ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೩೭

ಲೇಖನ ಸಾಹಿತ್ಯ : ಭಾಗ-೫



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೩೭ : ಲೇಖನ ಸಾಹಿತ್ಯ : ಭಾಗ-೫

* [illegible]
[illegible]

ಪ್ರಧಾನ ಸಂಪಾದಕರು
ಡಾ. ವೀರಣ್ಣ ರಾಜೂರ
ಧಾರವಾಡ

ಸಂಪಾದಕರು
ಡಾ. ಕೆ. ರವೀಂದ್ರನಾಥ
ಹಂಪಿ

[illegible] ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ
ವಿಜಯಪುರ
೨೦೨೦

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೩೭ : ಲೇಖನ ಸಾಹಿತ್ಯ : ಭಾಗ-೫

❖

- ಭಾಷಣ-ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ
ಸಂದರ್ಶನ-ಅರಿಕೆ-ಸಂಪಾದಕೀಯ

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಕೆ. ರವೀಂದ್ರನಾಥ

ಹಂಪಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೦

COMPLETE WORK OF DR. M.M.KALBURGI

VOLUME - 37 : LEKHANA SAHITY : BHAGA-5

Edited by : Dr. K. Ravindaranath, Hampi

Published by : Dr. P.G. Halakatti Research Centre
B.L.D.E. Association, Vijayapur, Karnatak

©

First Edition : 2020
Pages : lvi +1292=1348

Copies : 1000
Price Rs: 670/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 98 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೩೭–ಲೇಖನ ಸಾಹಿತ್ಯ: ಭಾಗ–೫

ಸಂಪಾದಕರು : ಡಾ. ಕೆ. ರವೀಂದ್ರನಾಥ, ಹಂಪಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ

ಪ್ರಥಮ ಮುದ್ರಣ: ೨೦೨೦
ಪುಟಗಳು: lvi + ೧೨೯೨ = ೧೩೪೮

ಪ್ರತಿಗಳು: ೧೦೦೦
ಬೆಲೆ ರೂ: ೬೭೦/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ

ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು-ನುಡಿ-ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ-ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ-ಅದ್ವಿತೀಯ-ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ-ಪಾಂಡಿತ್ಯ-ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ-ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ವಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ-ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ–ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ–ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜಾನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಚೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣು ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡಕರ**

೧. ಉತ್ತರಕ ರ್ನಾಟಕದ ಜನಪದ ಪದ್ಯಸಾಹಿತ್ಯ

೨. ಜಾನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ
೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ **–ಸಂ. ಡಾ. ಎಂ ಎಸ್. ಮದಭಾವಿ**

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧
೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨
೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ **–ಸಂ. ಡಾ. ಎಂ ಎಸ್. ಮದಭಾವಿ**

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ
೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ
೩. ಮಡಿವಾಳಪ್ಪ ಸಾಸನೂರ ಬರೆಹ–ಬದುಕು

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ **–ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ**

೧. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ **–ಸಂ. ಡಾ. ವಿ.ಎಸ್. ಮಾಳಿ**

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ **–ಸಂ. ಡಾ. ಕೆ. ರವೀಂದ್ರನಾಥ**

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ **–ಸಂ. ಡಾ. ಕೆ. ರವೀಂದ್ರನಾಥ**

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ

ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ

ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ

ಭಾಷಣ–ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಸಂದರ್ಶನ–ಅರಿಕೆ–ಸಂಪಾದಕೀಯ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ–ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾಧಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿಧ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.

❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ತಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಕೆ. ರವೀಂದ್ರನಾಥ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಕೆ. ರವೀಂದ್ರನಾಥ

ಡಾ. ಎಂ. ಎಂ. ಕಲಬುರ್ಗಿ ಅವರು ಬದುಕಿನುದ್ದಕ್ಕೂ ಬೋಧನೆ-ಶೋಧನೆ-ಪ್ರಕಟಣೆ ಎಂಬ ನೆಲೆಗಳಲ್ಲಿ ದಣಿವರಿಯದೇ ದುಡಿದ ವಿದ್ವಾಂಸರು. ಆ ಮೂಲಕ ಕನ್ನಡ ಸಂಶೋಧನ ಮಹಾಮಾರ್ಗವನ್ನು ರೂಪಿಸಿದವರು. ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಶಾಸನ, ಹಸ್ತಪ್ರತಿ, ಗ್ರಂಥಸಂಪಾದನೆ, ಇತಿಹಾಸ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಹಳಗನ್ನಡ, ವಚನ ಹಾಗೂ ಲಿಂಗಾಯತ ಸಾಹಿತ್ಯ ಹೀಗೆ ಏಕಕಾಲಕ್ಕೆ ಹತ್ತಾರು ಕ್ಷೇತ್ರಗಳನ್ನು ತಮ್ಮ ಅಧ್ಯಯನದ ತೆಕ್ಕೆಗೆ ತೆಗೆದುಕೊಂಡು "ಸಮಗ್ರ ಸಂಶೋಧಕ" ಎಂಬ ಗೌರವಕ್ಕೆ ಪಾತ್ರರಾದರು. ಅದಮ್ಯ ಉತ್ಸಾಹ, ಕ್ರಿಯಾಶೀಲತೆ, ಸಮಯಪ್ರಜ್ಞೆಗೆ ಹೆಸರಾಗಿದ್ದ ಡಾ. ಎಂ. ಎಂ. ಕಲಬುರ್ಗಿ ಅವರು ತಾವೂ ದುಡಿದರು; ತಮ್ಮ ಸುತ್ತಲಿನ ಪರಿಸರವನ್ನೂ ದುಡಿಯುವಂತೆ ನೋಡಿಕೊಂಡರು. ಕೆಲಸ ಮಾಡುವುದನ್ನು ಬಿಟ್ಟರೆ ನನಗೆ ಬೇರೆ ಕೆಲಸವೇ ಇಲ್ಲ ಎಂದು ಹೇಳುವುದರ ಮೂಲಕ ಕೆಲಸ ಕಾಯಕವಾಗುವ ಬಗೆಯನ್ನು ತಮ್ಮದೇ ಆದ ಹೊಸ ವ್ಯಾಖ್ಯಾನದ ಮೂಲಕ ಮನವರಿಕೆ ಮಾಡಿಕೊಟ್ಟರು. ಇಂಥ ಅಪ್ರತಿಮ ಸಂಶೋಧಕನ ಸಮಗ್ರ ಸಾಹಿತ್ಯವನ್ನು ಪ್ರಕಟಿಸಬೇಕೆಂಬ ಯೋಜನೆಯನ್ನು ನಮ್ಮ ನಾಡಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ವಿಜಯಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ ರೂಪಿಸಿರುವುದು ಪ್ರಾತಃಸ್ಮರಣೀಯರಾದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಎಂದು ನಾನು ಭಾವಿಸಿದ್ದೇನೆ.

ಡಾ. ಎಂ. ಎಂ. ಕಲಬುರ್ಗಿ ಅವರ ಸಮಗ್ರ ಸಾಹಿತ್ಯವನ್ನು ೧. ಸ್ವತಂತ್ರ ಕೃತಿಗಳು ೨. ಸಂಪಾದಿತ ಕೃತಿಗಳು ೩. ಲೇಖನಗಳು ಎಂದು ವರ್ಗೀಕರಿಸಿಕೊಳ್ಳಲಾಗಿದೆ. ಈ ಮೂರರಲ್ಲಿ ಲೇಖನ ಸಂಪುಟಗಳ ಸಂಪೂರ್ಣ ಒಂದು ಪಾಲನ್ನು ನನಗೆ ನೀಡಿ ಸಂಪಾದಿಸಿಕೊಡುವ ಜವಾಬ್ದಾರಿಯನ್ನು ಯೋಜನೆಯ ನಿರ್ದೇಶಕರು, ಪ್ರಧಾನಸಂಪಾದಕರು, ಸಲಹಾ ಸಮಿತಿ ಸದಸ್ಯರು ವಹಿಸಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

೧. ಲೇಖನ ಸಂಪುಟಗಳ ಸ್ವರೂಪ ಮತ್ತು ಸಂಯೋಜನ ವಿಧಾನ

ಡಾ. ಎಂ. ಎಂ. ಕಲಬುರ್ಗಿ ಅವರ ಮಾರ್ಗ ಹೆಸರಿನ ೮ ಸಂಪುಟಗಳಲ್ಲಿ ಒಟ್ಟು ೮೬೮ ಲೇಖನಗಳಿವೆ. ಸಂಪುಟ ೧ರಲ್ಲಿ ಸಾಹಿತ್ಯಮಾರ್ಗ-೭೨, ಸಂಪಾದನಮಾರ್ಗ-೦೪,

ವಿಮರ್ಶಾಮಾರ್ಗ-೨೪ ಸೇರಿ ಒಟ್ಟು ೧೦೦ ಲೇಖನಗಳು. ಸಂಪುಟ ೨ರಲ್ಲಿ ಶಾಸನಮಾರ್ಗ-೫೦, ಜಾನಪದಮಾರ್ಗ-೨೭, ಶಾಸ್ತ್ರಮಾರ್ಗ-೨೩ ಸೇರಿ ಒಟ್ಟು ೧೦೦ ಲೇಖನಗಳು. ಸಂಪುಟ ೩ರಲ್ಲಿ ಪ್ರಬಂಧ-೫೫, ಚಿಂತನ-೩೦, ನಿರ್ವಚನ-೧೫ ಸೇರಿ ಒಟ್ಟು ೧೦೦ ಲೇಖನಗಳು, ಸಂಪುಟ ೪ರಲ್ಲಿ ಸಂಪ್ರಬಂಧ-೧೦೦ ಲೇಖನಗಳು. ಸಂಪುಟ ೫ರಲ್ಲಿ ಪ್ರಸ್ತಾವನೆ-೨೯, ಅರಿಕೆ-೩೩, ಸಂಪಾದಕೀಯ-೨೩, ಸೇರಿ ಒಟ್ಟು ೮೫ ಲೇಖನಗಳು. ಸಂಪುಟ ೬ರಲ್ಲಿ ಭಾಷಣಗಳು-೩೪, ಮುನ್ನುಡಿಗಳು-೬೧, ಬೆನ್ನುಡಿಗಳು ೩೯, ವ್ಯಕ್ತಿಚಿತ್ರಣ-೩೫ ಸೇರಿ ಒಟ್ಟು ೧೬೯ ಲೇಖನಗಳು. ಸಂಪುಟ ೭ರಲ್ಲಿ ಪ್ರಬಂಧಗಳು -೪೩, ಪ್ರತಿಕ್ರಿಯೆಗಳು-೧೦, ಪ್ರಸ್ತಾವನೆಗಳು-೭, ಪುಸ್ತಕಾವಲೋಕನ-೧೧, ಭಾಷಣಗಳು-೧೯, ಸಂಪಾದಕರ ನುಡಿ-೧೦ ಸೇರಿ ಒಟ್ಟು ೧೦೦ ಲೇಖನಗಳು. ಸಂಪುಟ ೮ರಲ್ಲಿ ಆತ್ಮಕಥೆ-೧, ಪ್ರಬಂಧ-೨೦, ಭಾಷಣ-೧೪, ವ್ಯಕ್ತಿಚಿತ್ರಣ-೨೨, ಮುನ್ನುಡಿ-೨೦, ಬೆನ್ನುಡಿ ೨೧, ಅರಿಕೆ-೯ ಸೇರಿ ಒಟ್ಟು ೧೦೭ ಲೇಖನಗಳು. ಹೀಗೆ ೮ ಮಾರ್ಗಸಂಪುಟಗಳಲ್ಲಿ ಒಟ್ಟು ೮೬೮ ಲೇಖನಗಳು ಅಡಕಗೊಂಡಿವೆ.

ಈ ೮೬೮ ಲೇಖನಗಳು ಕಾವ್ಯ, ವಚನ, ಶಾಸ್ತ್ರ, ಶಾಸನ, ಭಾಷಣ, ಪ್ರಸ್ತಾವನೆ, ಮುನ್ನುಡಿ, ಬೆನ್ನುಡಿ, ಅರಿಕೆ, ವ್ಯಕ್ತಿಚಿತ್ರಣ, ಪುಸ್ತಕಾವಲೋಕನ ಇತ್ಯಾದಿ ಪ್ರಕಾರಗಳಲ್ಲಿ ಎಂಟೂ ಸಂಪುಟಗಳಲ್ಲಿ ಹಂಚಿಹೋಗಿವೆ. ಹೀಗೆ ಹಂಚಿಹೋಗಿರುವ ಲೇಖನಗಳನ್ನು ವಿಷಯಾನುಕ್ರಮದಲ್ಲಿ ವರ್ಗೀಕರಿಸಿಕೊಂಡು ೫ ಭಾಗಗಳಲ್ಲಿ (ಸಂಪುಟಗಳಲ್ಲಿ) ಈ ಕೆಳಗಿನಂತೆ ಸಂಯೋಜಿಸಲಾಗಿದೆ. ಪ್ರತಿಯೊಂದು ಸಂಪುಟಕ್ಕೂ ಪ್ರವೇಶಿಕೆಯ ರೂಪದ ಪ್ರಸ್ತಾವನೆಯನ್ನು ಬರೆಯಲಾಗಿದೆ.

I. ಲೇಖನ ಸಾಹಿತ್ಯ : ಭಾಗ-೧ ಶಾಸನಸಾಹಿತ್ಯ

II. ಲೇಖನ ಸಾಹಿತ್ಯ : ಭಾಗ-೨ ಶಾಸ್ತ್ರಸಾಹಿತ್ಯ

III. ಲೇಖನ ಸಾಹಿತ್ಯ : ಭಾಗ-೩ ವಚನಸಾಹಿತ

IV. ಲೇಖನ ಸಾಹಿತ್ಯ : ಭಾಗ-೪ ಕಾವ್ಯಸಾಹಿತ್ಯ

V. ಲೇಖನ ಸಾಹಿತ್ಯ : ಭಾಗ-೫ ಭಾಷಣ-ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ ಸಂದರ್ಶನ-ಅರಿಕೆ-ಸಂಪಾದಕೀಯ

ಈ ಮೇಲಿನ ೫ ಸಂಪುಟಗಳಲ್ಲಿ ಡಾ. ಎಂ. ಎಂ. ಕಲಬುರ್ಗಿ ಅವರು ಬರೆದ ಸ್ವತಂತ್ರ ಕೃತಿಗಳಲ್ಲಿಯ ಅರಿಕೆಗಳನ್ನು, ಸಂಪಾದಿತಕೃತಿಗಳಲ್ಲಿಯ ಪ್ರಸ್ತಾವನೆಗಳನ್ನು ಕೈಬಿಡಲಾಗಿದೆ. ಯಾಕೆಂದರೆ ಈ ಅರಿಕೆ-ಪ್ರಸ್ತಾವನೆಗಳು ಆಯಾ ಕೃತಿಗಳಲ್ಲಿ ಬಂದಿರುವುದರಿಂದ ಮತ್ತೆ ಇಲ್ಲಿಯೂ ಉಳಿಸಿಕೊಳ್ಳುವುದು ಸರಿಯಲ್ಲವೆಂಬುದು ನಮ್ಮ ಉದ್ದೇಶ. ಆದರೆ ಡಾ. ಎಂ. ಎಂ. ಕಲಬುರ್ಗಿಯವರು ಬೇರೆ ಬೇರೆ ವಿದ್ವಾಂಸರಿಂದ ಯಾವುದೋ ವಿಷಯಕ್ಕೆ ಲೇಖನಗಳನ್ನು ಬರೆಸಿ ಸಂಪಾದಿಸಿರುವ ಕೃತಿಗಳ ಸಂಪಾದಕೀಯ ಮತ್ತು ಪ್ರಧಾನ ಸಂಪಾದಕೀಯ ಮಾತುಗಳನ್ನು ಸೇರಿಸಿಕೊಂಡಿದ್ದೇವೆ. ಅದೇ ರೀತಿ ಮಾರ್ಗಸಂಪುಟ-೨ರಲ್ಲಿ ಪ್ರಕಟವಾಗಿರುವ ಜಾನಪದ ಸಂಬಂಧಿ ೨೭ ಲೇಖನಗಳು 'ಜಾನಪದಮಾರ್ಗ' ಹೆಸರಿನಲ್ಲಿ ಸ್ವತಂತ್ರ ಕೃತಿಯಾಗಿ ರೂಪ ತಾಳಿದ್ದರಿಂದ ಆ ಲೇಖನಗಳನ್ನೂ ಇಲ್ಲಿ ಕೈಬಿಡಲಾಗಿದೆ. ವಿಶೇಷವಾಗಿ ಡಾ. ಎಂ. ಎಂ. ಕಲಬುರ್ಗಿ ಅವರನ್ನು ಕೆಲವು ವ್ಯಕ್ತಿಗಳು,

ಪತ್ರಿಕೆಗಳು ಸಂದರ್ಶನ ಮಾಡಿವೆ. ಈಗಾಗಲೇ ಸಂದರ್ಶನಗಳ ಸಂಗ್ರಹ ಕೃತಿಯೂ ಪ್ರಕಟವಾಗಿದೆ. ಆ ೨೫ ಸಂದರ್ಶನಗಳು ಲೇಖನಸಾಹಿತ್ಯ : ಭಾಗ-೫ ರಲ್ಲಿ ಅಳವಡುವುದು ಸೂಕ್ತವೆಂದು ಭಾವಿಸಿ ಅವುಗಳನ್ನು ಸೇರಿಸಿಕೊಂಡಿದ್ದೇವೆ. ಇದಿಷ್ಟು ನಾನು ಸಂಪಾದಿಸಿದ ಡಾ. ಎಂ.ಎಂ. ಕಲಬುರ್ಗಿ ಅವರ ಲೇಖನ ಸಾಹಿತ್ಯ ೫ ಸಂಪುಟಗಳ ಶಿಲ್ಪವಾಗಿದೆ.

೨. ಲೇಖನ ಸಾಹಿತ್ಯ: ಭಾಗ -೫: ಭಾಷಣ-ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ, ಸಂದರ್ಶನ-ಅರಿಕೆ-ಸಂಪಾದಕೀಯ(ಸಂಪುಟ-೩೭)

ಪ್ರಸ್ತುತ ಈ ಸಂಪುಟದ ಲೇಖನಗಳನ್ನು ಡಾ ಕಲಬುರ್ಗಿಯವರೇ ಸಂಪುಟ ೫ ಹಾಗೂ ೬ ರಲ್ಲಿ ಭಾಷಣಗಳು -ವ್ಯಕ್ತಿಚಿತ್ರಣ-ಮುನ್ನುಡಿ-ಬೆನ್ನುಡಿ-ಅರಿಕೆ-ಸಂಪಾದಕೀಯ ಎಂದು ವರ್ಗೀಕರಿಸಿಕೊಂಡಿದ್ದರು. ಈ ವರ್ಗೀಕರಣ ಅವರ ಸಂಪುಟ-೭ ಮತ್ತು ಸಂಪುಟ -೮ ರಲ್ಲೂ ಮುಂದುವರಿದೆ. ಅದನ್ನೆ ನಾನು ಪರಿವಿಡಿಯನ್ನಾಗಿ ಮಾಡಿಕೊಂಡಿದ್ದೇನೆ. ಡಾ. ಕಲಬುರ್ಗಿಯವರನ್ನು ಬಾನುಲಿಯವರು, ಪತ್ರಿಕೆಯವರು ಹಾಗೂ ವಿದ್ವಾಂಸರು ಯಾವ ಯಾವುದೋ ಸಂದರ್ಭದಲ್ಲಿ ಸಂದರ್ಶನ ಮಾಡಿದ್ದಾರೆ. ಈ ಇಪ್ಪತ್ತೈದು ಸಂದರ್ಶನಗಳು ಕಳೆದು ಹೋಗದೆ; ಉಳಿದು ಬರಬೇಕು ಎಂಬ ಉದ್ದೇಶದಿಂದ ೨೦೧೭ ರಲ್ಲಿ ಡಾ. ವೀರಣ್ಣ ರಾಜೂರ ಮತ್ತು ಡಾ. ಹನುಮಂತ ಮೇಲಿನಮನಿ ಅವರುಗಳು ಡಾ. ಎಂ. ಎಂ. ಕಲಬುರ್ಗಿ ಸಂದರ್ಶನ ಸಂಪುಟ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಅವುಗಳನ್ನೂ ಇಲ್ಲಿ ಸಂಪಾದಿಸಿಕೊಡಲಾಗಿದೆ. ಈ ಸಂಪುಟದಲ್ಲಿ ಅರಿಕೆ-ಸಂಪಾದಕೀಯ ಎಂಬ ಶೀರ್ಷಿಕೆಯಡಿ ಕೆಲವು ಲೇಖನಗಳಿವೆ. ಇಲ್ಲಿಯ ಅರಿಕೆಗಳು ಡಾ. ಕಲಬುರ್ಗಿ ಅವರ ಸ್ವತಂತ್ರ ಕೃತಿಗಳಿಗೆ ಬರೆದ ಮಾತುಗಳಾಗಿದ್ದರೂ ಆ ಕೃತಿಗಳು ಮಾರ್ಗಸಂಪುಟಗಳ ಲೇಖನಗಳನ್ನು ಸೇರಿಸಿ ಅವುಗಳ ಒಟ್ಟು ಸಾರಾಂಶಕ್ಕೆ ಹೊಂದಿಕೆಯಾಗುವ ಹೆಸರನ್ನು ಕೊಟ್ಟಿದ್ದಾರೆ. ನಿದರ್ಶನಕ್ಕೆ ಕನ್ನಡಅರಸರ ಅಕನ್ನಡ ಪ್ರಜ್ಞೆ ಎಂಬ ಕೃತಿ ಹುಬ್ಬಳ್ಳಿ ಸಾಹಿತ್ಯ ಭಂಡಾರದಿಂದ ಪ್ರಕಟವಾಗಿದೆ. ಈ ಕೃತಿಯು ಚಾವುಂಡರಾಯನ ತಮಿಳುಪ್ರೀತಿ, ಗಂಗರಾಜನ ಮರಾಠಿಪ್ರೀತಿ, ವಿಷ್ಣುವರ್ಧನನ: ತಮಿಳುಸಂಸ್ಕೃತಿಯ ಆಗಮನ, ಕೃಷ್ಣದೇವರಾಯನ ತೆಲುಗುಸಂಸ್ಕೃತಿ ಆಕ್ರಮಣ, ಹೆಸರಿನ ಮಾರ್ಗ ಸಂಪುಟಗಳ ಲೇಖನಗಳ ಗ್ರಂಥರೂಪ. ಇಂಥ ಕೆಲವು ಕೃತಿಗಳು ಡಾ. ಕಲಬುರ್ಗಿ ಅವರಿಂದಲೇ ಪ್ರಕಟವಾಗಿವೆ. ಈ ಕೃತಿಗಳಿಗೆ ಬರೆದ ಅರಿಕೆ ಮಾತುಗಳನ್ನು ಈ ಸಂಪುಟದಲ್ಲಿ ಸೇರಿಸಿಕೊಳ್ಳಲಾಗಿದೆ. ಅದೇರೀತಿ ಅಭಿನಂದ ಗ್ರಂಥಗಳು, ವಿಚಾರಸಂಕಿರಣಗಳಲ್ಲಿ ಮಂಡಿತವಾದ ಪ್ರಬಂಧ ಸಂಕಲನಗಳು, ಮತ್ತು ಸಾಂದರ್ಭಿಕ ಸಾಹಿತ್ಯ ಕೃತಿಗಳಿಗೆ ಬರೆದ ಪ್ರಧಾನ ಸಂಪಾದಕ ಹಾಗೂ ಸಂಪಾದಕ ಮಾತುಗಳನ್ನು ಇಲ್ಲಿ ಸೇರಿಸಿಕೊಳ್ಳಲಾಗಿದೆ.

ಡಾ. ಎಂ. ಎಂ. ಕಲಬುರ್ಗಿ ಅವರು ಜನಪ್ರಿಯ ಭಾಷಣಕಾರರೂ ಅಲ್ಲ. ಜನಪ್ರಿಯ ಲೇಖಕರೂ ಅಲ್ಲ. ಆದರೆ ಅವರ ಭಾಷಣಗಳಲ್ಲಿ ಮತ್ತು ಬರಹಗಳಲ್ಲಿ ಜನಸಾಗರವನ್ನು ಆಕರ್ಷಿಸುವ ಸೃಜನಶೀಲಗುಣ ಇರುವುದನ್ನು ಮರೆಯುವಂತಿಲ್ಲ. ಹೀಗಾಗಿ ಏನನ್ನೇ ಬರೆಯಲಿ; ಯಾವುದನ್ನೇ ಕುರಿತು ಮಾತನಾಡಲಿ ಬಹುಮೂಲದ ಮಾಹಿತಿಗಳಿಂದ; ಆ ಮಾಹಿತಿ ಹೊರಡಿಸಬಹುದಾದ ಫಲಿತಗಳಿಂದ ಹೊಸದನ್ನು ನಿರೂಪಿಸುವುದನ್ನು ಕಾಣುತ್ತೇವೆ. ಭಾಷಣಗಳು-ಸಂದರ್ಶನ-ಸಂಪಾದಕೀಯ ಲೇಖನಗಳು ಆಯಾ ವಿಷಯದ ಮೇಲೆ ಸಿದ್ಧತೆಮಾಡಿಕೊಂಡು ಮಂಡಿಸಿದ ಕಾರಣ ಅವರ ಆಲೋಚನೆಗಳು, ತತ್ವಗಳು ಅಥವಾ ಚಿಂತನೆಗಳು ಒಂದು ಕ್ರಮವನ್ನು

ಪಡೆದುಕೊಂಡಿರುತ್ತವೆ. ಅದೇ ಬೇರೆಯವರ ಕೃತಿಗಳಿಗೆ ಬೆನ್ನುಡಿ, ಮುನ್ನುಡಿ ಅಥವಾ ಅಭಿಪ್ರಾಯ ಬರೆದಾಗಲೂ; ವ್ಯಕ್ತಿಯೊಬ್ಬರ ವ್ಯಕ್ತಿತ್ವವನ್ನು ನಿರೂಪಿಸುವ ವ್ಯಕ್ತಿ ಚಿತ್ರಣವನ್ನು ದಾಖಲಿಸುವಾಗಲೂ ಅಂಥದ್ದೇ ಶೈಕ್ಷಣಿಕ ಬರಹದ ಕ್ರಮವನ್ನು ಅವರಲ್ಲಿ ಕಾಣುತ್ತೇವೆ. ಹಾಗೆ ನೋಡಿದರೆ ಮುನ್ನುಡಿ-ಬೆನ್ನುಡಿ ಬರೆಯುವುದರಲ್ಲಿ ನಾನು ನಿರಾಸಕ್ತ ಎಂದು ಬಹಳಕಡೆ ಹೇಳಿಕೊಂಡಿದ್ದಾರೆ. ಸಂಶೋಧನೆಯನ್ನೆ ಪ್ರಧಾನ ಮಾಡಿಕೊಂಡಿರುವ ಡಾ. ಕಲಬುರ್ಗಿ ಅವರು ಸಮಗ್ರವಾದ ಓದು, ಸಂಗ್ರಹಶೀಲ ಬರಹದಿಂದಾಗಿ ತಮ್ಮ ಅಭಿಪ್ರಾಯವನ್ನು ಅಧಿಕೃತವಾಗಿ ದಾಖಲಿಸುವಲ್ಲಿ ಅದೇ ಸಂಶೋಧನ ಬರವಣಿಗೆಯ ಗತ್ತನ್ನು ತಾಳುತ್ತಾರೆ. ಚಿತ್ರಕಶೈಲಿಯಿಂದ ಇಡೀ ವಾತಾವರಣವನ್ನೇ ಕಣ್ಣಿಗೆ ಕಟ್ಟುವಂತೆ ಬರಹದಲ್ಲಿ ಎರಕಹೊಯ್ಯುತ್ತಾರೆ. ಓದುವುದು-ಬರೆಯುವುದು ಎಂದರೆ ಡಾ. ಕಲಬುರ್ಗಿ ಅವರಿಗೆ ಬೇಸರದ ಕೆಲಸವಲ್ಲ! ನಿತ್ಯ ಬದುಕಿನ ಕಾಯಕವಾಗಿತ್ತು.

'ಭಾಷಣಗಳು' ಭಾಗದಲ್ಲಿ ಪುಸ್ತಕಬಿಡುಗಡೆ, ವಿಚಾರಸಂಕಿರಣ, ಸಮ್ಮೇಳನ, ಅಭಿನಂದನಸಮಾರಂಭ, ಘಟಕೋತ್ಸವ ಸಮಾರಂಭ ಇತ್ಯಾದಿ ಸಭೆ-ಸಮಾರಂಭಗಳಲ್ಲಿ ಮಾಡಿದ ಭಾಷಣಗಳನ್ನು ಸಂಯೋಜಿಸಲಾಗಿದೆ. ಇವೆಲ್ಲ ಐತಿಹಾಸಿಕ ಭಾಷಣಗಳೆಂದರೆ ಅತಿಶಯೋಕ್ತಿಯಲ್ಲ. ಇಲ್ಲಿಯ ಭಾಷಣಗಳಲ್ಲಿ ಡಾ. ಎಂ. ಎಂ. ಕಲಬುರ್ಗಿ ಅವರ ಶೈಕ್ಷಣಿಕ ಪ್ರೀತಿ, ಮನೆತನದ ಶ್ರಮಸಂಸ್ಕೃತಿಯ ವಾತಾವರಣ, ಪ್ರಾಧ್ಯಾಪಕರಾಗಿ ರೂಪುಗೊಳ್ಳಲು ವಿದ್ಯಾರ್ಥಿಗಳ ಪಾಲು-ಪಾತ್ರ, ಶಿಕ್ಷಣ ಸಂಸ್ಥೆಗಳು ತಮ್ಮ ಹೊಣೆಗಾರಿಕೆಯಿಂದ ಕಳಚಿಕೊಳ್ಳುವುದು, ಆಯಾಕ್ಷೇತ್ರಗಳಲ್ಲಿ ಆಗಬೇಕಾದ ಶೈಕ್ಷಣಿಕ ಕೆಲಸಗಳು; ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಕುರಿತು ದಾಖಲಿಸಿವೆ.

ಗದುಗಿನ ಶ್ರೀ ತೋಂಟದಾರ್ಯ ಸಂಸ್ಥಾನಮಠದ ಲಿಂಗಾಯತ ಅಧ್ಯಯನ ಸಂಸ್ಥೆಗೆ ಪ್ರಕಟಣೆಯ ದೃಷ್ಟಿಯಿಂದ ಕರ್ನಾಟಕದಲ್ಲಿ ದೊಡ್ಡ ಹೆಸರಿದೆ. ಅದಕ್ಕೆ ಕಾರಣ ಅದರ ನಿರ್ದೇಶಕರಾಗಿ ದುಡಿದ ಡಾ. ಕಲಬುರ್ಗಿ ಅವರ ಪರಿಶ್ರಮ. ಅಪ್ರಕಟಿತ ಸಾಹಿತ್ಯಮಾಲೆ, ನೂತನ ಸಾಹಿತ್ಯಮಾಲೆ, ವಿಶ್ವಕೋಶ ಯೋಜನೆ, ಪುಣ್ಯಪುರುಷರ ಮಾಲೆ ಮುಂತಾಗಿ ಹಲವು ಹತ್ತು ಮಾಲೆಗಳನ್ನು ಅನುಷ್ಠಾನಕ್ಕೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಸಂಸ್ಥೆಯ ಲಿಂಗಾಯತ ಪುಣ್ಯಪುರುಷರ ಮಾಲೆಯ ೧೦೦ ನೆಯ ಪುಸ್ತಕಬಿಡುಗಡೆಯ ಸಂದರ್ಭದಲ್ಲಿ ಮಾಡಿದ ಭಾಷಣ ಆ ಸಂಸ್ಥೆಯ ಕಾರ್ಯಯೋಜನೆಯ ಸ್ವರೂಪವನ್ನು ದಾಖಲಿಸಿದೆ. ಪುಣ್ಯಪುರುಷರ ಕುರಿತಾಗಿ ಬಂದ ಕೃತಿಗಳು "ಸತ್ತವರ ಕಥೆಗಳಲ್ಲ ಕಾಯಕ ಜೀವಿಗಳ, ತ್ಯಾಗಿಗಳ, ಸಾಹಸಶೀಲರ ಆತ್ಮಚರಿತ್ರೆಗಳು. ಇನ್ನು ಕೆಲವು ಭಾಷಣಗಳು ಅಪ್ಪಟ ಸಾಹಿತ್ಯಪ್ರಕಾರಗಳಿಗೆ ಸಂಬಂಧಿಸಿವೆ. ಸಮಗ್ರ ಸ್ವರವಚನಸಾಹಿತ್ಯ, ಸಮಗ್ರ ವಚನಸಂಪುಟಗಳ ಬಿಡುಗಡೆ, ಬಸವಣ್ಣನವರ ಷಟ್ಸ್ಥಲವಚನ ಪ್ರಕಟನೆಯ ಶತಮಾನೋತ್ಸವ, ಬಸವೋತ್ತರಯುಗದ ವಚನಸಾಹಿತ್ಯ, ವಚನಚಳುವಳಿ ವಿಚಾರಸಂಕಿರಣ, ವಚನಸಾಹಿತ್ಯದ ಪ್ರಕಟನ ಇತಿಹಾಸ, ಅನುಭಾವಸಾಹಿತ್ಯ ವಿಚಾರಸಂಕಿರಣ ಇತ್ಯಾದಿ ಭಾಷಣಗಳು ಈ ಕ್ಷೇತ್ರದಲ್ಲಿ ಡಾ. ಕಲಬುರ್ಗಿ ಅವರಿಗಿದ್ದ ಪರಿಣತಿಯನ್ನು ಪ್ರತಿನಿಧಿಸುತ್ತವೆ. ವಚನ-ಸ್ವರವಚನ-ತತ್ವಪದ, ವಚನಸಂಗ್ರಹ-ಸಂಕಲನ-ಸಂಪಾದನ ಸ್ವರೂಪಗಳ ಕುರಿತು ಅಧಿಕೃತವಾಗಿ ಮಾತನಾಡಬಲ್ಲ ವಿದ್ವಾಂಸರು. ಹೀಗಾಗಿ ಯೋಜನೆಯನ್ನು ರೂಪಿಸಿದವರು, ಉದ್ಘಾಟನೆ ಮಾಡಿದವರು, ಸಮಾರೋಪದಲ್ಲಿ ಮಾತನಾಡಿದವರು ಅವರೇ ಆಗಿದ್ದಾರೆ. ಇದರಿಂದ ಕನ್ನಡಸಾಹಿತ್ಯದ ಹೊಸ ಹೊಸ ಪ್ರಕಾರಗಳ ಕಡೆಗೆ ವಿದ್ವಾಂಸರ ಗಮನ ಹರಿಯುವಂತಾಯಿತು.

ಡಾ. ಕಲಬುರ್ಗಿ ಅವರ ಸಾಧನೆಗೆ ಹಲವು ಪ್ರಶಸ್ತಿ-ಪುರಸ್ಕಾರಗಳು ಸಂದಿವೆ. ವಿಶ್ವಮಾನವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ವರ್ಧಮಾನಪ್ರಶಸ್ತಿ, ಪಂಪಪ್ರಶಸ್ತಿ, ಬಸವಶ್ರೀಪ್ರಶಸ್ತಿ, ಕೇಂದ್ರ ಸಾಹಿತ್ಯಅಕಾಡೆಮಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ನಾಡೋಜ ಗೌರವ. ಈ ಪ್ರಶಸ್ತಿ ಪ್ರದಾನಸಮಾರಂಭಗಳಲ್ಲಿ ಮಾಡಿದ ಭಾಷಣಗಳು ಆ ಪ್ರಶಸ್ತಿಗೆ ಮತ್ತು ಪ್ರಶಸ್ತಿ ನೀಡಿದ ಸಂಸ್ಥೆಗೆ ಗೌರವ ಬರುವಂತೆ ಮೂಡಿಬಂದಿವೆ. ತಮ್ಮ ಶೈಕ್ಷಣಿಕ ಬೆಳವಣಿಗೆಗೆ ಕಾರಣರಾದ ಮನೆತನದ ಅವಿಭಕ್ತ ಪ್ರಜ್ಞೆ-ಶ್ರಮ ಸಂಸ್ಕೃತಿಯ ವಾತಾವರಣ, ಶೈಕ್ಷಣಿಕ ಪರಿಸರ, ವಿದ್ಯಾಗುರುಗಳು ಮತ್ತು ವಿದ್ವಾಂಸರ ಒಡನಾಟ, ಈ ಸುದೀರ್ಘ ಬದುಕಿನಲ್ಲಿ ಹಾಗೂ ವೃತ್ತಿಜೀವನದಲ್ಲಿ ಆದಂಥ ಏರುಪೇರುಗಳು, ತಾವು ರೂಪಿಸಿಕೊಂಡ ಸಂಶೋಧನ ಮಾರ್ಗ ಮತ್ತು ವಿಧಾನಗಳನ್ನು ಎಳೆಎಳೆಯಾಗಿ ಸಿಂಹಾವಲೋಕನ ಮಾಡಿಕೊಳ್ಳುತ್ತಾರೆ. ವಿಶ್ವಮಾನವ ಪ್ರಶಸ್ತಿ ಕುರಿತು ತಮ್ಮ ಭಾಷಣದಲ್ಲಿ ಈ ಪ್ರಶಸ್ತಿಯಲ್ಲಿ ಕುವೆಂಪು ಇದ್ದಾರೆ ಮತ್ತು ಕುವೆಂಪು ಸಾಹಿತ್ಯದ ಪರಿಚಾರಕರಾದ ಡಾ. ದೇ. ಜವರೇಗೌಡ ಇದ್ದಾರೆ. ಹೀಗಾಗಿ ಒಂದು ಪ್ರಶಸ್ತಿಯಲ್ಲಿ ಎರಡು ಗೌರವಗಳು ಸೇರಿಕೊಂಡಿವೆ ಎನ್ನುತ್ತಾರೆ. ಹೀಗೆ ಆಯಾ ಪ್ರಶಸ್ತಿಯ ಆಶಯವನ್ನೂ ಅತ್ಯಂತ ಮನಂಬುಗುವಂತೆ ವ್ಯಾಖ್ಯಾನಿಸುತ್ತಾರೆ.

ಇನ್ನು ಹಸ್ತಪ್ರತಿ ಸಮ್ಮೇಳನ, ಶರಣಸಾಹಿತ್ಯ ಸಮ್ಮೇಳನ, ದೇಸಿಸಮ್ಮೇಳನ, ಇತಿಹಾಸಸಮ್ಮೇಳನ, ಜಾನಪದ ಸಮ್ಮೇಳನ, ಅಮೇರಿಕ ಅಕ್ಕ ಸಮ್ಮೇಳನ, ಆಳ್ವಾಸ ನುಡಿಸಿರಿ ಸಮ್ಮೇಳನ, ಶ್ರೀಕೃಷ್ಣ ಪಾರಿಜಾತ ಸಮ್ಮೇಳನ, ಸುಗಮ ಸಂಗೀತ ಸಮ್ಮೇಳನ, ಕನ್ನಡಸಾಹಿತ್ಯ ಸಮ್ಮೇಳನ, ಹಾಲುಮತ ಸಮ್ಮೇಳನ, ಸಾಣೆಹಳ್ಳಿ ನಾಟಕೋತ್ಸವಗಳಲ್ಲಿ ಭಾಗವಹಿಸಿದ್ದಾರೆ. ಈ ಎಲ್ಲ ವಿಷಯಗಳು ಡಾ. ಕಲಬುರ್ಗಿ ಅವರಿಗೆ ಪ್ರಿಯವಾದವುಗಳೇ. ಹಸ್ತಪ್ರತಿಸಂಪತ್ತು ರಾಷ್ಟ್ರೀಯಸಂಪತ್ತು. ಇಂದಿನ ಶೈಕ್ಷಣಿಕ ಸಂಸ್ಥೆಗಳು ಈ ಕ್ಷೇತ್ರವನ್ನು ಉಪೇಕ್ಷೆ ಮಾಡಿವೆ ಎಂಬ ಆತಂಕವನ್ನೂ. ಅದೇರೀತಿ ಶರಣಸಾಹಿತ್ಯ ಕುರಿತಂತೆ ವಚನಗಳು ಮತ್ತು ಅವುಗಳಿಂದ ಉತ್ಪಾದನೆಯಾದ ಕಾವ್ಯಗಳ ಅಧ್ಯಯನ ನಡೆಯಬೇಕಾದ ಅಗತ್ಯವನ್ನು ತಿಳಿಸುತ್ತಾರೆ. ಶರಣಸಾಹಿತ್ಯ ಪರಿಷತ್ತು ಜಂಗಮಸಂಸ್ಕೃತಿಯನ್ನು ಒಂದು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ, ಸಣ್ಣ ಸರಕಾರದ ಗಾತ್ರದಲ್ಲಿ ಬೆಳೆಸಿದೆ. ಈ ಪರಿಷತ್ತಿನ ಶಿಕ್ಷಣವೆಂದರೆ ಬಸವೇಶ್ವರ ವಿದ್ಯೆ. ಲಿಂಗಾಯತ ಚತುರ್ಮುಖಿಧರ್ಮ, ಇವರು ಹಿಂದುಗಳಲ್ಲ. ಭಾರತೀಯರು. ಲಿಂಗಾಯತ ಸಮಾಜಏಕೀಕರಣ, ಲಿಂಗಾಯತ ಮಠಗಳು ಏಕಸ್ವಾಮ್ಯದಿಂದ ಮುಕ್ತವಾಗಬೇಕು. ಶರಣಸಾಹಿತ್ಯವನ್ನು ಅಂತಾರಾಷ್ಟ್ರೀಯವಾಗಿ ಪ್ರಸಾರಮಾಡಬೇಕು. ಅ ಮೂಲಕ ಜಾತ್ಯಾತೀತ ಪೀಠಾರೋಹಣದಿಂದ ಶರಣಮಾರ್ಗಾನುಸರಣೆಗೆ ನಾಂದಿಹಾಡಬೇಕೆಂದಿದ್ದಾರೆ. ಇತಿಹಾಸ ನೋಡುವ ಕ್ರಮದಲ್ಲಿ ಬದಲಾಗಬೇಕೆಂಬ ಇತಿಹಾಸಸಮ್ಮೇಳನದ ಅಧ್ಯಕ್ಷೀಯ ಭಾಷಣಗಳು. ಆಯಾ ಕ್ಷೇತ್ರದ ಮೂಲಕ ಮಾಡಬೇಕಾದ ಕೆಲಸಗಳು, ಯೋಜನೆಗಳು, ಸಮಾಜಮುಖಿ ಆಶಯಗಳನ್ನು ಅತ್ಯಂತ ಸ್ಪಷ್ಟವಾಗಿ ತಮ್ಮ ಭಾಷಣದಲ್ಲಿ ಪ್ರತಿಪಾದಿಸಿದ್ದಾರೆ.

ಭಾಷಿಕವಾಗಿ ಕನ್ನಡ ಅಭಿಜಾತಭಾಷೆ, ಅಂದು ಏಕೀಕರಣ-ಇಂದು ಕನ್ನಡೀಕರಣ, ಪ್ರಾಚ್ಯಭಾಷಾ ವಿಶ್ವವಿದ್ಯಾಲಯ, ಭಾಷಾಬೋಧನ ಪದ್ಧತಿ ಎಂಬ ವಿಚಾರಸಂಕಿರಣಗಳಲ್ಲಿಯ ಭಾಷಣಗಳು, ಇತಿಹಾಸಕ್ಕೆ ಸಂಬಂಧಿಸಿದಂತೆ ಕಳಲೆ ವೀರಶೈವ ಅರಸುಮನೆತನ, ಮಹಾನಾಡ ಪ್ರಭುಗಳು, ಶಂಬಾ ಸಂಸ್ಕೃತಿಚಿಂತನೆಗಳಂಥ ಭಾಷಣಗಳು ಕನ್ನಡ-ಕರ್ನಾಟಕದ ಪ್ರಾಚೀನತೆ, ಸ್ಥಳೀಯ ಚರಿತ್ರೆಯ ಅನನ್ಯತೆ ಕಡೆಗಿನ ಒಲವನ್ನು ಒತ್ತಿಹೇಳಿದ್ದಾರೆ.

ಡಾ. ಎಂ.ಎಂ.ಕಲಬುರ್ಗಿ ಅವರು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಬಂದುದು ಒಂದು ಯೋಗಾಯೋಗ. ಕರ್ನಾಟಕ ಸಂಸ್ಕೃತಿಯ ಶೋಧ-ಪ್ರಸಾರ ಎಂಬ ವಿಶ್ವವಿದ್ಯಾಲಯದ ಆಶಯವನ್ನು ಸರಿಯಾಗಿ ಕಾರ್ಯ ರೂಪಕ್ಕೆ ತರುವಲ್ಲಿ ಅವರು ಯಶಸ್ವಿಯಾದರು. ದೇಶಿಅಧ್ಯಯನಕ್ಕೆ ಒತ್ತು, ಶೈಕ್ಷಣಿಕ ವಿಕಾಸದ ಹೊಸಆಯಾಮಗಳು, ಎಲ್ಲೆಲ್ಲಿ ಕನ್ನಡಿಗರು ಇದ್ದಾರೋ ಅಲ್ಲಿ ಕನ್ನಡ ವಿಶ್ವವಿದ್ಯಾಲಯ, ಎಲ್ಲ ರಸ್ತೆಗಳು ರೋಮ್‌ದ ಕಡೆಗೆ ಎಂಬಂತೆ ಎಲ್ಲ ಹಾದಿಗಳು ಹಂಪಿ ಕಡೆಗೆ ಕೇಂದ್ರೀಕೃತವಾಗಬೇಕು, ಈವರೆಗೆ ಉತ್ಪಾದನೆ- ಇನ್ನುಮೇಲೆ ವಿಸ್ತರಣೆ, ಶಿಕ್ಷಕರೇ ಶಿಕ್ಷಣ ಸಂಸ್ಥೆಯ ಶಕ್ತಿ, ಆ ಸಂಸ್ಥೆಯ ಆಗುಹೋಗುಗಳಿಗೆ ಅವರೇ ಜವಾಬ್ದಾರರು; ಅವರಿಂದ ವಿಭಾಗದಲ್ಲಿ ಉತ್ಪಾದನೆಗೆ ಅವಕಾಶ ಮತ್ತು ಅನ್ವಯಿಕ ಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಚಿಂತನೆ; ಒಂದು ವಿಭಾಗವನ್ನು ಸ್ಥಾನಿಕ ನೆಲೆಯಲ್ಲಿ ವಿಸ್ತರಣೆ-ಜಾಗತಿಕ ನೆಲೆಯಲ್ಲಿ ಬೆಳವಣಿಗೆ ಮಾಡುವ ಸಂಕಲ್ಪ, ಸರಕಾರಿ ಸಂಸ್ಥೆಯಿರಲಿ, ಧಾರ್ಮಿಕ ಸಂಸ್ಥೆಯಿರಲಿ ಅವುಗಳಿಗೆ ಕೊಡುವ ಅನುದಾನ ಸಾರ್ವಜನಿಕರ ಹಣ. ಹೀಗಾಗಿ, ಹಣವನ್ನು ನೀರಿನಂತೆ ಗಳಿಸು-ತೀರ್ಥದಂತೆ ಬಳಸು, ವಿಶ್ವವಿದ್ಯಾಲಯಗಳ ಉತ್ಪಾದನೆಯಲ್ಲಿ ಪ್ರಮುಖವಾದದ್ದು ಪ್ರಸಾರಾಂಗ. ಅದು ಜ್ಞಾನದ ಉತ್ಪಾದನೆಯ ಕೇಂದ್ರ-ಎಂದು ಮುಂತಾಗಿ ಘಟಿಕೋತ್ಸವ ಸ್ವಾಗತ ಭಾಷಣಗಳಲ್ಲಿ ಒಂದು ಶಿಕ್ಷಣ ಸಂಸ್ಥೆಯ ಕಾರ್ಯವೈಖರಿಯನ್ನು ಮನವರಿಕೆ ಮಾಡಿಕೊಡುತ್ತಾರೆ.

ವೈ. ಮಹಾಬಲೇಶ್ವರಪ್ಪ ಜನ್ಮಶತಮಾನೋತ್ಸವ, ಸಿಡ್ನಿ ಕನ್ನಡ, ಕುವೆಂಪು ಜನ್ಮಶತಮಾನೋತ್ಸವ, ಡಾ. ಫ.ಗು.ಹಳಕಟ್ಟಿ ಸಮಗ್ರಸಾಹಿತ್ಯ ಬಿಡುಗಡೆ, ಬಿ.ಎಲ್.ಡಿ.ಇ. ಸಂಸ್ಥೆ ಶತಮಾನೋತ್ಸವ ಸಮಾರಂಭಗಳಲ್ಲಿ ಮಾಡಿದ ಭಾಷಣಗಳು ಒಂದು ಪರಂಪರೆಯ ಸಮಗ್ರ ಚಿತ್ರಣವನ್ನು ನೀಡುತ್ತವೆ. ಯಾವುದೇ ನಾಡಿಗೆ ಭೌತಿಕ ಮತ್ತು ಸಾಂಸ್ಕೃತಿಕ ರಾಯಭಾರಿಗಳಾದ ಕುವೆಂಪು, ಫ.ಗು.ಹಳಕಟ್ಟಿ, ವೈ. ಮಹಾಬಲೇಶ್ವರಪ್ಪ, ಬಿ.ಎಲ್.ಡಿ.ಇ. ಸಂಸ್ಥೆಗಳ ಯುಗಮಾನದ ಸಾಧನೆಯನ್ನು ಇಲ್ಲಿಯ ಭಾಷಣಗಳು ದಾಖಲಿಸಿವೆ. ಹೀಗೆ ಅನೇಕ ವಿಷಯಗಳನ್ನು ಒಳಗೊಂಡ ಭಾಷಣಗಳು ಇಲ್ಲಿ ಸಂಯೋಜನೆಗೊಂಡಿವೆ.

ವ್ಯಕ್ತಿಚಿತ್ರಣ ಕುರಿತಂತೆ ಡಾ. ಎಂ. ಎಂ. ಕಲಬುರ್ಗಿಯವರು ಹಲವಾರು ಲೇಖನಗಳನ್ನು ಬರೆದಿದ್ದಾರೆ. ವ್ಯಕ್ತಿಯೊಬ್ಬ ತಾನು ಬದುಕಿದ ರೀತಿಯನ್ನು ತಾನೇ ಬರೆದುಕೊಳ್ಳುವುದು ಆತ್ಮಚರಿತ್ರೆ ಎನಿಸುತ್ತದೆ. ಅದೇ ವ್ಯಕ್ತಿಯ ಬದುಕಿನ ರೀತಿಯನ್ನು ಬೇರೊಬ್ಬರು ಬರೆದರೆ ಜೀವನಚರಿತ್ರೆ ಎನಿಸುತ್ತದೆ. ಹೀಗಾಗಿ ಡಾ.ಕಲಬುರ್ಗಿ ಅವರು ಬರೆದ ವ್ಯಕ್ತಿಚಿತ್ರಣಗಳು ಒಂದರ್ಥದಲ್ಲಿ ಜೀವನ ಚರಿತ್ರೆಗಳೇ ಆಗಿವೆ. ವ್ಯಕ್ತಿಚಿತ್ರಣಗಳಲ್ಲಿ ರಾಜಕೀಯ, ಶೈಕ್ಷಣಿಕ, ಸಾಹಿತ್ಯಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ದುಡಿದ ಮಹನೀಯರಿದ್ದಾರೆ. ಇವುಗಳನ್ನು ಓದುತ್ತಾ ಹೋದರೆ ಡಾ. ಎಂ. ಎಂ. ಕಲಬುರ್ಗಿ ಅವರ ವಿದ್ಯಾರ್ಥಿ ಜೀವನದಿಂದ ಹಿಡಿದು ಪ್ರಾಧ್ಯಾಪಕ ಜೀವನದ ಹಲವು ಘಟ್ಟಗಳಲ್ಲಿ ಬಂದು ಹೋದ ವ್ಯಕ್ತಿಗಳ ಬದುಕಿನ ರೀತಿಗಳು ಚಿತ್ರಪಟಲದಂತೆ ಸರಿದು ಹೋಗುತ್ತವೆ. ಸೃಜನಶೀಲತೆ ಇಲ್ಲಿಯ ಲೇಖನಗಳ ಜೀವಾಳವಾಗಿದೆ. ವ್ಯಕ್ತಿ ಆಕೃತಿಯನ್ನು ಪ್ರತಿಮೆಗಳಂತೆ ಕಂಡರಿಸುವುದು ಡಾ. ಕಲಬುರ್ಗಿ ಅವರ ಚಿತ್ರಶೈಲಿ ವಿಶಿಷ್ಟವಾದದ್ದು. ಎತ್ತರ ನಿಲುವು, ತುಂಬಿದ ಮೈಕಟ್ಟು ಆಕರ್ಷಕ ಮುಖ, ಮುಖಕ್ಕೆ ಬೆಳ್ಳಿಯ ಕಿರೀಟವಿಟ್ಟಂತೆ ತಲೆತುಂಬ ಬಿಳಿಯ ಕೂದಲು,

ಮತ್ತೂ ಆಕರ್ಷಣೆಯೆಂಬಂತೆ ಗಂಭೀರ ಪ್ರವೃತ್ತಿ, ಕಂಚಿನ ವಿಗ್ರಹದಂತಹ ನಿಲುವು. ಹೀಗೆ ಇಲ್ಲಿಯ ವ್ಯಕ್ತಿ ಚಿತ್ರಣಗಳಲ್ಲಿ ಅನೇಕರ ಬಗ್ಗೆ ಕಣ್ಣಿಗೆ ಕಟ್ಟುವಂತೆ ಅಕ್ಷರಗಳಲ್ಲಿ ಕಂಡರಿಸಿದ್ದನ್ನು ಕಾಣಬಹುದು.

ಬಸವರಾಜ ಕಟ್ಟೀಮನಿಯವರ ಬಗ್ಗೆ ಬರೆಯುತ್ತಾ ಗಳಗನಾಥರ ಉತ್ತರಾಧಿಕಾರಿ ಎನ್ನುತ್ತಾರೆ. ಗಳಗನಾಥರ ಕಾದಂಬರಿಗಳ ರುಚಿಯನ್ನುಂಡ ಉತ್ತರಕರ್ನಾಟಕದ ವಾಚಕ ಸಮುದಾಯ ರಾಷ್ಟ್ರಪ್ರಜ್ಞೆ, ನ್ಯಾಯ–ಅನ್ಯಾಯಗಳ ಘರ್ಷಣೆ, ಪತಿತರಿಗೆ ಬದುಕುವ ಒಲವುಗಳನ್ನು ಕಾದಂಬರಿಯ ಮೂಲಕ ನೀಡಿದ ಕಟ್ಟೀಮನಿಯವರ ಕಾದಂಬರಿಗಳತ್ತ ಧಾವಿಸಿದ್ದನ್ನು ಸರಿಯಾಗಿ ಗುರುತಿಸುತ್ತಾರೆ. ಅದೇರೀತಿ ಡಾ. ವೀರಣ್ಣ ರಾಜೂರ ಅವರ ಕುರಿತು 'ನನ್ನ ಉತ್ತರಾಧಿಕಾರಿ' ಎನ್ನುವಲ್ಲಿಯೂ ಗುರುಗಳಾದ ಆರ್.ಸಿ. ಹಿರೇಮಠ ಮತ್ತು ಶಿಷ್ಯನಾದ ಡಾ. ವೀರಣ್ಣ ರಾಜೂರ ಹಾಗೂ ತಮ್ಮ ನಡುವಿನ ಶೈಕ್ಷಣಿಕವಾದ ಸಾವಯವ ಸಂಬಂಧವನ್ನು ಬೆಸೆಯುತ್ತಾರೆ. ಕರ್ನಾಟಕವಿದ್ಯಾವರ್ಧಕ ಸಂಘ ಒಂದು ವೇದಿಕೆಯಾಗಿ ಶ್ರೀ ಹೊನ್ನಪುರಮಠ, ಸ್ಥಾಪಕರಾದ ಶ್ರೀ ರಾ.ಹ. ದೇಶಪಾಂಡೆ, ಗೋಕಾಕ ಚಳುವಳಿಯ ಅಂಗವಾಗಿ ಅಸ್ತಿತ್ವಕ್ಕೆ ಬಂದ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷರಾದ ಡಾ. ಶಂಬಾ ಅವರ ಕಾರ್ಯವೈಖರಿಯನ್ನು ವಿವರಿಸಿದ್ದಾರೆ. ಗೆಳೆಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಚಂದ್ರಶೇಖರ ಕಂಬಾರ, ಡಾ. ಗಿರಡ್ಡಿ ಗೋವಿಂದರಾಜ, ಡಾ. ತಾಳ್ತಜೆ ವಸಂತಕುಮಾರ, ಡಾ. ಗೊ.ರು.ಚ, ಎಂ. ರಾಮಚಂದ್ರ ಆಚಾರ್ಯ ಕುರಿತಾಗಿ ಬರೆಯುವಾಗ ಆತ್ಮೀಯತೆಯಿಂದ ಅವರ ನಡುವಿನ ಸಂಬಂಧಗಳನ್ನು ಬಿಚ್ಚಿಡುತ್ತಾರೆ. ಹಿರಿಯರಾದ ದೇ.ಜ.ಗೌ ಹಾಗೂ ಹಾ.ಮಾ ನಾಯಕ, ಡಾ. ವೆಂಕಟಾಚಲಶಾಸ್ತ್ರಿ, ಡಾ. ಆರ್. ಸಿ. ಹಿರೇಮಠ, ಶ್ರೀ ಎಚ್.ಟಿ. ಸಾಸನೂರ ಮತ್ತು ಡಾ. ತೋಂಟದ ಸಿದ್ಧಲಿಂಗಮಹಾಸ್ವಾಮಿಗಳ ಬಗ್ಗೆ ಬರೆಯುವಾಗ ಅವರ ಸಾಧನೆಯ ಎತ್ತರವನ್ನು ಮೌಲ್ಯಮಾಪನ ಮಾಡಿದ್ದಾರೆ. ವಿದ್ಯಾರ್ಥಿಗಳ ಬಗ್ಗೆ ಬರೆಯುವಾಗಲೂ ಅವರ ಆಸಕ್ತಿ, ಬದುಕಿನ ವೈಯಕ್ತಿಕ ತಲ್ಲಣಗಳನ್ನು ದಾಖಲಿಸುವಲ್ಲಿ ಅವರನ್ನು ಹತ್ತಿರದಿಂದ ನೋಡಿದ ಇಲ್ಲವೇ ಒಂದು ಕುಟುಂಬದ ಸದಸ್ಯರಂತೆ ನಡೆಸಿಕೊಂಡ ನೆನಪುಗಳ ಸುರಳಿಯನ್ನೇ ಬಿಚ್ಚಿಡುತ್ತಾರೆ. ರಾಜಕಾರಣಿಗಳಾದ ಎನ್. ತಿಪ್ಪಣ್ಣ, ಎಂ.ಪಿ. ಪ್ರಕಾಶ, ಎಂ.ವೈ.ಪಾಟೀಲ ಮುಂತಾದವರ ಸಾಂಸ್ಕೃತಿಕ ಮನಸ್ಸನ್ನು ವಿವರಿಸುತ್ತಾರೆ. ಶಿಕ್ಷಣ, ಸಾಹಿತ್ಯ, ರಾಜಕೀಯ, ಧರ್ಮ ಹಾಗೂ ಸಮಾಜಕೇಂದ್ರಿತವಾಗಿ ದುಡಿದ ಹಲವು ತಲೆಮಾರುಗಳ ವ್ಯಕ್ತಿಗಳ ವ್ಯಕ್ತಿತ್ವವನ್ನು ದಾಖಲಿಸುವುದರ ಮೂಲಕ ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯನ್ನು ನಿರೂಪಿಸುವ ಸಾಧ್ಯತೆಯ ಕಡೆಗೆ ಇಲ್ಲಿಯ ಲೇಖನಗಳು ಗಮನಸೆಳೆಯುತ್ತವೆ.

ಮುನ್ನುಡಿ ಲೇಖನಗಳು ಹಿರಿಯ ಲೇಖಕರ ಕೃತಿಗಳಿಗೆ, ಕಿರಿಯ ಮತ್ತು ವಿದ್ಯಾರ್ಥಿಗಳ ಕೃತಿಗಳಿಗೆ ಹಾಗೂ ಸಹದ್ಯೋಗಿ ಮಿತ್ರರ ಕೃತಿಗಳಿಗೆ ಬರೆದಿದ್ದಾರೆ. ಇವುಗಳಲ್ಲಿ ಶಾಸ್ತ್ರಕೃತಿಗಳು, ಕವನ ಹಾಗೂ ಸಂಶೋಧನ ಲೇಖನಸಂಕಲನಗಳು, ಪ್ರವಾಸ ಕೃತಿಗಳು, ಅಭಿನಂದನೆ–ಸಂಸ್ಮರಣ ಕೃತಿಗಳು, ಚರಿತ್ರೆ ಸಂಪುಟಗಳು, ಪಿಎಚ್.ಡಿ. ಮಹಾಪ್ರಬಂಧಗಳು ಇವೆ. ಒಂದು ಕೃತಿಗೆ ಮುನ್ನುಡಿ ಬರೆಯುವಾಗ ಕೃತಿಕಾರನ ಅಧ್ಯಯನಾಸಕ್ತಿ, ಆಲೋಚನಕ್ರಮ, ಮತ್ತು ಒಂದು ತಲೆಮಾರಿನ ಪರಂಪರೆಯನ್ನು ಪ್ರತಿನಿಧಿಸುವ ಆತನ ಸ್ಥಾನ ನಿರ್ದೇಶನವನ್ನು ಕೆಲವೇ ಮಾತುಗಳಲ್ಲಿ ಹೇಳುವುದು ಇಲ್ಲಿಯ ವಿಶೇಷ. ಮುಖ್ಯವಾಗಿ ಆಯಾ ಕೃತಿಗಳ ಬಗ್ಗೆ ಹೇಳುತ್ತಲೇ ಅದರಿಂದ ಹೊರಡಬಹುದಾದ ಫಲಿತಗಳು, ಚಾರಿತ್ರಿಕಸಂಗತಿಗಳು, ಸಾಹಿತ್ಯ–ಸಂಸ್ಕೃತಿಯ ಅನನ್ಯತೆಗಳು, ಅಧ್ಯಯನದ ವಿಧಾನಗಳು ಎಲ್ಲವೂ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. 'ಕವನಕ್ರಿಯೆಗೆ ಅನುಭವ ಸಾಮಗ್ರಿಯಷ್ಟೇ ಮುಖ್ಯವಾದುದು

ಭಾಷಾ ಮಾಧ್ಯಮದಲ್ಲಿ ಅದನ್ನು ಪಾಕಗೊಳಿಸುವುದು'. 'ಸಂಶೋಧಕನಾದವನು ಒಂದು ವಿಷಯವನ್ನು ಕುರಿತು ಈ ಮೊದಲು ಹೇಳಿದ ಗಟ್ಟಿ ಅಭಿಪ್ರಾಯಗಳನ್ನು ಮಾತ್ರ ಗ್ರಹಿಸಬೇಕೇ ಹೊರತು, ಅವುಗಳನ್ನು ಪುನರುಚ್ಚರಿಸಿದವರ ಮಾತುಗಳನ್ನು ಸಂಗ್ರಹಿಸುವುದು ವ್ಯರ್ಥಶ್ರಮ'. 'ಜಾನಪದ ವಾಚಿಕಸಂಪತ್ತನ್ನು ಭಾಷೆ ಮತ್ತು ಸಾಹಿತ್ಯವೆಂದು ವರ್ಗೀಕರಿಸಿದಲ್ಲಿ ಗಾದೆ ಪ್ರಥಮವಾಗಿ ಭಾಷೆಯ ಘಟಕ; ದ್ವಿತೀಯವಾಗಿ ಸಾಹಿತ್ಯದ ಪ್ರಕಾರ'. 'ನಮ್ಮ ಪ್ರಾಚೀನ ಕವಿಗಳಿಗೆ ಸಂಸ್ಕೃತ ಪದಗಳನ್ನು ಕನ್ನಡಕ್ಕೆ ಹದಮಾಡಿಕೊಳ್ಳುವುದು ಮುಖ್ಯ ಸಮಸ್ಯೆಯಾಗಿದ್ದಿತು. ಅದನ್ನು ಅವರು ಉಭಯ ಭಾಷಾ ಪಾಂಡಿತ್ಯದಿಂದ ಬಗೆಹರಿಸಿಕೊಳ್ಳುತ್ತಿದ್ದರು. ಆಧುನಿಕರಿಗೆ ಈ ಕಾವ್ಯ ಭಾಷಾಪರಂಪರೆಯ ವ್ಯಾಸಂಗವೂ ಇಲ್ಲ; ಸಂಸ್ಕೃತದ ನೇರ ಪರಿಜ್ಞಾನವೂ ಇಲ್ಲ;' 'ಯಾವುದೇ ಸಾಹಿತ್ಯಚರಿತ್ರೆ ಪರಿಪೂರ್ಣವಲ್ಲ. ಅಜ್ಞಾತ ವಿಷಯಗಳ ಬೆಳಕು ಕಾಣುವಿಕೆ ಚರಿತ್ರೆಕಾರನ ಶೈಕ್ಷಣಿಕ ಬೆಳವಣಿಗೆ'. 'ಸ್ನಾತಕೋತ್ತರ ಕನ್ನಡ ವಿಭಾಗಗಳು ಈವರೆಗೆ ಶೈಕ್ಷಣಿಕವಾಗಿ ಎರಡು ಪ್ರಯೋಗಗಳನ್ನು ಅನುಭವಿಸಿವೆ. ಟಿ. ಎಸ್. ವೆಂಕಣ್ಣಯ್ಯ, ಕೆ.ಜಿ. ಕುಂದಣಗಾರರ ಕಾಲದಲ್ಲಿ ವಿಭಾಗ ರೂಪದಲ್ಲಿ ಕಣ್ಣು ತೆರೆದ ಅವು ದೇಜಗೌ, ಡಾ. ಆರ್. ಸಿ. ಹಿರೇಮಠರ ಅವಧಿಯಲ್ಲಿ ಸಾಂಸ್ಥಿಕ ರೂಪದ ಮರುರಚನೆ ಪಡೆದವು. ಈಗ ಇದರ ಪುಣ್ಯವೂ ತೀರಿದ್ದು ಕನ್ನಡ ಅಧ್ಯಯನ ಸಂಸ್ಥೆಗಳನ್ನು ಹೊಸ ಪ್ರಯೋಗಕ್ಕೆ ಗುರಿಪಡಿಸುವುದು ಇಂದಿನ ಅಗತ್ಯವೆನಿಸಿದೆ.' 'ಪಿಎಚ್.ಡಿ ಪ್ರಬಂಧದಲ್ಲಿ ಸಾಮಾಗ್ರಿ ಸಂಗ್ರಹದಷ್ಟೇ ಮುಖ್ಯವಾದುದು ಅದರ ವರ್ಗೀಕರಣ, ವ್ಯಾಖ್ಯಾನ ಮತ್ತು ಸಂಯೋಜನ. ಅದು ವೈವಿಧ್ಯ ಸಾಮಗ್ರಿಯಿಂದ ಕಟ್ಟಿದ ಒಂದು ಸುಸಂಬದ್ಧ ಕಟ್ಟಡ'. 'ವಿದ್ವಾಂಸರು ನಡೆಸಿದ ಎಲ್ಲ ಶೋಧಗಳನ್ನು ಅವಲೋಕಿಸುವುದು, ಅವರ ಅಭಿಪ್ರಾಯಗಳಿಗೆ ಸೂಕ್ತ ಗೌರವ ಕೊಡುವುದು ಇಲ್ಲವೆ ಸಕಾರಣ ಸಂದೇಹಿಸುವುದು, ತಾನು ಶೋಧಿಸಿದ ವಿಚಾರಗಳನ್ನು ವಿನಯದಿಂದ ಮಂಡಿಸುವುದು ಒಳ್ಳೆಯ ಸಂಶೋಧಕನ ಲಕ್ಷಣಗಳು'. 'ಕ್ಷೇತ್ರಕಾರ್ಯವು ಅಧ್ಯಯನದ ಅದಕು, ಇದಕು, ಎದುಕು ಆಧಾರವಾಗಿರುವ ನೆಲೆಯಾಗಿದೆ'. 'ಇಂದು ಪಿಎಚ್.ಡಿ. ಪ್ರಬಂಧ ರಚನೆ ತುಂಬಾ ಯಾಂತ್ರಿಕವಾಗಿದೆ. ಇನ್ನೂ ದುರ್ದೈವದ ಸಂಗತಿಯೆಂದರೆ ಬಾಡಿಗೆಯ ಬರವಣಿಗೆಗಳು, ಕೃತಿಚೌರ್ಯ, ಸ್ವಜನ ಪಕ್ಷಪಾತಗಳೂ ಸಹಜ ಕ್ರಿಯೆಗಳಾಗಿವೆ. ಮೈಮುರಿದು ದುಡಿದು ಬೆವರನ್ನು ಬರವಣಿಗೆಯನ್ನಾಗಿಸುವವರು ಸಿಕ್ಕಾರೆಯೆ? ಎಂದು ಕೇಳುವ ಪರಿಸ್ಥಿತಿ ಕನ್ನಡದಲ್ಲಿ ಇಂದು ನಿರ್ಮಾಣವಾಗಿದೆ. ಮಾರ್ಗದರ್ಶಕ–ವಿದ್ಯಾರ್ಥಿಗಳೆಂಬ ಉಭಯಭ್ರಷ್ಟರು ಸೇರಿ ಈ ಕ್ಷೇತ್ರವನ್ನು ಅಪವಿತ್ರಗೊಳಿಸಿದ್ದಾರೆ'. 'ಇತಿಹಾಸ ಮತ್ತು ಸಾಹಿತ್ಯ ಇಂದು ವಿಭಿನ್ನ ಕ್ಷೇತ್ರಗಳಾಗಿದ್ದರೂ ಪ್ರಾಚೀನ ಕರ್ನಾಟಕದಲ್ಲಿ ಸಾಹಿತ್ಯವೆನ್ನುವುದು ಬಹಳಷ್ಟು ಸಲ ಇತಿಹಾಸವನ್ನು ಪ್ರಕಟಿಸುವ ಮಾಧ್ಯಮವಾಗಿದ್ದಿತು'. 'ನವೋದಯ ಸಂದರ್ಭ ಸಹೃದಯ ಪ್ರಧಾನ ಘಟ್ಟವಾದರೆ; ನವ್ಯಸಂದರ್ಭ ವಿಮರ್ಶಪ್ರಧಾನ ಘಟ್ಟ, ನವೋದಯ ಕಾಲದಲ್ಲಿ ಮೂಡಿದ ಗಣಪಾತಳಿಯ ಕುವೆಂಪುಶಿಲ್ಪ, ಲಯಪಾತಳಿಯ ಬೇಂದ್ರೆಶಿಲ್ಪಗಳಂತೆ, ನವ್ಯದಲ್ಲಿಯೂ ಇಂಗ್ಲೀಷ್ ನೆಲೆಯಿಂದ ಬಂದ ಗೋಕಾಕ–ಅಡಿಗರ ಜಟಿಲ–ಸಂಕೀರ್ಣಶಿಲ್ಪ, ಕನ್ನಡ ನೆಲೆಯಿಂದ ಬಂದ ಕಣವಿ–ಶಿವರುದ್ರಪ್ಪನವರ ಸಹಜ–ಸಂಕೀರ್ಣಶಿಲ್ಪಗಳ ದಾರಿಗಳು ತೆರೆದುಕೊಂಡಿವೆ'. '೨೦ನೆಯ ಶತಮಾನವನ್ನು ಕಾದಂಬರಿ ಪ್ರಧಾನಯುಗವೆಂದು ಕರೆಯಬಹುದು. ಇದು ನವೋದಯ, ಪ್ರಗತಿಶೀಲ, ನವ್ಯ ಎಂಬ ಮೂರು ಹಂತಗಳಲ್ಲಿ ಸಾಗಿ ಬಂದಿದೆ. ಇವುಗಳಲ್ಲಿ ಪ್ರಗತಿ ಶೀಲವೆಂಬುದು ಒಂದು ಪ್ರಯೋಗವಾಗಿ ಉಳಿಯಿತೇ ಹೊರತು, ಪರಂಪರೆಯಾಗಿ ಬೆಳೆಯಲಿಲ್ಲ. ಇತ್ತೀಚೆ ನವ್ಯಕಾದಂಬರಿ

ಒಂದು ಪರಂಪರೆಯಾಗಿ ಬೆಳೆಯುತ್ತಲಿದ್ದರೂ ಅದರ ಸಂಖ್ಯೆ ಕಡಿಮೆ. ಆದುದರಿಂದ ಇಂದಿಗೂ ಕಾದಂಬರಿ ಕ್ಷೇತ್ರವನ್ನು ಬಹುಪಾಲು ವ್ಯಾಪಿಸಿದುದು ನವೋದಯ ಪ್ರಜ್ಞೆಯ ಕಾದಂಬರಿ'. 'ಬದುಕು ಕ್ರಿಯಾನಿಷ್ಠ ಮತ್ತು ಪ್ರಕ್ರಿಯಾ ನಿಷ್ಠವಾಗಿದೆ. ಕ್ರಿಯಾನಿಷ್ಠ ಬದುಕಿನ ಶೋಧಕ್ಕೆ ಕೊನೆಯಿದೆ. ಪ್ರಕ್ರಿಯಾನಿಷ್ಠ ಬದುಕಿನ ಶೋಧಕ್ಕೆ ಕೊನೆಯಿಲ್ಲ'. 'ಸತ್ತ ಬಳಿಕವೂ ಬದುಕ ಬೇಕಾದರೆ ಓದಲು ಯೋಗ್ಯವಾದ ಸಾಹಿತ್ಯವನ್ನು ಬರೆಯಬೇಕು, ಇಲ್ಲವೇ ಬರೆಯಲು ಯೋಗ್ಯವಾದ ಜೀವನವನ್ನು ಬದುಕಬೇಕು'. 'ಸಜ್ಜನರಲ್ಲದ ವಿದ್ವಾಂಸರಲ್ಲದ ಸಹದ್ಯೋಗಿಗಳನ್ನೂ, ವಿದ್ಯಾರ್ಥಿಗಳನ್ನೂ ದೂರವಿಡಬೇಕು. ಒಂದು ವೇಳೆ ಅಂಥವರನ್ನು ಸಮೀಪ ಇಟ್ಟುಕೊಂಡರೆ ಅವರಂತೆ ನಾವೂ ವರ್ತಮಾನದಲ್ಲಿ ವಿಜೃಂಭಿಸಿ, ಭವಿಷ್ಯತ್ತಿನಲ್ಲಿ ಕಳೆದುಹೋಗುತ್ತೇವೆ' ಇಂಥ ಅಭಿಪ್ರಾಯಗಳು ಲೇಖನಗಳ ತುಂಬಾ ಸೂರೆಯಾಗಿವೆ.

'ಬೆನ್ನುಡಿ' ಕುರಿತಂತೆ ಡಾ. ಕಲಬುರ್ಗಿಯವರು ಅನೇಕ ಕೃತಿಗಳಿಗೆ ತಮ್ಮ ಅಭಿಪ್ರಾಯವನ್ನು ಬರೆದಿದ್ದಾರೆ. ಮುನ್ನುಡಿಗೂ ಮತ್ತು ಬೆನ್ನುಡಿಗೂ ವ್ಯತ್ಯಾಸವಿಲ್ಲ. ಇಲ್ಲಿಯ ಬೆನ್ನುಡಿಗಳು ಕವಿತೆ, ಲೇಖನ, ಕೃತಿ, ಮಹಾಪ್ರಬಂಧಗಳಿಗೆ ಬರೆದ ಅಭಿಪ್ರಾಯಗಳಾಗಿವೆ. ಇತ್ತೀಚೆಗೆ ಬೆನ್ನುಡಿ ಮಾತುಗಳು ಮುಖಪುಟ ಕಲಾವಿದನ ಭಾಗವಾಗಿದೆ. ಹೀಗಾಗಿ ಮುಖಪುಟ ವಿನ್ಯಾಸದ ಚೌಕಟ್ಟಿಗೆ ಹೊಂದಿಕೆಯಾಗುವಂತೆ ಬರೆದು ಮುಗಿಸುವುದು ಇಲ್ಲಿಯ ಗುಣ. ಒಂದರ್ಥದಲ್ಲಿ ಅಂಕಣ ಬರಹದ ಸ್ವರೂಪದ್ದಾಗಿದೆ. ಬೆನ್ನುಡಿ ಬರಹಗಳಿಗೆ ಸಂಗ್ರಹಶೀಲ ಗುಣ ಮುಖ್ಯವಾಗಿದೆ. ಆ ಗುಣವನ್ನು ಡಾ. ಕಲಬುರ್ಗಿ ಅವರ ಬೆನ್ನುಡಿಗಳಲ್ಲಿ ನೋಡಬಹುದು.

'ಸಂದರ್ಶನ' ಭಾಗದಲ್ಲಿ ೨೫ ಲೇಖನಗಳಿವೆ. ಪತ್ರಿಕೆಗಳು, ಬಾನುಲಿ ಮತ್ತು ವಿದ್ವಾಂಸರು ಡಾ. ಕಲಬುರ್ಗಿಯವರನ್ನು ವಿಶೇಷ ಸಂದರ್ಭಗಳಲ್ಲಿ ಸಂದರ್ಶಿಸಿದ ಸಂಪುಟವನ್ನು ಡಾ. ವೀರಣ್ಣ ರಾಜೂರ ಮತ್ತು ಡಾ. ಹನುಮಂತ ಮೇಲಿನಮನಿ ಅವರು ಸಂಪಾದಿಸಿ ಕೃತಿ ರೂಪದಲ್ಲಿ ಪ್ರಕಟಿಸಿದ್ದಾರೆ. ಈ ಸಂದರ್ಶನಗಳು ಮಾರ್ಗ ಸಂಪುಟಗಳಲ್ಲಿ ಸೇರಿರುವುದಿಲ್ಲ. ಆಯಾ ಸಂಸ್ಥೆ ಹಾಗೂ ಸಂದರ್ಶನ ಮಾಡಿದವರಿಂದ ಮಾಹಿತಿ ಸಂಗ್ರಹಿಸಿ ಸಿದ್ಧಪಡಿಸಿದ ಕೃತಿ. ಸಂಪಾದಕದ್ವಯರು ಈ ಸಂಪುಟದ ಆಶಯವನ್ನು ಕುರಿತು ಮಾಹಿತಿಪೂರ್ಣವಾದ ಪ್ರಾಸ್ತಾವಿಕ ಮಾತುಗಳನ್ನು ಹೇಳಿದ್ದಾರೆ. ಡಾ. ಕಲಬುರ್ಗಿ ಅವರಿಗೆ ಪಂಪಪ್ರಶಸ್ತಿ, ನೃಪತುಂಗಪ್ರಶಸ್ತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನಿಯೋಜನೆಗೊಂಡಾಗ, ಸಮಗ್ರ ವಚನಸಾಹಿತ್ಯ ಸಂಪುಟಗಳು ಪ್ರಕಟಗೊಂಡಾಗ, ತಾವು ಕಟ್ಟಿ ಬೆಳೆಸಿದ ಸಂಸ್ಥೆಗಳ ಸಾಧನೆ ಗಮನಸೆಳೆದಾಗ, ವಿಚಾರಸಂಕಿರಣ– ಆಸಕ್ತಿ ಅಧ್ಯಯನ ಕ್ಷೇತ್ರಗಳ ಜ್ಞಾನ ವಿಸ್ತರಣೆಗಾಗಿ ನಡೆಸಿದ ಸಂವಾದಗಳ ರೂಪದಲ್ಲಿ ಇಲ್ಲಿಯ ಸಂದರ್ಶನಗಳಿವೆ. ಕನ್ನಡಭಾಷೆಯ ಅಳಿವು–ಉಳಿವು, ಕನ್ನಡ ಭಾಷೆಯ ಸ್ಥಿತಿಗತಿ, ಕನ್ನಡ ವಿಭಾಗಗಳ ಸ್ಥಿತಿಗತಿ, ಇತಿಹಾಸ ರಚನೆಯ ವಿಪರ್ಯಾಸ, ಸಂಶೋಧನೆಯಂಥ ಜ್ಞಾನಶಾಖೆಯ ನಿರಾಸಕ್ತಿ ಮುಂತಾದ ಸಂಗತಿಗಳನ್ನು ಇಲ್ಲಿಯ ಸಂದರ್ಶನಗಳು ತೆರೆದಿಡುತ್ತವೆ.

'ಅರಿಕೆ' ಭಾಗದಲ್ಲಿ ಸ್ವತಂತ್ರ ಕೃತಿಗಳಿಗೆ ಬರೆದ ಅರಿಕೆಗಳು ಆಯಾ ಕೃತಿಯಲ್ಲಿ ಬಂದಿವೆ. ಆದರೆ ಇಲ್ಲಿಯ ಕೃತಿಗಳಿಗೆ ಬರೆದ ಅರಿಕೆಗಳಲ್ಲಿ ಮಾರ್ಗ ಸಂಪುಟಗಳಾದ ೧–೨–೩–೪–೫–೬– ರ ಅರಿಕೆಗಳು ಇಲ್ಲಿ ಸೇರಿವೆ. ಸಹಜವಾಗಿಯೇ ಮಾರ್ಗ ಎಂದಾಕ್ಷಣ ಡಾ. ಕಲಬುರ್ಗಿ ಅವರ ಹೆಸರು ನೆನಪಾಗುವಷ್ಟು ಈ ಸಂಪುಟಗಳು ಪ್ರಸಿದ್ಧಿಹೊಂದಿವೆ. ಅವುಗಳ ಸ್ವರೂಪ ಮತ್ತು ಲೇಖನ ಬರವಣಿಗೆಗೆ ಕಾರಣವಾದ ಸನ್ನಿವೇಶಗಳನ್ನು ಕುರಿತಾದ ಮನದಾಳದ ಮಾತುಗಳನ್ನು ಇಲ್ಲಿ

ಗಮನಿಸಬಹುದು. ಉಳಿದಂತೆ ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ ಎಂಬ ಕೃತಿ ಡಾ. ಕಲಬುರ್ಗಿ ಅವರ ಲೇಖನ ಮತ್ತು ಡಾ. ಸಿ.ಆರ್. ಯರವಿನತಲೆಮಠ ಹಾಗೂ ಪ್ರೊ. ಸದಾನಂದ ಕನವಳ್ಳಿ ಅವರುಗಳ ಎರಡು ಅನುವಾದಿತ ಲೇಖನವನ್ನು ಒಳಗೊಂಡಿದೆ. ಇದು ಚಿಕ್ಕ ಕೃತಿಯಾದರೂ ೧೨ನೇ ಶತಮಾನದ ಬಸವಸಂಪ್ರದಾಯದಲ್ಲಿ ಶುದ್ಧಶೈವಸಂಪ್ರದಾಯ ೧೪ನೇ ಶತಮಾನದಲ್ಲಿ ತಮಿಳುನಾಡಿನಲ್ಲಿ ಶೈವಸಂಪ್ರದಾಯವನ್ನೂ, ೧೫ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಶರಣಸಂಪ್ರದಾಯವನ್ನು ಪರಿವರ್ತಿಸಿ ವೀರಶೈವೀಕರಿಸಿಕೊಂಡಿತು. ಇದರ ಪ್ರಭಾವ ಚತುರಾಚಾರ್ಯರಪೀಠ, ಪಂಚಾಚಾರ್ಯರಪೀಠ ವ್ಯವಸ್ಥೆ, ಸಿದ್ಧಾಂತ ಶಿಖಾಮಣಿ ಹೆಸರಿನ ಧರ್ಮಗ್ರಂಥ ರಚನೆಯಾದ ಬಗೆಯನ್ನು ವಿವರಿಸುತ್ತದೆ. ಐತಿಹಾಸಿಕ, ಸಂಸ್ಕೃತಿ–ವಿಕೃತಿ, ಪರಿಕಲ್ಪನೆ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ಕನ್ನಡ ಶಾಸನಸಾಹಿತ್ಯ ಕೃತಿಗಳು ಮಾರ್ಗ ಸಂಪುಟದ ಮಹತ್ವದ ಲೇಖನಗಳನ್ನು ಆಯ್ದು ಆ ಲೇಖನಗಳಿಗೆ ಅನ್ವರ್ಥಕ ಆಗುವಂಥ ಹೆಸರನ್ನು ಈ ಕೃತಿಗಳಿಗೆ ನೀಡಿದ್ದಾರೆ. ಹೀಗಿದ್ದೂ ಸ್ವತಃ ಲೇಖಕರೇ ಆ ಲೇಖನಗಳ ಒಟ್ಟು ಆಶಯವನ್ನು ನಿಖರವಾಗಿ ಹೇಳುವುದರಿಂದ ಇಲ್ಲಿಯ ಅರಿಕೆ ಮಾತುಗಳು ಮುಂದಿನ ಅಧ್ಯಯನಕಾರರಿಗೆ ಆಕರವಾಗಬಲ್ಲವು ಎಂಬುದು ನಮ್ಮ ಭಾವನೆ.

'ಸಂಪಾದಕೀಯ' ಭಾಗದಲ್ಲಿರುವ ಲೇಖನಗಳು ಒಂದು ಕೃತಿ ಹಲವು ವಿದ್ವಾಂಸರ ಲೇಖನಗಳನ್ನು ಸಂಕಲಿಸಿ ರಚನೆಯಾಗಿರುವುದು ಇಲ್ಲಿಯ ವಿಶೇಷ. ಇವು ಪರಿಷ್ಕರಣೆ ಮಾಡಿದ ಗ್ರಂಥಸಂಪಾದನೆ ಕೃತಿಗಳಲ್ಲ; ಈ ಸಂಪಾದಕೀಯ ಮಾತುಗಳು ಪ್ರಸ್ತಾವನೆಗಳಲ್ಲ. ಹೀಗಿದ್ದೂ ಮಾನಸೋಲ್ಲಾಸ, ಸಾರಂಗಶ್ರೀ, ಜನಪದಸಾಹಿತ್ಯ ದರ್ಶನಗಳು, ಹರಿಹರ ಕವಿ ವಿರಚಿತ ಕನ್ನಡ ಶರಣರ ಕಥೆಗಳು, ಇತ್ಯಾದಿ ಕೆಲವು ಕೃತಿಗಳಿಗೆ ಬರೆದ ಸಂಪಾದಕೀಯ ಮಾತುಗಳು ಒಟ್ಟು ಆ ಕೃತಿಯ ಸ್ವರೂಪವನ್ನೇ ತಿಳಿಸಿಕೊಡುವ ಪ್ರಸ್ತಾವನೆ ರೂಪದಲ್ಲಿವೆ. ಒಟ್ಟಿನಲ್ಲಿ ಸಂಪಾದಕೀಯ, ಪ್ರಧಾನ ಸಂಪಾದಕೀಯ, ಅಧ್ಯಕ್ಷೀಯ ಮಾತುಗಳನ್ನು ಇಲ್ಲಿ ಸಂಯೋಜಿಸಿಕೊಡಲಾಗಿದೆ. ಆದಿಲ್‌ಶಾಹಿ ಸಾಹಿತ್ಯಸಂಪುಟ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ, ಪ್ರಾಚೀನ ಕರ್ನಾಟಕ ಆಡಳಿತ ವಿಭಾಗಗಳು ಇತ್ಯಾದಿ ಕೃತಿಗಳಿಗೆ ಬರೆದ ಮಾತುಗಳು ಚಾರಿತ್ರಿಕತೆಯ ದೃಷ್ಟಿಯಿಂದ ಮಹತ್ವದ್ದಾಗಿವೆ. ಕೊನೆಯದಾಗಿ ಡಾ. ಎಂ. ಎಂ. ಕಲಬುರ್ಗಿ ಅವರು ಭಾಷಣಗಳನ್ನೆ ಮಾಡಲಿ, ವ್ಯಕ್ತಿಚಿತ್ರಣ, ಬೆನ್ನುಡಿ–ಮುನ್ನುಡಿ, ಅರಿಕೆ–ಸಂಪಾದಕೀಯವನ್ನೇ ಬರೆಯಲಿ ಹೊಸ ಹೊಸ ಸಂಗತಿಗಳನ್ನು ಹೇಳುವುದರ ಮೂಲಕ ಮುಂದಿನ ಸ್ವತಂತ್ರ ಅಧ್ಯಯನಕ್ಕೆ ಒಂದು ಸೂಚನೆಯನ್ನು ಕೊಡುತ್ತಾರೆ. ಆ ಮೂಲಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ಸಂಶೋಧನ ಮಾರ್ಗದಲ್ಲಿ ನಾವು ಇದುವರೆಗೆ ತುಳಿದ ದಾರಿಯಾವುದು? ಇನ್ನು ತುಳಿಯಬೇಕಾದ ದಾರಿ ಯಾವುದು? ಎಂಬುದನ್ನು ಚಿಂತನೆಗೆ ಹಚ್ಚುವಲ್ಲಿ ಮಹಾಮಾರ್ಗಕಾರನ ಇಲ್ಲಿಯ ಲೇಖನಗಳು ಮಹತ್ವದ ದಾಖಲೆಗಳೆನಿಸಿವೆ.

ಕೃತಜ್ಞತೆಗಳು

ಡಾ. ಎಂ. ಎಂ. ಕಲಬುರ್ಗಿ ಸಮಗ್ರಸಾಹಿತ್ಯ ಪ್ರಕಟನೆ ಯೋಜನೆಯಲ್ಲಿ ಅವರ ಮಾರ್ಗಸಂಪುಟಗಳ ಲೇಖನಗಳ ಸಂಪಾದನೆಗೆ ಅವಕಾಶ ದೊರೆತದ್ದು ನನ್ನ ಭಾಗ್ಯ. ದುರ್ದೈವದ ಸಂಗತಿಯೆಂದರೆ ಶ್ರೀಯುತರ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆಯನ್ನು ಇಷ್ಟುಬೇಗ

ಕೈಗೆತ್ತಿಕೊಳ್ಳುತ್ತೇವೆಂದು ನಾವು ಊಹಿಸಿರಲಿಲ್ಲ. ಅನಿರೀಕ್ಷಿತ ಬೆಳವಣಿಗೆಗಳು ನಮ್ಮಿಂದ ಡಾ. ಎಂ.ಎಂ.ಕಲಬುರ್ಗಿ ಅವರನ್ನು ದೂರ ಮಾಡಿದವು. ನಮ್ಮ ಬರವಣಿಗೆಗೆ ಸಾಕ್ಷಿಪ್ರಜ್ಞೆಯಾಗಿದ್ದ ಅವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ಡಾ. ಎಂ.ಎಂ.ಕಲಬುರ್ಗಿ ಅವರ ಉತ್ತರಾಧಿಕಾರಿಗಳಾದ ಡಾ. ವೀರಣ್ಣ ರಾಜೂರ ಅವರು ಈ ಯೋಜನೆಯ ಪ್ರಧಾನ ಸಂಪಾದಕರು. ಅವರ ಮಾರ್ಗದರ್ಶನ ನನ್ನ ಕೆಲಸಕ್ಕೆ ಶ್ರೀರಕ್ಷೆ. ಅದೇರೀತಿ ಮಾತೃ ಸ್ವರೂಪಿಗಳಾದ ಶ್ರೀಮತಿ ಉಮಾದೇವಿ ಕಲಬುರ್ಗಿಯವರು. ಇವರೀರ್ವರಿಗೂ ನನ್ನ ಅನಂತ ವಂದನೆಗಳು. ಯೋಜನೆಯನ್ನು ರೂಪಿಸಿದ ವಿಜಯಪುರದ ಬಿ.ಎಲ್.ಡಿ.ಈ ಸಂಸ್ಥೆಯ ಅಧ್ಯಕ್ಷರಿಗೂ, ಪದಾಧಿಕಾರಿಗಳಿಗೂ, ಸಂಪಾದನ ಕಾರ್ಯದಲ್ಲಿ ನೆರವಾದ ಗೆಳೆಯ ಡಾ.ಪಿ.ಕೆ.ರಾಠೋಡ ಹಾಗೂ ವಿದ್ಯಾರ್ಥಿ ಮಿತ್ರರಾದ ಡಾ. ಕಾಂತೇಶರಡ್ಡಿ ಗೋಡಿಹಾಳ, ಶ್ರೀ ಟಿ. ಎಸ್. ಮಠದ, ಮತ್ತು ಡಾ.ಕೆ.ಆರ್.ಕೇಶವಮೂರ್ತಿ ಅವರಿಗೂ ಅಕ್ಷರ ಜೋಡಣೆ ಮಾಡಿದ ಗೆಳೆಯರಾದ ಡಾ. ಹನುಮಂತ ಮೇಲಿನಮನಿ ಹಾಗೂ ಡಾ. ಸರಸ್ವತಿದೇವಿ ಭಗವತಿ ಅವರಿಗೆ ಕೃತಜ್ಞತೆಗಳು.

ಹತ್ತೂ ಕಡೆ ಹಂಚಿಹೋಗಿದ್ದ ಲೇಖನಗಳನ್ನು ವಿಷಯಾನುಕ್ರಮದಲ್ಲಿ ಜೋಡಿಸುವುದು ದುಸ್ತರವಾದ ಕಾರ್ಯ. ಬಹುಶಿಸ್ತೀಯ ಅಧ್ಯಯನಕಾರರಾದ ಡಾ. ಎಂ.ಎಂ.ಕಲಬುರ್ಗಿ ಅವರು ಒಂದು ಲೇಖನದಲ್ಲಿ ಹತ್ತಾರು ವಿಷಯಗಳನ್ನು ಚರ್ಚಿಸಿದ್ದಾರೆ. ಹೀಗಾಗಿ ವರ್ಗೀಕರಣದಲ್ಲಿ ಸಮಸ್ಯೆಗಳು ಎದುರಾಗಿರುವುದು ಸಹಜ. ಈ ಕಾರ್ಯ ಆಧುನಿಕ ಗ್ರಂಥಸಂಪಾದನ ಶಾಸ್ತ್ರದ ವೈಧಾನಿಕತೆಯಾಗಿ ನನಗೆ ಅನುಭವ ತಂದುಕೊಟ್ಟಿತು. ಇಲ್ಲಿಯ ದೋಷಗಳನ್ನು ಮಿತಿಗಳೆಂದು ಪರಿಭಾವಿಸಿ ಈ ಸಂಪುಟವನ್ನು ವಿದ್ವಜ್ಜನತೆ ಪ್ರೀತಿಯಿಂದ ಸ್ವೀಕರಿಸುತ್ತೀರೆಂಬ ಭಾವನೆ ನನ್ನದು.

❖❖

*

ಪರಿವಿಡಿ

ಭಾಷಣ

ವ್ಯಕ್ತಿಚಿತ್ರಣ

ಮುನ್ನುಡಿ

ಬೆನ್ನುಡಿ

ಸಂದರ್ಶನ

ಅರಿಕೆ

ಸಂಪಾದಕೀಯ

■■

ಭಾಷಣ

೧

ಶರಣ ಸಾಹಿತ್ಯ ಸಮ್ಮೇಳನ : ಅಧ್ಯಕ್ಷತೆ

೨೦೦೩
ಬಸವೇಶ್ವರವಿದ್ಯೆ

ಪೂಜ್ಯರಿಗೆ ನಮಸ್ಕಾರ, ಶರಣ-ಶರಣೆಯರಿಗೆ ನಮಸ್ಕಾರ,

ನಮ್ಮ ಪರಂಪರೆಯಲ್ಲಿ ಅನೇಕ ವಿದ್ಯೆಗಳಿವೆ. ಇವುಗಳಲ್ಲಿ ಬಹುಜನಮಾನ್ಯವಾದುದು, ಬಸವೇಶ್ವರವಿದ್ಯೆ. ಈ ವಿದ್ಯೆಯ ಬಹುದೊಡ್ಡ ಕಾಣಿಕೆ, ಭಾರತೀಯ ಸನ್ಯಾಸ ಸಂಸ್ಕೃತಿ - ಆಚಾರ್ಯಸಂಸ್ಕೃತಿಗಳಿಗೆ ಬದಲು ಜಂಗಮಸಂಸ್ಕೃತಿಯನ್ನು ಅಸ್ತಿತ್ವಕ್ಕೆ ತಂದುದು. ಸನ್ಯಾಸಿಗೆ-ಆಚಾರ್ಯನಿಗೆ ಆತ್ಮಕಲ್ಯಾಣ ಮುಖ್ಯ. ಜಂಗಮನಿಗೆ ಹೆಚ್ಚಿನದಾಗಿ ಸಮಾಜಕಲ್ಯಾಣವೂ ಮುಖ್ಯ. ಈ ಜಂಗಮಸಂಸ್ಕೃತಿಯನ್ನು ಒಂದು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ, ಸಣ್ಣ ಸರಕಾರ ಗಾತ್ರದಲ್ಲಿ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳು ಬೆಳೆಸಿದ್ದು, ಈಗಲೂ ಪೂಜ್ಯ ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮಿಗಳ ಮೂಲಕ ಬೆಳೆಯುತ್ತಲಿದೆ. ಈ ಬೆಳವಣಿಗೆಯ ವಿಶೇಷ ಉಪಕ್ರಮವೆನಿಸಿದೆ; ಶರಣಸಾಹಿತ್ಯ ಪರಿಷತ್ತು ಮತ್ತು ಶರಣಸಾಹಿತ್ಯ ಸಮ್ಮೇಳನ. ಶ್ರೀ ಎಚ್. ತಿಪ್ಪೇರುದ್ರಸ್ವಾಮಿ, ಶ್ರೀ. ಗೊ. ರು. ಚ. ಅವರ ಶ್ರಮ ಕಾರಣವಾಗಿ, ಇದು ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಸಮ್ಮೇಳನ ಮಾದರಿಯಲ್ಲಿ ಆಕಾರ ಪಡೆಯುತ್ತಲಿದೆ.

ಬಸವೇಶ್ವರವಿದ್ಯೆಯ ಒಂದು ಭಾಗ ಶಿಕ್ಷಣ. ಭಾರತದಲ್ಲಿ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಿದವರು ಬ್ರಿಟಿಷರಾದರೂ ೯೦೦ ವರ್ಷ ಪೂರ್ವದಲ್ಲಿ ಈ ಪ್ರಕ್ರಿಯೆಯನ್ನು ಆರಂಭಿಸಿದವ, ಅಗ್ರಹಾರದ ಅಕ್ಷರಸಂಸ್ಕೃತಿಯನ್ನು ಅಸ್ಪೃಶ್ಯರ ವರೆಗೂ ವಿಸ್ತರಿಸಿದವ, ಬಸವೇಶ್ವರ. ಈ ಬಸವೇಶ್ವರನ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದು, ಈಗ ಶ್ರೀ ವೀರಣ್ಣ ಚರಂತಿಮಠ ಅವರ ಟೀಮು ಕಾರಣವಾಗಿ, ಹೊಸ ಅಧ್ಯಾಯದಿಂದ ವಿಜೃಂಭಿಸುತ್ತಿರುವ ಬಾಗಲಕೋಟೆಯ "ಬಸವೇಶ್ವರವಿದ್ಯಾ + ವರ್ಧಕ ಸಂಘ"ದ ಆಶ್ರಯದಲ್ಲಿ ಈ ಸಮ್ಮೇಲನ ಜರುಗುತ್ತಲಿದೆ.

ಬಸವೇಶ್ವರವಿದ್ಯೆಯ ಮುಖ್ಯಲಕ್ಷಣ ಮುಕ್ತತೆ. ಈ ಮುಕ್ತತೆ ಕಾರಣವಾಗಿಯೇ ರಾಯಚೂರಿನಲ್ಲಿ ಜರುಗಿದ್ದ ನಿಕಟಪೂರ್ವ ಸಮ್ಮೇಳನಕ್ಕೆ ಈ ವಿದ್ಯೆಯ ರಾಯಭಾರಿಯಂತೆ ದುಡಿಯುತ್ತಲಿರುವ ಶ್ರೀ ಭಗವಾನದಾಸ ತಿವಾರಿಯವರು ಅಧ್ಯಕ್ಷರಾಗಿದ್ದರು. ಅವರ ಬಳಿಕ ಈ ಗೌರವವನ್ನು ನಾನು ಇಷ್ಟು ಬೇಗ ನಿರೀಕ್ಷಿಸಿರಲಿಲ್ಲ. ಪೂಜ್ಯರ ಆದೇಶಕ್ಕೆ, ಶರಣಸಾಹಿತ್ಯ ಪರಿಷತ್ತಿನ ಸದಸ್ಯರ ಒತ್ತಾಯಕ್ಕೆ, ಬಾಗಿಲಕೋಟೆಯ ಬಂಧುಗಳ ಪ್ರೀತಿಗೆ

ಮಣಿದು, ಇದನ್ನು ಸ್ವೀಕರಿಸಿದ್ದೇನೆ. ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದಿರುವ ಇಷ್ಟು ಜನ ಬಂಧುಗಳನ್ನು ಏಕಕಾಲಕ್ಕೆ ಕಣ್ತುಂಬ ನೋಡುವ, ಅವರೊಂದಿಗೆ ಬಾಯ್ತುಂಬ ಮಾತನಾಡುವ ಭಾಗ್ಯಪ್ರಸಂಗವಿದು. ಬಸವೇಶ್ವರನ ಕೂಡಲಸಂಗಮ ಜಿಲ್ಲೆಯಲ್ಲಿ ನಿಂತು ಮಾತನಾಡುವ ಪುಣ್ಯ ಸಂದರ್ಭವಿದು- ಎಂದು ಭಾವಿಸುತ್ತ, ಈ ಗೌರವಕ್ಕಾಗಿ, ಸಂಬಂಧಪಟ್ಟ ಎಲ್ಲರಿಗೂ ಕೃತಜ್ಞನಾಗಿದ್ದೇನೆ.

ಸಂಶೋಧಕನಾದ ನನ್ನ ದೃಷ್ಟಿಯಲ್ಲಿ ಗತ ಮತ್ತು ವರ್ತಮಾನಗಳು ಎರಡು ಪ್ರತ್ಯೇಕ ಕಾಲಖಂಡಗಳಲ್ಲ. ಒಂದರ ವಿಸ್ತೃತರೂಪ ಇನ್ನೊಂದು. ಹೀಗಾಗಿ ಸಂಶೋಧನ ಕ್ಷೇತ್ರ ತೋರಿಕೆಗೆ ಗತಕಾಲವಾಗಿದ್ದರೂ ವಾಸ್ತವದಲ್ಲಿ ವರ್ತಮಾನವೇ ಆಗಿರುತ್ತದೆ. ಒಂದು ವೇಳೆ ಗತಕಾಲ ಕಾರಣವಾಗಿ ವರ್ತಮಾನ ಸಮಾಜದಲ್ಲಿ ಸಮಸ್ಯೆ-ಶೋಷಣೆ ನಿರ್ಮಾಣವಾಗಿದ್ದರೆ, ಆ ಗತದ ನಿಜಸ್ವರೂಪವನ್ನು ಶೋಧಿಸಿ ವರ್ತಮಾನದ ಮುಂದೆ ಮಂಡಿಸುವುದು, ಆ ಮೂಲಕ ಸಮಸ್ಯೆ- ಶೋಷಣೆಗಳ ನಿರ್ಮೂಲನೆಗೆ ನೆರವಾಗುವುದು, ಅಸತ್ಯವನ್ನು ನಂಬಿಕೊಂಡು ಪರಸ್ಪರ ಅವಿಶ್ವಾದಿಂದ ಬದುಕುವುದಕ್ಕಿಂತ ಕಹಿ ಎನಿಸಿದರೂ ಸತ್ಯವನ್ನು ತಿಳಿದುಕೊಂಡು ವಿಶ್ವಾಸದಿಂದ ಬದುಕುವಂತೆ ಮಾಡುವುದು, ಸಂಶೋಧಕನ ಕೆಲಸವಾಗಿರುತ್ತದೆ. ಲಿಂಗಾಯತದಲ್ಲಿ ಧರ್ಮ ಬೇರೆಯಲ್ಲ, ಸಮಾಜ ಬೇರೆಯಲ್ಲ. ಸಾಹಿತ್ಯವೂ ಬೇರೆಯಲ್ಲವಾಗಿ, ಇಲ್ಲಿ ಒಬ್ಬ ಸಂಶೋಧಕನ ಜವಾಬ್ದಾರಿ ಮತ್ತು ಲಿಂಗಾಯತನ ಕಾಳಜಿಗಳಿಂದ ಈ ಧರ್ಮ-ಈ ಸಮಾಜ-ಈ ಸಾಹಿತ್ಯಗಳ ವಿಷಯವಾಗಿ ನನಗೆ ಕಾಣುವ ಕೆಲವು ಸತ್ಯಗಳನ್ನು ಹೇಳಬಯಸುತ್ತೇನೆ.

ಲಿಂಗಾಯತ - ಚತುರ್ಮುಖಿಧರ್ಮ :

ಉದಾತ್ತ ಜೀವನಪದ್ಧತಿಯನ್ನು ಕುರಿತು ಮಹಾಪುರುಷರು ನಡೆಸಿದ ಚಿಂತನೆ, ಪ್ರಯೋಗಗಳೇ ಜಗತ್ತಿನಲ್ಲಿ ಧರ್ಮಗಳಾಗಿ ಬೆಳೆದಿವೆ. ಇವುಗಳಲ್ಲಿ ಅಪೂರ್ಣ ಸ್ವರೂಪದವು ಅವಧೂತ(ಸಿದ್ಧ)ಪಂಥಗಳು, ಅಪೂರ್ಣಪೂರ್ಣ ಸ್ವರೂಪವು ಆಚಾರ್ಯ(ಪುರೋಹಿತ) ಧರ್ಮಗಳು, ಪರಿಪೂರ್ಣ ಸ್ವರೂಪದವು ಅನುಭಾವಿ (ಪ್ರವಾದಿ) ಧರ್ಮಗಳು. ೧೨ನೆಯ ಶತಮಾನದಲ್ಲಿ ಒಂದು ಕಡೆ ಇಂದಿನ ಮಹಾರಾಷ್ಟ್ರದಲ್ಲಿ ಸಿದ್ಧರಾಮನಂಥವರ ಅವಧೂತಪಂಥ, ಇನ್ನೊಂದು ಕಡೆ ಇಂದಿನ ಆಂಧ್ರಪ್ರದೇಶದಲ್ಲಿ ಮಲ್ಲಿಕಾರ್ಜುನ ಪಂಡಿತಾರಾಧ್ಯನಂಥವರ ಆಚಾರ್ಯಧರ್ಮಗಳು ವಿಜೃಂಭಿಸುತ್ತಿರುವಾಗ, ಬಸವಣ್ಣ ಮೊದಲಾದ ಶಿವಶರಣರು ಮಧ್ಯದ ಕರ್ನಾಟಕದಲ್ಲಿ ಅನುಭಾವಿಧರ್ಮವನ್ನು ಅಸ್ತಿತ್ವಕ್ಕೆ ತಂದರು.

ಆಚಾರ್ಯಧರ್ಮವೆನ್ನುವುದು ಆತ್ಮ(ಪರಮಾತ್ಮ)ಮುಖಿ ಮತ್ತು ಮಾನವಮುಖಿ ಹೀಗೆ ಎರಡು ಅಮೂರ್ತ ಆಯಾಮಗಳನ್ನೊಳಗೊಂಡಿರುತ್ತದೆ. ಆತ್ಮ ಪರಮಾತ್ಮನಾಗಬೇಕೆಂಬ ವೈಯಕ್ತಿಕ ಪಾತಳಿ, ಮಾನವ ಮಹಾಮಾನವನಾಗಬೇಕೆಂಬ ಮಾನವಿಕ ಪಾತಳಿಗಳಲ್ಲಿ ವ್ಯವಹರಿಸುವ ಇದು, ನ್ಯಾಯಸ್ಥಾಪನೆಗಾಗಿ ಸಾಮಾಜಿಕ ಪಾತಳಿಗೆ ಇಳಿದು ಹೋರಾಡುವುದಿಲ್ಲ. ಹೀಗಾಗಿ ಇದರ ಆಚಾರ್ಯರು ಬದುಕಿರುವಾಗ ವ್ಯಕ್ತಿಯಾಗಿ ಪೀಠದ ಮೇಲೆ ಸುರಕ್ಷಿತ ಕುಳಿತು, ಸತ್ತ ಬಳಿಕ ವಿಗ್ರಹವಾಗಿ ಗದ್ದುಗೆಯ ಮೇಲೆ ಪೂಜೆಗೊಳ್ಳುತ್ತಾರೆ. ಭಾರತೀಯರ ವೈದಿಕಧರ್ಮ ಈ ಸ್ವರೂಪದ್ದಾಗಿದೆ.

ವೈದಿಕದ ಆತ್ಮ(ಪರಮಾತ್ಮ)ಮುಖಿ ಸಿದ್ಧಾಂತವನ್ನು ಇಡಿಯಾಗಿ ಕೈಬಿಟ್ಟು, ತನ್ನದೇ ಆದ ಮಾನವಮುಖಿ ಸಿದ್ಧಾಂತ, ಹೆಚ್ಚಿನದಾಗಿ ಅಸ್ಪಷ್ಟವಾಗಿಯಾದರೂ ವರ್ಣ-ವರ್ಗ-ಲಿಂಗಭೇದ ನಿರಾಕರಣೆಯ ಸಮಾಜಮುಖಿ ಸಿದ್ಧಾಂತಗಳ ಧರ್ಮವನ್ನು ಸ್ಥಾಪಿಸಿದವನು, ಭಗವಾನ್ ಬುದ್ಧ. ಈ ಪ್ರಕ್ರಿಯೆಯಿಂದಾಗಿ ಆತ ಆಚಾರ್ಯಪರಂಪರೆಯ ಭಾರತದಲ್ಲಿ, ಸ್ಥೂಲವಾಗಿಯಾದರೂ ಪ್ರಥಮ ಅನುಭಾವಿಪರಂಪರೆಯವನಾಗಿ ಕಾಣಿಸಿಕೊಳ್ಳುತ್ತಾನೆ.

ಈ ತರುವಾಯ ಬಂದ ಬಸವಣ್ಣ ಆತ್ಮ(ಪರಮಾತ್ಮ)ಮುಖಿ, ಮಾನವಮುಖಿ, ಸಮಾಜಮುಖಿ ಸಿದ್ಧಾಂತಗಳನ್ನು ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನಿಸಿ, ನಾಲ್ಕನೆಯದಾಗಿ ಕಾಯಕ-ದಾಸೋಹ ಪರಿಕಲ್ಪನೆಯ ಸಮೃದ್ಧಿಮುಖಿ ಸಿದ್ಧಾಂತವನ್ನು ಹೊಸದಾಗಿ ಜೋಡಿಸಿ, ಧರ್ಮವರ್ತುಲವನ್ನು ಪೂರ್ಣಗೊಳಿಸಿದನು. ಹೀಗೆ ಸಮಾಜದ ಮಧ್ಯಕ್ಕೇ ಇಳಿಯುವ ಕಾರಣ, ಬಸವಣ್ಣನಂಥ ಅನುಭಾವಿಗಳು ಜೀವಿಸಿರುವಾಗಲೂ ಅನುಭವಿಸಿದ ಹಿಂಸೆಯನ್ನು ಸತ್ತ ಬಳಿಕವೂ ಅನುಭವಿಸುತ್ತಾರೆ. ಅದೇನೇ ಇದ್ದರೂ ಧರ್ಮದ ನಾಲ್ಕು ಮಗ್ಗಲುಗಳನ್ನು ಸರಿಯಾಗಿ ಜೋಡಿಸಿ, ಎತ್ತಿಕಟ್ಟಿದ ಪ್ರಥಮಕೀರ್ತಿ ಜಗತ್ತಿನಲ್ಲಿ ಕಲ್ಯಾಣದ ಶರಣರಿಗೆ ಸಲ್ಲುತ್ತದೆ.

ಲಿಂಗಾಯತರು ಹಿಂದುಗಳಲ್ಲ - ಭಾರತೀಯರು :

ಶರಣರ ಸಮಾಜಮುಖಿ ಸಿದ್ಧಾಂತ, ಸಮೃದ್ಧಿಮುಖಿ ಸಿದ್ಧಾಂತಗಳು ವೈದಿಕ (ಹಿಂದೂ) ಮೂಲದವುಗಳಲ್ಲ, ಇವರ ಸ್ವತಂತ್ರ ಪರಿಕಲ್ಪನೆಗಳು. ಮಾನವಮುಖಿ ಸಿದ್ಧಾಂತದ ಸತ್ಯ, ಅಹಿಂಸೆ ಇತ್ಯಾದಿಗಳು ವೈದಿಕರವೂ ಅಲ್ಲ, ಲಿಂಗಾಯತರವೂ ಅಲ್ಲ, ಎಲ್ಲರಿಗೂ ಸಂಬಂಧಿಸಿದುವು. ಇನ್ನುಳಿದ ಆತ್ಮಮುಖಿ ಸಿದ್ಧಾಂತದ ಆತ್ಮ ಮತ್ತು ಪರಮಾತ್ಮ ಸಂಬಂಧವು ದ್ವೈತವಾಗಿರಬಹುದು ಇಲ್ಲವೆ ಅದ್ವೈತವಾಗಿರಬಹುದು; ಶರಣರು ಇವುಗಳಲ್ಲಿ ಅದ್ವೈತ ಸಂಬಂಧವನ್ನು ತಮ್ಮದೇ ಆದ ಒಂದು ಸಿದ್ಧಾಂತವನ್ನಾಗಿ ಬೆಳೆಸಿದರು. ಹೀಗೆ ನಾಲ್ಕೂ ಮುಖಗಳಲ್ಲಿ ವೈದಿಕದಿಂದ ಭಿನ್ನವಾಗಿರುವ ಶರಣಧರ್ಮವನ್ನು ಬೌದ್ಧ, ಜೈನ, ಶಿಖ್‌ಗಳಂತೆ ಸ್ವತಂತ್ರಧರ್ಮವೆಂದು ಕರೆಯಬೇಕಾಗುತ್ತದೆ.

ಹೀಗೆ ಸ್ವತಂತ್ರವಾಗಿದ್ದರೂ ಹನ್ನೆರಡನೆಯ ಶತಮಾನದ ಬಳಿಕ, ಪ್ರಾಚೀನತೆಯ ವ್ಯಸನ ಮತ್ತು ಶ್ರೇಷ್ಠತೆಯ ವ್ಯಸನಗಳಿಗೆ ಬಲಿಯಾಗಿ, ಲಿಂಗಾಯತವನ್ನು (ವೈದಿಕ)ಶೈವದ ಮುಂದುವರಿಕೆಯೆಂದು ಪ್ರತಿಪಾದಿಸುತ್ತ ಬಂದುದು ಕಾಲ್ಪನಿಕ ಆನಂದವಾಗಿದೆ. ಸಾಲದುದಕ್ಕೆ ಈ ಶತಮಾನದಲ್ಲಿ (ವೈದಿಕ) ಹಿಂದುವಿನ ಭಾಗವೆಂದು ಹೇಳುತ್ತಲಿರುವುದು, ಅನುಭಾವಿಗಳ ಚಲನಶೀಲಧರ್ಮವನ್ನು ಆಚಾರ್ಯರ ಸ್ಥಗಿತಧರ್ಮಕ್ಕೆ ಕಸಿಕಟ್ಟುವ ಭ್ರಮಾತ್ಮಕ ರಾಷ್ಟ್ರೀಯತೆಯಾಗಿದೆ.

ವೈದಿಕ ಧರ್ಮದಂತೆ, ವೈದಿಕ ಸಾಹಿತ್ಯವು ಸುತ್ತಲಿನ ಸಾಹಿತ್ಯದ ಮೇಲೆ ಪ್ರಭಾವ ಬೀರುವ ಸ್ವಭಾವದ್ದಾಗಿದೆ; ವೈದಿಕಭಾಷೆ(ಸಂಸ್ಕೃತ)ಯು ಸುತ್ತಲಿನ ಭಾಷೆಗೆ ತಾನು ಮಾತೃವೆಂದು ಆಭಾಸ ಹುಟ್ಟಿಸುವುದಾಗಿದೆ. ಈ ಸಾಹಿತ್ಯಿಕ ಪ್ರಭಾವ ಎಷ್ಟು ಬಲವಂತವಾಗಿದೆ ಎಂದರೆ, ಸ್ವತಂತ್ರವೆಂದು ಹೇಳಿಕೊಳ್ಳುವ ಜೈನ, ಬೌದ್ಧಗಳಿಗೆ ವೈದಿಕರ ಜನಪ್ರಿಯ ಕಾವ್ಯಗಳಾದ ರಾಮಾಯಣ, ಮಹಾಭಾರತಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ವಚನಕಾರರು ಮಾತ್ರ "ವಿದ್ಯೆಯೆಂದರೆ ರಾಮಾಯಣ, ಮಹಾಭಾರತವಲ್ಲ" ಎನ್ನುತ್ತ, ವರ್ಣಾಶ್ರಮಪದ್ಧತಿಯನ್ನು ಪ್ರತಿಪಾದಿಸುವ ಈ ಕಾವ್ಯಗಳು ಸಾರುವ ಮೌಲ್ಯಗಳನ್ನು ಪ್ರಶ್ನಿಸಿದರು. ಆಮೇಲಿನ ೮೦೦ ವರ್ಷಗಳ ಅವಧಿಯಲ್ಲಿ ಒಬ್ಬ ಲಿಂಗಾಯತ ಕವಿಯೂ ರಾಮಾಯಣ, ಮಹಾಭಾರತ ಬರೆಯಲೇ ಇಲ್ಲ. ಪ್ರಸಂಗ ಬಿದ್ದರೆ "ಸೋದರರ ವಧೆ", "ಕಾಳಗದ ಕಥೆ" ಎಂದು ಮುಂತಾಗಿ ನಿಂದಿಸುತ್ತ ಬಂದರು. ಇಷ್ಟೇ ಏಕೆ ಭೀಮಕವಿಯು ತನ್ನ ಬಸವಪುರಾಣವನ್ನು ಕುರಿತು,

ಆದಿರುದ್ರಗಣ "ಆದಿಪರ್ವಂ"
ವಾದಿಗಳ ಹೃತ್ "ಶಲ್ಯಪರ್ವಂ"
ಮೋದಭಕ್ತಿಗೆ ಬಸವಸಿಂಹಾಸನ "ಸಭಾಪರ್ವಂ"।
ವೇದವಿದರ "ಉದ್ಯೋಗಪರ್ವಂ"

ವೇದಿಸುವವರಿಗೆ "ಶಾಂತಿಪರ್ವಂ"
ಮೇದಿನಿಯೊಳಖಿಳಾಗಮಜ್ಞರ "ಕರ್ಣಪರ್ವ"ವಿದು ॥

ಎಂದು ಮಹಾಭಾರತವನ್ನು ಗಮನಿಸಿ ಹೇಳಿದುದು, ಸಾಹಿತ್ಯಿಕ ನೆಲೆಯಲ್ಲಿಯೂ ವೈದಿಕವನ್ನು ನಿರಾಕರಿಸುವುದೇ ಆಗಿದೆ. ಇದಲ್ಲದೆ ಶೋಷಣೆಯ ಮಾಧ್ಯಮವಾಗಿ ಬೆಳೆದಿದ್ದ ವೈದಿಕ ಭಾಷೆಯಾದ ಸಂಸ್ಕೃತದ ಬಗೆಗೂ ಶರಣರು,

ಕಲ್ಲಿಯ ಹಾಕಿ, ನೆಲ್ಲವ ತಳಿದು,
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ ವಾಗದ್ವೈತವ ಕಲಿತು,
ಸಂಸ್ಕೃತದ ಮಾತಿನ ಪಸರವ ಮುಂದೆ ಇಟ್ಟುಕೊಂಡು,
ಮತ್ಸ್ಯನ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
ಅದೇತರ ನುಡಿ? ಮಾತಿನ ಮರೆ, ಆತುರವೈರಿ ಮಾರೇಶ್ವರಾ ॥

ಎಂದು ನಿರಾಕರಣೆಯ ನಿಲುವು ತೋರುತ್ತಾರೆ. ಹೀಗೆ ಕೇವಲ ಧಾರ್ಮಿಕ ನೆಲೆಯಲ್ಲಲ್ಲ, ಸಾಹಿತ್ಯಿಕ ಮತ್ತು ಭಾಷಿಕ ನೆಲೆಯಲ್ಲಿಯೂ ವೈದಿಕವನ್ನು ಪ್ರತಿಭಟಿಸಿದ ಶರಣಧರ್ಮವನ್ನು ವೈದಿಕಜನ್ಯವೆನ್ನುವುದು, ಕಳೆದ ಶತಮಾನದ ವರೆಗೂ ಕನ್ನಡ ಮೊದಲಾದ ದ್ರಾವಿಡಭಾಷೆಗಳು ಸಂಸ್ಕೃತಜನ್ಯವೆಂದು ವ್ಯರ್ಥ ಪ್ರತಿಪಾದಿಸುತ್ತಿದ್ದುದಕ್ಕೆ ಸಮಾನವಾಗಿದೆ. ಅಂದರೆ ದ್ರಾವಿಡ ಭಾಷೆಗಳು ಸಂಸ್ಕೃತಜನ್ಯವಲ್ಲ. ಹಾಗೆಯೇ ಲಿಂಗಾಯತವು ಹಿಂದೂ (ವೈದಿಕ) ಜನ್ಯವಲ್ಲವೆಂದು ಡಾ. ಕಾಲ್ಡವೆಲ್ಲನಂತೆ ಗಟ್ಟಿದನಿಯಲ್ಲಿ ಹೇಳಬೇಕಿದ್ದು, ಬಹುಶಃ ಆ ಕಾಲ ದೂರವಿಲ್ಲವೆಂದು ನನ್ನ ಭಾವನೆ.

ಒಟ್ಟಾರೆ, ಶಂಕರನ ಅದ್ವೈತ, ಮಧ್ವನ ದ್ವೈತ, ರಾಮಾನುಜನ ವಿಶಿಷ್ಟಾದ್ವೈತಗಳಂತೆ ಲಿಂಗಾಯವು ವೇದಾಂತಕ್ಕೆ ಬರೆದ ಭಾಷ್ಯವಲ್ಲವಾಗಿ, ಲಿಂಗಾಯತರು ಧಾರ್ಮಿಕವಾಗಿ ನೂರಕ್ಕೆ ನೂರು (ವೈದಿಕ) ಹಿಂದುಗಳಲ್ಲ. ಜೈನ ಶಿಖ್‌ಗಳಂತೆ ಸಾಂಸ್ಕೃತಿಕವಾಗಿ ನೂರಕ್ಕೆ ನೂರು ಹಿಂದುಗಳು ಅಂದರೆ ಭಾರತೀಯರು. ಹೀಗಿದ್ದೂ ಲಿಂಗಾಯತಧರ್ಮ ವೈದಿಕಮೂಲದ್ದು ಎಂಬ ಭಾವನೆ ಬೆಳೆದು ಬರಲು ಕಾರಣ, ಆಂಧ್ರದಲ್ಲಿ ಸೃಷ್ಟಿಯಾದ ವೀರಶೈವ ಪದ ಕರ್ನಾಟಕವನ್ನು ಪ್ರವೇಶಿಸಿದುದಾಗಿದ್ದು, ಆ ಇತಿಹಾಸ ಹೀಗಿದೆ.

ಲಿಂಗಾಯತ-ವೀರಶೈವ :

ಪ್ರಾಚೀನ ಕರ್ನಾಟಕದಲ್ಲಿ ಕಾಳಾಮುಖ, ಪಾಶುಪತ, ಮಹಾವ್ರತ, ಶ್ರೋತ್ರೀಯ (ಶಿವಸಮಯ) ಎಂಬ ನಾಲ್ಕು ಶಿವಪರಧರ್ಮಗಳು ಅಸ್ತಿತ್ವದಲ್ಲಿದ್ದುದಾಗಿ ೧೨ನೆಯ ಶತಮಾನದ ಸಿರಸಂಗಿ-ನೇಸರಗಿ (೧೧೪೮), ಸಗರ ಶಾಸನ (೧೧೭೧)ಗಳು ತಿಳಿಸುತ್ತವೆ. ಈ ನಾಲ್ಕರಲ್ಲಿ ಕಾಳಾಮುಖಶೈವ, ಪಾಶುಪತಶೈವ, ಮಹಾವ್ರತ(=ಸೋಮ)ಶೈವಗಳು ಪ್ರಧಾನವಾಗಿ ಕರ್ನಾಟಕದಲ್ಲಿ, ಶ್ರೋತ್ರೀಯಶೈವ (ಶ್ರುತಿ=ವೇದ) ಪ್ರಧಾನವಾಗಿ ಆಂಧ್ರಪ್ರದೇಶದಲ್ಲಿ ಪ್ರಚಾರದಲ್ಲಿದ್ದವು. ಕವಿ ಹರಿಹರ ಹೇಳುವಂತೆ ಆಂಧ್ರಪ್ರದೇಶದ ಕಮ್ಮೆನಾಡಿನದಾಗಿರುವ ಬಸವಣ್ಣನ ಬ್ರಾಹ್ಮಣ ಕುಟುಂಬ, ಬಹುಶಃ ಆಂಧ್ರದ ಈ ಶ್ರೋತ್ರೀಯಶೈವಮೂಲದ್ದು. ಇದು ಬಸವಪುರಾಣದ ಪ್ರಕಾರ "ಉಭಯ ಧರ್ಮಮಾರ್ಗಿ" (3-61). ಅಂದರೆ ಆಗಮಿಕದ (ಸ್ಥಾವರ) ಲಿಂಗ ಮತ್ತು ವೈದಿಕದ ಜನ್ನಿವಾರಗಳೆರಡನ್ನೂ ಮನ್ನಿಸುವ ಸ್ವರೂಪದ್ದಾಗಿದೆ. ಜನ್ನಿವಾರ ಧರಿಸುವುದೆಂದರೆ ವೇದಾಧ್ಯಯನಕ್ಕೆ ಅರ್ಹನಾಗುವುದು. ಬಸವಣ್ಣ ಅದನ್ನು ಹರಿದುಹಾಕಿದನೆಂದರೆ ವೇದಾಧ್ಯಯನವನ್ನು, ವೇದಧರ್ಮವನ್ನು ಮೀರಿದನೆಂದೇ ಅರ್ಥ. ಹೀಗೆ ಮೀರಿ, ಇಷ್ಟಲಿಂಗವನ್ನೇ ಧಾರಣಮಾಡುವ ಲಿಂಗಾಯತ ಹೆಸರಿನ ಹೊಸ

ಧರ್ಮವನ್ನು ಸ್ಥಾಪಿಸಿದನು. ಈ ಧರ್ಮದಲ್ಲಿ ಕರ್ನಾಟಕದ ಕಾಳಾಮುಖ, ಪಾಶುಪತ, ಮಹಾವ್ರತಗಳು ಇಡಿಯಾಗಿ ಕರಗಿಹೋದವು. ಆದರೆ ಆಂಧ್ರದಲ್ಲಿ ಹೆಚ್ಚು ಪ್ರಬಲವಾಗಿದ್ದ ಶ್ರೋತ್ರೀಯ ಶೈವ (ಶುದ್ಧಶೈವ)ರಾದ ಮಲ್ಲಿಕಾರ್ಜುನ ಪಂಡಿತಾರಾಧ್ಯ ಮೊದಲಾದವರು ವೇದಪಾರಮ್ಯವನ್ನು ಮನ್ನಿಸಿಯೂ ಬಸವಣ್ಣನವರ ಈ ಹೊಸ ಧರ್ಮವನ್ನು ಸ್ವೀಕರಿಸಿದರು. ಇಂಥವರಿಂದಾಗಿ ಶರಣಧರ್ಮವು, ಇನ್ನೊಂದು ಬಗೆಯ ಉಭಯಮಾರ್ಗಿಧರ್ಮ ಅಂದರೆ ಇಷ್ಟಲಿಂಗ ಜಸ್ನಿಪಾರಗಳ ಮಿಶ್ರಧರ್ಮವೆಂಬಂತೆ ಆಂಧ್ರದಲ್ಲಿ, ಕರ್ನಾಟಕಾಂಧ್ರ ಗಡಿಸೀಮೆಯಲ್ಲಿ ಅಸ್ತಿತ್ವಕ್ಕೆ ಬಂದಿತು. ಇದೆಲ್ಲ ಜರುಗಿದುದು, ೧೨ನೆಯ ಶತಮಾನದ ಕೊನೆಯಲ್ಲಿ.

ಮುಂದೆ ೧೩ನೆಯ ಶತಮಾನದಲ್ಲಿ, ಈ ಮಿಶ್ರಧರ್ಮದ ಬಹುಮುಖ್ಯ ನೇತಾರನಂತೆ ಬೆಳಗಿದವನು ಕೆರೆಯಪದ್ಮರಸ. ಬಹುಮುಖ್ಯ ಪಠ್ಯದಂತೆ ಮೂಡಿಬಂದುದು ಈತನ ದೀಕ್ಷಾಬೋಧೆ. ಈ ಗ್ರಂಥದಲ್ಲಿ 'ಲಿಂಗಾಯತ' ಪದವಿದೆಯೇ ಹೊರತು ವೀರಶೈವ ಪದವಿಲ್ಲ. ಮುಂದಿನ ತಲೆಮಾರಿನ ಕುಮಾರಪದ್ಮರಸ, ನೀಲಕಂಠನಾಗನಾಥಾಚಾರ್ಯರು ಮಾಹೇಶ್ವರ, ವೀರಮಾಹೇಶ್ವರ ಪದಗಳನ್ನು ಬಳಸಿದ್ದಾರೆ. ಇಲ್ಲಿಯೂ ವೀರಶೈವ ಪದ ಕಾಣಬಂದಿಲ್ಲ. ಈ ಕಾಲದ ಮಹತ್ವದ ಕವಿಗಳಾದ ಹರಿಹರ ರಾಘವಾಂಕರಲ್ಲಿಯೂ ವೀರಶೈವ ಶಬ್ದ ಬಳಕೆಯಾಗಿಲ್ಲ.

ಆಮೇಲಿನ ೧೪ನೆಯ ಶತಮಾನದ ತೆಲುಗು ಬಸವಪುರಾಣವು ಈ ಮಾಹೇಶ್ವರ, ವೀರಮಾಹೇಶ್ವರ ಪದಗಳನ್ನು ಬಳಸಿದ್ದರೆ, ಇದರ ಅನುವಾದವಾಗಿರುವ ಕನ್ನಡ ಬಸವ ಪುರಾಣವು(೧೩೬೯) ಆಶ್ಚರ್ಯವೆಂಬಂತೆ ಇವುಗಳ ಸ್ಥಾನದಲ್ಲಿ ಕೆಲವೊಮ್ಮೆ ವೀರಶೈವ ಪದ ಬಳಸಿದೆ. ಇದರಿಂದ ವೀರಶೈವ ಪದವು ಪಾಲ್ಕುರಿಕೆ ಸೋಮೇಶ್ವರ ಮತ್ತು ಭೀಮಕವಿ ಮಧ್ಯದ (೧೩-೧೪ ನೆಯ ಶತಮಾನಗಳ ಮಧ್ಯದ) ಸೃಷ್ಟಿಯೆಂದೂ, ಕನ್ನಡ ಬಸವಪುರಾಣದ ಮೂಲಕ ಕರ್ನಾಟಕವನ್ನು ಮೊದಲು ಪ್ರವೇಶಿಸಿತೆಂದೂ ಹೇಳಬಹುದು.

ಈ ಮಾತನ್ನು ಕೆಲವರು ವಿರೋಧಿಸುತ್ತಾರೆ. ೫ನೆಯ ಶತಮಾನಕ್ಕಿಂತ ಹಿಂದಿನ ಆಗಮಗಳಲ್ಲಿ ಮತ್ತು ೧೨ನೆಯ ಶತಮಾನದ ಕೊಂಡಗುಳಿ ಕೇಶಿರಾಜನ ಶೀಲಮಹತ್ವದ ಕಂದ, ಶರಣರ ಕೆಲವು ವಚನಗಳಲ್ಲಿ ವೀರಶೈವಪದ ಬಳಕೆಯಾಗಿದೆ ಎಂಬುದು ಇವರ ವಾದ. ಇದು ನಿಜವಿದ್ದರೆ ಈ ೫ ರಿಂದ ೧೨ನೆಯ ಶತಮಾನಗಳ ಮಧ್ಯದ ಕೃತಿಗಳಲ್ಲಿ ವೀರಶೈವ ಪದ ಏಕೆ ಕಾಣಿಸಿಕೊಳ್ಳುವುದಿಲ್ಲ? ಎಂದು ಪ್ರಶ್ನಿಸಬೇಕಾಗುತ್ತದೆ. ಇದರರ್ಥ, ವೀರಶೈವ ಪದವನ್ನೊಳಗೊಂಡ ಉತ್ತರ ಭಾಗವನ್ನು ಕೆಲವು ಆಗಮಗಳಿಗೆ ೧೨ನೆಯ ಶತಮಾನದ ಬಳಿಕ ಜೋಡಿಸಿದರು. ಕೊಂಡಗುಳಿ ಕೇಶಿರಾಜನ ಶೀಲಮಹತ್ವದ ಕಂದ, ಅವನ ಹೆಸರಿನಲ್ಲಿ ಆಮೇಲೆ ಯಾರೋ ಬರೆದುದಾಗಿದೆ ಎಂದು ಕೆಲವು ವಿದ್ವಾಂಸರು ಹೇಳುವ ಮಾತು ನಿಜವೆಂದು ತೋರುತ್ತದೆ. ಷಟ್‌ಸ್ಥಲವಚನ ಕಟ್ಟುಗಳಲ್ಲಿ ತಪ್ಪಿಯೂ ವೀರಶೈವಪದ ಬಳಕೆಯಾಗಿಲ್ಲವಾಗಿ, ಈ ಪದವನ್ನೊಳಗೊಂಡ ಬಿಡಿವಚನಗಳು ಆಮೇಲೆ ಸೃಷ್ಟಿಯಾದುವೆಂದು ಅನುಮಾನಿಸಬೇಕಾಗುತ್ತದೆ.

ಇನ್ನೂ ಒಂದು ವಿಷಯ: ವೀರಶೈವಾಮೃತ ಮಹಾಪುರಾಣ (೧೫೩೦), ಅನಾದಿ ವೀರಶೈವ ಸಾರಸಂಗ್ರಹ (೧೬೦೦), ವೀರಶೈವ ಚಿಂತಾಮಣಿ (೧೭೦೦), ವೀರಶೈವಾಚಾರ ಕೌಸ್ತುಭ (೧೭೦೦), ವೀರಶೈವ ಧರ್ಮಶಿರೋಮಣಿ (೧೭೦೦), ವೀರಶೈವಾನಂದ ಚಂದ್ರಿಕಾ (೧೭೫೦) ಇತ್ಯಾದಿ ವೀರಶೈವ ಶಬ್ದವನ್ನೊಳಗೊಂಡ ಶೀರ್ಷಿಕೆಯ ಸಂಸ್ಕೃತ ಕನ್ನಡ ಗ್ರಂಥಗಳು ೧೫ನೆಯ ಶತಮಾನದಿಂದೀಚೆ ಹುಟ್ಟಿವೆಯೇ ಹೊರತು, ೧೨ರಿಂದ ೧೫ನೆಯ ಶತಮಾನದ ನಡುವೆ ಒಂದೂ ಕಂಡುಬರುವುದಿಲ್ಲ. ಇದರಿಂದ ವೀರಶೈವ ಪದ ೧೨ನೆಯ ಶತಮಾನದ ತರುವಾಯದ ಸೃಷ್ಟಿಯೆಂದು ಮತ್ತೂ ಖಚಿತವಾಗುತ್ತದೆ.

ಮಿಶ್ರಧರ್ಮವಾದ ಈ ವೀರಶೈವದ ಅನುಯಾಯಿಗಳೇ ಆರಾಧ್ಯವೀರಶೈವರು. ಒಳಗೆ ಬಂದ ಇವರು, ಶರಣಸಿದ್ಧಾಂತದಲ್ಲಿ ವೇದಾಗಮಸಿದ್ಧಾಂತವನ್ನೂ, ವೇದಾಗಮ ಸಿದ್ಧಾಂತದಲ್ಲಿ ಶರಣಸಿದ್ಧಾಂತವನ್ನೂ ಸಮನ್ವಯಗೊಳಿಸುತ್ತ ನಡೆದರು. ಭಕ್ತಿಯಿಂದಲೇ ಈ ಕೆಲಸ ಮಾಡಿರಬಹುದಾದರೂ, ಇದರಿಂದಾಗಿ ಲಿಂಗಾಯತ ಮತ್ತು ವೀರಶೈವ ಸಮಾನಾರ್ಥಕ ಪದಗಳಂತೆ ಬಳಕೆಯಾಗುತ್ತ ಬಂದವು.

ಕಲ್ಯಾಣದ ತರುವಾಯ ರೂಪಗೊಂಡ ಮಿಶ್ರಧರ್ಮವಾದ ಈ ವೀರಶೈವದ ಕೇಂದ್ರಗಳೆಂದರೆ, ಕೆರೆಯ ಪದ್ಮರಸಾದಿಗಳ ಹಳೆಬೀಡು, ಮಗ್ಗೆಯ ಮಾಯಿದೇವ-ಮಹಾಲಿಂಗ ದೇವ-ಜಕ್ಕಣಾರಾಧ್ಯ ಮೊದಲಾದವರ ಹಂಪಿ. ಇದಲ್ಲದೆ ಮುಸಲ್ಮಾನರ ದಾಳಿಗೆ ಭೀತನಾಗಿ ಪಾಲ್ಕುರಿಕೆ ಸೋಮನಾಥನು ಆಂಧ್ರಪ್ರದೇಶದಿಂದ ಬೆಂಗಳೂರು ಸಮೀಪದ ಕಲ್ಯೆ ಗ್ರಾಮಕ್ಕೆ ಬರುತ್ತಲೇ ಈ ಧರ್ಮ ಅವನಿಂದಾಗಿ, ಕಲ್ಯೆ, ಗುಬ್ಬಿ, ಗುಮ್ಮಳಾಪುರ ಸಮೀಪದ ಶಿವಗಂಗೆಯನ್ನು ಕೇಂದ್ರವಾಗಿಸಿಕೊಂಡಿತು. ಆ ಬಳಿಕ ಬಹುಶಃ ಕೆಳದಿ ರಾಜ್ಯದ ಬಾಳೆಹಳ್ಳಿಗೆ ವರ್ಗಾವಣೆಗೊಂಡಿತು. ಈ ಸಂಚಾರ ಸಂದರ್ಭದ ಯಾವುದೋ ಕಾಲಘಟ್ಟದಲ್ಲಿ (ಸುಮಾರು ೧೬ನೆಯ ಶತಮಾನದಲ್ಲಿ) ಚತುರಾಚಾರ್ಯಪೀಠ/ಪಂಚಾಚಾರ್ಯಪೀಠದ ಒಕ್ಕೂಟ ಬಹುಶಃ ಈ ಶಿವಗಂಗೆಯಲ್ಲಿ ಹುಟ್ಟಿಕೊಂಡಿತು. ಇದರೊಂದಿಗೆ ವೀರಶೈವ ಪದವೂ ಧಾರ್ಮಿಕ ನೆಲೆಯಲ್ಲಿ ಬೆಳೆಯುತ್ತಲೇ ಹೋಯಿತು.

ಆಧುನಿಕ ಕಾಲಕ್ಕೆ ಬಂದರೆ ಈ ವೀರಶೈವ ಪದ, ಮೊದಲು ಕೆಳದಿ ಸೀಮೆಯ ದಕ್ಷಿಣ ಕರ್ನಾಟಕದ ವಿದ್ವಾಂಸರ ಬರಹಗಳಲ್ಲಿ ಬಳಕೆಯಾಗಿ, ಬಳಿಕ ಸಮಾಜದಲ್ಲಿ ಇಳಿಯತೊಡಗಿತು. ಇದು ಮುದ್ರಣಸಂಸ್ಕೃತಿ ಆರಂಭಗೊಂಡ ಕಾಲ. ರಾಜಧಾನಿಪ್ರದೇಶ ಕಾರಣವಾಗಿ, ಅಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದ ಲೇಖನ-ಪ್ರಕಟನ ಚಟುವಟಿಕೆಗಳು, ಲಿಂಗಾಯತಪದವನ್ನು ಕ್ರಮೇಣ ಮೂಲೆಗೆ ಸರಿಸಿದವು.

ಉತ್ತರಕರ್ನಾಟಕ ಶರಣಸಿದ್ಧಾಂತದ ಜನ್ಮಭೂಮಿ. ಇಲ್ಲಿ ಔಷಧಕ್ಕೂ ವೀರಶೈವಪದ ಜನಬಳಕೆಯಲ್ಲಿರಲಿಲ್ಲ. ೧೮೬೮ರಲ್ಲಿ ಡೆಪ್ಯುಟಿ ಚನ್ನಬಸಪ್ಪನವರು ಬೆಳಗಾವಿಯಲ್ಲಿ ಸ್ಥಾಪಿಸಿದುದು 'ಲಿಂಗಾಯತ ಫ್ರೀ ಬೋರ್ಡಿಂಗ್', ಧಾರವಾಡ ನಿವಾಸಿಯಾದ ಕಿಟೆಲ್ ೧೮೭೫ರಲ್ಲಿ ಪ್ರಕಟಿಸಿದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾಣಿಸಿಕೊಂಡ ಸಾಹಿತ್ಯಘಟ್ಟದ ಹೆಸರು 'Lingait Literature'. ೧೮೮೩ ರಲ್ಲಿ ಗಿಲಗಂಚಿ ಗುರುಸಿದ್ಧಪ್ಪ, ಅರಟಾಳ ರುದ್ರಗೌಡರು ಧಾರವಾಡದಲ್ಲಿ ಸ್ಥಾಪಿಸಿದುದು, 'ಲಿಂಗಾಯತ ಅಸೋಸಿಯೇಶನ್.' ೧೯೧೦ರಲ್ಲಿ ಫ. ಗು. ಹಳಕಟ್ಟಿ ಅವರು ಬಿಜಾಪುರದಲ್ಲಿ ಸ್ಥಾಪಿಸಿದುದು 'ಬಿಜಾಪುರ ಲಿಂಗಾಯತ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಅಸೋಸಿಯೇಶನ್.' ೧೯೧೬ರಲ್ಲಿ ಬೆಳಗಾವಿಯಲ್ಲಿ ಅಸ್ತಿತ್ವಕ್ಕೆ ಬಂದುದು, 'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ' (ಕೆ. ಎಲ್. ಇ.) - ಹೀಗೆ ಈ ಪ್ರದೇಶದಲ್ಲಿ ಹುಟ್ಟಿದುವೆಲ್ಲ 'ಲಿಂಗಾಯತ' ಹೆಸರಿನ ಸಂಸ್ಥೆಗಳು.

ಇಂಥ ಸಂದರ್ಭದಲ್ಲಿ ರೈಲು ಸೌಕರ್ಯ ಕಾರಣವಾಗಿ, ಕಾಶಿಗೆ ಹೋಗುವ ವಿದ್ವಾಂಸರ ಸಂಖ್ಯೆ ವರ್ಧಿಸಿತು. ಅಲ್ಲಿ ಆರಾಧ್ಯ ವೀರಶೈವ ಕೃತಿಗಳಾದ ಕ್ರಿಯಾಸಾರ ಶ್ರೀಕರಭಾಷ್ಯಗಳನ್ನೂ, ಈ ಪರಂಪರೆಯ ಕೆಳದಿರಾಜ್ಯದ ಸಂಸ್ಕೃತಕೃತಿಗಳನ್ನೂ ಓದಿ ಕರ್ನಾಟಕಕ್ಕೆ ಬಂದ ಈ ಪಂಡಿತರು ಮಠಕ್ಕೆ ಸ್ವಾಮಿಯಾಗುವಲ್ಲಿ, ಮಠ ಸಿಗದಿದ್ದರೆ ಪಾಠಶಾಲೆಗೆ ಶಾಸ್ತ್ರಿಯಾಗುವಲ್ಲಿ, ಲಿಂಗಾಯತಶಬ್ದ ತಳ್ಳಲ್ಪಟ್ಟು, ವೀರಶೈವ ಶಬ್ದ ನಿಧಾನವಾಗಿ ಪ್ರಚಾರವಾಗತೊಡಗಿತು. ೧೯೦೪ರ ವೇಳೆಗೆ ಧಾರವಾಡದಲ್ಲಿ 'ಶ್ರೀಮದ್ವೀರಶೈವ ಮಹಾಸಭಾ' ಹೆಸರಿನ ಸಂಸ್ಥೆ ತಲೆಯೆತ್ತಿ, ವೀರಶೈವ ಶಬ್ದಕ್ಕೆ ಅಧಿಕೃತ ಮುದ್ರೆ ಬೀಳುವಲ್ಲಿ, ಲಿಂಗಾಯತ ಶಬ್ದ ಇನ್ನೂ ವೇಗವಾಗಿ ಮರೆಯಾಗತೊಡಗಿತು. ಈಗ "ಲಿಂಗಾಯತ ಖಾನಾವಳಿ" ಎಂಬ ಬೋರ್ಡುಗಳು "ವೀರಶೈವ ಲಿಂಗಾಯತ ಖಾನಾವಳಿ" ಎಂದಾದವು. ಕೊನೆಗೆ "ವೀರಶೈವ ಖಾನಾವಳಿ" ಎಂದಾದವು. ಇದೇ ರೀತಿ ಲಿಂಗಾಯತ ಸಂಘ ಸಂಸ್ಥೆಗಳೂ ಹೆಸರು ಬದಲಿಸಿಕೊಳ್ಳುತ್ತ ಬಂದವು. ಉದಾ: ಬೆಂಗಳೂರಿನ "ಲಿಂಗಾಯತ ವಿದ್ಯಾನಿಧಿ ಸಂಘ"

(೧೯೦೫) ಹೆಸರನ್ನು "ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ" (೧೯೭೩) ಎಂದು, ಸೊಲ್ಲಾಪುರದ "ಲಿಂಗಾಯತ ಅಸೋಸಿಯೇಶನ್" (೧೯೦೭) ಹೆಸರನ್ನು "ವೀರಶೈವ ಮಹಾಜನ ಸಭೆ" ಎಂದು ಬದಲಿಸಲಾಯಿತು.

ಹೀಗೆ ಹೆಸರಿನಲ್ಲಿ ಏನೇ ವ್ಯತ್ಯಾಸವಾದರೂ ವಿರಕ್ತ ಮತ್ತು ಪಂಚಾಚಾರ್ಯ ಪರಂಪರೆಯವರು ಪರಸ್ಪರ ವಿಶ್ವಾಸದಿಂದ ಬಾಳುತ್ತ ಬಂದರು. ಅಂದರೆ ಪಂಚಾಚಾರ್ಯ ಪರಂಪರೆಯವರು ಶರಣಧರ್ಮದ ಬಗ್ಗೆ ಭಕ್ತಿಯಿಂದಲೇ ನಡೆದುಕೊಳ್ಳುತ್ತಿದ್ದರು. ಉದಾ: ಆಚಾರ್ಯ ಪರಂಪರೆಯ ಮಲ್ಲಿಕಾರ್ಜುನ ಪಂಡಿತಾರಾಧ್ಯನು "ಬಸವ ಬಸವಾ, ಬಸವ, ಪರಮಗುರು ಬಸವ, ಮತ್ಸ್ವಾಮಿ ಸಂಗನಬಸವ" ಎಂದು ಮೊದಲಾಗಿ ಸ್ತುತಿಸಿದ್ದಾನೆ. ತೆಲುಗು ಪಾಲ್ಕುರಿಕೆ ಸೋಮಾರಾಧ್ಯನ ಬಸವಭಕ್ತಿ ಇತಿಹಾಸಪ್ರಸಿದ್ಧವಾಗಿದೆ. ಆಚಾರ್ಯ ಸಂಪ್ರದಾಯದ ಮಗ್ಗೆಯ ಮಾಯಿದೇವ "ಜಯ ಬಸವೇಶ ಭಕ್ತಜನಭಾಗ್ಯ ಶುಭೋದಯ ವೀರಶೈವ ನಿರ್ಣಯ ಪರಮಾವತಾರ" ಎಂದು ಕೀರ್ತಿಸಿದ್ದಾನೆ. ಇದೇ ಸಂಪ್ರದಾಯದ ಗುಬ್ಬಿಯ ಮಲ್ಲಣಾರ್ಯನು ಬಸವಪುರಾಣದ ಮಲ್ಲಣಾರ್ಯನೆಂದೇ ಪ್ರಖ್ಯಾತನಾಗಿದ್ದಾನೆ ಮತ್ತು "ಷಟ್ಸ್ಥಲದ ನಿರ್ಣಯವನಿಟ್ಟವಂ ಬಸವಣ್ಣನಲ್ಲದಿನ್ನಾರು ಲೋಕದೊಳು?" ಎಂದು ಸಾರಿದ್ದಾನೆ. ರಂಭಾಪುರಿಪೀಠದ ಜಗದ್ಗುರು ಕುಮಾರ ಚನ್ನಬಸವನು (೧೫೪೯) "ಶಶಿಧರಾರ್ಚಕ ಜನಕೆ ಬಸವೇಶನಂದದಿ" ತಾನಿರುವುದಾಗಿ ಹೆಮ್ಮೆ ಪಟ್ಟುಕೊಂಡಿದ್ದಾನೆ. ಗುರುವರ್ಗಕ್ಕೆ ಸಂಬಂಧಿಸಿದ ಹೂಲಿಮಠದ ಸಿದ್ಧನಂಜೇಶನು "ಬಸವಣ್ಣನಿಂದಧಿಕಮಿಲ್ಲ" ಎಂದು ಬಸವಣ್ಣನ ಮಹತ್ವವನ್ನು ಸಾರಿದ್ದಾನೆ. ಸಿದ್ಧಾಂತ ಶಿಖಾಮಣಿ ಮೊದಲಾದ ಹಸ್ತಪ್ರತಿಗಳು "ಶ್ರೀ ಗುರು ಬಸವಲಿಂಗಾಯನಮಃ" ಎಂದು ಬಸವ ನಮಸ್ಕಾರವಾಕ್ಯದಿಂದಲೇ ಆರಂಭವಾಗುತ್ತವೆ. ಮೇಲೆ ಹೇಳಿದ ಸಿದ್ಧನಂಜೇಶನು "ಬಸವಶತಕ", "ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ ಸ್ತೋತ್ರ" ಕೃತಿಗಳನ್ನು, ರಂಭಾಪುರಿ ಪೀಠದ ಜಗದ್ಗುರು ಕುಮಾರಚನ್ನಬಸವನು "ಬಸವೇಶ್ವರ ಪುರಾಣದೊಳು ಗುಪ್ತವೆನಿಸುವ ಪುರಾತನರ ಚರಿತೆ"ಯನ್ನೂ ಬರೆದಿದ್ದಾರೆ. ಷಡಕ್ಷರದೇವನು ಬಸವಣ್ಣನನ್ನು ಕುರಿತು ವೃಷಭೇಂದ್ರವಿಜಯ ಬರೆದುದು ಪ್ರಸಿದ್ಧವೇ ಇದೆ. ಹೀಗಿದ್ದೂ ೧೫ನೆಯ ಶತಮಾನದ ತರುವಾಯ ಇತಿಹಾಸದ ಯಾವುದೋ ಕಾಲಘಟ್ಟದಲ್ಲಿ ಆಚಾರ್ಯರು ಕ್ರಮೇಣ ಮೇಲರಿಮೆ ಬೆಳೆಸಿಕೊಳ್ಳುವಲ್ಲಿ ಮತ್ತು ವಿರಕ್ತರು ನೆಲೆನಿಂತು ಮಠ ಕಟ್ಟಿಸಿಕೊಳ್ಳುವಲ್ಲಿ ಪರಸ್ಪರ ಭಾವ ಬಿರುಕುಬಿಟ್ಟಂತಿದೆ. ಇದು ಇತಿಹಾಸ.

II

ಇಂದು ಲಿಂಗಾಯತರು ವೀರಶೈವರಾಗಿ, ವೀರಶೈವರು ಲಿಂಗಾಯತರಾಗಿ ಬೆಳೆದಿದ್ದಾರೆ. ಎಷ್ಟೇ ಕಹಿ ಎನಿಸಿದರೂ ಈ ವಾಸ್ತವವನ್ನು ಇಬ್ಬರೂ ಒಪ್ಪಿಕೊಳ್ಳಬೇಕು. ಇಂದು ನಾವು ಲಿಂಗಾಯತರೂ ಹೌದು, ವೀರಶೈವರೂ ಹೌದು ಎಂಬುದನ್ನು ತಿಳಿದುಕೊಂಡು, ಎರಡೂ ಮನಸ್ಸುಗಳು ಮತ್ತೆ ಒಂದಾಗಿ, ೧೨ನೆಯ ಶತಮಾನಕ್ಕೆ ಹಿಂದಿನಂತೆ ಸಾಮರಸ್ಯದಿಂದ "ಶರಣಮಾರ್ಗ"ದಲ್ಲಿ ಮುನ್ನಡೆಯಬೇಕು. ಏಕೆಂದರೆ ನಮ್ಮನ್ನು ಇತ್ತ ಒಳಗೆ ಕರ್ನಾಟಕದಲ್ಲಿ ಸಾಮಾನ್ಯ ಜನರ ವರೆಗೂ, ಅತ್ತ ಹೊರಗೆ ಜಾಗತಿಕದಲ್ಲಿ ಅಸಾಮಾನ್ಯ ಜನರ ವರೆಗೂ ಕರೆದುಕೊಂಡು ಹೋಗುವ ಶಕ್ತಿ ಬಸವಾದಿ ಶರಣರಿಗೆ ಮಾತ್ರ ಇದೆ. ಆದುದರಿಂದ, ಮುಸುಕಿನ ಗುದ್ದಾಟವನ್ನು ಬಿಟ್ಟು, ಮೊದಲಿನಂತೆ ಒಮ್ಮತದಿಂದ "ಶರಣಮಾರ್ಗ"ವನ್ನು ಅನುಸರಿಸಬೇಕು.

ಲಿಂಗಾಯತ ಮಠಗಳು ಏಕಸ್ವಾಮ್ಯದಿಂದ ಮುಕ್ತವಾಗಲಿ :

ತಾತ್ವಿಕವಾಗಿ ಹೇಳುವುದಾದರೆ ಶರಣಧರ್ಮದಲ್ಲಿ ಮೂಲತಃ ಜಂಗಮ (ಚರ)ಪೀಠದ ಪರಿಕಲ್ಪನೆ ಇದೆ, ಆಚಾರ್ಯ (ಗುರು) ಪೀಠದ ಪರಿಕಲ್ಪನೆ ಇಲ್ಲ. ಹೀಗಿದ್ದೂ ತರುವಾಯದ ದಿನಗಳಲ್ಲಿ ಐತಿಹಾಸಿಕ ಕಾರಣಗಳಿಂದಾಗಿ ಆರಾಧ್ಯವೀರಶೈವದಿಂದ ನಮ್ಮಲ್ಲಿ ಆಚಾರ್ಯಪೀಠಗಳು ಬೆಳೆದುಬಂದಿವೆ. ಆರಂಭದಲ್ಲಿ ಈ

ಜಂಗಮಪೀಠ ಆಚಾರ್ಯಪೀಠ ಎರಡರಲ್ಲಿಯೂ ಜಾತ್ಯತೀತವಾಗಿ ಪೀಠವೇರುವ ಮುಕ್ತ ಅವಕಾಶವಿದ್ದಿತು. ಆದರೆ ಕಾಲ ಗತಿಸಿದಂತೆ ಎರಡೂ ಕಡೆಗೆ ಜಂಗಮವಂಶಸ್ಥರೇ ಪೀಠವೇರುವ ದೋಷಪೂರ್ಣ ಪರಿಸ್ಥಿತಿ ನಿರ್ಮಾಣವಾಯಿತು. ಮಠಗಳ ಮೇಲಿನ ಜಂಗಮವಂಶಸ್ಥರ ಈ ಏಕಸ್ವಾಮ್ಯದ ಮೂಲ ನೆಲೆಗಳೆಂದರೆ ಜಂಗಮರನ್ನೇ ವಟುಗಳನ್ನಾಗಿ ರೂಪಿಸುವ ಮಠಗಳು ಮತ್ತು ಶಿವಯೋಗಮಂದಿರ. ಇನ್ನು ಮೇಲೆ ಶಿವಯೋಗಮಂದಿರ ಈ ದೋಷ ನಿವಾರಣೆಗಾಗಿ ವಟುಗಳಿಗೆ ಮುಕ್ತ ಅವಕಾಶ ನೀಡುವುದು ಅವಶ್ಯವಿದೆ.

ಇನ್ನೊಂದು ದೋಷವೆಂದರೆ, ಜಂಗಮಜಾತಿಯಲ್ಲಿಯೇ ಶಿಷ್ಯವರ್ಗ, ಪುತ್ರವರ್ಗ ಎಂದು ಎರಡು ರೀತಿಯ ಗುರುವರ್ಗದ ಮಠಗಳಿರುವುದು. ಇವುಗಳಲ್ಲಿ ಜಂಗಮಜಾತಿಯ ಶಿಷ್ಯವರ್ಗದ ಮಠಾಧೀಶತ್ವದಿಂದಾಗಿ ಅವು ಜಂಗಮಸಮಾಜದ ಆಸ್ತಿಯಾದವು; ಪುತ್ರವರ್ಗದ ಮಠಾಧೀಶತ್ವದಿಂದಾಗಿ ಜಂಗಮಕುಟುಂಬದ ಆಸ್ತಿಯಾದವು. ಕೊನೆಗೆ ಗೃಹಸ್ಥರ ಮನೆಗಳೇ ಆಗಿಬಿಟ್ಟವು. ಸಾಲದುದಕ್ಕೆ ಕೆಲವು ವಿರಕ್ತ ಮಠಗಳೂ ಮನೆಗಳಾದವು. ಈ ಮತ್ತು ಇಂಥ ಬೇರೆ ತಪ್ಪು ಪದ್ಧತಿಗಳು ಕಾರಣವಾಗಿಯೇ ಕರ್ನಾಟಕದಲ್ಲಿದ್ದ ವೀರಶೈವ ಲಿಂಗಾಯತರ ೫೭೦೬ ಮಠಗಳಲ್ಲಿ ೩೮೨೮ ಜಂಗಮರ ಮನೆಗಳಾದವು. ಇಂದು ಉಳಿದಿರುವ ೧೮೭೫ ಮಠಗಳಲ್ಲಿ ನಿಜವಾಗಿಯೂ ಉಳಿದುಕೊಂಡುವು ೧೧೮೪ ಮಾತ್ರ. ಅಂದರೆ ಈಗ ಅಸ್ತಿತ್ವದಲ್ಲಿರುವವುಗಳ ಮೂರುಪಟ್ಟು ಮಠಗಳು ಗೃಹಸ್ಥರ ಮನೆತನಗಳಾದವು. ಈ ಶಿಷ್ಯವರ್ಗ, ಪುತ್ರವರ್ಗ ಪದ್ಧತಿ ಹೀಗೆಯೇ ಮುಂದುವರಿದರೆ, ಉಳಿದಿರುವ ಗುರುವರ್ಗದ ಎಲ್ಲ ಮಠಗಳು ಗೃಹಸ್ಥರ ಮನೆತನಗಳಾಗುವ ಕಾಲ ದೂರವಿಲ್ಲವೆನಿಸುತ್ತದೆ.

ಈ ಎಲ್ಲ ತಪ್ಪುಗಳನ್ನು ತಿದ್ದಿಕೊಳ್ಳುವ ರೀತಿಯಲ್ಲಿ ವೀರಶೈವ ಲಿಂಗಾಯತ ಮಠಗಳು ಇಂದು ಮಠ ಮತ್ತು ಜಾತಿ ವಿಷಯದಲ್ಲಿ ಅನೇಕ ಪ್ರಯೋಗಗಳನ್ನು ಮಾಡುತ್ತಲಿವೆ. ವಿರಕ್ತಮಠಗಳಿಗೆ ಕ್ವಚಿತ್ತಾಗಿ ಭಕ್ತವರ್ಗದವರು ಸ್ವಾಮಿಗಳಾಗುತ್ತಿರುವರಾದರೂ ಇಳಕಲ್ಲದ ಪೂಜ್ಯ ಶ್ರೀ ಮಹಾಂತಸ್ವಾಮಿಗಳು ತಮ್ಮ ಶಾಖಾಮಠಗಳಲ್ಲಿ ಜಾತಿಗೋಡೆ ಒಡೆದು, ಶರಣಧರ್ಮೀಯರನ್ನು ಪೀಠಾಧಿಕಾರಿಯನ್ನಾಗಿ ಮಾಡುತ್ತಲಿರುವುದು ತುಂಬಾ ಆರೋಗ್ಯಕರ ಬೆಳವಣಿಗೆ. ಮೈಸೂರಿನ ಸುತ್ತೂರುಮಠ, ತುಮಕೂರಿನ ಸಿದ್ಧಗಂಗಾಮಠ, ಸಿರಿಗೆರೆಯ ತರಳಬಾಳು ಮಠಗಳು ಜಂಗಮರಿಗೇ ಸೀಮಿತವಾಗಿದ್ದ ಪೀಠಾಧಿಕಾರವನ್ನು ಭಕ್ತರಿಗೂ ವಿಸ್ತರಿಸಿವೆ. ಹೀಗೆ ವಿಸ್ತರಿಸಿ ಶರಣಸಿದ್ಧಾಂತದ ದಾರಿಯಲ್ಲಿ ಮುಂದುವರಿಯುವುದರಿಂದ ಮಾತ್ರ ಲಿಂಗಾಯತ ಸಮಾಜ ಮುಕ್ತವಾಗಿ, ಶಕ್ತವಾಗಿ ಬೆಳೆಯಬಲ್ಲುದೆಂಬುದನ್ನು, ನೂರಾರು ಜನಪರ ಸಂಸ್ಥೆಗಳನ್ನು ಕಟ್ಟುವುದರ ಮೂಲಕ ತೋರಿಸಿಕೊಟ್ಟಿವೆ. ಇತ್ತೀಚೆ ಗದುಗಿನ ತೋಂಟದಾರ್ಯಮಠ ಈ ದಿಸೆಯಲ್ಲಿ ವ್ಯಾಪಕ ಭೂಮಿಕೆಯನ್ನು ಸಿದ್ಧಪಡಿಸುತ್ತಲಿದೆ. ಪೂಜ್ಯ ಮಾತೆ ಮಹಾದೇವಿಯವರ ಮಹಿಳಾ ಜಗದ್ಗುರು ಪೀಠಸ್ಥಾಪನೆ ತಿಳಿದ ವಿಷಯವೇ ಆಗಿದೆ.

ಇತ್ತ ಗುರುವರ್ಗದ ಪೀಠಗಳಿಗೆ ಕ್ವಚಿತ್ತಾಗಿ ಭಕ್ತರು ಮಠಾಧೀಶರಾಗುತ್ತಿದ್ದರೂ, ವ್ಯವಸ್ಥೆ ಸಾಂಪ್ರದಾಯಕವೇ ಆಗಿರುವುದರಿಂದ ಏನನ್ನೂ ಸಾಧಿಸಿದಂತಾಗಿಲ್ಲ. ಇದೇ ಪರಂಪರೆಯ ಗೂಳೂರು ಸಂಸ್ಥಾನಮಠದ ಪೂಜ್ಯ ಶ್ರೀ ಚನ್ನಮಲ್ಲಸ್ವಾಮಿಗಳು ಆರಂಭಿಸಿರುವ ಚಲನಶೀಲತೆಯನ್ನು ಒಂದಿಷ್ಟು ಕಾದು ನೋಡಬೇಕಾಗಿದೆ. ಹೀಗಿರುವಾಗ ಗುರುವರ್ಗದ ಶ್ರೀ ಭಾಲ್ಕಿಮಠವು ಏಕಕಾಲಕ್ಕೆ ಜಾತ್ಯಾತೀತ ಪೀಠಾರೋಹಣ, ಶರಣಮಾರ್ಗಾನುಸರಣವೆಂಬ ಎರಡು ಕ್ರಾಂತಿಗಳಿಗೆ ನಾಂದಿ ಹಾಡಿದೆ. ಒಟ್ಟಾರೆ, ಭವಿಷ್ಯತ್ತಿನಲ್ಲಿ ವಿರಕ್ತವರ್ಗದ ಮಠಗಳು "ಇಳಕಲ್ಲ ಮಾದರಿ"ಯನ್ನು, ಗುರುವರ್ಗದ ಮಠಗಳು "ಭಾಲ್ಕಿಮಾದರಿ"ಯನ್ನು ಅನುಸರಿಸುವುದು ಸೂಕ್ತವೆನಿಸುತ್ತದೆ. ಇಂದು ಎರಡೂ ವರ್ಗದ ಬಹುಸಂಖ್ಯೆ ಸಣ್ಣ ಮಠಾಧೀಶರೂ, ಬಹುಸಂಖ್ಯೆ ಭಕ್ತರೂ ಒಂದುಗೂಡುವ ತವಕದಲ್ಲಿದ್ದು, ತಮ್ಮ ಹುಸಿ ಪ್ರತಿಷ್ಠೆ ಮುಂದುವರಿಸಿಕೊಂಡು ಹೋಗುವುದರ ಸಲುವಾಗಿ ಎರಡೂ ಕಡೆಯ ಜಗದ್ಗುರುಗಳೂ ಭಕ್ತಧುರೀಣರೂ ಇವರನ್ನು ತಡೆಯುವ ಪ್ರಯತ್ನ ಮಾಡಬಾರದು.

ಪ್ರಜಾಪ್ರಭುತ್ವ ಮನೋಧರ್ಮಕ್ಕೆ ವಿರುದ್ಧವಾದ ಇಂಥ ಕೃತಕ ಪ್ರಯತ್ನ ಖಂಡಿತವಾಗಿಯೂ ವ್ಯರ್ಥವಾಗುವುದೆಂದು ಬೇರೆ ಹೇಳಬೇಕಿಲ್ಲ.

ಈ ಸಂದರ್ಭದಲ್ಲಿ ಮಠ-ಮಠಾಧೀಶರನ್ನು ಕುರಿತು ಆಡಬೇಕಾದ ಮಾತುಗಳಿವು : ಮಠಗಳು ಶರಣ ಸಂಸ್ಕೃತಿ ಪ್ರಸಾರದ ಕೇಂದ್ರಗಳು. ಹೊಸ ಕೇಂದ್ರಗಳನ್ನು ಸ್ಥಾಪಿಸುವ ಅಗತ್ಯವಿಲ್ಲವೆಂಬಂತೆ ಇವುಗಳದು ನಮ್ಮಲ್ಲಿ ದೊಡ್ಡ ವ್ಯವಸ್ಥೆಯಾಗಿ ಬೆಳೆದಿದೆ. ಇನ್ನೂ ಪರಿಣಾಮಕಾರಿ ಕೆಲಸವಾಗಬೇಕಾದರೆ ಮೇಲೆ ಹೇಳಿದಂತೆ ಇವುಗಳನ್ನು ಪ್ರಜಾಸತ್ತೆ ಪದ್ಧತಿಗೆ ಒಳಪಡಿಸಿ, ತಾಲ್ಲೂಕು-ಜಿಲ್ಲೆ-ರಾಜ್ಯ ವಲಯಗಳಾಗಿ ಮರು ಸಂಘಟಿಸಬೇಕಾಗಿದೆ. ಇವುಗಳ ಭೌತಿಕ ಮತ್ತು ಸಾಂಸ್ಕೃತಿಕ ಪ್ರಗತಿಗಾಗಿ ಒಂದು ನಿರ್ದಿಷ್ಟ "ಸಂವಿಧಾನ"ರೂಪುಗೊಳ್ಳುವುದು ತೀರ ಅಗತ್ಯವಿದೆ.

ಮಠದ ಶಕ್ತಿಯೆಂದರೆ ಮಠಾಧಿಕಾರಿಗಳು. ಯಾವುದೇ ಅಧಿಕಾರಿಗೆ ತನ್ನ ಅಧಿಕಾರದ ತಿಳಿವಳಿಕೆ, ನಿರ್ವಹಣೆಯ ದಕ್ಷತೆ ಅವಶ್ಯ. ಈ ದೃಷ್ಟಿಯಿಂದ ಹೇಳುವುದಾದರೆ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಪೀಠಾರೋಹಣ ಮಾಡಲಿರುವ ಸ್ವಾಮಿಗಳಿಗೆ ಕನ್ನಡ ಭಾಷೆಯ ಜೊತೆಗೆ ಕನಿಷ್ಠ ಪಕ್ಷ ಇನ್ನೊಂದು ಭಾಷೆಯ ಜ್ಞಾನ, ಶರಣಸಿದ್ಧಾಂತದ ತಾತ್ವಿಕ ಮತ್ತು ಆಚರಣಾತ್ಮಕ ತಿಳಿವಳಿಕೆ ಅವಶ್ಯ ಬೇಕು. ಹೆಚ್ಚಿನದಾಗಿ ವರ್ಷಕ್ಕೆ ಮೂರು ತಿಂಗಳು ಹೊರರಾಜ್ಯಗಳಲ್ಲಿ ಸಂಚರಿಸುವ ಕಾರ್ಯಕ್ರಮವನ್ನು, ಒಳನಾಡಿನ ಮಠಾಧೀಶರಿಗೆ ಕಡ್ಡಾಯಗೊಳಿಸಬೇಕು. ಇಂದು ಹೊರರಾಜ್ಯಗಳ ಲಿಂಗಾಯತರು ಪರಸ್ಪರ ಸಂಪರ್ಕ, ಸಂಘಟನೆ ಇತ್ಯಾದಿಗಳ ಕೊರತೆಯಿಂದಾಗಿ ಕ್ರಮೇಣ ತಮಗೆ ತಿಳಿಯದಂತೆಯೇ ಅಲಿಂಗಾಯತರಾಗುತ್ತಲಿದ್ದಾರೆ. "ಹೊರನಾಡ ಲಿಂಗಾಯತರ ಸಂಘಟನೆ"ಯ ಹೆಸರಿನಲ್ಲಿ ಒಂದು ಕಾಲಬದ್ಧ ಯೋಜನೆಯನ್ನು ವೀರಶೈವ ಮಹಾಸಭೆ ಮತ್ತು ಮಠಾಧೀಶರು ರೂಪಿಸಿಕೊಂಡು, ಅಲ್ಲಲ್ಲಿಯ ಮಠಗಳ ಸುಧಾರಣೆ, ಹೊಸ ಮಠ/ಸಂಸ್ಥೆಗಳ ಸ್ಥಾಪನೆ, ಸೂಕ್ತ ಮಠಾಧೀಶ/ಅಧಿಕಾರಿಗಳ ನೇಮಿಸುವಿಕೆ, ಇತ್ಯಾದಿ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕು. ಇಂಥ ಸೀಮೋಲ್ಲಂಘನೆಯ ಮೂಲಕ ಅಂತಾರಾಜ್ಯಗಳ ಸಂಬಂಧವನ್ನು ಬಲಪಡಿಸಿ, ವೀರಶೈವವು ದಕ್ಷಿಣ ಭಾರತದ ದೊಡ್ಡ ಸಮುದಾಯವೆಂಬುದನ್ನು ಸಾರ್ವಜನಿಕರಿಗೆ, ಸರ್ಕಾರಕ್ಕೆ ಸಾಬೀತುಪಡಿಸಬೇಕು.

ಇಲ್ಲಿ ಹೇಳಬೇಕಾದ ಇನ್ನೊಂದು ಮಾತು: ಅನ್ನದಾಸೋಹ-ಶಿಕ್ಷಣದಾಸೋಹ-ಪುಸ್ತಕ ಪ್ರಕಟನೆ ಕ್ಷೇತ್ರಗಳಲ್ಲಿ ವೀರಶೈವ ಮಠಗಳು ಮಾಡುತ್ತಲಿರುವ ಸೇವೆ ಆದರ್ಶಪ್ರಾಯವಾಗಿದೆ. ಇವುಗಳ ಜೊತೆ ಔಷಧ ದಾಸೋಹವೆಂಬ ಹೊಸ ಉಪಕ್ರಮವನ್ನು ಆರಂಭಿಸಬೇಕಾಗಿದೆ. ಈ ಎಲ್ಲ ಬಹಿರ್ಮುಖಿ ಕೆಲಸಗಳ ನಡುವೆಯೂ ನಮ್ಮ ಮಠಾಧೀಶರು ಅಂತರ್ಮುಖತೆಯನ್ನು ಕಳೆದುಕೊಳ್ಳಬಾರದೆಂದು ಕೋರುತ್ತೇನೆ.

ಲಿಂಗಾಯತ ಸಮಾಜದ ಏಕೀಕರಣ :

ಶರಣರದು ಅಭೇದಸಂಸ್ಕೃತಿ. ಜೀವ ದೇವರಲ್ಲಿ, ಹಾಗೆಯೇ ಜೀವ ಜೀವರಲ್ಲಿ ಅಭೇದವನ್ನು ಪ್ರತಿಪಾದಿಸುವ ಇದು, ೧೨ನೆಯ ಶತಮಾನದಲ್ಲಿ ಅಂಥ ಅಭೇದಸಂಸ್ಕೃತಿಯನ್ನು ಹುಟ್ಟುಹಾಕಿತು. ದುರ್ದೈವದ ಸಂಗತಿಯೆಂದರೆ ತರುವಾಯದ ದಿನಗಳಲ್ಲಿ ವರ್ಗ ವರ್ಣ ಲಿಂಗ ಇತ್ಯಾದಿ ಭೇದಸಂಸ್ಕೃತಿಯನ್ನು ನಿರ್ಮಿಸಿಕೊಳ್ಳುತ್ತ ಬಂದಿತು.

ವರ್ಣಭೇದವನ್ನು ಕುರಿತು ಹೇಳುವುದಾದರೆ, ಇಲ್ಲಿ ಜಂಗಮ ಮತ್ತು ಭಕ್ತರಲ್ಲಿ ಪೂಜ್ಯ-ಪೂಜಕ ಎಂಬ ದೊಡ್ಡ ಕಂದರ ನಿರ್ಮಾಣವಾಗಿದೆ. ಹೆಚ್ಚಿನದಾಗಿ ಭಕ್ತರಲ್ಲಿ ವೃತ್ತಿಯನ್ನು ಅವಲಂಬಿಸಿ ಗಾಣಿಗ ಬಣಜಿಗ ಅಗಸ ಕ್ಷೌರಿಕರೆಂಬ, ಪ್ರದೇಶವನ್ನು ಅವಲಂಬಿಸಿ ನೊಣಬ ರೆಡ್ಡಿ, ಮಲೆಗೌಡರೆಂಬ, ಆಡಳಿತವನ್ನು ಅವಲಂಬಿಸಿ ಗೌಡ, ಲಾಳಗೊಂಡರೆಂಬ ಉಪಜಾತಿಯ ಸಣ್ಣ ಕಂದರಗಳು ನಿರ್ಮಾಣವಾಗಿವೆ. ಇತ್ತೀಚಿನ ದಿನಗಳಲ್ಲಿ ಕೆಲವರು ರಾಜಕೀಯ ಲಾಭಕ್ಕಾಗಿ ತಮ್ಮ ತಮ್ಮ ಉಪಜಾತಿಯ ಸಂಘಗಳನ್ನು ರಚಿಸಿದ್ದಾರೆ. ಸಣ್ಣ ಮತ್ತು

ದುರ್ಬಲ ಉಪಜಾತಿಗಳು ತಮ್ಮ ಸ್ಥಾನಮಾನದ ಉದಾತ್ತೀಕರಣಕ್ಕಾಗಿ ಸಂಘ ರಚಿಸುವುದು ಕ್ಷಮ್ಯ. ಆದರೆ ಪಂಚಮಸಾಲಿ ಗಾಣಿಗ ಬಣಜಿಗ ರೆಡ್ಡಿ ಇತ್ಯಾದಿ ದೊಡ್ಡ ಮತ್ತು ಸಬಲ ಉಪಜಾತಿಗಳು ಸಂಘ ರಚಿಸಿಕೊಂಡುದು, ಅಪಾಯಕಾರಿ ಬೆಳವಣಿಗೆ. ಇದಕ್ಕಿಂತ, ಜನನ ಕಾರಣವಾಗಿ ಸಮಾಜದ ಧಾರ್ಮಿಕ ಯಜಮಾನತ್ವ ಪಡೆದಿರುವ ಜಂಗಮರು "ಜಂಗಮಾಭಿವೃದ್ಧಿ ಸಂಘ" ರಚಿಸಿಕೊಂಡುದು ಇನ್ನೂ ಅಪಾಯಕಾರಿ ಬೆಳವಣಿಗೆ. ಯಾವ ಅಂಜಿಕೆಯೂ ಇಲ್ಲವೆಂಬಂತೆ ಮಠಾಧೀಶರು ಈ ಸಂಘಗಳ ಸಭೆಯ ಸಾನಿಧ್ಯ ವಹಿಸುತ್ತಿರುವುದು, ಡಾಕ್ಟರ್-ಎಂಜಿನಿಯರ್-ಪ್ರೊಫೆಸರ್ ಇತ್ಯಾದಿ ವಿದ್ಯಾವಂತರು ಪಾಲ್ಗೊಳ್ಳುತ್ತಲಿರುವುದು ಅಂದರೆ ಅವುಗಳನ್ನು ಪ್ರೋತ್ಸಾಹಿಸುತ್ತಿರುವುದು ವಿಷಾದನೀಯ. ಇಂಥ ಸಂಘಟನೆಗಳಿಂದ ಆವೇಶದ ಚರ್ಚೆ, ಭಾಷಣ ಬಿಟ್ಟರೆ ಏನೂ ಲಾಭವಿಲ್ಲ. ಬಹಳೆಂದರೆ ಆಯಾ ಉಪಪಂಗಡಗಳ ಮುಗ್ಧ ಜನರು ಬಲಿಪಶುಗಳಾಗಿ, ಕಳಪೆ ವ್ಯಕ್ತಿಗಳ ಧುರೀಣತ್ವ ಬೆಳೆಯುತ್ತದೆ. ವ್ಯಕ್ತಿತ್ವವಿಲ್ಲದೆ ಬಹುಸಂಖ್ಯೆಯ ಬಲದಿಂದ ಧುರೀಣರಾಗಿ ಬೆಳೆದವರು, ಸಾಮಾಜಿಕ-ರಾಜಕೀಯ ಜೀವನದಲ್ಲಿ ಬಹಳ ದಿನ ಬಾಳಲಾರರು-ತಾಳಲಾರರು. ಮುಂದಿನ ದಿನಗಳಲ್ಲಿ ಈ ಬಗೆಯ ಪ್ರತ್ಯೇಕತೆಯಿಂದಾಗಿ ಉಪ ಪಂಗಡಗಳು ತಬ್ಬಲಿಯಾಗುತ್ತ ನಡೆದು, ಅವರ ಮಕ್ಕಳು ಅಸಹಾಯಕಸ್ಥಿತಿ ಅನುಭವಿಸುತ್ತಾರೆ. ಕಾರಣ, ವರ್ತಮಾನದ ಸ್ವಾರ್ಥಕ್ಕಾಗಿ ಮಕ್ಕಳ ಭವಿಷ್ಯವನ್ನು ಬಲಿಕೊಡುವ ಈ ಧೋರಣೆಯನ್ನು ಕೈಬಿಟ್ಟು, ಕೊನೆಯ ಪಕ್ಷ ಜಂಗಮಾಭಿವೃದ್ಧಿ ಸಂಘ-ಗಾಣಿಗ ಸಂಘ-ರೆಡ್ಡಿ ಸಂಘ-ಪಂಚಮಸಾಲಿ ಸಂಘ-ಬಣಜಿಗ ಸಂಘ ಮೊದಲಾದ ಪ್ರಮುಖ ಸಂಘಗಳನ್ನು ತಕ್ಷಣ ವಿಸರ್ಜಿಸೋಣ. ನಾವು ಪರಸ್ಪರ ಇನ್ನಷ್ಟು ದೂರ ಹೋಗುವುದು ಬೇಡ, ಮತ್ತಷ್ಟು ಸಮೀಪ ಬರೋಣ.

ಹೀಗೆ ಸಮೀಪ ಬರುವುದರೊಂದಿಗೆ ಮಾಡಬೇಕಾದ ಇನ್ನೊಂದು ಕೆಲಸವೆಂದರೆ, ಇಂದು ಬಹುಸಂಖ್ಯಾತ ಲಿಂಗಾಯತ, ಅಲ್ಪಸಂಖ್ಯಾತ ಲಿಂಗಾಯತ ಪಂಗಡಗಳಲ್ಲದೆ, ಅರ್ಧಲಿಂಗಾಯತ (ಹಂಡೆಕುರುಬ ಇತ್ಯಾದಿ), ಅಸ್ಪೃಶ್ಯ ಲಿಂಗಾಯತ (ಉರಿಲಿಂಗಪೆದ್ದಿಮಠ ಸಂಪ್ರದಾಯ), ಲಿಂಗಾಯತತತ್ತ್ವನಿಷ್ಠ ಲಿಂಗಾಯತ (ಸಮಗಾರ) ಇತ್ಯಾದಿ ಪಂಗಡಗಳು ನಿರ್ಮಾಣವಾಗಿವೆ. ಇವೆಲ್ಲವುಗಳನ್ನೂ ಶರಣಸಿದ್ಧಾಂತಕ್ಕೆ ಬರಮಾಡಿಕೊಳ್ಳುವ ಯೋಜನೆಯನ್ನು ರೂಪಿಸುವುದು ಅವಶ್ಯವಿದೆ. ಇವುಗಳಲ್ಲಿ ಅಸ್ಪೃಶ್ಯ ಲಿಂಗಾಯತ, ಅಲಿಂಗಾಯತರ ವಿಷಯವಾಗಿ ಚಿತ್ರದುರ್ಗದ ಪೂಜ್ಯ ಶ್ರೀ ಶಿವಮೂರ್ತಿಶರಣರು ಮಾಡುತ್ತಿರುವ ಕಾರ್ಯ ಗಮನಾರ್ಹವಾಗಿದ್ದು, ಇದು ಒಂದಿಷ್ಟು ಪರಿಷ್ಕರಣವನ್ನು ಅಪೇಕ್ಷಿಸುತ್ತದೆ.

ಈ ಏಕೀಕರಣವು ಅರ್ಥವತ್ತಾಗುವುದು, ಸಿದ್ಧಾಂತಗಳ ಆಚರಣೆಯಿಂದ. ಮೇಲೆ ಹೇಳಿದ ಚತುರ್ಮುಖೀ ಸಿದ್ಧಾಂತಗಳಲ್ಲಿ ಸಮಾಜಮುಖಿ ಮತ್ತು ಸಮೃದ್ಧಿಮುಖಿಗಳು ಲಿಂಗಾಯತವೇ ಹುಟ್ಟುಹಾಕಿದುವು. ಕೊನೆಯಪಕ್ಷ ಇವುಗಳನ್ನು ಅಳವಡಿಸಿಕೊಂಡು 'ಲಿಂಗಾಯತರೆಂದರೆ ಸಮಾಜವಾದಿಗಳು, ಕಾಯಕ-ದಾಸೋಹಿಗಳು' ಎಂಬಂತೆ ಅವರು ರೂಪುಗೊಂಡು, ಬಸವೇಶ್ವರವಿದ್ಯೆಯ ನಿಜವಾದ ವಾರಸುದಾರರಾಗಬೇಕೆಂದು ಆಶಿಸುತ್ತೇನೆ.

ಶರಣಸಾಹಿತ್ಯ :

ಸಾಹಿತ್ಯವೆನ್ನುವುದು ಭಾಷಿಕ ಕಲೆ. ಅದರ ಗುರಿ ಮೌಲ್ಯಪ್ರತಿಪಾದನೆ. ಈ ಆದರ್ಶದಲ್ಲಿ ಶಿವಶರಣರು ಶಿವಕವಿಗಳು ಭಾಷೆ ಮತ್ತು ಮೌಲ್ಯಗಳ ಮೇಲೆ ಗಮನವಿಟ್ಟು, ಸಾಹಿತ್ಯಕ್ಷೇತ್ರದಲ್ಲಿ ಹೊಸ ಸಿದ್ಧಾಂತಗಳನ್ನು ಸ್ಥಾಪಿಸಿದರು, ಬರವಣಿಗೆಯಲ್ಲಿ ಅನುಷ್ಠಾನಗೊಳಿಸಿದರು.

ಇವುಗಳಲ್ಲಿ, ಭಾಷೆಯನ್ನು ಹೇಗೆ ಬಳಸಬೇಕು? ಕನ್ನಡ ಭಾಷೆಯನ್ನು ಹೇಗೆ ಬಳಸಬೇಕು? ಎಂಬ ಎರಡು ಪ್ರಶ್ನೆ ಹಾಕಿಕೊಂಡು, ಅವರು ಉತ್ತರ ಹುಡುಕಿದರು. ಭಾಷೆಗೆ ಸತ್ಯ ಒಂದು ಮುಖ, ಸುಳ್ಳು ಇನ್ನೊಂದು ಮುಖ. ಇವರು ಹುಟ್ಟುವ ಹೊತ್ತಿಗೆ ಸುಳ್ಳಿನ ಪರ್ಯಾಯಗಳಾದ ಸ್ತುತಿ-ನಿಂದೆಗಳ ಅತಿರೇಕದಿಂದಾಗಿ ಮಾತು

ಮಲಿನವಾಗಿದ್ದಿತು. ಶರಣರು "ಹುಸಿಯ ನುಡಿಯಲು ಬೇಡ" ಎಂಬಂಥ ಉಕ್ತಿಗಳಿಂದ ಮೊದಲು ಈ ಮಲಿನ ಮಾತುಗಾರಿಕೆಯನ್ನು ನಿಷೇಧಿಸಿದರು; "ಲಿಂಗವಿಲ್ಲದ ಅಂಗ ಭವಿ, ಮುಟ್ಟಲಾಗದು. ಲಿಂಗವಿಲ್ಲದ ಶಬ್ದ ಸೂತಕ, ಕೇಳಲಾಗದು" ಎನ್ನುತ್ತ, ಭವಿಯಾಗಿದ್ದ ಮಾತನ್ನು ಭಕ್ತನನ್ನಾಗಿಸಿದರು.

ಎರಡನೆಯದಾಗಿ, ಮಾತು ಹುಟ್ಟುವುದು ಸಮಾಜದಲ್ಲಿ-ಬೆಳೆಯುವುದು ಸಾಹಿತ್ಯದಲ್ಲಿ. ಶರಣರು ಬರುವ ಹೊತ್ತಿಗೆ ಕವಿಗಳಾದವರು, ಸಾಮಾಜಿಕರು ಹುಟ್ಟಿಸಿದ ಭಾಷೆಯನ್ನು ತೆಗೆದುಕೊಂಡು, ಅವರಿಗೇ ಅರ್ಥವಾಗದಂತೆ ಅಸಾಮಾಜಿಕವಾಗಿ ಬೆಳೆಸಿದ್ದರು. ಆಗ ಸಾಹಿತ್ಯಭಾಷೆಯ ಸಾಮಾಜೀಕರಣವೆಂಬಂತೆ ಶರಣರು ಕನ್ನಡಭಾಷೆಯನ್ನು ಮಾರ್ಗೀಯ ಜಟಿಲತೆಯಿಂದ ದೇಶೀಯ ಸರಳತೆಗಿಳಿಸಿದರು. ಈ ದೇಶೀನಿಷ್ಠ ಭಾಷೆಯನ್ನು ಬಳಸಿ ವಾಚನಪಾತಳಿಯ 'ವಚನ', ಶ್ರವಣಪಾತಳಿಯ 'ಸ್ವರವಚನ'ಗಳನ್ನು ಸೃಷ್ಟಿಸಿದರು. ಶಿವಕವಿಗಳು ರಗಳೆ, ಷಟ್ಪದಿಗಳ ಮೂಲಕ ಈ ದೇಶೀ ಪದ್ಧತಿಯನ್ನೇ ಮುಂದುವರಿಸಿದರು.

ಶರಣಸಾಹಿತ್ಯದ ಮೌಲ್ಯವನ್ನು ಕುರಿತು ಹೇಳುವುದಾದರೆ, ಇದು ಮನಸ್ಸಿನಲ್ಲಿ ದಟ್ಟವಾಗಿ ತುಂಬಿಕೊಂಡಿರುವ ಭಾವನೆಗಳೆಂಬ ಸರಕಿನ ಉತ್ಪಾದನೆಯಲ್ಲ. ಆರಂಭದಲ್ಲಿ ಹೇಳಿದ ಚತುರ್ಮುಖೀ ಸಿದ್ಧಾಂತಗಳ ಕಲಾತ್ಮಕ ಸೃಷ್ಟಿ. ನಿಜವಾದ ವೀರಶೈವ ಕವಿಗಳು ಈ ಸಿದ್ಧಾಂತವನ್ನು ವೈಯಕ್ತಿಕವಾಗಿ ಬದುಕಿದರು, ಸಾಮಾಜಿಕವಾಗಿ ಅನುಷ್ಠಾನಗೊಳಿಸಿದರು, ಸಾಹಿತ್ಯಿಕವಾಗಿ ಬರೆದರು. ಹೀಗೆ ಬರೆಹಗಾರರ ಮುಂದೆ ಈ ಮೂರು ಕ್ರಿಯೆಗಳ ಆದರ್ಶವನ್ನು ಸ್ಥಾಪಿಸಿದರು. ಈ ಹಿಂದಿನವರಂತೆ ಆತ್ಮ (ಪರಮಾತ್ಮ)ಪಾತಳಿ, ಮಾನವಿಕಪಾತಳಿಗಳೆಂಬ ಸುರಕ್ಷಿತ ನೆಲೆಯಲ್ಲಿ ನಿಂತು ಬರೆಯುತ್ತಲೇ, ಹೆಚ್ಚಿನದಾಗಿ ರಿಸ್ಕ್ ಮೈಮೇಲೆ ಎಳೆದುಕೊಳ್ಳುವ ರೀತಿಯಲ್ಲಿ ಸಾಮಾಜಿಕಪಾತಳಿ, ಸಮೃದ್ಧಿಪಾತಳಿಗಳಲ್ಲಿ ನಿಂತು ಸಾಹಿತ್ಯ ನಿರ್ಮಿಸಿದರು; 'ಕಾವ್ಯವಾಗಲಿ ಖಡ್ಗ. ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂಬುದನ್ನು ಆಚರಿಸಿ ತೋರಿಸಿದರು. ಹೀಗೆ ಸಿದ್ಧಾಂತವನ್ನು ಕೇಂದ್ರವಾಗಿಟ್ಟುಕೊಂಡು ಮತ್ತು ರಿಸ್ಕ್ ತೆಗೆದುಕೊಂಡು ಬರೆಯಲು ಕನ್ನಡದಲ್ಲಿ ನಡೆಸಿದ ಮೊದಲ ಪ್ರಯೋಗವಿದು.

ವಚನಕಾರರು ಮಾಡಿದ ಇನ್ನೂ ಒಂದು ಪ್ರಯೋಗ ಹೀಗಿದೆ. ಈವರೆಗೆ ಭಾರತೀಯ ಸಾಹಿತ್ಯದಲ್ಲಿ ವಿಷಯವನ್ನು ಸಾಮಾನ್ಯೀಕರಿಸಿ ಬರೆಯುವ ಪದ್ಧತಿ ಚಲಾವಣೆಯಲ್ಲಿದ್ದಿತು. ಇದಕ್ಕೆ ಹೆಚ್ಚಿನದಾಗಿ ಶರಣರು'ಆನೀ ಬಿಜ್ಜಳಂಗೆ ಅಂಜುವೆನೆ ಅಯ್ಯಾ?' ಎಂಬಂತೆ ಒಬ್ಬ ವ್ಯಕ್ತಿಯನ್ನು, 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು?' ಎಂಬಂತೆ ಒಂದು ಸಮಾಜವನ್ನು ನಿರ್ದಿಷ್ಟೀಕರಿಸಿ ಬರೆಯುವುದನ್ನು ಆರಂಭಿಸಿದರು. ಪತ್ರಿಕಾವರದಿ ಸ್ವರೂಪದ ಈ ನಿರ್ದಿಷ್ಟೀಕರಣ ಪ್ರಯೋಗ, ಕನ್ನಡ ಸಾಹಿತ್ಯಕ್ಕೆ ಶರಣರು ನೀಡಿದ ಹೊಸ ಕೊಡುಗೆಯಾಗಿದೆ.

ಹೀಗೆ ಸಾಮಾಜಿಕನನ್ನು, ಸಮಾಜವನ್ನು ನಿರ್ದಿಷ್ಟೀಕರಿಸಿ ಬರೆಯುವ ಸಾಹಿತ್ಯ ತುಂಬ ಜವಾಬ್ದಾರಿಯುತವಾದುದು. ಸ್ವಲ್ಪ ತಪ್ಪಿದರೆ ಸತ್ಯ ಅಸತ್ಯವಾಗಿ, ಅಸತ್ಯ ಸತ್ಯವಾಗಿ ಸಮಾಜದ ಶಾಂತಿ ಕದಡುವ ಸಾಧ್ಯತೆಯಿರುತ್ತದೆ. ಈ ಸೂಕ್ಷ್ಮವನ್ನು ಅವರು ಅರ್ಥಮಾಡಿಕೊಂಡುದನ್ನು 'ನಿನಗೆ ಕೇಡಿಲ್ಲವಾಗಿ, ಆನು ಒಲಿದಂತೆ ಹಾಡುವೆ' ಎಂಬ ಮಾತು ತಿಳಿಸುತ್ತದೆ. ನಿನಗೆ ಕೇಡಿಲ್ಲವಾಗಿ ಅಂದರೆ ಸಾಮಾಜಿಕ ನ್ಯಾಯಕ್ಕೆ ಭಂಗಬಾರದಂತೆ, ಆನು ಒಲಿದಂತೆ ಅಂದರೆ ನನ್ನ ಸ್ವಾತಂತ್ರ್ಯಕ್ಕೆ ಚ್ಯುತಿಬಾರದಂತೆ - ಈ ಉಭಯ ಜವಾಬ್ದಾರಿಗಳನ್ನು ನಿಭಾಯಿಸುವ ಎಚ್ಚರ ಅವರ ಬರವಣಿಗೆಯಲ್ಲಿದೆ. ಈ ಲಕ್ಷಣ-ಎಚ್ಚರಗಳನ್ನು ಹರಿಹರ, ಚಾಮರಸ, ಸರ್ವಜ್ಞರು ಕನ್ನಡದಲ್ಲಿ ಒಂದು ಪರಂಪರೆಯನ್ನಾಗಿ ಬೆಳೆಸಿದರು.

ಕೊನೆಯದಾಗಿ ಹೇಳಬೇಕಾದ ಇನ್ನೊಂದು ಮಾತು. ಶರಣರಿಗೆ ಮುಖ್ಯವಾದುದು ಸಾಹಿತ್ಯ ನಿರ್ಮಾಣವಲ್ಲ, ಚತುರ್ಮುಖೀ ಸಿದ್ಧಾಂತದ ತೀವ್ರ ಪ್ರತಿಪಾದನೆ. ಈ ಪ್ರತಿಪಾದನೆಯ ಉಪನಿಷ್ಪತ್ತಿಯಾಗಿ

ಅವರಿಗೆ ಅರಿಯದಂತೆಯೇ ಸಾಹಿತ್ಯ ಮೂಡಿಬಂದಿತು. ಉತ್ಕಟತೆಯ ತೀವ್ರತೆಯೇ ಉತ್ತಮ ಸಾಹಿತ್ಯದ ತಾಯಿ ಎಂಬುದಕ್ಕೆ ಅವರ ವಚನಗಳು ಉದಾಹರಣೆಯೆನಿಸಿದವು.

ಮೇಲೆ ಹೇಳಿದ ನಾಲ್ಕೂ ಮುಖಗಳನ್ನು ವಸ್ತುವಾಗಿಟ್ಟುಕೊಂಡ ಕಾರಣ, ವಚನಗಳಲ್ಲಿ ಆತ್ಮಮುಖಿ-ಮಾನವಮುಖಿಯ ಭಾವಗೀತೆ, ಆತ್ಮಮುಖಿ (ಮನೋಮುಖಿ)ಯ ನವ್ಯಕಾವ್ಯ. ಸಮಾಜಮುಖಿ-ಸಮೃದ್ಧಿಮುಖಿಯ ದಲಿತ-ಬಂಡಾಯಕಾವ್ಯ, ಈ ಎಲ್ಲ ಸಾಧ್ಯತೆಗಳು ಕಂಡುಬರುತ್ತವೆ. ಹೀಗಾಗಿ ಆಧುನಿಕ ಕಾವ್ಯದ ಎಲ್ಲ ಪ್ರಕಾರಗಳ ಮೇಲೆ ಪ್ರಭಾವಿಸಿದ ಏಕೈಕ ಪ್ರಾಚೀನಸಾಹಿತ್ಯವೆನಿಸಿದೆ, ವಚನಸಾಹಿತ್ಯ. ಇದು ಇನ್ನೂ ಹುಟ್ಟುತ್ತಲಿದೆ. ಏಕೆಂದರೆ ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ. ಒಟ್ಟಾರೆ ಶರಣರು ಆಶಯ, ಆಕೃತಿ ಎರಡೂ ನೆಲೆಗಳಲ್ಲಿ ಸಾಹಿತ್ಯಕ್ಕೆ ಹೊಸ ಸಿದ್ಧಾಂತಗಳನ್ನು ಬರೆದು ತೋರಿಸಿದರು. ಈ ಸಮ್ಮೇಳನ ಇಂಥ ಸಿದ್ಧಾಂತಗಳ ಚರ್ಚೆ-ಪ್ರಸಾರ ವೇದಿಕೆಯಾಗಲೆಂದು ಹಾರೈಸುತ್ತೇನೆ.

ಬಸವೇಶ್ವರವಿದ್ಯೆಯ ಅನುಷ್ಠಾನ-ಅಂತಾರಾಷ್ಟ್ರೀಯ ಪ್ರಸಾರ :

'ಸೋಹಂ ಎಂದೆನಿಸದೆ, ದಾಸೋಹಂ ಎಂದೆನಿಸಯ್ಯಾ' ಎನ್ನುತ್ತಾರೆ, ಬಸವಣ್ಣನವರು. ಸೋಹಂ ಆಗುತ್ತಲೇ ದಾಸೋಹಂ ಆಗಬೇಕೆಂಬುದು ಇದರ ಅರ್ಥ. ಧರ್ಮಗಳಿಗೆ ಸಂಬಂಧಿಸಿದಂತೆ ಭಾರತೀಯರ ಸಿದ್ಧಾಂತ ಸೋಹಂ ಪ್ರಧಾನ. ಪಾಶ್ಚಿಮಾತ್ಯರ ಸಿದ್ಧಾಂತ ದಾಸೋಹಂ ಪ್ರಧಾನ. ಇವೆರಡರ ಸಂಗಮವೆನಿಸಿರುವ ಶರಣಸಿದ್ಧಾಂತ, ಪೂರ್ವಪಶ್ಚಿಮಗಳ ದೊಡ್ಡ ಆಕರ್ಷಣೆಯೆನಿಸಿದೆ. ಹೀಗಿದ್ದೂ ಪ್ರಸಾರದ ಕೊರತೆಯಿಂದಾಗಿ ಇದಕ್ಕೆ ಸೂಕ್ತ ಮಾನ್ಯತೆ, ವಿಸ್ತಾರ ಸಿಕ್ಕಿಲ್ಲ. ಇತರ ಮುಖಗಳ ಅಭ್ಯಾಸವೂ ಸರಿಯಾಗಿ ನಡೆದಿಲ್ಲ. ಇಂದು ಈ ಸಿದ್ಧಾಂತವು ವೀರಶೈವಸಮಾಜದಿಂದ, ಕನ್ನಡಭಾಷೆಯಿಂದ ಆಚೆಗೆ ಪ್ರಸಾರ ಪಡೆಯಬೇಕಾಗಿದೆ. ಇದಕ್ಕೆ ಮೊದಲು ಈ ಸಿದ್ಧಾಂತದ ಸರಿಯಾದ ಅಭ್ಯಾಸ, ಅನುಷ್ಠಾನಗಳ ಕೆಲಸ ನಡೆಯಬೇಕಾಗಿದೆ.

ಈವರೆಗೆ, ಸಾಹಿತ್ಯಮಾಧ್ಯಮದ ಮೇಲೆ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದ ಫಲವಾಗಿ, ವೀರಶೈವದ ಕನ್ನಡಸಾಹಿತ್ಯ ಪ್ರಕಟನಕಾರ್ಯ ವೇಗವಾಗಿ ಮುನ್ನಡೆದಿದೆ. ಆದರೆ ೧) ಉಪೇಕ್ಷಿತವಾಗಿರುವ ಸಂಸ್ಕೃತ ತೆಲುಗು ಮೊದಲಾದ ಕನ್ನಡೇತರ ಭಾಷೆಗಳಲ್ಲಿ ಸೃಷ್ಟಿಯಾದ ಲಿಂಗಾಯತ ಸಾಹಿತ್ಯಪ್ರಕಟನೆಯ ಸಮಗ್ರಯೋಜನೆಯನ್ನು ಕೈಗೆತ್ತಿಕೊಳ್ಳಬೇಕು. ಸಮಸ್ಯೆಗಳಿಗೆ ಕಾರಣವಾಗಿರುವ ಆಗಮಗಳ ನಿಜಪಾಠನಿರ್ಣಯದ ಕಾರ್ಯವನ್ನೂ ಆರಂಭಿಸಬೇಕು. ೨) "ವಚನಸಾಹಿತ್ಯದ ನಿಜಪಾಠನಿರ್ಣಯ ಯೋಜನೆ" ಮತ್ತು "ಸಮಗ್ರ ಸ್ವರವಚನಸಾಹಿತ್ಯ ಪ್ರಕಟನ ಯೋಜನೆ" ಅಸ್ತಿತ್ವಕ್ಕೆ ಬರಬೇಕು. ೩) "ಜನಪ್ರಿಯ ಸಾಹಿತ್ಯಮಾಲೆ"ಯ ಅಡಿಯಲ್ಲಿ ಬಸವಣ್ಣನವರ ಷಟ್ಸ್ಥಲವಚನ, ಶಿವಶರಣೆಯರ ವಚನ, ಬಸವರಾಜದೇವರ ರಗಳೆ, ಸಿದ್ಧರಾಮ ಚರಿತ್ರೆ, ಬಸವಪುರಾಣ, ಪ್ರಭುಲಿಂಗಲೀಲೆ, ಶೂನ್ಯಸಂಪಾದನೆ, ಸಿದ್ಧಾಂತ ಶಿಖಾಮಣಿಯ ಸಿದ್ಧಾಂತ ಭಾಗ, ಸರ್ವಜ್ಞನ ವಚನ, ಸ್ವರವಚನ ಸಂಪುಟ, ನಿಜಗುಣರ ಷಟ್‌ಶಾಸ್ತ್ರ- ಈ ಪುಸ್ತಕಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಎಲ್ಲ ಕಡೆಗೂ ಎಲ್ಲ ಕಾಲಕ್ಕೂ ಸಿಗುವಂತೆ ಮಾಡಬೇಕು. ಇದೇ ರೀತಿ ಆಧುನಿಕ ಮುಖ್ಯ ಗ್ರಂಥಗಳನ್ನು ಪ್ರಕಟಿಸಿ ಸುಲಭ ಬೆಲೆಯಲ್ಲಿ ಸಿಗುವ ವ್ಯವಸ್ಥೆ ಮಾಡಬೇಕು. ೪) ಇವುಗಳಿಗಿಂತ ಮುಖ್ಯವಾದುದು ಭಾಷಾಂತರ ಕಾರ್ಯ. ಈ ಕೆಲಸಕ್ಕಾಗಿಯೇ "ಶರಣಸಾಹಿತ್ಯ ಭಾಷಾಂತರ ಸಂಸ್ಥೆ" ಹೆಸರಿನ ಒಂದು ಸ್ವತಂತ್ರ ಸಂಸ್ಥೆ ಅಸ್ತಿತ್ವಕ್ಕೆ ಬರಬೇಕು. ೫) ಪುಸ್ತಕೇತರ ಸಾಮಗ್ರಿಯಾದ ಚಿತ್ರ-ಚಲನಚಿತ್ರ-ಕಿರುತೆರೆಚಿತ್ರ-ವಿಡಿಯೋಚಿತ್ರ-ಸಂಗೀತ-ಗಮಕ-ಧ್ವನಿಸುರುಳಿ-ನೃತ್ಯ-ಶಿಲ್ಪ ಇತ್ಯಾದಿ ಮಾಧ್ಯಮಗಳನ್ನು ಲಿಂಗಾಯತ ಸಂಸ್ಕೃತಿಪ್ರಸಾರಕ್ಕೆ ಬಳಸಿಕೊಳ್ಳುವ ಸಲುವಾಗಿ, "ಲಿಂಗಾಯತ ಲಲಿತಕಲಾ ಅಕಾಡೆಮಿ" ಹೆಸರಿನ ಕೇಂದ್ರವನ್ನು ಸ್ಥಾಪಿಸಬೇಕು. ೬) ಇಂದು ಕಂಪ್ಯೂಟರ ಅನಿವಾರ್ಯಮಾಧ್ಯಮವಾಗಿದೆ. ಇದನ್ನು ಬಳಸಿ, ಕೇಳಿದ ಮಾಹಿತಿಯನ್ನು ಜಗತ್ತಿನ ಮೂಲೆಮೂಲೆಗೆ ಕ್ಷಣಾರ್ಧದಲ್ಲಿ ಒದಗಿಸುವ ಕೇಂದ್ರಗಳು

ಅಲ್ಲಲ್ಲಿ ಅಸ್ತಿತ್ವಕ್ಕೆ ಬರಬೇಕು. ೭) ವೀರಶೈವ ಸಮಾಜದ ದೊಡ್ಡ ದೋಷವೆಂದರೆ ಸಾಮಗ್ರಿ ಉತ್ಪಾದನೆಯಾಗುತ್ತಿದೆ, ಸಮರ್ಪಕ ಸರಬರಾಜು ವ್ಯವಸ್ಥೆಯಿಲ್ಲ. ಆದುದರಿಂದ ಎಲ್ಲ ಬಗೆಯ ಸಾಂಸ್ಕೃತಿಕ ಉತ್ಪಾದನೆಗಳನ್ನು ನಾಲ್ಕಾರು ಕೇಂದ್ರಗಳಲ್ಲಿ ಸಂಗ್ರಹಿಸಿ, ಅವುಗಳ ಅಧ್ಯಯನ-ಮಾರಾಟಗಳ ಸೂಕ್ತ ವ್ಯವಸ್ಥೆ ಮಾಡಬೇಕು. ೮) ೧೨ನೆಯ ಶತಮಾನದಿಂದಲೂ ಶಿಕ್ಷಣವನ್ನು ಜಾತ್ಯತೀತವಾಗಿ ಸಾರ್ವತ್ರಿಕಗೊಳಿಸುತ್ತ ಬಂದ ವೀರಶೈವರು, ಈಗ ಪ್ರತಿಯೊಬ್ಬ ಕನ್ನಡಿಗ ಸಾಕ್ಷರಿಯಾಗುವುದರ ಸಲುವಾಗಿ "ಒಂದು ಮಠಕ್ಕೆ ಒಂದು ಶಾಲೆ" ಎಂಬ ಘೋಷಣೆಯ ಅಡಿಯಲ್ಲಿ, ಕನಿಷ್ಠ ೪ನೆಯ ವರ್ಗದ ವರೆಗೆ ತಮ್ಮ ಸಾವಿರಾರು ಮಠಗಳಲ್ಲಿ ಪ್ರಾಥಮಿಕ ಶಾಲೆಗಳನ್ನು, ಒಂದು ಚಳುವಳಿ ರೂಪದಲ್ಲಿ ಆರಂಭಿಸಬೇಕು. ೯) ಈ ಶತಮಾನದ ಒಂದು ದೊಡ್ಡ ಸಾಧನೆ, ಕೂಡಲಸಂಗಮ ಪ್ರಾಧಿಕಾರ. ಸರಕಾರದ ನೇರ ಅಧಿಕಾರಕ್ಕೆ ಒಳಪಟ್ಟ ಈ ಪ್ರಾಧಿಕಾರದ ಸಮಗ್ರ ಆವರಣವು ಯಾವುದೇ ಅರ್ಚಕರ ಇಲ್ಲವೆ ಮಠಾಧೀಶರ ಅಧಿಕಾರ-ಬಳಕೆಗಳಿಂದ ಮುಕ್ತವಾಗಿರುವಂತೆ ನೋಡಿಕೊಳ್ಳಬೇಕು. ಬಸವಣ್ಣನವರ ಲೋಕಮಾನ್ಯ ಸಿದ್ಧಾಂತದ ಅನುಷ್ಠಾನ ಪ್ರಸಾರಗಳ ಉದ್ದೇಶದಿಂದ ಸರಕಾರ ಈ ಪ್ರಾಧಿಕಾರವನ್ನು ಸ್ಥಾಪಿಸಿರುವುದರಿಂದ, ಇಲ್ಲಿ ವಾಸ್ತು ಬಸವಸಿದ್ಧಾಂತಕ್ಕೆ ತಕ್ಕುದಾಗಿರಬೇಕು. ವಸ್ತು ಬಸವಸಿದ್ಧಾಂತವೇ ಆಗಿರಬೇಕು. ಕೂಡಲಸಂಗಮ ಪ್ರಾಧಿಕಾರ ಮಾದರಿಯಲ್ಲಿ ಬಾಗೇವಾಡಿ ಕಲ್ಯಾಣ ಉಳವಿ ಉಡುತಡಿ ಇತ್ಯಾದಿ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಬೇಕು. ೧೧) ಸಾಹಿತ್ಯಕ್ಕಿಂತ ಸಮಾಜ ದೊಡ್ಡದು. ಈ ದೊಡ್ಡ ಸಮಾಜದ ಹಿಂದೆ ಇನ್ನೂ ದೊಡ್ಡ ಸಂಸ್ಕೃತಿ ಇದೆ. ಈ ದೊಡ್ಡ ಸಂಸ್ಕೃತಿಯ ಗತ-ವರ್ತಮಾನ-ಭವಿಷ್ಯಗಳ ಸಂವಾದಕ್ಕಾಗಿ ಮುಂದಿನ ವರ್ಷದಿಂದ ಈ ಶರಣ ಸಾಹಿತ್ಯ ಪರಿಷತ್ತು, ಶರಣಸಾಹಿತ್ಯ ಸಮ್ಮೇಲನವೆಂಬ ಈ ಹೆಸರುಗಳನ್ನು ಕ್ರಮವಾಗಿ ಶರಣಸಂಸ್ಕೃತಿ ಪರಿಷತ್ತು, ಶರಣಸಂಸ್ಕೃತಿ ಸಮ್ಮೇಲನವೆಂದು ಬದಲಾಯಿಸಬೇಕೆಂದು ಸೂಚಿಸುತ್ತೇನೆ.

ಈ ಎಲ್ಲ ಯೋಜನೆಗಳತ್ತ ಅಲ್ಲಲ್ಲಿಯ ಮಠಗಳು, ಸಾರ್ವಜನಿಕ ಸಂಸ್ಥೆಗಳು ಗಮನಕೊಡುವುದಲ್ಲದೆ, ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರ, ಬಸವ ಸಮಿತಿ, ವೀರಶೈವ ಮಹಾಸಭೆಗಳು ಈ ಎಲ್ಲ ಹೊಣೆಗಳನ್ನು ಹಂಚಿಕೊಂಡು, ನಿಜವಾದ ಶರಣಸಿದ್ಧಾಂತದ ಪ್ರಾತಿನಿಧಿಕ ಸಂಸ್ಥೆಗಳಾಗಬೇಕು.

ನನಗೆ ವ್ಯಕ್ತಿಗಳು ಕಾಣುವುದಿಲ್ಲ. ಸಮಾಜ ಕಾಣಿಸುತ್ತದೆ; ಸತ್ಯ ಕಾಣಿಸುತ್ತದೆ. ಕಾರಣ, ಸಮಾಜದ ಹಿತಕ್ಕಾಗಿ ಹೇಳಿದ ಈ ಸತ್ಯಗಳನ್ನು ಮುಕ್ತಮನಸ್ಸಿನಿಂದ ಸ್ವೀಕರಿಸಬೇಕೆಂದು ಕೋರುತ್ತೇನೆ. ಒಟ್ಟಾರೆ, ಇಂದಿನ ಪ್ರಜಾಪ್ರಭುತ್ವ ಪರಿಸರಕ್ಕೆ ಪ್ರಸ್ತುತರಾಗುವುದರ ಸಲುವಾಗಿ ಜಾತ್ಯತೀತ ಪೀಠಾರೋಹಣ, ಲಿಂಗಾಯತ ಸಮಾಜ ಏಕೀಕರಣ, ಶರಣಮಾರ್ಗಾನುಸರಣಗಳಿಗೆ ಈ ಸಮ್ಮೇಳನ ನಾಂದಿ ಹಾಡಲೆಂದು ಹಾರೈಸುತ್ತೇನೆ.

ಶರಣಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾದ ಪೂಜ್ಯ ಶ್ರೀ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ, ಪೂಜ್ಯ ಶ್ರೀ ತರಳಬಾಳು ಶಿವಾಚಾರ್ಯ ಮಹಾಸ್ವಾಮಿಗಳವರ ಸನ್ನಿಧಿಗೂ, ಈ ಸಮ್ಮೇಲನದ ಕರ್ಣಧಾರತ್ವ ವಹಿಸಿರುವ ಬಾಗಲಕೋಟೆಯ ಎಲ್ಲ ಬಂಧುಗಳಿಗೂ, ಸಭೆಗೂ ನಮಸ್ಕಾರ.

ಬಾಗಲಕೋಟೆಯಲ್ಲಿ ಜರುಗಿದ ಅಖಿಲ ಭಾರತ ಶರಣಸಾಹಿತ್ಯ ಸಮ್ಮೇಲನದ ಅಧ್ಯಕ್ಷೀಯ ಭಾಷಣ (೧೭ ಜನೆವರಿ ೨೦೦೩).

ಆಕರ : ಮಾರ್ಗ ಸಂಪುಟ-೬

■■

೨

ಶ್ರೀಕೃಷ್ಣ ಪಾರಿಜಾತ ಸಮ್ಮೇಳನ : ಅಧ್ಯಕ್ಷತೆ

೨೦೦೪

ಹೂವಿನ ಕಥೆ

ವೇದಿಕೆಯ ಮೇಲಿನ ಗಣ್ಯರೇ, ಕೃಷ್ಣಪಾರಿಜಾತದ ಅಭಿಮಾನಿಗಳೇ,

ಪಾರಿಜಾತ-ಹೆಸರೇ ಒಂದು ರೋಮಾಂಚನ. ಈ ಹೂವಿನ ಸುತ್ತ ಬೆಳೆದ "ಶ್ರೀಕೃಷ್ಣ ಪಾರಿಜಾತ"ವನ್ನು ಪ್ರೇಕ್ಷಕನಾಗಿ ನೋಡಿದವ, ಶ್ರಾವಕನಾಗಿ ಕೇಳಿದವ, ವಾಚಕನಾಗಿ ಓದಿದವ, ನಾನು. ಇದರ ಶ್ರವ್ಯಪಠ್ಯ-ದೃಶ್ಯಪಠ್ಯಗಳನ್ನು ಅಭ್ಯಾಸ ಮಾಡಿದ, ಅಭ್ಯಾಸ ಮಾಡಿಸಿದ ತೃಪ್ತಿ ನನ್ನದಾಗಿದೆ. ಅಪರಾಳ ತಮ್ಮಣ್ಣನ ಪಾರಿಜಾತದ ಪ್ರಾಚೀನತಮ (೧೮೦೭) ಹಸ್ತಪ್ರತಿಯನ್ನು ಹುಡುಕಿದ ನನ್ನ ಆಕರಶೋಧ, ಇದರ ಉತ್ತರಾರ್ಧ ಕರ್ತೃ ಸಿರಗುಪ್ಪಿ ಸದಾಶಿವಯ್ಯನೆಂದು ಹೇಳಿದ ನನ್ನ ಸಂಗತಿಶೋಧ, ಮಹತ್ವದವುಗಳೆಂದು ವಿದ್ವಾಂಸರು ಗುರುತಿಸಿದ್ದಾರೆ. ಶ್ರೀಕೃಷ್ಣ ಪಾರಿಜಾತದ ಪಿಎಚ್.ಡಿ. ಅಭ್ಯಾಸಕ್ಕಾಗಿ ನಾನು ಡಾ. ಇಟ್ಟಣ್ಣವರ ಅವರಿಗೆ ನೀಡಿದ ಮಾರ್ಗದರ್ಶನ ಇನ್ನೂ ಮಹತ್ವದ್ದೆಂತು ಜಾನಪದ ಅಭ್ಯಾಸಿಗಳು ಭಾವಿಸಿದ್ದಾರೆ.

ಹೀಗೆ ನಾನು ಪ್ರೀತಿಯಿಂದ ಅನುಸಂಧಾನ ಮಾಡುತ್ತ ಬಂದ, ನನ್ನನ್ನು ಪ್ರೀತಿಯಿಂದ ಕಾಡುತ್ತ ಬಂದ, ಶ್ರೀಕೃಷ್ಣ ಪಾರಿಜಾತದ ವ್ಯಕ್ತಿರೂಪ ಕೌಜಲಗಿ ನಿಂಗವ್ವ ಅಥವಾ ಮಹಾಲಿಂಗಪುರ ನಿಂಗವ್ವ. ಈಕೆ ಕೌಜಲಗಿಯಿಂದ ಮಹಾಲಿಂಗಪುರಕ್ಕೆ ಬಂದು ಇಂದಿಗೆ ನೂರು ವರ್ಷ ತುಂಬಿದವು. ಆದುದರಿಂದ ಈ ಕಲಾವಿದೆಯ ಕರ್ಮಭೂಮಿಯಲ್ಲಿ ಜರುಗುತ್ತಲಿರುವ ಈ ಸಮ್ಮೇಲನ, ಈಕೆ ಮಹಾಲಿಂಗಪುರ ಪ್ರವೇಶಿಸಿದ ಶತಮಾನೋತ್ಸವೂ ಆಗಿದೆ. ಹೀಗೆ ಕಾಲ-ದೇಶಗಳ ದೃಷ್ಟಿಯಿಂದ ಮಹತ್ವದ್ದಾಗಿರುವ ಈ ಸಮ್ಮೇಲನದ ಅಧ್ಯಕ್ಷಸ್ಥಾನವನ್ನು ನಿಮ್ಮೆಲ್ಲರ ಪ್ರೀತಿಯ ಒತ್ತಾಯಕ್ಕೆ ಮಣಿದು, ನಿಂಗವ್ವನಿಗೆ ಕೈಮುಗಿದು ಸ್ವೀಕರಿಸಿದ್ದೇನೆ ಮತ್ತು ನಿಮಗೆ ಕೃತಜ್ಞನಾಗಿದ್ದೇನೆ.

ಶ್ರೀಕೃಷ್ಣ ಪಾರಿಜಾತ ಮೂಲತಃ ಪುರಾಣದ ಒಂದು ಉಪಕಥೆ. ಆಮೇಲೆ ಅಪರಾಳ ಗ್ರಾಮದಲ್ಲಿ ಹುಟ್ಟಿದ ಒಂದು ಸ್ವತಂತ್ರ ಕಾವ್ಯಕಥೆ. ಬಳಿಕ ೧೨೫ ವರ್ಷಗಳಲ್ಲಿ ಒಂದು ರಂಗಕೃತಿಯಾಗಿ, ಆಮೇಲೆ ಒಂದು ರಂಗಪ್ರಕಾರವಾಗಿ, ಕೊನೆಗೆ ಒಂದು ಕಂಪನಿಯೇ ಆಗಿ, ೫೦ರಷ್ಟು ಕಂಪನಿಗಳಿಗೆ ತಾಯಿಯೂ ಆಗಿ ಬೆಳೆದ ಏಕೈಕ ವೈಶಿಷ್ಟ್ಯ ಇದಕ್ಕೆ ಪ್ರಾಪ್ತವಾಗಿದೆ. ಈ ರಂಗಕೃತಿಯ ಮೊದಲ ಘಟ್ಟ ರೂಪಿಸಿದ ಯಾದವಾಡ ಮಲಕಪ್ಪ ಮುಂತಾದವರಿಗೆ, ಎರಡನೆಯ ಘಟ್ಟ ರೂಪಿಸಿ ಇದಕ್ಕೆ ದೊಡ್ಡ ಪ್ರಸಾರ-ಪ್ರತಿಷ್ಠೆಗಳನ್ನು ತಂದುಕೊಟ್ಟ ಕೌಜಲಗಿ

ನಿಂಗವ್ವನಿಗೆ, ಜಮಖಂಡಿ ಅಪ್ಪಾಲಾಲ ಮೊದಲಾದವರ ಕಂಪನಿಗಳಿಗೆ, ಪಾತ್ರಧಾರಿಗಳಿಗೆ, ರಂಗಕರ್ಮಿಗಳಿಗೆ, ಅನನ್ಯಪ್ರೀತಿ ತೋರುತ್ತ ಬಂದ ಪ್ರೇಕ್ಷಕರಿಗೆ, ನಾನು-ನಾವೆಲ್ಲ ಋಣಿಗಳೆಂದೇ ಹೇಳಬೇಕು.

ಯಾವುದೆ ರಂಗಕೃತಿ, ಅದರಲ್ಲಿಯೂ ಜಾನಪದ ರಂಗಕೃತಿ, ಚಲನಚಿತ್ರದಂತೆ ಬದಲಾಗದ "ಪ್ರದರ್ಶನ"ವಲ್ಲ; ಪ್ರತಿಸಲವೂ ಬದಲಾಗುತ್ತಲೇ ಬರುವ "ಪ್ರಯೋಗ." ಕಳೆದ ೧೨೫ ವರ್ಷಗಳಿಂದ ಹೀಗೆ ಪ್ರಯೋಗ ಪಾತಳಿಯಲ್ಲಿ ಪಲ್ಲಟವಾಗುತ್ತ ಬಂದಿರುವ ಶ್ರೀಕೃಷ್ಣ ಪಾರಿಜಾತ ರಂಗಕೃತಿಯ ಮೂಲಸ್ವರೂಪವನ್ನು, ಅದರ ಅವಸ್ಥಾಂತರಗಳನ್ನು ಕುರಿತು ಚಾರಿತ್ರಿಕವಾಗಿ ಗೆರೆಕೊರೆದಂತೆ ಮಾತನಾಡುವುದು ಕಷ್ಟದ ಕೆಲಸ. ಏಕೆಂದರೆ ಯಾವುದೇ ಚರಿತ್ರೆ ಎಷ್ಟೇ ಸುಸಂಗತವಾಗಿ ಬೆಳೆದಿದ್ದರೂ, ಕೆಲವೊಮ್ಮೆ ಅಸಂಗತಗಳು ಅದನ್ನು ನಿಯಂತ್ರಿಸಿರುತ್ತವೆ. ಹೀಗಾಗಿ ನಾವು ಕಾರ್ಯ-ಕಾರಣ ತರ್ಕದಿಂದ ಬರೆಯುವ ಅದರ ಚರಿತ್ರೆಯಲ್ಲಿ ಕೆಲವೊಮ್ಮೆ ದೋಷಗಳು ಸೇರಿಕೊಂಡು ಬಿಡುತ್ತವೆ. ಶ್ರೀಕೃಷ್ಣ ಪಾರಿಜಾತದ ವಿಭಿನ್ನರೂಪಗಳಾದ ಪುರಾಣಕೃತಿ, ಕಾವ್ಯಕೃತಿ, ರಂಗಕೃತಿಗಳನ್ನು ಕುರಿತು ಬೆಟಗೇರಿ ಕೃಷ್ಣಶರ್ಮ, ಸುಂಕಾಪುರ, ಮಲಶೆಟ್ಟಿ, ಇಟ್ಟಣ್ಣವರ, ಧೂಪದ, ಕುರ್ತಕೋಟಿ, ಬಸಲಿಂಗಯ್ಯ ಹಿರೇಮಠ, ರಾಮಚಂದ್ರ ಕಿತ್ತೂರ, ಬಾಳೇಶ ಲಕ್ಷೆಟ್ಟಿ, ಜಯತೀರ್ಥ ಜೋಶಿ, ಸಂಗಮೇಶ ಬಿರಾದಾರ, ಅಶೋಕ ನರೋಡೆ - ಮೊದಲಾದವರು ಮಾಡಿದ ಸಂಶೋಧನ-ವಿಮರ್ಶನ-ಪ್ರದರ್ಶನಗಳು ಎಷ್ಟೇ ಮಹತ್ವದವುಗಳಾದರೂ ಅಲ್ಲಿ ಕೆಲವೊಮ್ಮೆ ಇಂಥ ದೋಷಗಳು ಸೇರಿಕೊಂಡಿವೆ. ಒಂದಿಷ್ಟು ಸಮಸ್ಯೆಗಳೂ ಉಳಿದುಕೊಂಡಿವೆ.

ಪುರಾಣಮೂಲದ ಈ ಕಥೆ, ಕೃತಿರೂಪ ಪಡೆದುದು ಮೊದಲು ತೆಲುಗಿನಲ್ಲಿ. ಆಮೇಲೆ, ಕನ್ನಡ ಕೀರ್ತನಕಾವ್ಯವಾಗಿ ಅವತರಿಸಿದುದು, ತೆಲುಗುನಾಡಿಗೆ ಹೊಂದಿಕೊಂಡಿರುವ ಮತ್ತು ಹರಿದಾಸಸಾಹಿತ್ಯದ ಎರಡನೆಯ ಘಟ್ಟವೆನಿಸಿರುವ ರಾಯಚೂರು ಜಿಲ್ಲೆಯ ಅಪರಾಳ ಗ್ರಾಮದ ತಮ್ಮಣ್ಣನ ಕೈಯಲ್ಲಿ. ಇಂದು ಉಭಯಭಾಷಾ ಬಲ್ಲಿದರು ಈ ತೆಲುಗು-ಕನ್ನಡ ಕೃತಿಗಳ ಸಮಗ್ರ ತೌಲನಿಕ ಅಭ್ಯಾಸ ನಡೆಸುವುದು ಅವಶ್ಯವಿದೆ. ಈ ಕನ್ನಡ ಕೀರ್ತನಕಾವ್ಯ ಇತ್ತೀಚಿನ ೧೨೫ ವರ್ಷಗಳಲ್ಲಿ 'ರಂಗಕಲೆ'ಯಲ್ಲಿ ಹುಟ್ಟು, 'ಸಂಗೀತಕಲೆ'ಯಲ್ಲಿ ಮರುಹುಟ್ಟು- ಎಂಬ ಎರಡು ಘಟ್ಟಗಳಲ್ಲಿ ಹೀಗೆ ಬೆಳೆದು ನಿಂತಿದೆ.

ರಂಗಕಲೆಯಲ್ಲಿ ಹುಟ್ಟು

ಅಪರಾಳ ತಮ್ಮಣ್ಣನ ಪಾರಿಜಾತ ಕಾವ್ಯವನ್ನು ಮೊದಲಿನಿಂದಲೂ ಕೀರ್ತನಕಾರರು ಭಕ್ತಿಪ್ರಧಾನವಾಗಿ ಕೀರ್ತನಮಾಡುವ ಮೂಲಕ, ಪಾತರದ ಸ್ತ್ರೀಯರು ಹಾಡುತ್ತ ಅಭಿನಯಿಸುವ ಮೂಲಕ, ಬ್ರಾಹ್ಮಣ ಮಹಿಳೆಯರು ವಿರಾಮಕಾಲದಲ್ಲಿ ಶ್ರದ್ಧಾಪ್ರಧಾನವಾಗಿ ಹಾಡುವ ಮೂಲಕ, ತುಂಬ ಪ್ರಚುರಪಡಿಸುತ್ತಿದ್ದರು. ಧಾರವಾಡದ ಜೀಜಾಬಾಯಿಯಂಥ ಸುಶಿಕ್ಷಿತ ಮಹಿಳೆಯರು ಲಿಪಿಸುತ್ತ ಮಧ್ಯಮಧ್ಯ ಸುಂದರ ಚಿತ್ರ ಬಿಡಿಸುತ್ತಿದ್ದರು; ಶ್ರೀ ಚುರಮರಿಯವರ ಶಾಕುಂತಲದಂಥ ಕನ್ನಡ ಕೃತಿ ಮತ್ತು ಶ್ರೀ ಕಿರ್ಲೋಸ್ಕರ ಅವರ ಪಾರಿಜಾತದಂಥ ಮರಾಠಿಕೃತಿಗಳಲ್ಲಿ ಅದರ ಧಾಟಿಗಳನ್ನು ಬಳಸುತ್ತಿದ್ದರು. ತಮ್ಮದು ಹೂವಿನಕಥೆಯಾಗಿರದಿದ್ದರೂ ಶಿವಪಾರಿಜಾತ, ವೀರಭದ್ರಪಾರಿಜಾತ, ರಾಮಪಾರಿಜಾತವೆಂದು ತಮ್ಮನ್ನು ಕರೆದುಕೊಳ್ಳುವ ಮೂಲಕ ಕೆಲವು ಕೃತಿಗಳು ಈ ಹೆಸರನ್ನು ಒಂದು ಸಾಹಿತ್ಯಪ್ರಕಾರವಾಗಿಯೂ ಬೆಳೆಸಿದ್ದವು. ಹೀಗೆ ದಟ್ಟಪ್ರಭಾವ ಬೀರಿದ್ದ ಕೀರ್ತನ ಪಾರಿಜಾತದ ಒಡಲಿನಿಂದ ೧೯ನೆಯ ಶತಮಾನದ ಉತ್ತರಾರ್ಧದ ಹೊತ್ತಿಗೆ ಗೋಕಾಕ ತಾಲೂಕಿನಲ್ಲಿ ರಂಗಪಾರಿಜಾತ ಉದ್ಭವಿಸಿತು. ಕರ್ನಾಟಕದ ಇತರ ಪ್ರದೇಶ ಬಿಟ್ಟು, ಈ ದ್ವಿಭಾಷಿಕ ಪ್ರದೇಶದಲ್ಲಿಯೇ ಇದು ಏಕೆ ಉದ್ಭವಿಸಿತು? ಅದರ ಹಿಂದಿರುವ ಸಾಮಾಜಿಕ, ಸಾಂದರ್ಭಿಕ ಕಾರಣಗಳೇನು? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುವುದು ಅವಶ್ಯವಿದೆ.

ಇದನ್ನು ಬಿಟ್ಟರೂ ಈ ರಂಗಕೃತಿಯನ್ನು ರಚಿಸಿದವನು ಕುಲಗೋಡ ಗ್ರಾಮದ ಬ್ರಾಹ್ಮಣ ತಮ್ಮಣ್ಣನೋ? ನೆರೆಯ ಯಾದವಾಡ ಗ್ರಾಮದ ಹೂಗಾರ ಮಲಕಪ್ಪನೋ? ಎಂಬ ಸಂದೇಹವನ್ನು ಡಾ. ಶ್ರೀರಾಮ ಇಟ್ಟಣ್ಣವರ ಎತ್ತಿದ್ದಾರೆ. ಅಪರಾಳ ಪಾರಿಜಾತವನ್ನು ಧಾರವಾಡದ ಬ್ರಾಹ್ಮಣ ಮಹಿಳೆ ಜೀಜಾಬಾಯಿ ದೇವನಾಗರಿ ಲಿಪಿಯಲ್ಲಿ ನಕಲುಮಾಡಿ ಮಡಿವಂತಿಕೆ(?) ಮೆರೆದುದನ್ನು ನೋಡಿದರೆ, ಆ ಕಾಲದಲ್ಲಿ ಬ್ರಾಹ್ಮಣನಾದ, ಅದರಲ್ಲಿಯೂ ಮಾಧ್ವಬ್ರಾಹ್ಮಣನಾದ ಕುಲಗೋಡ ತಮ್ಮಣ್ಣ ಪದ್ಯಕೃತಿಯನ್ನು ಮುರಿದು ಕೆಳವರ್ಗದವರ ಜಾನಪದ ಆಟವನ್ನಾಗಿ ರೂಪಿಸಿದನೇ? ಡೊಂಬರ ನಿಂಗವ್ವ, ಬಾರಕೇರ ನೀಲವ್ವನಂಥ ಕೆಳಜಾತಿಯ ಹೆಂಗಸರನ್ನು ಕರೆದುಕೊಂಡು ಕಂಪನಿಯನ್ನೂ ಕಟ್ಟಿದನೇ? ಸೇವಕನಂಥ ಭಾಗವತನಾಗಿಯೂ ಅಭಿನಯಿಸುತ್ತಿದ್ದನೇ? ಎಂಬ ಸಂದೇಹಗಳು ಹುಟ್ಟುತ್ತವೆ. ಬಹಳೆಂದರೆ ಈತ ಅಪರಾಳ ಪಾರಿಜಾತದ ಪ್ರಸಿದ್ಧ ಕೀರ್ತನಕಾರನಾಗಿರಬಹುದೆನಿಸುತ್ತದೆ. ಕುಲಗೋಡ ಗ್ರಾಮದ ಮಾರುತಿದೇವಾಲಯದಲ್ಲಿ ಲಭಿಸಿದ ಇವನ ವಿಗ್ರಹದ ಭಂಗಿ, ಎಡಭಾಗದ ತಂಬೂರಿಗಳನ್ನು ನೋಡಿದರೆ ಇವನೊಬ್ಬ ಭಕ್ತ, ಅದರಲ್ಲಿಯೂ ಕೀರ್ತನಕಾರ ಭಕ್ತನೆಂಬ ಭಾವನೆ ಮೂಡುತ್ತದೆ. ಕೀರ್ತನ ವೃತ್ತಿಯ ಈತ 'ಕುಲಗೋಡ ಭೀಮ' ಮುದ್ರಿಕೆಯ ಕೆಲವು ಹಾಡುಗಳನ್ನು ರಚಿಸಿದ್ದನೆಂದು, ಬಹಳೆಂದರೆ ಕೆಲವರಿಗೆ ತಂಬೂರಿ ಪದ ಕಲಿಸಿದ್ದನೆಂದು ಹೇಳಬಹುದು.

ಯಾದವಾಡ ಮಲಕಪ್ಪನಾದರೋ ಜಾತಿಯಿಂದ ಹೂಗಾರ. ವಾದ್ಯ-ಸಂಗೀತ ಇತ್ಯಾದಿ ಈತನ ಕುಲಕಸಬು. ಇದು ಆಟ ನಿರ್ಮಾಣಕ್ಕೆ ಸೂಕ್ತ ವಾತಾವರಣ. ಮೇಲಾಗಿ ಆ ಕಾಲಘಟ್ಟದ ಪಾರಿಜಾತ ಕಲಾವಿದರಾದ ಯಾದವಾಡ ಮಲಕಪ್ಪ, ಹುಕ್ಕೇರಿ ಸಿದ್ರಾಮಪ್ಪ, ಬಡಕುಂದ್ರಿ ಬಸಪ್ಪ, ಬರಗಿ ಅಪ್ಪಾಲಾಲ, ಕೌಜಲಗಿ ನಿಂಗವ್ವ, ಬಾರಕೇರ ನೀಲವ್ವ, ಸಿದ್ಧಯ್ಯ ಚಟ್ಟಿಮಠ ಮೊದಲಾದವರೆಲ್ಲ ಬ್ರಾಹ್ಮಣೇತರರೇ ಆಗಿದ್ದಾರೆ. ಎರಡನೆಯ ಘಟ್ಟದ ಅಚ್ಯುತಾಚಾರ್ಯ ಶೂರ್ಪಾಲಿ, ಮೂರನೆಯ ಘಟ್ಟದ ಲೋಕಾಪುರ ದೇಶಪಾಂಡೆ ಅವರನ್ನು ಬಿಟ್ಟರೆ, ಈ ಕ್ಷೇತ್ರದಲ್ಲಿ ೧೨೫ ವರ್ಷ ನೇರವಾಗಿ ತೊಡಗಿಕೊಂಡವರೆಲ್ಲ ಬ್ರಾಹ್ಮಣೇತರರೇ ಆಗಿದ್ದಾರೆಂಬುದನ್ನು ನೆನೆದರೆ, ಬಹುಶಃ ಹೂಗಾರ ಮಲಕಪ್ಪನೋ, ಮಲಕಪ್ಪನ ರಂಗ ಸಮುದಾಯದವರೋ ಸೇರಿ ಈ ರಂಗಕೃತಿಯನ್ನು ರೂಪಿಸಿದ್ದು, ಕೀರ್ತನಕಾರ ಕುಲಗೋಡ ತಮ್ಮಣ್ಣ ರಚಿಸಿದ "ನೋಡಿರೊ ಬಲಭೀಮನ" ಇತ್ಯಾದಿ ಒಂದೆರಡು ಹಾಡುಗಳನ್ನು ಅವನೋ ಮುಂದಿನವರೋ ಈ ಆಟದಲ್ಲಿ ಸೇರಿಸಿರಬಹುದೆನಿಸುತ್ತದೆ.

ಈ ಯಾದವಾಡ ಮಲಕಪ್ಪನ ಶಿಷ್ಯೆ ಕೌಜಲಗಿ ನಿಂಗವ್ವ. ಪಾರಿಜಾತ ಆಟದ ನಡೆದಿರುವಾಗಲೇ ರಂಗಭೂಮಿಯ ಮೇಲೆ ಈಕೆ, ತನ್ನ ಗುರು ಯಾದವಾಡ ಮಲಕಪ್ಪನನ್ನು ಭಕ್ತಿಯಿಂದ ಸತ್ಕರಿಸುತ್ತಿದ್ದ ಬಗ್ಗೆ ಪ್ರತ್ಯಕ್ಷದರ್ಶಿಗಳ ಹೇಳಿಕೆಗಳಿವೆ. ಕುಲಗೋಡ ತಮ್ಮಣ್ಣನನ್ನು ಸತ್ಕರಿಸುತ್ತಿದ್ದ ಬಗ್ಗೆ ಇಂಥ ಯಾವ ಮಾತೂ ಕೇಳಿಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಯಾದವಾಡ ಮಲಕಪ್ಪನ ಒಂದು ಕೈಯಲ್ಲಿ ಪಾರಿಜಾತ ರಂಗಕೃತಿ ಹುಟ್ಟಿತು, ಇನ್ನೊಂದು ಕೈಯಲ್ಲಿ ಕೌಜಲಗಿ ನಿಂಗವ್ವ ಹುಟ್ಟಿದಳೆನಿಸುತ್ತದೆ. ಅಪರಾಳ ತಮ್ಮಣ್ಣನ ಪಾರಿಜಾತ ಎಷ್ಟೇ ಶ್ರೇಷ್ಠವಾಗಿದ್ದರೂ ದಾಸರ ಕೀರ್ತನೆಯಂತೆ ಅವನ ಕಾವ್ಯಭಾಷೆಯಲ್ಲಿ ಹದ ಕಡಿಮೆ. ಆ ಕೃತಿ ಮಧ್ಯಮವರ್ಗದ ಮಲಕಪ್ಪನ ಕೈಯ್ಯಲ್ಲಿ ರಂಗಕೃತಿಯಾಗಿ ಹುಟ್ಟಿ, ಕೆಳವರ್ಗದ ನಿಂಗವ್ವನ ಕೈಯಲ್ಲಿ ಬೆಳೆಯುವಲ್ಲಿ, ಅಂದರೆ "ಅಪ್ಪ ಸೆರಗ ಬಿಡೋ. . . . " ಎಂಬಂಥ ಗ್ರಾಮೀಣ ಪ್ರತಿಭೆಯ ಹಾಡು-ಮಾತುಗಳನ್ನು ಬಳಸಿಕೊಳ್ಳುವಲ್ಲಿ, ಅದರ ಭಾಷೆಗೆ ಒಂದು ದೇಶೀಯ ಧೋರಣೆ ಪ್ರಾಪ್ತವಾಯಿತು. ಮಧ್ಯಮವರ್ಗದ, ಕೆಳವರ್ಗದ ಈ ಗಂಡು-ಹೆಣ್ಣು ಕಲಾವಿದರು ಎತ್ತುಗಳಾಗಿ, ಬಂಡಿಗಳಾಗಿ ಈ ಆಟವನ್ನು ಹಳ್ಳಿ-ಪಳ್ಳಿಯ ಮೂಲೆಮೂಲೆಗೂ ಎಳೆದುಕೊಂಡು ಹೋದರು. ಪಾರಿಜಾತಳ ಗಂಧಗಾಳಿ ಮನೆಮನೆಗಳಲ್ಲಿ ಘಮಘುಮಿಸುವಂತೆ ಮಾಡಿದರು.

ಯಾದವಾಡ ಮಲಕಪ್ಪ ಕಟ್ಟಿಕೊಟ್ಟ ರಂಗಕೃತಿಯ ಮೂಲರೂಪ ಇಂದು ನಮ್ಮ ಕೈಗೆ ಇಳಿದು ಬಂದಿಲ್ಲ. ಮೌಖಿಕ ಸಂಪ್ರದಾಯದಲ್ಲಿ ಇದು ಸಾಧ್ಯವೂ ಇಲ್ಲ. ಹೀಗಿದ್ದೂ ಇದರ ಮೂಲರೂಪವನ್ನು ಈ ರೀತಿ ಊಹಿಸಬಹುದು. ಆರಂಭದ ಸ್ತುತಿ, ಆಮೇಲಿನ ಕೆಲವು ಹಾಡುಗಳು ಹೊಸದಾಗಿ ಕಟ್ಟಿ ಸೇರಿಸಿದುವು; ಮಿಕ್ಕ ಹಾಡುಗಳೆಲ್ಲ ಅಪರಾಳ ಪಾರಿಜಾತಕ್ಕೆ ಸಂಬಂಧಿಸಿದುವು. ಇವುಗಳಿಗೆ ಕರ್ನಾಟಕ ಸಂಗೀತಶೈಲಿಯನ್ನು ನಿರ್ದಿಷ್ಟಪಡಿಸಲಾಗಿದ್ದಿತು.

ದೃಶ್ಯಗಳನ್ನು ಕುರಿತು ಹೇಳುವುದಾದರೆ, ಆರಂಭದದಲ್ಲಿ ಗೊಲ್ಲತಿ-ಗೋಪಾಲ ಸನ್ನಿವೇಶ ಸೇರಿಸಿದ್ದು, ಅಂತ್ಯದಲ್ಲಿ ನರಕಾಸುರಯುದ್ಧ ಬಿಟ್ಟಿದ್ದು, ಮಾಡಿಕೊಂಡ ಬದಲಾವಣೆಗಳು. ಗೊಲ್ಲತಿ-ಬಾಲಗೋಪಾಲ ಸನ್ನಿವೇಶದ ಸೇರ್ಪಡೆಗೆ ದೂರದ ಯಕ್ಷಗಾನಕ್ಕಿಂತ, ನೆರೆಯ ಮಹಾರಾಷ್ಟ್ರದ ತಮಾಶಾ, ಅದಕ್ಕಿಂತ ಸ್ಥಳೀಯ ದಾಸರಾಟ, ರಾಧಾನಾಟ ಪ್ರೇರಣೆ ನೀಡಿರಬಹುದು. ಅದೇನೇ ಇರಲಿ, ಮನರಂಜನೆಯ ಉದ್ದೇಶದ ಇದು ತೇಪೆಯಂತೆ ಅಂಟಿಕೊಂಡಿದೆ. ಯುದ್ಧ ಮೊದಲಾದ ವೀರರಸ ಪ್ರಧಾನ ಉತ್ತರಾರ್ಧ ಭಾಗವನ್ನು ಕೈಬಿಟ್ಟು, ಶೃಂಗಾರ ಹಾಸ್ಯ ರಸಪ್ರಧಾನ ಘಟನೆಗಳನ್ನು ಉಳಿಸಿಕೊಂಡ ಕಾರಣ, ಈ ಕೃತಿಗೆ ಸ್ತ್ರೀಲಕ್ಷಣ (Female Feature) ಪ್ರಾಪ್ತವಾಗಿದೆಯಲ್ಲದೆ, ಕಥೆ ಕವಲೊಡೆಯದೆ ಅದಕ್ಕೆ ದಂಪತಿಗಳ "ವಿಯೋಗದಿಂದ ಸಂಯೋಗಕ್ಕೆ" ಎಂಬಂಥ ವರ್ತುಲವೂ ಸಿದ್ಧಿಸಿದೆ.

ಶ್ರೀಕೃಷ್ಣ ಪಾರಿಜಾತದಲ್ಲಿ ಮುತ್ತಿನ ಹಾರದ ಸನ್ನಿವೇಶ ತುಂಬ ಪ್ರಸಿದ್ಧವಾದುದು. ಈ ನಾಟಕೀಯ ಪ್ರಸಂಗವನ್ನು ಕೌಜಲಗಿ ನಿಂಗವ್ವನ ಕಂಪನಿಯಲ್ಲಿರುವಾಗ ನಣದಿ ರಾಮಣ್ಣ ಜೋಡಿಸಿದನೆಂದು ಶ್ರೀರಾಮ ಇಟ್ಟಣ್ಣವರ ದಾಖಲಿಸಿರುವ ಸಂದರ್ಶನ ಮಾಹಿತಿ ತಿಳಿಸುತ್ತದೆ. ಆದುದರಿಂದ ಮಲಕಪ್ಪನ ಮೂಲರಚನೆಯಲ್ಲಿ ಈ ದೃಶ್ಯವಿರಲಿಲ್ಲವೆಂದೇ ಹೇಳಬೇಕು.

ಇವುಗಳಿಗಿಂತ ಮುಖ್ಯಸಂಗತಿಯೆಂದರೆ ಪಾತ್ರಗಳ ನಡುವೆ, ಪಾತ್ರ ಮತ್ತು ಪ್ರೇಕ್ಷಕರ ನಡುವೆ ಸಂಬಂಧ ಕಲ್ಪಿಸುವ ಭಾಗವತನೊಬ್ಬ ದೂತಿಯೂ ಆಗಿ ಆಟದ ಮೈತುಂಬ ಸೇರಿಕೊಂಡುದು. ಇದೆಲ್ಲ ಪಾರಿಜಾತ ಕೃತಿಯ ಮೂಲಸ್ವರೂಪ.

ಸಂಗೀತಕಲೆಯಲ್ಲಿ ಮರುಹುಟ್ಟು

ದೃಶ್ಯಗಳ ಜೋಡಣೆ, ಜಾನಪದ ಸಂವೇದನೆ, ವ್ಯಾಪಕ ಪ್ರಸಾರಗಳಿಗೆ ಗುರಿಯಾಗುತ್ತ ಬಂದರೂ ಈ ರಂಗಪ್ರಕಾರದಲ್ಲಿ ಹೊಸ ಘಟ್ಟ ಕಾಣಿಸಿಕೊಂಡದ್ದು "ಕರ್ನಾಟಕ ಸಂಗೀತ ಪದ್ಧತಿ"ಯ ಬದಲು "ಹಿಂದುಸ್ತಾನಿ ಸಂಗೀತ ಪದ್ಧತಿ" ಅಳವಡುವ ಮೂಲಕ.

ಕರ್ನಾಟಕ ಸಂಗೀತ ತುಂಬ ಸಂಪ್ರದಾಯಬದ್ಧ. ಅಲ್ಲಿ ಹೊಸಹೊಸ ರಾಗಾಲಾಪ ಆವಿಷ್ಕಾರಗಳಿಗೆ ಅವಕಾಶವಿಲ್ಲ. ಹಿಂದುಸ್ತಾನಿ ಸಂಗೀತ ಇದಕ್ಕೆ ತುಂಬ ವಿರುದ್ಧವಾದುದು. ಸೃಜನಶೀಲತೆಯೇ ಇವರ ಕೇಂದ್ರಗುಣ. ಇಂಥ ಸಂಗೀತದಿಂದಾಗಿ ಶ್ರೀಕೃಷ್ಣಪಾರಿಜಾತ ಹೊಸ ಜನ್ಮ ತಳೆಯಿತು. ಶ್ರೀಕೃಷ್ಣ ಪಾರಿಜಾತವೆಂದರೆ ಸಂಗೀತವೆಂಬಷ್ಟರ ಮಟ್ಟಿಗೆ ಅದಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿತು.

೧೯-೨೦ ನೆಯ ಶತಮಾನದ ಮಧ್ಯಕಾಲ ಕರ್ನಾಟಕ-ಮಹಾರಾಷ್ಟ್ರಗಳ ಸ್ನೇಹ-ಸಂಪರ್ಕ ವರ್ಧಿಸಿದ ಸಂದರ್ಭ. ಆಗ ಮುಧೋಳ, ರಾಮದುರ್ಗ, ಜಮಖಂಡಿ, ಜತ್ತ, ನಿಪ್ಪಾಣಿ, ಸಾಂಗಲಿ ಮತ್ತು ಕೊಲ್ಹಾಪುರ ಸಂಸ್ಥಾನಗಳು ಮರಾಠಾ ಸಂಸ್ಥಾನಿಕರ ವಶದಲ್ಲಿದ್ದವು. ಅಂದು ಮಹಾರಾಷ್ಟ್ರದ ಮೂಲಕ ಹಿಂದುಸ್ತಾನಿ ಸಂಗೀತ ಈ ಭಾಗದಲ್ಲಿ ಕ್ರಮೇಣ ತಳವೂರುತ್ತಲೇ, ಜನರ ಅಭಿರುಚಿಯಲ್ಲಿ ದೊಡ್ಡ ಬದಲಾವಣೆ ಕಾಣಿಸಿಕೊಂಡಿತು. ಈ ಸಂದರ್ಭದ ಸದುಪಯೋಗ ಮಾಡಿಕೊಂಡವಳು, ಕೌಜಲಗಿ ನಿಂಗವ್ವ. ಗುರು ಯಾದವಾಡ ಮಲಕಪ್ಪ

ಮೊದಲಾದವರ ಕಂಪನಿಗಳು ಪ್ರಚಲಿತ ಕರ್ನಾಟಕ ಸಂಗೀತ ಪದ್ಧತಿಯಲ್ಲಿಯೇ ಶ್ರೀಕೃಷ್ಣ ಪಾರಿಜಾತವನ್ನು ಅಂದು ಪ್ರದರ್ಶಿಸುತ್ತಿದ್ದವು. ನಿಂಗವ್ವನೂ ಈ ಸಂಪ್ರದಾಯದವಳಾಗಿದ್ದರಿಂದ ಕರ್ನಾಟಕ ಸಂಗೀತದಲ್ಲಿಯೇ ತನ್ನ ಕಂಪನಿಯನ್ನು ಮುಂದುವರಿಸಿದ್ದಳು. ಸುದೈವಕ್ಕೆ ಈ ಕಂಪನಿ ಸೇರಿದ ನಣದಿ ರಾಮಣ್ಣ ಮೊದಲಾದ ಪ್ರಸಿದ್ಧ ಹಿಂದುಸ್ತಾನಿ ಗಾಯಕರಿಂದಾಗಿ ಇವಳ ರಂಗಭೂಮಿ ಪರಿವರ್ತನೆ ಕಂಡಿತು. ಇದೇ ಪದ್ಧತಿ ವ್ಯಾಪಕಗೊಂಡು, ಕೃಷ್ಣಪಾರಿಜಾತದಲ್ಲಿ ಹಿಂದುಸ್ತಾನಿ ಸಂಗೀತಪ್ರಧಾನವೆಂಬ ಎರಡನೆಯ ಘಟ್ಟ ತೆರೆದುಕೊಂಡಿತು. ಹೆಚ್ಚು ಕಡಿಮೆ ಈ ಸಂಗೀತಶೈಲಿಯಲ್ಲಿಯೇ ಇಂದು ಎಲ್ಲ ಕಂಪನಿಗಳು ಮುಂದುವರಿಯುತ್ತಲಿವೆ.

* * *

ಯಾರು ಏನೇ ಪರಿಷ್ಕರಣ ಮಾಡಿದರೂ ಒಟ್ಟು ಕೃತಿ, ಗೊಲ್ಲತಿ-ಗೋಪಾಲ ಸನ್ನಿವೇಶದಲ್ಲಿ ಹಾಸ್ಯವನ್ನು ಹುಟ್ಟಿಸುತ್ತ, ಕೃಷ್ಣ-ರುಕ್ಮಿಣಿ, ಕೃಷ್ಣ-ಸತ್ಯಭಾಮೆ ಸನ್ನಿವೇಶಗಳಲ್ಲಿ ಶೃಂಗಾರಕ್ಕೆ ತಿರುಗಿ, ಕೊನೆಗೆ ಭಕ್ತಿಯಲ್ಲಿ ವಿರಮಿಸುತ್ತದೆ. ಅಂದರೆ ಹಾಸ್ಯ ಶೃಂಗಾರ ಭಕ್ತಿಯೆಂಬ ಮಿಶ್ರರಸಗಳಿಂದಾಗಿ ಇದಕ್ಕೆ ಮೃದುಪೇಯದ ಮಾಧುರ್ಯ ಪ್ರಾಪ್ತವಾಗಿದೆ.

ಶ್ರೀಕೃಷ್ಣ ಪಾರಿಜಾತ ಸ್ವಯಂಭೂಕೃತಿಯಲ್ಲ. ಸಾವಿರವರ್ಷಗಳ ಕನ್ನಡಸಾಹಿತ್ಯ ಪರಂಪರೆಯ ಭಾಗವಾಗಿರುವ ಇದು, ಅದರ ಯಾವ "ಆಶಯ" ಪರಂಪರೆಗೆ? ಯಾವ "ಆಕೃತಿ" ಪರಂಪರೆಗೆ?ಯಾವ "ಅಭಿವ್ಯಕ್ತಿ" ಪರಂಪರೆಗೆ? ಸಂಬಂಧಿಸಿದೆ ಎಂದು ಕೇಳಬೇಕಾಗುತ್ತದೆ. ಆದಿಕವಿ ಪಂಪ ಕಾವ್ಯವನ್ನು ಲೌಕಿಕ ಆಗಮಿಕವೆಂದು ವರ್ಗೀಕರಿಸಿದ್ದಾನೆ. ಎಂಟು ರಸಗಳನ್ನೋ ಇವುಗಳಲ್ಲಿ ಕೆಲವು ರಸಗಳನ್ನೋ ಒಳಗೊಂಡುದು ಲೌಕಿಕ, ಹೆಚ್ಚಿನದಾಗಿ ಒಂಬತ್ತನೆಯದಾದ ಶಾಂತ(ಭಕ್ತಿ)ರಸವನ್ನೂ ಒಳಗೊಂಡುದು ಆಗಮಿಕವೆಂದು ನನ್ನ ಅನಿಸಿಕೆ. ಭಾವನೆಗಳ ಉದ್ರೇಕವೇ ರಸ. ಇವುಗಳ ಉದ್ರೇಕದಲ್ಲಿ ಆನಂದವುಂಟು; ಇದೇ ರೀತಿ ಇವುಗಳ ಉಪಶಮನದಲ್ಲಿಯೂ ಆನಂದವುಂಟು. ಕೃಷ್ಣಪಾರಿಜಾತವು ಪ್ರೇಕ್ಷಕರಲ್ಲಿ ಹಾಸ್ಯ ಶೃಂಗಾರಗಳ ಉದ್ರೇಕಾತ್ಮಕ ಲೌಕಿಕ ಆನಂದವನ್ನು ಸೃಷ್ಟಿಸಿ, ಕೊನೆಯಲ್ಲಿ ಶಾಂತರಸದಿಂದ ಉಪಶಮನಾತ್ಮಕ ಆಗಮಿಕ ಆನಂದವನ್ನು ತುಂಬುತ್ತದೆ. ಆದುದರಿಂದ ಈ ರಂಗಕೃತಿಯು ಕೇವಲ ಉದ್ರೇಕ ಆನಂದವನ್ನುಂಟುಮಾಡುವ ಪಂಪಭಾರತ ಪರಂಪರೆಯದಲ್ಲ, ಉದ್ರೇಕ ಆನಂದದೊಂದಿಗೆ ಉಪಶಮನ ಆನಂದವನ್ನೂ ಉಂಟುಮಾಡುವ ಆದಿಪುರಾಣ ಪರಂಪರಯದೆನಿಸುತ್ತದೆ.

ಆಗಮಿಕ ಆಶಯವು ಪಂಪನ ಆದಿಪುರಾಣದಲ್ಲಿ 'ಮಾರ್ಗೀಯ ಶೈಲಿ'ಯಲ್ಲಿ ನಡೆದರೆ, ಹರಿಹರನ ರಗಳೆಯಲ್ಲಿ ಅದು 'ದೇಶೀಶೈಲಿ'ಗೆ ಹೊರಳಿ, ಹರಿದಾಸರ ಕೀರ್ತನೆಯಲ್ಲಿ 'ಗೇಯಶೈಲಿ'ಗೆ ವಾಲಿತು. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಆಗಮಿಕ ಆಶಯ, ದೇಶೀ ಆಕೃತಿ, ಗೇಯತೆಯ ಅಭಿವ್ಯಕ್ತಿ - ಈ ಮೂರನ್ನೂ ಒಳಗೊಂಡ ಶ್ರೀ ಕೃಷ್ಣಪಾರಿಜಾತವನ್ನು ಆಸ್ವಾದಿಸುವುದೆಂದರೆ ಏಕಕಾಲಕ್ಕೆ ಪಂಪನ ಆದಿಪುರಾಣ, ಹರಿಹರನ ರಗಳೆ, ದಾಸರ ಕೀರ್ತನೆ ಆಸ್ವಾದಿಸಿದ ಅನುಭವವಾಗುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇಲ್ಲಿ ಶೃಂಗಾರದ ಅತಿರೇಕವೂ ಇದೆ, ಭಕ್ತಿಯ ಅತಿರೇಕವೂ ಇದೆ. ಇವೆರಡರ ಸಮನ್ವಯದಿಂದಾಗಿ ಈ ಕೃತಿಗೆ ಭರತೇಶವೈಭವದ ಭೋಗ-ಯೋಗಗಳ ಸಮನ್ವಯ ಸ್ವರೂಪ ಪ್ರಾಪ್ತವಾಗಿದೆ.

ಒಟ್ಟಾರೆ, ಆಶಯದಲ್ಲಿ ಆಗಮಿಕ, ಆಕೃತಿಯಲ್ಲಿ ದೇಶಿ, ಅಭಿವ್ಯಕ್ತಿಯಲ್ಲಿ ಗೇಯತೆ ಪ್ರಧಾನವಾಗಿರುವ ಅಪರಾಳ ತಮ್ಮಣ್ಣನ ಶ್ರವ್ಯಕಾವ್ಯ, ಇನ್ನೂ ಮುಂದುವರಿದು ಯಾದವಾಡ ಮಲಕಪ್ಪನಲ್ಲಿ ದೃಶ್ಯಕಾವ್ಯವೆಂಬ ಬೇರೊಂದು ಪ್ರಕಾರಕ್ಕೆ ಹೊರಳುವ ಮೂಲಕ, ಕೇಳಿದರೆ 'ಕರ್ಣಸುಖ'ವೆಂದು ಪ್ರಸಿದ್ಧಿಯ ಜೊತೆಗೆ, ನೋಡಿದರೆ 'ನೇತ್ರಸುಖ'ವೆಂಬ ಪ್ರಸಿದ್ಧಿ ಪಡೆಯಿತು.

ತನ್ನ ಶಿಷ್ಟತೆಯಿಂದಾಗಿ ಕೀರ್ತನಪಾರಿಜಾತ ನಿರ್ದಿಷ್ಟಪಠ್ಯವಾದರೆ, ತನ್ನ ಜಾನಪದೀಯತೆಯಿಂದಾಗಿ ರಂಗಪಾರಿಜಾತ ಅನಿರ್ದಿಷ್ಟಪಠ್ಯವಾಗಿದೆ. ಇಂಥ ಬದಲಾವಣೆಯಿಂದಾಗಿ ಈ ರಂಗಕೃತಿ 'ವ್ಯಕ್ತಿಪಠ್ಯ'ವೆನಿಸಿದೆ 'ಸಮುದಾಯಪಠ್ಯ'ವೆನಿಸಿತು. ವ್ಯಕ್ತಿಪಠ್ಯವೇ 'ಶೈಲಿ', ಸಮುದಾಯ ಪಠ್ಯವೇ 'ರೀತಿ'. ಹೀಗಾಗಿ ಆ ಕೀರ್ತನಕೃತಿ ಮತ್ತು ಈ ರಂಗಕೃತಿಗಳೆಂದರೆ ಶೈಲಿಯಿಂದ ರೀತಿಗೆ ಸಾಗಿಬಂದ ಪ್ರಯೋಗವೆಂದೇ ಹೇಳಬೇಕು.

ಒಟ್ಟಾರೆ, ಯಾದವಾಡ ಮಲಕಪ್ಪನ ಕೈಯಲ್ಲಿ ನಿರ್ದಿಷ್ಟ ಪಠ್ಯದಿಂದ ಅನಿರ್ದಿಷ್ಟ ಪಠ್ಯಕ್ಕೆ, ನಣದಿ ರಾಮಣ್ಣ ಮೊದಲಾದವರ ಕೈಯಲ್ಲಿ ನಿರ್ದಿಷ್ಟ ಸಂಗೀತದಿಂದ ಅನಿರ್ದಿಷ್ಟ ಸಂಗೀತಕ್ಕೆ ಹೊರಳಿದ್ದ ಕಾರಣ, ರಂಗಪಾರಿಜಾತವು ಏಕಕಾಲಕ್ಕೆ 'ನೋಡುವ-ಕೇಳುವ ಅನಿರ್ದಿಷ್ಟ ಪಠ್ಯ'ವೆಂಬ ಸೃಜನಶೀಲಕೃತಿಯಾಗಿದೆ. ಇದರಿಂದಾಗಿ ಸಂಗೀತಜ್ಞರ ನಡುವೆ ಸಂಗೀತವಾಗಿ ಒಗ್ಗುವ, ಆಧ್ಯಾತ್ಮಿಗಳ ನಡುವೆ ಆಧ್ಯಾತ್ಮವಾಗಿ ಹಿಗ್ಗುವ, ರಸಿಕರ ನಡುವೆ ಶೃಂಗಾರ-ಹಾಸ್ಯವಾಗಿ ಹಿಗ್ಗುವ ಅನಿರ್ದಿಷ್ಟಗುಣ ಪಡೆದಿದೆ.

ಕೇಳುವ ಕಾವ್ಯಪಾರಿಜಾತ, ನೋಡುವ ರಂಗಪಾರಿಜಾತಗಳನ್ನು ಕ್ರಮವಾಗಿ ಕೇಳಿ, ನೋಡಿ ಆಸ್ವಾದಿಸಬೇಕು. ಆದರೆ ಇತ್ತೀಚೆ ಸಾಕ್ಷರತೆ ವರ್ಧಿಸಿದಂತೆ ಎಲ್ಲ ಸಾಹಿತ್ಯವನ್ನೂ ಮುದ್ರಿಸಿ ವಾಚಿಸುವ ಮತ್ತು ವಿಮರ್ಶಿಸುವ ತಪ್ಪು ಪದ್ಧತಿ ನಮ್ಮಲ್ಲಿ ಬೆಳೆದು ಬಂದಿದೆ. ಅಭಿವ್ಯಕ್ತಿಯ ಈ ಪಾತಳಿಪಲ್ಲಟದಿಂದಾಗಿ ಆಯಾ ಪ್ರಕಾರಗಳ ಪರಿಣಾಮದಲ್ಲಿಯೂ ಪಲ್ಲಟ ತಲೆದೋರುವ ಕಾರಣ, ಅವುಗಳ ಮೌಲ್ಯನಿರ್ಣಯದಲ್ಲಿ ಅನ್ಯಾಯವಾಗುತ್ತಲಿದೆ. ಆದುದರಿಂದ ಕಾವ್ಯಪಾರಿಜಾತವನ್ನು ಶ್ರೋತೃಗಳಾಗಿ ಕೇಳಿ ಆನಂದಿಸುವುದು - ಕೇಳಿ ವಿಮರ್ಶಿಸುವುದು, ರಂಗಪಾರಿಜಾತವನ್ನು ಪ್ರೇಕ್ಷಕರಾಗಿ ನೋಡಿ ಆನಂದಿಸುವುದು -ನೋಡಿ ವಿಮರ್ಶಿಸುವುದು ಸರಿಯಾದ ಕ್ರಮವಾಗಿದ್ದು, ಅಂಥ ಆಸ್ವಾದನ ಪದ್ಧತಿ ಮತ್ತು ವಿಮರ್ಶಾಪದ್ಧತಿಗಳು ಕನ್ನಡದಲ್ಲಿ ಬೆಳೆದು ಬರಬೇಕಾಗಿದೆ.

ಇಂದು ಎಷ್ಟೋ ವ್ಯತ್ಯಾಸವಾಗಿದ್ದರೂ ಯಾದವಾಡ ಮಲಕಪ್ಪನ ರಂಗಪಠ್ಯ ನಮ್ಮ ಕಣ್ಣಮುಂದಿದೆ. ಮುಖ್ಯವಾದ ಸಂಗತಿಯೆಂದರೆ ಅಪರಾಳ ತಮ್ಮಣ್ಣನ ಕಾಲದ ವರೆಗೂ 'ಕೀರ್ತನಪಠ್ಯ'ವಾಗಿ ಸಂವಹನಗೊಳ್ಳುತ್ತಿದ್ದ ಅದು, ಮುಂದಿನ ತಲೆಮಾರುಗಳಲ್ಲಿ ಹಾಡುವ ಬ್ರಾಹ್ಮಣ ಮಹಿಳೆಯರ 'ಪಾರಾಯಣಪಠ್ಯ'ವಾಯಿತು. ಇನ್ನೂ ಮುಂದೆ ಈ ಪ್ರದೇಶದಲ್ಲಿ 'ರಂಗಪಠ್ಯ'ವಾಗುವ ಮೂಲಕ ಕೌಜಲಗಿ ನಿಂಗವ್ವನಂಥ ಶೂದ್ರರ ಕೈಸೇರಿ ಮಡಿವಂತಿಕೆ ಕಳೆದುಕೊಂಡ ಕಾರಣ, ಅದನ್ನು ನೈಷ್ಠಿಕ ಬ್ರಾಹ್ಮಣರು ಮನೆಯಿಂದ ಹೊರಗೆ ತಳ್ಳಿ, ತಮ್ಮ ಸಮೀಪದ ಗೋಕಾವಿಯ ಅನಂತಾದ್ರೀಶನ 'ವೆಂಕಟೇಶಪಾರಿಜಾತ'ವನ್ನು ಬರಮಾಡಿಕೊಂಡರು. ಹೀಗಿದ್ದೂ ಅಪರಾಳ ಪಾರಿಜಾತದ ಹಾಡುಗಾರಿಕೆಯನ್ನು ಬ್ರಾಹ್ಮಣ ಮಹಿಳೆಯರು ಇನ್ನೂ ಉಳಿಸಿಕೊಂಡಿರುವರೆಂದೂ, ಅದನ್ನು ಬಳಸಿಕೊಂಡು ತಾವು 'ಗೀತ-ಪಾರಿಜಾತ' ರಚಿಸಿರುವುದಾಗಿಯೂ ಹೇಳುವ ಶ್ರೀ ರಾಮಚಂದ್ರ ಕಿತ್ತೂರ ಅವರ ಮಾತುಗಳು ಮನನೀಯವಾಗಿವೆ.

ಈ ಕೃತಿಗೆ ಸಾಹಿತ್ಯ, ಆಧ್ಯಾತ್ಮ ಎಂಬ ಎರಡು ಮುಖಗಳಿವೆ. ಈ ವರೆಗೆ ವಿವೇಚಿಸಿದುದು ಸಾಹಿತ್ಯಮುಖ. ಇದರಾಚೆ ಇರುವುದೇ ನಿಜವಾದ ಮುಖ, ಆಧ್ಯಾತ್ಮಿಕ ಮುಖ. ಇಲ್ಲಿ ರುಕ್ಮಿಣಿ ಲಕ್ಷ್ಮಿತತ್ತ್ವ, ಸತ್ಯಭಾಮೆ ಭಕ್ತತತ್ತ್ವ. ಯಾವಾಗಲೂ ಎದೆಯಲ್ಲಿರುವ ಲಕ್ಷ್ಮಿಯು ದೇವನಿಂದ ಅಗಲದ ಅವಿನಾಭಾವಿ. ಭಕ್ತ ಅಹಂಕಾರದಿಂದ ಅಗಲಿ ಪಶ್ಚಾತ್ತಾಪ ಪಟ್ಟರೆ, ದೇವನೇ 'ಇದು ಏನು ಸೋಜಿಗವೋ ಎನ್ನ ಜೀವ ಮರುಗುತಿದೆ' ಎಂದು ಕರುಣೆ ತೋರಿ, ತನ್ನತ್ತ ಮಾಡಿಕೊಳ್ಳುವ ದಯಾಮಯಿ. ಈ ತತ್ವದ ಸುತ್ತ ಈ ಕಥೆ ಬೆಳೆದಿದೆ, ಪ್ರತಿಮಾ ವಿಧಾನದಲ್ಲಿ ಮೈತಳೆದಿದೆ.

ಭವಿಷ್ಯದಲ್ಲಿ ಇನ್ನೊಂದು ಪಠ್ಯ

೧೨೫ ವರ್ಷಗಳ ಅವಧಿಯಲ್ಲಿ ಪ್ರತಿಯೊಂದು ಕಂಪನಿ, ಪ್ರತಿಯೊಂದು ಪ್ರಯೋಗ ಶ್ರೀಕೃಷ್ಣ ಪಾರಿಜಾತಕ್ಕೆ ಮರುಹುಟ್ಟು ನೀಡುತ್ತ ಬಂದಿವೆ. ಇವೆಲ್ಲ ಸಾಂದರ್ಭಿಕ. ಆದರೆ ಈ ರಂಗಕಲೆಯನ್ನು ಮುರಿದು ಕಟ್ಟುವ ಅವಶ್ಯಕತೆಯನ್ನು ಮನಗಂಡು, ಕಿತ್ತೂರಿನಲ್ಲಿ ಶ್ರೀಬಸಲಿಂಗಯ್ಯ ಹಿರೇಮಠ ಮೊದಲಾದವರು ಪ್ರಜ್ಞಾಪೂರ್ವಕ ಮಾಡಿದ ಕಾಯಕಲ್ಪ ತುಂಬ ಮಹತ್ವದ್ದಾಗಿದೆ. ಶ್ರೀಕೃಷ್ಣಪಾರಿಜಾತದ ಆರಂಭದಲ್ಲಿ ಬರುವ ಗೊಲ್ಲತಿ-ಗೋಪಾಲ ಸನ್ನಿವೇಶವು ಮುಖ್ಯಕಥೆಗೆ ಸಂಬಂಧವಿಲ್ಲದ ತೇಪೆಯಂತೆ ಕಾಣುತ್ತಿದ್ದಿತು. ಈ ದೋಷವನ್ನು ಗಮನಿಸಿ, ಇದು ಗೃಹಸ್ಥಪೂರ್ವಜೀವನದಲ್ಲಿ ಕೃಷ್ಣನು ಗೊಲ್ಲತಿಯೊಂದಿಗೆ ನಡೆಸಿದ ಪ್ರಣಯಚೇಷ್ಟೆಯೆಂಬಂತೆ ಶ್ರೀ ಬಸಲಿಂಗಯ್ಯನವರು ರೂಪಿಸಿದುದು ತುಂಬ ಯೋಗ್ಯವೆನಿಸಿದೆ. ಇದಲ್ಲದೆ ಹಾಡಿನಲ್ಲಿ ಸಿಗುವ ಸೂಚನೆಯನ್ನವಲಂಬಿಸಿ ಗೊಲ್ಲತಿಯೊಂದಿಗೆ ಗೆಳತಿಯರನ್ನು ಸೃಷ್ಟಿಸುವ ಮೂಲಕ ರಂಗಭೂಮಿಗೆ ಬಣ್ಣ ತುಂಬಿದ್ದಾರೆ. ಇದೆಲ್ಲಕ್ಕಿಂತ ಎಲ್ಲ ಪಾತ್ರಗಳಿಗೆ ಕಡ್ಡಾಯವಾಗಿಸಿದ ಕುಣಿತದಿಂದಾಗಿ ಸ್ಥಗಿತ ರಂಗಭೂಮಿಗೆ ಒಂದು ಚಲನೆ ಪ್ರಾಪ್ತವಾಗಿದೆ. ಈ ಬದಲಾವಣೆಗಳಿಗಾಗಿ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ.

ಹೀಗಿದ್ದೂ, ಮಾಡಲೇಬೇಕಾದ ಇನ್ನೂ ಕೆಲವು ಬದಲಾವಣೆಗಳಲ್ಲಿ ಮುಖ್ಯವಾದುದು ದೂತಿಯಪಾತ್ರ. ಹೆಣ್ಣಿನ ನಡತೆ, ಗಂಡಿನ ವೇಷ ಕಾರಣವಾಗಿ ಇದು ತುಂಬ ಆಭಾಸ ಹುಟ್ಟಿಸುತ್ತದೆ. ಕಾವ್ಯಪಠ್ಯವನ್ನು ರಂಗಪಠ್ಯವನ್ನಾಗಿ ರೂಪಿಸುವಲ್ಲಿ ಸೃಷ್ಟಿಯಾದ ಆಭಾಸವಿದು. ಕಾವ್ಯದಲ್ಲಿ ಸಂಪರ್ಕವ್ಯಕ್ತಿಯಾಗಿ ದೂತಿ ಇದ್ದಾಳೆ. ಆಟದಲ್ಲಿ ಭಾಗವತ ಇರಬೇಕಾಗುತ್ತದೆ. ಕಾವ್ಯವನ್ನು ಆಟವನ್ನಾಗಿ ಪರಿವರ್ತಿಸುವಲ್ಲಿ ಆ ದೂತಿ, ಈ ಭಾಗವತ ಇಬ್ಬರನ್ನೂ ಒಂದುಗೂಡಿಸಿಬಿಟ್ಟರು. ಇನ್ನು ಮೇಲೆ ಭಾಗವತನೆಂಬ ಪುರುಷಪಾತ್ರ, ದೂತಿಯೆಂಬ ಸ್ತ್ರೀಪಾತ್ರಗಳನ್ನು ಸ್ವತಂತ್ರವಾಗಿ ಸೃಷ್ಟಿಸಿ, ಅವರವರ ಪಾಲಿನ ಕರ್ತವ್ಯಗಳನ್ನು ಅವರವರಿಗೆ ವಹಿಸಿಕೊಡಬೇಕು. ಇದು ಪರಿಷ್ಕರಿಸಲೇಬೇಕಾದ ವಿಷಯ. ಆರಂಭದಲ್ಲಿ ಬರುವ ಗೊಲ್ಲತಿಯ ಹೆಸರು ರಾಧೆ ಎಂಬುದಕ್ಕೆ ಕಥೆಯಲ್ಲಿ ಸೂಚನೆಗಳಿರುವುದರಿಂದ, ಆಕೆ ಕೃಷ್ಣನ ಪ್ರಿಯಸಖಿಯಾಗಿರುವುದರಿಂದ ಇನ್ನು ಮೇಲೆ ನೇರವಾಗಿ ಆ ಹೆಸರನ್ನೇ ಬಳಸುವುದು ಸೂಕ್ತ. ಹೂವಿಗಾಗಿ ಕಾದಾಡಿದ ಸತ್ಯಭಾಮೆ ಸೋತು ಶರಣಾಗುತ್ತಾಳೆ. ಇಷ್ಟಾದ ಮೇಲೆಯೂ ಹೂವು ರುಕ್ಮಿಣಿಯ ಹತ್ತಿರ ಉಳಿಯುವುದು ಸತ್ಯಭಾಮೆಗೆ ಅನ್ಯಾಯ. ಈಗ ರುಕ್ಮಿಣಿ ಪ್ರೀತಿ ತೋರಿಸುತ್ತ ತನ್ನ ತುರುಬಿನಿಂದ ತಂಗಿಯ ತುರುಬಿಗೆ ಹೂ ಮುಡಿಸುವ ದೃಶ್ಯ ಯೋಜಿಸಿದರೆ ಕಥಾವರ್ತುಲ ಪೂರ್ಣಗೊಳ್ಳುತ್ತದೆ.

ಇಂದು ರಂಗಭೂಮಿ ಹಲವು ರೀತಿಯಲ್ಲಿ ಬೆಳೆದಿದೆ. ಈ ಆದರ್ಶದಲ್ಲಿ ಸನ್ನಿವೇಶಗಳ ಕ್ರಮ-ಪ್ರಮಾಣ, ಹೊಸ ಸನ್ನಿವೇಶಗಳ ಸೃಷ್ಟಿ, ಅಗತ್ಯ ಹಾಡುಗಳ ಆಯ್ಕೆ, ಕರ್ತಬದ್ಧ ಮಾತುಗಾರಿಕೆ, ಹಾವ-ಭಾವ, ರಂಗಸಜ್ಜಿಕೆ ಇತ್ಯಾದಿಗಳಲ್ಲಿ ಪರಿಷ್ಕರಣಕಾರ್ಯ ನಡೆಯಬೇಕು. ಗಿಳಿಯ ದೌತ್ಯ, ಕೃಷ್ಣ-ರುಕ್ಮಿಣಿಯರ ಪಗಡೆಯಾಟಗಳಂಥ ಪ್ರಸಂಗಗಳನ್ನು ಬಳಸಿ, ಸರಸ ದಾಂಪತ್ಯವನ್ನು ಇನ್ನೂ ಜೀವಂತಗೊಳಿಸಬೇಕು.

ಈ ಆಟದ ಘಟನೆ ಜರುಗಿದುದು ಮಥುರಾನಗರದಲ್ಲಿ. ಅಲ್ಲಿಯ ಗೊಲ್ಲ-ಗೊಲ್ಲತಿಯರ ಪ್ರಾದೇಶಿಕ ದೃಶ್ಯ ಪದೇ ಪದೇ ಮರುಕಳಿಸುವಂತೆ ಮಾಡಬೇಕು. ಶ್ರೀಕೃಷ್ಣ ಪಾರಿಜಾತ ಒಂದು ಹೂವಿನಕಥೆಯಾಗಿರುವುದರಿಂದ ಅದರ ಪ್ರಸ್ತಾಪ-ಪ್ರದರ್ಶನ ಮತ್ತೆ ಮತ್ತೆ ಕಾಣಿಸಿಕೊಳ್ಳಬೇಕು. ಶ್ರೀಕೃಷ್ಣ ಪಾರಿಜಾತವು ನಾಟಕದಲ್ಲಿ ನಾಟಕವನ್ನೊಳಗೊಂಡಿದೆ. ಅಂದರೆ ಈ ನಾಟಕದಲ್ಲಿ ಕೃಷ್ಣನಾಗಿ ನಟಿಸುವವನೇ ಕೊರವಂಜಿಯಾಗಿಯೂ ನಟಿಸುತ್ತಾನೆ. ಈಗ ಸಂಸಾರ ನಾಟಕದಲ್ಲಿ ಸಾಮಾಜಿಕತೆ ಸೇರಿಕೊಳ್ಳುತ್ತದೆ. ಇದು, ಕೃಷ್ಣಪಾರಿಜಾತವೆಂದರೆ ಕೊರವಂಜಿ ದೃಶ್ಯವೆಂಬಂತೆ ಮಹತ್ವ ಪಡೆದಿದ್ದು, ಸುಧಾರಣಾ ಸಂದರ್ಭದಲ್ಲಿ ಇದನ್ನು ಇನ್ನೂ ಅದ್ಭುತವಾಗಿ ಬೆಳೆಸಬಹುದಾಗಿದೆ.

ರಂಗಪಾರಿಜಾತವು ಕೆಲವೊಮ್ಮೆ ಶೃಂಗಾರ ಹಾಸ್ಯ ಆಧ್ಯಾತ್ಮ ಸಂಗೀತ - ಇವುಗಳನ್ನು ಹಿಗ್ಗಾಮುಗ್ಗಾ ಎಳೆದಾಡುವ ಸಂಭಾಷಣೆಯೆನಿಸಿ, ಕಲಾಪ್ರಮಾಣಬದ್ಧತೆಯನ್ನು ಕಳೆದುಕೊಳ್ಳುತ್ತಲಿದೆ. ಈ ಎಲ್ಲ ಗುಣ-ದೋಷಗಳ ಹಿನ್ನೆಲೆಯಲ್ಲಿ ಪಾರಿಜಾತ ಸುಸಂಬದ್ಧ ಕಲೆಯಾಗಿ ಆಕಾರಪಡೆಯಬೇಕಾಗಿದೆ. ಕಂಪನಿಗಳ ಮಾಲಕರು, ಆಧುನಿಕ ರಂಗತಜ್ಞರು ಸೇರಿ ಈ ಕೆಲಸವನ್ನು ಪೂರೈಸಿದರೆ, ಜನಪದ ಯಾವ ರಂಗಕೃತಿಗೂ ಕಡಿಮೆಯಿಲ್ಲದ ಘನತೆ-ಆಕರ್ಷಣೆ ಇದಕ್ಕೆ ಪ್ರಾಪ್ತವಾಗುತ್ತದೆ. ಹೀಗೆ ಮಾಡುವಾಗ ದ್ವೈತಸಿದ್ಧಾಂತದ ಕೇಂದ್ರ ತಪ್ಪದಂತೆ ನೋಡಿಕೊಳ್ಳುವುದು ಅವಶ್ಯವಿದೆ.

ಈ ಕೆಲಸಕ್ಕೆ ಒಬ್ಬ ಪ್ರಾಮಾಣಿಕ, ಆಧುನಿಕ ರಂಗತಜ್ಞಬೇಕು. ಕನಸುಗಾರನಾದ ಅವನು ತನ್ನ ಅಭ್ಯಾಸ-ಅನುಭವಗಳ ಬಲದಿಂದ ಈ ರಂಗಪಠ್ಯವನ್ನು ಕಲಾಕೃತಿಯಾಗಿ ರೂಪಿಸುವ, ರಂಗಪ್ರಯೋಗವನ್ನು ಅರ್ಥಪೂರ್ಣವಾಗಿ ಪ್ರದರ್ಶಿಸುವ, ಜನತೆ-ವಿದ್ವಜ್ಜನತೆಯ ಹತ್ತಿರ ಒಯ್ದು ಅವರ ಪ್ರತಿಕ್ರಿಯೆಗೆ ತಕ್ಕಂತೆ ಸರಿಯಾದ ದಿಕ್ಕಿನಲ್ಲಿ ಅದನ್ನು ಅಭಿವೃದ್ಧಿ ಪಡಿಸುವ, ಮಕ್ಕಳಿಗೆ-ಆಸಕ್ತರಿಗೆ ರಂಗಶಿಕ್ಷಣ ತರಬೇತಿ ನೀಡುವ ವ್ಯಕ್ತಿತ್ವಸಂಪನ್ನತೆ ಅವನಿಗೆ ಬೇಕು. "ಶ್ರೀಕೃಷ್ಣ ಪಾರಿಜಾತ ಮಹಾಪರಿಷತ್ತು" ಹೆಸರಿನಲ್ಲಿ ಎಲ್ಲ ಕಂಪನಿಗಳನ್ನು ಸಂಘಟಿಸಿ, ಅವು ಆರ್ಥಿಕವಾಗಿ ಕುಸಿಯದಂತೆ, ವೃದ್ಧಾಪ್ಯದಲ್ಲಿ ಕಲಾವಿದರು ಅನಾಥರಾಗದಂತೆ ನೋಡಿಕೊಳ್ಳಬೇಕು. ಕಲಾವಿದರು, ಕಂಪನಿ, ಸಮಾಜ ಮತ್ತು ಸರಕಾರಗಳ ಮಧ್ಯ ಸರಿಯಾದ ತಿಳಿವಳಿಕೆ ಬೆಳೆಯುವಂತೆ ವ್ಯವಸ್ಥೆ ಮಾಡಬೇಕು. ಇದಲ್ಲದೆ ಇಂದು ರಂಗಕಲೆಯೆನ್ನುವುದು ದುಡಿಯಲಾರದ ಸೋಮಾರಿಗಳ, ಲಹರಿವ್ಯಕ್ತಿಗಳ ಕ್ಷೇತ್ರವೆಂಬ ಅಪಖ್ಯಾತಿಗೆ ಗುರಿಯಾಗಿದೆ. ವಿದ್ಯಾವಂತರು, ಸರಕಾರಿ-ಸಾರ್ವಜನಿಕ ವೃತ್ತಿನಿರತರು, ಪ್ರತಿಷ್ಠಿತರು ನಿರ್ದೇಶಕರಾಗಿ, ರಂಗಕರ್ಮಿಗಳಾಗಿ, ಪಾತ್ರಧಾರಿಗಳಾಗಿ ಸೇರಿಕೊಂಡು, ಆ ಅಪಖ್ಯಾತಿಯನ್ನು ನಿವಾರಿಸಬೇಕಾಗಿದೆ. ಆಗ ಇದಕ್ಕೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಸಿದ್ಧಿ ಪ್ರಾಪ್ತವಾಗುತ್ತದೆ.

ಶ್ರೀಕೃಷ್ಣ ಪಾರಿಜಾತ ಮಹಾಲಿಂಗಪುರ ಪ್ರದೇಶದಲ್ಲಿ ಹುಟ್ಟಿದ ಕಲಾಶಿಶು. ಕಲಾಜಗತ್ತಿಗೆ ಇದು ನಿಮ್ಮ ಕಾಣಿಕೆ. ತನ್ನ ಗುಣಾತ್ಮಕ ಅಂಶದಿಂದ ಇದು ಬೆಳೆಯುತ್ತಲಿದ್ದರೂ ಪೂರಕವಾಗಿ ನಿಮ್ಮ ನೆರವು ಅಗತ್ಯ. ಮಹಾಲಿಂಗಪುರದ ಜನತೆ ಈ ದಿಕ್ಕಿನಲ್ಲಿ ದುಡಿಯುವರೆಂದು ಆಶಿಸುತ್ತೇನೆ.

ಮಹಾಲಿಂಗಪುರದಲ್ಲಿ ಜರುಗುತ್ತಲಿರುವ ಈ ಪಾರಿಜಾತ ಸಮ್ಮೇಲನವೆಂದರೆ ನಿಂಗವ್ವನ ಸಮ್ಮೇಲನ, ನಿಂಗವ್ವನ ಹಬ್ಬ. ನಿಂಗವ್ವನ ಈ ಹಬ್ಬಕ್ಕೆ ನನ್ನನ್ನು ಆಮಂತ್ರಿಸಿದ ನಿಮ್ಮನ್ನು ಇನ್ನೊಮ್ಮೆ ನೆನೆದು ವಿರಮಿಸುತ್ತೇನೆ.

ಅಖಿಲಕರ್ನಾಟಕ ಒಂದನೆಯ ಶ್ರೀಕೃಷ್ಣ ಪಾರಿಜಾತ ಸಮ್ಮೇಳನದ (ಮಹಾಲಿಂಗಪುರ ೨೮, ೨೯ ಫೆಬ್ರುವರಿ ೨೦೦೪) ಅಧ್ಯಕ್ಷೀಯ ಭಾಷಣ.

ಆಕರ : ಮಾರ್ಗ ಸಂಪುಟ–೬

೩

ಹಸ್ತಪ್ರತಿ ಸಮ್ಮೇಳನ : ಅಧ್ಯಕ್ಷತೆ

೨೦೦೫

ನನ್ನ ಹಸ್ತಪ್ರತಿ ಕಥೆ

ಪ್ರಾತಃಸ್ಮರಣೀಯರಾದ ಶ್ರೀ. ಫ. ಗು. ಹಳಕಟ್ಟಿಯವರಿಗೆ ಕೈಮುಗಿದು,

ಪೂಜ್ಯರೇ-ಹಿರಿಯರೇ-ಸ್ನೇಹಿತರೇ,

ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮತ್ತು ವಿಜಾಪುರದ ಬಿ. ಎಲ್. ಡಿ. ಇ. ಸಂಸ್ಥೆಗಳ ಸಹಯೋಗದಲ್ಲಿ ಜರುಗುತ್ತಲಿರುವ ಈ ಸಮ್ಮೇಲನದ ವಸ್ತು, ಹಸ್ತಪ್ರತಿ. ನಾನು ಮೊದಲಿನಿಂದಲೂ ಹಸ್ತಪ್ರತಿ ಮಧ್ಯದಲ್ಲಿಯೇ ಬೆಳೆದವನಾದುದರಿಂದ, ಪ್ರತಿಸಲದಂತೆ ಈ ವರ್ಷವೂ ಕನ್ನಡ ವಿಶ್ವವಿದ್ಯಾಲಯ ಅಧ್ಯಕ್ಷತೆಯ ಆಮಂತ್ರಣ ನೀಡಿತು. ಈ ಸಲ ಇದನ್ನು ನಿರಾಕರಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ, ಒಂದು ಕಡೆ ನನ್ನ ಪ್ರೀತಿಯ ಕನ್ನಡ ವಿಶ್ವವಿದ್ಯಾಲಯ, ಇನ್ನೊಂದು ಕಡೆ ನನ್ನ ಪ್ರೀತಿಯ ಬಿ. ಎಲ್. ಡಿ. ಇ. ಸಂಸ್ಥೆ. ಈ ಪ್ರೀತಿಗಾಗಿ ಆತ್ಮೀಯರಾದ ಕುಲಪತಿ ಡಾ. ಬಿ. ಎ. ವಿವೇಕ ರೈಯವರಿಗೆ, ಬಿ. ಎಲ್. ಡಿ. ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ. ಎಂ. ಬಿ. ಪಾಟೀಲ ಮೊದಲಾದ ಪದಾಧಿಕಾರಿಗಳಿಗೆ, ಹಳಕಟ್ಟಿ ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ. ಎಸ್. ಸಿ. ತಂಬಾಕೆ ಅವರಿಗೆ, ನನ್ನ ವಿದ್ಯಾರ್ಥಿಮಿತ್ರ ಡಾ. ಎಫ್. ಟಿ. ಹಳ್ಳಿಕೇರಿಯವರಿಗೆ ಕೃತಜ್ಞನಾಗಿದ್ದೇನೆ.

ನಮ್ಮ ನಾಡಿನ ಕೆಲವು ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿವಿಭಾಗಗಳು ಅಸ್ತಿತ್ವಕ್ಕೆ ಬಂದಿವೆ. ಇವುಗಳಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದ ಬಾಗಿಲು ಮೊದಲಿನಿಂದಲೂ ಮುಚ್ಚಿಯೇ ಇದೆ. ಎಸ್. ಶಿವಣ್ಣ ಅವರಿಂದಾಗಿ ಕ್ರಿಯಾಶೀಲವಾಗಿದ್ದ ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದ ಬಾಗಿಲು, ಅವರ ನಿವೃತ್ತಿಯ ಬಳಿಕ ಮುಚ್ಚಿಯೇ ಹೋಯಿತು. ಕರ್ನಾಟಕ ವಿಶ್ವವಿದ್ಯಾಲಯದ ಹಸ್ತಪ್ರತಿ ಭಾಂಡಾರದ ಬಾಗಿಲು ಮುಂಜಾನೆ ತೆರೆಯುವ, ಸಂಜೆ ಮುಚ್ಚುವ ಸ್ಥಿತಿಗಿಳಿದಿದೆ. ಮೈಸೂರು ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗ ಮೊದಲಿನ ವೈಭವ ಕಳೆದುಕೊಂಡಿದ್ದರೂ ತಕ್ಕಮಟ್ಟಿಗೆ ಕೆಲಸ ಮಾಡುತ್ತಲಿದೆ. ಹೀಗೆ ಇವೆಲ್ಲ ಮಲಗಿರುವ-ಮಲಗುತ್ತಲಿರುವ ಸಂದರ್ಭದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗ ಎಚ್ಚರವಾಗಿರುವುದು, ಸಂತೋಷದ ಸಂಗತಿ. ಹಸ್ತಪ್ರತಿಗಳ ಸಂಗ್ರಹ-ಸಂರಕ್ಷಣೆ-ಸೂಚೀ ರಚನೆ ಇತ್ಯಾದಿ

ಸಾಂಪ್ರದಾಯಿಕ ವಿದ್ವತ್ತಿನ ಕಾರ್ಯಗಳೊಂದಿಗೆ, ಭಿನ್ನಪಾಠಗಳ ಚಲನಶೀಲತೆ-ಹಸ್ತಪ್ರತಿಗಳ ಕಂಪ್ಯೂಟರೀಕರಣ ಇತ್ಯಾದಿ ಹೊಸ ಹೊಸ ಚಿಂತನೆಗಳಲ್ಲಿ ಮುಂದುವರಿಯುತ್ತಿರುವುದು, ಅದರ ಆಧುನಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ. ಇದೂ ಸಾಲದೆಂಬಂತೆ 'ಹಸ್ತಪ್ರತಿ' ಹೆಸರಿನ ಪತ್ರಿಕೆಯ ಆರಂಭ, ಯು.ಜಿ.ಸಿ. ನೆರವಿನ ಅರ್ಥಪೂರ್ಣ ಯೋಜನೆಗಳು, ವಿದ್ಯಾರ್ಥಿಗಳಿಗೆ ನೀಡುವ ಹಸ್ತಪ್ರತಿ ವಾಚನ ತರಬೇತಿ ಮೊದಲಾದವು, ಈ ವಿಭಾಗದ ಶೈಕ್ಷಣಿಕ ಆಸಕ್ತಿಯನ್ನು ಸೂಚಿಸುತ್ತವೆ. ಇಷ್ಟು ಜೀವಂತವಾಗಿರುವ ಈ ವಿಭಾಗ, ತನ್ನ ಹತ್ತನೆಯ ವರ್ಷದ ಹರ್ಷದಲ್ಲಿ ಈ ಸಮ್ಮೇಲನವನ್ನು ಆಚರಿಸುತ್ತಲಿದೆ.

ಬಿ. ಎಲ್. ಡಿ. ಇ. ಸಂಸ್ಥೆ ನನ್ನ ವಿದ್ಯಾಭ್ಯಾಸದ ನೆಲ-ಹೊಲ. ನಾನು ಈ ಮನೆಯಂಗಳದ ಹೂವು. ಶ್ರೀ ಹಳಕಟ್ಟಿಯವರು ಸ್ಥಾಪಿಸಿದ ಈ ಸಂಸ್ಥೆಯಲ್ಲಿ ಪೂಜ್ಯ ಶ್ರೀ ಬಂಥನಾಳ ಶಿವಯೋಗಿಗಳು ಉನ್ನತ ಶಿಕ್ಷಣಕ್ಕೆ ಶ್ರೀಕಾರ ಬರೆದರು. ಶ್ರೀ ಬಿ. ಎಂ. ಪಾಟೀಲರು ತಾಂತ್ರಿಕ ಶಿಕ್ಷಣದ ಅಧ್ಯಾಯ ತೆರೆದರು. ಶ್ರೀ. ಎಂ. ಬಿ. ಪಾಟೀಲ ಅವರು ಹೆಚ್ಚಿನದಾಗಿ ಸಾಂಸ್ಕೃತಿಕ ಆಯಾಮ ಜೋಡಿಸುತ್ತಿರುವುದಕ್ಕೆ ಅವರ ಕಾಲಾವಧಿಯಲ್ಲಿ ಅಸ್ತಿತ್ವಕ್ಕೆ ಬಂದ 'ಡಾ. ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ' ಮತ್ತು ನಿರ್ಮಾಣಗೊಂಡ ಇದರ ಭವ್ಯ ಕಟ್ಟಡಗಳೇ ಸಾಕ್ಷಿ. ಈ ಕೇಂದ್ರ, ಇತ್ತೀಚೆ ಪೂಜ್ಯ ಶ್ರೀ ಸಿದ್ಧೇಶ್ವರಸ್ವಾಮಿಜಿ ಅವರ ನೇತೃತ್ವದಲ್ಲಿ ಇಪ್ಪತ್ತು ಲಕ್ಷ ರೂಪಾಯಿ ಮೌಲ್ಯದ 'ಸಮಗ್ರ ಹಳಕಟ್ಟಿ ಸಾಹಿತ್ಯ ಪ್ರಕಟನ ಯೋಜನೆ' ಹಮ್ಮಿಕೊಂಡಿದೆ. ಈ ಕೇಂದ್ರಕ್ಕೆ ಇದೀಗ ಕುಲಪತಿಗಳು ಕನ್ನಡ ವಿಶ್ವವಿದ್ಯಾಲಯದ ಮನ್ನಣೆ ಘೋಷಿಸಿದ್ದಾರೆ. ಈ ಎಲ್ಲ ಸಂಭ್ರಮ-ಸಡಗರಗಳ ನಡುವೆ ಈ ಸಮ್ಮೇಲನ ಜರುಗುತ್ತಲಿದೆ.

ವಚನಸಾಹಿತ್ಯವೆಂದಾಕ್ಷಣ ಮೊದಲು ನೆನಪಾಗುವ ಹೆಸರು, ಬಸವಣ್ಣ. ವಚನಸಾಹಿತ್ಯದ ಪ್ರಕಟನೆಯೆಂದಾಕ್ಷಣ ಮೊದಲು ನೆನಪಾಗುವ ಹೆಸರು, ಹಳಕಟ್ಟಿ. ಹಸ್ತಪ್ರತಿಗಳ ಒಡಲಿನಿಂದ ವಚನ-ಸ್ವರವಚನಸಾಹಿತ್ಯ, ಕಾವ್ಯ-ಶಾಸ್ತ್ರಸಾಹಿತ್ಯ ಇತ್ಯಾದಿ ಸೇರಿ ೫೦೦೦ ಪುಟಗಳಷ್ಟು ಪ್ರಾಚೀನಸಾಹಿತ್ಯವನ್ನು ಇವರು ಬೆಳಕಿಗೆ ತಂದುದು, ಇಂದು ಇತಿಹಾಸ. ಈ ಇತಿಹಾಸದ ಸೃಷ್ಟಿಗಾಗಿ ಇವರು ಒಂದು ಸಾವಿರ ಹಸ್ತಪ್ರತಿ ಕಟ್ಟುಗಳನ್ನು ಸಂಗ್ರಹಿಸಿದುದು, ಒಂದು ಸಾಹಸ. ಹೀಗೆ ಪ್ರಾಚೀನ ಸಾಹಿತ್ಯ ಪ್ರಕಟನೆ ಮತ್ತು ಪ್ರಾಚೀನ ಹಸ್ತಪ್ರತಿಸಂಗ್ರಹ - ಈ ಎರಡೂ ಕೆಲಸಗಳನ್ನು ಹಳಕಟ್ಟಿಯವರು ದೊಡ್ಡ ಪ್ರಮಾಣದಲ್ಲಿ ಪೂರೈಸಿದುದನ್ನು ಗಮನಿಸಿ, ಈ ಹಿಂದೆ ಡಾ. ಹಾ. ಮಾ. ನಾಯಕ ಅವರು 'ಹಳಕಟ್ಟಿಯವರ ಜನ್ಮಶತಮಾನೋತ್ಸವ ವರ್ಷ(೧೯೮೧)ವನ್ನು ಹಸ್ತಪ್ರತಿ ವರ್ಷವೆಂದು ಸರಕಾರ ಘೋಷಿಸಬೇಕು' ಎಂದು ಹೇಳಿದ್ದರು. ಆ ವರ್ಷ ಕರ್ನಾಟಕ ವಿಶ್ವವಿದ್ಯಾಲಯ ಹಳಕಟ್ಟಿಯವರ ನೆನಪಿಗೆ ಹಸ್ತಪ್ರತಿ ಕುರಿತು ವಿಚಾರಸಂಕಿರಣ ಜರುಗಿಸಿ, 'ಕರ್ನಾಟಕ ಭಾರತಿ' ಪತ್ರಿಕೆಯ ಮೂಲಕ ಲೇಖನಗಳನ್ನು ಪ್ರಕಟಿಸಿದ್ದಿತು. ಬೆಂಗಳೂರಿನ ಬಿ. ಎಂ. ಶ್ರೀ. ಪ್ರತಿಷ್ಠಾನ 'ಹಸ್ತಪ್ರತಿಶಾಸ್ತ್ರ' ಹೆಸರಿನ ವಿಚಾರಸಂಕಿರಣ ನಡೆಸಿ, ಗ್ರಂಥರೂಪದಲ್ಲಿ ಪ್ರಕಟಿಸಿದುದಲ್ಲದೆ, ಹಳಕಟ್ಟಿಯವರ ನೆನಪಿಗಾಗಿ 'ಮಣಿಹ' ಹೆಸರಿನ ಗ್ರಂಥವನ್ನೂ ಹೊರತಂದಿದ್ದಿತು. ಒಟ್ಟಾರೆ, ಸರಕಾರ ಘೋಷಿಸದಿದ್ದರೂ ಹಳಕಟ್ಟಿಯವರ ಜನ್ಮಶತಮಾನೋತ್ಸವ ವರ್ಷವಾದ ೧೯೮೧ನೆಯ ಇಸ್ವಿ, ಅಂದು ತಾನಾಗಿಯೇ ಹಸ್ತಪ್ರತಿವರ್ಷವಾಗಿ ಪರಿಣಮಿಸಿತು. ಆ ಬಳಿಕ, ಹಳಕಟ್ಟಿಯವರ ಹೆಸರಿನ ಈ ಸಂಶೋಧನ ಕೇಂದ್ರ ಜರುಗಿಸುತ್ತಲಿರುವ ಪ್ರಸ್ತುತ ಸಮ್ಮೇಲನ, ಅವರ ನೆನಪಿಗೆ ಸಲ್ಲಿಸುವ ನಮಸ್ಕಾರವೆಂದು ಭಾವಿಸುತ್ತೇನೆ.

೧೯೬೧, ಎಂ. ಎ. ವಿದ್ಯಾರ್ಥಿಯಾಗಿರುವಾಗ ನಾಗರಾಜನ 'ಪುಣ್ಯಾಸ್ರವ', ಮಂಗರಸನ 'ನೇಮಿಜಿನೇಶ ಸಂಗತಿ', 'ಮನ್ಮಥ ಕೊರವಂಜಿ' ತಾಳೆಪ್ರತಿಗಳನ್ನು ೧೦೦ ರೂಪಾಯಿಗೆ ಖರೀದಿಸಿ, ಟೇಬಲ್ ಮೇಲಿಟ್ಟು ದಿನವೂ ನೋಡುವ, ಓದುವ ಮೂಲಕ ಅಷ್ಟು ಹಿಂದೆಯೇ ಹಸ್ತಪ್ರತಿಗಳ ಬಗ್ಗೆ ವಿಚಿತ್ರ ಪ್ರೀತಿ ಬೆಳೆಸಿಕೊಂಡವನು,

ನಾನು. ಎಂ.ಎ. ಮುಗಿಯುತ್ತಲೇ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ವಚನವಾಙ್ಮಯ ಯೋಜನೆಯಲ್ಲಿ ನೌಕರಿ ಸೇರುವ ಮೂಲಕ, ನೇರವಾಗಿ ಹಸ್ತಪ್ರತಿ ಕುಟುಂಬದಲ್ಲಿ ನನ್ನ ಶೈಕ್ಷಣಿಕ ಬದುಕು ಆರಂಭವಾಯಿತು. ಈ ಯೋಜನೆಯ ಹಸ್ತಪ್ರತಿ ಭಾಂಡಾರದಲ್ಲಿ ೪೦೦೦ ಹಸ್ತಪ್ರತಿ ಕಟ್ಟು ಸಂಗ್ರಹಗೊಳ್ಳಲು ಆರಂಭದಿಂದಲೂ ದುಡಿದವರಲ್ಲಿ ನಾನೂ ಒಬ್ಬನು. ಕರ್ನಾಟಕ ವಿಶ್ವವಿದ್ಯಾಲಯದ 'ಕನ್ನಡ ಸಂಶೋಧನ ಸಂಸ್ಥೆ'ಯಲ್ಲಿ ಉಳಿದುಕೊಂಡಿದ್ದ ೪೦೦೦ ಹಸ್ತಪ್ರತಿ ಕಟ್ಟುಗಳು ನನ್ನಿಂದಾಗಿ 'ಕನ್ನಡ ಅಧ್ಯಯನಪೀಠ'ಕ್ಕೆ ವರ್ಗಾವಣೆಗೊಂಡವು. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಸ್ತಪ್ರತಿ ಭಾಂಡಾರ ಸ್ಥಾಪಿಸಿದ, ಹಸ್ತಪ್ರತಿ ಸಂಗ್ರಹ-ಸೂಚೀ ರಚನೆ - ಸಂಪಾದನ ಕಾರ್ಯಗಳು ಸಮಸಮವಾಗಿ ಜರುಗುವಂತೆ ನೋಡಿಕೊಂಡ ಶ್ರಮ, ನನ್ನದು.

'ಕವಿರಾಜಮಾರ್ಗ' ಹಸ್ತಪ್ರತಿ ಹುಡುಕಲು ಬೇಟೆಗಾರನಂತೆ ಹಳ್ಳಿಪಳ್ಳಿ ತಿರುಗಿ, ಗುಲ್ಬರ್ಗಾ ಜಿಲ್ಲೆಯ ಐನಾಪುರದ ಗ್ರಾಮಪಂಚಾಯತಿ ಕಟ್ಟೆಯ ಮೇಲೆ ದಿನಪತ್ರಿಕೆ ಹಾಸಿ-ಹೊದ್ದು ಮಳೆಯಲ್ಲಿ ನೆನೆಯುತ್ತಲೇ ಮಲಗಿದ ನೆನಪು, ನನ್ನಲ್ಲಿ ಇನ್ನೂ ಹಸಿಯಾಗಿದೆ. ಕನ್ನಡ ಅಧ್ಯಯನಪೀಠದ ೮೦೦೦ (೪೦೦೦+೪೦೦೦) ಕಟ್ಟುಗಳ ಸಂಖ್ಯೆಯನ್ನು ನನ್ನ ನಿವೃತ್ತಿಯ ಹೊತ್ತಿಗೆ ೧೦೦೦೦ಕ್ಕೆ ಮುಟ್ಟಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಯು.ಜಿ.ಸಿ. ನೆರವಿನ ಮೂಲಕ 'ನೆರೆಯ ರಾಜ್ಯಗಳ ಕನ್ನಡ ಹಸ್ತಪ್ರತಿ ಸಂಗ್ರಹ ಯೋಜನೆ' ಕೈಗೆತ್ತಿಕೊಂಡು, ಕುಲಪತಿ ಹುದ್ದೆ ಕಾರಣವಾಗಿ ಅದನ್ನು ಅಪೂರ್ಣ ಸ್ಥಿತಿಯಲ್ಲಿ ನಿಲ್ಲಿಸಿದ ನೋವು, ನನ್ನನ್ನು ಈಗಲೂ ಬಾಧಿಸುತ್ತಿದೆ. ಕರ್ನಾಟಕದಿಂದ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗಿರುವ ಕನ್ನಡ ಹಸ್ತಪ್ರತಿಗಳ ಮಾಹಿತಿಯನ್ನು ಸಂಗ್ರಹಿಸಬೇಕೆಂಬ ಹವ್ಯಾಸದಿಂದ ಮದ್ರಾಸ-ಹೈದ್ರಾಬಾದ-ಪುಣೆ-ಕೊಲ್ಹಾಪುರ-ಮುಂಬಯಿ-ಬನಾರಸಗಳ ವರೆಗೆ, ಸಾಲದುದಕ್ಕೆ ಇಂಗ್ಲೆಂಡ್-ಆಕ್ಸಫರ್ಡ್-ಕೆಂಬ್ರಿಜ್ ವರೆಗೆ ಪಯಣಿಸಿದವನು, ನಾನು. ಆದರೆ ಸ್ವಿಟ್ಜರ್ಲ್ಯಾಂಡಿನ ಬಾಸೆಲ್ - ಜರ್ಮನಿಯ ಟುಬಿಂಗನ್ ನಗರಗಳ ಸಂದರ್ಶನ ಕೈಗೂಡದಿರುವ ನೋವು, ನನ್ನಲ್ಲಿ ಈಗಲೂ ಉಳಿದುಕೊಂಡಿದೆ.

ಹೀಗೆ ನನ್ನಂತೆ ದುಡಿದವರ, ನನಗಿಂತ ಹೆಚ್ಚು ದುಡಿದವರ ಶ್ರಮದ ಫಲವಾಗಿ ಕರ್ನಾಟಕದ ಸರಕಾರಿ, ಅರೆಸರಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸುಮಾರು ೨೫,೦೦೦ ಕಟ್ಟುಗಳು ಸಂಗ್ರಹಗೊಂಡಿವೆ. 'ಹಳ್ಳಿಯಿಂದ ಹಳ್ಳಿಗೆ ಹಸ್ತಪ್ರತಿ ಸಂಗ್ರಹ' ಯೋಜನೆ ಕೈಗೆತ್ತಿಕೊಂಡು ಹುಡುಕಿದರೆ, ಒಳನಾಡಿನಲ್ಲಿಯೇ ಇನ್ನೂ ೧೦,೦೦೦ ಕಟ್ಟುಗಳು ಸಿಗುವ ಸಾಧ್ಯತೆಯಿದೆ. ಇವುಗಳಲ್ಲಿ ಕವಿರಾಜಮಾರ್ಗಪೂರ್ವದ ಕವಿಗಳ ಮತ್ತು ಪೊನ್ನ, ರನ್ನ, ರಾಘವಾಂಕ, ಕೇಶಿರಾಜ ಮೊದಲಾದವರ ಅಜ್ಞಾತಸಾಹಿತ್ಯ ಸಿಕ್ಕರೆ ನಮ್ಮ ಪುಣ್ಯ.

ಕರ್ನಾಟಕದ ಸುತ್ತಲೂ ಹೊಂದಿಕೊಂಡಿರುವ ಹೊರನಾಡಿನ ಸುಮಾರು ೨೦ ಜಿಲ್ಲೆಗಳು ಮೂಲತಃ ಕನ್ನಡಿಗರ ನೆಲೆಗಳೇ ಆಗಿರುವುದರಿಂದ, ಈವರೆಗೆ ಹೊರಳಿಯೂ ನೋಡದ ಅಲ್ಲಿ ಕನ್ನಡ ಹಸ್ತಪ್ರತಿಗಳ ಸಂಗ್ರಹಕಾರ್ಯ ನಡೆಸುವುದು ಅವಶ್ಯವಿದೆ. ಜೊತೆಗೆ ಕರ್ನಾಟಕದ ಹೊರಗಿನ ರಾಜ್ಯ-ರಾಷ್ಟ್ರಗಳ ಹಸ್ತಪ್ರತಿಭಾಂಡಾರಗಳಲ್ಲಿರುವ 'ಕನ್ನಡ ಹಸ್ತಪ್ರತಿಗಳ ಸಮಗ್ರ ಸೂಚಿ' ರೂಪಿಸಬೇಕಾಗಿದೆ. ಈ ಎರಡೂ ಕಾರ್ಯಗಳು ಜಿ. ಎಂ. ಉಮಾಪತಿಶಾಸ್ತ್ರೀ, ಎಸ್. ಶಿವಣ್ಣ, ಬಿ. ಎಸ್. ಸಣ್ಣಯ್ಯ ಅವರಂಥ ಕ್ಷೇತ್ರಕಾರ್ಯಕರ್ತರನ್ನು, ರಾಜೂರ, ಭಾನುಮತಿಯವರಂಥ ಗ್ರಂಥಸಂಪಾದನ ವಿದ್ವಾಂಸರನ್ನು ಅಪೇಕ್ಷಿಸುತ್ತವೆ.

ಹಸ್ತಪ್ರತಿಗಳೂ ಶಾಸನಗಳಂತೆ ನಮ್ಮ ಸಂಸ್ಕೃತಿಯ ವಾಹಕಗಳು. ಕರ್ನಾಟಕ ಸರಕಾರ ಶಾಸನಗಳಿಗಾಗಿ ಒಂದು ಇಲಾಖೆಯನ್ನೇ ತೆರೆದಂತೆ, ಹಸ್ತಪ್ರತಿಗಳಿಗಾಗಿ ತೆರೆಯಲಿಲ್ಲ. ಮುದ್ರಿತ ಗ್ರಂಥಗಳ ಬಗೆಗಿನ 'ಗ್ರಂಥಾಲಯ ವಿಜ್ಞಾನ'ದಂತೆ ಪ್ರಾಚೀನ ಗ್ರಂಥಗಳ ಬಗೆಗೆ 'ಹಸ್ತಪ್ರತಿ ವಿಜ್ಞಾನ'ವೆಂಬ ಶೈಕ್ಷಣಿಕ ಶಿಸ್ತು, ನಮ್ಮ

ವಿಶ್ವವಿದ್ಯಾಲಯಗಳಲ್ಲಿ ಹುಟ್ಟಿಕೊಳ್ಳಲಿಲ್ಲ. ಗ್ರಂಥಾಲಯ ಸಿಬ್ಬಂದಿ ಹುದ್ದೆಗಳಂತೆ ಹಸ್ತಪ್ರತಿ ಸಿಬ್ಬಂದಿ ಹುದ್ದೆಗಳು ನಮ್ಮಲ್ಲಿ ನಿರ್ಮಾಣವಾಗಲಿಲ್ಲ. ಈ ಎಲ್ಲ ಕೊರತೆಗಳನ್ನು ನೀಗಿಸಿ, ಈಗಿರುವ ಎಲ್ಲ ಹಸ್ತಪ್ರತಿ ಸಂಸ್ಥೆಗಳನ್ನು ಬಲಪಡಿಸುವುದು, ಇವುಗಳಲ್ಲಿ ಆಂತರಿಕ ಸಂಬಂಧ ಕಲ್ಪಿಸುವ ಒಂದು ಕೇಂದ್ರವ್ಯವಸ್ಥೆ ಅಸ್ತಿತ್ವಕ್ಕೆ ಬರುವುದು ಅವಶ್ಯವಿದೆ.

ಇದರ ಮುಂದಿನ ಹೆಜ್ಜೆಯಾಗಿರುವ ಸಂಗ್ರಹಿತ ಹಸ್ತಪ್ರತಿಗಳ ಸಂರಕ್ಷಣೆ ನಮ್ಮಲ್ಲಿ ತುಂಬ ಅಲಕ್ಷ್ಯಕ್ಕೆ ಗುರಿಯಾಗಿದೆ. ಮೈಸೂರು ವಿಶ್ವವಿದ್ಯಾಲಯ, ಹಂಪಿಯ ಕನ್ನಡ ವಿಶ್ವವಿದ್ಯಾಲಯ, ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಶ್ರವಣಬೆಳ್ಗೊಳ ಶ್ರೀ ಜೈನಮಠ, ಗದಗ ತೋಂಟದಾರ್ಯ ಮಠ, ಬೆಳಗಾವಿಯ ನಾಗನೂರು ಮಠ ಇತ್ಯಾದಿಗಳನ್ನು ಬಿಟ್ಟರೆ, ಬೇರೆ ಕೇಂದ್ರಗಳಲ್ಲಿ ಅವು ಧೂಳುತಿನ್ನುತ್ತಲಿರುವುದು ಹಸ್ತಪ್ರತಿಗಳಿಗೆ ವಿದ್ವಾಂಸರು ಮಾಡುವ ಶೈಕ್ಷಣಿಕ ಅನ್ಯಾಯವೆಂದೇ ಹೇಳಬೇಕು. ಯಾವುಯಾವುದೋ ಗ್ರಾಮಗಳಲ್ಲಿ ಹಾಳಾಗುತ್ತಿದ್ದವುಗಳನ್ನು ತಂದು, ವಿದ್ಯಾಸಂಸ್ಥೆಯಲ್ಲಿ ಹಾಳುಮಾಡುವ ರೀತಿಯಿದು. ಇಂಥ ಉಪೇಕ್ಷೆಯಿಂದಾಗಿಯೇ ಪುಣೆಯ 'ಭಂಡಾರಕರ್ ಸಂಶೋಧನ ಸಂಸ್ಥೆ'ಯಲ್ಲಿ ಪಂಪಭಾರತದ ಹಸ್ತಪ್ರತಿ ಇಂದು ಕಾಣೆಯಾಗಿರುವುದು.

ಹೀಗೆ ಹಸ್ತಪ್ರತಿಗಳ ಸಂರಕ್ಷಣೆಯಂತೆಯೇ, ಅವುಗಳ ಸೂಚೀರಚನೆ ಮತ್ತು ಪ್ರಕಟನೆಕಾರ್ಯಗಳು ಕೆಲವು ಸಂಸ್ಥೆಗಳಲ್ಲಿ ಉಪೇಕ್ಷೆಗೆ ಗುರಿಯಾಗಿವೆ. ನಾನು ಮುಖ್ಯಸ್ಥನಾಗಿರುವಾಗ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಗಳ ಕೆಲವು ಸೂಚಿಗಳು ಪ್ರಕಟವಾದವು. ಆ ಬಳಿಕ ಈ ಕಾರ್ಯ ನಿಂತೇ ಬಿಟ್ಟಿತು. ಬೆಂಗಳೂರು ವಿಶ್ವವಿದ್ಯಾಲಯ ಸೂಚಿಯ ಒಂದು ಸಂಪುಟ ಪ್ರಕಟಿಸುವಲ್ಲಿಯೇ ಸೋತು ಹೋಯಿತು. ಕೆಲವು ವಿಶ್ವವಿದ್ಯಾಲಯಗಳಂತೂ ಇದು ತಮ್ಮ ಕೆಲಸವಲ್ಲವೆಂಬಂತೆ ನಿಶ್ಚಿಂತೆಯಿಂದ ಕುಳಿತಿವೆ. ಈಗ ಕರ್ನಾಟಕದ ಎಲ್ಲ ಸರಕಾರಿ ಮತ್ತು ಖಾಸಗಿ ಭಾಂಡಾರಗಳಲ್ಲಿರುವ ಹಸ್ತಪ್ರತಿಗಳ ಸೂಚೀ ರಚನಾಕಾರ್ಯವನ್ನು ಪೂರ್ಣಗೊಳಿಸಿ, ಅಂತಿಮದಲ್ಲಿ ಸಮಗ್ರಸೂಚಿ ಸಿದ್ಧಪಡಿಸುವುದು ಅವಶ್ಯವಿದೆ. ಈ ಸಂದರ್ಭದಲ್ಲಿ ನಾನು ಸೂಚಿಸಿದಂತೆ ಪ್ರತಿವಿವರ - ಕೃತಿವಿವರವೆಂಬ ವಿಭಾಗ ಕಲ್ಪಿಸಿ, ಸೂಚಿ ರಚಿಸುವುದೇ ಸರಿಯಾದ ಕ್ರಮವೆಂದು ತಿಳಿಸಬಯಸುತ್ತೇನೆ. ಸೂಚಿ ಕೆಲವೇ ಅಭ್ಯಾಸಿಗಳಿಗೆ ಮಾತ್ರ ಪ್ರಯೋಜಕ. ಆದುದರಿಂದ ಇವುಗಳನ್ನು ಮುದ್ರಿಸದೆ, ಕಂಪ್ಯೂಟರದಲ್ಲಿ ಸಂಗ್ರಹಿಸುವ, ಇವುಗಳ ಝಿರಾಕ್ಸಪ್ರತಿಗಳನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ವಿತರಿಸುವ ಕೆಲಸ ಮಾಡಬಹುದಾಗಿದೆ.

ಹಸ್ತಪ್ರತಿಗಳ ಅಂತಿಮ ಉದ್ದೇಶವೆಂದರೆ ಪರಿಷ್ಕರಣ ಮತ್ತು ಪ್ರಕಟನ. ಈ ವಿಷಯವಾಗಿ ಆರಂಭದ ಹಂತದಲ್ಲಿ ಆಂಗ್ಲ ವಿದ್ವಾಂಸರುಮಾಡಿದ, ಸ್ಥಳೀಯ ಆರ್ಯವೈಶ್ಯ ಶೆಟ್ಟರು ಮಾಡಿಸಿದ ಕೆಲಸ ಪ್ರಕಟನೆಯೆಂದೂ, ಆಮೇಲೆ ದೇಶೀವಿದ್ವಾಂಸರು ಮಾಡಿದ ಕೆಲಸ ಪರಿಷ್ಕರಣವೆಂದೂ, ಅದು ಅವೈಜ್ಞಾನಿಕ, ಇದು ವೈಜ್ಞಾನಿಕವೆಂದೂ ಭಾವಿಸುತ್ತ ಬರಲಾಗಿದೆ. ಆದರೆ ಇದು ಎಷ್ಟರ ಮಟ್ಟಿಗೆ ವೈಜ್ಞಾನಿಕ? ಎಂಬ ಚರ್ಚೆ ಇಂದು ಅಗತ್ಯವೆನಿಸಿದೆ. ಈ ದೇಶೀ ವಿದ್ವಾಂಸರಿಗೆ ಪುಣೆಯ ಭಂಡಾರಕರ್ ಸಂಸ್ಥೆಯ ಸಂಸ್ಕೃತ ಮಹಾಭಾರತ ಪರಿಷ್ಕರಣ, ಭಂಡಾರಕರ ಸಂಸ್ಥೆಯವರಿಗೆ ಜರ್ಮನಿ ವಿದ್ವಾಂಸರ ಪರಿಷ್ಕರಣ ಮಾದರಿಯಾಗಿದ್ದವು. ಹಳಗನ್ನಡ ಮತ್ತು ನಡುಗನ್ನಡ ಕೃತಿಗಳ ಸಂಪಾದನೆಗಾಗಿ ಇಂದಿಗೂ ಅನ್ವಯಿಸುತ್ತಲಿರುವ ಈ ಮಾದರಿಯ ಔಚಿತ್ಯವನ್ನು ಕೆಲವರು ಆಗಾಗ ಸಣ್ಣ ದನಿಯಲ್ಲಿಯಾದರೂ ಪ್ರಶ್ನಿಸಿದ್ದಾರೆ. ಪ್ರೊ. ಬಸವನಾಳರು 'ಮಾತೃಕೆಗಳ ಉಪಯೋಗದಲ್ಲಿ ಒಂದು ಶಾಸ್ತ್ರೀಯವಾದ ತಂತ್ರವೆ ಈಗ ಏರ್ಪಟ್ಟಿದೆಯಾದರೂ, ಅದರ ಅನುಸರಣೆಯಿಂದ ಕೆಲವೊಂದು ವಿಶಿಷ್ಟ ತೊಡಕುಗಳು ನಿವಾರಣೆಯಾಗಬಹುದೇ ಹೊರತು ಎಲ್ಲ ತೊಡಕುಗಳು ಬಯಲಾಗುವವೆಂತಲ್ಲ' ಎಂದು

೧೯೫೧ರಷ್ಟು ಪೂರ್ವದಲ್ಲಿಯೇ ಹೇಳಿದರು. ಡಾ. ಡಿ. ಎಲ್. ಎನ್. ಅವರು 'ಹಳಗನ್ನಡ ಗ್ರಂಥಸಂಪಾದನೆ ಒಂದು ವ್ಯವಸ್ಥೆಗೆ ಒಳಪಡಬಹುದಾದರೂ ಅದೇ ವ್ಯವಸ್ಥೆಯನ್ನು ನಡುಗನ್ನಡ ಮತ್ತು ಈಚಿನ ಕಾಲದ ಕನ್ನಡ ಗ್ರಂಥಸಂಪಾದನೆಗೆ ಅನ್ವಯಿಸುವುದರಲ್ಲಿ ಕೆಲವು ಕ್ಲೇಶಗಳಿವೆ.. . . . . . . ಇದಕ್ಕೆ ಬೇರೆ ಕ್ರಮವನ್ನು ಏರ್ಪಡಿಸಬೇಕಾಗುತ್ತದೆ' ಎಂದು ೧೯೬೪ರಲ್ಲಿ ಹೇಳಿದರು. ಆ ಬೇರೆ ಕ್ರಮದ ಸ್ವರೂಪವನ್ನು ನಾನು 'ಜನಪ್ರಿಯ ವಾಙ್ಮಯದ ಸಂಪಾದನೆಯಲ್ಲಿ ಹಸ್ತಪ್ರತಿಗಳ ಆಯ್ಕೆ ತುಂಬ ಜಾಗರೂಕತೆಯಿಂದ ನಡೆಯಬೇಕಾಗುತ್ತದೆ. ಅಂದರೆ ಒಂದು ಕೃತಿಯ ಎಲ್ಲ ಕುಟುಂಬಗಳ ಒಂದೊಂದು ಉತ್ತಮ ಪ್ರತಿಗಳನ್ನು ಆಯ್ದುಕೊಳ್ಳುವುದಕ್ಕಿಂತ, ಒಂದೇ ಕುಟುಂಬದ ಕೆಲವು ಉತ್ತಮ ಪ್ರತಿಗಳನ್ನು ಆಯ್ದುಕೊಳ್ಳುವುದು ಲೇಸು' ಎಂದು ೧೯೭೮ರಲ್ಲಿ ಹೇಳಿದ್ದೇನೆ. ಈ ವಿಚಾರವನ್ನು ಆಗಾಗ ಪ್ರತಿಪಾದಿಸುತ್ತ 'ಮಾರ್ಗಸಾಹಿತ್ಯ ಸಂಪಾದನೆಗೆ ಹೆಚ್ಚು ಪ್ರತಿ ಬಳಸಿದಷ್ಟೂ ಸಂಪಾದನೆ ಹೆಚ್ಚು ಶುದ್ಧವಾಗುತ್ತದೆ, ದೇಶಿಸಾಹಿತ್ಯ ಸಂಪಾದನೆಗೆ ಹೆಚ್ಚು ಪ್ರತಿ ಬಳಸಿದಷ್ಟೂ ಸಂಪಾದನೆ ಹೆಚ್ಚು ಅಶುದ್ಧವಾಗುತ್ತದೆ. ಇದಕ್ಕೆ ಕಾರಣ ದೇಶಿಕಾವ್ಯಗಳಲ್ಲಿ ಪಾಠಾಂತರಗಳು ವಿಪರೀತ. ಈಗ ಒಂದೊಂದು ಹಸ್ತಪ್ರತಿಯಿಂದ ತಮತಮಗೆ ಸರಿಕಂಡ ಒಂದೊಂದು ಪಾಠವನ್ನು ಆಯ್ದುಕೊಂಡು, ಅಂತಿಮಪಾಠ ನಿರ್ಣಯಿಸಿದರೆ ಹತ್ತು ಪ್ರತಿಗಳನ್ನು ಬಳಸಿ ಹನ್ನೊಂದನೆಯ ಪ್ರತಿಯನ್ನು ಸಿದ್ಧಪಡಿಸಿದಂತಾಗುತ್ತದೆಯೇ ಹೊರತು, ನಿಜಪಾಠವನ್ನು ನಿರ್ಣಯಿಸಿದಂತಾಗುವುದಿಲ್ಲ. ಆದುದರಿಂದ ಇಲ್ಲಿ ಕಾಲದೃಷ್ಟಿಯಿಂದ ಪ್ರಾಚೀನ, ಪಾಠದೃಷ್ಟಿಯಿಂದ ಪರಿಪೂರ್ಣ, ಭಾಷಾದೃಷ್ಟಿಯಿಂದ ಶುದ್ಧವಾಗಿರುವ ಒಂದೇ ಒಂದು ಪ್ರತಿಯನ್ನು ಆಧಾರವಾಗಿಟ್ಟುಕೊಂಡು, ಅಲ್ಲಿ ಕಂಡುಬರುವ ಲಿಪಿಕಾರನ ದೋಷಗಳನ್ನು ನಿವಾರಿಸಿ, ಅಗತ್ಯವೆನಿಸಿದಲ್ಲಿ ಅದೇ ಕುಟುಂಬದ ಒಂದೆರಡು ಹಸ್ತಪ್ರತಿಗಳಿಂದ ಸೂಕ್ತ ಭಿನ್ನಪಾಠಗಳನ್ನು ಸ್ವೀಕರಿಸಬೇಕು. ಇದರಿಂದ ಮಿಶ್ರಪಾಠವಾಗುವುದು ತಪ್ಪಿ, ಒಂದು ಪ್ರಾಚೀನ ಪ್ರತಿಯನ್ನಾದರೂ ಶುದ್ಧರೂಪದಲ್ಲಿ ಉಳಿಸಿಕೊಟ್ಟಂತಾಗುತ್ತದೆ' ಎಂದು ಹೇಳಿದ್ದೇನೆ. ಹೀಗೆ ಮಾಡದ ಕಾರಣ ನಂಬಿಯಣ್ಣನ ರಗಳೆ, ಸೋಮನಾಥ ಚಾರಿತ್ರ ಮೊದಲಾದ ನಡುಗನ್ನಡ ಕಾವ್ಯಸಂಪಾದನೆಗಳು ಶುದ್ಧಪಾಠದ ಹೆಸರಿನಲ್ಲಿ ಮಿಶ್ರಪಾಠಕ್ಕೆ ಗುರಿಯಾದವೆಂದೇ ಹೇಳಬೇಕು. ಈ ಮಾದರಿಯಲ್ಲಿ ಪರಿಷ್ಕೃತಗೊಂಡ ವಚನ-ಕೀರ್ತನ ಸಂಪಾದನೆಗಳು ಇನ್ನೂ ಮಿಶ್ರಪಾಠಕ್ಕೆ ಗುರಿಯಾದವು. ದೇಶೀ ರಚನೆಯಾಗಿರುವ ವಚನಗಳಿಗೆ ಲಿಪಿಕಾರರ ಪಾಠಾಂತರವಲ್ಲದೆ, ಹೆಚ್ಚಿನದಾಗಿ ಶೂನ್ಯಸಂಪಾದನೆ ಮೊದಲಾದ ಕೃತಿಗಳನ್ನು ರೂಪಿಸಿದ ಸಂಕಲನಕಾರರ ಪಾಠಾಂತರಗಳೂ ಹುಟ್ಟಿಕೊಂಡಿವೆ. ಇನ್ನೂ ವಿಶೇಷವೆಂದರೆ ನಿಜವಚನಕಾರರ ಹೆಸರಿನಲ್ಲಿ ಕೃತಕ ವಚನಗಳೂ, ಕೃತಕ ವಚನಕಾರರ ಹೆಸರಿನಲ್ಲಿ ಕೃತಕ ವಚನಗಳೂ ಕಣ್ಣು ತೆರೆದಿವೆ. ಈ ತಿಳಿವಳಿಕೆ ವಚನಸಂಪಾದಕರಿಗೆ ಅವಶ್ಯ.

ಈ ವರೆಗೆ ಡಾ. ಹಳಕಟ್ಟಿ, ಆಮೇಲೆ ಶ್ರೀ ಬಸವನಾಳ, ಡಾ. ಆರ್. ಸಿ. ಹಿರೇಮಠ, ಡಾ. ಎಲ್. ಬಸವರಾಜು - ಹೀಗೆ ಎರಡು ಹಂತಗಳಲ್ಲಿ ವಚನಸಾಹಿತ್ಯ ಪ್ರಕಟವಾಗಿದೆ. ಇವರು ಶ್ರದ್ಧೆ-ಭಕ್ತಿಯಿಂದ ಕೆಲಸ ಮಾಡಿದ್ದರೂ ಹೆಚ್ಚು ವಚನಗಳನ್ನು ಪ್ರಕಟಿಸಬೇಕೆಂಬ ತೀವ್ರ ಹಂಬಲ ಕಾರಣವಾಗಿ ಹಳಕಟ್ಟಿಯವರ ಕಣ್ಣುತಪ್ಪಿಸಿ, ಕೆಲವೊಮ್ಮೆ ಕೃತಕ ವಚನಗಳು ಅವರ ಸಂಗ್ರಹದಲ್ಲಿ ಸೇರಿಕೊಂಡವು. ಹೆಚ್ಚು ಹಸ್ತಪ್ರತಿ ಬಳಸಿದರೆ ಪಾಠ ಹೆಚ್ಚು ಶುದ್ಧವಾಗುವುದೆಂಬ ಓರಿಯಂಟಾಲಿಸ್ಟ ಧೋರಣೆ ತಾಳುವಲ್ಲಿ ಬಸವನಾಳ-ಹಿರೇಮಠ-ಎಲ್. ಬಸವರಾಜು ಮೊದಲಾದವರ ಮತ್ತು ಇವರ ದಾರಿಯಲ್ಲಿ ನಡೆದ ನನ್ನಂಥವರ ಆರಂಭದ ಸಂಪಾದನೆಗಳು ಪಾಠಮಿಶ್ರಣಕ್ಕೆ ಗುರಿಯಾದವು. ಹೀಗೆ ಒಬ್ಬರಿಂದ 'ಕೂಟವಚನಗಳ ಮಿಶ್ರಣ', ಇನ್ನೊಬ್ಬರಿಂದ 'ಭಿನ್ನಪಾಠಗಳ ಮಿಶ್ರಣ', ಜರುಗಿತು. ಇದರಿಂದಾಗಿ ಈವರೆಗೆ ಪ್ರಕಟವಾದ ವಚನಸಾಹಿತ್ಯ ಒಂದಿಷ್ಟು ಅಶುದ್ಧರೂಪದಲ್ಲಿಯೇ ಹೊರಬಂದಿತೆನಿಸುತ್ತದೆ. ಇದು ಒಟ್ಟಾರೆ ನಡುಗನ್ನಡ ಸಾಹಿತ್ಯಕ್ಕೇ ಅನ್ವಯಿಸುವ ಮಾತಾಗಿದೆ. ಹೀಗಾಗಿ,

ಪ್ರಾಚೀನ ಲಿಪಿಕಾರರು ಹೊಸ ಹೊಸ ಪಾಠಾಂತರಗಳನ್ನು ಸೃಷ್ಟಿಸಿದರು, ನಾವು ಪಾಂಡಿತ್ಯದ ಹೆಸರಿನಲ್ಲಿ ಅವೆಲ್ಲವುಗಳನ್ನು ಬಳಸಿಕೊಂಡು ದೋಷಪೂರ್ಣ ಪಠ್ಯ ರೂಪಿಸಿದೆವು. ಬಹುಶಃ ಒಂದು ಪ್ರತಿ ಅವಲಂಬಿಸಿದ ಅವರಿಗಿಂತ ಹಲವು ಪ್ರತಿ ಅವಲಂಬಿಸಿದ ನಾವೇ ಹೆಚ್ಚು ತಪ್ಪು ಮಾಡಿದೆವು.

***

ಹೀಗೆ ಮುಕ್ತಛಂದಸ್ಸಿನ ವಚನ, ಮಾತ್ರಾಛಂದಸ್ಸಿನ ರಗಳೆ ಷಟ್ಪದಿ-ಕೀರ್ತನಸಾಹಿತ್ಯಗಳ ಸಂಪಾದನೆಯಂತೆ, ಅಂಶಛಂದಸ್ಸಿನ ತ್ರಿಪದಿ -ಸಾಂಗತ್ಯ ಸಾಹಿತ್ಯಗಳ ಸಂಪಾದನೆಯ ಬಗ್ಗೆಯೂ ನಾನು ಒಂದಿಷ್ಟು ವಿಭಿನ್ನ ನಿಲುವು ತಾಳಿದ್ದೇನೆ. ಒಂದು ಗುರುವಿನ ಬದಲು ಬರುವ ಒಂದು ಲಘುವು ಲಯಬದ್ಧ ಉಚ್ಚಾರದಲ್ಲಿ ಗುರುವಾದರೆ, ಅರ್ಥ ಕೆಡಬಹುದು. ಉದಾ: ರಣಮಽಯವಾಯಿತು ಹೆಣಮಽಯವಾಯಿತು > ರಣ ಮಾಯವಾಯಿತು ಹೆಣ ಮಾಯವಾಯಿತು. ಕೆಲವೊಮ್ಮೆ ಅವಗ್ರಹ ಚಿಹ್ನೆಯ ಬದಲು ಲಘುವರ್ಣ ಸೇರಿಸುವಲ್ಲಿ ಮೂಲಪಾಠ ವ್ಯತ್ಯಾಸವಾಗಬಹುದು. ಉದಾ: ಅನ್ನಽವ ನೀಡುಽದು ನನ್ನಿಽಯ ನುಡಿವುಽದು > ಅನ್ನವನು ನೀಡುವುದು ನನ್ನಿಯನು ನುಡಿಯುವುದು. ಇಂಥ ಸಂದರ್ಭಗಳಲ್ಲಿ ಘಟಿಸಬಹುದಾದ ಅರ್ಥವ್ಯತ್ಯಾಸ ಇಲ್ಲವೆ ಪಾಠವ್ಯತ್ಯಾಸವನ್ನು ತಪ್ಪಿಸಲು ಅವಗ್ರಹ ಚಿಹ್ನೆ ಬಳಸುವುದು ಸೂಕ್ತವೆಂದೇ ಹೇಳಬೇಕು.

ಇದಕ್ಕಿಂತ ಮುಖ್ಯವಿಚಾರವೆಂದರೆ, ಮಾತ್ರಾನಿಷ್ಠ ಮತ್ತು ಅಂಶನಿಷ್ಠ ದೇಶೀಕಾವ್ಯಗಳನ್ನು ಪರಿಷ್ಕರಿಸಿ ಪ್ರಕಟಿಸುವಾಗ, ಅವುಗಳ ಹಸ್ತಪ್ರತಿಯ ಪ್ರತಿಯೊಂದು ಸಂಧಿಯ ತಲೆಯ ಮೇಲಿರುವ ರಾಗ-ತಾಳಗಳನ್ನು ಈಗಿನಂತೆ ಕೈಬಿಡಬೇಕೆ? ಇಟ್ಟುಕೊಳ್ಳಬೇಕೆ? ಎಂಬುದು.

ಪ್ರಾಚೀನ ಕರ್ನಾಟಕದಲ್ಲಿ ನಿರಕ್ಷರಿಗಳ ಪ್ರಮಾಣ ಅಧಿಕ. ಹೀಗಾಗಿ ಅಂದಿನ ಕವಿಗಳು ತಮ್ಮ ಮುಂದೆ ಓದುವ ಕಣ್ಣುಗಳಿಲ್ಲ, ಕೇಳುವ ಕಿವಿಗಳಿವೆಯೆಂಬ ಎಚ್ಚರವಹಿಸಿ, ಕೇಳುವ ನಾದಮಯ ಪದ್ಯಗಳನ್ನೇ ರಚಿಸಿ, ತಮ್ಮ ಕಾವ್ಯಗಳ ಪ್ರತಿಯೊಂದು ಸಂಧಿಯ ತಲೆಯ ಮೇಲೆ ರಾಗ-ತಾಳಗಳನ್ನು ಬರೆದಿದ್ದಾರೆ. ಇದರರ್ಥ ಆಯಾ ಸಂಧಿಗಳನ್ನು ಅವುಗಳ ರಸಸನ್ನಿವೇಶಕ್ಕೆ ತಕ್ಕಂತೆ ಬೇರೆ ಬೇರೆ ರಾಗ-ತಾಳಯುಕ್ತವಾಗಿ ಅಭಿವ್ಯಕ್ತಿಸುವುದೇ ಅವರ ದೃಷ್ಟಿಯಲ್ಲಿ ಪೂರ್ಣಪಠ್ಯ. ಆದರೆ ಶ್ರವಣಪಾತಳಿಯ ನಮ್ಮ ಈ ಕೃತಿಗಳನ್ನು ವಾಚನಪಾತಳಿಯ ಅಭ್ಯಾಸಿಗಳಾದ ಮೊಗ್ಲಿಂಗ್ ಮೊದಲಾದ ಆಂಗ್ಲರು ತಮಗೆ ಅನವಶ್ಯವೆನಿಸುವ ಈ ರಾಗ-ತಾಳಗಳನ್ನು ಸಹಜವಾಗಿಯೇ ತೆಗೆದುಹಾಕಿದರು. ಅವರನ್ನು ನಾವು ಕಣ್ಣುಮುಚ್ಚಿ ಅನುಸರಿಸುವ ತಪ್ಪುಮಾಡಿದೆವು. ಈ ತಪ್ಪನ್ನು ತಿದ್ದಿಕೊಳ್ಳುವ ರೀತಿಯಲ್ಲಿ ಇನ್ನು ಮುಂದೆ ಷಟ್ಪದಿ ಸಾಂಗತ್ಯಗಳಂತಹ ಹಾಡುಗಬ್ಬಗಳ ಸಂಧಿಯ ಆರಂಭದ ರಾಗ-ತಾಳಗಳನ್ನು ಉಳಿಸಿಕೊಂಡು ಪರಿಷ್ಕರಣ ಮಾಡಬೇಕು; ಆಯಾ ಕಾವ್ಯಗಳ ಸಂವಹನ ಅಪೇಕ್ಷೆಯನ್ನು ಈಡೇರಿಸಬೇಕು. ಈ ತಪ್ಪನ್ನು ತಿದ್ದಿಕೊಳ್ಳುವ ಉದ್ದೇಶದಿಂದ ನಾನು 'ಷಟ್ಸ್ಥಲಶಿವಾಯಣ' ಹೆಸರಿನ ಭಾಮಿನಿಷಟ್ಪದಿ ಕೃತಿಯನ್ನು ರಾಗ-ತಾಳ ಉಲ್ಲೇಖಗಳೊಂದಿಗೆ ಸಂಪಾದಿಸಿದ್ದು, ಇನ್ನು ಮುಂದೆ ವಿದ್ವಾಂಸರು ಅಂಶ-ಮಾತ್ರಾ ಛಂದಸ್ಸಿನ ಕೃತಿಗಳ ಸಂಪಾದನೆಯಲ್ಲಿ ಈ ಕ್ರಮವನ್ನು ಅನುಸರಿಸುವರೆಂದು ನಂಬಿದ್ದೇನೆ.

***

ಸಾಹಿತ್ಯಕೃತಿಗಳನ್ನು ಸಾಮಾನ್ಯಪಠ್ಯ (general text), ಸಂದರ್ಭಜನ್ಯಪಠ್ಯ (contextual text)ವೆಂದು ಬಿಡಿಸಿ ಹೇಳಬಹುದು. ಸಾಮಾನ್ಯಪಠ್ಯವನ್ನು ಶಾಬ್ದಿಕ ಸಂಸ್ಕರಣದ ನಿಯಮಗಳ ಬೆಳಕಿನಲ್ಲಿ ಪರಿಷ್ಕರಿಸಬಹುದು. ಆದರೆ ಸಂದರ್ಭಜನಪಠ್ಯವನ್ನು ಸಮಕಾಲೀನ ಸಂದರ್ಭದಲ್ಲಿಟ್ಟು ಸಾಂಸ್ಕೃತಿಕ ಸಂಸ್ಕರಣ ನಿಯಮಗಳ ಬೆಳಕಿನಲ್ಲಿ ಪರಿಷ್ಕರಿಸಬೇಕಾಗುತ್ತದೆ. ಉದಾ: 'ಕಂಬಳಿ ನಾಗಿದೇವ' ಶಾಬ್ದಿಕ ಸಂಸ್ಕರಣ, 'ಸಂಬೋಳಿ ನಾಗಿದೇವ' ಸಾಂಸ್ಕೃತಿಕ

ಸಂಸ್ಕರಣ. ಶಾಬ್ದಿಕವಾಗಿ ಒಂದು ಪಾಠ, ಸಾಂಸ್ಕೃತಿಕವಾಗಿ ಒಂದು ಪಾಠ - ಹೀಗೆ ಎರಡೂ ಸರಿ ಇದ್ದರೆ, ಶಾಬ್ದಿಕ ಪಾಠವನ್ನು ಕೈಬಿಟ್ಟು, ಸಾಂಸ್ಕೃತಿಕ ಪಾಠವನ್ನು ಒಪ್ಪಿಕೊಳ್ಳುವ ಕ್ರಮವಿದು. ಪಂಪಭಾರತ, ಬಸವಣ್ಣನವರ ವಚನ, ಹರಿಹರನ ರಗಳೆ, ಕುಮಾರವ್ಯಾಸಭಾರತ ಇತ್ಯಾದಿಗಳನ್ನು ಈ ರೀತಿ ಸಾಂಸ್ಕೃತಿಕ ನೆಲೆಯಲ್ಲಿ ಪರಿಷ್ಕರಿಸಬೇಕಾಗುತ್ತದೆ.

***

ಈ ವರೆಗೆ ಕನ್ನಡದಲ್ಲಿ ಬಹಳಷ್ಟು ಕೃತಿಗಳ ಪರಿಷ್ಕರಣ-ಪ್ರಕಟನ ಕೆಲಸ ಮುಗಿದಿದೆ. ಆದರೆ ಇತ್ತೀಚಿನ ಭಾಷೆ ಸಾಹಿತ್ಯ ಸಂಸ್ಕೃತಿ ಜಾನಪದ ಇತ್ಯಾದಿ ಬಹುಶಿಸ್ತೀಯ ಅಧ್ಯಯನದ ಫಲವಾಗಿ, ಅವುಗಳಲ್ಲಿ ಉಳಿದುಕೊಂಡಿರುವ ದೋಷಗಳು ಎದ್ದು ಕಾಣುತ್ತಲಿವೆ. ಇಂಥ ಸಂದರ್ಭದಲ್ಲಿ ಈ ಮೊದಲಿನ ಆವೃತ್ತಿಗಳನ್ನು ಕಣ್ಣುಮುಚ್ಚಿ ಮರುಮುದ್ರಣ ಮಾಡದೆ, ಎರಡು ದಾರಿಗಳಲ್ಲಿ ಮುನ್ನಡೆಯಬೇಕು. ಒಂದು: ಮೊದಲಿನ ಸಂಪಾದಕರು ಬಳಸಿದವುಗಳನ್ನು ಬಿಟ್ಟು ಹೊಸ ಹಸ್ತಪ್ರತಿ ಬಳಸಿಕೊಳ್ಳಬೇಕು. ಎರಡು: ಹೊಸ ಹಸ್ತಪ್ರತಿ ಸಿಗದಿದ್ದರೆ ಮುದ್ರಿತ ಪ್ರತಿಯನ್ನೇ ಆಧಾರ ಹಸ್ತಪ್ರತಿಯೆಂದು, ಅಡಿಯಲ್ಲಿಯ ಪಾಠಗಳನ್ನು ಭಿನ್ನಹಸ್ತಪ್ರತಿಗಳೆಂದು ಭಾವಿಸಿ, ಸೂಕ್ತಪಾಠ ನಿರ್ಣಯಿಸಬೇಕು. ಇಲ್ಲಿಯ ಎರಡನೆಯ ಬಗೆಯದೇ 'ಪರಿಷ್ಕರಣದ ಪರಿಷ್ಕರಣ.' ಇದು ಹಸ್ತಪ್ರತಿ ಆಧರಿಸಿದ ಪರಿಷ್ಕರಣವಲ್ಲ, ಮುದ್ರಿತಪ್ರತಿ ಆಧರಿಸಿದ ಪರಿಷ್ಕರಣ. ಈಗ ತಮ್ಮಿಂದಾಗಿ ಹೊಸ ಪಾಠನಿರ್ಣಯದ ಪ್ರಮಾಣ ಗಣನೀಯವಾಗಿ ವರ್ಧಿಸುವಂತಿದ್ದರೆ ಮಾತ್ರ, ವಿದ್ವಾಂಸರು ತಮ್ಮ ಹೆಸರಿನಲ್ಲಿ ಪರಿಷ್ಕರಣದ ಪರಿಷ್ಕರಣಕಾರ್ಯ ಮಾಡಬೇಕು. ಮುಂದೊಂದು ದಿನ ಎಲ್ಲ ಹಸ್ತಪ್ರತಿಗಳು ನಾಶವಾಗುವ, ಹೊಸ ಹಸ್ತಪ್ರತಿಗಳು ಸಿಗದಿರುವ ಕಾಲ ಬರುತ್ತದೆ. ಹಸ್ತಪ್ರತಿಗಳೇ ಇಲ್ಲದ ಆ ಕಾಲದಲ್ಲಿ ಮುದ್ರಿತ ಪ್ರತಿಯನ್ನೇ ಆಧರಿಸಿ, ಪರಿಷ್ಕರಣದ ಪರಿಷ್ಕರಣ ಮಾಡುವುದು ಅನಿವಾರ್ಯವಾಗುತ್ತದೆಯೆಂದು ಬೇರೆ ಹೇಳಬೇಕಿಲ್ಲ.

ಇದೇ ಸಂದರ್ಭದಲ್ಲಿ ಹೇಳಬೇಕಾದ ಇನ್ನೊಂದು ವಿಷಯವೆಂದರೆ, ಈ ಮೊದಲು ಪ್ರಕಟವಾದ ಕೃತಿಗಳ ಸಮಗ್ರ ಸಂಪುಟ ರಚನೆ. ಓದುಗರ ಸೌಕರ್ಯಕ್ಕಾಗಿ ಸಮಗ್ರ ಸಂಪುಟ ಸಿದ್ಧಪಡಿಸುವುದು, ಕಡಿಮೆ ಬೆಲೆಯಲ್ಲಿ ಸಿಗುವಂತೆ ಮಾಡುವುದು ತುಂಬ ಅವಶ್ಯ. ಆದರೆ ಹೀಗೆ ಮಾಡುವಾಗ ಈ ಸಮಗ್ರ ಸಂಪಾದಕನ ಪರಿಶ್ರಮ ಪಾಂಡಿತ್ಯದ ಕೊಡುಗೆ ಎದ್ದು ಕಾಣುವಂತಿರಬೇಕು. ಬಸವಕಾಲೀನ ಸಂಪುಟಗಳಲ್ಲಿ ಕಾಲು ಭಾಗದಷ್ಟು, ಬಸವೋತ್ತರಕಾಲೀನ ಸಂಪುಟಗಳಲ್ಲಿ ಅರ್ಧಭಾಗದಷ್ಟು ಹೊಸವಚನ ಸೇರಿಸಿ, ತಕ್ಕ ಮಟ್ಟಿಗೆ ಸರಿಯಾದ ಪಾಠನಿರ್ಣಯಿಸಿ, ಸಾಧ್ಯವಾದಷ್ಟು ಕೃತಕ ವಚನಗಳನ್ನೂ-ಕೃತಕ ವಚನಕಾರರನ್ನೂ ಹೊರಗಿಟ್ಟು ರೂಪಿಸಿದ ಹದಿನಾಲ್ಕು ವಚನಸಂಪುಟಗಳನ್ನು, ಇದೇ ರೀತಿ ರೂಪಿಸಿದ ಐವತ್ತು ಕೀರ್ತನ ಸಂಪುಟಗಳನ್ನು ಇಲ್ಲಿ ನೆನೆಯಬಹುದು. ಇಷ್ಟರಲ್ಲಿ 'ತೋಂಟದ ಸಿದ್ಧಲಿಂಗ ಸಮಗ್ರಸಾಹಿತ್ಯ'ದ ಹತ್ತು ಸಂಪುಟಗಳು ಡಾ. ವಿ. ಬಿ. ರಾಜೂರ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾಗಲಿರುವುದನ್ನು ಇಲ್ಲಿ ಎತ್ತಿ ಹೇಳಬಹುದಾಗಿದೆ.

ಹೀಗೆ ಕನ್ನಡದಲ್ಲಿ ಗ್ರಂಥಸಂಪಾದನಕಾರ್ಯ ಬೆಳೆದು ಬರುತ್ತಿದ್ದಂತೆಯೇ ಆಗಾಗ ಇದನ್ನು ಕುರಿತ ಶಾಸ್ತ್ರಕೃತಿಗಳೂ ಹುಟ್ಟಿಬಂದವು. ೧೯೬೮ರಲ್ಲಿ ಡಾ. ಡಿ. ಎಲ್. ಎನ್. ಅವರು 'ಕನ್ನಡ ಗ್ರಂಥಸಂಪಾದನೆ' ಕೃತಿ ರಚಿಸಿದರು. ಇದರಿಂದ ಒಂದಿಷ್ಟು ಭಿನ್ನವಾಗಿ ನಾನು ೧೯೭೨ ರಲ್ಲಿ 'ಕನ್ನಡ ಗ್ರಂಥಸಂಪಾದನಶಾಸ್ತ್ರ' ಕೃತಿಯನ್ನಲ್ಲದೆ, ೧೯೫೩ರಲ್ಲಿ 'ಕನ್ನಡ ಹಸ್ತಪ್ರತಿಶಾಸ್ತ್ರ' ಕೃತಿಯನ್ನು ರಚಿಸಿದೆ. ಉಪೇಕ್ಷಿತ ಕ್ಷೇತ್ರವೆಂದರೆ ನನಗೆ ತುಂಬ ಪ್ರೀತಿ. ಹೀಗಾಗಿ ನನ್ನ ಮಾರ್ಗದರ್ಶನದಲ್ಲಿ ಡಾ. ಬಿ. ಕೆ. ಹಿರೇಮಠ ಅವರು 'ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ' ಹೆಸರಿನ ಪಿಎಚ್.ಡಿ. ಪ್ರಬಂಧವನ್ನು ರಚಿಸಿದ್ದು, ಬಹುಶಃ ಇದು ಭಾರತದಲ್ಲಿಯೇ ಈ ವಿಷಯವನ್ನು ಕುರಿತು ಪ್ರಥಮ ಪಿ.ಎಚ್.ಡಿ. ಕೃತಿಯೆಂದು ತೋರುತ್ತದೆ. ಆಮೇಲೆ ಯಾರೂ ಇವುಗಳಿಗಿಂತ ಭಿನ್ನವಾದ

ವಿಚಾರಗಳನ್ನು ಮಂಡಿಸದ ಕಾರಣ, ಗ್ರಂಥಸಂಪಾದನ ಶಾಸ್ತ್ರ ಮತ್ತು ಹಸ್ತಪ್ರತಿಶಾಸ್ತ್ರ ವಿಚಾರಗಳು ಸ್ಥಗಿತಗೊಂಡಿದ್ದವು. ಹೀಗಿದ್ದೂ ೨೫ ವರ್ಷಗಳ ಹಿಂದೆ 'ಛಂದೋಂಬುಧಿಯ ಪಾಠಾಂತರಗಳು ಕನ್ನಡ ಛಂದಸ್ಸಿನ ಬೆಳವಣಿಗೆಯನ್ನು ಸೂಚಿಸುತ್ತವೆ-ಚರ್ಚಿಸಿರಿ' ಎಂಬಂಥ ಪ್ರಶ್ನೆಗಳನ್ನು ಎಂ.ಎ. ವಿದ್ಯಾರ್ಥಿಗಳಿಗೆ ಕೇಳಲಾಗುತ್ತಿತ್ತು. ಹೀಗೆ ಕೇಳುವ ಉದ್ದೇಶ, ಪಠ್ಯ ಚಲನಶೀಲವಾಗಿರುತ್ತದೆ ಮತ್ತು ಕೆಲವೊಮ್ಮೆ ಪಾಠಾಂತರಗಳಿಗೆ ಐತಿಹಾಸಿಕ-ಸಾಂಸ್ಕೃತಿಕ ಮಹತ್ವವಿರುತ್ತದೆ ಎಂಬುದು. ಆದರೆ ಲಿಪಿಕಾರನ ವ್ಯಕ್ತಿತ್ವದ ಪ್ರತೀಕವಾಗಿರುವ ಭಿನ್ನಪಾಠಗಳಲ್ಲಿ ಒಳ್ಳೆಯವಿರಲಿ, ಒಳ್ಳೆಯದಲ್ಲವಿರಲಿ ಯಾವುದೂ ತ್ಯಾಜ್ಯವಲ್ಲವೆನ್ನುತ್ತ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಈ ವಿಷಯವನ್ನು ಒಂದು ಸಿದ್ಧಾಂತವಾಗಿ ಮಂಡಿಸುವ ಪ್ರಯತ್ನ ಮಾಡುತ್ತಲಿದೆ. ಹೀಗೆ ಮಂಡಿಸುವವರು ಹಸ್ತಪ್ರತಿಗಳಲ್ಲಿ ೧. ಲಿಪಿಕಾರಜನ್ಯಪಾಠಾಂತರಗಳು ೨. ಸಂಸ್ಕೃತಿಜನ್ಯ ಪಾಠಾಂತರಗಳು - ಎಂದು ಎರಡು ಬಗೆಯ ಭಿನ್ನಪಾಠಗಳಿರುವುದನ್ನು ತಿಳಿದುಕೊಳ್ಳಬೇಕು. ಇವುಗಳಲ್ಲಿ ವ್ಯಕ್ತಿಗತವಾಗಿರುವ ಲಿಪಿಕಾರಜನ್ಯ ಪಾಠಾಂತರಗಳು ದೋಷವೇ ಸರಿ. ಹೀಗಿದ್ದೂ ಆಯಾ ಲಿಪಿಕಾರರ ಭಾಷಾಜ್ಞಾನ ಮತ್ತು ಮನೋಧರ್ಮಗಳನ್ನು ತಿಳಿದುಕೊಳ್ಳುವ ದೃಷ್ಟಿಯಿಂದ, ಅವುಗಳನ್ನು ಈಗಿನಂತೆ ಅಡಿಯಲ್ಲಿಯೇ ದಾಖಲಿಸಬಹುದಾಗಿದೆ. ಆದರೆ ಪರಿಸರ ಸಮ್ಮತಿಯ ಸಂಸ್ಕೃತಿಜನ್ಯ ಪಾಠಾಂತರಗಳನ್ನು ಆಯಾ ಸಂಸ್ಕೃತಿಗಳ ರಕ್ಷಣೆ ದೃಷ್ಟಿಯಿಂದ ಖಂಡಿತ ದಾಖಲಿಸಬೇಕಾದರೂ, ಇವುಗಳನ್ನು ಅಡಿಯಲ್ಲಿ ಲಿಪಿಕಾರನ ಪಾಠಾಂತರಗಳಿಂದ ಪ್ರತ್ಯೇಕವಾಗಿ ದಾಖಲಿಸುವುದಾದರೂ ಹೇಗೆ?ಇದು ಬಗೆಹರಿಯಲಾರದ ಪ್ರಶ್ನೆ. ಆದುದರಿಂದ ಇವೆರಡನ್ನೂ ಈಗಿನಂತೆಯೇ ಅಡಿಯಲ್ಲಿ ದಾಖಲಿಸುವುದು ಅನಿವಾರ್ಯವೆನಿಸುತ್ತದೆ.

ಇಲ್ಲಿ ಒಂದು ಮಾತನ್ನು ನೆನೆಪಿಟ್ಟುಕೊಳ್ಳಬೇಕು: ಜನಪದ ಸಾಹಿತ್ಯಪಾಠದ ಮೇಲೆ ಜನತೆಯ ಅಧಿಕಾರವಿದ್ದರೆ, ಶಿಷ್ಟಸಾಹಿತ್ಯ ಪಾಠದ ಮೇಲೆ ಕವಿಯ ಅಧಿಕಾರವಿರುತ್ತದೆ. ಆದುದರಿಂದ ಸಾಂಸ್ಕೃತಿಕ ಪಾಠಾಂತರ ನೆವದಲ್ಲಿ ಕವಿಯ ಪಠ್ಯವನ್ನು ಬದಲಿಸುವ ಅಧಿಕಾರ ಯಾರಿಗೂ ಇರುವುದಿಲ್ಲ. ಕವಿಯ ಪಾಠ ಶಿಷ್ಟವೋ ಅರೆಶಿಷ್ಟವೋ, ಅದನ್ನು ಶೋಧಿಸಿ ಉಳಿಸಲು ಪ್ರಯತ್ನಿಸಬೇಕು. ಕೊನೆಯಪಕ್ಷ ಕವಿಪಾಠಕ್ಕೆ ಸಮೀಪದ ಪಾಠವನ್ನು ನಿರ್ಣಯಿಸಬೇಕು. ಒಟ್ಟಾರೆ, ಮೇಲೆ ಹೇಳಿದಂತೆ ಎರಡೂ ಬಗೆಯ (ಲಿಪಿಕಾರ ಜನ್ಯ, ಸಂಸ್ಕೃತಿ ಜನ್ಯ) ಪಾಠಾಂತರಗಳನ್ನು ಈಗಿನ ಹಾಗೆಯೇ ಅಡಿಯಲ್ಲಿ ಕೊಟ್ಟು, ಇವುಗಳ ಸ್ವರೂಪವನ್ನು ಪ್ರಸ್ತಾವನೆಯಲ್ಲಿ ಈಗಿನಕ್ಕಿಂತ ಹೆಚ್ಚು ವಿವರವಾಗಿ ಚರ್ಚಿಸಬೇಕು. ನನ್ನ ಈ ಮಾತುಗಳಿಂದ ಪಾಠದ ಚಲನಶೀಲತೆಯ ಬಗ್ಗೆ ಮೊದಲು ದನಿಯೆತ್ತಿದ ಕೆ. ವಿ. ನಾರಾಯಣ ಮೊದಲಾದ ವಿದ್ವಾಂಸರಿಗೆ ಸಮಾಧಾನವಾಗುವುದೆಂದು ಭಾವಿಸುತ್ತೇನೆ.

ಬದಲಾವಣೆಗೆ ಸರಿಯಾಗಿ ಸ್ಪಂದಿಸುವುದೇ ಬೆಳವಣಿಗೆ. ಹೀಗಾಗಿ ಹಸ್ತಪ್ರತಿ ಅಧ್ಯಯನವನ್ನು ಕಾಲಕ್ಕೆ ತಕ್ಕಂತೆ ಆಧುನಿಕಗೊಳಿಸದಿದ್ದರೆ ಅದು ಜಡಪಾಂಡಿತ್ಯವಾಗಿಬಿಡುತ್ತದೆ. ಇದನ್ನು ಗಮನಿಸಿಯೇ ನಾನು 'ಇಂದು ಜ್ಞಾನದ ರಕ್ಷಣೆ, ಪ್ರಸಾರಗಳಿಗೆ ಯಂತ್ರೋಪಕರಣಗಳ ಸಹಾಯ ಅನಿವಾರ್ಯವಾಗಿದೆ ಎಂದೂ, ಕಂಪ್ಯೂಟರ್ ಬಳಕೆ ಕನ್ನಡದಲ್ಲಿ ಸಾಧ್ಯವಾದರೆ ನಾಳೆ ಮುಗಿಯುವ ಸಂಶೋಧನೆ ಇಂದು, ಇಂದು ಮುಗಿಯುವ ಸಂಶೋಧನೆ ಈ ಕ್ಷಣ ಮುಗಿಯುತ್ತದೆ' ಎಂದೂ ಹೇಳಿದ್ದೆನು. ನನ್ನ ಆಸೆ ಈಡೇರುವ ಪ್ರಯತ್ನಗಳು ಅಲ್ಲಲ್ಲಿ ನಡೆದಿದ್ದು, ಈ ದಿಸೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಡಾ. ವೀರೇಶ ಬಡಿಗೇರ ಅವರು ಪ್ರಕಟಿಸಿದ 'ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟವೇರ ತಂತ್ರಜ್ಞಾನ' ಕೃತಿ ಉಲ್ಲೇಖಾರ್ಹವೆನಿಸಿದೆ. ಈ ದೆಸೆಯಲ್ಲಿ ಇನ್ನೂ ಹೊಸ ಪ್ರಯತ್ನಗಳು ಜರುಗಿ, ಈ ಕ್ಷೇತ್ರದಲ್ಲಿ ಆಧುನಿಕತೆ ತೆರೆದುಕೊಳ್ಳಬೇಕಾಗಿದೆ.

***

ಪಂಪಭಾರತ, ರಾಜಶೇಖರ ವಿಳಾಸಗಳಂಥ ಮಹತ್ವದ ಮಾರ್ಗೀಯ ಕಾವ್ಯಗಳನ್ನೂ, ಕುಮಾರವ್ಯಾಸ ಭಾರತ, ಬಸವಪುರಾಣಗಳಂಥ ಮಹತ್ವದ ದೇಶೀಯ ಕಾವ್ಯಗಳನ್ನೂ ಪ್ರಕಟಿಸಿದ ಬಳಿಕ, ವಿಶ್ವವಿದ್ಯಾಲಯ ಮೊದಲಾದ ಸಂಸ್ಥೆಗಳು ಸಂಪಾದನಕಾರ್ಯದಲ್ಲಿ ಮಂದ ಹೆಜ್ಜೆ ಹಾಕುತ್ತಲಿವೆ. ಇಂಥ ಸಂದರ್ಭದಲ್ಲಿ ಗದುಗಿನ ತೋಂಟದಾರ್ಯಮಠ ೧೦೦ರಷ್ಟು ಅಪ್ರಕಟಿತ ವಚನಕೃತಿ ಮತ್ತು ಕಾವ್ಯಕೃತಿ ಪ್ರಕಟಿಸಿದುದು, ಮೈಸೂರಿನ ಸುತ್ತೂರುಮಠ ೧೦ರಷ್ಟು ಅಪ್ರಕಟಿತ ಸ್ವರವಚನಸಂಪುಟ ಪ್ರಕಟಿಸಿದುದು ಹೆಮ್ಮೆಯ ಸಂಗತಿಯಾಗಿದೆ. ಇತ್ತೀಚೆ ಕರ್ನಾಟಕ ಸರಕಾರ ಪ್ರಕಟಿಸಿದ ವಚನ-ಕೀರ್ತನೆಗಳ ಜನಪ್ರಿಯ ಆವೃತ್ತಿಗಳು, ಕನ್ನಡ ಗ್ರಂಥ ಸಂಪಾದನೆಯ ಇತಿಹಾಸದ ಅವಿಸ್ಮರಣೀಯ ಘಟನೆಗಳೆನಿಸಿವೆ.

ಇಂದು ಸಾಹಿತ್ಯಿಕ ಮಹತ್ವದ ಎಲ್ಲ ಕೃತಿಗಳು ಪರಿಷ್ಕರಿಸಲ್ಪಟ್ಟು ಪ್ರಕಟವಾಗಿರುವ ಕಾರಣ, ಸಂಪಾದಕ ವಿದ್ವಾಂಸರು ಮುಂದೇನು? ಎಂಬ ಸಂದೇಹದಲ್ಲಿ ನಿಂತಿದ್ದಾರೆ. ಒಂದು ಕಾಲದಲ್ಲಿ ನನಗೂ ಇಂಥ ಸಂದೇಹ ಕಾಡಿದ್ದರಿಂದ, ಚಾರಿತ್ರಿಕ ಮಹತ್ವದ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನಿಂಬಸಾಮಂತ ಚರಿತೆ, ಸಿರುಮಣನಾಯಕನ ಸಾಂಗತ್ಯ, ಸಿರುಮನ ಚರಿತೆ, ಗೊಲ್ಲ ಸಿರುಮನ ಚರಿತೆ, ಹೊಸ ಕುಮಾರ ರಾಮನ ಸಾಂಗತ್ಯ, ಕೊಮಾರ ರಾಮಯ್ಯನ ಸಾಂಗತ್ಯ ಕೃತಿಗಳನ್ನೂ, ಬೇರೊಬ್ಬರ ಸಹಸಂಪಾದಕತ್ವದಲ್ಲಿ ಕಿತ್ತೂರ ಸಂಸ್ಥಾನ ಸಾಹಿತ್ಯ ಹೆಸರಿನ ಎರಡು ಸಂಪುಟಗಳನ್ನೂ, ಉಪಸಂಸ್ಕೃತಿ ಪರಂಪರೆಯ ತಗರ ಪವಾಡ, ಸಿದ್ಧಮಂಕ ಚರಿತೆಗಳನ್ನೂ ಇತ್ತೀಚೆ ಬೆಳಕಿಗೆ ತಂದೆನು. ಏಕಪ್ರತಿ ಸಾಹಿತ್ಯವರ್ಗದ 'ಕರ್ನಾಟಕದ ಕೈಫಿಯತ್ತುಗಳು' ಹೆಸರಿನ ಬೃಹತ್ ಸಂಪುಟ ಪ್ರಕಟಿಸಿದೆನು. ಸಾಲದುದಕ್ಕೆ ಸಮಗ್ರ ವಚನಸಂಪುಟ, ಸಮಗ್ರ ಕೀರ್ತನಸಂಪುಟ, ಸಮಗ್ರ ರಗಳೆ ಸಂಪುಟಗಳನ್ನು ರೂಪಿಸುವ ದಾರಿಯನ್ನು ಹುಡುಕಿಕೊಂಡೆನು. ಇದೇ ರೀತಿ ವಿದ್ವಾಂಸರು ಉಪೇಕ್ಷಿತ ಕ್ಷೇತ್ರಗಳನ್ನು ಹುಡುಕಿ ಲಗ್ಗೆ ಹಾಕಬೇಕಿದೆ.

ಇಂಥ ಉಪೇಕ್ಷಿತ ಕ್ಷೇತ್ರಗಳಲ್ಲಿ ಮುಖ್ಯವಾದುದು, ಲೌಕಿಕಶಾಸ್ತ್ರ ಕ್ಷೇತ್ರ. ಇಲ್ಲಿ ಗಣಿತ, ಜ್ಯೋತಿಷ, ವೈದ್ಯ, ಸೂಪ, ಸಂಗೀತ, ವಾಸ್ತು, ಕ್ರೀಡೆ ಮೊದಲಾದುವು ಕನ್ನೆನೆಲಗಳಾಗಿ ಉಳಿದಿವೆ. ವೈದ್ಯಶಾಸ್ತ್ರವೊಂದನ್ನೇ ತೆಗೆದುಕೊಂಡರೆ, ನರವೈದ್ಯದಲ್ಲಿಯೇ ಸ್ತ್ರೀವೈದ್ಯ, ಬಾಲವೈದ್ಯ ಇತ್ಯಾದಿ ಗ್ರಂಥಗಳೂ, ಪಶುವೈದ್ಯದಲ್ಲಿಯೇ ಗೋವೈದ್ಯ, ಅಶ್ವವೈದ್ಯ, ಗಜವೈದ್ಯ ಇತ್ಯಾದಿ ಕೃತಿಗಳೂ ನಮ್ಮಲ್ಲಿ ಸೃಷ್ಟಿಯಾಗಿವೆ. ಇವುಗಳಲ್ಲೆಲ್ಲ ಕರ್ನಾಟಕದ ಸ್ಥಳಜನ್ಯ (Indigenous) ಜ್ಞಾನಗಳು ಅಡಗಿರಬಹುದಾಗಿದೆ.

ಉಪೇಕ್ಷೆಗೆ ಗುರಿಯಾಗಿರುವ ಇಂತಹದೇ ಇನ್ನೊಂದು ಕ್ಷೇತ್ರ ಟೀಕೆ - ವ್ಯಾಖ್ಯಾನ ಸಾಹಿತ್ಯವಾಗಿದ್ದು, ಸಂಪಾದಕರಿಗೆ ಇಲ್ಲಿ ವಿಪುಲ ಸಾಮಗ್ರಿ ಕಾದು ಕುಳಿತಿದೆ.

ಈವರೆಗೆ ಶಂಕರ-ಮಧ್ವ-ರಾಮಾನುಜ ಧರ್ಮಗಳ ಕೀರ್ತನಸಾಹಿತ್ಯ ಸಮಗ್ರರೂಪದಲ್ಲಿ ಪ್ರಕಟವಾಗಿದೆ. ಜೈನಕೀರ್ತನೆಗಳ ಸಮಗ್ರ ಸಂಪುಟವೂ ಹೊರಬಂದಿದೆ. ಇವೆಲ್ಲವುಗಳಿಗಿಂತ ವಿಸ್ತಾರವಾಗಿರುವ ಲಿಂಗಾಯತ ಸ್ವರವಚನಸಾಹಿತ್ಯದ ಸಮಗ್ರ ಪ್ರಕಟನೆ ದೊಡ್ಡ ಆಹ್ವಾನವಾಗಿ ಉಳಿದಿದೆ.

ವಣಿಜೋತ್ಪತ್ತಿ, ಪಂಚಾಚಾರ್ಯ ನಿರ್ಣಯ, ಮಠಸ್ಥಲ, ಸಮಾಧಿಕ್ರಿಯಾ ಮೊದಲಾದ ಸಣ್ಣಸಣ್ಣ ರಚನೆಗಳು, ಲಾವಣಿ ಮೊದಲಾದ ಹಾಡುಗಳು ದೊಡ್ಡ ಸಮಸ್ಯೆಗಳನ್ನು ಬಿಡಿಸಲು ಕೆಲವೊಮ್ಮೆ ನೆರವಾಗುತ್ತಿದ್ದು, ಇವುಗಳ ವ್ಯವಸ್ಥಿತ ಪರಿಷ್ಕರಣ-ಪ್ರಕಟನೆ ಕೈಕೊಳ್ಳಬೇಕಿದೆ.

ಬೇತಾಳ ಪಂಚವಿಂಶತಿ ಕಥೆ, ಜೈನಕಥೆಗಳು ಮೊದಲಾದ ಕಥಾಕೃತಿಗಳು ಕತ್ತಲಲ್ಲಿ ಉಳಿದಿವೆ. ಇವೆಲ್ಲವುಗಳನ್ನು ಕ್ರಮಬದ್ಧವಾಗಿ ಸಂಗ್ರಹಿಸಿ 'ಪ್ರಾಚೀನ ಸಮಗ್ರ ಕಥಾಸಂಪುಟ'ಗಳನ್ನು ಹೊರತರಲು ಯಾರೂ ಮನಸ್ಸು ಮಾಡಿಲ್ಲ.

ಮುತ್ತಿನ ಚಿಪ್ಪಿನ ಸೂತ್ರ, ಬಣ್ಣಾಂತರದ ಸೂತ್ರ, ಗೂಢಲಿಪಿ, ಚಿತ್ರಹಸಿಗೆ, ಕಾಮದೇವನ ತೊರವಿ, ಬಂದಣಿಕೆ ಕಲ್ಪ, ಗಿಳಿ ಹಾಡು, ಕೃಷ್ಣರಾಜ ಪೇಟಿಕಾ, ಚಾಳಾಂಕಿ ಶತಕ, ವಾವೆಯ ಪದ, ಪಂದೆ, ಮಾಸಾಳು ವರ್ಣದ ತ್ರಿವಿಧಿ, ನಾರಾಯಣ ಕವಚ, ಚೂರ್ಣಿಕೆಗಳು, ದಿಮ್ಮಿಸಾಲೆ, ಕೀರಣಿಕೆ ಲೆಕ್ಕ, ಚೌರಾಣ, ರಾತ್ರಿ ನಲ್ಲನ ಪದ್ಯಗಳು; ಈ ಶೀರ್ಷಿಕೆಗಳೇ ನಮಗೆ ಹೊಸವು. ಪಗಡಿ ಆಟಗಳು, ೧೨ಮನೆ ಚದುರಂಗದಾಟ, ದಿಕ್ಪಾಲ ಗಂಜೀಪು, ದೇವಿ ದಶಾವತಾರ ಗಂಜೀಪು, ನವಗ್ರಹ ಗಂಜೀಪು ಈ ಆಟಗಳ ಸ್ವರೂಪ ನಮಗೆ ಗೊತ್ತಿಲ್ಲ. ಖಡ್ಗಶಾಸ್ತ್ರ, ಕತ್ತಿ ಲಕ್ಷಣ, ಬಾಣಗಾರಿಕೆ, ಸಭಾಪತಿ ಲಕ್ಷಣ - ಇವು ಖಂಡಿತ ಹೊಸ ವಿಚಾರ ತಿಳಿಸುತ್ತವೆ. ಇಂಥ ಹಸ್ತಪ್ರತಿಗಳನ್ನು ಒಮ್ಮೆಯಾದರೂ ಬಿಚ್ಚಿ ನೋಡಬೇಕು.

ಈ ವರೆಗೆ ಪ್ರಾಚೀನ ಅಕ್ಷರಪಠ್ಯ ಪರಿಷ್ಕರಿಸಿದ ನಾವು, ಸಚಿತ್ರಪಠ್ಯ ಪರಿಷ್ಕರಿಸುವತ್ತ ಗಮನ ಹರಿಸಿಲ್ಲ. ಇಂಥ ಸಂದರ್ಭದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಶ್ರೀತತ್ವನಿಧಿ, ಶ್ರೀಕೃಷ್ಣಪಾರಿಜಾತ ಕೃತಿಗಳನ್ನು ಪ್ರಕಟಿಸುವ ಮೂಲಕ, ಡಾ. ಎಫ್. ಟಿ. ಹಳ್ಳಿಕೇರಿಯವರು 'ಸಚಿತ್ರ ಹಸ್ತಪ್ರತಿಗಳು : ಸ್ವರೂಪ ಮತ್ತು ಸಂಪಾದನೆ' ಹೆಸರಿನ ಲೇಖನ ಬರೆಯುವ ಮೂಲಕ ಸಚಿತ್ರ ಸಂಪಾದನೆಯ ಮಹತ್ವದತ್ತ ನಮ್ಮ ಗಮನ ಸೆಳೆದಿದ್ದಾರೆ. ಮೈಸೂರಿನ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರಸ್ವಾಮಿಗಳು ಪರಿಷ್ಕರಿಸಿರುವ ಸಚಿತ್ರ 'ವೃಷಭೇಂದ್ರವಿಲಾಸ' ಹೆಸರಿನ ಯಕ್ಷಗಾನಕೃತಿ ಇಷ್ಟರಲ್ಲಿ ಹೊರಬರಲಿದೆ. ಈ ದಾರಿಯಲ್ಲಿ ಮುನ್ನಡೆದು ಸಚಿತ್ರ ಪಠ್ಯಗಳನ್ನೂ, ಬಣ್ಣದ ಚಿತ್ರಗಳೇ ಪ್ರಧಾನವಾಗಿರುವ ಲಿಂಗಾಯತ ಉದ್ಧರಣೆ, ಜೈನ ಪ್ರತಿಷ್ಠಾಕಲ್ಪ ಇತ್ಯಾದಿಗಳನ್ನೂ ಪ್ರಕಟಿಸುವುದು ಅವಶ್ಯವೆನಿಸಿದೆ.

ಬಹುಪ್ರತಿಯಲ್ಲಿ ಸಿಗುವ ಈ ಸಾಹಿತ್ಯಕೃತಿಗಳನ್ನು ಬಿಟ್ಟರೂ, ಏಕಪ್ರತಿಯಲ್ಲಿ ಸಿಗುವ ದಾಖಲುಸಾಹಿತ್ಯವರ್ಗದ ಕೈಫಿಯತ್ತುಗಳ ಒಂದು ಸಂಪುಟ ನನ್ನಿಂದ ಪ್ರಕಟವಾಗಿದ್ದು, ಡಾ. ಕೆ. ರವೀಂದ್ರನಾಥ ಅವರ 'ಕನ್ನಡ ದಾಖಲು ಸಾಹಿತ್ಯ' ಕೃತಿಯ ನೆರವಿನಿಂದ ಎಲ್ಲ ಬಖೈರು, ನಾಮೆ, ನಿರೂಪ, ಸ್ಥಲಪುರಾಣ ಇತ್ಯಾದಿ ಸಂಪುಟಗಳನ್ನು ಪ್ರಕಟಿಸುವುದು, ಬಹಳ ದೊಡ್ಡ ಯೋಜನೆಯೇ ಸರಿ.

ಮುಖ್ಯಕೃತಿಗಳೇ ಮುಗಿದು ಹೋಗಿವೆಯೆಂದು ಕೈಕಟ್ಟಿ ಕುಳಿತುಕೊಳ್ಳುವ ಬದಲು, ಮೇಲೆ ವಿವರಿಸಿದ ಸಾಹಿತ್ಯದ ಪರಿಷ್ಕರಣವನ್ನು ಕೈಗೆತ್ತಿಕೊಂಡರೆ, ಹತ್ತಾರು ಜನ ಹಲವಾರು ವರ್ಷ ದುಡಿಯುವಷ್ಟು ರಾಸಿ ನಮ್ಮ ಕಣ್ಣ ಮುಂದಿದೆಯೆನಿಸುತ್ತದೆ. ಯುವ ವಿದ್ವಾಂಸರು ಈಕಡೆಗೆ ಗಮನ ಹರಿಸಬೇಕೆಂದು ಕೋರುತ್ತೇನೆ.

ಈ ವರೆಗೆ ನಾನು ಹೇಳಿದುದು ನನ್ನ ಕಥೆಯೂ ಹೌದು, ಹಸ್ತಪ್ರತಿಯ ಕಥೆಯೂ ಹೌದು. ಹೀಗಾಗಿ 'ನನ್ನ ಹಸ್ತಪ್ರತಿ ಕಥೆ' ಹೆಸರಿನಲ್ಲಿ ಮೇಲಿನ ಮಾತುಗಳನ್ನು ಹೇಳಿದ್ದೇನೆ. ಆಲಿಸಿದ ನಿಮಗೆಲ್ಲ ವಂದನೆಗಳು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗವು ವಿಜಾಪುರದ ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಹಸ್ತಪ್ರತಿ ಸಮ್ಮೇಳನದ (೨೦೦೫ ಸಪ್ಟೆಂಬರ್ ೧೬) ಅಧ್ಯಕ್ಷೀಯ ಭಾಷಣ.

ಆಕರ : ಮಾರ್ಗ ಸಂಪುಟ–೬

೪

ಇತಿಹಾಸ ಸಮ್ಮೇಳನ : ಅಧ್ಯಕ್ಷತೆ

೧೯೯೪

ಕರ್ನಾಟಕ ಇತಿಹಾಸ ಅಕಾಡೆಮಿಯ "ಇತಿಹಾಸ ಸಮ್ಮೇಲನ" ಎಂದಾಕ್ಷಣ, ಕನ್ನಡ ಸಾಹಿತ್ಯ ಪರಿಷತ್ತಿನ "ಸಾಹಿತ್ಯ ಸಮ್ಮೇಲನ" ನೆನಪಾಗುತ್ತದೆ. ಸಾಹಿತ್ಯದ ಅಭ್ಯಾಸಿಯಾಗಿರುವ ನನಗೆ ಈ ನೆನಪು ಸಹಜ.

ಸಾಹಿತ್ಯ ಸಮ್ಮೇಲನದಂತೆ ಸಮಾರಂಭದ ಸ್ವರೂಪ ತಂದುಕೊಳ್ಳದೆ. ಶುದ್ಧ ಶೈಕ್ಷಣಿಕ ನೆಲೆಯಲ್ಲಿ ಮುನ್ನಡೆಯುತ್ತ ಬಂದುದು, ಈ ಸಮ್ಮೇಲನದ ವೈಶಿಷ್ಟ್ಯವಾಗಿದೆ. ಹೀಗಾಗಿ ಇದರ ಅಧ್ಯಕ್ಷನಾಗುವುದು, ಶೈಕ್ಷಣಿಕ ಕಾಳಜಿಯುಳ್ಳ ಯಾರಿಗಾದರೂ ಹೆಮ್ಮೆಯ ವಿಷಯವೆನಿಸುತ್ತದೆ. ಈ ಹೆಮ್ಮೆಯನ್ನು ನನ್ನದನ್ನಾಗಿಸಿದ ಕರ್ನಾಟಕ ಇತಿಹಾಸ ಅಕಾಡೆಮಿಯ ಕಾರ್ಯಸಮಿತಿಯ ಸದಸ್ಯರಿಗೆ, ಸಮ್ಮೇಲನವನ್ನು ನಿರ್ವಹಿಸುತ್ತಲಿರುವ ಸಂಡೂರಿನ ಸ್ನೇಹಿತರಿಗೆ, ನಿಮ್ಮೆಲ್ಲರಿಗೆ ಕೃತಜ್ಞನಾಗಿದ್ದೇನೆ.

ಪಶ್ಚಿಮದ ಪ್ರಭಾವದಿಂದಾಗಿ, ನೂರು ವರ್ಷಗಳ ಹಿಂದೆಯೇ ನಮ್ಮ ಸಾಹಿತ್ಯಕ್ಷೇತ್ರ ಮತ್ತು ಇತಿಹಾಸಕ್ಷೇತ್ರಗಳಲ್ಲಿ ಏಕಕಾಲಕ್ಕೆ ಆಧುನಿಕ ದೃಷ್ಟಿ ತೆರೆದುಕೊಂಡಿತು. ಆ ಹೊಸ ತಿರುವಿನಲ್ಲಿಯೇ 'ಸಾಹಿತ್ಯ ಸಮ್ಮೇಲನ' ಹುಟ್ಟಿಕೊಂಡಂತೆ, 'ಇತಿಹಾಸ ಸಮ್ಮೇಲನ' ಹುಟ್ಟಿಕೊಳ್ಳದಿರುವುದು ವಿಷಾದದ ಸಂಗತಿ. ಸಾಹಿತ್ಯ ಸಮ್ಮೇಲನವನ್ನು ಅಸ್ತಿತ್ವಕ್ಕೆ ತಂದ ಸಾಹಿತ್ಯಜ್ಞರಿಗಿಂತ ಅಂದಿನ ಇತಿಹಾಸತಜ್ಞರು ಯಾವುದೇ ದೃಷ್ಟಿಯಿಂದ ಕಡಿಮೆಯಿರಲಿಲ್ಲ, ಹೀಗಿದ್ದೂ ಅವರಾಗಲೀ, ತರುವಾಯದವರಾಗಲೀ ಅಂಥ ಒಂದು ಉಪಕ್ರಮವನ್ನು ಪ್ರಾರಂಭಿಸಲೇ ಇಲ್ಲ. ಇದರಿಂದ ಸಾಹಿತ್ಯದಂತೆ ಇತಿಹಾಸ ಜನರ ಹತ್ತಿರ ಹೋಗಲಿಲ್ಲ; ಜನಪ್ರಿಯ ವಿಷಯವಾಗಿ ಬೆಳೆಯಲಿಲ್ಲ. ಸಾಹಿತ್ಯದಲ್ಲಿಯಂತೆ ಹೊಸಹೊಸ ಚಿಂತನೆಗಳು ಇತಿಹಾಸದಲ್ಲಿ ಸ್ಫೋಟಗೊಳ್ಳಲಿಲ್ಲ; ಹೊಸ ಹೊಸ ಪ್ರಕಾರಗಳು ಆ ಪ್ರಮಾಣದಲ್ಲಿ ಬಿಚ್ಚಿಕೊಳ್ಳಲಿಲ್ಲ; ಸಾಹಿತಿಗಳಂತೆ ಸಂಶೋಧಕರಿಗೆ ಸಾಮಾಜಿಕ ಗೌರವ-ಪ್ರತಿಷ್ಠೆಗಳು ಪ್ರಾಪ್ತವಾಗಲಿಲ್ಲ; ನ್ಯಾಯವಾಗಿ ಲಭಿಸಬೇಕಿದ್ದ ಅವಕಾಶಗಳೂ ಅವರಿಗೆ ಲಭಿಸಲಿಲ್ಲ. ಈ ತಪ್ಪನ್ನು ತಿದ್ದಿಕೊಳ್ಳುವ ದೃಷ್ಟಿಯಿಂದ ಈ ಸಮ್ಮೇಲನ ಬಹುಮುಖ್ಯವಾದುದೆಂದು ಭಾವಿಸುತ್ತೇನೆ.

ಕಳೆದ ಎಂಟು ವರ್ಷಗಳಲ್ಲಿ ಈ ಸಮ್ಮೇಲನ, ರಾಜ್ಯದ ಮೂಲೆ ಮೂಲೆಗಳಲ್ಲಿ ಚದರಿಹೋಗಿದ್ದ ಇತಿಹಾಸಕಾರರನ್ನು ಸಂಘಟಿಸಿದೆ. ತರುಣ ಇತಿಹಾಸಕಾರರ ಸೈನ್ಯವನ್ನು ಸೃಷ್ಟಿಸಿದೆ. ಜನರಲ್ಲಿ ಇತಿಹಾಸಪ್ರಜ್ಞೆಯನ್ನು ಜಾಗೃತಗೊಳಿಸುತ್ತಲಿದೆ. ಇದಕ್ಕೆ ಮೂಲ ಮತ್ತು ಮುಖ್ಯ ಕಾರಣರಾದ ವಿದ್ವಾಂಸರಿಗೆ ಕನ್ನಡನಾಡಿನ ಇತಿಹಾಸಲೋಕದ ಕೃತಜ್ಞತೆಗಳು ಸಲ್ಲುತ್ತದೆ.

* * *

ಯಾವುದೇ ವಿಷಯ, ಸಹೃದಯರನ್ನು ಹೆಚ್ಚು ಸಂಖ್ಯೆಯಲ್ಲಿ ಒಳಗು ಮಾಡಿಕೊಂಡಷ್ಟೂ ಅವರ ಪ್ರೀತಿ-ಪ್ರತಿಕ್ರಿಯೆಗಳಿಗೆ ಮುಖಾಮುಖಿಯಾಗಿ ಸ್ಪಂದಿಸಿ, ತಾನೂ ಬೆಳೆಯುತ್ತದೆ, ಅವರ ಅಭಿರುಚಿಯನ್ನೂ ಬೆಳೆಸುತ್ತದೆ. ಬೇಂದ್ರೆ -ಗಳಗನಾಥರು ಸಾಹಿತ್ಯವನ್ನು, ಸಹೃದಯರ ಸಾಹಿತ್ಯಾಭಿರುಚಿಯನ್ನು ಬೆಳೆಸಿದುದು ಹೀಗೆ. ಇವರಲ್ಲಿ ಬೇಂದ್ರೆಯಂಥವರಂಥ ಶಿಕ್ಷಕಸಾಹಿತಿಗಳು ಊರೂರು ಸುತ್ತಿ, ಭಾವಗೀತೆಗಳನ್ನು ಜನರ ಎದುರು ಹಾಡಿದರು, ವ್ಯಾಖ್ಯಾನಮಾಡಿದರು. ಸರಕಿನ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸಿಕೊಡುವ ಜಾಹಿರಾತುದಾರನಂತೆ ವ್ಯವಹರಿಸಿದರು. ಹವ್ಯಾಸಿ ಸಾಹಿತಿಯಾದ ಗಳಗನಾಥರಂಥವರು, ಗಿರಾಕಿಗಳಿದ್ದಲ್ಲಿಗೇ ಹೋಗಿ ಸರಕು ಮಾರಾಟಮಾಡುವ ವ್ಯಾಪಾರಿಯಂತೆ, ಪುಸ್ತಕ ಹೊತ್ತುಕೊಂಡು ಊರೂರು ಅಲೆದರು. ಈ ಬಗೆಯ ಉಪಕ್ರಮಗಳಿಂದಾಗಿ ಸಾಹಿತ್ಯ ಭಾರೀ ಬೇಡಿಕೆಯ ಸರಕಾಗಿ ಬೆಳೆಯಿತು.

ಹೀಗೆ ಇತಿಹಾಸವನ್ನೂ ಜನರು ಪ್ರೀತಿಸುವಂತೆ ಮಾಡುವುದರ ಸಲುವಾಗಿ, ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ, ಇತಿಹಾಸಕ್ಕೆ ಸಂಬಂಧಪಟ್ಟ ಸಭೆ-ಸಮ್ಮೇಲನ. ವಿಚಾರಸಂಕಿರಣ-ಕಮ್ಮಟ ಇತ್ಯಾದಿಗಳನ್ನು ಜರುಗಿಸುವುದು ನಮ್ಮ ಮೊದಲ ಕರ್ತವ್ಯವಾಗಿದೆ. ಹೀಗೆ ಮಾಡುವಾಗ ಆಯಾ ಸ್ಥಳಕ್ಕೆ ಸಂಬಂಧಿಸಿದ, ಅಲ್ಲಿಯ ಜನರಿಗೆ ಪ್ರಿಯವಾದ ವಿಷಯಗಳನ್ನೇ ಆಯ್ದುಕೊಳ್ಳುವುದು ಸೂಕ್ತ, ಉಪಯುಕ್ತ. ಇದರಿಂದ ಇತಿಹಾಸ ಅಯಸ್ಕಾಂತದಂತೆ ಹಿಡಿದುಕೊಂಡು, ಅವರನ್ನು ಇತಿಹಾಸ ಕುತೂಹಲಿಗಳನ್ನಾಗಿಸುತ್ತದೆ. ಅಲ್ಲದೆ, ಇತಿಹಾಸವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ, ಆವೇಶರಹಿತವಾಗಿ ಪ್ರತಿಕ್ರಿಯಿಸುವ, ಆರೋಗ್ಯಪೂರ್ಣ ದೃಷ್ಟಿಕೋನವನ್ನು ಸಾಮಾಜಿಕರಲ್ಲಿ, ಅದರಲ್ಲಿಯೂ ಮೂಲಭೂತವಾದಿಗಳಲ್ಲಿ ಬೆಳೆಸುತ್ತದೆ.

ಇದಕ್ಕೆ ಪೂರಕವೆಂಬಂತೆ ಇತಿಹಾಸಕ್ಕೆ ಸಂಬಂಧಪಟ್ಟ ವೈವಿಧ್ಯಪೂರ್ಣ ಪುಸ್ತಕ, ಪತ್ರಿಕೆಗಳ ಪ್ರಕಟನ ಮತ್ತು ವಿತರಣಕಾರ್ಯಗಳು ವ್ಯಾಪಕವಾಗಿ ಜರುಗಬೇಕಾಗಿವೆ. ಇಂದು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ವಿದ್ವತ್ಪತ್ರಿಕೆಗಳ ಗುಣಮಟ್ಟವಾಗಲಿ, ನಿಯತತೆಯಾಗಲಿ ಸಮಾಧಾನಕರವಾಗಿಲ್ಲ. ಮಾಸಿಕ, ದೈನಿಕ ಪತ್ರಿಕೆಗಳು ಸಂಸ್ಕೃತಿ-ಇತಿಹಾಸಗಳಿಗೆ ಸಂಬಂಧಿಸಿದ ವಿಷಯ, ಸುದ್ದಿಗಳನ್ನು ಹೆಚ್ಚು ಪ್ರಕಟಿಸುತ್ತಿಲ್ಲ. ಇಂಥ ಕೊರತೆಗಳನ್ನು ನೀಗಿಸಿಕೊಂಡು ಇತಿಹಾಸದ ಅಧ್ಯಯನ, ವಾಚನ, ಲೇಖನ ವಾತಾವರಣವನ್ನು ಜನರ ನಡುವೆ ಜೀವಂತವಾಗಿಡುವುದು ತೀರ ಅವಶ್ಯವಿದೆ.

ಸವಕಲು ಶಬ್ದಗಳನ್ನೊಳಗೊಂಡ ಇಂದಿನ ಇತಿಹಾಸ ಬರೆವಣಿಗೆಯ ಶೈಲಿ ತುಂಬ ಗತಾನುಗತಿಕವಾಗಿದ್ದು, ಓದಲು ಬೋರ್ ಎನಿಸುತ್ತಿದೆ. ಆದುದರಿಂದ ಸಂಶೋಧನೆಯ ಇನ್ನೊಂದು ರೂಪವಾಗಿರುವ ವಿಮರ್ಶೆಯಂತೆ ಇತಿಹಾಸವೂ ಹೊಸ ಶೈಲಿಯನ್ನು, ಅಂದರೆ ಸರಳ, ಆಕರ್ಷಕ ಮತ್ತು ಚಿಂತನಪರ ಶೈಲಿಯನ್ನು ರೂಢಿಸಿಕೊಳ್ಳಬೇಕಾಗಿದೆ. ಯಾವುದೇ ವಿಷಯದ ಸಾರ್ಥಕತೆ ಇರುವುದು ಅದರ ಸಂವಹನಕ್ರಿಯೆಯಲ್ಲಿ. ಈ ದೃಷ್ಟಿಯಿಂದ ಸಂಶೋಧನೆಯಲ್ಲಿ ಇಂದಿನ ಹೊಸ ಕಾಲಕ್ಕೆ ತಕ್ಕ ಹೊಸಭಾಷಾಶೈಲಿಯೊಂದು ಹುಟ್ಟಿಬರಬೇಕಾಗಿದೆ.

ಈ ಬಗೆಯ ಜನಪ್ರಿಯ ಚಟುವಟಿಕೆಗಳ ಅಭಾವ ಕಾರಣವಾಗಿ, ಕರ್ನಾಟಕದ ಇತಿಹಾಸ ಮತ್ತು ಅದರ ವಾರಸುದಾರರಾದ ಕನ್ನಡಿಗರ ನಡುವೆ ಕಂದರ ಬೆಳೆದು, ಕಾಲಕಾಲಕ್ಕೆ ಅದು ದೊಡ್ಡದಾಗುತ್ತ ಬಂದಿದೆ. ಅಂದರೆ ಇತಿಹಾಸ ಬರೆಯುವ ಜವಾಬ್ದಾರಿ ಹೊತ್ತ ನಾವು, ಆ ಕಂದರವನ್ನು ದೊಡ್ಡದಾಗಿಸುತ್ತ ಬಂದಿದ್ದೇವೆ. ಇದರಿಂದ ಇತಿಹಾಸ ಒಂದು ಕಡೆ, ಜನತೆ ಇನ್ನೊಂದು ಕಡೆಯೆಂಬ ಪರಿಸ್ಥಿತ ನಿರ್ಮಾಣವಾಗಿದೆ. ಹೀಗಾಗಿ ಪರಂಪರೆಯನ್ನು ಪ್ರೀತಿಸುವ, ಓದಿ ಸುಖಿಸುವ, ಅಭಿಮಾನಪಡುವ ಮನಸ್ಸು ಅವರಲ್ಲಿ ಬೆಳೆಯಲಿಲ್ಲ; ಗತಕಾಲದಿಂದ ವರ್ತಮಾನಕಾಲವನ್ನು ತಿದ್ದಿಕೊಳ್ಳುವ 'ಜೀವನಕಲೆ' ಅವರಿಗೆ ತಿಳಿಯಲಿಲ್ಲ. ಒಟ್ಟಾರೆ ಪರಂಪರೆ ನಮ್ಮ ಜನರಿಗೆ

ಪಾಠವಾಗಿ, ಸ್ಫೂರ್ತಿಯಾಗಿ ಪರಿಣಮಿಸಲೇ ಇಲ್ಲ. "ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು" ಎಂಬ ಮಾತಿಗೆ ಅವರು ನಿದರ್ಶನವೆನಿಸಿದರು. ಹೀಗೆ ಇತಿಹಾಸದ ಬೇರುಗಳನ್ನು ಕಳೆದುಕೊಂಡುದೇ ಕನ್ನಡಿಗರ ಸ್ವಾಭಿಮಾನಶೂನ್ಯತೆಗೆ ಮುಖ್ಯ ಕಾರಣವೆನಿಸಿದೆ.

ಪರಂಪರೆಯ ಪ್ರಜ್ಞೆಯಿಲ್ಲದವನಿಗೆ ಈ ದೇಶವೂ ಅಷ್ಟೇ, ಪರದೇಶವೂ ಅಷ್ಟೇ. ಈ ಭಾಷೆಯೂ ಅಷ್ಟೇ, ಪರಭಾಷೆಯೂ ಅಷ್ಟೇ. ಅಂಥವನಿಗೆ ಉಪಜೀವನ ಮುಖ್ಯವಾಗಿರುತ್ತದೆಯೇ ಹೊರತು, ಜೀವನವಲ್ಲ. ವ್ಯಕ್ತಿಕೇಂದ್ರಿತವಾಗಿ ಬದುಕುವುದು ಉಪಜೀವನ, ಪರಂಪರೆ ಕೇಂದ್ರಿತವಾಗಿ - ಸಮಾಜ ಕೇಂದ್ರಿತವಾಗಿ ಬದುಕುವುದು ಜೀವನ. ವ್ಯಕ್ತಿಕೇಂದ್ರಿತನಾದವನು ಪರಂಪರೆಗೆ ವಿಮುಖನಾಗಿ ಬೆಳೆಯುವುದರಿಂದ, ಅವನಿಗೆ ಸ್ವಂತ ಮನೆಯೂ ಅಷ್ಟೇ, ಬಾಡಿಗೆ ಮನೆಯೂ ಅಷ್ಟೇ. ಅವನು ತನ್ನ ಮನೆಯನ್ನು ಸಹ ಭೌತಿಕ ಬೆಲೆಯಿಂದ ನೋಡುವನೇ ಹೊರತು, ಅದರಾಚೆಯ ಸಾಂಸ್ಕೃತಿಕ ಮೌಲ್ಯದಿಂದ ನೋಡುವುದಿಲ್ಲ. ಕನ್ನಡಿಗರ ಮನಸ್ಥಿತಿ ಈ ರೀತಿಯದಾಗಿರುವ ಕಾರಣ, ಅವರಿಗೆ ಕರ್ನಾಟಕ ಸ್ವಲ್ಪ ಹೆಚ್ಚು-ಕಡಿಮೆ ಬಾಡಿಗೆ ಮನೆಯಾಗಿ ಪರಿಣಮಿಸಿದೆ. ಇದಕ್ಕೆ ಉದಾಹರಣೆ ಹುಡುಕಲು ನಾವು ದೂರ ಹೋಗಬೇಕಿಲ್ಲ. ಬಳ್ಳಾರಿ ಜಿಲ್ಲೆಯ ತುಂಗಭದ್ರಾ ತೀರದ ಫಲವತ್ತಾದ ಹೊಲಗಳನ್ನು ಕನ್ನಡಿಗರು ಹೆಚ್ಚಿನ ಬೆಲೆಯ ಆಸೆಗೆ ಬಿದ್ದು, ಆಂಧ್ರದವರಿಗೆ ಮಾರುವ ಮೂಲಕ, ಅಲ್ಲಿ ಆ ಜನರ ವಸತಿ ಸಾಂದ್ರವಾಗುವುದಕ್ಕೆ ಅವಕಾಶ ಮಾಡಿಕೊಡುತ್ತಲಿದ್ದಾರೆ. ಇದು ನೇರವಾಗಿ ಹೊಲವನ್ನು ಮಾರುವುದಾಗಿದ್ದರೂ, ಪರ್ಯಾಯವಾಗಿ ನೆಲವನ್ನು ಕಳೆದುಕೊಳ್ಳುವುದಾಗಿದೆ. ಇದರಿಂದಾಗಿ ತಮ್ಮ ಮನೆಯಲ್ಲಿಯೇ ಅವರು ಅಲ್ಪಸಂಖ್ಯಾತರಾಗಿ, ಅಲಕ್ಷಿತರಾಗಿ, ಅಂಜಿ ಬಾಳುವ ದುರ್ದೆಸೆಯನ್ನು ತಂದುಕೊಳ್ಳುತ್ತಲಿದ್ದಾರೆ. ಕನ್ನಡಿಗರು ಇತಿಹಾಸವನ್ನು ಮರೆತವರು, ಭವಿಷ್ಯದ ಪ್ರಜ್ಞೆಯಿಲ್ಲದವರು ಎಂಬುದಕ್ಕೆ ಇದು ಜ್ವಲಂತ ನಿದರ್ಶನವಾಗಿದೆ.

ಇದಕ್ಕೆ ವಿರುದ್ಧವೆನ್ನುವಂತೆ ನಮ್ಮ ಎಡಬಲದ ತಮಿಳರು, ಮರಾಠರು ತುಂಬ ಸ್ವಾಭಿಮಾನಿಗಳು. ನಮ್ಮಂತೆ ಅಂದಂದಿನ ಇತಿಹಾಸವನ್ನು ಅಂದೇ ಮರೆಯುತ್ತ ಬರದೆ, ಮುಂದುವರಿಸಿಕೊಂಡು ಬಂದುದು, ಹಾಗೆ ಮುಂದುವರಿಯುವಂತೆ ಇತಿಹಾಸಕಾರರು-ರಾಜಕೀಯ ನೇತಾತರು ನೋಡಿಕೊಂಡುದು, ಇದಕ್ಕೆ ಕಾರಣವಾಗಿದೆ. ಇಂಥ ಚಾರಿತ್ರಿಕಪ್ರಜ್ಞೆಯು ಸಮಕಾಲೀನಪ್ರಜ್ಞೆಯನ್ನು ಪ್ರಭಾವಿಸಿದರೆ, ಸಮಕಾಲೀನಪ್ರಜ್ಞೆ ಚಾರಿತ್ರಿಕಪ್ರಜ್ಞೆಯನ್ನು ಬತ್ತದಂತೆ ನೋಡಿಕೊಳ್ಳುತ್ತದೆ. ಹೀಗೆ ಅವು ಪರಸ್ಪರ ಪೂರಕವಾಗಿ ಸಾಗಿದಾಗ ಮಾತ್ರ, ಯಾವುದೇ ದೇಶದ ಚರಿತ್ರೆ ಗತಕಾಲವಾಗಿ ನಿಲ್ಲದೆ, ವರ್ತಮಾನಕಾಲವಾಗಿ ಪ್ರವಹಿಸುತ್ತದೆ; ಅದರ ಇತಿಹಾಸಕ್ಕೆ ಚಲನಶೀಲತೆ ಪ್ರಾಪ್ತವಾಗುತ್ತದೆ. ಕನ್ನಡಿಗರ ಇತಿಹಾಸಕ್ಕೂ ಇಂಥ ಚಲನಶೀಲತೆ ಪ್ರಾಪ್ತವಾಗುವುದು ಅವಶ್ಯವಿದೆ. ಹೀಗೆ ಚಲನಶೀಲವಾಗುವುದಕ್ಕಾಗಿ ಭೌಗೋಲಿಕವಾಗಿಯೂ ಅದನ್ನು ಊರೂರು ಮುಟ್ಟಿಸಬೇಕಾಗಿದೆ. ಇಂದು ಸಂಡೂರಿಗೆ ಇತಿಹಾಸವನ್ನು ಮುಟ್ಟಿಸಿದುದು, ಅಂಥ ಒಂದು ಪ್ರಯತ್ನವೆಂದೇ ಭಾವಿಸುತ್ತೇನೆ.

ರಾಜ್ಯದ ಇತಿಹಾಸ ಬರೆಯುವ ಹೊಣೆಹೊತ್ತ ನಮ್ಮಿಂದ, ಹೀಗೆ ಜನತೆಗೆ ಅನ್ಯಾಯವಾದಂತೆ ಇತಿಹಾಸಕ್ಕೂ ಅನ್ಯಾಯವಾಗಿದೆ. ಅದು ಕೇವಲ ಇತಿಹಾಸ ವಿದ್ವಾಂಸರ ಮಧ್ಯದಲ್ಲಿ ತೊಳಲುವಂತೆ ಮಾಡಿದ್ದೇವೆ. ಇತಿಹಾಸ ಓದಿದ ಬಹಳ ಜನ ಅಧ್ಯಾಪಕರಿಗೆ, ಪಠ್ಯಪುಸ್ತಕದ ಆಚೆಗೂ ಇತಿಹಾಸವಿದೆ, ವರ್ಗಕೋಣೆಯ ಆಚೆಗೂ ಇತಿಹಾಸ ಕೇಳುವ ಜನರಿದ್ದಾರೆ ಎಂಬುದೇ ಗೊತ್ತಿಲ್ಲ. ಗೊತ್ತಿದ್ದವರಿಗೆ ಇತಿಹಾಸದ ಆಕರ ಗಣಿಗಳೆಂದರೆ ಶಾಸನ ಮತ್ತು ಪುರಾತತ್ತ್ವ ಅವಶೇಷಗಳು ಮಾತ್ರ. ಇದರಿಂದಾಗಿ ಕರ್ನಾಟಕದ ಇತಿಹಾಸ, ತನ್ನ ಮೈಯ ಒಂದೆರಡು ಮಗ್ಗುಲುಗಳನ್ನೋ, ಒಂದೆರಡು ಪದರುಗಳನ್ನೋ ಮಾತ್ರ ತೋರಿಸಿದೆ. ಅದರ ನಿಗೂಢ ಮಗ್ಗಲು ಮತ್ತು ಪದರುಗಳನ್ನು ಕಾಣಬೇಕಾದರೆ ಹೊಸಬಗೆಯ ಆಕರಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಜೊತೆಗೆ ಜಾಗತಿಕ ಮಟ್ಟದಲ್ಲಿ ಇತಿಹಾಸದ ಗ್ರಹಿಕೆ ಮತ್ತು ರಚನೆಯ ವಿಷಯವಾಗಿ ನಡೆದಿರುವ, ಹೊಸ ಹೊಸ ಚಿಂತನೆ

-ಪ್ರಯೋಗಗಳನ್ನು ಅಮದು ಮಾಡಿಕೊಳ್ಳಬೇಕಾಗುತ್ತದೆ. ಇಂಥ ಪ್ರಯತ್ನಗಳು ನಡೆದಾಗ ಮಾತ್ರ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯವೆಂದು ಕನ್ನಡ ಸಾಹಿತ್ಯ ನವೀಕರಣಗೊಂಡಂತೆ, ಕರ್ನಾಟಕದ ಇತಿಹಾಸ ಬರವಣಿಗೆಯೂ ನವೀಕರಣಗೊಳ್ಳುತ್ತದೆ, ಬೆಳೆಯುತ್ತದೆ.

ಹೀಗೆ ಇತಿಹಾಸವನ್ನು ಓದುವವರ, ಚಿಂತಿಸುವವರ ಸಂಖ್ಯೆಯನ್ನು ಬೆಳೆಸಿದರೆ, ಎಲ್ಲ ಮಗ್ಗಲುಗಳಿಂದಲೂ ಇತಿಹಾಸವನ್ನು ಬೆಳೆಸಿದರೆ, ಅದು ವಿದ್ವಾಂಸರಾದ ನಮ್ಮನ್ನು ಬೆಳೆಸುತ್ತದೆ: ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ-ಎಂಬಂತೆ, ಇವು ಸಾಧ್ಯವಾದಂತೆಲ್ಲ ಇತಿಹಾಸವನ್ನೂ, ಇದನ್ನು ಕಟ್ಟಿಕೊಡುವ ಇತಿಹಾಸಕಾರರನ್ನೂ ಜನತೆ ಗೌರವಿಸುತ್ತದೆ; ಮತ್ತು ಸಮಾಜದಲ್ಲಿ ಅವರ ಸ್ಥಾನಮಾನಗಳು ವರ್ಧಿಸುತ್ತವೆ. ಈ ದಿಶೆಯಲ್ಲಿ ಚಳುವಳಿರೂಪದ ಪ್ರಯತ್ನ ನಡೆಯಬೇಕಾಗಿದೆ.

* * *

ಮೇಲೆ ಹೇಳಿದಂತೆ ಇತಿಹಾಸಕಾರರಾದ ನಾವು, ಶಾಸನ-ಪುರಾತತ್ವ ಅವಶೇಷಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಲಿದ್ದರೂ ಬಿ. ಎಲ್. ರೈಸ್, ಆರ್. ನರಸಿಂಹಾಚಾರ್ಯರ ಕಾಲದ ವೇಗವನ್ನು, ಬಹುಶಃ ಗುಣಮಟ್ಟವನ್ನೂ ಇಂದು ಕಳೆದುಕೊಂಡಿದ್ದೇವೆ. ಅವರಿಗಿಂತ ಅನುಕೂಲತೆ ಹೆಚ್ಚು, ಕೆಲಸ ಕಡಿಮೆ- ಎಂಬ ಸ್ಥಿತಿಗೆ ತಲುಪಿದ್ದೇವೆ. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯ ವಲಯಗಳನ್ನು ಸರಿಯಾಗಿ ಪುನರ್ಘಟಿಸದಿರುವುದು, ಹಳೆಯ ಆಡಳಿತಪದ್ಧತಿಯನ್ನು ನವೀಕರಿಸದಿರುವುದು, ಸರಕಾರದಿಂದ ಸೂಕ್ತ ಆರ್ಥಿಕ ಸಹಾಯ ಸಿಗದಿರುವುದು, ತೆರವಾದ ಹುದ್ದೆಗಳನ್ನು ತುಂಬದಿರುವುದು ಇತ್ಯಾದಿಗಳೂ, ಇವುಗಳಿಗಿಂತ ನಮ್ಮ ಹಿರಿಯರೊಂದಿಗೆ ಹೋಲಿಸಿದರೆ ನಮಗಿರುವ ಕರ್ತವ್ಯಪ್ರಜ್ಞೆಯ, ಶ್ರಮಸಂಸ್ಕೃತಿಯ ಕೊರತೆಯೂ ಅದಕ್ಕೆ ಕಾರಣವೆಂದು ಹೇಳಬೇಕು.

ಸಧ್ಯದ ಪರಿಸ್ಥಿತಿಯನ್ನು ಗಮನಿಸಿ ಹೇಳುವುದಾದರೆ 'ಕೇಂದ್ರ ಪುರಾತತ್ವ ಇಲಾಖೆ'ಗಿಂತ 'ರಾಜ್ಯ ಪುರಾತತ್ವ ಇಲಾಖೆ'ಯ ಕೆಲಸ ಒಂದಿಷ್ಟು ಮೇಲು. ಹೀಗಿದ್ದೂ ಹಂಪೆ, ಸನ್ನತಿ, ತಲಕಾಡುಗಳಲ್ಲಿ ಭೂಶೋಧಕಾರ್ಯ ನಡೆಸಿ, ಸಂಪುಟಗಳನ್ನು ಪ್ರಕಟಿಸಿ ಶ್ಲಾಘ್ಯ ಕೆಲಸ ಮಾಡುತ್ತಲಿರುವ ಈ 'ರಾಜ್ಯ ಪುರಾತತ್ವ ಇಲಾಖೆ' ಶಾಸನಗಳ ಶೋಧ, ಪ್ರಕಟನೆಯ ಬಗೆಗೂ ಇಷ್ಟೇ ಆಸಕ್ತಿವಹಿಸುವುದು ಅವಶ್ಯವಿದೆ. 'ಕೇಂದ್ರ ಪುರಾತತ್ವ ಇಲಾಖೆ' ಹಂಪೆ, ಸನ್ನತಿ, ಗುಡ್ನಾಪುರಗಳಲ್ಲಿ ನಡೆಸಿರುವ ಭೂಶೋಧಕಾರ್ಯ ಮಹತ್ವದ್ದಾಗಿದ್ದರೂ ನಿಧಾನವಾಗಿದೆ; ಫಲಿತಾಂಶ ಪ್ರಕಟನೆ ಇನ್ನೂ ನಿಧಾನವಾಗಿದೆ; ಶಾಸನಗಳ ಪ್ರಕಟನಕಾರ್ಯ ಮತ್ತೂ ನಿಧಾನವಾಗಿದೆ. ಎರಡು ದಶಕಗಳ ಹಿಂದೆ 'ಕೇಂದ್ರ ಶಾಸನ ಇಲಾಖೆ'ಯನ್ನು ತಮಿಳುನಾಡಿನ ಉದಕಮಂಡಲದಿಂದ ಕರ್ನಾಟಕದ ಮೈಸೂರಿಗೆ ವರ್ಗಾಯಿಸಲಾಯಿತು. ಹೀಗೆ ಕರ್ನಾಟಕದಲ್ಲಿದ್ದೂ, ಕ್ರಮವಾಗಿ ಕನ್ನಡಿಗರೇ ನಿರ್ದೇಶಕರಾಗಿದ್ದೂ ಈ ಸಂಸ್ಥೆಯಿಂದ ಕರ್ನಾಟಕದ ಶಾಸನಗಳು ಸಮಗ್ರವಾಗಿ ಪ್ರಕಟವಾಗದಿರುವುದು ವಿಷಾದದ ಸಂಗತಿಯಾಗಿದೆ. ಇಂತಹದೇ ಇನ್ನೊಂದು ವಿಷಾದವೆಂದರೆ, ಕರ್ನಾಟಕದ ಬೇರೆ ಬೇರೆ ಸ್ಥಳಗಳಲ್ಲಿರುವ ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆಗಳ ಬಹಳಷ್ಟು ಶಾಖೆಗಳು ಒಂದೆರಡು ಭಗ್ನಮೂರ್ತಿಗಳನ್ನು ಬಾಗಿಲಮುಂದೆ ಚೆಲ್ಲಿಕೊಂಡು, ನಿದ್ರೆಮಾಡುತ್ತಲಿವೆ.

ವಿಶ್ವವಿದ್ಯಾಲಯಗಳಿಗೆ ಬಂದರೆ, ಇಲ್ಲಿಯ ಇತಿಹಾಸ ವಿಭಾಗಗಳಲ್ಲಿ ಇತ್ತೀಚೆ ಬೋಧನೆಗೆ ಹೆಚ್ಚು ಅವಕಾಶ ಸಿಕ್ಕು, ಸಂಶೋಧನೆ ಕ್ಷೀಣಿಸುತ್ತ ನಡೆದಿದೆ. ಬಹಳವೆಂದರೆ ಸಂಶೋಧನ "ಕಾರ್ಯ"ಗಳಿಗಿಂತ "ಕಾರ್ಯಕ್ರಮ" ಮಾಡಿ ಧನ್ಯತೆಯನ್ನು ಅನುಭವಿಸುತ್ತಲಿವೆ. ಅಂದರೆ ಪ್ರತಿವರ್ಷ ಮಾರ್ಚ ೩೧ಕ್ಕೆ 'ಸೆಮಿನಾರ್' ಮಾಡಿ, ಪತ್ರಿಕೆಗಳಲ್ಲಿ ಮಿಂಚಿ ಮಾಯವಾಗುವ ಕೆಲಸ ಮಾತ್ರ ಇಲ್ಲಿ ಉಳಿದುಕೊಂಡು, ಗಂಭೀರ ಚಿಂತನೆಯು, ಕಠಿಣ ಪರಿಶ್ರಮದ ಯೋಜನೆಗಳು ಇಲ್ಲಿಂದ ಓಟ ಕಿತ್ತಿವೆ.

ಸ್ನಾತಕೋತ್ತರ ಕನ್ನಡ ವಿಭಾಗಗಳಿಗೆ ಬಂದರೆ ಇಲ್ಲಿಯೂ ಇದೇ ಸ್ಥಿತಿ ವಿರಾಜಮಾನವಾಗಿದೆ. ಇತಿಹಾಸ ಚಟುವಟಿಕೆಗೇ ಸೀಮಿತಗೊಳಿಸಿ ಹೇಳುವುದಾದರೆ, ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗ ಕೈಗೆತ್ತಿಕೊಂಡಿರುವ ಎಪಿಗ್ರಫಿಯ ಕರ್ನಾಟಕ ಸಂಪುಟಗಳ ಪರಿಷ್ಕೃತ ಆವೃತ್ತಿಗಳು ಸಮಯಕ್ಕೆ ಸರಿಯಾಗಿ ಹೊರಬರದಿರುವುದು, ಸಂಬಂಧಿಸಿದ ಅಧಿಕಾರಿಗಳಿಗೆ ಅವುಗಳ ಮಹತ್ವದ ಅರಿವಿಲ್ಲದುದರ ದ್ಯೋತಕವಾಗಿದೆ.

ಹೀಗೆ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಿಂದ ತುಂಗಭದ್ರಾನದಿಯ ದಕ್ಷಿಣದ ೯ ಜಿಲ್ಲೆಯ ಶಾಸನಗಳು ದ್ವಿತೀಯ ಆವೃತ್ತಿ ರೂಪದಲ್ಲಿ ಕುಂಟುತ್ತಲಾದರೂ ಪ್ರಕಟವಾಗುತ್ತಲಿವೆ. ಮಿಕ್ಕ ೧೧ ಜಿಲ್ಲೆಗಳ ಶಾಸನಗಳಲ್ಲಿ ಒಂದಿಷ್ಟನ್ನು ಪ್ರಕಟಿಸಿದ ಕೇಂದ್ರ ಪುರಾತತ್ವ ಇಲಾಖೆ, ಈ ಕೆಲಸವನ್ನು ಮುಂದುವರಿಸಲಿಲ್ಲ. ತನ್ನ 'ಎಪಿಗ್ರಫಿಯ ಕರ್ನಾಟಕ' ಮಾದರಿಯಲ್ಲಿ 'ರಾಜ್ಯ ಪುರಾತತ್ವ ಇಲಾಖೆ'ಯೂ ಪ್ರಕಟಿಸಲಿಲ್ಲ. ಕರ್ನಾಟಕ, ಮಂಗಳೂರು, ಗುಲ್ಬರ್ಗಾ ವಿಶ್ವವಿದ್ಯಾಲಯಗಳು ಇದು ತನ್ನ ಕೆಲಸವಲ್ಲವೆಂಬಂತೆ ಬೆನ್ನು ತಿರುಗಿಸಿ ಕುಳಿತುಕೊಂಡಿವೆ. ಇದರಿಂದಾಗಿ ೧೧ ಜಿಲ್ಲೆಗಳ, ಅದರಲ್ಲಿಯೂ ಗುಲ್ಬರ್ಗಾ, ಬೀದರ, ರಾಯಚೂರು ಜಿಲ್ಲೆಗಳ, ಇವುಗಳಿಗಿಂತ ಹೊರನಾಡಿನ ಶಾಸನಗಳು ಶಾಸನವಿದ್ವಾಂಸರಾದ ನಮ್ಮತ್ತ ದೈನ್ಯ ದೃಷ್ಟಿಯಿಂದ ನೋಡುತ್ತಲಿವೆ.

ರಾಜಮನೆತನಗಳಿಗೆ ಸಂಬಂಧಿಸಿದ ಶಾಸನ ಸಂಪುಟಗಳನ್ನೂ, ಸೂಚಿಸಂಪುಟಗಳನ್ನೂ ಸಂಯೋಜಿಸುವ ಕೆಲಸದಲ್ಲಿ ತೊಡಗಿಕೊಳ್ಳುವ ಮೂಲಕ, ಶಾಸನಕ್ಷೇತ್ರಕ್ಕೆ ಬೆಲೆಯುಳ್ಳ ಕೊಡುಗೆ ಸಲ್ಲಿಸುತ್ತಲಿರುವ ನಮ್ಮ ನಿವೃತ್ತಶಾಸನತಜ್ಞರನ್ನು ಈ ಶಾಸನ ಇಲಾಖೆಗಳು ಬಳಸಿಕೊಂಡು, ಮೇಲೆ ಹೇಳಿದ ಪ್ರದೇಶಗಳ ಅಪ್ರಕಟಿತ ಶಾಸನಗಳ ಪ್ರಕಟಕಾರ್ಯವನ್ನು ಮೊದಲು ಮಾಡಿ ಮುಗಿಸಬೇಕಾಗಿದೆ.

ಕನ್ನಡ ಸಂಸ್ಕೃತಿಯ ಶೋಧ-ಪ್ರಸಾರಗಳಿಗಾಗಿ ತಲೆಯೆತ್ತಿರುವ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪುಸ್ತಕಗಳನ್ನು ಹೆಚ್ಚು ಸಂಖ್ಯೆಯಲ್ಲಿ ಪ್ರಕಟಿಸುತ್ತಿದೆಯಾದರೂ ಬಹಳಷ್ಟು ಪುಸ್ತಕಗಳು ಇದರ ಉದ್ದೇಶಕ್ಕೆ ಹೊರತಾದುವೆಂದೂ, ಇಲ್ಲಿ ನಡೆದಿರುವದು ಸ್ವಲ್ಪ ಹೆಚ್ಚು ಕಡಿಮೆ 'ಸಾಹಿತ್ಯ ಅಕಾಡಮಿ' ಮಾದರಿಯ ಕೆಲಸವೆಂದೂ ವಿದ್ವಾಂಸರ ಅಭಿಪ್ರಾಯವಾಗಿದೆ. ಬೇರೆ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ 'ಪುಸ್ತಕ ಪ್ರಕಾಶನಸಂಸ್ಥೆ'ಯ ಸ್ವರೂಪಕ್ಕೆ ಇಳಿಯುತ್ತಲಿರುವ ಇದು, ತಾನೇ ನೇರವಾಗಿ ಶೋಧ, ಬರೆವಣಿಗೆ, ಅನುವಾದ ಕೆಲಸಗಳಲ್ಲಿ ತೊಡಗಿಕೊಂಡು, 'ವಿಶ್ವವಿದ್ಯಾಲಯ'ದ ಸ್ವರೂಪ ಪಡೆಯಬೇಕಾಗಿದೆ. ಅದರ ಕಣ್ಣು ಮುಂದೆ ಸಂಶೋಧನೆಗಾಗಿ ಕರ್ನಾಟಕದ ಸುದೀರ್ಘವಾದ ಇತಿಹಾಸ, ಪ್ರಸಾರಕ್ಕಾಗಿ ಜಗತ್ತಿನ ವಿಸ್ತಾರವಾದ ಭೂಗೋಲ ಚಾಚಿಕೊಂಡಿವೆ.

ಈ ಸಂದರ್ಭದಲ್ಲಿ ಒಂದು ಸೂಚನೆ: ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಹೈದ್ರಾಬಾದ ವಲಯದಿಂದ ಉತ್ತರ ಕರ್ನಾಟಕದ ಜಿಲ್ಲೆಗಳನ್ನು ಬೇರ್ಪಡಿಸಿ, ಹೊಸದಾಗಿ 'ಧಾರವಾಡ ವಲಯ'ವನ್ನು ಸ್ಥಾಪಿಸುವುದು ಬಹುದಿನಗಳಿಂದ ನನೆಗುದಿಗೆ ಬಿದ್ದಿದ್ದು, ಪ್ರಭಾವಶಾಲಿ ವ್ಯಕ್ತಿಗಳು, ಸರಕಾರ - ಈ ಕೆಲಸಕ್ಕೆ ಆದ್ಯಗಮನ ಕೊಡಬೇಕಾಗಿದೆ.

'ಶಾಸನಗಳಂತೆ ಆಕರಗಳ ಇನ್ನೊಂದು ಗಣಿ"ಹಸ್ತಪ್ರತಿ"ಗಳು. ಶಾಸನಶೋಧಕಾರ್ಯ ಮತ್ತು ಹಸ್ತಪ್ರತಿಶೋಧಕಾರ್ಯಗಳು ನೂರು ವರ್ಷಗಳ ಹಿಂದೆ, ಕರ್ನಾಟಕದಲ್ಲಿ ಏಕಕಾಲಕ್ಕೆ "ರಾಜ್ಯ ಪುರಾತತ್ವ ಇಲಾಖೆ"ಯ ಮೂಲಕ ಪ್ರಾರಂಭವಾದುವೇನೋ ನಿಜ. ಮುಂದೆ ಕೆಲವೇ ದಿನಗಳಲ್ಲಿ 'ರಾಜ್ಯಪುರಾತತ್ವ ಇಲಾಖೆ'ಯಿಂದ ಹಸ್ತಪ್ರತಿಗಳನ್ನು ಪ್ರತ್ಯೇಕಿಸಿ ವಿಶ್ವವಿದ್ಯಾಲಯದ ಒಂದು ಭಾಗವನ್ನಾಗಿಸಲಾಯಿತು. ಬೋಧನಪ್ರಧಾನವಾದ ವಿಶ್ವವಿದ್ಯಾಲಯಗಳು ಈ ಇಲಾಖೆಯನ್ನು, ಇಲ್ಲಿ ದುಡಿಯುವ ವಿದ್ವಾಂಸರನ್ನು ಎರಡನೆಯ ದರ್ಜೆಯ ಪ್ರಜೆಗಳಂತೆ ನೋಡಿಕೊಳ್ಳುತ್ತಲಿವೆ. ಹೀಗಾಗಿ ಶಾಸನಗಳಿಗಾಗಿ 'ರಾಜ್ಯ ಪುರಾತತ್ವ ಇಲಾಖೆ,' ಮುದ್ರಿತ ಪುಸ್ತಕಗಳಿಗಾಗಿ 'ರಾಜ್ಯ ಸಾರ್ವಜನಿಕ ಗ್ರಂಥಾಲಯ ಇಲಾಖೆ'ಗಳು ಅಸ್ತಿತ್ವಕ್ಕೆ ಬಂದಂತೆ, ಹಸ್ತ ಪ್ರತಿಗಳಿಗಾಗಿ

'ರಾಜ್ಯ ಹಸ್ತಪ್ರತಿ ಇಲಾಖೆ' ಹೆಸರಿನ ಸ್ವತಂತ್ರ ಸಂಸ್ಥೆಯೊಂದು ಅಸ್ತಿತ್ವಕ್ಕೆ ಬರಬೇಕಾಗಿದೆ. ರಾಜ್ಯದ ಒಳ-ಹೊರಗೆ ಅಲ್ಲಲ್ಲಿ ಬಿದ್ದುಕೊಂಡಿರುವ, ಟ್ರಕ್ಕುಗಟ್ಟಲೇ ಸಿಗಬಹುದಾದ ಹಸ್ತಪ್ರತಿಗಳನ್ನು ಸಂಗ್ರಹಿಸುವುದರೊಂದಿಗೆ, ಈಗಾಗಲೇ ವಿಶ್ವವಿದ್ಯಾಲಯಗಳಲ್ಲಿ ಸಂಗ್ರಹವಾಗಿರುವ ಹಸ್ತಪ್ರತಿಗಳ ಸೂಚೀರಚನೆ, ಪರಿಷ್ಕರಣ-ಪ್ರಕಟನಕಾರ್ಯಗಳಿಗೆ ತೀವ್ರ ಗಮನಕೊಡಬೇಕಾಗಿದೆ.

ಸಾಮಾನ್ಯವಾಗಿ ಹಸ್ತಪ್ರತಿಗಳು ಸಾಹಿತ್ಯ-ಶಾಸ್ತ್ರಗಳನ್ನೊಳಗೊಂಡಿದ್ದರೂ ಅವು ಇತಿಹಾಸಕ್ಕೂ ಸಾಮಗ್ರಿ ಒದಗಿಸುತ್ತವೆಂದು ಬೇರೆ ಹೇಳಬೇಕಿಲ್ಲ. ನನ್ನ ದೃಷ್ಟಿಯಲ್ಲಿ ಸಾಹಿತ್ಯ ಬೇರೆಯಲ್ಲ, ಇತಿಹಾಸ ಬೇರೆಯಲ್ಲ. 'ಸತ್ಯದ ವಾಸ್ತವ ರೂಪ ಇತಿಹಾಸ, ಕಲಾರೂಪ ಸಾಹಿತ್ಯ.' ಈ ಸಾಹಿತ್ಯರಾಶಿಯ ಭಾಗವಾಗಿರುವ ಕುಮಾರರಾಮನ ಸಾಂಗತ್ಯ, ಕೆಳದಿನೃಪವಿಜಯ ಮೊದಲಾದ 'ಚಾರಿತ್ರಿಕ ಕಾವ್ಯ'ಗಳು ಈಗಾಗಲೇ ಪ್ರಕಟಗೊಂಡಿವೆ. ಇತ್ತೀಚೆ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನಿಂಬಸಾಮಂತ ಚರಿತೆ, ಸಿರುಮಣ ನಾಯಕನ ಸಾಂಗತ್ಯ, ಸಿರುಮನ ಚರಿತೆ, ಗೊಲ್ಲ ಸಿರುಮನ ಚರಿತೆಗಳು ಪ್ರಕಟವಾದುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಹಸ್ತಪ್ರತಿಗಳಲ್ಲಿ ಉಳಿದುಕೊಂಡಿರುವ ಇಂಥ ಇನ್ನೂ ಹತ್ತಾರು ಮಹತ್ವದ ಕೃತಿಗಳು ಪ್ರಕಟವಾಗಬೇಕಾಗಿದೆ.

ಇವುಗಳಲ್ಲದೆ, ಕಾವ್ಯ-ಶಾಸ್ತ್ರಗಳಲ್ಲಿ ಅಡಕವಾಗಿರುವ ಚರಿತ್ರೆಯ ತುಣುಕುಗಳನ್ನು ಶೋಧಿಸುವುದು ಇಂದು ಅವಶ್ಯವಿದೆ. ಉದಾ: ಕೇಶಿರಾಜನ ಶಬ್ದಮಣಿ ದರ್ಪಣದಲ್ಲಿ "ಬಾಲವಣಮಂ ಬೇಡುವನೊಂದೆ ಗೊಂದೆಗಮನಂಗಾರಾತಿಯಂ ಹೈಹಯಂ" ಎಂಬ ಕರ್ತೃ ನಿರ್ದೇಶನವಿಲ್ಲದ ವಾಕ್ಯ ಕಂಡುಬರುತ್ತದೆ. ಹೈಹಯ ಅರಸು ಶಿವನಿಗಿರುವ ಒಂದೇ ಒಂದು ನಂದಿಗೂ 'ಬಾಲವಣ'ವನ್ನು ಅಂದರೆ ಎತ್ತಿನ ಸುಂಕವನ್ನು ಆಕರಿಸದೆ ಬಿಡುವುದಿಲ್ಲವೆಂದು ಇಲ್ಲಿಯ ಅಭಿಪ್ರಾಯ. ಇದು ಹೈಹಯ ಅರಸರ ಕ್ರೂರ ಸುಂಕವ್ಯವಸ್ಥೆಯನ್ನು ಸೂಚಿಸುತ್ತದೆ.

'ಗಂಗಿ-ಗೌರಿ ಸಂವಾದ' ಕಾವ್ಯದಲ್ಲಿ ಶಿವನು ಗಂಗೆಯನ್ನು ಕದ್ದು ಪ್ರೀತಿಸಿದ ವಿಷಯವನ್ನು, ಗಿಳಿ ಬಂದು ಗೌರಿಗೆ ಹೇಳುತ್ತದೆ. ಆಗ "ಹಂಡೆ ಮಲಕನೊಡೆಯ ಉಂಡ ಮನೆಯ ಜಂತಿ ಎಣಿಸನು" ಎಂದು ತನ್ನ ಗಂಡನ ಏಕಪತ್ನೀನಿಷ್ಠೆಯನ್ನು ಗೌರಿ ಸಮರ್ಥಿಸಿಕೊಳ್ಳುತ್ತಾಳೆ. ಈ ಕೃತಿಯ ಸಂಪಾದಕರು 'ಹಂಡೆ ಮಲಕ' ಎಂಬುದಕ್ಕೆ "ಹಂಡೆಯ (ಪಾತ್ರೆಯ) ಗಂಟು" ಎಂದು ಅಸಂಬದ್ಧ ಅರ್ಥ ಬರೆದಿದ್ದಾರೆ. "ಶಿವನು ಹಂಡೆಯ (ಪಾತ್ರೆಯ) ಗಂಟಿನ ಒಡೆಯ" ಎಂದರೆ ಏನು ಅರ್ಥ? ಇದು ಶುದ್ಧ ತಪ್ಪು. ಇಲ್ಲಿಯ 'ಹಂಡೆಯ ಮಲಕ' ಎಂದರೆ ಬಳ್ಳಾರಿ ಪ್ರದೇಶದಲ್ಲಿ ಆಳುತ್ತಲಿದ್ದ ಹಂಡೆ ಮನೆತನದ ಪಾಳೆಯಗಾರನಾದ ಮಲಕನಾಯಕ. ಇವನು ಶಿವಭಕ್ತ. ಇದನ್ನು ಇಟ್ಟುಕೊಂಡರೆ 'ಹಂಡೆ ಮಲಕನೊಡೆಯ' ಎಂಬುದಕ್ಕೆ ಶಿವನೆಂಬ ಸರಿಯಾದ ಅರ್ಥ ಹೊರಡುವುದರಲ್ಲದೆ, ಈ ಕಾವ್ಯ ಮಲಕನಾಯಕನ ಆಸ್ಥಾನದಲ್ಲಿ ಹುಟ್ಟಿದೆಯೆಂದೂ ಸ್ಪಷ್ಟವಾಗುತ್ತದೆ. ಕನ್ನಡ ಕಾವ್ಯಗಳಲ್ಲಿ ಇಂಥ ಸಣ್ಣ ಸಣ್ಣ ಐತಿಹಾಸಿಕ ತುಣುಕುಗಳು ನೂರುನೂರು ಸಿಗುತ್ತವೆ. ಕಾವ್ಯ, ಶಾಸನ, ದಾಖಲೆ ಮೊದಲಾದವುಗಳ ವ್ಯಾಪಕ ಅಧ್ಯಯನದ ಹಿನ್ನೆಲೆ ಇದ್ದವರು ಮಾತ್ರ ಇವುಗಳನ್ನು ಗ್ರಹಿಸಬಲ್ಲರು, ಸಂಗ್ರಹಿಸಬಲ್ಲರು. ಇವೆಲ್ಲವನ್ನೂ ಹಸ್ತಪ್ರತಿಗಳಿಂದ ಆಯ್ದು ಸಂಪುಟಗಳಾಗಿ ನಾವು ಪ್ರಕಟಿಸಬೇಕಿದೆ.

ಇವುಗಳಿಗಿಂತ ಭಿನ್ನವಾದ ಸಾಮಗ್ರಿ ಹಳೆಯ ದಾಖಲೆಗಳು. ದೇವಾಲಯ-ಮಠಗಳಲ್ಲಿ, ಪ್ರತಿಷ್ಠಿತ ಕುಟುಂಬಗಳಲ್ಲಿ ಧೂಳು ತಿನ್ನುತ್ತ ಬಿದ್ದುಕೊಂಡಿರುವ ಇವುಗಳ ಸಂರಕ್ಷಣೆ, ಅಧ್ಯಯನಗಳಿಗಾಗಿ ಸ್ಥಾಪಿಸಲ್ಪಟ್ಟಿರುವ 'ರಾಜ್ಯ ಪತ್ರಾಗಾರ ಇಲಾಖೆ' ತಾನು ಈವರೆಗೆ ಏನು ಮಾಡಿರುವೆನೆಂಬುದನ್ನು ಪ್ರಕಟನೆಗಳ ಮೂಲಕ ವಿದ್ವಾಂಸರ ಗಮನಕ್ಕೆ ತರುವುದು ಅವಶ್ಯವಿದೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬಂಡಿಗಟ್ಟಲೆ ಬಿದ್ದಿರುವ ದಾಖಲೆಗಳು, ಈ ಇಲಾಖೆಯನ್ನು ಕೈಮಾಡಿ ಕರೆಯುತ್ತಲಿವೆ. ಈ ದಾಖಲೆಗಳ ವರ್ಗಕ್ಕೆ ಸೇರುವ ೧೩೪ ಕೈಫಿಯತ್ತುಗಳನ್ನೊಳಗೊಂಡ 'ಕರ್ನಾಟಕದ ಕೈಫಿಯತ್ತುಗಳು' ಕೃತಿ, ಇಂದು ಇತಿಹಾಸ ಸಮ್ಮೇಲನದಲ್ಲಿ

ಬಿಡುಗಡೆಯಾದುದು ಒಂದು ಯೋಗಾಯೋಗ. ಇತಿಹಾಸಕ್ಕೆ ಸಂಬಂಧಿಸಿದ ಇನ್ನೊಂದು ಸಾಮಗ್ರಿ ಗೆಝೆಟಿಯರ್. ಆಕರಗಳ ಸಂಗ್ರಹ, ಲೇಖನಗಳ ಬರೆವಣಿಗೆ, ಸಂಪುಟಗಳ ಪ್ರಕಟನೆ ದೃಷ್ಟಿಯಿಂದ 'ರಾಜ್ಯ ಗೆಝೆಟಿಯರ್ ಇಲಾಖೆ' ಕಾಲಕ್ಕೆ ಸರಿಯಾಗಿ ಕಾರ್ಯ ಮುಗಿಸಿ, ಮಾದರಿಯನ್ನು ಸ್ಥಾಪಿಸಿದೆ.

ಈ ವರೆಗೆ ವಿವರಿಸಿದವುಗಳಲ್ಲಿ ಕನಿಷ್ಠಪಕ್ಷ ದಾಖಲೆರೂಪದ ಆಕರಗಳ ಸಂಗ್ರಹವನ್ನಾದರೂ ೧೦ ವರ್ಷಗಳಲ್ಲಿ ಮಾಡಿ ಮುಗಿಸುವ ಸಲುವಾಗಿ 'ಎಲ್ಲ ಪ್ರದೇಶಗಳ ಎಲ್ಲ ಶಾಸನ, ಎಲ್ಲ ಹಸ್ತಪ್ರತಿ, ಎಲ್ಲ ದಾಖಲೆಗಳ ಸಂಗ್ರಹ ಮತ್ತು ಪ್ರಕಟನೆ' ಹೆಸರಿನ ಒಂದು ಕಾಲಬದ್ಧ ಯೋಜನೆಯನ್ನು ಸರಕಾರ ಸಂಬಂಧಪಟ್ಟ ಇಲಾಖೆಗಳಿಗೆ ವಹಿಸಿಕೊಡಬೇಕಾಗಿದೆ; ಇತ್ತೀಚೆ ೧೫ ಸಂಪುಟಗಳಲ್ಲಿ"ಎಲ್ಲ ಶರಣರನ ಎಲ್ಲ ವಚನ"ಗಳ ಯೋಜನೆಯನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ಮಾಡಿ ಮುಗಿಸಿದಂತೆ. ತಡಮಾಡಿದರೆ ಈ ಸಾಮಗ್ರಿ ಶಾಶ್ವತವಾಗಿ ನಮ್ಮ ಕೈಬಿಟ್ಟು ಹೋಗುವುದರಿಂದ, ಇತಿಹಾಸ ಸಮ್ಮೇಲನ ಈ ವಿಷಯವಾಗಿ ಸರಕಾರದ ಮೇಲೆ ಒತ್ತಡ ತರುವುದು, ಜೊತೆಗೆ ಈ ಕೆಲಸ ಮಾಡಬೇಕಾದ ನಾವು ನಮ್ಮ ಮೇಲೆ ಒತ್ತಡ ತಂದುಕೊಳ್ಳುವುದು ಅವಶ್ಯವಿದೆ.

ಇದೆಲ್ಲ ಶಿಷ್ಟ ಆಕರಸಾಮಗ್ರಿಯಾಗಿದೆ. ಇದಕ್ಕಿಂತ ಭಿನ್ನವಾದ. ದೇಶೀ ಸಂಸ್ಕೃತಿಯ ಪಳೆಯುಳಿಕೆಯಾದ ವಿಪುಲ ಜಾನಪದಸಾಮಗ್ರಿ ಅಲ್ಲಲ್ಲಿ ಉಳಿದುಕೊಂಡಿದೆ. ಅನೇಕ ರೂಪಗಳಲ್ಲಿ ಸಿಗುವ ಈ ಸಾಮಗ್ರಿಯ ಸಂಗ್ರಹ-ಅಧ್ಯಯನ ಇತ್ತೀಚೆ ಕನ್ನಡ ಅಧ್ಯಾಪಕರಿಂದ ಪ್ರಾರಂಭವಾಗಿದ್ದು, ಇನ್ನು ಮುಂದೆ ಇವರ ಜೊತೆ ಸಮಾಜಶಾಸ್ತ್ರ, ಮಾನವಶಾಸ್ತ್ರ ಮೊದಲಾದ ಶಿಸ್ತುಗಳ ವಿದ್ವಾಂಸರು ಈ ಕ್ಷೇತ್ರವನ್ನು ಪ್ರವೇಶಿಸಬೇಕಾಗಿದೆ. ಇತಿಹಾಸ ಪ್ರಾಧ್ಯಾಪಕರಿಗೂ ಇಲ್ಲಿ ವಿಪುಲ ಅವಕಾಶವಿದೆ. ಬಳ್ಳಾರಿ ಜಿಲ್ಲೆಯ ಓರುವಾಯಿ ಶಾಸನ ಕಪ್ಪೆಯರ ಆಹಾರದಾನವನ್ನೂ, ಸಮೀಪದ ಕುಡುತಿನಿ ಶಾಸನ ಕುಮಾರಸ್ವಾಮಿಯ ಯಾತ್ರೆಗೆ ಬರುವ ಕಪ್ಪಡಿಗಳ ಅನ್ನಸತ್ರವನ್ನೂ ಸೂಚಿಸುತ್ತವೆ. ಇಲ್ಲಿ ಕಪ್ಪೆಯರು, ಕಪ್ಪಡಿಗಳು ಸಮಾನಾರ್ಥ ಪದಗಳೆಂಬುದು ಸ್ಪಷ್ಟ. ಇದನ್ನು ಓದುತ್ತಲೇ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನ ನೆನಪಾಗುತ್ತದೆ. ಕುಮಾರಸ್ವಾಮಿಯ ನೆಲೆಯಾದ ಈ ಸೊಂಡೂರಿನಲ್ಲಿರುವ "ಕಪ್ಪೆ" ಅಡ್ಡಹೆಸರಿನ ಮನೆತನಗಳಲ್ಲಿ ಜಾನಪದೀಯ ಶೋಧ ನಡೆಸಿದಲ್ಲಿ ಈ ಸಮಸ್ಯೆ ಬಗೆಹರಿಯುವಂತಿದ್ದರೆ, ಇತಿಹಾಸ ಸಂದರ್ಭದಲ್ಲಿ ಜಾನಪದ ಅಧ್ಯಯನ ಎಷ್ಟು ಮಹತ್ವದ್ದೆಂಬುದು ತಾನೇ ವಿದಿತವಾಗುತ್ತದೆ. ಶಾಸನಗಳಲ್ಲಿ ಬರುವ ಗವರೆಗಳು, ಗಾತ್ರಿಗರು ಹೆಸರಿನ ವ್ಯಾಪಾರಿವರ್ಗಗಳು ಇಂದಿನ ಕೋರಿ, ಕತ್ತಿ ವ್ಯಾಪಾರಿ ಮನೆತನಗಳೆಂದು ನಾನು ಬೇರೆಡೆ ಬರೆದುದನ್ನು ಇಲ್ಲಿ ಸೂಚಿಸಬಹುದಾಗಿದೆ.

ಜಾನಪದದ ಜೊತೆಗೆ ಇತ್ತೀಚೆ ತೆರೆದುಕೊಂಡ ಇನ್ನೊಂದು ಅಧ್ಯಯನವೆಂದರೆ 'ನಾಮವಿಜ್ಞಾನ.' ಗ್ರಾಮನಾಮ, ವ್ಯಕ್ತಿನಾಮ, ಕುಟುಂಬನಾಮ ಇತ್ಯಾದಿಗಳನ್ನೊಳಗೊಳ್ಳುವ ಇದು, ಅನ್ಯ ಆಕರಗಳಿಂದ ಹೊರಡುವ ಸ್ಥಳೀಯ ಇತಿಹಾಸ ನಿಂತಲ್ಲಿಂದ, ಅದನ್ನು ಇನ್ನೂ ಹಿಂದಕ್ಕೆ ಕರೆದುಕೊಂಡು ಹೋಗುತ್ತದೆ. ಬಾಗೇವಾಡಿ ತಾಲೂಕಿನ ಭೈರವಾಡಗಿಯ ಪ್ರಾಚೀನ ಹೆಸರು ಬೌದ್ಧವಾಡಿಗೆ, ಬೇತಮಂಗಲದ ಪ್ರಾಚೀನ ಹೆಸರು ವಿಜಯಾದಿತ್ಯಮಂಗಲ - ಇತ್ಯಾದಿ ಸೂಚನೆಗಳು ಸಾಂಸ್ಕೃತಿಕ, ರಾಜಕೀಯ ಅಧ್ಯಯನಕ್ಕೆ ಎಷ್ಟು ಮಹತ್ವದವುಗಳೆಂದು ಬೇರೆ ಹೇಳಬೇಕಿಲ್ಲ. ಇದೇ ರೀತಿ ಕಟ್ಟಪ್ಪು, ಬನವಾಸಿ, ಮೈಸೂರು, ಚಿತ್ರದುರ್ಗ ಮೊದಲಾದ ಗ್ರಾಮನಾಮಗಳೂ, ಪುಲಿಕೇಶಿ, ಬುಕ್ಕ, ಪ್ರೌಢದೇವರಾಯ ಎಂಬಂಥ ವ್ಯಕ್ತಿನಾಮಗಳೂ, ಕದಂಬ, ಚಾಲುಕ್ಯ, ಹೊಯ್ಸಳ ಮೊದಲಾದ ಕುಟುಂಬನಾಮಗಳೂ ಅಭ್ಯಾಸ ಯೋಗ್ಯವಾಗಿದ್ದು, ನಾಮವಿಜ್ಞಾನ ಮಾತ್ರ ಇವುಗಳ ಹಿಂದಿರುವ ಸತ್ಯವನ್ನು ಸ್ಫೋಟಗೊಳಿಸುತ್ತದೆ. ದುರ್ದೈವದ ಸಂಗತಿಯೆಂದರೆ, ಈ ಕ್ಷೇತ್ರದಲ್ಲಿ ದುಡಿಯುತ್ತಲಿರುವ ಬಹುಜನ ವಿದ್ವಾಂಸರಿಗೆ ನಾಮವಿಜ್ಞಾನದ ವೈಜ್ಞಾನಿಕ ದೃಷ್ಟಿಕೋನ ಇನ್ನೂ ಲಭ್ಯವಾಗಿಲ್ಲವೆಂದೇ ಹೇಳಬೇಕು.

ಇದಕ್ಕಿಂತ ಸೂಕ್ಷ್ಮವಾಗಿ, ವ್ಯಾಪಕವಾದ ಆಕರಸಾಮಗ್ರಿ ಭಾಷೆ. ಇಂದು ಭಾಷೆಯ ರಾಚನಿಯ ಅಧ್ಯಯನ ನಡೆದಿದ್ದು, ಇನ್ನು ಮೇಲೆ ಸಾಂಸ್ಕೃತಿಕ ಅಧ್ಯಯನ ನಡೆಯಬೇಕಾಗಿದೆ. ಬದುಕಿನ ಶಬ್ದರೂಪವಾಗಿರುವ ಭಾಷೆಯ ಸಾಂಸ್ಕೃತಿಕ ಅಧ್ಯಯನವೆಂದರೆ ಬದುಕಿನ ಅಧ್ಯಯನವೇ ಆಗುತ್ತದೆ. ಸಂಸ್ಕೃತಿಯನ್ನು ತಿಳಿಸಿಕೊಡುವ ಸಾಧನವಾಗಬಹುದ್ಧಾದ ಭಾಷೆ, ಸಂಸ್ಕೃತಿಯನ್ನು ಪಲ್ಲಟಗೊಳಿಸುವ ಸಾಧನವೂ ಆಗಬಹುದು. ಗದುಗಿನ ಪ್ರಾಚೀನತಮ ಬೀಚಮ ಕೆರೆಯೇ ಇಂದು 'ಭೀಷ್ಮಕೆರೆ'ಯೆಂದು ಪ್ರಸಿದ್ಧಿ ಪಡೆದುದು, ಭಾಷೆಯಿಂದಾಗಿ ಸಂಸ್ಕೃತಿ ಪಲ್ಲಟಗೊಳ್ಳುವುದಕ್ಕೆ ಉದಾಹರಣೆಯಾಗಿದೆ. ಆದುದರಿಂದ ಸಂಸ್ಕೃತಿಯಲ್ಲಿ ಭಾಷೆಯನ್ನು, ಭಾಷೆಯಲ್ಲಿ ಸಂಸ್ಕೃತಿಯನ್ನು ಎಚ್ಚರಿಕೆಯಿಂದ ಹುಡುಕಬೇಕಾಗಿದೆ.

ಹೀಗೆ ಆಕರಗಳ ಶೋಧ ಅನೇಕ ನೆಲೆಗಳಲ್ಲಿ ನಡೆದರೆ ಮಾತ್ರ ಇತಿಹಾಸ ರಚನೆಗೆ ಒಂದು ಸಮಗ್ರತೆ ಪ್ರಾಪ್ತವಾಗುತ್ತದೆ. ಆದುದರಿಂದ ನಮ್ಮ ಇತಿಹಾಸಕಾರರು ಇನ್ನು ಮುಂದೆ ಆಕರದ ಹೊಸ ಹೊಸ ನೆಲೆಗಳನ್ನು ಹುಡುಕಿಕೊಂಡು ಹೋಗಬೇಕಾಗಿದೆ.

* * *

ಬಹುದಿನಗಳಿಂದಲೂ ನನ್ನ ಮನಸ್ಸನ್ನು ಕೊರೆಯುತ್ತಲಿರುವ ಒಂದು ಅಂಶವೆಂದರೆ, ಅಸತ್ಯಗಳಿಂದ ಮುಕ್ತವಾದ ಕರ್ನಾಟಕದ ಇತಿಹಾಸದ ರಚನೆ. "ನಾವು ಓದುತ್ತಲಿರುವ ಇತಿಹಾಸ, ಕೆಲವೊಮ್ಮೆ ನಡೆದ ಇತಿಹಾಸವಾಗಿರಲಿಕ್ಕಿಲ್ಲ" ಎಂಬ ಸಂದೇಹ ನನ್ನನ್ನು ಆಗಾಗ ಕಾಡಿದೆ. ೫೦ ವರ್ಷಗಳಾಚೆಯ ಸ್ವಾತಂತ್ರ್ಯಯೋಧರ ಪಟ್ಟಿಯಲ್ಲಿ ಖೋಟಾ ಹೆಸರುಗಳೂ ದಾಖಲಾಗಿರುವುದನ್ನು ನೆನೆದರೆ, ಸಾವಿರ ವರ್ಷಗಳಾಚೆಯ ನಿಷ್ಕಲಂಕ ಇತಿಹಾಸ ಬರೆಯಬೇಕೆನ್ನುವವನಿಗೆ ಈ ಸಂದೇಹ ಕಾಡುವುದು ಸಹಜ. ಎಂದೋ ಜರುಗಿದ ಘಟನೆ, ಎಂದೋ ಅಸ್ತಿತ್ವದಲ್ಲಿದ್ದ ವ್ಯವಸ್ಥೆ ಮತ್ತು ಇವುಗಳ ಹಿಂದಿರುವ ಕಾರಣ -ಇತ್ಯಾದಿಗಳನ್ನು ಕಂಡುಹಿಡಿಯುವುದು ಅಷ್ಟು ಸರಳ ಕೆಲಸವಲ್ಲ. ಕರ್ನಾಟಕದಂಥ ಬಹುಸಂಸ್ಕೃತಿಯ ನಾಡಿನಲ್ಲಿ ಇದು ಇನ್ನೂ ಕಷ್ಟದ ಕೆಲಸ. ಶಿಷ್ಟರ ಆರ್ಯೀಕರಣ, ಜಾನಪದರ ಐತಿಹ್ಯೀಕರಣ ರೂಪದ ಆಕರಸಾಮಗ್ರಿಯಿಂದಾಗಿ, ಇಲ್ಲಿ ವಿದ್ವಾಂಸರ ಅಪವ್ಯಾಖ್ಯಾನೀಕರಣಕ್ಕೆ ವಿಪುಲ ಅವಕಾಶವಿದೆ. ಈ ಅಪವ್ಯಾಖ್ಯಾನಕ್ಕೆ ಇತಿಹಾಸ ಬರೆಯುವವನ ಆರ್ಯಧೋರಣೆ ಇಲ್ಲವೆ ಆಂಗ್ಲಧೋರಣೆ ಸೇರಿದರಂತೂ ನಿಜದ ನೆಲೆ ಕೈಗೆ ಸಿಗದೇ ಹೋಗುತ್ತದೆ. ಈ ಸೂತಕಗಳಿಂದ ಮುಕ್ತವಾಗಿ ಇತಿಹಾಸ ಬರೆಯಬೇಕೆನ್ನುವವನು, ಆಕರಸಾಮಗ್ರಿ ಏನೇ ಹೇಳಲಿ, ಕರ್ನಾಟಕ ಯಾವ ಯಾವ ಸಂಸ್ಕೃತಿಗಳಲ್ಲಿ ಹಾಯ್ದುಬಂದಿದೆ -ಎಂಬ ಸ್ಪಷ್ಟ ತಿಳಿವಳಿಕೆಯನ್ನು ಹಿನ್ನೆಲೆಯಾಗಿಟ್ಟುಕೊಳ್ಳಬೇಕಾಗುತ್ತದೆ.

ಯಾವುದೇ ಸಂಸ್ಕೃತಿ ಶುದ್ಧರೂಪದಲ್ಲಿ ಉಳಿದು ಬಂದಿರುವುದಿಲ್ಲ; ಬರುವುದಿಲ್ಲ. ಮಿಶ್ರಣ ಅದರ ಅನಿವಾರ್ಯ ಪ್ರಕ್ರಿಯೆ. ಆದರೆ ಇಲ್ಲಿ ಸಾಮಾಜಿಕರ ಸಹಜಮಿಶ್ರಣ, ಪಂಡಿತರ ಆರೋಪಿತಮಿಶ್ರಣ - ಎಂಬ ಎರಡು ಪ್ರಕ್ರಿಯೆಗಳು ಜರುಗುತ್ತ ಬಂದಿರುತ್ತದೆ. ಕರ್ನಾಟಕವನ್ನೇ ಕುರಿತು ಹೇಳುವುದಾದರೆ, ಇದು ಮೂಲತಃ ದ್ರಾವಿಡ ನೆಲೆ; ಇಲ್ಲಿಯದು ಮೂಲತಃ ದ್ರಾವಿಡ ಸಂಸ್ಕೃತಿ. ಇದರ ಮೇಲೆ ಪ್ರಧಾನವಾಗಿ ಮೊದಲು ಆರ್ಯ ಸಂಸ್ಕೃತಿ, ಬಳಿಕ ಇಸ್ಲಾಂ ಸಂಸ್ಕೃತಿಗಳು ಸೇರಿಕೊಂಡಿದ್ದು, ಇತ್ತೀಚೆ ಆಂಗ್ಲಸಂಸ್ಕೃತಿ ಸೇರಿಕೊಳ್ಳುತ್ತಲಿದೆ. ಇಪ್ಪತ್ತನೆಯ ಶತಮಾನದಲ್ಲಿ ನಿಂತು ಇತಿಹಾಸ ಬರೆಯುವ ನಾವು ತೀರ ಇತ್ತೀಚಿನದೂ, ಒಡೆದು ಕಾಣುವಂಥದೂ ಆಗಿರುವ ಆಂಗ್ಲಸಂಸ್ಕೃತಿಯನ್ನು ಗುರುತಿಸಬಹುದು. ವಿಭಿನ್ನ ಲಕ್ಷಣಗಳನ್ನೊಳಗೊಂಡ ಇಸ್ಲಾಂ ಸಂಸ್ಕೃತಿಯನ್ನೂ ಗುರುತಿಸಬಹುದು. ಈಮಾತು ಆರ್ಯಸಂಸ್ಕೃತಿಯನ್ನು ಕುರಿತು ಹೇಳಲು ಬರುವಂತಿಲ್ಲ. ಅದು ಕಾಲದ ಸುದೀರ್ಘತೆ, ಪ್ರಭಾವದ ಗಾಢತೆ ದೃಷ್ಟಿಯಿಂದ ದ್ರಾವಿಡಸಂಸ್ಕೃತಿಯಲ್ಲಿ ಆಳವಾಗಿ ಕರಗಿಹೋಗಿದೆ. ಈ ಮಿಶ್ರಣವನ್ನು ಬೇರ್ಪಡಿಸಿ ನೋಡದೆ, ಇದೆಲ್ಲ ಆರ್ಯಮೂಲವೆಂದೇ ಪರಿಗಣಿಸಿ, ಇಲ್ಲವೆ ಆರ್ಯಚಿಂತನೆಗಳನ್ನು ಬೆರೆಸಿ, ಕೆಲವೊಮ್ಮೆ

ಇತಿಹಾಸ ಬರೆಯುತ್ತ ಬಂದಿದ್ದೇವೆ. ಈ ದೋಷದಿಂದ ನಾವು ಮುಕ್ತರಾಗದ ಹೊರತು ಕರ್ನಾಟಕದ ಶುದ್ಧ ಇತಿಹಾಸ ನಮಗೆ ಕಾಣಿಸುವುದಿಲ್ಲ. ಯಾವುದೇ ಒಂದು ವಿಷಯವನ್ನು ಕೈಗೆತ್ತಿಕೊಂಡರೆ, ಅದರ ಮೂಲಮಾತೃಕೆ (Archetype) ದ್ರಾವಿಡವೋ? ಆರ್ಯವೋ? ದ್ರಾವಿಡ ಮಾತೃಕೆಯಾಗಿದ್ದರೆ ಯಾವ ಹಂತದಲ್ಲಿ ಅದು ಆರ್ಯಪ್ರಭಾವಕ್ಕೆ ಗುರಿಯಾಯಿತು? ಆ ಪ್ರಭಾವ ಸಹಜವೋ? ಆರೋಪಿತವೋ? ಇತ್ಯಾದಿ ಪ್ರಶ್ನೆ ಹಾಕಿಕೊಂಡು, ಇತಿಹಾಸ ಕಟ್ಟುತ್ತ ಬರುವ ಕ್ರಮವನ್ನು ನಾವು ಅನುಸರಿಸಬೇಕಾಗಿದೆ. ಇತಿಹಾಸದಲ್ಲಿ ಇದನ್ನು 'ದ್ರಾವಿಡವಾದ' ಅಥವಾ 'ದೇಶೀವಾದ'ವೆಂದು ಕರೆಯಬಹುದು. ಈ ದ್ರಾವಿಡಚಿಂತನಕ್ರಮದ ಮೂಲಕ ಕರ್ನಾಟಕದ ಇತಿಹಾಸ ಬರೆಯುವುದು ಇತಿಹಾಸಕಾರನ ಕರ್ತವ್ಯವೂ ಹೌದು, ಅವನಿಗೆ ಸವಾಲವೂ ಹೌದು.

"ಕನ್ನಡವು ಸಂಸ್ಕೃತಜನ್ಯ"ವೆಂದೇ ನಂಬುತ್ತಲಿದ್ದ ಕಾಲದಲ್ಲಿ ಕಾಲ್ಡವೆಲ್ ಅವರು "ದ್ರಾವಿಡಮೂಲಸಿದ್ಧಾಂತ"ವನ್ನು ಸ್ಥಾಪಿಸಿ, ನಮ್ಮ ಕಣ್ಣು ತೆರೆಸಿದರು. ಇದೇ ರೀತಿ, ಮ್ಯಾಕ್ಸಮುಲ್ಲರ್ ಪ್ರಸಾರಮಾಡಿದ "ಆರ್ಯಮೂಲ ಸಂಸ್ಕೃತಿ ಸಿದ್ಧಾಂತ"ವನ್ನು ಕಣ್ಣುಮುಚ್ಚಿ ಒಪ್ಪಿಕೊಳ್ಳದೆ, "ದ್ರಾವಿಡಮೂಲ ಸಂಸ್ಕೃತಿ ಸಿದ್ಧಾಂತ"ವನ್ನು ಕಾಲ್ಡವೆಲ್‌ನಂತೆ ನಾವು ಸ್ಥಾಪಿಸಬೇಕಾಗಿದೆ. ಸ್ಥಳೀಯ ನಿಜವಾದ ಸಂಸ್ಕೃತಿಯ ಹುಡುಕಾಟ ನಡೆಯಬೇಕಾಗಿದೆ. ಕನ್ನಡ ಸಂಸ್ಕೃತಿಯ ಓರಿಜಿನಾಲಿಟಿ ಏನು? ಅದು ಬಣ್ಣ ಬದಲಿಸುತ್ತ ಬಂದ ಬಗೆಗಳಾವವು? ಹೀಗೆ ಪ್ರಶ್ನೆಹಾಕಿಕೊಂಡು ಬರೆಯದಿದ್ದರೆ, ಕರ್ನಾಟಕದ ಇತಿಹಾಸಕ್ಕೆ ನಾವು ಅನ್ಯಾಯ ಮಾಡಿದಂತಾಗುತ್ತದೆ. ಈ ದೃಷ್ಟಿಕೋನವಿಲ್ಲದೆ ಬರೆದುದು ಇತಿಹಾಸವಲ್ಲ, ಇತಿಹಾಸದ ವ್ಯಂಗ್ಯವೆನಿಸುತ್ತದೆ. ಸವದತ್ತಿ ಎಲ್ಲಮ್ಮನ ಇತಿಹಾಸವನ್ನು ರೇಣುಕೆ-ಜಮದಗ್ನಿ ಮೂಲದಿಂದ ಹೇಳುವುದು, ಮೈಲಾರನ ಇತಿಹಾಸವನ್ನು ಮಣಿಮಲ್ಲಾಸುರವಧೆಯಿಂದ ನಿರೂಪಿಸುವುದು, ಶಾಸನಗಳು ಚಾಲುಕ್ಯರ ಮೂಲವನ್ನು ಚುಲಕ (=ಬೊಗಸೆ)ದಿಂದ ಸಾಧಿಸುವುದು, ಹೊಯ್ಸಳರ ಮೂಲವನ್ನು ಹೊಯ್+ಸಳ ಎಂಬ ಜೈನ ಕಲ್ಪಿತ ಕಥೆಯಿಂದ ಪ್ರತಿಪಾದಿಸುವುದು, ಇವೆಲ್ಲ ಇತಿಹಾಸದ ವ್ಯಂಗ್ಯಗಳೇ ಸರಿ. ಇಂಥ ಸಂದರ್ಭಗಳಲ್ಲಿ "ದೇಶೀವಾದ"ವೇ ಪ್ರಯೋಜಕವೆನಿಸುತ್ತದೆ. ಈ ದೃಷ್ಟಿಕೋನದವರು ಮಾತ್ರ ಮಲಿನವಾದ ಇತಿಹಾಸವನ್ನು ಶುದ್ಧೀಕರಿಸುತ್ತಾರೆ. ಅಂಥವರಿಗೆ ಮಾತ್ರ ಕವಿ ಹರಿಹರದೇವನ ನಿಜನಾಮ ಹರಿಯಲದೇವ, ಮದಕರಿನಾಯಕನ ನಿಜನಾಮ ಮೆದಕೆರೆನಾಯಕ ಇತ್ಯಾದಿ ಸತ್ಯಗಳು ಕಾಣಿಸುತ್ತವೆ. ವೀರಶೈವ ಗೋತ್ರ-ಸೂತ್ರ ಸಂದರ್ಭದಲ್ಲಿ ಕೇಳಿಬರುವ 'ಮಳೆಯ ಸೂತ್ರ'ವನ್ನು ಆರ್ಯಚಿಂತನಕ್ರಮದವರು 'ವೃಷ್ಟಿಸೂತ್ರ'ವೆಂದು ಪ್ರತಿಪಾದಿಸಿದರೆ, ದ್ರಾವಿಡಚಿಂತನಕ್ರಮದವರು "ಮಲೆಯ ಸೂತ್ರ" ಅಂದರೆ ಕಾಳಾಮುಖರ "ಪರ್ವತಾವಳಿ" ಎಂದು ಪ್ರತಿಪಾದಿಸುವುದು, ಈ ವಿಭಿನ್ನ ಚಿಂತನಕ್ರಮಗಳಿಗೆ ನಿದರ್ಶನವೆನಿಸಿದೆ.

ಆರ್ಯದೃಷ್ಟಿಕೋನದಂತೆ ಇತ್ತೀಚೆ ಆಂಗ್ಲದೃಷ್ಟಿಕೋನವೂ ಕೆಲವೊಮ್ಮೆ ನಮ್ಮನ್ನು ದಾರಿತಪ್ಪಿಸುತ್ತಲಿದೆ. ಪ್ರಾಚೀನ ಆಡಳಿತಕ್ರಮವನ್ನೇ ಕುರಿತು ಹೇಳುವುದಾದರೆ, ಆರ್ಯಚಿಂತನ ಕ್ರಮದವರು ಕೌಟಿಲ್ಯನ ಅರ್ಥಶಾಸ್ತ್ರವನ್ನು ಆದರ್ಶವಾಗಿಟ್ಟುಕೊಳ್ಳುವಂತೆ, ಆಂಗ್ಲರ ದೃಷ್ಟಿಕೋನದವರು ಪ್ರಚಲಿತ ಇಂಗ್ಲಿಷ್ ಆಡಳಿತ ಪದ್ಧತಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳುತ್ತಾರೆ. ಅಂಥವರು ಸಾಮಂತ, ಮಾಂಡಲಿಕ ಶಬ್ದಗಳಲ್ಲಿರುವ ವ್ಯತ್ಯಾಸವನ್ನು ಗಮನಿಸದೆ, "Feudatory" ಎಂಬ ಒಂದೇ ಇಂಗ್ಲೀಷ್ ಪದ ಬಳಸುವುದು, ಇದಕ್ಕೆ ಉದಾಹರಣೆಯಾಗಿದೆ. ಇಂಥ ಸಂದರ್ಭಗಳಲ್ಲಿ ಸತ್ಯ ಒಂದೆಡೆ ಉಳಿದು, ಅಸತ್ಯವೇ ಬರಹದಲ್ಲಿ ಅವತರಿಸುತ್ತದೆ.

ಹೀಗೆ 'ಆರ್ಯವಾದ', 'ಆಂಗ್ಲವಾದ'ಗಳ ಅತಿರೇಕಗಳನ್ನು ಕಡಿಮೆಮಾಡಿಕೊಳ್ಳುವುದು ಅವಶ್ಯವಾಗಿದ್ದರೂ, ಹೀಗೆ ಕಡಿಮೆ ಮಾಡಿಕೊಳ್ಳುವ ಭರದಲ್ಲಿ 'ದ್ರಾವಿಡವಾದ'ವೆನ್ನುವುದು ಇನ್ನೊಂದು ಅತಿರೇಖವಾಗಬಾರದು; "ಕರ್ನಾಟಕ ಸತ್ಯ"ವನ್ನು ಅನ್ವೇಷಿಸುವ ಒಂದು ಪ್ರಾಮಾಣಿಕ ಸಾಧನವಾಗಬೇಕು.

ನಮ್ಮ ದೇಶದ ಇತಿಹಾಸ ರಚಿಸುವಲ್ಲಿ "ಭಾರತೀಯ ದೃಷ್ಟಿಕೋನ" ಇರಬೇಕೆಂದು ಬಯಸುವವರಿಗೆ, ನಮ್ಮ ರಾಜ್ಯದ ಇತಿಹಾಸ ರಚಿಸುವಲ್ಲಿ "ದ್ರಾವಿಡ ದೃಷ್ಟಿಕೋನ"ವಿರಬೇಕೆಂದು ಹೇಳುವುದು ಅನಿವಾರ್ಯವೆನಿಸುತ್ತದೆ.

ಈ "ದ್ರಾವಿಡವಾದ"ದ ಸಾರ್ಥಕತೆಗೆ ಕೇವಲ ಶಾಸನ, ಪುರಾತತ್ವ ಮೊದಲಾದ ಶಿಷ್ಟ ಆಕರಸಾಮಗ್ರಿಯನ್ನವಲಂಬಿಸದೆ, ಜಾನಪದ ಸಾಮಗ್ರಿಯನ್ನೂ ಬಳಸಿಕೊಳ್ಳಬೇಕಾಗುತ್ತದೆ. ಏಕೆಂದರೆ, ಶಾಸನಗಳು ಮುಖ್ಯವಾಗಿ ಯಜಮಾನಪರ ಸಂಸ್ಕೃತಿಯನ್ನು ದಾಖಲಿಸುತ್ತಬಂದಿವೆ. ಇಲ್ಲಿ ರಾಜಶಾಹಿಯ ಯುದ್ಧಶಾಸನ, ಪುರೋಹಿತಶಾಹಿಯ ದಾನಶಾಸನಗಳೇ ತುಂಬಿಕೊಂಡಿವೆ. ಇವುಗಳನ್ನು ಬಳಸಿ ಯಜಮಾನ ಸಂಸ್ಕೃತಿಯ ದೊಡ್ಡ ರಾಜಮನೆತನಗಳ ಇತಿಹಾಸವನ್ನು ಬರೆಯುತ್ತ ಬಂದ ನಾವು. ಈ ಸಂಸ್ಕೃತಿಯ ಸಣ್ಣ ಅರಸು ಮನೆತನಗಳ ಅಧ್ಯಯನದ ಕಡೆಗೆ ಗಮನ ಕೊಟ್ಟಿಲ್ಲ. ಇತ್ತೀಚೆ ಸ್ವಾದಿ, ಕೆಳದಿ, ಕಳಲೆ, ಹಾಗಲವಾಡಿ, ಹದಿನಾಡು, ಸುಗಟೂರು, ಯಲಹಂಕ ಪಾಳೆಯಗಾರರನ್ನು ಕುರಿತು ಅಲ್ಲಲ್ಲಿ ವಿಚಾರಸಂಕಿರಣಗಳು ಜರುಗಿ, ಕೆಲವು ಪುಸ್ತಕಗಳು ಪ್ರಕಟವಾಗಿದೆ. ಬಿಜ್ಜಾವರ, ಬೀಳಗಿ, ಹರಪನಹಳ್ಳಿ, ಉಮ್ಮತ್ತೂರು ಪಾಳೆಯಗಾರರನ್ನು ಕುರಿತು ವಿಚಾರಸಂಕಿರಣಗಳ ವ್ಯವಸ್ಥೆ ಮುಂದುವರಿದಿದೆ. ಇದು ಇನ್ನೂ ಮುಂದುವರಿದು ನಾಳ್ಗಾವುಂಡ-ಗಾವುಂಡ ಇತ್ಯಾದಿ ಅಧಿಕಾರಿಗಳ, ಇವರ ಸೀಮೆಗಳಲ್ಲಿ ಬದುಕುತ್ತಲಿದ್ದ ಜನಸಾಮಾನ್ಯರ, ಇವರ ಆಚೆಗೆ ಹರಡಿಕೊಂಡಿರುವ ಉಪಸಂಸ್ಕೃತಿಗಳ ಆಕರಸಂಗ್ರಹ-ಅಧ್ಯಯನ ನಡೆಯಬೇಕಾಗಿದೆ. ಹೀಗೆ ಜೀವನದ ಎಲ್ಲ ಹಂತಗಳ ಸಮಗ್ರ ಆಕರಸಾಮಗ್ರಿಯನ್ನು ಬಳಸಿಕೊಂಡರೆ ಮಾತ್ರ, ನಮ್ಮ ಇತಿಹಾಸಕ್ಕೆ ಸಮಗ್ರತೆ ಪ್ರಾಪ್ತವಾಗುತ್ತದೆ. ಆದರೆ, ಇದುವರೆಗೆ ಶಿಷ್ಟ ಆಕರಗಳೊಂದಿಗೆ ವ್ಯವಹರಿಸಿದ ವಿದ್ವಾಂಸರಿಗೆ ಈ ದೇಶೀ ಆಕರಗಳು ಸರಿಯಾಗಿ ಅರ್ಥವಾಗುವುದು ಕಠಿಣ. ಹೊಸಬಗೆಯ ತರಬೇತಿ, ವಿಶಿಷ್ಟ ಮಾನಸಿಕ ಸಿದ್ಧತೆಯುಳ್ಳ ಮೌಖಿಕ ಇತಿಹಾಸಕಾರರನ್ನು (Oral Historians) ಅದು ಬಯಸುತ್ತದೆ. ಹೀಗೆ ಶಿಷ್ಟ ಮತ್ತು ಜಾನಪದ ಈ ಎರಡೂ ಪ್ರಜ್ಞೆಗಳ ಹಿನ್ನೆಲೆಯಲ್ಲಿ ರೂಪಗೊಂಡ ಇತಿಹಾಸಶಾಸ್ತ್ರದ (Historiography) ಹೊಸ 'ಪರಿಕಲ್ಪನೆ'ಯ ಬೆಳಕಿನಲ್ಲಿ 'ಕನ್ನಡ ಸಂಸ್ಕೃತಿ ಚರಿತ್ರೆ'ಯನ್ನು ನಾವು ಬರೆಯಬೇಕಾಗಿದೆ. ಈವರೆಗೆ ಸಾಹಿತ್ಯ ಚರಿತ್ರೆ, ರಾಜಕೀಯ ಚರಿತ್ರೆ, ಧಾರ್ಮಿಕ ಚರಿತ್ರೆಗಳನ್ನು ಬರೆಯುತ್ತ ಬಂದ ನಮಗೆ, ಕರ್ನಾಟಕದ ಸಮಗ್ರ "ಸಂಸ್ಕೃತಿ ಚರಿತ್ರೆ" ಬರೆಯುವುದು ಒಂದು ಆಹ್ವಾನವಾಗಿ ಉಳಿದಿದೆ.

'ಸಂಸ್ಕೃತಿ'ಯೆನ್ನುವುದು ಒಂದು ಜನವರ್ಗದವರಿಂದ 'ಸಾಮೂಹಿಕ ಸಮ್ಮತಿ' ಪಡೆದು, ಆಚರಣೆಯಲ್ಲಿರುವ ಜೀವನಪದ್ಧತಿಯಾಗಿದೆ. ಕನ್ನಡಿಗರವೇ ಆದ ಇಂಥ ವಿಶಿಷ್ಟ ಜೀವನಪದ್ಧತಿಗಳಾವುವು? ಬದಲಾಗದೆ ಬಂದ, ಬದಲಾಗುತ್ತ ಬಂದ ಅವುಗಳ ಸ್ವಭಾವ, ಸ್ವರೂಪಗಳಾವುವು? ಅವು ಎಷ್ಟರ ಮಟ್ಟಿಗೆ ಜನಪರ? ಎಷ್ಟರ ಮಟ್ಟಿಗೆ ಜನವಿರೋಧಿ? ಅವು ಹಾಗೆ ರೂಪಗೊಳ್ಳಲು ಇರುವ ಒತ್ತಡಗಳಾವುವು? ಸಮಾಜದ ಮೇಲೆ ಆದ ಅವುಗಳ ಪರಿಣಾಮವೇನು? ಇತ್ಯಾದಿ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತ, 'ದ್ರಾವಿಡವಾದ'ದ ನೆಲೆಯಲ್ಲಿ ನಿಂತು, "ಕರ್ನಾಟಕ ಸಂಸ್ಕೃತಿ ಚರಿತ್ರೆ"ಯ ಬೃಹದ್ಗ್ರಂಥವನ್ನು ರಚಿಸಬೇಕಾಗಿದೆ. ಈ ಕಾರ್ಯ ಸಾಹಿತ್ಯ ಮತ್ತು ಇತಿಹಾಸ ವಿಭಾಗಗಳ ಸಂಯುಕ್ತ ಜವಾಬ್ದಾರಿಯಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಮಿಕ್ಕ ವಿಭಾಗಗಳಿಗಿಂತ ಈ ವಿಭಾಗಗಳ ಹೊಣೆ ವಿಶಿಷ್ಟವಾಗಿದೆ. ಇವು ಯಾವುದೋ ಒಂದು ಜ್ಞಾನಶೋಧದ ವಿಭಾಗಗಳಲ್ಲ, ನೇರವಾಗಿ "ಕರ್ನಾಟಕಜ್ಞಾನ" ಶೋಧದ ವಿಭಾಗಗಳು. ಇವುಗಳಲ್ಲಿ ಕನ್ನಡ ವಿಭಾಗಗಳು ಶಾಸನೋಕ್ತ ಆಡಳಿತ, ವಾಣಿಜ್ಯ, ಧರ್ಮ, ಮಹಿಳಾಸಮಾಜ, ವೀರಮರಣ, ಮಾಸ್ತಿಮರಣ, ಸಮಾಧಿಮರಣ ಇತ್ಯಾದಿಗಳನ್ನು ಕುರಿತು ಈ ವರೆಗೆ ಮಾಡಿದ ಅಧ್ಯಯನ ತುಂಬ ಮೌಲಿಕವೆನಿಸಿದೆ. ಇತ್ತೀಚೆ ಈ ಅಭ್ಯಾಸ ಇಳಿಮುಖವಾಗುತ್ತಿರುವುದನ್ನು ನಾವು ತಡೆಗಟ್ಟಬೇಕಾಗಿದೆ. ಇದೇ ರೀತಿ ಇತಿಹಾಸದವರೂ ಸಾಹಿತ್ಯವನ್ನು ಬಳಸಿಕೊಂಡು, ಸಮಾಧಿಮರಣ ಇತ್ಯಾದಿಗಳನ್ನು ಕುರಿತು ಅಧ್ಯಯನ ಮಾಡುತ್ತಲಿದ್ದರೂ ಈ ಕೆಲಸ ಏರುಮುಖಗೊಳ್ಳಬೇಕಾಗಿದೆ. ಇಂಥ ಅನೇಕ ಬಗೆಯ

ಅಧ್ಯಯನಗಳನ್ನು ಬಳಸಿಕೊಂಡು, ವಿದ್ವಾಂಸರು ಆದಷ್ಟು ಬೇಗ 'ಕರ್ನಾಟಕ ಸಂಸ್ಕೃತಿ ಚರಿತ್ರೆ'ಯನ್ನು ಬರೆಯಲೆಂದು ಹಾರೈಸುತ್ತೇನೆ.

ಕೊನೆಯದಾಗಿ, 'ಸಂಡೂರು' ಎಂದಾಕ್ಷಣ, ನಮಗೆ ಏಕಕಾಲಕ್ಕೆ ಅನೇಕ ವಿಷಯಗಳು ನೆನಪಾಗುತ್ತವೆ. ಉದ್ದಿಮೆದಾರರಿಗೆ ಅದಿರು ನೆನಪಾಗುತ್ತದೆ; ಧಾರ್ಮಿಕರಿಗೆ ಕುಮಾರಸ್ವಾಮಿ ನೆನಪಾಗುತ್ತಾನೆ; ಇತಿಹಾಸಕಾರರಿಗೆ ಘೋರ್ಪಡೆ ರಾಜಮನೆತನ ನೆನಪಾಗುತ್ತದೆ. ಇದೇ ರೀತಿ ಬಳ್ಳಾರಿ ಜಿಲ್ಲೆ ಎಂದಾಕ್ಷಣ, ಅನೇಕ ವಿಷಯಗಳು ಸ್ಮರಣೆಗೆ ಬರುತ್ತವೆ. ನಡುಗನ್ನಡ ಸಾಹಿತ್ಯದಲ್ಲಿ ಹೊಸ ಹಾದಿ ತೆರೆದವರು, ಈ ಜಿಲ್ಲೆಯ ಹರಿಹರ-ರಾಘವಾಂಕರು. ಅದನ್ನು ಪಟ್ಟಹಿಡಿದು ಮುಂದುವರಿಸಿಕೊಂಡು ಹೋದವರು, ಪ್ರೌಢದೇವರಾಯನ ಕಾಲದ ವೀರಶೈವ ವಿರಕ್ತರು ಮತ್ತು ಕೃಷ್ಣದೇವಾರಯನ ಕಾಲದ ವೈಷ್ಣವ ಕೀರ್ತನಕಾರರು. ಮಧ್ಯಕಾಲೀನ ಕರ್ನಾಟಕದ ರಾಜಕೀಯ ನೆಲೆಯಲ್ಲಿ ಕಂಪಿಲ ಅರಸುಮನೆತನ ಒಂದು ಬೆಳ್ಳಿಚುಕ್ಕಿ, ತರುವಾಯ ಕರ್ನಾಟಕದ ರಾಜಕೀಯ ಚಟುವಟಿಕೆಯನ್ನು ನಿಯಂತ್ರಿಸಿದವರು, ವಿಜಯನಗರದ ಅರಸರು ಮತ್ತು ಇಲ್ಲಿಂದಲೇ ಹರಡಿಹೋದ ಪಾಳೆಯಗಾರರು. ಧಾರ್ಮಿಕಕ್ಕೆ ಬಂದರೆ ವೀರಶೈವ ವಿರಕ್ತ ಆಂದೋಲನ, ಮಾಧ್ವ ದಾಸ ಆಂದೋಲನ ಹುಟ್ಟಿದ್ದು, ಬೆಳೆದದ್ದು, ಇದೇ ಜಿಲ್ಲೆಯಲ್ಲಿ, ಶಿಲ್ಪದಲ್ಲಿಯೂ ವಿಜಯನಗರಶೈಲಿ ಅವಿಷ್ಕಾರಗೊಂಡದ್ದು, ಇದೇ ಜಿಲ್ಲೆಯಲ್ಲಿ, ಹೀಗೆ ಮಧ್ಯಕಾಲೀನ ಕರ್ನಾಟಕದ ಎಲ್ಲ ಮುಖಗಳ ಇತಿಹಾಸವೆಂದರೆ ಬಳ್ಳಾರಿ ಜಿಲ್ಲೆಯ ಇತಿಹಾಸವೇ ಆಗಿದೆ. ಇಂಥ ಇತಿಹಾಸ ಪರಂಪರೆಯ ನೆಲದಲ್ಲಿ, ಇತಿಹಾಸಪ್ರಸಿದ್ಧ ರಾಜಮನೆತನದ ಮಾನ್ಯ ಶ್ರೀ. ಎಂ. ವಾಯ್. ಘೋರ್ಷಡೆಯವರ ನೇತೃತ್ವದಲ್ಲಿ ಈ "ಇತಿಹಾಸ ಸಮ್ಮೇಲನ" ಜರುಗುತ್ತಲಿದೆ. ಇಂಥ ಐತಿಹಾಸಿಕ ಸಮ್ಮೇಲನದ ಅಧ್ಯಕ್ಷತೆಯ ಅವಕಾಶವನ್ನು, ಸಾಹಿತ್ಯ-ಇತಿಹಾಸಗಳ ಅಭ್ಯಾಸಿಯಾದ ನನಗೆ ಒದಗಿಸಿಕೊಟ್ಟ ನಿಮಗೆಲ್ಲ ವಂದನೆಗಳು.

ಕರ್ನಾಟಕ ಇತಿಹಾಸ ಅಕಾಡೆಮಿ ಸಂಡೂರಿನಲ್ಲಿ ಹಮ್ಮಿಕೊಂಡಿದ್ದ ೮ನೆಯ ಇತಿಹಾಸ ಸಮ್ಮೇಲನದ ಅಧ್ಯಕ್ಷೀಯ ಭಾಷಣ (೮-೭-೧೯೯೪)

ಆಕರ : ಮಾರ್ಗ ಸಂಪುಟ-೬

■■

೫

PLACE NAME CONFERENCE : PRESIDENTIAL ADDRESS

1997

Dear onomastic friends,

When I was a student I used to travel by bus from Kalaburgi to Bijapur. En route, place names like Kalburgi, Gogi, Jevaragi, Nedalagi, Jeratagi, Moratagi, Gabbasavalagi, sindagi, Chikkasindagi, Hipparagi, Honnutagi, Kumatagi, Kavalagi aroused my curiosity. From then on, it became a habit with me to enquire with co-travellers about the origin of every place name I came across.

Then I became a teacher. And culture became the focal area of my studies. Literature, epigraphs and folklore were my source materials to understand culture. Afterwards, I began to use names as source material as I found them also useful. Thus, my curiosity transformed into habit and I was absorbed in the serious study of onomastics.

In the last few years, I have written articles and delivered lectures on names and came out with a monograph entitled Kannada Onomastics. I have also been instrumental in getting onomastics included in the Kannada Post Graduate syllabus. All these humble efforts of mine may have been the reason for my being elected the President of the 17th All India Place Name conference, which I consider a great honour and privilege. My heartfelt thanks to all the office bearers of the All India Place Names Soceity in general and in particular to Dr. D. Jaware Gowda, a pioneer in the field and Dr. K.V. Ramesh, the well-known epigraphist.

Thanjavur, the erstwhile capital of Colas, has been a cultural capital of Tamil Nadu for years. Brihadhisvara Temple, Sarasvati Mahal Library and Tamil University stand as three milestones in the cultural history of Tamil Nadu. I congratulate the Tamil University and its Department of Epigraphy for hosting the conference.

THE PLACE NAMES SOCIETY OF INDIA

Onomatics which entered India in the 19th century was pursued here and there without any co-ordination. In this context, The Place Names Society of India came into existence in 1978 as a common platform. Organizing conferences, publishing a journal, arranging special lectures etc. have been the regular activities of this society. I commend all the scholars who have taken pains to arrange all these activities.,

Sangha Sakti Kalovyuge is a well-known saying. Keeping this in mind, the activities of the society in general and onomastics in particular have to be developed further on the following lines:

1. As the study of place names was the primary concern of the earlier scholars, the society might have been named The Place Names Society of India. Now, times have changed. Scholars are studying not only place names but also personal names, family names, pet's names etc. Hence, circumstances demand that the Society had better be renamed All India Onomastic Society.
2. Only scholars well-versed in the respective languages can do justice to the interpretation of names. It is essential for the society to have branches in all the states of India with the active participation of local scholars. All the branches should hold regional conference and the apex body should conduct All India Conferences. This two-tier arrangement will give enough opportunity for more and more scholars to involve themselves in the activities of the Society. This type of regional organizations will make for the development of regional methodological, onomastic refinements.

ONOMASTIC STUDIES IN INDIA

Though the study of names has been going on for decades in India, its quantum and momentum are not up to the mark. The observation of Prof. G.N. Reddy in his Survey of Indian Place Names : A case Study is worth quoting:

"Though studies in Indian toponomy have made some progress in recent years, the picture is not as bright as it should be, when we look at each state or linguistic region separately. On the basis of the bibliographical information we have, the number of published papers and articles in English on the place names of Tamil Nadu and Karnataka is not more than 40 each. Next comes Andhra Pradesh with about 30 articles. Kerala takes the next place with about 20 articles and it is followed by Maharashtra and Gujarat with about 10 articles for each region. On the place names of Bengal and Assam we have less than 10 articles for each. It is indeed surprising that we don't find more than a dozen articles on the place names of the six Hindi - speaking states which constitute a major area of our country. We hardly find articles on the place names of Orissa, the North Eastern States other than Assam, Punbjab, Jammu and Kashmir, Sikkim and the Union Territories. But most interestingly, we find about 20 articles published on the place names of Jaffna, a Tamil-speaking region in Srilanka. We have a score of articles of general nature with an all-India interest on place name studies and about a dozen articles mainly based on epigraphical sources.
.. . . . The picture of Indian toponymics as we see today and the progress we have made so far clearly indicate that we are set for greater advancement in Indian place names studies."

To overcome this tardy development, necessary steps have to be taken immediately. Creation of statewise branches of the society, inclusion of onomastics in the P.G. syllabus, conducting workshops and seminars, publishing journals in different languages taking up U.G.C. projects etc. will go a long way.

QUALITY OF INDIAN ONOMASTIC STUDIES

Whatever be the discipline, qualitative, rather than quantitative. development is important. A time has come for Indian Onomasticians to have self-evaluation.

Onomastic studies in India started during the Renaissance period. The schools of those days had a romantic, rather than a scientific outlook. So, they viewed the names in the same way, A Kannada poet like Masti Venkatesh Iyangar wrote a poem incorporating village names romantically. Even a scholar like Sham. Ba. Joshi, considered a poineer in Kannada Onomastics, mistook

the village name Malligavada as a combination of mallige (jasmine)+vada (dwelling), whereas its true derivation is malliga (a name of a person) + vada.

Apart from having a romantic outlook, our scholars had a soft corner for puranic and folk interpretations. Because of these factors, our onomastic studies strayed from a scientific approach.

It is heartening to find an awakening among scholars to have a systematic approach to the multidimensional onomastic studies. However, drawbacks like selection of wrong sources, wrong splitting of the components of names, wrong semantic interpretation and lack of interdisciplinary knowledge are causing a lot of injustice to this field. For example, the personal name Puttegauda is wrongly derived as pusta (strong)+gauda (headman) instead of the true derivation of putta (small)+gauda, because of over enthusiasm for Sanskrit origin. In the same way, the place name Golasangi is wrongly split as golasa (chain)+angi (shirt) whereas its true splitup is golasans (Golasa's)+gi (place). Such mistake are committed not by ordinary persons but by present day well-known scholars in their so-called authoritative books on onomastics. This underlines an urgent need for qualitative improvement in onomastic studies.

SCIENTIFIC METHODOLOGY

The data for onomastic comprises place names, personal names, family names etc. The study has to have a three-pronged approach:

1. Morphological study
2. Semantic study
3. Cultural study

Morphological Study :

This study includes (a) the collection of current names, (b) identification of original forms of those names and (c) the correct split up of the specifics and the generics.

(a) **Collection of Current Names:** The current spoken as well as written forms of names have to be collected along with their variants and alternatives, if any. The spoken forms have to be collected from common folk and written forms, from literature and official records. Formidable as this task is, it is man-power oriented.

(b) Identification of Original Forms of Names: Here, one has to look for the earliest from available with all the variants of the intermediary stages. Alternative names, too, should be studied likewise. We have to depend upon the speech of rural folk, native literature and, above all, on inscriptions. Here, too, one may find forms created by scholars (sutturu-srotriyuru), forms created by ordinary people (amminabhavi - aminabhavi) and forms translated into Sanskrit (kolivada-kukkutapura). One has to be careful about such misleading forms. If one fails at this stage, all the prospective study will be rendered useless. Real intellectual exercise starts here.

(c) Correct Splitup of the Specific and the Generic: Like the identification of the original form, correct splitup of the names into specifics and generics is equally important. At this stage, the scholar should be aware of the local tradition in naming, linguistic processes in the formation of names typical of the particular language, topography, social structure, religious practices, political history etc. Because of lack of this multidisciplinary approach, most scholars usually fail at this stage. For example, Kesiraja, the celebrated Kannada grammarian, wrongly split the family name bannakara as banna (colour)+kara (sktkri=do) whereas its true derivative, according to me, is banna+ka=bannaka+ar(Hu.Pl)= bannakar>bannakara. If my interpretation is acceptable, then the whole chapter on derivation is Sabdamanidarpana will have to be rewritten. Oftentimes, modern scholars, too, are committing similar mistakes in splitting the names.

Semantic Study:

Like the correct splitting of names, assigning correct meaning to the split parts, too, is important. Scholars usually split the forms in a simple way so that they can give some convincing meaning for the parts. For example, the village name Hulikoti is split into huli(tiger)+koti (fort) and interpreted as tiger fort. But there is neither a fort here nor its remains. There is place called Kurtakoti, nearby which was referred to in the inscription as Kurittakunte. As this kunte (tank) has become koti in course of time, a form like Hulikunte might have become Hulikoti later.

On the whole, scholars of respective languages have to think collectively, work collectively, and provide the following source materials for the furtherance of the studies:

(a) Compilation of a database, preferably in computer, of all the names in current forms and their alternatives.

(b) Compilation of the earlier forms of these names, too, from all sources like literature, inscription.

(c) Identification and authentic listing of the specifics and the generics.

(d) Identification and listing of all the linguistic processes which are found in the course of naming in respect of different languages.

(e) Taking into account of the language - related differences and development of methodological refinements in the languages concerned.

To arrest the ongoing unscientific onomastic studies, it is necessary to prepare the aforementioned reference materials as early as possible.

Cultural Study :

There are lakhs and lakhs of place names, millions of family names and crores of personal names all over the globe. Though superficially they seem to be unrelated, we do find them related deep down. Strictly speaking, there is a form in the name; meaning in the form and culture in the meaning. Just as persons are many, but man is one, names are many but culture is one. We can discover this culture by a rigorous study of the meanings of names and the patterns of their use. I would like to present certain facts on the basis of Kannada names.

In Karnataka there are pairs of names of deites like Mudimallayya - Mallayya, Mudivirayya - Virayya, Mudisangayya - Sangayya and so on. Where mudi means 'old'. In each pair, the first name refers to the deity in its earlier stage and the second, to the same deity in its recent stage. Here, old Mallayya is Lord Mailara whereas new Mallayya is Lord Mallikarjuna. Both names refer to the same Lord of the Mountain. If Mailara's vehicle is the dog, that of Mallikarjuna is the bull. The dog is the symbol of the hunting culture and the bull, of the agrarian culture. Thus it is clear that Mailara of hunting culture is the old deity and Mallikarjuna of agrarian culture is the new deity. Mudivirayya is Lord Birappa of Kurubas (shepherds) whereas Virayya is Lord Virabhadra of Lingayats. Further evolution of Virabhadra is the Brahmins' Virupaksa. These pairs of names of deities reveal the evolution of gods as evidenced in the culture of Karnataka.

In Karnataka, there was a tradition of having names like Sivappa, Gurappa, Basappa with the appa generic. But in the 12th century, the Lingayat culture influenced the naming pattern and hence, the appa generic was substituted with the linga generic. For example, Sivalinga, Gurulinga, Basalinga. This discloses the philosophy of becoming linga as reflected in names, too.

In North Karnataka the husband does not call his wife by her name. On occasions like marriage he uses the corrupt form the her name (Kamala>Kamali). This tradition seems to be at least a thousand years old. For example, Ranna, an ancient Kannada poet, calls his wives Santi and Jakki in the corrupt forms of those names whereas he calls his mother Abbalabbe and daughter, Attimabbe in the full forms of those names. Very often, we find in Kannada, a tradition of changing the name of the wife at the time of marriage. This tradition, too, seems to he 800 years old. Basaversvara's wife Mayidevi was renamed Nilalocane or Nilambike. King Kaduvetti's wife Cattaladevi was renamed Kadavamahadevi.

There was a tradition among royal families to give an additional name to the prince at the time of coronation. Inscriptions reveal that the Ganga Prince Sivamara, thus got the second name of Saigotta; Santara Prince Taila got Bhujabala Santara; Goggi got Nanni Santara; Vadduga got Vikrama Santara.

It is interesting to note that certain families in Karnataka have retained some names for well over a thousand years. Bhimapayya, the name of the father of the ancient Kannada poet Pampa, is still used in that family at Annigere of Dharwad district. Likewise, Madarasa, the name of Basaversvara's father, is found in that family even today. Names of Jagadeva and Mallibommanna, who killed King Bijjala have survived to this day in the Almela Desmukha family of Sindagi taluk of Bijapur district.

Whatever be the form or meaning, the personal name stands for personality. Which only means personal name=personality. That's why, there are usages like hesaru beleyitu ('name grew' = fame grew) and hesaru halayitu ('name is lost' = reputation, was lost). There is the rare instance in a Kannada inscription wherein one Rudrabhatta pledged for a loan the letter bha of his name and used only Rudrata for his name till he repaid the loan. Such was the high honour personal names were held in.

* * *

Family names, too, do play an important role in understanding culture. Most of them pertain to places, professions and associated objects. This is not only a pan-Indian tradition but also quite ancient, one. The names of dynasties like Cola, Maurya, Gupta, Calukya, Rastrakuta, Pallava are nothing but family names.

The role of place names as a source for family names is enormous. In South Karnataka, the place where the family currently stays is used as family name. Whereas in North Karnataka the place from which the family migrated is used as family name. For example, Rastrakuta kings call themselves Lattalura puravaradhisvara (Lords of Lattalura) even when they were ruling in Malakheda, which bespeaks the tradition they practiced of using the original place they migrated from as family name. Such family names signify the migration of families from different places.

The role of professions as a sources for family names is equally important. We frequently come across in inscriptions gavare, a name of a merchant class. The ancient form of gavare is kavarai. There are two forms, namely gauri and kori derived respectively from gavare and kavarai in modern Kannada. Perhaps, theirs was a profession of trading on the back of kavile (kavilettu, an ox used for transport). It is likely to have changed form as kavile>kavare>gavare. The Gavaresvara temples built by these ancient traders are found even today as Gaurigudi in Karnataka. Gauri of here has nothing to do with goddess Gauri. In this way a link can be established between modern and ancient merchant classes. Many of the family names derived from professions stand for castes today. For example, hugara (florist), samagara (cobbler) etc function as caste names.

There seems to be a marked difference among higher strata and lower strata of society in having family names. If the harijans are referred to as holera representing the whole community, there are any number of sub-communities in each upper class. For example, there are, among Lingayat priestly community, cikkamatha, hirematha, viraktamatha, chaukimatha et al. Which signifies that if the lower class people are for unity, the higher class people are for diversity.

Also, the way in which family names are used deserves serious study. The people of North Karnataka abbreviate the personal name but elaborate the

family name. Take, for instance, my own name of M. M. Kalburgi wherein the first M is an abbreviation of my proper name, Mallappa, and Kalburgi is the family name derived from a place of that name. On the contrary, the people of South Karnataka abbreviate the family name but elaborate the personal name. For instance, D. Javaregauda where D is an abbreviation of the family name Devanahalli derived from a place of that name and Javaregauda is the personal name in full. This practice implies that the people of for North Karnataka are for family unity, but the people of Sourth Karnataka are individuality. In other words, one is traditional; the other, modern. The practice in North Karnataka of using the original place which they migrated from as surname endorses the fact that North Karnatakians love antiquity whereas South Karnatakians love modernity.

If we collect all the family names and study their meaning and pattern of use, it will be virtual study of migration, profession, hierarchy etc.

* * *

Though we find in literature place classified into grama, nagara, kheda, kharvada, madamba, pattana, dronamukha, we are unable to comprehend the exact criteria behind the classification. Though the generics nagara, pura, pattana are interchangeable in modern parlance, they might have been used differently in days of yore. Some Kannada inscriptions reveal that the generic pattana was a place where weekly business fairs used to be held and nagara, a permanent business centre; and pura, a temple-centered colony.

In place names we find three prominent features; nature-based, community-based and person-based. Chronologically, too, they might have come in that order. In coastal Karnataka, most of the place names are nature-based; in North Karnataka, community-based; and in South Karnataka, person-based. This phenomenon can be interpreted as coastal Karnataka retaining the first stage of nomenclature; North Karnataka, the second stage and South Karnataka, the third stage. The names of other regions of other states can be studied in a similar way.

Place name generics of Karnataka may not exceed 300, but it hasn't yet been possible to count the specifics. It is necessary that we prepare a comprehensive dictionary of all the place name generics and specifics of India.

On the basis of such dictionaries, the geographical, historical, religious and social structure can be understood in their proper perspective. For this, we should take advantage of the computer revolution taking place all around us.

Indian place names have undergone lots of changes over the years because of political and religious influences. Dravidian names were superseded by Aryan names; both were superseded by Perso-Arabic names; all three were superseded by their English versions. The anglicised names are not yet nativised and are used alongside the original names. It is advisable to retain our native names and do away with their anglicised versions before they inturn turs become nativised. It is appreciable that Tanjore is given up and and Thanjavar is retained; Bombay is given up and Mumbai is retained. Accepting Chennai and discarding Madras is a welcome step. All such anglicised cases should be taken up seriously and official status be restored to native forms. I call upon all State Governments to take appropriate action in this regard on a war footing.

Dear friends, I look forward to the day when all the Dravidian states will have the native generic of Nadu in their respective names. Tamil Nadu leads the way. Let Karnataka be Kannada Nadu; Andhara Pradesh, Telugu Nadu and Kerala, Malayalam Nadu. I trust this move will help preserve our native traditions and strengthen our mutual cultural ties.

I am sure all of you would be as happy as myself when the concerned governments implement this proposal moved from this forum.

Many thanks for a patient hearing.

The 17th All India Place Name Conference Thanjavur, April 26, 1997

ಆಕರ : ಮಾರ್ಗ ಸಂಪುಟ–೬

■■

೬
'ಆಳ್ವಾಸ್ ನುಡಿಸಿರಿ' ಸಮ್ಮೇಲನ : ಅಧ್ಯಕ್ಷತೆ

೨೦೧೧

ಕನ್ನಡ ಮನಸ್ಸು : ಸಂಘರ್ಷ ಮತ್ತು ಸಮನ್ವಯ

'ಆಳ್ವಾಸ್ ನುಡಿಸಿರಿ' ಸಮ್ಮೇಲನಕ್ಕೆ ಈ ಮೊದಲು ಉದ್ಘಾಟಕನಾಗಿ, ಪ್ರಶಸ್ತಿ ಪುರಸ್ಕೃತನಾಗಿ ಆಗಮಿಸಿದ್ದ ನಾನು, ಈಗ ಅಧ್ಯಕ್ಷನಾಗಿ ಬಂದಿದ್ದೇನೆ. ಇದು ಅನಿರೀಕ್ಷಿತ ಗೌರವ. ಈ ಗೌರವ ಇಷ್ಟು ಬೇಗ ಪ್ರಾಪ್ತವಾಗಲು ಕಾರಣರಾದ ಶ್ರೀ ಮೋಹನ ಆಳ್ವಾ ಅವರಿಗೂ, 'ನುಡಿಸಿರಿ' ಪರಿವಾರಕ್ಕೂ ಕೃತಜ್ಞನಾಗಿದ್ದೇನೆ.

ನಮ್ಮ ನಾಡಿನಲ್ಲಿ ಸರಕಾರದ ನೆರವಿನಿಂದ ಜರುಗುತ್ತಿರುವ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಭಿನ್ನವಾಗಿ, ಮೋಹನ ಆಳ್ವ ಸರಕಾರ ಈ 'ನುಡಿಸಿರಿ' ಸಮ್ಮೇಳನ ಜರುಗಿಸುತ್ತಿದೆ. ಶ್ರೀಮಂತಿಕೆಯನ್ನು ಸಂಸ್ಕೃತಿಯನ್ನಾಗಿ ಪರಿವರ್ತಿಸಿದ ಈ ಪ್ರಯೋಗಕ್ಕಾಗಿ ಅವರಿಗೆ ಕನ್ನಡಿಗರ ಅಭಿನಂದನೆಗಳು ಸಲ್ಲುತ್ತವೆ. ಪ್ರತಿವರ್ಷದಂತೆ ಈ ವರ್ಷವೂ 'ಕನ್ನಡ ಮನಸ್ಸು' ಈ ಸಮ್ಮೇಳನದ ಕೇಂದ್ರವಿಷಯವಾಗಿದೆ.

* * *

ಸಾಮಾನ್ಯವಾಗಿ ವ್ಯಕ್ತಿಗೆ ಒಂದು ಮನಸ್ಸಿರುವಂತೆ, ಸಮಾಜಕ್ಕೂ ಒಂದು ಮನಸ್ಸಿರುತ್ತದೆ. ಈ ರೀತಿ ಕನ್ನಡ ಸಮಾಜಕ್ಕೂ ಒಂದು ಮನಸ್ಸಿದೆ. ಅದರ ಸ್ವರೂಪವೇನು? ಅದು ಯಾವ ವಿಷಯಗಳ ಬಗ್ಗೆ? ಯಾವ ರೀತಿಯಲ್ಲಿ ಸಂಘರ್ಷಿಸುತ್ತ–ಸಮನ್ವಯ ಸಾಧಿಸುತ್ತ ಬಂದಿದೆ? ಎಂಬುದು ಇಲ್ಲಿಯ ಮುಖ್ಯಪ್ರಶ್ನೆಯಾಗಿದೆ. ಪ್ರಾಚೀನರು ಮತ್ತು ಆರಂಭಕಾಲದ ಆಧುನಿಕರು ಈ ಪ್ರಶ್ನೆಯನ್ನು ಸಾಮಾನ್ಯವಾಗಿ ವೈದಿಕವರ್ಗದ ಪರವಾಗಿಯೋ, ಆಳುವ ವರ್ಗದ ಪರವಾಗಿಯೋ ವ್ಯಾಖ್ಯಾನಿಸುತ್ತ ಬಂದರು.

ಈಗ ಸಂದರ್ಭ ಬದಲಾಗಿದೆ. ಬ್ರಿಟಿಶರ ಉದಾರನೀತಿಯಿಂದಾಗಿ ಸಾರ್ವಜನಿಕ ಶಿಕ್ಷಣ ಅಸ್ತಿತ್ವಕ್ಕೆ ಬಂದು, ಇತಿಹಾಸದಲ್ಲಿ ಮಲಗಿದ್ದವರು, ತುಳಿಸಿಕೊಂಡಿದ್ದವರು ಜಾಗ್ರತರಾಗಿದ್ದಾರೆ. ಪ್ರಜಾಸತ್ತೆಯಿಂದಾಗಿ ಇವರಿಗೆ ಅಭಿಪ್ರಾಯ ಸ್ವಾತಂತ್ರ್ಯವೂ ಪ್ರಾಪ್ತವಾಗಿದೆ. ಇವರು ನಡೆಸಿದ ಅನ್ವೇಷಣೆಯ ಫಲವಾಗಿ

ನಮ್ಮ ಇತಿಹಾಸದಲ್ಲಿ ಮುಚ್ಚಿಹೋಗಿದ್ದ-ಮುಚ್ಚಿಯಿಟ್ಟಿದ್ದ, ಗಾಬರಿ ಹುಟ್ಟಿಸುವ ಅನೇಕ ಸತ್ಯಗಳು ಹೊರಬರಲಾರಂಭಿಸಿವೆ. ಈ ಸಮ್ಮೇಳನದ ವಿಷಯವೇ 'ಸಂಘರ್ಷ-ಸಮನ್ವಯಗಳ ಶೋಧ'ವಾಗಿರುವುದರಿಂದ, ಮೂರೂ ದಿನಗಳಲ್ಲಿ ವ್ಯಕ್ತವಾಗಬಹುದಾದ ಅಂಥ ಭಯಂಕರ ಸತ್ಯಗಳನ್ನು ಅನ್ಯಥಾ ಭಾವಿಸದೆ 'ಇತಿಹಾಸದ ಪಾಠ' ದೃಷ್ಟಿಯಿಂದ ನೋಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ಮತ್ತು ಇಲ್ಲಿ ಪ್ರಬಂಧ ಮಂಡಿಸುವವರು ಕೇವಲ ಸೃಜನಸಾಹಿತ್ಯದ ಕಲ್ಪಿತ ಪುರಾವೆಗಳನ್ನು ವ್ಯಾಖ್ಯಾಸುವುದರ ಜೊತೆಗೆ ನಿಜಜೀವನದ ಘಟಿತ ಪುರಾವೆಗಳೊಂದಿಗೆ ಸಂವಾದ ನಡೆಸಿದಲ್ಲಿ, ಈ ವಿಷಯಕ್ಕೆ ನ್ಯಾಯ ಒದಗಿಸಿದಂತಾಗುವುದೆಂದು ಸೂಚಿಸಬಯಸುತ್ತೇನೆ.

ಸಂಘರ್ಷವು ಹೋರಾಟ(Struggle), ಕಾದಾಟ(Quarell) ಎಂದು ಎರಡು ತೆರನಾಗಿದೆ. ಹೋರಾಟ ಸಾಮಾಜಿಕ ನ್ಯಾಯಕ್ಕಾಗಿ, ಕಾದಾಟ ವೈಯಕ್ತಿಕ ಸ್ವಾರ್ಥಕ್ಕಾಗಿ. ಇದನ್ನು ಇನ್ನಷ್ಟು ಸ್ಪಷ್ಟಪಡಿಸುವುದಾದರೆ ಬ್ರಿಟಿಶರೊಂದಿಗೆ ನಮ್ಮ ಸಂಸ್ಥಾನಿಕರು ನಡೆಸಿದುದು ಕಾದಾಟ, ಗಾಂಧೀಜಿ ನಡೆಸಿದುದು ಹೋರಾಟ. ದಾಖಲೆಗಳನ್ನು ಆಧರಿಸಿ ಹೇಳುವುದಾದರೆ, ಪ್ರಾಚೀನ ಕರ್ನಾಟದಲ್ಲಿ ತಮ್ಮ ಪ್ರಭುತ್ವ ಸ್ಥಾಪನೆಗಾಗಿ ಕೈಕೊಂಡ ಪ್ರತಿಗಾಮಿ ಶಕ್ತಿಗಳ ಕಾದಾಟಗಳು ವಿಪುಲ, ಸಾಮಾಜಿಕ ನ್ಯಾಯಕ್ಕಾಗಿ ಜರುಗಿದ ಪ್ರಗತಿಗಾಮಿ ಶಕ್ತಿಗಳ ಹೋರಾಟಗಳು ವಿರಳ. ಇದಕ್ಕೆ ನಮ್ಮ ಆಧ್ಯಾತ್ಮಿಕ ನಿಲವು, ಸಾಮಾಜಿಕ ಸಂರಚನೆ, ರಾಜಕೀಯ ಸಂದರ್ಭಗಳು ಹೀಗೆ ಕಾರಣವಾಗಿವೆ:

ಕರ್ನಾಟಕ ಬಹುಮಟ್ಟಿಗೆ ವಲಸೆ ಸಂಸ್ಕೃತಿಗಳ ನಾಡು. ಇವುಗಳಲ್ಲಿ ಕನ್ನಡಿಗರನ್ನು ಹೆಚ್ಚು ಪ್ರಭಾವಿಸಿದುದು ವೈದಿಕವೆಂಬ ವಲಸೆ ಸಂಸ್ಕೃತಿ. ಈ ವೈದಿಕರದು ವ್ಯಕ್ತಿನೆಲೆಯಲ್ಲಿ ನಾನು ದೇವರಾಗಬೇಕೆಂಬ 'ಸೋಹಂ' ನಿಲುವು; ಸಾಮಾಜಿಕ ನೆಲೆಯಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಘಟಕಗಳಿರಬೇಕೆಂಬ ವಿಘಟನ ನಿಲವು. ದೇವನೊಂದಿಗೆ ಅದ್ವೈತ, ಸಮಾಜದೊಂದಿಗೆ ದ್ವೈತವೆಂಬ ಇಂಥ ಆಧ್ಯಾತ್ಮಿಕ ನಿಲುವು ಕಾರಣವಾಗಿ, ಭಾರತೀಯರು ವೈಯಕ್ತಿಕವಾಗಿ ಸಬಲರೂ, ಸಾಮಾಜಿಕವಾಗಿ ದುರ್ಬಲರೂ ಆದರು. ಈ ನಿಲವಿನವರು ಸಮಾಜವನ್ನು ವಿಘಟಿತವಾಗಿಟ್ಟು, ಬಹಳೆಂದರೆ 'ಸತ್ಯಂ ವದ ಧರ್ಮಂ ಚರ' ಎಂದು 'ಮಾನವಿಕ ಉಪದೇಶ' ಮಾಡುವರೇ ಹೊರತು, 'ವಿಪ್ರ ಮೊದಲು ಅಂತ್ಯಜ ಕಡೆ'ಯಾಗಿ ಎಲ್ಲರೂ ಒಂದೇ ಎಂಬ 'ಸಾಮಾಜಿಕ ಸಂದೇಶ' ಸಾರುವುದಿಲ್ಲ. ಸಾಮಾನ್ಯ ಘೋಷಣೆರೂಪದ ಉಪದೇಶ ಮಾಡುವವರು ಮಹಾತ್ಮರಾಗುತ್ತಾರೆ; ನಿರ್ದಿಷ್ಟ ವಿಮರ್ಶೆರೂಪದ ಸಂದೇಶ ಸಾರುವವರು ಹುತಾತ್ಮರಾಗುತ್ತಾರೆ. ಹೀಗಾಗಿ ಮಹಾತ್ಮರಾಗಬೇಕೆನ್ನುವ ವೈದಿಕರ ಆಧ್ಯಾತ್ಮದಿಂದ ಹೆಚ್ಚು ಪ್ರಭಾವಿತರಾದ ಕನ್ನಡಿಗರಲ್ಲಿ ಹುತಾತ್ಮರ ಹೋರಾಟ ಸ್ವಭಾವ ಅಷ್ಟಾಗಿ ಬೆಳೆದು ಬರಲಿಲ್ಲ.

ಇಂದು ಪಶ್ಚಿಮದ ಪ್ರಭಾವದಿಂದ ನಾವು ಧರ್ಮ ಸಮಾಜಗಳನ್ನು ಬಿಡಿಸಿ ನೋಡುತ್ತಿದ್ದರೂ ಪ್ರಾಚೀನ ಭಾರತದಲ್ಲಿ ಧಾರ್ಮಿಕವೇ ಸಾಮಾಜಿಕವಾಗಿದ್ದಿತು. ನಮ್ಮ ದೇಶವನ್ನು ಆಳುತ್ತ ಬಂದ, ಹಾಳು ಮಾಡುತ್ತ ಬಂದ ಸಮಾಜೋಧಾರ್ಮಿಕದ ಎರಡು ಘಟಕಗಳೆಂದರೆ ಜಾತಿ ಮತ್ತು ದೇವತೆ. ವೃತ್ತಿಗಳು ಜಾತಿಗಳಾಗಿ, ದೇವರು ದೇವತೆಗಳಾಗಿ ಬಿಚ್ಚಿಕೊಂಡು, ಬಳಿಕ ಜಾತಿಗೊಂದು ದೇವತೆ ತಗುಲಿಕೊಂಡು, ಈ ಮೊದಲು ವರ್ಣ ಆಧಾರದಿಂದ ನಾಲ್ಕು ಹೋಳಾಗಿದ್ದ ಸಮಾಜ,

ಈಗ ಒಳಗೊಳಗೇ ಮತ್ತೆ ಅನೇಕ ಹೋಳಾಯಿತು; ತಮ್ಮ ತಮ್ಮ ಜಾತಿ–ದೇವತೆಗಳ ಪ್ರಭುತ್ವ ಸ್ಥಾಪನೆಗೆ ಇಲ್ಲಿಯೂ ಕಾದಾಟ ಹುಟ್ಟಿ ಬೆಳೆಯಿತು.

ಧರ್ಮವನ್ನು ಬಿಟ್ಟರೆ ಸಮಾಜವನ್ನು ನಿಯಂತ್ರಿಸಿದುದು ರಾಜಕೀಯ. ಇಲ್ಲಿ ಜರುಗುವ ಪರಸ್ಪರ ಯುದ್ಧಗಳು ಮುಖ್ಯವಾಗಿ ಎರಡು ರಾಜಮನೆತನಗಳ ಸ್ವಾರ್ಥಮೂಲ ಕಾದಾಟಗಳೇ ಆಗಿದ್ದು, ವಿಘಟಿತ ಸಮಾಜದಲ್ಲಿ ಇವುಗಳಿಗೆ ಸೋಲು ಸಹಜ. ಹೀಗಾಗಿ ವಿಘಟಿತ ಕನ್ನಡಿಗರು ಹೊರಗಿನ ಮುಸಲ್ಮಾನರಿಗೆ ರಾಜಕೀಯವಾಗಿ ಸೋತರು, ಬಳಿಕ ಹೊರಗಿನ ಆಂಗ್ಲರಿಗೂ ರಾಜಕೀಯವಾಗಿ–ಸಾಮಾಜಿಕವಾಗಿ ಸೋತು, ಬರುಬರುತ್ತ ಗುಲಾಮಿ ಜೀವನಕ್ರಮಕ್ಕೆ ಹೊಂದಿಕೊಂಡರು.

ಈ ಬಗೆಯ ಆಧ್ಯಾತ್ಮಿಕ, ಸಾಮಾಜಿಕ, ರಾಜಕೀಯ ಕಾರಣಗಳಿಂದಾಗಿ ಕನ್ನಡಿಗರ ಬದುಕಿನಲ್ಲಿ ಒಳಗೆ 'ಅಸ್ಮಿತೆ' ಕುಸಿಯುತ್ತ, ಹೊರಗೆ 'ಅಸ್ತಿತ್ವ' ಶಿಥಿಲಗೊಳ್ಳುತ್ತ ನಡೆಯಿತು. ಸ್ವಾಭಿಮಾನಕ್ಕಿಂತ ಸಹನೆ ಇವರ ಜಾಯಮಾನವಾಯಿತು. ಇದರಿಂದಾಗಿ ಇವರು ತಮ್ಮವರೊಂದಿಗೆ ಕಾದಾಡುವ, ಅನ್ಯರೊಂದಿಗೆ ಹೊಂದಿಕೊಳ್ಳುವ ಸ್ವಭಾವದವರಾದರು. ಇಲ್ಲಿ ಈ ಸ್ವಭಾವದ ಕನ್ನಡಿಗರು ಕೈಕೊಂಡ ಸ್ವಾರ್ಥನಿಷ್ಠ ರಾಜಕೀಯ ಮೊದಲಾದ ಕಾದಾಟಗಳನ್ನು ಕೈಬಿಟ್ಟು, ಕಾದಾಟಗಳೇ ಆಗಿದ್ದರೂ ಪ್ರಾಚೀನರ ಸಾಮೂಹಿಕ ಬದುಕನ್ನು ನಿಯಂತ್ರಿಸುತ್ತಿದ್ದ ಜಾತಿ–ಧರ್ಮ ಮತ್ತು ಇವುಗಳ ಉಪನಿಷ್ಪತ್ತಿಗಳಿಗೆ ಸಂಬಂಧಿಸಿದುವುಗಳನ್ನು ಸ್ಥೂಲವಾಗಿ ಸಂಘರ್ಷಗಳೆಂದು ಕರೆಯಬಹುದು. ಆದರೆ ಒಂದಿಷ್ಟು ಧಾರ್ಮಿಕವಾಗಿದ್ದರೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಪ್ರಾಚೀನಕಾಲದ ನಿಜವಾದ ಸಂಘರ್ಷವೆಂದರೆ, ವಚನ ಚಳುವಳಿ ಮಾತ್ರ.

* * *

ಕರ್ನಾಟಕದಲ್ಲಿ ವಚನ ಚಳುವಳಿ ಪೂರ್ವಯುಗವು ಉತ್ತರಭಾರತದ ವಲಸೆಧರ್ಮಗಳಾದ ಬೌದ್ಧ, ಜೈನ, ವೈದಿಕ ಬ್ರಾಹ್ಮಣ, ಆಗಮಿಕ ಶೈವಬ್ರಾಹ್ಮಣ(ಕಾಳಾಮುಖ ಇತ್ಯಾದಿ)ಗಳ ಸ್ಪರ್ಧೆಯ ಅವಧಿಯೆನಿಸಿದೆ. ೧೮–೧೯ನೆಯ ಶತಮಾನದಲ್ಲಿ ಪಶ್ಚಿಮದೇಶದ ಡಚ್ ಪೋರ್ತುಗೀಜ ಫ್ರೆಂಚ್ ಇಂಗ್ಲಿಷ್ ವಸಾಹತುಶಾಹಿಗಳು ತಮ್ಮ ತಮ್ಮ ನೆಲೆಯನ್ನು ಸ್ಥಾಪಿಸಿಕೊಳ್ಳುವುದಕ್ಕಾಗಿ ಭಾರತದಲ್ಲಿ ಪರಸ್ಪರ ಕಾದಾಡಿದಂತೆ, ಉತ್ತರಭಾರತದ ಈ ವಲಸೆ ಧರ್ಮಗಳು ತಮ್ಮ ತಮ್ಮ ನೆಲೆ ಸ್ಥಾಪಿಸಿಕೊಳ್ಳುವುದಕ್ಕಾಗಿ, ಕರ್ನಾಟಕದಲ್ಲಿ ಕಾದಾಡಿದ ಕಾಲಘಟ್ಟವಿದು. ಆಗ ಕರ್ನಾಟಕದಲ್ಲಿ ಬಹುಶಃ ಕೇವಲ ಜಾತಿಗಳಿದ್ದವು. ಈ ಬಡಪಾಯಿ ಜಾತಿಗಳು ಈ ಅನ್ಯಧರ್ಮಗಳ ಕಾದಾಟವನ್ನು ಗಾಬರಿಯಾಗಿ ನೋಡಿದವು. ಇಲ್ಲವೆ ಒಮ್ಮೆ ಅವರ, ಒಮ್ಮೆ ಇವರ ಪರವಾಗಿ ಕಾದಾಡಿ ದಣಿದವು. ಈ ಕಾದಾಟದಲ್ಲಿ ವೈದಿಕವನ್ನು ಎದುರಿಸಲಾರದೆ ಮೊದಲು ನಾಶವಾದುದು ಬೌದ್ಧಧರ್ಮ. ಮಿಕ್ಕವುಗಳಲ್ಲಿ ಆಗಮಿಕ ಶೈವಬ್ರಾಹ್ಮಣವು ಕ್ರಮೇಣ ವೈದಿಕ ಬ್ರಾಹ್ಮಣದ ಪ್ರಭಾವಕ್ಕೆ ಒಳಗಾದ ಕಾರಣ, ಅಂದು ನೇರ ಪ್ರತಿಸ್ಪರ್ಧಿಗಳಾಗಿ ಕಾದಾಡಿದ ಧರ್ಮಗಳೆಂದರೆ ವೈದಿಕ ಮತ್ತು ಜೈನ. ವಡ್ಡಾರಾಧನೆ, ಧರ್ಮಾಮೃತ, ಸಮಯಪರೀಕ್ಷೆಗಳಲ್ಲಿ ಈ ಕಲಹಧ್ವನಿ ಕ್ರಮೇಣ ದೊಡ್ಡದಾಗಿ ಕೇಳಿಸುತ್ತ ನಡೆದಿದೆ.

ಈಗ ಜೈನರು ನಮ್ಮ ಭಾಷೆಯನ್ನು ಬಳಸಿಕೊಂಡು, ತಮ್ಮ ಧಾರ್ಮಿಕ ಸಾಹಿತ್ಯವನ್ನು ಮುರಿಯದೆ ಕಟ್ಟುವ–ವಿರೋಧಿಗಳಾದ ವೈದಿಕರ ಧಾರ್ಮಿಕ ಸಾಹಿತ್ಯವನ್ನು ಮುರಿದು ಕಟ್ಟುವ ಕ್ರಿಯೆಯಲ್ಲಿ

ತೊಡಗಿದಂತಿದೆ. ಅಂದರೆ ತಮ್ಮ ತೀರ್ಥಂಕರ ಪುರಾಣವನ್ನು ಮುರಿಯದೆ ಕಟ್ಟಿ ನಿಲ್ಲಿಸಿದ ಅವರು, ವೈದಿಕರ ಪುರಾಣಗಳನ್ನು ಎರಡು ರೀತಿಗಳಲ್ಲಿ ಮುರಿದು ಕಟ್ಟಲಾರಂಭಿಸಿದರು. ಒಂದು: ಶ್ರೀವಿಜಯನು ವೈದಿಕ ರಾಮಾಯಣವನ್ನು 'ಜೈನೀಕರಿಸಿ' ರಘುವಂಶ ಮಹಾಪುರಾಣ ಬರೆದುದು. ಎರಡು: ಪಂಪನು ವೈದಿಕ ಭಾರತವನ್ನು 'ಅವೈದಿಕಗೊಳಿಸಿ', ಅದನ್ನು ತನ್ನ ಅರಸನೊಂದಿಗೆ 'ಸಮೀಕರಿಸಿ' ಅವೈದಿಕ ಸಮಸ್ತಭಾರತ ರಚಿಸಿದುದು. ಇವೆಲ್ಲ ಸಾಹಿತ್ಯಿಕವಾಗಿ ಎಷ್ಟೇ ಶ್ರೇಷ್ಠಕೃತಿಗಳಾಗಿದ್ದರೂ, ಸ್ಥೂಲವಾಗಿ ಸ್ವಮತ ಉತ್ಕರ್ಷ-ಅನ್ಯಮತ ಅಪಕರ್ಷ ಭಾವನೆಯ ಸೃಷ್ಟಿಗಳೇ ಸರಿ.

ಈ ಸಾಹಿತ್ಯಿಕ ಪರೋಕ್ಷ ಸಂಘರ್ಷವನ್ನು ಬಿಟ್ಟರೆ, ಈ ಅವಧಿಯಲ್ಲಿ ಭಾಷೆಗೆ ಸಂಬಂಧಿಸಿದುದು ಮಾತ್ರ ನಿಜ ಅರ್ಥದಲ್ಲಿ ಪ್ರತ್ಯಕ್ಷ ಸಂಘರ್ಷವೆನಿಸಿದೆ. ಬಹುಶಃ ಮೊದಲಿನಿಂದಲೂ ನಮ್ಮ ನಾಡಿನಲ್ಲಿ ಕನ್ನಡ-ಸಂಸ್ಕೃತ, ದೇಶಿ-ಮಾರ್ಗಗಳ ಸಂಘರ್ಷ ಮತ್ತು ಸಮನ್ವಯಗಳು ಸಂಭವಿಸುತ್ತ ಬಂದಿವೆ. ಸೂಕ್ತಿಸುಧಾರ್ಣವದಲ್ಲಿ ದೇಶೀ ಕವಿಗಳನ್ನು ವಿಡಂಬಿಸುವ ಒಂದು ಅನಾಮಧೇಯ ಪದ್ಯದ ಅರ್ಥ ಹೀಗಿದೆ:

"ಇದು ಯಾವ ಛಂದಸ್ಸು? ಎಂದು ಕೇಳಿದರೆ, ಇರಿಯಲು ಬರುತ್ತಾರೆ. ಪದಬಂಧದಲ್ಲಿ ಈ ಪ್ರಯೋಗ ಹೇಗೆ ಸರಿ? ಎಂದು ಕೇಳಿದರೆ, ಬೈದೇ ಬಿಡುತ್ತಾರೆ. ನಿಮ್ಮದು ಯಾವ ಕವಿಮಾರ್ಗ? ಎಂದು ಪ್ರಶ್ನಿಸಿದರೆ ಸಾಕು, ಹೊಡೆದೇ ಬಿಡುತ್ತಾರೆ. ಇದರ ಅರ್ಥವೇನೆಂದು ಕೇಳುವುದೇ ತಡ, ಕೆಟ್ಟ ಕೆಟ್ಟ ಮಾತುಗಳನ್ನಾಡಿ ಮೈಮೇಲಿನ ಬಟ್ಟೆಯನ್ನೇ ಎಳೆದು ಬಿಡುತ್ತಾರೆ. ಯಾವ ಶೈಲಿ? ಎಂದು ಕೇಳಿದರೆ, ಕೊಂದೇ ಬಿಡುತ್ತಾರೆ-ಇತ್ತೀಚೆ ದೇಶೀ ವ್ಯಾಮೋಹಕ್ಕೆ ಬಿದ್ದಿರುವ 'ಮಹಾಕವಿಗಳು'.

ಹೀಗೆ ಮಾರ್ಗೀಯ ಶೈಲಿಯವರೂ ದೇಶೀಯ ಶೈಲಿಯವರೂ ಪಕ್ಷ-ಪ್ರತಿಪಕ್ಷಗಳಾಗಿ ನಿಂತ ಸಂದರ್ಭದಲ್ಲಿ ಕವಿರಾಜಮಾರ್ಗಕಾರ ಭಾಷೆಯ ನೆಲೆಯಲ್ಲಿ ಕನ್ನಡ-ಸಂಸ್ಕೃತಗಳ, ಶೈಲಿಯ ನೆಲೆಯಲ್ಲಿ ದೇಶಿ-ಮಾರ್ಗಗಳ ಸಂಘರ್ಷಕ್ಕೆ ಬದಲು, ಸಮನ್ವಯವನ್ನು ಪ್ರತಿಪಾದಿಸುತ್ತಾನೆ. ಮುಂದೆ ಬಂದ ಪಂಪನಂಥವರು 'ದೇಶಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು" ಎಂದು ಮುಂತಾಗಿ ಹೇಳುತ್ತ, ಇಂಥ ಸಮನ್ವಯವನ್ನು ಅನುಮೋದಿಸುತ್ತಾರೆ. ಈ ಧೋರಣೆಯ ಜೈನಕವಿಗಳು ಕನ್ನಡ-ಸಂಸ್ಕೃತ ಸಮನ್ವಯ ಸಾಧಿಸಿ, ನಮ್ಮ ಭಾಷೆಗೆ ಕ್ಲಾಸಿಕಲ್ ಲ್ಯಾಂಗ್ವೆಜ್ ಪ್ರತಿಷ್ಠೆ ತಂದುಕೊಟ್ಟರಾದರೂ ಬರುಬರುತ್ತ ಕನ್ನಡದ ಮೇಲೆ ಸಂಸ್ಕೃತದ ದಾಳಿ ದೊಡ್ಡದಾಗಿ ಬೆಳೆಯಿತು. ಇದನ್ನು ನಯಸೇನ(೧೧೧೨) ಮೊದಲಾದವರು "ಬೆರೆಸಲ್ಕೆ ತಕ್ಕುದೆ ಘೃತಮುಮಂ ತೈಲಮುಮಂ"ಎಂದು ಮುಂತಾಗಿ ಪ್ರಶ್ನಿಸುತ್ತ ನಡೆದರು. ಇಲ್ಲಿ ಆಂಡಯ್ಯನ ನಿಲವು ಅತಿರೇಕವೆನಿಸುತ್ತಿದ್ದರೂ, ಅಂದಿನ ಸಂಸ್ಕೃತದ ದಾಳಿಯ ಅತಿರೇಕವು ಅವನಿಂದ ಹೀಗೆ ಮಾಡಿಸಿದೆ ಎಂದು ತೋರುತ್ತದೆ.

ಇಂಥ ಇನ್ನೊಂದು ಸಂಘರ್ಷ, ಕಾವ್ಯನಾಯಕ ಮತ್ತು ಕಾವ್ಯರಸಗಳನ್ನು ಕುರಿತುದು. ಗುಣವರ್ಮ-ಪಂಪ ಆರಂಭಿಸಿದ್ದ ಲೌಕಿಕ-ಆಗಮಿಕವೆಂಬ ವಸ್ತು ಕವಲುಗಳಲ್ಲಿ ನಾಗಚಂದ್ರ ಲೌಕಿಕ ವಸ್ತುವನ್ನು ವಿರೋಧಿಸುತ್ತಾನೆ. "ನಾಯಕನನ್ಯನಾಗೆ ಕೃತಿ ವಿಶ್ರುತಮಾಗದು" ಎಂದು ಹೇಳುತ್ತ, "ರಾಜ ವಿಟ ಚೋರಕಥೆ ಕಥೆಯೆ?" "ಅರ್ಥ(ಹಣ) ದೊಳಾದಮಾದ ಮೋಹದಿನೇಕೆ ಮಾರುವರೊ ಪುಣ್ಯನಿಬಂಧಮಂ?" ಎಂದು ನಿಂದಿಸುತ್ತಾನೆ. ಮುಂದುವರಿದು ಭಾವವನ್ನು

ಉದ್ರೇಕಿಸುವ(ವಿಕಾರಗೊಳಿಸುವ) ಎಂಟು ರಸಗಳ ಲೌಕಿಕ ಕಾವ್ಯಕ್ಕೆ ಬದಲು, ಭಾವವನ್ನು ಉಪಶಮನಗೊಳಿಸುವ ಶಾಂತರಸವೂ ಸೇರಿದಂತೆ ಒಂಬತ್ತು ರಸಗಳ ಆಗಮಿಕ ಕಾವ್ಯ ಬರೆಯಬೇಕೆನ್ನುತ್ತಾನೆ. ಹೀಗೆ, ಈ ವರೆಗಿನ ಪಂಪನ ಪ್ರಯೋಗವನ್ನು ಪ್ರತಿಭಟಿಸಿದವನೆಂಬ ಅರ್ಥದಲ್ಲಿ ತನ್ನನ್ನು 'ಅಭಿನವಪಂಪ' ನೆಂದು ಕರೆದುಕೊಳ್ಳುತ್ತಾನೆ. ಪರಸ್ಪರಾವಲಂಬಿಗಳಾದ ಧರ್ಮ-ಸಾಹಿತ್ಯ-ಭಾಷೆಗಳ ಸಂಘರ್ಷ-ಸಮನ್ವಯಗಳು ಜೈನರ ಮೂಲಕ ಈ ಅವಧಿಯಲ್ಲಿ ಮೇಲಿನಂತೆ ಬೆಳದು ಬಂದವು.

ಹೀಗಿದ್ದೂ 'ಮಹಾಜನರ ಸನ್ನಿಧಿ-ಸಾಕ್ಷಿಯಾಗಿ ದಾನ ಕೊಡಲ್ಪಟ್ಟಿದೆ' ಎಂದು ಶಾಸನಗಳು ಹೇಳುವುದನ್ನು ನೋಡಿದರೆ, ಊರೂರಿನ ಎಲ್ಲ ಸಮುದಾಯಗಳು ವೈದಿಕರ ಪ್ರಭುತ್ವವನ್ನು-ಶ್ರೇಷ್ಠತೆಯನ್ನು ಅಂದು ಒಪ್ಪಿಕೊಂಡಿದ್ದವೆಂದು ತಿಳಿದುಬರುತ್ತದೆ.

* * *

ಈ ರೀತಿ ಮೇಲಾಟವಾಡುತ್ತಲಿದ್ದ ವೈದಿಕ ಜೈನಗಳೆಂಬ ಎರಡು 'ಧರ್ಮ'ಗಳನ್ನು ಬಿಟ್ಟರೆ, ಆ ಕಾಲದ ಕರ್ನಾಟಕದಲ್ಲಿದ್ದುವು ನೂರಾರು 'ಜಾತಿ'ಗಳು. ಈ ಜಾತಿಗಳು ಧರ್ಮಗಳಾಗಲು ಹವಣಿಸುವುದು ಸಹಜ. ಆದರೆ ವರ್ಣಧರ್ಮದ ವೈದಿಕವು ಇವುಗಳನ್ನು ಮತಾಂತರಿಸಿಕೊಳ್ಳಲೂ ಇಲ್ಲ, ಮಂತ್ರವನ್ನೂ ಕೊಡಲಿಲ್ಲ. ಜೈನವು ಮತಾಂತರಿಸಿಕೊಳ್ಳದಿದ್ದರೂ ಮಂತ್ರಕೊಡಲು ಆರಂಭಿಸಿತು. ಈಗ ಸಹಜವಾಗಿಯೇ ಕೆಳವರ್ಗದ ಬಹುಸಂಖ್ಯೆ ಜಾತಿಗಳು ಮಂತ್ರ ಸ್ವೀಕರಿಸಿ, ಹೊರಗೆ ನಿಂತು ಜೈನದ ಅನುಯಾಯಿ(ಒಕ್ಕಲು)ಯಾದವು. ಕೃಷಿ ಆಡಳಿತ ಇತ್ಯಾದಿಗಳ ಈ ಶ್ರಮಿಕ-ಧನಿಕ ಜನ, ತಮ್ಮ ತಮ್ಮ ಊರುಗಳಲ್ಲಿ ಜೈನರಿಗೆ ಬಸದಿ ಕಟ್ಟಿಸಿಕೊಟ್ಟರು, ದಾನ-ದತ್ತಿ ನೀಡಿ ಶಾಸನ ಬರೆಯಿಸಿದರು. ಇದರಿಂದ ವೈದಿಕವು ಧಾರ್ಮಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಅಲ್ಪಸಂಖ್ಯಾತವಾಗಿ ಉಳಿಯಿತು; ಜೈನವು ಜಾತಿ ನೆಲೆಯಲ್ಲಿ ಅಲ್ಪಸಂಖ್ಯಾತ, ಧರ್ಮ ನೆಲೆಯಲ್ಲಿ ಬಹುಸಂಖ್ಯಾತವಾಗಿ ಬೆಳೆಯಿತು.

ಇಂಥ ಸಂದರ್ಭದಲ್ಲಿ 'ನಾನು ಜಾತಿ-ವಿಜಾತಿ ಎನ್ನದೆ ಎಲ್ಲರಿಗೂ ಮಂತ್ರವನ್ನು ಕೊಡುತ್ತೇನೆ, ಏಕೆ? ಮತಾಂತರವನ್ನೂ* ಮಾಡಿಕೊಳ್ಳುತ್ತೇನೆ' ಎಂದು ಸಾರುತ್ತ, ಬಸವಣ್ಣ ಕರ್ನಾಟಕ ಕ್ಷಿತಿಜದ ಮೇಲೆ ಮೂಡಿಬಂದನು. ಜನನ ಆಧಾರಿತ ಹೊಲೆಯ, ಮಾದಿಗ, ಕುರುಬ, ಬೇಡ ಮೊದಲಾದ 'ಜಾತಿ'ಗಳ ಮತ್ತು ಜೈನ ಬ್ರಾಹ್ಮಣ ಮೊದಲಾದ 'ಜಾತಿಧರ್ಮ'ಗಳ ಬದಲು ಕೃಷಿ, ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ ಮೊದಲಾದ ವೃತ್ತಿ ಆಧಾರಿತ 'ಕಾಯಕಧರ್ಮ'ವನ್ನು ಅಸ್ತಿತ್ವಕ್ಕೆ ತಂದನು. ಕರ್ನಾಟಕದಲ್ಲಿ ಹುಟ್ಟಿದ-ಕನ್ನಡಿಗರು ಹುಟ್ಟುಹಾಕಿದ ಮೊಟ್ಟಮೊದಲ ಸ್ಥಳೀಯ ಧರ್ಮವಿದು. ಈ ಧರ್ಮದ ಜಾತಿ ನಿರಪೇಕ್ಷ ತತ್ತ್ವವು ಚಳುವಳಿಯಾಗಿ ಬಿಚ್ಚಿಕೊಳ್ಳಲಾರಂಭಿಸಿತು. ಇದು ಜಾತಿವಾದಿ ಸಮಾಜಕ್ಕೆ ನುಂಗಲಾರದ ತುತ್ತಾಯಿತು. ಈ ಜಾತಿನಿರಪೇಕ್ಷ ಪರಿಕಲ್ಪನೆಯ ಅನುಷ್ಠಾನವೆಂಬಂತೆ ಶರಣರು ಶೂದ್ರ ಅಲ್ಲಮನ ಶೂನ್ಯಸಿಂಹಾಸನಾರೋಹಣ ಮತ್ತು ಸ್ಪೃಶ್ಯಾಸ್ಪೃಶ್ಯರ ಮದುವೆಗಳನ್ನು ಜರುಗಿಸಿದರು. ಈ ಘಟನೆಗಳನ್ನು ನೆವವಾಗಿಟ್ಟುಕೊಂಡು ರಾಜಶಾಹಿ ಮತ್ತು ಪುರೋಹಿತಶಾಹಿಗಳು ಚಳುವಳಿಯನ್ನು ಹತ್ತಿಕ್ಕಿದರು. ಶರಣರು ಎಳೆಹೂಟೆ ಶಿಕ್ಷೆಯ ಮೂಲಕ ಹುತಾತ್ಮರಾದರು. ಈ ಅನ್ಯಾಯಕ್ಕೆ ಪ್ರತೀಕಾರವಾಗಿ, ಭಾರತದ ಇತಿಹಾಸದಲ್ಲಿಯೇ ರಾಜನನ್ನು ಪ್ರಜೆಗಳು ನಡು ಬೀದಿಯಲ್ಲಿ

ಕೊಂದ ಪ್ರಥಮ ಉದಾಹರಣೆಯೆಂಬಂತೆ ಜರುಗಿದ ಚಕ್ರವರ್ತಿ ಬಿಜ್ಜಳನ ಕೊಲೆಯಲ್ಲಿ ಚಳುವಳಿ ಕೊನೆಗೊಂಡಿತು. ಈ ಚಳುವಳಿಯ ಸಮುದ್ರಮಥನದಲ್ಲಿ 'ಸೋಹಂ' ಸಂಸ್ಕೃತಿಯ ವ್ಯಕ್ತಿವಾದಿ ಮಹಾಪುರುಷರಿಗೆ ಬದಲು, 'ದಾಸೋಹಂ' ಸಂಸ್ಕೃತಿಯ ಸಮಾಜವಾದಿ ಶರಣರು ರೂಪಗೊಂಡರು. ವಲಸೆ ಭಾಷೆಯ ಮಾರ್ಗೀಯ ಶೈಲಿಗೆ ಬದಲು, ಸ್ಥಳೀಯ ಭಾಷೆಯ ದೇಶೀ ಶೈಲಿಯಲ್ಲಿ ಸಂವಾದ ನಡೆಸಿದರು. ಇದರ ಫಲವಾಗಿ ಮನಮುಖಿ–ಜನಮುಖಿ ವಚನಸಾಹಿತ್ಯ ಸೃಷ್ಟಿಯಾಯಿತು. ಈಗ ಸ್ಥಳೀಯ ವ್ಯಕ್ತಿ, ಸಮಾಜ, ಭಾಷೆ, ಸಾಹಿತ್ಯಗಳು ವಲಸೆ ಸಂಸ್ಕೃತಿಯ ಮುಷ್ಟಿಯಿಂದ ವಿಮೋಚನೆಗೊಳ್ಳತೊಡಗಿದವು.

ಈ ಚಳುವಳಿಯ ಪೂರ್ವದಲ್ಲಿ ಕೆಳವರ್ಗದ ಬಹುಜನ ಸಮಾಜ, ಜೈನಕ್ಕೆ ಒಕ್ಕಲಾಗಿ ಹೊರಗೆ ನಿಂತಿದ್ದಿತು. ಈಗ ಈ ಸಮುದಾಯಗಳು ಬಸವಣ್ಣನ ಜಾತಿ ನಿರಪೇಕ್ಷೆಗೆ ಆಕರ್ಷಿತರಾಗಿ, ನಿಂತಕಾಲ ಮೇಲೆಯೇ ಜೈನವನ್ನು ಬಿಟ್ಟು ಲಿಂಗಾಯತದ ಒಳಗೆ ಧಾವಿಸಿ ಬಂದರು. ಇದರಿಂದಾಗಿ ಬಹುಸಂಖ್ಯಾತವಾಗಿದ್ದ ಜೈನಸಮಾಜ ತಟ್ಟನೇ ಅಲ್ಪಸಂಖ್ಯಾತಕ್ಕೆ ಕುಸಿದು, ದುರ್ಬಲವಾಯಿತು. ಈ ದೌರ್ಬಲ್ಯದ ಲಾಭ ಪಡೆದುಕೊಳ್ಳುವ ರೀತಿಯಲ್ಲಿ ಉತ್ತರದಲ್ಲಿ 'ವೀರಮಾಹೇಶ್ವರ'ರೆಂಬ ಉಗ್ರವಾದಿ ಆಗಮಿಕ ಶೈವಬ್ರಾಹ್ಮಣರು, ದಕ್ಷಿಣದಲ್ಲಿ 'ವೀರವೈಷ್ಣವ'ರೆಂಬ ಉಗ್ರವಾದಿ ಶ್ರೀವೈಷ್ಣವರು ಇನ್ನೂ ಬಲಿಷ್ಠರಾಗಿ, ಜೈನ ವ್ಯಕ್ತಿ–ಬಸದಿಗಳನ್ನು ಧ್ವಂಸಗೊಳಿಸತೊಡಗಿದರು. ಉತ್ತರ ಕರ್ನಾಟಕದಲ್ಲಿ ಪುಲಿಗೆರೆ ಆದಯ್ಯ, ಅಬ್ಬಲೂರು ಏಕಾಂತರಾಮಯ್ಯ, ಕೋವೂರ ಬ್ರಹ್ಮಯ್ಯ, ಮಾರುಡಿಗೆ ನಾಚಯ್ಯ ಮೊದಲಾದ ವೀರಮಾಹೇಶ್ವರರು, ಜೈನಮೃಗ ಬೇಂಟೆಕಾರನೆಂದು ಕರೆದುಕೊಂಡ ಅಣ್ಣಿಗೆರೆ ಶಾಸನೋಕ್ತ(೧೧೮೪) ವೀರಗೊಗ್ಗಿದೇವ ಈ ತೆರನಾದವರು. ಇತ್ತೀಚೆ ಅಣ್ಣಿಗೆರೆಯಲ್ಲಿ ಲಭಿಸಿದ ೬೦೦ ತಲೆ ಬುರುಡೆಗಳು ಬಹುಶಃ ಈತನ ಸಂಪ್ರದಾಯದವರಿಗೆ ಸಂಬಂಧಿಸಿದುವು.

ಇಂಥವರ ಉಗ್ರ ಘಟನೆಗಳನ್ನು ಕೆಲವು ವೀರಶೈವಕೃತಿಗಳು ಹೆಮ್ಮೆಯಿಂದ ಚಿತ್ರಿಸಿದುದು ಬೇಸರದ ವಿಷಯವಾಗಿದೆ. ತಾಳಿಕೋಟೆ ಶಾಸನ(೧೧೮೪)ದಲ್ಲಿ ಬರುವ "ಪರಿಯಳಿಗೆ ಅಣಿಲೆವಾಡ ಉಣಕಲ್ಲು ಸಂಪಗಾವಿ ಅಬ್ಬಲೂರು ಮಾರುಡಿಗೆ ಅಣಂಪುರ ಕರಹಾಡ ಕೆಂಬಾವಿ ಬಮ್ಮಕೂರು ಮೊದಲಾದ ದೇಶದೇಶಾಂತರದಲಿದಿರಾದ ಪರಸಮಯಿಗಳಂ ಪಡಲ್ವಡಿಸಿ, ಬಸದಿಗಳಂ ಹೊಸೆದು ಮುಕ್ಕಿ" ಎಂಬ ಮಾತು ಈ ವೀರಮಾಹೇಶ್ವರರ ಧಾರ್ಮಿಕ ದಾಳಿಯನ್ನು ಸ್ಪಷ್ಟಪಡಿಸುತ್ತದೆ. ಈ ಉಗ್ರವಾದಿ ವೀರಮಾಹೇಶ್ವರರೇ ಮುಂದಿನ ದಿನಗಳಲ್ಲಿ ವೀರಶೈವ ಹೆಸರಿನಿಂದ ಲಿಂಗಾಯತದೊಳಗೆ ಸೇರಿಕೊಂಡರು. ಹೀಗಾಗಿ ಜೈನ ಬಸದಿಗಳನ್ನು ಹಾಳುಮಾಡಿದವರು ಈ ವೀರಶೈವರೇ ಹೊರತು ಲಿಂಗಾಯತರಲ್ಲ. ಈ ಶೈವ ದಾಳಿಕಾರರಿಗೆ ಹೆದರಿ ಜೈನರು ಒಪ್ಪಂದ ಮಾಡಿಕೊಂಡರೆಂಬಂತೆ ತಮ್ಮ ಅನೇಕ ಬಸದಿಗಳನ್ನು 'ಎಕ್ಕೋಟಿ(=ಶೈವ)ಜಿನಾಲಯ'ವೆಂದು ಕರೆದುಕೊಂಡರು.

ಇದೇ ರೀತಿ ಅತ್ತಿಮಬ್ಬೆಯ ಕಾಲದಲ್ಲಿಯೇ ವೈದಿಕ ಬ್ರಾಹ್ಮಣರು (ವೈಷ್ಣವಗೀತಿ ಮನೋಹರರ್) ಆರಂಭಿಸಿದ್ದ ಜೈನರ ಮೇಲಿನ ದಾಳಿ ಕ್ರಮೇಣ ಇನ್ನೂ ಉಗ್ರಗೊಂಡಿತು. ಈಗ ಬ್ರಾಹ್ಮಣರೊಂದಿಗೆ ಜೈನರು ಒಪ್ಪಂದ ಮಾಡಿಕೊಂಡರೆಂಬಂತೆ ಎಷ್ಟೋ ಬಸದಿಗಳು 'ಬ್ರಹ್ಮಜಿನಾಲಯ'ವೆಂದು ಹೆಸರು ಬದಲಿಸಿಕೊಂಡವು. ಇಂಥ ಹಿಂಸೆ ದಕ್ಷಿಣಕರ್ನಾಟಕದಲ್ಲಿ ಶ್ರೀವೈಷ್ಣವರಿಂದ ಮುಂದುವರಿಯಿತು. ಇವರು ದಲಿತರಿಗೆ ಕೇವಲ ಮಂತ್ರದೀಕ್ಷೆ ಕೊಟ್ಟು ತಮ್ಮ ಅನುಯಾಯಿ ಸಂಖ್ಯೆ ವರ್ಧಿಸಿಕೊಂಡು,

ಅವರಿಗೆ 'ವೀರವೈಷ್ಣವ' ಹೆಸರು ನೀಡಿ, ಜೈನರ ನಾಶಕಾರ್ರ್ಯಕ್ಕೆ ಬಳಸಿಕೊಂಡರು. ತಮಿಳುನಾಡಿನ ಶೈವರ ದೌರ್ಜನ್ಯದಿಂದ ತಪ್ಪಿಸಿಕೊಂಡು ಕರ್ನಾಟಕಕ್ಕೆ ಬಂದ ಶ್ರೀವೈಷ್ಣವರು ಇಲ್ಲಿಯ ಜೈನರ ಮೇಲೆ ನಡೆಸಿದ ದೌರ್ಜನ್ಯಗಳಲ್ಲಿ ಶ್ರವಣಬೆಳ್ಗೊಳದ್ದು ದಾಖಲಾರ್ಹವಾಗಿದೆ. ಚಾವುಂಡರಾಯ ಇಲ್ಲಿ ಗೊಮ್ಮಟ ವಿಗ್ರಹ ನಿಲ್ಲಿಸಿದ, ಬಳಿಕ ಗಂಗರಾಜ ಅದಕ್ಕೆ ರಕ್ಷಣಾಗೋಡೆ ಕಟ್ಟಿಸಿದ. ಆ ಮೇಲೆ ಬುಕ್ಕರಾಯ ಜೈನ–ಶ್ರೀವೈಷ್ಣವ ಜಗಳ ಬಿಡಿಸಿ ಅದಕ್ಕೆ ೨೦ ಜನ ಕಾವಲುಗಾರರನ್ನು ನಿಯಮಿಸಿದ. ಅಂದರೆ ಗೊಮ್ಮಟ ವಿಗ್ರಹಕ್ಕೆ ೧೦ನೆಯ ಶತಮಾನದಲ್ಲಿ ಅವಶ್ಯವೆನಿಸದಿದ್ದ ರಕ್ಷಣಾಗೋಡೆ ೧೨ನೆಯ ಶತಮಾನದಲ್ಲಿ ಅಗತ್ಯವೆನಿಸಿತು, ಹೆಚ್ಚಿನದಾಗಿ ೧೪ನೆಯ ಶತಮಾನದಲ್ಲಿ ಕಾವಲುಗಾರರೂ ಅವಶ್ಯವೆನಿಸಿದರೆಂದು ಈ ಘಟನೆಗಳು ಧ್ವನಿಸುತ್ತವೆ. ೧೯ನೆಯ ಶತಮಾನದ ದೇವಚಂದ್ರನ 'ರಾಜಾವಳಿಕಥೆ' ಇಂಥ ಅನೇಕ ಸಮಾಜೋ ಧಾರ್ಮಿಕ ಸಂಘರ್ಷಗಳನ್ನು ದಾಖಲಿಸುತ್ತದೆ.

ಒಟ್ಟಾರೆ, ಕರ್ನಾಟಕದ ಅವೈದಿಕ ಧರ್ಮಗಳಲ್ಲಿ ಸಂಪೂರ್ಣ ನಾಶಕ್ಕೆ ಗುರಿಯಾದುದು ಬೌದ್ಧ, ಹೆಚ್ಚು ನಾಶಕ್ಕೆ ಗುರಿಯಾದುದು ಜೈನ, ನಾಶವಾಗದೆ ಉಳಿದು ಬೆಳೆದುದು ಲಿಂಗಾಯತ. ಹೀಗಿದ್ದೂ ವಿಜಯನಗರ ಕಾಲದಲ್ಲಿ ರಾಜಾಶ್ರಯದಿಂದಾಗಿ ಪ್ರಬಲವಾದ ವೈದಿಕ ಬ್ರಾಹ್ಮಣವು ಆಗಮಿಕ ಶೈವಬ್ರಾಹ್ಮಣವನ್ನು ಮಾಧ್ಯಮ ಮಾಡಿಕೊಂಡು, 'ಅವೈದಿಕ ಲಿಂಗಾಯತ'ವನ್ನು 'ವೈದಿಕ ವೀರಶೈವ'ವನ್ನಾಗಿಸಿತು.

ಮಧ್ಯಕಾಲೀನ ಈ ಸಂದರ್ಭದಲ್ಲಿ ವಚನಕಾರರಿಂದಾಗಿ 'ಕರಿ ಘನ ಅಂಕುಶ ಕಿರಿದೆನ್ನಬಹುದೆ?" ಎಂಬಂತೆ ಉತ್ತರಭಾರತದ ಹಿರಿಯ 'ವಲಸೆ ಸಂಸ್ಕೃತಿ'ಯು ಕಿರಿಯ 'ಸ್ಥಳೀಯ ಸಂಸ್ಕೃತಿ'ಗೆ ಬೆನ್ನು ತೋರಿಸಿತು; ಧರ್ಮ, ಭಾಷೆ, ಸಾಹಿತ್ಯ ನೆಲೆಗಳಿಂದ ಕಾಲುಕಿತ್ತಿತು. ಇದರ ಪ್ರಭಾವದಿಂದಾಗಿ, ಪಂಡಿತ ಪರಿವಾರಕ್ಕೆ ಸೀಮಿತವಾಗಿದ್ದ ಹಳಗನ್ನಡಕ್ಕೆ ಬದಲು ಬಹುಜನ ಬಳಕೆಯ ನಡುಗನ್ನಡವನ್ನು ಕಾವ್ಯಭಾಷೆಯನ್ನಾಗಿ ಪಳಗಿಸಿ, ಮಾರ್ಗೀಯ ಚಂಪುವಿಗೆ ಬದಲು ರಗಳೆ–ಷಟ್ಪದಿ ಇತ್ಯಾದಿ ದೇಶೀ ರಚನೆಗಳನ್ನು ಹರಿಹರಾದಿಗಳು ರೂಪಿಸಿದರು. ಈ ಮೊದಲು ವೈದಿಕವನ್ನು ವಿರೋಧಿಸಿಯೂ ಜೈನರು ಅವರ ರಾಮಾಯಣ ಮಹಾಭಾರತಗಳನ್ನು ಬರೆದರೆ, ಈ ವೀರಶೈವರು ಆ ಕಡೆಗೆ ಹೊರಳಿಯೂ ನೋಡಲಿಲ್ಲ. ಸಾಲದುದಕ್ಕೆ "ವಿದ್ಯೆಯೆಂದರೆ ರಾಮಾಯಣ ಭಾರತವಲ್ಲ", ಅವು "ಸೋದರರ ವಧೆ" ಎಂದು ಮುಂತಾಗಿ ನಿಂದಿಸಿ, ಉತ್ತರದ ರಾಮ–ಕೃಷ್ಣರಿಗೆ ಬದಲು ಸ್ಥಳೀಯ ಮಾದರ ಚೆನ್ನಯ್ಯ, ಬೇಡರ ಕಣ್ಣಪ್ಪ, ಅಕ್ಕಮಹಾದೇವಿ ಮೊದಲಾದ ಮಹಾತ್ಮರ ಘನತೆಯನ್ನು ಸಾಹಿತ್ಯದಲ್ಲಿ ಎತ್ತಿ ಹಿಡಿದರು. ಇದಲ್ಲದೆ 'ಓಲಯಿಸಿ ಬಾಳ್ವುದೆ ಕಷ್ಟಮಿಳಾದಿನಾಥರಂ' ಎಂದು ಪಂಪ ಸಾಮಾನ್ಯೀಕರಿಸಿ ಜಾರಿಕೊಂಡು ಮಾತನಾಡಿದರೆ, 'ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲಯಿಸುವೆನೆಂದು ನುಡಿವರಯ್ಯಾ ಶರಣರು, ಕೊಡುವೆನೇ ಉತ್ತರವನವರಿಗೆ? ಕೂಡಲಮ್ಮೆ' ಎಂದು ಬಸವಣ್ಣ ನೇರವಾಗಿ ನಿರ್ದಿಷ್ಟೀಕರಿಸಿ ಮಾತನಾಡುವುದು, ಕೊಂಡಗುಳಿ ಕೇಶಿರಾಜ ರಾಜನನ್ನು ಧಿಕ್ಕರಿಸಿ ತುಂಬಿದ ಆಸ್ಥಾನದಿಂದ ನಿರ್ಗಮಿಸುವುದು ಪ್ರಜೆಗಳ ರಾಜತ್ವದ ನಿರಾಕರಣೆಗೆ ನಿದರ್ಶನವೆನಿಸಿವೆ. ಬಳಿಕ ಹರಿಹರಾದಿಗಳು ಸಾಹಿತ್ಯವು ರಾಜಸ್ತುತಿಯ ಉಪಕರಣವಾಗುತ್ತಿದ್ದುದನ್ನು ಅಭಿನವಪಂಪನಿಗಿಂತ ಹೆಚ್ಚು ಸ್ಪಷ್ಟವಾಗಿ ಧಿಕ್ಕರಿಸಿದರು. ಇವರ ಕೆಲವು ಕೃತಿಗಳಲ್ಲಿ ಕಂಡುಬರುವ ಉಗ್ರ ಘಟನೆಗಳು ಆ ಕಾಲದ ಸಮಾಜೋ–ಧಾರ್ಮಿಕ ಸಂಘರ್ಷದ ತೀವ್ರತೆಯನ್ನು ಸೂಚಿಸುತ್ತವೆ.

ಹೀಗೆ, ತಮ್ಮ ಸಾಹಿತ್ಯವು ಹಳಗನ್ನಡಯುಗದಲ್ಲಿ ಜೈನಕವಿಗಳಿಂದ ವಿರೂಪಗೊಂಡ, ನಡುಗನ್ನಡ ಯುಗದಲ್ಲಿ ವೀರಶೈವ ಕವಿಗಳಿಂದ ತಿರಸ್ಕಾರಕ್ಕೆ ಗುರಿಯಾದ ನೋವು ವೈದಿಕರನ್ನು ಕಾಡುತ್ತಲಿದ್ದಿತು. ಇದನ್ನು ಸಮರ್ಥವಾಗಿ ನಿವಾರಿಸಿ ಕುಮಾರವ್ಯಾಸ ಭಾರತವನ್ನು, ಕುಮಾರವಾಲ್ಮೀಕಿ ರಾಮಾಯಣವನ್ನು, ನಿತ್ಯಾತ್ಮಶುಕ ಭಾಗವತವನ್ನು ಬರೆದು ನಿಲ್ಲಿಸಿದರು. ಈ ಹಿಂದೆ 'ಜನಪರ' ವಚನಸಾಹಿತ್ಯ ಹುಟ್ಟಿದಂತೆ ಈಗ ಇವರಿಂದ 'ಜನಪ್ರಿಯ' ಕೀರ್ತನಸಾಹಿತ್ಯ ಹುಟ್ಟಿತು. ಅದು ಪ್ರಧಾನವಾಗಿ 'ಸಾಮಾಜಿಕ ಸಂದೇಶ'ವಾಗಿ ದುಡಿದರೆ, ಇದು 'ಮಾನವಿಕ ಉಪದೇಶ'ವಾಗಿ ಮಿಡಿಯಿತು. ಅದೇನೇ ಇದ್ದರೂ, ಹಳಗನ್ನಡಯುಗದಲ್ಲಿ ಬಹುಮಟ್ಟಿಗೆ ಸೋತ ವೈದಿಕವು, ನಡುಗನ್ನಡಯುಗದ ಉತ್ತರಾರ್ಧದಲ್ಲಿ ಕೊನೆಗೂ ಬಹುಮಟ್ಟಿಗೆ ಗೆದ್ದಿತೆಂದೇ ಹೇಳಬೇಕು.

ಈ ಕಾಲಾವಧಿಯಲ್ಲಿ ಧರ್ಮಸಮನ್ವಯದ ದ್ಯೋತಕವೆಂಬಂತೆ ಅಲ್ಲಲ್ಲಿ ಹರಿಹರೇಶ್ವರ ದೇವಾಲಯಗಳನ್ನು ಕಟ್ಟಿಸಿದ್ದರೂ, ತ್ರಿಕೂಟ ದೇವಾಲಯದಲ್ಲಿ ಹರಿ ಹರ ಬ್ರಹ್ಮ ದೈವತಗಳನ್ನು ಸ್ಥಾಪಿಸಿದ್ದರೂ, ಸಾಮಾನ್ಯವಾಗಿ ವೈದಿಕಬ್ರಾಹ್ಮಣರು ಇಲ್ಲವೆ ಆಗಮಿಕ ಶೈವ ಬ್ರಾಹ್ಮಣ(ಜಂಗಮರು)ರು ಇವುಗಳ ಅರ್ಚಕರಾಗಿರುತ್ತಿದ್ದ ಮತ್ತು ದೇವಾಲಯದೊಳಗೆ ಬ್ರಾಹ್ಮಣೇತರರಿಗೆ ಪ್ರವೇಶವಿಲ್ಲದಿದ್ದ ಕಾರಣ, ಇದೆಲ್ಲ ಕೇವಲ ಒಂದು ಆದರ್ಶವೋ, ಶೋಷಕರು ವಿಭಿನ್ನ ಸಮುದಾಯಗಳನ್ನು ನಂಬಿಸುವ ಒಂದು ತಂತ್ರವೋ ಎನಿಸುತ್ತದೆ. ದೇವಾಲಯದ ಹೊರಗೆ 'ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ.............' ಎಂಬ ಶಾಸನ ನಿಲ್ಲಿಸಿದರೂ ಒಳಗೆ ಕೇವಲ ಚನ್ನಕೇಶವ ವಿಗ್ರಹವಿರುವುದೂ, ಅದರ ಅರ್ಚಕರು ಶ್ರೀವೈಷ್ಣವರಿರುವುದೂ, ಇದೆಲ್ಲ ಸಮನ್ವಯವೆಂಬ ಕಣ್ಣೊರೆಸುವ ತಂತ್ರವೆನಿಸುತ್ತದೆ. ಆದುದರಿಂದ ಇಂಥವುಗಳನ್ನು ಮರುವಿಮರ್ಶೆ ಮಾಡುವುದು ಇಂದು ತೀರ ಅವಶ್ಯವೆನಿಸುತ್ತದೆ.

* * *

ಈ ವರೆಗಿನ ಸಮಾಜೋಧಾರ್ಮಿಕ ಕಾದಾಟವು ಪರಸ್ಪರ ಆಂತರಿಕವಾದುದು. ಮುಸಲ್ಮಾನರ ಪ್ರವೇಶದಿಂದಾಗಿ ಅದು ೧೩ನೆಯ ಶತಮಾನದಲ್ಲಿ ಆಂತರಿಕ–ಬಾಹ್ಯ ಸ್ವರೂಪ ಪಡೆಯಿತು. ಈಗ ಮುಸಲ್ಮಾನ ಅರಸರು ರಾಜಕೀಯ ಆಕ್ರಮಣದ ಭಾಗವೆಂಬಂತೆ ಸ್ಥಳೀಯ ಧರ್ಮಗಳ ಮೇಲೆ ಬಲವಂತದ ಮತಾಂತರವನ್ನೂ ಕೈಕೊಂಡರು. ದೈವವಾದಿಗಳಾದ ಕನ್ನಡಿಗರು ಇದನ್ನು ಮೌನವಾಗಿ ಸಹಿಸಿದರು. ಈ ಮೊದಲು ಬೌದ್ಧ–ಜೈನ ಸ್ಮಾರಕಗಳನ್ನು ನಾಶಮಾಡಿದ್ದ ವೈದಿಕ–ಆಗಮಿಕರ ದೇವಾಲಯಗಳ ಮೇಲೆ ಮಸೀದಿಗಳು ತಲೆಯೆತ್ತಿದವು. ಹೀಗಾಗಿ ಮುಸಲ್ಮಾನರ ಮಸೀದಿಗಳ ಕೆಳಗೆ ಹಿಂದೂ ದೇವಾಲಯಗಳಿವೆಯೆಂದು ಕೆಲವು ಇತಿಹಾಸಕಾರರು ಹೇಳುವುದು ನಿಜವಿದ್ದರೂ, ಇನ್ನೂ ಕೆಳಗೆ ಬೌದ್ಧರ ಸ್ಮಾರಕಗಳಿವೆಯೆನ್ನುವುದನ್ನು ಅವರು ಮರೆಯಬಾರದು. ಒಟ್ಟಾರೆ, ಮುಸಲ್ಮಾನರ ದಾಳಿಯು ಮತಾಂತರ, ದೇವಾಲಯ ನಾಶಗಳಿಗೆ ಸೀಮಿತವಾಯಿತೇ ಹೊರತು, ನಮ್ಮ ಜೀವನಕ್ರಮ, ಭಾಷೆ, ಸಾಹಿತ್ಯಗಳ ಮೇಲೆ ವೈದಿಕದಂತೆ ಪ್ರಭಾವಿಸಲಿಲ್ಲ.

ಇದಲ್ಲದೆ, ಮುಸಲ್ಮಾನ ಚಹರೆಯ ಶಿರಹಟ್ಟಿ, ಸಾವಳಗಿ, ತಿಂಥಿಣಿ, ಕೊಡೇಕಲ್ಲ ಮೊದಲಾದ ಕ್ಷೇತ್ರಗಳಿಗೆ ಹಿಂದೂ ಮುಸ್ಲಿಂ ಭಕ್ತರು, ದಲಿತ ಚಹರೆಯ ಮಂಟೇಸ್ವಾಮಿ, ಮಲೆಯ ಮಹಾದೇಶ್ವರ ಮೊದಲಾದ ಮಹಾಪುರುಷರಿಗೆ ಸರ್ವಧರ್ಮೀಯರು ನಡೆದುಕೊಳ್ಳುತ್ತಿದ್ದರೂ, ಈ ನಾಥ–

ಆರೂಢ ಪಂಥಗಳ ಭಕ್ತರ ಧಾರ್ಮಿಕ ಆಚರಣೆಯಲ್ಲಿ ಸಮನ್ವಯವಿದೆಯೇ ಹೊರತು, ಲೌಕಿಕ ವ್ಯವಹಾರದಲ್ಲಿಲ್ಲ. ಉದಾ: ನಾಥಪಂಥೀಯ ಗೋವಿಂದಭಟ್ಟ ಶಿಶುನಾಳ ಶರೀಫ ಗುರು-ಶಿಷ್ಯರಾಗಿದ್ದರೂ ರಕ್ತಸಂಬಂಧ ಇತ್ಯಾದಿ ಲೌಕಿಕ ವ್ಯವಹಾರಗಳಲ್ಲಿ ಗುರು ಬ್ರಾಹ್ಮಣನಂತೆ, ಶಿಷ್ಯ ಮುಸಲ್ಮಾನಂತೆ ನಡೆದುಕೊಳ್ಳುತ್ತಿದ್ದರು. ಗುರುವಿನ ಪರಿಸರದಲ್ಲಿ ಅದ್ವೈತ, ಸಮಾಜದ ಪರಿಸರದಲ್ಲಿ ದ್ವೈತ ನಡತೆಯ ಇಂಥವರನ್ನು ಶರಣರು 'ಉಂಬುದು ಊಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರವೆಂಬ ಅನಾಚಾರಿಯ ಮುಖವ ನೋಡಲಾಗದು' ಎಂದು ಜರೆಯುತ್ತ, ಮುಂದುವರಿದು ಒಂದೇ ಒಂದು ಅಧಿಕೃತ ರಕ್ತಸಂಬಂಧ ನೆರವರಿಸಿದ ಕಾರಣ, ಕಲ್ಯಾಣಕ್ರಾಂತಿ ಸಂಭವಿಸಿದುದನ್ನು ನೆನೆದರೆ, ಏನೆಲ್ಲ ಸಹಿಸುತ್ತಿದ್ದರೂ ರಕ್ತಸಂಬಂಧದಂಥ ಸಮನ್ವಯವನ್ನು ಪ್ರಾಚೀನ ಸಮಾಜ ಸಹಿಸುತ್ತಿರಲಿಲ್ಲವೆಂದು ಸ್ಪಷ್ಟವಾಗುತ್ತದೆ.

ಅದೇನೆ ಇದ್ದರೂ, ಸಮಾಜದಲ್ಲಿ ಲೌಕಿಕ-ಧಾರ್ಮಿಕವಾಗಿ ಪ್ರತ್ಯೇಕವಾಗಿರಬೇಕೆನ್ನುವ ಆಚಾರ್ಯರ 'ಜಾತಿಧರ್ಮ'ಗಳಿಗಿಂತ, ಲೌಕಿಕದಲ್ಲಿ ಪ್ರತ್ಯೇಕವಾಗಿದ್ದು-ಧಾರ್ಮಿಕದಲ್ಲಿ ಸಮನ್ವಯವಾಗಿರಬೇಕೆನ್ನುವ ಅವಧೂತರ 'ಜಾತಿಪಂಥ'ಗಳು ಒಂದಿಷ್ಟು ಉದಾರವಾದಿಯೆಂದೇ ಹೇಳಬೇಕು. ಹೀಗಾಗಿ, 'ಜಾತಿಧರ್ಮ'ಗಳೇ ವಿಶೇಷವಾಗಿರುವ ಪ್ರಾಚೀನ ಕರ್ನಾಟಕದಲ್ಲಿ ಧಾರ್ಮಿಕ ಘರ್ಷಣೆ ಹೆಚ್ಚು, 'ಜಾತಿಪಂಥ'ಗಳೇ ವಿಶೇಷವಾಗಿರುವ ಮಹಾರಾಷ್ಟ್ರದಲ್ಲಿ ಧಾರ್ಮಿಕ ಘರ್ಷಣೆ ಕಡಿಮೆ ಜರುಗಿದವೆಂದು ತೋರುತ್ತದೆ. ಅವಧೂತರ ಈ 'ಜಾತಿಪಂಥ'ಗಳಿಗಿಂತ ಜಾತಿನಿರಪೇಕ್ಷ ನಿಲವಿನ ಶರಣರ 'ವೃತ್ತಿಪಂಥ' ಇನ್ನೂ ಉದಾರವಾಗಿದ್ದು, ಇದರಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಜರುಗಬಹುದೇ ಹೊರತು, ಅಸ್ಥಿತ್ವ-ಪ್ರತಿಷ್ಠೆಗಳ ಕಾದಾಟಕ್ಕೆ ಅವಕಾಶ ಕಡಿಮೆಯೆಂದೇ ಹೇಳಬೇಕು.

ಈ ಮಧ್ಯೆ ಆರಂಭದಿಂದಲೂ ಆಗಾಗ ಸಣ್ಣಪುಟ್ಟ ವೈಯಕ್ತಿಕ, ಸಾಮುದಾಯಿಕ ಘರ್ಷಣೆಗಳು ಜರುಗಿವೆ. ೧೫೭೪ರಲ್ಲಿ ಮೂಡಬಿದರೆಯಲ್ಲಿಯೇ ಜರುಗಿದ ಅಂಥ ಒಂದು ಘಟನೆಯನ್ನು ಧರ್ಮಸ್ಥಳದ ಮಂಜೂಷ ವಸ್ತುಸಂಗ್ರಹಾಲಯದ ತಾಮ್ರಪಟ ಹೀಗೆ ತಿಳಿಸುತ್ತದೆ: "ಮೂಡಬಿದರೆಯ ನೆಲ್ಲಿತೀರ್ಥ ಬಡಾವಣೆಯಲ್ಲಿಯ ವೀರಭದ್ರ ವಿಗ್ರಹವನ್ನು ಕಿತ್ತಿಹಾಕಿದ ವಿಷಯವಾಗಿ ಜಂಗಮರಿಗೂ ಬ್ರಾಹ್ಮಣರಿಗೂ ಜಗಳ ಉದ್ಭವಿಸಿದ್ದಿತು. ಜಂಗಮರು ಬಾಳೆಹಳ್ಳಿ ಸಿಂಹಾಸನದ ಕುಮಾರ ಚೆನ್ನಬಸವರಾಜನಿಗೆ ದೂರು ನೀಡಿದರು. ಮೂಡಬಿದುರೆಯ ರಾಣಿ ಅಬ್ಬಕ್ಕದೇವಿ ಮೊದಲಾದವರ ಮೂಲಕ ಈ ಜಗಳ ಬಗೆಹರಿಯಿತು." ಭೂಕಂದಾಯ ವಿಷಯವಾಗಿ ದಂಗೆಯೆದ್ದ ೫೦೦ಜನ ಜಂಗಮರನ್ನು ಮೈಸೂರಿನ ಚಿಕದೇವರಾಯ ಒಡೆಯರು ನಂಜನಗೂಡಿನಲ್ಲಿ ಕೊಲ್ಲಿಸಿದ ಭೀಕರ ಘಟನೆ ಇಲ್ಲಿ ದಾಖಲಿಸಲೇಬೇಕಾದ ವಿಷಯವಾಗಿದೆ. ಇದೇರೀತಿ ಸಮಾಜೋ ಧಾರ್ಮಿಕ ಹಕ್ಕು-ಬಾಧ್ಯತೆ ವಿಷಯಗಳಾದ ಕಳಸ ಮರ್ಯಾದೆ, ವ್ಯಾಸನತೋಳು ಮೆರವಣಿಗೆ ಇತ್ಯಾದಿಗಳಿಗಾಗಿ ಜರುಗಿದ ಅನೇಕ ಘರ್ಷಣೆ-ತೀರ್ಮಗಳು ಇತಿಹಾಸದುದ್ದಕ್ಕೂ ಸಿಗುತ್ತವೆ.

ಗ್ರಾಮೀಣ ಪ್ರದೇಶದಲ್ಲಿ ಬಹುಸಂಖ್ಯಾತ-ಅಲ್ಪಸಂಖ್ಯಾತ, ಧನಿಕ-ಶ್ರಮಿಕರ ನಡುವೆ, ವಿಭಿನ್ನ ಕೋಮುಗಳ ನಡುವೆ ಅನೇಕ ಸಂಘರ್ಷಗಳು ಜರಗುತ್ತ ಬಂದಿದ್ದು, ಇವುಗಳಲ್ಲಿ ಕೆಲವು ಜನಪದ ಸಾಹಿತ್ಯದಲ್ಲಿಯೂ ದಾಖಲಾಗಿವೆ. ಈ ಸಂಘರ್ಷಗಳ ಉದ್ದೇಶ ಸಾಮಾನ್ಯವಾಗಿ ಒಂದು ವರ್ಗ ಇನ್ನೊಂದು ವರ್ಗವನ್ನು ನಿಯಂತ್ರಿಸುವುದು ಮತ್ತು ಆ ನಿಯಂತ್ರಣವನ್ನು ಮುಂದುವರಿಸುವುದಾಗಿತ್ತೇ

ಹೊರತು, ಸಮನ್ವಯಭಾವದ್ದಾಗಿರಲಿಲ್ಲ. ಆದುದರಿಂದ ಇಂಥವುಗಳನ್ನು ಸಮನ್ವಯಕ್ಕಾಗಿ ಸಂಘರ್ಷಗಳಲ್ಲ, ಪ್ರಭುತ್ವಕ್ಕಾಗಿ ಸಂಘರ್ಷಗಳೆಂದು ಕರೆಯಬೇಕಾಗುತ್ತದೆ.

* * *

ಕನ್ನಡಿಗರಿಗೆ ಮುಸಲ್ಮಾನರ ಆಗಮನ ಒಂದು ಬಗೆಯ ಹೊಸ ಅನುಭವವೆನಿಸಿದರೆ, ಆಂಗ್ಲರ ಆಗಮನ ಇನ್ನೊಂದು ಬಗೆಯ ಹೊಸ ಅನುಭವವೆನಿಸಿತು. ಮತಾಂತರಕ್ಕೆ ಸಂಬಂಧಪಟ್ಟಂತೆ ಅಲ್ಲಿರುವಷ್ಟು ಬಲತ್ಕಾರ ಇಲ್ಲಿರಲಿಲ್ಲ. ದೀನ–ದಲಿತ, ಕೆಲವೊಮ್ಮೆ ಸ್ಥಿತಿವಂತ ಕನ್ನಡಿಗರು ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದುತ್ತಿರುವಾಗ ಇದು ಅವರವರ ವೈಯಕ್ತಿಕ ವಿಷಯವೆಂದು ಭಾವಿಸಿ, ನಮ್ಮ ಸಾಮಾಜಿಕ ನೇತಾರರು, ಮಠಾಧೀಶರು ಆ ಬಗ್ಗೆ ನಿರ್ಲಿಪ್ತರಾಗಿ ಉಳಿದರು. ಈ ಮತಾಂತರ ಪ್ರಕ್ರಿಯೆ ಅಂದು ಸಾಮಾಜಿಕ ಅಸಮಾಧಾನವನ್ನುಂಟು ಮಾಡಿತಾದರೂ ಅಶಾಂತಿಯನ್ನು ಹುಟ್ಟುಹಾಕಲಿಲ್ಲ.

ಆದರೆ ಒಂದೊಂದಾಗಿ ಸಂಸ್ಥಾನಗಳನ್ನು ಉರುಳಿಸಿ, ಇಂಗ್ಲಿಷರು ಅಧಿಕಾರಿಗಳನ್ನು ನೇಮಿಸಿದ ಸಂದರ್ಭದಲ್ಲಿ, ಸಂಸ್ಥಾನಿಕರ ಸಂಬಂಧಿಗಳೋ, ಪದಚ್ಯುತ ಅಧಿಕಾರಿಗಳೋ ಸಮಯಸಾಧಕರಂತೆ ಅಲ್ಲಲ್ಲಿ ಅವರ ವಿರುದ್ಧ ದಂಗೆ ಸೃಷ್ಟಿಸುತ್ತಿದ್ದರು; ಸಾಮಾನ್ಯರನ್ನೂ ಸೇರಿಸಿಕೊಳ್ಳುತ್ತಿದ್ದರು. ಇದರಿಂದಾಗಿ, ಈ ವರೆಗಿನ ರಾಜಕೀಯ ನೆಲೆಯ ಕಾದಾಟ ಕ್ರಮೇಣ ಸಾಮಾಜಿಕ ನೆಲೆಯ ಹೋರಾಟದತ್ತ ಸರಿಯಲಾರಂಭಿಸಿತು.

ಎರಡನೆಯದಾಗಿ, ಹಳೆಯ ಭೂಕಂದಾಯ ಪದ್ಧತಿಗೆ ಹೇಗೋ ಹೊಂದಿಕೊಂಡಿದ್ದ ರೈತರು ಬ್ರಿಟಿಶರ ಭೂಕಂದಾಯ ಪದ್ಧತಿಯಿಂದುಂಟಾದ ಆರ್ಥಿಕ ಏರುಪೇರುಗಳನ್ನು ಅಲ್ಲಲ್ಲಿ ವಿರೋಧಿಸಲಾರಂಭಿಸಿದರು. ಈ ರೈತವರ್ಗದಲ್ಲಿ ಎಲ್ಲ ಜಾತಿಯವರೂ ಇದ್ದುದರಿಂದ ಈ ಘರ್ಷಣೆ ಸಾಮಾಜಿಕರತ್ತ ಇನ್ನೂ ಸರಿಯಿತು.

ಹಳೆಯ ಕೃಷಿಸಂಸ್ಕೃತಿಯ ಜೊತೆಗೆ ಹೊಸ ಯಂತ್ರಸಂಸ್ಕೃತಿ ಬೆಳೆದು, ರೈತರಂತೆ ಕಾರ್ಮಿಕ ವರ್ಗವೊಂದು ಹುಟ್ಟಿಕೊಂಡು, ತಮ್ಮ ಸಮಸ್ಯೆಗಳಿಗೆ ನ್ಯಾಯ ಕೇಳತೊಡಗುವಲ್ಲಿ ಘರ್ಷಣೆಗೆ ಮತ್ತೂ ಸಾಮಾಜಿಕ ವ್ಯಾಪಕತೆ ಪ್ರಾಪ್ತವಾಯಿತು.

ಆಡಳಿತದಲ್ಲಿ ಇನಾಮಿಪದ್ಧತಿಗೆ ಬದಲು ನೌಕರಿಪದ್ಧತಿ ಅಸ್ತಿತ್ವಕ್ಕೆ ಬಂದ ಹೊಸದರಲ್ಲಿ ಬ್ರಾಹ್ಮಣರೇ ಸೇರಿಕೊಂಡು, ಅವರ ಪ್ರಾಬಲ್ಯ ಬೆಳೆಯುವಲ್ಲಿ, ಇದನ್ನು ಬ್ರಾಹ್ಮಣೇತರರು ವಿರೋಧಿಸುವುದು ಆರಂಭವಾಗಿ, 'ಬ್ರಾಹ್ಮಣೇತರ ಚಳುವಳಿ' ಕಣ್ಣು ತೆರೆಯಿತು.

ಇದೇರೀತಿ ಮೈಸೂರು ಅರಸು ಕುಟುಂಬದವರ ಶ್ರೀವೈಷ್ಣವ ಪದ್ಧತಿಯ ಅನುಸರಣೆಯಿಂದಾಗಿ, ತಮಿಳು ಶ್ರೀವೈಷ್ಣವಬ್ರಾಹ್ಮಣರು ದಕ್ಷಿಣ ಕರ್ನಾಟಕದ ಆಡಳಿತದಲ್ಲಿ, ಮಹಾರಾಷ್ಟ್ರದ ಬ್ರಾಹ್ಮಣ ಪೇಶ್ವೆಯವರಿಂದಾಗಿ ಮರಾಠಿ ಬ್ರಾಹ್ಮಣರು ಉತ್ತರ ಕರ್ನಾಟಕದ ಆಡಳಿತದಲ್ಲಿ ಪ್ರಬಲರಾದರು. ಈಗ ಅವಕಾಶ ವಂಚಿತರಾದ ಅಸಂತುಷ್ಟ ಸ್ಥಳೀಯ ಕನ್ನಡಿಗರು ಪ್ರಾದೇಶಿಕ ನ್ಯಾಯದ ದನಿಯೆತ್ತಿದರು.

ಈಗಾಗಲೇ ಬ್ರಿಟಿಶರು ಆರಂಭಿಸಿದ್ದ ಸಾರ್ವತ್ರಿಕ ಶಿಕ್ಷಣ, ಸಾಮಾಜಿಕ ಸಮಾನತೆ ಇತ್ಯಾದಿಗಳಿಂದಾಗಿ ಕನ್ನಡಿಗರಲ್ಲಿ ಜಾಗ್ರತಿಯುಂಟಾಗಿ, ಅನ್ಯಾಯವನ್ನು ಪ್ರಶ್ನಿಸುವ ಮನೋಧರ್ಮ ಅವರಲ್ಲಿ ಮೂಡಿತು.

ಈ ಮೊದಲಿನ 'ಸಮಾಜೋಧಾರ್ಮಿಕ' ಸಂಘರ್ಷದ ಮೇಲಿನ ಒತ್ತು ಈಗ 'ಸಮಾಜೋರಾಜಕೀಯ'ದ ಮೇಲೆ ಸರಿಯಿತು. ಮತ್ತು ಅದು 'ಸಾಮಾಜಿಕ ನ್ಯಾಯಕ್ಕಾಗಿ ಸಂಘರ್ಷ'ವೆಂಬ ಸರಿಯಾದ ಅರ್ಥ ಪಡೆದು, ಚಳುವಳಿ ಎಂಬ ಪರ್ಯಾಯ ಪದದೊಂದಿಗೆ ಚಲಾವಣೆಗೆ ಬಂದಿತು.

ಆರಂಭದಲ್ಲಿ ಈ ಚಳುವಳಿ ಹಿಂಸಾರೂಪ, ಅಹಿಂಸಾರೂಪವೆಂದು ಎರಡು ಕವಲೊಡೆಯಿತು. ಹಲಗಲಿ ಬೇಡರ ೧೮೫೭ರ 'ನಿರಾಯುಧ ಕಾಯದೆ' ವಿರುದ್ಧದ ದಂಗೆ ಮೊದಲಾದುವು ಹಿಂಸಾರೂಪದ ಚಳುವಳಿಯೆನಿಸಿದರೆ, ೧೮೬೦ರ 'ಆದಾಯ ತೆರಿಗೆ' ವಿರುದ್ಧದ ಹುಬ್ಬಳ್ಳಿ ಮುಸಲ್ಮಾನರ ಹೋರಾಟ ಮೊದಲಾದುವು ಅಹಿಂಸಾರೂಪದ ಚಳುವಳಿಯೆನಿಸಿದವು. ಭಾರತಸ್ವಾತಂತ್ರ್ಯ ಹೋರಾಟದ ನೇತಾರ ಗಾಂಧೀಜಿ ಕಾರಣವಾಗಿ, ಈ ಅಹಿಂಸಾ ಚಳುವಳಿ ಹೆಚ್ಚು ಸ್ಪಷ್ಟತೆ ಪಡೆಯಿತು. ಅಸಹಕಾರ, ಉಪವಾಸ ಇತ್ಯಾದಿ ದಾರಿಗಳಲ್ಲಿ ಬಿಚ್ಚಿಕೊಂಡ ಇದು 'ಚಳುವಳಿಯುಗ', 'ಸಂಘರ್ಷಯುಗ'ವೆಂದೇ ಪ್ರಸಿದ್ಧವಾಗಿದೆ.

ಈ ಕಾಲದಲ್ಲಿ ವಿದೇಶಿಯರ 'ಆಡಳಿತ ವಿರುದ್ಧ'ದ ಗಾಂಧೀ ಚಳುವಳಿ, ಸ್ವದೇಶೀಯರ 'ಶೋಷಣೆ ವಿರುದ್ಧ'ದ ಅಂಬೇಡ್ಕರ ಚಳುವಳಿ–ಹೀಗೆ ಎರಡು ಸ್ವಾತಂತ್ರ್ಯ ಚಳುವಳಿಗಳು ಹುಟ್ಟಿಕೊಂಡವು. ಬ್ರಿಟಿಶರ ನಿರ್ಗಮನದೊಂದಿಗೆ, 'ಯೂಜ್ ಆ್ಯಂಡ್ ಥ್ರೋ' ರೀತಿಯಲ್ಲಿ ಗಾಂಧೀಜಿಯವರನ್ನು ಬಳಸಿಕೊಂಡು ಕೊಲ್ಲುವುದರೊಂದಿಗೆ ಗಾಂಧೀ ಚಳುವಳಿ ಸಾಮಾನ್ಯವಾಗಿ ಮುಗಿದರೆ, ಅಂಬೇಡ್ಕರ ಚಳುವಳಿ ಬೇರೆ ಬೇರೆ ರೂಪಗಳಲ್ಲಿ ಈಗಲೂ ಜೀವಂತವಿದೆ. ಗಮನಿಸಬೇಕಾದ ಸಂಗತಿಯೆಂದರೆ, ಭಾರತವನ್ನೆಲ್ಲ ವ್ಯಾಪಿಸಿದ್ದ ಗಾಂಧೀ ಚಳುವಳಿಯನ್ನು ಕೈಬಿಟ್ಟು, ಅಂದಿನ ಕನ್ನಡ ನವೋದಯ ಕವಿಗಳು ಕೇವಲ ರಮ್ಯಭಾವನೆಯ ಪ್ರೇಮಗೀತಗಳನ್ನೋ, ನಿಸರ್ಗಗೀತೆಗಳನ್ನೋ, ಆಧ್ಯಾತ್ಮಗೀತೆಗಳನ್ನೋ ರಚಿಸಿದರು. ಬಹಳೆಂದರೆ ಸುರಕ್ಷಿತ ನೆಲೆಯಲ್ಲಿ ನಿಂತು ರಾಷ್ಟ್ರೀಯತೆಯ ಬಗ್ಗೆ ಬರೆದರೇ ಹೊರತು, ಅರಕ್ಷಿತ ನೆಲೆಯಲ್ಲಿ ನಿಂತು ಬ್ರಿಟಿಶರ ವಿರುದ್ಧದ ಚಳುವಳಿಯ ಬಗ್ಗೆ ಚಕಾರವೆತ್ತಲಿಲ್ಲ. ಈ ಸಾಹಿತ್ಯವನ್ನು ನೋಡಿದರೆ ಇವರ ಕಾಲದಲ್ಲಿ ಚಳುವಳಿ ನಡೆದಿಲ್ಲ, ಎಲ್ಲರೂ ನಲ್ಲ–ನಲ್ಲೆಯರ ಸಲ್ಲಾಪ, ಆಧ್ಯಾತ್ಮದ ಆನಂದದಲ್ಲಿ ಸಂತೃಪ್ತ ಜೀವನ ಕಳೆದರೆಂದು ಭಾಸವಾಗುತ್ತದೆ. ಹೀಗಾಗಿ 'ಸಮಾಜದ ಪ್ರತಿಬಿಂಬ'ವೆಂಬ ಅರ್ಥ ಕಳೆದುಕೊಂಡ ಈ ಸಾಹಿತ್ಯ, ಆ ಅರ್ಥ ಪಡೆದುಕೊಂಡುದು ಅಂದರೆ ಸಂಘರ್ಷ ಸಾಹಿತ್ಯ ಹುಟ್ಟಿದುದು ಪ್ರಗತಿಶೀಲ–ದಲಿತ–ಬಂಡಾಯ ಕಾಲದಲ್ಲಿ ಮಾತ್ರ ಎಂದೇ ಹೇಳಬೇಕು.

ನವೋದಯದ ಮೊದಲ ತಲೆಮಾರಿನಲ್ಲಿ ಮಾಸ್ತಿ–ತಮಿಳು, ಬೇಂದ್ರೆ–ಮರಾಠಿ, ಗೋವಿಂದ ಪೈ–ಕೊಂಕಣಿ, ಟಿ.ಎಸ್. ವೆಂಕಣಯ್ಯ–ತೆಲುಗು ಮೊದಲಾದ ಅನ್ಯ ಮಾತೃಭಾಷೆಯ ವೈದಿಕ ಪ್ರತಿಭೆಗಳೇ ಮಿಂಚಿದ್ದು, ಎರಡನೆಯ ತಲೆಮಾರಿನಲ್ಲಿ ಇದು ಕನ್ನಡ ಮಾತೃಭಾಷೆಯ ವೈದಿಕ ಪ್ರತಿಭೆಗಳ ಕೈಗೆ ವರ್ಗಾವಣೆಗೊಂಡಿತು. ಮಾಧ್ಯಮಗಳೂ ಅವರ ಹಿಡಿತದಲ್ಲುಳಿದವು. ಆಗ 'ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ವನ್ನು ಉದ್ಘಾಟಿಸಿ ಕುವೆಂಪು ಮಾಡಿದ ಭಾಷಣವನ್ನು, ಬಸಲಿಂಗಪ್ಪನವರ ಬೂಸಾ ಪ್ರಕರಣದಲ್ಲಿ ಸೃಷ್ಟಿಯಾದ ಸಂಚಲನವನ್ನು, ಸಾಹಿತ್ಯದ ಹೆಸರಿನಲ್ಲಿ ಅನ್ಯಸಮಾಜಗಳ ಮೇಲೆ ಮಾಸ್ತಿ ಮೊದಲಾದವರು ಮಾಡುತ್ತಬಂದ ಸೂಕ್ಷ್ಮ ಶಾಬ್ದಿಕ ಹಲ್ಲೆಗೆ ಸಂಬಂಧಪಟ್ಟವರು ತೋರಿದ ವಿರೋಧವನ್ನು, ವ್ಯಾಖ್ಯಾನಾತ್ಮಕ ಸಂಶೋಧನೆಯನ್ನು ಹೇಗೆ ನೋಡಬೇಕೆಂಬುದು ಗೊತ್ತಿಲ್ಲದವರು ವ್ಯಕ್ತಪಡಿಸುತ್ತಬಂದ ಪ್ರತಿಭಟನೆಗಳನ್ನು ಇಲ್ಲಿ ನೆನೆಯಬಹುದು.

ಸ್ವಾತಂತ್ರ್ಯಪೂರ್ವ-ಸ್ವಾತಂತ್ರ್ಯೋತ್ತರ ಕಾಲದಲ್ಲಿ ಕರ್ನಾಟಕ ಏಕೀಕರಣ ಚಳುವಳಿ, ರೈತ ಚಳುವಳಿ, ನದಿನೀರಿನ ಚಳುವಳಿ, ಭಾಷಾಚಳುವಳಿ, ದಲಿತಚಳುವಳಿ, ಗಡಿನಾಡ ಚಳುವಳಿ, ಕಾರ್ಮಿಕ ಚಳುವಳಿ, ಸ್ತ್ರೀ ವಿಮೋಚನಾ ಚಳುವಳಿ ಇತ್ಯಾದಿ ಅರ್ಥಪೂರ್ಣ ಚಳುವಳಿಗಳು ಜರುಗಿವೆ, ಜರುಗುತ್ತಿವೆಯಾದರೂ ನ್ಯಾಯದ ಮುಖವಾಡ ಧರಿಸಿರುವ ಅನ್ಯಾಯ ರೂಪದ ಚಳುವಳಿಗಳ ಸಂಖ್ಯೆ ಇಂದು ವರ್ಧಿಸುತ್ತಲಿದೆ. ಉಪವಾಸ ಸತ್ಯಾಗ್ರಹ ಒಂದು ಪ್ರಹಸನವಾಗಿ ಪರಿಣಮಿಸುತ್ತಲಿದೆ. ಗಾಂಧೀಜಿಯವರು 'ಹೋರಾಟ'ದ ಮೂಲಕ ಕಂಡುಕೊಂಡಿದ್ದ ರಾಮರಾಜ್ಯ ಪರಿಕಲ್ಪನೆಯು ರಾಮಸೇನೆ, ಬಜರಂಗದಳಗಳೆಂಬ 'ಕಾದಾಟ'ಗಳನ್ನು ಹುಟ್ಟು ಹಾಕಿದೆ. ಇವುಗಳ ಜೊತೆಗೆ ಕಮ್ಯುನಿಷ್ಟ ಚಳುವಳಿಯು ನಕ್ಸಲೀಯ ಚಟುವಟಿಕೆಯಾಗಿ ಬೆಳೆದಿದೆ. ಜೊತೆಗೆ ಭೂಗತ ಉಗ್ರರು ಹುಟ್ಟಿಕೊಳ್ಳುತ್ತಲಿದ್ದಾರೆ. ಒಟ್ಟಾರೆ, ನಮ್ಮ ನಾಡಿನಲ್ಲಿ ವಲಸೆ ಧರ್ಮಗಳು ಆರಂಭಿಸಿದ್ದ ಕಾದಾಟವು ಬಸವಯುಗ, ಗಾಂಧಿ-ಅಂಬೇಡ್ಕರ ಯುಗಗಳಲ್ಲಿ ಹೋರಾಟವಾಗಿ, ಈಗ ಮತ್ತೆ ಕಾದಾಟದ ಸ್ಥಿತಿಗಿಳಿದಿದೆ.

ಇಲ್ಲಿ ಗಮನಿಸಬೇಕಾದ ಎರಡು ಸಂಗತಿಗಳಿವೆ. ಒಂದು: ಕಳೆದ ನೂರು ವರ್ಷಗಳಿಂದ ಸ್ಥಳೀಯ, ಪ್ರಾಂತೀಯ ಮತ್ತು ರಾಷ್ಟ್ರೀಯ ಚಳುವಳಿಗಳಲ್ಲಿ ಭಾಗವಹಿಸಿದ ಕನ್ನಡಿಗರಲ್ಲಿ ಒಬ್ಬರೂ ರಾಷ್ಟ್ರೀಯ ನಾಯಕರಾಗಿ ಬೆಳೆಯಲಿಲ್ಲ. ಹೀಗಾಗಿ ಇಂಡಿಯಾದ ಆಡಳಿತವೆಂದರೆ ಉತ್ತರ ಭಾರತದವರ ಆಡಳಿತವೆಂಬ ಪರಿಸ್ಥಿತಿ ಅಂದಿನಿಂದ ಇಂದಿನ ವರೆಗೂ ಮುಂದುವರಿಯುತ್ತಲಿದೆ. ಎರಡು: ತಮ್ಮ ಅಸ್ಮಿತೆಗಾಗಿ ಅವೈದಿಕಗಳು ಎಷ್ಟೇ ಸಂಘರ್ಷ ನಡೆಸಿದರೂ ಇಂದಿಗೂ ಅಲಿಖಿತ ವೈದಿಕ ಸಂವಿಧಾನವೇ ಬೇರೆ ಬೇರೆ ರೂಪಗಳಲ್ಲಿ ಭಾರತೀಯ ಸಮಾಜವನ್ನು, ಕನ್ನಡ ಸಮಾಜವನ್ನು ಆಳುತ್ತಲಿದೆ. ಇತ್ತೀಚೆ ಅದಕ್ಕೆ ಅಲಿಖಿತ ಆಂಗ್ಲ ಸಂಸ್ಕೃತಿಯೂ ಜೊತೆಗೂಡಿದೆ.

ಕೊನೆಯದಾಗಿ, ಸಂಸ್ಕೃತಿಯ ಸ್ವರೂಪವೇ ಬಹುತ್ವದ ಮಿಶ್ರಣ. ಆದರೆ ಅನ್ಯ ಸಂಸ್ಕೃತಿಗಳು ಸ್ಥಳೀಯ ಸಂಸ್ಕೃತಿಯ ಅಭಿವೃದ್ಧಿಗೆ ಪೂರಕವಾಗಬೇಕೇ ಹೊರತು, ಮಾರಕವಾಗಬಾರದು. ಮಾರಕ ವಾತಾವರಣ ಸೃಷ್ಟಿಯಾಗುತ್ತಲೇ ಸಂಘರ್ಷಉದ್ಭವಿಸುತ್ತದೆ. ಅಂಥ ಸಂದರ್ಭದಲ್ಲಿ ಸ್ಥಳೀಯ ಸಂಸ್ಕೃತಿಯ ಸೋಲು ಗೆಲುವು ಅದರ ಬಲ-ದೌರ್ಬಲ್ಯಗಳನ್ನವಲಂಬಿಸಿರುತ್ತದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ, ಪ್ರಾಚೀನ ಕಾಲದಲ್ಲಿ ಮೃತಭಾಷೆಯಾದ ಸಂಸ್ಕೃತವನ್ನು ಜೀರ್ಣಿಸಿಕೊಂಡು ಬದುಕಿದ ಕನ್ನಡ, ಜೀವಂತ ಭಾಷೆಯಾದ ಇಂಗ್ಲಿಷನ್ನು ಜೀರ್ಣಿಸಿಕೊಂಡು ಬದುಕುವುದು ಅನುಮಾನವೆನಿಸುತ್ತದೆ. ನಮ್ಮೊಳಗೆ ಅಪ್ರಜ್ಞಾಪೂರ್ವಕ ಆಂಗ್ಲನಾಗರಿಕತೆ ಸೇರುತ್ತಲಿದ್ದರೆ, ನಮ್ಮ ಮೇಲೆ ಪ್ರಜ್ಞಾಪೂರ್ವಕ ಆರ್ಯಸಂಸ್ಕೃತಿ ಹೇರುತ್ತಲಿದ್ದಾರೆ. ಇವೇ ಮೊದಲಾದುವು ಅಪಾಯವಾಗದಂತೆ ಎಚ್ಚರವಹಿಸುವುದು, ಸಂದರ್ಭ ನೋಡಿಕೊಂಡು ಸಂಘರ್ಷ ನಡೆಸುವುದು, ನಮ್ಮ ಇಂದಿನ ಸವಾಲಾಗಿದೆ. ಕವಿರಾಜಮಾರ್ಗ ಹೇಳುವ "ಇನ್ನೊಬ್ಬರ ವಿಚಾರ, ಇನ್ನೊಬ್ಬರ ಧರ್ಮಗಳನ್ನು ಗೌರವಿಸುವವನೇ ನಿಜವಾದ ಮನುಷ್ಯ" ಎಂಬ ಜೀವನಮೌಲ್ಯ ನಮ್ಮ ಆದರ್ಶವಾಗಬೇಕಿದೆ.

ಆಕರ : ಮಾರ್ಗ ಸಂಪುಟ-೭

೭
ಹಾಲುಮತ ಸಂಸ್ಕೃತಿ ಸಮ್ಮೇಳನ : ಸರ್ವಾಧ್ಯಕ್ಷತೆ

೨೦೧೩

ಸಿದ್ಧಸಂಪ್ರದಾಯದ ಜಗದ್ಗುರು ರೇವಣಸಿದ್ಧ

ನಾನು ಸಂಸ್ಕೃತಿ ಸಂಶೋಧಕ. ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗಪಡಿಸಿಕೊಳ್ಳುವವರೊಂದಿಗೆ ಹೋರಾಡುವುದು, ಆ ಮೂಲಕ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದು ಸಂಶೋಧಕನ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ ನಾನು ಪ್ರಸ್ತುತ ಸಮ್ಮೇಳನದಲ್ಲಿ ಭಾಗವಹಿಸಿದ್ದೇನೆ.

ವೈದಿಕ, ಜೈನ, ಲಿಂಗಾಯತ ಮೊದಲಾದವುಗಳನ್ನು ಬಿಟ್ಟರೆ, ಕರ್ನಾಟಕದ ಬಹಳಷ್ಟು ಸಮಾಜಗಳಿಗೆ ಗುರುಪೀಠಗಳಿಲ್ಲ. ಇಂಥ ಸಮಾಜಗಳು ಇತ್ತೀಚೆ ಗುರುಪೀಠ ಸ್ಥಾಪಿಸಿಕೊಳ್ಳತೊಡಗಿವೆ. ವಿಷಾದದ ಸಂಗತಿಯೆಂದರೆ, ತಮಗೆ ರೇವಣಸಿದ್ಧ, ಮಂಕಸಿದ್ಧ, ಅಮೋಘಸಿದ್ಧ ಹೆಸರಿನ ಪ್ರಾಚೀನ ಮತ್ತು ಪ್ರಸಿದ್ಧ ಗುರುಪೀಠಗಳಿದ್ದರೂ ಇವುಗಳನ್ನು ಕಡೆಗಣಿಸಿ, ಕುರುಬ ಸಮಾಜದವರು ಕಾಗಿನೆಲೆಯಲ್ಲಿ ಇತ್ತೀಚೆ ವೈಷ್ಣವ ಚಹರೆಯ ಹೊಸ ಗುರುಪೀಠ ಸ್ಥಾಪಿಸಿದರು. ರಾಜಕೀಯ ವ್ಯಕ್ತಿಗಳು, ಅವರಿಗೆ ಆಪ್ತರಾಗಿರುವ ಕನ್ನಡ ಪ್ರಾಧ್ಯಾಪಕರು ಸೇರಿ ಕುರುಬ ಸಮಾಜವನ್ನು ದಾರಿ ತಪ್ಪಿಸಿದರು. ತಮ್ಮ ಸಮಾಜವನ್ನು ಜಾಗೃತಗೊಳಿಸಲು ಹೀಗೆ ಮಾಡಿದರೆಂದು ವಾದಿಸಬಹುದಾದರೂ, ಜಾಗೃತಗೊಳಿಸುವ ರೀತಿ ಇದಲ್ಲವೆಂದೇ ಹೇಳಬಹುದು.

ಕರ್ನಾಟಕ ಸಂಸ್ಕೃತಿಯ ಭಾಗವಾಗಿರುವ ಯಾವುದೇ ಸಮಾಜ ಹೀಗೆ ದಾರಿತಪ್ಪಿದಾಗ, ಸಂಸ್ಕೃತಿ ಸಂಶೋಧಕರು ಅದರ ಮುಂದೆ ಸತ್ಯವನ್ನು ಮಂಡಿಸಬೇಕಾಗುತ್ತದೆ. ಇಂಥ ಪ್ರಾಮಾಣಿಕ ಕಳಕಳಿಯಿಂದ ನಾನು ಕುರುಬ ಸಮಾಜದ ಅಧ್ಯಯನವನ್ನು ಆರಂಭಿಸಿದೆ. ಇದರ ಫಲವಾಗಿ ಮಂಕಸಿದ್ಧ ಚರಿತೆ(೨೦೦೪), ತಗರ ಪವಾಡ (೨೦೦೪) ಕೃತಿಗಳನ್ನು ಪ್ರಕಟಿಸಿದೆ. ಇದರಿಂದಾಗಿ ಕುರುಬ ಸಮಾಜದ ರೇವಣಸಿದ್ಧ ಸಂಪ್ರದಾಯ(ಶಾಂತ ಒಡೆಯರ ಸಂಪ್ರದಾಯ), ಮಂಕಸಿದ್ಧ ಸಂಪ್ರದಾಯ (ಮಂಕ ಒಡೆಯರ ಸಂಪ್ರದಾಯ)ಗಳು ಮತ್ತು ಅವುಗಳ ಇತಿಹಾಸ ಬೆಳಕಿಗೆ ಬಂದಿತು. ಜೊತೆ

ಜೊತೆಗೆ ಹಲವು ಲೇಖನಗಳನ್ನು ಪ್ರಕಟಿಸಿದೆ. ಇವುಗಳ ಸಂಕಲನಗಳಾದ 'ಹಾಲುಮತ ಅಧ್ಯಯನಗಳು', 'ರೇವಣಸಿದ್ಧ ಮತ್ತು...' ಎಂಬ ಎರಡು ಕೃತಿಗಳು ಬೆಳಕಿಗೆ ಬಂದವು.

ಈ ಬಗೆಯ ಪುಸ್ತಕ-ಲೇಖನ ಪ್ರಕಟಣೆಗಿಂತ ಹಾಲುಮತ ಸಮಾಜದ ವಿದ್ವಾಂಸರಿಗೆ ಸರಿಯಾದ ತಿಳುವಳಿಕೆ ನೀಡುವುದು ನನಗೆ ಮುಖ್ಯವೆನಿಸಿತು. ಈ ತಿಳುವಳಿಕೆ ಪಡೆದವರಲ್ಲಿ ಡಾ. ಎಫ್.ಟಿ.ಹಳ್ಳಿಕೇರಿ ಮೊದಲಿಗರು. ಇವರು ನನ್ನೊಂದಿಗೆ ಆಗಾಗ ಚರ್ಚಿಸಿ, ಪುಸ್ತಕ ಪ್ರಕಟಣೆ-ವಿಚಾರ ಸಂಕಿರಣ-ಸಮ್ಮೇಳನ ಸಂಘಟನೆ ಮಾಡಿದ ಫಲವಾಗಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ 'ಹಾಲುಮತ ಅಧ್ಯಯನ ಪೀಠ' ಅಸ್ತಿತ್ವಕ್ಕೆ ಬಂದಿತು. ಇಷ್ಟು ಸಾಲದೆಂಬಂತೆ ನಮ್ಮಿಬ್ಬರ ಪ್ರಯತ್ನದಿಂದಾಗಿ ಡಾ. ಬಸವರಾಜ ಬಿರಾದಾರ ಅವರ 'ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ', ಡಾ. ಅನ್ನಪೂರ್ಣ ಗೋಸ್ಬಾಳ ಅವರ 'ಹಾಲುಮತ ಅಧ್ಯಯನದ ಆಕರಗಳು', ಡಾ. ಚೆನ್ನಪ್ಪ ಕಟ್ಟಿ ಅವರ 'ಅಮೋಘಸಿದ್ಧ ಪರಂಪರೆ' ಹೆಸರಿನ ಮಹತ್ವದ ಕೃತಿಗಳು ಬೆಳಕಿಗೆ ಕಂಡವು. ಹೀಗೆ ನಾನು ಮಾಡಿದ ಬರವಣಿಗೆ ಮತ್ತು ಸೃಷ್ಟಿಸಿದ ಹಾಲುಮತ ಅಧ್ಯಯನದ ಹೊಸ ವಾತಾವರಣ ಕಾರಣವಾಗಿ, ನನಗೆ ಈ ಸಮ್ಮೇಳನದ ಅಧ್ಯಕ್ಷತೆ ಪ್ರಾಪ್ತವಾಗಿದೆ ಎಂದು ವಿನಯಪೂರ್ವಕವಾಗಿ ಭಾವಿಸುತ್ತೇನೆ. ಇದಕ್ಕಾಗಿ ನಾನು ಕುಲಪತಿಗಳಾದ ಡಾ. ಹಿ.ಚಿ.ಬೋರಲಿಂಗಯ್ಯ ಅವರಿಗೂ, ಹಾಲುಮತ ಅಧ್ಯಯನಪೀಠದ ಸಂಚಾಲಕರಾದ ಡಾ. ಎಫ್.ಟಿ.ಹಳ್ಳಿಕೇರಿ ಅವರಿಗೂ, ಈ ಸಮ್ಮೇಳನದ ಸಂಘಟಕರಿಗೂ ಕೃತಜ್ಞನಾಗಿದ್ದೇನೆ.

ಇಷ್ಟು ದೊಡ್ಡ ಸಮ್ಮೇಳನದ ಸಂಘಟನೆ ಶ್ರೀಮಂತ ನಗರಗಳಿಂದ ಮಾತ್ರ ಸಾಧ್ಯ. ಕೆಲವೊಮ್ಮೆ ಶ್ರೀಮಂತ ನಗರಗಳ ಹಣವು ಅರ್ಥಹೀನ ಧಾರ್ಮಿಕ ಸಭೆ-ಸಮಾರಂಭಗಳಿಗೆ ವ್ಯಯವಾಗುವುದು ಸಹಜ. ಸಂತೋಷದ ಸಂಗತಿಯೆಂದರೆ ಈ ಸಮ್ಮೇಳನವನ್ನು ಸಂಘಟಿಸುವುದರ ಮೂಲಕ, ಗಂಗಾವತಿಯ ಹಾಲುಮತ ಸಮಾಜದವರು ಶ್ರೀಮಂತಿಕೆಯ ಸದ್ಬಳಕೆ ಮಾಡಿರುವರೆಂದೇ ನನ್ನ ಅಭಿಪ್ರಾಯ.

ಈ ನಗರದ ಹೆಸರು ಗಂಗಾವತಿ. ಇದರ ಅರ್ಥ ಕುತೂಹಲಕಾರಿಯಾಗಿದೆ. ರಾಣಿಬೆನ್ನೂರ ತಾಲೂಕಿನ ಕುರುವತ್ತಿಯಂತೆ ಇದರ ನಿಜವಾದ ಹೆಸರು ಗಂಗವತ್ತಿ ಇರಬಹುದು. ಕುರುವತ್ತಿ ಎಂಬುದರ ಹಳೆಯ ಹೆಸರು ಕುರುಹಟ್ಟಿ ಇರಬಹುದು. ಈಗಲೂ ರೋಣ ತಾಲೂಕಿನಲ್ಲಿ ಕುರಹಟ್ಟಿ ಹೆಸರಿನ ಗ್ರಾಮವಿದೆ. ಇದೇ ರೀತಿ ಗಂಗವತ್ತಿಯ ಮೂಲರೂಪ ಗಂಗಹಟ್ಟಿ ಇರುವ ಸಾಧ್ಯತೆ ಇದೆ. ಇಲ್ಲಿಯ 'ಹಟ್ಟಿ' ಎಂಬುದು ಕುರುಬ ಸಂಸ್ಕೃತಿಗೆ ಸಂಬಂಧಪಟ್ಟ ಶಬ್ದವಾಗಿದೆ. 'ಗಂಗ' ಎಂದರೆ ಏನು? ಎಂಬುದು ಚರ್ಚಿಸಬೇಕಾದ ವಿಷಯ. ನೂರುವರ್ಷಗಳ ಹಿಂದೆ ಕನ್ನಡದ ಎಲ್ಲ ಶಬ್ದಗಳಿಗೆ ಸಂಸ್ಕೃತಮೂಲವನ್ನು ಹೇಳುವ ದುರಾಭ್ಯಾಸ ವಿದ್ವಾಂಸರಲ್ಲಿ ಬೆಳೆದು ಬಂದಿದ್ದಿತು. ಆ ಮೇರೆಗೆ ಈ ಗಂಗ ಹೆಸರನ್ನು ಉತ್ತರ ಭಾರತದ ಗಂಗಾನದಿಯೊಂದಿಗೆ ಸಮೀಕರಿಸಲು ಕೆಲವರು ಪ್ರಯತ್ನಿಸಿರಬಹುದಾಗಿದೆ. ಇದು ಸತ್ಯವಲ್ಲವೆಂದು ತೋರುತ್ತದೆ. ಬಳ್ಳಾರಿ ಜಿಲ್ಲೆಯ ಕುರುಗೋಡು ಶಾಸನ(೧೧೨೬)ವು ಬಲ್ಲಕುಂದೆ ನಾಡಿನ ಊರೂರುಗಳು "ಗಂಗರಿಂ ಕುಡಿಯರಿಂ" ತುಂಬಿ ಹೋಗಿದ್ದವೆಂದು ತಿಳಿಸುತ್ತದೆ. ಹಾನಗಲ್ಲ ತಾಲೂಕಿನ ಕನ್ನೇಶ್ವರ ಗ್ರಾಮದ ಎರಡು ಶಾಸನಗಳಲ್ಲಿ(೧೦೦೫, ೧೦೮೫) ಗಾವುಂಡ, ನಾಳ್ಗಾವುಂಡರಾಗಿದ್ದ ಗಂಗರ ಕನ್ನ,

ಗಂಗರ ಬೊಪ್ಪಗಾವುಂಡರ ಉಲ್ಲೇಖವಿದೆ. ರೋಣ ತಾಲೂಕಿನ ಸವಡಿ ಶಾಸನ(೯೭೧)ದಲ್ಲಿ ಗಂಗರ ವತ್ಸಯ್ಯ, ಸಿಗ್ಗಾಂವಿ ಶಾಸನದಲ್ಲಿ(ಆರನೆಯ ವಿಕ್ರಮಾದಿತ್ಯನ ಕಾಲ) 'ಗಂಗಕುಲದ ಏಚ' ಎಂಬವರ ಹೆಸರುಗಳಿವೆ. ಇಲ್ಲಿಯ ಸಿಗ್ಗಾಂವ ಶಾಸನ "ಗಂಗಕುಲ" ಎಂದು ಸ್ಪಷ್ಟವಾಗಿ ಹೇಳುವುದರಿಂದ "ಗಂಗ" ಎಂಬುದು ಕುಲನಾಮ. ಅಂದರೆ ಸಮಾಜ ನಾಮವೆಂದೂ, ಕನ್ನೇಶ್ವರ ಶಾಸನಗಳು 'ಗಂಗರ ಕನ್ನ', 'ಗಂಗರ ಬೊಪ್ಪ ಗಾವುಂಡ'ರು ಗಾವುಂಡ, ನಾಳ್ಗಾವುಂಡರಾಗಿದ್ದುದನ್ನು ಗಮನಿಸಿದರೆ, ಈ ಸಮಾಜದವರು ಪ್ರತಿಷ್ಠಿತ ಆಡಳಿತ ಮಾಡುವಷ್ಟು ಪ್ರಬಲರಾಗಿದ್ದರೆಂದೂ, ಕುರುಗೋಡು ಶಾಸನವು ಊರೂರುಗಳಲ್ಲಿ ಗಂಗರು, ಕುಡಿಯರು ಇದ್ದರೆಂದು ಹೇಳುವುದರಿಂದ ಈ ಸಮಾಜ ದೊಡ್ಡ ಸಂಖ್ಯೆಯದಾಗಿದ್ದಿತೆಂದೂ ಭಾವಿಸಬೇಕಾಗುತ್ತದೆ. ಇಲ್ಲಿಯ ಗಂಗವೆಂಬ ಕುಲನಾಮ ಮತ್ತು ವ್ಯಕ್ತಿನಾಮಗಳು ಬಹುಶಃ ಕುರುಬರಿಗೆ ಹೊಂದಿಕೆಯಾಗುವುದರಿಂದ ಗಂಗರೆಂದರೆ ಕುರುಬರೆಂದು ಊಹಿಸಬಹುದಾಗಿದೆ. ಕುರುಬರು ನೇಯುವ ಕಂಬಳಿಗೆ 'ಗೊಂಗಡಿ' ಎಂಬ ಪರ್ಯಾಯ ನಾಮವಿರುವುದೂ ಇಲ್ಲಿ ನೆನಪಾಗುತ್ತದೆ. ಇದೆಲ್ಲವನ್ನು ನೋಡಿದರೆ ಇಂದಿನ ಗಂಗಾವತಿಯು ಮೂಲತಃ ಕುರುಬರಹಟ್ಟಿ ಅಂದರೆ ಕುರುಬರ ಗ್ರಾಮವೆಂದು ಹೇಳಬೇಕೆನಿಸುತ್ತದೆ. ಇಂದಿಗೂ ಈ ನಗರದಲ್ಲಿ ಲಿಂಗಾಯತರನ್ನು ಬಿಟ್ಟರೆ ದೊಡ್ಡ ಸಂಖ್ಯೆಯಲ್ಲಿ ಕುರುಬರೆ ಇರುವುದು ನನ್ನ ಊಹೆಯನ್ನು ಸಮರ್ಥಿಸುತ್ತದೆ.

ರೇವಣಸಿದ್ಧ ಇಂದು ಕುರುಬರಲ್ಲಿ ಮತ್ತು ವೀರಶೈವರಲ್ಲಿ ಸಾಂಸ್ಕೃತಿಕ ನಾಯಕನ ಹೆಸರೆಂಬಂತೆ ಪ್ರಚಾರದಲ್ಲಿದೆ. ಈ ಸಮಸ್ಯೆ ನಿರ್ಮಾಣವಾದುದು ಹೇಗೆ? ಎಂದು? ಎಂಬುದು ಮುಖ್ಯಪ್ರಶ್ನೆಯಾಗಿದ್ದು, ಅದನ್ನು ಹೀಗೆ ವಿವರಿಸಬಹುದು: ಒಬ್ಬ ಮಹಾತ್ಮನ ಹೆಸರು ಮೇಲುಜಾತಿ ಕೆಳಜಾತಿಗಳಲ್ಲಿ ಪರಿಗಣಿತವಾಗುತ್ತಿದ್ದರೆ, ಅದು ಮೂಲತಃ ಕೆಳಜಾತಿಗೆ ಸಂಬಂಧಿಸಿದುದೆ ಆಗಿರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಇಂದು ವೀರಶೈವ ಜಾತಿಗೆ ಎಳೆಯಲ್ಪಟ್ಟಿದ್ದರೂ ರೇವಣಸಿದ್ಧ ಮೂಲತಃ ಕುರುಬ ಜಾತಿಯವನಾಗಿರಬೇಕು. ಕುರುಬರ ಜಾನಪದ ಸಾಹಿತ್ಯ, ದೇವಾಲಯ-ಮಠ-ಆಚರಣೆಗಳು, ಇತ್ತೀಚೆ ಪ್ರಕಟವಾದ ತಗರ ಪವಾಡ ಕೃತಿ. ತಾಮ್ರಪಟ ಮೊದಲಾದ ದಾಖಲೆಗಳು ಇವನು ಜಾತಿಯಿಂದ ಕುರುಬನೆಂದು ಇನ್ನೂ ದೃಢಪಡಿಸಿವೆ. ಇತ್ತೀಚೆ ಇಷ್ಟೆಲ್ಲ ಆಕರ ಸಾಮಗ್ರಿ ಬೆಳಕಿಗೆ ಬಂದಿದ್ದರೂ ರೇವಣಸಿದ್ಧನ ಪೂರ್ಣ ಅಭ್ಯಾಸಕ್ಕೆ ಇದು ಸಾಲುವುದಿಲ್ಲವೆಂದೇ ಹೇಳಬೇಕು. ಹೀಗಾಗಿ ವಿದ್ವಾಂಸರಾದವರು ಈತನಿಗೆ ಸಂಬಂಧಿಸಿದ ಸಾಂಸ್ಕೃತಿಕ-ಭೌತಿಕ, ಲಿಖಿತ-ಮೌಖಿಕ ಇತ್ಯಾದಿ ಸಾಮಗ್ರಿ ಶೋಧಕ್ಕಾಗಿ ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಕ್ಷೇತ್ರಕಾರ್ಯ ಪೂರೈಸಬೇಕು. ಹೀಗೆ ಮಾಡಿದರೆ ಇದು ಕುರುಬ ಸಮಾಜದ ಅಧ್ಯಯನವೆನಿಸುತ್ತಲೇ ಕರ್ನಾಟಕ ಸಂಸ್ಕೃತಿಯ ಭಾಗಶಃ ಅಧ್ಯಯನವೇ ಆಗುತ್ತದೆ. ಮತ್ತು ೧೨ನೆಯ ಶತಮಾನದ ಬಸವಣ್ಣನ ಕ್ರಾಂತಿಗೆ ಒದಗಿಬಂದ ಹಿನ್ನೆಲೆಯಾಗಿ ಪರಿಣಮಿಸುತ್ತದೆ.

ರೇವಣಸಿದ್ಧನ ಕಾಲ ವಿಚಾರವಾಗಿ ಇತ್ತೀಚೆ ಒಂದಿಷ್ಟು ಹೊಸ ವಿಷಯಗಳು ಬೆಳಕಿಗೆ ಬಂದಿವೆ. ಈತನು ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯ(೧೦೭೬-೧೧೨೬)ನನ್ನು, ಕಲಚುರಿ ಬಿಜ್ಜಳ(-೧೧೬೮)ನನ್ನು ಭೆಟ್ಟಿಯಾಗಿದ್ದನೆಂದು ಕನ್ನಡ ಕಾವ್ಯಗಳು ತಿಳಿಸುತ್ತವೆ. ಇನ್ನು ನಿರ್ದಿಷ್ಟವಾಗಿ ಹೇಳುವುದಾದರೆ ಗುಲಬರ್ಗಾ ಜಿಲ್ಲೆಯ ಕಕ್ಕೇರಿ ಶಾಸನ(೧೧೨೭)ದಲ್ಲಿ ಮೊದಲು, ಸಿರವಾಳ

ಶಾಸನ(೧೧೭೮)ದಲ್ಲಿ ಕೊನೆಗೆ ತೋರಿಬರುವುದರಿಂದ ಈತ ೧೧ನೆಯ ಶತಮಾನದ ಉತ್ತರಭಾಗದಲ್ಲಿ ಹುಟ್ಟಿ, ೧೨ನೆಯ ಶತಮಾನದ ಉತ್ತರಭಾಗದವರೆಗೂ ಬಾಳಿದವನಾಗಿದ್ದಾನೆ. ಇವನ ಆಶೀರ್ವಾದದಿಂದ ಬಸವಣ್ಣನ ಸಮಕಾಲೀನನಾದ ಸಿದ್ಧರಾಮ ಹುಟ್ಟಿರುವುದು ತಿಳಿದ ವಿಷಯವೇ ಆಗಿದೆ. ಇದೆಲ್ಲವನ್ನು ಗಮನಿಸಿದರೆ, ರೇವಣಸಿದ್ಧನು ಬಸವಣ್ಣನಿಗೆ ಹಿರಿಯ ತಲೆಮಾರಿನವನಾಗಿ ಹುಟ್ಟಿ, ಬಸವಣ್ಣ ಲಿಂಗೈಕ್ಯನಾಗುವ ವರೆಗೂ ಬದುಕಿದ ದೀರ್ಘಾಯುಷಿಯೆಂದು ಹೇಳಬೇಕಾಗುತ್ತದೆ.

ರೇವಣಸಿದ್ಧನ ಚರಿತ್ರೆಯನ್ನು, ಅವನ ಪಂಥದ ಸ್ವರೂಪವನ್ನು ತಿಳಿದುಕೊಳ್ಳಬೇಕೆನ್ನುವವರಿಗೆ ಪ್ರಾಚೀನತಮ ಮುಖ್ಯ ಆಕರಗಳೆಂದರೆ ಹರಿಹರನ ರೇವಣ ಸಿದ್ಧೇಶ್ವರ ರಗಳೆ. ರಾಘವಾಂಕನ ಸಿದ್ಧರಾಮ ಚಾರಿತ್ರ. ರೇವಣಸಿದ್ಧೇಶ್ವರ ರಗಳೆ ಯಲ್ಲಿ "ಸಿದ್ಧಸಮಯ ಚಕೋರ ಚಂದ್ರಿಕಾಯಮಾನ" "ಸಿದ್ಧಕುಲ ಚಾತಕ ಸುಧಾವರುಷ" ಎಂಬ ವಿಶೇಷಣಗಳು ಇವನದು ವೀರಶೈವ ಸಂಪ್ರದಾಯವಲ್ಲ, ಸಿದ್ಧಸಂಪ್ರದಾಯವೆಂದು ಖಚಿತಪಡಿಸುತ್ತವೆ.

ನಿರುಪಮಸಿದ್ಧಪ್ರತಿಮಸಿದ್ಧನಚಿಂತಿತ ಸಿದ್ಧನುತ್ತಮಾ
ವರಣಶರೀರ ಸಿದ್ಧನತಿ ಕಾರಣಸಿದ್ಧನಶೇಷಮಂ ಸಮು
ದ್ಧರಿಸುವ ಸಿದ್ಧನಾತ್ಮನಿಜ ಸಿದ್ಧನನೂನ ಪರಾಪರೈಕ ವಿ
ಸ್ತರತರಸಿದ್ಧನೊಪ್ಪಿದನಿಳಾತಳದೊಳ್ ಸಲೆ ಸಿದ್ಧರೇವಣಂ ॥

ಎಂಬ ಪದ್ಯವಂತೂ ಇವನು ವೀರಶೈವನಲ್ಲ, ಸಿದ್ಧಸಂಪ್ರದಾಯದವನೆಂದು ಇನ್ನೂ ಸ್ಪಷ್ಟಪಡಿಸುತ್ತದೆ. ರೇವಣಸಿದ್ಧ ಹೆಸರಿನಲ್ಲಿರುವ ಸಿದ್ಧ ಎಂಬುದೂ ಇದನ್ನು ಬೆಂಬಲಿಸುತ್ತದೆ. ಈ ಸಂಪ್ರದಾಯದ ಇನ್ನೊಂದು ಹೆಸರು "ನಾಥ ಸಂಪ್ರದಾಯ." ನಾಥ ಸಂಪ್ರದಾಯದ ಹಠಯೋಗ ಪ್ರದೀಪಿಕೆಯಲ್ಲಿ ರೇವಣನಾಥ ಎಂಬ ಹೆಸರು ಕಂಡುಬರುವುದೂ, ಸಿದ್ಧರಾಮ ಚಾರಿತ್ರ, ಸಿದ್ಧರಾಮನ ಶಾಸನಗಳು ಇದೇ ಸಂಪ್ರದಾಯದ ಸಿದ್ಧನಾಥನೆಂದು ಕರೆದುದೂ, ಸಿದ್ಧರಾಮನು ನಿರ್ಮಿಸಿದ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾಲಯದ ಆವರಣಕ್ಕೆ ಇಟ್ಟ 'ಯೋಗರಮಣೀಯ ಕ್ಷೇತ್ರ'ವೆಂಬುದು ನಾಥಸಂಪ್ರದಾಯದ ಪರಿಭಾಷೆಯಾಗಿರುವುದೂ, ರೇವಣಸಿದ್ಧನು ನಾಥಸಂಪ್ರದಾಯದವನೆಂಬುದನ್ನು ಬೆಂಬಲಿಸುತ್ತವೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ "ಪೂರ್ವದ ನಾಥಸಿದ್ಧರ ಮತೋಕ್ತವೆಂದು ಕಾಪಾಲಿಕಾಚರಣೆಯನಾಚರಿಸುವವರಲ್ಲ ನಮ್ಮ ಶರಣರು" ಎಂಬ ಅಲ್ಲಮನ ಹೇಳಿಕೆ ಸೂಚಿಸುವುದು ಬಹುಶಃ ರೇವಣಸಿದ್ಧನು ಸಿದ್ಧ ಪಂಥವನ್ನಲ್ಲ. ಅದಕ್ಕೂ ಹಿಂದಿನ ಉಗ್ರ ಆಚರಣೆಯ ಸಿದ್ಧಪಂಥವನ್ನು–ಎಂದು ತೋರುತ್ತದೆ. ಸಿದ್ಧರಾಮ ಚರಿತ್ರೆಯ ಆಧಾರದಿಂದ ಈ ಉಗ್ರ ಆಚರಣೆಯದು 'ವಿಕಾರಿಸಿದ್ಧ'ಪಂಥ, ಸಿದ್ಧರಾಮ–ರೇವಣಸಿದ್ಧರದು 'ಶಿವಸಿದ್ಧ'ಪಂಥವೆಂದು ಹೇಳಬಹುದಾಗಿದೆ.

ರೇವಣಸಿದ್ಧನ ಚರಿತ್ರೆಯ ಬಗ್ಗೆ ಈ ಪಂಥದ ತತ್ತ್ವ–ಆಚರಣೆಗಳ ಬಗ್ಗೆ, ಸರಿಯಾದ ಅಭ್ಯಾಸ ಇನ್ನೂ ನಡೆದಿಲ್ಲ. ಈತನ ಚರಿತ್ರೆಯನ್ನು ಮೊದಲು ಬರೆದ ಹರಿಹರಾದಿಗಳು ಪವಾಡಗಳೊಂದಿಗೆ ತಮ್ಮ ಶುದ್ಧಶೈವ ಮತಾಚರಣೆಗಳನ್ನೂ ಬೆರೆಸಿರುವ ಸಾಧ್ಯತೆಗಳಿವೆ. ಅದೇನೆ ಇದ್ದರೂ ಹರಿಹರನ ಪ್ರಕಾರ ರೇವಣಸಿದ್ಧನ ಚರಿತ್ರೆ ಹೀಗಿದೆ:

೧. ಕೈಲಾಸದಲ್ಲಿ ದಾರುಕನನ್ನು ದಾಟಿದ ತಪ್ಪಿಗಾಗಿ ರೇಣುಕನು ಶಿವನ ಆಜ್ಞೆಯಂತೆ ರೇವಣಸಿದ್ಧ ಹೆಸರಿನಿಂದ ಭೂಲೋಕದ ಕೊಲ್ಲಿಪಾಕಿಯ ಸೋಮನಾಥ ಲಿಂಗದಲ್ಲಿ ಜನಿಸಿದನು. ೨. ಅಲ್ಲಿಂದ ದಕ್ಷಿಣಕ್ಕೆ ಹೊರಟು ಅಗಸ್ತ್ಯನೊಂದಿಗೆ ಶಿವಗೋಷ್ಠಿ ಜರುಗಿಸಿದನು. ೩. ಪಿಣ್ಣಾಕ(ಎಳ್ಳುಹಿಂಡಿ) ತಿನ್ನುತ್ತಿದ್ದ ಕಾರಣ ಪಿಣ್ಣಾಕ ಹೆಸರಿನಿಂದ ಚೋಳದೇಶದ ಕಂಚಿಗೆ ಹೋಗಿ, ಅಲ್ಲಿ ಅಸ್ಥಿರವಾಗಿದ್ದ ವಿಷ್ಣುಮೂರ್ತಿಯನ್ನು ಸ್ಥಿರಗೊಳಿಸಿದನು. ೪. ಉತ್ತರದೇಶದ ಮಾಸನೂರಿನಲ್ಲಿದ್ದ ತಗಣಿರೂಪದ ರಾಕ್ಷಸ ದಂಪತಿಗಳನ್ನು ಲೋಹದ ಗುಂಡುಗಳನ್ನಾಗಿಸಿ, ಒಂದರಿಂದ ಮಾಡಿಸಿದ ಖಡ್ಗವನ್ನು ಮಾಸನೂರ ಕೆರೆಯಲ್ಲಿ ನಿಕ್ಷೇಪಿಸಿ, ಇನ್ನೊಂದರಿಂದ ಮಾಡಿಸಿದ ಕಠಾರಿಯನ್ನು ಬನವಾಸಿಯಲ್ಲಿ ಕಲ್ಯಾಣ ಚಾಲುಕ್ಯ ವಿಕ್ರಮಾದಿತ್ಯನಿಗೆ ನೀಡಿದನು. ೫. ಕಲ್ಯಾಣದಲ್ಲಿ ತೆಲ್ಲಿಗ ಕಲ್ಲಿಶೆಟ್ಟಿಯ ಮನೆಯಲ್ಲಿ ಗಾಣವಾಡಿಸುತ್ತ, ಅವನನ್ನು ಶ್ರೀಮಂತನನ್ನಾಗಿಸಿದನು. ೬. ಮಂಗಳವಾಡದಲ್ಲಿ ಮಾಯಿದೇವಿ ಎಂಬ ವೇಶ್ಯೆಯ ಮನೆಯಲ್ಲಿದ್ದು, ಅವಳ ಸಂಪತ್ತು ವರ್ಧಿಸುವಂತೆ ಮಾಡಿದನು. ೭. ವಿರೂಪಾಕ್ಷಸಿದ್ಧ ಹೆಸರಿನಿಂದ ವಿಭೀಷಣನು ಮಂಗಳವಾಡಕ್ಕೆ ಬಂದು, ರೇವಣಸಿದ್ಧನನ್ನು ಕರೆದುಕೊಂಡು ಹೋಗಿ, ಅವನ ಕೃಪೆಯಿಂದ ಲಂಕೆಯ ಸಮುದ್ರ ಮಧ್ಯದ ಮತ್ಸ್ಯಕೇಶ್ವರ ಲಿಂಗದ ಸಮಕ್ಷಮದಲ್ಲಿ ಮೂರುಕೋಟಿ ಶಿವಲಿಂಗ ಸ್ಥಾಪಿಸಿದನು. ೮. ಮಂಗಳವಾಡದಲ್ಲಿ ಭಿಕ್ಷೆಗಾಗಿ ಒಡ್ಡಿದ ಕೈಗೆ ಬಿಜ್ಜಳನು ನೀಡಿದ ಸುಡುವ ಅಂಬಲಿಯನ್ನು ಅವನು ಕಂಬಕ್ಕೆ ಒರಸಲು, ಅರಮನೆ ಸುಡತೊಡಗಿತು. ಕ್ಷಮೆಯಾಚಿಸಿದ ಬಿಜ್ಜಳನನ್ನು ಸಂತೈಸಿ, ಅವನ ಸಮಸ್ತ ಸೈನ್ಯಕ್ಕೆ ಕೇವಲ ಐದು ಮಾನ ಅಕ್ಕಿಯ ಬೋನದಿಂದ ಊಟ ಮಾಡಿಸಿದನು. ೯. ಕೊಲ್ಲಾಪುರದ ಗೋರಕ್ಷ ನಿಳಯದಲ್ಲಿ ಚಿಕ್ಕಲಕ್ಕಾದೇವಿ ಕಠಾರಿಯನ್ನು ರೇವಣಸಿದ್ಧನ ಭಿಕ್ಷಾಪಾತ್ರೆಗೆ ನೀಡಿದಳು. ರೇವಣಸಿದ್ಧನ ನೋಟ ಮಾತ್ರದಿಂದ ಕರಗಿದ ಕಠಾರಿಯ ಲೋಹರಸವನ್ನು ರೇವಣಸಿದ್ಧ ಕುಡಿಯಲಾಗಿ, ಆ ಕಠಾರಿ ಗೋರಕ್ಷನ ಎದೆಯಲ್ಲಿ ಮೂಡಿತು. ಕೊಲ್ಲಾಪುರ ಮಹಾಲಕ್ಷ್ಮಿಯ ಬಿನ್ನಹದ ಮೇರೆಗೆ ರೇವಣಸಿದ್ಧ ಲೋಹ ರಸ ಉಗುಳಲು ಗೋರಕ್ಷನ ಎದೆಯಿಂದ ಕಠಾರಿ ಹೊರಬಿದ್ದಿತು. ೧೦. ಮಾಸನೂರ ಕೆರೆಯಲ್ಲಿರುವ ಸುರಗಿಯನ್ನು ತೆಗೆಯಿಸಲು ಬಯಸಿ ಬಿಜ್ಜಳನು ಖರ್ಪರ ಜೋಗಿಯ ಸೂಚನೆಯ ಮೇರೆಗೆ ಬಲಿದಾನಕ್ಕಾಗಿ ಹನ್ನೆರಡುಸಾವಿರ ಕನ್ನೆಯರನ್ನು ಕಲೆಹಾಕಲು ಪ್ರಯತ್ನಿಸಿದನು. ಈಗ ರೇವಣಸಿದ್ಧನ ಮಗಳು ರೇವಣದೇವಿಯನ್ನು ಎಳೆದೊಯ್ಯಲು ತಾಯಿ ಮಾಯಿದೇವಿ ಹಲುಬಿದಳು. ವಾರಣಾಸಿಯಿಂದ ಅಲ್ಲಿಗೆ ಅವತರಿಸಿದ ರೇವಣಸಿದ್ಧನು ಬಿಜ್ಜಳನೊಂದಿಗೆ ನಡುನೀರಿಗೆ ಹೋಗಿ, ಸುರಗಿಯನ್ನು ಹೊರ ತೆಗೆದನು. ಅದು ಸರ್ಪವಾಗಿ ತೋರಲು ಅಂಜಿದ ಬಿಜ್ಜಳನ ಬಿನ್ನಹದಂತೆ ಅದನ್ನು ನೀರಿನಲ್ಲಿಯೇ ಇರಿಸಿದನು. ಹನ್ನೆರಡು ಸಾವಿರ ಕನ್ನೆಯರ ಸೆರೆ ಬಿಡಿಸಿ, ಅರಮನೆಗೆ ಬಂದು ಬಿಜ್ಜಳನ ಪುತ್ರಿಯನ್ನು ಮದುವೆಯಾದನು. ೧೧. ಚೋಳದೇಶಕ್ಕೆ ಹೋಗಿ ರಾಜೇಂದ್ರಚೋಳನ ಮಗಳನ್ನು, ಬಳಿಕ ಚೇರ, ಮಲಯಾಳ, ಗೌಳ, ಗುಜ್ಜರ, ನೇಪಾಳ ಮೊದಲಾದ ರಾಜ್ಯದ ರಾಜಕುಮಾರಿಯರನ್ನೂ ಮದುವೆಯಾದನು. ೧೨. ಮಂಗಳವಾಡದಲ್ಲಿ ಕೆರೆ ಕಟ್ಟಿಸಲಾರಂಭಿಸಿ ತಾನೇ ಗುದ್ದಲಿ ಹಿಡಿದು ಅಗಿಯಲು, ಮಡದಿಯರೂ ಮಣ್ಣು ಹೊರಲು ಆರಂಭಿಸಿದರು. ಆಗ ಮೂರು ತಿಂಗಳ ಬಸುರೆ ಚೋಳ ರಾಜಕುಮಾರಿ ಮಣ್ಣು ಹೊರಲು ತನಗೆ ಸಾಧ್ಯವಿಲ್ಲವೆನಲು, ಅವಳ ಹೊಟ್ಟೆಯಲ್ಲಿ ಬೆಳೆಯುತ್ತಿದ್ದ ತನ್ನ ಪಿಂಡವನ್ನು ಹೊರತೆಗೆದು ಕೆರೆಯ ಬದಿಯ ನೆಲದಲ್ಲಿ ಮುಚ್ಚಿಟ್ಟನು. ದಿವಸ ಗತಿಸಲು ಭೂಮಿಯಿಂದ ಹೊರಬಂದ ಕೂಸಿಗೆ ರುದ್ರಮುನಿಯೆಂದು ನಾಮಕರಣ ಮಾಡಿ,

ಅವನಿಗೆ ೮ನೆಯ ವರ್ಷಕ್ಕೆ ಮಂಗಳವಾಡದಲ್ಲಿ ಶೈವೋಪದೇಶ ನೀಡಿದನು. ೧೩. ಹಾವಿನಹಾಳ ಗ್ರಾಮಕ್ಕೆ ಬಂದು ಕಲಿದೇವರ ಭಕ್ತನಾದ ಕಲ್ಲಯ್ಯನಿಗೆ ರುದ್ರಮುನಿಯಿಂದ ದೀಕ್ಷೆ ನೀಡಿಸಿದನು. ೧೪. ಅರಿತು ೭೦೦ ಅರಿಯದೆ ೭೦೦ ವರ್ಷ ಬದುಕಿದನು. ೧೫. ಸಿದ್ಧರೇವಣನು ಪಾದುಕೆ ಕಳೆದು ಬರಿಗಾಲಿನಿಂದ ಸೊಲ್ಲಾಪುರಕ್ಕೆ ಬಂದು, ಅರಸಿ ಚಾಮಲದೇವಿಗೆ 'ಈ ಊರ ಮುದ್ದಗೌಡ ಸುಗ್ಗಲ ಗೌಡಿಗೆ ಸಿದ್ಧರಾಮ ಹುಟ್ಟುವ'ನೆಂಬ ಭವಿಷ್ಯ ನುಡಿದನು. ೧೬. ದೇಶ ಪರ್ಯಟನ ಮಾಡುತ್ತ ಕೊಲ್ಲಿಪಾಕಿಗೆ ಬಂದು ಸೋಮನಾಥಲಿಂಗದಲ್ಲಿ ಐಕ್ಯವಾದನು.

ದೇಶೀ ಸಂಪ್ರದಾಯದ ಜಾಲವಾದಿ ಮಲ್ಲಣ್ಣನ ಕೃತಿಯಲ್ಲಿ ಕೊಲ್ಲಿಪಾಕಿಯಲ್ಲಿ ಉದ್ಭವಿಸಿದ–ಐಕ್ಯವಾದ, ಅಗಸ್ತ್ಯನೊಂದಿಗೆ ಗೋಷ್ಠಿ ನಡೆಸಿದ, ಕಾಂಚಿ ವಿಷ್ಣು ಪ್ರತಿಮೆ ಸ್ಥಿರಗೊಳಿಸಿದ, ಕೊಲ್ಲಾಪುರದ ಚಿಕ್ಕಲಕ್ಕಾದೇವಿ ಖಡ್ಗಭಿಕ್ಷೆ ನೀಡಿದ, ಬನವಾಸಿಯಲ್ಲಿ ವಿಕ್ರಮಾದಿತ್ಯನಿಗೆ ಖಡ್ಗ ನೀಡಿದ, ಮಂಗಳವಾಡದಲ್ಲಿ ಕೆರೆ ಕಟ್ಟಿಸಿದ, ಚೋಳ ಕುಮಾರಿಯಿಂದ ರುದ್ರಮುನಿ ಹುಟ್ಟಿದ, ಲಂಕೆಯಲ್ಲಿ ಮೂರು ಕೋಟಿ ಲಿಂಗ ಸ್ಥಾಪಿಸಿದ, ಹಾವಿನಹಾಳ ಕಲ್ಲಯ್ಯನಿಗೆ ದೀಕ್ಷೆ ನೀಡಿದ, ಸಿದ್ಧರಾಮನ ಜನ್ಮಭವಿಷ್ಯ ನುಡಿದ, ಅರಿತು ೭೦೦–ಅರಿಯದೆ ೭೦೦ ವರ್ಷ ಬದುಕಿದ ಪ್ರಸಂಗಗಳು ಕಂಡುಬರುವುದಿಲ್ಲ.

ಇಲ್ಲಿ ಪವಾಡಗಳೇ ವಿಜೃಂಭಿಸಿದ್ದರೂ ವಿಕ್ರಮಾದಿತ್ಯ, ಬಿಜ್ಜಳ, ರಾಜೇಂದ್ರ ಚೋಳರೆಂಬ ಚಕ್ರವರ್ತಿಗಳು, ಕಲ್ಯಾಣ, ಮಂಗಳವಾಡ, ಮಾಸನೂರು, ಕೊಲ್ಲಾಪುರ ಮೊದಲಾದ ನಗರಗಳು ಚಾರಿತ್ರಿಕವೆನಿಸುತ್ತವೆ. "ಕಂತೆಯ ಕಮನಿಯರೂಪಂ ವಜ್ರಕುಂಡಲದ ವಜ್ರಧರಂ, ಲಾಕುಳದ ಲೋಕೈಕ ಬಂಧು ಮೆಟ್ಟಿದ ಹಾವುಗೆಯ ಕಟ್ಟಧಿಕಂ ಕೋವಣದ ಭಾವುಕಂ" ಎಂಬ ವಿವರಗಳು ಆತನ ವ್ಯಕ್ತಿಚಿತ್ರವನ್ನು ನೀಡುತ್ತವೆ. ಇದೆಲ್ಲಕ್ಕಿಂತ ಮುಖ್ಯವಾಗಿ "ತಟಾಕಂಗಳಂ ಕಟ್ಟಿಸುತ್ತಂ ಶಿವನಿಳಯಂಗಳನೆತ್ತಿಸುತ್ತಂ ಆರವೆಗಳನಿಕ್ಕಿಸುತ್ತಂ ಶಿವಪುರಂಗಳಂ ಮಾಡಿಸುತ್ತಂ ಸತ್ರಂಗಳಂ ನಿಮಿರ್ಚಿಸುತ್ತಂ ಕುರುಡರ್ಗೆ ಕಂಗಳಂ ಹೆಳವರ್ಗೆ ಕಾಲ್ಗಗಳಂ ಬಂಜೆಯರ್ಗೆ ಮಕ್ಕಳಂ ಕೆಟ್ಟರಸು ಮಕ್ಕಳಿಗೆ ರಾಜ್ಯಮಂ ಕಂಡ ಕಂಡ ಬಡವರ್ಗೆ ಸಂಪದಂಗಳನೀವುತಂ" ಎಂಬ ವಿವರ ಲೋಕಕಾರುಣ್ಯಕ್ಕೆ ಸಾಕ್ಷಿಯಾಗಿದೆ. ಮುಂದೆ ಬಂದ ಎಲ್ಲ ಪುರಾಣಗಳು ಸ್ವಲ್ಪ ಹೆಚ್ಚು ಕಡಿಮೆ ಇದೆ ಕಥೆಯನ್ನು ಅನುಸರಿಸಿವೆ. ಸಿರವಾಳ ಶಾಸನದಲ್ಲಿಯ "ಶಾನ್ತಿಮಯ್ಯದೇವಂಗಳ ಪುತ್ರ ರೇವಣದೇವಯ್ಯ"ಎಂಬುದು ಶಾಂತಮಯ್ಯನ ಶಿಷ್ಯ(ಪುತ್ರ) ರೇವಣ ದೇವಯ್ಯ(ಸಿದ್ಧ)ನೆಂದು ಹೇಳುತ್ತಿದ್ದರೆ, ತಗರಪವಾಡ ಮೊದಲಾದ ಕಾವ್ಯಗಳು ರೇವಣಸಿದ್ಧನ ಶಿಷ್ಯ ಶಾಂತಮುತ್ತಯ್ಯನೆನ್ನುತ್ತವೆ. ಇಲ್ಲಿ ಬರುವ ಶಾಂತಮಯ್ಯ ಮತ್ತು ಶಾಂತಮುತ್ತಯ್ಯ ಭಿನ್ನರೋ ಅಭಿನ್ನರೋ ಸ್ಪಷ್ಟವಾಗುವುದಿಲ್ಲ.

ಹೀಗೆ ಚಾರಿತ್ರಿಕ ವಿವರಗಳನ್ನೊದಗಿಸುವ ರೇವಣಸಿದ್ಧೇಶ್ವರ ರಗಳೆ ಈ ಪಂಥದ ತತ್ತ್ವ, ಆಚರಣೆಗಳನ್ನು ಒದಗಿಸುವುದಿಲ್ಲ. ಈ ಕೊರತೆಯನ್ನು ನಾವು ಇದೇ ಪಂಥದ ಸಿದ್ಧರಾಮ ಚಾರಿತ್ರದ ನೆರವಿನಿಂದ ಹೀಗೆ ತುಂಬಿಕೊಳ್ಳಬಹುದು.

ಈ ಸಂಪ್ರದಾಯದಲ್ಲಿ ಶಿಷ್ಯನಿಗೆ ದೀಕ್ಷೆ ನೀಡುವ ರೀತಿ ಹೀಗಿದ್ದಿತು: ನಾಲ್ಕು ಆಚಾರ್ಯ ಕಳಸ ಒಂದು ಗುರು ಕಳಸವನ್ನು ಹೂಡಿ ಗುರು ಅನುಗ್ರಹ ನೀಡುತ್ತಿದ್ದನು(೩–೧೩). ಈಗ ಪಂಚಾಕ್ಷರಿ ಮಂತ್ರದ ಜೀವ ರಹಸ್ಯವನ್ನು ತಿಳಿಸಲಾಗುತ್ತಿತ್ತು. ಹೊಸ ನಾಮಕರಣ ಮಾಡಿ, ಭೂತದಯೆ(ಅಥವಾ ಈ ಬಗೆಯ ಯಾವುದೇ ಒಂದು) ವ್ರತವನ್ನು ನೀಡುತ್ತಿದ್ದರು. ಈ ದೀಕ್ಷೆಯಿಂದ ಕನ್ನಡಿಯಿಂದ

ಕನ್ನಡಿ ತೋರಿದಂತೆ ಎರಡಳಿದು ಒಂದಾಗುವ ಸ್ಥಿತಿ ನಿರ್ಮಾಣವಾಗುತ್ತಿದ್ದಿತು(೩–೧೪). ಕರಡಿಗೆಯ ಸೆಜ್ಜೆಯಲ್ಲಿ ಅಣಿಮಾದಿ ಗುಣಮಿಳಿತ ಲಿಂಗವನ್ನಿಡುತ್ತಿದ್ದರು. ಆ ಕರಡಿಗೆಯನ್ನು ಎತ್ತಿಕೊಂಡು ಹೋಗುತ್ತಿದ್ದರು(೩–೩೩, ೩೪). ದೇವಾಲಯದ ಆವರಣವನ್ನು ಯೋಗರಮಣೀಯ ಕ್ಷೇತ್ರ(೩–೩೮)ಎಂದು ಕರೆಯುತ್ತಿದ್ದರು. ಅಲ್ಲಿ ದೇವಾಲಯ ಅದರ ಸುತ್ತಲೂ ಪುರವನ್ನು(೩–೩೯, ೪೦–೪೧) ನಿರ್ಮಿಸುತ್ತಿದ್ದರು. ದೇವಾಲಯದಲ್ಲಿ ಪೀಠಿಕೆ ಮತ್ತು ಗೋಳಕಗಳನ್ನು ಏಕಶಿಲೆಯಲ್ಲಿ ಕಂಡರಿಸಿದ ಯೋಗಲಿಂಗವನ್ನು, ಶಿವನ ಅನಂತ ಮುಖಗಳನ್ನು ಪ್ರತಿನಿಧಿಸುವ ಐದು ಮುಖವುಳ್ಳ ಗೋಳಕದ ಲಿಂಗವನ್ನು(೬–೩೦) ಒಂದರ ಮೇಲೆ ಒಂದರಂತೆ ಎರಡು ಪೀಠಿಕೆಗಳ ಲಿಂಗವನ್ನು(೩–೨೦) ಸ್ಥಾಪಿಸುತ್ತಿದ್ದರು. ಇವುಗಳನ್ನು ಆಚಾರ್ಯರ ನೇತೃತ್ವದಲ್ಲಿ ಪ್ರತಿಷ್ಠಿಸುತ್ತಿದ್ದರು(೩–೨೧). ಈ ಕಾರ್ಯದ ಬಳಿಕ ನಿತ್ಯ ಹೋಮ(೪–೦೩) ಜರುಗಿಸಲಾಗುತ್ತಿತ್ತು. ಮಂದರಗಿರಿ ಹೋಮವನ್ನು ವಿಶೇಷವೆಂದು ಭಾವಿಸಿದ್ದರು(೯–೩೯). ಗೋದಾನ, ಭೂದಾನ, ಕನ್ಯಾದಾನ, ವಸ್ತ್ರದಾನ, ಅನ್ನದಾನ, ಮಹಿಷಿ ದಾನಗಳನ್ನು ಜರುಗಿಸುತ್ತಿದ್ದರು(೪–೦೩). ನವಗ್ರಹ ಇತ್ಯಾದಿಗಳು ಹೋಮದ ಆಹುತಿಯನ್ನು ಸ್ವೀಕರಿಸುವವವೆಂದು(೪–೪)ಭಾವಿಸಲಾಗುತ್ತಿತ್ತು. ಲಿಂಗಕ್ಕೆ ಪಂಚಾಮೃತ ಅಭಿಷೇಕ ಮಾಡುತ್ತಿದ್ದರು(೬–೩೭). ಅಷ್ಟದಿಕ್ಪಾಲಕರನ್ನು ದೇವಾಲಯದ ಆವರಣದಲ್ಲಿ ಸ್ಥಾಪಿಸುತ್ತಿದ್ದರು(೪–೬ರಿಂದ ೧೧). ಸತ್ರ ನಿರ್ಮಾಣ (೪–೨), ಯೋಗಮಜ್ಜನ ಚೌಕ(೫ನೆಯ ಸಂಧಿ) ನಿರ್ಮಿಸುತ್ತಿದ್ದರು. ಗಣಪತಿ, ಬಾದುಮಯ್ಯ ದೈವತಗಳನ್ನು ಸ್ಥಾಪಿಸುತ್ತಿದ್ದರು(೮–೬೧). ತವಗದ ಆರಾಧನೆ(೮–೮೨, ೮೩), ಕ್ಷೇತ್ರ ಪೂಜೆ(೮–೮೦)ಜರುಗುತ್ತಿದ್ದಿತು. ಈಗ ಮಹಾ ನೂಲನ್ನು (=ಸೂತ್ರ) ಕ್ಷೇತ್ರಕ್ಕೆ ಸುತ್ತುತ್ತಿದ್ದರು(೮–೩೯, ೬೪). ದೇವಾಲಯದ ಲಿಂಗಕ್ಕೆ ತುಪ್ಪದ ಅಭಿಷೇಕ ಜರುಗುತ್ತಿತ್ತು(೮–೪೦–೪೧). ಇದು ಯೋಗಪ್ರಧಾನ ಪಂಥ. ಈ ಯೋಗದ ಸ್ವರೂಪವನ್ನು ಸಿದ್ಧರಾಮ ಚಾರಿತ್ರ ಹೀಗೆ ತಿಳಿಸುತ್ತದೆ:

> ....ಪದ್ಮಾಸನಂಗೈದು, ರವಿಶಶಿಗಳಂ ಬಲಿದು, ಕರಣಂಗಳ
> ತೊಡಚಿ ಕುಂಡಲಿಗೊತ್ತಿ, ಸುತ್ತಿರ್ದ ವಾಯುವಂ
> ಹಿಡಿದು, ಲಂಬಿಕೆಯಿಂ ಸುಷುಮ್ನೆಯೊಳು ಜ್ಯೋತಿಯಂ
> ನಡೆಸಿ, ಗಗನದ ಚಂದ್ರಕಳೆಯ ಬೆಮರಿಸುವ.............(೪–೨೭)

ರೀತಿ ಇದಾಗಿದ್ದಿತು. ಈ ಯೋಗದಿಂದ ಲಭ್ಯವಾಗುವ ೮ ಸಿದ್ಧಿಗಳಾದ ಅಣಿಮಾ (ಸೂಕ್ಷ್ಮರೂಪ ಧರಿಸುವುದು), ಮಹಿಮಾ(ದೊಡ್ಡರೂಪ ಧರಿಸುವುದು), ಗರಿಮಾ (ಭಾರವಾಗುವುದು), ಲಘಿಮಾ(ಹಗುರಾಗುವುದು), ಪ್ರಾಪ್ಯ(ಅಸಾಧ್ಯವಾದುದುದನ್ನು ಪಡೆಯುವುದು) ಪ್ರಾಕ್ಕಾಮ್ಯ(ಅಲ್ಪವನ್ನು ಅಧಿಕವಾಗಿಸುವುದು) ಈಶಿತ್ವ (ಎಲ್ಲೆಲ್ಲಿಯೂ ಪ್ರಭಾವ ಬೀರುವುದು), ವಶಿತ್ವ(ಇಂದ್ರಿಯ ನಿಗ್ರಹ)–ಇವು ಈ ಪಂಥದಲ್ಲಿ ಮನ್ನಿಸಲ್ಪಡುತ್ತಿದ್ದವು. ಇದಲ್ಲದೆ ಭಸಿತ, ರುದ್ರಾಕ್ಷಿ ಮೂಲಮಂತ್ರ (ಪಂಚಾಕ್ಷರಿ), ಜ್ಞಾನದಾನ, ಪಾಪ ನಿರ್ಮೂಲನ ಇವುಗಳ ಮೂಲಕ ಭವಿಗಳನ್ನು ಮಹಾಮಹೇಶ್ವರರನ್ನಾಗಿಸುವುದು ಈ ಪಂಥದ ಲಕ್ಷಣವಾಗಿದ್ದಿತು(೧–೧೦). ದೇವಾಲಯದಲ್ಲಿ ಲಿಂಗ ಸ್ಥಾಪಿಸುವಾಗ ನಂದಿಯನ್ನು ಗರ್ಭಗುಡಿಗೆ ಕರೆತಂದು ಅದರ ಕಾಲನ್ನು ಲಿಂಗದ ಮೇಲಿಡಿಸುತ್ತಿದ್ದರು. ಗೋವುಗಳನ್ನು ಸಾಕುತ್ತಿದ್ದರು. ಜನಹಿತ ಕಾರ್ಯಗಳಾದ ಕೆರೆ, ವನ, ನಿರ್ಮಾಣ ಮಾಡುತ್ತಿದ್ದರು. ಅಂತ್ಯಕಾಲದಲ್ಲಿ ಯೋಗಿಗಳಾದವರು

ಜೀವಂತ ಸಮಾಧಿ ಪ್ರವೇಶಿಸುತ್ತಿದ್ದರು. ಇವೇ ಮೊದಲಾದವು ಇವರ ಆಚರಣೆಗಳಾಗಿದ್ದವು. ಈ ಪಂಥದಲ್ಲಿ ಶಿವಯೋಗ, ಮಹಾಮನೆ ಪದಗಳು ಕಂಡುಬರುವುದರಿಂದ ಸಂಪ್ರದಾಯವಾದಿಗಳು ಹೇಳುವಂತೆ ಬಸವಾದಿಗಳು ವೀರಶೈವದಿಂದ ಪ್ರಭಾವಿತರಾಗದೆ ಈ ನಾಥ ಸಂಪ್ರದಾಯದಿಂದ ಪ್ರಭಾವಿತರಾಗಿರಬೇಕೆನಿಸುತ್ತದೆ. ಬಸವಣ್ಣನು ಜನ್ನಿವಾರ ಹರಿದುಕೊಂಡು ನಾಥಪಂಥ ಸೇರಿದನೆಂದೂ, ಬಳಿಕ ಅದನ್ನೂ ಬಿಟ್ಟು "ಲಿಂಗಾಯತ"ವೆಂಬ ಹೊಸ ಧರ್ಮ ಸ್ಥಾಪಿಸಿದನೆಂದೂ ಇತ್ತೀಚೆ ವಿದ್ವಾಂಸರು ಹೇಳುವುದನ್ನು ಇಲ್ಲಿ ನೆನೆಯಬಹುದು.

ಶಿವಾಚಾರದ ಈ ನಾಥಸಂಪ್ರದಾಯವನ್ನು ಯಾವುದೇ ಜಾತಿಯವರು ಅನುಸರಿಸಬಹುದಾಗಿದ್ದಿತು. ಈ ಮೇರೆಗೆ ಕುರುಬ ಜಾತಿಯ ರೇವಣಸಿದ್ಧ ನಾಥ ಸಂಪ್ರದಾಯದ ಅನುಯಾಯಿಯಾಗಿದ್ದನು. ಹೀಗೆ ಎಲ್ಲ ಜಾತಿಗಳನ್ನೊಳಗೊಂಡ ಈ ಪಂಥದಲ್ಲಿ ಊಟೋಪಚಾರದ ಮಟ್ಟಿಗೆ ಜಾತಿಭೇದ ಮಾಡುತ್ತಿರಲ್ಲಿಲ್ಲ. ಮದುವೆ ವಿಷಯದಲ್ಲಿ ಮಾತ್ರ ಜಾತಿಭೇದ ಪಾಲಿಸುತ್ತಿದ್ದರು. ಅಂದರೆ ಶಿವಾಚಾರ ವಿಷಯದಲ್ಲಿ ನಾವೆಲ್ಲ ಒಂದು, ಕುಲಾಚಾರ ವಿಷಯದಲ್ಲಿ ನಾವೆಲ್ಲ ಬೇರೆ ಬೇರೆ ಎಂಬುದು ಇವರ ನಿಲುವಾಗಿದ್ದಿತ್ತು. ಈ ದ್ವಂದ್ವನೀತಿಯನ್ನು ಚೆನ್ನಬಸವಣ್ಣನವರು "ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರವೆಂಬ ಅನಾಚಾರಿಯ ಮುಖವ ನೋಡಲಾಗದು" ಅಂದರೆ ಊಟದ ವಿಷಯದಲ್ಲಿ ಅಭಿನ್ನಭಾವ, ಮದುವೆಯ ವಿಷಯದಲ್ಲಿ ಭಿನ್ನ ಭಾವ-ಇದು ಸರಿಯೇ? ಎಂದು ನಿಂದಿಸಿದ್ದಾರೆ. ಹೀಗೆ ಜರಿದುದಲ್ಲದೆ ಶರಣರು ಮುಂದುವರಿದು ಊಟದಲ್ಲಿಯಂತೆ ಮದುವೆಯಲ್ಲಿಯೂ ಜಾತಿಭೇದ ಮಾಡಬಾರದೆಂದು ಸಾರಿ, ಸಮಗಾರ ಹರಳಯ್ಯ-ಬ್ರಾಹ್ಮಣ ಮಧುವಯ್ಯಗಳ ಮಕ್ಕಳ ಮದುವೆ ಮಾಡಿದರು. ಇದು ಸಮಾಜದಲ್ಲಿ ಕ್ರಾಂತಿಗೆ ಕಾರಣವಾಯಿತಾದರೂ ಶರಣರ ಈ ನೀತಿ ಶ್ಲಾಘನೀಯವೆಂದೇ ಹೇಳಬೇಕು. ಶರಣರ ಇಂಥ ಪ್ರಗತಿಪರ ವಿಚಾರಗಳಿಗೆ ಮಾರುಹೋಗಿ ನಾಥಪಂಥೀಯ ಸಿದ್ಧರಾಮ ಶರಣಪಂಥೀಯನಾದ. ಈ ವೇಳೆಗೆ ವೃದ್ಧನೆ ಆಗಿದ್ದ ರೇವಣಸಿದ್ಧ ಮಾತ್ರ ಮೊದಲಿನಂತೆಯೇ ಉಳಿದ. ಇದರಿಂದಾಗಿ ಕುರುಬ ಸಮಾಜದಲ್ಲಿ ಪ್ರಗತಿ ಪರವಾಗಿದ್ದ ಸಿದ್ಧರಾಮನ ಶಾಖೆ ಅಂದರೆ(ಸಿದ್ಧರಾಮನ ಶಿಷ್ಯನಾಗಿದ್ದ ಮಂಕಸಿದ್ಧನ ಶಾಖೆ) ಮತ್ತು ರೇವಣಸಿದ್ಧನ ಶಾಖೆ ಅಂದರೆ(ರೇವಣಸಿದ್ಧನ ಶಿಷ್ಯನಾಗಿದ್ದ ಶಾಂತಮುತ್ತಯ್ಯನ ಶಾಖೆ) -ಎಂಬ ಎರಡು ಶಾಖೆಗಳೇ ಬೆಳೆದು ಬಂದವು. ಭಾರತೀಯರು ಪ್ರಗತಿಗೆ ಬೇಗ ಸ್ಪಂದಿಸುವ ಮನೋಧರ್ಮದವರಲ್ಲ. ಹೀಗಾಗಿ ಇಂದಿಗೂ ಪ್ರಗತಿಪರರಾದ ಮಂಕಸಿದ್ಧ ಸಂಪ್ರದಾಯದವರ ಸಂಖ್ಯೆ ಸಣ್ಣದಾಗಿದ್ದರೆ, ಸಂಪ್ರದಾಯಶೀಲರಾದ ಶಾಂತಮುತ್ತಯ್ಯ ಸಂಪ್ರದಾಯದವರ ಸಂಖ್ಯೆ ದೊಡ್ಡದಾಗಿಯೇ ಬೆಳೆದುಬಂದಿದೆ.

೧೩ನೆಯ ಶತಮಾನದ ರೇವಣಸಿದ್ಧೇಶ್ವರ ರಗಳೆ, ಸಿದ್ಧರಾಮ ಚಾರಿತ್ರಗಳಲ್ಲಿ ಒಬ್ಬ ಶಿವಸಿದ್ಧನಂತೆ ಚಿತ್ರಿತನಾದ ರೇವಣಸಿದ್ಧನು ಬಳಿಕ ೩೦೦ ವರ್ಷ ಯಾವ ಕಾವ್ಯದಲ್ಲಿಯೂ ಕಾಣದೆ, ಒಮ್ಮೆಲೇ ಆಚಾರ್ಯನಂತೆ ಕಾಣಿಸಿಕೊಳ್ಳತೊಡಗಿದನು. ವೀರಶೈವಾಮೃತ ಮಹಾಪುರಾಣ(೧೫೩೦), ಗುರುರಾಜ ಚಾರಿತ್ರ (೧೬೦೦), ಚತುರಾಚಾರ್ಯ ಪುರಾಣ(೧೯೬೮)ಗಳಲ್ಲಿ ಆಚಾರ್ಯನಾಗಿ ಭಾಗಶಃ ಕಾಣಿಸಿಕೊಂಡ ಈತನು, ತರುವಾಯ ರೇವಣಸಿದ್ಧೇಶ್ವರ ಕಾವ್ಯ, ರೇವಣಸಿದ್ಧೇಶ್ವರ ಪುರಾಣಗಳಲ್ಲಿ ಆಚಾರ್ಯ ಚಹರೆಯ ಕಥಾನಾಯಕನಾಗಿ ಬೆಳೆದನು. ಶರಣ ಚಳುವಳಿಗೂ ಈತನಿಗೂ

ಸಂಬಂಧವಿಲ್ಲದಂತೆ ಹರಿಹರ ರಾಘವಾಂಕರಲ್ಲಿ ತೋರಿಬರುವ ಇವನನ್ನು ಶರಣರ ಷಟ್‌ಸ್ಥಲದ ಇನ್ನೊಂದು ರೂಪವಾದ ಏಕೋತ್ತರಶತಸ್ಥಲ(ಸಿದ್ಧಾಂತ ಶಿಖಾಮಣಿ)ದ ಬೋಧಕನೆಂಬಂತೆ ಇವನ ಮಗ ರುದ್ರಮುನಿಯನ್ನು ಕಲ್ಯಾಣದ ಕೊನೆಯ ದಿನಗಳಲ್ಲಿ ಶರಣರೊಂದಿಗೆ ಸಹಕರಿಸಿದನೆಂಬಂತೆ ಚಿತ್ರಿಸಲಾರಂಭಿಸಿದರು. ೧೫೮೪ರ ಚೆನ್ನಬಸವಪುರಾಣ, ೧೭೫೦ರ ಶರಣ ಲೀಲಾಮೃತ, ಕಾಲಜ್ಞಾನದ ವಚನಗಳು ಶರಣರಿಗೂ ರುದ್ರಮುನಿಗೂ ಸಂಬಂಧ ಕಲ್ಪಿಸುವ ಕೆಲಸ ಮಾಡಿದವು. ಈ ಸಂಬಂಧ ಕಲ್ಪನೆ ಗಟ್ಟಿಗೊಳಿಸಲು ಶರಣರ ವಚನಗಳಲ್ಲಿ ರೇವಣಸಿದ್ಧನ ಹೆಸರನ್ನು(ಚತುರಾಚಾರ್ಯರ ಹೆಸರನ್ನು) ಸೇರಿಸಿ ಬಿಟ್ಟರು. ಇಷ್ಟೇ ಏಕೆ, ರೇವಣಸಿದ್ಧ ಮೊದಲುಗೊಂಡು ನಾಲ್ಕೂ(ಐದೂ) ಆಚಾರ್ಯರು ಕೃತಯುಗದಷ್ಟು ಪ್ರಾಚೀನರೆಂದು ಸಾಧಿಸಲು ಆಗಮಗಳನ್ನು ಪ್ರಕ್ಷಿಪ್ತಗೊಳಿಸಿದರು. ಈ ಅಸತ್ಯವನ್ನು ಸತ್ಯವೆಂಬಂತೆ ಜನರ ತಲೆಯಲ್ಲಿ ತುಂಬಲು ನಿನ್ನೆ ಮೊನ್ನೆ ಬೇರೆ ಬೇರೆ ಗ್ರಾಮಗಳಲ್ಲಿ ಪಂಚಾಚಾರ್ಯರ ಯುಗಮಾನೋತ್ಸವ ಸಮಾರಂಭ ಆಚರಿಸತೊಡಗಿದರು. ಸ್ಥಳೀಯ ವೀರಶೈವ ಮುಖಂಡರು ಇಂಥ ಸುಳ್ಳು ಕಾರ್ಯಕ್ರಮಗಳಿಗೆ ತನು-ಮನದಿಂದ, ಅದಕ್ಕಿಂತ ಹೆಚ್ಚು ಧನದಿಂದ ನೆರವಾಗತೊಡಗಿದರು. ಈ ಎಲ್ಲ ಪ್ರಯತ್ನಗಳಿಂದಾಗಿ ಶಿವಸಿದ್ಧನಾಗಿದ್ದ ರೇವಣಸಿದ್ಧನು ರೇವಣಾರಾಧ್ಯ, ರೇಣುಕಾಚಾರ್ಯನೆನಿಸಿದನು. ಒಟ್ಟಾರೆ, ಶಿವಸಿದ್ಧನಾಗಿದ್ದ ಸಿದ್ಧರಾಮನು ೧೨ನೆಯ ಶತಮಾನದಲ್ಲಿ ಶಿವಶರಣನಾದರೆ, ಶಿವಸಿದ್ಧನಾಗಿದ್ದ ರೇವಣಸಿದ್ಧನನ್ನು ೧೬-೧೭ನೆಯ ಶತಮಾನದಲ್ಲಿ ವೀರಶೈವರು ಶಿವಾಚಾರ್ಯ ಮಾಡಿದರು. ಇವನನ್ನು ಕುರಿತು ಪುರಾಣ ಬರೆದು ಪ್ರವಚನಾದಿಗಳ ಮೂಲಕ ಅಸತ್ಯವನ್ನು ಸತ್ಯವೆಂಬಂತೆ ಪ್ರಚುರಗೊಳಿಸಿದರು. ರೇವಣಸಿದ್ಧನು ಕೊಲ್ಲಿಪಾಕಿಯ ಲಿಂಗದಿಂದ ಉದಯಿಸಿದನೆಂಬಂತೆ ಬರೆಯಿಸಿದ ಭಾವಚಿತ್ರ-ಕಂಡರಿಸಿದ ಶಿಲಾವಿಗ್ರಹಗಳನ್ನು ಅಲ್ಲಲ್ಲಿ ಪ್ರದರ್ಶಿಸಿದರು. ಈ ವೀರಶೈವ ಕಲ್ಪಿತ ರೇಣುಕಾಚಾರ್ಯನೇ ತಮ್ಮ ರೇವಣಸಿದ್ಧನೆಂದು ನಂಬಿ, ಕುರುಬರು ಸಹ ತಮ್ಮ ರೇವಣಸಿದ್ಧ ದೇವಾಲಯ, ಮಠಗಳಲ್ಲಿ ಈ ಚಿತ್ರ-ಶಿಲ್ಪಗಳನ್ನು ಪ್ರದರ್ಶಿಸುವ ತಪ್ಪು ಮಾಡಹತ್ತಿದರು.

ರೇವಣಸಿದ್ಧನಿಗೆ ಮಾಡಿದ ಇಷ್ಟು ಅನ್ಯಾಯ ಸಾಲದೆಂಬಂತೆ ತಾವು ಶೈವರಾಗಿದ್ದರೂ ವೈಷ್ಣವ ಪಂಥೀಯನಾದ ಕನಕದಾಸನ ಹೆಸರಿನಲ್ಲಿ ೨೦ನೆಯ ಶತಮಾನದಲ್ಲಿ ಕುರುಬರು ಇನ್ನೊಂದು ಜಗದ್ಗುರುಪೀಠವನ್ನು ಅಸ್ತಿತ್ವಕ್ಕೆ ತಂದರು. ಸರಕಾರವು ಚುನಾವಣೆಯ ಮತಗಳಿಗಾಗಿ ಕುರುಬ ಸಮಾಜವನ್ನು ತುಷ್ಟಿಗೊಳಿಸಲು ಕಾಗಿನೆಲೆ, ಬಾಡಗ್ರಾಮಗಳಲ್ಲಿ ಅರಮನೆಯಂತಹ ಕಟ್ಟಡ ಕಟ್ಟಿಸಿದರು. ಹೆದ್ದಾರಿಯಿಂದ ದೂರವಿರುವ ಇತಿಹಾಸ ಪ್ರಸಿದ್ಧ ಕ್ಷೇತ್ರಗಳಲ್ಲದ, ಒಂದೂ ಕುರುಬರ ಮನೆತನವಿಲ್ಲದ ಈ ಗ್ರಾಮಗಳಲ್ಲಿ ಇಂಥ ಬೃಹತ್ ಕಟ್ಟಡಗಳ ಪ್ರಯೋಜನವೇನು? ಇವುಗಳ ನಿರ್ವಹಣೆ ಏನು? ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಈ ಹಣದ ಒಂದು ಭಾಗವನ್ನು ಕುರುಬರ ಧಾರ್ಮಿಕ ಕೇಂದ್ರಗಳಾಗಿರುವ ಅರಕೇರಿ, ಸರೂರುಗಳಲ್ಲಿ ತೊಡಗಿಸಿದರೆ ಹೆಚ್ಚು ಪ್ರಯೋಜನವೆನಿಸುವುದರಿಂದ, ಕುರುಬರು ಇತ್ತ ಗಮನ ಕೊಡುವರೆಂದು ಆಶಿಸುತ್ತೇನೆ.

ಒಟ್ಟಾರೆ ತಮ್ಮ ಗುರು ರೇವಣಸಿದ್ಧನು ಒಮ್ಮೆ ವೀರಶೈವರ ಪಂಚಾಚಾರ್ಯರ ಕಲ್ಪನೆಯ ಮೂಲಕ, ಇನ್ನೊಮ್ಮೆ ವೀರವೈಷ್ಣವರ ಕನಕದಾಸ ಕಲ್ಪನೆಯ ಮೂಲಕ-ಹೀಗೆ ಎರಡು ಸಲ ಅನ್ಯಾಯಕ್ಕೆ ಗುರಿಯಾದನು. ಅಂದರೆ ಕುರುಬರ ರೇವಣಸಿದ್ಧ ಪರಂಪರೆಯ ಗುರುಗಳು, ಮಠಗಳು ಎರಡು ಸಲ ಅನ್ಯಾಯಕ್ಕೆ ಗುರಿಯಾದವು. ಕುರುಬರೆ ಮುಂದಾಗಿ ನಿಂತು ತಮ್ಮ ರೇವಣಸಿದ್ಧ

ಪರಂಪರೆಯನ್ನು(ಮಂಕಸಿದ್ಧ, ಅಮೋಘಸಿದ್ಧ ಪರಂಪರೆಗಳನ್ನು ಸಹಿತ)ಮೂಲೆಗುಂಪು ಮಾಡಿದರು. ಈಗಲಾದರೂ ಕುರುಬರು ಎಚ್ಚೆತ್ತು ತಮ್ಮ ಶಿವಸಿದ್ಧ ಪರಂಪರೆಯ ರೇವಣಸಿದ್ಧನನ್ನು, ರೇವಣಸಿದ್ಧ ಪರಂಪರೆಯ ಗುರುಪೀಠಗಳನ್ನು ಮತ್ತು ದೇವಾಲಯಗಳನ್ನು ಮುನ್ನೆಲೆಗೆ ತರುವ ಕೆಲಸ ಮಾಡಿದರೆ ಈ ಸಮ್ಮೇಳನ ಸಾರ್ಥಕವೆಂದು ಭಾವಿಸುತ್ತೇನೆ.

* * *

ರೇವಣಸಿದ್ಧ ಸಂಪ್ರದಾಯ(ಶಾಂತಮುತ್ತಯ್ಯ ಸಂಪ್ರದಾಯ/ಶಾಂತ ಒಡೆಯರ ಸಂಪ್ರದಾಯ)ದ ದೇವಾಲಯ–ಮಠ, ಒಡೆಯರು–ಭಕ್ತರು, ಕೌಟುಂಬಿಕ ವ್ಯವಸ್ಥೆ–ಧಾರ್ಮಿಕ ಆಚರಣೆ ಇತ್ಯಾದಿಗಳ ಅಭ್ಯಾಸ ತುಂಬ ಮಹತ್ವದ್ದಾಗಿದೆ. ಈ ಸಂಪ್ರದಾಯದ ಬಹಳಷ್ಟು ಮಠಗಳು ವೀರಶೈವ ಪಂಚಾಚಾರ್ಯರ ವಶಕ್ಕೆ ಹೋಗಿದ್ದರೂ ಉಳಿದಿರುವ ಮಠಗಳ ಸಂಖ್ಯೆ ಸಣ್ಣದೇನಲ್ಲ. ಈ ಎಲ್ಲ ಮಠ ಸಂಪ್ರದಾಯಗಳ ಮೂಲಗುರು ರೇವಣಸಿದ್ಧನ ಶಿಷ್ಯ(ಗುರು?)ನಾದ ಶಾಂತ ಮುತ್ತಯ್ಯನೆಂದು, ಈತನ ಮೂಲಮಠ ಮುದ್ದೇಬಿಹಾಳ ತಾಲೂಕಿನ ಸರೂರು ಗ್ರಾಮದ್ದೆಂದು ಕುರುಬ ಸಮಾಜದ ನಂಬಿಕೆ. ಇದನ್ನು 'ತಗರಪವಾಡ' ಕೃತಿ ಮತ್ತು ಒಂದಿಷ್ಟು ದಾಖಲೆಗಳು ದೃಢಪಡಿಸುತ್ತವೆ. ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಕುರುಬರ ಮಂಕಸಿದ್ಧ ಸಂಪ್ರದಾಯ/ಮಂಕ ಒಡೆಯರ ಸಂಪ್ರದಾಯದ ಮೂಲ ಕೇಂದ್ರವೂ ಇದೇ ಗ್ರಾಮವಾಗಿರುವುದು. ಈಗಲೂ ಈ ಎರಡೂ ಸಂಪ್ರದಾಯ ಈ ಗ್ರಾಮದಲ್ಲಿ ದೊಡ್ಡ ಸಂಖ್ಯೆಯಲ್ಲಿವೆ. ಈ ಎರಡರಲ್ಲಿ ರೇವಣಸಿದ್ಧ ಸಂಪ್ರದಾಯದ ಕುಟುಂಬಗಳು ಕರ್ನಾಟಕದಲ್ಲಿ ಸಂಖ್ಯಾ ಪ್ರಮಾಣ ಮತ್ತು ಪ್ರಾದೇಶಿಕ ವ್ಯಾಪ್ತಿಯಿಂದ ದೊಡ್ಡದಾಗಿದೆ. ಹೀಗಿದ್ದೂ ಈ ಸಂಪ್ರದಾಯ ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು ಜಿಲ್ಲೆಗಳಲ್ಲಿ ಎದ್ದುಕಾಣುವಂತಿದೆ.

ಈ ಶಾಂತವೊಡೆಯರಿಗೆ ಶಾಂತಭಿಕ್ಷಾವೃತ್ತಿಗಳೆಂಬುದು ಇನ್ನೊಂದು ಹೆಸರು. ಧಾರ್ಮಿಕ ನೇತಾರರಾಗಿರುವ ಇವರು ಶುದ್ಧ ಶಾಕಾಹಾರಿಗಳೂ ಲಿಂಗಧಾರಿಗಳೂ ಆಗಿರುತ್ತಾರೆ. ರೇವಣಸಿದ್ಧೇಶ್ವರ ದೇವಾಲಯಗಳ ಅರ್ಚಕರೂ, ಮಠಾಧಿಪತಿಗಳೂ ಆಗಿರುವ ಇವರು, ಕುರುಬರ ಬೀರದೇವರ ಪಟ್ಟ, ಈರಗಾರಿಕೆ ಪಟ್ಟ, ದೇವರ ದಿನನಿತ್ಯದ ಪೂಜೆ, ವಾರ್ಷಿಕ ಜಾತ್ರೆ ಇತ್ಯಾದಿಗಳನ್ನು ನೆರವೇರಿಸುತ್ತಾರೆ. ದೇವರ ಪೂಜೆಗೆ ಮಿಂದು ಮಡಿಯುಟ್ಟು ಬರುವಾಗ ಕೆಲವೆಡೆ ಇವರಿಗೆ ಚಾಮರ ಬೀಸುತ್ತಾರೆ. ೧೨ ವರ್ಷಕ್ಕೊಮ್ಮೆ ಇವರು ದೇವರಿಗೆ ವಿಶೇಷವಾದ 'ಕಂಥೆಸೇವೆ' ಸಲ್ಲಿಸುತ್ತಾರೆ. ಇದು ಮುಖ್ಯವಾಗಿ ಚಿತ್ರದುರ್ಗ ತುಮಕೂರು ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಈ ಒಡೆಯರು ಭವಿಷ್ಯ ನುಡಿಯುತ್ತಿದ್ದು, ಇವುಗಳಿಗೆ 'ಹೇಳಿಕೆ' ಎಂದು ಕರೆಯುತ್ತಾರೆ. ದೇವರ ಎದುರು ಭಕ್ತರು ತಮ್ಮ ಭವಿಷ್ಯ ಕೇಳುವುದನ್ನು 'ಹೂ ಕೇಳುವುದು' ಎಂದು ಕರೆಯುತ್ತಿದ್ದು, ಇದನ್ನೂ ಒಡೆಯರು ನಡೆಸಿಕೊಡುತ್ತಾರೆ. ಕೌಟುಂಬಿಕ ಸಂಸ್ಕಾರಗಳಾದ ನಾಮಕರಣ, ಮದುವೆ, ಅಂತ್ಯ ಸಂಸ್ಕಾರ ಮೊದಲಾದವುಗಳನ್ನು, ನ್ಯಾಯ ಬಗೆಹರಿಸುವಿಕೆಯನ್ನು, ದಂಡ ಕಟ್ಟಿ ಶುದ್ಧಗೊಳಿಸುವುದನ್ನು ಇವರೇ ಮಾಡುತ್ತಾರೆ. ಇಲ್ಲಿ ಗಮನಿಸಬೇಕಾದ ಒಂದು ವಿಶಿಷ್ಟ ಆಚರಣೆ ಹೀಗಿದೆ: ಧಾರ್ಮಿಕ, ಸಾಮಾಜಿಕ ಆಚರಣೆಗಳಿಗೆ ಅಯ್ಯನವರು ಪರ್ಯಾಯನಾಮದ ಒಡೆಯರು ಲಭ್ಯವಿಲ್ಲದ ಸಂದರ್ಭದಲ್ಲಿ ಅವರ ಕೆಲಸವನ್ನು 'ಕಾಲಿಲ್ಲದ ಅಯ್ಯನವರು' ಪೂರೈಸುತ್ತಾರೆ. ಇದು ಒಡೆಯರು ಮಂತ್ರಿಸಿದ ವಿಭೂತಿಯಾಗಿದೆ. ಚಿಕ್ಕ ಜೋಳಿಗೆಯಲ್ಲಿರುವ ಅದನ್ನು ಒಡೆಯರ ಮನೆಯಿಂದ ತಂದು ಕಂಬಳಿ ಗದ್ದುಗೆಯ ಮೇಲಿಟ್ಟರೆ,

ಸಾಕ್ಷಾತ್ ಒಡೆಯರೇ ಬಂದಂತೆ. ಇದರ ಸನ್ನಿಧಿಯಲ್ಲಿ ಎಲ್ಲ ಆಚರಣೆಗಳು ಜರುಗುತ್ತವೆ. ಈ ಪದ್ಧತಿ ತರೀಕೆರೆ, ಚಿಕ್ಕನಾಯಕನಹಳ್ಳಿ ಪ್ರದೇಶದಲ್ಲಿ ಮಾತ್ರ ಕಂಡುಬರುತ್ತದೆ. ಮಿಕ್ಕ ಪ್ರದೇಶಗಳಲ್ಲಿ, ಅದರಲ್ಲಿಯೂ ಉತ್ತರ ಕರ್ನಾಟಕದಲ್ಲಿ ಒಡೆಯರು ಲಭ್ಯ ಇಲ್ಲದಿರುವಾಗ ಲಿಂಗಾಯತ ಜಂಗಮರನ್ನು ಆಮಂತ್ರಿಸುತ್ತಾರೆ.

ಒಡೆಯರ ಕುಟುಂಬಗಳು ಅಣ್ಣ ತಮ್ಮಂದಿರು ಎನಿಸುವುದರಿಂದ ಇವರಲ್ಲಿ ಪರಸ್ಪರ ಮದುವೆ ಘಟಿಸುವುದಿಲ್ಲ. ಹೀಗಾಗಿ ಸಸ್ಯಾಹಾರಿಗಳಾದ ಈ ಕುರುಬ ಒಡೆಯರು ಮಾಂಸಾಹಾರಿಗಳಾದ ಕುರುಬ ಭಕ್ತರೊಂದಿಗೆ ನೆಂಟಸ್ತಿಕೆ ಮಾಡಿಕೊಳ್ಳುತ್ತಾರೆ. ಈಗ ಕುರುಬರ ಮನೆಯಿಂದ ತರುವ ಕನ್ಯೆಯನ್ನು ಶುದ್ಧೀಕರಿಸುವುದಂಬಂತೆ ಅವಳಿಗೆ ರೇವಣಸಿದ್ಧೇಶ್ವರ ದೇವಾಲಯದಲ್ಲಿ ಮಾಡುವ 'ಲಿಂಗದೀಕ್ಷಾ' ಕಾರ್ಯ ಹೀಗಿದೆ: ಒಡೆಯರ ಪಾದವನ್ನು ಕನ್ನೆಯ ತಲೆಯ ಮೇಲಿಟ್ಟು ಸ್ನಾನ ಮಾಡಿಸುತ್ತಾರೆ(ಕೆಲವು ಊರುಗಳಲ್ಲಿ ಹುಡುಗಿಯ ತಲೆಗೂದಲು ತೆಗೆಸುತ್ತಾರೆ). ಬಳಿಕ ಅವಳ ಉಡಿಯಲ್ಲಿ ಬಾಳೆ ಎಲೆ, ಅದರ ಮೇಲೆ ಕೆಂಡ ಇಟ್ಟು ದೇವಾಲಯದ ಪ್ರದಕ್ಷಿಣೆ ಮಾಡಿಸಿ, ಬೇವಿನ ಕಡ್ಡಿಯಿಂದ ನಾಲಗೆ ಸುಟ್ಟು, ಗೋಮೂತ್ರದಿಂದ ಬಾಯಿ ಮುಕ್ಕಳಿಸಲು ಹೇಳುತ್ತಾರೆ. ಆಮೇಲೆ ದೇವರ ಎದುರಿಗೆ ಕುಳ್ಳಿರಿಸಿ ದೇವರಿಗೂ ಈ ಕನ್ನೆಯ ಕೊರಳಿಗೂ ನೂಲು ಸುತ್ತಿ, ಕಿವಿಯಲ್ಲಿ 'ಓಂ ನಮಃ ಶಿವಾಯ' ಮಂತ್ರ ಹೇಳಿ, ಲಿಂಗ ಕಟ್ಟುತ್ತಾರೆ. ಹುಡುಗನಿಗೆ ಹುಟ್ಟಿದ ೫ನೆಯ ತಿಂಗಳಲ್ಲಿ ಲಿಂಗಧಾರಣೆಯಾಗಿದ್ದರೂ, ಈಗ ಅವನ ತಲೆಯ ಮೇಲೆ ಒಡೆಯರ ಪಾದವಿಡಿಸಿ ಸ್ನಾನ ಮಾಡಿಸಿ, ಲಿಂಗಕ್ಕೂ ಹುಡುಗನ ಕೊರಳಿಗೂ ನೂಲುಸುತ್ತಿ ಕಿವಿಯಲ್ಲಿ ಪಂಚಾಕ್ಷರಿಮಂತ್ರ ಹೇಳಿ ಇನ್ನೊಮ್ಮೆ ಲಿಂಗದೀಕ್ಷೆ ಮಾಡುತ್ತಾರೆ. ಬಳಿಕ ವಧು-ವರರಿಂದ 'ಕೋರಾನ್ನ ಭಿಕ್ಷೆ' ಮಾಡಿಸುತ್ತಾರೆ. ಈಗ ವರ 'ಒಡೆಯರಯ್ಯ' ವಧು 'ಒಡೆಯರಮ್ಮ'(ಗುರುತಾಯಿ) ಎನಿಸಿಕೊಳ್ಳುತ್ತಾರೆ. ಇಲ್ಲಿಂದ ಮುಂದೆ ಒಡೆಯರಮ್ಮ ಶಾಕಾಹಾರಿಯಾಗಿ ಮುಂದುವರಿದು, ಗಂಡನಂತೆ ಪೌರೋಹಿತ್ಯದ ಎಲ್ಲ ಕಾರ್ಯ ಮಾಡಲು ಅರ್ಹಳಾಗುತ್ತಾಳೆ. ಸ್ವತಃ ತಂದೆ ತಾಯಿ ಮೊದಲು ಮಾಡಿ ಎಲ್ಲರಿಂದಲೂ ನಮಸ್ಕರಿಸಿಕೊಳ್ಳುವ ಪ್ರತಿಷ್ಠೆ ಅವಳಿಗೆ ಪ್ರಾಪ್ತವಾಗುತ್ತದೆ. ತವರುಮನೆಗೆ ಹೋದರೆ ಅವಳಿಗಾಗಿ ಪ್ರತ್ಯೇಕ ಸಸ್ಯಾಹಾರದ ಅಡಿಗೆ ಸಿದ್ಧವಾಗುತ್ತದೆ. ಅವಳು ತವರುಮನೆಯ ಬಳಗದ ಎಂಜಲು ತಟ್ಟೆ ತೊಳೆಯುವುದಿಲ್ಲ. ಗಂಡ ಸತ್ತರೆ ವಿಧವೆಯಾಗುವುದಿಲ್ಲ. ಅಂದರೆ ಸೌಭಾಗ್ಯ ಸಂಕೇತಗಳಾದ ಮಂಗಳಸೂತ್ರ ಕುಂಕುಮ ಇತ್ಯಾದಿಗಳನ್ನು ತೆಗೆಯುವುದಿಲ್ಲ. ಲಿಂಗಧಾರಣೆಯ ಸಂದರ್ಭದಲ್ಲಿ ಧರಿಸಿದ ಲಿಂಗವೇ ತನ್ನ ಪತಿಯೆಂಬ ಭಾವನೆ ಇಲ್ಲಿದೆ. ಇದಲ್ಲದೆ ಈಕೆ ಮರು ವಿವಾಹವಾಗುವುದಿಲ್ಲ.

ಇದಕ್ಕೆ ಪ್ರತಿಯಾಗಿ ಒಡೆಯರ ಹುಡುಗಿ ಭಕ್ತರ ಮನೆಗೆ ಸೊಸೆಯಾಗಿ ಹೋದರೆ, ಅವಳಿಗೆ ಲಿಂಗದೀಕ್ಷೆ ಇಲ್ಲ. ತವರುಮನೆಯಲ್ಲಿ ಸಸ್ಯಾಹಾರಿಯಾಗಿದ್ದ ಅವಳು ಗಂಡನ ಮನೆಯಲ್ಲಿ ಮಾಂಸಾಹಾರಿಯಾಗಬಹುದು.

ಒಡೆಯರಲ್ಲಿ ತೀರಿಕೊಂಡರೆ ಶವವನ್ನು ರೇವಣಸಿದ್ಧೇಶ್ವರ ಗುಡಿಗೆ ತಂದು, ಅಲ್ಲಿ ವಿಶೇಷ ಪೂಜೆ ನೆರವೇರಿಸಿ, ಸಮಾಧಿ ಮಾಡುತ್ತಾರೆ. ರೇವಣಸಿದ್ಧ ಸಂಪ್ರದಾಯದ ಒಡೆಯರಲ್ಲಿ ಲಿಂಗಾಯತ ಆಚರಣೆಯೇ ಪ್ರಧಾನವಾಗಿರುವುದನ್ನು ನೋಡಿದರೆ, ಕುರುಬರಿಗೆ ಲಿಂಗಾಯತರಾಗುವುದು ಸರಳವೆನಿಸಿ, ಈ ಹಿಂದೆ ಅವರು ದೊಡ್ಡ ಸಂಖ್ಯೆಯಲ್ಲಿ ಲಿಂಗಾಯತಕ್ಕೆ ಮತಾಂತರವಾಗಿರಬೇಕೆನಿಸುತ್ತದೆ.

ಚಿಕ್ಕಮಗಳೂರು ನೆರೆಯ ಗ್ರಾಮದ ಹೆಸರು ಕುರುಬೂರು. ಆದರೆ ಇಲ್ಲಿ ಒಂದೂ ಕುರುಬ ಕುಟುಂಬವಿಲ್ಲ. ಬಹುಶಃ ಯಾವದೋ ಕಾಲದಲ್ಲಿ ಅಲ್ಲಿಯ ಕುರುಬರು ಲಿಂಗಾಯತರಾಗಿರುವರೆಂದೇ ಇದರರ್ಥ. ಇದಲ್ಲದೆ ಉತ್ತರ ಕರ್ನಾಟಕದಲ್ಲಿ ಕುಡು ಒಕ್ಕಲಿಗ ಲಿಂಗಾಯತರು, ದಕ್ಷಿಣ ಕರ್ನಾಟಕದಲ್ಲಿ ಸಾದ ಲಿಂಗಾಯತರು ಕುರುಬ ಮೂಲದವರೆಂದು ವಿದ್ವಾಂಸರು ಹೇಳುವುದನ್ನು ಇಲ್ಲಿ ನೆನೆಯಬಹುದು.

* * *

ಬ್ರಿಟಿಷ್‌ರಿಂದ ನಮಗೆ ಹಾನಿಗಿಂತ ಲಾಭವೇ ಅಧಿಕವಾಗಿದೆ. ಭೌತಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಬ್ರಾಹ್ಮಣೇತರರು ಪ್ರಗತಿ ಸಾಧಿಸಲು ದೊಡ್ಡ ಅವಕಾಶಗಳನ್ನು ಇವರು ತೆರೆದುಕೊಟ್ಟರು. ಈಗ ಕರ್ನಾಟಕದ ಮಟ್ಟಿಗೆ ಬ್ರಾಹ್ಮಣರಿಗೆ ದ್ವಿತೀಯರಾದ ಲಿಂಗಾಯತರು, ಒಕ್ಕಲಿಗರು ತಮ್ಮತಮ್ಮ ಸಂಘಗಳನ್ನು ಸ್ಥಾಪಿಸಿ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸ್ತರಗಳನ್ನು ಹೆಚ್ಚಿಸಿಕೊಂಡರು. ತರುವಾಯ ಲಿಂಗಾಯತ, ಒಕ್ಕಲಿಗರಿಗೆ ದ್ವಿತೀಯವಾಗಿರುವ ಕುರುಬರು ಎಚ್ಚತ್ತುಕೊಳ್ಳಬಯಸಿ ಸಂಘ-ಸಂಘಟನೆಗಳಿಗಾಗಿ ಕಳೆದ ಶತಮಾನದ ಪೂರ್ವಾರ್ಧದಲ್ಲಿಯೇ ಪ್ರಯತ್ನಿಸಿದರು.

೧೯೦೪ರಲ್ಲಿ ಲಿಂಗಾಯತರು ವೀರಶೈವ ಮಹಾಸಭೆ ಸ್ಥಾಪಿಸಿ, ಸಮ್ಮೇಳನ ಜರುಗಿಸಿದ ಮಾದರಿಯಲ್ಲಿ ಕುರುಬರು 'ಶ್ರೀ ಹಾಲುಮತ ಧರ್ಮೋತ್ತೇಜಕ ಮಹಾಸಭಾ' ಹೆಸರಿನ ಸಂಸ್ಥೆಯನ್ನು ಹುಟ್ಟುಹಾಕಿ, ೧೯೧೦ ಅಕ್ಟೋಬರ ೨೩, ೨೪, ೨೫ರಂದು ಲಕ್ಷ್ಮೇಶ್ವರದಲ್ಲಿ ಹುಲ್ಲೂರು ಶ್ರೀ ಅಮೋಗಿಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ಮೊದಲ ಸಮ್ಮೇಳನ ಜರುಗಿಸಿದರು. ಆಮೇಲೆ ೧೯೨೩ ಏಪ್ರಿಲ್‌ದಂದು ಹುಲ್ಲೂರಿನಲ್ಲಿ ಎರಡನೆಯ, ೧೯೨೩ ಡಿಸೆಂಬರದಂದು ದೇವಗಿರಿಯಲ್ಲಿ ಮೂರನೆಯ, ೧೯೨೯ ಸಪ್ಟಂಬರದಂದು ಅಬ್ಬಿಗೇರಿಯಲ್ಲಿ ನಾಲ್ಕನೆಯ ಸಮ್ಮೇಳನಗಳು ಜರುಗಿ, ಮುಂದೆ ಈ ಉಪಕ್ರಮ ನಿಂತುಬಿಟ್ಟಿತು. ಹೀಗೆ ೧೯೧೦ರಿಂದ ೨೦೧೦ರ ವರೆಗಿನ ನೂರು ವರ್ಷದ ವ್ಯಾಪ್ತಿಯಲ್ಲಿ ಕೇವಲ ನಾಲ್ಕು ಸಮ್ಮೇಳನ ಜರುಗಿದುದು ವಿಷಾದದ ಸಂಗತಿಯಾಗಿದೆ. ಕೊನೆಯ ಪಕ್ಷ ೨೦೧೦ರಲ್ಲಿ ಈ ಮಹಾಸಭೆಯ ಶತಮಾನೋತ್ಸವವನ್ನು ಕುರುಬ ಸಮಾಜದವರು ಅರ್ಥಪೂರ್ಣವಾಗಿ ಆಚರಿಸಿ, ಈ ಸಂಘಟನೆಯನ್ನು ಪುನರುಜ್ಜೀವನಗೊಳಿಸಬಹುದೆಂಬ ಆಶೆಯೂ ಈಡೇರಲಿಲ್ಲ. ಈ ಸಮ್ಮೇಳನದಲ್ಲಿ ೧. ಮಕ್ಕಳಿಗೆ ಶಿಕ್ಷಣ ನೀಡಬೇಕು. ೨. ಇಷ್ಟಲಿಂಗ ಧಾರಣೆ ಮಾಡಿಕೊಳ್ಳಬೇಕು. ೩. ಸಾಮಾಜಿಕ-ಧಾರ್ಮಿಕ ದುಷ್ಟಪದ್ಧತಿ ಕೈಬಿಡಬೇಕು. ೪. ಉದ್ಯೋಗ ಅಭಿವೃದ್ಧಿಪಡಿಸಿಕೊಳ್ಳಬೇಕು. ೫. ಸಮಾಜದ ಪ್ರಗತಿಗಾಗಿ ಸಂಘಗಳನ್ನು ಸ್ಥಾಪಿಸಬೇಕು. ೬. ರಾಜ್ಯ-ರಾಷ್ಟ್ರ ಪ್ರಜ್ಞೆ ಬೆಳಸಿಕೊಳ್ಳಬೇಕು ಮೊದಲಾದ ನಿರ್ಣಯ ಸ್ವೀಕರಿಸಲಾಗಿದೆ.

ಈ ಅವಧಿಯಲ್ಲಿ 'ಕರ್ನಾಟಕ ಹಾಲುಮತ ಪರಿಷತ್ತು' ಹೆಸರಿನ ಮತ್ತೊಂದು ಸಂಸ್ಥೆ ಹುಟ್ಟಿ, ಕೆಳಗಿನಂತೆ ಸಮ್ಮೇಳನ ಜರುಗಿಸಿತು.

ಒಂದನೆಯ ಸಮ್ಮೇಳನ-ನಲವಡಿ-೧೯೨೦

ಎರಡನೆಯ ಸಮ್ಮೇಳನ-ಬಂಕಾಪುರ-೧೯೨೪

ಮೂರನೆಯ ಸಮ್ಮೇಳನ-ರಾಣಿಬೆನ್ನೂರು-೧೯೩೭

ನಾಲ್ಕನೆಯ ಸಮ್ಮೇಳನ-ಗೋಕಾಕ-೧೯೩೯

ಈ ಸಂಘಟನೆಯೂ ಅರ್ಧಹಾದಿಗೇ ಬಂದು ನಿಂತು ಬಿಟ್ಟಿತು.

ಇದರ ಜೊತೆಗೆ 'ಅಖಿಲ ಭಾರತ ಹಾಲುಮತ ಪರಿಷತ್ತು' ಹೆಸರಿನ ಇನ್ನೂ ಒಂದು ಸಂಸ್ಥೆ ಹುಟ್ಟಿ, ಒಂದನೆಯ ಸಮ್ಮೇಳನವನ್ನು ೧೯೨೦ರಂದು ಮಹಾರಾಷ್ಟ್ರದ ಜಜೂರಿಯಲ್ಲಿ, ಎರಡನೆಯ ಸಮ್ಮೇಳನವನ್ನು ೧೯೨೨ರಂದು ಅಮಳನೇರ (ಖಾನದೇಶ)ದಲ್ಲಿ ಜರುಗಿಸಿ ಅದನ್ನೂ ನಿಲ್ಲಿಸಿದರು.

ಇದೇ ಸಂದರ್ಭದಲ್ಲಿ ೧೯೨೫ ಜೂನ್ ೧ರ ಸೋಮವಾರ ಹುಲ್ಲೂರಿನಲ್ಲಿ 'ಅಮೋಘಸಿದ್ಧಾರ್ಯ ಕುರುಬರ ಬೋರ್ಡಿಂಗ್' ಸ್ಥಾಪನೆಯಾಯಿತು. ೧೯೪೭ರಲ್ಲಿ ಬಟ್ಟೂರು ಗ್ರಾಮದಲ್ಲಿ 'ಕುರುಬರ ವಿದ್ಯಾರ್ಥಿಗಳ ಧರ್ಮಾರ್ಥ ಬೋರ್ಡಿಂಗ', ೧೯೨೫ ಮೇ ೨೫ರಂದು ಚಿಕ್ಕನಾಯಕನಹಳ್ಳಿಯಲ್ಲಿ 'ಕುರುಬರ ಸಂಘ' ಅಸ್ತಿತ್ವಕ್ಕೆ ಬಂದವು.

ಹೀಗೆ ಕುಂಟುತ್ತಲಾದರೂ ಸಂಘಟನೆಗಳು ಕಾಣಿಸಿಕೊಂಡುದರ ಪರಿಣಾಮವಾಗಿ ಕುರುಬ ಸಮಾಜದ ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಜಾಗ್ರತಿ ಆರಂಭವಾಯಿತಾದರೂ ಇತ್ತೀಚೆ ಆರಂಭಿಸಿದ ಕನಕಪೀಠದಿಂದಾಗಿ ಅವರ ಸಂಸ್ಕೃತಿಗೆ, ಅವರ ಸಂಸ್ಕೃತಿಯನ್ನು ತಾಯಿಯಂತೆ ರಕ್ಷಿಸಿಕೊಂಡು ಬಂದ ರೇವಣಸಿದ್ಧ, ಮಂಕಸಿದ್ಧ, ಅಮೋಘಸಿದ್ಧ ಗುರುಪೀಠಗಳಿಗೆ ದೊಡ್ಡ ಆಘಾತ ಸಂಭವಿಸಿತು. ಈಗಲಾದರೂ ಈ ಸಮಾಜ ಎಚ್ಚತ್ತು, ತಮ್ಮ ಈ ಸಾಂಪ್ರದಾಯಿಕ ಮಠಗಳನ್ನು ಮುನ್ನೆಲೆಗೆ ತಂದು, ಅವುಗಳ ಭೂಮಿಕೆಯಲ್ಲಿ ತಮ್ಮ ಸಮಾಜವನ್ನು ಅಭಿವೃದ್ಧಿಪಡಿಸುವರೆಂದು ಆಶಿಸುತ್ತೇನೆ.

ಆಕರ : ಮಾರ್ಗ ಸಂಪುಟ–೭

■■

೮

ವಚನ ಚಳುವಳಿ ವಿಚಾರ ಸಂಕಿರಣ : ಅಧ್ಯಕ್ಷತೆ

೧೯೯೦

ಪರಮಪೂಜ್ಯ ಜಗದ್ಗುರುಗಳಲ್ಲಿ ಭಕ್ತಿಪೂರ್ವಕ ಪ್ರಣಾಮವನ್ನು ಸಲ್ಲಿಸಿ, ಈ ಸಮ್ಮೇಳನದ ಅಧ್ಯಕ್ಷರೂ ವಿದ್ಯಾಗುರುಗಳೂ ಆದ ಡಾ. ಆರ್. ಸಿ. ಹಿರೇಮಠ ಅವರೇ, ಉಪನ್ಯಾಸಕ ಮಿತ್ರರೇ, ಮಹನೀಯರೇ, ಮಹಿಳೆಯರೇ.

ಮುಂಜಾನೆಯ ಗೋಷ್ಠಿ ವಿಮರ್ಶಾಪರವಾಗಿದ್ದರೆ, ಸಂಜೆಯ ಈ ಗೋಷ್ಠಿ ಸಂಶೋಧನ ಪರವಾಗಿರುವುದರಿಂದ ಚರ್ಚೆಗೆ ಇಲ್ಲಿ ಅವಕಾಶವಿರುವುದು ಸಹಜ. ಸಂಶೋಧನೆಯೆನ್ನುವುದು ಆಕರಗಳನ್ನು ಅವಲಂಬಿಸುವ ವಿದ್ವತ್ ಕ್ರಿಯೆಯಾಗಿದೆ. "No source no history" ಎಂದು ಹೇಳುವುದು ಈ ಕಾರಣಕ್ಕಾಗಿ. ವಚನ ಚಳುವಳಿಯನ್ನು ಕುರಿತ ಇಂಥ ಆಕರ ಸಾಮಗ್ರಿ ವಿಪುಲವಾಗಿದ್ದರೂ ಅಲ್ಲಿ ವೈವಿಧ್ಯತೆ ಕಡಿಮೆ, ವೈರುಧ್ಯ ಹೆಚ್ಚು. ಈ ಬಗೆಯ ಸಾಮಗ್ರಿಗಳನ್ನು ಬಳಸಿಕೊಂಡು ಇಂದಿನ ಮೂರು ಜನ ವಿದ್ವಾಂಸರು ತಮ್ಮ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಈ ಗೋಷ್ಠಿಯ ಅಧ್ಯಕ್ಷನಾಗಿ ಮಾತನಾಡುವ ನನಗೆ ಕೆಲವು ಸ್ಪಷ್ಟವಾದ ಅಭಿಪ್ರಾಯಗಳಿವೆ. ಕೆಲವು ಸ್ಪಷ್ಟವಾದ ಸಂದೇಹಗಳೂ ಇವೆ. ಇಂದಿನ ಆಕರಗಳನ್ನವಲಂಬಿಸಿ ನೀಡುವ ನನ್ನ ನಿರ್ಣಯ ಮುಂದೆ ಸಿಗುವ ಹೊಸ ಆಕರಗಳಿಂದಾಗಿ ತಪ್ಪಾಗಿ ಪರಿಣಮಿಸಬಹುದು. ಇದು ಸಂಶೋಧನೆಯಲ್ಲಿ ನಡೆಯುವ ಸಹಜ ಕ್ರಿಯೆಯಾಗಿದೆ. ಆದುದರಿಂದಲೇ "ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ" ಎನ್ನುವುದು.

ಡಾ. ಬಿ. ವಿ. ರಾಜೂರ ಅವರು ಮಂಡಿಸಿದ ಪ್ರಬಂಧ ಬಸವಪೂರ್ವಯುಗದ ವಚನಸಾಹಿತ್ಯವನ್ನು ಕುರಿತಿದೆ. ಇದು ವಚನಸಾಹಿತ್ಯ ಯಾವ ಪ್ರಕಾರದಿಂದ? ಯಾರಿಂದ? ಎಂದು? ಹುಟ್ಟಿಕೊಂಡಿತು ಎಂಬ ಪ್ರಶ್ನೆಗಳನ್ನೊಳಗೊಂಡಿರುತ್ತದೆ. ತಮಿಳು ತೇವಾರದಿಂದ, ಸಂಸ್ಕೃತದ ಗದ್ಯಪ್ರಕಾರ ಇಲ್ಲವೆ ಪದ್ಯಗಂಧಿಯಿಂದ, ಕನ್ನಡದ ತ್ರಿಪದಿಯಿಂದ ವಚನವಾಙ್ಮಯ ಹುಟ್ಟಿಕೊಂಡಿತೆಂಬ ವಿಭಿನ್ನ ಅಭಿಪ್ರಾಯಗಳನ್ನು ವಿದ್ವಾಂಸರು ಈವರೆಗೆ ಮಂಡಿಸಿದ್ದಾರೆ. ಯಾವುದೇ ವಿಷಯವನ್ನು ಕುರಿತ ಸಂಶೋಧನ ಪ್ರಸಂಗದಲ್ಲಿ ಅದು ಯಾವ ಮೂಲದಿಂದ ಹುಟ್ಟಿತು? ಎಂಬ ಪ್ರಶ್ನೆ ಹಾಕಿಕೊಂಡು, ಸಾಮಾನ್ಯವಾಗಿ ಅದಕ್ಕೆ ಅನ್ಯಮೂಲವನ್ನು ಹೇಳುವುದು ಹಿಂದಿನ ತಲೆಮಾರಿನ ಸಂಶೋಧನ ಪದ್ಧತಿಯಾಗಿದ್ದಿತು. ಈ ನಿಟ್ಟಿನಲ್ಲಿ ನಡೆದು ವಚನ ಸಾಹಿತ್ಯಕ್ಕೂ ಮೇಲೆ ಸೂಚಿಸಿದ ಅನ್ಯಮೂಲಗಳನ್ನು ವಿದ್ವಾಂಸರು ಹೇಳಿದ್ದಾರೆ. ಇವರ ವಾದಗಳು ದುರ್ಬಲವಾಗಿರುವುದರಿಂದ ನನಗೆ ಮಾತ್ರ ವಚನವು ಕನ್ನಡಿಗರಿಂದಲೇ ರೂಪುಗೊಂಡ ಒಂದು ಹೊಸ ಪ್ರಕಾರವೆನಿಸುತ್ತದೆ.

'ವಚನ' ಪದಕ್ಕೆ ಸಂಸ್ಕೃತದಲ್ಲಿ ಗದ್ಯ ಎಂಬ ಅರ್ಥವೂ ಇದೆ. ಚಂಪೂಕೃತಿಗಳಲ್ಲಿ 'ವಚನ' ಹೆಸರಿನ ಕೆಳಗೆ ಗದ್ಯ ಕಂಡುಬರುವುದನ್ನು ಇಲ್ಲಿ ನೆನೆಯಬಹುದು. ಆದರೆ ಈ ವಚನಕ್ಕೂ ಶರಣರ ವಚನಗಳಿಗೂ ಸಂಬಂಧವಿಲ್ಲ. ಇಲ್ಲಿ 'ವಚನ'ವೆಂಬುದಕ್ಕೆ ಗದ್ಯವೆಂದು ಅರ್ಥವಲ್ಲ, ಪ್ರತಿಜ್ಞೆಯೆಂದು ಅರ್ಥ. ಸಾಹಿತ್ಯವನ್ನು ಬರೆದಿದ್ದರೂ ಕವಿಗಳು ಬೇರೆ, ಶರಣರು ಬೇರೆ. ಕವಿಗಳ ಬದುಕು ಬರಹಗಳಲ್ಲಿ ಬಿರುಕು ಕಂಡುಬರಬಹುದು, ಶರಣರ ಬದುಕಿನಲ್ಲಿ ಇಂಥ ಬಿರುಕು ಕಂಡುಬರಲಾರದು. ಅಂದರೆ ಕವಿಗಳಿಗೆ ಸುಂದರವಾಗಿ ಹೇಳುವುದು ಮುಖ್ಯವಾಗಿರುವುದರಿಂದ ಅವರ ಬರವಣಿಗೆ 'ರಚನೆ' ಎನಿಸಿಕೊಂಡರೆ, ಶರಣರಿಗೆ ಸುಂದರವಾಗಿ ಹೇಳುವುದೂ, ಸುಂದರವಾಗಿ ಬಾಳುವುದೂ ಮುಖ್ಯವಾಗಿರುವುದರಿಂದ ಇವರ ಬರವಣಿಗೆ 'ವಚನ' ಎನಿಸಿಕೊಳ್ಳುತ್ತದೆ; ನಡೆದಂತೆ ನುಡಿದ ರೀತಿಯಿಂದಾಗಿ ಅದು 'ಪ್ರತಿಜ್ಞಾವಾಕ್ಯ' (=ವಚನ)ದ ಲಕ್ಷಣ ಪಡೆಯುತ್ತದೆ. ಈ ಕಾರಣದಿಂದಾಗಿಯೇ ಸರ್ವಜ್ಞನ ತ್ರಿಪದಿಗಳು ಪದ್ಯವಾಗಿದ್ದರೂ 'ವಚನ'ವೆಂದು ನಮ್ಮ ಪ್ರಾಚೀನರು ಕರೆಯುತ್ತ ಬಂದಿದ್ದಾರೆ. 'ವಚನ' ಸಂಸ್ಕೃತ ಪದ. ಇದಕ್ಕೆ ಕನ್ನಡದಲ್ಲಿ 'ಸೂಳ್ನುಡಿ' ಎಂಬ ಸಂವಾದಿ ಪದವನ್ನು ಶರಣರು ಬಳಸಿದ್ದಾರೆ. ಬಹುಶಃ ಇದನ್ನು ಸೂಳ್(=ಕ್ರಮ)+ನುಡಿ ಎಂದು ಬಿಡಿಸದೆ ಸೂರುಳ್ (=ಪ್ರತಿಜ್ಞೆ)+ನುಡಿ ಎಂದೇ ಬಿಡಿಸಬೇಕೆಂದು ತೋರುತ್ತದೆ. ಹೀಗಾಗಿ ಈ ಪ್ರಕಾರಕ್ಕೆ ಸಂಸ್ಕೃತ ತಮಿಳು ಇತ್ಯಾದಿ ಅನ್ಯಮೂಲಗಳನ್ನು ಹುಡುಕದೆ, ಪ್ರತಿಜ್ಞಾವಾಕ್ಯ ತತ್ತ್ವದಲ್ಲಿ ಇದು ಕನ್ನಡಿಗರಿಂದಲೇ ರೂಪ ಪಡೆಯಿತೆಂದು ಇಟ್ಟುಕೊಳ್ಳುವುದು ವಿಹಿತ.

ಈ ಸಾಹಿತ್ಯದ ಪ್ರಾಚೀನತೆಯನ್ನು ಈಗಾಗಲೇ ಜೇಡರದಾಸಿಮಯ್ಯನಷ್ಟು ಹಿಂದೆ ಹೇಳಲಾಗುತ್ತದೆ. ಇದು ನಿಜವೂ ಆಗಿದೆ. ಇವನಿಗಿಂತ ಹಿಂದೆ ೬ನೆಯ ವಿಕ್ರಮಾದಿತ್ಯನ (೧೦೭೬-೧೧೨೬) ಕಾಲದಲ್ಲಿ ರೇವಣಸಿದ್ಧ, ತೆಲುಗು ಜೊಮ್ಮಯ್ಯ, ಬಾಹೂರು ಬೊಮ್ಮಣ್ಣ, ಕೊಂಡಗುಳಿ ಕೇಶಿರಾಜ ಆಗಿಹೋಗಿದ್ದರೂ ಇವರು ಬರೆದ ವಚನಗಳು ಲಭ್ಯವಿಲ್ಲ. ಲಭ್ಯವಿರುವ 'ತೆಲುಗೇಶ್ವರಾ' ಮುದ್ರಿಕೆಯ ವಚನಗಳು ತೆಲುಗು ಜೊಮ್ಮಯ್ಯನಿಗಿಂತ ತೆಲುಗೇಶ ಮಸಣಯ್ಯನವಾಗಿರುವುದು ಹೆಚ್ಚು ಸಂಭವನೀಯ. ವಿಕ್ರಮಾದಿತ್ಯನಿಗಿಂತ ಪ್ರಾಚೀನನಾದ ಜಯಸಿಂಹನ (೧೦೧೮-೪೨) ಕಾಲದಲ್ಲಿ ಸುಗ್ಗಲೆ, ದೇವರದಾಸಿಮಯ್ಯರು ಆಗಿಹೋಗಿದ್ದರೂ ಇವರು ಶೈವರೆಂಬ ಅಭಿಪ್ರಾಯವಿದೆ. ವಚನ ಬರೆದ ಸೂಚನೆಗಳೂ ಇಲ್ಲ. ಕಾರಣ ಜೇಡರ ದಾಸಿಮಯ್ಯನ ಕಾಲವಾದ ಕ್ರಿ.ಶ. ಸು. ೧೧೦೦ಕ್ಕೆ ವಚನಸಾಹಿತ್ಯದ ಉಗಮವನ್ನು ಒಪ್ಪಿಕೊಳ್ಳಬಹುದು.

ಇಷ್ಟು ಪೂರ್ವದಲ್ಲಿ 'ವಚನ' ಸಾಹಿತ್ಯವನ್ನು ಹುಟ್ಟುಹಾಕಿದವರು ಯಾರು? ಎಂಬುದು ಮುಂದಿನ ಪ್ರಶ್ನೆ. ವಚನಗಳ ಮುಖ್ಯ ಲಕ್ಷಣ 'ಅಂಕಿತ'. ಈ 'ಅಂಕಿತ'ಸಾಹಿತ್ಯದ ಉಗಮವನ್ನು ಶೋಧಿಸುವುದು ಅಗತ್ಯವಿದೆ. ಅಂಕಿತ ಶಬ್ದ ಎರಡು ಬಗೆಯಾಗಿದೆ. ಒಂದು: ಕಾವ್ಯನಾಮ ಮತ್ತು ಬಿರುದುಗಳನ್ನು ತಮ್ಮ ರಚನೆಯಲ್ಲಿ ಸಂಯೋಜಿಸುವುದು. ಇನ್ನೊಂದು: ತಮ್ಮ ಆರಾಧ್ಯ ದೈವತದ ಹೆಸರನ್ನು ತಮ್ಮ ರಚನೆಯಲ್ಲಿ ಸಂಯೋಜಿಸುವುದು. ಇವುಗಳಲ್ಲಿ ಶರಣರ 'ಅಂಕಿತ ಪದ್ಧತಿ' ಆರಾಧ್ಯದೈವದ ಹೆಸರನ್ನು ಸಂಯೋಜಿಸುವುದಾಗಿದೆ. ಶರಣರು ಅಂಕಿತಕ್ಕೆ ತಮ್ಮ ಇಷ್ಟಲಿಂಗದ ಹೆಸರನ್ನು ಇಟ್ಟುಕೊಳ್ಳುವದಾದರೂ, ಹೀಗೆ ಇಟ್ಟುಕೊಳ್ಳಲು ಅವರಿಗೆ ಪ್ರೇರಣೆ ನೀಡಿದುದು, ಸ್ಥಾವರಲಿಂಗದ ಹೆಸರನ್ನು ಇಟ್ಟುಕೊಂಡು ವಚನ ಬರೆಯುವ ಒಂದು ಪ್ರಾಚೀನ ಪದ್ಧತಿಯೆಂದು ತೋರುತ್ತದೆ. ಏಕೆಂದರೆ ಸಾಮಾನ್ಯವಾಗಿ ಎಲ್ಲ ಶರಣರ 'ಅಂಕಿತ'ಗಳ ಹೆಸರಿನ ಸ್ಥಾವರಲಿಂಗಗಳು ಅವರವರ ಗ್ರಾಮಗಳಲ್ಲಿ ಇವೆ. ಜೇಡರ ದಾಸಿಮಯ್ಯನ ಅಂಕಿತ 'ರಾಮನಾಥ.' ಈ ಹೆಸರಿನ ಸ್ಥಾವರಲಿಂಗ ಅವನ ಗ್ರಾಮವಾದ ಮುದನೂರಿನಲ್ಲಿದೆ. ಇದೇ ರೀತಿ ಸಿದ್ಧರಾಮ, ಅಜಗಣ್ಣ ಮೊದಲಾದವರ ಅಂಕಿತಗಳಾದ ಕಪಿಲ ಸಿದ್ಧಮಲ್ಲಿಕಾರ್ಜುನ, ಸೋಮನಾಥ ಹೆಸರಿನ ಸ್ಥಾವರಲಿಂಗಗಳು ಸೊಲ್ಲಾಪುರ, ಲಕ್ಕುಂಡಿಗಳಲ್ಲಿವೆ. ಕೂಡಲಸಂಗಮದೇವಾ, ಚೆನ್ನಮಲ್ಲಿಕಾರ್ಜುನಾ ಎಂಬ ಮುದ್ರಿಕೆಯಲ್ಲಿ ವಚನ ಬರೆದ ಬಸವಣ್ಣ, ಅಕ್ಕಮಹಾದೇವಿಯರ ಜನ್ಮಗ್ರಾಮಗಳಲ್ಲಿ ಈ ಹೆಸರಿನ ಸ್ಥಾವರಲಿಂಗಗಳಿಲ್ಲವಾದರೂ ಇವರು ಈ

ಸ್ಥಾವರಲಿಂಗಗಳ ನೆಲೆಗಳಾದ ಕೂಡಲಸಂಗಮ, ಶ್ರೀಶೈಲಗಳೊಂದಿಗೆ ಸಂಬಂಧವಿಟ್ಟುಕೊಂಡವರೆಂಬುದು ತಿಳಿದ ವಿಷಯವೇ ಆಗಿದೆ, 'ಪುಲಿಗೆರೆಯ ವರದ ಸೋಮನಾಥಾ' ಎಂಬಂಥ ಅಂಕಿತಗಳು ನೇರವಾಗಿ ಗ್ರಾಮವನ್ನೂ ಅಲ್ಲಿಯ ಸ್ಥಾವರ ಲಿಂಗವನ್ನೂ ಸೂಚಿಸುತ್ತವೆ. ಆದುದರಿಂದ ಮುದ್ರಿಕೆ ಇಟ್ಟುಕೊಂಡು ವಚನ ಬರೆಯುವ ಉಪಕ್ರಮವನ್ನು ಶರಣರಿಗಿಂತ ಮೊದಲು ಈ ನಾಡಿನಲ್ಲಿ ಸ್ಥಾವರಲಿಂಗ ಪೂಜಕರಾದ ಶೈವರು ಪ್ರಾರಂಭಿಸಿದ್ದರೇನೋ ಎನಿಸುತ್ತದೆ. ಹಾಗಿದ್ದರೆ ಈ ಶೈವರು ಯಾರು?

ಕಾವ್ಯ, ಶಾಸ್ತ್ರಗಳಲ್ಲಿ ಅನೇಕ ಬಗೆಯ ಶೈವಮತಗಳ ಹೆಸರು ಕಂಡುಬರುತ್ತಿದ್ದರೂ ಕರ್ನಾಟಕದಲ್ಲಿ ಪ್ರಧಾನವಾಗಿ ಅಸ್ತಿತ್ವದಲ್ಲಿದ್ದುದು ಕಾಳಾಮುಖ (ಇತ್ಯಾದಿ) ಶೈವವೆಂದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ನಮ್ಮ ನಾಡಿನ ಸುಮಾರು ೨೫ ಸಾವಿರ ಶಾಸನಗಳಲ್ಲಿ ಸಾವಿರಾರು ಶಾಸನಗಳು ಈ ಕಾಳಾಮುಖರಿಗೆ ಸಂಬಂಧಿಸಿವೆ. ಇಂದು ವೀರಶೈವರು ನಡೆದುಕೊಳ್ಳುವ ಹಳ್ಳಿ-ಪಟ್ಟಣಗಳ ಎಲ್ಲ ಪ್ರಾಚೀನ ಶಿವದೇವಾಲಯಗಳು ಈ ಶೈವರಿಗೆ ಸಂಬಂಧಿಸಿದುವಾಗಿದೆ. ಇಂದಿನ ಎಲ್ಲ ವೀರಶೈವ ಮಠಗಳು, ಅದರಲ್ಲಿಯೂ ಗುರುವರ್ಗದ ಮಠಗಳು ಈ ಕಾಳಾಮುಖ ಪಂಥದವೇ ಆಗಿವೆಯೆಂದು ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಇಷ್ಟು ದೊಡ್ಡ ಮತವ್ಯವಸ್ಥೆಯ ಜಾಲ ನೆಯ್ದಿದ್ದ ಈಸಮಾಜ, ಸಾಹಿತ್ಯ ಬರೆಯದೇ ಇರುವುದು ಅಸಂಭವ. ಮೇಲಾಗಿ ಈ ಧರ್ಮದ ಅಧಿಕಾರಿಗಳು ಬಹುದೊಡ್ಡ ವಿದ್ವಾಂಸರಾಗಿದ್ದರೆಂದು ಶಾಸನಗಳು ಸಾಕ್ಷಿ ನುಡಿಯುತ್ತವೆ. ಸಾಹಿತ್ಯವೆನ್ನುವುದು ಮತಪ್ರಸಾರದ ಸುಲಭ ಮಾಧ್ಯಮ. ಈ ಮಾಧ್ಯಮವನ್ನು ವಿದ್ವಾಂಸರಾದ ಇವರು ಬಳಸದೇ ಹೋದರೆಂದು ನಂಬುವುದು ಕಷ್ಟವಾಗುತ್ತದೆ. ನನಗೇನೋ ಇವರು ಸಂಸ್ಕೃತ, ಕನ್ನಡಗಳಲ್ಲಿ ಸಾಹಿತ್ಯ ಬರೆದಿದ್ದು. ಕೆಲವು ವೀರಶೈವರು ಸಂದೇಹದಿಂದ ನೋಡುತ್ತಿರುವ ಸಿದ್ಧಾಂತ ಶಿಖಾಮಣಿ ಮೊದಲಾದ ಗ್ರಂಥಗಳು ಇವರ ಸಂಸ್ಕೃತ ಸಾಹಿತ್ಯವಾದರೆ, ಈಗ ಶರಣರದೆಂದು ಕರೆಯುವ ವಚನ ಸಾಹಿತ್ಯದ ಕೆಲವು ಭಾಗವೂ ಇವರದಾಗಿರಬಹುದೆನಿಸುತ್ತದೆ. ವಚನ ಸಾಹಿತ್ಯದಲ್ಲಿ ಅನೇಕ ಸಲ ವಿಚಾರ ವೈರುಧ್ಯಗಳು ಕಂಡುಬರುವುದು ಈ ಕಾರಣಕ್ಕಾಗಿ ಇರಬೇಕು. ಇನ್ನೂ ಮುಂದುವರಿದು ನೋಡಿದರೆ ಕೆಲವು ವಚನಕಾರರು ಕಾಳಾಮುಖರೆಂಬ ನಂಬಿಕೆ ಹುಟ್ಟುತ್ತದೆ. ಉದಾ: ರಾಯಚೂರು ಜಿಲ್ಲೆಯ ದೇವರಗುಡಿ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಮುಂದೆ ಕ್ರಿ.ಶ. ೧೧೬೮ರ ಒಂದು ಶಾಸನವಿದೆ. ಹುಳಿಯಮೇಶ್ವರ ಲಿಂಗಕ್ಕೆ ದಾನ ನೀಡಿದುದು ಇದರ ವಿಷಯ. ಈ ದೇವಾಲಯದ ಸ್ಥಾನಪತಿ ಕೇದಾರ ಪಂಡಿತ. ಹೆಸರಿನ ಕೊನೆಯ 'ಪಂಡಿತ' ಎಂಬುದು ಕಾಳಾಮುಖ ಸೂಚನೆಯಾಗಿರುವದರಿಂದ ಇದು ಕಾಳಾಮುಖ ಶೈವದೇವಾಲಯ. ಕೇದಾರ ಪಂಡಿತನ ಬಳಿಕ ಸ್ಥಾನಪತಿಯಾದವನು ಚಿಕ್ಕಯ್ಯ ಪಂಡಿತ. ಈ ಹುಳಿಯಮೇಶ್ವರ ಚಿಕ್ಕಯ್ಯ ಪಂಡಿತನೆಂದರೆ ವಚನಕಾರ ಉಳಿಯುಮೇಶ್ವರ ಚಿಕ್ಕಯ್ಯನೆಂಬುದನ್ನು ನೆನೆದರೆ, ಕಾಳಾಮುಖರೂ ವಚನ ಬರೆಯುತ್ತಿದ್ದರೆಂದು ಖಚಿತವಾಗುತ್ತದೆ. ಬಹುಶಃ ಈ ಕಾಳಾಮುಖಕ್ಕೂ ಶರಣ ಸಿದ್ಧಾಂತಕ್ಕೂ ಅಂಥ ವ್ಯತ್ಯಾಸವಿದ್ದಂತೆ ಕಂಡುಬರುವುದಿಲ್ಲ. ಕಾಳಾಮುಖನಾದ ಈ ಚಿಕ್ಕಯ್ಯ 'ಎನ್ನ ಅಂತರಂಗದ ಜ್ಯೋತಿಯೇ ಬಸವಣ್ಣ, ಎನ್ನ ಬಹಿರಂಗದ ಜ್ಯೋತಿಯೇ ಚೆನ್ನಬಸವಣ್ಣ' ಎಂದು ಶರಣರನ್ನು ಗೌರವದಿಂದ ನುಡಿಯುವುದು ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ವಚನಕಾರ ಏಕಾಂತದ ರಾಮಯ್ಯ ಅಬ್ಬಲೂರಿನ ಬ್ರಹ್ಮೇಶ್ವರಲಿಂಗದ ಭಕ್ತ. ಈ ದೇವಾಲಯ ಕಾಳಾಮುಖ ಮೂವರ ಕೋಣೆಯ ಸಂತತಿಗೆ ಸೇರಿದೆ. ಈತನು ಆಮೇಲೆ ಸೋಮೇಶ್ವರಲಿಂಗ ಸ್ಥಾಪಿಸಿರುವನಲ್ಲದೆ, ವಚನಗಳನ್ನು ಬರೆದಿದ್ದಾನೆ. ಚೌಡದಾನಪುರದ ಶಾಸನದಲ್ಲಿ 'ಮುಕ್ತಜೀಯ' ಎಂಬವನ ಹೆಸರು ಬರುತ್ತದೆ. ಹೆಸರಿನ ಕೊನೆಯ 'ಜೀಯ' ಎಂಬುದೂ ಕಾಳಾಮುಖ ಸೂಚನೆಯಾಗಿದೆ. ಈತನ ತರುವಾಯ ಅಲ್ಲಿ ಸ್ಥಾನಾಚಾರ್ಯನಾಗಿದ್ದ ಶಿವದೇವನು "ಭೂಲೋಕದಲ್ಲಿ ಭಕ್ತಿ ಪ್ರಸಾದಕ್ಕಾಗಿ ಬಸವಣ್ಣ ಹುಟ್ಟಿಬಂದಂತೆ ತಾನು ಈಗ ಹುಟ್ಟಿಬಂದಿರುವೆ" ಎನ್ನುತ್ತ, "ಲಿಂಗಕ್ಕೆ ಜಂಗಮಕ್ಕೆ ದಾಸೋಹ ಮಾಡಬೇಕೆಂದು ಬಸವಣ್ಣ ಹೇಳಿದಂತೆ ತಾನು ನಡೆದುಕೊಳ್ಳುತ್ತಲಿದ್ದೇನೆ"

ಎನ್ನುತ್ತಾನೆ. ಇದೆಲ್ಲ ನೋಡಿದರೆ ಶರಣ ಸಂಸ್ಕೃತಿಯ ಹಳೆಯ ರೂಪವೇ ಕಾಳಾಮುಖ ಸಂಸ್ಕೃತಿಯೆಂಬ ನಂಬುಗೆ ಬಲಿಯುತ್ತದೆ. ಈ ಕಾರಣಕ್ಕಾಗಿಯೇ ಪ್ರಾಚೀನ ಶಾಸನಗಳು "ವೀರಶೈವ" ಪದವನ್ನು ಬಳಸದೆ 'ಕಾಳಾಮುಖ' ಪದವನ್ನೇ ಬಳಸುತ್ತ ಬಂದಂತಿದೆ. ಅಂದರೆ ವೀರಶೈವದ ಪ್ರಾಚೀನ ರೂಪವೇ ಕಾಳಾಮುಖವೆಂದೂ, ವಚನಸಾಹಿತ್ಯದ ಮೂಲಪ್ರವರ್ತಕರು ಈ ಕಾಳಾಮುಖರೆಂದೂ ಹೇಳಲು ಮನಸ್ಸಾಗುತ್ತದೆ.

ವೊರಬದ ಮಲ್ಲಿಕಾರ್ಜುನ ಅವರ ಪ್ರಬಂಧದ ವಿಷಯು ವೀರಶೈವದ ತಾತ್ವಿಕತೆಗೆ ಸಂಬಂಧಿಸಿದುದಾಗಿದೆ. ವಚನಗಳು ಮೂಲತಃ 'ಸಿದ್ಧಾಂತ ಸಾಹಿತ್ಯ' ವರ್ಗಕ್ಕೆ ಸೇರುತ್ತವೆ. ಆದುದರಿಂದ ಅವುಗಳನ್ನು ಕುರಿತು ಅಭ್ಯಸಿಸುವವರು ವೀರಶೈವ ಸಿದ್ಧಾಂತವನ್ನು ತಿಳಿದುಕೊಳ್ಳುವುದು ಅವಶ್ಯವಿದೆ. ಇಂದು ವೀರಶೈವದ ಬಗ್ಗೆ ಏನೂ ತಿಳಿದುಕೊಳ್ಳದವರು ಮತ್ತು ತಪ್ಪು ತಿಳಿದುಕೊಂಡವರು ಅಲ್ಲಲ್ಲಿ ವಿಜೃಂಭಿಸುತ್ತಲಿದ್ದಾರೆ. ಇದರಿಂದ ಅನೇಕ ಸಲ ತಪ್ಪು ಅಭಿಪ್ರಾಯಗಳು ವ್ಯಕ್ತವಾಗುತ್ತಲಿವೆ. ವೈದಿಕ ಸಂಪ್ರದಾಯವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ವರ್ಗ ಕಲ್ಪಿಸಿದರೆ, ಬಸವಣ್ಣ ಭಕ್ತ, ಭವಿ ಎಂಬ ಎರಡು ವರ್ಗ ಕಲ್ಪಿಸಿದ; ಅವರು ಮಾಡಿದ ತಪ್ಪನ್ನೇ ಇವನೂ ಮಾಡಿದ, ಎಂದು ಆರೋಪಿಸುವವರೂ ಇದ್ದಾರೆ. ಇವರಿಗೆ ಈ ವರ್ಗೀಕರಣದ ಹಿಂದಿನ ತತ್ತ್ವ ಗೊತ್ತಿಲ್ಲ. ವೈದಿಕರದು ಜನನನಿಷ್ಠ ವರ್ಗೀಕರಣ, ಶರಣರದು ಗುಣನಿಷ್ಠ ವರ್ಗೀಕರಣ. ಜನನನಿಷ್ಠ ವರ್ಗೀಕರಣ ಕೃತಕವಾಗಿದ್ದು, ಇದರಲ್ಲಿ ಒಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ಹೋಗಲು ಅವಕಾಶವಿಲ್ಲ; ಗುಣನಿಷ್ಠ ವರ್ಗೀಕರಣದಲ್ಲಿ ಒಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ಹೋಗಲು ಅವಕಾಶವಿದೆ - ಇತ್ಯಾದಿ ಸೂಕ್ಷ್ಮಗಳನ್ನು ತಿಳಿದುಕೊಂಡರೆ ಈ ಆರೋಪ ಬಿದ್ದು ಹೋಗುತ್ತದೆ. ಹೀಗೆಯೇ ಇಷ್ಟಲಿಂಗವೆಂಬುದೂ ಒಂದು ಬಗೆಯಲ್ಲಿ ಸ್ಥಾವರಲಿಂಗವೇ ಆಗಿದೆ; ಜಂಗಮರಿಗೆ ಮಹತ್ವಕೊಟ್ಟು ಬಸವಣ್ಣನವರು ಪರ್ಯಾಯವಾಗಿ ಪುರೋಹಿತ ವರ್ಗವನ್ನು ಬೆಳೆಸಿದರು -ಇತ್ಯಾದಿ ಕೆಲವರ ಮಾತುಗಳಲ್ಲಿ ಹುರುಳಿಲ್ಲವೆಂದೇ ಹೇಳಬೇಕು.

ವಚನಸಾಹಿತ್ಯದಲ್ಲಿ ಪ್ರತಿಪಾದಿತವಾದ ಸ್ತ್ರೀಸಮಾಜ, ಶ್ರೀಮತಿ ಸರ್ವಮಂಗಳ ಅವರ ಪ್ರಬಂಧದ ವಿಷಯವಾಗಿದೆ. ವಚನಕಾರರದು ಕೇವಲ ಧಾರ್ಮಿಕ ಚಳುವಳಿಯಲ್ಲ, ಸಮಾಜೋ-ಧಾರ್ಮಿಕ ಚಳವಳಿ. ಭಾರತೀಯ ಇತರ ಧರ್ಮಗಳಂತೆ ಶರಣಸಿದ್ಧಾಂತ ಈ ಅರ್ಥದಲ್ಲಿ ಭಿನ್ನವಾಗುತ್ತದೆ. ಭಾರತೀಯ ಕೆಲವು ಧರ್ಮಗಳು ಗುರುತತ್ತ್ವ, ಲಿಂಗತತ್ತ್ವಗಳನ್ನು ತಮ್ಮದೇ ರೀತಿಯಲ್ಲಿ ಮಂಡಿಸಿವೆ. ವೀರಶೈವ ಈ ತತ್ವಗಳನ್ನು ಬೇರೊಂದು ರೀತಿಯಲ್ಲಿ ಹೇಳುತ್ತ, ಹೆಚ್ಚಿನದಾಗಿ ಜಂಗಮತತ್ತ್ವವನ್ನು ಪ್ರತಿಪಾದಿಸಿದೆ. ಈ ಜಂಗಮತತ್ತ್ವ ಪ್ರಧಾನವಾಗಿ 'ಸಾಮಾಜಿಕ ಸಿದ್ಧಾಂತ'ಗಳನ್ನೊಳಗೊಂಡಿದ್ದು ವರ್ಗಭೇದ-ವರ್ಣಭೇದ-ಲಿಂಗಭೇದ ನಿರ್ಮೂಲನ, ಕಾಯಕ, ದಾಸೋಹ ಇತ್ಯಾದಿಗಳೆಲ್ಲ ಈ ತತ್ವದ ಶಾಖೋಪಶಾಖೆಗಳಾಗಿವೆ. ಹೀಗಾಗಿ ವೀರಶೈವ ಆತ್ಮಕಲ್ಯಾಣ ಮತ್ತು ಸಮಾಜಕಲ್ಯಾಣ ಎರಡನ್ನೂ ಗುರಿಯಿಟ್ಟು ನಡೆದ ಧರ್ಮವೆನಿಸುತ್ತದೆ. ಈ ಉಭಯ ಕಲ್ಯಾಣಗಳ ಭಾಗವಾಗಿ ಸ್ತ್ರೀಸಮಾಜದ ವಿವೇಚನೆ ಮಾಡುತ್ತಾರೆ, ಶರಣರು. ಇವರು ಕಟ್ಟಬಯಸಿದುದು ಪುರುಷಪ್ರಧಾನ ಸಮಾಜವಲ್ಲ, ಸ್ತ್ರೀಪ್ರಧಾನ ಸಮಾಜವಲ್ಲ, ಉಭಯಪ್ರಧಾನ ಸಮಾಜವನ್ನು. ಈ ಉಭಯಪ್ರಧಾನತೆ ಕೇವಲ ಸಾಮಾಜಿಕ ನೆಲೆಯನ್ನಲ್ಲ, ಆಧ್ಯಾತ್ಮಿಕ ನೆಲೆಯನ್ನೂ ಆವರಿಸಿರುವುದು ವಿಶೇಷವಾಗಿದೆ. ಇದರಿಂದಾಗಿ ಸ್ತ್ರೀಗೆ ಸಾಮಾಜಿಕ ಸ್ವಾತಂತ್ರ್ಯ, ಆಧ್ಯಾತ್ಮಿಕ ಸ್ವಾತಂತ್ರ್ಯಗಳು ಏಕಕಾಲಕ್ಕೆ ಪ್ರಾಪ್ತವಾದವು.

ವಚನ ಸಾಹಿತ್ಯವನ್ನು ಪರಿಶೀಲಿಸಿದರೆ ಅಲ್ಲಿ ಬಸವ ಮಾದರಿ, ಚೆನ್ನಬಸವ ಮಾದರಿ, ಪ್ರಭುದೇವರ ಮಾದರಿ ಎಂದು ಮೂರು ಮುಖ್ಯ ಮಾದರಿಗಳು ಗೋಚರಿಸುತ್ತವೆ. ಬಸವ ಮಾದರಿ 'ಸಾಮಾಜಿಕತೆ ಪ್ರಧಾನ', ಚೆನ್ನಬಸವ ಮಾದರಿ 'ಧಾರ್ಮಿಕತೆ ಪ್ರಧಾನ', ಪ್ರಭುದೇವ ಮಾದರಿ 'ಆಧ್ಯಾತ್ಮಿಕತೆ ಪ್ರಧಾನ' ಎನಿಸಿವೆ. ಹೀಗಾಗಿ ವೀರಶೈವದ ಒಂದು ತುದಿಯಲ್ಲಿ ಬಸವಣ್ಣ, ಇನ್ನೊಂದು ತುದಿಯಲ್ಲಿ ಪ್ರಭುದೇವ ನಿಂತಿದ್ದರೆ, ಮಧ್ಯದ ಭಾಗವನ್ನು ವ್ಯಾಪಿಸಿದವ ವೀರಶೈವ ಧಾರ್ಮಿಕ ಸಾಹಿತ್ಯದ ಚೆನ್ನಬಸವಣ್ಣ. ಆದುದರಿಂದಲೇ ಬಸವಣ್ಣನವರ

ಸಾಮಾಜಿಕ ಚಿಂತನೆ, ಪ್ರಭುದೇವರ ಆಧ್ಯಾತ್ಮಿಕ ಚಿಂತನೆಗಳು ಹಿಂದೆ ಬಿದ್ದು, ಚೆನ್ನಬಸವಣ್ಣನ ಧಾರ್ಮಿಕ ಚಿಂತನೆಗಳೇ ವೀರಶೈವ ಧರ್ಮದ ಇತಿಹಾಸದಲ್ಲಿ ನಡೆದುಬಂದವು. ಇದಕ್ಕೆ ಕೆಲವರು ಮತೀಯ ಅಂಶಗಳನ್ನು ಕಾಲಕ್ರಮದಲ್ಲಿ ಸೇರಿಸಿದರು.

ಹೀಗೆ ಧರ್ಮ ಮತವಾಗುತ್ತ ಬಂದಂತೆ ಅದಕ್ಕೆ ಅನುಕೂಲವೆನಿಸುವ ಪಾಠಾಂತರ, ಪ್ರಕ್ಷಿಪ್ತ ಭಾಗಗಳು ವಚನ ಸಾಹಿತ್ಯಕ್ಕೆ ಸೇರುತ್ತ ಬಂದ ಕಾರಣ, ಅದರ ಶುದ್ಧರೂಪ ಹಾಳಾಗುತ್ತ ನಡೆಯಿತು, ಈಗ ವಚನಸಾಹಿತ್ಯವನ್ನು ಸಮಗ್ರವಾಗಿ ಪ್ರಕಟಿಸುವುದರೊಂದಿಗೆ ಶುದ್ಧವಾಗಿ ಪ್ರಕಟಿಸುವ ದೊಡ್ಡ ಹೊಣೆ ಸಂಪಾದಕರದಾಗಿದೆ. ಭಾರತೀಯ ಪರಿಸರದಲ್ಲಿ ಮೂಲವಲ್ಲ, ಮೂಲಕ್ಕೆ ತೀರ ಸಮೀಪ ಪಾಠವನ್ನು ನಿರ್ಣಯಿಸಿ ಕೊಡುವುದೇ ಅಸಾಧ್ಯವಾಗಿದೆ. ಈ ಅಸಾಧ್ಯ ಆಹ್ವಾನವನ್ನು ಸ್ವೀಕರಿಸಿ ಡಾ. ಫ. ಗು. ಹಳಕಟ್ಟಿ, ಡಾ. ಆರ್. ಸಿ. ಹಿರೇಮಠ ಅವರು ಯೋಜನಾಬದ್ಧವಾಗಿ ವಚನಸಾಹಿತ್ಯವನ್ನು ಸಂಪಾದಿಸಿ ಕೊಟ್ಟಿದ್ದಾರೆ. ಮೂರನೆಯ ಹಂತವಾಗಿ ಗದುಗಿನ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ ಯೋಜನಾಬದ್ಧವಾಗಿ ಪ್ರಾಚೀನ ಅಪ್ರಕಟಿತ ವಚನ ಸಂಕಲನಗಳನ್ನು ಪ್ರಕಟಿಸಿದೆ. ಈಗ ನಾಲ್ಕನೆಯ ಹಂತವೆಂಬಂತೆ ಕರ್ನಾಟಕ ಸರಕಾರವು ಪ್ರಧಾನ ಸಂಪಾದಕನಾದ ನಾನೂ ಒಳಗೊಂಡಂತೆ ೪-೬ ಜನ ವಿದ್ವಾಂಸರಿಗೆ "ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯ ಹೊಣೆ ಹೊರಿಸಿದೆ. ನಾವೆಲ್ಲ ವಚನ ಸಾಹಿತ್ಯದ ಬಗೆಗಿನ ಅಪಾರ ಪ್ರೇಮ, ಶರಣರ ಮೇಲಿನ ಭಕ್ತಿಯಿಂದ ಈ ಕೆಲಸ ಮಾಡುತ್ತಲಿದ್ದೇವೆ. ನಿಮ್ಮ ಸೂಚನೆಗಳೇನೇ ಇದ್ದರೂ ತಿಳಿಸಿ ನೆರವಾಗಬೇಕೆಂದೂ, ಇದು ನಿಮ್ಮ-ನಮ್ಮ ಸಾಮೂಹಿಕ ಪ್ರಯತ್ನ, ಸಾಮೂಹಿಕ ಹೊಣೆಯೆಂದು ಭಾವಿಸಿ ಮಾರ್ಗದರ್ಶನ ಮಾಡಬೇಕೆಂದೂ ಕೇಳಿಕೊಳ್ಳುತ್ತೇನೆ.

ಬೆಂಗಳೂರಿನಲ್ಲಿ ಜರುಗಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ (ಮೈಸೂರು) ಶರಣಸಾಹಿತ್ಯ ಸಮ್ಮೇಳನದ ವಿಚಾರ ಸಂಕಿರಣದ ಅಧ್ಯಕ್ಷೀಯ ಭಾಷಣ (೧೯೯೦)

ಆಕರ : ಮಾರ್ಗ ಸಂಪುಟ–೬

೯

ಬಸವಣ್ಣನವರ ಷಟ್‌ಸ್ಥಲವಚನ ಪ್ರಕಟನೆಯ ಶತಮಾನೋತ್ಸವ-ಅಧ್ಯಕ್ಷತೆ

೧೯೯೦

ಸ್ಥಾವರದಿಂದ ಜಂಗಮಕ್ಕೆ

ಪೂಜ್ಯರಿಗೆ ನಮಸ್ಕಾರ, ಸಭಿಕರಿಗೆ ನಮಸ್ಕಾರ,

"ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಇದು ವೀರಶೈವಸಿದ್ಧಾಂತದ ಮಹಾಸೂತ್ರ. ಈ ಸೂತ್ರವನ್ನು ಹಿಡಿದುಕೊಂಡೇ ಹನ್ನೆರಡನೆಯ ಶತಮಾನದಲ್ಲಿ ಸ್ಥಾವರಸಮಾಜದ ಗರ್ಭದಿಂದ ಜಂಗಮ ವೀರಶೈವಸಮಾಜ ಆವಿರ್ಭವಿಸಿತು. ದುರಂತವೆಂಬಂತೆ ತರುವಾಯದ ದಿನಗಳಲ್ಲಿ ಅದು ಮತ್ತೆ ಜಂಗಮದಿಂದ ಸ್ಥಾವರವಾಗುತ್ತ ಬಂದಿತು. ಸಾಮಾನ್ಯವಾಗಿ ಮಠಗಳೆಲ್ಲ ಈ ಸ್ಥಾವರವ್ಯವಸ್ಥೆಯ ಸಂತಾನಗಳೇ ಆಗಿದ್ದರೂ ತೋಂಟದಾರ್ಯ ಸಂಸ್ಥಾನಮಠ ಇತ್ತೀಚಿನ ದಿನಗಳಲ್ಲಿ "ಸ್ಥಾವರದಿಂದ ಜಂಗಮಕ್ಕೆ" ಹೊರಳುತ್ತಲಿದೆ. ಪೂಜ್ಯ ಶ್ರೀ ಸಿದ್ಧಲಿಂಗಸ್ವಾಮಿಗಳು ರಾಜಸತ್ತಾಯುಗದ ಧರ್ಮಗುರುಗಳಾಗಿ ಉಳಿಯದೆ, ಪ್ರಜಾಸತ್ತಾಯುಗದ ಧರ್ಮದರ್ಶಿಗಳಾಗಿ ಬೆಳೆಯುತ್ತಲಿದ್ದಾರೆ. ಹೀಗೆ ಸ್ಥಾವರದಿಂದ ಜಂಗಮಕ್ಕೆ ಹೊರಳಿರುವ ಶ್ರೀಮಠದ ಜಾತ್ರೆ ಸಹಜವಾಗಿಯೇ ಕಂದಾಚಾರದ ಕೂಪವಾಗಿ ಉಳಿಯದೆ, ಸಾಂಸ್ಕೃತಿಕ ತೊರೆಯಾಗಿ ಪ್ರವಹಿಸುತ್ತಲಿದೆ. ಈ ಪ್ರವಾಹದ ಒಂದ ಅಲೆ, ಇಂದು ಜರುಗುತ್ತಲಿರುವ ವಿಚಾರ ಸಂಕಿರಣ.

ವಿಶ್ವವಿದ್ಯಾಲಯ, ಸಾಹಿತ್ಯ ಅಕಾಡೆಮಿಗಳಂಥ ಎತ್ತರದ ವೇದಿಕೆಗಳ ಮೇಲೆ ಜರುಗಬೇಕಾದ ಇಂಥ ವಿಚಾರಸಂಕಿರಗಣಗಳಿಗೆ ಅವಕಾಶ ಕಲ್ಪಿಸಿಕೊಡುವುದರ ಮೂಲಕ ಶ್ರೀಮಠದ ವೇದಿಕೆ ವಿಶ್ವವಿದ್ಯಾಲಯ, ಅಕಾಡೆಮಿಗಳ ಆದರ್ಶದಲ್ಲಿ ಅರಳುತ್ತಲಿದೆ. "ಧರ್ಮವಿರುವುದು ಜನರ ಭಾವನೆಗಳನ್ನು ಕೆರಳಿಸುವುದಕ್ಕಲ್ಲ, ವಿಚಾರಗಳನ್ನು ಅರಳಿಸುವುದಕ್ಕೆ" ಎಂಬ ಆದರ್ಶಕ್ಕೆ ನಿದರ್ಶನ, ಈ ವಿಚಾರ ಸಂಕಿರಣ.

'ಬಸವಣ್ಣನವರ ಷಟ್ಸ್ಥಲ ವಚನಗಳು' ವೀರಶೈವಕ್ಕೆ ಎಲ್ಲ ದೃಷ್ಟಿಯಿಂದ ಪ್ರಥಮ ಪ್ರಮಾಣಗ್ರಂಥ. ಇದು ಪ್ರಕಟವಾಗಿ ಇಂದಿಗೆ ೧೦೦ ವರ್ಷ ಗತಿಸಿವೆ. ಅದರ ಸ್ಮರಣೆಗಾಗಿ ಹಮ್ಮಿಕೊಂಡ ಈ ವಿಚಾರ ಸಂಕಿರಣದ ವಿಷಯ "ವಚನ ಸಾಹಿತ್ಯದ ಪ್ರಕಟಣೆಯ ಇತಿಹಾಸ". ಈ ವಿಷಯವನ್ನು ಕುರಿತು ನಮ್ಮ ನಾಡಿನಲ್ಲಿ ಜರಗುತ್ತಲಿರುವ ಪ್ರಥಮ ವಿಚಾರ ಸಂಕಿರಣವಾಗಿರುವ ಇದು, ಒಂದು ಮಹತ್ವದ ಘಟನೆಯಾಗಿದೆ.

ಸಾಹಿತ್ಯದ ಒಂದು ಪ್ರಕಾರವಾಗಿರುವ ವಚನ ತನ್ನ ಜಂಗಮತ್ವ ಕಾರಣವಾಗಿ ಒಂದು 'ಪರಂಪರೆ'ಯಾಗಿ ೮೦೦ ವರ್ಷಗಳಿಂದ ಬೆಳೆಯುತ್ತ ಬಂದಿದೆ, ಬರುತ್ತಲಿದೆ. ಇದರ ಮುದ್ರಣಕಾರ್ಯ ಪ್ರಾರಂಭವಾದುದು ೧೮೮೩ರಲ್ಲಿ

"ಶಿಖಾರತ್ನ ಪ್ರಕಾಶವು" ಹೆಸರಿನ ವಚನಕೃತಿ ಪ್ರಕಟನೆಯ ಮೂಲಕ. ಆದರೆ ಇದರ ಕರ್ತೃವನ್ನು ಕೂಡಲ ಸಂಗಮಾವಧೂತ ಎಂದು ಕರೆದಿರುವುದರಿಂದ ಈ ಅವಧೂತ ರಚನೆಯನ್ನು ಶರಣಸಾಹಿತ್ಯದಲ್ಲಿ ಪರಿಗಣಿಸಲು ಸಂದೇಹ ಹುಟ್ಟುತ್ತದೆ. ಇದನ್ನು ಬಿಟ್ಟರೆ ೧೮೮೫ರಲ್ಲಿ ಪ್ರಕಟವಾದ 'ಸಿದ್ಧೇಶ್ವರ ವಚನಶಾಸ್ತ್ರವು' ಹೆಸರಿನ ತೋಂಟದ ಸಿದ್ಧಲಿಂಗಯತಿಗಳ ಕೃತಿಯೇ ಪ್ರಕಟಿತ ಪ್ರಥಮ ವಚನಗ್ರಂಥವೆನಿಸುತ್ತದೆ. ೧೬ನೆಯ ಶತಮಾನದಲ್ಲಿ ವಚನಸಾಹಿತ್ಯದ ಪುನರುಜ್ಜೀವನ ಘಟ್ಟಕ್ಕೆ ಶ್ರೀಕಾರ ಬರೆದವರು ತೋಂಟದಾರ್ಯರು. ೧೯ನೆಯ ಶತಮಾನದಲ್ಲಿ ಅಚ್ಚಾಗುವುದುರ ಮೂಲಕ ಅವರ ಕೃತಿಯೇ ವಚನಸಾಹಿತ್ಯ ಪ್ರಕಟನೆಗೆ 'ಶ್ರೀಕಾರ ' ಹಾಕಿದುದು ಒಂದು ಯೋಗಾಯೋಗ. ಈಗ ೧೦೦ ವರ್ಷಗಳ ಬಳಿಕ ಅಂದರೆ ೨೦ನೆಯ ಶತಮಾನದಲ್ಲಿ ಗದುಗಿನ ತೋಂಟದಾರ್ಯಮಠ ಅಪ್ರಕಟಿತ ವಚನಸಾಹಿತ್ಯ ಪ್ರಕಟನಕಾರ್ಯಕ್ಕೆ 'ಇತಿ ಶ್ರೀಕಾರ' ಹಾಕುತ್ತಿರುವುದು ಇನ್ನೊಂದು ಯೋಗಾಯೋಗ.

ತೋಂಟದಾರ್ಯರ ವಚನಕೃತಿಯ ತರುವಾಯ ಪ್ರಕಟವಾದ ಮಹತ್ವದ ಕೃತಿಯೆಂದರೆ, 'ಬಸವಣ್ಣನವರ ಷಟ್ಸ್ಥಲವಚನಗಳು'. ಇದು ಪ್ರಕಟವಾದುದು ೧೮೮೯ ರಲ್ಲಿ. ಅಂದಿನಿಂದ ೧೯೮೯ರ ವರೆಗಿನ ೧೦೦ ವರ್ಷದ ಅವಧಿಯಲ್ಲಿ ವಿಶ್ವವಿದ್ಯಾಲಯಗಳಂತ ಸರಕಾರಿ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಗಳಂಥ ಸಾರ್ವಜನಿಕ ಸಂಸ್ಥೆಗಳು, ತೋಂಟದಾರ್ಯ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಹಳಕಟ್ಟಿಯವರಂಥ ವ್ಯಕ್ತಿಗಳು ನಿರಂತರ ದುಡಿದರೂ ಈ ಸಾಹಿತ್ಯ ಇನ್ನೂ ಅಪ್ರಕಟಿತ ರೂಪದಲ್ಲಿ ಉಳಿದಿರುವುದು ಇದರ ವೈಪುಲ್ಯಕ್ಕೆ ಸಾಕ್ಷಿಯಾಗಿದೆ. ಈ ಅವಧಿಯಲ್ಲಿ ಅದು ಪ್ರಕಟನೆಗಾಗಿ ವಿಜಾಪುರ, ಧಾರವಾಡ, ಗದಗ -ಹೀಗೆ ಉತ್ತರ ಕರ್ನಾಟಕದಲ್ಲಿಯೇ ತನ್ನ ದೊಡ್ಡ ನೆಲೆಗಳನ್ನು ಹುಡುಕಿಕೊಂಡುದು ಗಮನಿಸಬೇಕಾದ ಅಂಶವೆನಿಸಿದೆ; ಒಂದು ಕಡೆ ನಿಂತು ಹೋದರೆ ತನ್ನ ಪ್ರಕಟನೆಗೆ ಬೇರೊಂದು ಕಡೆ ನೆಲೆಯನ್ನು ಹುಡುಕುತ್ತ, ಅಂದರೆ ಸ್ಥಾವರದಿಂದ ಜಂಗಮಕ್ಕೆ ನಡೆದುಬಂದುದು ವಿಶೇಷವೆನಿಸಿದೆ.

೧೨ನೆಯ ಶತಮಾನದಲ್ಲಿ ಸಂಭವಿಸಿದ ಕಲ್ಯಾಣ ಕ್ರಾಂತಿಯಿಂದಾಗಿ ಶರಣರೊಂದಿಗೆ ಶರಣಸಾಹಿತ್ಯವನ್ನೂ ನಾಶಗೊಳಿಸಲು ರಾಜಸತ್ತೆ ಕ್ರಮಕೈಕೊಂಡಂತಿದೆ. ಹೀಗೆ ದಾಳಿಗೆ ಗುರಿಯಾಗಿಯೂ ಉಳಿದುಕೊಂಡ ಈ ಸಾಹಿತ್ಯದ ವಿಷಯವಾಗಿ ಪ್ರೌಢದೇವರಾಯನ ಕಾಲದಲ್ಲಿ 'ಸಂರಕ್ಷಣೆ'ಯ ಕೆಲಸ, ತೋಂಟದಾರ್ಯರ ಕಾಲದಲ್ಲಿ 'ಸಂಯೋಜನೆ'ಯ ಕೆಲಸ, ಇಂದು 'ಸಂಸ್ಕರಣ' ಕೆಲಸಗಳು ನಡೆಯುತ್ತ ಬಂದಿದೆ. ಇದರಿಂದಾಗಿ ವಚನಸಾಹಿತ್ಯಕ್ಕೆ ಸಂಬಂಧ ಪಟ್ಟಂತೆ ಸೃಷ್ಟಿ, ಸಂರಕ್ಷಣೆ, ಸಂಯೋಜನೆ, ಸಂಸ್ಕರಣ ಎಂಬ ನಾಲ್ಕು ಚಾರಿತ್ರಿಕ ಘಟ್ಟಗಳು ತಲೆದೋರಿವೆ. ಸಂಯೋಜನ ಘಟ್ಟದಲ್ಲಿ ಎಡೆಯೂರಿನ ತೋಂಟದಾರ್ಯರು ನಾಯಕಪಾತ್ರವಹಿಸಿದರೆ, ಸಂಸ್ಕರಣ ಘಟ್ಟದಲ್ಲಿ ಗದುಗಿನ ತೋಂಟದಾರ್ಯ ಮಠ ನಾಯಕಪಾತ್ರ ವಹಿಸುತ್ತಿರುವುದು ಎತ್ತಿ ಹೇಳಬೇಕಾದ ಅಂಶವಾಗಿದೆ.

ಜೈನ, ವೀರಶೈವ, ಬ್ರಾಹ್ಮಣ ಕಾವ್ಯ-ಪುರಾಣಗಳನ್ನು, ಕೀರ್ತನೆ-ತತ್ವಪದಗಳನ್ನು ಪ್ರಕಟಿಸಿದ ಕ್ರೈಸ್ತ ಮಿಶನರಿಗಳು ಗ್ರಂಥಮುದ್ರಣ ಇತಿಹಾಸದ ಪ್ರಥಮ ಘಟ್ಟದಲ್ಲಿ ವಚನಸಾಹಿತ್ಯವನ್ನು ಪ್ರಕಟಿಸುವ ಗೋಜಿಗೆ ಹೋಗಲಿಲ್ಲ. ಇದಕ್ಕೆ ಕಾರಣ ವಚನಸಾಹಿತ್ಯ ಆ ಕಾಲದಲ್ಲಿ ಅಷ್ಟು ಪ್ರಚುರವಾಗಿರಲಿಲ್ಲವೆಂದು ಡಾ. ಎಲ್. ಬಸವರಾಜು ಹೇಳುತ್ತಾರೆ. ಆದರೆ ಸಾಮಾಜೋ-ಧಾರ್ಮಿಕ ಸಾಹಿತ್ಯವಾದ ವಚನಗಳ ಪ್ರಕಟನೆಯಿಂದ ಕ್ರೈಸ್ತಧರ್ಮ ಪ್ರಸಾರದ ತಮ್ಮ ಉದ್ದೇಶಕ್ಕೆ ಧಕ್ಕೆ ತಗಲುವುದೆಂಬುದೇ ಇದಕ್ಕೆ ಕಾರಣವೆಂದು ನಾನು ಈ ಮೊದಲು ಒಂದೆಡೆ ತರ್ಕಿಸಿದುದೇ ಸರಿಯೆಂದು ಕಾಣುತ್ತದೆ. ಹೀಗಾಗಿ ಪ್ರಾರಂಭದ ಘಟ್ಟದಲ್ಲಿ ವಚನಗಳನ್ನು ಪ್ರಕಟಿಸಿದ ಕೀರ್ತಿ ಸಾಮಾನ್ಯವಾಗಿ ಬಳ್ಳಾರಿಯ ವೈಶ್ಯ ಶೆಟ್ಟರಿಗೆ ಸಲ್ಲುತ್ತದೆ. ಹಂಪೆಯ ಪ್ರದೇಶದಲ್ಲಿ ನಿಕ್ಷಿಪ್ತವಾಗಿದ್ದ

ವಾಲಿಭಂಡಾರವನ್ನು ನೂರೊಂದು ವಿರಕ್ತರು ಪುನರುಜ್ಜೀವನಗೊಳಿಸಿ, ಪ್ರಚಾರ ಮಾಡಿದ ವಾತಾವರಣವೇ ಕಾರಣವಾಗಿ, ಬಳ್ಳಾರಿ ಪ್ರದೇಶದಲ್ಲಿ ವಚನಕೃತಿಗಳು ಮೊದಲು ಪ್ರಕಟವಾದುವೆಂದು ಹೇಳಬಹುದು. ಹಂಪೆಯ ಸುತ್ತಮುತ್ತ ಅಂದರೆ ಬಳ್ಳಾರಿ ಜಿಲ್ಲೆಯಲ್ಲಿ ಶೋಧ ನಡೆಸಿದರೆ ಇಂದಿಗೂ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಹೊಸಹೊಸ ಹಸ್ತಪ್ರತಿಗಳು ಸಿಗುವ ಸಾಧ್ಯತೆಯಿದೆ. ಪ್ರಾರಂಭದ ಘಟ್ಟದಲ್ಲಿ ಹೀಗೆ ಬಳ್ಳಾರಿ ಶೆಟ್ಟರಿಂದ ವಚನಗ್ರಂಥಗಳ ಪ್ರಕಟನ ಕೆಲಸ ನಡೆದರೆ, ಆರ್. ನರಸಿಂಹಾಚಾರ್ ಅವರಿಂದ ಕವಿಚರಿತೆಯ ಮೂಲಕ ವಚನಕಾರರ, ವಚನಸಾಹಿತ್ಯದ ಶೋಧ-ಪರಿಚಯ ಕೆಲಸ ಗಣ್ಯಪ್ರಮಾಣದಲ್ಲಿ ಜರುಗಿತು.

ಎರಡನೆಯ ಘಟ್ಟದಲ್ಲಿ ಬೇರೆ ಕೆಲವರು ಈ ಕೆಲಸ ಮಾಡಿದ್ದರೂ ಶ್ರೀ ಹಳಕಟ್ಟಿಯವರು ಆ ಕಾಲದ ಎಲ್ಲರನ್ನು ಮೀರಿಸುವಂತೆ, ಎಲ್ಲ ಕಾಲದವರನ್ನು ಮೀರಿಸುವಂತೆ ಮಾಡಿದ ಪ್ರಯತ್ನದಿಂದಾಗಿ 'ವಚನಪಿತಾಮಹ'ರೆನಿಸಿದರು. ಈ ಸಾಹಿತ್ಯ ಪ್ರಕಟನೆಗಾಗಿಯೇ 'ಹಿತಚಿಂತಕ' ಹೆಸರಿನ ಒಂದು ಸ್ವತಂತ್ರ ಅಚ್ಚುಕೂಟ ಪ್ರಾರಂಭಿಸಿದುದು ಹಳಕಟ್ಟಿಯವರ ಉತ್ಸಾಹ ಮತ್ತು ವಚನಸಾಹಿತ್ಯದ ವ್ಯಾಪ್ತಿಗಳಿಗೆ ನಿದರ್ಶನವೆನಿಸಿದೆ. ಕಾನೂನು ಪದವೀಧರರಾಗಿದ್ದ ಬಾಲಗಂಗಾಧರ ಟಿಳಕ ಅವರು ಭಗವದ್ಗೀತೆಯನ್ನು ಕುರಿತು, ಪಿ. ವಿ. ಕಾಣೆ ಅವರು ಧರ್ಮಶಾಸ್ತ್ರವನ್ನು ಕುರಿತು ಸಾಹಿತ್ಯಸೇವೆ ಮಾಡಿದಂತೆ, ಕಾಯದೆ ಪದವೀಧರರಾದ ಶ್ರೀ ಹಳಕಟ್ಟಿಯವರು ವಚನಸಾಹಿತ್ಯವನ್ನು ಕುರಿತು ಬಹುಮುಖ ಸೇವೆ ಸಲ್ಲಿಸಿದರು. ಇದರಿಂದಾಗಿ ವಚನಸಾಹಿತ್ಯವೆಂದಾಕ್ಷಣ ಬಸವಣ್ಣನವರ ಹೆಸರು ನೆನಪಾಗುವಂತೆ, ವಚನಸಾಹಿತ್ಯ ಪ್ರಕಟನೆಯೆಂದಾಕ್ಷಣ ಹಳಕಟ್ಟಿಯವರ ಹೆಸರು ನೆನಪಾಗುವಂತಾಯಿತು.

ಹಳಕಟ್ಟಿಯವರು ಮೂಲತಃ ಧಾರವಾಡದವರು. ವೀರಶೈವದ ವಿಷಯವಾಗಿ ಮೊದಲಿನಿಂದಲೂ ವಾದ-ಪ್ರತಿವಾದಗಳನ್ನು ಜೀವಂತವಾಗಿಡುವುದು ಹುಬ್ಬಳ್ಳಿ-ಧಾರವಾಡ ಪ್ರದೇಶದ ಲಕ್ಷಣವಾಗಿದೆ. ಬಹುಶಃ ಹಳಕಟ್ಟಿಯವರು ವಿಜಾಪುರಕ್ಕೆ ಹೋಗದೆ ಇಲ್ಲಿಯೇ ನೆಲೆನಿಂತಿದ್ದರೆ, ಮುಕ್ತವಾಗಿ ವಚನಸಾಹಿತ್ಯದ ಸೇವೆ ಮಾಡಲು ಸಾಧ್ಯವಾಗದೆ ವಾದಕ್ಕೆ ವಸ್ತುವಾಗುತ್ತಿದ್ದರೇನೋ. ಇವರು ಪ್ರಾಚೀನ ಸಂಕಲನಗಳಿಗಿಂತ, ಅವುಗಳಿಂದ ವಚನಗಳನ್ನು ಆಯ್ದು ಹೊಸ ಸಂಪುಟಗಳನ್ನು ರೂಪಿಸುವ ಕಡೆಗೇ ಹೆಚ್ಚು ಗಮನಕೊಟ್ಟಿದ್ದು, ವಚನಶಾಸ್ತ್ರಸಾರ ಸಂಪುಟಗಳು ಇದಕ್ಕೆ ಉಜ್ವಲ ನಿದರ್ಶನವೆನಿಸಿವೆ. ಹೀಗೆ ಗ್ರಂಥರೂಪದಲ್ಲಲ್ಲದೆ 'ಶಿವಾನುಭವಪತ್ರಿಕೆ' ಮೂಲಕವೂ ಸಲ್ಲಿಸಿದ ಸೇವೆ ವಿಶಿಷ್ಟವಾಗಿದೆ. ಈ ಘಟ್ಟದ ಕೊನೆಯಲ್ಲಿ ಶ್ರೀ ಬಸವನಾಳರು ವಚನಸಾಹಿತ್ಯದ ವಿಷಯವಾಗಿ ಮಾಡಿದ ಶಾಸ್ತ್ರೀಯ ಪರಿಷ್ಕರಣ ಪ್ರಯೋಗ ಅನನ್ಯವಾಗಿದ್ದು, ಇದರಿಂದ ವಚನಪರಿಷ್ಕರಣಕ್ಕೆ ಹೊಸ ತಿರುವು ಪ್ರಾಪ್ತವಾಯಿತು.

ಮುಂದಿನ ದಿನಗಳಲ್ಲಿ ವಚನಪ್ರಕಟನೆಯ ವಿಷಯವಾಗಿ ಹೊಸ ಘಟ್ಟ ರೂಪಿಸಿದ್ದು, ಧಾರವಾಡದ ಕನ್ನಡ ಅಧ್ಯಯನಪೀಠ. ಡಾ. ಆರ್. ಸಿ. ಹಿರೇಮಠ ಅವರ ಮೂಲಕ ನಡೆದ ಈ ಕೆಲಸ, ಎಲ್ಲ ಮೂಲಗಳಿಂದ ವಚನಗಳನ್ನು ಸಂಗ್ರಹಿಸಿ ಸಂಪುಟವನ್ನು ರೂಪಿಸುವುದು, ಪ್ರಾಚೀನ ಕಾಲದ ಅಜ್ಞಾತ ವಚನಸಂಕಲನ ಗ್ರಂಥಗಳನ್ನು ಪ್ರಕಟಿಸುವುದು- ಎಂದು ಎರಡು ತೆರನಾಗಿದೆ. ಇದರಿಂದಾಗಿ ಪ್ರತಿಯೊಬ್ಬ ಶರಣನ ವಚನಸಂಖ್ಯೆಯ ಅಂದಾಜು ಮೊತ್ತದ ಅರಿವಾಯಿತು. ಮತ್ತು ಈ ವರೆಗೆ ಅಜ್ಞಾತವಾಗಿದ್ದ ಅನೇಕ ವಚನಸಂಕಲನಗಳು ಬೆಳಕು ಕಂಡವು. ಜೊತೆಗೆ ಸುಮಾರು ನಾಲ್ಕು ಸಾವಿರ ಹಸ್ತಪ್ರತಿಗಳ ವಚನಭಂಡಾರವು ಅಸ್ತಿತ್ವಕ್ಕೆ ಬಂದಿತು. ವೀರಶೈವಸಮಾಜದ ಬಗ್ಗೆ, ವೀರಶೈವಸಾಹಿತ್ಯದ ಬಗ್ಗೆ, ಅದರಲ್ಲಿಯೂ ವಚನಸಾಹಿತ್ಯದ ಬಗ್ಗೆ ಡಾ. ಹಿರೇಮಠ ಅವರಿಗೆ ಇದ್ದ ಅತಿಯಾದ ಭಕ್ತಿ ವ್ಯಾಮೋಹಗಳೇ ಅವರಿಂದ ಇಷ್ಟು ಕೆಲಸ ಮಾಡಿಸಿದವು. ಆದರೆ ಜನತೆ ಇದೆಲ್ಲವನ್ನು ಮರೆಯಿತು. ಕಾರ್ಯಬಾಹುಳ್ಯದಲ್ಲಿ ನುಸುಳಿಬಂದ ಒಂದು ದೋಷವನ್ನು ದೊಡ್ಡದು ಮಾಡಿ ವ್ಯಕ್ತಿಗಳು,

ಸಾಮಾಜಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು ಸೇರಿ ಅವರ ಇಡಿ ಸೇವೆ-ಶ್ರಮಗಳಿಗೆ ಏನೂ ಅರ್ಥವಿಲ್ಲವೇನೋ ಎಂಬಂತೆ ವ್ಯವಸ್ಥಿತವಾಗಿ ವಿರೋಧ ವ್ಯಕ್ತಪಡಿಸಿದವು. ಸಾಲದುದಕ್ಕೆ ಈ ಕೆಲಸ ಶಾಶ್ವತವಾಗಿ ನಿಂತು ಹೋಗುವ ಸಲುವಾಗಿ ವಿಶ್ವವಿದ್ಯಾಲಯ, ಕರ್ನಾಟಕ ಸರಕಾರ, ವಿಶ್ವವಿದ್ಯಾಲಯ ಧನಸಹಾಯ ಆಯೋಗಗಳಲ್ಲಿಯೂ ವಿರೋಧ ಹುಟ್ಟುವಂತೆ ನೋಡಿಕೊಂಡವು. ಇದರಿಂದಾಗಿ, ಸಣ್ಣ ದೋಷವನ್ನು ಮುಂದುಮಾಡಿಕೊಂಡು ದೊಡ್ಡ ಕೆಲಸವನ್ನು ಹೇಗೆ ತಡೆದು ನಿಲ್ಲಿಸಬಹುದೆಂಬುದಕ್ಕೆ ಮುಂದಿನವರಿಗೆ ಒಂದು ದಾರಿಯನ್ನೇ ತೋರಿಸಿಕೊಟ್ಟಂತಾಯಿತು. ಹುಬ್ಬಳ್ಳಿ-ಧಾರವಾಡ ಪ್ರದೇಶ ಬಿಟ್ಟು, ಹಳಕಟ್ಟಿಯವರಂತೆ ಬೇರೆ ಪ್ರದೇಶದಲ್ಲಿ ಈ ಕಾರ್ಯ ನಡೆದಿದ್ದರೆ ಇದಕ್ಕೆ ಸರಿಯಾದ ಪ್ರಚಾರ ಸಿಗಬಹುದಾಗಿತ್ತೇನೋ. ಬೇರೊಬ್ಬರು ಮಾಡಿದ್ದರೆ ಬೇರೆ ರೀತಿಯ ದೋಷಗಳು ಉಳಿಯಬಹುದಿತ್ತೆಂಬುದನ್ನು ಮರೆತು, ವಿಮರ್ಶೆಯ ದಾರಿಯನ್ನು ಬಿಟ್ಟು ಜನತೆ ಪ್ರತಿಭಟನೆಯ ದಾರಿ ಹಿಡಿದ ಕಾರಣ, ಕನ್ನಡ ಅಧ್ಯಯನ ಪೀಠದಲ್ಲಿ ಈ ಕೆಲಸ ಅರ್ಧಕ್ಕೆ ನಿಂತಿಬಿಟ್ಟಿತು. ಕನ್ನಡ ಅಧ್ಯಯನ ಪೀಠದಲ್ಲಿ ಜರುಗುವ ಪ್ರಾಮಾಣಿಕ ದುಡಿಮೆಗೆ, ಮಹತ್ವದ ಕೆಲಸಕ್ಕೆ ಸಾಮಾನ್ಯವಾಗಿ ಸಾಮಾಜಿಕ ನ್ಯಾಯ ಸಿಗುವುದಿಲ್ಲವೆಂಬುದಕ್ಕೆ ಇದು ಮೊದಲ ಉದಾಹರಣೆಯಾಯಿತು.

ಹೀಗೆ ವಚನಸಾಹಿತ್ಯ ಪ್ರಕಟನೆ ತಟ್ಟನೇ ನಿಂತುಹೋದ ಪ್ರಸಂಗದಲ್ಲಿ ಅದು ತನ್ನ ಪ್ರಕಟನೆ-ಪ್ರಸಾರಗಳಿಗಾಗಿ ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯನ್ನು ಹುಡುಕಿಕೊಂಡಿತು. ಅಂದರೆ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ವಚನಪ್ರಕಟನ ಯೋಜನೆ ನಿಂತ ಬಳಿಕ ವೀರಶೈವಮಠವನ್ನೇ ಪ್ರಸಾರಾಂಗವಾಗಿಸುವ ಯಶಸ್ವೀಪ್ರಯೋಗವೊಂದು ಇಲ್ಲಿ ಜರುಗಿತು. ಹಿಂದಿನ ಘಟ್ಟಗಳಲ್ಲಿಯಂತೆ ಈ ಘಟ್ಟದಲ್ಲಿಯೂ ಕೆಲವರು ವಚನಸಾಹಿತ್ಯವನ್ನು ಪ್ರಕಟಿಸಿದ್ದರೂ ವೀರಶೈವ ಅಧ್ಯಯನ ಸಂಸ್ಥೆ 'ಅಪ್ರಕಟಿತ ಪ್ರಾಚೀನ ವಚನಸಾಹಿತ್ಯ'ವನ್ನು ಸಮಗ್ರವಾಗಿ ಪ್ರಕಟಿಸಬೇಕೆಂಬ ಬೃಹತ್‌ಯೋಜನೆ ಹಾಕಿಕೊಂಡು, ಅದನ್ನು ಸತ್ವ, ಮೊತ್ತ, ವೇಗ ದೃಷ್ಟಿಯಿಂದ ಸರಿಯಾಗಿ ಮುನ್ನಡೆಸುತ್ತಿರುವುದರಿಂದ ಈಸಂಸ್ಥೆಗೆ ಇಂದಿನ ಸಂದರ್ಭದಲ್ಲಿ ನಾಯಕ ಪಟ್ಟ ಪ್ರಾಪ್ತವಾಯಿತು. ಈ ಕಾಲದ ಯಾವುದೇ ಶೈಕ್ಷಣಿಕ, ಸಾರ್ವಜನಿಕ, ಧಾರ್ಮಿಕ ಸಂಸ್ಥೆಗಳೊಂದಿಗೆ ಹೋಲಿಸಬಾರದಷ್ಟು ಗಣ್ಯಪ್ರಮಾಣದಲ್ಲಿ ವಚನಪ್ರಕಟನೆಯ ಕಾರ್ಯ ಇಲ್ಲಿ ನಡೆದಿದೆ. ಅಜ್ಞಾತ ವಚನಸಂಕಲನಗಳನ್ನು ಪ್ರಕಟಿಸುವ ಪರಂಪರೆಯನ್ನು ಮುಂದುವರಿಸಿದುದಲ್ಲದೆ, ಸ್ವರವಚನಸಾಹಿತ್ಯ ಪ್ರಕಟನ ಕಾರ್ಯಕ್ಕೂ ವ್ಯಾಪಕ ಪ್ರಾರಂಭ ಒದಗಿಸಿದುದು ಈ ಸಂಸ್ಥೆಯ ಶ್ರೇಯಸ್ಸಾಗಿದೆ. ಕೈವಲ್ಯಪದವೆಂದೂ, ಅನುಭಾವಪದವೆಂದೂ, ತತ್ವಪದವೆಂದೂ, ಇತ್ತೀಚೆ ಶಿವದಾಸ ಗೀತಾಂಜಲಿ ಎಂದೂ ಕರೆದು ಶರಣಸಾಹಿತ್ಯದ ಬಹು ದೊಡ್ಡ ಪ್ರಕಾರದ ನಿಜನಾಮವಾದ 'ಸ್ವರವಚನ' ಎಂಬುದನ್ನು ಮರೆಮಾಚಲಾಗಿದ್ದಿತು. ವೀರಶೈವ ಅಧ್ಯಯನಸಂಸ್ಥೆ ಈ ಪ್ರಕಾರವನ್ನು ಬೆಳಕಿಗೆ ತರುವುದರೊಂದಿಗೆ 'ಸ್ವರವಚನ' ಎಂಬ ಹೆಸರನ್ನು ಪದೇ ಪದೇ ಬಳಸಿ, ಅದಕ್ಕೆ ಸಾರ್ವತ್ರಿಕವಾಗಿ ಶಾಶ್ವತ ಅಸ್ತಿತ್ವವನ್ನು ಕಲ್ಪಿಸಿಕೊಟ್ಟಿತು.

ಮಿಕ್ಕ ಸಾಹಿತ್ಯಕೃತಿಗಳ ಸಂಪಾದನೆಗಿಂತ ವಚನಸಾಹಿತ್ಯದ ಸಂಪಾದನ ಕೆಲಸ ತುಂಬ ಜಟಿಲವಾದುದು. ಪ್ರಕ್ಷಿಪ್ತವಚನಗಳ ನಿವಾರಣೆ, ವ್ಯತ್ಯಸ್ತವಚನಗಳ ಸುಧಾರಣೆ- ಈ ಸಂಪಾದನೆಯ ಗುರಿಯಾಗಬೇಕು. ಇದು ನುಡಿದಷ್ಟು ಸುಲಭವಲ್ಲ. ಸ್ವತಃ ಶರಣರೇ ಬಂದರೂ ಹಸ್ತಪ್ರತಿಗಳಿಂದ ತಮ್ಮ ವಚನಗಳನ್ನು ಪರಿಷ್ಕರಿಸಿಕೊಳ್ಳುವುದು ಅವರಿಗೂ ಸಾಧ್ಯವಾಗಲಿಕ್ಕಿಲ್ಲ ಎನ್ನುವಷ್ಟರ ಮಟ್ಟಿಗೆ ಭಿನ್ನಪಾಠಗಳು ಬೆರೆತು ಹೋಗಿವೆ, ಪ್ರಕ್ಷಿಪ್ತ ವಚನಗಳು ಪ್ರವೇಶಿಸಿವೆ. ಇದೆಲ್ಲವನ್ನು ಸೋಸುವುದಕ್ಕಿಂತ ಕತ್ತಲಿಲ್ಲ ಉಳಿದಿರುವ ವಚನಸಂಪತ್ತನ್ನು ಒಂದೂ ಬಿಡದಂತೆ ಹೊರಹಾಕುವ ಪ್ರಾಥಮಿಕ ಕೆಲಸವೇ ಇನ್ನೂ ಮುಗಿದಿಲ್ಲವೆನಿಸುತ್ತದೆ. ಶ್ರೀ ಹಳಕಟ್ಟಿ ಘಟ್ಟ ಕಳೆದು, ಡಾ. ಆರ್. ಸಿ. ಹಿರೇಮಠ ಘಟ್ಟ ಮುಗಿದ ಬಳಿಕವೂ ತೋಂಟದಾರ್ಯಮಠ ೬೦೦೦ ಪುಟಗಳಷ್ಟು ಪ್ರಾಚೀನ

ಅಪ್ರಕಟಿತ ವಚನಸಂಕಲನಗಳನ್ನು ಪ್ರಕಟಿಸಿದುದೇ ಈ ಮಾತಿಗೆ ಸಾಕ್ಷಿಯಾಗಿದೆ. ಮೊದಲ ಘಟ್ಟದಲ್ಲಿ ಶೂನ್ಯಸಂಪಾದನೆ, ಗಣಭಾಷಿತ ರತ್ನಮಾಲೆಗಳಂಥ ಪ್ರಸಿದ್ಧ ಸಂಕಲನಗಳು ಪ್ರಕಟವಾದುವು. ಎರಡನೆಯ ಘಟ್ಟದಲ್ಲಿ ವಿಶೇಷಾನುಭವ ಷಟ್ಸ್ಥಲ, ಪರಮಮೂಲಜ್ಞಾನ ಷಟ್ಸ್ಥಲಗಳಂಥ ಅಪ್ರಸಿದ್ಧ ಸಂಕಲನಗಳು ಪ್ರಕಟವಾದವು. ಈ ಮೂರನೆಯ ಘಟ್ಟದಲ್ಲಿ ಮೊದಲಿನ ಎರಡೂ ಘಟ್ಟಗಳಲ್ಲಿ ಕಣ್ತಪ್ಪಿ ಉಳಿದುಕೊಂಡಿದ್ದ ಪ್ರಸಿದ್ಧ, ಅಪ್ರಸಿದ್ಧ ಸಂಕಲನಗಳೂ, ಇನ್ನೂ ಅಪ್ರಸಿದ್ಧವಾಗಿರುವ ಸಂಗ್ರಹಗಳೂ ಲಘು ಸಂಕಲನಗಳೂ ಈಗ ಹೊರಬರುತ್ತಲಿವೆ. ಆದುದರಿಂದ ಈಗ ನಡೆದಿರುವ ಕೆಲಸ ಇನ್ನೂ ಅದಿರು ಹೊರ ತೆಗೆಯುವುದೇ ಆಗಿದ್ದು, ಪರಿಷ್ಕರಣ ಕಾರ್ಯದಲ್ಲಿ ದೋಷ ಉಳಿಯುವುದು ಸಹಜವಾಗಿದೆ. ಮೇಲಾಗಿ ಯಾರೇ ಪರಿಷ್ಕರಿಸಿದರೂ ಯಾವುದೇ ಮಾಯೆಯಿಂದ ದೋಷ ಉಳಿದುಕೊಳ್ಳುವ ಅಪಾಯ ಸ್ವರೂಪದ್ದಾಗಿದೆ, ವಚನ ಸಾಹಿತ್ಯಕ್ಷೇತ್ರ.

ಒಂದು ಕಡೆ ನಿಜಸ್ಥಿತಿ ಹೀಗಿದ್ದರೆ, ಇನ್ನೊಂದು ಕಡೆ ಧರ್ಮಾಧಿಕಾರಿಗಳ, ವಿದ್ವಾಂಸರ, ಸಾರ್ವಜನಿಕರ ವಿರೋಧಗಳೂ ಕೆಲವೊಮ್ಮೆ ಘಟಿಸುತ್ತದೆ. ಅಂದರೆ ಆ ಕಡೆ ಆ ಕ್ಷೇತ್ರ ಹಾಗೆ, ಈ ಕಡೆ ಈ ಜನ ಹೀಗೆ. ಇವುಗಳ ಮಧ್ಯೆ ಎಷ್ಟೇ ಪ್ರಾಮಾಣಿಕನಾಗಿದ್ದರೂ ಸಂಪಾದಕ ಕೆಲವೊಮ್ಮೆ ಶಿಲುಬೆಯೇರ ಬೇಕಾಗುತ್ತದೆ. ಆದುದರಿಂದ ವಚನ ಪರಿಷ್ಕರಣ ಪ್ರಸಂಗದಲ್ಲಿ ಉಳಿದುಕೊಳ್ಳಬಹುದಾದ ಸಣ್ಣ ದೋಷವನ್ನೇ ಜಪ್ಪಿಸಿ ಹಿಡಿದು ದೊಡ್ಡದು ಮಾಡುವುದರ ಮೂಲಕ, ಸಂಪಾದಕರ ದೊಡ್ಡ ಕೊಡುಗೆಯನ್ನು ಮರೆಮಾಡುವ ಇಲ್ಲವೆ ಅವರ ಬಗ್ಗೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಮೂಡಿಸುವ ಕೆಲಸ ಈ ಕ್ಷೇತ್ರದಲ್ಲಿ ನಡೆಯಬಾರದು. ಇದರಿಂದ ಸಂಪಾದಕರ ಶ್ರಮ-ಶ್ರದ್ಧೆಗಳನ್ನು ಅಗೌರವಿಸಿದಂತಾಗುತ್ತದೆ. ಅವರ ಉತ್ಸಾಹ-ಉದ್ದೇಶಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಅಲ್ಲದೆ ಈ ಕೆಲಸ ಮಾಡಬೇಕೆನ್ನುವ ಮುಂಬರುವ ಉತ್ಸಾಹಿ ಯುವಕರನ್ನು ಪರೋಕ್ಷವಾಗಿ ಅಧೀರರನ್ನಾಗಿಸಿದಂತಾಗುತ್ತದೆ. ಆಗ ಶುದ್ಧೀಕರಣ ಹೋಗಲಿ, ಅದಿರು ಹೊರಹಾಕುವ ಕೆಲಸವೂ ಕುಂಠಿತವಾಗುವ ಸಾಧ್ಯತೆಯಿದೆ. ಆದುದರಿಂದ ಇನ್ನು ಮೇಲಾದರೂ ವಿದ್ವಾಂಸರನ್ನು ಸರಿಯಾಗಿ ಬಳಸಿಕೊಳ್ಳುವ ಕೆಲಸ ವೀರಶೈವ ಸಮಾಜದಲ್ಲಿ ನಡೆಯುವುದೆಂದು ಆಶಿಸುತ್ತೇನೆ.

ಈ ಸಂದರ್ಭದಲ್ಲಿ ವಚನಸಂಪಾದಕರು ಪ್ರಕ್ಷಿಪ್ತವಚನಗಳನ್ನು ಪ್ರತ್ಯೇಕಿಸುವುದು ಮತ್ತು ವ್ಯತ್ಯಸ್ತವಚನಗಳನ್ನು ಪರಿಷ್ಕರಿಸುವುದು - ಈ ಎರಡು ಕೆಲಸಗಳ ಕಡೆಗೆ ಗಮನಕೊಡಬೇಕಾಗಿದೆ. ಇದಲ್ಲದೆ ಶಿಷ್ಟಪದ ಸಾಹಿತ್ಯ ಸಂಪಾದನೆಗೆ ಭಿನ್ನವಾದ ಸಂಪಾದನಸೂತ್ರಗಳನ್ನು ರೂಪಿಸಿಕೊಂಡು, ವಚನಸಾಹಿತ್ಯವನ್ನು ಪರಿಷ್ಕರಿಸುವ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ. ಈ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿ ವಚನಸಾಹಿತ್ಯ ಇನ್ನೂ ಶುದ್ಧರೂಪದಲ್ಲಿ ಬೆಳಕು ಕಾಣುವಂತೆ ಸಂಪಾದಕರು ಶ್ರಮವಹಿಸುವರೆಂದು ನಂಬುತ್ತೇನೆ; ಈ ವರೆಗೆ ಮಾಡಿದ ಕೆಲಸಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಒಟ್ಟಿನಲ್ಲಿ, ಕ್ರೈಸ್ತಪಾದ್ರಿಗಳು ಉಪೇಕ್ಷಿಸಿದಾಗ ಬಳ್ಳಾರಿ ಶೆಟ್ಟರ ಕೈಯ್ಯಲ್ಲಿ, ಇವರು ಕೈಚೆಲ್ಲಿದಾಗ ಶ್ರೀ ಹಳಕಟ್ಟಿಯವರ ತೆಕ್ಕೆಯಲ್ಲಿ, ಇವರ ತೋಳು ಸೋತಾಗ ಡಾ. ಹಿರೇಮಠ ಅವರ ಹೆಗಲುಗಳಲ್ಲಿ, ಇವರ ಹೆಗಲಿನಿಂದ ಜಾರಿ ಬೀಳುವಾಗ ತೋಂಟದಾರ್ಯಮಠದ ತಲೆಯ ನೆಲೆಯಲ್ಲಿ ಎಡೆ ಪಡೆಯುವುದರ ಮೂಲಕ ವಚನಸಾಹಿತ್ಯದ ಪ್ರಕಟನಕಾರ್ಯವು ಸ್ಥಾವರದಂತೆ ತಡೆದು ನಿಲ್ಲದೆ, ಜಂಗಮದಂತೆ ನಡೆದು ಬಂದಿದೆ.

'ಬಸವಣ್ಣನವರ ಷಟ್ಸ್ಥಲ ವಚನಗಳು' ಕೃತಿ ಪ್ರಕಟನೆಯ ಶತಮಾನೋತ್ಸವ ಸಮಾರಂಭದ ಅಧ್ಯಕ್ಷೀಯ ಭಾಷಣ. (ಗದಗ, ೧೯೯೦).

ಆಕರ : ಮಾರ್ಗ ಸಂಪುಟ–೬

■■

೧೦

ಶಂಬಾ ಸಂಸ್ಕೃತಿ ಚಿಂತನೆ : ಅಧ್ಯಕ್ಷತೆ

೧೯೯೨

ಶಂಬಾ ಸಂಶೋಧನೆಯ ಮೂರು ನೆಲೆಗಳು

ಉದ್ಘಾಟಕರಾದ ಶ್ರೀ ಪಾ. ವೆಂ. ಅವರೇ, ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬರಗೂರ ಅವರೇ, ಸದಸ್ಯರಾದ ಸುಕನ್ಯಾ, ವೀಣಾ ಅವರೇ, ಮಹನೀಯರೇ ಮತ್ತು ಮಹಿಳೆಯರೇ-

"ಶಂಬಾ ಜೋಶಿಯವರ ಸಂಸ್ಕೃತಿ ಚಿಂತನ"ವನ್ನು ಕುರಿತ ವಿಚಾರಸಂಕಿರಣವನ್ನು ಹಮ್ಮಿಕೊಳ್ಳುವ ಮೂಲಕ "ಸಾಹಿತ್ಯ ಅಕಾಡೆಮಿಯೆಂದರೆ ಕೇವಲ ಸೃಜನಶೀಲ ಸಾಹಿತ್ಯದ ಅಕಾಡೆಮಿ" ಅಲ್ಲ ಎಂಬುದನ್ನು ತೋರಿಸಿಕೊಟ್ಟ ಶ್ರೀ ಬರಗೂರ ಅವರಿಗೆ ಪ್ರಥಮದಲ್ಲಿ ಅಭಿನಂದನೆ ಸಲ್ಲಿಸುತ್ತೇನೆ ಮತ್ತು ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಅಕಾಡೆಮಿಯ ಬಾಗಿಲು ತೆರೆದಿರಲಿ ಎಂದು ಆಶಿಸುತ್ತೇನೆ.

ಶಂಬಾ ದೈಹಿಕವಾಗಿಯೂ, ಬೌದ್ಧಿಕವಾಗಿಯೂ ನೇರ ಮತ್ತು ಎತ್ತರದ ನಿಲುವಿನ ವ್ಯಕ್ತಿ. ಕರ್ನಾಟಕದ ಸೀಮೆಗಳನ್ನು ಹುಡುಕ ಹೊರಟು ಕನ್ನಡಿಗನನ್ನು, ಹಿಂದುವನ್ನು ಕೊನೆಗೆ ಮಾನವನನ್ನು ಹುಡುಕಲು ಶ್ರಮಿಸಿದ ಮಹಾಸಂಶೋಧಕ. "Persons are many, man in one" ಎಂಬ ಸತ್ಯವನ್ನು ಕಂಡುಕೊಂಡ ಮಹಾಚಿಂತಕ. ಈ ಶೋಧಪ್ರವೃತ್ತಿ ಅವರಲ್ಲಿ ಅಂಕುರಿಸಲು ಮಹಾರಾಷ್ಟ್ರದ ವಿದ್ವಾಂಸರ ಸಾಂಸ್ಕೃತಿಕ ಅಧ್ಯಯನಗಳು ಕಾರಣವಾಗಿದ್ದರೂ ಅವರು ಯಾರನ್ನೂ ಗುರುವಾಗಿ ಸ್ವೀಕರಿಸಿದವರಲ್ಲ, ಯಾರನ್ನೂ ಶಿಷ್ಯರೆಂದು ಅಂಗೀಕರಿಸಿದವರಲ್ಲ. ಹೀಗಾಗಿ ಶಂಬಾ ತನ್ನ ಸಂಶೋಧನೆಯ ಮುಂದುವರಿಕೆಗೆ ವಾರಸುದಾರರಿಲ್ಲದ ಒಂಟಿ ಸಲಗನ ಹಾಗೆ ಬೆಳೆದ ಧೀಮಂತ ವ್ಯಕ್ತಿ. ಬೇಂದ್ರೆ ಕವಿತ್ವಕ್ಕೂ ಈವರೆಗೆ ವಾರಸುದಾರರು ಹುಟ್ಟಿಲ್ಲವೆಂಬುದನ್ನು ಇಲ್ಲಿ ನೆನೆಯಬಹುದು.

ಶಂಬಾ ಹೊರನೋಟಕ್ಕೆ ಸುಮಾರು ೩೦ ಕೃತಿ ಬರೆದರೂ ಅವುಗಳ ಒಟ್ಟು ವಿಚಾರಗಳನ್ನು ಸಂಗ್ರಹಿಸಿದಲ್ಲಿ ವಾಸ್ತವಾಗಿ ಅವರು ಬರೆದ ಕೃತಿಗಳು ಮೂರೇ ಎನಿಸುತ್ತದೆ. ಒಂದು: ಕರ್ನಾಟಕ ಸಂಸ್ಕೃತಿಗೆ, ಇನ್ನೊಂದು: ಹಿಂದೂ ಸಂಸ್ಕೃತಿಗೆ, ಮತ್ತೊಂದು: ಮಾನವ ಸಂಸ್ಕೃತಿಗೆ ಸಂಬಂಧಿಸಿವೆ. "ಕಣ್ಮರೆಯಾದ ಕನ್ನಡ" (೧೯೩೩)ದಿಂದ ಕರ್ನಾಟಕ ಸಂಸ್ಕೃತಿವಿವೇಚನೆಯನ್ನು ಪ್ರಾರಂಭಿಸಿದ ಶಂಬಾ ಅವರು, "ಹಾಲುಮತದರ್ಶನ" (೧೯೫೦)ದಿಂದ ಹಿಂದೂ ಸಂಸ್ಕೃತಿವಿವೇಚನೆಯ ಹೊಸ ತಿರುವು ಪಡೆದರು. ಕೊನೆಯದಾಗಿ "ವೈವಸ್ವತಮನುಪ್ರಣೀತ

ಮಾನವಧರ್ಮದ ಆಕೃತಿ" (೧೯೭೯) ಗ್ರಂಥದ ಮೂಲಕ ಮಾನವಸಂಸ್ಕೃತಿ ವಿವೇಚನೆಯ ತಿರುವು ಪಡೆದರು. ಹೀಗೆ ಶಂಬಾ ಅವರ ಸಂಶೋಧನೆಯಲ್ಲಿ ಮೂರು ಮಜಲುಗಳನ್ನು ಗುರುತಿಸಬಹುದಾಗಿದೆ.

Fact ಸಂಶೋಧನೆ ಬೇರೆ, Truth ಸಂಶೋಧನೆ ಬೇರೆ. Fact ಒಂದು ಘಟನೆಯನ್ನು ಶೋಧಿಸಿದರೆ, Truth ಆ ಘಟನೆಯ ಹಿಂದಿನ ಸತ್ಯಾಸತ್ಯತೆಗಳನ್ನೂ ಸಾಮಾಜಿಕ ನ್ಯಾಯಾನ್ಯಾಯಗಳನ್ನೂ ಶೋಧಿಸುತ್ತದೆ. ಮೊದಲ ಘಟ್ಟದಲ್ಲಿ Analysis oriented ಶೋಧಕರಂತೆ ಕೆಲಸ ಮಾಡಿದ ಶಂಬಾ ಅವರು, ಎರಡು ಮೂರನೆಯ ಘಟ್ಟಗಳಲ್ಲಿ Interpritation oriented ಶೋಧಕರಾಗಿ ಶ್ರಮಿಸಿದರು. ಹೀಗಾಗಿ ಮೊದಮೊದಲು ಇತಿಹಾಸಶಾಸ್ತ್ರದ ನೆಲೆಯನ್ನು ಆಶ್ರಯಿಸಿದ ಅವರು, ಆಮೇಲೆ ಸಮಾಜಶಾಸ್ತ್ರ, ಮಾನವಶಾಸ್ತ್ರ, ಭಾಷಾಶಾಸ್ತ್ರ, ಸಂಕೇತಶಾಸ್ತ್ರಗಳ ಸಹಾಯವನ್ನು ಬಳಸಿಕೊಂಡು, ಸತ್ಯಶೋಧಕ್ಕೆ ಹೆಜ್ಜೆ ಹಾಕಿದರು. ಇದರಿಂದಾಗಿ ಅಂತರ್‌ಶಿಸ್ತೀಯತೆಗೆ ನಾಂದಿ ಹಾಡಿದರು.

ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ, ಕನ್ನಡದ ನೆಲೆ, ಕನ್ನುಡಿಯ ಹುಟ್ಟು, ಎಡೆಗಳು ಹೇಳುವ ಕನ್ನಾಡ ಕಥೆ- ಶಂಬಾ ಅವರ ಈ ಕೃತಿಗಳಲ್ಲಿ Fact ಶೋಧದ ದೃಷ್ಟಿಕೋನವನ್ನು ಕಾಣಬಹುದು. ಈ ಗ್ರಂಥಗಳೆಲ್ಲ ಪರಸ್ಪರ ಪೂರಕವೆಂಬಂತೆ ರಚಿತವಾಗಿದ್ದು, ಇಂದಿನ ಕರ್ನಾಟಕ, ಮಹಾರಾಷ್ಟ್ರ ಮತ್ತು ಲಾಟ (ಗುಜರಾತ) ಪ್ರಾಂತಗಳ ಪ್ರಾಚೀನಸಂಸ್ಕೃತಿ ಒಂದೇ ಬಗೆಯದೆಂಬ, ಅದು ಕನ್ನಡಿಗರಿಗೆ ಸಂಬಂಧಿಸಿದುದೆಂಬ ಅಂಶವನ್ನು ಇವುಗಳಲ್ಲಿ ಸ್ಥಾಪಿಸಿದ್ದಾರೆ. ಕವಿರಾಜಮಾರ್ಗಕಾರ ಹೇಳಿದಂತೆ ಕರ್ನಾಟಕವು ಕಾವೇರಿಯಿಂದ ಗೋದಾವರಿಯ ವರೆಗೆ ಮಾತ್ರವಲ್ಲ, ನರ್ಮದೆಯ ವರೆಗೂ ವ್ಯಾಪಿಸಿದ್ದಿತೆಂಬ ಸತ್ಯವನ್ನು ಗುರುತಿಸಲು ಶಾಸನ, ಕಾವ್ಯಗಳನ್ನಲ್ಲದೆ ಭಾಷೆ, ಆಚರಣೆ, ದೇವತೆಗಳು, ಸ್ಥಳನಾಮ ಇತ್ಯಾದಿ ಆಧಾರಗಳನ್ನೂ ಬಳಸಿದ್ದಾರೆ. ಇದನ್ನು ನೋಡಿದರೆ ತಮ್ಮ ಸಂಶೋಧನೆಯ ಪ್ರಥಮ ಘಟ್ಟದಲ್ಲಿಯೂ ಅವರು ಆ ಕಾಲದ ಸಂಶೋಧಕರಿಗಿಂತ ಬೇರೆಯಾದ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳುವ ಸಾಧ್ಯತೆಯನ್ನು ಕಂಡುಕೊಂಡಿದ್ದರೆಂದು ಸ್ಪಷ್ಟವಾಗುತ್ತದೆ.

"ಹಿಂದುಗಳ ಇತಿಹಾಸ ಅವರ ದೇವರುಗಳಲ್ಲಿದೆ" ಎಂಬ ರಹಸ್ಯವನ್ನು ಅರ್ಥಮಾಡಿಕೊಂಡ ಶಂಬಾ ಅವರು, ತಮ್ಮ ಸಂಶೋಧನೆಗೆ ಇನ್ನೊಂದು ತಿರುವು ಕೊಟ್ಟರು. ಇದರ ಫಲವಾಗಿ 'ಹಾಲುಮತ ದರ್ಶನ' ಎಂಬ ಗ್ರಂಥ ಬೆಳಕು ಕಂಡಿತು. ಇಲ್ಲಿ ಭಾಷೆಯನ್ನು ಮುಖ್ಯ ಆಕರವನ್ನಾಗಿಟ್ಟುಕೊಂಡು ಸಮಗ್ರಭಾರತದ ಸಂಸ್ಕೃತಿಯನ್ನು ಬಿಚ್ಚಿನೋಡಲು ಪ್ರಯತ್ನಿಸಿದರು. ಇದರಿಂದಾಗಿ, ಆರ್ಯರಲ್ಲಿ ಅಗ್ನಿತತ್ವ, ದ್ರಾವಿಡರಲ್ಲಿ ಜಲತತ್ವದ ನೆಲೆಗಳನ್ನು ಶೋಧಿಸಿ, ಶಿವ-ನಾರಾಯಣರೆಂಬ ಶಿಷ್ಟ ದೇವತೆಗಳ, ಎಲ್ಲಮ್ಮ-ಮೈಲಾರ ಮೊದಲಾದ ಜನಪದ ದೇವತೆಗಳ ಸಂಕೇತಗಳನ್ನು, ವೇದ-ಪುರಾಣ ಮೊದಲಾದವುಗಳ ರಹಸ್ಯವನ್ನು ಭೇದಿಸಿದರು. ದ್ರಾವಿಡರ ಜಲತತ್ವದ ಜಾನಾಂಗಿಕ ರೂಪವೇ 'ಹಾಲುಮತ ಸಮಾಜ'ವೆಂಬ ಸಿದ್ಧಾಂತವನ್ನು ಸ್ಥಾಪಿಸಿದರು. ಈ ವಿಚಾರದ ವ್ಯಕ್ತರೂಪವೆನ್ನುವಂತೆ ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಋಗ್ವೇದಸಾರ - ನಾಗಪ್ರತಿಮಾ ವಿಚಾರ, ಪ್ರವಾಹ ಪ್ರತಿತರ ಕರ್ಮ - ಹಿಂದೂ ಎಂಬ ಧರ್ಮ ಕೃತಿಗಳು ಇವರಿಂದ ಆಕಾರ ಪಡೆದವು.

ಇಲ್ಲಿಂದ ಮುಂದೆ ಶಂಬಾ ಹೊರಳಿದುದು, ಮಾನವಸಂಸ್ಕೃತಿ ಶೋಧದ ಕಡೆಗೆ. ಈಗ ವಿದೇಶೀ ಗ್ರಂಥಗಳ ಅಧ್ಯಯನ, ಸಂಸ್ಕೃತಿಯ ಆಳವಾದ ಪರಿಶೀಲನೆಯ ಹವ್ಯಾಸ ಬೆಳೆಸಿಕೊಂಡರು. ಆಗ ಇವರಿಗೆ ಮಾನವಸಂಸ್ಕೃತಿಯಲ್ಲಿ ನಡೆದ ಪ್ರಜ್ಞಾ ಪಲ್ಲಟ ಕ್ರಿಯೆ ಗಮನಕ್ಕೆ ಬಂದು, ಇದಕ್ಕೆ ಅನುಗುಣವಾಗಿ ಭಾಷೆಯನ್ನು ಪಲ್ಲಟಿಸಿಕೊಂಡುದೂ ಹೊಳೆದು, ಸಂಸ್ಕೃತಿ ಭಾಷೆಗಳ ಪರಸ್ಪರ ಸಂಬಂಧವನ್ನು ಈ ಘಟ್ಟದಲ್ಲಿ ಇನ್ನೂ ಗಾಢವಾಗಿ ಕಂಡುಕೊಂಡರು. ಮಾನವಸಂಸ್ಕೃತಿಯು ಪ್ರಜ್ಞಾಪಾತಳಿಯಿಂದ ಪ್ರಾಣಪಾತಳಿಗೆ ಪಲ್ಲಟವಾದುದನ್ನೂ ಇವುಗಳಲ್ಲಿ ಮೊದಲಿನ ಪಾತಳಿ ವೈವಸ್ವತಮನುಪ್ರಣೀತ ಮಾನವಧರ್ಮ, ಆಮೇಲಿನ ಪಾತಳಿ ಸ್ವಾಯಂಭುವ ಮನುಪ್ರಣೀತ

ಮಾನವಧರ್ಮವೆಂದು ಹೇಳಿದರು. ಇದರಿಂದಾಗಿ, ಸಮಷ್ಟಿಸಂಸ್ಕೃತಿ ವ್ಯಷ್ಟಿಸಂಸ್ಕೃತಿಗೆ ಹೊರಳಿದುದನ್ನೂ ಈ ಹೊರಳುವಿಕೆಗೆ ಗೀತೆ, ರಾಮಾಯಣ, ಮಹಾಭಾರತಗಳು ನೆರವಾಗುತ್ತ ಬಂದುದನ್ನೂ ಪ್ರತಿಪಾದಿಸಿದರು. ಇದರ ಫಲವಾಗಿ 'ವೈವಸ್ವತ ಮನುಪ್ರಣೀತ ಮಾನವಧರ್ಮದ ಆಕೃತಿ', 'ಬಿತ್ತಿದ್ದನ್ನು ಬೆಳಕೋ' ಗ್ರಂಥಗಳು ಬೆಳಕು ಕಂಡವು. ಈ ವರೆಗೆ ವಿದ್ವಾಂಸರ ವಾದಭೂಮಿಕೆಯಲ್ಲಿ ನಿಂತ ಶಂಬಾ, ಈಗ ಸಾಮಾಜಿಕರ ವಾದ-ಪ್ರತಿವಾದಗಳಿಗೆ ಗುರಿಯಾದರು. ಲೇಖನಕ್ಕೆ ಪ್ರತಿಲೇಖನ, ಪುಸ್ತಕಕ್ಕೆ ಪ್ರತಿಪುಸ್ತಕಗಳು ಹುಟ್ಟಿ, ಇವರು ವಾದಗ್ರಸ್ತ ವ್ಯಕ್ತಿಯಾಗಿ ಬೆಳೆದರು. ಒಬ್ಬ ವ್ಯಕ್ತಿಯ ವಿಷಯವಾಗಿ ಇಷ್ಟು ಸಂಖ್ಯೆಯಲ್ಲಿ ಪ್ರತಿಕ್ರಿಯೆಗಳು ಹುಟ್ಟಿದುದು ಅವರ ಶೋಧದ ಪ್ರಖರತೆಗೆ ಸಾಕ್ಷಿಯಾಗಿದೆ.

ಹೀಗೆ ಶಂಬಾ ಕರ್ನಾಟಕದಿಂದ ಹೊರಟು, ಭಾರತವನ್ನು ಆಕ್ರಮಿಸಿ, ವಿಶ್ವಮಾನವ ಸಂಸ್ಕೃತಿ ಶೋಧವನ್ನು ಆವರಿಸಿದರು. ಗತಕಾಲದ ಒಂದು ವಿಷಯದ ಸ್ಪಷ್ಟ ಸ್ವರೂಪವನ್ನು ಶೋಧಿಸಿ, ಅದು ಕಾಲಕ್ರಮದಲ್ಲಿ ಪಡೆಯುತ್ತ ಬಂದ ವ್ಯತ್ಯಾಸಗಳನ್ನು ಗುರುತಿಸಿ, ಅದರಲ್ಲಿಯ ಸ್ವೀಕಾರಾತ್ಮಕ, ತಿರಸ್ಕಾರಾತ್ಮಕ ಅಂಶಗಳನ್ನು ಪ್ರಕಟಿಸುವ ಮೂಲಕ ವರ್ತಮಾನವನ್ನು ತಿದ್ದುವ, ಭವಿಷ್ಯತ್ತನ್ನು ಕಟ್ಟುವ ಸಾಧ್ಯತೆಯತ್ತ ಬೆರಳು ತೋರಿಸಿದ ಅವರ ಸಂಶೋಧನೆಗೆ ನಿನ್ನೆ-ಇಂದು-ನಾಳೆಗಳ ವ್ಯಾಪ್ತಿ ಪ್ರಾಪ್ತವಾಗಿದೆ. ಹೀಗಾಗಿ ಗತಕಾಲದ ಶೋಧವೆನಿಸುವ ಅವರ ಸಂಶೋಧನೆಯಲ್ಲಿ ಚಲನಶೀಲತೆಯ ಲಕ್ಷಣವನ್ನು ಗುರುತಿಸಬಹುದಾಗಿದೆ. ಇದರಿಂದಾಗಿ ಅವರ ಬರವಣಿಗೆ ವಿದ್ವತ್ತಿನ ವಸ್ತುವಾಗುವುದರೊಂದಿಗೆ ಸಾಮಾಜಿಕ ಬದಲಾವಣೆಗೂ ಸ್ಫೂರ್ತಿ ನೀಡುವುದರಿಂದ, ಅದು Academic research ಆಗಿ ಉಳಿಯದೆ, Applied research ಆಗಿಯೂ ಬೆಳೆದಿದೆಯೆಂದು ಹೇಳಬಹುದಾಗಿದೆ.

ಶಂಬಾ ಶೋಧ ದೋಷರಹಿತ - ಪರಿಪೂರ್ಣವೆಂದು ಇದರ ಅರ್ಥವಲ್ಲ. ಸಂಶೋದನೆಗೆ ಆಕರಗಳೇ ಆಧಾರ. ಇವು ಬದಲಾಗದೇ ಬಂದ ಆಕರಗಳು, ಬದಲಾಗುತ್ತ ಬಂದ ಆಕರಗಳು ಎಂದು ಎರಡು ತೆರನಾಗಿರುತ್ತವೆ. ಶಂಬಾ ಅವರು ಭಾಷೆಯಂಥ ಬದಲಾಗುತ್ತ ಬಂದ ಆಕರವನ್ನು ಪರೀಕ್ಷಿಸದೆ ಬಳಸುವುದರಿಂದ, ಅನೇಕ ಸಲ ಅವರ ನಿರ್ಣಯ ತಪ್ಪು ದಾರಿ ಹಿಡಿಯುತ್ತದೆ. ಉಚ್ಚಂಗಿಯನ್ನು ಉಚ್ಚಶೃಂಗಿ ಎಂದೂ, ಮಲ್ಲಿಗವಾಡವನ್ನು ಮಲ್ಲಿಗೆವಾಡವೆಂದೂ ತಪ್ಪಾಗಿ ಗ್ರಹಿಸಿದುದು, ಎರಡು ಭಾಷೆಗಳ ಪದಗಳಲ್ಲಿ ಆಕಸ್ಮಿಕ ರೂಪಸಾಮ್ಯತೆಯಿದ್ದರೆ ಅವುಗಳಲ್ಲಿ ಅರ್ಥಸಾಮ್ಯತೆಯನ್ನೂ ಆರೋಪಿಸುವುದು- ಇವೆಲ್ಲ ಭಾಷಾಶಾಸ್ತ್ರದ ತಿಳುವಳಿಕೆಯ ಕೊರತೆಯ ಫಲವೆನಿಸಿವೆ. ಇನ್ನೂ ಒಂದು ಕೊರತೆಯೆಂದರೆ, ಪ್ರಜ್ಞಾಪಾತಳಿಯನ್ನು ನಾಶಮಾಡಿದ ಪ್ರಾಣಪಾತಳಿಯ ವೈದಿಕ ಸಂಸ್ಕೃತಿಯನ್ನು ಪ್ರತಿಭಟಿಸುವ ಇವರು, ಈ ಮೊದಲು ಹೀಗೆ ಪ್ರತಿಭಟಿಸಿದ ಪ್ರಾಚೀನ ಬೌದ್ಧ, ಜೈನ, ವೀರಶೈವ ಮೊದಲಾದವುಗಳಲ್ಲಿ ತಮ್ಮ ಸಿದ್ಧಾಂತಕ್ಕೆ ಸಮಾನವಾದ ಅಂಶಗಳೇನಾದರೂ ಇವೆಯೇ? ಎಂಬುದನ್ನು ಅಭ್ಯಸಿಸದಿರುವುದು. ಈ ಹಿಂದೆ ಅವರ 'ಬಿತ್ತಿದ್ದನ್ನು ಬೆಳಕೋ' ಗ್ರಂಥವನ್ನು ಬಿಡುಗಡೆ ಮಾಡುತ್ತ ನಾನು ಈ ಮಾತನ್ನು ಅವರಿಗೆ ಹೇಳಿದ್ದೆನಲ್ಲದೆ, ಪ್ರಜ್ಞಾಪಾತಳಿ ನಾಶವಾಗಿ ಪ್ರಾಣಪಾತಳಿ ಆಕಾರ ಪಡೆದುದನ್ನೇ ವಚನಕಾರರು "ಪ್ರಸಾದ ಪಾತಳಿ ನಾಶವಾಗಿ ಪದಾರ್ಥ ಪಾತಳಿ ಆಕಾರ ಪಡೆದಿದೆ" ಎಂದು ಬೇರೆ ಶಬ್ದದಲ್ಲಿ ಈ ಮೊದಲೇ ಹೇಳಿರುವರೆಂದೂ ಸೂಚಿಸಿದ್ದೆ. ಇಂಥ ಆಸು-ಪಾಸಿನ ಅಧ್ಯಯನ ಮಾಡಿದ್ದರೆ ಅವರ ವಿಚಾರಗಳ ಸ್ವಂತಿಕೆಯ ಪಾಲು ಸ್ಪಷ್ಟವಾಗುತ್ತಿತ್ತು.

ಆಕರಗಳ ಕೊರತೆಯಿಂದಾಗಿ ವಿಶ್ಲೇಷಣಾತ್ಮಕ (Fact) ಶೋಧವೇ ಭಾರತದಲ್ಲಿ ಅಸಮರ್ಪಕವೆನಿಸುವಾಗ, ಆಕರಗಳನ್ನೂ ಮೀರಿ ವ್ಯಾಖ್ಯಾನಿಸುವುದು ಅಪಾಯಕಾರಿಯೆಂದೇ ಹೇಳಬೇಕು. ಶಂಬಾ ಅವರು ಆಕರಗಳ ಸಂಯೋಜನೆಯನ್ನೂ ದಾಟಿ ಇಂಥ ವ್ಯಾಖ್ಯಾನಕ್ಕೆ ತೊಡಗಿ, ಕೆಲವೊಮ್ಮೆ ತಪ್ಪು ನಿರ್ಣಯಗಳನ್ನು ಸ್ಥಾಪಿಸುತ್ತಾರೆ. ಇಲ್ಲಿ ಗುರಿ ತಪ್ಪಿರಬಹುದು ಆದರೆ, ಬಳಸಿದ ವೈವಿಧ್ಯಪೂರ್ಣ ಆಕರ, ಅನುಸರಿಸಿದ ವಿಧಾನ ಗಮನ ಸೆಳೆಯುತ್ತವೆ.

ಶಂಬಾ ಅವರು ಸಂಶೋಧನೆ ಪ್ರಾರಂಭಿಸಿದ್ದು ನವೋದಯ ಕಾಲದಲ್ಲಿ. ಇದು ಪರಂಪರೆಯನ್ನು ವೈಭವೀಕರಿಸುತ್ತಿದ್ದ ಕಾಲ. ಈ ಕಾರಣದಿಂದಾಗಿ ಅವರ ಪ್ರಾರಂಭದ ಬರವಣಿಗೆಯಲ್ಲಿ ಕೆಲವೊಮ್ಮೆ ಕರ್ನಾಟಕದ ಪ್ರಾಚೀನತೆಯ ಬಗ್ಗೆ, ಸ್ವರೂಪದ ಬಗ್ಗೆ ಉತ್ಪ್ರೇಕ್ಷೆ ಕಂಡುಬರುತ್ತದೆ. ಇನ್ನೊಂದು ವಿಷಯವೆಂದರೆ, ಆ ಕಾಲದ ಸಂಶೋಧನ ಚಟುವಟಿಕೆಯ ಮುಖ್ಯ ಪ್ರವಾಹದಲ್ಲಿ ಶಂಬಾ ತೊಡಗಿಕೊಳ್ಳಲಿಲ್ಲ. ತೊಡಗಿಕೊಂಡಿದ್ದರೆ ತಮ್ಮ ಸಂಶೋಧನೆಯನ್ನು ವಿದ್ವತ್ ಪ್ರಚುರಗೊಳಿಸಲು ಇಲ್ಲವೆ, ವಿದ್ವಾಂಸರ ಪ್ರತಿಕ್ರಿಯೆಯಿಂದಾಗಿ ಅದನ್ನು ತಿದ್ದಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿತ್ತು. ಹೀಗೆ ಮಾಡದ ಕಾರಣ, ಅವರ ಸಂಶೋಧನೆ ಒಂದು ದ್ವೀಪವಾಗಿಯೇ ಉಳಿಯಿತು.

ಶಂಬಾ ಅಭಿವ್ಯಕ್ತಿಯ ಬಗ್ಗೆ ಒಂದು ಮಾತು ಹೇಳಲೇಬೇಕು. ಪ್ರಾರಂಭದ ದಿನಗಳಲ್ಲಿ ಅವರ ಅಭಿವ್ಯಕ್ತಿ ಸರಳ ಮತ್ತು ಸಂವಹನಶೀಲವಾಗಿದ್ದಿತು. ಆದರೆ ಬರಬರುತ್ತ ತಮ್ಮ ಶೋಧವು ಜನರ ಗಮನಕ್ಕೆ ಬೇಗ ಬರಲಿ ಎಂಬ ಉದ್ದೇಶದಿಂದ ಅದನ್ನು ತಮ್ಮ ಅನೇಕ ಪುಸ್ತಕಗಳಲ್ಲಿ ಪುನರುಕ್ತಗೊಳಿಸಿದುದು ಒಂದು ದೋಷವಾದರೆ, ವಿಷಯವನ್ನು ನಿರ್ದಿಷ್ಟವಾಗಿ ಹೇಳಬೇಕೆಂಬ ಉದ್ದೇಶ ಕಾರಣವಾಗಿ ಸೂತ್ರರೂಪದ ಭಾಷೆ ಬಳಸುತ್ತ ಹೋದುದು ಇನ್ನೊಂದು ದೋಷವಾಗಿದೆ. ಸಂಶೋಧಕರಾದ ಶಂಬಾ ಅವರಂತೆ ಕವಿಯಾದ ಬೇಂದ್ರೆಯವರೂ ಕೊನೆಯ ಗಳಿಗೆಯಲ್ಲಿ ಸೂತ್ರರೂಪದ (ಬೆಡಗು) ಭಾಷೆಯನ್ನು ಬಳಸಿದುದು ಒಂದು ಯೋಗಾಯೋಗ. ಈ ದೃಷ್ಟಿಯಿಂದಲಾದರೂ ಬೇಂದ್ರೆಯವರು ಕೊನೆಗೂ ಶಂಬಾ ಹತ್ತಿರ ಬಂದರೆನಿಸುತ್ತದೆ. ಆದರೆ ಸೂತ್ರಭಾಷೆಗೆ ಸಂಶೋಧಕ ಶಂಬಾ ಬಂದುದು ಕ್ಷಮ್ಯ, ಕವಿ ಬೇಂದ್ರೆ ಬಂದುದು ಅಕ್ಷಮ್ಯವೆಂದೇ ಹೇಳಬೇಕು.

ಇದೆಲ್ಲವನ್ನೂ ನೋಡಿದರೆ ಶಂಬಾ ಅವರ ಒಟ್ಟು ಬರಹದಲ್ಲಿ ಪುನರುಕ್ತಿ, ಸಂವಹನ ಜಟಿಲತೆಗಳು ಉಳಿದುಕೊಂಡಿದ್ದು, ಒಂದು ಬಗೆಯ ಅಕೆಡೆಮಿಕ್ ಶಿಸ್ತಿನ ಕೊರತೆ ಅಲ್ಲಿ ಉದ್ದಕ್ಕೂ ಕಂಡುಬರುವದೆಂದು ಹೇಳಬೇಕು. ಆದುದರಿಂದ ಈಗ ಕೆಲವರಾದರೂ ಅವರ ಬರವಣಿಗೆಯ ನೆಲೆಗಳನ್ನು ಕರ್ನಾಟಕ ಸಂಸ್ಕೃತಿ, ಹಿಂದೂಸಂಸ್ಕೃತಿ, ಮಾನವಸಂಸ್ಕೃತಿ ಎಂದು ವಿಂಗಡಿಸಿಕೊಂಡು, ಅಚ್ಚುಕಟ್ಟಾಗಿ ಮೂರು ಕೃತಿಗಳಲ್ಲಿ ಸಂಗ್ರಹಿಸಿಕೊಡುವುದು ಅಗತ್ಯವಿದೆ. ಇದರಿಂದ ಶಂಬಾ ಬರೆದದ್ದೇನು? ಅವರ ಚಿಂತನೆ ಬಂದು ನಿಂತಿದ್ದು ಎಲ್ಲಿಗೆ? ಅಲ್ಲಿಂದ ನಾವು ಮುಂದುವರಿಯಬೇಕಾದುದು ಹೇಗೆ? ಎಂಬ ದಾರಿಗಳು ಸ್ಪಷ್ಟವಾಗಿ ಅವರನ್ನು ಭವಿಷ್ಯತ್ತಿಗೆ ಕರೆದುಕೊಂಡು ಹೋಗುವುದು ಸಾಧ್ಯವಾಗುತ್ತದೆ. ರಾಜ್ಯ ಸಾಹಿತ್ಯ ಅಕಾಡೆಮಿ ಈ ಕೆಲಸವನ್ನು ಮಾಡುವುದೆಂದು ಹಾರೈಸುತ್ತ, ನನ್ನ ಮಾತಿಗೆ ವಿರಾಮ ಸೂಚಿಸುತ್ತೇನೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಧಾರವಾಡದಲ್ಲಿ ಜರುಗಿಸಿದ ಶಂಬಾ ಜೋಶಿಯವರ "ಸಂಸ್ಕೃತಿ ಚಿಂತನ" ವಿಚಾರ ಸಂಕಿರಣದ ಅಧ್ಯಕ್ಷೀಯ ಭಾಷಣ, ೧೯೯೨.

ಆಕರ : ಮಾರ್ಗ ಸಂಪುಟ-೬

■■

೧೧

ಕವಿ-ಶಾಸ್ತ್ರಜ್ಞ ಗೋವಿಂದ ಪೈ ವಿಚಾರ ಸಂಕಿರಣ : ಉದ್ಘಾಟನೆ - ಅಧ್ಯಕ್ಷತೆ

೨೦೦೬

ಮಹನೀಯರೇ, ಮಹಿಳೆಯರೇ,

ಪಂಪಭಾರತದಲ್ಲಿ ಒಂದು ಪ್ರಸಂಗ ಬರುತ್ತದೆ. ದುರ್ಯೋಧನ ಎಲ್ಲರನ್ನೂ ಕಳೆದುಕೊಂಡು ಏಕಾಕಿಯಾಗಿ ರಣರಂಗಕ್ಕೆ ಹೊರಟು, ದಾರಿಯಲ್ಲಿ ದ್ರೋಣಾಚಾರ್ಯರ ಶವ ನೋಡುತ್ತಲೇ, "ಅರಿಯಮೆ ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು, ಪಿನಾಕಪಾಣಿಯಲ್ತು", ಅಂದರೆ ನಿಮ್ಮ ಜೊತೆ ಯುದ್ಧಮಾಡುವುದಕ್ಕೆ ಅರ್ಜುನನಿಗಲ್ಲ, ಆ ಶಿವನಿಗೂ ಸಾಧ್ಯವಾಗದು - ಎಂದು ಹೊಗಳಿ, "ನಿಮ್ಮದೊಂದು ಪೆಸರ್ಗೇಳ್ವೊಡೆ ಕೈ ಮುಗಿವುದು" ಎನ್ನುತ್ತಾನೆ. ಹೀಗೆ ದ್ವಾಪರಯುಗದಲ್ಲಿ ದ್ರೋಣ ಎಂದ ಕೂಡಲೇ ತನಗೆ ತಾನೇ ಜನರ ಕೈ ಮುಗಿಯುತ್ತಿದ್ದವಂತೆ. ಇದೇ ರೀತಿ ಗೋವಿಂದ ಪೈ ಎಂದ ಕೂಡಲೇ ನಮಗೆ ಅರಿವಿಲ್ಲದೆಯೇ ಇಂದು ನಮ್ಮ ಕೈ ಮುಗಿಯುತ್ತವೆ. ಏಕೆಂದರೆ ಗೋವಿಂದ ಪೈ ಅವರು ಕೇವಲ ಒಬ್ಬ ಸಾಹಿತಿಯಾಗಿ ಬದುಕಿದವರಲ್ಲ,ಮೌಲ್ಯಯುತ ವ್ಯಕ್ತಿತ್ವ ರೂಪಿಸಿಕೊಂಡಿದ್ದವರು. ಆ ಕಾರಣದಿಂದಲೇ ಆಲೂರು ವೆಂಕಟರಾಯರು ವಯಸ್ಸಿನಿಂದ ಹಿರಿಯರಾಗಿದ್ದರೂ ಕೂಡ, ಮುಂಬೈ ಸಾಹಿತ್ಯ ಸಮ್ಮೇಲನದ ಸಂದರ್ಭದಲ್ಲಿ ಅಧ್ಯಕ್ಷತೆಯ ವೇದಿಕೆ ಏರುತ್ತಿದ್ದ ಗೋವಿಂದ ಪೈಗಳ ಪಾದಮುಟ್ಟಿ ನಮಸ್ಕಾರ ಮಾಡಿದರು. ಇದೊಂದು ಸಂದರ್ಭ ಸಾಕು, ಪೈಗಳದು ಎಂಥ ಬದುಕು ಎನ್ನುವುದಕ್ಕೆ.

ನಾನು ವಿದ್ಯಾರ್ಥಿಯಾಗಿದ್ದಾಗ ಸಹಜವಾಗಿ ಈ ಹೆಸರನ್ನು ಕೇಳಿದ್ದೆ. "ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ, ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮದಾತೆಯೇ" - ಈ ಒಂದು ಪದ್ಯದ ಮೂಲಕ ಗೋವಿಂದ ಪೈಗಳು ನನ್ನೊಳಗೆ ಪ್ರವೇಶ ಮಾಡಿದ್ದರು. ನಾನು ಎಂ. ಎ., ವಿದ್ಯಾರ್ಥಿಯಾಗಿದ್ದಾಗ ಗೆಳೆಯರಾದ ಎಂ. ರಾಮಚಂದ್ರ ಮೊದಲಾದವರು ಸೇರಿ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರವಾಸ ಹೋಗಿದ್ದೆವು. ಅಲ್ಲಿಯ ಧರ್ಮಸ್ಥಳ, ಉಡುಪಿಗಳಂತೆ ಸಾಹಿತ್ಯದ ವಿದ್ಯಾರ್ಥಿಗಳಾಗಿದ್ದ ನಮಗೆ ಪೈಗಳ ಮಂಜೇಶ್ವರವೂ ಒಂದು ದೊಡ್ಡ ಪುಣ್ಯಕ್ಷೇತ್ರವಾಗಿದ್ದಿತು. ಅಲ್ಲಿಗೆ ಭೆಟ್ಟಿ ನೀಡಿದ ಸಂದರ್ಭದಲ್ಲಿ ಪೈ ಅವರು "ಕಾಸರಗೋಡು ಕರ್ನಾಟಕದ್ದು, ಮುದ್ದಣ ತುಳುನಾಡಿನವ" ಎಂದು ಹೇಳಿದುದು ನನಗೆ ಇನ್ನೂ ನೆನಪಿದೆ.

ಗೋವಿಂದ ಪೈ ಅವರು ಹುಟ್ಟಿದ್ದು ಗಾಂಧಿಯುಗದಲ್ಲಿ. ಗಾಂಧಿಯುಗದ ವ್ಯಕ್ತಿಗಳಿಗೆ ಎರಡು ಜವಾಬ್ದಾರಿಗಳಿದ್ದವು. ಒಂದು: ಹಳೆಯದನ್ನು ಹುಡುಕುವುದು, ಮತ್ತೊಂದು: ಹೊಸದನ್ನು ಹುಟ್ಟಿಸುವುದು. ಅಂದು ವಿಸ್ಮೃತಿಯಿಂದಾಗಿ ನಮ್ಮ ಚರಿತ್ರೆ ಅಸ್ತವ್ಯಸ್ತಗೊಂಡಿತ್ತು, ಪಶ್ಚಿಮದ ಸಂಪರ್ಕದಿಂದಾಗಿ ಹೊಸ ಪರಿಸರದೊಂದಿಗೆ ಸ್ಪರ್ಧೆಯ ಹೆಜ್ಜೆ ಹಾಕುವುದು ಅನಿವಾರ್ಯವಾಗಿತ್ತು. ಆದುದರಿಂದ ಗಾಂಧೀಯುಗದ ಹಿರಿಯರು ಹಳೆಯದನ್ನು ಹುಡುಕುವ ಮತ್ತು ಹೊಸದನ್ನು ಹುಟ್ಟಿಸುವ ಎರಡು ಜವಾಬ್ದಾರಿಗಳನ್ನು ನೆರವೇರಿಸಬೇಕಾಗಿತ್ತು. ಈಗ ಸಹಜವಾಗಿಯೇ ಗೋವಿಂದ ಪೈ ಅವರು 'ಸಂಶೋಧನ ಸಾಹಿತ್ಯ'ದ ಮೂಲಕ ಹಳೆಯದನ್ನು ಹುಡುಕುವ ಕೆಲಸ ಮಾಡಿದರು. 'ಸೃಜನ ಸಾಹಿತ್ಯ'ದ ಮೂಲಕ ಹೊಸ ಮೌಲ್ಯಗಳನ್ನು ಹುಟ್ಟುಹಾಕುವ ಕೆಲಸಮಾಡಿದರು.

ಅಂದು ನಮ್ಮ ಇತಿಹಾಸದ ಕೊಂಡಿಗಳೆಲ್ಲ ಕಳಚಿಹೋಗಿ ಹಿಂದು-ಮುಂದಾಗಿದ್ದವು. ಯಾವ ಶತಮಾನದಲ್ಲಿ ಯಾವ ಘಟನೆ ಜರುಗಿತು? ನಮ್ಮ ಪರಂಪರೆಯ ಸಕ್ರಮವಾದ ಬೆಳವಣಿಗೆ ಎಂಥದ್ದು? ಇದೆಲ್ಲದರ ಪ್ರಜ್ಞೆ ನಮಗೆ ಇರಲಿಲ್ಲ. ಏಕೆಂದರೆ ನಮ್ಮ ಕವಿಗಳು 'ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ' ಎಂದು ನಿರ್ಮಮತೆಯಿಂದ ಸಾಹಿತ್ಯ ನಿರ್ಮಾಣಮಾಡಿದ ಕಾರಣ, ಅವರು ತಮ್ಮ ಕಾವ್ಯದ ಮೇಲೆ ಹೆಸರು ಹಾಕಿಕೊಳ್ಳಲಿಲ್ಲ. ತಮ್ಮ ಕಾವ್ಯವನ್ನು ಯಾವ ಸಂದರ್ಭದಲ್ಲಿ ಬರೆದೆವು ಎಂದೂ ದಾಖಲೆ ಮಾಡಲಿಲ್ಲ. ತಾವು ಯಾರು?ಎಲ್ಲಿಯವರು? ಈ ಯಾವ ವಿಚಾರವನ್ನೂ ಅವರು ನಮೂದಿಸಲಿಲ್ಲ. ಇದರಿಂದಾಗಿ ನಮ್ಮ ಇತಿಹಾಸ ನಮಗೇ ಸಿಗದೆ ಹೋಗಿದ್ದಿತು.

ಎರಡನೆಯದಾಗಿ, ನಮ್ಮ ಜನರು ಅನ್ಯರ ದಾಳಿಯಲ್ಲಿ ತಮ್ಮ ಪರಂಪರೆಯನ್ನು ರಕ್ಷಿಸುವ ಕಡೆಗೆ ಗಮನ ಕೊಡಲಿಲ್ಲ. ಹೀಗಾಗಿ ಕಳೆದುಹೋದ ಅದನ್ನು ಬಹಳ ದೊಡ್ಡ ಪ್ರಮಾಣದಲ್ಲಿ ತುಂಬಿಕೊಡುವ ಕೆಲಸ ಮಾಡಬೇಕಾಗಿತ್ತು. ಜೊತೆಗೆ ಪಶ್ಚಿಮದಿಂದಾಗಿ ತೆಗೆದುಕೊಂಡಿದ್ದ ಆಧುನಿಕತೆಯನ್ನು ಅಳವಡಿಸಿಕೊಳ್ಳಬೇಕಿತ್ತು. ಆ ಕೆಲಸವನ್ನು ಕಾವ್ಯ-ನಾಟಕ ಮೊದಲಾದ ಸೃಜನ ಸಾಹಿತ್ಯದ ಮೂಲಕ ತಮ್ಮ ಜೀವನ ಪರ್ಯಂತ ಮಾಡಿದರು, ಗೋವಿಂದ ಪೈಗಳು.

ಇತಿಹಾಸವನ್ನು ಸಕ್ರಮಗೊಳಿಸುವುದು, ಶೋಧಿಸುವುದು ಅಷ್ಟು ಸುಲಭದ ಕೆಲಸವಲ್ಲ. ಅದಕ್ಕೆ ಅನೇಕ ರೀತಿಯ ಆಕರಗಳು ಬೇಕಾಗುತ್ತವೆ. ಹಾಗಾಗಿಯೇ ಗೋವಿಂದ ಪೈ ಅವರು ಕಾವ್ಯ, ಶಾಸನ, ಭಾಷೆ, ವದಂತಿ, ಆಚರಣೆ ಮೊದಲಾದ ಆಕರಗಳ ಜೊತೆ, ಅನೇಕ ಭಾಷೆಯ ಸಾವಿರಾರು ಆಕರ ಸಾಮಗ್ರಿಗಳನ್ನು ಸಂಗ್ರಹಿಸಿ, ಸಂಶೋಧನೆ ಕೈಗೊಳ್ಳುತ್ತಿದ್ದರು.

ನಾನು ವಿದ್ಯಾರ್ಥಿಯಾಗಿದ್ದಾಗ ನೋಡಿದ್ದೆ. ಐದು ಸಾವಿರ ಗ್ರಂಥಗಳು ಪೈ ಅವರ ಗ್ರಂಥಾಲಯದಲ್ಲಿದ್ದವು. ಆ ಮನೆ ಇಟ್ಟಿಗೆಗಳಿಂದ ಕಟ್ಟಿದುದಲ್ಲ, ಪುಸ್ತಕಗಳಿಂದ ಕಟ್ಟಿದುದು ಎನ್ನುವ ರೀತಿಯಲ್ಲಿತ್ತು. ಅದರ ಮಧ್ಯದಲ್ಲಿ ಮಹಾತಪಸ್ವಿಯಂತೆ ಪೈಗಳ ಸಂಶೋಧನಾಕಾರ್ಯ ನಡೆಯುತ್ತಿತ್ತು. ಆಕರ ಸಂಗ್ರಹದ ಬಳಿಕ ಸಂಶೋಧಕ ಮಾಡಬೇಕಾದ ಮುಖ್ಯ ಕೆಲಸವೆಂದರೆ ಅದರ ಶುದ್ಧೀಕರಣ. ಕೈಗೆ ಸಿಕ್ಕ 'ಆಕರ'ವೇ ಸರಿ ಎನ್ನುವುದಲ್ಲ. ಏಕೆಂದರೆ ನಮ್ಮಲ್ಲಿ ಬದಲಾಗುತ್ತ ಬಂದ ಆಕರಗಳೇ ಬಹಳವುಂಟು. ಹೀಗಾಗಿ ಈ ಶುದ್ಧಿಕರಣ ಕೆಲಸವನ್ನು ಮೊದಲು ಮಾಡುತ್ತಿದ್ದರು, ಗೋವಿಂದ ಪೈಗಳು.

ಉದಾ: ಮಲ್ಲಿನಾಥ ಪುರಾಣದಲ್ಲಿ 'ಜಿನಪತಿ ಸಭೆಯೊಳ್ ಪೂಜ್ಯಂ' ಎಂಬ ಪಾಠವಿದೆ. ಇದನ್ನು ನಾವೆಲ್ಲಾ ಒಪ್ಪಿಕೊಂಡಿದ್ದೆವು. ಆದರೆ ಪ್ರಾಚೀನ ತೀರ್ಥಂಕರನ ಸಭೆಯಲ್ಲಿ ಆಧುನಿಕನಾದ ಕವಿ ನಾಗಚಂದ್ರ ಹೇಗೆ ಪೂಜ್ಯನಾಗಿದ್ದ?ಎಂದು ಗೋವಿಂದ ಪೈ ಅವರು ಪ್ರಶ್ನಿಸಿದರು. ಇದು 'ಜಿನಪತಿ ಸಭೆಯೊಳ್ ಪೂಜ್ಯಂ' ಅಲ್ಲ, 'ಜನಪತಿ ಸಭೆಯೊಳ್ ಪೂಜ್ಯಂ' ಎಂದು ಮೊಟ್ಟಮೊದಲು ತಿದ್ದಿ ಹೇಳಿದರು. ಅಷ್ಟೇ ಅಲ್ಲದೆ ಈ

ಜನಪತಿಯು ಕಲ್ಯಾಣಿಚಾಲುಕ್ಯರ ಜಗದೇಕಮಲ್ಲ ಜಯಸಿಂಹ ಎಂದು ಹೇಳಿ, ನಾಗಚಂದ್ರನು ೧೧ನೆಯ ಶತಮಾನದವನು ಎಂದು ನಿರ್ಣಯಿಸಿದರು.

ಹೀಗೆ ಒಂದು ಸಣ್ಣ ವಿಷಯವೂ ಅವರ ಕಣ್ಣಿನಿಂದ ನುಣುಚಿ ಹೋಗುವುದಕ್ಕೆ ಸಾಧ್ಯವಿರಲಿಲ್ಲ. ರಾಘವಾಂಕನ ಸಿದ್ಧರಾಮ ಚರಿತೆಯಲ್ಲಿ 'ಬಿಜ್ಜಳನ ತಮ್ಮಂ ಕರ್ಣದೇವ' ಎಂಬ ಪಾಠವಿದೆ. ಆದರೆ ಯಾವ ಶಾಸನದಲ್ಲೂ ಬಿಜ್ಜಳನಿಗೆ ಕರ್ಣದೇವನೆಂಬ ತಮ್ಮನಿದ್ದ ವಿಚಾರ ಬರುವುದಿಲ್ಲ. ಈ ಕುರಿತು ಸಂಶೋಧನೆ ಕೈಗೊಂಡ ಗೋವಿಂದಪೈ ಅವರು ಅನೇಕ ಶಾಸನಗಳನ್ನು ಅಧ್ಯಯನ ಮಾಡಿ 'ಅದು ಬಿಜ್ಜಳನ ತಮ್ಮಂ ಕರ್ಣದೇವ ಅಲ್ಲ, ಬಿಜ್ಜಳನ ಮಮ್ಮಂ ಕರ್ಣದೇವ' ಎಂದು ಹೇಳಿದರು. ಮಮ್ಮಂ ಎಂದರೆ ಮೊಮ್ಮಗ ಎಂದು ಅರ್ಥ. ಹೀಗೆ ಅತಿ ಸೂಕ್ಷ್ಮ ರೀತಿಯಲ್ಲಿ ವಿಚಾರಮಾಡಿ, ತರ್ಕಬದ್ಧವಾದ ಬರವಣಿಗೆಯನ್ನು ಪೂರೈಸಿ, ನಮ್ಮ ಇತಿಹಾಸದ ಮೇಲೆ ಕವಿದಿದ್ದ ಕತ್ತಲೆಯನ್ನು ದೂರ ಸರಿಸಿದವರು, ಗೋವಿಂದ ಪೈಗಳು. ಈ ದಾರಿಯಲ್ಲಿ ಸುಮಾರು ೨೫೦ಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪೈ ಅವರು ಬರೆದಿದ್ದಾರೆ.

ಎಷ್ಟೋ ಸಲ ಸಂಶೋಧಕರು ಒಂದು ವಿಚಾರವನ್ನು ತಾವೇ ಮೊದಲು ಹೇಳಿದವರು ಎಂದುಕೊಳ್ಳುತ್ತಾರೆ. ಹಾಗೆ ನೋಡಿದರೆ ಈ ಮೊದಲು ಗೋವಿಂದ ಪೈ ಅವರೇ ಹೇಳಿರುವ ಉದಾಹರಣೆಗಳಿವೆ. ಅಜಿತಪುರಾಣದ "ಕಲಿಯೆನೆ ನೆಗಳ್ದಳ್ ಕಸವರಗಲಿಯೆನೆ ನೆಗಳ್ದಳ್......" ಎಂದು ಆರಂಭವಾಗುವ ಪದ್ಯ ನನಗೆ ಶ್ರವಣಬೆಳಗೊಳ ಶಾಸನದಲ್ಲಿ ಸಿಕ್ಕಿತು. ಈ ಶಾಸನದ ಕಾಲನಿರ್ಣಯದ ಬಗೆಗೆ, ಇದರ ಮೇಲಾದ ರನ್ನನ ಪ್ರಭಾವದ ಬಗೆಗೆ ಒಂದು ಲೇಖನವನ್ನು ಬರೆದೆ. ಆದರೆ ಇತ್ತೀಚೆಗೆ ನನಗೆ ಗೊತ್ತಾಯಿತು. ಈ ಮೊದಲೇ ಗೋವಿಂದ ಪೈ ಅವರು ಈ ವಿಚಾರವನ್ನು ಹೇಳಿದ್ದಾರೆಂಬುದು. ಪ್ರಸಿದ್ಧ ಸಂಶೋಧಕರಾದ ಡಿ.ಎಲ್.ನರಸಿಂಹಾಚಾರ್ ಅವರು ರನ್ನನ ಅಜಿತಪುರಾಣದ 'ಪಿರಿಯಂ ಬೂತುಗನಾತನಿಮ್ಮಮಳ.......' ಎಂಬ ಪದ್ಯದ ಮೊದಲನೇ ಸಾಲಿನಲ್ಲಿ ಬರುವುದು 'ಮ್ಮಮಳ' ಅಲ್ಲ 'ಮ್ಮರುಳ' ಎಂದು ಸರಿಯಾಗಿಯೇ ಹೇಳಿದರು. ಆದರೆ ಈ ಪಾಠಾಂತರವನ್ನು ಗೋವಿಂದಪೈ ಅವರೇ ಈ ಮೊದಲು ಹೇಳಿದ್ದಾರೆ. ಹೀಗೆ ಅನೇಕ ವಿಷಯಗಳಲ್ಲಿ ನಮಗಿಂತ ಮೊದಲೇ ಸಂಶೋಧನೆ ಮಾಡಿದವರು, ಗೋವಿಂದ ಪೈಗಳು.

ಹೀಗಿದ್ದೂ ಗೋವಿಂದ ಪೈ ಅವರ ಬರವಣಿಗೆಯ ಬಗ್ಗೆ ಕೆಲವು ಆಕ್ಷೇಪಗಳಿವೆ. ಸಂಶೋಧನೆಯಲ್ಲಿ ಭಾಷೆ ಸ್ವಲ್ಪ ಜಟಿಲ, ವಾಕ್ಯ ದೀರ್ಘವೆನಿಸುತ್ತವೆ. ಅಡಿ ಟಿಪ್ಪಣಿಗಳು ಅತಿ ಎನಿಸುವುದನ್ನು ಗಮನಿಸಿ ಶ್ರೀರಂಗರು ತಮಾಷೆಗಾಗಿ "ಪೈ ಅವರು ಮೊದಲು ಅಡಿಟಿಪ್ಪಣಿ ಬರೆದು, ಆಮೇಲೆ ಲೇಖನ ಬರೆಯುತ್ತಾರೆ" ಎಂದು ಹೇಳುತ್ತಿದ್ದರು.

ಒಟ್ಟಾರೆ, ಗೋವಿಂದ ಪೈ ಅವರು ಆ ಕಾಲದಲ್ಲಿ ಅಸ್ತವ್ಯಸ್ತವಾಗಿದ್ದ ನಮ್ಮ ಚರಿತ್ರೆಯ ಚೌಕಟ್ಟನ್ನು ವ್ಯಸ್ತಗೊಳಿಸಿದ ಬಹು ದೊಡ್ಡ ಸಂಶೋಧಕರು. ಅಂದರೆ ನನ್ನ ದೃಷ್ಟಿಯಲ್ಲಿ ಅವರು ಚರಿತ್ರೆಯ ಸಂಶೋಧಕರು. ಶಂಬಾ ಜೋಶಿಯವರು ಸಂಸ್ಕೃತಿಯ ಸಂಶೋಧಕರು. ನಾನು ಈ ಹಿಂದೆ ಹೇಳಿದಂತೆ ದಕ್ಷಿಣ ಕರ್ನಾಟಕದವರು ಚರಿತ್ರೆಯ ಸಂಶೋಧಕರು, ಉತ್ತರ ಕರ್ನಾಟಕದವರು ಸಂಸ್ಕೃತಿಯ ಸಂಶೋಧಕರು. ಉತ್ತರದವರ ಮೇಲೆ ಪುಣೆಯ ಪ್ರಭಾವ ಇದೆ. ದಕ್ಷಿಣದವರ ಮೇಲೆ ಮದ್ರಾಸಿನ ಪ್ರಭಾವ ಇದೆ. ಗೋವಿಂದ ಪೈ ಅವರು ಮದ್ರಾಸು ರಾಜ್ಯಕ್ಕೆ ಸೇರಿದವರು. ಹೀಗಾಗಿ ಪೈ ಅವರು ಚರಿತ್ರೆಗೆ ಸಂಬಂಧಿಸಿದ ಸಂಶೋಧನೆಯನ್ನು ಕೈಗೊಂಡಿದ್ದಾರೆ.

ಗೋವಿಂದ ಪೈ ಅವರದು ಸಂಶೋಧನ ಕ್ಷೇತ್ರದಲ್ಲಿಯಂತೆ ಸೃಜನ ಕ್ಷೇತ್ರದಲ್ಲೂ ದೊಡ್ಡ ಹೆಸರು. ಹೀಗೆ ಎರಡು ಕ್ಷೇತ್ರಗಳಲ್ಲಿ ಸಮಾನವಾಗಿ ಕೆಲಸ ಮಾಡುವುದು ಸುಲಭವಲ್ಲ. ಪೈ ಅವರು ಮಾತ್ರ ಈ ಎರಡೂ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಿದ್ದಾರೆ. ಶ್ರೀವಿಜಯ, ನಾಗವರ್ಮ, ಕೇಶಿರಾಜ ಮುಂತಾದವರು ಕವಿಗಳೂ,

ಶಾಸ್ತ್ರಜ್ಞರೂ, ಆಗಿದ್ದರು. ಇಂಥ ಒಂದು ಪರಂಪರೆಯನ್ನು ೨೦ನೇ ಶತಮಾನದಲ್ಲಿ ಸಮರ್ಥವಾಗಿ ನಿರ್ವಹಿಸಿದ ವಿಶಿಷ್ಟ ಚೇತನ ಗೋವಿಂದಪೈ ಅವರು. ಇವರು ಮೊದಲು ಕವಿಯಾಗಿಯೇ ತಮ್ಮ ಸಾಹಿತ್ಯ ಬದುಕನ್ನು ಆರಂಭಿಸಿದರು. ಇವರು ಇಪ್ಪತ್ತೇಳು ವರ್ಷದವರಿರುವಾಗ ಹೆಂಡತಿ ತೀರಿಕೊಳ್ಳುತ್ತಲೇ ಕಾವ್ಯ ಬರವಣಿಗೆಯಿಂದ ಸಂಶೋಧನ ಕೆಲಸದ ಕಡೆಗೆ ತಿರುಗಿದರು. ಪೈ ಅವರು ಈ ಕುರಿತು "ಕಾವ್ಯ ಚಿತ್ತವನ್ನು ಕೆರಳಿಸುವಂತಹದ್ದು, ಹೆಂಡತಿ ಅಗಲಿಕೆಯ ಬಳಿಕ ಚಿತ್ತ ಕೆರಳಿಸುವ ಕಾವ್ಯ ಬರೆಯುವುದನ್ನು ಕಡಿಮೆ ಮಾಡಿ, ಚಿತ್ತಶಮನ ಮಾಡುವ ಸಂಶೋಧನ ಮಾರ್ಗ ಹಿಡಿದಿದ್ದೇನೆ" ಎಂದು ಹೇಳುತ್ತಾರೆ.

ಹಾಗೆ ನೋಡಿದರೆ, ಗೋವಿಂದ ಪೈ ಅವರ ಕಾವ್ಯಗಳಲ್ಲಿ ಒಂದು ವಿಶಿಷ್ಟತೆ ಇದೆ. ಅವರದು ಕೇವಲ ಇಂದ್ರಿಯ ಪಾತಳಿಯ ಕಾವ್ಯವಲ್ಲ, ಅತೀಂದ್ರಿತ ಪಾತಳಿಯ ಕಾವ್ಯವೂ ಹೌದು. ನವೋದಯ ಕವಿಗಳು ಇಂದ್ರಿಯ ಪಾತಳಿಯಲ್ಲಿ ಬರೆಯುತ್ತಲೇ ಅತೀಂದ್ರಿಯ ಪಾತಳಿಗೆ ಸರಿಯುತ್ತಾರೆ, ನವ್ಯದವರು ಮಾತ್ರ ಇಂದ್ರಿಯ ಪಾತಳಿಯವರು. ಇಂದ್ರಿಯ ಪಾತಳಿಯ ಕವಿತೆ ಎಂದರೆ ಎಂಟು ರಸಗಳ ಕವಿತೆ. ಇದು ಎಂಟು ಭಾವಗಳನ್ನು ಉದ್ರೇಕಿಸಿ ರಸಾನುಭವವನ್ನುಂಟು ಮಾಡುತ್ತದೆ. ಅತೀಂದ್ರಿಯ ಪಾತಳಿಯ ಕವಿತೆ ಎಂದರೆ ಶಾಂತರಸವೂ ಸೇರಿಕೊಂಡ ಒಂಬತ್ತು ರಸಗಳ ಕವಿತೆ. ಇಲ್ಲಿ ಉದ್ರೇಕಗೊಂಡ ಭಾವ ಶಾಂತರಸದ ಸ್ಪರ್ಶದಿಂದಾಗಿ ಉಪ ಶಮನಗೊಳ್ಳುತ್ತದೆ. ಉದ್ರೇಕದಲ್ಲೂ ಆನಂದ ಇದೆ, ಉಪಶಮನದಲ್ಲೂ ಆನಂದ ಇರುತ್ತದೆ. ಕೇವಲ ಉದ್ರೇಕಗೊಳಿಸುವುದೆಂದರೆ ಅದು ಪಂಪ ಹೇಳುವ ಲೌಕಿಕಕಾವ್ಯ. ಉದ್ರೇಕದೊಂದಿಗೆ ಉಪಶಮನ ಮಾಡುವುದೆಂದರೆ ಅದು ಅವನೇ ಹೇಳುವ ಆಗಮಿಕ ಕಾವ್ಯ. ಗೋವಿಂದ ಪೈ ಅವರು ನಮ್ಮ ಇಂಥ ಆಗಮಿಕ ಪರಂಪರೆಯ ಕವಿಯಾದ ಕಾರಣ, ಅವರ ಕಾವ್ಯ ಅತೀಂದ್ರಿಯ ಅನುಭೂತಿಯನ್ನು ನೀಡುತ್ತದೆ. ಒಂದು ಪದ್ಯದಲ್ಲಿ ಕನಕದಾಸರು

"ವರಕವಿಗಳ ಮುಂದೆ ನರಕವಿಗಳು ವಿದ್ಯೆ ತೋರಬಾರದು ।
ಧರಣೀಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು ॥"

ಎಂದು ಹೇಳುತ್ತಾರೆ. ಈ ಪದ್ಯದಿಂದ ನರಕವಿ ಬೇರೆ, ವರಕವಿ ಬೇರೆ ಎಂದು ಗೊತ್ತಾಗುತ್ತದೆ. ನರಕವಿಗಳು ಎಂಟು ರಸಗಳಿಂದ ಕೂಡಿದ ಕಾವ್ಯ ಬರೆಯುವವರು, ವರಕವಿಗಳು ಒಂಬತ್ತು ರಸಗಳಿಂದ ಕೂಡಿದ ಕಾವ್ಯ ಬರೆಯುವವರು. ಬೇಂದ್ರೆಯವರನ್ನು 'ವರಕವಿ' ಎಂದು ಕರೆಯುತ್ತಾರೆ. ಆ ಹಿನ್ನೆಲೆಯಿಂದ ನೋಡಿದರೆ ಗೋವಿಂದ ಪೈ ಅವರು ಸಹ 'ವರಕವಿ'ಗಳ ಸಾಲಿನಲ್ಲಿ ಸೇರುವವರು.

ಪೈ ಅವರು ಜೈನ ಗೊಮ್ಮಟಸ್ತುತಿ, ಬೌದ್ಧ ವೈಶಾಖಿ, ಕ್ರೈಸ್ತ, ಗೊಲ್ಗಾಥಾ, ವೈಧಿಕ ಪ್ರಭಾಸ ಕೃತಿಗಳನ್ನು ರಚಿಸಿದ್ದಾರೆ. ಗಾಂಧಿ ಅವರನ್ನು ಕುರಿತು ಬರೆದ 'ದೆಹಲಿ' ಲೇಖನ, ಏಕಲವ್ಯವನ್ನು ಕುರಿತು ಬರೆದ 'ಹೆಬ್ಬೆರಳು'ಗಳೂ ಇವೆ. ಇವುಗಳನ್ನು ನೋಡಿದರೆ ಇವರದು ಸರ್ವಧರ್ಮ ಸಮಾನತೆಯ ಮಾನವತಾವಾದಿ ಸಾಹಿತ್ಯವೆಂದು ಗೊತ್ತಾಗುತ್ತದೆ. ಇಷ್ಟೆಲ್ಲ ದೊಡ್ಡ ಸಾಧನೆಯನ್ನು ಮಾಡಿದರೂ ಪೈ ಅವರಿಗೆ ಅಹಂಕಾರವಿಲ್ಲ. ಬದಲಾಗಿ ನಾನು ಅಂಥ ದೊಡ್ಡ ಕೆಲಸವನ್ನು ಮಾಡಿಲ್ಲ, ಸೋಮಾರಿ, ಮೈಗಳ್ಳ ಎಂದು ತಮ್ಮನ್ನು ತಾವು ಕರೆದುಕೊಂಡಿದ್ದಾರೆ. ಇದು ಪೈ ಅವರ ದೊಡ್ಡಸ್ತಿಕೆಯನ್ನು ತೋರಿಸುತ್ತದೆ.

ಗೋವಿಂದ ಪೈ ಅವರಿಗೆ ಪಂಜೆ ಅವರು ಗುರುವಾಗಿದ್ದರೆ, ರಾಷ್ಟ್ರಪತಿ ಎಸ್. ರಾಧಾಕೃಷ್ಣ ಅವರು ಸಹಪಾಠಿಯಾಗಿದ್ದರು. ವಿದ್ಯಾರ್ಥಿಯಾಗಿದ್ದಾಗ ರಾಧಾಕೃಷ್ಣ ಅವರ ಇಂಗ್ಲೀಷ್ ಉಚ್ಚಾರಕ್ಕಿಂತ ಪೈ ಅವರ ಇಂಗ್ಲಿಷ್‌ನ ಉಚ್ಚಾರ ಚೆನ್ನಾಗಿತ್ತು ಎಂಬ ಒಂದು ಹೇಳಿಕೆ ಇದೆ. ಅಂಥ ಭಾಷಾ ಪ್ರವೀಣರಾಗಿದ್ದರು, ಗೋವಿಂದ ಪೈ. ಅವರು ರಾಷ್ಟ್ರಕವಿ ಪ್ರಶಸ್ತಿಯನ್ನು, ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಒತ್ತಾಯದಿಂದ ಒಪ್ಪಿಕೊಂಡಿದ್ದರು. ಮೈಸೂರು ವಿಶ್ವವಿದ್ಯಾಲಯ ಡಿಲಿಟ್ ಪದವಿ ನೀಡಲು ಮುಂದಾದಾಗ ನಿರಾಕರಿಸಿದರು.

ಇದೆಲ್ಲಾ ನೋಡಿದರೆ ಪೈ ಅವರು 'ಗುಹೇಶ್ವರ ಪ್ರಜ್ಞೆ'ಯ ವ್ಯಕ್ತಿತ್ವದವರೆನಿಸುತ್ತದೆ. ಕಾಸರಗೋಡು ಕೇರಳಕ್ಕೆ ಹೋದ ವಿಷಯದಲ್ಲಿ ಅವರು ತುಂಬಾ ಸಂಕಟಪಡುತ್ತಿದ್ದರು. ಕೊನೆಯ ವರೆಗೂ ತಮ್ಮ ಪೋಸ್ಟ್ ಕಾರ್ಡ್ ಮೇಲೆ ವಿಳಾಸ ಬರೆಯುವಾಗ ಮಂಜೇಶ್ವರದ ಮುಂದೆ ಕೇರಳ ರಾಜ್ಯಕ್ಕೆ ಬದಲು ಕರ್ನಾಟಕ ರಾಜ್ಯ ಅಥವಾ ಮೈಸೂರು ರಾಜ್ಯ ಎಂದೇ ಬರೆಯುತ್ತಿದ್ದರು.

ನಾನು ಕೊನೆಯುಸಿರು ಬಿಡುವುದು ಕರ್ನಾಟಕದಲ್ಲಿ ಹೊರತು, ಕೇರಳದ ಮಂಜೇಶ್ವರದಲ್ಲಿ ಅಲ್ಲವೆಂದು ಪ್ರವಾಸಕ್ಕೆ ಹೋಗಿದ್ದ ಸಂದರ್ಭದಲ್ಲಿ ವಿದ್ಯಾರ್ಥಿಗಳಾದ ನಮ್ಮ ಮುಂದೆಯೂ ನೊಂದು ನುಡಿದಿದ್ದರು. ಅದೇ ರೀತಿ ಮಂಗಳೂರಿನಲ್ಲಿ ಕೊನೆಯ ಉಸಿರೆಳೆದರು. ಹೀಗೆ ಪೈ ಅವರು ಭೌಗೋಳಿಕವಾಗಿ ಕೇರಳದಲ್ಲಿ ಇದ್ದರೂ, ಭಾವನಾತ್ಮಕವಾಗಿ ಕರ್ನಾಟಕದಲ್ಲಿದ್ದರು. ಅವರು ಹೇಳುತ್ತಿದ್ದರು - "ನನಗೆ ಇಬ್ಬರು ತಾಯಂದಿರು. ಕೊಂಕಣಿ ನನ್ನನ್ನು ಹೆತ್ತ ತಾಯಿ. ಕನ್ನಡ ನನ್ನ ಸಾಕು ತಾಯಿ. ಹೆತ್ತ ತಾಯಿಯ ಮೊಲೆಯಲ್ಲಿ ಹಾಲಿರಲಿಲ್ಲ. ಅದಕ್ಕೆ ಅವಳು ನನ್ನನ್ನು ಕನ್ನಡದ ಮೊರೆಯಲ್ಲಿ ಹಾಕಿದಳು. ಅವಳು ಅಳ್ತಿಯಿಂದ ನನಗೆ ಉಣ್ಣಿಸಿದಳು. ಅವಳ ಅಕ್ಕರೆಯ ಸಾಲವನ್ನು ನಾನು ಏಳೇಳು ಜನ್ಮದಲ್ಲೂ ತೆತ್ತು ತೀರಿಸಲಾರೆ." ಇಂಥ ಭಾವನೆಗಳನ್ನು ಹೊತ್ತ ಮಹಾಕವಿಯ, ಮಹಾಪುರುಷನ ಆಸೆ ನೆರವೇರಬೇಕಾಗಿತ್ತು. ಕಾಸರಗೋಡು ಹೋಗಲಿ, ಮಂಜೇಶ್ವರವಾದರೂ ಕರ್ನಾಟಕಕ್ಕೆ ಸೇರಿದ್ದರೆ ಅವರಿಗೆ ತುಂಬಾ ಸಂತೋಷವಾಗುತ್ತಿತ್ತು. ಕೇರಳ ಸರಕಾರ ಆ ಕೆಲಸವನ್ನಾದರೂ ಇಂದು ಮಾಡಲಿ ಎಂದು ಹಾರೈಸುತ್ತೇನೆ.

ಬೆಂಗಳೂರಿನ ಸುರಾನಾ ಕಾಲೇಜು ಹಮ್ಮಿಕೊಂಡಿದ್ದ "ಗೋವಿಂದ ಪೈ ಸಂಸ್ಕೃತಿಲೋಕ" ವಿಚಾರ ಸಂಕಿರಣದ ಉದ್ಘಾಟನ ಭಾಷಣ (೨೦೦೬).

ಆಕರ : ಮಾರ್ಗ ಸಂಪುಟ-೬

೧೨
ಕಳಲೆ ವೀರಶೈವ ಅರಸು ಮನೆತನ ವಿಚಾರ ಸಂಕಿರಣ : ಅಧ್ಯಕ್ಷತೆ

೧೯೯೪

ಪರಮಪೂಜ್ಯ ಜಗದ್ಗುರುಗಳಲ್ಲಿ ಭಕ್ತಿಪೂರ್ವಕವಾದ ಪ್ರಣಾಮಗಳನ್ನು ಸಲ್ಲಿಸಿ, ಪೂಜ್ಯರಾದ ಶ್ರೀ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳವರಲ್ಲಿ ಶರಣಾರ್ಥಿಗಳನ್ನು ಅರ್ಪಿಸುತ್ತಾ ಪ್ರಬಂಧಗಳನ್ನು ಮಂಡಿಸಿದ ವಿದ್ವಾಂಸ ಮಿತ್ರರೆ, ಮಹನೀಯರೆ, ಮಹಿಳೆಯರೆ,

ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯವರು ಕಳೆದ ಅನೇಕ ವರ್ಷಗಳಿಂದ ಉಪಯುಕ್ತವಾದ ಹಲವು ಕಾರ್ಯಕ್ರಮಗಳನ್ನು ನೆರವೇರಿಸುತ್ತಾ ಬಂದಿದ್ದಾರೆ. ಅವುಗಳಲ್ಲಿ ಇಂತಹ ವಿಚಾರ ಸಂಕಿರಣಗಳೂ ಸೇರಿವೆ. ಆದರೆ ಶ್ರೀಮಠದ ವಿಚಾರ ಸಂಕಿರಣದ ಪರಂಪರೆಯಲ್ಲಿ ಇದು ಒಂದು ಹೊಸ ಬಗೆಯ ವಿಚಾರ ಸಂಕಿರಣವಾಗಿದೆ. ವೀರಶೈವ ಮಠಗಳು ಸಾಮಾನ್ಯವಾಗಿ ತಾತ್ವಿಕ ಧಾರ್ಮಿಕ ಸಾಹಿತ್ಯಗಳ ಗೋಷ್ಠಿಗಳನ್ನು ಏರ್ಪಡಿಸುತ್ತಾ ಬಂದಿವೆ. ಆದರೆ ಶ್ರೀಮಠ ಇಲ್ಲಿ ಕಳಲೆ ಅರಸರ ಬಗ್ಗೆ ವಿಚಾರ ಸಂಕಿರಣವನ್ನು ಇಟ್ಟುಕೊಂಡಿರುವುದು ಚಾರಿತ್ರಿಕ ಸಾಹಿತ್ಯದತ್ತ ಇಟ್ಟ ಒಂದು ಹೊಸ ಹೆಜ್ಜೆ. ಮಠಗಳು ಕೇವಲ ಧಾರ್ಮಿಕ ರಕ್ಷಣೆಗೇ ಮೀಸಲಾಗಿರಲಿಲ್ಲ. ಹಿಂದಿನಿಂದಲೂ ಅವು ಸಾಮಾಜಿಕ ಸಂಸ್ಥೆಗಳ ತರಹ ಕಾರ್ಯ ನಿರ್ವಹಿಸುತ್ತಿದ್ದವು. ಸಮಾಜಕ್ಕೆ ಏನೇನು ಪೂರಕವಾಗಿದೆಯೋ ಆ ಎಲ್ಲಾ ಕ್ಷೇತ್ರಗಳಲ್ಲಿ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ–ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಮಠಗಳು ಮಹತ್ತರವಾದ ಪಾತ್ರವನ್ನು ನಿರ್ವಹಿಸಿವೆ; ನಿರ್ವಹಿಸುತ್ತಿವೆ. ನಾಗವರ್ಮನ ನಿಘಂಟಿನಲ್ಲಿ ಒಂದು ವಾಕ್ಯವಿದೆ. ಅದರ ಪ್ರಕಾರ 'ಯತಿಗಳು ಕಾಡಿನಲ್ಲಿ ನಿರ್ಮಿಸಿದ ಆಶ್ರಮಗಳಲ್ಲಿದ್ದರೆ, ವ್ರತಿಗಳು ಗ್ರಾಮ ಮತ್ತು ಮಠಗಳಲ್ಲಿದ್ದಾರೆ' ಎಂದು. ಮಠಾಧಿಪತಿಗಳಿಗೆ ಸಮಾಜದ ಜವಾಬ್ದಾರಿ ಬಹಳ ಇದೆ. ಆದ್ದರಿಂದ ರಾಜಕೀಯಕ್ಕೆ ಸಂಬಂಧಪಟ್ಟಂತಹ ಈ ಕಳಲೆ ಮನೆತನದ ವೀರಶೈವ ದಳವಾಯಿಗಳು ವಿಚಾರ ಸಂಕಿರಣವನ್ನು ಹಮ್ಮಿಕೊಂಡು ಶ್ರೀಮಠ ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ನಮ್ಮ ಧರ್ಮ ರಾಜಕೀಯವನ್ನು ರಾಜಕೀಯ ಪರಂಪರೆಯನ್ನು ಹೇಗೆ ತೆಗೆದುಕೊಂಡು, ಸಕ್ರಿಯವಾಗಿ ಅದರಲ್ಲಿ ಭಾಗವಹಿಸುತ್ತಿತ್ತೆನ್ನುವುದನ್ನು ನಮ್ಮ ಜನತೆಗೆ ತಿಳಿಸಿಕೊಡಬೇಕು. ಇತಿಹಾಸ ಕೇವಲ ಶೋಧನೆಗಾಗಿ ಅಲ್ಲ. ಅದು ಮುಂದಿನ ವ್ಯವಸ್ಥೆಯ ನಿರ್ಮಾಣಕ್ಕೆ ಮಾರ್ಗವಾಗುತ್ತದೆ. ಅನೇಕ ವಿಚಾರಗಳಲ್ಲಿ ಪ್ರಚೋದನೆ ಸಿಗುತ್ತದೆ. ಅದಕ್ಕಾಗಿಯೇ ಅಂಬೇಡ್ಕರ್ ಹೇಳುತ್ತಾರೆ, 'ಇತಿಹಾಸವನ್ನು ಮರೆತವರು ಇತಿಹಾವನ್ನು ಸೃಷ್ಟಿಸಲಾರರು' ಎಂದು.

ಈ ಕಳಲೆ ಮನೆತನದಲ್ಲಿ ವೀರಶೈವ ದಳವಾಯಿಗಳು ಇದ್ದರೆನ್ನುವುದನ್ನು ನಾವು ಇಲ್ಲಿಯವರೆಗೆ ಮರೆತಿದ್ದೆವು. ಈ ವಿಚಾರ ಸಂಕಿರಣ ಏರ್ಪಾಟಾದ ಮೇಲೆ ಈ ಮನೆತನದರು ವೀರಶೈವರು; ಇವರು ವೀರಶೈವ ಧರ್ಮಪ್ರಚಾರ ಮಾಡಿದ್ದಾರೆ; ಸಂಸ್ಕೃತಿಯನ್ನು ಉಳಿಸಿದ್ದಾರೆನ್ನುವುದು ಗೊತ್ತಾಗುತ್ತದೆ. ಈ ಸುತ್ತಮುತ್ತಲಿನ ವೀರಶೈವ ಧರ್ಮೀಯರಿಗೆ ಈ ವಿಚಾರ ತಿಳಿದಾಗ ಅವರಿಗೆ ಒಂದು ಅಭಿಮಾನ, ಸಂತೋಷವಾಗುವುದು ಸಹಜ. ಹೀಗಾಗಿ ಇದು ಒಂದು ಉಪಯುಕ್ತವಾದ ವಿಚಾರ ಸಂಕಿರಣವೆಂದು ನಾನು ಭಾವಿಸುತ್ತೇನೆ.

ವೀರಶೈವ ಅರಸರುಗಳ ಬಗ್ಗೆ ಒಂದು ಸಮಗ್ರವಾದ ಶೋಧನೆ ನಡೆಯಬೇಕು ಎನ್ನುವ ಒಂದು ಆಸೆ ನನಗೆ ಬಹಳ ದಿನಗಳಿಂದ ಇದೆ. ವೀರಶೈವರು ರಾಜರಾಗಿ ಎಲ್ಲಾ ವರ್ಗದವರ ಏಳಿಗೆಗೆ ಸಲ್ಲಿಸಿದ್ದ ಸೇವೆಯ ಬಗ್ಗೆ ತಿಳಿಯುವಂತಾಗಬೇಕು. ವೀರಶೈವಧರ್ಮ ೧೨ನೆಯ ಶತಮಾನವಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಯಿತು. ರಾಜಕೀಯ ವಿಚಾರದಲ್ಲಿ ವೀರಶೈವವು ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಂಡದ್ದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಹಾಗೂ ಕಲಚೂರ್ಯರ, ಹೊಯ್ಸಳರ ಯಾದವರ ವಿಜಯನಗರದವರ ಕಾಲಗಳಲ್ಲಿ. ಆಮೇಲೆ ಬಂದಂತಹ ಪಾಳೇಗಾರ ಮನೆತನಗಳಲ್ಲಿ ವೀರಶೈವಧರ್ಮದ ಪಾತ್ರ ಅಗಾಧವಾಗಿದೆ. ಇವುಗಳನ್ನು ನಾವು ಅನೇಕ ಆಕರಗಳಿಂದ ಶೋಧಿಸಿ ಅದಕ್ಕೆ ಫಲವತ್ತಾದಂತಹ ಐತಿಹಾಸಿಕ ಸ್ವರೂಪವನ್ನು ಕೊಡಬೇಕಾಗಿರುವುದು ಇಂದು ನಾವು ಮಾಡ ಬೇಕಾಗಿರುವ ಮುಖ್ಯವಾದ ಕೆಲಸವೆಂದು ನನ್ನ ಭಾವನೆ. ಯಾದವ ಮನೆತನದಲ್ಲಿ ರಾಮಚಂದ್ರ ಕೊನೆಯ ಅರಸು. ಆತ ವೀರಶೈವನಾಗಿದ್ದ ಎನ್ನುವ ವಿಚಾರ ನಮಗೆ ಕಾವ್ಯಗಳಲ್ಲಿ ಶಾಸನಗಳಲ್ಲಿ ಮತ್ತು ಶಿಲ್ಪಗಳಲ್ಲಿ ತಿಳಿದುಬರುತ್ತದೆ. 'ಶಿವತತ್ವ ಚಿಂತಾಮಣಿ'ಯೊಳಗೆ 'ತಾನೊಂದನುಂಡು ಜಂಗಮಕೊಂದನೀಯದಭಿಮಾನಿ ಯಾದವ ರಾಮಚಂದ್ರ' ಅಂತ ಯಾದವ ರಾಮಚಂದ್ರನ ಬಗ್ಗೆ ಬರ್ತದೆ. ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯ ಒಂದು ಹಳ್ಳಿಯಲ್ಲಿ ಯಾದವ ರಾಮಚಂದ್ರನ ಶಿಲ್ಪ ಸಿಕ್ಕಿದ್ದು, ಕೆಳಗೆ 'ಯಾದವ ರಾಮಚಂದ್ರರಾಯ' ಎಂದು ಬರೆದಿದೆ. ಕೈಯೊಳಗೆ ಇಷ್ಟಲಿಂಗವನ್ನು ಹಿಡಿದುಕೊಂಡಿರುವ ಶಿಲ್ಪ ಅದು. ಸಿದ್ಧರಾಮನ ಕುರಿತಂತೆ ಸುಮಾರು ಇಪ್ಪತ್ತೈದು, ಮೂವತ್ತು ಶಾಸನದೊಳಗೆ ಯಾದವ ಅರಸರು ಕೊಟ್ಟಿದ್ದ ದಾನಗಳ ವಿವರವಿದೆ. ಇವನ್ನೆಲ್ಲಾ ನೋಡಿದರೆ, ಹಿಂದೂಧರ್ಮದ ಒಂದೊಂದು ಮನೆತನದೊಳಗೂ ವೀರಶೈವದ ಪಾತ್ರವಿದ್ದದ್ದು ಕಾಣಿಸುತ್ತದೆ. ಏಕೆಂದರೆ ೧೨ನೆಯ ಶತಮಾನದಲ್ಲಿ ಸಂಖ್ಯೆಯ ದೃಷ್ಟಿಯಲ್ಲೇ ಆಗಲಿ, ಸತ್ವದ ದೃಷ್ಟಿಯಲ್ಲೇ ಆಗಲಿ ಈ ವೀರಶೈಧರ್ಮ ಬಹಳ ದೊಡ್ಡದಾಗಿತ್ತು. ಆ ಸಂದರ್ಭದಲ್ಲಿ ವೀರಶೈವರನ್ನು ಬಿಟ್ಟು ರಾಜ್ಯ ನಡೆಸುವುದು ಕಷ್ಟವಾಗುತ್ತಿತ್ತು ಮತ್ತು ಆ ಧರ್ಮದ ವಿಚಾರಗಳೂ ಅರ್ಥಪೂರ್ಣವಾಗಿದ್ದುದರಿಂದ ಹೆಚ್ಚಿನ ಸಂಖ್ಯೆಯ ಅರಸರುಗಳು ಈ ಧರ್ಮದ ಪರ ವಹಿಸಿದ್ದರೆಂದು ಹೇಳಬಹುದು. ಅದಕ್ಕಾಗಿ ನಾವು ನಮ್ಮ ರಾಜಕೀಯ ಜೀವನ ಎಷ್ಟು ಶ್ರೀಮಂತವಾಗಿತ್ತೆನ್ನುವುದನ್ನು ತಿಳಿಯುವ ಕಡೆಗೆ ಹೆಚ್ಚಿನ ದೃಷ್ಟಿಯನ್ನು ಕೊಡಬೇಕು, ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ ಇವುಗಳ ಕಡೆಗೂ ಗಮನ ಕೊಡುವುದರ ಜೊತೆಗೆ ನಮ್ಮ ಇತಿಹಾಸದ ಕಡೆಗೂ ಹೆಚ್ಚಿನ ಗಮನ ಕೊಡಬೇಕು. ಇದರ ಬಗ್ಗೆ ನಾವು ಗಮನ ಹರಿಸುವುದು ಹೆಚ್ಚು ಅವಶ್ಯಕವೂ ಹೌದು.

ವೀರಶೈವ ಮಠಗಳು ಕೇವಲ ಧರ್ಮ, ದೇವರುಗಳ ಚರ್ಚೆಯಲ್ಲಿ ಮುಳುಗಿಲ್ಲ. ಅವು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸಾಂಸ್ಕೃತಿಕವಾಗಿ ಕೆಲಸ ಮಾಡುತ್ತಿವೆ. ಅಂದರೆ ಬೇರೆ ಮಠಗಳಿಗಿಂತ

ವೀರಶೈವ ಮಠಗಳು ಎಲ್ಲಾ ಕ್ಷೇತ್ರಗಳಲ್ಲೂ ವಿಸ್ತಾರತೆಯನ್ನು ಪಡೆದುಕೊಂಡಿವೆ. ಇತ್ತೀಚೆಗಂತೂ ವೀರಶೈವ ಮಠಗಳು ದಾಸೋಹಕ್ಕೆ ಕೊಟ್ಟಿರುವ ಕೊಡುಗೆ ಬಹಳ ದೊಡ್ಡದು. ಸಾಹಿತ್ಯ ಕ್ಷೇತ್ರಕ್ಕಂತೂ ಈ ಮಠಗಳ ಕೊಡುಗೆ ಇನ್ನೂ ದೊಡ್ಡದು. ಒಂದು ಅಂದಾಜಿನ ಪ್ರಕಾರ ವೀರಶೈವ ಮಠಗಳು ಒಂದು ವರ್ಷಕ್ಕೆ ಸಾಹಿತ್ಯ ಪ್ರಕಟಣೆಗೋಸ್ಕರವಾಗಿ ಸುಮಾರು ಐದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿವೆ. ಈ ವಿಚಾರ ಸಂಕಿರಣದ ಒಂದು ಅಂಶವೆಂದರೆ, ಹೊಸ ಇತಿಹಾಸವನ್ನು ಬರೆಯೋದು ಎಷ್ಟು ಅವಶ್ಯಕವೊ ಬರೆದಂತಹ ಇತಿಹಾಸವನ್ನು ತಿದ್ದುಪಡಿಮಾಡುವುದು ಅಷ್ಟೇ ಅವಶ್ಯ. ಏಕೆಂದರೆ ಬ್ರಿಟಿಷರೂ ಅವರ ನಂತರ ಬಂದಂತಹ ವಿದೇಶಿ ಸಾಹಿತಿಗಳು ಒಂದು ವಿರುದ್ಧ ವಾದಂತಹ ಮನೋಭಾವದವರಾಗಿದ್ದರು. ಹೀಗಾಗಿ ನಮ್ಮ ಇತಿಹಾಸವನ್ನು ಬರೆದರು. ಆದರೆ ಇವತ್ತು ಆಧುನಿಕ ವಿಚಾರವನ್ನು ತುಂಬಿಕೊಂಡಂತಹ ವಿದ್ವಾಂಸರು ಮುಂದೆ ಬಂದು ಹಳೇ ಇತಿಹಾಸದ ತಪ್ಪುಗಳನ್ನು ಶೋಧಿಸಿ ಹೊಸದಾಗಿ ಬರೆಯೋದಕ್ಕೆ ತೊಡಗಬೇಕಾಗಿದೆ. ಆಗ ಮಾತ್ರ ನಿಜವಾದ ಇತಿಹಾಸ ನಮಗೆ ದೊರೆಯುವುದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಈ ಕೆಳದಿಯ ಅರಸರ ಲಾಂಛನದ ಬಗ್ಗೆ ಬಹುಶಃ ಶಿವಮೊಗ್ಗದಲ್ಲಿ ಇತ್ತೀಚೆಗೆ ನಡೆದ ವಿಚಾರ ಸಂಕಿರಣದಲ್ಲಿ ಚರ್ಚೆ ಆಗಿರಬೇಕು. ಆದರೆ ಬೇರೆ ಕೆಲಸ ಇದ್ದುದರಿಂದ ನಾನು ಹೋಗಲಾಗಲಿಲ್ಲ. ಕೆಲವು ವಿದ್ವಾಂಸರು ಕೆಳದಿಯ ಅರಸರ ಲಾಂಛನ ಗಂಡಭೇರುಂಡವೆಂದು ಹೇಳುತ್ತಾರೆ. ಆದರೆ ಕೆಳದಿಯ ವೀರಶೈವರು ಅಪ್ಪಟ ವೀರಶೈವರಾಗಿದ್ದರು. ಆದ್ದರಿಂದ ಗಂಡಭೇರುಂಡವನ್ನು ತಮ್ಮ ರಾಜ್ಯದ ಲಾಂಛನವನ್ನಾಗಿ ಹೇಗೆ ಮಾಡಿಕೊಂಡರು? ಇದನ್ನ ಬಿಟ್ಟರೆ ಮತ್ತೆ ಯಾವುದಾದರೂ ಇದ್ದಿರಬಹುದೆನ್ನುವ ಸಂದೇಹ ನಮಗೆ ಮೂಡುತ್ತದೆ. ಈ ಪ್ರಶ್ನೆಯನ್ನು ಹಾಕಿದಾಗ ಮೊನ್ನೆ ಒಬ್ಬರು ಅಂದರು, ಇಲ್ಲ ಅವರ ತಾಮ್ರಪಟಗಳ ಮೇಲೆ, ಶಿಲಾಶಾಸನಗಳ ಮೇಲೆ ನಂದಿಯ ಚಿತ್ರಗಳಿವೆಯಾದ್ದರಿಂದ ನಂದಿ ಅವರ ಲಾಂಛನವಾಗಿದ್ದಿರಬೇಕು ಎಂದು.

ಅದು ಆಗಿರುವುದೂ ಸಾಧ್ಯ. ಏಕೆಂದರೆ ಶಿವಪರವಾದ ಮತದ ಲಾಂಛನ ನಂದಿ. ಅಲ್ಲಿಯ ಮೊದಲನೆಯ ಅರಸರ ಒಂದು ವಿಷಯದಲ್ಲಿ 'ಸದಾಶಿವ ಮುದ್ರಾಂಕಿತ'ವೆಂದು ಬರುತ್ತದೆ. ಅಂದರೆ ಸದಾಶಿವನ ಮುದ್ರೆಯನ್ನು ಅಂಕಿತವನ್ನಾಗಿ ಮಾಡಿಕೊಂಡವನು ಎನ್ನುವ ಅರ್ಥ 'ಸದಾಶಿವ' ಅವರ ಒಂದು ಲಾಂಛನವಾಗಿದ್ದುದರ ಸಾಧ್ಯತೆ ಇದೆ. ಆದುದರಿಂದ ಹೊಸ ವಿಚಾರ ಮಾಡಲು ಪ್ರಯತ್ನಿಸಬೇಕು. ಇತಿಹಾಸವನ್ನು ಮತ್ತೆ ಕಾಲಕಾಲಕ್ಕೆ ಬರೆಯಬೇಕಾಗುವುದರಿಂದ ನಾವು ಅಂತಹ ಕೆಲಸವನ್ನು ಮಾಡಬೇಕಾಗಿದೆ. ಆದರೆ ಒಂದು ಮಾತು, ವಿಜಯನರದ ವರೆವಿಗೂ ನಮಗೆ ಕೇವಲ ಕನ್ನಡ ಮತ್ತು ಸಂಸ್ಕೃತದಲ್ಲಿರುವ ಶಾಸನ ಮತ್ತು ಕಾವ್ಯಗಳು ಆಧಾರವಾಗಿದ್ದವು. ವಿಜಯನಗರದ ತರುವಾಯ ನಮಗೆ ಮರಾಠೀ, ಉರ್ದು, ಪರ್ಶಿಯನ್, ಫ್ರೆಂಚ್, ಪೋರ್ಚುಗೀಸ್ ಹೀಗೆ ಅನೇಕ ಭಾಷೆಗಳಲ್ಲಿ ಜೊತೆಗೆ ಇಂಗ್ಲಿಷ್‌ನಲ್ಲಿಯೂ ನಮಗೆ ಆಕರಗಳು ಸಿಕ್ಕುವುದರಿಂದ ನಮಗೆ ಈಚೆಗೆ ಸರಿಯಾದ ಇತಿಹಾಸ ದೊರೆಯಲು ಸಾಧ್ಯತೆ ಇದೆ. ಆ ರೀತಿ ಮಾಡಿದಾಗ ಮಾತ್ರ ದಳವಾಯಿಗಳ ಸಂಪೂರ್ಣವಾದ ಇತಿಹಾಸವನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ.

ಈಗ ಇಲ್ಲಿ ಒಂದು ಮಾತು ಪದೇ ಪದೇ ಕೇಳಿಬರ್ತಾ ಇದೆ; ಕಳಲೆ ಮನೆತನದ ವೀರಶೈವ ದಳವಾಯಿಗಳು ಅಂತ ಮಾತ್ರ ಹೇಳತೀರಿ. ಆದರೆ ವೀರಶೈವ ಎನ್ನುವುದಕ್ಕೆ ಹೆಚ್ಚು ಒತ್ತು

ಕೊಡುತ್ತಿಲ್ಲವೆಂದು. ಈಗ ಒಂದು ವಿಷಯ ನನಗೆ ಖಚಿತವಾಗಿದೆ. ಈ ದಳವಾಯಿಗಳು ಮೂಲತಃ ವೀರಶೈವರಲ್ಲ. ಹಾಗೆ ನೋಡಿದರೆ, ಈ ಧರ್ಮ ೧೨ನೆಯ ಶತಮಾನದ ಈಚೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯಿತು. ಆಗ ಅನೇಕರು ಈ ಧರ್ಮಕ್ಕೆ ಸೇರಿದರು. ಹಾಗಾದರೆ ಈ ದಳವಾಯಿಗಳು ಮೂಲತಃ ಯಾರಾಗಿದ್ದರು ಅಂದರೆ ಬೇಡರಿರಬಹುದೇ? ಬಹಶಃ ಇರಬಹುದು. ಏಕೆಂದರೆ ಇವತ್ತಿಗೂ ಕಳೆಲೆಯ ಒಳಗೆ ಬೇಡರ ಸಂಖ್ಯೆ ಹೆಚ್ಚಾಗಿದೆ ಅಂತ ಕೇಳಿದ್ದೇನೆ. ಎರಡನೆಯದಾಗಿ, ಅವರ ಬಿರುದುಗಳಲ್ಲಿ, ವೈಷ್ಣವ ಪರವಾದಂತಹ ಪದಗಳ ಬಳಕೆ ಹೆಚ್ಚಾಗಿದೆ. ಬೇಡರು ಮೂಲತಃ ತಿರುಪತಿಯ ಒಕ್ಕಲು. ಹೀಗಾಗಿ ಅವರ ಬಿರುದುಗಳಲ್ಲೂ ಕೂಡ ವೈಷ್ಣವ ಪರವಾದ ಪದಗಳು ಹೆಚ್ಚಿನ ಸಂಖ್ಯೆಯಲ್ಲಿ ಇರಲು ಇದೇ ಕಾರಣ. ಈಗ ಪೂಜ್ಯ ಸ್ವಾಮೀಜಿಯವರು ಮತ್ತು ತಾರಾನಾಥ ಅವರು ಮಂಡಿಸಿದ ಪ್ರಬಂಧದೊಳಗೆ ತೆಲಗು ಭಾಷೆಯಲ್ಲೂ ಪರಿಣಿತರಾಗಿದ್ದರೆಂದು ತಿಳಿಯಿತು. ಈ ತೆಲಗು ಭಾಷೆ ಸ್ವಲ್ಪಬೇಡರಿಗೆ ಬರುತ್ತದೆ. ಬೇಡರು ಮೂಲತಃ ತಿರುಪತಿ ಒಕ್ಕಲಾಗಿದ್ದುದರಿಂದ ವಿಜಯನಗರ ಸಾಮ್ರಾಜ್ಯಕ್ಕೆ ಬಂದರು. ಆ ಕಾರಣದಿಂದ ಈ ದಳವಾಯಿಗಳು ಮೂಲತಃ ಬೇಡರವರಾಗಿದ್ದು, ನಂತರ ವೀರಶೈವಧರ್ಮದ ನೈಜತತ್ವಗಳಿಂದ ಆಕರ್ಷಿತರಾಗಿ ಆ ಧರ್ಮಕ್ಕೆ ಸೇರಿರಬೇಕು. ಹರಪನಹಳ್ಳಿ ಬಸವಪ್ಪರಾಯರು ಕೂಡ ಬೇಡರೇ, ಅವರು ನಂತರ ವೀರಶೈವಧರ್ಮಕೆ ಸೇರಿದರು. ಹೀಗೆ ಅನೇಕ ಅರಸರು. ನಾಯಕರುಗಳು ವೀರಶೈವಧರ್ಮಕ್ಕೆ ಸೇರಿದ ದಾಖಲೆಗಳಿವೆ. ಹರಪನಹಳ್ಳಿ ಬಸವಪ್ಪ ನಾಯಕ ಚೀಲಾಳಸ್ವಾಮಿಗಳ ಶಿಷ್ಯ. ಶರಣಸತಿ ಲಿಂಗಪತಿ ಅನ್ನುವ ಭಾವನೆಯುಳ್ಳ ಆತ ಕೈಗಳಿಗೆ ಬಳೆ ತೊಟ್ಟು ಲಿಂಗಪೂಜೆಯನ್ನು ಮಾಡುತ್ತಿದ್ದನಂತೆ. ಉತ್ತರ ಕರ್ನಾಟಕದಲ್ಲಿ ನಾಯಕ ಮತ್ತು ಸರನಾಯಕ ಅನ್ನೋ ವೀರಶೈವರು ಇದ್ದಾರಲ್ಲ ಅವರೆಲ್ಲ ಮೂಲತಃ ಬೇಡರೆ. ಹೀಗಾಗಿ ಈ ಕೆಳವರ್ಗದ ಜನಾಂಗ ಮೇಲುವರ್ಗಕ್ಕೆ ಬರಬೇಕೆಂದರೆ ಈ ನಾಡಿನಲ್ಲಿ ವೀರಶೈವಧರ್ಮ ಮುಕ್ತ ಉಳಿದ ಧರ್ಮಗಳು ಇನ್ನೊಬ್ಬರು ಬಂದರೆ ಕರೆದುಕೊಳ್ಳುವುದಿಲ್ಲ. ಆದ್ದರಿಂದ ಈ ನಾಡಿನಲ್ಲಿ ವೀರಶೈವಧರ್ಮ ಒಂದು ಮುಕ್ತ ಧರ್ಮ. ಹೀಗಾಗಿ ಕೆಳವರ್ಗದ ಬಲಿಷ್ಠ ಅರಸರುಗಳು ಮೇಲು ವರ್ಗಕ್ಕೆ ಬರಬೇಕು ಅಂದಾಗ ಈ ಬೇಡರು, ಗೌಡರು ಕುರುಬರು ಇವರೆಲ್ಲ ವೀರಶೈವರಾದರು. ಕೆಳದಿ ಅರಸರು ಮೂಲತಃ ಗೌಡರಿರುವ ಕುರುಬರು. ಇವರೆಲ್ಲ ತಮ್ಮ ಸಾಮಾಜಿಕ ಹಾಗೂ ಧಾರ್ಮಿಕ ಪ್ರತಿಷ್ಠೆ ಮತ್ತು ಈ ದಳವಾಯಿಗಳೂ ಸಹ ವೀರಶೈವಧರ್ಮಕ್ಕೆ ಬಂದವರು. ಕಳಲೆ ಅರಸರು ವೀರಶೈವಧರ್ಮಕ್ಕೆ ಬರಬೇಕಾದರೆ ಈ ಧರ್ಮದ ಆಗಿನ ಚಟುವಟಿಕೆ ಏನಿತ್ತೆಂದು ನಾವು ನೋಡಬೇಕಾಗುತ್ತದೆ. ತುಮಕೂರು ಜಿಲ್ಲೆಯ ಗುಬ್ಬಿ ಬಹಳ ದೊಡ್ಡವೀರಶೈವ ಕೇಂದ್ರ. ಆ ಸಂದರ್ಭದಲ್ಲಿ ವೀರಶೈವ ರಾಯಭಾರಿಗಳೆಂದರೆ ಕಲ್ಯಾಣ, ಹಂಪೆ ಹಾಗೂ ಗುಬ್ಬಿ ಕಲ್ಯಾಣ ಶರಣರ ಸಂಪ್ರದಾಯದ ರಾಯಭಾರಿಗಳು. ಹಂಪೆ ವಿರಕ್ತ ಸಂಪ್ರದಾಯದ ರಾಯಭಾರಿ. ಗುಬ್ಬಿ ಆರಾಧ್ಯ ಸಂಪ್ರದಾಯದ ರಾಯಭಾರಿ, ವೀರಶೈವದೊಳಗೆ ಮತ್ತೆ ವೀರಶೈವಗಳು, ಇವೆ. ಹೀಗಾಗಿ ಗುಬ್ಬಿ, ಗುಮ್ಮಳಾಪುರ ಭಾಗಗಳಲ್ಲಿ ವೀರಶೈವ ಚಟುವಟಿಕೆಗಳು ಹೆಚ್ಚಾಗಿದ್ದವು. ನಾವು ಕರಸ್ಥಳದ ನಾಗಿದೇವ, ಕರಸ್ಥಳದ ವೀರಣ್ಣ, ಕರಸ್ಥಳ, ಉರಸ್ಥಳವೆಂದರೆ ಲಿಂಗಗಳನ್ನು ಕರದಲ್ಲಿ ಮತ್ತೆ ಉರದಲ್ಲಿ ಧರಿಸಿದವರೆಂದಲ್ಲ ಹಾಗೆಂದರೆ.ಕೆ.ಆರ್.ನಗರದ ಹತ್ತಿರದ ಕರತಾಳಿನವರು. ಕರತಾಳು ಹೋಗಿ ಕರಸ್ಥಳ ಆಗಿಬಿಟ್ಟಿದೆ. ಈ ಕಡೆ ಆಗ ವೀರಶೈವಧರ್ಮ ಪ್ರಬಲವಾಗಿದ್ದರಿಂದ ಈ ದಳವಾಯಿಗಳು

ಸಹ ಈ ಧರ್ಮಕ್ಕೆ ಸೇರಿರುವ ಸಾಧ್ಯತೆ ಇದೆ. ನಾವು ಈ ವಿಷಯವಾಗಿ ಹೆಚ್ಚು ಗಮನವನ್ನು ಕೊಡಬೇಕಾಗಿದೆ.

ಈ ವೇದಿಕೆಯಲ್ಲಿ ಉಪಸ್ಥಿತರಿದ್ದು ನಾಲ್ಕು ಪ್ರಬಂಧಗಳನ್ನು ಮಂಡಿಸಿದ ನಾಲ್ವರು ವಿದ್ವಾಂಸರ ಪ್ರಬಂಧಗಳು ಉತ್ತಮವಾದವುಗಳು. ಆದರೆ ಒಂದು ಮಾತು ಇಲ್ಲಿ ಗಮನಿಸಬೇಕಾದದ್ದು. ಕಲಚೂರಿ ನಂಜರಾಜ ಬರುವವರೆಗೂ ಈ ಭಾಗದಲ್ಲಿ ಮೇಲುಕೋಟೆ ಮತ್ತು ಶ್ರೀರಂಗಪಟ್ಟಣ ಧಾರ್ಮಿಕ ಚಟುವಟಿಕೆಯ ಕೇಂದ್ರಗಳಾಗಿದ್ದರೆ, ನಂಜರಾಜ ಬಂದ ಕಾಲಕ್ಕೆ ನಂಜನಗೂಡು ಧಾರ್ಮಿಕ ಕೇಂದ್ರವಾಯಿತೆಂದು ಕಾಣಿಸ್ತದೆ. ಮೇಲುಕೋಟೆ ಮತ್ತು ಶ್ರೀರಂಗಪಟ್ಟಣ ಶ್ರೀವೈಷ್ಣವ ಪರಂಪರೆಗೆ ನೆಲೆಯಾದರೆ, ನಂಜನಗೂಡು ವೀರಶೈವರ ನೆಲೆಯಾಗಿತ್ತು ಅಂತ ಅನ್ನಿಸ್ತದೆ. ಏಕೆಂದರೆ ನಂಜನಗೂಡಿನ ದೇವಸ್ಥಾನದ ೬೩ ಪುರಾತನರ ವಿಗ್ರಹಗಳನ್ನು ನಂಜರಾಜ ಸ್ಥಾಪಿಸಿದ್ದಾನೆ. ಚಿಕ್ಕದೇವರಾಯರ ಕಾಲದಲ್ಲಿ ತಿರುಮಲಾರ್ಯ, ಚಿಕ್ಕುಪಾಧ್ಯಾಯ ಮೊದಲಾದವರು ಮೈಸೂರು ಅರಸರಾದರೂ ಕೆಳವರ್ಗದಿಂದ ಬಂದವರು. ನಂಜರಾಜನ ಕಾಲದಲ್ಲಿ ಶ್ರೀ ವೈಷ್ಣವಕ್ಕೆ ಸಮಾನಾಂತರವಾದ ಪ್ರವಾಹ ನಂಜನಗೂಡಿನಲ್ಲಿ ಹರಿಯಿತು ಅಂತ ಅನ್ನಬಹುದು. ಈ ಹಿನ್ನೆಲೆಯಲ್ಲಿ ದೊರಕಿದ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು ಮಿತ್ರ ತಾರಾನಾಥ ಅವರು ಪ್ರಬಂಧವನ್ನು ಮಂಡಿಸಿದ್ದಾರೆ. ಮೊದಲನೇ ಘಟ್ಟದಲ್ಲಿ ಶ್ರೀವೈಷ್ಣವ ಪರವಾದ ಕೃತಿಗಳು ಬಂದವು. ಎರಡನೇ ಘಟ್ಟದಲ್ಲಿ ವೀರಶೈವ ಪರವಾದ ಕೃತಿಗಳು ಬಂದವು. ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ ನಂಜರಾಜರ 'ನಂಜರಾಜ ವಾಣಿವಿಳಾಸ' ವೆಂಬ ಹಸ್ತಪ್ರತಿ ನೋಡುವುದಕ್ಕೆ ಸಿಕ್ಕಿತ್ತು. ಬಹಳ ಸುಂದರವಾದಂತಹ ಹಸ್ತಪ್ರತಿ, ನಾಲ್ಕು ಇಂಚು ಅಗಲ ಇರುವಂತಹ ಪುಟ್ಟ ಕೃತಿ ಅದು. ಇಲ್ಲಿ ಪ್ರಬಂಧ ಮಂಡಿಸಿದ ಪೂಜ್ಯ ಕುಂದೂರಮಠ ಸ್ವಾಮಿಜೀಯವರು ಸಂಸ್ಕೃತದ ಬಗ್ಗೆ ಅದ್ಭುತವಾದ ಒಂದು ಬಾಗಿಲನ್ನೆ ತೆರೆದಿದ್ದಾರೆ. ಕಳಲೆಯವರ ಸಂಸ್ಕೃತ ಸಾಹಿತ್ಯ ಇಷ್ಟು ವಿಪುಲವಾಗಿದೆಯೆಂದು ನನಗೆ ಗೊತ್ತಿರಲಿಲ್ಲ. ಹೀಗಾಗಿ ಸ್ವಾಮೀಜಿಯವರ ಪ್ರಬಂಧದಿಂದ ನಮ್ಮಗಳಿಗೆ ಹೆಚ್ಚಿನ ಲಾಭವಾಗಿದೆಯೆಂದು ಹೇಳಬಯಸುತ್ತೇನೆ. ಮೂರನೆಯದಾಗಿ ಮಿತ್ರರಾದ ಡಿ.ಕೆ. ರಾಜೇಂದ್ರ ಅವರು ಜನಪದ ಸಾಹಿತ್ಯವನ್ನು ಕುರಿತು ಮಾತನಾಡುತ್ತಾ, ಕಳಲೆ ಅರಸರ ಬಗ್ಗೆ ಲಾವಣಿಗಳಾಗಲಿ, ಕನ್ನಡ ಗೀತೆಗಳಾಗಲಿ ಸಿಕ್ಕಿಲ್ಲ ಎಂದು ಹೇಳುತ್ತ ಸಿಕ್ಕಿದಂತಹ ಐತಿಹಾಸಿಕ ಐತಿಹ್ಯಗಳನ್ನು ಕುರಿತು ಕೆಲವು ಮಾತುಗಳನ್ನು ಅವರು ಆಡಿದ್ದಾರೆ.

ಮಿತ್ರರಾದ ಮುದ್ದಾಚಾರಿಯವರು ಹೇಳಿದ ಹಾಗೆ, ಜನಪದ ಸಾಹಿತ್ಯವನ್ನು ಇನ್ನು ಮೇಲೆ ಇತಿಹಾಸಕ್ಕೆ ಬಳಸುವುದು ಬಹಳ ಅವಶ್ಯಕವಾಗಿದೆ. ಲಿಖಿತ ಸಾಹಿತ್ಯದ ಜೊತೆಗೆ ಜನಪದ ಸಾಹಿತ್ಯವನ್ನು ಬಳಸಿಕೊಳ್ಳಬೇಕು. ಏಕೆಂದರೆ ಭಾರತ ನಿರಕ್ಷರಿಗಳ ನಾಡು. ನೂರಕ್ಕೆ ಒಬ್ಬರೋ ಇಬ್ಬರೋ ಓದು ಬಲ್ಲವರಾಗಿದ್ದರೆ. ಇನ್ನು ತೊಂಬತ್ತೆಂಟು ಭಾಗ ಇತಿಹಾಸವನ್ನು ಬಾಯಿಯಲ್ಲಿ ಇಟ್ಟುಕೊಂಡು ಬಂದಿದ್ದಾರೆ. ನಿರಕ್ಷರಿಗಳದೆಂದು ಇದನ್ನು ಬಿಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಸರಿಯಾದ ರೀತಿಯಲ್ಲಿ ಶೋಧಿಸಿ ಬಳಸಿಕೊಳ್ಳಬೇಕು. ಉದಾಹರಣೆಗೆ: ನಾನು ಕೆಲವು ವರ್ಷಗಳ ಹಿಂದೆ ಒಂದು ಜನಪದ ಕಾವ್ಯವನ್ನು ನೋಡಿದೆ. "ಗಂಗೆ ಗೌರಿ ಸಂವಾದ" ಎಂದು ಅದರ ಹೆಸರು. ಅದರಲ್ಲಿ ಕೊನೆಗೆ ಏನು ಬಂತು ಅಂದರೆ "ಹಂಡೆ ಮಲಕ ನೋಡಯ್ಯ ಉಂಡ ಮನೆಯ ಜಂತಿಯ ಎಣಿಸಲ್ಲ" ಅಂತ ಬರುತ್ತದೆ. ನನಗೆ ಅದನ್ನು ಓದಿದಾಗ ಒಂದು ವಿಚಾರ ಫ್ಲ್ಯಾಷ್ ಆಯಿತು. ಆಮೇಲೆ ಮುನ್ನುಡಿಯಲ್ಲಿ

ಏನಾದರೂ ಅರ್ಥ ಇದೆಯೇ "ಹಂಡೆಯ ಮಲಕ ನೋಡಯ್ಯ" ಅನ್ನೋದಕ್ಕೆ ಅರ್ಥ ಹುಡುಕಿದಾಗ, ಅಲ್ಲಿ ಏನೂ ಬರೆದಿರಲಿಲ್ಲ. ಟಿಪ್ಪಣೀನೂ ಬರೆದಿರಲಿಲ್ಲ. ಕೊನೆಗೆ ಕಠಿಣ ಪದಕೋಶವನ್ನು ತೆಗೆದುಕೊಂಡು ನೋಡಿದೆ. ಹಂಡೆ ಮಲಕ ಅಂದರೆ ಹಂಡೆಯ ಗಂಟು ಅಂತ ಅವರು ಬರೆದಿದ್ದರು. ಆವಾಗ ನಾನು ಅಂದುಕೊಂಡೆ. ಅವರಿಗೆ ಇತಿಹಾಸ ಪ್ರಜ್ಞೆ ಇಲ್ಲ ಅಂತ. ಇತಿಹಾಸ ಪ್ರಜ್ಞೆ ಇಲ್ಲದವರಾರೋ ಆ ಕಠಿಣ ಪದಕೋಶಗಳನ್ನು ಸಂಪಾದನೆ ಮಾಡಿದ್ದಾನೆ. ಹಂಡೆಯ ಮಲಕನಾಯಕ ಅಂತ ಅನ್ನುವವ ಅನಂತಪುರದ ಅರಸು. ಹಂಡೆ ಮಲಕನ ಒಡೆಯ ಅಂತ ಅಂದರೆ ಶಿವ. ಅನಂತಪುರದವರು ಶಿವಭಕ್ತರು. ಹಂಡೆಯ ಮಲಕನ ಒಡೆಯ ಅಂದರೆ ಶಿವ. ಉಂಡ ಮನೆಯ ಜಂತಿ ಎಣಿಸೋದು ಇದನ್ನು ಗೌರಿ ಹೇಳುತ್ತಾಳೆ. ಶಿವ ನದೀತೀರಕ್ಕೆಳೆ ಹೋಗಿ ಗಂಗೆಯನ್ನು ಪ್ರೀತಿ ಮಾಡಿ ಕರೆದುಕೊಂಡು ಬರ್ತಾನೆ, ಆ ಸುದ್ದಿಯನ್ನು ನಾರದ ಬಂದು ಗೌರಿಗೆ ಹೇಳ್ತಾನೆ. ಗೌರಿ ಹೇಳ್ತಾಳ; ನನ್ನ ಗಂಡ ನನಗೆ ದ್ರೋಹ ಬಯಸೋದಿಲ್ಲ. ಹಂಡೆಮಲಕನೊಡೆಯ ಉಂಡ ಮನೆ ಜಂತಿ ಎಣಿಸಲ್ಲ ಅಂತ ಅಲ್ಲಿ ಗೌರಿ ಆ ಮಾತನ್ನು ಹೇಳುತ್ತಾಳೆ. ಈ ಗಂಗೆ ಗೌರಿ ಸಂವಾದ ಗ್ರಂಥದ ಕರ್ತೃಗಳು ಅನಂತಪುರದ ಹಂಡೆಮಲಕನಾಯಕನ ವಂಶದವರು. ಈ ವಿಚಾರ ಕಠಿಣ ಶಬ್ದಕೋಶದ ಸಂಪಾದಕರಿಗೆ ಗೊತ್ತಿದ್ದರೆ, ಸರಿಯಾಗಿರುತ್ತಿತ್ತು ಅವರಿಗಾಗಲಿ, ಮುನ್ನುಡಿ ಬರೆದವರಿಗಾಗಲಿ ತಿಳೀದೆ ಇರೋದ್ರಿಂದ ಅದು ಹಂಡೆಯ ಗಂಟಾಗಿದೆ. ಹೀಗೆ ಜನಪದ ಸಾಹಿತ್ಯದಿಂದ ಇತಿಹಾಸವನ್ನು ಸುಲಭವಾಗಿ ಸಂಪಾದಿಸಬಹುದು. ಈ ವಿಷಯದಲ್ಲಿ ಮಿತ್ರರು ತುಂಬಾ ಚೆನ್ನಾಗಿ ಕೆಲಸ ಮಾಡಿ ಒಳ್ಳೆಯ ಪ್ರಬಂಧವನ್ನು ಬರೆದಿದ್ದಾರೆ. ಮತ್ತೆ ದೇವರಾಜ ಅವರು ಕಳಲೆಯ ದೇವಾಲಯಗಳ ಮತ್ತು ಸ್ಥಳದ ಬಗ್ಗೆ ಎರಡು ಮಾತುಗಳನನು ಆಡಿದ್ದಾರೆ. ಕಳಲೆ ಅರಸರ ಸ್ಮಾರಕಗಳು ಈಗ ನಾವು ಯೋಚಿಸಿದಾಗ ಎಲ್ಲ ಸ್ಮಾರಕಗಳಂತೆ ಉತ್ಕೃಷ್ಟವಾದ ಕಲೆಯಾಗಿ ಬೆಳೆದು ಬಂದಿತು. ಆದರೆ ಹೊಯ್ಸಳರ ತರುವಾಯ ಕಲೆ ಕುಂಠಿತವಾಯಿತು. ಇತ್ತ ವಿಜಯ ನಗರದ ಕಾಲಕ್ಕೆ ಬಂದರೆ ಬಹಳ ಭವ್ಯವಾದಂತಹ ದೊಡ್ಡ ದೊಡ್ಡ ಕಟ್ಟಡಗಳು ಬಂದವು. ಆದರೆ ಸೃಜನಶೀಲತೆ ಆಕಟ್ಟಡಗಳಲ್ಲಿ ಇಲ್ಲ. ಒಂದು ರೀತಿ ಅಸಡ್ಡಾಲ ಅಂತಾರಲ್ಲಾ ಆ ರೀತಿ ಇದೆಯೇ ವಿನಃ ಸೃಜನಶೀಲ ಅಂತಾರಲ್ಲ, ಆ ಕ್ರಿಯೇಟಿವಿಟಿ ಕಂಡುಬರೋದಿಲ್ಲ. ಇದು ವಿಜಯನಗರ ಕಾಲಕ್ಕೆ ಆದಂತಹ ಒಂದು ದೊಡ್ಡ ಬದಲಾವಣೆ. ವಿಜಯನಗರದ ದೇವಾಲಯಗಳ ಪಡಿಯಚ್ಚಾಗಿ ಮೈಸೂರಿನ ಅರಮನೆಯ ಒಳಗಿರುವ ದೇವಾಲಯಗಳು ಕೆಲವು ಇವೆ. ಬಾದಾಮಿ ಶಿಲ್ಪ. ಆಮೇಲೆ ಬೇಲೂರ, ಹಳೇಬಿಡುಗಳ ಶಿಲ್ಪವನ್ನು ನೋಡಿರುವಂತಹವರಿಗೆ ಈ ಅರಮನೆಯ ಶಿಲ್ಪವನ್ನು ನೋಡಿದಾಗ ಅಂತಹ ಪ್ರಭಾವವೇನು ಬೀರುವುದಿಲ್ಲ. ಇವುಗಳಲ್ಲಿ ಸುಮ್ಮನೆ ಒಂದು ರೀತಿ ರಚನೆಯಿದೆಯೇ ವಿನಃ ಸೃಷ್ಟಿ ಇಲ್ಲ. ರಚನೆ ಬೇರೆ, ಸೃಷ್ಟಿ ಬೇರೆ. ಮತ್ತೆ ಕೆಲವು ಕಾವ್ಯಗಳಲ್ಲಿ ಅನೇಕ ಕಟ್ಟಡಗಳ ವಿವರಗಳು ಬಂದು ಇವು ದೇವಾಲಯ ಕಟ್ಟಿಸಿದ, ಕೋಟೆ ಕಟ್ಟಿಸಿದ, ಕೆರೆ ಕಟ್ಟಿಸಿದ, ಗೋಪುರ ಕಟ್ಟಿಸಿದ ಇತ್ಯಾದಿ ಎಂದು ಹೇಳಿ ಕಾವ್ಯಗಳಲ್ಲಿ ಗೋಪುರ ಇತ್ಯಾದಿ ಎಂದು ಹೇಳಿ ಕಾವ್ಯಗಳಲ್ಲಿ ಗೋಪುರ ಇತ್ಯಾದಿಗಳ ವರ್ಣನೆಯನ್ನು ಮಾಡುತ್ತಾರೆ. ಈಗ ಕೋಟೆ ಹಾಳಾಗಿರುವುದರಿಂದ ದೇವರಾಜರು ಕಾವ್ಯಗಳಲ್ಲಿ ಏನಾದರೂ ವಿಷಯ ಸಿಕ್ಕುತ್ತದೆಯೇ ಎಂಬುದನ್ನು ಪರಿಶೋಧಿಸಿ ಪ್ರಬಂಧವನ್ನು ಪುಷ್ಟೀಕರಿಸಬೇಕೆಂದೆನಿಸುತ್ತದೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳಬಯಸುತ್ತೇನೆ. ಇತಿಹಾಸದಲ್ಲಿ ಈ ಕಪಿಲಾಶ್ರಮ, ಕಣ್ವಾಶ್ರಮ ಇವುಗಳ ಕತೆಗಳನ್ನು ಕೈಬಿಡಬೇಕು. ಇವೆಲ್ಲಾ ಆಮೇಲೆ ಪುರೋಹಿತರು ಸೃಷ್ಟಿಸಿದಂತಹ ಆರ್‍ಯೀಕರಣದ ಮಾದರಿಗಳಿವು. ಆರ್‍ಯೀಕರಣ ಅಂದ್ರೆ, ಆ ಊರಿಗೆ ರಾಮ ಬಂದಿದ್ದ, ಸೀತೆ ಬಂದಿದ್ದಳು, ಕಣ್ವ ಬಂದಿದ್ದ ಎಂಬುದಾಗಿದೆ. ಅವರ್‍ಯಾಕೆ ಇಲ್ಲಿಗೆ ಬರ್‍ತಾರೆ? ತಮ್ಮ ಧರ್ಮವನ್ನು ಪ್ರಚಾರ ಮಾಡುವ ಒಂದು ತಂತ್ರ ಇದು ಅಷ್ಟೆ. ಕೇವಲ ಧರ್ಮದ ಪ್ರಚಾರ ಮಾಡುವುದಕ್ಕೆ ಧಾರ್ಮಿಕ ತತ್ವಗಳು ಮತ್ತು ಭಾಷೆ ಇಷ್ಟೇ ಬಳಸಿಕೊಳ್ಳುವುದಿಲ್ಲ ನಿಸರ್ಗವನ್ನು ಬಳಸಿಕೊಳ್ಳುತ್ತಾರೆ. ನಮ್ಮ ದೇವಾಲಯಗಳನ್ನು ಬಳಸಿಕೊಳ್ಳುತ್ತಾರೆ. ಗುಡ್ಡ, ಬೆಟ್ಟ, ನದಿ ಇವುಗಳಿಗೆಲ್ಲ ಮೊದಲಿದ್ದ ಹೆಸರನ್ನು ತೆಗೆಯೋದು, ಆರ್ಯರ ಹೆಸರುಗಳನ್ನು ಇಡುವುದು ಇದು ಒಂದು ಗ್ರಾಮ್ಯ ದೇವತೆ, ಅದರ ತಲೆಯ ಮೇಲೆ ಆ ರೇಣುಕ ಜಮದಗ್ನಿ ಕತೆಯನ್ನು ತಂದು ಹೇರಿಬಿಟ್ಟರು, ರೇಣುಕ ಜಮದಗ್ನಿಗೂ, ಈ ಸವದತ್ತಿ ಎಲ್ಲಮ್ಮನಿಗೂ ಏನೇನು ಸಂಬಂಧವಿಲ್ಲ. ಈ ಕತೆ ೧೭ನೇ ಶತಮಾನದವರೆಗೂ ಇರಲಿಲ್ಲ. ನಂತರ ಪುರೋಹಿತರು ಸವದತ್ತಿಯಲ್ಲಿ ಈ ಕತೆಯನ್ನು ಪ್ರಚಾರ ಮಾಡಿದರು. ಅದನ್ನು ಕೆಳವರ್ಗದವರು ನಂಬಿದರು. ದೊಡ್ಡವರು ಹೇಳಿದರು. ಕೆಳವರ್ಗದವರು ನಿಜ ಅಂತಲೇ ನಂಬಿಬಿಟ್ಟಿದ್ದಾರೆ. ಈಗ ನಾವು ಎಷ್ಟೋ ಬಾರಿ ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಅಂತ ಹೇಳಿದರೂ ಆ ಮಾತನ್ನು ಯಾರೂ ಕೇಳುವುದಿಲ್ಲ, ಇಲ್ಲಿ ನಿಜವಾದ ಇತಿಹಾಸ ಮರೆಯಾಗುತ್ತದೆ. ಆರ್‍ಯೀಕರಣದ ಪ್ರಭಾವ ಇಷ್ಟರ ಮಟ್ಟಿಗಾಗಿದೆ. ಕೃಷ್ಣ, ಮಲಪ್ರಭಾ ನದಿಗಳ ಹೆಸರು ಮೂಲ ಹೆಸರುಗಳಲ್ಲ. ಕೃಷ್ಣ ನದಿ ನಮ್ಮ ಜಿಲ್ಲೆಯೊಳಗೆ ಹರಿಯುತ್ತದೆ. ಬಹಳ ದೊಡ್ಡ ಹೊಳೆ ಅದು. ಅದಕ್ಕೆ ಇನ್ನೂ ಕೂಡ ಹಳ್ಳಿಗಳಲ್ಲಿ ಹಿರಿಹೊಳೆ ಅಂತ ಕರೆಯುತ್ತಾರೆ. ಪೆರ್ದೊರೆ ಎಂದು ಶಾಸನದಲ್ಲಿ ಬಂದಿದೆ. ಆದರೆ ನಾವು ಸುಧಾರಿಸಿರುವವರು; ನಾವು ಒಂದು ರೀತಿ ಪುರೋಹಿತರು. ಆ ನದಿಯನ್ನು ಕೃಷ್ಣ ಎಂದು ಕರೆಯುತ್ತಿದ್ದೀವೆ. ಈಗ ಕಾಳಿ ನದಿ ಅಂತ ಕರೆಯುತ್ತಾರೆ. ಹಳ್ಳಿಗಳಲ್ಲಿ ಮತ್ತೆ ಆ ಭಾಗಗದಲ್ಲಿ ಅದಕ್ಕೆ ಇನ್ನೂ ಕರಿಹೊಳೆ ಎಂದು ಕರೆಯುತ್ತಾರೆ. ಹೀಗೆ ಈ ಸಂಸ್ಕೃತೀಕರಣ ನಮ್ಮ ಇತಿಹಾಸಕಾರರಿಗೆ ದೊಡ್ಡ ಅಪಾಯಗಳು. ಈ ಆರ್‍ಯೀಕರಣ ಮತ್ತು ಸಂಸ್ಕೃತೀಕರಣ ಇವೆರಡರಿಂದ ನೀವು ಎಲ್ಲಿಯವರೆವಿಗೆ ಮುಕ್ತರಾಗೋದಿಲ್ಲವೊ ಹಾಗೆಯೇ ಈ ಕಪಿಲಾಶ್ರಮ, ಕಣ್ವಾಶ್ರಮ. ಮಂಡ್ಯ ಅಂದ ಕೂಡಲೇ ಅಲ್ಲೊಬ್ಬ ಮಾಂಡವ್ಯ ಋಷಿ ಬಂದಿದ್ದ ಎಂದು ಹೇಳುವುದು. ಬಿಳುಗಲಿ ಅಂದ ತಕ್ಷಣವೇ ಅಲ್ಲೊಬ್ಬ ಗಾಲವ ಋಷಿ ಬಂದಿದ್ದ ಎಂದು ಹೇಳುವುದು. ಹಾಗಾದರೆ ಎಷ್ಟು ಮಂದಿ ಋಷಿಗಳು ಇದ್ದಾರೆ? ಆಮೇಲೆ ಒಂದು ಪುರಾಣದ ದೇವತೆಯನ್ನು ತರುವುದು, ಅಲ್ಲೊಬ್ಬ ರಾಕ್ಷಸ ಇದ್ದ, ಅವನ್ನ ಕೊಂದ ಅನ್ನುವುದು ಯಾವ ರಾಕ್ಷಸನೂ ಇಲ್ಲ, ಯಾರನ್ನೂ ಕೊಲ್ಲಲೂ ಇಲ್ಲ. ಈ ರೀತಿಯಾದ ಸತ್ಯವಲ್ಲದೆ ಇರುವ ಇತಿಹಾಸವನ್ನು ಬಿಟ್ಟು ನಿಜವಾದ ಇತಿಹಾಸವನ್ನು ನಾವು ಅರಿಯಬೇಕಾಗಿದೆ. ಇದೇ ದೃಷ್ಟಿಯಲ್ಲಿ ಯೋಚನೆ ಮಾಡಿದಾಗ ಪಂಡಿತರು ಆ ಸಂಸ್ಕೃತಿಯಿಂದ ಬಂದಿದ್ದರು. ಆದ್ದರಿಂದ ಅವರು ಈ ಆರ್‍ಯೀಕರಣದ ಕತೆಗಳನ್ನು ಬರೆದರು. ನಾವು ನಿಜವಾದ ಇತಿಹಾಸವನ್ನು ಬರೆಯಬೇಕಾದಾಗ ಈ ಕಪಿಲಾಶ್ರಮ. ಭದ್ರಗಿರಿ ಮಹಾತ್ಮೆಗಳನ್ನು ಬಿಡಬೇಕು. ಮೂಲ ಏನಿದೆ, ಅವರು ಹೇಗೆ ವೀರಶೈವರಾದರು ಎಂಬುದನ್ನು ಪರಿಶೀಲನೆ ಮಾಡಬೇಕು.

ಈ ದಳವಾಯಿಗಳ ಸಾಹಿತ್ಯ ಮತ್ತು ಕಲಾದೃಷ್ಟಿ, ಆಗಿನ ಸಮಾಜ ಹೇಗಿತ್ತೋ ಹಾಗೆ ಮೂಡಿ ಬಂದಿರುತ್ತದೆ. ಆಗ ಸಮಾಜವನ್ನು ನಿಗ್ರಹಿಸಿದ ಎರಡು ದೊಡ್ಡ ಶಕ್ತಿಗಳೆಂದರೆ ಒಂದು ಊಳಿಗಮಾನ್ಯ ಪದ್ಧತಿ, ಮತ್ತೊಂದು ಪುರೋಹಿತ ಸಂಸ್ಕೃತಿ. ಇವೆರಡಕ್ಕೆ ತಕ್ಕ ಹಾಗೆ ಅಲ್ಲಿ ಸಾಹಿತ್ಯ ಮತ್ತು ಕಲೆಗಳು ರೂಪುಗೊಳ್ಳುವುದು ಸಹಜ. ಇಲ್ಲಿಯ ಕೃತಿಗಳನ್ನು ನೋಡಿದರೆ ಅವೆಲ್ಲಾ ಸಾಮಾನ್ಯವಾಗಿ ಅನುವಾದಗಳು. ಆ ಪುರಾಣ ಈ ಪುರಾಣ ಎಂಟು ಹತ್ತು ಪುರಾಣಗಳ ಅನುವಾದಗಳು, ಟೀಕೆಗಳು, ವ್ಯಾಖ್ಯಾನಗಳು, ಮಹಾತ್ಮೆಗಳು ಇವೆಲ್ಲ ಪುರೋಹಿತ ಸಂಸ್ಕೃತಿಯ ಸೃಷ್ಟಿಗಳು. ಇವು ಮೂಲತಃ ಸೃಜನಶೀಲ ಸಾಹಿತ್ಯವಲ್ಲ. ಇದು ಪಾಂಡಿತ್ಯದ ಸಾಹಿತ್ಯ ಮಾತ್ರ. ಈ ಅಗ್ರಹಾರದ ಸಂಸ್ಕೃತಿ ಪ್ರತಿಭೆಯನ್ನು ಸೃಷ್ಟಿ ಮಾಡೋಲ್ಲ, ಪಾಂಡಿತ್ಯವನ್ನು ಸೃಷ್ಟಿ ಮಾಡುತ್ತದೆ. ಅಗ್ರಹಾರದ ಯಾವ ಪಂಡಿತರೇ ಆಗಲಿ ಒಂದು ದೊಡ್ಡ ಪ್ರತಿಭಾ ಸಾಹಿತ್ಯವನ್ನು ಬರೆದಿಲ್ಲ. ಅನುವಾದ, ಟೀಕೆ, ವ್ಯಾಖ್ಯಾನ ಹೀಗೆ ಪಂಡಿತಸಾಹಿತ್ಯವನ್ನು ಬರೆದಿದ್ದಾರೆ. ಕಾಳಿದಾಸ, ವಾಲ್ಮೀಕಿ ತರಹದವು ಕುರುಬರು, ಬೇಡರು, ಬೆಸ್ತರು, ಇವರು ಬಹಳ ದೊಡ್ಡ ಪ್ರತಿಭಾ ಸಾಹಿತ್ಯವನ್ನು ಬರೆದಿದ್ದಾರೆ. ಆದರೆ ಪಾಣಿನಿ, ಪತಂಜಲಿ ಈ ಶಾಸ್ತ್ರ ಬರೆದಿರುವ ಪಂಡಿತ ಬ್ರಾಹ್ಮಣರು. ಪಂಪನ ವಂಶಸ್ಥರು ಮೂಲತಃ ಬ್ರಾಹ್ಮಣರು. ಪಂಪನ ತಂದೆಯ ಕಾಲಕ್ಕೆ ಅವರು ಜೈನರಾದರು. ಅವರ ತಂದೆ ಭೀಮಪ್ಪಯ್ಯ. ಅವರು ಜೈನ ಮತಕ್ಕೆ ಸೇರಿಕೊಂಡರು. ಭೀಮಪ್ಪಯ್ಯ ಜೈನರಾಗದೆ ಹೋಗಿದ್ದರೆ ಪಂಪ ಒಬ್ಬ ಪಂಡಿತ ಆಗುತ್ತಿದ್ದ. ಏಕೆ ಅಂದರೆ ಅಗ್ರಹಾರದ ಸಂಸ್ಕೃತಿಯಲ್ಲಿ ಪಂಡಿತರು ಹುಟ್ಟುತ್ತಾರೆಯೇ ವಿನಃ ಕವಿಗಳು ಹುಟ್ಟುವುದಿಲ್ಲ.

ಇಲ್ಲಿ ನಡೆದ ಈ ವಿಚಾರ ಸಂಕಿರಣದಿಂದ ನನಗೆ ತುಂಬಾ ಸಂತೋಷವಾಗಿದೆ. ಇದರ ಮೂಲಕ ವೀರಶೈವ ಅರಸುಮನೆತನದ ಚರಿತ್ರೆಯನ್ನು ಸೃಷ್ಟಿಮಾಡಲಿಕ್ಕೆ ಶ್ರೀಕಾರವನ್ನು ಹಾಕಿದ್ದಾರೆಂದು ನನಗೆ ಅನ್ನಿಸಿದೆ. ಕಳೆದ ವರ್ಷ ತೋಂಟದಾರ್ಯ ಮಠದಿಂದ ಸ್ವಾದಿ ಅರಸುಮನೆತನ ವೀರಶೈವ ಅರಸರ ಬಗ್ಗೆ ಒಂದು ವಿಚಾರ ಸಂಕಿರಣ ನಡೆಯಿತು. ಆನಂದಪುರದ ಮಠದ ವತಿಯಿಂದ ಕೆಳದಿ ಅರಸರ ಬಗ್ಗೆ ವಿಚಾರ ಸಂಕಿರಣ ನಡೆಯಿತು. ಈಗ ಸುತ್ತೂರು ಮಠದ ವತಿಯಿಂದ ಈ ವಿಚಾರ ಸಂಕಿರಣ ನಡೆದಿದೆ. ನಮ್ಮ ಮಠಗಳು ಇಂತಹ ಇತಿಹಾಸದ ವಿಚಾರ ಸಂಕಿರಣವನ್ನು ಏರ್ಪಡಿಸಿ, ವಿದ್ವಾಂಸರನ್ನು ಬರಮಾಡಿಕೊಂಡು ಹೊಸ ಹೊಸ ವಿಚಾರಗಳನ್ನು ಜನತೆಗೆ ತಿಳಿಸುವಂತಾಗಬೇಕು ಎಂದು ನಾನು ಅವರುಗಳಲ್ಲಿ ಬಿನ್ನವಿಸಿಕೊಳ್ಳುತ್ತಾ ಇದ್ದೇನೆ. ನನ್ನ ಲೆಕ್ಕದ ಪ್ರಕಾರ ಇನ್ನೂ ಸುಮಾರು ೫೦ರಿಂದ೬೦ ವೀರಶೈವ ಅರಸುಮನೆತನಗಳಿವೆ. ನಮ್ಮ ಒಂದೊಂದು ಮಠಗಳು ಒಂದೊಂದು ಮನೆತನಗಳ ಬಗ್ಗೆ ವಿಚಾರ ಸಂಕಿರಣವನ್ನು ಹಮ್ಮಿಕೊಂಡರೆ ನಾಲ್ಕಾರು ವರ್ಷಗಳಲ್ಲಿ ಎಲ್ಲ ಮನೆತನಗಳ ಬಗ್ಗೆಯೂ ತಿಳಿದುಬಿಡುತ್ತದೆ. ಅಂತೆಯೇ ಎಲ್ಲ ಧರ್ಮದವರೂ ಈ ರೀತಿ ಮಾಡಿದರೆ ಭಾರತದ ಇಡೀ ಇತಿಹಾಸವೇ ಬರುತ್ತದೆ. ಈಗ ವಿಶ್ವವಿದ್ಯಾನಿಲಗಳನ್ನು ಬಿಡಿ. ಅಲ್ಲಿ ಹಣ ಇಲ್ಲ. ಅಲ್ಲಿ ಕೆಲಸ ಮಾಡೋ ಜನವಿಲ್ಲ. ಹೀಗಾಗಿ ಈ ಮಠಮಾನ್ಯಗಳು ಇಂತಹ ಹೊಸ ಪ್ರಯೋಗಗಳನ್ನು ಮಾಡಬೇಕು. ಇವುಗಳು ಸಹ ವಿಶ್ವವಿದ್ಯಾಲಯಗಳಂತೆ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಅರಸು ಮನೆತನಗಳು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹಾಗಲವಾಡಿಯವರು, ಮಧುಗಿರಿಯವರು, ಮಹಾನಾಡ ಪ್ರಭುಗಳು ಇದ್ದಾರೆ. ಮೈಸೂರು ಸುತ್ತ ಮುತ್ತ ಯಳಂದೂರಿನ ಅರಸರು ಇದ್ದಾರೆ. ಪಿರಿಯಾಪಟ್ಟಣದ ಅರಸರು ಇದ್ದಾರೆ. ಇವರೆಲ್ಲ ವೀರಶೈವರೆ. ಉಮ್ಮತ್ತೂರಿನವರೂ

ಸಹ ವೀರಶೈವರೆ. ಒಂದು ಪದ್ಯವನ್ನು ಹೇಳಿ ನನ್ನ ಮಾತನು ಮುಗಿಸುತ್ತಿದ್ದೇನೆ. ಚೆನ್ನಬಸವ ಪುರಾಣದೊಳಗೆ ವೀರಶೈವ ಅರಸರ ಒಂದುಯಾದಿ ಕೊಡುತ್ತಾನೆ. ಅದು ಇಂತಿದೆ:

ಪರಮ ಜಂಗಮಕ್ಕೀವಸು ದಾಸೋಹವಂ ಮಾಳ್ಪ
ದೊರೆಗಳಂ ಪೇಳ್ವೆನಾ ನಂಜರಾಯಂ ಮುಂದೆ
ನಿರುತದಿಂ ಕೆಂಜ ಸೋಮಣ್ಣನಾಯಕಯಳಂದೂರರಸು ಚೆನ್ನೊಡೆಯರು
ಬರಗಿಯ ದೇವಿನಾಯಕನು ಬುಕ್ಕಣ್ಣೊಡೆಯ
ನಿರದಲ್ಲಿ ಸಿದ್ಧಮಲ್ಲನಾಯಕಂ ಮತ್ತೆ ಶಿವ
ಶರಣನಾ ಸಂಕಣ್ಣನಾಯಕಂ ಜಂಬೂರದಾನಿವಾಸದ ದೊರೆಗಳು

ಕೀರ್ತಿಸಾಗರದ ಚಿಕ್ಕಣ್ಣ ಶೆಟ್ಟಿಗಳು ವಿ
ಖ್ಯಾತಿ ಬಿಜ್ಜಾವರದ ಪ್ರಭುವೆ ಚಿಕ್ಕಣ್ಣಗೌಡ
ಸಾತಿಶಯದಿಂದೆ ಸುಗುಟೂರ ತಮ್ಮಣ್ಣಗೌಡನೆಸೆವ ತಗಡೂರ ಪ್ರಭುವು
ಪ್ರೀತಿಯಿಂ ತಲಕಾಡ ಚಂದ್ರಶೇಖರನುದುವ
ದಾತನ ಭೋಗವಾಡಿಯ ಲಿಂಗರಾಯಮನತಿ
ಭೂತಹಿತನುಡುವಂಕನಾಡಪ್ರಭು ಮೊದಲಾಗಿ ದಾಸೋಹಮಂ ಮಾಳ್ಪರು॥

(ಚೆ.ಪು. ೬೩-೫೫, ೫೬)

ದಾಸೋಹ ಮಾಡುತ್ತಿದ್ದ ವೀರಶೈವ ಅರಸರುಗಳ ಬಗ್ಗೆ ಈ ಯಾದಿಯಲ್ಲಿರುವವರ ಬಗ್ಗೆಯಾದರೂ ನಾವು ತಿಳಿದುಕೊಳ್ಳುವಂತಾದರೆ ನಮ್ಮ ಇತಿಹಾಸಕ್ಕೆ ಹೊಸ ಪುಟಗಳನ್ನು ಸೇರಿಸಿದಂತಾಗುತ್ತದೆ. ನಿಜವಾಗಿ ನಮ್ಮ ಇತಿಹಾಸವೆಂದರೆ ಚಾಲುಕ್ಯ ರಾಷ್ಟ್ರಕೂಟರ ತರಹದ ದೊಡ್ಡ ಅರಸರುಗಳು ಇದ್ದಾರಲ್ಲ ಅವರ ಇತಿಹಾಸವೇ ಅಲ್ಲ. ಅವರು ನಿಂತಿದ್ದು ಈ ಕಂಬಗಳ ಮೇಲೆ. ಈ ಕಂಬಗಳನ್ನು ನಾವು ಅಭ್ಯಾಸ ಮಾಡಬೇಕಾಗಿದೆ. ಈ ಪಾಳೇಗಾರರ ಬಗ್ಗೆ ಅಭ್ಯಾಸ ಮಾಡಬೇಕಿದೆ. ಈ ದಿಶೆಯಲ್ಲಿ ನಮ್ಮ ಮಠಗಳು ಬಹಳ ಉತ್ತಮವಾದ ಕಾರ್ಯವನ್ನು ಮಾಡುತ್ತವೆ. ಎಂದು ಆಶಿಸಿ ಗುರುಗಳಿಗೆ ವಂದಿಸಿ ವಿದ್ವಾಂಸರುಗಳಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ನಿಮ್ಮೆಲ್ಲರಿಗೂ ನನ್ನ ನಮಸ್ಕಾರಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* * *

"ಮಾನವನ ಕಷ್ಟನಷ್ಟಗಳ, ಅವಿವೇಕ ಮತ್ತು ಅಪರಾಧಗಳ ಒಂದು ದಾಖಲೆಗಿಂತ ಇತಿಹಾಸ ಹೆಚ್ಚಲ್ಲ."

–ಎಡ್ವರ್ಡ್ ಗಿಬ್ಬನ್

"ಕೆಡಕುಮಾಡಿದ ಒಳಿತನ್ನು ತಿಳಿದುಕೊಳ್ಳುವುದೇ ಇತಿಹಾಸದ ಮೊದಲನೆಯ ಪಾಠ"–ಎಮರ್‌ಸನ್

ಆಕರ : ಮಾರ್ಗ ಸಂಪುಟ–೭

೧೩

ಬಸವೋತ್ತರ ಯುಗದ ವಚನ ಸಾಹಿತ್ಯ ವಿಚಾರ ಸಂಕಿರಣ : ಉದ್ಘಾಟನೆ

೧೯೯೩

ಪೂಜ್ಯ ಜಗದ್ಗುರು ಶ್ರೀ ಶಿವಲಿಂಗೇಶ್ವರ ಸ್ವಾಮಿಜಿಯವರೇ,
ಮಹನೀಯರೇ, ಮಹಿಳೆಯರೇ,

ಗಡಿನಾಡಿನ ಪ್ರತಿಷ್ಠಿತ ವಿದ್ಯಾಸಂಸ್ಥೆಯೊಂದರ ಇಪ್ಪತ್ತೈದನೆಯ ವಾರ್ಷಿಕ ಸಮಾರಂಭವನ್ನು ಈ ವಿಚಾರ ಸಂಕಿರಣದ ಮೂಲಕ ಆರಂಭಿಸುತ್ತಿರುವುದು, ಬೆಳ್ಳಿಹಬ್ಬದ ಬಾಗಿಲನ್ನು ಬಂಗಾರದ ಕೀಲಿಯಿಂದ ತೆರೆಯುತ್ತಲಿರುವ ಉಪಕ್ರಮವೆಂದು ಭಾವಿಸುತ್ತೇನೆ. ಈ ವಿಚಾರ ಸಂಕಿರಣದ ವಿಷಯ 'ಬಸವಯುಗದ ವಚನಸಾಹಿತ್ಯ' ವಲ್ಲ, 'ಬಸವೋತ್ತರ ಯುಗದ ವಚನಸಾಹಿತ್ಯ'. ಈ ವರೆಗೆ ಕನ್ನಡದಲ್ಲಿ ಪ್ರಸಿದ್ಧಕವಿ ಪ್ರಸಿದ್ಧಕೃತಿಗಳನ್ನು ಕುರಿತು ಸಾಕಷ್ಟು ಅಧ್ಯಯನ ನಡೆದು ಅಪ್ರಸಿದ್ಧ ಕವಿ, ಅಪ್ರಸಿದ್ಧ ಕೃತಿಗಳ ಅಧ್ಯಯನ ಅಲಕ್ಷ್ಯಕ್ಕೆ ಗುರಿಯಾಗಿದೆ. ಹೀಗೆ ಕಡೆಗಣಿಸಲ್ಪಟ್ಟ ಪ್ರಾಚೀನಸಾಹಿತ್ಯ ಕನ್ನಡದಲ್ಲಿ ವಿಪುಲವಾಗಿದೆ. ಅವುಗಳಲ್ಲಿ 'ಬಸವೋತ್ತರಯುಗದ ವಚನಸಾಹಿತ್ಯ'ವೂ ಒಂದು. ಬಸವಯುಗದ ವಚನಸಾಹಿತ್ಯದಲ್ಲಿರುವ ಸಾಹಿತ್ಯಿಕ, ಸಾಮಾಜಿಕ ಮೌಲ್ಯಗಳಿಗೆ ಆಕರ್ಷಿತರಾದ ವಿದ್ವಾಂಸರು ಸಹಜವಾಗಿಯೇ ಈ ಸಾಹಿತ್ಯದ ಕಡೆಗೆ ಹೊರಳಿ ನೋಡಲಿಲ್ಲ.

ಇಂದಿನದು ಸಾಮಾನ್ಯರ ಯುಗ. ಸಮಾಜದಲ್ಲಿ ಪ್ರತಿಯೊಬ್ಬನಿಗೂ ತನ್ನದೇ ಆದ ಸ್ಥಾನವಿದ್ದು, ಅದನ್ನು ಅವನಿಗೆ ಕಲ್ಪಿಸಿಕೊಡುವುದು ಈ ಯುಗದ ಅಭೀಪ್ಸೆಯಾಗಿದೆ. ಈ ದೃಷ್ಟಿಯಿಂದ ಪ್ರತಿಯೊಂದು ಸಾಹಿತ್ಯಕೃತಿಗೂ ತನ್ನದೇ ಆದ ಮಹತ್ವವಿದೆ. ಅದರದೇ ಆದ ಓದುಗ ವರ್ಗವಿದೆ. ಅಂದರೆ ಪ್ರತಿಯೊಂದು ಕೃತಿಗೆ ಸಾಹಿತ್ಯಿಕವಲ್ಲದಿದ್ದರೆ ಸಾಮಾಜಿಕ, ಸಾಮಾಜಿಕವಲ್ಲದಿದ್ದರೆ ಧಾರ್ಮಿಕ ಇತ್ಯಾದಿ ಸ್ಥಾನವಿದ್ದೇ ಇರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದರೆ ಬಸವೋತ್ತರ ಯುಗದ ವಚನಗಳಿಗೆ ಧಾರ್ಮಿಕ ಮೌಲ್ಯವಂತೂ ಖಂಡಿತವಿದೆ. ಈ ದೃಷ್ಟಿಯಿಂದಲಾದರೂ ಇವುಗಳ ಅಧ್ಯಯನ ಪ್ರಯೋಜನಕವೆನಿಸುತ್ತದೆ.

ಬಸವಯುಗದಲ್ಲಿ ಬಿಡಿಬಿಡಿ ವಚನಗಳು ಸೃಷ್ಟಿಯಾದವು. ಬಸವೋತ್ತರಯುಗದವರಿಗೆ ಇವುಗಳನ್ನು ತಾತ್ತ್ವಿಕ ನಿಲುವಿನಲ್ಲಿ ಸಂಯೋಜಿಸುವ ಮತ್ತು ತಾತ್ವಿಕ ನಿಲುವಿನಲ್ಲಿ ಹೊಸ ವಚನಗಳನ್ನು ಸೃಷ್ಟಿಸುವ ಉಭಯ ಜವಾಬ್ದಾರಿಗಳು ಎದುರಾದವು. ಈ ಎರಡರಲ್ಲಿ ಇಂದಿನ ವಿಚಾರ ಸಂಕಿರಣ 'ಹೊಸ ವಚನಸೃಷ್ಟಿ'ಯನ್ನು ಕುರಿತುದಾಗಿದೆ.

ಈ ಸಂದರ್ಭದಲ್ಲಿ ನಮಗೆ ಕಾಡುವ ಮೊದಲ ಪ್ರಶ್ನೆಯೆಂದರೆ, ಬಸವೋತ್ತರಯುಗದ ವಚನಕಾರರನ್ನು, ನಿರ್ಧರಿಸುವುದು. ಏಕೆಂದರೆ ಕೆಲವರನ್ನು ಬಿಟ್ಟರೆ ಸಾಮಾನ್ಯವಾಗಿ ಎಲ್ಲ ವಚನಕಾರರನ್ನೂ ನಾವು ೧೨ನೆಯ ಶತಮಾನದಲ್ಲಿಯೇ ಪರಿಗಣಿಸಿದ್ದೇನೆ. ಇವರಲ್ಲಿ ಒಂದಿಷ್ಟು ಶರಣರನ್ನಾದರೂ ಬಸವೋತ್ತರಯುಗಕ್ಕೆ ಸೇರಿಸಬೇಕಾಗುತ್ತದೆ. ಉದಾ:

ಎಲ್ಲರ ಗಂಡಂದಿರು ಪರದಳವಿಭಾಡರು
ಎನ್ನ ಗಂಡ ಮನದಳವಿಭಾಡ
ಎಲ್ಲರ ಗಂಡಂದಿರು ಗಜವೇಂಟೆಕಾರರು
ಎನ್ನ ಗಂಡ ಮನವೇಂಟೆಕಾರ......

ಕದಿರರೆಮ್ಮವ್ವೆಯ ಈ ವಚನದಲ್ಲಿ ಬಂದಿರುವ 'ಪರದಳ ವಿಭಾಡ', 'ಗಜವೇಂಟೆಕಾರ' ಎಂಬ ಬಿರುದುಗಳು ವಿಜಯನಗರ ಕಾಲಕ್ಕೆ ಸಂಬಂಧಿಸಿದವುಗಳು. ಹೀಗಾಗಿ ಈ ವರೆಗೆ ಬಸವಯುಗದಲ್ಲಿ ಪರಿಗಣಿಸಲಟ್ಟ ಈಕೆ ಬಸವೋತ್ತರಯುಗದವಳೆಂಬ ಸಂದೇಹ ಹುಟ್ಟುತ್ತದೆ.

ಹಂಸಪತಿ ಗರುಡಪತಿ ವೃಷಭಪತಿ
ಮೊದಲಾದ ಸರ್ವಜೀವಾಧಿಪತಿ
ದೇವರಾಯ ಮಹಾರಾಯನ ಅರಸುತನ ಹೊಸದು:
ಓಲಗಕ್ಕೆ ಬಾರ, ಸಿಂಹಾಸನಕ್ಕೆ ಕುಳ್ಳಿರ,
ಸ್ತ್ರೀಲಂಪಟನಾಗಿ ಅಂತಃಪುರವ ಬಿಟ್ಟು ಹೊರವಡ.
ಕಪ್ಪಗಾಣಿಕೆಯನೊಪ್ಪಿಸಿಕೊಂಬವರಿಲ್ಲ.
ಗುರುವೆಂಬ ತಳಾರನ ಆಜ್ಞೆ ಕೆಟ್ಟಿತ್ತು.
ತೆರೆದ ಬಾಗಿಲು ಮುಚ್ಚುವರಿಲ್ಲ, ಮುಚ್ಚಿದ ಬಾಗಿಲ ತೆರೆವವರಿಲ್ಲ.
ಹಂಪೆಯ ವಿರುಪಯ್ಯನ ಅರಸುತನ ಕೆಟ್ಟಿತ್ತು ,
ಭಕ್ತರೆಂಬವರಿನ್ನು ಬದುಕಲೇಬಾರದು.

ಅಗ್ಘವಣಿ ಹಂಪಯ್ಯನ ಈ ವಚನದಲ್ಲಿ ಬರುವ ದೇವರಾಯನು ಕಂಪಿಲದೇವರಾಯನಾಗಿರಬಹುದು. ಹಂಪೆಯ ವಿರುಪಯ್ಯನು ವಿಜಯನಗರದ ಅರಸು ವಿರುಪಾಕ್ಷನಾಗಿರಬಹುದು. ಇದು ನಿಜವಿದ್ದಲ್ಲಿ ಈ ವಚನಕಾರನೂ ೧೨ನೆಯ ಶತಮಾನದ ತರುವಾಯದವನಾಗುತ್ತಾನೆ. ಇಂಥ ಸಮಸ್ಯೆಗಳನ್ನು ಬಿಟ್ಟರೂ ಈ ವರೆಗಿನ ಸಂಶೋಧನೆಯ ಪ್ರಕಾರ ಬಸವೋತ್ತರಯುಗದ ವಚನಕಾರರ ಸಂಖ್ಯೆ ೩೦. (ಕರ್ತೃ ಗೊತ್ತಿಲ್ಲದ ಬಸವಯುಗದ ೫೫ ವಚನಕಾರರಲ್ಲಿಯೂ ಕೆಲವರು ಬಸವೋತ್ತರಯುಗದವರಿರಬಹುದು). ಇವರಲ್ಲಿ ಇಂದಿನ ಗೋಷ್ಠಿ ಕೆಲವು ವಚನಕಾರರನ್ನು ಕುರಿತುದಾಗಿದೆ.

ಕಲ್ಯಾಣಕ್ರಾಂತಿಯ ಸಂದರ್ಭದಲ್ಲಿ ಶರಣರು ಉಳಿವೆ, ಹಂಪೆ, ಶ್ರೀಶೈಲಗಳಿಗೆ ತೆರಳಿದರು. ಇವರಲ್ಲಿ ಹಂಪೆಗೆ ಬಂದವರು ವೈರಿಗಳ ಅಪಾಯಕ್ಕೆ ಅಂಜಿ ವಚನಭಾಂಡಾರವನ್ನು ಇಲ್ಲಿಯೇ ಮುಚ್ಚಿಟ್ಟರೆಂದು ಕಾಣುತ್ತದೆ. ಹೀಗಾಗಿ ೧೫ನೆಯ ಶತಮಾನದಲ್ಲಿ ಶರಣರು, ಶರಣಕವಿಗಳು ಹಂಪೆಯ ಪರಿಸರದಲ್ಲಿ ತಲೆಯೆತ್ತಿ, ಮುಚ್ಚಿಟ್ಟಿದ್ದ ವಚನಗಳ ಶೋಧ-ಸಂಕಲನಗಳಿಗೆ ಕಾರಣರಾದರು. ಮತ್ತು ಹೊಸ ವಚನಗಳ ಸೃಷ್ಟಿಕಾರ್ಯವನ್ನೂ ಕೈಕೊಂಡರು. ಇತ್ತ ಶ್ರೀಶೈಲಕ್ಕೆ ಹೋದ ಶರಣ ಪರಂಪರೆಯವರು ಮುಂದಿನ ಕಾಲಾವಧಿಯಲ್ಲಿ ಆರಾಧ್ಯ ಹೆಸರಿನಲ್ಲಿ ಗುಮ್ಮಳಾಪುರ ಮಾರ್ಗವಾಗಿ ಕರ್ನಾಟಕವನ್ನು ಪ್ರವೇಶಿಸಿ, ಗುಬ್ಬಿ, ಎಡೆಯೂರುಗಳಲ್ಲಿ ವೀರಶೈವ ಧರ್ಮ-

ಸಾಹಿತ್ಯಗಳ ಪುನರುಜ್ಜೀವನ ಕಾರ್ಯವನ್ನು ಕೈಗೆತ್ತಿಕೊಂಡರು. ಈ ಹಿನ್ನೆಲೆಯಲ್ಲಿ ವೀರಶೈವ ಬಸವೋತ್ತರ ಯುಗವನ್ನು ಬಳ್ಳಾರಿ ಜಿಲ್ಲೆಯ ಆಂದೋಲನ, ತುಮಕೂರು ಜಿಲ್ಲೆಯ ಆಂದೋಲನವೆಂದು ಗುರುತಿಸಬೇಕಾಗುತ್ತದೆ.

ಈ ಆಂದೋಲನದ ಹರಿಕಾರರಲ್ಲಿ ಕರಸ್ಥಲದ ಪರಂಪರೆ ವಿಶಿಷ್ಟವಾದುದು. ನೂರೊಂದು ವಿರಕ್ತರಲ್ಲಿ ಪರಿಗಣಿಸಲ್ಪಡುವ ಈ ಪರಂಪರೆಯ ಮೂಲವ್ಯಕ್ತಿ ಕರಸ್ಥಲದ ಶಾಂತೇಶ. ಈತನ ಶಿಷ್ಯ ಕರಸ್ಥಲದ ವೀರಣ್ಣೊಡೆಯ. ಇವನ ಶಿಷ್ಯನಾದ ಕರಸ್ಥಲದ ನಾಗಲಿಂಗ ತುಂಬ ಪ್ರತಿಸಿದ್ಧವ್ಯಕ್ತಿ. ನಾಗಲಿಂಗನು ಶ್ರೀರಂಗಪಟ್ಟಣದ ಸಮೀಪದ ಬೊಮ್ಮೂರಿನವರು. ಈತನು ತನ್ನ ಗುರುವಿನೊಂದಿಗೆ ಗುಮ್ಮಳಾಪುರಕ್ಕೆ ಬಂದಿದ್ದ ಸಂಗತಿ ಕರಸ್ಥಲದ ನಾಗಲಿಂಗ ಚರಿತ್ರೆ ಮತ್ತು ಅವರ ಮುನ್ನುಡಿಯಲ್ಲಿ ಪ್ರಕಟವಾದ ಒಂದು ಬಿಡಿ ಹಾಡುಗಳಿಂದ ಗೊತ್ತಾಗುತ್ತದೆ. ಇದಕ್ಕೆ ಪೋಷವೆಂಬಂತೆ ಈ ಊರಿನ ಒಂದು ತಾಮ್ರ ಶಾಸನದಲ್ಲಿ 'ಶರಣ ವೀರಣ್ಣದೇವರು ಮತ್ತಮೀ ಸ್ಥಲದಲ್ಲಿರ್ಪ ಶಾಂತದೇವರು ನಾಗದೇವರು' ಎಂಬ ಹೆಸರುಗಳು ಕಂಡುಬರುತ್ತವೆ. ಶಿವತತ್ತ್ವ ಚಿಂತಾಮಣಿಯು (೩೮-೬೧) ಗುಮ್ಮಳಾಪುರದಲ್ಲಿದ್ದ 'ಸಲ್ಲಲಿತ ಶತಗಣಂಗಳ'ನ್ನು ಉಲ್ಲೇಖಿಸುತ್ತದೆ. ಈ ಶತಗಣಂಗಳು ನೂರೊಂದು ವಿರಕ್ತರೇ ಆಗಿರಬಹುದೆಂದು ಡಾ. ಎಂ. ಬಿ. ನೇಗಿನಹಾಳ ಊಹಿಸುತ್ತಾರೆ. ಇದು ನಿಜವಿದ್ದರೆ, ನೂರೊಂದು ವಿರಕ್ತರು ಮೂಲತಃ ಗುಮ್ಮಳಾಪುರದವರಾಗಿದ್ದು, ಆಮೇಲೆ ಹಂಪೆಗೆ ಬಂದು ಪ್ರಸಿದ್ಧರಾದರೆಂದು ಹೇಳಬೇಕಾಗುತ್ತದೆ. ಮೇಲೆ ಹೇಳಿದವರಲ್ಲದೆ ಕರಸ್ಥಲದ ಮಲ್ಲಿಕಾರ್ಜುನ ಹೆಸರಿನ ವಚನಕಾರರೂ ಕಂಡುಬರುತ್ತಾನೆ. ಇವರೆಲ್ಲ ಕರಸ್ಥಲ ಪರಂಪರೆಯವರೆಂದೇ ಹೇಳಬಹುದು.

ರಾಘವಾಂಕ ಚರಿತೆಯಲ್ಲಿ ಬರುವ 'ಕರತಳದ ನಾಗದೇವ' ಎಂಬ ಉಲ್ಲೇಖ ಕರಸ್ಥಲ ಹೆಸರಿನ ಮೂಲರೂಪ ಕರತಳ ಇಲ್ಲವೆ ಕರತಾಳ ಇದ್ದು, (೧. ಮೈಸೂರು ಜಿಲ್ಲೆ, ಕೆ. ಆರ್. ನಗರ ತಾಲೂಕು, ೨. ಮಂಡ್ಯಜಿಲ್ಲೆ, ಕೃಷ್ಣರಾಜಪೇಟೆ ತಾಲೂಕು) ಇದು ಐತಾಳ, ಕವಿತಾಳಗಳಂತೆ ಒಂದು ಗ್ರಾಮವಾಗಿರಬಹುದೇ? ಎಂಬ ಸಂದೇಹ ಮೂಡುತ್ತದೆ. ಹಾಗಿದ್ದರೆ ಈ ಪರಂಪರೆಯ ಮೂಲಪುರುಷ ಮೈಸೂರು ಜಿಲ್ಲೆ ಇಲ್ಲವೆ ಮಂಡ್ಯಜಿಲ್ಲೆಯ ಈಗಿನ ಕರತಾಳಗ್ರಾಮಕ್ಕೆ ಸಂಬಂಧಪಟ್ಟವನಾಗಿರಬೇಕು. ನಾಗಿದೇವನು ಇದರ ಸಮೀಪದ ಬೊಮ್ಮಾರಿಗೂ ಸಂಬಂಧಿಸಿದವನೆಂಬುದನ್ನು ಇಲ್ಲಿ ನೆನೆಯಬಹುದು. ಈ ಕರತಾಳ ಎಂಬ ಗ್ರಾಮನಾಮವನ್ನೇ ಪಂಡಿತರಾದವರು ಕರಸ್ಥಳವೆಂದು ಸಂಸ್ಕೃತೀಕರಿಸಿ, ವೀರಶೈವ ಕರಸ್ಥಲದ ಇಷ್ಟಲಿಂಗಕ್ಕೂ ಈ ಸಂಪ್ರದಾಯಕ್ಕೂ ಅರ್ಥಸಂಬಂಧ ಕಲ್ಪಿಸಿರುವ ಸಾಧ್ಯತೆಯೂ ಇದೆ.

ಕರಸ್ಥಲದ ನಾಗಲಿಂಗ ಜಾತಿಯಿಂದ ಅಕ್ಕಸಾಲಿಗನಾಗಿದ್ದು, ವೀರಶೈವ ವಿರಕ್ತ ಸಂಪ್ರದಾಯದಲ್ಲಿ ಪರಿಗಣಿತನಾಗಿರುವುದನ್ನು ನೋಡಿದರೆ ಜಾತ್ಯತೀತ ವಿರಕ್ತ ಪರಂಪರೆಯನ್ನು ೧೨ನೆಯ ಶತಮಾನದ ತರುವಾಯ ಮತ್ತೊಮ್ಮೆ ಹುಟ್ಟುಹಾಕುವ ಪ್ರಯತ್ನ ಇಲ್ಲಿ ಪ್ರಾರಂಭವಾದುದು ಸ್ಪಷ್ಟವಾಗುತ್ತದೆ. ಈ ಪ್ರಯತ್ನಕ್ಕೆ ನಿರ್ದಿಷ್ಟ ನೆಲೆ ಸಿಕ್ಕುದು ಮುಂದೆ ತೋಂಟದ ಸಿದ್ಧಲಿಂಗೇಶ್ವರ ಕಾಲದಲ್ಲಿ.

ಕರಸ್ಥಲ ಪರಂಪರೆಯಲ್ಲಿ ವೀರಣ್ಣೊಡೆಯ ಮತ್ತು ಮಲ್ಲಿಕಾರ್ಜುನರು ವಚನಕಾರರಾಗಿದ್ದಾರೆ. ವೀರಣ್ಣೊಡೆಯರ ಮುದ್ರಿಕೆ 'ಮಹಾಘನ ಶಾಂತಮಲ್ಲಿಕಾರ್ಜುನದೇವ. ಅದ್ವೈತಾನಂದದ ವಚನ, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಭಕ್ತ್ಯಾನಂದ ಸುಧಾರ್ಣವ, ಮಿಶ್ರಸ್ತೋತ್ರ ವಚನ (ಎಳಮಲೆಯ ಗುರುಶಾಂತದೇವ), ಶರಣ ಚಾರಿತ್ರ್ಯದ ವಚನ ಶಿವಯೋಗ ಚಿಂತಾಮಣಿ, ಷಟ್‌ಪ್ರಕಾರ ಸಂಗ್ರಹ - ಈ ಪ್ರಾಚೀನ ಸಂಕಲನಗಳಲ್ಲಿ ಇವನ ಒಟ್ಟು ೭ ವಚನಗಳು ಸಿಗುತ್ತವೆ. ಇದಲ್ಲದೆ ಹೆಚ್ಚಿನದಾಗಿ ಲಿಂಗಸೂತ್ರದ ವಚನ ಎಂಬ ಕೃತಿ ಇವನ ಹೆಸರಿನಲ್ಲಿ ಇರುವಂತೆ ತೋರುತ್ತದೆ.

ಮಲ್ಲಿಕಾರ್ಜುನನ ನಾಲ್ಕು ವಚನಗಳು ಸಿಕ್ಕಿವೆ. 'ಪರಮಗುರು ಶಾಂತಮಲ್ಲಿಕಾರ್ಜುನ' ಈತನ ಮುದ್ರಿಕೆ. ಈತನು ಸಂಕಲಿಸಿದ ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ ಮತ್ತು ಗುರುಸಿದ್ಧದೇವ ಸಂಕಲಿಸಿದ ಚಿದೈಶ್ವರ್ಯ ಚಿದಾಭರಣಗಳಲ್ಲಿ ಈತನ ವಚನಗಳು ಸಿಗುತ್ತಿದ್ದು, ಸಾಹಿತ್ಯದೃಷ್ಟಿಯಿಂದಲೂ ತುಂಬ ಸುಂದರವಾಗಿವೆ. ಈ ನಾಲ್ಕರಲ್ಲಿ ಎರಡು ವಚನಗಳು 'ಸಕಲಪುರಾತನರ ವಚನಗಳು ' ಕಟ್ಟಿನಲ್ಲಿ 'ಮಡಿವಾಳ ಮಾಚಯ್ಯನ ಸಮಾ(ಸಮಯಾ)ಚಾರದ ಮಲ್ಲಿಕಾರ್ಜುನನ ವಚನಗಳು' ಶೀರ್ಷಿಕೆಯ ಅಡಿಯಲ್ಲಿ ಸಿಗುವದನ್ನು ಇಲ್ಲಿ ನೆನೆಯಬಹುದು. ಈತನು ಬ್ರಹ್ಮೈದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ ಕೃತಿಯನ್ನು ಸಂಕಲಿಸಿರುವನೆಂದು ಅದರ ಸ್ಥಲಾಂತ್ಯದಲ್ಲಿ ಬರುವ 'ಶ್ರೀ ಕರಸ್ಥಲದ ಮಲ್ಲಿಕಾರ್ಜುನ ಒಡೆಯರು ಸೇರಿಸಿದ ಅನುಭಾವ ಬೋಧೆಯಪ್ಪ' ಎಂಬ ಮಾತಿನಿಂದ ತಿಳಿದುಬರುತ್ತದೆ. ಇವರ ಗುರು ಶಾಂತೇಶನೆಂದೂ ಈ ಸಂಕಲನದ ಆದ್ಯಂತ ಸ್ತುತಿ ಪದ್ಯದಲ್ಲಿ ಹೇಳಿದೆ. ವೀರಣ್ಣೊಡೆಯನ ಗುರುವೂ ಶಾಂತೇಶನೆಂಬುದನ್ನು ಇಲ್ಲಿ ಸ್ಮರಿಸಬೇಕು.

ಬಸವೋತ್ತರಯುಗದ ವಚನಕಾಲದಲ್ಲಿ ಗಣದಾಸಿ ವೀರಣ್ಣನ ಕೃತಿ 'ಗಣದಾಸಿ ವೀರಣ್ಣರ ವಚನ', 'ಗಣವಾಸಿ ವೀರಣ್ಣಗಳ ಛತ್ತೀಸ ವಚನ' ಹೆಸರುಗಳಲ್ಲಿ ಸಿಗುತ್ತದೆ. ಶೀರ್ಷಿಕೆಯ ಪ್ರಕಾರ ಇದರಲ್ಲಿ ಇರಬೇಕಾದುದು ೩೬ ವಚನಗಳು. ಆದರೆ ಇಲ್ಲಿರುವ ಸಂಖ್ಯೆ ೩೭. 'ಶಾಂತಕೂಡಲ ಸಂಗಮದೇವಾ' ಎಂಬುದು ಇವನ ಮುದ್ರಿಕೆ. 'ಗಣದಾಸಿ ವೀರಣ್ಣನವರು ನಿರೂಪಿಸಿದ ಮಹಾಜ್ಞಾನದ ಅನುಭಾವದ ವಚನ', 'ಜ್ಞಾನಸಾರಾಯದ ವಚನ' ಎಂಬ ವಿವರಣೆಗಳೂ ಅಲ್ಲಲ್ಲಿ ಸಿಗುತ್ತವೆ.

ಗೋಣಿಯ ಮಾರಯ್ಯನ ಮುದ್ರಿಕೆ ಕೇತೇಶ್ವರ. ಕುಮಾರ ಚೆನ್ನಬಸವನ ಪುರಾತನರ ಚರಿತೆಯಲ್ಲಿ ಗೋಣಿ ಮಲ್ಲಿದೇವಯ್ಯ ಎಂಬ ರೂಪ ಸಿಗುತ್ತದೆ. ಇದಲ್ಲದೆ ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ, ಉತ್ತರದೇಶದ ಬಸವಲಿಂಗನ ಬಸವೇಶ್ವರಪುರಾಣದ ಕಥಾಸಾಗರ, ಗರಣಿ ಬಸವಲಿಂಗನ ಬಸವೇಶ್ವರ ಕಾವ್ಯಗಳಲ್ಲಿ ಇವನ ಉಲ್ಲೇಖವಿದೆ. ಷಟ್‌ಸ್ಥಲಜ್ಞಾನಸಾರ, ಶರಣಚಾರಿತ್ರ್ಯದ ವಚನಗಳು, ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತಚಾರಿತ್ರ ಸಂಪಾದನೆಯ ವಚನಗಳು, ಮೈಸೂರು ಕನ್ನಡ ಅಧ್ಯಯನಸಂಸ್ಥೆಯ ಕೆ. ಬಿ. ೫೦೮ನೆಯ ಪ್ರತಿ - ಈ ಪ್ರಾಚೀನ ವಚನ ಸಂಕಲನಗಳಲ್ಲಿ ಈತನ ಒಟ್ಟು ೯ ವಚನಗಳು ಸಿಗುತ್ತವೆ.

ಜಕ್ಕಣಯ್ಯಗಳದು ಸ್ವತಂತ್ರ ವಚನಕಟ್ಟು. 'ಝೇಂಕಾರ ನಿರಂಜನ ಪ್ರಭುವೇ' ಮುದ್ರಿಕೆಯ ೭೭೮ ವಚನಗಳು ಈ ಕಟ್ಟಿನಲ್ಲಿವೆ. ಈ ಕೃತಿಯ ಹೆಸರು 'ಸಿರಾಳಮಂತ್ರ ಗೋಪ್ಯ'. ಬಸವಯುಗದ ಕೆಲವು ವಚನಕಾರರ ಹೆಸರಿನಲ್ಲಿ ಮಂತ್ರಗೋಪ್ಯ ಹೆಸರಿನ ಕೃತಿಗಳು ಸಿಗುತ್ತವೆ. ಆ ಪರಂಪರೆಗೆ ಸೇರಿದ ಈ ಕೃತಿಯಲ್ಲಿ ನಿಷ್ಕಲಲಿಂಗ ಸ್ಥಲದಿಂದ ನಿರವಯಲಿಂಗ ಸ್ಥಲದ ವರೆಗೆ ೧೮ ಸ್ಥಲಗಳಿವೆ. ಸಾಮಾನ್ಯವಾಗಿ ಇವು ಬೆಡಗಿನ ವಚನಗಳೇ ಆಗಿವೆ. ಈತನ ವಿಷಯವಾಗಿ ಏನೂ ತಿಳಿದುಬಂದಿಲ್ಲ.

ಈ ವಿಚಾರ ಸಂಕಿರಣದ ಬಾಲಸಂಗಯ್ಯ, ಕಾಡಸಿದ್ಧೇಶ್ವರ ವಿಶಿಷ್ಟವಚನಕಾರರಾಗಿದ್ದಾರೆ. ವಚನಸಾಹಿತ್ಯದ ಪ್ರಕಟನೆಯ ಇತಿಹಾಸದಲ್ಲೆ ಮೊದಲು ಬೆಳಕಿಗೆ ಬಂದುದು ಬಾಲಸಂಗಯ್ಯನ ವಚನಕೃತಿ. ಇದು 'ಶಿಖಾರತ್ನ ಪ್ರಕಾಶ' ಹೆಸರಿನಿಂದ ೧೮೮೩ರಲ್ಲಿ ಪ್ರಕಟವಾಗಿದೆ. ಇಲ್ಲಿ ಕರ್ತೃನಾಮವನ್ನು 'ಕೂಡಲಸಂಗಮಾವಧೂತ' ಎಂದು ಸೂಚಿಸಲಾಗಿದ್ದು, ಇಲ್ಲಿಯ ಅವಧೂತ ಶಬ್ದ ಇವನು ವೀರಶೈವನಾಗಿದ್ದರೂ ಅವಧೂತದ ಕಡೆಗೆ ಒಲವು ಉಳ್ಳವನಾಗಿರಬಹುದೇ? ಎಂಬ ಸಂದೇಹ ಹುಟ್ಟಿಸುತ್ತದೆ. ಈತನ ಹೆಸರಿನಲ್ಲಿ ಸಕಲಾಗಮ ಶಿಖಾಮಣಿ, ಸರ್ವಾಗಮ ಶಿಖಾಮಣಿ, ಶಿಖಾರತ್ನ ಪ್ರಕಾಶ, ಸಕಲಾಗಮ ಸಿದ್ಧಾಂತ ಶಿಖಾರತ್ನ ಶೀರ್ಷಿಕೆಗಳಲ್ಲಿ ಸಣ್ಣದೊಡ್ಡ ವಚನ ಸಂಕಲನಗಳು ಸಿಗುತ್ತವೆ. ಇವನ ಮುದ್ರಿಕೆ 'ಅಪ್ರಮಾಣ ಕೂಡಲಸಂಗಮದೇವಾ'. ಈವರೆಗೆ ಸಿಕ್ಕ ಇವನ ವಚನಸಂಖ್ಯೆ ೯೨೦.

ಇದೇ ರೀತಿ ಕಾಡಸಿದ್ಧೇಶ್ವರನೂ ಸಿದ್ಧಸಂಪ್ರದಾಯದ ಕಡೆಗೆ ಒಲವು ಇದ್ದ ವೀರಶೈವನೆಂದು ತೋರುತ್ತದೆ. ಇವನ ಮುದ್ರಿಕೆ 'ಕಾಡಿನೊಳಗಾದ ಶಂಕರಪ್ರಿಯ ಚೆನ್ನ ಕದಂಬಲಿಂಗ ನಿರ್ಮಾಯ ಪ್ರಭುವೆ'. ಈತನ ವಚನಗಳು ಸ್ವತಂತ್ರ ಕೃತಿರೂಪದಲ್ಲಿ ಅಲ್ಲದೆ 'ಸಂಬಂಧಾಚರಣೆಯ ವಚನಗಳು' ಹೆಸರಿನ ಪ್ರಾಚೀನ ವಚನಸಂಕಲನ ಕೃತಿಯಲ್ಲಿಯೂ ದೊರೆಯುತ್ತವೆ. ಸ್ವತಂತ್ರರೂಪದಲ್ಲಿ ಸಿಗುವ ಈ ಕೃತಿಕಟ್ಟನ್ನು 'ವೀರಶೈವ ಷಟ್‌ಸ್ಥಲ'ವೆಂದು ಕರೆಯಲಾಗಿದೆ. ಇದರಲ್ಲಿ ಸುಮಾರು ೬೦ಜನ ಶರಣರ ವಚನಗಳು ಎಡಪಡೆದಿದೆ. ಇವರಲ್ಲಿ 'ವಲ್ಲೆಪೀರಣ್ಣ' ಎಂಬ ಮುಸಲ್ಮಾನ ಶರಣನೂ ಇದ್ದು, ಈತ ಉರ್ದು ವಚನಗಳನ್ನು ಬರೆದಿದ್ದಾನೆ. ಕಟೂಕ್ತಿ, ವಾಚ್ಯ, ಬೆಡಗು ಇವನ ಬರವಣಿಗೆಯ ಮುಖ್ಯ ಲಕ್ಷಣವಾಗಿವೆ. ಈ ವರೆಗೆ ಸಿಕ್ಕ ಇವನ ವಚನಸಂಖ್ಯೆ ೫೦೦.

ಒಟ್ಟು ಈ ಯುಗದ ವಚನಗಳನ್ನು ಕುರಿತು ಹೇಳುವುದಾದರೆ, ಬಸವಯುಗದ ವಚನಗಳಲ್ಲಿ ಆಧ್ಯಾತ್ಮಿಕ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳು ನಿಬಿಡವಾಗಿದ್ದರೆ, ಇವುಗಳಲ್ಲಿ ಧಾರ್ಮಿಕ ಮೌಲ್ಯಗಳು ಮಾತ್ರ ಕಂಡಬರುತ್ತವೆ. ಅದರಲ್ಲಿಯೂ ಧಾರ್ಮಿಕ ಹೊಸ ನೋಟಗಳನ್ನು ಕಾಣಿಸಿಕೊಡದೆ, ಅನುಕರಣೆ ಮಾತ್ರ ಎದ್ದು ತೋರುತ್ತದೆ. ಇದಲ್ಲದೆ ಬಾಲಸಂಗಯ್ಯನ ವಚನ, ಕಾಡಸಿದ್ಧೇಶ್ವರ ವಚನಗಳನ್ನು ನೋಡಿದರೆ ಅಲ್ಲಿ ತತ್ತ್ವದ ಶುದ್ಧಿಯೂ ಮಿಶ್ರಣವಾಗುತ್ತ ನಡೆದುದು ಸ್ಪಷ್ಟವಾಗುತ್ತದೆ. ಸಾಹಿತ್ಯ ದೃಷ್ಟಿಯಿಂದಲೂ ಮೊದಲಿನ ಗುಣಮಟ್ಟ ತೋರಿಬರುವುದಿಲ್ಲ. ಹೀಗಾಗಿ ಪ್ರಗತಿ ಪರಂಪರೆಗಳಿಗಿಂತ ಸಂಪ್ರದಾಯವೇ ಇಲ್ಲಿಯ ಪ್ರಧಾನ ಲಕ್ಷಣವಾಗಿದೆ. ಕರಸ್ಥಲದ ಮಲ್ಲಿಕಾರ್ಜುನನ ವಚನಗಳು ಮಾತ್ರ ೧೨ನೆಯ ಶತಮಾನವನ್ನು ನೆನಪಿಸುತ್ತವೆ. ಆದುದರಿಂದ ಈ ಕಾಲದ ವಚನಸಾಹಿತ್ಯವನ್ನು ಸತ್ವಪೂರ್ಣ ಪರಂಪರೆಯ ಮುಂದುವರಿಕೆಯೆಂದು ಕರೆಯಲಾಗದಿದ್ದರೂ, ಅದರ ಒಂದು ಕೊಂಡಿಯೆಂದು ಹೇಳಬಹುದಾಗಿದೆ.

ಸಂಕೇಶ್ವರದ ಕಲಾ ವಿಜ್ಞಾನ ಕಾಲೇಜಿನ ಬೆಳ್ಳಿಹಬ್ಬ ಸಂದರ್ಭದಲ್ಲಿ ಯೋಜಿಸಿದ್ದ ವಿಚಾರ ಸಂಕಿರಣದ ಉದ್ಘಾಟನಾ ಭಾಷಣ (೧೯೯೩)

ಆಕರ : ಮಾರ್ಗ ಸಂಪುಟ-೬

೧೪

ಅನುಭಾವ ಸಾಹಿತ್ಯ ವಿಚಾರಸಂಕಿರಣ : ಉದ್ಘಾಟನೆ

೧೯೯೪

ಆತ್ಮೀಯರಾದ ಶ್ರೀ ಶಾಂತರಸ ಅವರೇ, ಸಾಹಿತ್ಯ ಅಕಾಡೆಮಿಯ ಕುಲಸಚಿವರಾದ ಶ್ರೀ ಸತ್ಯನಾರಾಯಣ ಅವರೇ, ಡಾ. ಎಂ. ಎಸ್. ಪಾಟೀಲ ಅವರೇ, ಶ್ರೀ ವೀರಣ್ಣ ದಂಡೆಯವರೇ, ಮಹನೀಯರೇ ಮತ್ತು ಮಹಿಳೆಯರೇ,

"ಕನ್ನಡದ ಅನುಭಾವ ಸಾಹಿತ್ಯ" ವಿಷಯವನ್ನು ಕುರಿತ ಈ ವಿಚಾರಸಂಕಿರಣನ್ನು ಉದ್ಘಾಟಿಸಲು ಬರುವಂತೆ ಡಾ. ಪಾಟಲ ಅವರು ನನಗೆ ಕೆಲವು ದಿನಗಳ ಹಿಂದೆಯೇ ಕೇಳಿಕೊಂಡರು. "ಅನುಭಾವವೆಂದರೇನು? ಈ ಬಗ್ಗೆ ನನಗೆ ಇನ್ನೂ ಸಂದೇಹವಿದೆ. ಯಾವುದರ ಬಗ್ಗೆ ನಿರ್ದಿಷ್ಟ ತಿಳಿವಳಿಕೆ ಇಲ್ಲವೋ ಅದನ್ನು ಕುರಿತು ಮಾತನಾಡಲು ನನಗೆ ಆಗುವುದಿಲ್ಲ, ದಯವಿಟ್ಟು ಕ್ಷಮಿಸಬೇಕು" ಎಂದು ಉತ್ತರ ಬರೆದೆ. ಪಾಟೀಲರು ಬಿಡಲಿಲ್ಲ. ಅವರ ಒತ್ತಾಯ - ಪ್ರೀತಿ ಕಾರಣವಾಗಿ ಇಲ್ಲಿಗೆ ಬಂದಿದ್ದೇನೆ.

ಕನ್ನಡದ ಅನುಭಾವ ಸಾಹಿತ್ಯವನ್ನು ಕುರಿತು ಮಾತನಾಡುವಾಗ ಅನುಭಾವ ಎಂದರೇನು? ಅದರ ಸ್ವರೂಪ ಎಂಥದ್ದು? ಸಾಹಿತ್ಯದಲ್ಲಿ ಅದು ಹೇಗೆ ಆಕಾರ ಪಡೆಯುತ್ತದೆ? ಕನ್ನಡ ಸಾಹಿತ್ಯದಲ್ಲಿ ಅದರ ಪಾತ್ರ ಹಾಗೂ ಪಾಲು ಎಷ್ಟು? ಎಂಬ ಮೂಲಭೂತ ಪ್ರಶ್ನೆಗಳು ಎದುರಾಗುತ್ತವೆ. ಉದ್ಘಾಟಕನಾದವನು ಈ ಪ್ರಶ್ನೆಗಳಿಗೆ ಉತ್ತರ ಕೊಡುವ ಮೂಲಕ ಮುಂದಿನ ಪ್ರಬಂಧಗಳಿಗೆ ಒಂದು ದಿಕ್ಕು-ದೆಸೆಗಳನ್ನು ತೋರಿಸಬೇಕಾಗುತ್ತದೆ. ಹೀಗಾಗಿ ನನ್ನದೇ ಆದ ರೀತಿಯಲ್ಲಿ ಚಿಂತನೆ ನಡೆಸಿ, ಕೆಲವು ನಿಲುವುಗಳನ್ನು ಇಲ್ಲಿ ಮಂಡಿಸಬಯಸುತ್ತೇನೆ.

ಅನುಭವ-ಅನುಭಾವ, ಶಿವಾನುಭವ-ಶಿವಾನುಭಾವ ಈ ಪದಗಳನ್ನು ನಾವು ಕೈಗೆ ಬಂದಂತೆ ಬಳಸುತ್ತೇವೆ. ಸಾಮಾನ್ಯವಾಗಿ ನಾವು ತಿಳಿದುಕೊಂಡಿದ್ದು "ಅನುಭವ" ಎನ್ನುವುದು ಲೌಕಿಕಕ್ಕೆ ಸಂಬಂಧಿಸಿದ್ದು, "ಅನುಭಾವ" ಎನ್ನುವುದು ಅಲೌಕಿಕಕ್ಕೆ ಸಂಬಂಧಿಸಿದ್ದು. "ಅನುಭಾವ"ಕ್ಕೆ "ಶಿವಾನುಭವ", "ಶಿವಾನುಭಾವ"ಗಳು ಪರ್ಯಾಯ ಪದಗಳು. ಕ್ರಿಯಾ ಜ್ಞಾನಗಳ ಸಾಮರಸ್ಯಸ್ಥಿತಿಯೇ ಅನುಭಾವ - ಹೀಗೆ ಕೆಲವು ಸ್ಥೂಲವಾದ ಅಂಶಗಳನ್ನು ತಿಳಿದುಕೊಂಡಿದ್ದೇವೆ.

ಅನುಭಾವ ತತ್ತ್ವಶಾಸ್ತ್ರದ ಪಾರಿಭಾಷಿಕ ಪದವೂ ಹೌದು, ಕಾವ್ಯಶಾಸ್ತ್ರದ ಪಾರಿಭಾಷಿಕ ಪದವೂ ಹೌದು. ಕಾವ್ಯಶಾಸ್ತ್ರದಲ್ಲಿ ಈ ಪದಕ್ಕೆ ನಿರ್ದಿಷ್ಟವಾದ ಅರ್ಥ ಹೇಳಲಾಗಿದೆ; ತತ್ತ್ವಶಾಸ್ತ್ರದಲ್ಲಿ ನಿರ್ದಿಷ್ಟವಾದ ಅರ್ಥ ಹೇಳಬೇಕಾಗಿದೆ. ಭಾರತೀಯ ಕಾವ್ಯಶಾಸ್ತ್ರ ರಸನಿಷ್ಪತ್ತಿಯ ವಿಷಯವಾಗಿ "ವಿಭಾವಾನುಭಾವ ವ್ಯಭಿಚಾರೀ

ಸಂಯೋಗಾತ್ ರಸನಿಷ್ಪತ್ತಿಃ" ಎಂದು ಹೇಳುತ್ತದೆ. ಇಲ್ಲಿ ವಿಭಾವ, ಅನುಭಾವ, ವ್ಯಭಿಚಾರೀ ಭಾವಗಳ ಸಂಯೋಗದಿಂದ ರಸ ನಿಷ್ಪನ್ನವಾಗುತ್ತದೆಯೆನ್ನುತ್ತ, "ಅನುಭಾವ" ಪದವನ್ನು ಬಳಸಲಾಗಿದೆ. ಮನುಷ್ಯ ಅಂದರೆ ದೇಹವಲ್ಲ,ಮನಸ್ಸು. ಮನಸ್ಸಿನ ವಿಕಾರವೆ ಭಾವ; ಭಾವದ ಉತ್ಕರ್ಷವೇ ರಸ. ಈ ರಸಗಳು ಎಂಟು. ಅವುಗಳನ್ನು ನಾವು ಅನುಭವಿಸಿ, ದೈಹಿಕ ಚಲನವಲನಗಳ ಮೂಲಕ ವ್ಯಕ್ತಪಡಿಸುವುದೇ ಅನುಭಾವ. ಹೀಗೆ ಕಾವ್ಯಮೀಮಾಂಸೆಯಲ್ಲಿ 'ಅನುಭಾವ' ಎಂಬ ಪದವನ್ನು ನಿರ್ದಿಷ್ಟ ಅರ್ಥದಲ್ಲಿ ಬಳಸುತ್ತ ಬಂದಿದ್ದೇವೆ. ಆದರೆ ತತ್ತ್ವಶಾಸ್ತ್ರದಲ್ಲಿ ಮಾತ್ರ ಸ್ವಲ್ಪ ಗೊಂದಲವಿದೆ. ಇದಕ್ಕೆ ನನ್ನದೇ ಆದ ಸಮಾಧಾನ ಹೀಗಿದೆ.

ಮನಸ್ಸಿನ ವಿಕಾರವೇ ಭಾವ; ನಿರ್ವಿಕಾರವೇ ಆತ್ಮ. ಭಾವದ ಉತ್ಕರ್ಷವು ರಸವಾಗುವಂತೆ ಆತ್ಮದ ಉತ್ಕರ್ಷವೂ ರಸವಾಗುತ್ತದೆ. ಇದೇ ಶಾಂತರಸ. ಇಲ್ಲಿ ಭಾವಸಂಬಂಧಿಯಾದ ಎಂಟು ರಸಗಳೇ ಬೇರೆ, ಆತ್ಮಸಂಬಂಧಿಯಾದ ಶಾಂತರಸವೇ ಬೇರೆ. ಹೀಗಿದ್ದೂ, ಭಾವಸಂಬಂಧಿ ರಸಗಳನ್ನು ಆತ್ಮಸಂಬಂಧಿ ರಸಗಳನ್ನಾಗಿ ತಿರುಗಿಸಿಕೊಳ್ಳಬಹುದೆಂದು ತೋರುತ್ತದೆ. ಕಾಯಸಾಹಿತ್ಯದಲ್ಲಿ ಶೃಂಗಾರವೆನಿಸುವ "ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ"ಎಂಬ ಅಕ್ಕನ ವಚನವು ಆತ್ಮಸಾಹಿತ್ಯವಾದುದೇ ಇದಕ್ಕೆ ನಿದರ್ಶನ. ಒಟ್ಟಿನಲ್ಲಿ ಇಂದ್ರಿಯಗಳನ್ನು ಉದ್ರೇಕಿಸಿಕೊಂಡು ಪಡೆವ ಆನಂದ ಒಂದಾದರೆ, ಇಂದ್ರಿಯಗಳನ್ನು ಉಪಶಮನಗೊಳಿಸಿಕೊಂಡು ಪಡೆಯುವ ಆನಂದ ಇನ್ನೊಂದು. ಉದ್ರೇಕಗೊಳಿಸಿ ಆನಂದ ನೀಡುವುದೇ "ಕಾಯಸಾಹಿತ್ಯ", ಉಪಶಮನಗೊಳಿಸಿ ಆನಂದ ನೀಡುವುದೇ "ಆತ್ಮಸಾಹಿತ್ಯ" ಎನ್ನಬಹುದು. ಸಾಮಾನ್ಯವಾಗಿ ನಮ್ಮ ಸಾಹಿತ್ಯದ ಬಹುಪಾಲು, ಕಾಯಸಾಹಿತ್ಯವೇ ಹೊರತು ಆತ್ಮಸಾಹಿತ್ಯವಲ್ಲ. ಇದನ್ನೇ ವಚನಕಾರರು "ಕಾಯಸಾಹಿತ್ಯ ಎಲ್ಲರಿಗೂ ಉಂಟು, ಆತ್ಮಸಾಹಿತ್ಯ ಅಪೂರ್ವ" ಎಂದು ಹೇಳಿದ್ದಾರೆ. ಹಿಂದೂ ದೇವಾಲಯದೊಳಗೆ ಗಂಟೆ ಜಾಗಟೆಗಳ ಸಶಬ್ದ ಆರಾಧನೆ ನಡೆಯುತ್ತದೆ. ಮಸೀದೆಗಳಲ್ಲಿ ನಿಶ್ಶಬ್ದ ಆರಾಧನೆ ನಡೆಯುತ್ತದೆ. ಅದರಲ್ಲಿಯೂ ಆನಂದವಿದೆ, ಇದರಲ್ಲಿಯೂ ಆನಂದವಿದೆ. ಈ ಮಾತುಗಳಿಂದ ಕಾಯಸಾಹಿತ್ಯ, ಆತ್ಮಸಾಹಿತ್ಯಗಳ ಸ್ವರೂಪವನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಒಟ್ಟಿನಲ್ಲಿ ಇಂದ್ರಿಯನಿಷ್ಠ ಭಾವಗಳ ಮೆಲೆ ಕೇಂದ್ರಿಕೃತ ಶಬ್ದಕಲೆಯ ಚಟುವಟಿಕೆಯೇ ಕಾಯಸಾಹಿತ್ಯ, ಇಂದ್ರಿಯಾತೀತ ಆತ್ಮದ ಮೇಲೆ ಕೇಂದ್ರೀಕೃತ ಶಬ್ದಕಲೆಯ ಚಟುವಟಿಕೆಯೇ ಆತ್ಮಸಾಹಿತ್ಯ.

ಈ ವರೆಗೆ ವಿವರಿಸಿದ ಶಾಂತರಸ, ಅದನ್ನು ಪ್ರತಿಪಾದಿಸುವ ಆತ್ಮಸಾಹಿತ್ಯ -ಇವು ಕನ್ನಡದಲ್ಲಿ ಮೂಲತಃ ಜೈನರ ಕೊಡುಗೆಗಳೆಂದು ಕಾಣುತ್ತದೆ. ಅವರು ತೀರ್ಥಂಕರರ ಲೌಕಿಕ ಚರಿತ್ರೆ, ಅಲೌಕಿಕಿ ಸಿದ್ಧಿಗಳನ್ನು ಪ್ರತಿಪಾದನೆ ಮಾಡುವ ಸಂದರ್ಭದಲ್ಲಿ ಕಾಯಸಾಹಿತ್ಯದ ಜೊತೆ ಆತ್ಮಸಾಹಿತ್ಯವನ್ನೂ ಸಮನ್ವಯಿಸಿದರು. ಕವಿ ನಾಗಚಂದ್ರ "ನಿನಗೆ ರಸಮೊಂದೆ ಶಾಂತಮೆ ಜಿನೇಂದ್ರ" ಎನ್ನುತ್ತ ಮಿಕ್ಕವು ತನ್ನ ಕನಸಿನಲ್ಲಿಯೂ ಬರದಿರಲಿ ಎಂದು ಜಿನನನ್ನು ಪ್ರಾರ್ಥಿಸುತ್ತಾನೆ. ಈ ಮಾತನ್ನು ಮುಂದುವರೆಸಿ, "ರಾಗದ್ವೇಷ ನಿಬದ್ಧಮಪ್ಪ ಕೃತಿಯಂ. . . . ಬಂಧಮಿಂಬಾಗೆ ಅರ್ಥ ಪೊಸತಾಗೆ ಪೇಳ್ದು ಅಖಿಲಮಂ ರಾಗಾವಿಳಂ ಮಾಳ್ಪ ವಿದ್ಯಾಗರ್ವಗ್ರಹಪೀಡಿತರ್. . .ಬಿತ್ತಿಬೆಳೆವಂತಕ್ಕು ವಿಷೋದ್ಯಾನಮಂ" (ವಿದ್ಯಾಗರ್ವವೆಂಬ ಭೂತ ಬಡಿಸಿಕೊಂಡ ಪಂಡಿತರು ರಾಗದ್ವೇಷಗಳಿಂದ ಕೂಡಿದ ಸಾಹಿತ್ಯ ರಚಿಸುವುದೆಂದರೆ ಉದ್ಯಾನ ಬೆಳೆಸುವ ನೆವದಲ್ಲಿ ವಿಷೋದ್ಯಾನವನ್ನು ಬೆಳೆಸಿದಂತೆ) ಎನ್ನುತ್ತಾನೆ. ಇಂಥ ಸಾಹಿತ್ಯದಿಂದ ಲೌಕಿಕಕ್ಕೂ ಕಲ್ಯಾಣವಿಲ್ಲ, ಅಲೌಕಿಕಕ್ಕೂ ಕಲ್ಯಾಣವಿಲ್ಲ ಎನ್ನುವ ಇವನ ಮಾತುಗಳನ್ನು ನೋಡಿದರೆ, ಜೈನಕವಿಗಳು ಎಂಟು ರಸನಿಷ್ಠ ಸಾಹಿತ್ಯ ಮತ್ತು ಅಂತಿಮದಲ್ಲಿ ಶಾಂತರಸನಿಷ್ಠಸಾಹಿತ್ಯವೆಂದು ಎರಡುವರ್ಗ ಮಾಡಿದ್ದು, ಇವುಗಳಲ್ಲಿ ಒಂದು "ಕಾಯಸಾಹಿತ್ಯಸಂಬಂಧಿ", ಇನ್ನೊಂದು "ಆತ್ಮಸಾಹಿತ್ಯಸಂಬಂಧಿ" ಎಂದು ಹೇಳಬಹುದು.

ಈ ಆತ್ಮಸಾಹಿತ್ಯವನ್ನು "ಅಧ್ಯಾತ್ಮಸಾಹಿತ್ಯ"ವೆನ್ನಬಹುದು. ಇಂದು ಇಂಥ ಸಾಹಿತ್ಯವನ್ನೇ "ಅನುಭಾವಸಾಹಿತ್ಯ"ವೆಂದು ಕರೆಯುವ ತಪ್ಪು ಮಾಡುತ್ತಲಿದ್ದೇವೆ. ಈ ಆತ್ಮವಾದಿ ಅಥವಾ ಅಧ್ಯಾತ್ಮವಾದಿಗಳಿಂದ ಭಿನ್ನರಾಗಿದ್ದಾರೆ, 'ಅನುಭಾವವಾದಿ'ಗಳು. ಅವರ ಆತ್ಮಸಾಹಿತ್ಯ ಅಥವಾ ಅಧ್ಯಾತ್ಮಸಾಹಿತ್ಯಕ್ಕಿಂತ ಭಿನ್ನವಾದುದು, ಇವರ ಅನುಭಾವಸಾಹಿತ್ಯ.

"ಅನುಭಾವ" ಎನ್ನುವ ಪದ ಭಾರತಕ್ಕೆ ವೀರಶೈವ ಶರಣರ ಕೊಡುಗೆಯಾಗಿದೆ. ಮಿಕ್ಕ ಧರ್ಮಗಳು ಆತ್ಮಕೇಂದ್ರಿತವಾದುವು, ಅಂದರೆ ವ್ಯಕ್ತಿ ಉದ್ಧಾರವನ್ನು ಕುರಿತು ಹೇಳುವುವು. ವೀರಶೈವಧರ್ಮ ಆತ್ಮಕೇಂದ್ರೀಯದ ಜೊತೆಗೆ ಸಮಾಜಕೇಂದ್ರೀಯವಾದದ್ದು. ಈ ಎರಡೂ (ಆತ್ಮ, ಸಮಾಜ) ನೆಲೆಗಳಲ್ಲಿ ಬಾಳುವವರು ಅನುಭಾವಿಗಳು. ವೀರಶೈವಧರ್ಮದಲ್ಲಿ ಮೂರು ಮಾತುಗಳು ಮುಖ್ಯ: ಗುರುಸೇವೆ, ಲಿಂಗಪೂಜೆ, ಜಂಗಮದಾಸೋಹ. ಎಲ್ಲ ಧರ್ಮಗಳು ಗುರುಸೇವೆ, ಲಿಂಗಪೂಜೆಗಳಿಗೆ ನಿಂತುಕೊಂಡರೆ, ವೀರಶೈವ ಇವೆರಡರ ಜೊತೆಗೆ ಜಂಗಮ ದಾಸೋಹಕ್ಕೂ ವಿಸ್ತರಿಸಿಕೊಳ್ಳುತ್ತದೆ. ಜಂಗಮ ದಾಸೋಹದ ವರೆಗೆ ಚಾಚಿಕೊಂಡರೆ ಮಾತ್ರ ಪೂರ್ಣಮನುಷ್ಯನಾಗುವನೆಂದು ಈ ಧರ್ಮ ಹೇಳುತ್ತದೆ. ಚನ್ನಬಸವಣ್ಣನವರು ಬಸವಣ್ಣನವರನ್ನು ಕುರಿತು ಒಂದೆಡೆ ಹೀಗೆ ಪ್ರಸ್ತಾಪಿಸುತ್ತಾರೆ,

ಕವಿತ್ವ ಸಾಧಕರೆಲ್ಲ ಕಳವಳಿಸಿ ಹೋದರು,
ವಿದ್ಯಾಸಾಧಕರೆಲ್ಲ ಬುದ್ಧಿಗೆಟ್ಟರು,
ತತ್ವಸಾಧಕರೆಲ್ಲ ಭಕ್ತಿಹೀನರಾದರು,
ಲಿಂಗಸಾಧಕರೆಲ್ಲ ಭೂಭಾರಕರಾದರು,
ಕೂಡಲಚೆನ್ನಸಂಗಮದೇವಯ್ಯಾ
ನಿಮ್ಮ ಬಸವಣ್ಣ ಜಂಗಮಸಾಧಕನಾಗಿ ಸ್ವಯಂಲಿಂಗವಾದನು.

ಇಲ್ಲಿಯೂ "ಲಿಂಗಸಾಧಕ"ರ ಅಪೂರ್ಣತೆಯನ್ನು, "ಜಂಗಮಸಾಧಕ"ರ ಪರಿಪೂರ್ಣತೆಯನ್ನು ಎತ್ತಿಹೇಳಲಾಗಿದೆ.

ಜಂಗಮ ಅಂದರೆ ಇಲ್ಲಿ ಸಮಾಜವೆಂದು ಅರ್ಥ. ಸಮಾಜದಲ್ಲಿಯ ವರ್ಗಭೇದ, ವರ್ಣಭೇದ, ಲಿಂಗಭೇದ ನಿರಾಕರಣೆಯ ಬಗ್ಗೆ ನಮ್ಮ ಹಿಂದೂಧರ್ಮಗಳು ಹೇಳುವುದಿಲ್ಲ; ಹೇಳಿದರೂ ಬಾಳುವುದಿಲ್ಲ; ಪರಿಸರವೂ ಹಾಗೆ ಬಾಳಬೇಕೆಂದು ಪ್ರಯತ್ನಿಸುವುದಿಲ್ಲ. ಶರಣರು ಮಾತ್ರ ವ್ಯಕ್ತಿ ಉದ್ಧಾರದೊಂದಿಗೆ ಸಮಾಜದ ಉದ್ಧಾರವನ್ನೂ ತಮ್ಮ ತತ್ವವಲಯಕ್ಕೆ ಒಳಗುಮಾಡಿಕೊಂಡು ಆಧ್ಯಾತ್ಮಿಕಗಳಾಗಿ ಉಳಿಯದೆ, ಅನುಭಾವಿಗಳಾಗಿ ಬೆಳೆಯುತ್ತಾರೆ. ಹೀಗಾಗಿ ಅನುಭಾವವೆನ್ನುವುದು ವ್ಯಕ್ತಿಕೇಂದ್ರಿತವೂ ಹೌದು, ಸಮಾಜಕೇಂದ್ರಿತವೂ ಹೌದು. ಬಸವಣ್ಣ ಒಂದು ಮಾತನ್ನು ಹೇಳುತ್ತಾನೆ: "ಲಿಂಗವ್ಯಸನಿ, ಜಂಗಮಪ್ರೇಮಿ ಎಂದೆನಿಸಯ್ಯಾ" ಎಂದು. ನಿಜವಾದ ವೀರಶೈವ ಎನಿಸಿಕೊಳ್ಳಬೇಕಾದರೆ ಇವೆರಡೂ ನೆಲೆಗಳಲ್ಲಿ ಬಾಳಬೇಕು. ಕೇವಲ ಲಿಂಗವ್ಯಸನಿಯಾಗಿ ಆತ್ಮೋದ್ಧಾರ ಮಾಡಿಕೊಂಡರೆ ಸಾಲದು. ಅದು ಅಪೂರ್ಣ ಬದುಕು. ನೀನೂ ಪೂರ್ಣವಾಗಬೇಕು, ಸಮಾಜವನ್ನೂ ಪೂರ್ಣಗೊಳಿಸಬೇಕು - ಇದನ್ನು ವೀರಶೈವ-ಹೇಳುತ್ತದೆ. ನೀನು ಪೂರ್ಣವಾಗಿ ಸಮಾಜ ಅಪೂರ್ಣವಾದರೆ ನಿಮ್ಮಿಬ್ಬರಲ್ಲಿ ಸಾಮರಸ್ಯ ಸಾಧ್ಯವಾಗುವುದಿಲ್ಲ. ಸ್ನಾನಮಾಡಿ ತಿಪ್ಪೆಯೊಳಗೆ ತಿರುಗಾಡಿದಂತಾಗುತ್ತದೆ. ಭಾರತದ ಧರ್ಮಗಳ ವೈಯಕ್ತಿಕ ಉದ್ಧಾರವನ್ನು ಕುರಿತು ಯೋಚಿಸಿದವೇ ಹೊರತು, ಸಮಾಜದ ಉದ್ಧಾರವನ್ನು ಕುರಿತು ಅಲ್ಲ. ಇದರಿಂದ ಧರ್ಮ ಮತ್ತು ಸಮಾಜಗಳ ನಡುವೆ ಕಂದರ ಉಂಟಾಯಿತು. "ಭಾರತೀಯರು ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರು" ಎಂಬ ಸ್ಥಿತಿ ನಿರ್ಮಾಣವಾಯಿತು.

ವೀರಶೈವರಲ್ಲಿ ಮಾತ್ರ ವೈಯಕ್ತಿಕತೆಯ ಜೊತೆ ಸಾಮಾಜಿಕ ಸಬಲತೆಯನ್ನೂ ಹೇಳಲಾಗಿದೆ. ಇದು "ಅನುಭಾವ" ಎನ್ನುವುದರ ವಿಸ್ತಾರ. ಇಂಥವರು ಅಂದರೆ ಲಿಂಗವ್ಯಸನಿ ಜಂಗಮದಾಸೋಹಿಗಳು ಬರೆದುದು ಅನುಭಾವಸಾಹಿತ್ಯ. ಇದರಿಂದಾಗಿ ಸಾಹಿತ್ಯದಲ್ಲಿ ಮೂರು ನೆಲೆಗಳು ಕಂಡುಬರುತ್ತವೆ. (೧)ಕವಿಗಳು ಬರೆದ ಕಾಯಸಾಹಿತ್ಯ(ಭಾವೋದ್ರೇಕ ಸಾಹಿತ್ಯ), (೨)ಲಿಂಗವ್ಯಸನಿಗಳು ಬರೆದ ಆತ್ಮಸಾಹಿತ್ಯ(ಆತ್ಮೋದ್ಧಾರ ಸಾಹಿತ್ಯ), (೩) ಜಂಗಮ ದಾಸೋಹಿಗಳು ಬರೆದ ಅನುಭಾವಸಾಹಿತ್ಯ(ವ್ಯಕ್ತಿ-ಸಮಾಜ ಉದ್ಧಾರ ಸಾಹಿತ್ಯ).

ಈ ಸಂದರ್ಭದಲ್ಲಿ ಚನ್ನಬಸವಣ್ಣನವರದೊಂದು ವಚನ ನೆನಪಾಗುತ್ತದೆ. "ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ." ಇದನ್ನೇ ಹೆಚ್ಚು ಕಡಿಮೆ ಮಾಡಿ "ಸಾವಿರಕ್ಕೊಬ್ಬ ಕವಿಸಾಹಿತಿ, ಲಕ್ಷಕ್ಕೊಬ್ಬ ಆತ್ಮಸಾಹಿತಿ, ಕೋಟಿಗೊಬ್ಬ ಅನುಭಾವಸಾಹಿತಿ" ಎಂದು ಹೇಳಬಹುದು.

ಇದು, ನಾನು ತಿಳಿದುಕೊಂಡ "ಅನುಭಾವ ಸಾಹಿತ್ಯ". ಇದರ ಹಿನ್ನೆಲೆಯಲ್ಲಿ ಇಂದಿನ ಪ್ರಬಂಧಗಳು ಮಂಡಿತವಾಗುತ್ತವೆಂದು ಭಾವಿಸಿ, ಎಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಗುಲ್ಬರ್ಗಾದಲ್ಲಿ ಹಮ್ಮಿಕೊಂಡಿದ್ದ 'ಅನುಭಾವಸಾಹಿತ್ಯ' ವಿಚಾರ ಸಂಕಿರಣದ ಉದ್ಘಾಟನ ಭಾಷಣ (೧೯೯೪).

ಆಕರ : ಮಾರ್ಗ ಸಂಪುಟ-೬

೧೫

ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟನ ಯೋಜನೆ : ಉದ್ಘಾಟನೆ

೧೯೯೫

ಪೂಜ್ಯರಿಗೆ ನಮಸ್ಕಾರ, ಸಭೆಗೆ ನಮಸ್ಕಾರ

ಮೈಸೂರಿನ "ಶ್ರೀ ಜಗದ್ಗುರು ಶಿವರಾತ್ರೀಶ್ವರ ಮಠ" ನಮ್ಮ ನಾಡಿನ ಪ್ರತಿಷ್ಠಿತ ಧಾರ್ಮಿಕ ಸಂಸ್ಥೆ. ಧರ್ಮವನ್ನು ಶರಣಸಿದ್ಧಾಂತದ ವ್ಯಾಪಕ ಅರ್ಥದಲ್ಲಿ ಪರಿಭಾವಿಸಿದ ಈ ಸಂಸ್ಥೆ ದಾಸೋಹ ಪದವನ್ನು ಕಾಲಕ್ಕೆ ತಕ್ಕಂತೆ ಪ್ರಸ್ತುತಗೊಳಿಸುತ್ತ ಬಂದಿದೆ. ಈ ಪ್ರಯೋಗದ ಒಂದು ಅಂಗ 'ಸಾಹಿತ್ಯದಾಸೋಹ'. "ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ" ಹೆಸರಿನಲ್ಲಿ ನಡೆದ ಈ ಸಾಹಿತ್ಯ ದಾಸೋಹದ ಭಾಗವಾಗಿ ಈಗಾಗಲೇ ವಿಚಾರ ಸಂಕಿರಣ, ಸಮ್ಮೇಳನಗಳನ್ನು ಜರುಗಿಸಲಾಗಿದೆ. ಉತ್ತಮೋತ್ತಮ ಗ್ರಂಥಗಳನ್ನು ಪ್ರಕಟಿಸಲಾಗಿದೆ. ಈ ಗ್ರಂಥಪ್ರಕಟನ ಪರಂಪರೆಯ ಅಂಗವಾಗಿ "ಶಿವದಾಸಗೀತಾಂಜಲಿ"ಯನ್ನು ಪ್ರಕಟಿಸುವ ಮೂಲಕ ಶರಣರ "ಸ್ವರವಚನಸಾಹಿತ್ಯ" ಪ್ರಕಟನೆಯ ಇತಿಹಾಸದಲ್ಲಿ ಶ್ರೀ ಮಠವು ಡಾ. ಫ. ಗು.ಹಳಕಟ್ಟಿಯವರ ಬಳಿಕ ಇನ್ನೊಂದು ಹೊಸ ಘಟ್ಟವನ್ನೇ ತೆರೆದಿದೆ ; ಮತ್ತು ಇದರ ಮುಂದುವರಿಕೆಯೆಂಬಂತೆ "ಮುಪ್ಪಿನ ಷಡಕ್ಷರಿಗಳ ಕೈವಲ್ಯಪದ್ಧತಿ" ಸಂಪುಟವನ್ನು ಪ್ರಕಟಿಸಿದೆ. ಈಗ ಈ ಪ್ರಯತ್ನಕ್ಕೆ ಪೂರ್ಣ ಸ್ವರೂಪ ಕೊಡುವ ಉದ್ದೇಶದಿಂದ "ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟನಯೋಜನೆ" ಹೆಸರಿನ ಒಂದು ಬೃಹತ್ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ವೀರಶೈವ ಸಾಹಿತ್ಯದ ಮಹತ್ವದ ಪ್ರಕಾರವಾದ ವಚನಸಾಹಿತ್ಯ ಈವರೆಗೆ ಬಹುಮಟ್ಟಿಗೆ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಿದೆ. ವಚನಗಳ ಸಾಹಿತ್ಯಿಕ, ಸಾಮಾಜಿಕ, ಸೈದ್ಧಾಂತಿಕ ಪ್ರಭಾವಗಳಿಗೆ ಮಾರುಹೋದ ವಿದ್ವಾಂಸರು ಶರಣರ ಇನ್ನೊಂದು ಮಹತ್ವದ ಪ್ರಕಾರವಾದ "ಸ್ವರವಚನಸಾಹಿತ್ಯ"ದ ಪ್ರಕಟನೆಯ ಕಡೆಗೆ ಅಷ್ಟಾಗಿ ಗಮನಹರಿಸಲಿಲ್ಲ. ಈ ಕೊರತೆಯನ್ನು ತುಂಬಿಕೊಡುವ ಮಹೋದ್ದೇಶದಿಂದ ಪ್ರಸ್ತುತ ಯೋಜನೆ ಹುಟ್ಟಿಕೊಂಡಿದೆ.

ತಮ್ಮ ಅನುಭಾವದ ವಾಚನ ಪಾತಳಿಗಾಗಿ 'ವಚನ'ಗಳನ್ನು ಬರೆದ ಶರಣರು ಶ್ರವಣಪಾತಳಿಗಾಗಿ 'ಸ್ವರವಚನ'ಗಳನ್ನು ಬರೆದರು. ಹನ್ನೆರಡನೆಯ ಶತಮಾನದಿಂದ ೨೦ನೆಯ ಶತಮಾನದ ವರೆಗೆ ನೂರಾರು

ಜನ ಶಿವಶರಣರು, ಶಿವಕವಿಗಳು ಸೃಷ್ಟಿಸಿದ ಈ ಸಾಹಿತ್ಯ ಲಿಖಿತ ಮತ್ತು ಮೌಖಿಕ ಪರಂಪರೆಯಲ್ಲಿ ಸಾಗಿಬಂದಿದೆ. ಈ ಸಾಹಿತ್ಯವನ್ನು ಸಮಗ್ರವಾಗಿ ಪ್ರಕಟಿಸಲಿರುವ ಪ್ರಸ್ತುತ ಯೋಜನೆಯಲ್ಲಿ ನಾವು ಎರಡು ಹಂತಗಳನ್ನು ಕಲ್ಪಿಸಿಕೊಂಡಿದ್ದೇವೆ.

೧. ಅಪ್ರಕಟಿತ ರೂಪದಲ್ಲಿರುವ ಲಿಖಿತ ಮತ್ತು ಮೌಖಿಕ ಪರಂಪರೆಯ ಎಲ್ಲ ಸ್ವರವಚನಗಳನ್ನು ಮೂರು ವರ್ಷಗಳ ಅವಧಿಯಲ್ಲಿ ಪ್ರಕಟಿಸುವ ಉದ್ದೇಶ ನಮ್ಮ ಕಣ್ಣಮುಂದಿದೆ. ಇಲ್ಲಿ ಪ್ರಾಚೀನ ಸ್ವತಂತ್ರ ಸ್ವರವಚನ 'ಕೃತಿ'ಗಳನ್ನು ಪರಿಷ್ಕರಿಸಿ ಪ್ರಕಟಿಸುವುದು; ಹಸ್ತಪ್ರತಿಗಳಲ್ಲಿ ಬಿಡಿಬಿಡಿಯಾಗಿ ಸಿಗುವ ಸ್ವರವಚನಗಳನ್ನು ಸಂಗ್ರಹಿಸಿ ಸಂಪುಟರೂಪದಲ್ಲಿ ಪ್ರಕಟಿಸುವುದು ; ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿ ಮೌಖಿಕ ಪರಂಪರೆಯಲ್ಲಿ ಸಿಗುವ ಸ್ವರವಚನಗಳನ್ನು ಧ್ವನಿಮುದ್ರಣ ಮಾಡಿಕೊಂಡು ಸಂಪುಟರೂಪದಲ್ಲಿ ಪ್ರಕಟಿಸುವುದು - ಇದು ಮೊದಲ ಹಂತದ ಪ್ರಕಟನ ಕಾರ್ಯ.

೨. ಹೀಗೆ ಎಲ್ಲ ಮೂಲಗಳಿಂದ ಸಂಗ್ರಹಿಸಿ ನಾವು ಪ್ರಕಟಿಸಿದ ಮತ್ತು ಈಗಾಗಲೇ ಅನ್ಯಸಂಸ್ಥೆಗಳು ಪ್ರಕಟಿಸಿದ ಎಲ್ಲ ಸ್ವರವಚನರಾಶಿಯನ್ನು ಒಂದು ಶಿಸ್ತಿಗೆ ಅಳವಡಿಸಿ, ಹದಿನೈದು ಸಂಪುಟಗಳಲ್ಲಿ ಏಕಕಾಲಕ್ಕೆ ಪ್ರಕಟಿಸುವುದು ಎರಡನೆಯ ಹತದ ಕಾರ್ಯವಾಗಿದೆ. ಈ ಹಂತದ ಒಟ್ಟು ಯೋಜನೆ ಹೀಗಿದೆ :

ಸಂಪುಟ ೧ : ಬಸವೇಶ್ವರ ಮೊದಲಾದ ೧೨ನೆಯ ಶತಮಾನದ ಶರಣರ ಬಿಡಿ ಸ್ವರವಚನ ಸಂಪುಟ.

ಸಂಪುಟ ೨ : ನಿಜಗುಣ ಶಿವಯೋಗಿ, ಸಪ್ತಕಾವ್ಯದ ಗುರುಬಸವ, ಸರ್ವಭೂಷಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಬಾಲಲೀಲಾ ಮಹಾಂತ ಶಿವಯೋಗಿ, ಮೈಲಾರ ಬಸವಲಿಂಗಶರಣರು - ಇತ್ಯಾದಿ ಪ್ರಸಿದ್ಧ ಸ್ವರವಚನಕಾರರ ಸಂಪುಟ.

ಸಂಪುಟ ೩ : ಗುರುಬಸವಾರ್ಯ, ಕರಸ್ಥಲನಾಗಿದೇವ, ಮೊಗ್ಗೆಯಮಾಯಿದೇವ, ಕಸ್ತೂರದೇವ, ಕವಿಲಿಂಗ, ವರತೆಯ ಸೋಮಣ್ಣ, ಸೋದೆ ಸದಾಶಿವರಾಯ, ದೊಡ್ಡಷಡಕ್ಷರಿಸ್ವಾಮಿ, ಜಿಗುನಿ ಮರುಳದೇವ, ಬೆಂಗಳೂರು ಮುದ್ವೀರಸ್ವಾಮಿ, ಕಾರುಗಹಳ್ಳಿ ಶಾಂತಯ್ಯ, ಶಂಕರದೇವ, ನಿಷ್ಕಲರು, ಮರಿಶಾಂತಬಸವ, ಸೋಮನಕಟ್ಟೆಕರಿಬಸವೇಶ್ವರ, ಗುರುಗುಂಡಬಸವ - ಇತ್ಯಾದಿ ಅಪ್ರಸಿದ್ಧ ಸ್ವರವಚನಕಾರರ ಸಂಪುಟ.

ಸಂಪುಟ ೪ : ಹಸ್ತಪ್ರತಿಗಳಲ್ಲಿ ಸಿಗುವ ಬಿಡಿ ಸ್ವರವಚನ ಸಂಪುಟಗಳು

ಸಂಪುಟ ೫ : " "

ಸಂಪುಟ ೬ : " "

ಸಂಪುಟ ೭ : " "

ಸಂಪುಟ ೮ : " "

ಸಂಪುಟ ೯ : " "

ಸಂಪುಟ ೧೦ : " "

ಸಂಪುಟ ೧೧ : ಮೌಖಿಕ ಪರಂಪರೆಯಲ್ಲಿ ಸಿಗುವ ಕಡಕೋಳ ಮಡಿವಾಳಪ್ಪ, ಕೂಡಲೂರ ಬಸವಲಿಂಗ ಶರಣರು, ನೀರಲಕೇರಿ ಸ್ವಾಮಿಗಳು ಮೊದಲಾದವರ ಸ್ವರವಚನ ಸಂಪುಟಗಳು.

ಸಂಪುಟ ೧೨ : " "

ಸಂಪುಟ ೧೩ : " "

ಸಂಪುಟ ೧೪ : " "

ಸಂಪುಟ ೧೫ : " "

ಈ ಯೋಜನೆ ಶ್ರೀಮಠದ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮೈಲುಗಲ್ಲು. ಇದು ಪೂರ್ಣಗೊಂಡರೆ ನಮ್ಮ ಅವಜ್ಞೆಯಲ್ಲಿ ಮುಳುಗಿ ಹೋಗಿರುವ ಹೊಸ ಸಾಹಿತ್ಯ ಪ್ರಕಾರವೊಂದು ಸಮಗ್ರರೂಪದಲ್ಲಿ ಬೆಳಕಿಗೆ ಬರುತ್ತದೆ. ಹಾಗೆ ನೋಡಿದರೆ ಬಹುಸಂಖ್ಯೆ ಜನರ ಮೇಲೆ ಮೋಡಿ ಹಾಕಿದ, ಅವರ ವ್ಯಕ್ತಿತ್ವವನ್ನು ತೀಡುತ್ತ ಬಂದ ಸಾಹಿತ್ಯ ಸಮುದಾಯದಲ್ಲಿಯೇ ಹಾಡುಗಬ್ಬ ಪ್ರಕಾರ ಗಣ್ಯವಾದುದು. ಕನ್ನಡ ಸಾಹಿತ್ಯದ ಮೊದಲ ಪುಟದ ರಚನೆಗಳಾಗಿರುವ ದೇಶೀಯ 'ಹಾಡುಗಬ್ಬ'ಗಳನ್ನು 'ಓದುಗಬ್ಬ'ವಾದ ಚಂಪೂ ಮೊದಲಾದವು ಮೂಲೆಗೆ ತಳ್ಳಿದವು. ಮುಂದೆ ೧೨ನೆಯ ಶತಮಾನದಲ್ಲಿ ದೇಶೀ ನೆಲೆಗಳಿಂದ ಬಂದ ಶರಣರು ದೇಶೀ ಪರಂಪರೆಯನ್ನು ಹರಿಗಡಿದು, ಅದಕ್ಕೆ ಲಿಖಿತ ಸಾಹಿತ್ಯದಲ್ಲಿ ನ್ಯಾಯವಾದ ಸ್ಥಾನವನ್ನು ಒದಗಿಸಿಕೊಟ್ಟರು. ಇದರಿಂದಾಗಿ ಜೇಡರ ದಾಸಿಮಯ್ಯ, ಬಸವಣ್ಣ, ಮಹಾದೇವಿಯಕ್ಕ ಮೊದಲಾದ ಶರಣರು ರಚಿಸಿದ 'ಹಾಡುಗಬ್ಬ' ಪ್ರಕಾರವು ಸ್ವರವಚನವೆಂಬ ಹೆಸರಿನಲ್ಲಿ ಪ್ರಸಿದ್ಧಿಪಡೆಯಿತು. ಬಳಿಕ ನಿಜಗುಣ ಶಿವಯೋಗಿಗಳಲ್ಲದೆ ವಿಜಯನಗರದ ಪ್ರೌಢದೇವರಾಯನ ಕಾಲದಲ್ಲಿ ಸಪ್ತಕಾವ್ಯದ ಗುರುಬಸವ, ಮೊಗ್ಗೆಯ ಮಾಯಿದೇವ, ಕರಸ್ಥಲದ ನಾಗಿದೇವ ಮೊದಲಾದ ವೀರಶೈವ ಅನುಭಾವಿಗಳು 'ಸ್ವರವಚನ' ಪ್ರಕಾರದಲ್ಲಿ ಕೃಷಿಮಾಡಿದರು. ಪ್ರೌಢದೇವರಾಯನ ತರುವಾಯ ೧೦೦ ವರ್ಷ ಗತಿಸುವಲ್ಲಿ ಪಟ್ಟಕ್ಕೆ ಬಂದ ಕೃಷ್ಣದೇವರಾಯನ ಪರಿಸರದ ಪುರಂದರದಾಸ, ಕನಕದಾಸ ಮೊದಲಾದವರೆಲ್ಲ ಈ ಹಾಡುಗಬ್ಬ ಪ್ರಕಾರವನ್ನು ಹರಿಸರ್ವೋತ್ತಮ ನೆಲೆಯಲ್ಲಿ ದುಡಿಸಿ, 'ಕೀರ್ತನೆ' ಹೆಸರಿನಲ್ಲಿ ಪ್ರಸಿದ್ಧಿಪಡಿಸಿದರು. ಈ ದಾಸ ಸಂಪ್ರದಾಯದ ಎರಡನೆಯ ಘಟ್ಟದಲ್ಲಿ ಪ್ರಸನ್ನವೆಂಕಟದಾಸ, ವಿಜಯದಾಸ, ಮಹಿಪತಿದಾಸ ಮೊದಲಾದವರು ಹುಟ್ಟಿ 'ಕೀರ್ತನ' ಪ್ರಕಾರವನ್ನು ವಿಪುಲಪ್ರಮಾಣದಲ್ಲಿ ಬೆಳೆಸಿದರು. ರತ್ನಾಕರ ವರ್ಣಿ ಮೊದಲಾದ ಜೈನ ಕವಿಗಳು "ಹಾಡು"ಗಳನ್ನು ಬರೆದರು. ಜೈನರ ಹಾಡು, ದಾಸರ ಈ ಕೀರ್ತನೆಯ ಜೊತೆಜೊತೆಗೇ ಕಸ್ತೂರದೇವ, ಜಿಗುನಿಮರುಳದೇವ, ಸರ್ಪಭೂಷಣ ಶಿವಯೋಗಿ, ಮುಪ್ಪಿಷಡಕ್ಷರಿ, ಮೈಲಾರ ಬಸವಲಿಂಗಶರಣರು, ಕಡಕೋಳ ಮಡಿವಾಳಪ್ಪ, ಕೂಡಲೂರು ಬಸವಲಿಂಗ ಶರಣರು ಮೊದಲಾದ ವೀರಶೈವ ಅನುಭಾವಿಗಳು 'ಸ್ವರವಚನ' ಪರಂಪರೆಯನ್ನು ಮುಂದುವರಿಸಿದರು. ಈ ಎಲ್ಲ ರಚನೆಗಳನ್ನು ಒಂದೂ ಬಿಡದಂತೆ ಸಂಗ್ರಹಿಸಿ ಪ್ರಕಟಿಸಿದರೆ 'ಕೀರ್ತನ'ಸಾಹಿತ್ಯದ ಮಗ್ಗುಲಲ್ಲಿ 'ಸ್ವರವಚನ ಸಾಹಿತ್ಯ'ವೆಂಬ ಇನ್ನೊಂದು ಪ್ರಕಾರ ಎದ್ದುಕಾಣುತ್ತದೆ. 'ಹರಿಸರ್ವೋತ್ತಮ' ಹಾಡುಗಬ್ಬ ಸಂಪತ್ತಿನ ಜೊತೆ 'ಶಿವಸರ್ವೋತ್ತಮ' ಹಾಡುಗಬ್ಬ ಸಂಪತ್ತು ತೆರೆದುಕೊಳ್ಳುತ್ತದೆ.

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಓದುಗಬ್ಬ ಮತ್ತು ಹಾಡುಗಬ್ಬ ಎಂಬ ಎರಡು ಸಾಹಿತ್ಯಪ್ರಕಾರಗಳು ಬೆಳೆದುಬಂದಿವೆ. ಇವುಗಳಲ್ಲಿ ಒಂದು ವಾಚನಪಾತಳಿಯದು, ಸಾಹಿತ್ಯಗುಣ ಪ್ರಧಾನವಾದುದು. ಇನ್ನೊಂದು ಶ್ರವಣಪಾತಳಿಯದು, ಸಂಗೀತಗುಣಪ್ರಧಾನವಾದುದು. ಆದರೆ ಇಂಗ್ಲಿಷರ ಸಂಪರ್ಕದಿಂದಾಗಿ ಸಾಕ್ಷರತೆ ಬೆಳೆದು ನಮ್ಮಲ್ಲಿ ಓದುಗಬ್ಬದೊಂದಿಗೆ ಹಾಡುಗಬ್ಬವನ್ನೂ ವಾಚನಪಾಳಿಯಲ್ಲಿಟ್ಟು ಅಭ್ಯಾಸ ಮಾಡುವ ತಪ್ಪು ಕ್ರಮ ವರ್ಧಿಸುತ್ತ ನಡೆಯಿತು. ಆಗ ಈ ಸ್ವರವಚನಗಳನ್ನು ಧ್ವನಿಮಾಧ್ಯಮದಲ್ಲಿ ಕೇಳಿ ಸಂಗೀತ ನೆಲೆಯಲ್ಲಿ ವಿಮರ್ಶಿಸದೆ, ಅಕ್ಷರ ಮಾಧ್ಯಮದಲ್ಲಿ ಓದಿ ಸಾಹಿತ್ಯದ ನೆಲೆಯಲ್ಲಿ ವಿಮರ್ಶಿಸುವ ತಪ್ಪು ಪದ್ಧತಿ ನಮ್ಮಲ್ಲಿ ಬೆಳೆಯಿತು. ಇದರಿಂದಾಗಿ ಅವು ಸಾಹಿತ್ಯಿಕಗುಣವಿದೂರ ರಚನೆಗಳೆಂಬ ಟೀಕೆಗೆ ಗುರಿಯಾದವು. ನಿಜಸ್ಥಿತಿಯೆಂದರೆ ಈ ಸಾಹಿತ್ಯವನ್ನು ಕಿವಿಯಿಂದಲೇ ಕೇಳಿ ವಿಮರ್ಶಿಸುವ ಹೊಸ ವಿಮರ್ಶಾ ಮಾನದಂಡಗಳು ಇಂದು ಬೆಳೆದುಬರಬೇಕಾಗಿದೆ.

ಎರಡನೆಯದಾಗಿ ನಾವು ಮಾಡಬೇಕಾಗಿರುವ ಇನ್ನೊಂದು ಕಾರ್ಯವೆಂದರೆ, ಈ ಸಾಹಿತ್ಯದ ಪ್ರಸಾರ. ಧ್ವನಿಮಾಧ್ಯಮದ ಸಾಹಿತ್ಯವಾಗಿರುವ ಇದನ್ನು ಸಂಗೀತದ ಮೂಲಕ ಪ್ರಕಟಿಸುವ ವ್ಯವಸ್ಥೆ ಮಾಡುವುದು ಅತ್ಯವಶ್ಯವಿದೆ. ಅಂದರೆ ಸಂಗೀತಕಲಾವಿದರಿಂದ ಪ್ರಚುರಪಡಿಸುವ, ಧ್ವನಿಸುರುಳಿಗಳನ್ನು ಸಿದ್ಧಪಡಿಸುವ ಮೊದಲಾದ ಚಟುವಟಿಕೆಗಳು ಬೆಳೆದುಬರಬೇಕಾಗಿದೆ.

ಹೀಗೆ ಸಮಗ್ರವಾಗಿ ಪ್ರಕಟಿಸುವುದು, ಹೊಸಬಗೆಯ ಮಾನದಂಡದಿಂದ ವಿಮರ್ಶಿಸುವುದು, ಸಂಗೀತಮಾಧ್ಯಮದಲ್ಲಿ ಪ್ರಸಾರಗೊಳಿಸುವುದು - ಈ ಮೂರು ಹಂತಗಳಲ್ಲಿ ಕೆಲಸ ನಡೆದರೆ ಮಾತ್ರ 'ಸ್ವರವಚನ'ಗಳಿಗೆ ಸರಿಯಾದ ನ್ಯಾಯ ಒದಗುತ್ತದೆ. ಈ ಬಗೆಯ ನ್ಯಾಯವನ್ನು ಒದಗಿಸಿಕೊಡುವ ಮೊದಲನೆಯ ಹಂತವಾಗಿ 'ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟನ ಯೋಜನೆ"ಯನ್ನು ಶ್ರೀಮಠ ಕೈಕೊಂಡಿದೆ. ಈ ಯೋಜನೆಯ ಯಶಸ್ಸಿಗಾಗಿ ಪೂಜ್ಯರ ಆಶೀರ್ವಾದವನ್ನೂ ವಿದ್ವಾಂಸರ ಸಹಕಾರವನ್ನೂ ಬಯಸುತ್ತೇನೆ.

ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ (ಮೈಸೂರು)ಯ ಅಂಗವಾಗಿ ೧-೫ ಸ್ವರವಚನ ಸಂಪುಟಗಳ ಬಿಡುಗಡೆ ಸಂದರ್ಭ.

ಆಕರ : ಮಾರ್ಗ ಸಂಪುಟ–೬

೧೬

ಮಹಾನಾಡ ಪ್ರಭುಗಳು ವಿಚಾರ ಸಂಕಿರಣ : ಉದ್ಘಾಟನೆ

೧೯೯೫

ಮಹನೀಯರೇ, ಮಹಿಳೆಯರೇ,

"ಮಹಾನಾಡ ಪ್ರಭು"ಗಳನ್ನು ಕುರಿತ ಈ ವಿಚಾರ ಸಂಕಿರಣವನ್ನು ಉದ್ಘಾಟಿಸುವಾಗ "ಸತ್ತವರ ಕಥೆಯಲ್ಲ. . . " ಎಂಬ ಪ್ರಭುಲಿಂಗಲೀಲೆಯ ಪದ್ಯ ನೆನಪಾಗುತ್ತದೆ. ಈ ನೆನಪಿಗೆ ಕಾರಣ, ಈ ರಾಜಮನೆತನದ ಶರಣಸಂಸ್ಕೃತಿ ಮತ್ತುಇಮ್ಮಡಿ ಚಿಕ್ಕಭೂಪಾಲನ ರಾಜಯೋಗಿ ವ್ಯಕ್ತಿತ್ವ. ಸಾಮಾನ್ಯವಾಗಿ ರಾಜರದು ಆಕ್ರಮಣಶೀಲ ಆಡಳಿತಧರ್ಮ, ಭೋಗಲೋಲ ಮನೋಧರ್ಮ. ರಾಜತ್ವದ ಈ ಆವರಣದಿಂದ ಇಮ್ಮಡಿ ಚಿಕ್ಕಭೂಪಾಲ ಬಿಡಿಸಿಕೊಂಡು, ಸಾತ್ವಿಕ ವಾತಾವರಣವನ್ನು ಬದುಕಿದವ. ಈ ಬದುಕು ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯದಲ್ಲಿ ಹರಳುಗಟ್ಟಿದೆ.

ಕನ್ನಡದಲ್ಲಿ ರಾಜರನ್ನು ವಸ್ತುವಾಗಿಟ್ಟುಕೊಂಡು ಅನೇಕ ಕೃತಿಗಳು ಹುಟ್ಟಿವೆ. ಅರಿಕೇಸರಿಯನ್ನು ಕುರಿತು ಪಂಪ, ಇರಿವ ಬೆಡಂಗನನ್ನು ಕುರಿತು ರನ್ನ ಬರೆದ ಕೃತಿಗಳಲ್ಲಿ ಮಹಾಭಾರತದ ಪಾತ್ರಗಳೇ ಪ್ರಧಾನವಾಗಿ, ಈ ಅರಸರ ಚಿತ್ರ ಸ್ಫುಟವಾಗಿ ಮೂಡಿಬರಲಿಲ್ಲ. ಲಿಂಗಣ್ಣ ಕವಿಯ "ಕೆಳದಿನೃಪ ವಿಜಯ" ಗೋವಿಂದವೈದ್ಯನ "ಕಂಠೀರವ ನರಸರಾಜ ವಿಜಯ" ಮೊದಲಾದವು ರಾಜಕೀಯ ಸಂಘರ್ಷಗಳನ್ನು ಮಾತ್ರ ಚಿತ್ರಿಸುವುದರಿಂದ, ಅಲ್ಲಿ ರಾಜರ ಚಿತ್ರ ಕೈಗೆ ಸಿಗುವುದೇ ಇಲ್ಲ. ನಂಜುಂಡನ ಕುಮಾರರಾಮನ ಚರಿತ್ರೆ ಒಂದು ಆದರ್ಶಚಿತ್ರವನ್ನು ಕೊಡುತ್ತಿದ್ದರೂ ಅದು ಲೌಕಿಕ ನೆಲೆಯಲ್ಲಿಯೇ ನಿಲ್ಲುತ್ತದೆ. ಇವುಗಳಿಗೆ ಭಿನ್ನವೆಂಬಂತೆ ಲೌಕಿಕ ನೆಲೆಯಲ್ಲಿ ನಿಂತರೂ ಪಾರಲೌಕಿಕ ನೆಲೆಗೆ ತಲುಪಿದ ಉನ್ನತ ವ್ಯಕ್ತಿತ್ವವನ್ನು ನಾವು "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ"ದಲ್ಲಿ ಮಾತ್ರ ಕಾಣುತ್ತೇವೆ.

"ಭೋಗವಿಚಾರವು ಬೇಕು, ನೃಪತಿಗಾತ್ಮಯೋಗವಿಚಾರವು ಬೇಕು" ಎನ್ನುತ್ತ ರತ್ನಾಕರವರ್ಣಿ ಭರತಚಕ್ರವರ್ತಿಯಲ್ಲಿ ಅವುಗಳ ಸಮನ್ವಯವನ್ನು ಸ್ಥಾಪಿಸಿದ್ದಾನೆ. ಆದರೆ ಅಲ್ಲಿಯದು ಕಾಲ್ಪನಿಕವೆನ್ನುವಷ್ಟು ಅಸಂಭವನೀಯ ಬದುಕು. "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ"ದಲ್ಲಿ ಮೂಡಿನಿಂತುದು ಅಂಗ-ಲಿಂಗ ಸಾಮರಸ್ಯಗಳ ಸಂಭವನೀಯ ಬದುಕು. ಇಲ್ಲಿ ಭರತೇಶನಿಗಿಂತ ನಮಗೆ ತೀರ ಹತ್ತಿರದ ಮತ್ತು ಅವನಿಗಿಂತ

ವಿಭಿನ್ನ ಯೋಗಭೋಗ ಸಮನ್ವಯದ ವ್ಯಕ್ತಿಯಾಗಿ ತೋರುತ್ತಾನೆ, ಇಮ್ಮಡಿ ಚಿಕ್ಕಭೂಪಾಲ. ಹೀಗಾಗಿ ಈ ರಾಜ್ಯವ್ಯಕ್ತಿಯನ್ನು ಕುರಿತ ಕೃತಿಯಲ್ಲಿ ಶರಣವ್ಯಕ್ತಿಯ ಕಥೆ ಎದ್ದುಬರುತ್ತಲಿದೆ.

ಒಡಲೆಲ್ಲ ಶಿವಧರ್ಮವೆಡೆಗೊಂಡ ನೆಲೆವನೆ
ನುಡಿಯೆಲ್ಲ ಪರಮಾರ್ಥದೇಳ್ಗೆ ॥
ನಡೆಯೆಲ್ಲ ದಿವ್ಯಾಗಮಮಾರ್ಗಯುತವಿ
ರ್ಮಡಿಚಿಕ್ಕರಾಜಪುಂಗವನ ॥॥

ಅಂಗದೊಳೊಂದಿದ ಸತ್ಕ್ರಿಯೆ ವಿಮಲಾಂತ
ರಂಗದೊಳರಿವು ಭಾವದೊಳು ॥
ಸಂಗೊಳಿಸಿಪ್ಪೇಕತೆಯ ನಿಜಾನಂದ
ಸಾಂಗಮಾಗಿರಲೆಸೆದಿರ್ಪ ॥॥

ಗುರುವನರ್ಚಿಸಿ ಗುರುರೂಪಾದ ಲಿಂಗವ
ನಿರದೆ ಭಜಿಸಿ ಲಿಂಗವಾದ ॥
ಪರಮ ಜಂಗಮವನಾರಾಧಿಸಿ ಪರತತ್ವ
ದಿರವಾದ ಚಿಕ್ಕೇಂದ್ರನಿರವ ॥॥

ಆನು ತಾನೆಂಬೆರಡಿಲ್ಲದ ನಿಜಲಿಂ
ಗಾನುಭಾವದ ನಿರುಗೆಯೊಳು ॥
ಮಾನಿತ ಪರಮಸುಜ್ಞಾನಿ ಚಿಕ್ಕೇಂದ್ರನು
ತಾನಿರ್ದನತಿ ಮುದದಿಂದೆ ॥॥

ಚಿಕ್ಕಭೂಪಾಲನನ್ನು ಕುರಿತ ಈ ಪದ್ಯಗಳು ವೀರಶೈವಪರ ಭರತೇಶನನ್ನು ನೆನಪಿಗೆ ತರುತ್ತವೆ. ಕವಿ ಮಲ್ಲಿಕಾರ್ಜುನ ಈ ಅರಸನಲ್ಲಿ ಗುರು -ಲಿಂಗ - ಜಂಗಮ ಸಂಸ್ಕೃತಿಗಳನ್ನು ಗುರುತಿಸಿದುದು ಈ ಪದ್ಯಗಳಿಂದ ವೇದ್ಯವಾಗುತ್ತದೆ. ಶಿವಕವಿಗಳಲ್ಲಿ "ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ" ಕಾವ್ಯ ಬರೆಯಬಾರದೆಂಬ ಪರಂಪರೆ ಬೆಳೆದುಬಂದಿದೆ. ಹಣದ ದುರಾಸೆಗೆ ಬಿದ್ದು "ದಿಲ್ಲೀಶ್ವರೋ ವಾ ಜಗದೀಶ್ವರೋ ವಾ" ಎಂದು ರಾಜರನ್ನು ಹೊಗಳಿ ಕಾವ್ಯ ಬರೆದ ಕವಿಗಳಿದ್ದಾರೆ. ಮಲ್ಲಿಕಾರ್ಜುನ ಈ ಪರಂಪರೆಗೆ ವಿದೂರ. ಚಿಕ್ಕಭೂಪಾಲನ ದೊಡ್ಡ ವ್ಯಕ್ತಿತ್ವ ಅವನಿಂದ ಈ ಕಾವ್ಯವನ್ನು ದೊಡ್ಡ ರೀತಿಯಲ್ಲಿ ಬರೆಯಿಸಿದೆ. ಇಮ್ಮಡಿ ಚಿಕ್ಕಭೂಪಾಲ ಶ್ರೀಹರ್ಷನಂಥ, ಪುಲಿಕೇಶಿಯಂಥ ದೊಡ್ಡರಾಜನಲ್ಲದಿರಬಹುದು. ಆದರೆ ಒಬ್ಬ ದೊಡ್ಡ ಜೀವಿ. ಕವಿ ಪದೇ ಪದೇ ಹೇಳುವಂತೆ ಗುರು, ಲಿಂಗ, ಜಂಗಮಗಳ ಮಹಾಸಂಗಮ.

"ಗುರುಸೇವೆ", "ಲಿಂಗಪೂಜೆ" ಭಾರತೀಯ ಧರ್ಮಗಳಲ್ಲಿ ಕಂಡುಬರುತ್ತವೆ. ಇದು ಜೀವ ಶಿವಪರನಾಗುವ ಸಿದ್ಧಾಂತ. ವೀರಶೈವ ಹೆಚ್ಚಿನದಾಗಿ "ಜಂಗಮದಾಸೋಹ"ವನ್ನು ಹೇಳುವ ಮೂಲಕ ಜೀವ ಸಮಾಜಪರನಾಗಬೇಕೆಂಬ ವಿಷಯವನ್ನು ವಿನೂತನವಾಗಿ ಪ್ರತಿಪಾದಿಸುತ್ತದೆ. ಇಲ್ಲಿ ಗುರುಸೇವೆಯೆಂದರೆ ಜ್ಞಾನದ ತಿಳುವಳಿಕೆ. ಈ ತಿಳುವಳಿಕೆಯು ನಡೆವಳಿಕೆಯಲ್ಲಿ ಬರಬೇಕಾದರೆ ಲಿಂಗಪೂಜೆ ಅವಶ್ಯ. ಅನ್ಯಧರ್ಮಿಯರಲ್ಲಿ "ಲಿಂಗಪೂಜೆ ಮಾಡುತ್ತಾನೆ" ಎಂದು ಹೇಳುವ ಪರಿಪಾಠವುಂಟು; ವೀರಶೈವದಲ್ಲಿ "ಲಿಂಗಪೂಜೆ ಮಾಡಿಕೊಳ್ಳುತ್ತಾನೆ"

ಎಂದು ಹೇಳುವ ಪರಿಪಾಠವಿದೆ. ಇಲ್ಲಿ ಲಿಂಗಪೂಜೆ ಮಾಡಿಕೊಳ್ಳುವುದೆಂದರೆ ತನ್ನ ಪೂಜೆಯನ್ನು ತಾನೇ ಮಾಡಿಕೊಳ್ಳುತ್ತ, ವಿಕಾರಗಳನ್ನು ದೂರಗೊಳಿಸಿಕೊಳ್ಳುವುದು, ತಾನೇ ಲಿಂಗವಾಗುವುದು. ಹೀಗೆ ಮೊದಲು ತಾನು ಲಿಂಗನಾಗಿ, ಬಳಿಕ ಜಂಗಮ ದಾಸೋಹ (ಸಮಾಜಸೇವೆ)ಕ್ಕೆ ಚಾಚಿಕೊಳ್ಳಲು ಹೇಳುತ್ತದೆ, ವೀರಶೈವ ಸಿದ್ಧಾಂತ. ಈ ಸಿದ್ಧಾಂತಪರಂಪರೆಯಲ್ಲಿ ಹುಟ್ಟಿ ಬೆಳೆದಿದೆ ಅವನ ಕುಟುಂಬ ಪರಂಪರೆ.

ಚಿಕ್ಕಭೂಪಾಲನ ಹಿರಿಯ ಮಗ ತೋಟೇಂದ್ರ ಸಮರನೀತಿಜ್ಞನಾದರೆ, ಇನ್ನೊಬ್ಬ ಮಗ ಸಪ್ಪೇಂದ್ರ ಸಂಗೀತನೀತಿಜ್ಞ. ಈ ಸಪ್ಪೇಂದ್ರನ "ಅಭಿನವ ಭರತಸಾರಸಂಗ್ರಹ "ಹೆಸರಿನ ಸಂಗೀತಶಾಸ್ತ್ರ ಇದಕ್ಕೆ ನಿದರ್ಶನ. ಕವಿ ಮಲ್ಲಿಕಾರ್ಜುನ, ವಿರಕ್ತ ತೋಂಟದಾರ್ಯ ಮೊದಲಾದವರು ಇವರ ಆಶ್ರಯದಲ್ಲಿ ಸುಮಾರು ೩೦ಕೃತಿ ರಚಿಸಿದ್ದಾರೆ. ಇವುಗಳಲ್ಲಿ ಕಾವ್ಯಗಳಿವೆ, ಶಾಸ್ತ್ರಗಳಿವೆ ಮತ್ತು ಟೀಕೆಗಳಿವೆ. ಕಾವ್ಯಗಳು ಇವನನ್ನು "ನೂತನ ಭೋಜರಾಜ" ಎಂದು ಕೀರ್ತಿಸಿವೆ. ಇಮ್ಮಡಿ ಚಿಕ್ಕಭೂಪಾಲ "ಶಾರದಾ ಭಾಂಡಾರ" ಹೆಸರಿನ ಗ್ರಂಥಭಾಂಡಾರವನ್ನು ಅರಮನೆಯಲ್ಲಿ ಸ್ಥಾಪಿಸಿದುದು ಇಲ್ಲಿ ಎತ್ತಿ ಹೇಳಬೇಕಾದ ವಿಷಯವಾಗಿದೆ. ಅರಮನೆಯ ಅನುಭವ ಮಂಟಪದಲ್ಲಿ ಏಕೋತ್ತರ ಶತಸ್ಥಲ, ವಿವೇಕ ಚಿಂತಾಮಣಿ, ಸಾನಂದ ಚರಿತೆ, ಅನುಭವಸೂತ್ರ, ವೀರಶೈವಾಮೃತಮಹಾಪುರಾಣ, ಲಿಂಗಲೀಲಾ ವಿಲಾಸ, ಪ್ರಭುಲಿಂಗಲೀಲೆ, ಗಣಭಾಷ್ಯ, ಸಿದ್ಧಾಂತಶಿಖಾಮಣಿ, ದೀಕ್ಷಾಬೋಧೆ, ಸೋಮನಾಥಭಾಷ್ಯ, ಇವೇ ಮೊದಲಾದ ಗ್ರಂಥಗಳ ವಾಚನ ನಡೆಯುತ್ತಿದ್ದುದನ್ನು "ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ" ಹೇಳುತ್ತದೆ. ಕವಿ-ಗಮಕಿ-ವಾದಿ-ವಾಗ್ಮಿಗಳ ಆಸ್ಥಾನಕ್ಕೆ ಗಮಕಿಯೊಬ್ಬ 'ಕುಮಾರರಾಮನ ಸಾಂಗತ್ಯ'ದ ಓಲೆಕಟ್ಟು ತಂದು ವಾಚಿಸಿದ ಸಂದರ್ಭವನ್ನು ಈ ಕೃತಿ ಸೂಚಿಸುತ್ತದೆ. ಈ ಮನೆತನದ ಸಾಹಿತ್ಯ ಪ್ರೀತಿಗೆ ಮೇಲಿನ ವಿವರಣೆಗಳು ಸಾಕ್ಷಿ ನುಡಿಯುತ್ತವೆ. ಹೀಗೆ ಧರ್ಮ, ರಾಜಧರ್ಮ, ಕಾವ್ಯಧರ್ಮಗಳ ವಿಶಿಷ್ಟ ತ್ರಿವೇಣಿಯೆನಿಸಿದೆ 'ಮಹಾನಾಡ ಪ್ರಭು'ಗಳ ಮನೆತನ.

ಈವರೆಗೆ ವೀರಶೈವಕ್ಕೆ ಸಂಬಂಧಪಟ್ಟಂತೆ ಧಾರ್ಮಿಕ, ಸಾಹಿತ್ಯಿಕ ಅಧ್ಯಯನದ ಕಡೆ ಒತ್ತು ಸರಿದು ರಾಜಕೀಯ ಕ್ಷೇತ್ರದ ಅಧ್ಯಯನ ಉಪೇಕ್ಷೆಗೆ ಗುರಿಯಾಗಿದೆ. ಕರ್ನಾಟಕದ ದೊಡ್ಡ ಸಮಾಜವಾಗಿರುವ, ಸಾಹಿತ್ಯ ಸಿದ್ಧಾಂತಗಳ ಹಿನ್ನೆಲೆಯುಳ್ಳ ಸಮಾಜವಾಗಿರುವ ವೀರಶೈವ, ರಾಜಕೀಯದಿಂದ ಪ್ರಾಚೀನಕಾಲದಲ್ಲಿ ದೂರ ಉಳಿಯಲು ಹೇಗೆ ಸಾಧ್ಯ? ಇದರರ್ಥ ವೀರಶೈವ ಅನೇಕ ರಾಜಮನೆತನಗಳಿವೆ. ಅವುಗಳ ಶೋಧಕಾರ್ಯಕ್ಕೆ ನಾವು ಕೈಹಾಕಿಲ್ಲ.

ಕರ್ನಾಟಕದಲ್ಲಿ ಧಾರ್ಮಿಕ ಸಿದ್ಧಾಂತವನ್ನೊಳಗೊಂಡ ಸಮಾಜಗಳೆಂದರೆ ವೈದಿಕ, ಜೈನ, ವೀರಶೈವ. ಯಾವುದೇ ಕೆಳವರ್ಗದ ವ್ಯಕ್ತಿ ಮೇಲೆ ಬರಬೇಕಾದರೆ ಇವುಗಳಲ್ಲಿ ಒಂದು ಧರ್ಮಕ್ಕೆ ಮತಾಂತರಗೊಳ್ಳಬೇಕು. ಯಾರನ್ನೂ ಒಳಗೆ ಕರೆದುಕೊಳ್ಳುವುದಿಲ್ಲ ವೈದಿಕಧರ್ಮ. ಬಹುಶಃ ಒಳಗೆ ಕರೆದುಕೊಳ್ಳುವ ಜೈನಧರ್ಮ ೧೧ನೆಯ ಶತಮಾನದ ಹೊತ್ತಿಗೆ ತನ್ನ ಬಾಗಿಲನ್ನು ಮುಚ್ಚಿಬಿಟ್ಟಿದ್ದಿತು. ತೆರೆದ ಬಾಗಿಲಿನಿಂದಲೇ ಅಸ್ತಿತ್ವಕ್ಕೆ ಬಂದ ವೀರಶೈವ ಬಾಗಿಲು ಇನ್ನೂ ಮುಚ್ಚಿಲ್ಲ. ಶಕ್ತಿಶಾಲಿಗಳಾಗಿರಬೇಕಾದ ರಾಜರೆಲ್ಲ ಪ್ರಾಚೀನಕಾಲದಲ್ಲಿ ಸಾಮಾನ್ಯವಾಗಿ ಕೆಳವರ್ಗದಿಂದಲೇ ಬಂದವರು. ಇವರಿಗೆ ಅಂದು ಉತ್ತಮಿಕೆ ಪಡೆಯಲು ಒಂದೇ ಒಂದು ತೆರೆದ ಬಾಗಿಲಿನ ಧರ್ಮ ವೀರಶೈವವಾಗಿದ್ದಿತು. ಹೀಗಾಗಿ ಕಳೆದ ೮೦೦ ವರ್ಷಗಳಲ್ಲಿ ಕೆಳವರ್ಗದ ಅನೇಕ ರಾಜಮನೆತನಗಳು ವೀರಶೈವಕ್ಕೆ ಮತಾಂತರಗೊಂಡವು. ತೋಂಟದ ಸಿದ್ಧಲಿಂಗಯತಿಗಳ ಪ್ರಭಾವದಿಂದಾಗಿ ತುಮಕೂರಿನ ಸುತ್ತಮುತ್ತ ಈ ಕ್ರಿಯೆ ದೊಡ್ಡ ಪ್ರಮಾಣದಲ್ಲಿ ಜರುಗಿತೆಂದು ಕಾಣುತ್ತದೆ. ಜೊತೆಗೆ ಸಾಮಾಜಿಕ ಅಭದ್ರತೆಯಲ್ಲಿ ಬಳಲುತ್ತಲಿದ್ದ ಮೇಲುವರ್ಗದವರಾದ ಜೈನರು ತಮ್ಮ ಸುಭದ್ರತೆಗಾಗಿ ವೀರಶೈವಕ್ಕೆ ಬಂದರು. ವೀರಶೈವ ಮೂಲದ

ಅರಸುಮನೆತನಗಳೊಂದಿಗೆ ಈ ಎರಡೂ ನೆಲೆಗಳಿಂದ ಬಂದ ಮನೆತನಗಳೂ ಸೇರಿ, ರಾಜಮನೆತನಗಳ ಸಂಖ್ಯೆ ಲಿಂಗಾಯತದಲ್ಲಿ ವರ್ಧಿಸುತ್ತಲೇ ಬಂದಿತು. ಇವುಗಳಲ್ಲಿ ತುಂಬ ಮಹತ್ವದ್ದಾಗಿದೆ, ಮಹಾನಾಡ ಪ್ರಭುಗಳದು.

ಈ ಪ್ರಭುಗಳನ್ನು ಕುರಿತು ಇಂದು ಸುಮಾರು ೨೦ ಜನ ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಲಿದ್ದಾರೆ. ಶಾಸನ, ಸಾಹಿತ್ಯ, ಕ್ಷೇತ್ರಕಾರ್ಯಗಳ ಬಲದಿಂದ ಸಂಗ್ರಹಿಸಿದ ಸಾಮಗ್ರಿಯನ್ನು ಸರಿಯಾಗಿ ಪರಿಶೀಲಿಸಿ ಬರೆದ ಲೇಖನಗಳನ್ನು ಇಲ್ಲಿ ನಡೆಯುವ ಚರ್ಚೆಯ ಬೆಳಕಿನಲ್ಲಿ ಇನ್ನೊಮ್ಮೆ ಪರಿಷ್ಕರಿಸಬೇಕು. ಇವುಗಳನ್ನು ೧೯೯೫ ಜನೆವರಿ ೧೪ರಂದು ಜರುಗುವ "ಸಿದ್ಧರಾಮ ಜಯಂತಿ" ಸಂದರ್ಭದಲ್ಲಿ ಪುಸ್ತಕರೂಪದಿಂದ ಪ್ರಕಟಿಸಬೇಕು. ಮುಂದಿನ ವರ್ಷ ಉಳಿದ ಮಹಾನಾಡ ಪ್ರಭುಗಳನ್ನು ಕುರಿತ ವಿಚಾರ ಸಂಕಿರಣ ಹಮ್ಮಿಕೊಳ್ಳಬೇಕು. ಜೊತೆಗೆ ಈ ಅರಸುಮನೆತನದ ಆಶ್ರಯದಲ್ಲಿ ಹುಟ್ಟಿದ ಎಲ್ಲ ಸಾಹಿತ್ಯಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಬೇಕು - ಈ ಕೆಲಸಗಳ ಕಡೆಗೆ ವಿದ್ವಾಂಸರು, ವಿದ್ಯಾಸಂಸ್ಥೆಗಳು, ಸಮಾಜ ತೀವ್ರ ಗಮನ ಕೊಡುವುದೆಂದು ಆಶಿಸುತ್ತೇನೆ.

ಸರಕಾರ ಬರೆಯಿಸುವ ಇತಿಹಾಸಕೃತಿಗಳಲ್ಲಿ, ಪಠ್ಯಪುಸ್ತಕಗಳಲ್ಲಿ ಈ ಅರಸರ ಮಾಹಿತಿಯನ್ನು ಸೇರಿಸುವುದೂ, ಹೆಂಜೇರು, ಮುಮ್ಮಡಿ, ಬಿಜ್ಜಾವರ, ಮಧುಗಿರಿ ಮೊದಲಾದ ರಾಜಧಾನಿಗಳಲ್ಲಿರುವ ಸ್ಮಾರಕಗಳ ರಕ್ಷಣೆಯತ್ತ ಸರಕಾರ ಗಮನಹರಿಸುವುದೂ ಅವಶ್ಯವಿದೆ. ಈ ಎಲ್ಲ ಕೆಲಸಗಳು ಜರುಗಿ, ಮಹಾನಡಪ್ರಭುಗಳ ಚರಿತ್ರೆ ಇತಿಹಾಸಪುಟದಲ್ಲಿ ಕಳೆದುಕೊಂಡಿರುವ ತನ್ನ ಗಣ್ಯಸ್ಥಾನವನ್ನು ಮತ್ತೆ ಪಡೆಯಲೆಂದು ಹಾರೈಸುತ್ತೇನೆ.

ಆಕರ : ಮಾರ್ಗ ಸಂಪುಟ–೬

■■

೧೭
ಪ್ರಾಚೀನ ಲೌಕಿಕ ಶಾಸ್ತ್ರ ಸಾಹಿತ್ಯ ವಿಚಾರ ಸಂಕಿರಣ : ಉದ್ಘಾಟನೆ

೨೦೧೫

ಕಳೆದ ಒಂದು ಸಾವಿರ ವರ್ಷಗಳಿಂದ ನಾಡಿನಲ್ಲಿ ಸಾವಿರಾರು ದೇವಾಲಯಗಳು ನಿರ್ಮಾಣಗೊಂಡಿವೆ. ಇವುಗಳನ್ನು ಕಟ್ಟಿದ ಶಿಲ್ಪ ಕಲಾವಿದರು ಯಾವುದೇ ಇಂಜನೀಯರಿಂಗ ಕಾಲೇಜಿನಲ್ಲಿ ವಾಸ್ತುಶಾಸ್ತ್ರವನ್ನು ಕಲಿತಿರಲಿಲ್ಲ. ಅವರೆಲ್ಲ ಪರಂಪರೆಯಿಂದ ಬಂದ ಕಸುಬನ್ನು ಅನುಭವದಿಂದ ಕಲಿತು ಕರಗತ ಮಾಡಿಕೊಂಡವರಾಗಿದ್ದಾರೆ.

ಕನ್ನಡಿಗರು ಕ್ರಿಯಾ ನೆಲೆಗಟ್ಟಿನಿಂದ ಶಾಸ್ತ್ರ ವಿಷಯಗಳನ್ನು ಮೈಗೂಡಿಸಿಕೊಂಡವರೆ ವಿನಾ ಬರೆದಿಡುವವರಲ್ಲ. ಹೀಗಾಗಿ ಶಾಸ್ತ್ರ ವಿಚಾರಗಳು ಅನುಭವದಿಂದ ಬೆಳೆದುಬಂದವುಗಳಾಗಿದ್ದು, ಅಭ್ಯಾಸದಿಂದ ಹುಟ್ಟಿ ಬೆಳೆಯಲಿಲ್ಲ. ಜ್ಞಾನಕ್ಕಿಂತ ಅನುಭವ ದೊಡ್ಡದು. ಅನುಭವದಿಂದ ಜ್ಞಾನ ಹುಟ್ಟುತ್ತದೆ. ಜ್ಞಾನದಿಂದ ಅನುಭವ ಹುಟ್ಟುವುದಿಲ್ಲ. ಕ್ರಿಯೆಯಿಂದ ಜ್ಞಾನವೆ ಹೊರತು ಜ್ಞಾನದಿಂದ ಕ್ರಿಯೆಯಲ್ಲ. ಬಸವಣ್ಣ, ಬುದ್ಧ ಮುಂತಾದ ದಾರ್ಶನಿಕರು ಅನುಭವದಿಂದ ದೊಡ್ಡ ಜ್ಞಾನಿಗಳಾಗಿದ್ದಾರೆ ಹೊರತು ಅಭ್ಯಾಸದಿಂದಲ್ಲ. ಇವರು ಸಮಾಜದಲ್ಲಿದ್ದುಕೊಂಡು ಬದುಕನ್ನು ಅಧ್ಯಯನ ಮಾಡಿ ಅನುಭಾವಿಗಳಾದರು. ಅವರ ಅನುಭವ ನುಡಿಗಳೆ ವಚನಗಳು. ಪ್ರತಿಪಾದಿಸುವ ವಿಚಾರಗಳು ಜ್ಞಾನದ ದೀವಿಗೆಗಳಾಗಿವೆ. ಹೀಗಾಗಿ ಜ್ಞಾನಕ್ಕಿಂತ ಅನುಭವ ದೊಡ್ಡದು.

ಶಿಲ್ಪಶಾಸ್ತ್ರ, ಗೋ ವೈದ್ಯ, ರಟ್ಟಮತಶಾಸ್ತ್ರ, ಸಂಗೀತ, ನೃತ್ಯ, ನಾಟಕ ಮುಂತಾದವು ಕ್ರಿಯಾ ಪ್ರಧಾನ ವಿಷಯಗಳಾಗಿವೆ. ಕವಿರಾಜಮಾರ್ಗದಲ್ಲಿ ಹೇಳಿರುವಂತೆ ಎಲ್ಲ ಶಾಸ್ತ್ರಗಳಿಗೆ 'ನಾಡವರ್ ಓವಜರ್' ಆಗಿದ್ದಾರೆ. ಇದು ಬಹು ಮುಖ್ಯವಾದ ವಿಚಾರವಾಗಿದೆ. ಯಾವುದೇ ಶಾಸ್ತ್ರದ ಮೂಲ ಇರುವುದು ಜನ ಸಾಮಾನ್ಯರ ಅನುಭವದಲ್ಲಿ. ಯಾವುದೇ ಶಾಸ್ತ್ರ ಶ್ರೇಷ್ಠ ಎನಿಸಿಕೊಳ್ಳಬೇಕಾದರೆ ಅದು ಅನುಭವದಿಂದ ಹುಟ್ಟಿರಬೇಕು. ಅದಕ್ಕಾಗಿ ನಾನು ಹಂಪಿ ಕನ್ನಡ ವಿಶ್ವವಿದ್ಯಾಲಯ ಕುಲಪತಿಯಾಗಿದ್ದಾಗ 'ನಾಡೋಜ ಪ್ರಶಸ್ತಿ'ಯನ್ನು ಅನುಭವ ಪ್ರಧಾನರಾದ ಹಿರಿಯರಿಗೆ ಕೊಡುವುದರ ಮೂಲಕ ಒಂದು ಪರಂಪರೆಯನ್ನು ಬೆಳೆಸಿದೆ. ಅದು ಈಗಲೂ ಮುಂದುವರಿದಿರುವುದು ಸಂತೋಷದ ಸಂಗತಿ.

ಪಾಕಶಾಸ್ತ್ರದಲ್ಲಿ ಪದವಿ ಪಡೆದವರಿಂದ ತಮ್ಮ ತಮ್ಮ ಮನೆಗಳಲ್ಲಿ ಅಡುಗೆ ಮಾಡಿಸುವುದಿಲ್ಲ. ಅನುಭವದ ಹಿನ್ನೆಲೆಯಿಂದ ಅಡುಗೆ ಮಾಡುವುದನ್ನು ಎಲ್ಲರ ಮನೆಯಲ್ಲಿ ಕಾಣಬಹುದು.

ಇನ್ನು ಕನ್ನಡ ಶಾಸ್ತ್ರ ಸಾಹಿತ್ಯ ಪರಂಪರೆಯ ಬಗೆಗೆ ಹೊರಳಿ ನೋಡಿದರೆ ೧೦ನೆಯ ಶತಮಾನ ಕನ್ನಡ ಸಾಹಿತ್ಯ ಸುವರ್ಣಯುಗ ಎಂದು ಕರೆದರೂ ಈ ಯುಗದಲ್ಲಿ ಕೇವಲ ಭಾವನಾ ವಿಚಾರಗಳೆ ಕಾವ್ಯಗಳಿಗೆ ವಸ್ತುವಾಯಿತು. ಅಷ್ಟಾಗಿ ಶಾಸ್ತ್ರ ವಿಷಯಗಳು ಈ ಯುಗದಲ್ಲಿ ರಚನೆಗೊಳ್ಳಲಿಲ್ಲ. ಆದರೆ ೧೧ನೆಯ ಶತಮಾನವಿದೆಯಲ್ಲಾ ಅದು ಶಾಸ್ತ್ರ ಸಾಹಿತ್ಯದ ಸುಗ್ಗಿಯ ಕಾಲ ಎಂದು ಕರೆಯಬಹುದು. ಚಾಲುಕ್ಯರ ಅರಸ ಜಯಸಿಂಹನು ತನ್ನ ಆಸ್ಥಾನ ಕವಿಗಳಿಂದ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದಂತೆ ಕಾವ್ಯಗಳನ್ನು ಬರೆಸಿದ. ಇದೆ ಕಾಲಘಟ್ಟದಲ್ಲಿ ಗಂಗರ ಮಂತ್ರಿ ಚಾವುಂಡರಾಯ 'ಲೋಕೋಪಕಾರ' ಎಂಬ ಶಾಸ್ತ್ರ ಕೃತಿಯನ್ನು, ಸೋಮನಾಥನು 'ಕಲ್ಯಾಣಕಾರಕ' ಎಂಬ ಕೃತಿಯನ್ನು ಜಯಸಿಂಹನ ಮೊಮ್ಮಗ ಸೋಮೇಶ್ವರನು 'ಮಾನಸೋಲ್ಲಾಸ' ಎಂಬ ಶಾಸ್ತ್ರ ಕೃತಿಯನ್ನು ರಚಿಸಿದನು. ಮುಂದೆ ಅಶ್ವಶಾಸ್ತ್ರ, ಗಜಶಾಸ್ತ್ರ, ಪಾಕಶಾಸ್ತ್ರ, ರಟ್ಟಮತಶಾಸ್ತ್ರ, ಗಣಿತಶಾಸ್ತ್ರ, ಖಡ್ಗಶಾಸ್ತ್ರ, ಯೋಗ ವಿಷಯಗಳಿಗೆ ಸಂಬಂಧಿಸಿದಂತೆ ಮೌಲಿಕ ಶಾಸ್ತ್ರ ಕಾವ್ಯಗಳು ರಚಿಸಲ್ಪಟ್ಟವು.

ಈಗ ಕನ್ನಡ ಭಾಷೆಗೆ, ಶಾಸ್ತ್ರೀಯ ಸಾಹಿತ್ಯದ ಮನ್ನಣೆ ದೊರೆತಿದೆ. ಈ ಸಂದರ್ಭದಲ್ಲಿ ಶಾಸ್ತ್ರ ಸಾಹಿತ್ಯ ಕುರಿತಾದ ವಿಚಾರ ಸಂಕಿರಣ ಆಯೋಜಿಸಿರುವುದು ಶ್ಲಾಘನೀಯ ವಿಚಾರವಾಗಿದೆ. ಈ ಕಾರ್ಯಕ್ರಮದಲ್ಲಿ ಶಾಸ್ತ್ರ ಸಾಹಿತ್ಯ ವಿಚಾರಗಳಿಗೆ ಸಂಬಂಧಿಸಿದಂತೆ ಹೆಚ್ಚು ಚರ್ಚೆ ನಡೆಯಲಿ, ಹೊಸ ವಿಷಯಗಳು ಮಂಡನೆಯಾಗಲಿ, ಭವಿಷ್ಯದಲ್ಲಿ ನಡೆಯುವ ಅಧ್ಯಯನಗಳಿಗೆ ಇದು ನಾಂದಿಯಾಗಲಿ, ಇನ್ನೂ ಹೆಚ್ಚು ಅಧ್ಯಯನ ನಡೆದು ಶಾಸ್ತ್ರ ಸಾಹಿತ್ಯದ ಮೇಲೆ ಬೆಳಕು ಚೆಲ್ಲುವಂತಾಗಲಿ ಎಂದು ಹಾರೈಸುತ್ತಾ ಎರಡು ದಿನಗಳ ಅವಧಿಯಲ್ಲಿ ಸಂಶೋಧಕರು, ವಿದ್ವಾಂಸರುಗಳು, ಚಿಂತಕರು, ಪ್ರಾಧ್ಯಾಪಕರುಗಳು, ವಿದ್ಯಾರ್ಥಿಗಳು ಸೇರಿ ಚಿಂತನ ಮಂಥನ ನೆಡೆಸಿ ಗತಕಾಲದ ಶ್ರೇಷ್ಠ ವಿಚಾರಗಳು ಭವಿಷ್ಯಕ್ಕೆ ಬೆಳಕಾಗಲಿ ಎಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಮತ್ತೊಮ್ಮೆ ಎಲ್ಲರಿಗೂ ನಮಸ್ಕಾರ.

---

* ಗದುಗಿನ ಜೆ.ಟಿ. ಕಾಲೇಜಿನಲ್ಲಿ ನಡೆದ 'ಪ್ರಾಚೀನ ಲೌಕಿಕ ಶಾಸ್ತ್ರ ಸಾಹಿತ್ಯ' ವಿಚಾರಸಂಕಿರಣದಲ್ಲಿ ಮಾಡಿದ ಉದ್ಘಾಟನ ಭಾಷಣದ ಸಾರಸಂಗ್ರಹ.

ಆಕರ : ಮಾರ್ಗ ಸಂಪುಟ–೮

೧೮

ಕುಮಾರವ್ಯಾಸ ವಿಚಾರ ಸಂಕಿರಣ : ಉದ್ಘಾಟನೆ

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ವಿದ್ವಾಂಸಮಿತ್ರರೂ ಆದ ಶ್ರೀ ಜಿ. ಎಸ್. ಸಿದ್ಧಲಿಂಗಯ್ಯ ಅವರೇ,

ಶ್ರೀ ಅ. ರಾ. ಸೇ. ಅವರೇ, ಸಹೃದಯರೇ -

ಮಹಾಕವಿ ಕುಮಾರವ್ಯಾಸನನ್ನು ಕುರಿತ ಈ ವಿಚಾರ ಸಂಕಿರಣದಲ್ಲಿ ಭಾಗವಹಿಸುವುದು ನನಗೆ ಸಂತೋಷದ ವಿಷಯವಾಗಿರುವಂತೆ, ಗೌರವದ ವಿಷಯವೂ ಆಗಿದೆ. ಅನೇಕ ಅರ್ಥಗಳಲ್ಲಿ ಕನ್ನಡದ ದೊಡ್ಡ ಕಾವ್ಯವಾಗಿರುವ ಕುಮಾರವ್ಯಾಸ ಭಾರತದ ಅಧ್ಯಯನ, ಈ ವರೆಗೆ ದೊಡ್ಡ ಪ್ರಮಾಣದಲ್ಲಿ ಉಪೇಕ್ಷಿತವಾಗಿದೆ. ಗಾತ್ರದಲ್ಲಿ ಅದು ದೊಡ್ಡದಾಗಿರುವುದೂ ಇದಕ್ಕೆ ಒಂದು ಮುಖ್ಯ ಕಾರಣವೆಂದು ತೋರುತ್ತದೆ.

ಮಹಾಭಾರತ ಪಂಚಮದೇವ. ಕೌರವ-ಪಾಂಡವ ಕಥೆಯ ಮೂಲಕ ವೇದಸಂಸ್ಕೃತಿಯನ್ನು ಪ್ರಸಾರಮಾಡುವುದು ಇದರ ಮುಖ್ಯ ಉದ್ದೇಶ. ಕುಮಾರವ್ಯಾಸ ಹುಟ್ಟುವ ವೇಳೆಗೆ ಕನ್ನಡದಲ್ಲಿ ಸಾಹಿತ್ಯಿಕ ಘಟ್ಟಗಳನ್ನು ರೂಪಿಸಿದ್ದ ಜೈನ ಮತ್ತು ವೀರಶೈವಗಳು ವೇದಸಂಸ್ಕೃತಿಯ ವಿರೋಧಿ ಧರ್ಮಗಳಾಗಿದ್ದ ಕಾರಣ, ಇವುಗಳಿಂದ ಮಹಾಭಾರತ ಕಥೆಗೆ ಸರಿಯಾದ ನ್ಯಾಯ ದೊರೆಯಲಿಲ್ಲವೆಂದು ತೋರುತ್ತದೆ. ಇವರಲ್ಲಿ ಜೈನರು ಮಹಾಭಾರತವನ್ನು ಎರಡು ರೀತಿಗಳಲ್ಲಿ ಕನ್ನಡಕ್ಕೆ ತಂದರು. ಅವು: ಮಹಾಭಾರತದ ಜೈನೀಕರಣವೆನಿಸಿದ 'ಜೈನ ಭಾರತ' (ಹರಿವಂಶ ಅಥವಾ ನೇಮಿನಾಥ ಪುರಾಣ) ಬರೆಯುವುದು, ಮತ್ತು ಮಹಾಭಾರತವನ್ನು ಲೌಕಿಕ ಕಥಾರೂಪಕ್ಕೆ ಇಳಿಸಿ ತಮ್ಮ ಆಶ್ರಯದಾತರಿಗೆ ಅನ್ವಯಿಸಿ 'ಸಮಸ್ತಭಾರತ' ರಚಿಸುವುದು (ಪಂಪಭಾರತ, ಗದಾಯುದ್ಧ). ಜೈನರ ಇವೆರಡೂ ಪ್ರಯತ್ನಗಳು ಸಾಹಿತ್ಯಿಕ ಗುಣದೃಷ್ಟಿಯಿಂದ ಉತ್ಕೃಷ್ಟವಾಗಿರಲಿ ಬಿಡಲಿ, ಮಹಾಭಾರತದ ಮೂಲಸ್ವರೂಪಕ್ಕೆ ಮಾತ್ರ ಇವುಗಳಿಂದ ಧಕ್ಕೆಯಾದುದು ನಿಜ. ಇವುಗಳಲ್ಲಿ ಅಷ್ಟೇನೂ ಪ್ರಸಿದ್ಧವಲ್ಲದ ಜೈನ ಮಹಾಭಾರತಗಳನ್ನು ಬಿಟ್ಟರೂ, ಪಂಪಭಾರತದಂಥ ಪ್ರಸಿದ್ಧಕೃತಿಗಳು ಮಹಾಭಾರತವೆಂದರೂ ಮಹಾಭಾರತವಲ್ಲವೆಂಬ ಕಾರಣದಿಂದ ಅವು ಹಿಂದೂಗಳ ಗೌರವ ಗಳಿಸಿರಲಿಕ್ಕಿಲ್ಲ; ಅಜೈನೀಯವೆಂದು ಜೈನರೂ ಗೌರವಿಸಿರಲಿಕ್ಕಿಲ್ಲ. ಹತ್ತಾರು ಸಂಖ್ಯೆಯಲ್ಲಿ ಆದಿಪುರಾಣ - ಅಜಿತಪುರಾಣದ ಪ್ರತಿಗಳು ಸಿಗುತ್ತಿದ್ದರೆ, ಒಂದೆರಡು ಸಂಖ್ಯೆಯಲ್ಲಿ ಪಂಪಭಾರತ - ಗದಾಯುದ್ಧ ಪ್ರತಿಗಳು ಸಿಗುತ್ತಿರುವುದಕ್ಕೆ ಬಹುಶಃ ಈ ಉಪೇಕ್ಷಾ ಮನೋಭಾವನೆಯೂ ಕಾರಣವಾಗಿರಬೇಕು.

ಜೈನರು ಹೀಗೆ ವ್ಯತ್ಯಸ್ತರೂಪದಲ್ಲಾದರೂ ಮಹಾಭಾರತವನ್ನು ಕನ್ನಡಕ್ಕೆ ತಂದರು. ವೀರಶೈವರು ಮಾತ್ರ ಈ ಕೃತಿಯನ್ನೇ ಮುಟ್ಟಲಿಲ್ಲ. ಇಷ್ಟೇ ಏಕೆ, "ಕಾಳಗದ ಕಥೆಯಲ್ಲ, ಸತ್ತವರ ಕಥೆಯಲ್ಲ" ಎನ್ನುವ

ಮೂಲಕ ಪರ್ಯಾಯವಾಗಿ ರಾಮಾಯಣ ಮಹಾಭಾರತಗಳನ್ನು ಟೀಕಿಸಿದರು. ಕೆಲವೊಮ್ಮೆ "ಹಾದರದ ಕಥೆ, ಸೋದರರ ವಧೆ" ಎಂದು ನೇರವಾಗಿಯೇ ತೆಗಳಿದರು. ತಮ್ಮ ಪುರಾಣಗಳೇ ತಮ್ಮ ಮಹಾಭಾರತಗಳೆಂಬಂತೆ-

ಆದಿರುದ್ರ ಗಣಾದಿಪರ್ವಂ
ವಾದಿಗಳ ಹೃತಶಲ್ಯಪರ್ವಂ
ಮೋದಭಕ್ತಿಗೆ ಬಸವಸಿಂಹಾಸನ ಸಭಾಪರ್ವಂ
ವೇದವಿದರುದ್ಯೋಗಪರ್ವಂ
ವೇದಿಸುವರಿಗೆ ಶಾಂತಿಪರ್ವಂ
ಮೇದಿನಿಯೊಳಖಿಳಾಗಮಜ್ಞರ ಕರ್ಣಪರ್ವವಿದು ॥

(ಭೀಮಕವಿಯ ಬಸವಪುರಾಣ)

ಎಂದು ತಮ್ಮ ಕೃತಿಗಳನ್ನು ಸಮರ್ಥಿಸಿಕೊಂಡರು. ಹೀಗೆ ೧೫ನೆಯ ಶತಮಾನದ ವರೆಗೂ ಈ ಎರಡೂ ಸಮಾಜದವರು ಸಾಹಿತ್ಯನಿರ್ಮಿತಿ ಪ್ರಸಂಗದಲ್ಲಿ ವ್ಯಾಸಭಾರತವನ್ನು ಮೂಲರೂಪದಿಂದ ಕನ್ನಡಕ್ಕೆ ತರಲಿಲ್ಲ. ನೆರೆಯ ಆಂಧ್ರಪ್ರದೇಶದಲ್ಲಿ ೧೧ನೆಯ ಶತಮಾನದಷ್ಟು ಪೂರ್ವದಲ್ಲಿಯೇ ಅದನ್ನು ಮೂಲ ರೂಪದಿಂದ ತೆಲುಗಿಗೆ ಅನುವಾದಿಸಲು ಪ್ರಾರಂಭಿಸಿ, ೧೫ನೆಯ ಶತವಮಾನದ ಹೊತ್ತಿಗೆ ಆ ಕಾರ್ಯವನ್ನು ಪೂರ್ಣಗೊಳಿಸಿಕೊಳ್ಳಲಾಗಿದ್ದಿತು. ಕರ್ನಾಟಕದಲ್ಲಿ ಮಾತ್ರ ಇಂಥ ಕ್ರಿಯೆ ಜರುಗಲೇ ಇಲ್ಲ. ಈ ಐತಿಹಾಸಿಕ ಕೊರತೆಯನ್ನು ತುಂಬಿಕೊಡುವ ಅಗತ್ಯವನ್ನು ಆಹ್ವಾನವಾಗಿ ಸ್ವೀಕರಿಸಿದ ಫಲ, ಗದುಗಿನ ಭಾರತ.

ಇಂಥದೇ ಇನ್ನೊಂದು ಕಾರಣವೆಂದರೆ, ಕುಮಾರವ್ಯಾಸ ಜೀವಿಸಿದ್ದುದು ೧೫ನೆಯ ಶತಮಾನದ ಸಂದರ್ಭ. ಇದು ಹಿಂದೂ ಸಂಸ್ಕೃತಿಯ ಪುನರುಜ್ಜೀವನ ಕಾಲ. ಮುಸಲ್ಮಾನರ ದಾಳಿಯಿಂದ ನಾಶವಾಗುತ್ತಲಿದ್ದ ಈ ಸಂಸ್ಕೃತಿಯ ರಕ್ಷಣೆ -ಸಂವರ್ಧನೆಗಾಗಿ ಅನೇಕ ಶಕ್ತಿಗಳು ದುಡಿಯತೊಡಗಿದ್ದ ಸಂದರ್ಭವದು. ವಿಜಯನಗರದ ಅರಸರು ರಾಜಕೀಯವಾಗಿ, ಧರ್ಮಧುರೀಣರು ಧಾರ್ಮಿಕವಾಗಿ ದುಡಿದರೆ, ಕವಿ ಕುಮಾರವ್ಯಾಸ ಮಹಾಭಾರತಸೃಷ್ಟಿಯ ಮೂಲಕ ಸಾಹಿತ್ಯಿಕವಾಗಿ ದುಡಿದು, ಹಿಂದೂಸಂಸ್ಕೃತಿ ಸಂರಕ್ಷಣೆಗೆ ತನ್ನ ಕಾಣಿಕೆಯನ್ನು ಸಲ್ಲಿಸಿದ.

ಹೀಗೆ ಒಂದು ಕಡೆಯಿಂದ ಬಹುದಿನಗಳ ಕೊರತೆ, ಇನ್ನೊಂದು ಕಡೆಯಿಂದ ಸಮಕಾಲೀನ ಅಗತ್ಯ ಕಾರಣವಾಗಿ ಕುಮಾರವ್ಯಾಸ ಭಾರತ ಹುಟ್ಟಿಕೊಂಡಿದ್ದು, ಇದು ಈ ಕೃತಿಸೃಷ್ಟಿಯ ಹಿನ್ನೆಲೆಯಾಗಿದೆ.

* * *

ಯಾವುದೇ ಉತ್ತಮಕೃತಿ ಯುಗದ ಸಂವೇದನೆಯ ನಿಷ್ಪತ್ತಿಯಾಗಿರುತ್ತದೆ. ಪಂಪ ಬದುಕಿದ್ದುದು ವೀರಯುಗದಲ್ಲಿ; ಕುಮಾರವ್ಯಾಸ ಬದುಕಿದ್ದುದು ಭಕ್ತಿಯುಗದಲ್ಲಿ. ಇವರಿಬ್ಬರಿಗೂ ಮೂಲ ಆಕರ ವ್ಯಾಸಭಾರತವೇ ಆಗಿದ್ದರೂ ಅದು ಒಬ್ಬನಲ್ಲಿ ವೀರಕಾವ್ಯವಾಗಿ, ಇನ್ನೊಬ್ಬನಲ್ಲಿ ಭಕ್ತಿಕಾವ್ಯವಾಗಿ ರೂಪತಾಳಿತು. ಅಂದರೆ ೧೦ನೆಯ ಶತಮಾನದಲ್ಲಿ ಹುಟ್ಟಿದ್ದರೆ ವೀರಕಾವ್ಯವನ್ನಾಗಿ ರೂಪಿಸುತ್ತಿದ್ದ ಕುಮಾರವ್ಯಾಸ, ೧೫ನೆಯ ಶತಮಾನದಲ್ಲಿ ಹುಟ್ಟಿದ್ದ ಕಾರಣ ಭಕ್ತಿಕಾವ್ಯವನ್ನಾಗಿ ರೂಪಿಸಿದನು. ಭಾರತಕಥೆಯ ಮುಖ್ಯವಸ್ತು ಯುದ್ಧವಾಗಿರುವುದರಿಂದ ಈ ಕೃತಿಯನ್ನು ವೀರಕಾವ್ಯವಾಗಿ ಸೃಷ್ಟಿಸುವುದು ಸುಲಭ. ಹೀಗಿದ್ದೂ ಕುಮಾರವ್ಯಾಸ ಅದನ್ನು ಭಕ್ತಿಕಾವ್ಯವನ್ನಾಗಿ ಸೃಷ್ಟಿಸಿದುದು ಒಂದು ಸಾಹಸವೇ ಸರಿ. "ಅರಸುಗಳಿಗಿದು ವೀರ . . ." ಎಂಬ ಪದ್ಯದಲ್ಲಿ ಕವಿಯೇ ಹೇಳಿರುವಂತೆ ಒಟ್ಟು ಕಾವ್ಯವನ್ನು ಅನೇಕ ಸಂವೇದನೆಗಳು ಆವರಿಸಿದ್ದರೂ, ಅವೆಲ್ಲವನ್ನೂ ಗಟ್ಟಿಯಾಗಿ, ಸೂಕ್ಷ್ಮವಾಗಿ

ಭಕ್ತಿಸೂತ್ರವೊಂದು ಪವಣಿಸಿದೆ ಎಂಬುದನ್ನು ಮರೆಯಲಾಗದು. "ಶ್ರೀಕೃಷ್ಣ ಚರಿತಾಮೃತ"ವೆಂಬ ಕೃತಿನಾಮವೇ ಈ ಕವಿಯ ಭಕ್ತಿಸಂವೇದನೆಯನ್ನು, ಈ ಕಾವ್ಯದ ನೆಲೆಯನ್ನು ಸೂಚಿಸುತ್ತದೆ.

ಸಾಹಿತ್ಯದಲ್ಲಿ ಸಂವೇದನೆಯ ಮುಂದಿನ ಹೆಜ್ಜೆ 'ಅಭಿವ್ಯಕ್ತಿ', ಅದರ ಮುಂದಿನ ಹೆಜ್ಜೆ 'ಸಂವಹನಶೀಲತೆ.' ತಾನು ಅನುಭವಿಸಿದ್ದ ಸಂವೇದನೆಗಳನ್ನು ಕವಿ ಪೂರ್ಣಪ್ರಮಾಣದಲ್ಲಿ ಅಭಿವ್ಯಕ್ತಿಸಬೇಕು; ಅದು ಪೂರ್ಣ ಪ್ರಮಾಣದಿಂದ ಜನಸಮೂಹದಲ್ಲಿ ಸಂಹವನಗೊಳ್ಳಬೇಕು. ಇವೆರಡೂ ಕುಮಾರವ್ಯಾಸ ಭಾರತದ ಬಹುಮುಖ್ಯ ಲಕ್ಷಣಗಳಾಗಿವೆ.

ಕುಮಾರವ್ಯಾಸನ ಅಭಿವ್ಯಕ್ತಿಯ ಒಂದು ಮುಖ್ಯಲಕ್ಷಣವೆಂದರೆ "ನಿರೂಪಣಾವಿಸ್ತಾರತೆ" ಮತ್ತು "ರೂಪಕಸಂಕ್ಷಿಪ್ತತೆ." ಈ ವೈರುದ್ಧ್ಯಗಳ ಸಂಗಮವಾಗಿದೆ ಕುಮಾರವ್ಯಾಸನ ಅಭಿವ್ಯಕ್ತಿಯ ರೀತಿ. ಒಮ್ಮೆ ನಿರೂಪಣೆಯ ವಿವರ ಅತಿಯಾಯಿತೇನೋ ಎನಿಸಿದರೆ, ಇನ್ನೊಮ್ಮೆ ರೂಪಕಗಳ ಪ್ರಮಾಣ ಅತಿಯಾಯಿತೇನೋ ಎನಿಸುವಷ್ಟು ಈ ಉಭಯ ರೀತಿಗಳು ಇಲ್ಲಿ ಕಾಲೂರಿವೆ. ಅಭಿವ್ಯಕ್ತಿ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಕವಿಯ ಉಚಿತಪದಗಳ ಆಯ್ಕೆ. ಭೇದಬುದ್ಧಿ ಪ್ರಸಂಗದಲ್ಲಿ ಕರ್ಣನಿಗೆ ಅವನ ಜನನರಹಸ್ಯವನ್ನು ಕೃಷ್ಣ ಹೇಳುವುದೇ ತಡ, "ಭೇದದಲಿ ಹೊಕ್ಕಿರಿದನೊ ಮಧುಸೂದನನು" ಎಂದು ಸ್ವಗತವಾಗಿ ಅಡಿಕೊಳ್ಳುತ್ತಾನೆ, ಕರ್ಣ. ಇಲ್ಲಿ ಇರಿ ಮತ್ತು ಸೂದನ (=ಕೊಲ್ಲು, ಇರಿ) ಪದಗಳ ಆಯ್ಕೆ ತುಂಬ ಔಚಿತ್ಯ ಪೂರ್ಣ. ಮಧು ಮೊದಲಾದ ರಾಕ್ಷಸರನ್ನು ಇರಿಯುವ ಕೆಲಸ ಮಾಡುತ್ತ ಬಂದ ಕೃಷ್ಣ, ಈಗ ತನ್ನನ್ನು ಇರಿದನೆಂದು ಸ್ವಗತವಾಗಿ ಅಡಿಕೊಳ್ಳುತ್ತಾನೆ, ಕರ್ಣ. ಇಲ್ಲಿ ಮಧುಸೂದನಕ್ಕೆ ಬದಲು ಲಕ್ಷ್ಮೀಪತಿ, ಇಲ್ಲವೆ ಕ್ಷೀರಸಾಗರಶಯನ ಇತ್ಯಾದಿ ಪದಗಳನ್ನು ಬಳಸಿದ್ದರೆ ಅರ್ಥದ ಪರಿಣಾಮಗಾಢತೆ ತಪ್ಪಿಹೋಗುತ್ತಿತ್ತು. ಇಂಥಲ್ಲಿ ಸಂದರ್ಭದ ಆಶಯ ಶಬ್ದಾರ್ಥವರ್ತುಲಕ್ಕೆ ಸೀಮಿತವಾಗಿ ನಿಲ್ಲದೆ, ಅನುಭವಿಸಿದಷ್ಟೂ ತರಂಗಗೊಳ್ಳುತ್ತ ಮುಂದುವರಿಯುತ್ತದೆ. ಈ ಕಾವ್ಯದಲ್ಲಿ ಮೇಲಿಂದಮೇಲೆ ಸಿಗುವ ಇಂಥ ಪ್ರಯೋಗಗಳ ಶೋಧ ಮತ್ತು ಅವುಗಳ ಆನ್ವಯಿಕ ವಿಮರ್ಶೆ ಅವಶ್ಯ ನಡೆಯಬೇಕಾಗಿದೆ.

ಅಭಿವ್ಯಕ್ತಿಕ್ರಿಯೆ ಪೂರ್ಣಪ್ರಮಾಣದಲ್ಲಿ ಜರುಗಿದ್ದರೆ, ಸಂವಹನಕ್ರಿಯೆ ಪೂರ್ಣಪ್ರಮಾಣದಲ್ಲಿ ಸಾಧ್ಯವಾಗುತ್ತದೆ ಎಂದು ಹೇಳಲು ಬರುವುದಿಲ್ಲ. ಸಂವಹನವೆನ್ನುವುದು ಕೃತಿಯೊಂದು ಸಹೃದಯರಿಗೆ ಮುಟ್ಟುವ ಸಾರ್ಥಕತೆಯಾಗಿದೆ. ಇಲ್ಲಿ ಕವಿಯ ಸಂವಹನ ಸಾಮರ್ಥ್ಯ ಮತ್ತು ಸಂವಹನ ವಿಧಾನ ಈ ಎರಡೂ ಅಂಶಗಳನ್ನು ಲಕ್ಷಿಸಬೇಕಾಗುತ್ತದೆ. ಸಂಸ್ಕೃತಿಯ ಪುನರುಜ್ಜೀವನ ಮತ್ತು ಪ್ರಸಾರಗಳೇ ಕುಮಾರವ್ಯಾಸನ ಮುಖ್ಯ ಉದ್ದೇಶವಾಗಿರುವುದರಿಂದ, ಅವನು ತನ್ನ ಕಣ್ಣಮುಂದೆ ಸಮಾಜದ ಎಲ್ಲ ಸ್ತರಗಳ ಸಹೃದಯರನ್ನು, ಮನುಷ್ಯ ಸ್ವಭಾವದ ಎಲ್ಲ ಪರಿಗಳನ್ನು ಇಟ್ಟುಕೊಂಡಿದ್ದಾನೆ. ಕನ್ನಡ ಭಾಷೆಯ ಸಹಜಸ್ವರೂಪ, ಕಾವ್ಯಭಾಷೆಯ ಪುನಃ ಸೃಷ್ಟಿ ರೀತಿ, ಭಾಮಿನಿಯಲ್ಲಿ ಅದನ್ನು ಬಳಸುವ ವಿಧಾನ ಇವೆಲ್ಲ ಕರಗತ ಮಾಡಿಕೊಂಡ ಕಾರಣ, ಅವನ ಕಾವ್ಯ ಸನ್ನಿವೇಶಕ್ಕೆ ತಕ್ಕಂತೆ ನೀರಾಗಿ ಹರಿಯುತ್ತದೆ, ಸುರಿಯುತ್ತದೆ, ಧುಮ್ಮಿಕ್ಕುತ್ತದೆ. ಹೀಗಾಗಿ ಸಂವಹನಶೀಲತೆ ದೃಷ್ಟಿಯಿಂದ ಇದು ಕನ್ನಡದ ಒಂದು ಅಪೂರ್ವಕೃತಿಯಾಗಿದೆ. ಈ ಅಪೂರ್ವತೆಯನ್ನು ತಂದುಕೊಟ್ಟುದು, ಕವಿ ಬಳಸಿದ ಸಂವಹನಶೀಲತೆಯ ಸಂವಿಧಾನ ಮತ್ತು ಬಹುಬಗೆಯ ವಿಧಾನಗಳು.

ಪ್ರಾಚೀನ ಲಿಖಿತ ಸಾಹಿತ್ಯದಲ್ಲಿ ಎರಡು ಶೈಲಿಪರಂಪರೆಗಳು ಬೆಳೆದುಬಂದಿವೆ: (೧) ಧ್ವನಿಪಾತಳಿಯಲ್ಲಿ ಸೆಲೆಯೊಡೆದು, ಅಕ್ಷರಪಾತಳಿಯಲ್ಲಿ ಮೂರ್ತಗೊಂಡ ಶೈಲಿ, (೨) ಅಕ್ಷರಪಾತಳಿಯಲ್ಲಿ ಸೆಲೆಯೊಡೆದು ಅಕ್ಷರಪಾತಳಿಯಲ್ಲಿಯೇ ಮೂರ್ತಗೊಂಡ ಶೈಲಿ. ಇವುಗಳನ್ನೇ "ಹಾಡುಗಬ್ಬ" ಪರಂಪರೆ, "ಓದುಗಬ್ಬ" ಪರಂಪರೆಗಳೆಂದು ನಮ್ಮ ಪ್ರಾಚೀನರು ಗುರುತಿಸಿದ್ದಾರೆ. ಇವುಗಳಲ್ಲಿ ಒಂದು ಧ್ವನಿಪಾತಳಿಯಲ್ಲಿಯೇ 'ಸಮೂಹ'ಕ್ಕೆ

ಸರಿಯಾಗಿ ಸಂವಹನಗೊಳ್ಳುವ ಕಾವ್ಯ, ಇನ್ನೊಂದು ಅಕ್ಷರಪಾತಳಿಯಲ್ಲಿಯೇ 'ವ್ಯಕ್ತಿ'ಗೆ ಸರಿಯಾಗಿ ಸಂವಹನಗೊಳ್ಳುವ ಕಾವ್ಯ. ನಮ್ಮದು ನಿರಕ್ಷರಿಗಳ ದೇಶವಾಗಿರುವುದರಿಂದ ಸಮೂಹಕ್ಕೆ ತಲುಪಿಸುವ ಸಲುವಾಗಿ ಧ್ವನಿಪಾತಳಿಯ ಕಾವ್ಯರಚನೆ ಅಂದಿನ ಅಗತ್ಯವಾಗಿದ್ದಿತು. ಹೀಗಾಗಿ ಕನ್ನಡದಲ್ಲಿ ಅಕ್ಷರ ಪಾತಳಿಯ ಕಾವ್ಯ ಎಷ್ಟೇ ಹುಟ್ಟಿದ್ದರೂ, ಧ್ವನಿಪಾತಳಿಯ ಕಾವ್ಯವನ್ನು ಹುಟ್ಟಿಸುವ, ಧ್ವನಿಮಾಧ್ಯಮದಲ್ಲಿಯೇ ಅದನ್ನು ಶ್ರವಣ ಸಂವಹನಗೊಳಿಸುವ ಪದ್ಧತಿ - ಪರಂಪರೆ ನಮ್ಮಲ್ಲಿ ಪ್ರಧಾನವಾಗಿದ್ದಿತು. ಕುಮಾರವ್ಯಾಸಭಾರತ ಈ ಪದ್ಧತಿಯ, ಈ ಪರಂಪರೆಯ ಕಾವ್ಯ. ತನ್ನ ಕೃತಿಯನ್ನು ಸ್ವತಃ ಕವಿಯೇ "ಶ್ರವಣಸುಧಾವಿನೂತನಕಥನ"ವೆಂದು ಕರೆದು ಈ ಮಾತನ್ನು ಸ್ಪಷ್ಟಪಡಿಸಿದ್ದಾನೆ. ಪ್ರಾಚೀನ ಹಸ್ತಪ್ರತಿಗಳಲ್ಲಿ ಪ್ರತಿಯೊಂದು ಸಂಧಿಯ ತಲೆಯ ಮೇಲೆ ರಾಗನಿರ್ದೇಶನವಿರುವುದನ್ನು ನೋಡಿದರೆ, ಈ ಕೃತಿಯನ್ನು ಸಂವಹನಗೊಳಿಸುವ ಸರಿಯಾದ ಕ್ರಮವೆಂದರೆ ಧ್ವನಿಮಾಧ್ಯಮವೆಂದೇ ಸ್ಪಷ್ಟವಾಗುತ್ತದೆ. ಆದರೆ ನಾವು ಇಂಗ್ಲೀಷಿನ ಶಿಕ್ಷಣ-ಸಾಹಿತ್ಯಗಳ ಪ್ರಭಾವದಿಂದಾಗಿ ಅಕ್ಷರಮಾಧ್ಯಮದಿಂದ ಓದುವ ಪದ್ಧತಿಯನ್ನು ಬೆಳೆಸಿಕೊಳ್ಳುತ್ತ ಬಂದಿದ್ದೇವೆ. ಇದರಿಂದಾಗಿ ನೋಡಿ ವಿಮರ್ಶಿಸಬೇಕಾದ ದೃಶ್ಯಪಾತಳಿಯ ನಾಟಕವನ್ನು ಓದಿ ವಿಮರ್ಶಿಸುವ ತಪ್ಪು ಕ್ರಮದಂತೆ, ಕೇಳಿ ವಿಮರ್ಶಿಸಬೇಕಾದ ಧ್ವನಿಪಾತಳಿಯ ಕಾವ್ಯಗಳನ್ನು ಓದಿ ವಿಮರ್ಶಿಸುವುದು ಸರಿಯಾದ ಕ್ರಮವಲ್ಲವೆನಿಸುತ್ತದೆ. ಆದುದರಿಂದ ಕನ್ನಡದ ಪದ್ಯಕೃತಿಗಳನ್ನು, ಕೊನೆಯಪಕ್ಷ ಪ್ರಾಚೀನ ಪದ್ಯಕೃತಿಗಳನ್ನಾದರೂ ಕೇಳಿ ವಿಮರ್ಶಿಸುವ ಪದ್ಧತಿಯನ್ನು ನಾವು ಅನುಸರಿಬೇಕಾಗಿದೆ. ಈ ವಿಚಾರದ ಹಿನ್ನೆಲೆಯನ್ನು ನೋಡಿದಾಗ, ಕುಮಾರವ್ಯಾಸನ ಕೃತಿ ಇಡಿಯಾಗಿ ಸಂವಹನಗೊಳ್ಳಬೇಕಾದರೆ ವಾಚನಮಾಧ್ಯಮಕ್ಕಿಂತ ಶ್ರವಣಮಾಧ್ಯಮವೇ ಯುಕ್ತವಿಧಾನವೆನಿಸುತ್ತದೆ. ಕವಿಯ ಉದ್ದೇಶವೂ ಇದೇ ಆಗಿರುವ ಸಾಧ್ಯತೆಯಿದೆ. ಆದುದರಿಂದ "ವಾಚನವಿಧಾನ"ಕ್ಕಿಂತ "ಶ್ರವಣವಿಧಾನ"ವನ್ನೇ ಈ ಕಾವ್ಯ ವಿಮರ್ಶೆಗೆ ಅನ್ವಯಿಸುವುದು ಯೋಗ್ಯವಾಗಿದೆ. "ಕಾಯಬೇಕೆಂದರ್ಜುನನು ಹಣೆ ಚಾಚಿದನು ಹರಿಪದಕೆ" ಎಂಬಂಥ ಅಭಿವ್ಯಕ್ತಿಗಳು ವಾಚನಮಾಧ್ಯಮಕ್ಕಿಂತ ಧ್ವನಿಮಾಧ್ಯಮದಲ್ಲಿ ತುಂಬ ಪರಿಣಾಮ ಬೀರುತ್ತವೆಯೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಕುಮಾರವ್ಯಾಸನ ಹಾಸ್ಯವನ್ನು ಕುರಿತು ಉಪನ್ಯಾಸ ಮಾಡುತ್ತ ಶ್ರೀ. ಅ. ರಾ. ಸೇ. ಅವರು ಈತನ ಕೃತಿಯ ಉಪೇಕ್ಷಿತ ಹಾಸ್ಯರಸಪೂರ್ಣ ಭಾಗಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಬಹುಶಃ ಒಂದೆರಡು ರಸಗಳಿಗೆ ನೆಲೆಯಾದುದು 'ಖಂಡಕಾವ್ಯ'ವಾದರೆ, ಸರ್ವರಸಗಳಿಗೆ ನೆಲೆಯಾದುದೇ 'ಮಹಾಕಾವ್ಯ'ವೆಂಬ ಪರಿಕಲ್ಪನೆ ನಮ್ಮ ಪ್ರಾಚೀನರದಾಗಿರಬಹುದು. ಕವಿಯೇ ಹೇಳುವಂತೆ "ಅರಸುಗದಳಿಗಿದು ವೀರ... ವಿರಹಿಗಳ ಶೃಂಗಾರ..." ಹೀಗೆ ಅನೇಕ ರಸಗಳ ನಿಬಿಡತೆ ಕಾರಣವಾಗಿ ಕುಮಾರವ್ಯಾಸಭಾರತ ಕನ್ನಡದ ಮಹಾಕಾವ್ಯವೆನಿಸಿದೆ. ಈ ರಸಗಳಲ್ಲಿ ಕುಮಾರವ್ಯಾಸನ "ಹಾಸ್ಯ" ವಿಶಿಷ್ಟಸ್ವರೂಪದ್ದಾಗಿದೆ. ಕನ್ನಡದಲ್ಲಿ ವೀರ, ಶೃಂಗಾರ ಇತ್ಯಾದಿ ರಸಗಳು ಬೇರೆ ಕೃತಿಗಳಲ್ಲಿ ಸಿಗಬಹುದು. ಹಾಸ್ಯಕ್ಕಾಗಿ ನಾವು ಕುಮಾರವ್ಯಾಸ ಭಾರತಕ್ಕೇ ಮೊರೆಹೊಗಬೇಕು. ಇದು ವ್ಯಾಸಭಾರತಕ್ಕೆ ಕುಮಾರವ್ಯಾಸನ ವಿಶೇಷ ಕೊಡುಗೆಯೂ ಹೌದು.

ಶೃಂಗಾರ-ಹಾಸ್ಯ ಮಿತ್ರರಸಗಳು. ಶೃಂಗಾರಕಾವ್ಯಗಳಲ್ಲಿ ಹಾಸ್ಯಪ್ರಜ್ಞೆಯ ವಿದೂಷಕ ಬರುವುದು ಈ ಕಾರಣಕ್ಕಾಗಿ. ಶೃಂಗಾರರಸದ ಭಾವ ರತಿ. ರತಿಯೆಂದಾಕ್ಷಣ ಮೊದಲು ನೆನಪಾಗುವುದು ಹೆಣ್ಣು. ಹೀಗಾಗಿ ಹೆಣ್ಣು-ಗಂಡುಗಳ ಮುಕ್ತಸಮಾಜದಲ್ಲಿ ಹಾಸ್ಯಪ್ರಜ್ಞೆ ಹೆಚ್ಚು ಪ್ರಮಾಣದಲ್ಲಿರುತ್ತದೆ. ಈ ಕಾರಣಕ್ಕಾಗಿಯೇ ಹೆಣ್ಣು-ಗಂಡುಗಳಲ್ಲಿ ಮುಕ್ತವ್ಯವಸ್ಥೆಯಿಲ್ಲದ ಇಸ್ಲಾಂ ಸಂಸ್ಕೃತಿಯ ಸಾಹಿತ್ಯದಲ್ಲಿ ಹಾಸ್ಯ ಕಡಿಮೆ. ಮುಕ್ತವ್ಯವಸ್ಥೆ ಕೆಲಮಟ್ಟಿಗೆ ಇರುವ ಭಾರತೀಯರ ಸಾಹಿತ್ಯದಲ್ಲಿ ಹಾಸ್ಯಕ್ಕೆ ಒಂದಿಷ್ಟು ಸ್ಥಾನವಿದೆ. ಮುಕ್ತವ್ಯವಸ್ಥೆಯೇ ಪ್ರಧಾನವಾಗಿರುವ ಪಶ್ಚಿಮಸಂಸ್ಕೃತಿಯಲ್ಲಿ ಹಾಸ್ಯ ಪ್ರಧಾನಸ್ಥಾನ ಗಳಿಸಿದೆ. ಇದರ ಫಲವಾಗಿ ಕಾಮೆಡಿ ಪ್ರಕಾರವೇ

ಅಲ್ಲಿ ಹುಟ್ಟಿಕೊಂಡಿದೆ. ಕುಮಾರವ್ಯಾಸನಲ್ಲಿಯೂ ಶುದ್ಧಹಾಸ್ಯ ಕಂಡುಬರುವುದು ದ್ರೌಪದೀಸ್ವಯಂವರ, ಸ್ತ್ರೀಪರಿವಾರದ ಉತ್ತರನ ಪೌರುಷ ಮೊದಲಾದ ಮಹಿಳಾ ಪ್ರಸಂಗಗಳಲ್ಲಿ ಎಂಬುದನ್ನು ಇಲ್ಲಿ ನೆನೆಯಬೇಕು. ಒಂದರಲ್ಲಿ ಬ್ರಾಹ್ಮಣರನ್ನು ಕುರಿತು, ಇನ್ನೊಂದರಲ್ಲಿ ಕ್ಷತ್ರಿಯರನ್ನು ಕುರಿತು ಈ ಹಾಸ್ಯ ಚಿಮ್ಮಿದೆ. ಮಿಕ್ಕ ಬಕಾಸುರವಧೆ, ಕೀಚಕವಧೆ, ಕರ್ಣ ಅಶ್ವತ್ಥಾಮರ ಸನ್ನಿವೇಶಗಳಲ್ಲಿ ಹಾಸ್ಯಕ್ಕಿಂತ ವಿಡಂಬನೆಯೇ ಪ್ರಧಾನವಾಗಿದೆ. ಹಾಸ್ಯದಲ್ಲಿ ಸಂತೋಷವಿದ್ದರೆ, ವಿಡಂಬನೆಯಲ್ಲಿ ಕ್ರೂರ ಸಂತೋಷವಿರುತ್ತದೆ.

ಮೇಲೆ ಹೇಳಿದಂತೆ, ಹಾಸ್ಯಪ್ರಸಂಗದಲ್ಲಿಯೂ ಕುಮಾರವ್ಯಾಸ ಪದಗಳ ಆಯ್ಕೆಯ ಮೂಲಕ ಕಾವ್ಯಸೌಂದರ್ಯವನ್ನು ಉತ್ಕರ್ಷಗೊಳಿಸುತ್ತಾನೆ.

ಆರೊಡನೆ ಕಾದುವೆನು ಕೆಲಬರು
ಹಾರುವರು ಕೆಲರಂತಕನ ನೆರೆ
ಯೂರವರು ಕೆಲರಧಮಕುಲದಲಿ ಜನಿಸಿ ಬಂದವರು।
ವೀರರೆಂಬವರಿವರ ಮೇಲಿ
ನ್ನಾರ ಹೆಸರುಂಟವರೊಳೆಂದು ಕು
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದಿರಿನಲಿ ॥

ಈ ಪದ್ಯವನ್ನು ಓದುತ್ತ ಹೋದಂತೆ ಯಾವನೋ ಒಬ್ಬ ವೀರನ ವೀರಘೋಷದ ಭಾವ ಮೂಡುತ್ತದೆ. ಆದರೆ, ಕೊನೆಯ "ಹೆಂಗಳಿದಿರಿನಲಿ" ಎಂಬ ಒಂದೇ ಒಂದು ಶಬ್ದದಿಂದಾಗಿ ಇಡೀ ರಚನೆ ವೀರದಿಂದ ಹಾಸ್ಯಕ್ಕೆ ತಿರುಗುತ್ತದೆ. ಪದ್ಯ ಕಾವ್ಯವಾಗುವುದು ಹೀಗೆ. ಇಂಥ ಅನೇಕ ಪಲಕುಗಳನ್ನು ಶೋಧಿಸಿ ಕುಮಾರವ್ಯಾಸನ ಸಂವಹನದ ವಿವಿಧ ರೀತಿಗಳನ್ನು, ಹಾಸ್ಯ ಹೊಮ್ಮಿಸುವ ವಿವಿಧ ಕ್ರಮಗಳನ್ನು ಅನ್ವೇಷಿಸುವುದು ಅಗತ್ಯವಿದೆ. ಇಂಥ ಕೆಲಸಗಳಿಗೆ ಇಂದಿನ ವಿಚಾರಸಂಕಿರಣ ನಾಂದಿಯಾಗಲೆಂದು ಹಾರೈಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರಿನಲ್ಲಿ ಕುಮಾರವ್ಯಾಸನನ್ನು ಕುರಿತು ಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಅಧ್ಯಕ್ಷೀಯ ಭಾಷಣ.

ಆಕರ : ಮಾರ್ಗ ಸಂಪುಟ–೬

೧೯

ಭಾಷಾಬೋಧನ ಪದ್ಧತಿ ಶಿಬಿರ : ಉದ್ಘಾಟನೆ

ಮಹನೀಯರೇ, ಮಹಿಳೆಯರೇ,

ಭೌಗೋಳಿಕ ಆವರಣ, ಶೈಕ್ಷಣಿಕ ವಾತಾವರಣ ದೃಷ್ಟಿಯಿಂದ ಕರ್ನಾಟಕ ವಿಶ್ವವಿದ್ಯಾಲಯ ಭಾರತದ ಒಂದು ಆಕರ್ಷಕ ಮತ್ತು ಮಹತ್ವಪೂರ್ಣ ವಿದ್ಯಾಕೇಂದ್ರವೆನಿಸಿದೆ. ಆರ್ಟ್ಸ್‌ಫೆಕಲ್ಟಿಗೆ ಸಂಬಂಧಿಸಿದ ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ, ಸಂಸ್ಕೃತ, ಉರ್ದು ಮತ್ತು ವಿದೇಶಭಾಷೆಗಳ ಬೋಧನೆಗೆ ಈ ವಿಶ್ವವಿದ್ಯಾಲಯದಲ್ಲಿ ಸಮೃದ್ಧ ಅವಕಾಶವಿದೆ. ಇವುಗಳಲ್ಲಿ ಕನ್ನಡ ಅಧ್ಯಯನಪೀಠ ಕನ್ನಡ, ಭಾಷಾಶಾಸ್ತ್ರ, ಜನಪದಸಾಹಿತ್ಯಗಳಲ್ಲಿ ಎಂ. ಎ. ವರ್ಗಗಳನ್ನೂ ಲಿಂಗ್ವಿಸ್ಟಿಕ್ಸ್, ಭಾಷಾಂತರ, ಬಸವ ಸ್ಟಡೀಜಗಳಲ್ಲಿ ಡಿಪ್ಲೋಮಾ ವರ್ಗಗಳನ್ನೂ ನಡೆಸುವುದರ ಜೊತೆಗೆ ಕನ್ನಡೇತರರಿಗಾಗಿ ೧೨ ತಿಂಗಳು, ೬ ತಿಂಗಳು, ೩ ತಿಂಗಳಿನ ಸರ್ಟಿಫಿಕೇಟಕೋರ್ಸ್ ಇನ್ ಕನ್ನಡ ವರ್ಗ ನಡೆಸುತ್ತಲಿದೆ. ವಿದೇಶಭಾಷಾ ವಿಭಾಗದಲ್ಲಿ ರಷ್ಯನ್, ಫ್ರೆಂಚ್, ಜರ್ಮನ್ ಭಾಷೆಗಳ ಬೋಧನೆಗೆ ಅವಕಾಶವಿದೆ. ಹೀಗೆ ಬೋಧನೆಯ ಜೊತೆ ಇಲ್ಲಿ ಸಂಶೋಧನ, ಪ್ರಕಟನ ವಿದ್ವತ್‌ಕಾರ್ಯಗಳು ಸಮಸಮವಾಗಿ ಜರುಗುತ್ತಲಿವೆ. ಈ ಚಟುವಟಿಕೆಗಳಿಗೆ ಒಂದು ನಿದರ್ಶನ ಕಳೆದ ೩ ದಿನಗಳಿಂದ ನಡೆಯುತ್ತಲಿರುವ "ಭಾಷಾಬೋಧನ ಪದ್ಧತಿ" ಶಿಬಿರ.

ಇಪ್ಪತ್ತನೆಯ ಶತಮಾನದಲ್ಲಿ ಜಗತ್ತು ಒಂದು ಹಳ್ಳಿಯ ವ್ಯಾಪ್ತಿಗೆ ಒಳಪಟ್ಟಿದೆ. ಈಗ ಅನೇಕ ಭಾಷೆಗಳ ಸಂಪರ್ಕದ ಅನಿವಾರ್ಯತೆಯಿಂದಾಗಿ ಇವುಗಳ ಕಲಿಕೆ ಜನರಿಗೆ ಅಗತ್ಯವೆನಿಸಿದೆ. ಈ ಅಗತ್ಯನ್ನು ಪೂರೈಸಿಕೊಡುವುದು ವಿದ್ಯಾಸಂಸ್ಥೆಗಳ ಕರ್ತವ್ಯವಾಗಿದ್ದು, ಅವು ಭಾಷೆಯನ್ನು ಅಲ್ಪಾವಧಿಯಲ್ಲಿ ಮತ್ತು ಶಾಸ್ತ್ರೀಯವಾಗಿ ಕಲಿಸುವ ಹೊಣೆಹೊರಬೇಕಾಗಿ ಬಂದಿದೆ.

೧. ಅಭಿವ್ಯಕ್ತಿಯ ಮಾಧ್ಯಮವರ್ಗಗಳಾದ ಸಂಗೀತ, ಶಿಲ್ಪ, ಚಿತ್ರ, ನೃತ್ಯಗಳು ಯಾವುದೇ ದೇಶದ ಪ್ರಜೆಗಳಿಗೆ ಅರ್ಥವಾಗುವ 'ಸಾರ್ವತ್ರಿಕ ಮಾಧ್ಯಮ'ಗಳಾದರೆ, ಭಾಷೆಯು ಅದನ್ನು ಕಲಿತ ಪ್ರಜೆಗಳಿಗೆ ಮಾತ್ರ ಅರ್ಥವಾಗುವ 'ಪರಿಮಿತ ಮಾಧ್ಯಮ'ವಾಗಿದೆ. ಈ ಪರಿಮಿತಿಯಲ್ಲದೆ ಕೆಲವೊಮ್ಮೆ ಭಾಷೆಯಲ್ಲಿ ಅನೇಕ ಪ್ರಾಂತಭೇದಗಳೂ, ಈ ಅನೇಕ ಪ್ರಾಂತಭೇದಗಳನ್ನು ಪ್ರತಿನಿಧಿಸುವ ಒಂದು ಪ್ರಮಾಣಭಾಷೆಯೂ ಇರುತ್ತದೆ. ಈ 'ವೈವಿಧ್ಯತೆ' ಕಾರಣವಾಗಿ 'ಏಕವಿಧ' ಭಾಷಾಬೋಧನ ಪದ್ಧತಿಯನ್ನು ರೂಪಿಸುವುದು ಕಷ್ಟದ ಕೆಲಸವಾಗಿದೆ.

೨. ಮೂಲತಃ ಭಾಷೆಯೆನ್ನುವುದು ಅಭಿವ್ಯಕ್ತಿಯ ಸಾಧನ. ಇದು ಸಾಧನ ಪಾತಳಿಯಿಂದ ಆಳಕ್ಕೆ ಇಳಿದರೆ

ಸ್ವಭಾಷೆಯಾಗುತ್ತಿದ್ದರೆ, ಕೇವಲ ಸಾಧನಪಾತಳಿ ಮೇಲೆಯೇ ಉಳಿದರೆ ಅನ್ಯಭಾಷೆ ಎನಿಸಿಕೊಳ್ಳುತ್ತದೆ. ಇವುಗಳಲ್ಲಿ ಅನ್ಯಭಾಷೆಯು ಸಂಪರ್ಕಭಾಷೆ, ಸಂಪರ್ಕೇತರ ಭಾಷೆಯೆಂದು ಎರಡು ವಿಧವಾಗಿದೆ.

೩. ಭಾಷಾಬೋಧನೆಯೆನ್ನುವುದು ಸ್ವಭಾಷೆಯವನಿಗೆ ಸ್ವಭಾಷೆಯನ್ನು ಇಲ್ಲವೆ ಅನ್ಯಭಾಷೆಯನ್ನು (ಸಂಪರ್ಕಭಾಷೆ ಮತ್ತು ಸಂಪರ್ಕೇತರ ಭಾಷೆ) ಕಲಿಸುವುದಾಗಿದೆ. ಆದುದರಿಂದ ಇವುಗಳಲ್ಲಿ ವಿದ್ಯಾರ್ಥಿ ಕಲಿಯಲಿರುವ ಭಾಷೆ ಯಾವುದು? ಎಂಬುದನ್ನು ಗಮನದಲ್ಲಿಟ್ಟುಕೊಂಡು, ಅವನಿಗೆ ಸ್ವಭಾಷಾ ಬೋಧನ ಪದ್ಧತಿ, ಇಲ್ಲವೆ ಸಂಪರ್ಕಭಾಷಾಬೋಧನಪದ್ಧತಿ, ಇಲ್ಲವೆ ಸಂಪರ್ಕೇತರ ಭಾಷಾಬೋಧನಪದ್ಧತಿಯ ಮೂಲಕವೇ ಭಾಷಾಬೋಧನೆ ನಡೆಸಬೇಕಾಗುತ್ತದೆ; ಇದನ್ನು ಬಿಟ್ಟು ಎಲ್ಲ ವಿದ್ಯಾರ್ಥಿಗಳಿಗೂ ಒಂದೇ ಪದ್ಧತಿಯನ್ನು ಅನ್ವಯಿಸುವುದು ಅವೈಜ್ಞಾನಿಕವೆನಿಸುತ್ತದೆ.

೪. ಭಾಷಾಬೋಧನಕಾರ್ಯದಲ್ಲಿ ಒಂದು ತುದಿಗೆ ಕಲಿಸಬೇಕಾದ ಭಾಷೆ ಇದ್ದರೆ, ಇನ್ನೊಂದು ತುದಿಗೆ ಅದನ್ನು ಕಲಿಯಬೇಕಾದ ವಿದ್ಯಾರ್ಥಿ ಇರುತ್ತಾನೆ. ಈ ವಿದ್ಯಾರ್ಥಿ ಯಾವ ಭಾಷಾಕುಟುಂಬದವ, ಯಾವ ಭಾಷೆಯವ, ಯಾವ ಪ್ರಾತಂಭೇದವ - ಈ ಅಂಶಗಳನ್ನೂ ಗಮನಿಸುವುದು ಅವಶ್ಯವಿದೆ. ಇದನ್ನು ಬಿಟ್ಟು ಅನೇಕ ಪ್ರಾತಂಭೇದ, ಅನೇಕ ಭಾಷೆ, ಅನೇಕ ಭಾಷಾಕುಟುಂಬದ ವಿದ್ಯಾರ್ಥಿಗಳನ್ನು ಕಲೆಹಾಕಿ ಭಾಷೆಯನ್ನು ಬೋಧಿಸುವುದು ತಪ್ಪು ವಿಧಾನವೆನಿಸುತ್ತದೆ.

೫. ಇಂದು ಜಗತ್ತಿನಾದ್ಯಂತ ಸ್ವಭಾಷೆಯನ್ನಾಗಲೀ, ಅನ್ಯಭಾಷೆಯನ್ನಾಗಲೀ ಕಲಿಸುವುದೆಂದರೆ ಅವುಗಳ ಪ್ರಮಾಣಭಾಷೆ ಅಂದರೆ ಲಿಪಿಬದ್ಧಭಾಷೆಯನ್ನೇ ಕಲಿಸುವುದಾಗಿದೆ. ಇಲ್ಲಿಯೂ ವಿದ್ಯಾರ್ಥಿಯ ಮಾತೃಭಾಷಾ ಲಿಪಿಗೂ ಹೊಸದಾಗಿ ಕಲಿಸುವ ಭಾಷಾಲಿಪಿಗೂ ಇರುವ ಸಂಬಂಧವನ್ನು ಅವಶ್ಯ ಗಮನಿಸಬೇಕು. ಇದನ್ನು ಬಿಟ್ಟು ಬೇರೆ ಬೇರೆ ಲಿಪಿ ತರಬೇತಿ ಪಡೆದ ವಿದ್ಯಾರ್ಥಿಗಳನ್ನು ಒಂದೆಡೆ ಕಲೆ ಹಾಕಿ ನಡೆಸುವ ಭಾಷಾಬೋಧನೆಯು ದೋಷಪೂರ್ಣವೆನಿಸುತ್ತದೆ. ಇದು ಬಹಳ ವೆಚ್ಚದ ಕೆಲಸವೆನಿಸಿದರೆ, ಕೊನೆಯ ಪಕ್ಷ ಪ್ರಾಧ್ಯಾಪಕನಾದವನು ಈ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬೋಧನಕಾರ್ಯ ನಡೆಸಬೇಕೆಂದೂ ಸೂಚಿಸುತ್ತೇನೆ.

೬. ಯಾವುದೇ ಭಾಷೆಯ ಧ್ವನಿಸ್ವರೂಪ, ಪದಸ್ವರೂಪ ಮತ್ತು ವಾಕ್ಯಸ್ವರೂಪಗಳ ಸರಿಯಾದ ಬೋಧನೆ ಪ್ರಥಮ ಅವಶ್ಯಕತೆಯಾಗಿದೆ. ಭಾರತದಲ್ಲಿ ರೂಢವಾಗಿದ್ದ ಪಠನಪದ್ಧತಿ ಇಂದು ಕಡಿಮೆಯಾಗಿ, ಉಚ್ಚಾರದಲ್ಲಿ ದೋಷ ವರ್ಧಿಸುತ್ತಲಿದ್ದು, ಇದಕ್ಕೆ ಪರ್ಯಾಯ ತರಬೇತಿ ಪದ್ಧತಿಯನ್ನು ನಾವು ರೂಢಿಸಬೇಕಾಗಿದೆ. ಪದ, ವಾಕ್ಯಗಳ ರಚನೆಯನ್ನು ಬೋಧಿಸುವಲ್ಲಿ ಮಾದರಿಗಳನ್ನು ರೂಪಿಸಿ, ಅವುಗಳ ಆದರ್ಶದಲ್ಲಿ ವಿದ್ಯಾರ್ಥಿಗಳು ಹೊಸ ಪದ, ಹೊಸ ವಾಕ್ಯ ಸೃಷ್ಟಿಸಿಕೊಳ್ಳುವ ರಹಸ್ಯವನ್ನುಅವರಿಗೆ ತಿಳಿಸಿಕೊಡಬೇಕು. ಇಲ್ಲದಿದ್ದರೆ ಅವರ ಶಬ್ದಭಾಂಡಾರ ಬೆಳೆಯುವುದಿಲ್ಲ; ವಾಕ್ಯರಚನಾಶಕ್ತಿ ಬೆಳೆಯುವುದಿಲ್ಲ.

೭. ಯಾವುದೇ ಭಾಷೆಯ ಪದಗಳಿಗೆ, ವಾಕ್ಯಗಳಿಗೆ ವಾಚ್ಯಾರ್ಥವೊಂದು ಇರುತ್ತದೆ. ಜನಬಳಕೆಯಲ್ಲಿ, ಕವಿಬಳಕೆಯಲ್ಲಿ ಅವುಗಳಿಗೆ ವಿಶೇಷ ಅರ್ಥವೊಂದು ಪ್ರಾಪ್ತವಾಗಿರುತ್ತದೆ.

ಮಾತಿನ ಮಧ್ಯೆ ಬಳಕೆಯಾಗುವ ಇಂಥ ಪಡೆನುಡಿಗಳೂ, ಗಾದೆಮಾತುಗಳೂ ಯಾವುದೇ ಭಾಷೆಯ ವಿಶೇಷ ಸಂಪತ್ತು, ಇವುಗಳನ್ನು ಅರಿಯದಿದ್ದರೆ ಯಾವುದೇ ಭಾಷೆ ಇಡಿಯಾಗಿ ವಶವಾಗುವುದಿಲ್ಲ.

೮. ವ್ಯಕ್ತಿಗೆ ದೇಹ, ಪ್ರಾಣ, ಮನಸ್ಸುಗಳಿದ್ದಂತೆ ಭಾಷೆಗೆ ರಚನೆ, ಅರ್ಥ, ಸಂಸ್ಕೃತಿಗಳೆಂಬ ಮೂರು ಕೋಶಗಳಿರುತ್ತವೆ. ಒಂದು ಭಾಷೆಯ ಸರಿಯಾದ ಅಭ್ಯಾಸವೆಂದರೆ ಈ ಮೂರೂ ಕೋಶಗಳ ಅಭ್ಯಾಸವಾಗಿದೆ.

ಯಾವುದೇ ಸಂಸ್ಕೃತಿಯ ಅಭ್ಯಾಸ ವರ್ಧಿಸಿದಷ್ಟೂ ಆ ಭಾಷೆಯ ತಿಳಿವಳಿಕೆ ಸ್ಪಷ್ಟವಾಗುತ್ತ ಹೋಗುತ್ತದೆ. ಇಲ್ಲದಿದ್ದರೆ ಮುಸ್ಲಿಂ ಅರಸು ಔರಂಗಜೇಬನು ಮಹಾಭಾರತ ಕೇಳಿದಂತಾಗುತ್ತದೆ. ಔರಂಗಜೇಬನ ಮಾದರಿಯಲ್ಲಿಯೇ ಇ. ಪಿ. ರೈಸ್ ಪ್ರಾಚೀನ ಕನ್ನಡ ಸಾಹಿತ್ಯವನ್ನು ಕುರಿತು ಹೀಗೆ ಹೇಳುತ್ತಾನೆ:

"Kanare writers ...... contributed extremely little to the stock of the world's knowledge and inspiration..... there is little of original and imperisable thought on the question of perinnial interest to man .... Hence a lack of that which stimulate hope and inspirers to great enterprises.

ಕನ್ನಡ ಭಾಷೆಯ ಪರಿಚಯವಿದ್ದು ಕನ್ನಡ ಸಂಸ್ಕೃತಿಯ ಪರಿಚಯವಿಲ್ಲದವನ ವಿಮರ್ಶೆ ಹೇಗೆ ದಾರಿ ತಪ್ಪಬಹುದೆಂಬುದಕ್ಕೀದು ಉತ್ತಮ ಉದಾಹರಣೆಯಾಗಿದೆ. ಆದುದರಿಂದ ರಚನೆ ಮತ್ತು ಅರ್ಥದ ಪಾತಳಿಯನ್ನು ದಾಟಿ ಯಾವುದೇ ಭಾಷೆಯ ಸಂಸ್ಕೃತಿಯ ಸಾಕ್ಷಾತ್ಕಾರ ಮಾಡಿಕೊಡುವ ರೀತಿಯಲ್ಲಿ 'ಭಾಷಾಬೋಧನ ಪದ್ಧತಿ' ಬೆಳೆದು ಬರಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನಪೀಠದ ಆಶ್ರಯದಲ್ಲಿ ಜರುಗಿದ 'ಭಾಷಾಬೋಧನ ಪದ್ಧತಿ' ಶಿಬಿರದ ಉದ್ಘಾಟನ ಭಾಷಣ.

ಆಕರ : ಮಾರ್ಗ ಸಂಪುಟ–೬

■■

೨೦
ವೈ. ಮಹಾಬಲೇಶ್ವರಪ್ಪ ಜನ್ಮಶತಮಾನೋತ್ಸವ : ಉದ್ಘಾಟನೆ

೨೦೦೬

ವೇದಿಕೆಯ ಮೇಲೆ ಉಪಸ್ಥಿತರಿರುವ ವೈ ಬಸವರಾಜಪ್ಪನವರೇ, ನಾಡಿನ ಶ್ರೇಷ್ಠ ಜಾನಪದ ತಜ್ಞರಲ್ಲೊಬ್ಬರಾದ ಮುದೇನೂರ ಸಂಗಣ್ಣನವರೇ, ಬಳ್ಳಾರಿ ನಗರದ ಎಲ್ಲಾ ಗಣ್ಯಮಾನ್ಯರೆ,

ನನ್ನ ಮಾತುಗಳ ಆರಂಭದಲ್ಲಿ ಕುವೆಂಪು ಅವರ ಕವನವೊಂದನ್ನು ಪ್ರಾಸಂಗಿಕವಾಗಿ ಉಲ್ಲೇಖಿಸ ಬಯಸುತ್ತೇನೆ:

ನಮಸ್ಕಾರ

ಅಜ್ಞಾತ ಮಹಾತ್ಮನೇ, ನಿನಗೆ ನಮಸ್ಕಾರ! ಸಾಷ್ಟಾಂಗ ನಮಸ್ಕಾರ!
ನೀನೇನೇ ಆಗಿರಲಿ, ನೀನೆಲ್ಲಿಯೇ ಇರಲಿ, ನಿನಗಿದೋ ನಮಸ್ಕಾರ!
ಸಾಷ್ಟಾಂಗ ನಮಸ್ಕಾರ!

ಯಾವ ದೇಶದವನೋ ನೀನು? ಯಾವ ಜಾತಿಯವನೋ ನೀನು?
ಯಾವ ಕರ್ಮದವನೋ ನೀನು? ಯಾವ ಧರ್ಮದವನೋ ನೀನು?
ಎಂತಾದರಾಗಿರಯ್ಯಾ ನೀನು, ಹೇ ಅಜ್ಞಾತ ಮಹಾತ್ಮನೇ
ನಿನಗಿದೋ ನಮಸ್ಕಾರ! ಸಾಷ್ಟಾಂಗ ನಮಸ್ಕಾರ!

ಲೋಕದ ಕಣ್ಣಿಗೆ ನೀ ಬೀಳದಿರಬಹುದು, ಲೋಕ ನಿನ್ನನ್ನು ಲೆಕ್ಕಿಸದಿರಬಹುದು
ಆದರೆ ಜಗದೀಶನ ಕಣ್ಣನೆಲ್ಲಾ ನೀನೆ ತುಂಬಿರುವೆ
ಆತನ ಎದೆಯನೆಲ್ಲಾ ನೀನೇ ಆವರಿಸಿರುವೆ!

ನೀನೇನಾದರೂ ಆಗಿರು, ನೀನಾರಾದರೂ ಆಗಿರು,
ನೀನೆಲ್ಲಾದರೂ ಇರು, ಅಥವಾ ನೀನಿಲ್ಲದೆ ಮೃತವಾಗಿರು, ಮಣ್ಣಾಗಿರು

ಅಜ್ಞಾತ ಮಹಾತ್ಮನೇ, ನಿನಗಿದೋ ನಮಸ್ಕಾರ! ಸಾಷ್ಟಾಂಗ ನಮಸ್ಕಾರ!
ಉದ್ದಂಡ ನಮಸ್ಕಾರ!

ಒಂದು ಅಜ್ಞಾತವಾದ ದಿವ್ಯ ಶಕ್ತಿಯ ಬಗ್ಗೆ ಹೇಳಿರುವ ಕುವೆಂಪು ಅವರ ಈ ಶರಣಾರ್ಥಿ ಮಾತುಗಳು ಇಂದು ಯಥಾವತ್ತಾಗಿ ಹರ್ಡೇಕರ ಮಂಜಪ್ಪನವರಿಗೆ ನೇರವಾಗಿ ಅನ್ವಯಿಸುತ್ತವೆ. ಹರ್ಡೇಕರ ಮಂಜಪ್ಪನಂಥವರ ವ್ಯಕ್ತಿತ್ವಕ್ಕೆ ಕುವೆಂಪುರಂಥವರು ಹೇಳುವ ಈ ಮಾತುಗಳು ಸಾರ್ವಕಾಲಿಕವಾದುವು.

ಇದೊಂದು ಚರಿತ್ರಾರ್ಹ ವಿಶಿಷ್ಟ ಸಮಾರಂಭ. ಒಬ್ಬ ಮಹಾಪುರುಷನ ಜನ್ಮಶತಮಾನೋತ್ಸವವನ್ನು ಇನ್ನೊಬ್ಬ ಮಹಾಪುರುಷನ ಗ್ರಂಥ ಬಿಡುಗಡೆಯ ಮೂಲಕ ಉದ್ಘಾಟಿಸಲಾಗುತ್ತಿದೆ. ಇಬ್ಬರನ್ನೂ ಒಂದು ಒಳ್ಳೆಯ ಸ್ಮರಣಾರ್ಹ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಲಾಗುತ್ತಿದೆ. ಈ ಸಂದರ್ಭದಲ್ಲಿ ಬಸವಣ್ಣನವರ ಒಂದು ವಚನ ನೆನಪಾಗುತ್ತದೆ. 'ಎನಗೆ ನಿಮ್ಮ ನೆನಹಾದಾಗಲೇ ಉದಯ, ನಿಮ್ಮ ಮರಹಾದಾಗಲೇ ಅಸ್ತಮಾನ....'-ಈ ಭಾಗದಲ್ಲಿ ಸೂರ್ಯನಂತೆ ಮೂಡಿ ಸೂರ್ಯನಂತೆ ಮರೆಯಾದ ರಾವ್ ಬಹಾದ್ದೂರ ವೈ. ಮಹಾಬಲೇಶ್ವರಪ್ಪನವರನ್ನು ಬಳ್ಳಾರಿಯ ಜನತೆ ಮರೆಯುವಂತಿಲ್ಲ.

ನಾನು, ಮಹಾಬಲೇಶ್ವರಪ್ಪನವರನ್ನು ನೋಡಿದ್ದು, ಎರಡು ಬಾರಿ. ಆರ್.ಸಿ. ಯವರು ಧಾರವಾಡದ ಮುರುಘಾಮಠದಲ್ಲಿ ಅವರನ್ನು ಪರಿಚಯಿಸಿದ್ದರು. ಅವರ ಗಂಭೀರ ನಿಲುವು, ವ್ಯಕ್ತಿತ್ವ ಇಂದಿಗೂ ನನ್ನ ಮನಸ್ಸಿನಲ್ಲುಳಿದಿದೆ. ಅವರನ್ನು ನೋಡಿದಾಕ್ಷಣ ನನಗನ್ನಿಸಿದ್ದು, ಮಹಾಭಾರತದ ಪಾತ್ರವೊಂದು ತಪ್ಪಿಸಿಕೊಂಡು ಬಂದಿದೆ ಎನ್ನಿಸಿತ್ತು. ಬಲರಾಮ, ಭೀಷ್ಮರನ್ನು ನೋಡದವರಿಗೆ ಅವರನ್ನು ಕಂಡಾಗ ಈ ಭಾವನೆ ಬರುತ್ತಿತ್ತು! ಮತ್ತೊಂದು ಅರ್ಥದಲ್ಲಿ ವಿಜಯನಗರ ಸಾಮ್ರಾಜ್ಯದ ರಾಜ ಪರಂಪರೆಯ ನಮ್ಮ ಕಾಲದ 'ಕಿರೀಟವಿಲ್ಲದ ರಾಜ' ನಂತೆ ಭಾಸವಾಗಿದ್ದರು.

ಮಹಾಬಲೇಶ್ವರಪ್ಪನವರನ್ನು ಹೊರತುಪಡಿಸಿ ಬಳ್ಳಾರಿ ಜಿಲ್ಲೆಯ ಚರಿತ್ರೆ ಬರೆಯಲು ಸಾಧ್ಯವಿಲ್ಲ. ಅದರಲ್ಲೂ ವಿಶೇಷವಾಗಿ ಲಿಂಗಾಯತ ಸಮಾಜದ ಚರಿತ್ರೆಯಲ್ಲಿ ಅವರದು ದೊಡ್ಡ ಭಾಗ. ಇಪ್ಪತ್ತನೆಯ ಶತಮಾನದ ಬಳ್ಳಾರಿ ಜಿಲ್ಲೆಯ ಚರಿತ್ರೆಯೆಂದಾದರೆ ಅದು ಲಿಂಗಾಯತ ಸಮಾಜದ ಚರಿತ್ರೆ. ಅದರಲ್ಲಿ ಮಹಾಬಲೇಶ್ವರಪ್ಪನವರದು ಒಂದು ಪ್ರಮುಖ ಅಧ್ಯಾಯ. ಮಹಾಬಲೇಶ್ವರಪ್ಪನಂಥವರು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಎರಡು ರೀತಿಯ ಹೊಣೆಗಾರಿಕೆಯನ್ನು ನಿಭಾಯಿಸಿದರು. ಆಗ ಪರಂಪರೆಯನ್ನು ಎತ್ತಿ ಹಿಡಿಯುವ ಮತ್ತು ಪ್ರಗತಿಯನ್ನು ಸಾಧಿಸುವ ಎರಡು ಕಾರ್ಯಗಳನ್ನು ಮಾಡಬೇಕಾಗಿತ್ತು. ಭಾರತೀಯರಿಗೆ ಗಾಂಧಿಯುಗ ಪ್ರೇರಕವಾಗಿತ್ತಾದರೂ ಮಧ್ಯಮ ವರ್ಗದ ಲಿಂಗಾಯುತರಿಗೆ ಅದು ಸಂಕ್ರಮಣಕಾಲವೆನಿಸಿತ್ತು. ಲಿಂಗಾಯುತನಾಗಿಯೂ ಭಾರತೀಯನಾಗಬೇಕಾಗಿದ್ದಂಥ ಪ್ರಯೋಗ ಮಾಡಬೇಕಾಗಿತ್ತು.

ವೈ. ಮಹಾಬಲೇಶ್ವರಪ್ಪ ಮತ್ತು ಹರ್ಡೇಕರ ಮಂಜಪ್ಪ-ಇಂಥ ಎರಡೂ ಮಾದರಿಗಳಿಗೆ ನಿದರ್ಶನ. ಇಬ್ಬರೂ ವಿಭಿನ್ನ ಪರಿಸರದಿಂದ ಬಂದವರು. ವೈ. ಮಹಾಬಲೇಶ್ವರಪ್ಪ ಆಗರ್ಭ ಶ್ರೀಮಂತ ಲಿಂಗಾಯತ. ಶ್ರೀಮಂತ ಲಿಂಗಾಯತ ಹೇಗೆ ರೂಪಗೊಳ್ಳಬೇಕು ಎಂಬುದಕ್ಕೆ ಅವರು ಉದಾಹರಣೆ. ಹರ್ಡೇಕರ ಮಂಜಪ್ಪ ಬಡಲಿಂಗಾಯತ ಬಡಲಿಂಗಾಯತ ಹೇಗೆ ರೂಪಗೊಳ್ಳಬೇಕು ಎಂಬುದಕ್ಕೆ

ಅವರು ಉದಾಹರಣೆ. ಒಬ್ಬರು ಅತಿ ಶ್ರೀಮಂತಿಕೆಯ ಸೆಳವಿಗೆ ಸಿಕ್ಕೂ ವ್ಯಕ್ತಿತ್ವ ನಾಶಮಾಡಿಕೊಳ್ಳಲಿಲ್ಲ. ಇನ್ನೊಬ್ಬರು ಅತಿ ಬಡತನದ ಸೆಳವಿಗೆ ಸಿಕ್ಕು ಹಾಳಾಗಲಿಲ್ಲ. ಶ್ರೀಮಂತಿಕೆಯ ಉದಾರೀಕರಣ, ಬಡತನದ ಉದಾತ್ತೀಕರಣ. ಹಾಗೇ ನೋಡಿದರೆ ದಾಸೋಹ ಪರಂಪರೆಯ ನಿಜವಾದ ಲಿಂಗಾಯತದಲ್ಲಿ ಶ್ರೀಮಂತರೂ ಇಲ್ಲ, ಬಡವರೂ ಇಲ್ಲ. ಇವುಗಳಾಚೆಯ ಬದುಕು ಅವನದಾಗಿರುತ್ತದೆ. ಈ ಇಬ್ಬರೂ ಅಂಥ ಬದುಕು ಬದುಕಿದವರು.

ಕೊನೆ ಕೊನೆಗೆ ಮಹಾಬಲೇಶ್ವರಪ್ಪನವರಿಗೆ ಬಡತನ ಆವರಿಸಿತು?! ಅವರು ಹಣದಿಂದ ಬಡವರಾದರು; ಗುಣದಿಂದ, ಕೀರ್ತಿಯಿಂದ ಬಡವರಾಗಲಿಲ್ಲ. ಅವರು ಶ್ರೀಮಂತರಾಗಿಯೇ ಉಳಿದರು. 'ಸಿಂಗದ ಮುಪ್ಪು ನೆಗಳ್ದೀ ಗಾಂಗೇಯನ ಮುಪ್ಪಾ......'ಎಂಬಂತೆ ಬದುಕಿದವರು.

ಮಹಾಬಲೇಶ್ವರಪ್ಪನವರು ಚುನಾವಣೆಯಲ್ಲಿ ಸೋತರು?! ಅಂಥವರು ಸೋತರು ಎಂದರೆ ಅವರಿಗೆ ರಾಜಕೀಯ ಗೊತ್ತಿಲ್ಲವೆಂದೇ ಅರ್ಥ! ಗೆದ್ದವರ ಹೆಸರು ನೆನಪಿಲ್ಲ....; ಸೋತವರನ್ನು ನೆನೆಯುತ್ತಿದ್ದೇವೆ. ವರ್ತಮಾನದಲ್ಲಿ ಯಾರು ಸೋತರೋ, ಅವರು ಭವಿಷ್ಯದಲ್ಲಿ ಗೆದ್ದರು. ವರ್ತಮಾನದಲ್ಲಿ ಕಿತ್ತೂರ ಚೆನ್ನಮ್ಮ ಸೋತಳು, ಆದರೆ ಆಕೆಯನ್ನು ನಾವು ನೆನೆಯುತ್ತೇವೆ. ಈ ದೇಶದ ಸ್ವಾತಂತ್ರ್ಯ ಹೋರಾಟದ ವಿಷಯ ಬಂದಾಗ, ಆಕೆಯನ್ನು ನೆನೆಯುತ್ತೇವೆ. ಹೀಗಾಗಿ ಯಾರು ಸೋತವರು? ಯಾರು ಗೆದ್ದವರು? ವರ್ತಮಾನದಲ್ಲಿ ಬದುಕುವುದು ಮುಖ್ಯವಲ್ಲ, ಭವಿಷ್ಯತ್ತಿನಲ್ಲಿಯೂ ಬದುಕುವುದು ಮುಖ್ಯ. ವ್ಯಕ್ತಿ ಸಾಯಬಹುದು. ಆದರೆ ವ್ಯಕ್ತಿತ್ವಕ್ಕೆ ಸಾವಿಲ್ಲ. ವ್ಯಕ್ತಿ ಎಷ್ಟು ವರ್ಷ ಬದುಕಬಲ್ಲ; ೮೦, ೯೦, ೧೦೦? ಆದರೆ ಆತನನ್ನು ಜನ ನೆನಪು ಹಿಡಿಯುವವರೆಗೆ ಅವನು ಜೀವಂತನೇ! ಹೀಗೆ ಎಷ್ಟು ವರ್ಷ? ಸೂರ್ಯ-ಚಂದ್ರರು ಜೀವಂತವಾಗಿರುವವರೆಗೆ. ಸೂರ್ಯ-ಚಂದ್ರರಂತೆ ಬಾಳುವ ವ್ಯಕ್ತಿತ್ವದ ಮಹಾಬಲೇಶ್ವರಪ್ಪ ಅವರ ಜನ್ಮಶತಮಾನೋತ್ಸವವನ್ನು ಈ ಭಾವದಿಂದ ಉದ್ಘಾಟಿಸುತ್ತಿದ್ದೇನೆ.

***

ಹರ್ಡೇಕರ ಮಂಜಪ್ಪ : ಅದ್ಭುತ ವ್ಯಕ್ತಿ; ಅವರ ಜೀವನವೇ ಒಂದು ಪವಾಡ. ಹುಟ್ಟಿದ್ದು ವ್ಯಕ್ತಿಯಾಗಿ, ಬೆಳೆದದ್ದು ತತ್ವವಾಗಿ. ಗಾಂಧಿ ಗುರಿ ಮತ್ತು ಗಾಂಧಿದಾರಿಯನ್ನೇ ಹಿಡಿದು ಬದುಕಿದ ಅವರು ಯಥಾರ್ಥವಾಗಿ 'ಕರ್ನಾಟಕ ಗಾಂಧಿ'ಯೇ. ಹಣೆಯ ತುಂಬ ಬಸವಣ್ಣ, ಮೈ ತುಂಬಾ ಗಾಂಧಿ-ಏಕೀಭವಿಸಿದ ವ್ಯಕ್ತಿತ್ವ, ಹರ್ಡೇಕರ ಮಂಜಪ್ಪ ಬಸವಣ್ಣನವರಷ್ಟು ಹಳಬರು, ಗಾಂಧೀಜಿಯಷ್ಟು ಹೊಸಬರು. ಹುಟ್ಟಿದ್ದು ಬನವಾಸಿ, ಮಾಸ್ತರಕಿ ಸಿರಸಿ, ಪತ್ರಿಕೆ ನಡೆಸಿದ್ದು ದಾವಣಗೆರೆ, ಆಶ್ರಮ ಹರಿಹರ, ವಿದ್ಯಾಸಂಸ್ಥೆ, ಆಲಮಟ್ಟಿ; ಅಷ್ಟೇ ಅಲ್ಲ, ಅವರು ಸತ್ತ ನಂತರ ಸಮಾಧಿಯೂ ಸ್ಥಳಾಂತರಗೊಂಡಿತು. ಯಾವುದೇ ದೊಡ್ಡ ಸಮುದಾಯದೊಂದಿಗೆ ಗುರುತಿಸಿಕೊಳ್ಳದಂತೆ ಬೆಳೆದ ಅವರ ವ್ಯಕ್ತಿತ್ವ, ಒಂದು ಅರ್ಥದಲ್ಲಿ ಹಿಂಡನಗಲಿದ ಗಜದಂತಿತ್ತು-ಅವರ ಸ್ಥಿತಿ! ಸರ್ವಜ್ಞನಂತ ವ್ಯಕ್ತಿತ್ವ ಹರ್ಡೇಕರ ಮಂಜಪ್ಪನವರದು! ಧರ್ಮವನ್ನು ರಾಷ್ಟ್ರಧರ್ಮವಾಗಿ ಉನ್ನತೀಕರಿಸಿದ ರಾಷ್ಟ್ರಧರ್ಮ ದೃಷ್ಟಾರಗಳ ನಿಜವಾದ ಪ್ರತಿನಿಧಿ. ರಾಷ್ಟ್ರಭಕ್ತಿಯ ಪರಿಕಲ್ಪನೆಯನ್ನು ಹರ್ಡೇಕರ ಮಂಜಪ್ಪನವರು ಸಮಗ್ರ ಜೀವನದೃಷ್ಟಿಗೂ ಮತ್ತು ದೇಶೀ ನೆಲೆಗೂ ಅನ್ವಯಿಸಿಕೊಂಡು ತಮ್ಮ ವ್ಯಕ್ತಿತ್ವವನ್ನು ಕಂಡುಕೊಂಡರು. ವೇದ ಸಂಸ್ಕೃತಿಯ ಜೊತೆಗೆ ವಚನ ಸಂಸ್ಕೃತಿಯ ಆದರ್ಶದಲ್ಲಿ ಮಂಜಪ್ಪನವರು ಬದುಕಿದರು!

ಈಗ ಬಿಡುಗಡೆಯಾಗುತ್ತಿರುವ ಸಮಗ್ರ ಸಾಹಿತ್ಯವು ಎರಡನೆಯ ಸಂಪುಟವಾಗಿದೆ. ಹರ್ಡೇಕರ ಮಂಜಪ್ಪನವರ ಸಮಗ್ರ ಸಾಹಿತ್ಯವನ್ನು ಹೊರತರಬೇಕೆಂದು ಈ ಹಿಂದೆ ಗ.ಸ. ಹಾಲಪ್ಪನವರು ಮೊದಲ ಸಂಪುಟವನ್ನು ತಂದಿದ್ದರು. ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅದರ ಸ್ಮರಣಾರ್ಥ ಅಧ್ಯಯನ ಕೈಗೊಳ್ಳಬೇಕೆಂದು ಪಿಎಚ್.ಡಿ. ಅಧ್ಯಯನಕ್ಕಾಗಿ ಮಲ್ಲಿಕಾರ್ಜುನ ಮೇತ್ರಿ ಅವರು ನನ್ನ ಮಾರ್ಗದರ್ಶನದಲ್ಲಿ ಪದವಿಪಡೆದಿದ್ದರು. ಇದೀಗ ಸಮಗ್ರ ಸಾಹಿತ್ಯದ ಮುಂದುವರೆದ ಭಾಗವಾಗಿ ನಾನು ಮತ್ತೂ ಮಲ್ಲಿಕಾರ್ಜುನ ಮೇತ್ರಿಯವರು ಎರಡನೇ ಸಂಪುಟವನ್ನು ತರುತ್ತಿದ್ದೇವೆ. ಆದರೂ ಅವರ ಸಾಹಿತ್ಯದ ೨೦ ಪುಸ್ತಿಕೆಗಳು ನಮಗೆ ಲಭ್ಯವಾಗಿಲ್ಲ. ಎರಡನೇ ಸಂಪುಟದಲ್ಲಿ ಅವುಗಳನ್ನು ಉಲ್ಲೇಖಿಸಲಾಗಿದೆ. ಆಸಕ್ತರು ಅವುಗಳನ್ನು ಹುಡುಕಿ, ಸಂಗ್ರಹಿಸಿ ಸಂಪಾದಿಸಿ ಮೂರನೇ ಸಂಪುಟವನ್ನು ತರಬಹುದಾಗಿದೆ.

***

ಮೌಲ್ಯವನ್ನು ವೈಯಕ್ತಿಕವಾಗಿ ಬದುಕುವುದು, ಸಾಹಿತ್ಯವಾಗಿ ಬರೆಯುವುದು, ಸಾಮಾಜಿಕವಾಗಿ ಕಾರ್ಯಗತಗೊಳಿಸುವುದು–ಈ ಮೌಲ್ಯ ಶಾಶ್ವತ ಕಾರ್ಯ ಮಾಡಬಲ್ಲದು. ಇದೀಗ ವೈ. ಮಹಾಬಲೇಶ್ವರಪ್ಪನವರ ಮನೆತನದ ಔಧಾರ್ಯದ ಫಲವಾಗಿ, ಗದುಗಿನ ಜಗದ್ಗುರು ತೋಂಟದಾರ್ಯಮಠದ ಲಿಂಗಾಯತ ಅಧ್ಯಯನ ಸಂಸ್ಥೆಯವತಿಯಿಂದ ಈ ಸಂಪುಟ ಪ್ರಕಟವಾಗುತ್ತಿದೆ.

ಮನುಷ್ಯ ಹುಟ್ಟುತ್ತಾನೆ, ಜೀವಿಸುತ್ತಾನೆ, ಸಾಯುತ್ತಾನೆ, ಸಹಜ. ಆದರೆ ಸಾರ್ಥಕವಾಗಿ ಜೀವಿಸಬೇಕು. ಹೀಗೆ ಸಾರ್ಥಕವಾಗಿ ಜೀವಿಸಿದ ಮಹಾನುಭಾವಿಗಳಿಬ್ಬರ ಸ್ಮರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸುವುದರಲ್ಲಿ ನಮ್ಮ ಬದುಕಿನ ಸಾರ್ಥಕತೆ ಇದೆ ಎಂದು ಹೇಳಿ ವಿರಮಿಸುತ್ತೇನೆ.

***

* ಮಾರ್ಚ ೨೦೦೬ ರಲ್ಲಿ ಬಳ್ಳಾರಿಯ ರಾಘವ ಕಲಾಮಂದಿರದಲ್ಲಿ ನಡೆದ 'ರಾವ್ ಬಹಾದ್ದೂರ್ 'ವೈ. ಮಹಾಬಲೇಶ್ವರಪ್ಪ ಜನ್ಮ ಶತಮಾನೋತ್ಸವ ಸಮಾರಂಭ' ದ ಉದ್ಘಾಟನಾ ಭಾಷಣ. ಇದೇ ಸಮಾರಂಭದಲ್ಲಿ ಎಂ. ಎಂ. ಕಲಬುರ್ಗಿ ಮತ್ತು ಮಲ್ಲಿಕಾರ್ಜುನ ಮೇತ್ರಿ ಅವರ ಸಂಪಾದಕತ್ವದ 'ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨' ಕೃತಿಯು ಮುದೇನೂರ ಸಂಗಣ್ಣನವರಿಂದ ಲೋಕಾರ್ಪಣೆಗೊಂಡಿತು(ಪ್ರಕಾಶಕರು : ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯಮಠ, ಗದಗ).

ಆಕರ : ಮಾರ್ಗ ಸಂಪುಟ–೮

೨೧

ಆಳ್ವಾಸ ನುಡಿಸಿರಿ : ಉದ್ಘಾಟನೆ

೨೦೦೫

ಕನ್ನಡ ಮನಸ್ಸು : ಬೌದ್ಧಿಕ ಸ್ವಾತಂತ್ರ್ಯ

ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ಎಸ್. ಎಲ್. ಭೈರಪ್ಪ ಅವರೇ,
ವೇದಿಕೆಯ ಮೇಲಿರುವ ಗಣ್ಯರೇ, ಸಭಿಕರೇ
ಸಂಪತ್ತನ್ನು ಸಂಸ್ಕೃತಿಯನ್ನಾಗಿಸುತ್ತಿರುವ ಶ್ರೀ ಮೋಹನ ಆಳ್ವಾ ಅವರೇ,
ಎಲ್ಲರಿಗೂ ನಮಸ್ಕಾರ.

'ಆಳ್ವಾಸ್ ನುಡಿಸಿರಿ'ಯ ಕೇಂದ್ರ ಕಾಳಜಿ 'ಕನ್ನಡ ಮನಸ್ಸು.' ಪ್ರತಿವರ್ಷ ಈ ಮನಸ್ಸಿನ ಒಂದು ಧಾರೆಯನ್ನು ಕುರಿತು ಸಮಾಲೋಚಿಸುವ ಈ ಸಮ್ಮೇಳನದ ವೇದಿಕೆ, ನೆಲಮೂಲ ಚಿಂತಕರ ಚರ್ಚೆಗೆ ಒಂದು ಅವಕಾಶವೂ ಹೌದು, ಆಹ್ವಾನವೂ ಹೌದು. ಇದು, ಈ ವರ್ಷ "ಕನ್ನಡ ಮನಸ್ಸು: ಬೌದ್ಧಿಕ ಸ್ವಾತಂತ್ರ್ಯ"ವೆಂಬ ಕೆಂಡದಂಥ ವಿಷಯವನ್ನು ನಮ್ಮೆಲ್ಲರ ಮುಂದೆ ಮಂಡಿಸಿದೆ.

ಮನಸ್ಸು ಆತ್ಮ ಬುದ್ಧಿ ಭಾವ-ಇವು ಅನಿರ್ದಿಷ್ಟ ಅರ್ಥದ ಪದಗಳು. ಇವುಗಳಲ್ಲಿ 'ವ್ಯಕ್ತಿ'ಯ ಬೌದ್ಧಿಕ ಸ್ವಾತಂತ್ರ್ಯದ ವ್ಯಾಖ್ಯಾನವೇ ಜಟಿಲವಾಗಿರುವಾಗ, ಕನ್ನಡವೆಂಬ 'ಸಮುದಾಯ'ದ ಬೌದ್ಧಿಕ ಸ್ವಾತಂತ್ರದ ಸ್ವರೂಪ, ಅದು ವರ್ತಿಸುತ್ತ ಬಂದ ರೀತಿಗಳನ್ನು ನಿರ್ವಚಿಸುವುದು ತುಂಬ ಕಷ್ಟವೆಂದೇ ಹೇಳಬೇಕು. ಹೀಗಿದ್ದೂ ಬೌದ್ಧಿಕ ಸ್ವಾತಂತ್ರ್ಯವೆಂದರೇನು? ಕನ್ನಡ ಮನಸ್ಸಿನ ಬೌದ್ಧಿಕ ಸ್ವಾತಂತ್ರ್ಯವೆಂತಹದು? ಮತ್ತು ಅದು ಹಿಂದೆ ವ್ಯವಹರಿಸುತ್ತಿದ್ದ, ಇಂದು ವ್ಯವಹರಿಸುತ್ತಿರುವ ರೀತಿಯ ಸ್ವರೂಪಗಳೇನು? ಇವುಗಳನ್ನು ಕುರಿತು ಪ್ರವೇಶರೂಪದ ಮಾತುಗಳನ್ನು ಇಲ್ಲಿ ಆಡಬಯಸುತ್ತೇನೆ.

ಮಾನವಿಕ-ಸಾಮಾಜಿಕ

ಮನುಷ್ಯ ಮಾನವಿಕ ನೆಲೆಯಲ್ಲಿ ಹುಟ್ಟುತ್ತಾನೆ, ಸಾಮಾಜಿಕ ನೆಲೆಯಲ್ಲಿ ಬದುಕುತ್ತಾನೆ. ಇವುಗಳಲ್ಲಿ ಮಾನವಿಕವೆಂಬುದು ಪ್ರಾಕೃತಿಕ (ನ್ಯಾಚುರಲ್) ಸೃಷ್ಟಿ, ಸಾಮಾಜಿಕವೆಂಬುದು ಅದರಿಂದ ನಾವು ನಿರ್ಮಿಸಿಕೊಂಡ ಸಾಂಸ್ಕೃತಿಕ(ಕಲ್ಚರಲ್) ರಚನೆ. ಅಂದರೆ ಮಾನವೀಯ-ಅಮಾನವೀಯ ಗುಣಗಳ ಸಂಚಯವಾಗಿರುವ ಮಾನವಿಕವನ್ನು ಬೇರೆ ಬೇರೆ ಪರಿಸರಗಳು ತಮ್ಮ ಅಂದಂದಿನ ಜೀವನಕ್ಕೆ ತಕ್ಕಂತೆ ಮರುರೂಪಿಸಿಕೊಳ್ಳುವಲ್ಲಿ,

ಸಮಷ್ಟಿಹಿತ ರೂಪದ ಬೇರೆ ಬೇರೆ ಸಾಮಾಜಿಕ ವ್ಯವಸ್ಥೆಗಳು ಅಸ್ತಿತ್ವಕ್ಕೆ ಬಂದಿರುತ್ತವೆ. ಈ ವ್ಯವಸ್ಥೆಗಳೇ ಸಾಮಾಜಿಕ ನ್ಯಾಯವೆನಿಸಿಕೊಳ್ಳುತ್ತಿದ್ದು, ಇವುಗಳಿಗೆ ಅನ್ಯಾಯ ಸಂಭವಿಸಿದಾಗ ಪ್ರತಿಭಟಿಸುವುದೇ ಬೌದ್ಧಿಕ ಸ್ವಾತಂತ್ರ್ಯವೆನಿಸಿಕೊಳ್ಳುತ್ತದೆ. ಈ ಕಡೆ ಬೌದ್ಧಿಕ ಸ್ವಾತಂತ್ರ್ಯದ ಕೊರತೆಯು ಪಾರತಂತ್ರ್ಯದ ಅಪಾಯಕ್ಕೆ, ಆ ಕಡೆ ಆಧಿಕ್ಯವು ಸ್ವೇಚ್ಛೆಯ ಅಪಾಯಕ್ಕೆ ತಳ್ಳುತ್ತದೆ. ಹೀಗಾಗಿ ಈ ಬೌದ್ಧಿಕ ಸ್ವಾತಂತ್ರ್ಯವನ್ನು ಸಾಮಾಜಿಕ ನ್ಯಾಯಕ್ಕೆ ಕೇಡು ತಟ್ಟದಂತೆ, ನಿರ್ಭೀತಿಯಿಂದ ಬಳಸಬೇಕಾಗುತ್ತದೆ. ಆದುದರಿಂದ "ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ" ಅಂದರೆ ಸಾಮಾಜಿಕ ನ್ಯಾಯಕ್ಕೆ ಭಂಗಬರದಂತೆ ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸುತ್ತೇನೆ - ಎಂಬ ಬಸವಣ್ಣನ ಮಾತು, ಮೂರು ದಿನದ ಈ ಸಮ್ಮೇಳನಕ್ಕೆ ಬರೆದ ಸೂತ್ರವಾಗಿದೆಯೆಂದೇ ಹೇಳಬಹುದು.

ವ್ಯಕ್ತಿ-ಸದಸ್ಯ

ಮೇಲಿನ ಮಾತನ್ನೇ ವಿಸ್ತರಿಸಿ ಹೇಳುವುದಾದರೆ, ಮಾನವಿಕ ನೆಲೆಯವನು ವ್ಯಕ್ತಿ, ಸಾಮಾಜಿಕ ನೆಲೆಯವನು ಸದಸ್ಯ. ನಾವೆಲ್ಲ ಸಾಮಾಜಿಕರಾಗಿರುವುದರಿಂದ, ಜಗತ್ತಿನಲ್ಲಿ ವ್ಯಕ್ತಿಯೆನ್ನುವವನಿಲ್ಲ, ಸದಸ್ಯನೆನ್ನುವವನಿದ್ದಾನೆ. ಆದುದರಿಂದ ಯಾರಿಗೂ ವ್ಯಕ್ತಿಸ್ವಾತಂತ್ರವಿರುವುದಿಲ್ಲ, ಸದಸ್ಯಸ್ವಾತಂತ್ರ್ಯ ಅಂದರೆ ಸಾಮಾಜಿಕ ಜವಾಬ್ದಾರಿಯನ್ನೊಳಗೊಂಡ ಸ್ವಾತಂತ್ರ್ಯವಿರುತ್ತದೆ. ಉದಾ: ಹೆಣ್ಣು ವ್ಯಕ್ತಿ, ಹೆಂಡತಿ ಸದಸ್ಯೆ. ಇಲ್ಲಿ ಹೆಂಡತಿಯಾದವಳಿಗೆ ಹೆಣ್ಣಿನ ಸ್ವೇಚ್ಛೆಯ ಸ್ವಾತಂತ್ರ್ಯವಿರುವುದಿಲ್ಲ, ಕೌಟುಂಬಿಕ ಜವಾಬ್ದಾರಿಯನ್ನೊಳಗೊಂಡ ಸ್ವಾತಂತ್ರ್ಯವಿರುತ್ತದೆ. ಹೀಗಾಗಿ ಪ್ರತಿಯೊಬ್ಬನೂ ತಾನು ವ್ಯಕ್ತಿಯಲ್ಲ, ಸದಸ್ಯನೆಂಬ ಎಚ್ಚರಿಕೆಯಿಂದ ತನ್ನ ಬದುಕಿನ ಎಲ್ಲ ಆಯಾಮಗಳಲ್ಲಿ ಬೌದ್ಧಿಕ ಸ್ವಾತಂತ್ರ್ಯವನ್ನು ಬಳಸಬೇಕಾಗುತ್ತದೆ. ಒಟ್ಟಾರೆ, ಬೌದ್ಧಿಕ ಸ್ವಾತಂತ್ರ್ಯವೆನ್ನುವುದು ಮಾನವಿಕ ಪಾತಳಿಯಲ್ಲಿ ಅಲ್ಲ, ಸಾಮಾಜಿಕ ಪಾತಳಿಯಲ್ಲಿ ಬಳಕೆಯಾಗುವುದಾಗಿದ್ದು, ಅದರ ಬಳಕೆಗೆ ಸಾಮಾಜಿಕ ನ್ಯಾಯದ ನಿರ್ಬಂಧವಿರುತ್ತದೆ.

ಕನ್ನಡ ಸಮಾಜ-ಬೌದ್ಧಿಕ ಸ್ವಾತಂತ್ರ್ಯ

ಪ್ರಾಚೀನ ಜನಜೀವನ 'ಮಾನವಿಕ ಪ್ರಧಾನ'ವಾಗಿದ್ದುದರಿಂದ, ಅಲ್ಲಿ ಭಾವಕ್ಕೆ ಮೊದಲ ಸ್ಥಾನ, ಬುದ್ಧಿಗೆ ಎರಡನೆಯ ಸ್ಥಾನ ಪ್ರಾಪ್ತವಾಗಿದ್ದಿತು. ಇಂದಿನ ಕಾಲದ್ದು 'ಸಾಮಾಜಿಕ ಪ್ರಧಾನ' ಜೀವನವಾಗಿರುವುದರಿಂದ, ಇಲ್ಲಿ ಬುದ್ಧಿಗೆ-ಬೌದ್ಧಿಕ ಸ್ವಾತಂತ್ರ್ಯಕ್ಕೆ ಪ್ರಧಾನಸ್ಥಾನ ಪ್ರಾಪ್ತವಾಗುತ್ತ ನಡೆದಿದೆ. ವಸ್ತುಸ್ಥಿತಿ ಹೀಗಿದ್ದರೂ ಯಥಾಸ್ಥಿತಿವಾದಿಗಳಾದ ಕನ್ನಡಿಗರಲ್ಲಿ ಸಾಮಾನ್ಯವಾಗಿ ಬೌದ್ಧಿಕ 'ಪಾರತಂತ್ರ' ಹೆಚ್ಚು, ಹೀಗಿದ್ದೂ ಕನ್ನಡಿಗರು ಕ್ವಚಿತ್ತಾಗಿ ಒಂದು ಕಡೆ ಬೌದ್ಧಿಕ ಪಾರತಂತ್ರ್ಯವನ್ನು, ಇನ್ನೊಂದು ಕಡೆ ಬೌದ್ಧಿಕ ಸ್ವೇಚ್ಛೆಯನ್ನು ಪ್ರತಿಭಟಿಸುತ್ತ, ಅಂದರೆ ಬೌದ್ಧಿಕ ಸ್ವಾತಂತ್ರ್ಯವನ್ನು ಪ್ರಕಟಿಸುತ್ತ ಬಂದಿದ್ದು, ಕನ್ನಡ ಸಾಹಿತ್ಯ-ಶಿಕ್ಷಣ-ಸಮೂಹ ಮಾಧ್ಯಮ-ಪ್ರದರ್ಶನ ಕಲೆಗಳಿಗೆ ಅನ್ವಯಿಸಿ ಕೆಲವು ಮಾತುಗಳನ್ನಾಡುತ್ತೇನೆ.

ಸಾಹಿತ್ಯ

ಹಳಗನ್ನಡ ಯುಗದಲ್ಲಿ ಅಕ್ಷರಸಂಸ್ಕೃತಿಯವರೆಂದರೆ ಬ್ರಾಹ್ಮಣರು ಮತ್ತು ಜೈನರು. ಹೊರಗಿನಿಂದ ಬಂದವರಾದ ಕಾರಣ, ರಕ್ಷಣೆಯನ್ನು ಬಯಸಿ, ಇವರಲ್ಲಿ ಬ್ರಾಹ್ಮಣರು ಭೂಮಿದಾನ ಪಡೆದು 'ಅಗ್ರಹಾರ ಸಂಸ್ಕೃತಿ'ಯನ್ನು, ಜೈನರು ಅರಸರನ್ನು ಅವಲಂಬಿಸಿ 'ಆಸ್ಥಾನ ಸಂಸ್ಕೃತಿ'ಯನ್ನು ರೂಪಿಸಿಕೊಂಡರು. ವರ್ಣಧರ್ಮ ಇತ್ಯಾದಿಗಳಿಂದ ಕೂಡಿದ ಸ್ಥಗಿತ ಸಂಸ್ಕೃತಿಯ 'ಅಗ್ರಹಾರ'ಗಳು ಪಂಡಿತರನ್ನು ಉತ್ಪಾದಿಸುವ ಫ್ಯಾಕ್ಟರಿಗಳೇ ಹೊರತು ಕವಿಗಳನ್ನು ಸೃಷ್ಟಿಸುವ ಹೊಲಗಳಲ್ಲವಾಗಿ, ಬ್ರಾಹ್ಮಣರಿಂದ ಬಹಳೆಂದರೆ ಶಾಸ್ತ್ರಸಾಹಿತ್ಯ ಮತ್ತು ಅನುವಾದಸಾಹಿತ್ಯ ಹುಟ್ಟಿತೇ ಹೊರತು, ಸೃಜನಸಾಹಿತ್ಯ ಸೃಷ್ಟಿಯಾಗಲಿಲ್ಲ. ಒಂದಿಷ್ಟು ಮುಕ್ತಸಂಸ್ಕೃತಿಯ ಜೈನರಿಂದ

ಮಾತ್ರ ಸೃಜನಸಾಹಿತ್ಯ ಸೃಷ್ಟಿಯಾಯಿತು. ಇದನ್ನು ನೋಡಿದರೆ ಬ್ರಾಹ್ಮಣನಾದ ತಂದೆ ಭೀಮಪಯ್ಯ ಜೈನಕ್ಕೆ ಮತಾಂತರಗೊಳ್ಳದಿದ್ದರೆ ಮಗ ಪಂಪ ಕವಿಯಾಗುತ್ತಿರಲಿಲ್ಲ, ಅಗ್ರಹಾರದ ಪಂಡಿತನಾಗುತ್ತಿದ್ದನೆನಿಸುತ್ತದೆ. ಹೀಗೆ ಮುಕ್ತಸಂಸ್ಕೃತಿಯವರಾಗಿದ್ದರೂ, ಅರಸರ ಆಶ್ರಯದ ಹಂಗು ಕಾರಣವಾಗಿ, ಜೈನರು ಪರಾಧೀನಪರಿಸ್ಥಿತಿಯಲ್ಲಿ ನಿಂತು ಸಾಹಿತ್ಯ ಸೃಷ್ಟಿಸಬೇಕಾಗಿ ಬಂದಿತು. ಇದರಿಂದಾಗಿ ಇವರ ಸಾಹಿತ್ಯದಲ್ಲಿಯೂ ಬೌದ್ಧಿಕ ಸ್ವಾತಂತ್ರ್ಯಕ್ಕೆ ಒಂದಿಷ್ಟು ಬಂಧನವುಂಟಾಯಿತೆಂದೇ ಹೇಳಬೇಕು.

ನಡುಗನ್ನಡಯುಗದಲ್ಲಿ ಅಕ್ಷರ ಸಂಸ್ಕೃತಿ ನೆಲೆಗೆ ಏರಿಬಂದ ಲಿಂಗಾಯತರಿಗೆ ಅಗ್ರಹಾರ ಸಂಸ್ಕೃತಿಯಂಥ ಸ್ಥಗಿತ ವ್ಯವಸ್ಥೆಯಾಗಲೀ, ನೆಲಮೂಲದವರಾದುದರಿಂದ ರಾಜಾಶ್ರಯದ ಅವಶ್ಯಕತೆಯಾಗಲೀ ಇರಲಿಲ್ಲವಾಗಿ, ಅವರ ವಚನಸಾಹಿತ್ಯ ಬಹಳಷ್ಟು ಬೌದ್ಧಿಕ ಸ್ವಾತಂತ್ರ್ಯವನ್ನು ಕಟ್ಟಿಕೊಂಡೇ ಬೆಳೆಯಿತು. ಹಳಗನ್ನಡ ಸಾಹಿತ್ಯ 'ಆನುಷಂಗಿಕ'ವಾಗಿ ಬಳಸುತ್ತಿದ್ದ ಬೌದ್ಧಿಕ ಸ್ವಾತಂತ್ರ್ಯವನ್ನು, ಇದು ಒಂದು 'ಸಿದ್ಧಾಂತ'ವಾಗಿ ಬಳಸಿತು.

೧೨ನೆಯ ಶತಮಾನದ ಹೊತ್ತಿಗೆ ಪ್ರಭುಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳಿಂದಾಗಿ ಕನ್ನಡ ಸಮಾಜ ಅಸ್ವಸ್ಥವಾಗಿದ್ದಿತು. ಸಂಸ್ಕೃತದ ಅತಿ ಬಳಕೆಯಿಂದಾಗಿ ಕನ್ನಡಭಾಷೆ ತನ್ನ ಪ್ರವಹನಶೀಲತೆಯನ್ನು ಕಳೆದುಕೊಂಡಿದ್ದಿತು. ನಮ್ಮ ಮೀಮಾಂಸಕರು 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂಬಂಥ ಸಂವಾದಗಳನ್ನು ಬೆಳೆಸಿ, ಸಾಹಿತ್ಯವನ್ನು ಹೇಗೆ ಕಟ್ಟಬೇಕೆಂದು ವಿಚಾರಿಸಿದರೇ ಹೊರತು, ಅದರೊಳಗೆ ಏನು ಕಟ್ಟಬೇಕೆಂಬ ಬಗ್ಗೆ ಅಷ್ಟಾಗಿ ಗಮನಕೊಡಲಿಲ್ಲವಾಗಿ, ಹಳಗನ್ನಡ ಸಾಹಿತ್ಯದಲ್ಲಿ ಅರಿಕೇಸರಿಯಂಥ ಸಾಮಾನ್ಯರು ಅರ್ಜುನರಾಗಿ ಮಾರ್ಪಟ್ಟ ಪ್ರಮಾದಗಳು ಘಟಿಸಿ, ಸಾಹಿತ್ಯವೂ ಆರಾಧನಾ ನೆಲೆ ತಲುಪಿದ್ದಿತು. ಹೀಗೆ, ಬಸವಣ್ಣ ಬರುವ ಹೊತ್ತಿಗೆ ಸಮಾಜ, ಸಮಾಜದ ಸೃಷ್ಟಿಯಾದ ಭಾಷೆ, ಭಾಷೆಯ ಸೃಷ್ಟಿಯಾದ ಸಾಹಿತ್ಯ ಭವಿಯಾಗಿದ್ದವು. ಇವನ್ನೆಲ್ಲ ಕನ್ನಡ ನೆಲದ ವಚನಕಾರರು ಭಕ್ತನನ್ನಾಗಿಸಿದರು. ಅಂದರೆ ಸ್ಥಗಿತವಾಗಿದ್ದವುಗಳನ್ನು ಚಲನಶೀಲಗೊಳಿಸಿದರು. ಹೀಗೆ ಬೌದ್ಧಿಕ ಸ್ವಾತಂತ್ರ್ಯವನ್ನು ಬಳಸಿ 'ಸಾಮಾನ್ಯೀಕೃತ' (ಜನರಲೈಜ್ಡ್) ಸಾಹಿತ್ಯವನ್ನಲ್ಲದೆ, 'ಆನೀ ಬಿಜ್ಜಳಂಗೆ ಅಂಜುವೆನೆ ಅಯ್ಯಾ?', 'ಜಾತಿವಿಡಿದು ಜಂಗಮವ ಮಾಡಬೇಕೆಂಬ ಪಾತಕರು ನೀವು ಕೇಳಿರೋ' ಎಂದು ಮುಂತಾಗಿ ಶೋಷಣೆಗೆ ಕಾರಣವಾದ ವ್ಯಕ್ತಿ, ಸಮಾಜಗಳತ್ತ ನೇರವಾಗಿ ಬೆರಳುಮಾಡುವ 'ನಿರ್ದಿಷ್ಟೀಕೃತ'ವೆಂಬ ಹೊಸ ಬಗೆಯ ಸಾಹಿತ್ಯವನ್ನೂ ಸೃಷ್ಟಿಸಿದರು. ಹೀಗೆ, ಸಾಹಿತ್ಯವನ್ನು ಸಾಮಾಜಿಕ ನ್ಯಾಯದ ಉಪಕರಣವನ್ನಾಗಿ ಬಳಸಿ, ಅದು 'ಅತಿ ರಾಜಕ'ವಾಗುವುದನ್ನು ವಚನಕಾರರು ತಪ್ಪಿಸಿದರೇನೋ ಸರಿ. ಆದರೆ ಮುಂದೆ ಬಂದ ಇದೇ ಲಿಂಗಾಯತ, ವೈದಿಕ ಮತ್ತು ಜೈನಕವಿಗಳಿಂದಾಗಿ, ಅದು 'ಅತಿದೈವಿಕ'ದ ನೆಲೆಗೆ ಅಂದರೆ ಸಾಮಾಜಿಕ ನೆಲೆಯಿಂದ ಮತ್ತೆ ಮಾನವಿಕ ನೆಲೆಗೆ ಸರಿದುದು, ಬೌದ್ಧಿಕ ಸ್ವಾತಂತ್ರ್ಯದ ಹಿನ್ನಡೆಯೆಂದೇ ಹೇಳಬಹುದು. ಈ ದೃಷ್ಟಿಯಿಂದ ನೋಡಿದರೆ, ಎರಡೂ ಭಕ್ತಿಕೇಂದ್ರಿತವಾಗಿದ್ದರೂ ವಚನ ಸಾಮಾಜಿಕ ಪಾತಳಿಯ, ಕೀರ್ತನವು ಮಾನವಿಕ ಪಾತಳಿಯ ಉತ್ಪಾದನೆ ಎನಿಸುತ್ತವೆ.

ಆಧುನಿಕ ಯುಗದಲ್ಲಿ ಆವಿಷ್ಕಾರಗೊಂಡ ನವೋದಯಸಾಹಿತ್ಯದ ಲೇಖಕರು ಸಾಮಾನ್ಯವಾಗಿ ಸಂರಕ್ಷಣಾತ್ಮಕ ಮನೋಧರ್ಮದವರು, ಮೇಲಾಗಿ ಪರಕೀಯ ಬ್ರಿಟಿಷರ ಆಳಿಕೆಗೆ ಅಂಜಿ ಬದುಕುತ್ತಿದ್ದವರು. ಹೀಗಾಗಿ ಇಲ್ಲಿಯೂ ಮೇಲೆ ಹೇಳಿದ ಮಾನವಿಕ ನೆಲೆಯ ಭಾವನಿಷ್ಠ ಬರೆವಣಿಗೆಯೇ ಪ್ರಧಾನವೆನಿಸಿ, ಸಾಮಾಜಿಕ ನೆಲೆಯ ವಿಚಾರನಿಷ್ಠ ಬರೆವಣಿಗೆ ಗೌಣ ನೆಲೆಗೆ ಸರಿಯಿತು. ಹಳೆಯ ದೈವಭಕ್ತಿಯ ಇನ್ನೊಂದು ರೂಪವಾದ ರಾಷ್ಟ್ರಭಕ್ತಿ, ಪರಂಪರೆಯ ವೈಭವೀಕರಣ, ಪ್ರೇಮ, ನಿಸರ್ಗಪ್ರೀತಿ ಇತ್ಯಾದಿ ಭಾವನೆಗಳು ವಿಜೃಂಭಿಸಿ, ಲೋಕ ಪ್ರಸಿದ್ಧ ಗಾಂಧಿ ಚಳುವಳಿಯ ಘರ್ಷಣೆ-ಗದ್ದಲ, ಬ್ರಿಟಿಷ್‌ರ ದಬ್ಬಾಳಿಕೆ ಮೊದಲಾದುವು ಇದರಲ್ಲಿ ದಾಖಲಾಗಲೇ

ಇಲ್ಲ. ಹೀಗಿರುವಾಗ 'ಹಲಗಲಿ ಬೇಡರ ಲಾವಣಿ' ಮೊದಲಾದವುಗಳನ್ನು ರಚಿಸಿ, ಹಳ್ಳಿಪಳ್ಳಿಗಳಲ್ಲಿ ಹಾಡಿದ ನಮ್ಮ ಜಾನಪದ ಲಾವಣಿಕಾರ ನಿರ್ಭೀತಿ, ಈ ನವೋದಯ ಕವಿಗಳ ಬೌದ್ಧಿಕ ಸ್ವಾತಂತ್ರ್ಯದ ಸೋಲನ್ನು ಸೂಚಿಸುತ್ತದೆ. ಹೀಗಿದ್ದೂ ರಾಜಾರಾಮ ಮೋಹನರಾಯ, ಮಹಾತ್ಮಾಗಾಂಧಿ ಮೊದಲಾದವರ ಸಮಾಜ ಸುಧಾರಣಾ ಧಾರೆಗಳು ಕೆಲಮಟ್ಟಿಗಾದರೂ ಕಾದಂಬರಿ, ನಾಟಕಗಳಲ್ಲಿ ಅವತರಿಸಿದವು. ಈ ಸಂದರ್ಭದಲ್ಲಿ ಮಾನವಿಕ ನೆಲೆಯ ಸಾಹಿತಿಯಾದರೂ ಕುವೆಂಪು ಅವರು ಕವನ, ಕಾದಂಬರಿ, ಶೂದ್ರತಪಸ್ವಿ -ಬೆರಳ್ಗೆ ಕೊರಳ್‌ದಂಥ ನಾಟಕಗಳ ಮೂಲಕ ಬೌದ್ಧಿಕ ಸ್ವಾತಂತ್ರ್ಯವನ್ನು ಒಂದು ತತ್ವವನ್ನಾಗಿ ಬಳಸಿದರು. ಇದನ್ನು ಪ್ರತಿಭಟಿಸಿದ ಮಾಸ್ತಿಯವರನ್ನು ಕುರಿತು ಕೆ. ವಿ. ಸುಬ್ಬಣ್ಣ ಅವರು "ಮಾಸ್ತಿಯವರ ಮಾತುಗಳು ಈಗ ಓದಿದರೆ, ಆಶ್ಚರ್ಯವಾಗುವಷ್ಟು ಬಾಲಿಶವಾಗಿ ಕಾಣುತ್ತವೆ...... ಈಗ ನನಗೆ ಇದೊಂದು ಮಹತ್ವದ ದಾಖಲೆ, ನಾವು ಮರೆಯ ಬಾರದ್ದು ಎನಿಸುತ್ತದೆ" ಎಂದು ಹೇಳುತ್ತಾರೆ. ಹೀಗೆ 'ಶೂದ್ರತಪಸ್ವಿ' ವಿಷಯದಲ್ಲಿ ಬೌದ್ಧಿಕ ಸ್ವಾತಂತ್ರ್ಯವನ್ನು ವಿರೋಧಿಸುವ ಮಾಸ್ತಿಯವರು, ಚನ್ನಬಸವನಾಯಕ, ಚಿಕವೀರರಾಜೇಂದ್ರದಂಥ ಕಾದಂಬರಿಗಳನ್ನು, ಬಿಜ್ಜಳರಾಯ ಚರಿತೆಯಂಥ ಪ್ರಾಚೀನಕೃತಿಯನ್ನು ಪ್ರಕಟಿಸಿ, ಇದು ಬೌದ್ಧಿಕ ಸ್ವಾತಂತ್ರ್ಯವೆಂದು ಸಮರ್ಥಿಸಿಕೊಳ್ಳುವುದು ಅವರ ಇಬ್ಬಂದಿತನವನ್ನು ಸೂಚಿಸುತ್ತದೆ.

೧೯೪೦ರ ದಶಕದಲ್ಲಿ ಅಸ್ತಿತ್ವಕ್ಕೆ ಬಂದ ಮಾರ್ಕ್ಸವಾದೀಯ ಪ್ರಗತಿಶೀಲಸಾಹಿತ್ಯ ಮಾತ್ರ ಬೌದ್ಧಿಕ ಸ್ವಾತಂತ್ರ್ಯವನ್ನು ಉಸಿರಾಡಿಸಲು ಆರಂಭಿಸಿತು. ಇದಕ್ಕೆ ಕಾರಣ, ಈ ಬರೆಹಗಾರರು ನೌಕರಶಾಹಿಗಳಾಗಿರದೆ, ಬೀದಿಯಲ್ಲಿ ಬೆಳೆದ ಸಾಮಾನ್ಯರಾಗಿದ್ದುದು. ಹಾಗೆ ನೋಡಿದರೆ ವಚನಸಾಹಿತ್ಯವನ್ನು ಬಿಟ್ಟರೆ ನಮ್ಮ ಸಾಹಿತ್ಯ ಮತ್ತೆ ಬೌದ್ಧಿಕ ಸ್ವಾತಂತ್ರ್ಯವನ್ನು ಒಂದು 'ತತ್ವ'ವನ್ನಾಗಿ ರೂಪಿಸಿಕೊಂಡುದು, ಅಂದರೆ ಸಾಮಾಜಿಕ ನ್ಯಾಯಕ್ಕಾಗಿ ದುಡಿಯ ತೊಡಗಿದುದು ಪ್ರಗತಿಶೀಲಸಾಹಿತ್ಯ ಸಂದರ್ಭದಲ್ಲಿಯೆಂದೇ ಹೇಳಬೇಕು. ಇದು ಕೇವಲ ಕಾದಂಬರಿ ಪ್ರಕಾರಕ್ಕೆ ಮೀಸಲಾದುದು, ಕೆಲವೇ ವರ್ಷ ಜೀವಿಸಿದುದು ವಿಷಾದದ ಸಂಗತಿಯಾಗಿದೆ.

ಹೀಗೆ ಪ್ರಧಾನವಾಗಿ, ನವೋದಯವು ಮಾನವಿಕವನ್ನು, ಪ್ರಗತಿಶೀಲವು ಸಾಮಾಜಿಕವನ್ನು ಪ್ರತಿನಿಧಿಸಿದರೆ, ಮುಂದೆ ಬಂದ ನವ್ಯವು ಅನಾಥಪ್ರಜ್ಞೆ ಇತ್ಯಾದಿಗಳನ್ನೊಳಗೊಂಡ ವೈಯಕ್ತಿಕತೆಯನ್ನು ಪ್ರತಿನಿಧಿಸಿ, ಆತ್ಮರತಿಯಲ್ಲಿ ವಿರಮಿಸಿತು. ಇಲ್ಲಿ ಕೆಲವೊಮ್ಮೆ ಸಾಮಾಜಿಕ ಅನ್ಯಾಯದ ನೋವು ಕಾಣಿಸುತ್ತದೆಯೇ ಹೊರತು, ಅದು ಪ್ರತಿಭಟನೆಯಾಗಿ ಪ್ರಕಟವಾಗುವುದಿಲ್ಲ.

ಇಂಥ ಸಂದರ್ಭದಲ್ಲಿ ಅಕ್ಷರಲೋಕವನ್ನು ಪ್ರವೇಶಿಸಿದ ಮತ್ತು ಅಂಬೇಡಕರ್, ಲೋಹಿಯಾ ಇತ್ಯಾದಿ ವಾದಗಳಿಂದ ಪ್ರಭಾವಿತರಾದ ದಲಿತ-ಬಂಡಾಯ ಬರೆಹಗಾರರು ಬೌದ್ಧಿಕ ಸ್ವಾತಂತ್ರ್ಯವನ್ನು ಒಂದು ಅಸ್ತ್ರವನ್ನಾಗಿ ಬಳಸಿದರು. ಈ ಕಾಲದ ಕಾವ್ಯ ಕಾದಂಬರಿ ನಾಟಕ ಕಥೆ ಏನೆಲ್ಲ ಪ್ರಕಾರಗಳಲ್ಲಿ ಅದು ವಿಜೃಂಭಿಸಿ, ನವ್ಯದ ವೈಯಕ್ತಿಕತೆ ಹಿಂದೆ ಸರಿದು, ಸಾಮಾಜಿಕತೆ ಸಾಹಿತ್ಯದ ವಸ್ತುವಾಯಿತು. ಸಾಮಾಜಿಕ ಶೋಷಣೆಯತ್ತ ಕೇವಲ ನೋವಿನಿಂದ ಬೆರಳು ತೋರದೆ, ಸಿಟ್ಟಿನಿಂದ ಅದನ್ನು ಕೆಡಹುವ ಕಾರ್ಯವನ್ನೂ ಮಾಡಿತು. ಇತ್ತೀಚೆ ಮುಸ್ಲಿಮ್ ಮತ್ತು ಕ್ರೈಸ್ತ ಸಮಾಜಗಳ ಶೋಷಣೆಯ ಜಳಜಗತ್ತು ಸಾಹಿತ್ಯದಲ್ಲಿ ದಾಖಲಾಗುತ್ತಲಿದ್ದು, ಅದು ಇನ್ನಷ್ಟು ನಿರ್ಭೀತ ನೆಲೆಗೆ ಸರಿಯುವುದು ಅಪೇಕ್ಷಣೀಯವಾಗಿದೆ. ಇತ್ತೀಚೆ ಹುಟ್ಟಿಕೊಂಡ 'ಮಹಿಳಾವಾದ' ಕೇವಲ ಮಹಿಳಾಸ್ವಾತಂತ್ರ್ಯವನ್ನು ಅಪೇಕ್ಷಿಸದೆ, ಹೆಚ್ಚಿನದಾಗಿ ಪುರುಷವಾದಿ ಪರಿಕಲ್ಪನೆಯನ್ನು ಪ್ರಶ್ನಿಸುವ ಮೂಲಕ, ಬೌದ್ಧಿಕ ಸ್ವಾತಂತ್ರ್ಯವನ್ನು ಒಂದು 'ತತ್ವ'ವನ್ನಾಗಿ ರೂಪಿಸಿಕೊಂಡು ಹೋರಾಟ ನಡೆಸಿದೆ.

ಒಟ್ಟಾರೆ, ಸೋಲು ಗೆಲುವುಗಳೇನೇ ಇರಲಿ, ವಚನ-ಪ್ರಗತಿಶೀಲ-ದಲಿತ ಬಂಡಾಯ-ಮಹಿಳಾವಾದ ಕಾಲಘಟ್ಟಗಳಲ್ಲಿ ಮಾತ್ರ ಬೌದ್ಧಿಕ ಸ್ವಾತಂತ್ರ್ಯ ಒಂದು 'ತತ್ವ'ವಾಗಿ ಕೆಲಸ ಮಾಡಲು ಹವಣಿಸಿದೆ. ಇಲ್ಲೆಲ್ಲ

ಅಪಾಯವನ್ನು ಮೈಮೇಲೆ ಎಳೆದುಕೊಂಡ ಬರೆವಣಿಗೆ ಎದ್ದು ಕಾಣುತ್ತದೆ. ಇವರೆಲ್ಲ ಮೂಲತಃ ತುಳಿತಕ್ಕೊಳಗಾದವರು, 'ವಾದ'ಗಳನ್ನು ನಂಬಿದವರೆಂಬುದು ನೆನಪಿಡಬೇಕಾದ ಸಂಗತಿಯಾಗಿದೆ.

ಸೃಜನ ಸಾಹಿತ್ಯದ ಸತ್ಯಕ್ಕೆ ಹಲವು ಮುಖ, ಸಂಶೋಧನ ಸಾಹಿತ್ಯದ ಸತ್ಯಕ್ಕೆ ಸಾಮಾನ್ಯವಾಗಿ ಒಂದು ಮುಖ. ಆದುದರಿಂದ ಸೃಜನ ಸಾಹಿತ್ಯದಲ್ಲಿ ವ್ಯವಹರಿಸುವ ಬೌದ್ಧಿಕ ಸ್ವಾತಂತ್ರ್ಯಕ್ಕೆ ಸಂಶೋಧನ ಸಾಹಿತ್ಯದಲ್ಲಿ ಅಷ್ಟಾಗಿ ಅವಕಾಶವಿರುವುದಿಲ್ಲ. 'ಪಾಸ್ಟ ಈಜ್ ಪರ್‌ಫೆಕ್ಟ್' ಆಗಿದ್ದು, ಗತಕಾಲದ ಆ ಕಟು-ಮಧುರ ಪರ್‌ಫೆಕ್ಟ್‌ಗಳನ್ನು ಬೆಳಕಿಗೆ ತರುವುದು ನಿಜವಾದ ಸಂಶೋಧಕನ ಧರ್ಮವಾಗಿದೆ. ದುರ್ದೈವದ ಸಂಗತಿಯೆಂದರೆ 'ಮುಚ್ಚಿಹೋದ' ಕಟುಸತ್ಯಗಳನ್ನು ಹೊರಹಾಕಿದರೆ ಸಂಪ್ರದಾಯವಾದಿಗಳು, 'ಮುಚ್ಚಿಹಾಕಿದ' ಕಟುಸತ್ಯಗಳನ್ನು ಹೊರಹಾಕಿದರೆ ಸಂಬಂಧಪಟ್ಟವರು ಸಹಿಸುವುದಿಲ್ಲ. ಇವರಿಗಿಂತ, ಸಂಶೋಧನೆಗೆ ಇಲ್ಲದ ಅರ್ಥಹಚ್ಚಿ ಸಮಾಜದ ಮನಸ್ಸನ್ನು ಕೆಡಿಸುವ ದುಷ್ಟವಿದ್ವಾಂಸರು ಹೆಚ್ಚು ಅಪಾಯಕಾರಿಯಾಗಿದ್ದು, ಇಂಥವರಿಂದ "ಯಾವಾಗ ವಾದಕ್ಕಾಗಿ ವಾದ ಆರಂಭವಾಗುವುದೋ, ಆಗ ಜ್ಞಾನಸಾಧಕನು ವಾದಮಾಡುವವರಿಗೆ ಜಯಪತ್ರ ಬರೆದುಕೊಟ್ಟು, ತಾನು ತನ್ನ ಉಪಾಸನೆಯಲ್ಲಿ ಮುಳುಗಿ ಹೋಗುವುದೇ ಶ್ರೇಯಸ್ಕರ." ಈ ಮಾತು ವಿತಂಡವಾದದ ವಿಮರ್ಶಕರಿಗೂ ಅನ್ವಯಿಸುತ್ತದೆ.

ಪ್ರದರ್ಶನ ಕಲೆ

ಪ್ರದರ್ಶನ ಕಲೆಯು ಸಾಹಿತ್ಯಕಲೆಯಾಗಿಯೂ ಬೆಳೆದಿರುವುದರಿಂದ, ಮೇಲೆ ಕನ್ನಡ ಸಾಹಿತ್ಯವನ್ನು ಕುರಿತು ಹೇಳಿದ ಮಾತುಗಳು, ಸ್ವಲ್ಪ ಹೆಚ್ಚು ಕಡಿಮೆ ನಮ್ಮ ವೃತ್ತಿ-ಹವ್ಯಾಸಿ ಪ್ರದರ್ಶನಕಲೆಗಳಿಗೂ ಅನ್ವಯಿಸುತ್ತವೆ. ಹಾಗೆ ನೋಡಿದರೆ, ಕಾದಂಬರಿಯಂತೆ ನಾಟಕ ಮೊದಲಾದ ದೃಶ್ಯಕಲೆಗಳು ಬೌದ್ಧಿಕ ಸ್ವಾತಂತ್ರ್ಯವನ್ನು ಒಂದಿಷ್ಟು ಅಧಿಕ ಪ್ರಮಾಣದಲ್ಲಿ ಬಳಸಿದವೆಂದು ತೋರುತ್ತದೆ. 'ಇಗ್ಗಪ್ಪ ಹೆಗ್ಗಡೆ ಪ್ರಹಸನ'ಗಳಂಥ ಕಲ್ಪಿತ ವಸ್ತುವನ್ನೊಳಗೊಂಡ ಸಾಮಾಜಿಕ ನಾಟಕಗಳು ೧೮೮೭ರಷ್ಟು ಪೂರ್ವದಲ್ಲಿಯೇ ರಚನೆಗೊಂಡು, ಆ ಮೇಲೆಯೂ ಇಂಥ ಸಾಮಾಜಿಕ ಶೋಷಣೆಗಳು ಆಗಾಗ ವಸ್ತುವಾದುದು ಇದಕ್ಕೆ ನಿದರ್ಶನ.

ಜನಪದ ದೃಶ್ಯಕಲೆಗಳಾದ ಕರಾವಳಿ ತೀರದ ಯಕ್ಷಗಾನ, ಬಯಲು ನಾಡಿನ ದೊಡ್ಡಾಟಗಳು ಪ್ರಧಾನವಾಗಿ ಪೌರಾಣಿಕ ಮತ್ತು ಚಾರಿತ್ರಿಕ 'ಆದರ್ಶವಸ್ತು'ಗಳನ್ನೇ ಅವಲಂಬಿಸಿರುವುದರಿಂದ, ಇಲ್ಲಿ ನಾಯಕ-ಪ್ರತಿನಾಯಕರ ಕಪ್ಪು-ಬಿಳುಪಿನ ಚಿತ್ರಗಳು ಮಾತ್ರ ಕಂಡುಬಂದು, ಬೌದ್ಧಿಕ ಸ್ವಾತಂತ್ರ್ಯಕ್ಕೆ ಒಂದು ಮಿತಿ ಪ್ರಾಪ್ತವಾಯಿತು. ಹೀಗಿದ್ದೂ ಯಕ್ಷಗಾನದಲ್ಲಿ ಕರ್ಣನಂಥ ಶೋಷಿತ ಪಾತ್ರದ ದೊಡ್ಡ ಅಭ್ಯಾಸಿಗಳು ಪಠ್ಯವನ್ನು ಮೀರಿ ಸಾಮಾಜಿಕ ಅನ್ಯಾಯವನ್ನು ಪ್ರಶ್ನಿಸುವುದು, ಸಾರಥಿ-ಮರಿಭಾಗವತರು ಆನುಷಂಗಿಕವಾಗಿ ಹಾಸ್ಯದ ಮೂಲಕ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವುದು ಗಮನಾರ್ಹವೆನಿಸುತ್ತದೆ. ಈ ದಿಸೆಯಲ್ಲಿ 'ತಾಳಮದ್ದಲೆ' ಪ್ರಕಟಿಸುವ ಸಮಯಸ್ಫೂರ್ತಿಯ ಬೌದ್ಧಿಕ ಸ್ವಾತಂತ್ರ್ಯ ಇನ್ನೂ ಗಮನಾರ್ಹವೆನಿಸುತ್ತದೆ. ಈ ದೃಷ್ಟಿಯಿಂದ ಬಯಲು ನಾಡಿನ ಸಣ್ಣಾಟ ಕೆಲವೊಮ್ಮೆ ಸಾಮಾಜಿಕ ವಿಷಯಗಳನ್ನು ಆಯ್ದುಕೊಂಡರೂ ಅವೂ ಸಾಮಾನ್ಯವಾಗಿ ಆದರ್ಶರೂಪದವು. ಹೀಗಾಗಿ ಸಾರಥಿ ದೂತಿಯಂಥ ಪಾತ್ರಗಳ ಹಾಸ್ಯಮೂಲ ಸಾಮಾಜಿಕ ನ್ಯಾಯದ ಮಾತುಗಳನ್ನು ಬಿಟ್ಟರೆ, ಮಿಕ್ಕಂತೆ ಬೌದ್ಧಿಕ ಸ್ವಾತಂತ್ರ್ಯಕ್ಕೆ ಇಲ್ಲಿಯೂ ಅವಕಾಶ ಸಿಗಲಿಲ್ಲ. ಆದರೆ ಈ ಕಾಲದಲ್ಲಿ ಹುಟ್ಟಿದ 'ಸಂಗ್ಯಾಬಾಳ್ಯಾ' ಸಣ್ಣಾಟ, ಸಾಹಿತಿಯ ಬೌದ್ಧಿಕ ಸ್ವಾತಂತ್ರ್ಯದ ಬೇಜವಾಬ್ದಾರಿಯೇ ಸರಿ. ನೆರೆಮನೆಯ ಗೃಹಿಣಿಯ ಅಕ್ರಮ ಘಟನೆಯನ್ನು ಮನರಂಜನೆಯ ಮಾಧ್ಯಮ ಮಾಡಿಕೊಂಡ ಈ ಮತ್ತು ಇಂಥ ಕೃತಿಗಳ ಕಲಾತ್ಮಕತೆ ಏನೇ ಇರಲಿ, ಇಂಥವು ಸಾಹಿತ್ಯನೀತಿಗೆ ಬಾಹಿರವೆಂದೇ ಹೇಳಬೇಕು.

ಸಾಮಾಜಿಕ ಮತ್ತು ಚಾರಿತ್ರಿಕ ವಸ್ತುಗಳ ಆಯ್ಕೆಯಂತೆ, ಸಿದ್ಧಕೃತಿಯ ಪುನಃಸೃಷ್ಟಿ ವಿಷಯದಲ್ಲಿಯೂ ಸಾಹಿತಿ ಎಚ್ಚರವಹಿಸಿಬೇಕಾಗುತ್ತದೆ. ನಮ್ಮಲ್ಲಿ ಇಂಥ ಪುನಃಸೃಷ್ಟಿ ಕಾರ್ಯ ಆದಿಕವಿ ಪಂಪನಿಂದ ಆರಂಭವಾಗಿ, ಭೈರಪ್ಪನವರ ವರೆಗೆ ಒಂದು ಸ್ವತಂತ್ರ ಪ್ರಕಾರವೆಂಬಂತೆ ಬೆಳೆದುಬಂದಿದೆ. ಈ ಪ್ರಕಾರದಲ್ಲಿ ಕೆಲಸಮಾಡಿದ ಲೇಖಕರ ಬೌದ್ಧಿಕ ಸ್ವಾತಂತ್ರ್ಯದ ಪರಿಕಲ್ಪನೆಯ ಅಧ್ಯಯನ ಇಂದು ನಡೆಯಬೇಕಾಗಿದೆ.

ಸಮೂಹ ಮಾಧ್ಯಮ

ನೂರಿನ್ನೂರು ವರ್ಷಗಳಿಂದ ಈಚೆ ಹುಟ್ಟಿದ ಆಧುನಿಕ ಸಮೂಹ ಮಾಧ್ಯಮಗಳಲ್ಲಿ ಮೊದಲು ಕಾಣಿಸಿಕೊಂಡುದು, ಪತ್ರಿಕೆ. ಆಮೇಲೆ ಕ್ರಮವಾಗಿ ಆಕಾಶವಾಣಿ, ಚಲನಚಿತ್ರ-ದೂರದರ್ಶನ ಕಾಣಿಸಿಕೊಂಡವು. ಇವುಗಳಲ್ಲಿ ಆಕಾಶವಾಣಿ ಒಂದಿಷ್ಟು ಮಡಿವಂತಿಕೆ ಮೆರೆದರೆ, ಮಿಕ್ಕ ಪತ್ರಿಕೆ ಸಿನಿಮಾ ದೂರದರ್ಶನಗಳು ಮಲಿನವಾಗುತ್ತ ನಡೆದಿವೆ. ಈ ಮಾಲಿನ್ಯವು ಮೂಢನಂಬಿಕೆ, ಮುಕ್ತಕಾಮ, ಕ್ರೈಮ್ ಇತ್ಯಾದಿ ರೂಪಗಳಲ್ಲಿ ಪ್ರಸಾರವಾಗುತ್ತಿದೆ. ಮಹಿಳೆಯನ್ನಂತೂ ಮನರಂಜನೆಯ ವಸ್ತು, ಮಾರುಕಟ್ಟೆಯ ಮಾಧ್ಯಮದ ಮಟ್ಟಕ್ಕೆ ಇಳಿಸುತ್ತಲಿದ್ದೇವೆ. ದೇವರ ಗದ್ದುಗೆ, ವಿಗ್ರಹಗಳಿಗೆ ಕೊಡಗಟ್ಟಲೆ ಹಾಲು, ಜೇನು, ಎಳೆನೀರು ಸುರಿಯುವ ಅಭಿಷೇಕ ಮೊದಲಾದ ಕುರುಡು ಸಂಪ್ರದಾಯಗಳನ್ನು ಗಂಟೆಗಟ್ಟಲೆ ಅದ್ದೂರಿಯಿಂದ ಪ್ರದರ್ಶಿಸುವ ದೂರದರ್ಶನಗಳೂ, ಸರಕಾರೀ ಸಮೂಹ ಮಾಧ್ಯಮಗಳೇ? ಮತೀಯ ಖಾಸಗಿ ಮಾಧ್ಯಮಗಳೇ? ಎಂಬ ಸಂಶಯ ಹುಟ್ಟಿಸುತ್ತಿವೆ. ಇದಲ್ಲದೆ ಬೇರೆ ಪ್ರಾಂತಗಳ ಕೌಟುಂಬಿಕ ನಡೆವಳಿಕೆ, ದೇವರ ಸ್ತೋತ್ರ, ಧಾರ್ಮಿಕ ಆಚರಣೆ-ಪೂಜೆ ಇತ್ಯಾದಿಗಳನ್ನು ಆವಶ್ಯಕತೆಗೆ ಮೀರಿ ಪ್ರದರ್ಶಿಸುವುದನ್ನು ನೋಡಿದರೆ, ನಮ್ಮ ಸಿನಿಮಾ ಮತ್ತು ದೂರದರ್ಶನಗಳು ಪರಪ್ರಾಂತೀಯರ ಕೈವಶವಾಗಿವೆ ಎನಿಸುತ್ತದೆ. ಇವುಗಳಿಂದಾಗಿ ಕೀಳು ಅಭಿರುಚಿಯ-ಮೂಢನಂಬಿಕೆಯ-ಪರಸಂಸ್ಕೃತಿಪ್ರೀತಿಯ ಪ್ರೇಕ್ಷಕವರ್ಗ ನಮ್ಮಲ್ಲಿ ಬೆಳೆಯುತ್ತಲಿದೆ. ಪಂಚೇಂದ್ರಿಯಗಳಲ್ಲಿ ಕಣ್ಣು, ಕಿವಿ ನೀಡುವ ಅನುಭವ ಹೆಚ್ಚು ಅಧಿಕೃತವಾದುದು. ಹೀಗಾಗಿ ದೃಶ್ಯ-ಶ್ರವ್ಯರೂಪದ ಈ ಪ್ರಬಲ ಮಾಧ್ಯಮಗಳು ದುರುಪಯೋಗವಾಗದಂತೆ ನೋಡಿಕೊಳ್ಳಬೇಕಾಗಿದೆ.

ಹೊಸ ಹೊಸ ಮಾಧ್ಯಮಗಳು ಎಷ್ಟೇ ಬೆಳೆದರೂ ಪತ್ರಿಕೆಗಳ ಮಹತ್ವ ಇನ್ನೂ ಉಳಿದುಕೊಂಡಿದೆ. ಹೀಗಿರುವಾಗ ಸುದ್ದಿಯನ್ನು ಸಂವಹನಗೊಳಿಸುವಲ್ಲಿ ಅವು ಮೊದಲಿನ ಸಂಯಮ ಕಳೆದುಕೊಳ್ಳುತ್ತಲಿರುವುದು ವಿಷಾದದ ಸಂಗತಿ. ಕೆಲವು ಪತ್ರಿಕೆಗಳನ್ನು ಓದಲು, ಮುಟ್ಟಲು, ಏಕೆ ನೋಡಲು ಅಸಹ್ಯವೆನಿಸುತ್ತದೆ. ಒಟ್ಟಾರೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಸಾಹಿತ್ಯಕಲೆ, ಪ್ರದರ್ಶನಕಲೆಗಳಿಗಿಂತ ಪತ್ರಿಕೆ ಹೆಚ್ಚು ಸ್ವೇಚ್ಛೆಗೆ ಇಳಿದಿದೆ.

ಶಿಕ್ಷಣ - ಭಾಷಾಮಾಧ್ಯಮ

ನಮ್ಮ ಶಿಕ್ಷಣ ಸಂಸ್ಥೆಗಳು ಸಂಬಳಕ್ಕಾಗಿ ಬರುವ ಶಿಕ್ಷಕರ, ಸರ್ಟಿಫಿಕೇಟಿಗಾಗಿ ಬರುವ ವಿದ್ಯಾರ್ಥಿಗಳ ವ್ಯವಸ್ಥೆಯಾಗಿದೆ. ಈ ಮಾತು, ಇಂದು ನಿಂತ ನೀರಾಗಿರುವ ಕಲೆ -ವಿಜ್ಞಾನ-ಸಮಾಜವಿಜ್ಞಾನ ನಿಕಾಯಗಳಿಗೆ ತುಂಬ ಅನ್ವಯಿಸುತ್ತದೆ. ಇಲ್ಲಿ ನೌಕರಿಗಾಗಿ ಒಂದು ಸರ್ಟಿಫಿಕೇಟು, ಸರ್ಟಿಫಿಕೇಟಿಗಾಗಿ ಒಂದು ಪಠ್ಯಕ್ರಮ-ಎಂಬ ಸರಳ ದಾರಿ ನಿರ್ಮಾಣವಾಗಿದೆ. ಇದರಿಂದಾಗಿ ಶಿಕ್ಷಣದ ಹೆಸರಿನಲ್ಲಿ ಸಾಮಾನ್ಯವಾಗಿ ಯುವಪ್ರತಿಭೆಗಳ ಬೌದ್ಧಿಕ ಸ್ವಾತಂತ್ರ್ಯ ನಾಶವಾಗುತ್ತ ನಡೆದಿದೆ. ಈಗ ಮಾಡಬೇಕಾದ ಮೊದಲ ಕೆಲಸವೆಂದರೆ, ಮಕ್ಕಳ ಬೌದ್ಧಿಕ ಸ್ವಾತಂತ್ರ್ಯ ಬೆಳೆಯುವುದಕ್ಕಾಗಿ ಇಂದಿನ ಏಕಮುಖ ಬೋಧನ ಪದ್ಧತಿಗೆ ಬದಲು ಸಂವಾದ ಶಿಕ್ಷಣ ಪದ್ಧತಿ ಅಸ್ತಿತ್ವಕ್ಕೆ ಬರಬೇಕಾಗಿದೆ. ಮುಕ್ತ ವಾತಾವರಣ, ಆನ್ವಯಿಕ ಬೋಧನೆ ಮತ್ತು ಆಧುನಿಕ ದೃಷ್ಟಿಗಳು ಮಾತ್ರ ಈ ಬಗೆಯ ಶಿಕ್ಷಣಪದ್ಧತಿಯನ್ನು ರೂಪಿಸುತ್ತವೆ.

ಬೌದ್ಧಿಕ ಸ್ವಾತಂತ್ರ್ಯವನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮಗಳಲ್ಲಿ ಭಾಷೆ ಮುಖ್ಯವಾದುದು. ಇಂಥ ಸಂದರ್ಭದಲ್ಲಿ ಸ್ವಭಾಷೆಯನ್ನು ಬಿಟ್ಟು ಅನ್ಯಭಾಷೆಯನ್ನು ಬಳಸುವುದು ಒಂದು ಬಗೆಯ ಬೌದ್ಧಿಕ ದಾರಿದ್ರ್ಯವೆನಿಸುತ್ತದೆ. ಇಲ್ಲಿ ಸ್ವಭಾಷೆಯೆಂದರೆ ಮಾತೃಭಾಷೆಯಲ್ಲ, ರಾಜ್ಯಭಾಷೆ. ಹಲವು ಮಾತೃಭಾಷಿಕರಾದ ನಾವು, ಬಾಳುವುದಕ್ಕಾಗಿ ಸಂವಿಧಾನಾತ್ಮಕವಾಗಿ ಒಂದು ರಾಜ್ಯವೆಂಬ ಘಟಕವನ್ನು ಒಪ್ಪಿಕೊಂಡಿದ್ದೇವೆ. ಆದುದರಿಂದ ಕರ್ನಾಟಕದಲ್ಲಿರುವ ಪ್ರತಿಯೊಬ್ಬ ಕನ್ನಡಿಗ ಮಾತೃಭಾಷೆಯ ಸ್ಥಾನದಲ್ಲಿ ರಾಜ್ಯಭಾಷೆಯನ್ನು ಒಪ್ಪಿಕೊಂಡು ಬಾಳುವುದು ಮಾತ್ರ ನಿಜವಾದ ಬೌದ್ಧಿಕ ಸ್ವಾತಂತ್ರ್ಯವೆನಿಸುತ್ತದೆ. ಇಲ್ಲದಿದ್ದರೆ ತಾತ್ವಿಕವಾಗಿ ಒಪ್ಪಿಕೊಂಡ ಬೌದ್ಧಿಕ ಸ್ವಾತಂತ್ರ್ಯವನ್ನು ಆನ್ವಯಿಕವಾಗಿ ಕೈಬಿಟ್ಟಂತಾಗುತ್ತದೆ. ಇಲ್ಲಿ ಒಂದು ಎಚ್ಚರಿಕೆ ಅವಶ್ಯ. ಅದು: ಇಂದು ನಾವು ಏಕಭಾಷಾ ಸಂದರ್ಭದಲ್ಲಿ ಬದುಕುತ್ತಿಲ್ಲ, ಬಹುಭಾಷಾ ಸಂದರ್ಭದಲ್ಲಿ ಬದುಕುತ್ತಲಿದ್ದೇವೆ. ಇದನ್ನು ಅರ್ಥಮಾಡಿಕೊಂಡು ಏಕಕಾಲಕ್ಕೆ ಕನ್ನಡಿಗ ಸ್ಥಾನಿಕನೂ ಜಾಗತಿಕನೂ ಆಗುವಂತೆ ಶಿಕ್ಷಣ ಮೊದಲಾದ ಕ್ಷೇತ್ರಗಳಲ್ಲಿ ಸೂಕ್ತ ಭಾಷಾಮಾಧ್ಯಮವನ್ನು ಅಸ್ತಿತ್ವಕ್ಕೆ ತರಬೇಕಾಗಿದೆ.

* * *

ನನ್ನ ದೃಷ್ಟಿಯಲ್ಲಿ ಇಂದು ಮೊದಲು ಮಾಡಬೇಕಾದ ಕಾರ್ಯವೆಂದರೆ, ಕುಟುಂಬಭಾಷೆಯೇ ಮಾತೃಭಾಷೆ-ಎಂಬ ಕಳೆದ ಶತಮಾನದ 'ಮಾತೃಭಾಷಾ ಪರಿಕಲ್ಪನೆ'ಯನ್ನು ಮರುವ್ಯಾಖ್ಯಾನಿಸುವುದು. ಏಕೆಂದರೆ ಹಿಂದಿನ ಸ್ಥಿರಸಮಾಜದ ಮಾತೃಭಾಷಾ ಪರಿಕಲ್ಪನೆ ಇಂದಿನ ಚರಸಮಾಜಕ್ಕೆ ಹೊಂದಿಕೆಯಾಗುವುದಿಲ್ಲ. ಹೀಗಿದ್ದೂ 'ಮಕ್ಕಳ ಶಿಕ್ಷಣಕ್ಕೆ ಮಾತೃಭಾಷೆಯೇ ಸೂಕ್ತ' ಎಂಬ ಗಾಂಧೀಜೀ ಮೊದಲಾದ ಶಿಕ್ಷಣತಜ್ಞರ ಹಳೆಯ ವಾದವನ್ನೇ ನೆವಮಾಡಿಕೊಂಡು, ಕೆಲವರು ಸಮಸ್ಯೆ ಸೃಷ್ಟಿಸುತ್ತಲಿದ್ದಾರೆ. ಮನುಷ್ಯ ಕೇವಲ ಕುಟುಂಬಜೀವಿಯಲ್ಲ, ಸಮಾಜಜೀವಿ. ಅಂದು ಸ್ಥಿರಸಮಾಜ ಕಾರಣವಾಗಿ, ಬಹುಮಟ್ಟಿಗೆ ಮನೆಯ ಹೊರಗಿನ ಸಮಾಜಭಾಷೆಯೇ ಒಳಗಿನ ಕುಟುಂಬದ ಮಾತೃಭಾಷೆಯಾಗಿ, ಒಳಗೂ ಹೊರಗೂ ಏಕಭಾಷಾ ಸಂದರ್ಭ ನಿರ್ಮಾಣವಾಗಿದ್ದಿತು. ಆಗ ಸಹಜವಾಗಿಯೇ ಸಮಾಜಭಾಷೆಯೂ ಆಗಿದ್ದ ಮಾತೃಭಾಷಾಬೋಧನೆ ಅರ್ಥಪೂರ್ಣವೆನಿಸುತ್ತಿದ್ದಿತು. ಇಂದು ಚರಸಮಾಜ ಕಾರಣವಾಗಿ ಮನೆಯ ಒಳಗೆ ಮಾತೃಭಾಷೆ-ಹೊರಗೆ ಸಮಾಜಭಾಷೆಯೆಂಬ ದ್ವಿಭಾಷಾಸಂದರ್ಭ ಸೃಷ್ಟಿಯಾಗಿದೆ. ಮಗು ಸಣ್ಣ ಮನೆಗಿಂತ ದೊಡ್ಡ ಸಮಾಜದಲ್ಲಿಯೇ ಹೆಚ್ಚು ಕಾಲಕಳೆಯಬೇಕಾದ ಇಂದಿನ ಹೊಸ ರೀತಿಯ ಬದುಕಿನಿಂದಾಗಿ, ಸಮಾಜಭಾಷೆಯೇ ಅದರ ಕುಟುಂಬದ ಮಾತೃಭಾಷೆಯ ಸ್ಥಾನವಹಿಸಿಕೊಳ್ಳತೊಡಗಿದೆ. ಆದುದರಿಂದ ರಾಜಕೀಯ ಕ್ಷಣಿಕ ಲಾಭಕ್ಕಾಗಿ ಕುಟುಂಬಸೀಮಿತ ಮಾತೃಭಾಷಾಮಾಧ್ಯಮದ ವಿಚಾರವನ್ನು ಕೈಬಿಟ್ಟು, ಮಗುವಿನ ಸಾಮಾಜಿಕ ಭವಿಷ್ಯದ ಶಾಶ್ವತ ಲಾಭಕ್ಕಾಗಿ, ಕರ್ನಾಟಕದ ಸಮಾಜಭಾಷೆ ಅಂದರೆ ಕರ್ನಾಟಕಸ್ಥರ ಮಾತೃಭಾಷೆಯಾದ ಕನ್ನಡಮಾಧ್ಯಮದಲ್ಲಿಯೇ ಎಲ್ಲ ಕರ್ನಾಟಕಸ್ಥರು ತಮ್ಮ ಮಕ್ಕಳ ಶಿಕ್ಷಣವನ್ನು ಆರಂಭಿಸಬೇಕು. ಬಳಿಕ, ಬೆಳೆಯುತ್ತಿದ್ದಂತೆಯೇ ಮಗು ಬೇಕಾದ ಎರಡು ಭಾಷೆಗಳನ್ನು, ಅವಶ್ಯವೆನಿಸಿದರೆ ಆಮೇಲೆ ಇಂಗ್ಲಿಷ್ ಭಾಷಾಮಾಧ್ಯಮವನ್ನು ಅನುಸರಿಸಬಹುದು. ಹೀಗೆ ಮಾಡಿದರೆ ಮಾತ್ರ, ಕನ್ನಡಗನೂ ಬೆಳೆಯುತ್ತಾನೆ, ಕರ್ನಾಟಕವೂ ಬೆಳೆಯುತ್ತದೆ. "ಕನ್ನಡಕರಣವೇ ನಿಜವಾದ ಏಕೀಕರಣ"ವೆಂಬ ಅಂತಿಮ ಸತ್ಯವೂ ಅನುಷ್ಠಾನಗೊಳ್ಳುತ್ತದೆ.

'ಬೌದ್ಧಿಕ ಸ್ವಾತಂತ್ರ್ಯ'ವೆನ್ನುವುದು ಕೇವಲ ಸಾಹಿತ್ಯಕ್ಷೇತ್ರದವರಿಗೆ ಸೀಮಿತವಾಗಿರದೆ, ಸಮಗ್ರ ಸಾರ್ವಜನಿಕರಿಗೆ ಅನ್ವಯಿಸುತ್ತಿದ್ದು, ಇವರೆಲ್ಲ ಈ ಸ್ವಾತಂತ್ರ್ಯದ ವ್ಯಾಪ್ತಿ ಮತ್ತು ಮಿತಿಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯವಿದೆ. ಸಾಹಿತ್ಯಕ್ಷೇತ್ರವನ್ನು ಗಮನಿಸಿ ಹೇಳುವುದಾದರೆ, ಇಂಥ ತಿಳಿವಳಿಕೆಯ

ಕೊರತೆಯಿಂದಾಗಿ ಸಾಹಿತಿ, ವಿಮರ್ಶಕ, ಸಹೃದಯ, ಪ್ರಕಾಶಕರಿಂದ ಸ್ವಾತಂತ್ರ್ಯ ಹೆಸರಿನಲ್ಲಿ ಕೆಲವೊಮ್ಮೆ ಸ್ವೇಚ್ಛೆ ಸ್ಫೋಟವಾಗಿ, ಸಾಮಾಜಿಕ ನ್ಯಾಯಕ್ಕೆ ಭಂಗಬರುತ್ತಲಿದೆ.

ಜಾಗತೀಕರಣ ಕಾರಣವಾಗಿ, ಸಮುದಾಯಗಳು ಇಂದು ಹೆಚ್ಚು ಚಲನಶೀಲವಾಗುತ್ತಲಿವೆ. ಯಾರಿಗೂ ಯಾರ ಅವಲಂಬನೆ ಅವಶ್ಯವಿಲ್ಲವಾಗಿ, ಪರಸ್ಪರ ಸಂಬಂಧದ 'ಸದಸ್ಯಸ್ಯಪ್ರಜ್ಞೆ' ಸಡಿಲಾಗುತ್ತ, 'ವ್ಯಕ್ತಿಪ್ರಜ್ಞೆ' ಬೆಳೆಯುತ್ತಲಿದೆ. ಇದರಿಂದಾಗಿ ವರ್ಧಿಸಬಹುದಾದ ಬೌದ್ಧಿಕ ಸ್ವಾತಂತ್ರ್ಯದ ಅಪಕಲ್ಪನೆಯನ್ನು ಹತ್ತಿಕ್ಕಿ, ಸಾಮಾಜಿಕ ನೆಮ್ಮದಿ-ಮರ್ಯಾದೆ-ಪ್ರಗತಿಗಳು ಸಾಮುದಾಯಿಕ ಹೊಣೆಯೆಂಬುದನ್ನು ಅರ್ಥಮಾಡಿಕೊಂಡು, ಎಲ್ಲರೂ ಬೌದ್ಧಿಕ ಸ್ವಾತಂತ್ರ್ಯವನ್ನು ಕೇವಲ "ಆನುಷಂಗಿಕ" ಹೇಳಿಕೆಯಾಗಿ ಅಲ್ಲ, "ಸಾಮಾಜಿಕ ಸಿದ್ಧಾಂತ"ವಾಗಿ ಬೆಳೆಸಬೇಕಾಗಿದೆ. ಅಂಥ ಬೆಳವಣಿಗೆಗೆ "ಆಳ್ವಾಸ್ ನುಡಿಸಿರಿ" ನೆಲವಾಗಲಿ-ನೆಲೆಯಾಗಲೆಂದು ಹಾರೈಸುತ್ತೇನೆ.

"ಆಳ್ವಾಸ ನುಡಿಸಿರಿ" ಸಮ್ಮೇಲನದ ಉದ್ಘಾಟನ ಭಾಷಣ (ಮೂಡಬಿದಿರೆ, ೨೦೦೫).

ಆಕರ : ಮಾರ್ಗ ಸಂಪುಟ–೬

■■

೨೨
ಕನ್ನಡ ಹಸ್ತಪ್ರತಿಗಳ ಪರಂಪರೆ ಮತ್ತು ಸಂರಕ್ಷಣೆ : ಉದ್ಘಾಟನೆ

ಇಂದಿಗೆ ನಲವತ್ತು ವರ್ಷಗಳ ಹಿಂದೆ ಅಂತರಾಷ್ಟ್ರೀಯ ಇತಿಹಾಸ ಪ್ರಾಧ್ಯಾಪಕರಾದ ಡಾ. ಎಸ್. ಶೆಟ್ಟರ ಅವರು ಅಮೇರಿಕಾಕ್ಕೆ ವ್ಯಾಸಂಗಕ್ಕಾಗಿ ಎರಡನೆಯ ಸಲ ಹೊರಟಿದ್ದರು. ನಾವು ವಿಶ್ವವಿದ್ಯಾಲಯದಲ್ಲಿ ಮಾತನಾಡುತ್ತ ಡಾ. ಶೆಟ್ಟರ ಅವರಿಗೆ, "ನೀವು ಅಮೇರಿಕಾಕ್ಕೆ ಹೊರಟಿದ್ದೀರಿ ಇದನ್ನು ಪೇಪರಿನಲ್ಲಿ ಒಂದು ಫೋಟೋ ಹಾಕಿ ಸುದ್ದಿ ಮಾಡಬೇಕಲ್ಲ" ಎಂದು ಹೇಳಿದೆವು. ಅದಕ್ಕೆ ಡಾ. ಶೆಟ್ಟರ ಅವರು "ನಾವು ರಾಜಕಾರಣಿಗಳಲ್ಲ; ನಾವು ಶಿಕ್ಷಣ ಕ್ಷೇತ್ರದ ಪ್ರಾಧ್ಯಾಪಕರು. ಆದ್ದರಿಂದ ನಾವು ಇಂಥ ಪ್ರಚಾರದ ಹುಚ್ಚ ವ್ಯಸನಕ್ಕೆ ಒಳಗಾದರೆ ಪ್ರಾಧ್ಯಾಪಕರ ಅಂತರಂಗ ಕ್ರಮೇಣ ಪೊಳ್ಳು ಆಗುತ್ತ ಹೋಗುತ್ತದೆ. ಸುಮ್ಮನೆ ನೆರೆಮನೆಯವರ ಮನೆಗೆ ಹೋಗಿ ಬಂದಂತಾಗಬೇಕು" ಎಂದರು. ಹೀಗಾಗಿ ಆ ಕಾಲದಿಂದಲೂ ನಾನು ಸಾಮಾಜಿಕ ಸಭೆ ಸಮಾರಂಭಗಳಿಗೆ, ಭಾಷಣಕ್ಕೆ ಹೋಗುವುದನ್ನು ಕಡಿಮೆ ಮಾಡಿದ್ದೇನೆ. ಈಗಂತೂ ಮತ್ತಷ್ಟು ಕಡಿಮೆ ಮಾಡಿದ್ದೇನೆ.

ಹೀಗಿದ್ದರೂ ನಾನು ಈ ಕಾರ್ಯಕ್ರಮಮಕ್ಕೆ ಬರಲು ಮುಖ್ಯ ಕಾರಣ ನನಗೆ ತುಂಬಾ ಆತ್ಮೀಯರಾಗಿರುವ ಶ್ರೀಯುತ ದಂಡಿನವರು. ಡಾ. ದಂಡಿನ ಅವರು ಈ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ರೀತಿ, ಪಟ್ಟ ಪರಿಶ್ರಮ ನನಗೆ ಗೊತ್ತಿದೆ. ಅವರು ಏಕಾಂಗವೀರರಾಗಿ ಎಷ್ಟು ಕಷ್ಟದಿಂದ ಸುಮಾರು ಐವತ್ತು ಸಂಸ್ಥೆಗಳನ್ನು ಹುಟ್ಟು ಹಾಕಿದರು ಎಂಬುದರ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ಮೇಲಾಗಿ ಅವರೇ ನಮ್ಮ ಮನೆಯವರೆಗೆ ಬಂದು ನಮ್ಮ ಸಂಸ್ಥೆಗೆ ಬರಬೇಕೆಂದು ನೀಡಿದ ಆಮಂತ್ರಣವನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ. ಅವರ ಒಂದೇ ಮಾತಿಗೆ ಒಪ್ಪಿಕೊಂಡು ಬಂದಿದ್ದೇನೆ. ನಿಜ ಸಂಗತಿ ಹೇಳಬೇಕೆಂದರೆ ಇವತ್ತು ಮೂರು ಘಂಟೆಗೆ ಮಾನ್ಯ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಸಭೆ ಇತ್ತು. ಆ ಸಭೆಗೆ ಹೋಗಬೇಕಾಗಿತ್ತು. ಆದರೆ ನಾನು ಈಗಾಗಲೇ ಗದುಗಿನ ಕಾರ್ಯಕ್ರಮಕ್ಕೆ ಒಪ್ಪಿಕೊಂಡ ಕಾರಣ ಬರಲಾಗುವುದಿಲ್ಲ ಎಂದು ಹೇಳಿದೆ. ಡಾ. ದಂಡಿನ ಅವರ ಬಗ್ಗೆ, ಅವರ ಶಿಕ್ಷಣ ಸಂಸ್ಥೆಯ ಬಗ್ಗೆ ಇರುವ ಪ್ರೀತಿ ಅಭಿಮಾನದ ಹಿನ್ನಲೆಯಲ್ಲಿ ನಾನು ಈ ಕಾರ್ಯಕ್ರಮಕ್ಕೆ ಬಂದಿದ್ದೇನೆ.

ಸುಮಾರು ಮೂವತ್ತು ವರ್ಷಗಳ ಹಿಂದೆ ನಾನು ಈ ಕಾಲೇಜಿಗೆ ಅಫಿಲೇಶನ್ ಕೊಡಲು ಬಂದಿದ್ದೆ. ಈ ಮೊದಲು ಈ ಕಾಲೇಜಿಗೆ ಮೂರು-ನಾಲ್ಕು ಸಲ ಅಫಿಲೇಶನ್ ಕಮೀಟಿ ಬಂದಿದ್ದರೂ ಅವರು ಇದಕ್ಕೆ ನೀಡಿರಲಿಲ್ಲ. ನಾನು ಬಂದೆ. ಮೂಲ ಕಟ್ಟಡ ಶೆಡ್ಡ ರೂಪದಲ್ಲಿತ್ತು. ನಾನು ವಿಚಾರ ಮಾಡಿದ್ದು ಏನಂದರೆ ಮುಂದುವರೆದ ಸಮಾಜದವರು ಶಿಕ್ಷಣ ಸಂಸ್ಥೆಯನ್ನು ಕಟ್ಟುವದು ದೊಡ್ಡದಲ್ಲ. ಹಿಂದುಳಿದ ಸಮಾಜದವರು ಈ ಕಾಲದಲ್ಲಿ ಶಿಕ್ಷಣ ಸಂಸ್ಥೆಯನ್ನು ಕಟ್ಟುವುದರಿಂದ "ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು" ಎಂಬಂತಾಗುತ್ತದೆ ಎಂದು ನಿರ್ಧರಿಸಿ, ಬಹಳಷ್ಟು ಜನರು ನನಗೆ ಈ ಸಂಸ್ಥೆಗೆ ಮಾನ್ಯತೆ ಕೊಡಬಾರದು ಎಂದು ಒತ್ತಡವನ್ನು ಹೇರಿದ್ದರೂ ಸಹ ನಾನು ಈ ಸಂಸ್ಥೆಗೆ ಅಫಿಲೇಶನ ನೀಡಿದ್ದಲ್ಲದೆ ಆಗ ಅಫಿಲೇಶನ ಫೀ ಒಂದು ಲಕ್ಷ ರೂ ಗಳಿತ್ತು. ಇದು ಹಿಂದುಳಿದ ಜನಾಂಗದ ಸಂಸ್ಥೆ ಇದಕ್ಕೆ ಐವತ್ತು ಸಾವಿರ ರೂಪಾಯಿಗಳನ್ನು ಕಡಿಮೆ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದೆ. ಆದರೆ ಐವತ್ತು ಸಾವಿರ ರೂ.ಗಳನ್ನು ಕಡಿಮೆ ಮಾಡಲಾರದೆ ಈ ಸಂಸ್ಥೆಗೆ ಅಫಿಲೇಶನ್ ನೀಡಲಾಯಿತು. ಆ ಮಾತು ಬೇರೆ ಕಳೆದ ಇಪ್ಪತ್ತೆಂಟು ಮೂವತ್ತು ವರ್ಷಗಳಲ್ಲಿ ಈ ಸಂಸ್ಥೆ ಬೆಳೆದು ಬಂದ ರೀತಿ ನನಗೆ ವಿಶೇಷ ಸಂತೋಷವನ್ನು ಉಂಟುಮಾಡಿದೆ. ಇತ್ತೀಚಿನ ದಿನಗಳಲ್ಲಿ ಈ ಸಂಸ್ಥೆಗೆ ಯು.ಜಿ.ಸಿ. ಯಿಂದ 'ಎ' ಗ್ರೇಡ್ ಮಾನ್ಯತೆ ಪಡೆದದ್ದು ತಿಳಿದು ಹೆಚ್ಚು ಸಂತೋಷವಾಗಿದೆ. ಇದಕ್ಕೆ ಪೂರಕವಾಗಿ ಈ ಮಹಾವಿದ್ಯಾಲಯದಲ್ಲಿ ಜರಗುತ್ತಿರುವ "ಕನ್ನಡ ಹಸ್ತಪ್ರತಿಗಳ ಪರಂಪರೆ ಮತ್ತು ಸಂರಕ್ಷಣೆ" ವಿಷಯವನ್ನು ಕುರಿತಾದ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಲು ಸಂತೋಷವೆನಿಸುತ್ತದೆ.

ಪ್ರಾಚೀನ ಹಸ್ತಪ್ರತಿಗಳ ಬಗ್ಗೆ ಹೇಳುವುದಾದರೆ ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿ ವಿಭಾಗಗಳು ಮುಚ್ಚುತ್ತಾ ನಡೆದು ಬಹಳಷ್ಟು ಜನರು ಈ ಕ್ಷೇತ್ರವನ್ನು ಉಪೇಕ್ಷೆಗೆ ಒಳಗು ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ ಈ ಕಾಲೇಜಿನ ಕನ್ನಡ ವಿಭಾಗದವರು ಉಪೇಕ್ಷಿತ ಕ್ಷೇತ್ರವನ್ನು ಕುರಿತಾಗಿ ವಿಚಾರ ಸಂಕಿರಣವನ್ನು ಆಯೋಜಿಸಿದ್ದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿಗಳ ಸಂಶೋಧನಾತ್ಮಕ ಅಧ್ಯಯನವು ಇಳಿಮುಖವಾಗುತ್ತಿರುವ ಸಂದರ್ಭದಲ್ಲಿ ಸಂತೋಷದ ಸಂಗತಿ ಎಂದರೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗವು ವಿಚಾರ ಸಂಕಿರಣ ಏರ್ಪಡಿಸುವುದು, ಪುಸ್ತಕ ಪ್ರಕಟಿಸುವುದು, ಲೇಖನಗಳನ್ನು ಬರೆಯುವುದನ್ನು ಮಾಡುತ್ತಿದೆ. ಇದಕ್ಕಿಂತ ಬಹು ಮುಖ್ಯವಾಗಿ ಮಾಡಬೇಕಾದ ಕೆಲಸ ಅಂದರೆ ಬೇರೆ ಬೇರೆ ಕಡೆಯಲ್ಲಿರುವ ಪಾರಂಪರಿಕ ಹಸ್ತಪ್ರತಿಗಳನ್ನು ಓದುವ ಕೆಲಸ ಅವುಗಳನ್ನು ಜನ ಸಮುದಾಯಕ್ಕೆ ತಲುಪಿಸುವ ಕೆಲಸ. ಪ್ರಾಚೀನ ಒಂದು ಹಸ್ತಪ್ರತಿ ಕಟ್ಟಿನಲ್ಲಿ ಒಂದು ಪ್ರತಿ ಇರುತ್ತದೆ. ಒಂದು ಕೃತಿ ಇರುತ್ತದೆ. ಈವರೆಗಿನ ಸಂಶೋಧನೆಯ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಮೂವತ್ತು ಸಾವಿರ ಹಸ್ತಪ್ರತಿಗಳು ಸಿಕ್ಕಿವೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ೧೦ ಸಾವಿರ ಹಸ್ತಪ್ರತಿಗಳಿವೆ. ಮೈಸೂರು ವಿಶ್ವವಿದ್ಯಾಲಯದಲ್ಲಿ ಆರು ಸಾವಿರ ಹಸ್ತಪ್ರತಿಗಳಿವೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಹತ್ತು ಸಾವಿರ, ಹಂಪಿ ವಿಶ್ವವಿದ್ಯಾಲಯದಲ್ಲಿ ಮೂರು ಸಾವಿರ, ಗುಲಬುರ್ಗಾ ವಿಶ್ವವಿದ್ಯಾಲಯದಲ್ಲಿ ಎರಡು ಸಾವಿರ ಹಸ್ತಪ್ರತಿಗಳಿದ್ದರೆ, ಧಾರ್ಮಿಕ ಸಂಸ್ಥೆಯಾದ ಧರ್ಮಸ್ಥಳದ ಸಂಶೋಧನ ಕೇಂದ್ರದಲ್ಲಿ ಎರಡು ಸಾವಿರ ಹಸ್ತ ಪ್ರತಿಗಳು ಇವೆ.

ಈ ಮೂವತ್ತು ಸಾವಿರ ಕನ್ನಡ ಹಸ್ತಪ್ರತಿಗಳು ನಮ್ಮ ನಾಡಿನ ಅಮೂಲ್ಯವಾದ ಸಾಂಸ್ಕೃತಿಕ ಸಂಪತ್ತು ಆಗಿವೆ. ಒಂದು ಹಸ್ತಪ್ರತಿಯ ಕಟ್ಟಿನಲ್ಲಿ ನಾಲ್ಕು ಕೃತಿಗಳು ಇರುತ್ತವೆ ಎಂದು ಲೆಕ್ಕ ಹಾಕಿದರೆ ಸರಾಸರಿ ಒಟ್ಟು ಮೂವತ್ತು ಸಾವಿರ ಹಸ್ತಪ್ರತಿಗಳಲ್ಲಿ ಒಂದು ಲಕ್ಷದ ಐವತ್ತು ಸಾವಿರ ಕೃತಿಗಳಿವೆ ಎಂದು ದಾಖಲಿಸಬಹುದು. ಇವತ್ತಿನ ಸಂದರ್ಭದಲ್ಲಿ ಕರ್ನಾಟಕದ ಒಳನಾಡಿನಲ್ಲಿ ಬಹುತೇಕವಾಗಿ ಹಸ್ತ ಪ್ರತಿಗಳ ಸಂಗ್ರಹಣೆ, ಪ್ರಕಟಣೆ, ಸಂಪಾದನ ಕಾರ್ಯ ಮುಗಿಯುತ್ತಾ ಬಂದಂತೆ ಕಾಣುತ್ತದೆ. ಇನ್ನು ಮುಂದೆ ವಿದ್ವಾಂಸರು ಕರ್ನಾಟಕದ ಹೊರ ನಾಡಿನಲ್ಲಿ ದೊರೆಯುವ ಕನ್ನಡ ಹಸ್ತಪ್ರತಿಗಳ ಶೋಧ ಕಾರ್ಯವನ್ನು ಕೈಗೊಳ್ಳಬೇಕಾದುದು ತುಂಬಾ ಅವಶ್ಯವಾಗಿದೆ. ಇಂದಿನ ನಮ್ಮ ಕರ್ನಾಟಕ ಸಣ್ಣದು. ಪ್ರಾಚೀನ ಕರ್ನಾಟಕ ಕಾವೇರಿಯಿಂದ ಗೋದಾವರಿಯವರಿಗೆ ವ್ಯಾಪಿಸಿಕೊಂಡ ವಿಶಾಲವಾದ ಕರ್ನಾಟಕ. ಆದ್ದರಿಂದ ನೆರೆಯ ರಾಜ್ಯಗಳಾದ ಆಂಧ್ರಪದೇಶ, ಮಹಾರಾಷ್ಟ್ರಗಳಲ್ಲಿ ಕನ್ನಡ ಹಸ್ತಪ್ರತಿಗಳ ಹುಡುಕಾಟ ನಡೆಯಬೇಕು. ಆಂಧ್ರಪ್ರದೇಶದ ಪಂಪನ ಬೋಧನ, ಅತ್ತಿಮಬ್ಬೆಯ ಪುತನೂರು, ಮಹಾರಾಷ್ಟ್ರದ ಕೊಲ್ಲಾಪೂರ ಸ್ಥಳಗಳಲ್ಲಿ ವಿದ್ವಾಂಸರಾದವರು ದೊಡ್ಡ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡಬೇಕು. ನಾನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿದ್ದಾಗ ಯು.ಜಿ.ಸಿ.ಯಿಂದ ಯೋಜನೆಯನ್ನು ಹಾಕಿಕೊಂಡು ಕಾರ್ಯ ಮಾಡುವ ತಯಾರಿಯಲ್ಲಿದ್ದಾಗ ಹಂಪಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಬಂದ ನಂತರ ಆ ಯೋಜನೆಯನ್ನು ಮರಳಿ ಯು.ಜಿ.ಸಿ.ಗೆ ಸಲ್ಲಿಸಬೇಕಾಯಿತು. ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಈಗಿನ ವಿದ್ವಾಂಸರು ಪ್ರಾಧ್ಯಾಪಕರು ಅವಶ್ಯವಾಗಿ ಮಾಡಬೇಕು. ಹಸ್ತ ಪ್ರತಿಗಳಲ್ಲಿ ಉತ್ತಮ ಕವಿಗಳ ಕೃತಿಗಳು ಸೇರಿಕೊಂಡಿರುವ ಸಾಧ್ಯತೆ, ಪ್ರಮುಖ ಕವಿಗಳ ಅನುಪಲಬ್ದ ಕೃತಿಗಳು ದೊರೆಯುವ ಸಾಧ್ಯತೆಗಳು ಇವೆ. ದಾಸ ಸಾಹಿತ್ಯ, ವಚನ ಸಾಹಿತ್ಯಕ್ಕೆ ಸಂಬಂಧಪಟ್ಟ ಹಸ್ತಪ್ರತಿಗಳನ್ನು ಸಂಗ್ರಹಿಸಿ ಎಲ್ಲ ಹಸ್ತ ಪ್ರತಿಗಳ ಸೂಚಿಯನ್ನು ಸಿದ್ಧಪಡಿಸಬೇಕು. ಇದರ ಜೊತೆಗೆ ಒಬ್ಬ ಕವಿಯ ಒಂದು ಕೃತಿಯ ಎಷ್ಟು ಹಸ್ತಪ್ರತಿಗಳು ಸಿಗುತ್ತವೆ ಎಂಬುದನ್ನು ದಾಖಲಿಸಬೇಕು. ಬಸವಪುರಾಣ, ಕುಮಾರವ್ಯಾಸ ಭಾರತ, ಶಬ್ದಮಣಿದರ್ಪಣ ಇಂಥ ಒಂದೊಂದು ಕೃತಿಯ ಎಷ್ಟು ಪ್ರತಿಗಳು ಲಭ್ಯವಾಗುತ್ತವೆ ಎಂದು ಶೋಧಿಸಿ ಅವುಗಳ ಹಸ್ತ ಪ್ರತಿಸೂಚಿಯನ್ನು ತಯಾರು ಮಾಡಬೇಕು.

ನನಗೆ ತಿಳಿದಿರುವಂತೆ ಈವರೆಗೆ ಕುಮಾರವ್ಯಾಸ ಭಾರತದ ೧೨೦ ಹಸ್ತ ಪ್ರತಿಗಳು ಸಿಗುತ್ತವೆ. ಕುಮಾರವ್ಯಾಸ ಮೂಲ ಕೃತಿಗೆ ಸಮೀಪದ ೩೦ ಪ್ರತಿಗಳು ದೊರೆಯುತ್ತವೆ. ಕುಮಾರ ವ್ಯಾಸನ ಊರಿನ ಹಾಗೂ ಗದುಗಿನ ಸುತ್ತ ಮುತ್ತ ಕುಮಾರವ್ಯಾಸ ಭಾರತದ ಹಸ್ತಪ್ರತಿಗಳ ಶೋಧವನ್ನು ಮಾಡಬೇಕು. ಗದುಗಿನ ಸುತ್ತ ಮುತ್ತ ಕವಿಯನ್ನು ಕೃತಿಯನ್ನು ಕುರಿತಾದ ಅನೇಕ ಕಥೆಗಳಿವೆ ಕುಮಾರವ್ಯಾಸನಿಗೆ ತನ್ನ ಜೀವನದ ಕೊನೆ ದಿನಗಳಲ್ಲಿ ಆರ್ಥಿಕ ತೊಂದರೆ ಉಂಟಾಗಿ ತನ್ನ ಹಸ್ತಪ್ರತಿಗಳನ್ನು ಬೇರೆಯವರಿಗೆ ನೀಡಿದನೆಂಬ ಕಥೆಗಳು ಇವೆ. ಆದರೆ ಈ ಕಥೆಗಳು ಎಷ್ಟು ಸತ್ಯ ಎಂಬ ಮಾತು ಬೇರೆ, ಬೇರೆ ಬೇರೆ ಕೃತಿಗಳನ್ನು ಶೋಧಿಸುವುದರಿಂದ ಮೂಲ ಕೃತಿಗೆ ಹತ್ತಿರವಾದ ಕೃತಿಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.

ಬೇರೆ ಬೇರೆ ಕವಿಗಳ ಬೇರೆ ಬೇರೆ ಹಸ್ತಪ್ರತಿಗಳನ್ನು ಇಟ್ಟುಕೊಂಡು ಅಭ್ಯಾಸ ಮಾಡುವದರಿಂದ ಮೂಲ ಕೃತಿಯ ಸ್ವರೂಪ ಮತ್ತು ಅದು ಪಡೆದ ಭಿನ್ನತೆಯನ್ನು ಗುರುತಿಸಲು ಸುಲಭವಾಗುತ್ತದೆ.

ಪ್ರಾಚೀನ ಕವಿಗಳಾದ ಪಂಪ, ರನ್ನ, ರಾಘವಾಂಕ, ಕುಮಾರವ್ಯಾಸರ ಹೆಚ್ಚು ಕೃತಿಗಳನ್ನು ಅಭ್ಯಾಸ ಮಾಡುವುದರಿಂದ ಶುದ್ಧ ಪಾಠ ನಿರ್ಣಯಿಸುವುದು ಸಾಧ್ಯವಾಗುತ್ತದೆ. ಆದರೆ ವಚನ ಸಾಹಿತ್ಯ ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೆಚ್ಚು ಹಸ್ತ ಪ್ರತಿಗಳನ್ನು ಬಳಸಿಕೊಳ್ಳುವುದರಿಂದ ಅಶುದ್ಧ ಪಾಠಗಳುಂಟಾಗುತ್ತದೆ. ಅಕಸ್ಮಾತ್ ಬಸವಣ್ಣ ಸಮಾಧಿಯಿಂದ ಎದ್ದು ಬಂದರೆ ಅವನ ವಚನದ ಕಟ್ಟುಗಳನ್ನು ಅವನ ಮುಂದೆ ಇಟ್ಟರೆ ಇವು ನನ್ನವು ಅಲ್ಲ, ಇವನ್ನ ಎಷ್ಟು ಕೆಡಿಸಿ ಬಿಟ್ಟಿರೆಪ್ಪಾ ಅಂತಾನ; ಹಾಂಗರ ಇವುನ ತಿದ್ದಿ ಕೊಡಪಾ ಅಂದರೆ ನಾನು ಬ್ಯಾರೆ ವಚನ ಬರದ ಕೊಡತೀನಿ ಆದ್ರ ಇವುನ್ನ ತಿದ್ದಾಕ ಆಗುದಲ್ಲ ಅಂತಾನ. ಯಾಕಂದರ ಮನಷ್ಯನ ಕೈಯ ಅಂತಾವ. ಅವ ಎಲ್ಲಿ ಕೈ ಇಡತಾನ ಅದನ ಕೆಡಿಸಿಬಿಡತಾನ.

ಹಸ್ತಪ್ರತಿಗಳ ಅಧ್ಯಯನದಲ್ಲಿ ದೇಶಿಯ ಸಾಹಿತ್ಯ ಕೃತಿಗಳ ಸಮೀಕ್ಷೆಯನ್ನು ಮಾಡಬೇಕು. ಬಸವ ಪುರಾಣ, ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ಪ್ರಭುಲಿಂಗಲೀಲೆ , ಚನ್ನಬಸವ ಪುರಾಣದಂಥ ಕೃತಿಗಳಲ್ಲಿ ಯಾವ ಯಾವ ಉಪಕೃತಿಗಳನ್ನು ಯಾವ ರಾಗ ತಾಳಗಳಲ್ಲಿ ಹಾಡುತ್ತಿದ್ದರು ಎಂಬುದನ್ನು ಹಸ್ತ ಪ್ರತಿಗಳ ಲಿಪಿಕಾರರು ಬರೆದಿದ್ದಾರೆ. ದೇಶಿಯ ಪ್ರಾಚೀನ ಹಸ್ತಪ್ರತಿಗಳಲ್ಲಿ ವೈದಿಕ, ಜೈನ, ಲಿಂಗಾಯತ ಕೃತಿಗಳು ದೊರೆಯುತ್ತವೆ. ವೈದಿಕರಲ್ಲಿ ಮಹಾಭಾರತ, ರಾಮಾಯಣ, ಜೈನರಲ್ಲಿ ಪುರಾಣಗಳು, ಲಿಂಗಾಯತರಲ್ಲಿ ವಚನ ಹಾಗೂ ಪುರಾಣದ ಹಸ್ತಪ್ರತಿಗಳು ದೊರೆಯುತ್ತವೆ. ಒಂದೊಂದು ಕೃತಿಯನ್ನು ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ರಾಗ ತಾಳಗಳಲ್ಲಿ ಹಾಡುತ್ತಿದ್ದರು. ಅವುಗಳ ಸಮೀಕ್ಷೆಯನ್ನು ಮಾಡಿ ಅಧ್ಯಯನ ಮಾಡುವುದು ಅತಿ ಅವಶ್ಯವಾದ ಕೆಲಸವಾಗಿದೆ.

ಇನ್ನೊಂದು ಮಹತ್ವದ ಕೆಲಸವೆಂದರೆ ಅಲಕ್ಷಿತ ಕ್ಷೇತ್ರಗಳಿಗೆ ಲಗ್ಗೆ ಹಾಕಿ ಅವುಗಳ ಪ್ರಾಮುಖ್ಯತೆ ಮತ್ತು ಮಹತ್ವವನ್ನು ಜನರಿಗೆ ತಿಳಿಸಿಕೊಡಬೇಕು. ಅಂತಹದರಲ್ಲಿ ನಮ್ಮ ನಾಡಿನ ಅಲಕ್ಷಿತ ಚರಿತ್ರೆ ಕಾವ್ಯಗಳ ಹಸ್ತಪ್ರತಿಗಳ ಅಧ್ಯಯನವನ್ನು ಕೈಗೊಳ್ಳವುದು ಮಹತ್ವದ ಕೆಲಸವಾಗಬೇಕು. ನಮ್ಮ ನಾಡಿನ ರಾಜರ ಮಹಾರಾಜರ ಚರಿತ್ರೆಗಳು ಅಧ್ಯಯನಕ್ಕೆ ಒಳಪಟ್ಟಿರುವಂತೆ ನಮ್ಮ ನಾಡಿನ ಪಾಳೆಗಾರರನ್ನು ಕುರಿತಾದ ಚಾರಿತ್ರಿಕ ಕಾವ್ಯಗಳು ಹಸ್ತ ಪ್ರತಿಗಳಲ್ಲಿವೆ. ಅವುಗಳ ಸಂಗ್ರಹಣೆ ಪರಿಷ್ಕರಣೆ ಪ್ರಕಟಣೆ ಆಗಬೇಕು. ಈ ಹಿಂದೆ ನಾನು 'ಸಿರುಮಣನ ನಾಯಕನ ಸಾಂಗತ್ಯ' ' ಸಿರುಮನ ಚರಿತೆ', 'ಗೊಲ್ಲಸಿರುಮನ ಚರಿತೆ' 'ಹೊಸ ಕುಮಾರ ರಾಮನ ಸಾಂಗತ್ಯ' 'ಕೊಮಾರ ರಾಮಯ್ಯನ ಚರತೆ' 'ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯ' ಇಂಥ ಪ್ರಾಚೀನ ಚಾರಿತ್ರಿಕ ಕಾವ್ಯಗಳನ್ನು ಪ್ರಕಟಿಸಿದ್ದೆ. ಇಂಥ ಹಸ್ತ ಪ್ರತಿಗಳ ಅಧ್ಯಯನ ಮಾಡಬೇಕು. ನಮ್ಮ ನಾಡಿನಲ್ಲಿ ಅನೇಕ ಉಪಸಂಸ್ಕೃತಿಗಳಿವೆ. ಮುಖ್ಯ ಸಂಸ್ಕೃತಿಗಳಾದ ವೈದಿಕ, ಜೈನ, ಲಿಂಗಾಯತ ಸಂಸ್ಕೃತಿಗಳ ಬಗ್ಗೆ ಈಗಾಗಲೇ ಬಹಳಷ್ಟು ಅಧ್ಯಯನ ಆಗಿದೆ. ಇವುಗಳಂತೆ ಉಪ ಸಂಸ್ಕೃತಿಗಳಾದ ಬೇಡರು, ಕುರುಬರು, ತಳವಾರರು ಹಾಗೂ ಅಂಬಿಗರು ಇಂಥ ಉಪಸಂಸ್ಕೃತಿಗಳನ್ನು ಕುರಿತಾದ ಹಸ್ತಪ್ರತಿಗಳ ಅಧ್ಯಯನವನ್ನು ಮಾಡಬೇಕು. ಕೆಲವು ವರ್ಷಗಳ ಹಿಂದೆ ನಾನು ಜಗದ್ಗುರು ತೋಂಟದಾರ್ಯ ಮಠದಿಂದ ೨೦೦೪ ರಲ್ಲಿ "ಸಿದ್ಧಮಂಕ ಚರಿತೆ" ಹಾಗೂ ವಿದ್ಯಾನಿಧಿ ಪ್ರಕಾಶನದಿಂದ "ತಗರ ಪವಾಡ" ಕೃತಿಗಳನ್ನು ಪ್ರಕಟಿಸಿದ ನಂತರ ಅಲಕ್ಷಿತ ಸಮಾಜವಾದ ಕುರುಬ ಉಪ ಸಂಸ್ಕೃತಿಗಳಲ್ಲಿ "ಶಾಂತ ಒಡೆಯರು" "ಮಂಕ

ಒಡೆಯರು" ಎಂಬೆರಡು ಸಂಸ್ಕೃತಿಗಳು ಇರುವುದು ಬೆಳಕಿಗೆ ಬಂದು ಕುರುಬ ಸಮಾಜ ಜಾಗೃತವಾಯಿತು. ರೇವಣಸಿದ್ಧನದು ಶಾಂತ ಒಡೆಯರ ಸಂಪ್ರದಾಯ, ಸಿದ್ಧರಾಮನದು ಮಂಕ ಒಡೆಯರ ಸಂಪ್ರದಾಯ ಎಂದು ತಿಳಿದು ಬಂದು, ೨೦೦೬ರಲ್ಲಿ ಡಾ. ಎಫ್. ಟಿ. ಹಳ್ಳಿಕೇರಿಯವರ ಕೈಯೊಳಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ "ಹಾಲಮತ ಅಧ್ಯಯನ ಕೇಂದ್ರ" ಪ್ರಾರಂಭವಾಗಿ ಹೊಸ ಅಧ್ಯಯನಗಳಿಗೆ ಅವಕಾಶ ಒದಗಿತು. ಶ್ರೀಮತಿ ಅನ್ನಪೂರ್ಣ ಗೊಸ್ಬಾಳ ಎಂಬವರು "ಹಾಲುಮತ ಅಧ್ಯಯನದ ಆಕರ"ಗಳನ್ನು ಕುರಿತು ದೊಡ್ಡ ಅಭ್ಯಾಸ ಮಾಡಿದರು. ಅದರಂತೆ ಶ್ರೀ ಪಾಟೀಲ ಎಂಬವರು ಶಾಂತಮುತ್ತಯ್ಯನನ್ನು ಕುರಿತು ಸಂಶೋಧನೆ ಮಾಡಿದ ಪರಿಣಾಮವಾಗಿ ಎರಡು ಸಂಪ್ರದಾಯಗಳ ಸಂಗತಿಗಳು ಬೆಳಕಿಗೆ ಬಂದು ಕುರುಬರದು ಕಾಗಿನೆಲೆ ಸಂಸ್ಕೃತಿಯಲ್ಲ, ಸರೂರು ಸಂಸ್ಕೃತಿ ಎಂದು ಅರ್ಥವಾಗಿ ಕಾಗಿನೆಲೆಯಿಂದ ಸರೂರ ಕಡೆ ಮುಖ ಮಾಡಿದರು.

ಇದರಂತೆ ಕೊಡೆಕಲ್ಲ ಬಸವಣ್ಣನನ್ನು ಕುರಿತಾಗಿ ಅಧ್ಯಯನ ಪ್ರಾರಂಭವಾದ ಮೇಲೆ ಡಾ. ಕೆ. ರವೀಂದ್ರನಾಥ ಅವರು ಅಧ್ಯಯನ ಕೈಗೊಂಡ ನಂತರ ಕರ್ನಾಟದಲ್ಲಿ ಕಟ್ಟುತ್ತ ಬಂದ ಕಲ್ಯಾಣಗಳ ಬಗ್ಗೆ ಮಹತ್ವದ ಸಂಗತಿಗಳು ಬೆಳಕಿಗೆ ಬಂದವು. ಇನ್ನು ಮುಂದೆ "ಸಾಲೂಟಗಿ" "ತೆರದಾಳ" ಕ್ಷೇತ್ರಗಳ ಅಧ್ಯಯನವನ್ನು ಕೈಗೆತ್ತಿಕೊಳ್ಳಬೇಕಾದ್ದು ಅವಶ್ಯವಿದೆ.

ಸಾಹಿತ್ಯದಲ್ಲಿ ಶಿಷ್ಟ ಸಾಹಿತ್ಯ ಅರೆ ಶಿಷ್ಟಸಾಹಿತ್ಯ, ಪರಿಶಿಷ್ಟ ಸಾಹಿತ್ಯ ಎಂದು ಪ್ರಕಾರಗಳು. ಹಳೆಗನ್ನಡ ಶಿಷ್ಟ ಸಾಹಿತ್ಯ, ನಡುಗನ್ನಡ ಅರೆಶಿಷ್ಟ ಸಾಹಿತ್ಯ, ಜನಪದ ಪರಿಶಿಷ್ಟ ಸಾಹಿತ್ಯ. ಹಳೆಗನ್ನಡದಲ್ಲಿ ಹೆಚ್ಚು ಹಸ್ತಪ್ರತಿಗಳನ್ನು ರೂಢಿಸಿದರೆ ಶುದ್ಧ ಪಾಠ ದೊರೆಯುತ್ತದೆ. ನಡುಗನ್ನಡದಲ್ಲಿರುವ ವಚನ ಸಾಹಿತ್ಯಕ್ಕೆ ಹೆಚ್ಚು ಹಸ್ತಪ್ರತಿಗಳನ್ನು ಬಳಸುವುದರಿಂದ ಅಶುದ್ಧವಾಗುತ್ತದೆ. ಹಸ್ತ ಪ್ರತಿಗಳಲ್ಲಿಯ ಪಾಠ ಪರಿಷ್ಕರಣೆಯಲ್ಲಿ ತುಂಬಾ ಎಚ್ಚರದಿಂದ ಕಾರ್ಯ ಮಾಡಬೇಕು. ಸದಾಕಾಲ ಅದರ ಬಗ್ಗೆ ಚಿಂತನೆ ಮಾಡಬೇಕು. ಬಸವಣ್ಣನವರ ವಚನವೊಂದನ್ನು ನಾನು ನೋಡುತ್ತಿರುವಾಗ "ಏನು ಬಂದಿರಿ ಹದುಳ ಇದ್ದಿರಿ ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ" ಎಂಬ ಸಾಲು. ಫ.ಗು. ಹಳಕಟ್ಟಿ , ಆರ್.ಸಿ. ಹಿರೇಮಠ, ಶಿ.ಶಿ. ಬಸವನಾಳ, ಎಲ್. ಬಸವರಾಜು ಅವರ ಸಂಪಾದನೆಗಳಲ್ಲಿ " ನಿಮ್ಮ ಮೈಸಿರಿ ಹಾರಿ ಹೋಹುದೆ" ಎಂದು ಉಳಿದುಕೊಂಡು ಬಂದಿತ್ತು. ನಾನು ವಚನ ಸಂಪುಟಗಳ ಸಂಪಾದನೆಗೆ ಮುಂದಾದಾಗ ಈ ವಚನದಲ್ಲಿಯ "ಮೈ ಸಿರಿ" ಎಂಬ ಪದ ಗಮನಕ್ಕೆ ಬಂದು ಅದಕ್ಕೆ ಸರಿಯಾದ ಪಾಠದ ಶೋಧಕ್ಕೆ ತೊಡಗಿದಾಗ ಅದು "ಮೈಸಿರಿ" ಅಲ್ಲ "ಐಸಿರಿ" ಎಂಬ ಶುದ್ಧ ಪಾಠವನ್ನು ಶೋಧಿಸಿ ವಚನದ ನಿಜವಾದ ಅರ್ಥ ಕಂಡುಕೊಳ್ಳಲು ಸಾಧ್ಯವಾಯಿತು.

ನಮ್ಮ ನಾಡಿನಲ್ಲಿರುವ "ಕಲ್ಲಚ್ಚಿನ ಪ್ರತಿಗಳ" ಅಧ್ಯಯನ ಕೈಗೊಳ್ಳುವದು ಅವಶ್ಯವಿರುವಂತೆ ಪ್ರಾಚೀನ ಕೃತಿಗಳ ಬಗ್ಗೆ ಬಂದಿರುವ ಪ್ರಸ್ತಾವನೆಗಳನ್ನು ಕುರಿತು ಅಧ್ಯಯನ ನಡೆಯಬೇಕು. ಇದರೊಂದಿಗೆ ನಮ್ಮ ಸ್ಥಳೀಯರ ಬಗ್ಗೆ ಅವರ ಸಂಸ್ಕೃತಿಗಳ ಬಗ್ಗೆ ಹಸ್ತಪ್ರತಿಗಳಲ್ಲಿರುವ ವಿಶೇಷಗಳನ್ನು ಹೊರ ಹಾಕುವ ಕೆಲಸ ಯುವ ಸಂಶೋಧಕರಿಂದ ಆಗಬೇಕಾಗಿದೆ. ಸ್ಥಳೀಯ ಮನೆತನಗಳಾದ ದೇಸಾಯಿಗಳವರ ಮನೆಯಲ್ಲಿಯ ಹಾಗೂ ಮಠಗಳಲ್ಲಿರುವ ಕಾಗದದಲ್ಲಿರುವ

ದಾಖಲೆಗಳ ಅಧ್ಯಯನವು ಅಷ್ಟೇ ಮಹತ್ವದ್ದು. ಗದುಗಿನ ತೋಂಟದಾರ್ಯಮಠದ ದಾಖಲೆಗಳನ್ನು ಕುರಿತು ಅಧ್ಯಯನ ಕೈಗೊಂಡಾಗ ಗದುಗಿನ ತೋಂಟದಾರ್ಯಮಠದ ಪೀಠಾಧಿಕಾರಿಗಳು ಎಡೆಯೂರು ಸಿದ್ಧಲಿಂಗೇಶ್ವರ ಮಠದ ವಾರಸುದಾರರು ಎಂಬ ವಿಷಯ ತಿಳಿದು ಬಂದಿತು. ದಾಖಲೆಗಳಲ್ಲಿರುವ ವಿಷಯವನ್ನು ಶೋಧಿಸಿ ನಿಜವಾದ ಇತಿಹಾಸವನ್ನು ಕಟ್ಟಿಕೊಡುವ ಕೆಲಸವನ್ನು ಮಾಡಬೇಕು. ಆದರೆ ಕಾಗದಗಳಲ್ಲಿರುವ ದಾಖಲೆಗಳ ಅಕ್ಷರಗಳು ಬಹಳ ಕೆಟ್ಟದಾಗಿರುತ್ತವೆ. ಪರಿಶ್ರಮ ವಹಿಸಿ ಪರಿಷ್ಕರಣೆ ಮಾಡಿ ಪ್ರಕಟಿಸಬೇಕು. ಎಂದು ಹೇಳುತ್ತಾ ಪ್ರಾಚೀನ ಹಸ್ತ ಪ್ರತಿಗಳನ್ನು ಕುರಿತಾದ ವಿಚಾರ ಸಂಕಿರಣಕ್ಕೆ ಆಮಂತ್ರಿಸಿದ್ದಕ್ಕಾಗಿ ಎಲ್ಲರಿಗೂ ವಂದಿಸಿ ನನ್ನ ಮಾತುಗಳಿಗೆ ವಿರಾಮ ಹೇಳುತ್ತೇನೆ.

---

* ಗದುಗಿನ ಕೆ.ಇ. ಎಸ್. ಕಾಲೇಜಿನಲ್ಲಿ ಏರ್ಪಡಿಸಿದ್ದ ವಿಚಾರಸಂಕಿರಣ ಉದ್ಘಾಟಿಸಿ ಮಾಡಿದ ಭಾಷಣ

ಆಕರ : ಮಾರ್ಗ ಸಂಪುಟ–೮

■■

೨೩
ಸಾಣೇಹಳ್ಳಿ ನಾಟಕೋತ್ಸವ : ಉದ್ಘಾಟನೆ

ಯುಗಪುರುಷ, ಪರಮಪೂಜ್ಯ, ಲಿಂ. ಶಿವಕುಮಾರ ಮಹಾಸ್ವಾಮಿಗಳನ್ನು ಭಕ್ತಿಪೂರ್ವಕವಾಗಿ ಸ್ಮರಿಸಿ, ಈ ಸಮಾರಂಭದ ದಿವ್ಯ ಸನ್ನಿಧಾನವನ್ನು ವಹಿಸಿದ ಪೂಜ್ಯ ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳಲ್ಲಿ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸಿ, ಪೂಜ್ಯರಾದ ಶ್ರೀ ಪಂಡಿತಾರಾಧ್ಯ ಮಹಾಸ್ವಾಮಿಗಳಲ್ಲಿ ಭಕ್ತಿಪೂರ್ವಕ ವಂದನೆಗಳನ್ನು ಸಲ್ಲಿಸಿ, ವೇದಿಕೆ ಮೇಲೆ ಆಸೀನರಾಗಿರುವ ಗಣ್ಯಮಾನ್ಯರೇ, ಮಹನೀಯರೆ ಮತ್ತು ಮಹಿಳೆಯರೇ ಎಲ್ಲರಿಗೂ ನಮಸ್ಕಾರ.

ಸಾಣೇಹಳ್ಳಿ ಶ್ರೀಗಳು ಪ್ರತಿವರ್ಷ ಜರುಗಿಸುತ್ತಿರುವ ಈ ನಾಟಕೋತ್ಸವಕ್ಕೆ ನಾನು ಅತಿಥಿಯಾಗಿ ಬರಬೇಕೆಂದು ಈ ಮೊದಲು ಒಂದೆರಡು ಸಲ ಆಮಂತ್ರಣ ನೀಡಿದ್ದರು. ಕಾರ್ಯಬಾಹುಳ್ಯದಿಂದ ಸಾಧ್ಯವಾಗಿರಲಿಲ್ಲ. ಈ ಸಾರಿ ನಾನು ತುಂಬಾ ಪ್ರೀತಿಯಿಂದ ಈ ಸಮಾರಂಭದಲ್ಲಿ ಭಾಗವಹಿಸಿದ್ದೇನೆ. ಸಾಣೇಹಳ್ಳಿ ನಮ್ಮ ರಾಜ್ಯದ ಯಾವುದೋ ಒಂದು ಮೂಲೆಯಲ್ಲಿರುವಂತಹ ಸಣ್ಣ ಹಳ್ಳಿ. ಆದರೆ ಕಳೆದ ಕೆಲವು ವರ್ಷಗಳಲ್ಲಿ ಈ ಹಳ್ಳಿ ರಾಜ್ಯ ಪ್ರಸಿದ್ಧಿಯನ್ನು ಪಡೆದಿದ್ದು ನಮಗೆಲ್ಲ ತುಂಬಾ ಸಂತೋಷವನ್ನುಂಟು ಮಾಡಿದೆ. ಹಿಂದೆ ಹೇಗೆ ಮಧುರಚೆನ್ನರಿಂದಾಗಿ ಹಲಸಂಗಿಗೆ ರಾಜ್ಯ ಮಟ್ಟದ ಪ್ರಸಿದ್ಧಿ ಪ್ರಾಪ್ತವಾಯಿತೊ. ಅದೇ ರೀತಿ ಈಗ ಪೂಜ್ಯ ಶ್ರೀ ಪಂಡಿತಾರಾಧ್ಯ ಮಹಾಸ್ವಾಮಿಗಳಿಂದಾಗಿ ಈ ಹಳ್ಳಿಗೆ ರಾಜ್ಯಮಟ್ಟದ ಸಾಂಸ್ಕೃತಿಕ ಕೀರ್ತಿ ಪ್ರಾಪ್ತವಾಗಿದೆ. ಈ ಹಳ್ಳಿಯನ್ನು ನಾನು ಈ ಮೊದಲು ಒಂದೆರಡು ಸಲ ಬಹಳ ಸೂಕ್ಷ್ಮವಾಗಿ ಗಮನಿಸಿದ್ದೇನೆ. ನನ್ನ ದೃಷ್ಟಿಯಲ್ಲಿ ಇದು ಒಂದು ಪೂರ್ಣಗ್ರಾಮ. ಪೂರ್ಣಗ್ರಾಮ ಎಂದರೆ ಅಲ್ಲಿ ಸುಖ, ಸಂತೋಷ ಮತ್ತು ಆನಂದ ಈ ಮೂರು ಸಂಗಮಿಸಬೇಕಾಗುತ್ತದೆ. ಅಂತಹ ಒಂದು ಸಂಗಮ ಈ ಗ್ರಾಮದಲ್ಲಿ ನಾನು ಕಂಡಿದ್ದೇನೆ. ಭೌತಿಕವಾಗಿ ಸುಖ, ಏಕೆಂದರೆ ಈ ಊರಿನ ಕೃಷಿ ಮೊದಲಾದ ಈ ಬೆಳವಣಿಗೆ ನೋಡಿದರೆ ಇದು ಒಂದು ಭೌತಿಕವಾಗಿ ಸುಖಿಗ್ರಾಮ ಎಂಬುದು ಸ್ಪಷ್ಟವಾಗುತ್ತದೆ. ಪೂಜ್ಯರವರ ಸನ್ನಿಧಾನದಿಂದಾಗಿ ಇದಕ್ಕೆ ಒಂದು ಆಧ್ಯಾತ್ಮಿಕವಾದ ಆನಂದ, ದಿವ್ಯಾನಂದ ಪ್ರಾಪ್ತವಾಗಿದೆ.

ಇದರ ಮಧ್ಯದೊಳಗೆ ಪೂಜ್ಯರು ಹಮ್ಮಿಕೊಂಡಿರುವ ನಾಟಕೋತ್ಸವ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಿಂದಾಗಿ ಈ ಊರಿಗೆ ಇನ್ನೊಂದು ಬಗೆಯ ಆನಂದ ಪ್ರಾಪ್ತವಾದ ಕಾರಣವಾಗಿ ಇದನ್ನು ನಾನು ಪೂರ್ಣಗ್ರಾಮ ಎಂದು ಕರೆಯುತ್ತಿದ್ದೇನೆ. ಇದಕ್ಕೆ ಕಾರಣ ಪೂಜ್ಯ ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಪಂಡಿತಾರಾಧ್ಯ ಮಹಾಸ್ವಾಮಿಗಳು.

ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಅವರು ವಿದ್ವಾಂಸ ಜಗದ್ಗುರುಗಳು. ಬಹುಶಃ ಇವತ್ತು ಕರ್ನಾಟಕದ ಯಾವುದೇ ಜಗದ್ಗುರು ಬಸವ ಸಂದೇಶವನ್ನು ಜಾಗತಿಕ ಮಟ್ಟದಲ್ಲಿ ಮುಟ್ಟಿಸುವಲ್ಲಿ ಸಮರ್ಥರಾಗಿದ್ದ ಏಕೈಕ ಸ್ವಾಮಿಗಳು ಎಂದರೆ ಶಿವಮೂರ್ತಿ ಮಹಾಸ್ವಾಮಿಗಳು. ಅವರು ಬಸವಣ್ಣನವರ ರಾಯಭಾರಿಯಾಗಿ ಜಗತ್ತಿನ ಯಾವುದೇ ಮೂಲೆಗೆ ಅವನ ಸಂದೇಶವನ್ನು ಮುಟ್ಟಿಸುವ ಸಮರ್ಥ ಜಗದ್ಗುರು ಅವರು. ಪೂಜ್ಯ ಪಂಡಿತಾರಾಧ್ಯ ಮಹಾಸ್ವಾಮಿಗಳು ನನಗಂತು ಅವರನ್ನು ನೋಡಿದಾಗ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಇನ್ನೊಂದು ಪ್ರತಿರೂಪ ಎನಿಸುತ್ತಿದೆ. ಏಕೆಂದರೆ ಅವರ ಕರ್ತೃತ್ವ ಶಕ್ತಿ ಮತ್ತು ಅವರು ಇಲ್ಲಿ ಮಾಡಿದಂತಹ ಕಾರ್ಯಗಳನ್ನು ನೋಡಿಕೊಂಡಾಗ ಪೂಜ್ಯ ಶಿವಕುಮಾರ ಮಹಾಸ್ವಾಮಿಗಳಲ್ಲಿಯ ಕರ್ತೃತ್ವ ಶಕ್ತಿಯ ಇನ್ನೊಂದು ರೂಪವನ್ನು ನಾನು ಇವರಲ್ಲಿ ಕಾಣುತ್ತಿದ್ದೇನೆ. ಅಂತಹ ಸ್ವಾಮಿಗಳ ಸನ್ನಿಧಾನದಿಂದಾಗಿ ಈ ಗ್ರಾಮಕ್ಕೆ ಒಂದು ದೊಡ್ಡ ಕೀರ್ತಿ ಪ್ರಾಪ್ತವಾಗಿದೆ ಎಂದು ಹೇಳಬೇಕು.

ಪ್ರತಿವರ್ಷ ಅವರು ನಾಟಕೋತ್ಸವವನ್ನು ಆಚರಿಸುವ ಮೂಲಕ, ಇಲ್ಲಿ ವಿಚಾರ ಸಂಕಿರಣ ನಡೆಸುವ ಮೂಲಕ, ಅನೇಕ ಪುಸ್ತಕಗಳನ್ನು ಪ್ರಕಟಿಸುವ ಮೂಲಕ, ರಾಜ್ಯದ ಬೇರೆ ಬೇರೆ ಭಾಗಗಳಿಂದ ವಿದ್ವಾಂಸರನ್ನು ಬರಮಾಡಿಕೊಳ್ಳುವ ಮೂಲಕ ಬಹುಶಃ ನೋಡಿ ಇಂತಹ ಸಣ್ಣ ಹಳ್ಳಿಗೆ ರಾಜ್ಯದ ಎಲ್ಲ ವಿದ್ವಾಂಸರು ಬಂದು ಹೋಗಿದ್ದಾರೆ. ಇದೊಂದು ಸಣ್ಣ ವಿಷಯವಲ್ಲ. ಪೂಜ್ಯರ ಒಂದು ಕರ್ತೃತ್ವ ಶಕ್ತಿ ಮತ್ತು ಅವರಿಗೆ ಈ ಹಳ್ಳಿಯ ಬಗ್ಗೆ, ಜನರ ಬಗ್ಗೆ, ಪರಿಸರದ ಬಗ್ಗೆ ಇರುವ ಕಾಳಜಿ ಕಾರಣವಾಗಿ ಇದೆಲ್ಲ ಸಾಧ್ಯವಾಗಿದೆ ಎಂದು ನಾನು ಭಾವಿಸುತ್ತಿದ್ದೇನೆ.

ಶ್ರೀಮಠ ಇಲ್ಲಿಯವರೆಗೆ ಇಲ್ಲಿ ಮಾಡುತ್ತ ಬಂದಿರುವ ಕಾರ್ಯಗಳನ್ನು ಗಮನಿಸುತ್ತಿದ್ದರೆ ಒಂದು ಮಾತು ಹೇಳಬೇಕೆನಿಸುತ್ತದೆ. ಮಠದಲ್ಲಿ ಎರಡು ಪ್ರಕಾರ, ಒಂದು ಸೋಹಂ ಸಂಸ್ಕೃತಿಯ ಮಠ ಮತ್ತೊಂದು ದಾಸೋಹಂ ಸಂಸ್ಕೃತಿಯ ಮಠ. ಸೋಹಂ ಸಂಸ್ಕೃತಿಯ ಮಠ ಮನುಷ್ಯ ದೇವರಾಗಬೇಕೆಂದೆನ್ನುವುದು, ದಾಸೋಹಂ ಸಂಸ್ಕೃತಿಯ ಮಠ ಮನುಷ್ಯ ದೇವರಾಗಬೇಕು ಆಮೇಲೆ ಆತ ಸಾಮಾಜಿಕನಾಗಬೇಕೆನ್ನುವುದು. ಇಲ್ಲಿಯವರೆಗೆ ಭಾರತದ ಇತಿಹಾಸವನ್ನು ನೋಡಿಕೊಂಡರೆ ವೈದಿಕ ಪರಂಪರೆಯಲ್ಲಿ ಸೋಹಂ ಸಂಸ್ಕೃತಿಯ ಮಠಗಳೆ ಬೆಳೆದು ಬರುತ್ತಿದ್ದವು. ಬಸವಣ್ಣನವರು ಕಾರಣವಾಗಿ ಸೋಹಂ ಸಂಸ್ಕೃತಿಯೊಂದಿಗೆ ದಾಸೋಹಂ ಸಂಸ್ಕೃತಿ ಬಹಳ ಮುಖ್ಯವಾಗಿದೆ. ಯಾಕೆಂದರೆ ಮನುಷ್ಯ ಕೇವಲ ದೇವರಾಗುವುದು ಮುಖ್ಯವಲ್ಲ. ಮನುಷ್ಯ ದೇವರಾದರೆ ಅದು ಅಪೂರ್ಣತೆ ಅಂತಾರೆ ಬಸವಣ್ಣನವರು. ಆತ ಪೂರ್ಣವಾಗಬೇಕಾದರೆ ಆತ ದೇವರಾಗಬೇಕು ಆ ದೈವಿ ವ್ಯಕ್ತಿತ್ವವನ್ನು ಸಾಮಾಜೀಕರಣಗೊಳಿಸಬೇಕು ಎನ್ನುತ್ತಾರೆ. ಇದನ್ನು ಅರ್ಥಮಾಡಿಕೊಂಡಂತಹ ಈ ಲಿಂಗಾಯತ ಮಠಗಳು ಅವು ದಾಸೋಹ ಸಂಸ್ಕೃತಿಯನ್ನು ಅಸ್ತಿತ್ವಕ್ಕೆ ತಂದವು. ಈ ದಾಸೋಹಂ ಸಂಸ್ಕೃತಿಯ ಒಂದ ಭಾಗವಾಗಿ ಇವೆಲ್ಲ ಕಾರ್ಯಕ್ರಮಗಳು ನಡೆಯುತ್ತಿವೆ. ಕೇವಲ ಅಡವಿಯೊಳಗೆ ಆಶ್ರಮ ಕಟ್ಟಿಕೊಂಡ ಋಷಿಗಳಲ್ಲ ನಮ್ಮ ಸ್ವಾಮಿಗಳು. ಅವರು ಊರೊಳಗೆ ಮಠ ಕಟ್ಟಿಕೊಂಡು ಸಮಾಜವನ್ನು ಪರಿವರ್ತನೆ ಮಾಡಬೇಕು, ಸಮಾಜವನ್ನು ಉದ್ಧಾರ ಮಾಡಬೇಕು, ಸಮಾಜದ ಕಲ್ಯಾಣದ ಕಡೆ ಗಮನಕೊಡಬೇಕು ಎಂಬ ಉದ್ದೇಶದಿಂದ ಪ್ರೇರಿತರಾದವರು. ಇಂತಹ ಕಾರ್ಯಕ್ರಮಗಳನ್ನು, ಇಲ್ಲಿ ಸ್ಥಾಪಿಸಿದ ಶಾಲೆ-ಕಾಲೇಜುಗಳನ್ನು ಇವನ್ನೆಲ್ಲ ನೋಡಿದರೆ ಮತ್ತು ಇಂತಹ ನಾಟಕೋತ್ಸವದಂತಹ ಕಲೆಗಳಿಗೆ ಉತ್ತೇಜನ ಕೊಡುವ ಚಟುವಟಿಕೆಗಳನ್ನು ನೋಡಿದರೆ

ಇದು ನಮ್ಮ ಸಂಸ್ಕೃತಿಯ ಒಂದು ಭಾಗ ಎಂಬುದು ಗೊತ್ತಾಗುತ್ತದೆ. ದಾಸೋಹ ಸಂಸ್ಕೃತಿಯ ಒಂದು ಭಾಗ. ಅದನ್ನು ಪೂಜ್ಯರು ಇಲ್ಲಿ ಪೋರೈಸಿದ್ದಾರೆ ಎನಿಸುತ್ತದೆ. ಅಂದರೆ ಕೇವಲ ದೇವರಾಗುವುದು ಮುಖ್ಯವಲ್ಲ. ಒಂದು ಕೈಯೊಳಗೆ ಲಿಂಗ ಇನ್ನೊಂದು ಕೈಯೊಳಗೆ ಜಂಗಮ ಎನ್ನುತ್ತಾರೆ ಬಸವಣ್ಣನವರುಃ ಅಂದರೆ ಲಿಂಗ ಪೂಜೆಯೂ ಬೇಕು, ಅದರ ಜೊತೆಗೆ ಜಂಗಮ ದಾಸೋಹ ಬೇಕಂತೆ, ಆ ಜಂಗಮ ದಾಸೋಹದ ಭಾಗವಾಗಿ ಈ ಕಲೆ, ಶಿಕ್ಷಣ, ಸಾಹಿತ್ಯ ಮೊದಲಾದವುಗಳನ್ನೆಲ್ಲ ಜನಮನದಲ್ಲಿ ಬಿತ್ತಿ ಅದರ ಬಗ್ಗೆ ಒಂದು ಪರಿವರ್ತನೆಯುಂಟು ಮಾಡಬೇಕು, ಒಂದು ಜಾಗೃತಿ ಉಂಟುಮಾಡಬೇಕೆನ್ನುವ ದೃಷ್ಟಿಯಿಂದ ಪೂಜ್ಯರು ಇಂತಹ ಕಲ್ಯಾಣವನ್ನು ಕಟ್ಟುವ ಕೆಲಸ ಮಾಡಿದ್ದಾರೆ. ಇದು ಒಂದು ಕಲ್ಯಾಣ ಕಟ್ಟುವ ಕೆಲಸ. ೧೨ನೇ ಶತಮಾನದಲ್ಲಿ ಬಸವಣ್ಣ ಹೇಗೆ ಕಲ್ಯಾಣವನ್ನು ಕಟ್ಟುತ್ತಾರೆಯೊ ಹಾಗೆ ಮುಂದುರೆಯುತ್ತದೆ. ಆ ಕಲ್ಯಾಣ ಕಟ್ಟುವ ಕೆಲಸ ಮುಗಿಯುವುದಿಲ್ಲ. ಅದನ್ನು ಬೇರೆ ಬೇರೆ ರೂಪದಲ್ಲಿ ಮುಂದುವರಿಸಬೇಕಾಗುತ್ತದೆ. ಅಂತಹ ಒಂದು ಕೆಲಸ ಸಾಣೇಹಳ್ಳಿಯಲ್ಲಿ ನಡೆದಿದೆ ಎಂದು ನನಗೆ ಅನಿಸುತ್ತದೆ.

ಶರಣ ಸಂಸ್ಕೃತಿಯನ್ನು ಪ್ರಚಾರ ಮಾಡುವ ಸಲುವಾಗಿ ಕಾಲ ಕಾಲಕ್ಕೆ ಬೇರೆ ಬೇರೆ ಮಾಧ್ಯಮಗಳನ್ನು ಅನುಸರಿಸುತ್ತಾ ಬಂದಿದ್ದಾರೆ, ಈ ಮೊದಲು ವಚನ ಸಾಹಿತ್ಯದ ಮೂಲಕ, ಪುರಾಣಗಳ ಮೂಲಕ ಶರಣ ಸಂಸ್ಕೃತಿಯನ್ನು ಪ್ರಚಾರ ಮಾಡುತ್ತಾ ನಮ್ಮ ಹಿರಿಯರು ಬಂದಿದ್ದಾರೆ. ಆದರೆ ಇಂದು ಆಧುನಿಕ ಮಾಧ್ಯಮಗಳಾದ ಕಥೆ, ಕಾದಂಬರಿ, ನಾಟಕ ಮತ್ತು ಸಿನಿಮಾ ಈ ಮೊದಲಾದ ಮಾಧ್ಯಮಗಳ ಮೂಲಕ ನಮ್ಮ ಸಂಸ್ಕೃತಿಯನ್ನು ಪ್ರಚಾರ ಮಾಡಬೇಕಾಗುತ್ತದೆ. ಆ ಉದ್ದೇಶದಿಂದ ಪೂಜ್ಯರು ಇಂತಹ ಶಿವಸಂಚಾರ ಎನ್ನುವ ಒಂದು ಹೊಸ ಪರಿಕಲ್ಪನೆಯನ್ನು ಕಂಡುಹಿಡಿದು ಅದರ ಮೂಲಕ ಶರಣ ಸಂಸ್ಕೃತಿಯನ್ನು ಪ್ರಚಾರ ಮಾಡುತ್ತಾ ಬಂದಿದ್ದಾರೆ. ಅದು ಕಳೆದ ಅನೇಕ ವರ್ಷಗಳಿಂದ ಯಶಸ್ವಿಯಾಗಿ ಮುಂದುವರೆದದ್ದು ನಿಮಗೆಲ್ಲ ಗೊತ್ತಿದೆ. ಇದರಿಂದ ಜನರ ತಿಳುವಳಿಕೆಯನ್ನು ಬೆಳೆಸುವ, ಜನರ ಅಭಿರುಚಿಯನ್ನು ತಿದ್ದುವ, ಅವರಲ್ಲಿ ಸದಭಿರುಚಿಯನ್ನು ಸೃಷ್ಟಿ ಮಾಡುವ ಕೆಲಸವನ್ನು ಪೂಜ್ಯರು ಮಾಡಿದ್ದು ಇದು ದೊಡ್ಡ ಕೆಲಸ ಎನಿಸುತ್ತದೆ.

ನಾಟಕದ ರಚನೆ, ತರಬೇತಿ, ಪ್ರದರ್ಶನ, ತಿರುಗಾಟ ಬಹಳ ದೊಡ್ಡ ಕೆಲಸಗಳು. ಇವನ್ನೆಲ್ಲ ಅವರು ಪೋರೈಸಿದ್ದು ಬಹಳ ಮುಖ್ಯವಾದ ಒಂದು ಸಾಧನೆ ಎಂದು ನಾನು ಭಾವಿಸುತ್ತೇನೆ. ನಾಟಕ ಎಂದರೆ ಬಹಳ ನೇರವಾದಂತಹ ಕಲಾ ಮಾಧ್ಯಮ. ಸಾಹಿತ್ಯ ಇದು ಕೇವಲ ಶಬ್ದದ ಮೂಲಕ ಕವಿ ಕಟ್ಟುತ್ತಾನೆ. ಅದನ್ನು ವಾಸ್ತವಕ್ಕೆ ಪಲ್ಲಟ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಇಲ್ಲಿ ಸ್ವತಃ ವ್ಯಕ್ತಿಗಳೇ, ಪಾತ್ರಗಳು ಪ್ರದರ್ಶನ ಮಾಡುವುದರಿಂದ ನಮಗೆ ನೇರವಾದ ಸಾಮಾಜಿಕವಾದ ತಿಳುವಳಿಕೆ, ಜಾಗೃತಿ ಪ್ರಾಪ್ತವಾಗುತ್ತದೆ. ಆದ್ದರಿಂದ ನಾಟಕ ಎಲ್ಲ ಕಲೆಗಳಲ್ಲಿ ಶ್ರೇಷ್ಠವಾದದ್ದು ಎಂದು ಭಾವಿಸುತ್ತಾ ಬಂದಿದ್ದೇವೆ. ಅದು ನಿಜವೂ ಹೌದು. ಒಂದು ಮಾತು ಗಮನಿಸಬೇಕು. ನಮ್ಮಲ್ಲಿ ೧೭ನೇ ಶತಮಾನದವರಗೆ ನಾಟಕಗಳೇ ಇರಲಿಲ್ಲ. ಹಾಗಲ್ಲ ನಮ್ಮಲ್ಲಿ ಓದುವ ನಾಟಕಗಳಿರಲಿಲ್ಲ; ನೋಡುವ ನಾಟಕಗಳು ಮೊದಲಿನಿಂದವೂ ಇದ್ದವು, ಆದರೆ ಓದುವ ನಾಟಕಗಳು ಪ್ರಾರಂಭವಾಗಿದ್ದು ೧೭ನೇ ಶತಮಾನಕ್ಕೆ. ನಿಜವಾಗಿಯೂ ಓದುವ ನಾಟಕಗಳ ಸಾರ್ಥಕತೆ ತಿಳಿಯುವುದು ಓದುವುದರಿಂದಲ್ಲ ಅದನ್ನು ನೋಡವುದರಿಂದ. ನಮ್ಮ ಜನರು ಅದನ್ನು ಓದುವ ಪಾತಳಿಗೆ ತರಲಿಲ್ಲ. ಅದನ್ನು ನೋಡುವ ಪಾತಳಿಯಲ್ಲಿಯೇ ಮುಂದುವರೆಸಿಕೊಂಡು ಬಂದಿದ್ದರು. ಆದ್ದರಿಂದ

ನಾಟಕಗಳನ್ನು ಸರಿಯಾದ ರೀತಿಯಲ್ಲಿ ರಂಗಮಾಧ್ಯಮವಾಗಿ ಬೆಳೆಸಿಕೊಂಡು ಬಂದಿದ್ದು ಕನ್ನಡಿಗರ ಒಂದು ದೊಡ್ಡ ಕೊಡುಗೆ ಎಂದೆನಿಸುತ್ತದೆ. ಒಂದು ವೇಳೆ ಇದಕ್ಕಿಂತ ಮೊದಲು ಅದನ್ನು ಅಕ್ಷರಕ್ಕೆ ಇಳಿಸಿದ್ದರೆ ನಾಟಕ ಬೇಡವಾಗುತ್ತಿತ್ತು. ರಂಗಭೂಮಿ ಬೇಡವಾಗುತ್ತಿತ್ತು. ಆ ಕೆಲಸವನ್ನು ನಮ್ಮ ಕವಿಗಳು ಮಾಡಲಿಲ್ಲ. ಅದಕ್ಕಾಗಿ ನಾಟಕ ಎಂಬುದು ನಮ್ಮಲ್ಲಿ ಜೀವಂತವಾಗಿ ಉಳಿದುಕೊಂಡು ಬಂದಿದೆ ಎಂದು ಹೇಳಬೇಕಾಗುತ್ತದೆ.

ಇಲ್ಲಿ ಶ್ರೀಮಠ ಇವತ್ತು ಶಿವಸಂಚಾರಕ್ಕೆ ಮೂರು ನಾಟಕಗಳನ್ನು ಎತ್ತಿಕೊಂಡಿದೆ. ಇವು ಬಹಳ ಮುಖ್ಯವಾದ ನಾಟಕಗಳು. ಇಲ್ಲಿ ಅವರು ಎತ್ತಿಕೊಂಡಂತಹ ನಾಟಕಗಳಲ್ಲಿ ಒಂದು ಬಸವಣ್ಣನವರನ್ನು ಕುರಿತ ಶಿವರಾತ್ರಿ ನಾಟಕ, ಮತ್ತೊಂದು ಮಿತ್ರರಾದ ಮನು ಬಳಿಗಾರ ಬರೆದಂತಹ ಮೈಲಾರ ಮಹದೇವ ನಾಟಕ, ಇನ್ನೊಂದು ಸಾಮಾಜಿಕ ನಾಟಕ. ಈ ಮೂರರಲ್ಲಿ ಎರಡು ಐತಿಹಾಸಿಕ, ಒಂದು ಸಾಮಾಜಿಕ ನಾಟಕ. ನಮ್ಮ ಪರಂಪರೆಯಲ್ಲಿ ಒಂದು ದೊಡ್ಡ ತಪ್ಪಾಗಿದೆ. ಏನು ತಪ್ಪಾಗಿದೆ ಎಂದರೆ, ನಾಟಕ ಎಂದರೆ ರಾಮಾಯಣ ಮತ್ತು ಮಹಾಭಾರತದ ನಾಟಕಗಳೆಂದು ತಿಳಿದುಕೊಂಡಿದ್ದೆವು ನಾವು ಇಲ್ಲಿಯವರೆಗೆ. ನಮ್ಮ ಸ್ಥಳೀಯ ಕಥೆಗಳ ಬಗ್ಗೆ ನಾವು ಏನೂ ವಿಚಾರಮಾಡಲಿಲ್ಲ. ಇದರಿಂದಾಗಿ ಸಾವಿರಾರು ವರ್ಷಗಳಿಂದ ನಮ್ಮ ಅಸ್ಮಿತೆ ನಾಶವಾಗುತ್ತಾ ಹೋಗಿದೆ. ನಮ್ಮತನ ಎನ್ನುವುದು ನಾಶವಾಗುತ್ತಾ ಹೋಗಿದೆ. ನಾವು ಇವತ್ತು ಜಾಗೃತವಾಗಿ ನಮ್ಮ ಪ್ರದೇಶದ ಮಹಾತ್ಮರನ್ನು ಮಹಾಪುರುಷರನ್ನು ನೆನೆಸುವುದು, ಕಲಾ ಮಾಧ್ಯಮದ ಮೂಲಕ ಪ್ರಚಾರ ಮಾಡುವುದು ಬಹಳ ಅವಶ್ಯವಿದೆ. ಹಾಗೆ ಮಾಡಿದರೆ ಮಾತ್ರ ನಮ್ಮತನ ಬೆಳೆಯುತ್ತದೆ. ನಮ್ಮ ಸ್ವಾಭಿಮಾನ ಬೆಳೆಯುತ್ತದೆ.

ಶಿವರಾತ್ರಿ ಎನ್ನುವ ನಾಟಕ ಬಸವಣ್ಣನೆಂಬ ಯುಗಪುರಷನ ಕುರಿತು, ಮಹಾಪುರುಷನ ಕುರಿತು ಇರುವಂಥದು ಅದು ಬಹಳ ಮಹತ್ವಪೂರ್ಣ ನಾಟಕ. ಇತ್ತಿಚೇಗೆ ಕಂಬಾರ ಬರೆದಂತಹ ನಾಟಕ. ಅದು ಕೇವಲ ಸೂಳೆ ಮನೆಯ ಸುತ್ತ ಸುತ್ತು ಹಾಕುತ್ತದೆ. ಕೊನೆಗೆ ಬಸವಣ್ಣನ ಸಂದೇಶವನ್ನು ಪ್ರತಿನಿಧಿಸುವ ಅತ್ಯುತ್ತಮವಾದಂತಹ ನಾಟಕವನ್ನು ಕಂಬಾರರವರು ಬರೆದಿದ್ದು, ಅದನ್ನು ಇಲ್ಲಿ ಎತ್ತಿಕೊಂಡಿದ್ದು ಬಹಳ ಔಚಿತ್ಯಪೂರ್ಣವೆಂದು ನನಗೆ ಅನಿಸುತ್ತಿದೆ.

ಆಮೇಲೆ ಮೈಲಾರ ಮಹಾದೇವರನ್ನು ಕುರಿತು. ಇದು ಇನ್ನೂ ಉತ್ತಮವಾದ ಪ್ರಯೋಗ ಎನಿಸುತ್ತದೆ. ಏಕೆಂದರೆ ನಮ್ಮ ಪ್ರದೇಶದ ಒಬ್ಬ ವ್ಯಕ್ತಿಯ ಕಥೆ. ನಾವು ಪದೇ ಪದೇ ಏನು ಮಾಡುತ್ತೇವೆ ಎಂದರೆ ಉತ್ತರ ಭಾರತದ ವ್ಯಕ್ತಿಗಳನ್ನೇ ಸ್ತುತಿಮಾಡುತ್ತಿದ್ದೇವೆ, ಆರಾಧನೆ ಮಾಡುತ್ತಿದ್ದೇವೆ. ನಾವು ಭಗತ್‌ಸಿಂಗ್‌ನನ್ನು ನೆನೆಸುತ್ತಿದ್ದೇವೆ. ಭಗತ್‌ಸಿಂಗನ ಪುಣ್ಯತಿಥಿ, ಜಯಂತಿಯನ್ನು ಆಚರಣೆ ಮಾಡುತ್ತಿದ್ದೇವೆ. ಆದರೆ ನಮ್ಮವರೇ ಆದ, ಆದರೆ ಭಗತ್‌ಸಿಂಗ್‌ನಿಗಿಂತ ಶ್ರೇಷ್ಠವಾದ ವ್ಯಕ್ತಿ ನಮ್ಮ ಪ್ರದೇಶದಲ್ಲಿದ್ದರೂ ಸಹ ಅವರ ಬಗ್ಗೆ ನಾವು ಗಮನಹರಿಸಿಲ್ಲ. ಇಂತಹ ವ್ಯಕ್ತಿಗಳನ್ನು ನಾವು ಉಪೇಕ್ಷೆ ಮಾಡಬಾರದು. ಅವರನ್ನು ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಮಟ್ಟಕ್ಕೆ ಒಯ್ಯುವಂತಹ ಕೆಲಸ ಮಾಡಬೇಕಾಗುತ್ತದೆ. ಆ ಕೆಲಸ ಮಾಡಲಿಕ್ಕೆ ನಾಟಕ ಒಂದು ಅತ್ಯುತ್ತಮವಾದ ಮಾಧ್ಯಮ. ಆದುದರಿಂದ ಈ ನಾಟಕವನ್ನು ಆರಿಸಿಕೊಂಡದ್ದು ನನಗೆ ವಿಶೇಷ ಸಂತೊಷವನ್ನುಂಟು ಮಾಡಿದೆ. ಅದಕ್ಕಾಗಿ ಪೂಜ್ಯರಿಗೆ ನಾನು ಅಭಿನಂದಿಸುತ್ತಿದ್ದೇನೆ.

ಇನ್ನೊಂದು ಮಾತು ಎಂದರೆ ಸಾಣೇಹಳ್ಳಿಯಲ್ಲಿ ಇಷ್ಟೆಲ್ಲ ಪ್ರಯೋಗ ನಡೆಯುತ್ತಿದ್ದರೂ ಸಹ ರಂಗ ಮಾಧ್ಯಮದಲ್ಲಿ ಇಷ್ಟೆಲ್ಲ ಕೆಲಸಗಳು ನಡೆಯುತ್ತಿದ್ದರೂ ಸಹ ಇದಕ್ಕೆ ಇನ್ನೂ ಹೆಚ್ಚಿನ ಪ್ರಚಾರ

ಸಿಗಬೇಕು. ರಾಷ್ಟ್ರೀಯ ಪ್ರಚಾರ ಸಿಗಬೇಕು ಎನಿಸುತ್ತದೆ. ಬಹಶಃ ಭಾರತದಲ್ಲಿ ಈ ರೀತಿಯೊಳಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಲೆಗಾಗಿ ಪ್ರಯತ್ನ ಮಾಡುವುದು, ಶ್ರಮವಹಿಸುವುದು ಇದೊಂದೆ ಮಠ ಎನಿಸುತ್ತದೆ. ಹೀಗಿದ್ದೂ ಸಹ ಇದಕ್ಕೆ ಏಕೆ ಪ್ರಚಾರ ಸಿಗಲಿಲ್ಲ? ಇದಕ್ಕೆ ಪ್ರಚಾರ ಸಿಗುವ ರೀತಿಯಲ್ಲಿ ನಾವು ಇನ್ನು ಮುಂದೆ ಗಮನ ಕೊಡಬೇಕು. ಇದನ್ನು ಮುಂದುವರೆಸಬೇಕು ಎಂದು ನಾನು ಇದರ ಸಂಘಟಕರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ಏನಾಗಿದೆ ಎಂದರೆ, ಈ ಇಂಗ್ಲಿಷ, ಹಿಂದಿ ಭಾಷೆಗಳ ಮೂಲಕ ನಾವು ಇದನ್ನು ಮುಂದುವರೆಸಿದರೆ ಮಾತ್ರ ಈ ಮಠದ ಕಾರ್ಯಕಲಾಪಗಳು ರಾಷ್ಟ್ರಮಟ್ಟದ ಕೀರ್ತಿ ಪಡೆಯುತ್ತವೆ. ಆ ದೆಸೆಯೊಳಗೆ ನಾವು ಕೆಲಸ ಮಾಡಬೇಕು ಎಂದು ಸಂಘಟಕರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಈ ಪ್ರಸಂಗದಲ್ಲಿ ನನಗೆ ಆಶೀರ್ವಾದಪೂರ್ವಕವಾಗಿ ಸತ್ಕಾರ ಮಾಡಿದ್ದಾರೆ. ನಾವು ಕೆಲಸ ಮಾಡುವ ಮನುಷ್ಯ ಅಷ್ಟೇ. ಕೆಲಸ ಮಾಡುವುದನ್ನು ಬಿಟ್ಟರೆ ನನಗೆ ಬೇರೆ ಕೆಲಸವೇ ಇಲ್ಲ. ಕನ್ನಡದ ಕೆಲಸ ಅದು ನನಗೆ ನನ್ನ ಮನಸ್ಸಿನಲ್ಲಿ ತುಂಬಿಕೊಂಡಂತಹ ಒಂದು ಅನಿವಾರ್ಯವಾದಂತಹ ಒಂದು ಹೊಣೆ ಎಂದು ತಿಳಿದುಕೊಂಡಿದ್ದೇನೆ. ಇದು ಕನ್ನಡದ ಹೊಣೆ ಎಂದು ತಿಳಿದುಕೊಂಡ ನಾನು ಕೆಲಸ ಮಾಡುತ್ತಾ ಬಂದಿದ್ದೇನೆ. ನಾನು ಮಾಡಿದ ಕೆಲಸವನ್ನು ಗಮನಿಸಿ ನನಗೆ ನೃಪತುಂಗ ಪ್ರಶಸ್ತಿ ಬಂದಿದ್ದಕ್ಕಾಗಿ ಇಲ್ಲಿ ಪೂಜ್ಯರು ಮತ್ತು ನೀವೆಲ್ಲಾ ನನ್ನನ್ನು ಆಶೀರ್ವದಿಸಿದ್ದೀರಿ. ನೃಪತುಂಗ ಯಾರು ಎಂಬುದು ನಿಮಗೆ ಗೊತ್ತಿದೆ. ನಾನು ನಮ್ಮ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಎರಡು ಮಾದರಿಗಳನ್ನು ಗಮನಿಸಿದ್ದೇನೆ. ಒಂದನೇ ಮಾದರಿ ಎಂದರೆ ಪುಲಿಕೇಶಿ, ಮತ್ತೊಂದು ಮಾದರಿ ನೃಪತುಂಗ. ಪುಲಿಕೇಶಿ ಭೌತಿಕ ಸಾಮ್ರಾಜ್ಯ ಕಟ್ಟಬೇಕು ಎನ್ನುವವ, ನೃಪತುಂಗ ಸಾಂಸ್ಕೃತಿಕ ಸಾಮ್ರಾಜ್ಯ ಕಟ್ಟಬೇಕೆನ್ನುವವ. ಅದಕ್ಕಾಗಿ ಪುಲಿಕೇಶಿ ನರಬಲಿವರೆಗೂ ನೆಲವನ್ನು ಗಳಿಸಲಿಕ್ಕೇ ಆತ ಪ್ರಯತ್ನ ಮಾಡಿದ, ಆದರೆ ನೃಪತುಂಗ ಆ ನೆಲವನ್ನು ಹೊಲವನ್ನಾಗಿ ಮಾಡಿದ. ಯಾಕೆಂದರೆ ನೆಲಕ್ಕಿಂತ ಹೊಲದಿಂದ ಹೆಚ್ಚು ಪ್ರಯೋಜನವಿದೆ. ಆದ್ದರಿಂದ ಸಾಂಸ್ಕೃತಿಕವಾದ ಒಂದು ಸಾಮ್ರಾಜ್ಯವನ್ನು ಕಟ್ಟಿದಂತಹ ನೃಪತುಂಗ ಆತನ ಹೆಸರಿನಲ್ಲಿರುವಂತಹ ಅತ್ಯಮೂಲ್ಯವಾದ ಒಂದು ಪ್ರಶಸ್ತಿ ನನಗೆ ಪ್ರಾಪ್ತವಾದ ಸಂದರ್ಭದಲ್ಲಿ ಪೂಜ್ಯರು ಆಶೀರ್ವಾದ ಮಾಡಿದ್ದಾರೆ ಮತ್ತು ಇಂತಹ ಒಂದು ಸಾಂಸ್ಕೃತಿಕವಾದ ಪರಿಸರದಲ್ಲಿ ಈ ಸತ್ಕಾರ ನನಗೆ ಪ್ರಾಪ್ತವಾದದ್ದು ವಿಶೇಷ ಸಂತೋಷವನ್ನುಂಟುಮಾಡಿದೆ. ಈ ಆಶೀರ್ವಾದಕ್ಕಾಗಿ ನಾನು ಪೂಜ್ಯರಿಗೆ ನಮಿಸಿ, ನಿಮಗೂ ವಂದಿಸಿ ನನ್ನ ಮಾತು ಮುಗಿಸುತ್ತಿದ್ದೇನೆ.

---

* ಸಾಣೇಹಳ್ಳಿ ನಾಟಕೋತ್ಸವ ಉದ್ಘಾಟಿಸಿ ಮಾಡಿದ ಭಾಷಣ.

ಆಕರ : ಮಾರ್ಗ ಸಂಪುಟ–೮

■■

೨೪

ಆಧುನಿಕ ಕನ್ನಡ ಸಾಹಿತ್ಯ – ಬಸವಣ್ಣ : ಉದ್ಘಾಟನೆ

೨೦೧೪

೧೨ನೇ ಶತಮಾನದಲ್ಲಿ ಶರಣರು ಕಟ್ಟಿದ ಕಲ್ಯಾಣವನ್ನು 'ಸಮಯ ಕಲ್ಯಾಣ'ವೆಂದು ನಮ್ಮ ಪರಂಪರೆಯಲ್ಲಿ ಕರೆಯುತ್ತ ಬಂದಿದ್ದಾರೆ. ಕಲ್ಯಾಣ ಎಂದರೆ ಮಂಗಲ, ಶುಭ ಎಂದೆಲ್ಲ ಅರ್ಥಗಳಿವೆ. ಆದರೆ ಆ ಕಲ್ಯಾಣ ಶರಣರ ಮೇಲೆ ನಡೆದ ಆಕ್ರಮಣದಿಂದಾಗಿ ಕಟ್ಟುವ ಕೆಲಸ ಅಲ್ಲಿ ನಿಂತುಕೊಂಡಿತು. ಆ ಮೇಲೆ ಡಿಗ್ಗಿ ಎನ್ನುವ ಗ್ರಾಮ, ಶಹಪೂರ ಹತ್ತಿರ ಇದೆ. ಅಲ್ಲಿ ಡಿಗ್ಗಿ ಸಂಗಮನಾಥ ಮತ್ತೆ ಕಲ್ಯಾಣ ಕಟ್ಟಲು ಶುರು ಮಾಡಿದ. ಕಾರಣಾಂತರದಿಂದ ಆ ಕೆಲಸ ಅರ್ಧಕ್ಕೆ ನಿಂತಿತು. ನಾಗಾವಿಯಲ್ಲಿ ಗುಂಡಬಸವ ಎನ್ನುವವ ಧರ್ಮಕಲ್ಯಾಣ ಎನ್ನುವ ಕಲ್ಯಾಣ ಕಟ್ಟುವ ಕೆಲಸ ಮಾಡಿದ. ಹೀಗಿದ್ದೂ ಕಳೆದ ಐವತ್ತು ಅರವತ್ತು ವರುಷಗಳಿಂದ ಈ ಕಲಬುರ್ಗಿ ಪ್ರದೇಶದಲ್ಲಿ ಮತ್ತೆ ಸಣ್ಣಪುಟ್ಟ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು ಬಸವ ಪ್ರಜ್ಞೆಯ ಕೆಲಸವನ್ನು ಕೈಗೆತ್ತಿಕೊಂಡಿದ್ದನ್ನು ನಾವು ಗಮನಿಸುತ್ತೇವೆ. ಅಂತಹ ಎಷ್ಟೋ ಜನ ಹಿರಿಯರಿದ್ದಾರೆ. ಇಂದು ಒಂದು ದೊಡ್ಡ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಅದಕ್ಕೆ ಒಂದು ದೊಡ್ಡ ವಿಸ್ತಾರವನ್ನು ಒದಗಿಸಬೇಕೆಂಬ ಉದ್ದೇಶದಿಂದ, ಬಸವ ಅಧ್ಯಯನಕ್ಕೆ ಯಾವುದೇ ಕೊರತೆ ಇಲ್ಲದಂತೆ–ಇಲ್ಲಿ ಒಂದು ದೊಡ್ಡ ಸಭಾಭವನವಾಗಲಿ, ಅಲ್ಲಿ ಅರಿವಿನ ಮನೆಯಾಗಲಿ, ಶಿವಯೋಗ ಸ್ಥಳವಾಗಲಿ, ಸಂಶೋಧನ ಗ್ರಂಥಾಲಯವಾಗಲಿ ಮತ್ತು ಅಧ್ಯಯನದ ಒಂದು ಕೇಂದ್ರವಾಗಲಿ, ಹೀಗೆ ಪರಿಪೂರ್ಣವಾದ ಎಲ್ಲ ಸೌಲಭ್ಯವುಳ್ಳ ಒಂದು ಸಂಗಮವಾಗಬೇಕೆಂಬ ಉದ್ದೇಶದಿಂದ ಬಹುದೊಡ್ಡ ಕೆಲಸವನ್ನು ಅಕ್ಕ ವಿಲಾಸವತಿ ಖೂಬಾ ಅವರು ಮಾಡಿದ್ದಾರೆ. ಕಲಬುರ್ಗಿ ನಾಡಿನ ಎಲ್ಲ ಬಸವ ಭಕ್ತರು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು.

'ಡಾ. ಬಿ.ಡಿ.ಜತ್ತಿ ವಚನ ಅಧ್ಯಯನ ಪೀಠ' ಎಂದು ಇದನ್ನು ಕರೆಯಲಾಗಿದೆ. ಒಂದು ಮಾತು, ಬಿ.ಡಿ.ಜತ್ತಿ ಅವರನ್ನು ನಾವು ಯಾರೂ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ನಮ್ಮ ರಾಜಕಾರಣಿಗಳ ಒಂದು ಶ್ರೇಣಿಯೊಳಗ ಬಿ.ಡಿ.ಜತ್ತಿ ಅವರೇ ಬೇರೆ, ಉಳಿದವರೇ ಬೇರೆ. ಇದನ್ನು ನಾವು ಸೂಕ್ಷ್ಮವಾಗಿ ಗಮನಿಸುವುದು ಅವಶ್ಯ. ಯಾಕೆಂದರೆ ತಲೆಯ ಮೇಲೆ ಗಾಂಧಿ ತತ್ತ್ವ, ಹಣೆಯ ಮೇಲೆ ಬಸವ ತತ್ತ್ವ. ಇವುಗಳ ಸಂಕೇತವಾಗಿ ಜತ್ತಿ ಅವರ ತಲೆಯ ಮೇಲೆ ಗಾಂಧೀ ಟೊಪ್ಪಿಗೆ, ಹಣೆಯ ಮೇಲೆ

ವಿಭೂತಿ ಇದ್ದವು. ತಲೆಯ ಮೇಲೆ ಗಾಂಧಿ ತತ್ತ್ವ, ಹಣೆಯ ಮೇಲೆ ಬಸವ ತತ್ತ್ವ ಇವೆರಡರ ಒಂದು ಮಹಾಸಂಗಮವಾಗಿದ್ದರು ಪೂಜ್ಯ ಬಿ.ಡಿ.ಜತ್ತಿ ಅವರು. ಅದಕ್ಕಾಗಿ ಅವರು ಬಸವಣ್ಣನವರಷ್ಟು ಹಳಬರು, ಗಾಂಧಿಯವರಷ್ಟು ಹೊಸಬರು. ಇಂಥ ಒಂದು ವ್ಯಕ್ತಿತ್ವ ಗಳಿಸಿಕೊಂಡ ಬಿ.ಡಿ.ಜತ್ತಿ ಅವರ ವೈಶಿಷ್ಟ್ಯತೆ ಎಂದರೆ, ಅವರು ಮೊದಲಿನಿಂದಲೂ ಹಣೆಯ ಮೇಲೆ ವಿಭೂತಿ ಧರಿಸಿಕೊಳ್ಳುತ್ತ ಬಂದವರು. ಕೆಲವರು ಹೇಳಬಹುದು, ಕರ್ನಾಟಕದೊಳಗ ಲಿಂಗಾಯತರ ಮನವೊಲಿಸಿಕೊಳ್ಳಲಿಕ್ಕ ವಿಭೂತಿ ಧಾರಣ ಮಾಡಿಕೊಳ್ಳುತ್ತಿದ್ದರು ಎಂದು. ಬಿ.ಡಿ.ಜತ್ತಿ ಅವರು ಕರ್ನಾಟಕದಲ್ಲಿರುವಷ್ಟು ಕಾಲ ಅವರ ಹಣೆಯ ಮೇಲೆ ವಿಭೂತಿ ಇರುತ್ತಿತ್ತು. ಆ ಮೇಲೆ ಅವರು ಪಾಂಡಿಚೇರಿಗೆ ಹೋದರು, ಅಲ್ಲೇನು ವಿಭೂತಿಯ ಅವಶ್ಯಕತೆ ಇತ್ತು? ಆಮೇಲೆ ಅವರು ಓರಿಸಾಕ್ಕೆ ಹೋದರು. ಅಲ್ಲೇನು ವಿಭೂತಿಯ ಅವಶ್ಯಕತೆ ಇತ್ತು? ಆಮೇಲೆ ಅವರು ಉಪರಾಷ್ಟ್ರಪತಿಯಾಗಿ ದೆಹಲಿಗೆ ಹೋದರು. ಉಪರಾಷ್ಟ್ರಪತಿ ಪೀಠದ ಮೇಲೆ ಕೂತರೂ ಹಣೆಯ ಮೇಲೆ ವಿಭೂತಿ ಇತ್ತು. ಇವತ್ತು ನಾನೊಂದು ಪ್ರಶ್ನೆ ಕೇಳತ್ತೇನೆ, ಅಕಸ್ಮಾತ್ ಇಂದಿರಾಗಾಂಧಿ ಅವರು, 'ಇದು ನಮ್ಮ ದೇಶ ಜಾತ್ಯಾತೀತ ರಾಷ್ಟ್ರ, ನೀವು ಹಣೆಯ ಮೇಲೆ ವಿಭೂತಿ ಹಚ್ಚಿಕೊಂಡು ಉಪರಾಷ್ಟ್ರಪತಿ ಪೀಠದ ಮೇಲೆ ಕೂತರೆ, ಸ್ವಲ್ಪ ಜಾತಿವಾದಿ ಅನಿಸಿಕೊಳ್ಳುತ್ತೀರಿ, ವಿಭೂತಿ ಹಚ್ಚಿಕೊಳ್ಳುವುದು ಬೇಡ' ಎಂದಿದ್ದರೆ ಜತ್ತಿ ಅವರು ಏನು ಮಾಡುತ್ತಿದ್ದರು? ಎಂದರೆ ಉಪರಾಷ್ಟ್ರಪತಿ ಹುದ್ದೆಯನ್ನು ತ್ಯಜಿಸಿ ಮನೆಗೆ ಬರುತ್ತಿದ್ದರು. ಇದು ಅವರ ಬಸವ ತತ್ತ್ವ, ಬಸವ ನಿಷ್ಠೆಯಾಗಿತ್ತು. ಮತ್ಯಾರಾದರೂ ಆಗಿದ್ದರೆ, ನಾಳೆಯಿಂದ ನಾವು ವಿಭೂತಿ ಹಚ್ಚಿಕೊಳ್ಳುವುದಿಲ್ಲ ಎನ್ನುತ್ತಿದ್ದರು. ಇಂಥ ಒಬ್ಬ ರಾಜಕಾರಣಿಗಳು ಕರ್ನಾಟಕದಲ್ಲಿ ಮತ್ತ್ಯಾರಿದ್ದಾರೆ? ಇವತ್ತು ನಾವು ನಮ್ಮ ಮೇಲಿನ ಅಧಿಕಾರಿಗಳ ಮನವೊಲಿಸುವ ಸಂಬಂಧ ವಿಭೂತಿ ಬಿಟ್ಟು ಹಣೆಗೆ ಏನೇನು ಹಚ್ಚಿಕೊಳ್ಳುತ್ತಿದ್ದೇವೆ? ವಿಶೇಷವಾಗಿ ರಾಜಕಾರಣಿಗಳು. ಲಿಂಗಾಯತ ರಾಜಕಾರಣಿಗಳು ಕುಂಕುಮ ಹಚ್ಚಿಕೊಳ್ಳುತ್ತಾರೆ. ಅದು ಬ್ಯಾಡ ಇದನ್ನ ಹಚ್ಚಿಕೊಳ್ಳರಿ ಅಂತ ಮತ್ತೇನಾದರು ಕೊಟ್ಟರೂ ಅದನ್ನೂ ಹಚ್ಚಿಕೊಳ್ಳುತ್ತಾರೆ. ಆದರೆ ಜತ್ತಿ ಅವರಿಗೆ ವಿಭೂತಿಯೊಂದು ಲಾಂಛನವಾಗಿದ್ದಿಲ್ಲ, ಅವರಿಗೆ ಅದೊಂದು ತತ್ತ್ವವಾಗಿತ್ತು. ಅದಕ್ಕಾಗಿ ಅವರು ಕೆಲಸ ಏನೇ ಇರಲಿ, ಅವರ ವಿಭೂತಿ ಧಾರಣೆಯನ್ನ ಜೀವನ ಪರ್ಯಂತ ತೂಗಿಸಿಕೊಂಡು ಬಂದರು. ಈ ಕಾರಣಕ್ಕಾಗಿ ಇಲ್ಲಿ ಅಷ್ಟೇ ಅಲ್ಲ ಎಲ್ಲೆಲ್ಲಿ ಬಸವ ಸಮಿತಿಗಳಿಯೋ ಅಲ್ಲೆಲ್ಲ ಜತ್ತಿಯವರ ಹೆಸರಿಗೆ ಸಂಶೋಧನ ಸಂಸ್ಥೆಗಳಾಗಬೇಕು. ಅಂತಹ ಒಂದು ದೊಡ್ಡ ಕೆಲಸವನ್ನು ಅವರು ಮಾಡಿದ್ದಾರೆ.

ಕರ್ನಾಟಕಕ್ಕೆ ಸೀಮಿತವಾಗಿದ್ದ ಬಸವ ಧರ್ಮವನ್ನು ಜಾತ್ಯಾತೀತವಾಗಿ ಬೆಳೆಸಿದವರು ಬಿ.ಡಿ.ಜತ್ತಿ ಅವರು. ರಾಷ್ಟ್ರಮಟ್ಟದಲ್ಲಿ ಅದನ್ನು ಬೆಳೆಸಿದರು. ಅಂತರಾಷ್ಟ್ರೀಯ ಮಟ್ಟದಲ್ಲಿ ಅದಕ್ಕೆ ಅವಕಾಶ ಸಿಗುವಂತೆ ಮಾಡಿದರು. ಹೀಗಾಗಿ ಬಸವ ತತ್ತ್ವದ ಪ್ರತಿಪಾದನೆ, ಪ್ರಚಾರದ ದೃಷ್ಟಿಯಿಂದ ಹಳಕಟ್ಟಿ ಅವರ ನಂತರ ನಾವು ಹೇಳಬಹುದಾದ ದೊಡ್ಡ ಹೆಸರು ಎಂದರೆ ಡಾ. ಬಿ.ಡಿ.ಜತ್ತಿ ಅವರದು. ಯಾಕೆಂದರೆ ಅವರು ಆರೀತಿ ಬದುಕಿದ್ದವರು. ಆ ಕಾಲದೊಳಗೆ ಅಷ್ಟಶತಮಾನೋತ್ಸವ ಮಾಡುವ ಮೂಲಕ ಒಂದು ರಾಷ್ಟ್ರವ್ಯಾಪ್ತಿ ಸ್ವರೂಪವನ್ನು ಈ ಬಸವತತ್ತ್ವಕ್ಕೆ, ವಚನ ಸಾಹಿತ್ಯಕ್ಕೆ ತಂದು ಕೊಟ್ಟರು. ಒಬ್ಬ ರಾಜಕಾರಣಿಯಾಗಿ, ಉಪರಾಷ್ಟ್ರಪತಿಯಾಗಿ ಹಣೆಯ ಮೇಲೆ ವಿಭೂತಿ ಹಚ್ಚಿಕೊಳ್ಳುವುದಕ್ಕೆ ಬಹಳ ಧೈರ್ಯ ಬೇಕು. ಅವರಲ್ಲಿ ಆತ್ಮ ನಿರ್ಧಾರವಿತ್ತು. ಧೈರ್ಯವಿತ್ತು. ಕರ್ನಾಟಕದಲ್ಲಿ ಬೇರೆ ಯಾವ ರಾಜಕಾರಣಿ ಇದ್ದಾರೆ ಹೇಳಿ? ೧೯೫೬ರಿಂದ ಇಷ್ಟೆಲ್ಲ ಜನ

ಲಿಂಗಾಯತ ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ, ಯಾರ ಹಣಿ ಮ್ಯಾಲರೆ ವಿಭೂತಿ? ಅದನ್ನು ಹಚ್ಚಲೇಬೇಕೆಂದಲ್ಲ! ಆದರೆ ಜತ್ತಿ ಅವರಲ್ಲಿ ಆ ನಿರ್ಧಾರಿತ ದೃಷ್ಟಿ ಬಹಳ ಗಟ್ಟಿಯಾಗಿತ್ತು. ಬಸವಣ್ಣನವರನ್ನು ಬಹಳ ಸರಿಯಾಗಿ ಅರ್ಥಮಾಡಿಕೊಂಡ, ಲಿಂಗಾಯತರನ್ನು ಸರಿಯಾಗಿ ಅರ್ಥಮಾಡಿಕೊಂಡ ಕಾರಣವಾಗಿ, ಆ ವಿಭೂತಿ ಒಂದು ಲಾಂಛನವಾಗಿ ಅವರಿಗೆ ಕಾಣಲಿಲ್ಲ, ಅದೊಂದು ತತ್ತ್ವವಾಗಿ ಅವರು ಕಂಡಿದ್ದರು. ಇಂತಹ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಇವತ್ತು **'ಬಿ.ಡಿ.ಜತ್ತಿ ವಚನ ಅಧ್ಯಯನ ಪೀಠ'** ಎನ್ನುವ ಒಂದು ಸಂಸ್ಥೆಯನ್ನು ಇಲ್ಲಿ ಸ್ಥಾಪಿಸಿದ್ದು, ಬಹಳ ಮುಖ್ಯವಾದಂಥ ವಿಚಾರವೆಂದು ನನಗೆ ಅನಿಸುತ್ತಿದೆ.

ಬಿ.ಡಿ.ಜತ್ತಿ ಅವರಿಗೆ ಹೊಳೆದ 'ಬಸವ ಸಮಿತಿ' ಎನ್ನುವ ಪರಿಕಲ್ಪನೆ ಬಹಳ ದೊಡ್ಡ ಪರಿಕಲ್ಪನೆ ಅದು. ೧೯೦೪ ರಲ್ಲಿ **'ವೀರಶೈವ ಮಹಾಸಭಾ'** ಪರಿಕಲ್ಪನೆ ಸೃಷ್ಟಿಗೊಂಡಂತೆ, ಅಂಥದ್ದೇ ಇನ್ನೊಂದು ದೊಡ್ಡ ಪರಿಕಲ್ಪನೆ **ಬಸವ ಸಮಿತಿ**. ವೀರಶೈವ ಮಹಾಸಭಾ 'ಆಚಾರ್ಯ ಸಂಸ್ಕೃತಿ' ಅದು, 'ಬಸವ ಸಮಿತಿ' ಇದು 'ಅನುಭಾವಸಂಸ್ಕೃತಿ'. ಆಚಾರ್ಯರಿಗಿಂತ ಅನುಭಾವಿಗಳು ದೊಡ್ಡವರು. ಜತ್ತಿ ಅವರು ಈ ಬಸವ ಸಮಿತಿಯನ್ನು ಆರಂಭ ಮಾಡುವ ಮೂಲಕ ಅವರು ಬಹಳ ದೊಡ್ಡದಾದ ಒಂದು ಪರಂಪರೆಯನ್ನು ಮುಂದುವರೆಸಿದರು. ಎಂಟುನೂರು ವರ್ಷಗಳ ಅವಧಿಯೊಳಗ ಯಾವುದು ನಿಂತು ಹೋಗಿತ್ತು, ಆ ಅನುಭಾವಿಗಳ ದೊಡ್ಡ ಪರಂಪರೆಯನ್ನು ಸಾಂಘಿಕವಾಗಿ ಮುಂದುವರೆಸಬೇಕೆಂದು ಆಲೋಚನೆಯನ್ನು ಮಾಡಿದ್ದು, ಬಹಳ ಮುಖ್ಯವಾಗಿ ಕಾಣುತ್ತದೆ.

ಲಂಡನ್ನಿನಲ್ಲಿ ಬಸವಣ್ಣನವರ ಸ್ಟ್ಯಾಚ್ಯು ಸ್ಥಾಪಿತವಾಯಿತು; ನಾವ್ಯಾರಾದರೂ ಪ್ರಯತ್ನ ಮಾಡಿದೇವಾ? ಬಸವಣ್ಣನವರ ಮೂರ್ತಿಯೊಂದು ಭಾರತದ ಸಂಸದ ಭವನದ ಎದುರಿಗೆ ಸ್ಥಾಪನೆಯಾಯಿತು. ನಾವ್ಯಾರೂ ಪ್ರಯತ್ನ ಮಾಡಲಿಲ್ಲ. ನಮ್ಮ ಹಣೆಬರಹಕ್ಕೆ ಒಂದು ವಿಶ್ವವಿದ್ಯಾಲಯಕ್ಕೆ ಹೆಸರಿಡಲು ಆಗುತ್ತಿಲ್ಲ. ಬಸವಣ್ಣ ತಾನೇ ಪ್ರಯತ್ನ ಮಾಡಿಕೊಂಡ. ದೊಡ್ಡವರು ಯಾವಾಗಲೂ ತಮ್ಮ ಕೆಲಸಗಳನ್ನು ತಾವು ಮಾಡಿಕೊಳ್ಳುತ್ತಾರೆ. ನಮ್ಮಿಂದಾಯಿತೆಂದು ಹೇಳಿಕೊಳ್ಳುವ ಕಾರಣವಿಲ್ಲ. ಒಂದು ಮಾತನ್ನು ನೀರಜ ಪಾಟೀಲ ಅವರು ಹೇಳಿದರು, ಲಂಡನ್‌ದೊಳಗ ಬಸವಣ್ಣನವರ ಸ್ಟ್ಯಾಚ್ಯು ಸ್ಥಾಪನೆ ಮಾಡಬೇಕೆನ್ನುವ ವಿಚಾರವನ್ನು ಪ್ರತಿಪಾದನೆ ಮಾಡಿದವನು ಒಬ್ಬ ಪಾಕಿಸ್ತಾನದವನಂತೆ. ಇಂಗ್ಲೀಷಿನಲ್ಲಿರುವ ಬಸವಣ್ಣನವರ ವಚನಗಳನ್ನು ಓದಿ, ಇಷ್ಟೆಲ್ಲ ವಿಶ್ವಮಾನ್ಯವಾದಂಥ ತತ್ತ್ವಗಳಿವೆ, ಇಂತಹ ವಿಚಾರಗಳನ್ನು ಬಿಟ್ಟುಹೋದ ಬಸವಣ್ಣನವರ ಪುತ್ಥಳಿಯನ್ನು ಲಂಡನ್ನಿನಲ್ಲಿ ಸ್ಥಾಪಿಸಬೇಕು ಎಂಬ ವಿಚಾರವನ್ನು ವ್ಯಕ್ತಪಡಿಸಿದ್ದನಂತೆ. ಪಾಕಿಸ್ಥಾನದವನೊಬ್ಬ ಇಂತಹ ವಿಚಾರ ವ್ಯಕ್ತಪಡಿಸುತ್ತಾನೆಂದರೆ ಬಸವಣ್ಣನ ತತ್ತ್ವ ಎಂತಹದಿರಬೇಕು! ಅದನ್ನು ಜತ್ತಿ ಅವರು ಅರ್ಥ ಮಾಡಿಕೊಂಡು ಅದಕ್ಕೆ ಬೀಜಾರೋಪಣವನ್ನು ಬೆಂಗಳೂರಿನಲ್ಲಿ 'ಬಸವ ಸಮಿತಿ'ಯನ್ನು ಸ್ಥಾಪಿಸುವ ಮೂಲಕ ಮಾಡಿದರು.

ಕೆಲವರು ಬಸವ ಸಮಿತಿ ಸ್ಥಾಪಿಸಿದರೆ ಏನಾಯಿತು? ಎನ್ನುತ್ತಾರೆ. ನಾನು ಹೇಳುತ್ತೇನೆ, ಬೆಂಗಳೂರಿನಂಥ ಊರೊಳಗೆ, ಆ ನಗರದ ಮಧ್ಯಪ್ರದೇಶದಲ್ಲಿ ಅಷ್ಟು ದೊಡ್ಡ ಸ್ಥಳ ತೆಗೆದುಕೊಳ್ಳುವುದು, ಅಂತಹ ದೊಡ್ಡ ಕಟ್ಟಡ ಕಟ್ಟುವುದು ಸಾಮಾನ್ಯ ಮಾತಲ್ಲ. ನಮಗೆ ಕಟ್ಟಿರುವ ಕಟ್ಟಡಕ್ಕೆ ಸುಣ್ಣಬಣ್ಣ

ಹಚ್ಚುವುದೂ ಆಗುವುದಿಲ್ಲ. ಆದರೆ ಬಿ.ಡಿ.ಜತ್ತಿ ಅವರು ಅಷ್ಟು ದಿನಗಳ ಹಿಂದೆಯೇ ಒಂದು ಕಲ್ಪನೆಯನ್ನು ಕಂಡು, ಬಸವ ಸಮಿತಿಯನ್ನು ಸ್ಥಾಪಿಸಿದರಲ್ಲ ಅವರನ್ನು ನಾವು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆನಿಸುತ್ತದೆ. ನಮ್ಮ ರಾಜಕಾರಣಿಗಳ ಹೆಸರುಗಳನ್ನು ಬೀದಿಬೀದಿಗಳಿಗೆ ಇಡುತ್ತೇವೆ. ಯಾವುಯಾವುದೋ ಸಂಸ್ಥೆಗಳಿಗೆ ಇಡುತ್ತೇವೆ. ಜತ್ತಿ ಅವರ ಹೆಸರನ್ನು ಎಲ್ಲಿಯಾದರೂ ಇಟ್ಟಿದ್ದೇವೆಯೇ? ಎಷ್ಟು ಸಂಸ್ಥೆಗಳಿವೆ? ಯಾರೋ ಬಂದು ದುಡ್ಡು ಕೊಟ್ಟ ಕೂಡಲೆ, ಅವರ ಹೆಸರನ್ನು ಸಂಸ್ಥೆಗೆ ಇಡುತ್ತೇವೆ. ಕೆಲಸ ಮಾಡಿದವರನ್ನು ಬಿಟ್ಟು, ಅಧಿಕಾರ ಹಿಡಿದವರು ತಮ್ಮ ಹೆಸರನ್ನು ಇಟ್ಟುಕೊಂಡು ಬಿಡುತ್ತಾರೆ. ಆದರೆ ಜತ್ತಿ ಅವರು ಮಾಡಿದಂಥ ಕೆಲಸ, ಅದರಲ್ಲೂ ಬಸವ ಸಿದ್ಧಾಂತವನ್ನು ಪ್ರಚಾರಮಾಡುವ ಒಂದು ಕೆಲಸ ಇದೆಯಲ್ಲ, ಇದು ಬಹಳ ದೊಡ್ಡ ಪರಿಕಲ್ಪನೆ. ಅವರ ಹೆಸರು ಶಾಶ್ವತವಾಗಿ ಉಳಿಸುವಂತಹ ಕೆಲಸವನ್ನು ನಾವು ಮಾಡಲಿಲ್ಲ ಎನಿಸುತ್ತದೆ. 'ಡಾ. ಬಿ.ಡಿ.ಜತ್ತಿ ವಚನ ಅಧ್ಯಯನ ಪೀಠ' ಒಂದು ಅಂತಹ ಪ್ರಯತ್ನ.

ವಿಶ್ವವಿದ್ಯಾಲಯಗಳಲ್ಲಿ **'ಡಿಪಾರ್ಟ್‌ಮೆಂಟ್ ಆಫ್ ವಚನ ಲಿಟರೇಚರ್'** ಎನ್ನುವ ವಿಭಾಗಗಳು ಸ್ಥಾಪನೆಯಾಗಬೇಕು. ಉತ್ತರಭಾರತದಲ್ಲಿ ಡಿಪಾರ್ಟ್‌ಮೆಂಟ್ ಆಫ್ ರಾಮಾಯಣ, ಡಿಪಾರ್ಟ್‌ಮೆಂಟ್ ಆಫ್ ಮಹಾಭಾರತ ಎಂದೆಲ್ಲ ಇವೆ. ಅದೇ ರೀತಿ ಡಿಪಾರ್ಟ್‌ಮೆಂಟ್ ಆಫ್ ವಚನ ಲಿಟರೇಚರ್ ಎಂದು ಪ್ರಾರಂಭಿಸಬೇಕಾದುದು ಅವಶ್ಯವಿದೆ. ವಚನ ಸಾಹಿತ್ಯ ಕೇವಲ ಲಿಂಗಾಯತರ ಸಾಹಿತ್ಯವಲ್ಲ, ಇದು ಸಮಸ್ತ ಕನ್ನಡಿಗರ ಸಾಹಿತ್ಯ. ಕರ್ನಾಟಕದ ಎಲ್ಲ ಜಾತಿಜನಾಂಗದ ಜನ ಕೂಡಿ ಬಸವಣ್ಣನವರ ನೇತೃತ್ವದಲ್ಲಿ ನಿರ್ಮಿಸಿದಂಥ ಧರ್ಮ ಇದು, ಸಾಹಿತ್ಯ ಇದು.

ಕೆಲವು ದಿನಗಳ ಹಿಂದೆ ಬೆಂಗಳೂರಿನಲ್ಲಿ ಒಂದು ಮಾತನ್ನು ಹೇಳಿದೆ, ೧೨ನೇ ಶತಮಾನದಕ್ಕಿಂತ ಮುಂಚೆ ಕನ್ನಡನಾಡಿನಲ್ಲಿ ಇರುವಂಥ ಧರ್ಮಗಳು ವಲಸೆ ಧರ್ಮಗಳು ಎಂದು. ಜೈನಧರ್ಮ ಉತ್ತರಭಾರತದಿಂದ ಬಂದುದು. ಬೌದ್ಧಧರ್ಮ ಉತ್ತರ ಭಾರತದಿಂದ ಬಂದುದು. ವೈದಿಕಧರ್ಮ ಉತ್ತರ ಭಾರತದಿಂದ ಬಂದುದು, ಶೈವಧರ್ಮ ಉತ್ತರ ಭಾರತ ಕಾಶ್ಮೀರದಿಂದ ಬಂದುದು. ಇವೆಲ್ಲ ವಲಸೆ ಧರ್ಮಗಳು. ಈ ಧರ್ಮಗಳ ದಬ್ಬಾಳಿಕೆ ಬಹಳವಾಗಿತ್ತು. ಸ್ಥಳೀಯರೆಲ್ಲರೂ ಎಚ್ಚೆತ್ತರು. ಎಲ್ಲರೂ ಸರಿಯಾಗಿ ಒಗ್ಗಟ್ಟಾಗಿದ್ದರು. ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸೂಳೆ ಸಂಕವ್ವೆ, ಎಲ್ಲರೂ ಎದ್ದು ಬಿಟ್ಟರು. ವಲಸೆ ಧರ್ಮಗಳ ಬಗ್ಗೆ ವಿರೋಧಿಸಿದರು. 'ಯಾರಿವರು? ಎಲ್ಲಿಯ ಧರ್ಮಗಳಿವು? ಏನನ್ನು ಹೇಳುತ್ತವೆ ಇವು? ಇವೆಲ್ಲ ಆಚಾರ್ಯ ಧರ್ಮಗಳು' ಎಂಬುದನ್ನು ತಿಳಿದುಕೊಂಡು, ಅನುಭಾವ ಧರ್ಮವೊಂದು ಬೇಕೆಂದು, ಎಲ್ಲ ಜಾತಿಗಳ ಜನರು ಕೂಡಿ ಬಸವಣ್ಣನ ನೇತೃತ್ವದಲ್ಲಿ ಆದಂಥ ಧರ್ಮವಿದು. ಕನ್ನಡಿಗರು ಕಟ್ಟಿದ ಕರ್ನಾಟಕದ ಮೊದಲನೇ ಧರ್ಮವಿದು. ಉಳಿದವೆಲ್ಲ ವಲಸೆ ಬಂದ ಧರ್ಮಗಳು. ಅವೆಲ್ಲ ದೊಡ್ಡ ಧರ್ಮಗಳು ನಿಜ, ಅದರಲ್ಲೇನೂ ಸಂಶಯವಿಲ್ಲ. ಆದರೆ ಅವುಗಳ ರೀತಿಯೇ ಬೇರೆ. ಇದೆಲ್ಲವನ್ನು ಅರ್ಥ ಮಾಡಿಕೊಂಡ ಬಿ.ಡಿ. ಜತ್ತಿ ಅವರು ಬಸವ ಧರ್ಮದ ಸಿದ್ಧಾಂತವನ್ನು, ಸಾಹಿತ್ಯವನ್ನು ತಿಳಿದುಕೊಂಡು, ಇದನ್ನು ಮುಂದುವರೆಸಬೇಕೆಂಬ ಉದ್ದೇಶದಿಂದ **'ಬಸವ ಸಮಿತಿ'**ಯನ್ನು ಸ್ಥಾಪನೆ ಮಾಡಿದರು.

ಇವತ್ತು **'ಆಧುನಿಕ ಕನ್ನಡ ಸಾಹಿತ್ಯ: ಬಸವಣ್ಣ'** ಎಂಬ ವಿಷಯ ಕುರಿತು, ಈ ಸಂಸ್ಥೆಯಲ್ಲಿ ಒಂದು ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರನ್ನು ಕುರಿತು ಯಾವ ಯಾವ ಸಾಹಿತ್ಯಗಳು ಹುಟ್ಟಿವೆ, ಅವುಗಳಲ್ಲಿ ಬಸವಣ್ಣನವರ ಸಂಗತಿಗಳು ಹೇಗೆ ಮೂಡಿಬಂದಿವೆ ಎಂಬ ವಿಷಯಗಳನ್ನು ಕುರಿತು ಇಲ್ಲಿ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿದೆ. ಶರಣರನ್ನು ಕುರಿತ ನಾಟಕಗಳು, ಕಾದಂಬರಿಗಳು, ಕಾವ್ಯಗಳು ಮೊದಲಾದ ಪ್ರಕಾರಗಳೆಲ್ಲ ಹುಟ್ಟಿವೆ. ಅವನ್ನು ಕುರಿತು, ಇವತ್ತು ಬಹಳ ದೊಡ್ಡ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿದೆ. ಇವೆಲ್ಲ ಈಗ ಹುಟ್ಟಿವೆ. ಆದರೆ ಮೊದಲಿನಿಂದಲೂ ಸಾಮಾನ್ಯ ಜನರು ಬಸವಣ್ಣನವರನ್ನು ಕುರಿತು ಸಾಹಿತ್ಯ ಬರೆದಿದ್ದಾರೆ. ಧಾರವಾಡದಲ್ಲಿ ಒಂದೇ ಸವನೆ ಮಳೆ ಬರುತ್ತಿತ್ತು. ಒಬ್ಬ ಗೌಳಿ ಸೈಕಲ್ ಮೇಲೆ ಹಾಲು ಮಾರಲು ಹೋಗುತ್ತಿದ್ದ. ಮಳೆಯಿಂದ ತಪ್ಪಿಸಿಕೊಳ್ಳಲು ಅವಸರದಿಂದ ಹೋಗುತ್ತಿದ್ದ, ಅಂತಹ ಅವಸರದೊಳಗೂ

ಮಲ್ಲಿಗಿ ಇರುವಾಗ ಮುಳ್ಯಾಕ ಮುಡಿಯುತ್ತಿ
ಕಲ್ಯಾಣದಾಗ ಬಸವಣ್ಣ । ಇರುವಾಗ
ಕಲ್ಲಿಗಿ ಯಾಕ ಕೈಮುಗಿತಿ

ಎಂದು ಹಾಡುತ್ತ ಸೈಕಲ್ ಮೇಲೆ ಓಡುತ್ತಿದ್ದ. ಮಳೆಯಿಂದ ತಪ್ಪಿಸಿಕೊಳ್ಳಲು ಇಂತಹ ಒಂದು ತ್ರಿಪದಿಯನ್ನು ಅವನು ಹಾಡುತ್ತಿದ್ದು, ಇದು ಕುಳಿತು ಬರೆದುದಲ್ಲ, ಜನರ ಮನಸಿನೊಳಗೆ ಬಸವಣ್ಣ ಸೇರಿಬಿಟ್ಟಾನ.

ನಮ್ಮ ಮನೆಯಲ್ಲಿ ಒಂದು ಕಟ್ಟಿ ಕಟ್ಟಿಸಬೇಕಾಗಿತ್ತು. ಗೌಂಡಿ ಕೈಯಾಗ ಒಬ್ಬಕಿ ಹೆಣ್ಣಾಳ ಬಂದಿದ್ದಳು. ಕಲ್ಲ ಕುಡು, ಕೆಸರ ಕುಡು ಅಂತ ಗೌಂಡಿ ಹೇಳ್ತಿದ್ದ. ಆಕೆ ಲಿಂಗಾಯತರಕಿ ಇರಲಿಲ್ಲ. ಆದರೆ ಅವಳ ಕೊರಳಲ್ಲಿ ಲಿಂಗ ಇತ್ತು. ನಾನು ಮನೆಯೊಳಗಿದ್ದವನು, ಅವಳ ಜಾತಿ ಯಾವುದು ಎಂದು ಕೇಳಿ ಬಿಡುವಾ ಎಂದು ಹೊರಗೆ ಬಂದೆ. 'ಯಾಕವಾ ನಿನ್ನ ಜಾತಿ ಯಾವುದು?' ಎಂದು ಕೇಳಿದೆ. ನಾವು ಬ್ಯಾಡರು ಎಂದಳು. ಮತ್ತ ಬ್ಯಾಡರಕಿ ಅಂತ ಹೇಳ್ತಿ, ಕೊಳ್ಳಾಗ ಲಿಂಗ ಕಟ್ಟಿಯಲ್ಲ ತಂಗಿ ಎಂದೆ. **'ಬಸವಣ್ಣಪ್ಪ ನಿಮಗಷ್ಟೆ ಲಿಂಗ ಕೊಟ್ಟಿಲ್ಲರಿ, ನಮಗೂ ಕೊಟ್ಟಾನ'** ಎಂದಳು. ನನಗೆ ಇಷ್ಟು ಸಾಹಿತ್ಯ ಓದಿದರೆ ಗೊತ್ತಾಗಿದ್ದಿಲ್ಲ, **'ಬಸವಣ್ಣಪ್ಪ ನಿಮಗಷ್ಟೆ ಲಿಂಗ ಕೊಟ್ಟಿಲ್ಲರಿ, ನಮಗೂ ಕೊಟ್ಟಾನ'** ಎನ್ನುವ ಆಕೆಯ ಮಾತಿನಿಂದ ನಾನು ದಂಗಾದೆ.

ನಾನು ಮತ್ತೆ ತಿರುಗಿ ಮನೆಯಲ್ಲಿ ಹೋದೆ. ಹತ್ತು ನಿಮಿಷ ಬಿಟ್ಟು ಮತ್ತೆ ಹೊರಗೆ ಬಂದೆ. 'ಹೌದವ್ವ ನಮಗ ಗೊತ್ತಾಗಿದ್ದಿಲ್ಲ, ಇವತ್ತ ನೀ ನನಗ ತಿಳಿಸಿಕೊಟ್ಟಿ ನೋಡು' ಎಂದೆ. 'ಬಸವಣ್ಣಪ್ಪ ಎಲ್ಲರಿಗಿ ಕೊಟ್ಟಾನ, ಮತ್ತ ನೀನು ಲಿಂಗಪೂಜಿ ಮಾಡಕೋತಿ ಏನು' ಎಂದು ಕೇಳಿದೆ. ಮಾಡಕೋತೀನ್ರಿ ಎಂದು ಹೇಳಿದಳು. ಲಿಂಗಪೂಜಿ ಮಾಡಿಕೊಳ್ಳುವಾಗ ಮಂತ್ರ ಏನಂತಿ ಎಂದು ಕೇಳಿದೆ. 'ಬಸವ ಬಸವ ಅಂತೀನ್ರಿ' ಎಂದಳು. 'ಬಸವ ಮಂತ್ರ ಪುರುಷ' ಅವನು. ಒಬ್ಬ ಸಾಮಾನ್ಯ ಹೆಣ್ಣುಮಗಳ ಮನಸಿನೊಳಗ ಇಳದಾನವ. ನಾನು ಒಳಗ್ಹೋದವನು ಇನ್ನೊಂದು ಪ್ರಶ್ನೆ ಕೇಳಬೇಕೆನಿಸಿ ಮತ್ತೆ ತಿರುಗಿ ಬಂದೆ. 'ಏನವ್ವ ನಿನ್ನ ಗಂಡ ಲಿಂಗ ಕಟ್ಯಾನೇನು?' ಎಂದು ಕೇಳಿದೆ. 'ಇಲ್ರಿ ಅವನಿಗನೂ ಕಟ್ಟಿದ್ದೆವು, ಅಂವ ಮಾಂಸ ತಿಲ್ಲಕ ಸುರು ಮಾಡದ, ಲಿಂಗ ಕಸಗೊಂಡು ಬಿಟ್ಟೆವು' ಎಂದಳು.

ಅಂದರೆ ಬಸವಣ್ಣನವರ ಬಗ್ಗೆ ನಾವು ಪ್ರಚಾರ ಮಾಡಬೇಕಾದ ಅವಶ್ಯಕತೆ ಇಲ್ಲ. ಜನರ ಮನಸ್ಸಿನಲ್ಲಿ ಬಸವಣ್ಣ ಇಳದೇಬಿಟ್ಟಾನವ.

ಕವಿಗಳಾದಂಥವರು ಪ್ರತಿಭಾವಂತರು ಕತಿ, ಕಾದಂಬರಿ, ಕಾವ್ಯ ಬರಿತಾರ. ಅಭ್ಯಾಸ ಮಾಡಿ ಬರಿತಾರ. ಆದರೆ ಜನರ ಅನುಭವದೊಳಗೆ ಬಸವಣ್ಣ ಸೇರಿಬಿಟ್ಟಿದ್ದಾನೆ. ನಮ್ಮ ಪರಂಪರೆಯೊಳಗ, ಪುರಾಣ ಬರೆದರು, ಚರಿತ್ರೆ ಬರೆದರು, ಪುರಾಣ ಚರಿತ್ರೀಕರಣ ಮಾಡಿದರು, ಚರಿತ್ರೆಯನ್ನು ಪುರಾಣೀಕರಣ ಮಾಡಿದರು. ಈ ರೀತಿ ನಾಲ್ಕು ರೀತಿಯ ಸಾಹಿತ್ಯ ಮೊದಲು ಹುಟ್ಟಿತು. ಈಗ ಮತ್ತೆ ಆಧುನಿಕ ಕಾಲದೊಳಗ ಅವರನ್ನು ಕುರಿತು ನಾಟಕ, ಕಾದಂಬರಿ, ಕಾವ್ಯ ಮೊದಲಾದ ಪ್ರಕಾರಗಳಲ್ಲಿ ಬಸವ ಸಾಹಿತ್ಯ ಹುಟ್ಟಿದೆ. ಬಹುಶಃ ಕರ್ನಾಟಕದಲ್ಲಿ ಬಸವಣ್ಣನವರನ್ನು ಕುರಿತು ಹುಟ್ಟಿದಷ್ಟು ವೈವಿಧ್ಯಮಯವಾದ ಸಾಹಿತ್ಯ ಮತ್ತೆ ಬೇರೆ ಯಾವ ಮಹಾಪುರುಷರನ್ನು ಕುರಿತೂ ಹುಟ್ಟಿಲ್ಲ. ೨೦ನೇ ಶತಮಾನವಲ್ಲ, ಪ್ರಾಚೀನ ಸಾಹಿತ್ಯದಲ್ಲೂ ಬಸವಣ್ಣನವರನ್ನು ಕುರಿತು ಬಹಳ ಸಾಹಿತ್ಯ ಹುಟ್ಟಿದೆ. ಪ್ರಾಚೀನ ಸಾಹಿತ್ಯದಲ್ಲಿ ಚಂಪು, ಷಟ್ಪದಿ, ಸಾಂಗತ್ಯ, ತ್ರಿಪದಿ, ಸ್ವರವಚನ, ಈ ಬಗೆಯಲ್ಲಿ ಒಂದೂ ಸಾಹಿತ್ಯ ಪ್ರಕಾರ ಬಿಟ್ಟಿಲ್ಲ, ಎಲ್ಲದರಲ್ಲೂ ಬಸವ ಸಾಹಿತ್ಯ ಹುಟ್ಟಿದೆ. ಇವತ್ತು ನಮ್ಮ ಆಧುನಿಕ ವಿದ್ವಾಂಸರು ಬಸವಣ್ಣನವರನ್ನು ಕುರಿತು ಎಲ್ಲ ಬಗೆಯ ಸಾಹಿತ್ಯ ಬರೆದಿದ್ದಾರೆ. ಆದರೆ ಇವರ್‍ಯಾರಿಗೂ ಬಸವಣ್ಣನ ಭುಜ ಮುಟ್ಟಲು ಸಾಧ್ಯವಾಗಿಲ್ಲ. ಅವನನ್ನು ಅರ್ಥಮಾಡಿಕೊಳ್ಳಲು ಯಾರಿಗೂ ಸಾಧ್ಯವಾಗಿಲ್ಲ. ಹಿಂದೆ ಹರಿಹರ ಬರೆದ, ಭೀಮಕವಿ ಬರೆದ, ಸಿಂಗಿರಾಜ ಬರೆದ, ಕೊಡೆಕಲ್ಲ ಬಸವಣ್ಣನವರ ಮಗ ರಾಚಪ್ಪಯ್ಯ ಅವನೂ 'ನಂದಿಯಾಗಮ ಲೀಲೆ' ಬರೆದ. ಯಾರು ಬರೆದರೂ ಸಹ ಬಸವಣ್ಣನ ಮೊಳಕಾಲು ಮುಟ್ಟಲು ಆಗಿಲ್ಲ. ಅವನ ಭುಜ ಅವನ ತಲೆ ಮುಟ್ಟುವುದು ಕಡೆಗೇ ಉಳಿಯಿತು. ಬಸವಣ್ಣನವರನ್ನು ಅರ್ಥಮಾಡಿಕೊಂಡು ಬರೆಯುವುದು ಇವತ್ತಿಗೂ ಯಾರಿಗೂ ಸಾಧ್ಯವಾಗಿಲ್ಲ.

ಇದು ಸಾಧ್ಯ ಇದ್ರ ಹರಿಹರನಿಗೆ ಮಾತ್ರ ಸಾಧ್ಯ ಇತ್ತು. ಹರಿಹರ ಕವಿಯೂ ಹೌದು, ಋಷಿಯೂ ಹೌದು. ಹೀಗಾಗಿ ಹರಿಹರನಿಗೆ ಮಾತ್ರ ಸಾಧ್ಯವಿತ್ತು. ಆದರೆ ಅವನು ಅರ್ಧ ಶೈವ ಅರ್ಧ ಲಿಂಗಾಯತ ಆಗಿ ಬಿಟ್ಟಿದ್ದ. ಹೀಗಾಗಿ ಅಲ್ಲಿಯೂ ಸರಿಯಾದ ಬಸವಣ್ಣ ಮೂಡಿ ಬರಲಿಲ್ಲ. ಆದರೆ ಎಲ್ಲರಿಗಿಂತ ಸರಿಯಾಗಿ ಬಸವಣ್ಣನವರನ್ನು ಅರ್ಥಮಾಡಿಕೊಂಡವನು ನನ್ನ ದೃಷ್ಟಿಯಲ್ಲಿ ಹರಿಹರ. ಅವನು ಹೇಳುತ್ತಾನೆ 'ಎಲೆ ಬಸವ ಬಸವಣ್ಣ ಬಸವರಾಜ ಬಸವಿದೇವ ಏನಯ್ಯ ನಿನ್ನ ನೇಮ ಇನ್ನಾರಿಗುಂಟು' ಅಂತ ಹೇಳ್ತಾ ಹೇಳ್ತಾ ಕೊನೆಗೆ ಹೇಳುತ್ತಾನೆ 'ಬಸವರಾಜ ಬಸವರಾಜ ನಿನ್ನ ಬಣ್ಣಿಸಲು ಎನ್ನಳವಲ್ಲ'. ನಿನ್ನ ಬಣ್ಣಿಸಲು ನನಗೆ ಸಾಮರ್ಥ್ಯವೇ ಇಲ್ಲ ಎನ್ನುತ್ತಾನೆ. ಅಂತಹ ದೊಡ್ಡ ಕವಿ ಕೈಚೆಲ್ಲಿ ಬಿಡುತ್ತಾನೆ. ಇಂತಹ ಒಬ್ಬ ಮಹಾಪುರುಷನ ಕುರಿತು, ಇವತ್ತು ಇಲ್ಲಿ ವಿಚಾರ ಸಂಕಿರಣ ನಡೆದಿದೆ. ಆಧುನಿಕ ಸಾಹಿತ್ಯದಲ್ಲಿ ಬಸವಣ್ಣ ಹೇಗೆ ಮೂಡಿಬಂದಿದ್ದಾರೆ ಎಂಬ ವಿಷಯವಾಗಿ ನೀವೆಲ್ಲ ವಿಚಾರ ಮಾಡುತ್ತಿರುವುದು ಬಹಳ ಸಂತೋಷ. ಒಂದು ವಚನ ಮೊನ್ನೆ ನನ್ನ ಗಮನಕ್ಕೆ ಬಂದಿತು.

ಶೀಲವಂತರೆಲ್ಲಾ ಶೀಲವಂತರಯ್ಯಾ
ಭಾಷೆವಂತರೆಲ್ಲಾ ಭಾಷೆವಂತರಯ್ಯಾ

ವ್ರತವಂತರೆಲ್ಲಾ ವ್ರತವಂತರಯ್ಯಾ
ಸತ್ಯವಂತರೆಲ್ಲಾ ಸತ್ಯವಂತರಯ್ಯಾ
ನೇಮವಂತರೆಲ್ಲಾ ನೇಮವಂತರಯ್ಯಾ
ಕೂಡಲ ಚೆನ್ನಸಂಗಮದೇವಯ್ಯಾ
ಸಂಗನಬಸವಣ್ಣನೊಬ್ಬನೇ ಲಿಂಗವಂತ.

ಬಸವಣ್ಣನೊಬ್ಬನೇ ಲಿಂಗವಂತ, ಉಳಿದವರೆಲ್ಲ ಖಾನೆಸುಮಾರಿ ಲಿಂಗವಂತರು. ಅವನೊಬ್ಬನೇ ಲಿಂಗಾಯತ ಎಂದು ಹೇಳಬೇಕಾದರೆ ಬಸವಣ್ಣನ ವ್ಯಕ್ತಿತ್ವ ಎಂತಹದಿತ್ತು ಎನ್ನುವುದು ಇದರಿಂದ ನಮಗೆ ತಿಳಿದುಬರುತ್ತದೆ. ಬಸವಣ್ಣನ ಬಗ್ಗೆ ಚರಿತ್ರೆ ಮತ್ತು ಸಾಹಿತ್ಯ ಬರೆಯುವವರು ಎರಡು ವಿಷಯ ಗಮನಿಸಬೇಕು. ಸರಿಯಾದ ಚರಿತ್ರೆ ಅರ್ಥ ಮಾಡಿಕೊಳ್ಳಬೇಕು. ಚರಿತ್ರೆ ಕೆಡಿಸಿ ಬರೆಯಬಾರದು. ಸರಿಯಾದ ತತ್ತ್ವ ಅರ್ಥ ಮಾಡಿಕೊಳ್ಳಬೇಕು. ತತ್ತ್ವ ಮತ್ತು ಚರಿತ್ರೆ ಇವೆರಡನ್ನು ಅರ್ಥ ಮಾಡಿಕೊಳ್ಳದೆ ನಿಮ್ಮ ಮನಸ್ಸಿಗೆ ಬಂದಂತೆ ಏನೇನೋ ಕಲ್ಪಿಸಿ, ಕತೆ, ಕಾದಂಬರಿ, ಕಾವ್ಯ ಬರೆದರೆ ಬಸವಣ್ಣನಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಆದುದರಿಂದ ಒಂದು ಸರಿಯಾದ ಚರಿತ್ರೆ, ಸರಿಯಾದ ಸಿದ್ಧಾಂತ ಬರೆಯಬೇಕು.

ಬಿಜಾಪೂರದೊಳಗ ಸಚಿವರಾದ ಎಂ.ಬಿ.ಪಾಟೀಲ ಅವರು ನನಗ ವೈಯಕ್ತಿಕವಾಗಿ ಕರೆದು ಐದು ಕೋಟಿ ರೂ. ಚೆಕ್ ಕುಡ್ತೀನಿ ತಗೊಂಡು ಹೋಗ್ರಿ ಅಂದ್ರು. ಬಸವಣ್ಣನವರನ್ನು ಜಗತ್ತಿನ ಎಲ್ಲರು ಓದುವಂಥ ಒಂದು ಗ್ರಂಥ ಆಗಬೇಕು ಎಂದರು. ದುಡ್ಡು ಕೊಡುವವರಿದ್ದಾರೆ. ಬಸವಣ್ಣನವರನ್ನು ಅರ್ಥ ಮಾಡಿಕೊಳ್ಳುವ ಜನರಿಲ್ಲ. ನಮಗೆ ಬಸವಣ್ಣನ ಚರಿತ್ರೆ ಗೊತ್ತಿಲ್ಲ. ಬಸವಣ್ಣನ ಸಿದ್ಧಾಂತ ಗೊತ್ತಿಲ್ಲ. ಕೆಲವು ವರ್ಷಗಳ ಹಿಂದೆ ಕಲಬುರ್ಗಿಯ ಶರಣ ಬಸವೇಶ್ವರ ಸಂಸ್ಥಾನದೊಳಗ, ದಾಸೋಹದ ಬಗ್ಗೆ ಭಾಷಣ ಮಾಡಲು ಬಂದಿದ್ದೆ. ಶರಣಬಸವಪ್ಪ ಅಪ್ಪ ಅವರು ಏಳು ದಿನದ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಏಳೂ ದಿನ, ಎಲ್ಲರೂ ದಾಸೋಹದ ಬಗ್ಗೆ ಮಾತನಾಡಬೇಕು. ಭಾಷಣ ಮಾಡುವವರೆಲ್ಲ ಭಾಷಣ ಮಾಡಿ ಹೋಗಬೇಕು. ಹಿಂದಿನ ಭಾಷಣವನ್ನೂ ಕೇಳಿರಬಾರದು, ಮುಂದಿನ ಭಾಷಣವನ್ನೂ ಕೇಳಬಾರದು. ನಾನೂ ಭಾಷಣ ಮಾಡಿದೆ, ಹೋದೆ.

೧೫ ದಿನಗಳ ನಂತರ ಒಬ್ಬರು ನನಗೊಂದು ಪತ್ರ ಬರೆದರು, ನೀವು ಏಳು ದಿವಸ ಭಾಷಣ ಮಾಡಿದರಲ್ರಿ, ಎಲ್ಲರೂ ಬಹಳ ಚಲೋ ಭಾಷಣ ಮಾಡಿದಿರಿ. ಆದರ ಒಬ್ಬರ ದಾಸೋಹದಂಗ ಇನ್ನೊಬ್ಬರ ದಾಸೋಹ ಇರಲಿಲ್ಲ ಎಂದು ಬರೆದಿದ್ದರು. ಅವರ ದಾಸೋಹವೇ ಬೇರೆ, ಇವರ ದಾಸೋಹವೇ ಬೇರೆ. ಅದಕ್ಕೆ ನನಗೊಂದು ಸಂಶಯ ಹುಟ್ಟಿದೆ, ಯಾವುದು ನಿಜವಾದ ದಾಸೋಹ ಎಂದು. ಹೀಗೆ ನಾವು ನಮನಮಗೆ ತಿಳಿದಂತೆ ಸಿದ್ಧಾಂತವನ್ನು ತತ್ತ್ವವನ್ನು ಪ್ರಚಾರ ಮಾಡುತ್ತ ಹೊರಟಿದ್ದೇವೆ. ಒಂದು ಹತ್ತು ಮಂದಿ ಸೇರೋಣ. ಒಂದು ಚರಿತ್ರೆ ಎಂದರೆ ಎಲ್ಲರೂ ಅದೇ ಚರಿತ್ರೆ ಹೇಳಬೇಕು. ಒಂದು ಸಿದ್ಧಾಂತವೆಂದರೆ ಎಲ್ಲರೂ ಅದೇ ಸಿದ್ಧಾಂತವನ್ನು ಹೇಳಬೇಕು. ನಾವು ಅಲ್ಲಿಯೂ ಸಲ್ಲುವವರು, ಇಲ್ಲಿಯೂ ಸಲ್ಲುವವರು. ಅಲ್ಲಿ ಹೋದಾಗ ಅವರಂತೆ ಹೇಳುವುದು, ಇಲ್ಲಿ ಹೋದಾಗ ಇವರಂತೆ ಹೇಳುವುದು. ಇದು ಎಲ್ಲಿಯವರೆಗೆ ನಾವು ಬಿಡುವುದಿಲ್ಲವೋ

ಅಲ್ಲಿಯವರೆಗೆ ಬಸವಣ್ಣನವರಿಗೆ ಅನ್ಯಾಯ ಮಾಡುತ್ತಲೇ ಇರುತ್ತೇವೆ. ಒಂದು ಹತ್ತು ಜನ ತಯಾರಾಗಿ ಈ ಸಿದ್ಧಾಂತವನ್ನು ಒಪ್ಪಿಕೊಳ್ಳೋಣ, ಈ ಚರಿತ್ರೆಯನ್ನು ಒಪ್ಪಿಕೊಳ್ಳೋಣ.

ಮೇಘ ಜಲಂಗಳೆಲ್ಲ ಮುತ್ತಾದಡೆ
ಸಪ್ತ ಸಮುದ್ರಕ್ಕೆ ಉದಕವೆಲ್ಲಿಯದೋ
ಬಟ್ಟಬಯಲೆಲ್ಲ ಗಟ್ಟಿಗೊಂಡರೆ
ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವು ಇನ್ನೆಲ್ಲಿಯದೋ
ಹುಟ್ಟಿದ ಅಬಲೆಯರೆಲ್ಲರೂ ನೆಟ್ಟನೆ ಶಿವಜ್ಞಾನಿಗಳಾದರೆ
ಭವದ ಬಳ್ಳಿಗೆ ಬೀಜ ಎಲ್ಲಿಯದೋ
ಕೂಡಲ ಚೆನ್ನಸಂಗಯ್ಯ ಲಕ್ಷಕೊಬ್ಬ ಭಕ್ತ ಕೋಟಿಗೊಬ್ಬ ಶರಣ

ಭಕ್ತನಿಗಿಂತ ಶರಣ ದೊಡ್ಡವ. ಭಕ್ತ ಆಗಬಹುದು, ಶರಣ ಆಗುವುದು ಕಠಿಣ. ಭಕ್ತನೇ ಶರಣ ಎಂದು ಹೇಳಬೇಡಿ. ಏಕೆಂದರೆ ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣಾಗಲು ಸಾಧ್ಯ. ಇದು ಶರಣ ಚಳುವಳಿ. ಭಕ್ತ ಅಂದರೆ ಏನು? ಶರಣ ಎಂದರೆ ಏನು? ಬಿಡಿಸಿ ಹೇಳಬೇಕು. ಭಕ್ತ ವ್ಯಕ್ತಿವಾದಿ, ಶರಣ ಸಮಾಜವಾದಿ. ಅಹಂ ಬ್ರಹ್ಮಾಸ್ಮಿ–ನಾನು ಬ್ರಹ್ಮ ಆಗಬೆಕು, ನಾನು ಬ್ರಹ್ಮ ಆಗಬೇಕು, ಅಷ್ಟೆ. ನಾನು ಸೋಹಂ. ಬಸವಣ್ಣ ಹೇಳಿದ **'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ'**. ಸೋಹಂ ಅದು ಅಪೂರ್ಣ ಸಿದ್ಧಾಂತ. ದಾಸೋಹಂ ಪೂರ್ಣ ಸಿದ್ಧಾಂತ. ಇಂತಹ ವಿಚಾರಗಳೆಲ್ಲ ನಾವು ಎಲ್ಲಿಯವರೆಗೂ ಸರಿಯಾಗಿ ಪ್ರತಿಪಾದನೆ ಮಾಡುವುದಿಲ್ಲವೋ ಅಲ್ಲಿವರೆಗೆ ನಾವು ಮಾಡಿದಂಥ ಕೆಲಸವೆಲ್ಲ ವ್ಯರ್ಥ ಆಗುತ್ತದೆ. ಆದುದರಿಂದ ಒಂದು ಹತ್ತು ಜನ ತಯಾರಾದರೆ ಸಾಕು, ಎಲ್ಲರೂ ಒಂದನ್ನೇ ಹೇಳುವುದನ್ನು ಕಲಿಯಬೇಕು. ಲಿಂಗಿ ಬ್ರಾಹ್ಮಣರು ಎಂದರೆ ವೀರಶೈವರು. ಹಾಗೆಂದರೇನೆಂದು ಸ್ಪಷ್ಟಪಡಿಸಬೇಕು. ನೀವೇನು ವೀರಶೈವರಿದ್ದೀರಲ್ಲ ನೀವು ಲಿಂಗಾಯತರಲ್ಲ ನೀವು, ಲಿಂಗಿಬ್ರಾಹ್ಮಣರು ನೀವು ಎಂದು ಹೇಳಬೇಕು. ಇಂತಹ ಸತ್ಯ ಚರಿತ್ರೆಗಳನ್ನು ಸತ್ಯ ತತ್ತ್ವಗಳನ್ನು ಕುರಿತು ಅಧ್ಯಯನ ನಡೆಯಬೇಕು. ಅಂದಾಗ ಮಾತ್ರ **'ಬಿ.ಡಿ.ಜತ್ತಿ ವಚನ ಅಧ್ಯಯನಪೀಠ'** ಅದು ಸಾರ್ಥಕ ಆಗುತ್ತದೆ. ಅಂತಹ ಒಂದು ಸಾರ್ಥಕ ಕೆಲಸ ಇಲ್ಲಿ ನಡೆಯಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ; ನಮಸ್ಕಾರ.

೧೪–೧೨–೨೦೧೪ರಂದು 'ಆಧುನಿಕ ಕನ್ನಡ ಸಾಹಿತ್ಯ : ಬಸವಣ್ಣ' ವಿಷಯದ ಮೇಲೆ ಕಲಬುರ್ಗಿ ಬಸವ ಸಮಿತಿಯಲ್ಲಿ ನಡೆದ ವಿಚಾರ ಸಂಕಿರಣದ ಉದ್ಘಾಟನ ಭಾಷಣದ ಲಿಖಿತ ರೂಪ.

ಆಕರ : ಮಾರ್ಗ ಸಂಪುಟ–೮

೨೫
ಕಿಟೆಲ್ ವಿಚಾರ ಸಂಕಿರಣ : ಉದ್ಘಾಟನೆ

ವೇದಿಕೆಯ ಗಣ್ಯರೇ, ಸಭೆಯ ಸ್ನೇಹಿತರೆ.

ಕಿಟೆಲ್ ಅವರ ಬಗೆಗಿನ ಗೌರವ, ಮಾನ್ಯ ಮಿತ್ರರಾದ ಜೆ.ಎಸ್.ಸದಾನಂದ ಅವರ ಪ್ರೀತಿ, ಆತ್ಮೀಯ ನಾವಡ ಅವರ ಒತ್ತಾಯ ಕಾರಣವಾಗಿ, ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇನೆ. ಕಿಟೆಲ್ ಅವರನ್ನು ಇನ್ನಷ್ಟು ಅರ್ಥಮಾಡಿಕೊಳ್ಳಲು ಈ ವಿಚಾರಸಂಕಿರಣ ನೆರವಾಗಲೆಂದು ಆಶಿಸುತ್ತ ಇದನ್ನು ಉದ್ಘಾಟಿಸುತ್ತೇನೆ.

ಪಾಶ್ಚಿಮಾತ್ಯರು ವ್ಯಾಪಾರಕ್ಕಾಗಿ ಬಂದು ರಾಜಕೀಯವಾಗಿ, ಧರ್ಮಪ್ರಚಾರಕ್ಕಾಗಿ ಬಂದು ಸಾಹಿತ್ಯಕವಾಗಿ ವಿಸ್ತರಿಸಿಕೊಂಡರು. ಹೀಗೆ ಸಾಹಿತ್ಯಕವಾಗಿ ವಿಸ್ತರಿಸಿಕೊಂಡ ಧರ್ಮಪ್ರಚಾರಕರಲ್ಲಿ ಡಾ. ಕಿಟೆಲ್ ಅವರು ಗಣ್ಯರೆನಿಸಿದ್ದಾರೆ. ಎಷ್ಟು ಗಣ್ಯರೆಂದರೆ ವಿದೇಶೀ ವಿದ್ವಾಂಸರ ಸಾಹಿತ್ಯಿಕ ಕೊಡುಗೆ ಎಂದಾಕ್ಷಣ, ನಮ್ಮ ನಾಲಗೆಯ ತುದಿಗೆ ಬಂದು ನಿಲ್ಲುವ ಮೊದಲು ಹೆಸರು ಕಿಟೆಲ್ ಅವರದು.

ಕಳೆದ ಕೆಲವು ದಶಕಗಳಿಂದ ಕನ್ನಡ ನಾಡಿನಲ್ಲಿ ಕಿಟೆಲ್ ಅವರನ್ನು ಕುರಿತು ಅನೇಕ ವಿಚಾರಸಂಕಿರಣಗಳು ಜರುಗಿವೆ. ಪುಸ್ತಕಗಳು ಪ್ರಕಟವಾಗಿವೆ. ನಿಘಂಟುವಿನಿಂದಾಗಿ ಅವರು ನಮ್ಮ ಮಧ್ಯೆ ಒಂದು ದಂತಕತೆಯಾಗಿಯೂ ಬೆಳೆದಿದ್ದಾರೆ. ಆದರೆ ಅವರು ಸೃಷ್ಟಿಸಿದ ಮತ್ತು ಅವರನ್ನು ಕುರಿತು ಸೃಷ್ಟಿಯಾದ ಸಾಹಿತ್ಯ ಅಭ್ಯಾಸಿಗಳಿಗೆ ಸುಲಭವಾಗಿ ಸಿಗುವುದಿಲ್ಲ. ಹೀಗಾಗಿ ಇಂಥ ವಿಚಾರ ಸಂಕಿರಣಗಳಲ್ಲಿ ವಿದ್ವಾಂಸರಾದವರು ತಮಗೆ ಲಭ್ಯವಾದ ಕೃತಿಗಳನ್ನು, ಸಂಘಟಕರು ಒದಗಿಸಿದ ಮಾಹಿತಿಗಳನ್ನು ಗಮನಿಸಿ ಮಾತನಾಡುವುದು ಅನಿವಾರ್ಯವಾಗಿದ್ದೆ. ಹೀಗಿದ್ದೂ ಈ ವಿಚಾರಸಂಕಿರಣದಿಂದಾಗಿ ಕಿಟೆಲ್ ಅವರ ಬಗೆಗಿನ ನಮ್ಮ ತಿಳಿವಳಿಕೆ ಇನ್ನಷ್ಟು ವರ್ಧಿಸಲೆಂದು ಹಾರೈಸುತ್ತೇನೆ.

ಇತ್ತೀಚೆ ಲಭಿಸಿದ, ಪ್ರಯತ್ನಿಸಿದರೆ ಇನನ್ನೂ ಲಭಿಸಬಹುದಾದ ಹೊಸ ಸಾಮಗ್ರಯನ್ನು ಬಳಸಿ, ನಾವು ಕಿಟೆಲ್, ಅವರರ ಚರಿತ್ರೆಯನ್ನು ಪುನಃ ರಚಿಸಬೇಕು. ಸಾಧನೆಯನ್ನು ಪುನಃ ಮೌಲೀಕರಣಗೊಳಿಸಬೇಕು. ಕಿಟೆಲ್ ಅವರು ಮಂಗಳೂರು ಧಾರವಾಡ, ಕೊಡಗು, ಕೊನೆಗೆ

ತಾಯ್ನಾಡು ಹೀಗೆ ೩-೪ ನೆಲೆಗಳಲ್ಲಿ ಬದುಕಿದ ಕಾರಣ ಅವರ ಜೀವನ ಚರಿತ್ರೆಯ ವಿಷಯ ಸಂಗ್ರಹಕ್ಕಾಗಿ ಈ ಎಲ್ಲ ಸ್ಥಳಗಳಿಗೆ ಭೇಟ್ಟಿ ನೀಡಬೇಕಾಗುತ್ತದೆ.ಡಾ. ಹಾವನೂರು, ಡಾ. ಜೆಂಕ್‌ಸಿನ್‌ರಂಥವರಿಂದ ಮಾತ್ರ ಈ ಹೊಸ ಮಾಹಿತಿ ಸಂಗ್ರಹ ಕಾರ್ಯ ಕೈಗೂಡಬಹುದಾಗಿದೆ.

ಒಂದುವೇಳೆ ಹೊಸ ಮಾಹಿತಿ ಸಿಗದಿದ್ದರೂ ಹಳೆಯದನ್ನು ಹೊಸದೃಷ್ಟಿಯಿಂದ ನೋಡಿ, ಅವರ ಸಾಹಿತ್ಯಿಕ ಕೊಡುಗೆಯನ್ನು ಮರು ಮೌಲ್ಯಮಾಪನ ಮಾಡುವುದು ಇಂದಿನ ಅಗತ್ಯವಾಗಿದೆ. ಈ ವರೆಗಿನ್ನು ಮೌಲ್ಯಮಾಪನ ನವೋದಯ ಸಂದರ್ಭದ ಬರೆವಣಿಗೆಯಾಗಿದೆ. ನಮ್ಮ ವಿಷಯವಸ್ತು ಆರಾಧನಾ ಮನೋಭಾವದಿಂದ ಅನ್ಯ ವಿಷಯವನ್ನು ಅನಾದರ ಭಾವದಿಂದ ನೋಡುತ್ತಲಿದ್ದ ಕಾಲವದು. ಹೀಗಾಗಿ ಅನ್ಯರಾದ ಪಾಶ್ಚಿಮಾತ್ಯರ ಆಡಳಿತವನ್ನು ಈ ವರೆಗೆ ದೋಷೈಕ ದೃಷ್ಟಿಯಿಂದ ಚಿತ್ರಿಸಿದ್ದೇವೆ. ನಮ್ಮವರೇ ಆದ ರಾಜಶಾಹಿ ಮತ್ತು ಪುರೋಹಿತ ಶಾಹಿಗಳು ನಮ್ಮನ್ನು ಶೋಷಿಸುತ್ತಿದ್ದ ಪ್ರಸಂಗದಲ್ಲಿ ಆಗಮಿಸಿದ ಬ್ರಿಟಿಶರು ನಮ್ಮಲ್ಲಿ ಕ್ರಮಬದ್ಧ ಆಡಳಿತನ್ನು ವಿಸ್ತರಿಸಿಕೊಳ್ಳು ಪ್ರೇರಣೆನೀಡಿದರು. ಮುಕ್ತಶಿಕ್ಷಣ, ಸಾಮಾಜಿಕ ಸಮಾನತೆ, ಪ್ರಜಾಸತ್ತೆ ಮೊದಲಾದ ಮೌಲ್ಯಗಳ ತಿಳುವಳಿಕೆ ಮೂಡಿಸಿದರು. ಇದೆಲ್ಲವನ್ನು ನೆನೆದರೆ ನಮಗೆ ಬ್ರಿಟಿಶರಿಂದ ಹಾನಿಗಿಂತ ಲಾಭವೇ ಅಧಿಕವಾಗಿದೆಯೆನಿಸುತ್ತದೆ. ಈ ಲಾಭಗಳ ಬೆಳಕಿನಲ್ಲಿ ನಿಂತು ಅವರ ಆಡಳಿತನ್ನು ಮರುಮೌಲ್ಯಮಾಪನ ಮಾಡುವುದು ಅವಶ್ಯವಿದೆ. ಇದೇ ರೀತಿ ಕಿಟೆಲ್ ಕುರಿತ ಆ ಕಾಲದ ಆರಾಧನಾಶೈಲಿಯ ಬರವಣಿಗೆಯ ಬಗ್ಗೆಯೂ ಮರುಚಿಂತನೆ ಮಾಡಬೇಕಾಗಿದೆ.

ಕಿಟೆಲ್ ಅವರ ಜೀವನ ಚರಿತ್ರೆ ಮತ್ತು ಸಾಧನೆಗಳ ಬಗ್ಗೆ ಬಹಳಷ್ಟು ಸಾಹಿತ್ಯ ಪ್ರಕಟವಾಗಿದೆ. ಹೀಗಿದ್ದೂ ಅಲ್ಲಿ ಅಭ್ಯಾಸಿಗಳಿಂದ ಒಂದಿಷ್ಟು ಉಪೇಕ್ಷೆ ಉತ್ಪ್ರೇಕ್ಷೆ ಸೇರಿಕೊಂಡಿವೆ. ಚರಿತ್ರೆಯನ್ನೇ ಕುರಿತು. ಹೇಳುವುದಾದರೆ ಅವರು ಕರ್ನಾಟಕಕ್ಕೆ ಬಂದುದು ಒಬ್ಬ ಪಾದ್ರಿಯಾಗಿ, ಅವರ ಮುಖ್ಯ ಕಾರ್ಯ ಧರ್ಮಪ್ರಸಾರ, ಗೌಣಕಾರ್ಯ ಸಾಹಿತ್ಯಸೃಷ್ಟಿ. ಹೀಗಿದ್ದೂ ೪೦ ವರ್ಷ ಪಾದ್ರಿಯಾಗಿ ಅವರು ಮಾಡಿದ ಕೆಲಸವನ್ನು ಉಪೇಕ್ಷಿಸಿ, ಸಾಹಿತ್ಯಿಕ ಕೊಡುಗೆಯ ಬಗ್ಗೆ ಬರೆಯುತ್ತ ಬಂದಿದ್ದೇವೆ. ಇನ್ನು ಮೇಲಾದರೂ ಅವರ ಪಾದ್ರಿಕಾರ್ಯದ ವಿಷಯವಾಗಿ ಅಧ್ಯಯನ ನಡೆಸುವುದು ಅವಶ್ಯವಿದೆ.

ಕಿಟೆಲ್ ಅವರ ಸಾಹಿತ್ಯ ಕೊಡುಗೆ ವೈವಿಧ್ಯಮಯವಾದುದು. ನಮ್ಮ ಕವಿಗಳು ಹೇಳುವಂತೆ ಅದನ್ನು ಧಾರ್ಮಿಕ ಮತ್ತು ಲೌಕಿಕವೆಂದು ಬಿಡಿಸಿ ವಿವೇಚಿಸಬಹುದು. ಗದ್ಯ ಪದ್ಯ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡ ಅವರ ಧಾರ್ಮಿಕ ಸಾಹಿತ್ಯದ ಧೋರಣೆಗೆ ಅನುದಾರವಾಗಿದೆ. ಛಂದೋಂಬುಧಿಯನ್ನು ಸಂಪಾದಿಸುವಲ್ಲಿ ಆರಂಭದ ದೇವತಾಸ್ತುತಿ ಕೈಬಿಟ್ಟಿದ್ದಾರೆ. "ಹರಹರಾ ಶ್ರೀ ಚೆನ್ನಸೋಮೇಶ್ವರ" ಮುದ್ರಿಕೆ ತೆಗೆದುಹಾಕಿ "ನರನೆಲಾ ಕೇಳ್ದಿಪ್ಪುದೀ ಬುದ್ಧಿಯಾ" ಎಂಬ ಹೊಸವಾಕ್ಯ ಸೇರಿಸಿದ್ದಾರೆ. ಈ ಕ್ರಮವನ್ನು ಆ ಕಾಲದ ಆರ್. ನರಸಿಂಹಾಚಾರ್ ಮೊದಲಾದವರು ವಿರೋಧಿಸಿದ್ದಾರೆ. ಕಿಟೆಲೆ ಮೋಗ್ಲಿಂಗ್‌ರು ಧಾರ್ಮಿಕ ಸಾಹಿತ್ಯ ವಿಷಯವಾಗಿ ತಾಳಿದ ಧೋರಣೆ, ಬಳಸಿದ ಭಾಷೆಯನ್ನು ಮಧುರ ಚೆನ್ನರು ಟೀಕಿಸಿದ್ದಾರೆ. ಇದೆಲ್ಲ ನಿಜಿದ್ದರೂ ಕಿಟೆಲ್‌ರ ಧಾರ್ಮಿಕ ಸಾಹಿತ್ಯದಲ್ಲಿ ನಾನು ಮೆಚ್ಚಿಕೊಂಡ ಕೃತಿ" "ಕ್ರೈಸ್ತಸಭಾ ಚರಿತ್ರೆ". ಸುಮಾರು ೭೦೦ಪುಟಗಳ ಈ ಕೃತಿಯಲ್ಲಿ ಚರ್ಚ್ ಇತಿಹಾಸ, ಚರ್ಚ್ ಪರಿಕಲ್ಪನೆ ಅಸ್ತಿತ್ವಕ್ಕೆ ಬಂದ ರೀತಿ, ಅದನ್ನು ಬೆಳೆಸುವಲ್ಲಿ ಪಾದ್ರಿಗಳು ಅನುಭವಿಸಿದ ಕಷ್ಟ ಇತ್ಯಾದಿಗಳ ಚಿತ್ರವಿದೆ. ಈ ಮಹತ್ವಪೂರ್ಣ ಕೃತಿಯನ್ನು ಕ್ರೈಸ್ತ ಸಂಸ್ಥೆಗಳು ಮತ್ತೆ ಪ್ರಕಟಿಸುವುದು ಅವಶ್ಯವಿದೆ.

ಗದ್ಯದಂತೆ ಕಿಟೆಲ್‌ರ ಪದ್ಯ ಸಾಹಿತ್ಯವನ್ನೂ ಹೊಸ ದೃಷ್ಟಿಯಿಂದ ನೋಡಬೇಕಾಗಿದೆ. ಏಸುವನ್ನು ಕುರಿತು ಇವರು ಬರೆದ ಪದ್ಯಕೃತಿ "ಕಥಾಮಾಲೆ"ಯ ಬಗ್ಗೆ ಬಹಳಷ್ಟು ಜನ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ. ನನಗೆ ಮಾತ್ರ ಅದು ಪದ್ಯ ಕೃತಿಯೇ ಹೊರತು, ಕಾವ್ಯ ಕೃತಿಯಲ್ಲವೆನಿಸುತ್ತದೆ. ನಮ್ಮ ಆಡು ಭಾಷೆಯನ್ನು ಗ್ರಂಥಭಾಷೆಯಾಗಿಸಿದ ಕ್ರೈಸ್ತ ಪಾದ್ರಿಗಳಿಗೆ ಕಾವ್ಯಭಾಷೆ ರೂಪಿಸುವ ಕಲೆ ಗೊತ್ತಿಲ್ಲ. ಆ ಕಾಲದಲ್ಲಿ ಒಂದಿಷ್ಟು ಛಂದಸ್ಸಿನ ಅಭ್ಯಾಸ ಮಾಡಿದ್ದ ಅವರಿಗೆ ಗ್ರಂಥಭಾಷೆಯನ್ನು ಪದ್ಯದಲ್ಲಿ ಲಯಾತ್ಮಕವಾಗಿ ದುಡಿಸುವುದು ಮಾತ್ರ ಸಾಧ್ಯವಾಯಿತು. ಸಾಮಾನ್ಯವಾಗಿ ನಮ್ಮ ಧಾರ್ಮಿಕ ಕೃತಿಗಳು, ಧರ್ಮದೊಂದಿಗೆ ಸಾಹಿತ್ಯವನ್ನು ಮೈಗೂಡಿಸಿಕೊಂಡು ಬೆಳೆದಿವೆ. ಇದಕ್ಕೆ ವಿರುದ್ಧವೆಂಬಂತೆ ಕಿಟೆಲ್ ಅವರ ರಚನೆಗಳಲ್ಲಿ ಧರ್ಮವಿದೆಯೇ ಹೊರತು ಸಾಹಿತ್ಯವಿಲ್ಲ.

ಹೀಗೆ ಧಾರ್ಮಿಕವಲ್ಲದೆ ಕ್ರೈಸ್ತರು ಲೌಕಿಕ ಸಾಹಿತ್ಯವನ್ನು ಬರೆದಿದ್ದು ಕ್ರೈಸ್ತಗೀತೆಗಳು ಇಲ್ಲಿ ಪ್ರಮುಖವೆನಿಸಿವೆ. ಕನ್ನಡದಲ್ಲಿ ನಿಜಗುಣ ಶಿವಯೋಗಿ, ಪುರಂದರದಾಸ ಮೊದಲಾದವರ ಗೀತಸಾಹಿತ್ಯಕ್ಕೆ ಒಂದು ಸುದೀರ್ಘ ಪರಂಪರೆಯಿದ್ದರೂ ಅಕ್ಷರವೃತ್ತ ಮಾತ್ರವೃತ್ತ, ಅಂಶ ವೃತ್ತಗಳ ಬಾಹುಳ್ಯ ಆ ಪ್ರಕಾರವನ್ನು ಗೌಣಗೊಳಿಸಿದ್ದಿತು. ಕ್ರೈಸ್ತ ಮಿಶನರಿಗಳು ಮಾತ್ರ ಗೀತಸಾಹಿತ್ಯ ಜನರನ್ನು ಮುಟ್ಟುವ ಪ್ರಭಾವಶಾಲಿ ಪ್ರಕಾರವೆಂದು ಬಗೆದು ಅದನ್ನು ವಿಶಿಷ್ಟರೀತಿಯಲ್ಲಿ ವಿಸ್ತರಿಸಿದರು. ಇದರಿಂದಾಗಿ ನಮ್ಮಲ್ಲಿ ಭಾವಗೀತೆಯೆಂಬ ಹೊಸ ಪರಂಪರೆ ಬೆಳೆಯಿತು. ಇದು ಕ್ರೈಸ್ತರ ವಿಶೇಷ ಕೊಡುಗೆಯೆಂದೇ ಹೇಳಬೇಕು.

ಪಾದ್ರಿಗಳ ಇನ್ನೊಂದು ಕೊಡುಗೆಯೆಂದರೆ ಭಾಷೆಗೆ ಸಂಬಂಧಪಟ್ಟ ಶಾಸ್ತ್ರಗಳ ರಚನೆ. ಈ ಭಂಡಾರದಲ್ಲಿ ನಿಘಂಟು, ಛಂದಸ್ಸು, ವ್ಯಾಕರಣ ಶಾಸ್ತ್ರಗಳಿವೆಯೇ ಹೊರತು ಅಲಂಕಾರ ಶಾಸ್ತ್ರವಿಲ್ಲ. ಇದು ಗಮನಿಸಬೇಕಾದ ಅಂಶ. ನಿಘಂಟು ವಿದ್ವತ್ತಿನ ರಾಚನಿಕ ಶಿಸ್ತು. ಈ ಶಾಸ್ತ್ರವನ್ನು ರಚಿಸಿದ ಬಹಳಷ್ಟು ಜನ ಕ್ರೈಸ್ತರಲ್ಲಿ ಕೆಲವರು ಮಾತ್ರ ಇದೇ ಶಿಸ್ತಿನ ವ್ಯಾಕರಣ, ಛಂದಸ್ಸು ರಚಿಸಿದರು. ಅಲಂಕಾರ ಹೀಗಲ್ಲ. ಅದು ಭರತ ಆನಂದವರ್ಧನ ಮೊದಲಾದ ದಾರ್ಶನಿಕರ ಅನ್ವೇಷಣೆಯಾಗಿದೆ. ಅಂಥವರಿಗೆ ಮಾತ್ರ ಅಲಂಕಾರದ ಆತ್ಮದರ್ಶನ ಸಾಧ್ಯವಾಗುತ್ತದೆ. ಕ್ರೈಸ್ತರ ಕಾವ್ಯತತ್ವವೆನ್ನುವುದು ಸಾಮಾನ್ಯವಾಗಿ ವಸ್ತು, ಘಟನೆ, ತಂತ್ರ ಹೀಗೆ ಕಾವ್ಯದ ಶರೀರಕ್ಕೆ ಸೀಮಿತವಾಗಿದ್ದು, ಅವರಿಗೆ ರಸ, ಧ್ವನಿ ಇತ್ಯಾದಿಗಳನ್ನೊಳಗೊಂಡ ನಮ್ಮ ಅಲಂಕಾರದ ಆತ್ಮ ನಿಲುಕದ ವಿಷಯ. ಹೀಗಾಗಿ ಕಿಟೆಲ್ ಮೊದಲಾದವರು ಅಲಂಕಾರಶಾಸ್ತ್ರ ರಚನೆ ಮಾಡಲಿಲ್ಲವೆಂದು ತೋರುತ್ತದೆ.

ಒಟ್ಟಾರೆ ಕಿಟೆಲ್ ಮೊದಲಾದ ಪಾದ್ರಿಗಳ ಬಗ್ಗೆ ಮಾತನಾಡುವಾಗ ಉಪೇಕ್ಷಿತ ಆಯಾಮಗಳ ಬಗ್ಗೆ ಹೆಚ್ಚು ಗಮನ ಕೊಡುವುದು, ಈ ವರೆಗೆ ಗಮನಿಸಿದ ಆಯಾಮಗಳನ್ನು ಹೊಸದೃಷ್ಟಿಯಿಂದ ಅವಲೋಕಿಸುವುದು ಅವಶ್ಯವಾಗಿದ್ದು ಈ ವಿಚಾರ ಸಂಕಿರಣ ಅಂಥ ಸಂಗತಿಗಳಿಗೆ ವೇದಿಕೆಯಾಗಲೆಂದು ಹಾರೈಸುತ್ತೇನೆ. ಇದಲ್ಲದೆ ಕಿಟೆಲ್ಲರ ಎಲ್ಲ ಲೇಖನ, ಗ್ರಂಥಗಳ ಪ್ರಕಟನೆಗೂ ವಿದ್ವಾಂಸರು ಪ್ರಯತ್ನಿಸಲೆಂದು ಆಶಿಸುತ್ತೇನೆ.

ಆಕರ : ಮಾರ್ಗ ಸಂಪುಟ–೭

■■

೨೬
'ಚರಿತ್ರೆಯ' ವಿಚಾರ ಸಂಕಿರಣ : ಉದ್ಘಾಟನೆ

ಸನ್ಮಾನ್ಯ ಸಚಿವರಾದ ಶ್ರೀ ಗೋವಿಂದ ಕಾರಜೋಳ ಅವರೇ,

ಸನ್ಮಾನ್ಯ ಶಾಸಕರಾದ ಶ್ರೀ ಅಪ್ಪು ಪಟ್ಟಣಶೆಟ್ಟಿ-ಶ್ರೀ ಎಂ.ಬಿ. ಪಾಟೀಲ ಅವರೇ ಸಭಿಕರೇ,

ಇಂದು ಕರ್ನಾಟಕ ಸರಕಾರದ ಪುರಾತತ್ವ ಇಲಾಖೆ ಮತ್ತು ವಿಜಾಪುರದ ಬಿ.ಎಲ್.ಡಿ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ ಈ ವಿಚಾರ ಸಂಕಿರಣ ಜರುತ್ತಲಿದೆ ಈ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಗೋವಿಂದ ಕಾರಜೋಳ ಅವರು ಸಾಂಸ್ಕೃತಿಕ ಕಾರ್ಯ ಕಾರ್ಯಕ್ರಮಗಳಿಗೆ ಉದಾರವಾಗಿ ಅನುದಾನ ನೀಡುತ್ತಿಲಿದ್ದಾರೆ. ಈ ಹಣಕ್ಕೆ ನ್ಯಾಯ ಒದಗಿಸುವ ಹೊಣೆ ಸಮ್ಮಂಥ ವಿದ್ವಾಂಸರ ಮೇಲಿದೆ. ಇದೇ ರೀತಿ ಮಾನ್ಯ ಶಾಸಕರಾದ ಶ್ರೀ.ಎಂ.ಬಿ.ಪಾಟೀಲ ಅವರು ವಚನಪಿತಾಮಹ ಫ.ಗು.ಹಳ್ಳಕಟ್ಟಿ ಸಂಶೋಧನ ಕೇಂದ್ರಸ್ಥಾಪಿಸಿ ಬಿ.ಎಲ್.ಡಿ. ಶಿಕ್ಷಣ ಸಾಂಸ್ಕೃತಿಕ ಆಯಾಮ ಜೋಡಿಸಿದ್ದಾರೆ. ಈ ಸಾಂಸ್ಕೃತಿಕ ಆಯಾಮಕ್ಕೂ ನ್ಯಾಯ ಒದಗಿಡುವ ಹೊಣೆ ನಮ್ಮಂಥ ವಿದ್ವಾಂಸರ ಮೇಲಿದೆ. ಇಷ್ಟು ಪೂರ್ವಪೀಠಿಕೆಯೊಂದಿಗೆ ನನ್ನ ಮಾತನ್ನು ಮುಂದುವರಿಸುತ್ತೇನೆ.

'ಸಾಹಿತ್ಯ'ದ ಅಭ್ಯಾಸಿಯಾಗಿರುವ ನಾನು 'ಚರಿತ್ರೆಯ' ವಿಚಾರಸಂಕಿರಣದಲ್ಲಿ ಇಂದು ಭಾಗವಹಿಸುತ್ತಲಿದ್ದೇನೆ. ಇದಕ್ಕೆ ಕಾರಣ ನಮ್ಮ ತಲೆಮಾರಿನ ಶಿಕ್ಷಣದಲ್ಲಿ ಈ ಈಗಿನಂತೆ Specilization ಪದ್ಧತಿ ಇರಲಿಲ್ಲ. ಹಿರಿಯ ಮಗ ಮನೆಯ ಎಲ್ಲ ಕೆಲಸ ಮಾಡಬೇಕಾಗುತ್ತದೆ. ಅದೇ ರೀತಿ ಅಂದು ಹಿರಿಯ ತಲೆಮಾರಿನವರಾದ ನಾವು ನಮ್ಮ ಶಿಕ್ಷಣದ ಎಲ್ಲ ವಿಷಯಗಳನ್ನು ಓದಬೇಕಾಗಿತ್ತು. ಈ ಮೇರೆಗೆ ನಾನು ಸಾಹಿತ್ಯದೊಂದಿಗೆ ಚರಿತ್ರೆಯನ್ನೂ, ಸಾಹಿತ್ಯಕೃತಿಗಳೊಂದಿಗೆ ಶಾಸನ ಮೊದಲಾದವುಗಳನ್ನೂ ಅಭ್ಯಾಸ ಮಾಡಬೇಕಾಯಿತು. ಇಂಥ ಅಭ್ಯಾಸಿಯಾದ ಕಾರಣ ಮತ್ತು ಈ ಜಿಲ್ಲೆಯವನಾದ ಕಾರಣ ನನ್ನನ್ನು ನೀವು ಆಮಂತ್ರಿಸಿರುವಿರೆಂದು ಭಾವಿಸುತ್ತೇನೆ.

ಬದುಕು ಬಹುಕ್ಷೇತ್ರೀಯ ಒಂದು ಸಂಕೀರ್ಣ ವ್ಯವಸ್ಥೆ. ಈ ಕ್ಷೇತ್ರಗಳು ಪರಸ್ಪರ ಪೂರಕ. ಹೀಗಾಗಿ ಬಹುಕ್ಷೇತ್ರೀಯ ಅಭ್ಯಾಸಿಯಾದವನಿಂದ ಮಾತ್ರ ಒಂದು ವಿಷಯದ ಸಂಶೋಧನೆ ಹೆಚ್ಚು ಬಿಚ್ಚಿಕೊಳ್ಳುತ್ತದೆ. ಉದಾ: ೧೧ನೆಯ ಶತಮಾನದವನಾಗಿರುವ ವಿಜಾಪುರದ ಕವಿ ನಾಗಚಂದ್ರನು "ನಿಜ ವಿಭವೊಂದಯಂ ಸಫಲಮಾಯ್ತೆನೆ ಮಲ್ಲಿಜಿನೇಂದ್ರ ಗೇಹಮಂ ವಿಜಯಪುರಕ್ಕಲಂಕರಣಮಾಗಿರೆ" ನಿರ್ಮಿಸಿದೆನೆಂದು ತನ್ನ ಕಾವ್ಯದಲ್ಲಿ ಹೇಳುತ್ತಾನೆ. ವಿಜಾಪುರದವನಾದ ಇವನು ಈ ನಗರಕ್ಕೆ

ಅಲಂಕಾರಪ್ರಾಯವೆನಿಸುವ ಮಲ್ಲಿನಾಥ ತೀರ್ಥಂಕರ ಬಸದಿಯನ್ನು ಕಟ್ಟಿಸಿದನೆಂದು ಈ ಪದ್ಯ ತಿಳಿಸುತ್ತದೆ. ಇವನ ಬಗ್ಗೆ ಸಾಹಿತ್ಯದಿಂದ ಇಷ್ಟು ಮಾತ್ರ ಗೊತ್ತಾಗುತ್ತದೆ. ಒಂದು ವೇಳೆ ಈ ಸಾಹಿತ್ಯ ಓದಿದವನು ಶಾಸನಾಭ್ಯಾಸಿಯೂ ಆಗಿದ್ದರೆ, ನಾಗಚಂದ್ರನ ಕೆಲವು ಪದ್ಯಗಳು ಇಲ್ಲಿಯ ಗೋಳಗುಮ್ಮಟ ಮ್ಯೂಜಿಯಂ ಶಾಸನದಲ್ಲಿವೆಯೆಂದೂ, ಈತನ ಮೊಮ್ಮಗ ಬಾಬಾನಗರ ಗ್ರಾಮದ ಒಂದು ಶಾಸನ ಬರೆದಿರುವನೆಂದೂ, ಈ ವಂಶದವರು ಮುಂದಿನ ದಿನಗಳಲ್ಲಿ ಕೊಲ್ಲಾಪುರಕ್ಕೆ ವಲಸೆ ಹೋಗಿ ಅಲ್ಲಿಯ ಶಿಲಾಹಾರ ಅರಸರಲ್ಲಿ ಸಚಿವರಾಗಿದ್ದ ವಿಷಯ ಇತ್ತೀಚೆ ಲಭ್ಯವಾದ ತಾಮ್ರಶಾಸನದಿಂದ ತಿಳಿದುಬರುವುದೆಂದೂ ಹೇಳುತ್ತಾನೆ. ಇದೇ ರೀತಿ ಕಲ್ಯಾಣಕ್ರಾಂತಿ ಸಂದರ್ಭದಲ್ಲಿ ಜಗದೇವ-ಮೊಲ್ಲೆಬೊಮ್ಮಯ್ಯಗಳಿಂದ ಬಿಜ್ಜಳನ ಕೊಲೆಯಾದುದನ್ನು ಸಾಹಿತ್ಯ ಓದಿದವನು ತಿಳಿಸುತ್ತಾನೆ. ಹೆಚ್ಚಿನದಾಗಿ ಜಾನಪದ ಕ್ಷೇತ್ರಕಾರ್ಯ ಮಾಡಿದವನು ಮಾತ್ರ ಇಂದಿನ ಆಲಮೇಲ ದೇಶಮುಖರು ಈ ಜಗದೇವನ ವಂಶಜರೆಂಬ ಹೊಸ ಅಂಶವನ್ನು ಜೋಡಿಸುತ್ತಾನೆ. ಹೀಗೆ ಹಲವು ಶಿಸ್ತುಗಳ ಅಧ್ಯಯನದಿಂದ ಸಂಶೋಧನೆ, ಪ್ರಸ್ತುತ ವಿಜಾಪುರ ಜಿಲ್ಲೆಯ ಸಂಶೋಧನೆ ಪೂರ್ಣಗೊಳ್ಳುತ್ತದೆ. ಈ ವಿಚಾರ ಸಂಕಿರಣದಲ್ಲಿ ಭಾಗವಹಿಸುವ ವಿದ್ವಾಂಸರು ಇಂಥ ಅಂತರ್ಶಿಸ್ತೀಯ ಅದರಲ್ಲಿಯೂ ಮಾಹಿತಿನಿಷ್ಠ, ಅದಕ್ಕಿಂತ ವಿಶ್ಲೇಷಣನಿಷ್ಠ, ಅದಕ್ಕಿಂತ ವ್ಯಾಖ್ಯಾನನಿಷ್ಠಗಳೆಂಬ ಮೂರು ಆಯಾಮಗಳನ್ನೊಳಗೊಂಡ ಪ್ರಬಂಧ ಮಂಡಿಸುವರೆಂದು ಆಶಿಸುತ್ತೇನೆ.

ಈ ವಿಚಾರಸಂಕೀರಣದ ವಿಷಯ ೫ ತಾಲೂಕುಗಳ ವಿಜಾಪುರ ಜಿಲ್ಲೆಯ ಪುರಾತತ್ವ ಮತ್ತು ಚರಿತ್ರೆಗಳ ಶೋಧ. ಬಿಡಿಸಿ ಹೇಳುವುದಾದರೆ ಭೂಮಿಯಲ್ಲಿ ಮರೆಯಾಗಿರುವ ಬದುಕನ್ನು ಕುರಿತುದು ಪುರಾತತ್ವ, ಭೂಮಿಯ ಮೇಲೆ ಬೆಳೆದು ಬಂದಿರುವ ಬದುಕನ್ನು ಕುರಿತುದು ಚರಿತ್ರೆ. ಇವುಗಳಲ್ಲಿ ಒಂದು ಇತಿಹಾಸಪೂರ್ವಕಾಲಕ್ಕೆ ಇನ್ನೊಂದು ಇತಿಹಾಸಕಾಲಕ್ಕೆ ಸಂಬಂಧಪಟ್ಟಿರುತ್ತವೆ.

ಕರ್ನಾಟಕದಲ್ಲಿ ಈವರಗೆ ಶೋಧಿಸಲಾದ ಪುರಾತತ್ವದ ನೆಲೆಗಳು ಅಂದರೆ ಭೂಗತ ಗ್ರಾಮಗಳು ೨೫೦೭. ಇವುಗಳಲ್ಲಿ ವಿಜಾಪುರ ಜಿಲ್ಲೆಗೆ ಸಂಬಂಧಿಸಿದುವು ೧೬೬. ಅವು ಮುದ್ದೇಬಿಹಾಳ ತಾಲೂಕಿನಲ್ಲಿ ೭೩, ಇಂಡಿ ತಾಲೂಕಿನಲ್ಲಿ ೩೮, ಸಿಂದಗಿ ತಾಲೂಕಿನಲ್ಲಿ ೨೫, ವಿಜಾಪುರ ತಾಲೂಕಿನಲ್ಲಿ ೧೮, ಬಾಗೇವಾಡಿ ತಾಲೂಕಿನಲ್ಲಿ ೧೨ ಶೋಧಿಸಲ್ಪಟ್ಟಿವೆ. ಕಾಲದ ದೃಷ್ಟಿಯಿಂದ ಬಾಗೇವಾಡಿ ತಾಲೂಕಿನ ನೆಲೆಗಳು ತುಂಬ ಪ್ರಾಚೀನ. ವಿಜಾಪುರ ಮುದ್ದೇಬಿಹಾಳ ತಾಲೂಕಿನ ನೆಲೆಗಳು ಆ ಮೇಲಿನವು. ಇಂಡಿ ತಾಲೂಕಿನ ನೆಲೆಗಳು ಮತ್ತೂ ಆಮೇಲಿನವು. ಸಿಂದಗಿ ತಾಲೂಕಿನ ನೆಲೆಗಳು ಇನ್ನೂ ಆಮೇಲಿನವು. ಇಲ್ಲೆಲ್ಲ ಶಿಲಾಗೋರಿ, ಮೃತ್ ಪಾತ್ರೆ, ಕಪ್ಪು ಚಿತ್ರ ಬಿಡಿಸಲಾದ ಕೆಂಪು ಮಡಕೆ, ಕಲ್ಲಿನ ಕೊಡಲಿ, ಸುತ್ತಿಗೆ ಸಿಕ್ಕಿವೆ.

ಚರಿತ್ರೆಯನ್ನು ಕಟ್ಟುವಲ್ಲಿ ವಿಗ್ರಹ-ವಾಸ್ತುಗಳಂಥ ಸ್ಮಾರಕಗಳು, ಸಾಹಿತ್ಯ ಶಾಸನಗಳಂಥ ಬರವಣಿಗೆಗಳು ನಂಬಿಕೆ ಆಚರಣೆ ಭಾಷೆ ಸಾಹಿತ್ಯಗಳನ್ನೊಳಗೊಂಡ ಜಾನಪದ ಸಾಮಗ್ರಿಗಳು ನೆರವಾಗುತ್ತವೆ. 'ಆರ್ಕಿಟಕ್ಚರ್ ಆಫ್ ವಿಜಾಪುರ', 'ವಿಜಾಪುರ ಜಿಲ್ಲೆಯ ದೇವಾಲಯಗಳು 'ಆದಿಲ್ ಶಾಹಿ ಸ್ಮಾರಕಗಳು' ಮೊದಲಾದ ಕೃತಿಗಳು ಈ ಜಿಲ್ಲೆಯ ವಿಗ್ರಹ ವಾಸ್ತುಗಳ ಶೋಧಕಾರ್ಯವನ್ನು ತಕ್ಕಮಟ್ಟಿಗೆ ಪೂರೈಸಿವೆ. 'ವಿಜಾಪೂರ ಜಿಲ್ಲೆಯ ಶಾಸನಗಳು', 'ಉರ್ದು ಪರ್ಶಿಯನ್ ಅರೇಬಿಕ್ ಇನ್ ಸ್ಕ್ರಿಪ್ಷನ್ಸ್ ಆಫ್ ಕರ್ನಾಟಕ' ಮೊದಲಾದ ಕೃತಿಗಳು ಈ ಜಿಲ್ಲೆಯ ಶಾಸನ ಶೋಧಕಾರ್ಯವನ್ನು

ಪೂರೈಸಿವೆ. ಈ ಜಿಲ್ಲೆಯ ಪ್ರಾಚೀನ ಕನ್ನಡ ಸಾಹಿತ್ಯಕೃತಿಗಳು ಬಹುಮಟ್ಟಿಗೆ ಪ್ರಕಟವಾಗಿದೆ. ಆದರೆ ಒಂದೆರಡನ್ನು ಬಿಟ್ಟರೆ ಉರ್ದುಕೃತಿಗಳ ಅನುವಾದಕಾರ್ಯ ತುಂಬ ಅಲಕ್ಷಿತವಾಗಿದೆ. ಹೀಗಾಗಿ ಇಲ್ಲಿಯ ಬಿ.ಎಲ್. ಡಿ ಶಿಕ್ಷಣ ಸಂಸ್ಥೆ "ಉರ್ದು ಕೃತಿಗಳ ಸಮಗ್ರ ಅನುವಾದ ಯೋಜನೆ"ಯನ್ನು ಸಿದ್ಧಪಡಿಸಿ, ಕರ್ನಾಟಕ ಸರಕಾರಕ್ಕೆ ಸಲ್ಲಿಸಿದೆ. ಮಾನ್ಯ ಸಂಸ್ಕೃತಿ ಸಚಿವರಾದ ಶ್ರೀ ಗೋವಿಂದಕಾರಜೋಳ ಅವರು ಅದನ್ನು ತೀವ್ರ ಮಂಜೂರ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ಏಕೆಂದರೆ ಉರ್ದು ಸಾಹಿತ್ಯಕೃತಿಗಳಲ್ಲಿ ಜಗದ್ಗುರು ಇಬ್ರಾಹಿಮ್ ಆದಿಲ್‌ಶಾಹಿ ಮೊದಲಾದವರ ವಿವರಗಳೂ, ಅನೇಕ ಮಹತ್ವದ ಸಂಗತಿಗಳು ಹುದುಗಿಕೊಂಡಿವೆ. ಉದಾ: ತೋಫು ಮೊದಲು ಅಹಮ್ಮದನಗರದಲ್ಲಿತ್ತು. ನಿಜಾಂ ಶಹನ ಆಜ್ಞೆಯಂತೆ ರೋಮ್ ದೇಶದ ಕಾರಾಗಾರಿಯೊಬ್ಬನು ಅದನ್ನು ತಯಾರಿಸಿದ್ದಾನೆ. ರಾಮರಾಜನ ಜೊತೆಯ ಯುದ್ಧದಲ್ಲಿ ಅದು ನಿಜಾಮ ಶಹನ ಜೊತೆಗೆ ಇತ್ತು. ಈ ತೋಫನ್ನು ಒಯ್ದು ಮ್ಯೂಜಿಯಂನಲ್ಲಿ ಇಡಲಾಗಿದೆ. ಅದು ಅಹಮ್ಮದನಗರದಿಂದ ಒಂದು ಕೋಸು ಅಂತರದ ಮೇಲಿದೆ. ಅದರ ಗುರುತು ಈಗಲೂ ಅಲ್ಲಿ ಇದೆ. ಮುಲಕ ಮೈದಾನ ತೋಫಿನ ಉದ್ದವು ಪುರುಷನ ಒಂಬತ್ತು ಕೈಗಳಷ್ಟು ಇದೆ. ತೋಫಿನ ಪರಿಘವೂ ಒಂಬತ್ತು ಕೈಗಳಷ್ಟು ಇದೆ. ತೋಪಿನ ಮದ್ದು ತುಂಬುವ ಬಾಯಿ ತುಂಬ ವಿಸ್ತೀರ್ಣವಾಗಿದೆ. ಅದರಲ್ಲಿ ಒಬ್ಬ ದಪ್ಪ ಮನುಷ್ಯ ಕುಳಿತು ತನ್ನ ರುಮಾಲನ್ನು ಸುತ್ತಿಕೊಳ್ಳುವಷ್ಟು ಅಗಲವಾಗಿದೆ. ತೋಫು ನೋಡತಕ್ಕಂಥ ವಸ್ತುವಾಗಿದೆ. ಇಂಥ ಸಾವಿರಾರು ಸಂಗೀತಗಳು ಈ ಕೃತಿಯಲ್ಲಿವೆ.

ಉರ್ದು ಪರ್ಶಿಯನ್ ಅರೇಬಿಕ್ ಶಾಸನಗಳನ್ನು ಕುರಿತು ಹೇಳುವುದಾದರೆ ಬಬಲಾದಿ, ಬಾಗೇವಾಡಿ, ಬಾದಾಮಿ, ಸೇಗಾವ್, ನಾಲ್ವತ್ತವಾಡ, ಪೀರಾಪುರ ಗ್ರಾಮಗಳಲ್ಲಿ ತಲಾ ಒಂದರಂತೆ ಒಟ್ಟು ೬, ವಿಜಾಪುರದಲ್ಲಿ ೧೦೪–ಹೀಗೆ ಈ ಜಿಲ್ಲೆಯಲ್ಲಿ ೧೧೦ ಶಾಸನಗಳು ಲಭಿಸಿ ಪ್ರಕಟವಾಗಿವೆ. ಇವುಗಳಲ್ಲಿ ಒಂದರೆಡು ಮಾಹಿತಿ ಹೀಗಿವೆ:

೧. ಉಪಲಿ ಬುರಜನ್ನು ೩ನೆಯ ಇಬ್ರಾಹಿಮ್ ಆದಿಲ್ ಶಾಹನ ಅಧಿಕಾರಿ ಹೈದರ್ ಖಾನ್ ೧೫೮೪ಲ್ಲಿ ಕಟ್ಟಿಸಿದನು.

೨. ಇಬ್ರಾಹಿಮ್ ರೋಜಾವನ್ನು ತಾಜ್ ಸುಲ್ತಾನನು ೧.೫೦.೯೦೦ ಹೊನ್ನು ವ್ಯಯಿಸಿ ಕಟ್ಟಿಸಿದನು.

೩. ತಾಜಬಾವಡಿಯನ್ನು ಮಲಿಕ್ ಸಂದಲ್‌ನುಫಕೀರರ ಸ್ನಾನಾದಿಗಳಿಗಾಗಿ ಜನರ ವಿಶ್ರಾಂತಿಗಾಗಿ ೧೬೫೪ರಲ್ಲಿ ಕಟ್ಟಿಸಿದರು.

ಇತ್ಯಾದಿ ಮಾಹಿತಿಯು ಉರ್ದು ಶಾಸನಗಳನ್ನು ಬಿಟ್ಟರೆ ಬೇರೆ ಯಾವ ದಾಖಲೆಗಳಲ್ಲಿ ಸಿಗುವುದು ಅಪರೂಪವೆಂದೇ ಹೇಳಬೇಕು.

ಈ ಜಿಲ್ಲೆಯಲ್ಲಿ ೪೧೯ ಕನ್ನಡ ಸಂಸ್ಕೃತ ಶಾಸನಗಳಿವೆ. ಅವು ಸಿಂದಗಿ ತಾಲೂಕಿನಲ್ಲಿ ೧೦೮, ವಿಜಾಪುರ ತಾಲೂಕಿನಲ್ಲಿ ೮೬, ಇಂಡಿ ತಾಲೂಕಿನಲ್ಲಿ ೭೯, ಬಾಗೇವಾಡಿ ತಾಲೂಕಿನಲ್ಲಿ ೭೫, ಮುದ್ದೇಬಿಹಾಳ ತಾಲೂಕಿನಲ್ಲಿ ೭೧ ಲಭ್ಯವಾಗಿವೆ. ಇವು ರಾಷ್ಟ್ರಕೂಟ, ಕಲ್ಯಾಣ, ಚಾಲುಕ್ಯ ಕಲಚೂರಿ ಯಾದವ, ಆದಿಲ್‌ಶಾಹಿ, ವಿಜಯನಗರ ರಾಜರ ಕಾಲದಲ್ಲಿ ಹುಟ್ಟುವೆ. ಇವುಗಳಲ್ಲಿ

ಬಹುಪಾಲು ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿವೆ. ತೀರ ಪ್ರಾಚೀನ ೫ ಶಾಸನಗಳಲ್ಲಿ ಮೊದಲಿನದು ಹೂವಿನ ಹಿಪ್ಪರಗಿಯದಿದ್ದು, ರಾಷ್ಟ್ರಕೂಟ ನೃಪತುಂಗನ ಕಾಲದ್ದಾಗಿದೆ (೮೬೨). ಇದರ ಮೇಲೆ ನೃಪತುಂಗನ ಶಿಲ್ಪವಿದೆ.) ೫ನೆಯದು ಕಾರಜೋಳ ಗ್ರಾಮದ್ದಾಗಿದ್ದು ಇದೂ ರಾಷ್ಟ್ರಕೂಟರ ಕಾಲದ್ದಾಗಿದೆ. (೯೫೭)ಈ ಗ್ರಾಮವನ್ನು ಇಲ್ಲಿ ಕರಂಜೋಳ ಎಂದು ಕರೆಯಲಾಗಿದೆ.

ಈ ಐದೂ ತಾಲೂಕುಗಳಲ್ಲಿ ಸುಮಾರು ೨೨ ಆಡಳಿತ ವಿಭಾಗಗಳಿದ್ದವು. ಅವು ತರ್ದವಾಡಿ ೧೦೦೦, ಆರುನೂರು ಬಾಡ, ಅಂಕುಲಗೆ ೫೦, ಎಳಮೇಲ ೫೦, ಬಾಗೆ ೫೦, ಕಾರಕುರುವ ೪೦, ನಾಲ್ವತುಂಬಾಡ ಖೇಡ ೩೬ ಬೇವಿನೂರ ೩೬, ರೂಗಿ ಕುಮ್ಮಸಿ ೩೦ ಮುತ್ತಗೆ ೩೦ ಮುಂಬಾಡ ೩೦, ಕನ್ನವುರಿ ೧೨, ವಾಯ್ವದ ೧೨, ಸಿಂದಗಿ ೧೨, ಸೋಗಿಲು ೧೨, ಹಡಗಲಿ ೧೨, ಹೆಬ್ಬಾಳ ೧೨, ಎಂಡುಬಾಡ, ಕೆಂಪನಕುಳಿ ೬, ತಂಬ ೬. ಇವುಗಳಲ್ಲಿ ಕೆಲವು ಒಂದರೊಳಗೊಂದು ಅಂತರ್ಗತವಾಗಿದ್ದವು.

ಈ ಜಿಲ್ಲೆಯಲ್ಲಿ ಕೇವಲ ಮಾಂಡಲಿಕ, ಸಾಮಂತರು ಆಳಿದ್ದಾರೆ. ಚಕ್ರವರ್ತಿಗಳು ಆಳಿಲ್ಲವಾದರೂ ಆದಿಲ್‌ಶಾಹಿಗಳನ್ನು ಚಕ್ರವರ್ತಿಗಳೆಂದು ಪರಿಗಣಿಸಬಹುದಾಗಿದೆ. ಆದಿಲ್ ಶಾಹಿಗಳ ಬಳಿಕ ಹಲವಾರು ದೇಶಗತಿಗಳು ಇಲ್ಲಿ ಆಳಿಕೆ ನಡೆಸಿವೆ. ಅವು: ಕೋಲಾರ, ಜೈನಾಪುರ, ನಾಲ್ವತ್ತವಾಡ, ಆಲಮೇಲ ಇತ್ಯಾದಿ.

ಕಲ್ಯಾಣ ಚಾಲುಕ್ಯರ ಇಮ್ಮಡಿ ತೈಲಪನು ೧೦೮ ಬಯಲುಗಾಳೆಗ ಮಾಡಿ, ೮೮ ಕೋಟೆ ಗೆದ್ದನೆಂದು ಮನಗೊಳಿ ಶಾಸನ (೧೧೬೧), ಇದೇ ವಂಶದ ೬ನೆಯ ವಿಕ್ರಮಾದಿತ್ಯನು ಧಾರಾನಗರಿಯನ್ನು ಸುಟ್ಟು, ಮಂಟಪವನ್ನು ಕಂಚಿಯನ್ನು ಸುಟ್ಟು ಚೋಳನ ರುಂಡವನ್ನು, ಉಜ್ಜಯಿನಿಯನ್ನು ಸುಟ್ಟು, ಬೆಳ್ಳಿಯ ಗುಂಡನ್ನು ಪಡೆದನೆಂದು ಮಲಗಾಣ ಶಾಸನ (೧೧೦೦), ಕಲಚೂರಿ ಕನ್ನರನು ೧೨ ಜನರನ್ನ ಕೊಂದು ೫೭ ಕಾಳಗ ಗೆದ್ದನೆಂದು ಚಡಚಣ ಶಾಸನ (೧೦೬೭)ತಿಳಿಸುತ್ತವೆ.

ಕನ್ನಡ ನಾಡಿನ ಒಂದು ಅಪರೂಪದ ಶಾಸನ ಹಿರೇಬೇವಿನೂರಿನಲ್ಲಿದೆ. ಬೊಪ್ಪಣ ಚಮೂಪತಿಯ ಸತಿ ಸಿರಿದೇವಿಯಕ್ಕ 'ವ್ರತಸಾರ ಸಮುಚ್ಚಯ' ಗ್ರಂಥದಲ್ಲಿ ಹೇಳಿದ ಎಲ್ಲ ವ್ರತಗಳನ್ನು ಪೂರೈಸಿ 'ಕ್ಷಿತಿರುಹ ನೋಂಪಿ' ಅಂದರೆ ಮರಗಳನ್ನು ನೆಡುವ ವ್ರತವನ್ನು ಕೈಕೊಂಡು ೪೧ ಮಾವಿನ ಮರ, ೬ ನೇರಿಲ ಮರ, ೬ ಹುಣಸಿ ಮರ ಇತ್ಯಾದಿಗಳನ್ನು ನೆಡಿಸಿ, ಇವುಗಳನ್ನು ಕಾಯಲು ಬನಕಾರನನ್ನು ನೇಮಿಸಿ, ಅವನ ವಾಸಕ್ಕಾಗಿ ಮನೆ ಕಟ್ಟಿಸಿಕೊಟ್ಟಳೆಂದು ಈ ಶಾಸನ ಹೇಳುತ್ತದೆ. ಅವಳೂ ಮರಗಳೆಂದರೆ ಭೂಲೋಕದ ಕಲ್ಪವೃಕ್ಷಗಳೆಂದು ಭಾವಿಸಿದ್ದಳು. ಒಂದು ಮರ ಕಡಿದರೆ ಒಬ್ಬ ಬ್ರಾಹ್ಮಣನನ್ನು ಕೊಂದ ಪಾಪವೆಂದು ನಂಬಿದ ನಮ್ಮ ನಾಡಿನಲ್ಲಿ ಇವಳ ಈ ವ್ರತ ಗಮನಾರ್ಹವಾಗಿದೆ. ಇಂದಿನ ಪರಿಸರವಾದಿಗಳು ಅವಶ್ಯ ಗಮನಿಸಬೇಕಾದ ಉದಾಹರಣೆ ಇದು. ಇದೇ ರೀತಿ ಊರೂರಿಗೆ ಕೆರೆ ಕಟ್ಟಿಸುತ್ತಿದ್ದು ಇಂಥ ೨೦ ಕೆರೆಗಳ ಉಲ್ಲೇಖ ಇಲ್ಲಿಯ ಶಾಸನಗಳಲ್ಲಿದೆ.

ಧಾರ್ಮಿಕ ಕ್ಷೇತ್ರಕ್ಕೆ ಬಂದರೆ ಈ ಜಿಲ್ಲೆಯ ಬಾಗೆವಾಡಿ ತಾಲೂಕಿನ ಭೈರೊಡಗಿಯ ಮೂಲ ಹೆಸರು ಬೌದ್ಧವಾಡಗಿ. ಹೀಗಾಗಿ ಇದು ಬೌದ್ಧ ಕ್ಷೇತ್ರವಾಗಿದ್ದಿತು. ಇಂಡಿಯಲ್ಲಿಯೂ ಬೌದ್ಧ ದೇವಾಲಯವಿದ್ದುದಾಗಿ ಶಾಸನ ತಿಳಿಸುತ್ತದೆ.

ಇಲ್ಲಿ ಪಾಶುಪತ ಶೈವದ ಮಲ್ಲಿಕಾರ್ಜುನ, ಸೋಮೇಶ್ವರ, ಕಲಿದೇವ ಹೆಸರಿನ ದೇವಾಲಯಗಳು ಅಧಿಕ. ಈ ಪಾಶುಪತ ಶೈವಧರ್ಮದ ಸಿಂಹಪರ್ಷೆ ಶಾಖೆಯಲ್ಲಿ ಪರ್ವತಾವಳಿ, ಭುಜಂಗಾವಳಿ ಹೆಸರಿನ ಉಪಶಾಖೆಗಳು ಅಸ್ತಿತ್ವದಲ್ಲಿದ್ದವು. ಇವುಗಳಲ್ಲಿ ಪರ್ವತಾವಳಿ ಶಾಖೆಯು "ಎಲಮೇಲ ಸಿಂಹಪರ್ಷೆಯ ಅಭಿನವ ಪಾಶುತ" ಹೆಸರಿನ ನೂತನ ಶಾಖೆಯನ್ನು ಆರಂಭಿಸಿದ್ದು, ಇದರಲ್ಲಿ ಮಲೆಯಾಳ ಪಂಡಿತನೆಂಬ ಗುರು ಪ್ರಸಿದ್ಧಿ ಹೊಂದಿದ್ದನು. ಭುಜಂಗಾವಳಿ ಶಾಖೆಯು ವಿಜಾಪುರ ಮುತ್ತಿಗೆಗಳಲ್ಲಿ ಅಸ್ತಿತ್ವದಲ್ಲಿದ್ದಿತು.

ಈ ಜಿಲ್ಲೆಯಲ್ಲಿ ನಾಥಪಂಥದ ಸಂಗಮೇಶ್ವರ ದೇವಾಲಯಗಳೂ ಅಧಿಕ ಸಂಖ್ಯೆಯಲ್ಲಿವೆ. ಬಸವಣ್ಣ ಬಾಗೇವಾಡಿಯಿಂದ ಕಪ್ಪಡಿ ಸಂಗಮಕ್ಕೆ ಬಂದುದನ್ನು ನೋಡಿದರೆ ಅವನು ಬ್ರಾಹ್ಮಣಧರ್ಮವನ್ನು ತೊರೆದು ನಾಥಪಂಥ ಸ್ವೀಕರಿಸಿರಬಹುದೆಂದೂ, ಮುಂದೆ ಆ ಧರ್ಮದ ನೆಲಗಟ್ಟಿನ ಮೇಲೆ ಲಿಂಗಾಯತವೆಂಬ ಹೊಸ ಧರ್ಮ ಸ್ಥಾಪಿಸಿರಬಹುದೆಂದೂ ಹೇಳಬಹುದಾಗಿದೆ. ಕಪ್ಪಡಿ ಸಂಗಮ' ಶಬ್ದದಲ್ಲಿರವ 'ಕಪ್ಪಡಿ' ಎಂಬುದು ಬಹುಶಃ 'ನಾಥಪಂಥೀಯ ಸನ್ಯಾಸಿ' ಎಂಬ ಅರ್ಥವನ್ನು ಸೂಚಿಸುತ್ತದೆ. ಕಪ್ಪ ನಿಂಬರಗಿ, ಕಪ್ಪಗಲ್ಲು, ಕಪ್ಪೆ ಚೆನ್ನಿಗರಾಯ 'ಕಪ್ಪೆ ಅರಭಟ್ಟ' ಶಬ್ದಗಳಲ್ಲಿಯೂ ಬಹುಶಃ ಇದೇ ಅರ್ಥವಿರಬಹುದು.

'ದೇವಾಲಯ ಕಟ್ಟಿಸಿ ಲಿಂಗಸ್ಥಾಪಿಸಿ, ಅದಕ್ಕೆ ತಮ್ಮ ಹೆಸರನ್ನಿಟ್ಟವರು ಲಿಂಗವೇ ಆಗುತ್ತಾರೆ' ಎಂಬ ಆಗಮದ ಹೇಳಿಕೆಯನ್ನು ನಂಬಿ, ಅಂದು ಬಹುಸಂಖ್ಯೆ ವ್ಯಕ್ತಿಗಳು ದೇವಾಲಯ ಕಟ್ಟಿಸುತ್ತಿದ್ದರು. ಈ ಮೇರೆಗೆ ವಾಮದೇವಯ್ಯನು ವಾಮೇಶ್ವರ, ಕೊಪ್ಪರಸನು ಕೊಪ್ಪೇಶ್ವರ ಇತ್ಯಾದಿ ದೇವಾಲಯ ಕಟ್ಟಿಸಿದ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ.

ಈ ಜಿಲ್ಲೆಯಲ್ಲಿ ಸುಮಾರು ೨೧೪ ದೇವಾಲಯಗಳಿವೆ. ಅವು ಸಿಂದಗಿ ತಾಲೂಕಿನಲ್ಲಿ ೫೦, ಇಂಡಿ ತಾಲೂಕಿನಲ್ಲಿ ೪೦, ಮುದ್ದೇಬಿಹಾಳ ತಾಲೂಕಿನಲ್ಲಿ ೬೮, ಬಾಗೆವಾಡಿ ತಾಲೂಕಿನಲ್ಲಿ ೨೮, ವಿಜಾಪೂರ ತಾಲೂಕಿನಲ್ಲಿ ಹೀಗೆ ಹರಡಿಕೊಂಡಿವೆ. ಇವುಗಳಲ್ಲಿ ಶೈವ ದೇವಾಲಯಗಳೇ ಅಧಿಕ.

ಬ್ರಾಹ್ಮಣರ ಉಪಜೀವನಕ್ಕಾಗಿ ದಾನ ನೀಡಿದ ಊರುಗಳನ್ನು 'ಅಗ್ರಹಾರ'ಗಳೆಂದು ಕರೆಯುತ್ತಿದ್ದರು. ಇಂಗಳೇಶ್ವರ, ಯಾಳವಾರ, ಕನ್ನೊಳ್ಳಿ ಕತಕನಹಳ್ಳಿ, ಕಾಖಂಡಕಿ, ಕುಮ್ಮಟಗಿ, ಕೋರವಾದ, ಕೋಲಾರ ಖೇಡ,ದೇವರಗೆಣ್ಣೂರ, ಗೊಟ್ಟೆ, ಚಟ್ಟರಕಿ, ನಿಡೋಣಿ, ಹೊಸೂರ, ಸಾಲೋಟಗಿ, ಬಾಗೆವಾಡಿ, ಮನಗೂಳಿ, ಮಲಗಾಣ, ಮುತ್ತಗಿ, ಸಿಂದಗಿ, ರೂಗಿ ಇಂಥವು ಅಗ್ರಹಾರಗಳಾಗಿದ್ದವು. ಈ ಅಗ್ರಹಾರದ ಬ್ರಾಹ್ಮಣರನ್ನು ಮಹಾಜನರೆಂದು ಕರೆಯುತ್ತಿದ್ದರು. ಬ್ರಹ್ಮ, ವಿಷ್ಣು, ಮಹೇಶ್ವರ ದೇವತೆಗಳನ್ನೊಳಗೊಂಡ ತ್ರೈಪುರುಷ ದೇವಾಲಯಗಳು ಮಲಗಾಣ, ತುಂಬಗಿ, ಕೊಂಡಗುಳಿ, ಕಕ್ಕಳಮೇಲಿ, ಎರಗಲ್ಲ, ಸಾಲೋಟಗಿಗಳಲ್ಲಿದ್ದು, ಅವು ಸಾರ್ವಜನಿಕ ಹಣದಿಂದ ನಡೆಯುವ ಬ್ರಾಹ್ಮಣರ ಉನ್ನತ ವಿದ್ಯಾಕೇಂದ್ರಗಳಾಗಿದ್ದವು. ಅಬ್ರಾಹ್ಮಣರಿಗೆ ಇಂಥ ಶಿಕ್ಷಣವ್ಯವಸ್ಥೆ ನಿರಾಕರಿಸಲ್ಪಟ್ಟಿದ್ದಿತು.

ವಿಜಾಪುರ ಜಿಲ್ಲೆ ಎಂದಾಕ್ಷಣ ಬಸವಣ್ಣ, ಬಸವಣ್ಣ ಎಂದಾಕ್ಷಣ ಶರಣರು ನೆನಪಾಗುತ್ತಾರೆ. ಬಸವಣ್ಣನ ಬಾಗೆವಾಡಿ, ಕೇಶಿರಾಜನ ಕೊಂಡಗುಳಿ, ನುಲಿಯ ಚಂದಯ್ಯನ ಶಿವಣಗಿ, ಮಡಿವಾಳ ಮಾಚಯ್ಯನ ಹಿಪ್ಪರಗಿ, ಕುರುಬ ಗೊಲ್ಲಾಳನ ಗೋಲಗೆರೆ, ಭೋಗಣ್ಣನ ಕೆಂಬಾವಿ, ಜೇಡರ ದಾಸಿಮಯ್ಯನ ಮುದನೂರ, ಶಾಂತಯ್ಯನ ನೆಲವಿಗೆ ಈ ಊರುಗಳನ್ನೊಳಗೊಂಡ ಪ್ರದೇಶದಲ್ಲಿಯೇ ಶರಣ ಚಳುವಳಿ ಮೊದಲು ಸ್ಫೋಟಗೊಂಡಿತೆಂದು ತಿಳಿದುಬರುತ್ತದೆ.

ತೆಲುಗು ಜೋಮ್ಮಯ್ಯನ ರಗಳೆಯಲ್ಲಿ ಬರುವ ವಿಕ್ರಮಾದಿತ್ಯನ ರಾಣಿ ಲಕ್ಷ್ಮೀದೇವಿಯ ಖೇಡ ಗ್ರಾಮದ ಕಂಕೋಜ ಮಸಣವ್ವೆಯರೆಂಬ ಶಿಲ್ಪಿಗಳ ಮಗಳೆಂದು ಅದೇ ಊರಿನ ಶಾಸನ ಹೇಳುತ್ತದೆ. ಕೊಂಡಗುಳಿ ಕೇಶಿರಾಜನು ನಿಂಬಣ ದಂಡನಾಥನ ಮಗನೆಂಬ ಹೊಸ ಅಂಶ ಅಲ್ಲಿಯ ಶಾಸನದಲ್ಲಿದೆ, ಭೂಯಾರ ಶಾಸನ,. "ನೆಲುವಿಗೆಯ ಸಾತ್ಯೆಯ(ಗಳ)ದಿವ್ಯ ಶ್ರೀಪಾದಗಳೇ ಶರಣು" ಎಂದು ಪ್ರಾರಂಭವಾಗುತ್ತೆ. ಇವುಗಳಗಿಂತ ಮುಖ್ಯವಾದುದು. ಪರಧರ್ಮಿಯರನ್ನು ಧ್ವಂಸಗೊಳಿಸಿದುದನ್ನು ತಿಳಿಸುವ ತಾಳಿಕೋಟಿಯ ಶೈವ ಶಾಸನ (೧೧೬೮)ಇಲ್ಲಿ ಪರಿಯಳಿಗೆ ಅಣಲೆವಾಡ, ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮಾರುಡಿಗೆ, ಅಣಂಪೂರು, ಕರವಾಡ, ಕೆಂಬಾವಿ, ಬಮ್ಮಕೂರು ಮೊದಲಾದ ದೇಶದೇಶಾಂತರದಲ್ಲಿದಿರಾದ ಪರಸಮಯಿಗಳಂ ಪಡಲ್ವಡಿಸಿ" ದ ಪುರಾತನ ನೂತರೆನಿಸಿದ "ಅಸಂಖ್ಯಾತಗಣಂ"ಗಳ ಉಲ್ಲೇಖ ಬರುತ್ತದೆ. ಇನ್ನೂ ಒಂದು ಮುಖ್ಯ ಸಂಗತಿಯೆಂದರೆ ಸೊಲ್ಲಾಪುರ ಸಿದ್ಧರಾಮನಿಗೆ ಸಂಬಂಧಿಸಿದ ಸುಮಾರು ೪೦ ಶಾಸನಗಳಲ್ಲಿ ಇಂಡಿ ತಾಲೂಕಿನ ಸಂಖ, ಕೂಡಿಗಿ, ಚೂರ್ಗಿ, ಟಾಕಳಿ (ಸಂಸ್ಕೃತ), ಚಡಚಣ, ಕಪ್ಪ ನಿಂಬರಗಿ, ಮುದ್ದೇಬಿಹಾಳ ತಾಲೂಕಿನ ಜತ್ತಿಗಿ ಫಡಕೇನೂರ-ಹೀಗೆ ೮ ಶಾಸನಗಳು ವಿಜಾಪುರ ಜಿಲ್ಲೆಗೆ ಸಂಬಂಧಿಸಿವೆ. ಫಡಕೇನೂರ ಶಾಸನವಂತೂ ಸಿದ್ಧರಾಮನನ್ನು "ಅನಾದಿ ಸಿದ್ಧನುಂ ಜಗತ್ಪ್ರಸಿದ್ಧನುಂ ಅಣಿಮಾ ಗರಿಮಾ ಲಘೀಮಾ ಮಹಿಮಾ ಪ್ರಾಪ್ತಿ ಪ್ರಕಾಮ್ಯ ಈಶಿತ್ವ ವಶಿತ್ವಮೆಂಬ ಅಷ್ಟಮಾದಿ ಗುಣೈಶ್ವರ್ಯ ಸಂಪನ್ನನಂ ಬೇಳ್ಪ ಭಕ್ತಜನ ಮನೋನ್ನತ ಕಳಾಪ್ರಸಿದ್ಧನುಂ ಸ್ವಚ್ಛಂದ ಮೃತ್ಯುಂಜಯಮೆಂಬ ದಶ ಪ್ರತ್ಯಯ ಪ್ರಬುದ್ಧನುಂ ಸಿದ್ಧ ಕುಳವಾರ್ಧಿವರ್ಧನ ಸುಧಾಕರನುಂ" ಎಂದು ಹೊಗಳಿವೆ. ರಾಘವಾಂಕನ ಸಿದ್ಧರಾಮ ಪುರಾಣದಂತೆ ಈ ಶಾಸನಗಳು ಸಿದ್ದರಾಮನ ಸೋಲ್ಲಾಪುರ ಪರಿಸರವನ್ನು "ಯೋಗರಮಣೀಯ ಕ್ಷೇತ್ರ"ವೆಂದು ಕರೆದಿವೆ. ಇದು ನಾಥ ಸಂಪ್ರದಾಯದ ಪಾರಿಭಾಷಿಕ ಶಬ್ದವಾಗಿರುವುದರಿಂದ ಸಿದ್ಧರಾಮನು ಮೂಲತಃ ನಾಥಪಂಥೀಯನೆಂದು ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಈ ಶಾಸನಗಳು ಶ್ರೀ ರಾಮನಾಥ ಶರಣು" ಎಂದೇ ಆರಂಭವಾಗುತ್ತಿದ್ದು, ಇಲ್ಲಿಯ 'ನಾಥ' ಶಬ್ದವನ್ನು ಗಮನಿಸಬೇಕು. ಅವನು ಈ ನಾಥಪಂಥ್ಯದಿಂದ ಶರಣಪಂಥಕ್ಕೆ ಬಂದವನಾಗಿದ್ದಾನೆ. ಈ ಶರಣಪಂಥದ ಜೊತೆಗೆ ಈ ಜಿಲ್ಲೆಯಲ್ಲಿ ಕೊಡೇಕಲ್ಲ ಬಸವಣ್ಣನ ಪಂಥ, ಆರೂಢ ಪಂಥ, ಸೂಫಿ ಪಂಥಗಳು ಬೆಳೆದು ಬಂದಿವೆ. ಸಿಂದಗಿಯ ಜಕ್ಕಪ್ಪಯ್ಯ, ಬಬಲಾದಿ ಚಿಕ್ಕಪ್ಪಯ್ಯ ವಿಜಾಪುರದ ರುಕ್ಮಾಂಗದ ಪಂಡಿತರು ಹುಟ್ಟಿದ್ದು ಬೇರೆ ಜಾತಿಗಳಲ್ಲಾದರೂ ಅನುಸರಿಸುತ್ತಿದ್ದುದು ಇಂತ ಪಂಥಗಳನ್ನು.

ಹೀಗೆ ಧಾರ್ಮಿಕ ವಿವರಗಳಲ್ಲದೆ, ಲೌಕಿಕಕ್ಕೆ ಬಂದರೆ ಭೂಮಾಪನದ ೨೩ ಬಗೆಯ ಕೋಲುಗಳ ಉಲ್ಲೇಖ ಇಲ್ಲಿಯ ಶಾಸನಗಳಲ್ಲಿದ್ದು, ಇವು ಮಾಣಿಕೇಶ್ವರದ ಕೋಲು ಎಂಬಂತೆ ದೇವರ ಹೆಸರಿನಲ್ಲಿ 'ದಾನಚಿಂತಾಮಣಿ ಕೋಲು' ಎಂಬಂತೆ ವ್ಯಕ್ತಿ ಹೆಸರಿನಲ್ಲಿ. ಹೆಬ್ಬಾಳ ಗಡಿಂಬ'

ಎಂಬಂತೆ ಗ್ರಾಮದ ಹೆಸರಿನಲ್ಲಿ ಕರೆಯಲ್ಪಡುತ್ತಿದ್ದವು ದ್ರಮ್ಮ (ದಾಮ), ಧರಣ(ಧಾರಣೆ), ಕಾಣಿ (ದುಗಾಣಿ)ಹೆಸರಿನ ನಾಣ್ಯಗಳೂ ಇಲ್ಲಿ ಬಳಕೆಯಲ್ಲಿದ್ದವು.

ಇದು ಈ ಜಿಲ್ಲೆಯ ಮಾಹಿತಿನಿಷ್ಠ ಚರಿತ್ರೆ. ವ್ಯಾಖ್ಯಾನನಿಷ್ಠವಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ ಅಂದು ಪ್ರಜಾಸಮುದಾಯವನ್ನು ರಾಜರು ಸೈನಿಕರನ್ನಾಗಿಸಿಕೊಂಡು, ಪುರೋಹಿತರು ಭಕ್ತರನ್ನಾಗಿಸಿಕೊಂಡು ತಾವು ಸುಖೀಜೀವನ ನಡೆಸುತ್ತಿದ್ದರು. ಶಾಸನಗಳೂ, ಸಾಹಿತ್ಯಕೃತಿಗಳು ಇಂಥವರ ಚರಿತ್ರೆಯನ್ನು ದಾಖಲಿಸಿದ್ದು, ಸಾಮಾನ್ಯರನ್ನು ಅಷ್ಟಾಗಿ ಹೊರಳಿ ನೋಡಿಲ್ಲ.

ಹೊಸ ಹೊಸ ಆಕರ ಲಭ್ಯವಾದಂತೆ, ಹೊಸ ಹೊಸ ದೃಷ್ಟಿಕೋನ ಮೂಡಿದಂತೆ ಇತಿಹಾಸಶೋಧ ಬದಲಾಗುವುದು ಸಹಜ. ಇದಕ್ಕೆ ಒಂದು ಉದಾಹರಣೆಯೆಂದರೆ, ಜಗತ್ತಿಗೆ ಈ ಜಿಲ್ಲೆ ನೀಡಿದ ಬಹುದೊಡ್ಡ ಕೊಡುಗೆಯಾದ ಬಸವಣ್ಣನ ಚರಿತ್ರೆ, ಸಿದ್ಧಾಂತಗಳ ಶೋಧ ಬದಲಾಗುತ್ತ ಬಂದುದು, ಬರುತ್ತಲಿರುವುದು. ಉದಾ: ಇಂದು ನಾವು ಭಾವಿಸಿರುವಂತೆ ಇವನು ಮೂಲತಃ ವೈದಿಕ ಶೈವಬ್ರಾಹ್ಮಣನಲ್ಲ, ಆಗಮಿಕ ಶೈವಬ್ರಾಹ್ಮಣ ಇವನ ತಂದೆ ಬಾಗೆವಾಡಿ ಅಗ್ರಹಾರದ ಒಡೆಯನಲ್ಲ, 'ಪುರ' ವೆಂದು ಕರೆಯಲಾಗುತ್ತಿದ್ದ ಅಲ್ಲಿಯ ಶುದ್ಧಶೈವ ಬ್ರಾಹ್ಮಣ ಬಡಾವಣೆಯ ಪಡೆಯ ಬಸವಣ್ಣನು ಈ ಬ್ರಾಹ್ಮಣಧರ್ಮ ತ್ಯಜಿಸಿ ಸ್ವೀಕರಿಸಿದ ಹೊಸ ಧರ್ಮ ವೀರಶೈವವಲ್ಲ, ನಾಥಪಂಥ. ಬಸವಣ್ಣನಿಗೆ ಜ್ಞಾನನೀಡದ ಗುರು ಜಾತವೇದಿಯಲ್ಲ, ಈಶಾನ್ಯಗುರುವೂ ಅಲ್ಲ. ಬುದ್ಧನಂತೆ ಇವನಿಗೆ ಯಾರೂ ಗುರುವಿರಲಿಲ್ಲ. ಇವರು ಬದುಕಿದುದು. ೩೬ ವರ್ಷವಲ್ಲ, ಸುಮಾರು ೬೯ ವರ್ಷ. ಪುರಾಣಗಳೂ ಹೇಳುವಂತೆ ಬಸವಣ್ಣ ಸಂಗಮೇಶ್ವರಲಿಂಗದಲ್ಲಿ ಐಕ್ಯವಾಗಲಿಲ್ಲ-ಜೀವಂತ ಸಮಾಧಿ ಪ್ರವೇಶಿಸಿದ. ಲಿಂಗಾಯತವು ಧರ್ಮವಲ್ಲ, ಪಂಥ, ವೀರಶೈವವು ಪಂಥವಲ್ಲ ಧರ್ಮ. ಲಿಂಗಾಯತರಲ್ಲಿ ಮತವಿಲ; ಮತನಿರಸನವಿದೆ. ದೀಕ್ಷೆಯಿಲ್ಲ, ಗುರುಕರುಣೆಯಿದೆ. ಇದು ಜಾತಿಧರ್ಮವಲ್ಲ ಕಾಯಕಪಂಥ. ಇತ್ಯಾದಿ ಹೊಸ ಅಭಿಪ್ರಾಯಗಳು ಇಂದು ಬಿಚ್ಚಿಕೊಳ್ಳುತ್ತಲಿವೆ. ಹೊಸ ಆಧಾರಗಳನ್ನು ಹುಡುಕಿ, ವಿದ್ವಾಂಸರಾದವರು ಇವುಗಳನ್ನು, ಇಂಥವುಗಳನ್ನು ಒರೆಗೆ ಹಚ್ಚಬೇಕಾಗಿದೆ. ಸಾಮಾನ್ಯರೂ ಸಂಪ್ರದಾಯದ ದೃಷ್ಟಿಕೋನ ಬಿಟ್ಟು, ಸಂಶೋಧನ ದೃಷ್ಟಿಕೋನ ಗಳಿಸಿಕೊಳ್ಳಬೇಕಾಗಿದೆ.

ಆಕರ : ಮಾರ್ಗ ಸಂಪುಟ-೭

೨೭

ವಿಶ್ವವಿದ್ಯಾಲಯದಲ್ಲಿ ಸಾಂಸ್ಕೃತಿಕ ಸಂಘಟನೆ : ದಾರಿ-ಗುರಿ

ಮಾನ್ಯರೆ,

ಶಿಕ್ಷಣಸಂಸ್ಥೆಯ ಮೂಲ ಮತ್ತು ಮುಖ್ಯ ಘಟಕವೆಂದರೆ ವಿದ್ಯಾರ್ಥಿಸ್ತೋಮ. ಅವರನ್ನು ಪಠ್ಯಕ್ರಮದ ಪರಿಧಿಯಲ್ಲಿ ಬೆಳೆಸುವುದರೊಂದಿಗೆ, ಅದನ್ನು ಮೀರಿಯೂ ಬೆಳೆಸುವುದು ವಿಶ್ವವಿದ್ಯಾಲಯದ ಕರ್ತವ್ಯವಾಗಿದೆ. ಇದರಿಂದ ಅವರು ಉಪಜೀವನ - ಜೀವನ ಎರಡೂ ನೆಲೆಗಳಲ್ಲಿ ಯಶಸ್ಸು ಗಳಿಸಬಲ್ಲರು. ಆದರೆ ಪಠ್ಯಕ್ರಮದ ರಚನೆ-ಬೋಧನೆಗಳ ವಿಷಯವಾಗಿಯೇ ಅತೃಪ್ತಿ ತುಂಬಿರುವ ಇಂದಿನ ಕಾಲದಲ್ಲಿ ಪಠ್ಯೇತರವಾಗಿಯೂ ಅವರನ್ನು ಬೆಳೆಸುವುದು ಕನಸಿನ ಮಾತಾಗಿ ಉಳಿದಿದೆ. ಹೀಗೆಯೇ ಮುಂದುವರಿದಲ್ಲಿ ವಿದ್ಯಾರ್ಥಿಗಳ ಸೃಜನಶೀಲ ಮನೋಧರ್ಮ ಕಮರಿಹೋಗುವ ಭಯವಿದೆ. ಆದುದರಿಂದ

೧. ಪಠ್ಯಕ್ರಮವನ್ನೇ ಸೃಜನಶೀಲವನ್ನಾಗಿ ರೂಪಿಸುವುದು

೨. ಪಠ್ಯಕ್ರಮಕ್ಕೆ ಹೊರತಾಗಿಯೂ ಸೃಜನಶೀಲ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿಕೊಡುವುದು.

ಈ ಎರಡೂ ಪ್ರಯತ್ನಗಳು ಸಮಸಮವಾಗಿ ನಡೆದರೆ ಮಾತ್ರ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಸಾಧ್ಯವಾಗುತ್ತದೆ.

ವಿಶ್ವವಿದ್ಯಾಲಯದ ಪ್ರತಿಯೊಂದು ವಿಭಾಗಗಳಲ್ಲಿ ಒಂದೊಂದು ವಿದ್ಯಾರ್ಥಿ ಸಂಘಗಳಿವೆ. ಪಠ್ಯೇತರ ಚಟುವಟಿಕೆಗಳಿಗೆ ಆಸ್ಪದ ಕೊಡಬೇಕಾಗಿರುವ ಇವು ಬಹಳಷ್ಟು ಸಲ ಉದ್ಘಾಟನೆಯಲ್ಲಿ ತೆರೆದುಕೊಂಡು, ಮುಕ್ತಾಯದಲ್ಲಿ ಮುಚ್ಚಿಹೋಗುತ್ತವೆ. ಇಲ್ಲವೆ ಉದ್ಘಾಟನೆಯಲ್ಲಿಯೇ ಮುಕ್ತಾಯಗೊಳ್ಳುತ್ತವೆ. ಕೆಲವು ವಿಭಾಗಗಳಲ್ಲಿ ಆಗಾಗ ಕಾರ್ಯಕ್ರಮ ನಡೆದರೂ ಅವು ಕೇವಲ ವಿದ್ವಾಂಸರ ಭಾಷಣಗಳಿಗೆ ಮಾತ್ರ ಸೀಮಿತಗೊಳ್ಳುತ್ತದೆ ಮತ್ತು ಗತಾನುಗತಿಕ ಕಾರ್ಯಕ್ರಮಗಳಾಗಿಬಿಡುತ್ತವೆ. ಹೀಗಾಗಿ ವಿದ್ಯಾರ್ಥಿಗಳ ಪರಿಪೂರ್ಣ ಬೆಳವಣಿಗೆಗೆ ಇವುಗಳಿಂದಲೂ ಏನೂ ಪ್ರಯೋಜನವಾಗುತ್ತಿಲ್ಲ. ಮೇಲಾಗಿ ವರ್ಗದ ಪ್ರಾಧ್ಯಾಪಕರ, ಮುಖ್ಯಸ್ಥರ ಹಸ್ತಪ್ರವೇಶದಿಂದಾಗಿ ಈ ಸಂಘಗಳಲ್ಲಿ ವಿದ್ಯಾರ್ಥಿಗಳಿಗೆ ಮುಕ್ತವಾಗಿ ಕೆಲಸ ಮಾಡುವುದು ಸಾಧ್ಯವಾಗುವುದಿಲ್ಲ. ಅವರು ಹೇಳಿದಂತೆ ಕೆಲಸ ಮಾಡಬೇಕು, ಇಲ್ಲವೆ ಅವರ ಪ್ರೀತಿಗಾಗಿ ತಮಗೆ ಬೇಡವಾದುದನ್ನೂ ಮಾಡಬೇಕು ಎಂಬ ಉಸಿರುಗಟ್ಟಿದ ವಾತಾವರಣ ಇಲ್ಲಿ ನಿರ್ಮಾಣಗೊಂಡಿರುತ್ತದೆ. ಹೀಗಾಗಿ ವರ್ಷದ ಕೊನೆಯ ಊಟ, ಫೋಟೋಗಳೇ ಪ್ರಧಾನವಾಗಿ, ಮುಖ್ಯ ಉದ್ದೇಶವೇ ಸೋತು ಹೋಗುತ್ತದೆ. ವಿದ್ಯಾರ್ಥಿಗಳಲ್ಲಿಯೂ ಕಾರ್ಯದರ್ಶಿಯಾಗಿ ವರ್ಗದಲ್ಲಿ ಮೆರೆಯಬೇಕೆಂಬ, ಸಹಪಾಠಿಗಳ ಮೇಲೆ-ಪ್ರಾಧ್ಯಾಪಕರ ಮೇಲೆ ಪ್ರಭಾವ

ಬೀರಬೇಕೆಂಬ ಸ್ವಾರ್ಥಪರ ಧೋರಣೆ ಇಲ್ಲಿ ಕೆಲಸ ಮಾಡುವುದರಿಂದ, ಬಹಳಷ್ಟು ಸಾತ್ವಿಕ ವಿದ್ಯಾರ್ಥಿಗಳು ಈ ಸಂಘದಿಂದ ದೂರ ಉಳಿಯುತ್ತಾರೆ, ತಮ್ಮ ಆಸಕ್ತಿಯ ಬಾಗಿಲುಗಳನ್ನು ಮುಚ್ಚಿಕೊಂಡು ಒಳಗೇ ಸಾಯುತ್ತಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಇಂಥ ಸಂಘಗಳಲ್ಲಿ ಕನ್ನಡ ವಿಭಾಗದ "ಕರ್ನಾಟಕ ಸಂಘ" ಮಾತ್ರ ಸ್ವಲ್ಪ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡುತ್ತಲಿದೆ. ಇದು ರಾಜ್ಯಭಾಷಾ ವಿಭಾಗವಾಗಿರುವುದೇ ಇದಕ್ಕೆ ಕಾರಣವೆಂದು ಬೇರೆ ಹೇಳಿಬೇಕಿಲ್ಲ. ಉಪನ್ಯಾಸ, ವಿಚಾರ ಸಂಕಿರಣ, ಕವಿಸಮ್ಮೇಲನ, ನಾಟಕ ಪ್ರಯೋಗ, ಗ್ರಂಥಪ್ರಕಟನೆ ಮೊದಲಾದವು ಇಲ್ಲಿ ಆಗಾಗ ಜರುಗುತ್ತವೆ. ೧೯೬೧ರ ವರೆಗೆ ಈ ಸಂಘ ಆರ್ಥಿಕ ಬಲವಿಲ್ಲದೆ ಹೆಸರಿಗೆ ಮಾತ್ರ ಒಂದೆರಡು ಕಾರ್ಯಕ್ರಮಗಳನ್ನು ನಡೆಸುತ್ತಲಿದ್ದಿತು. ೧೯೬೨, ನಾನು ವಿದ್ಯಾರ್ಥಿಯಾಗಿದ್ದ ಅವಧಿ. ಉತ್ತಮೋತ್ತಮ ಗ್ರಂಥ ಮತ್ತು "ಪ್ರಬುದ್ಧ ಕರ್ನಾಟಕ" ಪತ್ರಿಕೆಗಳ ಪ್ರಕಟಿಸುವಿಕೆಯಿಂದ ನಾಡಿನಲ್ಲಿ ಪ್ರಸಿದ್ಧ ಪಡೆದಿದ್ದ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ "ಕರ್ನಾಟಕ ಸಂಘ"ದ ಮಾದರಿಯಲ್ಲಿ ಕನ್ನಡ ವಿಭಾಗದ "ಕರ್ನಾಟಕ ಸಂಘ" ಕೆಲಸ ಮಾಡಬೇಕೆಂದು ಬಯಸಿ, ಶ್ರೀ. ಕೆ. ಜಿ. ಕುಂದಣಗಾರರ ಬರಹಗಳ ಸಂಕಲನವಾದ 'ಕುಂದಣ'ವನ್ನು ಆ ವರ್ಷ ಪ್ರಕಟಿಸಲಾಯಿತಲ್ಲದೆ, ೧೬೦೦-೦೦ ರೂ.ಗಳ ಶಾಶ್ವತ ನಿಧಿಯನ್ನೂ ಅಸ್ತಿತ್ವಕ್ಕೆ ತರಲಾಯಿತು. ಸಂಘದ ಕಾರ್ಯದರ್ಶಿಯಾಗಿರದಿದ್ದರೂ, ಈ ಎಲ್ಲ ಕೆಲಸದ ಕೇಂದ್ರಶಕ್ತಿ ನಾನಾಗಿದ್ದೆನು. ನಾನು ನಾಲ್ಕು ವರ್ಷ ಕರ್ನಾಟಕ ಕಾಲೇಜಿನಲ್ಲಿ ಕೆಲಸ ಮಾಡಿ ೧೯೬೬ರ ಸುಮಾರಿಗೆ ವಿಶ್ವವಿದ್ಯಾಲಯಕ್ಕೆ ತಿರುಗಿ ಬರುವಷ್ಟರಲ್ಲಿ ಆ ಶಾಶ್ವತನಿಧಿ ಕರಗಿಹೋಗಿದ್ದಿತು.

ಆಮೇಲೆ ಕರ್ನಾಟಕ ಸಂಘವನ್ನು ಮತ್ತೆ ಕಟ್ಟುವ ಪ್ರಯತ್ನ ನಡೆದು, ಆಗೊಮ್ಮೆ ಈಗೊಮ್ಮೆ ವಿದ್ಯಾರ್ಥಿಗಳ ಪದ್ಯ ಸಂಕಲನವಾದ 'ಮೂವತ್ತಾರು ಮುಖ, ಅರವತ್ಮೂರು ಕವನ', 'ಪ್ರಬಂಧ ಸಂಕಲನ'ಗಳು ಪ್ರಕಟವಾದವು. ಸಂಘದ ಕಾರ್ಯಾಧ್ಯಕ್ಷ ಬೇರೆಯವರಾಗಿದ್ದರೂ ಈ ಎಲ್ಲ ಪ್ರಕಟನೆಗಳ ರೂವಾರಿ ನಾನಾಗಿದ್ದೆನು. ಕರ್ನಾಟಕ ಸಂಘದ ವತಿಯಿಂದ ಪ್ರಕಟಿಸುವುದಕ್ಕಾಗಿ ವಿದ್ಯಾರ್ಥಿಗಳು ಸಂಗ್ರಹಿಸಿ ಕೊಟ್ಟಿದ್ದ ಸಾವಿರದಷ್ಟು ಜಾನಪದ ಒಗಟುಗಳು ಸಂಘದ ಕಾರ್ಯಾಧ್ಯಕ್ಷರಾಗಿ ಪ್ರಾಧ್ಯಾಪಕರೊಬ್ಬರು ತಮ್ಮ ಹೆಸರಿನಲ್ಲಿ ಪ್ರಕಟಿಸಿಕೊಂಡುದು ಎಲ್ಲರಿಗೂ ಬೇಸರವನ್ನುಂಟುಮಾಡಿತು. ಹೀಗೆ ಕರ್ನಾಟಕ ಸಂಘ ನಿರ್ದಿಷ್ಟ ಯೋಜನೆಯಿಲ್ಲದೆ ಮುನ್ನಡೆಯುತ್ತಲಿದ್ದ ಸಂದರ್ಭದಲ್ಲಿ ನಾನು ಈ ಸಂಘದ ಕಾರ್ಯಾಧ್ಯಕ್ಷನಾದೆನು. ಆಗೊಮ್ಮೆ ಈಗೊಮ್ಮೆ ಪುಸ್ತಕ ಪ್ರಕಟಿಸುವುದಕ್ಕಿಂತ ವಿದ್ಯಾರ್ಥಿಗಳಿಗಾಗಿ ಒಂದು ನಿಯತಕಾಲಿಕೆಯನ್ನು ಪ್ರಾರಂಭಿಸುವ ಯೋಚನೆ ಮಾಡಿ, ಕರ್ನಾಟಕ ಭಾರತಿ, ವಿಜ್ಞಾನಭಾರತಿಗಳ ಮಾದರಿಯಲ್ಲಿ 'ವಿದ್ಯಾರ್ಥಿ ಭಾರತಿ' ಹೆಸರಿನ ಪತ್ರಿಕೆಯನ್ನು ೧೯೬೫ರಲ್ಲಿ ಪ್ರಾರಂಭಿಸಲಾಯಿತು. ಕಥೆ, ಕವನ, ನಾಟಕ, ಹರಟೆ, ಪ್ರಬಂಧ, ಪ್ರತಿಭಾ ಪರಿಚಯ ಇತ್ಯಾದಿಗಳನ್ನೊಳಗೊಂಡ ಈ ಪತ್ರಿಕೆ ೨-೩ ವರ್ಷ ಸರಿಯಾಗಿ ನಡೆದು, ಬೇರೆಯವರು ಕಾರ್ಯಾಧ್ಯಕ್ಷರಾದ ಸಂದರ್ಭದಲ್ಲಿ ಅದು ನಿಂತು ಬಿಟ್ಟಿತು. ಮೂಲತಃ ಕರ್ನಾಟಕ ಸಂಘದ ಖಾಸಗಿ ಪತ್ರಿಕೆಯಾದ ಇದನ್ನು ಈ ಮಧ್ಯೆ ವಿಶ್ವವಿದ್ಯಾಲಯದ ಪತ್ರಿಕೆಯಾಗಿಸಿದೆ. ಇದರಿಂದಾಗಿ ಆರ್ಥಿಕ ತೊಂದರೆ ದೂರವಾಯಿತೇನೋ ನಿಜ. ಆದರೆ ಆಡಳಿತಾತ್ಮಕ ಕೆಂಪು ಪಟ್ಟಿಯಿಂದಾಗಿ ಅದರ ವೇಗ ನಿಧಾನವಾಯಿತು; ನಿಂತೇ ಬಿಟ್ಟಿತು. ನಾನು ಮುಖ್ಯಸ್ಥನಾದ ಸಂದರ್ಭದಲ್ಲಿ ಅದನ್ನು ಮತ್ತೆ ಪ್ರಾರಂಭಿಸಲಾಯಿತಾದರೂ ಸಂಪಾದಕರಾಗಿರುವ ಪ್ರಾಧ್ಯಾಪಕರ ಉಪೇಕ್ಷೆ, ಎರಡು ವರ್ಷಕ್ಕೊಮ್ಮೆ ವಿದ್ಯಾರ್ಥಿಗಳ ಬದಲಾವಣೆ, ವಿಶ್ವವಿದ್ಯಾಲಯದ ಮುದ್ರಣಾಲಯದಲ್ಲಿ ಆಗುತ್ತಿರುವ ವಿಳಂಬ, ವ್ಯಾಪಕ ಪ್ರಚಾರದ ಕೊರತೆ-ಇತ್ಯಾದಿಗಳಿಂದಾಗಿ ಇದು ನಿಂತೇ ಹೋಯಿತು. ವಿದ್ಯಾರ್ಥಿಗಳಿಗಾಗಿ ಇರುವ ಈ ವಿದ್ಯಾರ್ಥಿ ಪತ್ರಿಕೆಯನ್ನು ವಿದ್ಯಾರ್ಥಿಗಳು ಇಂದು ಸರಿಯಾಗಿ ಬೆಳೆಸುವುದು ಅವಶ್ಯವಿದೆ.

ಈ ಮಧ್ಯೆ ಕರ್ನಾಟಕ ಸಂಘಕ್ಕೆ ಶಾಶ್ವತ ಆಸ್ತಿಯ ಅವಶ್ಯಕತೆಯನ್ನು ಮನಗಂಡು ಡಾ. ಸುಂಕಾಪುರ ಅವರು ಮುಖ್ಯಸ್ಥರಾಗಿದ್ದ ಅವಧಿಯಲ್ಲಿ ಒಂದು ಸುಸಜ್ಜಿತ ಸಭಾಭವನವನ್ನು ನಿರ್ಮಿಸಲಾಯಿತು. ಮೈಕ್, ಸಂಗೀತವಾದ್ಯಗಳನ್ನು ಖರೀದಿಸಲಾಯಿತು. ಸಂಘದ ಹೆಸರಿನಲ್ಲಿ ಪ್ರಕಟಿಸಿದ ಪುಸ್ತಕಗಳ ಹಣದಿಂದಾಗಿ ಈ ಕೆಲಸ ಸಾಧ್ಯವಾಯಿತು. ಈ ಎಲ್ಲ ಕಾರ್ಯಗಳಲ್ಲಿ ಡಾ. ಸುಂಕಾಪುರ ಅವರ ಜೊತೆ ಕೈಗೂಡಿಸಿ ದುಡಿದ ತೃಪ್ತಿ ನನ್ನದಾಗಿದೆ. ಸಧ್ಯ ಈ ಸಂಘಕ್ಕೆ ನಾಲ್ಕಾರು ಸಾವಿರ ರೂಪಾಯಿಗಳ ಶಾಶ್ವತ ನಿಧಿಯೂ ಇದೆ.

ಈ ಮಧ್ಯೆ ಮೈಸೂರು ವಿಶ್ವವಿದ್ಯಾಲಯವು ಅಲ್ಲಿಯ ಕನ್ನಡ ವಿಭಾಗದ ಕರ್ನಾಟಕ ಸಂಘವನ್ನು 'ವಿಶ್ವವಿದ್ಯಾಲಯದ ಕರ್ನಾಟಕ ಸಂಘ'ವನ್ನಾಗಿಸಿದ ಮಾದರಿಯಲ್ಲಿ, ವಿಭಾಗದ ಕರ್ನಾಟಕ ಸಂಘವನ್ನು ವಿಶ್ವವಿದ್ಯಾಲಯದ ಕರ್ನಾಟಕ ಸಂಘವನ್ನಾಗಿ ವಿಸ್ತರಿಸುವ ವಿಚಾರ ನನ್ನಲ್ಲಿ ಮೂಡಿತು. ಎಲ್ಲ ವಿಭಾಗಗಳ ವಿದ್ಯಾರ್ಥಿ ಕವಿಸಮ್ಮೇಲನ, ಸಂಗೀತಗೋಷ್ಠಿಗಳನ್ನು ಪ್ರಾರಂಭಿಸುವ ಮೂಲಕ ಇಂಥ ಪ್ರಯತ್ನಕ್ಕೆ ನಾಂದಿ ಹಾಕಲಾಯಿತು. ಆದರೆ ಅಧಿಕಾರದ ಹಸ್ತಾಂತರ ಕಾರಣವಾಗಿ ನಮ್ಮ ಸಂಘ ವಿಸ್ತಾರಗೊಳ್ಳಲಿಲ್ಲ. ಇದೇ ಸುಮಾರಿಗೆ ಇಂಥ ಒಂದು ಸಂಘದ ಉದ್ಘಾಟನ ಕಾರ್ಯಕ್ರಮ ವಿಶ್ವವಿದ್ಯಾಲಯದ ಕೆಲವು ಶಿಕ್ಷಕ ಶಿಕ್ಷಕೇತರ ಮಿತ್ರರಿಂದ ಜರುಗಿತು. ಅವರ ಉದ್ದೇಶವೇ ಬೇರೆಯಾಗಿದ್ದರಿಂದ ಒಂದೂ ಕಾರ್ಯಕ್ರಮ ಜರುಗದೆ ಅದು ಅಳಿದೇ ಹೋಯಿತು.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯ ವಿದ್ಯಾರ್ಥಿಕೂಟ (ಪಿ. ಜಿ. ಜಿಮಖಾನ)ದ ಪ್ರಸ್ತಾಪ ಅವಶ್ಯವೆನಿಸುತ್ತದೆ. ವಿದ್ಯಾರ್ಥಿಗಳಿಗಾಗಿ ಇಂಥ ಒಂದು ಸಂಸ್ಥೆ ಈ ವಿಶ್ವವಿದ್ಯಾಲಯದಲ್ಲಿ ಇರುವ ವಿಷಯ ಬಹಳಷ್ಟು ವಿದ್ಯಾರ್ಥಿಗಳಿಗೆ ಗೊತ್ತೇ ಇಲ್ಲ, ಗೊತ್ತಿದ್ದರೂ ಇದು ಕ್ರೀಡೆಗಾಗಿ ಸೀಮಿತವೆಂಬ ಅಭಿಪ್ರಾಯ ಕೆಲವರಿಗಿದೆ. ಈ ಅಭಿಪ್ರಾಯಕ್ಕೆ ಕಾರಣ, ಅಲ್ಲಿ ಸಾಂಸ್ಕೃತಿಕ ವಿಭಾಗಕ್ಕಿರುವ ಗೌಣ ಸ್ಥಾನ. ಒಟ್ಟು ಹಣದ ಬಹುಪಾಲು ಮೊತ್ತ ಅಲ್ಲಿಯ ಕ್ರೀಡಾಶಾಖೆಯೇ ನುಂಗುತ್ತದೆ. ಆದರೆ ನಾನು ಈ ವಿದ್ಯಾರ್ಥಿಕೂಟದ ಸಾಂಸ್ಕೃತಿಕ ಶಾಖೆಯ ಉಪಾಧ್ಯಾಕ್ಷನಾಗಿದ್ದ ಸಮಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೂ ನ್ಯಾಯವಾದ ಹಣದ ಪಾಲು ಪಡೆಯಲಾಯಿತು. ಅಂದು ಈಗಿನ ಜಿಮಖಾನಾ ಹಾಲ್‌ದ ಸಭಾಭವನದಲ್ಲಿ ಸಣ್ಣ ದೊಡ್ಡ ಕಾರ್ಯಕ್ರಮಗಳನ್ನೂ, ಗಾಂಧೀಭವನದಲ್ಲಿ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನೂ ನಡೆಸಲಾಗುತ್ತಿತ್ತು. ಸಂಗೀತ ಮಂಟಪ, ನರ್ತನಮಂಟಪ, ಸಾಹಿತ್ಯಮಂಟಪ, ರಂಗಮಂಟಪ ಇತ್ಯಾದಿ ಹೆಸರುಗಳಿಂದ ಸಾಂಸ್ಕೃತಿಕ ಶಾಖೆಗಳನ್ನು ರೂಪಿಸಿಕೊಂಡು ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಕೆಲಸ ಈ ಅವಧಿಯಲ್ಲಿ ನಡೆಯಿತು. ಬಸವರಾಜ ಮನ್ಸೂರ್ ಅವರಿಂದ ಸಂಗೀತ ತರಬೇತಿ, ಶ್ರೀ ಉಪಾಧ್ಯಾಯ ಅವರಿಂದ ನರ್ತನ ತರಬೇತಿ, ಶ್ರೀ ದಂಡಾವತಿಮಠ ಅವರಿಂದ ಚಿತ್ರಕಲಾ ತರಬೇತಿಯನ್ನು ವಿದ್ಯಾರ್ಥಿಗಳಿಗೆ ವರ್ಷದುದ್ದಕ್ಕೂ ಕೊಡಿಸಿ, ಅವರನ್ನು ಪಠ್ಯೇತರ ಚಟುವಟಿಕೆಗಳಲ್ಲಿಯೂ ಪರಿಣತರನ್ನಾಗಿಸಲು ಪ್ರಯತ್ನ ಮಾಡಲಾಯಿತು. ವರ್ಷದುದ್ದಕ್ಕೂ ವಿದ್ಯಾರ್ಥಿಗಳಿಂದ ಸಂಗೀತ, ನರ್ತನ, ನಾಟಕ ಚಿತ್ರ ಪ್ರದರ್ಶನಗಳು ನಡೆಯುತ್ತಲಿದ್ದವು. ಎಲ್ಲ ವಿಭಾಗಗಳಿಂದ ಪ್ರತಿಭೆಗಳನ್ನು ಗುರುತಿಸಿ, ವಿದ್ಯಾರ್ಥಿಗಾಯಕರ, ವಿದ್ಯಾರ್ಥಿ ನರ್ತನ ಕಲಾವಿದರ, ವಿದ್ಯಾರ್ಥಿ ಚಿತ್ರಕಲಾವಿದರ, ವಿದ್ಯಾರ್ಥಿ ಕವಿಗಳ, ವಿದ್ಯಾರ್ಥಿ ಅಭಿನಯ ಕಲಾವಿದರ ತಂಡಗಳನ್ನು ರೂಪಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಕವಿಗಳ ಒಂದು ಪದ್ಯಸಂಕಲನವನ್ನು 'ದಿಗಂಬರ' ಹೆಸರಿನಿಂದ ಪ್ರಕಟಿಸಲಾಯಿತು. ಆಮೇಲೆ ಬಂದ ವಿದ್ಯಾರ್ಥಿಕೂಟದ ಉಪಾಧ್ಯಕ್ಷರು ಇದನ್ನು ಮುಂದುವರಿಸಲೇ ಇಲ್ಲ. ಪ್ರತಿವರ್ಷ ಪದವೀದಾನ ಸಮಾರಂಭದ ಸಂದರ್ಭದಲ್ಲಿ ಉನ್ನತಮಟ್ಟದ ಚಿತ್ರಕಲಾ ಪ್ರದರ್ಶನವನ್ನು ಈ ವಿದ್ಯಾರ್ಥಿಕೂಟ ನಡೆಸುತ್ತಲಿದ್ದಿತು. ಒಂದು ವಾರದ ವರೆಗೂ ಹುಬ್ಬಳ್ಳಿ ಧಾರವಾಡ ಜನತೆಗೆ ಇದು ಮುಖ್ಯ ಆಕರ್ಷಣೆಯಾಗುತ್ತಿದ್ದ ಸಂಗತಿ ಸ್ಮರಣೀಯವೆನಿಸಿದೆ. ಈ ಕೆಲಸದ ಯಶಸ್ಸಿನ ಅರ್ಧಪಾಲು ಅಂದು ಕಾರ್ಯಾಧ್ಯಕ್ಷರಾಗಿದ್ದ ಡಾ. ಚಂದ್ರಶೇಖರ ನರ್ಕೆ ಅವರಿಗೆ ಸಲ್ಲುತ್ತದೆ. ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆ ಅಂದು ಹೀಗೆ ಬಹುಮುಖವಾಗಿ ಬಿಚ್ಚಿಕೊಳ್ಳ ತೊಡಗಿದ ಕಾರಣ,

ಸಂಗೀತ-ನಾಟಕ-ಚಿತ್ರತರಬೇತಿಗಳಿಗೆ ಬೇಕಾಗುವ ಹತ್ತಾರು ಸಾವಿರ ರೂಪಾಯಿಗಳ ಉಪಕರಣಗಳನ್ನು ಆ ಕಾಲದಲ್ಲಿ ಖರೀದಿಸಿ, ಈ ಶಾಖೆಯನ್ನು ಒಂದು ಸ್ವಯಂಪೂರ್ಣ ವಿಭಾಗವನ್ನಾಗಿ ಬೆಳೆಸಲಾಯಿತು.

ಹೀಗೆ ವಿಶ್ವವಿದ್ಯಾಲಯದಲ್ಲಿ ವಿಭಾಗಮಟ್ಟದ, ವಿಶ್ವವಿದ್ಯಾಲಯ ಮಟ್ಟದ ವಿದ್ಯಾರ್ಥಿ ಸಂಘಟನೆಗಳಿದ್ದರೂ ಪ್ರಾಧ್ಯಾಪಕರ ಮಾರ್ಗದರ್ಶನದ ಬದಲಾವಣೆ, ಎರಡು ವರ್ಷಕ್ಕೊಮ್ಮೆ ವಿದ್ಯಾರ್ಥಿಗಳ ಆಗಮ-ನಿರ್ಗಮನ, ಆಡಳಿತಾತ್ಮಕ ತೊಂದರೆ, ದುರಾಸೆಯ ಪ್ರಾಧ್ಯಾಪಕ-ವಿದ್ಯಾರ್ಥಿ ಸಮುದಾಯ ಇತ್ಯಾದಿಗಳಿಂದಾಗಿ ವಿದ್ಯಾರ್ಥಿಗಳಿಗೂ ಈ ವೇದಿಕೆಗಳಿಗೂ ಸಂಬಂಧ ತಪ್ಪುತ್ತಲಿದೆ. ಸಂಬಂಧ ಒದಗಿಬಂದರೂ ಗಾಢತೆಯ ಪ್ರಮಾಣದಲ್ಲಿ ಕೊರತೆ ಕಾಣುತ್ತಲಿದೆ. ವಿದ್ಯಾರ್ಥಿಗಳೂ ಭವಿಷ್ಯದ ದೃಷ್ಟಿಯಿಂದ ಪಠ್ಯಕ್ರಮಕ್ಕೇ ಹೆಚ್ಚು ಗಮನಕೊಡುತ್ತಲಿದ್ದಾರೆ. ಹೀಗಾಗಿ ಈ ವಿಶ್ವವಿದ್ಯಾಲಯದಲ್ಲಿ ಸಾಂಸ್ಕೃತಿಕ ಚಟುವಟಿಕೆ ತುಂಬ ವಿರಳ. ಮತ್ತು ತೋರಿಕೆ ರೂಪದವುಗಳೆನಿಸಿವೆ.

ಮಿಕ್ಕ ವಿಭಾಗಗಳಿಗಿಂತ ಭಾಷೆ - ಸಾಹಿತ್ಯ ವಿಭಾಗಗಳಿಗೆ ವಿದ್ಯಾರ್ಥಿಗಳನ್ನು ಸಾಂಸ್ಕೃತಿಕವಾಗಿ ಬೆಳೆಸಲು ಸ್ವಾಭಾವಿಕ ಅವಕಾಶಗಳಿವೆ. ಹೀಗಿದ್ದೂ ಎಲ್ಲ ಭಾಗಗಳು ತಮ್ಮ ಪಠ್ಯಕ್ರಮದಲ್ಲಿ ಅನ್ವಯಿಕ ಬೋಧನೆಗೆ ಅವಕಾಶ ಮಾಡಿಕೊಡುವ ಮೂಲಕ ಇಂಥ ವ್ಯವಸ್ಥೆಯನ್ನು ಕಲ್ಪಿಸಬೇಕು. ನಾಲ್ಕು ವರ್ಷಗಳ ಹಿಂದೆ ಕನ್ನಡ ಎಂ. ಎ. ಪಠ್ಯಕ್ರಮದಲ್ಲಿ ಐಚ್ಛಿತ ವಿಷಯವೆಂದು ಸೃಜನ, ಸಮೂಹ ಸಂವಹನ, ವಿಮರ್ಶನ, ಸಂಶೋಧನ ವಿಷಯಗಳ ತಾತ್ವಿಕ ಮತ್ತು ಅನ್ವಯಿಕ ಅಭ್ಯಾಸಕ್ಕೆ ಅವಕಾಶ ಕಲ್ಪಿಸಿಕೊಡಲಾಗಿದೆ. ತಮಗೆ ಇಷ್ಟವೆನಿಸಿದ ವಿಷಯವನ್ನು ಆಯ್ದುಕೊಂಡು ವಿದ್ಯಾರ್ಥಿಗಳು ಆ ದಾರಿಯಲ್ಲಿ ಬೆಳೆಯಲು ತರಬೇತಿಯನ್ನು ಒದಗಿಸಲಾಗುತ್ತದೆ. ಎರಡು ವರ್ಷಗಳ ಅವಧಿಯಲ್ಲಿ ಕಾವ್ಯ, ವಿಮರ್ಶೆ, ಸಂಶೋಧನೆ ಇವುಗಳಲ್ಲಿ ಒಂದು ಕ್ಷೇತ್ರವನ್ನು ತನ್ನದನ್ನಾಗಿ ಮಾಡಿಕೊಂಡು ವಿದ್ಯಾರ್ಥಿ ಹೊರಗೆ ಹೋಗಬೇಕೆಂಬುದು ಇಲ್ಲಿಯ ಉದ್ದೇಶ. ಇದು ಅಧ್ಯಾಪಕರಿಂದ ಹೆಚ್ಚಿನ ಆಸಕ್ತಿ-ಶ್ರಮಗಳನ್ನು ಅಪೇಕ್ಷಿಸುತ್ತದೆ. ಒಂದು ವೇಳೆ ಈ ಕೋರ್ಸ್ ಮುಚ್ಚಿದ್ದೇ ಆದರೆ ಅಧ್ಯಾಪಕರು ಇಂಥ ಶ್ರಮಕ್ಕೆ, ತ್ಯಾಗಕ್ಕೆ ಸಿದ್ಧರಿಲ್ಲವೆಂದು ಅರ್ಥ ಹಚ್ಚಬೇಕಾಗುತ್ತದೆ.

ವಿದ್ಯಾರ್ಥಿಗಳೂ ತಮ್ಮ ಬೆಳವಣಿಗೆಗೆ ಅವಶ್ಯವಿರುವ ಯೋಗ್ಯಪಠ್ಯಕ್ರಮದ ಬಗ್ಗೆ ತಲೆ ಕೆಡಿಸಿಕೊಳ್ಳುವದಿಲ್ಲ. 'ಉತ್ತಮ ಶಿಕ್ಷಕ ಬೇಕು, ಉತ್ತಮ ಶಿಕ್ಷಣ ಬೇಕು' ಎಂಬ ದಿಕ್ಕಿನಲ್ಲಿ ಆಲೋಚಿಸುತ್ತಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಫ್ಯಾಕ್ಟರಿಯ ಪಡಿಯಚ್ಚು ವಸ್ತುಗಳಾಗಿ ರೂಪಗೊಳ್ಳುತ್ತಿರುವರೇ ಹೊರತು, ಹೊಲದ ಪೈರಾಗಿ ಗಾಳಿ ಬೆಳಕನ್ನುಂಡು ಬೆಳೆಯುತ್ತಿಲ್ಲ. ಸೃಜನಶೀಲತೆ ಬತ್ತಿಹೋಗಿ ಯಾಂತ್ರಿಕತೆ ಪ್ರಧಾನವಾಗುತ್ತಲಿದೆ.

ಕರ್ನಾಟಕ ವಿಶ್ವವಿದ್ಯಾಲಯವನ್ನು ಕುರಿತು ಹೇಳುವುದಾದರೆ, ಪಠ್ಯೇತರ ಚಟುವಟಿಕೆಗಳಿಗಾಗಿ ಇಲ್ಲಿ ಇರುವು ವೇದಿಕೆಗಳನ್ನು, ಅವಕಾಶಗಳನ್ನು ವಿದ್ಯಾರ್ಥಿಗಳಿಗೆ ಮೊದಲು ಪರಿಚಯ ಮಾಡಿಸಬೇಕು. ಇವುಗಳಲ್ಲಿಯ ಆಡಳಿತಾತ್ಮಕ ಹಸ್ತಕ್ಷೇಪ ಕಡಿಮೆಯಾಗಿ ವಿದ್ಯಾರ್ಥಿಗಳಿಗೆ ಮುಕ್ತ ಅವಕಾಶ ಸಾಧ್ಯವಾಗಬೇಕು. ಸಿಲೆಬಸ್ ಸೃಜನಶೀಲವಾಗಿ ರೂಪಗೊಳ್ಳಬೇಕು. ಆಗ ಮಾತ್ರ ವಿದ್ಯಾರ್ಥಿಗಳ ಆಸಕ್ತಿಗಳು ಮುಕ್ತವಾಗಿ ಬೆಳೆದು, ಅವರ ಪೂರ್ಣವ್ಯಕ್ತಿತ್ವ ಆಕಾರ ಪಡೆಯುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯ 'ವಿದ್ಯಾರ್ಥಿಕೂಟ'ದ ವಾರ್ಷಿಕ ಸಮಾರೋಪ ಕಾರ್ಯಕ್ರಮದ ಭಾಷಣ.

ಆಕರ : ಮಾರ್ಗ ಸಂಪುಟ–೬

■■

೨೮

ಕುಮಾರವ್ಯಾಸ ಭಾರತ ವಿಚಾರ ಸಂಕಿರಣ : ಸಮಾರೋಪ

ಕುಮಾರವ್ಯಾಸ ಭಾರತ : ಕೆಲವು ಟಿಪ್ಪಣಿಗಳು

ಮಹನೀಯರೇ, ಮಹಿಳೆಯರೇ

ಕುಮಾರವ್ಯಾಸನ ಬಗ್ಗೆ ಮಾತನಾಡಲು ನಿಂತರೆ, ಎಲ್ಲಿಂದ ಆರಂಭಿಸಬೇಕು? ಎಲ್ಲಿಗೆ ನಿಲ್ಲಿಸಬೇಕು? ಎಂಬುದು ಗೊತ್ತಾಗದಂಥ ದೈತ್ಯರಚನೆಯಾಗಿದೆ, ಅವನ ಕೃತಿ. ಹೀಗಿರುವಾಗ ತೌಲನಿಕ ಇತ್ಯಾದಿಗಳಿಗೂ ಪ್ರಸ್ತುತ ವಿಚಾರಸಂಕಿರಣ ಅವಕಾಶ ಮಾಡಿಕೊಟ್ಟು, ಈ ಕವಿಯ ಅಧ್ಯಯನಕ್ಕೆ ಇನ್ನೂ ಆಳ(Depth) ಮತ್ತು ವಿಸ್ತಾರ(Dimension)ಗಳನ್ನು ಒದಗಿಸಿದೆ. ಈ ಪ್ರಯತ್ನಕ್ಕಾಗಿ ವಿಚಾರಸಂಕಿರಣದ ಸಂಘಟಕರಾದ ಶ್ರೀ ರಾಧಾಕೃಷ್ಣ ಅವರಿಗೆ ಧನ್ಯವಾದಗಳು.

ಇವರು ಮುಂದಿನ ದಿನಗಳಲ್ಲಿ 'ಕುಮಾರವ್ಯಾಸಭಾರತ ಮತ್ತು ಇತರ ಭಾಷಾಭಾರತಗಳು' ವಿಷಯವನ್ನು ಕುರಿತು ಸಮಗ್ರ ತೌಲನಿಕ ವಿಚಾಸಂಕಿರಣ ಯೋಜಿಸುವುದು, ಸಾಧ್ಯವಾದರೆ ಹಿಂದಿ-ಇಂಗ್ಲಿಷ್ ಭಾಷೆಗಳಲ್ಲಿ, ಅದರಲ್ಲಿಯೂ ದಿಲ್ಲಿ ಇತ್ಯಾದಿ ಕೇಂದ್ರಪಟ್ಟಣಗಳಲ್ಲಿ ಆಯೋಜಿಸುವುದು, ಆ ಮೂಲಕ ಈ ಕೃತಿಯ ಮಹತ್ವವನ್ನು ರಾಷ್ಟ್ರಮಟ್ಟದಲ್ಲಿ ಪ್ರಸಿದ್ಧಿಪಡಿಸುವುದು ಅವಶ್ಯವಿದೆ. ಇಂದು ನಾವು ಜಾಗತೀಕರಣ ಸಂದರ್ಭದಲ್ಲಿರುವುದರಿಂದ ಅಂಥ ವಿಚಾರಸಂಕಿರಣವನ್ನು ಜರುಗಿಸಿ, ಕನ್ನಡಸಾಹಿತ್ಯದ ಮಹತ್ವವನ್ನು ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿದ್ವಾಂಸರ ಗಮನಕ್ಕೆ ತರುವುದು ಅಗತ್ಯವಾಗಿರುವಂತೆ, ಕನ್ನಡಕ್ಕೆ ಶಾಸ್ತ್ರೀಯ ಭಾಷಾಮರ್ಯಾದೆ ಪ್ರಾಪ್ತವಾಗಿರುವ ಇಂದಿನ ಸಂದರ್ಭದ ತುರ್ತು ಕರ್ತವ್ಯವೂ ಆಗಿದೆ.

೧

ಕುಮಾರವ್ಯಾಸಭಾರತ ಎಂದಾಕ್ಷಣ ಸಹಜವಾಗಿಯೇ ಪಂಪಭಾರತ ನೆನಪಾಗುತ್ತದೆ. ಹಾಗೆ ನೆನಪಾಗುತ್ತಲೇ ಪಂಪನು ಭಾರತ ಬರೆದ ಬಳಿಕ ಕುಮಾರವ್ಯಾಸ ಬರೆಯುವ ಅಗತ್ಯವೇನಿತ್ತು? ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ. ಈ ಪ್ರಶ್ನೆಗೆ ನಾನು ಕಂಡುಕೊಂಡ ಉತ್ತರ ಹೀಗಿದೆ:

ಹಳಗನ್ನಡ ಕವಿಯಾದ ಪಂಪ ಮಾರ್ಗಶೈಲಿಯಲ್ಲಿ, ನಡುಗನ್ನಡ ಕವಿಯಾದ ಕುಮಾರವ್ಯಾಸ ದೇಶೀ ಶೈಲಿಯಲ್ಲಿ ರಚಿಸಿದರೆಂದೂ, ಒಬ್ಬನು ವೀರಯುಗಕ್ಕೆ ತಕ್ಕ 'ವೀರಸತ್ತಾ' ಕಾವ್ಯ , ಇನ್ನೊಬ್ಬ ಭಕ್ತಿಯುಗಕ್ಕೆ ತಕ್ಕ 'ಭಕ್ತಿಸತ್ತಾ' ಕಾವ್ಯ ರಚಿಸಿದರೆಂದೂ ಸಾಮಾನ್ಯವಾಗಿ ಈವರೆಗೆ ಹೇಳುತ್ತ ಬಂದಿದ್ದೇವೆ. ನನ್ನ ದೃಷ್ಟಿಯಲ್ಲಿ ಇದಕ್ಕಿಂತ ಬೇರೆಯಾದ ಸಾಮಾಜಿಕ ಕಾರಣವಿದೆ. ಅದು: ಪಂಪ ಬದುಕಿದ್ದ ೧೦ನೆಯ ಶತಮಾನವು ಉತ್ತರಭಾರತದಿಂದ ವಲಸೆ ಬಂದಿದ್ದ ವೈದಿಕ–ಜೈನಧರ್ಮಗಳು ತಮ್ಮ ಪ್ರಭುತ್ವಕ್ಕಾಗಿ ಸಂಘರ್ಷ ನಡೆಸಿದ್ದ ಕಾಲವಾಗಿದ್ದಿತು. ಈಗ ಭಾಷಾ ಮಡಿವಂತಿಕೆಯ ವೈದಿಕರು ಧಾರ್ಮಿಕಸಾಹಿತ್ಯವನ್ನು ಸಂಸ್ಕೃತದಲ್ಲಿ, ಕ್ವಚಿತ್ತಾಗಿಯಾದರೂ ಲೌಕಿಕಸಾಹಿತ್ಯವನ್ನು ಕನ್ನಡದಲ್ಲಿ(ನಾಗವರ್ಮನ ಕರ್ಣಾಟ ಕಾದಂಬರಿ, ದುರ್ಗಸಿಂಹನ ಕರ್ನಾಟ ಪಂಚತಂತ್ರ)ಬರೆದರು. ಇದಕ್ಕೆ ವಿರುದ್ಧವಾಗಿ ಜೈನರು ಲೌಕಿಕ–ಧಾರ್ಮಿಕ ಎರಡೂ ಸಾಹಿತ್ಯಗಳಿಗೆ ಕನ್ನಡವನ್ನು ಬಳಸಿದರೂ ತಮ್ಮ ಅರ್ಧಶಕ್ತಿಯನ್ನು ಜೈನಪುರಾಣಗಳನ್ನು ಕಟ್ಟುವುದಕ್ಕಾಗಿ, ಇನ್ನರ್ಧ ಶಕ್ತಿಯನ್ನು ವಿರೋಧಿಗಳಾದ ವೈದಿಕರ ಕೃತಿಗಳನ್ನು ಮುರಿಯುವುದಕ್ಕಾಗಿ, ಮುರಿದುಕಟ್ಟುವುದಕ್ಕಾಗಿ ಮೀಸಲಿಟ್ಟರು.

ಮಹಾಭಾರತವೆಂಬ ವೈದಿಕ ಕೃತಿಯ ವಿಷಯವಾಗಿ ಅವರು ಅನುಸರಿಸಿದ ಈ ಮುರಿದುಕಟ್ಟುವ ಕ್ರಿಯೆ ಎರಡು ತೆರನಾಗಿದೆ. ಒಂದು: ವೈದಿಕಭಾರತವನ್ನು ಮರು ಪುರಾಣೀಕರಣ(ರೀ–ಮಿಥಿಫಿಕೇಶನ್)ಗೊಳಿಸುವುದು, ಅಂದರೆ ಜೈನಭಾರತವನ್ನಾಗಿಸುವುದು. ಇನ್ನೊಂದು: ವೈದಿಕಭಾರತವನ್ನು ಅಪುರಾಣೀಕರಣ(ಡಿ–ಮಿಥಿಫಿಕೇಶನ್)ಗೊಳಿಸುವುದು, ಅಂದರೆ ಅವೈದಿಕ ಭಾರತವನ್ನಾಗಿಸುವುದು. ಇವುಗಳಲ್ಲಿ ಪಂಪನು ಭಾರತವನ್ನು ಅವೈದಿಕಗೊಳಿಸಿದುದಲ್ಲದೆ, ಮುಂದುವರಿದು ಅದನ್ನು ತನ್ನ ಆಶ್ರಯದಾತನ ಚರಿತ್ರೆಯೊಂದಿಗೆ 'ಸಮೀಕರಣ'ಗೊಳಿಸಿದ. ಈ ಎರಡು ಪ್ರಯೋಗಗಳನ್ನು ತಾನು ಕೃತಿಯ 'ಮೈಗಿಡಲೀಯದೆ' ಮಾಡಿದ್ದೇನೆ ಎಂದು ಪಂಪ ಎಷ್ಟೇ ಹೇಳಿಕೊಂಡಿದ್ದರೂ ಅವನ ಭಾರತ ವೈದಿಕರ–ಸಹೃದಯರ ದೃಷ್ಟಿಯಲ್ಲಿ ಮೈಗೆಡಿಸಿಕೊಂಡುದೇ ಆಗಿದ್ದಿತು.

ಜೈನರು ಮಹಾಭಾರತದ ವಿಷಯವಾಗಿ ಹೀಗೆ ನಡೆದುಕೊಂಡರೆ, ತರುವಾಯ ಬಂದ ಲಿಂಗಾಯತ ವಚನಕಾರರು 'ಭಾರತಪುರಾಣ ಗೋತ್ರಕ್ಕೆ ಮಾರಿ', 'ವಿದ್ಯೆಯೆಂದರೆ ರಾಮಾಯಣ ಮಹಾಭಾರತವಲ್ಲ'ವೆಂದು ಆಕ್ಷೇಪ ವ್ಯಕ್ತಪಡಿಸಿದರು. ಬಳಿಕ ಬಂದ ಲಿಂಗಾಯತ ಕವಿಗಳು ಅದನ್ನು 'ಸೋದರರ ವಧೆ'ಯೆಂದು ತೀರ್ಮಾನಿಸಿದುದಲ್ಲದೆ, ತಮ್ಮ ಶರಣರ ಚರಿತ್ರೆಗಳೇ ತಮ್ಮ ಮಹಾಭಾರತವೆಂದು ಸಾರಿದರು. ನಿದರ್ಶನವೆಂಬಂತೆ ತನ್ನ ಬಸವಪುರಾಣ ಮಹಾಭಾರತದಂತೆ ಆದಿಪರ್ವ, ಕರ್ಣಪರ್ವ ಇತ್ಯಾದಿಗಳನ್ನೊಳಗೊಂಡಿದೆಯೆಂದು ಭೀಮಕವಿ ಹೀಗೆ ಹೇಳುತ್ತಾನೆ:

ಆದಿರುದ್ರಗಣಾದಿಪರ್ವಂ
ವಾದಿಗಳ ಹೃತ್‌ಶಲ್ಯಪರ್ವಂ
ಮೋದಭಕ್ತಿಗೆ ಬಸವಸಿಂಹಾಸನ ಸಭಾಪರ್ವಂ।
ವೇದವಿದರುದ್ಯೋಗಪರ್ವಂ
ವೇದಿಸುವರಿಗೆ ಶಾಂತಿಪರ್ವಂ
ಮೇದಿನಿಯೊಳಖಿಳಾಗಮಜ್ಞರ ಕರ್ಣಪರ್ವವಿದು॥

ಪಂಪಯುಗದ ಕನ್ನಡಸಾಹಿತ್ಯ ಎಷ್ಟೇ ಶ್ರೇಷ್ಠವಾಗಿದ್ದರೂ ಅದು ಕೇವಲ ಔತ್ತರೇಯ ವೈದಿಕ-ಜೈನ ಕಥಾವಸ್ತು ಮತ್ತು ಕಥಾನಾಯಕರನ್ನೊಳಗೊಂಡು, ಕನ್ನಡಿಗರ 'ಅಸ್ಮಿತೆ'ಯನ್ನು ಅವಗಣನೆಗೆ ಗುರಿಮಾಡಿದ್ದಿತು. ಬಸವಣ್ಣ, ಮಾದರ ಚೆನ್ನಯ್ಯ, ಮಹಾದೇವಿಯಕ್ಕ ಮೊದಲಾದ ಪ್ರಾದೇಶಿಕ ನಾಯಕರನ್ನು ಕುರಿತು ಕಾವ್ಯ ಬರೆದ ಲಿಂಗಾಯತ ಕವಿಗಳು ಈ ಅಸ್ಮಿತೆಯ ಜಾಗ್ರತಿಗಾಗಿ ಹೀಗೆ ಹೇಳಿದ್ದರೂ, ಅದು ಕ್ರಮೇಣ ಪವಾಡಗಳ ಆವರಣದಿಂದಾಗಿ ಇನ್ನೊಂದು ರೀತಿಯ ಅವಗಣನೆಗೆ ಗುರಿಯಾಯಿತು. ಅದೇನೇ ಇರಲಿ, ವೈದಿಕ ಭಾರತವು ಜೈನಯುಗ, ಲಿಂಗಾಯತಯುಗಗಳಲ್ಲಿ ಅವಗಣನೆಗೆ ಗುರಿಯಾಗಿದ್ದುದನ್ನು ಅಂದರೆ ಪಂಪನು ಚೆನ್ನಾಗಿ ಬರೆದಿದ್ದಾನೆ, ಸರಿಯಾಗಿ ಬರೆದಿಲ್ಲವೆಂಬುದನ್ನು ಗಮನಿಸಿದ ವೈದಿಕರು, ಅದು ಸರಿಯಾದ ರೀತಿಯಲ್ಲಿ ಕನ್ನಡಕ್ಕೆ ಬರಬೇಕೆಂದು ಹಂಬಲಿಸುತ್ತಿದ್ದರು. ಈ ಹಂಬಲವನ್ನು ಈಡೇರಿಸಿಕೊಟ್ಟವನು, ಪೂರ್ಣಪ್ರಮಾಣದಲ್ಲಿ ಈಡೇರಿಸಿಕೊಟ್ಟವನು, ಕುಮಾರವ್ಯಾಸ.

೨

ಕುಮಾರವ್ಯಾಸ ಬದುಕಿದ್ದ ವಿಜಯನಗರ ಸಾಮ್ರಾಜ್ಯದ ೧೪-೧೫ನೆಯ ಶತಮಾನವು ವೈದಿಕಧರ್ಮದ ಪುನರುಜ್ಜೀವನಯುಗ. ಸ್ವತಃ ಬುಕ್ಕರಾಯ 'ವೇದಮಾರ್ಗ ಪ್ರತಿಷ್ಠಾಪನಾಚಾರ್ಯ'ನೆಂದು ಶಾಸನಗಳಲ್ಲಿ ಕರೆದುಕೊಂಡಿದ್ದಾನೆ. ಹೀಗೆ ತಮಗೆ ಲಭ್ಯವಾದ ಈ ರಾಜಕೀಯ ಅನುಕೂಲ ವಾತಾವರಣವನ್ನು ಸದುಪಯೋಗಗೊಳಿಸಿಕೊಳ್ಳಲು ಸಾಯಣಾಚಾರ್ಯರು 'ವೇದಭಾಷ್ಯ'ವನ್ನೂ, ತೊರವೆಯ ನರಹರಿ 'ರಾಮಾಯಣ'ವನ್ನೂ, ನಿತ್ಯಾತ್ಮಶುಕ ಮೊದಲಾದವರು 'ಭಾಗವತ'ವನ್ನೂ ಬರೆದು, 'ವೇದಮಾರ್ಗ'ದ ವಸಂತಸಮಯವನ್ನೇ ಸೃಷ್ಟಿಸಿದರು. ಈ ವಸಂತಸಮಯದ ಚೈತ್ರನೆಂಬಂತೆ ಕುಮಾರವ್ಯಾಸ 'ನೆಲೆಗೆ ಪಂಚಮಶ್ರುತಿ'ಯೆಂದು ಸಾರುತ್ತ, ಮಹಾಭಾರತವನ್ನು ಸೃಷ್ಟಿಸಿ, ಜನರ ಬಹುದಿನದ ಅಪೇಕ್ಷೆಯನ್ನು ಪೂರೈಸಿದ. ಅಂದರೆ ಪಂಪಭಾರತದಲ್ಲಿ ಪರ್ಯಾಯವಾಗಿ ಘಟಿಸಿದ್ದ ವೇದಸಂಸ್ಕೃತಿಯ ಅಪಮೌಲೀಕರಣವನ್ನು ತಡೆಗಟ್ಟಿದ.

೩

ಕವಿತ್ವದೃಷ್ಟಿಯಿಂದ ನಾನು ಪಂಪನನ್ನು 'ಸಾಹಿತ್ಯಕವಿ'ಯೆಂದು, ಕುಮಾರವ್ಯಾಸನನ್ನು 'ಸಂತಕವಿ'ಯೆಂದು ಕರೆಯುತ್ತೇನೆ. "ಸಾಹಿತ್ಯಕವಿಗಳಿಗಿಂತ ಸಂತಕವಿಗಳ ಸತ್ವ ಹಿರಿದು" ಎಂಬ ಬೇಂದ್ರೆ ಅವರ ಮಾತನ್ನು ಇಲ್ಲಿ ನೆನೆಯಬಹುದು. ಸಾಹಿತ್ಯಕವಿಯಾದ ಪಂಪ ತನ್ನ ಭಾರತದಲ್ಲಿ ಲೌಕಿಕ ಎಂಟು ರಸಗಳನ್ನು ಪ್ರತಿಪಾದಿಸಿದ. ಸಂತಕವಿಯಾದ ಕುಮಾರವ್ಯಾಸ ತನ್ನ ಭಾರತದಲ್ಲಿ ೯ನೆಯದಾಗಿ ಭಕ್ತಿ ಮೂಲದ ಅಲೌಕಿಕ ಶಾಂತರಸವನ್ನು ಜೋಡಿಸಿದ. ಇದರಿಂದಾಗಿ ಪಂಪಭಾರತವು ಲೌಕಿಕ ರಸದಿಂದ ಲೌಕಿಕರಸಕ್ಕೆ ಉರುಳುತ್ತ ನಡೆದರೆ, ಕುಮಾರವ್ಯಾಸಭಾರತವು ಲೌಕಿಕರಸದಿಂದ ಅಲೌಕಿಕರಸಕ್ಕೆ ಹೊರಳುತ್ತ ನಡೆಯಿತು. ಲೌಕಿಕ ವನ್ನಾಗಿಸುವ ಸಲುವಾಗಿಯೇ ಪಂಪ ತನ್ನ ಕೃತಿಯಲ್ಲಿ ಅರ್ಜುನನನ್ನು ಅರಿಕೇಸರಿ ಸ್ತರಕ್ಕೆ ಇಳಿಸಿದ. ಅರಿಕೇಸರಿಯನ್ನು ಉದಾತ್ತನಾರಾಯಣ, ಉದಾರಮಹೇಶ್ವರ ಎಂದು ಕರೆಯುವ ಮೂಲಕ ವೈದಿಕದೇವತೆಗಳಾದ ನಾರಾಯಣ, ಮಹೇಶ್ವರರನ್ನು ಅರಿಕೇಸರಿಗಿಂತ ಸಾಮಾನ್ಯರೆಂಬಂತೆ ಚಿತ್ರಿಸಿದ. ದೇವಮಾನವ ಕೃಷ್ಣನನ್ನು ಹತ್ತರಲ್ಲಿ ಒಬ್ಬನಂತೆ ಚಿತ್ರಿಸಿ, "ಚಲದೊಳ್ ದುರ್ಯೋಧನಂ....." ಎಂಬ ತನ್ನ ಪ್ರಸಿದ್ಧಪದ್ಯದಿಂದ ಅವನನ್ನು ಹೊರಗಿಟ್ಟ.

ಆದರೆ ಆಗಮಿಕಗೊಳಿಸುವುದಕ್ಕಾಗಿ ಕುಮಾರವ್ಯಾಸ ಅವನನ್ನು ಒಳಗೆ ಕರೆತಂದುದಲ್ಲದೆ, ತನ್ನ ಕೃತಿಯನ್ನು ಕೃಷ್ಣಕೇಂದ್ರಿತವನ್ನಾಗಿಸಿದ.

ಹೀಗೆ ಈತನ ಕಾವ್ಯ ಲೌಕಿಕದಿಂದ ಅಲೌಕಿಕಕ್ಕೆ ಹೊರಳುತ್ತಿರುವುದಕ್ಕೆ ಭೀಷ್ಮಪರ್ವದ ಕೃಷ್ಣನ ಚಕ್ರಪ್ರಯೋಗ ಪ್ರಸಂಗವನ್ನು ನೋಡುಬಹುದು. ಹತ್ತುದಿನ ಕಳೆದರೂ ಎದುರಾಳಿ ಅರ್ಜುನನನ್ನು ಸೋಲಿಸುವುದು ಸಾಧ್ಯವಾಗದುದಕ್ಕೆ ಕೃಷ್ಣನ ಸಾರಥ್ಯವೇ ಕಾರಣವೆಂದು ಭಾವಿಸಿದ ಭೀಷ್ಮ, ಕೃಷ್ಣನನ್ನೇ ಮೊದಲು ನಿಗ್ರಹಿಸಲು ಯೋಚಿಸಿ

ಕೆಂಗರಿಯ ಮರಿದುಂಬಿ, ತಾವರೆ
ಗಂಗವಿಸುವವೊಲಸುರರಿಪುವಿನ
ಮಂಗಳಾನನ ಕಮಲದಲಿ ಶರವಾಳಿ ಗರಿಗಡಿಯೆ।

ಎಂಬಂತೆ ಕೃಷ್ಣನ ಮುಖಕ್ಕೆ ಬಾಣಗಳನ್ನು ಪ್ರಯೋಗಿಸಿದ. ಈ ಬಾಣಾಹತಿಯನ್ನು ಸಹಿಸದ ಕೃಷ್ಣ "ಭೀಷ್ಮನ ಕಡಿದು ಭೂತಗಣಕ್ಕೆ ಬೋನವ ಬಡಿಸುವೆನು" ಎಂದು ಚಕ್ರ ಬೀಸಲು ಸಿದ್ಧನಾಗುವುದೇ ತಡ, ಕಾವ್ಯ ವೀರರಸದಿಂದ ತಟ್ಟನೇ ಭಕ್ತಿರಸಕ್ಕೆ ಹೊರಳುವ ರೀತಿಯಲ್ಲಿ "ಹರಿ ಮುಕುಂದ ಮುರಾರಿ ಲಕ್ಷ್ಮೀವರನೆ ಕೇಶವಯೆನುತ ಚೌಪಟ ಶರವನವನಿಗೆ ಬಿಸುಟು" ಭೀಷ್ಮನು ಕೃಷ್ಣನಿಗೆ ಎರಗುತ್ತಾನೆ. ಮುಂದುವರಿದು ಭೀಷ್ಮನಿಂದ

ದೇವ, ನೀ ದಿಟ ಕೊಲುವೊಡೆಯು ನಾ
ಸಾವೆವೇ? . . . .
ದೇವನಾಮದ ಜೋಡು ತನ್ನನು
ಕಾವುದೈ, ನೀವ್ ಮುನಿದಡೆಯು ನಿಮ
ಗಾವು ಹೆದರೆವು. . . . .
ಅಳುಕಿ ಕೂದಲು ಹರಿದುದಾದರೆ
ಬಳಿಕ ನಾ ಡಿಂಗರಿಗನಲ್ಲ . . .

ಎಂದು ಭೀಷ್ಮ ನುಡಿದುದೂ, ಆಗ ಕೃಷ್ಣನು 'ನಾಚಿ ಚಕ್ರವ ಮುಚ್ಚಿ'ದುದೂ ಕುಮಾರವ್ಯಾಸಭಾರತದ ಒಟ್ಟು ತಾತ್ವಿಕತೆಗೆ ನಿದರ್ಶನವೆನಿಸಿದೆ. ಇಂಥ ಪ್ರಸಂಗಗಳನ್ನು ಸೃಷ್ಟಿಸದೆ ಪಂಪನು ಎಂಟು ಲೌಕಿಕರಸಗಳಿಂದ ಉದ್ರೇಕದ ಆನಂದವನ್ನುಂಟು ಮಾಡಿದರೆ, ಕುಮಾರವ್ಯಾಸ ಒಂಬತ್ತನೆಯ ಶಾಂತರಸವನ್ನೂ ಬಳಸಿ, ಆ ಉದ್ರೇಕದ ಆನಂದವು ಉಪಶಮನದ ಮಹದಾನಂದದಲ್ಲಿ ವಿರಮಿಸುವಂತೆ ಮಾಡುತ್ತಾನೆ. ಕಾವ್ಯಾರಂಭದಲ್ಲಿ "ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ, ಪದವಿಟ್ಟಳುಪದೊಂದಗ್ಗಳಿಕೆ....." ಎಂದು ಮುಂತಾಗಿ ಪದ್ಯವನ್ನು ವೀರೋಚಿತವಾಗಿ ಆರಂಭಿಸಿ,"ಎಂಬೀ ಬಲಹು ಗದುಗಿನ ವೀರನಾರಾಯಣನ ಕಿಂಕರಗೆ" ಎಂದು ವಿನಯೋಚಿತವಾಗಿ ಮುಗಿಸುವಲ್ಲಿಯೂ, ಅಂದರೆ ಅಹಂಕಾರವನ್ನು ನಿರಹಂಕಾರವಾಗಿ ಪಲ್ಲಟಿಸುವಲ್ಲಿಯೂ ಇಂಥ ರಸಪರಿವರ್ತನೆಯನ್ನು ಕಾಣಬಹುದು. ಕವಿಯು ಕೃಷ್ಣನಿಂದ "ಬಂಟನಹೆ ಭಕ್ತರಿಗೆ... ಮೆಚ್ಚೆವು ತರ್ಕಸಾಧಕರ" ಎಂದು ಹೇಳಿಸಿ, ತನ್ನ ಈ ಭಕ್ತಿರಸದ ನಿಲವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತಾನೆ. ಇಂಥ ಸಂತ ನಿಲವಿನಿಂದಾಗಿಯೇ

ತನ್ನ ಭಾರತವನ್ನು ಕೇವಲ ಚಾರುಕವಿತೆಯ 'ಲೌಕಿಕ'ಕೃತಿಗೆ ಇಳಿಸದೆ, "ನೆಲೆಗೆ ಪಂಚಮಶ್ರುತಿ"ಯ 'ಆಗಮಿಕ' ಕೃತಿಯಾಗಿ ಬೆಳೆಸುತ್ತಾನೆ. ಪಂಪನು ತನ್ನ ಕಾವ್ಯವಾಚನದಿಂದ "ವಿಭವಂ ಸೌಭಾಗ್ಯಮಿಷ್ಟಾಂಗನಾ ಸುರತಂ" ಲಭಿಸುವುದೆಂದು ಲೌಕಿಕ ಫಲಗಳನ್ನು ಹೇಳಿದರೆ, ಕುಮಾರವ್ಯಾಸನು "ವೇದಪಾರಾಯಣದ ಫಲ, ಗಂಗಾದಿ ತೀರ್ಥಸ್ನಾನ ಫಲ...' ಎಂದು ಮುಂತಾಗಿ ಅಲೌಕಿಕ ಫಲಗಳನ್ನು ಹೇಳುವುದು, ಈ ಕಾರಣಕ್ಕಾಗಿ. ಇದೆಲ್ಲವನ್ನು ನೋಡಿದರೆ, ಈ ಸಂತಕಾವ್ಯವನ್ನು "ಕುಮಾರವ್ಯಾಸ ವಿರಚಿತ ಕರ್ಣಾಟಭಾರತಕಥಾಮಂಜರಿ" ಎಂದು ಕರೆಯದೆ, ಮೂಲ ಪದ್ಯದಲ್ಲಿರುವಂತೆ "ಕುಮಾರವ್ಯಾಸಯೋಗೀಂದ್ರ ವಿರಚಿತ ಕರ್ಣಾಟಭಾರತ ಕಥಾಮಂಜರಿ" ಎಂದು ಕರೆಯುವುದೇ, ಕೃತಿಯ ಮೇಲೆ ಹಾಗೆ ಮುದ್ರಿಸುವುದೇ ಹೆಚ್ಚು ಸೂಕ್ತವೆನಿಸುತ್ತದೆ.

ಲೌಕಿಕರಸಗಳಲ್ಲಿ ಕನ್ನಡಸಾಹಿತ್ಯ ಹಾಸ್ಯವನ್ನು ಕಡೆಗಣಿಸುತ್ತ ಬಂದಿದೆ. ಬಹುಶಃ ಹೆಣ್ಣು-ಗಂಡಿನ ಮುಕ್ತಸಮಾಜದಲ್ಲಿ ಹಾಸ್ಯ ಹೆಚ್ಚು ಹುಟ್ಟುವಂತೆ ಕಾಣುತ್ತದೆ. ಇಂಥ ಮುಕ್ತವ್ಯವಸ್ಥೆ ಕಾರಣವಾಗಿ ಪಾಶ್ಚಿಮಾತ್ಯರಲ್ಲಿ ಕಾಮೆಡಿ ಎಂಬ ಸಾಹಿತ್ಯ ಪ್ರಕಾರವೇ ಹುಟ್ಟಿದೆ. ನಮ್ಮಲ್ಲಿ ಅಂಥ ಮುಕ್ತ ಸಾಮಾಜಿಕ ವ್ಯವಸ್ಥೆಗೆ ಅವಕಾಶವಿಲ್ಲವಾಗಿ ಒಂದು ಸ್ವತಂತ್ರ ಪ್ರಕಾರವಾಗಿ ಕಾಮೆಡಿ ಬೆಳೆದು ಬರಲಿಲ್ಲ. ಹೀಗಿದ್ದೂ ನಮ್ಮ ಕವಿಗಳು ಈ ಕೊರತೆಯನ್ನು ತುಂಬಿಕೊಳ್ಳಲು ವಿದೂಷಕನ ಕೃತಕ ಪಾತ್ರ ಸೃಷ್ಟಿಸಿಕೊಳ್ಳುವ ವಿಫಲಪ್ರಯತ್ನ ಮಾಡಿದರು. ಇದು ತೇಪೆ ಎನಿಸಿತೇ ಹೊರತು ನಿಜವಾದ ಹಾಸ್ಯವಾಗಿ ಪರಿಣಮಿಸಲಿಲ್ಲ. ಹೀಗಿರುವಾಗ ಪ್ರಾಚೀನಸಾಹಿತ್ಯದಲ್ಲಿ ಹಾಸ್ಯವನ್ನು ಸಾರ್ಥಕವಾಗಿ ಸೃಷ್ಟಿಸಿದ ಕುಮಾರವ್ಯಾಸ, ಮೇಲೆ ಹೇಳಿದಂತೆ ಸ್ತ್ರೀ-ಪುರುಷ ಮೇಳ ಸಂದರ್ಭಗಳಲ್ಲಿ ಅದು ಚಿಮ್ಮುವಂತೆ ಮಾಡಿದ್ದಾನೆ. ಅಂಥ ಮೇಳಗಳೆಂದರೆ ಉತ್ತರನ ಪೌರುಷ ಮತ್ತು ದ್ರೌಪದಿಯ ಸ್ವಯಂವರ. ಉತ್ತರನ ಸುತ್ತ ಹೆಣ್ಣುಗಳ ಮೇಳವೇ ಇದೆ. ಆಗ ಅವನು ತನ್ನ ಶೌರ್ಯದ ಬಗ್ಗೆ ಜಂಬಕೊಚ್ಚಿಕೊಳ್ಳುವ ರೀತಿ ಹಾಸ್ಯವನ್ನು ಉಕ್ಕಿಸುತ್ತದೆ. ಉತ್ತರನ ಬಾಯಿಯಿಂದ "ಆರೊಡನೆ ಕಾದುವೆನು, ಕೆಲಬರು ಹಾರುವರು , ಕೆಲರಂತಕನ ನೆರೆಯೂರವರು.." ಎಂದು ಪದ್ಯವನ್ನು ವೀರೋಚಿತ ರೀತಿಯಲ್ಲಿ ನುಡಿಸಿ, ಕೊನೆಗೆ ಪಿಸುದನಿಯಿಂದ "ಕುಮಾರ ನೆಣಗೊಬ್ಬನಲಿ ನುಡಿದನು ಹೆಂಗಳಿದಿರನಲಿ" ಎಂದು ಮುಗಿಸುವಲ್ಲಿ, ಅದು ವೀರದಿಂದ ಹಾಸ್ಯಕ್ಕೆ ಹೊರಳುತ್ತದೆ. ಇದೇರೀತಿ "ಯುವತಿಯರ ಮೊಗನೋಡುತುತ್ತರ ಬಿರುದ ಕೆದರಿದನು" ಎಂದು ಮುಂತಾಗಿ ೪-೬ ಪದ್ಯಗಳು ಮುಗಿಯುವಲ್ಲಿ ಹಾಸ್ಯ ಹೊನಲಾಗಿ ಹರಿಯುತ್ತದೆ. ಯುದ್ಧಭೂಮಿಯಿಂದ ಓಡಿಹೋಗುವ ಉತ್ತರನನ್ನು ಅರ್ಜುನ ಹಿಡಿದು ನಿಲ್ಲಿಸಿ, ವೀರನಾದವನು ರಣಭೂಮಿಯಲ್ಲಿ " ಅಳಿದನಾದೊಡೆ ದೇವಲೋಕದ ಲಲನೆಯರು" ಸಿಗುವರೆಂದು ಹೇಳಲು,"ಸುರರ ಸತಿಯರನೊಲ್ಲೆವೆಮಗೆಮ್ಮರಮನೆಯ ನಾರಿಯರೆ ಸಾಕು" ಎಂದು ಅವನು ಉತ್ತರಿಸುವಲ್ಲಿಯೂ ಹೆಣ್ಣಿನ ಪ್ರಸ್ತಾಪವಿರುವುದನ್ನು ಗಮನಿಸಬಹುದು.

ಇದೇರೀತಿ 'ದ್ರೌಪದಿ ಸ್ವಯಂವರ ಪ್ರಸಂಗ'ದಲ್ಲಿ ಅರ್ಜುನನು ಬಿಲ್ಲು ಎತ್ತಲು ಎದ್ದು ನಿಲ್ಲುತ್ತಲೇ ಆಕೆಯ ಗೆಳತಿಯರು

ಎಲವೋ ಮಟ್ಟಿಯ ಮದನ, ದರ್ಭೆಯ
ತಿಲದ ಮನ್ಮಥ, ವಿಮಲ ಧೋತ್ರದ
ತಳಿರುಗಾಸೆಯ ಕಾಮ, ಕೃಷ್ಣಾಜಿನದ ಕಂದರ್ಪ. . .

ಎಂದು ಮುಂತಾಗಿ ಕೈಹೊಡೆದು ನಗುವಲ್ಲಿ, " ಹೊತ್ತುಗಳೆವರೆ ಲೇಸು ಬಳಿಕೆನ್ನುತ್ತಮರಲಾ ವಿಪ್ರರು" ಎಂದು ಹೇಳುವಲ್ಲಿ ಇಡೀ ಪ್ರಸಂಗವೇ ಹಾಸ್ಯದಿಂದ ತುಂಬಿ ತುಳುಕುತ್ತದೆ. ಹೀಗೆ ಹೆಣ್ಣು ಕಾರಣವಾಗಿ ಹಾಸ್ಯ ಉಕ್ಕುವುದನ್ನು ಕವಿ ಅರ್ಥಮಾಡಿಕೊಂಡ ರೀತಿಯಲ್ಲಿ, ಈ ಎರಡೂ ಸ್ತ್ರೀಮೇಳ ಪ್ರಸಂಗಗಳು ಸೃಷ್ಟಿಯಾಗಿವೆ.

೪

ಹೀಗೆ ಕುಮಾರವ್ಯಾಸಭಾರತ ಲೌಕಿಕ ಭಾವ-ಅಲೌಕಿಕ ಅನುಭಾವಗಳ ಸಂಗಮವಾಗುತ್ತಲೇ ಲೋಕನೀತಿಯನ್ನು ಅನನ್ಯ ರೀತಿಯಲ್ಲಿ ಪ್ರತಿಪಾದಿಸುತ್ತದೆ. ಬಹುಶಃ ವ್ಯಾಸಭಾರತದಲ್ಲಿಲ್ಲದ, ಪಂಪಭಾರತದಲ್ಲಿಯೂ ಇಲ್ಲದ ಅಂಥ ಒಂದು ರೂಪಕ ಚಿತ್ರಣ ಹೀಗಿದೆ:

ಕುರುಕ್ಷೇತ್ರಯುದ್ಧ ಸನ್ನಿಹಿತವಾದ ಸಂದರ್ಭದಲ್ಲಿ ಧರ್ಮರಾಜ ಸಭೆ ಸೇರಿಸಿ, ಸೇನಾಪತಿ ಪಟ್ಟಕ್ಕೆ ಯಾರು ಯೋಗ್ಯ? ಎಂಬ ಪ್ರಶ್ನೆ ಕೇಳುತ್ತಾನೆ. ಒಬ್ಬೊಬ್ಬರು ತಮಗಿಷ್ಟವಾದ ಒಂದೊಂದು ಹೆಸರು ಸೂಚಿಸುತ್ತಾರೆ-ಇಂದಿನ ಪ್ರಜಾಪ್ರಭುತ್ವದ ರಾಜಕಾರಣಿಗಳಂತೆ. ಆಗ ಈ ಬಹುಮತ(ಭಿನ್ನಮತ)ಗಳ ಗೊಂದಲದಿಂದ ಬೇಸತ್ತ ಧರ್ಮರಾಜ ಕೃಷ್ಣನನ್ನು ಕುರಿತು

ಬಿಂಬವನು ಬೇರಿರಿಸಿ ಬಹುಮತ
ವೆಂಬ ಬಿಸಿಲಲಿ ರಾಜನಯವೆಂ
ದೆಂಬ ನೈದಿಲು ನಲಿವುಗೆಟ್ಟ ದೆ...(೧೧-೩೨)

ಅಂದರೆ ಸೂರ್ಯನನ್ನು ದೂರವಿಟ್ಟು, ಅವನ ಬಿಸಿಲನ್ನು ಮಾತ್ರ ಹಿಡಿದು ತಂದು ತೋರಿಸುವುದರಿಂದಾಗಿ ಕಮಲ ಬಾಡುವಂತೆ, ಸತ್ಯವನ್ನು ದೂರವಿಟ್ಟು ತಲೆಗೊಂದು ಮಾತನಾಡುವ ಬಹುಜನರ ಅಭಿಮತದಿಂದಾಗಿ ನಮ್ಮ ರಾಜಕಾರಣ ಬಾಡುತ್ತಲಿದೆ-ಎಂದು ಬಿನ್ನವಿಸಿಕೊಳ್ಳುತ್ತಾನೆ. ವಾಕ್‌ಸ್ವಾತಂತ್ರ್ಯದ ಹಕ್ಕನ್ನು ಮುಂದುಮಾಡಿಕೊಂಡು ಇಂದಿನ ಬಹುಜನ ಅಪ್ರಬುದ್ಧ ರಾಜಕಾರಣಿಗಳು ವ್ಯಕ್ತಪಡಿಸುವ ಅರ್ಥಹೀನ ವಾದಗಳನ್ನು, ಅದರಿಂದಾಗಿ ಪ್ರಸ್ತುತ ರಾಜಕಾರಣ ಬಾಡುತ್ತಲಿರುವುದನ್ನು ಈ ಪದ್ಯ ಧ್ವನಿಸುತ್ತದೆ.

೫

ಕುಮಾರವ್ಯಾಸ ಅಗ್ರಹಾರಸಂಸ್ಕೃತಿಯಲ್ಲಿ ಹುಟ್ಟಿದ ಕವಿ. ನನ್ನ ದೃಷ್ಟಿಯಲ್ಲಿ ಪ್ರಾಚೀನ ಅಗ್ರಹಾರಗಳಲ್ಲಿ ಪಂಡಿತರು ಹುಟ್ಟುತ್ತಿದ್ದರೇ ಹೊರತು, ಪ್ರತಿಭಾವಂತರಲ್ಲ-ವಿಶ್ವವಿದ್ಯಾಲಯದಲ್ಲಿ Creative ವ್ಯಕ್ತಿಗಳಿಗೆ ಬದಲು Scholor ವ್ಯಕ್ತಿಗಳು ಹುಟ್ಟುವಂತೆ. ಹೀಗಾಗಿ ಪ್ರಾಚೀನ ಕನ್ನಡಸಾಹಿತ್ಯದಲ್ಲಿ ಜೈನಯುಗ, ಲಿಂಗಾಯತಯುಗಗಳ ವರೆಗೆ, ಅಂದರೆ ಕುಮಾರವ್ಯಾಸನ ವರೆಗೆ ಒಬ್ಬನೂ ಪ್ರತಿಭಾವಂತ ಬ್ರಾಹ್ಮಣಕವಿ ಹುಟ್ಟಲಿಲ್ಲ. ಬಹಳೆಂದರೆ ನಾಗವರ್ಮನಂಥ ಛಂದೋಪಂಡಿತ, ದುರ್ಗಸಿಂಹನಂಥ ಅನುವಾದ ಪಂಡಿತರು ಹುಟ್ಟಿದರು. ಹೀಗಿದ್ದೂ ಅಗ್ರಹಾರ ಸಂಸ್ಕೃತಿಯಲ್ಲಿ ಕುಮಾರವ್ಯಾಸನಂಥ ಮಹಾಪ್ರತಿಭಾಶಾಲಿ ಹುಟ್ಟಿದುದೇಕೆ? ಇದಕ್ಕೆ ನಾನು ಕಂಡುಕೊಂಡ ಕಾರಣಗಳು ಎರಡು. ಮೊದಲನೆಯದು: ೧೫ನೆಯ ಶತಮಾನದ ಹೊತ್ತಿಗೆ ನಿಜವಾದ ಅಗ್ರಹಾರ ವ್ಯವಸ್ಥೆ ಶಿಥಿಲವಾಗಿದ್ದಿತು. ಅಥವಾ ಕೋಳಿವಾಡ ಗ್ರಾಮಪರಿಸರ ಅಗ್ರಹಾರವಾಗಿರಲಿಲ್ಲ. ಎರಡನೆಯದು: ಕುಮಾರವ್ಯಾಸ ವೈದಿಕ ಕುಟುಂಬದಲ್ಲಿ

ಹುಟ್ಟಿದ್ದರೂ ಭಾಗವತ ಪಂಥಕ್ಕೆ ಹೊರಳಿದವನು. ಭಾಗವತವೆನ್ನುವುದು ಒಂದು ಧರ್ಮವಲ್ಲ, ಒಂದು ಆಧ್ಯಾತ್ಮಮಾರ್ಗ. ಯಾವುದೇ ಜಾತಿಯವರು ಈ ಮಾರ್ಗದ ಅನುಯಾಯಿಯಾಗಬಹುದು. ಕುಮಾರವ್ಯಾಸ, ಬೇಂದ್ರೆ ವೈದಿಕಧರ್ಮ(ಜಾತಿ)ದಲ್ಲಿ ಹುಟ್ಟಿದ್ದರೂ ಭಾಗವತವೆಂಬ ಮುಕ್ತಮಾರ್ಗಕ್ಕೆ ಹೊರಳಿದವರು. ಹೀಗಾಗಿ ಇವರು ಬದ್ಧವ್ಯವಸ್ಥೆಯ ಅಗ್ರಹಾರ ಪಂಡಿತರಾಗಿ ಉಳಿಯದೆ, ಮುಕ್ತವ್ಯವಸ್ಥೆಯ ಪ್ರತಿಭಾಶಾಲಿ ಕವಿಯಾಗಿ ಬೆಳೆದರು.

ಕುಮಾರವ್ಯಾಸ ತನ್ನ 'ಕಾವ್ಯಕೆ ಗುರು' ಅಂದರೆ ಗುರುಕೃತಿಯೆಂದು ಕರೆದಿದ್ದಾನೆ. ಆಚಾರ್ಯಕೃತಿ ಬೇರೆ, ಗುರುಕೃತಿ ಬೇರೆ. ಆಚಾರ್ಯಕೃತಿ ಪಾಂಡಿತ್ಯ ಜನ್ಯವಾದುದು, ಗುರುಕೃತಿ ಪ್ರತಿಭಾಜನ್ಯವಾದುದು. ತನ್ನದು 'ಚಾರುಕವಿತೆಯ ಬಳಕೆಯಲ್ಲ'ವೆಂದೂ ಕುಮಾರವ್ಯಾಸ ಹೇಳುತ್ತಾನೆ. ಚಾರುಕವಿತೆಯೆಂದರೆ ಕೇವಲ ರಸಪಾತಳಿಯ ಕಾವ್ಯವೆಂದೂ, ತನ್ನ ಭಾರತ ಇದನ್ನೂ ಒಳಗೊಂಡ ದಾರ್ಶನಿಕ ಕಾವ್ಯವೆಂದು ಸೂಚಿಸುವ ಉದ್ದೇಶ ಇವನಿಗಿರುವಂತೆ ಕಾಣುತ್ತದೆ.

೬

ಕುಮಾರವ್ಯಾಸಭಾರತದ ಸಂವಹನ ರೀತಿಯ ಬಗ್ಗೆ ಒಂದು ಮಾತು. ಈ ಕವಿಯ ಮುಂದೆ ಗ್ರಾಮೀಣ ಪರಿಸರದ ನಿರಕ್ಷರಿ ಶ್ರೋತೃಗಳಿದ್ದರೇ ಹೊರತು ರಾಜಾಶ್ರಯದ ಸಾಕ್ಷರಿ ವಾಚಕರಲ್ಲ. ಓದುವ ವಾಚಕರಿಗಿಂತ ಈ ಕೇಳುವ ಶ್ರೋತೃಗಳನ್ನು ಗಮನದಲ್ಲಿಟ್ಟುಕೊಂಡು ಇವನು ಮಹಾಭಾರತವನ್ನು ರಚಿಸಿದ್ದಾನೆ. ಅದಕ್ಕಾಗಿಯೇ ಇದರ ಬಹಳಷ್ಟು ಹಸ್ತಪ್ರತಿಯ ಸಂಧಿಗಳ ಮೇಲೆ ರಾಗ-ತಾಳದ ಸೂಚನೆಗಳಿವೆ. ಹೀಗಾಗಿ ಈ ಕೃತಿಯನ್ನು ಅಲ್ಲಿ ಸೂಚಿತವಾಗಿರುವ ರಾಗ-ತಾಳಗಳಲ್ಲಿಯೇ ಸಂವಹನಗೊಳಿಸುವುದು ಸೂಕ್ತವೆಂದೂ, ಪ್ರಾಚೀನಕಾಲದಲ್ಲಿ ಇದೇ ಸಂವಹನಪದ್ಧತಿ ರೂಢಿಯಲ್ಲಿದ್ದಿತೆಂದೂ ಹೇಳಬಹುದು. ಇಂಗ್ಲಿಷ್‌ರು ಬಂದಬಳಿಕ ಸಾಕ್ಷರತೆ ಹೆಚ್ಚಿ, ಈ ಶ್ರವಣಪ್ರಧಾನ ಕೃತಿ ವಾಚನಪ್ರಧಾನವಾಗುತ್ತ ಬಂದಿತು. ಇಂಗ್ಲಿಷ್‌ರು ವಾಚನಪ್ರಧಾನ ಸಂಸ್ಕೃತಿಯವರಾದುದರಿಂದ ಪರಿಷ್ಕರಣ ಪ್ರಸಂಗದಲ್ಲಿ ಅವರು ನಮ್ಮ ಷಟ್ಪದಿ ಮೊದಲಾದ ದೇಶೀ ಕಾವ್ಯಗಳ ಸಂಧಿಯ ತಲೆಯ ಮೇಲಿನ ರಾಗ-ತಾಳಗಳನ್ನು ತೆಗೆದುಹಾಕಿದರು. ನಾವೂ ಕುರುಡರಂತೆ ಅವರನ್ನು ಅನುಸರಿಸಿದೆವು. ಇನ್ನು ಮೇಲೆ ಆ ತಪ್ಪನ್ನು ತಿದ್ದಿಕೊಳ್ಳಬೇಕೆಂದು ನನ್ನ ಭಾವನೆ.

ಕುಮಾರವ್ಯಾಸಭಾರತದ ಇನ್ನೊಂದು ಸಂವಹನ ಮಾಧ್ಯಮ ಗಮಕ. ಶಬ್ದಗಳು ಹಿಂದು ಮುಂದಾಗಿರುವ ವಾಕ್ಯಗಳಿಗಿಂತ, ನೇರ ವಾಕ್ಯಗಳನ್ನೊಳಗೊಂಡ ಪದ್ಯಮಾತ್ರ ಗಮಕಕ್ಕೆ ಯೋಗ್ಯ. ಕುಮಾರವ್ಯಾಸಭಾರತ ಹೀಗೆ ವಾಕ್ಯದ ಮುಂದೆ ವಾಕ್ಯ ಜೋಡಣೆಯ ವಾಕ್ಯಗಳ ಮಹಾರಾಶಿಯಾಗಿದೆ. ಇಂಥ ವಾಕ್ಯಗಳಿಂದಾದ ಪದ್ಯ ಮಾತ್ರ ಗಮಕಯೋಗ್ಯವಾಗುತ್ತದೆ. ಉದಾ:

ಅರಸುಗಳಿಗಿದು ವೀರ,
ದ್ವಿಜರಿಗೆ ಪರಮವೇದದ ಸಾರ,
ಯೋಗೀಶ್ವರರ ತತ್ವವಿಚಾರ,
ಮಂತ್ರೀಜನಕೆ ಬುದ್ಧಿಗುಣ. . .

ಹೀಗಿರುವ ವಾಕ್ಯಸರಣಿಯಿಂದಾಗಿ ಗಮಕ ಕಳೆ ಕಟ್ಟುತ್ತದೆ. ಗಮಕವೆಂದರೆ ಸ್ಪಷ್ಟತೆಯೆಂಬ ಅರ್ಥವೂ ಸಾರ್ಥಕತೆ ಪಡೆಯುತ್ತದೆ. ಈ ಕಾರಣದಿಂದಾಗಿಯೇ ಕುಮಾರವ್ಯಾಸಭಾರತ ಉತ್ತರ ಕರ್ನಾಟಕದಲ್ಲಿ ಹುಟ್ಟಿದ್ದರೂ, ಗಮಕಕಲೆ ಹೆಚ್ಚು ಪ್ರಚಾರದಲ್ಲಿರುವ ಮೈಸೂರು ಕರ್ನಾಟಕದಲ್ಲಿ ಹೆಚ್ಚು ಜನಪ್ರಿಯವಾಯಿತೆಂದು ಹೇಳಬಹುದು.

೭

ಕುಮಾರವ್ಯಾಸಭಾರತ ಈವರೆಗೆ ಅನೇಕ ಆವೃತ್ತಿಗಳಲ್ಲಿ ಬೆಳಕು ಕಂಡಿದೆ. ಇವುಗಳಲ್ಲಿ ಮೈಸೂರು ವಿಶ್ವವಿದ್ಯಾಲಯದ ವಿದ್ವದಾವೃತ್ತಿಯೇ ಹೆಚ್ಚು ಶುದ್ಧವೆಂದು ಎಲ್ಲರ ಭಾವನೆಯಾಗಿದ್ದರೆ, ಇದೇ ಹೆಚ್ಚು ಅಶುದ್ಧವೆಂದು ನನ್ನ ಭಾವನೆ. ಇದಕ್ಕೆ ನನ್ನ ವಿವರಣೆ ಹೀಗಿದೆ :

ಜಡಪಾಂಡಿತ್ಯವನ್ನೇ ನಿಜಪಾಂಡಿತ್ಯವೆಂದು ಭಾವಿಸಿದ್ದ ಕಳೆದ ಶತಮಾನದಲ್ಲಿ, ಹೆಚ್ಚು ಹಸ್ತಪ್ರತಿಗಳನ್ನು–ಹೆಚ್ಚು ಪಾಠಾಂತರಗಳನ್ನು ಸಂಗ್ರಹಿಸಿ, ಪಾಠನಿರ್ಣಯಿಸಿದುದೇ ಉತ್ತಮ ಪರಿಷ್ಕರಣವೆಂಬ ತಪ್ಪು ತಿಳಿವಳಿಕೆ ಅಂದಿನವರಲ್ಲಿ ರೂಢವಾಗಿದ್ದಿತು. ಮೇಲಾಗಿ ಇವರು ಮಾರ್ಗಕೃತಿಗೆ ಅನುಸರಿಸುವ ಪರಿಷ್ಕರಣ ಪದ್ಧತಿಯನ್ನು ದೇಶೀಕೃತಿ ಸಂಪಾದನೆಗೂ ಅನ್ವಯಿಸುವ ತಪ್ಪುಮಾಡಿದರು. ನಿರ್ದಿಷ್ಟ ರೀತಿಯಲ್ಲಿ ಬೆಳೆದು ಬಂದಿರುವ ಮತ್ತು ಆ ಕಾರಣಕ್ಕಾಗಿಯೇ ಮಿತಸಂಖ್ಯೆಯಲ್ಲಿರುವ ಮಾರ್ಗಕೃತಿಗಳ ಪಾಠಾಂತರ ಸ್ವರೂಪವೇ ಬೇರೆ, ಅನಿರ್ದಿಷ್ಟ ರೀತಿಯಲ್ಲಿ ಬೆಳೆದು ಬಂದಿರುವ ಮತ್ತು ಆ ಕಾರಣಕ್ಕಾಗಿಯೇ ಮಿತಿಮೀರಿದ ಸಂಖ್ಯೆಯಲ್ಲಿರುವ ದೇಶೀಕೃತಿಗಳ ಪಾಠಾಂತರ ಸ್ವರೂಪವೇ ಬೇರೆ. ಅಲ್ಲಿ ಹೆಚ್ಚು ಪ್ರತಿ ಬಳಸಿದಷ್ಟೂ ಸಂಪಾದನೆ ಹೆಚ್ಚು ಶುದ್ಧ, ಇಲ್ಲಿ ಹೆಚ್ಚು ಹಸ್ತಪ್ರತಿ ಬಳಸಿದಷ್ಟು ಸಂಪಾದನೆ ಹೆಚ್ಚು ಅಶುದ್ಧವಾಗಬಹುದಾಗಿದೆ, ಅಶುದ್ಧವಾಗುತ್ತದೆ. ಈ ತಾತ್ವಿಕತೆಯನ್ನು ಅರ್ಥ ಮಾಡಿಕೊಳ್ಳದೆ ಮೈಸೂರು ವಿಶ್ವವಿದ್ಯಾಲಯ ಅಸಂಖ್ಯಾತ ಪಾಠಾಂತರ ಸಂಗ್ರಹಿಸಿ, ತಮಗೆ ಸೂಕ್ತವಾದುದನ್ನು ಸ್ವೀಕರಿಸಿದ ಕಾರಣ, ಆ ಆವೃತ್ತಿ ತೇಪೆಯ ವಸ್ತ್ರವಾಯಿತೇ ಹೊರತು ಮೂಲವಸ್ತ್ರವಾಗಲಿಲ್ಲ. ಇದು ಸಂಪಾದಕನ ಇಷ್ಟದಂತೆ ಪುನಾರಚಿತವಾದ ಆವೃತ್ತಿಯಾಯಿತೇ ಹೊರತು ಕವಿ ಸೃಷ್ಟಿಸಿದ, ಇಲ್ಲವೆ ಕವಿಕೃತಿಗೆ ಸಮೀಪದ ಆವೃತ್ತಿಯಾಗಲಿಲ್ಲ.

ಈಗ ಎಲ್ಲ ಪ್ರದೇಶಗಳಲ್ಲಿ ಸಿಗುವ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಹೆಚ್ಚು ಶುದ್ಧ, ಹೆಚ್ಚು ಪ್ರಾಚೀನ, ಹೆಚ್ಚು ಪೂರ್ಣವಾಗಿರುವ, ಅದರಲ್ಲಿಯೂ ಗದಗ ಪ್ರದೇಶದಲ್ಲಿ ಹುಟ್ಟಿರುವ ವಿಶ್ವಾಸಾರ್ಹ ಒಂದು ಪ್ರತಿಯನ್ನು ಮಾತ್ರ ಆಯ್ದುಕೊಂಡು, ಅದರಲ್ಲಿಯ ಲಿಪಿಕಾರನ ದೋಷಗಳನ್ನು ದೂರಮಾಡಬೇಕು. ತೀರ ಅವಶ್ಯವೆನಿಸಿದರೆ ಇನ್ನೊಂದು ಉತ್ತಮಪ್ರತಿಯ ಪಾಠವನ್ನು ಬಳಸಬೇಕು. ಹಾಗೆ ಮಾಡಿದರೆ ಈ ಕಾವ್ಯಪರಂಪರೆಯ ಒಂದು ಕುಟುಂಬದ–ಒಂದು ಶುದ್ಧಪ್ರತಿಯನ್ನಾದರೂ ಉಳಿಸಿಕೊಟ್ಟಂತಾಗುತ್ತದೆ. ಅಂದರೆ ಹತ್ತು ಹಸ್ತಪ್ರತಿ ಸಂಗ್ರಹಿಸಿ, ಹನ್ನೊಂದನೆಯ ಹಸ್ತಪ್ರತಿ ಸಿದ್ಧಪಡಿಸುವ ಇಂದಿನ ದೋಷಪೂರ್ಣಪದ್ಧತಿಯಿಂದ ಸಂಪಾದನೆಯನ್ನು ಮುಕ್ತವಾಗಿಸಿದಂತಾಗುತ್ತದೆ. ಕರ್ನಾಟಕ ಸರಕಾರವಾಗಲೀ, ಯಾವುದೇ ಸಂಸ್ಥೆಯಾಗಲೀ, ಈ ನಿರೀಕ್ಷೆಯನ್ನು ಪೂರೈಸಬೇಕೆಂದು ಆಶಿಸುತ್ತೇನೆ. ಈ ಪೂರೈಕೆಯಲ್ಲಿ ಸಿದ್ಧವಾದ ಆವೃತ್ತಿಯಿಂದ ಮಾತ್ರ ಕೃತಿವಿಮರ್ಶೆಗೆ ಸರಿಯಾದ ನ್ಯಾಯ ಲಭಿಸುತ್ತದೆ. ಇಲ್ಲವಾದರೆ ಯಾವುದೋ ಅಪ್ರಾಮಾಣಿಕ ಕೃತಿಯನ್ನವಲಂಬಿಸಿ, ಮೌಲ್ಯಮಾಪನ

ಮಾಡಿದಂತಾಗುತ್ತದೆ. ಮುಂಬರುವ ಶಾಸ್ತ್ರೀಯ ಭಾಷಾಯೋಜನೆಗಳಲ್ಲಿ ಇದೂ ಒಂದು ಮಹತ್ವದ ಯೋಜನೆಯೆಂದು ಭಾವಿಸಿ, ನಾವು ಕವಿಗೆ ನ್ಯಾಯ ಒದಗಿಸುವುದು ಅಗತ್ಯವಾಗಿದೆ.

೮

ಮಹಾಭಾರತ ಅನೇಕ ಸಂದೇಶಗಳ ಜನ್ಮಭೂಮಿ. ಅಭ್ಯಾಸದ ಆಳಕ್ಕನುಗುಣವಾಗಿ ಅದು ಹೊಸ ಹೊಸ ಅರ್ಥಗಳನ್ನು ತೆರೆದು ತೋರುತ್ತ ಹೋಗುತ್ತದೆ. ಒಂದೆರಡು ಉದಾಹರಣೆ:

ಪಾಂಡವರ ಸೈನ್ಯ ೭ ಅಕ್ಷೋಹಿಣಿ, ಕೌರವನದು ೧೧ ಅಕ್ಷೋಹಿಣಿ. ಅವರಲ್ಲಿ ಭೀಮ, ಅರ್ಜುನ ಇಬ್ಬರೇ ಪ್ರೌಢ ಪರಾಕ್ರಮಿಗಳು, ಇವರಲ್ಲಿ ಭೀಷ್ಮ, ದ್ರೋಣ, ಕರ್ಣ, ಶಲ್ಯ, ದುರ್ಯೋಧನ, ಅಶ್ವತ್ಥಾಮ ಇತ್ಯಾದಿ ಬಹುಜನ ಪರಾಕ್ರಮಿಗಳು. ಹೀಗಿದ್ದೂ ದುರ್ಯೋಧನ ಸೋತಿದ್ದೇಕೆ? ನನ್ನ ಪ್ರಕಾರ ಅವನ ಸೋಲಿಗೆ ಕಾರಣ ಕರ್ಣ, ಕರ್ಣನ ಶೂದ್ರತ್ವ

ಭಾರತ ಜಾತಿವಾದಿ ರಾಷ್ಟ್ರ. ಇಲ್ಲಿ ಶೂದ್ರನು ತನ್ನ ಕೆಳವರ್ಗ ಮೀರಿ ನಡೆದುಕೊಂಡರೆ, ವಿಸ್ತರಿಸಿಕೊಂಡರೆ ಮೇಲು ವರ್ಗದವರು ಸಹಿಸುವುದಿಲ್ಲ. ಈ ಅಸಹನೆ ಅಪಾಯ ಪರಂಪರೆಯನ್ನು ಸೃಷ್ಟಿಸುತ್ತದೆ. ಉದಾ : ಕೌರವನ ಆಸ್ಥಾನವೆನ್ನುವುದು ಕ್ಷತ್ರಿಯ-ಬ್ರಾಹ್ಮಣರ ಸಂಘಟನೆ. ಈ ವ್ಯವಸ್ಥೆಯಲ್ಲಿ ಅನಿರೀಕ್ಷಿತವೆಂಬಂತೆ ಶೂದ್ರನಾದ ಕರ್ಣ ಸೇರಿಕೊಂಡ. ಅದೂ ಕೊನೆಯ ಆಸನವಲ್ಲ, ಚಕ್ರವರ್ತಿಯ ಮಗ್ಗುಲಿನ ಆಸನ ಅವನಿಗೆ ಪ್ರಾಪ್ತವಾಯಿತು. ಇದರಿಂದ ಎಲ್ಲರ ಆಸನಗಳ ಜೇಷ್ಠತೆಯಕ್ರಮ(Cader)ದಲ್ಲಿ ವ್ಯತ್ಯಾಸವಾಯಿತು. ಇದಲ್ಲದೆ ಆಗಾಗ ರಾಜಸಭೆಯಲ್ಲಿ ಕ್ಷತ್ರಿಯ-ಬ್ರಾಹ್ಮಣರಿಗಿಂತ ಇವನ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ಸಿಗತೊಡಗಿತು. ಇದರಿಂದಾಗಿ ಅಲ್ಲಿಯ ಕ್ಷತ್ರಿಯ-ಬ್ರಾಹ್ಮಣರು ಅತೃಪ್ತರಾದರು. ಇದು ಯುದ್ಧಪ್ರಸಂಗದಲ್ಲಿ ಬಿರುಕುಗಳಿಗೆ ಕಾರಣವಾಯಿತು. ೧೫ ದಿನಗಳ ಯುದ್ಧದಲ್ಲಿ ಭೀಷ್ಮ ಜೀವಂತವಾಗಿರುವ ೧೦ ದಿನ ಕರ್ಣ ಯುದ್ಧಭೂಮಿಗೆ ಬರಲಿಲ್ಲ. ಶೂದ್ರ ಕರ್ಣನ ವಿಷಯವಾಗಿ ಬ್ರಾಹ್ಮಣರಾದ ದ್ರೋಣ-ಅಶ್ವತ್ಥಾಮರು ದುರ್ಯೋಧನನೊಂದಿಗೆ ಆಗಾಗ ವಾದಕ್ಕಿಳಿದರು. ಕೆಲವೊಮ್ಮೆ ನೇರವಾಗಿ ಕರ್ಣನೊಂದಿಗೆ ಕಲಹಕ್ಕಿಳಿದರು. ಕ್ಷತ್ರಿಯನಾದ ಶಲ್ಯ ಒಲ್ಲದ ಮನಸ್ಸಿನಿಂದ ಶೂದ್ರನಾದ ಕರ್ಣನ ಸಾರಥ್ಯ ವಹಿಸಿದ, ರಣಾಂಗಣದಲ್ಲಿ ಅಸಹಕಾರ ತೋರಿದ. ಈ ಬಗೆಯ ಒಡೆದ ಮನಸ್ಸಿನ ಕೌರವರು ಬಹುಸಂಖ್ಯೆಯಲ್ಲಿದ್ದರೂ, ಒಂದೇ ಮನಸ್ಸಿನ ಅಲ್ಪಸಂಖ್ಯಾತರಾದ ಪಾಂಡವರಿಗೆ ಸೋಲಬೇಕಾಯಿತು.

ಇನ್ನೊಂದು ವಿಷಯ : ಮಹಾಭಾರತದಲ್ಲಿ ಬಹುದೊಡ್ಡ ಅನ್ಯಾಯಕ್ಕೆ ಗುರಿಯಾದವರು ಭೀಷ್ಮ, ಕರ್ಣ. ಇವರಲ್ಲಿ ಭೀಷ್ಮ ಕೌಟುಂಬಿಕ ಅನ್ಯಾಯಕ್ಕೆ, ಕರ್ಣ ಸಾಮಾಜಿಕ ಅನ್ಯಾಯಕ್ಕೆ ಗುರಿಯಾದರು. ತಂದೆಯಾದ ಶಂತನು, ಸೋದರರಾದ ಚಿತ್ರವೀರ್ಯ-ವಿಚಿತ್ರವೀರ್ಯ, ಇವರ ಮಕ್ಕಳಾದ ಪಾಂಡು-ಧೃತರಾಷ್ಟ್ರ, ಇವರ ಮಕ್ಕಳಾದ ಕೌರವ-ಪಾಂಡವರು, ಪಾಂಡವರ ಮಗನಾದ ಅಭಿಮನ್ಯು-ಹೀಗೆ ಮನೆಯಲ್ಲಿ ೫ ತಲೆಮಾರುಗಳ ಮದುವೆಮಾಡುವ ಭೀಷ್ಮ, ತಾನು ಮದುವೆಯಾಗಲಿಲ್ಲ. ಹೆಣ್ಣನ್ನು ತಾಯಿ ರೂಪದಲ್ಲಿ ಮುಟ್ಟಲಿಲ್ಲ, ಹೆಂಡತಿ ರೂಪದಲ್ಲಿ ಮುಟ್ಟಲಿಲ್ಲ, ಮಗಳು ರೂಪದಲ್ಲಿ ಮುಟ್ಟಲಿಲ್ಲ. ಕೊನೆಗೆ ಮೊಮ್ಮಗನ ಆಳಿಕೆಯ ದೌರ್ಜನ್ಯದ ಎದುರು ಅಸಹಾಯಕನಾಗಿ, ಮನೆಯ ಸೊಸೆಯ ವಸ್ತ್ರಾಪಹರಣ ಪ್ರಸಂಗದಲ್ಲಿ ಮೌನವಹಿಸಿದ, ಸೇನಾಪತಿ ಪಟ್ಟ ಪ್ರಸಂಗದಲ್ಲಿ ಕರ್ಣನ

ನಿಂದೆಗೆ ಗುರಿಯಾದ, ವೃದ್ಧಾಪ್ಯದಲ್ಲಿ ಯುದ್ಧಕ್ಕೆ ಗುರಿಯಾದ. ಈ ಎಲ್ಲ ಮಾನಸಿಕ ನೋವುಗಳ ಸಂಕೇತವೆಂಬಂತೆ ಬಾಣಗಳ ಹಾಸಿಗೆಯಲ್ಲಿ ೮ ದಿನ ನರಳಿದ. ಇನ್ನೂ ಕೊನೆಗೆ, ಹೆಣ್ಣನ್ನು ಮುಟ್ಟದ ಅವನು ರೂಪದಲ್ಲಿ ಮಾತ್ರ ಗಂಡಾದ ಶಿಖಂಡಿಯಿಂದ ಮಡಿದ. ಇವೆಲ್ಲ ಅವನು ಅನುಭವಿಸಿದ ಕೌಟುಂಬಿಕ ಅನ್ಯಾಯಗಳು. ಈ ಎಲ್ಲ ಅನ್ಯಾಯ ಸಂದರ್ಭಗಳಲ್ಲಿ ಅವನು ತುಟಿ ಬಿಚ್ಚಲಿಲ್ಲ. ಏಕೆಂದರೆ ಕೌಟುಂಬಿಕ ಅನ್ಯಾಯಕ್ಕೆ ಗುರಿಯಾದವರು ಮನೆತನದ ಮರ್ಯಾದೆದೃಷ್ಟಿಯಿಂದ ಮೌನವಾಗಿ ಎಲ್ಲ ನೋವುಗಳನ್ನು ನುಂಗಿಕೊಳ್ಳುತ್ತಾರೆ. ಕರ್ಣ ಹೀಗಲ್ಲ. ಸಾಮಾಜಿಕ ಅನ್ಯಾಯ ಕಾರಣವಾಗಿ ಕೆಲವೊಮ್ಮೆ ತುಟಿಬಿಚ್ಚಿ ಪ್ರತಿಭಟಿಸುತ್ತಾನೆ. ಕುಲವೆತ್ತಿ ಮಾತನಾಡಿದ ದ್ರೋಣ, ಅಶ್ವತ್ಥಾಮರೊಂದಿಗೆ ಒಂದಕ್ಕಿಂತ ಹೆಚ್ಚು ಸಲ ವಾದಕ್ಕಿಳಿಯುತ್ತಾನೆ. ಇಲ್ಲಿ ಕೌಟುಂಬಿಕ ಅನ್ಯಾಯಕ್ಕೊಳಗಾದವರು ಮೌನದುಃಖಿಗಳು, ಸಾಮಾಜಿಕ ಅನ್ಯಾಯಕ್ಕೊಳಗಾದವರು ಪ್ರತಿಭಟನಾವ್ಯಕ್ತಿಗಳಾಗುವವರೆಂಬ ಸೂಚನೆಯಿದೆ.

ಈ ಬಿಡಿ ಅಂಶಗಳನ್ನು ಬಿಟ್ಟರೂ ಮಹಾಭಾರತದ ಒಟ್ಟು ಸಂದೇಶ (Message) ಏನು? ಎಂಬುದು ಮುಖ್ಯಪ್ರಶ್ನೆ. ಅದು ಬದುಕಿನಲ್ಲಿ ಯಾರೂ ಪೂರ್ಣರಲ್ಲ. ದೌರ್ಬಲ್ಯ (Weakness) ಇಲ್ಲವೆ ದೌಷ್ಟ್ಯ (Wickedness) ನಮ್ಮನ್ನು ಆಳುತ್ತವೆ. ಮಹಾಭಾರತದ ಪಕ್ಷ-ಪ್ರತಿಪಕ್ಷಗಳನ್ನು ಧರ್ಮರಾಜ-ದುರ್ಯೋಧನ ಪ್ರತಿನಿಧಿಸುತ್ತಾರೆ. ಇವರಲ್ಲಿ ಧರ್ಮರಾಜನಿಗೆ ಜೂಜಿನ ವ್ಯಸನವೆಂಬ ದೌರ್ಬಲ್ಯವಿದೆ; ಹೀಗಿದ್ದೂ ಅವನು ಧರ್ಮಕ್ಕೆ ಸಂಕೇತ. ದುರ್ಯೋಧನನಿಗೆ ಅನ್ಯರ ನಾಶದ ದೌಷ್ಟ್ಯವಿದೆ, ಹೀಗಾಗಿ ಅವನು ದುಷ್ಟತನಕ್ಕೆ ಸಂಕೇತ. ದೌರ್ಬಲ್ಯದವನು ಬಹಳೆಂದರೆ ತಾನು ನಾಶಕ್ಕೆ ಗುರಿಯಾಗುತ್ತಾನೆ. ದೌಷ್ಟ್ಯದವನು ಮೊದಲು ಪರಿಸರ ನಾಶಮಾಡಿ, ಕೊನೆಗೆ ತಾನೂ ನಾಶವಾಗುತ್ತಾನೆ. ಹೀಗಾಗಿ ದೌರ್ಬಲ್ಯ ಕ್ಷಮ್ಯ, ದೌಷ್ಟ್ಯ ಅಕ್ಷಮ್ಯವೆಂಬುದೇ ಮಹಾಭಾರತದ ಸಂದೇಶವೆಂದು ಹೇಳಬಹುದಾಗಿದೆ.

ಆಕರ : ಮಾರ್ಗ ಸಂಪುಟ-೭

೨೯

ಸುಗಮ ಸಂಗೀತ ಸಮ್ಮೇಳನ : ಸಮಾರೋಪ

೨೦೧೩

ಸಾಹಿತ್ಯ ಪರಿಷತ್ತು ಜನಪದ ಸಾಹಿತ್ಯ ಪರಿಷತ್ತು ಗಮಕಕಲಾ ಪರಿಷತ್ತು ಇತ್ಯಾದಿ ಸಂಸ್ಥೆಗಳು ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದು ಅನೇಕ ವರ್ಷ ಗತಿಸಿದವು. ಇವುಗಳ ಸಾಲಿನಲ್ಲಿ 'ಸುಗಮ ಸಂಗೀತ ಪರಿಷತ್ತು' ಅಸ್ತಿತ್ವಕ್ಕೆ ಬರಬೇಕೆಂಬ ಕನ್ನಡಿಗರ ಹಂಬಲ ತುಂಬ ಹಳೆಯದು. ರಂಗಸಂಗೀತ ಸಿನಿಮಾ ಗೀತಗಳ ಹಾವಳಿ ಕಾರಣವಾಗಿ ಸುಗಮ ಸಂಗೀತ ಕ್ರಮೇಣ ಮರೆಯಾಗುತ್ತಲಿದ್ದಿತ್ತು. ಅದನ್ನ ಉಳಿಸಿ, ಬೆಳೆಸುವ ಉದ್ದೇಶದಿಂದ ನಾನು ಧಾರವಾಡದ ಬೇಂದ್ರೆ ಟ್ರಸ್ಟ್ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಪ್ರತಿತಿಂಗಳು ೧೫ರಂದು ಇಬ್ಬರು ಯುವ ಪ್ರತಿಭೆಗಳ ಮೂಲಕ "ಭಾವಗೀತ ಗಾಯನ" ಹೆಸರಿನ ಒಂದು ಕಾರ್ಯಕ್ರಮ ಜರುಗುವ ವ್ಯವಸ್ಥೆ ಮಾಡಿದ್ದೆನು. ಮೂರು ವರ್ಷಗಳ ಹಿಂದೆ ಆರಂಭಿಸಿದ ಅದು ಈಗಳೂ ಮುಂದುವರಿದಿದೆ. ಹೀಗೆ ಅಲ್ಲಲ್ಲಿ ಸಣ್ಣ ಪುಟ್ಟ ಪ್ರಯತ್ನಗಳು ನಡೆದಿದ್ದರೂ ದೊಡ್ಡ ಪ್ರಯ್ನವೆಂಬಂತೆ ಸುಗಮ ಸಂಗೀತ ಪರಿಷತ್ತು ಸ್ಥಾಪನೆಯಾಗಬೇಕೆಂದು ಎಲ್ಲರೂ ಬಯಸುತ್ತಿದ್ದರು. ಸ್ನೇಹಿತರ ಸಹಕಾರದಿಂದ ಈ ಬಯಕೆಯನ್ನು ಸಾಕಾರಗೊಳಿಸಿದ ಮಿತ್ರರಾದ ಶ್ರೀ ವಾಯ್. ಕೆ. ಮುದ್ದುಕೃಷ್ಣ ಅವರಿಗೆ ಕನ್ನಡಿಗರ ಅಭಿನಂದನೆಗಳು ಸಲ್ಲುತ್ತವೆ.

ಈ ಪರಿಷತ್ತು ನಮ್ಮ ನಾಡಿನ ಬೇರೆ ಬೇರೆ ನಗರಗಳಲ್ಲಿ ಒಂಬತ್ತು ಸಮ್ಮೇಲನ ಸಂಘಟಿಸಿ ಹತ್ತನೆಯ ಸಮ್ಮೇಲನವನ್ನು ಸಂಸ್ಕೃತಿನಗರಿ ಧಾರವಾಡದಲ್ಲಿ ಜರುಗಿಸುತ್ತಲಿದೆ. ಈ ಸಂಘಟನೆಗೆ ಸಹಕರಿಸಿದ ಧಾರವಾಡದ ಸಹೃದಯರು ಅಭಿನಂದನಾರ್ಹರೆನಿಸಿದ್ದಾರೆ. ಕಳೆದ ಎರಡು ದಿನಗಳಿಂದ ರಾಜ್ಯದ ಸುಪ್ರಸಿದ್ಧ ಸುಗಮ ಸಂಗೀತಗಾರರು ದೊಡ್ಡ ಸಂಖ್ಯೆಯಲ್ಲಿ ಇಲ್ಲಿಗೆ ಆಗಮಿಸಿದ್ದಾರೆ. ಇವರೆಲ್ಲರ ಗಾಯನವನ್ನು ಸಿ.ಡಿ. ದೂರದರ್ಶನ, ಆಕಾಶವಾಣಿ ಮೂಲಕ ಕೇಳಿದ ಧಾರವಾಡ ಜನತೆಗೆ ಅವರನ್ನು ಪ್ರತ್ಯಕ್ಷ ಕಾಣುವ, ನೇರವಾಗಿ, ಅವರ ಸಂಗೀತ ಕೇಳುವ ಸದವಕಾಶ ಪ್ರಾಪ್ತವಾಗಿದೆ. ಹಗಲು 'ಸೃಜನಾ' ಸಭಾಭವನದಲ್ಲಿ ಗಾಯನಗೋಷ್ಠಿ ವಿಚಾರಗೋಷ್ಠಿ, ಸಂಜೆ ಕರ್ನಾಟಕ ಕಾಲೇಜ ಮೈದಾನದಲ್ಲಿ ಬಹಿರಂಗ ಗಾಯನಗೋಷ್ಠಿ ಜರುಗುವ ಮೂಲಕ ಗಂಧರ್ವಲೋಕವೇ ಇಲ್ಲಿ ಅವತರಿಸಿದಂತಾಗಿದೆ. ಇದು ಧಾರವಾಡ ಜನತೆಗೆ ಒಂದು ಹೊಸ ರೀತಿಯ ರೋಮಾಂಚನವೆನಿಸಿದೆ.

***

ಪದ್ಯಸಾಹಿತ್ಯವು ಕವಿ-ಗಾಯಕ-ಸಹೃದಯತ್ರಯದಲ್ಲಿ ಪೂರ್ಣಗೊಳ್ಳುತ್ತದೆ. ಈ ತುದಿಯಲ್ಲಿರುವ ಕವಿಯ ಸೃಷ್ಟಿಯನ್ನು ಆ ತುದಿಯಲ್ಲಿರುವ ಸಹೃದಯನಿಗೆ ಸಂಗೀತಕಲಾವಿದನು ಗಾಯನದ ಮೂಲಕ ಸಂವಹನಗೊಳಿಸುತ್ತಾನೆ. ಪದ್ಯದ ಸಾರ್ಥಕತೆ ಇರುವುದು ಅದರ ಸರಿಯಾದ ಸಂವಹನದಲ್ಲಿ. ಸರಿಯಾದ ಸಂವನಹನವೆಂದರೆ ಪೂರ್ಣಸಂವಹನವೆಂದು ಅರ್ಥ. ಈ ಸಂವಹನ ಕ್ರಿಯೆಯಲ್ಲಿ ಶಾಸ್ತ್ರೀಯ ಸಂಗೀತ ಗಾಯಕನಿಗಿಂತ ಸುಗಮ ಸಂಗೀತಗಾರನ ಪಾತ್ರ ಮುಖ್ಯವಾದುದು. ಏಕೆಂದರೆ ಶಾಸ್ತ್ರೀಯ ಸಂಗೀತದಲ್ಲಿ ಪದ್ಯ ಅಮುಖ್ಯ, ಸಂಗೀತ ಮುಖ್ಯ. ಸುಗಮ, ಸಂಗೀತದಲ್ಲಿ ಪದ್ಯ ಮುಖ್ಯ, ಸಂಗೀತ ಅಮುಖ್ಯ. ಅಂದರೆ ಶಾಸ್ತ್ರೀಯ ಸಂಗೀತದಲ್ಲಿ ಸಂಗೀತಕ್ಕಾಗಿ ಸಾಹಿತ್ಯ, ಸುಗಮ ಸಂಗೀತದಲ್ಲಿ ಸಾಹಿತ್ಯಕ್ಕಾಗಿ ಸಂಗೀತ. ಹೀಗಾಗಿ ಸುಗಮ ಸಂಗೀತವೆಂದರೆ ಕವಿತೆಯನ್ನು ಗೀತೆಯನ್ನಾಗಿಸುವ ಪ್ರಯೋಗವೆನಿಸಿದೆ. ಪದ್ಯದಲ್ಲಿ ಅಡಕಗೊಂಡಿರುವ ಶಬ್ದವನ್ನು ಶಬ್ದದಲ್ಲಿ ಹುದುಗಿರುವ ಅರ್ಥಸ್ವಾರಸ್ಯವನ್ನು ಅರ್ಥದಲ್ಲಿ ಹುದುಗಿರುವ ಭಾವ ಸ್ವಾರಸ್ಯವನ್ನು ಸ್ಫುಟಗೊಳಿಸುವ ಆ ಮೂಲಕ ಸಹೃದಯನಲ್ಲಿ ರಸವನ್ನು ಉದ್ದೀಪನಗೊಳಿಸುವ ಕ್ರಿಯೆ ಇಲ್ಲಿ ಘಟಿಸುತ್ತದೆ.

ಸಾಹಿತ್ಯದಲ್ಲಿ ಜನಪದ-ದೇಶಿ-ಮಾರ್ಗವೆಂದು ಮೂರು ಪ್ರಕಾರಗಳಿವೆ. ಹಳ್ಳಿಗರ ಹಾಡು ಜನಪದ; ಉತ್ತರದ ಬೇಂದ್ರೆ ಗೀತೆ ದೇಶಿ, ದಕ್ಷಿಣದ ಕುವೆಂಪು ಗೀತೆ ಮಾರ್ಗ. ಭಾವಗೀತೆ ಯುಗದಲ್ಲಿ ಉತ್ತರದವರು ದಕ್ಷಿಣದ ಮಾರ್ಗಶೈಲಿ (ಗ್ರಂಥಸ್ಥ ಭಾಷಾಶೈಲಿ)ಗೆ ಹೊರಳಿದರೆ, ಬೇಂದ್ರೆ ಮಾತ್ರ ನಿಮದಾರಿ ನಿಮಗೆ, ನನ್ನ ದಾರಿ ನನಗೆ ಎಂಬಂತೆ ದೇಶಿಶೈಲಿಯಲ್ಲಿಯೇ ಮುಂದುವರಿದರು. ಅದೇನೇ ಇರಲಿ ಈ ಮೂರೂ ಪ್ರಕಾರಗಳಲ್ಲಿ ಜನಪದ ಹಾಡು ಹುಟ್ಟಿದ್ದು, ದೇಶಿ (ಬೇಂದ್ರೆ) ಮತ್ತು ಮಾರ್ಗ (ಕುವೆಂಪು)ಹಾಡು ಕಟ್ಟಿದ್ದು.

ಹುಟ್ಟಿದ ಜನಪದ ಹಾಡುಗಳ ಧಾಟಿ ಜನಪದರ ಕ್ರಿಯೆಗೆ ಅನುಗುಣವಾಗಿ ಆಕಾರ ಪಡೆಯುತ್ತವೆ. ಕ್ರಿಯೆ ಬದಲಾದರೆ ಧಾಟಿ ಬದಲಾಗುತ್ತದೆ. ಉದಾ: ವೇಗ ಗತಿಯ ಕುಣಿತದಲ್ಲಿ ವೇಗಗತಿಯ ಧಾಟಿ, ನಿಧಾನಗತಿಯ ಕುಣಿತದಲ್ಲಿ ನಿಧಾನ ಗತಿಯ ಧಾಟಿ ರೂಪ ತಾಳುತ್ತದೆ. ಇದೇ ರೀತಿ ಒಂದೇ ತ್ರಿಪದಿ ಬೀಸುವಾಗ ಒಂದು ಧಾಟಿಯನ್ನು, ಕುಟ್ಟುವಾಗ ಇನ್ನೊಂದು ಧಾಟಿಯನು ಧಾರಣ ಮಾಡುತ್ತದೆ. ಹೀಗಾಗಿ ಜನಪದ ಗೀತೆಯನ್ನು ಹಾಡುವ ಮೊದಲು ಸುಗಮ ಸಂಗೀತಗಾರರು ಆ ಗೀತ ಸಂದರ್ಭವನ್ನು ತಿಳಿದುಕೊಳ್ಳುವುದು ಅವಶ್ಯವೆನಿಸುತ್ತದೆ.

ಕಟ್ಟಿದ ಪದ್ಯಕ್ಕೆ ಇಂಥ ಬಂಧನವಿರುವುದಿಲ್ಲ. ಇಲ್ಲಿ ಒಂದು ಪದ್ಯವನ್ನು ಭಿನ್ನಧಾಟಿಗಳಲ್ಲಿ ಹಾಡುಬಹುದು. ಸುಗಮ ಸಂಗೀತವು ಈ ಕಟ್ಟಿದ ಪದ್ಯಗಳಿಗೆ ವಿಶೇಷ ಬಳಕೆಯಾಗುತ್ತದೆ. ಗಮನಿಸಬೇಕಾದ ಅಂಶವೆಂದರೆ ಕನ್ನಡದಲ್ಲಿ ಕಟ್ಟಿರುವ ಚಂಪೂ ಷಟ್ಪದಿ ಸಾಂಗತ್ಯ ಮೊದಲಾದ ಪ್ರಕಾರಗಳನ್ನು ಹೊರತುಪಡಿಸಿ ಸಂಗೀತವು ವಚನ ಕೀರ್ತನೆ ತತ್ವಪದ ಭಾವಗೀತೆಗಳಿಗೆ ಮಾತ್ರ ಬಳಕೆಯಾಗುವುದು ಅದರ ಮಿತಿಯನ್ನು ಸೂಚಿಸುತ್ತದೆ.

ಶಾಸ್ತ್ರೀಯ ಸಂಗೀತ ತುಂಬ ಗಂಭೀರವಾದುದಾದರೂ ಅಲ್ಲಿ ಮಧ್ಯ ಮಧ್ಯ ಕೆಮ್ಮಿ ಗಂಟಲನ್ನು ಸರಿಪಡಿಸಿಕೊಳ್ಳಲು, ಅವಶ್ಯವೆನಿಸಿದರೆ ಆಗಾಗ ನೀರು ಗುಟುಕರಿಸಲು ಇರುವ ಅವಕಾಶ ಸುಗಮ ಸಂಗೀತದಲ್ಲಿರುವುದಿಲ್ಲ. ಸುಗಮಸಂಗೀತದ ಹಾಡುಗಾರಿಕೆ ಈ ದೃಷ್ಟಿಯಿಂದ ತುಂಬ ಕಠಿಣವೆಂದೇ ಹೇಳಬೇಕು.

ಮೇಲೆ ಸೂಚಿಸಿದ ಮೇರೆಗೆ ಸುಗಮ ಸಂಗೀತವು ಸಣ್ಣ ಸಣ್ಣ ಕವಿತೆಗಳನ್ನು ಹಾಡಲು ಅನುಕೂಲವಾಗಿರುವ ಸಂಗೀತವಾಗಿರುತ್ತದೆ. ಹಾಗೆಂದ ಮಾತ್ರಕ್ಕೆ ಎಲ್ಲ ಕವಿತೆಗಳನ್ನು ಹಾಡಬೇಕೆಂದೇನೂ ಅಲ್ಲ. ಕುವೆಂಪು ಅವರ 'ಓ ನನ್ನ ಚೇತನ' ಬೇಂದ್ರೆಯವರ 'ಜೋಗಿ'ಯಂಥವುಗಳನ್ನು ಗಂಭೀರವಾಗಿ ಓದ ಬೇಕೆ ಹೊರತು ಹಾಡಬಾರದು. ಇಂತ ಹಾಡುಗಾರಿಕೆಯನ್ನು ನೋಡಿಯೇ ಕುವೆಂಪು ಅವರು "ನನ್ನ ಕೆಲವು ಕವಿತೆಗಳನ್ನು ಸೋಬಾನೆ ಧಾಟಿಯಲ್ಲಿ ಹಾಡುಬಾರದು" ಎಂದು ಹೇಳಿದುದನ್ನು ಇಲ್ಲಿ ನೆನೆಯಬಹುದು.

* * *

ಕವಿಯು ಕವಿತೆಯಲ್ಲಿ ಭಾಷೆಯನ್ನು ದುಡಿಸಿಕೊಳ್ಳುತ್ತಾನೆ. ಅದೇ ರೀತಿ ಸುಗಮ ಸಂಗೀತಗಾರನು ಸಂಗೀತದಲ್ಲಿ ಕವಿತೆಯನ್ನು ದುಡಿಸಿಕೊಳ್ಳುತ್ತಾನೆ. ಹೀಗೆ ದುಡಿಸಿಕೊಳ್ಳುವಾಗ ಗಾಯಕ ಕವಿತೆಯ ಶುದ್ಧಪಾಠ, ಭಾಷೆಯ ಸರಿಯಾದ ಉಚ್ಚಾರ, ಭಾಷೆಯ ಸರಿಯಾದ ಲಯದ ಕಡೆಗೆ ಗಮನಕೊಡಬೇಕಾಗುತ್ತದೆ.

ಕವಿತೆಯ ಪಾಠಶುದ್ಧಿಯ ಬಗ್ಗೆ ಹೇಳುವುದಾದರೆ ಕವಿತೆಯ ಓದುವ ಭಾಷೆ ಹಾಡುವ ಭಾಷೆಗೆ ಹೊರಳುವಾಗ ಅದರ ಪಾಠಕ್ಕೆ ಭಂಗ ಬಂದಿರುವ ಸಾಧ್ಯತೆಯಿದೆ. ಉದಾ: ಶಿಶುನಾಳ ಶರೀಫರ "ಚನ್ನಪ ಚೆನ್ನಗೌಡ ತುಂಬಿದ ಕೊಡನವ್ವ" ಹಾಡಿನ ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಅರ್ಥಹೊಂದಿಕೆ ಕಾಣುವುದಿಲ್ಲ. ಇಲ್ಲಿರುವ ಚೆನ್ನಗೌಡದ ನಿಜಪಾಠ 'ಚೆನ್ನಗೊಡ' (ಕೊಡ) ಈಗ "ಚೆನ್ನಾಗಿದೆಯಪ್ಪ ಚೆನ್ನಾದ ಕೊಡ" ಎಂಬ ಸರಿಯಾದ ಅರ್ಥವ್ಯಕ್ತವಾಗುತ್ತಿದ್ದು, ಹೀಗೆ ಪಾಠ ಸರಿಪಡಿಸುವುದರತ್ತ ಗಾಯಕ ಮೊದಲು ಗಮನಕೊಡಬೇಕು. ಎರಡನೆಯದಾಗಿ ಭಾಷೆಯ ಸರಿಯಾದ ಉಚ್ಚಾರ. ಅಂದರೆ ಅಲ್ಪಪ್ರಾಣ ಮಹಾಪ್ರಾಣ ಹ್ರಸ್ವ ದೀರ್ಘ ಶ–ಷ–ಉಚ್ಚಾರ ಇತ್ಯಾದಿಗಳ ಕಡೆಗೆ ವಿಶೇಷ ಲಕ್ಷ್ಯವಹಿಸಬೇಕು. ಯಾವುದೇ ಭಾಷೆಗೆ ತನ್ನದೆ ಆದ ಲಯವಿರುತ್ತದೆ. ಹಾಡುವ ಸಮಯದಲ್ಲಿ ಕಲಾವಿದ ಆ ಕಡೆ ಗೀತಲಯಕ್ಕೂ, ಈ ಕಡೆ ಭಾಷಾಲಯಕ್ಕೂ ಧಕ್ಕೆ ತಗುಲದಂತೆ ಎಚ್ಚರವಹಿಸಬೇಕು ಇದೆಲ್ಲವನ್ನು ನಿರ್ವಹಿಸುವ ಗಾಯಕನಾದವನು ರಾಗ ಸಂಯೋಜನೆಗೆ ಮೊದಲು ಮತ್ತು ಬಳಿಕ ಭಾಷಾತಜ್ಞನ ಮುಂದೆ ಕವಿತೆಯ ಪಠ್ಯವನ್ನು ಓದಿ ಹಾಡಿ ಎಲ್ಲ ರೀತಿಯಿಂದಲೂ ಅದು ಸರಿಯಾಗಿರುವಂತೆ ನೋಡಿಕೊಳ್ಳುವದು ಅವಶ್ಯವಿದೆ.

ಕವಿಯು ಆವೇಶಕ್ಕೆ ಒಳಗಾಗಿ ಬರೆಯುವಾಗ ರಾಗ, ತಾಳ ಗಮನಿಸಿರುವುದಿಲ್ಲ. ಇಂಥ ಕವಿತೆಯನ್ನು ಭಾಷೆಗೆ ಧಕ್ಕೆ ಬರದಂತೆ ರಾಗ, ತಾಳಗಳಿಗೆ ಒಗ್ಗಿಸುವಲ್ಲಿ ಗಾಯಕ ನಾದವನು ಅನೇಕ ಆತಂಕಗಳನ್ನು ಎದುರಿಸಬೇಕಾಗುತ್ತದೆ. ಉದಾ: "ಜಯ್ ಭಾರತ ಜನನಿಯ ತನುಜಾತೆ" ಪದ್ಯದಲ್ಲಿ "ಜಯಹೇ ಕರ್ನಾ। ಟಕ ಮಾತೆ" "ಮಾಧವಮಧುಸೂ॥ ದನರವತರಿಸಿದ" ಇಲ್ಲಿಯ 'ಟಕಮಾತೆ' 'ದನರವತರಿಸಿದ' ಎಂಬ ಅಪಪ್ರಯೋಗಗಳನ್ನು ಸರಿಪಡಿಸಿಕೊಳ್ಳುವುದು ಗಾಯಕನಿಗೆ ಆಹ್ವಾನೇ ಸರಿ. ಇದೇ ರೀತಿ 'ಶಂಕರ ರಾಮಾನುಜ ವಿದ್ಯಾರಣ್ಯ' ಎಂಬಲ್ಲಿಯ 'ರಾಮಾನುಜ' ಎಂಬುದನ್ನು ರಾಗ, ತಾಳ ಹೊಂದಿಕೆಗಾಗಿ 'ರಮನುಜ' ಎಂದು ಕುಗ್ಗಿಸಿದಲ್ಲಿ ಕೃತಕರೂಪ ಆಕಾರ ಪಡೆಯುತ್ತದೆ. ಈ ಪದ್ಯದಲ್ಲಿ ಇಂಥ ಎಷ್ಟೋ ಆತಂಕಗಳಿವೆ.

ಒಂದು ಶಬ್ದ ಇಲ್ಲವೆ ವಾಕ್ಯದಿಂದ ಎರಡು ಅರ್ಥ ಹೊರಡುತ್ತಿದ್ದರೆ ಅದನ್ನು ಬಿಡಿಸಿ ಎರಡುಸಲ ಹಾಡಬೇಕು. ಬೇಂದ್ರೆಯವರ 'ಟೊಂಕದ ಮ್ಯಾಲ ಕೈಯಿಟಗೊಂಡು' ಪದ್ಯದಲ್ಲಿ ಸುಂಕದವನಿಗೆ ಮಾತಿನಲ್ಲಿಯೇ ಮರುಳುಗೊಳಿಸಿ ಸುಂಕಕೊಡದೆ ಜಾರಿ ಹೋಗುವ ಹೆಣ್ಣಿನ ವರ್ಣನೆಯಿದೆ. ಅಲ್ಲಿ

'ಎಣ್ಣ ಮಾವ ಅಂತ ರಮಿಸಿ। ಬಣ್ಣದ ಮಾತ ಆಡಕೋತ
ಕಣ್ಣಾಗಮಣ್ಣ ತೂರುವಾಕಿ ಸಣ್ಣನ ನಡದಾಕಿ'

ಎಂಬ ಸಾಲುಗಳಿವೆ. ಇಲ್ಲಿ 'ಸಣ್ಣನ ನಡದಾಕಿ' ಎಂಬುದನ್ನು ಒಮ್ಮೆ ಕೃಶವಾದ ಕಟಿಯುಳ್ಳವಳು ಎಂಬ ಅರ್ಥ ಬರುವಂತೆ, ಇನ್ನೊಮ್ಮೆ ಸಣ್ಣ ನಡದಾಕಿ ಅಂದರೆ ಮೆಲ್ಲನೆ ಜಾರಿ ಹೊರಟವಳು ಅರ್ಥ ಬರುವಂತೆ ಹಾಡುಬೇಕು. ಅವರದೇ ಇನ್ನೊಂದು ಪದ್ಯದಲ್ಲಿ ಪೂಜಾರಿಯು ನರ್ತಕಿಗೆ ಬಯ್ಯುವ ಪ್ರಸಂಗ ಹೀಗಿದೆ:

"ಗುಡಿಯ ಮಡಿಯ ಪೂಜಾರಣ್ಣ ನರ್ತಕಿಗೆ ನುಡಿದನೊಂದು ಎಲೆ ದುಷ್ಟೇ ನಷ್ಟೆ" ಇದನ್ನು "ಪೂಜಾರಣ್ಣ" ಎಂದೂ, ಇನ್ನೊಮ್ಮೆ 'ಪೂ' ಜಾರಣ್ಣ ಎಂದೂ, ನೀ ಬೇಟೆಯಾಡುವೆಯಾ ಪ್ರಾಯದವರನೆಂದು ಇಲ್ಲಿ ಒಮ್ಮೆ ಹಾಡಿ ಅರ್ಥಭೇದ ಸ್ಪಷ್ಟಪಡಿಸಬೇಕು.

ಯಾವುದೇ ಕವಿತೆಯನ್ನು ಅದರ ಶೃಂಗಾರ ಕರುಣ ಇತ್ಯಾದಿ ಭಾವಗಳಿಗೆ ಚ್ಯುತಿ ಬರುವಂತೆ ಹಾಡಬಾರದು. ಉದಾ: ಬೇಂದ್ರೆಯವರ "ನೀ ಹಿಂಗೆ ನೋಡಬ್ಯಾಡ ನನ್ನ" ಎಂಬ ಪದ್ಯವನ್ನು ಬಹಳಷ್ಟು ಜನ ಪ್ರೇಮಗೀತೆಯಂತೆ ಹಾಡುತ್ತಾರೆ. ಆದರೆ ಇದು ಸತ್ತ ಮಗುವಿನ ಸಂಕಟತಾಳಲಾರದೆ ಹೆಂಡತಿ ಗಂಡನ ಮುಖವನ್ನು ನೋಡಿದ ಪ್ರಸಂಗದಲ್ಲಿ ಅವನು ಹೇಳಿದ ಶೋಕಗೀತೆಯಾಗಿದೆ. ಇದೇ ರೀತಿ "ಗಮಗಮಾಡಸ್ತಾವ ಮಲ್ಲಿಗಿ ನೀವು ಹೊರಟಿದ್ದೀಗ ಎಲ್ಲಿಗಿ" ಎಂಬುದು ಮೇಲು ನೋಟಕ್ಕೆ ಪ್ರೇಮಗೀತೆಯಂತೆ ಕಾಣುತ್ತದೆ. ಆದರೆ ಮಲ್ಲಿಗೆ ಹೂವಿನ ಹಚ್ಚಡ ಹೊದಿಸಿದ ಗಂಡನ ಶವವನ್ನು ಬೀಳ್ಕೊಡುವಾಗ ಮುಸ್ಲಿಂ ವಿಧವೆ ಹೇಳಿದ ಶೋಕ-ವಿರಹ ಪದ್ಯವಿದು. ಹೀಗೆ ಪದ್ಯದ ಸಂದರ್ಭ ಭಾವ ತಿಳಿದುಕೊಂಡು ಹಾಡಬೇಕು. ಹೀಗೆ ಹಾಡದೆ ಮುಂದಿನ ದಿನಗಳಲ್ಲಿ ತಮ್ಮ ಕವಿತೆಗಳಿಗೆ ಅನ್ಯಾಯ ಮಾಡುವುದನ್ನು ಊಹಿಸಿಯೇ ಬೇಂದ್ರೆಯವರು "ಅಂಬಿಕಾತನಯ ಕಟ್ಟಿದ ಕಗ್ಗ ನೀ ಜಗ್ಗಬ್ಯಾಡ ಹಿಗ್ಗಾಮುಗ್ಗ" ಎಂದು ಸಹೃದಯನಿಗೆ ಹೇಳಿದಂತಿದೆ. ಇದಲ್ಲದೆ ಕನ್ನಡದ ಯಾವ ಕವಿಯೂ ಬರೆಯದಿರುವ 'ಭಾವಸೂಚಿ'ಯನ್ನು ಬೇಂದ್ರೆಯವರು ಮಾತ್ರ ತಮ್ಮ ಎಲ್ಲ ಕವನಗಳಿಗೆ ಬರೆದು ಸಂಕಲನಗಳಿಗೆ ಅನುಬಂಧವಾಗಿ ಜೋಡಿಸಿದುದನ್ನು ಇಲ್ಲಿ ಸ್ಮರಿಸಬೇಕು.

ಇತ್ತೀಚೆ ಭಾವಗೀತೆಯನ್ನು ಪ್ರಸ್ತುತಪಡಿಸುವ ಸಂದರ್ಭದಲ್ಲಿ ಅತಿ ಎನ್ನುವಷ್ಟು ವಾದ್ಯಗಳನ್ನು ಬಳಸಲಾಗುತ್ತದೆ. ಇವುಗಳ ಅಬ್ಬರದಲ್ಲಿ ಕವಿತೆ ಕೇಳಿಸುವುದೇ ಇಲ್ಲ. ಅಥವಾ ಅಸ್ಪಷ್ಟವಾಗಿ ಕೇಳಿಸುತ್ತದೆ. ಇಂದು ಕವಿತೆಯನ್ನು ಈ ವಾದ್ಯವೃಂದ ನುಂಗಿಹಾಕುತ್ತಲಿದೆ. ಶಿಶುನಾಳ ಶರೀಫರ 'ಕೋಡಗನ ಕೋಳಿ ನುಂಗಿತ್ತ' ಪದ್ಯದಲ್ಲಿ 'ಹಾಡುವವನ ಮದ್ದಳೆ ನುಂಗಿತ್ತ' ಪಂಕ್ತಿಯಿದೆ. ಬಹುಶಃ ಆ ಕಾಲದಲ್ಲಿಯೇ ಪದ್ಯದ ಮೇಲೆ ವಾದ್ಯದ ಆಕ್ರಮಣ ಅತಿಯಾಗಿದ್ದು ಶರೀಫರು ಅದನ್ನು ಗಮನಿಸಿಯೇ ಹೀಗೆ ಹೇಳಿರಬಹುದಾಗಿದೆ. ಆದುದರಿಂದ ಪದ್ಯಕ್ಕೆ ಹಿನ್ನೆಲೆಯಾಗಿ ತಂಬೂರಿ (ಏಕದಾರಿ)ಶ್ರುತಿಯನ್ನು ಮಾತ್ರ ನಮ್ಮ ಹಿರಿಯರು ಬಳಸಿದರೆಂದು ತೋರುತ್ತದೆ. ಇದು ಇಂದು ನಮಗೆ ಮಾದರಿಯಾಗಬೇಕಿದೆ.

ಇನ್ನೊಂದು ವಿಷಯ ಗಾಯಕನ ಎದುರು ಸಂಗೀತ ಸಂಯೋಜಕ ಅಭಿನಯಾತ್ಮಕವಾಗಿ ನಿರ್ದೇಶನ ಮಾಡುವುದೂ ಒಮ್ಮೊಮ್ಮೆ ಆಭಾಸವೆನಿಸುತ್ತದೆ. ಶ್ರೋತೃವಿನ ಗಮನ ಇವನ ಕಡೆಗೂ ಸರಿದು, ಗಾಯನವನ್ನು ಇಡಿಯಾಗಿ ಗ್ರಹಿಸಲು ಇದು ತೊಡಕಾಗುತ್ತದೆ. ಆಧುನಿಕತೆಯ ಹೆಸರಿನಲ್ಲಿ ಸೇರಿಕೊಂಡಿರುವ ಇವೆರಡನ್ನು (ಅತಿಯಾದ ವಾದ್ಯವೃಂದ ಅಭಿನಯಾತ್ಮಕ ಸಂಗೀತ ನಿರ್ದೇಶನ) ನಿಯಂತ್ರಿಸುವುದು ಸೂಕ್ತವೆನಿಸುತ್ತದೆ.

ಕೊನೆಯದಾಗಿ ಸುಗಮ ಸಂಗೀತಕ್ಕೆ ಸಂಬಂಧಪಟ್ಟಂತೆ ಮೈಸೂರು ಗಾಯಕರ ಶೈಲಿ, ಧಾರವಾಡ ಗಾಯಕರ ಶೈಲಿ ಒಂದಿಷ್ಟು ಭಿನ್ನವಾಗಿ ಇವುಗಳಲ್ಲಿ ಯಾವುದು ಹೆಚ್ಚು ಸೂಕ್ತ? ಎಂಬ ಪ್ರಶ್ನೆಗೆ ಸಂಗೀತಶಾಸ್ತ್ರಜ್ಞರು ಉತ್ತರ ಹೇಳಬೇಕು.

ನಾನು ಮೂಲತಃ ಸಾಹಿತ್ಯ ಕ್ಷೇತ್ರದವನು. ಸಂಗೀತ ನನ್ನ ಕ್ಷೇತ್ರವಲ್ಲ. ಹೀಗಿದ್ದೂ ಈ ಸಮ್ಮೇಲನದ ಸಮಾರೋಪಕ್ಕೆ ನನ್ನನ್ನು ಆಮಂತ್ರಿಸಿದ ಸಂಘಟಕರಿಗೆ ವಿಶೇಷವಾಗಿ, ಮಿತ್ರರಾದ ಶ್ರೀ ಮುದ್ದು ಕೃಷ್ಣ ಅವರಿಗೆ ಕೃತಜ್ಞನಾಗಿದ್ದೇನೆ. ಈ ವರೆಗೆ ನನ್ನ ಮಾತು ಆಲಿಸಿದ ಶ್ರೋತೃವೃಂದಕ್ಕೂ ಆಭಾರಿ ಯಾಗಿದ್ದೇನೆ.

ಆಕರ : ಮಾರ್ಗ ಸಂಪುಟ–೭

■■

೩೦

೭೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ : ಸಮಾರೋಪ

೨೦೧೩

ಏನಾದರು ಆಗೂ ಮೊದಲು ಕನ್ನಡಿಗನಾಗು

ಎರಡು ಕಾಣಗಳಿಗಾಗಿ ಈ ಸಮ್ಮೇಳನದಲ್ಲಿ ನಾನು ಭಾಗವಹಿಸುತ್ತಿದ್ದೇನೆ. ಒಂದು: ನನ್ನ ತವರು ಜಿಲ್ಲೆಯಲ್ಲಿ ಜರುಗುತ್ತಲಿರುವ ಈ ಸಮ್ಮೇಳನದಲ್ಲಿ ಭಾಗಿಯಾಗುವುದು ನನ್ನ ಕರ್ತವ್ಯ. ಈ ಮೊದಲು ಪ್ರಬಂಧ ಮಂಡನೆ, ಗೋಷ್ಠಿಯ ಅಧ್ಯಕ್ಷತೆ, ಉದ್ಘಾಟನಾ ಸಮಾರಂಭಗಳಲ್ಲಿ ಭಾಗವಹಿಸಿದ್ದ ನನ್ನನ್ನು ಈ ವರ್ಷ ಸಮಾರೋಪ ಭಾಷಣಕಾರನಾಗಿ ಆಹ್ವಾನಿಸದಿದ್ದರೂ ಸಭಿಕನಾಗಿ ಮೂರು ದಿನ ಭಾಗವಹಿಸಲು ನಿರ್ಧರಿಸಿದ್ದೆ. ಈಗ ಅತಿಥಿಯಾಗಿಯೇ ಭಾಗವಹಿಸುತ್ತಲಿದ್ದೇನೆ. ಎರಡು: ಈ ಸಮ್ಮೇಲನದ ಸರ್ವಾಧ್ಯಕ್ಷರಾದ ಶ್ರೀ ಕೋಚೆ ಅವರ ಬಗ್ಗೆ ನನಗೆ ವಿಶೇಷ ಪ್ರೀತಿ. ಇದಕ್ಕೆ ಕಾರಣ ಅವರೊಬ್ಬ ವಿಶಿಷ್ಟ ಸಾಹಿತಿ. ನಾನು ಸಾಹಿತಿಗಳಲ್ಲಿ ಮೂರು ವರ್ಗಗಳನ್ನು ಕಲ್ಪಿಸುತ್ತೇನೆ. ೧. ಸಾಹಿತ್ಯ ಓದಿ ಸಾಹಿತ್ಯ ಬರೆಯುವವರು, ೨. ಸಮಾಜವನ್ನು ನಿರೀಕ್ಷಿಸಿ ಸಾಹಿತ್ಯ ಬರೆಯುವವರು, ೩. ಹೆಚ್ಚಿನದಾಗಿ ಸಮಾಜದ ಆಗು ಹೋಗುಗಳಲ್ಲಿ ತೊಡಗಿಕೊಂಡು ಸಾಹಿತ್ಯ ಬರೆಯುವವರು. ಕೋಚೆಯವರದು ಸಾಹಿತ್ಯ ಓದಿ, ಸಮಾಜ ನಿರೀಕ್ಷಿಸಿ, ಅದರಲ್ಲಿ ತೊಡಗಿಕೊಂಡು ಬರೆದ ಸಾಹಿತ್ಯವಾಗಿದ್ದು, ಇದನ್ನು ಓದುವುದೆಂದರೆ ವಾಸ್ತವ ಜೀವನವನ್ನು ಓದುವುದೆನಿಸುತ್ತದೆ. ಕಲ್ಪಿತ ಸಾಹಿತ್ಯಕ್ಕಿಂತ ಇಂಥ ಸಾಹಿತ್ಯವನ್ನು ಹೆಚ್ಚು ಪ್ರೀತಿಸುವ ನಾನು ಸಹಜವಾಗಿಯೇ ಕೋಚೆಯವರ ಬರೆಹವನ್ನು ಆ ಮೂಲಕ ಕೋಚೆಯವರನ್ನು ಮೆಚ್ಚಿಕೊಂಡಿದ್ದೇನೆ.

ವಿಜಾಪುರದಲ್ಲಿ ಜರುಗುತ್ತಲಿರುವ ೭೯ನೆಯ ಸಮ್ಮೇಳನಕ್ಕೆ ಬಳ್ಳಾರಿಯ ಕೋ.ಚೆನ್ನಬಸಪ್ಪನವರು ಅಧ್ಯಕ್ಷಾಗಿದ್ದಾರೆ. ಬಳ್ಳಾರಿಯಲ್ಲಿ ಜರುಗಿದ್ದ ೧೨ನೆಯ ಸಮ್ಮೇಳನಕ್ಕೆ ವಿಜಾಪುರದ ಹಳಕಟ್ಟಿ ಫಕೀರಪ್ಪನವರು ಅಧ್ಯಕ್ಷರಾಗಿದ್ದರು. ಇದೊಂದು ಯೋಗಾಯೋಗ.

ಈ ಮೊದಲು ೧೯೨೩ ನವೆಂಬರ ೨೧, ೨೨, ೨೩ರಂದು ವಿಜಾಪುರದಲ್ಲಿ ಜರುಗಿದ್ದ ೯ನೆಯ ಸಮ್ಮೇಳನಕ್ಕೆ ಶ್ರೀ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು.

ಡಾ. ಫ.ಗು.ಹಳಕಟ್ಟಿಯವರು ಸ್ಥಳೀಯ ಸ್ವಾಗತ ಸಮಿತಿ ಅಧ್ಯಕ್ಷರಾಗಿದ್ದರು. ಬೇಂದ್ರೆ, ಮಧುರಚೆನ್ನ, ನಾ.ಶ್ರೀ. ರಾಜಪುರೋಹಿತ, ತಮ್ಮಣ್ಣಪ್ಪ ಚಿಕ್ಕೋಡಿ, ಕಪಟ್ರಾಳ್ ಕೃಷ್ಣರಾವ್, ರಾ.ಹ. ದೇಶಪಾಂಡೆ, ಟಿ.ಎಸ್.ವೆಂಕಣ್ಣಯ್ಯ ಮೊದಲಾದ ಗಣ್ಯರು ಆಗಮಿಸಿದ್ದರು. ಬೇಂದ್ರೆಯವರು 'ನನಗೆ ಬೇಕಾದ ಸಾಹಿತ್ಯ' ಕುರಿತು, ಮಧುರಚೆನ್ನರು 'ಹಳ್ಳಿಯ ಹಾಡುಗಳು' ಕುರಿತು ಪ್ರಬಂಧಗಳನ್ನು ಮಂಡಿಸಿದ್ದರು. ಸಮ್ಮೇಳನದ ಕೊನೆಯಲ್ಲಿ ಒಂಬತ್ತು ನಿರ್ಣಯಗಳು ಸ್ವೀಕೃತವಾದವು. ಈ ವರೆಗೂ ಅವು ಅನುಷ್ಠಾನಗೊಂಡಿಲ್ಲ. ಆ ಮಾತು ಬೇರೆ.

ಗೋಳಗೊಮ್ಮಟದಂಥ ಲೋಕಪ್ರಸಿದ್ಧ ವಾಸ್ತುಗಳನ್ನು ಬಿಟ್ಟರೂ ವಿಜಾಪುರ ಜಿಲ್ಲೆ ಹಲವು ದೃಷ್ಟಿಯಿಂದ ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ ಪ್ರಯೋಗ ಭೂಮಿಯೆನಿಸಿದೆ. ಮಹಾಕವಿ ಪಂಪನ ಕಾವ್ಯ ಮಾರ್ಗವನ್ನು ಪ್ರತಿಭಟಿಸಿ ಹೊಸ ಕಾವ್ಯ ಮಾರ್ಗ ಪ್ರತಿಪಾದಿಸಿದ ಅಭಿನವ ಪಂಪನ ಜನ್ಮಗ್ರಾಮ ವಿಜಾಪುರ. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರವೆಂಬ ಭೇದಸಂಸ್ಕೃತಿಯನ್ನು ಧಿಕ್ಕರಿಸಿ ಅಭೇದ ಸಂಸ್ಕೃತಿ ಸ್ಥಾಪಿಸಲು ಹೋರಾಡಿದ ಯುಗಪುರುಷ ಬಸವಣ್ಣನ ತವರು ಜಿಲ್ಲೆ ವಿಜಾಪುರ. ಹಿಂದೂ, ಮುಸಲ್ಮಾನ ಭೇದಸಂಸ್ಕೃತಿ ನಿರಾಕರಿಸಿ ಅಭೇದ ಸಂಸ್ಕೃತಿ ಸ್ಥಾಪಿಸಲು ಪ್ರಯತ್ನಿಸಿದ ಜಗದ್ಗುರು ಇಬ್ರಾಹಿಂ ಆದಿಲ್‌ಶಾಹಿಯ ರಾಜಧಾನಿ ವಿಜಾಪುರ. ಹೀಗೆ ಸಾಹಿತ್ಯಿಕ, ಧಾರ್ಮಿಕ, ವ್ಯಾಜ್ಯಗಳನ್ನು ನಿವಾರಿಸಿ ಬದುಕನ್ನು 'ಸರ್ವಜನಾಂಗದ ಶಾಂತಿಯ ತೋಟ'ವನ್ನಾಗಿಸಲು ದುಡಿದ ಶ್ರೇಯಸ್ಸು ಈ ಜಿಲ್ಲೆಗೆ ಸಲ್ಲುತ್ತದೆ.

ಆಧುನಿಕ ಕಾಲಕ್ಕೆ ಬಂದರೆ ವಚನ ಪಿತಾಮಹ ಫ.ಗು.ಹಳಕಟ್ಟಿ, ಗಾಂಧಿ ಸಿದ್ಧಾಂತ-ಬಸವ ಸಿದ್ಧಾಂತಗಳ ಸಂಗಮವೆನಿಸಿದ್ದ ಹರ್ಡೇಕರ ಮಂಜಪ್ಪ, ಅನುಭಾವ ಕವಿ ಮಧುರಚೆನ್ನ, ನಾಟಕ ಸಾಹಿತ್ಯದ ಸೀಮಾ ಪುರುಷ ಶ್ರೀರಂಗ, ನಟಸಾರ್ವಭೌಮ ಹಂದಿಗನೂರು ಸಿದ್ಧರಾಮಪ್ಪ, ಕರ್ನಾಟಕದ ಲತಾಮಂಗೇಶಕರ್ ಅಮೀರಬಾಯಿ ಕರ್ನಾಟಕಿ ಪತ್ರಿಕಾ ಲೋಕದ ದಿಗ್ಗಜ ಮೊಹರೆ ಹನಮಂತರಾವ್, ಶಿಕ್ಷಕ ಸಾಹಿತಿ ಸಿಂಪಿ ಲಿಂಗಣ್ಣ, ಮಕ್ಕಳ ಸಾಹಿತಿ ಶಿಶು ಸಂಗಮೇಶ, ಶಂ.ಗು. ಬಿರಾದಾರ ಈ ಜಿಲ್ಲೆಯ ವಿಶೇಷ ಕೊಡುಗೆಯೆನಿಸಿದ್ದಾರೆ. ಹೀಗಿದ್ದೂ ಹಲಸಂಗಿ ಗೆಳೆಯರ ಬಳಿಕ ಈ ಜಿಲ್ಲೆಯಲ್ಲಿ ಮತ್ತೆ ಆ ಎತ್ತರದ ಸಾಹಿತ್ಯ ಪರಿಸರ ನಿರ್ಮಾಣವಾಗಲಿಲ್ಲ. ಈ ಸಮ್ಮೇಳನದಿಂದಾಗಿ ಅಂಥ ಪರಿಸರ ಮತ್ತೆ ಸೃಷ್ಟಿಯಾಗಲೆಂದು ಹಾರೈಸುತ್ತೇನೆ.

* * *

ಮೂರು ದಿನಗಳ ಈ ಸಮ್ಮೇಳನದ ಕೆಲವು ಗೋಷ್ಠಿಗಳು ಕಳೆದ ಸಮ್ಮೇಳನಗಳ ಪುನರುಕ್ತಿ ಎನಿಸಿವೆ. ಕೆಲವುಮುಖ್ಯ ವಿಷಯ ಬಿಟ್ಟು ಹೋಗಿವೆ. ಎಲ್ಲ ವಿಷಯ ಒಂದೇ ಸಮ್ಮೇಳನದಲ್ಲಿ ಅಡಕಗೊಳಿಸುವುದು ಅಸಾಧ್ಯ. ಹೀಗಿದ್ದೂ ಇದ್ದುದರಲ್ಲಿಯೇ ಹೊಸ ವಿನ್ಯಾಸ ಕಲ್ಪಿಸಬೇಕಾಗುತ್ತದೆ. ಅಂದರೆ ಸಾಹಿತ್ಯದ ಹೊಸ ಒಲವುಗಳು, ಸಾಹಿತ್ಯ ಪ್ರಸಾರದ ಹೊಸ ಮಾಧ್ಯಮಗಳು, ಪ್ರಚಲಿತ ವಿದ್ಯಮಾನಗಳು ಇತ್ಯಾದಿ ಇದೇ ರೀತಿ ಏಕಮುಖಿ ಭಾಷಣಗಳಿಗಿಂತ ಸಂವಾದಮುಖಿ ವಿನ್ಯಾಸ ಅಗತ್ಯವಿದೆ. ಇದರಿಂದ ಸಭಿಕರೂ ಪ್ರಾತಿನಿಧಿಕವಾಗಿ ಪಾಲ್ಗೊಳ್ಳುವ, ಭಾಷಣಕಾರ ಗಮನಿಸದ ಬೇರೆ ಅಂಶಗಳನ್ನೂ ಚರ್ಚಿಸಲು ಸಾಧ್ಯವಾಗಿ ಸಮ್ಮೇಳನಕ್ಕೆ ಸಮಷ್ಟಿ ಸ್ವರೂಪ ಸಾಧ್ಯವಾಗುತ್ತದೆ.

ಸಾಹಿತ್ಯ ಪರಿಷತ್ತು ಸಹ ಈ ಮಾತಿಗೆ ಹೊರತಾಗಿಲ್ಲ. ಅದರ ಅಂಗ ರಚನೆಯಲ್ಲಿ, ಕಾರ್ಯ ವಿಧಾನದಲ್ಲಿ ತೀವ್ರ ಬದಲಾವಣೆ ಅಗತ್ಯವಿದೆ. ನೆರೆಯ ರಾಜ್ಯಗಳಲ್ಲಿ ಇಂಥ ಸಂಸ್ಥೆಗಳಿವೆ; ಇಂಥ ಸಮ್ಮೇಳನ ಜರುಗುತ್ತಿವೆ. ಅವುಗಳನ್ನು ಗಮನಿಸಿ ನಮ್ಮ ಸಂದರ್ಭಕ್ಕೆ ಹೊಂದುವ ರೀತಿಯಲ್ಲಿ ಇವುಗಳನ್ನು ಶ್ರೀ ಹಾಲಂಬಿಯವರು ೮೦ನೆಯ ಸಮ್ಮೇಳನದ ಹೊತ್ತಿಗೆ ನವೀಕರಿಸುವರೆಂಬ ವಿಶ್ವಾಸ ನನ್ನದಾಗಿದೆ.

* * *

ಸಾಹಿತ್ಯದಲ್ಲಿ ಬರೆದ ಕೆಲವು ಆದರ್ಶದ ಮಾತುಗಳನ್ನು ನಾವು ವಾಸ್ತವವೆಂದು ನಂಬುತ್ತ ಪ್ರಾಚೀನ ಕಾಲದಲ್ಲಿ ಘಟಿಸಿದ ಕೆಲವು ಸ್ವಾಭಿಮಾನ ಪ್ರಸಂಗಗಳನ್ನು ಸಾಮಾನ್ಯೀಕರಿಸಿ ಹೆಮ್ಮೆಪಡುತ್ತ ಬಂದಿದ್ದೇವೆ. ಹಿರಿಯ ವಿದ್ವಾಂಸರೊಬ್ಬರು ಕೆಲವು ದಿನಗಳ ಹಿಂದೆ ಕನ್ನಡಿಗರ ಮುಖ್ಯ ಲಕ್ಷಣ 'ಸ್ವಾಭಿಮಾನ'ವೆಂದು ಹೇಳಿದುದು ನನ್ನ ಗಮನಕ್ಕೆ ಬಂದಿದೆ. ಅವರ ಈ ಹೇಳಿಕೆಯು ಸ್ವಾಭಿಮಾನದ ಒಂದೆರಡು ಪ್ರಾಚೀನ ಪ್ರಸಂಗಗಳನ್ನು ಎಲ್ಲ ಕನ್ನಡಿಗರಿಗೂ ಅನ್ವಯಸಿದುದಾಗಿದೆ. ಏಕೆಂದರೆ ನಾವು ಸ್ವಾಭಿಮಾನಿಗಳೇ ಆಗಿದ್ದರೆ ಪುಲಿಕೇಶಿ ಕಾಲದ ನರ್ಮದೆ ವರೆಗಿನ ನಮ್ಮ ಭೂಭಾಗ ನೃಪತುಂಗನ ಕಾಲಕ್ಕೆ ಗೋದಾವರಿಗೆ ಏಕೆ ಕುಸಿಯಿತು? ತರುವಾಯದ ದಿನಗಳಲ್ಲಿ ಅದು ಕೆಳಗೆ ಸರಿಯುತ್ತ ಇಂದು ಭೀಮೆಯ ವರೆಗೆ ಏಕೆ ಇಳಿಯಿತು? ಇದೇ ರೀತಿ ಸುತ್ತಲಿನ ಆಂಧ್ರಪ್ರದೇಶ, ತುಳು, ಕೇರಳ, ಮಹಾರಾಷ್ಟ್ರ, ಗೋವೆ ರಾಜ್ಯಗಳಿಗೆ ನಾವು ಬಹಳಷ್ಟು ಭೂಮಿಯನ್ನು ಏಕೆ ಬಿಟ್ಟುಕೊಟ್ಟೆವು? ರಾಜ್ಯದ ಒಳಗೆ ಅನ್ಯತೆಯ ಅನೇಕ ದ್ವೀಪಗಳು ಏಕೆ ನಿರ್ಮಾಣಗೊಂಡವು? ಎಂಬ ಅನೇಕ ಪ್ರಶ್ನೆಗಳು ಇಲ್ಲಿ ಉದ್ಭವಿಸುತ್ತವೆ. ಮೇಲಿನ ವಿವರವನ್ನು ಗಮನಿಸಿದರೆ ನಮ್ಮ ಸ್ವಾಭಿಮಾನ ಶತಮಾನದಿಂದ ಶತಮಾನಕ್ಕೆ ಕುಸಿಯುತ್ತ ಬಂದುದು ಸ್ಪಷ್ಟವಾಗುತ್ತದೆ. ಮುಂದೆ ಇಂಥ ಅನ್ಯಾಯ ಘಟಿಸದಂತೆ ಎಚ್ಚರವಹಿಸುವ ಸಲುವಾಗಿ, ಇತಿಹಾಸದಲ್ಲಿ ಇದಕ್ಕೆ ಒದಗಿ ಬಂದ ಕಾರಣಗಳನ್ನು ಹುಡುಕಬೇಕಾಗುತ್ತದೆ.

ಹಾಗೆ ಹುಡುಕ ಹೊರಟರೆ, ಮೊದಲ ಹಂತದಲ್ಲಿ ಉತ್ತರ ಭಾರತದ ರಾಜಕೀಯ, ಧಾರ್ಮಿಕ, ಭಾಷಿಕ, ಸಾಹಿತ್ಯಿಕ ಸಂಪರ್ಕ ಒದಗಿಬಂದ ಕ್ಷಣದಿಂದ ನಮ್ಮ ಸ್ವಾಭಿಮಾನ ಕ್ಷೀಣಿಸುತ್ತ ಬಂದುದು ವೇದ್ಯವಾಗುತ್ತದೆ. ಆರಂಭ ಕಾಲೀನ ಕರ್ನಾಟಕದ ಅರಸರು ಉತ್ತರಭಾರತದ ರಾಜರನ್ನು ವಿರೋಧಿಸಿದರಾದರೂ ಅಲ್ಲಿಯ ವೈದಿಕ-ಆಗಮಿಕ-ಜೈನ ಧರ್ಮಗಳನ್ನು ಸ್ವಾಗತಿಸಿದರು. ಅನುಯಾಯಿಯಾದರು. ಅವುಗಳ ಬೆಳವಣಿಗೆಗೆ ಹಗಲಿರುಳು ಶ್ರಮಿಸಿದರು. ಆ ಧರ್ಮಗಳು ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸಿ ಪ್ರಸಾರವಾದುದಕ್ಕೆ ಸಾಕ್ಷಿಯೆಂಬಂತೆ ನಮ್ಮ ನೆಲದ ತುಂಬ ವೈದಿಕರ ಅಗ್ರಹಾರಗಳೂ, ಆಗಮಿಕರ ತ್ರೀಕೂಟ ದೇವಾಲಯಗಳೂ, ಜೈನರ ಬೃಹತ್ ಬಸದಿಗಳೂ ನಮ್ಮ ನೆಲದ ತುಂಬ ಬೆಳದು ನಿಂತವು. ಈ ವಾಸ್ತುಗಳ ಒಳಹೊರಗೆ ರಾಮಾಯಣ, ಮಹಾಭಾರತದಗಳ, ತೀರ್ಥಂಕರರ ಕಥನಶಿಲ್ಪಗಳು ಧರ್ಮ ಪ್ರಸಾರದ ಚಿತ್ರಫಲಕಗಳಂತೆ ಕಿಕ್ಕಿರಿದು ತುಂಬಿಕೊಂಡವು. ಇದಕ್ಕೆ ಪೂರಕವಾಗಿ ಉತ್ತರದ ಸಂಸ್ಕೃತ ಭಾಷೆ ಕನ್ನಡಿಗರ ವಿರೋಧವನ್ನೂ ಲೆಕ್ಕಿಸದೆ ನುಗ್ಗಿ ಬಂದು ವ್ಯಾಕರಣ, ಛಂದಸ್ಸು, ನಿಘಂಟು, ಅಲಂಕಾರ ಮೊದಲಾದ ಶಾಸ್ತ್ರಶಿಸ್ತುಗಳನ್ನು ಕನ್ನಡದ ಮೇಲೆ ಹೇರಿತು. ಸಂಸ್ಕೃತವೇ ಕನ್ನಡದ ತಾಯಿಯೆಂಬ ಭ್ರಮೆಯನ್ನುಂಟುಮಾಡಿತು. ಜೈನ-ವೈದಿಕ ಅನುಯಾಯಿಯಾಗಿದ್ದ ಈ ಕಾಲದ ಪಂಪ-ನಾಗವರ್ಮ ಮೊದಲಾದ ಕವಿಗಳು

ತಮಿಳರಂತೆ ಸ್ಥಳೀಯ ವಸ್ತುವಿಗೆ ಬದಲು ತಮ್ಮ ಔತ್ತರೇಯ ಕಥಾನಾಯಕರನ್ನು ಕುರಿತ ರಾಮಾಯಣ, ಮಹಾಭಾರತ, ತೀರ್ಥಂಕರ ಪುರಾಣ, ಪಂಚತಂತ್ರ, ಕಾದಂಬರಿಗಳನ್ನು ಮತ್ತೆ ಮತ್ತೆ ಬರೆದರು. ನಿಸ್ಸಂದೇಹವಾಗಿಯೂ ಎಲ್ಲರೀತಿಯಿಂದ ಶ್ರೇಷ್ಠ ಕೃತಿಗಳಾಗಿದ್ದರೂ ಇವು ನಮ್ಮ ನಾಡಿನಲ್ಲಿ ಸಹಜವಾಗಿಯೇ ವಲಸೆ ಧರ್ಮಗಳ ಪ್ರಸಾರ ಮಾಧ್ಯಮದ ಕೆಲಸ ಮಾಡಿದವು. ಒಟ್ಟಾರೆ. ಶಿಲ್ಪ, ಭಾಷೆ, ಸಾಹಿತ್ಯ ಇತ್ಯಾದಿ ರೂಪದ ಔತ್ತರೇಯ ಸಂಪರ್ಕದಿಂದ ನಮ್ಮ 'ಅರಿವು' ವಿಸ್ತಾರವಾಯಿತಾದರೂ 'ಅಸ್ಮಿತೆ' ಕ್ಷೀಣಿಸುತ್ತ ಬಂದಿತು. ಇದರಿಂದಾಗಿ ನಮ್ಮ ಅಸ್ಮಿತೆ ಹಿನ್ನಡೆಗೆ ಸರಿಯತೊಡಗಿ ಔತ್ತರೇಯ ಸಂಸ್ಕೃತಿ ಮುನ್ನಡೆಗೆ ಬರತೊಡಗಿತು. ಇದನ್ನು ನಮ್ಮ ಅಸ್ಮಿತೆ ನಾಶದ ಮೊದಲ ಹಂತವೆಂದು ಕರೆಯಬಹುದು.

೧೨ನೆಯ ಶತಮಾನದ ಹೊತ್ತಿಗೆ ಇದು ಸಾಂಸ್ಕೃತಿಕ ದಬ್ಬಾಳಿಕೆಯ ಸ್ವರೂಪ ಪಡೆಯುತ್ತಲೇ ಬಸವಣ್ಣನ ನೇತೃತ್ವದಲ್ಲಿ ಸ್ಥಳೀಯ ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಸಿದ್ಧರಾಮ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದವರು 'ವಿದ್ಯೆಯೆಂದರೆ ರಾಮಾಯಣ ಮಹಾಭಾರತವಲ್ಲ', 'ವೇದಕ್ಕೆ ಒರೆಯ ಕಟ್ಟುವೆ' ಎಂದು ಮೊದಲಾಗಿ ನುಡಿಯುತ್ತ ಅದನ್ನು ಪ್ರತಿಭಟಿಸಿದರು. ಹರಿಹರ ರಾಘವಾಂಕಾದಿಗಳು ಔತ್ತರೇಯ ಕೃತಿಗಳಿಗೆ ಬದಲು ಸ್ಥಳೀಯ ಸಿದ್ಧರಾಮ, ಬಸವಣ್ಣ, ಮಾದರ ಚೆನ್ನಯ್ಯ, ಅಕ್ಕಮಹಾದೇವಿ ಮೊದಲಾದವರ ಬಗ್ಗೆ ಸಾಹಿತ್ಯ ರಚಿಸಿದರು. ಹೀಗಾಗಿ ನಾವು ಸ್ಥೂಲವಾಗಿ ಪಂಪಯುಗವನ್ನು ಕನ್ನಡಿಗರ 'ಅಸ್ಮಿತೆಯ ವಿಸ್ಮೃತಿಯುಗ'ವೆಂದು ಬಸವಯುಗವನ್ನು 'ಅಸ್ಮಿತೆಯ ಜಾಗ್ರತಿಯುಗ'ವೆಂದೂ ಕರೆಯಬಹುದಾಗಿದೆ.

ದುರ್ದೈವದ ಸಂಗತಿಯೆಂದರೆ ೧೩ನೆಯ ಶತಮಾನಕ್ಕೆ ಬರುತ್ತಲೇ ಈ ವರೆಗೆ ಅಖಂಡವಾಗಿದ್ದ ನಮ್ಮ ನಾಡು ಯಾದವರ ಉತ್ತರ ಕರ್ನಾಟಕ, ಹೊಯ್ಸಳರ ದಕ್ಷಿಣ ಕರ್ನಾಟಕವೆಂದು ಎರಡು ಹೋಳಾದುದು, ಇದೇ ಸಮಯಕ್ಕೆ ಮುಸಲ್ಮಾನರ ದಾಳಿ ಆರಂಭವಾದುದು ವಿಜಯನಗರದವರ ಕಾಲದಲ್ಲಿ ಮತ್ತೆ ಉತ್ತರದ ವೈದಿಕ-ಆಗಮಿಕ ಸಂಸ್ಕೃತಿ ಪ್ರಬಲವಾದುದು ಇತ್ಯಾದಿ ಕಾರಣಗಳಿಂದಾಗಿ ಸ್ಥಳೀಯ ಶರಣರು ಆರಂಭಿಸಿದ್ದ ಕನ್ನಡಿಗರ 'ಅಸ್ಮಿತೆ'ಯ ಚಳುವಳಿ ತಣ್ಣಗಾಗುತ್ತ ಬಂದಿತು. ಇದು ಸಾಲದೆಂಬಂತೆ ವೈದಿಕರಿಂದಾಗಿ ಪ್ರವೇಶಿಸಿದ ಸಂಸ್ಕೃತದೊಂದಿಗೆ ಮುಸಲ್ಮಾನರಿಂದಾಗಿ ಉರ್ದು, ಹೊಯ್ಸಳ, ವಿಷ್ಣುವರ್ಧನ-ಮೈಸೂರಿನ ಚಿಕ್ಕದೇವರಾಯರು ಶ್ರೀವೈಷ್ಣವ ಧರ್ಮ ಸ್ವೀಕರಿಸುವಲ್ಲಿ ತಮಿಳು, ತೆಲುಗು ಪಕ್ಷಪಾತಿ ಕೃಷ್ಣದೇವರಾಯನಿಂದಾಗಿ ತೆಲುಗು, ಮರಾಠಾ ಪೇಶ್ವೆಗಳಿಂದಾಗಿ ಮರಾಠಿ ಭಾಷೆಗಳು ಒಳಗೆ ಬೆಳೆದು ನಿಂತವು. ಈ ಹೊತ್ತಿಗೆ ನಮ್ಮ ನಾಡಿನಲ್ಲಿ ನಾವೇ ಎರಡನೆಯ ಪ್ರಜೆಗಳಾದೆವು. ಈಗ ಅನ್ಯರಿಗೆ ವಿಧೇಯವಾಗಿ ಬಾಳುವುದು, ಇಲ್ಲವೆ ಸ್ವಾರ್ಥಕ್ಕಾಗಿ ಈ ಅನ್ಯರೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಮಾತೃಭೂಮಿ ದ್ರೋಹಿಗಳಾಗಿ ಬದುಕುವುದು ಹೀಗೆ ಎರಡು ಜನವರ್ಗಗಳು ನಮ್ಮಲ್ಲಿ ನಿರ್ಮಾಣವಾದವು. ಕನ್ನಡಿಗರ ಈ ಎರಡೂ ಬಗೆಯ ದೌರ್ಬಲ್ಯವನ್ನು ಬಳಸಿಕೊಂಡು ಅಲ್ಲಲ್ಲಿ ಮುಸಲ್ಮಾನ ಮರಾಠಾ ಸಂಸ್ಥಾನಗಳು ತಲೆಯೆತ್ತಿದ ಕಾರಣ ನಮ್ಮವರೇ ಆದ ಮೈಸೂರು ಅರಸರು ಉದ್ದಕ್ಕೂ ತಮಿಳು ದಿವಾನರನ್ನೇ ನಿಯಮಿಸಿಕೊಳ್ಳುವ ತಪ್ಪು ಮಾಡಿದ ಕಾರಣ ಕನ್ನಡಿಗರ 'ಅಸ್ಮಿತೆ' ಎರಡನೆಯ ಸಲ ನಾಶಕ್ಕೆ ಗುರಿಯಾಯಿತು. ಇದು ಸಾಲದೆಂಬಂತೆ ೧೯ನೆಯ ಶತಮಾನದಲ್ಲಿ ಬ್ರಿಟಿಷರು ತಮ್ಮ ವಶದ ಕನ್ನಡನಾಡಿನ ಒಂದು ಘಟಕವನ್ನು

ಮಹಾರಾಷ್ಟ್ರ(ಮುಂಬೈ)ಕ್ಕೆ ಇನ್ನೊಂದು ಘಟಕವನ್ನು ತಮಿಳುನಾಡಿ(ಮದ್ರಾಸ)ಗೆ ಹಂಚಿ ಹಾಕುವಲ್ಲಿ ಮೂರನೆಯ ಸಲ ಕನ್ನಡಿಗರ ಅಸ್ಮಿತೆ ಕುಸಿದುಹೋಯಿತು. ಇದರ ಪರಿಣಾಮವಾಗಿ ೧೯೫೬ನೆಯ ಇಸ್ವಿಗೆ ಮೊದಲು ಭಾರತದ ಭೂಸ್ವರೂಪದಲ್ಲಿ ಕರ್ನಾಟಕದ ನಕ್ಷೆಯೇ ಇರದಂತೆ ಮರೆಯಾಗಿ ಹೋಯಿತು.

ಇದೆಲ್ಲವನ್ನು ಗಮನಿಸಿದರೆ ಕಳೆದ ಒಂದೂವರೆ ಸಾವಿರ ವರ್ಷದಿಂದ ಕನ್ನಡಿಗರ ಅಸ್ಮಿತೆ ಬೇರೆ ಬೇರೆ ರೀತಿಯ ದಾಳಿಗಳಿಂದಾಗಿ ಕುಂದುತ್ತ ಬಂದು ೨೦ನೆಯ ಶತಮಾನದ ಹೊತ್ತಿಗೆ ಅವರ ಆತ್ಮಶಕ್ತಿ-ಆತ್ಮವಿಶ್ವಾಸ ನಾಶವಾಗಿದ್ದಿತೆನಿಸುತ್ತದೆ. ಇದಕ್ಕೆ ನಿದರ್ಶವೆಂಬಂತೆ ಆಧುನಿಕ ಕಾಲದಲ್ಲಿ ರಾಷ್ಟ್ರೀಯ ವ್ಯಕ್ತಿತ್ವದ ಆಲೂರ ವೆಂಕಟರಾಯರಂಥವರು ನೆರೆಯ ರಾಜ್ಯದ ಟಿಳಕರ ಅನುಯಾಯಿಯಾಗಿ ಉಳಿದರು. ಕೆಂಗಲ್ಲ ಹನುಮಂತಯ್ಯ, ನಿಜಲಿಂಗಪ್ಪನಂಥವರು ಉತ್ತರದ ಮುರಾರಜಿಯವರನ್ನು ಮೀರಿ ಬೆಳೆಯಲಿಲ್ಲ. ದೇವರಾಜ ಅರಸರಂಥವರು ಇಂದಿರಾಗಾಂಧಿಯವರ ನೆರಳಾಗಿ ಉಳಿದರು. ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗಡೆಯಂಥವರು ರಾಜೀವಗಾಂಧಿಯವರಿಗೆ ದ್ವಿತೀಯರಾದರು. ಒಟ್ಟಾರೆ ಇವರೆಲ್ಲ ರಾಷ್ಟ್ರಮಟ್ಟಕ್ಕೇರದೆ ಪ್ರಾಂತಮಟ್ಟಕ್ಕೆ ನಿಂತುದಕ್ಕೆ ಆತ್ಮವಿಶ್ವಾಸ ಕುಸಿದ ಪರಂಪರೆಯವರಾಗಿದ್ದುದೇ ಕಾರಣವಾಗಿದೆ.

ಹೀಗೆ ಆಧುನಿಕ ಕನ್ನಡ ರಾಜಕೀಯ ವ್ಯಕ್ತಿಗಳ ಆತ್ಮವಿಶ್ವಾಸದಂತೆ ೧೯ನೆಯ ಶತಮಾನದ ಹೊತ್ತಿಗೆ ಆಧುನಿಕ ಕನ್ನಡ ಮಾತೃಭಾಷಿಕರ ಸಾಹಿತ್ಯ ಪ್ರತಿಭೆಯೂ ಬತ್ತಿಹೋಗಿದ್ದಿತು. ಈ ಕಾರಣದಿಂದಾಗಿಯೇ ನವೋದಯ ಕಾಲದ ಮೊದಲ ತಲೆಮಾರಿನಲ್ಲಿ ತಮಿಳು ಮಾತೃಭಾಷೆಯ ಕೈಲಾಸಂ-ಮಾಸ್ತಿ, ಮರಾಠಿ ಮಾತೃಭಾಷೆಯ ಬೇಂದ್ರೆ-ಶಂಭಾ, ತೆಲುಗು ಮಾತೃಭಾಷೆಯ ಟಿ.ಎಸ್.ವೆಂಕಣ್ಣಯ್ಯ-ಬೆಳ್ಳಾವೆ ವೆಂಕಟನಾರಣಪ್ಪ, ಕೊಂಕಣಿ ಮಾತೃಭಾಷೆಯ ಗೋವಿಂದ ಪೈ ಇವರೇ ಎದ್ದು ತೋರುವರೇ ಹೊರತು ಕನ್ನಡ ಮಾತೃಭಾಷೆಯ ಒಬ್ಬರೂ ತೋರುವುದಿಲ್ಲ.

ಈ ಕೀಳರಿಮೆ ಕಾರಣವಾಗಿಯೇ ಕನ್ನಡಿಗರು ಕರ್ನಾಟಕದ ಹೊರಗಿನ ಕ್ಷೇತ್ರ, ನದಿ, ವ್ಯಕ್ತಿಗಳೇ ಶ್ರೇಷ್ಠವೆಂಬ ಭ್ರಮೆ ಬೆಳಸಿಕೊಂಡರು, ಪ್ರಾಚೀನ ಕಾಲದಿಂದಲೂ ಉತ್ತರದ ಕಾಶಿಯೇ ಪುಣ್ಯಕ್ಷೇತ್ರ, ಗಂಗೆಯೇ ಪವಿತ್ರ ನದಿಯೆಂದು ಭಾವಿಸಿದರು. ಆಧುನಿಕ ಕಾಲಕ್ಕೆ ಪುಣ್ಯಕ್ಷೇತ್ರಗಳೆಂದು ನಂಬಿರುವರಲ್ಲದೆ, ಆ ದೇವತೆಗಳನ್ನು ಕಾಲಕಾಲಕ್ಕೆ ದೊಡ್ಡ ಸಂಖ್ಯೆಯಲ್ಲಿ ಆಮದು ಮಾಡಿಕೊಳ್ಳುವ ಮೂಲಕ, ಆಯಾ ರಾಜ್ಯದವರ ವಲಸೆಗೆ ಬಾಗಿಲು ತೆರೆಯುತ್ತ ಬಂದಿದ್ದಾರೆ. ತೆರೆಯುತ್ತಲಿದ್ದಾರೆ. ಇದರ ಮುಂದುವರಿಕೆಯೆಂಬಂತೆ ಬಿಜೆಪಿ ಸರಕಾರದ ಮುಜರಾಯಿ ಇಲಾಖೆ ೨೦-೨೫ ಲಕ್ಷ ರೂಪಾಯಿ ಖರ್ಚು ಮಾಡಿ ಗಂಗಾನದಿಯ ನೀರನ್ನು ತರಿಸಿ, ನಮ್ಮ ಎಲ್ಲ ದೇವಾಲಯಗಳಿಗೆ ಹಂಚಿತು. ತಿರುಪತಿಯಿಂದ ಲಾಡು ಪ್ರಸಾದ ಖರೀದಿಸಿ ವಿದೇಶದಲ್ಲಿ ವಿತರಣೆ ಮಾಡಿತು. ಗಂಗಾಜಲಕ್ಕಿಂತ ನಾವು ನಿತ್ಯ ಬಳಸುವ ನಮ್ಮ ಹಳ್ಳಿಯ ನೀರು ಹೆಚ್ಚು ಪವಿತ್ರ, ತಿರುಪತಿಯ ಲಾಡು ಪ್ರಸಾದಕ್ಕಿಂತ ನಮ್ಮ ದಾಸೋಹ ಮನೆಗಳಲ್ಲಿ ಬಡವರಿಗೆ ನೀಡುವ ನುಚ್ಚು-ಮಜ್ಜಿಗೆ ಹೆಚ್ಚು ಪವಿತ್ರವೆಂಬ ಭಾವನೆ ಕನ್ನಡಿಗರಲ್ಲಿ ಮೂಡಿದರೆ ಮಾತ್ರ ಅಸ್ಮಿತೆಯ ಜಾಗ್ರತಿಯೆನಿಸುತ್ತದೆ. ಏಕೆಂದರೆ ಎಲಿಜೆಬೆತ್ ರಾಣಿಗಿಂತ ನಮ್ಮ 'ಅವ್ವ' ಶ್ರೇಷ್ಠವೆಂಬ ವ್ಯಸನಕ್ಕೆ ನಿದರ್ಶನವೆಂಬಂತೆ 'ಪರಕೀಯ' ವ್ಯಕ್ತಿ-ವಿಷಯಗಳೇ ಶ್ರೇಷ್ಠವೆಂದು ಬೇರೆ ಹೇಳಬೇಕಿಲ್ಲ. ಬೆಂಗಾಲದ ಟ್ಯಾಗೋರ್, ಅರವಿಂದ,

ರಾಮಕೃಷ್ಣ ಪರಮಹಂಸ ಮೊದಲಾದ ಗಣ್ಯರ ಹೆಸರಿನಲ್ಲಿ ಸಂಸ್ಥೆಗಳೂ, ರಸ್ತೆ ಕೂ-ಉದ್ಯಾನಗಳೂ ನಮ್ಮಲ್ಲಿ ಅಗತ್ಯ ಮೀರಿ ಅಸ್ತಿತ್ವಕ್ಕೆ ಬಂದಿವೆ. ರಾಜಕೀಯ ಪಕ್ಷಗಳಾದ ಕಾಂಗ್ರೆಸ್ಸಿನ ಆಳ್ವಿಕೆಯಲ್ಲಿ ತಮ್ಮ ಉತ್ತರದ ವರಿಷ್ಠರ ತುಷ್ಟಿಗಾಗಿ ಇಂದಿರಾಗಾಂಧಿ, ರಾಜೀವಗಾಂಧಿ ಮೊದಲಾದವರ, ಭಾರತೀಯ ಜನತಾಪಕ್ಷದ ಆಳ್ವಿಕೆಯಲ್ಲಿ ಅಟಲ್ ಬಿಹಾರಿ ವಾಜಪೇಯಿ, ದೀನದಯಾಳ ಉಪಾಧ್ಯಾಯ ಮೊದಲಾದವರ ಹೆಸರಿನಲ್ಲಿ ಇಂಥ ಸ್ಮಾರಕಗಳು ಇತ್ತೀಚೆ ತಲೆಯೆತ್ತಿದವು. ಇದೇ ರೀತಿ ಮಹಾರಾಷ್ಟ್ರ, ತೆಲುಗು, ತಮಿಳುನಾಡಿನ ನಾಯಕ ವ್ಯಕ್ತಿಗಳ ಹೆಸರು ಇಲ್ಲಿ ಅಗತ್ಯ ಮೀರಿ ರಾರಾಜಿಸಿದವು. ಇದೇ ರೀತಿ ಗಣ್ಯ ಕನ್ನಡಿಗರ ಹೆಸರು ಉತ್ತರಭಾರತದಲ್ಲಿ ಏಕೆ, ನೆರೆಯ ರಾಜ್ಯಗಳಲ್ಲಿ ಈ ಪ್ರಮಾಣ ಹೋಗಲಿ, ಅಲ್ಪಪ್ರಮಾಣದಲ್ಲಿಯೂ ಕಾಣುವುದಿಲ್ಲ.

ಇದೆಲ್ಲವನ್ನು ಗಮನಿಸಿಯೇ ಅಂದಿನ ಮುಖ್ಯಮಂತ್ರಿ ಕೆಂಗಲ್ಲ ಹನುಮಂತಯ್ಯನವರು 'ಕನ್ನಡಿಗರು ಭಕ್ತ ಭಜರಂಗ(ಹನುಮಂತ) ಆಗುತ್ತ ಬಂದರೇ ಹೊರತು ಒಡೆಯ ಶ್ರೀರಾಮನಾಗುವ ಪ್ರಯತ್ನ ಮಾಡಲಿಲ್ಲ, ಎಂದು ಹೇಳಿದ್ದು. ಇಂದಿನಿಂದಾದರೂ ನಾವು 'ಭಜರಂಗಪ್ರಜ್ಞೆ'ಗೆ ಬದಲು ಶ್ರೀರಾಮಪ್ರಜ್ಞೆ' ಬೆಳೆಸಿಕೊಂಡರೆ ಮಾತ್ರ ನಮ್ಮ ನೆಲ ನಿಜವಾದ ಕರ್ನಾಟಕವಾಗುತ್ತದೆ. ನಾವೆಲ್ಲ ನಿಜವಾದ ಕನ್ನಡಿಗರಾಗುತ್ತೇವೆ. ಇಂದು ಇಂಥ ಹೊಸಕನ್ನಡಿಗ ನಮ್ಮ ನಾಡಿನಲ್ಲಿ ಮರುಹುಟ್ಟು ಪಡೆಯಬೇಕಾಗಿದೆ. ಕನ್ನಡಿಗನಾಗದೆ ಏನು ಸಾಧಿಸಿದರೂ ಸಾಧಿಸಿದಂತಲ್ಲ. ಆದುದರಿಂದ ಕನ್ನಡಿಗನಿಗೆ ರಾಜಕಾರಣಿಯಾಗು, ಜ್ಞಾನಿ-ವಿಜ್ಞಾನಿಯಾಗು, ಕವಿ-ಕಲಾವಿದನಾಗು, ಸನ್ಯಾಸಿ-ಸಂಸಾರಿಯಾಗು, ಲೋಕ ಮಾನ್ಯನೇ ಆಗು, ಏನಾದರೂ ಆಗು ಮೊದಲು ಕನ್ನಡವಾಗು" ಎಂದು ಸೂಚಿಸುತ್ತ, ಕನ್ನಡಿಗನು ಹೀಗಾಗಬೇಕೆಂಬುದೇ ಈ ಸಮ್ಮೇಳನದ ಮುಖ್ಯ ಸಂದೇಶವಾಗಲೆಂದು ಹಾರೈಸುತ್ತೇನೆ.

ಬದುಕು ಪರಸ್ಪರಾವಲಂಬಿಯಾಗಿರುವುದರಿಂದ ಯಾವುದೇ ಸಮುದಾಯದ ಅನ್ಯತೆಯನ್ನು ಬರಮಾಡಿಕೊಳ್ಳುವುದು ಸಹಜ. ಇದರಿಂದ ಅರಿವು ವಿಸ್ತಾರವಾಗುತ್ತದೆ ನಿಜ. ಇಲ್ಲಿ 'ಅರಿವನ್ನು ವಿಸ್ತಾರ ಮಾಡಿಕೊಳ್ಳುವುದೆಂದರೆ ಅಸ್ಮಿತೆಯನ್ನು ನಾಶ ಮಾಡಿಕೊಳ್ಳುವುದಲ್ಲ'ವೆಂಬ ಎಚ್ಚರವಿರಬೇಕಾಗುತ್ತದೆ. ಅರಿವನ್ನು ವಿಸ್ತಾರಗೊಳಿಸುವ ಅಸ್ಮಿತೆಯನ್ನು ಉದ್ದೀಪನಗೊಳಿಸುವ ಮಾಧ್ಯಮಗಳಲ್ಲಿ ಭಾಷೆ ಮತ್ತು ಅದರ ಉತ್ಪನ್ನವಾದ ಸಾಹಿತ್ಯ ತುಂಬ ಮುಖ್ಯವಾದುವು. ಈ ದೃಷ್ಟಿಯಿಂದ ನೋಡಿದರೆ ರಾಷ್ಟ್ರಮಟ್ಟದಲ್ಲಿ ದೊಡ್ಡ ದೊಡ್ಡ ಪ್ರಶಸ್ತಿಗಳನ್ನು ಗೆದ್ದು ತರುವ ಕನ್ನಡವು ಸಾಹಿತ್ಯಿಕವಾಗಿ ಸುದೈವಿ ಭಾಷಿಕವಾಗಿ ದುರ್ದೈವಿಯೆಂದೇ ಹೇಳಬೇಕು.

ಎರಡು ಸಾವಿರ ವರ್ಷಗಳಷ್ಟು ಪೂರ್ವದಿಂದಲೂ ಈ ನೆಲದ ಭಾಷೆಯಾದ ಕನ್ನಡದ ಮಗ್ಗುಲಲ್ಲಿ, ಮನಸ್ಸಿನಲ್ಲಿ ಅನೇಕ ವಲಸೆ ಭಾಷೆಗಳು ಬಂದು ನೆಲೆಸಿವೆ. ಭಾರತದ ಎಲ್ಲ ಪ್ರಾಂತಗಳಲ್ಲಿರುವ ಈ ಬಗೆಯ ಭಾಷಾ ಸಂಕರ ಸಮಸ್ಯೆಯನ್ನು ನೆಲದ ಭಾಷೆಯ ಅಂದರೆ ರಾಜ್ಯಭಾಷೆಯ ಆಧಾರದಿಂದ ಬಿಡಿಸುವುದೇ ಸೂಕ್ತವೆಂದು ನಿರ್ಧರಿಸಿದ ಪ್ರಯುಕ್ತ ೧೯೫೬ರಲ್ಲಿ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಿತು. ಹೀಗಿದ್ದೂ 'ಇದು ಕನ್ನಡ ಭಾಷಾ ರಾಜ್ಯ, ಈ ರಾಜ್ಯದ ಭಾಷೆ ಕನ್ನಡ, ಎಂಬ ಸಂವಿಧಾನ ಬದ್ಧ ಸರಳ ಸತ್ಯವನ್ನು ಅನುಷ್ಠಾನಗೊಳಿಸುವ ಬದಲು ಆಳುವವರು ಮತಗಳಿಕೆಯ ದೃಷ್ಟಿಯಿಂದ ಮಿಕ್ಕ ಭಾಷೆಗಳಿಗೂ ಸ್ವಲ್ಪ ಹೆಚ್ಚು ಕಡಿಮೆ ರಾಜ್ಯಭಾಷೆಯ ಸ್ಥಾನ ನೀಡುತ್ತ ಬರುವಲ್ಲಿ ದಿನಗಳೆದಂತೆ ಭಾಷಾ ಸಮಸ್ಯೆ ಸೃಷ್ಟಿಯಾಗುತ್ತ ಬಂದು 'ಕನ್ನಡ ಅಭಿವೃದ್ಧಿ ಪ್ರಾಧಿಕಾರ' ಸ್ಥಾಪಿಸುವ ಸ್ಥಿತಿ ನಿರ್ಮಾಣ ಮಾಡಿಕೊಂಡಿದ್ದೇವೆ.

ಎಲ್ಲ ರಾಜ್ಯಗಳಂತೆ ಬಹುಭಾಷಿಕ ರಾಜ್ಯವಾಗಿದ್ದರೂ 'ಸಂವಿಧಾನಾತ್ಮಕವಾಗಿ ಇದು ಕನ್ನಡ ರಾಜ್ಯ, ಇಲ್ಲಿಯ ಕನ್ನಡ ಭಾಷಾ ಆದ್ಯತೆಯನ್ನು ಯಾರೂ ಪ್ರಶ್ನಿಸುವಂತಿಲ್ಲ. ದೇವರೂ ಪ್ರಶ್ನಿಸುವಂತಿಲ್ಲ. ಈ ಪರಮಸತ್ಯವನ್ನು ಕನ್ನಡ ಮಾತೃಭಾಷಿಕರು ಮೊದಲು ಮಾಡಿ ಈ ನೆಲದಲ್ಲಿ ವಾಸಿಸುವ ಎಲ್ಲ ಅನ್ಯ ಮಾತೃಭಾಷಿಕರು ಅರ್ಥಮಾಡಿಕೊಂಡು ಕನ್ನಡವನ್ನು ಬದುಕಿನ ಎಲ್ಲ ನೆಲೆಗಳಲ್ಲಿ ಅದರಲ್ಲಿಯೂ ಆಡಳಿತ, ಶಿಕ್ಷಣ, ಸಮಾಜ ಈ ಮೂರೂ ನೆಲೆಗಳಲ್ಲಿ ಸರಿಯಾಗಿ ಬಳಸಬೇಕು, ಬೆಳೆಸಬೇಕು.

ಆಡಳಿತವೆನ್ನುವುದು ಕೆಲವೇ ಶಬ್ದಗಳ ವ್ಯವಹಾರ ಮತ್ತು ಸರಕಾರ ನಿಯಂತ್ರಿತ ವ್ಯವಸ್ಥೆ. ಇಂದು ನಮ್ಮ ಆಡಳಿತ ಪದ್ಧತಿ ಆಂಗ್ಲರದು, ಆದರೆ ಇದಕ್ಕೆ ಬಳಸಬೇಕಾದ ಭಾಷೆ ನಮ್ಮದು ಎಂಬ ದ್ವಂದ್ವ ಸೃಷ್ಟಿಯಾಗಿದೆ. ಇದರಿಂದ ನಿರ್ಮಾಣವಾಗಿರುವ ತೊಂದರೆಯನ್ನು ನಿವಾರಿಸಿಕೊಳ್ಳಲು ಮೂಲತಃ ಇಂಗ್ಲಿಷ್‌ದಂತೆ ನಮ್ಮದಲ್ಲದೆ ಸಂಸ್ಕೃತದ ಅಪರಿಚಿತ ಪದಗಳನ್ನು ಬಳಸಿ ಇದೇ ಸರಿಯಾದ ಕ್ರಮವೆಂಬ ಭ್ರಮೆಯಲ್ಲಿದ್ದೇವೆ. ಇಂದು ಕರ್ನಾಟಕ ಸರಕಾರ ಆಡಳಿತದಲ್ಲಿ ಕನ್ನಡ ಬಳಕೆ ವಿಷಯವಾಗಿ ಬಹಳಷ್ಟು ಪ್ರಗತಿ ಸಾಧಿಸಿದೆಯಾದರೂ ತಿಳಿಯುವ ಇಂಗ್ಲಿಷ್ ಪದಗಳಿಗಿಂತ ತಿಳಿಯದ ಸಂಸ್ಕೃತ ಪದ ಬಳಸಿದರೆ ಪ್ರಯೋಜನವೇನು? ಎಂದು ಕೇಳುವಷ್ಟು ನಮ್ಮ ಆಡಳಿತ ಭಾಷೆಯ ಬರಹ ಜಟಿಲವಾಗಿದೆ; ಕೃತಕವಾಗಿದೆ. ಆದುದರಿಂದ ಸಂಸ್ಕೃತಿಕ್ಕೆ ಕಟ್ಟು ಬೀಳದೆ, ಜನ ಬಳಕೆಯಲ್ಲಿರುವ ಯಾವುದೇ ಭಾಷೆಯ ಪದಗಳನ್ನು ಬಳಸಿಕೊಂಡು ಸಣ್ಣ ಸಣ್ಣ ವಾಕ್ಯ, ತಿಳಿಯಾದ ಶೈಲಿಗಳಿಂದ ಆಡಳಿತ ಭಾಷೆ ನವೀಕರಣಗೊಳ್ಳುವುದು ಅವಶ್ಯವಿದೆ. ಸರಕಾರದ ಒತ್ತಾಯಕ್ಕೆ ಬದಲು ಸಹಜ ಉಸಿರಾಟದಂತೆ ಕನ್ನಡ ಆಡಳಿತದಲ್ಲಿ ಅನುಷ್ಠಾನಕ್ಕೆ ಬರಬೇಕಾಗಿದೆ.

ಆಡಳಿತದಷ್ಟೇ ಸುಲಭವಾಗಿ ಶಿಕ್ಷಣದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸಬಹದಾಗಿತ್ತಾದರೂ, ಅಲ್ಪ ಸಂಖ್ಯಾತರ ಮತಗಳಿಸುವ ದೃಷ್ಟಿಯಿಂದ ನಮ್ಮ ರಾಜಕಾರಣಿಗಳು ಇದನ್ನು ಬಹುದೊಡ್ಡ ಸಮಸ್ಯೆಯನ್ನಾಗಿಸಿದ್ದಾರೆ. ಸಂವಿಧಾನವು 'ರಾಜ್ಯಭಾಷಾ' ಆಧಾರದ ಮೇಲೆ ರಾಜ್ಯವನ್ನು ಅಸ್ತಿತ್ವಕ್ಕೆ ತಂದು ಅವರವರ ಮಾತೃಭಾಷಾ ಆಧಾರದ ಮೇಲೆ ಮಗುವಿಗೆ ಶಿಕ್ಷಣ ನೀಡಬೇಕೆಂಬ ದ್ವಂದ್ವ ನೀತಿಯನ್ನು ಜಾರಿಗೊಳಿಸಿದೆ. ಇದಕ್ಕೆ ಪರಿಹಾರವೆಂದರೆ 'ಮಾತೃಭಾಷೆ' ಹಾಗೆಂದರೇನು? ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

ನಮ್ಮದು ಮೂಲತಃ ಕೃಷಿ ಪ್ರಧಾನ ಸಮಾಜ. ಇಲ್ಲಿ ಕುಟುಂಬಗಳು ಒಂದೇ ಸ್ಥಳದಲ್ಲಿ ನೆಲೆನಿಂತು ಪರಸ್ಪರ ಅವಲಂಬನ, ನಿರಂತರ ಸಂಪರ್ಕ ಕಾರಣದಿಂದಾಗಿ ಎಲ್ಲ ಜಾತಿಯವರಿಗೂ ಎಲ್ಲ ವಲಸಿಗರಿಗೂ ಕುಟುಂಬದ ಹೊರಗಿನ ರಾಜ್ಯ ಭಾಷೆಯೇ ಒಳಗಿನ ಭಾಷೆಯಾಗುವಲ್ಲಿ ಇಡೀ ಗ್ರಾಮ ಏಕಭಾಷಾ ಘಟಕವಾಗಿದ್ದಿತು. ಅಲ್ಲಿ ಮಾತೃಭಾಷೆಯ ಪ್ರಶ್ನೆಯೇ ಉದ್ಭವಿಸಿರಲಿಲ್ಲ. ಬರುಬರುತ್ತ ಕುಟುಂಬಗಳು ವಾಣಿಜ್ಯ-ನೌಕರಿ-ಶಿಕ್ಷಣ ಇತ್ಯಾದಿಗಳಿಗಾಗಿ ನೆಲೆ ಬದಲಿಸುತ್ತ ಬಂದ ಕಾರಣ ಸ್ಥಿರ ಸಮಾಜಕ್ಕೆ ಬದಲು ಮಿಶ್ರಸಮಾಜ ಅಸ್ತಿತ್ವಕ್ಕೆ ಬಂದಿತು. ಇದರಿಂದಾಗಿ ಹೊರಗಿನ ಪರಿಸರ ಭಾಷೆಯೇ ಬೇರೆ, ಒಳಗಿನ ಕುಟುಂಬ ಭಾಷೆಯೇ ಬೇರೆಯೆಂಬ ಪರಿಸ್ಥಿತಿ ನಿರ್ಮಾಣವಾಗತೊಡಗಿತು. ಮೇಲು ನೋಟಕ್ಕೆ ಹೀಗೆ ಕಾಣಿಸುತ್ತಿದ್ದರೂ ನಿಜಸ್ಥಿತಿಯೆಂದರೆ ನಿತ್ಯದ ನೌಕರಿ-ಉದ್ಯೋಗಗಳಿಗೆ ಹೋಗುವ ತಂದೆ-ತಾಯಿ, ಶಾಲೆ-ಟವಿಶನ್‌ಗಳಿಗೆ ಹೋಗುವ ಮಗು ಸಾಹಿತ್ಯಿಕವಾಗಿ ಪರಿಸರ ಭಾಷೆಯ ಜನರೊಂದಿಗೆ ದಿನದ ಬಹಳ ಸಮಯ ಕಳೆಯುತ್ತಾರೆ.

ಊಟ–ನಿದ್ರೆಗಳಿಗಾಗಿ ಬಂದು ಮನೆಯಲ್ಲಿ ಕಳೆಯುವುದು ಸ್ವಲ್ಪ ಸಮಯ ಮಾತ್ರ. ಎರಡನೇಯದಾಗಿ ಪರಿಸರದ ಭಾಷೆ ಸಾವಿರಾರು ಶಬ್ದಗಳನ್ನೊಳಗೊಂಡಿದ್ದರೆ, ಮನೆಯ ಭಾಷೆ ನೂರಿನ್ನೂರು ಶಬ್ದಗಳಿಗೆ ಸೀಮಿತವಾಗಿರುತ್ತದೆ. ಪರಿಸರದ ಭಾಷೆಯಲ್ಲಿ ಸಾವಿರಾರು ಜನರಿದ್ದರೆ ಮನೆಯ ಭಾಷೆಯಲ್ಲಿ ಬಹಳೆಂದರೆ ನಾಲ್ಕಾರು ಜನ ಮಾತ್ರ. ಈ ಬಗೆಯ ವ್ಯವಸ್ಥೆಯಿಂದಾಗಿ ದೊಡ್ಡ ಪರಿಸರ ಭಾಷೆಯಾಗಿರುವ ರಾಜ್ಯಭಾಷೆ ಕನ್ನಡವು ಪ್ರಧಾನವಾಗಿ, ಸಣ್ಣ ಪರಿಸರ ಭಾಷೆಯಾಗಿರುವ ಮನೆಯ ಭಾಷೆ ದ್ವಿತೀಯ ನೆಲೆಗೆ ಸರಿದಿರುತ್ತದೆ, ಪರಿಸರ ಭಾಷೆಯೂ ಅಲ್ಲದ ಮಾತೃ ಭಾಷೆಯೂ ಅಲ್ಲದ ಪರಕೀಯ ಭಾಷೆಯಾದ ಇಂಗ್ಲಿಷ್ ತೃತೀಯ ನೆಲೆಗೆ ಸರಿದಿರುತ್ತದೆ. ವಸ್ತುಸ್ಥಿತಿ ಹೀಗಿರುವುದರಿಂದ ಮಗುವಿನ ಆರಂಭಿಕ ಶಿಕ್ಷಣದಲ್ಲಿ ಮಾತೃಭಾಷೆ ಇಲ್ಲವೆ ಇಂಗ್ಲಿಷ್ ಭಾಷಾ ಮಾಧ್ಯಮಕ್ಕಿಂತ ಪರಿಸರ ಭಾಷಾ ಮಾಧ್ಯಮವೇ ಹೆಚ್ಚು ವೈಜ್ಞಾನಿಕವೆನಿಸುತ್ತದೆ.

ಎರಡನೆಯದಾಗಿ ಇಂದು ಮಗುವಿನ ಮಾತೃಭಾಷೆಯೆಂದರೆ ವಲಸೆ ಬಂದ ತಂದೆ–ತಾಯಿಗಳ ಮಾತೃಭಾಷೆಯೆಂದೇ ಅರ್ಥ. ನಿಜ ಅರ್ಥದಲ್ಲಿ ಅದು ಅವರು ಬಿಟ್ಟು ಬಂದ ಪರಿಸರ ಭಾಷೆಯೇ ಆಗಿರುತ್ತದೆ. ಈಗ ಇನ್ನೊಂದು ಹೊಸ ಪರಿಸರದಲ್ಲಿ ಹುಟ್ಟಿ ಬೆಳೆಯುತ್ತಲಿರುವ ತಮ್ಮ ಮಗುವಿಗೆ ಅವರು ತಮ್ಮ ಹಳೆಯ ಪರಿಸರದ ಭಾಷೆ ಹೇರುವುದೆಂದರೆ ಮಗುವಿನ ಭಾಷಾಸ್ವಾತಂತ್ರ್ಯ ಕಸಿದುಕೊಂಡ ಅಪರಾಧವಾಗುತ್ತದೆ. ಆದುದರಿಂದ ಮಗುವಿಗೆ ಅದರ ಪರಿಸರ ಭಾಷೆಯಲ್ಲಿ ಓದಿಸುವುದೇ ಸರಿಯಾದ ಭಾಷಾ ಕಲಿಕೆಯಾಗುತ್ತದೆ. ಈ ಸತ್ಯವನ್ನು ಅರ್ಥಮಾಡಿಕೊಳ್ಳದೆ ಈ ರಾಜ್ಯಕ್ಕೆ ಬಂದು ಆ ರಾಜ್ಯದ, ಆ ರಾಜ್ಯಕ್ಕೆ ಹೋಗಿ ಈ ರಾಜ್ಯದ ಭಾಷೆಯಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಬೇಕೆಂದು ಕೇಳುವುದು ವಿತಂಡನಾದವೆನಿಸುತ್ತದೆ. ಕೇಳಿದವರಿಗೆ ಕೇಳದ ಭಾಷಾಮಾಧ್ಯಮದಲ್ಲಿ ಶಿಕ್ಷಣ ನೀಡುವುದಾದರೂ ಹೇಗೆ ಸಾಧ್ಯ? ಇದರ ಬದಲು ಆ ರಾಜ್ಯದಲ್ಲಿರುವವರು ಆ ರಾಜ್ಯದ ಭಾಷಿಕರು, ಈ ರಾಜ್ಯದಲ್ಲಿರುವವರು ಈ ರಾಜ್ಯದ ಭಾಷಿಕರು ಎಂದು ರಾಜ್ಯ ಭಾಷೆಯೇ ಅಲ್ಲಲ್ಲಿಯ ಪ್ರಜೆಗಳ ಮಾತೃಭಾಷೆ ಎಂದು ಸಂವಿಧಾನದಲ್ಲಿ ತಿದ್ದುಪಡಿ ತರುವುದು ಮತ್ತು ಭಾರತದ ಎಲ್ಲ ರಾಜ್ಯಗಳ ಶಿಕ್ಷಣಕ್ಕೆ ಅನ್ವಯಿಸುವ ಒಂದು 'ರಾಷ್ಟ್ರೀಯ ಭಾಷಾ ನೀತಿ' ರೂಪಿಸಿ ಅದನ್ನು ಜಾರಿಗೊಳಿಸುವುದು ಇಂದಿನ ಅಗತ್ಯವಾಗಿದೆ. ಕೇಂದ್ರ ಸರಕಾರ ಈ ಬಗ್ಗೆ ತುರ್ತು ವಿಚಾರಿಸಬೇಕೆಂದು ಒತ್ತಾಯಿಸಬೇಕಾಗಿದೆ.

ಭಾಷಾವಾರು ಪ್ರಾಂತರಚನೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ಯಾವುದೇ ರಾಜ್ಯದಲ್ಲಿ ರಾಜ್ಯಭಾಷೆ ಒಂದು ವರ್ಗ, ಮಿಕ್ಕ ಎಲ್ಲ ಭಾಷೆಗಳು ಇನ್ನೊಂದು ವರ್ಗ. ಆರಂಭದಲ್ಲಿ ಮಗುವಿಗೆ ಪರಿಸರ ಭಾಷೆಯಾದ ರಾಜ್ಯಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು. ಆ ಭಾಷೆ ಹೆಚ್ಚಿನದಾಗಿ ಒಂದು ಆವಶ್ಯಕ ಪತ್ರಿಕೆಯಾಗಿರಬೇಕು. ಮುಂದುವರಿದಂತೆ ಮಿಕ್ಕ ಭಾಷೆಗಳಲ್ಲಿ ಇಂಗ್ಲಿಷ್ ಭಾಷೆಯನ್ನು, ಇನ್ನೂ ಮುಂದುವರಿದಂತೆ ಅದರ ಜೊತೆಗೆ ಬೇರೊಂದು ಭಾಷೆಯನ್ನು ಮಗು ಐಚ್ಛಿಕವಾಗಿ ಆಯ್ದುಕೊಳ್ಳಬೇಕು. ನಾಲ್ಕನೆಯ ವರ್ಗದ ವರೆಗೆ ಈ ವ್ಯವಸ್ಥೆ ಇರಬೇಕು. ಅಂದರೆ ಕನ್ನಡ ಮಾಧ್ಯಮ ಮತ್ತು ಒಟ್ಟು ಮೂರು ಭಾಷಾ ಕಲಿಕೆ ಈ ವರೆಗೆ ಇರಬೇಕು. ಐದನೆಯ ವರ್ಗಕ್ಕೆ ಬರುತ್ತಲೇ ಇಂಗ್ಲಿಷ್ ಮಾಧ್ಯಮ ಮತ್ತು ಈ ಹಿಂದಿನ ಮೂರು ಭಾಷಾ ಕಲಿಕೆ ಪಿಯುಸಿ ಮುಗಿಯುವವರೆಗೆ ಮುಂದುವರಿಯಬೇಕು. ಈ ಸೂತ್ರ ಒಪ್ಪಿಕೊಂಡರೆ, ಮಗುವಿಗೆ ಆರಂಭದಲ್ಲಿ

ರಾಜ್ಯ ಭಾಷಾ ಮಾಧ್ಯಮ ಬರುಬರುತ್ತ ಇಂಗ್ಲಿಷ್ ಭಾಷಾ ಮಾಧ್ಯಮ, ಮತ್ತು ಮಾತೃಭಾಷಾ ಆಯ್ಕೆಯ ಅವಕಾಶ ಇತ್ಯಾದಿ ಲಾಭಗಳಾಗುವವೆಂಬುದನ್ನು ಇಲ್ಲಿ ಗಮನಿಸಬೇಕು.

ಹೀಗೆ ಆಡಳಿತ ಶಿಕ್ಷಣಗಳಿಗಿಂತ ರಾಜ್ಯಭಾಷೆಯು ರಾಜ್ಯದ ಪ್ರತಿಯೊಬ್ಬ ಪ್ರಜೆಯ ಪ್ರಜ್ಞೆಯ ಭಾಗವಾಗಿ, ಎಲ್ಲ ವ್ಯವಹಾರಗಳ ಮಾಧ್ಯಮವಾಗಬೇಕು. ತಾವು ಕನ್ನಡಿಗರಾಗದೆ ಸರಕಾರವನ್ನು ದೂಷಿಸುವುದು ಸರಿಯಾದ ಕ್ರಮವಲ್ಲ. ರಾಜ್ಯದ ಸಂಪನ್ಮೂಲ ವ್ಯಕ್ತಿಯಾಗಿರುವ ಇವರು ಕನ್ನಡವನ್ನು ಅದಕು ಇದಕು ಎದಕು ಬಳಸುವ ಮನೋಧರ್ಮ ಬೆಳೆಸಿಕೊಂಡರೆ ಸಹಜವಾಗಿಯೇ ಶಿಕ್ಷಣ, ಆಡಳಿತ ಇತ್ಯಾದಿಗಳೂ ಕನ್ನಡವಾಗುತ್ತವೆ. ಇವರ ರಾಜಕೀಯ ಪ್ರತಿನಿಧಿಗಳೂ ಕನ್ನಡವಾಗುತ್ತಾರೆ.

ಅವಸಾನದ ಅಂಚಿನಲ್ಲಿರುವ ಭಾಷೆಗಳ ಪಟ್ಟಿಯಲ್ಲಿ ಕನ್ನಡವೂ ಒಂದು ಎಂಬ ಸುದ್ದಿ ಪ್ರಚಾರದಲ್ಲಿದೆ. ಹೀಗಿದ್ದೂ ಎರಡು ಸಾವಿರ ವರ್ಷಗಳಿಂದ ಸಂಸ್ಕೃತವನ್ನು ಎದುರಿಸಿ ಬದುಕಿರುವ ಕನ್ನಡ, ಇಂಗ್ಲಿಷ್‌ನ್ನು ಎದುರಿಸಿ ಬದುಕುತ್ತದೆ, ಬಾಳುತ್ತದೆ ಎಂಬ ಮಾತನಾಡುತ್ತ ನಡೆದಿದ್ದೇವೆ. ಗ್ರಂಥಸ್ಥ(ಮೃತ) ಭಾಷೆಯಾಗಿರುವ ಸಂಸ್ಕೃತವನ್ನು ಎದುರಿಸುವುದು ಸುಲಭ, ಕಂಠಸ್ಥ ಭಾಷೆಯಾಗಿರುವ, ಅದರಲ್ಲಿಯೂ ಪ್ರಚಲಿತ ಜ್ಞಾನದ ಭಾಷೆ-ಅನ್ನದ ಭಾಷೆಯಾಗಿರುವ ಇಂಗ್ಲಿಷನ್ನು ಎದುರಿಸಿ ಕನ್ನಡ ಬದುಕುವುದು ಅಷ್ಟು ಸುಲಭವಲ್ಲ. ಈ ಅಪಾಯದಿಂದ ಪಾರಾಗುವುದೆಂದರೆ 'ಕನ್ನಡವನ್ನು ಬಳಸು-ಇಂಗ್ಲಿಷ್‌ನ್ನು ಕಲಿ' ಎಂಬ ಸೂತ್ರವನ್ನು ಪಾಲಿಸುವುದಾಗಿದೆ. ಈ ವಿಚಾರಗಳ ಆದರ್ಶದಲ್ಲಿ ಭಾಷಾ ಸಮಸ್ಯೆಯನ್ನು ಬಗೆಹರಿಸಿದರೆ ನಮ್ಮ ಬಹಳಷ್ಟು ಸಮಸ್ಯೆಗಳು-ಶಿಕ್ಷಣ ಸಮಸ್ಯೆ, ಆಡಳಿತ ಸಮಸ್ಯೆ, ಗಡಿಸಮಸ್ಯೆ ಇತ್ಯಾದಿ ಬಗೆಹರಿಯುತ್ತದೆ.

ಒಟ್ಟಾರೆ, ಸಾರ್ವಜನಿಕರಿಗೆ ಕನ್ನಡ ಪ್ರಜ್ಞೆ ಮೂಡಿದರೆ ನಮ್ಮ ಎಲ್ಲ ಸಮಸ್ಯೆಗಳು ತಾನಾಗಿಯೇ ಪರಿಹಾರವಾಗುತ್ತವೆ. ಈ ಪ್ರಜ್ಞೆಯ ಬಲದಿಂದ ಅವರು ಜಗತ್ತಿನ ಬೇರೆ ಭಾಷಿಕರೊಂದಿಗೆ ನಾವೂ ಜಾಗತಿಕವಾಗಿ ಬೆಳೆಯಲು, ಜಾಗತೀಕರಣ ತಡೆಯಲು ಸಾಧ್ಯವಾಗುತ್ತದೆ. ನಾವು 'ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲ' ಎಂಬ ಪ್ರಜ್ಞೆಯಿಂದ ಕನ್ನಡತ್ವವನ್ನೇ ಜಾಗತೀಕರಣಗೊಳಿಸುವುದಾಗಿದೆ. ಹೀಗೆ ನಾವು ಜಾಗತಿಕವಾದರೆ 'ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ' ಎಂಬ ಕವಿವಾಣಿ ಅರ್ಥವಡೆಯುತ್ತದೆ.

ಇದು ಕೇವಲ ಭಾಷಣದಿಂದ, ಬರೆಹದಿಂದ ಸಾಧ್ಯವಾಗುವುದಿಲ್ಲ ಇದು ಕ್ರಿಯಾಶೀಲತೆಯನ್ನು ಅಪೇಕ್ಷಿಸುತ್ತದೆ. ಇದಕ್ಕೆ ಅಲ್ಲಲ್ಲಿ ಕನ್ನಡ ಪ್ರಜ್ಞಾಪಡೆ ಅಗತ್ಯ.

ಆಕರ : ಮಾರ್ಗ ಸಂಪುಟ-೭

■■

೩೧

ವೀರಶೈವ ಪುಣ್ಯಪುರುಷ ಮಾಲೆ : ೧೦೦ - ಬಿಡುಗಡೆ

೧೯೮೭

ಪೂಜ್ಯ ಶ್ರೀ ಜಗದ್ಗುರುಗಳಿಗೆ ನಮಸ್ಕಾರ, ಮಹನೀಯರೇ - ಮಹಿಳೆಯರೇ

ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯಮಠದ ಇತ್ತೀಚಿನ ೧೨ ವರ್ಷಗಳ ಇತಿಹಾಸ ಅನೇಕ ಅಪೂರ್ವ ಅಧ್ಯಾಯಗಳನ್ನು ತೆರೆದಿದೆ. ಅವುಗಳಲ್ಲಿ ಒಂದು ಮಹತ್ವದ ಅಧ್ಯಾಯ "ವೀರಶೈವ ಅಧ್ಯಯನ ಸಂಸ್ಥೆ." ಈ ಸಂಸ್ಥೆಯ ಭಾಗವಾದ "ವೀರಶೈವ ಪುಣ್ಯಪುರುಷ ಸಾಹಿತ್ಯರತ್ನಮಾಲೆ"ಯ ನೂರು ಪುಸ್ತಕಗಳ ಪ್ರಕಟಣೆಯು ಈ ಶತಮಾನದ ವೀರಶೈವದ ಇತಿಹಾಸದಲ್ಲಿ ಒಂದು ದೊಡ್ಡ ಕೆಲಸವೆಂದು ಈಗಾಗಲೇ ವಿದ್ವಾಂಸರು ಸರಿಯಾಗಿಯೇ ಗುರುತಿಸಿದ್ದಾರೆ.

'ಸಿದ್ಧರಾಮದೇವರು' ಹೆಸರಿನಿಂದ ಕನ್ನಡ ಎಂ.ಎ. ಓದುವಾಗ ಶ್ರೀಗಳವರಿಗೂ ನನಗೂ ನೇರ ಪರಿಚಯವಿರಲಿಲ್ಲ. ಎಲ್ಲ ವಿದ್ಯಾರ್ಥಿಗಳಲ್ಲಿ ಇವರೂ ಒಬ್ಬರು. ಜಗದ್ಗುರು ಪೀಠವೇರಿದ ಕೆಲವು ದಿನಗಳ ಬಳಿಕ, ಅವರಿಂದ ಒಂದು ಅನಿರೀಕ್ಷಿತ ಪತ್ರಬಂದಿತು. "ನಾವು ಶ್ರೀಮಠದಿಂದ ಸಾಹಿತ್ಯ ಪ್ರಕಟಿಸಲು ಇಚ್ಛಿಸಿದ್ದೇನೆ. ಈ ಬಗ್ಗೆ ನಿಮ್ಮೊಂದಿಗೆ ಸಮಾಲೋಚಿಸುವುದು ಅಗತ್ಯವಿದೆ. ಅವಕಾಶ ಮಾಡಿಕೊಂಡು ಗದುಗಿಗೆ ಬರಲು ಸಾಧ್ಯವೇ?" ಎಂದು ಬರೆದಿದ್ದರು. ನನಗೆ ಮೊದಲಿನಿಂದಲೂ ಮಠದ ಬಗ್ಗೆ, ಮಠೀಯ ಕೆಲಸಗಳ ಬಗ್ಗೆ ಅಷ್ಟು ಉತ್ಸಾಹವಿರಲಿಲ್ಲ. ಕೆಲವು ಮಠಗಳು ವಿದ್ವಾಂಸರನ್ನು ನಡೆಸಿಕೊಳ್ಳುವುದನ್ನು ನೋಡಿದ್ದೆ; ಜೀವಿತದ ಕಾಲಾವಧಿಯಲ್ಲಿ ಪ್ರೊ. ಬಸವನಾಳರು ಅನುಭವಿಸಿದ ಕಥೆಯನ್ನು ಕೇಳಿದ್ದೆ; ಡಾ. ಹಳಕಟ್ಟಿಯವರಿಗಾದ ವ್ಯಥೆಯನ್ನು ಕಂಡಿದ್ದೆ. ಹೀಗಾಗಿ ಜಗದ್ಗುರುಗಳವರ ಪತ್ರಕ್ಕೆ ಉತ್ತರಿಸಲೇ ಇಲ್ಲ. ಅಷ್ಟರಲ್ಲಿ ಮತ್ತೊಂದು ನೆನಪಿನೋಲೆ ಬಂದಿತು. ಅನಿವಾರ್ಯವಾಗಿ ಗದುಗಿಗೆ ಹೋದೆ. ನನ್ನ ಅನಿಸಿಕೆ, ಅಂಜಿಕೆಗಳನ್ನು ನಿವೇದಿಸಿದೆ. ಆಗ ಅವರು "ಮಠೀಯ ವ್ಯಕ್ತಿಯಾಗಿ ಬಾಳಲು ನಾನು ಈ ಪೀಠವೇರಿಲ್ಲ; ಶರಣತತ್ವದ ಪ್ರತಿನಿಧಿಯಾಗಿ ಸಮಾಜಸೇವೆಗೆ ಇಳಿದಿದ್ದೇನೆ. ವೀರಶೈವ ತತ್ವ-ಸಾಹಿತ್ಯ ಕನ್ನಡ ಸಾಹಿತ್ಯೇತಿಹಾಸಗಳ ಒಂದು ಭಾಗವಾಗಿರುವುದರಿಂದ, ನೀವು ಮಾಡಬೇಕಾಗಿರುವ ಕೆಲಸ ಕನ್ನಡದ ಕೆಲಸವೇ ಆಗುತ್ತದೆ. ಕಂದಾಚಾರವನ್ನು ಪೋಷಿಸುವ ಸಾಹಿತ್ಯನಿರ್ಮಿತಿಗೆ ಇಲ್ಲಿ ಅವಕಾಶವೂ ಇಲ್ಲ" ಎಂದು ತಮ್ಮ ದೃಷ್ಟಿಕೋನವನ್ನು ಸ್ಪಷ್ಟಪಡಿಸಿದರು. ಈಗಾಗಲೇ ಅಡ್ಡಪಲ್ಲಕ್ಕಿ ಮೊದಲಾದ ಅನಿಷ್ಟಗಳನ್ನು ತ್ಯಜಿಸಿ ಪ್ರಗತಿಪರಸ್ವಾಮಿಗಳೆಂದು ಪ್ರಸಿದ್ಧರಾಗಿದ್ದುದೂ, ಇಂಥ ಮುಕ್ತವಿಚಾರ ಇಟ್ಟುಕೊಂಡುದೂ ನಾನು ಈ ಕೆಲಸವನ್ನು ಒಪ್ಪಿಕೊಳ್ಳುವಂತೆ ಮಾಡಿತು.

ಬಹಳಷ್ಟು ಮಠಗಳಿಗೆ ಪುಸ್ತಕ ಪ್ರಕಟಣೆ ಒಂದು 'ಪ್ರೊಫೆಶನ್' ಆಗಿದೆ; ಆದರೆ ಇಲ್ಲಿಯದು ಒಂದು 'ಪ್ರೊಜೆಕ್ಟ್' ಆಗಬೇಕು. ಶುದ್ಧಶೈಕ್ಷಣಿಕ ದೃಷ್ಟಿಯಿಂದ ಇಲ್ಲಿ ಕೆಲಸ ನಡೆಯಬೇಕು - ಎಂಬ ವಿಚಾರದಿಂದ 'ವೀರಶೈವ ಅಧ್ಯಯನ ಸಂಸ್ಥೆ' (Institute of Veershaiva Studies) ಹೆಸರಿನ ಸಂಸ್ಥೆಯನ್ನು ಅಸ್ತಿತ್ವಕ್ಕೆ ತರಲು ನಿರ್ಧರಿಸಲಾಯಿತು. ಆಗ ಜಗದ್ಗುರುಗಳು "ನೀವು ಈ ಸಂಸ್ಥೆಯ ನಿರ್ದೇಶಕರಾಗಬೇಕು, ಇಲ್ಲಿ ಪ್ರಕಟವಾಗುವ ಪುಸ್ತಕಗಳ ಪ್ರಧಾನ ಸಂಪಾದಕರಾಗಬೇಕು" ಎಂದು ನನಗೆ ಹೇಳಿದರು. "ಹೆಸರು ಕೆಲಸದ ವೈರಿ, ನೀವು ಈ ಕರಾರು ಹಾಕುವುದಾದರೆ ನನ್ನನ್ನು ಬಿಟ್ಟು ಬಿಡಿರಿ" ಎಂದು ನುಡಿದೆ. ಆಗ ಜಗದ್ಗುರುಗಳು "ನೀವು ಹೇಳುವುದು ನಿಜ; ಅದರ ಒಳಗೆ ಜಗದ್ಗುರುಗಳ ಹೆಸರೂ ಇರಕೂಡದು, ಆಶೀರ್ವಾಣಿಯೂ ಇರಕೂಡದು" ಎಂದು ನನಗಿಂತ ಒಂದು ಹೆಜ್ಜೆ ಮುಂದುಹೋಗಿ ನುಡಿದರು. ಈ ಪುಸ್ತಕಗಳು ಭಕ್ತರ 'ಗ್ರಂಥದಾನ' ದಿಂದ ಪ್ರಕಟವಾಗಬೇಕು; ಆದರೆ ಇಲ್ಲಿ ಅವರ ಭಾವಚಿತ್ರ-ಪರಿಚಯ ಇತ್ಯಾದಿ ಪ್ರದರ್ಶನೀಯ ವಿಷಯಗಳಿರಬಾರದು" ಎಂದು ನಿರ್ಧರಿಸಿದೆವು. ಹೀಗಾಗಿ, ಪ್ರಧಾನ ಸಂಪಾದಕರ ಹೆಸರಿಲ್ಲದ, ಜಗದ್ಗುರುಗಳ ಆಶೀರ್ವಾದವಿಲ್ಲದ, ಗ್ರಂಥದಾನಿಗಳ ಪರಿಚಯವಿಲ್ಲದ ಶುದ್ಧ ಶೈಕ್ಷಣಿಕ ಪುಸ್ತಕಗಳಿವು. ಆದುದರಿಂದ ಇವುಗಳನ್ನು ಮಾಡಿದವರು ನಿರ್ದೇಶಕರೂ ಅಲ್ಲ; ಜಗದ್ಗುರುಗಳೂ ಅಲ್ಲ, ಗ್ರಂಥದಾನಿಗಳೂ ಅಲ್ಲ. ನಾವೆಲ್ಲ ಒಂದು ನಿಮಿತ್ತ ಮಾತ್ರ. ದೇವರು ನಮ್ಮ ಮೂಲಕ ಈ ಕಾರ್ಯ ಮಾಡಿಸಿದ್ದಾನೆ, ಅಷ್ಟೇ.

ಈ ಚರ್ಚೆಯ ದಿನದಂದೇ ಬೇರೆ ಅನೇಕ ಯೋಜನೆಗಳ ಜೊತೆಗೆ "ವೀರಶೈವ ಪುಣ್ಯಪುರುಷ ಸಾಹಿತ್ಯರತ್ನಮಾಲೆ"ಯನ್ನೂ ಪ್ರಾರಂಭಿಸಲು ಯೋಚಿಸಲಾಯಿತು. ೧೦೦ ಜನ ಪುಣ್ಯಪುರುಷರ ಹೆಸರು, ೧೦೦ ಜನ ಲೇಖಕರ ಹೆಸರುಗಳ ಯಾದಿ ಸಿದ್ಧವಾಯಿತು. "ಇದು ಸುಮಾರು ೩ ಲಕ್ಷ ರೂಪಾಯಿಗಳ ಯೋಜನೆ. ಒಮ್ಮೆ ಪ್ರಾರಂಭಿಸಿದ ಬಳಿಕ ನಡುವೆ ನಿಲ್ಲಬಾರದು" ಇದು ನನ್ನ ಪ್ರಶ್ನೆ. "ಹಾಗೇನಾದರೂ ಆದರೆ ಈ ಮಠವನ್ನೇ ಮಾರೋಣ. ಮಠ ಹೋದರೆ ಮತ್ತೊಂದು ಮಠ ಕಟ್ಟಿಸಬಹುದು; ಈ ಮಹಾಪುರುಷರ ಚರಿತ್ರೆ ಹೋದರೆ ಮತ್ತೆ ಸಿಗುವುದಿಲ್ಲ" ಎಂಬುದು ಜಗದ್ಗುರುಗಳ ಉತ್ತರ. ೨೫ ವರ್ಷ ವಯಸ್ಸಿನ ತರುಣ ಸನ್ಯಾಸಿಯ ಈ ದಿಟ್ಟ ಉತ್ತರ ನನ್ನಲ್ಲಿ ಇನ್ನೂ ವಿಶ್ವಾಸ ಮೂಡಿಸಿತು.

ಸಾಮಾನ್ಯವಾಗಿ ತಿಂಗಳಿಗೆ ಒಂದರಂತೆ ಈ ಪುಸ್ತಕಗಳು ಪ್ರಕಟವಾಗಬೇಕೆಂಬ ಸಂಕಲ್ಪ ನಮ್ಮದು. ಆ ಪ್ರಕಾರ ೧೦ ವರ್ಷಗಳಲ್ಲಿ ೧೦೦ ಪುಸ್ತಕ ಹೊರ ತಂದಿದ್ದೇವೆ. ಹೀಗಾಗಿ ಕೈಗೆತ್ತಿಕೊಂಡ ಯೋಜನೆಯನ್ನು ಸರಿಯಾಗಿ ಮುಗಿಸಿದ ತೃಪ್ತಿ ನಮ್ಮದಾಗಿದೆ. ಯುಗಪುರುಷ ಡೆಪ್ಯೂಟಿ ಚೆನ್ನಬಸಪ್ಪನವರಿಂದ ಪ್ರಾರಂಭವಾಗಿ, ಇನ್ನೊಬ್ಬ ಯುಗಪುರುಷ ಶ್ರೀ ಮೃತ್ಯುಂಜಯ ಅಪ್ಪಗಳಿಗೆ ಈ ಮಾಲೆ ಶತಸಂಖ್ಯೆ ಮುಟ್ಟಿದುದು ಒಂದು ಯೋಗಾಯೋಗವಾಗಿದೆ; ಮೃತ್ಯುಂಜಯ ಅಪ್ಪಗಳ ಜನ್ಮ ಶತಮಾನೋತ್ಸವ ವರ್ಷದಲ್ಲಿ ನಿಶ್ಚಿತ ನೆಲೆ ಮುಟ್ಟಿರುವುದು ಒಂದು ಪವಾಡವೆನಿಸಿದೆ.

ಈ ೧೦೦ ಜನ ಪುಣ್ಯಪುರುಷರಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಿಗೆ ಸಂಬಂಧಿಸಿದವರಿದ್ದುದು, ಕರ್ನಾಟಕೇತರ ಪ್ರದೇಶದವರೂ ಇದ್ದುದು, ಜಯದೇವಿತಾಯಿ ಲಿಗಾಡೆ ಮೊದಲು ಮಾಡಿ ಕೆಲವು ಜನ ಸ್ತ್ರೀಯರೂ ಇದ್ದುದು ಇದರ ವೈಶಿಷ್ಟ್ಯ. ಇವರಲ್ಲಿ ಒಬ್ಬೊಬ್ಬರೂ ಒಂದು ದಿಗ್ಗಜ. ಡೆಪ್ಯೂಟಿ ಚೆನ್ನಬಸಪ್ಪನವರಂಥ ನಿಜವಾದ ಕನ್ನಡದ ಕೆಲಸಗಾರರು, ಸಿರಸಂಗಿ ಲಿಂಗರಾಜ, ವಾರದ ಮಲ್ಲಪ್ಪನವರಂಥ ದಾನಿಗಳು, ಫ. ಗು. ಹಳಕಟ್ಟಿ, ಕೆ. ಪಿ. ಪುಟ್ಟಣ್ಣಶೆಟ್ಟರು, ಅರಟಾಳ ರುದ್ರಗೌಡರಂಥ ಸಮಾಜಸೇವಕರು, ಡಿ. ಸಿ. ಪಾವಟೆ, ಸಿ. ಸಿ. ಹುಲಕೋಟಿಯವರಂಥ ಕುಲಪತಿಗಳು, ಸಿದ್ದಪ್ಪ ಕಂಬಳಿ, ಎಸ್.ಆರ್.ಕಂಠಿ, ಎಂ.ಪಿ. ಪಾಟೀಲ, ಅಣ್ಣಾರಾವ್ ಗಣಮುಖಿಯವರಂಥ ಮಂತ್ರಿಗಳು, ಮಧುರಚೆನ್ನರಂಥ ಕವಿಗಳು, ಹಳ್ಳಿಕೇರಿ ಗುದ್ಲೆಪ್ಪ, ಸುಗಂಧಿ ಮುರಿಗೆಪ್ಪನವರಂಥ ರಾಷ್ಟ್ರಕಾರಣಿಗಳು, ಗುಬ್ಬಿ ವೀರಣ್ಣ, ದಂಡಾವತಿಮಠರಂಥ ಕಲಾವಿದರು, ಬ್ಯಾರಿಸ್ಟರ್ ಸರದಾರ, ಜಸ್ಟೀಸ್

ಮಹಾದೇವಯ್ಯನವರಂಥ ಅಧಿಕಾರಿಗಳು, ಭೂಮರಡ್ಡಿ ಬಸಪ್ಪನವರಂಥ ಉದ್ಯೋಗಪತಿಗಳು, ಹರ್ಡೇಕರ ಮಂಜಪ್ಪನವರಂಥ ರಾಷ್ಟ್ರಧರ್ಮದ್ರಷ್ಟಾರರು, ಹಾನಗಲ್ಲ ಕುಮಾರ ಸ್ವಾಮಿಗಳು, ಮೃತ್ಯುಂಜಯ ಅಪ್ಪಗಳಂಥ ಗುರುವಿನ ಗುರುಗಳು - ಹೀಗೆ ವಿವಿಧ ಕ್ಷೇತ್ರಗಳ ೧೦೦ ಜನ ಮಹಾಪುರುಷರ ಜೀವನ ಕಥೆ ಇಲ್ಲಿದೆ.

ಲೇಖಕರಲ್ಲಿ ಕುಲಪತಿ ದೇ. ಜವರೇಗೌಡ, ಆರ್. ಸಿ. ಹಿರೇಮಠ, ಸಂಶೋಧಕ ಎಚ್. ದೇವೀರಪ್ಪ, ಕವಿ ಸಿದ್ಧಯ್ಯ ಪುರಾಣಿಕ, ವಿಮರ್ಶಕ ಸ. ಸ. ಮಾಳವಾಡ, ಧರ್ಮಗುರು ಜ.ಚ.ನಿ. ಪತ್ರಕರ್ತ ಪಾಟೀಲ ಪುಟ್ಟಪ್ಪ, ಗಮಕ ಕಲಾನಿಧಿ ಜೋಳದರಾಶಿ ದೊಡ್ಡನಗೌಡರಂಥ ಹಿರಿಯರು ಮೊದಲು ಮಾಡಿ, ಸದಾನಂದ ಕನವಳ್ಳಿ, ಬಿ. ವಿ. ಗುಂಜೆಟ್ಟಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ವೀರಣ್ಣ ರಾಜೂರರಂಥ ತರುಣರಿದ್ದಾರೆ. ಹೀಗೆ ಎಲ್ಲ ವಯಸ್ಸಿನ ವಿದ್ವಾಂಸರು ಈ ಮಾಲೆಗೆ ಗ್ರಂಥ ನೀಡಿದುದು ಒಂದು ವಿಶೇಷ. ವಿಜಾಪುರ ಜಿಲ್ಲೆಯ ಸಿಂಪಿಲಿಂಗಣ್ಣ, ಮೈಸೂರಿನ ಎಂ. ಜಿ. ನಂಜುಂಡಾರಾಧ್ಯ, ಭಾಲ್ಕಿಯ ಜಿ. ಬಿ. ವಿಸಾಜಿ, ರಾಯಚೂರಿನ ಶಾಂತರಸ, ಬೆಳಗಾವಿಯ ಜಿ. ಎಸ್. ಘಿವಾರಿ, ಗುಲಬರ್ಗಾದ ಎಂ. ಜಿ. ಬಿರಾದಾರ, ಧಾರವಾಡದ ಎಂ. ಜಿ. ಹಂದ್ರಾಳ, ಬಳ್ಳಾರಿಯ ಶಿ. ವ. ಚೆನ್ನಬಸವೇಶ್ವರ, ಚಿತ್ರದುರ್ಗದ ಅಜ್ಜಂಪುರ ಶೆಟ್ಟರು, ಶಿವಮೊಗ್ಗೆಯ ಸಿ. ಎಸ್. ಶಿವಕುಮಾರಸ್ವಾಮಿ, ಬೆಂಗಳೂರಿನ ಸಾ. ಸಿ. ಮರಳಯ್ಯ - ಹೀಗೆ ಸಾಮಾನ್ಯವಾಗಿ ಕರ್ನಾಟಕದ ಎಲ್ಲ ಜಿಲ್ಲೆಯ ಲೇಖಕರು ಈ ಕೆಲಸಕ್ಕೆ ಕೈಗೂಡಿಸಿದ್ದಾರೆ. ದೇ. ಜವರೇಗೌಡ, ಎನ್ಕೆ, ಸೂರ್ಯನಾಥ ಕಾಮತರಂಥ ವೀರಶೈವೇತರರೂ, ಶಾಂತಾದೇವಿ ಮಾಳವಾಡರಂಥ ಮಹಿಳೆಯರೂ ಈ ಲೇಖಕರ ಬಳಗದಲ್ಲಿ ಸಮಾವೇಶಗೊಂಡಿದ್ದಾರೆ.

ಗ್ರಂಥದಾನಿಗಳಲ್ಲಿ ಶ್ರೀಮಂತರಿದ್ದಾರೆ, ಬಡವರಿದ್ದಾರೆ; ಸ್ತ್ರೀಯರಿದ್ದಾರೆ, ಪುರುಷರಿದ್ದಾರೆ; ವೀರಶೈವರಿದ್ದಾರೆ, ವೀರಶೈವೇತರರಿದ್ದಾರೆ. ಇದೀಗ ಬಿಡುಗಡೆಯಾಗಿರುವ ೧೦೦ನೆಯ ಪುಸ್ತಕದ 'ಗ್ರಂಥದಾನ'ವನ್ನು ಪೂರೈಸಿದವರು ಬೆಂಗಳೂರಿನ ಐ.ಬಿ. ಎಚ್. ಪ್ರಕಾಶನದವರು. ಬೆಳೆದು ನಿಂತ ರಾಷ್ಟ್ರಪ್ರಸಿದ್ಧಿಯ ಪ್ರಕಾಶನ ಸಂಸ್ಥೆ, ಬೆಳೆಯುತ್ತಲಿರುವ ನಮ್ಮ ಈ ಪ್ರಕಾಶನ ಸಂಸ್ಥೆಯ ಕೆಲಸವನ್ನು ಮೆಚ್ಚಿಕೊಂಡುದರ ದ್ಯೋತಕವಿದು.

ಈ ಪುಸ್ತಕಗಳ ಪ್ರಕಾಶನದಲ್ಲಿ ಒಂದು ಕ್ರಮವಿದೆ: ಲೇಖಕರಿಗೆ ಪತ್ರ ಬರೆಯುವುದು, ಒಪ್ಪಿಸುವುದು, ನೆನಪಿಸುವುದು, ಕ್ಷೇತ್ರಕಾರ್ಯ ಮಾಡಿಸುವುದು, ಅವಶ್ಯವೆನಿಸಿದರೆ ಮಾಹಿತಿ ಒದಗಿಸುವುದು, ತರಿಸಿಕೊಂಡ ಹಸ್ತಪ್ರತಿಯನ್ನು ಪರಿಷ್ಕರಿಸುವುದು, ಸಂದೇಹ ಬಂದಲ್ಲಿ ಹತ್ತೂಕಡೆ ವಿಚಾರಿಸಿ ಸತ್ಯವನ್ನು ದಾಖಲಿಸುವುದು, ಅಂತಿಮ ಪ್ರತಿಯನ್ನು ಕೃತಿನಾಯಕರ ವಾರಸುದಾರರ ಮುಂದೆ ಓದಿ, ಒಪ್ಪಿಗೆ ಪಡೆದು ಅಚ್ಚಿಗೆ ಕಳಿಸುವುದು. ಇದರಿಂದಾಗಿ ನೂರು ಗ್ರಂಥಗಳ ಗುಣಮಟ್ಟದಲ್ಲಿ ಒಂದು ಔನ್ನತ್ಯವನ್ನು ಕಾಯ್ದುಕೊಂಡುಬರಲು, ಲೇಖಕರು, ಪರಿಶೀಲಕರು, ಮುದ್ರಕರು - ಇವರೆಲ್ಲರ ಸಂಯುಕ್ತ ಪ್ರಯತ್ನದಿಂದಾಗಿ ಇವುಗಳಲ್ಲಿ ಅಕಾಡೆಮಿಕ್ ಸ್ಟ್ಯಾಂಡರ್ಡ ಉಳಿಸಿಕೊಳ್ಳಲು ಸಾಧ್ಯವಾಗಿದೆ.

ಇದು ವೀರಶೈವ ಅಧ್ಯಯನ ಸಂಸ್ಥೆಯ 'ಜನಪ್ರಿಯ' ಸಾಹಿತ್ಯಮಾಲೆ. ಮೊದಮೊದಲು ಒಂದು ಪುಸ್ತಕದ ೧೦೦೦ ಪ್ರತಿಗಳನ್ನು ಮುದ್ರಿಸಲಾಗುತ್ತಿತ್ತು. ಆಮೇಲೆ ೨೦೦೦ ಪ್ರತಿ, ಈಗ ೩೦೦೦ ಪ್ರತಿ ಪ್ರಕಟಿಸುತ್ತಲಿದ್ದೇವೆ. ಕೆಲವನ್ನು ೫೦೦೦ ಪ್ರತಿ ಮುದ್ರಿಸಿದ್ದೇವೆ. ಈ ನೂರು ಕೃತಿಗಳಲ್ಲಿ ಕೆಲವು ದ್ವಿತೀಯ ಆವೃತ್ತಿ ಕಂಡಿದೆ, ಕೆಲವು ತೃತೀಯ ಆವೃತ್ತಿಯನ್ನೂ ಕಂಡಿವೆ. ೧೦೦ ಪುಸ್ತಕಗಳು, ಸರಾಸರಿ ಪ್ರತಿಯೊಂದರಲ್ಲಿ ೧೦೦ ಪುಟ ಹಿಡಿದು ಲೆಕ್ಕ ಹಾಕಿದರೆ ಹತ್ತು ಸಾವಿರ ಪುಟಗಳ ಸಾಹಿತ್ಯ ಹೊರಬಂದಿದೆ. ಪ್ರತಿಯೊಂದಕ್ಕೆ ೨ ರೂ. ಬೆಲೆ ಹಿಡಿದರೆ ೨೦೦ ರೂ.ಗಳಿಗೆ ೧೦ ಸಾವಿರ ಪುಟಗಳ ಸಾಹಿತ್ಯ ನೀಡಿದ ಧನ್ಯತೆ ನಮ್ಮದಾಗಿದೆ.

ಪ್ರತಿಯೊಂದು ಪುಸ್ತಕಕ್ಕೆ ಅರ್ಧ ಹಣ ಗ್ರಂಥದಾನವಾಗಿ ಬರುತ್ತದೆ. ಮಿಕ್ಕರ್ಧ ಹಣವನ್ನು ಕಷ್ಟಪಟ್ಟು ಶ್ರೀಮಠ ಜೋಡಿಸುತ್ತದೆ. ಗ್ರಂಥಗಳಲ್ಲಿ ಕಾಲುಭಾಗ ಆಶೀರ್ವಾದರೂಪದಲ್ಲಿ ಖರ್ಚಾಗುತ್ತದೆ. ಮುಕ್ಕಾಲುಭಾಗ

ಮಾರಾಟವಾಗುತ್ತವೆ. ಹೀಗಾಗಿ ಪ್ರಕಟನೆಯಷ್ಟೇ ಇದರ ಪ್ರಸರಣ ಕಾರ್ಯವೂ ತೃಪ್ತಿದಾಯಕವಾಗಿದೆ. ಲಾಭವಿಲ್ಲ-ಹಾನಿಯಿಲ್ಲಯೆಂಬಂತೆ ಈ ಕಾರ್ಯವನ್ನು ಧರ್ಮಪ್ರಸಾದ ಏಕೈಕ ಉದ್ದೇಶದಿಂದ ನಡೆಸಲಾಗುತ್ತಿದೆ.

ವೀರಶೈವ ಪ್ರಾಚೀನಸಾಹಿತ್ಯ ರತ್ನಮಾಲೆ, ವೀರಶೈವ ನೂತನಸಾಹಿತ್ಯ ರತ್ನಮಾಲೆ, ವೀರಶೈವ ಅನುವಾದ ಸಾಹಿತ್ಯ ರತ್ನಮಾಲೆ, ವೀರಶೈವ ಅಪ್ರಕಟಿತ ಗ್ರಂಥಗಳ ಪ್ರಕಟನ ಯೋಜನೆ - ಇವೆಲ್ಲವುಗಳ ಮಧ್ಯೆ ಇಷ್ಟೆಲ್ಲ ಕೆಲಸ ಹೇಗೆ ಮಾಡಿದಿರಿ? ಎಂದು ಅನೇಕರು ನಮಗೆ ಕೇಳಿದ್ದಾರೆ. ವೀರಶೈವ ಅಧ್ಯಯನಸಂಸ್ಥೆಯಲ್ಲಿ ಸಹಾಯಕ ಸಂಶೋಧಕರು ಎಷ್ಟು ಜನ? ಪ್ರೂಫ್ ರೀಡರ್‌ರರು ಎಷ್ಟು ಜನ? ಎಂದು ಕೇಳುತ್ತಾರೆ. ಯಾರೂ ಇಲ್ಲ; ಪ್ರಸಂಗ ಬಿದ್ದರೆ ಜಗದ್ಗುರುಗಳು ಪ್ರೂಫ್ ನೋಡುತ್ತಾರೆ. ಸ್ವತಂತ್ರ ಪ್ರೆಸ್ ಇದೆಯೇ? ಎಂದೂ ಕೇಳುತ್ತಾರೆ. ಅವರಿಗೇನು ಗೊತ್ತು? ನಮ್ಮಲ್ಲಿ ಒಂದು ಕನ್ನಡ ಟೈಪರೈಟರ್ ಕೂಡ ಇಲ್ಲವೆಂಬುದು. ನಮಗೆ ಇವಾವೂ ಇಲ್ಲ, ಮಾಡುವ ಮನಸ್ಸಿದೆ; ಮನಸ್ಸಿದ್ದಲ್ಲಿ ಮಾರ್ಗವಿದೆ, "ಭಾವ ಶುದ್ಧವಿದ್ದರೆ ಭಾಗ್ಯಕ್ಕೇನು ಕಡಿಮೆ" ಎಂಬ ಆದರ್ಶ ನಮ್ಮ ಕಣ್ಣ ಮುಂದಿದೆ. ಅದು ನಮ್ಮಿಂದ ಈ ಕೆಲಸ ಮಾಡಿಸಿದೆ.

ಇದು ಕೇವಲ ಪುಸ್ತಕ ಸಂಖ್ಯೆ ಬೆಳೆಸುವ ತೋರಿಕೆಯ ಕೆಲಸವಲ್ಲ. ಗತಿಸಿ ಹೋದ ವೀರಶೈವ ಪುಣ್ಯಪುರುಷರ, ಗಣ್ಯಘಟನೆಗಳ ಇತಿಹಾಸ ಕಟ್ಟುವ ಕೆಲಸ. ಇವು 'ಸತ್ತವರ ಕಥೆ'ಗಳಲ್ಲ; ಶಾಶ್ವತರ ಕಥೆಗಳು. ಧರ್ಮದ ಹೆಸರಿನಲ್ಲಿ ಕಲ್ಪಿತ ಕಥೆ, ಪವಾಡ ಕತೆಗಳನ್ನು ಪ್ರಕಟಿಸಿ ಜನಮನದಲ್ಲಿ ಮತಮೌಢ್ಯತೆಯನ್ನು ಬಿತ್ತುವ, ಮತಾವೇಶವನ್ನು ಪ್ರಚೋದಿಸುವ ಕೃತಿಗಳಲ್ಲ. ತ್ಯಾಗಿಗಳಾಗಿ, ಕಾಯಕ ಯೋಗಿಗಳಾಗಿ, ಸಾಹಸಶೀಲರಾಗಿ ಬಾಳಿದವರ, ಹಾಗೆ ಬಾಳಲು ತರುಣರಿಗೆ ಸ್ಫೂರ್ತಿ ನೀಡಿದವರ ಆತ್ಮಚರಿತ್ರೆಗಳಿವು. ಇವರ ಬದುಕಿನ ಒಂದೊಂದು ಘಟನೆಗಳು ನಮಗೆ ಜೀವನಪಾಠಗಳಾಗಿ ಪರಿಣಮಿಸುತ್ತವೆ. ವೈಯಕ್ತಿಕವಾಗಿ ಹೇಳುವುದಾದರೆ ಹಸ್ತಪ್ರತಿ ಓದುವಲ್ಲಿ, ತಿದ್ದುವಲ್ಲಿ, ಪ್ರಕಟಿಸುವಲ್ಲಿ ಇವುಗಳಿಂದ ನಾನಂತೂ ತುಂಬ ಪ್ರಭಾವಿತನಾಗಿದ್ದೇನೆ. "ಸಾತ್ವಿಕರು ದುರ್ಬಲರಲ್ಲ", "ತಾಳ್ಮೆಗಿಂತ ಮಿಗಿಲಾದ ತಪಸ್ಸು ಬೇರೊಂದಿಲ್ಲ", "ಭೋಗಸುಖಕ್ಕಿಂತ ತ್ಯಾಗಸುಖ ದೊಡ್ಡದು", "ಮಂದಮತಿ ನಿಂದಿಸಲು ತಾಳಿಕೊಂಡವ ಜಾಣ" ಮೊದಲಾದ ಇವರ ಜೀವನಮೌಲ್ಯಗಳು ನನ್ನ ಮೇಲೆ ಆಳವಾದ ಪರಿಣಾಮ ಬೀರಿವೆ.

ಸಾರ್ವಜನಿಕ ಹಣ ಅಪವ್ಯಯದ ಆರೋಪಹೊರಿಸಿ, ಹಳಕಟ್ಟಿಯವರನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸಿದ ದುಷ್ಟಘಟನೆ ವೈಯಕ್ತಿಕವಾಗಿ ನನಗೆ ನೈತಿಕಬಲ ತಂದುಕೊಟ್ಟಿದೆ. ಗಿಲಗಂಚಿಯವರು ವಿದ್ಯಾರ್ಥಿಯೊಬ್ಬನಿಗೆ ಪರೀಕ್ಷಾ ಫೀ ತುಂಬಲು ಕೊರಳಲ್ಲಿಯ ಬಂಗಾರದ ಲಿಂಗಕರಡಿಗೆಯನ್ನು ಬಿಚ್ಚಿಕೊಟ್ಟ ಘಟನೆ ತ್ಯಾಗದ ಪಾಠವನ್ನು ಕಲಿಸಿದೆ. ತಂದೆಯ ಶವವನ್ನು ಮನೆಯಲ್ಲಿ ಬಿಟ್ಟು, ಮೊದಲೇ ಯೋಜಿಸಿದಂತೆ ಗವ್ಹರ್ನರ್‌ರನ್ನು ಬರಮಾಡಿಕೊಂಡು, ಹಾಸ್ಟೆಲ್ ಕಟ್ಟಡದ ಫೌಂಡೇಶನ್ ಸ್ಟೋನ್ ಸ್ಥಾಪಿಸುವ ಕಾರ್ಯಕ್ರಮ ಪೂರೈಸಿದ ಡಾ. ನಂದೀಮಠರ ಕರ್ತವ್ಯಪ್ರಜ್ಞೆ ನನ್ನನ್ನು ಸದಾ ಎಚ್ಚರಿಸುತ್ತಲಿದೆ. ಹೆಂಡತಿಯ ಮೈಮೇಲಿನ ಆಭರಣಗಳನ್ನು ಒತ್ತೆಯಿಟ್ಟು ವೀರಶೈವ ಬಡಮಕ್ಕಳಿಗಾಗಿ 'ಪ್ರಸಾದನಿಲಯ' ನಡೆಸಿದ ಡೆಪ್ಯುಟಿ ಚೆನ್ನಬಸಪ್ಪನವರ ಕಷ್ಟ ನನ್ನ ಕಣ್ಣು ತೆರೆಸಿದೆ. ಅಂಬಲಿ ಚೆನ್ನಬಸಪ್ಪನವರ ಹೆಂಡತಿ, ತಂಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಬಂಧಿಸಲ್ಪಟ್ಟು, ಜೇಲಿನಲ್ಲಿ ಚೀಲಗಟ್ಟಲೆ ಜೋಳ ಬೀಸಿದ, ಬಿಸಿಲಿನಲ್ಲಿ ನಿಂತು ಕೈದಿಗಳ ಮಲಿನ ಬಟ್ಟೆ ತೊಳೆದ ಘಟನೆಗಳು ನನ್ನ ಕಣ್ಣಲ್ಲಿ ನೀರು ತರಿಸಿವೆ. ಸೊಲ್ಲಾಪುರದ ಧನಶೆಟ್ಟಿ ಮಲ್ಲಪ್ಪನವರು, ಮೈಲಾರದ ಮಹಾದೇವಪ್ಪನವರು ರಾಷ್ಟ್ರಕ್ಕಾಗಿ ಹುತಾತ್ಮರಾದ ಘಟನೆಗಳಿಂದ ನಾನು ನಡುಗಿ ಹೋಗಿದ್ದೇನೆ. ಸೊಲ್ಲಾಪುರದ ವಾರದ ಮಲ್ಲಪ್ಪನವರ, ಬಳ್ಳಾರಿಯ ವಾಯ್. ಮಹಾಬಳೇಶ್ವರಪ್ಪನವರ ಆಗರ್ಭ ಶ್ರೀಮಂತ ಮನೆತನಗಳು ಅನುಭವಿಸಿದ ಆರ್ಥಿಕ ಮುಗ್ಗಟ್ಟು, ಅನಾಮಧೇಯ ಪತ್ರಗಳಿಂದ ಹರ್ಡೇಕರ ಮಂಜಪ್ಪವರು ಅನುಭವಿಸಿದ ಅವಮಾನ, ಸಿರಸಂಗಿ

ಲಿಂಗರಾಜರು ಸಹಿಸಿದ ಕಷ್ಟ, ಎಂ. ಬಸವಯ್ಯನವರು ಪಟ್ಟ ತೊಂದರೆ ನನಗೆ ಮಹಾಪಾಠಗಳಾಗಿ ಪರಿಣಮಿಸಿವೆ. ಹೀಗಾಗಿ ನನ್ನಿಂದ ಈ ಮಾಲೆಗೆ ಲಾಭವಾಗುವುದಕ್ಕಿಂತ ಈ ಮಾಲೆಯಿಂದ ನನಗೇ ಹೆಚ್ಚಿನ ಲಾಭವಾಗಿದೆ. ಇಂಥ ಭಾಗ್ಯವನ್ನು ನನ್ನದನ್ನಾಗಿಸಿದ ಶ್ರೀ. ಜಗದ್ಗುರುಗಳಿಗೆ ಕೃತಜ್ಞನಾಗಿದ್ದೇನೆ.

ಈ ೧೦ ವರ್ಷದ ಅವಧಿಯಲ್ಲಿ ಜಗದ್ಗುರುಗಳಾಗಲೀ, ಅವರ ಪರಿವಾರದವರಾಗಲೀ ನನ್ನನ್ನು ತುಂಬ ಗೌರವದಿಂದ, ವಿಶ್ವಾಸದಿಂದ ಕಂಡಿದ್ದಾರೆ. ಒಂದು ಬಗೆಯ ಕಾನೂನು - ನಿಯಮಗಳ ಬಂಧನದಲ್ಲಿ ನೌಕರಿಮಾಡುವ ನನಗೆ ಇಲ್ಲಿ ಸಿಕ್ಕ ಸ್ವಾತಂತ್ರ್ಯ ಹೆಚ್ಚು ಕೆಲಸ ಮಾಡಲು ಅವಕಾಶವೊದಗಿಸಿದೆ. ಒಂದು ವಿಷಯ: ಈ ೧೦೦ನೆಯ ಪುಸ್ತಕ ಹೊರಬರುತ್ತಿರುವಾಗ ನಾನು ೫೦ನೆಯ ವರ್ಷದೊಳಗೆ ಕಾಲಿಡುತ್ತಿದ್ದೇನೆ. ನನ್ನ ವಯಸ್ಸಿನ ಒಂದು ಘಟ್ಟ ಮುಗಿಯುತ್ತಲಿರುವ ಸಂದರ್ಭದಲ್ಲಿ ನನ್ನ ಸಮಾಜಕ್ಕೆ ಒಂದು ಮುಖ್ಯ ಸೇವೆ ಸಲ್ಲಿಸಿದ ಸಂತೃಪ್ತಿ ನನ್ನದಾಗಿದೆ.

ಹೀಗೆ, ನೂರು ಜನರ ಚರಿತ್ರೆಗಳು ಪ್ರಕಟವಾಗುವಲ್ಲಿ ವೀರಶೈವಕ್ಕೆ ಸಂಬಂಧಪಟ್ಟ ಹತ್ತಾರು ಹೊಸ ಕ್ಷೇತ್ರಗಳು ನಮ್ಮ ಮುಂದೆ ತಟ್ಟನೇ ಬಿಚ್ಚಿಕೊಂಡು ನಿಂತವು. ಹೀಗಾಗಿ ಈ ಯೋಜನೆಯ ವಿಸ್ತೃತ ರೂಪವೆಂಬಂತೆ, ಮುಂದುವರಿಕೆಯೆಂಬಂತೆ ಈ ಸಂಸ್ಥೆ ಈಗ ೧೨ ಸಂಪುಟಗಳಲ್ಲಿ "ವೀರಶೈವ ವಿಶ್ವಕೋಶ"ವನ್ನು ಹೊರತರುವ ಮಹಾಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದರಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳ ೨೪ ಜನ ವಿದ್ವಾಂಸರು ನೇರವಾಗಿ ತೊಡಗಿದ್ದು, ನೂರಾರು ಲೇಖಕರಿಗೆ ಲೇಖನ ಪೂರೈಸಲು, ಮಾರ್ಗದರ್ಶನ ನೀಡಲು ಅವಕಾಶವಿದೆ. ಜಗತ್ತಿನ ಸುಪ್ರಸಿದ್ಧ ವಿಶ್ವಕೋಶಗಳನ್ನು ಆದರ್ಶವಾಗಿಟ್ಟುಕೊಂಡು ಈ ಕೆಲಸಕ್ಕೆ ನಾವು ರೂಪಕೊಡುತ್ತಲಿದ್ದೇವೆ. ೬ ತಿಂಗಳಲ್ಲಿ ಈ ಯೋಜನೆಯ ತಳಪಾಯದ ಎಲ್ಲ ಕೆಲಸ ಮುಗಿದಿದೆ. ಈ ಬಸವಜಯಂತಿಗೆ ಬರೆವಣಿಗೆಯ ಕೆಲಸ ಪ್ರಾರಂಭವಾಗಲಿದೆ. ಈ ಕೆಲಸಕ್ಕೆ ವಿದ್ವಾಂಸರ, ಸಾರ್ವಜನಿಕರ ಸಲಹೆ-ಸಹಾಯ ವಿಪುಲ ಪ್ರಮಾಣದಲ್ಲಿ ಒದಗಿಬಂದುದು ನಮ್ಮ ಸುದೈವವಾಗಿದೆ.

ಕೊನೆಯದಾಗಿ "ವೀರಶೈವ ಪುಣ್ಯಪುರುಷ ಸಾಹಿತ್ಯರತ್ನಮಾಲೆ" ಯೋಜನೆಯ ಯಶಸ್ಸಿಗೆ ನೆರವಾದ ಎಲ್ಲರಿಗೂ ನಾವು ಋಣಿಯಾಗಿದ್ದೇವೆ. ಪುಸ್ತಕ ಬರೆದುಕೊಟ್ಟ ನೂರು ಜನ ಲೇಖಕರಿಗೆ, ಅವರಿಗೆ ಮಾಹಿತಿ ಒದಗಿಸಿದ ಸಾವಿರಾರು ಜನ ಮಹನೀಯರಿಗೆ, ಗ್ರಂಥದಾನಿಗಳಿಗೆ, ಪ್ರತ್ಯಕ್ಷವಾಗಿ - ಪರೋಕ್ಷವಾಗಿ ಪ್ರೇರಣೆ - ಸ್ಫೂರ್ತಿನೀಡಿದ ಅಭಿಮಾನಿಗಳಿಗೆ, ಅನೇಕ ಅಚ್ಚುಕೂಟದವರಿಗೆ, ಅನೇಕಾನೇಕ ಚಿತ್ರಕಲಾವಿದರಿಗೆ, ಓದುಗರ ವಿಶಾಲಬಳಗಕ್ಕೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಒಂದು ಮಾತು: ಈ ಕೃತಿಗಳನ್ನು ಬರೆದುಕೊಟ್ಟವರು ದೊಡ್ಡವರು, ಕೃತಿಗಳಿಗೆ ವಸ್ತುವಾದವರು ಇನ್ನೂ ದೊಡ್ಡವರು. ಆದರೆ ಈ ಕೃತಿ ಶತ ಬೆಳಕಿಗೆ ಬರಲು ದುಡಿದವರೆಲ್ಲ ಜಗದ್ಗುರುಗಳು ಮೊದಲು ಮಾಡಿ ಎಲ್ಲರೂ ವಯಸ್ಸಿನಲ್ಲಿ ಸಣ್ಣವರು. ಮಠದ ಹುಡುಗರಾದ ಪಟ್ಟಣಶೆಟ್ಟಿ, ದೇಸಾಯಿ, ಚೆನ್ನಯ್ಯ ಮಿತ್ರರಾದ ಡಾ. ಬಿ. ಆರ್. ಹಿರೇಮಠ, ರವಿ ಆಕಳವಾಡಿ-ಈ ಸಣ್ಣವರೆಲ್ಲ ಯಂತ್ರದಂತೆ ದುಡಿದು, ಈ ಯೋಜನೆಯ ಯಶಸ್ಸಿಗೆ ಕಾರಣರಾಗಿದ್ದಾರೆ. ಇವರೆಲ್ಲರಿಗೂ ತಮಗೂ ವಂದನೆಗಳು.

ಗದುಗಿನ ಶ್ರೀ ತೋಂಟದಾರ್ಯ ಮಠದ 'ವೀರಶೈವ ಪುಣ್ಯಪುರುಷ ಮಾಲೆ'ಯ ೧೦೦ನೆಯ ಪುಸ್ತಕ (ಮೃತ್ಯುಂಜಯ ಅಪ್ಪಗಳು) ಬಿಡುಗಡೆ ಸಮಾರಂಭದ ಭಾಷಣ. (ಧಾರವಾಡ, ೧೯೮೭)

ಆಕರ : ಮಾರ್ಗ ಸಂಪುಟ–೬

೩೨

ಸಮಗ್ರ ವಚನ ಸಂಪುಟ - ಪ್ರಥಮ ಆವೃತ್ತಿ : ಬಿಡುಗಡೆ

೧೯೯೩

ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪ ಮೊಯಿಲಿ ಅವರೇ,
ಕನ್ನಡ - ಸಂಸ್ಕೃತಿ ಸಚಿವರಾದ ಶ್ರೀ ಎಚ್. ವಿಶ್ವನಾಥ ಅವರೇ,
ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬರಗೂರ ರಾಮಚಂದ್ರಪ್ಪ ಅವರೇ,
ಮಾನ್ಯ ಸಚಿವರೇ, ಶಾಸಕರೇ, ಮಹನೀಯರೇ-ಮಹಿಳೆಯರೇ,

"ಎಲ್ಲ ಶರಣರ ಎಲ್ಲ ವಚನಗಳು" ಇಂದು ಏಕಕಾಲಕ್ಕೆ ಬೆಳಕಿಗೆ ಬರುತ್ತಲಿರುವುದು, ವಚನ ಸಾಹಿತ್ಯದ ಪ್ರಕಟನೆಯ ಇತಿಹಾಸದಲ್ಲಿ ಒಂದು ಚಾರಿತ್ರಿಕ ಘಟನೆಯಾಗಿರುವಂತೆ, ಹತ್ತು ಸಾವಿರ ಪುಟವ್ಯಾಪ್ತಿಯ ಹದಿನೈದು ಸಂಪುಟಗಳು ಏಕಕಾಲಕ್ಕೆ ಬಿಡುಗಡೆಯಾಗುತ್ತಲಿರುವುದು, ನಮ್ಮ ರಾಜ್ಯಸರಕಾರದ ಇತಿಹಾಸದಲ್ಲಿಯೂ ಒಂದು ಅಪೂರ್ವ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ; ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ. ಇಂಥ ಮಹತ್ವಾಕಾಂಕ್ಷೆ ಯೋಜನೆಗೆ ಅವಕಾಶ ಕಲ್ಪಿಸಿಕೊಡುವ ಮೂಲಕ. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುತ್ತಲಿರುವ, ಕರ್ನಾಟಕ ಪ್ರಜಾಸತ್ತಾ ಸರಕಾರಕ್ಕೆ ಪ್ರಾರಂಭದಲ್ಲಿಯೇ, ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ವಚನಗಳ ಸೃಷ್ಟಿಯುಗ :

'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಇದು ಶರಣಸಿದ್ಧಾಂತದ ಮಹಾವಾಕ್ಯ. ಇಲ್ಲಿ ಸ್ಥಾವರವೆಂದರೆ ಸ್ಥಗಿತ ಸಂಸ್ಕೃತಿ, ಜಂಗಮವೆಂದರೆ ಚಲನಶೀಲ ಸಂಸ್ಕೃತಿ. ವ್ಯಕ್ತಿಮಟ್ಟದಲ್ಲಿ ಚಲನಶೀಲಸಂಸ್ಕೃತಿಯನ್ನು ಒಪ್ಪಿಕೊಂಡ ಪ್ರಾಚೀನ ಭಾರತೀಯರು, ಸಮಾಜ ಮಟ್ಟದಲ್ಲಿ ಸ್ಥಗಿತ ಸಂಸ್ಕೃತಿಯನ್ನು ಸ್ಥಾಪಿಸುತ್ತ ಬಂದರು. ಇದರಿಂದಾಗಿ ಇತಿಹಾಸದುದ್ದಕ್ಕೂ ಅವರು ವೈಯಕ್ತಿಕವಾಗಿ ಸಬಲರೂ, ಸಾಮಾಜಿಕವಾಗಿ ದುರ್ಬಲರೂ ಆದರು. ವಚನಕಾರರು ಮಾತ್ರ ಗುರುಸೇವೆ, ಲಿಂಗಪೂಜೆಗಳಿಂದ ವ್ಯಕ್ತಿಸಂಸ್ಕೃತಿಯೂ, ಜಂಗಮದಾಸೋಹದಿಂದ ಸಮಾಜಸಂಸ್ಕೃತಿಯೂ ಚಲನಶೀಲಗೊಳ್ಳುವಂತೆ ಮಾಡಿ, ಅವೆರಡೂ ಸಶಕ್ತವಾಗುವ ದಾರಿ ತೋರಿದರು. ಏಕಕಾಲಕ್ಕೆ ವ್ಯಕ್ತಿ ಮತ್ತು ಸಮಾಜವೆಂಬ ಎರಡೂ ನೆಲೆಗಳಲ್ಲಿ ಸ್ಥಗಿತ ವ್ಯವಸ್ಥೆಯನ್ನು ಕೆಡಹುವ, ಚಲನಶೀಲವ್ಯವಸ್ಥೆಯನ್ನು ಕಟ್ಟುವ ಚಳುವಳಿಯನ್ನು ಕೈಕೊಂಡರು. ಹೀಗಾಗಿ ಇದು ನಾಶ-ನಿರ್ಮಾಣವೆಂಬ ಅಪೂರ್ವ ಚಟುವಟಿಕೆಗಳ ಅವಧಿಯಾಗಿದೆ: ಸ್ಥಾವರ ವಿಘಟನೆ - ಜಂಗಮ ಸಂಘಟನೆಗಳ ಚಳುವಳಿ ಸಂದರ್ಭವಾಗಿದೆ.

ಈ ಚಳುವಳಿಯ ಉಪನಿಷ್ಪತ್ತಿಯಾಗಿದೆ, ವಚನಸಾಹಿತ್ಯ. ವಚನವೆಂದರೆ ಗದ್ಯವೆಂದೋ, ಲಯಾತ್ಮಕ ಗದ್ಯವೆಂದೋ ಅರ್ಥವಲ್ಲ. ಸರ್ವಜ್ಞನ ತ್ರಿಪದಿಗಳು ಪದ್ಯವಾಗಿದ್ದರೂ ಅವುಗಳನ್ನು ವಚನವೆಂದೇ ಕರೆಯುತ್ತೇವೆ. ಮುಪ್ಪಿನ ಷಡಕ್ಷರಿ ಮೊದಲಾದವರ ಹಾಡುಗಳನ್ನು ಹಸ್ತಪ್ರತಿಗಳಲ್ಲಿ ವಚನವೆಂದೇ ಕರೆದಿದ್ದಾರೆ. ಇದನ್ನು ನೋಡಿದರೆ, ವಚನವೆನ್ನುವುದು ಗದ್ಯ ಅಥವಾ ಪದ್ಯ ಪ್ರಕಾರವನ್ನು ಸೂಚಿಸದೆ, ಮಹಾತ್ಮರ ಯಾವುದೇ ಪ್ರಕಾರದ ವಾಣಿಯನ್ನು ಸೂಚಿಸುವುದೆಂದು ಸ್ಪಷ್ಟವಾಗುತ್ತದೆ. ಹೀಗಾಗಿ ಇನ್ನು ಮುಂದೆ ಕವಿಗಳ ಸೌಂದರ್ಯಪ್ರಜ್ಞಾನಿಷ್ಠ ಮಾತುಗಳೇ 'ರಚನೆ', ಮಹಾತ್ಮರ ಆತ್ಮಸಾಕ್ಷಿನಿಷ್ಠ ಮಾತುಗಳೇ 'ವಚನ'ವೆಂದು ವ್ಯಾಖ್ಯಾನಿಸಬೇಕಾಗುತ್ತದೆ.

ಸಾಹಿತ್ಯದ ಎರಡು ಮುಖ್ಯ ಮೈಗಳೆಂದರೆ, ವಸ್ತು ಮತ್ತು ಭಾಷೆ. ಬಸವಪೂರ್ವಯುಗದಲ್ಲಿ ರಾಜರನ್ನು ವಸ್ತುವಾಗಿಸಿಕೊಳ್ಳುತ್ತ, ತನ್ಮೂಲಕ ಸ್ಥಗಿತ ಮೌಲ್ಯಗಳನ್ನು ಪ್ರಸಾರ ಮಾಡುವ ಉಪಕರಣವಾಗಿದ್ದಿತು, ಸಾಹಿತ್ಯ. ಆದರೆ ಸಾಹಿತ್ಯವನ್ನು ಚಲನಶೀಲ ಮೌಲ್ಯಗಳ ಪ್ರಸಾರಮಾಧ್ಯಮವಾಗಿಸ ಹೊರಟ ಶರಣರು, ವ್ಯಕ್ತಿ ಮತ್ತು ಸಮಾಜಗಳನ್ನು ವಸ್ತುವನ್ನಾಗಿಸಿಕೊಂಡರು. ಇದರಿಂದ ವರ್ಣಭೇದ, ವರ್ಗಭೇದ, ಲಿಂಗಭೇದವೆಂಬ 'ಭೇದಸಂಸ್ಕೃತಿ' ನಾಶವಾಗಿ, ವ್ಯಕ್ತಿ-ಸಮಾಜಗಳು ಶೋಷಣೆಯಿಂದ ಮುಕ್ತವಾದವು.

ಬಸವಪೂರ್ವಯುಗದ ಕವಿಗಳಿಗೆ ಮಾತನ್ನು ದೇಶಿನಿಷ್ಠವಾಗಿ ಬಳಸಬೇಕೋ, ಮಾರ್ಗನಿಷ್ಠವಾಗಿ ಬಳಸಬೇಕೋ, ಅವೆರಡನ್ನೂ ಸಮನ್ವಯಗೊಳಿಸಿ ಬಳಸಬೇಕೋ ಎಂಬುದು ಮುಖ್ಯವಾಗಿದ್ದಿತು. ಶರಣರಿಗೆ ಇದು ಮುಖ್ಯವಲ್ಲ. ಸ್ಥಗಿತಮೌಲ್ಯಗಳ ಪ್ರಸಾರಕ್ಕೂ ವ್ಯಕ್ತಿಪ್ರಶಸ್ತಿಗೂ ಉಪಕರಣವಾಗುವ ಮೂಲಕ ಮಾತು ಮಲಿನವಾಗುತ್ತಲಿದ್ದುದನ್ನು ಅವರು ಪ್ರಶ್ನಿಸಿದರು. ಈಗ ಲಿಂಗವಾಗದ ಅಂಗ ಭವಿ, ಮುಟ್ಟಲಾಗದು; ಲಿಂಗವಾಗದ ಮಾತು ಸೂತಕ, ಕೇಳಲಾಗದು - ಎಂದು ಹೇಳಿ, ಮಾತಿಗೆ ಅಂಟಿದ್ದ ಸೂತಕವನ್ನು ನಿವಾರಿಸಲು ಹೋರಾಡಿದರು. ಇದರಿಂದ ಮಾತು, ವ್ಯಕ್ತಿ-ಸಮಾಜಗಳ ಶುದ್ಧೀಕರಣದ ಉಪಕರಣವಾಯಿತು. 'ವಿಪ್ರ ಮೊದಲು, ಅಂತ್ಯಜ ಕಡೆಯಾಗಿ' ಸ್ತ್ರೀ-ಪುರುಷರೆಲ್ಲ ಈ ಉಪಕರಣವನ್ನು ಕೈಗೆತ್ತಿಕೊಳ್ಳುತ್ತಲೇ, ಸಾಹಿತ್ಯ ಕುಶಲಕಲೆಯ ದಾರಿಯಲ್ಲಿಯೇ ಉಳಿಯದೆ, ಚಳುವಳಿಯ ದಾರಿಗೂ ಇಳಿಯಿತು. ಹೀಗೆ ಭವಿಯಾಗಿದ್ದ ಭಾಷೆ - ಸಾಹಿತ್ಯಗಳು ಭಕ್ತವಾದವು. ಅಂದರೆ ಪದಾರ್ಥವಾಗಿದ್ದುವು ಪ್ರಸಾದವಾದುವು. ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ಸ್ಥಗಿತವಾಗಿದ್ದ ಅವು, ಚಲನಶೀಲವಾದುವು. ಇದರ ಫಲವಾಗಿ, ಯಜಮಾನಪರ ಸಾಹಿತ್ಯಕ್ಕೆ ಬದಲು ಜನಪರಸಾಹಿತ್ಯ ಸೃಷ್ಟಿಯಾಗಿ, ಕನ್ನಡದಲ್ಲಿ ಒಂದು ಹೊಸ ಯುಗ, ಕಣ್ಣು ತೆರೆಯಿತು.

ವಚನಗಳ ಸಂಯೋಜನಯುಗ :

ಬಿಜ್ಜಳನ ರಾಜಸತ್ತಾಸಂಸ್ಕೃತಿ, ವೈದಿಕರ ಅಗ್ರಹಾರಸಂಸ್ಕೃತಿ, ಶೈವರ ದೇವಾಲಯಸಂಸ್ಕೃತಿಗಳನ್ನು ನಿರಾಕರಿಸಿದ ಶರಣರನ್ನು ಈ ಮೂರೂ 'ಭೇದಸಂಸ್ಕೃತಿ'ಗಳು ಸೇರಿಕೊಂಡು, ಉಗ್ರವಾಗಿ ದಂಡಿಸಿದವು. ಬಹುಶಃ ಅವರ ಸಾಹಿತ್ಯವೂ ಅಂದಿನ ಸರಕಾರದಿಂದ ಬಹಿಷ್ಕಾರಕ್ಕೆ ಗುರಿಯಾಯಿತು-ಗಾಂಧೀಯುಗದಲ್ಲಿ ರಾಷ್ಟ್ರೀಯಸಾಹಿತ್ಯ ಬಹಿಷ್ಕಾರಕ್ಕೆ ಗುರಿಯಾದಂತೆ. ಕಲ್ಯಾಣದ ಕೊನೆಯ ದಿನಗಳಲ್ಲಿ ಹುಟ್ಟಿರಬಹುದಾದ ಕಾಲಜ್ಞಾನ ಸಾಹಿತ್ಯದಲ್ಲಿ, "ವಚನಗಳನ್ನು ಮುಚ್ಚಿಡಿರಿ. ಮುಚ್ಚಿಡಿರಿ"ಯೆಂಬ ಮಾತುಗಳು, ಪದೇ ಪದೇ ಕೇಳಿಬರುವುದರಿಂದ, ಹೀಗೆ ಊಹಿಸಬಹುದಾಗಿದೆ.

ಈ ರೀತಿ ಬಹಿಷ್ಕಾರಕ್ಕೆ ಗುರಿಯಾದ ವಚನವೆಂಬ ವಿಚಾರಸಾಹಿತ್ಯವನ್ನು ಮುಚ್ಚಿಡಲು ಹೊರಟ ಶರಣರಿಗೆ, ಸುರಕ್ಷಿತ ನೆಲೆಯಾಗಿ ಕಂಡುದು, ಹಂಪೆ. ಭವಿಷ್ಯತ್ತಿನಲ್ಲಿ ಶರಣರು ಹುಟ್ಟಿ, ಹಂಪೆಯಲ್ಲಿಯ 'ವಾಲಿಭಂಡಾರ'ವನ್ನು ಹೊರತೆಗೆಯುವರೆಂಬ ಉಲ್ಲೇಖ, ಕಾಲಜ್ಞಾನ ವಚನಗಳಲ್ಲಿ ಕೇಳಿ ಬರುತ್ತದೆ.

೧೫ನೆಯ ಶತಮಾನದ ಸುಮಾರಿಗೆ ಹಂಪೆಯಲ್ಲಿ ವೀರಶೈವರು ತಲೆಯೆತ್ತಿ, ಮುಚ್ಚಿಡಲಾಗಿದ್ದ ವಚನಸಾಹಿತ್ಯದ ಓಲೆಭಾಂಡಾರವನ್ನು ಬಳಸಿಕೊಂಡು, ಸಂಗ್ರಹ, ಸಂಕಲನ, ಸಂಪಾದನ ರೂಪದ "ಸಂಯೋಜನಸಾಹಿತ್ಯ"ವೆಂಬ, ಹೊಸ ಬಗೆಯ ಸಾಹಿತ್ಯ ಪ್ರಕಾರವನ್ನು ರೂಪಿಸುವ ದೊಡ್ಡ ಆಂದೋಲನವನ್ನೇ ಕೈಗೆತ್ತಿಕೊಂಡರು. ಬಳಿಕ ೧೬ನೆಯ ಶತಮಾನದಲ್ಲಿ, ಎಡೆಯೂರಿನ ತೋಂಟದ ಸಿದ್ಧಲಿಂಗಯತಿಗಳ ನೇತೃತ್ವದಲ್ಲಿ, ಈ ಆಂದೋಲನ ಇನ್ನೂ ವ್ಯಾಪಕವಾಗಿ ಬೆಳೆಯಿತು. ಈ ಎರಡೂ ಸಂದರ್ಭಗಳು ಕಾರಣವಾಗಿ, ಏಕೋತ್ತರ ಶತಸ್ಥಲ, ಶೂನ್ಯಸಂಪಾದನೆಗಳಂಥ ಸುಮಾರು ೧೫೦ ವಚನಸಂಕಲನಗಳು, ಮರುಹುಟ್ಟು ಪಡೆದವು. ೧೨ನೆಯ ಶತಮಾನದ ಈ ವಚನಗಳು ವೀರಶೈವರ ಸೃಜನಪ್ರತಿಭೆಯ ಫಲವೆನಿಸಿದರೆ, ೧೫-೧೬ನೆಯ ಶತಮಾನದ ಈ ಸಂಕಲನಗಳು, ಅವರ ಸಂಯೋಜನಪ್ರತಿಭೆಯ ಫಲವೆನಿಸಿದವು.

ವಚನಗಳು ಆಚಾರ್ಯರ ಸಾಹಿತ್ಯವಲ್ಲ. ಅನುಭಾವಿಗಳ ಸಾಹಿತ್ಯ. ಆಚಾರ್ಯರು ಧರ್ಮತತ್ವಗಳನ್ನು ಹೇಳಿ ಅವುಗಳನ್ನು ತಾವೇ ಕೈಯಾರೆ ಬರೆಯುತ್ತಾರೆ; ಅನುಭಾವಿಗಳು ಕೇವಲ ಹೇಳಿ ಹೋಗುತ್ತಾರೆ. ಮುಂದಿನವರು ಅವುಗಳನ್ನು ಸಂಯೋಜಿಸುತ್ತಾರೆ. ಕ್ರಿಸ್ತನ ವಾಣಿಯಾದ ಬೈಬಲ್, ಮಹಮ್ಮದನ ವಾಣಿಯಾದ ಕುರಾನ್‌ಗಳಂತೆ ಶರಣರ ವಾಣಿಯಾದ ವಚನಗಳು ಮುಂದಿನವರಿಂದ ಸಂಗ್ರಹಿಸಿ, ಸಂಯೋಜಿಸಲ್ಪಟ್ಟ ಕಾರಣ, ಇದು ಆಚಾರ್ಯ ಸಾಹಿತ್ಯವೆನಿಸದೆ, ಪ್ರವಾದಿ ಸಾಹಿತ್ಯವೆನಿಸಿದೆ. ಈ ಸಂಯೋಜನ ಅವಧಿಯಲ್ಲಿ ತೋಂಟದ ಸಿದ್ಧಲಿಂಗಯತಿ, ಘನಲಿಂಗದೇವ, ಸ್ವತಂತ್ರ ಸಿದ್ಧಲಿಂಗೇಶ್ವರ, ಷಣ್ಮುಖ ಶಿವಯೋಗಿ ಮೊದಲಾದವರು, ವಚನ ಸೃಷ್ಟಿಕಾರ್ಯ ಮಾಡಿದ್ದರೂ ವಚನಸಂಯೋಜನಕಾರ್ಯವೇ ಇಲ್ಲಿ ಪ್ರಧಾನವಾಗಿದೆ.

ಹೀಗೆ ೧೨ನೆಯ ಶತಮಾನದಿಂದ ೧೯ನೆಯ ಶತಮಾನದ ವರೆಗೆ, ಸೃಜನ ಮತ್ತು ಸಂಯೋಜನ ದಾರಿಗಳಲ್ಲಿ ಸಾಗಿಬಂದ ೮೦೦ ವರ್ಷಗಳ ಸಮಗ್ರ ವಚನಸಾಹಿತ್ಯವನ್ನು, ವಚನ ಪರಿಭಾಷಾಕೋಶವೂ ಸೇರಿದಂತೆ, ಹದಿನೈದು ಸಂಪುಟಗಳಲ್ಲಿ ಸಂಸ್ಕರಣಗೊಳಿಸಿದ ಪ್ರಥಮಪ್ರಯತ್ನವಾಗಿದೆ, ಈ ಯೋಜನೆ.

ವಚನಗಳ ಸಂಸ್ಕರಣಯುಗ :

೧೨ನೆಯ ಶತಮಾನದಿಂದ 'ಸೃಜನ' ರೂಪದಲ್ಲಿ, ೧೫ನೆಯ ಶತಮಾನದಿಂದ ಮುಂದೆ 'ಸಂಯೋಜನ' ರೂಪದಲ್ಲಿ ವ್ಯಕ್ತವಾದ ವಚನಸಾಹಿತ್ಯ, ೧೯ನೆಯ ಶತಮಾನದಲ್ಲಿ 'ಸಂಸ್ಕರಣ' ರೂಪದಿಂದ ಪ್ರಕಟವಾಗತೊಡಗಿತು. ಆದರೆ ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನೆಗೆ ಮೊದಲು ಕೈ ಹಾಕಿದ ಕ್ರೈಸ್ತ ಪಾದ್ರಿಗಳು, ನಮ್ಮ ಪುರಾಣಗಳನ್ನು, ಕೀರ್ತನೆಗಳನ್ನು ಪ್ರಕಟಿಸಿದರೇ ಹೊರತು, ಅವರ ಗಮನಕ್ಕೆ ಬಂದಿದ್ದರೂ, 'ವಚನಸಾಹಿತ್ಯ'ವನ್ನು ತಪ್ಪಿಯೂ ಪ್ರಕಟಿಸಲಿಲ್ಲವೆಂಬುದು ಆಶ್ಚರ್ಯದ ಸಂಗತಿಯಾಗಿದೆ. ಈ ಪ್ರಶ್ನೆಗೆ ಡಾ. ಫ. ಗು. ಹಳಕಟ್ಟಿಯವರಗೆ ಸಂಬಂಧಿಸಿದ ಒಂದು ಘಟನೆಯಲ್ಲಿ ಉತ್ತರವನ್ನು ಕಾಣಬಹುದಾಗಿದೆ. ಡಾ. ಹಳಕಟ್ಟಿ ಅವರು ತಮ್ಮ ಮಹಾಕೃತಿಯಾದ 'ವಚನಶಾಸ್ತ್ರಸಾರ'ವನ್ನು ಮುದ್ರಿಸಿಕೊಡಲು, ಮಂಗಳೂರಿನ ಬಾಸೆಲ್ ಮಿಶನ್ ಪ್ರೆಸ್ಸಿನವರಿಗೆ ವಿನಂತಿಸಿಕೊಂಡಿದ್ದರು. ಪ್ರೆಸ್ಸಿನಿಂದ ಒಪ್ಪಿಗೆ ಬಂದಿತು. ಹಳಕಟ್ಟಿ ಅವರು ೫೦೦ ರೂಪಾಯಿ ಮುಂಗಡ ಹಣದೊಂದಿಗೆ, ಹಸ್ತಪ್ರತಿಯನ್ನೂ ಕಳಿಸಿಕೊಟ್ಟರು. ಕೆಲವು ತಿಂಗಳು ಕಳೆದ ಬಳಿಕ ಆ ಪ್ರೆಸ್ಸಿನವರು ಹಣ ಮತ್ತು ಹಸ್ತಪ್ರತಿಗಳನ್ನು ಮರಳಿ ಕಳಿಸುತ್ತ, "ಜನಪರ ತತ್ವಗಳನ್ನೊಳಗೊಂಡ ಈ ಕೃತಿಯನ್ನು ಪ್ರಕಟಿಸಿದರೆ, ನಮ್ಮ ಧರ್ಮಪ್ರಸಾರಕ್ಕೆ ಅಡ್ಡಿಯುಂಟಾಗುವುದರಿಂದ, ಇದನ್ನು ಪ್ರಕಟಿಸಲು ಸಾಧ್ಯವಾಗುವುದಿಲ್ಲ" ಎಂದು ಬರೆದರು. ಇದನ್ನು ನೋಡಿದರೆ, ಕ್ರೈಸ್ತಪಾದ್ರಿಗಳು ವಚನಸಾಹಿತ್ಯವನ್ನು ಏಕೆ ಪ್ರಕಟಿಸಲಿಲ್ಲವೆಂಬುದರ ಕಾರಣ ಸ್ಪಷ್ಟವಾಗುತ್ತದೆ. ಆದುದರಿಂದ, ದೇಶೀ ವಿದ್ವಾಂಸರೇ ವಚನಸಾಹಿತ್ಯ ಪ್ರಕಟನೆಯನ್ನು ಪ್ರಾರಂಭಿಸಬೇಕಾಯಿತು.

ಅದೇನೇ ಇರಲಿ, ವಚನಸಾಹಿತ್ಯವು 'ಅಪ್ರಮಾಣಕೂಡಲಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ 'ಶಿಖಾರತ್ನಪ್ರಕಾಶನವು' ಹೆಸರಿನ ಕೃತಿಯ ಮೂಲಕ, ೧೮೮೩ರಲ್ಲಿ ಪ್ರಥಮ ಸಲ

ಪ್ರಕಟವಾಯಿತು. ಮುಂದೆ ೧೯೫೮ರಲ್ಲಿ ಬಸವಣ್ಣನವರ ಷಟಸ್ಥಲ ವಚನಕೃತಿ ಮೊದಲ ಬಾರಿಗೆ ಪ್ರಕಟವಾಯಿತು. ಇಲ್ಲಿಂದ ೧೯೫೮ಕ್ಕೆ ವಚನಸಾಹಿತ್ಯ ಪ್ರಕಟನೆಗೆ ನೂರುವರ್ಷ ತುಂಬುವ ಸಂದರ್ಭದಲ್ಲಿ ನಾವು ಈ ಯೋಜನೆಯನ್ನು ಕೈಗೆತ್ತಿಕೊಂಡುದು, ಒಂದು ಯೋಗಾಯೋಗವಾಗಿದೆ. ಒಂದರ್ಥದಲ್ಲಿ, ಇದು ಬಸವಣ್ಣನವರ ಷಟ್‌ಸ್ಥಲ ವಚನಕೃತಿ ಪ್ರಕಟನೆಯ ಶತಮಾನೋತ್ಸವದ ಸ್ಮರಣೆಯಾಗಿದೆ.

ಹೀಗೆ ಕಳೆದ ಶತಮಾನದಲ್ಲಿ ಪ್ರಾರಂಭವಾದ ವಚನಪ್ರಕಟನೆಯ ಚಟುವಟಿಕೆ, ವಿಜಾಪುರದ ಶಿವಾನುಭವ ಗ್ರಂಥಮಾಲೆಯಂಥ ವೈಯಕ್ತಿಕ ಗ್ರಂಥಮಾಲೆಗಳಿಂದ, ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳಿಂದ, ಗದುಗಿನ ತೋಂಟದಾರ್ಯಮಠದಂಥ ಧಾರ್ಮಿಕ ಸಂಸ್ಥೆಗಳಿಂದ, ಶಿ. ಶಿ. ಬಸವನಾಳ - ಎಲ್. ಬಸವರಾಜು ಅವರಂಥ ವಿದ್ವಾಂಸ ವ್ಯಕ್ತಿಗಳಿಂದ ಮುನ್ನಡೆದುದರ ಫಲವಾಗಿ, ಬಹುಪಾಲು ವಚನಗಳು ಬೆಳಕಿಗೆ ಬರಲು ೧೦೦ ವರ್ಷ ಹಿಡಿದುದು, ಆ ಸಾಹಿತ್ಯದ ಪ್ರಮಾಣಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ಈ ನೂರು ವರ್ಷಗಳ ವಚನಸಾಹಿತ್ಯದ ಪ್ರಕಟನೆಯ ಇತಿಹಾಸದಲ್ಲಿ, ಯೋಜನಾಬದ್ಧ ಮತ್ತು ಸಾಂಘಿಕ ಪ್ರಯತ್ನಗಳೂ ಸಂಭವಿಸಿ

೧. ವಿಜಾಪುರ ಶಿವಾನುಭವ ಸಂಸ್ಥೆಯ ಘಟ್ಟ

೨. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಘಟ್ಟ

೩. ಗದುಗಿನ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆಯ ಘಟ್ಟ

ಹೀಗೆ ಮೂರು ಘಟ್ಟಗಳು ತಲೆದೋರಿವೆ. ಮೊದಲಿನ ಎರಡು ಘಟ್ಟಗಳನ್ನು ಕ್ರಮವಾಗಿ ಡಾ. ಫ. ಗು. ಹಳಕಟ್ಟಿ, ಡಾ. ಆರ್. ಸಿ. ಹಿರೇಮಠ ಅವರು ರೂಪಿಸಿದ್ದಾರೆ. ಮೂರನೆಯ ಘಟ್ಟ ನನ್ನ ನಿರ್ದೇಶನದಲ್ಲಿ ಮುನ್ನಡೆದಿದೆ. ಈ ಎಲ್ಲ ಪ್ರಯತ್ನಗಳಿಂದಾಗಿ, ಬಹಳಷ್ಟು ವಚನಗಳು ಬೆಳಕಿಗೆ ಬಂದಿದ್ದರೂ ಅವು ಅಲ್ಲಿಷ್ಟು-ಇಲ್ಲಿಷ್ಟು ಹಂಚಿಹೋಗಿದ್ದವು, ಪುನರುಕ್ತವಾಗಿದ್ದವು, ಒಂದಿಷ್ಟು ಹಸ್ತಪ್ರತಿಗಳಲ್ಲಿ ಉಳಿದುಕೊಂಡಿದ್ದವು. ಹೀಗಾಗಿ ಒಬ್ಬ ಶರಣನ ವಚನರಾಶಿಯನ್ನು ನೋಡಬೇಕೆಂದರೆ, ಹತ್ತಾರು ಪ್ರಕಟಿತ ಪುಸ್ತಕಗಳನ್ನೂ ಅಪ್ರಕಟಿತ ಹಸ್ತಪ್ರತಿಗಳನ್ನೂ ತಿರುವಿ ಹಾಕುವ, ತೊಂದರೆ ಅನುಭವಿಸಬೇಕಾಗುತ್ತಿದ್ದಿತು. ಇದನ್ನು ತಪ್ಪಿಸುವ ಸಲುವಾಗಿ, ಸರಕಾರದ ಮೂಲಕ ಈ ಯೋಜನೆಯನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮೊದಲಿನ ಹಿರಿಯ ಸಂಪಾದಕರಿಗೆ ಗೌರವಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತ, ಕಿರಿಯರಾದ ನಾವು ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ.

ಪ್ರಸ್ತುತ ಯೋಜನೆ:

ಮೇಲೆ ಹೇಳಿದ, ಮೂರು ಘಟ್ಟಗಳಲ್ಲಿ ಪ್ರಕಟವಾದ ವಚನರಾಶಿಯನ್ನು ಒಗ್ಗೂಡಿಸುವ ಜೊತೆಗೆ, ಅಪ್ರಕಟಿತ ವಚನಗಳನ್ನು ಸಮಗ್ರವಾಗಿ ಸಂಗ್ರಹಿಸಿರುವ, ಆಮೇಲೆ ಆ ಮಹಾರಾಶಿಯನ್ನು ಪರಿಷ್ಕರಿಸಿ - ವ್ಯವಸ್ಥಿತವಾಗಿ ವರ್ಗೀಕರಿಸಿ - ಪ್ರಕಟಿಸಿರುವ ದೊಡ್ಡ ಯೋಜನೆಯಿದು. ಆಹ್ವಾನರೂಪದ ಈ ಕೆಲಸವನ್ನು ಪೂರೈಸುವ ದೃಷ್ಟಿಯಿಂದ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಮುಖ್ಯಸ್ಥನಾಗಿದ್ದ ನಾನು, ೧೯೮೫ರಲ್ಲಿ ೧೦ ಸಂಪುಟಗಳ ಈ ಯೋಜನೆಯನ್ನು ಕರ್ನಾಟಕ ಸರಕಾರಕ್ಕೆ ಕಳಿಸಿದೆ. ಮೂರು ವರ್ಷ ಈ ಬಗ್ಗೆ ಮೌನತಾಳಿದ ಸರಕಾರ, ೧೯೮೮ರಲ್ಲಿ ಅದನ್ನು ಮಂಜೂರು ಮಾಡಿತು. ಆದರೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕೊಡುವ ಬದಲು, ಅದನ್ನು ತಾನೇ ಕೈಗೆತ್ತಿಕೊಳ್ಳುವುದಾಗಿ ತಿಳಿಸಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ ಅವರು ಸದಸ್ಯರಾಗಿರುವ ಒಂದು ಸಮಿತಿಯನ್ನು ನನ್ನ ಸಂಪಾದಕತ್ವದಲ್ಲಿ ರಚಿಸಿತು. ಈ ಯೋಜನೆಯನ್ನು ಮಂಜೂರು ಮಾಡಿದ, ಶ್ರೀ ರಾಮಕೃಷ್ಣ ಹೆಗಡೆ ಅವರ

ಸರಕಾರವನ್ನೂ, ಅಂದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಕನ್ನಡ ಭಾಷೆ-ಸಾಹಿತ್ಯ-ಸಂಸ್ಕೃತಿಗಳ ಅಪಾರ ಅಭಿಮಾನಿಗಳಾದ ಶ್ರೀ ಎಂ. ಪಿ. ಪ್ರಕಾಶ ಅವರನ್ನೂ ಈ ಸಂದರ್ಭದಲ್ಲಿ ನೆನೆಯುವುದು ನನ್ನ ಆದ್ಯ ಕರ್ತವ್ಯವಾಗಿದೆ.

೧೯೮೮ ಜೂನ್ ೭ರಂದು ಈ ಯೋಜನೆಯ ಮೊದಲ ಸಭೆ ಸೇರಿ, ಕಾರ್ಯವ್ಯವಸ್ಥೆಯ ರೂಪರೇಷೆಯನ್ನೂ, ಎದುರಾಗಬಹುದಾದ ಸಂಪಾದನ ಸಮಸ್ಯೆಗಳನ್ನೂ, ಅವುಗಳಿಗೆ ಪರಿಹಾರೋಪಾಯಗಳನ್ನೂ ಸಮಾಲೋಚಿಸಿ, ಒಂದು ನಿರ್ಣಯಕ್ಕೆ ಬರಲಾಯಿತು. ಮೇಲೆ ಹೇಳಿದ ಸದಸ್ಯರಲ್ಲಿ ಡಾ. ಎಂ. ಎಂ. ಕಲಬುರ್ಗಿ, ಡಾ. ಎಸ್. ವಿದ್ಯಾಶಂಕರ ಅವರಲ್ಲದೆ, ಡಾ. ಬಿ. ವಿ. ಮಲ್ಲಾಪುರ, ಡಾ. ವಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ - ಹೀಗೆ ಆರು ಜನರು ಸಂಪಾದಕರಾಗಿ ದುಡಿಯುವಲ್ಲಿ, ಹೊಸ ಹೊಸ ವಚನಕಾರರೂ ವಚನಗಳೂ ಬೆಳಕಿಗೆ ಬರತೊಡಗಿ, ೧೦ ಸಂಪುಟಗಳಿಗೆ ಬದಲು ೧೪ ಸಂಪುಟ, ಕೊನೆಯ ವಚನ ಪರಿಭಾಷಾಕೋಶವೂ ಸೇರಿದಂತೆ ೧೫ ಸಂಪುಟಗಳು ಬೆಳೆದುನಿಂತವು. ವಚನ ಪರಿಭಾಷಾಕೋಶವನ್ನು ಹೊರತುಪಡಿಸಿ, ಬಸವಯುಗಕ್ಕೆ ಸಂಬಂಧಿಸಿದ ಒಂಬತ್ತು ಸಂಪುಟ, ಬಸವೋತ್ತರಯುಗಕ್ಕೆ ಸಂಬಂಧಿಸಿದ ಐದು ಸಂಪುಟಗಳಲ್ಲಿ ಅಡಕವಾದ ವಚನಕಾರರ ಮತ್ತು ವಚನಗಳ ಸಂಖ್ಯೆ ಹೀಗಿದೆ:

ಬಸವ ಯುಗ

೧.	**ಬಸವೇಶ್ವರ ವಚನಸಂಪುಟ . . . .**	೧೪೨೪
೨.	**ಅಲ್ಲಮಪ್ರಭು ವಚನಸಂಪುಟ . . . .**	೧೬೪೫
೩.	**ಚೆನ್ನಬಸವೇಶ್ವರ ವಚನಸಂಪುಟ . . . .**	೧೭೯೨
೪.	**ಸಿದ್ಧರಾಮೇಶ್ವರ ವಚನಸಂಪುಟ . . . .**	೧೬೭೯
೫.	**ಶಿವಶರಣೆಯರ ವಚನಸಂಪುಟ (೩೩ ಜನ). . . .**	೧೧೦೬

೬. ಸಂಕೀರ್ಣ ವಚನಸಂಪುಟ-೧ ವಚನಕಾರರು-೨೪. ವಚನಸಂಖ್ಯೆ-೧೭೪೮

೧.	ಅಂಗಸೋಂಕಿನ ಲಿಂಗತಂದೆ.......	೧೧
೨.	ಅಂಬಿಗರ ಚೌಡಯ್ಯ........	೨೭೯
೩.	ಅಗ್ಘವಣಿಯ ಹಂಪಯ್ಯ	೪
೪.	ಅಗ್ಘವಣಿಯ ಹೊನ್ನಯ್ಯ	೪
೫.	ಅಜಗಣ್ಣತಂದೆ	೧೦
೬.	ಅನಾಮಿಕ ನಾಚಯ್ಯ	೫
೭.	ಅಪ್ಪಿದೇವಯ್ಯ	೧
೮.	ಅಮರಗುಂಡದ ಮಲ್ಲಿಕಾರ್ಜುನ	೨
೯.	ಅಮುಗಿದೇವಯ್ಯ	೩೦
೧೦.	ಅರಿವಿನ ಮಾರಿತಂದೆ	೩೦೯
೧೧.	ಅವರಸರದ ರೇಕಣ್ಣ	೧೦೪
೧೨.	ಆದಯ್ಯ	೪೦೩
೧೩.	ಆನಂದಯ್ಯ	೨
೧೪.	ಆಯ್ದಕ್ಕಿ ಮಾರಯ್ಯ	೩೨

೧೫. ಉಗ್ಗಡಿಸುವ ಗಬ್ಬಿದೇವಯ್ಯ ೧೦
೧೬. ಉಪ್ಪರಗುಡಿಯಸೋಮಿದೇವಯ್ಯ ೧೧
೧೭. ಉರಿಲಿಂಗದೇವ ೪೮
೧೮. ಉರಿಲಿಂಗಪೆದ್ದಿ ೩೬೬
೧೯. ಉಳಿಯುಮೇಶ್ವರ ಚಿಕ್ಕಣ್ಣ ೧೨
೨೦. ಎಚ್ಚರಿಕೆಯ ಕಾಯಕದ ಮುಕ್ತಿನಾಥ೧೧
೨೧. ಎಲೆಗಾರ ಕಾಮಣ್ಣ ೧
೨೨. ಏಕಾಂತ ರಾಮಿತಂದೆ ೭
೨೩. ಏಲೇಶ್ವರ ಕೇತಯ್ಯ ೭೪
೨೪. ಒಕ್ಕಲಿಗ ಮುದ್ದಣ್ಣ ೧೨

೭. ಸಂಕೀರ್ಣ ವಚನ ಸಂಪುಟ-೨. ವಚನಕಾರರು- ೩೬. ವಚನ ಸಂಖ್ಯೆ-೧೩೪೧

೨೫. ಕಂಬದ ಮಾರಿತಂದೆ ೧೧
೨೬. ಕನ್ನಡಿಕಾಯಕದ ಅಮ್ಮಿದೇವ ೧೦
೨೭. ಕನ್ನದ ಮಾರಿತಂದೆ ೩
೨೮. ಕರುಳಕೇತಯ್ಯ ೮
೨೯. ಕಲಕೇತಯ್ಯ ೧೧
೩೦. ಕಾಮಾಟದ ಭೀಮಣ್ಣ ೪
೩೧. ಕಿನ್ನರಯ್ಯ ೧೮
೩೨. ಕೀಲಾರದ ಭೀಮಣ್ಣ ೧೦
೩೩. ಕೂಗಿನ ಮಾರಯ್ಯ ೧೧
೩೪. ಕೋತಾರದ ಸೋಮಣ್ಣ ೧
೩೫. ಕೋಲಶಾಂತಯ್ಯ ೧೦೩
೩೬. ಗಜೇಶ ಮಸಣಯ್ಯ ೭೧
೩೭. ಗಾಣದ ಕಣ್ಣಪ್ಪ ೧೦
೩೮. ಗಾವುದಿ ಮಾಚಯ್ಯ ೧೧
೩೯. ಗುಪ್ತಮಂಚಣ್ಣ ೧೦೨
೪೦. ಗುರುಪುರದ ಮಲ್ಲಯ್ಯ ೪
೪೧. ಗುರುಬಸವೇಶ್ವರ ೩
೪೨. ಗುರುಭಕ್ತಯ್ಯ ೧
೪೩. ಗೋರಕ್ಷ ೧೧
೪೪. ಘಟ್ಟಿವಾಳಯ್ಯ ೧೫೦
೪೫. ಚಂದಿಮರಸ ೧೬೦
೪೬. ಜಗಳಗಂಟ ಕಾಮಣ್ಣ ೪
೪೭. ಜೇಡರ ದಾಸಿಮಯ್ಯ ೧೭೬

೮೧.	ಮರಳುಶಂಕರದೇವ	೩೫
೮೨.	ಮರುಳಸಿದ್ಧೇಶ್ವರ	೧
೮೩.	ಮಲಹರಕಾಯಕದ ಚಿಕ್ಕದೇವಯ್ಯ	೧೦
೮೪.	ಮಲ್ಲಿಕಾರ್ಜುನಪಂಡಿತಾರಾಧ್ಯ	೧೩
೮೫.	ಮಹಾದೇವೀರಯ್ಯ	೧
೮೬.	ಮಳುಭಾವಿ ಸೋಮಣ್ಣ	೧
೮೭.	ಮಾದರ ಚೆನ್ನಯ್ಯ	೧೦
೮೮.	ಮಾದಾರ ಧೂಳಯ್ಯ	೧೦೬
೮೯.	ಮಾರುಡಿಗೆ ನಾಚಯ್ಯ	೧
೯೦.	ಮಾರೇಶ್ವರೊಡೆಯ	೧೩
೯೧.	ಮೆರೆಮಿಂಡದೇವ	೧೧೦
೯೨.	ಮೈದುನ ರಾಮಯ್ಯ	೬
೯೩.	ಮೇದಾರ ಕೇತಯ್ಯ	೧೪
೯೪.	ಮೋಳಿಗೆಯ ಮಾರಯ್ಯ	೮೧೮

೯. ಸಂಕೀರ್ಣ ವಚನಸಂಪುಟ-೪. ಜ್ಞಾತವಚನಕಾರರು-೨೭. ವಚನಸಂಖ್ಯೆ-೧೪೬೧.

ಅಜ್ಞಾತ ವಚನಕಾರರು-೫೪

ಜ್ಞಾತವಚನಕಾರರು:

೯೫.	ರಕ್ಕಸಬೊಮ್ಮಿತಂದೆ	೮
೯೬.	ರಾಯಸದ ಮಂಚಣ್ಣ	೧೦
೯೭.	ರೇಚದ ಬಂಕಣ್ಣ	೧
೯೮.	ಲದ್ದಿಯ ಸೋಮಯ್ಯ	೧
೯೯.	ವಚನಭಾಂಡಾರಿ ಶಾಂತರಸ	೬೪
೧೦೦.	ವರದ ಸಂಕಣ್ಣ	೧
೧೦೧.	ವೀರಗೊಲ್ಲಾಳ	೧೦
೧೦೨.	ವೀರಶಂಕರದಾಸಯ್ಯ	೧
೧೦೩.	ವೇದಮೂರ್ತಿ ಸಂಗಣ್ಣ	೧೦
೧೧೪.	ಸೂಜಿಕಾಯಕದ ರಾಮಿತಂದೆ	೧೦
೧೧೫.	ಸೊಡ್ಡಳ ಬಾಚರಸ	೧೦೪
೧೧೬.	ಹಡಪದ ಅಪ್ಪಣ್ಣ	೨೪೩
೧೧೭.	ಹಡಪದ ರೇಚಣ್ಣ	೯
೧೧೮.	ಹಾವಿನಹಾಳ ಕಲ್ಲಯ್ಯ	೧೦೩
೧೧೯.	ಹುಂಜಿನಕಾಳಗದ ದಾಸಯ್ಯ	೧

೧೨೦. ಹೆಂಡದ ಮಾರಯ್ಯ	೧೨
೧೨೧. ಹೊಡೆಹುಲ್ಲ ಬಂಕಣ್ಣ	೧೦
ಅಜ್ಞಾತ ವಚನಕಾರರ ಮುದ್ರಿಕೆಗಳು	
೧೨೨. ಅಖಂಡಮಂಡಲೇಶ್ವರ	೧
೧೨೩. ಅನುಗಲೇಶ್ವರ	೧
೧೨೪. ಅಪ್ರಮಾಣ ಗುಹೇಶ್ವರ	೧
೧೨೫. ಅಶ್ವಥರಾಮ	೧
೧೨೬. ಆನಂದಸಿದ್ಧೇಶ್ವರ	೨
೧೨೭. ಈಶ್ವರೀಯವರದ ಚೆನ್ನರಾಮ	೧
೧೨೮. ಏಕಾಂತ ವೀರಸೊಡ್ಡಳ	೨
೧೨೯. ಏಕೋರಾಮೇಶ್ವರಲಿಂಗ	೧
೧೩೦. ಕಲ್ಲಯ್ಯದೇವರು	೧
೧೩೧. ಕುರಂಗೇಶ್ವರಲಿಂಗ/ಕುಂತಳಿಯ ವರದ ಕುರಂಗಲಿಂಗ	೨
೧೩೨. ಗಾರ್ಗೇಶ್ವರಲಿಂಗ	೧
೧೩೩. ಗುರುವರದ ವಿರೂಪಾಕ್ಷ	೧
೧೩೪. ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ	೬
೧೩೫. ಚೆನ್ನರಾಮೇಶ್ವರಲಿಂಗ	೧
೧೩೬. ಜಂಗಮಲಿಂಗಪ್ರಭುವೆ	೧೮
೧೩೭. ಜ್ಯೋತಿಸಿದ್ಧೇಶ್ವರ	೧
೧೩೮. ತುಂಬಿಯಾಚಲೆಯ ಮನಃಪ್ರಿಯ ಚೆನ್ನಬಂಕೇಶ್ವರ	೧
೧೩೯. ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ	೭
೧೪೦. ತ್ರಿಲೋಚನಶಂಕರ	೧
೧೪೧. ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದುನೂರೇಶ	೪
೧೪೨. ನಂಜುಂಡಶಿವ	೨೪
೧೪೩. ನಾಚೇಶ್ವರ	೧
೧೪೪. ನಿಷ್ಕಳಂಕ ಚೆನ್ನಮಲ್ಲಿಕಾರ್ಜುನ ಪ್ರಭುವೆ	೧

೧೪೫. ನಿಃಕಳಂಕ ಚೆನ್ನಸೋಮೇಶ್ವರ ೧
೧೪೬. ನಿಜಗುರು ನಿರಾಲಂಬ ಪ್ರಭುವೆ ೪೧
೧೪೭. ನಿಜಗುರು ಶಾಂತಮಲ್ಲಿಕಾರ್ಜುನ ೨
೧೪೮. ನಿಜಮುಕ್ತಿ ರಾಮೇಶ್ವರ ೧
೧೪೯. ನಿರ್ಧನಪ್ರಿಯ ರಾಮೇಶ್ವರ ೧
೧೫೦. ನಿರಾಲಯ ನಿಜಗುರುಶಾಂತೇಶ್ವರ ೧
೧೫೧. ಬಸವಣ್ಣಪ್ರಿಯ ಧರ್ಮೇಶ್ವರ ೧
೧೫೨. ಭೀಮಬಂಕೇಶ್ವರ ೧
೧೫೩. ಮರ್ಕಟೇಶ್ವರ ೧
೧೫೪. ಮಹಾಮಹಿಮ ವೀರೇಶ್ವರ ೧
೧೫೫. ಮಹಾಘನ ಪ್ರಸಿದ್ಧ ಪ್ರಸನ್ನ
ಸಂಗಮೇಶ್ವರಲಿಂಗ ೧
೧೫೬. ಮಹಾಲಿಂಗ ವೀರರಾಮೇಶ್ವರ ೧
೧೫೭. ಮಹಾಲಿಂಗ ಶಶಿಮೌಳಿ ಸದಾಶಿವ ೬
೧೫೮. ವರದ ಸೋಮನಾಥ ೧
೧೫೯. ವಿಶ್ವಪತಿ ವಿಶ್ವನಾಥ ೧
೧೬೦. ವೈನಿಪುರದ ಸಂಗಮೇಶ್ವರ ೧
೧೬೧. ವೈದ್ಯನಾಥೇಶ್ವರ ೧
೧೬೨. ಶಂಭು ಮಾರೇಶ್ವರ ೧
೧೬೩. ಶಾಂತವೀರೇಶ್ವರ ೮೮
೧೬೪. ಶ್ರೀಗುರುಪ್ರಭುನ್ಮುನೀಶ್ವರ ೨
೧೬೫. ಶ್ರೀ ಬಸವಲಿಂಗ ೩
೧೬೬. ಶ್ರೀಮುಕ್ತಿ ರಾಮೇಶ್ವರ ೧
೧೬೭. ಸಂಗಮನಾಥ ೧
೧೬೮. ಸತ್ಯಕರಂಡಮೂರ್ತಿ ಸದಾಶಿವಲಿಂಗ ೧
೧೬೯. ಸದ್ಗುರು ಚೆನ್ನಮಲ್ಲಿಕಾರ್ಜುನ ೨
೧೭೦. ಸದ್ಗುರು ಶಂಭು ಸೋಮೇಶ್ವರ ೧
೧೭೧. ಸದ್ಗುರುಪ್ರಿಯ ಶಿವಸಿದ್ಧರಾಮೇಶ್ವರ ೧
೧೭೨. ಸರ್ವೇಶ್ವರಲಿಂಗ ೧
೧೭೩. ಸೋಮಭೀಮೇಶ್ವರಲಿಂಗ ೧
೧೭೪. ಸೋಲ ಗುರುರಾಯ ೧
೧೭೫. ಹಾಟಕೇಶ್ವರಲಿಂಗ ೧

೨.	ಭಿಕ್ಷದ ಸಂಗಯ್ಯ		೧
೩.	ಮಡಿವಾಳಪ್ಪ		೭೮
೪.	ಮುದ್ವೀರಸ್ವಾಮಿ		೧
೫.	ಮುಮ್ಮಡಿ ಕಾರ್ಯೇಂದ್ರ		೧೦೯
	ಗುರುಸಿದ್ಧಸ್ವಾಮಿ		೨೦೯
೧೧.	**ಸಂಕೀರ್ಣ ವಚನಸಂಪುಟ-೬. ವಚನಕಾರರು-೫.**		**ವಚನಸಂಖ್ಯೆ-೧೪೨೪**
೧.	ತೋಂಟದ ಸಿದ್ಧಲಿಂಗ ಶಿವಯೋಗ		೭೦೧
೨.	ಘನಲಿಂಗಿದೇವ		೬೬
೩.	ಗುಮ್ಮಳಾಪುರದ ಸಿದ್ಧಲಿಂಗ		೧೮
೪.	ಸ್ವತಂತ್ರ ಸಿದ್ಧಲಿಂಗೇಶ್ವರ		೪೩೦
೫.	ಇಮ್ಮಡಿ ಮುರುಘಾ		
೧೨.	**ಸಂಕೀರ್ಣ ವಚನಸಂಪುಟ-೭**	**ವಚನಕಾರರು-೪**	**ವಚನಸಂಖ್ಯೆ-೧೩೦೫**
೧.	ದೇಶಿಕೇಂದ್ರ ಸಂಗನಬಸವಯ್ಯ		೧೨೪೨
೨.	ನಿರಾಲಂಬ ಪ್ರಭುದೇವ		೧೪
೩.	ಪರಂಜ್ಯೋತಿ		೧೩
೪.	ಬಸವಲಿಂಗದೇವ		೩೬
೧೩.	**ಸಂಕೀರ್ಣ ವಚನಸಂಪುಟ-೮.**	**ವಚನಕಾರರು-೫**	**ವಚನಸಂಖ್ಯೆ-೧೧೦೯**
೧.	ಬಾಲಸಂಗಯ್ಯ		೯೨೦
೨.	ಭಿಕ್ಷದ ಸಂಗಯ್ಯ		೧
೩.	ಮಡಿವಾಳಪ್ಪ		೭೮
೪.	ಮುದ್ವೀರಸ್ವಾಮಿ		೧
೫.	ಮುಮ್ಮಡಿ ಕಾರ್ಯೇಂದ್ರ		೧೦೯
೧೪.	**ಸಂಕೀರ್ಣಸ ವಚನಸಂಪುಟ-೯.**	**ವಚನಕಾರರು-೭**	**ವಚನಸಂಖ್ಯೆ-೧೧೩೮**
೧.	ಮೂರುಸಾವಿರ ಮುಕ್ತಿಮುನಿ		೧೦೧
೨.	ವೀರಣ್ಣದೇವರು		೭
೩.	ಷಣ್ಮುಖಸ್ವಾಮಿ		೭೧೭
೪.	ಸಂಗನಬಸವೇಶ್ವರ ದೇವರು		೧
೫.	ಸಿದ್ಧಮಲ್ಲಪ್ಪ		೯
೬.	ಸಿದ್ಧವೀರ ದೇಶಿಕೇಂದ್ರ		೧
೭.	ಹೇಮಗಲ್ಲ ಹಂಪ		೩೦೨

ಒಟ್ಟು ಈ ಸಂಪುಟಗಳಲ್ಲಿ ಅಡಕವಾಗಿರುವ ವಚನಕಾರರ ಮತ್ತು ವಚನಗಳ ಸಂಖ್ಯೆ ಹೀಗಿದೆ:

೧.	ಬಸವಯುಗದ ವಚನಕಾರರು	೧೨೫	ವಚನ ಸಂಖ್ಯೆ	೧೩೦೭೭+೮
೨.	ಬಸವಯುಗದ ವಚನಕಾರ್ತಿಯರು	೩೩	ವಚನ ಸಂಖ್ಯೆ	೧೧೦೬
೩.	ಬಸವೋತ್ತರಯುಗದ ವಚನಕಾರರು	೩೦	ವಚನ ಸಂಖ್ಯೆ	೬೫೯೦
೪.	ಅಜ್ಞಾತ ವಚನಕಾರರು	೫೪	ವಚನ ಸಂಖ್ಯೆ	೨೫೧
	ಒಟ್ಟು ವಚನಕಾರರು	೨೪೨	ಒಟ್ಟು ವಚನಸಂಖ್ಯೆ	೨೧೦೩೨

ಪ್ರಸ್ತುತ ಪರಿಷ್ಕರಣ :

ಪಾಠಾಂತರ - ರೂಪಾಂತರ, ಪ್ರಕ್ಷೇಪ - ವಿಕ್ಷೇಪ ಮೊದಲಾದ ದಾಳಿಗಳಿಗೆ ಗುರಿಯಾಗುತ್ತ ಬಂದ, ವಚನಗಳಂಥ ಜನಪ್ರಿಯಸಾಹಿತ್ಯದ ಪರಿಷ್ಕರಣ ಕೆಲಸ ತುಂಬ ಜಟಿಲವಾದುದು. ಹಳಕಟ್ಟಿಯವರ ಕಾಲದಿಂದಲೂ ಪ್ರಕಟವಾಗಿ ಬೆರೆತು ಹೋಗಿದ್ದ ಕೃತಕ ವಚನಕಾರರನ್ನೂ, ಅವರ ಕೃತಕ ವಚನಗಳನ್ನೂ ಗುರುತಿಸುವುದು ಮತ್ತು ಕೈಬಿಡುವುದು, ನಮ್ಮ ಮೊದಲ ಕರ್ತವ್ಯವಾಗಿದ್ದಿತು. ಒಂದು ಅಂದಾಜಿನ ಪ್ರಕಾರ ೧೧೦ಕ್ಕೂ ಹೆಚ್ಚು ಜನ ಕೃತಕವಚನಕಾರರನ್ನೂ, ಅವರ ವಚನಗಳನ್ನೂ ನಾವು ಕೈಬಿಟ್ಟಿದ್ದೇವೆ. ಆಮೇಲೆ ನಿಜವಚನಕಾರರ ನಿಜವಚನಗಳ ಸಂಗ್ರಹಕ್ಕಾಗಿ ಪ್ರಕಟಿತ, ಅಪ್ರಕಟಿತ ಸುಮಾರು ೧೦೮ ಪ್ರಾಚೀನ ವಚನಸಂಕಲನಗಳನ್ನು ಇಲ್ಲಿ ಬಳಸಿಕೊಂಡಿದ್ದೇವೆ. ಒಂದೂ ವಚನ ಹೊರಗುಳಿಯಬಾರದೆಂದು, ರಾಜ್ಯದ ಎಲ್ಲ ವಿಶ್ವವಿದ್ಯಾಲಯ, ಎಲ್ಲ ಹಸ್ತಪ್ರತಿ ಭಾಂಡಾರಗಳನ್ನು ಜಾಲಾಡಿದ್ದೇವೆ.

ಈ ಕಾರ್ಯವನ್ನು ಒಂದು ಕ್ರಮಕ್ಕೆ ಒಳಪಡಿಸುವ ದೃಷ್ಟಿಯಿಂದ, ಧಾರವಾಡದ ಕನ್ನಡ ಅಧ್ಯಯನಪೀಠದಲ್ಲಿ "ವಚನ ಬ್ಯಾಂಕ್" ಹೆಸರಿನ ಭಾಂಡಾರವನ್ನು, ಅಸ್ತಿತ್ವಕ್ಕೆ ತರಲಾಯಿತು. ಒಂದು ಕಾರ್ಡಿನ ಮೇಲೆ ಒಂದು ವಚನವನ್ನು ದಾಖಲಿಸಿ, ಅಲ್ಲಿಯೇ ಬೇರೆಬೇರೆ ಕೃತಿಗಳಲ್ಲಿ ಸಿಗುವ ಅದರ ವ್ಯತ್ಯಸ್ತ ರೂಪಗಳನ್ನೂ ನಮೂದಿಸಲಾಯಿತು. ಇದರಿಂದ ಪುನರುಕ್ತ ವಚನಗಳನ್ನು ಸುಲಭವಾಗಿ ಗುರುತಿಸಿ ಕೈಬಿಡಲು, ಉತ್ತಮಪಾಠವನ್ನು ಆಯ್ದುಕೊಳ್ಳಲು ಅನುಕೂಲವಾಯಿತು. ಒಟ್ಟು ವಚನಕಾರರನ್ನು, ಒಬ್ಬೊಬ್ಬ ವಚನಕಾರನ ಒಟ್ಟು ವಚನಗಳನ್ನು, ಒಂದೆಡೆ ತರಲು ಮತ್ತು ಅವರ ರಚನೆಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ಸ್ಥಲಕಟ್ಟಿನ ಪ್ರಾಚೀನ ಸಂಕಲನಗಳನ್ನು ಹಾಗೆಯೇ ಉಳಿಸಿಕೊಂಡು, ಹೆಚ್ಚಿನ ವಚನಗಳನ್ನು ಎರಡನೆಯ ಭಾಗವಾಗಿ, ಆಕಾರಾದಿಯಾಗಿ ಜೋಡಿಸಿದ್ದೇವೆ. ಸ್ಥಲಕಟ್ಟು ಇರದ ಪಕ್ಷದಲ್ಲಿ ಪ್ರತಿಯೊಬ್ಬನ ವಚನಗಳನ್ನು ಅಕಾರಾದಿಯಾಗಿ ಹೊಂದಿಸಿಕೊಂಡಿದ್ದೇವೆ. ಈ ಸಂದರ್ಭದಲ್ಲಿ ಸ್ಥಲಕಟ್ಟಿನ ಕೃತಿಗಳಲ್ಲಿಯ, ಸಕಲಪುರಾತನರ ವಚನಕಟ್ಟುಗಳಲ್ಲಿಯ ಪಾಠಗಳಿಗೆ, ಆದ್ಯಗಮನ ಕೊಟ್ಟಿದ್ದೇವೆ.

ಹಸ್ತಪ್ರತಿಗಳಲ್ಲಿ ಎರಡಾಗಿದ್ದ ವಚನಗಳನ್ನು ಒಂದಾಗಿಸಿಕೊಂಡಿದ್ದೇವೆ, ಒಂದಾಗಿದ್ದ ಎರಡು ವಚನಗಳನ್ನು ಬಿಡಿಸಿಕೊಂಡಿದ್ದೇವೆ. ಚರಣಪಲ್ಲಟ, ಪದಪಲ್ಲಟ, ಅಂಕಿತಪಲ್ಲಟಗಳನ್ನು ಸರಿಪಡಿಸಿಕೊಂಡಿದ್ದೇವೆ. ಶಬ್ದರೂಪಗಳನ್ನು ಪರಿಷ್ಕರಿಸಿಕೊಂಡಿದ್ದೇವೆ. ಅಲ್ಪವ್ಯತ್ಯಾಸದಿಂದ ಪುನರುಕ್ತವಾಗಿದ್ದ ವಚನಗಳ ಸಮಸ್ಯೆಯನ್ನು ನಿವಾರಿಸಿಕೊಂಡಿದ್ದೇವೆ. ಈವರೆಗೆ ಭಾವಿಸಿದಂತೆ 'ಜಾತಿಶೈವರು, ಅಜಾತಿಶೈವರು' ಎಂದು ಪ್ರಾರಂಭವಾಗುವ ವಚನ, ಮಹಾದೇವಿಯರದಲ್ಲ; ಮಹಾದೇವೀರಯ್ಯನವದು. ನಮ್ಮಿಂದ ಮೊದಲ ಸಲ ಬೆಳಕಿಗೆ ಬರುತ್ತಲಿರುವ ಇವನ ಮುದ್ರಿಕೆ ಸರ್ವೇಶ್ವರ ಚೆನ್ನಮಲ್ಲಿಕಾರ್ಜುನ. ಅಮರಗುಂಡದ ಮಲ್ಲಿಕಾರ್ಜುನತಂದೆಯ ಮುದ್ರಿಕೆ,

ಈವರೆಗೆ ಭಾವಿಸಿದಂತೆ 'ಅಮರಗುಂಡದ ಮಲ್ಲಿಕಾರ್ಜುನ' ಅಲ್ಲ, 'ಮಾಗುಡದ ಮಲ್ಲಿಕಾರ್ಜುನ.' 'ಮನೆ ನೋಡಾ ಬಡವರು. . .' ವಚನದಲ್ಲಿಯ ಪಾಠ, 'ಸೋಂಕಿನಲ್ಲಿ ಸುಖಿ ' ಅಲ್ಲ, 'ಸೋಂಕಿನಲ್ಲಿ ಶುಚಿ.' 'ಬಲ್ಲಿದರೊಡನೆ ಬವರವಾದೊಡೆ ಗೆಲಲುಂಟು ಸೋಲಲುಂಟು' ವಚನದಲ್ಲಿಯ 'ಕಳ್ಳನೊಡನೆ ಭಾಷೆ ಪೂರಾಯವೆ ಅಯ್ಯ?' ಎಂಬುದರ ನಿಜಪಾಠ; 'ಕಳನೊಳಗೆ ಭಾಷೆ ಪೂರಾಯವಯ್ಯ'. 'ಕೋತಿಗೆ ಕೋಡು ಮೂಡಬಲ್ಲುದೆ?' ಎಂಬುದರ ಸತ್ಯಪಾಠ, 'ಕೊತ್ತಿಗೆ ಕೋಡು ಮೂಡಬಲ್ಲುದೆ?'. ವಚನಪಾಠಗಳಿಗೆ ಸಂಬಂಧಿಸಿದಂತೆ, ಈ ಬಗೆಯ ಅನೇಕ ಸುಧಾರಣೆಗಳನ್ನು ನಾವು ಮಾಡಿದ್ದೇವೆ.

ಇಷ್ಟೆಲ್ಲ ಮಾಡಿದರೂ 'ಮನುಷ್ಯಮಿತಿ'ಗೆ ಮೀರಿದ ಕೆಲವು ದೋಷಗಳು, ಇಲ್ಲಿ ಉಳಿದುಕೊಂಡಿರುವುದು ಸಹಜ. ಸ್ವತಃ ಶರಣರೇ ಅವತರಿಸಿಬಂದರೂ, ಅವರವರ ವಚನಗಳ ಶುದ್ಧಪಾಠ ನಿರ್ಣಯಿಸಲು, ಅವರಿಗೇ ಸಾಧ್ಯವಾಗದ ರೀತಿಯಲ್ಲಿ ಕೆಲವು ವಚನಗಳು ಕುಲಗೆಟ್ಟಿವೆ- ಎಂಬುದನ್ನು ಗಮನಿಸಿ, ಈ ಸಂಪುಟಗಳಲ್ಲಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಪ್ರಾರ್ಥಿಸುತ್ತೇವೆ. ಬಸವಯುಗಕ್ಕೆ ಸಾವಿರಾರು ಹೊಸ ವಚನಗಳನ್ನು ಸೇರಿಸುತ್ತ, ಬಸೋತ್ತರಯುಗದ ಮುಕ್ಕಾಲು ಪಾಲು ವಚನಗಳನ್ನು ಪ್ರಥಮಸಲ ಸಂಗ್ರಹಿಸಿಕೊಟ್ಟಿದ್ದೇವೆ ಎಂದು ವಿನಮ್ರತೆಯಿಂದ ಸೂಚಿಸುತ್ತೇವೆ.

'ಎಲ್ಲ ಶರಣರ ಎಲ್ಲ ವಚನ'ಗಳನ್ನು ಒಂದೇ ಕಡೆಗೆ ಹಿಡಿದುಹಾಕಿದ, ಸಂಪುಟಗಳಿಗಾಗಿ ವರ್ಗೀಕರಿಸಿದ ಸಾಹಸದ ಫಲವಾಗಿ, ಈ ಸಂಪುಟಗಳು ರೂಪುಗೊಂಡಿವೆ. ಇಲ್ಲಿಯ ಪ್ರತಿಯೊಂದು ಸಂಪುಟಕ್ಕೆ ಮಾನ್ಯ ಮುಖ್ಯಮಂತ್ರಿಗಳ ಮುನ್ನುಡಿ, ಪ್ರಕಾಶಕರ ಮಾತು, ಯೋಜನೆಯ ಸಂಪಾದಕರ ಅರಿಕೆ, ಆಯಾ ಸಂಪುಟ ಸಂಪಾದಕರ ವಿವರವಾದ ಪ್ರಸ್ತಾವನೆಗಳಿವೆ. ಕೊನೆಗೆ ವಚನಗಳ ಆಕಾರಾಧಿ, ಕಠಿಣ ಪದಕೋಶ, ಬಳಸಿಕೊಂಡ ಆಕರ ಸೂಚಿಗಳನ್ನು ಜೋಡಿಸಲಾಗಿದೆ. ಹೆಚ್ಚಿನದಾಗಿ ೩೦೦ ಪುಟಗಳ ವಚನಪರಿಭಾಷಾ ಕೋಶವನ್ನು ಸಿದ್ಧಪಡಿಸಿಕೊಡಲಾಗಿದೆ.

ಈ ಸಂಪುಟಗಳು ಅಚ್ಚಾದ ಬಳಿಕ, ನಮಗೆ ಮತ್ತೆ ಕೆಲವು ಹೊಸ ವಚನಗಳು ಲಭಿಸಿವೆ. ಹೀಗೆ ಹೊಸ ವಚನಗಳು ಸಿಗುತ್ತಹೋದಂತೆ ಈ ಸಂಪುಟಗಳನ್ನು ವಿಸ್ತರಿಸುವ ಇಲ್ಲವೆ 'ಅನುಬಂಧಸಂಪುಟ'ಗಳನ್ನು ರೂಪಿಸುವ, ಕೆಲಸ ನಡೆಯಬೇಕಾಗುತ್ತದೆ. ಹಳಕಟ್ಟಿಯವರು - ಬಸವನಾಳರು ನಡೆದ ಹಾದಿಯಲ್ಲಿ ಹಿರೇಮಠರು - ಬಸವರಾಜು ಅವರು ನಡೆದಿದ್ದಾರೆ. ಇವರ ದಾರಿಯಲ್ಲಿ ನಾವು ನಡೆದಿದ್ದೇವೆ. ನಮಗಿಂತ ಉತ್ತಮ ದಾರಿಯಲ್ಲಿ ನಮ್ಮ ಯುವಸಂಪಾದಕರು ನಡೆಯಲೆಂದು, ಹಾರೈಸುತ್ತೇನೆ.

ಈ ಸಂಪುಟಗಳಲ್ಲಿ ಅಡಕವಾಗಿರುವ ಸುಮಾರು ೨೧,೦೦೦ ವಚನಗಳನ್ನು ಕಂಪ್ಯೂಟರಕ್ಕೆ ಅಳವಡಿಸುವ, ಸಾರವತ್ತಾದ ವಚನಗಳನ್ನು ಆಯ್ದುಕೊಂಡು 'ಸಂಗ್ರಹಸಂಪುಟ'ಗಳನ್ನು ಪ್ರಕಟಿಸುವ, ಈ ಸಂಗ್ರಹ ಸಂಪುಟಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸುವ, ಯೋಜನೆಗಳನ್ನು ಯುವಮಿತ್ರರು ಕೈಗೆತ್ತಿಕೊಳ್ಳುವರೆಂದು ನಂಬಿದ್ದೇನೆ.

ಕೃತಜ್ಞತೆ :

೧೯೮೮ರಲ್ಲಿ ಈ ಯೋಜನೆ ಪ್ರಾರಂಭವಾಯಿತು. ಎರಡು ವರ್ಷಗಳಲ್ಲಿ ಎಲ್ಲ ಸಂಪುಟಗಳನ್ನು ಸಿದ್ಧಪಡಿಸಿ, ೧೯೯೦ರಲ್ಲಿ ಹಸ್ತಪ್ರತಿಗಳನ್ನು ಅಚ್ಚಿನ ಮನೆಗೆ ಕಳಿಸಲಾಯಿತು. ೧೫ ಸಂಪುಟಗಳ ಒಂದೊಂದು ಮಾತೃಕಾಪ್ರತಿಗಳು, ಅದೇ ವರ್ಷದ ಕೊನೆಯಲ್ಲಿ ಅಚ್ಚಾದವು. ಪ್ರತಿಯೊಂದು ಸಂಪುಟದ ೫೦೦೦ ಪ್ರತಿಗಳು ಅಚ್ಚಾಗುವುದು ಮಾತ್ರ ಬಾಕಿ ಉಳಿಯಿತು. ನಮ್ಮ ದುರ್ದೈವವೆಂಬಂತೆ, ಅಷ್ಟರಲ್ಲಿ ಕಾಗದ ಬೆಲೆ, ಮುದ್ರಣವೆಚ್ಚ ಮೂರು ಪಟ್ಟು ಬೆಳೆದವು. ಈ ಮೊದಲು ಮಂಜೂರಾಗಿದ್ದ ೭ ಲಕ್ಷ ರೂಪಾಯಿ ಸಾಲದಾಗಿ, ಇನ್ನೂ ೨೫ ಲಕ್ಷ

ರೂಪಾಯಿ ಬೇಕಾಯಿತು. ನಮ್ಮ ಕೆಲಸವೇನೋ ಮುಗಿದಿದ್ದಿತು. ಈಗ ಕನ್ನಡ-ಸಂಸ್ಕೃತಿ ಇಲಾಖೆಗೆ, ಹಣ ಜೋಡಿಸುವುದು ಸಮಸ್ಯೆಯಾಯಿತು. ಈ ಮಧ್ಯೆ ರಾಜಕೀಯ ಬದಲಾವಣೆಗಳು ವೇಗವಾಗಿ ಸಂಭವಿಸಿ, ೪ ಜನ ಮುಖ್ಯಮಂತ್ರಿಗಳು ನಿರ್ಗಮಿಸಿದರು. ಇದಕ್ಕೆ ಅನುಗುಣವಾಗಿ ೪ ಜನ ಕನ್ನಡ-ಸಂಸ್ಕೃತಿ ಇಲಾಖೆ ಸಚಿವರೂ ನಿರ್ಗಮಿಸಿದರು. ನಾವು ಒಬ್ಬೊಬ್ಬರನ್ನು ವಿನಂತಿಸಿಕೊಳ್ಳುವುದೂ, ಅವರು ಪದತ್ಯಾಗ ಮಾಡುವುದೂ ನಡೆದು, ಹೆಚ್ಚಿನ ಹಣ ಮಂಜೂರು ಮಾಡಿಸಿಕೊಳ್ಳುವುದು ಕನಸಿನ ಮಾತಾಯಿತು. ಈ ಸಂದರ್ಭದಲ್ಲಿ ಶಿಕ್ಷಣ ಸಚಿವರಾಗಿದ್ದ ಮಾನ್ಯ ಶ್ರೀ ವೀರಪ್ಪ ಮೊಯಿಲಿ ಅವರನ್ನು ಮೊದಲುಗೊಂಡು, ಅನೇಕ ಜನ ಗಣ್ಯರನ್ನು, ಶಾಸಕರನ್ನು, ಸಚಿವರನ್ನು ನಾವು ಮೊರೆಹೊಕ್ಕೆವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಿಬ್ಬಂದಿವರ್ಗದವರು ಪ್ರಾಮಾಣಿಕ ರಾಯಭಾರಿತ್ವ ವಹಿಸಿದರು. ಕೊನೆಗೂ ನಮ್ಮ ಪ್ರಯತ್ನ ಫಲಿಸಿ, ಕರ್ನಾಟಕ ಸರಕಾರದಿಂದ ಹಣ ಮಂಜೂರು ಆಯಿತು. ಪ್ರತಿಯೊಂದು ಸಂಪುಟದ ೫೦೦೦ ಪ್ರತಿಗಳು ಅಚ್ಚಾಗಿ, ಇಂದು ಬಿಡುಗಡೆಯಾಗುತ್ತಲಿವೆ; ಕೇವಲ ೪೦೦ ರೂಪಾಯಿಗಳ ಸುಲಭ ಬೆಲೆಯಲ್ಲಿ ಕನ್ನಡಿಗರ ಕೈಸೇರುತ್ತಲಿವೆ.

ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿ ಅವರು ಸಾಹಿತ್ಯ, ಸಂಸ್ಕೃತಿಗಳ ಆರಾಧಕರು, ಅಭಿಮಾನಿಗಳು. ಅಂದು ಶಿಕ್ಷಣಮಂತ್ರಿಯಾಗಿ, ಈ ಯೋಜನೆಗೆ ಹಣ ಬಿಡುಗಡೆ ಮಾಡಿಸುವಲ್ಲಿ ಆಸ್ಥೆ ವಹಿಸಿದ್ದ ಅವರೇ, ಇಂದು ಮುಖ್ಯಮಂತ್ರಿಯಾಗಿ ಈ ಸಂಪುಟಗಳನ್ನು ಬಿಡುಗಡೆ ಮಾಡುತ್ತಲಿರುವುದು, ಒಂದು ಯೋಗಾಯೋಗ. ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಅಪೂರ್ವವಾಗಿರುವ ಈ ಕಾರ್ಯವನ್ನು ಪೂರೈಸುತ್ತಲಿರುವ ಅವರಿಗೆ, ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ. ಕನ್ನಡ-ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಎಚ್. ವಿಶ್ವನಾಥ ಅವರು ಕನ್ನಡದ ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡವರು, ಅವುಗಳ ಪರಿಹಾರಕ್ಕಾಗಿ ಪ್ರಾಮಾಣಿಕ -ದಿಟ್ಟ ಪ್ರಯತ್ನಮಾಡುತ್ತಲಿರುವವರು. ನಮ್ಮ ಸಂಸ್ಕೃತಿಯ ಬಹು ದೊಡ್ಡ ಆಸ್ತಿಯಾಗಿರುವ, ವಚನಸಂಪುಟಗಳ ಬಿಡುಗಡೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿರುವ ಅವರಿಗೆ, ನನ್ನ ವಂದನೆಗಳನ್ನು ಸಲ್ಲುತ್ತವೆ.

ವಚನಕಾರರು, ಸಾಹಿತ್ಯವನ್ನು ಸಾಮಾಜಿಕ ನ್ಯಾಯಕ್ಕಾಗಿ ದುಡಿಸಿದವರು. ಈ ಧೋರಣೆಯ ಸಾಹಿತಿಮಿತ್ರರಾದ ಶ್ರೀ ಬರಗೂರು ರಾಮಚಂದ್ರಪ್ಪ ಅವರು, ಇಂದು ಅತಿಥಿಯಾಗಿ ಬಂದುದು ತುಂಬ ಔಚಿತ್ಯಪೂರ್ಣ. ಇವರಿಗೂ ನಾನು ಕೃತಜ್ಞನಾಗಿದ್ದೇನೆ.

ಈ ಸಂದರ್ಭದಲ್ಲಿ, ಅಪಾರ ಶ್ರಮದಿಂದ ಈ ಮೊದಲು ವಚನಗಳನ್ನು ಪ್ರಕಟಿಸಿದ ವಿದ್ವಾಂಸರನ್ನೂ, ಹಣ ಮಂಜೂರು ಮಾಡಿಸುವಲ್ಲಿ, ಗ್ರಂಥ ಬಿಡುಗಡೆ ಮಾಡಿಸುವಲ್ಲಿ ನೆರವಾದ ಶಾಸಕರನ್ನೂ, ಗಣ್ಯರನ್ನೂ ಕೃತಜ್ಞತೆಯಿಂದ ನೆನೆಯುತ್ತೇನೆ. ಡಾ. ಫ. ಗು. ಹಳಕಟ್ಟಿ ಅವರಿಂದ ಪ್ರಾರಂಭವಾಗಿ, ಡಾ. ಆರ್. ಸಿ. ಹಿರೇಮಠ ಅವರಿಂದ ಮುಂದುವರಿದ, ವಚನಸಾಹಿತ್ಯದ ಯೋಜನಾಬದ್ಧ ಪ್ರಕಟನಕಾರ್ಯಕ್ಕೆ, ಒಂದು ನಿಶ್ಚಿತ ಸ್ವರೂಪ ನೀಡುವಲ್ಲಿ ಮಾರ್ಗದರ್ಶನಮಾಡಿದ ಸಂಪಾದಕ ಸಮಿತಿಯ ಸದಸ್ಯರನ್ನು, ಶ್ರಮವಹಿಸಿ ಸಂಪುಟಗಳನ್ನು ರೂಪಿಸಿದ ಸಂಪಾದಕ ಮಿತ್ರರನ್ನು, ಉದ್ದಕ್ಕೂ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಸ್ನೇಹಿತರನ್ನು ನೆನೆದಾಗ ಹೃದಯ ತುಂಬಿಬರುತ್ತದೆ. ಇವರೆಲ್ಲರಿಗೂ ನಿಮಗೂ ಕೃತಜ್ಞತೆಯಿಂದ ಕೈಮುಗಿಯುತ್ತೇನೆ.

ಆಕರ : ಮಾರ್ಗ ಸಂಪುಟ–೬

■■

೩೩

ಸಮಗ್ರ ವಚನ ಸಂಪುಟ - ದ್ವಿತೀಯ ಆವೃತ್ತಿ : ಬಿಡುಗಡೆ

೨೦೦೧

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಂ. ಕೃಷ್ಣ ಅವರೇ,
ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವೆಯರಾದ ಶ್ರೀಮತಿ ರಾಣಿ ಸತೀಶ ಅವರೇ,
ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಬರಗೂರ ರಾಮಚಂದ್ರಪ್ಪನವರೇ,
ಶ್ರೀ. ಚಿ. ಸೋಮಶೇಖರ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರೇ, ಶ್ರೀ ಸಿ.ಎಸ್. ಕೇದಾರಿ ಅವರೇ, ವಚನ ಸಂಪುಟಗಳ ಸಂಪಾದಕ ಸಮಿತಿ ಸದಸ್ಯರೇ, ಸಂಪಾದಕ ಸ್ನೇಹಿತರೇ, ಮಹನೀಯರೇ-ಮಹಿಳೆಯರೇ,

ಹತ್ತು ವರ್ಷಗಳ ಹಿಂದೆ, ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ "ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ" ಅಸ್ತಿತ್ವಕ್ಕೆ ಬಂದಿತು. ಎರಡು ವರ್ಷಗಳ ಕಠಿಣ ಶ್ರಮದಲ್ಲಿ ಆ ಯೋಜನೆ ಪೂರ್ಣಗೊಂಡು, ಎಲ್ಲ ಶರಣರ ಎಲ್ಲ ಇಪ್ಪತ್ತೊಂದು ಸಾವಿರ ವಚನಗಳು, ಹತ್ತುಸಾವಿರ ಪುಟಗಳಲ್ಲಿ, ಹದಿನೈದು ಸಂಪುಟಗಳಲ್ಲಿ ಪ್ರಕಟವಾದವು.

೧೯೯೩ರಲ್ಲಿ ಬಿಡುಗಡೆಯಾದ ಪ್ರಥಮ ಆವೃತ್ತಿಯ ೫೦೦೦ ಪ್ರತಿಗಳು ಒಂದು ವರ್ಷದಲ್ಲಿ ಮಾರಾಟವಾಗಿ, ಸಾರ್ವಜನಿಕರಿಂದ ಅಪಾರ ಬೇಡಿಕೆ ಬರತೊಡಗಿದ ಕಾರಣ, ಇಂದು ಪರಿಷ್ಕೃತ ದ್ವಿತೀಯ ಆವೃತ್ತಿಯ ೫೦೦೦ ಪ್ರತಿಗಳು ಮತ್ತೆ ಬಿಡುಗಡೆಯಾಗುತ್ತಲಿವೆ. ಇದಕ್ಕೆ ಕಾರಣರೆನಿಸಿದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ. ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಸಚಿವೆಯರಾದ ಶ್ರೀಮತಿ ರಾಣಿ ಸತೀಶ ಅವರಿಗೂ, ಈ ಯೋಜನೆಯ ಪ್ರಧಾನ ಸಂಪಾದಕನಾಗಿ, ಆರಂಭದಲ್ಲಿಯೇ ಅಭಿನಂದನೆ ಸಲ್ಲಿಸುತ್ತೇನೆ.

ಇದು ಒಬ್ಬ ಕವಿಯ, ಒಂದು ಕೃತಿಯ ಪ್ರಕಟನೆಯಲ್ಲ. ಒಬ್ಬ ಕವಿಯ, ಎಲ್ಲ ಕೃತಿಗಳ ಪ್ರಕಟನೆಯೂ ಅಲ್ಲ. ೮೦೦ ವರ್ಷ ವ್ಯಾಪ್ತಿಯ ಒಂದು ದೊಡ್ಡ ಸಾಹಿತ್ಯಪ್ರಕಾರದ ಸಮಗ್ರ ಪ್ರಕಟನೆ. ಹೀಗಾಗಿ ಇದು ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿ ಪ್ರಥಮ ಐತಿಹಾಸಿಕ ಘಟನೆಯಾಗಿದೆ. ಒಂದೇ ಒಂದು ವರ್ಷದಲ್ಲಿ ೫೦೦೦ ಪ್ರತಿಗಳ ಮಾರಾಟವೂ ಒಂದು ವಿಕ್ರಮವೆನಿಸಿದೆ. ಈ ವಿಕ್ರಮಕ್ಕೆ ಕಾರಣ, ಶರಣರು ಮತ್ತು ಅವರ ವಚನಗಳು ಕನ್ನಡಿಗರ ಮೇಲೆ ಬೀರುತ್ತ ಬಂದ ಪ್ರಭಾವ.

ಭಾರತ, ತತ್ವಜ್ಞಾನ ಪ್ರಧಾನವಾದ ರಾಷ್ಟ್ರ. ಇಲ್ಲಿ ವೈದಿಕರು ವೈಯಕ್ತಿಕ ಶುದ್ಧಿಯ ಬಗ್ಗೆ, ಆಮೇಲೆ ಬಂದ ಬೌದ್ಧರು ವೈಯಕ್ತಿಕ ಶುದ್ಧಿ ಮತ್ತು ಸಾಮಾಜಿಕ ಸಮಾನತೆಯ ಬಗ್ಗೆ ಒತ್ತುಕೊಟ್ಟರು. ಕರ್ನಾಟಕದ ಶರಣರು ಈ ವೈಯಕ್ತಿಕ ಶುದ್ಧಿ, ಸಾಮಾಜಿಕ ಸಮಾನತೆಗಳನ್ನು ಬೇರೆ ರೀತಿಯಲ್ಲಿ ಪ್ರತಿಪಾದಿಸುತ್ತ, ಸಾಮಾಜಿಕ ಅಭಿವೃದ್ಧಿಯ ಮೇಲೆಯೂ ಒತ್ತುಕೊಟ್ಟರು. ಈ ಅಭಿವೃದ್ಧಿ ಸಿದ್ಧಾಂತದಿಂದಾಗಿ ನಮ್ಮ ತತ್ವಜ್ಞಾನ ಕಾಯಕ-ದಾಸೋಹಗಳ ವರೆಗೆ ವಿಸ್ತಾರಗೊಂಡಿತು. ಆದುದರಿಂದ ಭಾರತೀಯ ತತ್ವಜ್ಞಾನದ ಇತಿಹಾಸವೆನ್ನುವುದು ವೈದಿಕರ 'ಸೋಹಂ'ದಿಂದ ಶರಣರ 'ದಾಸೋಹಂ' ವರೆಗೆ ಬೆಳೆದ ಇತಿಹಾಸವಾಗಿದೆ. ಇದನ್ನೇ ಬಸವಣ್ಣನವರು 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ' ಎಂದು ಹೇಳಿದುದು.

ಶರಣರ ಈ ಸಿದ್ಧಾಂತಕ್ಕೆ ವೈಯಕ್ತಿಕ ಶುದ್ಧಿ, ಸಾಮಾಜಿಕ ಸಮಾನತೆ, ಸಾಮಾಜಿಕ ಅಭಿವೃದ್ಧಿ -ಎಂಬ ಮೂರು ಮುಖ್ಯ ಆಯಾಮಗಳಿರುವುದರಿಂದ, ಅದು ಕ್ರಮವಾಗಿ ತತ್ವಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರಗಳ ಅಧ್ಯಯನ ವಿಷಯವೆನಿಸಿದೆ. ಶರಣರು ರಾಜಪ್ರಭುತ್ವವನ್ನು ಪ್ರಶ್ನಿಸಿ, ಪ್ರಜಾಪ್ರಭುತ್ವವನ್ನು ಮನ್ನಿಸಿದುದರಿಂದ ಅವರ ಸಿದ್ಧಾಂತ ರಾಜ್ಯಶಾಸ್ತ್ರವನ್ನೂ ಒಳಗೊಂಡಿದೆ. ೮೦೦ ವರ್ಷಗಳ ಪರಂಪರೆ ಇರುವುದರಿಂದ ಇತಿಹಾಸಶಾಸ್ತ್ರದ ಆಯಾಮವೂ, ಸಾಂಸ್ಕೃತಿಕ ಚಳುವಳಿಯಾಗಿರುವುದರಿಂದ ಸಂಸ್ಕೃತಿಶಾಸ್ತ್ರದ ಆಯಾಮವೂ ಇದಕ್ಕೆ ಪ್ರಾಪ್ತವಾಗಿದೆ. ಈ ಚಳುವಳಿಯಲ್ಲಿ ಹೊಲೆಯರು-ಮಾದಿಗರು-ಸಮಗಾರ-ಡೋಹರ-ಕೊರವರೆಂಬ ಅಸ್ಪೃಶ್ಯ ದಲಿತರೂ, ಬೇಡ-ಕುರುಬ-ಅಂಬಿಗ- ಮೊದಲಾದ ಸ್ಪೃಶ್ಯ ದಲಿತರೂ, ಒಕ್ಕಲಿಗ-ಅಕ್ಕಸಾಲಿ-ಬಡಿಗ-ಕಮ್ಮಾರ-ಕುಂಬಾರ-ನೇಕಾರ-ಅಗಸ-ಕ್ಷೌರಿಕರೆಂಬ ಶ್ರಮಿಕ ದಲಿತರೂ ಪ್ರಧಾನವಾಗಿ ಭಾಗವಹಿಸಿದುದರಿಂದ, ಇಲ್ಲಿ ದಲಿತ ಅಧ್ಯಯನದ ಅನೇಕ ಸಾಧ್ಯತೆಗಳಿವೆ. ಅಕ್ಕಮಹಾದೇವಿ, ನೀಲಲೋಚನೆ ಮೊದಲುಮಾಡಿ ಕದಿರ ರೆಮ್ಮವ್ವೆ, ಅಸ್ಪೃಶ್ಯ ಕಾಳವ್ವೆ, ಸೂಳೆ ಸಂಕವ್ವೆ ವರೆಗಿನ ಮಹಿಳೆಯರು ಭಾಗವಹಿಸಿದುದರಿಂದ ಮಹಿಳಾ ಅಧ್ಯಯನದ ಆಯಾಮವನ್ನೂ, ದೇಶೀ ಸಮುದಾಯದ ಧ್ವನಿಯಾಗಿರುವುದರಿಂದ ಜಾನಪದ ಅಧ್ಯಯನದ ಆಯಾಮವನ್ನೂ ಪಡೆದುಕೊಂಡಿದೆ. ಇದೆಲ್ಲ ವಚನವೆಂಬ ಸಾಹಿತ್ಯಮಾಧ್ಯಮದ ಮೂಲಕ ವ್ಯಕ್ತವಾದ ಕಾರಣ, ಇಲ್ಲಿ ಭಾಷಾಶಾಸ್ತ್ರ-ಸಾಹಿತ್ಯಶಾಸ್ತ್ರ-ಗ್ರಂಥಸಂಪಾದನಶಾಸ್ತ್ರ-ನಿಘಂಟುಶಾಸ್ತ್ರಗಳ ಅಧ್ಯಯನಕ್ಕೂ ಅವಕಾಶವಿದೆ. ಕನ್ನಡಿಗರ ಕೊಡುಗೆಯಾಗಿರುವ ಈ ಅಪೂರ್ವಸಿದ್ಧಾಂತ, ಅತ್ಯಪೂರ್ವ ಸಾಹಿತ್ಯಗಳನ್ನು ಅನ್ಯಭಾಷೆಯ ಮೂಲಕ ಪ್ರಸಾರಮಾಡುವುದೂ ಅಗತ್ಯವಾಗಿರುವುದರಿಂದ ಇದು ಭಾಷಾಂತರ ವಿಭಾಗದ ವಿಷಯವೂ ಆಗಿದೆ. ಹೀಗೆ ಕನಿಷ್ಠ ಹದಿನೈದು ಅಧ್ಯಯನ ಶಿಸ್ತುಗಳನ್ನು ಒಳಗೊಂಡಿರುವ ವಚನಸಾಹಿತ್ಯವನ್ನು ಕುರಿತು, ಉತ್ತರ ಭಾರತದ ವಿಶ್ವವಿದ್ಯಾಲಯಗಳಲ್ಲಿರುವ ಡಿಪಾರ್ಟಮೆಂಟ್ ಆಫ್ ರಾಮಾಯಣ, ಡಿಪಾರ್ಟಮೆಂಟ್ ಆಫ್ ಮಹಾಭಾರತಗಳಂತೆ, ಡಿಪಾರ್ಟಮೆಂಟ್ ಆಫ್ ವಚನ ಲಿಟರೇಚರ್ ಹೆಸರಿನ ವಿಭಾಗವನ್ನು ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಆರಂಭಿಸುವುದು ಅವಶ್ಯವಿದೆ. ಹಾಗೆ ಮಾಡಿದರೆ, ಅದು ಕರ್ನಾಟಕದ ಎಲ್ಲ ಸ್ತರಗಳ ಜನತೆಯ ಮತ್ತು ಅವರ ಅಭಿವ್ಯಕ್ತಿಯ ಅಧ್ಯಯನವೇ ಆಗುವುದೆಂದು ಬೇರೆ ಹೇಳಬೇಕಿಲ್ಲ.

ಶೂದ್ರ ಉರಿಲಿಂಗಪೆದ್ದಿ ಮೊದಲುಮಾಡಿ ಅನೇಕ ಜನ ಶರಣರು ಸಂಸ್ಕೃತ ವಿದ್ವಾಂಸರಾಗಿದ್ದರು. ಮನಸ್ಸುಮಾಡಿದ್ದರೆ ಇಂದಿನ ಇಂಗ್ಲೀಷ್ ವ್ಯಾಮೋಹಿಗಳಂತೆ ಅಂದು ಅವರು ಸಂಸ್ಕೃತದಲ್ಲಿ ವಚನಗಳನ್ನು ರಚಿಸಬಹುದಿತ್ತು. ಹಾಗೆ ಮಾಡಲಿಲ್ಲ. ಮಹಾರಾಷ್ಟ್ರದಿಂದ ಬಂದ ಉರಿಲಿಂಗದೇವ, ಆಂಧ್ರಪ್ರದೇಶದಿಂದ ಬಂದ ಉರಿಲಿಂಗಪೆದ್ದಿಗಳಂತೆ ಭಾರತದ ಬೇರೆ ಬೇರೆ ರಾಜ್ಯಗಳಿಂದ ಬೇರೆ ಬೇರೆ ಭಾಷಿಕರು ಬಂದು, ಕರ್ನಾಟಕದ ಈ ಚಳುವಳಿಯಲ್ಲಿ ಭಾಗವಹಿಸಿದರು. ಹೊರಗಿನಿಂದ ಬಂದ ಇವರೆಲ್ಲ ಇಂದಿನ ಅಲ್ಪಸಂಖ್ಯಾತ ಭಾಷಿಕರಂತೆ ತಮ್ಮ ಮಾತೃಭಾಷೆಗಳನ್ನೇ ಮುಂದುಮಾಡಿಕೊಂಡು, ಅವರವರ ಮಾತೃಭಾಷೆಗಳಲ್ಲಿಯೇ ವಚನ ಬರೆಯಬಹುದಿತ್ತು. ಹಾಗೆಯೂ ಮಾಡಲಿಲ್ಲ. "ನಾವು ವಾಸಿಸುವ ರಾಜ್ಯದ ಭಾಷೆಯೇ ನಮ್ಮ ಮಾತೃಭಾಷೆ"

ಎಂಬ ವಾಸ್ತವ ಪ್ರಜ್ಞೆಯಿಂದ ಎಲ್ಲರೂ ಕನ್ನಡ ಮಾಧ್ಯಮದ ಶಿಕ್ಷಣ ಪಡೆದರು; ಕನ್ನಡ ಮಾಧ್ಯಮದಲ್ಲಿಯೇ ವಚನ ಬರೆದರು. 'ಕನ್ನಡಭಾಷಾವಾರ' ಪ್ರಾಂತ ರಚಿಸಿ, 'ಜಾತಿಭಾಷಾವಾರ' ನಿರ್ಣಯ ತೆಗೆದುಕೊಳ್ಳುವ ಸರಕಾರ ಮತ್ತು ಅಲ್ಪಸಂಖ್ಯಾತರು ಶರಣರ ಈ ಭಾಷಾನೀತಿಯನ್ನು ಗಮನಿಸುವುದು ಅಗತ್ಯವೆನಿಸಿದೆ.

ಮೇಲೆ ಹೇಳಿದ ಸ್ನಾತಕೋತ್ತರ ಅಧ್ಯಯನ, ಸಾಮಾಜಿಕ ಭಾಷಾನೀತಿ - ಇವುಗಳ ತಿಳುವಳಿಕೆಗೆ ಮುಖ್ಯ ಆಕರ ಶರಣರು ಬರವಣಿಗೆಯಲ್ಲಿ ಬಿಟ್ಟುಹೋಗಿರುವ ಅವರ ವಚನಸಾಹಿತ್ಯ. ಈ ಸಾಹಿತ್ಯವು ೧೨ನೆಯ ಶತಮಾನದಲ್ಲಿ ಸೃಜನ, ೧೫ನೆಯ ಶತಮಾನದಲ್ಲಿ ಸಂಪಾದನ, ೨೦ನೆಯ ಶತಮಾನದಲ್ಲಿ ಸಂಸ್ಕರಣವೆಂಬ ಮೂರು ಚಟುವಟಿಕೆಗಳಲ್ಲಿ ಕಾಣಿಸಿಕೊಂಡಿದೆ. ಇವುಗಳಲ್ಲಿ ಸಂಸ್ಕರಣ ಚಟುವಟಿಕೆಗೆ ನೂರು ವರ್ಷಗಳ ಇತಿಹಾಸವಿದೆ. ಈ ಸುದೀರ್ಘ ಅವಧಿಯಲ್ಲಿ ಫ. ಗು. ಹಳಕಟ್ಟಿ, ಎಸ್. ಎಸ್. ಬಸವನಾಳ, ಆರ್. ಸಿ. ಹಿರೇಮಠ, ಎಲ್. ಬಸವರಾಜು ಅವರಂಥ ವಿದ್ವಾಂಸರು, ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ಗದುಗಿನ ತೋಂಟದಾರ್ಯ ಮಠದಂಥ ಧಾರ್ಮಿಕ ಸಂಸ್ಥೆಗಳು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಂಥ ಸರಕಾರಿ ಸಂಸ್ಥೆಗಳು ಈ ಕಾರ್ಯವನ್ನು ಪೂರೈಸುತ್ತ ಬಂದವು. ಹೀಗೆ ಬಹುಮುಖಿಯಾಗಿ ದುಡಿದರೂ ಈ ಸಾಹಿತ್ಯ ಪೂರ್ಣಪ್ರಮಾಣದಲ್ಲಿ ಬೆಳಕಿಗೆ ಬಾರದೆ, ಹಸ್ತಪ್ರತಿಯಲ್ಲಿ ಒಂದಿಷ್ಟು ಉಳಿದುಕೊಂಡಿದ್ದಿತು. ಪ್ರಕಟವಾದ ಸಾಹಿತ್ಯವೂ ಅಲ್ಲಿಷ್ಟು-ಇಲ್ಲಿಷ್ಟು ಹಂಚಿಹೋಗಿದ್ದಿತು. ಈ ಎರಡೂ ಕೊರತೆಗಳನ್ನು ತುಂಬಿಕೊಡುವುದರ ಸಲುವಾಗಿ ಹತ್ತು ವರ್ಷಗಳ ಹಿಂದೆ ಈ ಬೃಹತ್ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು.

ಈ ಯೋಜನೆ ನಾವು ಅಂದುಕೊಂಡಷ್ಟು ಸುಲಭವಲ್ಲ. ಕೃತಕ ವಚನಕಾರರನ್ನು ಕೈಬಿಟ್ಟು ನಿಜವಚನಕಾರರನ್ನು ನಿರ್ಧರಿಸಿಕೊಳ್ಳುವುದು, ನಿಜವಚನಕಾರರ ಕೃತಕ ವಚನಗಳನ್ನು ಕೈಬಿಟ್ಟು ನಿಜವಚನಗಳನ್ನು ನಿರ್ಧರಿಸಿಕೊಳ್ಳುವುದು ಇಲ್ಲಿ ಮೊದಲು ನಡೆಯಬೇಕಾಗುತ್ತದೆ. ಈ ಎಚ್ಚರಿಕೆಯಿಂದ ನಾವು ಸುಮಾರು ೧೧೦ ಜನ ಕೃತಕ ವಚನಕಾರರನ್ನು ಕೈಬಿಟ್ಟು ೨೪೨ ಜನ ನಿಜವಚನಕಾರರನ್ನು ಇಟ್ಟುಕೊಂಡಿದ್ದೇವೆ. ಸುಮಾರು೧೦೮ ಪ್ರಾಚೀನ ವಚನಸಂಕಲನಗಳನ್ನು ಬಳಸಿಕೊಂಡು, ಅಲ್ಲಿಯ ವಚನಗಳನ್ನು ಕಷ್ಟಪಟ್ಟು ಸಂಗ್ರಹಿಸಿದ್ದೇವೆ. ಅವುಗಳನ್ನು ಇನ್ನೂ ಕಷ್ಟಪಟ್ಟು ಪರಿಷ್ಕರಿಸಿದ್ದೇವೆ. ಇತ್ತೀಚೆ ಹತ್ತು ಹಸ್ತಪ್ರತಿಗಳನ್ನು ಬಳಸಿಕೊಂಡು ಹನ್ನೊಂದನೆಯ ಹಸ್ತಪ್ರತಿಯನ್ನು ಸಿದ್ಧಪಡಿಸುವ ಮಟ್ಟಕ್ಕೆ ತಂದು ನಿಲ್ಲಿಸಿದ್ದ ವಚನಸಂಪಾದನೆಯ ತತ್ವವನ್ನು ಕೈಬಿಟ್ಟು, ಕನಿಷ್ಠಪಕ್ಷ ಶುದ್ಧ ಮತ್ತು ಪ್ರಾಚೀನ ಒಂದು ಪಾಠ ಪರಂಪರೆಯನ್ನಾದರೂ ಉಳಿಸಿಕೊಡುವ ಹೊಸ ಗ್ರಂಥಸಂಪಾದನ ಸಿದ್ಧಾಂತವನ್ನು ಇಲ್ಲಿ ಅಳವಡಿಸಿಕೊಂಡಿದ್ದೇವೆ. ಮತ್ತು ಶಾಬ್ದಿಕ ಸಂಸ್ಕರಣ-ಸಾಂಸ್ಕೃತಿಕ ಸಂಸ್ಕರಣಗಳ ನೆಲೆಯಲ್ಲಿ ತಪ್ಪು ಪಾಠಗಳನ್ನು ಸರಿಪಡಿಸಿದ್ದೇವೆ. ಒಂದೆರಡು ಉದಾಹರಣೆಗಳನ್ನು ಕೊಡುವುದಾದರೆ, ಈ ವರೆಗೆ ಎಲ್ಲ ವಿದ್ವಾಂಸರೂ ಭಾವಿಸಿದಂತೆ 'ಜಾತಿಶೈವ, ಅಜಾತಿಶೈವ' ಎಂದು ಆರಂಭವಾಗುವ ವಚನ ಮಹಾದೇವಿಯರದು ಅಲ್ಲ; ಮಹಾದೇವೀರಯ್ಯನದು. ಹೀಗೆ ಅನೇಕರ ಹೆಸರುಗಳನ್ನು ಸರಿಪಡಿಸಿದ್ದೇವೆ. ಮಾದಾರ ಚೆನ್ನಯ್ಯನ ಮುದ್ರಿಕೆ 'ನಿಜಾತ್ಮ ರಾಮ ರಾಮ' ಅಲ್ಲ "ನಿಜಾ[ತ್ಮಾ]ರಾಮ ರಾಮ". ಹೀಗೆ ಅನೇಕರ ಮುದ್ರಿಕೆಗಳನ್ನೂ ಸರಿಪಡಿಸಿದ್ದೇವೆ. ವಚನಗಳ ಪಾಠಕ್ಕೆ ಬಂದರೆ "ಏನಿ ಬಂದಿರಿ, ಹದುಳವಿದ್ದಿರೆ?" ಎಂಬ ಬಸವಣ್ಣನವರ ವಚನದಲ್ಲಿ ಬರುವ "ನಿಮ್ಮ ಮೈಸಿರಿ ಹಾರಿಹೋಹುದೆ?" ಎಂಬುದರ ನಿಜಪಾಠ "ನಿಮ್ಮೈಸಿರಿ ಹಾರಿಹೋಹುದೆ?" ಎಂಬುದಾಗಿದೆ. ಹೀಗೆ ಹತ್ತಾರು ಅಲ್ಲ, ನೂರಾರು ಅಲ್ಲ, ಸಾವಿರಾರು ಪಾಠಗಳನ್ನು ಸರಿಪಡಿಸಿದ್ದೇವೆ. ಇಷ್ಟಾಗಿಯೂ ನಮಗೆ ಪರಿಷ್ಕರಿಸಲು ಸಾಧ್ಯವಾಗದ ಅನೇಕ ಅಪಪಾಠಗಳು ಉಳಿದುಕೊಂಡಿವೆ.

ವಚನಸಂಖ್ಯೆಯನ್ನು ಕುರಿತು ಹೇಳುವುದಾದರೆ, ಪ್ರಥಮ ಆವೃತ್ತಿಯಲ್ಲಿ ಬಸವಯುಗಕ್ಕೆ ಸುಮಾರು ಒಂದೂವರೆ ಸಾವಿರ ಹೊಸ ವಚನಗಳನ್ನು ಸೇರಿಸಿದ್ದೇವೆ. ಬಸವೋತ್ತರ ಯುಗವನ್ನು ಪ್ರಥಮ ಬಾರಿ ಸಮಗ್ರವಾಗಿ ಶೋಧಿಸಿ ಹೊರತಂದಿದ್ದೇವೆ.

ದ್ವಿತೀಯ ಆವೃತ್ತಿಯನ್ನು ಕುರಿತು ಹೇಳುವುದಾದರೆ, ಪ್ರಥಮ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಪುನರುಕ್ತಿಗಳನ್ನು ನಿವಾರಿಸಿಕೊಂಡಿದ್ದೇವೆ. ಅಪಪಾಠಗಳನ್ನು ಪರಿಷ್ಕರಿಸಿಕೊಂಡಿದ್ದೇವೆ. ಮತ್ತೆ ಒಂದೂವರೆ ಸಾವಿರದಷ್ಟು ಹೊಸ ವಚನಗಳನ್ನು ಹುಡುಕಿ ಸೇರಿಸಿದ್ದೇವೆ. ಇಷ್ಟಾಗಿಯೂ ಬಸವೋತ್ತರಯುಗದ ಒಬ್ಬ ಶರಣನ ಸುಮಾರು ಒಂದೂವರೆ ಸಾವಿರ ವಚನಗಳು ಹೊರಗೆ ಉಳಿದುಕೊಂಡಿದ್ದು, ಅವುಗಳನ್ನು ಆಮೇಲೆ ಪುರವಣಿ ಸಂಪುಟವಾಗಿ ಪ್ರಕಟಿಸಲು ಸಭೆಯಲ್ಲಿ ನಿರ್ಣಯ ಸ್ವೀಕರಿಸಿದ್ದೇವೆ.

ಇದೆಲ್ಲವನ್ನೂ ನೋಡಿದರೆ ವಚನಗಳ ಶೋಧ, ಪರಿಷ್ಕರಣ, ಪ್ರಕಟನೆ ಎನ್ನುವುದು ಮುಗಿದ ಕೆಲಸವಲ್ಲ, ಮುಗಿಯುವ ಕೆಲಸವೂ ಅಲ್ಲವೆನಿಸುತ್ತದೆ. ಆದುದರಿಂದ ಮೇಲೆ ಹೇಳಿದ 'ಡಿಪಾರ್ಟಮೆಂಟ ಆಫ್ ವಚನ ಲಿಟರೇಚರ್'ದಲ್ಲಿ 'ವಚನಸಾಹಿತ್ಯ ಪರಿಷ್ಕರಣ'ದ ಒಂದು ಶಾಶ್ವತ ಯೋಜನೆ ಅಸ್ತಿತ್ವಕ್ಕೆ ಬರುವುದು ಅಗತ್ಯವಿದೆ ಎಂದು ಹೇಳಬೇಕಾಗುತ್ತದೆ. ಈ ಸಂಪುಟಗಳನ್ನು ಖರೀದಿಸಲು ಬೇರೆ ಬೇರೆ ದೇಶಗಳಲ್ಲಿರುವ ಕನ್ನಡಿಗರು ತುಂಬ ಉತ್ಸುಕರಾಗಿದ್ದಾರೆ. ಆದುದರಿಂದ ಈ ಎಲ್ಲ ಸಂಪುಟಗಳನ್ನು ಸರಕಾರಿ ಸಿ. ಡಿ. ರೋಮ್‌ಗೆ ಪರಿವರ್ತಿಸಿ, ಜಾಗತಿಕ ಮಟ್ಟದಲ್ಲಿ ಎಲ್ಲರಿಗೂ ಸುಲಭವಾಗಿ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ. ಇದು ಸರಕಾರಕ್ಕೆ ಕೀರ್ತಿಯನ್ನೂ, ವಿದೇಶೀ ವಿನಿಮಯವನ್ನೂ ತಂದುಕೊಡುವುದೆಂದು ಬೇರೆ ಹೇಳಬೇಕಿಲ್ಲ.

ಇಂದು ಬಿಡುಗಡೆಯಾಗುತ್ತಲಿರುವ ಈ ಸಂಪುಟಗಳು ಮೂರು ವರ್ಷಗಳ ಹಿಂದೆಯೇ ಪ್ರಕಟವಾಗಬೇಕಿತ್ತು. ಆದರೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯು ಅಡ್ಡಬಂದು, ತಡವಾಯಿತು. ಆ ಹುದ್ದೆಯಿಂದ ನಿವೃತ್ತಿಗೊಂಡ ಆರು ತಿಂಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುತ್ತಲೇ ಆರ್ಥಿಕ ತೊಂದರೆ ಅಡ್ಡಿಬಂದಿತು. ಆಗ ಆಪದ್ಬಂಧುವಿನಂತೆ ಮುಂದೆ ಬಂದು ಈ ಸಂಪುಟಗಳನ್ನು ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ವೆಂಕಟೇಶ ಅವರಿಗೆ, ಉದ್ದಕ್ಕೂ ನೆರವಿಗೆ ನಿಂತ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿಕಟಪೂರ್ವ ನಿರ್ದೇಶಕರಾದ ಶ್ರೀ ರಾಮಮೂರ್ತಿ ಅವರಿಗೆ ಕೃತಜ್ಞನಾಗಿದ್ದೇನೆ. ಈ ಹೊಣೆಯನ್ನು ಸರಿಯಾಗಿ ನಿರ್ವಹಿಸುವಲ್ಲಿ ಮಾರ್ಗದರ್ಶನ ನೀಡಿದ ಸಂಪಾದಕ ಮಂಡಲಿಯ ಸದಸ್ಯರಿಗೂ, ಸಕಾಲದಲ್ಲಿ ಕೆಲಸವನ್ನು ಪೂರೈಸಿದ ಎಲ್ಲ ಸಂಪುಟಗಳ ಸಂಪಾದಕ ಮಿತ್ರರಿಗೂ ಋಣಿಯಾಗಿದ್ದೇನೆ.

ಕೊನೆಯದಾಗಿ, ಈ ಸಾಹಿತ್ಯ ರಚಿಸಿದ ವಚನಕಾರರು ಕರ್ನಾಟಕದ ಪ್ರಜಾಸಾಮಾನ್ಯರು, ವಚನಗಳು ಪ್ರಜಾಸಾಹಿತ್ಯ. ಇದನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾ ಸರಕಾರದ ಕರ್ತವ್ಯವಾಗಿದೆ. ಈ ಭಾವನೆಯಿಂದ ಇದರ ಪ್ರಕಟನೆಗೆ ತೀವ್ರ ಆಸಕ್ತಿವಹಿಸಿದ ಮತ್ತು ಕಡಿಮೆ ಬೆಲೆಯಿಡಲು ಸಮ್ಮತಿಸಿದ ಸಂಸ್ಕೃತಿ ಸಂಪನ್ನರಾದ ಮಾನ್ಯ ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣ ಅವರಿಗೆ, ಮಾನ್ಯ ಸಂಸ್ಕೃತಿ ಸಚಿವೆ ಶ್ರೀಮತಿ ರಾಣಿ ಸತೀಶ ಅವರಿಗೆ ವಂದನೆಗಳು, ನಿಮಗೆಲ್ಲರಿಗೂ ವಂದನೆಗಳು.

ಸಮಗ್ರ ವಚನ ಸಂಪುಟಗಳ (ದ್ವಿತೀಯ ಆವೃತ್ತಿ) ಬಿಡುಗಡೆ ಸಂದರ್ಭ (ಬೆಂಗಳೂರು, ೨೦೦೧).

ಆಕರ : ಮಾರ್ಗ ಸಂಪುಟ–೬

೩೪

ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ : ಬಿಡುಗಡೆ

೨೦೦೭

ಪೂಜ್ಯರಲ್ಲಿ, ಗಣ್ಯರಲ್ಲಿ ಮತ್ತು ಸಭಿಕರಲ್ಲಿ
ನಮಸ್ಕಾರ.

ಪ್ರಾತಃಸ್ಮರಣೀಯರಾದ ಡಾ. ಫ. ಗು. ಹಳಕಟ್ಟಿಯವರ ಸಮಗ್ರ ಸಾಹಿತ್ಯ ಪ್ರಕಟನೆ, ವಿಜಾಪುರದ ಬಿ. ಎಲ್. ಡಿ. ಇ. ಸಂಸ್ಥೆಯ ಇತಿಹಾಸದಲ್ಲಿ, ಶ್ರೀ ಎಂ. ಬಿ. ಪಾಟೀಲ ಅವರ ಮತ್ತು ಶ್ರೀ ಶಿವಯೋಗಿ ತಂಬಾಕೆ ಅವರ ಆಡಳಿತಾವಧಿಯಲ್ಲಿ ಒಂದು ಹೊಸ ಅಧ್ಯಾಯವಾಗಿದೆ. ಇದೇ ರೀತಿ, ನನ್ನ ಜೀವನದಲ್ಲಿಯೂ ಒಂದು ಅಪೂರ್ವ ಘಟನೆಯಾಗಿದ್ದು, ಇದನ್ನು ನನ್ನದಾಗಿಸಿದ ದೇವರಿಗೆ ನಾನು ಕೃತಜ್ಞನಾಗಿದ್ದೇನೆ.

'ದಾಸೋಹ' ಲಿಂಗಾಯತ ಧರ್ಮದ ಕೇಂದ್ರತತ್ವವಾಗಿದೆ. ದೈವೀಕರಣಗೊಂಡ ವ್ಯಕ್ತಿತ್ವವನ್ನು ಸಾಮಾಜೀಕರಣಗೊಳಿಸುವುದೇ ದಾಸೋಹ. ೧೯ ಮತ್ತು ೨೦ನೆಯ ಶತಮಾನಗಳ ಸಂಧಿಕಾಲದಲ್ಲಿ ತಮ್ಮ ವ್ಯಕ್ತಿತ್ವವನ್ನು ಹೀಗೆ ಸಾಮಾಜೀಕರಣಗೊಳಿಸಿಕೊಂಡವರಲ್ಲಿ ಡೆಪ್ಯುಟಿ ಚೆನ್ನಬಸಪ್ಪನವರು, ಅರಟಾಳ ರುದ್ರಗೌಡರು, ಹಾನಗಲ್ಲ ಕುಮಾರಸ್ವಾಮಿಗಳು, ಸಿರಸಂಗಿ ಲಿಂಗರಾಜರು, ವಾರದ ಮಲ್ಲಪ್ಪನವರು, ಹರ್ಡೇಕರ ಮಂಜಪ್ಪನವರು, ಹಳಕಟ್ಟಿ ಫಕೀರಪ್ಪನವರು ಮುಖ್ಯರು.

ಇವರಲ್ಲಿ ಸಾಹಿತ್ಯಮಾಧ್ಯಮದ ಮೂಲಕವೂ ವ್ಯಕ್ತಿತ್ವವನ್ನು ಸಾಮಾಜೀಕರಣಗೊಳಿಸಿಕೊಳ್ಳಬಹುದೆಂದು ನನಗೆ ಗೊತ್ತಾದದ್ದು ಡಾ. ಹಳಕಟ್ಟಿಯವರ ಕಾರ್ಯವಿಧಾನದ ಮೂಲಕ. ತಕ್ಕ ಮಟ್ಟಿಗೆ ನಾನು ಅವರ ಈ ಆದರ್ಶದಲ್ಲಿ ಮುನ್ನಡೆದು, ಕನ್ನಡ ಸಮಾಜದ, ಲಿಂಗಾಯತ ಸಮಾಜದ ಸಾಹಿತ್ಯಿಕ ಕೆಲಸವನ್ನು ಮಾಡುತ್ತ, ಮಾಡಿಸುತ್ತ, ಬಂದಿದ್ದೇನೆ. ಹೀಗಾಗಿ ಡಾ. ಹಳಕಟ್ಟಿಯವರು ನನ್ನ ದೃಷ್ಟಿಯಲ್ಲಿ ಕೇವಲ ಒಬ್ಬ ವ್ಯಕ್ತಿಯಲ್ಲ, ಒಂದು ಸಂಸ್ಥೆ - ಒಂದು ಪ್ರೇರಣೆಯೆಂದು ಹೇಳಬಯಸುತ್ತೇನೆ.

ಈ ಪ್ರೇರಣೆ ನನ್ನಲ್ಲಿ ದೊಡ್ಡ ಶಕ್ತಿಯಾಗಿ ಕೆಲಸ ಮಾಡಿದ ಕಾರಣ, ಗದುಗಿನ ಶ್ರೀ ತೋಂಟದಾರ್ಯ ಮಠದ "ಲಿಂಗಾಯತ ಪುಣ್ಯಪುರುಷಮಾಲೆ"ಯ ಮೂಲಕ ಇನ್ನೂರು ಜನ ಲಿಂಗಾಯತ ಗಣ್ಯರ ಚರಿತ್ರೆಗಳು ಪ್ರಕಟವಾಗಿವೆ. ಡೆಪ್ಯುಟಿ ಚೆನ್ನಬಸಪ್ಪ, ಸಿರಸಂಗಿ ಲಿಂಗರಾಜ, ಅರಟಾಳ ರುದ್ರಗೌಡ, ಹರ್ಡೇಕರ ಮಂಜಪ್ಪ, ಹಳಕಟ್ಟಿ ಫಕೀರಪ್ಪ, ಶಿ. ಶಿ. ಬಸವನಾಳ, ಶಿ. ಚೆ. ನಂದಿಮಠ, ಹಾಲಭಾವಿ ವೀರಭದ್ರಪ್ಪ ಮೊದಲಾದವರ

ಜೀವನ-ಸಾಧನೆಯ ಪೂರ್ಣಪ್ರಮಾಣದ ಕೃತಿಗಳು ನನ್ನ ಪ್ರತ್ಯಕ್ಷ-ಪರೋಕ್ಷ ಪ್ರಯತ್ನದಿಂದಾಗಿ ಬೆಳಕು ಕಂಡಿವೆ. ಇಷ್ಟರಲ್ಲಿ ಶ್ರೀ ಪ್ರಭಾಕರ ಕೋರೆಯವರ ಆಸಕ್ತಿಯಿಂದಾಗಿ ಬೆಳಗಾವಿಯ ಕೆ. ಎಲ್. ಇ. ಸೊಸೈಟಿಯ ಪ್ರಸಾರಾಂಗದ ಮೂಲಕ ವಾರದ ಮಲ್ಲಪ್ಪ, ಹಳ್ಳಿಕೇರಿ ಗುದ್ಲೆಪ್ಪ, ಅಂಗಡಿ ಷಣ್ಮುಖಪ್ಪನವರನ್ನು ಕುರಿತ ಗ್ರಂಥಗಳು ಬಿಡುಗಡೆಯಾಗಲಿವೆ. ಹೆಚ್ಚಿನದಾಗಿ ಲಿಂಗಾಯತ ಶರಣರ, ವ್ಯಕ್ತಿಗಳ, ರಾಜಮನೆತನಗಳ ಚರಿತ್ರೆಯ ಶೋಧ-ಪ್ರಕಟನ ಕಾರ್ಯವೂ ನನ್ನಿಂದ ಜರುಗಿದೆ.

ಇದನ್ನು ಹೊರತುಪಡಿಸಿದರೆ 'ಸಮಗ್ರ ವಚನಸಾಹಿತ್ಯ' ಪ್ರಕಟನ ಯೋಜನೆಯಂತೆ, ಈಗ 'ಸಮಗ್ರ ವಚನಪಿತಾಮಹ ಸಾಹಿತ್ಯ' ಪ್ರಕಟನ ಯೋಜನೆಯನ್ನೂ ಪೂರೈಸಿದ ಭಾಗ್ಯ ನನ್ನದಾಗಿದೆ. ಬಹುಶಃ ದೇವರು ಈ ಎರಡು ಕೆಲಸಗಳಿಗಾಗಿಯೇ ನನ್ನನ್ನು ಹುಟ್ಟಿಸಿರುವನೆಂದು ಭಾವಿಸುತ್ತೇನೆ.

ಬಿ. ಎಲ್. ಡಿ. ಇ. ಸಂಸ್ಥೆಯ ಆವರಣದಲ್ಲಿ ಡಾ. ಹಳಕಟ್ಟಿ ಸ್ಮಾರಕ ಭವನ ನಿರ್ಮಾಣಗೊಂಡುದು ಒಂದು ಮಹತ್ವ ಘಟನೆ. ಈ ಭವನದ ಉದ್ಘಾಟನ ಕಾರ್ಯಕ್ರಮ (೨ ಜುಲೈ,೨೦೦೩)ದಲ್ಲಿ ಭಾಗವಹಿಸಿದ್ದ ನಾನು, ಈ ಕಟ್ಟಡವನ್ನು ಅಧ್ಯಯನದಿಂದ ತುಂಬಬೇಕೆಂಬ ಸಂಕಲ್ಪ ಮಾಡಿದೆ. ಈ ಸಂಕಲ್ಪದ ಸಾಕಾರವೆಂಬಂತೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಇದಕ್ಕೆ ಮನ್ನಣೆ ಲಭಿಸಿ, ಇಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಪ್ರಾಪ್ತವಾಯಿತು. ಜೊತೆಗೆ, ಕೈತಪ್ಪಿ ಹೋಗುವ ಮೊದಲೇ ಸಮಗ್ರ ಹಳಕಟ್ಟಿ ಸಾಹಿತ್ಯವು ಈ ಸಂಸ್ಥೆಯ ಮೂಲಕ ಪ್ರಕಟವಾಗಬೇಕೆಂಬ ಯೋಚನೆಯೂ ನನ್ನಲ್ಲಿ ಮೂಡಿತು. ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ, ಪೂಜ್ಯಶ್ರೀ ಸಿದ್ಧೇಶ್ವರ ಸ್ವಾಮಿಗಳ ಪ್ರೇರಣೆ, ಶ್ರೀ. ಎಂ. ಬಿ. ಪಾಟೀಲ ಮೊದಲಾದವರ ಔದಾರ್ಯ, ಶ್ರೀ ಶಿವಯೋಗಿ ತಂಬಾಕೆಯವರ ಆಸಕ್ತಿಗಳಿಂದಾಗಿ, ಅದು ಒಂದು ಬೃಹತ್ ಯೋಜನೆಯ ರೂಪದಲ್ಲಿ ಅಸ್ತಿತ್ವಕ್ಕೆ ಬಂದಿತು.

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ಎತ್ತಿ ಹೇಳಲೇಬೇಕು. ಅದು: ನಾನು ಯಾವುದೇ ದೊಡ್ಡ ಯೋಜನೆ ಕೈಗೆತ್ತಿಕೊಳ್ಳಲಿ, ಯೋಗಾಯೋಗವೆಂಬಂತೆ ಅದಕ್ಕೆ ಮಾನ್ಯ ಶ್ರೀ ಎಂ. ಪಿ. ಪ್ರಕಾಶ ಅವರ ಸಹಾಯ, ಸಂಪರ್ಕ ಉದ್ದಕ್ಕೂ ಒದಗಿಬಂದಿದೆ. ಈ ಹಿಂದೆ ನನ್ನ "ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ"ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿ ಬಂದು ಮಂಜೂರು ನೀಡಿದರು. "ಎಡೆಯೂರ ತೋಂಟದಾರ್ಯ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ"ಗೆ ಮುಜರಾಯಿ ಇಲಾಖೆಯ ಸಚಿವರಾಗಿ ಬಂದು, ಮಂಜೂರು ನೀಡಿ ಹಣ ಬಿಡುಗಡೆ ಮಾಡಿ, ಸಂಪುಟಗಳು ಹೊರಬರುವಂತೆ ನೋಡಿಕೊಂಡರು. ಇಂತಹ ಯೋಗ ಹಳಕಟ್ಟಿ ಸಂಪುಟಗಳ ವಿಷಯದಲ್ಲಿಯೂ ಜರುಗಿತು. ಅದು: ಈ ಯೋಜನೆಯ ಪ್ರಥಮ ಸಭೆ ಜರುಗಿದುದು, ಶ್ರೀ ಪ್ರಕಾಶ ಅವರ ಜನ್ಮಗ್ರಾಮವಾದ ಬಳ್ಳಾರಿ ಜಿಲ್ಲೆಯ ವಲ್ಲಭಾಪುರದಲ್ಲಿ, ಇದಕ್ಕೆ ಕಾರಣ, ಹಗರಿಬೊಮ್ಮನಹಳ್ಳಿಯಲ್ಲಿ ಪ್ರವಚನ ಪ್ರಾರಂಭಿಸಿದ್ದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ನೆರೆಯ ವಲ್ಲಭಾಪುರದಲ್ಲಿ ವಾಸವಾಗಿದ್ದರು. ಪ್ರವಚನದ ಮುಕ್ತಾಯ ಸಮಾರಂಭಕ್ಕೆ ಆಗಮಿಸಿದ್ದ ಶ್ರೀ ಸುತ್ತೂರು ಜಗದ್ಗುರುಗಳು ಆ ಗ್ರಾಮದಲ್ಲಿ ಈ ಸಂಪುಟಗಳ ಮೊದಲ ಸಭೆ ಕರೆದರು. ಸಹಜವಾಗಿಯೇ ಶ್ರೀ ಪ್ರಕಾಶ ಅವರು ಸಭೆಯಲ್ಲಿ ಹಾಜರಿದ್ದು, ಮಾರ್ಗದರ್ಶನ ಮಾಡಿದರು. ಇಷ್ಟು ಸಾಲದೆಂಬಂತೆ ಇಂದು ಅತಿಥಿಯಾಗಿಯೂ ಆಗಮಿಸಿ, ನನ್ನ ಸಂತೋಷವನ್ನು ಇಮ್ಮಡಿಗೊಳಿಸಿದ್ದಾರೆ.

* * *

ಈ ಪ್ರಥಮ ಸಭೆ ಮುಗಿದ ಬಳಿಕ ಎದುರಾದ ಸಮಸ್ಯೆಯೆಂದರೆ, ಹಳಕಟ್ಟಿ ಸಾಹಿತ್ಯದ ಒಟ್ಟು ಮೊತ್ತವನ್ನು ಗುರುತಿಸುವುದು. ಗ್ರಂಥ ಮತ್ತು ಲೇಖನರೂಪದಲ್ಲಿ ಪ್ರಕಟವಾಗಿರುವ ಈ ಸಾಹಿತ್ಯದ ಸಮಸ್ಯೆಗಳು ಹೀಗಿವೆ. ೧. ಗ್ರಂಥಗಳಲ್ಲಿ ಕೆಲವು ನೇರವಾಗಿ ಬೆಳಕು ಕಂಡಿವೆ. ಕೆಲವು ಶಿವಾನುಭವ ಪತ್ರಿಕೆಗಳಲ್ಲಿ ಮೊದಲು

ಧಾರಾವಾಹಿಯಾಗಿ ಪ್ರಕಟಗೊಂಡು, ಆಮೇಲೆ ಗ್ರಂಥರೂಪ ಪಡೆದಿದೆ. ಇನ್ನು ಕೆಲವು ಗ್ರಂಥಗಳಾಗದೆ ಶಿವಾನುಭವ ಪತ್ರಿಕೆಯಲ್ಲಿಯೇ ಉಳಿದಿದೆ. ಕೆಲವೊಮ್ಮೆ ಈ ಪತ್ರಿಕೆಯಲ್ಲಿ ಅಪೂರ್ಣ ಸ್ಥಿತಿಯಲ್ಲಿ ನಿಂತುಬಿಟ್ಟಿವೆ. ೨. ಇವರ ಪುಸ್ತಕಗಳನ್ನು ಪ್ರಕಟಿಸಿದ "ಶಿವಾನುಭವ ಗ್ರಂಥಮಾಲೆ"ಯಲ್ಲಿ ಬೇರೆಯವರ ಕೃತಿಗಳೂ ಪ್ರಕಟವಾಗಿದ್ದು, ಇವೂ ಹಳಕಟ್ಟಿಯವರ ಕೃತಿಗಳೆಂಬ ಪ್ರಚಾರ ದಟ್ಟವಾಗಿ ಹಬ್ಬಿದೆ. ೩. ಒಂದೆರಡು ಸಲ ಪುಸ್ತಕದ ಹೆಸರು ಆವೃತ್ತಿಯಿಂದ ಆವೃತ್ತಿಗೆ ಭಿನ್ನವಾಗಿದೆ. ೪. ಇದೇ ರೀತಿ ವಿಷಯಸ್ಪಷ್ಟನೆಗಾಗಿ ಒಂದು ಪುಸ್ತಕವು ದ್ವಿತೀಯ ಆವೃತ್ತಿಯಲ್ಲಿ ಎರಡು ಪುಸ್ತಕಗಳಲ್ಲಿ ಹಂಚಿಹೋಗಿದೆ. ಎರಡು ಪುಸ್ತಕಗಳು ಒಂದು ಪುಸ್ತಕವಾಗಿ ನಿಂತಿವೆ. ೫. ಕೆಲವು ಪುಸ್ತಕಗಳ ಮೇಲೆ ಪ್ರಕಟಿತ ವರ್ಷವನ್ನಾಗಲೀ, ಆವೃತ್ತಿ ಸಂಖ್ಯೆಯನ್ನಾಗಲೀ ಮುದ್ರಿಸಿಲ್ಲ. ೬. ಕೆಲವೊಮ್ಮೆ ಗ್ರಂಥಮಾಲೆಯ ಒಂದು ಕ್ರಮಸಂಖ್ಯೆ ಎರಡು ಗ್ರಂಥಗಳ ಮೇಲೆ ಅಚ್ಚಾಗಿದೆ. ಇನ್ನು ಕೆಲವೊಮ್ಮೆ ಮುಖಪುಟದ ಮೇಲೆ ಒಂದು ಸಂಖ್ಯೆ, ಒಳಪುಟದ ಮೇಲೆ ಇನ್ನೊಂದು ಸಂಖ್ಯೆ ಅಚ್ಚಾಗಿದೆ. ಕೆಲವು ಪುಸ್ತಕಗಳ ಮೇಲೆ ಗ್ರಂಥಮಾಲೆಯ ಕ್ರಮಸಂಖ್ಯೆಯನ್ನೇ ಮುದ್ರಿಸಿಲ್ಲ. ೭. ಶಿವಾನುಭವ ಪತ್ರಿಕೆಯ ಸಂಪುಟ-ಸಂಚಿಕೆಗಳ ಕ್ರಮಸಂಖ್ಯೆಯಲ್ಲಿಯೂ ಕೆಲವೊಮ್ಮೆ ಈ ದೋಷ ಘಟಿಸಿದೆ. ಹತ್ತಾರು ಹೊಣೆಗಳ ನಡುವೆ ಈ ಬಗೆಯ ಕೊರತೆ ಸಂಭವಿಸುವುದು ಸಹಜ. ನಾವು ಆರಂಭದಲ್ಲಿ ಈ ಎಲ್ಲ ಗೊಂದಲಗಳನ್ನು ಪರಿಹರಿಸಿಕೊಳ್ಳಬೇಕಾಯಿತು.

ಬಳಿಕ ಎದುರಾದುದು, ಪುಸ್ತಕ ಮತ್ತು ಶಿವಾನುಭವ ಪತ್ರಿಕೆ ಹುಡುಕುವುದು. ಈ ಸಂದರ್ಭದಲ್ಲಿ ಬೆಳಗಾವಿ ರುದ್ರಾಕ್ಷಿಮಠದ ಲಿಂಗಾಯತ ಗ್ರಂಥಾಲಯದ ವಿಶೇಷ ನೆರವು ನಮಗೆ ಒದಗಿಬಂದಿತು. ಇಲ್ಲಿ ಸಿಗುವ ಸಾಮಗ್ರಿ ಬಾಹುಳ್ಯವನ್ನು ಗಮನಿಸಿ ಬಿ. ಎಲ್. ಡಿ. ಇ. ಸಂಸ್ಥೆ ಈ ಗ್ರಂಥಾಲಯಕ್ಕೆ ಒಂದು ಝೆರಾಕ್ಸ ಯಂತ್ರವನ್ನೇ ಕಾಣಿಕೆಯಾಗಿ ನೀಡಿದುದರ ಫಲವಾಗಿ ನಮಗೆ ಎಲ್ಲ ಲೇಖನ ಗ್ರಂಥಗಳ ಝೆರಾಕ್ಸ ಪ್ರತಿ ಲಭ್ಯವಾದವು. ಈ ಸಂದರ್ಭದಲ್ಲಿ ಪೂಜ್ಯ ಶ್ರೀ ಸಿದ್ಧರಾಮ ಸ್ವಾಮೀಜಿಯವರ ನೆರವನ್ನು ನಾವು ನೆನೆಯಲೇಬೇಕು. ಇಷ್ಟಾಗಿಯೂ ಸಮಗ್ರಸಾಹಿತ್ಯ ನಮ್ಮ ಕೈಸೇರಲಿಲ್ಲ. ಧಾರವಾಡ, ಬಾಗಲಕೋಟ, ವಿಜಾಪುರ, ಬೆಂಗಳೂರು, ಮೈಸೂರು, ಶಿವಯೋಗಮಂದಿರ ಮೊದಲಾದ ಕೇಂದ್ರಗಳಿಂದ ಸಾಮಗ್ರಿಯನ್ನು ಸಂಗ್ರಹಿಸಲಾಯಿತು.

ಈ ಸಂಗ್ರಹದ ಬಳಿಕ ನಾವು ಪೂರೈಸಿದುದು, ಇದರ ವ್ಯವಸ್ಥಿತ ವರ್ಗೀಕರಣ. ೧ ರಿಂದ ೬ ವಚನ ಸಾಹಿತ್ಯ ಸಂಪುಟಗಳು, ೭ನೆಯದು ವಚನ ವಿವೇಚನ ಸಂಪುಟ, ೮ ಮತ್ತು ೯ ಕಾವ್ಯಸಾಹಿತ್ಯ ಸಂಪುಟಗಳು, ೧೦ರಿಂದ ೧೨ ಚರಿತ್ರಸಾಹಿತ್ಯ ಸಂಪುಟಗಳು, ೧೩ ಮತ್ತು ೧೪ ಲೇಖನಸಾಹಿತ್ಯ ಸಂಪುಟಗಳು. ಹೀಗೆ ವರ್ಗೀಕರಿಸಿ, ಕೆಲಸದ ಅನುಕೂಲಕ್ಕಾಗಿ ಬೆಳಗಾವಿ, ಧಾರವಾಡ, ವಿಜಾಪುರ ಪ್ರದೇಶಗಳ ಡಾ. ಎಸ್. ಆರ್. ಗುಂಜಾಳ, ಡಾ. ಬಸವರಾಜ ಜಗಜಂಪಿ, ಡಾ. ಗುಂಡಣ್ಣ ಕಲಬುರ್ಗಿ, ಡಾ. ವಿ.ಎಸ್. ಮಾಳಿ, ಡಾ. ಎಂ. ಎಂ. ಕಲಬುರ್ಗಿ, ಡಾ. ವೀರಣ್ಣ ರಾಜೂರ, ಡಾ. ಜೆ. ಎಂ. ನಾಗಯ್ಯ, ಡಾ. ಬಿ.ವಿ. ಮಲ್ಲಾಪುರ, ಡಾ. ಬಾಳಣ್ಣ ಸೀಗೀಹಳ್ಳಿ, ಡಾ. ಎಸ್.ಕೆ. ಕೊಪ್ಪಾ, ಡಾ. ಎಂ.ಎಂ. ಪಡಶೆಟ್ಟಿ, ಡಾ. ಎಂ. ಎಸ್. ಮದಭಾವಿ, ಶ್ರೀ ಸಿದ್ಧಲಿಂಗ ದೇಸಾಯಿ, ಡಾ. ಬಿ. ಎಂ. ಪಾಟೀಲ, ಡಾ. ಪಿ. ಕೆ. ರಾಠೋಡ ಇವರಿಗೆ ಪರಿಷ್ಕರಣ ಕಾರ್ಯವನ್ನು ವಹಿಸಿಕೊಡಲಾಯಿತು. ಹೀಗೆ ವಹಿಸಿಕೊಟ್ಟ ೧೪ ಸಂಪುಟಗಳು ಸಿದ್ಧವಾದ ಬಳಿಕವೂ ಉಳಿದುಕೊಂಡಿದ್ದ ಲೇಖನ-ಮುನ್ನುಡಿ ಇತ್ಯಾದಿಗಳನ್ನೊಳಗೊಂಡ ೧೫ನೆಯ ಸಂಪುಟವನ್ನು ಕೊನೆಯ ಗಳಿಗೆಯಲ್ಲಿ ಸಿದ್ಧಪಡಿಸಿಕೊಟ್ಟವರು ಡಾ. ಸರಸ್ವತಿದೇವಿ ಭಗವತಿ ಮತ್ತು ಡಾ. ಎಚ್. ಎಸ್. ಮೇಲಿನಮನಿ. ಈ ಕೊನೆಯ ಸಂಪುಟದ ವಿಶೇಷತೆಯೆಂದರೆ ಇಲ್ಲಿ ಶಿವಾನುಭವಪತ್ರಿಕೆಯ ಎಲ್ಲ ಸಂಪುಟ-ಸಂಚಿಕೆಗಳ ಸಂಖ್ಯೆ ಮತ್ತು ಕ್ರಮಸಂಖ್ಯೆಗಳನ್ನು ಖಚಿತವಾಗಿ ದಾಖಲಿಸಿದುದು, ಹೆಚ್ಚಿನದಾಗಿ ಎಲ್ಲ ಸಂಚಿಕೆಗಳ ಪರಿವಿಡಿಗಳನ್ನು ಮುದ್ರಿಸಿದುದು. ಒಟ್ಟು ಯೋಜನೆಯಲ್ಲಿ ಮೇಲೆ ಹೇಳಿದ ಎಲ್ಲ ಸಂಪಾದಕರ ಶ್ರಮವನ್ನು, ವಿಶೇಷವಾಗಿ ಡಾ.ಹನುಮಂತ ಮೇಲಿನಮನಿಯವರ ಸಹಾಯವನ್ನು ಪ್ರೀತಿಯಿಂದ ನೆನೆಯುತ್ತೇನೆ.

ಈ ಸಂಪುಟಗಳ ಪ್ರಕಟಣೆಯಿಂದಾಗಿ ಹಳಕಟ್ಟಿಯವರು ಪ್ರಕಟಿಸಿದ್ದ ಧರ್ಮ, ಸಾಹಿತ್ಯ, ಚರಿತ್ರೆ, ಸಮಾಜ ಇತ್ಯಾದಿ ಕ್ಷೇತ್ರಗಳ ವಿಪುಲ ಸಾಮಗ್ರಿ ನಮ್ಮ ಕೈಗೆ ಬಂದಿದೆ. ಅಂದರೆ ಅವರ ಸಮಗ್ರ ಸಾಹಿತ್ಯ ಅಂಗೈಮೇಲೆ ಲಿಂಗದಂತೆ ಚುಳುಕಾಗಿದೆ. ವಚನಶಾಸ್ತ್ರ ಭಾಗ ೧, ೨, ೩; ಶಿವಶರಣರ ಚರಿತ್ರೆಗಳು ಭಾಗ ೧, ೨, ೩; ಅಮರಗಣಾಧೀಶರ ಚರಿತ್ರೆ, ಶಿವಾನುಭವ ಶಬ್ದಕೋಶ, ಶೂನ್ಯಸಂಪಾದನೆ, ಏಕೋತ್ತರಶತಸ್ಥಲ, ಬಸವ-ಚೆನ್ನಬಸವ-ಪ್ರಭುದೇವರ ಷಟಸ್ಥಲ ವಚನಗಳು, ಮಿಕ್ಕ ನೂರಾರು ಶರಣರ ಸಾವಿರಾರು ವಚನ-ಸ್ವರವಚನಗಳು, ಹರಿಹರನ ರಗಳೆಯ ಎಂಟು ಭಾಗಗಳು, ಘನಮಠದಾರ್ಯರ ಕೃಷಿಜ್ಞಾನ ಪ್ರದೀಪಿಕೆ, ಬಾಗಿಲಕೋಟೆಯಲ್ಲಿ ಜರುಗಿದ ಅಖಿಲಭಾರತ ವೀರಶೈವ ಮಹಾಸಭೆಯ ಅಧಿವೇಶನದ ಸಮಗ್ರ ರಿಪೋರ್ಟ್, ದೇವರ ದಾಸಿಮಾರ್ಯ ಪ್ರಶಸ್ತಿ-ಹೀಗೆ ೪೯ ಗ್ರಂಥಗಳು, ೩೦೦ರಷ್ಟು ಲೇಖನಗಳು, ಮುನ್ನುಡಿಗಳು, ಜಾಹೀರಾತುಗಳು ಹೊರಬಂದಿವೆ. ಲೇಖನಗಳ ಮೂರು ಸಂಪುಟಗಳಂತೂ ಡಾ. ಹಳಕಟ್ಟಿಯವರ ಬಹುಮುಖಿಸೇವೆಯನ್ನು, ಜನಮುಖಿ ಸೇವೆಯನ್ನು ಸ್ಪಷ್ಟಪಡಿಸುತ್ತವೆ.

ಅಂದು, ಅತ್ತ ಸೊಲ್ಲಾಪುರದ ವಾರದ ಮಲ್ಲಪ್ಪನವರ ಸಂಸ್ಕೃತ ಪಾಠಶಾಲೆಯಲ್ಲಿ "ಲಿಂಗಿಬ್ರಾಹ್ಮಣ ಗ್ರಂಥಮಾಲೆ", ಇತ್ತ ಹಳಕಟ್ಟಿಯವರಿಂದ ವಿಜಾಪುರದಲ್ಲಿ "ಶಿವಾನುಭವ ಗ್ರಂಥಮಾಲೆ" ಆರಂಭವಾದವು. ಇವು ನಮ್ಮ ಧರ್ಮವನ್ನು ಬ್ರಾಹ್ಮಣೀಕರಣಗೊಳಿಸುವ, ಲಿಂಗಾಯತೀಕರಣಗೊಳಿಸುವ ಎರಡು ವಿರುದ್ಧ ಪ್ರಯತ್ನಗಳೆಂದೇ ಹೇಳಬೇಕು. ಹೀಗಾಗಿ ಶ್ರೀ ಹಳಕಟ್ಟಿಯವರು ಈ ಶಿವಾನುಭವ ಗ್ರಂಥಮಾಲೆಯನ್ನು ಆರಂಭಿಸದೇ ಹೋಗಿದ್ದರೆ, ಲಿಂಗಾಯತರು ಲಿಂಗೀಬ್ರಾಹ್ಮಣರಾಗುತ್ತಿದ್ದರೇನೋ ಎನಿಸುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದರೆ ವಚನಸಾಹಿತ್ಯ ಪ್ರಕಟನೆಯ ಮೂಲಕ ಹಳಕಟ್ಟಿಯವರು ನಮ್ಮ ಸಮಾಜವನ್ನು ಎಂಥ ಗಂಡಾಂತರದಿಂದ ಪಾರು ಮಾಡಿದರೆಂಬುದು ವೇದ್ಯವಾಗುತ್ತದೆ.

ಶ್ರೀ ಹಳಕಟ್ಟಿಯವರು ಲಿಂಗೈಕ್ಯರಾಗಿ ಇಂದಿಗೆ ನಾಲ್ಕು ದಶಕ ಗತಿಸಿದವು. ಬದುಕಿರುವಾಗ ಅವರಾಗಲೀ, ಬಳಿಕ ನಾವಾಗಲೀ, ಕೈತಪ್ಪಿಹೋಗುವ ಮೊದಲು ಅವರ ಸಾಹಿತ್ಯವನ್ನು ಇಡಿಯಾಗಿ ಹಿಡಿದುಹಾಕುವ ಪ್ರಯತ್ನ ಮಾಡಲಿಲ್ಲ. ಹೀಗಾಗಿ ಅವರು ಬರೆದುದು ಎಷ್ಟು? ಪ್ರಕಟಿಸಿದುದು ಎಷ್ಟು? ಎಂಬುದು ಲೆಕ್ಕಹತ್ತದ ಪರಿಸ್ಥಿತಿ ನಿರ್ಮಾಣವಾಗಿದ್ದಿತು. ಲೆಕ್ಕ ಹತ್ತಿದರೂ ಅದು ನಾಶವಾಗುವ ಸ್ಥಿತಿಗೆ ಸರಿದಿದ್ದಿತು. ಈ ದುಸ್ಥಿತಿ ಮುಂದುವರಿಯಬಾರದೆಂದು ಬಿ. ಎಲ್. ಡಿ. ಇ. ಸಂಸ್ಥೆ ಈ ಸಂಪುಟಗಳನ್ನು ಪ್ರಕಟಿಸುವ ಮೂಲಕ, ಪೂಜ್ಯ ಹಳಕಟ್ಟಿಯವರನ್ನು ಗ್ರಂಥರೂಪದಲ್ಲಿ ಬದುಕಿಸಿದೆ. ೩೦ ಲಕ್ಷ ರೂಪಾಯಿ ವೆಚ್ಚಿಸಿ ಏಕಕಾಲಕ್ಕೆ ೧೨ ಸಾವಿರ ಪುಟಗಳಷ್ಟು ದೊಡ್ಡ ಮೊತ್ತದ ಸಾಹಿತ್ಯವನ್ನು ಪ್ರಕಟಿಸಿದ ಕನ್ನಡ ನಾಡಿನ ಏಕೈಕ ಸಾರ್ವಜನಿಕ ಸಂಸ್ಥೆಯೆಂಬ ಕೀರ್ತಿಗೆ ಪಾತ್ರವಾಗಿದೆ.

ಡಾ. ಹಳಕಟ್ಟಿಯವರು ವಿಜಾಪುರಕ್ಕೆ ಬಂದುದು ೧೯೦೪ ರಲ್ಲಿ. ಈ ಯೋಜನೆ ಆರಂಭವಾದುದು, ೨೦೦೪ರಲ್ಲಿ. ಹೀಗಾಗಿ ಈ ಸಂಪುಟಗಳ ಪ್ರಕಟನೆ ಅವರ "ವಿಜಾಪುರ ಪ್ರವೇಶದ ಶತಮಾನೋತ್ಸವ ಸ್ಮರಣೆ"ಯೆನಿಸಿದೆ. ಈ ಸ್ಮರಣೀಯ ಕಾರ್ಯಕ್ಕೆ ಮನಸ್ಸು ಮಾಡಿದ ಶ್ರೀ ಎಂ. ಬಿ. ಪಾಟೀಲ, ಶ್ರೀ ಬಿ. ಆರ್. ಪಾಟೀಲ (ಲಿಂಗದಳ್ಳಿ), ಶ್ರೀ. ಜಿ. ಕೆ. ಪಾಟೀಲ, ಶ್ರೀ ಶಿವಯೋಗಿ ತಂಬಾಕೆ ಅವರ ಔದಾರ್ಯವನ್ನು, ಕಾರ್ಯದರ್ಶಿ ಶ್ರೀ ಎಂ. ಎಸ್. ಮದಭಾವಿ ಅವರ ಸಹಕಾರವನ್ನು ನೆನೆಯುತ್ತೇನೆ.

ಈ ಯೋಜನೆಯ ನೇತೃತ್ವ ವಹಿಸಿದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ, ಪ್ರೇರಕರಾದ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮೀಜಿಯವರ, ಮೂಲಸಾಮಗ್ರಿ ಪೂರೈಸಿದ ಬೆಳಗಾವಿಯ ಶ್ರೀಸಿದ್ಧರಾಮ ಸ್ವಾಮೀಜಿಯವರ ಮತ್ತು ಇತರ ಸ್ವಾಮೀಜಿಯವರ ಆಶೀರ್ವಾದವನ್ನು ಸ್ಮರಿಸುತ್ತೇನೆ.

ಕೊನೆಯದಾಗಿ ಮತ್ತು ಮುಖ್ಯವಾಗಿ ಬೆಂಗಳೂರಿನ ಶ್ರೀ ಜಿ. ಬಿ. ಪಾಟೀಲ ಅವರು ಈ ಸಂಪುಟಗಳನ್ನು ತಮ್ಮ ಜಿಲ್ಲೆಗೆ ಸಲ್ಲಿಸುವ ಸೇವೆಯೆಂಬ ಉತ್ಸಾಹದಿಂದ ಮುದ್ರಣಕಾರ್ಯ ಪೂರೈಸಿದ್ದಾರೆ. ಅವರಿಗೂ ಅವರ ಚಿರಂಜೀವಿ ಬಸವರಾಜನಿಗೂ ಧನ್ಯವಾದಗಳು.

ಮೈಯೆಲ್ಲ ಕೈಯಾಗಿ ಶ್ರಮಿಸಿದರೂ ಇನ್ನಷ್ಟು ಸಾಮಗ್ರಿ ಹೊರಗುಳಿದಿರುವ, ಮೈಯೆಲ್ಲ ಕಣ್ಣಾಗಿ ದುಡಿದರೂ ಒಂದಿಷ್ಟು ದೋಷಗಳು ನುಸುಳಿರುವ ಸಾಧ್ಯತೆಯಿದೆ. ಅಭ್ಯಾಸಿಗಳು ತಿಳಿಸಿದಲ್ಲಿ ತೆರೆದ ಮನಸ್ಸಿನಿಂದ ಸ್ವೀಕರಿಸುತ್ತೇನೆ. ಮುತ್ತು ರತ್ನಗಳಿಂದ ತುಂಬಿದ್ದ 'ಹಳಕಟ್ಟಿ ಹಡಗ' ಮುಳುಗದೆ ತೇಲಿಬಂದ ಸ್ವರೂಪದ ಈ ಸಂಪುಟಗಳನ್ನು ಸಾರ್ವಜನಿಕರು ಪ್ರೀತಿಯಿಂದ ಬರಮಾಡಿಕೊಳ್ಳಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಬಿ. ಎಲ್. ಡಿ. ಇ. ಸಂಸ್ಥೆಯ ಮುಂದೆ ಇನ್ನಷ್ಟು ವಿಷಯಗಳನ್ನು ಮಂಡಿಸುತ್ತೇನೆ. ಅವು: ೧. ಈ ಹದಿನೈದೂ ಸಂಪುಟಗಳ ಸಿ. ಡಿ. ಗಳನ್ನು ರಕ್ಷಿಸಬೇಕು. ೨. ಕಾಲಗತಿಸಿದಂತೆ ಶಿವಾನುಭವ ಪತ್ರಿಕೆ ನಾಶವಾಗುವುದು ಸಹಜ. ಆದುದರಿಂದ ಅದರ ಎಲ್ಲ ೩೧೯ ಸಂಚಿಕೆಗಳನ್ನು ಡಿ. ಟಿ. ಪಿ. ಮಾಡಿಸಿ ಸಿ. ಡಿ. ರೂಪದಲ್ಲಿ ಸಂರಕ್ಷಿಸಬೇಕು. ೩. ಹಳಕಟ್ಟಿ ಸಂಶೋಧನ ಸಂಸ್ಥೆಯನ್ನು ಗ್ರಂಥಾಲಯ, ವಸ್ತುಸಂಗ್ರಹಾಲಯ, ಪೀಠೋಪಕರಣ, ಸೂಕ್ತ ಸಿಬ್ಬಂದಿ ಮೊದಲಾದವುಗಳಿಂದ ಸುಸಜ್ಜಿತಗೊಳಿಸಬೇಕು. ೪. ಪೂಜ್ಯ ಹಳಕಟ್ಟಿಯವರ ಕೆಲಸ ಕನ್ನಡ-ಕನ್ನಡೇತರ ಭಾಷೆಗಳ ಮೂಲಕ, ವಿಚಾರ ಸಂಕಿರಣ-ವಿಶೇಷೋಪನ್ಯಾಸ - ಶಿಬಿರ-ಗ್ರಂಥಪ್ರಕಟನೆಗಳೆಂಬ ಶಾಖೆಗಳಲ್ಲಿ ಮುಂದುವರಿಯಬೇಕು. ಈ ಎಲ್ಲ ಕಾರ್ಯಗಳ ಸುಗಮತೆಗಾಗಿ ಮೆಡಿಕಲ್, ಎಂಜಿನೀಯರಿಂಗ್ ಕಾಲೇಜುಗಳಂತೆ ಈ ಸಂಸ್ಥೆಗೂ ವಾರ್ಷಿಕ ಅನುದಾನ, ಆರ್ಥಿಕ ಅಂದಾಜು ಪತ್ರಿಕೆಗಳ ಸ್ವತಂತ್ರ ವ್ಯವಸ್ಥೆ ಮಾಡಬೇಕು. ಈ ಎಲ್ಲ ವ್ಯವಸ್ಥೆಗಳಿಂದಾಗಿ ಡಾ. ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆ ಒಂದು ರಾಷ್ಟ್ರೀಯ-ಅಂತಾರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು, ಮತ್ತೆ ಇಲ್ಲಿ 'ಹಳಕಟ್ಟಿಯುಗ' ಆರಂಭವಾಗಲೆಂದು ಹಾರೈಸುತ್ತೇನೆ.

ವಿಜಾಪುರದಲ್ಲಿ ಜರುಗಿದ ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಬಿಡುಗಡೆ ಸಮಾರಂಭದ ಭಾಷಣ (೨೦೦೭)

ಆಕರ : ಮಾರ್ಗ ಸಂಪುಟ–೬

■■

೩೫

'ಜಂಗಮದಿಂದ ಸ್ಥಾವರಕ್ಕೆ' ಕೃತಿ ಲೋಕಾರ್ಪಣೆ

೨೦೦೯

ನಮ್ಮ ನಾಡಿನ ಪ್ರಾಚಾರ್ಯ ಪರಂಪರೆಯಲ್ಲಿ ಅಗ್ರಗಣ್ಯರಾಗಿರುವ ಪ್ರೊ. ಸಿ. ಬಿ. ಚಂದ್ರಶೇಖರಪ್ಪನವರೇ, ನಮ್ಮ ನಾಡಿನ ಕವಿ ಪರಂಪರೆಯಲ್ಲಿ ಅಗ್ರಮಾನ್ಯರಾಗಿರುವ ಚನ್ನವೀರ ಕಣವಿಯವರೇ, ಈ ಪುಸ್ತಕವನ್ನು ಸಂಪಾದಿಸಿರುವ ಡಾ. ಮೃತ್ಯುಂಜಯ ರುಮಾಲೆಯವರೇ, ಈ ಪುಸ್ತಕವನ್ನು ಪ್ರಕಟಿಸಿರುವ ವೆಂಕಟೇಶ ಅವರೇ, ಸಂಶೋಧನೆಯಂಥ ಶುಷ್ಕ ಸಮಾರಂಭಕ್ಕೆ ಇಷ್ಟುದೊಡ್ಡ ಸಂಖ್ಯೆಯಲ್ಲಿ ಆಗಮಿಸಿರುವ ಈ ಪ್ರದೇಶದ ಗಣ್ಯಮಾನ್ಯರೆ, ಎಲ್ಲರಿಗೂ ನನ್ನ ನಮಸ್ಕಾರಗಳು.

ನನ್ನ ಪುಸ್ತಕ ಅಲ್ಲ; ಮೃತ್ಯುಂಜಯ ರುಮಾಲೆಯವರ ಪುಸ್ತಕವಿದು! ನನ್ನ ಲೇಖನಗಳನ್ನು ಸಂಪಾದಿಸಿರುವ ಮೃತ್ಯುಂಜಯ ರುಮಾಲೆಯವರ ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ಆ ಸಂಪಾದಿತ ಪುಸ್ತಕದಲ್ಲಿರುವ ಲೇಖನಗಳ ಲೇಖಕನಾದ ನನಗೆ ಸಂತೋಷ ಉಂಟಾಗುವುದು ಸಹಜ. ಈ ಸಮಾರಂಭದಲ್ಲಿ ಕಣವಿಯವರು, ಸಿ. ಬಿ. ಚಂದ್ರಶೇಖರಪ್ಪನವರು ಭಾಗವಹಿಸಿರುವುದು ನನಗೆ ಇನ್ನೂ ಹೆಚ್ಚಿನ ಸಂತೋಷ ತಂದಿದೆ. ಏಕೆಂದರೆ, ಈ ಇಬ್ಬರು ವ್ಯಕ್ತಿಗಳು ಅಪರೂಪದವರು, ಸೃಜನಶೀಲರು. ಒಬ್ಬರು ಬರೆಹಗಾರರು, ಇನ್ನೊಬ್ಬರು ಆಡಳಿತಗಾರರು. ಇಂಥ ಅಪರೂಪದ ವ್ಯಕ್ತಿಗಳು ವೇದಿಕೆಯ ಮೇಲಿರುವುದು ಒಂದು ಸಂತೋಷ. ಇನ್ನೊಂದು ಸಂತೋಷವೆಂದರೆ, ನಾನು ಬದುಕಿರುವಾಗಲೇ ನನ್ನ ಲೇಖನಗಳನ್ನು ಕುರಿತು ಸಂಪಾದಿತ ಪುಸ್ತಕ ಹೊರಬರುತ್ತಿರುವುದು ಇದು ಇದೇ ಮೊದಲು.

ಡಾ. ರುಮಾಲೆಯವರು ಕೆಲದಿನಗಳ ಹಿಂದೆ ದೂರವಾಣಿ ಮೂಲಕ ಸಂಪರ್ಕಿಸಿ 'ಹೊಸಪೇಟೆಯ ಸಾಯಿಮಣಿ ಪ್ರಕಾಶನದ ವೆಂಕಟೇಶ ಅವರು ತಮ್ಮದೊಂದು ಪುಸ್ತಕ ಪ್ರಕಟಿಸಲು ಬಯಸಿದ್ದಾರೆ. ತಮ್ಮ ಯಾವುದಾದರೂ ಹೊಸ ಪುಸ್ತಕವಿದ್ದರೆ ತಿಳಿಸಿರಿ' ಎಂದು ಕೇಳಿದರು. ಅದಕ್ಕೆ, 'ನನ್ನ ಯಾವುದಾದರೂ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಸಂಶೋಧನ ಬರೆಹಗಳನ್ನು ಸಂಗ್ರಹಿಸಿ, ನೀನೇ ಸಂಪಾದಿಸು. ಬರೆಹಗಾರ ನಾನು ಇರಬಹುದು, ಆದರೆ ನೀನೇ ಸಂಪಾದಿಸು.

ಏಕೆಂದರೆ ನಾನು ಬರೆದಾದ ಮೇಲೆ ಅದು ಸಾರ್ವಜನಿಕ ಆಸ್ತಿ. ಆದ್ದರಿಂದ ನನ್ನ ಹಕ್ಕಿಗೆ ದಕ್ಕೆ ಬಾರದ ರೀತಿಯಲ್ಲಿ ಯಾರು ಬೇಕಾದರೂ ಸಂಗ್ರಹ ಮಾಡಬಹುದು, ನೀನೇ ಏಕೆ ಮಾಡಬಾರದು; ಏಕೆಂದರೆ, ಶರಣರ ವಚನಗಳನ್ನು ಶೂನ್ಯಸಂಪಾದನಕಾರರು ಹೇಗೆ ಸಂಪಾದಿಸಿದರೋ, ಹಾಗೇ ನನ್ನ ಲೇಖನಗಳನ್ನು, ವಿಚಾರಧಾರೆಯನ್ನು ಸಂಗ್ರಹಿಸಬಹುದು. ನನ್ನ ಬರೆವಣಿಗೆ ಬಹುಮುಖಿಯಾದುದು, ಬಹುಕ್ಷೇತ್ರೀಯವಾದುದು. ಒಂದೊಂದು ಕ್ಷೇತ್ರವನ್ನು ಆರಿಸಿಕೊಂಡು, ಯುವ ವಿದ್ವಾಂಸರು ಲೇಖನಗಳನ್ನು ಸಂಗ್ರಹಿಸಿ, ಅಭ್ಯಸಿಸಿ ಸಂಪಾದಿಸಿ ಪ್ರಕಟಿಸಿದರೆ, ನನ್ನ ವಿಚಾರಗಳ ಪ್ರತಿಪಾದನೆಯ ಪರಂಪರೆ ಬೆಳೆಯುತ್ತದೆ ಎಂದು ತಿಳಿಸಿದೆ.

ಲಿಂಗಾಯತ ಸಮಾಜ, ಲಿಂಗಾಯತ ಸಾಹಿತ್ಯ, ಲಿಂಗಾಯತ ಸಿದ್ಧಾಂತ–ತಿಳುವಳಿಕೆ ಇರುವ ಲೇಖನಗಳನ್ನು ಗಮನಿಸಿ ರುಮಾಲೆಯವರು ಸಂಪಾದಿಸಿದ್ದಾರೆ. ನನ್ನ ಬೇರೆ ಬೇರೆ ವಿಚಾರ ಪರಂಪರೆಗಳನ್ನು ಗಮನಿಸಿ ಸಂಪಾದನೆ ಮಾಡಿದರೆ ಅದು ಮುಂದುವರೆಯುತ್ತದೆ; ಅದು ನಿಮ್ಮದೇ ಪುಸ್ತಕಗಳನ್ನಾಗಿ ಮಾಡಿದಂತೆಯೂ ಆಗುತ್ತದೆ. 'ನೀವು ಬರೆದ ಲೇಖನಗಳಲ್ಲಿ ಶರಣ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ, ಲಿಂಗಾಯತ ಸಮಾಜಗಳಿಗೆ ಸಂಬಂಧಿಸಿದಂತೆ ಹೊಸ ವಿಚಾರಗಳಿವೆ. ಅವುಗಳನ್ನು ಒಂದೆಡೆ ತಂದರೆ, ಫಲವತ್ತಾದ ಬರೆವಣಿಗೆ ಹೇಗಿದೆ ಎಂಬುದು ತಿಳಿಯುತ್ತದೆ–ಎಂ. ರುಮಾಲೆಯವರು ಒಳ್ಳೆಯ ಲೇಖನಗಳನ್ನು ಆಯ್ಕೆ ಮಾಡಿಕೊಂಡು ಸರಿಯಾದ ವರ್ಗೀಕರಣ ಮಾಡಿ, ಸುದೀರ್ಘ ಪ್ರಸ್ತಾವನೆಯನ್ನು ಬರೆದು ಸಂಪಾದಿಸಿದ್ದಾರೆ.

***

ನನ್ನ ದೃಷ್ಟಿಯಲ್ಲಿ ಸಂಶೋಧನೆಯಲ್ಲಿ ಎರಡು ಪ್ರಕಾರಗಳು. ಒಂದು ಸ್ಥಗಿತ ಸಂಶೋಧನೆ; ಇನ್ನೊಂದು ಚಲನಶೀಲ ಸಂಶೋಧನೆ. ಸಂಶೋಧನೆ ಕೇವಲ ಭೂತಕಾಲಕ್ಕೆ ಮಾತ್ರ ಸಂಬಂಧಿಸಿದ್ದರೆ, ಅದು ಸ್ಥಗಿತ ಸಂಶೋಧನೆ. ಸಂಶೋಧನೆ ಭೂತಕಾಲಕ್ಕೆ ಸೀಮಿತವಾಗುಳಿಯದೆ ವರ್ತಮಾನಕಾಲದ ಭವಿಷ್ಯ–ಸ್ಥಿತಿಗೆ ವಿಸ್ತರಿಸಿದರೆ ಅದು ಚಲನಶೀಲ ಸಂಶೋಧನೆ. ಭೂತಕ್ಕೆ ನಿಶ್ಚಿತವಾಗುಳಿಯದೆ ವರ್ತಮಾನಕ್ಕೆ ಪ್ರಭಾವಿಸುವ ಚಲನಶೀಲ ಸಂಶೋಧನೆ ಇಂದಿನ ಅಗತ್ಯವಾಗಿದೆ. ಗೋವಿಂದ ಪೈ, ಆರ್. ನರಸಿಂಹಾಚಾರ್ಯರು ಮಾಡಿದ್ದು ಸ್ಥಗಿತ ಸಂಶೋಧನೆ. ಅವರು ಮಾಡಿದ್ದು ಮಹತ್ವದ ಸಂಶೋಧನೆಯೇ; ಅಸ್ತವ್ಯಸ್ತವನ್ನು ವ್ಯಸ್ತಗೊಳಿಸಿದ್ದು ಪೈ ಮತ್ತು ಆರ್. ನರಸಿಂಹಾಚಾರ್ಯರ ಕೆಲಸ. ಅದು ಮಹತ್ವದ್ದೇ; ಎರಡು ಮಾತಿಲ್ಲ.

ಸಂಶೋಧನೆ ಎಂಬುದು ನಿರಂತರ ಪ್ರಕ್ರಿಯೆ. ಸಂಶೋಧನೆ ಹಲವು ಹಂತಗಳನ್ನು ದಾಟಬೇಕಾದುದು ಅವಶ್ಯ. ಒಂದು ಘಟನೆ ಇರುತ್ತದೆ; ಆ ಘಟನೆಗೆ ದಾಖಲೆಗಳಿರುತ್ತವೆ. ಅದಕ್ಕೆ ಕಾರಣಗಳೂ ಇರುತ್ತವೆ; ಅದರ ನಂತರದಲ್ಲಿ ಪರಿಣಾಮವಿರುತ್ತದೆ. ಅಂದರೆ, ಘಟನೆ>ದಾಖಲೆ>ಕಾರಣ>ಪರಿಣಾಮ. ಘಟನಾನಿಷ್ಠ, ದಾಖಲೆನಿಷ್ಠ, ಕಾರಣನಿಷ್ಠ ಸಂಶೋಧನೆಯ ನಂತರ ಪರಿಣಾಮದಲ್ಲಿಯೂ ಶೋಧ ಮಾಡಬೇಕಾಗುತ್ತದೆ. ದಾಖಲೆಯಿಂದ ಘಟನೆ, ಘಟನೆಯಿಂದ ಕಾರಣ, ಕಾರಣದಿಂದ ಪರಿಣಾಮ–ಇವುಗಳ ಶೋಧವೇ ಸಮಗ್ರ ಶೋಧವಾಗಿರುತ್ತದೆ. ಸಂಶೋಧನೆಯೆಂಬುದು ಕೇವಲ ದಾಖಲೆಗಳ ಶೋಧ ಆಗಬಾರದು, ಅದು ಮುಂದುವರೆದು ಕಾರಣಶೋಧವಾಗಿ, ಪರಿಣಾಮ ಶೋಧವೂ ಆಗಬೇಕು. ಸಂಶೋಧಕ ಸಮಗ್ರ ಸಂಶೋಧನೆ ಮಾಡಬೇಕಾದುದು ಇಂದಿನ ಅಗತ್ಯವಾಗಿದೆ.

ಪರಿಣಾಮ ಶೋಧವಾಗಿರುವ ಚಲನಶೀಲ ಸಂಶೋಧನೆ ವರ್ತಮಾನದ ಶುದ್ಧಿಗೆ ತೊಡಗುತ್ತದೆ. ಮೃತ್ಯುಂಜಯ ರುಮಾಲೆಯವರು ತಮ್ಮ ಈ ಪುಸ್ತಕದ ಆರಂಭದಲ್ಲಿ ಅಂಥ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಿದ್ದಾರೆ:

'ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ.
ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು
ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ
ನಡೆಸುವ ಹೋರಾಟವೂ ಆಗಿದೆ.'

– ಎಂ. ಎಂ. ಕಲಬುರ್ಗಿ (ಪ್ರಸ್ತಾವನೆ, ಮಾರ್ಗ–೪)

ಯಾರು ಸುಳ್ಳು ಇತಿಹಾಸವನ್ನು ಹೇಳಿ ಸಮಾಜವನ್ನು ಶೋಷಣೆ ಮಾಡುತ್ತಾರೋ ಅಂಥವರ ಮುಂದೆ ಸತ್ಯ ಇತಿಹಾಸವನ್ನು ಹೇಳಿ ಸಮಾಜವನ್ನು ಜಾಗೃತಗೊಳಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂಶೋಧಕನಿಗೆ ಬಹುದೊಡ್ಡ ಹೊಣೆಗಾರಿಕೆಯೂ ಇರುತ್ತದೆ. ಈ ರೀತಿ ನಡೆಯಬೇಕಾದ ಸಂಶೋಧನೆಯು ಇಂದಿನ ಪ್ರಮುಖ ಅಗತ್ಯ. ಹೀಗಾಗಿ ಈ ಸಂಪುಟ (ಜಂಗಮದಿಂದ ಸ್ಥಾವರಕ್ಕೆ) ಚಲನಶೀಲ ಸಂಶೋಧನೆಯ ಸಂಪುಟವಾಗಿದೆ. ಇದು ಚಲನಶೀಲ ಸಂಶೋಧನೆಯ ನಿಯಮ-ವಿಧಾನಗಳನ್ನು ಅನುಸರಿಸಿದ ಸಂಪುಟವಾಗಿದೆ.

ಈಗ ಒಂದು ಮಾತು, ವಿವರಿಸಿ ಹೇಳಬೇಕಾಗುತ್ತದೆ. ಈ ಸಂಪಾದಿತ ಪುಸ್ತಕದ ಮುಖಪುಟದಲ್ಲಿ ವಿನ್ಯಾಸಗೊಳಿಸಿದ ಕರ್ನಾಟಕದ ನಕ್ಷೆ ಇದೆ. ಶರಣ ಸಂಸ್ಕೃತಿ ಅಥವಾ ಲಿಂಗಾಯತ ಸಮಾಜಕ್ಕೆ ಸಂಬಂಧಿಸಿದಂತೆ ನಾಲ್ಕು ಮುಖ್ಯ ಸ್ಥಳಗಳನ್ನು ಇಲ್ಲಿ ಗುರುತಿಸಲಾಗಿದೆ. ಕಲ್ಯಾಣ, ದ್ವಾರಸಮುದ್ರ, ಹಂಪಿ ಮತ್ತು ಕೆಳದಿ. ಕಲ್ಯಾಣದಲ್ಲಿ ಸ್ಥಾವರವಾಗಿದ್ದ ಸಮಾಜವನ್ನು ಶರಣರು ಜಂಗಮಗೊಳಿಸಿದ್ದರು. ಕ್ರಮೇಣ ಮುಂದುವರಿದ ಕಾಲಘಟ್ಟದಲ್ಲಿ ದ್ವಾರಸಮುದ್ರ, ಹಂಪಿ ಮತ್ತು ಕೆಳದಿಗೆ ಸ್ಥಳಾಂತರಗೊಳ್ಳುತ್ತಲೇ ಅದು ಪುನಃ ಸ್ಥಾವರವಾಗುತ್ತ ಬಂದಿದೆ. ಈಗ ಜಂಗಮಸಂಸ್ಕೃತಿ ಸ್ಥಾವರ ಸಂಸ್ಕೃತಿಯಾಗಿದೆ. ಒಮ್ಮೊಮ್ಮೆ ಏನಾಗುತ್ತದೆ ಎಂದರೆ, ಕತ್ತಲೆಯೊಳಗೇ ಇದ್ದವರಿಗೆ ಕತ್ತಲೆಯೆ ಸರಿಯೆನಿಸುತ್ತದೆ! ಒಮ್ಮೊಮ್ಮೆ ಬೆಳಕು ನಮಗೆ ಸತ್ಯವೆನಿಸುವುದಿಲ್ಲ! ಇಲ್ಲಿರುವ (ಈ ಕೃತಿಯಲ್ಲಿರುವ) ವಿಚಾರಗಳ ಸಾರಾಂಶವೆಂದರೆ, ಬೆಳಕಿನಿಂದ ಕತ್ತಲೆಗೆ, ಧರ್ಮದಿಂದ ಕರ್ಮಕ್ಕೆ, ಜಂಗಮದಿಂದ ಸ್ಥಾವರಕ್ಕೆ, ಲಿಂಗಾಯತದಿಂದ ವೀರಶೈವಕ್ಕೆ–ಇದು ಈ ಸಂಪುಟದ ಒಟ್ಟಾರೆ ಧ್ವನಿ! ಈ ಮಾತಿನ ಸೂಕ್ಷ್ಮತೆ ಏನೆಂದರೆ ಇಂಥ ಮಾತನ್ನು ಡಾ. ನಂದಿಮಠರೂ ಹೇಳಿದ್ದಾರೆ. ವೈ. ನಾಗೇಶಶಾಸ್ತ್ರಿಗಳೂ, ಹರ್ಡೇಕರ ಮಂಜಪ್ಪನವರೂ, ಹಳಕಟ್ಟಿಯವರೂ ಮೊದಲಾದ ಹಿರಿಯರು ನಮ್ಮ ಧರ್ಮ ಹೇಗೆ ಜಂಗಮದಿಂದ ಸ್ಥಾವರಕ್ಕೆ ನಡೆದಿದೆ? ಬೆಳಕಿನಿಂದ ಕತ್ತಲೆಯ ಕಡೆಗೆ ನಡೆದಿದೆ? ಎಂದು ಸ್ಥೂಲವಾಗಿ ಅವರವರಿಗೆ ಸಿಕ್ಕ ಆಧಾರದಲ್ಲಿ ಈ ಮಾತುಗಳನ್ನು ಹೇಳಿದ್ದಾರೆ.

ಈಗ ನಮಗೆ ವಿಪುಲವಾಗಿ ಸಿಕ್ಕ ಆಧಾರದಲ್ಲಿ 'ಜಂಗಮದಿಂದ ಸ್ಥಾವರಕ್ಕೆ' ಎಂಬ ಸಾಂಸ್ಕೃತಿಕ ಸ್ಥಿತ್ಯಂತರವನ್ನು ಇಲ್ಲಿ ಪ್ರತಿಪಾದನೆ ಮಾಡಲಾಗಿದೆ. ಚಲನಶೀಲ ಸಂಶೋಧನೆಯ ಪ್ರತಿಪಾದನೆಗೆ ಸಂಬಂಧಿಸಿದಂತೆ, ಇಲ್ಲಿ ಒಂದು ಲೇಖನವನ್ನು ನಿದರ್ಶನವಾಗಿ ಗಮನಿಸಬಹುದು. 'ಕೂಡಲಸಂಗಮದ ಜಾತವೇದಿ ಗದ್ದುಗೆ: ಸುಳ್ಳಿನಕಂತೆ' ಈ ಲೇಖನ ಸಮಾಜದ ಶುದ್ಧೀಕರಣಕ್ಕೆ

ಸಂಬಂಧಿಸಿದ ಮುಖ್ಯ ಲೇಖನಗಳಲ್ಲಿ ಒಂದು. ಬಸವಣ್ಣನ ಮತ್ತು ಆ ಮೂಲಕ ಆಧುನಿಕ ಲಿಂಗಾಯತ ಸಮಾಜದ ಇತಿಹಾಸವನ್ನು ವಿರೂಪಗೊಳಿಸಿದುದಕ್ಕೆ ಇತ್ತೀಚಿನ ನಿದರ್ಶನವೆಂಬಂತೆ ಒಂದು ಸಂದರ್ಭವನ್ನು ಇಲ್ಲಿ ವಿವರಿಸಬಹುದು. ಕೂಡಲಸಂಗಮದಲ್ಲಿ ಬಸವಣ್ಣನ ದೀಕ್ಷಾಗುರು ಜಾತವೇದಿಗಳ ಗದ್ದುಗೆಯಿದೆ ಎಂಬ ಹೊಸ ಸಮಸ್ಯೆಯನ್ನು ಈಗ ಸೃಷ್ಟಿಸಲಾಗಿದೆ. ಬಸವಣ್ಣನ ಗುರುವಿನ ವಿಚಾರ ಬಂದಾಗ ಈಶಾನ್ಯ ಗುರುಗಳು, ಶಿವನೇ ಗುರುಸ್ವರೂಪ ತಾಳಿ ಬಂದುದು, ಕಪ್ಪಡಿ ಸಂಗಯ್ಯ, ಜಾತವೇದ ಮುನಿಗಳು ಹೀಗೆ ಹಲವು ಹೆಸರುಗಳು ಕೇಳಿ ಬರುತ್ತವೆ. ಆದರೆ ಇತ್ತೀಚೆ ಅಭ್ಯಾಸ ದೃಷ್ಟಿಯಿಂದ ಕೂಡಲಸಂಗಮ ಕ್ಷೇತ್ರವನ್ನು ಪರಿಶೀಲಿಸುತ್ತಿದ್ದಾಗ, ಕೂಡಲ ಸಂಗಮಕ್ಷೇತ್ರಕ್ಕೆ ಸಂಬಂಧಿಸಿದಂತೆ ಐದು ಶಾಸನಗಳನ್ನು ಪುನರಾವಲೋಕಿಸಬೇಕಾಗಿ ಬಂದಿತು. ಶಾಸನಗಳ ಪ್ರಕಾರ ಸಂಗಮೇಶ್ವರ, ಕಾಳೇಶ್ವರ, ಆಚೇಶ್ವರ ದೇವಾಲಯಗಳು ಅಲ್ಲಿದ್ದವು. ಆದರೆ ಇಂದು ಸಂಗಮೇಶ್ವರ, ಸಿದ್ಧೇಶ್ವರ, ಜಾತವೇದಿ ಗುಡಿಗಳಿವೆ. ಶಾಸನೋಕ್ತವಾದ ಕಾಳೇಶ್ವರನನ್ನು ಸಿದ್ಧೇಶ್ವರನೆಂದೂ, ಆಚೇಶ್ವರನನ್ನು ಜಾತವೇದಿ ಎಂದೂ ಕರೆಯಲಾಗುತ್ತದೆ. ಪ್ರಾಚೀನ ಕಾಲದ ನಂಬಿಕೆಯ ಪ್ರಕಾರ ಪುಣ್ಯಕ್ಷೇತ್ರಗಳಲ್ಲಿ ದೇವಾಲಯ ಕಟ್ಟಿಸಿ, ತನ್ನ ಹೆಸರಿನ ಲಿಂಗಸ್ಥಾಪಿಸಿದರೆ ಮೋಕ್ಷ ಸಿಗುವುದೆಂಬಂತೆ: ಉದಾಹರಣೆಗೆ ಶಾಂತಲೆ ಕಟ್ಟಿಸಿದುದು ಶಾಂತಲೇಶ್ವರ, ಅಹವಮಲ್ಲ ಕಟ್ಟಿಸಿದುದು ಆಹವಮಲ್ಲೇಶ್ವರ ಹೀಗೆಯೇ ಆಚುಗಿ ಹೆಸರಿನವನು ಬಹುಶಃ ಯಲಬುರ್ಗಾದ ಸಿಂದವಂಶೀಯನೊಬ್ಬನು ಇಲ್ಲಿ ಲಿಂಗ ಸ್ಥಾಪಿಸಿರಬಹುದಾದವನು. ಆತನ ಹೆಸರಿನ ಆಚೇಶ್ವರ ದೇವಾಲಯವಿದ್ದಿರಬಹುದು. ಆದರೆ ಇದರ ಹೆಸರು ಬದಲಾದುದು ಹೇಗೆ? ನಾನು ಅಭ್ಯಾಸದ ದೃಷ್ಟಿಯಿಂದ ಅಲ್ಲಿ ವಿಚಾರಿಸಿದಾಗ, ಸಂಗಮಕ್ಷೇತ್ರದ ಮಲ್ಲಯ್ಯ ಪುರಾಣಿಕ ಎಂಬ ಎಪ್ಪತ್ತು-ಎಂಬತ್ತು ವರ್ಷದ ವೃದ್ಧ ಹೇಳುವ ಪ್ರಕಾರ-ನಮ್ಮ ತಂದೆ ಸಂಗಮೇಶ್ವರ ದೇವಾಲಯದ ಮಗ್ಗುಲಲ್ಲಿಯೇ ಅಂಗಡಿ ಇಟ್ಟಿದ್ದರು. ನಾನು ಈ ಆವರಣದಲ್ಲಿಯೇ ಹುಟ್ಟಿ ಬೆಳೆದಿದ್ದೇನೆ. ಈಗ ಜಾತವೇದಿಗಳ ಸಮಾಧಿ ಎನ್ನುವ ಇದು ರಾಚೇಶ್ವರ, ರಾಚೋಟೇಶ್ವರ ಗುಡಿ ಎಂದೇ ಕರೆಯುತ್ತಿದ್ದರು. ೧೯೬೭ ರಲ್ಲಿ ಬಸವಣ್ಣನವರ ಅಷ್ಟಶತಮಾನೋತ್ಸವ ಸಂದರ್ಭದಲ್ಲಿ ಜ.ಚ.ನಿ. ಮೊದಲಾದವರು ಇದನ್ನು ಜಾತವೇದಿ ಗುಡಿ ಎಂದು ಕರೆಯತೊಡಗಿದರು. ಆಗಿನಿಂದ ಇದು ಜಾತವೇದಿಗಳ ಗುಡಿ, ಜಾತವೇದಿಗಳ ಸಮಾಧಿ ಎಂದಾಗಿದೆ. ಇದು ನಮಗೆ ಅಪರಿಚಿತವಾದುದು, ಇತ್ತೀಚಿನ ಬೆಳವಣಿಗೆ. ಈ ಮಾಹಿತಿಯಿಂದ ನಮಗೆ ತಿಳಿಯುವ ಇತಿಹಾಸ ಸ್ಪಷ್ಟವಾಗಿದೆ.

ಆಚೇಶ್ವರ ದೇವಾಲಯವನ್ನು 'ಜಾತವೇದಿಗಳ ಗುಡಿ-ಸಮಾಧಿ' ಮಾಡುವುದರ ಉದ್ದೇಶವೇನು? ಸತ್ಯ ತಿಳಿದ ಮೇಲೆ ನಡೆದುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮನುಷ್ಯನಿಗಿಂತ ಸತ್ಯದೊಡ್ಡದು; ಸಾಹಿತಿ, ಸಂಶೋಧಕರಾದವರು ಮಾಡಬೇಕಾದ ಕೆಲಸವೆ ಅದು. ಚಲನಶೀಲ ಸಂಶೋಧನೆಯ ಒಟ್ಟು ಉದ್ದೇಶ ಸಮಾಜದ ಶುದ್ಧೀಕರಣ.

'ಜಂಗಮದಿಂದ ಸ್ಥಾವರಕ್ಕೆ'-ಸಂಪುಟದ ಐವತ್ತು ಲೇಖನಗಳು ಇದೇ ರೀತಿಯದಾಗಿರುತ್ತವೆ. ಚಲನಶೀಲ ಸಂಶೋಧನೆಗೆ ಇವು ಆಹಾರಗಳಾಗಿವೆ. ರುಮಾಲೆಯವರು ಬಹಳ ಎಚ್ಚರಿಕೆಯಿಂದ ಈ ಲೇಖನಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

ಇಲ್ಲಿ ಇನ್ನೊಂದು ಮಾತು. ಶರಣ ಸಂಸ್ಕೃತಿ-ಕಾಲಾನುಕಾಲಕ್ಕೆ ತನ್ನ ತಾತ್ತ್ವಿಕ ಸ್ವರೂಪ ಬದಲಿಸಿಕೊಂಡಿದೆ. ಬೌದ್ಧ ಸಂಸ್ಕೃತಿ, ಕ್ರೈಸ್ತ ಸಂಸ್ಕೃತಿ ಮೊದಲಾದವುಗಳು ಮೂಲ ಪುರುಷರ

ನಂತರ ಬದಲಾಗಿವೆ. ಕ್ರೈಸ್ತ ಧರ್ಮದಲ್ಲಿ ನಿಜವಾದ ಕ್ರಿಶ್ಚಿಯನ್ನ ಅಂದರೆ ಅದು ಏಸು ಕ್ರಿಸ್ತನೊಬ್ಬನೆ. ಕ್ರಿಶ್ಚಿಯಾನಿಟಿ ಕ್ರಮೇಣ ಚರ್ಚಾಯಾನಿಟಿ ಆದಂತೆಯೇ; ಭಕ್ತರ ಮನೆಗಳೇ ಮಠಂಗಳಯ್ಯಾ ಎಂಬುದು ಮಠಂಗಳೇ ಭಕ್ತರ ಮನೆಗಳಯ್ಯ ಎಂಬಂತಾಗಿದೆ. ಮಠೀಯ ಸಂಸ್ಕೃತಿಯು ಮತೀಯ ಸಂಸ್ಕೃತಿಯಾಗುತ್ತಿದ್ದಂತೆ ಶರಣ ಸಂಸ್ಕೃತಿಯೂ ಬದಲಾಯಿತು.

೧೨ನೇ ಶತಮಾನದ ಸಮಾಜ ಸ್ಥಗಿತವಾಗಿತ್ತು. ಅದನ್ನು ಬಸವಾದಿ ಪ್ರಮಥರು ಚಲನಶೀಲಗೊಳಿಸಿದರು. ಅಲ್ಲಮಪ್ರಭು ಒಂದು ವಚನದಲ್ಲಿ ಹೀಗೆ ಹೇಳುತ್ತಾನೆ.

ಸಂಸಾರವೆಂಬ ಹೆಣ ಬಿದ್ದಿದ್ದಡೆ,
ತಿನ ಬಂದ ನಾಯ ಜಗಳವ ನೋಡಿರೆ!
ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ
ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೆ.

ಈ ವಚನದ ಪ್ರಕಾರ ಸಮಾಜ ಒಂದು ಹೆಣವಿದ್ದಂತೆ. ಅದನ್ನು ಎಲ್ಲರೂ ಹರಿದು ತಿನ್ನುತ್ತಿದ್ದಾರೆ. ರಾಜಕೀಯ, ಧರ್ಮ ಮೊದಲಾದ ಕ್ಷೇತ್ರದ ಸ್ವಾರ್ಥಪರರು ಅಧಿಕಾರಕ್ಕಾಗಿ, ಪ್ರತಿಷ್ಠೆಗಾಗಿ ಈ ಸಮಾಜವನ್ನು ಹರಿದು ತಿನ್ನುತ್ತಿದ್ದಾರೆ.

ಬಸವಣ್ಣನವರು ಏನು ಮಾಡಿದರೆಂದರೆ, ಸಂಸಾರವೆಂಬುದು ಹೆಣವಾಗಿದೆ; ಇದು ಶವ ಆಗಿದೆ. ಯಾಕೆಂದರೆ, ಇಲ್ಲಿದ್ದ ಶಿವ ಎದ್ದು ಹೊರಗೆ ಹೋಗಿದ್ದಾನೆ. ಎದ್ದು ಹೋಗಿರುವ ಅವನನ್ನು ಮತ್ತೆ ಇಲ್ಲಿ ಸ್ಥಾಪಿಸಬೇಕಾಗಿದೆ. ಸ್ಥಾಪಿಸಿದರೆ ಶವವು ಶಿವವಾಗುತ್ತದೆ.

***

೧೨ನೇ ಶತಮಾನದಲ್ಲಿ ಮುಖ್ಯವಾಗಿ ಮೂರು ಪ್ರಮುಖ ವಿಚಾರಧಾರೆಗಳ ಪ್ರಭಾವವಿದ್ದವು. ಪ್ರಾತಿನಿಧಿಕವಾಗಿ ಸಿದ್ಧರಾಮ–ಬಸವಣ್ಣ–ಪಂಡಿತಾರಾಧ್ಯ ಇವರು ಪ್ರಭಾವಿ ವ್ಯಕ್ತಿಗಳಾಗಿದ್ದರು.

ಸಿದ್ಧರಾಮನನ್ನು 'ಕರ್ಮಯೋಗಿ' ಎಂದೇ ಕರೆಯುತ್ತ ಬಂದಿದ್ದೇವೆ. ಆದರೆ 'ಕರ್ಮಯೋಗಿ' ಎಂದರೇನು? ಅದರ ಬಗ್ಗೆ ಗಂಭೀರ ಯೋಚನೆ ಮಾಡಿರಲಿಲ್ಲ? ಸಿದ್ಧರಾಮ ನಾಥ ಪಂಥದವನು; ಅವಧೂತ. ಸಿದ್ಧರಾಮ ಚಾರಿತ್ರದಲ್ಲಿ ಅಂಥ ಒಂದು ಸುಳಿವು ಸಿಗುತ್ತದೆ. ಸಿದ್ಧರಾಮ ಶ್ರೀಶೈಲದಿಂದ ಮಲ್ಲಿಕಾರ್ಜುನ ಲಿಂಗವೊಂದನ್ನು ತಂದು ಸೊಲ್ಲಾಪುರದಲ್ಲಿ ಪ್ರತಿಷ್ಠಾಪಿಸಿ ದೊಡ್ಡ ದೇವಾಲಯ ನಿರ್ಮಿಸುತ್ತಾನೆ. ಕಟ್ಟಿಸಿದ ದೇವಾಲಯವನ್ನು ಒಳಗೊಂಡಂತೆ ಇದ್ದ ಸಮಗ್ರ ಆವರಣಕ್ಕೆ ಒಂದು ಹೆಸರು ಇಡುತ್ತಾನೆ. ಅದೇನೆಂದರೆ, 'ಯೋಗ ರಮಣೀಯ ಕ್ಷೇತ್ರ' ಅಂತ. ಅಚ್ಚರಿಯೆಂದರೆ, ನಮ್ಮ ಲಿಂಗಾಯತ ಸಂಸ್ಕೃತಿಯಲ್ಲಿ ಈ ಪದಗಳಿಲ್ಲ. ಇದೊಂದು ಪಾರಿಭಾಷಿಕ ಪದವಿರಬೇಕು ಎನ್ನಿಸಿತು. ಏಕೆಂದರೆ ಲಿಂಗಾಯತ ಸಂಸ್ಕೃತಿಯಲ್ಲಿ 'ಅವಿಮುಕ್ತಕ್ಷೇತ್ರ','ಮುಕ್ತಿ ಕೇತು'ಗಳೆಂಬ ಪದಗಳಿವೆ. ಸಿದ್ಧರಾಮನ ಈ ಶೀರ್ಷಿಕೆಯ ಅರ್ಥವಿಶೇಷವೇನು? ಯಾವ ಪಂಥದ ಪಾರಿಭಾಷಿಕ ಪದವಿರಬೇಕು? ಎನ್ನಿಸಿತು. ಒಮ್ಮೆ, ಮಂಗಳೂರಿಗೆ ಹೋಗಿದ್ದೆ. ಅಲ್ಲಿ ಕದರಿ ಬೆಟ್ಟಕ್ಕೂ ಹೋಗಿದ್ದೆ. ಅದೊಂದು ನಾಥ ಪಂಥೀಯ ಕ್ಷೇತ್ರ. ಅಲ್ಲಿ ಮಹಾದ್ವಾರದ ಮೇಲೆ, 'ಯೋಗ ರಮಣೀಯ ಕ್ಷೇತ್ರ' ಎಂದು ಬರೆದಿದ್ದರು. ಇದರ ಆಧಾರದ ಮೇಲೆ ಸಿದ್ಧರಾಮ ನಾಥಪಂಥೀಯ ಎಂದು ತಿಳಿಯಿತು. ಕಾವ್ಯಗಳಲ್ಲಿ ನಾಥ ಶರಣ ಎಂಬ ಉಲ್ಲೇಖವೂ ಬರುತ್ತದೆ. ಅಂದರೆ ನಾಥಪಂಥದ ಪ್ರಭಾವಿ ಅನುಯಾಯಿಯಾದ ಸಿದ್ಧರಾಮನು

೧೨ನೇ ಶತಮಾನದಲ್ಲಿ ಬಸವಣ್ಣನ ವಿಚಾರಧಾರೆಗೆ ಪ್ರಭಾವಿತನಾಗಿ ಶರಣ ಸಂಸ್ಕೃತಿ ಕ್ರಮೇಣ ಲಿಂಗಾಯತ ಸಂಸ್ಕೃತಿಯಲ್ಲಿ ಲೀನವಾಯಿತು. ಇದೇ ಸಂದರ್ಭದಲ್ಲಿ ಬಸವಣ್ಣನ ಜಾತಿಯೂ ಯಾವುದೆಂದು ತಿಳಿದುಕೊಳ್ಳುವುದು ಮುಖ್ಯವೆನಿಸುತ್ತದೆ. ಬಸವಣ್ಣನನ್ನು ಬ್ರಾಹ್ಮಣ ಎನ್ನಲಾಗುತ್ತದೆ. ಆದರೆ ಯಾವ ಬ್ರಾಹ್ಮಣ? ಯಾಕೆಂದರೆ ಎರಡು ಬ್ರಾಹ್ಮಣ ಪಂಥಗಳಿವೆ. ಒಂದು, ವೈದಿಕ ಬ್ರಾಹ್ಮಣ. ಎರಡು, ಆಗಮಿಕ ಬ್ರಾಹ್ಮಣ. ವೈದಿಕ ಬ್ರಾಹ್ಮಣದಲ್ಲಿ ಮೂರು ಪ್ರಕಾರಗಳಿವೆ– ಶಂಕರಾಚಾರ್ಯರ ಸ್ಮಾರ್ತ ಬ್ರಾಹ್ಮಣ, ಮಧ್ವಾಚಾರ್ಯರ ವೈಷ್ಣವ ಬ್ರಾಹ್ಮಣ, ರಾಮಾನುಜಾಚಾರ್ಯರ ಶ್ರೀ ವೈಷ್ಣವ ಬ್ರಾಹ್ಮಣ. ಆದರೆ, ಪ್ರಾಚೀನ ಕಾಲದಲ್ಲಿ ಆಗಮಿಕ ಬ್ರಾಹ್ಮಣವೆಂಬ ಒಂದು ಪಂಥವಿದ್ದು; ಅದು ಈಗ ಉಳಿದಿಲ್ಲ. ಕಾಲಾಂತರದಲ್ಲಿ ಬದಲಾಗುತ್ತ ಸಾಗಿ ಬಂದಿದೆ.

ಬಸವಣ್ಣನಿಗೆ ತನ್ನ ಮನೆಯಲ್ಲಿದ್ದ 'ಶಿವಭಕ್ತಿಯುಂ ಕರ್ಮಮುಮಂ ಎಂದೂ ಒಂದಾಗಿರದು' ಎಂದು ಜನಿವಾರ ಹರಿದು ಹೊರಬಂದ. ಬಸವಣ್ಣನ ಒಂದು ವಚನ ಹೀಗಿದೆ:

ಒಡೆಯರು ಬಂದಡೆ ಗುಡಿ ತೋರಣವ ಕಟ್ಟಿ
ನಂಟರು ಬಂದಡೆ ಸಮಯವಿಲ್ಲೆನ್ನಿ
ಅಂದೇಕೆ ಬಾರರು?
ನೀರಿಂಗೆ ನೇಣಿಂಗೆ ಹೊರಗಾದಂದು, ಸಮಯಾಚಾರಕ್ಕೆ ಒಳಗಾದಂದು
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು
ಬಳಿಕ ಬಂಧುಗಳುಂಟೆ, ಕೂಡಲಸಂಗಮದೇವಾ?

ಈ ವಚನದಲ್ಲಿ ಉಲ್ಲೇಖವಾಗಿರುವ 'ಸಮಯಾಚಾರ'ವೆಂಬುದು ನಾಥಸಂಪ್ರದಾಯ ಪಂಥದ ಪಾರಿಭಾಷಿಕ ಪದ. ಇದು ಶಿಥಿಲವಾಗುತ್ತಿದೆ ಎಂದು ತಿಳಿದು, ಬಸವಣ್ಣ ಇಷ್ಟಲಿಂಗ, ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳನ್ನು ರೂಪಿಸಿ 'ಲಿಂಗಾಯತ ಸಂಸ್ಕೃತಿ' ಎಂಬ ಹೊಸ ಧರ್ಮವನ್ನು ರೂಪಿಸಿದ.

ಸಿದ್ಧರಾಮನು ಮಹಾರಾಷ್ಟ್ರದವನು, ಬಸವಣ್ಣ ಕರ್ನಾಟಕದವನು, ಪಂಡಿತಾರಾಧ್ಯ ಆಂಧ್ರಪ್ರದೇಶದವನು. ಸಿದ್ಧರಾಮ ಮತ್ತು ಬಸವಣ್ಣನವರು ಪರಸ್ಪರ ಭೇಟಿಯಾಗಿ ಪ್ರಭಾವಿತರಾದರು. ಅದರೆ, ಬಸವಣ್ಣನಿಗೂ ಪಂಡಿತಾರಾಧ್ಯರಿಗೂ ಭೇಟಿಯಾಗಲಿಲ್ಲ. ಭೇಟಿಯಾಗಿದ್ದರೆ ಕನ್ನಡ ನಾಡಿನ ಲಿಂಗಾಯತ ಸಂಸ್ಕೃತಿಯ ಸ್ವರೂಪವೇ ಬೇರೆಯಾಗಿರುತ್ತಿತ್ತು.

ಬಸವಣ್ಣನದು ಪ್ರಗತಿಪರ ಚಿಂತನೆ. ಸಮಾಜವನ್ನು ಚಲನಶೀಲಗೊಳಿಸಿ ಶುದ್ಧಗೊಳಿಸುವ ಚಿಂತನೆ. ಇದು ಹನ್ನೆರಡನೇ ಶತಮಾನದಲ್ಲಿ ಕಲ್ಯಾಣದಲ್ಲಿ ನಡೆಯಿತು. ಮುಂದಿನ ಹಂತ ದ್ವಾರಸಮುದ್ರಕ್ಕೆ ಸ್ಥಳಾಂತರಗೊಂಡಿತು. ಅಲ್ಲಿ ಕೆರೆಯ ಪದ್ಮರಸ, ನರಸಿಂಹ ಬಲ್ಲಾಳರ ಕಾಲದಲ್ಲಿ ಚಿಂತನಾವಿಧಾನ, ಚಿಂತನಧಾರೆ ಬದಲಾಯಿತು. ಇದರ ನಂತರದ ಹಂಪಿಯಲ್ಲಿ, ವಿಜಯನಗರದರಸು ಪ್ರೌಢದೇವರಾಯನ ಕಾಲ ಇದನ್ನು ಲಿಂಗಾಯತದ ಪುನರುಜ್ಜೀವನ ಕಾಲ ಎಂದೇ ಕರೆಯಲಾಗುತ್ತದೆ. ಅದು ಪುನರುಜ್ಜೀವನ ಕಾಲವಲ್ಲ; 'ಲಿಂಗಾಯತದ ವೀರಶೈವೀಕರಣ'ಗೊಂಡ ಕಾಲ. ಈ ಕಾಲಕ್ಕೆ ಬಂದಕೂಡಲೇ ದೊಡ್ಡ ಸಮಾಜದ ಶ್ರೇಷ್ಠ ಧರ್ಮ ಶಿಥಿಲಗೊಂಡಿತು. ಈ ಧರ್ಮದ ಒಳಗೆ ಬಂದು ಸೇರಿದ್ದ ದಲಿತರು ಹೊರಗೆ ಹೋದರು. ದಲಿತರು, ಆಚಾರ್ಯರು, ಬೇರೆಯಾದಂತೆ, ಅನುಭಾವವೂ ಬದಲಾಗಿ ಅನುಭವಿಗಳು ಬೇರೆ ರೂಪ ತಾಳಿದರು.

ಇತ್ತೀಚೆ ನಾನು ಚಾಮರಾಜನಗರಕ್ಕೆ ಹೋಗಿದ್ದಾಗ ಅಲ್ಲಿ ಮಂಟೇಸ್ವಾಮಿ ಪರಂಪರೆಯಿದೆ. ಮಂಟೇಸ್ವಾಮಿ ಪುರಾಣದಲ್ಲಿ ಮೇಲಿಂದ ಮೇಲೆ 'ಬಸವಣ್ಣ' ಮತ್ತು 'ಕಲ್ಯಾಣ'ಗಳ ಉಲ್ಲೇಖ ಬರುತ್ತದೆ. ಅದನ್ನು ಹೆಚ್ಚಾಗಿ ದಲಿತರು, ಹಿಂದುಳಿದವರು ಹಾಡುತ್ತಾರೆ. ಪ್ರಾಸಂಗಿಕವಾಗಿ ಅವರೊಡನೆ ಮಾತನಾಡುವಾಗ 'ಬಸವಣ್ಣ ಗುರುವಿಲ್ಲದ ಗುಡ್ಡ' ಎಂದು ಹೇಳಿದರು. ಇದು ಅಚ್ಚರಿಯೆನಿಸಿತು. ಕವಿಗಳು ತಮ್ಮ ಕಾವ್ಯಗಳಲ್ಲಿ ಬಸವಣ್ಣನ ಗುರುವನ್ನು ಈಶಾನ್ಯಮುನಿ, ಜಾತವೇದ ಮುನಿ ಇತ್ಯಾದಿಯಾಗಿ ಹೇಳುತ್ತಿದ್ದರೆ, ಜಾನಪದರು ಹೊಸ ಅಂಶವನ್ನು ಇಲ್ಲಿ ಹೇಳುತ್ತಿದ್ದಾರೆ. ಅಂದರೆ ದೊಡ್ಡ ದೊಡ್ಡ ಕವಿಗಳು ಸತ್ಯವನ್ನು ರಂಜಿತವಾಗಿ ಹೇಳುತ್ತಿದ್ದರೆ, ಸಾಮಾನ್ಯರ ಬಾಯಿಯಲ್ಲಿ ಸತ್ಯ ಜೋಪಾನವಾಗಿ ಉಳಿದುಕೊಂಡು ಬಂದಿದೆ. ನಮ್ಮಲ್ಲಿ ದೀಕ್ಷೆ ಎರಡು ರೀತಿಯಲ್ಲಿವೆ. ಪರೋಕ್ಷ ಗುರುದೀಕ್ಷೆ, ಅಪರೋಕ್ಷ ಗುರುದೀಕ್ಷೆ. ಈ ಹಿನ್ನೆಲೆಯಲ್ಲಿ 'ಗುರುವಿಲ್ಲದ ಗುಡ್ಡ' ಮಾತಿಗೆ ವಿಶೇಷ ಅರ್ಥ ದೊರಕಿತು. ದೈವೀ ಕೃಪೆಯಾದವರಿಗೆ ಪರೋಕ್ಷ ದೀಕ್ಷೆಯಾಗಿರುತ್ತದೆ. ಹೀಗಾಗಿ ಬಸವಣ್ಣನಿಗೆ ಗುರುವಿಲ್ಲ. ಬುದ್ಧನಿಗೆ ಯಾರು ಗುರು? ಮಹಾವೀರನಿಗೆ ಯಾರು ಗುರು? ಮಹಮ್ಮದ್ ಪೈಗಂಬರ್‌ನಿಗೆ ಗುರು ಯಾರು? ಹೀಗಾಗಿ ಬಸವಣ್ಣನಿಗೆ ಗುರುಗಳಿಲ್ಲ; ಆತನು ಗುರುವಿಲ್ಲದ ಗುಡ್ಡ.

ಲಿಂಗಾಯತ ಎಂಬ ಹೊಸ ಧರ್ಮ, ಸ್ವತಂತ್ರ ಧರ್ಮ ರೂಪುಗೊಂಡದ್ದು ಈ ಹಿನ್ನೆಲೆಯಲ್ಲಿಯೇ. ಲಿಂಗಾಯತರಲ್ಲಿ ಬಹುತೇಕರು ವೀರಶೈವವೆಂಬ ವ್ರತವನ್ನು ಕೈಗೊಂಡಿದ್ದರಿಂದ ಲಿಂಗಾಯತರು ವೀರಶೈವರು ಎಂಬುದು ಒಂದೇ ಅರ್ಥದಲ್ಲಿ ಬಳಕೆಯಾಗುತ್ತ ಬಂದಿತು. ವಾಸ್ತವವಾಗಿ ಲಿಂಗಾಯತ ಎಂಬುದು ಧರ್ಮದ ಹೆಸರು ವೀರಶೈವ ಎಂಬುದು ವ್ರತದ ಹೆಸರು.

ಒಟ್ಟಾರೆಯಾಗಿ ಐವತ್ತು ಬಹುಮುಖ್ಯ-ಲೇಖನಗಳಿರುವ ಈ ಕೃತಿಯು ವರ್ತಮಾನದಲ್ಲಿ ಆದ ಇತಿಹಾಸದ ದುಷ್ಪರಿಣಾಮವನ್ನು ತಿಳಿಸುತ್ತದೆ. ಇದು ಸ್ಥಗಿತ ಸಂಶೋಧನೆಯಾಗಿರದೇ, ಚಲನಶೀಲ ಸಂಶೋಧನೆಗೆ ಸಂಶೋಧನ ವಿಧಾನವನ್ನು ಮಾದರಿಯನ್ನು ಸಿದ್ಧಮಾಡಿಕೊಡುತ್ತದೆ.

ರುಮಾಲೆಯವರು ಉತ್ತಮ ಮತ್ತು ಚರಿತ್ರೆಯ ಪುನರಾವಲೋಕನಕ್ಕೆ ಅನುಕೂಲವಾಗುವಂಥ ಲೇಖನಗಳನ್ನು ಸಂಗ್ರಹ ಮಾಡಿದ್ದಾರೆ. ಶ್ರಮವಹಿಸಿ ಅಧ್ಯಯನ ಪೂರ್ಣವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಅವರಿಗೂ ಮತ್ತು ಈ ಕೃತಿಯನ್ನು ಪ್ರಕಟಿಸಿದ ಹೊಸಪೇಟೆಯ ಸಾಯಿಮಣಿ ಪ್ರಕಾಶನದ ವೆಂಕಟೇಶ ಅವರಿಗೂ ಮತ್ತೊಮ್ಮೆ ಎಲ್ಲರಿಗೂ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

***

* ೮-೧೦-೨೦೦೯ ರಂದು ಹೊಸಪೇಟೆ ಸಮಾರಂಭ. ಡಾ. ಮೃತ್ಯುಂಜಯ ರುಮಾಲೆಯವರು ಸಂಪಾದಿಸಿದ ಲಿಂಗಾಯತ ಸಂಸ್ಕೃತಿಯನ್ನು ಕುರಿತ ಡಾ. ಎಂ. ಎಂ. ಕಲಬುರ್ಗಿಯವರ ಲೇಖನ ಸಂಪುಟ-'ಜಂಗಮದಿಂದ ಸ್ಥಾವರಕ್ಕೆ' ಕೃತಿಯ ಲೋಕಾರ್ಪಣೆಯ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಮಾಡಿದ ಭಾಷಣದ ಲಿಖಿತ ರೂಪ. ಕೃತಿಯನ್ನು ಲೋಕಾರ್ಪಣೆ ಮಾಡಿದವರು, ನಾಡೋಜ ಚನ್ನವೀರ ಕಣವಿಯವರು. ಅಧ್ಯಕ್ಷತೆ ವಹಿಸಿದವರು, ಪ್ರೊ. ಸಿ. ಬಿ. ಚಂದರಶೇಖರಪ್ಪನವರು.

ಆಕರ : ಮಾರ್ಗ ಸಂಪುಟ-೮

■■

೩೬

ಅಮೇರಿಕೆಯಲ್ಲಿ 'ವಚನ' ಇಂಗ್ಲಿಷ್ ಅನುವಾದ ಗ್ರಂಥ ಬಿಡುಗಡೆ

ಶರಣ ಸಂಸ್ಕೃತಿಯ ಆಧುನಿಕ ಅಭ್ಯಾಸ ಆರಂಭವಾಗಿ ಸುಮಾರು ೧೦೦ ವರ್ಷಗಳು ಗತಿಸಿದವು. ಈ ನೂರು ವರ್ಷಗಳ ಅವಧಿಯಲ್ಲಿ ಈ ಸಂಸ್ಕೃತಿಯ ವಿಷಯವಾಗಿ ಶೋಧ, ಚಿಂತನ ಮತ್ತು ಪ್ರಸಾರ ಎಂಬ ಮೂರು ಘಟ್ಟಗಳು ಕಾಣಿಸಿಕೊಂಡಿವೆ. ಶೋಧ ಘಟ್ಟದಲ್ಲಿ ದೊಡ್ಡ ಪಾತ್ರವನ್ನು ವಹಿಸಿದವರು ಫ.ಗು.ಹಳಕಟ್ಟಿಯವರು, ಚಿಂತನ ಘಟ್ಟದಲ್ಲಿ ದೊಡ್ಡ ಪಾತ್ರವಹಿಸಿದವರು ಶ್ರೀ ಹರ್ಡೇಕರ ಮಂಜಪ್ಪನವರು, ಬಸವ ಸಂಸ್ಕೃತಿಯ ಪ್ರಸಾರ ಘಟ್ಟದಲ್ಲಿ ದೊಡ್ಡ ಪಾತ್ರ ವಹಿಸಿದವರು ಮಾನ್ಯ ಶ್ರೀ ಬಿ.ಡಿ.ಜತ್ತಿಯವರು. ಅವರು ಬೆಂಗಳೂರಿನಲ್ಲಿ ಬಸವ ಸಮಿತಿಯನ್ನು ಸ್ಥಾಪಿಸುವುದರ ಮೂಲಕ ಕೇವಲ ರಾಜ್ಯಕ್ಕೆ ಸೀಮಿತವಾಗಿದ್ದ ಈ ಸಂಸ್ಕೃತಿಯನ್ನು ರಾಷ್ಟ್ರಮಟ್ಟದಲ್ಲಿ ವಿಸ್ತಾರಗೊಳಿಸಿದರು.

ಈಗ ಅದರ ಅಧ್ಯಕ್ಷರಾಗಿರುವ ಶ್ರೀ ಅರವಿಂದ ಜತ್ತಿಯವರು ಈ ಸಂಸ್ಕೃತಿಯನ್ನು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಪ್ರಸಾರ ಮಾಡುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಅವರು ಕೇವಲ ಕನ್ನಡ ಮಾಧ್ಯಮದ ಮೂಲಕ ಪ್ರಸಾರಕ್ಕೆ ಸೀಮಿತಗೊಳ್ಳದೇ, ಬೇರೆ ಬೇರೆ ಭಾಷೆಗಳಲ್ಲಿ ಇದು ಪ್ರಸಾರವಾಗಬೇಕೆಂಬ ಒಂದು ಆಲೋಚನೆಯಲ್ಲಿ ತೊಡಗಿದ್ದಾರೆ. ಈಗಾಗಲೇ ಬಸವ ಜರ್ನಲ್ ಇಂಗ್ಲಿಷ್ ಭಾಷೆಯಲ್ಲಿ, ಬಸವ ಪಥ ಕನ್ನಡ, ತೆಲುಗು, ತಮಿಳು, ಮಲೆಯಾಳಿ ಮತ್ತು ಮರಾಠಿ ಮೊದಲಾದ ಭಾಷೆಗಳಲ್ಲಿ ಅನುವಾದವಾಗಿ ಅದು ಪ್ರಕಟವಾಗುತ್ತಾ ಇದೆ. ಇದರ ಒಂದು ಮುಂದುವರಿಕೆಯಾಗಿ ವಚನ ಸಾಹಿತ್ಯದ ಬಹುಭಾಷಾ ಅನುವಾದವನ್ನು ಬಸವ ಸಮಿತಿ ಕೈಗೆತ್ತಿಕೊಂಡಿದ್ದು ಇದಕ್ಕಾಗಿ ಕರ್ನಾಟಕ ಸರ್ಕಾರ ಒಂದು ಕೋಟಿ ರೂ. ಅನುದಾನವನ್ನು ನೀಡಿದೆ. ಈ ಅನುದಾನದ ನೆರವಿನಲ್ಲಿ ಈ ಯೋಜನೆ ಈಗ ಆರಂಭವಾಗಿ ಅರ್ಧದಷ್ಟು ಕಾರ್ಯ ಪೂರ್ಣವಾಗಿದೆ. ಇದರ ನಿರ್ದೇಶಕನಾಗಿ ನಾನು ಕೆಲಸ ಮಾಡುತ್ತಿದ್ದೇನೆ.

ನನ್ನ ಜೀವಮಾನದಲ್ಲಿ ವಚನ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಅಥವಾ ಲಿಂಗಾಯತ ಸಮಾಜಕ್ಕೆ ಸಂಬಂಧಪಟ್ಟಂತೆ ಈ ಮೊದಲು ನೂರಾರು ಕೆಲಸಗಳನ್ನು ನಾನು ಪೂರೈಸಿದ್ದೇನೆ. ಒಂದು ಗದುಗಿನ ಶ್ರೀ ತೋಂಟದಾರ್ಯಮಠದ ಲಿಂಗಾಯತ ಅಧ್ಯಯನ ಸಂಸ್ಥೆಯ ಮೂಲಕ ಲಿಂಗಾಯತ ಪುಣ್ಯಪುರಷರ ಮಾಲಿಕೆಯಲ್ಲಿ ಸುಮಾರು ೨೫೦ ಜನರನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಎರಡನೆಯದಾಗಿ ಕರ್ನಾಟಕ ಸರ್ಕಾರದ ಆಶ್ರಯದಲ್ಲಿ ಎಲ್ಲ ಶರಣರ, ಎಲ್ಲ ವಚನಗಳನ್ನು ೧೫

ಸಂಪುಟಗಳಲ್ಲಿ ೧೦.೦೦೦ ಪುಟಗಳಲ್ಲಿ ೨೧೦೦೦ ವಚನಗಳನ್ನು ಪ್ರಕಟಿಸಲಾಗಿದೆ. ಮೂರನೆಯದಾಗಿ ಬಿಜಾಪುರದ ಬಿ.ಎಲ್.ಡಿ.ಇ ಸಂಸ್ಥೆಯ ಆಶ್ರಯದಲ್ಲಿ ಹಳಕಟ್ಟಿಯವರ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ೧೨೦೦೦ ಪುಟಗಳಲ್ಲಿ ಪ್ರಕಟಿಸಲಾಗಿದೆ. ಈಗ ನಾಲ್ಕನೆಯದಾಗಿ ಶರಣ ಸಾಹಿತ್ಯದ ಬಹಳ ಮುಖ್ಯವಾದಂತಹ ಕೊಡುಗೆಯಾಗಿರುವ ವಚನಗಳಲ್ಲಿ ೨೫೦೦ ವಚನಗಳನ್ನು ಆಯ್ದುಕೊಂಡು ಅವುಗಳನ್ನು ಭಾರತ ಸರ್ಕಾರ ಮಾನ್ಯಮಾಡಿದ ೨೨ ಭಾಷೆಗಳಲ್ಲಿ ಅನುವಾದ ಮಾಡಿಸುವ ಈ ಯೋಜನೆಗೆ ನಾನು ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ. ಇದರ ಅಂಗವಾಗಿ ಇಂಗ್ಲಿಷ ಅನುವಾದ ಪಠ್ಯವನ್ನು ಇವತ್ತು ಅಮೇರಿಕ ದೇಶದ ಸೆನ್‌ಪ್ರಾನ್ಸಿಸ್‌ಕೊ ನಗರದಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಮುಂಬರುವ ಸಪ್ಟೆಂಬರ್ ತಿಂಗಳಲ್ಲಿ ದೆಹಲಿಯಲ್ಲಿ ರಾಷ್ಟ್ರಪತಿಗಳು ಈ ಎಲ್ಲಾ ಸಂಪುಟಗಳನ್ನು ಬಿಡುಗಡೆ ಮಾಡುತ್ತಿದ್ದಾರೆ.

ಈ ಯೋಜನೆ, ಇದರ ಸ್ವರೂಪದ ಬಗ್ಗೆ ಹೇಳುವದಾದರೆ ಒಟ್ಟು ಈ ವರೆಗೆ ಬೆಳಕು ಕಂಡ ವಚನಗಳ ಸಂಖ್ಯೆ ಬಸವಯುಗ ಮತ್ತು ಬಸವೋತ್ತರಯುಗ ಸೇರಿ ೨೧೦೦೦. ಈ ೨೧೦೦೦ ವಚನಗಳಲ್ಲಿ ೨೫೦೦ ವಚನಗಳನ್ನು ಆಯ್ದುಕೊಂಡಿದ್ದೇವೆ. ಈ ೨೫೦೦ ವಚನಗಳು ಅದರ ಸ್ವರೂಪ ಹೀಗೆ ಇರಬೇಕೆಂದು ನಿರ್ಣಯಿಸಿಕೊಂಡೆವು. ಒಂದು-ಲಿಂಗಾಯತ ಸಿದ್ಧಾಂತವನ್ನು ಒಳಗೊಂಡಿರಬೇಕು. ಎರಡನೆಯದಾಗಿ ಲೋಕನೀತಿಯನ್ನು ಅದು ಸಾರಬೇಕು. ಮೂರನೆಯದಾಗಿ ಸಮಸಮಾಜದ ಬಗ್ಗೆ ಇರುವ ವಚನಗಳನ್ನು ಆಯ್ದುಕೊಳ್ಳಬೇಕು. ನಾಲ್ಕನೆಯದಾಗಿ ಸಮೃದ್ಧ ಸಮಾಜದ ಬಗ್ಗೆ ಇರುವ ವಚನಗಳನ್ನು ಆಯ್ದುಕೊಳ್ಳಬೇಕು. ಮತ್ತು ಇವೆಲ್ಲ ಮುಖ್ಯವಾಗಿ ಒಂದಿಷ್ಟು ಸಾಹಿತ್ಯಿಕವಾಗಿರಬೇಕು. ಇಂತಹ ಒಂದು ಪರಿಕಲ್ಪನೆ ಹಿನ್ನೆಲೆಯಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. ಇಲ್ಲಿ ೧೭೯ಜನ ಶರಣರ ೩೧ ಜನ ಶರಣೆಯರ ೧೩ ಜನ ಅಜ್ಞಾತ ಶರಣರ ಹೀಗೆ ಒಟ್ಟು ೧೭೩ ಜನ ಶರಣರ ೨೫೦೦ ವಚನಗಳನ್ನು ಆಯ್ದುಕೊಳ್ಳಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಇನ್ನಷ್ಟು ನಿರ್ದಿಷ್ಟವಾಗಿ ಹೇಳುವುದಾದರೆ ಕನ್ನಡ ವಚನಗಳ ಸಂಪುಟವನ್ನು ಮೂಲ ಪಠ್ಯವೆಂದು ಕರೆದಿದ್ದೇವೆ. ಆಮೇಲೆ ಸಂಪರ್ಕ ಪಠ್ಯವೆಂದು ಇಂಗ್ಲಿಷ ಮತ್ತು ಹಿಂದಿ ಸಂಪುಟಗಳನ್ನು ಕರೆದಿದ್ದೇವೆ. ಆಮೇಲೆ ಮಿಕ್ಕ ಭಾಷೆಗಳಿಗೆ ಸಂಬಂಧಪಟ್ಟಂತೆ ಮರಾಠಿ, ತೆಲಗು, ತಮಿಳು, ಪಂಜಾಬಿ, ಬೆಂಗಾಲಿ, ಉರ್ದು ಮತ್ತು ಸಂಸ್ಕೃತ ಹೀಗೆ ಹತ್ತು ಭಾಷೆಗಳ ಪಠ್ಯ ಈಗ ಸಿದ್ಧವಾಗಿ, ಮುದ್ರಣವಾಗಿ ಬಿಡುಗಡೆಗೆ ಅವು ಕಾಯುತ್ತಿವೆ. ಈ ಯೋಜನೆ ೨೦೦೮ರಲ್ಲಿ ಆರಂಭವಾಗಿ ಈಗ ೨೦೧೨ರಲ್ಲಿ ಕೊನೆಗೊಂಡಿದೆ. ಹೀಗಾಗಿ ಒಟ್ಟು ನಾವು ೧೦ ಸಂಪುಟಗಳನ್ನು ಹೊರತರುವಲ್ಲಿ ನಾಲ್ಕು ವರ್ಷ ಪರಿಶ್ರಮಪಟ್ಟಿದ್ದೇವೆ ಎಂದು ಹೇಳಬಯಸುತ್ತೇನೆ.

ಇವತ್ತು ವಿ.ಎಸ್.ಎನ್.ಎ ಆಶ್ರಯದಲ್ಲಿ ಸ್ಯಾನಪ್ರಾನ್ಸಿಸ್‌ಕೊದಲ್ಲಿ ಇಂಗ್ಲಿಷ ಆವೃತ್ತಿ ಮಾತ್ರ ಬಿಡುಗಡೆ ಹೊಂದುತ್ತಿದೆ. ಈಗಾಗಲೇ ಹೇಳಿರುವಂತೆ ಮಿಕ್ಕ ಆವೃತ್ತಿಗಳು-ಇಂಗ್ಲಿಷ ಒಳಗೊಂಡಂತೆ ದಿಲ್ಲಿಯಲ್ಲಿ ರಾಷ್ಟ್ರಪತಿಗಳಿಂದ ಸಪ್ಟೆಂಬರ ತಿಂಗಳಲ್ಲಿ ಬಿಡುಗಡೆಯಾಗುತ್ತಿದ್ದು, ಇದರೊಂದಿಗೆ ಪಂಜಾಬಿ ಭಾಷೆಯ ಸಂಪುಟ ಪಂಜಾಬ ಪ್ರಾಂತ್ಯದಲ್ಲಿ, ಬೆಂಗಾಲಿ ಭಾಷೆಯ ಸಂಪುಟ ಬಂಗಾಲ ದೇಶದಲ್ಲಿ, ಅದೇ ರೀತಿ ಮರಾಠಿ, ತೆಲಗು, ತಮಿಳು ಈ ಭಾಷೆಯ ಸಂಪುಟಗಳು ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಬಿಡುಗಡೆ ಆಗಲಿವೆ. ಈ ಒಂದು ಯೋಜನೆಗೆ ನಾವು ಒಂದು ಸಂಪಾದಕ ಮಂಡಳಿಯನ್ನು ರೂಪಿಸಿದ್ದೇವೆ. ಸಂಪಾದಕ ಮಂಡಳಿಯ ಅಧ್ಯಕ್ಷರು ಮಾನ್ಯ ಶ್ರೀ ಅರವಿಂದ

ಜತ್ತಿಯವರು, ಅದರ ಡೈರೆಕ್ಟರ ನಿರ್ದೇಶಕನಾಗಿ ನಾನು ಕೆಲಸ ಮಾಡುತ್ತಿದ್ದೇನೆ. ಇನ್ನು ಸಂಪಾದಕರನ್ನಾಗಿ ಹಿಂದಿ, ಇಂಗ್ಲಿಷ, ತೆಲಗು, ತಮಿಳು, ಬಂಗಾಲಿ, ಪಂಜಾಬಿ, ಸಂಸ್ಕೃತ, ಉರ್ದು ಮೊದಲಾದ ಭಾಷೆಯಲ್ಲಿ ಬಲ್ಲಿದರಾಗಿದಂಥ ಒಬ್ಬೊಬ್ಬ ಸಂಪಾದಕರನ್ನು ನೇಮಿಸಿದ್ದೇವೆ. ಪ್ರತಿಯೊಬ್ಬ ಸಂಪಾದಕರ ಕೈಯಲ್ಲಿ ೮–೧೦ ಜನ ಅನುವಾದಕರು ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಈ ೧೦ ಸಂಪುಟಗಳು ಹೊರಬರುವಲ್ಲಿ ೧೦೦ ಜನ ವಿದ್ವಾಂಸರು ದುಡಿದ, ಅವರ ಒಂದು ಪ್ರಯತ್ನ ಇದರಲ್ಲಿ ಇದೆ ಎಂದು ನಾನು ಸಂತೋಷದಿಂದ ಹೇಳಬಯಸುತ್ತೇನೆ.

ಇನ್ನೊಂದು ವಿಷಯವೆಂದರೆ ಸಾಹಿತ್ಯ, ಸಿದ್ಧಾಂತ ಮತ್ತು ಸಂಸ್ಕೃತಿ ಈ ಮೂರು ಗೊತ್ತಿದ್ದಂತವರು ಮಾತ್ರ ಇದನ್ನು ತಡವಿಕೊಳ್ಳಬೇಕು. ಅಂದಾಗ ಮಾತ್ರ ಇದು ಸರಿಯಾದ ಒಂದು ಅನುವಾದವಾಗುತ್ತದೆ. ಹೀಗೆ ಅನುವಾದಕರಿಗೆ ಬಂದಂತಹ ಸಮಸ್ಯೆಗಳನ್ನು ಸಂಪಾದಕರು ಬಗೆಹರಿಸುತ್ತಾರೆ. ಅವರಿಗೆ ಬಂದಂತಹ ಸಮಸ್ಯೆಗಳನ್ನು ನಿರ್ದೇಶಕನಾದ ನಾನು ಬಗೆಹರಿಸುತ್ತಿದ್ದೇನೆ. ಹೀಗೆ ಮೂರೂ ಹಂತಗಳಲ್ಲಿ ನಾವು ಸಮಾಲೋಚನೆ ನಡೆಸುವ ಮೂಲಕ ಒಟ್ಟು ವಚನಗಳ ಅನುವಾದ ಯೋಜನೆ ಒಂದು ಪರಿಪೂರ್ಣವಾಗುವ ದಿಕ್ಕಿನಲ್ಲಿ ನಾವು ದುಡಿದಿದ್ದೇವೆ ಎಂದು ಹೇಳಬಯಸುತ್ತಿದ್ದೇನೆ. ಆದ್ದರಿಂದ ಅನುವಾದಕನಿಗಾಗಿ ಎರಡು ಮೂರು ಸಭೆ ನಡೆಸಿದ್ದೇವೆ, ಸಂಪಾದಕರ ವಿಷಯದಲ್ಲಿ ೬–೭ ಸಲ ಸಭೆ ಸೇರಿ ನಾವು ಈ ಕೆಲಸ ಮಾಡಿದ್ದೇವೆ. ಇಷ್ಟೆಲ್ಲ ದುಡಿದಿದ್ದರೂ ಸಹ ನಮ್ಮ ಪ್ರಯತ್ನವೇ ಅಂತಿಮ ಎಂದು ಹೇಳುವುದಿಲ್ಲ. ಇದರಲ್ಲಿ ಉಳಿದಿರಬಹುದಾದ ದೋಷಗಳನ್ನು ಮುಂದೆ ವಿದ್ವಾಂಸರು ಸರಿಪಡಿಸುತ್ತಾರೆ ಎಂಬ ವಿಚಾರ ನನ್ನದಾಗಿದೆ.

ವಚನ ಅನುವಾದ ಮಾಡುವುದೆಂದರೆ ಕೇವಲ ಇದು ಭಾಷಿಕ ಅನುವಾದವಲ್ಲ. ಇದೊಂದು ಸಾಂಸ್ಕೃತಿಕ ಅನುವಾದ, ಇದೊಂದು ಸಿದ್ಧಾಂತದ ಅನುವಾದ. ಆದುದರಿಂದ ಮೊಟ್ಟಮೊದಲು ವಚನಗಳನ್ನು ಶುದ್ಧೀಕರಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಈಗಾಗಲೇ ಅನೇಕ ಜನ ವಿದ್ವಾಂಸರು ಶುದ್ಧೀಕರಣ ಕೆಲಸ ಮಾಡಿದ್ದಾರೆ. ಆದರೆ ಇನ್ನೂ ಅಲ್ಲಲ್ಲಿ ಉಳಿದಿರುವಂತಹ ದೋಷಗಳನ್ನು ನಾವು ತಿದ್ದುಪಡಿ ಮಾಡಿದ್ದೇವೆ. ಈಗ ಉದಾಹರಣೆಗೆ ಹೇಳುವದಾದರೆ 'ಚಲಿಸುವ ಚರನಿಗೆ ಚರ್ಚೆಯೇ ಭೂಷಣ' ಎಂದು ಒಂದು ಸಾಲಿದೆ. ಅದು 'ಚಲಿಸುವ ಚರನಿಗೆ ಚರ್ಚೆಯೇ ಭೂಷಣ' ಅಲ್ಲ ಅದು 'ಚರ್ಯೆಯೇ ಭೂಷಣ'. ಯಾವ ಚಲಿಸುತ್ತಿದ್ದಾನೆ ಅವನಿಗೆ ಚಲಿಸುವಿಕೆ ಅಂದರೆ ಚರ್ಯೆಯೇ ಭೂಷಣ ಎಂಬ ಒಂದು ಪಾಠವನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ. 'ಹರಿಯುವ ನದಿಗೆ 'ತನ್ಮಯವೆಲ್ಲಾ ಅಡಿ' ತನ್ಮಯವೆಲ್ಲಾ ಅಡಿ ಅಲ್ಲ 'ತನ್ನ ಮೈ ಎಲ್ಲಾ ಅಡಿ' ಹೀಗೆ ದೋಷಗಳನ್ನು ದೂರಮಾಡಿ ನಾವು ಸತ್ಯಪಾಠವನ್ನು ಕಣ್ಮುಂದೆ ಇಟ್ಟುಕೊಂಡು ಅನುವಾದಕ್ಕೆ ತೊಡಗಬೇಕಾಗುತ್ತದೆ. ಆಮೇಲೆ ಪ್ರತಿಯೊಂದು ವಚನವನ್ನು ಅರ್ಥೈಸುವಲ್ಲಿ ಅನೇಕ ಮಜಲುಗಳನ್ನು ದಾಟಬೇಕಾಗುತ್ತದೆ. ಒಂದು ಲೋಕರೂಢಿ ಅರ್ಥವಿರುತ್ತದೆ. ಉದಾಹರಣೆಗೆ 'ಹರಿಯುವ ಹಾವಿಗೆ ಅಂಜೆ' 'ಹರಿಯುವ ಹಾವು' ಎಂದರೆ 'ಚಲಿಸುವ ಹಾವು' ಎಂದರ್ಥ ಮಾಡುತ್ತಾರೆ ಎಲ್ಲರೂ 'ಚಲಿಸುವ ಹಾವು ಅಲ್ಲ' ಅದು. ಹರಿ ಅಂದರೆ ಕಚ್ಚು. 'ಕಚ್ಚುವ ಹಾವು'. ಇನ್ನೂ ಹಳ್ಳಿಯಲ್ಲಿ ನಿನ್ನ ಕೈಗೆ ಹಾವು ಹರಿಲಿ ಎನ್ನುತ್ತಾರೆ. ಅದರಿಂದ ಚಲಿಸುವ ಹಾವಿಗೆ ಅಂಜೆ ಎಂದು ಅರ್ಥಮಾಡಬಾರದು. ಅದು ಕಚ್ಚುವ ಹಾವಿಗೆ ನಾನು ಅಂಜಲಾರೆ ಎಂದರ್ಥ ಮಾಡಬೇಕಾಗುತ್ತದೆ. ಬಡ ಹಾರುವನೆ ಲೇಸು ಭಕ್ತನಾದರೂ, 'ಬಡ ಹಾರುವ' ಎಂದರೆ ಅಲ್ಲಿ ನಿರ್ಗತಿಕ ಹಾರುವನಲ್ಲ. ಹಾಗೆ ಅನುವಾದ ಮಾಡಬಾರದು. ಪಿಟಿಯೆಬಲ್ ಎಂದು ಅರ್ಥ

ಮಾಡಿದರೆ ಮಾತ್ರ ಅದು ಸರಿಯಾದ ಒಂದು ಅರ್ಥವಾಗುತ್ತದೆ. ಹೀಗೆ ಲೋಕರೂಢಿಯ ಅರ್ಥವನ್ನು ನಾವು ತಿಳಿದುಕೊಂಡರೆ ಮಾತ್ರ ವಚನ ಸಾಹಿತ್ಯ ಸರಿಯಾಗಿ ಅನುವಾದ ಮಾಡಲು ಸಾಧ್ಯವಾಗುತ್ತದೆ. ಇದರೊಂದಿಗೆ ಒಂದು ಸಾಂಸ್ಕೃತಿಕ ಅರ್ಥವಂತೂ ಇರುತ್ತದೆ. ಈಗ 'ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ಪೂಜಿಸದವನ' ಎಂದು ಒಂದು ವಾಕ್ಯವಿದೆ. ಅದು 'ದೃಷ್ಟಿಯಾರೆ' ಅಲ್ಲ 'ದೃಷ್ಟಿವಾರೆ' ಎಂದು. 'ದೃಷ್ಟಿವಾರೆ' ಎಂದರೆ ಮುಂಜಾನೆ ಎದ್ದು ಲಿಂಗವನ್ನು ಕಣ್ಣು ಪಿಳುಕಿಸದೆ ನೋಡುವುದು. ಹೀಗಾಗಿ 'ದೃಷ್ಟಿಯಾರೆ' ಎನ್ನುವುದನ್ನು ಬಿಟ್ಟು 'ದೃಷ್ಟಿವಾರೆ' ಎಂದು ಅದನ್ನು ಇಟ್ಟುಕೊಳ್ಳಬೇಕಾಗುತ್ತದೆ.

ಇನ್ನು ಮೇಲೆ ಮತ್ತೊಂದು ಮಜಲು ಎಂದರೆ ಒಂದು ಭಾಷಿಕ ಅರ್ಥ ಎಂದಿರುತ್ತದೆ. ಅದನ್ನು ಸರಿಯಾಗಿ ನಾವು ತಿಳಿದುಕೊಳ್ಳಬೇಕಾಗುತ್ತದೆ. ಈಗ 'ಅಂಗದೆ ಲಿಂಗವೇ ಆಡಿನ ಹಿಕ್ಕಿ ಲಿಂಗವೆ ಕಿತ್ತುಕ್ಕುವ ಸಾಣೆ ಲಿಂಗವೆ' ಎಂದು ಒಂದು ವಚನವಿದೆ. ಇಲ್ಲಿ 'ಕಿತ್ತುಕ್ಕುವ ಸಾಣೆ' ಎಂದರೆ 'ಸಾಣೆಕಲ್ಲು' ಎಂದು ಅರ್ಥ ಮಾಡಿದ್ದಾರೆ. ಆದರೆ ಸಾಣೆ ಕಲ್ಲು ಅಲ್ಲ, ಅದು 'ಸಾಣ'. 'ಸಾಣ' ಎಂದರೆ 'ಖಡ್ಗ' ಕಿತ್ತುಬರುವ 'ಖಡ್ಗ', ಎಂದು ಅದರ ಅರ್ಥ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಇನ್ನೂ ಒಂದು ಉದಾಹರಣೆ ಹೇಳುವುದಾದರೆ ಇಲ್ಲಿ ಪ್ರಶ್ನಾರ್ಥಕ ಚಿಹ್ನೆ ಇಡಬೇಕೋ, ಉದ್ಗಾರವಾಚಕ ಚಿಹ್ನೆ ಇಡಬೇಕೋ ಎಷ್ಟೋ ಸಲ ಗೊತ್ತಾಗುವುದಿಲ್ಲ. ಈಗ 'ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯ?' ಎಂದು ಪ್ರಶ್ನಾರ್ಥಕ ಚಿಹ್ನೆ ಎಲ್ಲರೂ ಇಡುತ್ತಾರೆ. ಅಲ್ಲಿ ಪ್ರಶ್ನಾರ್ಥಕ ಚಿಹ್ನೆ ಇಡಬಾರದು, ಅಲ್ಲಿ ಉದ್ಗಾರವಾಚಕ ಚಿಹ್ನೆ ಇಡಬೇಕು. ಯಾಕೆಂದರೆ, ಅಲ್ಲಮಪ್ರಭು ಅನಿಮಿಷನ ಕೈಯಿಂದ ಲಿಂಗವನ್ನು ತೆಗೆದುಕೊಂಡ ಮೇಲೆ ಅಲ್ಲಮಪ್ರಭುವಿಗೆ ಜ್ಞಾನೋದಯವಾಗುತ್ತದೆ. ಆಗ ಇವನಿಗೂ ನನಗೆ ಏನು ಸಂಬಂಧ ಎಂದು ಆಶ್ಚರ್ಯದಿಂದ ಹೇಳುವ ಮಾತು. 'ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯ!' ಹೀಗಿರಬೇಕು ವಿನಹ ಅಲ್ಲಿ ಪ್ರಶ್ನಾರ್ಥಕ ಚಿಹ್ನೆ ಇಡಬಾರದು.

ಈ ರೀತಿ ನಾವು ಅನೇಕ ಅರ್ಥ ಛಾಯೆಗಳನ್ನು, ಅರ್ಥ ತಿಳಿದುಕೊಂಡು ಅನುವಾದ ಮಾಡಬೇಕಾಗುತ್ತದೆ. ಎಷ್ಟೋ ಸಲ ಶರಣರು ಆಡು ಭಾಷೆಯನ್ನು ಬಳಸುತ್ತಾರೆ. 'ತಾರೌ ಅಗ್ಗವಣಿಯ, ನೀಡೌ ಪತ್ರಿಯ, ಲಿಂಗಕ್ಕೆ ಬೋನವ ಹಿಡಿಯೌ' ಈ ರೀತಿ ಅಡಿಗೆ ಮನೆ ಭಾಷೆಯನ್ನು ಅವರು ಬಳಸಿದ್ದು ಈ ವಚನದಲ್ಲಿ ಗೊತ್ತಾಗುತ್ತದೆ. ಇಂತಹ ವಚನ ಅನುವಾದ ಮಾಡುವಾಗ ನಾವು ಅಂಥ ಆಡು ಭಾಷೆಯನ್ನೇ ಅನುವಾದಕ್ಕೆ ಒಗ್ಗಿಸಿಕೊಳ್ಳುವುದು ಬಹಳ ಅವಶ್ಯ ಎಂದೆನಿಸುತ್ತದೆ. ಎಷ್ಟೋ ಸಲ ಹೀಗೆ ನಾವೆಲ್ಲ ವಿಚಾರ, ಪ್ರಯತ್ನ ಮಾಡಿದರೂ ಸಹ ಕೆಲವು ವಚನಗಳಿಗೆ, ಕೆಲವು ಸಾಲುಗಳಿಗೆ ಅರ್ಥ ಹೇಳುವುದಕ್ಕೆ ಆಗುವುದಿಲ್ಲ. ಯಾಕೆಂದರೆ ಅವು ನಮ್ಮ ಸಂಸ್ಕೃತಿಯಲ್ಲಿ ರೂಪಗೊಂಡಂತಹ ಗಟ್ಟಿಯಾಗಿ ಹರಳುಗೊಂಡಂತಹ ಅರ್ಥವು. ಈಗ 'ಕೂಡಲ ಸಂಗಮ ನಿನಗೆ ಸೆರಗೊಡ್ಡಿಬೇಡುವೆನು' ಎಂದಿದೆ. ಸೆರಗೊಡ್ಡಿ ಬೇಡುವೆನು ಎಂಬುದನ್ನು ಇಂಗ್ಲೀಷನಲ್ಲಿ ಏನು ಅನುವಾದ ಮಾಡುವುದಕ್ಕೆ ಆಗುತ್ತದೆ ನಮಗೆ. ಸೆರಗೊಡ್ಡಿ ಎನ್ನುವುದು ಇದು ಕನ್ನಡದ ಸಂಸ್ಕೃತಿಯಲ್ಲಿ ರೂಪಗೊಂಡಂತಹ ಒಂದು ಪದ. ಆದ್ದರಿಂದ ಇಂತಹ ಪ್ರಸಂಗದಲ್ಲಿ ನಾವು ಏನೋ ದೂರಾನ್ವಯದ ಅರ್ಥವನ್ನು ಹೇಳಲಿಕ್ಕೆ ಸಾಧ್ಯವಾಯಿತು. ಹೀಗೆ ನಾವು ಸುಮಾರು ೧೦೦ ಜನ ವಿದ್ವಾಂಸರನ್ನು ಕೂಡಿಸಿಕೊಂಡು ಈ ವಚನ ಸಂಪುಟಗಳನ್ನು ಹೊರ ತಂದಿದ್ದೇವೆ.

ನನ್ನ ದೃಷ್ಟಿಯಲ್ಲಿ ಬಸವ ಸಿದ್ಧಾಂತವೆನ್ನುವುದು ಪೂರ್ಣ ಸಿದ್ಧಾಂತ. ಇಲ್ಲಿಯವರೆಗೆ ಭಾರತೀಯ ಇತಿಹಾಸದಲ್ಲಿ ಎಲ್ಲಾ ಧರ್ಮಗಳ ಒಂದು ತತ್ವ, ಸಿದ್ಧಾಂತ ಹೇಗಿರುತ್ತದೆ ಎಂದರೆ, ಅದು 'ಸೋಹಂ' ಸಿದ್ಧಾಂತ. ನಾವು ದೇವರಾಗಬೇಕು ಇಷ್ಟೇ. ವ್ಯಕ್ತಿ ಕೇಂದ್ರಿತವಾದ ಸಿದ್ಧಾಂತವಿದು. ಆದರೆ ಶರಣರು ಅಷ್ಟಕ್ಕೆ ನಿಲ್ಲದೇ ನೀನು ದೇವರಾಗುವುದು ಅಷ್ಟೇ ಮುಖ್ಯವಲ್ಲ, ದೇವರಾಗಿ ಸಾಮಾಜಿಕ ಮನುಷ್ಯನಾಗಬೇಕು ಎಂದರು. ಹೀಗಾಗಿ 'ಸೋಹಂ' ವರೆಗೆ ಬಂದು ನಿಂತಂತಹ ಸಿದ್ಧಾಂತವನ್ನು ಇವರು 'ದಾಸೋಹ'ದ ವರೆಗೆ ವಿಸ್ತರಿಸಿದರು. ಅದಕ್ಕಾಗಿ ಬಸವಣ್ಣನವರು 'ಸೋಹಂ ಎಂದೆನಿಸದೇ, ದಾಸೋಹಂ ಎಂದೆನಿಸಯ್ಯ' ಎಂದೆನ್ನುತ್ತಾರೆ. ಹೀಗಾಗಿ ನಾವು ಇದನ್ನು ಪೂರ್ಣ ಸಿದ್ಧಾಂತವೆಂದು, ಲಿಂಗಾಯತವನ್ನು ಪೂರ್ಣ ಧರ್ಮವೆಂದು, ವಚನ ಸಾಹಿತ್ಯವನ್ನು ಪೂರ್ಣ ಸಿದ್ಧಾಂತವನ್ನು ಪ್ರತಿಪಾದನೆ ಮಾಡುವಂತಹ ಒಂದು ಬರವಣಿಗೆ ಎಂದು ಅರ್ಥೈಸಿ, ಇದರ ಒಂದು ಅನುವಾದ ಯೋಜನೆಯಲ್ಲಿ ನಾವೆಲ್ಲ ತೊಡಗಿಕೊಂಡು ಪೂರೈಸಿದ್ದೇವೆ.

ಬಸವ ಸಮಿತಿ ತುಂಬಾ ಶ್ರದ್ಧೆಯಿಂದ ಈ ಕೆಲಸವನ್ನು ನಮ್ಮಿಂದ ಮಾಡಿಸಿದೆ. ಇವತ್ತು ಇದರ ಮೊದಲನೆಯ ಸಂಪುಟದ ಅನುವಾದ ಅದು ಇಂಗ್ಲಿಷ ಸಂಪುಟ. ಆ ಸಂಪುಟ ಇವತ್ತು ಅಮೇರಿಕೆಯ ಲಿಂಗಾಯತರ ಒಂದು ಸಂಸ್ಥೆಯಲ್ಲಿ ಬಿಡುಗಡೆಯಾಗುತ್ತಿರುವುದು ನಮಗೆ ವಿಶೇಷ ಸಂತೋಷವನ್ನುಂಟು ಮಾಡಿದೆ. ಇದು ೨೨ ಭಾಷೆಗಳಲ್ಲಿ ಅನುವಾದವಾಗುವ ಈ ಯೋಜನೆಯ ಮೂಲ ಪಠ್ಯ ಕನ್ನಡದಲ್ಲಿದೆ. ಇದರಲ್ಲಿ ೨೫೦೦ ಅತ್ಯುತ್ತಮ ವಚನಗಳನ್ನು ನಾವು ಆಯ್ದುಕೊಂಡಿದ್ದೇವೆ. ಇದನ್ನು ಮೂಲಪಠ್ಯವೆಂದು ನಾವು ಕರೆದಿದ್ದೇವೆ. ಇದು ಇಂಗ್ಲಿಷನಲ್ಲಿ ಅನುವಾದಗೊಂಡ ಪಠ್ಯ, ೨೫೦೦ ಇಲ್ಲಿಯ ವಚನಗಳು ಇಂಗ್ಲಿಷಗೆ ಅನುವಾದವಾಗಿವೆ. ಇದು ಹಿಂದಿ ಪಠ್ಯ ೨೫೦೦ ವಚನಗಳು ಹಿಂದಿ ಭಾಷೆಗೆ ಅನುವಾದಗೊಂಡಿವೆ. ಇದು ಸಂಸ್ಕೃತ ಪಠ್ಯ 'ವಚನಂ' ಎಂದು ಇದಕ್ಕೆ ನಾವು ಹೆಸರಿಟ್ಟಿದ್ದೇವೆ. ಎಲ್ಲಾ ಧರ್ಮಗಳ ವಿಷಯವಾಗಿ ಹೇಳುವುದಾದರೆ ಹೇಗೆ 'ಬೈಬಲ್', 'ಖುರಾನ್' ಎಂದು ಕರೆಯುತ್ತಾರೋ ಹಾಗೆ ಇದನ್ನು ನಾವು 'ವಚನ್' ಎಂದು ಕರೆದಿದ್ದೇವೆ. ಲಿಂಗಾಯತ ಧಾರ್ಮಿಕ ಸಾಹಿತ್ಯ ಪಠ್ಯ ಯಾವುದು ಎಂದು ಕೇಳಿದರೆ 'ವಚನ'. ಆದುದರಿಂದ ಈಗ ಬೈಬಲ್, ಖುರಾನ್ ಮೊದಲಾದವುಗಳ ಹಾಗೆ ವಚನವೂ ಒಂದು ಪವಿತ್ರ ಧಾರ್ಮಿಕ ಸಾಹಿತ್ಯ ಗ್ರಂಥವಾಗಿದೆ. ಆದ್ದರಿಂದ ಇದಕ್ಕೆ ನಾವು 'ವಚನ್' ಎಂದಿಟ್ಟಿದ್ದೇವೆ. ಈ ಮಾಲಿಕೆಯಲ್ಲಿ ಈಗ ೧೦ ಗ್ರಂಥಗಳು ಸಿದ್ಧವಾಗಿದ್ದು ಮುಂದಿನ ದಿನಗಳಲ್ಲಿ ಇನ್ನೂ ೧೨ ಗ್ರಂಥಗಳು ಸಿದ್ಧಗೊಂಡರೆ ಒಟ್ಟು ೨೨ ಭಾಷೆಯಲ್ಲಿ ಈ ಸಾಹಿತ್ಯವನ್ನು ಹೊರಹಾಕಿದಂತಾಗುತ್ತದೆ. ಆಮೇಲೆ ವಿದೇಶಿ ಭಾಷೆಗಳಿಗೆ ಜರ್ಮನ, ರಷ್ಯನ್, ಜಪಾನ ಮೊದಲಾದ ಭಾಷೆಗಳಿಗೆ–ಈ ಪಠ್ಯವನ್ನೇ ಅನುವಾದ ಮಾಡುತ್ತಾ ಹೋಗುತ್ತೇವೆ.

---

* ಅಮೇರಿಕೆಯಲ್ಲಿ ವಚನಸಾಹಿತ್ಯ ಬಹುಭಾಷಾ ಅನುವಾದಯೋಜನೆಯ ಇಂಗ್ಲಿಷ್ ಅನುವಾದ ಗ್ರಂಥ 'ವಚನ' ಬಿಡುಗಡೆ ಸಮಾರಂಭದಲ್ಲಿ ಮಾಡಿದ ಭಾಷಣ.

ಆಕರ : ಮಾರ್ಗ ಸಂಪುಟ–೮

೩೭

‘ವಚನ’ ಸಂಪುಟ ಬಿಡುಗಡೆ : ಪ್ರಾಸ್ತಾವಿಕ

೨೦೧೨

ಘನತೆವೆತ್ತ ಉಪರಾಷ್ಟ್ರಪತಿಗಳಾದ ಶ್ರೀ ಹಮೀದ ಅನ್ಸಾರಿ ಅವರೇ,

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರ ಅವರೇ,

ಸನ್ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಗೋವಿಂದ ಕಾರಜೋಳ ಅವರೇ,

ಮಾನ್ಯ ಸಚಿವರೇ, ಸಂಸದರೇ, ಶಾಸಕರೇ ಮತ್ತು ಸಭಿಕರೇ,

‘ವಚನ’ವೆನ್ನುವುದು ಶಾಸ್ತ್ರೀಯ ಭಾಷಾಪ್ರತಿಷ್ಠೆಯ ಕನ್ನಡದಲ್ಲಿ ಹುಟ್ಟಿ, ಆ ಕನ್ನಡಕ್ಕೇ ಪ್ರತಿಷ್ಠೆಯನ್ನು ತಂದುಕೊಟ್ಟ ಸಾಹಿತ್ಯಪ್ರಕಾರವಾಗಿದೆ. ಇದು ಹುಟ್ಟುವ ಪೂರ್ವದಲ್ಲಿ, ನಮ್ಮ ಸಾಹಿತ್ಯ ಉತ್ತರಭಾರತದ ವೈದಿಕ-ಜೈನ ಸಂಸ್ಕೃತಿಗಳಿಂದ ತುಂಬಿಹೋಗಿದ್ದಿತು. ಇದರಿಂದಾಗಿ ನಮ್ಮ ‘ಅರಿವು’ ವಿಸ್ತಾರವಾಯಿತಾದರೂ ‘ಅಸ್ಮಿತೆ’ ಕ್ಷೀಣವಾಗುತ್ತ ಬಂದಿತು. ೧೨ನೆಯ ಶತಮಾನದ ಹೊತ್ತಿಗೆ ಆ ಅನ್ಯಸಂಸ್ಕೃತಿಯೇ ನಮ್ಮ ಸಂಸ್ಕೃತಿಯೆಂಬ ಭ್ರಮೆಯಲ್ಲಿ ಮುಳುಗಿಹೋಗಿದ್ದ ಸ್ಥಳೀಯ ಸಾಮಾಜಿಕರನ್ನು ಎಚ್ಚರಿಸಿದವನು, ಬಸವಣ್ಣ. ಅವನ ನೇತೃತ್ವದಲ್ಲಿ ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಡಿವಳ ಮಾಚಿದೇವ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದ ಸ್ಥಳೀಯರು ಈ ಔತ್ತರೇಯ ಸಾಂಸ್ಕೃತಿಕ ದಾಳಿಯನ್ನು ‘ಲಿಂಗಾಯತ ಚಳುವಳಿ’ಯ ಮೂಲಕ ಪ್ರತಿಭಟಿಸಿದರು. ಈ ಚಳುವಳಿಯ ಭಾಷಿಕ ಅಭಿವ್ಯಕ್ತಿಯಾಗಿ ‘ವಚನ’ವೆಂಬ ಅಪೂರ್ವಸಾಹಿತ್ಯ ಸೃಷ್ಟಿಯಾಯಿತು.

ಭಾರತೀಯ ಎಲ್ಲ ಆಸ್ತಿಕ ಧರ್ಮಗಳು ವೈದಿಕದ ‘ಆತ್ಮವಾದಿ’ ಇಲ್ಲವೆ ‘ಆತ್ಮವಾದಿ-ಸಾಕಾರ ಪರಮಾತ್ಮವಾದಿ’ ಸಿದ್ಧಾಂತಕ್ಕೆ ಸೀಮಿತವಾಗಿವೆ. ಇವುಗಳಿಗೆ ಭಿನ್ನವೆಂಬಂತೆ ‘ಆತ್ಮವಾದಿ-ನಿರಾಕಾರ ಪರಮಾತ್ಮವಾದಿ-ಸಮಸಮಾಜವಾದಿ-ಶ್ರಮಸಮಾಜವಾದಿ’, ಸಿದ್ಧಾಂತವನ್ನು ಪ್ರತಿಪಾದಿಸುವ ಲಿಂಗಾಯತವು ಅವೈದಿಕ ಧರ್ಮವಾಗಿದೆ. ಈ ದೃಷ್ಟಿಯಿಂದ ಬೌದ್ಧ, ಜೈನಗಳಂತೆ ಇದು ಸ್ವತಂತ್ರ ಧರ್ಮವಾಗಿದೆ. ಈ ಧರ್ಮದ ವಚನಸಾಹಿತ್ಯ ಸರಳವೆಂದರೂ ಸಂಕೀರ್ಣತೆಯನ್ನೊಳಗೊಂಡ, ಗದ್ಯವಾಗಿದ್ದರೂ ಪದ್ಯಲಯವನ್ನೊಳಗೊಂಡ ಒಂದು ವಿಶಿಷ್ಟ ಸಾಹಿತ್ಯಪ್ರಕಾರವಾಗಿದೆ.

ಇದರ ಆತ್ಮವಾದಿ–ನಿರಾಕಾರ ಪರಮಾತ್ಮವಾದಿ ಸಿದ್ಧಾಂತದಲ್ಲಿ ಮನಃಶಾಸ್ತ್ರ, ತತ್ತ್ವಶಾಸ್ತ್ರಗಳಿವೆ. ಸಮಾಜವಾದಿ ಸಿದ್ಧಾಂತದಲ್ಲಿ ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರಗಳಿವೆ. ಹೆಚ್ಚಿನದಾಗಿ ಇದರಲ್ಲಿ ವಿಶಿಷ್ಟ ಸಾಹಿತ್ಯಶಾಸ್ತ್ರವಿದೆ. ಹೀಗೆ ಬಹುಶಿಸ್ತೀಯವಾಗಿರುವುದರಿಂದ, ಉತ್ತರಭಾರತದ ವಿಶ್ವವಿದ್ಯಾಲಯಗಳಲ್ಲಿಯ ಡಿಪಾರ್ಟಮೆಂಟ್ ಆಫ್ ರಾಮಾಯಣ, ಡಿಪಾರ್ಟಮೆಂಟ ಆಫ್ ಮಹಾಭಾರತಗಳಂತೆ ಇದು 'ಡಿಪಾರ್ಟಮೆಂಟ್ ಆಫ್ ವಚನ ಲಿಟರೇಚರ್' ಹೆಸರಿನ ಸ್ವತಂತ್ರ ವಿಭಾಗವಾಗುವ ಅರ್ಹತೆಯನ್ನು ಪಡೆದಿದೆ. ಹೀಗಾಗಿ, ಕರ್ನಾಟಕ ಸರಕಾರ ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಈ ಹೆಸರಿನ ವಿಭಾಗ ಆರಂಭಿಸುವುದೆಂದು ಆಶಿಸುತ್ತೇನೆ.

೧೨ನೆಯ ಶತಮಾನದಿಂದಲೂ ಹುಟ್ಟುತ್ತ ಬಂದ ಈ ಸಾಹಿತ್ಯ, ತರುವಾಯದ ಶತಮಾನಗಳಲ್ಲಿ ಆಂಧ್ರಮೂಲದಿಂದ ಒತ್ತಿ ಬಂದ ಆಗಮಿಕ ವೀರಶೈವದಿಂದಾಗಿ ಮೂಲೆಗುಂಪಾಗತೊಡಗಿತು. ಆ ವೀರಶೈವಸಿದ್ಧಾಂತವೇ ಶ್ರೇಷ್ಠ, ಅದರ ಮಾಧ್ಯಮವಾಗಿರುವ ಸಂಸ್ಕೃತಭಾಷೆಯೇ ಪವಿತ್ರವೆಂಬ ಭ್ರಮೆಗೊಳಗಾಗಿ ಸ್ಥಳೀಯ ಲಿಂಗಾಯತರು ತಮ್ಮ ಕನ್ನಡ ವಚನಸಾಹಿತ್ಯವನ್ನು ಮರೆಯುತ್ತ ಬಂದರು. ಈ ಸಮಾಜದ ಪುಣ್ಯವೆಂಬಂತೆ ಹುಟ್ಟಿಬಂದ ಡಾ. ಫ.ಗು.ಹಳಕಟ್ಟಿಯವರು, ಮರೆತುಹೋಗಿದ್ದ ಈ ವಚನನಿಧಿಯನ್ನು ೨೦ನೆಯ ಶತಮಾನದಲ್ಲಿ ಬೆಳಕಿಗೆ ತಂದರು. ಈ ಶ್ರೇಣಿಯಲ್ಲಿ ಹೆಸರಿಸಬೇಕಾದ ಇನ್ನೊಬ್ಬ ಮಹಾಪುರಷರಾದ ಶ್ರೀ ಹರ್ಡೇಕರ ಮಂಜಪ್ಪನವರು ಪುಸ್ತಕ–ಪತ್ರಿಕೆಗಳ ಪ್ರಕಟನೆ, ಬಸವಜಯಂತಿಯ ಆರಂಭ ಇತ್ಯಾದಿಗಳ ಮೂಲಕ ಈ ತತ್ತ್ವ–ಸಾಹಿತ್ಯಗಳಿಗೆ ದೊಡ್ಡ ಪ್ರಚಾರವನ್ನೊದಗಿಸಿದರು. ಬಳಿಕ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ 'ಬಸವ ಸಮಿತಿ'ಯನ್ನು ಸ್ಥಾಪಿಸಿ, ತಮ್ಮ ಸರಳ ಬದುಕು ಮತ್ತು ಉಪರಾಷ್ಟ್ರಪತಿ ವರ್ಚಸ್ಸುಗಳ ಮೂಲಕ ಶ್ರೀ ಬಿ.ಡಿ. ಜತ್ತಿಯವರು ಈ ಶರಣಸಿದ್ಧಾಂತಕ್ಕೆ ದೇಶವ್ಯಾಪಿ ಪ್ರಚಾರ ಒದಗಿಸಿದರು. ಈಗ ಈ ಸಿದ್ಧಾಂತವನ್ನು ರಾಷ್ಟ್ರೀಯ–ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಬೇಕೆಂಬ ಹಂಬಲದ ಫಲವಾಗಿದೆ, ಬಸವ ಸಮಿತಿಯ ಪ್ರಸ್ತುತ "ವಚನಸಾಹಿತ್ಯದ ಬಹುಭಾಷಾ ಅನುವಾದ ಯೋಜನೆ."

ಕರ್ನಾಟಕ ಸರಕಾರದ ೧ ಕೋಟಿ ರೂಪಾಯಿಗಳ ಉದಾರ ಅನುದಾನದಲ್ಲಿ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಈವರೆಗೆ ಬೆಳಕಿಗೆ ಬಂದ ಬಸವಯುಗ, ಬಸವೋತ್ತರಯುಗಗಳ ಸುಮಾರು ೨೧ ಸಾವಿರ ವಚನಗಳಿಂದ ಆಯ್ದುಕೊಂಡ ೨೫೦೦ ವಚನಗಳ ಕನ್ನಡ ಸಂಪುಟವನ್ನು ಮೊದಲು ಸಿದ್ಧಪಡಿಸಲಾಯಿತು. ಲೋಕಮಾನ್ಯ ಸಂದೇಶ, ಮೌಲಿಕ ಸಾಹಿತ್ಯ, ಎಲ್ಲ ಶರಣರ ವಚನಗಳ ಪ್ರಾತಿನಿಧ್ಯ–ಈ ಮಾನದಂಡಗಳ ಆದರ್ಶದಲ್ಲಿ ಕನ್ನಡ ಸಂಪುಟ ರೂಪುಗೊಂಡಿದೆ. ಇದರಲ್ಲಿ ೧೭೯ ಜನ ಶರಣರ, ೩೧ ಜನ ಶರಣೆಯರ, ೧೩ ಜನ ಅಜ್ಞಾತ ಶರಣರ–ಹೀಗೆ ೧೭೩ ಜನರ ವಚನಗಳಿವೆ. ಆರಂಭದಲ್ಲಿ ಅಭ್ಯಾಸಪೂರ್ಣ ಪ್ರಸ್ತಾವನೆ, ಅಂತ್ಯದಲ್ಲಿ ಎಲ್ಲ ವಚನಕಾರರ ಚರಿತ್ರೆ, ವಚನಗಳ ಅಕಾರಾದಿ, ಕಠಿಣಪದಕೋಶ, ಪಾರಿಭಾಷಿಕ ಪದಕೋಶ, ಅಂಕಿತಗಳ ಅಕಾರಾದಿ ಇತ್ಯಾದಿಗಳಿವೆ.

ಹೀಗೆ ಎಲ್ಲ ದೃಷ್ಟಿಯಿಂದ ಸಮರ್ಪಕವಾದ ಕನ್ನಡ ಸಂಪುಟವನ್ನು ಆಧರಿಸಿ ಹಿಂದಿ, ಇಂಗ್ಲಿಷ್, ಮರಾಠಿ, ತೆಲುಗು, ತಮಿಳು, ಪಂಜಾಬಿ, ಬಂಗಾಲಿ, ಉರ್ದು, ಸಂಸ್ಕೃತ ಪಠ್ಯಗಳನ್ನು ರೂಪಿಸಲಾಗಿದೆ.

ಆರಂಭದಲ್ಲಿ ಈ ಸಂಪುಟಗಳ ಸಂಪಾದಕರೊಂದಿಗೆ ಸಮಾಲೋಚನೆ ನಡೆಸಿ, ಅವರಿಗೆ ಇವುಗಳ ಅನುವಾದಕಾರ್ಯ ಪೂರೈಸಿಕೊಡುವ ಹೊಣೆಯನ್ನು ಹೊರಿಸಲಾಯಿತು. ಬಳಿಕ ಅವರು ಸೂಕ್ತ ವಿದ್ವಾಂಸರಿಗೆ ಅನುವಾದಕಾರ್ಯವನ್ನು ಹಂಚಿಕೊಟ್ಟರು. ಅನುವಾದಕರಿಂದ ಸಿದ್ಧವಾದ ಪಠ್ಯವನ್ನು ಮೊದಲು ಸಂಪಾದಕರು, ಆಮೇಲೆ ಪರಿಶೀಲಕರು, ಬಳಿಕ ನಿರ್ದೇಶಕರು ಪರಿಷ್ಕರಿಸಿದ ಸಂಪುಟಗಳಿವು. ಒಟ್ಟು ೫೦ ಜನ ವಿದ್ವಾಂಸರ ೪ ವರ್ಷಗಳ(೨೦೦೮-೨೦೧೨)ದುಡಿಮೆಯ ಫಲವಿದು.

ಅನುವಾದ ಸಮಸ್ಯೆಗಳ ಬಗ್ಗೆ ಹೇಳುವುದಾದರೆ, ಇಲ್ಲಿಯ ದ್ರಾವಿಡಭಾಷಾ ಸಂಪುಟಗಳ ಅನುವಾದ ಸುಲಭ, ಆರ್ಯಭಾಷಾ ಸಂಪುಟಗಳ ಅನುವಾದ ಜಟಿಲ, ಆಂಗ್ಲ-ಉರ್ದುಭಾಷಾ ಸಂಪುಟಗಳ ಅನುವಾದ ಇನ್ನೂ ಜಟಿಲವೆನಿಸಿತು.

ಮೊದಲ ಹಂತದಲ್ಲಿ ಶುದ್ಧಪಾಠ ನಿರ್ಣಯವನ್ನು ಪೂರೈಸಲಾಯಿತು. ಎರಡನೆಯ ಹಂತದಲ್ಲಿ ಶಬ್ದದ ವಾಚ್ಯಾರ್ಥ, ಲಕ್ಷಣಾರ್ಥ, ಸಾಂಸ್ಕೃತಿಕ ಅರ್ಥ ಮತ್ತು ಪಾರಿಭಾಷಿಕ ಶಬ್ದದ ಅರ್ಥಗಳಿಗೆ ಗಮನಕೊಡಲಾಯಿತು. ಒಂದೇ ಪದ ಹಲವು ಅರ್ಥಗಳಲ್ಲಿ ಬಳಕೆಯಾದುದನ್ನೂ ಗಮನಿಸಲಾಯಿತು. ಇದಕ್ಕೂ ಮೀರಿ "ಎತ್ತಣ ಮಾಮರ, ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ!" ಎಂಬಲ್ಲಿರುವುದು ಪ್ರಶ್ನಾರ್ಥಕವಲ್ಲ, ಉದ್ಗಾರವಾಚಿ ಎಂಬಂಥ ಸೂಕ್ಷ್ಮಗಳನ್ನೂ ಗಮನಿಸಲಾಯಿತು. ಹೀಗಿದ್ದೂ "ಕೂಡಲ ಸಂಗಮದೇವಾ ನಿನಗೆ ಸೆರಗೊಡ್ಡಿ ಬೇಡುವೆನು" ಎಂಬಂಥ ವಾಗ್ರೂಢಿಗಳನ್ನು, "ನಿಮ್ಮ ಚರಣಕಮಲದೊಳಗಾನು ತುಂಬಿ" ಎಂಬಂಥ ಶ್ಲೇಷಗಳನ್ನು ಶಬ್ದಶಃ ಅನುವಾದಿಸುವಲ್ಲಿ ಸೋತು ನಿಲ್ಲಬೇಕಾಯಿತು. ಇಷ್ಟೆಲ್ಲ ಸಮಸ್ಯೆಗಳ ನಡುವೆಯೂ ಈ ಅನುವಾದಕಾರ್ಯವನ್ನು ಪ್ರಾಮಾಣಿಕವಾಗಿ ಪೂರೈಸಿದ್ದೇವೆ ಎಂದು ವಿನಮ್ರವಾಗಿ ಹೇಳಬಯಸುತ್ತೇವೆ.

ಈ ಯೋಜನೆಯ ನಿರ್ದೇಶಕತ್ವ ಆಕಸ್ಮಿಕವಾಗಿ ನನ್ನ ಹೆಗಲೇರಿತು. ಈ ಮೊದಲು ಪ್ರಧಾನ ಸಂಪಾದಕನಾಗಿ ಸಮಗ್ರ ವಚನಸಾಹಿತ್ಯದ ೧೫ ಸಂಪುಟಗಳನ್ನು, ವಚನಪಿತಾಮಹ ಹಳಕಟ್ಟಿ ಸಾಹಿತ್ಯದ ೧೫ ಸಂಪುಟಗಳನ್ನು ಹೊರತಂದ ನನ್ನ ಶ್ರದ್ಧೆ-ಶ್ರಮಗಳನ್ನು ಗಮನಿಸಿ, ಬಸವ ಸಮಿತಿ ಈ ಹೊಣೆಯನ್ನು ನನಗೆ ಹೊರಿಸಿತೆಂದು ಕಾಣುತ್ತದೆ. ಎಲ್ಲ ಅನುವಾದಕರ, ಸಂಪಾದಕರ, ಪರಿಶೀಲಕರ, ಬಸವ ಸಮಿತಿಯ ಎಲ್ಲ ಸದಸ್ಯರ, ಸಂಯೋಜಕರ, ಮುದ್ರಕರ ಸಹಕಾರದಿಂದಾಗಿ ನನ್ನ ಮಿತಿಯಲ್ಲಿ ನಿರ್ದೇಶನ ಕೆಲಸ ಪೂರೈಸಿದ್ದೇನೆ. ಇಂಥ ಪವಿತ್ರ ಕೆಲಸಗಳನ್ನು ನನ್ನಿಂದ ಮಾಡಿಸುತ್ತ ಬಂದ ದೇವರಿಗೆ, ದೇವಮಾನವ ಬಸವಣ್ಣನಿಗೆ, ಅವನ ಪರಿವಾರದ ಎಲ್ಲ ಶರಣರಿಗೆ ನಾನು ಋಣಿಯಾಗಿದ್ದೇನೆ.

ಈ ಯೋಜನೆಯ ಭಾಗವಾಗಿ ಮೇಲೆ ಹೇಳಿದ ೧೦ ಭಾಷಾ ಸಂಪುಟಗಳನ್ನು ಹೊರತಂದ ಬಳಿಕ, ಕೇಂದ್ರ ಸರಕಾರ ಮಾನ್ಯಮಾಡಿರುವ ಮಿಕ್ಕ ರಾಜಸ್ತಾನಿ, ಆಸಾಮಿ, ಬೋಡೋ, ಡೋಗ್ರಿ, ಸಿಂಧಿ, ಗುಜರಾತಿ, ಕಾಶ್ಮೀರಿ, ಕೊಂಕಣಿ, ಮೈಥಿಲಿ, ಮಲಯಾಳಂ, ಮಣಿಪುರಿ, ನೇಪಾಳಿ, ಓರಿಯಾ, ಸಂತಾಲಿ- ಹೀಗೆ ೧೪ ಭಾಷೆಯ ಸಂಪುಟಗಳ ಅನುವಾದಕಾರ್ಯವನ್ನು ಇದೀಗ ಆರಂಭಿಸಿದ್ದೇವೆ. ಈ ೧೦ ಸಂಪುಟಗಳನ್ನು ಈಗ ಬಸವ ಜಯಂತಿ ಆಚರಣೆಯ ಶತಮಾನೋತ್ಸವ ಮತ್ತು ಬಸವ ಸಮಿತಿಯ ಸಂಸ್ಥಾಪಕರಾದ ಡಾ. ಬಿ.ಡಿ. ಜತ್ತಿಯವರ ಜನ್ಮಶತಮಾನೋತ್ಸವ ವರ್ಷ(೨೦೧೩)ದಲ್ಲಿ

ಬಿಡುಗಡೆ ಮಾಡುತ್ತಲಿರುವ ನಾವು, ಮಿಕ್ಕ ೧೪ ಸಂಪುಟಗಳನ್ನು ಬಸವ ಸಮಿತಿಯ ಸುವರ್ಣಮಹೋತ್ಸವ ವರ್ಷ(೨೦೧೫)ದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದ್ದೇವೆ.

ಈ ಯೋಜನೆಯ ಮೊದಲ ಕಂತಿನ ೧೦ ಸಂಪುಟಗಳನ್ನು ಇಂದು ಸುಪ್ರಸಿದ್ಧ ವಿದ್ವಾಂಸರಾಗಿರುವ ಘನತೆವೆತ್ತ ಉಪರಾಷ್ಟ್ರಪತಿಗಳಾದ ಶ್ರೀ ಹಮೀದ ಅನ್ಸಾರಿ ಅವರು ಬಿಡುಗಡೆ ಮಾಡುತ್ತಲಿರುವುದು ವಚನಸಾಹಿತ್ಯದ ಪ್ರಕಟನೆಯ ಇತಿಹಾಸದಲ್ಲಿಯೇ ಚಿರಸ್ಮರಣೀಯವೆನಿಸಿದೆ. ಇದರಿಂದಾಗಿ ಈ ಸಂಪುಟಗಳಿಗೆ ರಾಷ್ಟ್ರೀಯ ಘನತೆ-ಗೌರವ ಪ್ರಾಪ್ತವಾಗಿದೆಯೆಂದು ಭಾವಿಸಿ, ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಈ ಯೋಜನೆಗೆ ಆರ್ಥಿಕ ನೆರವು ನೀಡಿದ ಕರ್ನಾಟಕ ಸರಕಾರಕ್ಕೂ ಈ ಸಂಪುಟಗಳನ್ನು ಪ್ರೀತಿಯಿಂದ ಸ್ವಾಗತಿಸಲಿರುವ ಕನ್ನಡ-ಕನ್ನಡೇತರ ಭಾಷಿಕರಿಗೂ ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವ ನಿಮ್ಮೆಲ್ಲರಿಗೂ ಶರಣು ಸಮರ್ಪಿಸುತ್ತೇನೆ.

ಆಕರ : ಮಾರ್ಗ ಸಂಪುಟ-೭

೩೮

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆಗಳ ಬಿಡುಗಡೆ

ಕನ್ನಡಸಾಹಿತ್ಯ : ಅರಿವು-ಅಸ್ಮಿತೆ

ಗಣ್ಯರಲ್ಲಿ, ಸಭಿಕರಲ್ಲಿ ನಮಸ್ಕಾರ

ಮಾನ್ಯರೆ,

ಕನ್ನಡ ಸಾಹಿತ್ಯ ಪರಿಷತ್ತಿನ ೧೫ ಪ್ರಕಟಣೆಗಳನ್ನು ಇದೀಗ ಪ್ರೀತಿಯಿಂದ ಬಿಡುಗಡೆ ಮಾಡಿದ ನಾನು, ಪ್ರಕಟಣೆ ಮತ್ತು ಪ್ರಸ್ತುತ ಪ್ರಕಟಣೆಗಳ ಬಗ್ಗೆ ಕೆಲವು ವಿಚಾರಗಳನ್ನು ನಿಮ್ಮ ಮುಂದೆ ಮಂಡಿಸುತ್ತೇನೆ.

ಪುಸ್ತಕಗಳ ರಚನೆ-ಉತ್ಪಾದನೆ-ಪ್ರಸಾರಗಳು ಸಂಸ್ಕೃತಿ ಕ್ಷೇತ್ರಕ್ಕೆ ಸಂಬಂಧಿಸಿದ್ದು, ಈ ಕ್ಷೇತ್ರದ ಅಭಿವೃದ್ಧಿಗಾಗಿ ಇಂದಿನ ಸರಕಾರ ಪ್ರತಿವರ್ಷ 'ಸಂಸ್ಕೃತಿ ಇಲಾಖೆ'ಗೆ ಮೊದಲಿನ ಸರಕಾರಗಳಿಗಿಂತ ಮೂರುಪಟ್ಟು ಹೆಚ್ಚು ಹಣ ನೀಡುತ್ತ ಬಂದಿದೆ. ಈ ಔದಾರ್ಯಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಜೊತೆಗೆ ಸಂಬಂಧಪಟ್ಟ ಇಲಾಖೆಗಳು ಈ ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡುಬೇಕೆಂದೂ, ಫಲಾನುಭವಿಗಳಾದ ನಾವು ಸಾಹಿತಿ-ಕಲಾವಿದರು ಈ ಅನುದಾನಕ್ಕೆ ನ್ಯಾಯ ಒದಗಿಸಬೇಕೆಂದೂ ಬಿನ್ನವಿಸಿಕೊಳ್ಳುತ್ತೇನೆ.

ಇತ್ತೀಚೆ ಕರ್ನಾಟಕ ಸರಕಾರ 'ಸಗಟು ಖರೀದಿ'ಯೆಂಬ ಒಳ್ಳೆಯ ಯೋಜನೆಯನ್ನು ಅಸ್ತಿತ್ವಕ್ಕೆ ತಂದಿದೆ. ಆದರೆ ಇದರಿಂದಾಗಿ ಹಣಗಳಿಸುವ ಪ್ರಕಾಶಕರು ಹುಟ್ಟಿಕೊಂಡು "ಜ್ಞಾನ ಸಂಪಾದನೆಯ ಮಾಧ್ಯಮವಾದ ಪುಸ್ತಕ ಕ್ರಮೇಣ ದ್ರವ್ಯಸಂಪಾದನೆಯ ಸರಕು" ಆಗಿ ರೂಪಗೊಳ್ಳುತ್ತಲಿದೆ. ಒಂದುವೇಳೆ ಈ ಧೋರಣೆಯೇ ಮುಂದುವರಿದರೆ ಪೇಟೆಯಲ್ಲಿ ಖೋಟಾನಾಣ್ಯಗಳ ಚಲಾವಣೆ ಹೆಚ್ಚಿದಷ್ಟು ಸಾಚಾನಾಣ್ಯಗಳ ಚಲಾವಣೆ ಮೂಲೆಗುಂಪಾಗುವಂತೆ, ಸಮಾಜದಲ್ಲಿ ಕೆಟ್ಟ ಪುಸ್ತಕಗಳ ಸಂಖ್ಯೆ ಬೆಳೆದು ಒಳ್ಳೆಯ ಪುಸ್ತಕಗಳು ಮೂಲೆಗುಂಪಾಗಬಹುದಾಗಿದೆ. ಹಾಗಾಗದಂತೆ ಎಚ್ಚರವಹಿಸುವುದು ಅವಶ್ಯವಿದೆ.

ಸಾಕ್ಷರತೆ, ಮುದ್ರಣ ಸೌಕರ್ಯ, ಸಗಟುಖರೀದಿ ದಂಥೆಯ ಪ್ರಕಾಶನ ಸಂಸ್ಥೆ, ಗ್ರಂಥಾಲಯ ಚಳುವಳಿ ಇವುಗಳಿಂದಾಗಿ ಪುಸ್ತಕ ಪ್ರಕಟನೆ ಮತ್ತು ಮಾರಾಟದ ಸಂಖ್ಯೆ ಬೆಳೆದಿದೆಯಾದರೂ ದೂರದರ್ಶನ, ಇ–ಪುಸ್ತಕ, ಇತ್ಯಾದಿ ಸೌಕರ್ಯಗಳಿಂದಾಗಿ ನಮ್ಮಲ್ಲಿ ಪುಸ್ತಕ ಓದುವವರ ಸಂಖೆ ಕಡಿಮೆಯಾಗಿದೆ. ಇದನ್ನು ತಡೆಗಟ್ಟುವುದಕ್ಕಾಗಿ ಬಾಲ್ಯದಲ್ಲಿಯೇ ಮಕ್ಕಳಲ್ಲಿ, ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿ ಹುಟ್ಟಿಸುವ ಪುಸ್ತಕಗಳನ್ನು ನಾವು ಉತ್ಪಾದಿಸಬೇಕಾಗಿದೆ.

ಆರಂಭಕಾಲದಲ್ಲಿ, ಹೆಸರಿಗೆ ತಕ್ಕಂತೆ ಸಾಹಿತ್ಯಿಕ ಪುಸ್ತಕಗಳನ್ನು ಪ್ರಕಟಿಸುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತು, ಬದಲಾದ ಪರಿಸ್ಥಿತಿ ಕಾರಣವಾಗಿ ಇತ್ತೀಚೆ ಸಾಹಿತ್ಯೇತರ ಕೃತಿಗಳನ್ನೂ ಪ್ರಕಟಿಸುತ್ತಲಿರುವುದು ಕಾಲೋಚಿತವಾಗಿದೆ. ಇಂದು ಹುಟ್ಟಿಕೊಳ್ಳುತ್ತಲಿರುವ ಹೊಸ ಹೊಸ ಜ್ಞಾನಕ್ಷೇತ್ರಗಳಲ್ಲಿ ಕನ್ನಡವು ಮಾಧ್ಯಮವಾಗಿ ದುಡಿಯಬೇಕೆಂಬ, ಕನ್ನಡಿಗರು ಆ ಕ್ಷೇತ್ರಗಳಲ್ಲಿ ತಜ್ಞತೆ ಪಡೆಯಬೇಕೆಂಬ ಹಂಬಲದಿಂದ ಪರಿಷತ್ತು ಈ ಕಾರ್ಯ ಮಾಡುತ್ತಲಿದೆ. ಇದೀಗ ಬಿಡುಗಡೆಯಾದ ಸಾಹಿತ್ಯಿಕ ಮತ್ತು ಸಾಹಿತ್ಯೇತರ ಕೃತಿಗಳು ಇದಕ್ಕೆ ಸಾಕ್ಷಿಯಾಗಿವೆ.

ಈ ಕೃತಿಗಳಲ್ಲಿ ಹಳಗನ್ನಡ ಸಾಹಿತ್ಯದ ನಾಗವರ್ಮನ ಕರ್ಣಾಟ ಕಾದಂಬರಿ, ಜನ್ನನ ಯಶೋಧರ ಚರಿತೆಗಳು ಶ್ರೇಷ್ಠ ಪ್ರೇಮಕಥೆಗಳಾಗಿವೆ. ಕವಿರಾಜಮಾರ್ಗ, ಶಬ್ದಮಣಿದರ್ಪಣಗಳು ಸಹ ಅಷ್ಟೇ ಶ್ರೇಷ್ಠ ಶಾಸ್ತ್ರಕೃತಿಗಳಾಗಿವೆ. ಆದರೆ ಈ ಹಳಗನ್ನಡ ಕಾಲಘಟ್ಟದಲ್ಲಿ ಉತ್ತರಭಾರತದಿಂದ ವಲಸೆಬಂದ ವೈದಿಕ–ಜೈನಧರ್ಮಗಳಿಗೆ ಸಂಬಂಧಿಸಿದ ನಮ್ಮ ಕವಿಗಳು ಸಹಜವಾಗಿಯೇ ತಮ್ಮ ರಾಮಾಯಣ ಮಹಾಭಾರತ ತೀರ್ಥಂಕರರಿಗೆ ಸಂಬಂಧಿಸಿದ ಪೌರಾಣಿಕ ಕಥೆಗಳನ್ನು ಉತ್ತರಭಾರತದ ಪಂಚತಂತ್ರ, ಬಾಣ ಕಾದಂಬರಿಗಳಂತ ಕಲ್ಪಿತ ಕಥೆಗಳನ್ನು ಉತ್ತರಭಾರತದ ಕಾವ್ಯಮೀಮಾಂಸೆ–ವ್ಯಾಕರಣಗಳ ಆದರ್ಶದಲ್ಲಿ ಶಾಸ್ತ್ರ ಕೃತಿಗಳನ್ನು ಬರೆದರು. ಒಟ್ಟಾರೆ, ಈ ಕಾಲದ ನಮ್ಮ ಸಾಹಿತ್ಯ–ಶಾಸ್ತ್ರ ಕೃತಿಗಳು ಉತ್ತರಭಾರತದ ಅನುಕರಣಗಳೋ, ಸೃಜನಶೀಲ ಅನುವಾದಗಳೋ ಎನಿಸಿದವು. ಈಗ ಕೆಲವೊಮ್ಮೆ ಸ್ಥಳೀಯ ಅರಿಕೇಸರಿ ಮೊದಲಾದ ರಾಜರನ್ನು ಪುರಾಣಪುರುಷರೊಂದಿಗೆ ಹೋಲಿಸಿ ಬರೆದರೂ, ಈ ಕೃತಿಗಳಲ್ಲಿ ಈ ಅರಸರು ಮರೆಯಾಗಿ, ವೈದಿಕ ಸಂಸ್ಕೃತಿಯ ರಾಮ, –ಕೃಷ್ಣ ಮೊದಲಾದವರೇ ವಿಜೃಂಭಿಸಿದರು. ಈ ಕವಿಗಳು ತಮಿಳು ಕವಿಗಳ ಹಾಗೆ ಸಿಲಪ್ಪದಿಗಾರಂ, ಮಣಿಮೇಖಲಯಗಳಂಥ ಶುದ್ಧ ಸ್ಥಳೀಯ ಚರಿತ್ರೆ ಬರಿಯದೆ ಮೇಲೆ ಹೇಳಿದ ಕೃತಿಗಳ ಮೂಲಕ ತಮ್ಮ ಔತ್ತರೇಯ ವೈದಿಕ–ಜೈನ ಜೀವನ ಮೌಲ್ಯಗಳನ್ನು ಕನ್ನಡಿಗರ ಮನಸ್ಸಿನಲ್ಲಿ ತುಂಬಿದರು. ಕನ್ನಡಿಗರೂ ಶ್ರೇಷ್ಠತೆಯ ವ್ಯಸನಕ್ಕೆ ಒಳಗಾಗಿ ಆ ಮೌಲ್ಯಗಳನ್ನು ಒಪ್ಪಿಕೊಂಡರು.

ಸಾಹಿತ್ಯದ ಮಾಧ್ಯಮವಾದ ಭಾಷೆಯ ವಿಷಯವಾಗಿಯೂ ಈ ಕವಿಗಳು ಅಗತ್ಯಕ್ಕೆ ಮೀರಿ ಉತ್ತರಭಾರತದ ಸಂಸ್ಕೃತ–ಪ್ರಾಕೃತ ಭಾಷೆ ಕಾವ್ಯಭಾಷೆಗಳನ್ನು ಅವಲಂಬಿಸುವ–ಬಳಸುವ ಮೂಲಕ ಸ್ಥಳೀಯ ಕನ್ನಡವು ಈ ಅನ್ಯಭಾಷೆಗಳ ಮರ್ಜಿ ಹಿಡಿದು ಬದುಕಬೇಕಾಯಿತು. ಭಾಷೆಗೆ ಸಂಬಂಧಿಸಿದಂತೆ ಆಂಡಯ್ಯ ಮಾಡಿದ ಪ್ರಯತ್ನವಾಗಲೀ, ನಯಸೇನ ಆಡಿದ ಮಾತಾಗಲೀ ಸಂಸ್ಕೃತದ ಸದ್ದು–ಗದ್ದಲದಲ್ಲಿ ಯಾರಿಗೂ ಕೇಳಿಸದೆ ಹೋದವು. ಇಂಥ ಸಂಕ್ರಮಣ ಕಾಲದಲ್ಲಿ ಕನ್ನಡಿಗರು ಬರೆದ ಇವು, ಖಂಡಿತವಾಗಿಯೂ ಸಾಹಿತ್ಯ ದೃಷ್ಟಿಯಿಂದ ಶ್ರೇಷ್ಠ ಕೃತಿಗಳು. ಇಂಥ ಔತ್ತರೇಯ ಸಾಹಿತ್ಯದಿಂದಾಗಿ

ಕನ್ನಡಿಗರ ಭಾಷೆ, ಕನ್ನಡಿಗರ 'ಅರಿವು' ವಿಸ್ತಾರವಾಗಿರಬಹುದಾದರೂ ಅವರ 'ಅಸ್ಮಿತೆ' ಕ್ರಮೇಣ ವಿಸ್ಮೃತಿಗೆ ಒಳಗಾಗುತ್ತ ಸ್ವಾಭಿಮಾನ ಶಿಥಿಲವಾಗುತ್ತ ನಡೆಯಿತು. ಗೋದಾವರಿ ವರೆಗಿನ ನೆಲವನ್ನು ಕಳೆದುಕೊಳ್ಳಲು ಇಂಥ ಔತ್ತರೇಯ ಪ್ರಭಾವದ ಸಾಹಿತ್ಯವೂ ಪರ್ಯಾಯವಾಗಿ ಕಾರಣವಾಯಿತು.

ಹೀಗೆ ಧರ್ಮ, ಸಾಹಿತ್ಯ, ಭಾಷೆ ಇತ್ಯಾದಿ ಮುಖಗಳಲ್ಲಿ ಒತ್ತಿ ಬರುತ್ತಲಿದ್ದ ಔತ್ತರೇಯ ಸಂಸ್ಕೃತಿಯನ್ನು ೧೨ನೆಯ ಶತಮಾನದಲ್ಲಿ ಸ್ಥಳೀಯ ಬಹುಜನಸಮಾಜಗಳು 'ವಚನಚಳುವಳಿ'ಯ ಮೂಲಕ ಪ್ರತಿಭಟಿಸಿ, ವಿಸ್ಮೃತಿಗೆ ಒಳಗಾಗಿದ್ದ ಕನ್ನಡಿಗರ ಅಸ್ಮಿತೆಯನ್ನು ಜಾಗೃತಗೊಳಿಸಿದವು. ಈಗ ಔತ್ತರೇಯ ಪುರಾಣಪುರುಷರ ಕಥೆಗಳ ಬದಲು, ಸ್ಥಳೀಯ ಮಾದರ ಚೆನ್ನಯ್ಯನಂಥ ದಲಿತ, ಒಕ್ಕಲಿಗ ಮುದ್ದಣ್ಣನಂಥ ಶ್ರಮಿತ, ಅಕ್ಕಮಹಾದೇವಿಯಂಥ ಮಹಿಳೆಯರ ಕಥೆಗಳ ಮೂಲಕ 'ನಡುಗನ್ನಡ ಸಾಹಿತ್ಯಯುಗ'ವೊಂದು ತೆರೆದುಕೊಂಡಿತು. ಆದುದರಿಂದ ಹಳಗನ್ನಡಯುಗವನ್ನು ಕನ್ನಡಿಗರ ಅಸ್ಮಿತೆಯ ವಿಸ್ಮೃತಿಯುಗವೆಂದೂ ನಡುಗನ್ನಡಯುಗವನ್ನು ಕನ್ನಡಿಗರ ಅಸ್ಮಿತೆಯ ಜಾಗ್ರತಿಯುಗವೆಂದು ಸ್ಥೂಲವಾಗಿ ಕರೆಯಬಹುದಾಗಿದೆ.

ಈ ನಡುಗನ್ನಡ ಕಾಲಘಟ್ಟದ ಕೃತಿಯಾಗಿದೆ, ಇದೀಗ ಬಿಡುಗಡೆಯಾದ ಮಹಾಲಿಂಗರಂಗನ ಅನುಭವಾಮೃತ. ಶುದ್ಧ ತತ್ತ್ವಜ್ಞಾನವನ್ನು ತಿಳಿಯಾದ ಭಾಷೆಯಲ್ಲಿ ಹೇಳುವುದಕ್ಕಿಂತ "ಸುಲಿದ ಬಾಳೆಯ ಹಣ್ಣಿನಂದದಿ, ಕಳೆದ ಸಿಗುರಿನ ಕಬ್ಬಿನಂದದಿ ಲಲಿತವಹ ಕನ್ನಡ" ಎಂದು ತಾಯಿ ನುಡಿಯನ್ನು ಕೊಂಡಾಡುತ್ತ "ಸಂಸ್ಕೃತದಲ್ಲಿನ್ನೇನು?" ಎಂದು ಹೇಳಿ, ಈ ಕೃತಿ ಭಾಷಾ ಅಸ್ಮಿತೆಯನ್ನು ಎತ್ತಿಹಿಡಿದುದು ಮಹತ್ವದ ಸಂಗತಿಯಾಗಿದೆ. ಆರಂಭಕಾಲದಿಂದಲೂ ಋಣಭಾರವಾಗಿರುವ, ಕೆಲಮೊಮ್ಮೆ ತಲೆಭಾರವೂ ಆಗಿರುವ ಸಂಸ್ಕೃತವನ್ನು ಈ ಕೃತಿ ಹೀಗೆ ಪ್ರಶ್ನಿಸಿದುದು, ಇಂದು ನಮಗೆ ತಲೆಭಾರವಾಗಿರುವ ಇಂಗ್ಲಿಷ್‌ನ್ನು ಪ್ರಶ್ನಿಸಲು ನೈತಿಕ ಬೆಂಬಲ ನೀಡುತ್ತದೆ.

ಇಂದು, ಒಂದು ಕಡೆ ಕನ್ನಡಕ್ಕೆ ಶಾಸ್ತ್ರೀಯ ಮರ್ಯಾದೆ ಪ್ರಾಪ್ತವಾಗಿರುವಾಗ, ಇನ್ನೊಂದು ಕಡೆ ಇದಕ್ಕೆ ಸಂಬಂಧಿಸಿದ ಹಳಗನ್ನಡ-ನಡುಗನ್ನಡ ಭಾಷೆ-ಸಾಹಿತ್ಯಗಳ ಅಧ್ಯಯನ ಇಳಿಮುಖವಾಗುತ್ತಲಿರುವುದು ವ್ಯಸನದ ಸಂಗತಿಯಾಗಿದೆ. ಈ ವಿಪರ್ಯಾಸವನ್ನು ನೀಗಿಸಿ, ಶಾಸ್ತ್ರೀಯ ಭಾಷಾ ಮರ್ಯಾದೆಗೆ ನ್ಯಾಯ ಒದಗಿಸಿಕೊಡುವ ಸಲುವಾಗಿ ನಾವು ಹಳಗನ್ನಡ-ನಡುಗನ್ನಡ ಭಾಷೆ-ಸಾಹಿತ್ಯಗಳ ಅಧ್ಯಯನಕ್ಕೂ ಈಗ ವಿಶೇಷ ಒತ್ತು ಕೊಡಬೇಕಾಗಿದೆ.

ಇಂದು ಬಿಡುಗಡೆಯಾದ ಕರ್ನಾಟಕ ಕವಿಚರಿತೆಯ ಮೂರು ಸಂಪುಟಗಳು ನವೋದಯದ ಆರಂಭಕಾಲದಲ್ಲಿ ಹುಟ್ಟಿದ ಚರಿತ್ರೆ ಶೋಧದ ಬಹುದೊಡ್ಡ ಕಾಣಿಕೆಗಳು. ಅಂದು ಉತ್ತರ ಕರ್ನಾಟಕದ ಶಂಬಾ ಜೋಶಿ ಮೊದಲಾದ ವಿದ್ವಾಂಸರು ಸಂಸ್ಕೃತಿ ಶೋಧದಲ್ಲಿ ತೊಡಗಿದ್ದರೆ, ದಕ್ಷಿಣ ಕರ್ನಾಟಕದ ಆರ್. ನರಸಿಂಹಾಚಾರ್ ಮೊದಲಾದ ವಿದ್ವಾಂಸರು ಚರಿತ್ರೆಯ ಶೋಧದಲ್ಲಿ ತೊಡಗಿದ್ದರು. ಸಂಶೋಧನೆಯ ಈ ಒಲವುಗಳನ್ನು ನಾನು "ಧಾರವಾಡ ಮಾದರಿ", "ಮೈಸೂರು ಮಾದರಿ"ಗಳೆಂದು ಕರೆದಿದ್ದೇನೆ. ಅದೇನೇ ಇರಲಿ, ೧೦೦ ವರ್ಷ ಕಳೆದರೂ ಕರ್ನಾಟಕ ಕವಿಚರಿತೆ ಸಂಪುಟಗಳ ಮಹತ್ವ ಇಂದೂ ಉಳಿದುಕೊಂಡಿದೆ, ಮುಂದೆಯೂ ಉಳಿದುಕೊಳ್ಳುತ್ತದೆ. ಆದರೆ ಕನ್ನಡ ಕವಿ-ಕೃತಿ ವಿಷಯವಾಗಿ ಇತ್ತೀಚೆ ನಡೆದ ಹೊಸ ಹೊಸ ಶೋಧಗಳ ಬೆಳಕಿನಲ್ಲಿ ಪರಿಷತ್ತು ಮುಂದಿನ ದಿನಗಳಲ್ಲಿ ಈ ಸಂಪುಟಗಳನ್ನು ಸಮಗ್ರವಾಗಿ ಪರಿಷ್ಕರಿಸಬೇಕೆಂದು ಕೋರುತ್ತೇನೆ.

ಇದೀಗ ಲೋಕಾರ್ಪಣೆಯಾದ ಕನ್ನಡ "ಲಿಪಿಶಾಸ್ತ್ರ" ಗ್ರಂಥವು ಕನ್ನಡ ಅಕ್ಷರಗಳ ಐತಿಹಾಸಿಕ ಬೆಳವಣಿಗೆಯನ್ನೂ, "ವ್ಯಾಕರಣ ಸೂತ್ರಗಳು" ಕೃತಿಯು ಪ್ರಾಚೀನ ಕನ್ನಡ ಭಾಷೆಯ ಸ್ವರೂಪವನ್ನೂ ತಿಳಿಸಿಕೊಡುತ್ತವೆ. "ಕನ್ನಡ ಭಾಷಾ ಪ್ರವೇಶ" ಕೃತಿಯು ನಮ್ಮ ಭಾಷೆಯ ಆರಂಭದ ಅಭ್ಯಾಸಿಗಳಿಗೆ ದಾರಿದೀಪವಾಗಿದೆ. "ಕಾನೂನು ದೀಪಿಕೆ", "ಖಗೋಳ ವಿಜ್ಞಾನಗಳು" ಹೊಸ ಜ್ಞಾನ ಕ್ಷೇತ್ರಗಳಿಗೆ ಕನ್ನಡವನ್ನು ಸಜ್ಜುಗೊಳಿಸುವ ಪ್ರಯತ್ನವೆನಿಸಿವೆ. ""ಇ-ಕಲಿಕೆ" ಕೃತಿಯಂತೂ ಇನ್ನೂ ಹೊಸದಾಗಿರುವ ಜ್ಞಾನ ಕ್ಷೇತ್ರವೊಂದನ್ನು ಪ್ರವೇಶಿಸುವವರಿಗೆ ನೆರವಾಗಲಿದ್ದು, ಕನ್ನಡವು ಯಾವುದೇ ಜ್ಞಾನ ಶಿಸ್ತಿಗೆ ಮಣಿಯಬಲ್ಲುದೆಂಬುದಕ್ಕೆ ನಿದರ್ಶನವೆನಿಸಿದೆ.

ಅಂದು ಪ್ರಾಥಮಿಕ ಶಿಕ್ಷಣದಲ್ಲಿ ಉದ್ಭವಿಸಿದ್ದ 'ಕನ್ನಡ-ಸಂಸ್ಕೃತ'ಗಳ ಸಮಸ್ಯೆ ಬಿಡಿಸಲು ಜರುಗಿದ ಗೋಕಾಕ ಚಳುವಳಿಯ ಒತ್ತಡದಲ್ಲಿ ಸೃಷ್ಟಿಯಾದ "ಗೋಕಾಕ ವರದಿ" ಕೃತಿಯು ಇದೀಗ ಬಿಡುಗಡೆಯಾಗಿದೆ. ಅತ್ಯುತ್ತಮ ಭಾಷಾ ವರದಿಯಾಗಿರುವ ಇದು ಇಂದು ಅದೇ ಪ್ರಾಥಮಿಕ ಶಿಕ್ಷಣದಲ್ಲಿ ಉದ್ಭವಿಸಿರುವ 'ಕನ್ನಡ-ಇಂಗ್ಲಿಷ್' ಸಮಸ್ಯೆ ಬಿಡಿಸಲು ನಮಗೆ ಮಾದರಿಯಾಗಿ ನಿಲ್ಲಬಹುದೆಂದು ಸೂಚಿಸುತ್ತ, ಈ ಸಂದರ್ಭದಲ್ಲಿ ಕನ್ನಡಪರ ದಿಟ್ಟ ನಿಲುವು ತಾಳಿದ ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಒಟ್ಟಾರೆ, ನಮ್ಮ ಅರಿವನ್ನು ವಿಸ್ತಾರಗೊಳಿಸುವ ಈ ಕೃತಿಗಳನ್ನು ಪ್ರಕಟಿಸಿದ ಕನ್ನಡ ಸಾಹಿತ್ಯ ಪರಿಷತ್ತಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ, ಮುಂದಿನ ದಿನಗಳಲ್ಲಿ ಅದು ನಮ್ಮ 'ಅಸ್ಮಿತೆ'ಯನ್ನು ಜಾಗ್ರಗೊಳಿಸುವ ಕೃತಿಗಳನ್ನೂ ಪ್ರಕಟಿಸಲೆಂದು ಹಾರೈಸುತ್ತೇನೆ.

೭೭ನೆಯ ಅಖಿಲ ಭಾರತ ಕನ್ನಡಸಾಹಿತ್ಯ ಸಮ್ಮೇಳನದಲ್ಲಿ ಪರಿಷತ್ತಿನ ಪ್ರಕಟನೆಗಳನ್ನು ಬಿಡುಗಡೆ ಮಾಡಿದ ಸಂದರ್ಭ.

ಆಕರ : ಮಾರ್ಗ ಸಂಪುಟ-೭

■■

೩೯

ಶಂಗಂ ತಮಿಳಗಂ ಕನ್ನಡ ನಾಡು–ನುಡಿ ಅಧ್ಯನದ ದಾರಿಯಷ್ಟೇ ಅಲ್ಲ, ದಿಕ್ಕನ್ನೂ ತೋರಿಸುವ ಕೃತಿ

'ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ' ಹಲವು ಕಾರಣಗಳಿಗಾಗಿ ಬಹಳ ಮಹತ್ವದ ಪುಸ್ತಕ. ಮೊದಲನೆಯದಾಗಿ ಇದು ಅನೇಕ ಹೊಸ ಹಾದಿಗಳನ್ನು ತೆರೆದುತೋರಿಸುತ್ತದೆ. ಕೇವಲ ದಾರಿಯನ್ನಲ್ಲ, ದಿಕ್ಕನ್ನೂ ತೋರಿಸುತ್ತದೆ. ನಾವು ಇಲ್ಲಿಯವರೆಗೂ ಯಾವ ವಿಷಯದ ಬಗ್ಗೆ ಸಂಪೂರ್ಣ ಉಪೇಕ್ಷೆ ಮಾಡಿದ್ದೆವೋ ಅಂಥ ಕ್ಷೇತ್ರಕ್ಕೆ ಕೈಯಿಟ್ಟು 'ಇದು ಮಾಡಬೇಕಾಗಿದ್ದ ಕೆಲಸ' ಎನ್ನುವದನ್ನು ತೋರಿಸಿಕೊಟ್ಟಿದೆ. ಅಂದರೆ ಈವರೆಗಿನ' ಸಂಸ್ಕೃತಮುಖೀ ಸಿದ್ಧ ಅಧ್ಯಯನ' ದ ಚೌಕಟ್ಟನ್ನ ಮುರಿದು ಡಾ. ಶೆಟ್ಟರ್ 'ದ್ರಾವಿಡಮುಖೀ ಅಧ್ಯಯನ' ಕ್ಕೆ ತೊಡಗಿದ್ದು, ಅದರ ಮೂಲಕ ಹೊಸ ದಿಕ್ಕನ್ನು ತೋರಿಸಿಕೊಟ್ಟದ್ದು, ಬಹಳ ಮುಖ್ಯವಾದ ಕೊಡುಗೆಯೆಂದೇ ಭಾವಿಸಿದ್ದೇನೆ.

ಆಧುನಿಕ ಅಭ್ಯಾಸದ ಆದ್ಯರೆಲ್ಲಾ ಬ್ರಾಹ್ಮಣರೇ ಆಗಿದ್ದರು. ಹೀಗಾಗಿ ಸಹಜವಾಗಿಯೇ ಅವರು ಏನೇ ಅಭ್ಯಾಸ ಮಾಡಿದರೂ ಎಲ್ಲದಕ್ಕೂ ಸಂಸ್ಕೃತವೇ ಮೂಲ. ಅದರ ಪ್ರಭಾವದಲ್ಲಿಯೇ ವಿಚಾರಗಳೆಲ್ಲ ಬೆಳೆದಿವೆ ಎನ್ನುವುದರ ಮೂಲಕ, ತಮ್ಮ ಸಂಸ್ಕೃತಿಯ ದಾರಿಯನ್ನು ಸಿದ್ಧಪಡಿಕೊಟ್ಟಿದ್ದರು. ಆದರೆ, ಇತ್ತೀಚಿನ ಕೆಲವು ವರ್ಷಗಳಿಂದ ಕನ್ನಡದ ಸ್ಪಷ್ಟ ಕಲ್ಪನೆಗಾಗಿ 'ದ್ರಾವಿಡಮುಖೀ ಅಧ್ಯಯನ' ಜರುಗಬೇಕೆಂಬ ಉದ್ದೇಶದಿಂದ ಅನೇಕ ಕೆಲಸಗಳು ನಡೆದಿವೆ. ಇದರ ಅಂಗವಾಗಿ ದ್ರಾವಿಡ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಿತು. ಆದರೆ ಅಲ್ಲಿ ಕೂಡ ಆರ್ಯಮನಸ್ಸಿನ ವಿದ್ವಾಂಸರೇ ಪ್ರವೇಶ ಪಡೆದಿದ್ದಾರೆ. ಹೀಗಾಗಿ ಇಂಥ ಸಂಸ್ಥೆಗಳಿಂದಲೂ ನಾವು ದ್ರಾವಿಡ ಅಧ್ಯಯನವನ್ನು ಹೆಚ್ಚು ನಿರೀಕ್ಷಿಸುವಂತಿಲ್ಲ. ಸಂಸ್ಕೃತ, ದ್ರಾವಿಡದಂತೆ 'ಪ್ರಾಕೃತ ಅಧ್ಯಯನ'ವು ನಮಗೆ ಅವಶ್ಯವಿದೆ. ಪ್ರಾಕೃತ ಎನ್ನುವ ಭಾಷೆ ಇದೆ ಎನ್ನುವುದನ್ನೂ ಕೂಡ ನೆನೆಯದೆ, ಅದನ್ನು ಕತ್ತಲೆಯಲ್ಲಿ ಇಡುತ್ತ ನಡೆದಿದ್ದೇವೆ. ಪ್ರಾಕೃತ ಅಧ್ಯಯನ ಇಲ್ಲದೆ ಹೋದರೆ ಕನ್ನಡ ಭಾಷೆ ಮತ್ತು ಕನ್ನಡದ ಜೈನಸಾಹಿತ್ಯದ ಅನೇಕ ಸಮಸ್ಯೆಗಳಿಗೆ ಉತ್ತರ ಸಿಗುವುದಿಲ್ಲ.

ಇದರ ಜೊತೆಗೆ ಪಾಲಿಭಾಷೆಯ ಅಧ್ಯಯನ ಕೂಡ ಆಗಬೇಕಿದೆ. ಭೈರಪ್ಪನವರು ಮೂಡಬಿದರೆಯ ತಮ್ಮ ಭಾಷಣದಲ್ಲಿ 'ಕರ್ನಾಟಕದ ಅನೇಕ ಮಸೀದಿಗಳನ್ನು ಅಗೆದರೆ ಅವುಗಳ ಕೆಳಗೆ ಹಿಂದೂ

ದೇವಾಲಯಗಳು ಕಾಣುತ್ತವೆ' ಎಂದು ಹೇಳಿದ್ದರು. ಅದೇ ವೇದಿಕೆಯಲ್ಲಿ ನಾನು ಹೇಳಿದ್ದೆ: 'ಇನ್ನೂ ಕೆಳಗೆ ಅಗೆದರೆ ಬೌದ್ಧ ವಿಹಾರಗಳು ಕಾಣುತ್ತವೆ' ಎಂದು. ನಮ್ಮಲ್ಲಿ ಬೌದ್ಧಧರ್ಮ ಮತ್ತು ಸಂಸ್ಕೃತಿ ಶ್ರೀಮಂತವಾಗಿದ್ದಿತು. ಹೀಗಾಗಿ ಪಾಲಿ ಅಭ್ಯಾಸ ಮಾಡದಿದ್ದರೆ ನಮ್ಮ ಸಂಸ್ಕೃತಿ ಪೂರ್ಣ ಆಗುವುದಿಲ್ಲ. ನಮ್ಮ ರಾಜ್ಯಸರ್ಕಾಠ 'ಸಂಸ್ಕೃತ ವಿಶ್ವವಿದ್ಯಾಲಯ' ವನ್ನು ಆರಂಭಿಸಬೇಕೆಂದು ವಿಚಾರ ಮಾಡಿದಾಗ ನನಗನ್ನಿಸಿದ್ದು: ಇದರ ಜೊತೆಗೆ ಪ್ರಾಕೃತ, ಪಾಲಿ ಭಾಷೆಗಳ ಅಧ್ಯಯನವೂ ಆಗಬೇಕು. ಆದುದರಿಂದ ಸಂಸ್ಕೃತಕ್ಕೆ ಮಾತ್ರ ಸೀಮಿತಗೊಳಿಸದೆ ಇದನ್ನು ಭಾರತೀಯ ಕ್ಲಾಸಿಕಲ್ ಭಾಷೆಗಳ ಸಂಸ್ಥೆಯನ್ನಾಗಿಸಿ 'ಪ್ರಾಚ್ಯ ಭಾಷಾ ವಿಶ್ವವಿದ್ಯಾಲ'ಯ ಎಂದು ಹೆಸರಿಟ್ಟರೆ ಸರಿಯಾದೀತು.

'ಸಂಶೋಧನೆ' ಎನ್ನುವದು ಗತಕಾಲದ ಶೋಧವಾಗಿದ್ದರೂ ಅದು ವರ್ತಮಾನಕ್ಕೆ ಪ್ರಸ್ತುತವಾಗಿರಬೇಕು. 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ' ಈ ಅರ್ಥದಲ್ಲಿ ಮಹತ್ವದ ಕೃತಿ ಏಕೆಂದರೆ ಇಂದು ಉದ್ಭವಿಸಿರುವ ಶಾಸ್ತ್ರೀಯ ಭಾಷೆಯ ಸಮಸ್ಯೆಗೂ ಇಲ್ಲಿ ಉತ್ತರವಿದೆ. ಈ ದೃಷ್ಟಿಯಿಂದಲೂ ಡಾ. ಶೆಟ್ಟರ್ ಮಾಡಿರುವ ಮಹತ್ವದ ಕೆಲಸವಿದು.

ಈ ಪುಸ್ತಕವನ್ನು ಅರ್ಥ ಮಾಡಿಕೊಳ್ಳಬೇಕಾದರೆ ದೊಡ್ಡ ಅಭ್ಯಾಸ ಬೇಕು. ಇದರಲ್ಲಿ ಅನೇಕ ಆಯಾಮಗಳಿವೆ. ಅನೇಕ ಕ್ಷೇತ್ರಗಳಿವೆ. ಇದನ್ನು ಒಂದು ಓದಿಗೆ ತಿಳಿದುಕೊಳ್ಳುವುದು ಸಾಧ್ಯವಿಲ್ಲ. ಸುಮಾರು ಹದಿನೈದು ಇಪ್ಪತ್ತು ವರ್ಷಗಳ ಚಿಂತನೆ ಇದರಲ್ಲಿ ಅಡಕವಾಗಿದೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ಈ ನಾಲ್ಕೂ ರಾಜ್ಯಗಳ ಇತಿಹಾಸ ಭೂಗೋಲ, ಭಾಷೆ, ಲಿಪಿ, ಸಾಹಿತ್ಯ, ಶಾಸನ, ಬುಡಕಟ್ಟು ಮೊದಲಾದ ವಿಚಾರಗಳನ್ನು ಅರ್ಥ ಮಾಡಿಕೊಂಡರೆ ಮಾತ್ರ ಈ ಪುಸ್ತಕ ತೆರೆದುಕೊಳ್ಳುತ್ತದೆ. ಇಲ್ಲದಿದ್ದರೆ ಇಲ್ಲ.

ಈ ಅಧ್ಯಯನಕ್ಕೆ ಶೆಟ್ಟರ್ ಅವರು ವಹಿಸಿರುವ ಶ್ರಮವನ್ನು ತಿಳಿದುಕೊಳ್ಳಬೇಕಾದರೆ ಪುಸ್ತಕ ಕದ ಕೊನೆಯಲ್ಲಿರುವ ಗ್ರಂಥಗಳ ಯಾದಿಯನ್ನು ಗಮನಿಸಬೇಕು. ಶಂಗಂ ಸಾಹಿತ್ಯವನ್ನು ನಾವ್ಯಾರೂ ಓದಿಲ್ಲ. ನಾನು ಹಂಪಿಯಲ್ಲಿದ್ದಾಗ ಶಂಗಂ ತೇವಾರಂ ಮತ್ತು ದಿವ್ಯಪ್ರಬಂಧಂ ವನ್ನು ಕನ್ನಡಕ್ಕೆ ಅನುವಾದಿಸಬೇಕು ಎಂಬ ಯೋಜನೆ ರೂಪಿಸಿದ್ದೆನು. ಇವು ಕನ್ನಡಕ್ಕೆ ಬಂದರೆ ನಮಗೆ ಹೊಸ ವಿಚಾರಗಳು ಪ್ರಕಟವಾಗುತ್ತವೆ ಎನ್ನಿಸಿತ್ತು. ಅಂಥ ಅಭ್ಯಾಸಗಳನ್ನು ಮಾಡದೆಹೋದರೆ ನಮ್ಮಿಂದ ಈ ಪುಸ್ತಕದ ಸರಿಯಾದ ವಿಮರ್ಶೆ ಸಾಧ್ಯವಾಗುವುದಿಲ್ಲವಾಗಿ ಶೆಟ್ಟರ್ ಹೇಳಿದ್ದೇ ನಿಜವಾಗಿ ಬಿಡುತ್ತದೆ. ಹಾಗಾಗದಂತೆ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿದ ಹೊಸ ಹೊಸ ಆಲೋಚನಾಶೀಲರು ಈ ಪುಸ್ತಕದ ತೆಕ್ಕೆಗೆ ಬೀಳುವುದು ಅವಶ್ಯವಿದೆ. ಆಗ ಮಾತ್ರ ಇದರ ಮಿತಿ–ಶಕ್ತಿಗಳ ನಿರ್ಣಯ ಸಾಧ್ಯವಾಗುತ್ತದೆ.

ತಮಿಳು 'ತೊಲ್ಕಾಪ್ಪಿಯಂ' ಮತ್ತು ಕನ್ನಡ 'ಕವಿರಾಜಮಾರ್ಗ' ಇವೆರಡರ ತೌಲನಿಕ ಅಧ್ಯಯನ ಅವಶ್ಯವಿದೆ ಎಂದು ೧೯೮೮ರಷ್ಟು ಪೂರ್ವದಲ್ಲಿಯೇ ಎರಡು ಪುಟಗಳ ಟಿಪ್ಪಣಿಯನ್ನು ನಾನು ಬರೆದಿದ್ದೆ. 'ಕವಿರಾಜಮಾರ್ಗಾಲಂಕಾರ' ವಿಶಿಷ್ಟ ಕೃತಿ. ಈ ಕೃತಿಯಲ್ಲಿ ಅಲಂಕಾರವಿದೆ, ಛಂದಸ್ಸಿದೆ, ವ್ಯಾಕರಣವಿದೆ, ನಾಡು–ನುಡಿ ನಾಡವರ ವಿವರವಿದೆ. ಅಲಂಕಾರದ ಗ್ರಂಥದಲ್ಲಿ ಛಂದಸ್ಸು–ವ್ಯಾಕರಣ, ನಾಡು ನುಡಿಯ ಬಗ್ಗೆ ಯಾಕೆ ಹೇಳುತ್ತಿದ್ದಾನೆ? ಬಹುಶಃ ನಮ್ಮಲ್ಲಿ ಇಂಥದೊಂದು ಮಿಶ್ರ ಬರವಣಿಗೆ ಪದ್ಧತಿ ಇರಬಹುದು. ಈ ಪದ್ಧತಿಗೆ ತೊಲ್ಕಾಪ್ಪಿಯಂನಲ್ಲಿ ಸುಳಿವು ಇರಬಹುದೇ?

ಎಂದು ಸಂದೇಹಿಸಿದಾಗ, ಅಲ್ಲಿ ಕೂಡ ಇಂಥ ಹೋಲಿಕೆಗಳು ನನಗೆ ಕಂಡುಬಂದವು. ಆಗ ಒಂದು ಟಿಪ್ಪಣಿಯನ್ನು ನಾನು ಬರೆದಿದ್ದೆ. ಇಲ್ಲಿ ಶೆಟ್ಟರ್ ಅವರು 'ಕಾವೇರಿಯಿಂದಮಾ ಗೋದಾವರಿವರಮಿರ್ದ...' ಎನ್ನುವ ಪದ್ಯವನ್ನು ಕುರಿತು ಸುದೀರ್ಘವಾಗಿ ಚರ್ಚಿಸಿದ್ದಾರೆ. ಗೋದಾವರಿಯನ್ನು ಉತ್ತರದ ಮೇರೆ ಎನ್ನಬಹುದು. ಆದರೆ ಕಾವೇರಿಯನ್ನು ದಕ್ಷಿಣ ಮೇರೆಯೆಂದು ಹೇಳಿದರೆ ಇದರ ಕೆಳಗಿನ ಕನ್ನಡ ಪ್ರದೇಶವನ್ನು ಕೈಬಿಡಬೇಕಾಗುತ್ತದೆ ಎಂಬ ಆತಂಕ ಅವರಿಗಿದೆ. ನಾನು ನನ್ನ ಪಿಎಚ್.ಡಿ. ಪ್ರಬಂಧದಲ್ಲಿ "ಕಾವೇರಿಯಿಂದ ಗೋದಾವರಿಯ ವರೆಗಿದ್ದುದು ರಾಷ್ಟ್ರಕೂಟರ ನಾಡು. ಕಾವೇರಿಯ ಕೆಳಗೆ ಗಂಗರು ಆಳುತ್ತಿದ್ದರು. ಗಂಗರ ಆಸ್ಥಾನದ ಗುಣವರ್ಮ ಕವಿ ತನ್ನ 'ಶೂದ್ರಕ' ಹೆಸರಿನ ಕಾವ್ಯದಲ್ಲಿ 'ಕಾವೇರಿಯ ನಿರ್ವೊಲಿತ್ತ ಬರೆ ನಿಮ್ಮ ಬಲಂ ಶತಖಂಡಮಾಗದೇ' ಎನ್ನುತ್ತಾನೆ. ಕಾವೇರಿಯನ್ನು ದಾಟಿ ಬಂದರೆ ನಿಮ್ಮ ಸೈನ್ಯ ಶತಖಂಡವಾಗುತ್ತದೆ" ಎಂದು ಈ ಪದ್ಯದ ಅರ್ಥ. ಅಂದರೆ ಕಾವೇರಿಯ ಕೆಳಗಿರುವ ಕನ್ನಡಿಗರೇ ಕಾವೇರಿಯ ಮೇಲಿರುವ ರಾಷ್ಟ್ರಕೂಟರಿಗೆ ಈ ಮಾತನ್ನು ಹೇಳುತ್ತಿದ್ದಾರೆ. ಆದ್ದರಿಂದ ಕವಿರಾಜಮಾರ್ಗಕಾರನಿಗೆ ಕಾವೇರಿಯು ಕನ್ನಡದ ಕೊನೆಯ ಸೀಮೆಯಲ್ಲ; ರಾಷ್ಟ್ರಕೂಟರ ದಕ್ಷಿಣದ ಮೇರೆ ಎಂದು ಸೂಚಿಸುವುದು ಮಾತ್ರ ಮುಖ್ಯವಾಗಿದೆ ಎಂಬ ನಿಲವನ್ನು ಶೆಟ್ಟರ್ ಅವರು ಇಲ್ಲಿ ಪರ್ಯಾಯವಾಗಿ ಸಮರ್ಥಿಸಿದ್ದಾರೆ.

ಈ ಕೃತಿಯಲ್ಲಿ ಇನ್ನೂ ಅನೇಕ ಹೊಸ ವಿಷಯಗಳಿವೆ. 'ಶಂದಮಿಳ್' ಎನ್ನುವುದು ಹದಿಮೂರು ನಾಡುಗಳ ಒಂದು ಪ್ರದೇಶವೆಂದು ತೋಲ್ಕಾಪ್ಪಿಯಂ ಕರೆದ ರೀತಿಯಲ್ಲಿಯೇ ಕವಿರಾಜಮಾರ್ಗಕಾರ 'ಕನ್ನಡ ನಡುವಣ ನಾಡು' ಎಂಬುದನ್ನು ಗುರುತಿಸುತ್ತಾನೆ. ಆ ನಾಡಿನ ಹೊರಗಿರುವ ಪ್ರದೇಶದ ಬಗ್ಗೆಯೂ ತೋಲ್ಕಾಪ್ಪಿಯಂನಲ್ಲಿ ವಿವರಗಳಿವೆ. ಹೀಗೆ ಕವಿರಾಜಮಾರ್ಗಂ ಮತ್ತು ತೋಲ್ಕಾಪ್ಪಿಯಂ ಸೂಚಿಸುವ ಪ್ರದೇಶಗಳ ಬಗ್ಗೆ ಶೆಟ್ಟರ್ ಬಹಳ ವಿಸ್ತಾರವಾಗಿ ವಿಚಾರಮಾಡಿದ್ದಾರೆ.

ಇನ್ನೊಂದು ವಿಷಯವನ್ನು ಅವರು ಕೈಗೆತ್ತಿಕೊಳ್ಳಬೇಕಿತ್ತು ಎನಿಸುತ್ತದೆ. ಅದು: ಶಂಗಂ ಸಾಹಿತ್ಯಕ್ಕೆ ಸಮಾನವಾಗಿ ಕನ್ನಡದ ನಾಗವರ್ಮ 'ಇಡುಕುಂಗಬ್ಬ' ಎಂಬ ಪದವನ್ನು ಬಳಸಿದುದು. ಪ್ರಾಚೀನ ಆಲಂಕಾರಿಕರು ಮುಕ್ತಕ, ಕುಲಕ, ಕೋಶ ಇವು ಮೂರು ಕಾವ್ಯರೂಪಗಳೆಂದಿದ್ದರೆ, ತರುವಾಯ ಬಂದ ದಂಡಿ ಈ ಮೂರರ ಜೊತೆ 'ಸಂಘಾತ' ಎನ್ನುವ ಇನ್ನೊಂದು ಪ್ರಕಾರವನ್ನು ಸೇರಿಸುತ್ತಾನೆ. ಇದಕ್ಕೆ ಕಾರಣ ದಂಡಿ ತಮಿಳುನಾಡಿನ ಕಂಚಿಯವ. ಅವನಿಗೆ ತನ್ನ ನಾಡಿನ ಶಂಗಂ ಸಾಹಿತ್ಯವೆಂಬ ರೂಪವನ್ನೂ ಸೇರಿಸುವ ಉದ್ದೇಶವಿದ್ದು, ಅದನ್ನು 'ಸಂಘಾತ' ಹೆಸರಿನಿಂದ ಸೇರಿಸಿಬಿಡುತ್ತಾನೆ. ಇದು ಬಹಳ ಮಹತ್ವಪೂರ್ಣವಾದದ್ದು. ದಂಡಿಯ ಕಾವ್ಯಾದರ್ಶಕ್ಕೆ ೧೩ನೆಯ ಶತಮಾನದ ತರುಣ ವಾಚಸ್ಪತಿ ವ್ಯಾಖ್ಯಾನ ಬರೆಯುತ್ತ, ಸಂಘಾತಕ್ಕೆ 'ದ್ರವಿಡ ಸಂಘಾತ' ಎಂದು ವಿವರಣೆ ನೀಡಿದರೆ, ನಾಗವರ್ಮ 'ಇಡುಕುಂಗಬ್ಬ'ವೆಂಬ ಪರ್ಯಾಯ ಪದವನ್ನು ಬಳಸುತ್ತಾನೆ. ಇಂಥ ಅನೇಕ ಸಂಗತಿಗಳನ್ನು ಕ್ರೋಡೀಕರಿಸಿದರೆ ಶಂಗಂ ಕಾಲದಲ್ಲಿಯೋ, ನಂತರದ ಕಾಲದಲ್ಲಿಯೊ ಶಂಗಂ ಸಾಹಿತ್ಯಕ್ಕೆ ಸಮಾನವಾದ ಇಡುಕುಂಗಬ್ಬ ಸಾಹಿತ್ಯ ರಚನೆ ಕನ್ನಡಲ್ಲಿ ನಡೆದಿರಬೇಕೆನಿಸುತ್ತದೆ. ಈ ಬಗ್ಗೆ ನನ್ನ ಪಿಎಚ್.ಡಿ. ಪ್ರಬಂಧದಲ್ಲಿ ಚರ್ಚಿಸಿದ್ದೇನೆ.

'ಶಂಗಂ ತಮಿಳುಗಂ ಮತ್ತು ಕನ್ನಡ ನಾಡು ನುಡಿ'ಯ ಮೊದಲ ಅಧ್ಯಾಯದ ಟಿಪ್ಪಣಿಯಲ್ಲಿ ಕನ್ನಡದ 'ಚೆತ್ತಾಣ-ಬೆಂದಡೆ' ಮತ್ತು ತಮಿಳಿನ 'ಅಹಂ-ಪುರಂ 'ಗಳ ಬಗ್ಗೆ ಶೆಟ್ಟರ್ ಮಾತನಾಡುತ್ತಾ ಈ ತಮಿಳ್ ರೂಪಗಳ ಮಹತ್ವವನ್ನು ಎತ್ತಿ ಹಿಡಿಯುತ್ತಾರೆ. ಚೆತ್ತಾಣ-ಬೆದಂಡೆ ಎರಡು ಕಾವ್ಯರೂಪಗಳು. ಆಶಯ ಮಾತ್ರ ಒಂದೇ ಆಗಿದೆ. ಅಹಂ ಮತ್ತು ಪುರಂ ಹಾಗಲ್ಲ. ಅಲ್ಲಿ ಆಶಯಗಳು ಬೇರೆ ಬೇರೆ ಇವೆ; ರೂಪಗಳು ಮಾತ್ರ ಒಂದೇ. ಅಹಂ-ಪುರಂ ಕ್ರಮವಾಗಿ ವೀರ ಮತ್ತು ಶೃಂಗಾರರಸಕ್ಕೆ ಮಾತ್ರ ಸೀಮಿತವಾಗಿದ್ದರೆ ಅದೇನೂ ಅಂಥಾ ದೊಡ್ಡ ಕೊಡುಗೆ ಎನಿಸುವುದಿಲ್ಲ. ಆದರೆ ಕನ್ನಡದಲ್ಲಿ ಲೌಕಿಕ ಮತ್ತು ಆಗಮಿಕ ಎಂಬ ಎರಡು ಪ್ರಕಾರಗಳಿದ್ದು, ಇವುಗಳಲ್ಲಿ ಲೌಕಿಕವು ಎಂಟು ರಸಗಳನ್ನು ಪ್ರತಿಪಾದಿಸಿ, ಭಾವವನ್ನು ಉದ್ರೇಕಗೊಳಿಸುವ ಪ್ರಕಾರವಾಗಿದ್ದರೆ, ಆಗಮಿಕವು ಎಂಟು ರಸಗಳನ್ನು ಉದ್ರೇಕಗೊಳಿಸಿ ಶಾಂತದಿಂದ ಉಪಶಮನಗೊಳಿಸುವದಾಗಿದೆ. ನನ್ನ ದೃಷ್ಟಿಯಲ್ಲಿ ಅಹಂ, ಪುರಂಕ್ಕಿಂತ ಈ ವರ್ಗೀಕರಣ ವಿಚಾರ ತುಂಬಾ ಮುಖ್ಯವಾದುದು.

ತೋಲ್ಕಾಪ್ಪಿಯಂನ ಪ್ರಭಾವ ಮುಂದಿನ ತಮಿಳು ಸಾಹಿತ್ಯದ ಮೇಲೆ ಆಗಿದೆ. ಆದರೆ ಮುಂದಿನ ಕಾವ್ಯ ಪರಂಪರೆಯ ಮೇಲೆ ಕವಿರಾಜಮಾರ್ಗದ ದೊಡ್ಡ ಪ್ರಭಾವ ಆಗಲಿಲ್ಲ ಎನ್ನುವ ವಾದವನ್ನು ಶೆಟ್ಟರ್ ಮಂಡಿಸುತ್ತಾರೆ. ತೋಲ್ಕಾಪ್ಪಿಯಂ ಮೇಲೆ ಅನೇಕರು ಟೀಕೆ ಬರೆದಿರಬಹುದು, ಕವಿರಾಜಮಾರ್ಗದ ಮೇಲೆ ಟೀಕೆ ಬರೆಯದಿದ್ದರೂ ಅದರ ಉಲ್ಲೇಖ ಕೆಲವು ಕಡೆ ಬರುತ್ತದೆ. ಕವಿರಾಜಮಾರ್ಗದಲ್ಲಿ ಬರುವ ವ್ಯಾಕರಣದ ವಿಚಾರಗಳು ಬೀಜರೂಪಿಯಾದವು. ಆಗ ನುಗ್ಗಿ ಬರುತ್ತಲಿದ್ದ ಸಂಸ್ಕೃತವನ್ನು ಯಾವ ರೀತಿ ಸ್ವೀಕಾರ ಮಾಡಬೇಕು, ಯಾವ ರೀತಿ ನಿರಾಕರಣ ಮಾಡಬೇಕು ಎನ್ನುವುದನ್ನು ಆತ ಪ್ರತಿಪಾದನೆ ಮಾಡುತಾನೆ. ಈ ಮತ್ತು ಇಂಥ ಅನೇಕ ವಿಚಾರಗಳನ್ನು ನಾಗವರ್ಮ ತನ್ನ 'ಶಬ್ದಸ್ಮೃತಿ'ಯಲ್ಲಿ, ಕೇಶಿರಾಜ ತನ್ನ 'ಶಬ್ದಮಣಿದರ್ಪಣ'ದಲ್ಲಿ ವಿವರವಾಗಿ ಹೇಳುತ್ತಾರೆ. ಮತ್ತು ಕವಿರಾಜಮಾರ್ಗಕಾರ ಹೇಳಿದ ಅಲಂಕಾರ ಮತ್ತು ದೇಶಿ-ಮಾರ್ಗಗಳ ಸಮನ್ವಯವನ್ನು ತರುವಾಯ ಬಂದ ಪಂಪ ಮೊದಲಾದವರು ಚಂಪೂವಿನಲ್ಲಿ ಮುಂದುವರೆಸಿದ್ದಾರೆ. ಹೀಗಾಗಿ ವ್ಯಕ್ತವಾಗಿ ಕವಿರಾಜಮಾರ್ಗದ ಪ್ರಭಾವ ಕಾಣಲಿಕ್ಕಿಲ್ಲ; ಆದರೆ ಅವ್ಯಕ್ತವಾಗಿ ಇದು ಬಹಳ ದೊಡ್ಡ ಪ್ರಭಾವವನ್ನು ಕನ್ನಡಗರ ಮೇಲೆ ಬೀರಿದೆ ಎನ್ನುವುದನ್ನು ನಾವು ಗಮನಿಸಬೇಕು.

ಈ ಪುಸ್ತಕದಲ್ಲಿ ನನಗೆ ಇಷ್ಟವಾದುದ್ದು, ನಾಲ್ಕನೆಯ ಅಧ್ಯಾಯ. ಇದನ್ನು ಶೆಟ್ಟರ್ ಅಲ್ಲದೆ ಬೇರೆ ಯಾರೂ ಬರೆಯಲಿಕ್ಕೆ ಸಾಧ್ಯವಿಲ್ಲ. ಬ್ರಾಹ್ಮಿಲಿಪಿ ಮತ್ತು ಅಶೋಕನ ಶಾಸನವನ್ನು ಇಟ್ಟುಕೊಂಡು ಹೇಳಿದ ಇಲ್ಲಿಯ ಯಾವ ವಿಚಾರಗಳೂ ನಮಗೆ ಈ ಮೊದಲು ಗೊತ್ತಿರಲಿಲ್ಲ. ಬ್ರಾಹ್ಮಿಲಿಪಿಯ ಅಶೋಕನ ಶಾಸನಗಳು ದಕ್ಷಿಣಭಾರತಕ್ಕೆ ಬಂದಿದ್ದು, ಕರ್ನಾಟಕವನ್ನು ವ್ಯಾಪಿಸಿದ್ದು ಮತ್ತು ತಮಿಳುನಾಡನ್ನು ಪ್ರವೇಶಮಾಡಲಾರದ್ದು ನಮಗೆ ಗೊತ್ತಿತ್ತು. ಆದರೆ ಇದಕ್ಕೆ ಶೆಟ್ಟರ್ ಮಾಡುವ ಕಾರ್ಯ-ಕಾರಣ ವ್ಯಾಖ್ಯಾನ ಬಹಳ ಮಹತ್ವದ್ದು. 'ಕಾರ್ಯಶೋಧ' ಮಾಡಬಹುದು. ಆದರೆ 'ಕಾರಣ ಶೋಧ' ಕಠಿಣವಾದದ್ದು. ಅಶೋಕನ ಶಾಸನಗಳಿರುವ ಎರ್ರಗುಡಿ, ಸನ್ನತಿ, ಕೊಪ್ಪಳ, ಚಿತ್ರದುರ್ಗ ಈ ೧೨೫ ಕಿಲೋಮಿಟರ್ ವ್ಯಾಪಿಯಲ್ಲಿ ಬರುವ ಪ್ರದೇಶವನ್ನು ಅವರು ಅಭ್ಯಾಸ ಮಾಡಿರುವ ರೀತಿ ಮತ್ತು ಅಲ್ಲಿಯ ಚಟುವಟಿಕೆಗಳನ್ನು ಗ್ರಹಿಸಿದ ರೀತಿ ಶೆಟ್ಟರ್ ಅವರನ್ನು ಬಿಟ್ಟು ಬೇರೆ ಯಾರಿಗೂ ಸಾಧ್ಯವಿಲ್ಲ.

'ಲಿಪಿಬದ್ಧಗೊಳಿಸುವಲ್ಲಿ ತಮಿಳಿಗಿಂತ ಹೆಚ್ಚು ಪುರಾತನತೆ ಕನ್ನಡ ಭಾಷೆಗೆ ಇದೆ' ಎನ್ನುವುದು ಶಾಸ್ತ್ರೀಯ ಸ್ಥಾನ ಪಡೆಯಲು ಕನ್ನಡಿಗರು ನಡೆಸಿರುವ ಇಂದಿನ ಹೋರಾಟ ಸಂದರ್ಭದಲ್ಲಿ ಬಹುಮುಖ್ಯ ಆಧಾರವೆನಿಸಿದೆ. ಅಶೋಕನನ್ನು ತಡೆಯುವ ಮೂಲಕ ಲಿಪಿ ಸಂಸ್ಕೃತವನ್ನು ತಮಿಳರು ತಡೆದರು. ಆದರೆ ಕನ್ನಡಿಗರು ಮುಕ್ತವಾಗಿ ಸ್ವೀಕರಿಸಿ, ಕನ್ನಡವನ್ನು ಸರಿಯಾಗಿ ಬೆಳೆಸಿದರು. ಆದುದರಿಂದಲೇ ಏಳನೆಯ ಶತಮಾನದ ಕನ್ನಡ ಶಾಸನಗಳಲ್ಲಿ 'ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆರವೋಲ್ ಮಂಜುವೋಲ್ ತೋರಿ ಬೇಗಂ ಪಿರಗುಂ' ಎಂಬಂಥ ಸುಂದರ ಪದ್ಯಗಳು ಕಾಣುತ್ತವೆ. ಇಷ್ಟು ಗಟ್ಟಿ ಪದ್ಯಗಳು, ಇಷ್ಟು ಗಟ್ಟಿ ರಚನೆ ಸುಮ್ಮನೆ ಬಂದಿವೆ ಎನಿಸುವುದಿಲ್ಲ. ಕನ್ನಡ ಈ ಹೊತ್ತಿಗಾಗಲೇ ಲಿಪಿಯನ್ನು ಬಳಸಿ ಪಕ್ವತೆಯನ್ನು ಪಡೆದಂತೆ ಕಾಣುತ್ತದೆ. ಏಳನೆಯ ಶತಮಾನದ ಹೊತ್ತಿಗೆ ಇಷ್ಟು ಸುಂದರ ಪದ್ಯಗಳು ತಮಿಳಿನಲ್ಲಿ ಇದ್ದಂತೆ ಕಾಣುವುದಿಲ್ಲ. ಯಾಕೆಂದರೆ ಅಲ್ಲಿ ಲಿಪಿಯೇ ಇರಲಿಲ್ಲ. ಮತ್ತು ಶಂಗಂ ಸಾಹಿತ್ಯ ಬಹಳ ದಿನಗಳ ವರೆಗೆ ಮೌಖಿಕವಾಗಿಯೇ ಬೆಳೆಯಿತು ಎನ್ನುವುದು ನಮಗೆ ಗೊತ್ತಿರಲಿಲ್ಲ. ಈ ಪುಸ್ತಕದ ಮೂಲಕ ಅಂತಹ ಬಹಳ ದೊಡ್ಡ ಸತ್ಯವನ್ನು ಶೆಟ್ಟರ್ ನಮಗೆ ತೋರಿಸಿದ್ದಾರೆ.

ಇದಲ್ಲದೆ ಚಿತ್ರದುರ್ಗದ ದಕ್ಷಿಣಕ್ಕಿರುವ. ಪ್ರದೇಶವನ್ನು ತಮಿಳರು ಮತ್ತು ತಮಿಳೇತರ ವಡುಗರು ಹಂಚಿಕೊಂಡ ವಿಷಯ ನಮಗೆ ಈವರೆಗೆ ಸರಿಯಾಗಿ ಯಾಕೆ ಅರ್ಥ ಆಗಲಿಲ್ಲವೆಂದರೆ, ಭೂಗೋಳ ಮತ್ತು ಇತಿಹಾಸವನ್ನು ಅರ್ಥ ಮಾಡಿಕೊಳ್ಳಲಾಗದೆ ಸಾಹಿತ್ಯ ಸರಿಯಾಗಿ ಅರ್ಥವಾಗುವುದಿಲ್ಲ. ಇದನ್ನು ಶೆಟ್ಟರ್ ಮುಖ್ಯವಾಗಿ ಗಮನಿಸಿದ್ದಾರೆ.

ನನಗೆ ಇನ್ನೂ ಒಂದು ಸಂಶಯವಿದೆ. ಕನ್ನಡ ಭಾಷೆಯು ದ್ರಾವಿಡ ಕುಟುಂಬದಿಂದ ಬೇರ್ಪಟ್ಟು, ಸ್ವತಂತ್ರ ಆಕಾರ ಪಡೆಯಲಿಕ್ಕೆ ಶುರು ಮಾಡಿದ್ದು ಯಾವ ಕಾಲದಲ್ಲಿ? ಯಾವ ಪ್ರದೇಶದಲ್ಲಿ? ಎನ್ನುವುದು. ಬಹುಶಃ ಇದಕ್ಕೆ ಕಾರಣ ಸಂಸ್ಕೃತ ಪ್ರಭಾವವೆನಿಸುತ್ತದೆ. ಶಂಬಾ ಜೋಶಿಯವರ ಪ್ರಕಾರ ಸಂಸ್ಕೃತ ಮತ್ತು ಕನ್ನಡ ಮೊದಲು ಎಲ್ಲಿ ಸಂಧಿಸಿದವೋ ಅಲ್ಲಿ ಮೊದಲು ಕನ್ನಡ ಉದಯವಾಯಿತು. ಬಹುಶಃ ಗೋದಾವರಿ ತೀರದಲ್ಲಿ ಇಂಥ ಸಂಪರ್ಕ ಸಾಧ್ಯವಾದ ಕಾರಣ, ಅಲ್ಲಿ ಮೊದಲು ಕನ್ನಡ ರೂಪು ಪಡೆದುಕೊಂಡಿದ್ದರೆ ಹಲ್ಮಿಡಿ ಶಾಸನ, ತಮಟಕಲ್ಲ ಶಾಸನ ಇಂಥ ಪ್ರಾಚೀನ ಕನ್ನಡ ಬರೆಹಗಳೆಲ್ಲಾ ದೂರದ ದಕ್ಷಿಣ ಕರ್ನಾಟಕದಲ್ಲಿ ಯಾಕೆ ಮೊದಲು ದೊರಕುತ್ತವೆ? ಎನ್ನುವುದೂ ಪ್ರಶ್ನೆಯೇ. ಇದಕ್ಕೆ ಗಂಭೀರ ಅಧ್ಯಯನದ ಮೂಲಕ ಉತ್ತರ ಕಂಡುಕೊಳ್ಳುವ ಅಗತ್ಯವಿದೆ.

ಇನ್ನೂ ಒಂದು ಮಾತನ್ನು ಶಂಬಾ ಜೋಶಿಯವರು ಹೇಳುತ್ತಾರೆ: ದಕ್ಷಿಣ ಭಾರತೀಯರಿಗೆಲ್ಲ ದ್ರಾವಿಡರೆಂದು ಹೇಳುವ ತಿಳಿಗೇಡಿತನವನ್ನು ಮೊದಲು ಮಾಡಿದವನು ಹರ್ಬಲ್ ರಸಲೇನ್ ಎನ್ನುತ್ತಾ, ನಿಜವಾಗಿಯೂ ದ್ರಾವಿಡ ಎಂದರೆ ತಮಿಳು ಮಾತ್ರ, ಎನ್ನುವ ಅವರು ಇದಕ್ಕೆ ಪಂಪಭಾರತ, ವಡ್ಡಾರಾಧನೆಗಳಿಂದ ಸಮರ್ಥನೆ ನೀಡುತ್ತಾರೆ. ಅದ್ದರಿಂದ ಇನ್ನು ಮೇಲೆ ದ್ರಾವಿಡವೆಂದರೆ ತಮಿಳು ಮಾತ್ರ, ಕನ್ನಡ ತೆಲುಗು, ತಮಿಳು, ಮಲಯಾಳಂ-ಈ ನಾಲ್ಕೂ ಸೇರಿದ ಮೂಲಪ್ರದೇಶಕ್ಕೆ ಬೇರೆ ಹೆಸರು ಇದ್ದು, ಅದನ್ನು ಶೋಧ ಮಾಡಬೇಕಿದೆ.

ಈ ಪುಸ್ತಕದಲ್ಲಿ ಎರಮ್ಮೆ ನಾಡಿನ ಬಗ್ಗೆ-ಕದಂಬ ಮತ್ತು ಪುನ್ನಾಟದ ಬಗ್ಗೆ-ಕೊಡವ, ಕೊಂಕಣ ಮತ್ತು ತುಳು ನಾಡುಗಳ ಬಗ್ಗೆ ಬಹಳ ದೀರ್ಘವಾಗಿ ಚರ್ಚಿಸಿದ್ದಾರೆ. ಆದರೆ ಎರಮ್ಮೆ ನಾಡು ಎಂದರೆ ಮೈಸೂರು ಎನ್ನುವುದು ನನಗೆ ಅನುಮಾನ. ಎರಮ್ಮೆ ಅಂದರೆ ಎಮ್ಮೆ, ಎಮ್ಮೆ ಎಂದರೆ ಮಹಿಷ, ಮಹಿಷಾಸುರನನ್ನು ಕೊಂದ ಸ್ಥಳ ಮೈಸೂರು ಎಂದು ಮುಂತಾಗಿ ಹೇಳುತ್ತಲಿದ್ದಾರೆ. ಆದರೆ ಎರಮ್ಮೆ ನಾಡು ಎನ್ನುವುದು ಬೇರೆಯೇ ಇರಬೇಕು. ಶೆಟ್ಟರ್ ಅವರೇ ಒಂದು ಕಡೆ ಸೂಚಿಸಿದ ಹಾಗೆ ಎರಮ್ಮೆನಾಯಕರ ಪಟ್ಟಿ ಎನ್ನುವುದು ದಿಂಡಗಲ್ ಹತ್ತಿರ ಇದೆ. ಬಹುಶಃ ಅದೇ ಪ್ರದೇಶವೇ ಎರುಮ್ಮೆನಾಡು ಇರಬೇಕು. ಮೈಸೂರು ಮಹಿಷರಾಕ್ಷಸನ ಹೆಸರಿನಿಂದ ಬಂದದ್ದಲ್ಲ. ಮೈಸ ಎಂಬ, ಹುಣಸ ಎಂಬ ವ್ಯಕ್ತಿ ಹೆಸರಿನಿಂದ ಮೈಸೂರು, ಹುಣಸೂರು ಬಂದಿರಬೇಕು.

ಕೊನೆಯದಾಗಿ, ಶಂಗಂ ಸಾಹಿತ್ಯಕ್ಕೆ ಕನ್ನಡಿಗರ ಕೊಡುಗೆ ಎನ್ನುವ ವಿಚಾರ ಮಾಡಿದ್ದಾರೆ. ಇದೂ ಕೂಡ ಮಹತ್ವದ ವಿಷಯವೇ. ತಮಿಳು ಶಂಗಂ ಸಾಹಿತ್ಯದ ಒಂದು ಭಾಗವನ್ನು ಕರ್ನಾಟಕದ ಚಾರಣ ಕವಿಗಳಾದ ಎರಮ್ಮೆ ನಾಡಿನವರು, ಕೊಂಕಣ ಕವಿಗಳು, ಕೋಶಲರು ಬರೆದಿರುವ ಬಗ್ಗೆ ಅಧಿಕೃತವಾಗಿ ಹೇಳುತ್ತಾರೆ. ಅವರ ಮಾತನ್ನು ನಾವೆಲ್ಲ ಒಪ್ಪಿಕೊಳ್ಳುವ ರೀತಿಯಲ್ಲಿ ವಿಷಯವನ್ನು ನಿರೂಪಿಸುತ್ತಾರೆ. ಅಷ್ಟೇ ಅಲ್ಲದೆ, ಹೊಸ ಸಂಶೋಧನೆಗೆ ನಮ್ಮನ್ನು ಕೆಣಕುತ್ತಾರೆ. ನಮ್ಮಲ್ಲಿ ಆಸಕ್ತಿ ಹುಟ್ಟುವ ಹಾಗೆ ಮಾಡುತ್ತಾರೆ.

ಈ ಪುಸ್ತಕರ ಭಾಷೆ ಸ್ವಲ್ಪ ಕ್ಲಿಷ್ಟವೆನಿಸುತ್ತದೆ ಎನ್ನುವುದನ್ನು ಬಿಟ್ಟರೆ, ಹೊಸ ಶೋಧಗಳ ಈ ಪುಸ್ತಕವನ್ನು ನೀಡಿದ್ದಕ್ಕಾಗಿ ಅವರಿಗೆ ಅಭಿನಂದನೆಗಳು. ಕನ್ನಡದ ಶ್ರೇಷ್ಠ ಪ್ರಶಸ್ತಿಗಳೆಲ್ಲವೂ ಈ ಪುಸ್ತಕಕ್ಕೆ ಸಲ್ಲಬೇಕು, ಸಲ್ಲಲಿ ಎಂದು ಹಾರೈಸುತ್ತೇನೆ.

ಆಕರ : ಮಾರ್ಗ ಸಂಪುಟ-೭

೪೦

'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಒಂದು ಮಹತ್ವದ ಗ್ರಂಥ

ಮೂಲತಃ ನಾನು ಸಾಹಿತ್ಯದ ವಿದ್ಯಾರ್ಥಿಯಾಗಿದ್ದರೂ, ಇತಿಹಾಸದ ಬಗ್ಗೆ ಒಲವನ್ನು ಬೆಳೆಯಿಸಿಕೊಂಡವನು ಎಂಬ ಕಾರಣದಿಂದ ಇಲ್ಲಿಯ ಸ್ನೇಹಿತರು ನಾನು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಟ್ಟಿದ್ದಾರೆಂದು ಭಾವಿಸುತ್ತೇನೆ. ೧೯೭೪ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಲನ ಮಂಡ್ಯದಲ್ಲಿ ಜರುಗಿತು. ಆ ಸಮ್ಮೇಳನದಲ್ಲಿ ಭಾಗವಹಿಸಿದ ನಾನು ಉಪನ್ಯಾಸ ನೀಡಿದ್ದೆ ಬಹುಶಃ ಅದನ್ನು ಬಿಟ್ಟರೆ ಮಂಡ್ಯದಲ್ಲಿ ನಾನು ನೀಡುತ್ತಿರುವ ಎರಡನೆಯ ಉಪನ್ಯಾಸ ಅಂದರೆ ಇದು. ಈ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಲು ಒಂದಕ್ಕಿಂತ ಹೆಚ್ಚು ಕಾರಣಗಳಿವೆ. ಮೊದಲನೆಯಾಗಿ ಮಿತ್ರರಾದ. ಡಾ.ರಾಮೇಗೌಡ ಅವರು ಕನ್ನಡದ ಒಬ್ಬ ಸೌಮ್ಯ ಮತ್ತು ಸ್ವತಶಾಲಿ ಪ್ರಾಧ್ಯಾಪಕರು, ಸತ್ವಶಾಲಿ ಸಾಹಿತಿಗಳು. ಇದು ಬಹಳ ಮುಖ್ಯವಾದಂಥ ಒಂದು ಆಕರ್ಷಣೆ ಎರಡನೆಯದಾಗಿ ಅವರ ಪಿಎಚ್.ಡಿ. ಮಹಾಪ್ರಬಂಧ 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು ಬಹಳ ಮಹತ್ವಪೂರ್ಣವಾದ ಪ್ರಬಂಧ. ಎಷ್ಟು ಮಹತ್ವಪೂರ್ಣವಾದುದೆಂದರೆ; ಈವರೆಗಿನ ಕನ್ನಡ ಸಾಹಿತ್ಯದ ಒಂದು ದೊಡ್ಡ ಕೊರತೆಯನ್ನು ಈ ಪ್ರಬಂಧ ತುಂಬಿಕೊಟ್ಟಿದೆ ಎಂಬುದು ನನ್ನ ಪ್ರಾಮಾಣಿಕವಾದ ಅಭಿಪ್ರಾಯ. ಮೂರನೆಯದಾಗಿ ನಾನು ಇಲ್ಲಿಗೆ ಬರಲಿಕ್ಕೆ ಕಾರಣವೆಂದರೆ, ಇಂಥ ಒಂದು ಉತ್ತಮ ಪ್ರಬಂಧಕ್ಕೆ ಮಾರ್ಗದರ್ಶನ ನೀಡಿದ ಡಾ. ಹಾ.ಮಾ. ನಾಯಕರ ಬಗೆಗಿನ ಒಂದು ಗೌರವ.

ಈ ಎರಡು, ಮೂರು ಕಾರಣಗಳಿಂದಾಗಿ ನಾನು ಈ ಸಭೆಗೆ ಆಗಮಿಸಿದ್ದೇನೆ ಮತ್ತು ಈ ಕೃತಿಯಯನ್ನು ಬಹಳ ಪ್ರೀತಿಯಿಂದ ಬಿಡುಗಡೆ ಮಾಡುತ್ತಿದ್ದೇನೆ.

ಇದು ನಿಮಗೆ ಗೊತ್ತಿರುವ ಹಾಗೆ ಪಿಎಚ್ ಡಿ. ಮಹಾಪ್ರಬಂಧ ಕನ್ನಡದಲ್ಲಿ ಪಿಎಚ್.ಡಿ. ಅಧ್ಯಯನ ಆರಂಭವಾಗಿ ಸುಮಾರು ಅರವತ್ತು ವರ್ಷಗಳು ಗತಿಸಿವೆ. ನಮ್ಮ ಪಿಎಚ್.ಡಿ. ಅಧ್ಯಯನ ಮೊದಲು ಪ್ರಾರಂಭವಾದದ್ದು ಲಂಡನ್ನಿನೊಳಗೆ, ಆಮೇಲೆ ಮುಂಬಯಿ, ಅನಂತರ ಕರ್ನಾಟದೊಳಗೆ.

೧೯೩೦ರಲ್ಲಿ ಡಾ. ಎಸ್.ವಿ.ನಂದೀಮಠ ಅವರು ಎಲ್.ಜಿ. ಬಾರ್ನೆಟ್‌ರವರ ಮಾರ್ಗದರ್ಶನದೊಂದಿಗೆ, ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ.ಅಧ್ಯಯನ ಪೂರೈಸಿದರು. ಆ ಬಳಿಕ ಈ ಅಧ್ಯಯನ ಮುಂಬಯಿಗೆ ಬಂತು. ಮುಂಬಯಿ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ

ಡಾ. ಪಂಚಮುಖಿಯವರ ಮಾರ್ಗದರ್ಶನ ಪಡೆದು ಶ್ರೀ ಎ.ಟಿ.ಪಾಟೀಲ ಎಂಬವರು 'ಪ್ರಸನ್ನ ವೆಂಕಟದಾಸ'ರನ್ನು ಕುರಿತು ಪಿಎಚ್.ಡಿ. ಅಧ್ಯಯನ ಮಾಡಿದರು. ೧೯೩೦ರಲ್ಲಿ ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಮಾಧ್ಯಮದ ಮೂಲಕವೂ, ೧೯೪೭ರಲ್ಲಿ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮದ ಮೂಲಕವೂ ಪಿಎಚ್.ಡಿ. ಅಧ್ಯಯನ ಆದದ್ದು. ಆ ನಂತರ ಈ ಅಧ್ಯಯನ ಕರ್ನಾಟಕಕ್ಕೆ ಬಂತು. ೧೯೫೫ರಲ್ಲಿ ಡಾ.ಕೆ.ಜಿ.ಕುಂದಣಗಾರರ ಮಾರ್ಗದರ್ಶನದಲ್ಲಿ ಶ್ರೀ ಜಿ.ಎಸ್. ಗದ್ದಗಿಮಠ ಅವರು 'ಕನ್ನಡ ಜನಪದ ಗೀತೆ'ಗಳನ್ನು ಕುರಿತು ಪಿಎಚ್.ಡಿ.ಪ್ರಬಂಧ ಪೂರ್ಣಗೊಳಿಸಿದರು. ಅದು ಕರ್ನಾಟಕದಲ್ಲಿ ಪೂರ್ಣಗೊಂಡ ಮೊದಲ ಪ್ರಬಂಧ.

ಹೀಗೆ ೧೯೩೦ರಿಂದ ೧೯೯೨ರ ವರೆಗೆ ಅರವತ್ತೆರಡು ವರ್ಷಗಳ ಅವಧಿಯಲ್ಲಿ ಕನ್ನಡದಲ್ಲಿ ಸುಮಾರು ಮೂನ್ನೂರು ಪಿಎಚ್.ಡಿ. ಪ್ರಬಂಧಗಳು ಹುಟ್ಟಿವೆ. ಆ ಮಾಲಿಕೆಯಲ್ಲಿ 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಎಂಬ ಈ ಪ್ರಬಂಧವೂ ಸೇರ್ಪಡೆಯಾಗುತ್ತದೆ. ಆದರೆ ನನ್ನ ದೃಷ್ಟಿಯಲ್ಲಿ ಈ ಪ್ರಬಂಧ ಮೂನ್ನೂರ ಒಂದನೇ ಪ್ರಬಂಧವಾಗಿ ಸೇರ್ಪಡೆಯಾಗುವುದಿಲ್ಲ. ಇದು ಮೊದಲ ಮೂವತ್ತು ಪಿಎಚ್.ಡಿ. ಪ್ರಬಂಧಗಳೊಳಗೆ ಸೇರುತ್ತದೆ. ಇನ್ನೂ ಸ್ವಲ್ಪ ಖಚಿತವಾಗಿ ಹೇಳುವುದಾದರೆ ಮೊದಲ ಇಪ್ಪತ್ತು ಪ್ರಬಂಧಗಳೊಳಗೆ ಇದಕ್ಕೆ ಸ್ಥಾನ ಸಿಗುತ್ತದೆ. ಅಂಥ ಮಹತ್ವದ ಪ್ರಬಂಧವನ್ನು 'ರಾಗೌ' ಅವರು ರೂಪಿಸಿದ್ದಾರೆ. ಕನ್ನಡದಲ್ಲಿ ಸಾಹಿತ್ಯ, ಭಾಷೆ, ಜಾನಪದ, ಈ ಕ್ಷೇತ್ರಗಳನ್ನು ಕುರಿತು ಈವರೆಗೆ ಅಧ್ಯಯನ ನಡೆದಿದೆ. ಅದರಲ್ಲಿಯೂ ಕವಿಕೃತಿಯ ಸಾಹಿತ್ಯಿಕ ಅಧ್ಯಯನ ಕೆಲವು ಕಾಲದವರೆಗೆ ವ್ಯಾಪಕವಾಗಿ ನಡೆದು ಇತ್ತಿಚೆಗೆ ಕವಿ ಕೃತಿಯ ಸಾಹಿತ್ಯೇತರವಾದಂಥ ಅಧ್ಯಯನವೂ ನಡೆಯುತ್ತಾ ಇದೆ. ಈ ಸಾಹಿತ್ಯೇತರ ಅಧ್ಯಯನ ಅಂದರೆ ಅದು ಸಾಮಾಜಿಕವಾಗಿರಬಹುದು. ಅಥವಾ ಚಾರಿತ್ರಿಕವಾಗಿರಬಹುದು. ಈ ಮಹಾಪ್ರಬಂಧ ಸಾಹಿತ್ಯೇತರ ಅಧ್ಯಯನದ ಚಾರಿತ್ರಿಕ ವಿಭಾಗಕ್ಕೆ ಸೇರುವಂಥ ಒಂದು ಕೃತಿಯಾಗಿದೆ. ಅದರಲ್ಲೂ ಕನ್ನಡದ ರಾಜಕೀಯ ಕ್ಷೇತ್ರವನ್ನು ಕುರಿತು ಈ ಪ್ರಬಂಧ ವಿವೇಚನೆ ನಡೆಸಿದೆ. ಕನ್ನಡ ಸಾಹಿತ್ಯದಲ್ಲಿ ರಾಜಕೀಯ ಚರಿತ್ರೆ ಪ್ರಧಾನವಾಗಿ ಮತ್ತು ಅಪ್ರಧಾನವಾಗಿ ಆಗಾಗ ಕಂಡುಬರುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಎರಡು ಮುಖ್ಯವಾದಂಥ ಸಮಸ್ಯೆಗಳು ನಿರ್ಮಾಣಗೊಂಡವು. ಒಂದು ಶೈಲಿ ಸಮಸ್ಯೆ ಮತ್ತೊಂದು ನಾಯಕ ಸಮಸ್ಯೆ. ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಸಾಹಿತ್ಯ ಎಂದು ಸೇರಿಕೊಳ್ಳಲಾರಂಭಿಸಿತೋ ಅಂದೇ ಕನ್ನಡ ಭಾಷೆಯ ಶೈಲಿಯ ಮಗ್ಗುಲಿನಲ್ಲಿಯೇ ಕನ್ನಡ ಸಂಸ್ಕೃತ ಮಿಶ್ರಣವಾದ ಇನ್ನೊಂದು ಶೈಲಿ ರೂಪಗೊಂಡಿತು. ಹೀಗಾಗಿ ಕನ್ನಡದಲ್ಲಿ ಒಂದು 'ದೇಸೀ ಶೈಲಿ, ಮತ್ತೊಂದು 'ಮಾರ್ಗ ಶೈಲಿ' ಎಂಬ ಶೈಲಿಯ ಎರಡು ಕವಲುಗಳು ರೂಪುಗೊಂಡವು. ಬಹಶಃ ಸಂಸ್ಕೃತ ನಮ್ಮ ಭಾಷೆಯಲ್ಲಿ ಬಂದು ಸೇರದಿದ್ದರೆ ನಮ್ಮ ಶೈಲಿಯಲ್ಲದೆ ಬೇರೆ ಉತ್ಪನ್ನವಾಗುತ್ತಾ ಇರಲಿಲ್ಲ. ಶೈಲಿಯಲ್ಲಿ ಇಂಥ ಒಂದು ಸಮಸ್ಯೆ ಬಂತು. ಆ ಸಮಸ್ಯೆಯನ್ನು ಮೊದಲಿನಿಂದಲೂ ಕನ್ನಡಿಗರು ಒಂದು ರೀತಿಯಲ್ಲಿ ಪ್ರತಿಕ್ರಿಯಾತ್ಮಕವಾಗಿ ನೋಡಿದ್ದಾರೆ. ಮುಂದೆ ಕವಿಗಳಿಗೆ ಹೇಳಬೇಕಾಯ್ತು–

ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕುಮಾರ್ಗದೊಳೆ ತಳ್ಳುದು ತಳ್ತೊಡೆ ಕಾವ್ಯಬಂಧಮೊಪ್ಪುಗುಮ್....

ನಯಸೇನ ಮೊದಲಾದವರೆಲ್ಲ ಸಂಸ್ಕೃತ ಬೇಡ ಅಂತ ಡಂಗುರ ಸಾರಿಬಿಟ್ಟಿದ್ದಾರೆ. ಹೀಗೆ ಶೈಲಿಗಳದು ಒಂದು ಸಮಸ್ಯೆ ಆಯಿತು ಎಂಬುದು ಸ್ಪಷ್ಟವಿದೆ. ಕನ್ನಡದಲ್ಲಿ ಮೊದಲಿನಿಂದಲೂ ಅದು ಬೆಳೆದುಬಂದಿರುವುದು ನಮಗೆ ಗೊತ್ತಾಗುತ್ತದೆ. ಆ ರೀತಿಯದೇ ಇನ್ನೊಂದು ಸಮಸ್ಯೆಯೆಂದರೆ ಕಥಾನಾಯಕನ ಸಮಸ್ಯೆ. ಸಂಸ್ಕೃತ ಕನ್ನಡದೊಳಕ್ಕೆ ಪ್ರವೇಶ ಮಾಡಿದ ಸಂದರ್ಭದಲ್ಲಿ ಉದ್ಭವವಾದದ್ದು. ನಾವು ಅನೇಕ ಸಂಸ್ಕೃತ ಕೃತಿಗಳನ್ನು ಕನ್ನಡಕ್ಕೆ ಬರಮಾಡಿಕೊಂಡಿದ್ದೇವೆ. ಮೊದಮೊದಲು ಸಂಸ್ಕೃತ ಕವಿಗಳನ್ನು ಟೀಕೆ ಮತ್ತು ವ್ಯಾಖ್ಯಾನದ ಮೂಲಕ ಕನ್ನಡಕ್ಕೆ ತಂದರು. ಆಮೇಲೆ ಭಾಷಾಂತರದ ಮೂಲಕ ಕನ್ನಡಕ್ಕೆ ತಂದ ಕೃತಿಗಳು ಕಳೆದುಹೋಗಿಬಿಟ್ಟವೆ. ಸಂಸ್ಕೃತ ಕೃತಿಗಳನ್ನು ರೂಪಾರಂತಗೊಳಿಸಿದ ಕಾಲವೆಂದರೆ ಅದು ಪಂಪ, ರನ್ನರ ಕಾಲ.

ರಾಮಾಯಣ ಮತ್ತು ಮಹಾಭಾರತ ಕೃತಿಗಳನ್ನು ರೂಪಾಂತರಗೊಳಿಸುವಾಗ ಈ ನಾಯಕನ ಸಮಸ್ಯೆ ಅನ್ನೋದು ಕನ್ನಡದಲ್ಲಿ ಹುಟ್ಟಿಕೊಂಡಿತು. ನೇರವಾಗಿ ರಾಮಾಯಾಣ ಮತ್ತು ಮಹಾಭಾರತಗಳನ್ನು ಸ್ವೀಕರಿಸಿದರೆ ಆ ಕಾಲದ ಜೈನ ಕವಿಗಳಿಗೆ ಒಪ್ಪಿಗೆಯಾಗುತ್ತಿರಲಿಲ್ಲ. ಏಕೆಂದರೆ ಅವು ಹಿಂದೂ ಕೃತಿಗಳು. ಆದ್ದರಿಂದ ಸಾಹಿತ್ಯದಲ್ಲಿ ಏನಾದರೂ ವೈವಿಧ್ಯವನ್ನು ತರುತ್ತೇವೆ ಪುರಾಣದ ವಿಘಟನೆಯನ್ನು ತರುತ್ತೇವೆಂದು ರಾಮಾಯಣ ಮತ್ತು ಮಹಾಭಾರತಗಳನ್ನು ವಿಘಟನೆಗೊಳಿಸಿದರು, ಅಂದರೆ ತಮ್ಮ ಆಶ್ರಯದಾತ ಅರಸರ ಚರಿತ್ರೆಯನ್ನು ಕೃತಿಯೊಳಗೆ ಸೇರಿಸುವುದರ ಮೂಲಕ ವಿಘಟನೆಗೊಳಿಸಿದರು. ಇದರಿಂದಾಗಿ ನಾಯಕರ ಸಮಸ್ಯೆ ಉಂಟಾಯಿತು. ರಾಜಕೀಯ ವ್ಯಕ್ತಿಗಳನ್ನು ಕಥಾನಾಯಕನನ್ನಾಗಿ ಮಾಡಬೇಕೋ ಅಥವಾ ಮಾಡಬಾರದೊ ಎಂಬ ಪ್ರಶ್ನೆ ೧೦ನೇ ಶತಮಾನದಲ್ಲಿ ಉದ್ಭವವಾದಂತೆ ಕಾಣಿಸುತ್ತದೆ.

ನಮ್ಮ ಸಾಹಿತ್ಯದಲ್ಲಿ ರಾಜಕೀಯ ಅಂಶಗಳು ಸೇರ್ಪಡೆಯಾದದ್ದು ಮೊದಲೇ ತಿಳಿಸಿದಂತೆ ಪಂಪ, ರನ್ನರ ಕೃತಿಯೊಳಗೆ. ಅವರು ಮಾಡಿದ್ದು ಪುರಾಣದ ಚರಿತ್ರೀಕರಣ. ಮುಂದೆ ಹರಿಹರ ರಾಘವಾಂಕರು ಮಾಡಿದ್ದು ಚರಿತ್ರೆಯ ಪುರಾಣೀಕರಣ. ಆನಂತರದಲ್ಲಿ ನಂಜುಂಡ ಮತ್ತು ಮಿಕ್ಕ ಕವಿಗಳು ಮಾಡಿದ್ದು ಚರಿತ್ರೆಯ ಉತ್ಪ್ರೇಕ್ಷೀಕರಣ. ಹೀಗೆ ನಮ್ಮಲ್ಲಿ ಚರಿತ್ರೆಯೆನ್ನುವಂಥ ವಾಹಿಸಿ, ಸಾಹಿತ್ಯದಲ್ಲಿ ಮೂರು ತಿರುವುಗಳನ್ನು ಪಡೆದು ಸಾಗಿಬಂದಿದೆ.ಇಲ್ಲಿ ರಾಗೌ ಅವರು ಈ ಮೂರು ನೆಲೆಗಳನ್ನು ಕಣ್ಮುಂದೆ ಇಟ್ಟುಕೊಂಡು ಒಂದು ಸಾವಿರ ವರ್ಷದ ಅಧ್ಯಯನವನ್ನು ಮಾಡಿದ್ದಾರೆ ಇದು ಬಹಳ ಮಹತ್ವವಾದುದು. ಏಕೆಂದರೆ ಒಬ್ಬ ಕವಿಯನ್ನು ಕೇಂದ್ರದಲ್ಲಿಟ್ಟುಕೊಂಡು ಅವನ ಕೃತಿಯನ್ನೋ ಅಥವಾ ಅವನ ಕೃತಿಗೆ ಹಿನ್ನೆಲೆಯಾದಂಥ ಅನ್ಯ ಕೃತಿಗಳನ್ನೋ ಅಭ್ಯಾಸ ಮಾಡಿ ಪಿಎಚ್.ಡಿ. ಪ್ರಬಂಧವನ್ನು ಪೂರೈಸುವ ಇಂದಿನ ಕಾಲದೊಳಗೆ, ರಾಗೌ ಅವರು ಒಂದು ಸಾವಿರ ವರ್ಷದ ಇತಿಹಾಸವನ್ನು ಈ ಮೂರೂ ನೆಲೆಯೊಳಗೆ ಅಧ್ಯಯನ ಮಾಡಿರುವುದು ಬಹಳ ಮಹತ್ವವಾದದ್ದು. ಅದರಲ್ಲೂ ಸಾಹಿತ್ಯ ಕೃತಿಯಷ್ಟನ್ನೇ ನೋಡಿಲ್ಲ. ಸಾಹಿತ್ಯ ಕೃತಿಯ ಆಕರ ಒಂದು ಕಡೆಯಾದರೆ, ದಾಖಲೆಗಳ ಆಕರ ಇನ್ನೊಂದು ಕಡೆ. ಈ ಎರಡು ಆಕರಗಳು ಬಹಳ ಮುಖ್ಯವಾದವು.

ಕರ್ನಾಟಕದಲ್ಲಿ ಸು. ೨೫೦೦ ಶಾಸನಗಳು ಒಂದು ಕಡೆ. ಸಾವಿರಾರು ಕೃತಿಗಳು ಇನ್ನೊಂದು ಕಡೆ ಇವೆ. ಏನಾದರೂ ಅಥವಾ ಎಲ್ಲಾದರೂ ಇವರು ಮುಖ್ಯವಾದಂಥ ಅಂಶ ಬಿಟ್ಟಿದ್ದಾರೋ? ಆರೋಪ ಮಾಡಲು ಸಾಧ್ಯವೋ? ಎಂದು ನಾನು ಓದುತ್ತಾ ಹೋದೆ. ಎಲ್ಲೂ ಅಂತಹದೇನೂ ಸಿಗಲಿಲ್ಲ. ಬಹುಶಃ ಇದನ್ನು ಬಿಟ್ಟಿದ್ದಾರೆ ಅಂತ ತಿಳಿದುಕೊಂಡು ಓದುತ್ತಾ ಹೋದರೆ ಮತ್ತೆಲ್ಲೋ ಒಂದು ಕಡೆ ಅದನ್ನು ದಾಖಲಿಸಿರುತ್ತಾರೆ. ನನಗನ್ನಿಸಿತು. ಇವರು ತುಂಬಾ ಆಳವಾದ ಮತ್ತು ಪರಿಪೂರ್ಣವಾದ ಅಧ್ಯಯನ ಮಾಡಿದ್ದಾರೆಂದು.

ಹೀಗೆ ಎರಡು ರೀತಿಯ ಆಕರಗಳನ್ನು ಕಣ್ಮುಂದೆ ಇಟ್ಟುಕೊಂಡು ಸಂಶೋಧನೆಯನ್ನು ಪೂರೈಸುವುದು ಒಂದು ರೀತಿಯ ಸವಾಲಿನ ಕೆಲಸ. ಆ ಕೆಲಸವನ್ನು ಬಹಳ ಸಮರ್ಥವಾಗಿ ಡಾ. ರಾಗೌ ಅವರು ಮಾಡಿದ್ದಾರೆ. ಇಲ್ಲಿ ಅವರು ಮಾಡಿರುವಂಥ ಮತ್ತೊಂದು ಕೆಲಸವೆಂದರೆ ಸಾಹಿತ್ಯದಲ್ಲಿ ಉಕ್ತವಾದಂಥ ತಪ್ಪನ್ನು ತಿದ್ದುವುದು ಮತ್ತು ಸಾಹಿತ್ಯದಲ್ಲಿನ ಕೊರತೆಯನ್ನು ತುಂಬಿಕೊಡುವುದು. ಈ ಎರಡೂ ಕೆಲಸಗಳನ್ನು ಅವರು ತಮ್ಮ ಕೃತಿಯಲ್ಲಿ ಮಾಡಿದ್ದಾರೆ. ಸಾಹಿತ್ಯ ಬೇರೆ, ದಾಖಲೆಗಳು ಬೇರೆ. ಸಾಹಿತ್ಯ ಭಾವನಾಂಶವನ್ನು ತುಂಬಿಕೊಂಡಿದ್ದರೆ, ಶಾಸನ ದಾಖಲೆಗಳನ್ನು ತುಂಬಿಕೊಂಡಿರುತ್ತದೆ. ಹೀಗಾಗಿ ದಾಖಲಾತ್ಮಕ ಮತ್ತು ಭಾವನಾತ್ಮಕ ಚರಿತ್ರೆಗಳ ಸಂಯುಕ್ತವಾದಂಥ ಒಂದು ಅಧ್ಯಯನ ಇದು. ಇದರಿಂದಾಗಿ ನಮ್ಮ ರಾಜಕೀಯ ಚರಿತ್ರೆಯ ಒಂದು ಪರಿಪೂರ್ಣ ಅಧ್ಯಯನ ಇದು. ಇದುವರೆವಿಗೆ ಕರ್ನಾಟಕ ಇತಿಹಾಸದ ಬಗ್ಗೆ ಕೃತಿಗಳು ಬಂದಿದ್ದವು. ಆದರೆ ಸಾಹಿತ್ಯವನ್ನು ಬಳಸಿಕೊಳ್ಳದೆ ಬರೀ ಅಸ್ಥಿಪಂಜರಗಳು ಬಂದಿದ್ದವು. ಅದಕ್ಕೆ ರಕ್ತ ಮಾಂಸದ ರೀತಿಯಲ್ಲಿ ಸಾಹಿತ್ಯದ ವಿಚಾರಗಳನ್ನು ತುಂಬಿ ಒಂದು ಸಮಗ್ರತೆಯನ್ನು, ಪರಿಪೂರ್ಣತೆಯನ್ನು ಡಾ. ರಾಗೌ ಅವರು ಈ ಕೃತಿಗೆ ತಂದಿದ್ದಾರೆ ಎಂಬುದು ನನ್ನ ಸ್ಪಷ್ಟವಾದಂಥ ಅಭಿಪ್ರಾಯ.

ಆಕರ ಸಂಗ್ರಹಿಸುವಾಗ ಅವರಿಗೆ ದಣಿವೇ ಇಲ್ಲ. ಸಿಕ್ಕಂಥ ಆಕರವನ್ನು ಇವರು ಗಮನಿಸಿರಲಾರರು ಎಂಬ ಒಂದು ಅಭಿಪ್ರಾಯ ನನ್ನ ಮನಸ್ಸಲ್ಲಿ ಮೂಡಿತ್ತು, ಆದರೆ ಅಂಥ ಯಾವ ಒಂದು ಆಕರವನ್ನೂ ಅವರು ಬಿಡಲಿಲ್ಲ.

ಉದಾಹರಣೆಗೆ 'ನಿಂಬ ಸಾಮಂತ ಚರಿತೆ' ಅಂತ ಕೊಲ್ಲಾಪುರದ ಗಂಡರಾದಿತ್ಯನ ಕಾಲದ ಒಂದು ಘಟನೆ-ಕೊಲ್ಲಾಪುರದಲ್ಲಿ ಗಂಡರಾದಿತ್ಯನಿಗೂ ಬಿಜ್ಜಳನಿಗೂ ಯುದ್ಧವಾಯಿತು ಎಂದು ಕಾವ್ಯದಲ್ಲಿ ಬರುತ್ತದೆ; ಶಾಸನ ಸಿಕ್ಕಿತು. ಈ ವಿಷಯ ನನಗಷ್ಟೇ ಗೊತ್ತು ಎಂದು ನಾನಂದುಕೊಂಡಿದ್ದೆ. ಆದರೆ ರಾಗೌ ಅವರು ತಮ್ಮ ಕೃತಿಯಲ್ಲಿ ಸೊಲ್ಲಾಪುರ ತಾಲ್ಲೂಕಿನ ಔರಾದದಲ್ಲಿ ದೊರೆತ ಶಾಸನದಲ್ಲಿ ಈ ವಿಷಯ ಬರುತ್ತದೆ ಎಂದು ಸೂಚಿಸಿದ್ದಾರೆ. ಅಂದರೆ ತುಂಬಾ ಆಧುನಿಕ ಎನ್ನಬಹುದಾದಂಥ ಸಂಪನ್ಮೂಲಗಳನ್ನು ತುಂಬಾ ಎಚ್ಚರದಿಂದ ಹುಡುಕಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತದೆ. ಅಲ್ಲದೆ ಇತಿಹಾಸ ಒಂದು ಘಟನೆಯನ್ನು ಶಾಸನದ ಅನೇಕ ಆಧಾರಗಳಿಂದ ಸ್ಪಷ್ಟಮಾಡಿದ್ದಾರೆ. ರಾಷ್ಟ್ರಕೂಟ ಮೂರನೇ ಕೃಷ್ಣ ಚೋಳ ರಾಜಾದಿತ್ಯನನ್ನು ಯುದ್ಧದಲ್ಲಿ ಸೋಲಿಸುತ್ತಾನೆ. ತಕ್ಕೋಳಿ ಅನ್ನುವಲ್ಲಿ ಕಾಳಗ ಆಗುತ್ತದೆ. ಆ ಕಾಳಗದ ವಿಷಯವನ್ನು ಇಟ್ಟುಕೊಂಡು ಪೊನ್ನ ಕವಿ 'ಭುವನೈಕ ರಾಮಾಭ್ಯುದಯವನ್ನು ಬರೆದಿದ್ದ. ಆ ತಕ್ಕೋಳಿ ಕಾಳಗದ ವಿಷಯ ಯಾವ ಯಾವ

ಶಾಸನಗಳಲ್ಲಿ ಬರುತ್ತದೆಂದರೆ ನನಗೆ ಒಂದೆರಡು ಶಾಸನಗಳು ಮಾತ್ರಗೊತ್ತಿದ್ದವು. ಆದರೆ ರಾಗೌ ಅವರು ಸುಮಾರು ಎಂಟು ಹತ್ತು ಶಾಸನಗಳ ಉಲ್ಲೇಖವನ್ನು ಕೊಡುತ್ತಾರೆ. ಹೀಗೆ ಒಂದು ತರುತ್ತಾರೆಂಬುದನ್ನು ನೋಡಿದಾಗ ನಮಗೆ ವಿಸ್ಮಯವಾಗುತ್ತದೆ. ಇದಕ್ಕಿಂತ ನನ್ನ ಮನಸ್ಸಿಗೆ ತಟ್ಟಿದಂತಹ ವಿಷಯ ಅಂದರೆ ಅವರು ಆಕರಗಳನ್ನು ಪರೀಕ್ಷೆಮಾಡಿ ತೆಗೆದುಕೊಂಡಿರುವುದು. ಎಷ್ಟೋ ಸಲ ಸುಳ್ಳು ಆಕರಗಳಿರುತ್ತವೆ. ಖೋಟಾ ಆಧಾರಗಳಿರುತ್ತವೆ. ಅಲ್ಲದೆ ಪಾಠಾಂತರಗಳಿರುತ್ತವೆ. ಈ ಆಕರ ಸರಿಯೋ, ತಪ್ಪೋ ಅನ್ನೋದನ್ನು ನಿರ್ಣಯ ಮಾಡಿ ಸ್ವೀಕರಿಸಬೇಕಾಗುತ್ತದೆ. ಪಂಪಭಾರತದೊಳಗೆ ಒಂದು ಕಡೆ ಡಾಳಪ್ರಿಯ ಅಂತ ಬರುತ್ತದೆ. ಅದು ಡಾಲಪ್ರಿಯವೋ ಅಥವಾ ಕಾಳಪ್ರಿಯವೋ ಸಂಶಯ. ರಾಗೌ ಅವರು ಸರಿಯಾಗಿಯೇ ಅದನ್ನು ಕಾಲಪ್ರಿಯವೆಂದು ತೆಗೆದುಕೊಂಡು ಅದರ ಸಮರ್ಥನೆಗೆ ಉಲ್ಲೇಖವನ್ನು ಕೊಡುತ್ತಾರೆ. ಆಮೇಲೆ ನನಗನಿಸಿದ್ದು, ರನ್ನನ 'ಅಜಿತಪುರಾಣ' ದಲ್ಲಿ ಬಹಳ ಸುಪ್ರಸಿದ್ಧ ಪದ್ಯವಿದೆ. ಆ ಪದ್ಯದ ಪಾಠಾಂತರ ಹೀಗಿದೆ:

> ಪಿರಿಯಂ ಬೂತಗನಾತನಿಂ ಮಮಳನಾತಂಗಂ ನೊಳಂಬಾಂತಕಂ
> ಪಿರಿಯಂ ನೆಟ್ಟನೆ ದಾನಧರ್ಮದೆಡೆಯೊಳ್ ಚಾವುಂಡರಾಯಂ ಕರಂ
> ಪಿರಿಯಂ ಶಂಕರ ಗಂಡನಲ್ತೆ ಪಿರಿಯಂ ತದ್ಭಾರಮಂ ಪೊತ್ತು ನಿ
> ತ್ತರಿಸುತ್ತಿರ್ದುದಱಿಂದೆ ನೀನೆ ಪಿರಿಯೈ ಶ್ರೀದಾನಚಿಂತಾಮಣೀ

ಅದು 'ಮಮಳ' ಅಂತ್ಲೆ ಎಲ್ಲರೂ ತಿಳಿದದ್ದು. ರಾಗೌ ಅವರು 'ಮಮಳ' ಅಲ್ಲ 'ಮರುಳ' ಎಂಬುದಾಗಿ ತೆಗೆದುಕೊಂಡಿದ್ದಾರೆ. ಅಂದರೆ ಪ್ರಬಂಧವನ್ನು ಬರೆಯುವಾಗ ಆಕರಗಳನ್ನು ಸ್ವಿಕಾರ ಮಾಡುವಾಗ ಒಬ್ಬ ವಿದ್ವಾಂಸ ಎಷ್ಟು ಎಚ್ಚರವಹಿಸಬೇಕಾಗುತ್ತೆ. ಇನ್ನೊಬ್ಬರಾಗಿದ್ದರೆ ಅಲ್ಲಿ 'ಮಮಳ' ಇದೆ ಎನ್ನುವ ಕಾರಣಕ್ಕೇ ಅದನ್ನೇ ತೆಗೆದುಕೊಳ್ಳುತ್ತಿದ್ದರೇನೋ? ಆದರೆ ಐತಿಹಾಸಿಕ ದೃಷ್ಟಿಯಿಂದ ಅವರು 'ಮರುಳ' ಅನ್ನುವ ಪದವನ್ನು ಸ್ವೀಕಾರ ಮಾಡಿದ್ದೇ ಸರಿ.

'ಚನ್ನಬಸವ ಪುರಾಣ'ದಲ್ಲಿ ಬಿಜ್ಜಳನ ಬಗ್ಗೆ 'ಜಿನ ಬಿಜ್ಜಳ' ಅಂತ ಬರುತ್ತದೆ. ಬಿಜ್ಜಳ ಮೂಲತಃ ಶೈವ. ಯಾಕೋ ಏನೋ 'ಜಿನ ಬಿಜ್ಜಳ" ಅಂತ ಪ್ರಚಾರವಾಗಿಬಿಡ್ತು. ಇದು ಜಿನ ಬಿಜ್ಜಳ ಅಲ್ಲ. ಪಾಠಾಂತರವಿದೆ ಎಂಬುದು ನನಗೆ ಗೊತ್ತಿತ್ತು. ರಾಗೌ ಅವರು ಅದನ್ನು ಗಮನಿಸಿದ್ದಾರೆ. ಜಿನ ಬಿಜ್ಜಳ ಅಲ್ಲ, ಅದು 'ನೃಪ ಬಿಜ್ಜಳ' ಅಂತ ತೆಗೆದುಕೊಂಡಿದ್ದಾರೆ.

ಅಂದರೆ ಅಡಿಪಡಿಗೂ ಉತ್ಪ್ರೇಕ್ಷಿತವಾದಂಥ ಪಾಠಾಂತರಗಳನ್ನು ತೆಗೆದುಕೊಂಡು ಸತ್ಯ ಯಾವುದು ಅಂತ ನೋಡಿಕೊಂಡು ಇತಿಹಾಸ ಬರೆಯುವಂತ ರೀತಿ ಇದೆಯಲ್ಲ, ಅದು ಅತ್ಯಂತ ಶ್ರದ್ಧಾಪೂರ್ಣ ಅಧ್ಯಯನಕ್ಕೆ ಮಾತ್ರ ಸಾಧ್ಯ. ಬಿಜ್ಜಳನ ತಮ್ಮ ಅಂತ ಒಂದು ಕಡೆ ಬರುತ್ತದೆ. ಅದಕ್ಕಾಗಿ ಗೋವಿಂದ ಪೈಗಳು ಹೇಳಿದ್ದರು, ಇದು ತಮ್ಮ ಅಲ್ಲ ಮೊಮ್ಮ (ಮೊಮ್ಮಗ)ಎಂದು. ಅದನ್ನು ರಾಗೌ ಸರಿಯಾಗಿ ಬಳಸಿಕೊಂಡಿದ್ದಾರೆ. ಅಂದರೆ ಈ ಕಡೆ ಸಾಹಿತ್ಯಕೃತಿ, ಶಾಸನ, ಅಲ್ಲದೆ ವಿದ್ವಾಂಸರು ಬರೆದಂಥ ಅನೇಕ ಗ್ರಂಥಗಳು, ಅನೇಕ ಉಲ್ಲೇಖಗಳನ್ನು ಡಾ. ರಾಗೌ ಗಮನಿಸಿದ್ದಾರೆ. ವಿದ್ವಾಂಸರಿಗೆ ಸವಾಲಾದ ಇಂಥ ಅಂಶಗಳನ್ನು ನಿರ್ಣಯಿಸುವಲ್ಲಿ ಆಕರಗಳನ್ನು ಹೇಗೆ ಬಳಸಿದ್ದಾರೆ, ಅನ್ನೋದು ನಮಗಿದರಿಂದ ಗೊತ್ತಾಗುತ್ತದೆ.

ಈ ಪ್ರಬಂಧದಲ್ಲಿ ಕಂಡ ಮತ್ತೊಂದು ಮುಖ್ಯ ಅಂಶವೆಂದರೆ ಶಿಸ್ತು. ಪ್ರಬಂಧಕ್ಕೆ ಅದು ಮೊದಲು ಬೇಕು. ನಾವು ಸಂಗ್ರಹಿಸಿದ ವಿಷಯವನ್ನು ಒಂದು ಶಿಸ್ತಿಗೆ ಅಳವಡಿಸುವುದಿದೆಯಲ್ಲ, ರೀಸರ್ಚ್ ಡಿಸಿಪ್ಲಿನ್ ಇದೆಯಲ್ಲ ಅದು ಬಹಳ ಸಮರ್ಪಕವಾಗಿದೆ. ಯಾಕೆಂದರೆ ನನಗನ್ನಿಸಿತ್ತು. ಇವರು ಏನು ಮಾಡುತ್ತಾರೋ ಏನೊ? ಒಂದುಸಾವಿರ ವರ್ಷದ ಇತಿಹಾಸ, ಇದನ್ನು ಹೇಗೆ ಜೋಡಿಸುತ್ತಾರೆ? ಏನೋ ತುಂಡು-ತುಂಡು ಇದೆ, ಇದನ್ನ ಯಾವ ರೀತಿ ಹೊಂದಿಸುತ್ತಾರೆ ಅಂತ ಸಂದೇಹ ಬಂತು. ಆದರೆ ಈ ಪ್ರಬಂಧವನ್ನು ನೋಡಿದಾಗ ಅನ್ನಿಸಿತು ಬಹುಶಃ ನಾನೇ ಆಗಿದ್ದರೂ ಈ ರೀತಿಯ ಶಿಸ್ತನ್ನು ತರಲಾಗುತ್ತಿರಲಿಲ್ಲ ಎಂಬುದು ಸ್ಪಷ್ಟವಾಯಿತು. ಎಲ್ಲಿಯೂ ಗೊಂದಲ ಎನ್ನಿಸುವುದಿಲ್ಲ. ಒಂದು ಸ್ಪಷ್ಟತೆ, ಶಿಸ್ತು ಮತ್ತು ಸರಳತೆ ಇವು ಅವರ ಪ್ರಬಂಧದ ಮುಖ್ಯ ಲಕ್ಷಣಗಳಾಗಿವೆ. ಅಧ್ಯಾಗಳ ವರ್ಗೀಕರಣದಲ್ಲಿ ಸರಿಯಾದ ಕ್ರಮ ಅನುಸರಿಸಿದ್ದಾರೆ. ಪ್ರಬಂಧದ ಆರಂಬದೊಳಗೆ ಸಾಹಿತ್ಯ ಎಂದರೇನು? ಇತಿಹಾಸ ಎಂದರೇನು? ಇತ್ಯಾದಿ ಎಲ್ಲಾ ಮಾತುಗಳನ್ನು ಅವರು ಒಂದು ಹಿನ್ನೆಲೆಯಾಗಿ ತೆಗೆದುಕೊಂಡು ಮುಂದಿನ ಪ್ರಕರಣಗಳಿಗೆ ಹೋಗಿದ್ದಾರೆ. ಅನಂತರ ಇತಿಹಾಸದ ಉದಯ, ಅದು ಸಾಹಿತ್ಯದಲ್ಲಿ ಹೇಗೆ ಕಾಣಿಸಿತು ಎಂಬುದಕ್ಕೆ ಕಾವ್ಯಾವಲೋಕನ ಮೊದಲಾದ ಕೃತಿಗಳಲ್ಲಿ ಬಿಡಿ-ಬಿಡಿಯಾಗಿ ಚಲ್ಲಿಹೋದಂಥ ಅನೇಕ ಅಂಶಗಳನ್ನು ಸಮಗ್ರವಾಗಿ ಸಂಗ್ರಹಿಸುವುದು, ಐತಿಹಾಸಿಕ ಪರಂಪರೆಯೊಳಗೆ ಅದನ್ನು ಕಟ್ಟಿ ನಿಲ್ಲಿಸುವುದು, ಅಲ್ಲಲ್ಲಿ ಅನೇಕ ಅಂಶಗಳನ್ನು ವ್ಯಕ್ತಪಡಿಸುವುದು ಇವೆಲ್ಲಾ ತುಂಬಾ ಪರಿಣಾಮಕಾರಿಯಾದಂಥ ಬರಹಗಾರನಿಗೆ ಮಾತ್ರ ಸಾಧ್ಯ ಅನ್ನುವಷ್ಟರಮಟ್ಟಿಗೆ ಆ ಪ್ರಕರಣವನ್ನು ರೂಪಿಸಿದ್ದಾರೆ. ಬಹುಶಃ ಶಬ್ದಮಣಿದರ್ಪಣದ ಇನ್ನೂ ಕೆಲವು ಆಕರಗಳು ಬಿಟ್ಟು ಹೋದವೇನೋ, ಅವುಗಳ ಬಗ್ಗೆ ನೋಡಬಹುದಾಗಿತ್ತೇನೊ ಅನ್ನಿಸುತ್ತದೆ. ಆಮೇಲೆ ಚಾರಿತ್ರಿಕ ಧ್ವನಿಕಾವ್ಯಗಳಾದ ಪಂಪಭಾತರ, ಗದಾಯುದ್ಧ ಮೊದಲಾದ ಕೃತಿಗಳನ್ನು ಸಮಗ್ರವಾಗಿ ಸಾಹಿತ್ಯದಿಂದ ಶಾಸನ, ಶಾಸನದಿಂದ ಸಾಹಿತ್ಯ, ಎರಡೂ ಕಡೆ ಹೋಗಿ ಅದಕ್ಕೊಂದು ಏಕರೂಪತೆಯನ್ನು ತಂದದ್ದು ಮೆಚ್ಚುವಂಥದ್ದಾಗಿದೆ. ಮುಂದೆ ಐತಿಹಾಸಿಕ ಕೃತಿಗಳು ಅಂದರೆ ನಂಜುಂಡನ' 'ಕುಮಾರರಾಮ ಚರಿತೆ'ಯಾಗಲಿ; 'ನಿಂಬಸಾಮಂತ ಚರಿತೆ', 'ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ' ಮುಂತಾದ ಕೃತಿಗಳ ಸಮಗ್ರವಾದ ಅಭ್ಯಾಸವನ್ನು ಮಾಡಿದ್ದಾರೆ. ಕವಿ ತನಗೆ ಆಶ್ರಯ ನೀಡಿದ ಅರಸನ ಬಗ್ಗೆ ಕಾವ್ಯದ ಪ್ರಾರಂಭದಲ್ಲಿ, ಕೊನೆಯಲ್ಲಿ ಅಥವಾ ಮಧ್ಯದಲ್ಲಿ ಎಲ್ಲಿಯೋ ಬಂದಿರುತ್ತದೆ. ಅದನ್ನೆಲ್ಲ ಸಂಗ್ರಹಿಸುವುದು ಕಠಿಣದ ಕೆಲಸ.

ಕನ್ನಡದಲ್ಲಿ ಗಂಗೆ-ಗೌರಿ ಸಂವಾದ ಎಂಬ ಕತೆಯಿದೆ. ಅದನ್ನು ನಾನು ಓದುತ್ತಿದ್ದೆ. ಒಂದು ಕಡೆ 'ಹಂಡೆ ಮರುಕನೊಡೆಯ ಉಂಡ ಮನೆಯ ಜಂತಿ ಎಣಿಸಲು' ಅಂತ ಅಲ್ಲಿ ಗೌರಿ ಹೇಳ್ತಾಳೆ. ಅಂದರೆ ಶಿವ ಗಂಗೆಯನ್ನು ಮೋಹಿಸಿರುತ್ತಾನೆ. ಅದನ್ನು ಬಂದು ನಾರದ ಈಕೆಗೆ ಹೇಳುತ್ತಾನೆ. ನಿನ್ನ ಗಂಡ ಇನ್ನೊಬ್ಬಾಕೆಯನ್ನು ತರುತ್ತಾನಂತೆ ಎಂದು ಅದಕ್ಕೆ ಗೌರಿ ಹೇಳುತ್ತಾಳೆ. ನನ್ನಗಂಡ ನನಗೆ ದ್ರೋಹ ಬಗೆಯುವದಿಲ್ಲ ಅಂತ ಹೇಳುವಾಗ 'ಹಂಡೆ ಮರುಕನೊಡೆಯ ಉಂಡ ಮನೆಯ ಜಂತಿ ಎಣಿಸಲು' ಎನ್ನುತ್ತಾಳೆ. ಇಲ್ಲಿ 'ಹಂಡೆ ಮರುಕ' ಎಂದರೆ ಹಂಡೆ-ದೊಡ್ಡ ಪಾತ್ರೆ, ಮರುಕ-ಗಂಟು; ಹಂಡೆ ಗಂಟು ಎಂದಾಗುತ್ತದೆ; ಆದರೆ ವಿಷಯ ಇದಲ್ಲ, ಇದು ಏನೂ ಅರ್ಥ ಕೊಡಲಾರದು. ಅನಂತಪುರ(ಬಳ್ಳಾರಿ ಬಳಿ)ದಲ್ಲಿ ಹಂಡೆ ಅಂತ ಒಂದು ರಾಜ್ಯ ಇದೆ. ಅದಕ್ಕೆ ಮರುಕನಾಯಕ

ಅಂತ ಒಬ್ಬ ಅರಸನಿದ್ದ, ಆತ ಶಿವಭಕ್ತನಾಗಿದ್ದ. ಆದ್ದರಿಂದ ಹಂಡೆ ಮರುಕನೊಡೆಯ ಅಂದರೆ ಶಿವ ಅಂತ ತೆಗೆದುಕೊಂಡಾಗ ಅರ್ಥ ಬರುತ್ತದೆ.

ಇದರಿಂದ ನಮಗೆ ತಿಳಿಯುವುದೆಂದರೆ ಒಬ್ಬ ವಿದ್ವಾಂಸನಾದಂಥವನು ಐತಿಹಾಸಿ ಅಂಶಗಳನ್ನು ಆಯ್ದು ಕೊಳ್ಳುವಾಗ ಎಷ್ಟು ಎಚ್ಚರವಹಿಸಬೇಕಾಗುತ್ತದೆ ಎಂಬುದು. ಅಂಥ ಅನೇಕ ತುಣುಕುಗಳನ್ನೆಲ್ಲ ಇವರು ಸಂಗ್ರಹಿಸಿ ಪ್ರಬಂಧ ರೂಪಿಸಿದ್ದಾರೆ. ಈ ಸಂದರ್ಭದಲ್ಲಿಯೂ ಅವರ ಶ್ರಮ ನಮ್ಮ ಗಮನವನ್ನು ಸೆಳೆಯುತ್ತದೆ.

ಈ ಕೃತಿ ಅಭಿವ್ಯಕ್ತಿಯೂ ತುಂಬಾ ಸೂತ್ರಬದ್ಧವಾಗಿದೆ. ನಂಜುಂಡನ ಕುಮಾರರಾಮನ ಬಗ್ಗೆ ಬರೆಯುತ್ತಾ ಒಂದು ಕಡೆ ಇದು ಇತಿಸಾಹವಿರಬಹುದು, ಐತಿಹ್ಯವಿರಬಹುದು ಅನ್ನುತ್ತಾರೆ, ಸಾಕು, ಇದಿಷ್ಟೇ ಹೇಳಿದರೂ ಸಾಕು. ಇವೆರಡರ ಮೇಲೆ ನಾವು ಅನೇಕ ಪುಟಗಳನ್ನು ಬರೆಯಬಹುದು. ಇಡೀ ಅವರ ವ್ಯಕ್ತಿತ್ವವನ್ನು ಸಾಹಿತ್ಯವನ್ನು ಎರಡೇ ಮಾತುಗಳ ಮೂಲಕ ಹಿಡಿದಿಡುವುದು ಅಂದರೆ ಎಷ್ಟು ಸೂತ್ರಬದ್ಧವಾಗಿದೆ ಅನ್ನೋದು ಗೊತ್ತಾಗುತ್ತದೆ. ಇನ್ನೊಂದು ಅಂಶ ಚರಿತ್ರೆ, ಐತಿಹ್ಯ ಮತ್ತು ಪುರಾಣ–ಒಂದು ಚರಿತ್ರೆ ಇರುತ್ತದೆ, ಐತಿಹ್ಯ ಕೂಡಿಕೊಂಡಾಗ ಪುರಾಣವಾಗುತ್ತದೆ. ಚರಿತ್ರೆಯೊಳಗೆ ಶುದ್ಧವಾದ ಚಾರಿತ್ರಿಕ ಅಂಶ ಇರುತ್ತದೆ. ಐತಿಹ್ಯ ಬಂದಾಗ ಅರ್ಧಸತ್ಯವಾಗುತ್ತದೆ. ಪುರಾಣ ಬಂದಾಗ ಸತ್ಯ ಸಂಪೂರ್ಣ ಮುಳಿಗಿಬಿಡುತ್ತದೆ.

ಒಬ್ಬ ವ್ಯಕ್ತಿಯ ಚರಿತ್ರೆ, ಐತಿಹ್ಯ ಮತ್ತು ಪುರಾಣ ಇಂಥ ಮಾತುಗಳನ್ನು ಅವರು ಒಟ್ಟು ಅಭ್ಯಾಸಮಾಡಿ ಬರವಣಿಗೆಯಲ್ಲಿ ಗುರುತಿಸಿರುವುದು ನೋಡಿದರೆ, ಅದೇನೊ ಹೇಳುತ್ತಾರಲ್ಲ– 'ಕೂದ್ಲಿದ್ದಾಕಿ ಹ್ಯಾಗಾದ್ರೂ ತುರುಬ ಕಟ್ತಾಳೆ' ಎನ್ನುವಂತೆ, ಅವರಿಗೆ ಸಂಪೂರ್ಣ ವಿಷಯ ಹಿಡಿತಕ್ಕೆ ಸಿಕ್ಕಿದೆ, ಹೀಗಾಗಿ ಅವರು ಹೊಂದಿಸಿ ತಮ್ಮ ಪ್ರಬಂಧವನ್ನು ರೂಪಿಸಿದ್ದಾರೆ ಎಂಬುದು ಗೊತ್ತಾಗುತ್ತದೆ.

ಅದಲ್ಲದೆ ವಿಷಯ ಮಂಡನೆಯಲ್ಲಿ ತುಂಬಾ ಸಂಯಮ, ಅನ್ಯರ ಅಭಿಪ್ರಾಯ ನಿರಾಕರಿಸುವಲ್ಲಿ ತುಂಬಾ ವಿನಯ ಇದು ವಿದ್ವಾಂಸರಾದಂಥವರಿಗೆ ಇರಬೇಕಾದಂಥ ಮುಖ್ಯ ಲಕ್ಷಣ, ಆ ಲಕ್ಷಣಗಳಿಗೆ ಲಕ್ಷ್ಯವಾಗಿ, ಉದಾಹರಣೆಯಾಗಿ, ಆದರ್ಶವಾಗಿ, 'ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು' ಎಂಬ ಪ್ರಬಂಧ, ಬಹಳ ಒಳ್ಳೆಯ ಪ್ರಬಂಧ, ಅಂದರೆ ಒಳ್ಳೆಯ ಪ್ರಬಂಧ ಅನ್ನೋದಕ್ಕೆ ನಾನು ಮತ್ತೆ ಅಂಡರ್ ಲೈನ್ ಮಾಡುತ್ತೇನೆ, ಬಹಳ ಒಳ್ಳೆಯ ಪ್ರಬಂಧ. ಸಾಮಾನ್ಯವಾಗಿ ನಾನು ಯಾರನ್ನೂ ಹೊಗಳುವುದಿಲ್ಲ. ನಾನು ಹೊಗಳುವವನಲ್ಲ ಎಂಬ ದೋಷಾರೋಪ ನನ್ನ ಮೇಲಿದೆ. ಆದರೆ ಗುಣಕ್ಕೆ ಮತ್ಸರವುಂಟೇ? ಇಂಥ ಒಂದು ಉತ್ತಮ ಪ್ರಬಂಧ ಬಂದಾಗ ಕನ್ನಡಕ್ಕೆ ಒಂದು ಉತ್ತಮ ಕೊಡುಗೆ ದೊರೆತಾಗ ಹೊಗಳಬೇಡವೆ? ನಾನಾಗಲೇ ಹೇಳಿದ ಹಾಗೆ ಮೊದಲ ಹತ್ತು ಅಥವಾ ಇಪ್ಪತ್ತು ಪ್ರಬಂಧಗಳ ಸಾಲಲ್ಲಿ ಬರುವಂಥ ಕೊಡುಗೆಯಿದು.

ಈ ಪ್ರಬಂಧವನ್ನು ಬರೆದ ರಾಗೌ ಅವರಿಗೂ ಮಾರ್ಗದರ್ಶನ ಮಾಡಿದ ಹಾ.ಮಾ. ನಾಯಕರವರಿಗೂ ನನ್ನ ಅಭಿನಂದನೆಗಳು. ಈ ಬಿಡುಗಡೆಯ ಸಮಾರಂಭ ಬಹುಶಃ ಮಂಡ್ಯದ ಇತಿಹಾಸದಲ್ಲಿ ಬಹಳ ಉತ್ತಮವಾದ ಕಾರ್ಯಕ್ರಮ ಅಂತ ಅನಿಸುತ್ತದೆ. ಈ ನಗರದ ಇತಿಹಾಸದಲ್ಲಿ

ಇಂಥ ಉತ್ತಮ ಪುಸ್ತಕ ಬಿಡುಗಡೆಯಾಯ್ತು ಎಂದು ದಾಖಲೆಯಾಗುವಂಥ ಒಂದು ಕಾರ್ಯಕ್ರಮವನ್ನು ರೂಪಿಸಿದಂಥ ಇಲ್ಲಿಯ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳಿಗೂ ನನ್ನ ವಂದನೆಯನ್ನು ತಿಳಿಸಿ ನನ್ನ ಮಾತು ಮುಗಿಸುತ್ತಿದ್ದೇನೆ.

ಆಕರ : ಮಾರ್ಗ ಸಂಪುಟ–೭

■■

೪೧

ಬಸವ ಸಿರಿ–ಬಿಸಿಲುನಾಡಿನಲ್ಲಿ ಒಂದಿಷ್ಟು ನೆರಳು

ಸಿದ್ಧಲಿಂಗೇಶ್ವರ ಬುಕ್ ಡಿಪೋ ಎಂದಾಕ್ಷಣ ಬೇಸಗೆಯ ಮರದ ನೆರಳು ನೆನಪಾಗುತ್ತದೆ. ಇದಕ್ಕೆ ಕಾರಣ, ಪುಸ್ತಕ ಸಂಸ್ಕೃತಿಯಿಂದ ವಿದುರವಾಗಿರುವ ಕಲಬುರ್ಗಿ ಪ್ರದೇಶದಲ್ಲಿ ಶ್ರೀ ಬಸವರಾಜ ಕೋನೆಕ ಅವರು ಈ ಹೆಸರಿನ ಪುಸ್ತಕ ಪ್ರಕಾಶನ ಸಂಸ್ಥೆ ಸ್ಥಾಪಿಸಿ ಅದನ್ನು ದೊಡ್ಡ ಆಕರ್ಷಣೆಯಾಗಿ ಬೆಳೆಸಿದುದು.

ದೊಡ್ಡ ಉದ್ಯಮಕ್ಕೆ ದೊಡ್ಡ ಮೊತ್ತದ ಹಣಬೇಕು. ಆದರೆ ಬಸವರಾಜ ಬರಿಗೈಯಿಂದ ಬಂದು ಒಂದು ಸಂಸ್ಥೆಯಾಗಿ ಬೆಳೆದಿದ್ದಾರೆ. ಅವರಲ್ಲಿರುವ ಪರಿಶ್ರಮ ಪ್ರವೃತ್ತಿ ಮತ್ತು ಸಹಕಾರ ಮನೋಭಾವವೇ ಇದಕ್ಕೆ ಕಾರಣ. ಪುಸ್ತಕ ಸಂಸ್ಕೃತಿ ಲೇಖಕ–ಮುದ್ರಕ–ಪ್ರಕಾಶಕ–ಮಾರಾಟಗಾರ ಮತ್ತು ಓದುಗ ಈ ಐದು ಘಟಕಗಳ ಸಹಕಾರದಲ್ಲಿ ಸಂವರ್ಧಿಸುತ್ತದೆ. ಈ ಸಹಕಾರವನ್ನು ಸಂಘಟಿಸಲು ವಿಶಿಷ್ಟ ಶಕ್ತಿ ಬೇಕು. ಇದನ್ನು ಗಳಿಸಿಕೊಂಡಿರುವ ಬಸವರಾಜ ಒಬ್ಬ ಸಂಸ್ಕೃತಿ ಪರಿಚಾರಕರಂತೆ ಕಲಬುರ್ಗಿ ಪ್ರದೇಶದಲ್ಲಿ ಕೆಲಸ ಮಾಡುತ್ತಲಿದ್ದಾರೆ. ಲೇಖಕ ಓದುಗರ ನಡುವೆ ಸೇತುವೆಯಂತೆ ದುಡಿಯುತ್ತಲಿದ್ದಾರೆ. ಆ ಪ್ರದೇಶದಲ್ಲಿ ಈ ಮೊದಲು ಇಂಥ ಮಾದರಿಗಳಿರಲಿಲ್ಲ. ಕೋನೆಕ ಅವರೂ ಇಂಥ ಹಿನ್ನೆಲೆಯಿಂದ ಬಂದವರಲ್ಲ, ಹೀಗಿದ್ದೂ ತಾವು ಕಂಡಿರುವ ಗುರಿಯನ್ನು ಗಟ್ಟಿಗೊಳಿಸಿಕೊಂಡು, ಪರಿಸರವನ್ನು ಅದಕ್ಕೆ ಸ್ಪಂದಿಸುವಂತೆ ಮಾಡಿದುದು ಸಣ್ಣ ಕೆಲಸವೇನಲ್ಲ. ವ್ಯಕ್ತಿತ್ವ ನಿರ್ಮಾಣ ಬೇರೆ, ಪರಿಸರ ನಿರ್ಮಾಣ ಬೇರೆ, ತಾನು ಬೆಳೆದು ಇತರರನ್ನು ಬೆಳೆಸುವುದು ದೊಡ್ಡ ಕಷ್ಟವೇ ಸರಿ. ಈ ಎರಡೂ ನೆಲೆಗಳಲ್ಲಿ ಶೂನ್ಯದಿಂದ ಆರಂಭಿಸಿ, ಹೀಗೆ ಹೆಜ್ಜೆ ಹಾಕುತ್ತ ನೂರರ ಕಡೆಗೆ ನಡೆದು ಬರುವ ಶ್ರೇಯಸ್ಸು ಇವರದಾಗಿದೆ.

ಬಹಳಷ್ಟು ಪ್ರಕಾಶಕರು ಕೈತುಂಬ ನಿರ್ದಿಷ್ಟ ಹಣ ತರುವ ಪಠ್ಯಪುಸ್ತಕ ವ್ಯವಹಾರದಲ್ಲಿ ತೊಡಗುತ್ತಾರೆ, ಇಲ್ಲವೆ ಜ್ಞಾನ ಪ್ರಸಾರದ ಮಾಧ್ಯಮವಾಗಿಸುವ ಪುಸ್ತಕಗಳನ್ನು ಮಾರಾಟದ ಸರಕನ್ನಾಗಿ ರೂಪಿಸುತ್ತಾರೆ. ಇಂಥ ಸಂದರ್ಭದಲ್ಲಿ ಬಸವರಾಜ ಸಾಹಿತ್ಯಾಭಿರುಚಿ ಬೆಳೆಸುವ ಕೃತಿ ಪ್ರಕಟಣೆಗೆ ಮುಂದಾಗಿರುವುದು ಗಮನಿಸಬೇಕಾದ ವಿಷಯವಾಗಿದೆ. ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯವಲ್ಲದೆ, ವಿಜ್ಞಾನ, ಸಮಾಜವಿಜ್ಞಾನ ಮತ್ತು ತಂತ್ರಜ್ಞಾನ ಕೃತಿಗಳನ್ನು, ಸಂದರ್ಭ ಗ್ರಂಥಗಳನ್ನು

ಪ್ರಕಟಿಸುವ ಮೂಲಕ ತಮ್ಮ ಸಂಸ್ಥೆಗೆ ವೈವಿಧ್ಯತೆ ಕಲ್ಪಿಸಿದ್ದಾರೆ. ಭಿನ್ನ ರುಚಿ, ಬೇಡಿಕೆಯ ಓದುಗರ ಆಸೆಯನ್ನು ಒಂದೇ ಕೇಂದ್ರದ ಮೂಲಕ ಪೂರೈಸುವ ಉತ್ತರ ಕರ್ನಾಟಕದ ಏಕೈಕ ವ್ಯಕ್ತಿಯಾಗಿ ಅವರು ಬೆಳೆದುದು ಪವಾಡವೇ ಸರಿ.

ಬರೆಯಲು ಲೇಖಕರನ್ನು ಸೃಷ್ಟಿಸುವ, ಓದಲು ವಾಚಕರನ್ನು ಸೃಷ್ಟಿಸುವ ಜವಾಬ್ದಾರಿ ಪ್ರಕಾಶನ ಸಂಸ್ಥೆಯದಾಗಿದೆ. ಬಸವರಾಜ ಅವರು ಪ್ರಕಾಶನ ಮಾರಾಟ ಚಟುವಟಿಕೆಗಳಿಂದ ಕಲಬುರ್ಗಿ ಪ್ರದೇಶದಲ್ಲಿ ಲೇಖಕರನ್ನು ಸೃಷ್ಟಿಸಿದ್ದಾರೆ, ವಾಚಕರನ್ನೂ ಹಾಗೆ ನೋಡಿದರೆ, ಅವರಿಗೆ ಕಲಬುರ್ಗಿ ಪ್ರದೇಶದ ಲೇಖಕರ ಪ್ರೋತ್ಸಾಹ ನಿರೀಕ್ಷಿತ ಮಟ್ಟದಲ್ಲಿ ಲಭ್ಯವಾಗಿಲ್ಲವೆನಿಸುತ್ತದೆ. ಇದಕ್ಕೆ ಕಾರಣ ಹಿತ್ತಲಗಿಡ ಮದ್ದಲ್ಲವೆಂಬ... ಸ್ವಭಾವ. ಈ ಸ್ವಭಾವಕ್ಕೆ ಅನುಗುಣವಾಗಿ ಅಲ್ಲಿಯ ಅನೇಕ ಲೇಖಕರು ತಮ್ಮ ಪ್ರದೇಶಗಳಿಂದ ಒಂದಿಷ್ಟು ಹೆಚ್ಚು ಆಕರ್ಷಕವಾಗುವ ಧಾರವಾಡ ಕಡೆಗೋ, ಬೆಂಗಳೂರು ಕಡೆಗೋ ಒಲವು ತೋರುವುದನ್ನು ಈಗಲೂ ಬಿಟ್ಟಿಲ್ಲ. ಆದಷ್ಟು ಬೇಗ ಅಲ್ಲಿಯ ಲೇಖಕರು ಮುದ್ರಕರು ಓದುಗರು ಬಸವರಾಜ ಅವರಂಥ ಸ್ಥಳೀಯರಿಗೆ ಪ್ರೋತ್ಸಾಹ ನೀಡುವ ಮೂಲಕ ಕಲಬುರ್ಗಿಯನ್ನೇ ಧಾರವಾಡವಾಗಿಸಿದ್ದಾರೆ, ಬೆಂಗಳೂರನ್ನಾಗಿಸಿದ್ದಾರೆ.

ಇಂದು ಸಂಪರ್ಕ ಮಾಧ್ಯಮ ವರ್ಧಿಸಿವೆ. ಕುಳಿತಲ್ಲಿಯೇ ಯಾವುದೇ ವ್ಯವಹಾರವನ್ನು ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆಸಬಹುದಾಗಿದೆ. ಹೀಗಾಗಿ ಉತ್ತಮ ಮುದ್ರಣಕ್ಕೆ ಗದುಗಿಗೋ ಅಭಿವೃದ್ಧಿಗೊಳಿಸಬಹುದು. ಬೆಂಗಳೂರಿನವರೂ ಗದುಗಿನತ್ತ ನೋಡುವಂತೆ ಮಾಡಿದ ಉದಾಹರಣೆ ನನ್ನ ಕಣ್ಣಮುಂದಿದೆ. ಈ ರೀತಿ ಕಲಬುರ್ಗಿಯಲ್ಲಿ ಮುದ್ರಣೋದ್ಯಮ ಬೆಳೆದರೆ ಲೇಖಕರು, ಪ್ರಕಾಶಕರು ದೂರ ಹೋಗುವುದು ತಪ್ಪುತ್ತದೆ.

ಶಾಲೆ-ಕಾಲೇಜುಗಳ ಶಿಕ್ಷಣ ಬೆಳೆಯುವುದು ಬೇರೆ, ಸಾಹಿತ್ಯ ವಾತಾವರಣ ಬೆಳೆಯುವುದು ಬೇರೆ. ಕಳೆದ ಕೆಲವು ದಶಕಗಳಲ್ಲಿ ಶಿಕ್ಷಣ ಸಂಸ್ಥೆಗಳು ಇಲ್ಲಿ ವಿಪುಲ ಸಂಖ್ಯೆಯಲ್ಲಿ ಬೆಳೆದಿವೆ. ಇದರಿಂದಾಗಿ ವಿದ್ಯಾರ್ಥಿಗಳು, ಪಠ್ಯಪುಸ್ತಕ ಪ್ರಪಂಚ ಸಹಜವಾಗಿಯೇ ವರ್ಧಿಸಿವೆ. ಇದಕ್ಕಿಂತ ಭಿನ್ನವಾದ ಸಾಹಿತ್ಯಕ ತಂಗಾಳಿ ಮನೆ ಮನೆಗಳಲ್ಲಿ ಸುಳಿಯಬೇಕು, ಲೇಖಕರೂ ಕಲಾವಿದರೂ ಸಾಮೂಹಿಕ ಚರ್ಚೆ, ವಿಚಾರ ಸಂಕಿರಣ, ಸಂಗೀತ ಕಚೇರಿ, ಕಲಾಪ್ರದರ್ಶನ ಇತ್ಯಾದಿಗಳ ಮೂಲಕ ಇಂತಹ ವಾತಾವರಣವನ್ನು ತುಂಬಿ ಕಲಬುರ್ಗಿಯನ್ನು ಸಾಂಸ್ಕೃತಿಕ ರಾಜಧಾನಿಯಾಗಿ ಬೆಳೆಸಬೇಕು. ಅದಕ್ಕೂ ತಕ್ಕ ರೀತಿಯಲ್ಲಿ ಸಿದ್ಧಲಿಂಗೇಶ್ವರ ಪ್ರಕಾಶನದಂಥ ಸಂಸ್ಥೆಗಳು ಇನ್ನೂ ಬೆಳೆಯಬೇಕೆಂದು ಹಾರೈಸುತ್ತೇನೆ.

ಆಕರ : ಮಾರ್ಗ ಸಂಪುಟ-೮

■■

೪೨

ಸೋಽಹಂ ಎನಿಸದೆ ದಾಸೋಽಹಂ ಎನಿಸಯ್ಯ

ಬಸವಣ್ಣನವರ ಸಾಮಾಜಿಕ ಸಿದ್ಧಾಂತದ ಚರ್ಚೆಗಾಗಿ ನಾವೆಲ್ಲ ಇಂದು ಕೂಡಲಸಂಗಮದಲ್ಲಿ ಸೇರಿರುವುದು ಅರ್ಥಪೂರ್ಣ ಘಟನೆಯೆಂದು ಭಾವಿಸುತ್ತೇನೆ. ಏಕೆಂದರೆ ವೈದಿಕ ಬಸವಣ್ಣ ಹುಟ್ಟಿದ್ದು ಬಾಗೇವಾಡಿಯಲ್ಲಿ, ಲಿಂಗಾಯತ ಬಸವಣ್ಣ ಹುಟ್ಟಿದ್ದು ಕೂಡಲಸಂಗಮದಲ್ಲಿ. ಹಿಂದೆ ಬಾಗೇವಾಡಿಯಲ್ಲಿ ಕರ್ಮದಿಂದ ಧರ್ಮಕ್ಕೆ ಸಾಗಿಬಂದಿದ್ದ ಅವರನ್ನು ಅಂಗದಿಂದ ಲಿಂಗಕ್ಕೆ ಪರಿವರ್ತಿಸಿದ್ದು ಈ ಕೂಡಲಸಂಗಮ. ಇಲ್ಲಿ ಸಂಗ್ರಹಿಸಿದ್ದ ತತ್ತ್ವಬೀಜಗಳನ್ನು ಅವರು ಕಲ್ಯಾಣದಲ್ಲಿ ಕ್ರಾಂತಿಗಾಗಿ ಬಳಸಿದರು.

ಬಸವಣ್ಣನವರದು ಸಮಾಜೋ–ಧಾರ್ಮಿಕ ಕ್ರಾಂತಿ. ಭಾಷಿಕ, ಸಾಹಿತ್ಯಿಕ, ರಾಜಕೀಯ ಆರ್ಥಿಕ– ಹೀಗೆ ಬದುಕಿನ ಎಲ್ಲ ಕ್ಷೇತ್ರಗಳು ಹುಟ್ಟುವುದು, ಬೆಳೆಯುವುದು ಸಮಾಜದಲ್ಲಿ. ಹೀಗಾಗಿ ಬಸವಣ್ಣನವರ ಕ್ರಾಂತಿಯ ಯಾವುದೇ ಕ್ಷೇತ್ರವನ್ನು ಅರ್ಥಮಾಡಿಕೊಳ್ಳುವ ಮೊದಲು ಅವರು ಕಟ್ಟಿದ್ದ ಸಮಾಜದ ಸ್ವರೂಪವನ್ನು ತಿಳಿದುಕೊಳ್ಳುವುದು ಮುಖ್ಯವೆನಿಸುತ್ತದೆ. ವಚನ ಸಾಹಿತ್ಯಾಭ್ಯಾಸಿಗಳಿಗೆ ಸಮಾಜಶಾಸ್ತ್ರದ ಅಭ್ಯಾಸ, ಸಮಾಜಶಾಸ್ತ್ರಜ್ಞರಿಗೆ ವಚನ ಸಾಹಿತ್ಯದ ಅಭ್ಯಾಸ ತೀರಾ ಅಗತ್ಯವೆನಿಸಿದೆ ಎಂದು ಸೂಚಿಸುತ್ತೇನೆ. ಇನ್ನೊಂದು ಸೂಚನೆಯೆಂದರೆ, ಚಾಣಕ್ಯನ ಅರ್ಥಶಾಸ್ತ್ರ ಇತ್ಯಾದಿ ಗ್ರಂಥಗಳಲ್ಲಿ ದಾಖಲಾಗಿರುವ ಆರ್ಯ ಸಮಾಜಪದ್ಧತಿ, ಇಲ್ಲವೆ ಇಂದು ನಮ್ಮ ಬದುಕಿನ ಭಾಗವಾಗಿರುವ ಆಂಗ್ಲ ಸಮಾಜಪದ್ಧತಿಯ ಬೆಳಕಿನಲ್ಲಿ ಶರಣ ಸಮಾಜವನ್ನು ಅರ್ಥೈಸುವುದನ್ನು ಬಿಟ್ಟು, ನಮ್ಮ ಆಕರಗಳು ವ್ಯಕ್ತಪಡಿಸುವ ಅಂಶಗಳನ್ನು ಮಾತ್ರ ಸಂಗ್ರಹಿಸುವುದೇ ಸರಿಯಾದ ಅಧ್ಯಯನ ವಿಧಾನವಾಗಿದೆ.

ಬಸವಣ್ಣ ಕಟ್ಟಬಯಸಿದ್ದ ಸಮಾಜದ ಲಕ್ಷಣಗಳ ಪಟ್ಟಿ ಹೋಗಲಿ, ಅಲ್ಲಿ ನಿಮಗೆ ಕಂಡುಬಂದ ಕೊರತೆಗಳ ಪಟ್ಟಿಯನ್ನು ಮಾಡಿದರೂ ಅದು ಈ ವಿಚಾರ ಸಂಕಿರಣದ ಒಂದು ಸಾಧನೆಯೆಂದೇ ಭಾವಿಸುತ್ತೇನೆ. ಮುಂದೆ ಆ ಕೊರತೆಗಳ ಸತ್ಯಾಸತ್ಯತೆಯ ಚರ್ಚೆಗಾಗಿ ನಾವು ಇನ್ನೊಂದು ವಿಚಾರ ಸಂಕಿರಣವನ್ನು ಜರುಗಿಸಬಹುದಾಗಿದೆ. ಹೀಗೆ ಹೇಳಲು ಕಾರಣ, ಕೆಲವರು ಶರಣ ಸಿದ್ಧಾಂತವನ್ನು ಅಪಾರ್ಥ ಮಾಡಿಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಉದಾ: ವೈದಿಕರು ಬ್ರಾಹ್ಮಣ–ಕ್ಷತ್ರಿಯ–ವೈಶ್ಯ–ಶೂದ್ರವೆಂದು ಸಮಾಜವನ್ನು ವರ್ಗೀಕರಿಸಿದರೆ, ಭಕ್ತಭವಿಯೆಂದು ವರ್ಗೀಕರಿಸಿದ ದೋಷ ಶರಣರಲ್ಲಿದೆ ಎಂದು ಕೆಲವರು ಹೇಳುತ್ತಾರೆ. ಇದು ತತ್ವದ ನಿಜಸ್ವರೂಪ ಅರ್ಥಮಾಡಿಕೊಳ್ಳದೆ

ನೀಡಿದ ಅಭಿಪ್ರಾಯವಾಗಿದೆ. ವೈದಿಕ ವರ್ಗೀಕರಣ ಜನನನಿಷ್ಠವಾಗಿದ್ದು, ಒಂದು ವರ್ಣದಲ್ಲಿ ಹುಟ್ಟಿದವನು ಇನ್ನೊಂದು ಮೇಲುವರ್ಣಕ್ಕೆ ಹೋಗಲು ಅಲ್ಲಿ ಅವಕಾಶವಿಲ್ಲ. ಅದೇ ವರ್ಣದಲ್ಲಿ ಮುಂದುವರಿದು, ಪುಣ್ಯಮಾಡಿದ್ದರೆ ಮಾತ್ರ ಮುಂದಿನ ಜನ್ಮದಲ್ಲಿ ಮೇಲುವರ್ಣದವನಾಗಿ ಹುಟ್ಟಬಹುದು. ಶರಣಧರ್ಮದಲ್ಲಿ ಹೀಗಿಲ್ಲ. ಇಲ್ಲಿಯ ವರ್ಗೀಕರಣ ಗುಣನಿಷ್ಠವಾಗಿದೆ. ಯಾವುದೇ ವರ್ಣದಲ್ಲಿ ಹುಟ್ಟಿದವನು ಇದೇ ಜನ್ಮದಲ್ಲಿ ಸದಾಚಾರದಿಂದ 'ಭಕ್ತ'ನೆನಿಸಿಕೊಳ್ಳುತ್ತಾನೆ, ಅನಾಚಾರದಿಂದ 'ಭವಿ'ಯೆನಿಸಿಕೊಳ್ಳುತ್ತಾನೆ. ನೀವು ಇಂದು ಸಿದ್ಧಪಡಿಸಬಹುದಾದ ಕೊರತೆಗಳ ಪಟ್ಟಿಗೆ ಮುಂದಿನ ವಿಚಾರಸಂಕಿರಣದಲ್ಲಿ ಈ ರೀತಿ ಸಮಾಧಾನ ಹೇಳಬಹುದಾಗಿದೆ.

ಲಿಂಗಾಯತ ಧರ್ಮಕ್ಕೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ– ಹೀಗೆ ಆರು ಸ್ಥಲಗಳ ಸಿದ್ಧಾಂತವಿದೆ. ನಿಜವಾದ ಲಿಂಗಾಯತನ ಅಂತಿಮ ಗುರಿ ಆರನೆಯ ಸ್ಥಲವಾದ ಐಕ್ಯ. ಹೀಗಿದ್ದೂ ಇವರನ್ನು ಐಕ್ಯರೆಂದು ಕರೆಯುವುದಿಲ್ಲ. ನಾಲ್ಕನೆಯ ಸ್ಥಲವನ್ನಾಧರಿಸಿ ಪ್ರಾಣಲಿಂಗಿಗಳೆಂದೂ ಕರೆಯುವುದಿಲ್ಲ. ಇವೆರಡರ ನಡುವಿನ ಐದನೆಯ ಸ್ಥಲವನ್ನಾಧರಿಸಿ ಶರಣರೆಂದು ಕರೆಯುತ್ತಾರೆ. ಇದನ್ನು ಅರ್ಥಮಾಡಿಕೊಂಡರೆ ಮಾತ್ರ ಲಿಂಗಾಯತದ ಕೇಂದ್ರತತ್ವ ಗೊತ್ತಾಗುತ್ತದೆ. ಐಕ್ಯಸ್ಥಲ ಲೌಕಿಕ ಪ್ರಜ್ಞೆಯ ಆಚೆಗಿನ ಸ್ಥಿತಿ. ಇಂತಹ ವ್ಯಕ್ತಿತ್ವ ಸಮಾಜಕ್ಕೆ ಆದರ್ಶವೇ ಹೊರತು ವಾಸ್ತವವಲ್ಲ. ನಾಲ್ಕನೆಯ ಪ್ರಾಣಲಿಂಗಿಸ್ಥಲ 'ಅಹಂ ಬ್ರಹ್ಮಾಸ್ಮಿ' ಸ್ವರೂಪದ್ದು, ನಾನು ದೇವರಾಗುವುದು. ಶರಣ ಸ್ಥಲವು 'ನಾನು' ದೇವರಾಗಿ, ನೀವೂ ದೇವರಾಗುವುದನ್ನು ಅಂದರೆ 'ನಾವು' ದೇವರಾಗುವುದನ್ನು ಪ್ರತಿಪಾದಿಸುತ್ತದೆ. ಹೀಗಾಗಿ ಶರಣಸ್ಥಲದ ವ್ಯಕ್ತಿಯಾಗಿ ಉಳಿಯುವುದಿಲ್ಲ–ಸಮಾಜವಾಗಿ ಬೆಳೆಯುತ್ತಾನೆ. ಆದುದರಿಂದ ಶರಣಸ್ಥಲದ ಅಭ್ಯಾಸವೇ ಸಮಾಜಶಾಸ್ತ್ರೀಯ ಅಭ್ಯಾಸವೆನಿಸುತ್ತದೆ.

ಪ್ರಾಚೀನ ಭಾರತದಲ್ಲಿ ತತ್ವಜ್ಞಾನ, ಶಂಕರಾಚಾರ್ಯರು ಹೇಳುವ 'ಅಹಂ ಬ್ರಹ್ಮಾಸ್ಮಿ' ಹಂತಕ್ಕೆ ಬಂದು ನಿಂತಿದ್ದಿತು. ಶರಣರು ಹೇಳುವ ಪ್ರಾಣಲಿಂಗಿ ಸ್ಥಲವಾಗಿರುವ ಇದು ಪ್ರಾಣವನ್ನು ಲಿಂಗವನ್ನಾಗಿಸಿಕೊಳ್ಳುವ ಪ್ರಕ್ರಿಯೆ ಆಗಿದೆ. ಅಲ್ಲಮಪ್ರಭು ಈ ಸ್ಥಲದವರನ್ನು 'ಲಿಂಗಸಾಧಕರೆಲ್ಲ ಭೂಭಾರಕರಾದರು' ಎಂದು ಟೀಕಿಸುತ್ತಾನೆ. ಅಂಗವು ಲಿಂಗವಾಗಿ ದೂರ ಉಳಿದರೆ ಸಮಾಜಕ್ಕೆ ಏನು ಪ್ರಯೋಜನ? ಅದು ಮುಂದುವರಿದು ಸಮಾಜದಲ್ಲಿ /ಜಂಗಮದಲ್ಲಿ ಏಕವಾಗಬೇಕು. ಆಗ ಮಾತ್ರ ಪ್ರಯೋಜನ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಅರವಿಂದ ಘೋಷರು ಅಂಗವನ್ನು ಲಿಂಗವನ್ನಾಗಿಸಿಕೊಂಡಿದ್ದವರು. ಗಾಂಧೀಜಿಯವರು ಅಲ್ಲಿಗೆ ನಿಲ್ಲದೆ, ಅದನ್ನು ಸಮಾಜಮುಖಿಯಾಗಿ ವಿಸ್ತರಿಸಿಕೊಂಡಿದ್ದವರು. ಬಸವಣ್ಣನವರು ಹೇಳುವುದು ಅರವಿಂದ ಘೋಷರಾಗುವುದನ್ನಲ್ಲ, ಗಾಂಧೀಜಿಯಾಗುವುದನ್ನು. ಒಟ್ಟಾರೆ, ಪ್ರಾಣಲಿಂಗಿಸ್ಥಲದ ಸಾಮಾಜೀಕರಣವೇ ಶರಣಸ್ಥಲ. ಈ ಸ್ಥಲದ ಅಭ್ಯಾಸವೇ ಶರಣಸಮಾಜದ ಅಭ್ಯಾಸ.

ಬಸವಣ್ಣನವರು 'ಲಿಂಗ ವ್ಯಸನಿ, ಜಂಗಮ ಪ್ರೇಮಿ' ಎಂಬ ಮಾತನ್ನು ಹೇಳುತ್ತಾರೆ. ಆತ್ಮೋದ್ಧಾರವನ್ನು ಸಾಧಿಸುತ್ತ ಸಮಾಜೋದ್ಧಾರವನ್ನೂ ಸಾಧಿಸಬೇಕೆಂಬುದು ಇದರ ಅರ್ಥ. ಲಿಂಗ, ಜಂಗಮ ಎರಡೂ ಮುಖ್ಯವಾದರೂ ಇವುಗಳಲ್ಲಿ ಜಂಗಮವೇ ಅತಿಮುಖ್ಯವೆಂದು ಶರಣರ ಅಭಿಪ್ರಾಯ. ಮನೆಗೆ ಬಂದ ಅಲ್ಲಮನನ್ನು ಉಪೇಕ್ಷಿಸಿ, ಲಿಂಗಪೂಜೆಯಲ್ಲಿ ನಿರತರಾಗಿದ್ದ ಬಸವಣ್ಣನನ್ನು 'ಜಂಗಮ ಮುಂದಿರಲು ಲಿಂಗಪೂಜೆ ಏತಕ್ಕಯ್ಯಾ' ಎಂದು ಆತ ಪ್ರಶ್ನಿಸುವುದನ್ನು ಇಲ್ಲಿ ನೆನೆಯಬಹುದು.

ವೀರಶೈವ ಪುರಾಣಗಳಲ್ಲಿ ಒಂದು ಕಥೆ ಬರುತ್ತದೆ. ಬಸವಣ್ಣ ಒಂದು ದಿನ ಕಪ್ಪಡಿಯಲ್ಲಿ ಸಂಗಮೇಶ್ವರನ ಪೂಜೆ ಪೂರೈಸಿ, ನೈವೇದ್ಯ ತಟ್ಟೆಯನ್ನು ಮುಂದಿಟ್ಟ. ಶಿವಲಿಂಗ ನೈವೇದ್ಯ ಸ್ವೀಕರಿಸಲಿಲ್ಲ. ಸಂಕೋಚಪಡುತ್ತಿರಬಹುದೆಂದು ಭಾವಿಸಿ ಮರೆಗೆ ಹೋಗಿ ನಿಂತ. ನೈವೇದ್ಯ ಹಾಗೆಯೇ ಇತ್ತು. ಇದರ ಬಾಯಿ ಈ ಕಡೆ ಇರಬಹುದು, ಆ ಕಡೆ ಇರಬಹುದೆಂದು ಊಹಿಸಿ ತಟ್ಟೆಯನ್ನು ಅತ್ತ–ಇತ್ತ ಸರಿಸಿದ. ನೈವೇದ್ಯ ಸ್ವೀಕರಿಸಲಿಲ್ಲ. ಲಿಂಗದ ಬಾಯಿ ಎಲ್ಲಿ? ದಿಗಿಲುಗೊಂಡ ಬಸವಣ್ಣ 'ಮೇಲೆ ಸುರುವಿದರೆ, ಬಾಯಿ ಇದ್ದಲ್ಲಿ ಸ್ವೀಕರಿಸೀತು' ಎಂದು ಭಾವಿಸಿ ಹಾಗೆಯೇ ಮಾಡಿದ. ಶಿವ ಪ್ರತ್ಯಕ್ಷನಾಗಿ, 'ಲಿಂಗದ ಬಾಯಿ ಜಂಗಮ/ಸಮಾಜ' ಎಂದು ಹೇಳಿದ. ಈ ಕಥೆ ಸಮಾಜದ ತೃಪ್ತಿಯೇ ಶಿವತೃಪ್ತಿ ಎಂಬುದನ್ನು ಸೂಚಿಸುತ್ತದೆ.

ಒಂದು ಮಾತು, ಶರಣರಲ್ಲಿ ನಮ್ಮ ಎಲ್ಲ ಸಂದೇಹಗಳಿಗೆ, ಸಮಸ್ಯೆಗಳಿಗೆ ಉತ್ತರಗಳಿವೆ. ಕೆಲವು ವರ್ಷಗಳ ಹಿಂದೆ ಬಸವಜಯಂತಿ ಕಾರ್ಯಕ್ರಮಕ್ಕಾಗಿ ಗುಲಬರ್ಗಾಕ್ಕೆ ಹೋಗಿದ್ದೆ, ಐದಾರು ಸಾವಿರ ಜನ ಸೇರಿದ್ದರು. ಮಾತನಾಡುತ್ತ 'ಬಸವಣ್ಣನವರಲ್ಲಿ ಬದುಕಿನ ಎಲ್ಲ ಪ್ರಶ್ನೆಗಳಿಗೆ ಉತ್ತರಗಳಿವೆ' ಎಂದು ಹೇಳಿದೆ. ಆಗ ಸಭಿಕರಲ್ಲಿ ಒಬ್ಬ ಎದ್ದುನಿಂತು 'ಇದು ಅಂಗವಿಕಲರ ವರ್ಷ. ಬಸವಣ್ಣ ಅಂಗವಿಕಲರ ಬಗ್ಗೆ ಏನು ಹೇಳಿದ್ದಾನೆ?' ಎಂದು ಕೇಳಿದ. ನನಗೆ ತಕ್ಷಣ ಉತ್ತರ ಹೊಳೆಯಲಿಲ್ಲ. 'ಅಂಗವಿಕಲತೆ ಒಂದು ಸಾರ್ವಕಾಲೀನ ಸಮಸ್ಯೆ. ಬಸವಣ್ಣ ಈ ಸಮಸ್ಯೆಗೆ ಉತ್ತರ ಹೇಳಿರಬಹುದು. ನನಗೆ ಕೆಲವು ದಿವಸ ಸಮಯ ಕೊಡಿ' ಎಂದು ಕೇಳಿದೆ. ನಂತರ ಬಸವಣ್ಣನವರ ವಚನಗಳನ್ನು ಹುಡುಕಿದೆ. ಈ ವಚನ ಸಿಕ್ಕಿತು.

> 'ಹಾಲ ಕಂದಲು, ತುಪ್ಪದ ಮಡಕೆಯ
> ಬೋಡು, ಮುಕ್ಕೆನಬೇಡ.
> ಹಾಲು ಸಿಹಿ, ತುಪ್ಪ ಕಮ್ಮನೆ, ಲಿಂಗಕ್ಕೆ ಬೋನ,
> ಕೂಡಲಸಂಗನ ಶರಣರ ಅಂಗಹೀನರೆಂದರೆ ನಾಯಕ ನರಕ'.

ನಾಲ್ಕಾರು ವರ್ಷಗಳ ಬಳಿಕ ಬಸವಜಯಂತಿ ಕಾರ್ಯಕ್ರಮಕ್ಕಾಗಿ ಗುಲಬರ್ಗಾಕ್ಕೆ ಮತ್ತೆ ಹೋಗುವ ಪ್ರಸಂಗ ಒದಗಿತು. ಅದೇ ವೇದಿಕೆ. ಹಿಂದೆ ಪ್ರಶ್ನೆ ಕೇಳಿದ ಸಂದರ್ಭ ನೆನಪಾಗಿ 'ಬಸವಣ್ಣ ಅಂಗವಿಕಲರ ಬಗ್ಗೆ ಏನು ಹೇಳಿದ? ಎಂದು ನಿಮ್ಮಲ್ಲಿ ಒಬ್ಬರು ಕೇಳಿದ್ದಿರಿ' ಎನ್ನುತ್ತಲೇ 'ನಾನೇ ಕೇಳಿದವ' ಎಂದು ಒಬ್ಬ ಎದ್ದುನಿಂತ. ಮೇಲಿನ ವಚನ ಹೇಳಿದೆ, ವಿವರಿಸಿದೆ. ಸಭೆ ಹರ್ಷದಿಂದ ಚಪ್ಪಾಳೆ ತಟ್ಟಿತು. ಹೀಗೆ ಸೂಕ್ಷ್ಮವಾಗಿ ಅವಲೋಕಿಸಿದರೆ, ಶರಣರಲ್ಲಿ ಬದುಕಿನ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗುವುದೆಂದು ತಿಳಿದಿದ್ದೇನೆ.

* * *

ಇದು ಶರಣರ ಸಾಮಾಜಿಕ ಅಧ್ಯಯನ ಸಮಾವೇಶ. ಎಲ್ಲ ಮಾನವಿಕ ಶಾಸ್ತ್ರದ ತಾಯಿ ಸಮಾಜಶಾಸ್ತ್ರವೆಂದು ಹೇಳಲಾಗುತ್ತದೆ. ಆದುದರಿಂದ ಮಾನವಿಕ ಅಧ್ಯಯನಗಳೆಲ್ಲ ಸಮಾಜೋರಾಜ್ಯಶಾಸ್ತ್ರ, ಸಮಾಜೋತತ್ವಶಾಸ್ತ್ರ, ಸಮಾಜೋಭಾಷಾಶಾಸ್ತ್ರಗಳೇ ಆಗಿವೆ. ಬಸವಣ್ಣನವರ ಪರಿಕಲ್ಪನೆಯ ಸಮಾಜವನ್ನು ಹೀಗೆಯೇ ಬಿಡಿಸಿ ನೋಡಬೇಕಾಗುತ್ತದೆ.

ಬಸವ ಸಿದ್ಧಾಂತವೆನ್ನುವುದು ಶಂಕರ, ಮಧ್ವ, ರಾಮಾನುಜ ಸಿದ್ಧಾಂತಗಳಂತೆ ವೇದಸಾಹಿತ್ಯಕ್ಕೆ ಬರೆದ ವ್ಯಾಖ್ಯಾನವಲ್ಲ. ಸಾಮಾಜಿಕ, ಮಾನವಿಕಗಳನ್ನು ತೀಕ್ಷ್ಣವಾಗಿ ವಿಮರ್ಶಿಸಿ ಬರೆದ ಸಿದ್ಧಾಂತ. ಆಧುನಿಕ ಸಮಾಜಶಾಸ್ತ್ರಜ್ಞರು ಬೇರೆ ಧರ್ಮಗಳಿಗಿಂತ ಬಸವಧರ್ಮದ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿರುವುದು, ಈ ಕಾರಣಕ್ಕಾಗಿ.

ಈ ಸಂದರ್ಭದಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ ಶರಣಸಮಾಜದ ಅಭ್ಯಾಸ ಮಾಡುವವರಿಗೆ ವಚನಸಾಹಿತ್ಯವೇ ಆಕರಸಾಮಗ್ರಿ. ಇದು ಪಂಪಭಾರತದಂತೆ ಸಾಮಾನ್ಯ ಸಾಹಿತ್ಯವಲ್ಲ, ಆದಿಪುರಾಣದಂತೆ ಸಿದ್ಧಾಂತ ಸಾಹಿತ್ಯ. ಶರಣಸಿದ್ಧಾಂತ ಅರ್ಥ ಮಾಡಿಕೊಳ್ಳದೆ ಮಾರ್ಕ್ಸ್ ಸಾಹಿತ್ಯ ಅರ್ಥವಾಗದಿರುವಂತೆ. ಶರಣಸಿದ್ಧಾಂತದ ಪೂರ್ವಸಿದ್ಧತೆಯೊಂದಿಗೆ ವಚನವೆಂಬ ಆಕರವನ್ನು ಬಳಸಬೇಕೆಂದು ಹೇಳಬಯಸುತ್ತೇನೆ.

ಬಸವಣ್ಣ ಹುಟ್ಟುವ ಮೊದಲು ಭಾರತದಲ್ಲಿ ವ್ಯಕ್ತಿಗಳಿದ್ದರು, ಸಮಾಜವಿರಲಿಲ್ಲ. ಅಥವಾ ವೈದಿಕರ ವರ್ಗೀಕೃತ ಸಮಾಜವಿದ್ದಿತು, ಬೌದ್ಧರ ಏಕೀಕೃತ-ಅಭಿವೃದ್ಧಿರಹಿತ ಸಮಾಜವಿದ್ದಿತು. ಈಗ ಬಸವಣ್ಣನವರು ಏಕೀಕೃತ ಮತ್ತು ಅಭಿವೃದ್ಧಿಶೀಲ ಸಮಾಜದ ಪರಿಕಲ್ಪನೆಯನ್ನು ಮಂಡಿಸಿದರು. ಇವರ ಏಕೀಕೃತ ಸಮಾಜದಲ್ಲಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು. ಎಲ್ಲರೂ ಸೋದರರು.

ಅಭಿವೃದ್ಧಿಶೀಲ ಸಮಾಜ ಬಸವಣ್ಣನವರ ಹೊಚ್ಚ ಹೊಸ ಪರಿಕಲ್ಪನೆಯಾಗಿದೆ. ವೈದಿಕರ ವರ್ಣನಿಷ್ಠ ಸಮಾಜದಲ್ಲಿ ಬ್ರಾಹ್ಮಣ-ಕ್ಷತ್ರಿಯರದು ದುಡಿಯದ ವರ್ಗ, ವೈಶ್ಯ-ಶೂದ್ರರದು ದುಡಿಯುವ ವರ್ಗ. ಬಸವಣ್ಣನವರು ಶ್ರಮಜೀವಿಗಳಾದ ವೈಶ್ಯ ಶೂದ್ರರನ್ನೂ ಸಂಘಟಿಸಿದರು, ಪ್ರೋತ್ಸಾಹಿಸಿದರು.

ಬುದ್ಧನ ಭಿಕ್ಷುಗಳು ಶ್ರಮಜೀವಿಗಳಾಗಿರಲಿಲ್ಲ. ಕಾಯಕವು ಸಿದ್ಧಾಂತದ ಭಾಗವಾಗುವಲ್ಲಿ ಬಸವಣ್ಣನ ಶರಣರು ಮಾತ್ರ ಶ್ರಮಜೀವಿಗಳಾದರು. 'ಕೃತ್ಯ-ಕಾಯಕವಿಲ್ಲದವರು ಭಕ್ತರಲ್ಲ, ಸತ್ಯ-ಶುದ್ಧವಿಲ್ಲದುದು ಕಾಯಕವಲ್ಲ.' ಅಂದರೆ ಭಕ್ತನ ಲಕ್ಷಣ ಕಾಯಕ. ಕಾಯಕದ ಲಕ್ಷಣ ಸತ್ಯಶುದ್ಧತೆಯೆಂದೂ ಸಾರಿದರು. ಕಾಯಕದ ಸತ್ಯಶುದ್ಧತೆಯ ಸ್ವರೂಪವನ್ನು 'ಹಾಗವೆಂಬ ಸಣ್ಣ ನಾಣ್ಯದಷ್ಟು ಕಾಯಕಮಾಡಿ, ಹಣ-ಅಡ್ಡವೆಂಬ ದೊಡ್ಡ ನಾಣ್ಯದಷ್ಟು ಕೂಲಿ ಬೇಡದಿರುವುದು.' 'ಶ್ರಮದಷ್ಟು ಕೆಲಸಮಾಡಿ, ಅಗತ್ಯವಿರುವಷ್ಟು ಪ್ರತಿಫಲ ಪಡೆಯುವುದು' ಎಂದು ಸ್ಪಷ್ಟಪಡಿಸಿದರು. ಈ ಕಾಯಕವು ಶಾರೀರಿಕ ಇಲ್ಲವೆ ಬೌದ್ಧಿಕವಾಗಿರಬಹುದು. ಅದರಲ್ಲಿ ತಾರತಮ್ಯವಿಲ್ಲವೆಂಬುದನ್ನು 'ಕಾಸಿ ಕಮ್ಮಾರನಾದ.... ವೇದವನೋದಿ ಹಾರುವನಾದ' ಎಂಬ ವಚನದ ಮೂಲಕ ಸಾರಿದರು.

ಈ ಕಾಯಕ ಸಾರ್ಥಕವಾಗುವುದು ದಾಸೋಹದಲ್ಲಿ. ಹಿಂದೆ ಹೇಳಿದ 'ಅಹಂ ಬ್ರಹ್ಮಾಸ್ಮಿ' ಅಥವಾ 'ಸೋಹಂ' ಎಂಬುದರ ಸಾಮಾಜೀಕರಣವೇ 'ದಾಸೋಹಂ'. ಹೀಗಾಗಿ 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ' ಎಂಬುದನ್ನೇ ಶರಣರು ಅಂತಿಮ ಸಿದ್ಧಾಂತವನ್ನಾಗಿಸಿಕೊಂಡರು.

* * *

ಶರಣರ ಸಾಮಾಜಿಕ ಸಿದ್ಧಾಂತವನ್ನು ಈ ದಾರಿಗಳಲ್ಲಿ ನೋಡಬೇಕು. ಆಧುನಿಕರಿಗೆ ಇದು ಇನ್ನೂ ಸ್ಪಷ್ಟವಾಗಬೇಕಾದರೆ ಗುರು, ಲಿಂಗ, ಜಂಗಮ, ವಿಭೂತಿ, ಪ್ರಸಾದ ಇತ್ಯಾದಿ ಹಳೆಯ

ಪರಿಭಾಷೆಗಳನ್ನು ಕಡಿಮೆ ಬಳಸಿ, ಆಧುನಿಕ ಸಮಾಜಶಾಸ್ತ್ರೀಯ ಪರಿಭಾಷೆಗಳನ್ನು ಹೆಚ್ಚು ಬಳಸಬೇಕು ಮತ್ತು ಶ್ರಮ, ಆಹಾರ, ಅರ್ಥ, ಸಮಯ, ಕುಟುಂಬ, ಮಹಿಳಾ ಸಬಲೀಕರಣ ಇತ್ಯಾದಿ ಆಧುನಿಕ ಶೀರ್ಷಿಕೆಗಳಡಿಯಲ್ಲಿ ಅವರ ತತ್ವ-ಸಾಹಿತ್ಯಗಳನ್ನು ಚರ್ಚಿಸಬೇಕು. ಆಗ ಶರಣಸಮಾಜದ ಸ್ವರೂಪ ಕಾಲದೃಷ್ಟಿಯಿಂದ ಪ್ರಾಚೀನವಾದರೂ ಮೌಲ್ಯದೃಷ್ಟಿಯಿಂದ ಆಧುನಿಕವೆಂದು ಸ್ಪಷ್ಟವಾಗುತ್ತದೆ.

---

* ಕೃಪೆ: 'ಬಸವತತ್ವ (ಸಾಮಾಜಿಕ ಬದಲಾವಣೆ)' ಸಂ. ಮಹೇಶ ತಿಪ್ಪಶೆಟ್ಟಿ, ಪ್ರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಕೂಡಲ ಸಂಗಮದಲ್ಲಿ ಮಾಡಿದ ಭಾಷಣ.

ಆಕರ : ಮಾರ್ಗ ಸಂಪುಟ-೮

೪೩

ಆತ್ಮೋದ್ಧಾರದ ಜೊತೆಗೆ ಸಮಾಜೋದ್ಧಾರ ಮಾಡಿದ ಬಸವಣ್ಣ

೨೦೧೫

ಮಾನವ ಹಕ್ಕುಗಳ ಪ್ರಥಮ ಹರಿಕಾರ ರೂಸ್‌ವೆಲ್ಟ್ ೧೯೪೮ರ ಎರಡನೆಯ ಮಹಾಯುದ್ಧದಲ್ಲಿ ಆದ ಅಪಾರ ಹಾನಿಯಿಂದ ನೊಂದು ೩೦ ಅಂಶಗಳ ಮಾನವ ಹಕ್ಕುಗಳನ್ನು ಮಂಡಿಸಿದ. ಬಸವನ ವಚನಗಳಲ್ಲಿ ೧೨ನೆಯ ಶತಮಾನದಲ್ಲೇ ಇವೆಲ್ಲ ಬಂದಿವೆ. ಭಾರತದ ಇತಿಹಾಸದಲ್ಲಿ ಉಪನಿಷತ್ತುಕಾರರು, ಇತರೆ ಮಹಾತ್ಮರು ಕಾಡಿನಲ್ಲಿ ಮರದಡಿ ಜ್ಞಾನದ ಮೂಲಕ ಕ್ರಿಯೆಯನ್ನು ಬೋಧಿಸಿದರೆ, ಬಸವಣ್ಣ ಜನರ ಮಧ್ಯೆ ಹೋರಾಟದಲ್ಲಿ ಕ್ರಿಯೆಯ ಮೂಲಕ ಜ್ಞಾನ ಅನುಷ್ಠಾನ ಮಾಡಿದವ. ಆತನದು ಮೊದಲು ನಡೆ, ಅನಂತರ ನುಡಿ. ಬಸವಣ್ಣ ಬರುವವರೆಗೂ ಜ್ಞಾನದ ಮೂಲಕ ಕ್ರಿಯೆಯು ಪ್ರಚಲಿತದಲ್ಲಿತ್ತು. ಬಸವಣ್ಣ ಭಾರತದ ಮೊದಲ "Activist"–ಚಳುವಳಿಗಾರ. ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ ಅಯ್ಯಾ... ಮಾಲೆಗಾರರ ಕೇಳಿ ಹೂವು ಅರಳವವೇ ಅಯ್ಯಾ... ಎಂದರಿತು ಕಾರ್ಯ ನಿರ್ವಹಿಸಿದವ.

ಕಲ್ಯಾಣಕ್ಕೆ ಹೋದ ಆರಂಭದಲ್ಲೇ ಶಿವನಾಗಮಯ್ಯ ಎನ್ನುವ ದಲಿತನೊಂದಿಗೆ ಸ್ನೇಹ ಮಾಡಿ, ಅವನ ಮನೆಯಲ್ಲಿ ಉಂಡ. ಅಸ್ಪೃಶ್ಯತೆಯ ಅಪರಾಧದ ಮೇಲೆ ಬಸವಣ್ಣನನ್ನು ಆಸ್ಥಾನದ ಬದಲಿಗೆ(ಮೈಲಿಗೆ ಆಗುತ್ತದೆಯೆಂದು) ಬೀದಿಯಲ್ಲಿಯೇ ವಿಚಾರಣೆ ನಡೆಸಿದರು. ಅವನ ಸಮತಾವಾದ ಮಾನವತಾವಾದಕ್ಕೆ ಅಂದಿನ ಸಂಪ್ರದಾಯಸ್ತರು ಸದ್ಯಕ್ಕೆ ಸುಮ್ಮನಾದರು.

ಬಸವಣ್ಣನ ಬದುಕಿನ ಮೂರು ಪ್ರಮುಖ ಘಟ್ಟಗಳು:

೧. ಬಾಗೇವಾಡಿಯಲ್ಲಿ–ಕರ್ಮದಿಂದ ಧರ್ಮಕ್ಕೆ

೨. ಕೂಡಲಸಂಗಮದಲ್ಲಿ–ಅಂಗದಿಂದ ಲಿಂಗಕ್ಕೆ

೩. ಕಲ್ಯಾಣದಲ್ಲಿ–ಲಿಂಗದಿಂದ ಜಂಗಮಕ್ಕೆ

ಬಸವಣ್ಣ ಆತ್ಮೋದ್ಧಾರ ಸಮಾಜೋದ್ಧಾರದ ಪಯಣ ನಡೆಸಿದ.

ಲಿಂಪೂಜೆಯು ಮುಂಜಾನೆಯ ಬಿಸಿಲಿನಂತೆ ಹಿತ, ಸುಲಭ. ಆದರೆ ಜಂಗಮಪೂಜೆ (ಸಮಾಜ ಸೇವೆ) ಮಧ್ಯಾಹ್ನದ ಬಿಸಿಲಿನಂತೆ ಕಡುಕಷ್ಟ. ಆತ್ಮೋದ್ಧಾರ ಸುಲಭ. ಆದರೆ ಸಮಾಜೋದ್ಧಾರ ಕಷ್ಟಸಾಧ್ಯ. ಬಸವಣ್ಣ, ಮುಂದೆ ಗಾಂಧಿ ಸಮಾಜೋದ್ಧಾರ ಮಾಡಿದರು.

ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ, ನಮ್ಮ ದೇಶದಲ್ಲಿ ದೇವ-ದೇವಿಯರ ಮುಂದೆ ಉನ್ಮಾದದ ಭಕ್ತಿ ಪರಂಪರೆ ನಡೆದಿತ್ತು. ರಾಮಕೃಷ್ಣರದು ಉನ್ಮಾದದ ಭಕ್ತಿ. ಭಜನಾ ಭಕ್ತಿ; ಇನ್ನೊಂದು ಪರಂಪರೆ ಉಗ್ರಭಕ್ತಿ. ಶಿವನಿಗೆ ಕಣ್ಣುಕೊಟ್ಟ ಮಾರ್ಕಂಡೇಯನದು ಉಗ್ರಭಕ್ತಿ. ಬಸವನದು ವೈಚಾರಿಕ ಭಕ್ತಿ. ಸಕಲ ಜೀವಜಂತುಗಳನ್ನು ಪ್ರಕೃತಿಯನ್ನು ಪ್ರೀತಿಸುವ ಭಕ್ತಿ. ಭಕ್ತ ನಿಂತಲ್ಲಿಂದ ಮುಂದಿನ ಹಂತದಲ್ಲಿ ಶರಣ. ಅಂಗ ಲಿಂಗವಾಗುವ ಹಾಗೆ. ಭಕ್ತ ಶರಣನಾಗುವ Metamorphosis ಪರಿವರ್ತನಾ ಪ್ರಕ್ರಿಯೆ. ಜೀವ ಶಿವ ಆಗುವುದು, ಜೀವ ಪರಮಾತ್ಮ ಆಗುವುದು ಅಪೂರ್ವ ಸಿದ್ಧಾಂತ. ವ್ಯಕ್ತಿತ್ವ ದೈವೀಕರಣ. ಆದರೆ ಗಾಂಧಿ, ಅಂಬೇಡ್ಕರ್ ಸಮಾಜದ ದೈವೀಕರಣದ ಪ್ರಯತ್ನ ಮಾಡಿದರು. ಬಸವಣ್ಣ "ಲಿಂಗವ್ಯಸನಿ ಜಂಗಮ(ಸಮಾಜ)ಪ್ರೇಮಿ ಎನಿಸಯ್ಯ" ಎಂದು ಸದಾ ಬೇಡುತ್ತಿರುತ್ತಾರೆ. ಆತ್ಮೋದ್ಧಾರದ ಜೊತೆಗೆ ಸಮಾಜೋದ್ಧಾರ ಮಾಡಿದವನು ಬಸವಣ್ಣ. ವರ್ಗ, ವರ್ಣ, ಲಿಂಗಭೇದ ಅಳಿಸಲು ಚಳುವಳಿ ಮಾಡಿದವ. ಭೇದ ಸಂಸ್ಕೃತಿ ಅಳಿಸಿ ಅಭೇದ ಸಂಸ್ಕೃತಿ ಉಳಿಸಿದವ.

ಭಾರತದ ಅವನತಿಯ ಎರಡು ಅಂಶಗಳು ಎಂದರೆ ಒಂದು-ಜಾತಿ, ಮತ್ತೊಂದು-ದೇವತೆಗಳು. ಕರ್ನಾಟಕದಲ್ಲಿ ೩೬,೦೦೦ ದೇವಾಲಯಗಳಿವೆ. ಅವು ಮೌಢ್ಯ ಹಾಗೂ ಶೋಷಣಾ ಕೇಂದ್ರಗಳು. ದಾನ ಅಂದು ಶೋಷಣೆಯಾಗಿತ್ತು. ೧೬ ದಾನಗಳ ಪಟ್ಟಿ ಇತ್ತು. ಕನ್ಯಾದಾನ, ಕನ್ಯಾಶುಲ್ಕ ಇದ್ದವು. ಬಸವಣ್ಣ ಕಾಯಕವನ್ನು ಕಡ್ಡಾಯ ಮಾಡಿದ. ಅದರಿಂದ ಕಲ್ಯಾಣ ಸುಭಿಕ್ಷವಾಯಿತು. ಶರಣರೆಲ್ಲರಿಗೂ ಕಾಯಕವೇ ಪೂಜೆಯಾಯಿತು. ಕಾಯಕದಲ್ಲಿ ತೊಡಗಿದರೆ ಗುರುಪೂಜೆ, ಲಿಂಗಪೂಜೆಯಾಯಿತು. ಕಾಯಕದಲ್ಲಿ ತೊಡಗಿದರೆ ಗುರುಪೂಜೆ, ಲಿಂಗಪೂಜೆಯಾದರೂ ಬಿಡಬೇಕೆಂಬುದು ಆದರ್ಶವಾಯಿತು. "ದುಡಿಯದೇ ತಿನ್ನುವುದು ಪದಾರ್ಥ. ದುಡಿದು ತಿನ್ನುವುದು ಪ್ರಸಾದ" ಎಂದು ಪರಿಗಣಿತವಾಯಿತು. ಲಕ್ಕಮ್ಮ ತನ್ನ ಗಂಡ ಸುಮ್ಮನೆ ಕೂತಿರಲು "ಕಾಯಕ ಕೆಟ್ಟಿತ್ತು ಎನ್ನಾಳ್ದನೆ" ಎಂದು ಎಚ್ಚರಿಸುತ್ತಾಳೆ. ಕಾಯಕದಲ್ಲಿ ವಸ್ತುವಿನ ನೈಜ ಬೆಲೆಗಿಂತ ಹೆಚ್ಚಿಗೆ ಪಡೆದರೆ ಅದು ಮೋಸ. ನುಲಿಯ ಚಂದಯ್ಯನ ಶಿಷ್ಯ ಲಿಂಗಯ್ಯ ಹಗ್ಗ ಮಾರಿ ದುಪ್ಪಟ್ಟು ಹಣ ತಂದಾಗ ಚಂದ್ರಯ್ಯ ಸಂತೋಷಿಸದೆ ಲಿಂಗಯ್ಯನನ್ನು ನಿಂದಿಸಿ, ತಂದ ಜಾಸ್ತಿ ಹಣವನ್ನು ಹಿಂದಕ್ಕೆ ಕೊಡಲು ಕಳುಹಿಸುತ್ತಾನೆ. ಅಂದಿನ ತತ್ವ "ನಾನು" ದುಡಿಯಬೇಕು, "ನಾವೆಲ್ಲ" ಉಣ್ಣಬೇಕು-ಕಾಯಕ ದಾಸೋಹದ ನೀತಿ ಇದು.

ಬಸವ, ವಿವೇಕಾನಂದ, ಗಾಂಧಿ ಜಾಗತಿಕ ಮಹಾಪುರುಷರು. ಬಸವ ಕನ್ನಡಿಗನೆಂಬ ಹೆಮ್ಮೆ ನಮ್ಮೆಲ್ಲರದು. ಒಮ್ಮೆ ವಿವೇಕಾನಂದರಿಗೆ ಒಬ್ಬ ಭಕ್ತ "ಸ್ವಾಮಿ, ಈ ಗುಹೆಯಲ್ಲಿ ಒಬ್ಬ ಸನ್ಯಾಸಿ ೨೦ ವರ್ಷದಿಂದ ತಪಸ್ಸು ಮಾಡುತ್ತಿದ್ದಾನೆ. ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದು ಕೇಳಿದ. ಅವರು ಅಲ್ಲಿದ್ದ ಬಂಡೆಯೊಂದನ್ನು ತೋರಿಸಿ "ಅದು ಸಾವಿರ ವರ್ಷ ತಪಸ್ಸು ಮಾಡಿದೆ. ಅದರಿಂದೇನು ಪ್ರಯೋಜನ?" ಎಂದರಂತೆ!

ಬಸವ ಕನಸು ಕಂಡ. ಕಟ್ಟುವ ಕಾಯಕದಲ್ಲಿ ಕಲ್ಯಾಣ ನಿರ್ಮಿಸಿದ. ಅದಕ್ಕೆ ಭೃತ್ಯಾಚಾರ, ಬಾಗುವ ಗುಣ ಅನುಸರಿಸಿ ಬೀಗುವ ಅಹಂಕಾರ ದೂರ ಇಟ್ಟ. ಮೇಲಾಗಲೊಲ್ಲೆನು, ಕೀಳಾಗಲೊಲ್ಲೆನು. ದೇವಾಲಯ, ಕಳಸ ಬೇಡ. ಶಿರ ಹೊನ್ನ ಕಳಸ ಎಂದ. ಕಳಸದ ಮೇಲೆ ಕಾಗೆ ಕೂರುತ್ತದೆ. ಎನ್ನನು ಶರಣರ ಚಮ್ಮಾವಿಗೆ ಮಾಡು ಎಂದ. ಎಲ್ಲರ ಜೊತೆ ಬೆಂದರೆ ಶಿವಸುಖ; ಶಿವಸಾರ. ಗೆದ್ದು ಸೋಲುವುದಕ್ಕಿಂತ ಸೋತು ಗೆಲ್ಲುವುದು ಮುಖ್ಯ. ಕಾಲು ಕೀಳಲ್ಲ, ಶಿರ ಶ್ರೇಷ್ಠ ಅಲ್ಲ. ಎಲ್ಲರೂ

ಎಲ್ಲದೂ ಸಮಾನ ಎನ್ನುವ ಸಮ-ಸಮಾಜ ಕಟ್ಟಿದ. ಬಸವ ವಿನೀತ ಮನೋಭಾವದವ. ಸಕಲ ಜೀವಾತ್ಮರಿಗೆ ಲೇಸ ಬಯಸಿ, ಇವ ನಮ್ಮವ, ಇವ ನಮ್ಮವ, ಇವ ನಮ್ಮವ ಎಂದು ದಯವೇ ಧರ್ಮದ ಮೂಲ ಎಂದು ನಂಬಿ ಬಾಳಿ, ಅನುಷ್ಠಾನಕ್ಕೆ ತಂದವ. ನಾವೆಲ್ಲರೂ ವಚನಗಳ ದಾರಿಯಲ್ಲಿ ಬಸವನ ದಾರಿಯಲ್ಲಿ ನಡೆಯಲು ಪಣತೊಡೋಣ.

---

* 'ಮಾನವ ಹಕ್ಕುಗಳ ವೇದಿಕೆ' ಏರ್ಪಡಿಸಿದ ಬಸವಜಯಂತಿ ಉತ್ಸವದಲ್ಲಿ ಮಾಡಿದ ಭಾಷಣದ ಸಾರರೂಪ. ಸಂಗ್ರಹ-ಶಿವನಕೆರೆ ಬಸವಲಿಂಗಪ್ಪ. ಮಹಾಮನೆ. ಡಿಸೆಂಬರ್-೨೦೧೫.

ಆಕರ : ಮಾರ್ಗ ಸಂಪುಟ-೮

೪೪

ಲಿಂಗಾಯತ ಧರ್ಮವು ವಲಸೆ ಧರ್ಮಗಳ ವಿರುದ್ಧ ಎಲ್ಲ ಸಮುದಾಯದ ಕನ್ನಡಿಗರು ಕಟ್ಟಿದ ಹೋರಾಟದ ಧರ್ಮ

೨೦೧೫

೧೨ನೇ ಶತಮಾನದ ಮೊದಲು ಕರ್ನಾಟಕದಲ್ಲಿ ನಾಲ್ಕು ಧರ್ಮಗಳಿದ್ದವು. ಅವು ಬೌದ್ಧ, ಜೈನ, ವೈದಿಕ ಮತ್ತು ಶೈವ ಧರ್ಮಗಳು. ಇವೆಲ್ಲ ಉತ್ತರ ಭಾರತದಿಂದ ವಲಸೆ ಬಂದ ಧರ್ಮಗಳು. ೧೨ನೇ ಶತಮಾನದ ಹೊತ್ತಿಗೆ ಬೌದ್ಧ ಧರ್ಮ ನಾಶವಾಗಿತ್ತು, ಜೈನ ಧರ್ಮ ದುರ್ಬಲವಾಗಿತ್ತು. ಶೈವ ಮತ್ತು ವೈದಿಕದ ನಡುವೆ ಮೇಲಾಟ ನಡೆದಿತ್ತು. ವೈದಿಕರ ದಬ್ಬಾಳಿಕೆಯನ್ನು ಬಸವಣ್ಣ ವಿರೋಧಿಸಿ ದಲಿತರನ್ನು, ಶ್ರಮಿಕರನ್ನು ಹುರಿದುಂಬಿಸಿ ಜನಸಾಮಾನ್ಯರಿಗೆ ಪ್ರಜ್ಞೆ ಮೂಡಿಸಿದರು. ೧೨ನೇ ಶತಮಾನದಲ್ಲಿ ವಲಸೆ ಧರ್ಮದ ವಿರುದ್ಧ ಕನ್ನಡಿಗರು ಕಟ್ಟಿದ ಹೋರಾಟದ ಧರ್ಮ ಲಿಂಗಾಯತ ಧರ್ಮವಾಗಿದೆ.

ನಿಜವಾದ ಸಂಶೋಧಕ ಜನರ ಭಾವನೆಗಳಿಗೆ ಧಕ್ಕೆ ಮಾಡುವುದಿಲ್ಲ. ಬದಲಾಗಿ ಭ್ರಾಂತಿಗೆ ಧಕ್ಕೆ ಮಾಡುತ್ತಾನೆ. ನಾನು ಭ್ರಾಂತಿಗೆ ಧಕ್ಕೆ ಮಾಡುತ್ತೇನೆ ಹೊರತು ಭಾವನೆಗಳಿಗಲ್ಲ ಶರಣ ಸಂಸ್ಕೃತಿ ಬಹುಮುಖಿ ಸಂಸ್ಕೃತಿ, ಬಹುಮುಖಿ ಹೋರಾಟ, ಬಹುಮುಖಿ ಸಾಧನೆ. 'ಲಿಂಗಾಯತ ಧರ್ಮ' ಕನ್ನಡಿಗರು ಸೃಷ್ಟಿಸಿದ ಕರ್ನಾಟಕದ ಮೊದಲ ಧರ್ಮ'. ಕನ್ನಡಿಗರ ಧ್ವನಿ, ಕನ್ನಡಿಗರು ಕಟ್ಟಿದ ಕನ್ನಡ ಧರ್ಮ ಲಿಂಗಾಯತ ಧರ್ಮ. ಎಲ್ಲ ವೃತ್ತಿಯ, ಎಲ್ಲ ಸಮುದಾಯದ ಕನ್ನಡಿಗರು ಕಟ್ಟಿದ ಧರ್ಮ. ವೈದಿಕರು ಸಂಸ್ಕೃತದ ಮೂಲಕ ನಡೆಸಿದ ಭಾಷಾ ದಬ್ಬಾಳಿಕೆಯನ್ನು ಮೂಲೆಗುಂಪು ಮಾಡಿದ ಬಸವಣ್ಣ ಕನ್ನಡದಲ್ಲಿ ವಚನ ಸಾಹಿತ್ಯ ರಚಿಸಿದರು. ವಚನ ಸಾಹಿತ್ಯ ಮೊಟ್ಟಮೊದಲ ಕನ್ನಡ ಸಾಹಿತ್ಯ. ಅಲ್ಲಿಯವರೆಗೆ ಉತ್ತರ ಭಾರತದಿಂದ ಬಂದ ಸಂಸ್ಕೃತ ಸಾಹಿತ್ಯದ ಅನುವಾದ, ಅನುಕರಣೆಯೇ ಕನ್ನಡ ಸಾಹಿತ್ಯವಾಗಿತ್ತು. ರಾಮಾಯಣ, ಮಹಾಭಾರತವನ್ನೇ ಕನ್ನಡಕ್ಕೆ ಅನುವಾದಿಸಲಾಗುತ್ತಿತ್ತು. ಆದರೆ ವಚನ ಸಾಹಿತ್ಯ ಕನ್ನಡದ ನೆಲದಿಂದ ಕನ್ನಡಿಗರೇ ರಚಿಸಿದ ಮೊಟ್ಟ ಮೊದಲ ಕನ್ನಡ ಸಾಹಿತ್ಯ. ಲಿಂಗಾಯತ ಅವೈದಿಕ ಧರ್ಮ. 'ಹಿಂದೂ' ಎಂಬುದೇ ಒಂದು ಮೋಸ. ಅದು ಧರ್ಮವಲ್ಲವೇ ಅಲ್ಲ. ೧೨ನೇ ಶತಮಾನದಲ್ಲಿ ಅಸ್ಮಿತೆ ವಿಸ್ಮೃತಿಯಾಗಿತ್ತು. ಬಸವಾದಿ

ಶರಣರು ಅಸ್ಮಿತೆ ಜಾಗೃತ ಮಾಡಿದರು. ಹೊಸ ವಾತಾವರಣ ಸೃಷ್ಟಿ ಮಾಡಿದರು. ೧೨ನೇ ಶತಮಾನದಲ್ಲಿ ಬಸವಾದಿ ಶರಣರಿಂದ ಸೃಷ್ಟಿಸಿದ ಧರ್ಮ "ಲಿಂಗಾಯತ". ಲಿಂಗಾಯತರು ಹಿಂದೂಗಳೂ ಅಲ್ಲ ವೀರಶೈವರೂ ಅಲ್ಲ. ಇದನ್ನು ಲಿಂಗಾಯತರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಲಿಂಗಾಯತ ಕೇವಲ ಭಕ್ತಿ ಚಳುವಳಿಯಲ್ಲ. ಭಕ್ತಿ ಈ ಧರ್ಮದ ಬುನಾದಿ. ಆದರೆ ಇದು ಭಕ್ತಿಗೆ ನಿಲ್ಲುವುದಿಲ್ಲ. ಭಾರತದಲ್ಲಿ ಭಕ್ತಿ ಚಳುವಳಿ ಇತ್ತು. ಭಕ್ತಿ ಆತ್ಮೋಧ್ಧಾರಕ ವಿಚಾರ. ಬಸವಾದಿ ಶರಣರು ಆತ್ಮೋದ್ಧಾರದ ಜೊತೆಗೆ ಸಮಾಜೋದ್ಧಾರ ಮಾಡಿದರು. "ಸೋಹಂ" ಎಂದೆನಿಸದೇ "ದಾಸೋಹಂ" ಎಂದೆನಿಸಿದ ಧರ್ಮವಿದು. ನಮ್ಮದು ಸಮಾಜಮುಖಿ ಸಂಸ್ಕೃತಿ.

ಇಂದು ಎರಡು ಕೆಲಸಗಳಾಗಬೇಕಿದೆ. "ಲಿಂಗಾಯತ" ಇತಿಹಾಸ ಗ್ರಂಥ ಮತ್ತು ಸಿದ್ಧಾಂತ ಗ್ರಂಥ ಮಾಡಬೇಕಿದೆ. "ಗುರು, ಲಿಂಗ, ಜಂಗಮ, ಕಾಯಕ, ದಾಸೋಹ" ಈ ಐದರಲ್ಲಿ ನಮ್ಮ ತತ್ತ್ವವಿದೆ. ಲಿಂಗಾಯತದ ಶುದ್ಧೀಕರಣ, ನವೀಕರಣ, ಏಕೀಕರಣ, ಜಾಗತೀಕರಣ, ಸಬಲೀಕರಣ ಈ ಐದು ಕೆಲಸಗಳಾಗಬೇಕಿದೆ. ಮಠಗಳಲ್ಲಿ ಬಸವಣ್ಣನಿಲ್ಲ. ಸ್ವಾಮಿಗಳಿದ್ದಾರೆ. ಅವರು ತಮ್ಮ ತಮ್ಮ ಮಠದ ಹಿರಿಯ ಜಗದ್ಗುರುಗಳ ಪುರಾಣ ಹೇಳಿಸುವುದರಲ್ಲೇ ಮಗ್ನರಾಗಿದ್ದಾರೆ. ಮಠಗಳು ಶಿಕ್ಷಣ ಸಂಸ್ಥೆಗಳಾಗಿವೆ. ಮಠಾಧೀಶರು ರಾಜಕಾರಣ ಮಾಡುತ್ತಿದ್ದಾರೆ. ಇನ್ನೂ ೧೦ ವರ್ಷದಲ್ಲಿ ಮಠಾಧೀಶರು ಶಾಸಕರು, ಸಂಸದರಾಗುತ್ತಾರೆ. ಒಂದೇ ಜಾತಿಯವರು ಮಠಾಧೀಶರಾಗುವುದರಿಂದ ಮಠಗಳು ದೊಡ್ಡ ಗೃಹಸ್ಥರ ಮನೆಗಳಾಗುತ್ತಿವೆ. ಇದು ಬದಲಾಗಬೇಕು. ಮಠಗಳಲ್ಲಿ ಬಸವಣ್ಣನ ಪ್ರವೇಶವಾಗಬೇಕು. ಮನೆ-ಮನ, ಸಮುದಾಯದ ಶುದ್ಧೀಕರಣವಾಗಬೇಕು. ಇಡೀ ದಕ್ಷಿಣ ಭಾರತದಲ್ಲೇ ದೊಡ್ಡ ಸಮುದಾಯ ಲಿಂಗಾಯತ ಸಮುದಾಯವಾಗಿದೆ. ಇದನ್ನು ಉತ್ತರ ಭಾರತದವರಿಗೆ ತಿಳಿಸಬೇಕಾದರೆ ಲಿಂಗಾಯತ ರಾಷ್ಟ್ರೀಯ ಅಧಿವೇಶನ ಸಂಘಟಿಸಬೇಕು.

---

* ಮಣೆಯ ಬಸವ ಇಂಟರನ್ಯಾಶನಲ್ ಅಂಡರ್‌ಸ್ಟ್ಯಾಂಡಿಂಗ್ ಅ್ಯಂಡ್ ರಿಸರ್ಚ ಸೆಂಟರ್‌ನ ಹುಬ್ಬಳ್ಳಿ ಘಟಕದ ವತಿಯಿಂದ ಬಸವಜಯಂತಿ ಆಚರಣೆ, ಬಸವತತ್ತ್ವ ಚಿಂತನೆ, ಲಿಂಗಾಯತ ಧರ್ಮ ಸಂವಿಧಾನಾತ್ಮಕ ಮಾನ್ಯತೆ ಕುರಿತು ಕಲ್ಯಾಣ ನಗರ ರಂಗಮಂದಿರದಲ್ಲಿ ಮೇ.೧೦, ೨೦೧೫ರಂದು ಆಯೋಜಿಸಿದ ಕಾರ್ಯಾಗಾರವನ್ನುದ್ದೇಶಿಸಿ ಮಾಡಿದ ಭಾಷಣದ ಸಾರ.

ಕೃಪೆ : ವಿಜಯ ಸಂದೇಶ (೧೪-೩೪)ವಾರಪತ್ರಿಕೆಯಲ್ಲಿ ಪ್ರಕಟವಾದ ವರದಿ (ದಿನಾಂಕ: ೧೮-೫-೨೦೧೫)

ಆಕರ : ಮಾರ್ಗ ಸಂಪುಟ-೮

■■

೪೫

ಲಿಂಗಾಯತಧರ್ಮದ ಜಾಗತೀಕರಣ

ಪರಮ ಪೂಜ್ಯ ಸ್ವಾಮಿಗಳಲ್ಲಿ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸಿ, ವೇದಿಕೆ ಮೇಲಿರುವ ಗಣ್ಯರಿಗೆ, ಈ ಸಭೆಯಲ್ಲಿ ಆಸೀನರಾಗಿರುವ ಎಲ್ಲ ಶರಣ ಶರಣೆಯರಿಗೆ ಶರಣು ಶರಣಾರ್ಥಿಗಳು, ಸಂವಾದಕ್ಕೂ ಮುಂಚೆ ಒಂದೆರಡು ವಿಚಾರಗಳನ್ನು ಹಂಚಿಕೊಳ್ಳಲು ನಾನು ಬಯಸಿದ್ದೇನೆ.

ಮೊದಲನೆಯದಾಗಿ ಈ ಆಮಂತ್ರಣ ಪತ್ರದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷ ಎಂ.ಎಂ. ಕಲ್ಬುರ್ಗಿ ಅಂತ ಹಾಕಿದ್ದಾರೆ, ಮತ್ತು ಮೊದಲನೆ ದಿವಸ ನನ್ನ ಹೆಸರು ಅಚ್ಚಾಗಿದೆ. ಆದರ ನಾನ್ಯಾಕ ಬರಲಿಲ್ಲ ಅಂತ ನಿಮಗ ಸಂಶಯ ಬಂದಿರಬಹುದು, ನಿಜ ಹೇಳಬೇಕಂದ್ರ ನಾನು ಶೆಟಕಾರರಿಗ್ಹೇಳಿದ್ದು ೨೪ನೇ ತಾರೀಖಿನ ದಿವಸ ಸಂವಾದಕ್ಕ ಮಾತ್ರ ಬರ್ತೀನಿ, ಉಳಿದ ದಿವಸ ನನಗೆ ಬರಲಿಕ್ಕೆ ಆಗುವುದಿಲ್ಲ, ಯಾಕಂದ್ರ ಮೂರು ದಿವಸ ಸಮ್ಮೇಳನದೊಳಗ ಒಂದಿವಸ ಪ್ರವಾಸ ಬರಲಿಕ್ಕ, ಒಂದುದಿವಸ ಹೋಗಲಿಕ್ಕ ಕೂಡಿ ಐದು ದಿವಸ ಕಳಿಲಿಕ್ಕ ಸಾಧ್ಯ ಆಗುದಿಲ್ಲ, ಕೆಲಸ ಬಹಳ ಅದಾವ, ನನಗ ೨೪ನೇ ತಾರೀಖಿನ ದಿವಸ ಸಂವಾದದಲ್ಲಿ ಮಾತ್ರ ಭಾಗವಹಿಸಲಿಕ್ಕೆ ಸಾದ್ಯ ಆಗ್ತದ ಅಂತ ಹೇಳಿದ್ದೆ, ಅವರೆಲ್ಲ ಒಪ್ಪಿಕೊಂಡಿದ್ದರು, ಆದರೆ ಇಲ್ಲಿ ಬಂದ ನೋಡಿತೀನಿ ಎಲ್ಲರ ಪ್ರೀತಿಯ ಒತ್ತಾಯಕ್ಕ ಹಾಕಿಬಿಟ್ಟಿದ್ದಾರೆ, ಅವರ ಪ್ರೀತಿಗೆ ನಾನು ತಲೆಬಾಗತಾ ಇದೀನಿ. ಆ ಮಾತು ಬೇರೆ, ಹೀಗಾಗಿ ನನಗ ಮೊದಲನೆ ದಿವಸ ಬರಲಿಕ್ಕೆ ಅಗಲಿಲ್ಲ. ಇವತ್ತು ೨೪ನೇ ತಾರೀಖಿನ ದಿವಸ ಇಲ್ಲಿ ಬಂದು ನಿಮ್ಮೊಂದಿಗೆ ನನ್ನ ಕೆಲವು ಅಭಿಪ್ರಾಯಗಳನ್ನು ಹಂಚಿಕೊಳ್ತಾ ಇದೀನಿ.

ನಿಮಗೆಲ್ಲಾ ಗೊತ್ತಿರುವ ಹಾಗೆ ನಾನೊಬ್ಬ ಸಂಶೋಧಕ, 'ಸತ್ಯವನ್ನೇ ಹೇಳುತ್ತೇನೆ, ಸತ್ಯವನ್ನಲ್ಲದೇ ಬೇರೇನೂ ಹೇಳುವುದಿಲ್ಲ', ಈ ಒಂದು ತತ್ವಕ್ಕೆ ಸಂಶೋಧಕ ಬದ್ಧನಾಗಿರಬೇಕಾಗ್ತದ, ಈ ಸತ್ಯದ ಒಂದು ಪ್ರತಿಪಾದಕನಾಗಿ, ಎರಡನೆಯದಾಗಿ ಲಿಂಗಾಯತ ಸಮಾಜದ ಸದಸ್ಯನಾಗಿ, ಈ ಸಮಾಜದ ಬಗ್ಗೆ ಇರುವ ಒಂದು ಕಳಕಳಿಯೆದೆಯಲ್ಲಾ ಆ ಕಳಕಳಿಗೆ ಬದ್ಧನಾಗಿ, ನಾನು ಈ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸ್ತಾ ಇದ್ದೇನೆ. ಹೀಗೆ ಭಾಗವಹಿಸುವ ಮೊದಲು ನೀವೆಲ್ಲ ತಿಳಕೊಳ್ಳಬೇಕಾದ ಮತ್ತು ನಡಕೊಳ್ಳಬೇಕಾದ ಐದು ಅಂಶಗಳನ್ನ ನಾ ಹೇಳ್ತೀನಿ, ಇಷ್ಟ ತಿಳಕೊಂಡರ ಸಾಕು ಬಸವ ಧರ್ಮದ ಬಗ್ಗೆ ನಾವು ಸರಿಯಾಗಿ ತಿಳಕೊಂಡಂತೆ, ಸರಿಯಾಗಿ ನಡಕೊಂಡಂತೆ ಅಗ್ತಾ ಇದೆ.

ತಿಳಕೊಳ್ಳಬೇಕಾದ ಅಂಶಗಳು ಐದು. ಅವು ಯಾವವು ಅಂದ್ರೆ, ಒಂದು–ಲಿಂಗಾಯತ ಸ್ವತಂತ್ರ ಧರ್ಮ, ಎರಡು–ಲಿಂಗಾಯತ ಧರ್ಮದ ಸಂಸ್ಥಾಪಕ ಬಸವಣ್ಣ, ಮೂರು ಲಿಂಗಾಯತವು ವೀರಶೈವದಿಂದ ಭಿನ್ನ, ನಾಲ್ಕು–ಪಂಚಾಚಾರ್ಯರ ವ್ಯವಸ್ಥೆ ೧೪ನೇ ಶತಮಾನದಲ್ಲಿ ಹುಟ್ಟಿದ್ದು, ಐದು–ಸಿದ್ಧಾಂತ ಶಿಖಾಮಣಿ ೧೫ನೇ ಶತಮಾನದಲ್ಲಿ ಹುಟ್ಟಿದ್ದು.

ಇನ್ನು ನಡಕೊಳ್ಳಬೇಕಾದ ವಿಷಯಗಳು ಏನು ಅಂತಂದ್ರ ಒಂದು–ಲಿಂಗಾಯತದ ಶುದ್ಧಿಕರಣ ಮೊದಲಾಗಬೇಕಾದ್ದು. ಕಾಲಕಾಲಕ್ಕ ಯಾವ ಯಾವದೋ ಧರ್ಮದ ಮೂಢನಂಬಿಕೆಗಳನ್ನ, ಮೂರ್ಖನಂಬಿಕೆಗಳನ್ನ ನಾವು ಒಪ್ಪಿಕೊಂಡು ನಮ್ಮ ಧರ್ಮವನ್ನ ಅಶುದ್ಧ ಮಾಡಿಕೊಂಡೀವಿ ನಾವು, ನಮ್ಮ ಸಿದ್ಧಾಂತವನ್ನ ಅಶುದ್ಧ ಮಾಡಿಕೊಂಡೀವಿ ನಾವು, ನಮ್ಮ ಆಚರಣೆಯನ್ನ ಅಶುದ್ಧ ಮಾಡಿಕೊಂಡಿವಿ ನಾವು, ಆದ್ದರಿಂದ ಮೊಟ್ಟಮೊದಲು ಆಗಬೇಕಾದದ್ದು ಲಿಂಗಾಯತದ ಶುದ್ಧೀಕರಣ. ಎರಡು–ಲಿಂಗಾಯತದ ನವೀಕರಣ ಅಗಬೇಕು. ೧೨ನೇ ಶತಮಾನದ ಆಚರಣೆಗಳನೆಲ್ಲ ಈಗ ನಾವು ತರತೀವಿ ಅಂತಂದ್ರ ಸಾಧ್ಯ ಆಗುದಿಲ್ಲ, ಬಸವಣ್ಣನವರ ತತ್ವಗಳನ್ನ ಸಿದ್ಧಾಂತಗಳನ್ನ, ಆಚರಣೆಗಳನ್ನ, ಮೂಲಭೂತವಾಗಿಟ್ಟುಕೊಂಡು, ೨೧ನೇ ಶತಮಾನಕ್ಕ ಹೊಂದುರೀತಿಯೊಳಗ ನವೀಕರಣ ಮಾಡಬೇಕಾಗ್ತದ, ಬಸವಣ್ಣ ನಮಗ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಸ್ವಲ್ಪ ನವೀಕರಣ ಮಾಡಿಕೊಳ್ಳಬಹುದು. ಆದರ ಮೂಲಕ್ಕ ಧಕ್ಕಿ ಬಂದಿರಬಾರದು, ಹಾಗೆ ಸ್ವಲ್ಪ ನವೀಕರಣ ಮಾಡಿಕೊಳ್ಳಬೇಕು. ನಮ್ಮ ಧರ್ಮಕ್ಕ ಧರ್ಮಗ್ರಂಥ ಇಲ್ಲಂತ ನಾವೆಷ್ಟೋ ಸಲ ಮಾತಾಡ್ತೀವಿ, ಯಾಕ ಬಸವಣ್ಣನವರಿಗೆ ಸಾಧ್ಯವಿರಲಿಲ್ಲವೇನು? ಬರಿಬಹುದಾಗಿತ್ತು. ಆದರ ಎಲ್ಲಾ ನಾನೇ ಬರೆದಿಟ್ಟು ಹೋಗಬಾರದು. ನನಕ್ಕಿಂತ ದೊಡ್ಡವರು ಹುಟ್ಟತಾರಂತ ಅವರಿಗೆ ಗೊತ್ತದ, ಯಾಕಂದ್ರೆ ಭವಿಷ್ಯ ಬಾಳ ದೊಡ್ಡದದ, ನನ್ನ ವಿಚಾರ ಎಲ್ಲ ನಾನೇ ಹೇಳಿ ಇಷ್ಟೆ ಅಳವಡಿಸಿಕೊಳ್ಳಬೇಕಂತಂದ್ರ, ಮತ್ತೂ ಇದೇನಾಗ್ತದ ಅಂದ್ರ, ಇದು ವೇದ, ಬೈಬಲ್‌ದಂಗ ಒಂದು ರೀತಿ ಸ್ಥಗಿತ ಆಗಿಬಿಡ್ತದ ಈ ತತ್ವಗಳು. ಅದಕ್ಕ ಬಸವಣ್ಣ ಹೇಳ್ತಾರೆ, ಪ್ರತಿಯೊಂದೂ ವಿಷಯಕ್ಕ ಬಂದಾಗ, 'ಆಗದುದ ಎದುರಿಗೆ ತೋರಲೇಕೆ?' ಆಗಮದಾಗ ಹೀಗ ಹೇಳ್ಯಾದ, ವೇದದಾಗ ಹೀಗ ಹೇಳ್ಯಾದ ಎಂದು ತೋರಲೇಕೆ, ನಿಮ್ಮ ನಿಮ್ಮ ಅನುಭಾವಗಳಾಳದಾವಲ್ಲ ಅವನ್ನ ಬದುಕಿಗೆ ಅಳವಡಿಸಿಕೊಳ್ತಾ ಹೋಗಿಬಿಡಿ, ಮಾಲೆಗಾರನ ಕೇಳಿ ನನೆ ಅರಳುವುದೇ?' ಅಂತ ಮಾಲೆಗಾರನ ಕೇಳಿ ಮೊಗ್ಗು ಅರಳತದ ಏನು, ಅದು ನೈಸರ್ಗಿಕವಾಗಿ ಅರಳತದ, ಏ, ನೀ ನಾ ಹೇಳಿದಾಗ ಅರಳಬೇಕು, ಬ್ಯಾಡಂದರ ಬಿಡಬೇಕು ಅನ್ನುವ ಹಾಗಿಲ್ಲ, ಆದುದರಿಂದ ನವೀಕರಣ ಒಂದು ಸ್ವಲ್ಪ ಮಾಡಬೇಕಾಗತದ, ಅದಕ್ಕಾಗಿ ಅವರು ಧರ್ಮ ಗ್ರಂಥವನ್ನ ಬರೆಯದೇ, (ಬರದಾರ ಒಂದಿಷ್ಟು) ಆದರ ಒಂದು ನೂರು ಪುಟದಿದ್ದರ ೧೦೦ಪುಟಗಳದಾವ ಅವು (ಈ ಬೈಬಲ್ ಮತ್ತು ಕುರಾನ್‌ಗಳು ನೂರು ಪುಟಗಳು ಅವರು ಬರದಾರ, ನಮಗೇನು ಬರಿಲಿಕ್ಕ ಅವಕಾಶ ಇಲ್ಲ ಅದರಾಗ, ಆದರೂ ಒಂದು ೬೦–೭೦ಪುಟಗಳು ಬರದಾರ ೩೦ಪುಟಗಳು ಬಿಟ್ಟದ ನಿಮಗಾಗಿ, ನಿಮಗೇನಾದರು ತಿಳಿದರ ಸ್ವಲ್ಪ ಜೋಡಿಸರಿ, ಅದಕ, ಅಂದರ ನವೀನ ಅಗ್ತಾ ಹೋಗಬೇಕು ಇದು, ಕಾಲಕ್ಕೆ ತಕ್ಕಂತೆ ಪರಿಸರಕ್ಕೆ ತಕ್ಕಂತೆ ಸ್ವಲ್ಪ ನವೀನ ಆಗಬೇಕು. ಆದರ ಮೂಲತತ್ವ ಧಕ್ಕಿ ಬಂದಿರಬಾರದು.

ಇವು ಐದು ಮಾಡಬೇಕಾದ ಕೆಲಸಗಳು–ಲಿಂಗಾಯತದ ಶುದ್ಧೀಕರಣ, ಲಿಂಗಾಯತದ ನವೀಕರಣ, ಲಿಂಗಾಯತದ ಏಕೀಕರಣ, ಲಿಂಗಾಯತದ ಜಾಗತೀಕರಣ, ಲಿಂಗಾಯತದ ಸಬಲೀಕರಣ, ಇವುಗಳನ್ನ

ನಾವು ಮನಸಗೊಟ್ಟು ಮಾಡಿದರ ಬಸವಣ್ಣ ಏನು ದರ್ಶನವನ್ನ ಕಂಡಿದ್ದರು ಅದನ್ನ ಪೂರೈಸುವ ದಾರಿಯೊಳಗ ನಾವು ನಡದಂತೆ ಅಗ್ತಾ ಇದೆ. ಆದ್ರ ಈಗ ಪೂಜ್ಯ ಸ್ವಾಮೀಜಿಗಳು ಹೇಳಿದರು. ಈಗ ನಾವ್ಯಾರು ಲಿಂಗಾಯತರಾಗಿ ಉಳಿದಿಲ್ಲ ಅಂತ. ಅದು ನಿಜ ಅದ. ಅಕಸ್ಮಾತ ಬಸವಣ್ಣ ಕೂಡಲ ಸಂಗಮದಿಂದ ಎದ್ದುಬಂದರ ನಾವು ಅವರನ್ನು ನೋಡಿ ನಾವೆಲ್ಲ ನಿಮ್ಮವರ ಅಂದರ, ನೀವಲ್ಲ, ನಾ ಹಿಂಗ ಬದಕಂತ ಹೇಳಿಲ್ಲ, ನೀವ ಲಿಂಗಾಯತರೆ ಅಲ್ಲ ಅಂತ ಹೇಳ್ತಾರ. ಬೇಕಾದ್ರ ನಾವು ಲಿಂಗ ತೆಗೆದು ತೋರಿಸಿದರೂ ಸಹ ಅವರು ನಂಬುವುದಿಲ್ಲ, ಅಷ್ಟರ ಮಟ್ಟಿಗೆ ನಾವು ಅಲಿಂಗಾಯತರಾಗಿದ್ದೇವೆ. ಆದ್ದರಿಂದ ಸರಿಯಾದ ಲಿಂಗಾಯತರಾಗುವುದು ಶುದ್ಧೀಕರಣ ಅದಲ್ಲ, ನವೀಕರಣ ಅದಲ್ಲ, ಈ ಏಕೀಕರಣ ಅದಲ್ಲ ಅದರೊಂದಿಗೆ ಸಬಲೀಕರಣ ಅದಲ್ಲ ಇವು ಕೆಲವು ವಿಷಯಗಳನ್ನ ನಾವು ತಿಳಿದುಕೊಂಡು ಆ ರೀತಿ ಕೆಲಸ ಮಾಡಬೇಕಾಗಿದೆ. ಆಗಲೇ ದರ್ಗಾ ಹೇಳಿದಹಾಗೆ, ವಚನ ಕೋಟ್ ಮಾಡಿದರಲ್ಲ. ಅದು ಬಹಳ ಪ್ರಸಿದ್ದ ವಚನ ಅದ, ತನು ಭಕ್ತ ಆಗ್ಯಾದೆ, ಮನ ಭವಿ ಆಗ್ಯಾದ. ಆದರ, ಮನವೂ ಭಕ್ತ ಆಗಬೇಕಾಗ್ತದೆ, ಈ ದೃಷ್ಟಿಯಿಂದ ನಾವು ಕೆಲಸ ಮಾಡಬೇಕು. ಹಾಗ ಮಾಡಿದರ ಮಾತ್ರ ಈ ವಿಚಾರ ಸಂಕಿರಣದ ಸಾರ್ಥಕತೆ ಆಗ್ತದ ಅಂತ ನಾ ಭಾವಿಸಿದ್ದೇನೆ.

ಈ ವಿಚಾರ ಸಂಕಿರಣದ ಶೀರ್ಷಿಕೆ ಲಿಂಗಾಯತ ಧರ್ಮದ ಜಾಗತೀಕರಣ ಅನ್ನುವದು! ಬಹಳ ದೊಡ್ಡದು, ಯಾಕಂದರ ಈ ಧರ್ಮಕ್ಕ ಜಾಗತೀಕರಣ ಆಗುವಂತ ಶಕ್ತಿ ಅದ. ಸುಮ್ಮನೆ ಯಾವದೋ ಒಂದು ದುರ್ಬಲವಾದಂತ ಧರ್ಮಕ್ಕ ಜಾಗತೀಕರಣ ಆಗಲಿಕ್ಕ ಶಕ್ತಿ ಇರುವುದಿಲ್ಲ, ಭಾಳ ಆದರ ನಮ್ಮ ರಾಜ್ಯ ದಾಟಿ ಹೋಗಬಹುದು, ದುರ್ಬಲ ಇದ್ರ, ನಮ್ಮ ರಾಷ್ಟ್ರ ಧಾಟಿ ಹೋಗಲಿಕ್ಕಾಗುದಿಲ್ಲ. ಆದರ ಜಾಗತೀಕರಣವಾಗುವಂತ ಒಂದು ಶಕ್ತಿ ಈ ಧರ್ಮಕ್ಕ ಅದ. ಈ ಸಿದ್ಧಾಂತಕ್ಕದ, ಅದನ್ನ ನಾವು ಅರ್ಥ ಮಾಡಿಕೊಳ್ಳಬಹುದು, ನಾನೆಷ್ಟೋ ಸಲ ಹೇಳ್ತಾ ಇದ್ದೀನಿ, ಉಳಿದೆಲ್ಲ ನಮ್ಮ ಲಿಂಗಾಯತ, ಈ ಪಂಚಾಚಾರ್ಯರದಾರಲ್ಲ, ಇವರೆಲ್ಲ ಮಠದ ಆಚಾರ್ಯರು ಅಷ್ಟೆ, ಮತದ ಆಚಾರ್ಯರಲ್ಲ. ಆದರ ಮತದ ಒಬ್ಬ ಆಚಾರ್ಯ ಪುರುಷ, ಆಚಾರ್ಯ ಪದ ಬಳಸಬಾರದು, ಅನುಭಾವಿಗಳು ಅಂತ ಬಳಸಬೇಕು. ಆಚಾರ್ಯ ಅಂತ ಬಳಸಿದರ ಅದು ಶುದ್ಧ ಜಡ ಆಗ್ತದೆ. ಅನುಭಾವಿ ಅಂತ ಬಳಸಿದ್ರೆ ಅದು ಚಲನಶೀಲ ಆಗ್ತದ, ನಾವು ಆಚಾರ್ಯ ಪಂತದವರಲ್ಲ ಅನುಭಾವ ಪಂಥದವರು. ಆದರ ಏನಾಗ್ತದ ಅಂದ್ರ ಜನಬಳಕೆ ಕಾರಣವಾಗಿ ನಾವು ಒಮ್ಮೊಮ್ಮೆ ಪದಗಳನ್ನ ಅವಸರದಲ್ಲೇನೋ ಬಳಸಿಬಿಡ್ತೀವಿ. ಇಂಥ ಒಂದು ಅನುಭಾವ ಪಂಥವನ್ನ ಬಸವಣ್ಣನವರು ಸ್ಥಾಪಿಸಿ, ನಮ್ಮ ಮುಂದ ಭಾಳದೊಡ್ಡ ಬೆಳಕನ್ನ ಬಿಟ್ಟುಹೋಗಿದ್ದಾರ. ಆ ಬೆಳಕು ಕ್ರಮೇಣ ಕತ್ತಲೆ ಆಗ್ತಾ ಇದೆ. ಮತ್ತ ನಾವು ಜಾಗ್ರತರಾಗಿ; ಒಂದು ಭಾಳ ಸಂತೋಷ ಅಂತಂದ್ರೆ, ಇಂಥ ಮಾತುಗಳೆ ೧೦೦ವರ್ಷ ಹಿಂದ ಇರಲಿಲ್ಲ. ಎಂದ ಹಳಕಟ್ಟಿಯವರು ಬಂದ ಬಳಿಕ ಇದೆಲ್ಲ ಗೊತಾಯ್ತು, 'ಪಾಪಿಯ ಕಣ್ಣಿಗೆ ಪರುಷ ಕಲ್ಲಾಗಿಪ್ಪಂತೆ' ಇದ್ದಿಯಲ್ಲ, ಅನ್ನೋ ರೀತಿಯೊಳಗ ಪಾಪಿಗಳಾದ ನಮ್ಮ ಕಣ್ಣಿಗೆ ಪರುಷಮಣಿ ಅದು ಕಲ್ಲಾಗಿ ಹೋಗಿತ್ತು. ಹಳಕಟ್ಟಿಯವರು ಬಂದು ನಮ್ಮ ಕಣ್ಣು ತೆರಸಿದರು, ಅಲ್ರೋ ಇದು ಕಲ್ಲಲ್ಲ, ಪರುಷಮಣಿ ಅದ. ನಾವು ವಿಚಾರ ಮಾಡಿ ಅದರ ಅಧ್ಯಯನ, ಪ್ರಚಾರ, ಅದರ ಪ್ರಸಾರಗಳನ್ನೆಲ್ಲ ಮಾಡುವುದರ ಮೂಲಕ, ಇವತ್ತ ಮತ್ತ ನಮಗ ಜಾಗೃತಿಯಾಗ್ಯಾದ, ನಾವು ವೈದಿಕರಲ್ಲ, ವೀರಶೈವರಲ್ಲ. ನಮ್ಮದು ಧರ್ಮ, ವೈದಿಕದ ಶಾಖೆಯಲ್ಲ,

ಇದೊಂದು ಸ್ವತಂತ್ರ ಧರ್ಮ, ನಮ್ಮ ಧರ್ಮ ಇದು ವೀರಶೈವ ಅಲ್ಲ, ಇದು ಲಿಂಗಾಯತ ಬೇರೆ ಅದ, ನಮ್ಮ ಧರ್ಮ ಸಂಸ್ಥಾಪಕರು ಪಂಚಾಚಾರ್ಯರಲ್ಲ, ನಮ್ಮ ಧರ್ಮ ಸಂಸ್ಥಾಪಕರು ಗುರು ಬಸವಣ್ಣ ಎನ್ನುವ ವಿಚಾರ ಕ್ರಮೇಣವಾಗಿ ನಮ್ಮ ತಲಿ ಒಳಗ ಹೋಗ್ತಾ ಇದೆ. ಇವನ್ನ ಇನ್ನಷ್ಟೂ ಗಟ್ಟಿಗೊಳಿಸಿಕೊಂಡು ನಾವು ನಿಜವಾದ ಲಿಂಗಾಯತ ಆದಾಗ ಮಾತ್ರ ಬಸವಣ್ಣನವರ ದಾರಿಯೊಳಗ ನಡದಂತೆ ಆಗ್ತದ. ನೋಡ್ರಿ ಬಸವಣ್ಣ ಬಂದಾಗ ಏನಾಯಿತು ಅನ್ನುವಂತ ಒಂದು ಮಾತು ಹೇಳ್ತೇನೆ, ಅಲ್ಲಮಪ್ರಭು ವಚನದಲ್ಲಿ ಉಲ್ಲೇಖಿಸಿದಂತೆ ಎಲ್ಲಾ ಮಠಗಳೂ, ಎಲ್ಲಾ ಆಚಾರ್ಯರೂ ಹ್ಯಾಗ ಆಗಿದ್ರೂ ಅಂದ್ರೆ ತನುಗುಣಮತ್ತರಾಗಿದ್ದರಂತೆ, 'ತನುಗುಣಮತ್ತರಾಗಿರ್ದ ಐಶ್ವರ್ಯಾಂಧಕರ ಮತವನೇನಮಾಡಬಂದೆಯಯ್ಯಾ ಬಸವಣ್ಣ?' ಎಂಥಾ ಕೆಲಸ ಮಾಡ್ತಾ ಇದಿರಿ, ಎಲ್ಲಾ ಮಠಗಳು, ಎಲ್ಲಾ ಸ್ವಾಮಿಗಳು, ಯಾರು ಧರ್ಮವನ ಸರಿಯಾದ ದಿಕ್ಕಿನಲ್ಲಿ ನಡೆಸಿಕೊಂಡು ಹೋಗಬೇಕಾಗಿತ್ತೋ ಅವರೆಲ್ಲ ತನುಗುಣಮತ್ತರಾಗ್ಯಾರ ಎಲ್ಲಾ ಧರ್ಮದವರು ಕಾಪಾಲಿಕರು, ಕಾಳಮುಖರು ಇದ್ರಲ್ಲ ಅವರೆಲ್ಲ, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಇವೆಲ್ಲ ತನುಗುಣಗಳು. ಇವು ಈ ತನುಗುಣಗಳಿಂದ ಮತ್ತರಾಗಿ ಹೋಗಿಬಿಟ್ಟಿದ್ರವರು, ತನುಗುಣಮತ್ತರಾಗಿರ್ದರು ಮತ್ತು ಐಶ್ವರ್ಯಾಂಧಕರು ಆಗಿದ್ದರು. ಅಂದ್ರ ಮಠಗಳೆಲ್ಲ ಐಶ್ವರ್ಯದ ಅಂಧತೆಯಲ್ಲಿರುವಂತವರ ಮತವನು ಏನಮಾಡಬಂದೆಯಯ್ಯಾ ಬಸವಣ್ಣ, ನೀವು ಅವರ ಮ್ಯಾಲ ಎಂಥ ಒಂದು ದೊಡ್ಡ ದಾಳಿ ಮಾಡಿದಿರಿ, ಅಲ್ಲಮಪ್ರಭುಗಳು ಹೇಳುವಂಥ ಮಾತು, ಈಗ ಬಂದಂತ ಈ ವಿಚಾರಗಳದವಲ್ಲ, ಈ ವಿಚಾರಗಳನ್ನ ನಾವು ಸರಿಯಾಗಿ ತಿಳಕೊಂಡು, ಸರಿಯಾಗಿ ಪ್ರಚಾರ ಮಾಡಬೇಕಾಗ್ತದ.

ಮೊದಲ ವಿಚಾರಗಳನ್ನ ಸರಿಯಾಗಿ ತಿಳಕೋಬೇಕು, ಮೂರು ವಿಷಯ ತಿಳಕೋಬೇಕು. ಒಂದು-ನಮ್ಮ ನಿಜವಾದ ಸಿದ್ಧಾಂತ ಅಂದರ ಏನು? ಅದನ್ನು ತಿಳಕೋಬೇಕು, ಎರಡನೆಯದ್ದು ನಮ್ಮ ಚರಿತ್ರ ತಿಳಕೋಬೇಕು, ನಾವು ಚರಿತ್ರೆ ತಿಳಕೊಳ್ಳದೇ ಯಾರ್‍ಯಾರೋ ಬಂದು ಏನೇನೋ ತಂದು ನಮ್ಮೊಳಗ ಬೆರಸಿ, ಚರಿತ್ರೆಯನ್ನ ಕುಲಗೆಡಿಸಿ, ನಮ್ಮ ತಲಿಯೊಳಗ ತುಂಬಿ ಹೋಗಿಬಿಡ್ತಾರೆ, ಅದಕ್ಕಾಗಿ ನಾವು ಮೊದಲು ಸಿದ್ಧಾಂತ ತಿಳಕೊಬೇಕು, ಎರಡನೆಯದ್ದು ನಮ್ಮ ಚರಿತ್ರೆಯನ್ನ ತಿಳಕೊಬೇಕು. ಮೂರನೆಯದ್ದು ನಮ್ಮ ಸಮಾಜವನ್ನು, ನಮ್ಮ ಸಮಾಜದ ಸ್ಥಿತಿ ಏನೆಂಬುದನ್ನ ತಿಳಕೋಬೇಕು. ಹಾಗಿಲ್ಲಿ ತತ್ವ ಗೊತ್ತಾದಾಗ ಇಲ್ಲಿ ತಿದ್ದಲಿಕ್ಕ ಬರ್ತದ, ಹೀಗ ಈ ಮೂರು ಅಂಶಗಳನ್ನ ಒಂದು ಸಿದ್ಧಾಂತ, ಚರಿತ್ರೆ ಮತ್ತು ಸಮಾಜ ಈ ಮೂರನ್ನ ಸರಿಯಾಗಿ ತಿಳಕೊಂಡು ನಾವು ಏನಾದರೂ ಪ್ರಯತ್ನ ಮಾಡಿದರ ಈ ಲಿಂಗಾಯತ ಧರ್ಮ ಇದು ಜಾಗತಿಕ ಆಗ್ತದೆ, ಜಾಗತಿಕ ಆಗುವ ಸಾಧ್ಯತೆ ಅದೆ, ಯಾಕಂದ್ರೆ ನಮ್ಮನ್ನ ಜಗತ್ತಿನ ಮೂಲೆವರೆಗೂ ಕರೆದುಕೊಂಡು ಹೋಗುವ ಶಕ್ತಿ ಯಾವುದಾದರೂ ಇದ್ರ ಅದು ವಿಶ್ವಗುರು ಬಸವಣ್ಣ ಮಾತ್ರ, ಉಳಿದವರ್‍ಯಾರು ಪಂಚಾಚಾರ್ಯರು ಏನ ಮಾಡಿದ್ರೂ ಇಲ್ಲೇ ಈ ಮಠದ ಹೊಸ್ತಿಲತನ ತರತಾರ ಹೊರತು, ಹೊಸ್ತಿಲು ದಾಟಿ ಹೋಗುವುದಿಲ್ಲ, ಸಾಧ್ಯನೇ ಇಲ್ಲ ಇವ್ರಿಗಿ, ಈ ಶಕ್ತಿನೇ ಇಲ್ಲ ಇವ್ರಿಗಿ. ನಮ್ಮನ್ನ ಜಗತ್ತಿನ ಮೂಲಿವರಿಗೂ ಒಯ್ಯುವಂಥ ಶಕ್ತಿ ಇದ್ದರ ಅದು ಬಸವಣ್ಣ ಒಬ್ಬರಿಗೆ ಅದ. ದುರ್ದೈವ ಬಸವಣ್ಣ ಅನ್ನುವಂಥ ಒಂದು ದೊಡ್ಡ ಹಡಗು, ಅದರಾಗ ಬೇಕಾದಷ್ಟು ಮಂದಿ ಕೂತರೂ ಅದು ಕರಕೊಂಡು ಹೋಗ್ತದ, ಅದು ಭಾಳ ದೊಡ್ಡ ಹಡಗ ಅದ, ಆದ್ರ ಏನ ಮಾಡ್ಯಾರ ಅಂದ್ರ ಅಲ್ಲಿ ನಮ್ಮ ಸ್ವಾಮಿಗಳದಾರಲ್ಲ; ಅನೇಕ ಜನರದಾರ, ನಾವು ಎಲ್ಲಾರೂ ಲೀಡರ್ಸ ಅಂತ. ಒಬ್ಬ ಒಂದು ಕಡಿ ಹುಟ್ಟುಹಾಕಿದ್ರ,

ಮತ್ತೊಬ್ಬ ಇನ್ನೊಂದು ಕಡಿಗೆ ಹುಟ್ಟುಹಾಕ್ತಾನ, ಇನ್ನೊಬ್ಬ ಮತ್ತೊಂದು ಕಡಿಗಿ ಹುಟ್ಟು ಹಾಕ್ತನ, ಹೀಗ ಹತ್ತು ಮಂದಿ ಹತ್ತುಕಡಿಗೆ ಹುಟ್ಟು ಹಾಕಿದ್ರ ಹಡಗ ಹ್ಯಾಂಗ ಹೋಗಬೇಕದು. ಎಲ್ಲಾರೂ ಕೂಡಿ, ಒಂದ ರೀತಿಯೊಳಗ ಹುಟ್ಟು ಹಾಕಿದ್ರ ಮಾತ್ರ ಅದು ಜಾಗತಿಕ ಆಗ್ತದ, ಹಿಂಗ ಇವರು ಹುಟ್ಟು ಹಾಕಿ ಹುಟ್ಟು ಹಾಕಿ ದಣಿತಾ ಇದಾರ ಸ್ವಾಮಿಗಳು, ಈ ಕಡಿ ಒಳಗ ಕೆಲ ಜನ ಹಗ್ಗ ಕಟ್ಟಿ ಅದನ ಗೂಟಕ್ಕ ಕಟ್ಟ್ಯಾರ. ಈ ಹಗ್ಗ ಬಿಚ್ಚು ಕೆಲಸ ಮಾಡಬೇಕು ಮೊದಲ, ಆಮೇಲೆ ಇವ್ರೇನದಾರಲ್ಲ ಹತ್ತೂ ಜನ ಸ್ವಾಮಿಗಳು, ನೂರು ಜನ ಸ್ವಾಮಿಗಳು, ಸಾವಿರ ಸ್ವಾಮಿಗಳು ಕೂಡಿ ಒಂದೇ ದಿಕ್ಕಿನಿಂದ ಮುನ್ನಡೆಸುವ ಕೆಲಸವನ್ನ ಮಾಡಿದಾಗ ಮಾತ್ರ ಇದು ಜಾಗತೀಕರಣ ಆಗ್ತದ. ಈ ಕೆಲವು ಮಾತುಗಳನ್ನ ಸಂವಾದಕ್ಕೆ ಹಿನ್ನೆಲೆಯಾಗಿ ಹೇಳ ಬಯಸುತ್ತೇನೆ.

ಆಕರ : ಮಾರ್ಗ ಸಂಪುಟ–೮

■■

೪೬

ಶ್ರೀ ಪ್ರೌಢದೇವರಾಯ ವಿಗ್ರಹ ಸ್ಥಾಪನೆ

ಈ ಸಮಾರಂಭದ ದಿವ್ಯ ಸಾನಿಧ್ಯವನ್ನು ವಹಿಸಿರುವ ಶ್ರೀ ಮ.ನಿ.ಪ್ರ ಸಂಗನಬಸವ ಮಹಾಸ್ವಾಮಿಗಳವರಿಗೆ ಭಕ್ತಿ ಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತಾ, ವೇದಿಕೆಯ ಮೇಲಿರುವ ಸಂಸ್ಕೃತಿ ಚಿಂತಕರೂ ರಾಜಕೀಯ ಮುತ್ಸದ್ದಿಗಳೂ, ಕರ್ನಾಟಕ ರಾಜ್ಯದ ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಎಂ. ಪಿ. ಪ್ರಕಾಶ ಅವರೇ, ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿರುವ ಡಾ. ಜಿ. ಪೊಂಪನಗೌಡ ಅವರೆ, ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾಗಿರುವ ಶ್ರೀ ಅಲ್ಲಂ ಬಸವರಾಜ ಅವರೇ, ಈ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಟಿ. ಎಚ್. ಎಂ. ಗುರುಮೂರ್ತಿ ಅವರೇ, ಇಲ್ಲಿ ನೆರೆದಿರುವ ಎಲ್ಲರಿಗೂ ನಮಸ್ಕಾರಗಳು.

'ಪ್ರೌಢದೇವರಾಯ ಮತ್ತು ಎಂ. ವಿಶ್ವೇಶ್ವರಯ್ಯ– ಇಬ್ಬರ ಮೂರ್ತಿ ಅನಾವರಣ ಸಮಾರಂಭದಲ್ಲಿ ತಾವು ಮುಖ್ಯ ಅತಿಥಿಗಳಾಗಿ ವಿಶೇಷ ಉಪನ್ಯಾಸ ನೀಡಬೇಕು' ಎಂದು ಪೂಜ್ಯ ಗುರುಗಳು ದೂರವಾಣಿಯ ಮೂಲಕ ನನ್ನನ್ನು ಆಹ್ವಾನಿಸಿದ್ದರು. ಬಿಡುವಿಲ್ಲದ ಕಾರ್ಯಗಳ ಮತ್ತು ಅನಾರೋಗ್ಯದ ಕಾರಣವಾಗಿ ನಾನು ಪ್ರಯಾಣ ಮಾಡುವಂತಿರಲಿಲ್ಲ. ಆದರೆ, ಮುಖ್ಯವಾಗಿ ಮೂರು ಕಾರಣಗಳಿಂದ ಈ ಸಮಾರಂಭದಲ್ಲಿ ಭಾಗವಹಿಸುತ್ತಿದ್ದೇನೆ. ಮೊದಲನೆಯದಾಗಿ, ಪೂಜ್ಯರಾದ ಗುರುಗಳು ಆಹ್ವಾನಿಸಿದ್ದರಿಂದ, 'ಗುರುವಲಾ ವಾದಿಸಲ್ಬಾರದು' ಎಂಬ ಮಾತಿಗನುಗುಣವಾಗಿ ಅವರ ಮಾತಿಗೆ ಗೌರವ ನೀಡಬೇಕಾದುದು ಕರ್ತವ್ಯವೆಂದು ಭಾವಿಸಿದ್ದರಿಂದ. ಎರಡನೆಯದಾಗಿ, ವಿಜಯನಗರ ಮತ್ತು ಕರ್ನಾಟಕದ ಇತಿಹಾಸದಲ್ಲಿ ದೊಡ್ಡ ಸ್ಥಾನವನ್ನು ಪಡೆದೂ ಆಧುನಿಕ ವಿದ್ವಾಂಸರ ಉದ್ದೇಶಿತ ಉಪೇಕ್ಷೆಗೆ ಒಳಗಾಗಿರುವ ಕನ್ನಡದ ಶ್ರೇಷ್ಠ ರಾಜ ಪ್ರೌಢದೇವರಾಯನ ಬಗ್ಗೆ ಮಾತನಾಡಿ ಬೆಳಕು ಚೆಲ್ಲಬೇಕಾಗಿರುವುದರಿಂದ ಮತ್ತು ಮೂರನೆಯದಾಗಿ, ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಬಗ್ಗೆ ಇರುವ ಗೌರವ.

***

'ವಿಜಯನಗರ' ಎಂಬುದು ರಾಜಕೀಯ ಸಾಮ್ರಾಜ್ಯವಾದರೆ, ವಿದ್ಯಾವರ್ಧಕ ಸಂಘವು ಶಿಕ್ಷಣ ಸಾಮ್ರಾಜ್ಯ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಿಂದ ಈ ಭಾಗದಲ್ಲಿ ಎರಡು ರೀತಿಯಲ್ಲಿ ಜನಕಲ್ಯಾಣವಾಯಿತು. ಒಂದು, ಸಾಕ್ಷರ ಸಮಾಜ; ಎರಡು, ಸುಶಿಕ್ಷಿತ ಸಮಾಜ. ಈ ಎರಡೂ ಪ್ರಮುಖ ಅವಶ್ಯಕತೆಗಳೇ! ಇದು ಸಮಗ್ರ ಸಮಾಜದ ಅಭಿವೃದ್ಧಿಯ ಲಕ್ಷಣಗಳು. ಈ ಪರಿಸರದ ಪ್ರಾಚೀನ ಇತಿಹಾಸ ಸಂದರ್ಭದಲ್ಲಿ ವಿಜಯನಗರ ಸಾಮ್ರಾಜ್ಯದಿಂದಲೂ, ಆಧುನಿಕ ಸಂದರ್ಭದಲ್ಲಿ ವೀರಶೈವ ವಿದ್ಯಾವರ್ಧಕ ಸಂಘದಿಂದಲೂ ಸಾಕ್ಷರ ಸಮಾಜ ಮತ್ತು ಸುಶಿಕ್ಷಿತ ಸಮಾಜದ ಪರಿಕಲ್ಪನೆಗಳು ಅಕ್ಷರಶಃ ಸಾಮಾಜಿಕವಾಗಿ ಜಾರಿಗೆ ಬಂದಿವೆ. ಹೀಗಾಗಿ ಈ ಅಂಶಗಳನ್ನು ಹೊರಗಿಟ್ಟು ಈ ಭಾಗದ ಚರಿತ್ರೆಯನ್ನು ಬರೆಯಲು ಸಾಧ್ಯವಿಲ್ಲ!

ಬ್ರಿಟೀಶರು ಆರಂಭಿಸಿದ ಶಿಕ್ಷಣದ ಸಾರ್ವತ್ರೀಕರಣಕ್ಕೆ ಕರ್ನಾಟಕದಲ್ಲಿ ಲಿಂಗಾಯತರು ಮಾತ್ರ ಸ್ಪಂದಿಸಿದ್ದರು. ವಿಶೇಷವೆಂದರೆ, ಸಮಾಜದ ಈ ಜವಾಬುದಾರಿಯನ್ನು ಕೈಕೊಂಡ ಲಿಂಗಾಯತರು ಮೂಲತಃ ಅಕ್ಷರ ಜೀವಿಗಳಲ್ಲ. ಕೃಷಿ ಮತ್ತು ವ್ಯಾಪಾರ ಇವರ ಬದುಕಿನ ಮುಖ್ಯ ಜೀವನ ಕಾರ್ಯಗಳು. ಆದರೆ ಲಿಂಗಾಯತ ಧರ್ಮದ ಮುಖ್ಯ ಧೋರಣೆಯಾದ ದಾಸೋಹ ಸಿದ್ಧಾಂತವೇ ಮುಖ್ಯ ಕಾರಣವಾಗಿ ಇವರು ಸಮಾಜದ ಹೊಣೆ ಹೊತ್ತರು. ದಾಸೋಹ–ಲಿಂಗಾಯತದ ಆತ್ಮ. ಲಿಂಗಾಯತದ ಪ್ರಕಾರ ದಾಸೋಹ ಎಂಬುದು ಜೀವನ ಮೌಲ್ಯ. ಇದು ಹನ್ನೆರಡನೆಯ ಶತಮಾನದ ಸೃಷ್ಟಿ; ಅಗತ್ಯ ಕಾಲಕ್ಕೆ ತಕ್ಕಂತೆ ಇದು ರೂಪಾಂತರಗೊಳ್ಳುತ್ತ ಬಂದಿದೆ. ಮೂಲ ದ್ರವ್ಯವನ್ನು ಸ್ಥಾಯಿಯಾಗಿರಿಸಿಕೊಂಡು ಕಾಲಕ್ಕೆ ತಕ್ಕಂತೆ ಕಾಲದ ಅಗತ್ಯವನ್ನು ಅರ್ಥಮಾಡಿಕೊಂಡು ಸಾಹಿತ್ಯ ರಚನೆಯ ಮೂಲಕ, ಸಿದ್ಧಾಂತವನ್ನು ರೂಪಗೊಳಿಸುವುದರ ಮೂಲಕ, ಶಿಕ್ಷಣ ಪೂರೈಕೆಯ ಮೂಲಕ ತನ್ನ ಕಾರ್ಯವನ್ನೂ ಲಿಂಗಾಯತ ಮಾಡಿತು. ಇದು ಇಪ್ಪತ್ತನೆಯ ಶತಮಾನದಲ್ಲಿ ಕರ್ನಾಟಕ್ಕೆ ಲಿಂಗಾಯತದ ಮಹತ್ವದ ಕಾಣಿಕೆಯಾಗಿದೆ.

ಬೆಳವಣಿಗೆ ಎಂದರೆ ಬದಲಾವಣೆಗೆ ಸರಿಯಾಗಿ ಸ್ಪಂದಿಸುವುದೇ ಆಗಿದೆ. ಇದು ಒಂದು ಅರ್ಥದಲ್ಲಿ ದಾಸೋಹ ಎಂಬ ಹನ್ನೆರಡನೇ ಶತಮಾನದ ಲಿಂಗಾಯತದ ಮತ್ತು ಶರಣರ ಪರಿಕಲ್ಪನೆಯ ಆಧುನಿಕ ಚಿಂತನೆಯೂ ಆಗಿದೆ. ಲಿಂಗಾಯತ ಧರ್ಮದ ಬಹುಮುಖ್ಯ ಸಾಮಾಜಿಕ ಲಕ್ಷಣವೆಂದರೆ ಕಾಲಾನುಗುಣದಲ್ಲಿ ತನ್ನ ಚಿಂತನೆಯನ್ನು ಅನ್ವಯಿಸಿಕೊಳ್ಳುವುದು. ಅಕ್ಷರದಾಸೋಹವು ದಾಸೋಹವನ್ನು ಇಪ್ಪತ್ತನೆಯ ಶತಮಾನಕ್ಕೆ ಅನ್ವಯಿಸಿದ ಲಿಂಗಾಯತದ ಮುಖ್ಯ ಉದ್ದೇಶವಾಗಿದೆ. ವೀರಶೈವ ವಿದ್ಯಾವರ್ಧಕ ಸಂಘವು ಅಂಥ ಅವಶ್ಯಕತೆಯನ್ನು ಪೂರೈಸಿದೆ. ಆರಂಭದಲ್ಲಿ ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ –ಪ್ರೌಢ ಶಿಕ್ಷಣ, ಕಾಲೇಜು ಶಿಕ್ಷಣ, ವೈದ್ಯಕೀಯ–ಕಂಪ್ಯೂಟರ್ ಶಿಕ್ಷಣ ಇವೆಲ್ಲವುಗಳು ಪೂರೈಸಬೇಕಾದ ಅಗತ್ಯಗಳಾಗಿವೆ.

ತಾಂತ್ರಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪುತ್ಥಳಿ ಸ್ಥಾಪನೆಯು ಅರಿವಿನ ವಿಸ್ತಾರದ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯವಾಗಿದೆ.

ಪ್ರೌಢದೇವರಯನೆಂಬ ಅರಸು, ವಿಶ್ವೇಶ್ವರಯ್ಯನೆಂಬ ದಿವಾನ–ಈ ಇಬ್ಬರೂ ಅರಸು ಎಂದರೆ ಹೇಗಿರಬೇಕು? ಪ್ರಧಾನಿ ಎಂದರೆ ಹೇಗಿರಬೇಕು? ಎಂಬುದಕ್ಕೆ ಚರಿತ್ರೆಯಲ್ಲಿ ನಿದರ್ಶನವಾಗಿರುವವರು. ಸೃಜನಶೀಲ ನಿರ್ಮಾಣದ ಪ್ರತಿಭೆಯನ್ನು ಹೊಂದಿರುವ ಈ ಇಬ್ಬರ ಪ್ರತಿಮೆಗಳ

ಅನಾವರಣವಾಗುತ್ತಿರುವುದು ಔಚಿತ್ಯಪೂರ್ಣ. ಅಂಥ ಆದರ್ಶದಲ್ಲಿ ಸಂಸ್ಥೆಯ ಆಡಳಿತ, ಶಿಕ್ಷಣ ಬೆಳೆಯಲಿ ಎಂದು ಹಾರೈಸುತ್ತೇನೆ.

***

ಚರಿತ್ರೆಯಲ್ಲಿ ಆಡಳಿತ ಎಂಬುದು ಮೂರು ಪರಿಕಲ್ಪನೆಗಳಲ್ಲಿ ರೂಪುಗೊಂಡಿದೆ. ಪ್ರಜಾಸತ್ತೆ, ರಾಜಸತ್ತೆ, ದೇವಸತ್ತೆ. ವಿಜಯನಗರವೆಂದರೆ ಅದು ರಾಜಸತ್ತೆ ಸಂದರ್ಭದಲ್ಲಿ ದೇವಸತ್ತೆ ಸಾಮ್ರಾಜ್ಯದ ಪ್ರಯೋಗವಾದ ಕಾಲವಾಗಿದೆ. ಹರಿಹರ ಹಂಪೆಯಲ್ಲಿದ್ದ ಕವಿ. ಸಾಹಿತ್ಯದಲ್ಲಿ ಭಕ್ತಿಯನ್ನು ಪ್ರತಿಪಾದಿಸಿದ ಕನ್ನಡದ ಶ್ರೇಷ್ಠ ಕವಿ. ತಾನು ಬರೆದಿರುವ ರಗಳೆಗಳಲ್ಲಿ ವಿರೂಪಾಕ್ಷನನ್ನು ಹಂಪೆಯ ಅಧಿದೈವವೆಂದೂ, ವಿರೂಪಾಕ್ಷನೇ ತನ್ನ ಕಾವ್ಯಕ್ಕೆ ಒಡೆಯ ಎಂದೂ ಹೇಳಿದ್ದಾನೆ. ಅಂದರೆ ಹಂಪೆಯೆಂಬ ಪ್ರದೇಶ ಯಾವುದೇ ಕಾಲದಲ್ಲಿಯೂ ದೇವಸತ್ತೆಯಲ್ಲಿಯೇ ಇತ್ತು. ವಿಜಯನಗರ ಸಾಮ್ರಾಜ್ಯವು ಇಂಥ ದೇವಸತ್ತಾ ಸಾಮ್ರಾಜ್ಯದ ಕೇಂದ್ರದಲ್ಲಿ ಸ್ಥಾಪನೆಯಾದಾಗ ವಿರೂಪಾಕ್ಷನ ಒಡೆತನದಲ್ಲಿಯೇ ರಾಜ್ಯಾಡಳಿತ ನಡೆಯಿತು. ಹೀಗಾಗಿ ವಿಜಯನಗರ ಸಾಮ್ರಾಜ್ಯದ ಪ್ರತಿಯೊಬ್ಬ ರಾಜರ ಹೆಸರಿನಲ್ಲಿ ಅದರ ಅಂಕಿತ ಕಂಡು ಬರುತ್ತದೆ. ಪ್ರೌಢ+ದೇವರಾಯ, ಕೃಷ್ಣ+ದೇವರಾಯ, ಅಚ್ಯುತ+ದೇವರಾಯ ಇತ್ಯಾದಿಯಾಗಿ, ಆದರೆ, ಹಂಪಿಯಲ್ಲಿ ಇಂಥ ದೇವರ ಹೆಸರಿನ ಎರಡು ಸಂಸ್ಕೃತಿಗಳು, ನಾಲ್ಕು ಅರಸುಮನೆತನಗಳು ರಾಜ್ಯಾಡಳಿತ ಮಾಡಿದವು. ಸಂಗಮ, ಸಾಳ್ವ, ತುಳುವ, ಅರವೀಡು ಎಂಬ ನಾಲ್ಕು ಮನತನಗಳು ರಾಜ್ಯಭಾರ ಮಾಡಿದವಾದರೂ ಎರಡು ದೈವ ಸಂಸ್ಕೃತಿಗಳು ಇಲ್ಲಿ ಮುಖಾಮುಖಿಯಾದವು. ವಿರೂಪಾಕ್ಷ ಸಂಸ್ಕೃತಿ ಮತ್ತು ವಿಠ್ಠಲ ಸಂಸ್ಕೃತಿಗಳೇ ಆ ಎರಡು ದೈವ ಸಂಸ್ಕೃತಿಗಳು. ವಿರೂಪಾಕ್ಷ ಸಂಸ್ಕೃತಿಯ ಪ್ರಸಿದ್ಧರಾಜ ಸಂಗಮವಂಶದ ಪ್ರೌಢದೇವರಾಯ; ವಿಠ್ಠಲ ಸಂಸ್ಕೃತಿಯ ಪ್ರಸಿದ್ಧರಾಜ ತುಳುವ ವಂಶದ ಕೃಷ್ಣದೇವರಾಯ. ದೈವ ಸಂಸ್ಕೃತಿಗಳು ಬದಲಾದ ಸಂದರ್ಭದಿಂದ ರಾಜ್ಯಾಡಳಿತದಲ್ಲಿ ಭಿನ್ನಧೋರಣೆಗಳು ಕಂಡುಬಂದವು. ಇದರಿಂದ ಮೂಲ ವಿರೂಪಾಕ್ಷ ಸಂಸ್ಕೃತಿನಿಷ್ಠವಾಗಿದ್ದ ಜನ ಸಮುದಾಯದ ಮೇಲೆ ಪ್ರತಿಕೂಲ ಪರಿಣಾಮವುಂಟಾಯಿತು. ಪ್ರಾಚೀನ ಕಾಲದಿಂದಲೂ ವಿರೂಪಾಕ್ಷ ನಿಷ್ಠವಾಗಿದ್ದ ಹಂಪೆ ಭೂ ಪ್ರದೇಶವು ರಾಜ್ಯಾಧಿಕಾರದ ನೆಪದಲ್ಲಿ ಬದಲಾದದ್ದು ಪ್ರಜೆಗಳ ಅಸಮಾಧಾನಕ್ಕೆ ಗುರಿಯಾಯಿತು. ಡಿಂಡಿಮ ಎಂಬ ಕವಿಯು ತನ್ನ 'ಸಾಳ್ವಾಭ್ಯುದಯ' ಎಂಬ ಸಂಸ್ಕೃತ ಕಾವ್ಯದಲ್ಲಿ ಈ ಸಾಂಸ್ಕೃತಿಕ ಸ್ಥಿತ್ಯಂತರವನ್ನು ಸೂಕ್ಷ್ಮವಾಗಿ ಗಮನಿಸಿದ್ದಾನೆ. ಡಿಂಡಿಮನು ಸಾಳ್ವ ಅರಸುಮನೆತನದ ಕೊನೆಯ ಮುಖ್ಯ ದೊರೆಯಾದ ಸಾಳುವ ನರಸಿಂಹನ ಕಾಲದಲ್ಲಿದ್ದವನು. ತುಳುವ ವಂಶವು ಆಡಳಿತ ಮಾಡಿದ ಕಾಲದವರೆಗೆ ಇವನು ಜೀವಂತವಾಗಿದ್ದವನು. ವಿರೂಪಾಕ್ಷ ಎಂಬ ರಾಜ ಮುದ್ರೆಯಲ್ಲಿ ರಾಜ್ಯಾಡಳಿತ ನಡೆಯುತ್ತಿದ್ದ ಈ ಕಾಲಘಟ್ಟದಲ್ಲಿ 'ಶ್ರೀ ರಾಮ' ರಾಜಮುದ್ರೆಯಲ್ಲಿ ರಾಜ್ಯಾಡಳಿತ ಮೊದಲಾಯಿತು. 'ಯಥಾ ರಾಜಾ ತಥಾ ಪ್ರಜಾ' ಎಂಬಂತೆ ಪ್ರಜಾಸಮುದಾಯವು 'ಶ್ರೀರಾಮ' ಅಂಕಿತಕ್ಕೆ ಬದಲಾದುದಷ್ಟೇ ಅಲ್ಲದೇ, ಪರ್ಯಾಯ ದೈವ ಸಂಸ್ಕೃತಿಯಿಂದ ಹಂಪೆಯಲ್ಲಿ ಸಾಂದ್ರಗೊಳಿಸಿತು!

'ವಿರೂಪಾಕ್ಷ ನಿಷ್ಠೆ'ವಾಗಿದ್ದ ಸಂಗಮರಾಜಮನೆತನವು ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದುದು ಸಮಸ್ಯೆಯೆನಿಸಲಿಲ್ಲ. 'ಶ್ರೀರಾಮನಿಷ್ಠೆ'ವಾದ ತುಳುವ ರಾಜಮನೆತನವು ವಿಜಯನಗರ ಸಾಮ್ರಾಜ್ಯವನ್ನು ಆಳಲಾರಂಭಿಸಿದ್ದು ಆಂತರಿಕ ಸಮಸ್ಯೆಯೂ ಆಯಿತು.ಈ ಸಾಂಸ್ಕೃತಿಕ ಪಲ್ಲಟವು ಎರಡು ರೀತಿಯ

ಪರಿಣಾಮವನ್ನುಂಟುಮಾಡಿತು. ಒಂದು, ಧಾರ್ಮಿಕವಾಗಿ ಇದು ಹಿಂದೂ ಮತ್ತು ಮುಸ್ಲಿಂ ಎಂಬ ಒಂದು ಮತ್ತು ವಿರೂಪಾಕ್ಷ ಮತ್ತು ವಿಠಲ ಎಂಬ ಎರಡು–ಹಂತಗಳಲ್ಲಿ ಆಂತರಿಕ ಭಿನ್ನ ಧೋರಣೆಗೆ ಕಾರಣವೂ ಅಯಿತು. ಎರಡನೆಯಾದಾಗಿ ಭಾಷಿಕವಾಗಿ ಇದು ವಿರೂಪಾಕ್ಷ ನೆಲೆಯ ಕನ್ನಡಿಗರು, ವಿಠಲ (ವೆಂಕಟೇಶ) ನೆಲೆಯ ತೆಲುಗರು ಎಂಬಂಥ ಆಂತರಿಕ ಭಿನ್ನ ಧೋರಣೆಗೆ ಕಾರಣವಾಯಿತು. ಅಂದರೆ ಹಂಪೆ ಕೇಂದ್ರಿತವಾದ ವಿಜಯನಗರ ಸಾಮ್ರಾಜ್ಯದಲ್ಲಿ ರಾಜವಂಶಗಳಷ್ಟೇ ಬದಲಾಗದೇ ಅದರ ಜೊತೆಗೆ ಬದಲಾದ ದೈವ ಸಂಸ್ಕೃತಿಯ ಧೋರಣೆಗಳು ಪ್ರಜೆಗಳಲ್ಲಿ ಧಾರ್ಮಿಕ ಮತ್ತು ಭಾಷಿಕವಾದ ಭಿನ್ನ ಧೋರಣೆಗಳಿಗೆ ಕಾರಣವಾದವು. ವಿರೂಪಾಕ್ಷ ಅಂಕಿತದ ಹಂಪೆಯ ಸ್ಥಳದಲ್ಲಿ ವೆಂಕಟೇಶನೆಲೆಯ ತಿರುಪತಿಯು ಬದಲಾದದ್ದು, ಕರ್ನಾಟಕದ ಕನ್ನಡ ಪ್ರಾಧಾನ್ಯ ಸ್ಥಾನದಲ್ಲಿ ಆಂಧ್ರದ ತೆಲುಗು ಪ್ರಾಧಾನ್ಯತೆ ಮೂಡಿದ್ದು ಪ್ರಜೆಗಳಲ್ಲಿ, ವಿಶೇಷವಾಗಿ ಭಾವುಕ ಜನಸಮುದಾಯದಲ್ಲಿ ಅಸಮಾಧಾನ ಮೂಡಿಸಿತು.

ಸಾಂಸ್ಕೃತಿಕ ಮತ್ತು ಧಾರ್ಮಿಕ ಸ್ಥಿತ್ಯಂತರಗಳು ಸ್ವಾಭಿಮಾನವನ್ನು ಕೆಣಕುವಂಥವುಗಳಾಗಿದ್ದರಿಂದ ಸಹಜವಾಗಿ ಅಸಮಾಧಾನ–ಪ್ರತಿಭಟನೆ ರೂಪತಾಳುವ ಸಂದರ್ಭಕ್ಕಾಗಿ ಕಾಯುತ್ತಿತ್ತು! ಆದರೆ ಇದು ದೊಡ್ಡ ಮಟ್ಟದಲ್ಲಿ, ತೀವ್ರ ಪ್ರಮಾಣದಲ್ಲಿ ನಡೆದದ್ದು ಸಂಗಮ>ಸಾಳುವ ರಾಜವಂಶಗಳ ನಂತರ ಆಡಳಿತವನ್ನು ಕೈಗೆ ತೆಗೆದುಕೊಂಡ ತುಳುವ ವಂಶದ ಕಾಲದಲ್ಲಿ. ವಿಶೇಷವಾಗಿ ಕೃಷ್ಣದೇವರಾಯನ ಕಾಲದಲ್ಲಿ.

ವಿಶೇಷವೆಂದರೆ, ಈ ಘರ್ಷಣೆ ಆರಂಭವಾಗದ ಔದಾರ್ಯದ ಕಾಲದಲ್ಲಿ ಪ್ರೌಢದೇವರಾಯ ರಾಜ್ಯವನ್ನು ಆಳಿದ. ಪ್ರೌಢ ದೇವರಾಯನನ್ನು ಕುರಿತಂತೆ ಒಂದು ಶಾಸನವು, '.....ಸಕಲ ವರ್ಣಾಶ್ರಮ ಧರ್ಮಗಳನ್ನು ಸುಖ ಸಂಕಥಾ ಭೋಗದಿಂ....' ಎಂದು ಹೇಳುತ್ತದೆ. ಈತನ ಕಾಲದಲ್ಲಿ ಶೈವ, ವೈಷ್ಣವ, ಜೈನ ಧರ್ಮಗಳು ಸಮಾನ ಪೋಷಣೆಯಲ್ಲಿದ್ದವು. ಮುಸಲ್ಮಾನನಾದ ಅಹಮ್ಮದಖಾನನು ಈತನಲ್ಲಿ ಕಟಗಿ ವೃತ್ತಿಯಲ್ಲಿದ್ದವನು. ಈ ಅಹಮ್ಮದಖಾನನು ಧರ್ಮಶಾಲೆಯನ್ನು, ಭಾವಿಯನ್ನು ನಿರ್ಮಿಸಿದುದಲ್ಲದೇ, ನಿತ್ಯವೂ ಖುರಾನ್ ಗ್ರಂಥವನ್ನು ಪಠಣ ಮಾಡುತ್ತಿದ್ದನು. ರಾಜಕೀಯವಾಗಿ ತೆಲುಗರು ಪ್ರೌಢದೇವರಾಯನನ್ನು ಗೌರವಿಸಿದ್ದರು. ತೆಲುಗು ಶಾಸನಗಳಲ್ಲಿ 'ಪ್ರಭುಡು ದೇವರಾಯ' ಎಂಬ ಉಲ್ಲೇಖವಿದೆ. ಭಾಷೆ–ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರೌಢದೇವರಾಯನ ಕಾಲದ ಸಾಹಿತ್ಯ ಸಮೃದ್ಧವಾದುದು. ಆಂಧ್ರಕವಿ ಸಾರ್ವಭೌಮನೆನಿಸಿದ ಶ್ರೀನಾಥ ಕವಿಯು, 'ಕನ್ನಡ ರಾಜ್ಯಲಕ್ಷ್ಮೀ ದಯಲೇದಾ, ನೇನು ಶ್ರೀನಾಥುಡನ್ ...' (ನಾನು, ಶ್ರೀನಾಥಕವಿ; ಕನ್ನಡ ತಾಯೇ ನಿನಗೆ ದಯವಿಲ್ಲವೇ?), 'ವಾಕ ವಿತ್ವಂಬು ನಿಜಮು ಕರ್ಣಾಟ ಭಾಷಮು...' (ನನ್ನ ಕವಿತ್ವದ ನಿಜಶಕ್ತಿ ಇರುವುದು ಕನ್ನಡದಲ್ಲಿ) ಎನ್ನುತ್ತಾನೆ. ಬ್ರಹ್ಮಸೂತ್ರವೃತ್ತಿ, ರತಿರತ್ನ ಪ್ರದೀಪಿಕಾಗಳಂಥ ಸಂಸ್ಕೃತ ಕಾವ್ಯಗಳು ಪ್ರೌಢದೇವರಾಯನ ಆಸ್ಥಾನದಲ್ಲಿ ರಚನೆಯಾಗಿವೆ.

***

ವಿಶೇಷವಾಗಿ ಪ್ರೌಢದೇವರಾಯನನ್ನು ಕುರಿತ ಸಮಗ್ರ ಸಂಶೋಧನೆ ಅಗತ್ಯವಂತೂ ಇದ್ದೇ ಇದೆ. ಇದು ಶೈಕ್ಷಣಿಕವಾದ ಮತ್ತು ಸಂಶೋಧನಾತ್ಮಕವಾದ ಮುಖ್ಯ ವಿಷಯವಷ್ಟೇ ಅಲ್ಲ. ಇದು ಚರಿತ್ರೆಯನ್ನು ಪುನಾರಚಿಸಲು ಆಗಬೇಕಾದ ಮಹತ್ವದ ಶೋಧವೂ ಆಗಿದೆ. ಸಂಗ್ರಹಿಸಬೇಕಾದ

ಆಕರಗಳು ಹಲವು ಮಾದರಿಗಳಲ್ಲಿವೆ. ಅವು ಮುಖ್ಯವಾಗಿ ಮೂರು ಕವಲುಗಳಲ್ಲಿವೆ. ಒಂದು, ಪ್ರವಾಸಿಗಳ ದಿನಚರಿ (ನಿಕೊಲೋಸ್ ಕಾಂಟಿ, ಅಬ್ದುಲ್ ರಜಾಕ್, ನ್ಯೂನಿಜ್ ಮೊದಲಾದವರು), ಎರಡು ಶಾಸನಗಳು (ಒಟ್ಟು ೨೭೫. ಕನ್ನಡ ಮತ್ತು ಸಂಸ್ಕೃತ ೨೨೦, ತೆಲುಗು ೧೫, ತಮಿಳು ೪೦), ಮೂರು, ಸಾಹಿತ್ಯ. (ಈ ಕಾಲದ ಸಾಹಿತ್ಯ ವಿಪುಲವಾದುದು). ಇವು ವಿಭಿನ್ನ ಮಾಹಿತಿಗಳು. ಇವುಗಳ ಉದ್ದೇಶವೂ ವಿಭಿನ್ನ. ಈ ಮೂರೂ ಮಾಹಿತಿಗಳನ್ನು ಸೇರಿಸಿ ಅಧ್ಯಯನ ಮಾಡಿ ಸಮಗ್ರ ಚಿತ್ರವನ್ನು ಕಂಡುಕೊಳ್ಳಬೇಕಾಗಿದೆ.

ವಿಜಯನಗರ ಸಾಮ್ರಾಜ್ಯ ಕಾಲದ ಒಟ್ಟಾರೆ ಸಾಹಿತ್ಯವನ್ನು ಎರಡು ಭಾಗಗಳಲ್ಲಿ ನೋಡಬಹುದಾಗಿದೆ. ಪ್ರೌಢದೇವರಾಯನ ಕಾಲದ ಸಾಹಿತ್ಯ–ಕನ್ನಡದಲ್ಲಿ ಈ ಬಗ್ಗೆ ವಿಪುಲ ಆಕರ ಲಭ್ಯವಾಗುತ್ತವೆ. (ಈ ಕಾಲದ ಲಿಂಗಾಯತ ಸಾಹಿತ್ಯವಂತೂ ಪ್ರೌಢದೇವರಾಯನನ್ನು ಹೊರತು ಪಡಿಸುವಂತಿಲ್ಲ!) ಕೃಷ್ಣದೇವರಾಯನ ಕಾಲದ ಸಾಹಿತ್ಯ–ಕನ್ನಡದಲ್ಲಿ ಗೈರು ಹಾಜರು, ತೆಲುಗಿನಲ್ಲಿ ವಿಪುಲ ಆಕರ. ಆದರೆ, ಪ್ರಾಚೀನ ಕಾಲದಲ್ಲಿ ಕನ್ನಡಿಗರ ಮನದಲ್ಲಿ ಇಳಿದವನು ಪ್ರೌಢದೇವರಾಯ ಆಧುನಿಕ ಕಾಲದಲ್ಲಿ ಕನ್ನಡಿಗರ ಮನದಲ್ಲಿ ಉಳಿದವನು ಕೃಷ್ಣದೇವರಾಯ. ಇದನ್ನು ಗಮನಿಸಿದರೆ, ಯಾರಿಂದ ಕರ್ನಾಟಕಕ್ಕೆ ಹೆಚ್ಚು ಉಪಕಾರ?! ಪ್ರಶ್ನೆ ಉದ್ಭವಿಸಿ, ಹಾಗೇ ಉಳಿಯುತ್ತದೆ!

***

ರಾಜ ಮತ್ತು ಧರ್ಮ ಎಂಬ ಎರಡು ಘಟಕಗಳ ಮುಖಾಮುಖಿಯಲ್ಲಿ ನೋಡುವುದಾದರೆ ಪ್ರೌಢದೇವರಾಯನನ್ನು ಲಿಂಗಾಯತ ಧರ್ಮಕ್ಕೆ ಮುಖ ಮಾಡಿ ಚರ್ಚಿಸಬೇಕಾಗುತ್ತದೆ. ಲಿಂಗಾಯತವು ಹನ್ನೆರಡನೇ ಶತಮಾನದಲ್ಲಿ ಬಿಜ್ಜಳ ಕೇಂದ್ರಿತ ನೆಲೆಯಲ್ಲಿ ರೇವಣ, ಬಸವಾದಿ ಶರಣರಿಂದ ಚಲನ ಶೀಲ ಸಿದ್ಧಾಂತವನ್ನು ರೂಪಿಸಿ ಅನುಭಾವಿಗಳಲ್ಲಿ ಬೆಳೆಯಿತು. ಇದು ಒಂದು ಅರ್ಥದಲ್ಲಿ ಅತೃಪ್ತಿಗಳನ್ನು ಎದುರು ಹಾಕಿಕೊಂಡಿತು! ಲಿಂಗಾಯತವು ಮತ್ತೊಂದು ಹಂತದಲ್ಲಿ ಅಂದರೆ ಹದಿನೈದನೇ ಶತಮಾನದಲ್ಲಿ ಪ್ರೌಢದೇವರಾಯ ಕೇಂದ್ರಿತ ನೆಲೆಯಲ್ಲಿ ವಚನ ವ್ಯಾಖ್ಯಾನಕಾರರ ಷಟ್‌ಸ್ಥಲ ನಿರ್ಣಾಯಕರ ಮೂಲಕ ಸ್ಥಿತೀಕರಣ ಸಿದ್ಧಾಂತವನ್ನು ರೂಢಿಸಿ ಆಚಾರ್ಯರಲ್ಲಿ ಬೆಳೆಯಿತು. ಇದು ಒಂದು ಅರ್ಥದಲ್ಲಿ ಸಂತೃಪ್ತಿಯನ್ನು ಒಪ್ಪಿಸಿಕೊಂಡಿತು!

ನೂರೊಂದು ವಿರಕ್ತರಲ್ಲಿ ಒಬ್ಬನೆನ್ನುವ ಕರಸ್ಥಲದ ವೀರಣ್ಣೊಡೆಯನು ಪ್ರೌಢದೇವರಾಯನ ಮಂತ್ರಿಯೂ ಅಳಿಯನೂ ಆಗಿರುವುದು ಒಂದು ಮಹತ್ವದ ಧಾರ್ಮಿಕ ಸಂದರ್ಭವಾಗಿದೆ. ಷಟ್ ಸ್ಥಲ ನಿರ್ಣಾಯಕನಾದ–ಮಗ್ಗೆಯ ಮಾಯಿದೇವನನ್ನು, 'ಪ್ರೌಢನಿಂ ಪೂಜೆಯಂ ಕೈಕೊಂಡು'.....ಎಂದು ಚನ್ನಬಸವ ಪುರಾಣ ಉಲ್ಲೇಖಿಸುವುದನ್ನು ಗಮನಿಸಬೇಕು. ಭಂಡಾರಿ ಜಕ್ಕಪ್ಪನು ತನ್ನ ಮಂತ್ರಿ ಪದವಿಯನ್ನು ಲಕ್ಕಣ್ಣನಿಗೆ ಕೊಡಿಸುತ್ತಾನೆ. ಇನ್ನು ಈತನ ಕಾಲದ ಶರಣಕವಿಗಳಾದ ಏಕೋತ್ತರ ಶತಸ್ಥಲ, ಪ್ರಭುಲಿಂಗಲೀಲೆ ಮೊದಲಾದ ಕೃತಿಗಳ ಕರ್ತೃಗಳು ವಿಜಯನಗರದ ಗೌರವಾನ್ವಿತ ಸ್ಥಾನ ಪಡೆದಿದ್ದರು. ಈ ಕೃತಿಗಳು ವಿಜಯನಗರದಲ್ಲಿ ಮೆರವಣಿಗೆ ಮಾಡಿಸಿಕೊಂಡಿದ್ದವು ಎಂಬುದು ಮಹತ್ವದ ಘಟನೆಗಳೆನಿಸುತ್ತವೆ. ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ, ಚಂದ್ರಶೇಖರನ ಪಂಪಾಸ್ಥಾನವರ್ಣನಂ– ಶಿವಪರವಾದ ಕೃತಿಗಳಾಗಿವೆ.

***

ಪ್ರೌಢದೇವರಾಯನು ಕನ್ನಡದ ಶ್ರೇಷ್ಠ ದೊರೆಯಾಗಿರುವ ಹಿನ್ನೆಲೆಯಲ್ಲಿಯೇ ಆತನ ಧಾರ್ಮಿಕ ನಿಲುವು ಶೈವ ಪರವಾಗಿತ್ತು ಎಂಬುದಕ್ಕೆ ವಿಪುಲ ಮಾಹಿತಿಗಳು ಆಧಾರವನ್ನೊದಗಿಸುತ್ತವೆ.

ಆದರೆ, ಯಾವ ಶೈವ? ಪ್ರಶ್ನೆಯೂ ಇದರ ಮುಂದಿದೆ.

* ಶಿವತತ್ತ್ವ ಚಿಂತಾಮಣಿಯಲ್ಲಿ,

ಪೂಜಕನು ತಾನೆಯಾದಪೆನೆನುತ ಮನವೊಲಿದು
ರಾಜಶೇಖರ ವಿರೂಪಾಕ್ಷಂ ಸ್ವಲೀಲೆಯಂ
ರಾಜಾಧಿರಾಜ ಪರಮೇಶ್ವರಂ ಶ್ರೀ ವೀರದೇವರಾಜೇಂದ್ರನಾಗಿ॥

* ಚೆನ್ನಬಸವ ಪುರಾಣದಲ್ಲಿ,

ವಿಕಟಾಂಗ ಗಜೇಶ್ವರನನ್ನು ನೋಡಿ ನಕ್ಕ ದೇವೇಂದ್ರ
ಶಾಪಗ್ರಸ್ತನಾಗಿ ಪ್ರೌಢದೇವರಾಯನಾಗಿ ಹುಟ್ಟಿದ.....

*ಶಿವತತ್ತ್ವಚಿಂತಾಮಣಿಯಲ್ಲಿ,

ಪರಹಿತದ ಬೀಡು ಸತ್ಯದ ನುಡಿಯ ನಡುನಾಡು....
ಪರತರ ಶಿವಾನುಭಾವಿಗಳ ಪರಿಮಿತ ಗೃಹಂ
ಪರಿಕೆ ಪರಿಗಿದು ವಿಜಯಕಲ್ಯಾಣ ಮಾಡುದು.....

(ಹಂಪಿ, ರಾಜಕೀಯವಾಗಿ ವಿಜಯನಗರ, ಧಾರ್ಮಿಕವಾಗಿ ವಿಜಯಕಲ್ಯಾಣವೆನಿಸಿತು. ಕಾಶಿ, ಕೇದಾರ, ಶ್ರೀಶೈಲ, ಉಜ್ಜನಿ, ರಂಭಾಪುರಿಯಾಗಲಿಲ್ಲ; ಲಿಂಗಾಯತರಿಗೆ ಕಲ್ಯಾಣ ಬಿಟ್ಟರೆ ಗತಿಯಿಲ್ಲ. ಹನ್ನೆರಡನೇ ಶತಮಾನದ ಕಲ್ಯಾಣವೇ ಹದಿನೈದನೇ ಶತಮಾನದಲ್ಲಿ ವಿಜಯಕಲ್ಯಾಣವೆನಿಸಿತು)

* ಪ್ರೌಢದೇವರಾಯನು, ವಿರೂಪಾಕ್ಷರಥ, ಪಂಪಾಂಬಿಕೆ ರಥ, ಗಜೇಶ ರಥ ನಿರ್ಮಿಸಿದ. ಇದು ಹಂಪೆಗೆ ಸಂಬಂಧಿಸಿದ ಪ್ರಮುಖ ಕಾಣಿಕೆ.

* ಆಣೆಕಟ್ಟು, ಕೆರೆ, ಭಾವಿ ನಿರ್ಮಾಣ. ಮಧುರಾವಿಜಯದ ಉಲ್ಲೇಖದಂತೆ ಮುಸಲ್ಮಾನ ಸೈನಿಕರಂತೆ ಕಾವೇರಿ ಅಡ್ಡಾದಿಡ್ಡಿ ಹರಿದಿರುವಳೆಂದು , ನಿಯಂತ್ರಿಸಲು ವಿಜಯನಗರ ಅರಸರು ಆಣೆಕಟ್ಟು ಕಟ್ಟಿಸಿದರು.

ಇಂಥ ಧಾರ್ಮಿಕ ಚಟುವಟಿಕೆಗಳಿಂದ ಪ್ರೌಢದೇವರಾಯನ ಧಾರ್ಮಿಕ ನಿಲುವನ್ನು ಅರಿಯಬೇಕಾಗಿದೆ.

ಸ್ಥಾವರವಾಗಿದ್ದ ಸಮಾಜವು ಜಂಗಮಶೀಲಗೊಂಡು ಕ್ರಮೇಣ ಪ್ರೌಢದೇವರಾಯನ ಕಾಲದಲ್ಲಿ ಸ್ಥಾವರಗೊಳ್ಳುವ ಅಂದರೆ, ಲಿಂಗಾಯತವು ವೀರಶೈವೀಕರಣಗೊಳ್ಳುವ ಧಾರ್ಮಿಕ ಸಂದರ್ಭ ಜರುಗಿತು ಎಂಬುದನ್ನು ಹೊರತುಪಡಿಸಿದರೆ, ಪ್ರೌಢದೇವರಾಯ ವಿಜಯನಗರ ಸಾಮ್ರಾಜ್ಯದ, ಕನ್ನಡನಾಡಿನ ಅಷ್ಟೇ ಅಲ್ಲದೇ ದಕ್ಷಿಣಭಾರತದ ಶ್ರೇಷ್ಠ ದೊರೆ ಎಂಬುದಕ್ಕೆ ಇತಿಹಾಸ ಸಾಕ್ಷಿ ಹೇಳುತ್ತದೆ.

ಇದೀಗ ಪ್ರೌಢದೇವರಾಯನ ಮೂರ್ತಿ ಅನಾವರಣ, ಆತನ ಹೆಸರಿನ ಮಹಾವಿದ್ಯಾಲಯ ರೂಪಗೊಂಡಿರುವುದು ಸಂತೋಷದ ವಿಷಯವಾಗಿದೆ.

ಈ ನೆಪದಲ್ಲಿ ಆಧುನಿಕವಾಗಿ ಪ್ರೌಢದೇವರಾಯನ ಹೆಸರನ್ನು ನೆನಪುಮಾಡಿಕೊಳ್ಳುವ ಶ್ರೇಷ್ಠ ಕಾರ್ಯ ಇದಾಗಿದೆ. ಇಂಥ ಪ್ರಯತ್ನ ಮಾಡಿದ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿಗೂ, ಮಹಾವಿದ್ಯಾಲಯದ ಆಡಳಿತ ಮಂಡಳಿಗೂ ಧನ್ಯವಾದಗಳನ್ನು ಸಲ್ಲಿಸಿ ನಾನು ವಿರಮಿಸುತ್ತೇನೆ.

***

ದಿನಾಂಕ ೧೬-೦೩-೨೦೦೮ ರಂದು ಹೊಸಪೇಟೆಯ ಶ್ರೀ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಪ್ರೌಢದೇವರಾಯ ಮತ್ತು ಸರ್ ಎಂ. ವಿಶ್ವೇಶ್ವರಯ್ಯ ಮೂರ್ತಿಗಳ ಅನಾವರಣ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾಡಿದ ಭಾಷಣ. ಸಮಾರಂಭದ ದಿವ್ಯ ಸಾನಿಧ್ಯವನ್ನು ಶ್ರೀ ಮ.ನಿ.ಪ್ರ. ಸಂಗನಬಸವ ಮಹಾಸ್ವಾಮಿಗಳು ವಹಿಸಿದ್ದು, ಮತ್ತೊಬ್ಬ ಮುಖ್ಯ ಅತಿಥಿಗಳಾಗಿ ಕರ್ನಾಟಕದ ಮಾಜಿ ಉಪಮುಖ್ಯ ಮಂತ್ರಿಗಳಾದ ಶ್ರೀ ಎಂ. ಪಿ. ಪ್ರಕಾಶ್ ಅವರು ಉಪಸ್ಥಿತರಿದ್ದರು. ಅವರೊಂದಿಗೆ ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಅಲ್ಲಂ ಬಸವರಾಜ ಅವರೂ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ಟಿ. ಎಚ್. ಎಂ. ಗುರುಮೂರ್ತಿ ಅವರೂ ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಜಿ. ಪೊಂಪನಗೌಡ ವಹಿಸಿದ್ದರು.

ಆಕರ : ಮಾರ್ಗ ಸಂಪುಟ-೮

೪೭

ಸಿಡ್ನಿ ಕನ್ನಡ ಕುವೆಂಪು ಜನ್ಮಶತಮಾನೋತ್ಸವ

ಸಿಡ್ನಿ ಕನ್ನಡ ಸಂಘದ ಅಧ್ಯಕ್ಷರಾಗಿರುವ ಮಾನ್ಯ ಶ್ರೀ ಗೋಪಿನಾಥರವರೇ, ಆಸ್ಟ್ರೇಲಿಯಾ ದೇಶದ ಸುಪ್ರಸಿದ್ಧ ನಗರವಾಗಿರುವ ಸಿಡ್ನಿಯಲ್ಲಿ ನೆಲೆ ನಿಂತಿರುವ ಕನ್ನಡ ಬಂಧುಗಳೇ ಎಲ್ಲರಿಗೂ ನಮಸ್ಕಾರ.

ಇಂದು ನಾನು ಸಿಡ್ನಿ ಕನ್ನಡ ಸಂಘದ ಆಶ್ರಯದಲ್ಲಿ ಜರುಗುತ್ತಿರುವ ಕಾರ್ಯಕ್ರಮಕ್ಕೆ ಅತಿಥಿಯಾಗಿ ಆಗಮಿಸಿದ್ದರೂ ಒಂದರ್ಥದಲ್ಲಿ ಕನ್ನಡದ ಯಾತ್ರಿಕನಾಗಿ ಈ ಪ್ರದೇಶಕ್ಕೆ ಬಂದಿದ್ದೇನೆ. ಏಷ್ಯಿಯಾ ಫೆಸಿಫಿಕ್ ಕನ್ನಡ ಸಂಘಗಳ ಕಾರ್ಯಕ್ರಮಗಳಲ್ಲಿ ಉದ್ದಕ್ಕೂ ಭಾಗವಹಿಸುವುದರ ಮೂಲಕ ಅಂದರೆ, ಮೆಲ್ಬೋರ್ನ್, ಅಡಿಲೆಡ್, ಅಕ್ಲಂಡ್, ಸಿಡ್ನಿ, ಸಿಂಗಾಪೂರ ಮೊದಲಾದ ನಗರಗಳ ಕನ್ನಡ ಸಂಘಗಳಲ್ಲಿ ಭಾಗವಹಿಸುವುದರ ಮೂಲಕ ನಾನು ಕನ್ನಡದ ಯಾತ್ರಿಕನಂತೆ ಈ ಪ್ರದೇಶಕ್ಕೆ ಬಂದಿದ್ದೇನೆ ಅಂತೆನಿಸುತ್ತದೆ. ಇಂದು ಇಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ನಾನು ವಿಶೇಷ ಸಂತೋಷದಿಂದ ಭಾಗವಹಿಸುತ್ತಿದ್ದೇನೆ. ಕರ್ನಾಟಕಕ್ಕೆ ಸೀಮಿತವಾಗಿದ್ದ ಕನ್ನಡ ಕುಟುಂಬಗಳು ಇವತ್ತು ಜಾಗತಿಕವಾಗುತ್ತಾ ನಡೆದು ಅಲ್ಲಲ್ಲಿ ಕನ್ನಡ ಭಾಷಾ ದೀಪಗಳು ಅಸ್ತಿತ್ವಕ್ಕೆ ಬರುತ್ತಿವೆ. ಈ ಭಾಷಾ ದೀಪಗಳು ಕನ್ನಡ ಭಾಷಾ ದೀಪಗಳಾಗಿ ಬೆಳೆಯಬೇಕೆಂಬ ಉದ್ದೇಶದಿಂದ ನೀವೆಲ್ಲ ಈ ಸಿಡ್ನಿಯಲ್ಲಿ ಅಂಥ ಒಂದು ಪ್ರಯತ್ನವನ್ನು ಮಾಡುತ್ತಿರುವದನ್ನು ನಾನು ಗಮನಿಸುತ್ತಿದ್ದೇನೆ. ಕನ್ನಡ ಭಾಷಾ ದ್ವೀಪ, ದೀಪವಾಗುವಂತೆ ಯಾಕೆ ನೀವು ಪ್ರಯತ್ನ ಮಾಡುತ್ತಿದ್ದೀರಿ ಎಂದರೆ ನಿಮಗೆ ನಿಮ್ಮ ನಾಡಿನ ಬಗ್ಗೆ ಅಖಂಡವಾದ ಪ್ರೀತಿಯಿದೆ. ಒಬ್ಬ ಮನುಷ್ಯ ತನ್ನ ನಾಡನ್ನು ಏಕೆ ಪ್ರೀತಿಸುತ್ತಾನೆ? ಇದು ಬಹಳ ಮುಖ್ಯವಾದ ಪ್ರಶ್ನೆ. ಒಬ್ಬ ಮನುಷ್ಯ ತನ್ನ ನಾಡನ್ನು ಏಕೆ ಪ್ರೀತಿಸುತ್ತಾನೆ? ಅದರ ಬಗ್ಗೆ ಬ್ರೇಕ್ಟ್ ಎನ್ನುವ ಒಬ್ಬ ವಿದ್ವಾಂಸ ಒಂದು ಮಾತನ್ನು ಹೇಳುತ್ತಾನೆ. "ಒಬ್ಬ ಮನುಷ್ಯ ತನ್ನ ನಾಡನ್ನು ಏಕೆ ಪ್ರೀತಿಸುತ್ತಾನೆ ಎಂದರೆ, ಅಲ್ಲಿ ರೊಟ್ಟಿ ಹೆಚ್ಚು ರುಚಿ ಎನಿಸುತ್ತದೆ. ಅಲ್ಲಿ ಗಾಳಿ ಹೆಚ್ಚು ಸುವಾಸನೆಯಿಂದ ಕೂಡಿರುತ್ತದೆ. ಅಲ್ಲಿ ಮಾತುಗಳು ಹೆಚ್ಚು ಸಂಗೀತಮಯವಾಗಿ ಕೇಳಿಸುತ್ತವೆ. ಅಲ್ಲಿ ಆಕಾಶ ಹೆಚ್ಚು ಸಮೀಪವಾಗಿರುತ್ತದೆ. ಅಲ್ಲಿನ ನೆಲದ ಮೇಲೆ ನಡೆಯುವದು ಹೆಚ್ಚು ಸುಲಭವೆನಿಸುತ್ತದೆ." ಅಂದರೆ ನಾಡಿನ ಬಗ್ಗೆ ಒಂದು

ವಿಶಿಷ್ಟವಾದ, ವಿಚಿತ್ರವಾದಂತಹ ಒಂದು ಸೆಳೆತ, ಒಂದು ಎಳೆತ ನಮ್ಮ ಮನಸ್ಸಿನಲ್ಲಿ ಮನೆಮಾಡಿರುವ ಕಾರಣ ನಾಡು ಎಂದ ಕೂಡಲೇ ನಾವು ಮೈಮರೆತುಬಿಡುತ್ತೇವೆ.

"ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡವೆನೆ ಮೈ ನಿಮಿರುವುದು"

ಕುವೆಂಪು ಅವರ ಮಾತು ಇಂತಹ ಒಂದು ಭಾಷೆ, ದೇಶ ಇದರ ಮೋಹಕ್ಕೆ ಸಿಕ್ಕಿಕೊಂಡ ನೀವು ಇಲ್ಲಿ ಒಂದು ಸಂಘವನ್ನು ಕಟ್ಟಿಕೊಂಡು ಕನ್ನಡದ ಚಟುವಟಿಕೆಗಳನ್ನು ಹಮ್ಮಿಕೊಂಡಿರುವುದು ತುಂಬ ಸಂತೋಷದ ಸಂಗತಿ. ಇವತ್ತು ರಾಜ್ಯೋತ್ಸವ ಮತ್ತು ಮಹಾಕವಿ ಕುವೆಂಪು ಜನ್ಮಶತಮಾನೋತ್ಸವ ಈ ಎರಡೂ ಕಾರ್ಯಕ್ರಮವನ್ನು ಇಲ್ಲಿ ಹಮ್ಮಿಕೊಂಡಿದ್ದೀರಿ. ರಾಜ್ಯೋತ್ಸವ ಇದು ಕರ್ನಾಟಕದ ಸುದೀರ್ಘ ಇತಿಹಾಸದಲ್ಲಿಯೇ ಒಂದು ಅವಿಸ್ಮರಣೀಯವಾದ ಘಟನೆ. ಭಾರತೀಯರಾದ ನಮಗೆ ಸ್ವಾತಂತ್ರ್ಯೋತ್ಸವ ಎಷ್ಟು ಮಹತ್ವವಾದದ್ದೋ, ಕನ್ನಡಿಗರಾದ ನಮಗೆ ರಾಜ್ಯೋತ್ಸವವು ಅಷ್ಟೇ ಮಹತ್ವವಾದದ್ದು. ಯಾಕೆಂದರೆ, ೧೯೫೬, ನವೆಂಬರ ೦೧ ಇದರ ಹಿಂದಿನ ನಕಾಶೆಗಳ ನಕ್ಷೆಯನ್ನು ನೋಡಿದರೆ ಅದರಲ್ಲಿ ಕರ್ನಾಟಕದ ನಕ್ಷೆ ಇರಲಿಲ್ಲ. ಇದು ಅವಶ್ಯ ನೆನಪಿಡಬೇಕಾದ ಸಂಗತಿ. ೧೯೫೬ರ ಹಿಂದೆ ಭಾರತೀಯ ಭೂಪಟದಲ್ಲಿ ಕರ್ನಾಟಕದ ನಕ್ಷೆಯೇ ಇರಲಿಲ್ಲ. ಕರ್ನಾಟಕದ ಕೆಲವು ಭಾಗ ಮುಂಬೈ ಕರ್ನಾಟಕವನ್ನು ಸೇರಿಕೊಂಡು ಹೋಗಿತ್ತು, ಇನ್ನು ಕೆಲವು ಭಾಗ ನಿಜಾಮ ಕರ್ನಾಟಕ, ಇನ್ನು ಕೆಲವು ಭಾಗ ಮದ್ರಾಸ್ ಕರ್ನಾಟಕ, ಇನ್ನು ಕೆಲವು ಭಾಗ ಮೈಸೂರು ಕರ್ನಾಟಕ ಅದರಲ್ಲಿ ಮತ್ತೆ ಹತ್ತು ಹಲವು ಪ್ರಾಂತಗಳು. ಇದರಿಂದಾಗಿ ಕರ್ನಾಟಕವೇ ಭಾರತದ ಭೂಪಟದಲ್ಲಿ ಕಳೆದು ಹೋಗಿತ್ತು. ನಮ್ಮ ಹಿರಿಯರು ನಡೆಸಿದ ಒಂದು ಸುದೀರ್ಘ ಹೋರಾಟದ ಫಲವಾಗಿ ೧೯೫೬ ನವೆಂಬರ ೦೧ ಮುಂಜಾನೆ ೯.೪೦ ಘಂಟೆಗೆ ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ. ರಾಜೇಂದ್ರ ಪ್ರಸಾದರವರು ಅಖಂಡ ಕರ್ನಾಟಕದ ಉದ್ಘಾಟನೆಯನ್ನು ಮಾಡಿದರು. ಅವತ್ತಿನಿಂದ ಕರ್ನಾಟಕ ರಾಜ್ಯ ನಿಜಲಿಂಗಪ್ಪನವರ ಮುಖ್ಯಮಂತ್ರಿತ್ವದ ಅಡಿಯಲ್ಲಿ ಅದು ಅಸ್ತಿತ್ವಕ್ಕೆ ಬಂತು. ಅಂದರೆ ಸುಮಾರು ೨೦–೨೨ ತುಂಡುಗಳಾಗಿ ಕತ್ತರಿಸಿ ಹೋಗಿದ್ದ ಕರ್ನಾಟಕ ಎಚ್ಚೆತ್ತು ಮತ್ತೆ ಒಂದುಗೂಡಿದ ಸುದಿನ ಇದು. ಅಂದರೆ ಕರ್ನಾಟಕ ಅಸ್ತಿತ್ವಕ್ಕೆ ಬಂದಾಗ ತುಂಡುತುಂಡಾಗಿ ಹೋಗಿದ್ದ ನೆಲ ಅಖಂಡವಾದಾಗ ಏಕೀಕರಣವೇನೋ ಆಯಿತು. ಆದರೆ ನಿಜವಾದ ಏಕೀಕರಣ ಎಂದರೆ ಅದರಲ್ಲಿ ಸಾಂಸ್ಕೃತಿಕವಾದ ಒಂದು ಏಕೀಕರಣವನ್ನುಂಟು ಮಾಡುವುದು. ಕೇವಲ ಭೌಗೋಳಿಕ ಏಕೀಕರಣವಲ್ಲ, ಸಾಂಸ್ಕೃತಿಕ ಏಕೀಕರಣವನ್ನುಂಟುಮಾಡುವುದು. ಏಕೆಂದರೆ ಒಂದು ರಾಜ್ಯ ಎಂದರೆ ಕೇವಲ ನೆಲದ ತುಂಡಲ್ಲ. ಅದು ಸಾಂಸ್ಕೃತಿಕವಾದಂತಹ ಒಂದು ಘಟಕ. ಹಿಂದೆ ವಿಜಯನಗರ ಸಾಮ್ರಾಜ್ಯವನ್ನು ಹಕ್ಕ–ಬುಕ್ಕರು ಸ್ಥಾಪಿಸಿದರು. ಹಕ್ಕ–ಬುಕ್ಕ ಅದನ್ನು ರಾಜಕೀಯವಾಗಿ ಸ್ಥಾಪಿಸಿದರು. ವಿದ್ಯಾರಣ್ಯರು ಅದನ್ನು ಧಾರ್ಮಿಕವಾಗಿ ಸ್ಥಾಪಿಸಿದರು. ಕುಮಾರವ್ಯಾಸ–ಚಾಮರಸ ಅದನ್ನು ಸಾಹಿತ್ಯಿಕವಾಗಿ ಸ್ಥಾಪಿಸಿದರು. ಇದರ ಮೂಲಕವಾಗಿ ಆ ವಿಜಯನಗರ ಸಾಮ್ರಾಜ್ಯಕ್ಕೆ ಕೇವಲ ಭೌಗೋಳಿಕವಾದಂತಹ ಒಂದು ಸ್ಪರ್ಶ ಉಂಟಾಗದೇ, ಸಾಂಸ್ಕೃತಿಕವಾದ ಒಂದು ಸ್ಪರ್ಶ ಪ್ರಾಪ್ತವಾಯಿತು. ಉದ್ದಕ್ಕೂ ನಮ್ಮ ರಾಜರು ಮತ್ತು ನಮ್ಮ ಕವಿಗಳು ನಮ್ಮ ನಾಡನ್ನು ಸಾಂಸ್ಕೃತಿಕವಾಗಿ ಕಟ್ಟಬೇಕೆನ್ನುವ ಉದ್ದೇಶದಿಂದ ಬಹಳ ದೊಡ್ಡ ಪ್ರಯತ್ನ ಮಾಡಿದ್ದಾರೆ. ರಾಜನಾದ ನೃಪತುಂಗ ಕವಿರಾಜ ಮಾರ್ಗದಲ್ಲಿ ಆಡಿದಂತಹ ಮಾತುಗಳು ತನ್ನ ನಾಡು ಹೇಗಾಗಬೇಕು? ತನ್ನ ಪ್ರಜೆಗಳು

ಹೇಗಿರಬೇಕು? ಎನ್ನುವ ಬಗ್ಗೆ ನೋಡಿದರೆ, ಅದು ಒಂದು ಅಲಂಕಾರಗ್ರಂಥವಾದರೂ ಅದರೊಳಗೆ ಒಂದು ದೊಡ್ಡ ಆಶಯವನ್ನು ವ್ಯಕ್ತಪಡಿಸುತ್ತಾನೆ.

ಕನ್ನಡಿಗರೆಂದರೆ ಹೇಗಿದ್ದಾರೆಂದರೆ, "ಸುಭಟರ್ಕಳ್ ಕವಿಗಳ್ ಸುಪ್ರಭುಗಳ್ ಚಲ್ವರ್ಕಳ್ ಗುಣಿಗಳ್ ಅಭಿಮಾನಿಗಳ್ ಅತ್ಯುಗ್ರರ್ ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್" ನೋಡಿ, ನನ್ನ ಪ್ರಜೆಗಳು ನನ್ನ ನಾಡಿನ ಜನ ಹೇಗಿದ್ದಾರೆ ಎಂದರೆ, ಸುಭಟರಾಗಿದ್ದಾರೆ, ಚಲುವರಾಗಿದ್ದಾರೆ, ವಿವೇಕಿಗಳಾಗಿದ್ದಾರೆ, ಕವಿಗಳಾಗಿದ್ದಾರೆ ಆಗಬೇಕೆನ್ನುವ ಆಶಯ. ಇಂತಹ ಒಂದು ಕರ್ನಾಟಕವನ್ನು ಕಟ್ಟಲಿಕ್ಕೆ ನೃಪತುಂಗ ಪ್ರಯತ್ನ ಮಾಡುತ್ತಾನೆ. ಅಂತಹ ಒಂದು ಕರ್ನಾಟಕವನ್ನು ಪಂಪ ಅದನ್ನು ಬಾಯಿತುಂಬ ಹೊಗಳುತ್ತಾನೆ. ಆಮೇಲೆ ಶರಣರು, ದಾಸರು ಆ ಕರ್ನಾಟಕದಲ್ಲಿ ಹೊಸ ಸಂಸ್ಕೃತಿಯನ್ನು ರೂಢಿಸುತ್ತಾರೆ. ಮಹಲಿಂಗರಂಗ ಎನ್ನುವಂತಹ ಒಬ್ಬ ಕವಿ "ಸುಲಿದ ಬಾಳೆಯಹಣ್ಣಿನಂದದಿ, ಕಳೆದ ಸಿಗುರಿನ ಕಬ್ಬಿನಂದದಿ, ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರುವ ಕನ್ನಡ ಎಂದು ಹೇಳುತ್ತಾನೆ. ಹೇಗಿದೆಯೆಂದರೆ, ಕಾಯಿಸಿ, ಆರಿಸಿದ ಹಾಲಿನಂತಿದೆ ನಮ್ಮ ಕನ್ನಡ" ಎಂದು ಹೇಳುತ್ತಾನೆ. ಈ ರೀತಿ ನಾಡು ಮತ್ತು ನುಡಿಯ ವಿಷಯವಾಗಿ ಅಖಂಡವಾದಂತಹ ಅಭಿಮಾನವನ್ನು ತಾಳಿದವರು ನಮ್ಮ ಜನ ಮತ್ತು ಆ ರೀತಿ ಕನ್ನಡವನ್ನು ಕಟ್ಟಿದವರು ನಮ್ಮ ಜನ. ಅದರಿಂದಾಗಿ ಕನ್ನಡವನ್ನು ಎಲ್ಲಾ ಮಗ್ಗಲುಗಳಿಂದ ಕಟ್ಟುವ ಒಂದು ನಿರಂತರವಾದ ಪ್ರಯತ್ನ ಈ ನಾಡಿನಲ್ಲಿ ನಡೆದು ಬಂದದ್ದು ನಮಗೆ ಗೊತ್ತಾಗುತ್ತದೆ.

ಹೀಗೆ ಕವಿಗಳಲ್ಲದೇ ಜಕ್ಕಣಾಚಾರ್ಯ ಅದನ್ನು ಒಬ್ಬ ಶಿಲ್ಪಿಯಾಗಿ ಕಟ್ಟಿದ, ಪುರಂದರದಾಸರು ಅದನ್ನು ಭಕ್ತಿದೆಸೆಯಲ್ಲಿ ಕಟ್ಟಿದರು, ಶಾಂತಲೆ ಎಂಬ ಮಹಿಳೆ ಅದನ್ನು ಒಂದು ಕಲೆಯ ನೆಲೆಯಲ್ಲಿ ಕಟ್ಟಿದಳು. ಅತ್ತಿಮಬ್ಬೆ ದಾನಿಯಾಗಿ ಕಟ್ಟಿದಳು, ಬಸವಣ್ಣ ಸಮಾಜೋಧಾರ್ಮಿಕ ಮಹಾಪುರುಷನಾಗಿ ಅದನ್ನು ಕಟ್ಟಿದ. ಹೀಗೆ ಕಾಲಕಾಲಕ್ಕೆ ಅದನ್ನು ಕೇವಲ ಭೌಗೋಳಿಕವಾಗಿಯಲ್ಲ, ಸಾಂಸ್ಕೃತಿಕವಾಗಿಯೂ ಕಟ್ಟಬೇಕು, ನಿಜವಾಗಿರುವಂತಹ ಕರ್ನಾಟಕದ ಲಕ್ಷಣ ಅದು ಎಂದು ತಿಳಿದುಕೊಂಡು ನಮ್ಮ ಜನ ಉದ್ದಕ್ಕೂ ಈ ನಾಡಿಗಾಗಿ ದುಡಿಯುತ್ತಾ ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ನೋಡಿದರೆ ಡೆಪ್ಯೂಟಿ ಚೆನ್ನಬಸಪ್ಪನವರು ಶೈಕ್ಷಣಿಕವಾಗಿ ಕಟ್ಟಿದರು, ಆಲೂರು ವೆಂಟಕರಾಯರು ರಾಷ್ಟ್ರೀಯವಾಗಿ ಕಟ್ಟಿದರು, ನಿಜಲಿಂಗಪ್ಪ ಮತ್ತು ಹನುಮಂತಯ್ಯನವರು ರಾಜಕೀಯವಾಗಿ ಕಟ್ಟಿದರು. ಆಮೇಲೆ ವಿಶ್ವೇಶ್ವರಯ್ಯನಂತವರು ತಾಂತ್ರಿಕ ಕ್ಷೇತ್ರದಲ್ಲಿ ಕನ್ನಡವನ್ನು, ಕರ್ನಾಟಕವನ್ನು ಅದ್ಭುತವಾಗಿ ಕಟ್ಟಿದರು, ಬೇಂದ್ರೆ ಮತ್ತು ಕುವೆಂಪುರವರು ಅದನ್ನು ಸಾಹಿತ್ಯಿಕವಾಗಿ ಶಾಶ್ವತವಾಗಿ ಕಟ್ಟಿದರು. ಹೀಗೆ ಕರ್ನಾಟಕವನ್ನು ಅನೇಕ ಶಕ್ತಿಗಳ ವ್ಯಕ್ತಿಗಳು, ಅನೇಕ ಮೈಗಳಿಂದ ಅದನ್ನು ಕಟ್ಟಿದ್ದು ನಾವು ಗಮನಿಸುತ್ತಿದ್ದೇವೆ.

ಈ ರೀತಿ ಅಖಂಡ ಕರ್ನಾಟಕವನ್ನು ಸಾಂಸ್ಕೃತಿಕ ಕರ್ನಾಟಕವನ್ನು, ಕಟ್ಟಿದವರಲ್ಲಿ ನಮ್ಮ ಕಣ್ಣುಮುಂದಿನ ಒಂದು ದೊಡ್ಡ ಉದಾಹರಣೆಯೆಂದರೆ, ಕುವೆಂಪುರವರು. ಕುವೆಂಪು ಕೇವಲ ಒಬ್ಬ ಕವಿಯಲ್ಲ, ಕಾವ್ಯಕ್ಕಾಗಿ ಕಾವ್ಯ ಬರೆದಂತಹ ಒಬ್ಬ ಬರಹಗಾರನಲ್ಲ, ಸಾಹಿತ್ಯಕ್ಕಾಗಿ ಸಾಹಿತ್ಯ ಬರೆದಂತಹ ಒಬ್ಬ ಬರಹಗಾರನಲ್ಲ. ಸಂಸ್ಕೃತಿಗಾಗಿ ಸಾಹಿತ್ಯ ಬರೆದಂತಹ ಬರಹಗಾರ. ಅದಕ್ಕಾಗಿಯೇ ಕುವೆಂಪುರವರ ಸಾಹಿತ್ಯದಲ್ಲಿ ಸಾಹಿತ್ಯದ ಅಂಶಗಳೊಂದಿಗೆ ಸಾಂಸ್ಕೃತಿಕ ಕಾಳಜಿಗಳೇ ಬಹಳ ಇವೆ. ಅದನ್ನು ಓದಿದಾಗ ನಮಗೆ ಈ ಕವಿ ಈ ನಾಡನ್ನು ಸಾಹಿತ್ಯದ ಮೂಲಕ ಕಟ್ಟಲಿಕ್ಕೆ ಯಾವ ಒಂದು ಪ್ರಯತ್ನ ಮಾಡುತ್ತಿದ್ದಾನೆ, ಯಾವ ವಿಚಾರಗಳನ್ನು ಬಿತ್ತುತ್ತಿದ್ದಾನೆ ಎಂಬುದು ನಮಗೆ ಗೊತ್ತಾಗುತ್ತಿದೆ.

ಅಂತಹ ಒಬ್ಬ ಮಹತ್ವದ ಕವಿಯ, ಒಬ್ಬ ಸಾಂಸ್ಕೃತಿಕ ವ್ಯಕ್ತಿಯ ಜನ್ಮಶತಮಾನೋತ್ಸವವನ್ನು ನೀವು ಇಲ್ಲಿ ಆಚರಿಸುತ್ತಿದ್ದೀರಿ. ಕುವೆಂಪುರವರು ನಾನು ಈಗಾಗಲೇ ಹೇಳಿದ ಹಾಗೆ ಕೇವಲ ಸಾಹಿತ್ಯಕ್ಕಾಗಿ ಸಾಹಿತ್ಯ ಬರೆದವರಲ್ಲ. ಅವರೇ ಒಂದು ಕಡೆ ಹೇಳುತ್ತಾರೆ. "ನನ್ನ ಸಾಹಿತ್ಯ ಉದ್ಭವಿಸುವುದು ಬದುಕಿನಿಂದ, ಬದುಕಿಗಾಗಿ, ಬದುಕಿನ ಆಚೆಯ ಬದುಕಿಗಾಗಿ'. ಇದು ಬಹಳ ಮಹತ್ವವಾದದ್ದು. ಸಾಮಾನ್ಯ ಕವಿಗಳು ಬದುಕಿಗಾಗಿ ಕಾವ್ಯ ಬರೆಯುತ್ತಾರೆ ಅಷ್ಟೆ ಆದರೆ ಕುವೆಂಪುರಂತಹ ರಸಋಷಿಗಳು ಬದುಕಿನ ಆಚೆಯೂ ಒಂದು ಬದುಕಿದೆ, ಆ ಬದುಕಿಗಾಗಿ ಅವರು ಸಾಹಿತ್ಯವನ್ನು ನಿರ್ಮಾಣ ಮಾಡುತ್ತಾರೆ. ಅದಕ್ಕಾಗಿಯೇ ಅವರ ಸಾಹಿತ್ಯವನ್ನು ಓದುವಾಗ ಕೇವಲ ಇಂದ್ರಿಯ ಮಟ್ಟದ ಸಾಹಿತ್ಯಕ್ಕಿಂತ ಅತೀಂದ್ರಿಯ ಮಟ್ಟದ ಸಾಹಿತ್ಯವನ್ನು ಓದಿದ ಅನುಭವವಾಗುತ್ತದೆ. ಅದನ್ನು ನಾವು ಕೆಲವು ಉದಾಹರಣೆಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು.

ಕುವೆಂಪು ಒಬ್ಬ ದೊಡ್ಡ ಕವಿ ಮಲೆನಾಡಿನ ಕುಪ್ಪಳ್ಳಿ ಎಂಬ ಕಾಡು ಪ್ರದೇಶದಲ್ಲಿ ಹುಟ್ಟಿ ಬಂದಂಥವರು. ಅವರ ಮೊದಲನೇ ಕವನ ಸಂಕಲನ 'ಕೊಳಲು' ೧೯೩೦ರಲ್ಲಿ ಪ್ರಕಟವಾಗುತ್ತದೆ. ಈ ಕವನ ಸಂಕಲನದ ಮೊದಲನೇ ಪದ್ಯ ಹೀಗೆ ಪ್ರಾರಂಭವಾಗುತ್ತದೆ: "ಕಾಡಿನ ಕೊಳಲಿದು, ಕಾಡ ಕವಿಯು ನಾ,' ನೋಡಿ ಈ ಮಾತು ಹೇಗಿದೆ? ನಾ ಕಾಡಿನ ಕವಿ, ನಾನು ಕಾಡಿನಿಂದ ಎದ್ದು ಬಂದಿದ್ದೇನೆ, ಈಗ ಹೊರಗೆ, ಎಲ್ಲಿಗೆ ಬಂದಿದ್ದೀನಿ, ನಾಡಿಗೆ ಬಂದಿದ್ದೇನೆ. ಕೇಳಿ ನಾಡಿನ ಜನರು ಕಾಡಿನ ಸಂದೇಶ ತಂದಿದ್ದೇನೆ ನಾನು. ಬಹುಶಃ ಇಂತಹ ಮಾತನ್ನು ತನ್ನ ಅಸ್ತಿತ್ವವನ್ನು ಕಾಡಿನ ಮೂಲಕ ಗುರುತಿಸಿಕೊಂಡ ಕವಿ, "ಕಾಡಿನ ಕೊಳಲಿದು ಕಾಡ ಕವಿಯು ನಾ ನಾಡಿನ ಜನರು ಒಲಿದಾಲಿಪುದು." ಕಾಡಿನಿಂದ ಎದ್ದು ಕವಿ ನಾಡಿಗೆ ಬಂದರು, ಮೈಸೂರಿನ ಕಡೆ ಬಂದುಬಿಟ್ಟರು. ಮೈಸೂರಿಗೆ ಬಂದು ಮೈಸೂರಿನಲ್ಲಿ ಪ್ರಾಧ್ಯಾಪಕರಾಗಿ, ಸಾಹಿತಿಗಳಾಗಿ ಒಬ್ಬ ಋಷಿಯ ಸದೃಶ ಜೀವನವನ್ನು ನಡೆಸಿದವರು. ಒಂದು ವಿಷಯ ಇಲ್ಲಿ ಗಮನಿಸಬೇಕು. ಕುವೆಂಪುರವರು ದೊಡ್ಡ ಕವಿಗಳು. ತೇಜಸ್ವಿ ಅವರೂ ಇವತ್ತು ಒಬ್ಬ ದೊಡ್ಡ ಬರಹಗಾರರು. ತಂದೆ ಕಾಡಿನಿಂದ ನಾಡಿಗೆ ಬಂದರೆ, ಮಗ ತೇಜಸ್ವಿ ನಾಡಿನಿಂದ ಕಾಡಿಗೆ ಹೋದರು. ಈ ನಾಡು ಬೇಡವೆಂದು ಕಾಡಿನಲ್ಲಿ ಅರಣ್ಯ ಜೀವನವನ್ನು ತಮ್ಮ ತೋಟದಲ್ಲಿ ಅವರು ನಡೆಸುತ್ತಿದ್ದಾರೆ.

ಕುವೆಂಪುರವರು ಹೀಗೆ ಕಾಡಿನಿಂದ ನಾಡಿಗೆ ಬಂದು ತಮ್ಮ ಜೀವಮಾನದುದ್ದಕ್ಕೂ ಸೃಷ್ಟಿಸಿದಂತಹ ಸಾಹಿತ್ಯ ಅದು ಅಪಾರವಾದದ್ದು ಮತ್ತು ವೈವಿಧ್ಯಪೂರ್ಣವಾದದ್ದು. ಸುಮಾರು ೩೦ರಷ್ಟು ಕವನ ಸಂಕಲನಗಳು, ೩ ಖಂಡ ಕಾವ್ಯಗಳು, ೧ ಮಹಾಕಾವ್ಯ, ೨ ಕಾದಂಬರಿ, ೨ ಜೀವನಚರಿತ್ರೆ, ೧ ಆತ್ಮ ಚರಿತ್ರೆ, ೧೪ ನಾಟಕ, ೩ ಕಥಾ ಸಂಕಲನಗಳು, ಸುಮಾರು ೭ ಪ್ರಬಂಧ ಮತ್ತು ವಿಮರ್ಶೆ, ಇಷ್ಟು ವಿಸ್ತಾರವಾದಂತಹ, ವಿಪುಲವಾದಂತಹ ಸಾಹಿತ್ಯವನ್ನು ಕನ್ನಡಕ್ಕೆ ಕೊಟ್ಟಂಥವರು ಕುವೆಂಪುರವರು. ಇಂತಹ ಕೊಡುಗೆಗೆ ಕಾರಣವಾಗಿ ಅವರಿಗೆ ಪ್ರಶಸ್ತಿಗಳು ಪ್ರಾಪ್ತವಾದವು. ನಮ್ಮ ಕರ್ನಾಟಕಕ್ಕೆ ರಾಷ್ಟ್ರಮಟ್ಟದ ಒಂದು ಘನತೆಯನ್ನು, ಒಂದು ವ್ಯಕ್ತಿತ್ವವನ್ನು ತಂದು ಕೊಟ್ಟಂತವರು ಕುವೆಂಪುರವರು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಅವರು ಕನ್ನಡದ ಮೊದಲನೇ ರಾಷ್ಟ್ರಕವಿ. ಮೊದಲನೆ ಜ್ಞಾನಪೀಠ ಪ್ರಶಸ್ತಿ ಪಡೆದವರು. ಮೊದಲನೆ ಕೇಂದ್ರ ಸಾಹಿತ್ಯ ಪ್ರಶಸ್ತಿ, ಮೊದಲನೇ ಪದ್ಮಭೂಷಣ, ಮೊದಲನೆ ಕರ್ನಾಟಕ ರತ್ನ, ಮೊದಲನೆ ಪಂಪ ಪ್ರಶಸ್ತಿ, ಮೊದಲನೆ ಆಧುನಿಕ ಮಹಾಕಾವ್ಯ ಬರೆದವರು. ಹೀಗೆ ಅನೇಕ ಪ್ರಥಮಗಳಿಗೆ ಭಾಜನರಾದವರು ಮಹಾಕವಿ ಕುವೆಂಪುರವರು. ಅವರ ಮಹಾಕಾವ್ಯ

ರಾಮಾಯಣ ದರ್ಶನಂ ಒಂದು ವಿಶಿಷ್ಟವಾದಂತಹ ಮಹಾಕಾವ್ಯ. ಎಂತಹ ವಿಶಿಷ್ಟವಾದದ್ದೆಂದರೆ ನೋಡುವುದಕ್ಕೆ ಅದು ರಾಮಾಯಣದ ಕಥೆ ಇದ್ದರೂ ಸಹ ಅದು ಕಥೆ ಅಷ್ಟೇ ರಾಮನದ್ದು. ಅದರಲ್ಲಿರುವ ತತ್ವ, ಸಿದ್ಧಾಂತ ಅನಿಕೇತನ ಪ್ರಜ್ಞೆಯಿಂದ ಕೂಡಿರುವಂತಹದ್ದು, ಎಷ್ಟೇ ರಾಮಾಯಣ ಶ್ರೇಷ್ಠವಾಗಿದ್ದರೂ ಅದಕ್ಕೆ ಒಂದು ವೈದಿಕ ಸ್ಪರ್ಶವಿದೆ. ಆದರೆ ಕುವೆಂಪುರವರು ಅದಕ್ಕಿರುವ ವೈದಿಕ ಸ್ಪರ್ಶವನ್ನು ತೆಗೆದು ಅದನ್ನು ಅನಿಕೇತನವನ್ನಾಗಿ ಮಾಡಿದರು. ಯಾಕೆಂದರೆ ಕುವೆಂಪುರವರ ಶಕ್ತಿ, ಧೋರಣೆಯೇ ಅನಿಕೇತನ ಧೋರಣೆ. "ಓ ನನ್ನ ಚೇತನ ಆಗು ನೀ ಅನಿಕೇತನ, ಮನೆಯನೆಂದು ಕಟ್ಟದಿರು, ಕೊನೆಯನೆಂದೂ ಮುಟ್ಟದಿರು" ಮನೆಯನ್ನು ಕಟ್ಟಿಕೊಂಡು ಗೂಡಿನಲ್ಲಿ ವಾಸವಾಗುವ ವ್ಯಕ್ತಿತ್ವವಲ್ಲವದು. ಬಯಲಲ್ಲಿ ಬೆಳೆಯಬೇಕಾದ್ದು ನನ್ನ ಚೇತನ ಎನ್ನುತ್ತಾರೆ. ಹೀಗೆ ರಾಮಾಯಣ ದರ್ಶನಕ್ಕೆ ರಾಮನ ಕಥೆಯನ್ನು ಇಟ್ಟುಕೊಂಡರೂ ಸಹ ಅದಕ್ಕೆ ಅನಿಕೇತನವಾದಂತಹ ಒಂದು ಸ್ಪರ್ಶವನ್ನು ಕೊಟ್ಟದ್ದು ಬಹಳ ಮುಖ್ಯವಾದಂತಹ ಒಂದು ಆ ಕಾವ್ಯದ ಲಕ್ಷಣವೆಂದು ನಾವು ಹೇಳಬೇಕು.

ಪ್ರಧಾನವಾಗಿ ಕುವೆಂಪುರವರು ಕವಿಯಂತೆ ನಾವು ಗಮನಿಸುತ್ತಿದ್ದೇವೆ. ಅವರು ಒಬ್ಬ ದೊಡ್ಡ ಕಾದಂಬರಿಕಾರರು, ದೊಡ್ಡ ನಾಟಕಕಾರರು. ಆದರೆ ಅವರು ಕೇವಲ ಕವಿ ಮಾತ್ರವಲ್ಲ. ಕವಿಯೆಂದಾಗ ಅವನ ಬರವಣಿಗೆ ಭಾವನಿಷ್ಠವಾಗಿರುತ್ತದೆ. ಒಂದು ವಿಶೇಷವೆಂದರೆ, ಯಾರು ಭಾವನಿಷ್ಠವಿರುತ್ತಾರೋ ಅವರು ವಿಚಾರನಿಷ್ಠವಿರುವುದಿಲ್ಲ. ಕುವೆಂಪುರವರಲ್ಲಿ ಭಾವನಿಷ್ಠ ಎಷ್ಟು ದೊಡ್ಡ ಪ್ರಮಾಣದಲ್ಲಿದೆಯೋ ಅಷ್ಟೇ ಪ್ರಧಾನವಾದ ವಿಚಾರನಿಷ್ಠವಾದಂತಹ ಸಾಹಿತ್ಯ ಅವರದು. ಅದರಲ್ಲಿ ಭಾವನಿಷ್ಠತೆ ಹೇಗಿದೆ ಎಂದರೆ, ಸಾಮಾನ್ಯವಾಗಿ ಭಾವನಿಷ್ಠ ಸಾಹಿತ್ಯ ಅದು ಇಂದ್ರಿಯ ಅನುಭವ ಸಾಹಿತ್ಯವಿರುತ್ತದೆ ಎಲ್ಲರದ್ದು. ಆದರೆ ಕುವೆಂಪುರವರ ಭಾವನಿಷ್ಠತೆ ಇಂದ್ರಿಯ ಅನುಭವದಿಂದ ಅತೀಂದ್ರಿಯ ಅನುಭವಕ್ಕೆ ಹೋಗುತ್ತದೆ. ಈಗ ಉದಾಹರಣೆಗೆ ಅವರ ಹೆಂಡತಿಯನ್ನು ಕುರಿತು ಬರೆದಂತಹ ಒಂದು ಕವನ 'ನಾ ನಿನಗೆ, ನೀ ನನಗೆ ಜೇನಾಗುವಾ,' ಇದು ಇಂದ್ರಿಯ ಅನುಭವ. ಒಮ್ಮೆಲೇ ಅವರು ಅತೀಂದ್ರಿಯಕ್ಕೆ ಹೋಗುತ್ತಾರೆ 'ರಸದೇವ ಗಂಗೆಯಲಿ ಮೀನಾಗುವಾ', 'ಹೂವಾಗುವಾ, ಹಣ್ಣಾಗುವಾ' ಎಂಥು ಒಮ್ಮೆ ಇಂದ್ರಿಯಕ್ಕೆ ಬರುತ್ತಾರೆ. 'ರಸಮೂರ್ತಿ ಭಗವತಿಗೆ ಮುಡಿಪಾಗುವಾ' ಎಂದು ಮತ್ತೆ ಅತಿಂದ್ರೀಯಕ್ಕೆ ಹೋಗುತ್ತಾರೆ. ಹೀಗಾಗಿ ಸಾಮಾನ್ಯವಾಗಿ ಭಾವನಿಷ್ಠವಾಗಿ ಅಲ್ಲಿಯೇ ಉಳಿಯದೇ ಒಂದು ರೀತಿಯ ಆಧ್ಯಾತ್ಮದ ಸ್ಪರ್ಶವನ್ನು ಕವನಕ್ಕೆ ತರುವುದರ ಮೂಲಕ ಅತೀಂದ್ರಿಯವಾದಂತಹ ಸಾಹಿತ್ಯವನ್ನು ಕನ್ನಡಕ್ಕೆ ಕೊಟ್ಟಂಥವರು. ಆಕಾಶದಲ್ಲಿ ಅವರು ಹಕ್ಕಿ ಹಾರುವುದನ್ನು ನೋಡುತ್ತಾರೆ. ಬಿಳಿ ಹಕ್ಕಿ ನೋಡಿದ ಕೂಡಲೆ ಅದನ್ನು ಹೇಗೆ ವರ್ಣನೆ ಮಾಡುತ್ತಾರೆ. 'ದೇವರು ರುಜು ಮಾಡಿದನು' ಎನ್ನುತ್ತಾರೆ ಅವರು. ಅಲ್ಲಿ ಹಾರುವ ಬಿಳಿ ಹಕ್ಕಿಗಳ ಸಾಲುಗಳನ್ನು ನೋಡಿ ದೇವರು ರುಜು ಮಾಡುತ್ತಾನೆ ಎನ್ನುತ್ತಾ ಅತೀಂದ್ರಿಯಕ್ಕೆ ಹೋಗಿ ಬಿಡುತ್ತಾರೆ. ಸೂರ್ಯೋದಯ ಚಂದ್ರೋದಯ ನೋಡುತ್ತಾರೆ ನೋಡಿದವರು 'ಸೂರ್ಯೋದಯ, ಚಂದ್ರೋದಯ ದೇವರ ದಯೆ ಕಾಣೋ' ಎನುತ್ತಾರೆ. ಇನ್ನೊಬ್ಬರಾಗಿದ್ದರೆ ಅದನ್ನು ಲೌಕಿಕ ಮಾಡಿ ಕೈಬಿಡುತ್ತಿದ್ದರು ಅದರೆ ಅದನ್ನು ಅಲೌಕಿಕಕ್ಕೆ ತಿರುಗಿಸಿಬಿಡುತ್ತಾರೆ. ಇಂತಹ ಒಂದು ಬರವಣಿಗೆಯಿಂದಾಗಿ ಅವರು ಕನ್ನಡದಲ್ಲಿ ಒಂದು ಅಲೌಕಿಕವಾದ ಬರವಣಿಗೆಯ, ಅತೀಂದ್ರೀಯ ಬರವಣಿಗೆಯ ಒಬ್ಬ ಋಷಿ ಕವಿಯಾಗಿ ಬೆಳೆದರು. ಅವರು ಸಹಜವಾಗಿ ಋಷಿಕವಿಯಾಗದೆ ಸಾಮಾನ್ಯ ಕವಿಗಳ ರೀತಿಯಲ್ಲಿಯೂ ಕೆಲವು ಪದ್ಯಗಳನ್ನು

ಬರೆದಿದ್ದಾರೆ. ನಮಗೂ ಅದು ಗೊತ್ತು. ನಮಗೆ 'ಅಡಿಯ ಗೆಜ್ಜೆ ನಡುಗೆ ಹೆಜ್ಜೆ ಇಡುತ ಸುಗ್ಗಿ ಬರುತಿದೆ, ಹಿಗ್ಗಿ ಬರೆ, ಹಿಗ್ಗಿ ತಿರೆ, ಸಗ್ಗ ಸುಖವ ತರುತಿದೆ' ಹೀಗೆ ಲಲಿತವಾಗಿ ಅವರು ಬರೆಯಬಲ್ಲರು. ಹೀಗೆ ಬರೆಯುತ್ತಾ ಬರೆಯುತ್ತಾ ಒಮ್ಮೆಲೆ ಅವರು ದೈವತ್ವಕ್ಕೆ ಹೋಗಬಲ್ಲರು. ಇನ್ನೊಂದು ಕಡೆ ಅವರು ಹೇಳುತ್ತಾರೆ. 'ಹಸುರಿತ್ತಲ್ ಹಸುರತ್ತಲ್, ಹಸುರೆತ್ತಲ್ ಕಾಡಿನಲಿ' ಹಸರ್ ಹಸರ್ ಕಾಣಿಸುತ್ತದಂತೆ ಎಲ್ಲಾಕಡೆ ಕಾಡಿನಲ್ಲಿ. 'ಹಸುರಿತ್ತಲ್ ಹಸುರತ್ತಲ್, ಹಸುರೆತ್ತಲ್ ಕಾಡಿನಲಿ, ಹಸುರುಗಟ್ಟಿತು ಕವಿಯ ಆತ್ಮ' ನೋಡಿ ಹಸುರುಗಟ್ಟಿತಂತೆ ಅವರ ಆತ್ಮ. 'ಹಸುರ್‌ಗಟ್ಟಿತೊ ಕವಿಯ ಆತ್ಮ, ಹಸುರ್ ನೆತ್ತರ್ ಒಡಲಿನಲಿ' ನನ್ನ ರಕ್ತವು ಹಸಿರಾಗಿಬಿಟ್ಟಿತು ಎನ್ನುತ್ತಾರೆ. ಇಷ್ಟರಮಟ್ಟಿಗೆ ಅವರು ನಿಸರ್ಗದೊಂದಿಗೆ ತಲ್ಲೀನರಾಗಿದ್ದನ್ನು ನೋಡಿಕೊಂಡರೆ ಅವರು ಕನ್ನಡದಲ್ಲಿ ಪಂಪನನ್ನು ಬಿಟ್ಟರೆ ಅವನಿಗಿಂತ ದೊಡ್ಡ ಪ್ರಮಾಣದಲ್ಲಿ ನೈಸರ್ಗಿಕ ಒಂದು ವರ್ಣನೆಯನ್ನು ಮಾಡಿದಂತಹ ಒಬ್ಬ ಮಹಾಕವಿಯಾಗಿ ಕಾಣುತ್ತಾರೆ. ಅದಕ್ಕಾಗಿ ಅವರು ಹೇಳುತ್ತಾರೆ 'ನನ್ನ ಸಾಹಿತ್ಯವನ್ನು ನಿಸರ್ಗದಿಂದ ಬೇರ್ಪಡಿಸಲಾಗದು'. 'ನನ್ನ ಸಾಹಿತ್ಯವೆಂದರೆ ನಿಸರ್ಗ'ವೆನ್ನುತ್ತಾರೆ. ಅಷ್ಟರ ಮಟ್ಟಿಗೆ ಅವರು ತನ್ಮಯರಾಗುತ್ತಾ ಬರೆದು ಬರೆಯುತ್ತಾ ಬರೆಯುತ್ತಾ ಆಧ್ಯಾತ್ಮಕ್ಕೆ ಹೋಗುವುದನ್ನು ನಾವು ನೋಡುತ್ತೇವೆ. 'ಬಿಸಿಲಿದು, ಬರಿ ಬಿಸಿಲಲ್ಲೊ ಸೂರ್ಯನ ಕೃಪೆ ಕಾಣೊ'. ಆಕಾಶದಲ್ಲಿ ಚಂದ್ರ ಮೂಡುತ್ತಾನೆ ಶಿವನೇ ಚಂದ್ರನಾಗಿ ಬಂದ ಎನ್ನುತ್ತಾರೆ. ಅವರಿಗೆ ಲೌಕಿಕ ದೃಷ್ಟಿಯ ಚಂದ್ರ ಕಾಣುವುದಿಲ್ಲ, ದೇವರೆ ಅಲ್ಲಿ ಚಂದ್ರನಾಗಿ ಬಂದಂತೆ ಕಾಣಿಸುತ್ತಾನೆ. ಇದನ್ನು ನೋಡಿಕೊಂಡಾಗ ಈ ಇಂದ್ರಿಯ ಅನುಭವದಿಂದ ಅತೀಂದ್ರಿಯ ಅನುಭಕ್ಕೆ ಹೋಗುವ ಒಂದು ರೀತಿ ಕನ್ನಡಕ್ಕೆ ಬಹಳ ವಿಶಿಷ್ಟವಾದದ್ದು ಎಂಬುದು ನಮಗೆ ಗೊತ್ತಾಗುತ್ತದೆ. ಅದಕ್ಕಾಗಿ ಅವರು ಹೇಳುತ್ತಾರೆ 'ನನ್ನ ಸಾಹಿತ್ಯದಲ್ಲಿ ಆಧ್ಯಾತ್ಮ ದೃಷ್ಟಿಯು ಸರ್ವವ್ಯಾಪ್ತಿಯಂತೆ.'

ಹೀಗೆ ಭಾವಗೀತೆ ಮತ್ತು ಭಾವನಿಷ್ಠಾ ಕಾವ್ಯ ಬರೆಯುವದರೊಂದಿಗೆ ಅವರು ವಿಚಾರನಿಷ್ಠವಾಗಿ ಕಾವ್ಯ ಬರೆದದ್ದು ಬಹಳ ಮುಖ್ಯವಾದದ್ದು. ವಿಚಾರನಿಷ್ಠವಾಗಿ ಕಾವ್ಯ, ಗದ್ಯ ಇಂತಹ ಬರವಣಿಗೆ ಮಾಡಿದ್ದು ನಮ್ಮ ಗಮನಕ್ಕೆ ಬರುತ್ತದೆ. ಅವರು ಸೂರ್ಯೋದಯ ಕುರಿತು 'ಸೂರ್ಯೋದಯ, ಚಂದ್ರೋದಯ ದೇವರ ದಯೆ ಕಾಣೋ' ಎಂದು ದೇವರು ಕುರಿತು ಹೇಳುತ್ತಾರೆ. ಆದರೆ ನಾವು ಕಲ್ಪಿಸಿಕೊಂಡಂತಹ ಈ ಕ್ಷುಲ್ಲಕ ದೈವತ್ವಗಳ ಬಗ್ಗೆ ತುಂಬಾ ಸಿಟ್ಟಿದೆ ಅವರಿಗೆ. "ನೂರು ದೇವರನೆಲ್ಲ ನೂಕಾಚೆ ದೂರ' ವೈಚಾರಿಕವಾಗಿ ಬರೆಯುತ್ತಾರೆ, ದೈವತ್ವವನ್ನು ಆರಾಧಿಸುತ್ತಾರೆ, ಆರಾಧಿಸುತ್ತಾ ಈ ಕ್ಷುಲ್ಲಕ ದೈವತ್ವವನ್ನೆಲ್ಲ ನಿರಾಕರಿಸುತ್ತಾರೆ. 'ನೂರ ದೇವರನೆಲ್ಲ ನೂಕಾಚೆ ದೂರ, ಭಾರತಾಂಬೆ ದೇವಿ ನಮಗಿಂದು ಪೂಜಿಸುವ ಬಾರ. ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ, ಬಡತನವ ಬುಡಮುಟ್ಟ ಕೀಳಬನ್ನಿ, ಮೌಢ್ಯತೆಯ ಮಾರಿಯನು ಹೊರದೂಡ ಬನ್ನಿ, ವಿಜ್ಞಾನ ದೀವಿಗೆ ಹಿಡಿಯ ಬನ್ನಿ, ಸಿಲುಕದಿರಿ, ಸಿಲುಕದಿರಿ ಮತವೆಂಬ ಮೋಹದ ಅಜ್ಞಾನಕ್ಕೆ ಮತಿಯಿಂದ ದುಡಿಯಿರೈ ಲೋಕಹಿತಕೆ, ಆ ಮತದ ಈ ಮತದ ಹಳೆ ಮತದ ಸಹವಾಸ, ಸೇರಿರೈ ಮನುಜ ಮತಕೆ. ಓ ಬನ್ನಿ ಸೋದರರೆ ವಿಶ್ವಪಥಕೆ" ಹೀಗೆ ವೈಚಾರಿಕವಾಗಿ ನಾವೇನು ಕೆಲವು ಮೂಢನಂಬಿಕೆಯಿಂದ ದೇವರನ್ನು ಪೂಜಿಸುತ್ತೇವೆಯೋ ಇದನ್ನು ಬಿಟ್ಟುಬಿಡಿರಿ. 'ನೂರಾರು ದೇವರನ್ನು ನೂಕಾಚೆ ದೂರ, ಭಾರತಾಂಬೆ ಸೇವೆಯ ಮಾಡೋಣ ಬಾರ' ಅಂದರೆ ಪುರಾಣ ದೇವತೆಗಳ ಸಾಲಿನಲ್ಲಿ ಭಾರತ ಮಾತೆಯನ್ನು ಸ್ಥಾಪಿಸುತ್ತಾರೆ. ಅಂದರೆ ಸಾಂಸ್ಕೃತಿಕ ದೇವತೆಯನ್ನು ಅವರು ಸ್ಥಾಪಿಸುತ್ತಾರೆ. ಹೀಗೆ ಅವರು ಬರೆದ

ವೈಚಾರಿಕ ಸಾಹಿತ್ಯ ವಿಪುಲವಾಗಿದೆ ಎಂಬುದನ್ನು ನಾವು ನೋಡಬೇಕು. ಯಾಕೆಂದರೆ ಅವರ ಬದುಕೇ ಅಂತಹದ್ದು. ಏನೇ ಬರೆದರೂ ಸಹ ಅದು ಸಮಾಜದ ಹಿತಕ್ಕಾಗಿ ಬರೆಯಬೇಕು. ಜನ ಬದುಕಬೇಕೆಂಬ ದೃಷ್ಟಿ ಇದೆಯಲ್ಲ ಅದು ಆ ದೃಷ್ಟಿಯ ಕಾರಣವಾಗಿ ನಾವು ಇಂತಹ ರಚನೆಯನ್ನು ಅವರ ಕೃತಿಯಲ್ಲಿ ಕಾಣುತ್ತೇವೆ. ಅದಕ್ಕಾಗಿ ಅವರು ಕರ್ನಾಟಕ ಎಂಬುದು ಬರೀ ಇದು ನೆಲದ ತುಂಡಲ್ಲ ಎನ್ನುತ್ತಾರೆ. 'ಶಕ್ತಿ ಕಣಾ, ಮಂತ್ರ ಕಣಾ, ದೇವಿ ಕಣಾ' ಕರ್ನಾಟಕ ಇದು ಶಕ್ತಿ, ಇದು ಬರೀ ಮಣ್ಣಲ್ಲ, ಇದು ಮಣ್ಣಿನ ತುಂಡಲ್ಲ, ಇದು ಭೂಮಿಯ ತುಂಡಲ್ಲ 'ಶಕ್ತಿ ಕಣಾ, ದೈವ ಕಣಾ, ಮಂತ್ರ ಕಣಾ' ಎನ್ನುವ ಒಂದು ಮಾತನ್ನು ನೋಡಿಕೊಂಡಾಗ ಅವರಿಗೆ ಹೇಗೆ ಕರ್ನಾಟಕದ ಬಗ್ಗೆ ಪ್ರೀತಿ ಇತ್ತು ಎಂಬುದು ಗೊತ್ತಾಗುತ್ತದೆ. ಕನ್ನಡ ಭಾಷೆಯ ಬಗ್ಗೆ ಕುವೆಂಪುರವರಷ್ಟು ಗಾಢವಾಗಿ ವಿಚಾರ ಮಾಡಿದವರು ಮತ್ತು ಸ್ಪಷ್ಟವಾಗಿ ಹೇಳಿದವರು ಇನ್ನೊಬ್ಬರಿಲ್ಲವೆನಿಸುತ್ತದೆ. ಅವರ ರಚನೆಯಲ್ಲಿ ಆ ಮಾತು ಮತ್ತೆ ಮತ್ತೆ ನಮಗೆ ಕೇಳಿಸುತ್ತದೆ. 'ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರಾ, ಹೊರ ನುಡಿಯ ಹೊರೆಯಿಂದ ಕುಸಿದು ಕುಗ್ಗಿ. ರಾಜನುಡಿ ಎಂದೊಂದು, ರಾಷ್ಟ್ರ ನುಡಿ ಎಂದೊಂದು, ದೇವ ನುಡಿ ಎಂದೊಂದು ಹತ್ತಿಜಗ್ಗಿ' ಒಂಧು ರಾಜ ನುಡಿ 'ಇಂಗ್ಲಿಷ', ರಾಷ್ಟ್ರ ನುಡಿ 'ಹಿಂದಿ', ದೇವ ನುಡಿ 'ಸಂಸ್ಕೃತ', ಇವುಗಳ ಒಂದು ಭಾರದಿಂದ ನಮ್ಮ ಕನ್ನಡ ಸಾಯುತ್ತಿದೆ.

ಕುವೆಂಪು ಅವರು ಯಾವ ಭಾಷೆಯ ವಿರೋಧಿಯಲ್ಲ. ಭಾಷೆ ಅದು ಬೆಳಕಾಗಿ ಬರಬೇಕೆ ವಿನಃ ಬೆಂಕಿಯಾಗಿ ಬರಬಾರದು ಎಂಬುದು ಅವರ ಅಭಿಪ್ರಾಯ. ಆದರೆ ಏನಾಗಿದೆ ಇಂಗ್ಲಿಷ್, ಸಂಸ್ಕೃತ ಮತ್ತು ಹಿಂದಿ ಕನ್ನಡಕ್ಕೆ ಬೆಳಕಾಗಿ ಬರುವುದರ ಬದಲು ಬೆಂಕಿಯಾಗಿ ಬರುತ್ತಲಿವೆ ಎಂಬಂತಹ ಒಂದು ಸ್ಪಷ್ಟವಾದ ಕಲ್ಪನೆಯಿದೆ ಅವರಿಗೆ. ಆದುದರಿಂದ ಇಂತಹ ಮಾತುಗಳನ್ನು ಅವರು ಬರೆಯುತ್ತಾರೆ. ಇಂಗ್ಲಿಷ್ ಬಗ್ಗೆ ಹೇಳುತ್ತಾರೆ. 'ಕನ್ನಡದ ಕ್ರಿಸ್ತ ಅದೋ ಇಂಗ್ಲಿಷರ ಶಿಲುಬೆಯಲ್ಲಿ ಸಿಲುಕಿ ಬಾಯಿ ಬಿಡುತಲಿಹನು' ಈ ಮಾತು ನೋಡಿಕೊಂಡಾಗ ಇಂಗ್ಲಿಷರಿಂದ ಕನ್ನಡಕ್ಕೆ ಆಗುತ್ತಿರುವ ಹಾನಿ ಎಂತಹದ್ದು ಎಂಬುದನ್ನು ಅವರು ಇಲ್ಲಿ ಸ್ಪಷ್ಟಪಡಿಸುತ್ತಿದ್ದಾರೆ. ಹಿಂದಿ ಬಗ್ಗೆ ಅವರು ಹೇಳುವುದು 'ಉತ್ತರದ ಕಾಶಿಯಲಿ ಕತ್ತೆ ಮಿಂದ್ಯೆತರಲು, ದಕ್ಷಿಣ ದೇಶಕೆ ಅದು ಕುದುರೆಯಹುದೆ' ಉತ್ತರ ದೇಶದಲ್ಲಿ ಒಂದು ಕತ್ತೆ ಗಂಗಾ ಸ್ನಾನ ಮಾಡಿ ಬಂದರೆ ಅದು ದಕ್ಷಿಣಕ್ಕೆ ಕುದುರೆಯಾಗುತ್ತದೆಯೆ? ಉತ್ತರದ ಹಿಂದಿಯನ್ನು ನಮ್ಮ ಮೇಲೆ ಹೇರಬೇಡಿ ಎಂದು ಹೇಳುವುದಕ್ಕೆ ಈ ಮಾತನ್ನು ಬಳಸುತ್ತಾರೆ. ಇಂತಹ ಮಾತುಗಳ ಮೂಲಕ ಅವರು ಕನ್ನಡವನ್ನು ಕಟ್ಟಿದವರು, ಕನ್ನಡವನ್ನು ಬೆಳೆಸಿದವರು.

ಕೊನೆಯದಾಗಿ ಒಂದು ಮಾತನ್ನು ಇಲ್ಲಿ ಅವಶ್ಯ ಹೇಳಬೇಕು. ಅವರು ಹೇಳಿದಂತಹ ಒಂದು ಮಾತು ನಿಮ್ಮ ಸಿಡ್ನಿ ಸಂಘದ ಧ್ಯೇಯವಾಕ್ಯವಾಗಿದೆ. 'ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು' ಇದು ಕುವೆಂಪು ಕಂಡ ಒಂದು ದರ್ಶನ. ಯಾಕೆಂದರೆ ಅವರಿಗೆ ಗೊತ್ತಾಗಿದೆ ಎಂದೆನಿಸುತ್ತದೆ. ಇನ್ನು ಕನ್ನಡ ಕುಟುಂಬಗಳು ಕರ್ನಾಟಕದಲ್ಲಿ ಉಳಿಯುವುದಿಲ್ಲ. ಇವು ವಲಸೆ ಹೋಗುತ್ತವೆ. ಅದಕ್ಕಾಗಿ 'ಎಲ್ಲಾದರೂ ಇರು, ಆಸ್ಟ್ರೇಲಿಯಾದಲ್ಲಿರಿ, ನ್ಯೂಜಿಲೆಂಡ್‌ದಲ್ಲಿ ಇರಿ' ಈ ಕುಟುಂಬಗಳು ಕರ್ನಾಟಕಕ್ಕೆ ಸೀಮಿತವಾಗಿ ಉಳಿಯುವುದಿಲ್ಲ. ಅವರಿಗೆ ಗೊತ್ತಾಗಿ, ಅವರ ದರ್ಶನಕ್ಕೆ ಹೊಳೆದಿದೆ ಇದು. 'ಎಲ್ಲಾದರೂ ಇರು, ಎಂತಾದರೂ ಇರು, ಆದರೆ ಎಂದೆಂದಿಗೂ ನೀ ಕನ್ನಡವಾಗಿರು' ಅದು ನಿಮಗೆ ಕೊಟ್ಟಂತಹ ಒಂದು ಸಂದೇಶ. ಎಲ್ಲಾದರೂ ಇರಿ ನೀವು ಆದರೆ ಕನ್ನಡವಾಗಿರಿ ಎಂದು. ಅಂದರೆ ಕನ್ನಡ ಎಂದರೇನು? ಕರ್ನಾಟಕ ಎಂದರೇನು? ಕನ್ನಡಿಗ

ಎಂದರೆ ಯಾರು? ಇದಕ್ಕೆ ಅವರು ಹೇಳುವಂತಹದ್ದು ಬಹಳ ಮುಖ್ಯವಾದದ್ದು. ಈ ಪದ್ಯ ಓದಿದಾಗ ಎನಿಸುತ್ತದೆ ಕರ್ನಾಟಕದಲ್ಲಿದ್ದು ಕನ್ನಡವನ್ನು ಪ್ರೀತಿಸದಿದ್ದರೆ ಅವನು ಕನ್ನಡಿಗನಲ್ಲ. ಕರ್ನಾಟಕದಲ್ಲಿ ಇದ್ದು ಕನ್ನಡವನ್ನು ಪ್ರೀತಿಸದಿದ್ದರೆ ಅವನು ನಿಂತಂತಹ ನೆಲ ಅದು ಕರ್ನಾಟಕವಲ್ಲ. ಹೊರಗಿದ್ದು ಅವನು ಕನ್ನಡವನ್ನು ಪ್ರೀತಿಸುತ್ತಿದ್ದರೆ ಅವನು ಕನ್ನಡಿಗ, ಹೊರಗಿದ್ದು ಅವ ಕನ್ನಡವನ್ನು ಪ್ರೀತಿಸುತ್ತಿದ್ದರೆ ಅವನು ನಿಂತ ನೆಲ ಕರ್ನಾಟಕ ಅವರ ದೃಷ್ಟಿಯಲ್ಲಿ ಆಸ್ಟ್ರೇಲಿಯಾ ಕರ್ನಾಟಕ. ಏಕೆಂದರೆ ಕನ್ನಡವನ್ನು ಪ್ರೀತಿಸುವವರು ಎಲ್ಲಿ ಹೆಜ್ಜೆಯೂರುತ್ತಾರೊ 'ನೀ ಮೆಟ್ಟುವ ನೆಲ ಅದೇ ಕರ್ನಾಟಕ.' ಕನ್ನಡ ಪ್ರೀತಿಸುವವನು, ಕನ್ನಡ ಪ್ರಜ್ಞೆಯುಳ್ಳವವನು ಮೆಟ್ಟಿದ ನೆಲ ಅದೇ ಕರ್ನಾಟಕ, ಕನ್ನಡ ಪ್ರೀತಿಸುವವ 'ಕುಡಿಯುವ ನೀರ್ ಕಾವೇರಿ' ಇಲ್ಲಿ ಹರಿಯುವ ನೀರನ್ನು ನೀವು ಅದನ್ನು ಕನ್ನಡ ಪ್ರಜ್ಞೆಯಿಂದ ಕುಡಿದರೆ ಅದು ಕಾವೇರಿ ಎಂದು ಹೇಳುತ್ತಾರೆ. 'ನೀ ಏರುವ ಮಲೆ ಸಹ್ಯಾದ್ರಿ' ಆಸ್ಟ್ರೇಲಿಯಾದಲ್ಲಿದ್ದು ಕನ್ನಡ ಪ್ರಜ್ಞೆಯಿಂದ ನೀನು ಇಲ್ಲಿಯ ಬೆಟ್ಟವನ್ನು ಹತ್ತಿದರೆ ಇದು ಆಸ್ಟ್ರೇಲಿಯಾದ ಬೆಟ್ಟವಲ್ಲ, ಇದು ಕನ್ನಡದ ಸಹ್ಯಾದ್ರಿ ಎಂದು ಹೇಳುತ್ತಾರೆ. ಇಂತಹ ಒಂದು ಭಾವನೆಯನ್ನು ಬೆಳೆಸಿಕೊಂಡು ಕನ್ನಡಿಗರು ಎಲ್ಲೇ ಇದ್ದರೂ ಪ್ರಸಿದ್ಧಿಯನ್ನು ಪಡೆಯಬೇಕೆಂಬ ಹಾರೈಕೆಯನ್ನು ಆ ಪದ್ಯದಲ್ಲಿ ಕೊಡುತ್ತಿದ್ದಾರೆ.

ಇಂತಹ ಒಬ್ಬ ಕವಿಯ ಜನ್ಮ ಶತಮಾನೋತ್ಸವವನ್ನು ಇಲ್ಲಿ ಆಚರಿಸುತ್ತಿದ್ದೇವೆ. ಒಂದು ಬಹಳ ಮುಖ್ಯವಾದ ಸಂಗತಿ ಎಂದರೆ ಕನ್ನಡದ ಆತ್ಮ ನಾಶವಾಗಬಾರದು. ನೀವು ಮಾಡುವಂತಹ ಪ್ರಯತ್ನ ಕನ್ನಡ ನಾಶವಾಗುವುದಲ್ಲ; ಬೆಳೆಯುವುದು. ಇಲ್ಲಿ ಹೋರಾಟ ನೀವು ಮಾಡುತ್ತಿದ್ದೀರಿ. ಅದನ್ನು ಕಳೆದ ಎರಡು ದಿನಗಳಿಂದ ಗಮನಿಸಿದ್ದೇನೆ. ಇಂತಹ ಒಂದು ಪ್ರಯತ್ನ, ಹೋರಾಟಕ್ಕೆ ನನ್ನ ಬೆಂಬಲವಿದೆ. ಇದಕ್ಕಾಗಿ ನಾನು ನಿಮ್ಮೆಲ್ಲರಿಗೆ ವಂದನೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

---

* ಸಿಡ್ನಿ ಕನ್ನಡ ಸಂಘ ಏರ್ಪಡಿಸಿದ್ದ ಕುವೆಂಪು ಜನ್ಮಶತಮಾನೋತ್ಸವ ಸಮಾರಂಭದ ಮುಖ್ಯಅತಿಥಿಯಾಗಿ ಮಾಡಿದ ಭಾಷಣ.

ಆಕರ : ಮಾರ್ಗ ಸಂಪುಟ–೮

■■

೪೮

ಪ್ರಾಚ್ಯಭಾಷಾ ವಿಶ್ವವಿದ್ಯಾಲಯ - ಸೂಕ್ತ ಹೆಸರು

೨೦೦೯

ಮಾನ್ಯರೇ,

'ಸಂಸ್ಕೃತ ವೇದ ವಿಶ್ವವಿದ್ಯಾಲಯ' ಹೆಸರಿನಿಂದ, ಮತೀಯವೆನಿಸುವ 'ವೇದ' ಶಬ್ದವನ್ನು ಕೈಬಿಡಬೇಕೆಂದು, ಭೈರಪ್ಪನವರು ಲೇಖನದ (ವಿಜಯ ಕರ್ನಾಟಕ ೧೦ ಅಗಷ್ಟ ೨೦೦೯) ಮೂಲಕ ಆಗ್ರಹಪಡಿಸಿರುವುದು ತುಂಬ ಸೂಕ್ತ. ಆದರೆ ಈ ವಿಶ್ವವಿದ್ಯಾಲಯವು ಕನ್ನಡ ಅಭಿವೃದ್ಧಿಗೆ ಪೂರಕವಾಗುವುದೆಂಬ ಇವರ ಅಭಿಪ್ರಾಯದಲ್ಲಿ ಹುರುಳಿಲ್ಲ. ಏಕೆಂದರೆ ಇಂದು ನಾವು ಹಳೆಯ ವಿಚಾರ, ಸ್ಥಗಿತ ಭಾಷೆಗಳಿಗೆ ಬದಲು ಹೊಸ ವಿಚಾರ, ಜಾಗತಿಕ ಭಾಷೆಗಳಿಗೆ ಸ್ಪಂದಿಸುವ ಸಂದರ್ಭದಲ್ಲಿದ್ದೇವೆ.

ಆರಂಭದಲ್ಲಿಯೇ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಈ ವರೆಗೆ ಸಂಸ್ಕೃತ ವಿಶ್ವವಿದ್ಯಾಲಯವನ್ನು ವಿರೋಧಿಸುತ್ತಿರುವ ಯಾರೂ ಸಂಸ್ಕೃತ ವಿರೋಧಿಗಳಲ್ಲ. ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮೂಲಕ ಸಂಸ್ಕೃತವೆಂಬ ಕ್ಲಾಸಿಕಲ್ ಭಾಷೆಯೊಂದನ್ನೇ ಅಭಿವೃದ್ಧಿಪಡಿಸಲು ಹೊರಟಿರುವ ಸರಕಾರ, ಮಿಕ್ಕ ಕ್ಲಾಸಿಕಲ್ ಭಾಷೆಗಳನ್ನು ಮಲಮಗನಂತೆ ಕಾಣಬಾರದೆಂಬುದು ಇವರ ಉದ್ದೇಶವಾಗಿದೆ.

ಭೈರಪ್ಪನವರು ಹೇಳುವ ಮಾತುಗಳಲ್ಲಿ ಕೆಲವು ಅಶಾಸ್ತ್ರೀಯ, ಕೆಲವು ಸಂಸ್ಕೃತ ಪಕ್ಷಪಾತೀಯವಾಗಿವೆ. ಅಶಾಸ್ತ್ರೀಯವೇಕೆಂದರೆ ಅವರು ಭಾಷೆ-ಶಬ್ದಗಳ ವಿಷಯವಾಗಿ ತೀರ ಸಾಮಾನ್ಯರಂತೆ ಅದರ ಶುದ್ಧಿ-ಅಶುದ್ಧಿಯ ಚರ್ಚೆಗೆ ಇಳಿದು, ಹಳೆಯ ಪಂಡಿತರಂತೆ ಶಬ್ದಗಳ ಮಡಿವಂತಿಕೆಯ ಬಗ್ಗೆ ಮಾತನಾಡಿದುದು ಅನವಶ್ಯವೆಸುತ್ತದೆ.

ಭಾಷೆಯೆಂದರೆ ವಾಕ್ಯವೇ ಹೊರತು ಶಬ್ದವಲ್ಲ. ಯಾವುದೇ ಭಾಷೆಯ ಶಬ್ದವು ಬಳಸಿದವರ ಭಾಷೆಯ ಆಸ್ತಿಯಾಗುವುದೆಂಬ ಸತ್ಯವನ್ನು ಅವರು ತಿಳಿಯಬೇಕು. ಈ ಮೇರೆಗೆ ಹಳೆಯ ಶಬ್ದ ಮರೆಯಾಗುವುದೂ, ಹೊಸ ಶಬ್ದ ಬಳಕೆಯಾಗುವುದೂ ಸ್ವಾಭಾವಿಕ. ಬಹುಶಃ ಇನ್ನು ಕೆಲವೇ ವರ್ಷಗಳಲ್ಲಿ ಕನ್ನಡಿಗರು ಈವರೆಗೆ ಆಡು ಭಾಷೆ, ಬರೆಹ ಭಾಷೆಗಳಲ್ಲಿ ಬಳಸುತ್ತಲಿದ್ದ ಸಂಸ್ಕೃತದ 'ಸಹಜಶಬ್ದ'ಗಳೂ ಕ್ರಮೇಣ ಮಾಯವಾಗಿ, ಅಲ್ಲಿ ಇಂಗ್ಲಿಷ್ ಶಬ್ದಗಳು ಪ್ರವೇಶಿಸುವುದು ತೀರ ಸಹಜವಾಗಿದೆ. ಇಂಥ ಸಂದರ್ಭದಲ್ಲಿ ಕೆಲವು ಶುಷ್ಕಪಂಡಿತರು ವಿಜ್ಞಾನ, ತಂತ್ರಜ್ಞಾನ, ಆಡಳಿತ ಕ್ಷೇತ್ರಗಳ ಪಾರಿಭಾಷಿಕ ಶಬ್ದಗಳಿಗೆ ಆಮ್ಲಜನಕ, ಅಧೀಕ್ಷಕದಂಥ ಸಂಸ್ಕೃತದ 'ಕೃತಕ ಶಬ್ದ'ಗಳನ್ನು ಒತ್ತಾಯದಿಂದ ಬಳಕೆಗೆ ತಂದಿದ್ದರೂ, ಇಂದಿನ ಜಾಗತೀಕರಣ ಸಂದರ್ಭದಲ್ಲಿ ಇವು ಬಹಳ ದಿನ ನಿಲ್ಲದೆ, ಆಕ್ಸಿಜನ್ ಕಮೀಶನರ್‌ಗಳೇ ರೂಢಗೊಳ್ಳುವುದರಲ್ಲಿ ಸಂಶಯವಿಲ್ಲ. ಹೀಗಾಗಿ ಇಂದು

ಸಂಸ್ಕೃತವೆಂಬ ಮೃತಭಾಷೆಯ ಸಹಜ ಮತ್ತು ಕೃತಕ ಶಬ್ದಗಳಿಗಿಂತ ಇಂಗ್ಲಿಷ್ ಎಂಬ ಜೀವಂತ ಮತ್ತು ಜಾಗತಿಕ ಸಂಪರ್ಕ ಭಾಷೆಯ ಶಬ್ದಗಳ ಬಳಕೆ ಹೆಚ್ಚು ನಿರಾಯಾಸ, ಹೆಚ್ಚು ಪ್ರಯೋಜಕವೆಂಬ ಪರಿಸ್ಥಿತಿ ನಿರ್ಮಾಣವಾಗಿದೆಯೆಂದೇ ಹೇಳಬಹುದು. ಒಟ್ಟಾರೆ, ಸಂಸ್ಕೃತ ಶಬ್ದಗಳಿಂದ ಕನ್ನಡ ಅಭಿವೃದ್ಧಿಯಾಗುವ ಕಾಲ ಮುಗಿದು ಹೋಗಿ, ಇಂಗ್ಲಿಷ್ ಶಬ್ದಗಳಿಂದ ಕನ್ನಡ ಅಭಿವೃದ್ಧಿಯಾಗುವ ಕಾಲ ಸನ್ನಿಹಿತವಾಗಿದೆಯೆಂದು ತೋರುತ್ತದೆ.

ಶಬ್ದ, ಪಾರಿಭಾಷಿಕ ಶಬ್ದಗಳ ಬಳಕೆಯನ್ನಲ್ಲದೆ ಭೈರಪ್ಪನವರು ಸಂಸ್ಕೃತ ಜ್ಞಾನಸಂಪತ್ತಿನ ಬಳಕೆಯ ಬಗ್ಗೆ ಬಹಳ ಚರ್ಚಿಸಿದ್ದಾರೆ. ಕಳೆದ ಸಾವಿರಾರು ವರ್ಷಗಳಿಂದ ಸಂಸ್ಕೃತದಲ್ಲಿಯ ಜ್ಞಾನಸಂಪತ್ತು ಕನ್ನಡ ಭಾಷೆ - ಸಾಹಿತ್ಯಗಳಿಗೆ ವರ್ಗಾವಣೆಗೊಂಡಿದೆ. ಸ್ಥಗಿತ ಸಾಹಿತ್ಯವಾಗಿರುವ ಅದರಲ್ಲಿ ಈಗ ಪಡೆದುಕೊಳ್ಳಬಹುದಾದ ಮಹತ್ವಪೂರ್ಣ ಜ್ಞಾನಸಂಪತ್ತು ಉಳಿದಿಲ್ಲವೆಂದು ಹೇಳಬಹುದೇನೋ.

ಇದಕ್ಕೆ ಪೂರಕವಾಗಿ ಬಸವಣ್ಣ ಮೊದಲಾದ ಶರಣರು ಸಂಸ್ಕೃತ ಬಳಸಿರುವುದನ್ನು ಭೆರಪ್ಪನವರು ಅಗತ್ಯಮೀರಿ ವಿವರಿಸಿದ್ದಾರೆ. ಮುಕ್ತ ಮನಸ್ಸಿನ ಮಹಾಪುರುಷರು ಅನ್ಯಸಾಹಿತ್ಯದ ಒಳ್ಳೆಯ ವಿಚಾರಗಳನ್ನು, ತಮ್ಮ ಅಭಿಪ್ರಾಯದ ಸಮರ್ಥನೆಗಾಗಿ ಅನ್ಯ ಉದ್ಧರಣೆಗಳನ್ನು ಬಳಸುವುದು ಸಹಜ. ಇಂದು ಬದುಕಿದ್ದರೆ ಅದೇ ಶರಣರು ಪಾಶ್ಚಿಮಾತ್ಯರ ಸೂಕ್ತ ವಿಚಾರಗಳನ್ನು ಇಂಗ್ಲಿಷ್ ಉದ್ಧರಣೆಗಳನ್ನು ಬಳಸುತ್ತಿದ್ದರು. ಇಷ್ಟಾಗಿಯೂ ಅವರು ಸಂಸ್ಕೃತ ಮೂಲದಲ್ಲಿರುವ ವ್ಯಕ್ತಿ-ಸಮಾಜ ವಿರೋಧಿ ವಿಚಾರಗಳನ್ನು ಖಂಡಿಸಿ, ಕನ್ನಡಿಗರ ಕಾಣಿಕೆಯೆಂಬಂತೆ ಅನೇಕ ಹೊಸ ಹೊಸ ವಿಷಯಗಳನ್ನು ಪ್ರತಿಪಾದಿಸಿದುದು ತಿಳಿದ ವಿಷಯವೇ ಆಗಿದೆ. ಅದೇನೇ ಇರಲಿ, ಕವಿಗಳು, ಶಾಸ್ತ್ರಜ್ಞರು, ಶರಣರು, ದಾಸರು ಇತ್ಯಾದಿ ಪ್ರಾಜ್ಞರು ಸಂಸ್ಕೃತದಿಂದ ಕನ್ನಡಕ್ಕೆ ಎಲ್ಲವನ್ನು ಪಡೆದಿರುವಾಗ, ನಾವು ಪಡೆಯಬಹುದಾದ ಹೊಸ ವಿಷಯ ಅಲ್ಲಿ ಇನ್ನೂ ಇದೆಯೇ ? ಇದ್ದರೂ ಅಲ್ಲಿಯ ವೈದ್ಯ, ವಾಸ್ತು, ಖಗೋಲ, ತಂತ್ರಜ್ಞಾನ, ವಿಜ್ಞಾನ ಇತ್ಯಾದಿಗಳು ಆಧುನಿಕ ಶೋಧಗಳೊಂದಿಗೆ ಸ್ಪರ್ಧಿಸಬಹುದೆ? ಎಂಬ ಅನುಮಾನ ಮೂಡುತ್ತದೆ.

ವಸ್ತುಸ್ಥಿತಿ ಹೀಗಿರುವಾಗ ಭೈರಪ್ಪನವರು "ಕನ್ನಡ ಭಾಷೆಯ ಅಭಿವೃದ್ಧಿಗೆ ಸಂಸ್ಕೃತ ವಿಶ್ವವಿದ್ಯಾಲಯ ಪೂರಕವಾಗಲಿದೆ" ಎಂದು ಹೇಳಿದ್ದಾರೆ. ಆದರೆ ಈ ರೀತಿಯ ವಿಶ್ವವಿದ್ಯಾಲಯ ಸ್ಥಾಪನೆಯು ಕನ್ನಡ ಅಭಿವೃದ್ಧಿಗೆ ಖಂಡಿತ ಪೂರಕವಾಗುವುದಿಲ್ಲ; ಅದಕ್ಕೆ ಬೇರೆ ವಿಧಾನಗಳನ್ನೇ ಅನುಸರಿಸಬೇಕಾಗುತ್ತದೆ. ಹೀಗೆ ಬೇರೆ ವಿಧಾನಗಳನ್ನು ಅನುಸರಿಸಿದರೂ ಕನ್ನಡ ಅಭಿವೃದ್ಧಿಯ ದೃಷ್ಟಿಯಿಂದ ಇಂಗ್ಲಿಷ್ ಎಂಬ ಜೀವಂತಭಾಷೆಯ ಮುಂದೆ ಸಂಸ್ಕೃತವೆಂಬ ಮೃತಭಾಷೆ ಖಂಡಿತವಾಗಿಯೂ ಅವಗಣಿತವಾಗುತ್ತದೆ. ಬಹಳೆಂದರೆ ಇಂಥ ವಿಶ್ವವಿದ್ಯಾಲಯದಿಂದ ಅಂತಿಮದಲ್ಲಿ ಯಜ್ಞಮಾಡುವ ಪುರೋಹಿತರು, ಭವಿಷ್ಯ ಹೇಳುವ ಜೋಯಿಸರು, ಮಂತ್ರ ಹೇಳುವ ಅರ್ಚಕರು, ಕೆಲವೇ ಜನ ಪಂಡಿತರು ಸೃಷ್ಟಿಯಾಗುತ್ತಾರೆ. ಒಟ್ಟಾರೆ, ಪ್ರಾಚೀನ ಕಾಲದಲ್ಲಿ ಕನ್ನಡ ಅಭಿವೃದ್ಧಿಗೆ ಸಂಸ್ಕೃತ ನೆರವಾದುದು ನಿಜ. ಈಗ ಆ ಕಾಲ ಮುಗಿದು, ಸಂಸ್ಕೃತದಿಂದ ಈ ವರೆಗೆ ತೆಗೆದುಕೊಂಡುದನ್ನು ಕ್ರಮೇಣ ಬಿಡುತ್ತ, ಇಂಗ್ಲಿಷ್ ಇತ್ಯಾದಿಗಳಿಂದ ಹೊಸದನ್ನು ಪಡೆಯುತ್ತಲಿರುವ ಸಂದರ್ಭದಲ್ಲಿ ನಾವಿದ್ದೇವೆ. ಹೀಗಾಗಿ, ಇಂದು ಸಂಸ್ಕೃತದಿಂದ ಕನ್ನಡ ಭಾಷೆ, ಜ್ಞಾನಗಳ ಅಭಿವೃದ್ಧಿ ಸಾಧ್ಯವೆ? ಎಂಬುದು ಸಂದೇಹಿಸಬೇಕಾದ ವಿಷಯವಾಗಿದೆ.

ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗಗಳಿದ್ದರೂ ಕನ್ನಡ ವಿಶ್ವವಿದ್ಯಾಲಯವನ್ನು, ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಸಂಗೀತಕ್ಕೆ ವಿದ್ಯಾರ್ಥಿಗಳಿಲ್ಲದಿರುವಾಗಲೂ ಸಂಗೀತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದಂತೆ, ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ವಿಭಾಗಗಳಿದ್ದರೂ ಈ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪಿಸಬಾರದೇಕೆ? ಎಂದು

ಭೈರಪ್ಪನವರು ಕೇಳಿದುದು ವೈಜ್ಞಾನಿಕವೆನಿಸುವುದಿಲ್ಲ. ಕನ್ನಡ, ಸಂಗೀತಗಳು ನಿತ್ಯ ಚಲಾವಣೆಯಲ್ಲಿರುವ ಜೀವಂತ ಜ್ಞಾನಕ್ಷೇತ್ರಗಳು. ಸಂಸ್ಕೃತ ಹಾಗಲ್ಲ. ಅದು ಜೀವಂತ ಭಾಷೆಯೂ ಅಲ್ಲ, ಅಲ್ಲಿ ಹೊಸ ಹೊಸ ವಿಷಯಗಳೂ ಹುಟ್ಟುತ್ತಿಲ್ಲ. ಹೀಗಿರುವಾಗ ಭೈರಪ್ಪನವರು ಮಾಡಿರುವ ಸ್ಥಗಿತ ಮತ್ತು ಚಲನಶೀಲ ಕ್ಷೇತ್ರಗಳ ಹೋಲಿಕೆ ಇಲ್ಲಿ ಒಪ್ಪಿತವೆನಿಸುವುದಿಲ್ಲ. ಇದೇ ರೀತಿ ಅವರು ಪ್ರಸ್ತಾಪಿಸಿರುವ ವಿಜಾಪುರ ಮಹಿಳಾ ವಿಶ್ವವಿದ್ಯಾಲಯವೂ ನನ್ನ ದೃಷ್ಟಿಯಲ್ಲಿ ಸರಕಾರದ ಅವೈಜ್ಞಾನಿಕ ವಿಚಾರವೇ ಆಗಿದೆ.

ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತವು ಕೇವಲ ಅಧ್ಯಯನದ ವಿಷಯವಾಗಬಾರದು, ಬೋಧನೆಯ ಮಾಧ್ಯಮವೂ ಆಗಬೇಕು. ವಿದ್ಯಾರ್ಥಿಗಳು ಸಂಸ್ಕೃತ ಮಾಧ್ಯಮದಲ್ಲಿ ಉತ್ತರವನ್ನು ಬರೆಯಬೇಕು - ಎಂದು ಸೂಚಿಸಿದ್ದಾರೆ. ಇಂಥ ಉಪಕ್ರಮಗಳು ಇಂದು ಆಕಾಶವಾಣಿಯಲ್ಲಿ ಸಂಸ್ಕೃತ ಮಾಧ್ಯಮದಲ್ಲಿ ಸುದ್ದಿ ಬಿತ್ತರಿಸುವಂತೆ ಒಂದು ಪ್ರಹಸನವಾಗುವ ಸಾಧ್ಯತೆಯಿದೆ. ಈ ಬಗೆಯ ಪ್ರಯತ್ನಗಳಿಗೂ ಕನ್ನಡ ಅಭಿವೃದ್ಧಿಗೂ ಏನು ಸಂಬಂಧ? ಎಂದು ಕೇಳಬೇಕಾಗುತ್ತದೆ.

ಕರ್ನಾಟಕದ ಬ್ರಾಹ್ಮಣೇತರ ಮಠಗಳು ಸಂಸ್ಕೃತ ಪಾಠಶಾಲೆ ನಡೆಸುವುದನ್ನು ತಮ್ಮ ವಾದಕ್ಕೆ ಬೆಂಬಲವಾಗಿ ಹಿಡಿದಿದ್ದಾರೆ. ಬ್ರಾಹ್ಮಣರಿಗೆ ತಾವು ಕಡಿಮೆಯಲ್ಲವೆಂದು ಸಾಧಿಸಬೇಕಿದ್ದ ಅಂದಿನ ಐತಿಹಾಸಿಕ ಸಂದರ್ಭಗಲ್ಲಿ ಈ ಮಠಗಳು ಸಂಸ್ಕೃತ ಪಾಠಶಾಲೆ ಆರಂಭಿಸುವ ತಪ್ಪು ಮಾಡಿದವು. ಇದರಿಂದಾಗಿ ಇವುಗಳ ಪಾರಂಪರಿಕ ದೇಶೀ ತತ್ವಜ್ಞಾನ ಮೂಲೆ ಗುಂಪಾಯಿತು. ಇಷ್ಟೇ ಏಕೆ? ಹುಸಿ ಪ್ರತಿಷ್ಠೆಗಾಗಿ ಹುಟ್ಟಿದ ಇವುಗಳಲ್ಲಿ ಬಹಳಷ್ಟು ಪಾಠಶಾಲೆಗಳು ಹುಟ್ಟುತ್ತಲೇ ಕಣ್ಣುಮುಚ್ಚಿದವು. ಇಂದಿನ ನಿಜಸ್ಥಿತಿಯೆಂದರೆ, ಬ್ರಾಹ್ಮಣ -ಅಬ್ರಾಹ್ಮಣ ಸೇರಿ ಈಗ ರಾಜ್ಯದಲ್ಲಿರುವ ನೂರಿನ್ನೂರು ಸಂಸ್ಕೃತ ಪಾಠಶಾಲೆಗಳಲ್ಲಿ ೧೦೦ಕ್ಕೆ ೯೦ ರಷ್ಟು ಸರಕಾರದ ಅನುದಾನ ಆಸೆಯ ಲೆಟರಹೆಡ್ ಸಂಸ್ಥೆಗಳೇ ಆಗಿವೆ. ಹಾಗೆ ನೋಡಿದರೆ, ಇವು ಶಾಲೆ -ಕಾಲೇಜುಗಳಂತೆ ಸಂಸ್ಕೃತವನ್ನು ಒಂದು ಭಾಷೆಯನ್ನಾಗಿ ಕಲಿಸದೆ, ಅದನ್ನು ತಮ್ಮ ತಮ್ಮ ಮತಪ್ರಚಾರದ ಮಾಧ್ಯಮ ಮಾಡಿಕೊಂಡಿರುವುದರಿಂದ, ಇಂದು ಪಾಠಶಾಲೆಗಳಿಗೆ ಧನಸಹಾಯ ನೀಡುವುದು ಧರ್ಮನಿರಪೇಕ್ಷ ಸಂವಿಧಾನಕ್ಕೆ ವಿರುದ್ಧವೆಂದೇ ಹೇಳಬೇಕು.

ಹೀಗೆ, ಉದ್ದಕ್ಕೂ ಕನ್ನಡ ಅಭಿವೃದ್ಧಿ ಹೆಸರಿನಲ್ಲಿ ಸಂಗತವಲ್ಲದ ವಿಚಾರಗಳನ್ನು ಮಂಡಿಸಿದ ಭೈರಪ್ಪನವರು, ಕೊನೆಯಲ್ಲಿ ಎಲ್ಲ ಪ್ರಾಚ್ಯಭಾಷೆಗಳ ಅಧ್ಯಯನಕ್ಕೆ ಅವಕಾಶವಿರಲಿ, ಹೆಸರು ಮಾತ್ರ 'ಸಂಸ್ಕೃತ ವಿಶ್ವವಿದ್ಯಾಲಯ'ವೆಂದಿರಲಿ - ಎನ್ನುವುದು ಸಂಸ್ಕೃತ ಪಕ್ಷಪಾತವಲ್ಲದೆ ಮತ್ತೇನು? ಒಂದು ವೇಳೆ ಸಂಸ್ಕೃತ, ಪಾಲಿ, ಪ್ರಾಕೃತ ಇತ್ಯಾದಿಗಳ ಅಭ್ಯಾಸಕ್ಕೆ ಇಲ್ಲಿ ಸಮಾನ ಅವಕಾಶವಿರುವುದಾದರೆ ಈ ಸಂಸ್ಥೆಯನ್ನು 'ಸಂಸ್ಕೃತ ವಿಶ್ವವಿದ್ಯಾಲಯ'ವೆಂದೇ ಏಕೆ ಕರೆಯಬೇಕು? 'ಪ್ರಾಕೃತ ವಿಶ್ವವಿದ್ಯಾಲಯ' ಇತ್ಯಾದಿ ಹೆಸರಿನಿಂದೇಕೆ ಕರೆಯಬಾರದು? ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಹಾಗೆ ನೋಡಿದರೆ, ಪ್ರಾಚೀನ ಕನ್ನಡಸಾಹಿತ್ಯದ ಬಹುಭಾಗವಾಗಿರುವ ಜೈನಸಾಹಿತ್ಯವು ಪ್ರಾಕೃತಸಾಹಿತ್ಯಕ್ಕೆ, ತದ್ಭವವೆಂದು ಕರೆಯಿಸಿಕೊಳ್ಳುವ ಕನ್ನಡದ ಅಪಾರ ಶಬ್ದಗಳೆಲ್ಲ ಪ್ರಾಕೃತಭಾಷೆಗೆ ಋಣಿಯಾಗಿರುವುದರಿಂದ, ಈ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ, ಪ್ರಾತೃತಗಳಿಗೆ ಸಮಾನ ಸ್ಥಾನ ನೀಡಬೇಕೆಂದು ಕೇಳಬೇಕಾಗುತ್ತದೆ.

ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಈ ವಿಶ್ವವಿದ್ಯಾಲಯವು ಬಹಳವೆಂದರೆ ಹಳಗನ್ನಡ ಭಾಷೆ-ಸಾಹಿತ್ಯಗಳ ತಿಳಿವಳಿಕೆಗೆ, ಹಳೆಯ ಧರ್ಮ-ದರ್ಶನಗಳ ಅಭ್ಯಾಸ ಮಾಡುವವರಿಗೆ ನೆರವಾಗಬಹುದೇ ಹೊರತು, ಹೊಸ ಜಗತ್ತನ್ನು ಪ್ರವೇಶಿಸಬೇಕೆನ್ನುವ ಕನ್ನಡಿಗರಿಗೆ, ಕನ್ನಡ ಅಭಿವೃದ್ಧಿ ಪೂರಕವಾಗುವುದಿಲ್ಲ. ಆದುದರಿಂದ ಸಂಸ್ಕೃ ವಿಶ್ವವಿದ್ಯಾಲಯ ಸ್ಥಾಪನೆಯ ವಿಚಾರ ಕೈಬಿಟ್ಟು, ಈಗಾಗಲೇ ವಿಶ್ವವಿದ್ಯಾಲಯಗಳಲ್ಲಿರುವ ಸಂಸ್ಕೃತ ವಿಭಾಗಗಳನ್ನು ಬಲಪಡಿಸುವ, ಕನ್ನಡ ಸಂಸ್ಕೃತ ವಿದ್ಯಾರ್ಥಿಗಳು ಪರಸ್ಪರ ಭಾಷೆಗಳನ್ನು ಐಚ್ಛಿಕವಾಗಿ

ಓದುವ ಪಠ್ಯಕ್ರಮ ಆರಂಭಿಸಬೇಕು. ಇದು ಎರಡೂ ಭಾಷೆಗಳ ದೃಷ್ಟಿಯಿಂದ ಉಪಯುಕ್ತ ವಿಚಾರ. ಇಷ್ಟು ಹೇಳಿದ ಬಳಿಕವೂ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಿದ್ದಲ್ಲಿ ಸಂಸ್ಕೃತ, ಪ್ರಾಕೃತ, ಪಾಲಿ ಇತ್ಯಾದಿ ಪ್ರಾಚ್ಯಭಾಷೆಗಳನ್ನು ಅಧ್ಯಯನ ಮಾಡುವ ಸಲುವಾಗಿ ಭಾಷಿಕ ಪಕ್ಷಪಾತ ಮಾಡದೆ, ಅದಕ್ಕೆ "ಪ್ರಾಚ್ಯಭಾಷಾ ವಿಶ್ವವಿದ್ಯಾಲಯ" (University of Classical Languages) ವೆಂದು ನಾಮಕರಣ ಮಾಡುವದೇ ಸಾಮಾಜಿಕ ನ್ಯಾಯವೆನಿಸುತ್ತದೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡ ಆಶ್ರಯದಲ್ಲಿ ನೀಡಿದ ಭಾಷಣ.

ಆಕರ : ಮಾರ್ಗ ಸಂಪುಟ-೬

■■

೪೯

ಸಂಶೋಧಕ ಎಂ. ಎಂ. ಕಲಬುರ್ಗಿ

೧೯೯೩

ಅಧ್ಯಕ್ಷರೂ ಕವಿ ಮಿತ್ರರೂ ಆಗಿರುವ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ ಅವರೇ,
ಸಂವಾದಗೋಷ್ಠಿಯ ಸ್ನೇಹಿತರೇ, ಶಂಬಾ ವಿಚಾರವೇದಿಕೆಯ ಗೆಳೆಯರೇ
ಮತ್ತು ಆತ್ಮೀಯರೇ,

ಸೃಜನ - ವಿಮರ್ಶನ ಸಾಹಿತ್ಯವನ್ನು ಕುರಿತು ವಿಚಾರಸಂಕಿರಣಗಳು ಜರುಗುತ್ತಲಿರುವ ಇಂದಿನ ಸಂದರ್ಭದಲ್ಲಿ, ಸಂಶೋಧನಸಾಹಿತ್ಯವನ್ನು ಕುರಿತು ಹಮ್ಮಿಕೊಂಡಿರುವ ಈ ವಿಚಾರಸಂಕಿರಣ, ಒಂದು ಹೊಸ ಉಪಕ್ರಮವಾಗಿದೆ. ಈ ಉಪಕ್ರಮಕ್ಕೆ ನನ್ನನ್ನು ಮೊದಲು ಆಯ್ದುಕೊಂಡಿರುವಿರಿ. ಇದು ಮಹಾಸಂಶೋಧಕ ಡಾ. ಶಂಬಾ ಅವರಿಗೆ ಗೌರವ ತೋರಿಸಲು, ನನಗೆ ಲಭಿಸಿದ ಒಂದು ಸದವಕಾಶವೆಂದೇ ಭಾವಿಸುತ್ತೇನೆ.

ಶ್ರದ್ಧೆ, ಶ್ರಮ, ಸಮಯ - ಇವುಗಳನ್ನು ಜೀವನದ ಮೌಲ್ಯಗಳೆಂದು ನಂಬಿದವನು, ನಾನು. ಇದರಿಂದಾಗಿ ಸರಿಯಾದ ಸಮಯಕ್ಕೆ ಸರಿಯಾದ ಕೆಲಸ ಮಾಡುವ ಪ್ರವೃತ್ತಿ ನನ್ನಲ್ಲಿ ತಕ್ಕಮಟ್ಟಿಗೆ ಬೆಳೆದುಬಂದಿದೆ. Plan your work and work your plan ಎಂಬ ಸೂಕ್ತಿಯಿಂದ ಪ್ರಭಾವಿತನಾಗಿ, ವಿದ್ಯಾರ್ಥಿ ದೆಸೆಯಿಂದಲೂ ಕಾರ್ಯವನ್ನು ಯೋಜಿಸುವ, ಯೋಜನೆಯನ್ನು ಕಾರ್ಯಗತಗೊಳಿಸುವ ಜೀವನಪದ್ಧತಿಯನ್ನು ಬೋಧನವೃತ್ತಿ, ಸಂಶೋಧನ ಪ್ರವೃತ್ತಿಗಳಲ್ಲಿ ಪಾಲಿಸುತ್ತ ಂದಿದ್ದೇನೆ.

ನನಗೆ ಬೋಧನೆ ತುಂಬ ಇಷ್ಟ. ಅರುವತ್ತೂ ನಿಮಿಷಗಳನ್ನು ಸಾರ್ಥಕಗೊಳಿಸಲು ನಾನು ಪೂರ್ವಸಿದ್ಧತೆಯೊಂದಿಗೇ ವರ್ಗಕೋಣೆಯನ್ನು ಪ್ರವೇಶಿಸುತ್ತೇನೆ. ಇದು ನನ್ನ ಪ್ರಾಧ್ಯಾಪಕರಾದ ಪ್ರೊ. ಬಿ. ಟಿ. ಸಾಸನೂರ ಅವರಿಂದ ಬಂದ ಬಳುವಳಿಯಾಗಿದೆ. ವರ್ಗ ಪ್ರಾರಂಭವನ್ನು ಸೂಚಿಸುವ ಗಂಟೆಯ ಧ್ವನಿಯೊಂದಿಗೇ ನಾನು ಕೋಣೆಯನ್ನು ಪ್ರವೇಶಿಸಿ, ಬೋಧನೆಗೆ ಇಳಿಯುತ್ತೇನೆ. ಅದು ಬಂಗಾರವನ್ನು ಶುದ್ಧೀಕರಿಸುವ ಬೆಂಕಿಯಾಗಿ ಕಂಡಿದೆ. ಹೀಗಾಗಿ ನನ್ನನ್ನು ಬೆಳೆಸಿದ ಒಂದು ಮುಖ್ಯ ನೆಲೆ ವರ್ಗಕೋಣೆಯೆಂದು ತಿಳಿದಿದ್ದೇನೆ.

ದುರ್ಗಮವಾದ ಕೋಟೆಯ ಮೇಲೆ ಸರಿಯಾದ ದಿಕ್ಕಿನಿಂದ ದಾಳಿ ಮಾಡುವ ಯೋಧನಂತೆ, ಸರಿಯಾದ ನಿಟ್ಟಿನಿಂದ ಫೋಟೋ ತೆಗೆಯುವ ಛಾಯಾಚಿತ್ರಕನಂತೆ ನಾನು ಪಾಠವಿಷಯವನ್ನು ಪ್ರವೇಶಿಸುತ್ತೇನೆ. ಏಕಶಿಸ್ತೀಯ ಬೋಧನೆಗಿಂತ ಬಹುಶಿಸ್ತೀಯ ಬೋಧನೆ ನನಗೆ ತುಂಬ ಪ್ರೀತಿ. ಹೀಗಾಗಿ ಪಂಪಭಾರತವನ್ನು ಕಾವ್ಯಮೌಲ್ಯ, ಜೀವನಮೌಲ್ಯ, ಪ್ರೇರಣೆ-ಪ್ರಭಾವ ಇತ್ಯಾದಿ ಆಯಾಮಗಳಿಂದ ಮುನ್ನಡೆಸಿಕೊಂಡು ಹೋಗುತ್ತ, ಕೃತಿಯನ್ನು-

ಅದರ ಹಿಂದಿರುವ ಜೀವನವನ್ನು -ಇನ್ನೂ ಹಿಂದಿರುವ ಸತ್ಯವನ್ನು ಶೋಧಿಸುವುದು ನನ್ನ ಬೋಧನಪದ್ಧತಿಯಾಗಿದೆ. ಕಾವ್ಯವಿರಲಿ, ಶಾಸ್ತ್ರವಿರಲಿ, ಬೋಧನೆಯಲ್ಲಿ ಇನ್ನೊಬ್ಬರ ಅನುಭವಗಳನ್ನು ನಾನು ಬಳಸಿಕೊಳ್ಳುವುದು ತೀರ ಕಡಿಮೆ. ನನ್ನ ಅನುಭವ- ಆಲೋಚನೆಗಳನ್ನೇ ವರ್ಗದಲ್ಲಿ ನಾನು ಮೂರ್ತಗೊಳಿಸುತ್ತೇನೆ. ಹೀಗಾಗಿ ಇನ್ನೊಬ್ಬರ ಕೃತಿಗಳಿಗಿಂತ ಭಿನ್ನರೀತಿಯಲ್ಲಿ ಗ್ರಂಥಸಂಪಾದನಶಾಸ್ತ್ರ, ಸಂಶೋಧನಶಾಸ್ತ್ರ, ನಾಮಶಾಸ್ತ್ರ ಕೃತಿಗಳನ್ನು ರಚಿಸುವುದು ನನಗೆ ಸಾಧ್ಯವಾಯಿತು. ಇವುಗಳಲ್ಲಿ ಯಾರದು ಸರಿ? ಎಷ್ಟು ಸರಿ? ಎಂಬುದನ್ನು ವಿದ್ವಾಂಸರು ನಿರ್ಣಯಿಸಬೇಕಾಗಿದೆ.

ಪಠ್ಯ ಕೈಯಲ್ಲಿ ಇದ್ದರೆ, ಅದು ನನಗೆ ಒಂದು ನೆವ. ನಾನೇ ಪಠ್ಯವಾಗಿ ಬಿಡುವುದು ನನ್ನ ಸ್ವಭಾವ. ಈ ಬಗೆಯ ಅದ್ವೈತಸ್ಥಿತಿಯಲ್ಲಿ ನಿಂತು, ನಾನು ಸುಖದ ಕ್ಷಣಗಳನ್ನು ಅನುಭವಿಸುವುದು ವರ್ಗಕೋಣೆಯಲ್ಲಿ, ವಿದ್ಯಾರ್ಥಿಗಳ ಜೊತೆಯಲ್ಲಿ. ಹೀಗಾಗಿ ಈ ವರೆಗಿನ ೩೦ ವರ್ಷಗಳ ಕಾಲಾವಧಿಯಲ್ಲಿ ರಜೆಯ ದಿನಗಳನ್ನು ಹೊರತುಪಡಿಸಿ, ನಾನು ವರ್ಗಬೋಧನೆಯನ್ನು ಒಂದು ಸಲವೂ ತಪ್ಪಿಸಿಕೊಂಡಿಲ್ಲ. ನನ್ನ ಈ ರೀತಿ ಒಂದು ನೀತಿಯಾಗಿ ಬೆಳೆದು, Habit is the second personality ಎಂಬಂತೆ ಅದು ನನ್ನ ಶಿಕ್ಷಕ ವ್ಯಕ್ತಿತ್ವವಾಗಿ ರೂಪಗೊಂಡಿದೆ. ನನ್ನ ವಿದ್ಯಾರ್ಥಿಗಳು ನನ್ನ ನಿಷ್ಠುರತೆ - ಅತಿರೇಕಗಳನ್ನು ಕೆಲವೊಮ್ಮೆ ಒಪ್ಪಲಿಕ್ಕಿಲ್ಲ. ವರ್ಗಬೋಧನೆಗೆ ಸಂಬಂಧಿಸಿದ ನನ್ನ ಈ ವರ್ತನೆಯನ್ನು ಮಾತ್ರ ಅವರು ಪ್ರೀತಿಸುತ್ತಲೇ ಬಂದಿದ್ದಾರೆ.

ಪಿಎಚ್. ಡಿ. ಮಾರ್ಗದರ್ಶನ, ನನಗೆ ಪ್ರೌಢವಿದ್ಯಾರ್ಥಿಗಳೊಂದಿಗೆ ನಡೆಸುವ ಮುಕ್ತ ಅಧ್ಯಯನವೆನಿಸಿದೆ. ಉತ್ತಮ ಪ್ರಬಂಧ ರೂಪಿಸುವುದೆಂದರೆ ವಿದ್ಯಾರ್ಥಿಯ ಜೊತೆಗೆ ಮಾರ್ಗದರ್ಶಕನೂ ಶೈಕ್ಷಣಿಕವಾಗಿ ಬೆಳೆಯುವುದು, ಎಂಬ ಅನುಭವ ನನ್ನದಾಗಿದೆ. ಉಪೇಕ್ಷಿತ, ಮೌಲಿಕ ವಿಷಯಗಳನ್ನು ಆಯ್ದುಕೊಡುವುದರಿಂದಾಗಿ ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಶಾಸನಗಳಲ್ಲಿ ಕರ್ನಾಟಕದ ವರ್ತಕವರ್ಗ, ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ, ಶ್ರೀಕೃಷ್ಣ ಪಾರಿಜಾತ: ಒಂದು ಅಧ್ಯಯನ, ಕೊಡಕಲ್ ಬಸವಣ್ಣ: ಒಂದು ಅಧ್ಯಯನ, ಕುಮಾರ ವ್ಯಾಸನ ರೂಪಕಗಳು : ಒಂದು ಅಧ್ಯಯನ - ಇತ್ಯಾದಿ ಪಿಎಚ್.ಡಿ. ಪ್ರಬಂಧಗಳು ನನ್ನ ಮಾರ್ಗದರ್ಶನದಲ್ಲಿ ಬೆಳಕುಕಂಡಿವೆ.

ವೃತ್ತಿಯಲ್ಲಿ ಬೋಧಕವಾಗಿರುವ ನಾನು ಪ್ರವೃತ್ತಿಯಲ್ಲಿ ಬೆಳೆದುದು ಸಂಶೋಧಕನಾಗಿ. ಆದರೆ ಮೂಲತಃ ನನ್ನದು ಸೃಜನಶೀಲ ಮನಸ್ಸು. ಡಾ. ಆರ್. ಸಿ. ಹಿರೇಮಠ ಅವರ ಪರಿಸರದಲ್ಲಿ ವಿದ್ಯಾರ್ಥಿ ಜೀವನವನ್ನು ರೂಪಿಸಿಕೊಳ್ಳಬೇಕಾಗಿ ಬಂದ ಕಾರಣ, ಅವರ ವಿದ್ವತ್ತು ಕವಿಯಾಗಲಿದ್ದ ನನಗೆ ಸಂಶೋಧಕನ ದಾರಿ ತೋರಿಸಿತು. ವೃತ್ತಿಜೀವನ ಪ್ರಾರಂಭಿಸಿದ ಹೊಸದರಲ್ಲಿ ಕವಿಯಾಗಿಬೇಕೋ? ಸಂಶೋಧಕನಾಗಬೇಕೋ? ಎಂಬ ಎರಡು ದಾರಿಗಳು ನನ್ನ ಮುಂದೆ ತೆರೆದುಕೊಂಡಿದ್ದವು. ಆದರೆ ಅಂದಿನ ಧಾರವಾಡದ ವಾತಾವರಣವು ನನ್ನನ್ನು ಕವಿಯಾಗಿ ಬೆಳೆಯಗೊಡಲಾರದೆಂದೇ ಸ್ಪಷ್ಟವಾಯಿತು. ಆಕಸ್ಮಿಕ ಆಯ್ಕೆ ಎನಿಸಿದ್ದ ಸಂಶೋಧನೆ ಆಗ ಅನಿವಾರ್ಯವಾಗಿ ಪರಿಣಮಿಸಿತು. ಆರಂಭದ ಆ ದಿನಗಳಲ್ಲಿ ಅನೇಕ ಜನ ಹಿರಿಯ ಸಂಶೋಧಕರ ಆದರ್ಶದಲ್ಲಿ, ಅದರಲ್ಲಿಯೂ ಡಾ. ಎಂ. ಚಿದಾನಂದಮೂರ್ತಿ ಅವರ ಆಕರ್ಷಣೆಯಲ್ಲಿ, ನಾನು ಸಂಶೋಧನೆಯನ್ನು ಒಂದು ಗಂಭೀರವ್ರತವೆಂದು ಸ್ವೀಕರಿಸಿದೆನು.

ಮೂಲತಃ ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ನಾನು, ಸಹಜವಾಗಿಯೇ ಮೊದಲ ಹಂತದಲ್ಲಿ ಸಾಹಿತ್ಯ, ಸಾಹಿತ್ಯಶಾಸ್ತ್ರ, ಗ್ರಂಥಸಂಪಾದನೆ - ಈ ಮೂರು ಕ್ಷೇತ್ರಗಳಲ್ಲಿ ಶ್ರಮಿಸಿ, ಕ್ರಮವಾಗಿ ಶಾಸನಕ್ಷೇತ್ರ, ಶಿಷ್ಟಸಂಸ್ಕೃತಿ, ಜನಪದ ಸಂಸ್ಕೃತಿ - ಹೀಗೆ ಮತ್ತೆ ಮೂರು ಕ್ಷೇತ್ರಗಳಿಗೆ ವಿಸ್ತರಿಸಿಕೊಳ್ಳುವ ಮೂಲಕ, ಸಂಶೋಧನೆಯ ಆರು ನೆಲೆಗಳನ್ನು ಈ ವರೆಗೆ ಆವರಿಸಿಕೊಂಡಿದ್ದೇನೆ. ಹೀಗಾಗಿ ನನ್ನದು ಬಹು ಕ್ಷೇತ್ರೀಯ ಸಂಶೋಧನೆಯಾಗಿದೆ.

ನಾಗವರ್ಮ ಜನ್ನನ ಗುರುವಲ್ಲ, ಆತ್ಮಬಲಿ: ಬ್ರಹ್ಮಶಿವನ ವಿಚಾರಗಳು, ಬಸವಣ್ಣನವರ ಜನನದ ಉದ್ದೇಶ, ಸೊಲ್ಲಾಪುರದ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾಲಯ, ಶೂನ್ಯಸಂಪಾದನೆ : ರಾಚನಿಕ ಅಧ್ಯಯನ, ಹರಿಹರನ ಸಾಹಿತ್ಯದಲ್ಲಿ ಹೋರಾಟದ ಧ್ವನಿಗಳು, ವಚನಗಳ ಸಂಗ್ರಹ-ಸಂಕಲನ -ಸಂಪಾದನೆ, ಕನ್ನಡಿಗರ ಮಾತೃಭಾಷಾಪ್ರಜ್ಞೆಯ ಇತಿಹಾಸ - ಇತ್ಯಾದಿ ಪ್ರಬಂಧಗಳು ಸಾಹಿತ್ಯ ಸಂಶೋಧನೆಗೆ ನನ್ನ ಕಾಣಿಕೆಯೆನಿಸಿದೆ.

ನನ್ನ ಇನ್ನೊಂದು ಪ್ರೀತಿ ಶಾಸ್ತ್ರ. ಭಾಷೆ, ಛಂದಸ್ಸು, ಗ್ರಂಥಸಂಪಾದನೆ, ನಾಮವಿಜ್ಞಾನ, ಸಂಶೋಧನೆ - ಈ ಶಾಸ್ತ್ರ ಶಾಖೆಗಳಲ್ಲಿ ನನ್ನ ಶ್ರಮ ಹರಡಿಕೊಂಡಿದೆ. ಭಾಷೆಗೆ ಸಂಬಂಧಿಸಿದಂತೆ ಕೇಸಿ - ಕೇರಿ, ಪ್ರಾಚೀನ ಕನ್ನಡದ ಒಂದು ಉಚ್ಚಾರ, ಕ್ಷಳಸೂತ್ರ ಇತ್ಯಾದಿ ಲೇಖನಗಳು ಇದಕ್ಕೆ ಉದಾಹರಣೆಯೆನಿಸಿವೆ. "ಶಬ್ದಮಣಿದರ್ಪಣಸಂಗ್ರಹ" ಹೆಸರಿನ ಕೃತಿ ಹಳಗನ್ನಡ ಭಾಷೆಯ ಬಗೆಗಿನ ನನ್ನ ಆಸಕ್ತಿಗೆ ನಿದರ್ಶನವೆನಿಸಿದೆ. ಅಂಶಗಣದ ಇತಿಹಾಸ, ತೀನಂಶ್ರೀ ಛಂದೋವಿಚಾರ : ಪರಿಶೀಲನೆ ಮೊದಲಾದ ಲೇಖನಗಳು ನನ್ನ ಛಂದೋ ಆಸಕ್ತಿಯನ್ನು ಸೂಚಿಸುತ್ತವೆ. 'ವಚನ ಸಾಹಿತ್ಯ ಸಂಪಾದನೆ' ಮೊದಲಾದ ಪ್ರಬಂಧಗಳನ್ನಲ್ಲದೆ "ಕನ್ನಡ ಗ್ರಂಥ ಸಂಪಾದನಶಾಸ್ತ್ರ" ಹೆಸರಿನ ಕೃತಿಯನ್ನೂ ಪ್ರಕಟಿಸಿ, ಆ ಬಗೆಗಿನ ನನ್ನ ಒಲವನ್ನು ವ್ಯಕ್ತಪಡಿಸಿದ್ದೇನೆ. ಹಸ್ತಪ್ರತಿಗಳ ಬಗೆಗಿನ ನನ್ನ ಅಭಿರುಚಿಯು ಕವಿರಾಜಮಾರ್ಗ, ರನ್ನ ನಿಘಂಟುಗಳಂಥ ಅಪೂರ್ವ ಹಸ್ತಪ್ರತಿಗಳೂ ಸೇರಿದಂತೆ ಸಾವಿರಾರು ಹಸ್ತಪ್ರತಿಗಳನ್ನು ಅಧ್ಯಯನಪೀಠಕ್ಕೆ ಸಂಗ್ರಹಿಸಿಕೊಟ್ಟಿದೆ. ಹಸ್ತಪ್ರತಿ -ದಾಖಲೆಗಳನ್ನು ಹುಡುಕಿಕೊಂಡು ನಾನು ಲಂಡನ್, ಆಕ್ಸಫರ್ಡ್, ಕೆಂಬ್ರಿಜ್‌ಗಳ ವರೆಗೂ ಹೋದುದನ್ನು ಇಲ್ಲಿ ಸ್ಮರಿಸಿಕೊಳ್ಳುತ್ತೇನೆ. ನಾಮವಿಜ್ಞಾನ ನಾನು ಇತ್ತೀಚೆ ಬೆಳೆಸಿಕೊಂಡ ಹವ್ಯಾಸವಾಗಿದೆ. ಈ ವಿಷಯವನ್ನು ಕುರಿತ ನನ್ನ ಕೃತಿಯು ಕನ್ನಡ ನಾಮಸ್ವರೂಪದ ಬಗೆಗೆ ಕೆಲವು ಹೊಸ ಸಿದ್ಧಾಂತಗಳನ್ನು ಮಂಡಿಸಿದೆ. ಇನ್ನೂ ಇತ್ತೀಚೆ ಹೊರಬಂದ "ಕನ್ನಡ ಸಂಶೋಧನಶಾಸ್ತ್ರ" ಈ ವರೆಗಿನ ಇಂಥ ಕೃತಿಗಳಿಗಿಂತ ಭಿನ್ನವಾಗಿದೆಯೆಂದೇ ನನ್ನ ಅನಿಸಿಕೆ.

ಗ್ರಂಥಸಂಪಾದನಕಾರ್ಯಕ್ಕೆ ಸಂಬಂಧಿಸಿದಂತೆ ಕೊಂಡಗುಳಿ ಕೇಶಿರಾಜನ ಕೃತಿಗಳು, ಆದಯ್ಯನ ಲಘುಕೃತಿಗಳು, ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ ಸ್ತೋತ್ರಗಳಂಥ ಕಾವ್ಯಗಳನ್ನೂ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನಿಂಬಸಾಮಂತ ಚರಿತೆ, ಸಿರುಮಣನಾಯಕನ ಸಾಂಗತ್ಯ, ಸಿರುಮನ ಚರಿತೆಗಳಂಥ ಇತಿಹಾಸ ಕಾವ್ಯಗಳನ್ನು ಬಸವಣ್ಣನವರ ಟೀಕಿನ ವಚನಸಂಪುಟಗಳನ್ನು ಹೊರತಂದಿದ್ದೇನೆ. ಪ್ರಧಾನಸಂಪಾದಕನಾಗಿ ಕರ್ನಾಟಕ ಸರಕಾರದ ವತಿಯಿಂದ ಎಲ್ಲ ಶರಣರ ಎಲ್ಲ ವಚನಗಳ ಹದಿನೈದು ಸಂಪುಟಗಳನ್ನು ಹೊರತರುತ್ತಿರುವುದು ನನ್ನ ಜೀವಮಾನದ ದೊಡ್ಡಕಾರ್ಯವೆಂದೇ ಭಾವಿಸಿದ್ದೇನೆ.

ಶಾಸನಕ್ಷೇತ್ರ ನನ್ನ ಇನ್ನೊಂದು ಪ್ರೀತಿ. ಇದಕ್ಕೆ ಸಂಬಂಧಪಟ್ಟಂತೆ ಶಾಸನಗಳಲ್ಲಿ ಶಿವಶರಣರು, ಶಾಸನ ವ್ಯಾಸಂಗ ಸಂಕಲನಗಳು, ಸಮಾಧಿಬಲಿದಾನ ವೀರಮರಣ ಸ್ಮಾರಕಗಳು, ಮಹಾರಾಷ್ಟ್ರದ ಕನ್ನಡ ಶಾಸನಗಳು - ಈ ಕೃತಿಗಳನ್ನು ಹೊರತಂದಿದ್ದೇನೆ. ಕಪ್ಪೆ ಅರಭಟ್ಟ, ಕೊಂಡಗುಳಿ ಕೇಶಿರಾಜ, ಹುಳಿಯಮೇಶ್ವರ ಚಿಕ್ಕಯ್ಯ, ಅಗ್ಗಳ, ನಾಗಚಂದ್ರರ ಶಾಸನಗಳನ್ನು ಮತ್ತು ಹಲ್ಮಿಡಿ- ಕುರ್ಕಿಯಾಲ್ ಶಾಸನಗಳನ್ನು ಕುರಿತ ಲೇಖನಗಳಲ್ಲಿಯೂ, ಗೋಸಾಸ, ರಾಜಧಾನಿ: ಒಂದು ಸ್ಪಷ್ಟನೆ ಹೆಸರಿನ ಲೇಖನಗಳಲ್ಲಿಯೂ ಹೊಸ ವಿಚಾರಗಳನ್ನು ಮಂಡಿಸಿದ್ದೇನೆ.

ಸಾಹಿತ್ಯಕೃತಿಗಳ ಸಾಹಿತ್ಯೇತರ ಅಧ್ಯಯನ, ಶಾಸನಗಳ ರಾಜಕೀಯೇತರ ಅಧ್ಯಯನದ ಹಿನ್ನೆಲೆಯಲ್ಲಿ ಬರೆದ ವೀರಸಿದ್ಧಾಂತ, ಪಂಪನ ಅಗ್ರಹಾರ - ರನ್ನನ ಬತ್ತಗಾವೆ, ಪಂಪಭಾರತದಲ್ಲಿ ವೀರರ ಮರಣಚಿತ್ರ ಇತ್ಯಾದಿ ಲೇಖನಗಳು ಶಿಷ್ಟಸಂಸ್ಕೃತಿಯನ್ನು ಕುರಿತ ಶೋಧಗಳಾಗಿವೆ.

ಜಾನಪದ ಸಂಸ್ಕೃತಿಯನ್ನು ಕುರಿತ ನನ್ನ ಬರವಣಿಗೆಯು ನೇರವಾಗಿ ಜಾನಪದ ನೆಲೆಯಿಂದ ಮಾಡಿದುದು, ಕಾವ್ಯ-ಶಾಸನಗಳ ನೆಲೆಯಿಂದ ಮಾಡಿದುದು - ಎಂದು ಎರಡು ತೆರನಾಗಿದೆ. ಉತ್ತರ ಕರ್ನಾಟಕದ ಜನಪದ ಪದ್ಯಸಾಹಿತ್ಯ ಕೃತಿಯಲ್ಲದೆ, ಕನ್ನಡ ಜನಪದಸಾಹಿತ್ಯದ ಪ್ರಾಂತಭೇದಗಳು, ಸಮಗಾರದೇವರಿಗೆ ಮಚ್ಚಿಪೆಟ್ಟು,

ಏಕ್ಕಲಮ್ಮ - ಎಲ್ಲಮ್ಮ, ಜನಪದ ಪ್ರೇಕ್ಷಕವರ್ಗ, ಸಣ್ಣಾಟ : ಒಂದು ವಿವೇಚನೆ ಇವು ನೇರವಾಗಿ ಜಾನಪದ ನೆಲೆಯಲ್ಲಿ ಮಾಡಿದ ಸಂಶೋಧನೆಗಳಾದರೆ, ಬಳರಿದೇವತೆ, ಮೈಲಾರ - ಮಾಳಚಿ, ಶ್ರೀ ಕೃಷ್ಣಪಾರಿಜಾತ ಮತ್ತು ಸಿರಗುಪ್ಪಿ ಸದಾಶಿವಯ್ಯ, ಸಿರದಗಾಳ - ಉರಿಯ ಉಯ್ಯಲೆ - ಮೂದಲೆಯ ಉಲಿ ಮೊದಲಾದವು ಸಾಹಿತ್ಯದ ನೆಲೆಯಿಂದ ನಡೆಸಿದ ಜಾನಪದ ಸಂಶೋಧನೆಗಳಾಗಿವೆ.

ಇನ್ನೊಂದು ನಿಟ್ಟಿನಿಂದ ಹೇಳುವುದಾದರೆ, ಕಾವ್ಯಕ್ಕೆ ಸಂಬಂಧಿಸಿದ ನವೋದಯ, ನವ್ಯ, ದಲಿತ ಬಂಡಾಯ ಘಟ್ಟಗಳಂತೆ ಕನ್ನಡ ಸಂಶೋಧನೆಯಲ್ಲಿಯೂ ಆಕರಶೋಧಮುಖಿ, ವಿಶ್ಲೇಷಣಮುಖಿ, ಮತ್ತು ವ್ಯಾಖ್ಯಾನಮುಖಿ ರೂಪದ ಮೂರು ಘಟ್ಟಗಳು ಕಂಡುಬರುತ್ತವೆ. ನಾನು ಈ ಮೂರು ಘಟ್ಟಗಳಲ್ಲಿ ದುಡಿದಿದ್ದೇನೆ. ನನ್ನಿಂದ ಸಂಪಾದಿಸಲ್ಪಟ್ಟ ಕಾವ್ಯ, ಚಾರಿತ್ರಿಕ ಕಾವ್ಯ ಮತ್ತು ವಚನಕೃತಿಗಳೂ, ಶಾಸನಸೂಚಿ - ಹಸ್ತಪ್ರತಿ ಸೂಚಿಗಳೂ, ಪ್ರಕಟನೆಗೆ ಸಿದ್ಧವಾಗಿರುವ ೧೩೨ ಕೈಫಿಯತ್ತುಗಳೂ ಆಕರಶೋಧಮುಖಿ ಸಂಶೋಧನೆಗೆ ಉದಾಹರಣೆಯೆನಿಸಿವೆ.

ಅಲಭ್ಯವಾಗಿರುವ ಇತಿಹಾಸವನ್ನು ಶೋಧಿಸುವುದೂ, ಅಸ್ತವ್ಯಸ್ತವಾಗಿರುವ ಇತಿಹಾಸವನ್ನು ಕ್ರಮಬದ್ಧವಾಗಿ ಕಟ್ಟಿಕೊಡುವುದೂ ಕರ್ನಾಟಕದ ಮಟ್ಟಿಗೆ ಅಗತ್ಯ ಮಾಡಬೇಕಾದ ಕೆಲಸವಾಗಿದೆ. ಇಲ್ಲಿ ಆಕರಗಳನ್ನು ಮುಖಬೆಲೆಯ ಮಟ್ಟದಲ್ಲಿ ಬಳಸಿಕೊಳ್ಳುವ ಕೆಲಸ ನಡೆಯುತ್ತದೆ. ಇದೇ ವಿಶ್ಲೇಷಣಾತ್ಮಕ ಸಂಶೋಧನೆಯಾಗಿದೆ. ಈ ನಿಟ್ಟಿನ ನನ್ನ ಸಂಶೋಧನೆಯ ಫಲ ಶಾಸನಗಳಲ್ಲಿ ಶಿವಶರಣರು, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಮಹಾರಾಷ್ಟ್ರದ ಕನ್ನಡ ಶಾಸನಗಳು, ಪ್ರತಿಬಿಂಬ ಮೊದಲಾದ ಕೃತಿಗಳು ಮತ್ತು ಅನೇಕ ಲೇಖನಗಳು. ಇಲ್ಲಿ ಸಂಶೋಧಕನಾದವನು ಕೆಲವೊಮ್ಮೆ ವಿದ್ವಾಂಸರನ್ನು ಎದುರಿಸುವ ಪ್ರಸಂಗಗಳು ನಿರ್ಮಾಣವಾಗುತ್ತವೆ. ಡಾ. ಡಿ. ಎಲ್. ಎನ್. ಸಂಪಾದಿತ ಶಬ್ದಮಣಿದರ್ಪಣವನ್ನು ಕುರಿತ ವಾದ, ಪಂಪನ ತಾಯಿಯ ಹೆಸರನ್ನು ಕುರಿತು ಡಾ. ಪಿ. ಬಿ. ದೇಸಾಯಿ ಅವರೊಂದಿಗೆ ನಡೆದ ವಾದಗಳು ಇದಕ್ಕೆ ಉದಾಹರಣೆಯೆನಿಸಿವೆ. ಎಲ್ಲರಂತೆ ಈ ವಿಶ್ಲೇಷಣಾತ್ಮಕ ಸಂಶೋಧನೆಯ ಪ್ರಮಾಣವೇ ನನ್ನ ಬರವಣಿಗೆಯ ಬಹುಪಾಲನ್ನು ವ್ಯಾಪಿಸಿದೆ. ಇತ್ತೀಚೆ ಕನ್ನಡ ಸಂಶೋಧನೆ ವ್ಯಾಖ್ಯಾನಮುಖಿ ದಿಕ್ಕಿನಲ್ಲಿ ನಡೆದು, ವಿಮರ್ಶೆಯ ಸೀಮೆಯನ್ನು ಆಕ್ರಮಿಸಿದೆ. ವಿಶ್ಲೇಷಣಮುಖಿ ಸಂಶೋಧನೆಗೆ ಆಕರಸಾಮಗ್ರಿ ಆಧಾರವಾದರೆ, ವ್ಯಾಖ್ಯಾನಮುಖಿ ಸಂಶೋಧನೆಗೆ ಹೆಚ್ಚಿನದಾಗಿ ನಮ್ಮ ನಿಲುವುಗಳೇ ಆಧಾರವೆನಿಸುತ್ತದೆ. ಈಗ ಒಂದೇ ವಿಷಯವನ್ನುಕುರಿತ ಒಬ್ಬನ ಸಂಶೋಧನೆಯಿಂದ ಇನ್ನೊಬ್ಬನ ಸಂಶೋಧನೆ ಭಿನ್ನವೆನಿಸುತ್ತದೆ -ವಿಮರ್ಶೆಯಂತೆ. ಇದರಿಂದ ಸಂಶೋಧನ ಚಲನಶೀಲಗೊಳ್ಳುವುದಾದರೂ ಕೆಲವೊಮ್ಮೆ ವಾದಗ್ರಸ್ತವಾಗುತ್ತದೆ. ಸಾಮಾಜಿಕ ವಿಷಯವನ್ನೊಳಗೊಂಡಿದ್ದರಂತೂ ಖಂಡಿತ ವಾದಗ್ರಸ್ತವಾಗುತ್ತದೆ. ಅಂಥ ಒಂದು ಸಂದರ್ಭ ನನ್ನ ಜೀವನದಲ್ಲಿ ಅಗ್ನಿದಿವ್ಯವಾಗಿ ಪರಿಣಿಸಿತೆಂಬುದು ಎಲ್ಲರಿಗೂ ಗೊತ್ತು. ಈ ವ್ಯಾಖ್ಯಾನಮುಖಿ ಸಂಶೋಧನೆ ಯಜಮಾನಪರ ಇಲ್ಲವೆ ಜನಪರವಾಗಿರಬಹುದು. ಯಜಮಾನಪರ ಸಂಸ್ಕೃತಿಯಲ್ಲಿ ಬೆಳೆದುಬಂದಿರುವ ಭಾರತೀಯರಿಗೆ, ಜನಪರ ಸಂಸ್ಕೃತಿಯ ನಿಲವು ಸಹಜವಾಗಿಯೇ ಕಹಿಮೆನಿಸುತ್ತದೆ.

ಮೇಲೆ ಹೇಳಿದ ಮೂರು ಪ್ರಕಾರಗಳಲ್ಲಿ ನಾನು ಸಂಶೋಧನಕಾರ್ಯ ಪೂರೈಸಿದುದು, ನನ್ನ ಸಮಾಧಾನಕ್ಕಾಗಿ ನನ್ನ ಬರವಣಿಗೆ ಒಂದು ಬಗೆಯ ಉತ್ಕಟಸ್ಥಿತಿಯ ಅಭಿವ್ಯಕ್ತಿ. ಒಂದು ಮಾತು: ಸಂಶೋಧನೆಯೆನ್ನುವುದು ಪೂರ್ಣ ಮತ್ತು ಅಪೂರ್ಣಸ್ವರೂಪದ್ದಿರುತ್ತದೆ. ಆಕರಸಾಮಗ್ರಿಯ ಕೊರತೆಯುಳ್ಳ ಭಾರತದಲ್ಲಿ ಅಪೂರ್ಣ ಸಂಶೋಧನೆ ಅನಿವಾರ್ಯ. ಇದು ಕೆಲವು ಹೆಜ್ಜೆ ನಡೆದು ಆಕರಗಳ ಕೊರತೆ ಕಾರಣವಾಗಿ ನಿಂತುಬಿಡುವುದು ಇಲ್ಲವೆ ಸಾಧಾರ ಊಹೆಯಿಂದ ಕೊರತೆಯನ್ನು ತುಂಬಿಕೊಳ್ಳುವುದು ಎಂದು ಎರಡು ಬಗೆಯಾಗಿದೆ. ಕಾಲಕ್ರಮದಲ್ಲಿ ಹೆಚ್ಚಿನ ಸಾಮಗ್ರಿ ಸಿಕ್ಕರೆ ಈ ಅಪೂರ್ಣಶೋಧಗಳು ಬೆಳೆದು ಪೂರ್ಣವಾಗುತ್ತವೆ, ಇಲ್ಲವೆ ಬದಲಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಸಂದೇಹಗಳನ್ನು ಎತ್ತುವುದೂ ಸಂಶೋಧನೆಯೇ ಎಂಬ

ಭಾವನೆಯಿಂದ ಕೆಲವು ಟಿಪ್ಪಣಿ ರೂಪದ ಸಮಸ್ಯೆಗಳನ್ನು ಮಂಡಿಸಿದ್ದೇನೆ. ಇವುಗಳನ್ನು ಸಮಸ್ಯೆಗಳೆಂಬ ದೃಷ್ಟಿಯಿಂದಲೇ ನೋಡಬೇಕು ಮತ್ತು ಪ್ರಾಜ್ಞರು ಅವುಗಳಿಗೆ ಸಂಶೋಧನೆಯ ಪರಿಹಾರ ನೀಡಬೇಕು. ಹೀಗಾಗಿ ನನ್ನ ಎಲ್ಲಾ ನಿರ್ಣಯಗಳು ಪರಿಪೂರ್ಣವೆಂದಾಗಲೀ, ಕೊನೆಯ ವರೆಗೆ ನಿಲ್ಲುವುವೆಂದಾಗಲೀ ಯಾರೂ ಭಾವಿಸಬಾರದು.

ವ್ಯಕ್ತಿಯ ಬೆಳವಣಿಗೆಗೆ ಪ್ರೀತಿಯಷ್ಟೇ ಮುಖ್ಯವಾದುದು ವಿರೋಧ. ನಾನು ಪ್ರೀತಿಯಿಂದ ಒಂದು ಅಡಿ ಬೆಳೆದರೆ, ವಿರೋಧದಿಂದ ಎರಡು ಅಡಿ ಬೆಳೆದಿದ್ದೇನೆ. ಶಂಬಾ ಅವರೂ ಬೆಳೆದುದು ಹೀಗೆಯೇ.ಇದಕ್ಕೆ ಕಾರಣ, ನಿಜವಾದ ಸಂಶೋಧಕನು ಬರೆಹದಂತೆ ಬದುಕಿನಲ್ಲಿಯೂ ಅಸತ್ಯದ ಕೂಡ ಒಪ್ಪಂದ ಮಾಡಿಕೊಳ್ಳದ ಹಟಮಾರಿಯಾಗಿರುವುದು. ಇಂಥ ಸಂದರ್ಭಗಳಲ್ಲಿ ಎಷ್ಟೇ ಗಾಸಿಯಾದರೂ, ಭೌತಿಕ ಹಾನಿಗೆ ಒಳಗಾದರೂ ಸಂಶೋಧನೆಯ ಬಗೆಗಿನ ಅಂತರ್ಮುಖತೆಯನ್ನು ಅವನು ಕಳೆದುಕೊಳ್ಳಬಾರದು. ಇದು ನನ್ನ ಸಂಶೋಧನ ಜೀವನದೃಷ್ಟಿಯಾಗಿದೆ.

ಕೊನೆಯದಾಗಿ, ಕರ್ನಾಟಕದಲ್ಲಿ ಸಂಶೋಧನೆ ತನ್ನ ಭವಿಷ್ಯವನ್ನು ಉತ್ತಮಪಡಿಸಿಕೊಳ್ಳಬೇಕಾಗಿದೆ. ಅವುಗಳಲ್ಲಿ ಮುಖ್ಯವಾದುವು: ಸಂಶೋಧನೆಗೆ ಸಾಹಿತ್ಯಕ್ಷೇತ್ರದಲ್ಲಿ ನ್ಯಾಯವಾದ ಪಾಲುಪುರಸ್ಕಾರ ಸಿಗುವುದು, ಸಂಶೋಧನಸಾಹಿತ್ಯವನ್ನು ಜನಪ್ರಿಯಗೊಳಿಸುವುದು, ಸಂಶೋಧನೆಯ ಹೊಸ ಕ್ಷೇತ್ರ - ಹೊಸ ವಿಧಾನಗಳನ್ನು ಶೋಧಿಸುವುದು, ಯುವಸಂಶೋಧಕರನ್ನು ಸಂಘಟಿಸಿ ಆ ಮಾರ್ಗದಲ್ಲಿ ಅವರನ್ನು ಮುನ್ನಡೆಸುವುದು -ಇವು ನಮ್ಮ ಕಣ್ಣು ಮುಂದಿನ ಸವಾಲುಗಳಾಗಿವೆ.

ಇಂದು ಸಾಹಿತ್ಯಕ್ಷೇತ್ರದಲ್ಲಿ ಸೃಜನ- ವಿಮರ್ಶನ ಸಾಹಿತ್ಯಕ್ಕೆ, ಸಾಹಿತಿಗಳಿಗೆ ಸಿಗುವ ಗೌರವ ಮತ್ತು ಹುದ್ದೆಗಳು ಸಂಶೋಧನ ಸಾಹಿತ್ಯ -ಸಾಹಿತಿಗಳಿಗೆ ಸಿಗುತ್ತಿಲ್ಲ. ಉಳಿದ ಸಾಹಿತ್ಯಿಕ ಸಂಸ್ಥೆಗಳು ಹೋಗಲಿ, ಸಂಶೋಧನೆಗಾಗಿಯೇ ಅಸ್ತಿತ್ವಕ್ಕೆ ಬಂದ ಹಂಪೆಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ದ್ವಿತೀಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆಯೆಂಬುದು ಅದರೊಂದಿಗೆ ಸಂಬಂಧವಿಟ್ಟುಕೊಂಡ ವಿದ್ವಾಂಸರ ಅಭಿಪ್ರಾಯವಾಗಿದೆ. ಅನ್ಯ ಸಾಹಿತ್ಯಕೃತಿಗಳೊಂದಿಗೆ ಹೋಲಿಸಿದರೆ ಕೇಂದ್ರಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದಲೂ ಸಂಶೋಧನಕೃತಿಗಳು ವಂಚಿತವಾಗಿವೆಯೆಂದೇ ಹೇಳಬೇಕು. ಕಳೆದ ೩೦ ವರ್ಷಗಳಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಸೃಜನ ವಿಮರ್ಶನ ಸಾಹಿತಿಗಳೇ ಅಧ್ಯಕ್ಷರಾಗುತ್ತ ಬಂದಿದ್ದಾರೆ; ಸಂಶೋಧನ ಸಾಹಿತಿ ಒಮ್ಮೆಯೂ ಅಧ್ಯಕನಾಗಲಿಲ್ಲ. ಸದಸ್ಯನೂ ಆಗಿಲ್ಲ. ಇತ್ತೀಚೆ ಅಲ್ಲಿ ಸಂಶೋಧನ ಸಾಹಿತ್ಯಿಕ್ಕೆ ಅವಕಾಶ ಸಿಗುತ್ತಲಿದ್ದರೂ ಅದು ಸಾಲದೆಂದೇ ಹೇಳಬೇಕಾಗುತ್ತದೆ. ಇಂಥ ಭೌತಿಕ ಅವಕಾಶಗಳೂ ಒಂದು ಕ್ಷೇತ್ರದ ಬೆಳವಣಿಗೆಗೆ ಪ್ರೇರಣೆ ನೀಡುವುದರಿಂದ, ಸಂಶೋಧನೆಯ ಶ್ರೇಯಸ್ಸಿಗಾಗಿ ನಾವು ಅವುಗಳನ್ನು ಕೇಳಬೇಕಾಗಿದೆ. ಇದಕ್ಕಿಂತ ಘೋರವಾದುದು, ಸ್ನಾತಕೋತ್ತರ ಕನ್ನಡ ವಿಭಾಗಗಳಲ್ಲಿ ಸಾಂಸ್ಥಿಕ ಮತ್ತು ವೈಯಕ್ತಿಕ ಸಂಶೋಧನೆ ಶೂನ್ಯ ಸ್ಥಿತಿಗೆ ಇಳಿದುದು. ಸಂಶೋಧನೆಯನ್ನು ಕಡೆಗಣಿಸಿ ವಾರಕ್ಕೆ ೪-೫ ಪಿರಿಯೆಡ್ ತೆಗೆದುಕೊಳ್ಳುವುದು ಮಾತ್ರ ತಮ್ಮ ಕೆಲಸವೆಂದು ಅಧ್ಯಾಪಕರು ಭಾವಿಸಿದಂತಿದೆ. ಸಂಶೋಧನೆಯ ಉನ್ನತಿಗಾಗಿ ಶ್ರಮಿಸುವುದಕ್ಕಿಂತ ಮೂರು ವರ್ಷ ಬಚಾವ್ ಆಗುವುದೇ ಅಲ್ಲಲ್ಲಿಯ ಕುಲಪತಿಗಳಿಗೆ ಮುಖ್ಯವಾಗಿದೆ. ಆರ್ಥಿಕ ಮೊದಲಾದ ಕಾರಣಗಳಿಂದಾಗಿ ಸಾಹಿತ್ಯ ಪರಿಷತ್ತುಗಳಂಥ ಸಂಸ್ಥೆಗಳೂ ವಿದ್ವತ್ತಿನ ಕೆಲಸಗಳಿಂದ ವಿಮುಖವಾಗಿವೆ. ಹೀಗೆ ಅನೇಕ ದಿಕ್ಕುಗಳಿಂದ ಆಗುತ್ತಲಿರುವ ಅನ್ಯಾಯವನ್ನು, ಅನೇಕ ಮುಖಗಳಿಂದ ಅನುಭವಿಸುತ್ತಿರುವ ಅಧಃಪತನವನ್ನು ನಾವು ಮನವಿ, ಪತ್ರಿಕೆ, ಬಹಿರಂಗಸಭೆಗಳ ಮೂಲಕ ವ್ಯಕ್ತಪಡಿಸಿ, ಸಂಶೋಧನೆಗೆ ಸಿಗಬೇಕಾದ ಸ್ಥಾನ-ಮಾನಗಳನ್ನು ದೊರಕಿಸಿಕೊಡಬೇಕು; ಅದು ಬೆಳೆಯುವಂತೆ ನೋಡಿಕೊಳ್ಳಬೇಕು.

ಸಂಶೋಧನೆ ಈವರೆಗೆ ವಿದ್ವಾಂಸರ ಮಧ್ಯದಲ್ಲಿ ತೊಳಲುತ್ತ ಬಂದಿದೆ. ಪತ್ರಿಕೆಯಿಂದ ಪತ್ರಿಕೆಗೆ, ಪುಸ್ತಕದಿಂದ ಪುಸ್ತಕಕ್ಕೆ ಜಾರುತ್ತ ನಡೆದಿದೆ. ವಿದ್ವಾಂಸರಿಗೆ ಸಂಬಂಧಿಸಿದ ವಿಷಯವೆಂಬ ಹಣೆಪಟ್ಟಿ ಹಚ್ಚಿಕೊಂಡ

ಕಾರಣ, ಅದರ ಬಳಗ ಈ ವರೆಗೆ ಬೆಳೆಯಲೇ ಇಲ್ಲ. ಈಗ ಸಂಶೋಧನೆಯನ್ನು ಸರಳ ಭಾಷೆಯಲ್ಲಿ ಬರೆದು ಪುಸ್ತಕ, ಪತ್ರಿಕೆಗಳ ಮೂಲಕ ಜನರ ಮಧ್ಯಕ್ಕೆ ಕೊಂಡೊಯ್ದು, ಕವನ -ಕಥೆ - ಕಾದಂಬರಿಗಳಂತೆ ಅದನ್ನು ಜನಪ್ರಿಯಗೊಳಿಸುವುದು ಅಗತ್ಯವಿದೆ. ಇದಕ್ಕಾಗಿ ಕವಿಗೋಷ್ಠಿಯಂತೆ ಆಗಾಗ ಸಂಶೋಧನಗೋಷ್ಠಿಗಳನ್ನು ಹಮ್ಮಿಕೊಂಡು, ಆಯಾ ಸ್ಥಳ, ಆಯಾ ಸಮಾಜಗಳಿಗೆ ಸಂಬಂಧಿಸಿದ ಮೂಲಸತ್ಯವನ್ನು ಶೋಧಿಸಬೇಕಾಗಿದೆ. ಮತ್ತು ಆ ಮೂಲಸತ್ಯ ಬದಲಾಗುತ್ತ ಬಂದ ರೀತಿ, ಅದರಿಂದ ಅಲ್ಲಿಯ ವರ್ತಮಾನ ಬದುಕಿನ ಮೇಲಾದ ಒಳ್ಳೆಯ - ಕೆಟ್ಟ ಪರಿಣಾಮಗಳನ್ನು ಪ್ರತಿಪಾದಿಸುವ ಮೂಲಕ, ಒಂದು ಬಗೆಯ ಅನ್ವಯಿಕ ಸಂಶೋಧನೆಯನ್ನು ಅಸ್ತಿತ್ವಕ್ಕೆ ತರಬಹುದಾಗಿದೆ; ಅದು ಸಮಾಜವನ್ನು ತಿದ್ದುವ, ಸ್ಫೂರ್ತಿಸುವ ಒಂದು ಮಾಧ್ಯಮವಾಗಬೇಕಾಗಿದೆ. ಹೀಗೆ ಮಾಡುವುದರಿಂದ ಸಂಶೋಧನೆ ಸಾಮಾಜಿಕರೊಂದಿಗೆ ಮುಖಾಮುಖಿಯಾಗಿ, ಅವರ ಪ್ರತಿಕ್ರಿಯೆಗೆ ತಕ್ಕಂತೆ ಹೊಸ ಹೊಸ ಆಯಾಮಗಳನ್ನು ಬಿಚ್ಚಿಕೊಳ್ಳುತ್ತದೆ, ನವೀಕರಣಗೊಳ್ಳುತ್ತದೆ. ಸಂಶೋಧನೆಯ ಚಲನಶೀಲತೆಗಾಗಿ ಮತ್ತು ಸಮಾಜದಲ್ಲಿ ಸಂಶೋಧನೆಯನ್ನು ನೋಡುವ ಸರಿಯಾದ ದೃಷ್ಟಿಕೋನವನ್ನು ಬೆಳೆಸುವುದಕ್ಕಾಗಿ, ಈ ಉಪಕ್ರಮವನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರಬೇಕಾಗಿದೆ.

ಇಂದು ಸಂಶೋಧನೆಯೆನ್ನುವುದು ಅಲ್ಲಲ್ಲಿ ಮಡುಗಟ್ಟಿ ನಿಂತಿದೆ. ಈ ಪರಿಸ್ಥಿತಿ ತಪ್ಪಿ ಅದು ಪ್ರವಾಹವಾಗಿ ಹರಿಯಬೇಕು. ಅದರ ದಾರಿಯನ್ನು ದಾರಿಗಳನ್ನಾಗಿಸುತ್ತ, ಮಾರ್ಗಗಳನ್ನಾಗಿ ಹಿಗ್ಗಿಸುತ್ತ ಹೋಗಬೇಕು. ಇದು ಸಾಮೂಹಿಕ ಪ್ರಯತ್ನದಿಂದ, ಪರಸ್ಪರ ಸಂಪರ್ಕ ಮತ್ತು ಸಮಾಲೋಚನೆಯಿಂದ ಮಾತ್ರ ಸಾಧ್ಯ. ಆಗಾಗ ಸಂಶೋಧಕರು ಒಂದೆಡೆ ಸೇರುವುದರಿಂದ ಈ ನಿರೀಕ್ಷೆ ಈಡೇರುತ್ತದೆ. ಯುವಸಂಶೋಧಕರನ್ನು ಆತ್ಮೀಯವಾಗಿ ಕಂಡು, ತಿದ್ದಿ ತೀಡಿ ಪ್ರೋತ್ಸಾಹಿಸುವುದರಿಂದ, ಸಂಶೋಧನೆಗೆ ಹೊಸರಕ್ತ, ಹೊಸ ಪರಂಪರೆ ಪ್ರಾಪ್ತವಾಗುತ್ತದೆ. ಈ ಕಾರ್ಯದ ಸಾರ್ಥಕತೆಗಾಗಿ "ಸಂಶೋಧಕರ ಚಲನಶೀಲ ಸಂಘಟನೆ" ಇಂದು ಅಸ್ತಿತ್ವಕ್ಕೆ ಬರಬೇಕಾಗಿದೆ.

ಕೊನೆಯದಾಗಿ, ಶಂಬಾ ವಿಚಾರವೇದಿಕೆ ಹುಟ್ಟುತ್ತಲೇ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಪ್ರೀತಿ-ಪ್ರಯತ್ನಗಳಿಗೆ ಹೆಸರಾಗಿರುವ ಇದರ ಸಂಚಾಲಕರು ಕಟ್ಟಿಕೊಂಡಿರುವ ಕನಸುಗಳು ಹತ್ತಾರು. ಅವುಗಳಲ್ಲಿ ಒಂದು, ಇಂದಿನ ವಿಚಾರಸಂಕಿರಣ. ಕರ್ನಾಟಕದಲ್ಲಿ ನನಗಿಂತ ಹಿರಿಯ ಸಂಶೋಧಕರಿದ್ದಾರೆ, ಹೆಚ್ಚು ಕೆಲಸ ಮಾಡಿದವರೂ ಇದ್ದಾರೆ. ಹೀಗಿದ್ದೂ ನನ್ನ ಸಾಹಿತ್ಯವನ್ನು ಆಯ್ದುಕೊಂಡು ನಡೆಸಿದ ಈ ವಿಚಾರಸಂಕಿರಣಕ್ಕಾಗಿ ಈ ವೇದಿಕೆಗೆ ಕೃತಜ್ಞನಾಗಿದ್ದೇನೆ. ರಾಜ್ಯಮಟ್ಟದಲ್ಲಿ, ರಾಜಧಾನಿಕೇಂದ್ರದಲ್ಲಿ ನಡೆಸಿದ ಈ ಕಾರ್ಯಕ್ರಮದ ಮೂಲಕ, ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ನೀವೆಲ್ಲ ನನ್ನ ಮೇಲೆ ಹೊರಿಸಿರುವಿರೆಂದೇ ಭಾವಿಸುತ್ತೇನೆ. ನಿಮ್ಮ ನಿರೀಕ್ಷೆಗೆ ತಕ್ಕ ರೀತಿಯಲ್ಲಿ ಕನ್ನಡಕ್ಕಾಗಿ, ಕನ್ನಡ ಸಂಶೋಧನೆಗಾಗಿ ದುಡಿಯುತ್ತೇನೆ. ನಿಮ್ಮ ಪ್ರೀತಿ-ವಿಶ್ವಾಸಗಳು ನಿರಂತರವಾಗಿರಲೆಂದು ಹಾರೈಸುತ್ತೇನೆ.

ಬೆಂಗಳೂರಿನಲ್ಲಿ ಶಂಬಾ ವಿಚಾರ ವೇದಿಕೆಯು ಯೋಜಿಸಿದ್ದ "ಸಂಶೋಧಕ ಎಂ. ಎಂ. ಕಲಬುರ್ಗಿ" ವಿಚಾರ ಸಂಕಿರಣದಲ್ಲಿ ಪ್ರಸ್ತುತ ಪಡಿಸಿದ ಭಾಷಣ (೨೪-೧-೧೯೯೬)

ಆಕರ : ಮಾರ್ಗ ಸಂಪುಟ-೬

■■

೫೦

ದೇ. ಜ. ಗೌ. : ೭೫

೧೯೯೫

ಈ ಸಮಾರಂಭದ ಕೇಂದ್ರಬಿಂದುವಾದ ಡಾ. ದೇಜಗೌ ಅವರೇ, ಗಣ್ಯರೇ, ಸ್ನೇಹಿತರೇ,

ದೇಜಗೌ ಅಂದರೆ ಕನ್ನಡ, ಕನ್ನಡವೆಂದರೆ ದೇಜಗೌ. ಹೀಗೆ ಕನ್ನಡಕ್ಕೆ ಪರ್ಯಾಯ ನಾಮವಾಗಿ ಬೆಳೆದವರು ದೇಜಗೌ. ಆದುದರಿಂದ ಅವರ ಅಮೃತೋತ್ಸವ ಸಮಾರಂಭದಲ್ಲಿ ಭಾಗವಹಿಸುವುದು ನನಗೆ ವ್ಯಕ್ತಿನೆಲೆಯಲ್ಲಿ ಪ್ರೀತಿಯ ವಿಷಯವೆನಿಸಿರುವಂತೆ, ಕನ್ನಡ ಪ್ರಾಧ್ಯಾಪಕ ನೆಲೆಯಲ್ಲಿ ಕರ್ತವ್ಯದ ವಿಷಯವೆನಿಸಿದೆ.

ಸಾಹಿತಿಗಳಲ್ಲಿ ಎರಡು ವರ್ಗಗಳಿವೆ. ಒಬ್ಬರದು ವ್ಯಕ್ತಿಕೇಂದ್ರಿತ ಸಂಸ್ಕೃತಿ, ಇನ್ನೊಬ್ಬರದು ಸಮಾಜ ಕೇಂದ್ರಿತ ಸಂಸ್ಕೃತಿ. ತೆಂಗಿನ ಮರದಂತೆ ಒಬ್ಬರದು ಊರ್ಧ್ವಮುಖಿ ವ್ಯಕ್ತಿತ್ವ, ಮಾವಿನ ಮರದಂತೆ ಇನ್ನೊಬ್ಬರದು ವಿಸ್ತಾರಮುಖಿ ವ್ಯಕ್ತಿತ್ವ. ವ್ಯಕ್ತಿಕೇಂದ್ರಿತ ಸಾಹಿತಿಗಳು ತಮಗೆ ಇಷ್ಟವಾದ ಸಾಹಿತ್ಯಪ್ರಕಾರದಲ್ಲಿ ಕೃಷಿಮಾಡಿ ಎತ್ತರದಿಂದ ಎತ್ತರಕ್ಕೆ ಬೆಳೆಯುತ್ತಾರೆ. ಪರಿಸರವನ್ನು ಪರಿಗಣಿಸದೆ ಪ್ರತಿಷ್ಠೆಯ ಶಿಖರದಲ್ಲಿ ವಿಜೃಂಭಿಸುತ್ತಾರೆ. ಕೆಲವೊಮ್ಮೆ ಜನವಿದೂರತೆ ಕಾರಣವಾಗಿ, 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಎಂಬಂತೆ ಇವರ ಗಣ್ಯತೆ ದ್ವಿಗುಣ, ತ್ರಿಗುಣ ಪ್ರಚಾರ ಪಡೆಯುತ್ತದೆ. ಇದಕ್ಕೆ ವಿರುದ್ಧವೆನ್ನುವಂತೆ ಗಣ್ಯಸಾಹಿತಿಯಾಗಿದ್ದರೂ ಅತಿಪರಿಚಯ ಕಾರಣವಾಗಿ, ಸಮೂಹಕೇಂದ್ರಿತ ಸಾಹಿತಿಗೆ ವ್ಯಕ್ತಿಕೇಂದ್ರಿತ ಸಾಹಿತಿಯ ಸ್ಥಾನಮಾನ ಲಭಿಸದೆ ಹೋಗುತ್ತದೆ. ಸಮಾಜದ ಈ ದೃಷ್ಟಿದೋಷ ಗೊತ್ತಿದ್ದೂ ದೇಜಗೌ ಸಮೂಹ ಕೇಂದ್ರಿತ ಸಾಹಿತಿಯಾಗಿ ಬಿಚ್ಚಿಕೊಂಡರು, ಬೆಳೆದುನಿಂತರು.

ಸಮೂಹಕೇಂದ್ರಿತ ಮನೋಧರ್ಮ ಕಾರಣವಾಗಿ, ದೇಜಗೌ ಕೇವಲ ವ್ಯಕ್ತಿಯಾಗಿ ಬೆಳೆಯದೆ ಸಂಸ್ಥೆಯಾಗಿಯೂ ಬೆಳೆದುದಕ್ಕೆ ಪ್ರಥಮ ಉದಾಹರಣೆ ಕನ್ನಡ ಅಧ್ಯಯನಸಂಸ್ಥೆ. ದೇಜಗೌ ಬರುವ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಎಂಟು ಪತ್ರಿಕೆ, ನಾಲ್ಕು ಜನ ಕನ್ನಡ ಅಧ್ಯಾಪಕರ ಒಂದು ಸೀಮಿತ ಕ್ಷೇತ್ರವಾಗಿದ್ದಿತು. ಪ್ರತಿವರ್ಷ ಹತ್ತೆಂಟು ವಿದ್ಯಾರ್ಥಿಗಳಿಗೆ ಬೋಧಿಸುತ್ತ, ಜೀವನದುದ್ದಕ್ಕೂ ಒಂದೆರಡು ಪುಸ್ತಕ, ಹತ್ತಾರು ಲೇಖನ ಬರೆಯುವುದೇ ಜೀವನದ ಧನ್ಯತೆ, ವಿಭಾಗದ ಸಾರ್ಥಕತೆ ಎಂದು ಅಲ್ಲಿಯ ಅಧ್ಯಾಪಕರು ಭಾವಿಸಿದ್ದರು. ಇದರಿಂದ ವಿಭಾಗ ಒಂದು ಕೂಪವಾಗಿ ಮಾರ್ಪಟ್ಟಿದ್ದಿತು. ಒಕ್ಕಲು ಮಗ ದೇಜಗೌ ಅದರ ಅಧಿಕಾರ ವಹಿಸಿಕೊಳ್ಳುತ್ತಲೇ ಕಾಲುವೆಗಳನ್ನು ತೋಡಿ, ಆ ಕೂಪವನ್ನು ಹತ್ತೂ ಕಡೆಗೆ ಹರಗಡಿದುದು, ಅದನ್ನು ಪ್ರವಾಹವಾಗಿ ಪರಿವರ್ತಿಸಿ ಜನತೆಯ ಹತ್ತಿರ ಒಯ್ದುದು ಒಂದು ಚರಿತ್ರಾರ್ಹ ಘಟನೆಯೆನಿಸಿದೆ. ಈ ವರೆಗೆ ಕನ್ನಡದ ಗುಡಿಯಾಗಿ ನಿಂತಿದ್ದ ವಿಭಾಗ ಈಗ ರಥವಾಗಿ ಚಲಿಸತೊಡಗಿತು. ಈ ರಥಕ್ಕೆ ಎಳೆಯುವ ಎತ್ತು, ಉರುಳುವ ಗಾಲಿಯಾದವರು ದೇಜಗೌ.

ವಿಶ್ವವಿದ್ಯಾಲಯವೆಂದರೆ ಜನಸಂಪರ್ಕವಿದೂರವಾದ ಒಂದು ಉನ್ನತ ಶಿಕ್ಷಣಕೇಂದ್ರ. ಪರಸ್ಪರ ಸಂಪರ್ಕ ಬೆಳೆಸಿಕೊಂಡು ವಿದ್ವಾಂಸರು ಮಾತ್ರ ಬೆಳೆಯುವ ನೆಲೆಯೆಂಬ ಭಾವನೆ ಭಾರತದಲ್ಲಿ ಮೊದಲಿನಿಂದಲೂ ಬೇರೂರಿದ್ದಿತು. ಅದರ ಬಗೆಗೆ ಒಂದು ರೀತಿಯ ಭಯಮಿಶ್ರಿತ ಗೌರವ, ಪರಿವೇಷಗಟ್ಟಿದ್ದಿತು. ಜನತೆ ಒಂದು ಕಡೆ, ವಿದ್ವಜ್ಜನತೆ ಒಂದುಕಡೆ ಎಂಬ ವಿಲಕ್ಷಣ ವಾತಾವರಣ ನಿರ್ಮಾಣವಾಗಿದ್ದಿತು. ದೇಜಗೌ ಇವುಗಳ ಸಮನ್ವಯದ ಕನಸನ್ನು ಕಂಡು ಅದನ್ನು ನನಸನ್ನಾಗಿಸುವ ವಿನೂತನ ಪ್ರಯೋಗ ನಡೆಸಿದರು.

ಕನ್ನಡ ವಿಭಾಗದ ಕೇಂದ್ರಪೀಠದ ಮೇಲೆ ಕುಳಿತು ಈ ಪ್ರಯೋಗವನ್ನು ಅವರು ಅನುಷ್ಠಾನಗೊಳಿಸಲಿಲ್ಲ. ಮಹಮ್ಮದ ಮೌಂಟನ್ ಹತ್ತಿರ ಬರುವುದು ಸಾಧ್ಯವಿಲ್ಲದಾಗ, ಮೌಂಟನ್‌ವೇ ಮಹಮ್ಮದನ ಹತ್ತಿರ ಹೋದ ರೀತಿಯಲ್ಲಿ ಅವರು ಕರ್ನಾಟಕವನ್ನೆಲ್ಲ ಸುತ್ತಿದರು. ಅಲ್ಲಲ್ಲಿಯ ಸಾಹಿತಿಗಳನ್ನು ಕಂಡರು, ಗೌರವಿಸಿದರು. ಕಿರಿಯ ಸಾಹಿತಿಗಳನ್ನು ಶೋಧಿಸಿದರು, ಪ್ರೋತ್ಸಾಹಿಸಿದರು. ಇವರೆಲ್ಲರಿಗೆ ಕನ್ನಡ ಅಧ್ಯಯನ ಸಂಸ್ಥೆಯ ಬಾಗಿಲನ್ನು ತೆರೆದರು. ಕನ್ನಡ ಗರ್ಭಗುಡಿಯ ಪ್ರವೇಶ ಅರ್ಚಕರಿಗೆ ಮಾತ್ರ ಸೀಮಿತ ಎನ್ನುವದನ್ನು ತಪ್ಪಿಸಿ, ಸಮಸ್ತರಿಗೂ ಅದನ್ನು ಮುಕ್ತದ್ವಾರವಾಗಿಸಿದರು. ಇದರಿಂದ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಉಪೇಕ್ಷಿತವಾಗಿ ಬದುಕುತ್ತಲಿದ್ದ ಸಾಹಿತಿಗಳು ಅಧ್ಯಯನಸಂಸ್ಥೆಯೊಂದಿಗೆ ನೇರ ಸಂಪರ್ಕ ಕಲ್ಪಿಸಿಕೊಂಡು, ಆತ್ಮವಿಶ್ವಾಸವನ್ನು ವರ್ಧಿಸಿಕೊಂಡರು. "ಇದರಿಂದ ವಿಭಾಗ ಮೈಲಿಗೆಯಾಗುತ್ತಲಿದೆ"ಯೆಂದು ಹುಯಿಲು ಎಬ್ಬಿಸಿದ ಮಡಿವಂತರನ್ನೂ ಲೆಕ್ಕಿಸದೆ ದೇಜಗೌ ಉತ್ತರೋತ್ತರ ಹೆಜ್ಜೆಹಾಕಿದರು. ತಮ್ಮನ್ನು ಬಿಟ್ಟರೆ ವಿಭಾಗಕ್ಕೆ ಗತಿಯಿಲ್ಲವೆಂದು ಭಾವಿಸಿದ್ದ ಮಡಿವಂತರಿಗೆ ಭ್ರಮನಿರಸನವಾಗುತ್ತಲೇ ಅವರೆಲ್ಲ ದೇಜಗೌ ಪ್ರವಾಹದೊಂದಿಗೆ ಸೇರಿಕೊಂಡರು. ಇದರಿಂದ ಅಧ್ಯಾಪಕ ಸಾಹಿತಿ, ವೃತ್ತಿಸಾಹಿತಿಗಳ ಸಮನ್ವಯ ಸಾಧ್ಯವಾಗಿ ಒಂದು ಹೊಸ ಮನ್ವಂತರವೇ ತೆರೆದುಕೊಂಡಿತು.

ಹೀಗೆ "ಕನ್ನಡ ವಿಭಾಗ"ವು "ಕರ್ನಾಟಕ ವಿಭಾಗ"ವಾಗ ತೊಡಗುತ್ತಲೇ ದೇಜಗೌ ಅವರು ಅದನ್ನು ಕನ್ನಡ ಅಧ್ಯಯನಸಂಸ್ಥೆಯನ್ನಾಗಿ ಪರಿವರ್ತಿಸಿದರು. ಕನ್ನಡ ಸ್ನಾತಕೋತ್ತರ ಶಿಕ್ಷಣವ್ಯವಸ್ಥೆಯಲ್ಲಿ ಇದು ಒಂದು ದೊಡ್ಡ ತಿರುವು. ಈ ಸಂಧರ್ಭದಲ್ಲಿ ದೇಜಗೌ ಮಾಡಿದ ಮೊದಲ ಕೆಲಸವೆಂದರೆ ಸ್ನಾತಕೋತ್ತರ ಕ್ಲೋಸ್ ಸಿಲೆಬಸಗೆ ಬದಲು ಓಪನ್ ಸಿಲೆಬಸ್ ರೂಪಿಸಿದ್ದು. ಈಗ ಕಡ್ಡಾಯ ಪತ್ರಿಕೆಗಳಲ್ಲಿ ವೈವಿಧ್ಯತೆ ಕಂಡುಬಂದಿತು. ಐಚ್ಛಿಕ ಪತ್ರಿಕೆಗಳ ಸಂಖ್ಯೆ ವರ್ಧಿಸಿತು. ದಕ್ಷಿಣ ಭಾರತ, ಭಾರತ ಮತ್ತು ಭಾರತೋತ್ತರ ವಿದ್ಯೆಗಳ ಸೇತುವೆ ಕನ್ನಡ ಪಠ್ಯಕ್ಕೆ ಪ್ರಾಪ್ತವಾಯಿತು. ಈ ಮೊದಲಿನ ವಿಷಯಗಳು ಹಿಗ್ಗಿ, ಅವುಗಳ ಪ್ರೌಢ ಅಧ್ಯಯನ ಪ್ರಾರಂಭವಾಯಿತು. ಇದರಿಂದಾಗಿ ರಕ್ತಹೀನತೆಯಿಂದ ಬಳಲುತ್ತಿದ್ದ ಸ್ನಾತಕೋತ್ತರ ಸಿಲೆಬಸ್ ಮಾಂಸಖಂಡ ತುಂಬಿಕೊಂಡು ಬೆಳೆಯಿತು. ಇದಕ್ಕೆ ಪೂರಕವಾಗಿ ಭಾಷಾಶಾಸ್ತ್ರ, ಜಾನಪದ, ದಕ್ಷಿಣ ಭಾರತೀಯ ಸಾಹಿತ್ಯ - ಹೀಗೆ ಇನ್ನೂ ಮೂರು ಸ್ನಾತಕೋತ್ತರ ವರ್ಗಗಳನ್ನು ಸಂಸ್ಥೆಯಲ್ಲಿ ಅನುಷ್ಠಾನಗೊಳಿಸಿದರು. ಜೊತೆಗೆ ಅನೇಕ ಡಿಪ್ಲೋಮಾ, ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಿದರು. ಈ ಪ್ರಯತ್ನಗಳಲ್ಲಿ ಚಳುವಳಿಯಾಗಿ ಕವಲೊಡೆದುದು ಜಾನಪದ, ಅಧ್ಯಯನ. ಗ್ರಾಮೀಣ ಸಮಗ್ರ ಬದುಕನ್ನು, ಅದರ ಸುದೀರ್ಘ ಪರಂಪರೆಯನ್ನು ಅಧ್ಯಯನಕ್ಕೆ ಅಳವಡಿಸಿಕೊಂಡ ಈ ಶಾಖೆಯು ಬೋಧನೆ, ಸಂಶೋಧನೆ, ಪ್ರಕಟಣೆ, ಕ್ಷೇತ್ರಕಾರ್ಯ, ವಿಚಾರ ಸಂಕಿರಣ, ಮ್ಯುಜಿಯಂ ಸ್ಥಾಪನೆ ರಂಗಗಳಲ್ಲಿ ಮೈಮುರಿದು ಬೆಳೆದು ಕರ್ನಾಟಕದ ವ್ಯಾಪ್ತಿಯಲ್ಲಿ ಹೊಸ ಜಾಗೃತಿಯನ್ನುಂಟು ಮಾಡಿತು. ಈ ಎಲ್ಲ ಚಟುವಟಿಕೆಗಳಿಗನುಗುಣವಾಗಿ ಅಧ್ಯಾಪಕರ, ವಿದ್ಯಾರ್ಥಿಗಳ ಸಂಖ್ಯೆಯೂ ವರ್ಧಿಸಿ ಕನ್ನಡ ಅಧ್ಯಯನಸಂಸ್ಥೆ, ಮೈದುಂಬಿಕೊಂಡು ನಿಂತಿತು. ಯಾವುದೇ ವಿಷಯ ತನ್ನಷ್ಟಕ್ಕೆ ತಾನು ಸ್ವತಂತ್ರವಲ್ಲ. ಅದು ಏಕಶಿಸ್ತೀಯವಾಗಿ ಬೆಳೆಯಲಾರದು, ಬೆಳೆಯಬಾರದು. ಅಂತರ್‌ಶಿಸ್ತೀಯತೆಯಿಂದ ಮಾತ್ರ ಸಶಕ್ತವಾಗಿ ಬೆಳೆಯಬಲ್ಲದು - ಎಂಬ ಪ್ರಜ್ಞೆ ಜಾಗೃತವಾಗಿ ಅಧ್ಯಯನ, ಅಧ್ಯಾಪನಗಳಲ್ಲಿ ಹೊಸ ಫಲಿತಾಂಶಗಳು ಕಾಣಿಸಿಕೊಂಡವು. ಇವುಗಳ ಬೆಳವಣಿಗೆಗಾಗಿ ಹೊಸ ಹೊಸ ಯೋಜನೆಗಳು ಅನುಷ್ಠಾನಗೊಂಡವು.

ಯಾವುದೇ ವಿಷಯ ದೇಜಗೌ ಮನಸ್ಸನ್ನು ಪ್ರವೇಶಿಸಿದರೆ ತೀರಿತು. ಅದನ್ನು ಆದಷ್ಟು ಬೇಗ, ಅದಷ್ಟು ದೊಡ್ಡ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ತರುವುದು ಅವರ ಸ್ವಭಾವ. ಹೀಗಾಗಿ ವೈವಿಧ್ಯಪೂರ್ಣ ಶಾಖೆಗಳು ವೈವಿಧ್ಯಪೂರ್ಣ ಬೋಧನಮುಖಿಯಾಗುತ್ತಲೇ ಅವು ಸಂಶೋಧನಮುಖಿಯೂ ಆಗಬೇಕೆಂಬ ಅವರ ನಿಲವು ಕಾರಣವಾಗಿ ವಿಶ್ವಕೋಶ, ಎಪಿಗ್ರಾಫಿಯಾ ಕರ್ನಾಟಿಕಾ, ಕನ್ನಡ ಸಾಹಿತ್ಯಚರಿತ್ರೆ, ಭಾಷಾಂತರ, ಗ್ರಂಥಸಂಪಾದನೆ, ಪಠ್ಯಪುಸ್ತಕ ನಿರ್ಮಾಣ - ಇವೇ ಮೊದಲಾದ ಯೋಜನೆಗಳು ಏಕಕಾಲಕ್ಕೆ ಜೇನುಗೂಡಿನಂತೆ ಕ್ರಿಯಾಶೀಲವಾಗಿ ಕಾಣಿಸಿಕೊಂಡವು. ಈ ಒಂದೊಂದು ಯೋಜನೆಗಳ ಸಾಧನೆಯೇ ಒಂದು ದೊಡ್ಡ ಇತಿಹಾಸವೆಂಬಂತೆ ಅವು ದೊಡ್ಡ ಪ್ರಮಾಣದಲ್ಲಿ ಬೆಳೆದು ನಿಂತವು. ಈಗ ವಿಭಾಗಕ್ಕೆ ಹಣ ಸಾಲದೆ ಹೋಯಿತು. ಸ್ಥಳ ಸಾಲದೆ ಹೋಯಿತು. ಈ ಕೊರತೆಯನ್ನು ತುಂಬಲು ಸಂಸ್ಥೆಯ ಸಂಪನ್ಮೂಲಗಳನ್ನು ವರ್ಧಿಸಿ, ಸ್ವತಂತ್ರಕಟ್ಟಡವನ್ನು ಕಟ್ಟಿಸಿ, ಪ್ರತಿಯೊಂದು ಪೈಸೆಯನ್ನೂ ಪ್ರತಿಯೊಂದು ಅಂಗುಲ ಜಾಗವನ್ನೂ ಸಾರ್ಥಕವಾಗಿ ಬಳಸಿದರು.

ಪುಸ್ತಕ ಪ್ರಕಟಣೆಯೆಂದರೆ ದೇಜಗೌ ಅವರಿಗೆ ವಿಶೇಷ ಪ್ರೀತಿ. ಸಂಶೋಧನೆ ಕೇವಲ ಬೌದ್ಧಿಕ ಶ್ರಮದಲ್ಲಿ ಪರ್ಯಾವಸಾನಗೊಳ್ಳದೆ, ಪ್ರಕಟಣ ರೂಪದಲ್ಲಿ ಕಾಣಿಸಿಕೊಳ್ಳಬೇಕೆಂಬ ಉತ್ಕಟ ಹಂಬಲ ಅವರದು. ಪ್ರಸಾರಾಂಗದ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದ ಅವರಿಗೆ ಪ್ರಕಟನೆಯ ಕಷ್ಟ-ಸುಖಗಳ ವಾಸ್ತವ ಸ್ಥಿತಿಯ ಪರಿಚಯವಿದ್ದಿತು. ಈ ಅನುಭವವನ್ನು ಆಧಾರವಾಗಿಟ್ಟುಕೊಂಡು ಪ್ರಯತ್ನಿಸುವಲ್ಲಿ. ಪ್ರಸಾರಾಂಗದ ಪ್ರಕಟನೆಗಳೆಂದರೆ ಕನ್ನಡ ಅಧ್ಯಯನ ಸಂಸ್ಥೆಯ ಪ್ರಕಟನೆಗಳೇ ಎಂಬಂತೆ ಪುಸ್ತಕಗಳ ಮೇಲೆ ಪುಸ್ತಕಗಳು ಹೊರಬಂದವು. ಪುಸ್ತಕ ಪೇಟೆಯಲ್ಲಿ ಅಧ್ಯಯನ ಸಂಸ್ಥೆಯ ಸರಕು ಮಹಾಪೂರದಂತೆ ಬರತೊಡಗಿತು. ಭಿನ್ನರುಚಿಯ ಪುಸ್ತಕಗಳ ಉತ್ಪಾದನೆ - ಮಾರಾಟ ವರ್ಧಿಸುತ್ತಲೇ ಹೋಯಿತು. ಸಾಲದುದಕ್ಕೆ ವಿಚಾರ ಸಂಕಿರಣ, ಕಮ್ಮಟ, ಸಭೆ-ಸಮಾರಂಭಗಳು ವರ್ಷದುದ್ದಕ್ಕೂ ಜರುಗಿ, ವಿಶ್ವವಿದ್ಯಾಲಯದ ಆವರಣದಲ್ಲಿ ಕನ್ನಡಕ್ಕೆ, ಕನ್ನಡ ಅಧ್ಯಯನಸಂಸ್ಥೆಗೆ ಘನತೆ-ಗೌರವಗಳು ಪ್ರಾಪ್ತವಾದವು. ಈಗ ಕನ್ನಡದ ಸರ್ವಸಮಸ್ಯೆಗಳಿಗೆ ಪರಿಹಾರ ನೀಡುವ ಕೇಂದ್ರವ್ಯಕ್ತಿಯಾಗಿ, ಕನ್ನಡದ ಹಿತಚಿಂತಕರಾಗಿ ದೇಜಗೌ ರಾಜ್ಯಮಟ್ಟದಲ್ಲಿ ಕಂಗೊಳಿಸಿದರು.

ಕನ್ನಡವನ್ನು ಬೆಳೆಸುವವರು ವಿರಳ, ಬೆಳೆಸುತ್ತಲೇ ಕನ್ನಡದಲ್ಲಿ ಬರೆಯುವವರು ಇನ್ನೂ ವಿರಳ. ಈ ವಿರಳವ್ಯಕ್ತಿಗಳ ಶ್ರೇಣಿಯಲ್ಲಿ ನಿಂತು ಸಾಹಿತ್ಯಕೃಷಿಮಾಡಿದ ಶ್ರೇಯಸ್ಸು ದೇಜಗೌ ಅವರದು. ಗ್ರಂಥಸಂಪಾದನೆ, ಜಾನಪದ, ಅನುವಾದ, ಆತ್ಮಚರಿತ್ರೆ, ಜೀವನಚರಿತ್ರೆ ಇವು ದೇಜಗೌ ಸಾಹಿತ್ಯದ ಮುಖ್ಯಕ್ಷೇತ್ರಗಳು. ಆಂಡಯ್ಯನ ಕಬ್ಬಿಗರ ಕಾವ, ನೇಮಿಚಂದ್ರನ ಲೀಲಾವತಿ, ನಾಗರಸನ ಪುಣ್ಯಾಶ್ರವ ಇವರ ಪ್ರಮುಖ ಸಂಪಾದನೆಗಳು. ಪಾಠನಿರ್ಣಯದಲ್ಲಿ ಸತ್ಯನಿಷ್ಠತೆ, ಪ್ರಸ್ತಾವನೆಯಲ್ಲಿ ಸಮಗ್ರತೆ ಇವರ ಸಂಪಾದನೆಯ ವಿಶೇಷತೆಗಳೆಂದು ಡಿ. ಎಲ್. ಎನ್. ಹೇಳಿದುದು ಯಥೋಚಿತವಾಗಿದೆ. ಆತ್ಮಚರಿತ್ರೆ -ಜೀವನ ಚರಿತ್ರೆ ಕ್ಷೇತ್ರಗಳಿಗೆ ದೇಜಗೌ ಸಲ್ಲಿಸಿದ ಸೇವೆ ಸಂಖ್ಯಾತ್ಮಕ ಮತ್ತು ಗುಣಾತ್ಮಕವಾಗಿ ದೊಡ್ಡದು. 'ಹೋರಾಟದ ಬದುಕು' ಹೆಸರಿನ ಎರಡು ಸಂಪುಟಗಳಲ್ಲಿ, ತಮ್ಮ ಸಂಭಾವನೆ ಗ್ರಂಥಗಳಿಗೆ ಬರೆದ ಆತ್ಮಕಥೆಗಳಲ್ಲಿ ದೇಜಗೌ ಬದುಕಿನ ಪ್ರಾಮಾಣಿಕ ಚಿತ್ರವಿದೆ. ತಮ್ಮ ದೌರ್ಬಲ್ಯಗಳನ್ನೂ ಬಿಚ್ಚಿ ಬಯಲಿಗಿಟ್ಟ ಕನ್ನಡದ ಏಕೈಕ ನಿದರ್ಶನವೆನಿಸಿವೆ, ಈ ಆತ್ಮಚರಿತ್ರೆಗಳು. ಜೀವನಚರಿತ್ರೆ ಕ್ಷೇತ್ರಕ್ಕೆ ದೇಜಗೌ ಅವರಿಂದ ಸಂದ ಸೇವೆ ಒಂದು ಸ್ವತಂತ್ರ ಅಧ್ಯಯನಕ್ಕೆ ವಸ್ತುವಾಗುವಷ್ಟು ಗಣ್ಯವಾಗಿದೆ. ತಮ್ಮ ಪರಿಸರದ ವ್ಯಕ್ತಿಗಳನ್ನೂ ರಾಷ್ಟ್ರೀಯ- ಅಂತರ್‌ರಾಷ್ಟ್ರೀಯ ವ್ಯಕ್ತಿಗಳನ್ನೂ ಕುರಿತು ಬರೆದ ಇವುಗಳಲ್ಲಿ ಕೆಲವು ಕೃತಿಗಳು ಮಹಾವ್ಯಕ್ತಿಗಳನ್ನು ಕನ್ನಡಕ್ಕೆ ಪ್ರಥಮಸಲ ಪರಿಚಯಿಸಿದುವುಗಳಾಗಿವೆ. ದೇಜಗೌ ದೇಶ-ವಿದೇಶಗಳನ್ನು ಅನೇಕ ಸಲ ಸುತ್ತಿ ಬಂದವರು. ಲೋಕಾಭಿರಾಮವಾಗಿ ಹೊತ್ತುಗಳೆಯದೆ ಆ ದೇಶಗಳನ್ನು ಒಬ್ಬ ಅಭ್ಯಾಸಿಯಂತೆ ಈಕ್ಷಿಸಿದವರು. ಇದರ ಫಲವಾಗಿ ಹಲವು ಪ್ರವಾಸ ಸಾಹಿತ್ಯಕೃತಿಗಳು ಇವರಿಂದ ಬೆಳೆಕುಕಂಡವು. ಮೂಲತಃ ಗ್ರಾಮೀಣ ಪರಿಸರದವರಾದ ದೇಜಗೌ ಅವರದು ಅಪ್ಪಟ ಜಾನಪದೀಯ

ವ್ಯಕ್ತಿತ್ವ. ತಮ್ಮ ದೇಶೀಯ ಅನುಭವವನ್ನು ಶಾಸ್ತ್ರಶಿಸ್ತಿಗೆ ಅಳವಡಿಸಿ ಬರೆದ "ಜಾನಪದ ಅಧ್ಯಯನ" ಒಂದು ಮಿತಿಯಲ್ಲಿ ವಿಶ್ವಕೋಶವೆನಿಸಿದೆ. 'ಜಾನಪದ ಗೀತಾಂಜಲಿ' ಇವರ ಅಧ್ಯಯನದ ವ್ಯಾಪ್ತಿ, ಅಭಿರುಚಿಗಳಿಗೆ ಸಾಕ್ಷಿಯೆನಿಸಿದೆ.

ಇವೆಲ್ಲವುಗಳಿಗಿಂತ ಮುಖ್ಯ ಕೊಡುಗೆಯಾಗಿದೆ, ಭಾಷಾಂತರ ಸಾಹಿತ್ಯ. ಎರಡು ಭಾಷೆಗಳ ಎರಡು ಸಂಸ್ಕೃತಿಗಳ ತಿಳುವಳಿಕೆಯಲ್ಲಿ ಆವತರಿಸುತ್ತದೆ, ಭಾಷಾಂತರ. ಈ ತತ್ವವನ್ನು ತಲಸ್ಪರ್ಶಿ ಅರ್ಥ ಮಾಡಿಕೊಂಡಿರುವ ದೇಜಗೌ ಹಮ್ಮು-ಬಿಮ್ಮು, ಯುದ್ಧ ಮತ್ತು ಶಾಂತಿ ಮೊದಲಾದ ಜಾಗತಿಕ ಕೃತಿಗಳನ್ನು ಕನ್ನಡಕ್ಕೆ ತಂದುದು ದೊಡ್ಡ ಕೊಡುಗೆಯೇ ಸರಿ. ಶ್ರಮ-ಸೃಜನಶೀಲ ಮನೋಧರ್ಮಗಳ ಫಲವೆನಿಸಿದ ಇವು ಕನ್ನಡದ ಕಣಜವನ್ನು ತುಂಬಿದ ಗದ್ಯಮಹಾಕೃತಿಗಳೆನಿಸಿವೆ.

ದೇಜಗೌ ಸಾಹಿತ್ಯವನ್ನು ಕುರಿತು ಬರೆಯುವಾಗ ಅವರ ಗದ್ಯಶೈಲಿಯನ್ನು ಪ್ರಸ್ತಾಪ ಮಾಡದಿದ್ದರೆ ವಿಷಯ ಅಪೂರ್ಣವೆನಿಸುತ್ತದೆ. ಮೂಲತಃ ಗ್ರಾಮೀಣ ಪರಿಸರದವರಾದ ಅವರ ಜಾನಪದ ಶಬ್ದಸಂಪತ್ತು ಸಮೃದ್ಧವಾದುದು. ಅಭ್ಯಾಸಬಲದಿಂದ ಕೈವರ್ತಿಸಿಕೊಂಡಿರುವ ಸಂಸ್ಕೃತ ಶಬ್ದಭಾಂಡಾರವು ಶ್ರೀಮಂತವಾದುದು. ಈ ಎರಡರ ಸಮನ್ವಯದಿಂದ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬಂಥ ಆಕರ್ಷಕ ಶೈಲಿ ಅವರಲ್ಲಿ ಆಕಾರ ಪಡೆದಿದೆ. ಕನ್ನಡದ ಸಂದರ್ಭದಲ್ಲಿ 'ದೇಜಗೌ ಶೈಲಿ' ಎಂದು ಬೆರಳಿಟ್ಟು ತೋರಿಸಬಹುದಾದ ವೈಶಿಷ್ಟ್ಯ ಅದಕ್ಕೆ ಪ್ರಾಪ್ತವಾಗಿದೆ.

ಹೀಗೆ ವಿಷಯ ವೈವಿಧ್ಯ, ವಿಶಿಷ್ಟಶೈಲಿಗಳ ಮೂಲಕ ದೊಡ್ಡ ಕೊಡುಗೆಯನ್ನು ನೀಡಿದ್ದರೂ, ದೇಜಗೌ ಕೃತಿಗಳ ಅಧ್ಯಯನಕ್ಕೆ ಸಾಹಿತ್ಯಿಕ ನ್ಯಾಯ ಲಭ್ಯವಾಗಿಲ್ಲವೆಂದೇ ತೋರುತ್ತದೆ. ರಾಜ್ಯ, ರಾಷ್ಟ್ರಮಟ್ಟದ ಪ್ರಶಸ್ತಿಗಳಿಗೆ ಪರಿಗಣಿಸಬಹುದಾದ ಕೃತಿಗಳನ್ನು ಸೃಷ್ಟಿಸಿದ್ದರೂ, ಆ ಪ್ರಶಸ್ತಿ ಗೌರವಗಳಿಂದ ದೇಜಗೌಸಾಹಿತ್ಯ ವಂಚಿತವಾಗುತ್ತ ಬಂದಿದ್ದು, ಅವುಗಳನ್ನು ನೀಡುವ ಸಂಸ್ಥೆ, ಸಮಿತಿಗಳ ಪ್ರಾಮಾಣಿಕತೆಯನ್ನು ಸಂದೇಹಿಸುತ್ತದೆ.

ದೇಜಗೌ ಅವರದು ಸಾಂಸ್ಕೃತಿಕ ವ್ಯಕ್ತಿತ್ವ.ಇದಕ್ಕೆ ಅವಶ್ಯವಿರುವ ಸ್ನೇಹಮೌಲ್ಯ ಅವರಲ್ಲಿ ಸಮೃದ್ಧವಾಗಿದೆ. ಈ ಬುನಾದಿಯ ಮೇಲೆ ಅವರು ಕಟ್ಟಿದ ಸಂಸ್ಥೆಗಳು ಅನೇಕ. ಕನ್ನಡ ಅಧ್ಯಯನ ಸಂಸ್ಥೆಯಂತೂ ಸರಿಯೆ. ಈ ನಿಟ್ಟಿನಲ್ಲಿ ಅವರು ಎತ್ತಿ ನಿಲ್ಲಿಸಿದ ಸಂಸ್ಥೆಗಳೆಂದರೆ ಕುವೆಂಪು ಪ್ರತಿಷ್ಠಾನ, ದೇಜಗೌ ಪ್ರತಿಷ್ಠಾನ ಮತ್ತು ಭಾರತೀಯ ನಾಮವಿಜ್ಞಾನ ಸಂಸ್ಥೆ. ಇವು ತುಂಬ ಜೀವಂತವಾಗಿರುವುದು ಒಂದು ವಿಶೇಷ.

ಸಾಹಿತಿಗಳು ಸಿಗಬಹುದು ಅವರು ಸಂಘಟಕರಾಗಿವುದು ವಿರಳ. ಸಮರ್ಥ ಆಡಳಿತಗಾರರಾಗಿರುವುದು ಇನ್ನೂ ವಿರಳ. ಈ ಶಕ್ತಿತ್ರಯ ಏಕೀಭವಿಸಿದ ವ್ಯಕ್ತಿಯಾಗಿದ್ದಾರೆ ದೇಜಗೌ. ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿ ಅದನ್ನು ದಶರಥಶಕ್ತಿಯಿಂದ ಆಳಿದ ಬಾಳಿದ ದೇಜಗೌ, ಕುಲಪತಿಯಾಗಿಯೂ ಮೈಸೂರು ವಿಶ್ವವಿದ್ಯಾಲಯವನ್ನು ಉದ್ದಗಲಗಳಲ್ಲಿ ವಿಸ್ತರಿಸಿದರು. ಮಾನಸಗಂಗೋತ್ರಿ ಕುವೆಂಪು ಅವರ ಮಾನಸ ಶಿಶು, ದೇಜಗೌ ಅವರ ಕ್ರತುಶಕ್ತಿಯ ಕೂಸು - ಇದು ಇಂದು ಮನೆಮಾತಾಗಿದೆ. ಹೀಗೆ ತಮ್ಮ ಜೀವಮಾನದಲ್ಲಿ ಬಿತ್ತಬೇಕಾದುದನ್ನು ಬಿತ್ತಿ, ಬೆಳೆಯಬೇಕಾದುದನ್ನು ಬೆಳೆದು, ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ, ದೇಜಗೌ.

ದೇಜಗೌ : ೭೫ರ ಸಮಾರಂಭ (ಬೆಂಗಳೂರು ೧೯೯೩)ದಲ್ಲಿ ಮಾಡಿದ ಭಾಷಣ.

ಆಕರ : ಮಾರ್ಗ ಸಂಪುಟ–೬

■■

೫೧

ಯಡೆಯೂರು ಸಿದ್ಧಲಿಂಗೇಶ್ವರ ಕ್ಷೇತ್ರದ ವಾರಸುದಾರರು ಗದುಗಿನ ಶ್ರೀಗಳು

. ೨೦೧೦

ಪೂಜ್ಯರಲ್ಲಿ ನಮಸ್ಕಾರ, ಸಭೆಗೆ ನಮಸ್ಕಾರ.

ಲಿಂಗಾಯತ ಸಂಸ್ಕೃತಿಯ ಶೂನ್ಯಸಿಂಹಾಸನ ಪರಂಪರೆಯಲ್ಲಿ ತೋಂಟದ ಸಿದ್ಧಲಿಂಗಯತಿಗಳು ದ್ವಿತೀಯ ಅಲ್ಲಮರೆನಿಸಿದ್ದಾರೆ. ಜಂಗಮನಾಗಿ ಲೋಕಸಂಚಾರ ಮಾಡುತ್ತಲಿದ್ದ ಈ ಯತಿಯ ನಿರ್ದಿಷ್ಟ ನೆಲೆ, ಯಡೆಯೂರಿನ ವಿರಕ್ತಮಠ. ಅಂತ್ಯಕಾಲದಲ್ಲಿ ಇವರು ಜೀವಂತಸಮಾಧಿ ಪ್ರವೇಶಿದುದು ಇದೇ ವಿರಕ್ತಮಠದ ಆವರಣದಲ್ಲಿ. ಈ ಸಮಾಧಿ ಗದ್ದುಗೆಯಿಂದಾಗಿ ಯಡೆಯೂರು ಪ್ರಸಿದ್ಧ ಕ್ಷೇತ್ರವಾಗಿ ಬೆಳೆದಿದೆ.
ಇವರ ತರುವಾಯ ಪೀಠವೇರಿದ ಅಧಿಪತಿಗಳು ಸಿದ್ಧಲಿಂಗೇಶ್ವರನ ಗದ್ದುಗೆಯ ಪೂಜೆಗೆ ಅರ್ಚಕರನ್ನು ನಿಯಮಿಸಿ, ಜಂಗಮತತ್ವದಂತೆ ಲೋಕಸಂಚಾರ ಮಾಡುತ್ತ, ಆಗಾಗ ಯಡೆಯೂರಿನ ತಮ್ಮ ಮೂಲಮಠಕ್ಕೆ ಮರುಳುತ್ತಿದ್ದರು. ಈ ಪರಂಪರೆಯಲ್ಲಿ ಬಂದ ಕಟ್ಟಿಗೆಹಳ್ಳಿ ಸಿದ್ಧಲಿಂಗರು ಶಿಷ್ಯ ಚೀಲಾಳಸ್ವಾಮಿಗೆ ಉತ್ತರಾಧಿಕಾರಿ ಪಟ್ಟ ಕಟ್ಟಲಾಗಿ, ಮಿಕ್ಕ ಶಿಷ್ಯರು ಸಿಟ್ಟಿಗೆದ್ದು, 'ತಮ ತಮಗೆ ಬೇರೆ ಸಮಯ ಮಾಡಿಕೊಂಡರು.' ಇದೆಲ್ಲ ವಿಷಯ ಹಲವು ಆಕರಗಳಲ್ಲಿ, ಇತ್ತೀಚೆ ಲಭ್ಯವಾದ 'ಷಟ್ಸ್ಥಲಶಿವಾಯಣ' ಕಾವ್ಯದಲ್ಲಿ ದಾಖಲಾಗಿದೆ.

ಈ ವಿವರಗಳನ್ನು ಬಿಟ್ಟರೂ (೧) ಇಂದು ಕರ್ನಾಟಕದಲ್ಲಿರುವ ಸಾವಿರಾರು ವಿರಕ್ತಮಠಗಳಲ್ಲಿ ಗದುಗಿನವರು ಮಾತ್ರ ಪೀಠಕ್ಕೆ ಬರುವಾಗ ಸಾಮಾನ್ಯವಾಗಿ ತಮ್ಮ ಮೂಲ ಹೆಸರನ್ನು "ತೋಂಟದ ಸಿದ್ಧಲಿಂಗ"ವೆಂದು ಬದಲಿಸಿಕೊಳ್ಳುತ್ತಾರೆ. ಇಲ್ಲವೆ ತಮ್ಮ ಹೆಸರಿನ ಹಿಂದೆ "ತೋಂಟದ" ಎಂಬುದನ್ನು ಕಡ್ಡಾಯವಾಗಿ ಬಳಸುತ್ತಾರೆ. ಉದಾ : ತೋಂಟದ ಅರ್ಧನಾರೀಶ್ವರ ಇತ್ಯಾದಿ. (೨) ಈಗಲೂ ಯಡೆಯೂರು ಗದ್ದುಗೆಯ ದರ್ಶನಕ್ಕೆ ವರ್ಷದಲ್ಲಿ ಅನೇಕ ಸಲ ಧಾರ್ಮಿಕ ವಿಧಿಯೆಂಬಂತೆ ಕಡ್ಡಾಯವಾಗಿ ಹೋಗುವವರು, ಗದುಗಿನ ಶ್ರೀಗಳು ಮಾತ್ರ. (೩) ಉದ್ದಕ್ಕೂ ಯಡೆಯೂರು ಕ್ಷೇತ್ರದ ಕಟ್ಟಡ, ರಥ ಮೊದಲಾದವುಗಳ ಜೀರ್ಣೋದ್ಧಾರಕಾರ್ಯಗಳನ್ನು ಪೂರೈಸುತ್ತ ಬಂದವರು ಅಂದಂದಿನ ಗದಗಿನ ಶ್ರೀಗಳೆಂಬುದಕ್ಕೆ ಅನೇಕ ದಾಖಲೆಗಳು ಇವರಲ್ಲಿವೆ. (೪) ಸುತ್ತಲಿನ ಭಕ್ತರ ಸಹಕಾರದಿಂದ ಯಡೆಯೂರಿನಲ್ಲಿ ದಾಸೋಹ ಸ್ಥಾಪಿಸಿ, ಅದನ್ನು ಗದುಗಿನ ಶ್ರೀಗಳ ಅಧ್ಯಕ್ಷತೆಯಲ್ಲಿ ಮೊದಲಿನಿಂದಲೂ ನಡೆಸಿಕೊಂಡು ಬರುತ್ತಲಿರುವವರು, ಗದುಗಿನ ಭಕ್ತರು. (೫) ಕರ್ನಾಟಕ ಸರಕಾರದ ಮುಜರಾಯಿ ಇಲಾಖೆಯವರು ಶ್ರೀಕ್ಷೇತ್ರದ ಬಗ್ಗೆ ಈಗಲೂ

ಪ್ರಕಟಿಸುತ್ತಲಿರುವ ಪ್ರಚಾರ ಪುಸ್ತಕಗಳಲ್ಲಿ, ಅಲ್ಲಿಯ ಗದ್ದುಗೆಯ ಮುಂದೆ ತೂಗುಬಿಟ್ಟಿರುವ ನಾಮಫಲಕದಲ್ಲಿ ಈ ಕ್ಷೇತ್ರದ ಗುರುಪರಂಪರೆಯನ್ನು ತೋಂಟದ ಸಿದ್ಧಲಿಂಗಶಿವಯೋಗಿಗಳ ಹೆಸರಿನಿಂದ ಆರಂಭಿಸಿ, ಇಂದಿನ ಗದುಗಿನ ಶ್ರೀಗಳ ಹೆಸರಿನಿಂದ ಮುಕ್ತಾಯಗೊಳಿಸಿದ ೧೯ ಜಗದ್ಗುರುಗಳ ಪಟ್ಟಿಯಿದೆ. (೬) ಇತ್ತೀಚೆ ಮುಜರಾಯಿ ಇಲಾಖೆ ಪ್ರಕಟಿಸಿದ "ಶ್ರೀ ತೋಂಟದ ಸಿದ್ಧಲಿಂಗೇಶ್ವರ ಸಮಗ್ರಸಾಹಿತ್ಯ" ಹೆಸರಿನ ಹತ್ತು ಸಂಪುಟಗಳಲ್ಲಿ ಇಂದಿನ ಗದುಗಿನ ಶ್ರೀಗಳ ಆಶೀರ್ವಾದ ಮುನ್ನುಡಿ ಇದೆ.

ಇತಿಹಾಸದುದ್ದಕ್ಕೂ ನಡೆದು ಬಂದ ಈ ಎಲ್ಲ ಸಂಬಂಧ - ಸಂಪ್ರಾದಯಗಳನ್ನು ನೋಡಿದರೆ, ಯಡೆಯೂರು ಕ್ಷೇತ್ರದ ವಾರಸುದಾರರು ಗದುಗಿನ ಶ್ರೀಗಳೆಂದು ಕರ್ನಾಟಕ ಸರಕಾರ ಮತ್ತು ಸಾರ್ವಜನಿಕರು ಪರ್ಯಾಯವಾಗಿ ನಿರಂತರ ಒಪ್ಪುತ್ತ ಬಂದಿರುವರೆಂದೇ ಹೇಳಬೇಕು. ಏಕೆಂದರೆ ದಾಖಲೆ ಸುಳ್ಳಾದರೂ ಸಂಪ್ರದಾಯ ಸುಳ್ಳಾಗುವುದಿಲ್ಲವೆಂದು ಬೇರೆ ಹೇಳಬೇಕಿಲ್ಲ.

ಆದರೆ, ಉತ್ತರ ಕರ್ನಾಟಕದ ಸಂಚಾರಕ್ಕೆ ಬಂದ ಜಗದ್ಗುರು ಕಟ್ಟಿಗೆಹಳ್ಳಿ ಸಿದ್ಧಲಿಂಗ (೧೭ನೆಯ ಶತಮಾನ) ರ ತರುವಾಯದವರು ಅನಾರೋಗ್ಯ, ಪ್ರಯಾಣ ಸೌಕರ್ಯದ ಕೊರತೆ, ಹವಾಮಾನದ ವೈಪರೀತ್ಯ ಇತ್ಯಾದಿ ಕಾರಣಗಳಿಂದಾಗಿ ದೂರದ ಯಡೆಯೂರಿಗೆ ಕ್ವಚಿತ್ ಮರಳಿ ಹೋಗಹತ್ತಿದರು. ಇದರಿಂದಾಗಿ ಮಾಲಕರಿಲ್ಲ ಯಡೆಯೂರು ಕ್ಷೇತ್ರದಲ್ಲಿ ಅರ್ಚಕರ ಅವ್ಯವಹಾರ ಬೆಳೆದು, ಆಡಳಿತ ಶಿಥಿಲಗೊಂಡಿತು. ಈ ದುರಾಡಳಿತಕ್ಕೆ ಬೇಸತ್ತ ಯಡೆಯೂರು ಗ್ರಾಮಸ್ಥರು ಈ ಮಠದ ಅಧಿಕಾರವನ್ನು ವಹಿಸಿಕೊಳ್ಳಬೇಕೆಂದು ೧೯೦೨ರ ಸುಮಾರಿಗೆ ಅಂದಿನ ಮೈಸೂರು ಮಹಾರಾಜರ ಸರಕಾರಕ್ಕೆ ಬರೆದ ಪತ್ರಗಳೂ, ೧೯೦೪ರ ಸುಮಾರಿಗೆ ಸರಕಾರ ವಹಿಸಿಕೊಂಡಿರುವುದಕ್ಕೆ ಮಠದ ಮಾಲಕರಾದ ಅಂದಿನ ಜಗದ್ಗುರುಗಳು ಪ್ರತಿಭಟಿಸಿ ಬರೆದ ಪತ್ರಗಳೂ, ಸರಕಾರ ವಹಿಸಿಕೊಂಡ ಬಳಿಕವೂ ಜಗದ್ಗುರುಗಳ ಮತ್ತು ಸ್ಥಳೀಯ ಸರಕಾರಿ ಅಧಿಕಾರಿಗಳ ನಡುವೆ ಜರುಗಿದ ಪತ್ರೋತ್ತರದ ದಾಖಲೆಗಳೂ ಗದುಗಿನ ಮಠದಲ್ಲಿವೆ.

ಹೀಗೆ ಯಡೆಯೂರಿನ ಮಠವನ್ನು ವಶಪಡಿಸಿಕೊಂಡ ಬಳಿಕವೂ ಮಹಾರಾಜರ ಸರಕಾರವು ಶ್ರೀಗಳ ಮತ್ತು ಶ್ರೀಕ್ಷೇತ್ರದ ಪರಸ್ಪರ ಸಂಬಂಧವನ್ನು ತಕ್ಕಮಟ್ಟಿಗೆ ಗೌರವಿಸುತ್ತ ಮುಂದುವರಿಸಿದ್ದಿತು. ಆದರೆ, ೧೯೭೪ರಲ್ಲಿ ಕರ್ನಾಟಕ ಸರಕಾರ ಇದೆಲ್ಲವನ್ನು ಗಮನಿಸದೆ, ಮಠವನ್ನು ದೇವಾಲಯವೆಂದು ಭ್ರಮಿಸಿ, ಯಡೆಯೂರು ಕ್ಷೇತ್ರವನ್ನು ಮುಜರಾಯಿ ಇಲಾಖೆಗೆ ಸೇರಿಸಿಕೊಂಡಿತು.

ಮುಜರಾಯಿ ಇಲಾಖೆಯು ಸಾರ್ವಜನಿಕ ಆಸ್ತಿಯಾಗಿರುವ ದೇವಾಲಯಗಳನ್ನು ವಶಪಡಿಸಿಕೊಳ್ಳಬಹುದೇ ಹೊರತು, ವೈಯಕ್ತಿಕ ಆಸ್ತಿಯಾಗಿರುವ ಮಠಗಳನ್ನಲ್ಲ. ಯಡೆಯೂರು ಕ್ಷೇತ್ರವು ಮೂಲತಃ ದೇವಾಲಯವಲ್ಲ, ಮಠ ; ಸಿದ್ಧಲಿಂಗೇಶ್ವರರ ಜೀವಂತ ಸಮಾಧಿಯನ್ನೊಳಗೊಂಡ ಮಠ. ಸಿದ್ಧಲಿಂಗ ಶಿವಯೋಗಿಗಳು ಸಮಾಧಿ ಪ್ರವೇಶಮಾಡಿದ ಸಂದರ್ಭ (೧೬ನೆಯ ಶತಮಾನ)ದಲ್ಲಿ ಬರೆಯಿಸಿದ ಅಲ್ಲಿಯ ಪ್ರಸಿದ್ಧ ಶಿಲಾಶಾಸನವು ಆ ಕ್ಷೇತ್ರವನ್ನು ಆರು ಸಲ ಮಠವೆಂದು ಕರೆದಿದೆಯೇ ಹೊರತು, ಒಮ್ಮೆಯೂ ದೇವಾಲಯವೆಂದು ಕರೆದಿಲ್ಲ. ಈ ಕ್ಷೇತ್ರವನ್ನು ಕುರಿತು ಹುಟ್ಟಿದ ೩-೪ ಕಾವ್ಯಗಳೂ ಇದನ್ನು ಮಠವೆಂದೇ ಕರೆದಿವೆ. ಹೀಗಿರುವಾಗ ಕರ್ನಾಟಕ ಸರಕಾರ ಲಿಂಗಾಯತ ಸಮಾಜವನ್ನು ಕಡೆಗಣಿಸಿ, ಅವರ ಈ ಮಠವನ್ನು ೧೯೭೪ರಲ್ಲಿ ವಶಪಡಿಸಿಕೊಂಡುದು ಯಾವ ನ್ಯಾಯ? ಈ ವಿಷಯದ ನಿಜಸ್ಥಿತಿಯ ಸ್ಪಷ್ಟನೆಗಾಗಿ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಇತ್ತೀಚೆ ಪ್ರಕಟಿಸಿರುವ "ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ದಾಖಲು ಸಾಹಿತ್ಯ" ಹೆಸರಿನ ಎರಡು ಸಂಪುಟ(೨೦೦೭, ೨೦೦೯)ಗಳಲ್ಲಿರುವ ೭ ಪತ್ರಗಳ ಮುಖ್ಯಭಾಗಗಳನ್ನು ಇಲ್ಲಿ ಕಾಲಕ್ರಮವಾಗಿ ಗಮನಿಸಬಹುದು.

ಪತ್ರ-೧ : ಯಡೆಯೂರಿನ ಕಾಳಶೆಟ್ಟಿ ಮೊದಲಾದ ಗ್ರಾಮಸ್ಥರು ಅರ್ಚಕರ ವಿರುದ್ಧ ಮೈಸೂರು ಸರಕಾರಕ್ಕೆ ಬರೆದ ಪತ್ರ (ಕ್ರಿ.ಶ. ೧೯೦೨).

"..... ಈ ಯಡೆಯೂರು ಗ್ರಾಮದಲ್ಲಿರುವ ಸಿದ್ಧಲಿಂಗೇಶ್ವರಸ್ವಾಮಿಯೆಂಬ ದೇವರ ದೇವಸ್ಥಾನದ ಹುಟ್ಟುವಳಿ ಸುಮಾರು ೧೫೦೦-೨೦೦೦ ವರೆವಿಗೂ ಯಿದಾಂತದನ್ನು ಈ ದೇವಸ್ಥಾನದ ಪೂಜಾರಿಗಳು ತಮ್ಮಗೆ ವುಪಯೋಗಿಸಿಕೊಳ್ಳುತ್ತಾ ದೇವರ ಕೆಲಸಗಳಿಗೂ ನಡೆಸದೆ, ದೇವರ ಸೇವೆಗೆ ಬರತಕ್ಕ ಭಕ್ತಾದಿಗಳಿಗೆ ಇಲ್ಲದ ತೊಂದರೆಗಳು ಉಂಟುಮಾಡುತ್ತಾ, ದೇವರ ಆಭರಣಗಳನ್ನು ಸ್ವಪ್ರಯೋಜನಕ್ಕಾಗಿ ಅಡವು ಹಾಕಿಕೊಂಡು ದೇವಸ್ಥಾನವನ್ನು ಹೀನಸ್ಥಿತಿಗೆ ತಂದು ಇರುವುದಲ್ಲದೆ, ಭಾರಿ ಬೆಲೆಗಳು ಬx x xರೆ ತಕ್ಕ ವಾಹನಗಳನ್ನು ಹಾಳುಮಾಡಿರುತ್ತಾರೆ. ಮತ್ತು ....ಕ್ಕೆ ಅವಕಾಶವಿಲ್ಲದಂತೆ ಸರಕಾರದವರು ಸ್ವಾಧೀನಪಡಿಸಿಕೊಳ್ಳಬೇಕು. ....**ರುಜು ಕಾಳಶೆಟ್ಟರು.** (ಇನ್ನೂ ಅನೇಕರ ರುಜುಗಳಿವೆ.)

ಈ ಪತ್ರ ಬರೆದ ಕಾಳಶೆಟ್ಟಿ ಮೊದಲಾದವರಿಗೆ ಸರಕಾರದಿಂದ ಉತ್ತರ ಬಂದಿದೆ (ಕ್ರಿ.ಶ.೧೯೦೪).

ಪತ್ರ-೨ : ಯಡೆಯೂರಿನ ನಾಗಸಂದ್ರ ಅಯ್ಯಪ್ಪಶೆಟ್ಟಿ ಮೊದಲಾದವರು ಅರ್ಚಕರ ವಿರುದ್ಧ ಮೈಸೂರು ಸರಕಾರಕ್ಕೆ ಬರೆದ ಪತ್ರ (೧೯೦೨).

".... ಈ ದೇವಸ್ಥಾನದ ಆಚಾರಿಗಳು ......ವುತ್ಪತ್ತಿ ಮೊಬಲಗುಗಳು ಹಂಚಿಕೆ ಮಾಡಿಕೊಂಡು ತಮ್ಮ ಸ್ವಂತಕ್ಕೆ ಉಪಭೋಗಿಸಿಕೊಳ್ಳುತ್ತಾ, ದೇವರ ಕೆಲ್ಸಾಗಳ್ನು ವೇಳೆಗೆ ಸರಿಯಾಗಿ ಮಾಡದೆ, ಒಬ್ಬರಿಗೊಬ್ಬರು ಶಂಮ್ಯಾಗಳು ಮಾಡಿಕೊಂಡು, ದೇವಸ್ಥಾನಗಳನ್ನು ಬಹಳ ಹೀನಸ್ಥಿತಿಗೆ ತಂದಿರುವುದಲ್ಲದೆ, ಭಕ್ತಾದಿಗಳು ದೇವರಿಗೋಸ್ಕರ ಮಾಡಿಸಿಕೊಟ್ಟಿರತಕ್ಕ ಬೆಳ್ಳಿ-ಬಂಗಾರದ ಆಭರಣಗಳ ಅಡುವು ಹಾಕಿ, ತನ್ಮೂಲಕ ಮೊಬಲಗು ತಂದು ....ಉಪಯೋಗಿಸಿಕೊಳ್ಳುತ್ತಾರೆ....ತಂದಾ ಸರ್ಕಾರದ ಮೇನೇಜಮೆಂಟಿಗೆ ತೆಗೆದುಕೊಂಡರೆ ಸರ್ಕಾರಕ್ಕೆ ಬಹಳ ಫಾಯಿದೆಯಿದೆ. ಪ್ರಜೆಗಳಿಗೆ ಸುಖವು ಸಹ ಆಗುತ್ತೆ..... **ನಾಗಸಂದ್ರದ ಅಯ್ಯಪ್ಪಶೆಟ್ಟರು.** (ಮೊದಲಾದವರ ಸಹಿಗಳಿವೆ)

ಈ ಪತ್ರ ಬರೆದ ಅಯ್ಯಪ್ಪಶೆಟ್ಟಿ ಮೊದಲಾದವರಿಗೆ ಸರಕಾರದಿಂದ ಉತ್ತರ ಬಂದಿದೆ (ಕ್ರಿ.ಶ.೧೯೦೩). ಈ ೨ ಪತ್ರಗಳನ್ನು ಆಧರಿಸಿ ಮೈಸೂರು ಸಂಸ್ಥಾನ ಇದೇ ಸುಮಾರಿಗೆ ಯಡೆಯೂರು ಮಠವನ್ನು ವಶಪಡಿಸಿಕೊಂಡಿದೆ. ಆಗ ಅಂದಿನ ಗದುಗಿನ ಜಗದ್ಗುರುಗಳು ಎರಡು ವರ್ಷಗಳ ಬಳಿಕ ಸರಕಾರಕ್ಕೆ ಪ್ರತಿಭಟಿಸಿ ಬರೆದ ಪತ್ರ ಹೀಗಿದೆ.

ಪತ್ರ-೩ : ಮೈಸೂರ ದಿವಾನ್‌ರಿಗೆ ಅಂದಿನ ಗದಗ ಜಗದ್ಗುರುಗಳು ಪ್ರತಿಭಟಿಸಿ ಬರೆದ ಪತ್ರ

"..... ಇತ್ತೀಚೆಗೆ ಸುಮಾರು ಎರಡು ವರ್ಷಗಳ ಹಿಂದೆ ಸದರ ಗದ್ದುಗೆಯು ಮತ್ತು ಆಸ್ತಿಯು ಸರಕಾರಕ್ಕೆ ಸೇರಿಸಲ್ಪಟ್ಟಿರುತ್ತದೆ. ಸದರ ಶಿದ್ದೇಶ್ವರಸ್ವಾಮಿಗಳ ಪಶ್ಚಾತ ಮಠವು ಮತ್ತು ಜಮೀನುಗಳು ಅವರ ಮೊದಲನೆ ವಾರಸಾದಾರ ಮತ್ತು ಪಟ್ಟಾಧಿಕಾರಿಗಳಾದಂಥ ...... ಬೋಳಬಸವೇಶ್ವರ ಸ್ವಾಮಿಗಳವರ ತಾಬಾಕ್ಕೆ ಬಂದವು. ಅಲ್ಲಿಂದಾ ವಂಶಾವಳಿಯು ಅಜಮಾಸ ಐದಾರುನೂರು ವರ್ಷಗಳ ಹಿಂದಿನ ಕಾಲದ ತನಕ ತೋಂಟದ ಸ್ವಾಮಿ ಹೆಸರಿಲೆ ಅಲ್ಲೆ ನಡೆಯುತ್ತಾ ಬಂತು.......

ಈಗಿನ ಅರ್ಜಿದಾರರು ಮೊದಲನೇ ಶಿದ್ದೇಶ್ವರ ಸ್ವಾಮಿಗಳಿಂದ ೧೬ನೆಯವರು ಇರುತ್ತಾರೆ. ಮತ್ತು ಈಗ ತೋರಿಸಿದ ಆಧಾರ ಮೇಲಿಂದ ಕಗ್ಗೇರಿ ಮತ್ತು ಯಡೆಯೂರಿನಲ್ಲಿ ಇರುವ ಮಠಮಾನ್ಯಗಳಿಗೆ ಹಕ್ಕುದಾರರು ಇರುತ್ತಾರೆ. ..... ಆದ್ದರಿಂದ ಈ ಎರಡೂ ಹಳ್ಳಿಗಳಲ್ಲಿ ಇರತಕ್ಕಂಥಾ ಗದ್ದಿಗೆಯೂ ಯಾವತ್ತೂ ಆಸ್ತಿಯೂ ಶ್ರೀ ಶಿದ್ಧೇಶ್ವರಸ್ವಾಮಿಗಳೇ ಮುಖ್ಯ ವಾರಸಾದಾರರೆಂದು ಉಪಭೋಗ ಮಾಡಲಿಕ್ಕೆ ಮತ್ತು ವಹಿವಾಟ ಮಾಡಲಿಕ್ಕೆ

ತಾಬಾ ಕೊಡಲ್ಪಡಬೇಕೆಂದು ಬೇಡಿಕೊಳ್ಳುತ್ತೇನೆ ಮತ್ತು ಸದರ ಸಂಗತಿಯನ್ನು ಹಳೆ ಗ್ರಂಥಗಳ ಆಧಾರದ ಮೇಲಿಂದ ಮತ್ತು ವಯೋವೃದ್ಧರ ತೋಂಡಿ ಪುರಾವೆಗಳ ಮೇಲಿಂದ ಶಿದ್ಧ ಮಾಡಿಕೊಡಲಿಕ್ಕೆ ತಯ್ಯಾರ ಇದ್ದೇನೆ. ......ಆದ್ದರಿಂದ ಸ್ವ ಆಸ್ತಿಯನ್ನು ಅರ್ಜಿದಾರನಿಗೆ ಪರತ್ತು ತಾಬಾ ಮಾಡಬೇಕೆಂದು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.".

ಪತ್ರ -೪ : ದಿವಾನ ಶ್ರೀ ಎಂ.ವಿಶ್ವೇಶ್ವರಯ್ಯನವರಿಗೆ ಅಂದಿನ ಗದಗ ಜಗದ್ಗುರುಗಳು ಬರೆದ ಪತ್ರ (ಕ್ರಿ.ಶ.೧೯೧೪ ಜನವರಿ ೧೫)

".... ಅರ್ಜಿದಾರರು ಗುರು ಶಿಷ್ಯ ಪರಂಪರೆಯೆಂಬ ವಂಶಾನುಕ್ರಮದಿಂದಾ ಮೇಲೆ ಹೇಳಿದ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳ ಸರಳ ವಂಶಸ್ಥರಿರುತ್ತಾರೆ."

ಪತ್ರ -೫ : ಯಡೆಯೂರಿನ ಶಾನುಭೋಗ ಶ್ರೀ ವರದೈಯ್ಯಂಗಾರ ಗದಗ ಜಗದ್ಗುರುಗಳಿಗೆ ಬರೆದ ಪತ್ರ (ಕ್ರಿ.ಶ. ೧೯೧೫)

"..... ಶ್ರೀ ತೋಂಟದಾರ್ಯಸ್ವಾಮಿ ಸದ್ಗುರುಗಳು ಗದಗ ದಿವ್ಯಸನ್ನಿಧಿಯಲ್ಲಿ.... ಶ್ಯಾನುಭೋಗ ವರದೈಯ್ಯಂಗಾರ ಮಾಡುವ ಬಿನ್ನಹಗಳು: ಮಹಾಸ್ವಾಮಿ, ತಮ್ಮ ಸಂಸ್ಥಾನದ ಕಡೆಯಿಂದ ಇಲ್ಲಿನ ರಥೋತ್ಸವಕ್ಕೆ.... ಮದತು ಮಾಡದಿದ್ದಲ್ಲಿ ..... ಚೆಂದವಲ್ಲಾ. ಮೇಲ್ಕಂಡ ಮಹಾಸಂಬಾರ (ಸಮಾರಂಭ)ಕ್ಕೆ ಸರಕಾರದಿಂದಾಗಲಿ ಫಂಡ್ಸ ವಗೈರೆ ಏರ್ಪಾಡಿಲ್ಲ..... ಸಂಸ್ಥಾನದ ಗೌರವಕ್ಕೆ ತಕ್ಕ ಹಾಗೇ ಮೌಲ್ಯವನ್ನು ಈ ಕೆಳಗಣ ವಿಳಾಸಕ್ಕೆ ಮನಿಆರ್ಡ್ರ ಮೂಲಕ ಕಳುಹಿಸಿಕೊಡಬೇಕು......ಇತಿ ವಿಶ್ವಾಸ ಪಾತ್ರನಾದ ಶ್ಯಾನುಭೋಗ ವರದೈಯ್ಯಂಗಾರ್

ಪತ್ರ -೬: ಗದಗ ಜಗದ್ಗುರುಗಳು ಕಳುಹಿಸಿದ ಹಣಕ್ಕೆ ಶ್ರೀ ವರದೈಯಂಗಾರ ರವಾನಿಸಿದ ರಸೀದಿ (ಕ್ರಿ.ಶ. ೧೯೧೮)

ಶ್ರೀಮದನಾದಿ ತೋಂಟದ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳವರ ಪೀಠದ ಮೇಲೆ ಪರಂಪರಾನುಗತ ಶ್ರೀಮಡ್ಡೊಂಬಳ ಮಹಾಸಂಸ್ಥಾನ ಮಠಾಧಿಷ್ಠಿತ ....ತೋಂಟದ ಸಿದ್ಧಲಿಂಗಾರ್ಯ ಮಹಾಸ್ವಾಮಿಗಳವರ ದಿವ್ಯಪಾದಸನ್ನಿಧಿಗೆ -....ಗದ್ದಿಗೆಯ ಸೇವಾ ಸತ್ಕಾರ ಮಾಡತಕ್ಕ ಯಡೆಯೂರ ಗ್ರಾಮದ ಸ್ಥಳಮಠದ ನಾವುಗಳು ಬರೆದುಕೊಟ್ಟ ರಶೀದಿಯೇನೆಂದರೆ : ಸದರಿ ಶ್ರೀಮದನಾದಿ ತೋಂಟದ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳವರ ಶಿವಯೋಗಸ್ಥಾನವಾದ ಮೂಲ ಕರ್ತೃಗದ್ದಿಗೆಯ ಅಧಿಕಾರಿಗಳಾದ ತಾವು, ಸದರಿ ಮಹಾಸ್ವಾಮಿಯ ಕರ್ತೃಗದ್ದಿಗೆಯ ಒಂದು ವರ್ಷದ ನೈವೇದ್ಯ ಮತ್ತು ನಂದಾದೀವಿಗೆಯ ಬಗ್ಗೆ ರೂ. (೨೦೦) ಎರಡು ನೂರು ರೂಪಾಯಿಗಳನ್ನು ..... ಸೆಂಗ್ಸನ್ ಮಾಡಿ, ಮೊಬಲಗು ನಮಗೆ ಪಾವತಿ ಮಾಡಿರುವ ಕಾರಣ..... ಒಂದು ವರ್ಷದ ಮಟ್ಟಿಗೆ ವಿನಿಯೋಗ ಮಾಡುತ್ತೇವೆಂಬುದಾಗಿ ಬರಕೊಟ್ಟ, ಹಣ ಸಂದ ರಸೀದಿ, ಸಹಿ, ತಾರೀಖು ೧೮ನೇ ನವಂಬರ ೧೯೧೮ನೆ ಯಿಸ್ವಿ.

ಪತ್ರ -೭ : ಕುಣಿಗಲ್ ಮಾಮಲೇದಾರರಿಗೆ ಅಂದಿನ ಗದಗ ಶ್ರೀಗಳು ಬರೆದ ಪತ್ರ(ಕ್ರಿ. ಶ. ೧೯೨೧ ಫೆಬ್ರುವರಿ ೯)

"ಯಡೆಯೂರ ತೋಂಟದ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳವರ ಗದ್ದುಗೆಗೆ ನಾವು ದರ ವರ್ಷ ನಂದಾದೀವಿಗೆ ನೈವೇದ್ಯದ ದಸೆಯಿಂದಾ ಕೊಡತಕ್ಕ ಎರಡುನೂರ ರೂಪಾಯಿ (೨೦೦)ನ್ನು ..... ಕಚೇರಿಗೆ ತಂದು ಹಾಜರ ಮಾಡಬೇಕೆಂದು ತಮ್ಮಿಂದ ತಿಳಿಸೋಣವಾಗಿದೆ. ಆದರೆ ಸದರ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳವರು ನಮ್ಮ ಸಂಸ್ಥಾನದ ಮೂಲ ಗುರುಗಳು ಇದ್ದು, ಸದರ ಮಹಾಸ್ವಾಮಿಗಳವರ ಪೀಠದ ಮೇಲೆ ಶಿಷ್ಯಪರಂಪರವಾಗಿ ಈಗಿನ ಮಹಾಸ್ವಾಮಿಗಳ ವರೆಗೂ ಅಧಿಕಾರಿಗಳಾಗುತ್ತ xxxxxx ಯಡೆಯೂರ ತೋಂಟದ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳವರ ಗದ್ದಿಗೆಗೆ ನಾವೇ ಮಾಲಕರಿದ್ದ ಕಾರಣ, ನಮ್ಮ ಮೂಲ

ಗುರುಸ್ಥಾನದ ವ್ಯವಸ್ಥಾ ಯೇನಾದದ್ದು ನಾವೇ ನೋಡಬೇಕಾಗಿದೆ. ಆದ್ದರಿಂದ ಈಗ ಮಹಾಸ್ವಾಮಿಗಳವರ ರಥಕ್ಕೆ ಆರು ಕಲ್ಲುಗಾಲಿಗಳನ್ನು ತುರುವಿಕೇರಿ ಮಲ್ಲಿಕಾರ್ಜುನಮೂರ್ತಿಗಳ ಮುಖಾಂತರವಾಗಿ ನಾವೇ ಮಾಡಿಸಿದ್ದೇವೆ. ಮತ್ತು ಸದರ ರಥಕ್ಕೆ ಯರಡಾವರ್ತಿ ಹೋರ್ತಿxಗಗ್ಗಳನ್ನು ನಾವೇ ಕಳಿಸಿದ್ದೇವೆ ಮತ್ತು ಸದರ ರಥದಲ್ಲಿ ಮಹಾಸ್ವಾಮಿಯನ್ನು ಮೂಹೂರ್ತ ಮಾಡಿಸಲಿಕ್ಕೆ ಅಲ್ಲಿ ಒಂದು ಕಟ್ಟಡ ಕಟ್ಟಿಸಲಿಕ್ಕೆ ಒಂದು ಸಾವಿರ ರೂಪಾಯಿಗಳನ್ನು (೧೦೦೦) ತುರುವಿಕೇರಿ ಮಲ್ಲಿಕಾರ್ಜುನಮೂರ್ತಿಗಳ ಕೈಯಲ್ಲಿ ನೊಣವಿನಕೇರಿ ಕಾಡಸಿದ್ದೇಶ್ವರಮಠದ ಕರಿಬಸವಸ್ವಾಮಿಗಳ ಮಾರಪ್ಪತ್ತು ಕೊಟ್ಟಿದ್ದೇವೆ. ...... ಮತ್ತು ಹೋದ ವರ್ಷ ಸದರ ರಥಕ್ಕೆ ಒಂದನೂರಾ ಐವತ್ತು ರೂಪಾಯಿಗಳನ್ನು (೧೫೦) ಖರ್ಚುಮಾಡಿ ಯಂಣಿ ಉಣಿಸಿದ್ದೇವೆ. ಈಗ ಯಿಷ್ಟು ಕೆಲಸಗಳು ನಮ್ಮಿಂದ ಆಗಿವೆ. ಮುಂದೆ ನಾವು ಮಾಡತಕ್ಕ ಕೆಲಸಗಳು ಅಂದರೆ ಯಡೆಯೂರು ಮಹಾಸ್ವಾಮಿಯ ಪೂಜಾ ವಿದ್ಯುಕ್ತವಾಗಿ ಜರುಗುವದರ ದಶೆಯಿಂದಾ ವೈದಿಕ ಸಂಸ್ಕೃತಪಾಠಶಾಲಾ ಸ್ಥಾಪನ ಮಾಡುವವರು ಯಿದ್ದೇವೆ ಮತ್ತು ಮಹಾಸ್ವಾಮಿಯ ಗದ್ದಿಗೆಯ ಪ್ರಾಕಾರ ವಗೈರೆ ನಾದುರಸ್ತ ಆದ್ದರಿಂದ ದುರಸ್ತ ಮಾಡಬೇಕಾಗಿದೆ ಮತ್ತು ಅಲ್ಲಿ ಕೆಲವು ಉಗ್ರಾಣ ವಗೈರೆ ಇಮಾರತುಗಳನ್ನು ಹಾಕಿಸತಕ್ಕ ಕೆಲಸಗಳು ಇರುತ್ತವೆ. ಆದ್ದರಿಂದ ಸದರ ಮಹಾಸ್ವಾಮಿಗಳ ಗದ್ದಿಗೆಯ ಉತ್ಪನ್ನವನ್ನು ಕೊಡಲಿಕ್ಕೆ ಹುಕುಮು ಆಗಬೇಕು. ಅಂದರೆ ಮುಂದೆ ನಾವು ಎಲ್ಲಾ ಸರಿಯಾಗಿ ವ್ಯವಸ್ಥಾ ಮಾಡಿಸುತ್ತೇವೆ."

***

ಇದೆಲ್ಲವನ್ನು ನೋಡಿದರೆ, (೧) ಯಡೆಯೂರು ಕ್ಷೇತ್ರದ ವಾರಸುದಾರರು ಗದುಗಿನ ಜಗದ್ಗುರುಗಳು. (೨) ೧೯೦೪ರ ಸುಮಾರಿಗೆ ಈ ಕ್ಷೇತ್ರವನ್ನು ಮೈಸೂರು ಮಹಾರಾಜರ ಸರಕಾರ ವಶಪಡಿಸಿಕೊಂಡರೂ, ೧೯೨೧ರ ವರೆಗೆ ಕ್ಷೇತ್ರದ ನಂದಾದೀವಿಗೆ ನೈವೇದ್ಯಗಳಿಗಾಗಿ ಗದುಗಿನ ಶ್ರೀಗಳಿಂದ ಕುಣಿಗಲ್ಲ ತಹಶೀಲದಾರರು ಪ್ರತಿವರ್ಷ ಇನ್ನೂರು ರೂಪಾಯಿ ತರಿಸಿಕೊಳ್ಳುತ್ತಿದ್ದರು. (೩) ಎಡೆಯೂರು ಕ್ಷೇತ್ರದ ಬೇಡಿಕೆ ಇಂದು ನಿನ್ನೆಯದಲ್ಲ, ಮೈಸೂರು ಮಹಾರಾಜರ ಕಾಲದಿಂದಲೂ ನಡೆದು ಬಂದಿದೆ. ಹೀಗಾಗಿ ಸಾರ್ವಜನಿಕ ಆಸ್ತಿಯಾಗಿರುವ ಗೋಕರ್ಣ ದೇವಾಲಯವನ್ನು ಯಾವುದೋ ಒಂದು ಮಠಕ್ಕೆ ನೀಡಿರುವಾಗ, ವೈಯಕ್ತಿಕ ಆಸ್ತಿಯಾಗಿರುವ ನಮ್ಮ ಮಠವನ್ನು ನಮಗೆ ಕೊಡಿರೆಂದು ಗದಗಿನ ಶ್ರೀಗಳು ಕೇಳುವುದು ನ್ಯಾಯಸಮ್ಮತವೆನಿಸುತ್ತದೆ.*

---

* ಮೇಲಿನ ೩, ೪, ೭, ನೆಯ ನಂಬರಿನ ಪತ್ರಗಳಿಗಾಗಿ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ದಾಖಲು ಸಾಹಿತ್ಯ ಸಂಪುಟ ೧ರ ೮೫, ೭೯, ೮೩ ನೆಯ ಪತ್ರಗಳನ್ನು ೧, ೨, ೫, ೬, ನೆಯ ಪತ್ರಗಳಿಗಾಗಿ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ದಾಖಲು ಸಂಪುಟ ೨ರ ೩, ೪, ೯, ೧೦ನೆಯ ಪತ್ರಗಳನ್ನು ನೋಡಿರಿ.

* ಈ ಪತ್ರಗಳಲ್ಲಿಯ x x x x ಈ ಗುರುತು ತ್ರುಟಿತ ಭಾಗವನ್ನು, ... ಈ ಗುರುತು ನಾವು ಕೈಬಿಟ್ಟ ಭಾಗವನ್ನು ಸೂಚಿಸುತ್ತವೆ.

ಆಕರ : ಮಾರ್ಗ ಸಂಪುಟ–೬

೫೨

ಅಮೇರಿಕ ಅಕ್ಕ ಸಮ್ಮೇಲನ

ಸ್ವಾಭಿಮಾನ ಕರ್ನಾಟಕ

ಎಲ್ಲರಿಗೂ ನಮಸ್ಕಾರ,

ಪ್ರವಾದಿ ಮಹಮ್ಮದ ಪೈಗಂಬರರ ಹೇಳಿಕೆಯೊಂದಿಗೆ ನನ್ನ ಮಾತನ್ನು ಆರಂಭಿಸುತ್ತೇನೆ. ಅದು: "ನಿನ್ನ ಹತ್ತಿರ ಆರು ಕಾಸುಗಳಿದ್ದರೆ ಮೂರು ಕಾಸು ಕೊಟ್ಟು ರೊಟ್ಟಿ ಖರೀದಿಸು, ಮೂರು ಕಾಸು ಕೊಟ್ಟು ಹೂವು ಖರೀದಿಸು." ಇಂದು ನಾವು ಆರೂ ಕಾಸು ಕೊಟ್ಟು ರೊಟ್ಟಿ ಖರೀದಿಸುವ "ಭೋಗಜೀವನ" ವ್ಯವಸ್ಥೆಯಲ್ಲಿದ್ದೇವೆ. ಇಂಥ ಭೌತಿಕ ಹಪಹಪಿಯ ಕಾಲಮಾನದಲ್ಲಿ, ಅದರಲ್ಲಿಯೂ 'ಭೋಗಭೂಮಿ' ಎನಿಸಿದ ಅಮೇರಿಕೆಯಲ್ಲಿದ್ದೂ 'ಮೂರು ಕಾಸು ಕೊಟ್ಟು ಹೂವು ಖರೀದಿಸು'ವ ರೀತಿಯಲ್ಲಿ ನೀವು 'ಕನ್ನಡ ಸಮ್ಮೇಳನ' ಜರುಗಿಸುತ್ತಿರುವಿರಿ. ಅಕ್ಕ ಸಂಸ್ಥೆಯ ಈ ಸಂಸ್ಕೃತಿ ಪ್ರೀತಿಯನ್ನು ಅಭಿನಂದಿಸುತ್ತೇನೆ.

ಈ ಸಂಸ್ಥೆಯನ್ನು ವೈಯಕ್ತಿಕ ಕಾರಣಕ್ಕಾಗಿಯೂ ಅಭಿನಂದಿಸುವುದು ನನ್ನ ಕರ್ತವ್ಯವಾಗಿದೆ. ಅದು: ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಸಂದರ್ಭದಲ್ಲಿ ನಾನು ೨ ಸಂಪುಟಗಳಲ್ಲಿ ಮಹಾಕವಿ ಕುವೆಂಪು ಅವರ ಸಮಗ್ರ ಕವನಗಳನ್ನು ಪ್ರಕಟಿಸಲು ನಿರ್ಧರಿಸಿದೆ. ಆಗ ಈ 'ಅಕ್ಕ' ಸಂಸ್ಥೆ ದೊಡ್ಡ ಮೊತ್ತದ ಆರ್ಥಿಕ ನೆರವು ನೀಡಿ ೨೦೦೦ ಪುಟಗಳ ಈ ಸಂಪುಟಗಳನ್ನು ಹೂಸ್ಟನ್‌ದಲ್ಲಿ ಜರುಗಿದ ಕನ್ನಡ ಸಮ್ಮೇಳನದಲ್ಲಿ ಬಿಡುಗಡೆ ಮಾಡಿತು. ಈ ಔದಾರ್ಯಕ್ಕಾಗಿ ನಿಮ್ಮೆಲ್ಲರಿಗೆ ಕೃತಜ್ಞನಾಗಿದ್ದೇನೆ. ಮತ್ತು ಪ್ರತಿ ವರ್ಷವೂ ಸಮ್ಮೇಳನದ ಶಾಶ್ವತ ನೆನಪಿಗಾಗಿ, ನೀವು ಇಂಥ ಯಾವುದೇ ಒಂದು ಮಹಾಕಾರ್ಯ ಮಾಡಬೇಕೆಂದು ಸೂಚಿಸುತ್ತೇನೆ.

ಭಾಷಣದ ವಿಷಯಕ್ಕೆ ಬರುವ ಮೊದಲು ಇನ್ನೂ ಒಂದು ಮಾತು. ನಾನು ೨೦೦೪ರಲ್ಲಿ ಕರ್ನಾಟಕ ಸಂಘಗಳ ಆಮಂತ್ರಣದ ಮೇರೆಗೆ ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್, ಸಿಂಗಾಪುರ

ದೇಶಗಳಿಗೆ ಭೆಟ್ಟಿಕೊಟ್ಟಿದ್ದೆನು. ಆಗ ವಿದೇಶೀಯ ಕನ್ನಡಿಗರ ಭೌತಿಕ ಬದುಕನ್ನು, ಸಾಂಸ್ಕೃತಿಕ ಆಸಕ್ತಿಯನ್ನು ಹತ್ತಿರದಿಂದ ನೋಡುವ ಅವಕಾಶ ಪ್ರಾಪ್ತವಾಯಿತು. ಆಗ ವಿಶ್ವದ ಎಲ್ಲ ಕಡೆಗೂ ಹಬ್ಬಿರುವ ಕನ್ನಡಿಗರಿಗೆ ಸಾಂಸ್ಕೃತಿಕ ನೆರವು ನೀಡುವುದರ ಸಲುವಾಗಿ ಕರ್ನಾಟಕ ಸರಕಾರವು 'ವಿದೇಶೀ ಕನ್ನಡಿಗರ ಸಂಪರ್ಕ ಪ್ರಾಧಿಕಾರ'ವನ್ನು ಅಸ್ತಿತ್ವಕ್ಕೆ ತರುವುದು ಅವಶ್ಯವೆಂಬ ವಿಚಾರ ನನ್ನಲ್ಲಿ ಮೂಡಿತು. ತಕ್ಷಣ ಅಲ್ಲಿಂದಲೇ ಅಂದಿನ ಮುಖ್ಯಮಂತ್ರಿಗಳಿಗೆ ಪತ್ರ ಬರೆದು "ಇಂದು ಸ್ಥಿರಸಮಾಜಕ್ಕೆ ಬದಲು ಚರಸಮಾಜ ಅಸ್ತಿತ್ವಕ್ಕೆ ಬಂದಿದೆ. ಇದರಿಂದಾಗಿ, ಒಂದು ಕರ್ನಾಟಕಕ್ಕೆ ಬದಲು ಜಗತ್ತಿನ ತುಂಬ ಅಲ್ಲಲ್ಲಿ ಅನೇಕ ಕರ್ನಾಟಕಗಳು ಅಸ್ತಿತ್ವಕ್ಕೆ ಬಂದಿದ್ದು, ಈಗ ನೀವು ಮೊದಲಿನಂತೆ ಒಂದು ಕರ್ನಾಟಕದ ಮುಖ್ಯಮಂತ್ರಿಯಲ್ಲ, ಈ ಅನೇಕ ಕರ್ನಾಟಕಗಳ ಮುಖ್ಯ ಮಂತ್ರಿಯಾಗಿದ್ದೀರಿ. ಕಾರಣ 'ಅನೇಕ ಕರ್ನಾಟಕ' ಗಳೆಂಬ ಹೊಸ ಪರಿಕಲ್ಪನೆಗೆ ಸ್ಪಂದಿಸುವ ರೀತಿಯಲ್ಲಿ ಮೇಲೆ ಸೂಚಿಸಿದ ಪ್ರಾಧಿಕಾರವನ್ನು ನೀವು ಅಸ್ತಿತ್ವಕ್ಕೆ ತರಬೇಕೆ"ಂದು ಸೂಚಿಸಿದ್ದೆನು. ನನ್ನ ಈ ಸೂಚನೆಯನ್ನು ಹಲವು ಸಭೆಗಳಲ್ಲಿ–ಬರೆಹಗಳಲ್ಲಿ ವ್ಯಕ್ತಪಡಿಸಿದ್ದೆನು. ಇದಕ್ಕೆ ಸ್ಪಂದಿಸುವ ರೀತಿಯಲ್ಲಿ ಸರಕಾರವೇನೋ ೨೦೦೮ರಲ್ಲಿ ಈ ಬಗೆ 'ವಿಶೇಷ ಘಟಕ' ವನ್ನು ಸ್ಥಾಪಿಸಿದೆಯೆಂದೂ, ಸಮನ್ವಯಾಧಿಕಾರಿಯಾಗಿ ವಿಧಾನಪರಿಷತ್ ಸದಸ್ಯರೊಬ್ಬರನ್ನು ನೇಮಿಸಿದೆಯೆಂದೂ ಪತ್ರಿಕೆಯಲ್ಲಿ ಓದಿದ್ದು, ಈ ಘಟಕ ಕ್ರಿಯಾಶೀಲವಾಗಬೇಕಿದೆ. ಆದುದರಿಂದ "ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಕವಿವಾಣಿಗೆ ಅನುಗುಣವಾಗಿ ಬೆಳೆಯಲು ಹೊರನಾಡು–ಹೊರದೇಶಗಳ ಕನ್ನಡಿಗರಿಗೆ ನೆರವಾಗಬೇಕೆಂದು, ಸರಕಾರಕ್ಕೆ ಈ ಸಮ್ಮೇಳನದ ಮೂಲಕ ಒತ್ತಾಯಿಸುತ್ತೇನೆ.

ಈಗ ನೇರವಾಗಿ ವಿಷಯಕ್ಕೆ ಬರುತ್ತೇನೆ. ಸಾಹಿತ್ಯವನ್ನು ಸೃಜನ–ಸೃಜನೇತರವೆಂದು ವರ್ಗೀಕರಿಸುವುದು ರೂಢಿಯಲ್ಲಿದೆ. ಇವು ಪರಸ್ಪರ ವಿರೋಧಿಗಳಲ್ಲ, ಪೂರಕಗಳು. ಇದೇ ರೀತಿ ಸೃಜನೇತರ ಶಾಖೆಗಳಾದ ವಿಮರ್ಶೆ–ಸಂಶೋಧನೆಗಳೂ ಪರಸ್ಪರ ವಿರೋಧಿಗಳಲ್ಲ, ಪೂರಕಗಳು. ನನ್ನ ದೃಷ್ಟಿಯಲ್ಲಿ "ಸಂಶೋಧನೆಯೆನ್ನುವುದು ವಿಶ್ಲೇಷಣಾತ್ಮಕ ವಿಮರ್ಶೆ, ವಿಮರ್ಶೆಯೆನ್ನುವುದು ವ್ಯಾಖ್ಯಾನಾತ್ಮಕ ಸಂಶೋಧನೆ". ಆಧುನಿಕ ಕನ್ನಡ ಸೃಜನಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ದಲಿತ– ಬಂಡಾಯವೆಂಬ ಹಂತಗಳಲ್ಲಿ ಬೆಳೆದಂತೆ, ೧೫೦ ವರ್ಷಗಳ ಇತಿಹಾಸವಿರುವ ಈ ಆಧುನಿಕ ಸಂಶೋಧನ ಸಾಹಿತ್ಯವೂ ಆಕರಶೋಧ, ಘಟನಾಶೋಧ, ಘಟನೆಯ ಹಿಂದಿರುವ ಕಾರಣ ಶೋಧ, ವರ್ತಮಾನದ ಮೇಲೆ ಅದರ ಪರಿಣಾಮಶೋಧ–ಹೀಗೆ ೪ ಘಟ್ಟಗಳಲ್ಲಿ ಬೆಳೆದು ಬಂದಿದೆ.

ಸಂಶೋಧಕನಾದ ನನಗೆ ಇತ್ತೀಚೆ ಕಾಡುತ್ತಲಿರುವ ಮುಖ್ಯಪ್ರಶ್ನೆಯೆಂದರೆ, ೬ನೆಯ ಶತಮಾನದ ಚಾಲುಕ್ಯ ಪುಲಿಕೇಶಿಯ ಕಾಲಕ್ಕೆ ಕರ್ನಾಟಕದ ಉತ್ತರಸೀಮೆ ನರ್ಮದೆಯಾಗಿದ್ದಿತು. ಮುಂದೆ ೩ ಶತಮಾನ ಗತಿಸುವಲ್ಲಿ, ಅಂದರೆ ೯ನೆಯ ಶತಮಾನದ ಕವಿರಾಜಮಾರ್ಗದ ಕಾಲಕ್ಕೆ 'ಕಾವೇರಿಯಿಂದಮಾ ಗೋದಾವರಿ' ವರೆಗೆ ಅದು ಕುಗ್ಗಿದ್ದಿತು. ಇಂದು ಬೀದರ ಜಿಲ್ಲೆಗೆ ಕುಸಿದಿದೆ. ಹೀಗೆ ಉದ್ದಕ್ಕೂ ಕರ್ನಾಟಕವು ತನ್ನ ಭೂಮಿಯನ್ನು ಎಡಬಲದ ಭಾಷಿಕರಿಗೆ ಏಕೆ ಬಿಟ್ಟುಕೊಡುತ್ತ ಬಂದಿತು? ಸಾಲದುದಕ್ಕೆ ಆ ಅನ್ಯಭಾಷಿಕರು ವಲಸಿಗರಾಗಿ ದೊಡ್ಡ ಪ್ರಮಾಣದಲ್ಲಿ ಒಳಗೆ ನುಗ್ಗಲು ಏಕೆ

ಅವಕಾಶ ಮಾಡಿಕೊಟ್ಟಿತು? ಇನ್ನೂ ಸಾಲದುದಕ್ಕೆ ಒಳಗೆ ಬಂದ ಅವರು ಕನ್ನಡಿಗರಾಗದೆ, ನಮಗೆ ಏಕೆ ತಲೆ ಭಾರವಾದರು? ಅಂದರೆ ಅದೇ ಕವಿರಾಜಮಾರ್ಗ ಹೇಳುವ "ಸುಭಟರ್ಕಳ್, ಕವಿಗಳ್, ಸುಪ್ರಭುಗಳ್, ಚೆಲ್ವರ್ಕಳ್, ಗುಣಿಗಳ್, ಅಭಿಮಾನಿಗಳ್, ಅತ್ಯುಗ್ರರ್, ಗಭೀರಚಿತ್ತರ್, ವಿವೇಕಿಗಳ್" ಎನಿಸಿಕೊಂಡ ಕನ್ನಡಿಗರು ಬರುಬರುತ್ತ ಏಕೆ ದುರ್ಬಲರಾದರು? ಏಕೆ ಅಭಿಮಾನಶೂನ್ಯರಾದರು? ಇದಕ್ಕೆ ಸಂಶೋಧಕನಾದ ನಾನು ಕಂಡುಕೊಂಡ 'ಒಂದು' ಕಾರಣ, ನಾವು ಇತಿಹಾಸವನ್ನು ಮರೆಯುತ್ತ ಪುರಾಣವನ್ನು ಬರೆಯುತ್ತ ಬಂದುದು. ಅಂದರೆ ಘಟಿತ ಭವ್ಯಪರಂಪರೆಯನ್ನು ಸಾಹಿತ್ಯಗೊಳಿಸುವುದಕ್ಕಿಂತ ಕಲ್ಪಿತ ಭ್ರಮಾತ್ಮಕ ಪುರಾಣವನ್ನು ಸಾಹಿತ್ಯಗೊಳಿಸುತ್ತ, ಪ್ರಸಾರಗೊಳಿಸುತ್ತ ಬಂದುದು. ಮತ್ತು ಆಧುನಿಕ ಕಾಲದಲ್ಲಿಯೂ ಘಟಿತ (Fact) ವಸ್ತುವಿಗಿಂತ, ಕಲ್ಪಿತ (Fiction) ವಸ್ತುವನ್ನೊಳಗೊಂಡ ಕಥೆ ಕಾದಂಬರಿಗಳಿಗೇ ಹೆಚ್ಚು ಮಹತ್ವಕೊಟ್ಟುದು.

ನನ್ನ ದೃಷ್ಟಿಯಲ್ಲಿ, ಅಮೂರ್ತ ಮಾದರಿ(Abstract Model)ಗಳೆನಿಸುವ ಕಟ್ಟುಕಥೆ (Fiction)ಯ ಕಥೆ-ಕಾದಂಬರಿಗಳಿಗಿಂತ ಮೂರ್ತ ಮಾದರಿ(Concrete)ಗಳೆನಿಸುವ ಘಟಿತ ಕಥೆ (Fact)ಯ ಇತಿಹಾಸ, ಇತಿಹಾಸಸಾಹಿತ್ಯಗಳು ವರ್ತಮಾನವನ್ನು ನೇರವಾಗಿ ಪ್ರಭಾವಿಸುತ್ತವೆ. ಉದಾ: ದಕ್ಷಿಣಮಹಾರಾಷ್ಟ್ರದ ಎಲ್ಲ ಊರುಗಳ ಹೆಸರು ಕನ್ನಡವಾಗಿವೆ. ಕರ್ನಾಟಕದ ಎಲ್ಲ ಶಾಸನ ಸಂಖ್ಯೆ ೨೫,೦೦೦. ಮಹಾರಾಷ್ಟ್ರದ ಶಾಸನ ಸಂಖ್ಯೆ ಕೇವಲ ೧,೦೦೦. ಈ ೧,೦೦೦ದಲ್ಲಿ ಕನ್ನಡ ೫೦೦, ಪ್ರಾಕೃತ೨೦೦, ಸಂಸ್ಕೃತ೨೦೦, ಮರಾಠಿ ಕೇವಲ ೧೦೦. ಮರಾಠಿ ಸಂತ ಏಕನಾಥನು "ನಮೋ ಕಾನಡಿ ಭಾಷಾ" ಎಂದು ಕನ್ನಡ ಭಾಷೆಗೆ ಭಕ್ತಿ-ಗೌರವ ತೋರಿದ್ದಾನೆ. ಶಿವಾಜಿ ಕರ್ನಾಟಕದ ಹೊಯ್ಸಳ (>ಭೋಸಲೆ) ವಂಶದವ. ಬೆಳವಡಿ ಮಲ್ಲಮ್ಮ ಶಿವಾಜಿಯ ಸೈನ್ಯವನ್ನು ಸೋಲಿಸಿದಳು. ಕೆಳದಿ ಚೆನ್ನಮ್ಮ ಶಿವಾಜಿಯ ಮಗ ರಾಜಾರಾಮನನ್ನು ಔರಂಗಜೇಬನಿಂದ ರಕ್ಷಿಸಿದಳು. ಇಂಥ ಸತ್ಯಗಳನ್ನು ಕನ್ನಡಿಗರು ಮರಾಠಿಗರೂ ಮತ್ತೆ ಮತ್ತೆ ಬರೆಯುತ್ತ, ಮರಾಠರಿಗೆ ಹೇಳುತ್ತ ಬಂದಿದ್ದರೆ, ಕರ್ನಾಟಕ-ಮಹಾರಾಷ್ಟ್ರ ಸಮಸ್ಯೆ ಇಷ್ಟು ಉಲ್ಬಣಗೊಳ್ಳುತ್ತಿರಲಿಲ್ಲ. ಹೀಗೆ ನಮ್ಮ ಹಿರಿಯರು ವರ್ತಮಾನದ ಮೇಲೆ ಪ್ರಭಾವಿಸುವ ಇತಿಹಾಸವನ್ನು ಕುರಿತು ಸಾಹಿತ್ಯ ಸೃಷ್ಟಿಸಲಿಲ್ಲವಾಗಿ "ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು" ಎಂಬ ಅಂಬೇಡ್ಕರ ಮಾತು ಕನ್ನಡಿಗರ ವಿಷಯದಲ್ಲಿ ನಿಜವಾಗುತ್ತ ಬಂದಿತು. ಇನ್ನು ಮೇಲಾದರೂ ನಾವು ಇತಿಹಾಸವನ್ನು ದೊಡ್ಡ ಪ್ರಮಾಣದಲ್ಲಿ ಶೋಧಿಸಬೇಕಾಗಿದೆ, ಇತಿಹಾಸವನ್ನು ದೊಡ್ಡ ಪ್ರಮಾಣದಲ್ಲಿ ಸೃಷ್ಟಿಸಬೇಕಾಗಿದೆ.

ಹೀಗೆ ಉಪೇಕ್ಷೆ ಮಾಡುತ್ತ ಬಂದ ಇತಿಹಾಸವನ್ನು ಶೋಧಿಸುವ ಜೊತೆಗೆ, ಈ ವರೆಗೆ ಬರೆಯುತ್ತ ಬಂದ ಸ್ವದೇಶಪ್ರೀತಿಯ, ಸ್ವಜನಪಕ್ಷಪಾತೀಯ ಸುಳ್ಳು ಇತಿಹಾಸವನ್ನು ಸರಿಪಡಿಸುವುದೂ ಸಂಶೋಧಕರ ಕೆಲಸವಾಗಿದೆ. ಉದಾ: ಭಾರತ ಸ್ವಾತಂತ್ರ್ಯ ಚಳುವಳಿಯನ್ನು ಉದ್ದೀಪನಗೊಳಿಸುವ ಸದುದ್ದೇಶದಿಂದ ನಮ್ಮ ಪರಂಪರೆಯನ್ನು ವಿಮರ್ಶಾತ್ಮಕವಾಗಿ ದಾಖಲಿಸುವುದಕ್ಕಿಂತ, ವೈಭವೀಕರಿಸುವ ಕಾರ್ಯವನ್ನು ಮಾಡಿದೆವು. ಇದರಿಂದ ನಿಜ ಇತಿಹಾಸಕ್ಕೆ ಬದಲು, ಕೆಲವೊಮ್ಮೆ ಹುಸಿಪ್ರತಿಷ್ಠೆಯ ಸುಳ್ಳು ಇತಿಹಾಸವೂ ನಮ್ಮಲ್ಲಿ ಬೆಳೆದು ಬಂದಿತು.

ಸ್ವಜನಪಕ್ಷಪಾತೀಯ ಸುಳ್ಳು ಇತಿಹಾಸಕ್ಕೆ, ವಿಜಯನಗರದ ಕೃಷ್ಣದೇವರಾಯನು ಕರ್ನಾಟಕಪರ ಸಾಮ್ರಾಟನಾಗಿದ್ದನೆಂದು ವರ್ಣಿಸುತ್ತ ಬಂದುದನ್ನು ಉದಾಹರಣೆಯಾಗಿ ಕೊಡಬಹುದು. ಏಕೆಂದರೆ,

ಕನ್ನಡ ಅರಸನಾದರೂ ಇವನು ತೆಲುಗಿನಲ್ಲಿಯೇ ಏಕೆ ಕಾವ್ಯ ಬರೆದ? "ದೇಶ ಭಾಷೆಗಳಲ್ಲಿ ತೆಲುಗು ಲೇಸು" ಎಂದು ಏಕೆ ಹೇಳಿದ? ಅಷ್ಟದಿಗ್ಗಜಗಳೆಂಬ ಹೆಸರಿನಲ್ಲಿ ಎಂಟು ಜನ ತೆಲುಗು ಕವಿಗಳಿಗೇ ಏಕೆ ಆಶ್ರಯ ನೀಡಿದ? ತೆಲುಗು ಕವಿ ಅಲ್ಲಾಸಾನಿ ಪೆದ್ದಣ್ಣನ ಕಾಲಿಗೆ ತಾನೇ ಕೈಯ್ಯಾರೆ ಚಿನ್ನದ ಕಡಗವನ್ನೇಕೆ ತೊಡಿಸಿದ? ಈ ತೆಲಗುಪ್ರೀತಿ ಸ್ಥಳೀಯ ಕನ್ನಡ ವಿದ್ವಾಂಸರ ಮೇಲೆ ಯಾವ ಪರಿಣಾಮ ಬೀರಿರಬಹುದು? ಒಟ್ಟಾರೆ, ಇದು ಭಾಷಿಕವಾಗಿ ಅವನ ಯಾವ ನಿಲವನ್ನು ಸೂಚಿಸುತ್ತದೆ? ಎರಡನೆಯದಾಗಿ, ತಾನು ವಿಜಯನಗರ ಸಾಮ್ರಾಜ್ಯದ ಕುಲದೇವತೆಯಾದ ವಿರೂಪಾಕ್ಷನ ಸನ್ನಿಧಿಯಲ್ಲಿ ಆಳುತ್ತಲಿದ್ದರೂ ದೂರದ ತೆಲುಗುನಾಡಿನ ತಿರುಪತಿಯ ವೆಂಕಟೇಶ್ವರನ ಎದುರು, ಪತ್ನಿಯರ ಸಮೇತ ಕೈಮುಗಿದ ತನ್ನ ಆಳೆತ್ತರದ ವಿಗ್ರಹವನ್ನೇಕೆ ನಿಲ್ಲಿಸಿದ? ಹಂಪಿಯ ವಿರೂಪಾಕ್ಷನ ಶೈವ ಪರಿಸರದಲ್ಲಿ ಮೊದಲ ಬಾರಿಗೆ ವೈಷ್ಣವ-ಶ್ರೀ ವೈಷ್ಣವ ಬಾಲಕೃಷ್ಣ, ಉಗ್ರನರಸಿಂಹ, ಹಜಾರರಾಮ, ವಿಜಯವಿಠಲ ಇತ್ಯಾದಿ ದೇವಾಲಯಗಳನ್ನೇಕೆ ಕಟ್ಟಿಸಿದ? ಹಿಂದಿನ ಯಾವ ಅರಸರೂ ಮಾಡದ ಇಂಥ ಕೆಲಸ ಸ್ಥಳೀಯ ಶೈವರ ಮೇಲೆ ಧಾರ್ಮಿಕ ಯಾವ ಪರಿಣಾಮ ಬೀರಿರಬಹುದು? ಇದಲ್ಲದೆ ತಂದೆ ನರಸನಾಯಕನಿಗೆ ಮೂರು ಜನ ಖಾಸಾ ಮಕ್ಕಳಿದ್ದರೂ, ಬಹುಶಃ ಖಾಸಾ ಮಗನಲ್ಲದ ಈ ಕೃಷ್ಣದೇವರಾಯ ಪಟ್ಟಕ್ಕೆ ಬಂದುದರ ಹಿಂದಿರುವ ಪಿತೂರಿಗಳಾವವು? ಇದರಿಂದಾಗಿರಬಹುದಾದ ರಾಜಕೀಯ ದುಷ್ಪರಿಣಾಮವೇನು? ಈ ಎಲ್ಲ ಭಾಷಿಕ, ಧಾರ್ಮಿಕ, ರಾಜಕೀಯ ಪ್ರಶ್ನೆಗಳಿಗೆ ಉತ್ತರ ಹುಡುಕುವುದೆಂದರೆ, ಈಗ ಪ್ರಚಾರದಲ್ಲಿರುವ ಕೃಷ್ಣದೇವರಾಯನ ಇತಿಹಾಸವನ್ನೇ ಪಲ್ಲಟಗೊಳಿಸುವುದಾಗಿದೆ. ಅವನು ಕನ್ನಡಪರ, ಕನ್ನಡಿಗರ ಪರ ಸಾಮ್ರಾಟನೇ? ಎಂದು ಕೇಳುವುದಾಗಿದೆ. "ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಗೊಳಿಸಿಕೊಳ್ಳುವವರೊಂದಿಗೆ ನಡೆಸುವ ಹೋರಾಟವೂ ಆಗಿದೆ" ಎಂಬ ಮಾತು ಇಲ್ಲಿ ನೆನಪಾಗುತ್ತದೆ. ಹೀಗೆ ಕೆಲವೊಮ್ಮೆ ಸುಳ್ಳು ಇತಿಹಾಸ ಬರೆದು ಪ್ರಚಾರ ಮಾಡಿದ ಸಂಶೋಧಕರಾದ ನಾವು ಮಾಡಿದ ಇನ್ನೊಂದು ತಪ್ಪು: ಶೋಧವನ್ನು ಸೃಜನ ಸಾಹಿತಿಗಳಂತೆ ಜನರಿಗೆ ತಲುಪಿಸುವ ಕೆಲಸ ಮಾಡದಿರುವುದು. ಅದು ಕೇವಲ ವಿದ್ವಾಂಸರ ವಲಯದಲ್ಲಿಯೇ ಸುತ್ತಾಡಿತು. ಬಂಗಾಲದ ಬಲ್ಲಾಳರು, ಹಿಮಾಚಲ ಪ್ರದೇಶದ ಸೇನರು, ನೇಪಾಳದ ಮಲ್ಲರು, ಮಿಥಿಲೆಯ ಕರ್ನಾಟರು, ಗುಜರಾಥದ ಚಾಲುಕ್ಯರು, ಆಂಧ್ರಪ್ರದೇಶದ ವೆಂಗಿಚಾಲುಕ್ಯರು ಕನ್ನಡಿಗರೆಂಬುದು ಎಷ್ಟು ಜನರಿಗೆ ಗೊತ್ತು? ಇಂದಿನ ಆಂಧ್ರಪ್ರದೇಶದಲ್ಲಿ ಸುಮಾರು ೨,೦೦೦ ಕನ್ನಡ ಶಾಸನಗಳಿವೆ ಎಂಬುದು ಯಾರಿಗೆ ತಿಳಿದಿದೆ? ರಾಷ್ಟ್ರಕೂಟ ೩ನೆಯ ಕೃಷ್ಣನು ೨೦ ವರ್ಷ ತಮಿಳುನಾಡಿನ ಬಹುಭಾಗವನ್ನು ಕಂಚಿ ರಾಜಧಾನಿಯಿಂದ ಆಳಿದುದಾಗಲೀ, ಇವನ ಕನ್ನಡ ಶಾಸನ ಮಧ್ಯಪ್ರದೇಶದ ಉತ್ತರದಲ್ಲಿರುವ ಜುರಾ ಗ್ರಾಮದಲ್ಲಿರುವುದಾಗಲೀ ಎಷ್ಟು ಜನರಿಗೆ ಗೊತ್ತು? ಹೀಗೆ ಗೊತ್ತು ಮಾಡದ ಕಾರಣ ಇತಿಹಾಸ ಒಂದು ಕಡೆ ಉಳಿಯಿತು, ಕನ್ನಡ ಜನ ಒಂದು ಕಡೆ ಉಳಿದರು. ಬೋಗಿಗಳ ಕೊಂಡಿಕಳಚಿಕೊಂಡು ಮುಂದುವರಿದ ರೈಲು ಎಂಜಿನ್‌ದಂತಾದರು. ಇದನ್ನು ತಪ್ಪಿಸುವ ರೀತಿಯಲ್ಲಿ ಇತಿಹಾಸದ ನಿರಂತರತೆಯನ್ನು ವರ್ತಮಾನಕ್ಕೆ ಬೆಸೆದುಕೊಂಡಿದ್ದರೆ, ಕನ್ನಡಿಗರ ಸ್ವಾಭಿಮಾನ ಬತ್ತುತ್ತಿರಲಿಲ್ಲ. ನನ್ನ ದೃಷ್ಟಿಯಲ್ಲಿ ಸ್ವಾಭಿಮಾನವೆನ್ನುವುದು ವಿವೇಕಪೂರ್ಣವಾಗಿ ಭಾವೋದ್ರೇಕವಾಗಿದೆ. ಇನ್ನು ಮೇಲಾದರೂ ಸಾಮಾನ್ಯರಿಗೂ ತಿಳಿಯುವ ರೀತಿಯಲ್ಲಿ, ತಿಳಿಯುವ ಭಾಷೆಯಲ್ಲಿ ಬರೆದು,

ಅವರಿಗೆ ನಮ್ಮ ಪರಂಪರೆಯನ್ನು ತಲುಪಿಸಿ, ಈ ಉದ್ರೇಕವನ್ನು ಉಳಿಸಿ–ಬೆಳಸಬೇಕಾಗಿದೆ. ಹೀಗೆ ಮಾಡಿದ ತಪ್ಪುಗಳಿಂದಾಗಿ, ಪ್ರಾಚೀನಕಾಲದಂತೆ ಆಧುನಿಕ ಕಾಲದಲ್ಲಿಯೂ ಇತಿಹಾಸ, ಇತಿಹಾಸಸಾಹಿತ್ಯ ಹಿಂದೆ ಬಿದ್ದು ಕನ್ನಡಿಗರಿಗೆ ಸಾಹಿತ್ಯವೆನ್ನುವುದು ತಮ್ಮ ಪರಂಪರೆಯನ್ನು ಮುಂದುವರುಯುವ "ಒಂದು ಪ್ರೇರಣೆ"ಯಾಗಿ ಪರಿಣಮಿಸಲಿಲ್ಲ. ಹೀಗಾಗಿ ಇಂದು ನಾವು ಇತಿಹಾಸವನ್ನು–ಸಾಹಿತ್ಯೀಕೃತ ಇತಿಹಾಸವನ್ನು ವಿಪುಲಪ್ರಮಾಣದಲ್ಲಿ ಬರೆದು, ಅದನ್ನು ಜನಮುಖಿಮಾಡುವ ಮೂಲಕ ಕನ್ನಡಿಗರಲ್ಲಿ ನಮ್ಮತನದ ಪ್ರಜ್ಞೆಯನ್ನು ನಿರಂತರ ಜಾಗೃತವಾಗಿಡಬೇಕಾಗಿದೆ.

ಇದಕ್ಕೆ ಅವಶ್ಯವಾದುದು ನಿಜ ಇತಿಹಾಸದ ಶೋಧ, ರಚನೆ. Past is perfect ಎಂಬ ಮಾತೊಂದಿದೆ. ಗತಕಾಲವು ಅಚಲವಾದುದು. ಅದನ್ನು ಯಾರೂ ಬದಲಿಸಲಾರರು. ಅಲ್ಲಲ್ಲಿ ಮರೆಯಾಗಿರುವ ಈ perfect ಸಂಗತಿಗಳನ್ನು ತಕ್ಕ ಮಟ್ಟಿಗೆ ಮೂಲರೂಪದಲ್ಲಿ ಶೋಧಿಸುವುದು ಸಂಶೋಧಕನ ಕರ್ತವ್ಯವಾಗಿದೆ. ಈ ಗತ perfect ಅಭಿಮಾನದ್ದಿರಬಹುದು, ಅವಮಾನದ್ದಿರಬಹುದು. ಅಭಿಮಾನರೂಪದ್ದು ನಮ್ಮಲ್ಲಿ ಸ್ವಾಭಿಮಾನ ಮುಂದುವರಿಯುವಂತೆ ಮಾಡುತ್ತದೆ. ಅವಮಾನ ರೂಪದ್ದು ಅಂಥ ತಪ್ಪು ಮತ್ತೆ ಮಾಡದಂತೆ ಎಚ್ಚರಿಸುತ್ತದೆ. ಆದುದರಿಂದ ಇದ್ದುದನ್ನು ಇದ್ದಂತೆ ದಾಖಲಿಸುವುದು ಸಂಶೋಧಕನ ಕರ್ತವ್ಯವಾಗಿದೆ.

ಇತಿಹಾಸ ಹುಡುಕುವುದು ಮನುಷ್ಯನ ಸಹಜ ಪ್ರವೃತ್ತಿ (Instinct). ಅದನ್ನು ಹುಡುಕಿಕೊಳ್ಳದ ವ್ಯಕ್ತಿ, ಸಮಾಜ ಜಗತ್ತಿನಲ್ಲಿ ಇಲ್ಲವೆಂದೇ ಹೇಳಬೇಕು. ಇಂಥ ಕೆಲಸಕ್ಕೆ ಕೈಹಾಕಿದ ಫಲವಾಗಿ ಮೊದಮೊದಲು ಉತ್ತರ ಕರ್ನಾಟಕದಲ್ಲಿ ಸಂಸ್ಕೃತಿಶೋಧ, ದಕ್ಷಿಣ ಕರ್ನಾಟಕದಲ್ಲಿ ಚರಿತ್ರೆ ಶೋಧ–ಹೀಗೆ ಎರಡು ಬಗೆಯ ಶೋಧಮಾದರಿಗಳು ಹುಟ್ಟಿದವು. ಇವುಗಳನ್ನು ಧಾರವಾಡ ಮಾದರಿ, ಮೈಸೂರು ಮಾದರಿ ಎಂದು ನಾನು ಕರೆದಿದ್ದೇನೆ. ಈ ಮಾದರಿಗಳು ಆಕಾರಗೊಳ್ಳಲು ಕಾರಣ, ಮೈಸೂರಿನವರು ವಿದೇಶಿಯ ಬ್ರಿಟಿಶರ ನೆಲೆಯಾಗಿದ್ದ ಮದ್ರಾಸ್ ಪ್ರಭಾವಕ್ಕೆ ಒಳಗಾದುದು, ಧಾರವಾಡದವರು ದೇಶೀ ಪೇಶ್ವೆಯರ ನೆಲೆಯಾಗಿದ್ದ ಪುಣೆ ಪ್ರಭಾವಕ್ಕೆ ಒಳಗಾದುದು. ಮುಂದೆ ಧಾರವಾಡದವರು ಮೈಸೂರಿನವರೇ ಶ್ರೇಷ್ಠವೆಂಬ ವ್ಯಸನಕ್ಕೆ ಒಳಗಾಗಿ, ತಮ್ಮ ಸಾಂಸ್ಕೃತಿಕ ಶೋಧ ಕೈಬಿಟ್ಟು ಅವರ ಚಾರಿತ್ರಿಕ ಶೋಧವನ್ನೇ ಅನುಸರಿಸಿದರು. ಇದರಿಂದಾಗಿ ಧಾರವಾಡದ ಸಂಸ್ಕೃತಿ ಶೋಧಕರಾದ ಶಂ.ಬಾ.ಜೋಶಿ ಮೊದಲಾದವರು ಅನುಯಾಯಿಗಳಿಲ್ಲದ ನೇತಾರರಂತೆ ಏಕಾಂಗಿಯಾದರು. ಇಂದು ಪರಸ್ಪರ ಒಡನಾಟ ಬೆಳೆದು, ಎರಡೂ ಪ್ರದೇಶದವರು ಚಾರಿತ್ರಿಕ–ಸಾಂಸ್ಕೃತಿಕ ಶೋಧ ಕಾರ್ಯ ಮುಂದುವರಿಸಿದ್ದಾರೆ.

ಸಂಶೋಧನೆಯೆನ್ನುವುದು ಗತಕಾಲದ ಪ್ರಶ್ನೆಗಳಿಗೆ ಉತ್ತರ ಹುಡುಕುವುದಾದರೂ ಅದು ಹೆಚ್ಚಿನದಾಗಿ ವರ್ತಮಾನದ ಪ್ರಶ್ನೆಗಳಿಗೂ ಉತ್ತರಿಸಬೇಕು. ಕೇವಲ ಗತಕಾಲದ ಪ್ರಶ್ನೆಗಳಿಗೆ ಉತ್ತರಿಸುವುದು ``Past is Past'' ಧೋರಣೆಯುಳ್ಳದ್ದಾಗಿದೆ. ಹೆಚ್ಚಿನದಾಗಿ ವರ್ತಮಾನದ ಪ್ರಶ್ನೆಗಳಿಗೂ ಉತ್ತರಿಸುವುದು ``Past is present''ಧೋರಣೆಯದಾಗಿದೆ. ಇವುಗಳಲ್ಲಿ ಒಂದನ್ನು 'ಸ್ಥಗಿತ ಸಂಶೋಧನೆ'ಯೆಂದೂ, ಇನ್ನೊಂದನ್ನು 'ಚಲನಶೀಲ ಸಂಶೋಧನೆ'ಯೆಂದೂ ಕರೆಯಬಹುದಾಗಿದೆ. ಚಲನಶೀಲ ಸಂಶೋಧನೆಯಲ್ಲಿ ಕಳೆದು ಹೋದ 'ಘಟನೆ' ಅಥವಾ

‘ಕಾರ್ಯ’ದೊಂದಿಗೆ ಅದರ ಹಿಂದಿರುವ ‘ಕಾರಣ’ ಮತ್ತು ಅದರಿಂದ ಮುಂದಿನ ಜೀವನದ ಮೇಲಾದ ‘ಪರಿಣಾಮ’ಗಳನ್ನೂ ಶೋಧಿಸುವುದು ಜರುಗುತ್ತದೆ. ಇಂಥ ಕಾರಣ-ಕಾರ್ಯ-ಪರಿಣಾಮಗಳೆಂಬ ಮೂರು ಮೈಗಳುಳ್ಳದು ‘ಪೂರ್ಣಶೋಧ’ ವಾಗಿದ್ದು, ಇಲ್ಲಿಯ ಕಾರಣ, ಪರಿಣಾಮಗಳೆಂಬ ಎರಡು ಮೈಗಳುಳ್ಳದು ‘ಸೃಜನಶೀಲಶೋಧ’ವೆನಿಸುತ್ತವೆ. ಏಕೆಂದರೆ ಕವಿಯ ಕಲ್ಪನೆಯಂತೆಯೇ ಸೃಜನಶೀಲಶೋಧದಲ್ಲಿ ಸಂಶೋಧಕನ ತರ್ಕ ಕೆಲಸ ಮಾಡುತ್ತದೆ.

ಶೋಧ ಯಾವುದೇ ರೂಪದ್ದಿರಲಿ, ಅದು ಒಮ್ಮೆಲೇ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗುವುದೆಂದು ಹೇಳುವಂತಿಲ್ಲ. ಅವರವರಿಗೆ ಲಭ್ಯವಾದ ಆಕರಸಾಮಗ್ರಿ, ಅವರವರ ವಿದ್ವತ್ತಿನ ನಿಲವು ಇತ್ಯಾದಿ ಕಾರಣಗಳಿಂದಾಗಿ, ಅದು ಕ್ರಮೇಣ ಬೆಳಕಿಗೆ ಬರಬಹುದಾಗಿದೆ. ಇದನ್ನು ಗಮನಿಸಿಯೇ ನಾನು “ಸಂಶೋಧನೆಯೆನ್ನುವುದು ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ” ಎಂದು ಹಿಂದೊಮ್ಮೆ ಹೇಳಿದ್ದೇನೆ. ಹೀಗೆ ನಿರಂತರ ಕ್ರಿಯೆಯಾಗಿರುವ ಸಂಶೋಧನೆಯೆನ್ನುವುದು ಲಭ್ಯ ಆಧಾರಸಾಮಗ್ರಿಯನ್ನವಲಂಬಿಸಿರುತ್ತದೆ. ಮುಂದಿನ ದಿನಗಳಲ್ಲಿ ಲಭ್ಯವಾದ ಹೊಸ ಬಗೆಯ ಆಧಾರ ಸಾಮಗ್ರಿಗಳಿಂದಾಗಿ ಈ ಮೊದಲಿನ ಸಂಶೋಧಕನೊಬ್ಬನ ಸಂಶೋಧನೆ ತಪ್ಪೆನಿಸಬಹುದು. ಬದಲಾದರೆ ಅದನ್ನು ತಪ್ಪುಯೆಂದು ಕರೆಯಬೇಕೇ ಹೊರತು, ಸುಳ್ಳುಯೆಂದು ಕರೆಯಬಾರದು. ಹೀಗಾಗಿ ನಿಜವಾದ ಸಂಶೋಧಕನು “ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ” ಎಂದು ನಾವು ಭಾವಿಸಬೇಕಾಗುತ್ತದೆ.

ಕೊನೆಯದಾಗಿ, ಸಂಶೋಧನೆಯೆನ್ನುವುದು ಸಾಮಾನ್ಯರಿಗೆ ನಿಲುಕದ ಶೈಕ್ಷಣಿಕ ಶಿಸ್ತು. ಆದರೆ ಸಂಶೋಧನೆಯ ವಿಷಯಗಳು ನಿಲುಕದಷ್ಟು ದೂರವಾದವುಗಳಲ್ಲ. ಅವು ನಮ್ಮ ಎಡಬಲದಲ್ಲಿಯೇ ಬೇಕಾದಷ್ಟು ಬಿದ್ದಿರುತ್ತವೆ. ನಮ್ಮ ಮಾತಿನಲ್ಲಿ, ಜರುಗಿದ ಘಟನೆ-ಸಂಪ್ರದಾಯಗಳಲ್ಲಿ ಅದು ಮರೆಯಾಗಿ ನಿಂತಿರುತ್ತದೆ. “ದೇವರು ದಿಂಡರು” ಎಂಬಲ್ಲಿಯ ದಿಂಡರು ಯಾರು? ನಮ್ಮ ರಾಜ್ಯದ ಹೆಸರು ಕರ್ನಾಟಕ, ನಮ್ಮ ಹಳೆಯ ರಾಜಧಾನಿಯ ಹೆಸರು ಮೈಸೂರು, ಹೊಸ ರಾಜಧಾನಿಯ ಹೆಸರು ಬೆಂಗಳೂರು. ಇವುಗಳ ಅರ್ಥವೇನು? ಹೋಗಲಿ, ನಮ್ಮ ನಿಮ್ಮ ಹೆಸರು, ಅಡ್ಡಹೆಸರು, ಊರಿನ ಹೆಸರು ಇವುಗಳ ಅರ್ಥವೇನು? ದಕ್ಷಿಣ ಕರ್ನಾಟಕದ ಸಂಶೋಧಕ ಡಾ. ಎಂ. ಚಿದಾನಂದಮೂರ್ತಿ, ಉತ್ತರ ಕರ್ನಾಟಕದ ಸಂಶೋಧಕ ಎಂ. ಎಂ. ಕಲಬುರ್ಗಿ. ಅವರು ತಮ್ಮ ಮನೆತನದ ಹೆಸರನ್ನು ‘ಎಂ’ ಎಂದು ಸಣ್ಣದು ಮಾಡಿ ತಮ್ಮ ವ್ಯಕ್ತಿ ಹೆಸರನ್ನು ಪ್ರಧಾನಗೊಳಿಸಿದರೆ ಇದಕ್ಕೆ ವಿರುದ್ಧವೆಂಬಂತೆ ನಾನು ನನ್ನ ವ್ಯಕ್ತಿ ಹೆಸರನ್ನು ‘ಎಂ’ ಎಂದು ಸಣ್ಣದು ಮಾಡಿ, ನನ್ನ ಕುಟುಂಬದ ಹೆಸರನ್ನು ದೊಡ್ಡದು ಮಾಡಿದ್ದೇನೆ. ಇದು, ಮೈಸೂರಿನವರು ವ್ಯಕ್ತಿವಾದಿ(ವ್ಯಷ್ಟಿ)ಮನೋಧರ್ಮದವರು, ಧಾರವಾಡದವರು ಕುಟುಂಬವಾದಿ(ಸಮಷ್ಟಿ) ಮನೋಧರ್ಮದವರೆಂದು ಧ್ವನಿಸುತ್ತದೆ. ವಿಜಾಪುರ ಜಿಲ್ಲೆಯವರು ಮಾತಿನಲ್ಲಿ ಬಳಸುವ ‘ಹೋಗಿ ಕೇಸಿ ಬಂದೆ’. ‘ಹೋಗಿ ಕೇರಿ ಬಂದೆ’ ಎಂಬಲ್ಲಿಯ ಕೇಸಿ-ಕೇರಿಗಳ ಅರ್ಥವೇನು? ‘ಸಮಗಾರ ದೇವರಿಗೆ ಮಚ್ಚಿಪೆಟ್ಟು’ ಈ ಗಾದೆಮಾತಿಗೆ, ‘ನಿನ್ನ ಸೆರಗ ಹರಿಯಲಿ’ ಎಂಬ ಹೆಂಗಸರ ಬೈಗುಳಕ್ಕೆ ಅರ್ಥವೇನು? ಭೈರವನ ಲಾಂಛನ ಬೇಟೆಯ ನಾಯಿ, ಶಿವನ ಲಾಂಛನ ಕೃಷಿಯ ಎತ್ತು, ವಿಷ್ಣುವಿನ ಲಾಂಛನ ಎರಗುವ ಗರುಡ. ಇವು ಬೇಟೆಸಂಸ್ಕೃತಿ, ಕೃಷಿಸಂಸ್ಕೃತಿ, ಯುದ್ಧಸಂಸ್ಕೃತಿ ಎಂಬ

ಮಾನವಸಂಸ್ಕೃತಿಯ ವಿಕಾಸದ ಹಂತಗಳನ್ನು ಸೂಚಿಸುವುದಿಲ್ಲವೆ? ಮಲ್ಲಯ್ಯ-ಮುದಿಮಲ್ಲಯ್ಯ, ಸಂಗಯ್ಯ-ಮುದಿಸಂಗಯ್ಯ, ವೀರಯ್ಯ-ಮುದಿವೀರಯ್ಯ ಎಂಬ ಜೋಡು ಹೆಸರುಗಳು ಹಳೆಯ ದೇವರು, ಹೊಸ ದೇವರೆಂಬ ದೇವತೆಯ ಪಲ್ಲಟದತ್ತ ಬೆರಳು ನೀಡುವುದಿಲ್ಲವೆ?

ಹೀಗೆ ಸಂಶೋಧನೆ ಮಾಡಬೇಕೆನ್ನುವವರಿಗೆ ಅವರ ಎಡಬಲದಲ್ಲಿಯೇ ವಿಪುಲ ಸಾಮಗ್ರಿ ಬಿದ್ದುಕೊಂಡಿರುತ್ತದೆಂದು ಹೇಳಬಹುದು. ಇದನ್ನು ಗಮನಿಸಿ, ಸಾಹಿತಿಗಳಂತೆ ಸಾಮಾನ್ಯರೂ ಸಂಶೋಧನದೃಷ್ಟಿ ಬೆಳೆಸಿಕೊಳ್ಳಬೇಕೆಂದೂ, ಈ ದೃಷ್ಟಿಯಿಂದಾಗಿ ಅವರಲ್ಲಿ ಪರಂಪರೆಯ ಪ್ರಜ್ಞೆ ಜಾಗೃತವಾಗುವದೆಂದೂ, ಇಂಥ ಜಾಗೃತಿ ಮಾತ್ರ "ಸ್ವಾಭಿಮಾನ ಕರ್ನಾಟಕ" ವನ್ನು ಕಟ್ಟಬಲ್ಲುದೆಂದೂ ಸೂಚಿಸಬಯಸುತ್ತೇನೆ.

ಆಕರ : ಮಾರ್ಗ ಸಂಪುಟ-೭

■■

೫೩

ಕುವೆಂಪು ಪ್ರಥಮ ಜನ್ಮಶತಮಾನೋತ್ಸವ

ಕುವೆಂಪು : ಆಶಯ, ಆಕೃತಿ ಅಭಿವ್ಯಕ್ತಿ

೧

ವಿದ್ಯಾಗುರು ಸಮಾನರಾದ ಡಾ. ದೇಜಗೌ ಅವರೇ,

ಮಾನ್ಯರಾದ ಶ್ರೀ ವೀರಪ್ಪ ಮೊಯ್ಲಿ ಅವರೇ, ಕುಲಪತಿ ಡಾ. ಶಶಿಧರ ಪ್ರಸಾದ ಅವರೇ, ಸಭಿಕರೇ,

ರಾಷ್ಟ್ರಕವಿ ಕುವೆಂಪು ಅವರಿಗೆ ಸಂಬಂಧಪಟ್ಟಂತೆ ನನ್ನ ಜೀವನದಲ್ಲಿ ಸಂಭವಿಸಿದ ಸ್ಮರಣೀಯ ಘಟನೆಗಳು ಎರಡು. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಸಂದರ್ಭದಲ್ಲಿ ಅವರ ಎಲ್ಲ ೩೩ ಕವನ ಸಂಕಲನಗಳನ್ನು "ಕುವೆಂಪು ಸಮಗ್ರ ಸಂಪುಟ" ಹೆಸರಿನಿಂದ ಪ್ರಕಟಿಸಿದುದು ಒಂದು ಘಟನೆಯಾದರೆ, ಅವರ ಈ ಪ್ರಥಮ ಜನ್ಮಶತಮಾನೋತ್ಸವದಲ್ಲಿ ಭಾಗವಹಿಸುತ್ತಿರುವುದು ಇನ್ನೊಂದು ಘಟನೆಯಾಗಿದೆ.

ಕುವೆಂಪು ಮಹಾವೃಕ್ಷ ಬೇರೂರಿದುದು ಕುಪ್ಪಳ್ಳಿಯಲ್ಲಿ, ಫಲ ಬಿಟ್ಟುದು ಮೈಸೂರಿನಲ್ಲಿ. ಅದರಲ್ಲಿಯೂ ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿ. ಇಂಥ ಅರ್ಥಪೂರ್ಣ ಪರಿಸರದಲ್ಲಿ ಜರುಗುತ್ತಲಿರುವ ಈ ಸಮಾರಂಭದಲ್ಲಿ ಭಾಗವಹಿಸುತ್ತಿರುವುದು ನನಗೆ ಇನ್ನೂ ಸ್ಮರಣೀಯ ಘಟನೆಯೆನಿಸಿದೆ. ಕನ್ನಡದ ಗೌರವವನ್ನು ಎತ್ತರಿಸಿದ ಸಾಹಿತಿಗಳಲ್ಲಿ ಕುವೆಂಪು ಅಗ್ರಮಾನ್ಯರು. ಬಿಡಿಸಿ ಹೇಳುವುದಾದರೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಕನ್ನಡ ಕವಿ. ಜ್ಞಾನಪೀಠ ಪ್ರಶಸ್ತಿ, ಕರ್ನಾಟಕ ರತ್ನಪ್ರಶಸ್ತಿ, ಪಂಪ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ ಪಡೆದ ಮೊದಲ ಕನ್ನಡ ಕವಿ. ಹಾಗೂ ರಾಷ್ಟ್ರಕವಿಗೌರವ ಪಡೆದ ಮೊದಲ ಕವಿ, ಬಹುಶಃ ಕೊನೆಯ ಕವಿ. ಇದೆಲ್ಲಕ್ಕೆ ಮಿಗಿಲೆಂಬಂತೆ ತಮ್ಮ ದೈತ್ಯ ದೈವೀ ಪ್ರತಿಭೆಯಿಂದ ಸೃಷ್ಟಿಸಿ ನಮಗೆ ಬಿಟ್ಟು ಹೋದ ಸಾಹಿತ್ಯಿಕ ಆಸ್ತಿ ತುಂಬ ದೊಡ್ಡದು. ಹೀಗಾಗಿ ಇವರ ವಿಷಯದಲ್ಲಿ ಕನ್ನಡಿಗರು ಎಷ್ಟೇ ಸ್ಮಾರಕ ನಿರ್ಮಿಸಿದರೂ

ಎಷ್ಟೇ ಪ್ರಶಸ್ತಿ ಸ್ಥಾಪಿಸಿದರೂ ಕಡಿಮೆ ಎಂದೇ ಹೇಳಬೇಕು. ಯಾವುದೇ ದೊಡ್ಡ ಕವಿ ಅನ್ಯ ಸಾಹಿತ್ಯದ ಪ್ರಭಾವಕ್ಕೆ ಎಷ್ಟೇ ಒಳಗಾಗಿದ್ದರೂ ಅವನ ತಾಯಿಬೇರು ಪರಂಪರೆಯಲ್ಲಿರುತ್ತದೆ. ಕನ್ನಡ ಸಾಹಿತ್ಯಕ್ಕೆ ಸಾವಿರ ವರ್ಷಗಳ ಪರಂಪರೆಯಿದೆ. ಅದು ತುಂಬ ಶ್ರೀಮಂತವೂ ಆಗಿದೆ. ಈ ಪರಂಪರೆಯಲ್ಲಿ ಪ್ರಯೋಗಗಳಿವೆ, ಪ್ರಕಾರಗಳಿವೆ. ಪ್ರತಿಷ್ಠಿತ ಮಹಾಕಾವ್ಯಗಳಿವೆ. ಕುವೆಂಪು ಇವುಗಳಲ್ಲಿ ಯಾವ ಆಶಯ, ಯಾವ ಆಕೃತಿ, ಯಾವ ಅಭಿವ್ಯಕ್ತಿಯ ವಾರಸುದಾರ? ವಾರಸುದಾರನಾಗಿದ್ದರೂ ಯಾವ ಅರ್ಥಗಳಲ್ಲಿ ಅವುಗಳಿಂದ ಭಿನ್ನ? ಈ ಪ್ರಶ್ನೆಗಳಿಗೆ ನಾವು ಉತ್ತರ ಹುಡುಕಬೇಕಾಗಿದೆ. ಈ ಹುಡುಕುವಿಕೆಯನ್ನು ಆದಿ ಕವಿ ಪಂಪನಿಂದಲೇ ಆರಂಭಿಸಬಹುದಾಗಿದೆ. ಆಶಯ ದೃಷ್ಟಿಯಿಂದ ಪಂಪನಲ್ಲಿ ಎರಡು ಕವಲುಗಳಿವೆ. ಒಂದು ಲೌಕಿಕ, ಇನ್ನೊಂದು ಆಗಮಿಕ. ಲೌಕಿಕ ಎಂಬುದು ಧರ್ಮ, ಅರ್ಥ, ಕಾಮವೆಂಬ ಮೂರು ಪುರುಷಾರ್ಥಗಳನ್ನುಳ್ಳುದು, ಆಗಮಿಕವೆಂಬುದು ಮೋಕ್ಷವನ್ನು ಒಳಗೊಂಡು ನಾಲ್ಕು ಪುರುಷಾರ್ಥಗಳನ್ನುಳ್ಳುದು. ಭಾವನೆಗಳ ಉದ್ರೇಕವೇ ರಸ. ಲೌಕಿಕವು ಎಂಟು ಭಾವನೆಗಳನ್ನು ಉದ್ರೇಕಿಸಿ "ಆಹ್ಲಾದ"ವನ್ನುಂಟು ಮಾಡುತ್ತದೆ. ಆಗಮಿಕವು ಶಾಂತವೆಂಬ ಒಂಬತ್ತನೆಯ ರಸ ಸ್ಪರ್ಶದಿಂದ ಉದ್ರಿತಗೊಂಡ ರಸಗಳನ್ನು ಉಪಶಮನಗೊಳಿಸಿ ಆನಂದವನ್ನುಂಟು ಮಾಡುತ್ತವೆ. ಕುವೆಂಪು ಕಾವ್ಯ ತತ್ತ್ವ ಎಂಟು ರಸಗಳು ಶಾಂತರಸದ ನಿಯಂತ್ರಣದಲ್ಲಿರಬೇಕು. ಅಂದರೆ ಲೌಕಿಕವು ಕೊನೆಯಲ್ಲಿ ಆಗಮಿಕವಾಗಬೇಕೆಂಬುದಾಗಿದೆ. ಅವರೇ "ಬದುಕಿನ ಗುರಿ ಶಾಂತಿ......ಸಾಹಿತ್ಯದ ಕೊನೆಯ ಗುರಿಯೂ ಶಾಂತರಸಾಸ್ವಾದನೆಯೇ" ಎಂದೂ "ಹೋಮರ್ ನಿನ್ನ ಕಲೆ ಪಿರಿದಾದೊಡಂ ನಿನ್ನ ಕಥೆ ಪಿರಿದಲ್ತು" ಎಂದೂ ಹೇಳಿದುದನ್ನು ಇಲ್ಲಿ ನೆನೆಯಬಹುದು. ಒಟ್ಟಾರೆ, ಕುವೆಂಪು ಅವರು ನಮ್ಮ ಆದಿ ಕವಿಯ ಲೌಕಿಕ ಕಾವ್ಯವಾದ ಪಂಪಭಾರತದ ವಾರಸುದಾರರಲ್ಲ ಆಗಮಿಕ ಕಾವ್ಯದ ಆದಿಪುರಾಣದ ವಾರಸುದಾರರು.

ಹೀಗಿದ್ದೂ ಪಂಪನ ಆಗಮಿಕದಿಂದ ಕುವೆಂಪು ಆಗಮಿಕ ಒಂದಿಷ್ಟು ಭಿನ್ನವಾಗಿದೆಯೆಂದೇ ಹೇಳಬೇಕು. ಪಂಪ ಜೈನ ಕವಿ. ಆ ಧರ್ಮದಲ್ಲಿ ಆತ್ಮವಿದೆ, ದೇವರಿಲ್ಲ. ಹೀಗಾಗಿ ಅವನದು ದೇವರಿಲ್ಲದ ಆಗಮಿಕ. ಕುವೆಂಪು ಅವರದು ದೇವರನ್ನೊಳಗೊಂಡ ಆಗಮಿಕ. ಪಂಪ ತನ್ನ ಯಾವುದೇ ಕಾವ್ಯದಲ್ಲಿ ದೇವರನ್ನು ಉಪಮೆಯಾಗಿ ತರದಿರುವುದು ಈ ಕಾರಣಕ್ಕಾಗಿ. ಉದಾ: ಅವನು ಸೂರ್ಯೋದಯವನ್ನು "ತಳತಳನೆ ನೇಸರ್ಮೂಡಿದುದು ಬಕಂಗೆಮಿಳ್ತು ಮೂಡುವ ತೆರದಿಂ" ಎಂದು ಅದೈವಿಕ ನೆಲೆಯಲ್ಲಿ ವರ್ಣಿಸಿದರೆ ಕುವೆಂಪು "ಸೂರ್ಯೋದಯ, ಚಂದ್ರೋದಯ ದೇವರ ದಯ ಕಾಣೋ" ಎಂದು ದೈವಿಕ ನೆಲೆಗೆ ಒಯ್ಯುತ್ತಾರೆ.

ಈ ತಾತ್ವಿಕತೆಯ ಪರಮಾವಧಿ ನಿದರ್ಶನ ಅವರ ಶ್ರೀ ರಾಮಾಯಣ ದರ್ಶನ. ದೈವಿಕತೆಯೆಂದರೆ ಮಾನವಿಕತೆಯೆಂಬ ವಿಶಿಷ್ಟ ದರ್ಶನವನ್ನು ಅಲ್ಲಿ ಕಾಣುತ್ತೇವೆ. ಅಂದರೆ ವಾಲ್ಮೀಕಿ ರಾಮಾಯಣ ಎಷ್ಟೇ ಉತ್ಕೃಷ್ಟವಾಗಿದ್ದರೂ ಅದು ವೈದಿಕ ಧರ್ಮನಿಷ್ಠ, ನಾಗಚಂದ್ರನದು ಜೈನಧರ್ಮನಿಷ್ಠ, ಕುವೆಂಪು ಅವರದು ಧರ್ಮನಿರಪೇಕ್ಷ ನಿಷ್ಠ. ವಾಲ್ಮೀಕಿ, ನಾಗಚಂದ್ರ ಕೃತಿ ಧಾರ್ಮಿಕ ಆವರಣ ರೀತಿಯವು, ಕುವೆಂಪು ಅವರದು ಧಾರ್ಮಿಕ ಅನಾವರಣ ರೀತಿಯದು. ಮಾನವಧರ್ಮ ರೀತಿಯದು. ಇಲ್ಲಿ ದೈವತ್ವದ ವಿಸ್ತರಣೆ ಕಂಡುಬರುತ್ತದೆ. ಇದನ್ನೇ ನಾವು ಕುವೆಂಪು ಅವರ "ಅನಿಕೇತನ ಪ್ರಜ್ಞೆ "ಎಂದು ಕರೆಯಬಹುದು.

ಹೀಗೆ ಕುವೆಂಪು ಕಾವ್ಯ ಸಾಮಾನ್ಯವಾಗಿ ೮ ರಸಗಳಿಗೆ ನಿಲ್ಲದೆ ೯ ರಸಗಳ "ದೈವಿಕ" ಗತಿಗೆ ವಿಸ್ತರಿಸಿದರೆ, ಅವರ ನಾಟಕ, ಪ್ರಬಂಧಗಳು ಪ್ರಧಾನವಾಗಿ ವೈಚಾರಿಕ ನೆಲೆಯಲ್ಲಿ ಸಂಚರಿಸುತ್ತವೆ. ಈ ನಾಟಕಗಳಲ್ಲಿ 'ಶೂದ್ರ ತಪಸ್ವಿ' ರಾಮಾಯಣದ, 'ಬೆರಳ್ಗೆ ಕೊರಳ್' ಮಹಾಭಾರತದ ಒಂದೊಂದು ಸನ್ನಿವೇಶವನ್ನು ವಿಘಟನಗೊಳಿಸಿದ ರಚನೆಗಳಾಗಿವೆ. 'ಜಲಗಾರ'ವಂತೂ ನೇರವಾಗಿ ವೈಜ್ಞಾನಿಕ ಪ್ರಜ್ಞೆಯಿಂದ ತುಂಬಿತುಳುಕುವ ಕೃತಿಯಾಗಿದೆ. ಕವಿಯ ಪರಮೋದ್ದೇಶ ಕಲೆಗಾಗಿ ಕಲೆ ಅಲ್ಲ, ಜೀವನ ಕಲೆಗಾಗಿ ಕಲೆ ಎಂಬುದಕ್ಕೆ ಈ ನಾಟಕಗಳು ನಿದರ್ಶನವೆನಿಸಿವೆ.

ಈ ವೈಚಾರಿಕತೆಯನ್ನು ಕಲೆಯ ಆವರಣವಿಲ್ಲದೆ ವ್ಯಕ್ತಪಡಿಸುತ್ತವೆ, ಅವರ ವಿಚಾರ ಕ್ರಾಂತಿಗೆ ಆಹ್ವಾನವು, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿರಿ ಹೆಸರಿನ ಪ್ರಬಂಧ ಸಂಕಲನಗಳು. ಇಲ್ಲೆಲ್ಲ ಸತ್ಯಗಳನ್ನು ವ್ಯಕ್ತಿಪಡಿಸಿದ ಧೀರವಾಣಿ ಉದ್ದಕ್ಕೂ ಕೇಳಿಸುತ್ತದೆ.

ಇನ್ನೊಂದು ಬಗೆಯ ವೈಚಾರಿಕತೆಯನ್ನು ಅವರ ಕಾವ್ಯಮೀಮಾಂಸೆ, ಕಾವ್ಯವಿಮರ್ಶೆಗೆ ಸಂಬಂಧಪಟ್ಟ ಲೇಖನಗಳಲ್ಲಿ ಕಾಣುತ್ತೇವೆ. ಇದನ್ನು "ಚಿಂತನ ಪರತೆ" ಎಂದು ಕರೆಯಬಹುದು. ಮಹೋನ್ನತಿ ದರ್ಶನ ವಿಮರ್ಶೆ ಮತ್ತು ಸರೋವರದ ಸಿರಿಗನ್ನಡಿಯಲ್ಲಿ, ದ್ರೌಪದಿಯ ಶ್ರೀಮುಡಿ ಇತ್ಯಾದಿಗಳೂ ಇದಕ್ಕೆ ನಿದರ್ಶನವೆನಿಸಿವೆ.

ಹೀಗೆ ಕವನಗಳಲ್ಲಿ ದೈವಿಕ ಭಾವುಕತೆ, ನಾಟಕ ಪ್ರಬಂಧಗಳಲ್ಲಿ ವೈಚಾರಿಕ ಚಿಂತನ ಪರತೆಗಳನ್ನೊಳಗೊಂಡಿರುವುದರಿಂದ ಕುವೆಂಪು ಅವರ ಒಳಗೆ ಪರಮಹಂಸರೂ ಇದ್ದಾರೆ, ವಿವೇಕಾನಂದರೂ ಇದ್ದಾರೆ ಎನಿಸುತ್ತದೆ.

ದೈವಿಕ ಬಾವುಕತೆ, ವೈಚಾರಿಕ ಚಿಂತನಪರತೆಗಳಲ್ಲದೆ ಕುವೆಂಪು ಅವರ ಬರವಣಿಗೆಯ ಇನ್ನೊಂದು ಸಾಂಸ್ಕೃತಿಕ ನೆಲೆ ಇದಕ್ಕೆ ಇವರ ಕಾದಂಬರಿ ಮತ್ತು ಜೀವನ ಚರಿತ್ರೆ, ಆತ್ಮ ಚರಿತ್ರೆಗಳು ನಿದರ್ಶನವೆನಿಸಿವೆ.

ಇವರ ಕಾದಂಬರಿಗಳು ಸಂಕ್ರಮಣ ಕಾಲದ ಮಲೆನಾಡಿನ ಜೀವನವನ್ನು ಚಿತ್ರಿಸುತ್ತವೆ. ವೈದಿಕ-ಶೂದ್ರ, ಸಂಘರ್ಷ, ಹಿಂದೂ-ಕ್ರಿಶ್ಚಿಯನ್ ಸಂಗಮ ಇವುಗಳೊಂದಿಗೆ ಪರಂಪರೆ-ಪ್ರಗತಿಗಳ ಒಂದು ಸ್ಪಷ್ಟ ಚಿತ್ರ ಇತ್ಯಾದಿಗಳನ್ನು ಇಲ್ಲಿ ಕಾಣಬಹುದಾಗಿದೆ.ಇವರ ಎರಡೂ ರಚನೆಗಳನ್ನು "ಸಾಂಸ್ಕೃತಿಕ ಕಾದಂಬರಿ" ಎಂದು ಕರೆಯಬೇಕಾಗುತ್ತದೆ. "ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ" ಎಂಬ ಪ್ರಜ್ಞೆ ನಿರಂತರ ಎಚ್ಚರವಾಗಿರುವುದರಿಂದ ಸಾಂಸ್ಕೃತಿಕ ಸ್ವರೂಪ ಇಲ್ಲಿ ಉದ್ದಕ್ಕೂ ಮೂಡಿಬಂದಿದೆ.

ಜೀವನ ಚರಿತ್ರೆ-ಆತ್ಮಚರಿತ್ರೆಗಳನ್ನು ಈ ಸಾಂಸ್ಕೃತಿಕ ಪ್ರಕಾರದಲ್ಲಿಯೇ ಪರಿಭಾವಿಸಬಹುದು. ವಿವೇಕಾನಂದ, ಪರಮಹಂಸರ ಜೀವನ ಚರಿತ್ರೆಗಳು ಕೇವಲ ವ್ಯಕ್ತಿ ಜೀವನ ಕಥೆಗಳಲ್ಲ. ಅವನ್ನು ಒಳಗೊಂಡಂತೆ ಪರಿಸರದ ಜೀವನ ಕಥನಗಳಾಗಿ ಮೈವೆತ್ತಿವೆ. ಇದೇ ರೀತಿ "ನೆನಪಿನ ದೋಣಿಯಲಿ" ಒಂದು ವಿಶಿಷ್ಟ ಆತ್ಮಕಥೆಯಾಗಿದೆ. "ನನ್ನ ಬದುಕಿನ ಬಗೆಗೆ ಯಾರೂ ಬರೆಯಲಾರರು. ಯಾಕೆಂದರೆ ಅದು ಮಾನವರ ದೃಷ್ಟಿಗೆ ಗೋಚರವಾಗುವಂತೆ ಹೊರಮುಖವಾಗಿ ಸಾಗಿಲ್ಲ" ಎಂದು ಅರವಿಂದರು ತಮ್ಮ ಬಗ್ಗೆ ಹೇಳಿಕೊಂಡ ಮಾತು ತಕ್ಕ ಮಟ್ಟಿಗೆ ಕುವೆಂಪು ಅವರಿಗೂ ಅನ್ವಯಿಸುತ್ತದೆ. ಹೀಗಾಗಿ ಕವಿಯೇ ಬರೆದ ಇದು ಒಂದರ್ಥದಲ್ಲಿ ಅವರ ಆತ್ಮಚರಿತ್ರೆಯಾಗಿದೆ. ಜೊತೆಗೆ ಪರಿಸರವನ್ನೂ

ಢಾಳವಾಗಿ ಚಿತ್ರಿಸಿದ ಇದನ್ನು ವಿಶಿಷ್ಟ ಆತ್ಮಚರಿತ್ರೆಯೆಂದು ಕರೆಯಬಹುದಾಗಿದೆ. "ಕವಿಯ ಜೀವನ ಚರಿತ್ರೆಯೆಂದರೆ ಅವನ ಕವನಗಳೇ, ಉಳಿದುವೆಲ್ಲ ಬರಿ ಅಡಿಟಿಪ್ಪಣಿ" ಎಂದು ಕುವೆಂಪು ಹೇಳಿರುವರಾದರೂ ಇವರ ಕವನಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಈ ಆತ್ಮಚರಿತ್ರೆ ತುಂಬಾ ನೆರವಾಗುತ್ತದೆ.

೨

ಕುವೆಂಪು ಅವರ ಆಶಯಗಳ ಹಾಗೆಯೇ "ಆಕೃತಿ'ಯೂ ಅಭ್ಯಾಸಯೋಗ್ಯವೆನಿಸಿದೆ. ಇವರ ಸಾಹಿತ್ಯದಲ್ಲಿ ಕವನ, ಮಹಾಕಾವ್ಯ, ನಾಟಕ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆ, ಆತ್ಮಚರಿತ್ರೆ, ಮಕ್ಕಳ ಸಾಹಿತ್ಯ ಮೊದಲಾದ ಪ್ರಕಾರಗಳಿವೆ. ಇವೆಲ್ಲವುಗಳ ಆಕೃತಿ ವಿವೇಚನೆ ಇಲ್ಲಿ ಅಪ್ರಸ್ತುತ. ಆಕೃತಿಯೆನ್ನುವುದು ವಸ್ತು ವಿನ್ಯಾಸ, ಸಂವಹನ ವಿನ್ಯಾಸವೆಂದು ಎರಡು ತೆರನಾಗಿರುತ್ತವೆ. ಸಂವಹನ ವಿನ್ಯಾಸವನ್ನೇ ಗಮನಿಸಿ ಹೇಳುವುದಾದರೆ ಇವರ ಮಹಾಕಾವ್ಯ ಒಂದರ್ಥದಲ್ಲಿ ರಗಳೆಯಾಗಿದೆ. ಆದುದರಿಂದ ಆಶಯದಲ್ಲಿ ಪಂಪನ (ಆದಿಪುರಾಣದ)ವಾರಸುದಾರರಾದರೆ ಮಹಾಕಾವ್ಯದ ಆಕೃತಿ ಮಟ್ಟಿಗೆ ಹರಿಹರನ ವಾರಸುದಾರರಾಗಿದ್ದಾರೆ. ರಗಳೆಯನ್ನು ತುಂಬ ಸಂಕೀರ್ಣವಾಗಿ ಬಳಸಿಕೊಳ್ಳುವ ಮೂಲಕ ಹರಹರನಿಗೆ ಭಿನ್ನವೂ ಆಗಿದ್ದಾರೆ.

೩

ಕುವೆಂಪು ಸಾಹಿತ್ಯದ ಆಶಯ, ಆಕೃತಿ ಏನೇ ಇರಲಿ, ಅವರ ಅಭಿವ್ಯಕ್ತಿ ಮಾರ್ಗೀಯವಾದುದು. ಜೀವನದಲ್ಲಿ ಆಡುಭಾಷೆ, ಗ್ರಾಂಥಿಕಭಾಷೆ ರೂಢಿಯಲ್ಲಿರುತ್ತದೆ. ಸಾಹಿತ್ಯದಲ್ಲಿ ಇವೇ ಕ್ರಮವಾಗಿ ದೇಶಿ, ಮಾರ್ಗಗಳಾಗಿ ನಿಲ್ಲುತ್ತವೆ. ಇವುಗಳಲ್ಲಿ ಬೇಂದ್ರೆ ದೇಶಿಗೆ, ಕುವೆಂಪು ಮಾರ್ಗಕ್ಕೆ ಪರಮಾವಧಿ ನಿದರ್ಶನರೆನಿಸಿದ್ದಾರೆ.

ಇದನ್ನು ಬಿಟ್ಟರೂ ಕುವೆಂಪು ನಿಜ ಅರ್ಥದಲ್ಲಿ ಗದ್ಯ ಕವಿಯೇ? ಪದ್ಯ ಕವಿಯೇ? ಎಂದು ಕೇಳಿದರೆ ಹರಿಹರನಂತೆ ಗದ್ಯ ಕವಿ ಎಂದೇ ಹೇಳಬಹುದೇನೋ. ಬಹುಶಃ ಈ ಕಾರಣಕ್ಕಾಗಿಯೇ ವಿಮರ್ಶಕರು ಕಾದಂಬರಿಗಳೇ ಅವರ ನಿಜವಾದ ಮಹಾಕಾವ್ಯಗಳೆಂದು ಹೇಳುವುದು. ಕುವೆಂಪು ಅವರಿಗೂ ತಮ್ಮ ಈ ಶಕ್ತಿ ಅರ್ಥವಾದಂತಿದೆ. ಅದಕ್ಕಾಗಿಯೇ ಅವರು ಗದ್ಯದಂತೆ ಓಡುವ ರಗಳೆಯನ್ನೇ ತಮ್ಮ ಮಹಾಕಾವ್ಯದ ಮಾಧ್ಯಮ ಮಾಡಿಕೊಂಡರು. ಈ ಗದ್ಯ "ಸೃಷ್ಟಿಯ ಹೃದಯಕೆ ಪ್ರಾಣಾಗ್ನಿಯ ಹೊಳೆ ಹರಿಯಿಸಿ ರವಿ ದಯಮಾಡುವನು" ಎಂಬಂತೆ ಗಂಭೀರ ಗತಿಯುಳ್ಳದ್ದಾಗಿದೆ.

೪

ಈವರೆಗಿನ ವಿವೇಚನೆಯನ್ನು ಇನ್ನೊಂದು ಕ್ರಮದಲ್ಲಿ ಹೀಗೆ ಹೇಳಬಹುದು. ಕುವೆಂಪು ಆಶಯದಲ್ಲಿ ಪಂಪನ ಆದಿಪುರಾಣದ ವಾರಸುದಾರರಾಗಿದ್ದರೂ ಅದಕ್ಕೆ ದೈವಿಕವನ್ನೂ ಜೋಡಿಸುವದರಿಂದ ಕುಮಾರವ್ಯಾಸನೇ ಆಗುತ್ತಾರೆ. ರಾಮಾಯಣದರ್ಶನದ ಮಹಾ ಛಂದಸ್ಸು ದೃಷ್ಟಿಯಿಂದ ಅವರು ಆಕೃತಿಯುಲ್ಲಿ ಹರಿಹರನೆನಿಸುತ್ತಾರೆ. ಅಭಿವ್ಯಕ್ತಿ ಮಾರ್ಗೀಯವಾಗಿರುವುದರಿಂದ ಪಂಪನನ್ನು ನೆನಪಿಸುತ್ತಾರೆ. ಹೀಗಾಗಿ ಕುವೆಂಪು ಆಶಯದಲ್ಲಿ ಕುಮಾರವ್ಯಾಸ, ಆಕೃತಿಯಲ್ಲಿ

ಹರಿಹರ, ಅಭಿವ್ಯಕ್ತಿಯಲ್ಲಿ ಪಂಪನೆಂದೂ ಹೇಳಬಹುದು. ಆದುದರಿಂದ ಇವರ ಸಾಹಿತ್ಯ ಸಾವಿರ ವರ್ಷದ ಕನ್ನಡ ಸಾಹಿತ್ಯ ಓದಿದ ಅನುಭವ ನೀಡುತ್ತದೆ.

ಕುವೆಂಪು ಅವರ ಅನುಭವ ತುಂಬ ಆಳ, ಅಭ್ಯಾಸ ತುಂಬ ವಿಶಾಲ. ಲೌಕಿಕದೊಂದಿಗೆ ಆಗಮಿಕ ಅನುಭವ ಕನ್ನಡದೊಂದಿಗೆ ಇಂಗ್ಲಿಷ್, ಸಂಸ್ಕೃತ ಸಾಹಿತ್ಯಗಳ ಅಭ್ಯಾಸ ಇವರಲ್ಲಿ ಎರಕಗೊಂಡಿದೆ. ಆದುದರಿಂದ ಕುವೆಂಪು ಅರ್ಥಮಾಡಿಕೊಳ್ಳುವುದಕ್ಕೆ ಕೇವಲ ಲೌಕಿಕ ಅನುಭವ ಸಾಲದು, ಆಗಮಿಕ ಅನುಭವವೂ ಬೇಕು. ಕೇವಲ ಕನ್ನಡ ಅಭ್ಯಾಸ ಸಾಲದು, ಇಂಗ್ಲಿಷ್, ಸಂಸ್ಕೃತ ಅಭ್ಯಾಸವೂ ಬೇಕು.

ಈ ಎಲ್ಲ ಸಾಧನೆಗಳಿಂದಾಗಿ ಕುವೆಂಪು ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಆಸ್ತಿ ಎನಿಸಿದ್ದಾರೆ. ಯಾವುದೇ ನಾಡಿಗೆ ಭೌತಿಕ ಮತ್ತು ಸಾಂಸ್ಕೃತಿಕ ಆಸ್ತಿಗಳಿರುತ್ತವೆ. ಭೌತಿಕಕ್ಕಿಂತ ಸಾಂಸ್ಕೃತಿಕ ಆಸ್ತಿ ಶಾಶ್ವತ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಇಂದು ಕಲ್ಯಾಣ ಎಂದಾಕ್ಷಣ ಭೌತಿಕ ಚಾಲುಕ್ಯರು ನೆನಪಾಗುವುದಿಲ್ಲ, ಸಾಂಸ್ಕೃತಿಕ ಶರಣರು ನೆನಪಾಗುತ್ತಾರೆ. ಅದೇ ರೀತಿ ಇಂದು ಮೈಸೂರು ಎಂದಾಕ್ಷಣ ಮಹಾರಾಜರು ನೆನಪಾಗುವುದಿಲ್ಲ, ಕುವೆಂಪು ನೆನಪಾಗುತ್ತಾರೆ. ಆದುದರಿಂದ ಮೈಸೂರಿಗೆ ಸಾಂಸ್ಕೃತಿಕ ಕಾಂತಿ ನೀಡಿದ ಮುಖ್ಯರಲ್ಲಿ ಮುಖ್ಯರಾದ ಕುವೆಂಪು ಅವರ ಜನ್ಮಶತಮಾನೋತ್ಸವವನ್ನು ಆಚರಿಸುವುದು, ಅವರ ಕರ್ಮಭೂಮಿಯಾದ ಈ ನಗರದ, ಕರ್ಮಭೂಮಿಯ ಕೇಂದ್ರವಾದ ಮಾನಸಗಂಗೋತ್ರಿಯ ಕರ್ತವ್ಯವೆಂದು ಭಾವಿಸುತ್ತೇನೆ.

ಆಕರ : ಮಾರ್ಗ ಸಂಪುಟ–೭

■■

೫೪

ಕನ್ನಡ ಅಭಿಜಾತಭಾಷೆ : ಒಂದು ಸಮರ್ಥನೆ
ವಿಚಾರ ಸಂಕಿರಣ

ಎಲ್ಲರಿಗೂ ನಮಸ್ಕಾರ,

ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಗೌರವ ಪ್ರಾಪ್ತವಾದ ಇಂದಿನ ಸಂದರ್ಭದಲ್ಲಿ ಈ ಭಾಷೆಯ, ಈ ಭಾಷಾಸಾಹಿತ್ಯದ ಮೈಮನಗಳನ್ನು ಕುರಿತು ಅಭ್ಯಸಿಸುವ ಹೊಸಹುಮ್ಮಸ್ಸು ಎಲ್ಲೆಡೆ ತೋರಿಬರುತ್ತಲಿದೆ. ಈ ಹುಮ್ಮಸ್ಸಿನ ಭಾಗವೆಂಬಂತೆ ಇಂದು ಕೊಪ್ಪಳ ಕಾಲೇಜಿನಲ್ಲಿ ಕನ್ನಡ ಅಭಿಜಾತಭಾಷೆ ಒಂದು ಸಮರ್ಥನೆ" ವಿಷಯದ ಬಗ್ಗೆ ಹಮ್ಮಿಕೊಂಡಿರುವ ಈ ವಿಚಾರ ಸಂಕಿರಣದಲ್ಲಿ ಭಾಗವಹಿಲು ನನ್ನ ವಿದ್ಯಾರ್ಥಿ ಪ್ರಿ. ಅಲ್ಲಮಪ್ರಭು ಪ್ರೀತಿಪೂರ್ವಕ ಆಜ್ಞೆ ಮಾಡಿದರು. ವಿದ್ಯಾರ್ಥಿಪರಾಧೀನನಾದ ನಾನು ಒಪ್ಪಿಕೊಂಡು ಇಂದು ಇಲ್ಲಿಗೆ ಬಂದಿದ್ದೇನೆ.

'ಅಭಿಜಾತ ಭಾಷೆ, ಎನ್ನುವುದು ಇಂಗ್ಲಿಷ್ Classical laugauge ಎಂಬುದರ ಪರ್ಯಾಯಪದ. ಕಳೆದುಹೋದ ಪ್ರಬುದ್ಧ ಭಾಷೆ (ಉದಾ: ಸಂಸ್ಕೃತ) ಎಂದು ಇದರ ಮೂಲ ಅರ್ಥ. ಕಳೆದು ಹೋದ ಒಂದು ಪ್ರಬುದ್ಧ ಭಾಷೆಯ ಅವಸ್ಥೆ (ಉದಾ: ಹಳಗನ್ನಡ)ಎಂದೂ ಈ ಅರ್ಥ ವಿಸ್ತರಗೊಂಡಿದೆ. ಇನ್ನೂ ಇತ್ತೀಚೆ, ದೀರ್ಘಕಾಲೀನ ಹಳಮೆಯುಳ್ಳ ಅನ್ಯಭಾಷೆಗಳಿಗೂ ಧಾರೆಯೆರೆಯುವಷ್ಟು ಸಾಹಿತ್ಯಿಕ ಸಾಂಸ್ಕೃತಿಕ-ಸತ್ವ-ಸ್ವತ್ವಮಳ್ಳ ಜೀವಂತ ಭಾಷೆ ಎಂದು ಶಬ್ದ ಬಳಸಲಾಗುತ್ತಿದೆ. ಈ ಗೌರವ ತಮಿಳು ಭಾಷೆಗೆ ಸಲ್ಲುವಂತಿದ್ದರೆ ಕನ್ನಡ ಭಾಷೆಗೂ ಆ ಅರ್ಹತೆಯಿದೆ.

ತಮಿಳುರುವ ಪ್ರಾಚೀನ ಕನ್ನಡಕ್ಕೆ ಇದೆಯೆಂದು ಇತ್ತೀಚೆ ಇನ್ನೂ ಸ್ಪಷ್ಟವಾಗಿದೆ. ಹಾಗೆ ನೋಡಿದರೆ ಅದಕ್ಕಿಂತ ಮೊದಲು ಇದು ಲಿಪಿಬದ್ಧವಾಗಿದೆಯೆಂಬ ವಾದವೊಂದು ಇತ್ತೀಚೆಗೆ ಪಂಡಿತಮಾನ್ಯವಾಗುತ್ತಲಿದೆ. ಇದು ಸ್ವತಂತ್ರ ವಿಚಾರಧಾರೆ ಬೆಳೆಸಿಕೊಂಡಿದ್ದರೂ ಅನೇಕನಿದರ್ಶನಗಳಿವೆ. ಸಂಸ್ಕೃತಿ ಸಾಹಿತ್ಯ ಶಾಸ್ತ್ರಗಳಿಂದ ಪ್ರಭಾರಿತವಾಗಿದ್ದರೂ ಒಂದು ಸ್ವಯಂಪೂರ್ಣ ಭಾಷೆಗೆ ಅವಶ್ಯವಿರುವ ಅರ್ಹತೆ ಪಡೆದಿದೆಯೆಂದು ಈ ಗೋಷ್ಠಿಯ ಪ್ರಬಂಧಗಳು ಸಮರ್ಥನೆ ನೀಡಿವೆ.

ಇವುಗಳಲ್ಲಿ ಒಂದು ಪ್ರಬಂಧದ ವಿಷಯ ದೇಶಿ-ಮಾರ್ಗ. ಸಂಸ್ಕೃತವು ತನ್ನ ಅಸ್ಮಿತೆಗೆ ಧಕ್ಕೆ ಬರುವಷ್ಟು ಅನ್ಯಭಾಷೆಯಿಂದ ಪ್ರಭಾವಿತವಾಗಿಲ್ಲವಾದುರಿಂದ ಆ ಸಾಹಿತ್ಯದಲ್ಲಿ ಈ ಬಗೆಯ

ಕವಲು ಕಂಡುಬರಲಿಲ್ಲ. ಸಂಸ್ಕೃತದಿಂದ ಪ್ರಭಾವಿತವಾದ ಕನ್ನಡದಲ್ಲಿ ಸಂಭವಿಸಿದ ಈ ಕವಲನ್ನು ಗುರುತಿಸಿದುದು ಕನ್ನಡ ಕವಿಗಳ ಅನ್ವೇಷಣಾದೃಷ್ಟಿಗೆ ನಿದರ್ಶನವೆನಿಸಿದೆ. ಈ ಸಮಸ್ಯೆ ನಯಸೇನ, ಆಂಡಯ್ಯ ಮೊದಲಾದ ಕನ್ನಡ ಕವಿಗಳನ್ನು, ಕವಿರಾಜಮಾರ್ಗಕಾರನಂತೂ ಇವುಗಳ ಸಮನ್ವಯ ಶೈಲಿಯ ರೀತಿಗಳನ್ನು ಶಾಸ್ತ್ರನಿಷ್ಠವಾಗಿ ಪ್ರತಿಪಾದಿಸಿದ್ದಾನೆ. ಆದಿಕವಿ ಪಂಪ ಕಾವ್ಯಮಾಧ್ಯಮದಲ್ಲಿ ಈ ಸಮನ್ವಯದ ಎಲ್ಲ ಸಾಧ್ಯತೆಗಳನ್ನು ಸಾಧಿಸಿ ತೋರಿಸಿದ್ದಾನೆ. 'ದೇಶಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂದು ಆಡಿದ ಮಾತು. ಮಾಡಿದ ಪ್ರಯೋಗಗಳು ಸಂಸ್ಕೃತ ಕಾವ್ಯಮಾರ್ಗದಿಂದ ಭಿನ್ನವಾದ ಕನ್ನಡಿಗರ ಆಲೋಚನೆಯನ್ನು ಎತ್ತಿಹೇಳುತ್ತವೆ. ಅಷ್ಟಾದಶ ವರ್ಣನೆಯ ಪರಿಕಕಲ್ಪನೆ ತನ್ನ ಆದಿ ಪ್ರಾಸ ಪಾಲನೆಗಾಗಿ ಸಂಸ್ಕೃತದ ಯತಿನಿಯಮ ಮೀರಿದುದು ಇವೆಲ್ಲ ಸ್ವಂತಿಕೆಗಳು ಸ್ಮರಣಾರ್ಹವೆನಿಸಿವೆ.

ಹೀಗೆ ಶೈಲಿಯ ಬಗ್ಗೆಯಲ್ಲದೆ ವಸ್ತುವಿನ ಬಗ್ಗೆಯೂ ಕನ್ನಡಿಗರು ಸ್ವತಂತ್ರ ಆಲೋಚನೆಮಾಡಿದ್ದಾರೆ. ಅಂದರೆ ಸಂಸ್ಕೃತವು ಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರವೆಂದು ಅದರ ಮೈಯನ್ನು ಗಮನಿಸಿ ವರ್ಗೀಕರಿಸಿದ್ದದೆ, ಕನ್ನಡಿಗರು ಅದರ ಮನಸ್ಸನ್ನು ಗಮನಿಸಿ ಲೌಕಿಕ ಆಗಮಕವೆಂದು ವರ್ಗೀಕರಿಸಿದುದು ಕಾವ್ಯಮೀಮಾಂಸೆಗೆ ಅವರ ವಿಶೇಷ ಕೊಡುಗೆಯೆಂದೇ ಹೇಳಬೇಕು ತಮಿಳು ಅಗಂ ಪುರಂ ವರ್ಗಿಕರಣಕ್ಕಿಂತ ಇದು ಹೆಚ್ಚು ಶಾಸ್ತ್ರೀಯವಾಗಿದೆ. ಕಾವ್ಯಾದರ್ಶವು ಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರ ನಾಟಕವೆಂದು ಮೂರು ಪ್ರಕಾರಗಳಾಗಿ ವಿಭಾಗಿದ್ದರೆ. ಕವಿರಾಜಮಾರ್ಗವು ಪದ್ಯ ಗದ್ಯಕಥಾ ಎಂದು ಎರಡು ಪ್ರಕಾರಗಳಾಗಿ ವಿಭಾಗಿಸಿದ್ದಾನೆ. ಇದಕ್ಕೆ ಕಾರಣ ಕನ್ನಡದಲ್ಲಿ ಅಂದು ನಾಟಕವೂ ಇನ್ನೂನೋಡುವ ರಂಗಮಾಧ್ಯಮವಾಗಿದ್ದಿತು ಓದುವ ಪುಸ್ತಕ ಮಾಧ್ಯಮವಾಗಿರಲಿಕ್ಕಿಲ್ಲ.

ಕನ್ನಡ ವಿದ್ವಾಂಸರು ಇಂದಿನ ವರೆಗೆ ಈ ಲೌಕಿಕ ಆಗಮಿಕಗಳನ್ನು ಸರಿಯಾಗಿ ಅರ್ಥೈಸಿಲ್ಲವೆಂದು ತೋರುತ್ತದೆ. ಭಾವನೆಯನ್ನು ಕೆರಳಿಸುವ ಎಂಟುರಸಗಳಿಗೆ ಆಶ್ರಯವಾದುದು ಲೌಕಿಕಸಾಹಿತ್ಯ. ಈ ಎಂಟೂರಸಗಳ ಉದ್ದೇಶವನ್ನು ಉಪಶಮನಗೊಳಿಸುವುದು ಶಾಂತರಸವಾಗಿದ್ದು, ಈ ಒಂಬತ್ತು ರಸಗಳೊಳಗೆ ಆಶ್ರಯವಾದುದು ಆಗಮಿಕ ಸಾಹಿತ್ಯ ಇದಕ್ಕೆ ಶರಣರು ಕಾಯಸಾಹಿತ್ಯ –ಆತ್ಮಸಾಹಿತ್ಯವೆಂದು ಈ ಎರಡೂ ಬಗೆಯ ಸಾಹಿತ್ಯ ಬರೆಯುವವರನ್ನು ಕನಕದಾಸ ನರಕವಿ–ವರಕವಿಯೆಂದೂ ಕರೆದಿದ್ದಾರೆ.

ಸಾಹಿತ್ಯಕ್ಕೆ ಬಂದರೆ ಕನ್ನಡಿಗರು ಸಂಸ್ಕೃತಸಾಹಿತ್ಯಕ್ಕೆ ಉದ್ದಕ್ಕೂ ನೀಡುತ್ತ ಬಂದ ಸೃಜನಶೀಲ ಪ್ರತಿಕ್ರಿಯೆ ಸ್ವತಂತ್ರ ಅಭ್ಯಾಸಯೋಗ್ಯವಾಗಿದೆ. ವ್ಯಾಸಭಾರತವನ್ನೇ ಉದಾಹರಿಸುವುದಾದರೆ, ಪಂಪನದು ಅವೈದಿಕ ಸಮಸ್ತ ಭಾರತ, ಕುಮಾರವ್ಯಾಸನದು ವೈದಿಕ ಶ್ರೀಕೃಷ್ಣ ಚರಿತಾಮೃತ. ಮುಂದಿನ ದಿನಗಳಲ್ಲಿ ಹುಟ್ಟಿದ ವಚನ ಸಾಹಿತ್ಯವಂತೂ ಭಾರತಕ್ಕೆ ಅಲ್ಲ ಜಗತ್ತಿಗೆ ಕನ್ನಡಿಗರು ನೀಡಿರುವ ವಿಶೇಷ ಕಾಣಿಕೆಯಾಗಿದೆ. ಹೀಗೆ ಸ್ವತಂತ್ರ ವಿಚಾರಧಾರೆಯ ಕಾವ್ಯ ಮೀಮಾಂಸೆ, ಶ್ರೇಷ್ಠ ಸಾಹಿತ್ಯವನೊಳಗೊಂಡ ಕನ್ನಡವು ಅಭಿಜಾತ ಭಾಷಾಶ್ರೇಣಿಗೆ ಅರ್ಹವಾಗಿದೆ.

ಕನ್ನಡಕ್ಕೆ ಕನ್ನಡದ್ದೇ ವ್ಯಾಕರಣ ಎಂಬ ಪ್ರಬಂಧವು ಸಂಸ್ಕೃತವು ಭಾಷೆಯಾಗಿ ಪ್ರವೇಶಿಸಿದುದನ್ನೂ ತನ್ನ ವ್ಯಾಕರಣ ಚೌಕಟ್ಟಿಗೆ ಕನ್ನಡವನ್ನು ಪಡಿಯಚ್ಚುಗೊಳ್ಳಿಸುವ ಪ್ರಯತ್ನವನ್ನು ಪ್ರಶ್ನಿಸುತ್ತದೆ. ಅದಕ್ಕೆ

ಸಂಸ್ಕೃತದ ಬಾಳಿಕೆ ಮತ್ತು ಕನ್ನಡಿಗರಿಗಿರುವ ಸಂಸ್ಕೃತದ ಶ್ರೇಷ್ಠತೆಯ ವ್ಯಸನ ಕಾರಣವೆಂದು ತೋರುತ್ತದೆ. ಕಾರ್ಯಮೀಮಾಂಸೆ ಸಾಮಾನ್ಯವಾಗಿ ಎಲ್ಲಭಾಷೆಯ ಸಾಹಿತ್ಯಗಳಿಗೆ ಒಂದೇ ಆಗಿದ್ದರೆ, ನಾಟಕ ಸಾಮಾನ್ಯವಾಗಿ ಪ್ರತಿಯೊಂದು ಭಾಷೆಗೆ ಕೊನೆಯಪಕ್ಷ ಪ್ರತಿಯೊಂದು ಭಾಷಾ ಕುಟುಂಬಕ್ಕೆ ಭಿನ್ನವಾಗಿರುತ್ತದೆ. ಕವಿರಾಜಮಾರ್ಗಕಾರ ಹೇಳುವ "ನಾಣ್ಣುಡಿಯ ಬೆಡಂಗೆ ಕನ್ನಡದ ಮೂರ್ತಿನೊಳ್ ಕುತ ಶಬ್ದಾಲಕಾರದೊಳತಿಶಯಮೀ ಕನ್ನಡಕ್ಕೋ ಸತತಂ ಪ್ರಾಸಂ ಕನ್ನಡಮಗಳೂಳೆಂದು ವಾಸುಗಿಯುಮರಿಯತಾರದೆ ಬೇಸರುಗುಂ ದೇಸಿ ಬೇರೆವೇರಪುದರಿಂ" ಎಂಬ ವಿವರಗಳು ಕೇಶಿರಾಜ ಹೇಳುವ 'ಸಮನಿಸಿದೆ ಏಒಓ ಎಂಬಿವು ಕನ್ನಡದೊಳ್ ಸ್ವಭಾವದಿಂದೊಳವು, ನಾಲ್ವತ್ತೇಳಾಯ್ತಳೆ ಶುದ್ಧಗೆಯಚ್ಚಗನ್ನಡಕ್ಕಿ ಕ್ರಮದಿಂ' ಎಂಬ ವಿವರಗಳು ಕನ್ನಡದ ವೈಶಿಷ್ಟ್ಯವನ್ನು ಸಾರುತ್ತದೆ. ಹೀಗಿದ್ದೂ ಕನ್ನಡುವು ಸಂಸ್ಕೃತ ನಾಟಕರಣದ ಒತ್ತಾಯದ ಒತ್ತಾಯದ ಮಾಘಸ್ನಾನಕ್ಕೆ ಆಗಾಗ ಒಳಗಾಗಿದೆ. ಕೆಲವೊಮ್ಮೆ ಅದರಿಂದ ಮುಕ್ತವಾಗಿರುವುದನ್ನು ಗುರುತಿಸಿದ ಕೇಶಿರಾಜನು "ಗಮಕ ಸಮಾಸದಿಂ ಕಳಕುಳಕ್ಕಳದಿಂ..." ಎಂಬ ಪದ್ಯದಲ್ಲಿ ಅದರ ಅನನ್ಯತೆಯನ್ನು ಎತ್ತಿ ನುಡಿದಿದ್ದಾರೆ. ಇದೆಲ್ಲವನ್ನು ಗಮನಿಸಿಯೇ ಡಿ.ಎನ್. ಶಂಕರಭಟ್ಟರು "ಕನ್ನಡಕ್ಕೆ ಬೇಕು ಕನ್ನಡದ್ದೇ ಆದ ವ್ಯಾಕರಣ" ಎಂಬ ಪುಸ್ತಕ ಬರೆದರು.

ಹೀಗೆ ಕನ್ನಡ ಎಲ್ಲ ದೃಷ್ಟಿಯಿಂದ ಸ್ವಯಂಪೂರ್ಣ ಭಾಷೆಯಾಗಿದೆ. ಶ್ರೇಷ್ಠಸಾಹಿತ್ಯನೀಡಿದೆ. ಶಾಸ್ತ್ರಗಳ ದೃಷ್ಟಿಯಿಂದಲೂ ಸ್ವತಂತ್ರ ಚಿಂತನೆ ಮಾಡಿದೆ. ಈ ಎಲ್ಲ ಕಾರಣಗಳಿಂದಾಗಿ ಅಭಿಜಾತ ಸಾಹಿತ್ಯ ಸಾಲಿಗೆ ಸಲ್ಲುತ್ತದೆ. ಈ ಅಭಿಜಾತ ಲಕ್ಷಣವನ್ನು ಗಮನಿಸಿಯೇ ಅನೇಕರಂತೆ ಮರಾಠಿ ಸಂತಕವಿ ಏಕನಾಥನು ನತೋ ಕಾನಡಿ ಭಾಷಾ" ಎಂದೂ, ತೆಲುಗು ಶ್ರೀನಾಥ ಕವಿಯು "ನಾ ಕವಿತ್ವಂಬು ನಿಜಮುಲ ಕರ್ಣಾಟಭಾಷಾ" ಎಂದೂ ಸಾರಿದ್ದಾರೆ.

ಆಕರ : ಮಾರ್ಗ ಸಂಪುಟ-೭

■■

೫೫

ಬಿ.ಎಲ್.ಡಿ.ಇ.ಸಂಸ್ಥೆ ಶತಮಾನೋತ್ಸವ

ಕೆರೆಯ ನೀರನು ಕೆರೆಗೆ ಚೆಲ್ಲಿ

"ವಿಜಾಪುರದಲ್ಲಿ ಬಿ.ಎಲ್.ಡಿ.ಇ.ಸಂಸ್ಥೆ ಅಸ್ತಿತ್ವಕ್ಕೆ ಬರದಿದ್ದರೆ ನಾನು ಪ್ರಾಧ್ಯಾಪಕನಾಗುತ್ತಿರಲಿಲ್ಲ, ಕುಲಪತಿಯಾಗುತ್ತಿರಲಿಲ್ಲ. ಇದಕ್ಕಿಂತ ಮುಖ್ಯವಾಗಿ ಒಬ್ಬ ಸಂಶೋಧನ ಸಾಹಿತಿಯಾಗುತ್ತಿರಲಿಲ್ಲ"- ಕೆಲವು ದಿನಗಳ ಹಿಂದೆ ಒಂದು ಸಭೆಯಲ್ಲಿ ನಾನು ಈ ಮಾತು ಹೇಳಿದ ನೆನಪು.

೨೦ನೆಯ ಶತಮಾನದ ಆರಂಭ. ಲಿಂಗಾಯತ ಸಮಾಜ ಆಧುನಿಕತೆಗೆ ಹೊರಳುತ್ತಲಿದ್ದ ಸಂದರ್ಭ. ನನ್ನ ಹಳ್ಳಿ ಯರಗಲ್ಲದಲ್ಲಿ ಶಾಲೆಯಿದ್ದುದು ೪ನೆಯ ವರ್ಗದ ವರೆಗೆ ಮಾತ್ರ. ಪ್ರತಿವರ್ಷ ಪಾಸಾಗುತ್ತ ನಡೆದ ನನ್ನೊಂದಿಗೆ ೫, ೬, ೭ನೆಯ ವರ್ಗಗಳು ಅಲ್ಲಿ ಆರಂಭವಾಗುತ್ತ ಬಂದವು. ಇಲ್ಲಿಗೇ ನಿಲ್ಲಬಹುದಾಗಿದ್ದ ನನ್ನ ಶಿಕ್ಷಣ ಮುಂದುವರಿಯಲು ಕಾರಣವಾದುದು, ತಾಲೂಕು ಸ್ಥಳವಾಗಿರುವ ಸಿಂದಗಿಯಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಎಚ್.ಜಿ.ಹೈಸ್ಕೂಲ್. ಇನ್ನೂ ಮುಂದುವರೆಯಲು ಕಾರಣವಾದದ್ದು, ಜಿಲ್ಲಾ ಸ್ಥಳವಾಗಿರುವ ವಿಜಾಪುರದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಬಿ.ಎಲ್.ಡಿ.ಇ ಸಂಸ್ಥೆಯ ವಿಜಯ ಕಾಲೇಜು. ಹೀಗೆ ಸಮಯಕ್ಕೆ ಸರಿಯಾಗಿ ನನ್ನ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದ ಇಂಥ ಸ್ಥಳೀಯ ವಿದ್ಯಾಸಂಸ್ಥೆಗಳು ನಾನು, ನನ್ನಂಥವರು ಶಿಕ್ಷಣ ಮುಂದುವರಿಸಲು ದೊಡ್ಡ ಅವಕಾಶಗಳನ್ನು ಒದಗಿಸಿಕೊಟ್ಟವು. ಇಲ್ಲದಿದ್ದರೆ ಆರ್ಥಿಕ ತೊಂದರೆ ಕಾರಣವಾಗಿ, ನಾವು ದೂರದ ಧಾರವಾಡ, ಕೊಲ್ಲಾಪುರ, ಪುಣೆ ನಗರಗಳಿಗೆ ಕಲಿಯಲು ಹೋಗದೇ ಪ್ರಾಥಮಿಕ ಶಾಲಾಶಿಕ್ಷಕರೋ, ಕಛೇರಿಯ ಗುಮಾಸ್ತರೋ ಆಗಿ ಉಳಿಯುತ್ತಿದ್ದೆವು.

೧೯೧೦ರಲ್ಲಿ ಆರಂಭವಾದ ಬಿ.ಎಲ್.ಡಿ.ಇ. ಸಂಸ್ಥೆ ೧೯೧೪ರಲ್ಲಿ ಶ್ರೀ ಸಿದ್ಧೇಶ್ವರ ಹೈಸ್ಕೂಲ್, ೧೯೪೫ರಲ್ಲಿ ವಿಜಯ ಕಾಲೇಜು ಆರಂಭಿಸುವ ಮೂಲಕ ವಿದ್ಯಾರ್ಥಿಗಳಿಗಾಗಿ ವಿದ್ಯಾವಿಕಾಸದ ಸೋಪಾನಗಳನ್ನು ನಿರ್ಮಿಸಿದ್ದಿತು. ೧೯೫೬ರಲ್ಲಿ ಕಾಲೇಜು ಓದಲು ವಿಜಾಪುರಕ್ಕೆ ಬಂದ ನನಗೆ, ಅಷ್ಟು ಪೂರ್ವದಲ್ಲಿಯೇ ಸಿದ್ಧೇಶ್ವರ ಹೈಸ್ಕೂಲಿಗಾಗಿ ಕಟ್ಟಿಸಿದ್ದ ಅರಮನೆಯಂಥ ಕರಿಯ ಕಲ್ಲಿನ

ಕಟ್ಟಡ, ನಮ್ಮ ಹಿರಿಯರ ದೊಡ್ಡ ಕನಸಿಗೆ ಸಾಕ್ಷಿಯಾಗಿ ಕಂಡಿತು. ಇದರ ಮುಂದುವರಿಕೆ ಎಂಬಂತೆ ನಗರದ ಹೊರವಲಯದಲ್ಲಿ ನಿರ್ಮಿಸಿದ ಹಳೆಯ ಕಾಲದ ಕೋಟೆಯನ್ನು ನೆನಪಿಸುವಂಥ ಕರಿಯ ಕಲ್ಲಿನ ಕಾಲೇಜು ಕಟ್ಟಡ, ಅವರ ದೊಡ್ಡ ಕನಸಿಗೆ ಇನ್ನೊಂದು ಸಾಕ್ಷಿಯಾಗಿ ಕಂಡಿತು.

ಕೇವಲ ದೊಡ್ಡ ಕಟ್ಟಡಗಳಿಂದ ಒಂದು ಶಿಕ್ಷಣಸಂಸ್ಥೆ ದೊಡ್ಡದೆನಿಸುವುದಿಲ್ಲ. ಅದು ದೊಡ್ಡದಾಗುವುದು ಅಲ್ಲಿಯ ದೊಡ್ಡ ವಿದ್ವತ್ತು-ವ್ಯಕ್ತಿತ್ವಗಳ ಶಿಕ್ಷಕರಿಂದ. ನಾನು ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ಐರಾವತ-ಸುಪ್ರತೀಕಗಳಂಥ ಶಿಕ್ಷಕ ಸಮುದಾಯ ಅಲ್ಲಿ ಮೇಳವಿಸಿದ್ದಿತು. ಇವರ ಬೆಳಕಿನಲ್ಲಿ ನಾನು, ನನ್ನಂಥವರು ಬೆಳೆದೆವು.

ನನ್ನ ಮೇಜರ್ ವಿಷಯ ಕನ್ನಡ. ಈ ವಿಷಯವನ್ನು ಎಚ್.ಟಿ.ಸಾಸನೂರ, ಎಚ್.ಕೆ.ಲಗಳಿ, ಬಿ.ಟಿ.ಸಾಸನೂರ ಬೋಧಿಸುತ್ತಿದ್ದರು. ಹೀಗಿದ್ದೂ ಮೇಜರ್ ವಿದ್ಯಾರ್ಥಿಗಳ ನೇರ ಪ್ರಾಧ್ಯಾಪಕರೆಂದರೆ ಎಚ್.ಕೆ.ಲಗಳಿ, ಬಿ.ಟಿ.ಸಾಸನೂರ. ಇವರಲ್ಲಿ ಒಬ್ಬರು ವಿಮರ್ಶೆಗೆ, ಇನ್ನೊಬ್ಬರು ಶಾಸ್ತ್ರಕ್ಕೆ ಪ್ರಸಿದ್ಧರು. ಇವರು ಯಾವುದೇ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಿಗಿಂತ ಕಡಿಮೆ ಇರಲಿಲ್ಲ. ಲಗಳಿಯವರದು ಕೈಯಲ್ಲಿ ಪುಸ್ತಕವಿಲ್ಲದೆ, ಇದ್ದರೂ ನೆವಕ್ಕೆ ಮಾತ್ರ ಹಿಡಿದು ವಿಷಯವನ್ನು ವಿಸ್ತರಿಸುತ್ತಿದ್ದ, ಹರಿತವಾಗಿ ಹರಿಬಿಡುತ್ತಿದ್ದ ಬೋಧನ ರೀತಿ ಅನನ್ಯವಾಗಿದ್ದಿತು. ಹಾಸ್ಯಲೇಪನದಿಂದಾಗಿ ಅದು ವೈಚಾರಿಕ ವಿನೋದವಾಗಿಯೂ ಪರಿಣಮಿಸುತ್ತಿತ್ತು. ಅವರದು ಓದಿ, ಕೇಳಿ ಸಂಗ್ರಹಿಸಿದ ಹಾಸ್ಯವಲ್ಲ, ಸಮಯೋಚಿತ ಸೃಷ್ಟಿ. ಹೀಗಾಗಿ ನಾಲ್ಕು ವರ್ಷದ ಅವಧಿಯಲ್ಲಿ ನಾವು ಒಮ್ಮೆ ಕೇಳಿದ ಹಾಸ್ಯವನ್ನು ಇನ್ನೊಮ್ಮೆ ಅವರಿಂದ ಕೇಳಲಿಲ್ಲ. ನನ್ನ ದೃಷ್ಟಿಯಲ್ಲಿ ನವನವೋನ್ಮೇಷಶಾಲಿನಿಯಾದ ಅವರ ಹಾಸ್ಯ ಶ್ರೀರಂಗ ಮಾದರಿಯದು.

ವೈಯಕ್ತಿಕವಾಗಿ ನನ್ನ ಮೇಲೆ ದೊಡ್ಡ ಪ್ರಭಾವ ಬೀರಿದ್ದು ಬಿ.ಟಿ.ಸಾಸನೂರ ಅವರ ಬೋಧನೆ. ಕನ್ನಡ, ಸಂಸ್ಕೃತ, ಇಂಗ್ಲಿಷ್, ಹಿಂದಿ-ಹೀಗೆ ಬಹುಭಾಷಾ ಬಹುಶ್ರುತತ್ವದಿಂದಾಗಿ ಅವರ ವ್ಯಕ್ತಿತ್ವ ಶ್ರುತಿಮಾಡಿದ ವೀಣೆಯಾಗಿದ್ದಿತು. ವಿದ್ವತ್ತು ಎಂದರೇನು? ಎಂಬುದನ್ನು ನಾನು ಅವರನ್ನು ನೋಡಿ ಅರ್ಥಮಾಡಿಕೊಂಡೆನು. ಅವರ ಬೋಧನ ನಮ್ಮನ್ನೆಲ್ಲ ವಿದ್ವತ್ತಿನಿಂದ ಕಟ್ಟಿಹಾಕುತ್ತಿದ್ದಿತು. ಪೂರ್ವಸಿದ್ಧತೆಯೊಂದಿಗೆ ಅವರು ವರ್ಗಕೋಣೆಯನ್ನು ಸವ್ಯಸಾಚಿಯಂತೆ ಪ್ರವೇಶಿಸುತ್ತಿದ್ದರು. ವ್ಯಾಕರಣ, ಅಲಂಕಾರ, ಛಂದಸ್ಸು-ಈ ಕಾವ್ಯಶಾಸ್ತ್ರಗಳನ್ನು ಅವರಷ್ಟು ನಿಖರವಾಗಿ ಬೋಧಿಸುವವರನ್ನು ನಾನು ಇದುವರೆಗೂ ನೋಡಿಲ್ಲ. ಈ ಶಾಸ್ತ್ರಗಳಿಗೆ ಅವರು ಪ್ರಮಾಣಪುರುಷರಾಗಿದ್ದರು. ಅದರಲ್ಲಿಯೂ ಶಬ್ದಮಣಿದರ್ಪಣವನ್ನು ಅರ್ಥೈಸಿಕೊಂಡ, ಅರ್ಥೈಸಿಕೊಡುವ ವಿಷಯದಲ್ಲಿ ಅವರು ಸೀಮಾಪುರುಷರು. ವಿಷಯವನ್ನು ಸಂದೇಹದಲ್ಲಿಟ್ಟು ದಾಟುವುದಾಗಲೀ, ಮರೆಮಾಚಿ ಮುಂದುವರಿಯುವದಾಗಲೀ, ಅವರ ಜಾಯಮಾನವೇ ಅಲ್ಲ. ಏನೆಲ್ಲವನ್ನು ತಲಸ್ಪರ್ಶಿಯಾಗಿ ನೋಡಿ, ಗುಣ-ದೋಷಗಳನ್ನು ಒರೆಗೆ ಹಚ್ಚಿ ಹೇಳುವುದು ಅವರ ರಕ್ತಗುಣ. ಇದರಿಂದಾಗಿ ಅವರ ಬೋಧನೆ ವಕೀಲರ ವಾದವಾಗುತ್ತಿರಲಿಲ್ಲ, ನ್ಯಾಯಾಧೀಶನ ತೀರ್ಪು ಎನಿಸುತ್ತಿತ್ತು. ನಾನು ವಿಶ್ವವಿದ್ಯಾಲಯದ ಪ್ರಾಧ್ಯಾಪಕನಾದ ಬಳಿಕವೂ ಎದುರಾಗುತ್ತಿದ್ದ ಸಂದೇಹಗಳಿಗೆ ಇವರಿಂದ ಪರಿಹಾರ ಪಡೆಯುತ್ತಿದ್ದೆ. ಬಿ.ಟಿಯವರು ಹೇಳಿದರೆ ಮುಗಿಯಿತು, ನನಗೆ ಅದು ಸರ್ವೋಚ್ಚ ನ್ಯಾಯಾಲಯದ ತೀರ್ಪು.

ಇಂಥ ಪಾಂಡಿತ್ಯ ಪರಿಸರದಲ್ಲಿ ಬೆಳೆದ ನನ್ನ ಮೇಲೆ ಇನ್ನೊಂದು ರೀತಿಯ ಪ್ರಭಾವ ಬೀರಿದವರು, ಪ್ರಾಕೃತ ಪ್ರಾಧ್ಯಾಪಕರಾದ ಶ್ರೀಪಾದ ಭಿಡೆಯವರು. ಪಿರಿಯಡ್ ಆರಂಭದ ಗಂಟೆ ಬಾರಿಸುತ್ತಲೇ ವರ್ಗಕೋಣೆ ಪ್ರವೇಶಿಸುತ್ತಿದ್ದ ಅವರ ಸಮಯಪ್ರಜ್ಞೆ, ಒಂದು ತಾಸಿನ ಎಲ್ಲ ಅರವತ್ತು ನಿಮಿಷಗಳನ್ನು ಗಂಭೀರ ಬೋಧನೆಗೆ ಬಳಸುತ್ತಲಿದ್ದ ಅವರ ಸಮಯ ಸದ್ವಿನಿಯೋಗ, ನನ್ನ ವೃತ್ತಿ ಜೀವನಕ್ಕೆ ಒಂದು ಶಿಸ್ತು ಕಲಿಸಿತು.

ವಿದ್ಯಾರ್ಥಿ ಸಮುದಾಯದಲ್ಲಿ ನಾನು ಎದ್ದು ಕಾಣುವ ವ್ಯಕ್ತಿಯಾಗಿರಲಿಲ್ಲ. ಅಂದು ಬಿ.ಎ.,ಎಂ.ಎ. ಪರೀಕ್ಷೆಗಳಲ್ಲಿ ಪ್ರಥಮ ವರ್ಗದಲ್ಲಿ ಪಾಸಾಗುವುದು ಕನಸಿನ ಮಾತು. ಹೀಗಿದ್ದೂ ನಾನು ಬಿ.ಎ. ಪರೀಕ್ಷೆಯನ್ನು ವಿಶ್ವವಿದ್ಯಾಲಯಕ್ಕೆ ಪ್ರಥಮವರ್ಗದಲ್ಲಿ ಪ್ರಥಮನಾಗಿ ಉತ್ತೀರ್ಣನಾಗುವಲ್ಲಿ, ನನ್ನ ಅಧ್ಯಾಪಕರು ನನ್ನತ್ತ ಗಮನಹರಿಸಿದರು. ಎಂ.ಎ. ಪರೀಕ್ಷೆಯಲ್ಲಿ ಪ್ರಥಮವರ್ಗ ಪ್ರಶಸ್ತಿ ಸಹಿತ ಉತ್ತೀರ್ಣನಾಗಿ ಕರ್ನಾಟಕ ಕಾಲೇಜು-ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕನಾಗಿ ಬೆಳೆಯುತ್ತಲೇ ವಿಜಯ ಕಾಲೇಜು ಪರಿಸರದಲ್ಲಿ ಒಂದಿಷ್ಟು ಸುದ್ದಿಯಾದೆನು. ಹೀಗಿದ್ದೂ ಈ ಸಂಸ್ಥೆಗೂ ನನಗೂ ಸಂಪರ್ಕ ಏರ್ಪಟ್ಟುದು ೨೦೦೩ರಷ್ಟು ತಡವಾಗಿ. ಈ ಹೊತ್ತಿಗೆ ಹಳಕಟ್ಟಿ ಅವರಿಂದ ಸ್ಥಾಪಿತವಾಗಿ, ಬಂಥನಾಳ ಸ್ವಾಮಿಗಳಿಂದ ಬೆಳೆದು, ಬಿ.ಎಂ.ಪಾಟೀಲರಿಂದ ಆಧುನಿಕಗೊಂಡ ನನ್ನ ಈ ಮಾತೃಸಂಸ್ಥೆ, ಎಂ.ಬಿ.ಪಾಟೀಲ, ಎಸ್.ಎಸ್. ತಂಬಾಕೆ ಅವರಿಂದಾಗಿ ಸಾಂಸ್ಕೃತಿಕ ಆಯಾಮ ಪಡೆದುಕೊಳ್ಳುತ್ತಲಿದ್ದಿತು. ಇದಕ್ಕೆ ಸಾಕ್ಷಿ ಎನ್ನುವಂತೆ ಸಂಸ್ಥೆಯ ಸಂಸ್ಥಾಪಕರು, ವಚನಸಾಹಿತ್ಯದ ಸಂಶೋಧಕರು ಆದ ಶ್ರೀ ಫ.ಗು.ಹಳಕಟ್ಟಿ ಅವರ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಸ್ಮಾರಕ ಭವನದ ಉದ್ಘಾಟನ ಸಮಾರಂಭಕ್ಕೆ ಅತಿಥಿಯಾಗುವ ಮೂಲಕ ಈ ಸಂಶೋಧನ ಸಂಸ್ಥೆಗೂ ನನಗೂ ಸಂಬಂಧ ಆರಂಭವಾಯಿತು. ಪ್ರಧಾನ ಸಂಪಾದಕನಾಗಿ 'ಫ.ಗು.ಹಳಕಟ್ಟಿ ಸಮಗ್ರಸಾಹಿತ್ಯ' ದ ೧೫ ಸಂಪುಟಗಳನ್ನು ಪ್ರಕಟನೆಗೆ ಸಿದ್ಧಪಡಿಸಿಕೊಡುವ ಮೂಲಕ, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ದೊರಕಿಸಿಕೊಡುವ ಮೂಲಕ ಈ ಸಂಬಂಧದ ಕೊಂಡಿ ಗಟ್ಟಿಮುಟ್ಟಾಗಿ, ಇಂದು ನಾನು ಈ ಸಂಶೋಧನ ಸಂಸ್ಥೆಯ ಭಾಗವಾಗಿ ಬಿಟ್ಟಿದ್ದೇನೆ. ಈ ಸಂಬಂಧ ಕಾರಣವಾಗಿ, ಇಂದು ಶತಮಾನೋತ್ಸವ ಆಚರಿಸುತ್ತಲಿರುವ ನನ್ನ ಮಾತೃಸಂಸ್ಥೆಗೆ "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದ" ಧನ್ಯತೆ ನನ್ನದಾಗಿದೆ.

ಆಕರ : ಮಾರ್ಗ ಸಂಪುಟ-೭

■■

೫೬

ಅಂದು ಏಕೀಕರಣ ಇಂದು ಕನ್ನಡಕರಣ

ಅಸಾಮಾನ್ಯ ಪತ್ರಕರ್ತರೂ ಕರ್ನಾಟಕದ ಹಿತಚಿಂತಕರೂ ೭೦ನೆಯ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆದ ಶ್ರೀ ಪಾಟೀಲ ಪುಟ್ಟಪ್ಪನವರೇ, ನನ್ನ ಕನ್ನಡದ ಬಂಧುಗಳೇ ಎಲ್ಲರಿಗೂ ನಮಸ್ಕಾರ.

೧೯೨೪ ಮಹಾತ್ಮಾಗಾಂಧಿಜೀಯವರು ಅಧ್ಯಕ್ಷರಾಗಿದ್ದ ಐತಿಹಾಸಿಕ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಜರುಗಿದ್ದ ಬೆಳಗಾವಿ ನಗರದಲ್ಲಿ ಶ್ರೀ ಪಾಟೀಲ ಪುಟ್ಟಪ್ಪನವರು ಅಧ್ಯಕ್ಷರಾಗಿರುವ ಐತಿಹಾಸಿಕ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಂದು ಜರುಗುತ್ತಲಿದೆ. ಅಂದು ಆ ಅಧಿವೇಶನ ಕಾಂಗ್ರೆಸ್ಸಿನ ನವೋದಯಕ್ಕೆ ಚಾಲನೆ ನೀಡಿದಂತೆ, ಇಂದು ಈ ಸಮ್ಮೇಳನ ಕನ್ನಡದ ನವೋದಯಕ್ಕೆ ನಾಂದಿ ಹಾಡಲೆಂದು ಹಾರೈಸುತ್ತ ನನ್ನ ಮಾತನ್ನು ಆರಂಭಿಸುತ್ತೇನೆ.

'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಹಾರೈಕೆಯೊಂದಿಗೆ ೧೯೨೪ರ ಅಖಿಲ ಭಾರತ ಕಾಂಗ್ರೆಸ್ ಅಂದು ಉದ್ಘಾಟಿಸಲ್ಪಟ್ಟಿತು. ಅಂದಿನಿಂದ ತೀವ್ರಗೊಂಡು ೧೯೫೬ರ ವರೆಗೆ ಮುಂದುವರೆದು ನಿರಂತರ ಹೋರಾಟದ ಫಲವಾಗಿ ಭಾಷೆಯನ್ನಾಧರಿಸಿ ಕನ್ನಡ ಪ್ರದೇಶದ ಏಕೀಕರಣ ಕೈಗೂಡಿತು. ಕಣ್ಮರೆಗೊಂಡ್ಡಿದ್ದ ಕರ್ನಾಟಕ ನಕ್ಷೆ ಭಾರತದ ಭೂಪಟದಲ್ಲಿ ಮತ್ತೆ ಕಾಣಿಸಿಕೊಂಡಿತು. ಅಂದಿನಿಂದ ಇಂದಿನ ವರೆಗೆ ಅಂದರೆ ೪೫ ವರ್ಷ ಗತಿಸಿವೆ. ಇನ್ನು ೫ ವರ್ಷ ಗತಿಸಿದರೆ ಏಕೀಕರಣದ ಸುವರ್ಣ ಮಹೋತ್ಸವದ ಹೊಸ್ತಿಲು ದಾಟಲಿದ್ದೇವೆ. ಈ ಅವಧಿಯಲ್ಲಿ ನಾವು ನಿರೀಕ್ಷಿಸಿದಷ್ಟು ಕರ್ನಾಟಕ ಭಾಷಾಪ್ರಜ್ಞೆಯ ಗುರಿ ಮುಟ್ಟಿಲ್ಲವಾದರೂ ಸರಕಾರ ಮಾಡುತ್ತ ಬಂದ ಪ್ರಯತ್ನ ಸಣ್ಣದೇನಲ್ಲ.

ಆರಂಭದಲ್ಲಿ ಆಡಳಿತ ಪದಕೋಶ, ಆಡಳಿತ ಪದಕೋಶದ ಸರಳೀಕರಣ ಕಾರ್ಯ ಯೋಜನೆಗಳ ಅಡಿಯಲ್ಲಿ ಪೂರಕ ಸಾಹಿತ್ಯವನ್ನು ಸಿದ್ಧಪಡಿಸಿತು. ಇದರಿಂದಾಗಿ ಆಡಳಿತ ಕೆಲಸ-ಕಾರ್ಯಗಳಿಗೆ ಶಬ್ದಸಾಮಗ್ರಿ ಲಭ್ಯವಾಯಿತು. ಪತ್ರಗಳ ನಮೂನೆ ಸಾಹಿತ್ಯ ಪ್ರಕಟನೆಯಿಂದಾಗಿ ಆಡಳಿತದಲ್ಲಿ ಕನ್ನಡದ ಬಳಕೆ ತೀವ್ರಗೊಂಡಿತು.

ಕನ್ನಡ ಭಾಷೆ-ಸಂಸ್ಕೃತಿಗಳ ಶೋಧ ಪ್ರಸಾರಗಳಿಗಾಗಿ "ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನೇ" ಆರಂಭಿಸಿದುದು ರಾಷ್ಟ್ರಮಟ್ಟದ ಹೊಸ ಉಪಕ್ರಮವಾಗಿದೆ. ಈ ಇಲಾಖೆ ಒಂದು ಸ್ವತಂತ್ರ ನಿರ್ದೇಶನಾಲಯವನ್ನೇ ಸ್ಥಾಪಿಸಿ, ಮೈಸೂರಿನ ರಂಗಾಯಣ, ಧಾರವಾಡದ ಅಂಬಿಕಾತನಯದತ್ತ ರಾಷ್ಟ್ರೀಯ ಪ್ರತಿಷ್ಠಾನಗಳಲ್ಲದೆ, ಕಾರಂತ, ಪು.ತಿ.ನ. ಮೊದಲಾದವರ ಹೆಸರಿನಲ್ಲಿ ಕೇಂದ್ರಗಳನ್ನು ಆರಂಭಿಸಿದೆ. ಜಿಲ್ಲೆಗೊಂದರಂತೆ ಶಾಖೆಗಳನ್ನು ತೆರೆದು ರಾಜ್ಯ ಮಟ್ಟದಲ್ಲಿ ಸಂಸ್ಕೃತಿ ಪ್ರಸಾರ ಅಭಿವೃದ್ಧಿ ಕೆಲಸವನ್ನು ದೊಡ್ಡ ಪ್ರಮಾಣದಲ್ಲಿ ಪೂರೈಸಿದೆ. ರಾಜ್ಯದ ಮೂಲೆ ಮೂಲೆಯಲ್ಲಿದ್ದ ಕಲಾವಿದರನ್ನು ಸಾಹಿತಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವೂ ಇವುಗಳಿಂದ ಸಾಧ್ಯವಾಗಿದೆ. ಅಂಬೇಡ್ಕರ ಸಾಹಿತ್ಯ, ಲೋಹಿಯಾ ಸಾಹಿತ್ಯಗಳಂಥ ಅನುವಾದ ಯೋಜನೆ, ಡಿ.ವಿ.ಜಿ. ಕೃತಿ ಶ್ರೇಣಿಯಂಥ ಸಂಕಲನ ಯೋಜನೆ, ವಚನ ಸಾಹಿತ್ಯ, ದಾಸಸಾಹಿತ್ಯದಂಥ ಸಂಪಾದನ ಯೋಜನೆಗಳನ್ನು ಕೇಂದ್ರ ನಿರ್ದೇಶನಾಲಯ ಪೂರೈಸಿದೆ. ರಾಜ್ಯದಲ್ಲಿ ಜಿಲ್ಲಾ ಉತ್ಸವಗಳು, ವಿಶೇಷೋತ್ಸವಗಳೂ ಜರುಗಿ ಸಾಂಸ್ಕೃತಿಕ ಕರ್ನಾಟಕ ರೂಪಗೊಳ್ಳುತ್ತಲಿದೆ.

ಇದಲ್ಲದೆ ಅಕಾಡೆಮಿಗಳನ್ನು ಅಸ್ತಿತ್ವಕ್ಕೆ ತರುವ ಮೂಲಕ ಸಾಂಸ್ಕೃತಿಕ ಎಲ್ಲ ಶಾಖೆಗಳನ್ನು ಸ್ವತಂತ್ರವಾಗಿ ಬೆಳೆಸಲು ಅನುವು ಮಾಡಿಕೊಡಲಾಗಿದೆ. ಇಂದಿನದು ವಿಜ್ಞಾನ-ತಂತ್ರಜ್ಞಾನ ಪ್ರಧಾನ ಯುಗ. ಬದಲಾವಣೆಗೆ ಸರಿಯಾಗಿ ಸ್ಪಂದಿಸುವುದೆ ಬೆಳವಣಿಗೆ. ಈ ದೃಷ್ಟಿಯಿಂದ ಇತ್ತೀಚಿನ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಜಾಗತಿಕ ತಂತ್ರಜ್ಞಾನ ಖ್ಯಾತಿಯನ್ನು ತಂದು ಕೊಟ್ಟ ಖ್ಯಾತಿ ನಮ್ಮ ಸರಕಾರದ್ದಾಗಿದೆ. ಆದರೆ ಇದಕ್ಕೆ ತಕ್ಕಂತೆ ವಿಜ್ಞಾನ-ತಂತ್ರಜ್ಞಾನ ಸಾಹಿತ್ಯ ಬೆಳೆಯಲಿಲ್ಲ. ಕನ್ನಡ ಕೇವಲ ಸಾಹಿತ್ಯ ಭಾಷೆಯಾಗಿ ಬೆಳೆಯದೆ ವಿಜ್ಞಾನ-ಸಮಾಜ ವಿಜ್ಞಾನ ಕ್ಷೇತ್ರದಲ್ಲಿಯೂ ಪಳಗಬೇಕಿದೆ. ಈ ಅಲಕ್ಷ್ಯವನ್ನು ತಿದ್ದಿಕೊಳ್ಳುವ ಉದ್ದೇಶದಿಂದ ಆದಷ್ಟು ಬೇಗ ವಿಜ್ಞಾನ-ಸಮಾಜ ವಿಜ್ಞಾನ ಅಕಾಡೆಮಿಯನ್ನು ಅಸ್ತಿತ್ವಕ್ಕೆ ತಂದು ವಿಜ್ಞಾನ-ತಂತ್ರಜ್ಞಾನ-ಸಮಾಜವಿಜ್ಞಾನದ ಕ್ಷೇತ್ರಗಳಲ್ಲಿಯೂ ಕನ್ನಡವನ್ನು ದುಡಿಸುವ ಕೆಲಸ ಆರಂಭಿಸುತ್ತೇವೆ.

ಹೀಗೆ ಸಂಸ್ಕೃತಿ ಇಲಾಖೆ ಅಕಾಡೆಮಿಗಳಲ್ಲದೆ ಕನ್ನಡದ ಹಿತರಕ್ಷಣೆಗಾಗಿಯೇ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ'ವನ್ನು ಸರಕಾರ ಅಸ್ತಿತ್ವಕ್ಕೆ ತಂದುದು ವಿಶೇಷವೆಂದೇ ಹೇಳಬೇಕು. ಡಾ. ಪಾಟೀಲ ಪುಟ್ಟಪ್ಪನವರು ಅಧ್ಯಕ್ಷರಾಗುವುದರ ಮೂಲಕ ಈ ಪ್ರಾಧಿಕಾರಕ್ಕೆ ಹೊಸ ಆವೇಶ, ಹೊಸ ಶಕ್ತಿ ಪ್ರಾಪ್ತವಾದುದು ಇಂದು ಇತಿಹಾಸ. ಆಡಳಿತದಲ್ಲಿ ಕನ್ನಡ ಅನುಷ್ಠಾನಗೊಳ್ಳುವಲ್ಲಿ, ಗಡಿ ಸಮಸ್ಯೆಗಳ ನಿವಾರಣೆಯಲ್ಲಿ ಅವರು ಮಾಡಿದ ಕಾರ್ಯ, ಆಡಿದ ಪಾತ್ರ ಚರಿತ್ರಾರ್ಹವೆನಿಸಿವೆ. ಆಮೇಲೆಯೂ ಪ್ರಾಧಿಕಾರ ತುಂಬ ಚುರುಕಾಗಿ ಕೆಲಸಮಾಡಿದೆ. ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಕೃಪಾಂಕ, ತಾಂತ್ರಿಕ ವಿದ್ಯೆಯ ಅಭ್ಯಾಸದಲ್ಲಿ ಕನ್ನಡ ಸಂಸ್ಕೃತಿಯ ಅಭ್ಯಾಸಕ್ಕೆ ಮಾಡಿಕೊಟ್ಟ ಅನುಕೂಲತೆಗಳು ವಿಶೇಷ ಸಾಧನೆಯೆನಿಸಿವೆ.

ಈಗ ಪ್ರಾಧಿಕಾರ ಹೊಸ ಹೊಸ ಕನಸುಗಳನ್ನು ಹೊತ್ತು ನಡೆದಿದೆ. ಭಾಷೆಯಲ್ಲಿ ಅನೇಕ ಪ್ರಯೋಗಗಳು ನಡೆದು ಅದು ಆಧುನಿಕವಾಗುತ್ತ ನಡೆದಿದೆ. ಆದರೆ ಆಡಳಿತ ಭಾಷೆ ೫೦ ವರ್ಷಗಳಷ್ಟು ಹಳೆಯ ಶೈಲಿಯಲ್ಲಿ ಬರುತ್ತಲಿದೆ. ಇದರಿಂದಾಗಿ ಅದು ವರ್ತಮಾನಕ್ಕೆ ಅರ್ಥವಾಗದಂಥ ಸ್ಥಿತಿಯಲ್ಲಿದೆ. ಇದನ್ನು ಆಧುನಿಕಗೊಳಿಸುವ ಜನ ವೇದ್ಯಗೊಳಿಸುವ ಒಂದು ಸಮಗ್ರ ಯೋಜನೆಯೂ ಒಂದು.

ಕನ್ನಡದ ಅಭಿವೃದ್ಧಿಯೆಂದರೆ ಆಡಳಿತ, ಶಿಕ್ಷಣ, ಸಮಾಜ ಈ ಮೂರು ಕ್ಷೇತ್ರದಲ್ಲಿ ಕನ್ನಡದ ಬಳಕೆ ಮತ್ತು ಅಭಿವೃದ್ಧಿಯಾದರೆ, ಆಡಳಿತದಲ್ಲಿ ಕನ್ನಡ ಸಮಸ್ಯೆಯೇ ಅಲ್ಲ. ಏಕೆಂದರೆ ಇದು ನೇರವಾಗಿ ಸರಕಾರಕ್ಕೆ ಸಂಬಂಧಿಸಿದುದು. ಈ ದಿಸೆಯಲ್ಲಿ ಪ್ರಗತಿ ಸಾಧ್ಯವಾಗಿದೆ. ಶಿಕ್ಷಣದಲ್ಲಿ ಕನ್ನಡ ಭಾಷಾ ಮಾಧ್ಯಮ, ಕನ್ನಡೇತರ ಭಾಷಾ ಬಳಕೆಗಳಿಗೆ ಸೂಕ್ತ ಸ್ಥಾನಮಾನ ಕೊಡುವ ದಿಸೆಯಲ್ಲಿ ಇನ್ನೂ ಹಿತಕರವಾದ ದಾರಿ ಹುಡುಕಬೇಕಾಗಿದೆ. ಕನ್ನಡಿಗ ಏಕಕಾಲಕ್ಕೆ ರಾಜ್ಯಭಾಷೆಯಾದ ಕನ್ನಡವನ್ನೂ 'ದೂರ ತೀರವ ಸೇರಲು' ಸಂಪರ್ಕ ಭಾಷೆಗಳನ್ನೂ ಅಭ್ಯಸಿಸುವ ವೈಜ್ಞಾನಿಕ ವಿಧಾನವನ್ನು ಸರಕಾರ ಅಪೇಕ್ಷಿಸುತ್ತದೆ. ಇದಕ್ಕಿಂತ ಮುಖ್ಯವಾದುದು ಸಾಮಾಜಿಕರಲ್ಲಿ ಕನ್ನಡಪ್ರಜ್ಞೆಯನ್ನು ಜಾಗ್ರತಗೊಳಿಸುವುದು. ನಮ್ಮ ಮಕ್ಕಳು ಡಾಕ್ಟರ್‌ಗಲಿ, ಇಂಜನೀಯರ್ ಆಗಲಿ, ಏನೇ ಆಗಲಿ, ಮೊದಲು ಕನ್ನಡಿಗರಾಗಲಿ. ಈ ಜಾಗ್ರತಿಗಾಗಿ ಪ್ರಾಧಿಕಾರ ಸೂಕ್ತ ಯೋಜನೆಯನ್ನು ರೂಪಿಸುತ್ತಲಿದೆ. ಇಂಥ ಭಾಷಾ ಪ್ರಜ್ಞೆ ಬೆಳೆಯಬೇಕಾದರೆ ಕನ್ನಡವು ಅರ್ಥಗಳಿಸುವ, ಅನ್ನಗಳಿಸುವ, ಅಧಿಕಾರಗಳಿಸುವ ಮಾಧ್ಯಮವಾಗುವಂತೆ ನಾವು ನೋಡಿಕೊಳ್ಳಬೇಕಾಗಿದೆ. ಈ ಭೌತಿಕ ಶಕ್ತಿ ಸಾಂಸ್ಕೃತಿಕ ಶಕ್ತಿಗೆ ದಾರಿಮಾಡಿಕೊಡುತ್ತದೆ ಎಂಬ ಧೋರಣೆ ನನ್ನದಾಗಿದೆ.

ಕನ್ನಡವೆನ್ನುವುದು ಕೇವಲ ಒಂದು ಭಾಷೆಯಲ್ಲ; ಅದರ ಉತ್ಪಾದನೆಯಾದ ಸಾಹಿತ್ಯವಲ್ಲ, ಒಂದು ಸಂಸ್ಕೃತಿ. ಹೀಗಾಗಿ ಇತ್ತೀಚೆಗೆ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತ್ಯೇತರ ವಿಷಯಗಳೂ ಚರ್ಚೆಯಾಗುತ್ತಲಿವೆ ಸಮಷ್ಟಿಪ್ರಜ್ಞೆಗೆ ಇದು ಆರೋಗ್ಯಕರ ಬೆಳವಣಿಗೆಯೂ ಹೌದು. ಆದುದರಿಂದ ಮುಂದಿನ ದಿನಗಳಲ್ಲಿ ಇದನ್ನು 'ಕನ್ನಡ ಸಂಸ್ಕೃತಿ ಸಮ್ಮೇಳನ'ವೆಂದು ಕರೆಯುವುದು ಸೂಕ್ತವೆಂದು ನನ್ನ ಭಾವನೆ. ಹಾಗೆ ಮಾಡಿದ್ದೇ ಆದರೆ ಪರಿಷತ್ತಿನ ಇತಿಹಾಸದಲ್ಲಿ ಹೊಸ ಯುಗವನ್ನು ತೆರೆದಂತಾಗುತ್ತದೆಯೆಂದೂ ಹೇಳುತ್ತ ಈ ಸಮ್ಮೇಳನಕ್ಕೆ ಶುಭವನ್ನು ಹಾರೈಸುತ್ತೇನೆ.

ಆಧುನಿಕ ಕಾಲದ ಆರಂಭ ಘಟ್ಟದಲ್ಲಿ ವ್ಯಕ್ತಿ ತನ್ನ ಪ್ರಗತಿಗಾಗಿ ವಿಶ್ವಪರ್ಯಟನ ಮಾಡುತ್ತಲಿದ್ದ. ಇಂದು ವಿಶ್ವವನ್ನೇ ತನ್ನತ್ತ ಬರಮಾಡಿಕೊಂಡು ಪ್ರಗತಿ ಸಾಧಿಸುತ್ತಲಿದ್ದಾನೆ. ಇದು ಅಂತರ್ಜಾಲದ ಮೂಲಕ ಸಾಧ್ಯವಾಗಿದೆ. ಇಂಥ ಅಂತರ್ಜಾಲದ ಮೂಲಕ ಕರ್ನಾಟಕವನ್ನು ಕರ್ನಾಟಕ ಸಂಸ್ಕೃತಿಯನ್ನು ದೇಶಕ್ಕೆ ರಫ್ತು ಮಾಡುವುದು ಅಗತ್ಯವಿದೆ. ಇಂಥ ವ್ಯವಸ್ಥೆಯನ್ನು ದೊಡ್ಡ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ತರುವ ಯೋಚನೆ ಕರ್ನಾಟಕ ಸರಕಾರದ ಕಣ್ಣಮುಂದಿದೆ.

ಕನ್ನಡಕರಣವೇ ನಿಜವಾದ ಏಕೀಕರಣ.

ಆಕರ : ಮಾರ್ಗ ಸಂಪುಟ–೭

■■

೫೭

ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

ಸ್ಥಾವರದಿಂದ ಜಂಗಮಕ್ಕೆ

'ವೀರಶೈವಸಾಹಿತ್ಯ' ಎಂದಾಕ್ಷಣ ವಚನಸಾಹಿತ್ಯ ನೆನಪಾಗುತ್ತದೆ ; 'ವಚನಸಾಹಿತ್ಯ' ಎಂದಾಕ್ಷಣ ಬಸವಣ್ಣನವರ ವಚನಗಳು ನೆನಪಾಗುತ್ತವೆ. ಇಷ್ಟು ಗಾಢವಾಗಿ ನಮ್ಮನ್ನು ಆವರಿಸಿರುವ ಬಸವಣ್ಣನವರ ಬರವಣಿಗೆಯ ಕೆನೆಯ ಕೆನೆ, ಅವರ 'ಷಟ್ಸ್ಥಲವಚನ ಸಂಪುಟ'. ಒಂದರ್ಥದಲ್ಲಿ ಇದು ಬಸವಣ್ಣನವರ ಮಹಾಕಾವ್ಯ.

ಈ ಕಾರಣದಿಂದಾಗಿ ವಚನಪ್ರಸಾರಕಾರ್ಯದ ಇತಿಹಾಸದಲ್ಲಿ ಅವರ 'ಷಟ್ಸ್ಥಲ ವಚನ' ಸಂಪುಟ ಪ್ರಕಟನೆಗೆ ವಿಶೇಷಮಹತ್ವ ಸಲ್ಲುತ್ತದೆ. ಅದು ಪ್ರಥಮ ಸಲ ಪ್ರಕಟವಾದ ವರ್ಷ ಸ್ಮರಣಾರ್ಹವೆನಿಸುತ್ತದೆ. ಏಕೆಂದರೆ ಹಸ್ತಪ್ರತಿರೂಪದಲ್ಲಿ ಆಮೆಗತಿಯಿಂದ ಪ್ರಸಾರಗೊಳ್ಳುತ್ತಲಿದ್ದ ಈ ಕೃತಿ, ಈಗ ಯಂತ್ರಪ್ರತಿರೂಪ ಕಾರಣವಾಗಿ ಸಹಸ್ರ ಜನರ ಕರಕಮಲಗಳಲ್ಲಿ ತುಂಬಿ, ಹೃದಯಕಮಲಗಳಲ್ಲಿ ತುಳುಕಿತು. ಈ ಅಪೂರ್ವ ಘಟನೆ ಜರುಗಿದುದು ಅಂದರೆ ಈ ಕೃತಿ ಪ್ರಥಮಸಲ ಪ್ರಕಟವಾದುದು ೧೮೮೫ರಲ್ಲಿ. ಮುಂದೆ ೧೯೮೫ರಲ್ಲಿ ಈ ಪ್ರಕಟನೆಗೆ ನೂರು ವರ್ಷ ತುಂಬಿದ ನಿಮಿತ್ತ ೬ ಎಪ್ರಿಲ್ ೧೯೮೦ರಂದು ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನಸಂಸ್ಥೆ "ಬಸವಣ್ಣನವರ ಷಟ್‌ಸ್ಥಲವಚನಗಳು ಗ್ರಂಥಪ್ರಕಾಶನದ ಶತಮಾನೋತ್ಸವ ವಿಚಾರಸಂಕಿರಣ"ವೆಂಬ ಸ್ಮರಣಾರ್ಹ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಈ ಕಾರ್ಯಕ್ರಮದ ಅಂಗವಾಗಿ ಸಂಘಟಿಸಿದ್ದ "ವಚನಸಾಹಿತ್ಯ ಪ್ರಕಟನೆಯ ಇತಿಹಾಸ" ಹೆಸರಿನ ವಿಚಾರಸಂಕಿರಣದಲ್ಲಿ ವಿದ್ವಾಂಸರು ಮಂಡಿಸಿದ ನಾಲ್ಕು ಅಭ್ಯಾಸಪೂರ್ಣ ಪ್ರಬಂಧ ಮತ್ತು ಅಧ್ಯಕ್ಷೀಯ ಭಾಷಣಗಳ ಗುಚ್ಛವಾಗಿದೆ, ಈ ಕೃತಿ.

ಅಪ್ರಕಟಿತ ವಚನಸಾಹಿತ್ಯ ಪ್ರಕಟನೆಗೆ ಕಟಿಬದ್ಧವಾಗಿರುವ 'ವೀರಶೈವ ಅಧ್ಯಯನ ಸಂಸ್ಥೆ' ಯೋಜಿಸಿದ ಈ ವಿಚಾರಸಂಕಿರಣ ತುಂಬ ವಿನೂತನವಾದುದು. ಸಾಮಾನ್ಯವಾಗಿ ಹಾಡಿದ್ದನ್ನೇ ಹಾಡುವಂತಿರುವ ವೀರಶೈವ ವಿಚಾರಸಂಕಿರಣಗಳಿಗಿಂತ ಇದು ಭಿನ್ನವಾದುದು. ವಿನೂತನ ಕಾರ್ಯಕ್ರಮಗಳಿಗೆ ಹೆಸರಾಗಿರುವ 'ವೀರಶೈವ ಅಧ್ಯಯನಸಂಸ್ಥೆ' ಇಂಥ ವಿಷಯವನ್ನು ವಿಚಾರಸಂಕಿರಣಕ್ಕೆ ಆಯ್ದುಕೊಂಡುದು ಸಹಜವೇ ಆಗಿದೆ.

ಪೂಜ್ಯ ಶ್ರೀ ಫ. ಗು. ಹಳಕಟ್ಟಿ ಅವರು ಪ್ರಾರಂಭಿಸಿದ ಪ್ರಾಚೀನ ಅಪ್ರಕಟಿತ ವಚನಸಾಹಿತ್ಯದ ಪ್ರಕಟನೆಯ ಒಂದು ಸುತ್ತು 'ವೀರಶೈವ ಅಧ್ಯಯನ ಸಂಸ್ಥೆ'ಯ ಮೂಲಕ ಪೂರ್ಣಗೊಳ್ಳಲಿರುವ ಇಂದಿನ ಸಂದರ್ಭದಲ್ಲಿ, ಈ ವಿಚಾರ ಸಂಕಿರಣ ಜರುಗಿದುದು ಅರ್ಥಪೂರ್ಣ ಉಪಕ್ರಮ.

ನೂರುವರ್ಷಗಳ ಕಾಲಾವಧಿಯಲ್ಲಿ ವಚನಸಾಹಿತ್ಯ ಪ್ರಕಟವಾಗುತ್ತ ಬಂದ ಘಟ್ಟಗಳನ್ನು ಗುರುತಿಸುತ್ತ, ಆಯಾ ಘಟ್ಟಗಳಲ್ಲಿ ಜರುಗಿದ ಸಂಪಾದನ ಕೆಲಸದ ಸಾಧನೆ - ಮಿತಿಗಳನ್ನು ಈ ಕೃತಿಯಲ್ಲಿ ಸಾದರಪಡಿಸಲಾಗಿದೆ. ಇಲ್ಲಿ ಎಲ್ಲ ಸಂಪಾದನೆಗಳ, ಎಲ್ಲ ಸಂಪಾದಕರ ಹೆಸರುಗಳು ಬಂದಿಲ್ಲ, ಬರುವುದು ಸಾಧ್ಯವೂ ಇಲ್ಲ. ಆದರೆ ಪ್ರಮುಖ ಸಂಪಾದಕರ, ಸಂಸ್ಥೆಗಳ ಹೆಸರು ಕೈಬಿಟ್ಟುಹೋಗದಂತೆ ನೋಡಿಕೊಳ್ಳಲಾಗಿದೆ. ಇದು ಒಂದು ಸಮಗ್ರಚಿತ್ರ ನೀಡಿದರೆ ನಮ್ಮ ಶ್ರಮ ಸಾರ್ಥಕವೆಂದು ಬಗೆಯುತ್ತೇವೆ.

ಈ ವಿಚಾರಸಂಕಿರಣಕ್ಕೆ ಅವಕಾಶಮಾಡಿಕೊಟ್ಟು ಪ್ರಕಟಿಸುತ್ತಿರುವ ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನಸಂಸ್ಥೆಗೆ, ಅದರ ಸ್ಫೂರ್ತಿಯಾಗಿರುವ ಪೂಜ್ಯ ಶ್ರೀ ತೋಂಟದಾರ್ಯಜಗದ್ಗುರುಗಳಿಗೆ ನಮ್ಮ ಪ್ರಣಾಮಗಳು ಸಲ್ಲುತ್ತವೆ. ಪ್ರಬಂಧಗಳನ್ನು ಮಂಡಿಸಿದ ವಿದ್ವಾಂಸರಿಗೂ, ಅಚ್ಚುಕಟ್ಟಾಗಿ ಮುದ್ರಿಸಿದ ಧಾರವಾಡ ವಿಜಯ ಪ್ರೆಸ್ಸಿನ ಒಡೆಯರಾದ ಶ್ರೀ ವಿಜಯ ಹೊಸಕೇರಿ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

ಆಕರ : ಮಾರ್ಗ ಸಂಪುಟ–೬

■■

೫೮

ಪಾವಟೆಯವರಿಂದ ಹೆಗ್ಗಡೆಯವರ ವರೆಗೆ

೨೦೦೩

ಧಾರವಾಡದ "ಜನತಾ ಶಿಕ್ಷಣ ಸಮಿತಿ" ಯ ಅರವತ್ತು ವರ್ಷಗಳ ಇತಿಹಾಸದಲ್ಲಿ ಉತ್ತರಾರ್ಧ ಬದುಕು, ದರ್ಶನ–ಜ್ಞಾನ–ಚಾರಿತ್ರಗಳ ಆದರ್ಶದಲ್ಲಿ, ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ಶ್ರದ್ಧೆ–ಶಿಕ್ಷಣ–ಸಾಮಾಜಿಕ ನ್ಯಾಯಗಳ ಆಡಳಿತದಲ್ಲಿ ಆಕಾರಗೊಂಡಿದೆ.

ಬಿ. ಎಂ. ಶ್ರೀಯವರಂಥ ಯುಗಪುರುಷರು ಪ್ರಥಮ ಪ್ರಿನ್ಸಿಪಾಲರಾಗಿದ್ದರೂ ಈ ಸಂಸ್ಥೆಯ ಮೊದಲಿನ ಮೂವತ್ತು ವರ್ಷಗಳ ಬದುಕು ಕೆಳಗೆ ಬೇರು ಬಿಡಿಲಿಲ್ಲ. ಮೇಲೆ ಫಲ ನೀಡಲಿಲ್ಲ. ಇಂಥ ನಿರಾಸೆಯ ಸಂದರ್ಭದಲ್ಲಿ ಈ ಸಂಸ್ಥೆ(ಸರ್ವ)ಧರ್ಮಸ್ಥಳದ ಆಡಳಿತಕ್ಕೆ ಒಳಪಟ್ಟಿತು. ಧರ್ಮಸ್ಥಳದ ಮಂಜುನಾಥನಿಗೆ ಸಮಾಜದಿಂದ ಸಂದ ಭಕ್ತಿಯನ್ನು ಸಮಾಜದ ಶಕ್ತಿಯನ್ನಾಗಿಸುತ್ತಲಿರುವ ಪೂಜ್ಯ ಶ್ರೀ ಹೆಗ್ಗಡೆಯವರ ಬಹುಮುಖಿ ಪ್ರಯೋಗ ಇಂದು ಇತಿಹಾಸ. ಈ ಪ್ರಯೋಗದ ಒಂದು ಭಾಗವಾದುದು ಧಾರವಾಡದ ಪುಣ್ಯ. ಮಂಜುನಾಥನು ನೀರಿನಂತೆ ಗಳಿಸಿಕೊಡುವ ಹಣವನ್ನು ತೀರ್ಥದಂತೆ ಬಳಸುವಲ್ಲಿ ವಿದ್ಯಾಗಿರಿಯ ಶಿಕ್ಷಣಕ್ಕೆ ಕ್ರಮೇಣ ಸಾಮರ್ಥ್ಯ, ಪಾವಿತ್ರ್ಯ ಪ್ರಾಪ್ತವಾಗತೊಡಗಿತು. ಜನತಾ ಶಿಕ್ಷಣ ಸಮಿತಿಯೆಂಬ ನೆಲ ಹೊಲವಾಯಿತು. ತೋಟವಾಯಿತು. ಫಲಭರಿತವಾಯಿತು. ಧಾರವಾಡದ ಒಂದು ತುದಿಯ ಬೆಟ್ಟದ ಮೇಲೆ ಪಾವಟೆನಗರಿ, ಇನ್ನೊಂದು ತುದಿಯ ಬೆಟ್ಟದ ಮೇಲೆ ವಿದ್ಯಾಗಿರಿ. ಇಲ್ಲಿಯವರೆಗೆ ವಿದ್ಯಾಗಿರಿಯ ಮೇಲೆ ವ್ಯಕ್ತಿಗಳು ಬೆಳೆದಿದ್ದರು. ಈಗ ಸದಸ್ಯರು ಬೆಳೆಯತೊಡಗಿದರು. ಹೀಗಾಗಿ ಹೊರಗಿನ ಆವರಣ, ಒಳಗಿನ ವಾತಾವರಣವೆಲ್ಲ ಶೈಕ್ಷಣಿಕವಾಗತೊಡಗಿತು. ಶಿಸ್ತು ಒಂದು ಶಿಕ್ಷೆಯಲ್ಲ, ಸೃಜನಶೀಲತೆ. ಅಂಥ ಒಂದು ಸೃಜನಶೀಲ ಶಿಸ್ತು ಇಲ್ಲಿಯ ಶಿಕ್ಷಣದಲ್ಲಿ ಬೆಳೆದುಬಂದಿತು. ಧಾರವಾಡದ ಮಿಕ್ಕ ಸಂಸ್ಥೆಗಳ ಮೇಲೆ ಕೇಂದ್ರೀಕೃತವಾಗಿದ್ದ ಸಾಮಾಜಿಕರ ದೃಷ್ಟಿ ವಿದ್ಯಾಗಿರಿಯತ್ತ ಹೊರಳಿತು.

"ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು" ಕನ್ನಡ ಸಾಹಿತ್ಯದಲ್ಲಿ ಇದು ಸುಪ್ರಸಿದ್ಧ ಹೇಳಿಕೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ವಿದ್ಯಾಗಿರಿಯ ಆವರಣದಲ್ಲಿ "ಶಿಕ್ಷಣ ಚಿತ್ರಕ್ಕೆ

ವಜ್ರದ ಚೌಕಟ್ಟು" ನೀಡಿದವರು ಕಾರ್ಯದರ್ಶಿ ಶ್ರೀ ವಜ್ರಕುಮಾರ ಅವರು. ವಿದ್ಯಾಗಿರಿಯು ಬೆಳೆಯುತ್ತ ನಡೆದ ವಿದ್ಯಾಸಂಸ್ಥೆಗಳ ಭಾರ ಹೊರಲು ಸಮರ್ಥವಾಗುವಲ್ಲಿ, ಕೆಳಗೆ ಒಂದೆಡೆ ತಾಂತ್ರಿಕ ಮಹಾವಿದ್ಯಾಲಯ, ಇನ್ನೊಂದೆಡೆ ದಂತ ಮಹಾವಿದ್ಯಾಲಯ, ಮತ್ತೊಂದೆಡೆ ಔಷಧ ಮಹಾವಿದ್ಯಾಲಯ ಸ್ಥಾಪಿಸುವುದರ ಮೂಲಕ ಆ ಚೌಕಟ್ಟನ್ನು ಗಿರಿಯಿಂದ ಧರೆಗೆ ವಿಸ್ತರಿಸುತ್ತ ಬಂದರು. ಇಂಥ ಹೊಸ ಹೊಸ ಪ್ರಯತ್ನಗಳಿಂದಾಗಿ, ಈ ವರೆಗೆ ಪಾವಟೆಯವರಿಂದ ಸಾಂಪ್ರದಾಯಿಕ ಉನ್ನತ ಶಿಕ್ಷಣದ ವರ್ಚಸ್ಸು ಗಳಿಸಿದ್ದ ಧಾರವಾಡ, ಈಗ ಆಧುನಿಕ ತಾಂತ್ರಿಕ ಶಿಕ್ಷಣದ ವರ್ಚಸ್ಸು ಗಳಿಸಿತು. ಧಾರವಾಡದ ಉನ್ನತ ಶಿಕ್ಷಣದ ಇತಿಹಾಸವೆಂದರೆ "ಪಾವಟೆಯವರಿಂದ ಹೆಗ್ಗಡೆಯವರ ವರೆಗೆ" ಎಂಬುದು ಮನೆಮಾತಾಯಿತು.

ಆಕರ : ಮಾರ್ಗ ಸಂಪುಟ–೮

■■

೫೯

ಕಿತ್ತೂರು ಚೆನ್ನಮ್ಮರಾಣಿ : ನಾಣ್ಯ ಪ್ರಕಟಣೆ

೧೮೨೪ರಷ್ಟು ಪೂರ್ವದಲ್ಲಿಯೇ ಬ್ರಿಟಿಶರ ವಿರುದ್ಧ ಹೋರಾಡಿದ ಕಿತ್ತೂರು ಚೆನ್ನಮ್ಮ ರಾಣಿ, ಇಂದು ಕರ್ನಾಟಕದ ಜನಮನದಲ್ಲಿ ಸಾಂಸ್ಕೃತಿಕ ವ್ಯಕ್ತಿಯಾಗಿ(Cultural hero) ಬೆಳೆದಿದ್ದಾಳೆ. ಇದಕ್ಕೆ ನಿದರ್ಶನವೆಂಬಂತೆ ಅಂದಿನಿಂದಲೂ ಅವಳ ಹೆಸರಿನಲ್ಲಿ ವಿಪುಲ ಜನಪದ ಸಾಹಿತ್ಯ, ಕಾವ್ಯ, ನಾಟಕ, ಕಾದಂಬರಿ, ಚಲನಚಿತ್ರಗಳನ್ನೊಳಗೊಂಡ ಶಿಷ್ಟಸಾಹಿತ್ಯ ಹುಟ್ಟಿಕೊಂಡಿವೆ; ಹುಟ್ಟುತ್ತಲಿವೆ. ಹಳ್ಳಿಯಿಂದ ದಿಲ್ಲಿಯ ಸಂಸದರ ಭವನದ ಆವರಣದ ವರೆಗೆ ಅವಳ ಪುತ್ಥಳಿಗಳು ಸ್ಥಾಪನೆಗೊಂಡಿವೆ. ರಸ್ತೆ, ಬಡಾವಣೆ, ಉದ್ಯಾನ, ಸಂಸ್ಥೆಗಳು ಅವಳ ಹೆಸರನ್ನು ಹೊತ್ತು ರಾರಾಜಿಸುತ್ತಿವೆ. ಇವೆಲ್ಲವುಗಳಿಗೆ ಕಿರೀಟಪ್ರಾಯವೆಂಬಂತೆ ಅವಳ ರಾಜಧಾನಿಯಾದ ಕಿತ್ತೂರಿನಲ್ಲಿ "ರಾಣಿ ಚೆನ್ನಮ್ಮ ಬಾಲಿಕೆಯ ಸೈನಿಕ ಶಾಲೆ" ತಲೆಯೆತ್ತಿದೆ.

೧೫೮೫ರಲ್ಲಿ ಅಸ್ತಿತ್ವಕ್ಕೆ ಬಂದ ಈ ಸಂಸ್ಥಾನದ ಪ್ರಥಮ ರಾಜಧಾನಿ ಬೆಳಗಾವಿ ಜಿಲ್ಲೆಯ ಸಂಪಗಾವಿ. ಇಲ್ಲಿ ೪ ಜನ ಸಂಸ್ಥಾಪಕರು ಆಳಿದ ಬಳಿಕ, ೫ ನೆಯವನಾದ ಅಲ್ಲಪ್ಪ ದೇಸಾಯಿ ರಾಜಧಾನಿಯನ್ನು ೧೬೮೨ರಲ್ಲಿ ಸಂಪಗಾವಿಯಿಂದ ಕಿತ್ತೂರಿಗೆ ವರ್ಗಾಯಿಸಿದನು. ಫಲವತ್ತಾದ ಭೂಮಿ, ಹೊಳೆ-ಹಳ್ಳ-ಕೆರೆ-ಕಾಲುವೆಗಳ ನೀರಿನ ಸೌಕರ್ಯ, ದಟ್ಟ ಅರಣ್ಯ, ಹಿತರಕರವಾದ ಹವೆ, ಇತ್ಯಾದಿಗಳಿಂದಾಗಿ ರಾಜಧಾನಿ ಕಿತ್ತೂರು ಅಲ್ಪಾವಧಿಯಲ್ಲಿಯೇ ನಿರೀಕ್ಷೆ ಮೀರಿ ಬೆಳೆಯಿತು. ಅಂದೇ ವಿಸ್ತಾರವಾದ ಕೋಟೆ-ಕಂದರ, ಸುದೀರ್ಘ ರಸ್ತೆ, ಮೂರಂತಸ್ತಿನ ಅರಮನೆಗಳಿಂದ ಶೋಭಿಸಿತು. ೧೪ ಕರ್ಯಾತ(ತಾಲೂಕು) ೩೦೦ ಹಳ್ಳಿಗಳ ಕೇಂದ್ರ ಸ್ಥಾನವೆಂಬ ಕೀರ್ತಿ ಇದಕ್ಕೆ ಪ್ರಾಪ್ತವಾಯಿತು.

ಹೀಗೆ ರಾಜಧಾನಿಯಾಗುವ ಮೂಲಕ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಾಹಿತ್ಯಿಕ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯ ಪಾತ್ರವಾಡಿ ಕನ್ನಡಿಗರ ಗಮನಸೆಳೆದ ಇದು, ಸ್ಥಾಪನೆಗೊಂಡು ಇಂದಿಗೆ ಸುಮಾರು ೩೨೫ ವರ್ಷ ಸಂದಿವೆ. ಈ ಊರಿನ ಇತಿಹಾಸದಲ್ಲಿ ಇದು ಮಹತ್ವದ ಘಟ್ಟ. ಹೀಗಾಗಿ ಕನ್ನಡಿಗರು "ಕಿತ್ತೂರು ರಾಜಧಾನಿ ಸಂಸ್ಥಾಪನ ವರ್ಷ: ೩೨೫" ಎಂಬ ಸಮಾರಂಭವನ್ನು ಆಚರಿಸುವ ಸಿದ್ಧತೆಯಲ್ಲಿದ್ದಾರೆ. ಇದಕ್ಕೆ ಪೂರಕವೆಂಬಂತೆ ಕರ್ನಾಟಕ ಸರಕಾರ "ಕಿತ್ತೂರು ಅಭಿವೃದ್ಧಿ

ಪ್ರಾಧಿಕಾರ' ಸ್ಥಾಪಿಸಲು ಈ ವರ್ಷ ೨ ಕೋಟಿ ರೂಪಾಯಿ ತೆಗೆದಿರಿಸಿದೆ. ಈಗಾಗಲೇ ಅಧಿಕಾರಿಗಳು ಪರಿವೀಕ್ಷಣೆ ಇತ್ಯಾದಿ ಕೆಲಸ ಆರಂಭಿಸಿದ್ದಾರೆ. ಬ್ರಿಟಿಷರ ದಾಳಿಯಿಂದ ಹಾಳಾಗಿರುವ ಈ ರಾಜಧಾನಿ ಈ ಎಲ್ಲ ಅಭಿವೃದ್ಧಿ ಚಟುವಟಿಕೆಗಳಿಂದಾಗಿ ಮತ್ತೆ ಹಳೆಯ ವೈಭವ ಪಡೆಯುವ ಉತ್ಸಾಹದಲ್ಲಿದೆ. ಹೀಗೆ ರಾಜಧಾನಿ ಕಿತ್ತೂರು ತನ್ನ ೩೨೫ ನೆಯ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಲಿರುವ ಸಂದರ್ಭದಲ್ಲಿ ರಾಣಿ ಚೆನ್ನಮ್ಮನ ಸ್ಮರಣೆಯೆಂಬಂತೆ ಕೇಂದ್ರ ಸರಕಾರ ಅವಳ ಹೆಸರಿನಲ್ಲಿ ನಾಣ್ಯವನ್ನು ಪ್ರಕಟಿಸುವುದು ಸೂಕ್ತವೆನಿಸುತ್ತದೆ.

ಆಕರ : ಮಾರ್ಗ ಸಂಪುಟ–೮

■■

೬೦

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಧುನಿಕ ಕರ್ನಾಟಕದ ಇತಿಹಾಸದಲ್ಲಿ 'ಏಕೀಕರಣ' ಒಂದು ಮಹ್ವತದ ಘಟನೆ. ಇಂತಹ ಇನ್ನೊಂದು ಮಹತ್ವದ ಘಟನೆ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ. ಕರ್ನಾಟಕದ ಮಿಕ್ಕ ವಿಶ್ವವಿದ್ಯಾಲಯಗಳ ವ್ಯಾಪ್ತಿ ಎರಡು ಮೂರು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದ್ದರೆ, ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಕನ್ನಡಿಗರು ನೆಲೆಸಿರುವ ಎಲ್ಲ ದೇಶ-ವಿದೇಶಗಳನ್ನು ಒಳಗೊಂಡಿದೆ. ಅವುಗಳಿಗಿಂತ ಇದರ ಗುರಿಯೂ ಭಿನ್ನವಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ ಕನ್ನಡ ಸಂಸ್ಕೃತಿಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಸಾಹಿತ್ಯಕ್ಕೆ ಅನ್ವಯಿಸಿ ಆದಿಕವಿ ಪಂಪ ಹೇಳಿರುವ 'ದೇಶಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳ್ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಕನ್ನಡ ಸಮಾಜ ಮೊದಲಿನಿಂದಲೂ ದ್ವಿಭಾಷಾ ಸಂದರ್ಭದಲ್ಲಿ ಬದುಕುತ್ತ ಬಂದಿದೆ. ಹಿಂದಿನದು ಕನ್ನಡ-ಸಂಸ್ಕೃತ ದ್ವಿಭಾಷಾ ಸಂದರ್ಭ, ಇಂದಿನದು ಕನ್ನಡ-ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಪಶ್ಚಿಮ ಬದುಕು ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಇಂಥ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶೀ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ ಗುಣಾಂಶಗಳನ್ನು ಗುರುತಿಸುವುದು; ಜೊತೆಗೆ ಪೂರ್ಣ ಬದುಕಿಗೆ ಅಗತ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರವಹಿಸಿ ತುಂಬಿಕೊಳ್ಳುವುದು. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ' ಕನ್ನಡವು

ಕನ್ನಡವ ಕನ್ನಡಿಸುತಿರಬೇಕು, ಎಂಬಂತೆ ನಾವು ಕನ್ನಡವನ್ನು ಬದುಕಿಸಬೇಕಾಗಿದೆ, ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶಮಾಡಿಕೊಂಡು ಜಾಗತಿಕವಾಗುವುದು ತಪ್ಪಿ ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ ಪೂರೈಸಬೇಕಾದ ಇನ್ನೊಂದು ಕೆಲಸವೆಂದರೆ, ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣಮಾಡುವುದು. ಈ ರೀತಿ ಐತಿಹಾಸಿಕ ಪರಂಪರೆ ಮತ್ತು ಭೌಗೋಳಿಕ ಪರಿಸರಗಳಲ್ಲಿ ಶ್ರಮಿಸಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ 'ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ. ಈ ಅಗತ್ಯಗಳಿಗೆ ಉತ್ತರವೆಂಬಂತೆ ರಾಜ್ಯ ಸರಕಾರದ ನೇರ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದಿದೆ (೧೯೯೧), ಹಂಪಿಯ ಕನ್ನಡ ವಿಶ್ವವಿದ್ಯಾಲಯ.

ಆಕರ : ಮಾರ್ಗ ಸಂಪುಟ–೮

■■

೬೧

ದೇಶೀ ಸಮ್ಮೇಲನ : ಸ್ವಾಗತ

೧೯೯೮

ಸೀಮೋಲ್ಲಂಘನ

ಮಾನ್ಯರಾದ ದೇಜಗೌ ಅವರೇ, ಗಂಗಾವತಿಯ ಗಣ್ಯರೇ, ಮಿತ್ರರೇ,

"ಸೀಮೋಲ್ಲಂಘನ" ಕನ್ನಡ ವಿಶ್ವವಿದ್ಯಾಲಯದ ಕನಸೂ ಹೌದು; ಕ್ರಿಯೆಯೂ ಹೌದು. ಇಂಥ ಕನಸು-ಕ್ರಿಯೆಗಳು ಜನತೆಯ ಬದುಕು-ಭಾವನೆಗಳನ್ನು ಹೆಚ್ಚು ಸ್ಪಂದಿಸಿದಷ್ಟೂ ಯಾವುದೇ ಸಂಸ್ಥೆ ಹೆಚ್ಚು ಆರೋಗ್ಯಕರವಾಗಿ ಬೆಳೆಯುತ್ತದೆ. ಈ ಸತ್ಯವನ್ನು ಅರ್ಥಮಾಡಿಕೊಂಡಿರುವ ಕನ್ನಡ ವಿಶ್ವವಿದ್ಯಾಲಯ, ಕಮಲಾಪುರದ ವಿದ್ಯಾರಣ್ಯದಿಂದ ಕರ್ನಾಟಕದ ಜನಾರಣ್ಯದ ಕಡೆಗೆ ಸೀಮೋಲ್ಲಂಘನ ಮಾಡುತ್ತ ನಡೆದಿದೆ. ಇದಕ್ಕೆ ಕಣ್ಣು ಮುಂದಿನ ನಿದರ್ಶನವೆನಿಸಿದೆ, ಗಂಗಾವತಿಯಲ್ಲಿ ಜರುಗುತ್ತಲಿರುವ ಈ "ದೇಶೀ ಸಮ್ಮೇಲನ."

"ನಮ್ಮ ಕೃತಿಯೂ ಘನ, ವಿಸ್ಮೃತಿಯೂ ಘನ." ಕನ್ನಡಿಗರು ಬದುಕಿದ್ದ ಅನೇಕ ದೇಶೀಸತ್ಯಗಳು ಈ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿವೆ. ಈ ದೇಶೀಸತ್ಯಗಳ ಶೋಧ, ವಿಮರ್ಶೆ ಮತ್ತು ಪ್ರಸಾರ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮುಖ್ಯ ತಾತ್ವಿಕ ನೆಲೆಯಾಗಿದೆ. ಈ ನೆಲೆಯ ಒಂದು ಅಲೆ, ಇಂದಿನ "ದೇಶೀ ಸಮ್ಮೇಳನ." ಇತಿಹಾಸದುದ್ದಕ್ಕೂ ದೇಶಿಯನ್ನು ಬೆಂಬಲಿಸುತ್ತ ಬಂದ ಮತಂಗ, ಹರಿಹರ, ಹರಿದಾಸರ ಬಳಿಕ ಹಂಪಿಯಲ್ಲಿ ಅಸ್ತಿತ್ವ ಪಡೆದಿರುವ ಕನ್ನಡ ವಿಶ್ವವಿದ್ಯಾಲಯ ಮತ್ತು ಅದು ನಡೆಸುತ್ತಲಿರುವ ಈ ಸಮ್ಮೇಳನ ಆ ಪರಂಪರೆಯ ಮುಂದುವರಿಕೆಗಳೆನಿಸಿವೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ "ಜಾನಪದ" ಶಬ್ದಕ್ಕಿಂತ "ದೇಶಿ" ಶಬ್ದದ ಬಳಕೆ ಹೆಚ್ಚು, ಅದಕ್ಕೆ ಅರ್ಥಸೋಪಾನಗಳೂ ಹೆಚ್ಚು.

ಜಾನಪದ, ದೇಶಿ ಇವು ಸ್ಥೂಲವಾಗಿ ಪರ್ಯಾಯ ಪದಗಳೆನಿಸಿದರೂ "ದೇಶಿ" ಎನ್ನುವುದು ಜಾನಪದವನ್ನೂ ಅದರ ಮುಂದುವರಿಕೆಯನ್ನೂ ಪ್ರತಿನಿಧಿಸುತ್ತದೆ. ಅಂದರೆ, ಒಂದು ದೇಶದ ಜಾನಪದವೂ "ದೇಶಿ," ಆ ಜಾನಪದದಿಂದ ಬೆಳೆದುದೂ "ದೇಶಿ". ಇವುಗಳನ್ನು ಕ್ರಮವಾಗಿ "ಪ್ರಾಕೃತಿಕ ದೇಶಿ", "ಪರಿಷ್ಕೃತ ದೇಶಿ" ಎಂದು ಕರೆಯಬಹುದು. ಸಾಹಿತ್ಯಕ್ಕೆ ಅನ್ವಯಿಸಿ ಹೇಳುವುದಾದರೆ ಹಳ್ಳಿಯ ತಾಯಿ ಹೇಳುವ ತ್ರಿಪದಿ ಪ್ರಾಕೃತಿಕ ದೇಶಿ, ಸರ್ವಜ್ಞ ಹೇಳಿದ ತ್ರಿಪದಿ ಪರಿಷ್ಕೃತ ದೇಶಿ. ಹಳ್ಳಿಗರ ಹಾಡುಗಳು ಪ್ರಾಕೃತಿಕ ದೇಶಿ, ಬೇಂದ್ರೆ ಭಾವಗೀತೆಗಳು ಪರಿಷ್ಕೃತ ದೇಶಿ. ಕನ್ನಡ ಜನಪದ ಸಾಹಿತ್ಯ ಪ್ರಾಕೃತಿಕ ದೇಶಿ, ಬಸವಣ್ಣ ಹರಿಹರ ರಾಘವಾಂಕರಿಂದ ಜೀವಪಡೆದು ಕುಮಾರವ್ಯಾಸಾದಿಗಳಲ್ಲಿ ಮುಂದುವರಿದ ಕನ್ನಡ ಸಾಹಿತ್ಯ ಪರಿಷ್ಕೃತ ದೇಶಿ. ಒಟ್ಟಾರೆ ಈ ಎರಡೂ ನೆಲೆಯ ರಚನೆಗಳು ದೇಶಿಯೆನಿಸುತ್ತವೆ.

ಪ್ರಾಕೃತಿಕ ದೇಶಿಯಲ್ಲಿ ಬೇಟೆ ಜಾನಪದ, ಪಶುಪಾಲನ ಜಾನಪದವೆಂಬ ಎರಡು ಘಟ್ಟಗಳು ಮಾಯವಾಗಿ, ಇಂದು ಮೂರನೆಯ "ಕೃಷಿ ಜಾನಪದ" ಘಟ್ಟವೂ ಕೊನೆಯ ಹಂತಕ್ಕೆ ಬಂದು ನಿಂತಿದೆ. ಆ ಎರಡು ಘಟ್ಟಗಳು ಪ್ರಧಾನವಾಗಿ ಬುಡಕಟ್ಟು ಜಾನಪದ ಅಥವಾ ಮಾಂಸಾಹಾರಿ ಸಂಸ್ಕೃತಿ. ಈ ಮೂರನೆಯ ಘಟ್ಟ ಪ್ರಧಾನವಾಗಿ ಕೃಷಿಜಾನಪದ ಅಥವಾ ಸಸ್ಯಾಹಾರಿ ಸಂಸ್ಕೃತಿ. ದುರ್ದೈವದ ಸಂಗತಿಯೆಂದರೆ ಇಂದು ಜಾನಪದವೆಂದರೆ ಕೃಷಿಜಾನಪದವೆಂದೇ ಭಾವಿಸಿ ಬುಡಕಟ್ಟು ಜಾನಪದ(ಬೇಟೆ, ಪಶುಪಾಲನೆ)ವನ್ನು ಉಪೇಕ್ಷಿಸುತ್ತ ಬಂದಿದ್ದೇವೆ. ಈ ತಪ್ಪನ್ನು ತಿದ್ದಿಕೊಳ್ಳುವ ರೀತಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಕೃಷಿಸಂಸ್ಕೃತಿಯ "ಜಾನಪದ ವಿಭಾಗ"ದೊಂದಿಗೆ, ಬೇಟೆ-ಪಶುಪಾಲನ ಸಂಸ್ಕೃತಿಗಳ "ಬುಡಕಟ್ಟು ವಿಭಾಗ"ವನ್ನೂ ಅಸ್ತಿತ್ವಕ್ಕೆ ತಂದಿದೆ. ಇದರಿಂದಾಗಿ ಪ್ರಾಕೃತಿಕ ದೇಶಿಯ ಅಧ್ಯಯನ ಚಕ್ರಕ್ಕೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಪೂರ್ಣತ್ವ ಪ್ರಾಪ್ತವಾಗಿದೆ. ಮಿಕ್ಕಂತೆ ಪರಿಷ್ಕೃತ ದೇಶಿಯ ಬಗೆಗೆ ಈ ವಿಶ್ವವಿದ್ಯಾಲಯ ಹೊಸ ಹೊಸ ಯೋಜನೆಗಳನ್ನು ರೂಪಿಸಿಕೊಳ್ಳಬೇಕಾಗಿದೆ.

ಬದುಕಿನಲ್ಲಿ ಅನ್ಯಸಂಸ್ಕೃತಿಯ ಪ್ರಭಾವ ಅನಿವಾರ್ಯ. ಈ ಅನ್ಯಸಂಸ್ಕೃತಿಯನ್ನು ಜೀರ್ಣಿಸಿಕೊಂಡು ಬೆಳೆದುದು ಪರಿಷ್ಕೃತದೇಶಿ ಜೀವನಪದ್ಧತಿಯಾದರೆ, ಪ್ರಾಕೃತಿಕ ದೇಶಿಯನ್ನು ಕ್ಷೀಣಿಸಿಕೊಂಡು ಅನ್ಯಸಂಸ್ಕೃತಿಯ ಪ್ರಭಾವದಲ್ಲಿ ಬೆಳೆದುದು ಮಾರ್ಗ ಜೀವನಪದ್ಧತಿಯಾಗಿದೆ.

ಪ್ರಾಕೃತಿಕವೇ ಇರಲಿ, ಪರಿಷ್ಕೃತವೇ ಇರಲಿ, ದೇಶಿಯು "ಸಮಷ್ಟಿಪ್ರಜ್ಞೆ" ಪ್ರಧಾನವಾದುದು. ಮಾರ್ಗವು "ವ್ಯಷ್ಟಿಪ್ರಜ್ಞೆ" ಪ್ರಧಾನವಾದುದು. ಸಾಹಿತ್ಯದಲ್ಲಿ ಸಮಷ್ಟಿಪ್ರಜ್ಞೆ ಪ್ರಧಾನವಾದುದನ್ನು 'ರೀತಿ'ಯೆಂದು, ವ್ಯಷ್ಟಿಪ್ರಜ್ಞೆ ಪ್ರಧಾನವಾದದನ್ನು 'ಶೈಲಿಯೆಂದು ಕರೆಯಬೇಕೆಂದು ತೋರುತ್ತದೆ. ಈ ಹಿನ್ನೆಲೆಯಲ್ಲಿ ದೇಶಿನಿಷ್ಠ ಜೀವನಪದ್ಧತಿಯನ್ನು ರೀತಿಯೆಂದೂ, ಮಾರ್ಗನಿಷ್ಠ ಜೀವನಪದ್ಧತಿಯನ್ನು ಶೈಲಿಯೆಂದೂ ಕರೆಯಬಹುದಾಗಿದೆ.

ಹೀಗೆ ದೇಶಿ ಎನ್ನುವುದು ಒಂದು ದೇಶದ ಮೂಲ ಮತ್ತು ಮೂಲಜನ್ಯ ಜೀವನಪದ್ಧತಿಯೇ ಹೊರತು, ಎರವಲು ಮತ್ತು ಎರವಲು ಜನ್ಯ ಜೀವನಪದ್ಧತಿಯಲ್ಲ. ಕವಿರಾಜಮಾರ್ಗಕಾರ ಅಂದಿನ ಕನ್ನಡ ಸಾಹಿತ್ಯಕ್ಕೆ ಅನ್ವಯಿಸಿ "ನೆಲೆಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ" ಎಂದು ಹೇಳುವಂತೆ, ಇದು ತನಗೆ ತಾನೇ ಮಾದರಿಯಾಗಿ ಬೆಳೆಯುತ್ತ ಹೋಗುತ್ತದೆ. ಹೀಗೆ, "ಒಡಲನೂಲಿನಿಂದ ಜೇಡ ನೇಯುವಂತೆ ಜಾಲ" ತನ್ನ ಸಂಸ್ಕೃತಿಯ ಹೊಟ್ಟೆಯೊಳಗಿಂದ ಹುಟ್ಟಿದುದು ಮತ್ತು ಹಾಗೆ ಮತ್ತೆ ಮತ್ತೆ ಹುಟ್ಟಿ ಬೆಳೆಯುತ್ತಲಿರುವುದೇ ದೇಶಿ. ಬೀಜವೊಂದು ಬೇರೊಡೆದು, ಹಣ್ಣಿನ ಹಂತದಲ್ಲಿ ಮತ್ತೆ ಬೀಜವನ್ನು ಉತ್ಪಾದಿಸುವಂತೆ, ಈ ದೇಶಿ ಪ್ರಕ್ರಿಯೆ ಬೀಜದಿಂದ ಬೀಜಕ್ಕೆ ಮುಂದುವರಿಯುತ್ತಿರುತ್ತದೆ.

ಒಂದು ದೇಶದ ದೇಶಿ, ಭೌತಿಕವೇ ಇರಲಿ, ಅಭೌತಿಕವೇ ಇರಲಿ, ಅದರಲ್ಲಿಯೇ ಕಾಲ-ದೇಶ ಬದ್ಧವಾಗಿ ವೈವಿಧ್ಯತೆಯಿರುತ್ತದೆ; ಒಂದು ದೇಶದ ಕಂಠಸ್ಥ ಭಾಷೆಯಂತೆ. "ವಾಸುಗಿಯುಮರಿಯಲಾರದೆ ಬೇಸರುಗುಂ ದೇಶಿ ಬೇರೆವೇರಪ್ಪುದರಿಂ" ಎಂದು ಕವಿರಾಜಮಾರ್ಗಕಾರ ಕನ್ನಡ ದೇಶೀಭಾಷೆಯನ್ನು ಕುರಿತು ಹೇಳಿದುದನ್ನು ಇಲ್ಲಿ ನೆನೆಯಬಹುದು. ಹೀಗೆ ಮಾರ್ಗಕ್ಕೆ ವಿರುದ್ಧಮುಖಿಯಾಗಿ, ಜೀವನದ ಎಲ್ಲ ಕ್ಷೇತ್ರಗಳಲ್ಲಿ ಇದು ಬೆಳೆಯುತ್ತಲಿರುವ ಕಾರಣ, ದೇಶಿ ಛಂದಸ್ಸು, ದೇಶಿ ಕಾವ್ಯ, ದೇಶಿ ರಾಗ, ದೇಶಿ ಔಷಧ, ದೇಶಿ ಬ್ರಾಹ್ಮಣ ಇತ್ಯಾದಿ ಪದಗಳು ನಮ್ಮ ಪರಂಪರೆಯಲ್ಲಿ ಕಾಣಸಿಗುತ್ತವೆ. ಕರ್ನಾಟಕದ ಜೈನಮುನಿಗಳಲ್ಲಿ "ದೇಶಿಗಣ" ಹೆಸರಿನ ಒಂದು ಪಂಗಡವಿದೆ. ದೇಶಿಗೌಡ, ದೇಶಿಹಳ್ಳಿ ಹೆಸರಿನ ವ್ಯಕ್ತಿನಾಮ, ಗ್ರಾಮನಾಮಗಳು ಇಂದಿಗೂ ಸಿಗುತ್ತವೆ. ದೇಶಿಗೆ ವ್ಯಾಪಾರಿ ಎಂಬ ಅರ್ಥವೂ ಇದೆ. ಶಾಸನಗಳಲ್ಲಿ ಉಭಯದೇಶಿ, ನಾನಾದೇಶಿ, ಸಮಸ್ತದೇಶಿ ಎಂದು ಇವರು ಸೂಚಿತರಾಗಿದ್ದಾರೆ. ಈ ದೇಶಿ ವರ್ತಕರು ಸ್ಥಾಪಿಸಿದ ದೇವರು ದೇಶೇಶ್ವರ. ಅನಂತಪುರ

ಜಿಲ್ಲೆಯ ಮಡಕಶಿರಾ ತಾಲ್ಲೂಕಿನ ಹೆಂಜೇರು ಗ್ರಾಮದ ೧೧೨೫ರ ಶಾಸನವೊಂದು ಪೆರಿಯಾಳುವಶೆಟ್ಟಿಯು ದೇಶೇಶ್ವರ ದೇವಾಲಯ ಸ್ಥಾಪಿಸಿದುದನ್ನು ತಿಳಿಸುತ್ತದೆ. ಹೀಗೆ ಮಾರ್ಗದಿಂದ ಪ್ರತ್ಯೇಕವೆಂಬಂತೆ ವಿಶಿಷ್ಟಮುದ್ರೆಯಿಂದ "ದೇಶಿ" ಉದ್ದಕ್ಕೂ ಬಹುಮುಖಿಯಾಗಿ ಸಾಗಿಬಂದಿದೆ.

ಮಾರ್ಗ ಒಂದು ಅರ್ಥದಲ್ಲಿ ಕೃತಕ. ದೇಶಿ ಸ್ವಾಭಾವಿಕ. ಆದುದರಿಂದ ಸ್ವಾಭಾವಿಕವಾಗಿರುವ ದೇಶಿಗೆ ಕನ್ನಡದಲ್ಲಿ ಸುಂದರ, ಚೆಲವು ಎಂಬ ಅರ್ಥವೂ ಇದೆ. ಪರಿಷತ್ತಿನ ನಿಘಂಟು ದೇಶಿಗೆ ಹದಿಮೂರು ಅರ್ಥ ಹೇಳಿದುದನ್ನು ಇಲ್ಲಿ ನೆನೆಯಬಹುದು.

ದೇಶಿಯಲ್ಲಿ "ಪ್ರಾಕೃತಿಕ ದೇಶಿ", "ಪರಿಷ್ಕೃತ ದೇಶಿ" ಎಂಬ ಎರಡು ಪ್ರಕಾರಗಳಿದ್ದರೂ ಮಾರ್ಗದ ಜೊತೆ ಆಗಾಗ ಹೋರಾಟಕ್ಕೆ ಇಳಿಯುತ್ತ ಬರುವುದು, ಬಂದುದು ಪರಿಷ್ಕೃತ ದೇಶಿ. ಕವಿರಾಜಮಾರ್ಗಕ್ಕೆ ಮೊದಲು, ದೇಶೀ ನೆಲೆಯ ಕಾವ್ಯಪದ್ಧತಿ, ಮಾರ್ಗ ನೆಲೆಯ ಕಾವ್ಯಪದ್ಧತಿಗಳ ನಡುವೆ ದೊಡ್ಡ ಸಂಘರ್ಷ ಸಂಭವಿಸಿದಂತಿದೆ.

"ಇದು ಯಾವ ಛಂದಸ್ಸು? ಎಂದು ಕೇಳಿದರೆ ಇರಿಯಲು ಬರುತ್ತಾರೆ. ಪದಬಂಧದಲ್ಲಿ ಈ ಪ್ರಯೋಗ ಹೇಗೆ ಸರಿ? ಎಂದು ಕೇಳಿದರೆ ಬೈದೇ ಬಿಡುತ್ತಾರೆ. ನಿಮ್ಮದು ಯಾವ ಕವಿಮಾರ್ಗ? ಎಂದು ಪ್ರಶ್ನಿಸಿದರೆ ಸಾಕು ಹೊಡೆದೇ ಬಿಡುತ್ತಾರೆ. ಇದರ ಅರ್ಥವೇನೆಂದು ಕೇಳುವುದೇ ತಡ, ಕೆಟ್ಟ ಕೆಟ್ಟ ಮಾತುಗಳನ್ನು ಆಡಿ ಮೈ ಮೇಲಿನ ಬಟ್ಟೆಯನ್ನೇ ಎಳೆದುಬಿಡುತ್ತಾರೆ. ಇದು ಯಾವ ಶೈಲಿ? ಎಂದು ಕೇಳಿದರೆ ಕೊಂದೇ ಬಿಡುತ್ತಾರೆ. ಇತ್ತೀಚೆ ದೇಶೀ ವ್ಯಾಮೋಹಕ್ಕೆ ಬಿದ್ದಿರುವ ಮಹಾಕವಿಗಳು!!".

ಕವಿರಾಜಮಾರ್ಗಪೂರ್ವದ ಒಂದು ಪದ್ಯದಲ್ಲಿ ದೇಶಿಪರವಾಗಿರುವ ಕವಿಗಳನ್ನು ಮಾರ್ಗಪರವಾಗಿರುವ ಕವಿಗಳು ಹೀಗೆ ಟೀಕಿಸಿದುದನ್ನು ಇಲ್ಲಿ ಗಮನಿಸಬಹುದು. ಕವಿರಾಜಮಾರ್ಗಕಾರ ಇಂಥ ಸಂದರ್ಭದಲ್ಲಿ ಮಾರ್ಗದ ಪರವಾಗಿ ನಿಲ್ಲುತ್ತಾನೆ. ಪಂಪ ಮಾತ್ರ "ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು" ಎಂದು ಎರಡರ ಸಮನ್ವಯ ಸೂಚಿಸುತ್ತಾನೆ. ಹೀಗೆ ಆರಂಭವಾದ ದೇಶಿ, ಮಾರ್ಗಗಳ ಸಂಘರ್ಷ ಕನ್ನಡ ಸಾಹಿತ್ಯದಲ್ಲಿ ಹರಿಹರ, ನಯಸೇನ, ಆಂಡಯ್ಯ, ಮಹಾಲಿಂಗರಂಗ ಮೊದಲಾದವರಿಂದ ಒಂದು ಬಗೆಯ ಗುದುಮುರಿಗೆ ಸ್ಥಿತಿಯಲ್ಲಿಯೇ ಸಾಗಿಬಂದಿದೆ.

ದೇಶದಲ್ಲಿ ಉತ್ಪನ್ನವಾದವೆಲ್ಲವೂ 'ದೇಶಿ.' "ಮೋಡಿ-ಮಾಟ-ಮಂತ್ರ" ಇದಕ್ಕೆ ಹೊರತಲ್ಲ. ಈ ಚಟುವಟಿಕೆಗಳು ಪ್ರಾಕೃತಿಕ ದೇಶಿಯಲ್ಲಿ ಹುಟ್ಟಿ ಪರಿಷ್ಕೃತ ದೇಶಿಯಲ್ಲಿಯೂ ಬೆಳೆದು ಬಂದಿವೆ. ಅನ್ಯದೇಶೀಯ ಚಟುವಟಿಕೆಗಳಿಂದಲೂ ಇವು ಪ್ರಭಾವಿತವಾಗಿವೆ. ಲೌಕಿಕ ನೆಲೆ, ಧಾರ್ಮಿಕ ನೆಲೆಗಳಲ್ಲಿ ಹುಟ್ಟಿ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಚಲಿಸಿ ಮನುಷ್ಯನ ಭಾವನೆಗಳನ್ನು ಪ್ರಭಾವಿಸುತ್ತಲೂ ಬಂದಿವೆ. ಬಹಳಷ್ಟು ಸಲ ಶೋಷಣೆಯ ಮಾಧ್ಯಮಗಳಾಗಿ ಕೆಲಸ ಮಾಡುತ್ತಲಿವೆ. ಕೆಲವೊಮ್ಮೆ ಎಷ್ಟೇ ನಂಬುವುದಿಲ್ಲವೆಂದರೂ ನಂಬುವಂತೆ ಮಾಡುತ್ತವೆ. ಇವುಗಳ ಸ್ವರೂಪ ಮತ್ತು ನಿಜಸ್ವರೂಪಗಳನ್ನು ಅಭ್ಯಸಿಸಲು ಮತ್ತು ಸಮಾಜಕ್ಕೆ ಸರಿಯಾದ ಮಾರ್ಗದರ್ಶನ ನೀಡಲು ಈ ಸಮ್ಮೇಳನ ಯೋಗ್ಯ ವೇದಿಕೆಯಾಗಿದೆ ಎಂದು ಭಾವಿಸುತ್ತೇನೆ.

ಈ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ. ದೇ. ಜವರೇಗೌಡ ಅವರು ಕರ್ನಾಟಕ ಕಂಡ ಒಂದು ಅಪೂರ್ವಶಕ್ತಿ. ಇವರ ಮೊದಲ ಪ್ರೀತಿ ಕನ್ನಡ, ಕೊನೆಯ ಪ್ರೀತಿಯೂ ಕನ್ನಡ. ಕನ್ನಡ ಪ್ರಾಧ್ಯಾಪಕರಾಗಿ, ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಇವರು ಸಲ್ಲಿಸಿದ ಸೇವೆ "ನ ಭೂತೋ ನ ಭವಿಷ್ಯತಿ." ದೇಶೀ ಪರಿಸರದಲ್ಲಿ ಜನಿಸಿ, ದೇಶಿ ಬದುಕನ್ನು ಬಾಳುವ-ಆಳುವ ದೇ.ಜ.ಗೌ. ಅವರ ಬರವಣಿಗೆಯ ಮೂಲ ತುಡಿತ ದೇಶಿ.

ದೇಶಿ ಅಧ್ಯಯನ ಕರ್ನಾಟಕದಲ್ಲಿ ಸ್ನಾತಕೋತ್ತರ ಶಿಕ್ಷಣದಲ್ಲಿ ಸ್ಥಾನಪಡೆಯುವುದಕ್ಕೆ ದುಡಿದ ಪ್ರಥಮರಲ್ಲಿ ಒಬ್ಬರಾಗಿ, ಅದನ್ನು ಎಲ್ಲ ಆಯಾಮಗಳಲ್ಲಿ ಬೆಳೆಸಿದವರು ದೇಜಗೌ. ಹೀಗಾಗಿ ಅವರು ಈ ಪ್ರಥಮ ದೇಶೀ ಸಮ್ಮೇಳನದ ಅಧ್ಯಕ್ಷರಾದುದು, ಸೂಕ್ತವಾಗಿರುವಂತೆ ನಮ್ಮೆಲ್ಲರಿಗೆ ಸಂತೋಷದ ವಿಷಯವೂ ಆಗಿದೆ.

ಈ ಎರಡೂ ದಿನಗಳ ವಿಚಾರಸಂಕಿರಣದಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳ ಜಾನಪದ ತಜ್ಞರು ಭಾಗವಹಿಸಿ "ಮೋಡಿ-ಮಾಟ ಮಂತ್ರ" ವಿಷಯವನ್ನು ಕುರಿತು ಪ್ರಬಂಧ ಮಂಡಿಸಲಿದ್ದಾರೆ. ಸುಪ್ರಸಿದ್ಧ ಜಾನಪದ ಹಾಡುಗಾರ್ತಿ, 'ಜನಪದಶ್ರೀ:೯೮' ಪ್ರಶಸ್ತಿ ವಿಜೇತೆ ಶ್ರೀಮತಿ ಫಕೀರವ್ವ ಗುಡಿಸಾಗರ ಅವರಿಗೆ ಈ ವೇದಿಕೆಯಲ್ಲಿ ಸಲ್ಲಲಿರುವ ಸತ್ಕಾರ ಜಾನಪದಕ್ಕೆ ಸಂದ ಸತ್ಕಾರವಾಗಿದೆ. ನಮ್ಮ ಭಾಗದ ಸುಪ್ರಸಿದ್ಧ ಜಾನಪದ ವಿದ್ವಾಂಸರೂ, ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಅದನ್ನು ಅನುಷ್ಠಾನಗೊಳಿಸಲು ಶ್ರಮಿಸಿದವರೂ ಆದ ಡಾ. ಎಂ. ಜಿ. ಬಿರಾದಾರ ಅವರ ಆಗಮನದಿಂದಾಗಿ ಈ ಸಮ್ಮೇಳನಕ್ಕೆ ಒಂದು ವಿಶೇಷತೆ ಪ್ರಾಪ್ತವಾಗಿದೆ. ಇವರೆಲ್ಲರಿಗೆ ಹೃತ್ಪೂರ್ವಕ ಸ್ವಾಗತ ಬಯಸುತ್ತೇನೆ.

ಗಂಗಾವತಿ ಒಂದು ಗಟ್ಟಿ ನಗರ. ಶ್ರೀ ಚನ್ನಬಸವಸ್ವಾಮಿ ಪಟ್ಟಣ ಸಹಕಾರಿ ಬ್ಯಾಂಕಿನ ಆಡಳಿತ ವರ್ಗ ಒಂದು ಗಟ್ಟಿ ಕುಟುಂಬ. ಈ ನಗರದ ಸಹಕಾರದಿಂದ, ಈ ಕುಟುಂಬದ ನೇತೃತ್ವದಲ್ಲಿ ಈ ಸಮ್ಮೇಳನ ಇಂದು ಜರುಗುತ್ತಲಿದೆ. ಕೆಲವು ಊರುಗಳು ಕೇವಲ ಭೌತಿಕವಾಗಿ ಬೆಳೆದಿರುತ್ತವೆ, ಹೆಚ್ಚಿನದಾಗಿ ಧಾರ್ಮಿಕವಾಗಿಯೂ ಬೆಳೆದಿರುತ್ತವೆ. ಇನ್ನೂ ಹೆಚ್ಚಿನದೆಂಬಂತೆ ಸಾಂಸ್ಕೃತಿಕವಾಗಿಯೂ ಬೆಳೆದಿರುವುದು ಗಂಗಾವತಿಯ ವೈಶಿಷ್ಟ್ಯ. ಈ ಭವ್ಯ ಕಲ್ಯಾಣಮಂಟಪ, ಇದರಲ್ಲಿ ಆಗಾಗ ಜರುಗುತ್ತಲಿರುವ ಕಾರ್ಯಕ್ರಮಗಳೇ ಇದಕ್ಕೆ ಸಾಕ್ಷಿ. ಇವುಗಳಿಗೆ ಕಳಸವಿಟ್ಟಂತೆ ಈ ಸಮ್ಮೇಳನ ಜರುಗುತ್ತಲಿದೆ. ಈ ಹೊಣೆಯನ್ನು ಹೊತ್ತ ಗಂಗಾವತಿಯ ನಾಗರಿಕರಿಗೂ ಬ್ಯಾಂಕಿನ ಆಡಳಿತ ವರ್ಗಕ್ಕೂ ನನ್ನ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗ ಇದೀಗ ಆಕಾರ ಪಡೆಯುತ್ತಲಿರುವ ಒಂದು ಜ್ಞಾನಶಾಖೆ. ಯುವ ಅಧ್ಯಾಪಕರ ಉತ್ಸಾಹ ಕಾರಣವಾಗಿ ಅಲ್ಲಿ ಅನೇಕ ಸಾಧನೆಗಳು ಆಕಾರ ಪಡೆಯಲಿವೆಯೆಂಬ ವಿಶ್ವಾಸ ನನ್ನದಾಗಿದೆ. ಆ ವಿಶ್ವಾಸಕ್ಕೆ ಉತ್ತರವೆಂಬಂತೆ ಎಲ್ಲರೂ ಶ್ರಮವಹಿಸಿ ಈ ಸಮ್ಮೇಳನವನ್ನು ಎತ್ತಿ ನಿಲ್ಲಿಸಿದ್ದಾರೆ. ಅವರ ಶ್ರಮ ಸಾರ್ಥಕವಾಗಿ ಮುಂದುವರಿಯಲೆಂದು ಹಾರೈಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಸೀಮೋಲ್ಲಂಘನಕ್ಕೆ ಸಾಕ್ಷಿಯಾಗಿರುವ ಈ ಸಮ್ಮೇಳನಕ್ಕೆ ಗಂಗಾವತಿ ಗಂಗೋತ್ರಿಯಾಗಿದ್ದು, ಈ ಸಮ್ಮೇಳನ ಪ್ರತಿವರ್ಷ ರಾಜ್ಯದ ಬೇರೆ ಭಾಗಗಳಲ್ಲಿ ಜರುಗಿ, ಒಂದು ಹೊಸ ಪರಂಪರೆಗೆ ನಾಂದಿಯಾಗಲೆಂದು ಹಾರೈಸಿ, ಈ ಸಮಾರಂಭವನ್ನು ಉದ್ಘಾಟಿಸುತ್ತೇನೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗ ಹಮ್ಮಿಕೊಂಡಿದ್ದ ಪ್ರಥಮ 'ದೇಶೀ ಸಮ್ಮೇಲನ'ದ ಸ್ವಾಗತ ಭಾಷಣ (ಗಂಗಾವತಿ, ೧೯೯೮, ನವೆಂಬರ್).

ಆಕರ : ಮಾರ್ಗ ಸಂಪುಟ–೬

೬೨

ಜಾನಪದ ಸಮ್ಮೇಳನ : ಸ್ವಾಗತ

೧೯೯೪

ಮಾನ್ಯ ಕುಲಪತಿಗಳಾದ ಡಾ. ಎಸ್. ಜಿ. ದೇಸಾಯಿ ಅವರೇ, ಸಮ್ಮೇಲನದ ಅಧ್ಯಕ್ಷರಾದ ಡಾ. ಆರ್. ಸಿ. ಹಿರೇಮಠ ಅವರೇ. ಜಾನಪದ ವಿದ್ವಾಂಸರೇ ಮತ್ತು ಮಹಾಜನರೇ.

ಇದು ಕನ್ನಡ ಅಧ್ಯಯನ ಪೀಠ ಆಚರಿಸುತ್ತಲಿರುವ ೧೨ನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಲನ.೧೨ ವರ್ಷವೆಂಬುದು ವ್ಯಕ್ತಿ ಜೀವನದಲ್ಲಿ ಒಂದು ಘಟ್ಟವೆಂದು, ಒಂದು ತಿರುವು ಬಿಂದುವೆಂದು ಜಾನಪದರು ನಂಬುತ್ತಾರೆ. ಈ ದೃಷ್ಟಿಯಿಂದ ಪ್ರಸ್ತುತ ೧೨ನೆಯ ಅಧಿವೇಶನ ಸೀಮೋಲ್ಲಂಘನ ಸಮ್ಮೇಲನವಾಗಿದೆ. ಆದುದರಿಂದ ಮುಂದಿನ ವರ್ಷದಿಂದ ಇದನ್ನು ವಿಷಯ ದೃಷ್ಟಿಯಿಂದ ಘನರ್ಘಟಿಸುವ, ಉತ್ತರ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರುವ ಇದನ್ನು ದಕ್ಷಿಣ ಕರ್ನಾಟಕಕಕ್ಕೂ, ಕರ್ನಾಟಕದ ಆಚೆಗೂ ಒಯ್ಯುವ ವಿಚಾರ ನಮ್ಮದಾಗಿದೆ.

ಕೇವಲ ಜನರ ಮಧ್ಯದಲ್ಲಿ ಬದುಕುತ್ತಲಿದ್ದ 'ಜಾನಪದ' ಇಂದು ವಿದ್ವಜ್ಜನರ ಅಭ್ಯಾಸದ ವಸ್ತುವಾಗಿದೆ. ವಿಶ್ವವಿದ್ಯಾಲಯವೆಂಬುದು ವಿಶ್ವದ ಎಲ್ಲ ಜ್ಞಾನ-ವಿಜ್ಞಾನಗಳ ಅಧ್ಯಯನ-ಅಧ್ಯಾಪನ-ಸಂಶೋಧನ ಪ್ರಕಟನ-ಪ್ರಸಾರಗಳ ಕೇಂದ್ರವಾಗಿರುವುದರಿಂದ, ಕರ್ನಾಟಕ ವಿಶ್ವವಿದ್ಯಾಲಯ 'ಜಾನಪದ'ವನ್ನೂ ತನ್ನ ಕಕ್ಷೆಗೆ ಒಳಪಡಿಸಿಕೊಂಡುದು ಸೂಕ್ತವೇ ಆಗಿದೆ. ಕಳೆದ ಕೆಲವು ವರ್ಷಗಳಿಂದ ಜಾನಪದ ಎಂ. ಎ. ವರ್ಗವನ್ನು ಪ್ರಾರಂಭಿಸಿದ ಅಧ್ಯಯನಪೀಠ, ಪ್ರತಿವರ್ಷ ೧೫ ವಿದ್ಯಾರ್ಥಿಗಳಿಗೆ ಬೋಧನಾವಕಾಶವನ್ನು ಕಲ್ಪಿಸಿದೆ. ಇದರ ಜೊತೆಗೆ ಜಾನಪದ ಸಾಹಿತ್ಯ ಸಂಗ್ರಹಕಾರ್ಯವನ್ನೂ ಕೈಗೆತ್ತಿಕೊಂಡು ಉತ್ತಮೋತ್ತಮ ಕೃತಿಗಳನ್ನು "ಜೀವನ ಜೋಕಾಲಿ" ಮಾಲೆಯಲ್ಲಿ ಪ್ರಕಟಿಸಿದೆ. ಇದರ ಫಲವಾಗಿ ತ್ರಿಪದಿ-ಹಾಡು-ಲಾವಣಿ -ಕಥನ - ಗೀತೆ - ಸಣ್ಣಾಟ - ದೊಡ್ಡಾಟ ಇತ್ಯಾದಿ ಪ್ರಕಾರಗಳು ಈ ಮಾಲೆಯಲ್ಲಿ ಬೆಳಕು ಕಂಡಿವೆ. ಇದಲ್ಲದೆ ಅಧ್ಯಯನಪೀಠ ಪ್ರತಿವರ್ಷ ಜಾನಪದಲ್ಲಿ ಪಿಎಚ್.ಡಿ. ಅಧ್ಯಯನ ಮಾಡಬಯಸುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಲಿದೆ. ಈ ವರೆಗೆ ಜನಪದ ಸಾಹಿತ್ಯ-ಜನಾಂಗ-ಆಚರಣೆ-ಗ್ರಾಮದೇವತೆ-ದೃಶ್ಯಕಲೆ ಇತ್ಯಾದಿ ವಿಷಯಗಳನ್ನು ಕುರಿತು ಅನೇಕ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದೆ. ಕೆಲವು ಪ್ರಬಂಧಗಳು ಬೆಳಕನ್ನು ಕಂಡಿದೆ.

ಈ ವರ್ಷದಿಂದ ಜಾನಪದ ಕಲೆಗಳ ಪ್ರತ್ಯಕ್ಷ ಅಧ್ಯಯನದ ಅವಶ್ಯಕತೆಯನ್ನು ಮನಗಂಡು, ಪ್ರಾತ್ಯಕ್ಷಿಕೆಗಳನ್ನು ನಡೆಸಲಾಗುತ್ತಿದೆ. ಕಲಾವಿದರನ್ನು ಅಧ್ಯಯನ ಪೀಠಕ್ಕೆ ಮೂರು ದಿನಗಳ ಕಾಲ ಬರಮಾಡಿಕೊಂಡು, ಅವರು ಪ್ರದರ್ಶಿಸುವ ಕಲೆಗಳ ನೇರ ಅಧ್ಯಯನ ಕೈಕೊಳ್ಳಲಾಗುತ್ತಿದೆ. ಕಲಾಪ್ರದರ್ಶನವನ್ನು

ಸೂಕ್ಷ್ಮವಾಗಿ ಅವಲೋಕಿಸುವುದು, ಅಭ್ಯಸಿಸುವುದು, ಕಲಾವಿದರೊಂದಿಗೆ ಚರ್ಚಿಸುವುದು, ಸಮಾಲೋಚಿಸುವುದು ಇತ್ಯಾದಿ ಕಾರ್ಯಗಳು ಜರುಗಿ, ಪ್ರತಿಯೊಂದು ಕಲೆಯ ವೈಜ್ಞಾನಿಕ ಅಧ್ಯಯನ ಮಾಡುವ, ಈ ಅಧ್ಯಯನದ ಫಲವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಉದ್ದೇಶಕ್ಕಾಗಿ ಈ ಪ್ರಾತ್ಯಕ್ಷಿಕೆಗಳನ್ನು ಪ್ರಾರಂಭಿಸಲಾಗಿದೆ.

ಈ ವರ್ಷ ಪ್ರಾರಂಭಿಸಿದ ಇನ್ನೊಂದು ಹೊಸ ಉಪಕ್ರಮವೆಂದರೆ ಜಾನಪದ ವಸ್ತುಸಂಗ್ರಹಾಲಯವನ್ನು ಅಸ್ತಿತ್ವಕ್ಕೆ ತಂದುದು. ಈಗಾಗಲೇ ಧಾರವಾಡ-ಬೆಳಗಾಂವ ಜಿಲ್ಲೆಗಳಲ್ಲಿ ಸಂಚರಿಸಿ, ಅನೇಕ ಜಾನಪದ ವಸ್ತುಗಳನ್ನು ಸಂಗ್ರಹಿಸಲಾಗಿದ್ದು, ಮುಂದಿನ ವರ್ಷಗಳಲ್ಲಿ ಒಂದು ಅಪೂರ್ವ "ಜಾನಪದ ವಸ್ತುಸಂಗ್ರಹಾಲಯ"ವನ್ನು ಸ್ಥಾಪಿಸುವ ಹವಣಿಕೆಯಲ್ಲಿದ್ದೇವೆ.

ಈ ಎಲ್ಲ ಪ್ರಯತ್ನಗಳ ಮುಡಿದು ಮಾಣಿಕ್ಯವೆನಿಸಿದೆ, ಈ ಜನಪದ ಸಮ್ಮೇಲನ. ವಿಶ್ವವಿದ್ಯಾಲಯ ಮತ್ತು ಜನತೆಯ ನಡುವೆ ಒಂದು ಸಾರ್ಥಕ ಸೇತುವೆಯಾಗಿ ಕೆಲಸ ಮಾಡಲೆಂಬ ದೃಷ್ಟಿಯಿಂದ, ಇದನ್ನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಜರುಗಿಸುತ್ತ ಬಂದಿದ್ದೇವೆ. ಇದು ವಿಚಾರಸಂಕಿರಣ, ರಂಗಪ್ರದರ್ಶನವೆಂಬ ಎರಡು ಆಯಾಮಗಳನ್ನೊಳಗೊಂಡಿದೆ. ಬೇರೆ ಬೇರೆ ಭಾಗಗಳಿಂದ ಆಮಂತ್ರಿಸಲ್ಪಟ್ಟ ವಿದ್ವಾಂಸರಿಂದ ಪ್ರಬಂಧ ಮಂಡನೆ-ಚರ್ಚೆ ನಡೆದು, ಇವು ಪ್ರತಿವರ್ಷ 'ಜಾನಪದ ಸಾಹಿತ್ಯ ದರ್ಶನ' ಹೆಸರಿನಿಂದ ಪುಸ್ತಕರೂಪದಲ್ಲಿ ಪ್ರಕಟವಾಗುತ್ತಲಿದೆ. ಆಕರ ಗ್ರಂಥಗಳಾಗಿರುವ ಇವು ಈಗಾಗಲೇ ಜಾನಪದ ವಿದ್ವಾಂಸರನ್ನು ಆಕರ್ಷಿಸಿವೆ.

ಈ ಪರಂಪರೆಯ ಮುಂದುವರಿಕೆಯೆಂಬಂತೆ ಇಂದು ಜರುಗುತ್ತಲಿರುವ ಸಮ್ಮೇಲನದಲ್ಲಿ "ಆಕಾಶ ಜಾನಪದ" ಎಂಬ ವಿನೂತನ ವಿಷಯವನ್ನು ವಸ್ತುವನ್ನಾಗಿಟ್ಟುಕೊಂಡಿದ್ದೇವೆ. ಇಲ್ಲಿ ಆಕಾಶ ಮತ್ತು ಅದರ ಅಂಗಗಳಾದ ಸೂರ್ಯ, ಚಂದ್ರ, ನಕ್ಷತ್ರ, ಗ್ರಹ, ಮೋಡ, ಮಳೆ ಇತ್ಯಾದಿ ವಿಷಯಗಳ ಹಿಂದೆ ಇರುವ ಜಾನಪದರ ಅನಿಸಿಕೆ ಏನು? ಅನುಭವಗಳೇನು? ಎಂಬುದನ್ನು ಸಂಗ್ರಹಿಸುವ, ಸಂಯೋಜಿಸುವ ಕಾರ್ಯ ಇಲ್ಲಿ ನಡೆಯುತ್ತದೆ. ಅಭ್ಯಾಸಪೂರ್ಣ ಪ್ರಬಂಧಗಳನ್ನು ಮಂಡಿಸಲು ಆಗಮಿಸಿದ ವಿದ್ವಾಂಸಮಿತ್ರರನ್ನು ಈ ಸಂದರ್ಭದಲ್ಲಿ ಸಂತೋಷದಿಂದ ಸ್ವಾಗತಿಸುತ್ತೇನೆ.

ಜನಪದ ಸಮ್ಮೇಲನದ ಹೃದಯ, ಜಾನಪದ ಕಲಾವಿದರು ಪ್ರತಿದಿನ ಸಂಜೆ ನಡೆಸಿಕೊಡಲಿರುವ ರಂಗಪ್ರದರ್ಶನ. ಇವು ಮನರಂಜನೆಯೊಂದಿಗೆ ಎರಡೂ ದಿನ ವಿದ್ವಾಂಸರ ಅಧ್ಯಯನಕ್ಕೆ ವಸ್ತುವಾಗುತ್ತಲಿರುವುದು ವಿಶೇಷವೆಂದೇ ಹೇಳಬೇಕು, ನಾಡಿನ ನಾನಾ ಭಾಗಗಳಿಂದ ಅನೇಕ ಜನ ಕಲಾವಿದರು ಇಲ್ಲಿಗೆ ಬಂದಿದ್ದಾರೆ. ಅವರು ನಗರವಿದೂರ ವ್ಯಕ್ತಿಗಳು. ಕಾರಣ, ಈ ಗ್ರಾಮೀಣಕಲೆಗಳನ್ನು ನಗರವಾಸಿಗಳಾದ ನೀವು ತಾಳ್ಮೆಯಿಂದ ನೋಡಬೇಕು-ಕೇಳಬೇಕು - ಪ್ರೋತ್ಸಾಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಮ್ಮೇಲದ ಅಧ್ಯಕ್ಷತೆ ವಹಿಸಿದವರು ನಮ್ಮೆಲ್ಲರಿಗೆ ಹಿರಿಯರೂ, ನಮ್ಮ ನಾಡಿನ ಘನವಿದ್ವಾಂಸರೂ ಆದ ಡಾ. ಆರ್. ಸಿ. ಹಿರೇಮಠ ಅವರು. ಈ ಸಮ್ಮೇಳನವನ್ನು ಪ್ರಾರಂಭಿಸಿದವರೂ ಈ ಸಮ್ಮೇಳನದ ತವರುಮನೆಯಾದ ಕನ್ನಡ ಅಧ್ಯಯನ ಪೀಠದ ಶಿಲ್ಪಿಗಳೂ ಆಗಿರುವ ಅವರು ಶಿಷ್ಟಪದದಂತೆ ಜಾನಪದದ ಅಭ್ಯಾಸಿಗಳೂ ಹೌದು. ಇವರು ಈ ಸಮ್ಮೇಳನದ ಅಧ್ಯಕ್ಷರಾದುದು ನಮ್ಮೆಲ್ಲರಿಗೆ ವಿಶೇಷ ಸಂತೋಷವನ್ನುಂಟು ಮಾಡಿದೆ. ನಮ್ಮ ಆಮಂತ್ರಣವನ್ನು ಒಪ್ಪಿಕೊಂಡು ಆಗಮಿಸಿದ ಡಾ. ಹಿರೇಮಠ ಅವರನ್ನು ಗೌರವದಿಂದ ಬರಮಾಡಿಕೊಳ್ಳುತ್ತೇನೆ.

ಕನ್ನಡ ಅಧ್ಯಯನ ಪೀಠದ ಪ್ರತಿಯೊಂದು ಕಾರ್ಯಕಲಾಪಗಳಿಗೆ ಕುಲಪತಿಗಳ ಮಾರ್ಗದರ್ಶನ, ಸಹಾಯ ಅತ್ಯವಶ್ಯ. ಇದೆಲ್ಲವನ್ನು ಮುಕ್ತಹಸ್ತದಿಂದ ನೀಡುತ್ತಲಿರುವ ಕುಲಪತಿ ಡಾ. ಎಸ್. ಜಿ. ದೇಸಾಯಿ ಅವರು ನಮ್ಮ ಬಿನ್ನಹವನ್ನು ಮನ್ನಿಸಿ ಈ ಸಮ್ಮೇಳನವನ್ನು ಉದ್ಘಾಟಿಸಲು ಆಗಮಿಸಿದ್ದಾರೆ. ಅವರನ್ನು

ವಿಶ್ವಾಸದಿಂದ ಸ್ವಾಗತಿಸುತ್ತೇನೆ. ಈ ಸಮ್ಮೇಳನ ನಮ್ಮ ವಿಶ್ವವಿದ್ಯಾಲಯದ ಬೆಳಗಾವಿ ಸ್ನಾತಕೋತ್ತರ ಕೇಂದ್ರದ ಆಶ್ರಯದಲ್ಲಿ ಜರುಗುತ್ತಲಿದೆ. ಈ ಕೇಂದ್ರದ ಆಡಳಿತಾಧಿಕಾರಿಗಳೂ, ಕನ್ನಡ ವಿಭಾಗದ ಮುಖ್ಯಸ್ಥರೂ ಆಗಿರುವ ಡಾ. ಗುರುಲಿಂಗ ಕಾಪಸೆ ಅವರು ಶೈಕ್ಷಣಿಕ ಶಿಸ್ತು, ಶ್ರಮ-ಶ್ರದ್ಧೆಗಳಿಗೆ ಹೆಸರಾದವರು. ಸ್ಥಳೀಯ ಸ್ನೇಹಿತರ ಸಹಕಾರದೊಂದಿಗೆ ಈ ದೊಡ್ಡ ಹೊಣೆಯನ್ನು ಸಕ್ರಮವಾಗಿ ಸಂಘಟಿಸಿದ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಪೀಠದ ಎಲ್ಲ ಆಗು-ಹೋಗುಗಳಿಗೆ ಅಲ್ಲಿಯ ಅಧ್ಯಾಪಕ ವರ್ಗ ಹೊಣೆಯಾಗಿದೆ. ಸಮ್ಮೇಲನದಂಥ ದೊಡ್ಡ ಹೊಣೆಯ ಸಂದರ್ಭದಲ್ಲಿಯಂತೂ ಅವರು ಹೆಚ್ಚು ಶ್ರಮಿಸಬೇಕಾಗುತ್ತದೆ. ಅಂಥ ಶ್ರಮ ಶ್ರದ್ಧೆಗಳಿಂದ ಈ ಸಮ್ಮೇಲನಕ್ಕಾಗಿ ದುಡಿದ ಎಲ್ಲ ಅಧ್ಯಾಪಕ ಮಿತ್ರರಿಗೆ ಕೃತಜ್ಞತೆ ಹೇಳುತ್ತ, ನಿಮ್ಮೆಲ್ಲರನ್ನು ಇನ್ನೊಮ್ಮೆ ಆದರರಿಂದ ಬರಮಾಡಿಕೊಳ್ಳುತ್ತೇನೆ.

೧೨ನೆಯ ಜಾನಪದ ಸಮ್ಮೇಲನದ (ಬೆಳಗಾವಿ) ಸ್ವಾಗತ ಭಾಷಣ (೧೯೮೪) - ಜಾನಪದ ಸಾಹಿತ್ಯದರ್ಶನ - ಸಂಪುಟ ೧೨.

ಆಕರ : ಮಾರ್ಗ ಸಂಪುಟ–೬

೬೩

ಕನ್ನಡ ವಿಶ್ವವಿದ್ಯಾಲಯ ನುಡಿಹಬ್ಬದ ಸ್ವಾಗತ : ೧

ಶೈಕ್ಷಣಿಕ ವಿಕಾಸದ ಹೊಸ ಆಯಾಮಗಳು

೧

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳೂ, ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆಗಿರುವ ಮಾನ್ಯ ಶ್ರೀ ಜೆ. ಎಚ್.ಪಟೇಲ್ ಅವರೇ, ಉನ್ನತ ಶಿಕ್ಷಣ ಸಚಿವರೂ, ಕನ್ನಡ ವಿಶ್ವವಿದ್ಯಾಲಯದ ಸಹಕುಲಾಧಿಪತಿಗಳೂ ಆಗಿರುವ ಮಾನ್ಯ ಶ್ರೀ ಬಸವರಾಜ ಪಾಟೀಲ ಅಟ್ಟೂರ ಅವರೇ, "ನಾಡೋಜ" ಗೌರವ ಪದವಿ ವಿಭೂಷಿತರಾದ ಡಾ. ದೇ. ಜವರೇಗೌಡ, ಡಾ. ರಾಜಕುಮಾರ್, ಡಾ. ಜಾರ್ಜ್ ಮಿಶಲ್ ಅವರೇ, ಮುಖ್ಯ ಅತಿಥಿಗಳಾದ ಡಾ. ವಿ. ಆಯ್. ಸುಬ್ರಹ್ಮಣ್ಯಂ ಅವರೇ, ಮಾನ್ಯ ಸಚಿವರೇ, ಶಾಸಕರೇ, ಮಹನಿಯರೇ, ಮಹಿಳೆಯರೇ–ನಿಮ್ಮೆಲ್ಲರಿಗೂ ಸ್ವಾಗತ.

ಪಾಶ್ಚಿಮಾತ್ಯ ಪದ್ಧತಿಯ ವಿಶ್ವವಿದ್ಯಾಲಯಗಳು ಭಾರತದಲ್ಲಿ ಆರಂಭವಾಗಿ ನೂರು ವರ್ಷ ಗತಿಸಿದವು. ಈ ಅವಧಿಯಲ್ಲಿ ಸಿದ್ಧ ಮಾದರಿಯ ಈ ವಿಶ್ವವಿದ್ಯಾಲಯಗಳಿಂದ ಭಿನ್ನವೆಂಬಂತೆ, ಶಾಂತಿನಿಕೇತನದಂಥ ಹೊಸ ಬಗೆಯ ವಿಶ್ವವಿದ್ಯಾಲಯಗಳು ಅಲ್ಲಲ್ಲಿ ಅಸ್ತಿತ್ವಕ್ಕೆ ಬಂದವು. ಇವುಗಳಲ್ಲಿ ಒಂದು ವಿಶಿಷ್ಟ ಪ್ರಯೋಗವೆನಿಸಿದೆ, ಹಂಪಿಯ ಕನ್ನಡ ವಿಶ್ವವಿದ್ಯಾಲಯ. ಕನ್ನಡ ಸಂಸ್ಕೃತಿಯನ್ನು ಶೋಧಿಸುವ, ವ್ಯಾಖ್ಯಾನಿಸುವ, ಪ್ರಕಟನ–ಪ್ರಸಾರಕಾರ್ಯವನ್ನು ಪೂರೈಸುವ ಹೊಣೆಯನ್ನು ಈ ಸಂಸ್ಥೆ ಹೊಂದಿದೆ. ಈ ಎಲ್ಲ ಚಟುವಟಿಕೆಗಳಿಗೆ ತಾತ್ವಿಕ ನೆಲೆಯಾಗಿದೆ, ದೇಶಿ.

ಸಮಗ್ರ ಭಾರತದಲ್ಲಿಯೇ ರಾಜ್ಯಸರಕಾರ ಪೋಷಿಸುವ ಏಕೈಕ ವಿದ್ಯಾ ಸಂಸ್ಥೆಯಾಗಿದೆ, ಕನ್ನಡ ವಿಶ್ವವಿದ್ಯಾಲಯ. ಹೀಗಾಗಿ ಮೊದಲಿನಿಂದಲೂ ಈ ಸಂಸ್ಥೆಗೆ ಉದಾರ ನೆರವು ನೀಡುತ್ತ, ಬಂದ ಕರ್ನಾಟಕ ಸರ್ಕಾರವನ್ನು, ಅದರ ಮಹಾನಾಯಕರಾಗಿರುವ ಮಾನ್ಯ ಶ್ರೀ ಜೆ. ಎಚ್. ಪಟೇಲ್ ಅವರನ್ನು ಆರಂಭದಲ್ಲಿಯೇ ಅಭಿನಂದಿಸುತ್ತೇನೆ.

ಶಿಕ್ಷಣ, ವಿಶ್ವವಿದ್ಯಾಲಯದ ಹೃದಯ. ಇದಕ್ಕೆ ಅರ್ಥ ತುಂಬುವುದಕ್ಕಾಗಿ ಈ ವರ್ಷದ ಆರಂಭದಲ್ಲಿಯೇ ಮಾಡಿದ ಬಹುಮುಖ್ಯ ಕೆಲಸವೆಂದರೆ ವಿಭಾಗಗಳ ಪುನಾರಚನೆ. ಇದರಿಂದಾಗಿ ಮಹಿಳಾ ಅಧ್ಯಯನ ವಿಭಾಗ, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ವಿಶ್ವ ಕನ್ನಡ ವಿಭಾಗಗಳು ಅಸ್ತಿತ್ವಕ್ಕೆ ಬಂದು ಈ ವಿಶ್ವವಿದ್ಯಾಲಯದ ಶೈಕ್ಷಣಿಕ ವಿಕಾಸಕ್ಕೆ ಹೊಸ ಆಯಾಮಗಳು ಪ್ರಾಪ್ತವಾಗಿವೆ.

ವಿಶ್ವವಿದ್ಯಾಲಯದ ಬೆಳವಣಿಗೆಯೆಂದರೆ ವಿಭಾಗಗಳ ಬೆಳವಣಿಗೆ. ಅವುಗಳ ಬೆನ್ನೆಲುಬು ಗಟ್ಟಿಯಾದರೆ ಮಾತ್ರ ವಿಶ್ವವಿದ್ಯಾಲಯದ ಬೆನ್ನೆಲುಬು ಗಟ್ಟಿಯಾಗಿರುತ್ತದೆ. ಈ ಆದರ್ಶದಲ್ಲಿ ವಿಭಾಗಗಳು ಮೈಮುರಿದು ಬೆಳೆಯುವುದಕ್ಕಾಗಿ, ಅವುಗಳಿಗೆ ಸ್ವತಂತ್ರ ಘಟಕದ ಸ್ಥಾನಮಾನವನ್ನು ಕಲ್ಪಿಸಿಕೊಡಲಾಗಿದೆ. ಅಂದರೆ ವಾರ್ಷಿಕ ಬಜೆಟ್ ಹಂಚಿಕೊಟ್ಟು, ಸಾಂಸ್ಥಿಕ ಯೋಜನೆ, ವೈಯಕ್ತಿಕ ಯೋಜನೆ, ವಿಚಾರ ಸಂಕಿರಣಗಳ ಹೊಣೆಗಳನ್ನು ವಹಿಸಿಕೊಡಲಾಗಿದೆ. ಪ್ರತಿ ತಿಂಗಳು ವರದಿ ತರಿಸಿಕೊಳ್ಳುವ ಮತ್ತು ಪ್ರತಿ ಮೂರು ತಿಂಗಳಿಗೊಮ್ಮೆ ಕುಲಪತಿಗಳು ವಿಭಾಗಗಳಿಗೆ ಭೇಟಿ ನೀಡುವ ಮೂಲಕ, ಅಲ್ಲಿ ಸಂಶೋಧನೆ ಕ್ರಮಬದ್ಧವಾಗಿ ಮುನ್ನಡೆಯುವಂತೆ ಎಚ್ಚರವಹಿಸಲಾಗಿದೆ.

ಇದು ದೇಶೀ ಅಧ್ಯಯನದ ವಿಶ್ವವಿದ್ಯಾಲಯ ಇಲ್ಲಿ ಕರ್ನಾಟಕದ ಅಧ್ಯಯನ ಮತ್ತು ಇದಕ್ಕೆ ನೆಲೆಯಾಗಿರುವ ದ್ರಾವಿಡ ಅಧ್ಯಯನಗಳಿಗೆ ವಿಶೇಷ ಒತ್ತು ಕೊಡುತ್ತಲೇ ಲೋಕ ಸಂಬಂಧವನ್ನು ಕಲ್ಪಿಸಿಕೊಳ್ಳುವುದು ಇದರ ಉದ್ದೇಶವಾಗಿದೆ. ಆದುದರಿಂದ ಪ್ರಸ್ತುತ ವರ್ಷದ ಯೋಜನೆ ವಿಚಾರ ಸಂಕಿರಣ ಗ್ರಂಥ ಪ್ರಕಟಣೆಗಳು ಈ ದಾರಿಯಲ್ಲಿ ಹೀಗೆ ಮುನ್ನಡೆದಿವೆ.

ಕರ್ನಾಟಕದ ಬುಡಕಟ್ಟು ಮಹಾಕಾವ್ಯಗಳ ಮತ್ತು ಉತ್ತರ ಕರ್ನಾಟಕದ ಜನಪದ ಮಹಾಕಾವ್ಯಗಳ ಸಂಗ್ರಹ, ದೇಶೀ ಸಮ್ಮೇಳನ ಮತ್ತು ಬುಡಕಟ್ಟು ಮಾಲೆಯನ್ನು ಕುರಿತ ವಿಚಾರ ಸಂಕಿರಣಗಳ ಸಂಘಟನೆ, ಕರ್ನಾಟಕದ ಜನಸಮುದಾಯ ಕೋಶ ಮತ್ತು ಕೃಷಿ ಪದಕೋಶಗಳ ಸಿದ್ಧತೆ, ಉತ್ತರಕರ್ನಾಟಕದ ಎಲ್ಲ ಜಿಲ್ಲೆಗಳ ಶಾಸನ ಸಂಪಾದನೆ, ಕರ್ನಾಟಕದ ಪ್ರತಿಯೊಂದು ಗ್ರಾಮದ ದೇವಾಲಯಗಳ ಪರಿವೀಕ್ಷಣೆ, ಹಸ್ತಪ್ರತಿಗಳ ಸಂಗ್ರಹ ಇವೇ ಮೊದಲಾದ ಯೋಜನೆಗಳು ಈ ವರ್ಷ ಆರಂಭವಾಗಿದೆ. ಹೀಗೆ ಅಧ್ಯಯನವನ್ನು ಕರ್ನಾಟಕದ ಪ್ರಾಚೀನತೆಗೆ ಮಾತ್ರ ಸೀಮಿತಗೊಳಿಸದೆ, ಆಧುನಿಕತೆಗೂ ಮುಂದುವರಿಸಿದ ಫಲವಾಗಿ, ಕರ್ನಾಟಕದ ಹೊಸ ಜಿಲ್ಲೆಗಳ ಅಧ್ಯಯನಯೋಜನೆಯೊಂದಿಗೆ, ಉತ್ತರ ಕರ್ನಾಟಕದ ಅಭಿವೃದ್ಧಿ ಅಧ್ಯಯನ, ಕನ್ನಡ ಮಾಲೆ ಮತ್ತು ಸ್ವಾತಂತ್ರ್ಯ ಹೋರಾಟ, ಕನ್ನಡ ಸಾಹಿತ್ಯದ ಅಧ್ಯಯನಗಳ ಪುನರ್‌ವ್ಯಾಖ್ಯಾನ, ಮೌಖಿಕ ಚರಿತ್ರೆ. ಇವೇ ಮೊದಲಾದ ವಿಚಾರ ಸಂಕಿರಣಗಳನ್ನು ಈ ವರ್ಷ ಜರುಗಿಸಲಾಗಿದೆ.

ಹೀಗೆ ಕರ್ನಾಟಕಕ್ಕೆ ಮಾತ್ರ ಸೀಮಿತಗೊಳ್ಳದೆ, ತಾನು ದ್ರಾವಿಡ ವ್ಯಾಪ್ತಿಗೂ ಹಿಗ್ಗಬೇಕೆಂದು ಕನ್ನಡ ವಿಶ್ವವಿದ್ಯಾಲಯದ ಸಂಕಲ್ಪವಾಗಿದೆ. ಈ ಸಂಕಲ್ಪವನ್ನು ಸಾಕಾರಾಗೊಳಿಸುತ್ತಿರುವುದಕ್ಕೆ ನಿದರ್ಶನವೆಂಬಂತೆ "ದ್ರಾವಿಡ ಕಾವ್ಯ ಮೀಮಾಂಸೆ" ಹೆಸರಿನ ವಿಚಾರ ಸಂಕಿರಣವನ್ನು ಸಂಘಟಿಸುವುದರೊಂದಿಗೆ, 'ದ್ರವಿಡಿಯನ್ ಎಟಿಮಾಲಾಜಿಕಲ್ ಡಿಕ್ಷನರಿ'ಯ ಅನುವಾದ ಕಾರ್ಯವನ್ನು, ದ್ರಾವಿಡ ಸಾಹಿತ್ಯ ಚರಿತ್ರೆ, ಕನ್ನಡಕ್ಕೆ ಅನುವಾದಗೊಂಡ ದ್ರಾವಿಡ ಗ್ರಂಥಸೂಚಿಗಳ ಸಿದ್ಧತೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ವರ್ಷದ ನುಡಿಹಬ್ಬಕ್ಕೆ ದ್ರಾವಿಡ ವಿಶ್ವವಿದ್ಯಾಲಯದ ಸಹ ಕುಲಾಧಿಪತಿಗಳಾದ ಡಾ.ವಿ.ಆಯ್. ಸುಬ್ರಹ್ಮಣ್ಯಂ ಅವರನ್ನು ಮುಖ್ಯ ಅತಿಥಿಗಳನ್ನಾಗಿ ನಾವು ಬರಮಾಡಿಕೊಂಡುದು, ಈ ಹಿನ್ನೆಲೆಯಲ್ಲಿ.

ಹೀಗೆ ದ್ರಾವಿಡ ಅಧ್ಯಯನ ನಡೆಸುತ್ತಲೇ ಇದರ ಆಚೆಗೂ ಇರುವ ಲೋಕದೊಂದಿಗೆ ಆದಾನ ಪ್ರದಾನ ಸಂಬಂಧ ಇಟ್ಟುಕೊಳ್ಳುವುದು ಈ ಸಂಸ್ಥೆಯ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ ನಿಂತು, ಮರಾಠಿ ಅಭಂಗಗಳ ಅನುವಾದ ಕಾರ್ಯ, ಕನ್ನಡಕ್ಕೆ ಅನುವಾದಗೊಂಡ ಇಂಗ್ಲಿಷ್ ಗ್ರಂಥಸೂಚಿಗಳ ಸಿದ್ಧತೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಭೌತಿಕ ಮತ್ತು ಬೌದ್ಧಿಕ ಹಸಿವನ್ನು ಹಿಂಗಿಸಿಕೊಳ್ಳಬೇಕೆಂದು

ಜಗತ್ತಿನ ಮೂಲೆ ಮೂಲೆಗೆ ವಲಸೆ ಹೋಗಿರುವ ಕನ್ನಡಿಗರೊಂದಿಗೆ ಸಂಪರ್ಕ ಬೆಳೆಸಿಕೊಳ್ಳಲು, ವಿದೇಶಿಯರಿಗೆ ಕನ್ನಡ ಸಂಸ್ಕೃತಿಯನ್ನು ಪರಿಚಯಿಸಲು ಅಸ್ತಿತ್ವಕ್ಕೆ ಬಂದಿರುವ 'ವಿಶ್ವಕನ್ನಡ ವಿಭಾಗ' ಈ ದಿಶೆಯಲ್ಲಿ ದುಡಿಯುವ ಉದ್ದೇಶ ಹೊಂದಿದೆ. ಇಂದು ಡಾ. ಜಾರ್ಜ್ ಮಿಶಲ್ ಅವರಿಗೆ "ನಾಡೋಜ" ಗೌರವ ಪದವಿಯನ್ನು ನೀಡುವ ಉದ್ದೇಶವೂ ಲೋಕ ವಿಸ್ತಾರ ಪಡೆಯುವುದೇ ಆಗಿದೆ.

ಹೀಗೆ, ಕನ್ನಡವನ್ನು ಕೇಂದ್ರವಾಗಿಟ್ಟುಕೊಳ್ಳುತ್ತಲೇ ಕನ್ನಡದಿಂದ ದ್ರಾವಿಡಕ್ಕೆ, ದ್ರಾವಿಡದಿಂದ ಆರ್ಯಕ್ಕೆ, ಆರ್ಯದಿಂದ ಆರ್ಯೇತರಕ್ಕೆ ವಿಸ್ತಾರ ಪಡೆಯುತ್ತಲಿರುವ ಇಲ್ಲಿಯ ಅಧ್ಯಯನ, 'ಸೀಮೋಲ್ಲಂಘನ ಪ್ರಕ್ರಿಯಾ' ಸ್ವರೂಪದ್ದಾಗುವಂತೆ ನೋಡಿಕೊಳ್ಳಲಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಕಣ್ಣಮುಂದೆ ಇರುವ ಇನ್ನೊಂದು ಕನಸು ಆನ್ವಯಿಕ ಬೋಧನೆ. ಅಂದರೆ, ಸಾಹಿತ್ಯವನ್ನು ಬೋಧಿಸುವುದನ್ನಲ್ಲ, ಕಾವ್ಯ ಸೃಜಿಸುವುದನ್ನು ಕಲಿಸುವುದು. ಇದಕ್ಕೆ ಪೂರ್ವಭಾವೀ ಪ್ರಯೋಗವೆಂಬಂತೆ "ಕಾವ್ಯ ಕಟ್ಟುವ ಬಗೆ" ವಿಷಯವನ್ನು ಕುರಿತ ಹತ್ತು ದಿನಗಳ ಕಮ್ಮಟದಲ್ಲಿ ೨೦ ಯುವಕರಿಗೆ ಮಾರ್ಗದರ್ಶನ ತರಬೇತಿ ನೀಡಿದುದು ಒಂದು ಹೊಸ ಪ್ರಯೋಗವೆಂದೇ ಹೇಳಬೇಕು. ಈ ಆದರ್ಶದಲ್ಲಿ "ಸೃಜನಶೀಲ ಕನ್ನಡ" ಡಿಪ್ಲೋಮಾ ವರ್ಗವನ್ನು ಮುಂದಿನ ವರ್ಷದಿಂದ ತೆರೆಯಲಾಗುತ್ತದೆ. ಈಗ ಸಂಗೀತ ವಿಭಾಗ, ಶಿಲ್ಪಕಲಾ ವಿಭಾಗಗಳಲ್ಲಿ ಡಿಪ್ಲೋಮಾ ವರ್ಗ ನಡೆಸಲಾಗುತ್ತಿದ್ದು, ಮುಂದಿನ ವರ್ಷ ಮಹಿಳಾ ಅಧ್ಯಯನ ಡಿಪ್ಲೋಮಾ ವರ್ಗವನ್ನು ಆರಂಭಿಸಲಾಗುತ್ತಿದೆ.

ಲೋಹಿಯಾ ಅಧ್ಯಯನಪೀಠ, ದಲಿತ ಸಂಸ್ಕೃತಿಪೀಠ, ಶಂಬಾ ಅಧ್ಯಯನ ವೇದಿಕೆಗಳನ್ನು ಪುನಾಃರಚಿಸಲಾಗಿದ್ದು, ಲೋಹಿಯಾ ಅಧ್ಯಯನಪೀಠ, ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟವನ್ನು ಪ್ರಕಟಿಸಿದೆ. ಮಿಕ್ಕವು ಸೂಕ್ತ ಯೋಜನೆಗಳನ್ನು ಕೈಗೆತ್ತಿಕೊಂಡಿವೆ. ಈ ವರ್ಷ ಕನ್ನಡ ತೆಲುಗು ಸಂಸ್ಕೃತಿಪೀಠ, ಶ್ವೇತಾಂಬರ ಜೈನ ಸಂಸ್ಕೃತಿಪೀಠ ಆರಂಭಿಸುವ ಪೂರ್ವಸಿದ್ಧತೆ ನಡೆದಿದೆ.

ಶೈಕ್ಷಣಿಕ ಅಭಿವೃದ್ಧಿಗಾಗಿ ಜಾನಪದ ಮ್ಯೂಜಿಯಂ, ಆರ್ಟ್‌ಗ್ಯಾಲರಿ, ಹಸ್ತಪ್ರತಿ ಗ್ರಂಥಾಲಯಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಕೊಪ್ಪಳದ ಶ್ರೀ ಸಂಗಣ್ಣ ಅಗಡಿ, ಧಾರವಾಡದ ಶ್ರೀ ಕೆ.ಎಸ್. ದೇಶಪಾಂಡೆ ಅವರಿಂದ ಅಪೂರ್ವ ಗ್ರಂಥಗಳನ್ನು ಕಾಣಿಕೆಯಾಗಿ ಪಡೆದು, ಗ್ರಂಥಾಲಯವನ್ನು ಬೆಳೆಸಲಾಗಿದೆ.

ಪ್ರಸಾರಾಂಗ, ನಮ್ಮ ವಿಶ್ವವಿದ್ಯಾಲಯದ ಶಕ್ತಿ. ಆಸಕ್ತಿಗಳನ್ನು ಜಗತ್ತಿಗೆ ಪರಿಚಯಿಸುವ ಪ್ರಕಟಣ ಸಂಸ್ಥೆ. ಈ ಮೊದಲಿನ ಪತ್ರಿಕೆಗಳ ಜೊತೆಗೆ ಈ ವರ್ಷ "ಕನ್ನಡ ಅಧ್ಯಯನ", "ಮಹಿಳಾ ಅಧ್ಯಯನ" ಹೆಸರಿನ ಎರಡು ಹೊಸ ಪತ್ರಿಕೆಗಳನ್ನು ಆರಂಭಿಸಲಾಗಿದೆ. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ನಾಟಕ ರಂಗಕೃತಿಗಳ ಪ್ರಯೋಗ, ಬೃಹದ್ದೇಶೀ, ರಜಾಕಾರರ ಲಾವಣಿ ಕೃತಿಗಳು ಇತ್ತೀಚೆ ಪ್ರಕಟವಾಗಿದ್ದು, ನುಡಿಹಬ್ಬದ ಅಂಗವಾಗಿ ಮಂಟಪಮಾಲೆಯ ೧೦ ಪುಸ್ತಕಗಳು, ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಕೃಷಿಜ್ಞಾನ ಪ್ರದೀಪಿಕೆ, ಕೋಡೆಕಲ್ಲ ವಚನವಾಕ್ಯ, ಆದಿಲ್‌ಶಾಹಿ ಆಸ್ಥಾನ ಸಾಹಿತ್ಯ, ಕರ್ನಾಟಕದ ಸೂಫಿಗಳು, ಕನ್ನಡ ರಂಗಭೂಮಿ ಈ ಆರು ಕೃತಿಗಳು ಇಂದು ಬಿಡುಗಡೆಯಾಗಿವೆ. ಈ ವರ್ಷ ಬಾಹ್ಯಯೋಜನೆಯ ಅಂಗವಾಗಿ ಕೊಲ್ಲಾಪುರ ಜಿಲ್ಲೆಯ ಶಾಸನಗಳು, ಆಂಧ್ರಪ್ರದೇಶದ ಕನ್ನಡ ಶಾಸನಗಳು, ತಮಿಳುನಾಡಿನ ಕನ್ನಡ ಶಾಸನಗಳು ಹೆಸರಿನ ಸಂಪುಟಗಳು ರೂಪುಗೊಳ್ಳುತ್ತಲಿವೆ.

ಪ್ರಸಾರಾಂಗದ ಇನ್ನೊಂದು ಕೆಲಸವೆಂದರೆ, ಪುಸ್ತಕ ಸಂಸ್ಕೃತಿಯಾತ್ರೆ. ಇದರ ಅಂಗವಾಗಿ ಬೀದರ್, ಗುಲ್ಬರ್ಗಾ, ಬಳ್ಳಾರಿ, ಸಂಡೂರು, ಸಂಕೇಶ್ವರ, ಬೆಳಗಾವಿ, ಚಿತ್ರದುರ್ಗ, ಹಂಪಿ, ಧರ್ಮಸ್ಥಳಗಳಲ್ಲಿ ಪುಸ್ತಕ ಮಾರಾಟ ನಡೆಸಲಾಗಿದೆ. ಬಳ್ಳಾರಿ ಸಂಡೂರು, ಹೆಬ್ರಿ, ಸಂಕೇಶ್ವರ, ಕಾಸರಗೋಡುಗಳಲ್ಲಿ ಮಂಟಪಮಾಲೆಯ ಉಪನ್ಯಾಸವನ್ನು ಕೈಕೊಳ್ಳಲಾಗಿದೆ. "ಉಪೇಕ್ಷಿತ ಸಾಹಿತ್ಯಮಾಲೆ"ಯ ಹೆಸರಿನಲ್ಲಿ ಅದಿಲ್‌ಶಾಹಿ ಆಸ್ಥಾನ ಸಾಹಿತ್ಯ ವಿಷಯವನ್ನು ಕುರಿತ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ. ಹೊಸಪೇಟೆಯಲ್ಲಿ ಪುಸ್ತಕ ಮಾರಾಟ ಮಳಿಗೆ ಆರಂಭಿಸಿದುದು, ಈ ವರ್ಷದ ವಿಶೇಷ ಸಾಧನೆಯಾಗಿದೆ.

ಆಡಳಿತ ಸುಧಾರಣೆ, ಈ ವರ್ಷದ ಇನ್ನೊಂದು ಸಾಧನೆ. ಸಂಶೋಧನೆ ವಿಭಾಗಗಳಲ್ಲಿ ಸೇರಿಹೋಗಿದ್ದ 'ಅಧ್ಯಯನಾಂಗ'ವನ್ನು ಆಡಳಿತ ವಿಭಾಗದಲ್ಲಿ ಸ್ಥಾಪಿಸಿ, ಅದಕ್ಕೆ ಕ್ರಮವತ್ತಾದ ಕಾರ್ಯಯೋಜನೆಯನ್ನು ರೂಪಿಸಿಕೊಡಲಾಗಿದೆ. ಪಠ್ಯಕ್ರಮ, ಪರೀಕ್ಷೆ, ಪಿಎಚ್.ಡಿ. ನಿಯಮಗಳಲ್ಲಿ ಸುಧಾರಣೆ ಮಾಡಲಾಗಿದೆ. ವಿತ್ತ ಭಾಂಡಾರದ ಮೇಲೆ ಹತೋಟಿ ಸಾಧಿಸಲಾಗಿದೆ. ಇದರ ಫಲವಾಗಿ ಹಣಕಾಸಿನಲ್ಲಿ ಮಿತವ್ಯಯ, ಕಾಗದ ಪತ್ರಗಳ ಪರಿಚಲನೆಯಲ್ಲಿ ವೇಗಗಳು ಸಾಧ್ಯವಾಗಿವೆ.

ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಆವರಣದಲ್ಲಿ ಬ್ಯಾಂಕ್ ಸ್ಥಾಪಿಸಲಾಗಿದೆ. ಬಸ್ ವ್ಯವಸ್ಥೆ ಮಾಡಿ, ತಿಂಗಳಿಗೆ ೩೦ ಸಾವಿರ ರೂ. ಉಳಿತಾಯ ಮಾಡಲಾಗಿದೆ. ಐದು ಸಾವಿರ ಗಿಡಗಳನ್ನು ಈ ವರ್ಷ ನೆಡಿಸಲಾಗಿದೆ. ಶ್ರೀಶೈಲ ಅತಿಥಿಗೃಹವನ್ನು ಪೀಠೋಪಕರಣಗಳಿಂದ ಸುಸಜ್ಜಿತಗೊಳಿಸಲಾಗಿದೆ. ಅಂಚೆ ಕಛೇರಿಯನ್ನು ಆರಂಭಿಸುವ ಸಿದ್ಧತೆ ನಡೆದಿದೆ. ಬರುವ ಮಾರ್ಚದೊಳಗಾಗಿ ಆವರಣದ ಎಲ್ಲ ರಸ್ತೆಗಳ ಡಾಂಬರೀಕರಣ ಮಾಡಲಾಗುತ್ತದೆ.

ವರ್ಷದ ಆರಂಭದಿಂದಲೂ ಆರ್ಥಿಕ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿದ್ದೇವೆ. ಕಳೆದ ವರ್ಷ ನೀಡುತ್ತಲಿದ್ದ ಎರಡೂವರೆ ಕೋಟಿ ವಾರ್ಷಿಕ ಅನುದಾನ, ಈ ವರ್ಷ ಮೂರು ಕೋಟಿಗೆ ಏರಿದೆ. ಹೋದ ವರ್ಷದ ಬಾಕಿ ತೀರಿಸಲು ಈ ವರ್ಷದ ಆರಂಭದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ. ಎಚ್.ಪಟೇಲ್ ಅವರು ಮತ್ತೆ ಹೆಚ್ಚಿನದಾಗಿ ಒಂದು ಕೋಟಿ ರೂಪಾಯಿ ಅನುದಾನ ನೀಡಿರುವುದನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಈ ವರ್ಷ "ಕನ್ನಡ ಸಂಸ್ಕೃತಿ ಇಲಾಖೆ' ನೀಡಿದ ನೆರವು ಸ್ಮರಣೀಯವೆನಿಸಿದೆ. ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳ ಶಾಸನ ಪ್ರಕಟಣೆಗಾಗಿ ಈ ಇಲಾಖೆ ಪ್ರತಿವರ್ಷ ಎರಡು ಲಕ್ಷ ರೂ. ಗಳಂತೆ ಹತ್ತು ವರ್ಷ ಅನುದಾವನ್ನು ಮಂಜೂರು ಮಾಡಿದೆ. "ಬೃಹದ್ದೇಶೀ" ಗ್ರಂಥ ಪ್ರಕಟಣೆಗೆ ಒಂದು ಲಕ್ಷ ರೂಪಾಯಿ ನೀಡಿದೆ. ಆವರಣದ ಒಳರಸ್ತೆಗಳ ಡಾಂಬರೀಕರಣಕ್ಕೆ ಪ್ರವಾಸೋದ್ಯಮ ನಿರ್ದೇಶನಾಲಯ ವತಿಯಿಂದ ಆರೂವರೆ ಲಕ್ಷ ರೂ. ಬರಲಿದೆ. ಲೋಕೋಪಯೋಗಿ ಇಲಾಖೆ ಅಳ್ಳಿಕೆರೆಯ ಮೇಲಿನ ರಸ್ತೆಯ ಡಾಂಬರೀಕರಣಕ್ಕಾಗಿ ಆರೂವರೆ ಲಕ್ಷ ರೂ. ನೀಡಿದೆ. "ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯು ವಿಶ್ವವಿದ್ಯಾಲಯ ಆವರಣದ ಅಭಿವೃದ್ಧಿಗಾಗಿ ೫೦ ಲಕ್ಷ ರೂ. ಗಳ ಆಶ್ವಾಸನೆ ನೀಡಿದೆ. ಈ ಎಲ್ಲ ಅನುದಾನಗಳಿಗಾಗಿ ಮಾನ್ಯ ಸಚಿವರಾದ ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್, ಶ್ರೀ ಸಿ.ಎಂ. ಉದಾಶಿ, ಶ್ರೀ ಕೆ. ಶರಣಪ್ಪ ಅವರ ಔದಾರ್ಯವನ್ನು ನೆನೆಯುತ್ತೇನೆ. ಇವೆಲ್ಲವುಗಳ ಹಿಂದೆ ಬಹುದೊಡ್ಡ ಪಾತ್ರವಾಡಿದ ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ಎಂ.ಪಿ.ಪ್ರಕಾಶ್ ಅವರನ್ನು ವಿಶೇಷವಾಗಿ ಸ್ಮರಿಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯ ತನ್ನ ಅಸ್ತಿತ್ವವನ್ನು ಪ್ರಕಟಣೆಗಳ ಮೂಲಕ ತೋರಿಸಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಮುದ್ರಣ ವೆಚ್ಚದ ಏರಿಕೆ ಕಾರಣವಾಗಿ, ಎಲ್ಲ ವಿಶ್ವವಿದ್ಯಾಲಗಳ ಪ್ರಕಟಣ ಕಾರ್ಯ ಸೊರಗುತ್ತಲಿದೆ. ಈ ದುಃಸ್ಥಿತಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒದಗಬಾರದೆಂದು ಸಂಸದ ಸಾಹಿತ್ಯನಿಧಿ ಯೋಜನೆಯನ್ನು ರೂಪಿಸಲಾಗಿದೆ. ಇದರನ್ವಯ, ಜಿಲ್ಲಾ ಅಭಿವದ್ಧಿಗಾಗಿ ಕೇಂದ್ರ ಸರ್ಕಾರ ಲೋಕಸಭೆ ರಾಜ್ಯಸಭೆಗಳ ಸದಸ್ಯರಿಗೆ ಕೊಡಮಾಡುವ ಒಂದು ಕೋಟಿ ರೂ. ಹಣದಲ್ಲಿ ಐದು ಲಕ್ಷ ರೂ. ಗಳನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ನೀಡಲು ಎಲ್ಲ ಸಂಸತ್ ಸದಸ್ಯರಿಗೆ ಬಿನ್ನವಿಸಿಕೊಳ್ಳಲಾಗಿದೆ. ಮಾನ್ಯರಾದ ಶ್ರೀ ಕೆ.ಸಿ. ಕೊಂಡಯ್ಯ, ಶ್ರೀ ಎಚ್.ಜಿ. ರಾಮಲು, ಶ್ರೀ ಬಸವರಾಜ ಪಾಟೀಲ ಸೇಡಂ ಇದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಮಾನ್ಯರಾದ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಅನಂತಕುಮಾರ ಅವರು ಭರವಸೆ ನೀಡಿದ್ದಾರೆ. ಮಿಕ್ಕವರಿಂದ ಒಪ್ಪಿಗೆ ನಿರೀಕ್ಷಿಸಿದ್ದು, ಇವರೆಲ್ಲರು ಕೊಡಮಾಡಿದರೆ ಒಂದೂವರೆ ಕೋಟಿ ರೂಪಾಯಿ ಸಂಗ್ರಹವಾಗಿ, ಅದರ ಬಡ್ಡಿ ಹಣದಲ್ಲಿ ಪ್ರಕಟಣೆಗಳು ನಿರಾತಂಕವಾಗಿ ನಡೆಬಹುದಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಸಂಸತ್ ಸದಸ್ಯರಿಗೆ ಒಂದು ಮಾತು ಹೇಳಿದರೆ ದೊಡ್ಡ ಉಪಕಾರವಾಗುತ್ತದೆ.

ವಿಶ್ವವಿದ್ಯಾಲಯದಲ್ಲಿ ಹದಿನೆಂಟು ವಿಭಾಗಗಳಿವೆ. ಪ್ರತಿಯೊಂದು ವಿಭಾಗದಲ್ಲಿ ದತ್ತಿ ಉಪನ್ಯಾಸ ಸ್ಥಾಪಿಸಲು ಈ ವರ್ಷ ಯೋಜಿಸಿಲಾಗಿದೆ. ಇದರ ಅಂಗವಾಗಿ ಬಳ್ಳಾರಿಯ ಶ್ರೀ ಕೆ.ಸಿ.ಕೊಂಡಯ್ಯ, ಶಿವಮೊಗ್ಗೆಯ ಶ್ರೀ ಎಚ್. ಇಬ್ರಾಹಿಂ ಸಾಹೇಬ್, ಬಳ್ಳಾರಿಯ ಶ್ರೀ ಅಲ್ಲಂ ಬಸವರಾಜ, ಬೆಳಗಾವಿಯ ಕೆ.ಎಲ್.ಇ.ಸೊಸೈಟಿ, ಬಾಗಲಕೋಟೆಯ ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ ತಲಾ ೫೦ ಸಾವಿರ ರೂ. ಗಳನ್ನು ಕೊಡಮಾಡಿದ್ದಾರೆ. ಹೀಗೆ ಮಿಕ್ಕ ವಿಭಾಗಗಳಲ್ಲಿಯೂ ದತ್ತಿನಿಧಿ ಸ್ಥಾಪಿಸುವ ಪ್ರಯತ್ನ ಮುಂದುವರೆದಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಸಿಬ್ಬಂದಿಗಳ ಮನೆಗಳನ್ನು ಕಟ್ಟಲು ಹುಡ್ಕೋದಿಂದ ಒಂದೂವರೆ ಕೋಟಿ ರೂ. ಮಂಜೂರಾಗಿದೆ. ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಪುರಾತತ್ವ ವಸ್ತು ಸಂಗ್ರಹಾಲಯಕ್ಕಾಗಿ ಒಂದು ಕೋಟಿ ಎಪ್ಪತ್ತೈದು ಲಕ್ಷ ಹಣ ಮಂಜೂರು ಮಾಡಿದೆ. ಹೀಗೆ ಸಾಧ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಕ್ರೋಡೀಕರಿಸಲಾಗಿದೆ. ಹೀಗಿದ್ದೂ ಹಿಂದಿನ ಬಾಕಿ ಇನ್ನು ೭೫ ಲಕ್ಷ ರೂ. ಇದ್ದು, ಮಾನ್ಯ ಮುಖ್ಯಮಂತ್ರಿಗಳನ್ನು ಈ ಅನುದಾನಕ್ಕಾಗಿ ಬಿನ್ನವಿಸಿಕೊಳ್ಳುತ್ತೇನೆ. "ಹಣವನ್ನು ನೀರಿನಂತೆ ಗಳಿಸಬೇಕು. ತೀರ್ಥದಂತೆ ಬಳಸಬೇಕು" ಎಂಬ ಅರ್ಥನೀತಿಯನ್ನನುಸರಿಸಿ, ಮಿತವ್ಯಯವನ್ನು ಪಾಲಿಸಿರುವುದರಿಂದಾಗಿ, ಈ ವಿಶ್ವವಿದ್ಯಾಲಯಕ್ಕೆ ಪ್ರತಿ ವರ್ಷ ೧೨ ಲಕ್ಷ ರೂಪಾಯಿ ಉಳಿತಾಯವಾಗುತ್ತಲಿದೆ.

ವಿಶ್ವವಿದ್ಯಾಲಯದ ಆಸ್ತಿ ಎಂದರೆ ಇಲ್ಲಿಯ ಸಿಬ್ಬಂದಿ ವರ್ಗ ಮತ್ತು ಇಲ್ಲಿಯ ಪ್ರಕಟಣೆಗಳು. ಕನ್ನಡ ವಿಶ್ವವಿದ್ಯಾಲಯು ಪ್ರಕಟಿಸಿದ ಕರ್ನಾಟಕ ಜಾನಪದಕಲೆಗಳ ಕೋಶ (ಸಂ.ಪ್ರೊ.ಹಿ.ಚಿ.ಬೋರಲಿಂಗಯ್ಯ) ಕೃತಿಗೆ ಪುಸ್ತಕ ಪ್ರಾಧಿಕಾರದ ಪ್ರಥಮ ಬಹುಮಾನ, ದೆಹಲಿಯ ಅಖಿಲ ಭಾರತ ಪ್ರಕಾಶನ ಸಂಸ್ಥೆಯ ಪ್ರಥಮ ಬಹುಮಾನಗಳು ಲಭ್ಯವಾಗಿವೆ. ಬುಡಕಟ್ಟು ವಿಭಾಗ ಪ್ರಕಟಿಸಿದ ಬುಡಕಟ್ಟು ಮಹಾಕಾವ್ಯ ಮಾಲೆ (ಸಂ.ಡಾ. ಕೆ.ಎಂ.ಮೈತ್ರಿ, ಡಾ.ಕೇಶವನ್ ಪ್ರಸಾದ್, ಡಾ. ಚೆಲುವರಾಜು ಮತ್ತು ದೇಶೀ ಶ್ರೀ ಮೊಗಳ್ಳಿ ಗಣೇಶ) ಪುಸ್ತಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬಹುಮಾನವನ್ನು, ಬೇರು ಕಾಂಡ ಚಿಗುರು (ಡಾ.ಕೆ.ವಿ. ನಾರಾಯಣ), ತಮಂಧದ ಕೇಡು (ಶ್ರೀ ಅಮರೇಶ್ ನುಗಡೋಣಿ) ನಾಕನೆಯ ನೀರು (ಶ್ರೀಮತಿ ನಾಗವೇಣಿ)

ಕೃತಿಗಳು ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಗೆದ್ದುಕೊಂಡಿವೆ. ಪ್ರೊ. ಎ.ವಿ.ನಾವಡ ಅವರು ಈ ವರ್ಷ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ತಜ್ಞ ಗೌರವ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಜಾನಪದ ಅಕಾಡೆಮಿಗೆ ಪ್ರೊ. ಹಿ.ಚಿ.ಬೋರಲಿಂಗಯ್ಯ, ಶಿಲ್ಪಕಲಾ ಅಕಾಡೆಮಿಗೆ, ಶ್ರೀ ಜಯಕುಮಾರ್ ಸದಸ್ಯರಾಗಿ ನಾಮಕರಣಗೊಂಡಿದ್ದಾರೆ. ಈ ಸಂಗತಿಗಳು ವಿಶ್ವವಿದ್ಯಾಲಯದ ಕಿರೀಟಕ್ಕೆ ತುರಾಯಿ ಎನಿಸಿವೆ.

'ನಾಡೋಜ' ಮಹಾಕವಿ ಪಂಪನ ಬಿರುದು. ನಾಡಿನ ಉಪಾಧ್ಯಾಯ, ನಾಡಿನ ಆಚಾರ್ಯ ಪುರುಷ ಎಂದು ಇದರ ಅರ್ಥ. ಆ ಕಾಲದ "ಪಂಪ ಪ್ರತಿಭೆ"ಯನ್ನು ನೆನಪಿಸುವ ಈ ಕಾಲದ ಗಣ್ಯರಿಗೆ, ಕನ್ನಡ ವಿಶ್ವವಿದ್ಯಾಲಯ "ನಾಡೋಜ" ಗೌರವ ಪದವಿ ಪ್ರದಾನ ಮಾಡುತ್ತ ಬಂದಿದೆ. ಈ ವರ್ಷ ಅಭಿನಯ ಕಲಾ ಸಾಮ್ರಾಜ್ಯದ ಅನಭಿಷಕ್ತ ದೊರೆ ಡಾ. ರಾಜ್‌ಕುಮಾರ್ ಅವರಿಗೆ, ಕನ್ನಡ ಉನ್ನತ ಶಿಕ್ಷಣದ ಶಿಲ್ಪಿಗಳಾದ ಡಾ.ದೇ. ಜವರೇಗೌಡ, ಡಾ.ಆರ್. ಸಿ. ಹಿರೇಮಠ ಅವರಿಗೆ ಮತ್ತು ಕರ್ನಾಟಕಾಂತರ್ಗತ ಭಾರತೀಯ ಪುರಾತತ್ವ ವಿದ್ವಾಂಸ ಡಾ. ಜಾರ್ಜ್ ಮಿಶಲ್ ಅವರಿಗೆ ಈ ಗೌರವ ಪದವಿಯನ್ನು ನೀಡಲಾಗುತ್ತಿದ್ದು, ಇವರೆಲ್ಲರನ್ನು ಆದರರಿಂದ ಸ್ವಾಗತಿಸುತ್ತೇನೆ.

ಈ ವರ್ಷದ ನುಡಿಹಬ್ಬಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ಡಾ. ವಿ. ಆಯ್.ಸುಬ್ರಹ್ಮಣ್ಯಂ ಅವರು ಅಂತಾರಾಷ್ಟ್ರಿಯ ದ್ರಾವಿಡ ವಿದ್ವಾಂಸರು. ತಮಿಳು ವಿಶ್ವವಿದ್ಯಾಲಯದ ಪರಿಕಲ್ಪನೆಗೆ ಹುಟ್ಟುಹಾಕಿ, ಅದನ್ನು ಅಸ್ತಿತ್ವಕ್ಕೆ ತರುವ ಮೂಲಕ, ಇವರು ಪರ್ಯಾಯವಾಗಿ ತೆಲುಗು ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯಗಳ ಸೃಷ್ಟಿಗೂ ಕಾರಣವೆನಿಸಿದ್ದಾರೆ. ಈ ಚಿಂತನೆಯ ಮುಂದುವರಿಕೆಯೆಂಬಂತೆ ಈಗ ಕುಪ್ಪಂದಲ್ಲಿ "ದ್ರಾವಿಡ ವಿಶ್ವವಿದ್ಯಾಲಯ" ವನ್ನು ಅಸ್ತಿತ್ವಕ್ಕೆ ತಂದು, ಅದರ ಸಹಕುಲಾಧಿಪತಿಗಳಾಗಿರುವ ಇವರನ್ನು ಗೌರವದಿಂದ ಬರಮಾಡಿಕೊಳ್ಳುತ್ತೇನೆ.

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ವ್ಯಾಪ್ತಿ ೩-೪ ಜಿಲ್ಲೆಗಳಿಗೆ ಮಾತ್ರ ಸೀಮಿತ. ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಕರ್ನಾಟಕದ ಎಲ್ಲ ಜಿಲ್ಲೆಗಳು, ಏಕೆ? ಕನ್ನಡಿಗರಿರುವ ಜಗತ್ತಿನ ಎಲ್ಲ ಪ್ರದೇಶಗಳೂ ಸೇರುತ್ತವೆ. ಇವುಗಳಿಗೆ ಕನ್ನಡ ವಿಶ್ವವಿದ್ಯಾಲಯ ಕೇಂದ್ರವಾಗಬೇಕೆಂಬುದು ನಮ್ಮ ಕನಸು. ಈ ಉದ್ದೇಶದ ಸಫಲತೆಗಾಗಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯವನ್ನು ರಾಜ್ಯದ ಮೂಲೆಮೂಲೆಗೆ ಕೊಂಡೊಯ್ಯುವ ಮೊದಲ ಹಂತದ ಹೊಸ ಪ್ರಯೋಗಗಳನ್ನು ಆರಂಭಿಸಲಾಗಿದೆ. ಇದರಿಂದಾಗಿ ಈ ವರ್ಷ ಕರ್ನಾಟಕ ವ್ಯಾಪ್ತಿಗೆ ಹಿಗ್ಗುತ್ತಲಿರುವ ಈ ಸಂಸ್ಥೆ, ಮುಂದಿನ ವರ್ಷ ಭಾರತ, ವಿದೇಶಗಳ ವ್ಯಾಪ್ತಿಯನ್ನು ಸಾಧಿಸಲಿದೆ. "ಎಲ್ಲ ರಸ್ತೆಗಳು ರೋಮ್‌ದ ಕಡೆಗೆ" ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಎಂಬಂಥ ವಾತಾವರಣ ನಿರ್ಮಾಣ ಮಾಡುವ ಗುರಿ, ಈ ಸಂಸ್ಥೆಯ ಕಣ್ಣ ಮುಂದಿದೆ. ಈ ಕಾರ್ಯದಲ್ಲಿ ಕನ್ನಡಿಗರ ಸಹಕಾರವನ್ನು ಬಯಸುತ್ತೇನೆ. ಎಲ್ಲರಿಗೂ ನಮಸ್ಕಾರ.

ಆಕರ : ಮಾರ್ಗ ಸಂಪುಟ-೭

■■

೭೪

ಕನ್ನಡ ವಿಶ್ವವಿದ್ಯಾಲಯ ನುಡಿಹಬ್ಬದ ಸ್ವಾಗತ : ೨

೨

ಘನತೆವೆತ್ತ ಸನ್ಮಾನ್ಯ ಕುಲಾಧಿಪತಿಗಳೇ, ಸನ್ಮಾನ್ಯ ಸಮಕುಲಾಧಿಪತಿಗಳೇ, ಗೌರವಾನ್ವಿತ ಡಾ.ಎ.ಎನ್.ಮೂರ್ತಿರಾವ್ ಮತ್ತು ಡಾ.ಹಾ.ಮಾ.ನಾಯಕ ಅವರೇ, ಸಂಸದ ಸದಸ್ಯರೇ, ಸಚಿವ–ಶಾಸಕರೇ, ಸೆನೆಟ್–ಸಿಂಡಿಕೇಟ್ ಸದಸ್ಯರೇ, ಮಹನೀಯರೇ–ಮಹಿಳೆಯರೇ ಮತ್ತು ವಿದ್ಯಾರ್ಥಿಗಳೇ

"ಕನ್ನಡ ವಿದ್ಯೆ"ಯ ಶೋಧ, ವಿಮರ್ಶೆ ಮತ್ತು ಪ್ರಸಾರಗಳ ಆದರ್ಶದಲ್ಲಿ ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ ಇಂದು ತನ್ನ ಆರನೆಯ ನುಡಿಹಬ್ಬವನ್ನು ಆಚರಿಸುತ್ತಲಿದೆ. ಈ ಸಮಾರಂಭಕ್ಕೆ ಘನತೆವೆತ್ತ ಸನ್ಮಾನ್ಯ ಕುಲಾಧಿಪತಿಗಳಾದ ಶ್ರೀಮತಿ ವಿ.ಎಸ್.ರಮಾದೇವಿ ಅವರನ್ನೂ, ಸನ್ಮಾನ್ಯ ಸಮಕುಲಾಧಿಪತಿಗಳಾದ ಡಾ.ಜಿ.ಪರಮೇಶ್ವರ ಅವರನ್ನೂ, ಸುಪ್ರಸಿದ್ಧ ಸಾಹಿತಿಗಳಾದ ಡಾ.ಎ.ಎನ್.ಮೂರ್ತಿರಾವ್, ಡಾ.ಹಾ.ಮಾ.ನಾಯಕ ಅವರನ್ನೂ, ಸಂಸದ ಸದಸ್ಯರನ್ನೂ, ಸಚಿವ–ಶಾಸಕರನ್ನೂ, ಎಲ್ಲ ಮಹನೀಯರನ್ನೂ ಪ್ರೀತಿಯಿಂದ ಸ್ವಾಗತಿಸುತ್ತೇನೆ.

ಕನ್ನಡ ಮತ್ತು ಆಂಧ್ರ ಅಕ್ಕತಂಗಿಯರು. ಹೀಗಾಗಿ ಆಂಧ್ರದ ಮಗಳಾದ ಮಾನ್ಯ ಶ್ರೀಮತಿ ರಮಾದೇವಿಯವರು ಪರ್ಯಾಯವಾಗಿ ಕನ್ನಡದ ಮಗಳೇ ಆಗಿದ್ದಾರೆ. ಪ್ರಥಮ ದರ್ಜೆಯ ಚಿನ್ನದ ಗರಿಗಳನ್ನು ಕಿರೀಟದಲ್ಲಿ ಧರಿಸಿಕೊಳ್ಳುತ್ತಲೇ ಬೆಳೆದ ಈ ಕಾನೂನುತಜ್ಞೆ, ಕಾನೂನು ಸಾಹಿತಿಯೂ ಆಗಿರುವುದು ಒಂದು ವಿಶೇಷ. ಕಥೆ, ಕಾದಂಬರಿ, ನಾಟಕ ರಚನೆಯ ಮೂಲಕ ತೆಲುಗು ಸಾಹಿತಿಯಾಗಿರುವುದು ಇನ್ನೂ ವಿಶೇಷ. " ನಾನು ಇಷ್ಟರಲ್ಲಿ ಕನ್ನಡದಲ್ಲಿಯೇ ವ್ಯವಹರಿಸುತ್ತೇನೆ" ಎಂದು ಇತ್ತೀಚೆ ಹೇಳಿರುವ ಮಾತು, ಇವರ ಸಾಂಸ್ಕೃತಿಕ ಕರ್ತವ್ಯ ಪ್ರಜ್ಞೆಗೆ ನಿದರ್ಶನವೆನಿಸಿದೆ. ಯಾವುದೇ ರಾಜ್ಯದ ರಾಜ್ಯಪಾಲರಿಗೆ ಮಾದರಿಯೆನಿಸಿದೆ. ಕನ್ನಡ ವಿಶ್ವವಿದ್ಯಾಲಯವು, 'ವಿಶ್ವವಿದ್ಯಾಲಯ ಧನಸಹಾಯ ಆಯೋಗ'ಕ್ಕೆ ಸಂಲಗ್ನಗೊಂಡ ಮೊದಲ ವರ್ಷವಿದು. ಈ ಮೊದಲ ವರ್ಷದ ನುಡಿಹಬ್ಬಕ್ಕೆ ಮೊದಲನೆಯ ಕುಲಾಧಿಪತಿಯಾಗಿ ಸನ್ಮಾನ್ಯರು ಆಗಮಿಸಿರುವುದು, ಚರಿತ್ರಾರ್ಹ ಘಟನೆಯಾಗಿದೆ.

ಶಿಕ್ಷಣ ಸಚಿವರಾದ ಮಾನ್ಯ ಡಾ.ಜಿ.ಪರಮೇಶ್ವರ ಅವರು ಶಿಕ್ಷಣ ಸಂಸ್ಥೆಗಳ ಮಧ್ಯೆ ಹುಟ್ಟಿ, ಶಿಕ್ಷಣ ಸಂಸ್ಥೆಗಳ ಮಧ್ಯೆ ಬೆಳೆದವರು. ಕೃಷಿ ಪದವೀಧರರಾಗಿರುವುದು, ವಿದೇಶದಲ್ಲಿ ಪಿಎಚ್.ಡಿ. ಪದವಿ ಗಳಿಸಿರುವುದು, ೧೦೦ರಷ್ಟು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಲಿರುವುದು ಇವೆಲ್ಲ ಇವರ ಶಿಕ್ಷಣ ಸಚಿವತ್ವಕ್ಕೆ ಸಮರ್ಥನೆಯನ್ನು ಒದಗಿಸಿವೆ. ಉನ್ನತ ಶಿಕ್ಷಣ ಕ್ಷೇತ್ರವನ್ನು ತೀವ್ರ ಬದಲಾವಣೆಯೊಂದಿಗೆ ೨೧ನೆಯ ಶತಮಾನಕ್ಕೆ ಕೊಂಡೊಯ್ಯಬೇಕೆನ್ನುವ ಇವರ ಅದಮ್ಯ ಬಯಕೆ ಅನನ್ಯವೆನಿಸಿದೆ.

ನಾಡೋಜ ಗೌರವ ಪದವಿ ಸ್ವೀಕರಿಸಲಿರುವ ಮಾನ್ಯ ಶ್ರೀ ಎ.ಎನ್. ಮೂರ್ತಿರಾವ್ ಅವರು ಭೌತಿಕ ಮತ್ತು ಸಾಂಸ್ಕೃತಿಕ ಎರಡೂ ಅರ್ಥಗಳಲ್ಲಿ "ಶತಮಾನ ಪುರುಷ" ಎನಿಸಿದ್ದಾರೆ. 'ಮೌಲ್ಯ'ವನ್ನು ವ್ಯಕ್ತಿಯಾಗಿ ಬದುಕಿ, ಲೇಖಕರಾಗಿ ಬರೆಯುವ ಹಿರಿಯ ಸಾಹಿತಿಗಳಾದ ಶ್ರೀಯುತರು ಕನ್ನಡ ಪ್ರಬಂಧ ಸಾಹಿತ್ಯ ಪ್ರಕಾರಕ್ಕೆ ನೀಡಿದ ಕೊಡುಗೆ ಅರ್ಥಪೂರ್ಣವಾದುದು. ಅಂದರೆ ಗುಣಾತ್ಮಕವಾಗಿರುವ ಅದು ಒಳನೋಟಗಳಿಂದ ತುಂಬಿದ್ದು, ಹೊಸ ವೈಚಾರಿಕ ದೃಷ್ಟಿಕೋನದಿಂದ ಶೋಭಿಸುತ್ತದೆ.

ನುಡಿಹಬ್ಬದ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ಮಾನ್ಯ ಡಾ.ಹಾ.ಮಾ.ನಾಯಕ ಅವರದು ತುಂಬ ದೊಡ್ಡ ಹೆಸರು. ಅಖಂಡ ಕರ್ನಾಟಕವನ್ನು ಸಮಾನವಾಗಿ ಪ್ರೀತಿಸುವ ಇವರು, ದೇಶ-ವಿದೇಶ ಮಟ್ಟದಲ್ಲಿ ಕನ್ನಡದ ರಾಯಭಾರಿಯಂತೆ ದುಡಿದವರು. ಕನ್ನಡದ ಹಿತರಕ್ಷಣೆ ವಿಷಯದಲ್ಲಿ ನಿರ್ಭೀತ ಸಲಗದಂತೆ ನಡೆದುಕೊಳ್ಳುವ ಇವರು, ಅಂಥ ಸಂದರ್ಭಗಳಲ್ಲಿ ವಹಿಸಿದ ಶ್ರಮ, ತೋರಿದ ಶ್ರದ್ಧೆ ಶಬ್ದಾತೀತ. ಅಂಕಣ ಬರಹದ ಮೂಲಕ ಕರ್ನಾಟಕದ ಮನೆಮನೆಗಳನ್ನು ಮುಟ್ಟಿದ ಡಾ.ನಾಯಕ ಅವರು, ಆ ಪ್ರಕಾರಕ್ಕೆ ಸಾಹಿತ್ಯಕ್ಷೇತ್ರದಲ್ಲಿ ಒಂದು ಸ್ಥಿರವಾದ ಸ್ಥಾನಗೌರವವನ್ನು ತಂದುಕೊಟ್ಟವರು.

ಈ ಸಮಾರಂಭಕ್ಕೆ ಆಗಮಿಸಿರುವ ಸಚಿವರು, ಲೋಕಸಭಾ ಸದಸ್ಯರು, ಶಾಸಕರು ಕನ್ನಡ ವಿಶ್ವವಿದ್ಯಾಲಯವನ್ನು ತುಂಬ ಗಾಢವಾಗಿ ಪ್ರೀತಿಸುತ್ತಲಿರುವರೆಂಬುದು ನನ್ನ ಪ್ರತ್ಯಕ್ಷ ಅನುಭವದ ಮಾತಾಗಿದೆ. ನುಡಿಹಬ್ಬದಲ್ಲಿ ಪಾಲ್ಗೊಂಡ ಇವರೆಲ್ಲರನ್ನು, ನಿಮ್ಮೆಲ್ಲರನ್ನು ಇನ್ನೊಮ್ಮೆ ಗೌರವದಿಂದ ಸ್ವಾಗತಿಸುತ್ತೇನೆ.

ಮೂಲತಃ ಧಾರ್ಮಿಕ ಕೇಂದ್ರವಾಗಿರುವ ಹಂಪಿ, ಕವಿ ಹರಿಹರನಿಂದಾಗಿ ಸಾಹಿತ್ಯ ಕೇಂದ್ರವಾಗಿ, ಹಕ್ಕಬುಕ್ಕರಿಂದ ರಾಜಕೀಯ ಕೇಂದ್ರವಾಗಿ ಬೆಳೆದು 'ವಿಜಯನಗರವೆ'ನಿಸಿತು. ಇಂದು ಆ ವಿಜಯನಗರವೇ ಕನ್ನಡ ವಿಶ್ವವಿದ್ಯಾಲಯ ಹೆಸರಿನಲ್ಲಿ 'ವಿದ್ಯಾನಗರ'ವಾಗಿ ಬೆಳೆಯುತ್ತಲಿದೆ. ಈ ಉನ್ನತ ವಿದ್ಯಾಸಂಸ್ಥೆ ಭೌತಿಕ ಮತ್ತು ಬೌದ್ಧಿಕ ನೆಲೆಗಳಲ್ಲಿ ಮುನ್ನಡೆಯಬೇಕೆಂದು ನಮ್ಮ ಆಸೆ.

ಭೌತಿಕ ಸಾಧನೆಯನ್ನು ಕುರಿತು ಹೇಳುವುದಾದರೆ ಈ ವರ್ಷ ಕರ್ನಾಟಕ ಸರ್ಕಾರದಿಂದ ೩೭ ಲಕ್ಷ ರೂಪಾಯಿ ಹೆಚ್ಚಿನ ಅನುದಾನ ಲಭ್ಯವಾಗಿದೆ. ಕರ್ನಾಟಕದ ಜನಪ್ರಿಯ ದಿನಪತ್ರಿಕೆ ಖ್ಯಾತಿಯ ಸಂಯುಕ್ತ ಕರ್ನಾಟಕದ 'ಲೋಕಶಿಕ್ಷಣ ಟ್ರಸ್ಟ್' ಕಾರ್ಯದರ್ಶಿಗಳಾದ ಶ್ರೀ ಕೆ.ಶ್ಯಾಮರಾವ್ ಅವರು ಗಳಗನಾಥರ ಸಮಗ್ರ ಕಾದಂಬರಿ ಸಾಹಿತ್ಯದ ಪ್ರಕಟನೆಗೆ ದೊಡ್ಡ ಮೊತ್ತದ ಹಣ ನೀಡಿದ್ದಾರೆ. ಬಳ್ಳಾರಿ ಜಿಲ್ಲೆಯ ಲೋಕಸಭಾ ಸದಸ್ಯರಾಗಿದ್ದ ಮಾನ್ಯ ಶ್ರೀ.ಕೆ.ಸಿ.ಕೊಂಡಯ್ಯ ಅವರು ನೀಡಿದ್ದ

ಲೋಕಸಭಾ ಸದಸ್ಯ ನಿಧಿಯಿಂದ ರಸ್ತೆಗಳು ಡಾಂಬರೀಕರಣಗೊಂಡಿದ್ದು, ಇಂದೇ ಅವರಿಂದ 'ಸೂರ್ಯಬೀದಿ' ಮತ್ತು 'ಚಂದ್ರಬೀದಿ'ಗಳು ಉದ್ಘಾಟನೆಗೊಂಡಿವೆ. ಕೊಪ್ಪಳ ಜಿಲ್ಲೆಯ ಲೋಕಸಭಾ ಸದಸ್ಯರಾದ ಶ್ರೀ ಹೆಚ್.ಜಿ.ರಾಮುಲು ಅವರು ನೀಡಿದ ಲೋಕಸಭಾ ಸದಸ್ಯ ನಿಧಿಯಿಂದ ರೂಪಗೊಳ್ಳಲಿರುವ 'ಸಮಗ್ರ ನೀರು ಪೂರೈಕೆ ಯೋಜನೆ'ಗಾಗಿ ಇಂದೇ ಅವರಿಂದ ಅಡಿಗಲ್ಲು ಸ್ಥಾಪಿತವಾಗಿದೆ.

ಬಳ್ಳಾರಿ ಜಿಲ್ಲೆಯ ಜಿಲ್ಲಾ ಪಂಚಾಯತ್ ಕೊಡಮಾಡಿರುವ ಹಣದಿಂದ 'ಅಕ್ಷರೋದ್ಯಾನ' ಮತ್ತು 'ಕ್ರಿಯಾಶಕ್ತಿ ವನ'ಗಳನ್ನು ನಿರ್ಮಿಸಲಾಗಿದೆ. ಕೊಪ್ಪಳ ಜಿಲ್ಲಾ ಪಂಚಾಯತ್‌ದವರು ಸ್ವರ್ಣ ಜಯಂತಿ ಗ್ರಾಮ ರೋಜಗಾರ ಯೋಜನೆಯ ಅಧ್ಯಯನಕ್ಕಾಗಿ ಮತ್ತು ಕೊಪ್ಪಳ ಜಿಲ್ಲಾ ಅಭಿವೃದ್ಧಿ ಗ್ರಂಥರಚನೆಗಾಗಿ ಆರ್ಥಿಕ ನೆರವು ನೀಡಿದ್ದಾರೆ. ಅರಣ್ಯ ಇಲಾಖೆಯವರು ವಿಶ್ವವಿದ್ಯಾಲಯದ ಆವರಣದಲ್ಲಿ ಈ ವರ್ಷ ೧೦ ಸಾವಿರ ಗಿಡಗಳನ್ನು ಬೆಳೆಸಿದ್ದಾರೆ. ಇವರೆಲ್ಲರಿಗೆ ವಿಶ್ವವಿದ್ಯಾಲಯ ಋಣಿಯಾಗಿದೆ.

ಹೀಗೆ ತನ್ನ ಸಂಪನ್ಮೂಲಗಳನ್ನು ಸರಕಾರ ಮತ್ತು ಸಾರ್ವಜನಿಕರಿಂದ ಕ್ರೋಡೀಕರಿಸಿಕೊಂಡು, ಅರ್ಧಕ್ಕೆ ನಿಂತಿದ್ದ ವಸತಿಗೃಹಗಳನ್ನೂ ಇತರ ಕಾಮಗಾರಿಗಳನ್ನೂ ಪೂರ್ಣಗೊಳಿಸುವ ಕಾರ್ಯವನ್ನು ಮಾಡುತ್ತಲಿದ್ದೇವೆ. ಎನ್.ಎಸ್.ಎಸ್. ಶಿಬಿರಗಳನ್ನು ಏರ್ಪಡಿಸಿ ಆವರಣದ ಅಭಿವೃದ್ಧಿಗಾಗಿ ಶ್ರಮಿಸಿದ್ದೇವೆ. 'ಪುಸ್ತಕ ಮಾರಾಟ ಮಳಿಗೆ'ಯ ಕಟ್ಟಡ ಕಾರ್ಯ ಇಷ್ಟರಲ್ಲಿ ಆರಂಭವಾಗಲಿದೆ. ಇಂದೇ ಉನ್ನತ ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಜಿ.ಪರಮೇಶ್ವರ ಅವರು "ಮಾನಸೋಲ್ಲಾಸ" ಹೆಸರಿನ ಕುಲಪತಿ ನಿವಾಸದ, ತೋಟಗಾರಿಕೆ ಸಚಿವರಾದ ಮಾನ್ಯ ಶ್ರೀ ಅಲ್ಲಂ ವೀರಭದ್ರಪ್ಪನವರು "ಭುವನವಿಜಯ" ಹೆಸರಿನ ಉದ್ಯಾನದ ಅಡಿಗಲ್ಲು ಸಮಾರಂಭವನ್ನು ನೆರವೇರಿಸಿದ್ದಾರೆ.

ಜಾನಪದ-ಬುಡಕಟ್ಟು ವಸ್ತು ಸಂಗ್ರಹಾಲಯ, ಇತಿಹಾಸ-ಪುರಾತತ್ವ ಸಂಗ್ರಹಾಲಯ ಮತ್ತು ಸಾಹಿತಿ-ಕಲಾವಿದರ ಚಿತ್ರಶಾಲೆಗಳನ್ನು ಸ್ಥಾಪಿಸಿ, ಅವುಗಳ ಬೆಳವಣಿಗೆಗಾಗಿ ವಿಶೇಷ ಪ್ರಯತ್ನ ಮಾಡುತ್ತಲಿದ್ದೇವೆ. ಪ್ರತಿವರ್ಷ ಬುಡಕಟ್ಟು- ಜಾನಪದ-ಸಾಂಪ್ರದಾಯಿಕ ಚಿತ್ರಕಲಾ ಸ್ಪರ್ಧೆ ಏರ್ಪಡಿಸುವ ಹೊಸ ಯೋಜನೆಯನ್ನು ಈ ವರ್ಷದಿಂದ ಆರಂಭಿಸಿದ್ದೇವೆ. ಮಾಹಿತಿ ತಂತ್ರಜ್ಞಾನದ ಬಗೆಗೆ ಕರ್ನಾಟಕ ಸರ್ಕಾರ ಹೊಸ ಅಧ್ಯಾಯ ಆರಂಭಿಸಿದ್ದು, ಇದಕ್ಕೆ ಸಹಮತವೆನ್ನುವಂತೆ ಕನ್ನಡ ವಿಶ್ವವಿದ್ಯಾಲಯ ತನ್ನ ಎಲ್ಲ ವಿಭಾಗಗಳಿಗೆ ಈ ತಂತ್ರಜ್ಞಾನವನ್ನು ಸಮಗ್ರವಾಗಿ ಅಳವಡಿಸಿದೆ. ಮುಂದುವರಿದು, ಜಾಗತಿಕ ಸಂಪರ್ಕಕ್ಕಾಗಿ ನಿನ್ನೆಯೇ ವೆಬ್‌ಸೈಟ್ ಉದ್ಘಾಟನೆಯಾಗಿರುವುದು ಈ ವರ್ಷದ ಇನ್ನೊಂದು ಸಾಧನೆಯಾಗಿದೆ. ಹೆಚ್ಚಿನದಾಗಿ ಕಟ್ಟಡಗಳಿಗೆ ವಿದ್ಯುತ್ ದೀಪ, ಆಂತರಿಕ ದೂರವಾಣಿಗಳನ್ನು ಕಲ್ಪಿಸುವುದರೊಂದಿಗೆ, ಒಂದು ಸಾವಿರ ಎಕರೆ ಭೂಮಿಗೆ ತಂತಿಬೇಲಿಯನ್ನು ಕಟ್ಟಿಸಿ, ವಿಶ್ವವಿದ್ಯಾಲಯದ ಆವರಣವನ್ನು ಸಂರಕ್ಷಿಸಲಾಗಿದೆ.

ಶೈಕ್ಷಣಿಕ ಪ್ರಗತಿಯನ್ನು ಕುರಿತು ಹೇಳುವುದಾದರೆ, 'ವಿಶ್ವವಿದ್ಯಾಲಯ ಧನಸಹಾಯ ಆಯೋಗ'ದ ಸಂಲಗ್ನತೆ ಪ್ರಾಪ್ತವಾದುದು, ಕನ್ನಡ ವಿಶ್ವವಿದ್ಯಾಲಯದ ಚರಿತ್ರೆಯಲ್ಲಿಯೇ ಐತಿಹಾಸಿಕ ತಿರುವುಯೆನಿಸಿದೆ. ವಿಶ್ವವಿದ್ಯಾಲಯ ರಾಷ್ಟ್ರೀಯ ಮುಖ್ಯ ಪ್ರವಾಹದಲ್ಲಿ ಸೇರಿಕೊಂಡ ಈ ಪ್ರಕ್ರಿಯೆಯಿಂದಾಗಿ,

ಮೊದಲ ಕಂತು ೯೦ ಲಕ್ಷ ರೂಪಾಯಿ ಮಂಜೂರಾಗಿದ್ದು, ಹೆಚ್ಚಿನದಾಗಿ ನಮ್ಮ ಅಧ್ಯಾಪಕರು ವಿವಿಧ ರೀತಿಯ ಲಾಭಗಳನ್ನು ಪಡೆಯಲು ಅನೇಕ ಅವಕಾಶಗಳು ತೆರೆದುಕೊಂಡಿವೆ.

ಇಂತಹದೇ ಇನ್ನೊಂದು ಸಾಧನೆಯೆಂದರೆ, ವಿಶ್ವವಿದ್ಯಾಲಯ ಬಾದಾಮಿಗೆ ಶಿಲ್ಪಕಲಾ ವಿಭಾಗವನ್ನು ವರ್ಗಾಯಿಸುವ ಮೂಲಕ ಈ ವರೆಗೆ ಏಕಕೇಂದ್ರೀಯವಾಗಿದ್ದ ಈ ವಿಶ್ವವಿದ್ಯಾಲಯವನ್ನು ಬಹುಕೇಂದ್ರೀಯತೆಗೆ ಹೊರಳಿಸಿದುದು. ಈ ವರ್ಷ ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಒಂದೊಂದರಂತೆ ಇಂಥ ಇನ್ನೂ ಎರಡು ಕೇಂದ್ರಗಳನ್ನು ತೆರೆಯುವ ಪ್ರಯತ್ನದಲ್ಲಿದ್ದೇವೆ.

ವಿಭಾಗಗಳು ಕ್ರಿಯಾಶೀಲವಾದರೆ ವಿಶ್ವವಿದ್ಯಾಲಯ ಕ್ರಿಯಾಶೀಲವಾಗುತ್ತದೆ. ವಿಭಾಗಗಳು ಬೆಳೆದರೆ ವಿಶ್ವವಿದ್ಯಾಲಯ ಬೆಳೆಯುತ್ತದೆ. ಈ ತಿಳಿವಳಿಕೆಯ ಮೇಲೆ ಹೆಚ್ಚು ಒತ್ತುಕೊಟ್ಟು, ಪ್ರತಿಯೊಂದು ವಿಭಾಗಕ್ಕೆ ಈ ವರ್ಷವೂ ಸಾಂಸ್ಥಿಕ ಯೋಜನೆ, ವೈಯಕ್ತಿಕ ಯೋಜನೆ, ವಿಚಾರ ಸಂಕಿರಣಗಳನ್ನು ವಹಿಸಿಕೊಡಲಾಗಿದೆ. ಇವುಗಳಲ್ಲಿ ಸಾಂಸ್ಥಿಕ ಯೋಜನೆಗಳಾದ ಕರ್ನಾಟಕ ಸಂಸ್ಕೃತಿ ಚರಿತ್ರೆ ಸಂಪುಟಗಳು, ಕರ್ನಾಟಕ ಪುರಾತತ್ವ ಚರಿತ್ರೆ ಸಂಪುಟಗಳು, ಕರ್ನಾಟಕ ಬುಡಕಟ್ಟು ಸಂಸ್ಕೃತಿ ಸಂಪುಟಗಳು, ಕರ್ನಾಟಕ ದೇವಾಲಯ ಕೋಶ, ಕರ್ನಾಟಕ ಜನಸಮುದಾಯ ಕೋಶ, ಶಾಸನ ಸಂಪುಟ, ವೃತ್ತಿ ಪದಕೋಶ ಮುಖ್ಯವೆನಿಸಿವೆ. ಹೆಚ್ಚಿನದಾಗಿ ವೈಯಕ್ತಿಕ ಯೋಜನೆ ಅಡಿಯಲ್ಲಿ ಉತ್ತಮೋತ್ತಮ ಕೃತಿಗಳ ರಚನಾಕಾರ್ಯ ಮುನ್ನಡೆದಿದೆ. ಈ ವರ್ಷವೂ ವಿಚಾರ ಸಂಕಿರಣಗಳಿಗಾಗಿ ವಿಶೇಷ ಗಮನ ಕೊಡಲಾಗಿದ್ದು, ವಿಕೇಂದ್ರಿತ ಅಭಿವೃದ್ಧಿಯ ಆದರ್ಶದಲ್ಲಿ ಮೈಸೂರು ವಿಶ್ವವಿದ್ಯಾಲಯ ಮೊದಲಾದ ದೂರದ ಸಂಸ್ಥೆಗಳ ಸಹಯೋಗದೊಂದಿಗೆ ಇವುಗಳನ್ನು ಜರುಗಿಸಲಾಗಿದೆ. ಇದರಿಂದಾಗಿ ಅಧ್ಯಾಪಕರಲ್ಲಿ ಸಾಂಸ್ಕೃತಿಕ ಜವಾಬ್ದಾರಿ ಈ ವರ್ಷ ಇನ್ನೂ ಜಾಗೃತವಾಗಿ, ಅವರಲ್ಲಿ ಆರೋಗ್ಯಪೂರ್ಣ ಸ್ಪರ್ಧೆ ಸೃಷ್ಟಿಯಾಗಿದೆ.

ಇಂದು ಕಲಿಯುವ ಶಿಕ್ಷಣಕ್ಕೂ, ಬದುಕುವ ಜೀವನಕ್ಕೂ ಸಂಬಂಧ ತಪ್ಪಿಹೋಗುತ್ತಲಿದೆ. ಇದನ್ನು ಸರಿಪಡಿಸುವ ಉದ್ದೇಶದಿಂದ "ಆನ್ವಯಿಕ ಸ್ನಾತಕೋತ್ತರ ಶಿಕ್ಷಣ" ವೆಂಬ ಹೊಸ ಬಗೆಯ ಶಿಕ್ಷಣವನ್ನು ಆರಂಭಿಸುವ ಸಿದ್ಧತೆಯಲ್ಲಿದ್ದೇವೆ. ಹೊಸದಾಗಿ "ವಿಜ್ಞಾನ ನಿಕಾಯ"ವನ್ನು ಆರಂಭಿಸಿ, ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಸಂಬಂಧಪಟ್ಟ ಪಠ್ಯ ಮತ್ತು ಪೂರಕ ಸಾಹಿತ್ಯವನ್ನು ಪ್ರಕಟಿಸುವ ಗುರಿ ನಮ್ಮದಾಗಿದೆ.

ನಾವು ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ವಿಭಾಗವೆಂದರೆ ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯಕ್ಕೆ ಏಕೈಕ ಆದಾಯ ಮೂಲವಾಗಿರುವ ಈ ಶಾಖೆ, ಜೇನುಹುಟ್ಟಿನಂತೆ ದುಡಿದು ಕಳೆದ ವರ್ಷ ಪುಸ್ತಕಗಳ ಮಾರಾಟದಿಂದ ೫೦ ಲಕ್ಷ ರೂಪಾಯಿಗಳನ್ನು ಗಳಿಸಿದೆ. ಈ ವರ್ಷವೂ ಆ ದಾರಿಯಲ್ಲಿ ಮುನ್ನಡೆದು ಬೆಳಗಾವಿ, ಸಂಕೇಶ್ವರ, ಧರ್ಮಸ್ಥಳ, ಪುತ್ತೂರು, ಉಡುಪಿ, ತುಮಕೂರು, ಸಾಗರ, ಗಂಗಾವತಿ, ಚಿತ್ರದುರ್ಗ, ಬೆಂಗಳೂರು ಮತ್ತು ಹಾಸನಗಳಿಗೆ ಪುಸ್ತಕ ಸಂಸ್ಕೃತಿಯಾತ್ರೆಯನ್ನು ಕೈಕೊಂಡು, ಪುಸ್ತಕ ಮಾರಾಟದಲ್ಲಿ ವೇಗದ ಹೆಜ್ಜೆಯನ್ನು ಹಾಕಿದೆ. ಶಿವಮೊಗ್ಗೆಯ ಕುವೆಂಪು ವಿಶ್ವವಿದ್ಯಾಲಯ, ಧಾರವಾಡದ ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಜಿಲ್ಲಾ ಸಾಹಿತ್ಯ ಪರಿಷತ್‌ನೊಂದಿಗೆ ಜರುಗಿಸಿದ ಉಪನ್ಯಾಸ, ವಿಚಾರ ಸಂಕಿರಣಗಳೂ ಮಂಗಳೂರು, ಧಾರವಾಡ,

ಕೊಪ್ಪಳ, ಸಂಕೇಶ್ವರ, ಹೆಬ್ರಿ, ಚೆಳ್ಳಗುರ್ಕಿ ಗ್ರಾಮಗಳಲ್ಲಿ ಜರುಗಿದ ಪ್ರಚಾರೋಪನ್ಯಾಸಗಳೂ ಎತ್ತಿ ಹೇಳಬೇಕಾದುವು.

"ವೇಗ ಮತ್ತು ಗುಣಮಟ್ಟ" ಗಳನ್ನು ಆದರ್ಶವಾಗಿಟ್ಟುಕೊಂಡು ದುಡಿಯುತ್ತಲಿರುವ ಪ್ರಸಾರಾಂಗದ ಮೂಲಕ, ಈ ವರ್ಷ ಒಟ್ಟು ೧೦೦ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ನಿನ್ನೆ ಜರುಗಿದ "ಆರನೆಯ ನುಡಿಹಬ್ಬಕ್ಕೆ ಅರುವತ್ತು ಪುಸ್ತಕಗಳ ಬಿಡುಗಡೆ" ಕಾರ್ಯಕ್ರಮವು ಅಪೂರ್ವ ಸಾಧನೆಯ ದ್ಯೋತಕವೆನಿಸಿದೆ. ನಮ್ಮ ಅಧ್ಯಾಪಕರಾದ ಡಾ.ಕೆ.ವಿ.ನಾರಾಯಣ, ಡಾ.ಎಚ್.ಎಸ್.ಶ್ರೀಮತಿ, ಡಾ.ರಹಮತ್ ತರೀಕೆರೆ ಬರೆದ ಪುಸ್ತಕಗಳು ಈ ವರ್ಷವೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗೆದ್ದುಕೊಂಡು ಬಂದಿರುವುದು ಹೆಮ್ಮೆಯ ವಿಷಯವಾಗಿದೆ. ಡಾ.ಲಕ್ಷ್ಮಣ ತೆಲಗಾವಿ ಅವರಿಗೆ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯ ಪ್ರತಿಷ್ಠಿತ ಪ್ರಶಸ್ತಿಯಾದ "ಡಾ.ಅಂಬೇಡ್ಕರ್ ಫೆಲೋಶಿಪ್" ಪ್ರಾಪ್ತವಾದುದು ನಮಗೆಲ್ಲ ಹೆಮ್ಮೆಯನ್ನುಂಟುಮಾಡಿದೆ.

ಕನ್ನಡ ವಿಶ್ವವಿದ್ಯಾಲಯ ತನ್ನ ಬಾಹುಗಳನ್ನು ಕ್ರಮೇಣ ಎಡಬಲಕ್ಕೆ ಚಾಚುತ್ತ ನಡೆದಿದೆ. ಈ ಸಂಸ್ಥೆಯ ಮುಖ್ಯ ಉದ್ದೇಶ ಕನ್ನಡ ಪರಂಪರೆಯನ್ನು ಶೋಧಿಸುತ್ತ, ತನ್ನ ಬೇರುಗಳನ್ನು ದ್ರಾವಿಡ ಸಂಸ್ಕೃತಿಯಲ್ಲಿ ಕಂಡುಕೊಳ್ಳುವುದಾಗಿದೆ. ಈ ಉದ್ದೇಶದ ಸಫಲತೆಗಾಗಿ ತಂಜಾವೂರಿನ ತಮಿಳು ವಿಶ್ವವಿದ್ಯಾಲಯದೊಂದಿಗೆ "ಸಂಗಂ ಸಾಹಿತ್ಯ"ದ ಅನುವಾದ ಕಾರ್ಯವನ್ನೂ, ಕುಪ್ಪಂ ದ್ರಾವಿಡ ವಿಶ್ವವಿದ್ಯಾಲಯದೊಂದಿಗೆ "ತಮಿಳು ಮಹಾಕಾವ್ಯ"ಗಳ ಅನುವಾದ ಕಾರ್ಯವನ್ನೂ, ಹೈದ್ರಬಾದಿನ ತೆಲುಗು ವಿಶ್ವವಿದ್ಯಾಲಯದೊಂದಿಗೆ "ತೆಲುಗು ಸಾಂಸ್ಕೃತಿಕ ಕಾವ್ಯ"ಗಳ ಅನುವಾದ ಕಾರ್ಯವನ್ನೂ ಕೈಗೆತ್ತಿಕೊಳ್ಳುವ ಸಿದ್ಧತೆಯಲ್ಲಿದೆ, ಪ್ರಸಾರಾಂಗ. ಇಂದು ಪ್ರಕಟವಾದ ಕನ್ನಡ ಇನ್‌ಸ್ಕ್ರಿಪ್ಷನ್ಸ್ ಆಫ್ ಆಂಧ್ರಪ್ರದೇಶ, ತೆಲುಗು ದಾಕ್ಷಿಣಾತ್ಯ ಸಾಹಿತ್ಯ, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಪ್ರಕಟವಾಗಲಿರುವ ಕರ್ನಾಟಕದ ಉರ್ದು-ಪರ್ಶಿಯನ್-ಅರೆಬಿಕ್ ಶಾಸನ ಸಂಪುಟ ಕೃತಿಗಳು ಈ ದಿಸೆಯ ಆರಂಭಿಕ ಪ್ರಯತ್ನಗಳಾಗಿವೆ.

ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನರಿಗೆ ತಲುಪಿಸುವ ವಿನೂತನ ಯೋಜನೆಯನ್ನು ಈ ವರ್ಷದಿಂದ ಆರಂಭಿಸಿ, ೪,೫೦೦ ಪುಟಗಳ, ಆರು ಸಂಪುಟಗಳ ಗಳಗನಾಥರ ೨೨ ಕಾದಂಬರಿಗಳನ್ನು ಕೇವಲ ೬೦೦ ರೂ.ಗಳಿಗೆ ಮಾರಾಟ ಮಾಡಲಾಗುತ್ತಿದೆ. ೫೦೦ ಪುಟಗಳ ಹರಿಹರನ ರಗಳೆಗಳ ಸಮಗ್ರ ಸಂಪುಟಕ್ಕೆ ಕೇವಲ ರೂ.೧೦೦ ಬೆಲೆ ಇಡಲಾಗಿದೆ. ಒಟ್ಟಾರೆ ಇಂದು ಪುಸ್ತಕದ ಉತ್ಪಾದನೆ, ಪ್ರಕಾಶನ, ಗುಣಮಟ್ಟ, ಮಾರಾಟ ವಿಷಯಗಳಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆಯೆಂದು ಹೇಳಲು ಸಂತೋಷವೆನಿಸುತ್ತದೆ.

ವಿದೇಶಗಳಲ್ಲಿ ಕನ್ನಡವನ್ನು ಪ್ರಸಾರ ಮಾಡುವ ಸಾಧ್ಯತೆಗಳ ಹಿನ್ನೆಲೆಯಲ್ಲಿ ಜರ್ಮನಿಯ ಟುಬಿಂಗನ್ ವಿಶ್ವವಿದ್ಯಾಲಯದ ಭಾರತೀಯಶಾಸ್ತ್ರ ಪ್ರಾಧ್ಯಾಪಕರಾದ ಶ್ರೀಮತಿ ಬ್ರೂಕ್ನರ್ ಅವರನ್ನು ಇಲ್ಲಿಗೆ ಆಮಂತ್ರಿಸಿ ಅವರೊಂದಿಗೆ, ಮೊದಲ ಸುತ್ತಿನ ಚರ್ಚೆ ನಡೆಸಲಾಗಿದೆ. ಈ ವಿಚಾರದ ಮುಂದುವರಿಕಯೆಂಬಂತೆ ಹಾಲೆಂಡ್, ಶ್ರೀಲಂಕಾ, ಥೈಲ್ಯಾಂಡ್, ಇಂಡೋನೇಷಿಯಾ, ಮಲೇಷಿಯಾ, ಪಾಕಿಸ್ತಾನ, ಬಾಂಗ್ಲಾದೇಶಗಳ ಇತಿಹಾಸ ವಿದ್ವಾಂಸರು ಕಳೆದ ವಾರ ನೀಡಿದ ಭೇಟಿ, ಮಾಡಿದ ಭಾಷಣ ವಿಶೇಷವೆನಿಸಿದೆ. ಈ ವರ್ಷ ಅಮೇರಿಕೆಯ ಹೂಸ್ಟನ್‌ದಲ್ಲಿ ಜರುಗಲಿರುವ ವಿಶ್ವ ಕನ್ನಡ

ಸಮ್ಮೇಳನದಲ್ಲಿ ವಿಶ್ವವಿದ್ಯಾಲಯ ಸಕ್ರಿಯವಾಗಿ ಭಾಗವಹಿಸುವ ಯೋಜನೆ ರೂಪಿಸಿಕೊಂಡಿದೆ. ವಿದೇಶದಲ್ಲಿರುವ ಕನ್ನಡಿಗರ ಮಕ್ಕಳಿಗಾಗಿ ಪ್ರತಿವರ್ಷ ಸಂಸ್ಕೃತಿಬೋಧನ ತರಬೇತಿಯನ್ನು, ಕರ್ನಾಟಕ ಪ್ರವಾಸ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಹೀಗೆ ಜಾಗತಿಕ ಮುಖ್ಯವಾಹಿನಿಯಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ತೊಡಗಿಸುವ ಅನೇಕ ಯೋಜನೆಗಳು ನಮ್ಮ ಕಣ್ಣು ಮುಂದಿವೆ.

೧. ಈ ವರ್ಷದ ಅಕ್ಟೋಬರ್ ೨೩ರಿಂದ ಇಡೀ ಒಂದು ವರ್ಷ ಕನ್ನಡ ವಿಶ್ವವಿದ್ಯಾಲಯದ ದಶಮಾನೋತ್ಸವ ಜರುಗಲಿದೆ. ಇದರ ಅಂಗವಾಗಿ ಕೆಲವು ಐತಿಹಾಸಿಕ ಯೋಜನೆಗಳನ್ನು ಹಮ್ಮಿಕೊಳ್ಳಲಿದ್ದೇವೆ. ಇವುಗಳಲ್ಲಿ ಮುಖ್ಯವಾದುದು, "ಕರ್ನಾಟಕ ರಾಜ್ಯಕೋಶ" ಯೋಜನೆಯ ಅಡಿಯಲ್ಲಿ ಕರ್ನಾಟಕ ಭೂಮಿಕೋಶ, ಕರ್ನಾಟಕ ಸಸ್ಯಕೋಶ, ಕರ್ನಾಟಕ ಪ್ರಾಣಿ –ಪಕ್ಷಿಕೋಶ, ಕರ್ನಾಟಕ ಜನಸಮುದಾಯ ಕೋಶ, ಕರ್ನಾಟಕ ಭಾಷಾಕೋಶ – ಈ ಪಂಚಕೋಶಗಳನ್ನು ಹೊರತರುವುದು. ಇದಲ್ಲದೆ "ಕವಿತಾಗುಣಾರ್ಣವ" ಶೀರ್ಷಿಕೆಯಲ್ಲಿ ಪಂಪನ ಎರಡೂ ಕೃತಿಗಳನ್ನು, ಕುಮಾರರಾಮನ ಸಾಂಗತ್ಯಗಳ ಸಮಗ್ರ ಸಂಪುಟವನ್ನು, ಕುಮಾರವ್ಯಾಸ ಭಾರತ, ಭರತೇಶ ವೈಭವ ಸಂಪುಟಗಳನ್ನು, ಕುವೆಂಪು–ಬೇಂದ್ರೆ ಕವನಗಳ ಸಮಗ್ರ ಸಂಪುಟಗಳನ್ನು ಪ್ರಕಟಿಸುವುದು.

ಚಿತ್ರ, ಶಿಲ್ಪ, ಸಂಗೀತ, ನೃತ್ಯ ಮೊದಲಾದ ಕಲೆಗಳ ಅಧ್ಯಯನ, ತರಬೇತಿಗಳಿಗಾಗಿ ಒಂದು ಕೋಟಿ ರೂಪಾಯಿ ಮೌಲ್ಯದ "ದಶಮಾನೋತ್ಸವ ಸ್ಮಾರಕ ಭವನ"ವನ್ನು ನಿರ್ಮಿಸುವುದು. ಇದಲ್ಲದೆ ಶೈಕ್ಷಣಿಕ ವಾತಾವರಣಕ್ಕೆ ಪೂರಕವೆಂಬಂತೆ ಕನ್ನಡ ವಿಶ್ವವಿದ್ಯಾಲಯದ ಆವರಣದ ಸಮಗ್ರ ಅಭಿವೃದ್ಧಿ ಯೋಜನೆ ಅಡಿಯಲ್ಲಿ ರಸ್ತೆ ಡಾಂಬರೀಕರಣ, ರಸ್ತೆದೀಪ, ಉದ್ಯಾನ, ನೀರು ಪೂರೈಕೆ, ಅಧ್ಯಾಪಕ – ಅಧ್ಯಾಪಕೇತರ ವಸತಿಗೃಹ, ಪ್ರಾಥಮಿಕ ಶಾಲಾ ಕಟ್ಟಡ, ಅಂಚೆಮನೆ, ಬ್ಯಾಂಕ್ ಕಟ್ಟಡ, ಬಸ್ ನಿಲ್ದಾಣ ಇತ್ಯಾದಿಗಳನ್ನು ನಿರ್ಮಿಸುವುದು. ಇನ್ನೂ ಒಂದು ವಿಷಯವೆಂದರೆ ಇಕ್ಕಟ್ಟಾದ ಬೀದಿಗಳಲ್ಲಿ ಸಂಭವಿಸಬಹುದಾದ ಅಪಘಾತವನ್ನು ತಪ್ಪಿಸಲು ಮತ್ತು ೩ ಕಿ.ಮೀ. ಸುತ್ತು ಬಳಸುವುದನ್ನು ನಿವಾರಿಸಲು ಸುಮಾರು ೨೦ ಲಕ್ಷ ವೆಚ್ಚದಲ್ಲಿ 'ಕಮಲಾಪುರ ಬೈಪಾಸ್ ರಸ್ತೆ'ಯನ್ನು ನಿರ್ಮಿಸುವುದು ಅವಶ್ಯವಿದೆ. ವಿಶ್ವವಿದ್ಯಾಲಯದ ಘನತೆಗೆ ತಕ್ಕಂತೆ 'ಹಳ್ಳಿಕೆರೆ' ಏರಿಯ ಮೇಲೆ ಅಗಲವಾದ ಜೋಡು ರಸ್ತೆ ಅಥವಾ ನೇರ ರಸ್ತೆ ಅಗತ್ಯವಿದೆ. ಈ ಎಲ್ಲ ಕೆಲಸಗಳಿಗಾಗಿ ೧೦ಕೋಟಿ ರೂಪಾಯಿ ಬೇಕಾಗುತ್ತದೆ. ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಗಾಗಿ ಈ ವರ್ಷ ತೆಗೆದಿಟ್ಟಿರುವ ೩,೩೦೦ಕೋಟಿ ಹಣದಲ್ಲಿ ಮೇಲೆ ಸೂಚಿಸಿದ ೧೦ಕೋಟಿ ಹಣವನ್ನು ನೀಡಬೇಕೆಂದು ಕೋರುತ್ತೇನೆ.

೨. ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರತಿವರ್ಷ ೩ಕೋಟಿ ಅನುದಾನ ನೀಡುತ್ತ ಬರಲಾಗಿದೆ. ವರ್ಧಿಸಿದ ಶೈಕ್ಷಣಿಕ ಮತ್ತು ಇತರ ಚಟುವಟಿಕೆಗಳಿಂದಾಗಿ ಈ ಹಣ ಏನೂ ಸಾಲುವುದಿಲ್ಲ. ಕಾರಣ ಈ ಮೊತ್ತವನ್ನು ೩ ಕೋಟಿಯಿಂದ ೫ಕೋಟಿಗೆ ಹೆಚ್ಚಿಸುವುದು ಅವಶ್ಯವಿದೆ.

೩. ಈ ಹಿಂದೆ ಹೆಚ್ಚುವರಿಯಾಗಿ ತುಂಬಿರುವ ೬೫ಜನ ಕ್ರೋಢೀಕೃತ ನೌಕರರನ್ನು ಖಾಯಂಗೊಳಿಸುವುದು ಇಂದಿನ ಮುಖ್ಯ ತುರ್ತುಯೆನಿಸಿದೆ.

ಸನ್ಮಾನ್ಯರಾದ ಕುಲಾಧಿಪತಿಗಳು ಮತ್ತು ಸಮಕುಲಾಧಿಪತಿಗಳು, ಆಗಮಿಸಿರುವ ಸಚಿವರು, ಶಾಸಕರು ಮೇಲೆ ಸೂಚಿಸಿದ ಮೂರೂ ಬೇಡಿಕೆಗಳನ್ನು ಪೂರೈಸಿಕೊಟ್ಟು, ಬೆಳೆಯುವ ಹಂತದಲ್ಲಿರುವ ಈ ವಿಶ್ವವಿದ್ಯಾಲಯಕ್ಕೆ ನೆರವಾಗಬೇಕೆಂದು ಕೋರುತ್ತೇನೆ.

"ಹಣವನ್ನು ನೀರಿನಂತೆ ಗಳಿಸು, ತೀರ್ಥದಂತೆ ಬಳಸು" ಎಂಬ ನೀತಿ ನಮ್ಮ ಕಣ್ಣು ಮುಂದಿರುವುದರಿಂದ, ತಾವು ನೀಡಲಿರುವ ಪ್ರತಿಯೊಂದು ಪೈಸೆಯನ್ನೂ ನಾವು ಪವಿತ್ರವಾಗಿ ಬಳಸುತ್ತೇವೆ. " ಎಲ್ಲ ರಸ್ತೆಗಳು ರೋಮ್‌ದ ಕಡೆಗೆ" ಎಂಬಂತೆ ಜಗತ್ತಿನ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವಂತೆ ನಾವೆಲ್ಲ ದುಡಿಯುತ್ತೇವೆ.

ಆಕರ : ಮಾರ್ಗ ಸಂಪುಟ–೭

೬೫

ಕನ್ನಡ ವಿಶ್ವವಿದ್ಯಾಲಯ ನುಡಿಹಬ್ಬದ ಸ್ವಾಗತ : ೩

ಈವರೆಗೆ ಉತ್ಪಾದನೆ-ಇನ್ನುಮೇಲೆ ವಿಸ್ತರಣೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಈ ವರ್ಷ ದಶಮಾನೋತ್ಸವದ ಸಂಭ್ರಮ. ಈ ಸಂಭ್ರಮದ ಸಡಗರದಲ್ಲಿ ಜರುಗುತ್ತಲಿರುವ ೭ನೆಯ ಘಟಿಕೋತ್ಸವಕ್ಕೆ ಘನತೆವೆತ್ತ ಕುಲಾಧಿಪತಿಗಳಾದ ಸನ್ಮಾನ್ಯ ಶ್ರೀಮತಿ ವಿ.ಎಸ್.ರಮಾದೇವಿಯವರನ್ನು, ಸಮಕುಲಾಧಿಪತಿಗಳಾದ ಸನ್ಮಾನ್ಯ ಶ್ರೀ ಜಿ.ಪರಮೇಶ್ವರ ಅವರನ್ನು, ಗೌರವಾನ್ವಿತರಾದ ಪದ್ಮಭೂಷಣ ಡಾ.ಯು.ಆರ್.ರಾವ್, ಪದ್ಮಭೂಷಣ ಡಾ.ಭೀಮಸೇನ ಜೋಶಿ ಅವರನ್ನು, ಗಣ್ಯ ಮಹನೀಯರನ್ನು, ವಿಶ್ವವಿದ್ಯಾಲಯದ ಕಾರ್ಯಕಾರಿ ಮತ್ತು ಆಡಳಿತ ಮಂಡಳಿಯ ಮಾನ್ಯ ಸದಸ್ಯರನ್ನು, ಸರ್ವಸಭಿಕರನ್ನು ಆದರದಿಂದ ಸ್ವಾಗತಿಸುತ್ತೇನೆ.

ಕರ್ನಾಟಕದ ಪ್ರಥಮ ಮಹಿಳಾ ರಾಜ್ಯಪಾಲರಾದ ಘನತೆವೆತ್ತ ಶ್ರೀಮತಿ ವಿ.ಎಸ್.ರಮಾದೇವಿ ಅವರು, ರಾಜಭವನದ ಬಾಗಿಲುಗಳನ್ನು ಪ್ರಜೆಗಳಿಗೆ ತೆರೆಯುವುದರ ಮೂಲಕ ತಾವು ರಾಜಸತ್ತಾಯುಗದ ರಾಜ್ಯಪಾಲರಲ್ಲ, ಪ್ರಜಾಸತ್ತಾಯುಗದ ರಾಜ್ಯಪಾಲರೆಂಬುದನ್ನು ಸಾಬೀತುಪಡಿಸಿದ್ದಾರೆ. ಪ್ರಜೆಗಳ ಗುಡಿಸಲುಗಳೇ ರಾಜಭವನ ಎಂಬ ಇವರ ಸಾಮಾನ್ಯತಾಪ್ರಜ್ಞೆ ರಾಷ್ಟ್ರದ ಎಲ್ಲ ರಾಜ್ಯಪಾಲರಿಗೂ ಮಾದರಿಯಾಗಿದೆ. ಕನ್ನಡಿಗರ ತಾಯಿಯಾಗಿರುವ ಈ "ಗವ್ವರ್ನರಮ್ಮ"ನಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಹಾರ್ದಿಕ ಸ್ವಾಗತವನ್ನು ಕೋರುತ್ತೇನೆ.

ವಿದ್ಯಾ ಸಚಿವರಾದ ಮಾನ್ಯ ಶ್ರೀ ಜಿ.ಪರಮೇಶ್ವರ ಅವರು ತಮ್ಮ ಹೆಸರಿಗೆ ಹೆಸರು ತರುವ ರೀತಿಯಲ್ಲಿ ನಮ್ಮೊಂದಿಗೆ ನಡೆದುಕೊಳ್ಳುವ ಬಗೆ ಅನನ್ಯವಾದುದು. ನಾವೆಲ್ಲ ಕುಲಪತಿಗಳು ಅವರ ಸೌಜನ್ಯ, ಸಹಕಾರ ಮನೋಭಾವಗಳಿಂದ ತುಂಬ ಪ್ರಭಾವಿತರಾಗಿದ್ದೇವೆ. ಎಲ್ಲ ವಿಶ್ವವಿದ್ಯಾಲಯಗಳ ಬಗ್ಗೆ, ಅದರಲ್ಲಿಯೂ ಕನ್ನಡ ವಿಶ್ವವಿದ್ಯಾಲಯದ ಬಗ್ಗೆ ಅಪಾರ ಪ್ರೀತಿಯಿಟ್ಟುಕೊಂಡಿರುವ ಮಾನ್ಯ ಸಮಕುಲಾಧಿಪತಿಗಳಿಗೆ ಆದರದ ಸ್ವಾಗತ ಬಯಸುತ್ತೇನೆ.

ಭಾರತೀಯ ಬಾಹ್ಯಾಕಾಶ ವಿಜ್ಞಾನದಲ್ಲಿ ಹೊಸ ಅಧ್ಯಾಯ ತೆರೆದು, ಕನ್ನಡಿಗರ ಕೀರ್ತಿಯನ್ನು ಜಾಗತಿಕ ಮಟ್ಟದಲ್ಲಿ ಮೆರೆದ ಮಾನ್ಯ ಶ್ರೀ ಯು.ಆರ್.ರಾವ್ ಅವರಿಗೂ, ಸಂಗೀತಕ್ಕೆ ಇನ್ನೊಂದು ಹೆಸರು ಎಂದೇ ಖ್ಯಾತರಾಗಿ, ಕನ್ನಡದ ಧ್ವನಿಯನ್ನು ಜಗತ್ತಿಗೆ ಕೇಳಿಸಿದ ಮಾನ್ಯ ಶ್ರೀ ಭೀಮಸೇನ ಜೋಶಿ ಅವರಿಗೂ ಗೌರವಪೂರ್ವಕ ಸ್ವಾಗತ ಕೋರುತ್ತೇನೆ ಮತ್ತು ಕನ್ನಡ ವಿಶ್ವವಿದ್ಯಾಲಯ ನೀಡಲಿರುವ "ನಾಡೋಜ" ಹೆಸರಿನ ಈ ತವರುಮನೆ ಬಾಗಿನವನ್ನು ಸ್ವೀಕರಿಸಬೇಕೆಂದು ಇಬ್ಬರಲ್ಲಿಯೂ ಬಿನ್ನವಿಸಿಕೊಳ್ಳುತ್ತೇನೆ.

"ಮಾತೆಂಬುದು ಜ್ಯೋತಿರ್ಲಿಂಗ" ಇದು ವಿಶ್ವವಿದ್ಯಾಲಯದ ಧ್ಯೇಯವಾಕ್ಯ. ಈ ವಾಕ್ಯವನ್ನು ತಾನು ಬದುಕುವುದು, ಕನ್ನಡಿಗರೂ ಇದನ್ನು ಬದುಕುವಂತೆ ಮಾಡುವುದು, ಕನ್ನಡೇತರರಿಗೂ ಇದರ ಮಹತ್ವವನ್ನು ತಿಳಿಸಿಕೊಡುವುದು ಹೀಗೆ ಮೂರು ನೆಲೆಗಳಲ್ಲಿ ದುಡಿಯುವುದು, ಈ ವಿಶ್ವವಿದ್ಯಾಲಯದ ದಾರಿ 'ಗುರಿ' ಏನೆಲ್ಲ ಆಗಿದೆ.

"ಕನ್ನಡ ಮಾತ"ನ್ನು ಈ ವಿಶ್ವವಿದ್ಯಾಲಯ ಬದುಕುವುದೆಂದರೆ, "ಕನ್ನಡ ವಿದ್ಯೆ"ಯನ್ನು ತಾನು ಶೋಧಿಸುವುದು ಮತ್ತು ಉತ್ಪಾದಿಸುವುದು. ಕಳೆದ ಒಂಬತ್ತು ವರ್ಷಗಳಿಂದ ಈ ಶೋಧನ – ಉತ್ಪಾದನ ಕ್ರಿಯೆಗೆ ಈ ವಿದ್ಯಾಸಂಸ್ಥೆ ನೆಲವಾಗಿದೆ. ಇಲ್ಲಿಯ ಶಿಕ್ಷಕ ಶಿಕ್ಷೇತರ ಸಿಬ್ಬಂದಿಗಳ ಶ್ರಮದಿಂದಾಗಿ, ಈವರೆಗೆ ಕಳೆದು ಹೋಗಿದ್ದ ಕನ್ನಡದ ದಾರಿಗಳು ಮತ್ತೊಮ್ಮೆ ಕಾಣಿಸಿಕೊಂಡಿವೆ. ಹೊಸದಾರಿಗಳು ಹುಟ್ಟಿಕೊಂಡಿವೆ. ಇದಕ್ಕೆ ಈ ಆವರಣದಲ್ಲಿ ಸೃಷ್ಟಿಯಾದ ಭೌತಿಕ ಅಭಿವೃದ್ಧಿ ಮತ್ತು ಶೈಕ್ಷಣಿಕ ಅಭಿವೃದ್ಧಿ ಸಾಕ್ಷಿಯೆನಿಸಿವೆ.

ಈ ವರ್ಷದ ಭೌತಿಕ ಅಭಿವೃದ್ಧಿಯನ್ನು ಕುರಿತು ಹೇಳುವುದಾದರೆ, ಶಿಕ್ಷಕರ ೧೮ ಮನೆಗಳು, ಹೆಚ್ಚಿನದಾಗಿ ಕುಲಸಚಿವರ ಮನೆ, ಕುಲಪತಿ ಭವನ ಇವು ಈ ವರ್ಷದ ನಿರ್ಮಾಣವೆನಿಸಿವೆ. ಇವುಗಳಿಗಾಗಿ ನಾವು ವ್ಯಯಿಸಿದ ಹಣ ಸುಮಾರು ಒಂದೂವರೆ ಕೋಟಿ ರೂಪಾಯಿ. ಇದಲ್ಲದೆ ೮೦ ಲಕ್ಷ ರೂಪಾಯಿ ಮೌಲ್ಯದ ಸರ್ವಜ್ಞ ಹೆಸರಿನ ಗ್ರಂಥಾಲಯ ಕಟ್ಟಡದ ಕಾರ್ಯ ಆರಂಭವಾಗಿದೆ. ಇವುಗಳಿಗೆ ಆರ್ಥಿಕ ನೆರವು ನೀಡಿದ ಸಚಿವೆಯಾದ ಶ್ರೀಮತಿ ಸುಮಾ ವಸಂತ್ ಅವರಿಗೆ, ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶ್ರೀ ಎನ್.ಎಸ್.ಬೋಸರಾಜು ಅವರಿಗೆ, ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಚೇರಮನ್ ಶ್ರೀ ಹರಿಗೌತಮ್ ಅವರಿಗೆ ನಾವು ಕೃತಜ್ಞರಾಗಿದ್ದೇವೆ. ರಸ್ತೆಗಳ ಡಾಂಬರೀಕರಣಕ್ಕಾಗಿ ಲೋಕಸಭಾ ಸದಸ್ಯರಾದ ಶ್ರೀ ಹೆಚ್.ಜಿ.ರಾಮುಲು ಅವರು ೫ ಲಕ್ಷ ರೂಪಾಯಿ ನೀಡಿದುದನ್ನು, ರಾಜ್ಯ ಸಭಾ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯ ಅವರು ರಸ್ತೆದೀಪಕ್ಕಾಗಿ ೧೫ ಲಕ್ಷ ರೂಪಾಯಿ ನೀಡಲು ಮುಂದೆ ಬಂದುದನ್ನು, ಬಾದಾಮಿಯ ಶಿಲ್ಪಕಲಾಕೇಂದ್ರದ ಅಭಿವೃದ್ಧಿಗಾಗಿ ಬಾಗಲಕೋಟೆಯ ಲೋಕಸಭಾ ಸದಸ್ಯರಾದ ಮಾನ್ಯ ಶ್ರೀ ಆರ್.ಎಸ್.ಪಾಟೀಲ್ ಅವರು ೫ ಲಕ್ಷ ರೂಪಾಯಿ ನೀಡಿದುದನ್ನು, ಕುಮಾರರಾಮ ಹೆಸರಿನ ಉದ್ಯಾನ ನಿರ್ಮಿತಿಗಾಗಿ ತೋಟಗಾರಿಕೆ ಇಲಾಖೆ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪನವರು ೫ ಲಕ್ಷ ರೂಪಾಯಿ ಕೊಡಮಾಡಿರುವುದನ್ನು ಗೌರವದಿಂದ ನೆನೆಯುತ್ತೇವೆ. ನೀರಿನ ಅರವಟ್ಟಿಗೆ ನಿರ್ಮಿತಿಗಾಗಿ ಹುಬ್ಬಳ್ಳಿಯ ಮಾನ್ಯ ಶ್ರೀ ಮುಥಾ ವಾಘಮಲ್ ಭೂರಾಜಿ ಅವರು ೨ ಲಕ್ಷ ರೂಪಾಯಿ ನೀಡಿದುದನ್ನು, ಬಳ್ಳಾರಿ ಜಿಲ್ಲಾ ಪಂಚಾಯತ್ ನೀರು ಪೂರೈಕೆಗೆ ಮುಂದೆಬಂದುದನ್ನು

ನೆನೆಯುವುದು ನಮಗೆ ಸಂತೋಷದ ವಿಷಯವಾಗಿದೆ. ಈ ಎಲ್ಲ ಸಹಾಯಗಳಿಂದಾಗಿ ನಮ್ಮ ಆವರಣ ಮೈತುಂಬಿಕೊಂಡು ಬೆಳೆಯುವುದರೊಂದಿಗೆ, ಈ ವರ್ಷ ಕುಟುಂಬಗಳು ಇಲ್ಲಿ ವಾಸಮಾಡಲು ಆರಂಭಿಸಿದುದು ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವೆನಿಸಿದೆ. ಇದಕ್ಕೆ ಪೂರಕವೆಂಬಂತೆ ಹೆಲಿಪ್ಯಾಡ್, ಪ್ರಾಥಮಿಕ ಶಾಲೆ, ವ್ಯಾಪಾರ ಮಳಿಗೆ, ಹಾಸ್ಟೆಲ್, ಬಸ್‌ಸ್ಟ್ಯಾಂಡ್, ಆಸ್ಪತ್ರೆಗಳು ನಿರ್ಮಾಣಗೊಂಡರೆ ಈ ಆವರಣ "ಪೂರ್ಣಗ್ರಾಮ" ವೆನಿಸುತ್ತದೆ. ಆದುದರಿಂದ ದಶಮಾನೋತ್ಸವ ಸಂದರ್ಭದಲ್ಲಿ ಈ ಕೆಲಸಗಳಿಗೆ ಮುಂದುಬರಲು ದಾನಿಗಳಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಈ ಭೌತಿಕ ಬೆಳವಣಿಗೆಯನ್ನು ಮೀರಿ, ಇತ್ತೀಚೆ ಶೈಕ್ಷಣಿಕ ಹೊಸ ಅಧ್ಯಾಯವೊಂದು ಇಲ್ಲಿ ತೆರೆದುಕೊಂಡಿದೆ. ಮುಖ್ಯವಾಗಿ ಶಿಕ್ಷಕರಲ್ಲಿ, ಅದರಲ್ಲಿಯೂ ಯುವ ಶಿಕ್ಷಕರಲ್ಲಿ ಲೆಕ್ಕಣಿಕೆ ಹಿಡಿಯುವ ಆತ್ಮವಿಶ್ವಾಸವನ್ನು ತುಂಬಲಾಗಿದೆ. ಇವರು ಕೈಗೆತ್ತಿಕೊಂಡ ಯೋಜನೆಗಳ ಫಲವಾಗಿ ಈ ವರ್ಷ ಇಲ್ಲಿಯವರೆಗೆ ಸುಮಾರು ೭೫ ಪುಸ್ತಕಗಳು ಪ್ರಕಟವಾಗಿವೆ. ಈ ನುಡಿಹಬ್ಬ ಸಂದರ್ಭದಲ್ಲಿ ೨೫ ಪುಸ್ತಕಗಳು ಪ್ರಕಟವಾಗಲಿವೆ. ಹೀಗೆ ಕಳೆದ ವರ್ಷದಂತೆ ಈ ವರ್ಷವೂ ೧೦೦ ಪುಸ್ತಕಗಳನ್ನು ಪ್ರಕಟಿಸಿದ್ದೇವೆ. ಇವುಗಳಲ್ಲಿ ಕುಮಾರವ್ಯಾಸ, ತಿಮ್ಮಣಕವಿಗಳ "ಕನ್ನಡ ಭಾರತ" ಪ್ರಕಟಣೆಗಾಗಿ ವಿಜಯನಗರ ಉಕ್ಕಿನ ಉದ್ದಿಮೆಯ ಒಡೆಯರಾದ ಶ್ರೀ ಸಜ್ಜನ ಜಿಂದಾಲ್ ಅವರು ೩ ಲಕ್ಷ ರೂಪಾಯಿ ನೀಡಿದ್ದಾರೆ. "ಜೈನ ಸಾಹಿತ್ಯಮಾಲೆ"ಯ ಸ್ಥಾಪನೆಗಾಗಿ ಹೊಸಪೇಟೆಯ ಶ್ರೀ ಅಭೇರಾಜ ಬಲ್ಡೋಟಾ ಅವರು ಈ ವರ್ಷ ೧ ಲಕ್ಷ ರೂಪಾಯಿ ನೀಡಿದ್ದು, ಮುಂದಿನ ವರ್ಷ ಶಾಶ್ವತನಿಧಿಗಾಗಿ ೧೦ ಲಕ್ಷ ರೂಪಾಯಿ ನೀಡುವ ವಾಗ್ದಾನ ಮಾಡಿದ್ದಾರೆ.

ಕಳೆದ ವರ್ಷ ಗಳಗನಾಥರ ಕಾದಂಬರಿ ಸಮಗ್ರ ಸಂಪುಟಕ್ಕೆ ೬ ಲಕ್ಷ ರೂಪಾಯಿ ನೀಡಿದ್ದ, ಲೋಕಶಿಕ್ಷಣ ಟ್ರಸ್ಟ್ ಕಾರ್ಯದರ್ಶಿಗಳಾದ ಶ್ರೀ ಕೆ.ಶ್ಯಾಮರಾವ್ ಅವರು ಈ ವರ್ಷ ಬೆಟಗೇರಿ ಕೃಷ್ಣಶರ್ಮರ ಸಮಗ್ರ ಕೃತಿ ಪ್ರಕಟನೆಗಾಗಿ ೫ ಲಕ್ಷ ರೂಪಾಯಿ ನೀಡುವ ವಾಗ್ದಾನ ಮಾಡಿದ್ದಾರೆ. ಶ್ರೀ ವಿ.ಎಂ.ಕುಮಾರಸ್ವಾಮಿ ಅವರು ಕುವೆಂಪು ಅವರ ಸಮಗ್ರ ಕವನ ಸಂಕಲನ ಪ್ರಕಟಣೆಗಾಗಿ ಅಮೇರಿಕೆಯ ಕನ್ನಡಿಗರಿಂದ ಒಂದು ಸಾವಿರ ಡಾಲರ್ ಒದಗಿಸಿಕೊಡುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಹೀಗೆ ಸಾರ್ವಜನಿಕರನ್ನು ಬಿಟ್ಟರೂ ಸರಕಾರಿ ಇಲಾಖೆಗಳು ನೀಡಿದ ಕೊಡುಗೆ ಕೆಳಗಿನಂತಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆರಾದ ಶ್ರೀಮತಿ ರಾಣಿ ಸತೀಶ್ ಅವರು ಹಂಪಿ ಉತ್ಸವದ ಪ್ರಕಟಣೆಗಾಗಿ ೧ ಲಕ್ಷ, ಶಾಸನ ಪ್ರಕಟಣೆಗಾಗಿ ೨ ಲಕ್ಷ, ಮ್ಯೂಸಿಯಂ ಅಭಿವೃದ್ಧಿಗಾಗಿ ೪ ಲಕ್ಷ ರೂಪಾಯಿ ನೀಡಿದ್ದಾರೆ. ಸಣ್ಣ ನೀರಾವರಿ ಇಲಾಖೆಯ ಸಚಿವರಾದ ಶ್ರೀ ಕುಮಾರ ಬಂಗಾರಪ್ಪ ಅವರು ಕರ್ನಾಟಕದ ಕೆರೆಗಳನ್ನು ಕುರಿತ ಕೃತಿ ಪ್ರಕಟಣೆಗಾಗಿ ೨ ಲಕ್ಷ ನೀಡಿದ್ದಾರೆ. "ಕರ್ನಾಟಕ ರಾಜ್ಯಕೋಶ ಮಾಲೆ"ಯ ಸಸ್ಯಕೋಶ ಸಂಪುಟದ ಪ್ರಕಟಣೆಗಾಗಿ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪ ಅವರು ೨.೫ ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ಒಂದೂವರೆ ಸಾವಿರ ಪುಟಗಳ, ಕರ್ನಾಟಕ ಚಲನಚಿತ್ರ ಚರಿತ್ರೆ'ಯ ಪ್ರಕಟಣೆಗಾಗಿ ರಾಜ್ಯ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರಾದ ಪ್ರೊ.ಬಿ.ಕೆ.ಚಂದ್ರಶೇಖರ್ ಅವರು ೭ ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ಗಂಗಾವತಿಯ ಶಾಸಕರಾದ ಮಾನ್ಯ ಶ್ರೀ ಶ್ರೀರಂಗದೇವರಾಯಲು ಅವರು ತಮ್ಮ ಶಾಸಕರ ನಿಧಿಯಿಂದ ಗ್ರಂಥಾಲಯ ಅಭಿವೃದ್ಧಿಗಾಗಿ ೨ ಲಕ್ಷ ಕೊಡಮಾಡಿದ್ದಾರೆ. ಉರ್ದು ಪರ್ಶಿಯನ್

ಅರೇಬಿಕ್ ಶಾಸನ ಪ್ರಕಟಣೆಗಾಗಿ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶ್ರೀ ಎನ್.ಎಸ್.ಭೋಸರಾಜು ರೂ.೧ ಲಕ್ಷ ಮಂಜೂರು ಮಾಡಿದ್ದಾರೆ. ದಶಮಾನೋತ್ಸವದ ವಿಶೇಷ ಸಾಧನೆಯೆಂಬಂತೆ ಎಲ್ಲ ಶರಣರ ಎಲ್ಲ ವಚನಗಳ ಮರುಮುದ್ರಣಕ್ಕಾಗಿ ೧೦ ಲಕ್ಷ ರೂಪಾಯಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡಿದುದು ಚಾರಿತ್ರಿಕ ದಾಖಲೆಯೆನಿಸಿವೆ. ಸ್ವಾತಂತ್ರ್ಯ ಯೋಧ ಶ್ರೀ ಟೇಕೂರ ಸುಬ್ರಹ್ಮಣ್ಯಂ ಅವರ ಜನ್ಮ ಶತಮಾನೋತ್ಸವ ನೆನಪಿನ ಕನ್ನಡ, ಇಂಗ್ಲೀಷ್ ಪುಸ್ತಕಗಳ ಪ್ರಕಟಣೆಗಾಗಿ ಬಳ್ಳಾರಿ ಜಿಲ್ಲಾಧಿಕಾರಿಗಳು ಆರ್ಥಿಕ ನೆರವು ನೀಡಿದ್ದಾರೆ. ಈ ಎಲ್ಲ ಇಲಾಖೆಗಳನ್ನು ಎಲ್ಲ ಮಹನೀಯರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಈ ನೆರವುಗಳ ಸರಮಾಲೆಯಲ್ಲಿ ಕರ್ನಾಟಕ ಸರ್ಕಾರ "ಪುರಂದರದಾಸ ಅಧ್ಯಯನ ಪೀಠ" ಸ್ಥಾಪನೆಗಾಗಿ ೧೦ ಲಕ್ಷ ರೂಪಾಯಿ ಕೊಡಮಾಡಿರುವುದನ್ನು, ದಶಮಾನೋತ್ಸವ ಸಮಾರಂಭ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದ ೫೦ ಲಕ್ಷ ರೂಪಾಯಿಗಳ ಹೆಚ್ಚಿನ ಅನುದಾನವನ್ನು ವಿಶೇಷವಾಗಿ ಸ್ಮರಿಸುತ್ತೇವೆ. ಇದೆಲ್ಲ ಸೇರಿ ಈ ವರ್ಷ ಸರಕಾರದ ವಾರ್ಷಿಕ ಅನುದಾನವನ್ನು ಹೊರತುಪಡಿಸಿ, ಎರಡು ಕೋಟಿ ಹಣವನ್ನು ಅನ್ಯಮೂಲಗಳಿಂದ ಹೆಚ್ಚಿಗೆ ಸಂಗ್ರಹಿಸಿದ ಸಾಧನೆ ನಮ್ಮದಾಗಿದೆ.

ಬೌದ್ಧ ಸಾಹಿತ್ಯದ ಮತ್ತು ಬೌದ್ಧರಿಗೂ ಕರ್ನಾಟಕಕ್ಕೂ ಇರುವ ಸಂಬಂಧಗಳ ಅಧ್ಯಯನದ ಬೃಹತ್ ಯೋಜನೆಗೆ ನಮ್ಮ ಸಿಂಡಿಕೇಟ್ ಸಭೆ ಒಪ್ಪಿಗೆ ನೀಡಿದ್ದು, ಈ ವರ್ಷ ೧೦ ಉತ್ತಮ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯಿದಾಗಿದೆ. ಅನುವಾದ ಯೋಜನೆಗೂ ಈ ವರ್ಷ ವಿಶೇಷ ಗಮನಕೊಟ್ಟಿದ್ದು, ತೆಲುಗಿನಿಂದ ಕಾಟಮರಾಜು ಕಥಲು, ಕ್ರೀಡಾಭಿರಾಮಮು, ತಮಿಳಿನಿಂದ ಸಿಲಪ್ಪದಿಗಾರಂ, ಸಂಸ್ಕೃತದಿಂದ ನೀತಿವಾಕ್ಯಾಮೃತಂ ಕನ್ನಡಕ್ಕೆ ತರಲಾಗಿದೆ. ವಿಜ್ಞಾನ ಸಂಗಾತಿ, ಚೆಲುವಕನ್ನಡ, ಪುಸ್ತಕ ಮಾಹಿತಿಗಳೊಂದಿಗೆ ಮಹಿಳಾ ಅಧ್ಯಯನ, ಕನ್ನಡ ಅಧ್ಯಯನಗಳನ್ನು ಆರಂಭಿಸಿದ್ದ ನಾವು ಈ ವರ್ಷದಿಂದ ಕರ್ನಾಟಕ ಅಭಿವೃದ್ಧಿ ಹೆಸರಿನ ಹೊಸ ಪತ್ರಿಕೆಯನ್ನು ಆರಂಭಿಸಲಿದ್ದೇವೆ. ನಮ್ಮ ಪ್ರಸಾರಾಂಗದ ಪುಸ್ತಕ ಪ್ರಕಟಣೆ ಮಾರಾಟ ಇತ್ತೀಚೆ ನಾಲ್ಕು ಪಟ್ಟು ವರ್ಧಿಸಿರುವುದರಿಂದ ಇಲ್ಲಿ ನಡೆಯುತ್ತಲಿರುವುದು ಕೇವಲ ಪುಸ್ತಕದ ಪ್ರಕಟಣೆಯಲ್ಲ, ಪುಸ್ತಕದ ಪವಾಡವೆಂದೇ ಹೇಳಬೇಕು. ಬಹುಶಃ ಇಂದು ಭಾರತದ ಯಾವುದೇ ವಿಶ್ವವಿದ್ಯಾಲಯದಲ್ಲಿ ಪ್ರತಿವರ್ಷ ಇಷ್ಟು ಸಂಖ್ಯೆ ಪುಸ್ತಕ ಪ್ರಕಟವಾಗುವುದು ಅನುಮಾನ.

ಈ ವರ್ಷ ನಮ್ಮ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಗಳಿಗೆ ಪ್ರಶಸ್ತಿ, ಬಹುಮಾನಗಳ ಸುಗ್ಗಿ ಕಾಲ. ಕಳೆದ ವಾರ ಪ್ರಕಟವಾದ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನಗಳಲ್ಲಿ ೫ ಬಹುಮಾನಗಳನ್ನು ನಮ್ಮ ಸಿಬ್ಬಂದಿಯವರೇ ಗೆದ್ದು ತಂದುದು ಈ ವಿಶ್ವವಿದ್ಯಾಲಯದ, ಏಕೆ ಯಾವುದೇ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಚರಿತ್ರಾರ್ಹ ದಾಖಲೆಯೆನಿಸಿದೆ. ಡಾ.ಕರೀಗೌಡ ಬೀಚನಹಳ್ಳಿ, ಶ್ರೀ ಶಿವಾನಂದ ವಿರಕ್ತಮಠ ಹೀಗೆ ಇಬ್ಬರು ಪುರುಷರು, ಡಾ.ಎಚ್.ಎಸ್.ಶ್ರೀಮತಿ, ಶ್ರೀಮತಿ ನಾಗವೇಣಿ, ಡಾ.ಶೈಲಜಾ ಹಿರೇಮಠ ಹೀಗೆ ಮೂವರು ಮಹಿಳೆಯರು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಈ ಐದು ಗೌರವಗಳು ಸಾಲದೆಂಬಂತೆ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಡಾ.ಹಿ.ಚಿ.ಬೋರಲಿಂಗಯ್ಯ, ಪ್ರೊ.ಎ.ವಿ.ನಾವಡ, ಡಾ.ಅಮರೇಶ ನುಗಡೋಣಿ, ಶ್ರೀ ಮೊಗಳ್ಳಿ ಗಣೇಶ್, ಡಾ.ಸಿ.ಆರ್.ಗೋವಿಂದರಾಜು ಈ ಆರು ಜನರ ಗ್ರಂಥಗಳಿಗೆ ಆರು ಬಹುಮಾನಗಳು

ಪ್ರಾಪ್ತವಾಗಿವೆ. ಈ ವರ್ಷ ಶ್ರೀಮತಿ ನಾಗವೇಣಿ ಅವರ ಒಂದೇ ಪುಸ್ತಕಕ್ಕೆ ೪ ಬಹುಮನಗಳು ಬಂದಿವೆ. ನಮ್ಮ ಚರಿತ್ರೆ ವಿಭಾಗದ ಡಾ.ವಿಜಯ ಪೂಣಚ್ಚ ಅವರು ಯುಜಿಸಿ ನೆರವಿನಿಂದ ವಿಶೇಷ ಅಧ್ಯಯನಕ್ಕಾಗಿ ವಿದೇಶಕ್ಕೆ ಹೋಗಿದ್ದಾರೆ. ಇದೆಲ್ಲವನ್ನು ಸಂತೋಷದಿಂದ ಸ್ಮರಿಸುತ್ತೇನೆ.

ಹೀಗೆ ಭೌತಿಕ, ಶೈಕ್ಷಣಿಕ ಉತ್ಪಾದನೆಯ ಪ್ರಕ್ರಿಯೆ ಈ ವಿಶ್ವವಿದ್ಯಾಲಯದಲ್ಲಿ ನಿರಂತರ ನಡೆದಿದ್ದು, ಈಗ ದಶಮಾನೋತ್ಸವದ ತಿರುವು ಬಿಂದುವಿನಲ್ಲಿ ನಾವು ನಿಂತಿದ್ದೇವೆ. ಆದುದರಿಂದ 'ಈವರೆಗೆ ಉತ್ಪಾದನೆ, ಇನ್ನು ಮೇಲೆ ವಿಸ್ತರಣೆ' ಎಂಬ ಘೋಷಣೆಯೊಂದಿಗೆ ನಾವು ಹೊಸ ಅಧ್ಯಾಯ ತೆರೆಯ ಬಯಸಿದ್ದೇವೆ. ಅಂದರೆ ಈವರೆಗಿನ ಕೇಂದ್ರಿಯ ಅಭಿವೃದ್ಧಿಯನ್ನು ಇನ್ನು ಮೇಲೆ ವಿಕೇಂದ್ರೀಯಗೊಳಿಸುವುದು ನಮ್ಮ ಹೊಸ ಧ್ಯೇಯವಾಗಿದ್ದು, ಈ ವಿಸ್ತರಣೆ ಸ್ಥಾನಿಕ, ಜಾಗತಿಕ ಮತ್ತು ಆನ್ವಯಿಕ ಹೀಗೆ ಮೂರು ನೆಲೆಗಳಲ್ಲಿ ಜರುಗಬೇಕಿದೆ.

೧೯೫೬ ಪೂರ್ವದ ಭಾರತಭೂಪಟದಲ್ಲಿ ಕರ್ನಾಟಕದ ನಕ್ಷೆಯೇ ಇರಲಿಲ್ಲ. ಆಮೇಲೆ ಕನ್ನಡನುಡಿಯನ್ನಾಧರಿಸಿ ಈ ಭೂಪಟದಲ್ಲಿ 'ಕನ್ನಡನಾಡು' ಅಸ್ತಿತ್ವಕ್ಕೆ ಬಂದಿತು. ಹೀಗೆ ನುಡಿಯನ್ನಾಧರಿಸಿ ನಾಡು ಹುಟ್ಟಿರುವುದರಿಂದ ನಮ್ಮ ನಾಡಿನ ಯಾವುದೇ ಚಟುವಟಿಕೆಗಳಿಗೆ ನಮ್ಮ ನುಡಿಯೇ ಮಾನದಂಡವಾಗಬೇಕಾಗುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡು, ನಾವು ಕನ್ನಡ ನುಡಿಯನ್ನು ಮತ್ತು ಈ ನುಡಿಯನ್ನಾಧರಿಸಿದ ಕನ್ನಡನಾಡನ್ನು ಗೌಣಗೊಳಿಸುತ್ತ ನಡೆದಿದ್ದೇವೆ. ಸರಕಾರ ಕನ್ನಡವನ್ನು ಆಡಳಿತ ಮಾಧ್ಯಮ ಮಾಡಬೇಕು, ಶಿಕ್ಷಣ ಮಾಧ್ಯಮ ಮಾಡಬೇಕು ನಿಜ. ಇದೆಲ್ಲಕ್ಕಿಂತ ಮೊದಲು ಸಾಮಾಜಿಕರು ಕನ್ನಡವನ್ನು ಸಮಾಜಮಾಧ್ಯಮ ಮಾಡಬೇಕಿದೆ. ಈ ಉದ್ದೇಶ ಸಾಧನೆಗಾಗಿ ಅಂದರೆ ಈವರೆಗೆ ಏಕೀಕರಣ, ಇನ್ನು ಮೇಲೆ ಕನ್ನಡೀಕರಣ ಎಂದು ಸಾಮಾಜಿಕರು ದೀಕ್ಷೆ ತೊಡುವುದಕ್ಕಾಗಿ ಕನ್ನಡ ವಿಶ್ವವಿದ್ಯಾಲಯ ಶ್ರಮಿಸಬೇಕಾಗಿದೆ. ಕನ್ನಡ ಕೇವಲ "ಕನ್ನಡಿಗರ ಮಾತೃಭಾಷೆ" ಯಲ್ಲ, "ಕರ್ನಾಟಕದ ಮಾತೃಭಾಷೆ" ಅಂದರೆ ಕರ್ನಾಟಕದಲ್ಲಿರುವ ಎಲ್ಲರ ಮಾತೃಭಾಷೆ ಎಂಬ ಗುರಿಸಾಧನೆಗೆ ಚಳುವಳಿ ರೂಪದ ಹೊಸ ಯೋಜನೆಗಳನ್ನು ಕನ್ನಡ ವಿಶ್ವವಿದ್ಯಾಲಯ ಕೈಗೆತ್ತಿಕೊಳ್ಳಬೇಕಾಗಿದೆ. ಈ ಆದರ್ಶಕ್ಕೆ ಅರ್ಥ ತುಂಬುವ ಸಲುವಾಗಿ, ಕರ್ನಾಟಕದ ಎಲ್ಲ ಸಾಂಸ್ಕೃತಿಕ ಸಂಸ್ಥೆಗಳೊಂದಿಗೆ ಸಂಪರ್ಕವನ್ನಿಟ್ಟುಕೊಂಡು, ಅವುಗಳಿಗೆ ಸರಿಯಾದ ದಾರಿ ದಿಕ್ಕು ತೋರುವುದು, ಅಲ್ಲಲ್ಲಿಯೇ ಅವು ಕನ್ನಡೀಕರಣದ ಕೆಲಸದಲ್ಲಿ ತೊಡುಗುವಂತೆ ಮಾಡುವುದು ಇವೇ ಮೊದಲಾದ ಕೆಲಸಗಳಿಗೂ ಕನ್ನಡ ವಿಶ್ವವಿದ್ಯಾಲಯ ಇನ್ನು ಮೇಲೆ ಆದ್ಯತೆ ಕೊಡಬಯಸಿದೆ.

ಹೀಗೆ ಒಳಗೆ ಕರ್ನಾಟಕವನ್ನು ಕನ್ನಡೀಕರಣಗೊಳಿಸುವುದು ಒಂದು ಹಂತವಾದರೆ, ಹೊರಗೆ ವಾಸಿಸುತ್ತಿರುವ ಕನ್ನಡಿಗರು ಕನ್ನಡಿಗರಾಗಿ ಉಳಿಯುವಂತೆ ನೋಡಿಕೊಳ್ಳುವುದು ಇನ್ನೊಂದು ಹಂತವಾಗಿದೆ. ಇದಕ್ಕಾಗಿ ದೂರದಲ್ಲಿದ್ದರೂ ಅವರು ಕರ್ನಾಟಕವನ್ನು ನೋಡುವ, ಕೇಳುವ, ಓದುವ ಸಾಮಾಗ್ರಿಗಳನ್ನು ಸೃಷ್ಟಿಸಿ ವಿತರಿಸುವುದು, ಅವರೊಂದಿಗೆ ವಿಚಾರಸಂಕಿರಣ, ಉಪನ್ಯಾಸಗಳ ಮೂಲಕ ನಿರಂತರ ಸಂಪರ್ಕ ಬೆಳೆಸುವುದು ನಮ್ಮ ಉದ್ದೇಶವಾಗಿದೆ.

ಬೇರೆ ದೇಶದ ಪ್ರಜೆಗಳನ್ನು ಕನ್ನಡದತ್ತ ಆಕರ್ಷಿಸುವುದು ನಮ್ಮ ಇನ್ನೊಂದು ಉದ್ದೇಶವಾಗಿದೆ. ಅಂದರೆ ೧ ಕೋಟಿ ರೂಪಾಯಿ ಶಾಶ್ವತನಿಧಿಯನ್ನು ಸ್ಥಾಪಿಸಿ, ಅದರ ಬಡ್ಡಿ ಹಣವನ್ನು ನಮ್ಮ ಭಾಷೆ, ಸಂಸ್ಕೃತಿಗಳ ಅಧ್ಯಯನಕ್ಕೋಸುಗ ಬರಲಿರುವ ವಿದೇಶಿ ವಿದ್ವಾಂಸರು, ವಿದ್ಯಾರ್ಥಿಗಳಿಗಾಗಿ

ಉಪಯೋಗಿಸುವುದು ಇದರ ಸ್ವರೂಪವಾಗಿದೆ. ಈ ದೊಡ್ಡ ಮೊತ್ತವನ್ನು ಕರ್ನಾಟಕ ಸರ್ಕಾರ ಪೂರೈಸಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಪೀಠಗಳನ್ನು ಸ್ಥಾಪಿಸುವುದರೊಂದಿಗೆ, ವಿದೇಶಗಳಲ್ಲಿ "ಕನ್ನಡಪೀಠ" ಸ್ಥಾಪಿಸುವುದು ಇಂದಿನ ಬಹುಮುಖ್ಯ ಅಗತ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯದ ಈ ಕನಸನ್ನು ಕರ್ನಾಟಕ ಸರಕಾರ ನನಸಾಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಹೀಗೆ ಸ್ಥಾನಿಕ ನೆಲೆಯಲ್ಲಿ ಕನ್ನಡವನ್ನು ತುಂಬುವ, ಜಾಗತಿಕ ನೆಲೆಯಲ್ಲಿ ಕನ್ನಡವನ್ನು ವಿಸ್ತರಿಸುವಷ್ಟೇ ಮುಖ್ಯವಾದುದು ಅನ್ವಯಿಕ ಬೋಧನಕ್ರಮವನ್ನು ಆರಂಭಿಸುವುದು. ಈ ವರೆಗೆ ಪರೀಕ್ಷೆಯಲ್ಲಿ ಪ್ರಶ್ನೆಗೆ ಉತ್ತರ ನೀಡುವ ಬೋಧನಕ್ರಮವನ್ನು ಅನುಸರಿಸಿದ ಪರಿಣಾಮವಾಗಿ, ನಮ್ಮ ಶಿಕ್ಷಣ ಬಹುಮಟ್ಟಿಗೆ ಅಪ್ರಯೋಜಕವೆನಿಸಿದೆ. ಈ ಪದ್ಧತಿಗೆ ತಿಲಾಂಜಲಿ ಹೇಳುವ ರೀತಿಯಲ್ಲಿ 'ಅನ್ವಯಿಕ' ಬೋಧನ ಕ್ರಮವನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಕನಿಷ್ಠ ಪಕ್ಷ ಸೃಜನಸಾಹಿತ್ಯ ಕ್ಷೇತ್ರಕ್ಕಾದರೂ ಇದನ್ನು ಅನ್ವಯಿಸಬೇಕಾಗಿದೆ.

ಶಿಕ್ಷಕರೇ ಶಿಕ್ಷಣ ಸಂಸ್ಥೆಯ ಶಕ್ತಿ. ಅದರ ಆಗು ಹೋಗುಗಳಿಗೆ ಅವರೇ ಜವಾಬ್ದಾರರು ಎಂಬ ತಿಳುವಳಿಕೆ ನಮ್ಮೆಲ್ಲರದಾಗಿದೆ. "ನಮ್ಮ ವಿಭಾಗದಲ್ಲಿ ಉತ್ಪಾದನೆಗೆ ಅವಕಾಶ ಮಾಡಿಕೊಳ್ಳುತ್ತೇವೆ ಮತ್ತು ನಾವು ಅನ್ವಯಿಕ ಕ್ರಿಯೆಗಳಲ್ಲಿ ತೊಡಗಿಕೊಳ್ಳುತ್ತೇವೆ. ನಮ್ಮ ವಿಭಾಗವನ್ನು ಸ್ಥಾನಿಕ ನೆಲೆಗಳಲ್ಲಿ ವಿಸ್ತರಿಸುತ್ತೇವೆ ಮತ್ತು ಜಾಗತಿಕ ನೆಲೆಗಳಲ್ಲಿ ಬೆಳೆಸುತ್ತೇವೆ." ಹೀಗೆ ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಏಕಕಾಲಕ್ಕೆ ನಾಲ್ಕು ಮುಖಗಳಲ್ಲಿ ತಮ್ಮ ವಿಭಾಗಗಳನ್ನು ಬೆಳೆಸುವ ಹೊಸ ನಾಂದಿ ಹಾಡುವರೆಂಬ ವಿಶ್ವಾಸ ಈ ವಿದ್ಯಾಸಂಸ್ಥೆಯದಾಗಿದೆ.

ಮಾತು ಮುಗಿಸುವ ಮುನ್ನ ಒಂದು ಮಾತು : ಕನ್ನಡ ವಿಶ್ವವಿದ್ಯಾಲಯಕ್ಕೆ ಕರ್ನಾಟಕದ ಲಲಿತಕಲಾ ಕಾಲೇಜುಗಳನ್ನು ಸಂಲಗ್ನಗೊಳಿಸುವುದು, ೬೯ ಜನ ಕ್ರೋಢೀಕೃತ ನೌಕಕರನ್ನು ಖಾಯಂಗೊಳಿಸುವುದು–ಈ ಎರಡು ಮುಖ್ಯ ಪ್ರಶ್ನೆಗಳು ಇನ್ನೂ ಬಗೆಹರಿಯಲಿಲ್ಲ. ನಾವು ಅನೇಕ ಸಲ ಪ್ರಯತ್ನಿಸಿದ್ದಾಯಿತು. ಮಾನ್ಯ ಕುಲಾಧಿಪತಿಗಳು, ಸಮಕುಲಾಧಿಪತಿಗಳು ಈ ಬೇಡಿಕೆಗಳನ್ನು ಬೇಗ ಪೂರೈಸಿಕೊಡಬೇಕೆಂದು ಈ ಘಟಿಕೋತ್ಸವದಲ್ಲಿಯೂ ಮತ್ತೆ ಬಿನ್ನವಿಸಿಕೊಳ್ಳುತ್ತೇನೆ. ಇಷ್ಟು ಮಾತುಗಳೊಂದಿಗೆ ಎಲ್ಲರಿಗೂ ಇನ್ನೊಮ್ಮೆ ಸ್ವಾಗತ ಕೋರುತ್ತೇನೆ.

ಆಕರ : ಮಾರ್ಗ ಸಂಪುಟ–೭

■■

೬೬

ಬಸವ ಶ್ರೀ ಪ್ರಶಸ್ತಿ

ನನ್ನ ಪ್ರೀತಿಯ ವಿಷಯ ಎರಡು: ಕನ್ನಡ ಮತ್ತು ಬಸವಣ್ಣ. ನಾನು ಕನ್ನಡಕ್ಕೆ ಸಲ್ಲಿಸಿದ ಸೇವೆಗಾಗಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ-ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ-ನೃಪತುಂಗ ಪ್ರಶಸ್ತಿ ಪ್ರಾಪ್ತವಾಗಿವೆ. ಗಮನಿಸಬೇಕಾದ ಸಂಗತಿಯೆಂದರೆ, ಬಸವಣ್ಣ ಮೊದಲಾದ ಶರಣರಿಗೆ ಸಲ್ಲಿಸಿದ ಸೇವೆಗಾಗಿ ನನಗೆ ಸಂದ ಪ್ರಥಮ ಸಾರ್ವಜನಿಕ ಪ್ರಶಸ್ತಿ ಇದು. ಇದನ್ನು ನನ್ನದಾಗಿಸಿದ "ಬಸವ ವೇದಿಕೆ"ಗೆ ಕೃತಜ್ಞನಾಗಿದ್ದೇನೆ.

ನಾನು ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ, ಶರಣಸಾಹಿತ್ಯದ ಅಭ್ಯಾಸಿಯಾಗುವಲ್ಲಿ ನನಗೆ ಮಾದರಿಯಾದವರು, ಪೂಜ್ಯ ಶ್ರೀ ಫ.ಗು. ಹಳಕಟ್ಟಿಯವರು. ನಾನು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಯಾಗಿದ್ದ ಸಂದರ್ಭ. ಶ್ರೀ ಹಳಕಟ್ಟಿಯವರು ಪ್ರಕಟಿಸುತ್ತಿದ್ದ 'ಶಿವಾನುಭವ' ಪತ್ರಿಕೆ ಆಗ ನಮ್ಮ ಮನೆಗೆ ಬರುತ್ತಿದ್ದಿತು. ಇದರ ಒಂದು ಸಂಚಿಕೆಯ ಬೆನ್ನಮೇಲೆ ಪ್ರಕಟವಾಗಿದ್ದ 'ಕೆಲಸ ಮಾಡುವವನ ಮನಸ್ಸು ಸ್ವಚ್ಛವಾಗಿರುತ್ತದೆ' ಎಂಬ ವಾಕ್ಯ ಬಾಲಕನಾದ ನನ್ನ ಮೇಲೆ ದೊಡ್ಡ ಪ್ರಭಾವ ಬೀರಿ, ಅಂದಿನಿಂದ ನಾನು 'ಶ್ರಮಸಂಸ್ಕೃತಿ'ಯ ವ್ಯಕ್ತಿಯಾಗಿ ಬೆಳೆಯಲು ಪ್ರೇರೇಪಿಸಿತು. ಎರಡನೆಯದಾಗಿ, ನಾನು ವಿಜಾಪುರದ ವಿಜಯ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ 'ವ್ಯಕ್ತಿ ಕೇಂದ್ರಿತ ಬದುಕಿಗಿಂತ ಸಮಾಜ ಕೇಂದ್ರಿತ ಬದುಕು ಶ್ರೇಷ್ಠ' ಎಂಬುದನ್ನು ಶ್ರೀ ಹಳಕಟ್ಟಿಯವರ ನಡತೆಯಿಂದ ಅರಿತುಕೊಂಡೆನು. ಆಗ ನನ್ನ ಕ್ಷೇತ್ರವಾದ ಸಾಹಿತ್ಯದ ಮೂಲಕವೂ ಸಮಾಜಕ್ಕೆ ಸೇವೆ ಸಲ್ಲಿಸಬಹುದೆಂಬ ವಿಚಾರ ನನ್ನಲ್ಲಿ ಅಂಕುರಿಸಿ, ಕನ್ನಡಸಾಹಿತ್ಯ-ಶರಣಸಾಹಿತ್ಯಗಳಿಗೆ ದುಡಿಯುತ್ತ ಬಂದೆನು.

ವಚನಸಾಹಿತ್ಯದ ಶೋಧ-ಪ್ರಕಟಣೆಗಳಿಗೆ ನಾಂದಿ ಹಾಡಿದ ಶ್ರೀ ಹಳಕಟ್ಟಿಯವರು ವಿಜಾಪುರ ಜಿಲ್ಲೆಯವರು. ಎಲ್ಲ ಶರಣರ ಎಲ್ಲ ವಚನಗಳನ್ನು ಪ್ರಕಟಿತ-ಅಪ್ರಕಟಿತ ಆಕರಗಳಿಂದ ಶೋಧಿಸಿ, ಪರಿಷ್ಕರಿಸಿ, ವರ್ಗೀಕರಿಸಿ ಸರಕಾರದ ನೆರವಿನಿಂದ ಬೆಳಕಿಗೆ ತರುವ ಮೂಲಕ, ಅವರು ಆರಂಭಿಸಿದ್ದ ಕೆಲಸವನ್ನು ಬಹುಮಟ್ಟಿಗೆ ಪೂರ್ಣಗೊಳಿಸಿದ ನಾನೂ ವಿಜಾಪುರ ಜಿಲ್ಲೆಯವನು. ಹೀಗೆ ವಿಜಾಪುರ ಜಿಲ್ಲೆಯಿಂದ ಆರಂಭವಾದ ವಚನಗಳ ಶೋಧ-ಪ್ರಕಟಣೆಯ ವರ್ತುಲ ಅದೇ ಜಿಲ್ಲೆಯವನಾದ ನನ್ನಿಂದ ಪೂರ್ಣಗೊಂಡುದು ಒಂದು ಯೋಗಾಯೋಗವೆನಿಸಿದೆ.

ಕರ್ನಾಟಕ ವಿಶ್ವವಿದ್ಯಾಲಯ ಕೈಗೆತ್ತಿಕೊಂಡಿದ್ದ 'ವಚನ ವಾಙ್ಮಯ ಪ್ರಕಟನ ಯೋಜನೆ'ಯಲ್ಲಿ ಸಹಾಯಕ ಸಂಶೋಧಕನಾಗುವ ಮೂಲಕ ನನ್ನ ವಚನಸಾಹಿತ್ಯ ಸೇವೆ ಆರಂಭವಾಯಿತು. ಬಳಿಕ ಈ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಸಣ್ಣಪುಟ್ಟ ಕಾರ್ಯಗಳನ್ನು ಬಿಟ್ಟರೂ ಐದು ಮುಖ್ಯ ಯೋಜನೆಗಳು ನನ್ನಿಂದ ಹೀಗೆ ಪೂರ್ಣಗೊಂಡವು:

೧. ಗದುಗಿನ ಶ್ರೀ ತೋಂಟದಾರ್ಯ ಮಠ, ಮೈಸೂರಿನ ಶ್ರೀ ಸುತ್ತೂರು ಮಠಗಳ ಮೂಲಕ ೫೦ರಷ್ಟು ಪ್ರಾಚೀನ ಅಪ್ರಕಟಿತ ವಚನ-ಸ್ವರವಚನ ಸಂಪುಟಗಳು ನನ್ನ ನಿರ್ದೇಶನದಲ್ಲಿ ಬೆಳಕುಕಂಡಿವೆ.

೨. ಎಡೆಯೂರ ಸಿದ್ಧಲಿಂಗೇಶ್ವರ ಕ್ಷೇತ್ರದ ವತಿಯಿಂದ ೧೦ ಸಂಪುಟಗಳಲ್ಲಿ 'ಶ್ರೀ ತೋಂಟದ ಸಿದ್ಧಲಿಂಗೇಶ್ವರ ಸಮಗ್ರ ಸಾಹಿತ್ಯ' ನನ್ನ ಪ್ರೇರಣೆ-ಪ್ರಯತ್ನದಿಂದಾಗಿ ಪೂರ್ಣಗೊಂಡಿದೆ.

೩. ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ 'ಸಮಗ್ರ ವಚನ ಸಾಹಿತ್ಯದ ಪ್ರಕಟನೆ ಜನಪ್ರಿಯ ಆವೃತ್ತಿ' ಹೆಸರಿನಿಂದ ೧೦ ಸಾವಿರ ಪುಟ, ೧೫ ಸಂಪುಟಗಳಲ್ಲಿ ಸುಮಾರು ೨೨ ಸಾವಿರ ವಚನಗಳು ನನ್ನ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡಿವೆ.

೪. ವಿಜಾಪುರದ ಬಿ.ಎಲ್.ಡಿ.ಇ. ಸಂಸ್ಥೆಯ ವತಿಯಿಂದ ೧೨ ಸಾವಿರ ಪುಟ, ೧೫ ಸಂಪುಟಗಳಲ್ಲಿ ಪ್ರಕಟಗೊಂಡ 'ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ'ದ ಪ್ರಧಾನ ಸಂಪಾದಕತ್ವ ನನಗೆ ಪ್ರಾಪ್ತವಾದುದು ಒಂದು ಭಾಗ್ಯವೆಂದೇ ಭಾವಿಸುತ್ತೇನೆ.

೫. ಬೆಂಗಳೂರಿನ 'ಬಸವ ಸಮಿತಿ'ಯ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದ 'ವಚನಸಾಹಿತ್ಯ ಬಹುಭಾಷಾ ಅನುವಾದ ಯೋಜನೆ'ಯ ನಿರ್ದೇಶಕನಾಗುವಲ್ಲಿ, ಈಗಾಗಲೇ ೧೦ ಭಾಷಾ ಸಂಪುಟಗಳು ಪ್ರಕಟವಾಗಿವೆ. ೧೪ ಭಾಷಾ ಸಂಪುಟಗಳ ಅನುವಾದಕಾರ್ಯ ಮುಂದುವರಿದಿದೆ.

ಹಳ್ಳಿ ಮೂಲದವನಾದ ನಾನು ಅಷ್ಟೇನೂ ಬುದ್ಧಿವಂತನಲ್ಲ, ಶ್ರದ್ಧಾವಂತ. ನನ್ನಂಥವನಿಂದ ಇಂಥ ದೊಡ್ಡ ಕಾರ್ಯಗಳನ್ನು ಮಾಡಿಸಿದ ಬಸವಣ್ಣ ಮೊದಲಾದ ಶರಣರಿಗೆ ಕೃತಜ್ಞನಾಗಿದ್ದೇನೆ.

ಈ ಕಾರ್ಯಗಳಿಗೆ ಪೂರಕವಾಗಿ ಶರಣರನ್ನು ಕುರಿತು ಬೇರೆ ಸಾಹಿತ್ಯಕೃತಿಗಳನ್ನು ಮತ್ತು ಸಂಶೋಧನ-ವಿಮರ್ಶನ ಲೇಖನಗಳನ್ನು ಪ್ರಕಟಿಸುವ ಮೂಲಕ, ನಾನು ಈ ಕ್ಷೇತ್ರದ ಸೀಮೆಗಳನ್ನು ಅಲ್ಲಲ್ಲಿ ವಿಸ್ತರಿಸಿದ್ದೇನೆ. ಇದೆಲ್ಲವನ್ನು ಗುರುತಿಸಿ 'ಬಸವ ವೇದಿಕೆ' ಈ ಪ್ರಶಸ್ತಿ ಪ್ರದಾನಮಾಡಿದೆಯೆಂದು ಭಾವಿಸಿದ್ದೇನೆ.

* * *

ಶರಣರು, ವೈದಿಕ ಋಷಿಗಳಂತೆ-ಬುದ್ಧನಂತೆ ಏಕಾಂತದ ಅಡವಿಯಲ್ಲಿ ಕುಳಿತು ಗಳಿಸಿದ 'ಜ್ಞಾನ'ವನ್ನು ಸಮಾಜದಲ್ಲಿ 'ಕ್ರಿಯೆ'ಯನ್ನಾಗಿಸುವ ಬದಲು ಸಂಘರ್ಷದಿಂದ ಸಮಾಜದಲ್ಲಿ ಗಳಿಸಿದ 'ಜ್ಞಾನ'ವನ್ನು ಸಮಾಜದಲ್ಲಿ 'ಕ್ರಿಯೆ'ಯನ್ನಾಗಿಸಿದವರು. ಅಂದರೆ ಅವರದು ಜ್ಞಾನದಿಂದ ಕ್ರಿಯಾಮಾರ್ಗ, ಇವರದು ಕ್ರಿಯೆಯಿಂದ ಜ್ಞಾನಮಾರ್ಗ. ಹೀಗಾಗಿ ಅವರ ಸಿದ್ಧಾಂತ 'ಆದರ್ಶ ಮತ್ತು ಸಂದೇಶ'ವೆನಿಸಿದರೆ, ಇವರ ಸಿದ್ಧಾಂತ 'ವಾಸ್ತವ ಮತ್ತು ಚಳವಳಿ'ಯೆನಿಸಿತು. ಆದುದರಿಂದ ಚಳುವಳಿಗಾರ ಬಸವಣ್ಣ ಭಾರತದ ದಾರ್ಶನಿಕರಲ್ಲಿ ಪ್ರಥಮ 'ಆ್ಯಕ್ಟಿವಿಸ್ಟ್'ಯೆನಿಸಿದ್ದಾನೆ.

ಭಾರತೀಯ ಸಮಾಜವನ್ನು ದುರ್ಬಲಗೊಳಿಸುತ್ತ ಬಂದ ಮುಖ್ಯ ಅಂಶಗಳು ಎರಡು: ಜಾತಿಗಳು ಮತ್ತು ದೇವತೆಗಳು. ಭಾರತೀಯರು ವೃತ್ತಿಗಳನ್ನು ಜಾತಿಗಳನ್ನಾಗಿ, ದೇವರನ್ನು ದೇವತೆಗಳನ್ನಾಗಿ ನಿರ್ಮಿಸಿಕೊಳ್ಳುತ್ತ ಬರುವಲ್ಲಿ ಅವರ ಬದುಕು ಜಟಿಲವಾಗುತ್ತ ಬಂದಿತು. ಶರಣರು

ಇವೆರಡರ ವಿರುದ್ಧ ದಂಗೆಯೆದ್ದು, ಜಾತಿಗಳನ್ನು ವೃತ್ತಿಗಳನ್ನಾಗಿ, ಅಂದರೆ ಕಾಯಕಗಳನ್ನಾಗಿ ಪರಿಕಲ್ಪಿಸಿದರು. 'ಕಲ್ಲು ದೇವರಲ್ಲ, ಉಳಿಯ ಮೊನೆಯಲ್ಲಿ ಒಡೆಯಿತ್ತು. ಮರ ದೇವರಲ್ಲ, ಉರಿಯಲ್ಲಿ ಬೆಂದಿತ್ತು. ಮಣ್ಣು ದೇವರಲ್ಲ, ನೀರಿನ ಕೊನೆಯಲ್ಲಿ ಕದಡಿತ್ತು' ಎಂದು ಮುಂತಾಗಿ ಕುರುಬ ಗೊಲ್ಲಾಳನೆಂಬ ಶರಣ ಹೇಳುವಂತೆ, ಇವರು ಹೊರಗಿನ ದೇವತೆಗಳನ್ನು-ದೇವಾಲಯಗಳನ್ನು ನಿರಾಕರಿಸಿ 'ದೇಹ ದೇವಾಲಯ' ಸಂಸ್ಕೃತಿಯನ್ನು ಪ್ರಚುರಗೊಳಿಸಿದರು. ಹೀಗಾಗಿ ಲಿಂಗಾಯತದಲ್ಲಿ ಜಾತಿಗಳಿಲ್ಲ, ವೃತ್ತಿಗಳಿವೆ. ದೇವತೆಗಳಿಲ್ಲ, ದೇವರಿದ್ದಾನೆ-ಎಂದು ಹೇಳಬಹುದು. ಒಟ್ಟಾರೆ, ವೈದಿಕರು ಸೃಷ್ಟಿಸಿಕೊಂಡು ಬಂದಿದ್ದ ವರ್ಣ-ಜಾತಿಗಳ ನಿರಾಕರಣೆಯಿಂದಾಗಿ ಸಮಾಜಕಲ್ಯಾಣದ, ದೇವಾಲಯಗಳ ನಿರಾಕರಣೆಯಿಂದಾಗಿ ಆತ್ಮಕಲ್ಯಾಣದ ಸರಳ ದಾರಿಗಳು ಶರಣರಿಂದ ಸಿದ್ಧವಾದವು.

ಶರಣರ ಈ 'ಸಮಾಜೋ-ಆತ್ಮಿಕ ಸಿದ್ಧಾಂತ' ಇಂದು ಜಾಗತಿಕ ಮಟ್ಟದಲ್ಲಿ ಎಲ್ಲರ ಗಮನ ಸೆಳೆದಿದೆ. ಹೀಗಿದ್ದೂ ಆಗಾಗ ಕೆಲವರು ಇವರ ಸಿದ್ಧಾಂತ ಹಾಗೂ ಸಾಧನೆಗಳನ್ನು ಪ್ರಶ್ನಿಸುತ್ತಲಿದ್ದಾರೆ. ಹಣ್ಣು ತುಂಬಿದ ಮರಕ್ಕೆ ಕಲ್ಲು ಎಸೆಯುವುದು ಸಹಜ. ಇದಕ್ಕೆ ನಿದರ್ಶನವೆಂಬಂತೆ ಇತ್ತೀಚೆ ಕುವೆಂಪು ವಿಶ್ವವಿದ್ಯಾಲಯದ 'ಸ್ಥಳೀಯ ಸಂಸ್ಕೃತಿ ವಿಭಾಗ'ದ ಪ್ರಾಧ್ಯಾಪಕರು ವಚನ ಚಳವಳಿ ವೈದಿಕ ವಿರೋಧಿಯಲ್ಲ, ಇದು ಜಾತ್ಯತೀತ ಸಿದ್ಧಾಂತ ಪ್ರತಿಪಾದಿಸುವುದಿಲ್ಲ-ಎಂಬ ಎರಡು ವಿತಂಡವಾದ ಹೂಡಿದ್ದಾರೆ. ಇದು 'ಸ್ಥಳೀಯ ಸಂಸ್ಕೃತಿ ವಿಭಾಗ'ವೆಂಬ ಹೆಸರನ್ನು ಮುಂದುಮಾಡಿಕೊಂಡು, ಸ್ಥಳೀಯರ ವಿಶೇಷ ಕೊಡುಗೆಯನ್ನೇ ಮುಚ್ಚಿಹಾಕುವ ಹುನ್ನಾರದಂತೆ ತೋರುತ್ತದೆ. ಈ ಬಗೆಯ ವಿಕೃತ ಸಂಶೋಧನೆಗಳ ಬಗ್ಗೆ ಆ ವಿಶ್ವವಿದ್ಯಾಲಯದ ಸಿಂಡಿಕೇಟ ಸಭೆ ಎಚ್ಚರವಹಿಸುವುದು ಅವಶ್ಯವಿದೆ.

ಕೊನೆಯದಾಗಿ, ಪ್ರಜಾಸಾಹಿತ್ಯವಾಗಿರುವ ಸಮಗ್ರ ವಚನಗಳನ್ನು ಪ್ರಜಾಸತ್ತಾ ಕರ್ನಾಟಕ ಸರಕಾರ ಈ ಮೊದಲು ೨ ಆವೃತ್ತಿಯಾಗಿ ಪ್ರಕಟಿಸಿದ್ದು, ಅವು ಮಾರಾಟವಾಗಿ ಜನರಿಂದ ಬೇಡಿಕೆ ಹೆಚ್ಚುತ್ತಲಿದೆ. ಆದುದರಿಂದ ಇದೀಗ ಮುಖ್ಯಮಂತ್ರಿ ಪದವಿ ಸ್ವೀಕರಿಸಿದುದರ ಕೊಡುಗೆ ಎಂಬಂತೆ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಈ ಸಾಹಿತ್ಯದ ೩ನೆಯ ಆವೃತ್ತಿಗಾಗಿ ೫೦ ಲಕ್ಷರೂಪಾಯಿ ಅನುದಾನ ಘೋಷಿಸಬೇಕೆಂದು ಬಿನ್ನವಿಸಿಕೊಳ್ಳುತ್ತ, ಅವರ ೫ ವರ್ಷಗಳ ಆಡಳಿತ ಯಶಸ್ವಿಯಾಗಿ ಮುನ್ನಡೆಯಲೆಂದು ಆಶಿಸುತ್ತೇನೆ.

ಆಕರ : ಮಾರ್ಗ ಸಂಪುಟ-೮

■■

೬೭

ವರ್ಧಮಾನ ಸಾಹಿತ್ಯ ಪ್ರಶಸ್ತಿ

೧೯೯೪

ಪೂಜ್ಯ ಸ್ವಾಮೀಜಿಯವರೇ ಸಾಹಿತ್ಯ ಸಂಗಾತಿಗಳೇ,

ಭಾರತೀಯ ಪರಿಸರದಲ್ಲಿ "ವರ್ಧಮಾನ" ಎಂದಾಕ್ಷಣ ಅನೇಕ ಅರ್ಥಗಳು ನೆನಪಾಗುತ್ತವೆ. ಈ ದೊಡ್ಡಹೆಸರಿನ ಪುರಸ್ಕಾರವನ್ನು ಈ ವರೆಗೆ ಅನೇಕ ಜನ ದೊಡ್ಡ ವ್ಯಕ್ತಿಗಳು ಸ್ವೀಕರಿಸಿದ್ದಾರೆ. ಈಗ ನಾನು ಸಂಶೋಧನವೆಂಬ ದೊಡ್ಡ ಕ್ಷೇತ್ರದ ಪರವಾಗಿ ಈ ಪುರಸ್ಕಾರವನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತೇನೆ.

ನನಗೂ "ಮಾರ್ಗ"ಕ್ಕೂ ಅನನ್ಯ ಸಂಬಂಧ. ನಾನು ಹುಟ್ಟಿದ್ದು ಮಾರ್ಗಶಿರ ಮಾಸದಲ್ಲಿ. "ಕವಿರಾಜಮಾರ್ಗ" ನನ್ನ ಪಿಎಚ್.ಡಿ. ಅಧ್ಯಯನದ ವಿಷಯ. ನನ್ನ ಎರಡು ಮುಖ್ಯ ಕೃತಿಗಳ ಹೆಸರು "ಮಾರ್ಗ." ಈಗ "ಮನಸ್ಸಿಲ್ಲದ ಮಾರ್ಗ" ಕೃತಿಯೊಂದಿಗೆ ಪುರಸ್ಕಾರ ಪ್ರಾಪ್ತವಾದುದು ಒಂದು ಯೋಗಾಯೋಗ.

"ಮಾರ್ಗ" ಅನೇಕ ಅರ್ಥಗಳಲ್ಲಿ ನನ್ನ ಜೀವನದ ಮುಖ್ಯ ಕೃತಿ. ಇಪ್ಪತ್ತೈದು ವರ್ಷಗಳಲ್ಲಿ ಪ್ರಕಟವಾದ ನನ್ನ ಇನ್ನೂರು ಲೇಖನಗಳನ್ನೊಳಗೊಂಡ ಈ ಕೃತಿಗಳಿಂದಾಗಿ ನನಗೆ ಹೆಸರು ಬಂದದ್ದು ನಿಜ; ಹಿಂಸೆಯಾದದ್ದೂ ನಿಜ. ಆಗ ನನ್ನ ಮೇಲೆ ಎಸೆದ ಕಲ್ಲುಗಳು ಅರಳಿ ಪ್ರಶಸ್ತಿ ರೂಪದ ಮಲ್ಲಿಗೆಯಾಗಿ ಮರಳುತ್ತಲಿವೆಯೆಂದು ಭಾವಿಸುತ್ತೇನೆ.

"ಮಾರ್ಗ" ಸಂಪುಟಗಳು ಪ್ರಕಟವಾದುದು ನನ್ನ ಐವತ್ತನೆಯ ವರ್ಷ ಸಂದರ್ಭದಲ್ಲಿ, ೧೯೮೮ರಲ್ಲಿ. ಅಲ್ಲಿಂದ ಈ ವರೆಗೆ ಈ ಸಂಪುಟಗಳಿಗೆ ೧೯೮೮ರಲ್ಲಿ ವರ್ಷದ ಶ್ರೇಷ್ಠ ಕೃತಿಯೆಂಬ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೯೦ರಲ್ಲಿ ವಿಶ್ವಮಾನವ ಪ್ರಶಸ್ತಿ ಲಭಿಸಿದ್ದು, ಈಗ "ವರ್ಧಮಾನ ಪ್ರಶಸ್ತಿ" ಲಭಿಸುತ್ತಿದೆ. ಈ ಮಧ್ಯೆ ನನಗೆ ೧೯೯೦ರಲ್ಲಿ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ೧೯೯೧ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೧೯೯೨ರಲ್ಲಿ ನನ್ನ "ಚನ್ನಬಸವಣ್ಣನವರ ಷಟ್ಸ್ಥಲ ವಚನ ಮಹಾಸಂಪುಟ"ಕ್ಕೆ ಸಾಹಿತ್ಯ ಅಕಾಡೆಮಿ ಬಹುಮಾನಗಳು ಸಂದಿವೆ. ಇದೆಲ್ಲವನ್ನೂ ನೋಡಿದರೆ, "ಮಾರ್ಗ" ಮಧ್ಯದಲ್ಲಿ ಕಲ್ಲು-ಮುಳ್ಳುಗಳೇ ಇರುವುದಿಲ್ಲ, ಹೂವುಗಳೂ ಇರುತ್ತವೆಯೆಂದು ನನಗೆ ಮನವರಿಕೆಯಾಗಿದೆ.

ನಿಜವಾದ ಸಂಶೋಧಕನಿಗೆ ಸಂಶೋಧನೆಯೆನ್ನುವುದು ಕೇವಲ ಸತ್ಯದ ಅನ್ವೇಷಣೆಯಲ್ಲ, ಸತ್ಯದ ಸಹವಾಸ. ಇದರಿಂದಾಗಿ ನಿಜಜೀವನದಲ್ಲಿಯೂ ಸತ್ಯವನ್ನು ಪ್ರೀತಿಸುವ, ಅಸತ್ಯವನ್ನು ಪ್ರತಿಭಟಿಸುವ ಮನೋಧರ್ಮ ಅವನಲ್ಲಿ ಬೆಳೆದಿರುತ್ತದೆ. ಹೀಗಾಗಿ, ವಿದ್ವಾಂಸರ ಪ್ರತಿಕ್ರಿಯೆಗೆ ಗುರಿಯಾಗುವ ಸಂಶೋಧಕ ಸಮಾಜದ

ಪ್ರತಿಭಟನೆಯನ್ನೂ ಜೀರ್ಣಿಸಿಕೊಳ್ಳುತ್ತ ಬೆಳೆಯಬೇಕಾಗುತ್ತದೆ. ಸಂಶೋಧನೆ ಸಾಮಾಜಿಕ ಕ್ಷೇತ್ರವನ್ನೊಳಗೊಂಡಿದ್ದರಂತೂ, ಆತ ಖಂಡಿತವಾಗಿ ಸಮಾಜದ ವಿರೋಧಕ್ಕೆ ಗುರಿಯಾಗಬೇಕಾಗುತ್ತದೆ. ಶಂ. ಬಾ. ಜೋಶಿ, ಡಿ. ಎಲ್. ನರಸಿಂಹಾಚಾರ್, ಎಸ್. ಎಸ್. ಬಸವನಾಳ ಮತ್ತು ನಾನು ಅನುಭವಿಸಿದ ನೋವುಗಳು ಇದಕ್ಕೆ ನಿದರ್ಶನವೆನಿಸಿವೆ. "ಸತ್ಯವಂತರಿಗಿದು ಕಾಲವಲ್ಲ" ಎಂಬ ದಾಸರ ಮಾತು ಯಾವ ಕಾಲಕ್ಕೂ ಸತ್ಯವೆಂದು ಬೇರೆ ಹೇಳಬೇಕಿಲ್ಲ.

ನನ್ನ ಜೀವನದಲ್ಲಿ ವಿದ್ವಾಂಸರ ಪ್ರತಿಕ್ರಿಯೆ ಮತ್ತು ಸಾಮಾಜಿಕರ ಪ್ರತಿಭಟನೆಗಳು ಜರುಗಿವೆ. 'ಶಬ್ದಮಣಿದರ್ಪಣ' ಸಂಪಾದನೆಯ ಗುಣದೋಷಗಳನ್ನು ಎತ್ತಿತೋರಿಸುವಲ್ಲಿ ಡಾ. ಡಿ. ಎಲ್. ನರಸಿಂಹಾಚಾರ್ ಅವರೊಂದಿಗೆ, ಪಂಪನ ತಮ್ಮ ಜಿನವಲ್ಲಭನ ಶಾಸನಪಾಠ ನಿರ್ಣಯಿಸುವಲ್ಲಿ ಡಾ. ಪಿ. ಬಿ. ದೇಸಾಯಿ ಅವರೊಂದಿಗೆ, ಅನೇಕ ಸಲ ಡಾ. ಎಂ. ಚಿದಾನಂದಮೂರ್ತಿಯವರೊಂದಿಗೆ ನಾನು ಐತಿಹಾಸಿಕ ವಾದಕ್ಕೆ ಇಳಿದಿದ್ದೇನೆ. ತೀ. ನಂ. ಶ್ರೀ. ಅವರ ಆಧುನಿಕ ಛಂದಸ್ಸನ್ನು ಕುರಿತ ವಿಚಾರಗಳಿಗೆ ಇತ್ತೀಚೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದೇನೆ. ಇದು ಲೇಖನಕ್ಕೆ ಪ್ರತಿಲೇಖನದ ಘರ್ಷಣೆ. ಸಂಶೋಧನೆಯಲ್ಲಿ ಇದು ಸಹಜ, ಆರೋಗ್ಯಕರ. ಈ ಸ್ತರದಲ್ಲಿ ಮುಂದುವರಿಯಬೇಕಾದ ಸಂಶೋಧನೆಯಲ್ಲಿ ಸಾಮಾನ್ಯರೂ ಕೈಹಾಕಿದರೆ ಅದು ಸತ್ಯಶೋಧನ ಹಾದಿಯನ್ನು ಬಿಟ್ಟು, ಹಿಂಸೆಯ ಹಾದಿ ಹಿಡಿಯುತ್ತದೆ. ಕುರುಬರ ಬೀರಲಿಂಗನ ವಿಕಾಸ ಹಂತಗಳೇ ವೀರಭದ್ರಲಿಂಗ - ವಿರೂಪಾಕ್ಷಲಿಂಗ, ಕನಕದಾಸ ಕುರುಬನಲ್ಲ; ಕವಿ ಹರಿಹರದೇವನ ನಿಜನಾಮ ಹರಿಯಲದೇವ; ಪ್ರೌಢದೇವರಾಯನ ನಿಜ ನಾಮ ಪ್ರಭುಡುದೇವರಾಯ; ಸರ್ವಜ್ಞನ ಮುದ್ರಿಕೆ ಸರ್ವಜ್ಞ ಅಲ್ಲ ಪರಮಾರ್ಥ - ಇತ್ಯಾದಿ ನನ್ನ ವಾದಗಳ ಚರ್ಚೆಯಲ್ಲಿ ಪೂರ್ವಸಿದ್ಧತೆಯಿಲ್ಲದ ಸಾಮಾಜಿಕರೂ ಕೈಹಾಕಿದ ಕಾರಣ ಅನೇಕ ಕಿರಿಕಿರಿಗಳು ಏರ್ಪಟ್ಟವು. ಇವುಗಳಿಗಿಂತ ದೊಡ್ಡದಾದ ಒಂದು ಅಗ್ನಿಕುಂಡದಲ್ಲಿ ನಾನು ಹಾಯ್ದು ಬಂದುದು ನಿಮಗೆಲ್ಲ ಗೊತ್ತಿರುವ ವಿಷಯವಾಗಿದೆ. ಆ ಅಗ್ನಿಕುಂಡ ತೋಡಿದ ಕೆಲವು ಮುಖ್ಯರಿಗೆ ಶರಣರ ಮೇಲಿನ ಭಕ್ತಿಗಿಂತ ಒಳಜಾತಿ ಮೇಲಿನ ಪ್ರೀತಿ ಮುಖ್ಯವಾಗಿದ್ದಿತು. ಆ ಕಾಲದಲ್ಲಿ ಎಲ್ಲ ಶರಣರ ಎಲ್ಲ ವಚನಗಳ ಪ್ರಕಟನ ಕಾರ್ಯದಲ್ಲಿ ನಾನು ನಿರತನಾಗಿದ್ದೆನು. ಶರಣರ ಈ ಕಾರ್ಯ ಇಲ್ಲವೆ ನನ್ನ ಮರ್ಯಾದೆ - ಇವರೆಡರಲ್ಲಿ ಒಂದನ್ನು ಬಲಿಕೊಟ್ಟು ಒಂದನ್ನು ಆಯ್ದುಕೊಳ್ಳುವ ಅನಿವಾರ್ಯ ಸಂದರ್ಭ ಅಂದು ನಿರ್ಮಾಣವಾಯಿತು. ಆಗ ನನ್ನ ಮರ್ಯಾದೆಯನ್ನು ಬಲಿಕೊಟ್ಟು, ಶರಣರ ಕಾರ್ಯವನ್ನು ಎತ್ತಿಹಿಡಿದೆ. ಇದರ ಫಲವಾಗಿ ೧೫ ಸಂಪುಟಗಳಲ್ಲಿ ೧೧,೦೦೦ ಪುಟಗಳಲ್ಲಿ ೨೧,೦೦೦ ವಚನಗಳು ಏಕಕಾಲಕ್ಕೆ ಪ್ರಕಟವಾದವು. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ, ಒಂದು ಸಾಹಿತ್ಯಪ್ರಕಾರದ ಸಮಗ್ರ ಪ್ರಕಟನೆ. ಈ ಕೆಲಸ ನನ್ನ ಜೀವಮಾನದ ಒಂದು ಮುಖ್ಯ ಘಟನೆಯೆಂಬ ಸಂತೃಪ್ತಿ ನನ್ನದಾಗಿದೆ.

ಶ್ರಮ ನನ್ನ ದೇವರು, ದೈವ. ನೋವು ನನ್ನ ತಾಯಿ, ಸ್ಥಾಯಿ. ಯಾವ ಪದವಿ ಪ್ರಶಸ್ತಿಗಳಿಂದಲೂ ಮಾಯಲಾರದ ಗಾಯಗಳಿಗೆ ಗುರಿಯಾದವನು ನಾನು. ಇಂಥ ಗಾಯಗಳನ್ನೇ ಉದಾತ್ತೀಕರಿಸಿಕೊಂಡು ಬೆಳೆಯುವುದು ನನ್ನ ಮನೋಧರ್ಮವಾಗಿಬಿಟ್ಟಿದೆ. ನಾನು ಮಾಡಿದ ಉತ್ತಮ ಕೆಲಗಳೆಲ್ಲ ಇಂಥ ನೋವಿನ ಸೃಷ್ಟಿಗಳಾಗಿವೆ. ಇದಕ್ಕೆ ನಿದರ್ಶನ ನನ್ನ ಮಾರ್ಗೋತ್ತರ ಕಾರ್ಯಗಳು.

ವರ್ಧಮಾನ ಪ್ರಶಸ್ತಿ ಗಳಿಸಿದ "ಮಾರ್ಗ" ಮಾಲೆಯ ಎರಡನೆಯ ಸಂಪುಟವು ಮೂರು ಪ್ರಕರಣ, ನೂರು ಪ್ರಬಂಧಗಳನ್ನೊಳಗೊಂಡಿದೆ. ಇಲ್ಲಿಯ ಮೊದಲ ಭಾಗ ಶಾಸನಕ್ಷೇತ್ರಕ್ಕೆ ಸಂಬಂಧಿಸಿದೆ. 'ಕಪ್ಪೆ ಅರಭಟ್ಟ' ಎಂಬಲ್ಲಿಯ ಕಪ್ಪೆಯೆಂಬುದು ಯತಿವರ್ಗವನ್ನು ಸೂಚಿಸುತ್ತದೆ. ಚಿತ್ರದುರ್ಗದ ಹಳೆಯ ಹೆಸರು ಚಿತ್ರಕಲ್ಲುದುರ್ಗ.

ಇಲ್ಲಿಯ ಚಿತ್ರಕಲ್ಲು ಎಂಬುದರ ಹಳೆಯ ರೂಪ ಚಿತ್ತರಕಲ್ಲು, ಇನ್ನೂ ಹಳೆಯ ರೂಪ ಸಿದ್ಧರಕಲ್ಲು - ಇತ್ಯಾದಿ ೩೯ ಲೇಖನಗಳಲ್ಲದೆ, ಶಾಸನಶಾಸ್ತ್ರಕ್ಕೆ ಸಂಬಂಧಪಟ್ಟ ೧೧ ಲೇಖನಗಳು ಇಲ್ಲಿವೆ. ಮುಂದಿನದು ಜಾನಪದ ವಿಭಾಗ. "ಸಮಗಾರ ದೇವರಿಗೆ ಮಚ್ಚೀ ಪೆಟ್ಟು" ಎಂಬ ಗಾದೆಮಾತು ಮಾರಿಕಾಂಬೆಯ ಪೂಜೆಯನ್ನು ಸೂಚಿಸುತ್ತದೆ. ಸವದತ್ತಿ ಎಲ್ಲಮ್ಮನು ಮೂಲತಃ ಜೈನ ಪದ್ಮಾವತಿಯಕ್ಷಿಯಾಗಿದ್ದಾಳೆ. ಮೈಲಾರನ ವಾಹನ ನಾಯಿ, ಅವನು ಪಶುಪಾಲನ ಸಂಸ್ಕೃತಿಯ ದೇವತೆ. ಮಲ್ಲಿಕಾರ್ಜುನನ ವಾಹನ ನಂದಿ, ಅವನು ಕೃಷಿ ಸಂಸ್ಕೃತಿಯ ದೇವತೆ. ಜಾನಪದ ದೊಡ್ಡಾಟದ ಬಳಿಕ ಸಣ್ಣಾಟ ಹುಟ್ಟಿಕೊಳ್ಳಲು ನಮ್ಮಲ್ಲಿ ವೀರಯುಗದ ಬಳಿಕ ಭಕ್ತಿಯುಗ ತೆರೆದುಕೊಂಡುದೇ ಕಾರಣ. ಶ್ರೀಕೃಷ್ಣಪಾರಿಜಾತದ ಕರ್ತೃ ಅಪರಾಳ ತಮ್ಮಣ್ಣನಾಗಿದ್ದರೂ ಇದರ ಉತ್ತರಾರ್ಧ ಬರೆದವ ಸಿರಗುಪ್ಪಿ ಸದಾಶಿವಯ್ಯ - ಇತ್ಯಾದಿ ವಿಷಯಗಳನ್ನೊಳಗೊಂಡ ೨೭ ಲೇಖನಗಳು ಇಲ್ಲಿವೆ. ಈ ಕೃತಿಯ ಕೊನೆಯ ಭಾಗ ಶಾಸ್ತ್ರಕ್ಕೆ ಸಂಬಂಧಿಸಿದ್ದು, ನಾಮಶಾಸ್ತ್ರ, ಛಂದಶ್ಶಾಸ್ತ್ರ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನಶಾಸ್ತ್ರಗಳ ವ್ಯಾಪ್ತಿಯಲ್ಲಿ ಬರೆದ ೨೩ ಲೇಖನಗಳು ಇಲ್ಲಿವೆ. ಬನವಾಸಿಯ ಹಳೆಯ ಹೆಸರು ಬನವಸೆ. ಇದರ ಹಿಂದಿನ ರೂಪ ಬನವಸೆಯ್. ಇನ್ನೂ ಹಿಂದಿನದು ಬನವಕೆಯ್. ಬನವ ಎಂಬವನ ಸ್ಥಳವೆಂದು ಇದರ ಅರ್ಥ. ಸುಶೀಲಬಾಯಿ, ಕಮಲಾಬಾಯಿ ಎಂಬಂಥ ಸ್ತ್ರೀನಾಮಗಳ ಕೊನೆಯ 'ಬಾಯಿ' ಎನ್ನುವುದು ಅಬ್ಬೆ+ಅವ್ವೆಗಳಿಂದಾದ ಅಬ್ಬವ್ವೆ, ಅಬ್ಬಾಯಿಗಳ ಸವೆದ ರೂಪವೇ ಆಗಿದೆ. ಪಟ್ಟಣಶೆಟ್ಟಿಯೆಂದರೆ ಸಂತೆಯನ್ನು ಸಂಘಟಿಸುವ ಶೆಟ್ಟಿ. ಹೀಗೆ ನೂರಾರು ಹೊಸ ಅಂಶಗಳನ್ನು ಮೊದಲಬಾರಿಗೆ ಶೋಧಿಸಿಕೊಟ್ಟ ಶ್ರೇಯಸ್ಸು ಈ ಸಂಪುಟಕ್ಕೆ ಸಲ್ಲುತ್ತದೆ.

ಸಂಶೋಧನೆ ಪ್ರಾರಂಭವಾಗುವುದೇ ಆಕರಸಾಮಗ್ರಿಯನ್ನವಲಂಬಿಸಿ. ಸಂಶೋಧಕರಾದವರು ಸಾಮಾನ್ಯವಾಗಿ ಇನ್ನೊಬ್ಬರು ಪ್ರಕಟಿಸಿದ ಆಕರಸಾಮಗ್ರಿಯನ್ನು ಕಚ್ಚಾಸರಕಿನಂತೆ ಬಳಸಿಕೊಂಡು, ಸಂಶೋಧನ ನಡೆಸುವುದುಂಟು. ಹಾಗೆ ಮಾಡುವುದರೊಂದಿಗೆ ನಾನು ಆಕರ ಸಾಮಗ್ರಿಯನ್ನೂ ಪ್ರಕಟಿಸಿದುದು ವಿಶೇಷ. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಸಿರುಮನ ಚರಿತೆ, ಸಿರುಮಣನಾಯಕನ ಸಾಂಗತ್ಯ, ಕೊಲ್ಲಾಪುರ ನಿಂಬಸಾಮಂತ ಚರಿತೆ, ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ - ಈ ಚಾರಿತ್ರಿಕ ಕಾವ್ಯಗಳು ನನ್ನಿಂದ ಪ್ರಥಮ ಸಲ ಬೆಳಕು ಕಂಡಿವೆ. ಇತ್ತೀಚೆ ಎಲ್ಲ ಶರಣರ ಎಲ್ಲ ವಚನಗಳ ೧೫ ಸಂಪುಟಗಳು ನನ್ನ ನೇತೃತ್ವದಲ್ಲಿ ಪ್ರಕಟಗೊಂಡಿದ್ದು, ಮುಂದಿನ ತಿಂಗಳು ಐತಿಹಾಸಿಕ ದಾಖಲೆಗಳಾದ ೧೩೩ ಕೈಫಿಯತ್ತುಗಳ ೮೦೦ ಪುಟಗಳ ಗ್ರಂಥವೊಂದು ಬಿಡುಗಡೆಯಾಗಲಿದೆ. ಇತ್ತೀಚೆ "ನೆರೆಯ ರಾಜ್ಯಗಳಲ್ಲಿಯ ಪ್ರಾಚೀನ ಹಸ್ತಪ್ರತಿ ಸಂಗ್ರಹ ಯೋಜನೆ"ಯನ್ನು ಕೈಗೆತ್ತಿಕೊಂಡಿದ್ದೇನೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರ ವಿರಚಿತ "ಮಾನಸೋಲ್ಲಾಸ" ಹೆಸರಿನ ೮,೦೦೦ ಶ್ಲೋಕಗಳ ಸಂಸ್ಕೃತ ವಿಶ್ವಕೋಶದ ಕನ್ನಡ ಭಾಷಾಂತರ ಕಾರ್ಯ ನನ್ನ ನಿರ್ದೇಶನದಲ್ಲಿ ಈ ತಿಂಗಳು ಪ್ರಾರಂಭವಾಗಲಿದೆ. ಹೀಗಾಗಿ ಸಂಶೋಧನೆಯೊಂದಿಗೆ ಸಂಶೋಧಕರಿಗೆ ಆಕರಸಾಮಗ್ರಿಯನ್ನೂ ಒದಗಿಸಿದ ತೃಪ್ತಿ ನನ್ನದಾಗಿದೆ.

ಇಂಥ ಆಕರಸಾಮಗ್ರಿಯನ್ನವಲಂಬಿಸಿದ ನಾನು "ಏಕಕ್ಷೇತ್ರೀಯ" ಸಂಶೋಧಕನಾಗಿಯೇ ಅಂಬಿಗಾಲಿಟ್ಟವನು. ಆಗ "ಸಾಹಿತ್ಯ" ನನ್ನ ಮೊದಲ ಸಂಶೋಧನ ಕ್ಷೇತ್ರವಾಯಿತು. ಕವಿ ಕಾವ್ಯ ವಿಚಾರವಾಗಿ ಹಲವು ಲೇಖನಗಳನ್ನು ಬರೆಯುವುದು ಅಂದು ನನ್ನಿಂದ ಸಾಧ್ಯವಾಯಿತು.

ಮುಂದೆ ಕೆಲವೇ ದಿನಗಳಲ್ಲಿ ಈ "ಏಕಕ್ಷೇತ್ರೀಯ" ಶೋಧದಿಂದ ನಾನು "ಬಹು ಕ್ಷೇತ್ರೀಯ" ಶೋಧಕ್ಕೆ ಸಾಗಿಬಂದೆನು. ಯಾವುದೇ ಜ್ಞಾನಕ್ಷೇತ್ರ ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿರುವುದಿಲ್ಲ. ಅದು ಅನೇಕ ಕ್ಷೇತ್ರಗಳೊಂದಿಗೆ ಒಳಸಂಬಂಧ ಹೊಂದಿರುವುದೆಂಬ ಅಂಶ ನನಗೆ ಅನೇಕ ವರ್ಷಗಳ ಹಿಂದೆಯೇ ಹೊಳೆಯಿತು.

ಹೀಗಾಗಿ ಅಭ್ಯಾಸಕ್ಕೆತ್ತಿಕೊಂಡ ಒಂದು ಕ್ಷೇತ್ರದಿಂದ ಇನ್ನೊಂದು, ಮತ್ತೊಂದು, ಮಗುದೊಂದು ಕ್ಷೇತ್ರದತ್ತ ಸಾಗುವುದು ನನ್ನ ಸ್ವಭಾವವೇ ಆಯಿತು. ಮೂಲತಃ ಕನ್ನಡ ಸಾಹಿತ್ಯಕ್ಕೆ ಸೀಮಿತನಾದ ನಾನು ಶಾಸನಶಾಸ್ತ್ರಕ್ಕೆ, ಅಲ್ಲಿಂದ ಹಸ್ತಪ್ರತಿ-ಗ್ರಂಥಸಂಪಾದನಾಶಾಸ್ತ್ರಕ್ಕೆ, ಅಲ್ಲಿಂದ ಜನಪದಶಾಸ್ತ್ರಕ್ಕೆ, ಕೊನೆಗೆ ನಾಮಶಾಸ್ತ್ರಕ್ಕೆ, ಹೀಗೆ ಕ್ಷೇತ್ರೋಲ್ಲಂಘನೆ ಮಾಡುತ್ತ ಬಂದಿದ್ದೇನೆ. ಹಲವು ಕ್ಷೇತ್ರಗಳ ಬೆಳಕಿನಲ್ಲಿ ಮಾತ್ರ ಒಂದು ವಿಷಯದ ಎಲ್ಲ ಮಗ್ಗುಲುಗಳ ಶೋಧ ಸಾಧ್ಯವೆಂಬುದು ನನಗೆ ಮನವರಿಕೆಯಾಗಿದೆ. ಶಿಷ್ಟಪದಸಾಹಿತ್ಯ, ಜನಪದಸಾಹಿತ್ಯ, ರಾಜಕೀಯ ಚರಿತ್ರೆ, ವಾಸ್ತುಜ್ಞಾನ, ಸಾಮಾಜಿಕ ಅಧ್ಯಯನ, ಶಾಸನಕ್ಷೇತ್ರ - ಹೀಗೆ ಹಲವು ಬಗೆಯ ವ್ಯಾಸಂಗವಿಲ್ಲದಿದ್ದರೆ ಸವದತ್ತಿ ಎಲ್ಲಮ್ಮನ ಅಧ್ಯಯನ, ಕದರಿಯ ನಾಥಪಂಥದ ಅಧ್ಯಯನ ಪೂರ್ಣಗೊಳ್ಳುವುದಿಲ್ಲವೆಂದು ಬೇರೆ ಹೇಳಬೇಕಿಲ್ಲ.

ಹೀಗೆ ಬಹುಕ್ಷೇತ್ರಿಯ ಶೋಧವನ್ನು ಮೈಗೂಡಿಸಿಕೊಳ್ಳುತ್ತಲೇ ಅದರಿಂದ ಪ್ರಕಟವಾಗುವ ವಸ್ತುಸ್ಥಿತಿ (Fact) ಶೋಧಕ್ಕೆ ನಿಲ್ಲದೆ, ವಸ್ತುಸತ್ಯ (Truth) ಶೋಧಕ್ಕೆ ನಾನು ಹೊರಳಿದ್ದೇನೆ. ಇಲ್ಲಿ ಆಕರಸಾಮಗ್ರಿಯನ್ನು ಸಂಯೋಜಿಸುವುದಕ್ಕಿಂತ ವ್ಯಾಖ್ಯಾನಿಸುವ ಕೆಲಸ ಪ್ರಧಾನವಾಗಿರುತ್ತದೆ. ಈ ವ್ಯಾಖ್ಯಾನವೆನ್ನುವುದು ಸಂಶೋಧಕನ ಅಭ್ಯಾಸದ ವ್ಯಾಪ್ತಿ, ವಿಷಯದ ತಿಳುವಳಿಕೆ ಮತ್ತು ತರ್ಕಶಕ್ತಿಗಳನ್ನವಲಂಬಿಸಿರುತ್ತದೆ.

ಹೀಗೆ ಆಕರಸಾಮಗ್ರಿಯ ಬಹುಕ್ಷೇತ್ರೀಯ ಬಳಕೆ, ಸಂಯೋಜನಾತ್ಮಕ ವಿಧಾನ, ವ್ಯಾಖ್ಯಾನಾತ್ಮಕವಿಧಾನ, ವಸ್ತು ಸತ್ಯ ನಿಲವು - ಈ ನಾಲ್ಕು ನೆಲೆಗಳಲ್ಲಿ ಸೃಷ್ಟಿಗೊಂಡುದೇ "ಪೂರ್ಣಶೋಧ"ವೆಂದು ನನ್ನ ಅಭಿಮತ. ಈ ಧೋರಣೆಯಿಂದ ಪ್ರಕಟಗೊಳ್ಳುವ ವಸ್ತುಸ್ಥಿತಿ ಮತ್ತು ವಸ್ತುಸತ್ಯಗಳಿಂದಾಗಿ ಹೊಸ ಎಚ್ಚರ ಸಮಾಜದಲ್ಲಿ ಮೂಡಬಹುದಾಗಿದೆ. ಸಾಹಿತ್ಯದಿಂದ ಸಮಾಜ ಬದಲಾಗುವಂತಿದ್ದರೆ, ಆ ಕಾರ್ಯಕ್ಕೆ ಪರ್ಯಾಯವಾಗಿ ಹೇಳುವ ಸೃಜನಸಾಹಿತ್ಯಕ್ಕಿಂತ ನೇರವಾಗಿ ಹೇಳುವ ಸಂಶೋಧನಸಾಹಿತ್ಯ ಹೆಚ್ಚು ಅನುಕೂಲಕರ ಪ್ರಕಾರವೆಂದೇ ಹೇಳಬೇಕು. ಇಂಥ ಸಮಾಜಕೇಂದ್ರಿತ ಸಂಶೋಧನೆಯು ಪರಂಪರೆಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತ, ವರ್ತಮಾನವನ್ನು ತಿದ್ದಲು ನೆರವಾಗುತ್ತದೆ.

ಇಂದು ಕರ್ನಾಟಕದಲ್ಲಿ ಸೃಜನ ಮತ್ತು ವಿಮರ್ಶನ ಸಾಹಿತ್ಯಗಳೊಂದಿಗೆ ಹೋಲಿಸಿದರೆ ಸಂಶೋಧನ ಸಾಹಿತ್ಯದ ಸೃಷ್ಟಿಕಾರ್ಯ ಆ ಪ್ರಮಾಣದಲ್ಲಿ ಜರುಗುತ್ತಿಲ್ಲ. ಅದಕ್ಕೆ ಆ ಪ್ರಮಾಣದ ಗೌರವ ಮನ್ನಣೆಗಳೂ ಪ್ರಾಪ್ತವಾಗುತ್ತಿಲ್ಲ. ಸಾಹಿತ್ಯ ಅಕಾಡೆಮಿಯಲ್ಲಿ ಸೃಜನ, ವಿಮರ್ಶನ ಸಾಹಿತಿಗಳೇ ಹೆಚ್ಚು. ಅಧ್ಯಕ್ಷರು ಹೋಗಲಿ, ಸದಸ್ಯರಾಗುವ ಅವಕಾಶವೂ ಸಂಶೋಧಕರಿಗೆ ಅಲ್ಲಿ ಪ್ರಾಪ್ತವಾಗಿಲ್ಲ. ಸಂಶೋಧನೆಗಾಗಿಯೇ ಹುಟ್ಟಿರುವ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿಯೂ ಸೃಜನಸಾಹಿತಿಗಳೇ ಬಿಡಾರ ಹೂಡಿದ್ದಾರೆ. ಹೀಗಾಗಿ ಕರ್ನಾಟಕದ ಸಂಶೋಧಕರು ಸಾಹಿತ್ಯ ಸಂಸ್ಥೆಗಳಿಂದ ಏಕೆ, ಸಂಶೋಧನ ಸಂಸ್ಥೆಗಳಿಂದಲೂ ವಂಚಿತರಾಗಿದ್ದಾರೆ. ಹೀಗೆ ಕರ್ನಾಟಕದಲ್ಲಿ ಸಂಶೋಧನೆ, ಸಂಶೋಧಕರು ಹಿಂದೆಬೀಳಲು ಅನ್ಯರ ಅತಿಕ್ರಮಣದಂತೆ ಸಂಬಂಧಪಟ್ಟ ಸಂಶೋಧಕರೂ ಕಾರಣವೆಂದು ಹೇಳಬೇಕಾಗುತ್ತದೆ. ಏಕೆಂದರೆ ಅವರು ತಮಗೆ ಆಗುತ್ತಲಿರುವ ಅನ್ಯಾಯವನ್ನು ಸಾರ್ವಜನಿಕರ ಹತ್ತಿರ, ಸರಕಾರದ ಹತ್ತಿರ ಒಯ್ಯುತ್ತಿಲ್ಲ; ಒಯ್ದರೂ ಪ್ರಭಾವಶಾಲಿಯಾಗಿ ಮಂಡಿಸುತ್ತಿಲ್ಲ. ಎರಡನೆಯದಾಗಿ ಸಂಶೋಧನೆಯನ್ನು ಸಾಮಾನ್ಯರ ಹತ್ತಿರ ಒಯ್ದು ಅದನ್ನು ಜನಪ್ರಿಯಗೊಳಿಸುತ್ತಿಲ್ಲ. ಇನ್ನು ಮೇಲಾದರೂ ಯುವ ಸಂಶೋಧಕರನ್ನು, ಹವ್ಯಾಸಿ ಸಂಶೋಧಕರನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಆಗಾಗ ಸಂಶೋಧನ ಸಮ್ಮೇಲನ ನಡೆಸಬೇಕು; ಸಂಶೋಧನ ಲೇಖನಗಳಿಗೆ ಜಟಿಲ ಭಾಷೆ-ಜಟಿಲ ವಿಧಾನಗಳ ಬದಲು, ಸರಳ ಭಾಷೆ - ಸರಳ ವಿಧಾನ ಬಳಸಬೇಕು. ಆಯಾ ಪ್ರದೇಶಗಳಲ್ಲಿ ಅಲ್ಲಲ್ಲಿಯ ವಿಷಯವನ್ನೇ ಕುರಿತು ಅನ್ವೇಷಣೆ ನಡೆಸಿ, ಸಂಶೋಧನೆಯನ್ನು ಜನಪ್ರಿಯಗೊಳಿಸಬೇಕು. ತನ್ನ ಸಹೃದಯರ ಸಂಖ್ಯೆಯನ್ನು ಬೆಳೆಸಿಕೊಂಡು, ಅವರ ಪ್ರತಿಕ್ರಿಯೆಗೆ ತಕ್ಕಂತೆ ಸಂಶೋಧನೆ ಹೊಸ ಹೊಸ ಮಗ್ಗಲುಗಳನ್ನು ಬಿಚ್ಚಿಕೊಂಡು ಬೆಳೆಯಬೇಕು.

ಕೊನೆಯದಾಗಿ, ಸಂಶೋಧನೆಗೆ ಈಗ ಪ್ರಸಾರ ಪ್ರಚಾರ ಏನೂ ಸಾಲದು. ದೂರದರ್ಶನ ಆಕಾಶವಾಣಿಗಳು ಹೊಸ ಹೊಸ ಸಂಶೋಧನೆಗಳನ್ನು ಆಗಾಗ ಪ್ರಸಾರ ಮಾಡಬೇಕು. ಸಂಶೋಧನ ಪತ್ರಿಕೆಗಳನ್ನು ಕೆಲವು ವಿಶ್ವವಿದ್ಯಾಲಯಗಳು ಪ್ರಕಟಿಸುತ್ತಿದ್ದರೂ ಅವುಗಳ ಗುಣಮಟ್ಟ ಇಳಿಮುಖವಾಗುತ್ತಿದೆ. ನಿಯತವಾಗಿಯೂ ಅವು ಪ್ರಕಟವಾಗುತ್ತಿಲ್ಲ. ಈ ಎಲ್ಲ ಕೊರತೆಗಳನ್ನು ನೀಗಿಸಿಕೊಂಡು ಸಂಶೋಧನೆ ಸಾಹಿತ್ಯಪ್ರಪಂಚದಲ್ಲಿ ತನ್ನ ನ್ಯಾಯವಾದ ಸ್ಥಾನವನ್ನು ಪಡೆಯಲೆಂದು ಹಾರೈಸುತ್ತೇನೆ.

ಕಾಂತವಾರ, ಕರ್ನಾಟಕವೆಂಬ ದೊಡ್ಡ ರಾಜ್ಯದಲ್ಲಿ ಒಂದು ಸಣ್ಣ ಹಳ್ಳಿ. ವರ್ಧಮಾನ ಪ್ರಶಸ್ತಿಯಂಥ ಪುರಸ್ಕಾರಗಳಿಗೆ, ಡಾ. ಮೊಗಸಾಲಿಯವರಂಥ ಸಾಹಿತಿಗಳಿಗೆ ತವರುಮನೆಯಾಗುವ ಮೂಲಕ ಅದು ಅಖಿಲ ಕರ್ನಾಟಕದ ಗಮನವನ್ನು ತನ್ನತ್ತ ಸೆಳೆದಿದೆ. ಹಲಸಂಗಿ, ಹೆಗ್ಗೋಡುಗಳಂತೆ ಕರ್ನಾಟಕದ ವಿಶಿಷ್ಟ ಸಾಂಸ್ಕೃತಿಕ ಕೇಂದ್ರವಾಗಿಯೂ ಅದು ಬೆಳೆಯಲೆಂದು ಹಾರೈಸುತ್ತ, ನಿಮಗೆಲ್ಲ ವಂದನೆ ಹೇಳುತ್ತ, ವಿರಮಿಸುತ್ತೇನೆ.

ಮೂಡಬಿದಿರೆಯಲ್ಲಿ ೧೩-೩-೧೯೯೪ರಂದು ಜರುಗಿದ ವರ್ಧಮಾನ ಸಾಹಿತ್ಯ ಪ್ರಶಸ್ತಿ ಸ್ವೀಕಾರ ಸಮಾರಂಭದ ಭಾಷಣ.

ಆಕರ : ಮಾರ್ಗ ಸಂಪುಟ–೬

■■

೭೮

ಪಂಪ ಪ್ರಶಸ್ತಿ

೧೯೯೮

ಸನ್ಮಾನ್ಯ ಸಚಿವರೇ, ಗಣ್ಯಮಾನ್ಯರೇ, ಸಭಿಕರೇ,

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿದೇಶದೊಳ್ ॥

ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ ॥

ಹೀಗೆ ಯಾವ ನಾಡನ್ನು ಕುರಿತು, ಯಾವ ಕವಿ ಹಾಡಿದನೋ, ಆ ನಾಡಿನ ರಾಜಧಾನಿಯಾದ ಬನವಾಸಿಯಲ್ಲಿ ನಿಂತು, ಆ ಕವಿಯ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿರುವ 'ಪಂಪ ಪ್ರಶಸ್ತಿ'ಯನ್ನು ಸ್ವೀಕರಿಸಿದುದು, ನನ್ನ ಬದುಕಿನ ಭಾಗ್ಯವಿಶೇಷವೆಂದು ಭಾವಿಸುತ್ತೇನೆ.

ಈ ಪ್ರಶಸ್ತಿಯನ್ನು ಪ್ರದಾನ ಮಾಡಿದವರು, ತೆರೆದ ಮನಸ್ಸಿನ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ಜೆ. ಎಚ್. ಪಟೇಲ ಅವರು; ಅತಿಥಿಗಳಾದವರು ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರಾದ ಮಾನ್ಯ ಶ್ರೀ ಆರ್. ವ್ಹಿ. ದೇಶಪಾಂಡೆ ಅವರು ; ಅಧ್ಯಕ್ಷತೆ ವಹಿಸಿದವರು ಕನ್ನಡ-ಸಂಸ್ಕೃತಿ ಸಚಿವೆಯರಾದ ಶ್ರೀಮತಿ ಲೀಲಾದೇವಿ ಪ್ರಸಾದ ಅವರು; ಇದಕ್ಕೆಲ್ಲ ಪ್ರೇಕ್ಷಕಸಾಕ್ಷಿಯಾದವರು ನೀವೆಲ್ಲರು - ಎಂಬುದು ನನ್ನ ಬದುಕಿನ ಇನ್ನೊಂದು ಭಾಗ್ಯವಿಶೇಷವೆಂದು ಭಾವಿಸುತ್ತೇನೆ.

ನಾನು ಪಟ್ಟಣದ ವಿಭಕ್ತ ಕುಟುಂಬದ 'ವ್ಯಕ್ತಿ'ಯಲ್ಲ; ಹಳ್ಳಿಯ ಅವಿಭಕ್ತ ಕುಟುಂಬದ 'ಸದಸ್ಯ'. ವ್ಯಕ್ತಿ ಬೇರೆ, ಸದಸ್ಯ ಬೇರೆ. ವ್ಯಕ್ತಿಗೆ ಹೇಗೋ ಬದುಕುವುದು; ತಾನು ಬದುಕುವುದು ಮುಖ್ಯವಾಗಿರುತ್ತದೆ. ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ, ದುಡಿದು ಬದುಕುವ ಶ್ರಮಸಂಸ್ಕೃತಿ, ಕೂಡಿ ಬದುಕುವ ಸಮೂಹಸಂಸ್ಕೃತಿಗಳು ಸದಸ್ಯನ ಕೇಂದ್ರಪ್ರಜ್ಞೆಗಳಾಗಿರುತ್ತವೆ. ಬಸವಣ್ಣನವರ ಪರಿಭಾಷೆಯಲ್ಲಿ ಕಾಯಕ,

ದಾಸೋಹಗಳೆನಿಸುವ ಈ ಪ್ರಜ್ಞೆಗಳು, ನನ್ನ ತಂದೆ-ತಾಯಿಗಳಿಂದ ನನ್ನೊಳಗೆ ಇಳಿದುಬಂದಿರುವ ಪಿತ್ರಾರ್ಜಿತ ಆಸ್ತಿಯೆನಿಸಿವೆ. ಹೀಗಾಗಿ, ಕೆಲಸ ಮಾಡುವುದನ್ನು ಬಿಟ್ಟರೆ ನನಗೆ ಬೇರೆ ಕೆಲಸವೇ ಇಲ್ಲವೆಂಬಂಥ ಶ್ರಮಸಂಸ್ಕೃತಿಯನ್ನು, ಅದರಲ್ಲಿಯೂ ಹತ್ತಾರು ಜನರನ್ನು ಕೂಡಿಸಿಕೊಂಡು ಸಾಹಿತ್ಯದ ಸೃಷ್ಟಿ-ಪ್ರಕಾಶನ ಕಾರ್ಯದಲ್ಲಿ ತೊಡಗುವ ಸಮೂಹಸಂಸ್ಕೃತಿಯನ್ನು ನಾನಾ ರೂಢಿಸಿಕೊಂಡಿದ್ದೇನೆ.

ಅವಿಭಕ್ತ ಕುಟುಂಬದ ಸದಸ್ಯನಿಗೆ ತನ್ನ ಕುಟುಂಬದ ಬಗೆಗೆ ಅದಮ್ಯ ಪ್ರೀತಿ; ಅದರ ಪರಂಪರೆಯ ಬಗೆಗೆ ಅಪಾರ ಅಭಿಮಾನ. ಅದರ ಘನತೆಯನ್ನು ಹುಡುಕುವುದು, ಅದನ್ನು ಎತ್ತಿಹಿಡಿದು ಮುಂದುವರಿಸುವುದು, ಅವನ ಸ್ವಭಾವವಾಗಿರುತ್ತದೆ. ಈ ದೃಷ್ಟಿಯನ್ನು ಸ್ವಲ್ಪ ವಿಸ್ತರಿಸಿಕೊಂಡರೆ ಸಾಕು, ಅವನು ತನ್ನ ನಾಡಿನ ಬಗೆಗೆ, ಅದರ ಪರಂಪರೆಯ ಬಗೆಗೆ ಅಭಿಮಾನ ತಾಳಿದವನಾಗುತ್ತಾನೆ. ಅದರ ಶೋಧದ ಬಗೆಗೆ ಉತ್ಸುಕನಾಗುತ್ತಾನೆ. ನಾನು ಕರ್ನಾಟಕ ಪರಂಪರೆಯ ಸಂಶೋಧಕ ಸಾಹಿತಿಯಾಗಲು ಮೂಲತಃ ಅವಿಭಕ್ತ ಕುಟುಂಬದ ಸದಸ್ಯನಾದುದೇ ಕಾರಣವೆನಿಸುತ್ತದೆ.

ಆಧುನಿಕ ಕನ್ನಡ ಸಾಹಿತ್ಯದ ಆರಂಭಕಾಲದಲ್ಲಿ,' ಧಾರವಾಡ ಮಾದರಿ' ಮತ್ತು 'ಮೈಸೂರು ಮಾದರಿ'ಯೆಂಬ ಎರಡು ಸಾಹಿತ್ಯಿಕ ಮಾದರಿಗಳು ನಮ್ಮಲ್ಲಿ ಕಾಣಿಸಿಕೊಂಡವು. ಇವುಗಳನ್ನೇ ಸೃಜನಕ್ಕೆ ಸಂಬಂಧ ಪಟ್ಟಂತೆ ಬೇಂದ್ರೆ ಮಾದರಿ, ಕುವೆಂಪು ಮಾದರಿಗಳೆಂದೂ, ಸಂಶೋಧನೆಗೆ ಸಂಬಂಧ ಪಟ್ಟಂತೆ ಶಂ. ಬಾ. ಜೋಶಿ ಮಾದರಿ, ಆರ್. ನರಸಿಂಹಾಚಾರ್ ಮಾದರಿಗಳೆಂದೂ ಕರೆಯಬಹುದು. ಬೇಂದ್ರೆ ತರುವಾಯ ಉತ್ತರ ಕರ್ನಾಟಕದ ಸೃಜನಸಾಹಿತಿಗಳು ಧಾರವಾಡ ಮಾದರಿಯನ್ನು ಕೈಬಿಟ್ಟು, ದಕ್ಷಿಣ ಕರ್ನಾಟಕದ ಮೈಸೂರು ಮಾದರಿಯನ್ನು ಕೈಗೆತ್ತಿಕೊಂಡರು. ಇದೇ ರೀತಿ ಶಂ. ಬಾ. ತರುವಾಯ ಉತ್ತರ ಕರ್ನಾಟಕದ ಸಂಶೋಧಕರು ಧಾರವಾಡ ಮಾದರಿಯನ್ನು ಕೈಬಿಟ್ಟು, ಮೈಸೂರು ಮಾದರಿಯನ್ನು ಕೈಗೆತ್ತಿಕೊಂಡರು. ಬಹುಶಃ ಬೇಂದ್ರೆಯವರ ಸೃಜನ ದಾರಿಯಂತೆ, ಶಂ. ಬಾ. ಅವರ ಸಂಶೋಧನ ದಾರಿಯೂ ತುಂಬ ದುರ್ಗಮವೆಂದೋ, ಸಂಕೀರ್ಣವೆಂದೋ, ಮೈಸೂರು ಮಾದರಿಯ ಅನುಕರಣದಿಂದ ತಮಗೆ ಹೆಚ್ಚು ಪ್ರಚಾರ ಸಿಗುವುದೆಂದೋ, ಇವರು ಭಾವಿಸಿದರೆಂದು ತೋರುತ್ತದೆ. ನಾನು ಸಂಶೋಧಕನಾಗಿ ಕಣ್ಣು ತೆರೆಯುವ ಹೊತ್ತಿಗೆ ಈ "ಮಾದರಿಪಲ್ಲಟ" ಧಾರವಾಡ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದಿದ್ದಿತು. ಹೀಗಾಗಿ ನಾನೂ ಮೈಸೂರು ಮಾದರಿಯಲ್ಲಿಯೇ ಸಂಶೋಧಕನಾಗಿ ಬೆಳೆದೆ. ಇತ್ತೀಚೆ ಸಾಹಿತ್ಯಕೃತಿಗಳ ಸಾಹಿತ್ಯೇತರ ಅಧ್ಯಯನ, ಗ್ರಾಮೀಣ ಬದುಕಿನ ಜಾನಪದ ಅಧ್ಯಯನಗಳೆಂಬ ಶಿಸ್ತುಗಳು ತೆರೆದುಕೊಳ್ಳುವಲ್ಲಿ, ಕಳೆದುಕೊಂಡ ಶಂ. ಬಾ ದಾರಿಯನ್ನು ನಾನು ಕ್ರಮೇಣ ತುಳಿಯುತ್ತಲಿದ್ದೇನೆ, ಮೈಸೂರು ಮಾದರಿಯ "ಚರಿತ್ರೆ" ಶೋಧಕ್ಕಿಂತ, ಧಾರವಾಡ ಮಾದರಿಯ "ಸಂಸ್ಕೃತಿ" ಶೋಧದಲ್ಲಿ ತೊಡಗಿಕೊಂಡಿದ್ದೇನೆ.

ಸಂಸ್ಕೃತಿಯೆನ್ನುವುದು ಸಮೂಹಸಮ್ಮತ ಜೀವನ ಪದ್ಧತಿಯಾಗಿದೆ. ಭಾರತೀಯರದು, ಅಂತೆಯೇ ಕನ್ನಡಿಗರದು ಜೀವ ಶಿವ ಆಗಬೇಕೆಂಬ ವ್ಯಕ್ತಿಕೇಂದ್ರಿತ ಜೀವನ ಪದ್ಧತಿಯೇ ಹೊರತು ಜೊತೆಗೆ ಸಮಾಜವೂ ಶಿವ ಆಗಬೇಕೆಂಬ ಸಮಾಜಕೇಂದ್ರಿತ ಜೀವನ ಪದ್ಧತಿಯಲ್ಲ. ಇದರಿಂದ ಕನ್ನಡಿಗರಾದ ನಾವು ವೈಯಕ್ತಿಕವಾಗಿ ಸಬಲರೂ ಸಾಮಾಜಿಕವಾಗಿ ದುರ್ಬಲರೂ ಆಗುತ್ತ ಬಂದೆವು. ಇದಲ್ಲದೆ ಬಹುಸಂಖ್ಯೆ ವಲಸೆಗಾರರ ಆಗಮನದಿಂದಾಗಿ ನಾವು ಇನ್ನೂ ದುರ್ಬಲರಾದೆವು. ನಾವು ದುರ್ಬಲರೆಂಬುದಕ್ಕೆ ಕಣ್ಣಮುಂದಿನ ಉದಾಹರಣೆಯೆಂದರೆ, ಕಾವೇರಿಯಿಂದ ಗೋದಾವರಿ ವರೆಗೆ ವ್ಯಾಪಿಸಿದ್ದ ನೆಲವನ್ನು ಕ್ರಮೇಣ ಕಳೆದುಕೊಳ್ಳುತ್ತ ಬಂದುದು, ಈಗಲೂ ಕಳೆದುಕೊಳ್ಳುತ್ತಲಿರುವುದು. ದುರ್ಬಲಸಮಾಜಕ್ಕೆ ಹೇಗಾದರೂ ಬದುಕುವುದು ಮುಖ್ಯವಾಗಿ ಸ್ವಾಭಿಮಾನ ಗೌಣ ನೆಲೆಗೆ ಸರಿಯುತ್ತದೆ. ಹೀಗಾಗಿ ನಮ್ಮಲ್ಲಿ ಸ್ವಾಭಿಮಾನವೆನ್ನುವುದು ಕೆಲವೊಮ್ಮೆ

ಮಯೂರವರ್ಮಾದಿಗಳಂತೆ ವ್ಯಕ್ತಿಮಟ್ಟದಲ್ಲಿ ಕಾಣಿಸಿಕೊಂಡಿತೇ ಹೊರತು ಸಮೂಹಸಂಸ್ಕೃತಿಯಾಗಿ ಯಾವ ಕಾಲಕ್ಕೂ ರೂಪಗೊಳ್ಳಲಿಲ್ಲ. ಕರ್ನಾಟಕದ ನೆಲ, ಜಲ, ಭಾಷೆ ಇತ್ಯಾದಿಗಳನ್ನು ಉಳಿಸಿಕೊಳ್ಳಲು ಅಂದರೆ ನಮ್ಮನ್ನೇ ನಾವು ಉಳಿಸಿಕೊಳ್ಳಲು ಇನ್ನು ಮೇಲಾದರೂ ಸ್ವಾಭಿಮಾನವನ್ನು ಸಮೂಹಸಂಸ್ಕೃತಿಯನ್ನಾಗಿ ಹುಟ್ಟುಹಾಕುವ ಕಡೆಗೆ, ನಾವು ವಿಶೇಷ ಗಮನ ಕೊಡಬೇಕಾಗಿದೆ.

ಸ್ವಾಭಿಮಾನವೆನ್ನುವುದು ತನ್ನತನವನ್ನು ಕಂಡುಕೊಳ್ಳುವುದು ಮತ್ತು ಕಾಯ್ದುಕೊಳ್ಳುವುದಾಗಿದೆ. ಇದು ಮುಂದಿನ ಆದರ್ಶ, ಇಂದಿನ ವಾಸ್ತವಗಳೊಂದಿಗೆ ಹಿಂದಿನ ಇತಿಹಾಸವನ್ನೂ ಅಪೇಕ್ಷಿಸುತ್ತದೆ. "ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು." ಆದುದರಿಂದ ನಮ್ಮ ಇತಿಹಾಸವನ್ನು ಇಡಿಯಾಗಿ ಶೋಧಿಸುವುದು, ಅಲ್ಲಿಯ ಉತ್ತಮಾಂಶಗಳನ್ನು ಗುರುತಿಸಿ, ಅವು ವರ್ತಮಾನ ಬದುಕಿನ ಮೇಲೆ ಪ್ರಭಾವಿಸುವಂತೆ ಮಾಡುವುದು, ಇವೇ ಮೊದಲಾದ ಕೆಲಸಗಳನ್ನು ಪರಂಪರೆಯ ಸಂಶೋಧಕರಾದ ನಾವು ನಿರಂತರ ಮಾಡುತ್ತ ಬರಬೇಕಾಗಿದೆ. ಇದು ಕರ್ನಾಟಕಪ್ರಜ್ಞೆಯನ್ನು ಜಾಗ್ರತವಾಗಿಡುತ್ತ, ಸ್ವಾಭಿಮಾನವನ್ನು ಬೆಳೆಸುತ್ತದೆ. ಈ ಕೆಲಸ ನಮ್ಮ ಶಿಕ್ಷಣದ ಒಂದು ಭಾಗವಾಗಿ ಬೆಳೆಯಬೇಕಾಗಿದೆ. ದುರ್ದೈವದ ಸಂಗತಿಯೆಂದರೆ, ಇಂದಿನ ವಿದ್ಯಾರ್ಥಿಗಳು "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡ. . . " ಎಂಬ ಕವಿರಾಜಮಾರ್ಗದ ಪದ್ಯವನ್ನು ಕಂಠಪಾಠ ಹೇಳುತ್ತಾರೆ. ಕಾವೇರಿ ಎಲ್ಲಿದೆ? ಗೋದಾವರಿ ಎಲ್ಲಿದೆ? ಗೊತ್ತಿಲ್ಲ. ಅವರಲ್ಲಿ ರಾಜ್ಯದ ಬಗೆಗೆ ಇಂಥ ಅಜ್ಞಾನ ತುಂಬಿಕೊಂಡಿದೆ. ಆದುದರಿಂದ ಕರ್ನಾಟಕದ ಪರಿಚಯ-ಪರಂಪರೆಗಳ ಪ್ರಜ್ಞೆ ಮೂಡಿಸುವ, ಅಂದರೆ ಕರ್ನಾಟಕದ ಭೌಗೋಳಿಕ ಪರಿಸರ, ರಾಜಕೀಯ ಇತಿಹಾಸ, ಸಾಮಾಜಿಕ ಸ್ವರೂಪ, ಸಾಂಸ್ಕೃತಿಕ ಪರಂಪರೆ, ಸಾಹಿತ್ಯಚರಿತ್ರೆ, ಕಲಾವೈಭವ, ಔದ್ಯೋಗೀಕರಣ, ಪ್ರಚಲಿತ ಸಮಸ್ಯೆ - ಇತ್ಯಾದಿ ವಿಷಯವನ್ನೊಳಗೊಂಡ "ಕರ್ನಾಟಕ ಕೈಪಿಡಿ"ಯೊಂದನ್ನು ಸಿದ್ಧಪಡಿಸಿ ಅದನ್ನು ಪಿ.ಯು.ಸಿ. ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಓದಿಸಬೇಕು. ಅವನು ಏನೇ ಆಗುವ ಮೊದಲು ಕನ್ನಡಿಗನಾಗುವ ಶಿಕ್ಷಣ ಕ್ರಮ ನಮ್ಮಲ್ಲಿ ಕಡ್ಡಾಯವಾಗಬೇಕು. ಹೀಗೆ ಮಾಡಿದಾಗ ಮಾತ್ರ, ಜಾಗತಿಕವಾಗುವ ಭರದಲ್ಲಿ ಸ್ಥಾನಿಕತೆಯನ್ನು ನಾಶಮಾಡಿಕೊಳ್ಳುವುದು ತಪ್ಪಿ, ಕನ್ನಡವೇ ಜಾಗತಿಕವಾಗುತ್ತದೆ. ಆಗ ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯೆಲ್ಲವೆಂಬ ಸತ್ಯ ಅಸ್ತಿತ್ವಕ್ಕೆ ಬರುತ್ತದೆ.

ದುರ್ದೈವದ ಸಂಗತಿಯೆಂದರೆ, ನಮ್ಮ ಪರಂಪರೆಯನ್ನು ಶೋಧಿಸಿ, ಈ ಕೆಲಸವನ್ನು ಮಾಡಬೇಕಾದ ವಿಶ್ವವಿದ್ಯಾಲಯಗಳ ಕನ್ನಡ ಮತ್ತು ಇತಿಹಾಸ ವಿಭಾಗಗಳು ಇಂದು ಹಂಪಿಯ ಕಲ್ಲಿನ ರಥದಂತೆ ತಮ್ಮ ಚಲನಶೀಲತೆಯನ್ನು ಕಳೆದುಕೊಂಡಿವೆ. ಈ ವಿಭಾಗಗಳನ್ನು ಸಮಗ್ರವಾಗಿ ಮುರಿದು ಕಟ್ಟುವ ತುರ್ತುಕಾರ್ಯ ಇಂದು ನಡೆದು, ಅಲ್ಲಿ ಸಂಸ್ಕೃತಿಶೋಧ ಮತ್ತೆ ಪುನರುಜ್ಜೀವನಗೊಳ್ಳಬೇಕಾಗಿದೆ. ಪಂಪಭಾರತದ ಮೊದಲನೆಯ ಪದ್ಯವನ್ನು ವ್ಯಾಖ್ಯಾನಿಸುವುದು ಹೋಗಲಿ, ಸರಿಯಾಗಿ ಓದಲು ಬರುವ ಇಬ್ಬರು ಮೂವರು ಅಧ್ಯಾಪಕರು ಸಿಕ್ಕರೆ ಕನ್ನಡದ ಪುಣ್ಯವೆಂಬಂತೆ ಕಳವಳಕಾರಿ ವಾತಾವರಣ ಕನ್ನಡ ವಿಭಾಗಗಳಲ್ಲಿ ನಿರ್ಮಾಣವಾಗಿದೆ.

ಇದಕ್ಕೆ ಸಮಾನಾಂತರವಾಗಿ ಮಾಡಬೇಕಾದ ಇನ್ನೊಂದು ಕಾರ್ಯವೆಂದರೆ ನಮ್ಮ ರಾಜ್ಯದಲ್ಲಿ ಸಾವಿರ ಸಂಖ್ಯೆಯಲ್ಲಿರುವ ಕನ್ನಡ ಸಂಘಗಳನ್ನು ಇನ್ನೊಮ್ಮೆ ಸರಿಯಾಗಿ ಸಂಘಟಿಸಿ, ಕನ್ನಡದ ಕೆಲಸವೆಂದರೆ ಕೇವಲ ಕಾರ್ಯಕ್ರಮ ಮಾಡುವುದುದಲ್ಲ, ಕಾರ್ಯಮಾಡುವುದು ಎಂಬ ಸರಿಯಾದ ತಿಳಿವಳಿಕೆಯನ್ನು ಅವುಗಳಲ್ಲಿ ಮೂಡಿಸುವುದಾಗಿದೆ. ಇವು ಜಾಗ್ರತವಾದರೆ ಇಡೀ ಕರ್ನಾಟಕವೇ ಜಾಗ್ರತವಾಗುತ್ತದೆ. ಇವು ಚಲನಶೀಲವಾದರೆ ಇಡೀ ಕರ್ನಾಟಕವೇ ಚಲನಶೀಲವಾಗುತ್ತದೆ. ಹೀಗೆ ಮಾಡುವುದರಿಂದ ಕರ್ನಾಟಕಕ್ಕೆ ಆಗುತ್ತಲಿರುವ ಅನ್ಯಾಯ ಅಲ್ಲಲ್ಲಿಯ ಜನರಿಂದಲೇ ತಡೆಯಲ್ಪಡುತ್ತದೆ. ಕನ್ನಡ ಕನ್ನಡಿಗ ಕರ್ನಾಟಕಗಳ ರಕ್ಷಣೆ ಪೋಷಣೆಗಳಿಗೆ ಸೂಕ್ತ

ವಾತಾವರಣ ನಿರ್ಮಾಣವಾಗುತ್ತದೆ. ಆದುದರಿಂದ ಕರ್ನಾಟಕ ಸರಕಾರ ಮತ್ತು ಜನತೆ, ಈ ಬಗ್ಗೆ ಗಂಭೀರವಾಗಿ ಚಿಂತಿಸಬೇಕೆಂದು, ಸಮಾರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ಪಂಪ ಒಬ್ಬ ಕವಿಯಲ್ಲ, ಒಂದು ಕಾವ್ಯಪ್ರಕಾರ, ಒಂದು ಕಾವ್ಯಪರಂಪರೆ. ಅವನ ಕೃತಿಗಳು ಕೇವಲ ಸಾಹಿತ್ಯಕ ಮಹಾಕಾವ್ಯಗಳಲ್ಲ, ಸಾಂಸ್ಕೃತಿಕ ಮಹಾಕಾವ್ಯಗಳು. ಅವನು ತನ್ನ ಕಾಲದ ಕನ್ನಡಿಗರ ಸಮಗ್ರ ಸಂಸ್ಕೃತಿಯನ್ನೇ ಅವುಗಳಲ್ಲಿ ಸಾಹಿತ್ಯಗೊಳಿಸಿದ್ದಾನೆ. ಹೀಗಾಗಿ ಈತನ ಕೃತಿಗಳು ಕನ್ನಡಿಗರ ಸಾಹಿತ್ಯಿಕ ಆಸ್ತಿಯೂ ಹೌದು, ಸಾಂಸ್ಕೃತಿಕ ಆಸ್ತಿಯೂ ಹೌದು. ೧೦ನೆಯ ಶತಮಾನದಲ್ಲಿ ಅವನನ್ನು ಮೀರಿಸುವ ಕವಿಗಳು ಭಾರತದಲ್ಲಿಯೇ ಏಕೆ? ಬಹುಶಃ ಜಗತ್ತಿನಲ್ಲಿಯೇ ಇರಲಿಲ್ಲವೆಂಬುದು ಕನ್ನಡಕ್ಕೆ ಸಲ್ಲುವ ಜಾಗತಿಕ ಮನ್ನಣೆಯೂ ಹೌದು.

ಇತ್ತೀಚೆ, ಪಂಪನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಕನ್ನಡ ಶಾಸನವೊಂದು ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಕುರ್ಕಿಯಾಲ ಗ್ರಾಮದಲ್ಲಿ ಲಭ್ಯವಾಗಿದೆ. ಈ ಶಾಸನವನ್ನು ಅರ್ಥೈಸುವಲ್ಲಿ, ಲೇಖನದ ಮೇಲೆ ಲೇಖನ ಬರೆದು ಅದರ ವಿಷಯವನ್ನು ಕನ್ನಡಿಗರಿಗೆ ಪರಿಚಯಿಸುವಲ್ಲಿ, ದುಡಿದ ಸಂತೃಪ್ತಿ ನನ್ನದಾಗಿದೆ. ಅಪೂರ್ವ ದಾಖಲೆಯಾಗಿರುವ ಈ ದೊಡ್ಡ ಶಾಸನ ಮಳೆ ಗಾಳಿಗೆ ಸಿಕ್ಕು ಹಾಳಾಗುತ್ತಲಿದ್ದು, ಇದನ್ನು ಸರಕಾರ ರಕ್ಷಿಸಬೇಕಾಗಿದೆ. ಜೊತೆಗೆ ನೆರೆಯಲ್ಲಿ ಭೂಗತವಾದ ಪಂಪನ ಧರ್ಮಪುರದಲ್ಲಿ ಉತ್ಖನನ ಕಾರ್ಯವು ಜರುಗಬೇಕಾಗಿದೆ.

ಪಂಪನ ತಾಯಿಯ ತವರುಮನೆ, ಧಾರವಾಡ ಜಿಲ್ಲೆಯ ಅಣ್ಣಿಗೆರೆಯೆಂದು ಈ ಶಾಸನ ತಿಳಿಸುತ್ತದೆ. ಹಿರಿಯ ಮಗನಾದ ಪಂಪ, ತಾಯಿಯ ತವರೂರಿನಲ್ಲಿ ಹುಟ್ಟಿರುವುದು ಸಹಜವಾಗಿರುವುದರಿಂದ, ಅಣ್ಣಿಗೆರೆ ಅವರ ಜನ್ಮಸ್ಥಳವೆಂದು ಹೇಳಬೇಕಾಗುತ್ತದೆ. ಪಂಪನ ವಂಶಸ್ಥರು ಇಂದಿಗೂ ಜೈನರಾಗಿ, ಲಿಂಗಾಯತರಾಗಿ ಅಲ್ಲಿ ಮುಂದುವರಿದಿದ್ದಾರೆ. ತಮಿಳುನಾಡಿನ ಸರಕಾರ ಮದ್ರಾಸಿನಲ್ಲಿ ನಿರ್ಮಿಸಿರುವ ಕವಿ ತಿರುವಳ್ಳುವರ ಸ್ಮಾರಕದಂತೆ ಕರ್ನಾಟಕ ಸರಕಾರವೂ ಅಣ್ಣಿಗೆರೆಯಲ್ಲಿ ಪಂಪನ ಸ್ಮಾರಕವನ್ನು ಸ್ಥಾಪಿಸುವುದೆಂದು ಆಶಿಸುತ್ತೇನೆ.

ಮಾತು ಮುಗಿಸುವ ಮುನ್ನ ಒಂದುಮಾತು, ನನ್ನ ತಂದೆ ಹೇಳುತ್ತಿದ್ದರು : ನಮ್ಮದು ಬಸವಣ್ಣನ ಸಂಪ್ರದಾಯ, ದಾಸೋಹ ನಮ್ಮ ಸಿದ್ಧಾಂತ. "ಅಂಬಲಿ ಕಂಬಳಿ ಆಸ್ತಿ; ಮಿಕ್ಕಿದ್ದೆಲ್ಲ ಜಾಸ್ತಿ" ಎಂಬ ಅವರು ಈ ಮಾತು ಈಗ ನೆನಪಿಗೆ ಬರುತ್ತದೆ. ಕಾರಣ 'ಪಂಪಪ್ರಶಸ್ತಿ' ಜೊತೆ ಸರ್ಕಾರ ಕೊಡುತ್ತಿರುವ ಈ ಒಂದು ಲಕ್ಷರೂಪಾಯಿ ನನ್ನ ಬದುಕಿಗೆ ಜಾಸ್ತಿ ಎನಿಸುತ್ತದೆ. ಅದನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟು, ನಿಜವಾದ ಆಸ್ತಿಯಾಗಿರುವ ಪ್ರಶಸ್ತಿ ಪತ್ರವನ್ನು ಮಾತ್ರ ನಾನು ಸ್ವೀಕರಿಸ ಬಯಸುತ್ತೇನೆ. ಈ ಹಣವನ್ನು ಅಣ್ಣಿಗೆರೆಯಲ್ಲಿ ಪಂಪನ ಸ್ಮಾರಕ ನಿರ್ಮಿಸಲು ಬಳಸಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

೧೯೯೭ನೆಯ ಸಾಲಿನ ಪಂಪಪ್ರಶಸ್ತಿ ಸ್ವೀಕಾರ ಸಂದರ್ಭದ ಭಾಷಣ (ಬನವಾಸಿ ೧೯೯೮, ಜನೆವರಿ ೩).

ಆಕರ : ಮಾರ್ಗ ಸಂಪುಟ–೬

■■

೬೯

ವಿಶ್ವಮಾನವ ಪ್ರಶಸ್ತಿ

೧೯೯೦

ಪೂಜ್ಯರಾದ ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರಲ್ಲಿ ಪ್ರಣಾಮಗಳನ್ನು ಸಲ್ಲಿಸಿ, ದೇಜಗೌ ಟ್ರಸ್ಟಿನ ಆತ್ಮಸ್ವರೂಪರಾದ ಡಾ. ದೇ. ಜವರೇಗೌಡ ಅವರೇ, ಅತಿಥಿಗಳಾದ ಡಾ. ಸಿ. ಪಿ. ಕೃಷ್ಣಕುಮಾರ ಅವರೇ, ಮಾತೋಶ್ರೀ ಸಾವಿತ್ರಮ್ಮನವರೇ, ಶ್ರೀ. ಜೆ. ಶಶಿಧರಪ್ರಸಾದ ಅವರೇ. ಮಹನೀಯರೇ ಮತ್ತು ಮಹಿಳೆಯರೇ -

ನಮ್ಮ ನಾಡಿನ ಪ್ರಸಿದ್ಧ ಸಂಸ್ಥೆಯಾದ ದೇಜಗೌ ಟ್ರಸ್ಟಿನ ಪ್ರತಿಷ್ಠಿತ ಪುರಸ್ಕಾರವೆನಿಸಿದ ವಿಶ್ವಮಾನವ ಪ್ರಶಸ್ತಿಯನ್ನು ಸ್ವೀಕರಿಸುವುದು ನನಗೆ ಸಂತೋಷದ ವಿಷಯ, ನನ್ನ "ಮಾರ್ಗ" ಸಂಪುಟಗಳಿಗೆ ಗೌರವದ ವಿಷಯ. ಈ ಪ್ರಶಸ್ತಿಯ ಹೆಸರಿನಲ್ಲಿ ಶ್ರೀ ಕುವೆಂಪು ಅವರಿದ್ದಾರೆ, ಟ್ರಸ್ಟ್ ಹೆಸರಿನಲ್ಲಿ ಡಾ. ದೇಜಗೌ ಅವರಿದ್ದಾರೆ. ಹೀಗೆ ಒಂದು ಪುರಸ್ಕಾರದಲ್ಲಿ ಎರಡು ಗೌರವಗಳು ಸೇರಿಕೊಂಡಿದ್ದು, ಸುಖದ ಕೊನೆಯ ಸುಖಕ್ಕಿಂತ ದುಃಖದ ಕೊನೆಯ ಸುಖ ಹೆಚ್ಚು ಸಂತೋಷವನ್ನುಂಟು ಮಾಡುವಂತೆ, ಮೂರನೆಯದಾಗಿ ಅಂಥ ಸಂತೋಷವೂ ಇಲ್ಲಿ ಸೇರಿಕೊಂಡಿರುವುದರಿಂದ ಈ ಪ್ರಶಸ್ತಿ ಪ್ರದಾನೋತ್ಸವ ಸಂದರ್ಭ ನನ್ನ ಜೀವಮಾನದಲ್ಲಿಯೇ ಚಿರಸ್ಮರಣೀಯವೆನಿಸಿದೆ.

ಈ ಪುರಸ್ಕಾರ ಪ್ರಾಪ್ತವಾದ ವಾರ್ತೆ ೧೯೯೦ ಸೆಪ್ಟಂಬರ್ ೧೨ರಂದು ಆಕಾಶವಾಣಿ ಮತ್ತು ಸುದ್ದಿಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೇ ನನ್ನ ಅನೇಕ ಜನ ಆತ್ಮೀಯರು ಅನೇಕ ಬಗೆಗಳಲ್ಲಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿ ಪತ್ರ ಬರೆದಿದ್ದಾರೆ. ಅವರಲ್ಲಿ ಕೆಲವರು 'ಅಲ್ಲಾಕೇ ಘರಮೇ ದೇರ ಹೈ, ಅಂಧೇರೆ ನಹಿ' ಎಂದು, ಬೇರೆ ಕೆಲವರು 'ಸಾಹಿತ್ಯ ಅಕಾಡೆಮಿ ಮಾರ್ಗ-೨ ಕ್ಕೆ ಮಾತ್ರ ಪ್ರಶಸ್ತಿ ನೀಡುವ ಮೂಲಕ ಮಾಡಿದ ತಪ್ಪನ್ನು ದೇಜಗೌ ಟ್ರಸ್ಟ್ ತಿದ್ದಿಕೊಂಡಿತು' ಎಂದು ಪ್ರತಿಕ್ರಿಯಿಸಿದ್ದಾರೆ. ಹೀಗೆ ಕರ್ನಾಟಕವ್ಯಾಪ್ತಿಯ ನನ್ನ ಆತ್ಮೀಯರಿಗೆ ತೀವ್ರ ಸಂತೋಷವನ್ನುಂಟು ಮಾಡಿದ ಈ ಪ್ರಶಸ್ತಿ, ಪ್ರಥಮ ಸಲ ತುಂಗಭದ್ರೆಯನ್ನು ದಾಟುವ ಮೂಲಕ, ಇಂದು ಉತ್ತರ ಕರ್ನಾಟಕದಲ್ಲಿಯೂ ಮನೆಮಾತಾಗಿ ಪರಿಣಮಿಸಿದೆ.

'ಮಾರ್ಗ' ವೆನ್ನುವುದು ನನ್ನ ಕೃತಿಯ ಹೆಸರಾಗಿರುವಂತೆ, ಅದು ಅನೇಕ ಅರ್ಥಗಳಲ್ಲಿ ನನ್ನ ಸಂಶೋಧನೆಯ ಸಂಕೇತವೂ ಆಗಿದೆ. ಮಂಗರಾಜನ ನಿಘಂಟುವಿನಲ್ಲಿ 'ಮಾರ್ಗ' ಪದಕ್ಕೆ 'ಅರಸಿಕೊಂಬುದಂ ಮಾರ್ಗವೆಂಬುದು ' (೧೪೦-೧೧), 'ಪದ್ಧತಿ ಮಾರ್ಗಂ' (೫೫-೧೦) ಎಂಬ ಎರಡು ಅರ್ಥಗಳಿರುವುದರಿಂದ, ಈ ಹೆಸರು, ಏಕಕಾಲಕ್ಕೆ ನಾನು ಸಂಶೋಧಕನೆಂಬುದನ್ನೂ ನನ್ನ ಸಂಶೋಧನ ಪದ್ಧತಿಯನ್ನೂ ಪ್ರತಿನಿಧಿಸುತ್ತದೆ. ಆದುದರಿಂದ 'ಮಾರ್ಗ' ಕೃತಿಗೆ ಸಂದ ಈ ಪ್ರಶಸ್ತಿ ನನ್ನ ಸಮಗ್ರ ಬರೆವಣಿಗೆಗೆ, ಅದರ ಹಿಂದಿರುವ ನನ್ನ ಸಮಗ್ರ ವ್ಯಕ್ತಿತ್ವಕ್ಕೆ ಸಂದ ಪುರಸ್ಕಾರವಾಗಿದೆಯೆಂದು ಭಾವಿಸುತ್ತೇನೆ.

ನಾನು ಹಳ್ಳಿಯ ಮಧ್ಯಮವರ್ಗದ ಕುಟುಂಬದಲ್ಲಿ ಹುಟ್ಟಿದವ. ಕಠಿಣ ಪರಿಶ್ರಮದಿಂದ ನನ್ನ ತಂದೆ ಬಡತನ ನೀಗಿಸಿಕೊಂಡುದನ್ನು ಕೇಳಿದ, ನೋಡಿದ ನನಗೆ ಬಾಲ್ಯದಲ್ಲಿಯೇ 'ಶ್ರಮ' ಒಂದು ಅರ್ಥಪೂರ್ಣ ಜೀವನಮೌಲ್ಯವೆಂಬುದು ಮನದಟ್ಟಾಯಿತು. ಎಂ. ಎ. ಮುಗಿಯುವ ವರೆಗೂ ದುಡಿಮೆಯ ತಂದೆಯವರ ಕೈಯ್ಯಲ್ಲಿ ಬೆಳೆದ ನಾನು, ಆಮೇಲೆ ದುಡಿಮೆಯ ವಿದ್ಯಾಗುರು ಡಾ. ಆರ್. ಸಿ. ಹಿರೇಮಠ ಅವರ ಕೈಯ್ಯಲ್ಲಿ ಬೆಳೆದವನು. ಹೀಗೆ ಒಂದು ಶ್ರಮದಿಂದ ಇನ್ನೊಂದು ಶ್ರಮಕ್ಕೆ ವರ್ಗಾಯಿಸಲ್ಪಟ್ಟ ನನ್ನಲ್ಲಿ 'ಶ್ರಮಮೌಲ್ಯ' ಹರಳುಗಟ್ಟುತ್ತಿದ್ದಂತೆಯೇ 'ದುಡಿಯುವವನ ಮನಸ್ಸು ಆರೋಗ್ಯಶಾಲಿಯಾಗಿರುತ್ತದೆ' ಎಂಬ ಅರ್ಥದ ಡಾ. ಫ. ಗು. ಹಳಕಟ್ಟಿಯವರ ವಾಕ್ಯ ನನ್ನ ಮೇಲೆ ದೊಡ್ಡ ಪರಿಣಾಮವನ್ನುಂಟು ಮಾಡಿತು. ನಾನು ವಹಿಸುತ್ತಿದ್ದ ಶ್ರಮದ ಬಗ್ಗೆ ಗೌರವ ವರ್ಧಿಸಿ, ನನ್ನ ದಾರಿ ಸರಿಯಾಗಿದೆ ಎಂಬ ಸಮಾಧಾನವೂ ಮೂಡಿತು. ಮಂಗಳೂರಿನ ಸೇಂಟ್ ಎಲೋಸಿಯಸ್ ಚರ್ಚಿನಲ್ಲಿ ತೂಗುತ್ತಲಿರುವ ದೊಡ್ಡ ಫಲಕದ ಮೇಲಿನ "THINK" ಎಂಬ ಶಬ್ದ ವಿದ್ಯಾರ್ಥಿಯಾಗಿದ್ದ ನನ್ನಲ್ಲಿ ಚಿಂತನಶೀಲತೆಯ ಬಾಗಿಲನ್ನು ತೆರೆಯಿತು. ಆಕ್ಸಫರ್ಡ್ ವಿಶ್ವವಿದ್ಯಾಲಯದಲ್ಲಿ ಭೆಟ್ಟಿಯಾಗಿದ್ದ ಆಂಗ್ಲ ವಿದ್ಯಾರ್ಥಿಯೊಬ್ಬ ತಾನು ಪಿಎಚ್.ಡಿ. ಅಧ್ಯಯನಕ್ಕೆ ಆಯ್ದುಕೊಂಡ ವಿಷಯ "TRUTH" ಎಂದು ಹೇಳಿದುದು ನನಗೆ ವಿದ್ಯುತ್‌ಸ್ಪರ್ಶದಂಥ ಅನುಭವ ಮೂಡಿಸಿತು. ಮುಪ್ಪಿನ ಷಡಕ್ಷರಿಯ "ಜನಮೆಚ್ಚೆ ನಡಕೊಂಡರೇನುಂಟು ಲೋಕದಿ, ಮನ ಮೆಚ್ಚೆ ನಡಕೊಂಬುದೇ ಚೆಂದವು" ಎಂಬುದು ನನ್ನ ಮನಸ್ಸನ್ನು ಆಳುವ ಮಹಾವಾಕ್ಯವಾಗಿ ಪರಿಣಮಿಸಿತು. "ಕೂಡಲ ಸಂಗಮದೇವಾ ನಿನಗೆ ಕೇಡಿಲ್ಲವಾಗಿ ಅನು ಒಲೆದಂತೆ ಹಾಡುವೆ" ಎಂಬುದು ಸತ್ಯಕ್ಕೆ ಕೇಡಾಗದಂತೆಯೂ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಚ್ಯುತಿ ಬರದಂತೆಯೂ ಬರೆಯಬೇಕೆಂಬ ಎಚ್ಚರಿಕೆ ನೀಡಿತು. "ಎಲ್ಲರೂ ಅಹುದೆಂಬುದು ಪ್ರಮಾಣವಲ್ಲ ಕಾಣಿಭೋ, ಎಲ್ಲರೂ ಅಲ್ಲವೆಂಬುದು ಪ್ರಮಾಣವಲ್ಲ ಕಾಣಿಭೋ...... ಅಹುದೆಂಬುದನು, ಅಲ್ಲವೆಂಬುದನು ಮನ್ಮನೋಮೂರ್ತಿ ಮಹಾಲಿಂಗಗುರು ಶಿವ ಸಿದ್ಧೇಶ್ವರಪ್ರಭುವೆ ನೀನೇ ಬಲ್ಲೆ" ಎಂಬ ವಚನ ಜನತೆಯ ಪರ-ವಿರೋಧವನ್ನು ಲೆಕ್ಕಿಸದೆ ಆತ್ಮಸಾಕ್ಷಿಯಾಗಿ ಸಂಶೋಧನೆಯನ್ನು ಮುನ್ನಡೆಸಬೇಕೆಂಬ ದಾರಿ ತೋರಿಸಿಕೊಟ್ಟಿತು. "ತಾಳ್ಮೆಗಿಂತ ಮಿಗಿಲಾದ ತಪಸ್ಸು ಬೇರೊಂದಿಲ್ಲ" ಎಂಬ ಲೋಕವಾಣಿ ನನ್ನಲ್ಲಿ ಸಹನಶೀಲತೆಯನ್ನು ಸ್ಥಾಪಿಸಿತು.

ಇವೇ ಮೊದಲಾದ ಸೂಕ್ತಿ-ಸನ್ನಿವೇಶಗಳಿಂದ ಸಂಶೋಧಕನಾಗಿ ರೂಪಗೊಂಡಿದ್ದರೂ ಮೂಲತಃ ನನ್ನದು ಸಂಶೋಧನ ಸಾಹಿತಿಯ ಮನೋಧರ್ಮವಲ್ಲ, ಸೃಜನ ಸಾಹಿತಿಯ ಸ್ವಭಾವ. ಆದರೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ. ಎ. ಓದಿದ ಕಾರಣ ಅಲ್ಲಿಯ ಪರಿಸರದ ಪ್ರಭಾವದಿಂದಾಗಿ ನಾನು ಸಂಶೋಧನೆಗೆ ಹೊರಳಿದೆ. ಕವಿಯಾಗಿಬೇಕಿದ್ದವನು ಸಂಶೋಧಕನಾದೆ. ಬಿ. ಎ. ಓದುವ ಸಂದರ್ಭದಲ್ಲಿ ವಿದ್ಯಾಗುರು ಪ್ರೊ. ಬಿ. ಟಿ. ಸಾಸನೂರ ಅವರ ಪಾಂಡಿತ್ಯದ ಪ್ರಭಾವವೂ ಇದಕ್ಕೆ ತಕ್ಕಮಟ್ಟಿನ ಪೂರ್ವಸಿದ್ಧತೆಯನ್ನು ಕಲ್ಪಿಸಿಕೊಟ್ಟಿದ್ದಿತು.

ನನ್ನ ಪ್ರಾರಂಭದ ಸಂಶೋಧನಾತ್ಮಕ ಲೇಖನ ಮತ್ತು ಗ್ರಂಥಗಳ ವಿಷಯವಾಗಿ ಡಾ. ದೇಜಗೌ, ಡಾ. ಆರ್. ಸಿ. ಹಿರೇಮಠ, ಡಾ. ಹಾ. ಮಾ. ನಾಯಕ ಅವರಂಥ ಹಿರಿಯರೂ, ಡಾ. ಚಿದಾನಂದಮೂರ್ತಿ, ಡಾ. ಎಸ್. ಶೆಟ್ಟರ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ ಅವರಂಥ ಆತ್ಮೀಯರೂ ಆಡಿದ ಮೆಚ್ಚುಗೆಯ ಮಾತುಗಳು ನನ್ನ ಶಕ್ತಿಯ ಬಗ್ಗೆ ನನ್ನಲ್ಲಿ ವಿಶ್ವಾಸ ಮೂಡಿಸಿದವು. ಇವೆಲ್ಲವುಗಳಿಗಿಂತ ನನ್ನ ಸಂಶೋಧನೆಗೆ ಮುಖ್ಯ ಕಾರಣವಾದದ್ದು ನಿರಂತರ ದುಡಿಮೆ.

ನಾನು ಹೀಗೆ ದುಡಿಯುವುದರ ಉದ್ದೇಶ ಸಂಶೋಧಕನಾಗಬೇಕೆಂದೇನೂ ಅಲ್ಲ, ನನ್ನ ವಿದ್ಯಾಗುರುಗಳಾದ ಡಾ. ಆರ್. ಸಿ. ಹಿರೇಮಠರೂ ಅವರ ಗುರುಗಳಾದ ಡಾ. ಎಸ್. ಸಿ. ನಂದಿಮಠರೂ ಸಂಸ್ಥೆಯ ಮೇಲಿನ ಪ್ರೀತಿ, ಸಮಾಜದ ಮೇಲಿನ ವ್ಯಾಮೋಹ ಕಾರಣವಾಗಿ ಸ್ವಜನರಿಂದಲೇ ಅಪಾರ ಹಿಂಸೆ, ತೊಂದರೆಗಳನ್ನು ಅನುಭವಿಸಿದರು. ಅವರ ಆದರ್ಶವನ್ನು ಒಪ್ಪಿಕೊಂಡ ನಾನು ಅವೇ ಕಾರಣಗಳಿಂದಾಗಿ ಹಿಂಸೆ

ತೊಂದರೆಗಳನ್ನು ಅನುಭವಿಸಿದೆ. ಹೀಗೆ ಅನುಭವಿಸುತ್ತಿದ್ದುದನ್ನು ಮರೆಯುವದಕ್ಕಾಗಿ ಅಭ್ಯಾಸದ ಮೊರೊಹೊಕ್ಕೆ, ಹೀಗೆ ಮೊರೆಹೊಕ್ಕುದಕ್ಕಾಗಿ ಸಂಶೋಧಕನಾಗಿ ಬೆಳೆದೆ, ಹೀಗೆ ಬೆಳೆದುದಕ್ಕಾಗಿ ಮತ್ತೆ ಹಿಂಸೆ-ತೊಂದರೆಗಳನ್ನು ಅನುಭವಿಸಿದೆ. ಈ ಚಕ್ರವನ್ನು ನೋಡಿದರೆ ನನ್ನ ಸಂಶೋಧನ ಸಾಹಿತ್ಯವು ಸಂಶೋಧನ ಉದ್ದೇಶಕ್ಕಾಗಿ ಹುಟ್ಟಿದುದಲ್ಲ, ಕಷ್ಟಗಳಿಂದ ಪಾರಾಗಲು ನಡೆಸಿದ ವ್ಯಾಸಂಗಮಗ್ನತೆಯ ಉಪನಿಷ್ಪತ್ತಿಯಾಗಿದೆ ಎನಿಸುತ್ತದೆ. ಆದುದರಿಂದ ನನ್ನನ್ನು ಪರೋಕ್ಷವಾಗಿ ಬೆಳೆಸಿದ, ಬೆಳೆಸುತ್ತಲಿರುವ ಈ ಕಾಟ ಹಿಂಸೆ ತೊಂದರೆಗಳಿಗೆ ಕೃತಜ್ಞನಾಗಿದ್ದೇನೆ.

ಬೆನ್ನ ಹಿಂದಿನ ಈ ಬೆಂಕಿಯನ್ನು ಮರೆಯಿಸಿದವರು, ಕಣ್ಣ ಮುಂದಿನ ನನ್ನ ವಿದ್ಯಾರ್ಥಿಗಳು. ಗಾಢವಾಗಿ ಪ್ರೀತಿಸುವ ಮೂಲಕ ನಾನು ಇಪ್ಪತ್ತೈದು ವರ್ಷಕಾಲ ಬದುಕುವಂತೆ ಮಾಡಿದ, ಬರೆಯುವಂತೆ ಮಾಡಿದ ಅವರನ್ನು ಈ ಸಂದರ್ಭದಲ್ಲಿ ಅಂತಃಕರಣಪೂರ್ವಕ ಸ್ಮರಿಸುತ್ತೇನೆ.

ನನ್ನ ಬೆಳವಣಿಗೆಯ ಅವಕಾಶಗಳ, ಬದುಕಿನ ಆಹ್ವಾನಗಳ ರಂಗ ಸ್ನಾತಕೋತ್ತರ ಕನ್ನಡ ವಿಭಾಗ. ಕರ್ನಾಟಕದಲ್ಲಿ ಶ್ರೀ ಟಿ. ಎಸ್. ವೆಂಕಣ್ಣಯ್ಯ, ಶ್ರೀ. ಕೆ. ಜಿ. ಕುಂದಣಗಾರ, ಅವರಿಂದಾಗಿ ಈ ಸ್ನಾತಕೋತ್ತರ ಕನ್ನಡ ಶಿಕ್ಷಣಕ್ಕೆ ವಿಭಾಗೀಯ ಸ್ವರೂಪ ಪ್ರಾಪ್ತವಾಗಿದ್ದಿತ್ತು. ಈ ಪ್ರಯೋಗದ ಪುಣ್ಯತೀರುತ್ತಲೇ ಡಾ. ದೇ. ಜವರೇಗೌಡರ, ಡಾ. ಆರ್. ಸಿ. ಹಿರೇಮಠರ ಕಾಲದಲ್ಲಿ ಅದು ಸಾಂಸ್ಥಿಕ ಸ್ವರೂಪಕ್ಕೆ ತಿರುಗಿತು. ಧಾರವಾಡದ ಸ್ನಾತಕೋತ್ತರ ಕನ್ನಡ ವಿಭಾಗ ಹೀಗೆ ಸಾಂಸ್ಥಿಕ ಸ್ವರೂಪ ಪಡೆಯುತ್ತಲಿದ್ದ ಎರಡನೆಯ ಘಟ್ಟದ ಆರಂಭದಲ್ಲಿ ನಾನು ಅದನ್ನು ಪ್ರವೇಶಿಸಿದೆ. ಇತ್ತೀಚಿನ ಒಂದು ಸಭೆಯಲ್ಲಿ ಡಾ. ಆರ್. ಸಿ. ಹಿರೇಮಠ ಅವರು ನನ್ನನ್ನು ಕುರಿತು "He is my successor" ಎಂದು ಹೇಳುವಷ್ಟರ ಮಟ್ಟಿಗೆ ಸಂಸ್ಥೆಯನ್ನು ಕಟ್ಟುವ ಕಾರ್ಯದಲ್ಲಿ ನನ್ನ ಹಿರಿಯರಿಗೆ ಪ್ರಾಮಾಣಿಕವಾಗಿ ನೆರವು ನೀಡಿದೆ. ಆಮೇಲೆ ಶ್ರೀ ಬಸವೇಶ್ವರಪೀಠದ ಪ್ರಾಧ್ಯಾಪಕನಾಗಿ ಅದನ್ನು ಬಸವೇಶ್ವರ ಅಧ್ಯಯನ ಡಿಪ್ಲೊಮಾ ಕೋರ್ಸ್, ವೀರಶೈವ ಗ್ರಂಥಾಲಯ, ಪ್ರಚಾರೋಪನ್ಯಾಸ ಮತ್ತು ವಿಶೇಷೋಪನ್ಯಾಸ, ಗ್ರಂಥಪ್ರಕಟನೆ - ಹೀಗೆ ನಾಲ್ಕು ನೆಲೆಗಳಲ್ಲಿ ಬೆಳೆಸಿದ ತೃಪ್ತಿ ನನ್ನದಾಗಿದೆ. ಎರಡು ವರ್ಷಗಳ ಹಿಂದೆ ಪೀಠವನ್ನು ಮಾತ್ರ ಬಿಟ್ಟು, ಬಸವಣ್ಣನವರನ್ನು ಕರೆದುಕೊಂಡು ಹೊರಬಂದ ದೊಡ್ಡ ಘಟನೆ ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ಈಗಲೂ ಜೀವಹಿಡಿದುಕೊಂಡಿರುವ ಎರಡನೆಯ ಘಟ್ಟದ ಸಾಂಸ್ಥಿಕ ಅಧ್ಯಯನದ ಪುಣ್ಯವೂ ಇಂದು ತೀರದಂತೆ ಕಾಣುತ್ತದೆ. ಯಾವುದೇ ಪ್ರಯೋಗಕ್ಕೆ ಒಂದು ಆಯುಷ್ಯ ಪ್ರಮಾಣವಿರುತ್ತದೆ. ಚೆನ್ನಾಗಿ ಉರಿದ ದೀಪಕ್ಕೆ ಕುಡಿ ಬರುವುದು ಸಹಜ. ಅದೇ ರೀತಿ ಇಂದು ಕನ್ನಡ ಅಧ್ಯಯನ ಸಂಸ್ಥೆಗಳ ಸಾಹಿತ್ಯಿಕ ಕೆಲಸಕ್ಕೆ ಕುಡಿಬಂದಿದೆ. ಮತ್ತೆ ಬೆಳಕು ದೊಡ್ಡದಾಗಬೇಕಾದರೆ ಎಣ್ಣೆ ಹಾಕುವುದು ಮುಖ್ಯವಲ್ಲ, ಕುಡಿ ಕೆಡುಹುವುದು ಮುಖ್ಯ. ಈಗ ಅಂಥ ಆಮೂಲಾಗ್ರ ಬದಲಾವಣೆಯ ಒಂದು ಹೊಸ ಪ್ರಯೋಗವನ್ನು ಇಲ್ಲಿಯ ವಿಭಾಗದ ಮುಖ್ಯಸ್ಥನಾದ ಡಾ. ಸಿ.ಪಿ.ಕೆ. ಮೊದಲಗೊಂಡು ನಾವೆಲ್ಲ ಮಾಡಬೇಕಾಗಿದೆ. ಈ ಹಿಂದೆ ನಮ್ಮ ಹಿರಿಯರು ಇಂಥ ಆಹ್ವಾನಗಳನ್ನು ಯಶಸ್ವಿಯಾಗಿ ನಿರ್ವಹಿಸಿದಂತೆ ಇಂದು ನಾವೂ ನಿರ್ವಹಿಸಬೇಕಾಗಿದೆ.

ಡಾ. ಆರ್. ಸಿ. ಹಿರೇಮಠ ಅವರು ಕನ್ನಡ ಅಧ್ಯಯನ ಪೀಠದ ನಾಯಕತ್ವ ವಹಿಸಿಕೊಂಡ ಸಂದರ್ಭದಲ್ಲಿ ನಿರಪೇಕ್ಷ ಭಾವದಿಂದ ದುಡಿದೆನಾದರೂ ನಾನು ನಾಯಕತ್ವ ವಹಿಸಿಕೊಳ್ಳುವ ಹೊತ್ತಿಗೆ ಅಲ್ಲಿ ಸಾಂಸ್ಥಿಕ ಸಂಶೋಧನೆಯ ವಾತಾವರಣ ಉಳಿದಿರಲಿಲ್ಲ. ಕುಡಿ ಕೆಡವಲು ಮಾಡಿದ ಪ್ರಯತ್ನಗಳೂ ಸಫಲವಾಗುವ ಲಕ್ಷಣ ತೋರದಿದ್ದಾಗ, ಸಂಸ್ಥೆಯನ್ನು ಬೆಳೆಸಬೇಕೆಂಬ ನನ್ನ ಉತ್ಸಾಹವಾಹಿನಿ ತನ್ನ ಪಾತ್ರವನ್ನೇ ಬದಲಿಸಿಕೊಳ್ಳಬೇಕಾಯಿತು.' ಚುನಾಮಣಾ ವ್ಯವಸ್ಥೆಯ ಸಾರ್ವಜನಿಕ ಸಂಸ್ಥೆ'ಗಳಲ್ಲಿ ಕೆಲಸಕ್ಕಿಂತ ವಿರೋಧವೇ

ಹೆಚ್ಚು ಬೆಳೆಯುವದೆಂದು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಪ್ರಾಮಾಣಿಕವಾಗಿ ಬೆಳೆಸಿಯೂ ಅನುಭವಿಸಿದ ತೊಂದರೆಯಿಂದ ನನಗೆ ಅರ್ಥವಾಗಿದ್ದಿತು. ಹೀಗಾಗಿ ಚುನಾವಣೆ - ಬಹುಮತ ಇತ್ಯಾದಿಗಳಿಂದ ಮುಕ್ತವಾದ 'ವೀರಶೈವ ಅಧ್ಯಯನ ಸಂಸ್ಥೆ'ಯನ್ನು ಗದುಗಿನ ಶ್ರೀ ತೋಂಟದಾರ್ಯಮಠದಲ್ಲಿ ರೂಪಿಸಿಕೊಳ್ಳುವುದು ನನಗೆ ಅನಿವಾರ್ಯವಾಯಿತು.

ಸಾಮಾನ್ಯವಾಗಿ ಮಠಗಳನ್ನು, ಮಠಗಳಂಥ ಸಂಸ್ಥೆಗಳಲ್ಲಿ ಕೆಲಸ ಮಾಡುವವರನ್ನು ಸಂದೇಹದಿಂದ ನೋಡಲಾಗುತ್ತದೆ. ಆದರೆ ಯಾವುದೇ ಸಂಸ್ಥೆ ತನ್ನಷ್ಟಕ್ಕೆ ತಾನು ಕೆಟ್ಟದ್ದಲ್ಲ. ಅದನ್ನು ಸಾಮಾಜಿಕ ಶ್ರೇಯಕ್ಕಾಗಿ ಇಲ್ಲವೆ ವೈಯಕ್ತಿಕ ಲಾಭಕ್ಕಾಗಿ ಬಳಸುವದು ವ್ಯಕ್ತಿಯ ನಡತೆಯನ್ನು ಅವಲಂಬಿಸಿರುತ್ತದೆ. ಮೂಲತಃ ಇವು ಯತಿಗಳಿರುವ ಆಶ್ರಮಗಳಲ್ಲ, ವ್ರತಿಗಳಿರುವ ಸಾಮಾಜಿಕ ಸಂಸ್ಥೆಗಳು. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘಗಳಂತೆ ಸಾರ್ವಜನಿಕ ಶ್ರಮ, ತ್ಯಾಗ ಮತ್ತು ಹಣದಿಂದ ಸಾರ್ವಜನಿಕರ ಶ್ರೇಯಸ್ಸಿಗಾಗಿ ಅಸ್ತಿತ್ವಕ್ಕೆ ಬಂದ ಸಾಮಾಜಿಕ ಸಂಸ್ಥೆಗಳು. ಧರ್ಮದ ಮೂಲಕ ಜನತೆಗೆ ಅವಶ್ಯವಾಗಿರುವ ಶಿಕ್ಷಣ, ಸಾಹಿತ್ಯ, ಸಂಸ್ಕೃತಿಗಳ ಪ್ರಸಾರ ಇವುಗಳ ಕರ್ತವ್ಯ. ಆದುದರಿಂದ ಇವುಗಳನ್ನು ಕೇವಲ ಧಾರ್ಮಿಕ ಚಟುವಟಿಕೆಗಳಿಗೆ ಬಿಟ್ಟುಕೊಡದೆ, ಸಾಹಿತ್ಯ ಪರಿಷತ್ತು, ಸಾಹಿತ್ಯ ಅಕಾಡೆಮಿಗಳಂತೆ ಸಾಂಸ್ಕೃತಿಕ ಕೇಂದ್ರಗಳಾಗಿ ಬೆಳೆಸಬೇಕು. ಮನಸ್ಸು ಮಾಡಿದರೆ ವೀರಶೈವ ಮೊದಲಾದ ಚಲನಶೀಲ ಧರ್ಮದ ಮಠಗಳು ಜನಜಾಗೃತಿಗಾಗಿ ಚಳುವಳಿಯ ವೇದಿಕೆಗಳೂ ಆಗಬಲ್ಲವು. ನನ್ನ ಮಟ್ಟಿಗಂತೂ ಗದುಗಿನ ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನಸಂಸ್ಥೆ ವಿಶ್ವವಿದ್ಯಾಲಯದ ಪ್ರಸಾರಾಂಗವನ್ನು ನೆನಪಿಸುವ ಒಂದು ಯಶಸ್ವಿ ಪ್ರಯೋಗವೆನಿಸಿದೆ. ಕಳೆದ ಹತ್ತು ವರ್ಷಗಳಲ್ಲಿ ವೀರಶೈವ ಪುಣ್ಯಪುರುಷ ಮಾಲೆಯಲ್ಲಿ ೧೨೫, ಅಪ್ರಕಟಿತ ವಚನಸಾಹಿತ್ಯ ಪ್ರಕಟನೆಯೋಜನೆಯಲ್ಲಿ ೫೦, ಇತರ ಕೃತಿಗಳು ೨೫ ಹೀಗೆ ೨೦೦ ಕೃತಿಗಳ ಪ್ರಕಟನೆ, ಉತ್ತಮೋತ್ತಮ ವಿಚಾರ ಸಂಕಿರಣಗಳ ಸಂಘಟನೆ-ಇತ್ಯಾದಿಗಳು ಇದಕ್ಕೆ ನಿದರ್ಶನವೆನಿಸಿವೆ. ಹೀಗೆ ಬಗೆಬಗೆಯ ಸಂಸ್ಥೆಗಳಲ್ಲಿ, ಸಂದರ್ಭಗಳಲ್ಲಿ ದುಡಿಯುವದರಿಂದ ನನ್ನ ಶಕ್ತಿಗೆ, ಸಂಶೋಧನಾಸಕ್ತಿಗೆ ವಿವಿಧ ಆಯಾಮಗಳು ಅನುಭವಗಳು ಪ್ರಾಪ್ತವಾದವು.

೧೯೬೨ರಲ್ಲಿ ಕನ್ನಡ ಅಧ್ಯಯನಪೀಠ ಪ್ರಾರಂಭಿಸಿದ 'ಸಮಗ್ರವಚನ ವಾಙ್ಮಯ ಪರಿಷ್ಕರಣ ಪ್ರಕಟಣಯೋಜನೆ' ಯಲ್ಲಿ ಸಹಾಯಕ ಸಂಶೋಧಕನೆಂದು ಪ್ರವೇಶಮಾಡುವ ಮೂಲಕ ನನ್ನ ಸಂಶೋಧನೆ ಸುಳಿ ಬಿಚ್ಚಿತು. ಎಲ್ಲ ಸಂಶೋಧಕರಂತೆ ನಾನು ಮೊದಲು ಕೈಕೊಂಡುದು ಆಕರಗಳ ಸಂಗ್ರಹಕಾರ್ಯವನ್ನು, ಅಭ್ಯಾಸಕಾರ್ಯವನ್ನು. ಈ 'ಆಕರನಿಷ್ಠಶೋಧ' ನನ್ನ ಸಂಶೋಧನೆಯ ಪ್ರಥಮ ಘಟ್ಟ. ಆಕರಗಳ ಮಹತ್ವ ಗೊತ್ತಾಗುತ್ತ ಹೋದಂತೆ ಇವು ತಿಳಿಸಿಕೊಡುವ ಗತಕಾಲದ ಘಟನೆಗಳ ಅನ್ವೇಷಣೆಗಾಗಿ 'ಸಂಗತಿನಿಷ್ಠಶೋಧ'ಕ್ಕೆ ತೊಡಗಿದೆ. ಇದು ನನ್ನ ಸಂಶೋಧನೆಯ ಎರಡನೆಯ ಘಟ್ಟವಾಗಿದೆ. ಆಮೇಲೆ ಡಾ. ಎಸ್. ಶೆಟ್ಟರ, ಡಾ. ಎಂ. ಚಿದಾನಂದಮೂರ್ತಿ ಮೊದಲಾದವರ ಸಂಪರ್ಕ ಕಾರಣವಾಗಿ 'ವಿಚಾರನಿಷ್ಠಶೋಧ'ಕ್ಕೆ ಹೊರಳಿದೆ. ಇದು ನನ್ನ ಸಂಶೋಧನೆಯ ಮೂರನೆಯ ಘಟ್ಟವಾಗಿದೆ. ಈ ಮೂರು ಘಟ್ಟಗಳಿಗೆ ನಾನು ಬಳಸಿದ್ದು ನಿರೂಪಣಾತ್ಮಕ, ಸಂಯೋಜನಾತ್ಮಕ, ವ್ಯಾಖ್ಯಾನಾತ್ಮಕ ಶೈಲಿಯನ್ನು ಮತ್ತು ತಂತ್ರವನ್ನು.

ನನ್ನದು ಹಲವು ಮುಖಗಳಲ್ಲಿ ಹರಿಯಬೇಕೆನ್ನುವ ಹವ್ಯಾಸ. ಇದರಿಂದಾಗಿ ಹಳಗನ್ನಡ, ವ್ಯಾಕರಣ, ಛಂದಸ್ಸು, ಶಾಸನ, ಗ್ರಂಥಸಂಪಾದನೆ, ಜನಪದ, ಚರಿತ್ರೆ, ಸಂಸ್ಕೃತಿ, ಇತ್ತೀಚೆ ನಾಮವಿಜ್ಞಾನ ಇತ್ಯಾದಿ ಕ್ಷೇತ್ರಗಳನ್ನು ಶ್ರದ್ಧೆಯಿಂದ ಪ್ರವೇಶಿಸಿದೆ. ಕವಿಯಂತೆ ಸಂಶೋಧಕನಿಗೂ ಯಾವುದೇ ಕ್ಷೇತ್ರ ಅಪ್ರಯೋಜಕವಲ್ಲವೆಂಬುದು ನನಗೆ ಬಹಳ ದಿನಗಳ ಹಿಂದೆಯೇ ಮನದಟ್ಟಾಯಿತು. ಇದರಿಂದ ಅಂತರ್‌ಶಿಸ್ತೀಯ ಸಂಶೋಧನೆ ನನ್ನಲ್ಲಿ ಏರ್ಪಟ್ಟು, ಸಂಶೋಧನೆಗಾಗಿ ಕೈಗೆತ್ತಿಕೊಂಡ ಯಾವುದೇ ವಿಷಯದ ಮುಖ್ಯ ಬಾಗಿಲುಗಳನ್ನಲ್ಲದೆ, ಉಪೇಕ್ಷಿತ ಬಾಗಿಲುಗಳನ್ನೂ ತೆರೆಯುವ ರೀತಿಗಳು ಗೊತ್ತಾದವು. ಇದೇ ಕಾಲಕ್ಕೆ ವ್ಯಾಖ್ಯಾನನಿಷ್ಠ ಸಂಶೋಧನಪದ್ಧತಿಯಿಂದಾಗಿ

ವಿಚಾರಶೋಧದ ಹವ್ಯಾಸ ಬೆಳೆದು ಹೊರಬಾಗಿಲುಗಳೊಂದಿಗೆ ಒಳಬಾಗಿಲುಗಳನ್ನೂ ತೆರೆಯುವ ರೀತಿಗಳೂ ಗೊತ್ತಾದವು. ಈ ಎರಡು ತಿಳುವಳಿಕೆಗಳಿಂದಾಗಿ ನನ್ನ ಸಂಶೋಧನೆ ಹೊಸ ನೆಲೆಯನ್ನು ಪಡೆಯಿತು.

'ಸಂಗತಿನಿಷ್ಠಶೋಧ'ಕ್ಕೆ ಹೊಸ ಹೊಸ ಆಕರಗಳು ಅವಶ್ಯ. 'ವ್ಯಾಖ್ಯಾನನಿಷ್ಠ ಶೋಧ'ಕ್ಕೆ ಹೊಸ ಆಕರಗಳು ಬೇಕೆಂದೇನೂ ಇಲ್ಲ. ಇರುವ ಆಕರಗಳಿಂದಲೇ ತನ್ನ ಸಂಶೋಧನ ಸಾಮರ್ಥ್ಯದಿಂದ ಹೊಸ ಹೊಸ ಧ್ವನಿಗಳನ್ನು ಹೊರಡಿಸಬೇಕಾಗುತ್ತದೆ; ಭಾಷೆಯಿಂದ ಕವಿ ಹೊಸ ಹೊಸ ಧ್ವನಿ ಹೊರಡಿಸುವಂತೆ. ಇದನ್ನು ನಾನು 'ಕಾವ್ಯಧ್ವನಿ'ಗೆ ಸಮಾನವಾದ 'ಸಂಶೋಧನ ಧ್ವನಿ'ಯೆಂದು ಕರೆಯುತ್ತೇನೆ. ಇಲ್ಲಿ ಆಕರಗಳನ್ನು ಆಕರವನ್ನಾಗಿ ಬಳಸಿಕೊಳ್ಳದೆ, ಆಧಾರವನ್ನಾಗಿ ತಿರುಗಿಸಿಕೊಳ್ಳಬೇಕಾಗುತ್ತದೆ. ಇದು ಆಕರಗಳಿಂದ ವಾಚ್ಯಾರ್ಥ ಹೊರಡಿಸುವದಲ್ಲ, ವ್ಯಂಗ್ಯಾರ್ಥ ಹೊರಡಿಸುವುದು. ಇದರಿಂದ 'ಸಾಧ್ಯತೆ'ಯ ಅನೇಕ ಛಾಯೆಗಳು ಪ್ರಕಟವಾಗುತ್ತದೆ. ಇವು ಸಂಶೋಧನೆಯನ್ನು ಮುಂದುವರಿಸಲು ಪ್ರಚೋದಿಸುತ್ತಿದ್ದು, ಆಗ 'ಸಾಧ್ಯತೆ'ಯು 'ಸತ್ಯ'ವಾಗಬಹುದು, ಇಲ್ಲವೆ ಬೇರೊಂದು 'ಸತ್ಯ' ಬೆಳಕಿಗೆ ಬರಬಹುದು. ಅದೂ ಸಾಧ್ಯವಾಗದಿದ್ದರೆ ಸತ್ಯವನ್ನು ಹುಡುಕಲು ವಿದ್ವಾಂಸರನ್ನು ಪ್ರಚೋದಿಸಿದ ಬೆಲೆಯಂತೂ ಇದಕ್ಕೆ ಇದ್ದೇ ಇರುತ್ತದೆ. ಆದುದರಿಂದ ವ್ಯಾಖ್ಯಾನ ಮುಖಿ ಸಂಶೋಧನೆಯನ್ನು ಸಾಮಗ್ರಿಮುಖಿ ಸಂಶೋಧನದೃಷ್ಟಿಯಿಂದ ನೋಡಲೇಬಾರದು. ಹಾಗೆ ನೋಡಿದರೆ ಸಮಸ್ಯೆಗಳು ಉದ್ಭವಿಸುತ್ತವೆ; ಗೊಂದಲ-ಗದ್ದಲಗಳು ಏಳುತ್ತವೆ. ಈ ಗೊಂದಲಕ್ಕೆ ಕಾರಣ, ವ್ಯಾಖ್ಯಾನಮುಖಿ ಸಂಶೋಧನೆಯನ್ನು ನೋಡುವ ದೃಷ್ಟಿ ನಮ್ಮಲ್ಲಿ ಇನ್ನೂ ಮೂಡದಿರುವುದು.

ಎರಡನೆಯದಾಗಿ, ಕರ್ನಾಟಕದಲ್ಲಿ ಇತ್ತೀಚೆ ಸಾಮಾಜಿಕ ಮೌಲ್ಯಗಳ ಸಂಶೋಧನೆಯ ಕಡೆಗೆ ಹೆಚ್ಚು ಒತ್ತು ಬೀಳುತ್ತಲಿದೆ. ಇದರಿಂದಾಗಿ ಸಾಹಿತ್ಯಕೃತಿಯ ಸಾಹಿತ್ಯೇತರ ಅಧ್ಯಯನ, ಅದರಲ್ಲಿಯೂ ಸಾಮಾಜಿಕ ಅಧ್ಯಯನ ಇಂದು ಮಹತ್ವದ ವಿಷಯವಾಗಿ ಬೆಳೆಯುತ್ತಲಿದೆ. ಆದರೆ ಸಾಮಾಜಿಕ ಸುಧಾರಣೆಯಂತೆ ಸಾಮಾಜಿಕ ಸಂಶೋಧನೆಯೂ ಅಪಾಯಕ್ಕೆ ಗುರಿಯಾಗುವ ಸಂದರ್ಭ ಭಾರತದಲ್ಲಿದೆ. ಇಂಥ ಶೋಧವನ್ನು ವಸ್ತುನಿಷ್ಠವಾಗಿ ನೋಡುವ ಕಾಲ ಬಹುಶಃ ನಮ್ಮ ದೇಶದಲ್ಲಿ ಇನ್ನೂ ಪ್ರಾಪ್ತವಾಗಿಲ್ಲದುದೇ ಇದಕ್ಕೆ ಕಾರಣವೆಂದು ತೋರುತ್ತದೆ. ಆದುದರಿಂದ ಕವಿಸಮ್ಮೇಲನ, ಕಾವ್ಯಗೋಷ್ಠಿಗಳಂತೆ ಆಗಾಗ ಸಂಶೋಧನ ಸಮ್ಮೇಲನ, ಸಂಶೋಧನಗೋಷ್ಠಿಗಳನ್ನು ಜರುಗಿಸುವ ಮೂಲಕ ಸಂಶೋಧನೆಯನ್ನು ಜನಪ್ರಿಯಗೊಳಿಸುವ, ಆ ಮೂಲಕ ಜನರ ದೃಷ್ಟಿಕೋನವನ್ನು ತಿದ್ದುವ ಕಾರ್ಯ ಇಂದು ನಡೆಯಬೇಕಾಗಿದೆ. ಇಲ್ಲದಿದ್ದರೆ ಆಕರಗಳ ಅಭಾವವಿರುವ, ಇದ್ದರೂ ಅಪ್ರಯೋಜಕವಾಗಿರುವ ಕರ್ನಾಟಕದಲ್ಲಿ ಸಂಶೋಧಕ ಅಕಾರಣವಾಗಿ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

ಇಂದು ಸಂಶೋಧನೆಯು ವ್ಯಾಖ್ಯಾನಮುಖಿಯಾಗುವುದರೊಂದಿಗೆ ಸಾಮಾಜಿಕ ಮೌಲ್ಯಶೋಧನ ನೆಲೆಗೆ ಇಳಿಯುತ್ತಿರುವಂತೆ, ಮೂಲತಃ ವ್ಯಾಖ್ಯಾನಮುಖಿ ಲಕ್ಷಣದ ವಿಮರ್ಶೆಯೂ ಸಾಮಾಜಿಕ ಮೌಲ್ಯವಿಮರ್ಶೆಯ ನೆಲೆಗೆ ಇಳಿಯುತ್ತಿರುವುದರಿಂದ ಸಂಶೋಧನೆ ಮತ್ತು ವಿಮರ್ಶೆಗಳ ನಡುವಿನ ಅಂತರ ಕಡಿಮೆಯಾಗುತ್ತ ನಡೆದಿದೆ. ಈ ಹಿಂದೆ ಇದು ಸಂಶೋಧನ ಲೇಖನ, ಇದು ವಿಮರ್ಶಾಲೇಖನವೆಂದು ಬೆರಳುಮಾಡಿ ಹೇಳಬಹುದಿತ್ತು. ಇಂದು ಹಾಗೆ ಹೇಳಲು ಬಾರದಂತೆ ಸಂಶೋಧನೆಯಲ್ಲಿ ವಿಮರ್ಶೆ, ವಿಮರ್ಶೆಯಲ್ಲಿ ಸಂಶೋಧನೆಗಳು ಸಂಗಮಿಸುತ್ತಲಿವೆ. ಪ್ರಸ್ತುತ 'ಮಾರ್ಗ' ಸಂಪುಟಗಳಲ್ಲಿ ಇಂಥ ಅನೇಕ ಲೇಖನಗಳನ್ನು ನೋಡಬಹುದಾಗಿದೆ.

ಈ ಸಂಪುಟಗಳಲ್ಲಿ ಸಾಹಿತ್ಯ, ಗ್ರಂಥಸಂಪಾದನೆ, ವಿಮರ್ಶೆ, ಶಾಸನ, ಜಾನಪದ, ಶಾಸ್ತ್ರ - ಹೀಗೆ ಆರು ವಿಷಯಗಳಿಗೆ ಸಂಬಂಧಿಸಿದ ಎರಡುನೂರು ಲೇಖನಗಳಿದ್ದು, ಅವು ವಸ್ತುದೃಷ್ಟಿಯಿಂದ ಆಕರಶೋಧ, ಸಂಗತಿಶೋಧ, ವಿಚಾರಶೋಧ ಸ್ವರೂಪದವುಗಳೂ ವಿಧಾನದೃಷ್ಟಿಯಿಂದ ವಿವರಣಾತ್ಮಕ, ಸಂಯೋಜನಾತ್ಮಕ,

ವ್ಯಾಖ್ಯಾನಾತ್ಮಕ ರೀತಿಯವೂ ಆಗಿವೆ. ಹೀಗಾಗಿ ಇಪ್ಪತ್ತೈದು ವರ್ಷಗಳ ನನ್ನ ಅಧ್ಯಯನದ ಶ್ರಮ, ಸಂಶೋಧನೆಯ ಕ್ರಮ, ಸಾಹಿತ್ಯಿಕ ಸಾಧನೆ ಇವುಗಳನ್ನು ಅಳವಡಿಸಿಕೊಂಡಿರುವ ಮಾರ್ಗಸಂಪುಟಗಳಿಗೆ ಸಂದ ಈ ಪುರಸ್ಕಾರ, ನನ್ನ ಸಮಗ್ರ ಸಂಶೋಧನೆಗೂ ಸಂದುದಾಗಿದೆ.

ಇಂದು ಸಾಹಿತ್ಯಕ್ಷೇತ್ರದಲ್ಲಿ ಸೃಜನ, ವಿಮರ್ಶನ, ಸಂಶೋಧನ ಎಂಬ ಮೂರು ಸ್ಪಷ್ಟ ಶಾಖೆಗಳು ಒಡೆದು ಕಾಣುತ್ತಿವೆಯಾದರೂ ಸಂಶೋಧನೆಗಿಂತ ಸೃಜನ, ವಿಮರ್ಶನಗಳಿಗೆ ಹೆಚ್ಚಿನ ಗೌರವ - ಜನಪ್ರಿಯತೆಗಳು ಸಲ್ಲುತ್ತಲಿವೆ. ಕಾಳಿದಾಸನಷ್ಟೇ ಪಾಣಿನಿ ಶ್ರೇಷ್ಠ ಎಂಬ ಭಾವ ನಮ್ಮಲ್ಲಿ ಬೇರೂರಿದಾಗ ಮಾತ್ರ ಈ ತಾರತಮ್ಯ ತೊಲಗುತ್ತದೆ. ಸಂಶೋಧನೆಯಲ್ಲಿ ವಿಶ್ಲೇಷಣಾತ್ಮಕ ಪಾಂಡಿತ್ಯ, ಸಂಶ್ಲೇಷಣಾತ್ಮಕ ಪ್ರತಿಭೆಗಳು ಏಕೀಭವಿಸುವುದರಿಂದ ಆ ರಚನೆಯೂ ಒಂದು ಮಹಾಕೃತಿಯೇ ಆಗಿರುತ್ತದೆ. ಆದುದರಿಂದ ಇಂದು ಸಂಶೋಧನ ಸಾಹಿತ್ಯದ ಬಗೆಗೂ ಅಕ್ಷರಜಗತ್ತಿನಲ್ಲಿ ಸರಿಯಾದ ದೃಷ್ಟಿಕೋನ ಬೆಳೆದು, ಅದಕ್ಕೆ ತಕ್ಕ ಗೌರವ ಪ್ರಾಪ್ತವಾಗಬೇಕಾಗಿದೆ. ಇಂದಿನ ಸಂದರ್ಭದಲ್ಲಿ ಸಾಹಿತಿಗಳು ಬಿಡಲಿ, ಸಾಹಿತ್ಯ ಅಕಾಡೆಮಿಗಳಂಥ ಉನ್ನತ ಸಂಸ್ಥೆಗಳಾದರೂ ಸೃಜನ, ವಿಮರ್ಶನ ಕ್ಷೇತ್ರಗಳಿಗೆ ಕೊಡುವ ಗೌರವವನ್ನು ಸಂಶೋಧನ ಕ್ಷೇತ್ರಕ್ಕೆ ಕೊಡುತ್ತಿಲ್ಲ. ಒಂದುವೇಳೆ ಈ ಬಗೆಯ ಉಪೇಕ್ಷೆ ಮುಂದುವರಿದದ್ದೇ ಆದರೆ, ನಾಡು-ನುಡಿ, ಸಂಸ್ಕೃತಿಗಳ ಶೋಧಕ್ಕಾಗಿ ಪ್ರತ್ಯೇಕ 'ಸಂಶೋಧನ ಅಕಾಡೆಮಿ'ಯನ್ನು ಕೇಳುವುದು ಅನಿವಾರ್ಯವಾಗುತ್ತದೆ.

ಹೀಗೆ ಸಾರ್ವಜನಿಕ ಜೀವನದಲ್ಲಿ, ಸಾಹಿತ್ಯ ಅಕಾಡೆಮಿಗಳಂಥ ಉನ್ನತ ವೇದಿಕೆಗಳಲ್ಲಿ ಉಪೇಕ್ಷೆಗೆ ಗುರಿಯಾಗಿರುವ 'ಸಂಶೋಧನೆ'ಗೆ ದೇಜಗೌ ಟ್ರಸ್ಟ್ ತೋರಿದ ಪ್ರಸ್ತುತ ಗೌರವ ಈ ಸಂಸ್ಥೆಯ ಸಾಹಿತ್ಯಿಕ ನ್ಯಾಯದೃಷ್ಟಿಗೆ ಸಾಕ್ಷಿಯೆನಿಸಿದೆ. ಅದರಲ್ಲಿಯೂ 'ಮಾರ್ಗ' ಕೃತಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಟ್ಟುದು ಈ ಟ್ರಸ್ಟಿನ ವಿಶ್ವಮಾನವ ನೀತಿಗೆ ನಿದರ್ಶನವೆನಿಸಿದೆ. "Persons are many, man is one". ಆ ಮೂಲ ಮಾನವನೇ ವಿಶ್ವಮಾನವ . ಆತ ನ್ಯಾಯ, ಕರುಣೆ, ಪ್ರೀತಿ ಇತ್ಯಾದಿ ದೈವೀಗುಣಗಳ ಸಂಕೇತ. ಆತನ ಸ್ವರೂಪ ಸತ್ಯ. ಸಂಶೋಧಕನ ಆದಿ ಮತ್ತು ಅಂತಿಮ ಗುರಿಯೂ ಸತ್ಯಶೋಧ. ಸಂಶೋಧಕನಾದ ನಾನು ಆ ವಿಶ್ವಮಾನವ ಸತ್ಯದ ಶೋಧದಲ್ಲಿ ಮುನ್ನಡೆಯುವಂತೆ ನಿಮ್ಮ ಹರಕೆ ಹಾರೈಕೆಗಳು ನನಗೆ ನೆರವಾಗಿ ಬರಲೆಂದು ಹಾರೈಸುತ್ತೇನೆ.

ಪೂಜ್ಯ ಶ್ರೀ ಜಗದ್ಗುರು ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಾನು ಈ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವದರಿಂದ, ನನ್ನ ನೋವುಗಳ ಸ್ಥಾನದಲ್ಲಿ ನಲಿವನ್ನು ಅನುಭವಿಸುತ್ತಲಿದ್ದೇನೆ. ವಿದ್ಯಾರ್ಥಿ ದೇಶಿಕೇಂದ್ರಸ್ವಾಮಿಗಳಲ್ಲಿ ಮಗುವಿನ ಪ್ರೀತಿಯನ್ನೂ, ಜಗದ್ಗುರು ಶಿವರಾತ್ರಿದೇಶಿಕೇಂದ್ರಸ್ವಾಮಿಗಳಲ್ಲಿ ತಾಯಿಯ ವಾತ್ಸಲ್ಯವನ್ನೂ ನಾನು ಕಂಡಿದ್ದೇನೆ. ನನ್ನ 'ಮಾರ್ಗ'ಕ್ಕೆ ಗೌರವ ಸಲ್ಲಿಸಲು ಹಮ್ಮಿಕೊಂಡಿರುವ ಈ ಸಮಾರಂಭದ ಅಧ್ಯಕ್ಷತೆಯನ್ನು ಅವರು ವಹಿಸಿದುದೇ ಇದಕ್ಕೆ ನಿದರ್ಶನವೆನಿಸಿದೆ. ಧರ್ಮಾಧಿಕಾರಿಗಳಿಗಿರಬೇಕಾದ ವಿಶ್ವಮಾನವದೃಷ್ಟಿಗೆ ಇದು ದ್ಯೋತಕವೆನಿಸಿದೆ. ಈ ಔದಾರ್ಯಕ್ಕಾಗಿ ಪೂಜ್ಯರಿಗೆ ಭಕ್ತಿಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಮೈಸೂರು ಎಂದಾಕ್ಷಣ ಒಂದು ಕಾಲಕ್ಕೆ ಮಹಾರಾಜರು ನೆನಪಗಾಗುತ್ತಿದ್ದರು, ಇಂದು ಕುವೆಂಪು ನೆನಪಾಗುತ್ತಾರೆ - ಕಲ್ಯಾಣ ಎಂದಾಕ್ಷಣ ಚಾಲುಕ್ಯರು ನೆನಪಾಗದೆ, ಬಸವಣ್ಣ ನೆನಪಾಗುವಂತೆ. ಹೀಗೆ ಸಾಂಸ್ಕೃತಿಕ ಮಹಾಪುರುಷರಾಗಿ ಬೆಳೆದಿರುವ ಶ್ರೀ ಕುವೆಂಪು ಅವರನ್ನು ಪ್ರತಿನಿಧಿಸುವ ಈ 'ವಿಶ್ವಮಾನವ ಪ್ರಶಸ್ತಿ'ಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅವರಿಗೆ ನನ್ನ ಗೌರವಗಳು ಸಲ್ಲುತ್ತದೆ.

ನನ್ನ ದೃಷ್ಟಿಯಲ್ಲಿ ವಿದ್ಯಾಗುರು ಡಾ. ಆರ್. ಸಿ. ಹಿರೇಮಠ ಅವರ ಇನ್ನೊಂದು ರೂಪ ಡಾ. ದೇ. ಜವರೇಗೌಡರು. ನನ್ನ ಬೆಳವಣಿಗೆಯಲ್ಲಿ ಅವರ ಪರೋಕ್ಷಪ್ರಭಾವ ಅಧಿಕವಾಗಿದೆ. ಈಗ ಅದೆಲ್ಲ ಪ್ರತ್ಯಕ್ಷವಾಗಿ,

ಅವರ ಹೆಸರಿನ ಟ್ರಸ್ಟ್ ಮೂಲಕ ನನ್ನ ತಲೆಗೆ ತುರಾಯಿಯಂತೆ ಶೋಭಿಸಿದೆ. ಈ ಪ್ರೀತಿಗಾಗಿ ಮಾನ್ಯ ಡಾ. ದೇಜಗೌ ಅವರಿಗೆ ನನ್ನ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಅತಿಥಿಯಾಗಿ ಆಗಮಿಸಿ, ನನ್ನ ಸಂಶೋಧನೆಯ ಶಕ್ತಿ ಮಿತಿಗಳನ್ನು ಕುರಿತು ಮಾತನಾಡಿದ ಸಿ. ಪಿ. ಕೆ. ಅವರಿಗೆ, ಈ ಸಮಾರಂಭದ ಅಂಗವಾಗಿ ನನ್ನ ಸಮಗ್ರಸಾಹಿತ್ಯವನ್ನು ಕುರಿತು ಇಟ್ಟುಕೊಂಡ ವಿಚಾರಸಂಕಿರಣದಲ್ಲಿ ಭಾಗವಹಿಸಿ, ಪ್ರೀತಿಯ ಮಾತುಗಳನ್ನಾಡಿದ ಹಿರಿಯರಾದ ಶ್ರೀ ಎಚ್. ಎಸ್. ಕೆ. ಅವರಿಗೆ, ಮಿತ್ರರಾದ ಶ್ರೀ ಪ್ರಧಾನ ಗುರುದತ್ತ, ಶ್ರೀ ರಾಮೇಗೌಡ, ಶ್ರೀ ಶಿವರಾಮು ಕಾಡನಕುಪ್ಪೆ ಅವರಿಗೆ ಕೃತಜ್ಞನಾಗಿದ್ದೇನೆ.

ಒಂದು ಕಡೆ ಪಠ್ಯಪುಸ್ತಕ ಮತ್ತು ಜನಪ್ರಿಯ ಕೃತಿಗಳ ಪ್ರಕಾಶನದ ಹವ್ಯಾಸ ಬೆಳೆಯುತ್ತಲಿರುವ, ಇನ್ನೊಂದು ಕಡೆ ಮುದ್ರಣ ಸಾಮಗ್ರಿಯ ಬೆಲೆ ಹೆಚ್ಚುತ್ತಲಿರುವ ಇಂದಿನ ಸಂದರ್ಭದಲ್ಲಿ ಸಾವಿರದ ಐನೂರು ಪುಟ ಗಾತ್ರದ 'ಮಾರ್ಗ' ಸಂಪುಟಗಳನ್ನು ಪ್ರಕಟಿಸಿದ ಬೆಂಗಳೂರಿನ ಪ್ರಸಿದ್ಧ ಪ್ರಕಾಶಕರಾದ ಶ್ರೀ ಜಿ. ಕಲ್ಲಯ್ಯ ಅವರನ್ನು, ಈ ಕೃತಿಯ ಮಹತ್ವವನ್ನು ಅವರಿಗೆ ಮನಗಾಣಿಸಿದ ಮಿತ್ರರಾದ ಡಾ. ಜೀ. ಶಂ. ಪರಮಶಿವಯ್ಯ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ದೇಜಗೌ ಟ್ರಸ್ಟಿನ ಅಧ್ಯಕ್ಷರಾದ ಮಾತೋಶ್ರೀ ಸಾವಿತ್ರಮ್ಮ ಅವರ ಅಂತಃಕರಣಕ್ಕೆ, ಕಾರ್ಯದರ್ಶಿ ಡಾ. ಶಶಿಧರ ಪ್ರಸಾದ ಅವರ ವಿಶ್ವಾಸಕ್ಕೆ, ಪದಾಧಿಕಾರಿಗಳ ಪ್ರೀತಿಗೆ, ಈ ಕಾರ್ಯಕ್ರಮಕ್ಕೆ ಆಗಮಿಸಿ ನನ್ನ ಮೇಲೆ ಪ್ರೀತಿಯ ಮಳೆಗರೆದ ನಿಮ್ಮೆಲ್ಲರ ಅಭಿಮಾನಕ್ಕೆ, ವಂದನೆಗಳನ್ನು ಅರ್ಪಿಸುತ್ತೇನೆ.

ದೇಜಗೌ ಟ್ರಸ್ಟ್‌ನ ವಿಶ್ವಮಾನವ ಪ್ರಶಸ್ತಿ ಸ್ವೀಕಾರ ಸಂದರ್ಭದ ಭಾಷಣ (ಮೈಸೂರು ೧೧, ಅಕ್ಟೋಬರ ೧೯೯೦)

ಆಕರ : ಮಾರ್ಗ ಸಂಪುಟ–೬

■■

೭೦

ರಾಜ್ಯೋತ್ಸವ ಪ್ರಶಸ್ತಿ

೧೯೯೨

ಮಾನ್ಯ ಕುಲಪತಿಗಳೇ, ಜಿಲ್ಲಾಧಿಕಾರಿಗಳೇ, ಸಾಹಿತ್ಯ ಸಂಗಾತಿಗಳೇ,

ಬೆಂಗಳೂರಿನಲ್ಲಿ ಜರುಗಿದ '೧೯೯೧ನೆಯ ವರ್ಷದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ' ಸಮಾರಂಭದಲ್ಲಿ ಭಾಗವಹಿಸಲು ನನ್ನಿಂದ ಸಾಧ್ಯವಾಗದ ಕಾರಣ, ಈ ಸಮಾರಂಭ ಇಂದು ನನ್ನ ಮನೆಯಲ್ಲಿಯೇ ಜರುಗುತ್ತಲಿದೆ. ಪ್ರಶಸ್ತಿ ಪ್ರದಾನಕ್ಕಿಂತ ಈ ನೆವದಲ್ಲಿ ನಿಮ್ಮಂಥ ಹಿರಿಯರು, ಹಿತೈಷಿಗಳು ನನ್ನ ಮನೆಗೆ ಆಗಮಿಸಿದುದು ನನಗೆ ಹೆಚ್ಚಿನ ಸಂತೋಷವನ್ನುಂಟು ಮಾಡಿದೆ. ಈ ಮನೆಯ ಇತಿಹಾಸದಲ್ಲಿ ಇದು ಸ್ಮರಣೀಯ ಘಟನೆಯೆಂದು ಬಗೆದು, ನಿಮ್ಮೆಲ್ಲರನ್ನು ಹೃತ್ಪೂರ್ವಕ ಬರಮಾಡಿಕೊಳ್ಳುತ್ತೇನೆ.

ರಾಜ್ಯೋತ್ಸವ ಪ್ರಶಸ್ತಿ ಸಮಾರಂಭದಲ್ಲಿ ನಾನು ಭಾಗವಹಿಸದಿರಲು ಏನೇ ಕಾರಣಗಳಿದ್ದರೂ ಸಾರ್ವಜನಿಕವಾಗಿ ಪದೇ ಪದೇ ಕಾಣಿಸಿಕೊಳ್ಳುವುದು ನನಗೆ ಅಷ್ಟೇನೂ ಇಷ್ಟವಾದ ವಿಷಯವಲ್ಲದುದು ಮುಖ್ಯ ಕಾರಣವಾಗಿದೆ. ಪ್ರಚಾರ ಬೆಳೆದಷ್ಟು ಪರಿಸರದಲ್ಲಿ ಅಸಮಾಧಾನ ವರ್ಧಿಸುತ್ತದೆ. ಒಮ್ಮೆ ಸವಿ ಹತ್ತಿದರೆ ಪ್ರಚಾರದ ಉನ್ಮಾದವನ್ನು ನಿಯಂತ್ರಿಸಿಕೊಳ್ಳುವುದು ವ್ಯಕ್ತಿಗೆ ಕಷ್ಟವಾಗುತ್ತದೆ - ಎಂಬಿವೂ ನಾನು ಸುದ್ದಿ ಜಗತ್ತಿನಿಂದ ದೂರ ಉಳಿಯಲು ಇರುವ ಬೇರೆ ಕಾರಣಗಳಾಗಿವೆ.

೧೯೬೨ರಲ್ಲಿ ಎಂ. ಎ. ಮುಗಿಸಿ, ಅಧ್ಯಾಪಕ ವೃತ್ತಿಗೆ ಸೇರಿದ ಹೊಸದರಲ್ಲಿ ಕವಿಯಾಗಬೇಕೋ? ಸಂಶೋಧಕನಾಗಬೇಕೋ? ಎಂಬ ಎರಡು ದಾರಿಗಳು ನನ್ನ ಕಣ್ಣಮುಂದಿದ್ದವು. ಮೂಲತಃ ನನ್ನದು ಕವಿಗೆ ಅವಶ್ಯವಿರುವ ಸೃಜನಶೀಲ ಮನೋಧರ್ಮ. ಆದರೆ 'ಕವಿಯಾಗಿ ಬೆಳೆಯಲು ಬೇಕಾಗುವ ಸಹೃದಯ ವಾತಾವರಣ ಈಗ ಧಾರವಾಡದಲ್ಲಿ ಇಲ್ಲ' ಎಂಬ ಅಂಶವನ್ನು ಮನಗಂಡ ನಾನು, ನನ್ನ ಪ್ರೀತಿಯ ಕವಿತೆಗೆ ವಿದಾಯ ಹೇಳಿ, ಸಂಶೋಧನೆಯನ್ನು ಕೈಗೆತ್ತಿಕೊಂಡೆ. ಇತ್ತೀಚೆ ಗೊತ್ತಾಯಿತು, ಸಂಶೋಧಕನಾಗಿ ಬೆಳೆಯಲೂ ಧಾರವಾಡ ಅನುಕೂಲ ಸ್ಥಳವಲ್ಲವೆಂದು, ಆ ಮಾತು ಬೇರೆ.

ಸೃಜನಸಾಹಿತಿಗಳಿಗೆ ಹೆಚ್ಚು ಪ್ರಸಿದ್ಧಿ-ಪ್ರಚಾರಗಳಿರುವ ಇಂದಿನ ಕಾಲದಲ್ಲಿ ಸಂಶೋಧನ ಸಾಹಿತಿಯಾದುದಕ್ಕೆ ನಾನೇನೂ ವ್ಯಥೆ ಪಡುತ್ತಿಲ್ಲ. ನನ್ನ ಕೆಲಸ, ನನ್ನ ಸಾಧನೆ ನನಗೆ ತೃಪ್ತಿಯನ್ನುಂಟು ಮಾಡಿದೆ. ಇಷ್ಟೇ ಏಕೆ, ನಾನು ಕವಿಯಾಗಿದ್ದರೆ ಇಷ್ಟು ಪುರಸ್ಕಾರಗಳು ಬರುತ್ತಿರಲಿಲ್ಲವೇನೋ.

'ಶ್ರಮ' ಜೀವನದ ಪರಮಮೌಲ್ಯವೆಂದು ನಂಬಿದವ ನಾನು. ಮೇಲಧಿಕಾರಿಗಳಿಗೆ ಅಂಜಿ ಅಲ್ಲ, ನನ್ನ ಮನಸ್ಸಿಗೆ ಅಂಜಿ ದುಡಿಯುತ್ತ ಬಂದವ ನಾನು. ಈ ದುಡಿಮೆ ನನ್ನ ವಿದ್ಯಾಗುರುಗಳಾದ ಡಾ. ಆರ್. ಸಿ. ಹಿರೇಮಠ ಅವರಿಂದ ಬಂದ ಬಳುವಳಿ. ಹೀಗೆ ನನ್ನ ಚೈತನ್ಯದ ಒಂದು ತುದಿ ನನ್ನ ವಿದ್ಯಾಗುರುಗಳಾದರೆ,

ಇನ್ನೊಂದು ತುದಿ ನನ್ನ ವಿದ್ಯಾರ್ಥಿಗಳು. ಇವರು ನನ್ನೊಳಗಿದ್ದು ನನ್ನನ್ನೂ, ನನ್ನ ಸಂಶೋಧನೆಯನ್ನೂ ದಿನವೂ ಬೆಳೆಸುತ್ತಲಿದ್ದಾರೆ.

ಸಂಶೋಧನೆ ಸುಖದ ದಾರಿಯಲ್ಲ. ಬೌದ್ಧಿಕ ಶ್ರಮದೊಂದಿಗೆ ದೈಹಿಕ ಶ್ರಮವನ್ನೂ, ಹೆಚ್ಚಿನದಾಗಿ ಬೆಂಕಿಯಂಥ ಪ್ರಾಮಾಣಿಕತೆಯನ್ನೂ ಅದು ಬಯಸುತ್ತದೆ. ಈ ವ್ರತವನ್ನು ಸ್ವೀಕರಿಸಿದ ನನ್ನನ್ನು ಮುನ್ನಡೆಸಿದ ಮಹಾವಾಕ್ಯಗಳು ಹಲವು. ಅವುಗಳಲ್ಲಿ "ಜನಮೆಚ್ಚೆ ನಡಕೊಂಡರೇನುಂಟು ಲೋಕದಿ, ಮನಮೆಚ್ಚೆ ನಡಕೊಂಬುದೇ ಚೆಂದವು" ಎಂಬ ಸರಳವಾಕ್ಯ ನನ್ನನ್ನು ಬಾಲ್ಯದಿಂದಲೂ ಆಳುತ್ತ ಬಂದಿದೆ. ಸಂಶೋಧನೆಯ ನಿಜವಾದ ಹಾದಿಯನ್ನು ತೋರಿಸಿಕೊಟ್ಟಿದೆ. ಈ ಅವಧಿಯಲ್ಲಿ ನಾನು ಸಾಮಗ್ರಿ ಶೋಧದಿಂದ ಹೊರಟು ಘಟನಾ ಶೋಧಕನಾಗಿ ಬೆಳೆದು, ಸಂಸ್ಕೃತಿ ಶೋಧನೆಗೆ ಹೊರಳಿದ್ದೇನೆ. ಅಕಾಡೆಮಿಕ್ ಸಂಶೋಧನೆಯಿಂದ ಅಪ್ಲಾಯಿಡ್ ಸಂಶೋಧನೆಗೂ ಬಿಚ್ಚಿಕೊಂಡಿದ್ದೇನೆ.

ಸಂಶೋಧಕನ ನಿತ್ಯ ಒಡನಾಟ, ಸತ್ಯದ ಕೊಡ. "ಸತ್ಯವನ್ನೇ ಹೇಳುತ್ತೇನೆ, ಸತ್ಯವನ್ನಲ್ಲದೆ ಬೇರೆ ಏನನ್ನೂ ಹೇಳುವುದಿಲ್ಲ" ಎಂಬ ಧೋರಣೆ ಬರವಣಿಗೆಯಲ್ಲಿ ಬೆಳೆದು, ಅವನ ಬದುಕಿನಲ್ಲಿಯೂ ಅದು ಇಳಿಯುವದೆಂದು ಕಾಣುತ್ತದೆ. ಇದರಿಂದ ಅವನು ಪರಿಸರಕ್ಕೆ ನಿಷ್ಠುರನಾಗುತ್ತಾನೆ; ಪರಿಸರದಿಂದ ಆಗಾಗ ಹಿಂಸೆಗೆ ಗುರಿಯಾಗುತ್ತಾನೆ. ಶೈಕ್ಷಣಿಕ ವಲಯದ ಅವನ ಸಂಶೋಧನೆಯನ್ನು ಸಾಮಾಜಿಕ ವಲಯಕ್ಕೆ, ಅಲ್ಲಿಂದ ಧಾರ್ಮಿಕ ವಲಯಕ್ಕೆ ತಳ್ಳಿದರೆ ಆ ಹಿಂಸೆಯ ಪ್ರಮಾಣ ಇನ್ನೂ ಹೆಚ್ಚುತ್ತದೆ. ಇಂಥ ಒಂದು ಅಗ್ನಿದಿವ್ಯ ಘಟನೆಯನ್ನು ನಾನು ದಾಟಿ ಬಂದುದು ನಿಮಗೆಲ್ಲ ಗೊತ್ತೇ ಇದೆ. ಆದರೆ 'ಅಲ್ಲಾಕೇ ಘರ ಮೇ ದೇರ ಹೈ, ಅಂಧೇರೆ ನಹೀ' ಎಂಬಂತೆ ಹಿಂದಿನ ಮೂರು ಪುರಸ್ಕಾರ ಬಿಟ್ಟರೂ, ಈ ಅಗ್ನಿದಿವ್ಯ ಘಟನೆಯ ತರುವಾಯ ಒಂದರ ಮೇಲೊಂದರಂತೆ ನಾಲ್ಕು ಪುರಸ್ಕಾರಗಳು ನನಗೆ ಪ್ರಾಪ್ತವಾದವು. ಆ ಶಿಲುಬೆಯಂತೆ ಈ ಪುರಸ್ಕಾರಗಳನ್ನೂ ನಾನು ಸಮಚಿತ್ತದಿಂದ ಸ್ವೀಕರಿಸುತ್ತ ಬಂದಿದ್ದೇನೆ, ಸಂಶೋಧಕನ ಜೀವನದಲ್ಲಿ ಇವೆಲ್ಲ ಸಹಜವೆಂದೇ ಅರ್ಥಮಾಡಿಕೊಂಡಿದ್ದೇನೆ.

೨೦ ಜನರಿರುವ ಅವಿಭಕ್ತ ಒಕ್ಕಲಿಗ ಕುಟುಂಬದಲ್ಲಿ ಹುಟ್ಟಿ ಬೆಳೆದವ ನಾನು. ಕೆಲಸವನ್ನು ಮುಂದೆ ಇಟ್ಟು, ಹೆಸರನ್ನು ಹಿಂದೆ ಇಟ್ಟು ದುಡಿಯುವ ಮೂಲಕ ಕುಟುಂಬದ ಕೀರ್ತಿಯನ್ನು ಎತ್ತಿ ಹಿಡಿಯುವುದು ಅಲ್ಲಿಯ ಸಂಸ್ಕೃತಿ. ಈ 'ಸಮೂಹ ಸಂಸ್ಕೃತಿ'ಯಲ್ಲಿ ಹುಟ್ಟಿ ಬೆಳೆದವನಾದುದರಿಂದ "ಕನ್ನಡ ಅಧ್ಯಯನಪೀಠ ಕುಟುಂಬದ ಬೆಳವಣಿಗೆಯೇ ನನ್ನ ಬೆಳವಣಿಗೆ" ಎಂಬ ಭಾವ ಮೊದಲಿನಿಂದಲೂ ನನ್ನಲ್ಲಿ ಸಹಜವಾಗಿ ಬೆಳೆಯಿತು. ಹೀಗಾಗಿ ನನ್ನ ಗುರುಗಳಾದ ಡಾ. ಹಿರೇಮಠ ಅವರು ಕಟ್ಟಿದ ಕನ್ನಡ ವಿಭಾಗವನ್ನು ನೂರು ಅಂದ, ನೂರು ಚಂದಗಳಿಂದ ಕಟ್ಟಬೇಕೆಂದು ಅನೇಕ ಯೋಜನೆಗಳ ಕನಸನ್ನು ಕಣ್ಣಲ್ಲಿ ತುಂಬಿಕೊಂಡು ಬೆಳೆದೆ. ಆದರೆ ನಾನು ಮುಖ್ಯಸ್ಥನಾಗುವ ಹೊತ್ತಿಗೆ ಮುಖ್ಯಸ್ಥರ ಆವರ್ತನ ಪದ್ಧತಿ ಅಸ್ತಿತ್ವಕ್ಕೆ ಬಂದು, ನನ್ನ ಕನಸುಗಳೆಲ್ಲ ಕರಗಿ ಹೋದವು.

ಹೀಗೆ ಹತ್ತಿಕ್ಕಲ್ಪಟ್ಟ ಆ ಕನಸು, ಒಳಗೆ ಸಾಂಸ್ಥಿಕ ಕೆಲಸದ ಅವಕಾಶ ತಪ್ಪಿಹೋದ ಕಾರಣ, ಹೊರಗೆ ಗದುಗಿನ ತೋಂಟದಾರ್ಯ ಮಠದ ಮೂಲಕ ವೀರಶೈವ ಅಧ್ಯಯನ ಸಂಸ್ಥೆಯಲ್ಲಿ, ವಚನಸಾಹಿತ್ಯ ಪ್ರಕಟನ ಯೋಜನೆಯ ಮೂಲಕ ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ತನ್ನ ನೆಲೆಯನ್ನು ಹುಡುಕಿಕೊಂಡಿತೆಂದು ಕಾಣುತ್ತದೆ. ಇದರಿಂದಾಗಿ ವಿಶ್ವವಿದ್ಯಾಲಯದಲ್ಲಿ 'ವ್ಯಕ್ತಿ'ಯಾಗಿ, ಹೊರಗೆ 'ಸಂಸ್ಥೆ'ಯಾಗಿ ನನ್ನ ವ್ಯಕ್ತಿತ್ವವನ್ನು ಹಂಚಿಕೊಳ್ಳುವುದು ಅನಿವಾರ್ಯವಾಯಿತು. ನನ್ನ ಈ ಎರಡೂ ನೆಲೆಗಳನ್ನು ಒಂದುಗೂಡಿಸುವುದು ಇಲ್ಲವೆ ಹೀಗೆಯೇ ಮುನ್ನಡೆಸುವುದು ದೈವಕ್ಕೆ ಬಿಟ್ಟ ವಿಷಯ, ದೇವರಿಗೆ ಬಿಟ್ಟ ವಿಷಯವಾಗಿದೆ. ಸಮಾಧಾನದ ಸಂಗತಿಯೆಂದರೆ ನನ್ನ ಶ್ರಮ, ಶ್ರದ್ಧೆ,

ಸಮಯನಿಷ್ಠೆಗಳನ್ನು ನನ್ನ ವಿಶ್ವವಿದ್ಯಾಲಯ ಗುರುತಿಸಿದೆ. ಈ ಕಾರಣಕ್ಕಾಗಿಯೇ ಕಷ್ಟಕಾಲದ ಎಲ್ಲ ಘಟ್ಟಗಳಲ್ಲಿ, ಎಲ್ಲ ಕುಲಪತಿಗಳೂ ಕುಲಸಚಿವರೂ ನನ್ನನ್ನು ವಿಶ್ವಾಸದಿಂದ ಕಾಣುತ್ತ ಬಂದಿದ್ದಾರೆ. ಅದರಲ್ಲಿಯೂ ಕುವೆಂಪು ಸಂಸ್ಕೃತಿಯಲ್ಲಿ ಬೆಳೆದ, ಅಧ್ಯಾಪಕರಿಗೆ ಮುಜಗರು ಆಗುವಷ್ಟರ ಮಟ್ಟಿಗೆ ಅವರನ್ನು ಪ್ರೀತಿಯಿಂದ ಕಾಣುವ ಡಾ. ರಾಮೇಗೌಡ ಅವರು, ಆ ಪ್ರೀತಿಯ ಭಾಗವನ್ನು ನನಗೂ ಹಂಚಿದ್ದಾರೆ. ಮೂಲತಃ ಅಧ್ಯಾಪಕರೇ ಆಗಿರುವ ಅವರ ಪ್ರೀತಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ನನ್ನ ಕಾರ್ಯಪ್ರವಾಹದ ವೇಗ, ರಭಸಗಳಿಗೆ ಎಡಬಲದ ತಟಗಳಂತೆ ನೆರವಾಗುತ್ತಲಿರುವವರು ನನ್ನ ಕೆಲವು ವಿದ್ಯಾರ್ಥಿಗಳು, ಕೆಲವು ಜನ ಸಹೋದ್ಯೋಗಿಗಳು. ಕೆಲಸದಲ್ಲಿ ನನಗೆ ಸಣ್ಣದು-ದೊಡ್ಡದು ಮುಖ್ಯವಲ್ಲ, ಸಣ್ಣವರು ದೊಡ್ಡವರು ಮುಖ್ಯವಲ್ಲ. ಹೀಗಾಗಿ ದುಡಿಯದವರನ್ನು ಕೈಬಿಟ್ಟು, ದುಡಿಯುವವರನ್ನು ಕಟ್ಟಿಕೊಂಡು ಮುನ್ನಡೆಯುವದು, ಆ ಮೂಲಕ ಕನ್ನಡದ ಮುನ್ನಡೆ ಸಾಧಿಸುವುದು ನನ್ನ ಕೆಲಸ ರೀತಿ. ಅನ್ಯರು ಮಾಡುವ ಅನುತ್ತಮ ಕೆಲಸಕ್ಕೆ ಅಡ್ಡಿ ಮಾಡಿದರೆ, ಅವರು ನಮ್ಮ ಉತ್ತಮ ಕೆಲಸಕ್ಕೆ ಅಡ್ಡಿ ಮಾಡುವರೆಂಬ ಭಯ ನನ್ನನ್ನು ಯಾವಾಗಲೂ ಕಾಡುತ್ತದೆ. ಇದರಿಂದಾಗಿ ನನ್ನಲ್ಲಿ ಡಿಫೆನ್ಸಿವ್ ಪರ್ಸನಾಲಿಟಿ ಬೆಳೆದಿದ್ದು, ಈ ವ್ಯಕ್ತಿತ್ವವುಳ್ಳವರನ್ನೇ ಕಟ್ಟಿಕೊಂಡು ನಾನು ಕನ್ನಡದ ದಾರಿಯನ್ನು ಕ್ರಮಿಸುತ್ತಲಿದ್ದೇನೆ. ಈ ದಾರಿಯಲ್ಲಿ ನನ್ನೊಂದಿಗೆ, ನನ್ನ ನಿಷ್ಠುರತೆಯೊಂದಿಗೆ ಹೆಜ್ಜೆ ಹಾಕುತ್ತಲಿರುವ ಈ ಸಹೋದ್ಯೋಗಿಗಗಳಿಗೆ, ಸ್ನೇಹಿತರಿಗೆ ಕೃತಜ್ಞನಾಗಿದ್ದೇನೆ.

ಈ ಸಂದರ್ಭದಲ್ಲಿ ನನ್ನ ಕುಂಟುಬ ವರ್ಗದ ಬಗ್ಗೆ ಒಂದು ಮಾತು. ಸಂಶೋಧನ ವ್ಯಸನವನ್ನು ಹಿಂಗಿಸಿಕೊಳ್ಳುವುದರ ಸಲುವಾಗಿ, ಕಷ್ಟಗಳನ್ನು ಮರೆಯುವುದರ ಸಲುವಾಗಿ ನಾನು ಅಧ್ಯಯನವನ್ನು ಮೊರೆ ಹೊಗುವುದು ಅನಿವಾರ್ಯವಾಗಿದೆ. ಹೀಗಾಗಿ ಇಪ್ಪತ್ತುನಾಲ್ಕು ತಾಸೂ ಪುಸ್ತಕದಲ್ಲಿಯೇ ಮುಖವಿಟ್ಟುಕೊಂಡು ಕೂಡುವ ನನ್ನ ಅನಿವಾರ್ಯತೆಯನ್ನು ನನ್ನ ಹೆಂಡತಿ, ಮಕ್ಕಳು ಅರ್ಥಮಾಡಿಕೊಂಡಿದ್ದಾರೆ.ನನಗೆ ಪುಸ್ತಕಗಳಷ್ಟೇ ಸಮಾಧಾನ ಕೊಡುವ ಆಶ್ರಯಸ್ಥಾನವೆನಿಸಿದ್ದಾರೆ. ಸಂಶೋಧನೆಯಿಂದಾಗಿ ನನ್ನ ಜೀವನದಲ್ಲಿ ಶುಷ್ಕತೆ ಪ್ರವೇಶವಾಗದಂತೆ ನೋಡಿಕೊಂಡಿದ್ದಾರೆ. ಇವರ ಪ್ರೀತಿಯನ್ನು ವರ್ಣಿಸಲು ನನ್ನಲ್ಲಿ ಶಬ್ದಗಳಿಲ್ಲ.

ಇಂದು ಕರ್ನಾಟಕ ಸರಕಾರದ ಪರವಾಗಿ ಜಿಲ್ಲಾಧಿಕಾರಿಗಳಾದ ಶ್ರೀ. ಶಂಕರಲಿಂಗೇಗೌಡ ಅವರು ನನಗೆ ಪ್ರಶಸ್ತಿಯನ್ನು ನೀಡಿದ್ದಾರೆ. ವಿಶೇಷವೆನ್ನುವಂತೆ ಪೋಲೀಸ್ ವರಿಷ್ಠ ಅಧಿಕಾರಿಗಳಾದ ಶ್ರೀ ಶಂಕರ ಬಿದರಿ ಅವರು ಇಲ್ಲಿ ಉಪಸ್ಥಿತರಿದ್ದಾರೆ. ಕರ್ನಾಟಕ ಸರಕಾರಕ್ಕೆ, ಈ ವರಿಷ್ಠ ಅಧಿಕಾರಿಗಳಿಗೆ ಕೃತಜ್ಞನಾಗಿದ್ದೇನೆ. ಈ ಪ್ರಶಸ್ತಿ ಕಾರ್ಯಕ್ರಮವನ್ನು ಯೋಜಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ, ಅದರ ಸಹಾಯಕ ನಿರ್ದೇಶಕರಾದ ಶ್ರೀ ಮ. ಗು. ಸದಾನಂದಯ್ಯನವರಿಗೆ ಋಣಿಯಾಗಿದ್ದೇನೆ. ಕುಲಪತಿ ಡಾ. ಎಸ್. ರಾಮೇಗೌಡರು ಮೊದಲು ಮಾಡಿ ನನ್ನ ವಿಶ್ವವಿದ್ಯಾಲಯದ ಕುಟುಂಬ ವರ್ಗದವರು, ಶ್ರೀಮತಿ ಶಾಂತಾದೇವಿ ಮಾಳವಾಡ ಅವರೂ ಒಳಗೊಂಡಂತೆ ನನ್ನ ಸಾಹಿತ್ಯ ಸಂಗಾತಿಗಳು, ಸಂಸ್ಕೃತಿ ಇಲಾಖೆ - ಸುದ್ದಿ ಪ್ರಪಂಚದ ಮಿತ್ರರು ಆಗಮಿಸಿದ್ದೀರಿ. ಅನೇಕ ಜನ ಆತ್ಮೀಯರೂ ಸೋದರಿಯರೂ ಈ ಸಂತೋಷಕೂಟದಲ್ಲಿ ಭಾಗವಹಿಸಿದ್ದೀರಿ. ನಿಮ್ಮೆಲ್ಲರನ್ನು ಇನ್ನೊಮ್ಮೆ ಹೃತ್ಪೂರ್ವಕವಾಗಿ ನನ್ನ ಮನೆಗೆ ಬರಮಾಡಿಕೊಳ್ಳುತ್ತೇನೆ.

ಧಾರವಾಡದ ನನ್ನ ಮನೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಸಮಾರಂಭ ಪೂರ್ವಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿದ ಸಂದರ್ಭದ ಭಾಷಣ. (೨೮-೩-೧೯೯೨).

ಆಕರ : ಮಾರ್ಗ ಸಂಪುಟ–೬

೭೧

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೨೦೦೭

ನಾನು ಮತ್ತು ಸಂಶೋಧನೆ

ಸರ್ವಜ್ಞಂ ತದಹಂ ವಂದೇ । ಪರಂಜ್ಯೋತಿಸ್ತಮೋಪಹಂ ।
ಪ್ರವೃತ್ತಾ ಯನ್ಮುಖಾದ್ದೇವೀ । ಸರ್ವಭಾಷಾಸರಸ್ವತೀ ॥

(ನಾಗವರ್ಮನ ಕರ್ಣಾಟ ಭಾಷಾಭೂಷಣಂ ೧-೧)

ಸರ್ವಭಾಷಾ ಸರಸ್ವತಿ ಪರಿವಾರದವರಾದ ನಿಮಗೆ ನಮಸ್ಕಾರ.

ಸ್ನೇಹಿತರೇ, ನಾನು ಕನ್ನಡ ಭಾಷಾಸರಸ್ವತಿಯನ್ನು ಇಲ್ಲಿ ಪ್ರತಿನಿಧಿಸುತ್ತಿದ್ದೇನೆ. ನನ್ನ ಕನ್ನಡ ಸರಸ್ವತಿಯ ದೇಶ ವಿಸ್ತಾರವಾದುದು, ಭಾಷೆ ಪ್ರಾಚೀನವಾದುದು, ಸಾಹಿತ್ಯ ಸಮೃದ್ಧವಾದುದು. ಇನ್ನಷ್ಟು ಸ್ಪಷ್ಟ ಪಡಿಸುವುದಾದರೆ, ಸಂಸ್ಕೃತ-ಪ್ರಾಕೃತಗಳನ್ನು ಬಿಟ್ಟರೆ ಸಮಗ್ರ ಭಾರತದಲ್ಲಿಯೇ ಭಾಷೆಯ ಪ್ರಾಚೀನತೆ, ಸಾಹಿತ್ಯದ ಅನನ್ಯತೆ ದೃಷ್ಟಿಯಿಂದ ನನ್ನ ಕನ್ನಡದ ಸ್ಥಾನ ಪ್ರಥಮಪಂಕ್ತಿಯದಾಗಿದೆ.

ಎಲ್ಲ ರಾಜ್ಯಗಳಂತೆ ಕನ್ನಡದ ಮೇಲೆಯೂ ಪ್ರಾಚೀನ ಕಾಲದಲ್ಲಿ ಸಂಸ್ಕೃತ, ಆಧುನಿಕ ಕಾಲದಲ್ಲಿ ಇಂಗ್ಲಿಷ್ ಭಾಷೆ - ಸಾಹಿತ್ಯಗಳು ತಮ್ಮತಮ್ಮ ಪ್ರಭಾವ ಬೀರಿವೆ. ಹೀಗಿದ್ದೂ ಕನ್ನಡ ಈ ಪ್ರಭಾವಗಳನ್ನು ಜೀರ್ಣಿಸಿಕೊಳ್ಳುತ್ತ, ಕೆಲವೊಮ್ಮೆ ಪ್ರತಿಭಟಿಸುತ್ತ, ಉದ್ದಕ್ಕೂ ತನ್ನತನವನ್ನು ಮೆರೆದಿದೆ. ಈ 'ತನ್ನತನ'ದಿಂದಾಗಿಯೇ ಸಾಮಾನ್ಯವಾಗಿ ಪ್ರತಿವರ್ಷವೂ ಕನ್ನಡ ಸಾಹಿತಿಗಳು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗೌರವ ಗಳಿಸುತ್ತ ಬಂದಿದ್ದಾರೆ. ಈ ವರ್ಷ, ಸಂಶೋಧನ ಸಾಹಿತ್ಯಪ್ರಕಾರದ ಮೂಲಕ ಈ ಗೌರವವನ್ನು ಮುಂದುವರಿಸಿದ ಭಾಗ್ಯ ನನ್ನದಾಗಿದೆ.

ಭಾರತದ ಆತ್ಮ ಹಳ್ಳಿಗಳಲ್ಲಿದೆ. ನಾನು ಅಂಥ ಹಳ್ಳಿ ಮೂಲದ ವ್ಯಕ್ತಿ. ನನ್ನ ತಂದೆ ತಾಯಿಗಳು ಬುದ್ಧಿವಂತರಲ್ಲ, ಶ್ರದ್ಧಾವಂತರು. ೨೦ ಜನ ಸದಸ್ಯರನ್ನೊಳಗೊಂಡ ನನ್ನ ಕುಟುಂಬದ ಮುಖ್ಯ ಲಕ್ಷಣ ಅವಿಭಕ್ತಪ್ರಜ್ಞೆ ಮತ್ತು ಶ್ರಮಸಂಸ್ಕೃತಿ. ಇವುಗಳನ್ನು ಮೈಗೂಡಿಸಿಕೊಂಡು ಬೆಳೆದ ನಾನು, ವೈಯಕ್ತಿಕವಾಗಿ ಪ್ರೀತಿಸುತ್ತ ಬಂದ ವಿಷಯಗಳು ಎರಡು-ಕನ್ನಡ ಮತ್ತು ಬಸವೇಶ್ವರ. ಇವೆಲ್ಲ ನನ್ನ ವ್ಯಕ್ತಿತ್ವವನ್ನು, ನನ್ನ ಸಾಹಿತ್ಯವ್ಯಕ್ತಿತ್ವವನ್ನು ರೂಪಿಸಿವೆ.

ಅವಿಭಕ್ತ ಕುಟುಂಬದ ವ್ಯಕ್ತಿಗೆ ಪರಿವಾರ ಮತ್ತು ಪರಂಪರೆಗಳ ಬಗೆಗೆ ಅಗಾಧ ಪ್ರೀತಿ, ಕೌಟುಂಬಿಕ ಪ್ರತಿಷ್ಠೆಯ ಬಗೆಗೆ ಸದಾ ಎಚ್ಚರ. ಇವು ಕಾರಣವಾಗಿಯೇ ನನ್ನ ದೇಶವನ್ನು ಪ್ರೀತಿಸುವ, ನನ್ನ ಪರಂಪರೆಯನ್ನು ಹುಡುಕುವ ಸಂಶೋಧಕನಾಗಿ ನಾನು ರೂಪಗೊಂಡೆನೆಂದು ತೋರುತ್ತದೆ.

ನನ್ನ ಪ್ರಾಥಮಿಕ ಶಿಕ್ಷಣ ಜರುಗಿದುದು ಹಳ್ಳಿಯಲ್ಲಿ, ಪ್ರೌಢಶಿಕ್ಷಣ ಜರುಗಿದುದು ಹಳ್ಳಿ ಮನಸ್ಸಿನ ನಗರದಲ್ಲಿ. ಹೀಗಾಗಿ ನಾನು ನಗರಭಾಷೆಗಳಿಗೆ ವಿಸ್ತರಿಸಿಕೊಳ್ಳದೆ ನನ್ನ ಕನ್ನಡಕ್ಕೆ ಸೀಮಿತಗೊಂಡೆನು. ಇದು ನನ್ನನ್ನು ಕುಬ್ಜನನ್ನಾಗಿಸಲಿಲ್ಲ, ನನ್ನ ಮೂಲಕ ನನ್ನನ್ನು ನೋಡುವ ದೃಷ್ಟಿಕೋನವನ್ನು ದಯಪಾಲಿಸಿತು. ಇದರಿಂದಾಗಿಯೇ ನಾನು ಕೇವಲ ಚರಿತ್ರೆಯ ಸಂಶೋಧಕನಾಗಿ ಉಳಿಯದೆ, ಸಂಸ್ಕೃತಿ ಚಿಂತಕನಾಗಿಯೂ ಬೆಳೆಯಲು ಸಾಧ್ಯವಾಗಿರಬಹುದು.

ಸಂಶೋಧನ ಬರವಣಿಗೆಯ ಸಂದರ್ಭದಲ್ಲಿ ನನಗೆ ಯಾವತ್ತೂ ಮಾರ್ಗದರ್ಶಿಯಾದುದು "ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ"ಎಂಬ ಬಸವಣ್ಣನ ಮಾತು. ಸಾಮಾಜಿಕ ನ್ಯಾಯಕ್ಕೆ, ಅದೇ ವೇಳೆಗೆ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಚ್ಯುತಿ ಬರದಂತೆ ಬರೆಯಬೇಕೆಂಬುದು ಇದರ ಅರ್ಥ. ಹೀಗಾಗಿ ಸಮಾಜವನ್ನು ನಾಶಮಾಡಲು ಅನೇಕ ಸಾಧನಗಳಿರುವಾಗ, ಹೆಚ್ಚಿನದಾಗಿ ಸಾಹಿತ್ಯವೂ ಇನ್ನೊಂದು ಸಾಧನವಾಗಬಾರದೆಂದು ನಾನು ಎಚ್ಚರವಹಿಸುತ್ತ ಬಂದಿದ್ದೇನೆ.

ನನ್ನದು ಮೂಲತಃ ಸೃಜನಶೀಲ ಮನಸ್ಸು. ಕವಿಯಾಗಬೇಕಿದ್ದವನು ಸಂದರ್ಭದ ಒತ್ತಡದಿಂದಾಗಿ ಸಂಶೋಧಕನಾದೆನೆಂದು ತೋರುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ ನನ್ನ ಸಂಶೋಧನೆಯ ಸಂಗೀತದಲ್ಲಿ ಸೃಜನಶೀಲತೆಯ ಶ್ರುತಿ ಆಗಾಗ ಕೇಳಿಸುತ್ತದೆ.

ಮೂಲತಃ ನಾನು ಶಿಕ್ಷಕ, ಆಮೇಲೆ ಸಂಶೋಧಕ. ನನ್ನ ಸಂಶೋಧನೆಗೆ ಸುಮಾರು ೪೦ ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ನಾನು ಸಾಮಾನ್ಯವಾಗಿ ಬರೆಯಬಹುದಾದಕ್ಕಿಂತ ಸ್ವಲ್ಪ ಹೆಚ್ಚು ಬರೆದೆನೆಂದು ತೋರುತ್ತದೆ. ಇದಕ್ಕೆ ಕಾರಣ, ನನಗೆ ಉದ್ದಕ್ಕೂ ಒದಗಿ ಬಂದ ಸಾಂಸ್ಥಿಕ ಮತ್ತು ಸಾಮಾಜಿಕ ಕಿರಿಕಿರಿಗಳು. ನಾನು ಸಂಸ್ಥೆಗಳನ್ನು, ಸಮಾಜವನ್ನು ಪ್ರಾಮಾಣಿಕವಾಗಿ ಪ್ರೀತಿಸಿದ್ದೇ ಇದಕ್ಕೆ ಕಾರಣ. ದಿನನಿತ್ಯದ ಈ ಕಿರಿಕಿರಿಗಳನ್ನು ಮರೆಯಲು ನನಗೆ ಬರವಣಿಗೆಯೇ ಅನಿವಾರ್ಯ ದಾರಿಯಾಗಿ ಪರಿಣಮಿಸಿತು. ಇದಲ್ಲದೆ, ಹೊತ್ತು ಕಳೆಯಲು ನನಗೆ ಬೇರೆ ಹವ್ಯಾಸಗಳಿಲ್ಲವಾಗಿ, ಈ ಬರವಣಿಗೆಯಲ್ಲಿಯೇ ವಿಷಯ ವೈವಿಧ್ಯದ ಇನ್ನೊಂದು ದಾರಿಯನ್ನು ಹುಡುಕಿಕೊಂಡೆನು. ಇದರ ಫಲವಾಗಿ ವ್ಯಾಕರಣ, ಅಲಂಕಾರ, ಛಂದಸ್ಸು, ನಿಘಂಟು, ಹಸ್ತಪ್ರತಿ, ಗ್ರಂಥಸಂಪಾದನೆ, ಜಾನಪದ, ನಾಮವಿಜ್ಞಾನ ಇತ್ಯಾದಿ ಕ್ಷೇತ್ರಗಳು ನನ್ನ ತೆಕ್ಕೆಗೆ ಬಂದವು. ಇವುಗಳಿಗಿಂತ ಭಾಷೆ-ಸಾಹಿತ್ಯ-ಸಮಾಜ-ಧರ್ಮ-ಇತಿಹಾಸ ಕ್ಷೇತ್ರಗಳ ಅಂತರಶಿಸ್ತೀಯದಲ್ಲಿ ರೂಪಗೊಳ್ಳುವ 'ಸಂಸ್ಕೃತಿಯ ಶೋಧ'ದಲ್ಲಿ ಆಸಕ್ತಿ ಬೆಳೆಸಿಕೊಂಡನು.

* * *

ಎಂ. ಎ. ಮುಗಿಯುತ್ತಲೆ (೧೯೬೨) ನಾನು ಸಂಶೋಧನೆ ಆರಂಭ ಮಾಡಿದ್ದು, ಪಿಎಚ್.ಡಿ. ಅಧ್ಯಯನಕ್ಕೆ ತೊಡಗುವ ಮೂಲಕ (೧೯೬೩). ಈ ಅಧ್ಯಯನದ ವಿಷಯ, ಕನ್ನಡ ಸಾಹಿತ್ಯದ ಮೊದಲ ಘಟ್ಟವಾಗಿದೆ. ಕಳೆದುಹೋದ ಈ ಘಟ್ಟದಲ್ಲಿ ಉಳಿದುನಿಂತ ಏಕೈಕ ಅನರ್ಘ್ಯರತ್ನವಾಗಿದೆ, ೯ನೆಯ ಶತಮಾನದ 'ಕವಿರಾಜಮಾರ್ಗ'. ಅಮೇರಿಕೆಯ ಚಿಕ್ಯಾಗೋ ವಿಶ್ವವಿದ್ಯಾಲಯದ ಸಂಸ್ಕೃತಿ ಮತ್ತು ಭಾರತ ಅಧ್ಯಯನದ ಪ್ರಾಧ್ಯಾಪಕ ಡಾ. ಷೆಲ್ಡನ್ ಪೋಲಾಕ್ ಹೇಳುವಂತೆ "ಪ್ರಾಯಶಃ ಜಗತ್ತಿನ ಸಂಸ್ಕೃತಿಗಳಲ್ಲಿಯೇ ದೇಶಭಾಷಾ ಮೀಮಾಂಸೆಯನ್ನು ಸಿದ್ಧಾಂತೀಕರಿಸಿದ, ಮೊದಲ ಪಠ್ಯ"ವೆಂಬ ಖ್ಯಾತಿ ಈ ಕೃತಿಗಿದೆ. ಇದನ್ನು ಒಳಗುಮಾಡಿಕೊಂಡು

ಈ ಪೂರ್ವದಲ್ಲಿದ್ದ, ಇರಬಹುದಾದ ಕನ್ನಡ ಸಾಹಿತ್ಯದ ಆಶಯ - ಆಕೃತಿಗಳನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಇಲ್ಲಿಂದ ಮುಂದೆ ನನ್ನ ಸಂಶೋಧನ ವ್ಯವಸಾಯ ವೇಗ ಮತ್ತು ಗುಣಮಟ್ಟಗಳನ್ನು ಗುರಿಯಿಟ್ಟು ನಡೆದು ಬಂದಿದೆ.

* * *

ಸಂಶೋಧನೆಗೆ ಮೂಲ ಮತ್ತು ಮುಖ್ಯದ್ರವ್ಯ ಆಕರಸಾಮಗ್ರಿ. ಹೀಗಾಗಿ ಮೊದಲ ಹಂತದಲ್ಲಿ ಕರ್ನಲ್ ಮೆಕೆಂಝಿ ಮೊದಲಾದವರಿಂದ "ಆಕರಮುಖಿ" ಶೋಧ ಇಲ್ಲಿ ಜರುಗಿತು. ಬಳಿಕ ಇಂಥ ಆಕರಗಳ ಮೂಲಕ "ವಿಶ್ಲೇಷಣಮುಖಿ" ಶೋಧ ನಡೆಸಿ, ಚರಿತ್ರೆ ಬರೆಯುವುದು ಆರಂಭವಾಯಿತು. ಇತ್ತೀಚೆ ಈ ಚರಿತ್ರೆಯನ್ನು "ವ್ಯಾಖ್ಯಾನಮುಖಿ" ಶೋಧಕ್ಕೆ ಗುರಿಪಡಿಸಿ, ಆ ಚರಿತ್ರೆಯ ಒಳದನಿಗಳನ್ನು ಅರ್ಥಮಾಡಿಕೊಳ್ಳುವ ಕೆಲಸ ಮುನ್ನಡೆದಿದೆ. ಇದರಿಂದಾಗಿ ಸಂಶೋಧನೆಯು ಕೇವಲ ಪಠ್ಯಕೇಂದ್ರಿತವಾಗಿ ಉಳಿಯದೆ ಪರಿಸರ ಕೇಂದ್ರಿತವಾಗಿ ಬೆಳೆಯುತ್ತಲಿದೆ. ಈ ಪರಿಸರ ಶೋಧವು ಸಹಜವಾಗಿಯೇ ಸಂಸ್ಕೃತಿ ಅಧ್ಯಯನಕ್ಕೆ ಹೊರಳಿ, ಅಂತರಶಿಸ್ತೀಯತೆಯನ್ನು ಅಳವಡಿಸಿಕೊಳ್ಳತೊಡಗಿದೆ. ಇದರ ಪರಿಣಾಮವಾಗಿ ಉಪೇಕ್ಷಿತ ವಿಷಯಗಳು ಇಲ್ಲಿ ಮಹತ್ವ ಪಡೆಯುತ್ತಲಿವೆ.

ವಿಶ್ಲೇಷಣಮುಖಿ ಸಂಶೋಧನೆಯ ಮೂಲಕ ಚರಿತ್ರೆಯ ಶೋಧ (Fact finding) ಪೂರೈಸಿದ ಬಳಿಕ, ಅದನ್ನು ವ್ಯಾಖ್ಯಾನಮುಖಿ ಸಂಶೋಧನೆಗೆ ಗುರಿಪಡಿಸಿ, ಅದರ ಹಿಂದಿನ ಸತ್ಯಶೋಧ (Truth finding) ಕೆಲಸ ಮಾಡುವಲ್ಲಿ ಸಂಶೋಧನೆಯು ವಿಮರ್ಶೆಯ ಹಾದಿ ಹಿಡಿಯುತ್ತದೆ. ಅದಕ್ಕಾಗಿಯೇ "ಸಂಶೋಧನೆಯೆನ್ನುವುದು ವಿಶ್ಲೇಷಣಾತ್ಮಕ ವಿಮರ್ಶೆ, ವಿಮರ್ಶೆಯೆನ್ನುವುದು ವ್ಯಾಖ್ಯಾನಾತ್ಮಕ ಸಂಶೋಧನೆ"ಯೆನ್ನುವುದು. ಅಂದರೆ ಇವೆರಡೂ ಒಂದೇ ಮೂಲದಲ್ಲಿ ಹುಟ್ಟುತ್ತಿದ್ದರೂ ಸಂಶೋಧನೆಯು ಒಂದು ಹಂತದಲ್ಲಿ ನಿಂತುಬಿಟ್ಟರೆ, ವಿಮರ್ಶೆಯು ನಿಲ್ಲದೆ, ಆಕರಗಳನ್ನು ಆಧರಿಸಿ ವಿಮರ್ಶಕರ ವಿಭಿನ್ನ ಚಿಂತನೆ, ಧೋರಣೆಗಳಿಗೆ ತಕ್ಕಂತೆ ಅದು ಹೊಸ ಹೊಸ ನೆಲೆಗಳಲ್ಲಿ ಬಿಚ್ಚುತ್ತಲೇ ಹೋಗುತ್ತದೆ. ನನ್ನ ಅನೇಕ ಲೇಖನಗಳು ಸಂಶೋಧನೆಯಾಗುತ್ತಲೇ ವಿಮರ್ಶೆಯಾಗಿ ಬೆಳೆದುದನ್ನು ಇಲ್ಲಿ ನೆನೆಯಬಹುದಾಗಿದೆ.

ಶೋಧವೆನ್ನುವುದು ಆಕರಮುಖಿಯೇ ಇರಲಿ, ವಿಶ್ಲೇಷಣಮುಖಿಯೇ ಇರಲಿ, ವ್ಯಾಖ್ಯಾನಮುಖಿಯೇ ಇರಲಿ, ಭೂತಕಾಲಕ್ಕೆ ಸ್ಥಗಿತಗೊಳ್ಳದೆ ವರ್ತಮಾನವನ್ನು ಪ್ರಭಾವಿಸುವಲ್ಲಿ ಅದರ ಸಾರ್ಥಕತೆಯಿದೆ. ಇದನ್ನು "ಸಮಾಜಮುಖಿ" ಸಂಶೋಧನೆಯೆಂದು ಕರೆಯಬಹುದು. ಈ ಪ್ರಭಾವಿಸುವಿಕೆಯನ್ನು ಸೃಜನ ಸಾಹಿತಿಯು "ಕಲ್ಪಿತ ಮಾದರಿ"ಗಳಿಂದ ಪೂರೈಸುತ್ತಿದ್ದರೆ, ಸಂಶೋಧನ ಸಾಹಿತಿ "ಘಟಿತ ಮಾದರಿ"ಗಳಿಂದ ಪೂರೈಸಬೇಕಾಗುತ್ತದೆ. ಈ ಪೂರೈಕೆಗಾಗಿ, ತನ್ನ ಪರಿಸರದ ಅನ್ಯಾಯಗಳನ್ನು ಗುರುತಿಸಿ, ಅವುಗಳನ್ನು ಸಂಶೋಧನೆಯಿಂದ ನಿವಾರಿಸಲು ಪ್ರಯತ್ನಿಸುವ ಸಂಶೋಧಕನು ಮಾತ್ರ ಪರಿಸರಕ್ಕೆ ಪ್ರಸ್ತುತನಾಗುತ್ತಾನೆ. ಇಲ್ಲದಿದ್ದರೆ ಕೇವಲ ಪುಸ್ತಕದ ಪಂಡಿತನಾಗಿ ಉಳಿಯುತ್ತಾನೆ. ಇತ್ತೀಚೆ ಕನ್ನಡದಲ್ಲಿ ಸಂಶೋಧನೆ ಪುಸ್ತಕದ ಪಾಂಡಿತ್ಯದಿಂದ ಪರಿಸರದ ವಿಮರ್ಶೆಯತ್ತ ಹೊರಳುತ್ತಲಿರುವುದು, ಕೇವಲ ವಿದ್ವಾಂಸರ ವಾದವಾಗಿ ಉಳಿಯದೆ ಸಾಮಾಜಿಕರ ಸಂವಾದವಾಗಿಯೂ ಬೆಳೆಯುತ್ತಲಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ.

ಸಾಹಿತ್ಯದಲ್ಲಿಯಂತೆ ಸಂಶೋಧನೆಯಲ್ಲಿಯೂ ಕಾಲಕಾಲಕ್ಕೆ ಹೊಸ ಹೊಸ ಒಲವುಗಳು ಕಾಣಿಸಿಕೊಳ್ಳುವುದು ಸಹಜ. ಕನ್ನಡ ಸಂಶೋಧನೆಯೆನ್ನುವುದು ನವೋದಯ ಕಾಲದಲ್ಲಿ ಅಂಕುರಿಸಿದ ಜ್ಞಾನಶಿಸ್ತು. ರಾಷ್ಟ್ರೀಯ ಆಂದೋಲನದ ಆ ಸಂದರ್ಭದಲ್ಲಿ ಪರಂಪರೆಯನ್ನು ವೈಭವೀಕರಿಸುವುದು ಮತ್ತು ಲಿಖಿತ ಸಾಮಗ್ರಿಗೆ ಮಾತ್ರ ಒತ್ತು ಕೊಡುವುದು ಮುಖ್ಯವಾಗಿದ್ದವು. ಮೇಲಾಗಿ ಈ ಕ್ಷೇತ್ರದಲ್ಲಿ ಅಧಿಕ ಸಂಖ್ಯೆಯಲ್ಲಿದ್ದ ಬ್ರಾಹ್ಮಣ

ವಿದ್ವಾಂಸರು ಅಂದು ಸಹಜವಾಗಿಯೇ ವೈದಿಕ ದೃಷ್ಟಿಕೋನದಿಂದ ಇತಿಹಾಸ ಬರೆದರು. ಇಂದು ವೈಭವೀಕರಣಕ್ಕೆ ಬದಲು ಸಾಮಾಜಿಕ ನ್ಯಾಯವನ್ನು ಹುಡುಕುವ, ಲಿಖಿತದಂತೆ ಮೌಖಿಕ ಸಾಮಗ್ರಿಯನ್ನೂ ಬಳಸುವ ಪ್ರವೃತ್ತಿ ಬೆಳೆದಿದೆ. ಬ್ರಾಹ್ಮಣೇತರ ವಿದ್ವಾಂಸರೂ ಈ ಕ್ಷೇತ್ರವನ್ನು ಪ್ರವೇಶಿಸಿದ್ದಾರೆ. ಹೀಗಾಗಿ ಈವರೆಗಿನ ವೈದಿಕಪರ ಸಂಶೋಧನೆಯ ಮರುಪರಿಶೀಲನೆ ಇಂದು ನಡೆಯಬೇಕಾಗಿದೆ, ನಡೆದಿದೆ.

* * *

ಆಕರಗಳನ್ನು ಬಳಸಿಕೊಂಡು ವಿಶ್ಲೇಷಣಾತ್ಮಕ ಸಂಶೋಧನೆಯನ್ನೋ, ವ್ಯಾಖ್ಯಾನಾತ್ಮಕ ಸಂಶೋಧನೆಯನ್ನೋ ಕೈಕೊಳ್ಳುವ ಸಂಶೋಧಕ ಕೆಲವೊಮ್ಮೆ ವಿದ್ವಾಂಸರ ಪ್ರತಿಕ್ರಿಯೆ ಇಲ್ಲವೆ ಸಮಾಜದ ಪ್ರತಿಭಟನೆ ಎದುರಿಸಬೇಕಾಗುತ್ತದೆ. ಏಕೆಂದರೆ ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ಶೋಷಿಸುವವರಿಗೆ ಸಂಶೋಧಕ ಮಂಡಿಸುವ ನಿಜ ಇತಿಹಾಸದಿಂದ ಕಿರಿಕಿರಿಯಾಗಿ, ಅವರು ಪ್ರತಿಭಟನೆಯ ದಾರಿ ಹಿಡಿಯುತ್ತಾರೆ. ಅಂಥ ಸಂದರ್ಭದಲ್ಲಿ ಸಂಶೋಧನೆಯು ಸಾಮಾಜಿಕ ಹೋರಾಟವಾಗಿ ಪರಿಣಮಿಸುತ್ತದೆ. ಈ ಬಗೆಯ ಪಂಡಿತರ ಪ್ರತಿಕ್ರಿಯೆ, ಸಮಾಜದ ಪ್ರತಿಭಟನೆಗಳನ್ನು ಎದುರಿಸಿದ ಕಹಿ ಅನುಭವ ನನ್ನದಾಗಿದೆ.

* * *

ಸಾಮಾನ್ಯವಾಗಿ ಸಂಶೋಧಕರು ಇನ್ನೊಬ್ಬರು ಪ್ರಕಟಿಸಿದ ಆಕರಗಳನ್ನು ಬಳಸಿಕೊಂಡು ಸಂಶೋಧನೆಯನ್ನು ಪೂರೈಸುತ್ತಾರೆ. ಹೀಗೆ ಮಾಡುವುದರೊಂದಿಗೆ ನಾನು ಹೆಚ್ಚಿನದಾಗಿ ಆಕರಗಳ ಶೋಧ-ಪ್ರಕಟನ ಕಾರ್ಯವನ್ನೂ ಮಾಡಿದ್ದೇನೆ. ಇವುಗಳಲ್ಲಿ ಪ್ರಾಚೀನ ಮತ್ತು ಆಧುನಿಕ ಹಸ್ತಪ್ರತಿಗಳ ಶೋಧ-ಸಂಪಾದನೆ-ಪ್ರಕಟನೆ ಮುಖ್ಯವಾದುವು. ಪ್ರಾಚೀನ ಹಸ್ತಪ್ರತಿಗಳನ್ನೇ ಕುರಿತು ಹೇಳುವುದಾದರೆ ಕರ್ನಾಟಕದಲ್ಲಿ ಈವರೆಗೆ ಸಂಗ್ರಹವಾಗಿರುವ ಸುಮಾರು ೨೫ ಸಾವಿರ ಕಟ್ಟುಗಳಲ್ಲಿ ಹಂಪಿ, ಧಾರವಾಡ ವಿಶ್ವವಿದ್ಯಾಲಯಗಳು ಸೇರಿ ಸುಮಾರು ೫ ಸಾವಿರ ಕಟ್ಟುಗಳ ಸಂಗ್ರಹ ನನ್ನ ಪ್ರತ್ಯಕ್ಷ-ಪರೋಕ್ಷ ಪ್ರಯತ್ನದ ಫಲವೆನಿಸಿದೆ. ಇದಲ್ಲದೆ ಸಮಗ್ರ ವಚನಸಾಹಿತ್ಯ, ಸಮಗ್ರ ಹಳಕಟ್ಟಿ ಸಾಹಿತ್ಯ ಪ್ರಕಟನ ಯೋಜನೆಗಳು ನನ್ನ ಪ್ರಧಾನ ಸಂಪಾದಕತ್ವದಲ್ಲಿ ಪೂರ್ಣಗೊಂಡಿವೆ. ಸಮಗ್ರ ಕೀರ್ತನಸಾಹಿತ್ಯ, ಸಮಗ್ರ ತೋಂಟದಾರ್ಯ ಸಾಹಿತ್ಯ ಪ್ರಕಟನ ಯೋಜನೆಗಳ ರೂವಾರಿ-ಯೋಜಕನಾಗಿದ್ದೇನೆ. ಹೆಚ್ಚಿನದಾಗಿ ಅನೇಕ ಹಸ್ತಪ್ರತಿ ಸೂಚಿಗಳೂ ನನ್ನ ನೇತೃತ್ವದಲ್ಲಿ ಬೆಳಕು ಕಂಡಿವೆ.

ಸಾಹಿತ್ಯದ ವಿದ್ಯಾರ್ಥಿಯಾಗಿರುವ ನನಗೆ, ಇತಿಹಾಸದ ಬಗೆಗೂ ವಿಶೇಷ ಒಲವು. ಆದುದರಿಂದ ಪ್ರಾಚೀನ ಇತಿಹಾಸ ಕೃತಿಗಳಾದ ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ನಿಂಬ ಸಾಮಂತ ಚರಿತೆ, ಸಿದ್ಧಮಂಕಚರಿತೆ, ತಗರ ಪವಾಡ, ಸಿರುಮಭೂಪಾಲನನ್ನು ಕುರಿತ ೩ ಕೃತಿಗಳು, ಕುಮಾರರಾಮನನ್ನು ಕುರಿತ ೪ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದೇನೆ. ದಾಖಲೆಗೆ ಸಂಬಂಧಿಸಿದಂತೆ 'ಕರ್ನಾಟಕ ಕೈಫಿಯತ್ತುಗಳು' ನನ್ನ ವಿಶೇಷ ಪ್ರಕಟನೆಯೆನಿಸಿದೆ. ವಿಜಾಪುರ ಜಿಲ್ಲೆ, ಧಾರವಾಡ ಜಿಲ್ಲೆಗಳ ಶಾಸನಸೂಚಿ, ಧಾರವಾಡ ತಾಲೂಕಿನ ಶಾಸನಗಳು ನನ್ನ ಶ್ರಮದಲ್ಲಿ ಮೂಡಿಬಂದಿವೆ. ಒಟ್ಟಾರೆ, ಸಾಹಿತ್ಯ-ಇತಿಹಾಸ ಕ್ಷೇತ್ರಗಳಿಗೆ ಸಂಬಂಧಿಸಿದ ಆಕರಗಳ ಶೋಧ-ಪ್ರಕಟನ ಕೆಲಸ ನನ್ನ ಸಮಕಾಲೀನ ಸಂಶೋಧಕರಿಗಿಂತ ಒಂದಿಷ್ಟು ಅಧಿಕ ಪ್ರಮಾಣದಲ್ಲಿ ನನ್ನಿಂದ ಜರುಗಿದೆಯೆಂದೇ ಹೇಳಬೇಕು.

ನಮ್ಮ ಸಂಶೋಧಕರು ಆಕರಗಳನ್ನು ಬಳಸಿಕೊಂಡು ವಿಶ್ಲೇಷಣಾತ್ಮಕ ಸಂಶೋಧನೆಯ ಮೂಲಕ ಚರಿತ್ರೆಯನ್ನು ಸ್ಪಷ್ಟಪಡಿಸಿದುದೇ ಹೆಚ್ಚು. ಇದಕ್ಕೆ ಕಾರಣ, ನಮ್ಮ ಪೂರ್ವಜರು ಚರಿತ್ರೆ ಬರೆಯಲಿಲ್ಲವಾಗಿ ಪ್ರಾಚೀನ ಕೆಲವು ಮುಖ್ಯ ಘಟನೆಗಳು ಕಳೆದುಹೋಗಿದ್ದವು. ಕೆಲವು ಹಿಂದುಮುಂದಾಗಿದ್ದವು. ಹೀಗಾಗಿ ಸಹಜವಾಗಿಯೇ ನಮ್ಮ ಓರಿಯಂಟಾಲಿಷ್ಟರು ಇವುಗಳನ್ನು ಶೋಧಿಸುವ, ಜೋಡಿಸುವ ಕೆಲಸಕ್ಕೆ ಆದ್ಯಗಮನ ಕೊಡುತ್ತ ಬಂದರು. ಈ ದಿಸೆಯಲ್ಲಿ ನಾನೂ ದುಡಿದು, ಕಳೆದುಹೋದ ಘಟನೆ, ಆಚರಣೆಗಳನ್ನು ಸ್ಪಷ್ಟಪಡಿಸುವ

ಕೆಲಸ ಮಾಡಿದ್ದೇನೆ. ಶಾಸನಗಳಲ್ಲಿ ಶಿವಶರಣರು, ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು, ಮಹಾರಾಷ್ಟ್ರದ ಕನ್ನಡ ಶಾಸನಗಳು ಈ ಕ್ಷೇತ್ರದ ನನ್ನ ಮಹತ್ವದ ಕೃತಿಗಳೆನಿಸಿವೆ.

ನನ್ನ ಸಂಶೋಧನಕೃಷಿಯನ್ನು ಗ್ರಂಥ ಮತ್ತು ಪ್ರಬಂಧಗಳೆಂದು ವರ್ಗೀಕರಿಸಬಹುದಾಗಿದ್ದು, ಗ್ರಂಥಗಳನ್ನು ಸಂಪಾದನ ಸಾಹಿತ್ಯ, ಸಂಶೋಧನ ಸಾಹಿತ್ಯ, ಶಾಸ್ತ್ರಸಾಹಿತ್ಯವೆಂದು ವಿಂಗಡಿಸಬಹುದಾಗಿದೆ. ಸಂಪಾದನ ಸಾಹಿತ್ಯದಲ್ಲಿ 'ಹರಿಹರನ ರಗಳೆ'ಗಳಂಥ ಸಾಹಿತ್ಯಕೃತಿಗಳೂ, 'ಕಿತ್ತೂರು ಸಂಸ್ಥಾನ ಸಾಹಿತ್ಯ'ದಂಥ ಚಾರಿತ್ರಿಕ ಕೃತಿಗಳೂ, 'ಬಸವಣ್ಣನವರ ಟೀಕಿನ ವಚನ'ಗಳಂಥ ವಚನಕೃತಿಗಳೂ, 'ಕರ್ನಾಟಕದ ಕೈಫಿಯತ್ತು'ಗಳಂಥ ದಾಖಲು ಸಾಹಿತ್ಯಕೃತಿಗಳೂ, 'ಅರಟಾಳ ರುದ್ರಗೌಡರ ಚರಿತ್ರೆ'ಯಂಥ ಜೀವನಚರಿತ್ರೆಗಳೂ, 'ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ'ದಂಥ ಸಂಕಲನಗ್ರಂಥಗಳೂ, 'ಸಾರಂಗಶ್ರೀ'ಯಂಥ ವಿಚಾರಸಂಕಿರಣ ಸಂಪುಟಗಳೂ ಮುಖ್ಯವೆನಿಸಿವೆ. ಸಂಶೋಧನಗ್ರಂಥಗಳಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ'ದಂಥ ಕೃತಿಗಳು ಸಮಾವೇಶಗೊಳ್ಳುತ್ತವೆ. ಶಾಸ್ತ್ರಸಾಹಿತ್ಯದಲ್ಲಿ 'ಹಸ್ತಪ್ರತಿಶಾಸ್ತ್ರ', 'ಗ್ರಂಥಸಂಪಾದನಶಾಸ್ತ್ರ', 'ಸಂಶೋಧನಶಾಸ್ತ್ರ', 'ನಾಮವಿಜ್ಞಾನ' ಕೃತಿಗಳನ್ನು ಹೆಸರಿಸಬಹುದಾಗಿದೆ.

ಗ್ರಂಥಗಳಿಗಿಂತ ಪ್ರಬಂಧ ರಚನೆ ನನಗೆ ತುಂಬ ಇಷ್ಟ. ಸಣ್ಣ ಕೀಲಿಗಳಂತಿರುವ ಇವು ದೊಡ್ಡ ಬಾಗಿಲನ್ನು ತೆರೆಯುತ್ತಿರುವುದರಿಂದ, ಈವರೆಗೆ ನಾನು ಸುಮಾರು ೪೦೦ ಪ್ರಬಂಧಗಳನ್ನು ಬರೆದಿದ್ದು, ಅವು 'ಮಾರ್ಗ' ಹೆಸರಿನ ನಾಲ್ಕು ಸಂಪುಟಗಳಲ್ಲಿ ಪ್ರಕಟವಾಗಿವೆ. ನನ್ನನ್ನು ಸಂಶೋಧನಕ್ಷೇತ್ರದಲ್ಲಿ ಗಟ್ಟಿಯಾಗಿ ನಿಲ್ಲಿಸಿದ ಇವುಗಳಲ್ಲಿ ೨ನೆಯ ಸಂಪುಟಕ್ಕೆ ರಾಜ್ಯ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಪ್ರಾಪ್ತವಾಗಿದ್ದರೆ, ಈಗ ೪ನೆಯ ಸಂಪುಟಕ್ಕೆ ರಾಷ್ಟ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ಲಭಿಸಿದೆ.

ಕನ್ನಡ ಸಂಶೋಧನಕ್ಷೇತ್ರದಲ್ಲಿ ಮೊದಮೊದಲು ಧಾರವಾಡದ ಸಾಂಸ್ಕೃತಿಕ ಮಾದರಿ. ಮೈಸೂರಿನ ಚಾರಿತ್ರಿಕ ಮಾದರಿಯೆಂಬ ಎರಡು ಕವಲುಗಳು ಕಾಣಿಸಿಕೊಂಡವು. ಈಗ ಎರಡೂ ಮಾದರಿಗಳು ಎರಡೂ ಪ್ರದೇಶಗಳಲ್ಲಿ ಪ್ರಚಾರಕ್ಕೆ ಬರುತ್ತಲಿವೆ. ಪ್ರಸ್ತುತ 'ಮಾರ್ಗ-೪'ರಲ್ಲಿ ಈ ಎರಡೂ ಮಾದರಿಯ ಪ್ರಬಂಧಗಳಿವೆ. ಸಂಶೋಧನೆ ಕೇವಲ ಗತಕಾಲಕ್ಕೆ ಸೀಮಿತವಾಗದೆ ವರ್ತಮಾನವನ್ನೂ ಪ್ರಭಾವಿಸಬೇಕೆಂಬ ನನ್ನ ಇತ್ತೀಚಿನ ತಹತಹಕ್ಕೆ ಅನುಗುಣವಾಗಿ ಇಲ್ಲಿ ಅಂಥ ಬಹಳಷ್ಟು ಲೇಖನಗಳು ಎಡೆಪಡೆದಿವೆ. ಉಪೇಕ್ಷಿತ ವಿಷಯಗಳಿಗೆ ಇಲ್ಲಿ ಅವಕಾಶ ಮಾಡಕೊಡಲಾಗಿದೆ. ಪಠ್ಯಕೇಂದ್ರಿತವಾಗುತ್ತಲೇ ಪರಿಸರಕೇಂದ್ರಿತವಾಗುವ ಮೂಲಕ ಇಲ್ಲಿಯ ಬಹಳಷ್ಟು ಲೇಖನಗಳು ಅಂತರಶಿಸ್ತೀಯ ಆಯಾಮವನ್ನೊಳಗೊಂಡಿವೆ. ಹೊಸ ಸಂಶೋಧನದಷ್ಟೇ ಹಳೆಯ ಶೋಧಗಳ ಮರುಪರಿಶೀಲನೆಯೂ ಅವಶ್ಯವೆಂಬ ಭಾವನೆಯಿಂದ ಬರೆದ ಲೇಖನಗಳೂ ಇಲ್ಲವೆ. ಈ ಲಕ್ಷಣಗಳಿಂದಾಗಿ ಪ್ರಸ್ತುತ ಕೃತಿ ನನ್ನ ಮೊದಲಿನ 'ಮಾರ್ಗ' ಸಂಪುಟಗಳಿಗಿಂತ ಹೆಚ್ಚು ಮಹತ್ವದ್ದೆಂದು ಭಾವಿಸುತ್ತೇನೆ ಮತ್ತು ಇದಕ್ಕೆ ರಾಷ್ಟ್ರೀಯ ಗೌರವ ಪ್ರಾಪ್ತವಾಗಲು ಕಾರಣರಾದ ಎಲ್ಲ ಮಾನ್ಯರಿಗೆ ಕೃತಜ್ಞನಾಗಿದ್ದೇನೆ.

ಮಾತು ಮುಗಿಸುವ ಮುನ್ನ ಒಂದೆರಡು ಮಾತು :

೧. ಸ್ಥಿರಸಮಾಜದ ಸೃಷ್ಟಿಯಾಗಿರುವ ಹಳೆಯ 'ಮಾತೃಭಾಷಾ ಪರಿಕಲ್ಪನೆ'ಯು ಬದಲಾದ ಚರಸಮಾಜದಲ್ಲಿ ಅರ್ಥ ಕಳೆದುಕೊಳ್ಳತೊಡಗಿರುವುದರಿಂದ, ಅದರ ಮರು ವ್ಯಾಖ್ಯಾನ ಇಂದು ತೀರ ಅಗತ್ಯವೆನಿಸಿದೆ. ಭಾಷಾವಾರು ಪ್ರಾಂತರಚನೆಯಿಂದಾಗಿ ಕೆಲವಡೆ ಭಾಷಾಸಂಘರ್ಷಗಳು ಹುಟ್ಟಿಕೊಂಡಿವೆ. ಜಾಗತೀಕರಣದಿಂದಾಗಿ ರಾಜ್ಯ ಭಾಷೆಗಳಿಗೆ ಅಳಿಯುವ ಭಯ ಕಾಡುತ್ತಲಿದೆ. ಭಾಷಿಕ ಈ ಮೂರು ಸಮಸ್ಯೆ (ಚರ ಸಮಾಜ, ಭಾಷಾವಾರ ಪ್ರಾಂತರಚನೆ, ಜಾಗತೀಕರಣ)ಗಳ ನಿವಾರಣೆಗಾಗಿ ಹೊಸ 'ರಾಷ್ಟ್ರೀಯ ಭಾಷಾನೀತಿ'ಯನ್ನು ಭಾರತದಲ್ಲಿ ಅಸ್ತಿತ್ವಕ್ಕೆ ತರುವುದು ಅವಶ್ಯವಿದೆ. ಈ ಕೆಲಸವನ್ನು ಸಾಹಿತ್ಯ ಅಕಾಡೆಮಿ ಕೈಕೊಳ್ಳಬೇಕು. ಇದು ಅದರ ಕರ್ತವ್ಯವೂ ಆಗಿದೆ.

೨. ಕೇಂದ್ರ ಸಾಹಿತ್ಯ ಅಕಾಡಮಿ ರಾಷ್ಟ್ರದ ಸಾರ್ವಭೌಮ ಸಾಹಿತ್ಯಸಂಸ್ಥೆ. ಸರಕಾರ ಅಂಥ ಅಧಿಕಾರವನ್ನು ಈ ಸಂಸ್ಥೆಗೆ ನೀಡಿದೆ. ಹೀಗಾಗಿ ಭಾಷೆ-ಸಾಹಿತ್ಯ ವಿಷಯವಾಗಿ ರಾಷ್ಟ್ರೀಯ ಮಹತ್ವದ ನಿರ್ಣಯ ತೆಗೆದುಕೊಳ್ಳುವಾಗ ಸರಕಾರ ಈ ಸಂಸ್ಥೆಯ ಸಲಹೆ ಪಡೆಯುವುದು, ಸಲಹೆ ಪಡೆಯದೆ ನಿರ್ಣಯ ತೆಗೆದುಕೊಂಡರೆ ಈ ಸಂಸ್ಥೆ ಸರಕಾರವನ್ನು ಪ್ರಶ್ನಿಸುವುದು ಅಪೇಕ್ಷಣೀಯವೆನಿಸುತ್ತದೆ. ಆದರೆ, ಸರಕಾರ ಇತ್ತೀಚೆ ಶಾಸ್ತ್ರಭಾಷೆಯ (ಕ್ಲಾಸಿಕಲ್ ಲ್ಯಾಂಗ್ವೆಜ್) ವಿಷಯವಾಗಿ ತೆಗೆದುಕೊಂಡ ಏಕಪಕ್ಷೀಯ ನಿರ್ಣಯವನ್ನು ಗಮನಿಸಿದರೆ, ಅದು ಈ ಸಂಸ್ಥೆಯನ್ನು ಉಪೇಕ್ಷಿಸುತ್ತದೆಯೆಂಬ ಸಂದೇಹ ಮೂಡುತ್ತದೆ. ಇಂಥ ಸಂದರ್ಭದಲ್ಲಿ ಎಚ್ಚರವಹಿಸದಿದ್ದರೆ ಅಕಾಡಮಿ ಕ್ರಮೇಣ ಹೆಸರಿಗೆ ಮಾತ್ರ ಸಾರ್ವಭೌಮ ಸಂಸ್ಥೆಯಾಗಬಹುದಾಗಿದೆ. ಹಾಗಾಗದಂತೆ ಈ ಸಂಸ್ಥೆ ಎಚ್ಚರವಹಿಸಬೇಕೆಂದೂ, ಇದಕ್ಕೆ ಸರ್ವಭಾಷಾಸರಸ್ವತೀ ಪರಿವಾರದವರಾದ ನಾವೆಲ್ಲ ಬೆಂಬಲವಾಗಿ ನಿಲ್ಲಬೇಕೆಂದೂ ಆಶಿಸುತ್ತೇನೆ.

ಮಾರ್ಗ-೪ ಕೃತಿಗೆ ಲಭಿಸಿದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸ್ವೀಕಾರ ಸಂದರ್ಭದ ಭಾಷಣ (ದಿಲ್ಲಿ, ೨೦೦೭ ಫೆಬ್ರುವರಿ ೨೧). ಈ ಭಾಷಣದ ಇಂಗ್ಲಿಷ್ ಆವೃತ್ತಿ ಓದಲಾಯಿತು.

ಆಕರ : ಮಾರ್ಗ ಸಂಪುಟ–೬

■■

೭೨

ಕಲಬುರ್ಗಿ : ಐವತ್ತು

ೞ೯೮೮

ಮಾನ್ಯ ಹಿರಿಯರೇ, ಆತ್ಮೀಯ ಸ್ನೇಹಿತರೇ ಮತ್ತು ಪ್ರೀತಿಯ ವಿದ್ಯಾರ್ಥಿಗಳೇ,

ಡಾ. ಜಿ. ಕೆ. ನಾರಾಯಣ ರೆಡ್ಡಿ ಅವರು, ಡಾ. ದೇ. ಜವರೇಗೌಡರು, ಡಾ. ಆರ್. ಸಿ. ಹಿರೇಮಠರು, ಪ್ರೊ. ಬಿ. ಟಿ. ಸಾಸನೂರ ಅವರು - ಈ ಹಿರಿಯರ ಸಮ್ಮುಖದಲ್ಲಿ ನನ್ನ 'ಮಾರ್ಗ' ಸಂಪುಟಗಳು ಬಿಡುಗಡೆಯಾಗುತ್ತಿರುವುದು ನನಗೆ ಸಂತೋಷದ ವಿಷಯವಾಗಿರುವಂತೆ, ಗೌರವದ ವಿಷಯವೂ ಆಗಿದೆ. ಇವರಲ್ಲಿ ಇಬ್ಬರು ನನ್ನ ವಿದ್ಯಾಗುರುಗಳು, ಒಬ್ಬರು ನನ್ನನ್ನು ತಮ್ಮ ವಿದ್ಯಾರ್ಥಿಯಂತೆ ಪ್ರೀತಿಯಿಂದ ಕಾಣುತ್ತ ಬಂದವರು, ಮತ್ತೊಬ್ಬರು ನಾನು ಸೇವೆ ಸಲ್ಲಿಸುತ್ತಿರುವ ಈ ವಿಶ್ವವಿದ್ಯಾಲಯ ಕುಟುಂಬದ ಮುಖ್ಯಸ್ಥರು.

ಡಾ. ನಾರಾಯಣ ರೆಡ್ಡಿಯವರು ಅಧಿಕಾರದಿಂದ ಕುಲಪತಿಗಳಾದರೂ ಅಂತರ್ಯದಲ್ಲಿ ಒಬ್ಬ ಅಧ್ಯಾಪಕರು. ಇನ್ನೂ ಆಂತರ್ಯದಲ್ಲಿ ಒಬ್ಬ ಸಾತ್ವಿಕ ವ್ಯಕ್ತಿಗಳು. ಇಂದಿನ ಕಾಲದಲ್ಲಿ ಕುಲಪತಿಗಳು ಇಷ್ಟು ಒಳ್ಳೆಯವರಾಗಿರಬಾರದು ಎನ್ನುವಷ್ಟರ ಮಟ್ಟಿಗೆ ಇವರದು ಸಾತ್ವಿಕ ವ್ಯಕ್ತಿತ್ವ. ಇದು ಇವರ ವ್ಯಕ್ತಿತ್ವದ ಮುಖ್ಯಶಕ್ತಿಯೆಂದು ನಾನು ಭಾವಿಸಿದ್ದೇನೆ. ಈ ಎಲ್ಲ ಕಾರಣಗಳಿಂದಾಗಿ ಇಂದು ಬರಮಾಡಿಕೊಂಡಿರುವ ಮಾನ್ಯ ಕುಲಪತಿಗಳ ಹಸ್ತದಿಂದ ಈ ಸಂಪುಟಗಳು ಬಿಡುಗಡೆಯಾಗುತ್ತಿರುವುದು, ನನಗೆ ಹರ್ಷ-ಹೆಮ್ಮೆಗಳನ್ನುಂಟು ಮಾಡಿದೆ.

ಡಾ. ದೇ. ಜವರೇಗೌಡ ಅವರು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು, ಕನ್ನಡದ ಅವಿಶ್ರಾಂತ ಕುಲಪತಿಗಳು. ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಬೋಧಿಸಿದವರು, ಕನ್ನಡದಲ್ಲಿ ಬರೆದವರು ಅನೇಕರಿರಬಹುದು. ಇದಕ್ಕೆ ಹೆಚ್ಚಿನದಾಗಿ ಕನ್ನಡದ ಚಟುವಟಿಕೆಗಳಿಗೆ ಸಾಂಸ್ಥಿಕರೂಪ ಕೊಟ್ಟವರು ಇಬ್ಬರು ಮಾತ್ರ. ಇವರಲ್ಲಿ ಡಾ. ಆರ್.ಸಿ. ಹಿರೇಮಠರು ಒಬ್ಬರಾದರೆ, ಡಾ. ದೇ. ಜವರೇಗೌಡರು ಇನ್ನೊಬ್ಬರು. ಕನ್ನಡವನ್ನು, ಕನ್ನಡದ ಕೆಲಸವನ್ನು, ಕನ್ನಡದ ಕೆಲಸಗಾರರನ್ನು ಪ್ರೀತಿಸುತ್ತ ಬಂದ ಡಾ. ಜವರೇಗೌಡರು ನನ್ನ ಮೇಲೆ ಉದ್ದಕ್ಕೂ ಪ್ರೀತಿಧಾರೆ ಎರೆಯುತ್ತ ಬಂದಿದ್ದಾರೆ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನನ್ನ ಬಗ್ಗೆ, ನನ್ನ ಕೆಲಸದ ಬಗ್ಗೆ ಪ್ರಶಂಸೆಯ ಮಾತುಗಳನ್ನು ಆಡುತ್ತ ಬಂದಿದ್ದಾರೆ. ಇಂಥ ಮಾತುಗಳೇ ಈ ಸಂಪುಟವನ್ನು ಪ್ರಕಾಶನಗೊಳಿಸಲು ಶ್ರೀ ಕಲ್ಲಯ್ಯ ಅವರಿಗೆ ಧೈರ್ಯ ನೀಡಿವೆಯೆಂದು ನನಗೆ ಆಮೇಲೆ ಗೊತ್ತಾಗಿದೆ. ಅನಾರೋಗ್ಯದ ಮಧ್ಯದಲ್ಲಿಯೂ ಅವರು ಇಷ್ಟು ದೂರ ಬಂದು, ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುತ್ತಿರುವದು ನನಗೆ ಇನ್ನೂ ಗೌರವದ ವಿಷಯವೆನಿಸಿದೆ.

ಇಂದು ನನಗೆ ೫೦ ವರ್ಷ. ಈ ಸಂದರ್ಭದಲ್ಲಿ ನನ್ನೊಳಗೆ ಎರಡು ವಿರುದ್ಧ ನೋವುಗಳು ಕಾಣಿಸಿಕೊಳ್ಳುತ್ತಿವೆ. ಒಂದು: ಇನ್ನೂ ಹತ್ತು ವರ್ಷ ನೌಕರಿ ಮಾಡಬೇಕೆ? ಎಂಬುದು. ಇನ್ನೊಂದು: ನೌಕರಿ ಹತ್ತೇ ವರ್ಷ ಉಳಿಯಿತು, ಕೆಲಸ ಬಹಳ ಉಳಿಯಿತು ಎಂಬುದು. ಹೀಗಾಗಿ ಈ ವರ್ಷದಿಂದ ನಾನು ಹೆಚ್ಚು ದುಡಿಯಲು ಮನಸ್ಸು ಮಾಡಿದ್ದೇನೆ.

'ದುಡಿಯುವುದು' ಎಂದಾಕ್ಷಣ ನನಗೆ ನನ್ನ ತಂದೆಯ ನೆನಪಾಗುತ್ತದೆ. 'ದುಡಿಮೆಗಿಂತ ದೊಡ್ಡ ದೇವರಿಲ್ಲ, ತಾಳ್ಮೆಗಿಂತ ದೊಡ್ಡ ತಪಸ್ಸಿಲ್ಲ' ಹೀಗೆ ನನ್ನ ತಂದೆ ಪದೇ ಪದೇ ಹೇಳುತ್ತಿದ್ದರು; ಹಾಗೆ ಬಾಳುತ್ತಿದ್ದರು. ತಂದೆಯ ಈ ಸಂಸ್ಕಾರವಿಶೇಷದಿಂದ ರೂಪಗೊಂಡ ನನಗೆ ಆ ಮೇಲೆ ಇನ್ನೊಂದು ಬಗೆಯ ಸಂಸ್ಕಾರ ನೀಡಿದವರು ಇಬ್ಬರು: ಪ್ರೊ. ಬಿ.ಟಿ.ಸಾಸನೂರ ಮತ್ತು ಡಾ. ಆರ್. ಸಿ. ಹಿರೇಮಠರು. ೧೯೫೭ರಿಂದ ನಾನು ಕಾಲೇಜು ವಿದ್ಯಾರ್ಥಿಯಾಗಿದ್ದ ಕಾಲ. ಕನ್ನಡದ ಒಲವು ನನ್ನಲ್ಲಿ ಅದೇ ಆಗ ಹರಳುಗಟ್ಟುತ್ತಲಿದ್ದ ಆ ಅವಧಿಯಲ್ಲಿ ಬಿ. ಟಿ. ಸಾಸನೂರ ಅವರ ಸಂಪರ್ಕ ಒದಗಿ ಬಂದುದು ನನ್ನ ಜೀವನದ ಮುಖ್ಯತಿರುವು. ನನಗೆ ಭಾಷೆಯ ಒಳರಚನೆ, ಶಾಸ್ತ್ರದ ಶಿಸ್ತುಗಳನ್ನು ಅವರು ತಿಳಿಸಿದರು. ಗ್ರಾಮೀಣ ಪರಿಸರದ ಶಿಲೆಯಾಗಿದ್ದ ನನ್ನನ್ನು ಸಾಸನೂರ ಅವರು ವಿಗ್ರಹವಾಗಿ ಕಂಡರಿಸಿದರೆ, ಅದರಲ್ಲಿ ಪ್ರಾಣಪ್ರತಿಷ್ಠೆಮಾಡಿದವರು ಡಾ. ಆರ್.ಸಿ. ಹಿರೇಮಠರು. ಇದು ನನ್ನ ಜೀವಮಾನದ ಇನ್ನೊಂದು ತಿರುವು. ಹೀಗೆ ಒಬ್ಬರು ತಮ್ಮ ಅಚ್ಚುಕಟ್ಟಾದ ಬೋಧನೆಯಿಂದ ನನ್ನನ್ನು ಕನ್ನಡ ಪ್ರಾಧ್ಯಾಪಕನನ್ನಾಗಿ ಕಂಡರಿಸಿದರೆ, ಇನ್ನೊಬ್ಬರು ತಮ್ಮ ಅಪಾರ ವಿದ್ವತ್ತಿನಿಂದ ನನ್ನನ್ನು ಸಂಶೋಧಕನನ್ನಾಗಿ ರೂಪಿಸಿದರು. ಆರ್. ಸಿ. ಹಿರೇಮಠರು ನನ್ನ ಮೇಲೆ ಬೀರಿದ ಇನ್ನೊಂದು ಮುಖ್ಯ ಪ್ರಭಾವವೆಂದರೆ ನಿರಂತರ ದುಡಿಮೆ. ೨೦ನೆಯ ವಯಸ್ಸಿನಲ್ಲಿ ನಾನು ತಂದೆಯ ಸಂಪರ್ಕದಿಂದ ಮುಕ್ತನಾಗಿ ಡಾ. ಹಿರೇಮಠರ ಸಂಪರ್ಕಕ್ಕೆ ಅಂದರೆ ಒಂದು ದುಡಿಮೆಯಿಂದ ಇನ್ನೊಂದು ದುಡಿಮೆಗೆ ವರ್ಗಾಯಿಸಲ್ಪಟ್ಟವನು. ಅಲ್ಲಿಂದೀಚೆಗೆ ನನ್ನ ಜೀವನ ಸಂಪುಟದ ಬಹುಮುಖ್ಯ ಪುಟಗಳನ್ನು ಬರೆದವರು ಡಾ. ಹಿರೇಮಠರು. ಈ ಅವಧಿಯಲ್ಲಿ ಒಬ್ಬ ಅಭ್ಯಾಸಿಯಾಗಿ ನನಗಿರುವ ಶಕ್ತಿಯೇನು? ಮಿತಿಯೇನು? ನೌಕರನಾಗಿ ನನ್ನ ಶ್ರದ್ಧೆಯೇನು? ಅಶ್ರದ್ಧೆಯೇನು? ಕನ್ನಡ ವಿಭಾಗದ ಸದಸ್ಯನಾಗಿ ನಾನು ದುಡಿದದ್ದೇನು? ವ್ಯಕ್ತಿಯಾಗಿ ಅನುಭವಿಸಿದ ಸುಖವೇನು? ದುಃಖವೇನು? ಒಟ್ಟು ಜೀವನದಲ್ಲಿ ನನಗುಂಟಾದ ನ್ಯಾಯವೇನು? ಅನ್ಯಾಯವೇನು? ಈ ಎಲ್ಲ ಸಂಗತಿಗಳಿಗೆ ಡಾ. ಆರ್. ಸಿ. ಹಿರೇಮಠರು ಸಾಕ್ಷಿದರ್ಪಣವಾಗಿದ್ದಾರೆ.

ನಾನು ಡಾ. ಆರ್. ಸಿ. ಹಿರೇಮಠ ಅವರ ಅನುವರ್ತಿ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಅದು ನನಗೆ ಸಂತೋಷವೂ ಕೂಡ. ಈ ಸಂದರ್ಭದಲ್ಲಿ ನನ್ನ ಸ್ನೇಹಿತರೊಬ್ಬರು ಕೇಳಿದ ಪ್ರಶ್ನೆ ನೆನಪಾಗುತ್ತದೆ. ಗುರು ಶಿಷ್ಯರು ಒಂದೇ ವಿಭಾಗದಲ್ಲಿ, ಒಂದೇ ಊರಲ್ಲಿ ಇದ್ದರೆ ಸಂಬಂಧ ಮುರಿದುಹೋದ ಅನೇಕ ಉದಾಹರಣೆಗಳು ನಮ್ಮ ಕಣ್ಣುಮುಂದಿರುವಾಗ ನಿಮ್ಮಿಬ್ಬರ ಸಂಬಂಧ ಮುರಿಯದೇ ಮುಂದುವರಿದುದರ ರಹಸ್ಯವೇನು? ಉತ್ತರ ಇಷ್ಟು: ಮಲ್ಲಿಕಾರ್ಜುನ ಮನ್ಸೂರ ಅವರನ್ನು ಸಂಗೀತದ ಮೋಹಕ್ಕಾಗಿ ಪ್ರೀತಿಸುವುದು ಬೇರೆ; ಲೌಕಿಕ ಲಾಭಕ್ಕಾಗಿ ಪ್ರೀತಿಸುವುದು ಬೇರೆ. ಲೌಕಿಕ ಲಾಭಕ್ಕಾಗಿ ಪ್ರೀತಿಸುವವನು ಇನ್ನೂ ಲಾಭಕ್ಕಾಗಿ ಅವರನ್ನು ಪ್ರೀತಿಗೆ ಬದಲು ಪೀಡಿಸುತ್ತ ಹೋಗುತ್ತಾನೆ. ಸಂಗೀತದ ಮೋಹಕ್ಕಾಗಿ ಪ್ರೀತಿಸುವವನು ಇನ್ನೂ ಮೋಹಕ್ಕಾಗಿ ಅವರನ್ನು ಪ್ರೀತಿಸುತ್ತ ಹೋಗುತ್ತಾನೆ. ಈ ಉದಾಹರಣೆಯಿಂದ ನಿವೃತ್ತಿಯ ನಂತರವೂ ವಿದ್ವಾಂಸರಾದ ಡಾ. ಆರ್. ಸಿ. ಹಿರೇಮಠರೊಂದಿಗಿನ ನನ್ನ ಸಂಬಂಧ ಮುಂದುವರಿದುದರ ಕಾರಣವನ್ನು ಅರ್ಥಮಾಡಿಕೊಳ್ಳಬಹುದು.

ಹೀಗೆ ಡಾ. ಹಿರೇಮಠರ ಕೈಯ್ಯಲ್ಲಿ ರೂಪಗೊಂಡು, ಪ್ರಾಧ್ಯಾಪಕ ವೃತ್ತಿ ಪ್ರಾರಂಭಿಸಿದ ನಾನು, ಈಗ ಬಸವೇಶ್ವರ ಪೀಠದ ಪ್ರಾಧ್ಯಾಪಕ ಅಧಿಕಾರದಲ್ಲಿದ್ದೇನೆ. ಕನ್ನಡದ ಅನೇಕ ಕ್ಷೇತ್ರಗಳಲ್ಲಿ ಆಸಕ್ತಿಯುಳ್ಳ ನಾನು, ಬಸವೇಶ್ವರ ಪೀಠದ ಪ್ರಾಧ್ಯಾಪಕನಾದುದು ನನ್ನ ಬಹುಜನ ವಿದ್ವಾಂಸಮಿತ್ರರ ಮನಸ್ಸಿಗೆ ಬಂದಿಲ್ಲವೆಂದು ತೋರುತ್ತದೆ. ಆದರೆ ಎಲ್ಲವೂ ನಾವು ಬಯಸಿದಂತೆ ಸಂಭವಿಸುವುದಿಲ್ಲ. ಅಧ್ಯಯನಪೀಠದ ಆಂತರಿಕ ಹಿತ ದೃಷ್ಟಿಯಿಂದ ಅಂದಿನ ಮುಖ್ಯಸ್ಥರು, ಆಯ್ಕೆ ಸಮಿತಿ ಸದಸ್ಯರು ಹೀಗೆ ಮಾಡಿದರೆಂದು ತೋರುತ್ತದೆ. ವ್ಯಕ್ತಿಗಿಂತ ಸಂಸ್ಥೆ ದೊಡ್ಡದು. ಅವರ ನಿರ್ಣಯವನ್ನು ನಾನು ಮೌನವಾಗಿ ಸ್ವೀಕರಿಸಿದ್ದೇನೆ. ಮತ್ತು ಇರುವ ಅವಕಾಶದಲ್ಲಿಯೇ ಸಂಶೋಧನೆ - ಬೋಧನೆ ವಿಷಯವಾಗಿ ಪ್ರಾಮಾಣಿಕವಾಗಿ ದುಡಿಯುತ್ತಿದ್ದೇನೆ. ಆದರೂ ನನ್ನ ನಿರೀಕ್ಷೆ ಪೂರ್ಣವಾಗುತ್ತಿಲ್ಲ. ಕಾರಣ, ನನ್ನನ್ನು ಪೋಷಿಸುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯ ಕ್ಷಮಿಸಬೇಕು, ನನ್ನನ್ನು ಪ್ರೀತಿಸುತ್ತಿರುವ ವಿದ್ಯಾರ್ಥಿಗಳು ಕ್ಷಮಿಸಬೇಕು.

ನನ್ನದು ಮೂಲತಃ ಸೃಜನಶೀಲ ಮನೋಧರ್ಮ. ಆದರೆ ಕಾಲೇಜು ವಿದ್ಯಾರ್ಥಿಯಾಗಿರುವಾಗ ಹೊಸಗನ್ನಡ ಸಾಹಿತ್ಯದ ಪ್ರಭಾವ ಗಾಢವಾಗಿರದಿದ್ದ ಕಾರಣ, ನಾನು ಹಳಗನ್ನಡ ಸಾಹಿತ್ಯದ ಅಭ್ಯಾಸಿಯಾಗುವುದು ಅನಿವಾರ್ಯವಾಯಿತು. ಮುಂದೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯಾದುದರಿಂದ ಸಂಶೋಧಕನಾಗುವುದು ಇನ್ನೂ ಅನಿವಾರ್ಯವಾಯಿತು. ಒಮ್ಮೊಮ್ಮೆ ನನಗನಿಸುತ್ತದೆ: ಬೇರೆ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿದ್ಯಾರ್ಥಿಯಾಗಿದ್ದರೆ ನಾನು ಸೃಜನಶೀಲ ಬರಹಗಾರನಾಗುತ್ತಿದ್ದೆನೆಂದು. ಹೀಗಿದ್ದೂ ಸಂಶೋಧಕನಾಗಿ ಬೆಳೆದುದಕ್ಕೆ ನನಗೇನೂ ಬೇಸರವಿಲ್ಲ.

೧೯೬೨ರಲ್ಲಿ ಅಧ್ಯಾಪನ-ಲೇಖನ ಕಾರ್ಯಗಳನ್ನು ಮುಂದುವರಿಸಿದಂತೆ ಜನ - ವಿದ್ವಜ್ಜನ ನನ್ನನ್ನು ಸಂಶೋಧಕನೆಂದು ಗುರುತಿಸತೊಡಗಿದರು. ಅವರ ನಿರೀಕ್ಷೆ-ವಿಶ್ವಾಸಗಳನ್ನು ಹುಸಿಗೊಳಿಸಬಾರದೆಂಬ ನಿರಂತರ ಎಚ್ಚರ ಕಾರಣವಾಗಿ ನನಗರಿಯದಂತೆ ಸಂಶೋಧಕನಾಗಿ ಬೆಳೆದೆ.

ಕನ್ನಡ ಸೃಜನ ಸಾಹಿತ್ಯವು ನವೋದಯ - ನವ್ಯ - ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ ಕನ್ನಡ ಸಂಶೋಧನಸಾಹಿತ್ಯವೂ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿ ವ್ಯಾಖ್ಯಾನನಿಷ್ಠ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬೆಳೆದಿದೆ. ಈ ಎಲ್ಲ ಘಟ್ಟಗಳಲ್ಲಿಯೂ ನಾನು ನಡೆದುಬಂದಿದ್ದೇನೆ. ಕನ್ನಡಸಂಶೋಧನೆಯು ಸಂಸ್ಕೃತಿ-ಶಾಸನ-ಜಾನಪದ-ನಾಮವಿಜ್ಞಾನ ಇತ್ಯಾದಿ ಹೊಸಕ್ಷೇತ್ರಗಳನ್ನು ಅಂತರಶಿಸ್ತೀಯವಾಗಿ ಅಳವಡಿಸಿಕೊಳ್ಳುತ್ತ ಬಂದಿದೆ. ಈ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಳ್ಳುತ್ತಬೆಳೆದಿದ್ದೇನೆ. ಹೀಗೆ, ಈ ಎರಡೂ ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ, ನನ್ನ ಕೃತಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ.

ಭಾರತದಂತಹ ಭಾವನಿಷ್ಠ ರಾಷ್ಟ್ರದಲ್ಲಿ ಸಂಶೋಧನೆ ಸರಳದಾರಿಯಲ್ಲ. 'ಕಹಿ ಸತ್ಯ ಹೇಳಬಾರದು' ಎಂಬ ಸಂಪ್ರದಾಯದ ವಾರಸುದಾರರಾದ ಭಾರತೀಯರಿಗೆ ಅಂಥ ಸತ್ಯ ಸಹಜವಾಗಿಯೇ ಸಿಹಿಯೆನಿಸುವುದಿಲ್ಲ. ಹೀಗಾಗಿ ಈ ರಾಷ್ಟ್ರದಲ್ಲಿ ಸಂಶೋಧಕ ಆಗಾಗ ಸಣ್ಣಸಣ್ಣ ಶಿಲುಬೆಗಳನ್ನು ಏರಬೇಕಾಗುತ್ತದೆ, ಅನೇಕ ಅಗ್ನಿಕುಂಡಗಳನ್ನು ದಾಟಬೇಕಾಗುತ್ತದೆ. ಆದರೆ ಕಾಲಕೆಳಗಿನ ಬೆಂಕಿಗಿಂತ ಕಣ್ಣುಮುಂದಿನ ಬೆಳಕು ದೊಡ್ಡದೆಂಬ ನನ್ನ ನಂಬಿಕೆ, ನನ್ನನ್ನು ಈವರೆಗೆ ಉಳಿಸಿದೆ-ಬೆಳೆಸಿದೆ ಎಂದು ಭಾವಿಸುತ್ತೇನೆ.

ಸಂಶೋಧನೆ ಎನ್ನುವುದು ಬಹಳಷ್ಟು ಸಲ ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣ ವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ. ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ

ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. "ಎಲ್ಲರೂ ಅಹುದೆಂಬುದು ಪ್ರಮಾಣವಲ್ಲ ಕಾಣಿರೋ, ಎಲ್ಲರೂ ಅಲ್ಲವೆಂಬುದು ಪ್ರಮಾಣವಲ್ಲ ಕಾಣಿರೋ, ಅಹುದೆಂಬುವನೂ ಅಲ್ಲವೆಂಬುವನೂ ಎನ್ನ ಮನೋಮೂರ್ತಿ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ ನೀನೇ ಬಲ್ಲೆ" ಎಂಬ ವಚನವಂತೂ ನನ್ನನ್ನು ಸದಾ ಎಚ್ಚರಿಸುತ್ತಲಿದೆಯೆಂದು ವಿನಮ್ರನಾಗಿ ಹೇಳಬಯಸುತ್ತೇನೆ.

ಇಂದು ನವೆಂಬರ್ ೨೮. ನನಗೆ ೫೦ ವರ್ಷ, ನನ್ನ ಸಂಶೋಧನೆಗೆ ೨೫ ವರ್ಷ. ಇದು ನನ್ನ ಆಯುರ್ಮಾನದ ಸುವರ್ಣಸಂದರ್ಭ, ನನ್ನ ಲೇಖನ ವಯೋಮಾನದ ರಜತಸಂದರ್ಭ. ಈ ಅವಧಿಯಲ್ಲಿ ಗ್ರಂಥಗಳನ್ನು ಬಿಟ್ಟರೂ ನಾನು ಪ್ರಕಟಿಸಿದ ಲೇಖನಗಳ ಸಂಖ್ಯೆ ಇನ್ನೂರಕ್ಕೂ ಮಿಗಿಲು. ಬೇರೆ ಬೇರೆ ಪತ್ರಿಕೆಗಳಲ್ಲಿ ಚದರಿಹೋಗಿದ್ದ ಇವುಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುವ ಆವಶ್ಯಕತೆಯನ್ನು ಅನೇಕ ಮಿತ್ರರು, ವಿಶೇಷವಾಗಿ ಡಾ. ಹಾ. ಮಾ. ನಾಯಕ ಅವರು ಆಗಾಗ ನನ್ನ ಮುಂದೆ ಪ್ರಸ್ತಾಪ ಮಾಡುತ್ತಿದ್ದರು. ಕೆಲಸದ ಒತ್ತಡ, ಪ್ರಕಾಶನದ ಅನಾನುಕೂಲತೆಯಿಂದಾಗಿ ಈ ಕಾರ್ಯ ಮುಂದುಹೋಗುತ್ತಲಿದ್ದಿತು. ನನ್ನ ೫೦ನೇ ವರ್ಷವನ್ನು ನೆಪವನ್ನಾಗಿಟ್ಟುಕೊಂಡು, ಪಟ್ಟುಹಿಡಿದು ಈಗ ಅವುಗಳನ್ನು ಪ್ರಕಟಿಸಿದ್ದೇನೆ.

೩೦ರಷ್ಟು ಗ್ರಂಥಗಳನ್ನು ಬಿಟ್ಟರೂ ಇಪ್ಪತ್ತು ವರ್ಷಗಳಲ್ಲಿ ೨೦೦ರಷ್ಟು ಲೇಖನಗಳನ್ನು ನಾನು ಬರೆದದ್ದೇಕೆ? ಇದಕ್ಕೆ ವಿದ್ವತ್ತಿನ ಮೇಲಿನ ಪ್ರೀತಿ, ದುಡಿಮೆಯ ಪ್ರವೃತ್ತಿ, ಸಂಸ್ಥೆಯ ಋಣಭೀತಿ, ಕಾರಣವಾಗಿರಬಹುದು. ಇವುಗಳಿಗಿಂತ ಮುಖ್ಯಕಾರಣ, ನಾನು ಉದ್ದಕ್ಕೂ ಸಂಸ್ಥೆಯಲ್ಲಿ ಅನುಭವಿಸುತ್ತ ಬಂದ ಕಷ್ಟಪರಂಪರೆ. ಈ ಅವಧಿಯಲ್ಲಿ ಬದುಕುವುದರ ಸಲುವಾಗಿ ಬರವಣಿಗೆಯನ್ನು ಮೊರೆಹೊಗುವುದು ನನಗೆ ಅನಿವಾರ್ಯವಾಗಿದ್ದಿತು. ಹೀಗಾಗಿ ಇಲ್ಲಿಯ ಉತ್ತಮ ಲೇಖನಗಳೆಲ್ಲ ನನ್ನ ಕಷ್ಟಕಾಲದಲ್ಲಿ ಹುಟ್ಟಿದವುಗಳಾಗಿವೆ.

ಈ ಸಂಪುಟಗಳಲ್ಲಿ ಒಂದನ್ನು ನನ್ನ ಕನ್ನಡದ ಕೆಲಸಗಳಿಗೆ 'ಸಾಂಸ್ಥಿಕ ಕುಲುಮೆ'ಯಾಗುವ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠಕ್ಕೆ ಅರ್ಪಿಸಿದ್ದೇನೆ. ಇನ್ನೊಂದನ್ನು ನನ್ನ ಹೆಚ್ಚುವರಿ ಶ್ರಮವನ್ನು ಸಮಾಜಕ್ಕೆ ವಿನಿಯೋಗಿಸಲು ಮಾಧ್ಯಮವಾಗಿರುವ ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನಸಂಸ್ಥೆಗೆ ಅರ್ಪಿಸಿದ್ದೇನೆ. ಮುಂದೆ ಬರಲಿರುವ ಇಂಥ ಇನ್ನೊಂದು ಗ್ರಂಥವನ್ನು ನನ್ನ ಮಟ್ಟಿಗೆ 'ಸಾಮಾಜಿಕ ಕುಲುಮೆ'ಯಾಗಿ ಪರಿಣಮಿಸಿದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಅರ್ಪಿಸುವ ಮನಸ್ಸು ಮಾಡಿದ್ದೇನೆ.

ಮುಂಜಾನೆ ಜರುಗಿದ ಸಮೀಕ್ಷಾಗೋಷ್ಠಿ ಕಾರ್ಯಕ್ರಮಗಳಲ್ಲಿ ಪಾಲುಗೊಂಡವರೆಲ್ಲ ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರು, ಪರಮಸ್ನೇಹಿತರು. ಮೈಸೂರಿನಿಂದ ವೆಂಕಟಾಚಲಶಾಸ್ತ್ರಿ, ಬೆಂಗಳೂರಿನಿಂದ ಡಾ. ಚಿದಾನಂದಮೂರ್ತಿ, ಡಾ. ವಿದ್ಯಾಶಂಕರ, ಮಂಗಳೂರಿನಿಂದ ಡಾ. ವಿವೇಕ ರೈ, ಗುಲಬರ್ಗಾದಿಂದ ಡಾ. ಎಂ. ಜಿ. ಬಿರಾದಾರ, ಗದಗ ಮತ್ತು ಚಿತ್ರದುರ್ಗಗಳಿಂದ ಶ್ರೀ ಶ್ಯಾಮಸುಂದರ ಬಿದರಕುಂದಿ, ಮತ್ತು ಬಿ. ರಾಜಶೇಖರಪ್ಪ ಆಗಮಿಸುವುದರ ಮೂಲಕ ನನ್ನನ್ನು ಕೃತಜ್ಞನನ್ನಾಗಿ ಮಾಡಿದ್ದಾರೆ. ಕರ್ನಾಟಕದ ಬಹುಜನ ಸಂಶೋಧಕರು, ವಿದ್ವಾಂಸರು ಒಂದೇ ವೇದಿಕೆಯ ಮೇಲೆ ಸಮಾವೇಶಗೊಂಡುದು ನನಗೆ ದೊಡ್ಡ ಗೌರವವೆಂದೇ ಭಾವಿಸುತ್ತೇನೆ.

ಈ ಸಂದರ್ಭದಲ್ಲಿ ಡಾ. ಎಂ. ಚಿದಾನಂದಮೂರ್ತಿ ಅವರನ್ನು ನಾನು ವಿಶೇಷವಾಗಿ ನೆನೆಯುತ್ತೇನೆ. 'ಭಯಪಡಬೇಡಿ, ಈ ಕಷ್ಟಗಳು ನಿಮ್ಮನ್ನು ಬೆಳೆಸುತ್ತವೆ. ನಿಮ್ಮ ಬೆಂಬಲಕ್ಕೆ ಅಂದರೆ ಸ್ನೇಹಿತನ ಅಲ್ಲ, ಸತ್ಯದ ಬೆಂಬಲಕ್ಕೆ ನಾವೆಲ್ಲ ಇದ್ದೇವೆ' ಎಂಬಂಥ ಮಾತುಗಳ ಮೂಲಕ ಸಂಶೋಧನ ಸಂದರ್ಭದಲ್ಲಿ ಉದ್ದಕ್ಕೂ ನನ್ನ ಆತ್ಮವಿಶ್ವಾಸ ಕುಸಿಯದಂತೆ ನೋಡಿಕೊಂಡವರು ಅವರು.

ಕೇವಲ ಪುಸ್ತಕ ಬಿಡುಗಡೆಯನ್ನು ಮಾತ್ರ ಇಟ್ಟುಕೊಳ್ಳುವ ವಿಚಾರ ನನ್ನದಾಗಿದ್ದಿತು. ಆದರೆ ಇದಕ್ಕೆ ಎರಡು ಸಮೀಕ್ಷಾ ಗೋಷ್ಠಿಗಳನ್ನು ಜೋಡಿಸುವ ವಿಚಾರ ಮಾಡಿದವರು, ಅದನ್ನು ಆಚರಣೆಯಲ್ಲಿ ತಂದವರು ನನ್ನ ಕೆಲವು ಜನ ಸ್ನೇಹಿತರು. ಕನ್ನಡದ ರಚನಾತ್ಮಕ ಕೆಲಸಗಳಿಗೆ, ಸಂಘಟನೆಗೆ ಇವರೆಲ್ಲ ಹೆಸರಾದವರು. ಕನ್ನಡದ ಮೇಲಿನ ಪ್ರೀತಿಯಿಂದ ಈ ಕಾರ್ಯಕ್ರಮವನ್ನು ಸಂಘಟಿಸಿದ ಇವರ ಬೆಂಕಿಯಂಥ ಪ್ರಖರ ಸ್ನೇಹಕ್ಕೆ ನಾನು ಕೃತಜ್ಞನಾಗಿದ್ದೇನೆ.

೧೫೦೦ ಪುಟ ವ್ಯಾಪ್ತಿಯ ಈ ಸಂಪುಟಗಳನ್ನು ಪ್ರಕಾಶಗೊಳಿಸಿದವರು ಬೆಂಗಳೂರಿನ 'ನರೇಶ ಅಂಡ್ ಕಂಪನಿ' ಪುಸ್ತಕ ಪ್ರಕಾಶನ ಸಂಸ್ಥೆಯ ಮಾಲಕರಾದ ಶ್ರೀ. ಜಿ. ಕಲ್ಲಯ್ಯ ಅವರು. ಅವರದೂ ನನ್ನದೂ ಕೇವಲ ಒಂದು ವರ್ಷದ ಪರಿಚಯ. ಹೀಗಿದ್ದೂ ಅವರು ಈ ಸಂಪುಟಗಳನ್ನು ಪ್ರಕಟಿಸಲು ಧೈರ್ಯಮಾಡಿದರು. ಅವರಿಗೆ ನನ್ನ ಬಗ್ಗೆ, ನನ್ನ ಲೇಖನಗಳ ಮಹತ್ವದ ಬಗ್ಗೆ ಒಳ್ಳೆಯ ಮಾತನ್ನು ಆಡಿದವರು ಡಾ. ದೇ. ಜವರೇಗೌಡರು ಮತ್ತು ಮಿತ್ರರಾದ ಜೀ. ಶಂ. ಪರಮಶಿವಯ್ಯನವರು. ಇವರಿಬ್ಬರಿಗೂ ಶ್ರೀ ಕಲ್ಲಯ್ಯನವರಿಗೂ ನನ್ನ ಧನ್ಯವಾದಗಳು ಸಲ್ಲುತ್ತವೆ.

ಗದುಗಿನ 'ತ್ವರಿತ' ಮುದ್ರಣಾಲಯದ ಮಾಲಕರಾದ ಶ್ರೀ ಫ. ಶಿ. ಭಾಂಡಗೆ ಅವರು ನನ್ನ ಹಳೆಯ ಸ್ನೇಹಿತರು. "ಒಂದು ವೇಳೆ ಪ್ರಕಾಶಕರು ಲಭಿಸದಿದ್ದಲ್ಲಿ ನಾನು ಅಚ್ಚಿಸಿಕೊಡುತ್ತೇನೆ, ಹಣದ ವಿಚಾರ ಆಮೇಲೆ" ಎನ್ನುವುದರ ಮೂಲಕ ನನ್ನ ಬಗ್ಗೆ ಪ್ರೀತಿ ವ್ಯಕ್ತಪಡಿಸಿದ ಅವರು ಎರಡು ತಿಂಗಳಲ್ಲಿ ೧೫೦೦ ಪುಟಗಳ ಈ ಸಂಪುಟಗಳನ್ನು ಪೂರ್ಣಗೊಳಿಸಿಕೊಟ್ಟುದು ಒಂದು ಸಾಹಸ, ಒಂದು ಪವಾಡ. 'ತ್ವರಿತ ಮುದ್ರಣ' ಎಂಬ ಹೆಸರನ್ನು ಸಾರ್ಥಕಗೊಳಿಸಿದ ಶ್ರೀ ಭಾಂಡಗೆ ಅವರಿಗೂ, ಅವರ ಅಳಿಯ ಶ್ರೀ. ಕೆ. ಅಶೋಕ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಸಂಪುಟಗಳು ಹೊರಬರುವಲ್ಲಿ ಮುದ್ರಣಯಂತ್ರದೊಂದಿಗೆ ಯಂತ್ರವಾಗಿ ದುಡಿದವರು ಡಾ. ಬಿ. ಆರ್. ಹಿರೇಮಠರು. ರಾತ್ರಿಗಳನ್ನೂ ಹಗಲು ಮಾಡಿ ದುಡಿದ ಅವರ ಅನನ್ಯ ಪ್ರೀತಿ-ವಿಶ್ವಾಸಗಳಿಗೆ, ಕರಡಚ್ಚು ನೋಡುವ ಕೆಲಸದಲ್ಲಿ ನೆರವಾದ ಶ್ರೀ ಉಮೇಶ ಅಂಗಡಿ ಅವರಿಗೆ ನಾನು ಋಣಿಯಾಗಿದ್ದೇನೆ.

ಈ ಸಂದರ್ಭದಲ್ಲಿ ಎರಡು ವಿಚಾರಗಳು: ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಮಿಕ್ಕ ವಿಭಾಗಗಳ ಹೊಣೆಯೇ ಒಂದು ರೀತಿ; ಕನ್ನಡ ವಿಭಾಗದ ಹೊಣೆಯೇ ಒಂದು ರೀತಿ. ಕರ್ನಾಟಕದಲ್ಲಿ ಕನ್ನಡ ವಿಭಾಗಗಳು ಸಶಕ್ತವಾಗಿರಬೇಕಾದುದು ಅಪೇಕ್ಷಣೀಯ. ಈವರೆಗೆ ನಮ್ಮ ರಾಜ್ಯದ ಸ್ನಾತಕೋತ್ತರ ಕನ್ನಡ ವಿಭಾಗಗಳು ಸಂಶೋಧನೆಗೆ ಸಂಬಂಧಿಸಿದಂತೆ ಉತ್ತಮ ಕೆಲಸ ಮಾಡಿವೆ. ಆದರೆ ಕೆಲವು ಸಮಯದ ಬಳಿಕ ದೀಪಕ್ಕೆ ಸಹಜವಾಗಿಯೇ ಕುಡಿ ಬರುವಂತೆ ಈಗ ಕನ್ನಡ ವಿಭಾಗಗಳ ಕೆಲಸಕ್ಕೆ ಕುಡಿ ಬಂದಿದೆ. ಅವುಗಳ ಪ್ರಕಾಶ ಕುಂದುತ್ತ ನಡೆದಿದೆ. ಇದಕ್ಕೆ ಸರಿಯಾದ ಉಪಾಯ ಕಣ್ಣುಮುಚ್ಚಿ ಎಣ್ಣೆ ಸುರಿಯುವುದಲ್ಲ. ಕುಡಿಕೊಡವಿ ಜ್ಯೋತಿ ಸರಿಯಾಗಿ ಉರಿಯುವಂತೆ ಮಾಡುವುದು. ಕನ್ನಡ ಪ್ರಾಧ್ಯಾಪಕರಾದ ನಾವೆಲ್ಲ ಕನ್ನಡ ವಿಭಾಗಗಳನ್ನು ಪುನಶ್ಚೇತನಗೊಳಿಸುವ ಬಗ್ಗೆ ಗಂಭೀರವಾಗಿ ಇಂದು ವಿಚಾರಿಸಬೇಕಾಗಿದೆ.

ಇನ್ನೊಂದು ವಿಷಯ: ಬಹಳ ದಿನಗಳಿಂದ ಇದು ನನ್ನ ಮನಸ್ಸನ್ನು ಆವರಿಸಿದೆ. ಆಲ್ ಇಂಡಿಯಾ ಹಿಸ್ಟರಿ ಕಾಂಗ್ರೆಸ್, ಸೌಥ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಕರ್ನಾಟಕ ಹಿಸ್ಟರಿ ಕಾಂಗ್ರೆಸ್ - ಹೀಗೆ ಒಂದಕ್ಕಿಂತ ಹೆಚ್ಚು ಸಂಘಟನೆಗಳನ್ನು ಕಟ್ಟಿಕೊಂಡು ಇತಿಹಾಸ ಪ್ರಾಧ್ಯಾಪಕರು ತಮ್ಮ ಜ್ಞಾನಕ್ಷೇತ್ರದ ಬೆಳವಣಿಗೆಗಾಗಿ ಶ್ರಮಿಸುತ್ತಿದ್ದಾರೆ. ಇದೇ ರೀತಿ ಕನ್ನಡ ವಿದ್ವಾಂಸರು ಇಂಥ ಒಂದು ಸಂಸ್ಥೆಯನ್ನು "ಕನ್ನಡ ಸಂಶೋಧನ

ಪರಿಷತ್ತು" ಹೆಸರಿನಿಂದ ಪ್ರಾರಂಭಿಸುವುದು ಇಂದಿನ ತೀರ ಅಗತ್ಯವಾಗಿದೆ. ಸಂಶೋಧನೆ ಮುಂದುವರಿಯಲು, ಸಂಶೋಧಕ ವಿದ್ವಾಂಸರಲ್ಲಿ ಪರಸ್ಪರ ಸಂಬಂಧ ಬೆಳೆಯಲು, ಯುವಕರಲ್ಲಿ ಸಂಶೋಧನಾಸಕ್ತಿ ವರ್ಧಿಸಲು ಈ ಕಾರ್ಯವನ್ನು ನಾವು ಮಾಡಬೇಕಾಗಿದೆ. ಡಾ. ಚಿದಾನಂದಮೂರ್ತಿ, ಡಾ. ಹಾ. ಮಾ. ನಾಯಕ, ಡಾ. ವೆಂಕಟಾಚಲಶಾಸ್ತ್ರಿ, ಮತ್ತು ಇಲ್ಲಿಯ ಅನೇಕ ಮಿತ್ರರೊಂದಿಗೆ ಸಮಾಲೋಚಿಸಿ ಉತ್ತೇಜಕ ಉತ್ತರ ಪಡೆದಿದ್ದೇನೆ. ಆದುದರಿಂದ ಹಂಪೆಯಲ್ಲಿ ಪ್ರಥಮ ಸಮಾವೇಶ ಜರುಗಿಸುವ ಮೂಲಕ ಈ ಸಂಘಟನೆಯನ್ನು ಬೇಗ ಅಸ್ತಿತ್ವಕ್ಕೆ ತರುವುದು ಅಗತ್ಯವಿದೆ.

ಕೊನೆಯದಾಗಿ, ನನ್ನ ವಿದ್ಯಾರ್ಥಿ ಮಿತ್ರರನ್ನು ನೆನೆಯುವುದು ಸಂತೋಷದ - ತೃಪ್ತಿಯ - ಧನ್ಯತೆಯ ವಿಷಯ. ಅವರು ನನ್ನ ಲಿಂಗೈಯ ಇಷ್ಟಲಿಂಗ. ಕಳೆದ ೨೫ ವರ್ಷಗಳ ಅವಧಿಯಲ್ಲಿ ನನ್ನ ಸಂಪರ್ಕಕ್ಕೆ ಬಂದ ಎಲ್ಲ ವಿದ್ಯಾರ್ಥಿಗಳೂ ನನ್ನ ಬಗ್ಗೆ ಅದಮ್ಯ ಪ್ರೀತಿ ವಿಶ್ವಾಸ ತೋರುತ್ತ ಬಂದಿದ್ದಾರೆ. ಎಲ್ಲೆಲ್ಲಿಯೋ ಇರುವ ಅವರಿಗೂ ಈಗಿನವರಿಗೂ ನನ್ನ ಕೃತಜ್ಞತೆಗಳು.

ಈ ಕಾರ್ಯಕ್ರದಲ್ಲಿ ಕನ್ನಡ ಅಧ್ಯಯನ ಪೀಠದ, ಮಿಕ್ಕ ವಿಭಾಗಗಳ ಪ್ರಾಧ್ಯಾಪಕರು ಭಾಗವಹಿಸಿದ್ದಾರೆ. ಧಾರವಾಡದ, ಬೇರೆ ಗ್ರಾಮಗಳ ಆತ್ಮೀಯರು ಆಗಮಿಸಿದ್ದಾರೆ. ಇವರೆಲ್ಲರಿಗೂ ನನ್ನ ವಂದನೆಗಳು.

"ಕಲಬುರ್ಗಿ : ಐವತ್ತು" ಸಮಾರಂಭದ ಭಾಷಣ (ಧಾರವಾಡ, ೧೯೮೮)

ಆಕರ : ಮಾರ್ಗ ಸಂಪುಟ–೬

■■

೭೩

ಕಲಬುರ್ಗಿ : ಅರುವತ್ತು

೧೯೯೮

ಎಲ್ಲರಿಗೂ ನಮಸ್ಕಾರ

"ಕೃತಜ್ಞ" ಶಬ್ದದಿಂದಲೇ ನನ್ನ ಮಾತನ್ನು ಆರಂಭಿಸುತ್ತೇನೆ. ನೀವೆಲ್ಲ ಸೇರಿ ಯೋಜಿಸಿರುವ ಈ ಕಾರ್ಯಕ್ರಮ ನಿಮ್ಮಮಟ್ಟಿಗೆ ಸತ್ಕಾರ ಸಮಾರಂಭ, ನನ್ನಮಟ್ಟಿಗೆ ನಮಸ್ಕಾರ ಸಮಾರಂಭ. ಅರವತ್ತು ವರ್ಷಗಳ ಅವಧಿಯಲ್ಲಿ ನಾನು, ನಿಮ್ಮ- ನಿಮ್ಮಂಥ ಅನೇಕರ ಉಪಕಾರದಲ್ಲಿ ಬದುಕಿದ್ದೇನೆ, ಸಹಕಾರದಲ್ಲಿ ಬೆಳೆದಿದ್ದೇನೆ. ಅವರೆಲ್ಲರಿಗೂ ನಮಸ್ಕಾರ. ತಿಳಿದೋ ತಿಳಿಯದೆಯೋ ನನ್ನಿಂದ ಸಜ್ಜನರಿಗೆ ನೋವಾಗಿದ್ದರೆ ಅವರ ಕ್ಷಮೆಯನ್ನು ಅವಶ್ಯ ಕೇಳುತ್ತೇನೆ. ಅಸಜ್ಜನರಿಗೆ ನೋವಾಗಿದ್ದರೆ ಕ್ಷಮೆ ಕೇಳುವ ಆವಶ್ಯಕತೆಯಿಲ್ಲ.

ನಾನು ದುರ್ದೈವಿಯೆಂದು ನನ್ನ ಗೆಳೆಯರು ಹೇಳುತ್ತಾರೆ, ಸುದೈವಿಯೆಂದೂ ಹೇಳುತ್ತಾರೆ. ಇದಕ್ಕೆ ನನ್ನ ವಿವರಣೆ ಇಷ್ಟು: ವ್ಯಕ್ತಿಕೇಂದ್ರಿತ ಬದುಕಿಗಿಂತ ಸಮಾಜಕೇಂದ್ರಿತ ಬದುಕು ಹೆಚ್ಚು ದುಃಖಮಯವಾದುದು. ಇದು ಗೊತ್ತಿದ್ದೂ ನಾನು ಹಳಕಟ್ಟಿ, ಬಸವನಾಳರ ಆದರ್ಶದಲ್ಲಿ ಸಮಾಜಕೇಂದ್ರಿತ ಬದುಕನ್ನು ಆಯ್ದುಕೊಂಡಿದ್ದೇನೆ. ನನಗೆ ಈ ದುಃಖದಲ್ಲಿಯೇ ಸುಖವಿದೆ. ಈ ದುಃಖದಾಚೆ ಇನ್ನೂ ದೊಡ್ಡ ಸುಖವಿದೆಯೆಂದು ನನಗೆ ತಿಳಿದಿದೆ. ಆದುದರಿಂದ ನನ್ನ ಗೆಳೆಯರು ಏನೇ ಹೇಳಲಿ, ತಿಳಿದೋ ತಿಳಿಯದೆಯೋ ಕ್ಷಣಿಕ ಸುಖದ ವ್ಯಕ್ತಿಕೇಂದ್ರಿತ ಬದುಕನ್ನು ಬಿಟ್ಟು, ಶಾಶ್ವತಸುಖದ ಸಮಾಜಕೇಂದ್ರಿತ ಬದುಕನ್ನು ಆಯ್ದುಕೊಂಡಿರುವ ನಾನು ಸುದೈವಿಯೆಂದೇ ಹೇಳಬೇಕು.

ನನ್ನದು ಆಕ್ರಮಣಕಾರಿ ವ್ಯಕ್ತಿತ್ವವಲ್ಲ, ಸಂರಕ್ಷಣಾತ್ಮಕ ವ್ಯಕ್ತಿತ್ವ. ಆಕ್ರಮಣಾಕಾರಿ ವ್ಯಕ್ತಿಯಂತೆ ಬೇರೆಯವರ ಗೆರೆಗಳನ್ನು ಅಳಿಸಿಹಾಕಿ, ನನ್ನ ಗೆರೆಯನ್ನು ದೀರ್ಘವಾಗಿಸಿಕೊಳ್ಳದೆ, ಸಂರಕ್ಷಣಾತ್ಮಕ ವ್ಯಕ್ತಿಯಾದ ನಾನು ಸ್ವಶಕ್ತಿಯಿಂದಲೇ ಅದನ್ನು ದೀರ್ಘವಾಗಿಸಿಕೊಂಡಿದ್ದೇನೆ. ಸಾಧ್ಯವಾದಾಗಲೆಲ್ಲ ಜೊತೆಯ ಗೆರೆಗಳೂ ದೀರ್ಘವಾಗುವಂತೆ ನೋಡಿಕೊಂಡಿದ್ದೇನೆ.

ನಾನು ಪರಿಪೂರ್ಣ ವ್ಯಕ್ತಿಯೆಂಬ ಭ್ರಮೆ ನನಗಿಲ್ಲ. ದುಷ್ಟತನ, ದೌರ್ಬಲ್ಯ ಮನುಷ್ಯನ ಸ್ವಭಾವಗಳಾಗಿವೆ. ದುಷ್ಟವ್ಯಕ್ತಿ ತನಗಾಗಿ ಸುತ್ತಲಿನ ಪರಿಸರವನ್ನು ನಾಶಮಾಡಿ, ಕೊನೆಗೆ ತಾನೂ ನಾಶವಾಗುತ್ತಾನೆ. ದೌರ್ಬಲ್ಯದ ವ್ಯಕ್ತಿ ಪರಿಸರವನ್ನು ನಾಶಮಾಡುವುದಿಲ್ಲ, ಬಹಳೆಂದರೆ ತಾನು ನಾಶವಾಗುತ್ತಾನೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ನನ್ನಲ್ಲಿ ದೌಷ್ಟ್ಯವಿಲ್ಲ. ಮನುಷ್ಯ ಸಹಜ ದೌರ್ಬಲ್ಯವಿದ್ದು, ಅದು ಎರಡು ತೆರನಾಗಿದೆ.

ಅತಿಯೆನ್ನುವಷ್ಟು ಇನ್ನೊಬ್ಬರಿಗೆ ಸಹಾಯ ಮಾಡಿ, ಅವರಿಂದ ನಾನು ದುರುಪಯೋಗಕ್ಕೆ ಗುರಿಯಾಗುತ್ತೇನೆ - ಇದು ಒಂದು ಬಗೆಯ ದೌರ್ಬಲ್ಯ. ಸಾಮಾನ್ಯವಾಗಿ ಆತ್ಮದ ಮಾತು ಕೇಳುವ ನಾನು, ಕ್ವಚಿತ್ತಾಗಿ ಮನಸ್ಸಿನ ಮಾತು ಕೇಳಿ ಕೆಲವೊಮ್ಮೆ ತಪ್ಪು ಮಾಡುತ್ತೇನೆ -ಇದು ಇನ್ನೊಂದು ಬಗೆಯ ದೌರ್ಬಲ್ಯ. ನನ್ನ ವ್ಯಕ್ತಿತ್ವದ ಒಟ್ಟು ಸಾರವಿದು.

* * *

ನಾನು ಹುಟ್ಟಿದ್ದು ಹಳ್ಳಿಯ ಅವಿಭಕ್ತ ಕುಟುಂಬದಲ್ಲಿ. ನನ್ನ ತಂದೆ ತಾಯಿಗಳು ಈ ಅವಿಭಕ್ತ ಕುಟುಂಬವನ್ನು ಶ್ರಮಸಂಸ್ಕೃತಿಯ ಬುನಾದಿಯ ಮೇಲೆ ಕಟ್ಟಿದರು. ಹೀಗಾಗಿ ದುಡಿದು ಉಣ್ಣುವುದು ನಮ್ಮ ಮನೆತನದ ಮುಖ್ಯ ಲಕ್ಷಣವಾಗಿದೆ. ನನ್ನ ತಮ್ಮನು ಬೆಳೆದರೆ ನಾನು ಬೆಳೆದಂತೆ - ಎಂಬ ಅವಿಭಕ್ತ ಪ್ರಜ್ಞೆಯ ನನ್ನ ಅಣ್ಣಂದಿರು ತಮ್ಮ ಶಿಕ್ಷಣವನ್ನು ಮೊಟಕುಗೊಳಿಸಿ, ನನ್ನ ಶಿಕ್ಷಣಕ್ಕೆ ಕಷ್ಟಪಟ್ಟಿದ್ದಾರೆ. ನಾನು ಪ್ರೊಫೆಸರ್, ಪ್ರಶಸ್ತಿವಿಜೇತ, ಕುಲಪತಿಯಾದ ಸಂದರ್ಭಗಳಲ್ಲಿ ದೊಡ್ಡ ಸಾಮ್ರಾಜ್ಯ ಗಳಿಸಿದಷ್ಟು ಸಂಭ್ರಮಿಸಿದ್ದಾರೆ. ಹೀಗೆ ಅವರು ನನಗಾಗಿ ಮಾಡಿದ ತ್ಯಾಗ, ತೋರಿಸುತ್ತ ಬಂದ ಪ್ರೀತಿಗಳ ಋಣವನ್ನು ನಾನು ಏಳೇಳು ಜನ್ಮಗಳಲ್ಲಿ ತೀರಿಸದವನಾಗಿದ್ದೇನೆ.

ಈ ರೀತಿ ತಂದೆ-ತಾಯಿ-ಅಣ್ಣ-ತಮ್ಮಂದಿರಿಂದ ಆಕಾರ ಪಡೆದ ನಾನು, ಆಕೃತಿ ಪಡೆದುದು ಗುರುಗಳಾದ ಪ್ರೊ. ಬಿ. ಟಿ. ಸಾಸನೂರ, ಡಾ. ಆರ್. ಸಿ. ಹಿರೇಮಠ ಅವರ ಕೈಯಲ್ಲಿ. ತಮ್ಮ ವಿದ್ವತ್ತಿನ ನಿಖರತೆಯ ಮೂಲಕ, ವಿದ್ವತ್ತಿನ ವಿಸ್ತಾರದ ಮೂಲಕ ನನ್ನೊಳಗೆ ಯಾವಾಗಲೂ ಜೀವಂತವಾಗಿರುವ ಈ ಇಬ್ಬರು ಗುರುಗಳಿಗೆ ಆಜನ್ಮ ಋಣಿಯಾಗಿದ್ದೇನೆ.

ನನ್ನ ಜೀವನದ ಎರಡನೆಯ ಘಟ್ಟ ಆರಂಭವಾದುದು, ಅಧ್ಯಾಪಕ ವೃತ್ತಿಯಿಂದ. ಇದಕ್ಕೆ ನೆಲವಾದುದು ಧಾರವಾಡ, ನೆಲೆಯಾದುದು ಕರ್ನಾಟಕ ವಿಶ್ವವಿದ್ಯಾಲಯ. ಈ ಸುದೀರ್ಘ ಅವಧಿಯಲ್ಲಿ ನಾನು ಮುಖ್ಯವಾಗಿ ಕರ್ನಾಟಕ ಕಾಲೇಜು, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಅಧ್ಯಯನ ಪೀಠ, ವೀರಶೈವ ಧಾರ್ಮಿಕ ಸಂಸ್ಥೆಗಳ ಸಂಪರ್ಕದಲ್ಲಿ ಬೆಳೆದಿದ್ದೇನೆ.

೧೯೬೨ರಿಂದ ೧೯೬೬ರ ವರೆಗಿನ ಕರ್ನಾಟಕ ಕಾಲೇಜ್ ಅಧ್ಯಾಪಕ ವೃತ್ತಿ, ನನ್ನ ಜೀವಮಾನ ಸೌಧದ ಅಡಿಗಲ್ಲು, ಆ ಅವಧಿಯಲ್ಲಿ ನಾನು ರೂಢಿಸಿಕೊಂಡ ಬೋಧನ ವಿಧಾನ, ಬಳಸಿಕೊಂಡ ಸಮೃದ್ಧ ಗ್ರಂಥಾಲಯ ಭವಿಷ್ಯದಲ್ಲಿ ನನ್ನ ಬಾಳಿನ ಬುತ್ತಿಯಾದವು. ಇಂದಿಗೂ ಆ ಕೆಂಪು ಇಟ್ಟಿಗೆಯ ಭವ್ಯ ಕಟ್ಟಡ ಕಂಡಾಗಲೆಲ್ಲ ಕೈಮುಗಿಯುವಷ್ಟು ಕರಗಿ ಹೋಗುತ್ತೇನೆ. ಮುಗ್ಧ ವಿದ್ಯಾರ್ಥಿಗಳು ನನ್ನನ್ನು ಪ್ರೀತಿಸುತ್ತಿದ್ದ ರೀತಿಗೆ ಈಗಲೂ ಧನ್ಯತೆಯನ್ನು ಅನುಭವಿಸುತ್ತೇನೆ.

ಸಾರ್ವಜನಿಕರ ನೆನಪಿನಿಂದ ಮರೆತು ಹೋಗಿದ್ದ ವಿದ್ಯಾವರ್ಧಕ ಸಂಘ, ನಾನು ಕಾರ್ಯದರ್ಶಿಯಾದ ಸಂದರ್ಭದಲ್ಲಿ ಮತ್ತೆ ಕರ್ನಾಟಕದ ಸುದ್ದಿಯಾಗಿ ಬೆಳೆಯಿತು., ಇಂದಿಗೂ ಮುಗಿಯದಿರುವ ಸಭಾಭವನದ ಅಡಿಗಲ್ಲು ಸ್ಥಾಪನೆ ಮೊದಲುಮಾಡಿ, ಅಂದು ಹತ್ತಾರು ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದ್ದಿತು. ಎಡಬಲದ ಮಿತ್ರ ಸಮಾಜ, ಟೆನ್ನಿಸ್ ಕೋರ್ಟ್, ಗರಗ ಸಿದ್ಧಲಿಂಗಪ್ಪ ಗ್ರಂಥಾಲಯಗಳನ್ನು ಬೇರೆಡೆಗೆ ವರ್ಗಾಯಿಸಿ, ಧಾರವಾಡದ ಹೃದಯದಂತಿರುವ ಆ ತ್ರಿಕೋನಾಕಾರದ ಸಂಪೂರ್ಣ ಜಾಗವನ್ನು ಸಾಂಸ್ಕೃತಿಕ ಚಟುವಟಿಕೆಗಳಿಂದ ತುಂಬುವ, ಸಾಂಸ್ಕೃತಿಕ ರಾಜಧಾನಿಯಾದ ಧಾರವಾಡದಲ್ಲಿ ಅದನ್ನು ಸಾಂಸ್ಕೃತಿಕ ರಾಜಭವನವನ್ನಾಗಿ ರೂಪಿಸುವ, ಅಂದರೆ ವಿದ್ಯಾವರ್ಧಕ ಸಂಘವನ್ನು ಸಿಟಿಯ ಯೂನಿವರ್ಸಿಟಿಯಾಗಿ ರೂಪಿಸುವ ಕನಸು ನನ್ನದಾಗಿದ್ದಿತು. ಕೊನೆಗೂ ಹಳಕಟ್ಟಿಯವರು ಹಣದ ಆರೋಪ ಹೊತ್ತು ಕೋರ್ಟ ಕಟಕಟೆಯಲ್ಲಿ ನಿಂತುದನ್ನು ನೆನಪು

ಮಾಡಿಕೊಳ್ಳುತ್ತ, ಹೊತ್ತ ಆರೋಪದಿಂದ ಮುಕ್ತನಾಗುತ್ತ ಸಂಘದಿಂದ ನಿರ್ಗಮಿಸಿದ್ದೇನೆ. ಅದೇನೇ ಇರಲಿ, ನನ್ನ ವ್ಯಕ್ತಿತ್ವಕ್ಕೆ ಸಾಮಾಜಿಕ ವಿಸ್ತಾರವನ್ನು ತಂದುಕೊಟ್ಟ ಈ ಸಂಸ್ಥೆಗೆ ಋಣಿಯಾಗಿದ್ದೇನೆ.

ಕನ್ನಡ ಅಧ್ಯಯನಪೀಠ ಅನೇಕ ಅರ್ಥಗಳಲ್ಲಿ ನನ್ನ "ಕರ್ಮ" ಭೂಮಿ. ಅದನ್ನು ನೆನಪು ಮಾಡಿಕೊಂಡಾಗಲೆಲ್ಲ, ನನ್ನ ಕಣ್ಣ ಮುಂದೆ ಮೊದಲು ಬರುವವರು ನನ್ನ ಪ್ರೀತಿಯ ವಿದ್ಯಾರ್ಥಿಗಳು. ನಾನು ಅವರ ಗುರು, ಅವರು ನನ್ನ ದೇವರು. ಲಿಂಗಪೂಜೆ-ಜಂಗಮದಾಸೋಹ ಪ್ರಜ್ಞೆಯಿಂದ ಅವರಿಗಾಗಿ ದುಡಿದ ಪುಣ್ಯ ನನ್ನದಾಗಿದೆ.

ಕನ್ನಡ ಅಧ್ಯಯನ ಪೀಠದ ಸೇವೆಯೆಂದರೆ ನನಗೆ ಸತ್ಯದ ಆರಾಧನೆ. ಆದರೆ ಈ ಸಂಸ್ಥೆಯನ್ನು ಸುಧಾರಿಸಲು -ಸಂರಕ್ಷಿಸಲು ಹೋಗಿ ನಾನು ಉದ್ದಕ್ಕೂ ಭಯದಲ್ಲಿಯೇ ಬದುಕು ಮಾಡಿದ್ದೇನೆ. ಈ ಭಯವನ್ನು ಮರೆಯುವುದಕ್ಕಾಗಿ ಬರವಣಿಗೆಯ ಮೊರೆ ಹೊಕ್ಕಿದ್ದೇನೆ. ಕೌಟುಂಬಿಕ ಅನ್ಯಾಯಗಳನ್ನು ನುಂಗಿಕೊಂಡು, ಅದರ ಕ್ಷೇಮಕ್ಕಾಗಿ ಆಜನ್ಮ ಶ್ರಮಿಸಿದ ಶರಶಯನಸ್ಥ ಭೀಷ್ಮರನ್ನು ನೆನಪಿಸಿಕೊಳ್ಳುತ್ತ, ನಿನ್ನೆ ಅದರಿಂದ ನಿವೃತ್ತಿ ಹೊಂದಿದ್ದೇನೆ. ನಾನು ಈ ಸಂಸ್ಥೆಗಾಗಿ ದುಡಿದುದು ಹೆಚ್ಚು, ಪಡೆದುದು ಕಡಿಮೆಯೆಂದು ಮಾತನಾಡುತ್ತಾರೆ. ಅದು ಅವರ ದೃಷ್ಟಿ. ಆದರೆ ನಾನು ಪಡೆದ ಪಗಾರ ಹೆಚ್ಚು, ದುಡಿದ ಪ್ರಮಾಣ ಕಡಿಮೆ- ಎಂಬ ನೋವಿನ ಭಾರದಿಂದಲೇ ಈ ನನ್ನ ಮಾತೃಸಂಸ್ಥೆಗೆ ಮಣಿಯುತ್ತೇನೆ.

ಈ ಸಂದರ್ಭದಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ಪತನಗೊಳಿಸಿದ ಎರಡು ಅನ್ಯಾಯಗಳೆಂದರೆ, ಮುಖ್ಯಸ್ಥರ ರೊಟೇಶನ್ ಪದ್ಧತಿಯಿಂದಾಗಿ ವಿಭಾಗಗಳ 'ಆಡಳಿತದ ಗುಣಮಟ್ಟ' ಹಾಳಾದುದು ಮತ್ತು ಟೈಂ ಬಾಂಡ್ ಪ್ರಮೋಷನ್ ಪದ್ಧತಿಯಿಂದಾಗಿ 'ಶಿಕ್ಷಣದ ಗುಣಮಟ್ಟ' ಹಾಳಾದುದು. ಮಿಕ್ಕ ವಿಷಯದ ವಿಭಾಗಗಳು ಕರ್ನಾಟಕದಲ್ಲಿ ಹಾಳಾದರೆ ಬೇರೆ ರಾಜ್ಯಗಳಲ್ಲಿ ಬೆಳೆಯಬಹುದು. ಕನ್ನಡ ವಿಭಾಗಗಳು ಕರ್ನಾಟಕದಲ್ಲಿ ಹಾಳಾದರೆ ಬೆಳೆಯುವುದು ಎಲ್ಲಿ? ಕನ್ನಡದ ಮೇಲಿನ ಪ್ರೀತಿ ನನ್ನಿಂದ ಈ ಮಾತುಗಳನ್ನು ಆಡಿಸುತ್ತದೆ. ಕಾರಣ, ಕನ್ನಡ ವಿಭಾಗಗಳ ಸಮಗ್ರ ಸುಧಾರಣೆಗಾಗಿ ಸರ್ಕಾರ ತೀವ್ರ ಕ್ರಮ ಕೈಗೊಳ್ಳುವುದು ಸಕಾಲಿಕವಾಗಿದೆ. ನಿಷ್ಠುರತೆಗೆ ಹೆಸರಾಗಿರುವ, ಕನ್ನಡ ಭಕ್ತರಾಗಿರುವ ಡಾ. ಹಾ. ಮಾ. ನಾಯಕ, ಡಾ. ಚಿದಾನಂದಮೂರ್ತಿಗಳಂಥ ಹಿರಿಯ ನಿವೃತ್ತರು ಈ ಬಗ್ಗೆ ದನಿ ಎತ್ತಬೇಕಾಗಿದೆ. ಕನ್ನಡದ ಪ್ರಶ್ನೆಯಾಗಿರುವುದರಿಂದ ಇದಕ್ಕೆ ಸಾರ್ವಜನಿಕರೂ ದನಿಗೂಡಿಸಬೇಕಾಗಿದೆ.

ಕನ್ನಡ ಅಧ್ಯಯನಪೀಠದಲ್ಲಿ ಕಾಣಿಸಿಕೊಂಡ ಒಂದು ಬಗೆಯ ಶೂನ್ಯತೆ ಕಾರಣವಾಗಿ, ನನಗೆ ಕನ್ನಡದ ಕೆಲಸಕ್ಕೆ ಇನ್ನೊಂದು ಅಧ್ಯಯನಪೀಠ ಅಗತ್ಯವೆನಿಸಿತು. ಆಗ ಈ ಅಗತ್ಯಕ್ಕೆ ಉತ್ತರವಾಗಿ ತಲೆಯೆತ್ತಿದುದು, ಗದುಗಿನ ತೋಂಟದಾರ್ಯ ಮಠದ "ವೀರಶೈವ ಅಧ್ಯಯನ ಸಂಸ್ಥೆ". ಶ್ರೀಗಳವರ ಪುಸ್ತಕ ಪ್ರೀತಿಯ ನೆಲೆಯಲ್ಲಿ ಒಂದು ಪ್ರಸಾರಾಂಗವೇ ಅಲ್ಲಿ ಬೆಳೆದು ನಿಂತಿತು. ಕನ್ನಡದ ಕೆಲಸಕ್ಕೆ ಇದೂ ಸಾಲದೆನಿಸಿದಾಗ ಪಿಎಚ್.ಡಿ. ಪ್ರಬಂಧ, ಆಧುನಿಕ ಸಾಹಿತ್ಯಗಳ ಪ್ರಕಟಣೆಗಾಗಿ ಬೆಳಗಾವಿಯ ನಾಗನೂರ ಮಠದಲ್ಲಿ "ವೀರಶೈವ ಅಧ್ಯಯನ ಅಕಾಡೆಮಿ" ಅಸ್ತಿತ್ವಕ್ಕೆ ಬಂದಿತು. ಇದೂ ಸಾಲದೆನಿಸಿದಾಗ ಮೈಸೂರಿನ ಸುತ್ತೂರು ಮಠದಲ್ಲಿ "ಸ್ವರವಚನ" ಪ್ರಕಟನ ಯೋಜನೆ ಆರಂಭವಾಯಿತು. ಆನಂದಪುರ ಮಠದಲ್ಲಿ "ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ", ಜಂಬಗಿ ಮಠದಲ್ಲಿ "ವೀರಶೈವ ಅಧ್ಯಯನ ವೇದಿಕೆ", ಕೊಡೇಕಲ್ ಮಠದಲ್ಲಿ "ಕೊಡೇಕಲ್ ಬಸವೇಶ್ವರ ಅಧ್ಯಯನ ಸಂಸ್ಥೆ" ಬೆಳೆದು, ವೀರಶೈವ ಮಠಗಳು ಪ್ರಕಾಶನಸಂಸ್ಥೆಯ ಸ್ವರೂಪ ಪಡೆದವು. ಇದೂ ಸಾಲದೆಂಬಂತೆ ಗದುಗಿನಲ್ಲಿ "ವೀರನಾರಾಯಣ ಸಂಸ್ಕೃತಿ ಪ್ರತಿಷ್ಠಾನ", ಕೊಪ್ಪಳದಲ್ಲಿ "ಅಗಡಿ ಸಂಗಣ್ಣ ಸಂಸ್ಕೃತಿ ಪ್ರತಿಷ್ಠಾನ" ಬೆಳಗಾವಿಯಲ್ಲಿ "ಕೆ. ಎಲ್. ಇ. ಪ್ರಕಾಶನ" ಅಸ್ತಿತ್ವಕ್ಕೆ ಬಂದವು. ನನ್ನ ಪ್ರಯತ್ನದಿಂದಾಗಿ ಇತ್ತೀಚೆ ಡಾ.

ಮಲ್ಲಾಪುರ ಅವರ ಸಮಗ್ರ ಲೇಖನ ಸಂಪುಟಗಳು ಪ್ರಕಟವಾದವು. ಈಗ ನನ್ನ ಮಾರ್ಗ ಸಂಪುಟಗಳನ್ನು ಪ್ರಕಟಿಸಿದ ಸಪ್ನ ಬುಕ್ ಹೌಸ್. ಡಾ. ವೆಂಕಟಾಚಲಶಾಸ್ತ್ರಿಗಳ ಪ್ರಬಂಧಗಳನ್ನು ನಾಲ್ಕು ಸಂಪುಟಗಳಲ್ಲಿ, ಡಾ. ಚಿದಾನಂದಮೂರ್ತಿಗಳ ಪ್ರಬಂಧಗಳನ್ನು ಐದು ಸಂಪುಟಗಳಲ್ಲಿ ಹೊರತರುತ್ತಲಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಡಾ. ನೇಗಿನಹಾಳರ ಪ್ರಬಂಧಗಳ ಸಮಗ್ರ ಸಂಪುಟವನ್ನು ಇಷ್ಟರಲ್ಲಿಯೇ ಪ್ರಕಟಪಡಿಸಲಿದೆ. ಇದೇ ರೀತಿಯಲ್ಲಿ ಡಾ. ರಾಜೂರ ಅವರ ಲೇಖನಗಳ ಸಮಗ್ರ ಸಂಪುಟ ಬೆಳಕು ಕಾಣಲಿದೆ. ಸಿಂದಗಿಯ "ನೆಲೆ ಪ್ರಕಾಶನ" ತನ್ನ ನೆಲೆಯನ್ನು ವಿಸ್ತರಿಸಿಕೊಂಡಿದೆ. ೧೫ ಸಂಪುಟಗಳಲ್ಲಿ ಸಮಗ್ರ ವಚನ ಸಾಹಿತ್ಯ ಬೆಳಕು ಕಂಡಿದೆ. ೩೦ ಸಂಪುಟಗಳಲ್ಲಿ ಸಮಗ್ರ ದಾಸ ಸಾಹಿತ್ಯ ಬೆಳಕು ಕಾಣಲಿದೆ. ನಾಳೆ ೨ ಸಂಪುಟಗಳಲ್ಲಿ 'ಮಾನಸೋಲ್ಲಾಸ'ದ ಅನುವಾದ ಬಿಡುಗಡೆಯಾಗಲಿದೆ,

ಹೀಗೆ ಅಧ್ಯಯನ, ಅಧ್ಯಾಪನ, ಸಂಶೋಧನ, ಪ್ರಕಾಶನ ಚಟುವಟಿಕೆಗಳಲ್ಲಿ ತೊಡಗಿರುವಾಗಲೇ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಎಂಬ ಮೂರನೆಯ ಘಟ್ಟ ನನ್ನ ಬದುಕಿನಲ್ಲಿ ತೆರೆದುಕೊಂಡಿತು. ಕನ್ನಡ ಅಧ್ಯಯನ ಪೀಠವನ್ನು ಬಿಡುವ ದಿನ "ಏಳು ಕಮಲವೆ, ನೀನು ಯಾವ ಕರ್ಮದಿ ಬಂದು ಇಂಥ ಕೆಸರಲ್ಲಿ ಬಿದ್ದೆ. ಹೇಳು ಕಮಲವೆ, ನಿನ್ನ ಯಾವ ಪುಣ್ಯದಿ ಈಗ ಮುಖವೆತ್ತಿ ಮೇಲಕೆದ್ದೆ" - ಎಂಬ ಮಧುರಚೆನ್ನರ ಮಾತನ್ನು ನೆನಪಿಸಿಕೊಂಡಿದ್ದೇನೆ. ಈಗ ಹಂಪಿಯಲ್ಲಿ ಧಾರವಾಡಕ್ಕಿಂತ ಹೆಚ್ಚು ಸುಖವಾಗಿದ್ದೇನೆ, ಹೆಚ್ಚು ದುಡಿಯುತ್ತಲಿದ್ದೇನೆ. ವಿಭಾಗಗಳಿಗೆ ಸ್ವಾತಂತ್ರ್ಯ ಕೊಡುವ ಮೂಲಕ, ವಿಶ್ವವಿದ್ಯಾಲಯವನ್ನು ಜನತೆಯ ಬಾಗಿಲಿಗೆ ಕೊಂಡೊಯ್ಯುವ ಮೂಲಕ - ಈ ಸಂಸ್ಥೆಗೆ "ದೇಶೀ ಅಧ್ಯಯನ"ದ ಹೊಸ ರೂಪ ನೀಡುವ ಉತ್ಸಾಹದಲ್ಲಿದ್ದೇನೆ.

ಕನ್ನಡ ವಿಶ್ವವಿದ್ಯಾಲಯದ ಬೆಳವಣಿಗೆ ಮತ್ತು ಕರ್ನಾಟಕದ ಬೆಳವಣಿಗೆ ಪರಸ್ಪರ ಪೂರಕವೆನಿಸಿವೆ. ದುರ್ದೈವದ ಸಂಗತಿಯೆಂದರೆ ಕನ್ನಡ ಶಾಸಕರ ಕೈಯಲ್ಲಿ ಕರ್ನಾಟಕ ಉಳಿಯಲಾರದೇನೋ ಎನಿಸುವಷ್ಟು ಇಲ್ಲಿ ವಲಸೆ ಸಮಸ್ಯೆ ಬೆಳೆಯತೊಡಗಿದೆ. ಪ್ರತಿ ವರ್ಷ ಅನೇಕ ಪ್ರಶಸ್ತಿಗಳನ್ನು ಗೆದ್ದು ತರುವ ಕನ್ನಡ ಭಾಷೆ ಸಾಹಿತ್ಯಕವಾಗಿ ಸುದೈವಿ - ಸಾಮಾಜಿಕವಾಗಿ ದುರ್ದೈವಿ ಎಂಬಂತೆ ಸಾರ್ವಜನಿಕ ಜೀವನದಲ್ಲಿ ಅದು ಕುಸಿಯುತ್ತ ನಡೆದಿದೆ. ಇದಕ್ಕೆ ಕಾರಣ, ಇತಿಹಾಸದುದ್ದಕ್ಕೂ ಕರ್ನಾಟಕದಲ್ಲಿ ಸ್ವಾಭಿಮಾನವೆನ್ನುವುದು ಸಮೂಹಸಂಸ್ಕೃತಿಯಾಗಿ ರೂಪಗೊಳ್ಳದಿರುವುದು. ಇಂದು ಇದು ರೂಪಗೊಳ್ಳಬೇಕಾದರೆ ಕರ್ನಾಟಕದ ತುಂಬ ಹಬ್ಬಿರುವ ಕರ್ನಾಟಕ ಸಂಘಗಳು ನಿಜವಾದ ಕರ್ನಾಟಕ ಸಂಘಗಳಾಗಿ ಬೆಳೆಯಬೇಕು. ಒಣಪ್ರತಿಷ್ಠೆಯ ಅಧಿಕಾರ - ಅರ್ಥವಿಲ್ಲದ ಕಾರ್ಯಕ್ರಮಗಳಿಂದ ವಿಮುಖವಾಗಿ, ಕನ್ನಡ-ಕನ್ನಡಿಗ - ಕರ್ನಾಟಕಗಳಿಗೆ ಆಗುತ್ತಲಿರುವ ಅನ್ಯಾಯಗಳನ್ನು ಇವು ಅಲ್ಲಲ್ಲಿಯೇ ತಡೆಗಟ್ಟಬೇಕು. ಒಟ್ಟಿನಲ್ಲಿ ಕನ್ನಡ ಸಂಘಗಳು ಪ್ರಾಮಾಣಿಕವಾಗಿ ಎಚ್ಚತ್ತರೆ, ರಚನಾತ್ಮಕವಾಗಿ ದುಡಿದರೆ ಕನ್ನಡ ಬದುಕುತ್ತದೆ, ಕರ್ನಾಟಕ ಬೆಳೆಯುತ್ತದೆ.

ಹೀಗೆ ವಿದ್ಯಾರ್ಥಿ, ಪ್ರಾಧ್ಯಾಪಕ, ಕುಲಪತಿ - ಈ ಮೂರು ಘಟ್ಟಗಳ ನಡುವೆ ನನ್ನ ಅಧ್ಯಯನ ಮತ್ತು ಸಂಶೋಧನೆ ಘಟ್ಟದ ಹೊಳೆಯಂತೆ ಸಾಗಿ ಬಂದಿದೆ. ಅದು ಆಕರಗಳ ಶೋಧ-ವಿಶ್ಲೇಷಣೆ - ವ್ಯಾಖ್ಯಾನವೆಂಬ ಮೂರು ಆಯಾಮಗಳಲ್ಲಿ, ಏಕಶಿಸ್ತೀಯ ಮತ್ತು ಬಹುಶಿಸ್ತೀಯ ಎಂಬ ಎರಡು ರೀತಿಗಳಲ್ಲಿ ಮುಂದುವರಿದಿದೆ. ನನ್ನ ೫೦ನೆಯ ಹುಟ್ಟುಹಬ್ಬ ಸಂದರ್ಭದಲ್ಲಿ "ಡಾ. ಕಲಬುರ್ಗಿ ಈಜ್ ಮಾಯ್ ಸಕ್ಸೆಸರ್" ಎಂದು ಗುರುಗಳಾದ ಡಾ. ಆರ್. ಸಿ. ಹಿರೇಮಠ ಅವರು ಆಡಿದ ಮಾತು, ನನ್ನ ಗ್ರಂಥ ಸಂಪಾದನಶಾಸ್ತ್ರಕ್ಕೆ ಅಭಿಪ್ರಾಯ ಬರೆಯುತ್ತ "ವಿದ್ವತ್ತು, ಪಾಂಡಿತ್ಯ ಇವು ನಮ್ಮೊಂದಿಗೆ ಕೊನೆಗಾಣುತ್ತವೆಂದು ಭಾವಿಸಿರುವ ಜನ ಇನ್ನೂ ಇರುವಾಗಲೇ ನೀವು ಇಂಥ ಪುಸ್ತಕವನ್ನು ಪ್ರಕಟಿಸಿರುವುದು ಅಭಿಮಾನದ ಮಾತು" ಎಂದು ಡಾ. ಹಾ. ಮಾ. ನಾಯಕ ಅವರು ಹೇಳಿದ ಮಾತು ನನಗೆ ಸಂಶೋಧನೆಯಲ್ಲಿ ಸ್ಫೂರ್ತಿ ನೀಡಿದೆ. ಹೀಗೆ ಬೆಳೆದ ನಾನು, ನನ್ನ ವಿದ್ಯಾರ್ಥಿಗಳನ್ನು

ಸಂಶೋಧಕರನ್ನಾಗಿ ರೂಪಿಸುವಲ್ಲಿ, ಸಹ ಸಂಶೋಧಕರಿಗೆ ನೆರವಾಗುವಲ್ಲಿ, ನನ್ನಸುತ್ತ ಸಂಶೋಧನ ಕುಟುಂಬವೊಂದು ಬೆಳೆದಿದೆ. ಈ ಅಭಿನಂದನ ಸಮಾರಂಭದಲ್ಲಿ ಭಾಗಿಯಾಗಿರುವ ಶಾಂತಾದೇವಿ ಮಾಳವಾಡ, ಹಾ. ಮಾ. ನಾಯಕ, ಚಿದಾನಂದಮೂರ್ತಿ, ಎಂ. ಐ. ಸವದತ್ತಿ, ವೆಂಕಟಾಚಲಶಾಸ್ತ್ರೀ, ಎಂ.ಜಿ. ಬಿರಾದಾರ, ಕುರ್ತಕೋಟಿ, ಗಿರಡ್ಡಿ, ಮುಂಜಾನೆಯ ವಿಚಾರಗೋಷ್ಠಿಯಲ್ಲಿ ಭಾಗಿಯಾಗಿರುವ ರೈ, ತಾಳ್ತಜೆ, ಶೇಷಶಾಸ್ತ್ರಿ, ತಾರಾನಾಥ, ದಂಡೆ, ಪಡಶೆಟ್ಟಿ, ಹೇಮಾ ಇಂಥವರಿಂದಾಗಿ ನನ್ನ ಕನ್ನಡ ಕುಟುಂಬ ವಿಸ್ತಾರಗೊಂಡಿದೆ.

ಈ ವಿಸ್ತಾರಕ್ಕೆ ಮೂಲಕಾರಣ ನನ್ನ ಸುಖೀ ಕುಟುಂಬ. ನಾನು ಮತ್ತು ನನ್ನ ಹೆಂಡತಿ, ಸಂಸಾರದಲ್ಲಿ ಪರಸ್ಪರ ಸೋಲುವ ಮೂಲಕ ಇಬ್ಬರೂ ಗೆದ್ದಿದ್ದೇವೆ. ಮನೆಯನ್ನು ಮರೆಯುವಷ್ಟು ವಿದ್ಯಾವ್ಯಸನಿಯಾದ ನನ್ನನ್ನು, ಮಕ್ಕಳನ್ನು ಪೋಷಿಸುವ ಮೂಲಕ "ನಾಗಠಾಣ ಕುಟುಂಬ"ದ ಈಕೆ, "ಕಲಬುರ್ಗಿ ಕುಟುಂಬ"ವನ್ನು ರೂಪಿಸಿದ್ದಾಳೆ. ಮಕ್ಕಳೂ ಕಲಬುರ್ಗಿ ಕುಟುಂಬ ಸಂಸ್ಕೃತಿಗೆ ತಕ್ಕ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಅಳಿಯಂದಿರು ಮಕ್ಕಳಂತೆ ನಡೆದುಕೊಳ್ಳುತ್ತಲಿದ್ದಾರೆ. 'ಮಹಾಮಾರ್ಗ'ವನ್ನು ಸಂಪಾದಿಸಿದ ಕನವಳ್ಳಿ, ರಾಜೂರ, 'ಕಲಬುರ್ಗಿ-೬೦'ನ್ನು ಸಂಪಾದಿಸಿದ ಹೆಗಡೆ, ಶೀಗಿಹಳ್ಳಿ, ಈ ಕೃತಿಗಳ ಕಲಾಕೃತಿಗಾಗಿ ಶ್ರಮಿಸಿದ ಶಶಿ ಸಾಲಿ, ಸುರೇಶ ಕುಲಕರ್ಣಿ, ಕಲಬುರ್ಗಿ:೬೦ರ ಪ್ರಕಾಶಕಿ ಹನುಮಾಕ್ಷಿ ಗೋಗಿ, ಇವರೊಂದಿಗೆ ಕಳೆದ ೨ ವರ್ಷಗಳಿಂದಲೂ ದುಡಿದ ಇತರ ಯುವ ಸ್ನೇಹಿತರು ನನ್ನ ಪ್ರಾಣವೆನಿಸಿದ್ದಾರೆ. ಪುಸ್ತಕದ ಸ್ವಾಮಿಗಳೆಂದೇ ಖ್ಯಾತರಾಗಿರುವ ಗದುಗಿನ ಶ್ರೀ ತೋಂಟದಾರ್ಯ ಗುರುಗಳು ಮತ್ತು ಬೆಳಗಾವಿಯ ಶ್ರೀ ಸಿದ್ಧರಾಮಸ್ವಾಮಿಗಳು ನಮ್ಮೆಲ್ಲರಿಗೆ ಕೃಪಾಛತ್ರವಾಗಿದ್ದಾರೆ. ಬದುಕಿನಲ್ಲಿ ಇದಕ್ಕಿಂತ ಹೆಚ್ಚಿನದು ಏನು ಬೇಕು? ಇಂಥ ಬದುಕನ್ನು ನನ್ನದಾಗಿಸಿದ ಎಲ್ಲ ಹಿರಿಯರಿಗೆ, ಸ್ನೇಹಿತರಿಗೆ, ವಿದ್ಯಾರ್ಥಿಗಳಿಗೆ, ಅಭಿಮಾನಿಗಳಾದ ನಿಮಗೆ, ಕೃತಜ್ಞತೆಯಿಂದ ಕೈಮುಗಿಯುತ್ತೇನೆ. ನಮಸ್ಕಾರ.

ಕಲಬುರ್ಗಿ : 'ಅರವತ್ತು' ಸಮಾರಂಭದ ಭಾಷಣ (ಧಾರವಾಡ, ೧೯೯೮).

ಆಕರ : ಮಾರ್ಗ ಸಂಪುಟ–೬

■■

೭೪

ನೃಪತುಂಗ ಪ್ರಶಸ್ತಿ

ಈ ವರ್ಷದ ರಾಜ್ಯೋತ್ಸವ ಪ್ರಶಸ್ತಿ ಸಂಖ್ಯೆಯನ್ನು ೫೦ಕ್ಕೆ ಸೀಮಿತಗೊಳಿಸಿದ ದಿಟ್ಟ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಡಿ.ವಿ. ಸದಾನಂದಗೌಡ ಅವರನ್ನು ಅಭಿನಂದಿಸುತ್ತ, ಮಾನ್ಯ ಸಚಿವರಾದ ಶ್ರೀ ಆರ್. ಅಶೋಕ-ಶ್ರೀ ಗೋವಿಂದ ಕಾರಜೋಳ ಅವರೇ, ಆತ್ಮೀಯರಾದ ಡಾ. ನಲ್ಲೂರ ಪ್ರಸಾದ-ಶ್ರೀ ಮನು ಬಳಿಗಾರ-ತಾಳ್ತಜೆ ವಸಂತಕುಮಾರ-ಶ್ರೀ ಕೆ. ಆರ್. ಶ್ರೀನಿವಾಸ ಅವರೇ, ಅರಳು ಸಾಹಿತ್ಯ ಪ್ರಶಸ್ತಿ ವಿಜೇತ ಯುವ ಸಾಹಿತಿಗಳೆ, ಸಹೃದಯ ಸಭಿಕರೇ ಎಲ್ಲರಿಗೂ ನಮಸ್ಕಾರ.

ಕನ್ನಡ ಸಂದರ್ಭದಲ್ಲಿ 'ನೃಪತುಂಗ' ಹೆಸರೇ ಒಂದು ರೋಮಾಂಚನ. ಈ ಹೆಸರನ್ನು ನೆನೆದರೆ ಸಾಕು 'ಕವಿರಾಜಮಾರ್ಗ' ಕಣ್ಣೆದುರು ಬರುತ್ತದೆ. ಅದರೊಂದಿಗೆ "ಕಾವೇರಿಯಿಂದಮಾ ಗೋದಾವರಿವರಮಿರ್ದ" ಕನ್ನಡನಾಡು, "ಸುಭಟರ್ಕಳ್ ಕವಿಗಳ್ ಸುಪ್ರಭುಗಳ್....." ಎನಿಸಿದ ಕನ್ನಡಿಗರು, "ನಾಣ್ನುಡಿಯ ಬೆಡಂಗೆ ಕನ್ನಡದ ಮಾತಿನೊಳ್" ಎಂಬ ಸುಪ್ರಸಿದ್ಧ ಕನ್ನಡ ಭಾಷೆ, ಚತ್ತಾಣ-ಬೆದಂಡೆಗಬ್ಬಗಳೆಂಬ ಕನ್ನಡ ಸಾಹಿತ್ಯಪ್ರಕಾರ, ಶ್ರೀವಿಜಯ-ದುರ್ವಿನೀತ ಮೊದಲಾದ ಕನ್ನಡ ಕವಿಸಮೂಹ, ಇವುಗಳಿಗೆ ಮಿಗಿಲಾಗಿ "ಇನ್ನೊಬ್ಬರ ವಿಚಾರ, ಇನ್ನೊಬ್ಬರ ಧರ್ಮಗಳನ್ನು ಗೌರವಿಸುವವನೇ ನಿಜವಾದ ಮನುಷ್ಯ"ನೆಂಬ ಕನ್ನಡಿಗರ ಜೀವನಮೌಲ್ಯ-ಹೀಗೆ ಏನೆಲ್ಲ ನೆನಪಾಗುತ್ತವೆ.

ತನ್ನ ಸಾಮ್ರಾಜ್ಯದ ಆಸ್ತಿಯಾಗಿರುವ ಈ ಸಂಸ್ಕೃತಿಗಳ ಬಗ್ಗೆ ನೃಪತುಂಗನಿಗೆ ದೊಡ್ಡ ಸಂಭ್ರಮ. ಈ ಪ್ರಶಸ್ತಿ ಅಂಕಿತಗೊಂಡುದು ಹೀಗೆ ಸಂಭ್ರಮಿಸುವ ಸಾಂಸ್ಕೃತಿಕ ಸಾರ್ವಭೌಮ ನೃಪತುಂಗ ಹೆಸರಿನಲ್ಲಿ; ಇದು ಸ್ಥಾಪನೆಗೊಂಡುದು ಕನ್ನಡಿಗರ ಸಾರ್ವಭೌಮ ಸಂಸ್ಥೆಯಾದ ಕನ್ನಡ ಸಾಹಿತ್ಯಪರಿಷತ್ತಿನಲ್ಲಿ. ಇದು ಧನಿಕ ವರ್ಗದವರು ಸ್ಥಾಪಿಸಿದ ಪ್ರಶಸ್ತಿಯಲ್ಲ; ಸಾರಿಗೆ ಸಂಸ್ಥೆಯ ಶ್ರಮಿಕ ವರ್ಗದವರು ಸ್ಥಾಪಿಸಿದ ಪ್ರಶಸ್ತಿ. ಹೀಗಾಗಿ, ಇದನ್ನು 'ಶ್ರಮಸಂಸ್ಕೃತಿ'ಯ ನಾನು ಪ್ರೀತಿಯಿಂದ ಸ್ವೀಕರಿಸಿದ್ದೇನೆ. ಈ ಪ್ರಶಸ್ತಿಗಾಗಿ ಕನ್ನಡ ಸಾಹಿತ್ಯ ಪರಿಷತ್ತಿಗೂ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೂ, ಇದನ್ನು ಪ್ರದಾನಮಾಡಿದ ಮಾನ್ಯ ಮುಖ್ಯಮಂತ್ರಿಗಳಿಗೂ, ಇತರ ಸಚಿವರಿಗೂ, ಸಾಕ್ಷಿಯಾಗಿರುವ ಸಭಿಕರಿಗೂ ಕೃತಜ್ಞನಾಗಿದ್ದೇನೆ.

ನಮ್ಮ ರಾಜಕೀಯ ಇತಿಹಾಸದಲ್ಲಿ ಎರಡು ಮಾದರಿಗಳಿವೆ. ಒಂದು : ಆರನೆಯ ಶತಮಾನದ ಪುಲಿಕೇಶಿ ಮಾದರಿ, ಇನ್ನೊಂದು: ಒಂಬತ್ತನೆಯ ಶತಮಾನದ ನೃಪತುಂಗ ಮಾದರಿ. ಪುಲಿಕೇಶಿಯದು ವಿಸ್ತಾರವಾದ ಭೌತಿಕ ಸಾಮ್ರಾಜ್ಯ ಸ್ಥಾಪಿಸಬೇಕೆಂಬ ನಿಲವು. ನೃಪತುಂಗನದು ಸಮೃದ್ಧವಾದ ಸಾಂಸ್ಕೃತಿಕ ಸಾಮ್ರಾಜ್ಯ ಕಟ್ಟಬೇಕೆಂಬ ನಿಲವು. ಹೀಗಾಗಿ ಅವನದು ನರ್ಮದೆಯ ವರೆಗೂ ನೆಲವನ್ನು ಗೆದ್ದ ಕೀರ್ತಿ, ಇವನದು ಆ ನೆಲವನ್ನು ಹೊಲವನ್ನಾಗಿಸಿದ ಕೀರ್ತಿ. ಈ ಹೊಲದ ಬಂಗಾರ ಬೆಳೆ "ಕವಿರಾಜಮಾರ್ಗ."

ಒಂಬತ್ತನೆಯ ಶತಮಾನ ವರೆಗಿನ ಅವಧಿ, ಕರ್ನಾಟಕದ ಇತಿಹಾಸದಲ್ಲಿ ಯುದ್ಧಗಳ ಕಾಲ. ಪ್ರಾಣಹಾನಿಯ ಕಾದಾಟದಲ್ಲಿ ಅರ್ಥವಿಲ್ಲವೆಂಬ ಪರಮಸತ್ಯವನ್ನು ಕಂಡ ನೃಪತುಂಗ, ಅಶೋಕನಂತೆ ಪರೋಕ್ಷವಾಗಿ ಯುದ್ಧವಿರಾಮ ಧೋರಣೆ ತಾಳಿದ. ಅಂದು ಭೌತಿಕ ಭೂಮಿಸಮಸ್ಯೆಗಿಂತ ಸಾಂಸ್ಕೃತಿಕ ಭಾಷಾಸಮಸ್ಯೆಗೆ ಪರಿಹಾರ ಹುಡುಕುವುದು ಅವನಿಗೆ ತುರ್ತು ಎನಿಸಿತು. ದೇಶವೆಂದರೆ ಭಾಷೆ. ದೇಶ ದೊಡ್ಡದಾಗುತ್ತ, ಭಾಷೆ ಸಣ್ಣದಾಗುತ್ತ ನಡೆದರೆ ದೇಶ ದೇಶವಾಗಿ ಉಳಿಯುವುದಿಲ್ಲ. ದೇಶ ಸೀಮಿತವಾದರೇನು? ಭಾಷೆ ಸೀಮಾತೀತವಾಗಬೇಕು– ಈಗಿನ ಇಂಗ್ಲಂಡ್ ದೇಶ, ಇಂಗ್ಲಿಷ್ ಭಾಷೆಗಳಂತೆ. ಇದು ಅವನ ನಿಲವು. ಅದಕ್ಕಾಗಿಯೇ "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡ" ಎನ್ನುತ್ತ ನಮ್ಮ ನಾಡಿಗೆ ಸೀಮೆ ಹೇಳಿದ ಅವನು, ಅದರಲ್ಲಿ 'ಭಾವಿಸಿದ ಜನಪದಂ ವಸುಧಾವಲಯ ವಿಲೀನವಿಶದ ವಿಷಯ ವಿಶೇಷಂ' ಎನ್ನುತ್ತ, ಈ ನಾಡಿನಲ್ಲಿಯ 'ಜನಪದ ಸಂಸ್ಕೃತಿ'ಗೆ ಸೀಮಾತೀತ ವಸುಧಾಮಾನ್ಯತೆಯನ್ನು ಹಾರೈಸಿದ.

ಈ ಹಾರೈಕೆಗೆ ಅರ್ಥ ತುಂಬುವ ಮೊದಲ ಹಂತವೆಂಬಂತೆ ಕನ್ನಡ–ಸಂಸ್ಕೃತವೆಂಬ ಭಾಷಾ ಸಮಸ್ಯೆಯನ್ನು, ದೇಶಿ–ಮಾರ್ಗವೆಂಬ ಶೈಲಿ ಸಮಸ್ಯೆಯನ್ನು, ಬಗೆಹರಿಸಲು ನಿರ್ಧರಿಸಿದ. ಈ ಬಗ್ಗೆ ಸಾಮೂಹಿಕವಾಗಿ ಚರ್ಚಿಸಲು ತನ್ನ ನೇತೃತ್ವದಲ್ಲಿ ವಿದ್ವಾಂಸರ ಸಭೆ ಸೇರಿಸಿದ. ಶ್ರೀವಿಜಯನ 'ಕವಿಮಾರ್ಗ'ಕೃತಿಯನ್ನು ಆಧಾರವಾಗಿಟ್ಟುಕೊಂಡು ಎಲ್ಲರೂ ಚರ್ಚೆ ನಡೆಸಿ, ಸಂಸ್ಕೃತದೊಂದಿಗೆ ಸಂಘರ್ಷಕ್ಕಿಂತ ಸಮನ್ವಯವೇ ಸೂಕ್ತವೆಂಬ ಆರೋಗ್ಯಪೂರ್ಣ ನಿರ್ಣಯಕ್ಕೆ ಬಂದರು. ಈಗ ಕನ್ನಡ ನಾಡು, ನಾಡವರು, ನುಡಿಗಳ ವಿವರಣೆಯೊಂದಿಗೆ ಉಭಯ ಭಾಷಾ ಸಮನ್ವಯ ರೂಪದ ವ್ಯಾಕರಣ–ಅಲಂಕಾರ–ಛಂದಸ್ಸು ವಿಚಾರಗಳು ಸೇರಿಕೊಂಡು, ಅದಕ್ಕೆ ಅರಸನ ಸಮ್ಮತಿ ಲಭಿಸಿ, ಶ್ರೀವಿಜಯನ 'ಕವಿಮಾರ್ಗ'ವು 'ನೃಪತುಂಗಾನುಮತಮಪ್ಪ ಕವಿರಾಜಮಾರ್ಗ'ವಾಗಿ ಆಕಾರ ಪಡೆಯಿತು. ಇಂಥ ಸಮುದಾಯ ಚರ್ಚೆ ಪ್ರಜ್ಞೆಯ ನೃಪತುಂಗನ ಹೆಸರಿನಲ್ಲಿ ಸಾರಿಗೆಯ ಶ್ರಮಿಕ ಸಮುದಾಯ ಈ ಪ್ರಶಸ್ತಿಯನ್ನು ಅಸ್ತಿತ್ವಕ್ಕೆ ತಂದಿದೆ. ಆರು ಕೋಟಿ ಕನ್ನಡ ಸಮುದಾಯದ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಇದನ್ನು ನೀಡುತ್ತಿದೆ. ಹೀಗೆ ಎಲ್ಲ ದೃಷ್ಟಿಯಿಂದಲೂ ಸಮುದಾಯವನ್ನು ಸಂಕೇತಿಸುವ ಈ ಪ್ರಶಸ್ತಿಯನ್ನು ಹಳ್ಳಿಯ ಸಮುದಾಯ ಕುಟುಂಬಮೂಲದ ನಾನು ಪ್ರೀತಿಯಿಂದ ಸ್ವೀಕರಿಸಿದ್ದೇನೆ.

ಮೇಲೆ ಹೇಳಿದ ಕವಿ ಶ್ರೀವಿಜಯ, ಅಮೋಘವರ್ಷ ಪ್ರತಿನಾಮದ ನೃಪತುಂಗ, ಅವನ ಆಸ್ಥಾನದಲ್ಲಿ ಆಕಾರಗೊಂಡ 'ಕವಿರಾಜಮಾರ್ಗ'–ಈ ಹೆಸರುಗಳೆಂದರೆ ನನಗೆ ತುಂಬಾ ಪ್ರೀತಿ.

ಇದಕ್ಕೆ ಸಾಕ್ಷಿಯೆಂಬಂತೆ ನನ್ನ ಮಗನ ಹೆಸರು ಶ್ರೀವಿಜಯ, ನನ್ನ ಮೊಮ್ಮಗನ ಹೆಸರು ಅಮೋಘವರ್ಷ, ನನ್ನ ಪಿಎಚ್.ಡಿ. ವಿಷಯ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ', 'ಮಾರ್ಗ' ನನ್ನ ಸಂಶೋಧನ ಸಂಪುಟಗಳ ಹೆಸರು, ನಾನು ಹುಟ್ಟಿದ್ದು ಮಾರ್ಗಶಿರ ಮಾಸದಲ್ಲಿ. ಹೀಗೆ ಅನೇಕ ರೂಪಗಳಲ್ಲಿ ನೃಪತುಂಗ ಪರಿಸರ ನನ್ನನ್ನು ಸುತ್ತಿಕೊಂಡಿದೆ. ಈಗ 'ನೃಪತುಂಗ ಪ್ರಶಸ್ತಿ' ಹೆಸರಿನ ಮೂಲಕ ಮತ್ತೂ ಸುತ್ತಿಕೊಂಡಿದೆ.

ನನ್ನದು ಸಂರಕ್ಷಣಾತ್ಮಕ ವ್ಯಕ್ತಿತ್ವ(Defensive Personality), ಆಕ್ರಮಣಕಾರಿ ವ್ಯಕ್ತಿತ್ವ (Offensive Personlity)ಅಲ್ಲ. ನೌಕರಿ ಆರಂಭಿಸಿದ ಹೊಸದರಲ್ಲಿ ಅಂದು ವಿಶ್ವವಿದ್ಯಾಲಯದಲ್ಲಿ ಎರಡು ಮಾದರಿಗಳು ನನ್ನ ಕಣ್ಣ ಮುಂದಿದ್ದವು: ರಾಜಕಾರಣಮಾಡಿ ಕಳ್ಳದಾರಿಯ ಮೂಲಕ ದೊಡ್ಡವನಾಗುವುದು ಇಲ್ಲವೆ ಅಧ್ಯಯನಶೀಲನಾಗಿ ಹೆದ್ದಾರಿಯ ಮೂಲಕ ದೊಡ್ಡವನಾಗುವುದು. ಆಗ ಸಂರಕ್ಷಣಾತ್ಮಕ ವ್ಯಕ್ತಿತ್ವದ ನಾನು ಹೆದ್ದಾರಿಯ ಮೂಲಕ ದೊಡ್ಡವನಾಗುವ ಅಧ್ಯಯನಶೀಲತೆಯನ್ನು ಆಯ್ದುಕೊಂಡೆ. ಹೀಗಾಗಿ ನನ್ನ ಗೆಳೆಯರ ಪರಿವಾರ ಕೌರವಪಕ್ಷದಂತೆ ದೊಡ್ಡದಾಗಲಿಲ್ಲ, ಪಾಂಡವರ ಪಕ್ಷದಂತೆ ಸಣ್ಣದಾಯಿತು. ನಾನು ಪಾಂಡವರಂತೆ ವನವಾಸ, ಅಜ್ಞಾತವಾಸ ಅನುಭವಿಸಬೇಕಾಯಿತು. ಆ ಅಜ್ಞಾತವಾಸವೇ ಈ ನೃಪತುಂಗ ಪ್ರಶಸ್ತಿಗಳಂಥ ಗೌರವಗಳ ಮೂಲಕ ನನ್ನನ್ನು ಈಗ ಜ್ಞಾತಗೊಳಿಸುತ್ತಿದೆ.

ನಾನು ಮೂಲತಃ ಶಿಕ್ಷಕ, ಇದಕ್ಕೆ ಪೂರಕವಾಗಿ ಒಬ್ಬ ಲೇಖಕ. ಎರಡು ಮುಖಗಳಲ್ಲಿ ಒಂದು ಮುಖ ಸವೆದರೂ ನಾಣ್ಯ ಅಪ್ರಯೋಜಕವಾಗುವಂತೆ ಶಿಕ್ಷಕ-ಲೇಖಕಗಳೆಂಬ ಎರಡು ಮುಖಗಳಲ್ಲಿ ಒಂದು ಇಲ್ಲದಿದ್ದರೆ ಅವನು ಅಪೂರ್ಣನೆಂದೇ ನನ್ನ ಭಾವನೆ. ಹೀಗಾಗಿ ನಾನು ಈ ಎರಡೂ ಹೊಣೆಗಳನ್ನು ಶ್ರದ್ಧೆಯಿಂದ ನಿರ್ವಹಿಸುತ್ತ ಬಂದಿದ್ದೇನೆ. ಮತ್ತು ಅಂದಿನ ಸ್ಥಳೀಯ ಮತ್ತು ರಾಷ್ಟ್ರೀಯ ಘಟನೆಗಳೂ ನಾನು, ನನ್ನಂಥವರು ಬೆಳೆಯಲು ಕಾರಣವಾದವು. ಅವು: ನಾನು ಶಿಕ್ಷಕನಾಗುವ ಕೆಲವೇ ವರ್ಷ ಮೊದಲು ಕರ್ನಾಟಕ ಏಕೀಕರಣ, ವಿಶ್ವವಿದ್ಯಾಲಯ ಧನಸಹಾಯ ಆಯೋಗ ಅಸ್ತಿತ್ವಕ್ಕೆ ಬಂದಿದ್ದವು. ಇವುಗಳಿಗಿಂತ ಮುಖ್ಯಕಾರಣ, ನಾನು ಅಧ್ಯಾಪಕನಾದ ಹೊಸದರಲ್ಲಿ ಕನ್ನಡ ವಿಭಾಗವು ಕನ್ನಡ ಅಧ್ಯಯನಪೀಠವಾಗಿ ರೂಪಗೊಂಡುದು. ಜಾನಪದ, ಭಾಷಾಶಾಸ್ತ್ರ, ಶಾಸನ, ಗ್ರಂಥಸಂಪಾದನೆ ಇತ್ಯಾದಿ ಹೊಸವಿಷಯಗಳು ಸೇರ್ಪಡೆಗೊಳ್ಳುವಲ್ಲಿ ಬಹುಶಿಸ್ತೀಯ ಅಧ್ಯಯನ ನನಗೆ ಸಾಧ್ಯವಾಯಿತು. ಅದೇ ಆಗ ಅಸ್ತಿತ್ವಕ್ಕೆ ಬಂದ ವಿಚಾರಸಂಕಿರಣ, ಬೇಸಗೆಯ ಶಿಬಿರ, ವಿಶೇಷೋಪನ್ಯಾಸ ಇತ್ಯಾದಿ ಹೊಸಹೊಸ ಉಪಕ್ರಮಗಳೂ ನನ್ನ ತಿಳಿವಳಿಕೆಯನ್ನು ವಿಸ್ತರಿಸಿದವು. ಇವುಗಳಿಗಿಂತ ನಿಜವಾಗಿಯೂ ನನ್ನನ್ನು ಪ್ರತಿದಿನ ಬೆಳೆಸಿದುದು ವರ್ಗಬೋಧನೆ. ನನ್ನ ೧ ತಾಸಿನ ವರ್ಗಬೋಧನೆಯ ಅವಧಿ ೬೦ ನಿಮಿಷಗಳದ್ದೇ ಹೊರತು ೪೫ ನಿಮಿಷಗಳದ್ದಲ್ಲ. ಒಳ್ಳೆಯ ಶಿಕ್ಷಕ ಒಳ್ಳೆಯ ವಿದ್ಯಾರ್ಥಿಗಳನ್ನು ರೂಪಿಸುವಂತೆ, ಒಳ್ಳೆಯ ವಿದ್ಯಾರ್ಥಿಗಳು ಒಳ್ಳೆಯ ಶಿಕ್ಷಕನನ್ನು ರೂಪಿಸುತ್ತಾರೆ. ಈ ಅರ್ಥದಲ್ಲಿ ನನ್ನ ಒಳ್ಳೆಯ ವಿದ್ಯಾರ್ಥಿಗಳು ನನ್ನನ್ನು ರೂಪಿಸಿದ್ದಾರೆ. ಹೀಗಾಗಿ ನನ್ನ ಗುರುಗಳಿಗೆ ಋಣಿಯಾಗಿರುವಷ್ಟೇ ನನ್ನ ವಿದ್ಯಾರ್ಥಿಗಳಿಗೂ ನಾನು ಋಣಿಯಾಗಿದ್ದೇನೆ.

ನನ್ನ ಶೈಕ್ಷಣಿಕ ವ್ಯಕ್ತಿತ್ವದ ಇನ್ನೊಂದು ಮುಖ ಸಂಶೋಧನೆ. ಆರಂಭದಲ್ಲಿ ಆಕರಶೋಧಕನಾಗಿ-ಘಟನಾಶೋಧಕನಾಗಿ ದುಡಿದ ನಾನು, ಬಳಿಕ ಘಟನೆಯ ಹಿಂದಿರುವ ಕಾರಣಶೋಧಕನಾಗಿ-

ಮುಂದಿರುವ ಪರಿಣಾಮಶೋಧಕನಾಗಿ ಬಿಚ್ಚಿಕೊಂಡಿದ್ದೇನೆ. ಕಾರಣಶೋಧ, ಪರಿಣಾಮಶೋಧಗಳು ವಿಮರ್ಶಾ ಮಾದರಿಗಳಾಗಿರುವುದರಿಂದ, ನನ್ನ ಅನೇಕ ಬರೆಹಗಳು ಸಂಶೋಧನೆಯಾಗುತ್ತಲೇ ವಿಮರ್ಶೆಗಳೂ ಆಗಿವೆ. ಆಕರಶೋಧ-ಘಟನಾಶೋಧಗಳು ಕೇವಲ ಗತಕಾಲವನ್ನು ಶೋಧಿಸುತ್ತಿದ್ದರೆ, ಕಾರಣಶೋಧ- ಪರಿಣಾಮಶೋಧಗಳು ಗತ-ವರ್ತಮಾನ ಕಾಲಗಳನ್ನೂ ಅರ್ಥೈಸುತ್ತವೆ. ಹೀಗಾಗಿ ಅವುಗಳಲ್ಲಿ ಒಂದನ್ನು ಸ್ಥಗಿತ ಸಂಶೋಧನೆಯೆಂದೂ, ಇನ್ನೊಂದನ್ನು ಚಲನಶೀಲ ಸಂಶೋಧನೆಯೆಂದೂ ನಾನು ಕರೆದಿದ್ದೇನೆ. ಅದು Past is Past ಎಂಬ, ಇದು Past is Present ಎಂಬ ಧೋರಣೆಯುಳ್ಳುವಾಗಿವೆ. ನಾನು ಸಂಶೋಧನೆಯ ಈ ಎಲ್ಲ ಸ್ತರ, ಎಲ್ಲ ಆಯಾಮಗಳಲ್ಲಿ ದುಡಿದಿದ್ದೇನೆ. ಈಗ ಅನೇಕ ಹೊಸ ವಾದಗಳನ್ನು ಹುಟ್ಟುಹಾಕುವುದರೊಂದಿಗೆ, ನಮ್ಮ ಹಿರಿಯರ ಅನೇಕ ಹಳೆಯ ವಾದಗಳನ್ನು ಪ್ರಶ್ನಿಸಿದ್ದೇನೆ, ಪರಿಷ್ಕರಿಸಿದ್ದೇನೆ.

"ಸತ್ಯವನ್ನು ಹೇಳುತ್ತೇನೆ. ಸತ್ಯವನಲ್ಲದೆ ಬೇರೇನನ್ನೂ ಹೇಳುವುದಿಲ್ಲ" ವೆಂದು ಸತ್ಯಕ್ಕೆ ಬದ್ಧನಾಗಿರುವ ಸಂಶೋಧಕ ಆಗಾಗ ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ಇಂಥ ಹಿಂಸೆಯನ್ನು ಅನುಭವಿಸಿದ ನೋವೂ ನನ್ನದಾಗಿದೆ. ಆದರೆ ಕಾಲ ಕೆಳಗಿನ ಬೆಂಕಿಗಿಂತ ಕಣ್ಣ ಮುಂದಿನ ಬೆಳಕು ದೊಡ್ಡದೆಂಬ ಭಾವನೆಯಿಂದ ಈ ವರೆಗೆ ನಡೆದು ಬಂದಿದ್ದೇನೆ. ಹೀಗಿದ್ದೂ ನನ್ನ ಶೋಧವೇ ಸತ್ಯವೆಂಬ ಭ್ರಮೆ ನನಗಿಲ್ಲ. ನಾನೇ ಹೇಳಿದಂತೆ "ಸಂಶೋಧನೆಯೆಂಬುದು ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮದತ್ತ ಸಾಗುವ ಕ್ರಿಯೆಯಾಗಿದೆ."

ನಾನು ಮೂಲತಃ ಸಾಹಿತ್ಯ ಸಂಶೋಧನೆಯ ವಿದ್ಯಾರ್ಥಿ. ಸಹಜವಾಗಿಯೇ ಇದಕ್ಕೆ ಸಂಬಂಧಪಟ್ಟ ವ್ಯಾಕರಣ, ಛಂದಸ್ಸು, ಅಲಂಕಾರ, ನಿಘಂಟು ಕ್ಷೇತ್ರಗಳ ಸಂಶೋಧನೆಯಲ್ಲಿ ತೊಡಗಿದ್ದೇನೆ. ಇದಕ್ಕೆ ಹೆಚ್ಚಿನದಾಗಿ ಸಾಹಿತ್ಯವೆನ್ನುವುದು ಜೀವನದ ಪ್ರತಿಬಿಂಬವಾಗಿರುವುದರಿಂದ ಅಲ್ಲಿ ಮೂಡಿರುವ ರಾಜಕೀಯ ಇತಿಹಾಸ, ಧಾರ್ಮಿಕ ಇತಿಹಾಸ ಮತ್ತು ಸಿದ್ಧಾಂತಗಳು ನನ್ನ ಅಧ್ಯಯನದ ವಸ್ತುಗಳಾದವು. ಸಾಲದುದಕ್ಕೆ ಆಧುನಿಕ ಶಿಕ್ಷಣದಿಂದಾಗಿ ಕನ್ನಡದಲ್ಲಿ ತೆರೆದುಕೊಂಡ ಜಾನಪದ, ಭಾಷಾಶಾಸ್ತ್ರ, ವಿಮರ್ಶೆ, ಶಾಸನಶಾಸ್ತ್ರ, ನಾಮವಿಜ್ಞಾನ, ಗ್ರಂಥಸಂಪಾದನೆಗಳೂ ನನ್ನ ಬೋಧನೆ-ಬರವಣಿಗೆಗಳ ವಸ್ತುವಾದವು.

ಹೀಗೆ ನನ್ನ ಅಧ್ಯಯನ ಶಿಸ್ತುಗಳು ಅನೇಕವಿದ್ದರೂ ಅವುಗಳ ಹಿಂದಿರುವ ಕನ್ನಡಿಗರ ಚರಿತ್ರೆಯನ್ನು, ಸಂಸ್ಕೃತಿಯನ್ನು ಹುಡುಕುವುದು ನನಗೆ ತುಂಬ ಇಷ್ಟವಾದುದು. ಆಧುನಿಕ ಕಾಲದ ಆರಂಭದಲ್ಲಿ ಮೈಸೂರು ಭಾಗದವರಿಂದ 'ಚರಿತ್ರೆ ಮಾದರಿ', ಧಾರವಾಡ ಭಾಗದವರಿಂದ 'ಸಂಸ್ಕೃತಿಯ ಮಾದರಿ'ಗಳೆಂಬ ಎರಡು ಸಂಶೋಧನ ಮಾದರಿಗಳು ನಮ್ಮಲ್ಲಿ ಬಿಚ್ಚಿಕೊಂಡವು. ಮುಂದಿನ ದಿನಗಳಲ್ಲಿ ಮೈಸೂರಿನವರು ಧಾರವಾಡ ಮಾದರಿಯನ್ನು ಧಾರವಾಡದವರು ಮೈಸೂರ ಮಾದರಿಯನ್ನು ಅಳವಡಿಕೊಂಡಿದ್ದು, ನಾನು ಈ ಎರಡೂ ಮಾದರಿಗಳಲ್ಲಿ ದುಡಿದಿದ್ದೇನೆ. ಇವೆಲ್ಲವುಗಳಿಗಿಂತ ಸಮಾಜ, ಧರ್ಮ, ಶಿಕ್ಷಣ, ಕಲೆ, ಸಾಹಿತ್ಯ, ರಾಜಕಾರಣ ಏನೆಲ್ಲ ಸಮಾಜದ ಶ್ರೇಯಸ್ಸಿಗಾಗಿ ದುಡಿಯುವಂತೆ ಸಂಶೋಧನೆಯೂ ಸಮಾಜದ ಶ್ರೇಯಸ್ಸಿಗಾಗಿ ದುಡಿಯಬೇಕೆಂಬುದು ನನ್ನ ಮುಖ್ಯ ಧೋರಣೆಯಾಗಿದೆ. "ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ; ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ

ಪಡಿಸಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ" ಎಂಬುದೂ ನನ್ನ ಧೋರಣೆಯಾಗಿದೆ. ಹೀಗಾಗಿ ನನ್ನ ಶೋಧಗಳು ವರ್ತಮಾನದ ಅನೇಕ ಸಮಸ್ಯೆಗಳಿಗೆ, ಶೋಷಣೆಗಳಿಗೆ ಪರಿಹಾರ ಸೂಚಿಸಿವೆ. ``Research is a dialogue between Past and Persent'' ಎಂಬ ಮಾತಿಗೆ ನನ್ನ ಇಂಥ ಶೋಧಗಳು ಸಾಕ್ಷಿಯಾಗಿವೆ.

ನನ್ನದು ಅವಿಭಕ್ತಪ್ರಜ್ಞೆ, ಆದುದರಿಂದ ಜೀವನದುದ್ದಕ್ಕೂ ನಾನೊಬ್ಬನೇ ಬೆಳೆಯದೆ ನನ್ನ ವಿದ್ಯಾರ್ಥಿಗಳನ್ನು ಸ್ನೇಹಿತರನ್ನು ಜೋಡಿಸಿಕೊಂಡು ಯೋಜನೆಗಳನ್ನು ಪೂರೈಸಿದ್ದೇನೆ. ಅನೇಕ ಸರಕಾರಿ, ಸಾರ್ವಜನಿಕ ಸಂಸ್ಥೆಗಳೊಂದಿಗೆ ಸಂಪರ್ಕವಿಟ್ಟುಕೊಂಡು ಅವುಗಳ ಅಭಿವೃದ್ಧಿಗಾಗಿ ದುಡಿದಿದ್ದೇನೆ. ಇದು ನನಗೆ ಸಾರ್ವಜನಿಕಸೇವೆಯ ಸಾರ್ಥಕ ಭಾವನೆಯನ್ನುಂಟುಮಾಡಿದೆ.

* * *

ಸಂಸ್ಕೃತಿ ಸಾರ್ವಭೌಮ ನೃಪತುಂಗನ ಹೆಸರಿನಲ್ಲಿರುವ ಈ ಪ್ರಶಸ್ತಿಯನ್ನು, ಸ್ವೀಕರಿಸುವಾಗ ಸಮಕಾಲೀನ ಸಂಸ್ಕೃತಿ, ಅದರ ಭಾಗಗಳಾದ ಶಿಕ್ಷಣ-ಕಲೆ ಇತ್ಯಾದಿಗಳ ಸ್ಥಿತಿಗತಿಯ ಪ್ರಸ್ತಾಪ ಇಲ್ಲಿ ಸೂಕ್ತವೆನಿಸುತ್ತದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷಾಗೌರವ ಸಂದ ಸಂಭ್ರಮದಲ್ಲಿರುವ ನಾವು, ಈ ಗೌರವಕ್ಕೆ ಅರ್ಹವಾದ ಕ್ರಿಯಾಯೋಜನೆ ರೂಪಿಸಬೇಕಾಗಿದೆ. ನನಗೆ ಇಲ್ಲಿ ಮುಖ್ಯವೆನಿಸಿದುದು ಮಹತ್ವಪೂರ್ಣ ಯೋಜನೆಗಳನ್ನು ಕೈಕೊಳ್ಳುವುದರ ಜೊತೆಗೆ, ಆ ಕೆಲಸ ನಿರ್ವಹಿಸುವ ಸಮರ್ಥ ವಿದ್ವಾಂಸರನ್ನು ರೂಪಿಸುವುದು. ಹೀಗೆ ಮಾಡದಿದ್ದರೆ ಇಲ್ಲಿಯ ಕ್ರಿಯಾಯೋಜನೆಗಳು ಅಸಮರ್ಥರು ಮೇಯುವ ಹುಲ್ಲುಗಾವಲಾಗುತ್ತವೆ. ಯಾವುದೇ ಜ್ಞಾನಕ್ಷೇತ್ರದ ಶ್ರೇಷ್ಠತೆಗೆ ಅಲ್ಲಿಯ ಶ್ರೇಷ್ಠವ್ಯಕ್ತಿಗಳು ಕಾರಣ. ಹೀಗಾಗಿ ಅಂಥವರನ್ನು ಸೃಷ್ಟಿಸುವ ಹೊಸ ಶಿಕ್ಷಣ ಕೋರ್ಸ ಅಸ್ತಿತ್ವಕ್ಕೆ ಬರಬೇಕಾಗಿದೆ. ಅವರು ಮಾತ್ರ ಕನ್ನಡ ಸಂಸ್ಕೃತಿಯ ರಾಯಭಾರಿಗಳಾಗಿ ನಿಂತು, ನಮಗೆ ಪ್ರಾಪ್ತವಾಗಿರುವ ಶಾಸ್ತ್ರೀಯ ಭಾಷಾಮರ್ಯಾದೆಯನ್ನು ರಾಷ್ಟ್ರೀಯ-ಜಾಗತಿಕ ಮಟ್ಟದಲ್ಲಿ ಎತ್ತಿಹಿಡಿಯಬಲ್ಲರು.

ಶಿಕ್ಷಕನಾದ ನನಗೆ ನೋವಿನ ಸಂಗತಿಯೆಂದರೆ ನಮ್ಮ ಶಿಕ್ಷಣಕ್ಷೇತ್ರದ, ಅದರಲ್ಲಿಯೂ ಪ್ರಾಥಮಿಕ ಶಿಕ್ಷಣಕ್ಷೇತ್ರದ ಅವ್ಯವಸ್ಥೆ. ಕಳೆದ ವರ್ಷ ೫೦೦ ಸರಕಾರಿ ಪ್ರಾಥಮಿಕ ಶಾಲೆಗಳು ಮುಚ್ಚಿದರೆ, ಈ ವರ್ಷ ೨೦೦೦ ಸರಕಾರಿ ಶಾಲೆಗಳು ಮುಚ್ಚಲಿವೆ-ಎಂಬ ಆಘಾತಕರ ಸುದ್ದಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು. ಈ ಸುದ್ದಿಯನ್ನು ಅಲ್ಲಗಳೆದುದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಹೀಗಿದ್ದೂ ಈ ಪರಿಸ್ಥಿತಿಗೆ ನಾವು ಕಾರಣ ಹುಡುಕಬೇಕಾಗಿದೆ. ನನಗೆ ತಿಳಿದಮಟ್ಟಿಗೆ ಈ ದುರಂತಕ್ಕೆ ಕಾರಣ, ನಮ್ಮ ಸರಕಾರ ಮತ್ತು ಶಿಕ್ಷಕರು. ಅಂದರೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿಯ ವಿಭಿನ್ನ ಪಠ್ಯಕ್ರಮ, ದೋಷಪೂರ್ಣ ಭಾಷಾನೀತಿ, ಗ್ರಾಮೀಣ ಶಾಲೆಗಳಲ್ಲಿಯ ಸೌಕರ್ಯದ ಕೊರತೆ ಮತ್ತು ನಮ್ಮ ಶಿಕ್ಷಕರ ಅನರ್ಹತೆ-ಬೇಜವಾಬ್ದಾರಿತನ. ಈ ನಾಲ್ಕು ನೆಲೆಗಳಲ್ಲಿ ತೀವ್ರ ಸುಧಾರಣೆ ಅಗತ್ಯವಿದೆ.

ಇದಕ್ಕೆ ವಿರುದ್ಧವೆಂಬಂತೆ ಸೌಕರ್ಯಗಳಿಂದ ಕೂಡಿರುವ ಸ್ನಾತಕ-ಸ್ನಾತಕೋತ್ತರ ಶಿಕ್ಷಣದಲ್ಲಿ ಇನ್ನೊಂದು ಬಗೆಯ ದುರಂತ ಕಾಣಿಸಿಕೊಂಡಿದೆ. ಅದು: ಪಗಾರಕ್ಕಾಗಿ ಬರುವ ಶಿಕ್ಷಕರ, ಸರ್ಟಿಫಿಕೇಟಗಾಗಿ ಬರುವ ವಿದ್ಯಾರ್ಥಿಗಳ ಸರಳದಾರಿ ಅಲ್ಲಿ ನಿರ್ಮಾಣವಾಗಿದೆ. ಮೇಲಾಗಿ ಪಗಾರ ಹೆಚ್ಚಳದಿಂದಾಗಿ ಶಿಕ್ಷಕರು ಸೋಮಾರಿಗಳಾಗಿದ್ದಾರೆ, ಯುಜಿಸಿ ಮತ್ತು ಸರಕಾರಗಳು

ಕಣ್ಣುಮುಚ್ಚಿ ನೀಡುವ ಯೋಜನೆಗಳ ಅಧಿಕ ಅನುದಾನದಿಂದಾಗಿ ಅವರು ಭ್ರಷ್ಟರಾಗುತ್ತಿದ್ದಾರೆ. ನಿವೃತ್ತಿ ವಯೋಮಿತಿಯ ಹೆಚ್ಚಳವೂ ಇಲ್ಲಿ ಸಮರ್ಥನೀಯವೆನಿಸುವುದಿಲ್ಲ. ನೇರವಾಗಿಯೇ ನನ್ನ ಕ್ಷೇತ್ರಕ್ಕೆ ಬರುವುದಾದರೆ, ಕನ್ನಡ ಪ್ರಾಧ್ಯಾಪಕರು ಕೇವಲ ಪಠ್ಯಪುಸ್ತಕ ಬೋಧಿಸುವ ಗಿಳಿಗಳಾಗಿದ್ದಾರೆ. ಏಕಭಾಷಾ ಅಭ್ಯಾಸಿಗಳಾಗಿ ಕೂಪಮಂಡೂಕರೂ ಆಗಿದ್ದಾರೆ. ಇವರು ಪಠ್ಯೇತರ ಜ್ಞಾನಸಾಗರದ ಈಜುಗಾರರೂ ಬಹುಭಾಷಾ ಬಲ್ಲಿದರೂ ಆಗುವುದು ಅಗತ್ಯವಿದೆ. ಮತ್ತು ಅವರು ಆ ಮೂಲಕ ಕನ್ನಡ ನಾಡು-ನುಡಿ-ಸಂಸ್ಕೃತಿಗಳನ್ನು ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಾರ ಮಾಡುವ ಪ್ರತಿನಿಧಿಗಳಾಗುವುದು ಅವಶ್ಯವಿದೆ.

ಬಿ.ಜೆ.ಪಿ ಸರಕಾರ ಶಿಕ್ಷಣ, ಸಂಸ್ಕೃತಿ, ಕಲೆಗಳಿಗಾಗಿ ಈ ಮೊದಲಿನ ಸರಕಾರಗಳಿಗಿಂತ ಹೆಚ್ಚು ಹಣ ನೀಡಿದೆ, ನೀಡುತ್ತಲಿದೆ. ಇದಕ್ಕೆ ಪ್ರತಿಯಾಗಿ ಗುಣಮಟ್ಟದ ಫಲಿತಾಂಶ ನೀಡುವುದು ಫಲಾನುಭವಿಗಳಾದ ನಮ್ಮ ಜವಾಬ್ದಾರಿಯಾಗಿದೆ. ಈ ವರೆಗಿನ ಅನುದಾನದ ಪ್ರಮಾಣ-ಫಲಿತಾಂಶಗಳ ಗುಣಮಟ್ಟವನ್ನು ನೋಡಿದರೆ ಸರಕಾರ ಜನಪ್ರಿಯತೆಗಾಗಿ ಆವಶ್ಯಕತೆಗಿಂತ ಅಧಿಕ ಹಣ ನೀಡುತ್ತಲಿದೆ ಎಂಬ ಅನುಮಾನ ಬರುತ್ತಲಿದೆ. ಈ ಕೆಲಸಗಳನ್ನು ಫಲಾನುಭವಿಗಳಾದ ನಾವು ಕಲೆ-ಸಂಸ್ಕೃತಿಗಳ ಮೇಲಿನ ಪ್ರೀತಿಗಾಗಿ ಮಾಡಬೇಕೇ ಹೊರತು, ಹಣದ ಮೇಲಿನ ಪ್ರೀತಿಗಾಗಿ ಮಾಡಬಾರದು. ಹೀಗಾದರೆ ಕಳಪೆ ಗುಣಮಟ್ಟದ ಫಲಿತಾಂಶ, ಹಣದ ಅಪವ್ಯಯವೆಂಬ ಅಪವಾದ ಹೊರಬೇಕಾಗುತ್ತದೆ. ಆದುದರಿಂದ ಹಣಕ್ಕೆ ತಕ್ಕ ಕೆಲಸ, ಕೆಲಸಕ್ಕೆ ತಕ್ಕ ಹಣವೆಂಬ ನೀತಿ ಸರಕಾರದಲ್ಲಿ, ಸಂಸ್ಥೆಗಳಲ್ಲಿ ಅನುಷ್ಠಾನಗೊಳ್ಳಲೆಂದು ಆಶಿಸುತ್ತೇನೆ. ಇದಲ್ಲದೆ ಕೆಲವು ವ್ಯಕ್ತಿ-ಸಂಸ್ಥೆಗಳು ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಸರಕಾರದಿಂದ ಅನುದಾನ ಪಡೆದು ಅಲ್ಲಿ ಮತೀಯ-ಸ್ವಪ್ರತಿಷ್ಠೆಯ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸುತ್ತಿವೆ. ಇವೆಲ್ಲ ದೋಷ ನಿವಾರಣೆಗಾಗಿ ಸಂಸ್ಕೃತಿ ಇಲಾಖೆ ಅನುದಾನ ವಿಷಯದಲ್ಲಿ ಸೂಕ್ತ ನೀತಿಯನ್ನು ರೂಪಿಸಬೇಕಾಗಿದೆ.

ನಮ್ಮ ರಾಜ್ಯದಲ್ಲಿ ಪ್ರಶಸ್ತಿ, ಪ್ರಾಧಿಕಾರ, ಅಕಾಡೆಮಿ, ಪೀಠ ಇತ್ಯಾದಿಗಳ ಸಂಖ್ಯೆ ಆವಶ್ಯಕತೆಗಿಂತ ಮೀರಿ ಬೆಳೆದಿದೆ. ಇವುಗಳ ಜೊತೆ ಜಯಂತಿ-ಪುಣ್ಯತಿಥಿ ಹೆಸರಿನಲ್ಲಿ ರಜಾ ದಿನಗಳೂ ಬೆಳೆದಿವೆ. ಆಯಾ ಕಾಲದ ಸರಕಾರಗಳು ಮತ ಗಳಿಕೆಯ ಜನಪ್ರಿಯತೆಗಾಗಿ ಈ ಸಂಖ್ಯೆಯನ್ನು ಬೆಳೆಸುತ್ತ ಬಂದಿವೆಯೆಂದು ಬೇರೆ ಹೇಳಬೇಕಿಲ್ಲ. ಇಂಥ ಅವ್ಯವಸ್ಥೆಯ ಸಂದರ್ಭದಲ್ಲಿಯೂ ಈ ವರ್ಷ ರಾಜ್ಯೋತ್ಸವ ಪ್ರಶಸ್ತಿ ಸಂಖ್ಯೆಯನ್ನು ೫೦ಕ್ಕೆ ಇಳಿಸಿದ ಮಾನ್ಯ ಮುಖ್ಯಮಂತ್ರಿಗಳ ದಿಟ್ಟ ಕ್ರಮವನ್ನು ರಾಜ್ಯದ ಜನ ಮೆಚ್ಚಿಕೊಂಡಿದೆ. ಇದು ನಮ್ಮ ಮುಖ್ಯಮಂತ್ರಿಗಳಿಗೆ ಲಭಿಸಿದ ೫೧ನೆಯ ಪ್ರಶಸಿಗೌರವವೆಂದು ಭಾವಿಸುತ್ತೇನೆ. ಹೀಗೆ ಒಂದು ಕಡೆಗೆ ಸರಕಾರ ಪುರಸ್ಕಾರಗಳ ಸಂಖ್ಯೆಯನ್ನು ನಿಯಂತ್ರಿಸುತ್ತಿದ್ದರೆ, ಇನ್ನೊಂದು ಕಡೆ ಒಂದು ವಿಶ್ವವಿದ್ಯಾಲಯ ೧೨ ಜನರಿಗೆ ಗೌರವ ಡಾಕ್ಟರೇಟ್ ನೀಡಿದುದು, ಇದಕ್ಕೆ ಘನತೆವೆತ್ತ ರಾಜ್ಯಪಾಲರು ಸಮ್ಮತಿಸಿದ್ದು ಬೇಸರದ ಸಂಗತಿಯಾಗಿದೆ.

ವಿದೇಶಿ ಕನ್ನಡಿಗರಿಗೆ ನೀಡಬೇಕಾದ ಸಹಾಯದ ಆವಶ್ಯಕತೆಯನ್ನು ಮನಗಂಡು ೨೦೦೪ರಲ್ಲಿ ನಾನು ನ್ಯೂಝಿಲ್ಯಾಂಡ್‌ದಿಂದಲೇ ಅಂದಿನ ಮುಖ್ಯಮಂತ್ರಿ ಶ್ರೀ ಧರ್ಮಸಿಂಗ್ ಅವರಿಗೆ ಪತ್ರ ಬರೆದಿದ್ದೆನು. 'ಇತ್ತೀಚಿನ ಸಾಮಾಜಿಕ ಚಲನಶೀಲತೆ ಕಾರಣವಾಗಿ ಕನ್ನಡಿಗರು ಬೇರೆ ರಾಜ್ಯ, ರಾಷ್ಟ್ರಗಳಲ್ಲಿ ಹಂಚಿಹೋಗಿದ್ದಾರೆ. ಹೀಗಾಗಿ ನೀವು ನಮ್ಮ ಮುಖ್ಯಮಂತ್ರಿಗಳಷ್ಟೇ ಅಲ್ಲಿ, ಅವರ

ಮುಖ್ಯಮಂತ್ರಿಗಳೂ ಹೌದು. ಅಂದರೆ ನೀವು ಈಗ ಒಂದು ಕರ್ನಾಟಕದ ಮುಖ್ಯಮಂತ್ರಿಗಳಲ್ಲ ಹಲವು ಕರ್ನಾಟಕಗಳ ಮುಖ್ಯಮಂತ್ರಿ ಆದುದರಿಂದ ಇವರ ಯೋಗಕ್ಷೇಮವೂ ನಿಮ್ಮ ಹೊಣೆಯಾಗಿದೆ' ಎಂದು ತಿಳಿಸಿ, ಇದರ ನಿರ್ವಹಣೆಗಾಗಿ 'ವಿದೇಶಿ ಕನ್ನಡಿಗರ ಸಂಪರ್ಕ ಘಟಕ'ವನ್ನು ಅಸ್ತಿತ್ವಕ್ಕೆ ತರಬೇಕೆಂದು ತಿಳಿಸಿದ್ದೆನು. ಅಲ್ಲಿಂದ ಮರಳಿದ ಬಳಿಕ ಕನ್ನಡ-ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಿಗೆ ಇದರ ಅಗತ್ಯವನ್ನು ತಿಳಿಸಿ, ಆಗಾಗ ಭಾಷಣ, ಪತ್ರಿಕೆಗಳ ಮೂಲಕ ಈ ವಿಷಯ ಪ್ರಸ್ತಾಪ ಮಾಡಿದ್ದೆನು. ಇದರ ಫಲವಾಗಿ ಇತ್ತೀಚೆ ಕರ್ನಾಟಕ ಸರಕಾರ"ಅನಿವಾಸಿ ಭಾರತೀಯ ಸಮಿತಿ" ಹೆಸರಿನ ಘಟಕವನ್ನು ಅಸ್ತಿತ್ವಕ್ಕೆ ತಂದಿದ್ದು, ಇಂದಿನ ಜಾಗತೀಕರಣ ಸಂದರ್ಭದಲ್ಲಿ ಈ ಶಾಖೆ ಹೆಚ್ಚು ಉತ್ಸಾಹದಿಂದ ಕೆಲಸ ಮಾಡಬೇಕಾಗಿದೆ.

ಇಷ್ಟೆಲ್ಲ ಹೇಳಿದ ಬಳಿಕವೂ ಹೇಳಬೇಕಾದ ಬಹಳಷ್ಟು ಮಾತು ಉಳಿದುಕೊಳ್ಳುವುದು ಸಹಜ. ಆದರೂ ಹೇಳಲೇಬೇಕಾದ ಒಂದು ಕೊನೆಯ ಮಾತು: ಈ ವರೆಗೆ ನಮ್ಮ ಸಚಿವರು, ಶಾಸಕರು ಮತ್ತು ಆಡಳಿತಗಾರರು ಉತ್ತಮ ಕೆಲಸಗಳೊಂದಿಗೆ ಕೆಲವು ತಪ್ಪುಗಳನ್ನೂ ಮಾಡಿದ್ದಾರೆ. "ಒಮ್ಮೆ ಮಾಡಿದ ತಪ್ಪನ್ನು ಮತ್ತೆ ಮಾಡದವನೇ ಜಂಟಲ್‌ಮನ್" ಎಂದು ಹಿರಿಯರು ಹೇಳಿದ್ದಾರೆ. ಈ ಮಾತನ್ನು ನೆನಪಿನಲ್ಲಿಟ್ಟುಕೊಂಡು ನಮ್ಮ ಸಚಿವರು, ಇನ್ನುಮುಂದೆ ಹಳೆಯ ತಪ್ಪುಗಳನ್ನು ಪುನರುಕ್ತಗೊಳಿಸದೆ ನೃಪತುಂಗನ ಆದರ್ಶದಲ್ಲಿ ರಾಜ್ಯಭಾರ ಮಾಡಲಿ, ನಾವೆಲ್ಲ ಅಂಥ ಸಚಿವರ ಆದರ್ಶವನ್ನು ವಾಸ್ತವವಾಗಿಸುವ ಪ್ರಜೆಗಳಾಗಲಿ-ಎಂದು ಹಾರೈಸಿ, ಎಲ್ಲರಿಗೂ ಇನ್ನೊಮ್ಮೆ ಕೃತಜ್ಞತೆ ಅರ್ಪಿಸಿ, ಮಾತು ಮುಗಿಸುತ್ತೇನೆ."ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದೆ" ಎಂಬ ಕವಿಯ ಆಶಯದೊಂದಿಗೆ ನಿಮಗೆ ಕೈಮುಗಿಯುತ್ತೇನೆ.

ಆಕರ : ಮಾರ್ಗ ಸಂಪುಟ-೭

■■

ವ್ಯಕ್ತಿ ಚಿತ್ರಗಳು

೭೫

ಪಾಂಡಿತ್ಯದ ಡಿ. ಎಲ್. ನರಸಿಂಹಾಚಾರ್

೧೯೭೧

ಡಿ. ಎಲ್. ಎನ್. ಅವರನ್ನು ನೋಡಿ, ತೀ.ನಂ.ಶ್ರೀ. ಅವರ ಮರಣ ದುಃಖವನ್ನು ಮರೆಯುತ್ತಿದ್ದ ಕನ್ನಡ ಸಾಹಿತ್ಯಪ್ರಪಂಚ ಡಿ. ಎಲ್. ಎನ್. ಅವರ ನಿಧನವಾರ್ತೆಯಿಂದ (೮-೫-೧೯೭೧) ನಿಜಕ್ಕೂ ತತ್ತರಿಸಿಹೋಗಿದೆ.

ಬಿ. ಎಂ. ಶ್ರೀ., ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿಗಳ ಕಮ್ಮಟದಲ್ಲಿ ರೂಪಗೊಂಡು, ಕುವೆಂಪು, ಡಿ. ಕೆ. ಭೀಮಸೇನರಾವ್, ಕೆ. ವೆಂಕಟರಾಮಪ್ಪ, ಎನ್. ಅನಂತರಂಗಾಚಾರ್ ಮೊದಲಾದವರ ಜತೆಯಲ್ಲಿ ವಿದ್ಯಾರ್ಥಿ ಜೀವನವನ್ನು ಕಳೆದು, ಸಂಶೋಧನ ವಿದ್ಯಾರ್ಥಿಯೆಂದು, ಓರಿಯಂಟಲ್ ರೀಸರ್ಚ ಇನ್‌ಸ್ಟಿಟ್ಯೂಟದ ಕನ್ನಡ ಪಂಡಿತರೆಂದು, ಮೈಸೂರಿನ ಮಹಾರಾಜಾ ಕಾಲೇಜು, ಯುವರಾಜಾ ಕಾಲೇಜು, ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರೆಂದು, ಪರಿಷತ್ತು ಕೈಕೊಂಡ ನಿಘಂಟುವಿನ ಸಂಪಾದಕರೆಂದು ಬಹುಮುಖವಾಗಿ ದುಡಿದವರು, ಡಿ. ಎಲ್. ಎನ್. ತಮ್ಮ ಜೀವಿತದ ಅವಧಿಯಲ್ಲಿ ಕನ್ನಡ, ಇಂಗ್ಲಿಷ್, ಸಂಸ್ಕೃತ, ತಮಿಳು, ತೆಲಗು, ಪ್ರಾಕೃತ ಮೊದಲಾದ ಭಾಷೆಗಳನ್ನು ಕೈವರ್ತಿಸಿಕೊಂಡು, ಹಲವು ಶಾಸ್ತ್ರ-ಹಲವು ಸಾಹಿತ್ಯಗಳ ಪರಿವಾರವನ್ನು ಕಟ್ಟಿಕೊಂಡು, ಕನ್ನಡದ ಕಣದಲ್ಲಿ ಇವರು ಮನದಣಿ ದುಡಿದರು. ಜಾಗತಿಕ ವಿದ್ವಾಂಸರ ಸಾಲಿನಲ್ಲಿ ನಿಲ್ಲಬಹುದಾದ ವಿದ್ವತ್ತನ್ನು ಸಂಪಾದಿಸಿದರು.

ಕನ್ನಡದ ದಿಗ್ಗಜ :

ಅಧಿಕಾರದ ಬಲ, ಸ್ವಪಕ್ಷಗಳ ಬೆಂಬಲ, ದುಡ್ಡಿನ ದೌಲತ್ತು, ಮೋಹಕ ಮಾತುಗಾರಿಕೆ ಇವಾವೂ ಇಲ್ಲದೆ ಕೇವಲ ಪಾಂಡಿತ್ಯದ ಸಂಪತ್ತಿನಿಂದ ಜನತೆಯ ಗಮನ, ಗೌರವಗಳನ್ನು ಗಳಿಸಿದವರು ಡಿ. ಎಲ್. ಎನ್. "ಡಿ.ಎಲ್. ಎನ್.ಎಂದರೆ ಪಾಂಡಿತ್ಯ, ಪಾಂಡಿತ್ಯವೆಂದರೆ ಡಿ. ಎಲ್.ಎನ್. ಹಳಗನ್ನಡ ಭಾಷೆ ಸಾಹಿತ್ಯಗಳ ವಿಷಯಕ್ಕಂತೂ ಹಲವರು ಹೇಳುವಂತೆ, ನಾನೂ ಬಲ್ಲಂತೆ ಅವರೊಂದು ಜಂಗಮ ಬೃಹತ್ಕೋಶ! ಹಳಗನ್ನಡದಲ್ಲಿ ಅವರಿಗಿಂತಲೂ ನಿಷ್ಣಾತರಾದ ವಿದ್ವಾಂಸರನ್ನು ಸಧ್ಯದಲ್ಲಿ ಕಾಣುವುದು ಅವಶ್ಯಕವೆಂದೇ ನನ್ನ ಭಾವನೆ." ಕನ್ನಡದ ಇನ್ನೊಂದು ದಿಗ್ಗಜ ತೀ.ನಂ.ಶ್ರೀ, ಹೇಳಿದ ಮಾತಿದು. ಇದು ಪ್ರಶಂಸೆಯಲ್ಲ, ಸರಿಯಾದ ವಿಮರ್ಶೆಯೆಂದು ನನ್ನಂತೆ ಎಲ್ಲರ ಅಭಿಪ್ರಾಯ.

ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥಪೀಠವನ್ನೇರುವ ಭಾಗ್ಯ ಅವರದಾಗದಿದ್ದರೂ, ಪೀಠವೇರಿದವರನ್ನೂ, ಪೀಠ ಏರಬೇಕಾದವರನ್ನೂ ಸಿದ್ಧಗೊಳಿಸಿದವರು; ಮೈಸೂರು ವಿಶ್ವವಿದ್ಯಾಲಯಕ್ಕೆ ಪಾಂಡಿತ್ಯದ ಭದ್ರಬುನಾದಿ ಹಾಕಿದವರು ಡಿ.ಎಲ್. ಎನ್. ೧೧ ಗ್ರಂಥ, ೭ ಮುನ್ನುಡಿ, ೧೨ ವಿಮರ್ಶಾಲೇಖನ, ೭೦ ಇತರ ಲೇಖನ - ಇದು ಡಿ. ಎಲ್. ಎನ್. ಸಾಹಿತ್ಯಸಂಪತ್ತು. ಅವರ ಈ ಕೃಷಿ ಮೊತ್ತದಲ್ಲಿ ಕಡಿಮೆಯೆಂದು ವಾದಿಸುವವರು ಸತ್ವದಲ್ಲಿ ಹಿರಿದೆಂದು ಒಪ್ಪಿಕೊಳ್ಳಲೇಬೇಕು. ಇತ್ತೀಚೆ ಬಂದ ನೂರಾರು ಪುಸ್ತಕಗಳು, ಅವರು ವರ್ಗದಲ್ಲಿ ನೀಡಿದ ಉಪನ್ಯಾಸದ ವಿಸ್ತೃತರೂಪಗಳೆಂದು ಅವರ ಶಿಷ್ಯರೇ ಅಭಿಮಾನಪಟ್ಟು ಹೇಳುವುದರಿಂದ, ಅವರ ಸಾಹಿತ್ಯ ಕೃಷಿಯನ್ನು ಪುಸ್ತಕಸಂಖ್ಯೆಯಲ್ಲಿ ನೋಡದೆ, ಶಿಷ್ಯಸಂಖ್ಯೆಯಲ್ಲಿ ನೋಡುವುದು ನ್ಯಾಯವೆಂದು ತೋರುತ್ತದೆ. ಹಾಗೆ ನೋಡಿದರೆ, ಒಂದು ಇಡೀ ಪುಸ್ತಕದಿಂದ ಸಾಧ್ಯವಾಗದ ಬೆಳಕು, ಅವರ ಒಂದು ಲೇಖನ ಒದಗಿಸುವುದರಿಂದ ಅವರ ಕೃಷಿ ಸಣ್ಣದಲ್ಲವೆಂದೇ ನನ್ನ ಭಾವನೆ.

ವ್ಯಕ್ತಿತ್ವ ವಿಶೇಷ :

ಡಿ. ಎಲ್.ಎನ್. ಅವರ ವ್ಯಕ್ತಿತ್ವ ವಿಶೇಷತೆಯನ್ನು ಸಂಪಾದಕ, ಶಾಸ್ತ್ರಜ್ಞ, ಸಂಶೋಧಕ, ವಿಮರ್ಶಕ, ಪ್ರಾಧ್ಯಾಪಕ ಎಂದು ಬಿಡಿಸಿ ಹೇಳಬಹುದು.

ವಡ್ಡಾರಾಧನೆ ಅವರ ಸಂಪಾದನ ಸಾಮರ್ಥ್ಯಕ್ಕೆ ಒಂದು ಪರಮ ನಿದರ್ಶನ. ಅದರೊಂದಿಗೆ ನಡೆಸಿದ ೪೦ ವರ್ಷಗಳ ಅನುಸಂಧಾನದಿಂದಾಗಿ ಇತ್ತೀಚೆ ಸುದೀರ್ಘಪ್ರಸ್ತಾವನೆ, ಪರಿಪೂರ್ಣ ಪರಿಶಿಷ್ಟಗಳೊಂದಿಗೆ ಅದು ಮೊದಲಿನ ಮೂರುಪಟ್ಟು ಗಾತ್ರ ಪಡೆದು ಹೊರಬಂದಿತು. ಕನ್ನಡಕ್ಕೆ ಒಂದು ಅಪೂರ್ವ ಗದ್ಯಗ್ರಂಥ, ಅಪೂರ್ವಶುದ್ಧಿಯಲ್ಲಿ ಲಭಿಸಿತು. ಈ ದಾರಿಯಲ್ಲಿ ಪಂಪರಾಮಾಯಣ ಸಂಗ್ರಹ, ಸುಕುಮಾರಚರಿತಂ, ಸಿದ್ಧರಾಮಚಾರಿತ್ರ ಮೊದಲಾದ ಗ್ರಂಥಗಳು ಪರಿಷ್ಕರಣ ಹೊಂದಿ, ಪ್ರಕಟಗೊಂಡವು. ಈ ಸಂಸ್ಕರಣ ಪ್ರಸಂಗದಲ್ಲಿ ಅವರ ಬುದ್ಧಿ, ಮನಸ್ಸು ಯಾವ ರೀತಿ ದುಡಿಯುತ್ತಿದೆಯೆಂಬುದಕ್ಕೆ "ಮಾನಸೋಲ್ಲಾಸದಲ್ಲಿ ಕನ್ನಡ ಛಂದಸ್ಸು" ಎಂಬ ಲೇಖನವನ್ನು ನೋಡಬೇಕು.

ಎಲ್ಲ ಕ್ಷೇತ್ರಗಳಲ್ಲಿಯೂ ಎದ್ದುಕಾಣುವ ಡಿ. ಎಲ್. ಎನ್. ಅವರ ಶಾಸ್ತ್ರಮತಿ, "ಕನ್ನಡ ಗ್ರಂಥಸಂಪಾದನೆ" ಎಂಬ ಕೃತಿಯಲ್ಲಿ ಸಂಪೂರ್ಣ ಪ್ರಕಟಗೊಂಡಿದೆ. ಗ್ರಂಥಸಂಪಾದನೆಯ ವಿಧಾನಗಳನ್ನು ಕನ್ನಡಕ್ಕೆ ಅನ್ವಯಿಸಿ ಬರೆದ ಈ ಶಾಸ್ತ್ರಕೃತಿ ಕನ್ನಡದಲ್ಲಿ ಪ್ರಥಮ ಸಾಹಸ, ಪ್ರಥಮಸಾಧನೆ. ಅದರ ಪುಟಪುಟಗಳಲ್ಲಿ ಡಿ.ಎಲ್.ಎನ್. ಅವರ ಪ್ರಕಟಿತ, ಅಪ್ರಕಟಿತ ಕೃತಿಗಳ ಅಧ್ಯಯನದ ವ್ಯಾಪ್ತಿಯನ್ನು, ಸಾಹಿತ್ಯ ವ್ಯಾಸಂಗದ ಉದ್ದಗಲಗಳನ್ನು ಅರಿಯಬಹುದು.

ಸಂಶೋಧನೆ ಡಿ. ಎಲ್. ಎನ್. ಅವರ ಉಸಿರು. ಸಾಹಿತ್ಯ, ಶಾಸ್ತ್ರ, ಇತಿಹಾಸಗಳಲ್ಲೆಲ್ಲ ಇದು ಮಿಂಚಿನಂತೆ ಕಾರ್ಯಮಾಡಿದೆ. ಸಂಪಾದಿತಕೃತಿಗಳ ಮುನ್ನುಡಿಗಳೂ, ಪೊನ್ನನ ಭುವನೈಕರಾಮಾಭ್ಯುದಯ, ಕುಮುದೇಂದು ರಾಮಾಯಣ, ಧವಳನೆಂಬ ಹಾಡಿನಸ್ವರೂಪ ಇತ್ಯಾದಿ ಲೇಖನಗಳೂ ಅವರ ಸಾಹಿತ್ಯಸಂಶೋಧನೆಯ ಅಮೃತ ಫಲಗಳು. ಪಾಂಡಿತ್ಯಕ್ಕೆ ಸಂಬಂಧಪಟ್ಟ ಅವರ ಸಂಶೋಧನ ಶಕ್ತಿಯ ಉಜ್ವಲ ಉದಾಹರಣೆ 'ಶಬ್ದವಿಹಾರ' ಎಂಬ ಚಿಕ್ಕ ಕೃತಿ. ಒಂದು ಶಬ್ದವನ್ನು ಹಿಡಿದುಕೊಂಡು ರೆಂಬೆ, ಕಾಂಡಗುಂಟ ಇಳಿದು, ಹಲವು ಬೇರುಗಳಲ್ಲಿ ಹರಿದಾಡಿ, ಮೂಲಬೇರನ್ನು ಮುಟ್ಟಿಹೇಳುವ ಅವರ ಸಾಹಸ ಇನ್ನೊಬ್ಬರಿಗೆ ಅಸಾಧ್ಯವೆಂಬ ಭಾವನೆಯನ್ನು ಹುಟ್ಟಿಸುತ್ತದೆ. ಒಂದೊಂದು ಶಬ್ದ ಯಾವ ಜಿಲ್ಲೆಯ, ಯಾವ ಊರಿನ, ಯಾವ

ಸ್ಥಳದ ಶಾಸನದಲ್ಲಿದೆ; ಯಾವ ಕವಿಯ, ಯಾವ ಕಾವ್ಯದ ಯಾವ ಸಂದರ್ಭದಲ್ಲಿದೆ ಎಂದು ನಾಲಗೆಯ ತುದಿಯಲ್ಲಿ ನೆನಪಿಸಿಕೊಳ್ಳುವ, ಅಗಲಿಹೋದ ಅವುಗಳ ಸಂಬಂಧಿಪದಗಳನ್ನು ಅನ್ಯಭಾಷೆಗಳಿಂದ ಬೆರಳ ತುದಿಯಲ್ಲಿ ಎತ್ತಿ ತರುವ ಅವರ ಕೂರ್ಮಸಾಹಸ ಒಂದು ಲೀಲೆಯೆಂದೇ ಹೇಳಬೇಕು.

ಡಿ. ಎಲ್.ಎನ್.ಅವರ ವಿಮರ್ಶೆ ಪಕ್ಷ ಪಂಗಡಗಳ ಸಂಘರ್ಷಣೆಯಲ್ಲ, ನ್ಯಾಯಾಧೀಶನ ತೀರ್ಮಾನ, ಅವರ ದೃಷ್ಟಿಯಲ್ಲಿ ಪಂಪ, ಹರಿಹರ, ಕುಮಾರವ್ಯಾಸರು ಕನ್ನಡದ ಮಹಾಕವಿಗಳು. ಹರಿಹರ ಅವರ ಮೆಚ್ಚಿನ ಕವಿ. ಪುಷ್ಪದಂತಪುರಾಣ, ಅಗ್ಗಳದೇವ, ರುದ್ರಭಟ್ಟ, ಕುಮಾರವ್ಯಾಸನ ಕರ್ಣ ಮೊದಲಾದ ಲೇಖನಗಳು ಅವರ ನ್ಯಾಯದೃಷ್ಟಿಗೆ ನಿದರ್ಶನಗಳು. ಈ ಕಾಲದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ರೂಪಿಸಬಲ್ಲ ಮಹಾಶಿಲ್ಪಿ ಅವರೊಬ್ಬರೇ ಎಂದು ಎಲ್ಲರ ಭಾವನೆಯಾಗಿತ್ತು. ಅವರ ನಿಧನ ಎಲ್ಲರನ್ನೂ ನಿರಾಶೆಗೊಳಿಸಿತು.

ಕಾರ್ಯ ತತ್ಪರತೆ :

ಪಾಂಡಿತ್ಯ, ಸಂಶೋಧನೆಗಳ ಕಾಡಿನಲ್ಲಿ ಆನೆಯಂತೆ ನಡೆದ ಅವರ ಬರವಣಿಗೆ ಶುಷ್ಕವಾಗಿರದೆ ರಸವತ್ತಾಗಿದ್ದಿತು. "ಹಚ್ಚನೆಯ ಹುಲ್ಲುಗಾವಲ ಹರವಿನಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತ, ಸೊಂಪಾಗಿ ಕಾಣುವೆಡೆಗಳಲ್ಲಿ ತಂಗಿ, ಹಿಡಿಹುಲ್ಲುನ್ನು ಕಬಳಿಸುವ ಹಸುವಿನಂತೆ ಇದೆ, ನನ್ನ ವ್ಯಾಸಂಗದ ಹವ್ಯಾಸ. ನನ್ನ ಕೊಠಡಿಯ ಆರಾಮಕುರ್ಚಿಯ ಮೇಲೆ ಮಲಗಿ, ಕೈಗೆ ಎಟುಕಿದ ಪುಸ್ತಕವನ್ನು ತೆರೆದು, ಓದುತ್ತ ಓದುತ್ತ, ಇಹದ ತಾಪತ್ರಯ ದೂರ ಸರಿದಂತೆಲ್ಲ ತನ್ಮಯತೆಯ ಮಡುವಿನಲ್ಲಿ ಮೆಲ್ಲಮೆಲ್ಲನೆ ಮುಳುಗಿ ಬಿಡುತ್ತೇನೆ. ಪಕ್ಕದ ಮೇಜಿನ ಮೇಲೆ ಇರುವ ಗಂಧದ ಕಡ್ಡಿಗಳು ಉಗುಳುವ ಹೊಗೆ, ಸುರುಳಿಸುರುಳಿಯಾಗಿ ಅಂಕುಡೊಂಕಾಗಿ ಮೇಲೆ ಹರಡಿ, ಕೊಠಡಿಯ ಪರಿಮಿತಾಕಾಶದಲ್ಲಿ ಕರಗಿಹೋಗುವಂತೆ ನಾನೂ ಬಾರಿಬಾರಿಗೆ ಕರಗಿ ಹೋಗಬೇಕೆಂಬ ಹಂಬಲ ನನಗೆ ಹಿರಿದಾಗಿದೆ." ಈ ಬರವಣಿಗೆಯಲ್ಲಿ ಹರಿಹರನ ಗದ್ಯತನವಿದೆ. ಸಾವಿರಾರು ಕೆಟ್ಟ ಪದ್ಯಗಳನ್ನು ಬರೆದವನನ್ನು ಕವಿಯೆನ್ನುವುದಕ್ಕಿಂತ ಇಂಥ ಗದ್ಯ ಬರೆದವನನ್ನು ಕವಿಯೆನ್ನುವುದು ಲೇಸು. ಕೇವಲ ಪದ್ಯಬರೆದ ಮಾತ್ರಕ್ಕೆ ರಾಷ್ಟ್ರಮಟ್ಟದ ಗೌರವ ನೀಡುವಂತೆ, ಇಂಥ ವಿದ್ವತ್‌ಪೂರ್ಣ ವ್ಯವಸಾಯ ಗೆಯ್ದವರಿಗೂ ನೀಡುವುದು ನ್ಯಾಯ.

ಡಿ. ಎಲ್. ಎನ್. ಅವರು ಪ್ರಥಮವರ್ಗದ ಪ್ರಾಧ್ಯಾಪಕರೆಂದು ಅವರ ಶಿಷ್ಯಕೋಟಿಯ ಒಮ್ಮತದ ಅಭಿಪ್ರಾಯ . ೬೦ ನಿಮಿಷಕ್ಕೆ ಬದಲು ೫೫ ನಿಮಿಷಕ್ಕೆ ಸಾಲುವಷ್ಟು ಪಾಠಸಾಮಗ್ರಿ ತಮ್ಮ ಹತ್ತಿರ ಇದ್ದರೆ ಅವರು ವರ್ಗ ನಡೆಸುತ್ತಿರಲಿಲ್ಲ. ಉದ್ವೇಗ, ಅಂದಾಜು, ಆತ್ಮವಂಚನೆ, ಅಪ್ರಾಮಾಣಿಕತೆ ಇವು ಒಮ್ಮೊಯೂ ವರ್ಗದಲ್ಲಿ ಸುಳಿಯಲಿಲ್ಲ. ವಿದ್ಯಾರ್ಥಿಗಳಲ್ಲಿ ವ್ಯಾಸಂಗದ ಹವ್ಯಾಸ ಬೆಳೆಸಿ, ಹಸಿವನ್ನು ಹಿಂಗಿಸುವ ದಾರಿ ತೋರಿಸಿ, ಆ ದಾರಿಯಲ್ಲಿ ಎಡವಿದಾಗ ಎತ್ತಿ ನಿಲ್ಲಿಸಿ ಮುನ್ನಡೆಸಿದರು. ಇದನ್ನು ನೆನಪಿಟ್ಟು ಅವರ ವಿದ್ಯಾರ್ಥಿಗಳು, ಮಿತ್ರರು 'ಜ್ಞಾನೋಪಾಸಕ', 'ಹೊಸ ಬೆಳಕು', 'ಉಪಾಯನ' ಎಂಬ ಸಂಭಾವನ ಗ್ರಂಥಗಳನ್ನು ಅರ್ಪಿಸಿ, ನಾಡಜನತೆ ಬೀದರ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರೆಂದು ಆರಿಸಿ ಕೃತಜ್ಞತೆಗಳನ್ನು ಸಲ್ಲಿಸಿದರು.

ಒಂದು ಪ್ರಸಂಗ :

ಇವುಗಳಿಗಿಂತ ಡಿ. ಎಲ್. ಎನ್. ಅವರ ದೊಡ್ಡ ಆಸ್ತಿಯೆಂದರೆ ದೊಡ್ಡ ಮನಸ್ಸು. ತಮ್ಮ ನಿಲವಿಗೆ ತಕ್ಕ ಅಧಿಕಾರ ಸಿಗಲಿಲ್ಲವೆಂದು ಒಮ್ಮೆಯೂ ಅವರು ತುಟಿಬಿಚ್ಚಲಿಲ್ಲ, ಮನದಲ್ಲಿ ಆ ಭಾವನೆಯನ್ನು ಮೂಡಿಸಿಕೊಳ್ಳಲಿಲ್ಲ. ಇವರು ಸಂಪಾದಿಸಿದ 'ಶಬ್ದಮಣಿದರ್ಪಣ'ವನ್ನು ವಿಮರ್ಶಿಸುತ್ತ ನಾನು ಬರೆದ ಒಂದೆರಡು

ಮಾತುಗಳು ಡಿ. ಎಲ್. ಎನ್. ಅವರಿಗೆ ನೋವನ್ನುಂಟು ಮಾಡಿದವು - ಎಂದು ನನ್ನ ಗೆಳೆಯರಿಂದ ತಿಳಿದಾಗ ನನಗೆ ನೋವಾಯಿತು. ಒಮ್ಮೆ ಮೈಸೂರಿಗೆ ಹೋಗುವ ಪ್ರಸಂಗ ಒದಗಿ ಬಂದಿತು. ಡಿ. ಎಲ್. ಎನ್. ಅವರ ಮನೆ ಹುಡುಕಿಕೊಂಡು ಹೋದೆ. "ಅವರ ಆರೋಗ್ಯ ಸರಿ ಇಲ್ಲ, ಬನ್ನಿ" ಎನ್ನುತ್ತ ಅವರ ಮಗಳು ಒಳಕೋಣೆಗೆ ಕರೆದುಕೊಂಡು ಹೋದಳು. ಅವರನ್ನು ನೋಡಿದ್ದು ಇದೇ ಮೊದಲ ಸಲ. ಆಜಾನುಬಾಹು ವ್ಯಕ್ತಿ ಒದುತ್ತ ಮಲಗಿದ್ದರು. ಶರಶಯನ ಮೇಲಿನ ಭೀಷ್ಮರ ನೆನಪಾಯಿತು. ಪರಿಚಯ ಮಾಡಿಕೊಳ್ಳುತ್ತಲೇ "ಏನಯ್ಯಾ, ನೀನು ವಯಸ್ಸಿನಲ್ಲಿ ಸಣ್ಣವನೆಂದು ಕೇಳಿದ್ದೆ. ಇಷ್ಟು ಸಣ್ಣವನೆಂದು ಭಾವಿಸಿರಲಿಲ್ಲ. ದರ್ಪಣದ ಮುಂದಿನ ಪ್ರಕರಣಗಳ ಬಗ್ಗೆ ಬರೆಯಲೇ ಇಲ್ಲ" ಎಂದು ಅವರೇ ಮಾತು ಆರಂಭಿಸಿದರು. "ನನ್ನಿಂದ ನಿಮಗೆ ನೋವಾಗಿದೆ ಎಂದು ಕೇಳಿದೆ. ಮುಂದಿನ ಪ್ರಕರಣಗಳ ಬರೆವಣಿಗೆ ನಿಲ್ಲಿಸಿದೆ. . . . ವೀರಪಟ್ಟ ಸಂದರ್ಭದಲ್ಲಿ ಕಟುವಾಗಿ ಮಾತನಾಡಿದ ಕರ್ಣ, ಶರಶಯನ ಸಂದರ್ಭದಲ್ಲಿ ಭೀಷ್ಮರ ಕ್ಷಮೆ ಕೇಳಲು ಬಂದ ಮನಸ್ಥಿತಿ ನನ್ನದಾಗಿದೆ. . . ಮರೆವುದು ಮನದ ಉಮ್ಮಚ್ಚರಮಂ. . . " ಎಂದು ಅಪರಾಧಿ ಭಾವನೆಯಿಂದ ನುಡಿದೆ. ದೊಡ್ಡದಾಗಿ ನಕ್ಕು "ಹಾಗೇನಿಲ್ಲ, ಸತ್ಯವನ್ನೇ ಬರೆದಿರುವಿ, ಕಟುವಾಗಿ ಬರೆಯಬಾರದಿತ್ತು" ಎಂದು ಮೃದುವಾಗಿಯೇ ನುಡಿದು, ಮಾತು ಬದಲಿಸಿ, ಸಾಹಿತ್ಯ-ಅಧ್ಯಯನಗಳ ಬಗ್ಗೆ ಚರ್ಚೆ ಮುಂದುವರಿಸಿದರು. ಸ್ವಲ್ಪ ಹೊತ್ತಿನ ಬಳಿಕ ಹೆಗಲ ಮೇಲೆ ಕೈಯಿಟ್ಟು, ಬಾಗಿಲ ವರೆಗೂ ನಡೆದು ಬಂದು ಬೀಳ್ಕೊಡುವಾಗ "ದರ್ಪಣದ ಮಿಕ್ಕ ಪ್ರಕರಣಗಳ ಬಗ್ಗೆ ಬರೆದು ಪ್ರಕಟಿಸು, ಮುಂದಿನ ಆವೃತ್ತಿಯಲ್ಲಿ ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ" ಎಂದು ಹೇಳಲು ಮರೆಯಲಿಲ್ಲ. ಕೆಲವು ದಿನಗಳ ಬಳಿಕ ಈ ವಿಷಯವನ್ನು ನೆನಪಿಸಿ ಕಾಗದವನ್ನೂ ಬರೆದರು. ದೋಷಗಳ ಪಟ್ಟಿ ಸಿದ್ಧಪಡಿಸಿ, ನೇರವಾಗಿ ಅವರಿಗೇ ಕಳಿಸಿದೆ. ಅವರು ತಮ್ಮ ಮುಂದಿನ ಆವೃತ್ತಿಯಲ್ಲಿ ಬರೆದ "ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಮಲ್ಲಿನಾಥ ಕಲಬುರ್ಗಿ ಎಂ. ಎ. ಅವರು 'ದರ್ಪಣಾವಲೋಕನ' ಎಂಬ ಹೆಸರಿನಲ್ಲಿ ಎರಡು ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಸೂತ್ರವೃತ್ತಿ ಟೀಕೆಗಳಲ್ಲಿ ಹಂಚಿಹೋಗಿರುವ ಸ್ಖಾಲಿತ್ಯಗಳನ್ನೆಲ್ಲ ಅವರು ತುಂಬ ಶ್ರಮವಹಿಸಿ ಕಂಡುಹಿಡಿದಿದ್ದಾರೆ. ಇಷ್ಟೇ ಅಲ್ಲದೆ ಮುಂದಿನ ಪ್ರಕರಣಗಳಲ್ಲಿ ಅಡಗಿರುವ ತಪ್ಪುಗಳನ್ನು ಹುಸಿ ತಪ್ಪುಗಳನ್ನು ಅವರು ಎಚ್ಚರಿಕೆಯಿಂದ ಪರಿಶೀಲಿಸಿ ಅವುಗಳನ್ನೆಲ್ಲ ಪಟ್ಟಿಮಾಡಿ ನನಗೆ ಕಳಿಸಿಕೊಡುವ ಉಪಕಾರವನ್ನು ಮಾಡಿದ್ದಾರೆ. ಇವರ ಲೇಖನಗಳು ಕಾರಣವಾಗಿ ಶಬ್ದಮಣಿದರ್ಪಣದ ಈ ಮುದ್ರಣ ಅದರ ಹಿಂದಣ ಮುದ್ರಣಕ್ಕಿಂತ ಹೆಚ್ಚು ಸಮರ್ಪಕವಾಗಿದೆಯೆಂದು ಭಾವಿಸುತ್ತೇನೆ" ಎಂಬ ನಿರ್ವಿಕಾರ ಬರವಣಿಗೆಯನ್ನು ಓದಿದಾಗಲಂತೂ ನನ್ನನ್ನೇ ನಾನು ಹಳಿದುಕೊಂಡೆ, ಮನದಲ್ಲಿಯೇ ಮತ್ತೊಮ್ಮೆ ಅವರ ಕ್ಷಮೆ ಕೇಳಿಕೊಂಡೆ.

ಆಕರ : ಮಾರ್ಗ ಸಂಪುಟ–೧

೭೬

ಡಾ. ಆರ್. ಸಿ. ಹಿರೇಮಠ ಅವರ ವರ್ಗಬೋಧನೆ

೧೯೮೧

ಪ್ರಾಥಮಿಕ, ಮಾಧ್ಯಮಿಕ, ಸ್ನಾತಕ ಮತ್ತು ಸ್ನಾತಕೋತ್ತರ - ಈ ಒಂದೊಂದು ಘಟ್ಟದಲ್ಲಿ ತಮ್ಮ ವರ್ಗಬೋಧನೆಯ ಮೂಲಕ ನನ್ನ ಮೇಲೆ ಪ್ರಭಾವ ಬೀರಿದವರು ,ನಾಲ್ಕು ಜನ ಶಿಕ್ಷಕರು. ಹಾಗೆ ನೋಡಿದರೆ ಇವರಲ್ಲಿ ಒಬ್ಬರು ನನ್ನನ್ನು ಕಡೆದು - ಕಂಡರಿಸಿ, ತಿದ್ದಿ-ತೀಡಿ ಇನ್ನೊಬ್ಬರ ಕೈಗೆ ಒಪ್ಪಿಸುತ್ತ ಬಂದಿದ್ದಾರೆ. ಈ ರೀತಿ ಮೂರು ಕೈಗಳನ್ನು ದಾಟಿ ಬಂದು, ಕೊನೆಯಲ್ಲಿ ಡಾ. ಹಿರೇಮಠ ಅವರ ಕೈಯಲ್ಲಿ ಜೀವ ಪಡೆದವನು ನಾನು. ಈ ಅರ್ಥದಲ್ಲಿ ಆ ಮೂವರು ನನ್ನ ವ್ಯಕ್ತಿತ್ವವಿಗ್ರಹವನ್ನು ಕಂಡರಿಸಿದ ಶಿಲ್ಪಿಗಳಾದರೆ, ಇವರು ಅದರಲ್ಲಿ ಪ್ರಾಣ ಪ್ರತಿಷ್ಠಾಪನ ಮಾಡಿದವರು. ಈ ಪ್ರಾಣಪ್ರತಿಷ್ಠಾಪನ ಕಾರ್ಯಕ್ಕೋಸುಗ, ಇವರು ಬಳಸಿದ ಪರಿಕರಗಳಲ್ಲಿ ವರ್ಗಬೋಧನೆಯೂ ಒಂದು.

೧೯೬೦ ಜೂನ ತಿಂಗಳು. ವಿದ್ಯಾರ್ಥಿಯಾಗಿ ಎಂ.ಎ. ವರ್ಗಪ್ರವೇಶ ಮಾಡಿದೆ. ನಾವು ೧೮ ಜನ ವಿದ್ಯಾರ್ಥಿಗಳು. ನಾನು ಯಾವಾಗಲೂ ಕುಳಿತುಕೊಳ್ಳುತ್ತಿದ್ದುದು ಕೊನೆಯ ಸಾಲಿನಲ್ಲಿ, ಕಿಟಕಿಯ ಹತ್ತಿರ. ಉಪನ್ಯಾಸ ಕೇಳುವುದರಲ್ಲಿಯೇ ಮಗ್ನವಾಗುತ್ತಿದ್ದೆ; ಬೇಸರವೆನಿಸಿದರೆ ಮಾತ್ರ ಕಿಟಕಿಯ ಮುಖಾಂತರ ನಿಸರ್ಗ ನಿರೀಕ್ಷಣೆಯಲ್ಲಿ ಮಗ್ನನಾಗುತ್ತಿದ್ದೆ.

ನಮಗೆ ಡಾ. ಆರ್. ಸಿ. ಹಿರೇಮಠ, ಡಾ. ಎಂ.ಎಸ್. ಸುಂಕಾಪುರ, ಪ್ರೊ. ಬಿ. ಎಸ್. ಕುಲಕರ್ಣಿ, ಪ್ರಿನ್ಸಿಪಾಲ ಎಸ್. ಎಸ್. ಮಾಳವಾಡ ಪಾಠ ಹೇಳುತ್ತಿದ್ದರು. ಕೊನೆಯ ವರ್ಷ ಪ್ರೊ.ಎಸ್. ಎಂ.ವೃಷಭೇಂದ್ರಸ್ವಾಮಿ ಅವರು ಅಧ್ಯಾಪಕರಾಗಿ ಬಂದರು.

ಈ ಸುಮಾರಿಗಾಗಲೇ ಡಾ. ಹಿರೇಮಠ ಅವರು ವಿಶ್ವವಿದ್ಯಾಲಯದ ಆಡಳಿತ ಯಂತ್ರದ ಅನಿವಾರ್ಯ ಅಂಗವಾಗತೊಡಗಿದ್ದರು. ಸಿನೇಟ್, ಅಕೆಡೆಮಿಕ್ ಕೌನ್ಸಿಲ್ ಮೊದಲಾದ ಸಭೆಗಳು ಅವರ ವರ್ಗಬೋಧನೆಗೆ ಅಡ್ಡಿಯನ್ನೊಡ್ಡಲು ಪ್ರಾರಂಭಿಸಿದ್ದವು. ಇಂಥದರಲ್ಲಿಯೂ ಅವರು ಹೇಗೋ ಬಿಡುವು ಮಾಡಿಕೊಂಡು ವರ್ಗಕ್ಕೆ ಬರುತ್ತಲಿದ್ದಾರೆ ಎಂದು - ಕೆಲವೊಮ್ಮೆ ೪-೫ ನಿಮಿಷ ತಡವಾಗಿ ಬರುವುದರಿಂದ - ನಮಗೆ ಮನವರಿಕೆಯಾಗುತ್ತಲಿದ್ದಿತು(ಮುಂದಿನ ವರ್ಷಗಳಲ್ಲಿ ಆಡಳಿತ ಅನಿವಾರ್ಯವಾಗಿ ಬೆಳೆಯುತ್ತ ನಡೆದು, 'ವರ್ಗಬೋಧನೆ'ಯ ಲಾಭ ವಿದ್ಯಾರ್ಥಿಗಳಿಗೆ ಕಡಿಮೆಯಾಗುತ್ತ ಹೋದುದು ದೊಡ್ಡ ಹಾನಿಯೆಂದೇ ಹೇಳಬೇಕು). ಇದರಿಂದಾಗಿ ಯಾವಾಗಲೂ ತೆಕ್ಕೆಯಲ್ಲಿ ಹತ್ತಾರು ಪುಸ್ತಕ ಹಿಡಿದುಕೊಂಡು ಬರುತ್ತಿದ್ದ ಅವರು, ಕ್ವಚಿತ್ತಾಗಿ

ಬರಿಗೈಯಿಂದಲೇ ಬಂದು, ತಮ್ಮ ವಿಷಯವನ್ನು ಬೋಧಿಸಬೇಕಾಗುತ್ತಿದ್ದಿತು. ಅವರು ತೆಕ್ಕೆಯ ತುಂಬ ಪುಸ್ತಕ ಹಿಡಿದುಕೊಂಡು ಬಂದರೆ "ಸಿಡಿಲ ಬಳಗಮನೊಳಕೊಂಡಂತೆ ತಟಿತಟಿಸಿ ಪೊಳೆವ ಕೆಯ್ದು" ಗಳೊಂದಿಗೆ ಬಂದ ಕರ್ಣನ ನೆನಪು. ಒಂದೆರಡು ತಿಂಗಳು ಕಳೆಯುವಲ್ಲಿ ಡಾ. ಹಿರೇಮಠ ಅವರ ಅಧ್ಯಾಪನ ನನಗೆ ತುಂಬ ಅಪ್ಯಾಯಮಾನವಾಗುತ್ತ ನಡೆಯಿತು. ಅವರು ವರ್ಗವನ್ನು ಪ್ರವೇಶಿಸುವಾಗಲೆಲ್ಲ "ಪ್ರಾಣಂ ಬರ್ಪಾಕೃತಿಯೊಳೆ ಬಾಣಾಸನಪಾಣಿ ಕರ್ಣಂ ಬಂದಂ" ಎಂಬಂಥ ಅನುಭವ ನನಗಾಗುತ್ತಲಿದ್ದಿತು.

ಸಾಮಾನ್ಯವಾಗಿ ಪ್ರಿನ್ಸಿಪಾಲ್ ಮಾಳವಾಡ ಅವರನ್ನು ಬಿಟ್ಟರೆ ಮಿಕ್ಕ ಪ್ರಾಧ್ಯಾಪಕರು ವೇಷಭೂಷಣದ ಕಡೆಗೆ ಅಷ್ಟು ಗಮನಕೊಟ್ಟವರಲ್ಲ. ಡಾ. ಹಿರೇಮಠ ಅವರು ತಪ್ಪದೆ ಸೂಟು, ಟೈ ಧರಿಸಿ ಬರುತ್ತಿದ್ದರೂ ಅವರಿಗೆ ಆ ಕಡೆಗೆ ಗಮನವಿರುತ್ತಿರಲಿಲ್ಲ (ಒಟ್ಟು ಜೀವನದ ಬಗ್ಗೆಯೇ ಅವರದು "ನಿರ್ಲಿಪ್ತಮನೋಭಾವ" ಎಂದು ಆಮೇಲೆ ನಾನು ಕಂಡುಕೊಂಡಿದ್ದೇನೆ). ಕ್ವಚಿತ್ತಾಗಿ ಸರಳವೇಷ, ಕೋಟು ಧೋತರ-ಧರಿಸಿಯೂ ಬರುತ್ತಿದ್ದರು. ಒಂದು ದಿನವೂ ಅವರು ಆಯಾಸ, ಬೇಜಾರುಗಳಿಂದ ಪಾಠ ಹೇಳಲಿಲ್ಲ; ಸೋತು ಖುರ್ಚಿಯಲ್ಲಿ ಕುಳಿತುದನ್ನು ನಾವು ಕಾಣಲಿಲ್ಲ. ಶರವೇಗದಿಂದ ವರ್ಗಕ್ಕೆ ಬಂದವರೇ ಟೇಬಲ್ ಹಿಡಿದುಕೊಂಡು ನಿಂತರೆ ಮುಗಿಯಿತು, ಪ್ರವಚನಲೀಲೆಯಲ್ಲಿ ಮುಳುಗಿಬಿಡುತ್ತಿದ್ದರು. ಅವರು ನಮಗೆ ಹೇಳುತ್ತಿದ್ದುದು ಪಂಪಭಾರತ, ಆದಿಪುರಾಣ, ವ್ಯಾಕರಣ, ಇಂಗ್ಲೀಷ್ ಗೀತೆಗಳು. ಇವು ಪರಸ್ಪರ ಸಂಬಂಧವಿಲ್ಲದ ಕ್ಷೇತ್ರಗಳು. ಆದರೆ "ಕಲಿತನ ತನುಗುಳ್ಳೊಡೆ ಸೂಜಿ ಬಾಳು ಮೊದಲಾಗಿ ಕಾದಬೇಕು" ಎಂಬಂಥದು ಅವರ ಪ್ರವಚನಸಮರ. ವೀರಯೋಧನೊಬ್ಬ ಎಲ್ಲ ದಿಕ್ಕುಗಳಿಗೂ ಎದೆಯೊಡ್ಡಿ ಹೋರಾಡುವಂತೆ ಅವರ ಬೋಧನೆ. ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆ-ಸಾಹಿತ್ಯಗಳ ಆಳವಾದ ಅಭ್ಯಾಸ-ಅನುಭವಗಳ ಪ್ರಭಾವಳಿಯನ್ನು ಕಟ್ಟಿಕೊಂಡು ಅದು ಸಾಗುತ್ತಲಿದ್ದಿತು. ಯಾವುದೇ ವಿಷಯ ಕೈಗೆತ್ತಿಕೊಂಡರೂ ಅದಕ್ಕೆ ಪೂರಕವಾಗಿ ವ್ಯಾಕರಣ, ಛಂದಸ್ಸು, ಅಲಂಕಾರ, ಇತಿಹಾಸ, ಲೋಕಾನುಭವ, ತೌಲನಿಕ ವಿಮರ್ಶೆಗಳನ್ನು ಮೇಳವಿಸಿಕೊಂಡ ಅವರ ಉಪನ್ಯಾಸ, ಗುಡುಗು-ಸಿಡಿಲು-ಮೋಡ-ಮಿಂಚುಗಳ ಬಳಗವನ್ನು ಕಟ್ಟಿಕೊಂಡು ಸುರಿವ ವರ್ಷಾಧಾರೆ. ಆಗ ಒಂದು ಬಗೆಯ ಸರ್ವಜ್ಞತ್ವ ಅವರ ವಾಣಿಯಲ್ಲಿ ಎದ್ದುಬರುತ್ತಿತ್ತು. ಯಾವುದೇ ವಿಷಯದ ಬಗೆಗೆ, ಶಬ್ದದ ಬಗೆಗೆ, ಅವರು ತಡವರಿಸುತ್ತಿರಲಿಲ್ಲ; ತಡಕಾಡುತ್ತಿರಲಿಲ್ಲ. ಆಗ ಸಮಯೋಚಿತವಾಗಿ ಬಳಸುವ ಅನೇಕ ಭಾಷೆಗಳ ಉದ್ಧರಣೆಗಳು ಅವರ ವ್ಯಾಸಂಗದ ವೈಶಾಲ್ಯವನ್ನೂ ಅಗಾಧ ಸ್ಮರಣಶಕ್ತಿಯನ್ನೂ ಬಿಂಬಿಸುತ್ತಿದ್ದವು (ಈ ವಯಸ್ಸಿನಲ್ಲಿಯೂ ಅದು ಬಾಡಿಲ್ಲ; ಬತ್ತಿಲ್ಲ). ಇದು ಕೇವಲ ಶುಕವಾಣಿಯಾಗಿರದೆ ಆಯಾ ಕಾವ್ಯಗಳ ಅಭ್ಯಾಸ ರಕ್ತಗತವಾದುದರ, ಅಸ್ಥಿಗತವಾದುದರ ಕುರುಹಾಗಿದ್ದಿತು. ಹೀಗಾಗಿ ಎರಡು ವರ್ಷಗಳ ಅವಧಿಯಲ್ಲಿ ಅವರು ಒಮ್ಮೆ ಬಳಸಿದ ಉದ್ಧರಣೆಯನ್ನು ಮತ್ತೊಮ್ಮೆ ಬಳಸಲೇ ಇಲ್ಲ. ಏಕೆಂದರೆ ಅವರ ಪಾಠ ಮಾತುಗಳನ್ನು ಜೋಡಿಸಿಕೊಂಡು, ಕಠಿಣಪದಗಳಿಗೆ ಅರ್ಥಬರೆದುಕೊಂಡು ವರ್ಗಕ್ಕೆ ಬಂದು ಒಪ್ಪಿಸುವ ವರದಿಯಾಗಿರಲಿಲ್ಲ. "ಇದು ನಿಚ್ಚಂ ಪೊಸತು ಅರ್ಣವಂಬೊಲ್" ಎಂಬಂತೆ ಅದೊಂದು ಸೃಷ್ಟಿಕ್ರಿಯೆಯಾಗಿ ಅಂಕುರಿಸಿ ಅರಳುತ್ತಲಿದ್ದಿತು. ಎಲ್ಲಿಂದಲೋ ಗಿಡವನ್ನು ಕಿತ್ತು ತಂದು ವೇದಿಕೆಯ ಮೇಲೆ ನಿಲ್ಲಿಸಿ ವರ್ಣಿಸುವ ರೀತಿಯಲ್ಲ; ವೇದಿಕೆಯ ಮೇಲೆ ತಾವೇ ಬೀಜವಾಗಿ ಊರಿಕೊಂಡು, ಸಸಿಯಾಗಿ-ಗಿಡವಾಗಿ-ಮರವಾಗಿ ಬೆಳೆದು ಉಲಿವ ರೀತಿಯಾಗಿದ್ದಿತು. ಯಾವುದನ್ನೇ ಓದಿಸಲಿ, ಅವರು ಶಬ್ದಾರ್ಥ ಪಾತಳಿಯ ಮೇಲೆ ನಿಂತವರೇ ಅಲ್ಲ. ಕ್ರಮವಾಗಿ ವಿಷಯದ ಸ್ಥೂಲ-ಸೂಕ್ಷ್ಮ-ಕಾರಣ ತನುಗಳನ್ನು ತೆರೆದು ತೋರಿಸಿ, ಕಾವ್ಯಗವಿಯ ಗುಹೇಶ್ವರನ ದರ್ಶನ ಮಾಡಿಸುವ ಪ್ರಭುಶಕ್ತಿ ಅವರದಾಗಿದ್ದಿತು. ಹೀಗಾಗಿ ನಾವು ಅವರಿಂದ ಓದಿದುದು ಪಂಪಭಾರತವನ್ನಲ್ಲ, ಪಂಪನನ್ನು; ಆದಿಪುರಾಣವನ್ನಲ್ಲ, ಆದಿತೀರ್ಥಂಕರನನ್ನು; ಶಬ್ದಮಣಿದರ್ಪಣವನ್ನಲ್ಲ, ಹಳಗನ್ನಡ ಭಾಷೆಯ ಸೂಕ್ಷ್ಮಸಂವೇದನೆಯನ್ನು.

ಹೀಗೆ ಉಪನ್ಯಾಸಗಳು ವರದಿಯಾಗದಂತೆ ಹರಟೆಯೂ ಆಗುತ್ತಿರಲಿಲ್ಲ. ಲಘು ಪ್ರಶಂಸೆಗಾಗಿ (cheap popularity) ಅವರು ಕವಿ-ಕಾವ್ಯದ ಅಂತಸ್ತನ್ನಾಗಲೀ, ವೇದಿಕೆಯ ಪಾವಿತ್ರ್ಯವನ್ನಾಗಲೀ, ಪ್ರಾಧ್ಯಾಪಕನ ಘನತೆಯನ್ನಾಗಲೀ, ದುರುಪಯೋಗಪಡಿಸಿಕೊಳ್ಳಲಿಲ್ಲ. ಅಪರೂಪಕ್ಕೆ ಸುಂದರ ವಿನೋದಗಳು ಸುರಿಯುತ್ತಿದ್ದರೂ ಒಟ್ಟಿನಲ್ಲಿ ಅವರದು ಒಂದು ಬಗೆಯ ಸೀರಿಯಸ್ ಬೋಧನೆ. ಹೀಗಾಗಿ ಸಾಮಾನ್ಯ ವಿದ್ಯಾರ್ಥಿಗಳಿಗೆ ಅದು ತಲೆಭಾರ, ಆಸಕ್ತರಿಗೆ ನೀರು-ಗೊಬ್ಬರ ಉಣಿಸುತ್ತಲಿದ್ದಿತು.

ಡಾ. ಹಿರೇಮಠರು ಪೂರ್ವಸಿದ್ಧ ಸಣ್ಣಟಿಪ್ಪಣಿಗಳನ್ನಾಗಲೀ, ದೊಡ್ಡ ಫೈಲ್‌ನ್ನಾಗಲೀ ಸಜ್ಜುಮಾಡಿಕೊಂಡು ಕ್ಲಾಸಿಗೆ ಬರುತ್ತಿರಲಿಲ್ಲವಾದುದರಿಂದ ಅವರ ನಿರೂಪಣೆಯಲ್ಲಿ ಕೆಲವೊಮ್ಮೆ ಕ್ರಮ ತಪ್ಪುತ್ತಲಿದೆ ಎಂದು ತೇಲುನೋಟಕ್ಕೆ ಅನಿಸುತ್ತಲಿದ್ದರೂ ಅದು ಸೈನಿಕರ ಕವಾಯತು ಕ್ರಮವನ್ನು ಮೀರಿ, ಯುದ್ಧಕ್ರಮದಂತೆ ಸಂಕೀರ್ಣವೂ ಭೂಮದರ್ಶಿಯೂ ಆಗಿರುತ್ತಿತ್ತು. ಹೀಗಾಗಿ ಗಟ್ಟಿ ಹಿನ್ನೆಲೆಯಿಲ್ಲದ ವಿದ್ಯಾರ್ಥಿ ಕಕ್ಕಾವಿಕ್ಕಿಯಾಗುತ್ತಿದ್ದರೆ, ಗಟ್ಟಿಮುಟ್ಟಾದ ವಿದ್ಯಾರ್ಥಿ ಪೂರ್ಣದಿಂದ ಪೂರ್ಣವನ್ನು ಗಳಿಸಿಕೊಳ್ಳುತ್ತಲಿದ್ದ.

"ಮಾತುಗಾರಿಕೆ" ದೃಷ್ಟಿಯಿಂದ ಅವರದು ಅಂಥ ಕಲಾವಂತಿಕೆಯೇನಲ್ಲ; ಧ್ವನಿಯೂ ಅಷ್ಟು ಹಿತವಾದುದಲ್ಲ. ಅಂದರೆ ಅವರು ಮಾತುಗಾರರಲ್ಲ, ಮಾತುವೀರರು. ವ್ಯಾಕರಣಬದ್ಧವಾದ ವಾಗಾಡಂಬರವೂ ಅಲ್ಲವಾದುದರಿಂದ, ಅದು ಕೃತ್ರಿಮಕಲೆಯೂ ಆಗಿರಲಿಲ್ಲ. "ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ಟುದು" ಎಂಬಂತೆ ದೇಸಿಯನ್ನು ಮೈಗೂಡಿಸಿಕೊಂಡು ಮಾರ್ಗಮುಖಿಯಾಗಿ ಮುನ್ನಡೆಯುತ್ತಲಿದ್ದಿತು. ಹೀಗಾಗಿ ಅವರ ಉಪನ್ಯಾಸದಲ್ಲಿ ನಾಗರಿಕತೆಗಿಂತ ನೈಸರ್ಗಿಕತೆ ಹೆಚ್ಚು; ತುದಿನಾಲಗೆಯ ನಯನಾಜೂಕತೆಗಿಂತ ಗಟ್ಟಿಯಾದ ಹೃದಯವಂತಿಕೆ ಅಧಿಕ. ಈ ಶ್ರೀಮಂತಿಕೆಯಲ್ಲಿ ಮಾತುಗಾರಿಕೆ ಮತ್ತು ವಿಷಯಗಳಿಗೆ ಸಂಬಂಧಿಸಿದ ಸಣ್ಣ-ಪುಟ್ಟ ದೋಷಗಳು ಮುಚ್ಚಿಹೋಗುತ್ತಿದ್ದವು.

ಡಾ. ಹಿರೇಮಠ ಅವರು ಮೂಲತಃ ಹಳ್ಳಿಯವರಾದುದರಿಂದಲೂ, ಅವರಲ್ಲಿ ಜಾನಪದ ದಟ್ಟಸಂವೇದನೆಗಳು ಇನ್ನೂ ನೆಲೆಯೂರಿರುವದರಿಂದಲೂ ಅವರ ಉಪನ್ಯಾಸದಲ್ಲಿ ವೈಚಾರಿಕತೆಗಿಂತ ಭಾವುಕತೆ ಅಂದರೆ ವಿಮರ್ಶೆಗಿಂತ ಸಹೃದಯತೆ ಒಂದು ಗುಂಜಿ ಅಧಿಕವೆಂದೇ ಹೇಳಬೇಕು. ಹೀಗಾಗಿ ಕಾವ್ಯಬೋಧನೆಯ ಸಂದರ್ಭದಲ್ಲಿ ಒಳ್ಳೆಯ ಪ್ರಸಂಗಗಳು ಬಂದಾಗಲೆಲ್ಲ ಮಾತು ನಿಲ್ಲಿಸಿ, "ಇದು ಪಂಪ", "ಇದು ಕಾವ್ಯ" ಎಂದು ನುಡಿದು ರಸಸಮಾಧಿಯಲ್ಲಿ ಮುಳುಗಿಬಿಡುತ್ತಿದ್ದರು. ಒಮ್ಮೆ ಹರಿಶ್ಚಂದ್ರಕಾವ್ಯವನ್ನು ಓದಿಸುವ ಪ್ರಸಂಗ: ಚಂದ್ರಮತಿ ವಿಶ್ವಾಮಿತ್ರನ ಕಾಟಕ್ಕೆ ಬೇಸತ್ತು ಕಾಳ್ಕಿಚ್ಚನ್ನು ಪ್ರವೇಶಿಸುವಾಗ ಹಸುಳೆ ಲೋಹಿತಾಶ್ವ ತಾಯಿಯನ್ನು ತಬ್ಬಿಕೊಂಡು ತಡೆಗಟ್ಟುತ್ತಲಿದ್ದ ಸಂದರ್ಭವನ್ನು ಬೋಧಿಸುವಾಗ ಅವರ ಧ್ವನಿ ದುಃಖದಿಂದ ನಡುಗಿತು, ವಿದ್ಯಾರ್ಥಿಗಳಾದ ನಮ್ಮ ಕಣ್ಣಂಚಿನಲ್ಲಿ ನೀರು ಮಿಂಚಿತು. ಇದೇ ರೀತಿ ಆಗಾಗ ಅವರೊಂದಿಗೆ ನಾವು ಕೃತಿಯಲ್ಲಿ ಕರಗಿ ಹೋಗುತ್ತಲಿದ್ದೆವು.

ಹೀಗೆ ಭಾವನಾಪ್ರಧಾನರಾಗುತ್ತಿದ್ದವರು, ಶಾಸ್ತ್ರಬೋಧೆಯಲ್ಲಿ ಶಾಸ್ತ್ರಬಲ್ಲಿದ ಸಂಶೋಧಕರಾಗಿ ಬಿಡುತ್ತಿದ್ದರು. ಭಾಷಾವಿಜ್ಞಾನ, ಅಲಂಕಾರ, ಸಾಹಿತ್ಯಚರಿತ್ರೆ, ಛಂದಸ್ಸು ಏನೇ ಇರಲಿ ಅದರ ಮುಖ್ಯ ಲಕ್ಷಣಕ್ಕೇ ಕೈಹಾಕಿ, ನಮ್ಮ ಮನಸ್ಸು ಒಪ್ಪುವಂತೆ ಸಿದ್ಧಾಂತಗಳನ್ನು ಮಂಡಿಸುತ್ತಿದ್ದರು. ದ್ರಾವಿಡ, ಪ್ರಾಕೃತ, ಸಂಸ್ಕೃತಭಾಷೆಗಳ ಪರಿವಾರದಲ್ಲಿ ಅದರ ಸಂಬಂಧ ಮತ್ತು ಬೆಳವಣಿಗೆಯ ಹಸ್ತ-ಹೆಜ್ಜೆಗಳನ್ನು ವಿವರಿಸುತ್ತಿದ್ದರು.

ಡಾ. ಹಿರೇಮಠರಲ್ಲಿ ಪಾಂಡಿತ್ಯ, ಪರಿಶ್ರಮಗಳು ಸಮದಂಡಿಯಾಗಿವೆ. ಯಾವುದು ಹೆಚ್ಚು, ಯಾವುದು ಕಡಿಮೆ ಹೇಳುವಂತಿಲ್ಲ. ಪರೀಕ್ಷೆಗಳು ಸಮೀಪಿಸಿದರೆ ಬಿಡುವಿನ ದಿನಗಳಲ್ಲೂ ಪಾಠ. ಊಟಮಾಡಿ ೧೧ ಗಂಟೆಗೆ ಬಂದು ವರ್ಗದಲ್ಲಿ ನಿಂತರೆ ಮುಗಿಯಿತು. ಮತ್ತೆ ಸಂಜೆ ಊಟಕ್ಕೇ ಹೋಗುವುದು. ಮಧ್ಯೆ ಒಂದೆರಡು ಸಲ, ಟೇಬಲ್ ಮೇಲಿಟ್ಟ ನೀರನ್ನು ಗುಟುಕರಿಸುವುದನ್ನು ಬಿಟ್ಟರೆ ೫-೬ ತಾಸು ನಿರಂತರ ಪಾಠ ಪ್ರವಚನ. ವರ್ಷದ ಕೊನೆಯ ದಿನವಂತೂ ತಮ್ಮ ವಿಷಯವನ್ನಲ್ಲದೆ ಮಿಕ್ಕವರ ವಿಷಯಗಳನ್ನೂ ಸಿಂಹಾವಲೋಕನ ಮಾಡಿ, ಸರ್ವಸಂದೇಹಗಳಿಗೆ ಪರಿಹಾರ ನೀಡುತ್ತಿದ್ದರು. ಈ ಪ್ರಸಂಗದಲ್ಲಿ ಅವರ ಪಾಂಡಿತ್ಯದ ಅಪಾರ ರಾಶಿ ನಮ್ಮ ಗಮನಕ್ಕೆ ಬರುತ್ತಲಿದ್ದಿತು. ಮುಳ್ಳು ಸರಿಸಿದರೆ ಸಾಕು, ಬೇರೆ ಬೇರೆ ಸ್ಟೇಶನ್‌ಗಳ ಕಾರ್ಯಕ್ರಮವನ್ನು ಪ್ರಕಟಗೊಳಿಸುವ ರೇಡಿಯೊದಂತೆ ಬೇರೆ ಬೇರೆ ವಿಷಯ ಸಲೀಸಾಗಿ, ಅಧಿಕೃತವಾಗಿ ವ್ಯಕ್ತವಾಗುತ್ತಲಿದ್ದಿತು (ವಿದ್ಯಾವ್ಯಾಸಂಗದಲ್ಲಿ ಇಷ್ಟು ವೈವಿಧ್ಯ, ವೈಶಾಲ್ಯಗಳನ್ನೊಳಗೊಂಡ ಕನ್ನಡ ಪ್ರಾಧ್ಯಾಪಕರು ಇಂದು ಬೇರೊಬ್ಬರಿರುವುದು ನನಗೆ ಸಂದೇಹ). ಅವರ ಒಂದು ಮಾತು, ಒಂದು ಸಮಸ್ಯೆಯನ್ನಲ್ಲ, ಅಂಥ ಸಮಸ್ಯೆಗಳ ಪರಂಪರೆಯನ್ನೇ ಬಿಚ್ಚಿತೋರಿಸುತ್ತಲಿದ್ದಿತು. ನಾವೇ ಬೇರೆ ಇಂಥ ಸಮಸ್ಯೆಗಳನ್ನು ಬಿಡಿಸಿಕೊಳ್ಳಲು ದಾರಿ ತೋರುತ್ತಲಿದ್ದಿತು. ಹೀಗಾಗಿ ಅವರು ನಮಗೆ ನೂರಾರು ಕೀಲಿಕೈಗಳನ್ನು ಕೊಡುವುದಕ್ಕಿಂತ ಕೆಲವೇ "ಮಾಸ್ಟರಲಾಕ್ ಕೀ" ಕೊಟ್ಟರೆನ್ನಬಹುದು. ಅಂದರೆ ಸ್ಪೂನ ಫೀಡಿಂಗ್ ತಪ್ಪಿಸಿ ಕಾವ್ಯವವನ್ನು ಓದುವ, ಅರ್ಥೈಸುವ, ಸಂಶೋಧನೆಯನ್ನು ಕೈಕೊಳ್ಳುವ ದೃಷ್ಟಿಯನ್ನು ಬೆಳೆಸಿಕೊಟ್ಟರು.

ಡಾ. ಹಿರೇಮಠ ಅವರಿಗೆ ಪಂಪ, ವಚನಕಾರರು, ಹರಿಹರ ಪ್ರೀತಿಯ ಕವಿಗಳು. ವ್ಯಾಕರಣ, ಧರ್ಮ-ತತ್ವ ಮೊದಲಾದುವು ಪ್ರೀತಿಯ ವಿಷಯಗಳು. ಅವರು ವರ್ಗಕೋಣೆಯಲ್ಲಿ ಪಂಪನ "ಒತ್ತಿ ತರುಂಬಿ ನಿಂದ" ಎಂಬ ಪದ್ಯವನ್ನು ತಿರುತಿರುಗಿ ಓದಿದ, ಓದಿಓದಿ ಮೆಚ್ಚಿದ, ಮತ್ತೆ ಮತ್ತೆ ಅರ್ಥೈಸಿ ತಣಿದು ತಣಿಸಿದ ಸನ್ನಿವೇಶ, ನನ್ನ ಕಣ್ಣಲ್ಲಿ, ಎದೆಯಲ್ಲಿ ಮಾಸದ ಚಿತ್ರವಾಗಿ ಇನ್ನೂ ಉಳಿದಿದೆ. ಇಂದು ಆ ಪದ್ಯವನ್ನು ಓದುವಾಗ, ಓದಿಸುವಾಗಲೆಲ್ಲ ನನಗೆ ಡಾ. ಹಿರೇಮಠರು ವ್ಯಕ್ತಪಡಿಸುತ್ತಿದ್ದ ಭಾವಭಂಗಿ ಕಣ್ಣಿಗೆ ಕಾಣಿಸುತ್ತದೆ, ಧ್ವನಿಯ ಏರಿಳಿತ ಕಿವಿಗೆ ಕೇಳಿಸುತ್ತದೆ.

ಡಾ. ಹಿರೇಮಠ ಅವರು ವಿಷಯವನ್ನು ಮಧ್ಯ ಮಧ್ಯ ಕರಿಹಲಗೆಯ ಮೇಲೆ ಬರೆದು ವಿವರಿಸುತ್ತಿದ್ದರು. ತುಂಬ ಮುದ್ದು ಮುದ್ದಾದ ಅಕ್ಷರ ಮೂಡಿಸುತ್ತಿದ್ದಂತೆ "ಗಾಂಧೀಲಿಪಿ"ಯನ್ನು ಬರೆಯುತ್ತಿದ್ದ ನನಗೆ ಒಂದು ಬಗೆಯ ಹೊಟ್ಟೆಕಿಚ್ಚು. ಮೈಯ ಶಕ್ತಿಯನ್ನೆಲ್ಲ ಮುಂಗೈಗೆ ತಂದು ಬರೆವ ರೀತಿಯದು. ಆ ಅಕ್ಷರಗಳಲ್ಲಿ ಅವರ ಅಂತರಂಗದ ತೇಜವೆಲ್ಲ ಇಳಿದುಬರುತ್ತಲಿದ್ದ ಅನುಭವ. ಒಮ್ಮೆ ಒಂದು ಪ್ರಸಂಗ : ಕೊನೆಯ ಪಿರಿಯಡ್. ವಿದ್ಯಾರ್ಥಿಗಳ ವಿಚಾರಸಂಕಿರಣ. ಪ್ರಬಂಧ ಓದಬೇಕಿದ್ದ ವಿದ್ಯಾರ್ಥಿ, ಅಧ್ಯಕ್ಷತೆ ವಹಿಸಬೇಕಿದ್ದ ವಿದ್ಯಾರ್ಥಿನಿ ವೇದಿಕೆಯ ಮೇಲೆ ಬಂದು ಕುಳಿತರು. ಅವರ ಹಿಂಭಾಗದ ಕರಿಹಲಗೆಯ ಮೇಲೆ ಡಾ. ಹಿರೇಮಠರು ಸಮುಚ್ಚಯ ವಿಧಿಯನ್ನು ವಿವರಿಸುತ್ತ ಹಿಂದಿನ ಪಿರಿಯಡ್‌ದಲ್ಲಿ ಬರೆದಿದ್ದ "ಒಂದೆಡೆಯೊಳ್ ಕಟ್ಟುವುದೆ ಪುಲಿಯುಮಂ ಕವಿಲೆಯುಮಂ" ಎಂಬ ವಾಕ್ಯ, ಹುಡುಗ-ಹುಡುಗಿಗಾಗಿಯೇ ಮುದ್ದಾದ ಬೋರ್ಡು ಬರೆದು ಅಂಟಿಸಿದಂತೆ ತೋರುತ್ತಲಿದ್ದಿತು. ಅಂದು ವಿಚಾರಸಂಕಿರಣ ಮುಗಿಯುವ ವರೆಗೂ ಈ ಜೋಡಿಗೂ ಆ ಬೋರ್ಡಿಗೂ ಸಂಬಂಧ ಕಲ್ಪಿಸಿ ನಾವೆಲ್ಲ ನಕ್ಕದ್ದೇ ನಕ್ಕದ್ದು. ಸ್ವತಃ ಡಾ. ಹಿರೇಮಠ ಅವರ ಬೋಧನೆ ಗಂಭೀರ ಸ್ವರೂಪದ್ದಾಗಿದ್ದರೂ, ಅವರ ಬರವಣಿಗೆ ವಿನೋದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಈ ಘಟನೆಯನ್ನು ನಾವು ಸ್ನೇಹಿತರು ಸೇರಿದಾಗಲೆಲ್ಲ ಇನ್ನೂ ನೆನಪು ಮಾಡಿಕೊಂಡು ನಗುತ್ತೇವೆ. ಇನ್ನೂ ಒಂದು ಅಂಶವೆಂದರೆ ಅವರು

ಉಪನ್ಯಾಸಕ್ಕೆ ತೊಡಗಿದರೆಂದರೆ ಕನ್ನಡದಲ್ಲಿ ಪ್ರಾರಂಭಿಸಿ ಕ್ರಮೇಣ ಇಂಗ್ಲೀಷಕ್ಕೆ ಹೊರಳುವುದು, ಇಂಗ್ಲೀಷದಿಂದ ಮತ್ತೆ ಕನ್ನಡಕ್ಕೆ ಮರಳುವುದು ಉದ್ದಕ್ಕೂ ನಡೆದೇ ಇರುತ್ತಿದ್ದಿತು. ಒಂದು ಬಗೆಯ ಕನ್ನಡಾಂಗ್ಲಮಿಶ್ರಿತ "ಚಂಪೂ ಉಪನ್ಯಾಸ" ಎಂದು ಸ್ವಾರಸ್ಯವಾಗಿ ನಾವು ಮಾತನಾಡಿಕೊಳ್ಳುತ್ತಿದ್ದೆವು.

ಇವೆಲ್ಲವುಗಳಿಗೆ ಮಿಗಿಲಾಗಿ, ಅವರ ಚಾರಿತ್ರ್ಯ ಈ ಗಟ್ಟಿ ಉಪನ್ಯಾಸಕ್ಕೆ ಹಿನ್ನೆಲೆಯಾಗಿ ನಿಂತು, ಅದರ ಪ್ರಭಾವವನ್ನು ನಮ್ಮ ಮೇಲೆ ಇನ್ನೂ ಗಟ್ಟಿಗೊಳಿಸುತ್ತಲಿದ್ದಿತು. ನನ್ನ ಜೀವನಕ್ಕೆ ಬಹುದೊಡ್ಡ ಆಸ್ತಿಯಾಗಿ ಬಂದ ಈ "ವಚೋಶಕ್ತಿ"ಯ ನೆನಪಾದಾಗಲೆಲ್ಲ ನಾನು ಕೃತಜ್ಞತೆಯಿಂದ ಕರಗಿಹೋಗುತ್ತೇನೆ.

ಆಕರ : ಮಾರ್ಗ ಸಂಪುಟ–೧

■■

೭೭

ಗಳಗನಾಥರ ಉತ್ತರಾಧಿಕಾರಿ

೧೯೬೯

ಗಳಗನಾಥರಿಗೆ ನಮಸ್ಕಾರ

ಶ್ರೀ ಕಟ್ಟೀಮನಿಯವರು ನನ್ನ ಪಾಲಿಗೆ ಹದಿನಾರು ವರುಷಗಳಿಂದ ಒಬ್ಬ ಲೇಖಕ, ಆರು ವರುಷಗಳಿಂದ ಒಬ್ಬ ಪರಿಚಿತ, ಮೂರು ವರುಷಗಳಿಂದ ಒಬ್ಬ ಹಿರಿಯ ಮಿತ್ರ. ಈ ಮೂರು ಮಜಲುಗಳಲ್ಲಿ ನನ್ನೊಂದಿಗೆ ಸಾಗಿಬಂದ ಅವರನ್ನು ನುಡಿಯಲ್ಲಿ 'ನ್ಯಾಯನಿಷ್ಠುರಿ', ನಡೆಯಲ್ಲಿ 'ಸದಾಚಾರಿ', ಕಾದಂಬರಿಕ್ಷೇತ್ರಗಳಲ್ಲಿ 'ಗಳಗನಾಥರ ಉತ್ತರಾಧಿಕಾರಿ' ಎಂದು ಅರಿತು ಕೊಂಡಿದ್ದೇನೆ.

ನೀಳ ಶರೀರ, ನೇರ ನಿಲವು, ಗಂಭೀರ ಮುಖಮುದ್ರೆ, ಹೊಳೆಯುವ ಕಣ್ಣು, ತಲ್ಲೀನಭಾವ, ಅಚ್ಚ ಮೌನ- ಇವು ಕಟ್ಟೀಮನಿಯವರ ವ್ಯಕ್ತಿವೈಶಿಷ್ಟ್ಯಗಳು. ಸುಖ-ದುಃಖ, ಸ್ತುತಿ-ನಿಂದೆಗಳ ಹಿಡಿತಕ್ಕೆ ಸಿಗದ ಅವರದು ಸದಾ ಚಿಂತನಶೀಲ ಪ್ರವೃತ್ತಿ. ಸಮಾಜದ ನೀರ-ಕ್ಷೀರಗಳನ್ನು ಮೌನದಲ್ಲಿ ಬಿಡಿಸಿ ನೋಡುವ ಅವರು, ತುಟಿ ಬಿಚ್ಚುವುದು ವಿರಳ. ಬಿಚ್ಚಿದರೆ ಮಾತು ಮಲ್ಲಿಗೆಯಾಗಿ ಸುರಿಯುತ್ತದೆ, ಇಲ್ಲವೆ ಮಾರ್ಗಣೆಯಾಗಿ ಕೊರೆಯುತ್ತದೆ. ಎಂಥ ಗಂಡಾಂತರದಲ್ಲಿಯೂ "ಅವರವರ ಕಂಡರೆ ಅವರವರಂತೆ" ಎಂಬ ಊಸರವಳ್ಳಿಯ ಬದುಕು ಅವರಿಗೆ ಸೇರದು. ಅನ್ಯಾಯದ ಎದುರು "ವಜ್ರಾದಪಿ ಕಠೋರಾಣಿ",ನ್ಯಾಯದ ಎದುರು "ಮೃದೂನಿ ಕುಸುಮಾದಪಿ"ಯಾಗಿರುವ ಅವರು ಬಿರುಸೆಂದರೆ ಬಿರುಸು, ಮೃದುವೆಂದರೆ ಮೃದು. ಹೀಗಾಗಿ 'ಬಿರುಸ'ನ್ನು ಎದುರಿಸಿ ಶತ್ರುಗಳಾದವರು ಕೊನೆಗೊಮ್ಮೆ 'ಮೃದು'ವನ್ನು ಮೆಚ್ಚಿ ಇವರಿಗೆ ಮಿತ್ರರಾಗುತ್ತಾರೆ. ನುಡಿಯಲ್ಲಿ 'ನ್ಯಾಯನಿಷ್ಠುರ' ಎಂದು ಗೌರವಿಸುತ್ತಾರೆ.

ಪ್ರಗತಿಶೀಲ ಕಾದಂಬರಿಕಾರರು ಲೋಕವಿರೋಧವನ್ನು ಆಹ್ವಾನಿಸುವ ನ್ಯಾಯನಿಷ್ಠುರರು, ಆದರೆ ವ್ಯಕ್ತಿಗೌರವವನ್ನು ಮಾರಿಕೊಂಡ ವಿಷಯಲೋಲುಪರು ಎಂಬ ಮಾತುಗಳು ನಾಡಿನ ತುಂಬ ಅಲ್ಲಲ್ಲಿ ಕೇಳಿ ಬರುತ್ತವೆ. ಇಂಥವರ ಅಶುದ್ಧ ಬದುಕು ಓದುಗರ ಮೇಲಾಗುವ ಕಾದಂಬರಿಗಳ ಪರಿಣಾಮವನ್ನು ಅರ್ಧಗೊಳಿಸುತ್ತದೆ ಎಂದು ಜನ ನುಡಿಯುತ್ತಾರೆ. ಆದರೆ ಪ್ರಗತಿಶೀಲ ಕಾದಂಬರಿಕಾರ ಎನಿಸಿದ ಕಟ್ಟೀಮನಿಯವರ ವಿಷಯವಾಗಿ ಇಂಥ ಗುಜುಗುಜು ಕೇಳಿ ಬರುವುದಿಲ್ಲ. ಅವರ ಪರಿಶುದ್ಧ ಬದುಕು ಓದುಗರ ಮೇಲಾಗುವ ಕಾದಂಬರಿಗಳ ಪರಿಣಾಮವನ್ನು ಅಧಿಕಗೊಳಿಸುತ್ತದೆ. ಅದಕ್ಕಾಗಿ ಜನತೆ ಅವರನ್ನು ನಡೆಯಲ್ಲಿ 'ಸದಾಚಾರಿ' ಎಂದು ಗೌರವಿಸುತ್ತದೆ.

ಈ ನಡೆ -ನುಡಿ, ಬದುಕು - ಬರಹಗಳ ಸಾಮರಸ್ಯ ಕಟ್ಟೀಮನಿಯವರಿಗೆ ಒಂದು ಬಗೆಯ ವಿಶಿಷ್ಟ ವ್ಯಕ್ತಿತ್ವವನ್ನು ತಂದುಕೊಟ್ಟಿದೆ. ಈ ವ್ಯಕ್ತಿತ್ವ ಅವರ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಫಲಿಸಿದ್ದರೂ ಕಟ್ಟೀಮನಿಯವರಿಗೆ ಹೆಸರು ಗಳಿಸಿಕೊಟ್ಟಿದ್ದು ಕಾದಂಬರಿ. ಮೂವತ್ತು ವರುಷಗಳ ಹಿಂದೆ ಪಾತ್ರ, ಘಟನೆ, ತಂತ್ರ, ಭಾಷೆಗಳ ನವೀನ ಪರಿವಾರವನ್ನು ಕಟ್ಟಿಕೊಂಡು, ಅದಮ್ಯ ರಾಷ್ಟ್ರಭಕ್ತಿ, ನ್ಯಾಯಾನ್ಯಾಯದ ಘರ್ಷಣೆಗಳಲ್ಲಿ ಮುನ್ನಡೆವ ಇವರ ಕಾದಂಬರಿಗಳು ಜನತೆಯನ್ನು ಒಮ್ಮೆಲೇ ತನ್ನತ್ತ ಆಕರ್ಷಿಸಿದವು. ಪ್ರಜೆಗಳಲ್ಲಿ ರಾಷ್ಟ್ರಭಕ್ತಿಯನ್ನು ತುಂಬಿದವು, ಪತಿತರಿಗೆ ಬದುಕುವ ಬಲವನ್ನು ನೀಡಿದವು. ಇದರಿಂದಾಗಿ ಗಳಗನಾಥರ ಕಾದಂಬರಿಗಳ ರುಚಿಯಲ್ಲಿ ತಲ್ಲೀನರಾಗಿದ್ದ ಉತ್ತರ ಕರ್ನಾಟಕದ ವಾಚಕರು ಒಮ್ಮೆಲೇ ಕಟ್ಟೀಮನಿಯವರ ಕಾದಂಬರಿಗಳತ್ತ ಧಾವಿಸಿದರು. ಕನ್ನಡಿಗರ ಮನ ಮನಗಳಲ್ಲಿ ಗಳಗನಾಥರ ಕೃತಿಗಳಿಗಿದ್ದ ಮನ್ನಣೆ ಕಟ್ಟೀಮನಿಯವರ ಕೃತಿಗಳಿಗೆ ಸಂದಿತು. ಪೇಟೆಯಲ್ಲಿ, ವಾಚನಾಲಯಗಳಲ್ಲಿ, ಮನೆ ಮನೆಗಳಲ್ಲಿ ಗಳಗನಾಥರ ಕಾದಂಬರಿಗೆ ಬದಲು ಕಟ್ಟೀಮನಿಯವರ ಕಾದಂಬರಿಗಳು ತುಂಬಿನಿಂತವು. ಗಳಗನಾಥರ ವಾಚಕರೆಲ್ಲ ಇವರ ವಾಚಕರಾದರು. ಪ್ರಬುದ್ಧ ಪದ್ಮನಯನೆ, ಮಾಧವ ಕರುಣಾವಿಲಾಸಗಳ ಹೆಸರು ಕ್ರಮೇಣ ಕಡಿಮೆಯಾಗಿ, ಮಾಡಿ ಮಡಿದವರು, ಜರತಾರಿ ಜಗದ್ಗುರು, ಜನಿವಾರ -ಶಿವದಾರಗಳು ಜನರ ನಾಲಗೆಯ ಮೇಲೆ ನಲಿದಾಡಿದವು. ಈ ಹೆಸರುಗಳು ಕಟ್ಟೀಮನಿಯವರಿಗೆ ಹೆಸರು ಗಳಿಸಿಕೊಟ್ಟವು, ಉತ್ತರ ಕರ್ನಾಟಕದಲ್ಲಿ ಇವರಿಗೆ 'ಗಳಗನಾಥರ ಉತ್ತರಾಧಿಕಾರಿ' ಪಟ್ಟವನ್ನು ಒದಗಿಸಿಕೊಟ್ಟವು.

ಕಟ್ಟೀಮನಿ ಬದುಕು - ಬರಹ: ಕಟ್ಟೀಮನಿ ಅಭಿನಂದನ ಗ್ರಂಥ, ೧೯೬೯.

ಆಕರ : ಮಾರ್ಗ ಸಂಪುಟ–೬

೭೮

ವಿದ್ಯಾವರ್ಧಕ ಸಂಘದಲ್ಲಿ ಶ್ರೀ ಹೊನ್ನಾಪುರಮಠರು

೧೯೮೧

೧೯೬೨, ಕರ್ನಾಟಕ ವಿದ್ಯಾವರ್ಧಕ ಸಂಘದೊಳಗೆ ಸಭಿಕನಾಗಿ ನನ್ನ ಪ್ರವೇಶ. ಅಲ್ಲಿಯ ಸಭಾಭವನದ ಗೋಡೆಯ ಮೇಲೆ ಹತ್ತಿಪ್ಪತ್ತು ಮಹನೀಯರ ಭಾವಚಿತ್ರಗಳು. ಗಾಂಧೀಯುಗದ ಆದರ್ಶವನ್ನು ಪ್ರತಿನಿಧಿಸುವ ಕರ್ನಾಟಕದ ಹಿರಿಯ ವ್ಯಕ್ತಿಗಳವರು. ಈ ಭಾವಚಿತ್ರಗಳ ಸಾಲಿನಲ್ಲಿ ಝಿಗ್ಲರ್, ಸಾಸನೂರ, ಹೊನ್ನಾಪುರಮಠ! ಝಿಗ್ಲರ್ 'ನಿಘಂಟು'ವಿನ ಮೂಲಕ ನನಗೆ ಪರಿಚಯ, ಸಾಸನೂರ ಮೊದಲಿನಿಂದಲೂ ನನ್ನ ಮನದಲ್ಲಿ ಮೂಡಿನಿಂತ ವ್ಯಕ್ತಿ, ಈ ಹೊನ್ನಾಪುರಮಠರು ಯಾರು?

ತೆಳುವಾದ ಶರೀರ, ನಿಷ್ಕಲಂಕ ನೇತ್ರ, ಸಾತ್ವಿಕ ಮುಖಮುದ್ರೆ, ಇದಕ್ಕೆ ಒಪ್ಪುವ ಕೋಟು, ತಲೆಗೆ ಎದ್ದು ಕಾಣುವ ರುಮಾಲು, ಕೊರಳಿಗೆ ಇನ್ನೂ ಎದ್ದು ಕಾಣುವ ಶಲ್ಲೆ - ಇದು ಇವರ ಭಾವಚಿತ್ರ. ಯಾರು ಈ ಹೊನ್ನಾಪುರಮಠರು?

೧೯೬೮ರಲ್ಲಿ ನಾನು ಅನಿರೀಕ್ಷಿತವಾಗಿ ವಿದ್ಯಾವರ್ಧಕ ಸಂಘದ ಸಹಕಾರ್ಯದರ್ಶಿಯಾದೆ. ಈ ಸಂಸ್ಥೆಯನ್ನು ಕಟ್ಟಿ ಬೆಳೆಸಿದವರ ವಿಷಯವನ್ನು, ಅವರ ಕಾರ್ಯವಿಧಾನ, ಸೇವಾಭಾವಗಳನ್ನು ಅರಿಯುವ ಬಯಕೆ. ಆಗ ತಿಳಿದು ಬಂತು, ಶ್ರೀ ಹೊನ್ನಾಪುರಮಠರು ವೃತ್ತಿಯಿಂದ ವಕೀಲರು, ಪ್ರವೃತ್ತಿಯಿಂದ ಸಮಾಜಸೇವಕರು -ಸಾಹಿತಿಗಳೆಂದು.

೧೮೯೦, ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಯಾದ ವರ್ಷ. ಪುಣೆಯಲ್ಲಿ ಸಾಂಸ್ಕೃತಿಕ ಗುರು ಬಾಲಗಂಗಾಧರ ತಿಲಕರ ಪ್ರಭಾವವನ್ನು ತುಂಬಿಕೊಂಡಿದ್ದ ಗದಿಗೆಯ್ಯನವರು ೧೮೯೩ರಲ್ಲಿ ಅಂದರೆ ವಯಸ್ಸಿನ ೨೩ ರಲ್ಲಿ ಸನದು ಪಡೆದು, ಧಾರವಾಡದಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದ ಸಮಯವೆಂದರೆ ವಿದ್ಯಾವರ್ಧಕ ಸಂಘ ದಳ ಬಿಚ್ಚುತ್ತಲಿದ್ದ ಕಾಲ. ಪಿತ್ರಾರ್ಜಿತ ವ್ಯಕ್ತಿತ್ವ -ಸ್ವಾರ್ಜಿತ ವ್ಯಕ್ತಿತ್ವ ಸಿದ್ಧಿಗಳಿಂದ ಸಾಮಾಜಿಕ ಕ್ಷೇತ್ರದಲ್ಲಿ ಈಸುಬಿದ್ದ ಇವರ ಸೇವೆ, ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ಅನಿವಾರ್ಯವಾಯಿತೆಂದೇ ತೋರುತ್ತದೆ.

ಕರ್ನಾಟಕ ಏಕೀಕರಣ, ಕನ್ನಡ ಭಾಷೆ-ಸಾಹಿತ್ಯಗಳ ಪುನರುಜ್ಜೀವನ, ಕನ್ನಡ ಸಮಾಜ-ಸಂಸ್ಕೃತಿಗಳ ಸೇವೆ - ಇವು ವಿದ್ಯಾವರ್ಧಕ ಸಂಘ ಮತ್ತು ಹೊನ್ನಾಪುರಮಠ ಅವರ ಸಮಾನ ಗುರಿಗಳಾಗಿದ್ದವು. ಹೀಗಾಗಿ ಈ ವ್ಯಕ್ತಿ ಈ ಸಂಘ ಸಂಗಮಿಸಿದವು. ಹೊನ್ನಾಪುರಮಠರು ೫೦ ರೂಪಾಯಿಯ ಅಜೀವ ಸದಸ್ಯರಾದರು,

ಸಂಘಕ್ಕೆ. ೧೯೬೭ರಲ್ಲಿ ಸಂಘದ ಕಾರ್ಯಸಮಿತಿಯ ಸದಸ್ಯರಾಗಿ, ೧೬ ವರ್ಷಗಳ ವರೆಗೆ ಮುಂದುವರಿದು, ಈ ಸಂಸ್ಥೆಯ ಮೈಮನಗಳನ್ನು ಪೋಷಿಸಿದರು. ಈ ಅವಧಿಯಲ್ಲಿ ಅವರಿಂದ ಸಂಘಕ್ಕೆ ಸಂದ ನಿತ್ಯಸೇವೆಯ ದಾಖಲೆ ಲಭಿಸದೆ, ಈ ಕೆಳಗಿನ ಕೆಲವು ಮುಖ್ಯ ಘಟನೆಗಳು ಮಾತ್ರ ಕಂಡುಬರುತ್ತವೆ.

ಸಂಘವನ್ನು ಪ್ರವೇಶಿಸಿದ ಹೊಸದರಲ್ಲಿಯೇ (೧೮೯೮) 'ನೀತಿ ಮಂಜರಿ' ಹೆಸರಿನ ಇವರ ಗ್ರಂಥವೊಂದು ಸಂಘದ ಮೂಲಕ ಪ್ರಕಟವಾಯಿತು. ಇದು ೨೮ನೆಯ ವಯಸ್ಸಿನ ಗದಿಗೆಯ್ಯನವರ 'ನೀತಿಮಾರ್ಗವ್ಯಕ್ತಿತ್ವ'ವನ್ನೂ ವಿದ್ಯಾವರ್ಧಕ ಸಂಘದಂಥ ರಾಜ್ಯಮಟ್ಟದ ಸಂಸ್ಥೆ ಇವರ ಸಾಹಿತ್ಯಶಕ್ತಿಗೆ ನೀಡಿದ ಗೌರವವನ್ನೂ ಸೂಚಿಸುತ್ತದೆ. ಇಲ್ಲಿಗೆ ೫-೬ ವರ್ಷ ಗತಿಸಿರಲಿಲ್ಲ. ಶ್ರೀಯುತರು ಕಾರ್ಯಸಮಿತಿಗೆ ರಾಜೀನಾಮೆ ಕೊಟ್ಟರೆಂದು "ಮ. ರಾ. ವಿಭೂತಿ ಇವರ ಪತ್ರದ ವಿಚಾರ ಆಗಿ, ಅವರ ರಾಜೀನಾಮೆಯನ್ನು ಮಂಜೂರ ಮಾಡಲಿಕ್ಕೆ ಯಾವತ್ತೂ ಸಭಿಕರು ನಾಖುಷಿಯಾಗಿರುವದರಿಂದ ದಯಮಾಡಿ ವ್ಯವಸ್ಥಾಪಕರಾಗಿ ಉಳಿಯುವಂತೆ ವಿನಂತಿ ಮಾಡಬೇಕು" ಎಂಬ ೮-೭-೧೯೦೪ ರ ಕಾರ್ಯಸಮಿತಿಯ ಗೊತ್ತುವಳಿಯಿಂದ ತಿಳಿದು ಬರುತ್ತದೆ. ಈ ಘಟನೆಯ ಕಾರಣ ಗೊತ್ತಾಗದಿದ್ದರೂ, ವಿದ್ಯಾವರ್ಧಕ ಸಂಘಕ್ಕೆ ಇದ್ದ ಶ್ರೀ ಗದಿಗೆಯ್ಯನವರ ಸದಸ್ಯತ್ವದ 'ಆವಶ್ಯಕತೆ' ಸ್ಪಷ್ಟವಾಗುತ್ತದೆ.

ಕರ್ನಾಟಕ, ರಾಜಕೀಯವಾಗಿ ಹರಿದು ಹಂಚಿ ಹೋಗಿ ಜನರ ಭಾಷೆಯೂ ಪರಸ್ಪರರಿಗೆ ಅರ್ಥವಾಗದ ಸಮಯವದು. ಭಾಷೆಯಲ್ಲಿಯೂ ಏಕೀಕರಣ ಸಾಧಿಸುವ ಸಲುವಾಗಿ ಸಂಘ "ಗ್ರಂಥಕರ್ತರ ಸಮ್ಮೇಲನ" ಹಮ್ಮಿಕೊಳ್ಳಲು ಯೋಚಿಸಿ, ವೆಂಕಟರಾವ ಆಲೂರ, ರಾಮರಾವ ನರಗುಂದಕರ, ಬಾಳಕೃಷ್ಣರಾವ ಕದಡಿ, ಗುರುಬಸಪ್ಪ ಹಳಕಟ್ಟಿ, ನಾರಾಯಣರಾವ ಅಮ್ಮಿನಭಾವಿ, ಗದಿಗೆಯ್ಯ ವಿಭೂತಿ, ಕೃಷ್ಣರಾವ ಮುದವೀಡಕರ ಇವರನ್ನೊಳಗೊಂಡ ಸಮಿತಿಯನ್ನು ನಿಯಮಿಸಿತು (೧೮-೨-೧೯೦೭ ರ ಸಭೆ). ಮುಂದೆ ೧೯೦೭ ಜೂನ ೨ ರಂದು "ಗ್ರಂಥಕರ್ತರ ಸಮ್ಮೇಲನ"ವನ್ನು ಧಾರವಾಡದಲ್ಲಿ ಕರೆದು ಭಾಷಾಪ್ರಗತಿಗೆ ವಿಧಾಯಕವಾದ ನಿರ್ಣಯಗಳನ್ನು ಸ್ವೀಕರಿಸಿ, ಅವುಗಳನ್ನು ಕಾರ್ಯರೂಪಕ್ಕೆ ತರುವುದರ ಸಲುವಾಗಿ ಎಸ್. ಜಿ. ನರಸಿಂಹಾಚಾರ್, ನಾರಾಯಣರಾವ ಕರಗುದರಿ, ವಿನಾಯಕರಾವ ಜೋಶಿ, ರಾಮಚಂದ್ರರಾವ ದೇಶಪಾಂಡೆ, ರಾಮಸ್ವಾಮಿ ಅಯ್ಯಂಗಾರ್, ಗದಿಗೆಯ್ಯಾ ಹೊನ್ನಾಪುರಮಠ, ರಾಮರಾವ ನರಗುಂದಕರ - ಈ ೭ ಜನರ ಒಂದು ಸಮಿತಿಯನ್ನು ನಿಯಮಿಸಿತು (೧೬ ನೆಯ ವಾರ್ಷಿಕ ವರದಿ). ಹೀಗೆ ಕನ್ನಡ ಗ್ರಂಥಕರ್ತರ ಸಮ್ಮೇಲನ ಸಂಘಟಿಸುವ, ಆ ಸಮ್ಮೇಲನದಲ್ಲಿ ಸ್ವೀಕರಿಸಿದ ನಿರ್ಣಯಗಳನ್ನು ಕಾರ್ಯಗತಗೊಳಿಸುವ - ಈ ಎರಡೂ ಘಟ್ಟಗಳಲ್ಲಿ ಗದಿಗೆಯ್ಯನವರ ಹೆಸರು ಇರುವುದೊಂದು ವಿಶೇಷ. ಇದು ಶ್ರೀ ಹೊನ್ನಾಪುರಮಠ ಅವರಲ್ಲಿದ್ದ ಭಾಷಾಪ್ರಜ್ಞೆಯ ಸಾಮರ್ಥ್ಯಕ್ಕೆ ನಿದರ್ಶನವಾಗಿದೆ. ಬಹುಶಃ ಗ್ರಂಥಕರ್ತರ ೨ನೆಯ ಸಮ್ಮೇಲನ ಧಾರವಾಡದಲ್ಲಿ ಜರುಗಬೇಕೆಂದು ೨೯-೨-೧೯೦೮ ರಂದು ನಿರ್ಣಯ ಸ್ವೀಕರಿಸುತ್ತ, ಇದರ ಸಂಘಟನೆಗೆ ರೂಪಿಸಿದ ೬ ಜನರ ಕಮಿಟಿಯಲ್ಲಿಯೂ ವಿಭೂತಿಯವರು ಒಬ್ಬರಿದ್ದಾರೆ. ಈ ಹೊತ್ತಿಗಾಗಲೇ ಶ್ರೀಯುತರು ಹಲವು ಪುಸ್ತಕಗಳನ್ನು ಬರೆದು ತಮ್ಮ ಭಾಷಾಪ್ರೌಢಿಮೆಯನ್ನು ತೋರಿಸಿದುದರ ಪ್ರತೀಕವಿದು. ಈ ವರೆಗೆ ಸಂಘದ ಗೊತ್ತುವಳಿ ಪುಸ್ತಕದಲ್ಲಿ ಶ್ರೀ ಗದಿಗೆಯ್ಯಾ ವಿಭೂತಿ ವಕೀಲರು ಎಂಬ ಉಲ್ಲೇಖಗಳಿದ್ದು, ೩೦-೫-೧೯೦೮ ರಿಂದ 'ಹೊನ್ನಾಪುರಮಠ' ಎಂಬುದು ಕಾಣಿಸಿಕೊಂಡು ಮುಂದುವರಿದಿದೆ. ಇದು ಗದಿಗೆಯ್ಯನವರ ವ್ಯಕ್ತಿನಾಮ ಪರಿವರ್ತನೆಯಾಗಿರುವಂತೆ ವ್ಯಕ್ತಿತ್ವ ಪರಿವರ್ತನೆಯ ಘಟ್ಟವೂ ಆಗಿದೆಯೆಂದು ಅವರ ಜೀವನದ ಇತಿಹಾಸದಿಂದ ತಿಳಿದುಬರುತ್ತದೆ.

ವಿದ್ಯಾವರ್ಧಕ ಸಂಘದ ಬಹುಮುಖ್ಯ ಸಾಧನೆಯೆಂದರೆ 'ವಾಗ್ಭೂಷಣ' ಪತ್ರಿಕೆ. ೧೮೯೬ರಲ್ಲಿ ಪ್ರಾರಂಭವಾದ ಇದು ಆ ಕಾಲದ ಏಕೈಕ ಮಾಸಿಕ. "ವಾಗ್ಭೂಷಣ ಮಾಸಿಕವು ಹಳಗನ್ನಡ ಪರಿಶೋಧದ ಮತ್ತು ಹೊಸಗನ್ನಡದ ಪ್ರೋತ್ಸಾಹದ ಸಂಕೇತವಾಗಿದ್ದಿತು." ಸಂಘದ ಸುದ್ದಿ, ಇತರ ಲೇಖನ, ಗ್ರಂಥ ಪ್ರಕಟನಗಳಿಗೆ ಇದರಲ್ಲಿ ಅವಕಾಶವಿದ್ದಿತು. 'ವಾಗ್ಭೂಷಣ ಸುಧಾರಿಸುವ' ವಿಷಯವಾಗಿ ಮಿಸ್ಟರ್ ಗದಿಗೆಯ್ಯ ವಿಭೂತಿಯವರು ಜಾಯಿಂಟ್ ಎಡಿಟರ್‌ರಾಗಬೇಕೆಂದು ೨೩-೧೨-೧೯೦೫ರ ಕಾರ್ಯಸಮಿತಿಯಲ್ಲಿ ನಿರ್ಣಯಿಸಲಾಗಿದೆ. ಆದರೆ ಮರುವರುಷವೇ "ಮ. ರಾ. ಗದಿಗೆಯ್ಯ ವಿಭೂತಿಯವರು ಕಳೆದ ವರ್ಷ ವಾಗ್ಭೂಷಣದ ಸಬ್ ಎಡಿಟರ್ ಕೆಲ್ಸ್ ಮಾಡಿದ ಬಗ್ಗೆ ಅವರ ಉಪಕಾರ ಸ್ಮರಿಸತಕ್ಕದ್ದು. ಅದರಂತೆ ಅವರಿಗೆ ಪತ್ರ ಬರೆಯತಕ್ಕದ್ದು. ಅವರು ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದರಿಂದ ಇನ್ನಿಬ್ಬರನ್ನು ನೇಮಿಸಿಕೊಳ್ಳತಕ್ಕದ್ದು" ಎಂಬ ೧೭-೧-೧೯೦೭ರ ನಿರ್ಣಯವಿದೆ. ಈ ರಾಜೀನಾಮೆಗೂ ಕಾರಣ ಗೊತ್ತಾಗುವುದಿಲ್ಲ. ಆದರೆ ವಾಗ್ಭೂಷಣ "ಸುಧಾರಿಸುವ" ಸಲುವಾಗಿ ಅವರನ್ನು ಸೇರಿಸಿಕೊಂಡಿದ್ದರೆಂಬ ಸಂಗತಿ ಗಮನಾರ್ಹವಾಗಿದೆ. ಹೀಗಿದ್ದೂ ೪-೬-೧೯೦೮ರ ಸಭೆಯಲ್ಲಿ ವಾಗ್ಭೂಷಣಕ್ಕೆ "ಹೊಸತನ" ತರಲು ೫ ಜನ ಲೇಖಕರನ್ನು ಆಯ್ಕೆ ಮಾಡಿ ಅವರಲ್ಲಿ ಗದಿಗೆಯ್ಯನವರನ್ನು "ನಗೆಮಾತು ವೃತ್ತಾಂತ ಸಂಗ್ರಹ" ಒದಗಿಸಲು ಕೇಳಿಕೊಂಡುದು, ಇವರು ಆಮಂತ್ರಿಸುವ ಮಟ್ಟದ ಪ್ರಸಿದ್ಧ ಬರೆಹಗಾರರೆಂಬುದನ್ನು ಧ್ವನಿಸುತ್ತದೆ. ಈ ಪತ್ರಿಕೆಯಲ್ಲಿ ಗದಿಗೆಯ್ಯನವರು ಲೇಖನಗಳನ್ನು ಬರೆದರು. ಧಾರಾವಾಹಿಯಾಗಿ ರಾಮದಾಸಸ್ವಾಮಿಗಳ ಚರಿತ್ರೆ, ಮೋಹಿನಿ ನಾಟಕಗಳನ್ನು ಪ್ರಕಟಿಸಿದರು. ಇವರ ಇತಿಹಾಸಪ್ರಸಿದ್ಧ 'ಚಂದ್ರೋದಯ' ಪ್ರೆಸ್ಸಿನಲ್ಲಿಯೇ ಕೆಲವು ವರ್ಷ ಈ ಪತ್ರಿಕೆ ಮುದ್ರಣವಾಗುತ್ತಲಿದ್ದಿತು.

ಹೀಗೆ ಸಾಹಿತ್ಯಿಕವಾಗಿ ಸಂಘವನ್ನು ಬಲಪಡಿಸಿದ ಶ್ರೀ ಹೊನ್ನಾಪುರಮಠ ಅವರ ಗ್ರಂಥಗಳನ್ನು ತನ್ನ ಮಾಲೆಯಲ್ಲಿ ಪ್ರಕಟಿಸಿದುದಲ್ಲದೆ 'ನೀತಿ ಮಂಜರಿ' ಪುಸ್ತಕದ ಆರಂಭದ ೯೫ ಪುಟಗಳನ್ನು ಇನಾಮಿಪರೀಕ್ಷೆಯ ೬ನೆಯ ತರಗತಿಯ ಬಾಯಿ ಪರೀಕ್ಷೆಯ ಪಠ್ಯವನ್ನಾಗಿಸಿ (೨೫-೬-೧೯೧೧ ಸಭೆ), ಇವರ 'ಅದ್ಭುತಪ್ರೇಮ' ಕಾದಂಬರಿ (೧೯೧೮)ಗೆ ಬಹುಮಾನವಿತ್ತು, ಸಂಘ ತನ್ನ ಗೌರವವನ್ನು ವ್ಯಕ್ತಪಡಿಸಿತು. ವಾಗ್ಭೂಷಣದಲ್ಲಿ ಧಾರವಾಹಿಯಾಗಿಯಲ್ಲದೆ ಸ್ವತಂತ್ರ ವಾಗಿಯೂ "ಕರ್ನಾಟಕ ಪುಸ್ತಕ ಮಾಲಾ" ಹೆಸರಿನಿಂದ ಗ್ರಂಥಗಳನ್ನು ಪ್ರಕಟಿಸಲು ಸಂಘ ಯೋಚಿಸಿ ಬೇರೆ ಬೇರೆ ಜಿಲ್ಲೆಗಳಿಂದ ಈ ಬಗ್ಗೆ ವರ್ಗಣಿದಾರರನ್ನು ಸಂಗ್ರಹಿಸುವ ಕೆಲಸವನ್ನು ಹಲವರಿಗೆ ಹಂಚಿಕೊಟ್ಟಿದ್ದು 'ಧಾರವಾಡ ಜಿಲ್ಲೆ'ಯ ಹೊಣೆಯನ್ನು ಗದಿಗೆಯ್ಯನವರಿಗೆ ಹೊರಿಸಲಾಗಿದೆ (೪-೬-೧೯೦೮ ರ ಸಭೆ).

ಶ್ರೀ ವೆಂಕಟ ರಂಗೊ ಕಟ್ಟಿ ಅವರ 'ಲಘುವ್ಯಾಕರಣ'ದ ಮಾಲಿಕತ್ವವನ್ನು ಸಂಘ ಪಡೆಯುವ ಬಗ್ಗೆ ಕಾರ್ಯದರ್ಶಿಯವರು ಕಳಿಸಿದ ಸುತ್ತೋಲೆ (೫-೯-೧೯೦೭)ಗೆ ಸದಸ್ಯರಾದ ಶ್ರೀ ಹೊನ್ನಾಪುರಮಠ ಅವರು 'No objection' ಎಂದು ಬರೆದು (೫-೯-೧೯೦೭) ಸಹಿ ಹಾಕಿದ್ದಾರೆ.

ಸಂಘದ ಉಪಾಧ್ಯಕ್ಷ ಶ್ರೀ ರಾಘವೇಂದ್ರರಾವ ಗಂಗೊಳ್ಳಿ ಅವರಿಗೆ ಕಾರವಾರಕ್ಕೆ ವರ್ಗವಾದ ನಿಮಿತ್ತ ಈ ಸ್ಥಾನದಲ್ಲಿ ಶ್ರೀ ಶ್ರೀನಿವಾಸ ರೊದ್ದ ಅವರನ್ನು ಆಮಂತ್ರಿಸಲು ಕಾರ್ಯದರ್ಶಿ ಕರಗುದರಿಯವರು ಕಳಿಸಿದ ಸುತ್ತೋಲೆಗೆ (೩೧-೧-೧೯೦೫) ಸಮಿತಿಯ ಸದಸ್ಯರಾದ ಶ್ರೀ ಹೊನ್ನಾಪುರಮಠ ಅವರು "I Concur" ಎಂದು ಬರೆದು ಸಹಿ ಹಾಕಿದ್ದಾರೆ. (ಸಹಿಯ ಕೆಳಗೆ ಮಾತ್ರ ೩೧-೧-೧೯೦೫ ಕ್ಕೆ ಬದಲು ೩-೨-೧೯೦೫ ಎಂದು ದಿನಾಂಕವಿದೆ).

ಈ ರೀತಿ ಸಹಕರಿಸಿದ ಶ್ರೀಯುತರು ಸಂಘದ ಅಜೀವ ಸದಸ್ಯರ ಸಂಖ್ಯಾ ಬೆಳವಣಿಗೆಯಲ್ಲಿಯೂ ಶ್ರಮಿಸಿದ್ದಾರೆ. "ವ್ಯವಸ್ಥಾಪಕ ಸಭೆಯ ಪ್ರತಿಯೊಬ್ಬ ಮೆಂಬರು ಕನಿಷ್ಠ ೨೫ ಜನ ಹೊಸ ಆಶ್ರಯದಾತರನ್ನು ಮಾಡಿಸಿಕೊಳ್ಳತಕ್ಕದ್ದು. ಮತ್ತು ಈ ಬಗೆಯಾಗಿ ಮಾಡಿಸತಕ್ಕ ಜನರ ಕಡೆಯಿಂದ ವಚನವನ್ನು ಪಡೆಯಲಿಕ್ಕೆ ಮಿ. ವಿನಾಯಕರಾವ ಜೋಶಿ, ಹಣಮಂತರಾವ ಕಲಘಟಗಿ, ನಾರಾಯಣರಾವ ಕರಗುದರಿ, ಗದಿಗೆಯ್ಯಾ ಹೊನ್ನಾಪುರಮಠ, ಇವರು ಎಲ್ಲರೂ ಸಹಾಯ ಮಾಡತಕ್ಕದ್ದು" (೧೪-೭-೧೯೧೨) ಎಂಬ ನಿರ್ಣಯ ಇವರು ಸಮಾಜದ ಮೇಲೆ ಬೀರಿದ್ದ ವರ್ಚಸ್ಸನ್ನು ವ್ಯಕ್ತಪಡಿಸುತ್ತದೆ.

ಹೀಗೆ ೧೮೯೭ರಿಂದ ೧೯೧೩ರ ವರೆಗೆ ಕ್ರಿಯಾಶೀಲ ಸದಸ್ಯರಾಗಿದ್ದ ಹೊನ್ನಾಪುರಮಠ ಅವರು ಸಂಘಕ್ಕೋಸುಗ ಸಾಹಿತ್ಯಿಕವಾಗಿ ಆರ್ಥಿಕವಾಗಿ ದುಡಿದಿದ್ದಾರೆ. ಈ ಅವಧಿಯಲ್ಲಿ ಆಂಡರಸನ್ (೧೮೯೬ ರಿಂದ ೯೭), ವೆಂಕಟ ರಂಗೋ ಕಟ್ಟಿ (೧೮೯೮-೯೯), ಗುರುನಾಥರಾವ ಪಾಠಕ (೧೯೦೭-೧೨), ವಿನಾಯಕರಾವ ಜೋಶಿ (೧೯೧೩-೧೫) ಅವರು ಸಂಘದ ಅಧ್ಯಕ್ಷರು. ಈ ಅತಿರಥ-ಮಹಾರಥರೊಂದಿಗೆ ಹೆಗಲು ಕೊಟ್ಟು ಸಂಘದ ಕನ್ನಡರಥವನ್ನು ಎಳೆದ ಹಿರಿಮೆ ಇವರದಾಗಿದೆ. ವಿದ್ಯಾವರ್ಧಕ ಸಂಘದ ಜೀವನದಲ್ಲಿ ೧೮೯೦-೧೯೦೪ ಪ್ರಾರಂಭದ ದೆಸೆ, ೧೯೦೪-೧೯೧೫ ಪ್ರಗತಿದೆಸೆಯೆಂದು ಹೇಳಲಾಗುತ್ತದೆ. ಗದಿಗೆಯ್ಯನವರು ಅದರ ಪ್ರಾರಂಭದೆಸೆಯಲ್ಲಿ ಪ್ರವೇಶಿಸಿ ಪ್ರಗತಿದೆಸೆಯಲ್ಲಿ ಮುನ್ನಡೆದುದು ವೈಯಕ್ತಿಕವಾಗಿ ಸಂಘದ ಬದುಕಿನ, ಹಾಗೆಯೇ ಗದಿಗೆಯ್ಯನವರ ಜೀವನದ ಪ್ರಾರಂಭ-ಪ್ರಗತಿಗಳ ಇತಿಹಾಸವೇ ಆಗಿದೆ.

ಈ ತರುವಾಯ ಇವರು ಸಂಘದ ಸಂಪರ್ಕವನ್ನೇ ಕಡಿದುಕೊಂಡರೆಂದು ತೋರುತ್ತದೆ. ೧೯೩೩ರಲ್ಲಿ ಇವರು ಲಿಂಗೈಕ್ಯರಾದಾಗ ಸಂಘ ದುಃಖಸೂಚಕ ನಿರ್ಣಯದ ಮೂಲಕ ಇವರಿಗೆ ತನ್ನ ಕೃತಜ್ಞತೆ ಸಲ್ಲಿಸಿತು. ನನ್ನನ್ನು ಪ್ರಾರಂಭದಲ್ಲೇ ಆಕರ್ಷಿಸಿದ್ದ ಗದಿಗೆಯ್ಯನವರ ಭಾವಚಿತ್ರವು ೧೯೪೦ರಲ್ಲಿ, ಆಗ ಸಂಘದ ಅಧ್ಯಕ್ಷರಾಗಿದ್ದ ಜಿ. ಆರ್. ನಲವಡಿಯವರು ಅನಾವರಣಗೊಳಿಸಿದ್ದು.

ಹೊನ್ನಪುರ -ಸಂ. ಹೇಮಾ ಪಟ್ಟಣಶೆಟ್ಟಿ (೧೯೮೧)

ಆಕರ : ಮಾರ್ಗ ಸಂಪುಟ–೬

■■

೭೯

ದೊಡ್ಡ ಮನುಷ್ಯ

೧೯೮೮

ಎನ್. ತಿಪ್ಪಣ್ಣ

ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಸ್ನೇಹ, ಸಹಾಯ, ನ್ಯಾಯಪರತೆಗಳಿಗೆ ಪರ್ಯಾಯನಾಮವಾಗಿ ಕೇಳಿ ಬರುತ್ತಿದ್ದ ಹೆಸರು, ಶಿಕ್ಷಕ-ಶಿಕ್ಷಕೇತರ ವರ್ಗಗಳಲ್ಲಿ ಪ್ರತಿನಿತ್ಯ ಪ್ರತಿಧ್ವನಿತವಾಗುತ್ತಲಿದ್ದ ಹೆಸರು.

ಯಾರು, ಈ ತಿಪ್ಪಣ್ಣ? ಕುತೂಹಲ ನನಗೆ.

ಕುಲಪತಿ - ಕುಲಸಚಿವರಂಥ ಅಧಿಕಾರವರ್ಗ, ಸಿನೇಟ್-ಸಿಂಡಿಕೇಟ್ ಸದಸ್ಯರಂಥ ಆಳುವ ವರ್ಗಗಳಿಂದ ದೂರವಿರುವ ಪ್ರವೃತ್ತಿ ನನ್ನದು. ನನ್ನ ಕೆಲಸವಾಯಿತು, ನನ್ನ ವಿದ್ಯಾರ್ಥಿಗಳಾದರು - ಇದು ನನ್ನ ಮನೋಧರ್ಮ. ಹೀಗಾಗಿ ಒಂದು ವರ್ಷ ಗತಿಸಿದರೂ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಿಂಡಿಕೇಟ್ ಸದಸ್ಯರಾಗಿದ್ದ ತಿಪ್ಪಣ್ಣ, ಹೆಸರಿನ ಮೂಲಕ ಕಿವಿಗೆ ವಸ್ತುವಾದರೆ ಹೊರತು, ಕಣ್ಣಿಗೆ ವಸ್ತುವಾಗಲಿಲ್ಲ.

ಒಂದು ಸಂಜೆ. ವಿಶ್ವವಿದ್ಯಾಲಯದಲ್ಲಿ ದೊಡ್ಡ ಸಭೆ. ವೇದಿಕೆಯ ಮೇಲೆ ೪-೬ ಜನ ಪ್ರತಿಷ್ಠಿತರು, ಅವರ ಮಧ್ಯೆ ಎತ್ತರ ನಿಲುವು, ತುಂಬಿದ ಮೈಕಟ್ಟು, ಆಕರ್ಷಕ ಮುಖ, ಮುಖಕ್ಕೆ ಬೆಳ್ಳಿಯ ಕಿರೀಟವಿಟ್ಟಂತೆ ತಲೆತುಂಬ ಬಿಳಿಯ ಕೂದಲು ಮತ್ತೂ ಆಕರ್ಷಣೆಯೆಂಬಂತೆ ಗಂಭೀರ ಪ್ರವೃತ್ತಿ, ಕಂಚಿನ ವಿಗ್ರಹದಂತಹ ನಿಲುವು, ಪ್ರಥಮ ಭೆಟ್ಟಿಯಲ್ಲಿಯೇ ಪ್ರಭಾವ ಬೀರುವ ವ್ಯಕ್ತಿತ್ವ. ಇವರೇ ತಿಪ್ಪಣ್ಣ- ಎಂದು ಸ್ನೇಹಿತರೊಬ್ಬರು ಸೂಚಿಸಿದರು. ಈವರೆಗೆ ಧ್ವನಿರೂಪದಲ್ಲಿ ಕೇಳಿದ್ದ ಹೆಸರು, ಅಂದು ವ್ಯಕ್ತಿರೂಪದಲ್ಲಿ ಕಣ್ಣಿಗೆ ಕಟ್ಟಿತು. "ದೊಡ್ಡ ಹೆಸರಿನ ದೊಡ್ಡ ವ್ಯಕ್ತಿ" ಎನಿಸಿತು.

* * *

ಮುಂಜಾನೆ ೧೦ ಗಂಟೆ.

ಪರೀಕ್ಷಾ ವಿಭಾಗದಿಂದ ಜವಾನ ಮನೆಗೆ ಬಂದ,

ಪರೀಕ್ಷಾಧಿಕಾರಿಗಳಾದ ಎಸ್. ಬಿ: ಶಹಾಪೇಟೆ ಅವರು ನಿಮಗೆ ಬರ ಹೇಳಿದ್ದಾರೆ.

ಕಾರಣ?

ಗೊತ್ತಿಲ್ಲ.

ನನಗೆ ಅಧಿಕಾರಿಗಳೆಂದರೆ ಒಂದು ಬಗೆಯ ಭಯ. ಅದರಲ್ಲಿಯೂ ತುಂಬ ನಿಷ್ಠುರರೆಂದೇ ಹೆಸರಾಗಿದ್ದ ಪರೀಕ್ಷಾಧಿಕಾರಿಗಳು. ಮನಸ್ಸಿಗೆ ಕಿರಿಕಿರಿಯಾಯಿತು.

ಮತ್ತೆ ಯಾರಾದರೂ ಅಲ್ಲಿ ಇದ್ದಾರೆಯೇ?

ಎನ್. ತಿಪ್ಪಣ್ಣ ಮೊದಲಾದವರು ಇದ್ದಾರೆ.

ತಿಪ್ಪಣ್ಣನವರಿಗೂ ನನಗೂ ಇಷ್ಟರಲ್ಲಿ ಒಂದೆರಡು ಸಲ ಆಕಸ್ಮಿಕ ಭೆಟ್ಟಿ ಸಂಭವಿಸಿದ್ದಿತು. ನನ್ನನ್ನು ಕರೆಯಿಸಿ ಮಾತನಾಡುವಷ್ಟು ಅದು ಗಾಢವಾಗಿರಲಿಲ್ಲ. ಅವಸರದಿಂದ ಪರೀಕ್ಷಾ ವಿಭಾಗಕ್ಕೆ ಹೋದೆ. ಎನ್. ತಿಪ್ಪಣ್ಣ, ಪ್ರಿ. ಹಳ್ಳೂರ, ಪ್ರಿ. ಬೊಮ್ಮಣ್ಣನವರ, ಶಹಾಪೇಟೆ-ನಾಲ್ಕೂ ಜನ ಗಂಭೀರವಾಗಿ ಚರ್ಚಿಸುತ್ತಿದ್ದರು.

ನಮಸ್ಕಾರ.

ಬನ್ನಿ, ಕುಳಿತುಕೊಳ್ಳಿ.

ಅಧೀರ ಮನಸ್ಕನಾಗಿ ಕುಳಿತೆ.

ತಿಪ್ಪಣ್ಣ ಮಾತಿಗೆ ಪ್ರಾರಂಭಿಸಿದರು.

ಕನ್ನಡ ವಿಭಾಗದ ಬಸವೇಶ್ವರಪೀಠ ಕೆಲವು ವರ್ಷಗಳಿಂದ ತೆರವು ಇದೆ. ಅದಕ್ಕೆ ಒಬ್ಬ ತಾತ್ಪೂರ್ತಿಕ ಪ್ರಾಧ್ಯಾಪಕನನ್ನು ನೇಮಿಸಬೇಕಾಗಿದೆ. ನೀವು ಇದಕ್ಕೆ ಒಪ್ಪುವಿರಾ?

ಈ ಅನಿರೀಕ್ಷಿತ ಹೊಣೆ-ಗೌರವಗಳು ನನ್ನನ್ನು ನಿರುತ್ತರಗೊಳಿಸಿದವು.

ನಾವು ನಾಲ್ಕೂ ಜನ ಸಮಾಲೋಚಿಸಿದ್ದೇವೆ. ಇಂದಿನ ಪರಿಸ್ಥಿತಿಯಲ್ಲಿ ನೀವೇ ಇದಕ್ಕೆ ಯೋಗ್ಯವೆಂದು ತೀರ್ಮಾನಿಸಿದ್ದೇವೆ.

ನಿಮ್ಮ ವಿಶ್ವಾಸಕ್ಕೆ ಕೃತಜ್ಞ. ಈಗ ಕುಲಪತಿಗಳಾಗಿರುವ ನನ್ನ ಪ್ರಾಧ್ಯಾಪಕರಾದ ಡಾ. ಆರ್. ಸಿ. ಹಿರೇಮಠ ಅವರನ್ನು ಕೇಳಿ ಹೇಳುತ್ತೇನೆ. ಅವರು ಒಪ್ಪಿದರೆ ನನ್ನ ಅಭ್ಯಂತರವಿಲ್ಲ.

ಹೀಗೆ ಹೇಳಿ ಹೊರಬಂದೆ.

ಸಾಯಂಕಾಲ ಕುಲಪತಿ ಡಾ. ಆರ್. ಸಿ. ಹಿರೇಮಠರನ್ನು ಭೆಟ್ಟಿಯಾದೆ. ಅಂದೇ ಮಧ್ಯಾಹ್ನ ಸಿಂಡಿಕೇಟ್ ಸಭೆ ಇದ್ದಿತೆಂದೂ, ತಿಪ್ಪಣ್ಣ ಮೊದಲಾದವರು ಬಸವೇಶ್ವರಪೀಠದ ಪ್ರಸ್ತಾಪ ಮಾಡುವುದರ ಮೂಲಕ ನನ್ನನ್ನು ಆ ಪೀಠದ ತಾತ್ಪೂರ್ತಿಕ ಪ್ರಾಧ್ಯಾಪಕನೆಂದು ನೇಮಿಸಲಾಯಿತೆಂದೂ 'ಅದರ್ ಎಂಡ್'ದಿಂದ ಈ ವಿಷಯ ಪ್ರಸ್ತಾಪವಾದುದು ತಮಗೆ ಸಂತೋಷವನ್ನುಂಟು ಮಾಡಿತೆಂದೂ ತಿಳಿಸಿದರು. ಅಂದು ಮುಂಜಾನೆ ಪರೀಕ್ಷಾ ವಿಭಾಗದಲ್ಲಿ ನಡೆದ ಮಾತುಕತೆಗಳನ್ನು ಡಾ. ಹಿರೇಮಠರ ಮುಂದೆ ವಿವರಿಸಿ, ಮನಸ್ಸು ಹಗುರು ಮಾಡಿಕೊಂಡೆ.

ಈ ಘಟನೆ ತಿಪ್ಪಣ್ಣ ಅವರಿಗೆ ಇಂದು ನೆನಪಿರಲಿಕ್ಕಿಲ್ಲ. ನನಗೆ ನೆನಪಿದೆ.

* * *

ಹೀಗೆ ಆ ಕಾಲದಲ್ಲಿ ತಿಪ್ಪಣ್ಣನವರು ತಾವಾಗಿಯೇ ಸಹಾಯ ಮಾಡಿದ್ದು ಅನೇಕ ಜನರಿಗೆ. ಅವರಿಂದಾಗಿ ತಮ್ಮ ಭವಿಷ್ಯವನ್ನೇ ಭವ್ಯವಾಗಿಸಿಕೊಂಡ ಅನೇಕರನ್ನು ವಿಶ್ವವಿದ್ಯಾಲಯದಲ್ಲಿ ಕಂಡಿದ್ದೇನೆ. ತಿಪ್ಪಣ್ಣನವರ ಹೆಸರು ಹೇಳಿ ತಮ್ಮ ಮನೆಯ ದೀಪ ಹಚ್ಚಬೇಕು-ಅಂಥ ದೊಡ್ಡ ಸಹಾಯ ಪಡೆದವರನ್ನೂ ನಾನು ನೋಡಿದ್ದೇನೆ. ಅವರಲ್ಲಿ ನನ್ನ ಒಬ್ಬ ಸ್ನೇಹಿತರು ಅವರಿಂದ ಎಲ್ಲ ಬಗೆಯ ಸಹಾಯ ಪಡೆದ ಮರುದಿನವೇ ತಮ್ಮ ಗೋಮುಖವನ್ನು ಕಳಚಿ ವ್ಯಾಘ್ರಮುಖವನ್ನು ತೋರಿಸಿದರು. ಮುಚ್ಚಿಕೊಂಡಿದ್ದ ಕೃತಘ್ನತೆಯ ಉಗುರುಗಳನ್ನು ಬಿಚ್ಚಿಹಿಡಿದರು. ತಿಪ್ಪಣ್ಣನವರಿಗೆ ಆ ದಿನಗಳಲ್ಲಿ ಒಳಗೊಳಗೆ ದೊಡ್ಡ ನೋವು. ನನ್ನನ್ನು ನೋಡಿದಾಗಲೆಲ್ಲ ಅವರಿಗೆ ಆ ನೋವು ಮರುಕಳಿಸುತ್ತಿತ್ತು. ಹೀಗಿದ್ದೂ ಅವರು ಒಮ್ಮೆಯೂ ನನ್ನ ಮುಂದೆ ಆ ನೋವನ್ನು ತೋಡಿಕೊಳ್ಳಲಿಲ್ಲ. ಸಹಾಯದಂತೆ ಸಹನೆಯೂ ತಿಪ್ಪಣ್ಣನವರ ಮುಖ್ಯ ಗುಣ.

ಈ ಘಟನೆ ತಿಪ್ಪಣ್ಣನವರಿಗೆ ಇಂದು ನೆನಪಿರಲಿಕ್ಕಿಲ್ಲ, ನನಗೆ ನೆನಪಿದೆ.

* * *

ವಿಶ್ವವಿದ್ಯಾಲಯದ ಅತಿಥಿಗೃಹದಲ್ಲಿ ತಿಪ್ಪಣ್ಣನವರ ವಾಸ್ತವ್ಯ, ಭೆಟ್ಟಿಗಾಗಿ ಹೋದವರಿಗೆ ಮೊದಲು ಹಾರ್ದಿಕ ಸ್ವಾಗತ, ಆತ್ಮೀಯ ಆತಿಥ್ಯ, ಆಮೇಲೆ ಶಾಂತ ಚಿತ್ತದಿಂದ ಬಂದವರ ದುಃಖ-ದೂರುಗಳಲ್ಲಿ ಪಾಲ್ಗೊಳ್ಳುವಿಕೆ. 'ಆಗ ಬಾ, ಈಗ ಬಾ, ಹೋಗಿ ಬಾ' ಎನ್ನುವ ಸ್ವಭಾವವಲ್ಲ, ಸ್ಪಷ್ಟ ಉತ್ತರ, ನೇರ ತೀರ್ಮಾನ. ಇದರಿಂದಾಗಿ ತಿಪ್ಪಣ್ಣನವರ ಹತ್ತಿರ ಸಹಾಯಕ್ಕೆ ಹೋಗುವವರ ಸಾಲು ಯಾವಾಗಲೂ ದೊಡ್ಡದಾಗಿರುತ್ತಿತ್ತು, ವಿಶ್ವವಿದ್ಯಾಲಯ ಯಂತ್ರದ ಬಹುಮುಖ್ಯ ಭಾಗವಾಗಿದ್ದ ಅವರು ದಣಿವನ್ನು ಲೆಕ್ಕಿಸದೆ ದುಡಿಯುತ್ತಿದ್ದರು, ಹೀಗಿದ್ದೂ ಅವರ ಮುಖದ ಮೇಲೆ ಬೇಸರದ ಛಾಯೆ ನನಗೆ ಒಮ್ಮೆಯೂ ಕಾಣಿಸಲಿಲ್ಲ.

* * *

ತಿಪ್ಪಣ್ಣನವರಿಗೆ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಬಗ್ಗೆ ಎಲ್ಲಿಲ್ಲದ ಅಭಿಮಾನ. ಆ ಸಂಸ್ಥೆ ನಡೆದುಬಂದ ಕಥೆಯನ್ನು, ಎಡವಿದ ಸಂದರ್ಭಗಳನ್ನು, ಪ್ರಿನ್ಸಿಪಾಲ್ ಮರಿಯಪ್ಪ ಅವರು ವಹಿಸುತ್ತಿರುವ ಶ್ರಮವನ್ನು ನನ್ನ ಮುಂದೆ ಅವರು ಅನೇಕ ಸಲ ಪ್ರಸ್ತಾಪಿಸಿದ್ದುಂಟು. ತಾವು ಸಂಸ್ಥೆಯ ಕಾರ್ಯದರ್ಶಿಯಾದರೂ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಮರಿಯಪ್ಪನವರೊಂದಿಗೆ ನಡೆದುಕೊಳ್ಳುತ್ತಿದ್ದ ರೀತಿ, ತೋರುತ್ತಲಿದ್ದ ಗೌರವಗಳು, ಸಂಸ್ಥೆಗಳನ್ನು ನಡೆಸುತ್ತಲಿರುವ ಅಂದಿನ ಬೇರೆ ಕಾರ್ಯದರ್ಶಿಗಳಿಗೆ ಆದರ್ಶವಾಗಿದ್ದವು. ಇಬ್ಬರೂ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು, ಅತಿಥಿಗೃಹದಲ್ಲಿ ಇಳಿದುಕೊಂಡಾಗ, ಸಭೆಗಳಲ್ಲಿ ಭಾಗವಹಿಸಿದಾಗ ನಿಷ್ಕಪಟಿಯಾದ, ಗ್ರಾಮೀಣ ಸತ್ವದ ಮರಿಯಪ್ಪನವರು ತಿಪ್ಪಣ್ಣನವರ ಅತಿಯಾದ ಔದಾರ್ಯಕ್ಕೆ ಸಿಡಿಮಿಡಿಗೊಳ್ಳುತ್ತಿದ್ದರು. ಅದಕ್ಕೆ ತಿಪ್ಪಣ್ಣನವರ ಉತ್ತರ ಮುಗುಳು ನಗೆ.

ವೀರಶೈವ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷರಾಗಿದ್ದ ಅಲ್ಲಂ ಕರಿಬಸಪ್ಪನವರ ಬಗ್ಗೆ ತಿಪ್ಪಣ್ಣನವರಿಗೆ ದೊಡ್ಡ ಗೌರವ. ಕರಿಬಸಪ್ಪನವರು ಚುನಾವಣೆಯಲ್ಲಿ ಸೋತ ಸುದ್ದಿಯನ್ನು ಆಕಾಶವಾಣಿಯ ಮೂಲಕ ಕೇಳುತ್ತಲೇ 'ಉಯ್, ಲಾಸ್ಟ್ ಅವರ್ ಫೋರ್ಟ್' ಎಂದು ಹಳಹಳಿಸಿದರು. 'ಹಿ ಈಸ್ ಅವರ್ ಕ್ಯಾಪ್ಟನ್' ಎಂದು ಕರಿಬಸಪ್ಪನವರ ಬಗ್ಗೆ ಹೇಳಿಕೊಳ್ಳುವಲ್ಲಿ ಸಂತೋಷಪಡುತ್ತಿದ್ದರು. ತಾವು ಇಷ್ಟು ಮಹತ್ವದ ವ್ಯಕ್ತಿಯಾಗಿದ್ದರೂ ಕರಿಬಸಪ್ಪನವರ ಬಗ್ಗೆ ಆಡುತ್ತಲಿದ್ದ ಈ ಮಾತುಗಳಲ್ಲಿ ತಿಪ್ಪಣ್ಣನವರ ದೊಡ್ಡ ಮನಸ್ಸನ್ನು ನಾವು ಗುರುತಿಸುತ್ತಿದ್ದೆವು. ಇಂಥ ಅನೇಕ ಘಟನೆಗಳು ಅವರ ಬಗ್ಗೆ ನಮಗೆ ಇದ್ದ ಗೌರವವನ್ನು ಇಮ್ಮಡಿಸುತ್ತಿದ್ದವು.

ತಿಪ್ಪಣ್ಣನವರನ್ನು ಅಂದು ನೋಡಿದಾಗಲೆಲ್ಲ, ಇಂದು ನೆನೆದಾಗಲೆಲ್ಲ ಸಮುದ್ರದ ನೆನಪಾಗುತ್ತದೆ. ದೊಡ್ಡ ಮನಸ್ಸಿನ, ದೊಡ್ಡ ಮನುಷ್ಯ. ನನ್ನ ಜೀವನದಲ್ಲಿ ಯಾವಾಗಲೂ ಜೀವಂತವಾಗಿರುವ ಕೆಲವೇ ಜನ ಹಿರಿಯರಲ್ಲಿ ಅವರೂ ಒಬ್ಬರು. ಹೀಗಾಗಿ ಇತ್ತೀಚೆ ಅವರು ಧಾರವಾಡದಿಂದ ದೂರವಾಗಿದ್ದರೂ ನನ್ನ ಮನಸ್ಸು ಮಾತ್ರ ಮೊದಲಿನಷ್ಟೇ ಸಮೀಪ ಉಳಿದಿದೆ.

ಸುಮನ : ಎಸ್. ತಿಪ್ಪಣ್ಣ ಅವರ ಅಭಿನಂದನ ಗ್ರಂಥ, ೧೯೮೮.

ಆಕರ : ಮಾರ್ಗ ಸಂಪುಟ–೬

■■

೮೦

ಕನ್ನಡ ಪರಂಪರೆಯ ನಿರ್ಮಾಪಕ

೧೯೯೦

ಒಬ್ಬ ವಿದ್ಯಾರ್ಥಿ, ಇಬ್ಬರು ಅಧ್ಯಾಪಕರಿಂದ ಪ್ರಾರಂಭವಾದ ಸ್ನಾತಕೋತ್ತರ ಕನ್ನಡ ವಿಭಾಗ ಇಂದು ೩೦೦ ಜನ ವಿದ್ಯಾರ್ಥಿಗಳ, ೩೦ ಜನ ಅಧ್ಯಾಪಕರ ಬಹುದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ಈ ಬೆಳವಣಿಗೆಯ ಸಮಗ್ರ ಕೀರ್ತಿ ಡಾ. ಆರ್. ಸಿ. ಹಿರೇಮಠ ಅವರಿಗೆ ಸಲ್ಲುತ್ತದೆ.

೧೯೫೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಉದಯದೊಂದಿಗೆ ಅಧ್ಯಾಪಕರಾಗಿ ಬಂದ ಡಾ. ಆರ್. ಸಿ. ಹಿರೇಮಠರು ೩೦ ವರ್ಷಗಳ ಕಾಲ ರಾತ್ರಿಗಳನ್ನೂ ಹಗಲುಮಾಡಿ ದುಡಿದು, ಕನ್ನಡ ವಿಭಾಗವನ್ನು ಅಡಿಯಿಂದ ಮುಡಿಯ ವರೆಗೂ ಕಟ್ಟಿ ಬೆಳೆಸಿದರು.

ಕನ್ನಡದ ನಿಷ್ಠಾವಂತ ವಿದ್ಯಾರ್ಥಿಯಾಗಿದ್ದ ಡಾ. ಹಿರೇಮಠರು ಎಲ್ಲ ಪರೀಕ್ಷೆಗಳಲ್ಲಿಯೂ ಪ್ರಥಮ ಸ್ಥಾನದ ತುರಾಯ ಹಚ್ಚಿಕೊಂಡೇ ಬೆಳೆದರು. ಮೊದಲಿನಿಂದಲೂ ಕನ್ನಡದ ಮೈ-ಮನಸ್ಸುಗಳನ್ನು, ಮಿತಿ-ಶಕ್ತಿಗಳನ್ನು ಅರ್ಥಮಾಡಿಕೊಂಡಿದ್ದ ಅವರು ಅಧ್ಯಾಪಕರಾಗಿ, ಮುಖ್ಯಸ್ಥರಾಗಿ, ರಾಷ್ಟ್ರೀಯ-ಅಂತರರಾಷ್ಟ್ರೀಯ ಶೈಕ್ಷಣಿಕ ತಿಳುವಳಿಕೆಗಳ ಮೂಲಕ ಕನ್ನಡದ ಶಕ್ತಿಕೋಶಗಳನ್ನು ಹಿಗ್ಗಿಸುತ್ತಲೇ ಹೋದರು.

೧೯೫೦, ನಮ್ಮ ನಾಯಕ ವ್ಯಕ್ತಿಗಳು ಕನ್ನಡ ನಾಡಿನ ಏಕೀಕರಣದ ಹೋರಾಟಕ್ಕೆ ಇಳಿದರೆ, ಇದೇ ಕಾಲಕ್ಕೆ ಅಧ್ಯಾಪಕರಾಗಿ ಬಂದಿದ್ದ ಡಾ. ಹಿರೇಮಠರು ಕನ್ನಡ ಶಿಕ್ಷಣದ ನವೀಕರಣಕ್ಕಾಗಿ ಮತ್ತು ಧ್ರುವೀಕರಣಕ್ಕಾಗಿ ಉತ್ತರ ಕರ್ನಾಟಕದಲ್ಲಿ ಹೋರಾಟಕ್ಕಿಳಿದರು. ಮೈಸೂರು ಭಾಗದಲ್ಲಿ ಟಿ. ಎಸ್. ವೆಂಕಣ್ಣಯ್ಯ ಮೊದಲಾದವರ ಪ್ರಯತ್ನಗಳಿಂದಾಗಿ ಸ್ನಾತಕೋತ್ತರ ಕನ್ನಡಶಿಕ್ಷಣದ ದಾರಿ ಈಗಾಗಲೇ ಸಿದ್ಧವಾಗಿದ್ದಿತು. ಆದರೆ ಕಲ್ಲು-ಮುಳ್ಳುಗಳನ್ನು ಸವರಿ, ಉತ್ತರ ಕರ್ನಾಟಕದಲ್ಲಿ ಇಂಥ ದಾರಿಯನ್ನು ಹೊಸದಾಗಿ ತೆರೆಯುವ ಹೊಣೆಯನ್ನು ಡಾ. ಹಿರೇಮಠರು ಹೊರಬೇಕಾಗಿ ಬಂದಿತು. ಓಬೆರಾಯನ ಕಾಲದ ಕನ್ನಡ ಎಂ. ಎ. ಅಭ್ಯಾಸಕ್ರಮವನ್ನು ಸಬಲಗೊಳಿಸುವುದು, ಕಾಲೇಜುಗಳಲ್ಲಿ ಕನ್ನಡಕ್ಕೆ ಯೋಗ್ಯ ಸ್ಥಾನಮಾನಗಳನ್ನು ಒದಗಿಸಿಕೊಡುವುದು- ಏನೆಲ್ಲ ಭಾರ ಇವರ ಹೆಗಲಮೇಲೆಯೇ ಇಳಿದುಬಂದಿತು. ಆಗ ಹೊಸ ಹೊಸ ಬೆಳಕುಗಳು ಕನ್ನಡದಲ್ಲಿ ತೂರಿ ಬರುವುದಕ್ಕಾಗಿ, ವಿಶ್ವವಿದ್ಯೆಯ ಬಾಗಿಲುಗಳನ್ನು ಒಂದೊಂದಾಗಿ ತೆರೆಯುತ್ತ ಹೊರಟ ಹಿರೇಮಠರು, ಈ ಭಾಗದಲ್ಲಿ ಕನ್ನಡ ಪರಂಪರೆಯ ನಿರ್ಮಾಪಕರಾದರು.

ಭಾಷಾವಿಜ್ಞಾನ :

ಸಾಹಿತ್ಯ, ಸಾಹಿತ್ಯಶಾಸ್ತ್ರ, ಸಂಸ್ಕೃತಿಗಳಿಗೆ ಮಾತ್ರ ಸೀಮಿತವಾಗಿದ್ದ ಕನ್ನಡ ಅಭ್ಯಾಸಕ್ರಮದ ವಿಸ್ತಾರಸಂದರ್ಭದಲ್ಲಿ ಡಾ. ಹಿರೇಮಠರು ಮೊದಲು ಗಮನಕೊಟ್ಟುದು ಭಾಷಾವಿಜ್ಞಾನಕ್ಕೆ. ವ್ಯಾಕರಣವು ಭಾಷಾಶಾಸ್ತ್ರವಾಗಿ ಬಿಚ್ಚಿಕೊಂಡುದು ಈ ಯುಗದ ಒಂದು ಜಾಗತಿಕ ಸಾಧನೆಯಾಗಿದೆ. ಈ ಜಾಗತಿಕ ಸಾಧನೆಯನ್ನು ಕರ್ನಾಟಕಕ್ಕೆ ಸಾಧ್ಯಮಾಡಿಕೊಟ್ಟ ಪ್ರಥಮಕೀರ್ತಿ ಪ್ರಧಾನವಾಗಿ ಆರ್. ಸಿ. ಹಿರೇಮಠ ಅವರಿಗೆ ಸಲ್ಲುತ್ತದೆ. ಭಾಷಾಶಾಸ್ತ್ರವನ್ನು ಕನ್ನಡ ಅಭ್ಯಾಸಕ್ರಮದಲ್ಲಿ ಒಂದು ಪತ್ರಿಕೆಯಾಗಿ, ಆಮೇಲೆ ಐಚ್ಛಿಕ ವಿಷಯವಾಗಿ, ಕೊನೆಗೆ ಪೂರ್ಣಪ್ರಮಾಣದ ಸ್ನಾತಕೋತ್ತರ ಕೋರ್ಸನ್ನಾಗಿ ಬೆಳೆಸಿದವರು, ಡಾ. ಹಿರೇಮಠರು.

ಭಾಷಾಶಾಸ್ತ್ರದ ಬೇಸಗೆ ಶಿಬಿರ, ದ್ರಾವಿಡ ಭಾಷಾವಿಜ್ಞಾನದ ಸಮ್ಮೇಲನ-ವಿಚಾರ ಸಂಕಿರಣಗಳನ್ನು ಧಾರವಾಡದಲ್ಲಿ ಜರುಗಿಸಿ, ಈ ಶಾಸ್ತ್ರ ಗಟ್ಟಿಯಾಗಿ ಕಾಲೂರಲು ಕಾರಣರಾದರು. ಸ್ವತಃ ಭಾಷಾವಿಜ್ಞಾನಿಗಳಾದುದರಿಂದ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಭಾಷಾಶಾಸ್ತ್ರೀಯ ಸಮ್ಮೇಲನಗಳಲ್ಲಿ ಪ್ರಬಂಧಗಳನ್ನು ಮಂಡಿಸಿ, ಗೋಷ್ಠಿ-ಸಮ್ಮೇಲನಗಳ ಅಧ್ಯಕ್ಷತೆ ವಹಿಸಿ ಭಾಷಾವಿಜ್ಞಾನಿಗಳ ಗಮನವನ್ನು ಕರ್ನಾಟಕ ವಿಶ್ವವಿದ್ಯಾಲಯದತ್ತ ಸೆಳೆದರು. ಎರಡು ಸಲ ವಿದೇಶಗಳಿಗೆ ಹೋಗಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಭಾಷೆಯನ್ನು ಪ್ರತಿನಿಧಿಸಿದರು. ತ್ರಿವೇಂದ್ರಮ್‌ದಲ್ಲಿ ಅಸ್ತಿತ್ವಕ್ಕೆ ಬಂದ ಅಂತರರಾಷ್ಟ್ರೀಯ ಭಾಷಾ ವಿಜ್ಞಾನಸಂಸ್ಥೆಯ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿ, ಅದರ ಪ್ರಥಮ ನಿರ್ದೇಶಕರಾಗಿಯೂ ದುಡಿದು, ಈ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದ ವಿದ್ವಾಂಸರಾಗಿ ಬೆಳೆದರು.

ಜೈನ-ವೀರಶೈವ-ಬ್ರಾಹ್ಮಣಸಾಹಿತ್ಯ ಶಾಖೆ :

ಪ್ರಾಚೀನ ಕನ್ನಡ ಭಾಷೆ - ಸಾಹಿತ್ಯ - ಸಂಸ್ಕೃತಿಗಳನ್ನು ವಿಸ್ತರಿಸಿದ ಧರ್ಮಗಳಲ್ಲಿ ಜೈನ, ವೀರಶೈವ, ಬ್ರಾಹ್ಮಣ ಪ್ರಮುಖವಾದುವು. ಇವುಗಳ ಕಾಣಿಕೆಯ ಸರ್ವತೋಮುಖ ಅಧ್ಯಯನಕ್ಕಾಗಿ ಈ ಹೆಸರಿನ ಸಾಹಿತ್ಯ ಶಾಖೆಗಳನ್ನು ಕನ್ನಡ ವಿಭಾಗದಲ್ಲಿ ಪ್ರಾರಂಭಿಸಿ, ಅಭ್ಯಾಸಕ್ರಮದಲ್ಲಿ ಅಳವಡಿಸಿ, ಕರ್ನಾಟಕದ ಸಮಗ್ರ ಸಂಸ್ಕೃತಿಯ ಶೋಧಕ್ಕೆ ದಾರಿಗಳನ್ನು ಕಲ್ಪಿಸಿಕೊಟ್ಟವರು, ಡಾ. ಹಿರೇಮಠರು. ಹಸ್ತಪ್ರತಿ ಸಂಗ್ರಹ, ಗ್ರಂಥ ಪರಿಷ್ಕರಣಗಳಂಥ ಕಾರ್ಯಗಳಿಗೂ ಇಲ್ಲಿ ಅವಕಾಶ ಮಾಡಿಕೊಟ್ಟು, ಹರಿಹರನ ರಗಳೆಗಳ ಸಮಗ್ರ ಸಂಪುಟ, ಮೋಹನ ತರಂಗಿಣಿ, ಧರ್ಮಾಮೃತ ಮೊದಲಾದ ಇಪ್ಪತ್ತು ಪ್ರಾಚೀನಕೃತಿಗಳು ತಮ್ಮ ನೇತೃತ್ವದಲ್ಲಿ ಹೊರಬರುವಂತೆ ಪ್ರಯತ್ನಿಸಿದರು.

ಗ್ರಂಥಸಂಪಾದನಶಾಸ್ತ್ರ - ಶಾಸನಶಾಸ್ತ್ರ :

ಕನ್ನಡ ಅಭ್ಯಾಸ ನವೀಕರಣಗೊಳ್ಳಬೇಕೆಂಬ ಅದಮ್ಯ ಉತ್ಸಾಹ ಕಾರಣವಾಗಿ ಮೇಲೆ ಹೇಳಿದ ಶಾಖೆಗಳ ತರುವಾಯ, ಡಾ. ಹಿರೇಮಠರು ಕನ್ನಡದಲ್ಲಿ ರೂಢಿಸಿದ ಇನ್ನೆರಡು ಶಾಖೆಗಳೆಂದರೆ ಗ್ರಂಥಸಂಪಾದನ ಶಾಸ್ತ್ರ ಮತ್ತು ಶಾಸನಶಾಸ್ತ್ರ. ಒಂದು ದೇಶದ ಮನಸ್ಸು ತನ್ನನ್ನು ಪ್ರಕಟಪಡಿಸಿಕೊಳ್ಳುವ ಪ್ರಮುಖ ಮಾಧ್ಯಮಗಳೆಂದರೆ ಶಾಸನ ಮತ್ತು ಸಾಹಿತ್ಯ. ಜೀವನದ ಗತಿಯನ್ನು ಶಾಸನಗಳು ದಾಖಲಾತ್ಮಕವಾಗಿ ವ್ಯಕ್ತಪಡಿಸಿದರೆ ಸಾಹಿತ್ಯವು ಕಲಾತ್ಮಕವಾಗಿ ವ್ಯಕ್ತಪಡಿಸುತ್ತದೆ. ಇವುಗಳ ಪ್ರಕಟನೆ, ಅಧ್ಯಯನ ನಡೆಯದಿದ್ದರೆ ಕನ್ನಡ ಪರಂಪರೆಯ ತಿಳುವಳಿಕೆ ಅಕ್ಷರಮಟ್ಟಿಗೆ ಅಪೂರ್ಣವೇ ಸರಿ. ಆದುದರಿಂದ ಇವುಗಳ ಪರಿಜ್ಞಾನ, ಪರಿಣತಿ ವಿದ್ಯಾರ್ಥಿಗಳಿಗೆ ಅವಶ್ಯವೆಂದು ಭಾವಿಸಿ, ಕನ್ನಡ ಅಭ್ಯಾಸಪತ್ರಿಕೆಯಲ್ಲಿ ಈ ವಿಷಯಗಳನ್ನು ಆಳವಡಿಸಿದ ಫಲವಾಗಿ ಉತ್ತರ ಕರ್ನಾಟಕದಲ್ಲಿ 'ಸಾಂಸ್ಕೃತಿಕ ಅಧ್ಯಯನ'ದ ಹೊಸ ಹೊಸ ದಾರಿಗಳು ತೆರೆದುಕೊಳ್ಳಹತ್ತಿದವು. ಈ ಕ್ಷೇತ್ರಗಳಿಗೆ ಸಂಬಂಧಪಟ್ಟ

ಶಾಸ್ತ್ರಗ್ರಂಥಗಳ ರಚನೆ, ಪ್ರಾಚೀನ ಕೃತಿಗಳ ಪ್ರಕಟನೆ, ಶಾಸನಸೂಚಿ ಸಂಪುಟಗಳ ಸಿದ್ಧತೆ ನಡೆದು, ಕನ್ನಡ ವಿಭಾಗದ ವಿದ್ವತ್ತಿನ ತಳಹದಿ ವಿಸ್ತಾರವಾಯಿತು.

ಜಾನಪದ ಅಧ್ಯಯನ :

ಶಿಷ್ಟಪದ ಜೀವನ - ಶಿಷ್ಟಪದ ಸಾಹಿತ್ಯಗಳಷ್ಟೇ ಮುಖ್ಯವಾದುದು ಜಾನಪದ ಜೀವನ - ಜಾನಪದ ಸಾಹಿತ್ಯಗಳು. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಇದರ ಅಧ್ಯಯನ ಒಂದು ಶೈಕ್ಷಣಿಕ ಶಿಸ್ತಾಗಿ ಬೆಳೆದುಬರುತ್ತಿರುವಾಗ, ಕನ್ನಡ ವಿಭಾಗ ಈ ವಿಷಯದಲ್ಲಿ ಹಿಂದೆ ಬೀಳಬಾರದೆಂದು 'ಜನಪದಸಾಹಿತ್ಯ'ವನ್ನು ಐಚ್ಛಿಕ ವಿಷಯವನ್ನಾಗಿ ಪ್ರಾರಂಭಿಸಿದ ಡಾ.ಹಿರೇಮಠರು, ೧೯೭೩ರಲ್ಲಿ ಸ್ನಾತಕೋತ್ತರ ಕೋರ್ಸನ್ನೇ ಪ್ರಾರಂಭಿಸಿದರು. ವಿಶ್ವವಿದ್ಯಾಲಯದ ಮುಖಪತ್ರಿಕೆಯಾದ 'ಕರ್ನಾಟಕ ಭಾರತಿ'ಗೆ ಐದು ವರ್ಷ ತುಂಬಿದ ನೆನಪಿಗಾಗಿ 'ಜಾನಪದ ವಿಶೇಷ ಸಂಚಿಕೆ' ಪ್ರಕಟಿಸಲು ಹೋಗಿ, 'ಜಾನಪದ ಸಮ್ಮೇಲನ'ವನ್ನೇ ೧೯೭೩ರಲ್ಲಿ ಪ್ರಾರಂಭಿಸಿದರು. ಇದು ಇಂದಿನ ವರೆಗೆ ಒಂದು ಉತ್ತಮ ಉಪಕ್ರಮ ರೂಪದಲ್ಲಿ ಪ್ರತಿವರ್ಷ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಜರುಗುತ್ತಲಿದೆ. ವಿಚಾರಸಂಕಿರಣ, ಜಾನಪದ ಕಲಾಪ್ರದರ್ಶನಗಳನ್ನೊಳಗೊಂಡ ಈ ಸಮ್ಮೇಲನದಲ್ಲಿ ಮಂಡಿಸಲಾದ ಪ್ರಬಂಧಗಳು 'ಜಾನಪದ ಸಾಹಿತ್ಯದರ್ಶನ' ಹೆಸರಿನಿಂದ ಪ್ರಕಟವಾಗುತ್ತಿದ್ದು, ಈ ಗ್ರಂಥಗಳು ಜಾನಪದಲೋಕಕ್ಕೆ ಅಪೂರ್ವ ಸಾಮಗ್ರಿಯನ್ನು ಒದಗಿಸುತ್ತಲಿವೆ. ಅಖಿಲಭಾರತದಲ್ಲಿಯೇ ಪ್ರತಿವರ್ಷ ತಪ್ಪದೇ ನಡೆಸುತ್ತ ಬರಲಾಗುವ ಏಕೈಕ ಜಾನಪದ ಸಮ್ಮೇಲನವೆಂಬ ಕೀರ್ತಿ ಈ ಸಮಾವೇಶಕ್ಕಿದೆ.

ಪಿಎಚ್.ಡಿ. ಮಾರ್ಗದರ್ಶನ - ಇತರ ಕೋರ್ಸುಗಳು :

ಕನ್ನಡ, ಭಾಷಾಶಾಸ್ತ್ರ, ಜಾನಪದಗಳಲ್ಲಿ ಸ್ನಾತಕೋತ್ತರ ವರ್ಗಗಳು ಮೈತುಂಬಿಕೊಂಡು ಬೆಳೆಯುತ್ತಲಿರುವಾಗ ಪಿಎಚ್.ಡಿ. ಅಧ್ಯಯನದ ಮಾರ್ಗದರ್ಶನವೂ ಇಲ್ಲಿ ಸಮಸಮವಾಗಿ ಮುನ್ನಡೆಯಿತು. ಸಾಲದುದಕ್ಕೆ ಭಾಷಾಂತರ, ಭಾಷಾಶಾಸ್ತ್ರ, ತಮಿಳು, ತತ್ವಜ್ಞಾನ ಡಿಪ್ಲೋಮಾ ಕೋರ್ಸುಗಳನ್ನೂ, ಕನ್ನಡೇತರ ಪದವೀಧರರಿಗಾಗಿ ಬಿ. ಲಿಟ್. ಎಂ. ಲಿಟ್. ಕೋರ್ಸುಗಳನ್ನೂ, ಕನ್ನಡೇತರರಿಗಾಗಿ ಕನ್ನಡ ಸರ್ಟಿಫಿಕೇಟ ಕೋರ್ಸ್‌ನ್ನೂ ತೆರೆದು ವಿಭಾಗಕ್ಕೆ ವೈವಿಧ್ಯಶೋಭೆ ಒದಗಿಸಿದರು. ಇವರ ಮಾರ್ಗದರ್ಶನದಲ್ಲಿ ಡಾ. ರಾಯ. ಧಾರವಾಡಕರ, ಡಾ. ಬಿ. ಬಿ. ಹೆಂಡಿ ಮೊದಲಾದ ವಿದ್ವಾಂಸರು ಪಿಎಚ್.ಡಿ. ಪದವಿ ಪಡೆದರು. ಇಂದು ಇವರ ಶಿಷ್ಯರು-ಪ್ರಶಿಷ್ಯರು ಇಂಥ ಮಾರ್ಗದರ್ಶನವನ್ನು ಶಾಖೋಪಶಾಖೆಗಳಲ್ಲಿ ಮುನ್ನಡೆಸುತ್ತಲಿದ್ದಾರೆ.

ಬಸವೇಶ್ವರಪೀಠ :

ಸಾರ್ವಜನಿಕರ ನೆರವಿನಿಂದ 'ಬಸವೇಶ್ವರ ಪೀಠ'ವನ್ನು ಪ್ರಾರಂಭಿಸಿದುದು, ಡಾ. ಹಿರೇಮಠರು ಯಾವ ಯಾವ ದಿಕ್ಕುಗಳಲ್ಲಿ ಕನ್ನಡದ ಬೆಳವಣಿಗೆಗಾಗಿ ಯೋಚಿಸುತ್ತಿದ್ದರೆಂಬುದಕ್ಕೆ ನಿದರ್ಶನವಾಗಿದೆ. ಬೆಳಗಾವಿ ಜಿಲ್ಲೆಯ ಮುರುಗೋಡ ಮಠದ ಪೂಜ್ಯ ಶ್ರೀ ಮಹಾಂತಸ್ವಾಮಿಗಳ ಶತಮಾನೋತ್ಸವಕ್ಕೆ ಸಂಗ್ರಹಿಸಿದ ಅಪಾರ ಹಣವನ್ನು ಉತ್ಸವಕ್ಕೆ ಮಾತ್ರ ವ್ಯಯಮಾಡದೆ, ಅದರಿಂದ ಮೂರು ಲಕ್ಷ ರೂಪಾಯಿಗಳನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕೊಟ್ಟು, 'ಬಸವೇಶ್ವರಪೀಠ' ಸ್ಥಾಪಿಸಲು ಉತ್ಸವ ಸಮಿತಿಯ ಮನ ಒಲಿಸಿದರು. ಆದರೆ ಎಲ್ಲ ಹಣ ಉತ್ಸವಕ್ಕೆ ಕರಗಿ, ಒಂದು ಲಕ್ಷ ಐವತ್ತು ಸಾವಿರ ಮಾತ್ರ ಉಳಿದಾಗ, ಡಾ. ಹಿರೇಮಠರೇ ಮುಂದಾಗಿ ಮತ್ತೆ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ, ೧೯೭೨ ರಲ್ಲಿ ಈ ಪೀಠವನ್ನು

ವಿಶ್ವವಿದ್ಯಾಲಯದ ಕನ್ನಡ ಭಾಗದಲ್ಲಿ ಅಸ್ತಿತ್ವಕ್ಕೆ ತಂದರು. ಮುಂದೆ ಡಾ. ಎಂ. ಎಂ. ಕಲಬುರ್ಗಿಯವರ ನೇತೃತ್ವದಲ್ಲಿ ಅದು ಬಸವೇಶ್ವರ ಅಧ್ಯಯನ ಡಿಪ್ಲೊಮಾ, ವೀರಶೈವ ಗ್ರಂಥಾಲಯ, ವಿಶೇಷ ಪ್ರಜಾರೋಪನ್ಯಾಸ, ಗ್ರಂಥಪ್ರಕಟನೆ - ಭಾಷಾಂತರಗಳೆಂಬ ನಾಲ್ಕು ನಿಟ್ಟುಗಳಲ್ಲಿ ಬೆಳೆದು, ನಮ್ಮ ನಾಡಿನ ಇಂಥ ಪೀಠಗಳಲ್ಲಿಯೇ ಎದ್ದು ಕಾಣುವಂತೆ ಶೈಕ್ಷಣಿಕ ಶಿಸ್ತು ಪಡೆಯಿತು.

ಸಂಸ್ಕೃತ-ತಮಿಳು-ಹಿಂದಿ ಅಭ್ಯಾಸ :

ಕನ್ನಡವನ್ನು ಸಂಲಗ್ನ ಭಾಷೆಗಳಿಂದ ಸಶಕ್ತಗೊಳಿಸುವುದು ಡಾ. ಹಿರೇಮಠ ಅವರಿಗೆ ಮೊದಲಿನಿಂದಲೂ ಇದ್ದ ದೃಷ್ಟಿ. ಆದುದರಿಂದ ಮಾರ್ಗೀಯ ಕನ್ನಡವನ್ನು ಸಂಸ್ಕೃತದ ಮೂಲಕ, ದೇಶೀಯ ಕನ್ನಡವನ್ನು ತಮಿಳಿನ ಮೂಲಕ, ಆಧುನಿಕ ಕನ್ನಡವನ್ನು ರಾಷ್ಟ್ರಭಾಷೆಯಾದ ಹಿಂದಿಯ ಮೂಲಕ ಸತ್ವಶಾಲಿಗೊಳಿಸಲು ಅನೇಕ ಉಪಕ್ರಮಗಳನ್ನು ಕೈಗೆತ್ತಿಕೊಂಡರು. ಸಂಸ್ಕೃತ ಅಧ್ಯಾಪಕರನ್ನು ನೇಮಿಸಿಕೊಂಡು ಸಂಸ್ಕೃತ ಬಸವಪುರಾಣದ ಪರಿಷ್ಕರಣ-ಪ್ರಕಟನಯೋಜನೆಯನ್ನೂ, ಹಿಂದಿ ಸಹಾಯಕ ಸಂಶೋಧಕರನ್ನು ನೇಮಿಸಿಕೊಂಡು ವಚನಸಾಹಿತ್ಯ, ಶೂನ್ಯಸಂಪಾದನೆಗಳ ಅನುವಾದ ಕೆಲಸವನ್ನೂ ಮಾಡಿಸಿದರು. ತಮಿಳು ಸರಕಾರದ ನೆರವಿನಿಂದ ಒಂದು ರೀಡರ್ ಹುದ್ದೆ ಪಡೆದು, ತಮಿಳು ಡಿಪ್ಲೊಮಾ-ಸರ್ಟಿಫಿಕೇಟ್ ಕೋರ್ಸು ಮತ್ತು ತೌಲನಿಕ ಅಧ್ಯಯನಗಳಿಗೆ ಶ್ರೀಕಾರ ಹಾಕಿದರು.

ಮುಂಬೈಯಲ್ಲಿ ಕನ್ನಡ ವಿಭಾಗ :

ಕನ್ನಡವನ್ನು ಒಳಗೆ ಬೆಳೆಸುವಂತೆ ಹೊರಗೆ ವಿಸ್ತರಿಸುವ ವಿಷಯವಾಗಿಯೂ ಡಾ. ಹಿರೇಮಠರು ಅಹರ್ನಿಶಿ ದುಡಿದರು. ಮುಂಬಯಿ ನಮ್ಮ ರಾಷ್ಟ್ರದ ಮುಖ್ಯಪಟ್ಟಣ. ಅಲ್ಲಿ ಕನ್ನಡಿಗರ ಸಂಖ್ಯೆಯೂ ಅಧಿಕ. ಆದುದರಿಂದ ಅಲ್ಲಿ ಕನ್ನಡ ವಿಭಾಗದ ಆವಶ್ಯಕತೆಯ ಕನಸುಕಂಡು, ಮಹಾರಾಷ್ಟ್ರ ಸರಕಾರದೊಂದಿಗೆ ಸಮಾಲೋಚಿಸಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮರಾಠಿ ವಿಭಾಗ ಪ್ರಾರಂಭಿಸುವ ಕರಾರಿ ಮೇಲೆ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗ ಪ್ರಾರಂಭವಾಗುವಂತೆ ಮಾಡಿದರು. ಇದರ ಫಲವಾಗಿ ಅಲ್ಲಿಯ ಕನ್ನಡ ವಿಭಾಗ ಬೋಧನ, ಸಂಶೋಧನ, ಪ್ರಕಟನ ಕಾರ್ಯಗಳಿಗಾಗಿ ಕನ್ನಡಿಗರ ಸೂಕ್ತವೇದಿಕೆಯಾಗಿ ಬೆಳೆಯುತ್ತಲಿದೆ.

ವಚನಸಾಹಿತ್ಯ ಪ್ರಕಟನ ಯೋಜನೆ :

ಡಾ. ಹಿರೇಮಠರ ದುಡಿಮೆಯೂ ಅಪಾರ, ವಿದ್ವತ್ತಿನ ಮುಖಗಳೂ ಅನೇಕ. ಪುಣೆಯ ಭಂಡಾರಕರ ರೀಸರ್ಚ್ ಇನ್‌ಸ್ಟಿಟ್ಯೂಟ್ ಕೈಗೆತ್ತಿಕೊಂಡಿದ್ದ ವ್ಯಾಸ ಭಾರತದ ಪರಿಷ್ಕರಣ ಮಹಾಯೋಜನೆಯಿಂದ ಆಕರ್ಷಿತರಾದ ಇವರು, ಅದೇ ಮಾದರಿಯಲ್ಲಿ ಕನ್ನಡದ ಅಪೂರ್ವಸಂಪತ್ತು ಎನಿಸಿದ ವಚನ ವಾಙ್ಮಯವನ್ನು ಸಂಗ್ರಹಿಸಿ, ಪರಿಷ್ಕರಿಸಿ, ಪ್ರಕಟಿಸುವ ಯೋಜನೆಯನ್ನು ೧೯೬೨ ರಲ್ಲಿ ಕೈಗೆತ್ತಿಕೊಂಡರು. ಕೆಲವೇ ವರ್ಷಗಳಲ್ಲಿ ಬಸವ, ಚನ್ನಬಸವ, ಸಿದ್ಧರಾಮ, ಪ್ರಭುದೇವ, ಶಿವಶರಣೆಯರ ವಚನಗಳ ಬೃಹತ್ ಸಂಪುಟಗಳನ್ನೂ, ಶೂನ್ಯಸಂಪಾದನೆಯಂಥ ಇಪ್ಪತ್ತೈದು ಮಹತ್ವಪೂರ್ಣ ಪ್ರಾಚೀನ ವಚನಕೃತಿಗಳನ್ನೂ ಬೆಳಕಿಗೆ ತರುವ ಮೂಲಕ ವಚನಸಾಹಿತ್ಯದ ಪ್ರಕಟನೆಯ ಇತಿಹಾಸದಲ್ಲಿ ಡಾ. ಹಳಕಟ್ಟಿಯವರ ತರುವಾಯ ಎರಡನೆಯ ಘಟ್ಟವನ್ನು ತೆರೆದರು. ಬಹುಶಃ ದೊಡ್ಡ ವ್ಯಕ್ತಿಯ ಜನನದ ಹಿಂದೆ ಒಂದು ದೊಡ್ಡ ಉದ್ದೇಶವಿರುವುದಾದರೆ ಡಾ. ಹಿರೇಮಠರ ಜನನದ ಹಿಂದೆ ಇದ್ದ ಅಂಥ ಒಂದು ದೊಡ್ಡ ಉದ್ದೇಶ 'ವಚನಸಾಹಿತ್ಯ ಪ್ರಕಟನೆ'ಯಾಗಿದೆ.

ಪಠ್ಯಪುಸ್ತಕ ನಿರ್ದೇಶನಾಲಯ - ಗ್ರಂಥಪ್ರಕಟನೆ :

ಭಾರತದ ಶಕ್ತಿ-ಸೌಂದರ್ಯಗಳಿರುವುದು ಅದರ ವೈವಿಧ್ಯತೆಯಲ್ಲಿ. ಈ ವೈವಿಧ್ಯತೆಯ ಧ್ವನಿರೂಪಗಳು ಇಲ್ಲಿಯ ಪ್ರಾಂತಭಾಷೆಗಳಾಗಿವೆ. ಈ ಎಲ್ಲ ಭಾಷೆಗಳಲ್ಲಿಯೂ ಜಗತ್ತಿನ ಸಕಲ ಜ್ಞಾನಕೃತಿಗಳು ಹುಟ್ಟಿಕೊಳ್ಳಬೇಕೆಂಬ ಕನಸು ನಮ್ಮ ರಾಷ್ಟ್ರದಲ್ಲಿ ಉದಯವಾಗುತ್ತಲೇ ಡಾ. ಹಿರೇಮಠರು 'ಕನ್ನಡ ಪಠ್ಯಪುಸ್ತಕ ನಿರ್ದೇಶನಾಲಯ'ಕ್ಕೂ ವಾತಾವರಣವನ್ನು ಸಜ್ಜುಗೊಳಿಸಿದರು. ಪ್ರೊ. ಸ. ಸ. ಮಾಳವಾಡ ಅವರು ನಿರ್ದೇಶಕರಾಗುವುದರೊಂದಿಗೆ ಪ್ರಾರಂಭವಾದ ಈ ಶಾಖೆ ಡಾ. ಎಸ್. ಎಮ್. ವೃಷಭೇಂದ್ರ ಸ್ವಾಮಿಗಳವರ ಅವಧಿಯಲ್ಲಿ ಇನ್ನೂ ವಿಸ್ತಾರಗೊಂಡಿತು. ಅನೇಕ ವಿದ್ವಾಂಸರಿಂದ, ಅನೇಕ ವಿಷಯಗಳಲ್ಲಿ, ಅನೇಕ ನೂರು ಪುಸ್ತಕಗಳು ಪ್ರಕಟವಾಗಿ ಕನ್ನಡದ ಪಠ್ಯಪುಸ್ತಕಕ್ಷೇತ್ರ ಸಶಕ್ತವಾಯಿತು.

ಪಠ್ಯಪುಸ್ತಕಗಳ ಕೊರತೆಯನ್ನು ಪೂರೈಸುವುದರೊಂದಿಗೆ ವಿದ್ವತ್‌ಗ್ರಂಥಗಳ ಕೊರತೆಯನ್ನೂ ನಿವಾರಿಸುವ ಉದ್ದೇಶದಿಂದ ಅನ್ಯಭಾಷೆಯ ಉತ್ತಮೋತ್ತಮ ಗ್ರಂಥಗಳನ್ನು ಕನ್ನಡಕ್ಕೆ ತರಲಾಯಿತು. ಶೂನ್ಯಸಂಪಾದನೆಯಂಥ ಕನ್ನಡ ಮಹಾಕೃತಿ ಅನೇಕ ಸಂಪುಟಗಳಲ್ಲಿ ಇಂಗ್ಲೀಷ್ ಭಾಷೆಗೆ ಅನುವಾದಗೊಂಡುದು ಎತ್ತಿ ಹೇಳಬೇಕಾದ ಸಾಧನೆಯಾಗಿದೆ. ಇದರ ಜೊತೆಗೆ ಪ್ರಸಾರಾಂಗ ಪ್ರಕಟಿಸುವ ಎಲ್ಲ ವಿದ್ವತ್ ಗ್ರಂಥಗಳನ್ನು ಸಿದ್ಧಪಡಿಸಿಕೊಡುವ ಶಾಶ್ವತವ್ಯವಸ್ಥೆ ಕನ್ನಡ ವಿಭಾಗದಲ್ಲಿ ನಡೆಯಿತು. 'ಕರ್ನಾಟಕ ಭಾರತಿ, ಮಾನವಿಕ ಭಾರತಿ, ವಿಜ್ಞಾನ ಭಾರತಿ, ವಿದ್ಯಾರ್ಥಿ ಭಾರತಿ' ಪತ್ರಿಕೆಗಳೆಲ್ಲ ಡಾ. ಹಿರೇಮಠರ ಅವಧಿಯಲ್ಲಿಯೇ ಕನ್ನಡ ವಿಭಾಗದಲ್ಲಿ ಕಣ್ಣು ತೆರೆದು ಬೆಳೆದವು.

ಗ್ರಂಥಾಲಯ-ಹಸ್ತಪ್ರತಿ ಭಾಂಡಾರ :

ವಿದ್ಯಾರ್ಥಿಗಳ, ವಿದ್ವಾಂಸರ ಉಪಯೋಗಕ್ಕೆ ಒಂದು ಸುಸಜ್ಜಿತ ಗ್ರಂಥಾಲಯವನ್ನು ಕನ್ನಡ ವಿಭಾಗದಲ್ಲಿ ಸ್ಥಾಪಿಸುವ ಯೋಜನೆ ಡಾ. ಹಿರೇಮಠರದಾಗಿದ್ದಿತು. ಅವರ ಕನಸು ಡಾ. ಸುಂಕಾಪುರ ಅವರ ಕಾಲದಲ್ಲಿ ಮೂರ್ತರೂಪ ಪಡೆದು, ಡಾ. ಕಲಬುರ್ಗಿಯವರ ಕಾಲದಲ್ಲಿ ಸರ್ವಸಮರ್ಪಕವಾಗಿ ಬೆಳೆದು, ಅದು ಇಂದು ಈ ವಿಭಾಗದ ಅಪೂರ್ವ ಆಸ್ತಿಯಾಗಿ ಪರಿಣಮಿಸಿದೆ.

ಕನ್ನಡ ವಿಭಾಗ ಇಷ್ಟು ಬಗೆಯ ಬೋಧನ ಸಂಶೋಧನ ಮುಖಗಳಲ್ಲಿ ಬೆಳೆದು ಆಧುನಿಕವಾಗಿ ಮುನ್ನಡೆಯುತ್ತಿರುವಾಗ ಡಾ. ಹಿರೇಮಠರು ಪ್ರಾರಂಭಿಸಿದ ಒಂದು ಮುಖ್ಯ ಶಾಖೆಯೆಂದರೆ ಹಸ್ತಪ್ರತಿ ಭಂಡಾರ. ೧೯೬೨ರಲ್ಲಿ ವಚನವಾಙ್ಮಯ ಪ್ರಕಟನ ಯೋಜನೆಯೊಂದಿಗೆ ಅಸ್ತಿತ್ವಕ್ಕೆ ಬಂದ ಈ ಭಂಡಾರ, ಕೆಲವೇ ವರ್ಷಗಳಲ್ಲಿ ೪೦೦೦ ಹಸ್ತಪ್ರತಿಗಳನ್ನು ಸಂಗ್ರಹಿಸಿತು. ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಹಸ್ತಪ್ರತಿಗಳು ಇಷ್ಟು ಪ್ರಮಾಣದಲ್ಲಿ ಒಂದೆಡೆ ಸಿಗುವ ಏಕೈಕ ಕೇಂದ್ರವಾಗಿ ಇದು ಬೆಳೆಯಿತು. ಡಾ. ಕಲಬುರ್ಗಿಯವರ ಅವಧಿಯಲ್ಲಿ ಈ ಹಸ್ತಪ್ರತಿಗಳ ವಿರಣಾತ್ಮಕಗಳ ಸೂಚಿಗಳೂ ಸಿದ್ಧವಾಗಿ ಪ್ರಕಟವಾಗುತ್ತ ನಡೆದವು.

ಭಾಷಾ ಪ್ರಯೋಗಶಾಲೆ - ಪ್ರದರ್ಶನಾಲಯ :

ಡಾ. ಹಿರೇಮಠರ ಪ್ರಥಮ ಆಸಕ್ತಿಗಳಲ್ಲಿ ಭಾಷಾಭ್ಯಾಸವೂ ಒಂದು. ಅದರ ಏಳಿಗೆಗಾಗಿ ಏನೆಲ್ಲ ಮಾಡಲು ಅವರು ಸಿದ್ಧರು. ಬೋಧನ, ಸಂಶೋಧನ, ಪ್ರಕಟನಗಳಲ್ಲಿ ಈ ಶಾಖೆಯನ್ನು ಬೆಳೆಸಿದ ಅವರು, ಪ್ರಾಯೋಗಿಕ ಕಲಿಕೆಗಾಗಿ ಭಾಷಾಪ್ರಯೋಗಶಾಲೆಯ ಯಂತ್ರೋಪಕರಣಗಳನ್ನು ಖರೀದಿಸಿದರು. ಇತ್ತೀಚೆ ಅದರ ಸ್ಥಾಪನಕಾರ್ಯ ನಡೆದು ವಿದ್ಯಾರ್ಥಿಗಳ ಪ್ರಾಯೋಗಿಕ ಅಧ್ಯಯನಕ್ಕೆ ಅನುಕೂಲವಾಗಿದೆ. ಇಲ್ಲಿಯ

ಭಾಷಾವಿಜ್ಞಾನದ ಬೆಳವಣಿಗೆ, ಭಾಷಾ ಪ್ರಯೋಗಶಾಲೆಯ ಪ್ರಾರಂಭ ಈ ಎರಡು ಕೆಲಸಗಳನ್ನು ನೆನೆಯುವಾಗ ಡಾ. ಜೆ. ಎಸ್. ಕುಳ್ಳಿಯವರು ನೆನಪಾಗುತ್ತಾರೆ.

ಇದರ ಜೊತೆಗೆ ಇನ್ನೂ ಉಪಯುಕ್ತ ಪ್ರದರ್ಶನಾಲಯಗಳನ್ನು ಪ್ರಾರಂಭಿಸುವ ಹಂಬಲ ಅವರದಾಗಿದ್ದಿತು. ನಮ್ಮ ಗ್ರಾಮೀಣ ಜನತೆಯ ಉಪಕರಣಗಳನ್ನು ಸಂಗ್ರಹಿಸಿ 'ಜಾನಪದ ಸಂಗ್ರಹಾಲಯ'ವನ್ನು, ಕನ್ನಡ ಗಣ್ಯವಕ್ತಿಗಳ ಭಾವಚಿತ್ರ, ಹಸ್ತಪ್ರತಿ, ಧ್ವನಿಮುದ್ರಿಕೆ ಇತ್ಯಾದಿಗಳನ್ನು ಸಂಗ್ರಹಿಸಿ 'ಸ್ಮರಣಸಂಸ್ಥೆ'ಯನ್ನೂ ಸ್ಥಾಪಿಸಬೇಕೆಂಬ ಅವರ ಕನಸುಗಳು ಮುಂದಿನ ಕಾಲದಲ್ಲಿ ಒಂದಿಷ್ಟು ಆಕಾರ ಪಡೆದರೂ, ಅವು ಸಮಗ್ರರೂಪ ತಾಳಬೇಕಾಗಿದೆ.

ಉಪನ್ಯಾಸ ಮಾಲೆಗಳು :

ಕನ್ನಡ ವಿಭಾಗದಲ್ಲಿ ಸಾಹಿತ್ಯಿಕ ವಾತಾವರಣ ಭೋರ್ಗರೆಯುತ್ತಿರಬೇಕು ಎಂಬ ಆಸೆ-ಆದರ್ಶಗಳನ್ನು ಹೊತ್ತ ಡಾ. ಹಿರೇಮಠರು ವಿದ್ವಾಂಸರ ಆಗಮನ, ಸಂದರ್ಶನ, ವಿಶೇಷೋಪನ್ಯಾಸ, ವಿಚಾರಸಂಕಿರಣ ಇತ್ಯಾದಿಗಳ ಮೂಲಕ ಸಂಸ್ಥೆಯನ್ನು ಸಶಬ್ದ ಕೇಂದ್ರವನ್ನಾಗಿ ಬೆಳೆಸಲು ಯೋಚಿಸಿದರು. ಈ ಯೋಚನೆಯ ಫಲವಾಗಿ ಮೊದಲು ಮೂಡಿಬಂದುದು 'ಶ್ರೀ ಮೃತ್ಯುಂಜಯ ಉಪನ್ಯಾಸಮಾಲೆ'. ವೀರಶೈವ ಸಾಹಿತ್ಯ, ತತ್ವ, ಚರಿತ್ರೆಗಳ ಅಧ್ಯಯನಕ್ಕೆ ಇದು ಮೀಸಲು. "ಅಖಿಲಭಾರತ ಪ್ರಾಚ್ಯವಿದ್ಯಾ ಸಮ್ಮೇಲನ ಸ್ಮಾರಕ ಉಪನ್ಯಾಸಮಾಲೆ" ಅಸ್ತಿತ್ವಕ್ಕೆ ಬರಲು ಕಾರಣರಾದವರೂ ಡಾ. ಹಿರೇಮಠರೇ. ಈ ಮಾದರಿಯಲ್ಲಿ ಇಂದು ಎಸ್. ಎಸ್. ಮಾಳವಾಡ ಸಾಹಿತ್ಯ ಪ್ರಶಸ್ತಿ, ಡಾ. ಆರ್. ಸಿ. ಹಿರೇಮಠ ವ್ಯಾಖ್ಯಾನಮಾಲೆಗಳು ಆರಂಭಗೊಂಡಿವೆ. ಸಾಲದುದಕ್ಕೆ ಪ್ರತಿವರ್ಷ ಕರ್ನಾಟಕ ಸಂಘದ ಮೂಲಕ ವರ್ಷದುದ್ದಕ್ಕೂ ವಿಶೇಷ ಉಪನ್ಯಾಸಗಳೂ ವಿದ್ಯಾರ್ಥಿ ಚಟುವಟಿಕೆಗಳೂ ಇಲ್ಲಿ ವಿಸ್ತಾರಗೊಳ್ಳುತ್ತ ನಡೆದಿವೆ.

ಕನ್ನಡ ಅಧ್ಯಯನಪೀಠ :

ಸಂಕ್ಷಿಪ್ತ ವಿಶ್ವವಿದ್ಯಾಲಯದಂತೆ ಹತ್ತೂ ಮುಖಗಳಲ್ಲಿ ಬೆಳೆದ ಕನ್ನಡ ವಿಭಾಗ, ಸಂಸ್ಥೆಯಾಗಿ ರೂಪಗೊಳ್ಳುವುದು ಅನಿವಾರ್ಯವಾಯಿತು. ೧೯೭೨ರಲ್ಲಿ ಡಾ. ಹಿರೇಮಠರು ಆ ಕೆಲಸವನ್ನೂ ಪೂರೈಸಿದರು. ಮುಂದೆ ಸ್ಥಳಾವಕಾಶ ಸಾಲದೆ ಹೋಗಿ, ಕನ್ನಡದ ಚಟುವಟಿಕೆಗಳಿಗೆ ಒಂದು ವಿಶಾಲವಾದ ಸ್ವತಂತ್ರ ಕಟ್ಟಡ ಅಗತ್ಯವೆನಿಸಿತು. ಡಾ. ಹಿರೇಮಠರು ಕುಲಪತಿಯಾದ ಅವಧಿಯಲ್ಲಿ ವಿಶ್ವವಿದ್ಯಾಲಯ ಆವರಣದ ಹೃದಯಸ್ಥಾನದಲ್ಲಿ 'ಕನ್ನಡ ಅಧ್ಯಯನ ಪೀಠ' ಹೆಸರಿನ ಸ್ವತಂತ್ರ ಕಟ್ಟಡ ತಲೆಯೆತ್ತಿತು. ಕನ್ನಡದ ಬೆಳವಣಿಗೆಗೆ ಏನೇನು ಬೇಕೋ ಆ ಎಲ್ಲ ಆವಶ್ಯಕತೆಗಳಿಗೆ ಸೂಕ್ತ ಅವಕಾಶಗಳನ್ನು ಕಲ್ಪಿಸಿಕೊಡುವುದರ ಮೂಲಕ ಕನ್ನಡದ ಈ ಕಟ್ಟಡ ಜೇನುಗೂಡಿನಂತೆ ತುಂಬಿಕೊಂಡು ಬೆಳೆಯಿತು.

ತಮ್ಮ ವೈಯಕ್ತಿಕ ಸುಖಗಳನ್ನೂ ಬದಿಗೊತ್ತಿ, ಹೆಸರಿಗೆ ತಕ್ಕಂತೆ ಡಾ. ಹಿರೇಮಠರು ಕನ್ನಡದಲ್ಲಿ ಹಿರಿಯ ಪಥಗಳನ್ನೇ ರೂಪಿಸಿದರು, ವಿಸ್ತರಿಸಿದರು, ಉತ್ತರಕರ್ನಾಟಕದಲ್ಲಿ ಕನ್ನಡದ ಉನ್ನತ ಶಿಕ್ಷಣಪರಂಪರೆಯ ನಿರ್ಮಾಪಕರಾದರು.

ಸಂಯುಕ್ತ ಕರ್ನಾಟಕ ದಿನಪತ್ರಿಕೆ, (ಡಾ. ಆರ್.ಸಿ.ಹಿರೇಮಠರ ಸಾಹಿತ್ಯ ಸಮ್ಮೇಲನ, ಅಧ್ಯಕ್ಷತೆ ಸಂದರ್ಭ), ೧೯೯೦.

ಆಕರ : ಮಾರ್ಗ ಸಂಪುಟ–೬

೮೧

ವೈವಿಧ್ಯಮಯ ಬಾಳು

೧೯೯೦

೧೯೭೦. ಕನ್ನಡ ಅಧ್ಯಯನಪೀಠದ ಸ್ನಾತಕೋತ್ತರ ಕನ್ನಡ ವರ್ಗಕ್ಕೆ ವಿದ್ಯಾರ್ಥಿಗಳ ಪ್ರವೇಶದ ಮಹಾಪೂರ. ವಿದ್ಯಾರ್ಥಿಗಳ ಸಂಖ್ಯೆ ಗಣ್ಯವಾಗಿದ್ದರೂ ವಿದ್ಯಾರ್ಥಿನಿಯರ ಸಂಖ್ಯೆ ಅಗಣ್ಯವೇನಲ್ಲ.

ಜೂನ ತಿಂಗಳಿನ ಒಂದು ದಿನ. ಆ ವರ್ಷದ ಮೊದಲನೆಯ ಪಿರಿಯೆಡ್. ನಾನು ವರ್ಗಕೋಣೆ ಪ್ರವೇಶಿಸಿದೆ. ಕೋಣೆ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ತುಂಬಿ ಜೀವ ಪಡೆದಿತ್ತು. ನೂರಾರು ಕಣ್ಣುಗಳ ದೃಷ್ಟಿ ನನ್ನ ಮೇಲೆ ಕೇಂದ್ರೀಕೃತ. ಉಪನ್ಯಾಸಕ್ಕೆ ಮೊದಲು ವಿದ್ಯಾರ್ಥಿಸ್ತೋಮದ ಮೇಲೆ ಮಂದವಾಗಿ ದೃಷ್ಟಿಹಾಯಿಸಿದೆ. ವಿದ್ಯಾರ್ಥಿನಿಯರ ಮಧ್ಯೆ ಒಬ್ಬ ಗೃಹಿಣಿ. ನೋಡಿದ ಕ್ಷಣದಲ್ಲಿ ಗೌರವ ಉಕ್ಕಿಸುವ ಮುಖಭಾವ. ಅಂದು ಸೂಜಿಗಲ್ಲಾಗಿ ಎಳೆದ ಈ ವಿವಾಹಿತ ವಿದ್ಯಾರ್ಥಿನಿ ಕ್ರಮೇಣ ಪರಿಚಿತೆಯಾಗಿ, ಆತ್ಮೀಯಳಾಗಿ, ನಮ್ಮ ಪರಿವಾರದ ಒಂದು ಭಾಗವಾದಳು.

ದಿನಗಳು ಉರುಳುತ್ತಲಿದ್ದವು. ವಿದ್ಯಾರ್ಥಿಗಳ ಪರಿಚಯ ಬೆಳೆಯುತ್ತಲಿದ್ದಿತು. ಸಂದೇಹ-ಸಮಸ್ಯೆಗಳ ಚರ್ಚೆಗಾಗಿ ಅವರ ಬರುವಿಕೆ-ಹೋಗುವಿಕೆ. ಒಂದು ದಿನ ನನ್ನ ಛೇಂಬರ್‌ಗೆ ಆ ವಿವಾಹಿತ ವಿದ್ಯಾರ್ಥಿನಿಯ ಪ್ರವೇಶ. "ಮೇ ಆಯ್ ಕಮ್ ಇನ್ ಸರ್?" ಬರೆವಣಿಗೆಯಲ್ಲಿ ತಲ್ಲೀನನಾಗಿದ್ದ ನಾನು ಅನುಮತಿ ಸೂಚಿಸಿ ಮುಖವೆತ್ತಿದೆ. ಗೌರವಮಿಶ್ರಿತ ಭಾವದಿಂದ ಹೇಳಿದೆ "ಪ್ಲೀಜ್, ಟೇಕ್ ಯುವರ್ ಸೀಟ್."

"ಸರ್, ನಾನು ಲೀಲಾವತಿ ತೋರಣಗಟ್ಟಿ, ಬೆಳಗಾಂವ ಲಿಂಗರಾಜ ಕಾಲೇಜಿನ ವಿದ್ಯಾರ್ಥಿನಿ. ಭೈರಪ್ಪನವರ ವಂಶವೃಕ್ಷದ ಬಗ್ಗೆ ನಿಮ್ಮೊಂದಿಗೆ ಚರ್ಚಿಸಬೇಕೆಂದಿದ್ದೇನೆ." ಚರ್ಚೆ ಮುಂದುವರಿಯಿತು. "ಭೈರಪ್ಪನವರ ಪಾತ್ರಗಳು ಮಾತನಾಡುವುದಿಲ್ಲ. ಮನಸ್ಸನ್ನು ತೋಡಿಕೊಳ್ಳುತ್ತವೆ" - ಈ ಸೂತ್ರಶೋಧದೊಂದಿಗೆ ನಮ್ಮ ಚರ್ಚೆ ಮುಗಿಯಿತು. ಆದರೆ ಜೀವನ ಪರ್ಯಂತ ಭೈರಪ್ಪನವರ ಕಾದಂಬರಿಗಳು ಲೀಲಾವತಿಯವರನ್ನು ಕೆಣಕುತ್ತಲೇ ಹೋದವೆಂಬುದನ್ನು ನಾನು ಆ ಮೇಲೆ ಕಂಡುಕೊಂಡಿದ್ದೇನೆ.

ಉತ್ತರ ಕರ್ನಾಟಕದ ಗೌಡತಿಯಂಥ ಗಂಭೀರ ನಿಲವು. ಸ್ಥೂಲಶರೀರ, ಎರಕಹೊಯ್ದು ಮಾಡಿದಂಥ ಮುಖಮುದ್ರೆ. ಹಣೆಗೆ ಒಪ್ಪುವ ಕುಂಕುಮ. ಮನದಲ್ಲಿ ವ್ಯಾಸಂಗಪ್ರಿಯತೆ, ಮಾತಿನಲ್ಲಿ ಆತ್ಮೀಯತೆ- ಇವೆಲ್ಲ ಕಾರಣಗಳಿಂದಾಗಿ ಲೀಲಾವತಿ ನನಗೆ ಇನ್ನೂ ಹತ್ತಿರವಾದರು. ಪರೀಕ್ಷೆ ಮುಗಿದ ಬಳಿಕ ಅವರು ವಿದ್ಯಾರ್ಥಿನಿಯಾಗಿ ಉಳಿಯಲಿಲ್ಲ; ಆತ್ಮೀಯ ಸೋದರಿಯಾಗಿ ಬೆಳೆದರು.

ಆತ್ಮೀಯತೆ, ಅಭ್ಯಾಸದ ಹಸಿವು-ಇವು ಲೀಲಾವತಿಯ ಮುಖ್ಯಗುಣ. ಹೀಗಾಗಿ ಅವರು ಧಾರವಾಡಕ್ಕೆ ಬಂದಾಗಲೆಲ್ಲ ನಮ್ಮ ಮನೆಗೆ ಬರುತ್ತಿದ್ದರು. ಗಂಟೆ ಗಟ್ಟಲೆ ಚರ್ಚಿಸುತ್ತಿದ್ದರು. "ಸರ್, ಭೈರಪ್ಪನವರ ವಂಶವೃಕ್ಷ ಕಾದಂಬರಿಯ ಪ್ರೊ. ಸದಾಶಿವರಾಯ ಅವರಿಗೆ ಅಭ್ಯಾಸವೇ ಪ್ರಾಣ. ಅದನ್ನು ಬಿಟ್ಟರೆ ಜಗತ್ತಿನಲ್ಲಿ ಅವರಿಗೆ ಬೇರೆ ಸುಖಗಳೇ ಕಾಣಿಸುವುದಿಲ್ಲ. ನಿಮ್ಮನ್ನು ನೋಡಿದಾಗಲೆಲ್ಲ ನನಗೆ ಸದಾಶಿವರಾಯರೇ ನೆನಪಾಗುತ್ತಾರೆ" ಎಂದು ಸಲುಗೆಯಿಂದ ಒಮ್ಮೆ ನುಡಿದಿದ್ದರು. "ಹೌದು. ಆ ಸದಾಶಿವರಾಯ ಬೌದ್ಧಿಕ ಸಾಹಚರ್ಯದ ಸೆಳವಿಗೆ ಬಿದ್ದು ಇನ್ನೊಬ್ಬಳನ್ನು ವರಿಸಿದ್ದರು. ನಾನು ಆ ತಪ್ಪು ಮಾಡಲಾರೆ" ಎಂದು ಸಲುಗೆಯಿಂದಲೇ ಹೇಳಿದ್ದೆ.

ಲೀಲಾವತಿಗೆ ಓದುವ ಒಲವು ಬಹಳ. ಎಂ. ಎ. ಮುಗಿದ ಬಳಿಕ ಕಾಲೇಜಿನಲ್ಲಿ ಅಧ್ಯಾಪಿಕೆಯಾಗುವ ತವಕ. ಪಿಎಚ್.ಡಿ. ಅಧ್ಯಯನ ಮುಂದುವರಿಸುವ ಹಂಬಲ, ಲೇಖನ ವ್ಯವಸಾಯ ಕೈಕೊಳ್ಳುವ ಆಸೆ. ಕೆಲವು ತಿಂಗಳು ಎಲ್ಲಿಯೋ ನೌಕರಿ ಮಾಡಿದರು. ಬಹಳದಿನ ನಡೆಯಲಿಲ್ಲ, ಬಹುಜನ ಪ್ರತಿಷ್ಠಿಕರ ಪರಿಚಯವಿದ್ದರೂ ಸೂಕ್ತ ನೌಕರಿ ಸಿಗಲಿಲ್ಲ. ಹೀಗಾಗಿ ಪತಿ ನೌಕರಿ ಮಾಡುತ್ತಲಿದ್ದ ಉತ್ತರ ಭಾರತದಲ್ಲಿ ಕೆಲವು ದಿನ, ಕರ್ನಾಟಕದಲ್ಲಿ ಕೆಲವು ದಿನ ಅವರ ವಾಸ್ತವ್ಯ.

ಕರ್ನಾಟಕದಲ್ಲಿ ಇದ್ದಾಗಲೆಲ್ಲ ಪಿಎಚ್.ಡಿ. ಅಧ್ಯಯನದ ಆಸೆ ಹೊತ್ತು ನನ್ನಲ್ಲಿಗೆ ಓಡಿಬರುತ್ತಿದ್ದರು. ನನಗೆ ಪ್ರಾಚೀನ ಸಾಹಿತ್ಯದ ಆಸಕ್ತಿ ಲೀಲಾವತಿಗೆ ಆಧುನಿಕ ಸಾಹಿತ್ಯದ ಒಲವು. ಹೀಗಾಗಿ ಅವರು ನನ್ನ ಮೇಲೆ ಮುನಿಸುತಾಳಿ ಬೇರೊಬ್ಬರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಅಧ್ಯಯನ ನಡೆಸಿ, ಪ್ರಬಂಧ ಬರೆದು, ವಿಶ್ವವಿದ್ಯಾಲಯಕ್ಕೆ ಅರ್ಪಿಸಿ ನಿಧನರಾದರು. ಮರಣೋತ್ತರ ಪಿಎಚ್.ಡಿ. ಪದವಿ ಪಡೆದರು. ಎಂ. ಎ. ಮುಗಿದ ಬಳಿಕ ಲೀಲಾವತಿ ಆಗಾಗ ಮೈಸೂರಿಗೆ ಹೋಗಿಬರುತ್ತಿದ್ದರು. ಡಾ. ಭೈರಪ್ಪನವರ ಆತ್ಮೀಯ ಸಂಬಂಧದ ಬಗ್ಗೆ ನನ್ನೊಂದಿಗೆ ಮಾತನಾಡುತ್ತಿದ್ದರು, ಕಾದಂಬರಿಯ ಮೂಲಕ ಭೈರಪ್ಪನವರನ್ನು ಮೆಚ್ಚಿಕೊಂಡ ಲೀಲಾವತಿ 'ಭೈರಪ್ಪನವರ ಕಾದಂಬರಿ ಸಾಹಿತ್ಯ'ವನ್ನೇ ಆಯ್ದುಕೊಂಡು ಪಿಎಚ್.ಡಿ. ಅಧ್ಯಯನ ಮುಗಿಸಿದರು. 'ಭೈರಪ್ಪನವರ ಕಾದಂಬರಿಗಳು' ಹೆಸರಿನ ವಿಮರ್ಶಾ ಗ್ರಂಥವನ್ನೂ ಪ್ರಕಟಿಸಿದರು.

ಲೀಲಾವತಿ ಅವರಿಗೆ ಮೈಸೂರಿನ ಆತ್ಮೀಯರಲ್ಲಿ ಡಾ. ಪ್ರಭುಶಂಕರ ಅವರೂ ಒಬ್ಬರು. ಒಂದೇ ಕುಟುಂಬವರ್ಗದವರಂತೆ ಅವರ ಸಂಬಂಧ. ಪ್ರಭುಶಂಕರ ಲೀಲಾವತಿಯವರ ಕವನ ಸಂಕಲನವನ್ನು ಹೊರತಂದರು. ಹನಿ ಘನೀಭೂತಗೊಂಡಂತೆ ಅವರ ಭಾವ ಭಾಷೆಯಲ್ಲಿ ಹನಿಗವನವಾಗುತ್ತದೆ. ಇದನ್ನು ಅರ್ಥ ಮಾಡಿಕೊಂಡೇ ಅವರು ತಮ್ಮ ಸಂಕಲನಕ್ಕೆ 'ತುಣುಕುಗಳು' ಎಂದು ಹೆಸರಿಟ್ಟರು.

ಯಾರೋ
ಕಬ್ಬು ತಿಂದು
ಸಿಪ್ಪೆ ಚೆಲ್ಲಿಹೋಗಿದ್ದಾರೆ.
ಆಯಿತು!
ಅದನ್ನೆ ಕಾಗದಮಾಡಿ
ಕರುಣಕಥೆ ಬರೆವೆ.

ಇದು ಲೀಲಾವತಿಯವರ ಜೀವನ ದೃಷ್ಟಿ.

ಕವನದ ಜೊತೆ ಜನಪದ ಗೀತೆ, ಗಾದೆ, ಒಗಟುಗಳ ಸಂಗ್ರಹದ ಕಡೆಗೆ ಲೀಲಾವತಿ ಅವರಿಗೆ ವಿಶೇಷ ಒಲವು, ಡಾ. ಹಾ. ಮಾ. ನಾಯಕ ಅವರ ಪ್ರಯತ್ನದ ಫಲವಾಗಿ "ಕನ್ನಡ ಒಡಪುಗಳು" ಹೆಸರಿನ ಒಡಪು ಸಂಗ್ರಹವನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದರು. ಒಂದರೆಡು ಕಾದಂಬರಿಗಳನ್ನು ಬರೆದಿರುವುದಾಗಿಯೂ ಅವುಗಳ ಪ್ರಕಟನೆಗಾಗಿ ಪ್ರಕಾಶಕರನ್ನು ಹುಡುಕುತ್ತಿರುವುದಾಗಿಯೂ ಹೇಳುತ್ತಿದ್ದರು.

ಲೀಲಾವತಿಯ ಮಗಳೂ ವಿಜಯಾ. ಮಗಳು ಅವಳೇ, ಮಗನೂ ಅವಳೇ. ಮೆಡಿಕಲ್ ಓದುತ್ತಿದ್ದಳು. ತಾಯಿ-ಮಗಳು ಅನೇಕ ಸಲ ನಮ್ಮ ಮನೆಗೆ ಬಂದುದುಂಟು. ವಿಜಯಾ ಮುಗ್ಧ ಹುಡುಗಿ. ಆಶ್ರಮದಲ್ಲಿ ಬೆಳೆದಂಥ ಸಾತ್ವಿಕಚೇತನ. ಮಾತನಾಡಿಸಿದರೆ ಸಾಕು, ಮೊದಲ ಉತ್ತರ ಮಂದಹಾಸ. ಅದರ ಹಿಂದೆ ಮೋಹಕ ರೂಪ. ಇನ್ನೂ ಹಿಂದೆ ಮೃದುಮಾತು. ಮಾತಿನಲ್ಲಿ ಮನಸ್ಸು ಎದ್ದು ಕಾಣುತ್ತಿತ್ತು. ಪರೀಕ್ಷೆಯಲ್ಲಿ ಉತ್ತೀರ್ಣಳಾದಳು, ಅನುರೂಪ ವರನೊಂದಿಗೆ ಮದುವೆ. ವಿದೇಶದಲ್ಲಿ ವಾಸ. ಅನಿರೀಕ್ಷಿತ ನಿಧನ. "ಪುಷ್ಪವಿದ್ದಂತೆ ಮೊಗ್ಗೆಯ ಕೊಯ್ದುಕೊಂಡ ಶಿವನು." ಮಗಳ ಸುಖದಲ್ಲಿ ತನ್ನ ಸುಖವನ್ನು ಅನುಭವಿಸುತ್ತಿದ್ದ ಲೀಲಾವತಿ ಪರದೇಶಿಯಂತಾದಳು. ಅಂದಿನಿಂದ ಅವಳದು ನಿರ್ಜೀವ ಬದುಕು.

ಇತ್ತೀಚೆ ವಿಜಯಳ ಕವನ ಸಂಕಲನ ಬಿಡುಗಡೆಯಾಯಿತು. ಅವಳು ಕವನ ಬರೆಯುತ್ತಿದ್ದಳೆಂದು ನನಗೆ ಗೊತ್ತೇ ಇರಲಿಲ್ಲ. ಅವಳೇ ಒಂದು ಉತ್ತಮ ಕವನವಾಗಿದ್ದಳು, ಕವನಸಂಕನವಾಗಿದ್ದಳು. ಮೈಸೂರಿನ ಡಾ. ಪ್ರಭುಶಂಕರ ತಮ್ಮ ಅಪೂರ್ವಕೃತಿ 'ಬೆರಗು' ಅವಳಿಗೆ ಅರ್ಪಿಸಿದರು. ಸೂಕ್ತ ಮುಡಿಪು.

ಲೀಲಾವತಿ ಕವನ ಪ್ರಕಟಿಸಿದರು, ಜನಪದ ಸಂಕಲನ ಹೊರತಂದರು. ಸಭೆ-ಸಮಾರಂಭಗಳಲ್ಲಿ ಭಾಗವಹಿಸಿದರು. ಈ ಮಧ್ಯೆ ಕಾನೂನು ಪದವೀಧರೆಯಾಗಿ ನ್ಯಾಯವಾದಿ ವೃತ್ತಿಗಿಳಿಯ ಬಯಸಿದರು. ರಾಜಕೀಯ ಕ್ಷೇತ್ರವನ್ನು ಧುಮುಕಲೂ ವಿಚಾರಿಸಿದರು. ಮಗಳ ಮರಣದಿಂದ ಇವೆಲ್ಲ ಕನಸುಗಳು ತುಂಡುತುಂಡಾದವು. ಈ ಎಲ್ಲ ತುಣುಕುಗಳನ್ನು ಅಲ್ಲಲ್ಲಿಯೇ ಬಿಟ್ಟು ತಾವೂ ತಟ್ಟನೇ ಕಣ್ಮರೆಯಾದರು. ಅವರ ಪತಿ ಈ ತುಣುಕುಗಳಿಗೆ ಒಂದು ಆಕಾರ ಕೊಡಲು ಪ್ರಯತ್ನಿಸುತ್ತಿದ್ದಾರೆ. ಮೋಹದ ಮಗಳನ್ನು, ಪ್ರೀತಿಯ ಮಡದಿಯನ್ನು ಅಗಲಿ, ಅಸಹಾಯಕತೆಯ ಮಧ್ಯದಲ್ಲಿಯೂ ಆ ಕೆಲಸಕ್ಕೆ ಆತ್ಮೀಯರ ನೆರವನ್ನು ನಿರೀಕ್ಷಿಸುತ್ತಿದ್ದಾರೆ.

ನಂದಾದೀಪ (ಲೀಲಾವತಿ ತೋರಣಗಟ್ಟಿಯವರ ಸ್ಮರಣ ಗ್ರಂಥ), ೧೯೯೦.

ಆಕರ : ಮಾರ್ಗ ಸಂಪುಟ-೬

■■

೬೨

ಸಂಶೋಧನೆಯ ಸಂಶೋಧಕ

೧೯೯೧

"ಕವಿಗಳ ಕವಿ" ಎಂಬ ಮಾತು ಕಾವ್ಯಮೀಮಾಂಸೆಯಲ್ಲಿ ತುಂಬ ಪ್ರಸಿದ್ಧ. ಕಾವ್ಯಪರಂಪರೆಯಲ್ಲಿ ಹೊಸಮಾರ್ಗವನ್ನು ತೆರೆದು ಆ ದಿಸೆಯಲ್ಲಿ ಮುಂದಿನ ತಲೆಮಾರು ದುಡಿಯುವಂತೆ ಮಾಡಿದವನೆ ಕಾವ್ಯಮಾರ್ಗದ ಕವಿ ಅಥವಾ ಕವಿಗಳ ಕವಿ. ಇದೇ ರೀತಿ ಸಂಶೋಧನ ಪರಂಪರೆಯಲ್ಲಿ ಹೊಸ ಮಾರ್ಗವನ್ನು ತೆರೆದು, ಆ ದಿಸೆಯಲ್ಲಿ ಮುಂದಿನ ತಲೆಮಾರು ದುಡಿಯುವಂತೆ ಮಾಡಿದವನೇ ಸಂಶೋಧನ ಮಾರ್ಗದ ಸಂಶೋಧಕ ಅಥವಾ ಸಂಶೋಧನೆಯ ಸಂಶೋಧಕ.

ಸಂಶೋಧನೆಯ ಸಂಶೋಧಕನಿಗೆ ಎರಡು ಆಯಾಮಗಳಿರುವದುಂಟು. ಒಬ್ಬ ಸಂಶೋಧಕನಾಗಿ ಅವನ ಸಾಧನೆ ಏನು? ಒಂದು ಸಂಶೋಧನಾ ಮಾರ್ಗದ ಸಂಶೋಧಕನಾಗಿ ಅಥವಾ ಪ್ರವರ್ತಕನಾಗಿ ಅವನ ಕೊಡುಗೆ ಏನು? ಎಂಬುವೇ ಆ ಆಯಾಮಗಳು.

ಈ ವಿವರಗಳ ಹಿನ್ನೆಲೆಯಲ್ಲಿ ಡಾ. ಎಂ. ಚಿದಾನಂದಮೂರ್ತಿ ಅವರನ್ನು ನಾನು 'ಸಂಶೋಧನೆಯ ಸಂಶೋಧಕ'ರೆಂದು ಕರೆಯುತ್ತ ಒಬ್ಬ ಸಂಶೋಧಕರಾಗಿ ಅವರ ಕೊಡುಗೆ ಏನು? ಎಂಬುದನ್ನು ಬಿಟ್ಟು, ಅವರು ಕನ್ನಡದಲ್ಲಿ ತೆರೆದ ಹೊಸ ಸಂಶೋಧನ ಮಾರ್ಗದ ಲಕ್ಷಣಗಳೇನು? ಅದರ ಪರಿಣಾಮ - ಪ್ರಭಾವಗಳೇನು? ಎಂಬ ವಿಷಯಕ್ಕೆ ಈ ಬರವಣಿಗೆಯನ್ನು ಸೀಮಿತಗೊಳಿಸುತ್ತೇನೆ.

ಕನ್ನಡದಲ್ಲಿ ಆಧುನಿಕ ಸಂಶೋಧಕನಿಗೆ ಸುಮಾರು ೧೦೦ ವರ್ಷ ತುಂಬಿವೆ. ಈ ಅವಧಿಯಲ್ಲಿ ಅದು ಅನೇಕ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಸಾಗಿಬಂದಿದೆ. ಕರ್ನಲ್ ಮೆಕೆಂಜ್, ಫ್ಲೀಟ್, ರೈಸ್ ಮೊದಲಾದವರಿಂದ ರೂಪಗೊಂಡ ಪ್ರಥಮಘಟ್ಟವನ್ನು ನಾವು 'ಆಕರಸಾಮಗ್ರಿ ಸಂಶೋಧನ ಘಟ್ಟ' ವೆಂದು ಕರೆಯಬಹುದು. ಆಮೇಲೆ ಆರ್. ನರಸಿಂಹಾಚಾರ್, ಗೋವಿಂದ ಪೈ ಮೊದಲಾದವರು ಈ ಆಕರಗಳನ್ನು ಬಳಸಿಕೊಂಡು ಚರಿತ್ರೆಯ ಕಟ್ಟಡವನ್ನು ಭಾಗಶಃ ಇಲ್ಲವೆ ಇಡಿಯಾಗಿ ಕಟ್ಟುವ ಘಟನಾ ಶೋಧನಿಷ್ಠ ಕೆಲಸವನ್ನು ಮಾಡಿದರು. ಇವರು ಆಕರಗಳ ಮೈಯನ್ನು ಮಾತ್ರ ನೋಡಿದವರೇ ಹೊರತು ಮನಸ್ಸನ್ನು ಅರ್ಥಮಾಡಿಕೊಳ್ಳುವ ಸಾಹಸ ಮಾಡಿದವರಲ್ಲ. ಉದಾ: ಬುಕ್ಕರಾಯನ ಶಾಸನವನ್ನು ರೈಸ್ ಶೋಧಿಸಿದರೆ, ನರಸಿಂಹಾಚಾರ್ ಮೊದಲಾದವರು ಇದು ನಮ್ಮ

'ಧರ್ಮಸಮನ್ವಯ'ದ ದ್ಯೋತಕವೆಂಬಂಥ ಆಶಯವನ್ನು ಗ್ರಹಿಸಿ ಪ್ರಸಾರ ಮಾಡಿದರು. ಅವರಾರೂ ಈ ಶಾಸನದಲ್ಲಿ ಮತೀಯ ಒಪ್ಪಂದದ ಹಿಂದೆ 'ಮತೀಯ ಕಲಹವಿದೆ'ವೆಂಬ ಅಂಶವನ್ನು ಒತ್ತು ಕೊಟ್ಟು ಹೇಳಲೇ ಬಲ್ಲ. ಹೀಗಾಗಿ ಧರ್ಮಸಮನ್ವಯದ ಶಾಸನವೆಂಬಂತೆ ತೋರಿದರೂ ಇದು ಧರ್ಮಕಲಹದ ಶಾಸನವಾಗಿದೆಯೆಂದು ಹೇಳಿದರೆ ಅದು ಈ ಘಟನೆಯ ಇನ್ನೊಂದು ಮುಖದ ಶೋಧ, ನಿಜವಾದ ಮುಖದ ಶೋಧವೆನಿಸುತ್ತದೆ. ಇದನ್ನು ನೋಡಿದರೆ ಆ ಕಾಲದಲ್ಲಿ ಸಂಶೋಧನೆಯು ಪ್ರಧಾನವಾಗಿ ವಿಷಯದ ಮೈ ಕಾಣಿಸಿ ಕೊಡುತ್ತಿದ್ದಿತೇ ಹೊರತು, ಮನಸ್ಸನ್ನಲ್ಲವೆಂದು ಸ್ಪಷ್ಟವಾಗುತ್ತದೆ. ಈ ಘಟ್ಟದ ಕೊನೆಯಲ್ಲಿ ಕಾಣಿಸಿಕೊಂಡ ಡಾ. ಡಿ. ಎಲ್. ಎನ್.ಅವರು ಶಬ್ದಾರ್ಥ ನಿರ್ಣಯವೆಂಬ ಹೊಸ ಕ್ಷೇತ್ರಕ್ಕೆ ಒತ್ತುಕೊಟ್ಟರಾದರೂ ಸಂಶೋಧನ ವಿಧಾನಮಾತ್ರ ಹಳೆಯದೇ. ಇಂಥ ಸಂದರ್ಭದಲ್ಲಿ ಸಂಶೋಧನ ಕ್ಷಿತಿಜ ಮೇಲೆ ಡಾ. ಎಂ. ಚಿದಾನಂದಮೂರ್ತಿ ಕಾಣಿಸಿಕೊಳ್ಳುತ್ತಾರೆ.

ಡಾ. ಚಿದಾನಂದಮೂರ್ತಿ ಅವರು ಆ ಕಾಲದ ಎಲ್ಲ ಸಂಶೋಧಕರಂತೆ 'ಘಟನಾನಿಷ್ಠ ಶೋಧ'ವನ್ನು ಕೈಕೊಂಡರೂ ಕೆಲವು ದಿನಗಳಲ್ಲಿಯೇ ಅದನ್ನು ದಾಟಿ 'ವ್ಯಾಖ್ಯಾನನಿಷ್ಠ ಶೋಧ' ಕ್ಷೇತ್ರವನ್ನು ವ್ಯಾಪಿಸಿದರು. ಇದರಿಂದಾಗಿ ಆ ಕಾಲದ ಸಂಶೋಧಕರಲ್ಲಿಯೇ ಅವರು ತುಂಬ ಭಿನ್ನರಾಗಿ ತೋರಿದರು. ಮುಂದಿನ ದಿನಗಳಲ್ಲಿ ಈ ದಾರಿಯನ್ನೇ ವೇಗವಾಗಿ ತುಳಿಯುತ್ತ ಬಂದ ಕಾರಣ, 'ವ್ಯಾಖ್ಯಾನಿಷ್ಠ ಶೋಧ' ಇವರ ಸಂಶೋಧನೆಯ ಮುಖ್ಯ ಲಕ್ಷಣವೆನಿಸಿತು. ಇದು ಕನ್ನಡದಲ್ಲಿ ಇವರು ತೆರೆದ ಹೊಸದಾರಿ ಎನಿಸಿತು.

ಘಟನಾನಿಷ್ಠ ಶೋಧವು ಹೊಸ ಆಕರಸಾಮಗ್ರಿಯನ್ನು ಬಯಸುತ್ತದೆ. ಹೊಸ ಸಾಮಗ್ರಿ ಇಲ್ಲದಿದ್ದರೆ ಅಲ್ಲಿ ಒಂದು ಹೆಜ್ಜೆಯನ್ನೂ ಇಡಲು ಆಗುವುದಿಲ್ಲ. ಆದರೆ ವ್ಯಾಖ್ಯಾನನಿಷ್ಠಶೋಧಕ್ಕೆ ಹೊಸ ಆಕರಸಾಮಗ್ರಿ ಬೇಕೆಂದೇನೂ ಇಲ್ಲ. ಇದ್ದ ಸಾಮಗ್ರಿಯನ್ನೇ ಬೇರೆ ಬೇರೆ ನಿಟ್ಟುಗಳಿಂದ ನೋಡಿ, ಈವರೆಗಿನ ಶೋಧಕ್ಕಿಂತ ವಿಭಿನ್ನ ಫಲಿತಾಂಶಗಳನ್ನು ಸ್ಫೋಟಗೊಳಿಸಬಹುದಾಗಿದೆ. ಈ ಫಲಿತಾಂಶವು ಸಂಶೋಧಕನು 'ಆಕರ'ವನ್ನು 'ಆಧಾರ'ವಾಗಿ ಬಳಸಿಕೊಳ್ಳುವದರ ಮೇಲೆ ಅವಲಂಬಿಸಿರುತ್ತದೆ. ಡಾ ಚಿದಾನಂದಮೂರ್ತಿ ಅವರ ಎಲ್ಲ ಲೇಖನಗಳಲ್ಲಿ ಈ ದೃಷ್ಟಿಕೋನ ವಿವಿಧ ಪ್ರಮಾಣದಲ್ಲಿ ಕಂಡುಬರುತ್ತಿದ್ದು, ಇದು ಅವರ ಸಂಶೋಧನೆಯ ಪ್ರಧಾನಗುಣವೆನಿಸಿದೆ.

ಡಾ. ಮೂರ್ತಿ ಅವರು ಸಂಶೋಧಕರಾಗಲು ಒಂದು, ವ್ಯಾಖ್ಯಾನನಿಷ್ಠ ಸಂಶೋಧಕರಾಗಲು ಇನ್ನೊಂದು ಹೀಗೆ ಎರಡು ಕಾರಣಗಳಿವೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಕವಿತ್ವಕ್ಕೆ ಕುವೆಂಪು, ವಿಮರ್ಶೆಗೆ ತೀ.ನಂ.ಶ್ರೀ. ಸಂಶೋಧನೆಗೆ ಡಿ. ಎಲ್. ಎನ್. ಪ್ರಮಾಣ ಪುರುಷರೆನಿಸಿದ್ದ ಕಾಲದಲ್ಲಿ ಡಾ. ಮೂರ್ತಿ ಅವರು ಆಸಕ್ತಿಯಲ್ಲಿ ಡಿ.ಎಲ್.ಎಸ್. ಅವರ, ಅಭಿವ್ಯಕ್ತಿಯಲ್ಲಿ ತಿ. ನಂ. ಶ್ರೀ. ಅವರ ಪ್ರಭಾವಕ್ಕೆ ಒಳಗಾದ ಕಾರಣ, ವಿಶಿಷ್ಟ ಪಾಕದ ಸಂಶೋಧಕರೆನಿಸಿದರು. ಎಂ. ಎ. ಪದವಿ ಪಡೆದ ಹೊಸದರಲ್ಲಿಯೇ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ವಿಷಯವನ್ನು ಪಿಎಚ್.ಡಿ. ಅಧ್ಯಯನಕ್ಕಾಗಿ ಆಯ್ದುಕೊಂಡ ಕಾರಣ ಅವರ ಸಂಶೋಧನೆಗೆ ವ್ಯಾಖ್ಯಾನ ನಿಷ್ಠತೆಯ ಸ್ಪರ್ಶ ಆರಂಭವಾಯಿತು. ಆದುದರಿಂದ ಡಾ. ಮೂರ್ತಿಗಳು ಹೊಸಬಗೆಯ 'ಸಂಶೋಧನೆಯ ಸಂಶೋಧಕ'ರಾದುದರ ಮೂಲ ಸೆಲೆ ಅವರು ಪಿಎಚ್.ಡಿ. ಅಧ್ಯಯನಕ್ಕೆ ಆರಿಸಿಕೊಂಡ ವಿಷಯದಲ್ಲಿದೆಯೆನ್ನಬಹುದು. ಶಾಸನಗಳೆಂಬ ವೈವಿಧ್ಯಪೂರ್ಣಸಾಮಗ್ರಿಯನ್ನು ಸಂಸ್ಕೃತಿಯನ್ನು ಅನ್ವೇಷಣೆಗಾಗಿ ಸಂಯೋಜಿಸುವುದು, ಆಮೇಲೆ ಅಲ್ಲಿ ಅಡಗಿರುವ ಸಂಸ್ಕೃತಿಯನ್ನು ಕೇಳಿಸಿಕೊಳ್ಳುವದು - ಈ ಎರಡೂ ಕಾರ್ಯಗಳಿಂದಾಗಿ ಏಕಕಾಲಕ್ಕೆ ಘಟನೆಗಳ ಶೋಧ, ಇದಕ್ಕಿಂತ ಅವುಗಳ ಹಿಂದಿರುವ ಸಂಸ್ಕೃತಿಯ ಶೋಧ ಅವರಿಗೆ

ಸಾಧ್ಯವಾಯಿತು. ಅಮೂರ್ತವಾದ ಸಂಸ್ಕೃತಿ ಶೋಧಕ್ಕೆ ವ್ಯಾಖ್ಯಾನದ ದಾರಿ ಅನಿವಾರ್ಯವೆನಿಸಿ, ಅದು ಅವರ ಸಂಶೋಧನೆಯ ಮುಖ್ಯಲಕ್ಷಣವಾಯಿತು. ಹೀಗೆ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ ಘಟನಾ ಶೋಧ ಪ್ರಧಾನವಾಗಿದ್ದರೂ ಅಲ್ಲಿ ವ್ಯಾಖ್ಯಾನ ನಿಷ್ಠಶೋಧವೂ ಕೆಲಸ ಮಾಡಿದ್ದು, ಮುಂದಿನ ದಿನಗಳಲ್ಲಿ ಇದು ಪ್ರೌಢರೀತಿಯಿಂದ ಕಾಣಿಸಿಕೊಂಡಿತು.

ಕವಿಗೆ ಇರಬೇಕಾದ 'ಪ್ರತ್ಯುತ್ಪನ್ನಮತಿ' ವ್ಯಾಖ್ಯಾನ ನಿಷ್ಠ ಸಂಶೋಧನೆಯಲ್ಲಿ ಕೆಲಸ ಮಾಡುತ್ತದೆ. ಹೊರಗೆ ಸಾಮಗ್ರಿಯನ್ನು ಸಂಗ್ರಹಿಸುತ್ತ, ವಿಶ್ಲೇಷಿಸುತ್ತ ನಡೆಯುವ ಸಂಶೋಧಕನ ಒಳಗೆ, ಸಂಗ್ರಹಿಸಿದ ಸಾಮಗ್ರಿಯ ಸ್ಪಂದನಗಳನ್ನು ಗುರುತಿಸುತ್ತ ಹೋಗುವ ಕ್ರಿಯೆ ನಡೆಯುತ್ತಿದ್ದು, ಆಗ ಅನೇಕ ಹೊಸ ಹೊಸ ಒಳನೋಟಗಳು ಫಳಫಳ ಹೊಳೆಯುತ್ತ ಹೋಗುತ್ತವೆ. ಕೊನೆಗೊಮ್ಮೆ ನಿಜವಾದ ನೋಟ ಅವನನ್ನು ತಡೆದುನಿಲ್ಲಿಸುತ್ತದೆ. ಇದನ್ನು ಎರಕಹೊಯ್ದ ಸಂಶೋಧನ ಬರವಣಿಗೆ ಒಂದು ಧ್ವನಿಪೂರ್ಣಕಾವ್ಯದ ಸ್ವರೂಪ ಪಡೆಯುತ್ತದೆ. ಘಟನಾ ಶೋಧನಿಷ್ಠ ಸಂಶೋಧನೆಯು ವಾಚ್ಯಾರ್ಥ ಪಾತಳಿಯದಾದರೆ, ಈ ವ್ಯಾಖ್ಯಾನನಿಷ್ಠ ಸಂಶೋಧನೆಯು ಧ್ವನಿಪಾತಳಿಯದೆನಿಸುತ್ತದೆ. ಡಾ. ಮೂರ್ತಿ ಅವರ ಅನೇಕ ಲೇಖನಗಳಲ್ಲಿ ಇಂಥ 'ಸಂಶೋಧನ ಧ್ವನಿ'ಯನ್ನು ಕಾಣುತ್ತೇವೆ. ಇದು ಮಾತಿಗೆ ಹಚ್ಚಿದ ಅರ್ಥವಲ್ಲ, ಮೌನಕ್ಕೆ ಹಚ್ಚಿದ ಅರ್ಥ. ಆಕರಗಳಿಂದ ಈ ರೀತಿ ಅರ್ಥಹೊರಡಿಸುವ ವಿಧಾನವನ್ನು ಕನ್ನಡದಲ್ಲಿ ಹೊಸದಾಗಿ ತೋರಿ ಕೊಟ್ಟವರು ಡಾ. ಮೂರ್ತಿ ಅವರು.

ಇಂದು ಸಂಶೋಧನೆ ಮತ್ತು ವಿಮರ್ಶೆಗಳು ತೀರ ಸಮೀಪ ಬರುತ್ತಲಿವೆ. ಈ ಮೊದಲು ಇದು ಸಂಶೋಧನಾತ್ಮಕ ಲೇಖನ, ಅದು ವಿಮರ್ಶಾತ್ಮಕ ಲೇಖನವೆಂದು ಸ್ಪಷ್ಟವಾಗಿ ಬಿಡಿಸಿ ಹೇಳಬಹುದಿತ್ತು. ಏಕೆಂದರೆ ಅಂದು ಸಂಶೋಧನೆ ಘಟನಾಶೋಧ ಸ್ವರೂಪದ್ದೂ, ವಿಮರ್ಶೆ ರಸವಿಮರ್ಶಾ ಸ್ವರೂಪದ್ದೂ ಆಗಿದ್ದವು. ಆದರೆ ಇತ್ತೀಚೆ ಆ ಕಡೆ ವಿಮರ್ಶೆ ರಸವಿಮರ್ಶಾ ವಲಯ ದಾಟಿ ಮೌಲ್ಯಶೋಧಕ್ಕೂ ಮೈಚಾಚಿತು. ಈ ಕಡೆ ಸಂಶೋಧನೆ ಘಟನಾಶೋಧ ವಲಯ ದಾಟಿ ಮೌಲ್ಯಶೋಧಕ್ಕೂ ಮೈಚಾಚಿತು. ಇದರ ಫಲವಾಗಿ ಇಂದು ಸಂಶೋಧನೆ ಮತ್ತು ವಿಮರ್ಶೆಗಳು ತೀರ ಸಮೀಪ ಬಂದಿವೆ. ವಿಮರ್ಶಾಕ್ಷೇತ್ರದಲ್ಲಿ ಈ ಬಗೆಯ ಕೆಲಸವನ್ನು ಯಾರೇ ಮಾಡಿರಲಿ, ಸಂಶೋಧನೆಯ ಕ್ಷೇತ್ರದಲ್ಲಿ ಮಾತ್ರ ಈ ಪದ್ಧತಿಯನ್ನು ಬೆಳೆಸಿದವರು ಡಾ. ಚಿದಾನಂದಮೂರ್ತಿ ಅವರು. ಇದಕ್ಕೆ ಕಾರಣ, ಅವರು ಸಂಸ್ಕೃತಿಶೋಧದ ಮೂಲಕ ಸಂಶೋಧನಕ್ಷೇತ್ರವನ್ನು ಪ್ರವೇಶಿಸಿದ್ದು. ಸಂಸ್ಕೃತಿಶೋಧ ಸಹಜವಾಗಿಯೇ ಮೌಲ್ಯಶೋಧವಾಗಿರುವದರಿಂದ ಅವರ ಅನೇಕ ಲೇಖನಗಳಲ್ಲಿ ಈ ಲಕ್ಷಣವನ್ನು ನಾವು ಕಾಣುತ್ತೇವೆ. 'ಶೂನ್ಯ ಸಂಪಾದನೆಯನ್ನು ಕುರಿತು' ಎಂಬ ಅವರ ಗ್ರಂಥ ವಿಮರ್ಶೆಯೂ ಹೌದು, ಸಂಶೋಧನೆಯೂ ಹೌದು - ಎನ್ನುವುದು ಈ ಕಾರಣಕ್ಕಾಗಿ.

ಈ ಮೊದಲು ನಮ್ಮಲ್ಲಿ ಸಂಶೋಧನೆಯ ವಿಷಯ ಸಾಮಾನ್ಯವಾಗಿ ಸಾಹಿತ್ಯದ ಕೃತಿ -ಕರ್ತೃಗಳಿಗೆ ಸೀಮಿತವಾಗಿದ್ದಿತು. ಡಾ. ಮೂರ್ತಿ ಅವರು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ವಿಷಯವನ್ನು ಪಿಎಚ್.ಡಿ. ಅಭ್ಯಾಸಕ್ಕೆ ಆಯ್ದುಕೊಂಡುದು ನಮ್ಮ ಸಂಶೋಧನೆಯ ಇತಿಹಾಸದಲ್ಲಿ ಒಂದು ಶುಭಮುಹೂರ್ತವೆಂದೇ ಹೇಳಬೇಕು. ಶಾಸನಗಳಿಂದ ರಾಜಕೀಯೇತರ ವಿಷಯಗಳನ್ನು ಸ್ಫೋಟಗೊಳಿಸುವ ಕ್ರಿಯೆ ಇಲ್ಲಿಂದ ಪ್ರಾರಂಭವಾಯಿತು. ಈ ಹೊಸ ದಾರಿಗೆ ಅವರ 'ಕನ್ನಡ' ಶಾಸನಗಳ ಸಾಂಸ್ಕೃತಿಕ ಅಧ್ಯಯನ ಅನೇಕ ದೃಷ್ಟಿಯಿಂದ ಮೈಲುಗಲ್ಲಾಯಿತು. ಈ ಗ್ರಂಥದ ಆದರ್ಶದಲ್ಲಿ ಮುಂದಿನ ತಲೆಮಾರಿನ ಕನ್ನಡ ಅಧ್ಯಾಪಕರು ರಾಜಕೀಯೇತರ ವಿಷಯಶೋಧಕ್ಕಾಗಿ ಶಾಸನಗಳನ್ನು ಅಭ್ಯಸಿಸಲು ಪ್ರಾರಂಭಿಸಿದರು. ಇತಿಹಾಸದವರಿಗಿಂತ ಭಿನ್ನವಾದ ಆಯಾಮವನ್ನು ಶಾಸನಲೋಕದಲ್ಲಿ ತೆರೆದರು. ಇತಿಹಾಸದ ವಿದ್ಯಾರ್ಥಿಗಳಿಗೆ ಕಾಣದ ಅನೇಕ ಅಂಶಗಳನ್ನು

ಸಾಹಿತ್ಯಾಧ್ಯಯನದ ಬಲದಿಂದ ಗುರುತಿಸಿಕೊಟ್ಟರು. ಇದರ ಫಲವಾಗಿ ಕರ್ನಾಟಕದ ವೀರಗಲ್ಲುಗಳು, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಕರ್ನಾಟಕದಲ್ಲಿ ಸತಿ ಪದ್ಧತಿ, ಶಾಸನಗಳಲ್ಲಿ ಕರ್ನಾಟಕದ ವರ್ತಕರು - ಇತ್ಯಾದಿ ಮಹಾಪ್ರಬಂಧಗಳು ಬೆಳಕುಕಂಡವು.

ಸಂಸ್ಕೃತಿ ಸಂಶೋಧನೆಯ ಬೆನ್ನುಹತ್ತಿ ಬೆಳೆದ ಡಾ. ಮೂರ್ತಿ ಅವರಿಗೆ 'ಸಮಾಜ' ಮಹತ್ವದ್ದಾಗಿ ಕಂಡಿತು. ಆದುದರಿಂದ ಯಾವುದೇ ವಿಷಯವನ್ನು ಕೈಗೆತ್ತಿಕೊಂಡರೂ ಅದರ ಅಂತರಂಗದಲ್ಲಿ ಮಿಡಿಯುವ ಸಾಮಾಜಿಕ ಸ್ಪಂದನವನ್ನೂ ಕೇಳಿಸಿಕೊಡುವುದು ಅವರಿಗೆ ಮುಖ್ಯವಾಗಿಬಿಟ್ಟಿತು. ಅವರ ಯಾವುದೇ ಲೇಖನದಲ್ಲಿ ಈ ದೃಷ್ಟಿಯನ್ನು ಒಂದಿಲ್ಲ ಒಂದು ಬಗೆಯಲ್ಲಿ ಕಾಣಬಹುದು. ಹೀಗಾಗಿ ಅವರ ಬರೆವಣಿಗೆಯಲ್ಲಿ ಸಮಾಜೋಧಾರ್ಮಿಕ ಮೊದಲಾದ ನೋಟಗಳನ್ನು ಕಾಣುತ್ತೇವೆ. 'ಕರ್ನಾಟಕದ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ದಿಂದ ಬಿಚ್ಚಿತೊಂಡ ಈ ಹೊಸ ದಾರಿ, ಸಾಹಿತ್ಯಕೃತಿಗಳ ಸಾಂಸ್ಕೃತಿಕ ಅಧ್ಯಯನದತ್ತಲೂ ಬೆರಳು ತೋರಿಸಿತು. ಆಗ ಸಾಹಿತ್ಯಕೃತಿಗಳ ಸಾಹಿತ್ಯೇತರ ಅಧ್ಯಯನದ ಕಡೆಗೆ ಸಂಶೋಧಕರು ಹೊರಳ ತೊಡಗಿದರು. ಇದರಿಂದಾಗಿ ಯಾವುದೇ ಕೃತಿ ಸಾಹಿತ್ಯದೊಂದಿಗೆ ಸಾಮಾಜಿಕವಾಗಿಯೂ ಮುಖ್ಯವೆಂಬ ಅಭಿಪ್ರಾಯ ಸ್ಥಾಪಿತವಾಯಿತು. ಸಾಮಾಜಿಕ ನೆಲೆಯಿಂದ ಸಾಹಿತ್ಯವನ್ನು ಬೇರ್ಪಡಿಸಿ ನೋಡುವುದು ಕಡಿಮೆಯಾಯಿತು. ಇದಕ್ಕೆ ನಿದರ್ಶನವೆಂಬಂತೆ ಪಂಪಭಾರತದ ಸಾಂಸ್ಕೃತಿಕ ಅಧ್ಯಯನ, ತೊರವೆ ರಾಮಾಯಣದ ಸಾಂಸ್ಕೃತಿಕ ಅಧ್ಯಯನ ಇತ್ಯಾದಿ ಗ್ರಂಥಗಳು ನಮ್ಮಲ್ಲಿ ಹುಟ್ಟಿಕೊಂಡವು. ಹಿಂದಿ, ಇಂಗ್ಲೀಷ್ ಮೊದಲಾದ ಭಾಷೆಗಳಲ್ಲಿ ಹುಟ್ಟಿದ ಹರ್ಷಚರಿತ ಏಕ ಸಾಂಸ್ಕೃತಿಕ ಅಧ್ಯಯನ, ಇಂಡಿಯಾ ಆ್ಯಜ್ ನೋನ್ ಟು ಪಾಣಿನಿ-ಇತ್ಯಾದಿಗಳ ಅಧ್ಯಯನ ಡಾ. ಮೂರ್ತಿ ಅವರಿಗೆ ಪ್ರೇರಣೆ ನೀಡಿದ್ದವೆಂಬುದನ್ನು ಇಲ್ಲಿ ಮರೆಯುವಂತಿಲ್ಲ.

ಡಾ. ಚಿದಾನಂದಮೂರ್ತಿಗಳು ಕನ್ನಡ ಸಂಶೋಧನಕ್ಷೇತ್ರದಲ್ಲಿ ವಿಸ್ತರಿಸಿದ ಇನ್ನೊಂದು ಆಯಾಮವೆಂದರೆ ಅಂತರ್‌ಸ್ತೀಯತೆ. ಒಂದಕ್ಕಿಂತ ಹೆಚ್ಚು ವಿಷಯಗಳ, ವಿಷಯ ಶಾಖೆಗಳ ವ್ಯಾಸಂಗವನ್ನು ಪರಸ್ಪರ ಪೂರಕವಾಗಿ ಬಳಸಿಕೊಂಡು ನಡೆಸುವ ಅಭ್ಯಾಸವೇ ಅಂತರ್‌ಶಿಸ್ತೀಯ ಅಥವಾ ಅಂತರ್ ವೈಷಯಿಕ ಸಂಶೋಧನೆ. ಈ ಮೊದಲು ಕನ್ನಡ ಭಾಷೆ ಸಾಹಿತ್ಯಗಳ ಸಂಶೋಧನಪ್ರಸಂಗದಲ್ಲಿ ಈ ಅಂತರ್‌ಶಿಸ್ತೀಯತೆಗಾಗಿ ಬಹಳವೆಂದರೆ ಶಾಸನ ಸಾಮಗ್ರಿಯನ್ನು ಅದೂ ಘಟನಾಶೋಧಕ್ಕೆ ಮಾತ್ರ ಬಳಸಿಕೊಳ್ಳಲಾಗುತ್ತಿತ್ತು. ಆರ್. ನರಸಿಂಹಾಚಾರ್ ಮೊದಲಾದವರು ಶಾಸನತಜ್ಞರಾಗಿದ್ದುದರಿಂದ ಈ ಸಾಮಗ್ರಿಯನ್ನು ಉಪಯೋಗಿಸಿಕೊಳ್ಳುತ್ತಲಿದ್ದರು. ಆದರೆ ಶಾಸನೇತರ ಕ್ಷೇತ್ರಗಳನ್ನೂ ಬಳಸಿಕೊಳ್ಳುವ ಆ ಮೂಲಕ ಕನ್ನಡ ಸಂಶೋಧನೆಗೆ ವೈವಿಧ್ಯ ಲಕ್ಷಣವನ್ನು ಒದಗಿಸುವ ಕೆಲಸ ಮಾಡಿದವರು, ಡಾ. ಚಿದಾನಂದಮೂರ್ತಿಗಳು. ಇದರಿಂದಾಗಿ ನಮ್ಮ ಸಂಶೋಧನ ಸೌಧಕ್ಕೆ ಅನೇಕ ಬಾಗಿಲು ಕಿಡಕಿಗಳನ್ನು ಒಮ್ಮೆಲೇ ಅಳವಡಿಸಿದಂತಾಯಿತು. ಯಾವುದೇ ವಿಷಯ ಯಾವುದೇ ವಿಷಯದ ವ್ಯಾಸಂಗಕ್ಕೆ ಅಪ್ರಯೋಜಕವಲ್ಲವೆಂಬಂಥ ದೃಷ್ಟಿ ನಮ್ಮ ಸಂಶೋಧನ ಕ್ಷೇತ್ರದಲ್ಲಿ ಮೂಡಿತು. ಆವರೆಗೆ ಉಪೇಕ್ಷಿತವಾಗಿದ್ದ ಅನೇಕ ಕ್ಷೇತ್ರಗಳು ಮಹತ್ವ ಪಡೆದವು. ಡಾ. ಮೂರ್ತಿ ಅವರು ಬೈಗುಳನ್ನು ಕುರಿತು ಬರೆದ ಲೇಖನ ಒಂದು ಬಗೆಯ ಉಪೇಕ್ಷಿತ ವಿಷಯವಾದರೆ, ಭಗವ - ಮಾಸಕಬ್ಬೆಯೆಂಬುದು ಇನ್ನೊಂದು ಬಗೆಯ ಉಪೇಕ್ಷಿತ ವಿಷಯವೆನಿಸಿದೆ. 'ಕಬ್ಬಿಣ'ವನ್ನು ಕುರಿತ ಲೇಖನವಂತೂ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಪರಮಾವಧಿ ನಿದರ್ಶನವೆನಿಸಿದೆ.

ಈ ಬಗೆಯ ಅಭ್ಯಾಸಕ್ಕೂ ಮುಖ್ಯ ಕಾರಣ, ಕೆಲವು ಶಿಸ್ತುಗಳ ಸಂಗಮವಾಗಿರುವ ಸಂಸ್ಕೃತಿಶೋಧವನ್ನು ಹಿಡಿದುಕೊಂಡೇ ಇವರು ಸಂಶೋಧನಕ್ಷೇತ್ರವನ್ನು ಪ್ರವೇಶಿಸಿದ್ದು. ಇವರಿಗೆ ಈ ಬಗೆಯ ಅಂತರ್‌ಶಿಸ್ತೀಯ

ಅಧ್ಯಯನಕ್ಕೆ ತರಬೇತಿ ಸಂದರ್ಭವಾದುದು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ವನ್ನು ಕುರಿತ ಕೃತಿ ರಚನೆ. ಇದು ಸಾಮಾನ್ಯವಾಗಿ ಶಾಸನವನ್ನು ಸಾಹಿತ್ಯದಿಂದ, ಸಾಹಿತ್ಯವನ್ನು ಶಾಸನದಿಂದ ಸಮರ್ಥಿಸಿಕೊಳ್ಳುತ್ತ ಹೋದ ಅಧ್ಯಯನವಾಗಿದ್ದು, ಅಂತರ್‌ಶಿಸ್ತೀಯತೆಯ ದೃಷ್ಟಿಯಿಂದ ನಮ್ಮ ಸಂಶೋಧನಕ್ಷೇತ್ರದ ಮೈಲುಗಲ್ಲಾಗಿ ನಿಂತು ಹೊಸ ಜನಾಂಗದ ಕಣ್ಣನ್ನೇ ತೆರೆಯಿಸಿತು. ಇನ್ನೂ ಜಾನಪದ ಅಧ್ಯಯನದ ಹೊಸಗಾಳಿ ಬೀಸದಿದ್ದ ಕಾಲದಲ್ಲಿ ಇಂತಹ ಬಹುಶಿಸ್ತೀಯ ಅಧ್ಯಯನ ಸುಳಿಬಿಚ್ಚುವಂತೆ ಇವರು ಮಾಡಿದ್ದು ಗಮನಿಸಬೇಕಾದ ವಿಷಯವಾಗಿದೆ. ಏಕೆಂದರೆ ಜಾನಪದವೆಂಬುದು ಸಕಲ ಶಿಸ್ತುಗಳ ಸಂಗಮ. ಇದರ ಅಭ್ಯಾಸ, ಸಹಜವಾಗಿಯೇ ನಾವು ಅಂತರ್‌ಶಿಸ್ತೀಯತೆಯನ್ನು ಅಳವಡಿಸಿಕೊಳ್ಳುವಂತೆ ಒತ್ತಾಯ ಮಾಡುತ್ತದೆ. ಶಾಸನಗಳ ಅಭ್ಯಾಸದ ಮೂಲಕ ಇಂಥ ಹವ್ಯಾಸವನ್ನು ಬೆಳೆಸಿಕೊಂಡಿದ್ದ ಡಾ. ಮೂರ್ತಿ ಅವರು ಜಾನಪದ ನಮ್ಮಲ್ಲಿ ಪ್ರವೇಶಿಸಿದ ಕೂಡಲೇ ಆ ಹೊಸ ಶಿಸ್ತನ್ನೂ ಅಳವಡಿಸಿಕೊಂಡರು. ಇದಕ್ಕೆ ಜಾನಪದ ಲೇಖನಗಳ ಸಂಗ್ರಹವಾದ 'ಗ್ರಾಮೀಣ' ಮತ್ತು 'ಪೂರ್ಣ ಸೂರ್ಯಗ್ರಹಣ'ಗಳನ್ನು ಉದಾಹರಿಸಬಹುದು.

ಹೀಗೆ ಅಂತರ್ ಶಿಸ್ತೀಯತೆಗೆ ಬೇರೆ ಬೇರೆ ವಿಷಯಗಳನ್ನು ಹೂಡಿಕೊಳ್ಳುವುದಲ್ಲದೆ, ಡಾ. ಮೂರ್ತಿ ಅವರು ಅವುಗಳನ್ನು ಸ್ವತಂತ್ರವಾಗಿಯೂ ದುಡಿಸಿಕೊಳ್ಳುವದರ ಮೂಲಕ ಭಾಷಾಶಾಸ್ತ್ರ, ಜನಪದಶಾಸ್ತ್ರ, ನಾಮಶಾಸ್ತ್ರಗಳಿಗೂ ಕಾಣಿಕೆ ಸಲ್ಲಿಸಿ, ಈ ಹೊಸ ಕ್ಷೇತ್ರಗಳ ಒಳಗು-ಹೊರಗುಗಳನ್ನು ಕನ್ನಡಿಗರಿಗೆ ತೋರಿಸಿಕೊಟ್ಟಿದ್ದಾರೆ. ಹೀಗಾಗಿ ಇವರ ಅಧ್ಯಯನ ಕ್ಷೇತ್ರಗಳು ಬೇಕೆಂದಾಗ ಸ್ವತಂತ್ರ ರೂಪದಲ್ಲಿ ಕಾಣಿಸಿಕೊಂಡರೂ ಅಂತರ್‌ಶಿಸ್ತೀಯತೆಯೇ ಅವರ ಮುಖ್ಯ ಆಸಕ್ತಿಯಾಗಿದೆ.

ಡಾ. ಮೂರ್ತಿ ಅವರ ಶೋಧದ ಇನ್ನೊಂದು ಕಾಣಿಕೆಯೆಂದರೆ ಕ್ಷೇತ್ರಕಾರ್ಯ. ಸಾಹಿತ್ಯ ಸಂಶೋಧಕರು ಮುಖ್ಯವಾಗಿ ಗ್ರಂಥಾಲಯದ ಅಭ್ಯಾಸಿಗಳು, ಗ್ರಂಥ-ಪತ್ರಿಕೆ-ಹಸ್ತಪ್ರತಿ ಇತ್ಯಾದಿಗಳಲ್ಲಿ ವಿರಮಿಸುವವರು. ಇದರಾಚೆಗೂ ಒಂದು ಆಕರಲೋಕವಿದೆಯೆಂದು ಗೊತ್ತಿದ್ದರೂ ಅದರ ಮಹತ್ವ, ವ್ಯಾಪ್ತಿಗಳನ್ನು ಇವರು ತಿಳಿದುಕೊಂಡಿರಲಿಲ್ಲ. ಶಾಸನಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಕೊಂಡ ಡಾ. ಮೂರ್ತಿ ಅವರಿಗೆ ಕ್ಷೇತ್ರಕಾರ್ಯ ಕೆಲವೊಮ್ಮೆ ಅನಿವಾರ್ಯವಾಗುವುದರ ಮೂಲಕ ಅದರ ಮಹತ್ವ ಗೊತ್ತಾಗುತ್ತ ಹೋದಂತೆ, ಅವರು ಈ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಲೇ ಹೋಗಿದ್ದಾರೆ. ಸಾಹಿತ್ಯದಿಂದ ಶಾಸನ, ಶಾಸನದಿಂದ ಭಾಷಾಶಾಸ್ತ್ರ, ಭಾಷಾಶಾಸ್ತ್ರದಿಂದ ಜಾನಪದಗಳಿಗೆ ತಮ್ಮ ಅಭಿರುಚಿಯನ್ನು ಬೆಳೆಸಿಕೊಳ್ಳುತ್ತ ಬಂದ ಇವರು, ಆಯಾ ಕ್ಷೇತ್ರಗಳಿಗೆ ಸಂಬಂಧಪಟ್ಟ ಕ್ಷೇತ್ರಕಾರ್ಯಗಳನ್ನು ಪೂರೈಸುತ್ತಲೇ ಬಂದಿದ್ದಾರೆ. ಹಂಪೆಯಲ್ಲಿಯ ಹರಿಹರನ ವಾಸಸ್ಥಾನ, ಪಂಪನ ಧರ್ಮಪುರ ಇವೇ ಮೊದಲಾದ ಸಾಹಿತ್ಯಿಕ ಕ್ಷೇತ್ರಕಾರ್ಯ, ಹಳೆಯ ಶ್ರವಣಬೆಳಗೊಳ, ಕಲ್ಲೆಗಳಿಗೆ ಸಂಬಂಧಿಸಿದ ಪುರಾತತ್ವ ಕ್ಷೇತ್ರಕಾರ್ಯ, ಲಂಬಾಣ ಜನ ಮತ್ತು ಅವರ ಭಾಷೆ, ಕನ್ನಡ ಉಪಭಾಷೆಯೊಂದರಲ್ಲಿ ತಾಲವ್ಯೀಕರಣ ಮತ್ತು ಕಂಠ್ಯೀಕರಣ ಇತ್ಯಾದಿ ಭಾಷಾಶಾಸ್ತ್ರೀಯ ಕ್ಷೇತ್ರಕಾರ್ಯ, ಪಗರಣ, ಶೂಲದಹಬ್ಬ, ನಾಗಬೆತ್ತ ಇತ್ಯಾದಿ ಜಾನಪದ ಕ್ಷೇತ್ರ ಕಾರ್ಯಗಳನ್ನು ಇಲ್ಲಿ ನೆನೆಯಬಹುದು.

ಹೀಗೆ ಸಂಶೋಧನೆಯ ಕ್ಷಿತಿಜವನ್ನು ವಿಶಾಲಗೊಳಿಸುತ್ತ ಹೋದ ಡಾ. ಮೂರ್ತಿ ಅವರು, ಅದಕ್ಕೆ ಸಂಬಂಧಪಟ್ಟ ಪರಿಕಲ್ಪನೆಗಳನ್ನು ನಿಕರವಾಗಿ ಅಭಿವ್ಯಕ್ತಿಸುವ ಪದಗಳು ಕನ್ನಡದಲ್ಲಿಲ್ಲದುದನ್ನು ಗಮನಿಸುತ್ತ ಬಂದಿದ್ದಾರೆ. ಈ ಕೊರತೆಯನ್ನು ತುಂಬಿಕೊಡಲು ಅನೇಕ ಹೊಸ ಪದಗಳನ್ನು ಕಮ್ಮಟಿಸಿ, ಸಂಶೋಧನ ಕ್ಷೇತ್ರದ ಪರಿಭಾಷಾ ಸಂಪತ್ತನ್ನು ಹೆಚ್ಚಿಸಿದ್ದಾರೆ. ಸಂಪ್ರಬಂಧ (ಸಂಶೋಧನ ಪ್ರಬಂಧ, Research paper),

ಸಮಾಜೋಧಾರ್ಮಿಕ ಅಭ್ಯಾಸ (Socio-Religious Study), ಪ್ರಕೋಶ (ಪದಪ್ರಯೋಗಕೋಶ, Bibliography), Antiqulore (ಪುರಾವಸ್ತುಶಾಸ್ತ್ರ) ಇತ್ಯಾದಿ ಪದಗಳು ಕೇವಲ ಅನುವಾದಗಳಲ್ಲ, ಸಂಶೋಧನ ತತ್ವವನ್ನು ಪದಸ್ಥಗೊಳಿಸಿದ ಹೊಸ ಸೃಷ್ಟಿಗಳು, ಹೊಸ ಕೊಡುಗೆಗಳು.

ಡಾ. ಮೂರ್ತಿ ಅವರ ಸಂಶೋಧನೆಯ ಭಾಷೆಯನ್ನು ಕುರಿತು ಬರೆಯದಿದ್ದರೆ ಈ ಲೇಖನ ಅಪೂರ್ಣವೆನಿಸುತ್ತದೆ. ನಮ್ಮ ನಾಡಿನ ಸಂಶೋಧಕರಲ್ಲಿ ಎದ್ದು ಕಾಣುವ ಹಳೆಯ ತಲೆಮಾರಿನ ಗೋವಿಂದ ಪೈ ಮೊದಲಾದವರು ಸಂಶೋಧನೆಗೆ ಬಳಸುವ ಭಾಷೆಗೆ ಸಂವಹನಶೀಲತೆ ಕಡಿಮೆ. ಅದು ಆಕರಗಳ ಭಾರದಿಂದಲೂ ಬಳಲುತ್ತದೆ. ಆರ್. ನರಸಿಂಹಾಚಾರ್ ಅವರ ಭಾಷೆ ಸಂವಹನಶೀಲವಾಗಿದ್ದರೂ ಘಟನಾಶೋಧ ನಿಷ್ಠತೆ ಕಾರಣವಾಗಿ ಅದು ವಿರಣಾತ್ಮಕವಾಗಿಬಿಡುತ್ತದೆ. ಮುಂದಿನ ತಲೆಮಾರಿನ ಡಾ. ಡಿ. ಎಲ್. ಎನ್. ಅವರ ಭಾಷೆಯಲ್ಲಿಯೂ ಲವಲವಿಕೆ ಕಡಿಮೆ. ಡಾ. ಮೂರ್ತಿ ಅವರ ಭಾಷೆ ಸರಳವಾಗಿದ್ದು, ಅದು ತೀ.ನಂ.ಶ್ರೀ. ಅವರ ಭಾಷೆಯನ್ನು ಸ್ಥೂಲವಾಗಿ ನೆನಪಿಸುತ್ತದೆ. ಹೀಗಿದ್ದೂ, ತೀ.ನಂ.ಶ್ರೀ. ಅವರಿಗಿಂತ ಡಾ. ಮೂರ್ತಿ ಅವರ ಭಾಷೆಯಲ್ಲಿ ತರ್ಕಬದ್ಧತೆ ಎದ್ದು ಕಾಣುತ್ತದೆ. ವ್ಯಾಖ್ಯಾನದಿಂದಾಗಿ ವಿವರಣಾತ್ಮಕಕ್ಕೆ ಇಳಿಯಬಹುದಿದ್ದ ಅವರ ಭಾಷೆಯಲ್ಲಿ ತರ್ಕಬದ್ಧತೆ ಬೆಳೆದುಕೊಂಡು ಬರುತ್ತದೆ. ಹೀಗೆ ಸರಳತೆ ತರ್ಕಬದ್ಧತೆಗಳೆಂಬ ಎರಡು ಗುಣಗಳಿಂದಾಗಿ ಅವರದು ಸಂಶೋಧನೆಗೆ ಹೇಳಿ ಮಾಡಿಸಿದ ಮಾಗದರ್ಶಿ ಭಾಷೆಯಾಗಿದೆ. ಸಂಶೋಧನೆ ಸಾಮಾಜಿಕತೆಯತ್ತ ಹೊರಳಿದರಂತೂ ಅವರ ಭಾಷೆ ಎಣ್ಣೆಯಂತಲ್ಲ, ನೀರಿನಂತೆ ಪ್ರವೇಶಿಸುತ್ತದೆ. ಸಂಪೂರ್ಣ ಸೂರ್ಯಗ್ರಹಣ ಪುಸ್ತಕದ ತುಂಬ ಇಂಥ ಭಾಷೆ ಎದ್ದು ಬರುತ್ತಿದ್ದು, ಕ್ಷೇತ್ರಕಾರ್ಯಕ್ಕೆ ಸಂಬಂಧಪಟ್ಟ ಇತರ ಲೇಖನಗಳಲ್ಲಿ ಅದು ಇನ್ನೂ ಕಣ್ಣಿಗೆ ಹೊಡೆಯುತ್ತದೆ.

ಹೀಗೆ ವ್ಯಾಖ್ಯಾನನಿಷ್ಠ ಪದ್ಧತಿ, ಅಂತರ್‌ಶಿಸ್ತೀಯ ಅಧ್ಯಯನ, ಸಂವಹನಶೀಲ ಅಭಿವ್ಯಕ್ತಿ -ಈ ಮೂರು ದೃಷ್ಟಿಯಿಂದ ಕನ್ನಡ ಸಂಶೋಧನ ಕ್ಷೇತ್ರವನ್ನು ನವೀಕರಿಸಿದ ಕಾರಣ ಡಾ. ಮೂರ್ತಿ ಅವರು 'ಸಂಶೋಧನೆಯ ಸಂಶೋಧಕ' ರೆನಿಸಿದ್ದಾರೆ.

ಈ ಮಾರ್ಗದಲ್ಲಿ ಕೆಲವು ತರುಣ ಸಂಶೋಧಕರು ದುಡಿಯುತ್ತಲಿದ್ದರೂ ಅದು ಮುಂದುವರಿದೀತೆ? ಎಂಬ ಸಣ್ಣ ಸಂದೇಹ ಕಾಡುತ್ತದೆ. ಇದಕ್ಕೆ ಕಾರಣ ಬದಲಾದ ಕಾಲಧರ್ಮ. ಡಾ. ಮೂರ್ತಿ ಅವರಿಗಿದ್ದ ಬಹುವೈಷಯಿಕ ಅಧ್ಯಯನದ ಹಂಬಲ, ಅದಕ್ಕಿಂತ ಅನಿವಾರ್ಯತೆ ಈಗ ಇಲ್ಲ. ಎಲ್ಲ ವಿಷಯಗಳು ಸ್ವತಂತ್ರಶಾಖೆಗಳಾಗಿ ನಮ್ಮಲ್ಲಿ ಬೆಳೆಯುತ್ತಲಿವೆ. ಎರಡನೆಯದಾಗಿ ಇದು ಪ್ರಚಾರಯುಗವಾಗಿದ್ದು, ಸುಲಭ ಪ್ರಚಾರದ ಸಾಹಿತ್ಯಶಾಖೆಗಳನ್ನು ತರುಣರು ಬಯಸುವದು ಸಹಜ. ಸಂಶೋಧನೆ, ಅದರಲ್ಲಿಯೂ 'ಅಂತರ್‌ಶಿಸ್ತೀಯ - ವ್ಯಾಖ್ಯಾನಮುಖಿ ಸಂಶೋಧನೆ'ಯು ಅಪಾರ ಶ್ರಮದೊಂದಿಗೆ ನಿರಂತರ ಚಿಂತನಶೀಲತೆಯನ್ನು ಬಯಸುತ್ತದೆ. ಅನೇಕ ಆಕರ್ಷಣೆಗಳ ಮಧ್ಯೆ ಬದುಕುವ ಇಂದಿನ ಯುವಕರಿಗೆ ನಿರಂತರ ಚಿಂತನಶೀಲತೆಗೆ ಬೇಕಾಗುವ ವ್ಯವಧಾನ ಕಡಿಮೆ. ಹೀಗೆ ವ್ಯವಧಾನ ಕಡಿಮೆಯಾದರೆ ವ್ಯಾಖ್ಯಾನಮುಖಿ ಸಂಶೋಧನ ವಿತಂಡವಾದಕ್ಕೆ ತಿರುಗುವ ಭಯವಿದೆ. ಹಾಗಾದ ಪಕ್ಷದಲ್ಲಿ ಇದು 'ಕೊಲೆ ಮಾಡಿದ್ದರೂ ಕೊಲೆ ಮಾಡಿಲ್ಲ'ವೆಂದು ಸ್ಥಾಪಿಸುವ ಜಾಣ ವಕೀಲನ ತರ್ಕಬದ್ಧ ವಾದವಾಗಿ ಬಿಡುತ್ತದೆ, ಸತ್ಯ ಸತ್ತುಹೋಗುತ್ತದೆ. ಇಷ್ಟೆಲ್ಲ ವಿಘ್ನಗಳ ಮಧ್ಯದಲ್ಲಿಯೂ ನಾವು ಮೂರ್ತಿಗಳ 'ಮಾರ್ಗ'ವನ್ನು ಮುಂದುವರಿಸಬೇಕಾಗಿದೆ.

ಸಂಶೋಧನ - (ಎಂ. ಚಿದಾನಂದಮೂರ್ತಿ ಅಭಿನಂದನ ಗ್ರಂಥ) - ೧೯೯೧.

ಆಕರ : ಮಾರ್ಗ ಸಂಪುಟ–೬

೮೩

ಸಂಸ್ಕೃತಿ ಪರಿಚಾರಕ : ಸದಾನಂದ ಕನವಳ್ಳಿ

೧೯೯೪

ಧಾರವಾಡ, ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ. ಅದಕ್ಕೆ ಈ ಖ್ಯಾತಿಯನ್ನು ತಂದುಕೊಟ್ಟವರು ಅಲ್ಲಿಯ ಕವಿ-ಕಲಾವಿದರು ಮತ್ತು ತಮ್ಮ ಅಗಾಧ ಸಂಘಟನಾಶಕ್ತಿ, ಸದಭಿರುಚಿಗಳಿಂದ ಈ ವಾತಾವರಣವನ್ನು ಬದುಕಿಸುತ್ತ ಬಂದ ಸಂಸ್ಕೃತಿಯ ಪರಿಚಾರಕರು. ಇಂಥ ಪರಿಚಾರಕಶ್ರೇಣಿಯಲ್ಲಿ ಇಂದು ತಪ್ಪದೇ ಕೇಳಿಬರುವ ಹೆಸರು, ಸದಾನಂದ ಕನವಳ್ಳಿ.

ನಟರಲ್ಲ, ನಾಟಕ ಪ್ರದರ್ಶನಕ್ಕೆ ಇವರು ಬೇಕು. ಚಿತ್ರಕಲಾವಿದರಲ್ಲ, ಚಿತ್ರಪ್ರದರ್ಶನಕ್ಕೆ ಇವರು ಬೇಕು. ಸಂಗೀತಗಾರರಲ್ಲ, ಸಂಗೀತ ಕಚೇರಿಗೆ ಇವರು ಬೇಕೇ ಬೇಕು. ಹೀಗೆ ಧಾರವಾಡದ ಸಾಂಸ್ಕೃತಿಕ ಜೀವನದ ಅನಿವಾರ್ಯ ಅಂಗವಾಗಿ ಬೆಳೆದವರು, ಕನವಳ್ಳಿ.

ಮಾಟವಾದ ಮೈಕಟ್ಟು, ಸರಳ ವೇಷ, ಬಗಲಿಗೆ ಬಣ್ಣದ ಚೀಲ - ಈ ಲಕ್ಷಣದ ವ್ಯಕ್ತಿಯೊಬ್ಬ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಂಡುಬಂದರೆ, ಅವರು ಸದಾನಂದ ಕನವಳ್ಳಿ ಎಂದು ಸಹಜವಾಗಿ ಗುರುತಿಸಬಹುದು. ಸಂಘಟನೆ ಸಣ್ಣದೇ ಇರಲಿ, ದೊಡ್ಡದೇ ಇರಲಿ; ಅಲ್ಲಿಯ ಕೆಲಸ ಮುಖ್ಯವೇ ಇರಲಿ, ಅಮುಖ್ಯವೇ ಇರಲಿ; ಸಮರ್ಪಣ ಭಾವದಿಂದ ತೊಡಗಿಸಿಕೊಳ್ಳುವುದು ಇವರ ಸ್ವಭಾವ. ಕಲೆ-ಕಲಾವಿದರನ್ನು ಮುಂದುಮಾಡಿ, ತಾವು ಹಿಂದೆ ನಿಲ್ಲುವ ಇಂಥವರಿಂದಾಗಿ ಧಾರವಾಡ ಪ್ರದೇಶದಲ್ಲಿ ಕಲೆ ದಟ್ಟವಾಗಿ ಕಾಣಿಸಿಕೊಳ್ಳುತ್ತಲಿದೆ, ಕೇಳಿಸಿಕೊಳ್ಳುತ್ತಲಿದೆ.

ಕನವಳ್ಳಿಯವರಿಗೆ ಕಲಾಸೇವೆ ಸ್ವಾರ್ಜಿತ, ಅವರ ಕುಟುಂಬಕ್ಕೆ ಕೃಷಿಸೇವೆ ಪಿತ್ರಾರ್ಜಿತ. ಧಾರವಾಡ ಜಿಲ್ಲೆಯ ಹಿರೇಮುಗದೂರಿನ ಕೃಷಿ ಕುಟುಂಬದಲ್ಲಿ ೧೯೩೫ ಸೆಪ್ಟಂಬರ ೧೯ರಂದು ಕನವಳ್ಳಿಯವರ ಜನನ. ಪ್ರಾಥಮಿಕ ಶಿಕ್ಷಣ ಹಿರೇಮುಗದೂರು, ಕೊರಡೂರು, ಕರಜಗಿಗಳಲ್ಲಿ. ಮಾಧ್ಯಮಿಕ ಶಿಕ್ಷಣ ಬಾಗಿಲಕೋಟೆ, ಹುಬ್ಬಳ್ಳಿ, ಧಾರವಾಡಗಳಲ್ಲಿ. ಕರ್ನಾಟಕ ಕಾಲೇಜಿನಿಂದ ೧೯೫೦ರಲ್ಲಿ ಬಿ. ಎ. ಪದವೀಧರ. ಕರ್ನಾಟಕ ವಿಶ್ವವಿದ್ಯಾಲಯದಿಂದ ೧೯೬೮ರಲ್ಲಿ ಎಂ.ಎ. ಪದವೀಧರ. ಪ್ರಧಾನ ವಿಷಯ ಇಂಗ್ಲಿಷ್. ಪ್ರೊ. ಗೋಕಾಕ, ಪ್ರೊ. ಮೆನೆಜಿಸ್ ಅವರ ಅಚ್ಚುಮೆಚ್ಚಿನ ಶಿಷ್ಯ - ಇದು ವಿದ್ಯಾರ್ಥಿ ಜೀವನ.

ಹುಬ್ಬಳ್ಳಿಯ ಪಿ. ಸಿ. ಜಾಬಿನ ವಿಜ್ಞಾನ ಕಾಲೇಜು, ವಿಜಾಪುರದ ವಿಜಯ ಕಾಲೇಜುಗಳಲ್ಲಿ ಇಂಗ್ಲಿಷ್ ಅಧ್ಯಾಪಕ; ಕೊಪ್ಪಳ ಗವಿಸಿದ್ಧೇಶ್ವರ ಕಾಲೇಜು, ಲಕ್ಷ್ಮೇಶ್ವರ ಮುನಸಿಪಲ್ ಕಾಲೇಜುಗಳ ಪ್ರಾಚಾರ್ಯ; ನಿವೃತ್ತಿಯ ಬಳಿಕ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕ - ಇದು ವೃತ್ತಿಜೀವನ.

ಕನವಳ್ಳಿಯವರು ಕಲೆ-ಸಂಸ್ಕೃತಿಗಳ ಆಸಕ್ತರಾಗಿ, ಆರಾಧಕರಾಗಿ ಬೆಳೆದದ್ದು ವಿಜಾಪುರದಲ್ಲಿ, ಅದು ನಳನಳಿಸಿ ಬೆಳೆಯುವಂತೆ ದುಡಿದದ್ದು ಲಕ್ಷ್ಮೇಶ್ವರ, ಧಾರವಾಡಗಳಲ್ಲಿ. ಎರಡು ದಶಕಗಳ ಕಾಲಾವಧಿಯಲ್ಲಿ ಲಕ್ಷ್ಮೇಶ್ವರ ಕಾಲೇಜು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಕ್ರೀಡಾತ್ಮಕವಾಗಿ ಅನೇಕ ಆದರ್ಶಗಳನ್ನು ಸ್ಥಾಪಿಸಿತು. ಹಳ್ಳಿಯ ಕಾಲೇಜು ವಿಶ್ವವಿದ್ಯಾಲಯ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ತಲೆಗೆ ತುರಾಯಿ ಹಚ್ಚಿಕೊಂಡು ಮೆರೆಯಿತು. ಎಲ್ಲ ಕಾಲೇಜುಗಳು ವಿದೇಶೀ ಆಟಗಳಲ್ಲಿ ತಲ್ಲೀನವಾದರೆ ಲಕ್ಷ್ಮೇಶ್ವರ ಕಾಲೇಜು ಹಚ್ಚಿನದಾಗಿ ಕುಸ್ತಿ, ಈಜು, ಮಲ್ಲಕಂಬಗಳಂಥ ಸ್ವದೇಶೀ ಆಟಗಳ ಮೂಲಕ ಪರಿಸರದ ಕಣ್ಣು ತೆರೆಯಿಸಿತು. ೧೯೭೭ರಲ್ಲಿ ಜರುಗಿಸಿದ ಅಖಿಲ ಕರ್ನಾಟಕ 'ಹಳ್ಳಿಗಾಡು ಓಟ ಸ್ಪರ್ಧೆ'ಯಂತೂ ಗ್ರಾಮೀಣ ಜನತೆಗೆ ಒಂದು ರೋಮಾಂಚನಕಾರಿ ಅನುಭವ.

ಕನವಳ್ಳಿಯವರಿಂದಾಗಿ ಲಕ್ಷ್ಮೇಶ್ವರ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ತುಂಬಿಹೋಗಿದ್ದಿತು. ಬೇಂದ್ರೆ, ಗೋಕಾಕ, ಕಾರಂತ, ಮಾಳವಾಡ, ಯು. ಆರ್. ಅನಂತಮೂರ್ತಿ, ಕಣವಿ, ಕುರ್ತುಕೋಟಿ, ಸಿಂಪಿ ಲಿಂಗಣ್ಣ, ಎಸ್. ಎಲ್. ಭೈರಪ್ಪ ಮೊದಲಾದ ಸಾಹಿತಿಗಳ ಆಗಮನದಿಂದಾಗಿ ಐತಿಹಾಸಿಕ ಲಕ್ಷ್ಮೇಶ್ವರ "ಸಾಂಸ್ಕೃತಿಕ ಲಕ್ಷ್ಮೇಶ್ವರ"ವಾಗಿ ಬೆಳೆಯಿತು. ಕಟ್ಟುನಿಟ್ಟಾದ ಬೋಧನೆ, ನಕಲುರಹಿತ ಪರೀಕ್ಷೆ, ವಶೀಲಿಯಿಲ್ಲದ ಫಲಿತಾಂಶಗಳಿಂದಾಗಿ ಶೈಕ್ಷಣಿಕ ಗುಣಮಟ್ಟ ವರ್ಧಿಸಿತು. ಒಬ್ಬ ಪ್ರಾಮಾಣಿಕ ಪ್ರಿನ್ಸಿಪಾಲನಿಂದ ಒಂದು ಕಾಲೇಜು ಹೇಗೆ ಬಹುಮುಖವಾಗಿ ಬೆಳೆಯಬಹುದೆಂಬುದಕ್ಕೆ ಮುನಸಿಪಲ್ ಕಾಲೇಜು ನಿದರ್ಶನವೆನಿಸಿತು. ಆದರೆ ಅವರ ಪ್ರಾಮಾಣಿಕತೆ ಅವರಿಗೆ ಕೆಲವೊಮ್ಮೆ ಸಿಲುಬೆಯಾಗಿಯೂ ಪರಿಣಮಿಸಿತು. ಇಂದಿನ ದಿನಗಳಲ್ಲಿ ಇದು ಸಹಜ.

ಇಂದು ಶ್ರದ್ಧಾವಂತ ಕೆಲಸಗಾರರು ಸಿಗುವುದು ಕಡಿಮೆ. ಕರ್ನಾಟಕ ವಿಶ್ವವಿದ್ಯಾಲಯ ಕನವಳ್ಳಿಯವರಲ್ಲಿ ಒಬ್ಬ ಶ್ರದ್ಧಾವಂತ ಕೆಲಸಗಾರರನ್ನು ಗುರುತಿಸಿತು. ತನ್ನ ಪ್ರಸಾರಾಂಗಕ್ಕೆ ನಿರ್ದೇಶಕರಾಗಿ ಬರಲು ಆಹ್ವಾನಿಸಿತು. ಗೆಳೆಯರ ಒತ್ತಾಯವೂ ಇದಕ್ಕೆ ಸೇರಿತು. ನಿವೃತ್ತಿಯ ಸುಖಜೀವನ ನಡೆಸಲು ನಿಶ್ಚಯಿಸಿದ್ದ ಕನವಳ್ಳಿಯವರು ಅನಿವಾರ್ಯವಾಗಿ ಮತ್ತೆ ಪ್ರವೃತ್ತಿರಂಗಕ್ಕಿಳಿಯಬೇಕಾಯಿತು. ಕುಲಪತಿ ಡಾ. ರಾಮೇಗೌಡರ ಪ್ರೋತ್ಸಾಹದಲ್ಲಿ ಕನವಳ್ಳಿಯವರು ಯೋಜನಾಬದ್ಧ ಕಾರ್ಯನಿರ್ವಹಿಸಿ ಎರಡು ವರ್ಷಗಳಲ್ಲಿ ಪ್ರಸಾರಾಂಗವನ್ನು ಕ್ರಿಯಾಶೀಲಗೊಳಿಸಿದರು. ನೂರಕ್ಕೂ ಹೆಚ್ಚು ಪ್ರಕಟನೆಗಳನ್ನು ಬೆಳಕಿಗೆ ತಂದರು. ಅನಿಯತವಾಗಿದ್ದ ನಿಯತಕಾಲಿಕೆಗಳು ಈಗ ದಾರಿಯ ಮೇಲೆ ಬಂದವು. ಕುಂಟುತ್ತ ನಡೆದಿದ್ದ ಪ್ರಚಾರೋಪನ್ಯಾಸ, ವಿಶೇಷೋಪನ್ಯಾಸಗಳು ಸಮ ಹೆಜ್ಜೆ ಇಡತೊಡಗಿದವು. ಮಾಸ್ತಿ, ಗುಬ್ಬಿ ವೀರಣ್ಣ, ಬಸವನಾಳ ಶತಮಾನೋತ್ಸವಗಳು ಜರುಗಿದವು. ಜ್ಞಾನಪೀಠ ಪ್ರಶಸ್ತಿವಿಜೇತ ವ್ಹಿ. ಕೆ. ಗೋಕಾಕ, ಪದ್ಮಭೂಷಣ ಪ್ರಶಸ್ತಿ ಗೌರವಾನ್ವಿತ ಮಲ್ಲಿಕಾರ್ಜುನ ಮನ್ಸೂರ ಅವರ ಅಪೂರ್ವ ಸತ್ಕಾರ ಸಮಾರಂಭಗಳ ಸಂಘಟನೆಯಲ್ಲಿ ಕನವಳ್ಳಿ ಕೇಂದ್ರ ಪಾತ್ರವಹಿಸಿದರು.

ಹೀಗೆ ಉದ್ದಕ್ಕೂ ಸಂಸ್ಥೆಯ ಭಾಗವಾಗಿ, ಸಂಸ್ಥೆಯೇ ಆಗಿ, ಕೆಲಸ ಮಾಡಿದ ಕನವಳ್ಳಿಯವರು ಸಮಾಜವಿಮುಖರಾಗಿ ದಂತಗೋಪುರದಲ್ಲಿ ವಿಹರಿಸಿದವರಲ್ಲ. ಮೊದಲಿನಿಂದಲೂ ಸಾಮಾಜಿಕ ಸಂಬಂಧವನ್ನು

ರೂಢಿಸಿಕೊಂಡು ಬೆಳೆದವರು. ಅವರು ಹೋದಲ್ಲಿ ಸ್ನೇಹಿತರ ದೊಡ್ಡ ಬಳಗವಿರುತ್ತದೆ. ಇಲ್ಲವೆ ಸ್ನೇಹಿತರ ದೊಡ್ಡ ಬಳಗವಿರುವಲ್ಲಿ ಕನವಳ್ಳಿಯವರಿರುತ್ತಾರೆ. ಶೈಕ್ಷಣಿಕ ಸಂಘಟನೆ ಇರಲಿ, ಕ್ರೀಡೆ ಇರಲಿ, ಸಾಹಿತ್ಯ-ಸಂಗೀತವಿರಲಿ, ಚಿತ್ರಕಲಾ ಪ್ರದರ್ಶನವಿರಲಿ, ಕನವಳ್ಳಿ ಅಲ್ಲಿ ಹಾಜರ. "ಗುಲ್ಬರ್ಗಾ-ಕರ್ನಾಟಕ ವಿಶ್ವವಿದ್ಯಾಲಯಗಳ ಖಾಸಗಿ ಕಾಲೇಜುಗಳ ಪ್ರಾಂಶುಪಾಲರ ಸಂಘ"ದ ಕಾರ್ಯದರ್ಶಿಯಾಗಿ ಇವರು ಸಲ್ಲಿಸಿದ ಸೇವೆ ದೊಡ್ಡದು. ಧಾರವಾಡದ "ಸಮಾಜ ಪರಿವರ್ತನ ಸಮುದಾಯ"ದ ಉಪಾಧ್ಯಕ್ಷರಾಗಿ ಸಲ್ಲಿಸಿದ ಸೇವೆ ಇನ್ನೂ ದೊಡ್ಡದು. ಧಾರವಾಡದ "ಸಿತಾರರತ್ನ ರಹಿಮತ್‌ಖಾನ ಸಂಗೀತ ಸಮಿತಿ"ಯ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಮತ್ತೂ ದೊಡ್ಡದು. ಧಾರವಾಡ ಪ್ರದೇಶದ ದೊಡ್ಡ ಸುದ್ದಿಯಾಗಿ ಈ ಸಂಗೀತ ಸಮಿತಿಯನ್ನು ಕನವಳ್ಳಿ ಕಟ್ಟಿ ಬೆಳೆಸಿದ್ದಾರೆ. ಸಾಲದುದಕ್ಕೆ ಸಣ್ಣಪುಟ್ಟ ಸಂಘಟನೆಗಳನ್ನೂ ಜೀವಂತವಿಡುವ ಮೂಲಕ "ಸಾಂಸ್ಕೃತಿಕ ಧಾರವಾಡ"ದ ಅನಿವಾರ್ಯ ವ್ಯಕ್ತಿಯಾಗಿ ಬೆಳೆದಿದ್ದಾರೆ. ಸಂಗೀತ ಕಲಾವಿದರಾದ ಮಲ್ಲಿಕಾರ್ಜುನ ಮನ್ಸೂರ, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್ಲ ಮೊದಲುಮಾಡಿ, ವೆಂಕಟೇಶಕುಮಾರ, ಕೈವಲ್ಯ ಕುಮಾರ ಗುರವ, ಗಣಪತಿ ಭಟ್ಟ, ಸಿತಾರ ಕಲಾವಿದ ಬಾಲೇಖಾನ, ಸುಪ್ರಸಿದ್ಧ ತೊಗಲುಬೊಂಬೆಯಾಟದ ಬಳ್ಳಾರಿ ಬೆಳಗಲ್ಲು ವೀರಣ್ಣ, ನಾಟಕ ಕಲಾವಿದರಾದ ಶ್ರೀ ಏಣಗಿ ಬಾಳಪ್ಪ, ಸಿಂಧುವಳ್ಳಿ ಅನಂತಮೂರ್ತಿ, ಸಾಹಿತಿಗಳಾದ ಎಸ್. ಎಲ್. ಭೈರಪ್ಪ, ಚೆನ್ನವೀರ ಕಣವಿ; ಪ್ರಧ್ಯಾಪಕರಾದ ಎಸ್. ಶೆಟ್ಟರ, ಎಂ. ಚಿದಾನಂದಮೂರ್ತಿ; ಸಾಮಾಜಿಕ ಕಳಕಳಿಯ ಮಠಾಧೀಶರಾದ ಗದುಗಿನ ಶ್ರೀ ತೋಂಟದಾರ್ಯ ಜಗದ್ಗುರುಗಳು; ಪತ್ರಕರ್ತರಾದ ಶ್ರೀ ಸಂತೋಷಕುಮಾರ ಗುಲ್ವಾಡಿ, ಚಿತ್ರಕಲಾವಿದರಾದ ಶಶಿ ಸಾಲಿ, ಕೃಷ್ಣ ಪೋತದಾರ, ಮುದ್ರಣ ತಜ್ಞರಾದ ರವಿ ಅಕಳವಾಡಿ, ಫ. ಶಿ. ಭಾಂಡಗೆ, ಹರಿದಾಸ - ಇವರೆಲ್ಲ ಕನವಳ್ಳಿಯವರ ಸಾಂಸ್ಕೃತಿಕ ಬಳಗ. ಹೀಗೆ ಕನವಳ್ಳಿಯವರು "ಯೋಜಕಸ್ತತ್ರದುರ್ಲಭಃ" ಎಂಬ ಸೂತ್ರಕ್ಕೆ ವ್ಯಾಖ್ಯಾನವೆನಿಸಿದ್ದಾರೆ. "ಕಾರ್ಯವನ್ನು ಯೋಜಿಸು, ಯೋಜನೆಯನ್ನು ಕಾರ್ಯಗತಗೊಳಿಸು" ಎಂಬ ಮಾತಿಗೆ ನಿದರ್ಶನವೆನಿಸಿದ್ದಾರೆ.

ಕ್ರಿಯಾಶೀಲ ಸಂಘಟಕರಲ್ಲದೆ ಸಾಹಿತಿಯಾಗಿ ಬೆಳೆದುದು ಶ್ರೀ ಕನವಳ್ಳಿಯವರ ವಿಶೇಷತೆ. ಕಲಾವಿಮರ್ಶೆ ಕನವಳ್ಳಿಯವರ ಮುಖ್ಯಕ್ಷೇತ್ರ. ರಂಗಭೂಮಿಯ ಶಿರಹಟ್ಟಿ ವೆಂಕೋಬರಾವ, ಗುಬ್ಬಿ ವೀರಣ್ಣ, ಕಣಬರ್ಗಿಮಠ ಅವರನ್ನು ಕುರಿತು, ಸಂಗೀತಕ್ಷೇತ್ರದ ಪಂಚಾಕ್ಷರಿ ಗವಾಯಿ, ಮಲ್ಲಿಕಾರ್ಜುನ ಮನ್ಸೂರ, ಭೀಮಸೇನ ಜೋಶಿ ಅವರನ್ನು ಕುರಿತು ಬರೆದ ಪುಸ್ತಕ ಇವರ ವಿಶೇಷ ಕೊಡುಗೆಗಳು. "ಓಲಂಪಿಕ್, ನಡೆದುಬಂದ ದಾರಿ" ಕ್ರೀಡಾ ಕ್ಷೇತ್ರದ ಒಂದು ಉತ್ತಮ ಕೃತಿ. "ಕಿತ್ತಿಕೋ ಹಚ್ಚಿಕೋ ಸತ್ಯಾಗ್ರಹ" ಪರಿಸರ ವಲಯದ ಒಂದು ಅಪರೂಪ ಕೃತಿ.

ಇಂಗ್ಲೀಷ್ ಪ್ರಾಧ್ಯಾಪಕ, ಹಿಂದಿ ಪರಿಣತ, ಕನ್ನಡ ಲೇಖಕರಾಗಿರುವುದು ಕನವಳ್ಳಿಯವರ ಇನ್ನೊಂದು ವಿಶೇಷತೆ. ಹೀಗಾಗಿ ಅವರು ರಾಬರ್ಟ್ ಸಿವೆಲ್, ರೋಮಿಲಾ ಥಾಪರ್ ಅವರ ಸುಪ್ರಸಿದ್ಧ ಇಂಗ್ಲಿಷ್ ಕೃತಿಗಳನ್ನು "ಮರೆತು ಹೋಗಿರುವ ಸಾಮ್ರಾಜ್ಯ", "ಇಂಡಿಯಾ" ಹೆಸರುಗಳಲ್ಲಿ ಕನ್ನಡಕ್ಕೆ ತಂದರು. ಡಾ. ಎಸ್. ಶೆಟ್ಟರ ಅವರ ಇಂಗ್ಲಿಷ ಕೃತಿಯನ್ನು "ಶ್ರವಣ ಬೆಳಗೊಳ" ಹೆಸರಿನಿಂದ ಹಿಂದಿಗೆ ಅನುವಾದಿಸಿದರು. ತಮ್ಮ "ಕಿತ್ತಿಕೋ ಹಚ್ಚಿಕೋ ಸತ್ಯಾಗ್ರಹ" ಕೃತಿಯನ್ನು "ಕ್ವೆಸ್ಟ್ ಫಾರ್ ಜಸ್ಟಿಸ್" ಹೆಸರಿನಲ್ಲಿ ಇಂಗ್ಲಿಷಕ್ಕೆ ಅನುವಾದಿಸಿದರು. ಹೀಗೆ ಮೂಲತಃ ಸಾಂಸ್ಕೃತಿಕ ಪರಿಚಾರಕರಾಗಿರುವ ಕನವಳ್ಳಿಯವರು ಅನೇಕ ಭಾಷೆಗಳ ನಡುವೆ ರಾಯಭಾರಿಯಾಗಿಯೂ ದುಡಿದರು. ಈ ಬಗೆಬಗೆಯ ಬರೆವಣಿಗೆಗಾಗಿ, ಅದರಲ್ಲಿಯೂ ಕಲಾವಿಮರ್ಶಾತ್ಮಕ ಬರೆವಣಿಗೆಗಾಗಿ ಇವರಿಗೆ "ಕರ್ನಾಟಕ ರಾಜ್ಯ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ" ಸಂದಿತು.

ಒಂದು ವಿಷಯವನ್ನು ಹೇಳದಿದ್ದರೆ ಕನವಳ್ಳಿಯವರ ಪರಿಚಯ ಪೂರ್ಣವಾಗುವುದಿಲ್ಲ. ಅದು ಸ್ನೇಹಪರತೆ. "ಸ್ನೇಹ" ವೆನ್ನುವುದು ನಿಘಂಟುವಿನ ಶಬ್ದವಾಗಿ ಉಳಿದಿರುವ ಇಂದಿನ ದಿನಗಳಲ್ಲಿ, ಅದಕ್ಕೆ ಪರ್ಯಾಯ ಹೆಸರು ಕನವಳ್ಳಿ. ಈ ಸ್ನೇಹಜೀವನ ಮತ್ತು ಸಾಂಸ್ಕೃತಿಕ ಜೀವನಗಳ ಸಂಯುಕ್ತ ಹೆಸರು "ಸದಾನಂದ ಕನವಳ್ಳಿ."

ಸುಧಾ ಪತ್ರಿಕೆ, ೧೯೯೪.

ಆಕರ : ಮಾರ್ಗ ಸಂಪುಟ–೬

■■

೮೪

ನೆನಪಿನಂಗಳದಿಂದ

೧೯೯೬

'ಕಂನುಡಿಯ ಹುಟ್ಟು' ನಾನು ನೋಡಿದ ಶಂಬಾ ಅವರ ಮೊದಲ ಕೃತಿ. ಮುಖಪುಟದ ಮೇಲೆ ಅನುಸ್ವಾರ ಬಳಸಿ ಬರೆದ 'ಕಂನುಡಿ' ಪದ, ಶ್ಲೇಷಾರ್ಥದ 'ಜೇನುಹುಟ್ಟು' ಚಿತ್ರ ನನ್ನನ್ನು ತುಂಬಾ ಆಕರ್ಷಿಸಿದವು. ಹೈಸ್ಕೂಲು ವಿದ್ಯಾರ್ಥಿಯಾಗಿದ್ದ ನನಗೆ ವಿಷಯ ತಿಳಿಯದೇ ಹೋದರೂ ಇವರೊಬ್ಬ ವಿಶಿಷ್ಟ ಲೇಖಕರೆಂಬ ಅಂಶ ಮನವರಿಕೆಯಾಯಿತು.

'ಕಂನಡದ ನೆಲೆ' ನಾನು ಓದಿದ ಶಂಬಾ ಅವರ ಮೊದಲ ಕೃತಿ. ಕಾಲೇಜು ವಿದ್ಯಾರ್ಥಿಯಾಗಿದ್ದ ಕಾಲವದು. ನಮ್ಮ ನಾಡಿನ ಬಗೆಗೆ ಆದರ್ಶ - ಅಭಿಮಾನಗಳು ನನ್ನಲ್ಲಿ ಗರಿಗೆದರುತ್ತಿದ್ದ ಆ ಸಂದರ್ಭದಲ್ಲಿ ಈ ಪುಸ್ತಕದ ಓದು ಕರ್ನಾಟಕದ ವಿಸ್ತಾರ, ಸಂಸ್ಕೃತಿಗಳ ಬಗೆಗೆ ಅಸ್ಪಷ್ಟವಾದರೂ ವಿಶಿಷ್ಟ ಪರಿಣಾಮ ಬೀರಿತು. ಆ ಕಾಲದ ಸಂಶೋಧಕರಾದ ಗೋವಿಂದ ಪೈ ಮೊದಲಾದವರಿಗಿಂತ ಇವರು ಭಿನ್ನ ಸಂಸೋಧಕರೆಂದು ಖಚಿತವಾಯಿತು.

ಶಂಬಾ ಅವರನ್ನು ನಾನು ಮೊದಲು ನೋಡಿದ್ದು, ಭಾಷಣ ಕೇಳಿದ್ದು ೧೯೬೧ರಲ್ಲಿ. ಎಂ. ಎ. ಓದುತ್ತಲಿದ್ದ ಸಂದರ್ಭವದು. ನಮ್ಮ ಕರ್ನಾಟಕ ಸಂಘಕ್ಕೆ ಅತಿಥಿಗಳಾಗಿ ಬಂದಿದ್ದ ಅವರು ಪುರಾಣ, ದೇವತೆ ಇತ್ಯಾದಿ ವಿಷಯ ಕುರಿತು ಮಾತನಾಡಿದರು. ವಿದ್ಯಾರ್ಥಿಗಳಾದ ನಮಗೆ ಅವರ ಭಾಷಣ ಸಂಪೂರ್ಣ ಅರ್ಥವಾಗಲಿಲ್ಲ. ವಿಭಾಗದ ಮುಖ್ಯಸ್ಥರಾದ ಡಾ. ಆರ್. ಸಿ. ಹಿರೇಮಠ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶಂಬಾ ಅವರ ಉಪನ್ಯಾಸದ ಕೆಲವು ಅಂಶಗಳನ್ನು ನಿರಾಕರಿಸಿ ಮಾತನಾಡಿದರು. ಶಂಬಾ ಮಧ್ಯದಲ್ಲಿಯೇ ಎದ್ದು ನಿಂತು ವಿರೋಧಿಸಿದರು. ಇಬ್ಬರಿಗೂ ವೇದದಿಕೆಯ ಮೇಲೆ ಬೆಳೆದ ಮಾತಿನ ಘರ್ಷಣೆ ಇತರ ಅಧ್ಯಾಪಕರ ಮಧ್ಯಸ್ಥಿಕೆಯಿಂದ ತಣ್ಣಗಾಯಿತು.

ಆಮೇಲೆ ಶಂಬಾ ಅವರಿಗೂ ನನಗೂ ಒಂದು ದಶಕದಷ್ಟು ಕಾಲ ಸಂಪರ್ಕ ಕೂಡಿ ಬರಲಿಲ್ಲ. ನಾನು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಯಾಗಿದ್ದ ಅವಧಿ (೧೯೭೪). ಆಗ ಭಾಷೆ-ಸಂಸ್ಕೃತಿಗಳ ಸಂಬಂಧವನ್ನು ಕುರಿತು ಅವರು ಗಾಢ ಚಿಂತನೆ ನಡೆಸಿದ್ದರು. ತಮ್ಮ ಈ ಚಿಂತನೆಯನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳುವ ಉತ್ಕಟತೆ ಅವರದಾಗಿದ್ದಿತು. ಇದನ್ನು ಅರ್ಥಮಾಡಿಕೊಂಡ ನಾನು ವಿದ್ಯಾವರ್ಧಕ ಸಂಘದಲ್ಲಿ ವಿಶೇಷ ಉಪನ್ಯಾಸ ಏರ್ಪಡಿಸಿ, ನಂತರ ಅದನ್ನು 'ಭಾಷೆ ಮತ್ತು ಸಂಸ್ಕೃತಿ' ಎಂಬ

ಹೆಸರಿನಿಂದ ಪ್ರಕಟಿಸಿದೆನು. ಇದನ್ನು ಶಂಬಾ ನನ್ನ ಮುಂದೆ ಆಗಾಗ ಪ್ರಸ್ತಾಪಿಸಿ ಧನ್ಯವಾದ ಹೇಳುತ್ತಿದ್ದರು. ತಮ್ಮ ತಲೆಯಲ್ಲಿ ತುಂಬಿಕೊಂಡಿದ್ದ ವಿಚಾರಗಳು ಪುಸ್ತಕರೂಪದಲ್ಲಿ ಪ್ರಕಟಗೊಂಡ ಸಂತೋಷ ಅವರದಾಗಿತ್ತು. ಆ ಬಳಿಕ ಶಂಬಾ ಅವರಿಗೂ ನನಗೂ ಸಂಬಂಧ ವರ್ಧಿಸತೊಡಗಿತು. ನಾನು ಅವರ ವಿಚಾರಗಳನ್ನು ಮುಂದುವರಿಸಲು ಅಪೇಕ್ಷಿಸುತ್ತಿದ್ದರು. ಆದರೆ ಅವರ ಬರವಣಿಗೆ ಕ್ಲಿಷ್ಟವಾಗಿರುವುದರಿಂದ, ಅದು ಊಹೆಯಿಂದ ಊಹೆಗೆ ಮುಂದುವರಿಯುವುದರಿಂದ, ಆ ಹೊಣೆ ನನಗೆ ಸಾಧ್ಯವಿಲ್ಲವೆಂದು ಮುಖತಃ ಹೇಳಿದೆ.

೧೯೮೦ರ ಇಸ್ವಿ, 'ಬಿತ್ತಿದ್ದನ್ನು ಬೆಳಕೋ' ಪುಸ್ತಕದ ಬಿಡುಗಡೆಯನ್ನು ನಾನು ಮಾಡಬೇಕೆಂದು ಶಂಬಾ ಬಯಸಿದರು. ಅರೆಮನಸ್ಸಿನಿಂದಲೇ ಒಪ್ಪಿಕೊಂಡೆ. "ಯಾವುದೊಂದು ಸಂಸ್ಕೃತಿಯ ಐತಿಹಾಸಿಕ ಸ್ವರೂಪದ ಅನ್ವೇಷಣೆಯಿಂದ ಆ ಜನರ, ಆ ನಿನ್ನೆಗಳ ಫಲಿತ ಇಂದಿನ ಸಮಸ್ಯಾ ಪರಿಹಾರಕ್ಕೆ ಉಪಕಾರವಾಗುತ್ತಿರಬೇಕು" ಎಂಬ ಅವರ ವಾಕ್ಯದ ಸುತ್ತ ಕೆಲವು ಮಾತುಗಳನ್ನಾಡಿದೆ. ಮುಂದುವರಿದು 'ಮಾನವನು ನರನಾಗಿದ್ದಾನೆ' ಎಂಬ ಶಂಬಾ ವಿಚಾರ ಹೊಸದೇನಲ್ಲ, ಜಂಗಮವು ಸ್ಥಾವರವಾಗಿದೆ ಎಂಬ ಶಬ್ದಗಳ ಮೂಲಕ ಶರಣರು ಹೇಳಿದುದೇ ಆಗಿದೆ, ಇತ್ಯಾದಿಯಾಗಿ ಹೇಳಿದೆ. ಶಂಬಾ ಅವರಿಗೆ ಬಹಳಷ್ಟು ತೃಪ್ತಿಯಾದರೂ ನನ್ನ ಭಾಷಣದಿಂದ ಒಂದಿಷ್ಟು ಅತೃಪ್ತಿಯೂ ಆಯಿತೆಂದು ತೋರುತ್ತದೆ.

ಗೋಕಾಕ ಚಳವಳಿಯ ಹಿನ್ನೆಲೆಯ ಸಂದರ್ಭ. ಶಿಕ್ಷಣದಲ್ಲಿ ಕನ್ನಡದ ಸ್ಥಾನವನ್ನು ಕುರಿತು ಸಾಹಿತಿಗಳ ಅಭಿಪ್ರಾಯ ಸಂಗ್ರಹಿಸಲು ಡಾ. ಗೋಕಾಕ್ ಸಮಿತಿ ಧಾರವಾಡಕ್ಕೆ ಆಗಮಿಸಿದ್ದಿತು. ಧಾರವಾಡದ ಸ್ನೇಹಿತರಾದ ನಾವೆಲ್ಲಾ 'ಗೋಕಾಕ್ ಗೋ ಬ್ಯಾಕ್' ಎಂದು ಘೋಷಿಸುತ್ತಾ ಮುತ್ತಿಗೆ ಹಾಕಿ ಸಮಿತಿಯ ಕಾರ್ಯಕಲಾಪಗಳನ್ನು ವಿಫಲಗೊಳಿಸಿ, ಅವರನ್ನು ಮರಳಿಸಿದ್ದೆವು. ಮುಂದೆ ಒಂದೆರಡು ವಾರಗಳಲ್ಲಿ ಸರಕಾರದ ಭಾಷಾ ಧೋರಣೆಯನ್ನು ಖಂಡಿಸಲು ವಿದ್ಯಾವರ್ಧಕ ಸಂಘದ ಆವರಣದಲ್ಲಿ ಬಹಿರಂಗ ಸಂಭೆ ಏರ್ಪಡಿಸಲಾಗಿದ್ದಿತು. ಅಂದಿನ ಬೃಹತ್ ಸಭೆಯ ಅಧ್ಯಕ್ಷರು ಶಂಬಾ ಅವರು. ಇದಕ್ಕೆ ಕಾರಣ, ಮಡಿಕೇರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಅವರು ಸರಕಾರದ ನೀತಿಯನ್ನು ಟೀಕಿಸಿದ್ದರು. ಅಂದಿನ ಸಭೆಯಲ್ಲಿ ಪಾಟೀಲ ಪುಟ್ಟಪ್ಪ, ಧಾರವಾಡಕರ, ಕಣವಿ, ಚಂಪಾ, ನಾನು ಮೊದಲಾದವರು ಮಾತನಾಡಿದೆವು. ಕೇವಲ ಹುಣ್ಣಿಮೆಗೊಮ್ಮೆ ಅಮವಾಸ್ಯೆಗೊಮ್ಮೆ ಸಭೆ ಸೇರಿ ಖಂಡಿಸುವುದು ಈ ಸಮಸ್ಯೆಗೆ ಪರಿಹಾರವಲ್ಲ, ನಿರಂತರ ಹೋರಾಟ ನಡೆಯಬೇಕು - 'ಕನ್ನಡ ಕ್ರಿಯಾಸಮಿತಿ' ಹೆಸರಿನ ಹೋರಾಟ ಸಂಘಟನೆ ಅಸ್ತಿತ್ವಕ್ಕೆ ಬರುವುದು ಅಗತ್ಯವಿದೆ ಎಂದು ನಾನು ಒತ್ತಿ ಹೇಳಿದೆ. ಸಭೆ ಪ್ರಚಂಡ ಬೆಂಬಲ ನೀಡಿತು.ಸಭೆ ಮುಗಿದೊಡನೆ ಗಣ್ಯರೆಲ್ಲಾ ವಿದ್ಯಾವರ್ಧಕ ಸಂಘದ ಕಟ್ಟಡದಲ್ಲಿ ಸಭೆಸೇರಿ ಕ್ರಿಯಾಸಮಿತಿಯನ್ನು ರಚಿಸಿದೆವು. ಮುಂದಾಗಿ ಸಭೆಯಲ್ಲಿ ಕ್ರಿಯಾಸಮಿತಿಯ ಸ್ಥಾಪನೆಯ ಅಗತ್ಯವನ್ನು ಕುರಿತು ಮಾತನಾಡಿದ್ದ ನಾನು ಮತ್ತು ಸಭೆಯನ್ನು ಸಂಘಟಿಸಿದ್ದ ಚಂಪಾ ಕಾರ್ಯದರ್ಶಿಗಳಾಗಬೇಕೆಂದು ಸಭೆ ಘೋಷಿಸಿತು. ಅಧ್ಯಕ್ಷರ ಆಯ್ಕೆ ಅಷ್ಟು ಸುಲಭವಾಗಿರಲಿಲ್ಲ. ಪಾಟೀಲ ಪುಟ್ಟಪ್ಪ ಅವರಿಗೆ ಅಧ್ಯಕ್ಷರಾಗುವ ಇಚ್ಛೆ ಇದ್ದಿತು. ಕೆಲವರಿಗೆ ಇದು ಬೇಡವಾಗಿದ್ದಿತು. ಜಾಣತನ ಮಾಡಿ ಶಂಬಾ ಅವರನ್ನು ಅಧ್ಯಕ್ಷರನ್ನಾಗಿಸಿದೆವು. ಅವರು ಅದಕ್ಕೆ ಯೋಗ್ಯವ್ಯಕ್ತಿ ಎನ್ನುವುದು ಬೇರೆ ಮಾತು.

ಶಂಬಾ ಅಧ್ಯಕ್ಷತೆಯ 'ಕ್ರಿಯಾಸಮಿತಿ' ಅಸ್ತಿತ್ವಕ್ಕೆ ಬಂದು, ಹೋರಾಟ ದಿನದಿಂದ ದಿನಕ್ಕೆ ಬೆಳೆಯುತ್ತ ನಡೆಯಿತು. ವೃದ್ಧಾಪ್ಯ ಕಾರಣದಿಂದಾಗಿ ಶಂಬಾ ಅವರು ಬಹಿರಂಗ ಸಭೆಗಳಿಗೆ ಬರುವುದು ಸಾಧ್ಯವಿರಲಿಲ್ಲ. ಆದರೂ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ ದಿನ ಅವರನ್ನು ಕರೆತಂದೆವು. ಅಂದು ಸಾಂಕೇತಿಕವಾಗಿ ಒಂದೆರಡು ತಾಸು ಕುಳಿತು, ಈ ಉಪವಾಸ ಸತ್ಯಾಗ್ರಹ ಯಶಸ್ವಿಯಾಗಿ ಮುಂದುವರಿಯಲಿ ಎಂದು ಹಾರೈಸಿ ಹೋದರು.

ಹೋರಾಟದ ಸೆಳವು ನಮ್ಮನ್ನು ಯಾವ ದಿಕ್ಕಿಗೆ ಎಳೆದೊಯ್ಯುವುದೆಂಬುದರ ಪರಿವೆಯಿಲ್ಲದೆ ಚಳವಳಿ ಉಕ್ಕೇರುತ್ತಾ ನಡೆಯಿತು. ಈ ಗದ್ದಲ-ಗೊಂದಲವನ್ನು ತಮ್ಮ ವೃದ್ಧಾಪ್ಯ ತಡೆದುಕೊಳ್ಳದೆಂಬ ಭೀತಿಯಿಂದ ಶಂಬಾ ಅವರು ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ನೀಡಿದರು. ಅದೇನೇ ಇರಲಿ, ಅವರ ಅಧ್ಯಕ್ಷತೆಯಿಂದ ಚಳವಳಿಗೆ ಒಂದು ಘನತೆ ಪ್ರಾಪ್ತವಾದದ್ದು ನಿಜ.

ಶಂ. ಬಾ. ಸ್ಮೃತಿಗಂಧ - ಸಂ: ಎಸ್. ಶಿವಲಿಂಗಯ್ಯ - ಜಿ. ಎಂ. ಹೆಗಡೆ. (೧೯೯೬)

ಆಕರ : ಮಾರ್ಗ ಸಂಪುಟ–೬

■■

೮೫

ನಾಡಗೇರ ಮಾಸ್ತರ : ಜೀವಂತ ದಂತಕಥೆ

೧೯೯೭

"ನಾಡಿಗೇರ ಮಾಸ್ತರ"

ಧಾರವಾಡದಲ್ಲಿ ಪ್ರತಿಧ್ವನಿಸುವ ಹೆಸರು. ಬೇಂದ್ರೆ ಮಾಸ್ತರ, ಬಸವನಾಳ ಮಾಸ್ತರರನ್ನು ಬಿಟ್ಟರೆ ಮಾಸ್ತರ ಪರಂಪರೆಯಲ್ಲಿ ಕೇಳಿ ಬರುವ ಮೂರನೆಯ ದೊಡ್ಡ ಹೆಸರು, ಕೊನೆಯ ದೊಡ್ಡ ಹೆಸರು ನಾಡಿಗೇರ ಮಾಸ್ತರ.

"ಸಮಸ್ತ ಧಾತ್ರಿ ಕೈಮುಗಿವುದು ನಿಮ್ಮದೊಂದು ಪೆಸರ್ಗೇಳ್ದೊಡೆ"

ಆಚಾರ್ಯ ದ್ರೋಣರ ಹೆಸರು ಕಿವಿಗೆ ಬೀಳುತ್ತಲೇ ಸಮಸ್ತ ಜನಗಣದ ಕೈಗಳು ತಾನಾಗಿಯೇ ಮುಗಿಯುತ್ತಿದ್ದವೆಂದು ಇಲ್ಲಿ ಹೇಳುತ್ತಾನೆ, ಪಂಪ. ಇಂಥ ಗೌರವವನ್ನು ಗಳಿಸಿಕೊಂಡ ನಮ್ಮ ಕಣ್ಣು ಮುಂದಿನ ಉದಾಹರಣೆ ಎನಿಸಿದ್ದಾರೆ, ನಾಡಿಗೇರ ಮಾಸ್ತರ.

ಇವರು ಕಾಲೇಜ, ಪ್ರಾಧ್ಯಾಪಕರಲ್ಲ. ವಿಶ್ವವಿದ್ಯಾಲಯದ ಪ್ರಾಧ್ಯಾಪಕರಂತೂ ಅಲ್ಲವೇ ಅಲ್ಲ. ಕೇವಲ ಹೈಸ್ಕೂಲ ಮಾಸ್ತರ, ಹೆಡ್ ಮಾಸ್ತರ. ಆದರೆ ಇವರ ವಿಷಯವಾಗಿ ವಿದ್ಯಾರ್ಥಿಗಳಲ್ಲಿ, ಅಧ್ಯಾಪಕರಲ್ಲಿ, ಅಧಿಕಾರಿಗಳಲ್ಲಿ, ಸಾರ್ವಜನಿಕರಲ್ಲಿ ದೊಡ್ಡ ಗೌರವ. ಇದಕ್ಕೆ ಕಾರಣ "ಮಾಸ್ತರ" ಶಬ್ದಕ್ಕೆ ಬರೆದ ವ್ಯಾಖ್ಯಾನದಂತಹ ಇವರ ಬದುಕು.

"ಒಳ್ಳೆಯ ಶಿಕ್ಷಕ ನಿವೃತ್ತಿ ಬಳಿಕವೂ ಶಿಕ್ಷಕನಾಗಿಯೇ ಮುಂದುವರಿಯುತ್ತಾನೆ" ಎಂದು ಹೇಳುವುದುಂಟು. ಈ ಮಾತಿಗೆ ನಿದರ್ಶನವೆಂಬಂತೆ ನಾಡಿಗೇರ ಮಾಸ್ತರರು ನಿವೃತ್ತಿ ನಂತರವೂ ಶಿಕ್ಷಣದ ಪ್ರಗತಿಗಾಗಿ ಪ್ರಯೋಗಗಳನ್ನು ಮುಂದುವರಿಸಿದ್ದ ಸಂದರ್ಭದಲ್ಲಿ ಅವರನ್ನು ಮೊಟ್ಟಮೊದಲು ಸಂದರ್ಶಿಸುವ ಯೋಗ ನನಗೆ ಒದಗಿ ಬಂದಿದ್ದಿತು. ಪ್ರಥಮ ಸಂದರ್ಶನದಲ್ಲಿಯೇ ನಾನು ಅವರ "ಸಮ್ಮೋಹಿನಿ" ಪ್ರಭಾವಕ್ಕೆ ವಶನಾದೆ. ಗಾಂಧೀಯುಗದ ಒಂದು ಮಾದರಿಯನ್ನು ಕಂಡ ಧನ್ಯತೆ ನನ್ನದಾಯಿತು.

ಕುಸಿಯುತ್ತಲಿರುವ ಮಕ್ಕಳ ಕನ್ನಡ ಬರಹದ ಬಗೆಗೆ ಮಾಸ್ತರರು ವ್ಯಾಕುಲರಾಗಿದ್ದರು. ಈ ಅಪಾಯದಿಂದ ಅವರನ್ನು ಪಾರು ಮಾಡಲು ಚಿಂತನ ನಡೆಸಿದ್ದರು. ಮಾದರಿ ಪಾಠಗಳನ್ನು ರಚಿಸುವುದು, ಪ್ರಶ್ನೆ ಪತ್ರಿಕೆ ಸಿದ್ಧಪಡಿಸಿ ಧಾರವಾಡದ ಶಾಲೆಗಳಲ್ಲಿ ತಮ್ಮ ಶಿಕ್ಷಣ ಚಿಂತನೆಗಳನ್ನು ಪ್ರಯೋಗಕ್ಕೆ ಒಡ್ಡುವುದು -

ಇತ್ಯಾದಿ ದೊಡ್ಡ ಪ್ರಮಾಣದ ಚಟುವಟಿಕೆಗಳು ಮಾಸ್ತರರಿಗೆ ಮುಖ್ಯವಾಗಿದ್ದವು. ಅವರ ಮನೆ ಇವೆಲ್ಲವುಗಳಿಗೆ ಕೇಂದ್ರವಾಗಿ ಬಿಟ್ಟಿದ್ದಿತು. ಇಳಿ ವಯಸ್ಸಿನಲ್ಲಿಯೂ ಅವರಿಗಿದ್ದ ಉತ್ಸಾಹಕ್ಕೆ, ಎಳೆಯರ ಭವಿಷ್ಯದ ಬಗೆಗಿನ ಕಳಕಳಿಗೆ, ಕನ್ನಡದ ಮೇಲಿನ ಅದಮ್ಯ ಪ್ರೀತಿಗೆ ಮಾರುಹೋದ ನನ್ನ ಮನಸ್ಸು ಅಂದೇ ಅವರ ಗುರುತ್ವವನ್ನು ಒಪ್ಪಿಕೊಂಡಿತು. ದೂರದಿಂದ ಕೇಳಿದುದನ್ನು ಹತ್ತಿರದಿಂದ ಕಂಡಂತಾಯಿತು. ಕನ್ನಡವನ್ನು ಕಾಯುವ ನೆಪದಲ್ಲಿ ಸರಕಾರವನ್ನು ಮೇಯುವವರು ನಮ್ಮ ಸುತ್ತ ತುಂಬಿಕೊಂಡಿರುವ ಇಂದಿನ ದಿನಗಳಲ್ಲಿ ನಿವೃತ್ತ ಮಾಸ್ತರರ ಈ ನಿರ್ವ್ಯಾಜ್ಯ ಕನ್ನಡ ಪ್ರೀತಿಗೆ ಏನೆನ್ನಬೇಕು !!

ಈ ಘಟನೆ ಸಂಭವಿಸಿದ ಕೆಲವೇ ದಿನಗಳಲ್ಲಿ ರೈಲಿನ ಮೂಲಕ ಮುಂಬಯಿಗೆ ಪ್ರಯಾಣಿಸುತ್ತಿದ್ದೆ. ನನ್ನೊಂದಿಗೆ ಧಾರವಾಡದಲ್ಲಿ ರೈಲು ಹತ್ತಿದ ಸಹ ಪ್ರಯಾಣಿಕರೊಬ್ಬರು ಎಡಗೈಯಿಂದ ಬರೆಯುತ್ತಲಿದ್ದರು. ಮರುಕ-ಗೌರವ ಮಿಶ್ರಿತ ಭಾವದಿಂದ ಅವರೊಂದಿಗೆ ಮಾತು ಆರಂಭಿಸಿದೆ.

ನೀವು ಯಾರು ?

ಮೋಹನ ನಾಡಿಗೇರ.

ನಾಡಿಗೇರ ಮಾಸ್ತರ ಏನಾಗಬೇಕು?

ಅವರು ನನ್ನ ತಂದೆ.

ಮೋಹನ ನನಗೆ ತೀರ ಹತ್ತಿರವಾದರು. ಆ ಮಾತು ಈ ಮಾತು ಆಡುತ್ತ ಹೊತ್ತು ಕಳೆಯುತ್ತಲಿದ್ದೆವು.

ಮಾಸ್ತರರು ನಿನ್ನನ್ನು ಹೇಗೆ ಬೆಳೆಸಿದರು?

ಅದು ದೊಡ್ಡ ಕಥೆ. ತಾವೂ ಕಷ್ಟವನ್ನು ಬರಮಾಡಿಕೊಂಡವರು, ನಮ್ಮನ್ನೂ ಅದರ ಜೊತೆ ಬದುಕಿಸಿದರು. ತಂದೆಯವರು ಕೆ. ಇ. ಬೋರ್ಡ್ ಹೈಸ್ಕೂಲ ಹೆಡ್‌ಮಾಸ್ತರ ಆಗಿದ್ದ ಸಂದರ್ಭ. ಶಾಲೆ ಆರ್ಥಿಕವಾಗಿ ತುಂಬ ದುಸ್ಥಿತಿಯನ್ನು ಅನುಭವಿಸುತ್ತಿದ್ದಿತು. ಹೀಗಾಗಿ ನಮ್ಮ ತಂದೆ ಪೂರ್ಣ ಪಗಾರಕ್ಕೆ ಸಹಿ ಹಾಕಿ, ಅರ್ಧ ಪಗಾರ ತೆಗೆದುಕೊಳ್ಳುತ್ತಿದ್ದರು. ಆರ್ಥಿಕವಾಗಿ ದುರ್ಬಲವಾಗಿದ್ದ ನಮ್ಮ ಕುಟುಂಬ ಇದರಿಂದ ತುಂಬ ತೊಂದರೆ ಅನುಭವಿಸಿತು. ತಂದೆಯವರು ಇದಾವುದನ್ನೂ ಲೆಕ್ಕಿಸದೆ ಹೈಸ್ಕೂಲ್ ಆರ್ಥಿಕ ಸುಧಾರಣೇಯಲ್ಲಿಯೇ ಮುಳುಗಿದ್ದರು.

ಇವರ ಈ ಅರ್ಧ ಪಗಾರ ಉಪಕ್ರಮ ನನ್ನ ವಿದ್ಯಾಭ್ಯಾಸದ ಮೇಲೆಯೂ ಪರಿಣಾಮ ಬೀರಿತು. ನಾನು ಮೊದಲಿನಿಂದಲೂ ಪ್ರಥಮ ದರ್ಜೆಯ ವಿದ್ಯಾರ್ಥಿ. ಇದರಿಂದಾಗಿ ಸಹಜವಾಗಿಯೇ ಶಿಷ್ಯವೇತನ ಲಭಿಸಿ ನನ್ನ ವಿದ್ಯಾರ್ಥಿ ಜೀವನವಾದರೂ ನೆಮ್ಮದಿಯಿಂದ ನಡೆಯುವುದೆಂದು ಭಾವಿಸಿದ್ದೆ. ಈ ಶಿಷ್ಯವೇತನ ಪಡೆಯುವುದು ನನ್ನ ತಂದೆಯ ವಾರ್ಷಿಕ ಉತ್ಪನ್ನವನ್ನು ಅವಲಂಬಿಸಿದ್ದಿತು. ಅವರ ಪೂರ್ಣ ಪಗಾರದ ಸರ್ಟಿಫಿಕೇಟ ಕಾರಣವಾಗಿ ನನಗೆ ಸಿಗಬೇಕಾಗಿದ್ದ ಶಿಷ್ಯವೇತನವು ಪೂರ್ಣ ಬರುವುದು ತಪ್ಪಿ ಹೋಯಿತು. ಆದರೂ ನಾನು ಪಿಟ್ ಎನ್ನಲಿಲ್ಲ. ಕಾಲೇಜಿನಲ್ಲಿ ಕಷ್ಟದ ದಿನಗಳನ್ನು ಕಳೆದು ಎಂಜನೀಯರ್ ಆದೆ.

ಈ ಘಟನೆ ಕೇಳಿ ನನಗೆ ಮೋಹನ ಅವರ ಬಗೆಗೆ ಹೆಮ್ಮೆ ಎನಿಸಿತು. ಮಾಸ್ತರರ ಬಗೆಗೆ ಸಿಟ್ಟು ಬಂದಿತು. ಇಂಥ ಬದುಕು ಕಾರಣವಾಗಿ ಮಾಸ್ತರರು ಇಂದು ನಮ್ಮೆಲ್ಲರ ನಡುವಿನ ಜೀವಂತ ದಂತಕಥೆ ಎನಿಸಿದ್ದಾರೆ.

ವಾತ್ಸಲ್ಯ: (ಎಸ್.ಜಿ.ನಾಡಗೇರ ಅಭಿನಂದನ ಗ್ರಂಥ), ೧೯೯೭.

ಆಕರ : ಮಾರ್ಗ ಸಂಪುಟ–೬

■■

೮೬

ಶಬ್ದಶಾಸ್ತ್ರಜ್ಞ

೧೯೯೭

ಕನ್ನಡ ವಿದ್ವತ್ ಪರಂಪರೆಯ ಮಹತ್ವದ ಕೊಂಡಿಯಾಗಿರುವ ತೋಗೆರೆ ವೆಂಕಟಸುಬ್ಬಶಾಸ್ತ್ರಿಗಳ ವೆಂಕಟಾಚಲಶಾಸ್ತ್ರಿ ಅವರು ಈ ತಲೆಮಾರಿನ ಅಗ್ರಗಣ್ಯ ಸಂಶೋಧಕರಲ್ಲಿ ಒಬ್ಬರು. ಸಂಶೋಧನೆಗೆ ಅವಶ್ಯವಾದುದು ಶ್ರಮನಿಷ್ಠ ವ್ಯಾಸಂಗ. ಈ ಆಸಕ್ತಿಯನ್ನು ಬಾಲ್ಯದಲ್ಲಿಯೇ ರೂಢಿಸಿಕೊಂಡ ಶಾಸ್ತ್ರಿಗಳು ಮುಂದಿನ ದಿನಗಳಲ್ಲಿ ಅದರ ತೃಪ್ತಿಗಾಗಿ ಘನತೆವೆತ್ತ ಪ್ರಾಧ್ಯಾಪಕರಾದ ಡಾ. ಡಿ. ಎಲ್. ನರಸಿಂಹಾಚಾರ್, ಪ್ರೊ. ತೀ. ನಂ. ಶ್ರೀಕಂಠಯ್ಯ ಅಂಥವರ ಸನ್ನಿಧಿ-ಸಂಪರ್ಕಗಳನ್ನು ಹುಡುಕಿಕೊಳ್ಳುತ್ತಲೇ ಹೋದರು; ಬೆಳೆಯುತ್ತಲಿರುವ ತಮ್ಮ ವಿದ್ವತ್ತಿಗೆ ಶೈಕ್ಷಣಿಕ ಶಿಸ್ತನ್ನು ತಂದುಕೊಂಡರು.

ಈ ದಿನ ಮೊದಲು ಮಾಡಿ, ಶಾಸ್ತ್ರಿಗಳು ಕನ್ನಡಕ್ಕೆ ಸಲ್ಲಿಸುತ್ತ ಬಂದ ಕಾಣಿಕೆ ಕನ್ನಡವಿರುವ ವರೆಗೂ ಬಾಳುವಂತಹದು. ಈ ಕಾಣಿಕೆಯ ಕೇಂದ್ರ ಕಾಳಜಿ ಹಳಗನ್ನಡ ಭಾಷೆಯ ಶಬ್ದ ಅಥವಾ ಪದ. ಈ ಕಾಳಜಿ ಅಗಲದಷ್ಟೇ ಆಳವಾಗಿರುವುದು ವಿಶೇಷ. ಇದರ ಸಾಧನೆಗಾಗಿ ಡಾ. ಶಾಸ್ತ್ರಿಗಳು ಮುದ್ರಣಪೂರ್ವದ ನೂರಾರು ಕೃತಿಸಮುದ್ರಗಳನ್ನು ಈಸಿದ್ದಾರೆ. ಕಾವ್ಯೋಕ್ತ ಶಬ್ದಕ್ಕೆ ಶಾಸ್ತ್ರವನ್ನು, ಶಾಸ್ತ್ರನಿಯಮಕ್ಕೆ ಕಾವ್ಯವನ್ನು, ಇವೆರಡಕ್ಕೂ ತಮ್ಮ ಅಧ್ಯಯನದ ಸಂಸ್ಕಾರವನ್ನು ಆಧಾರವಾಗಿ ಹಿಡಿದು, ಕನ್ನಡ ವಿದ್ವತ್ತನ್ನು ವಿಸ್ತರಿಸುತ್ತ ಬಂದಿದ್ದಾರೆ. ಯಾವುದೇ ಶಬ್ದ ಯಾವ ಕಾವ್ಯದ ಯಾವ ಮೂಲೆಯಲ್ಲಿದೆ? ಇದಕ್ಕೆ ಯಾವ ಸೂತ್ರದಲ್ಲಿ ಯಾವ ಬಗೆಯ ಸಮರ್ಥನೆಯಿದೆ - ಇತ್ಯಾದಿಗಳೆಲ್ಲ ಅವರ ನಾಲಗೆಯ ಮೇಲೆ, ಅವರ ಬೆರಳ ಮೇಲೆ ಸ್ಥಾಪಿತವಾಗಿವೆ. ಈ ಗಾಢ ವ್ಯಾಸಂಗ ಕಾರಣವಾಗಿ ಹಳಗನ್ನಡ 'ಪದರಚನೆ' (ವ್ಯಾಕರಣ), 'ಪದಪರಿಷ್ಕರಣ' (ಗ್ರಂಥ ಸಂಪಾದನೆ), 'ಪದನಿಷ್ಪತ್ತಿ' (ನಿಘಂಟು), 'ಪದಸ್ಥಲಯ' (ಛಂದಸ್ಸು) - ಈ ನಾಲ್ಕು ಸಿದ್ಧಿಗಳು ಡಾ. ಶಾಸ್ತ್ರಿಗಳಲ್ಲಿ ಅಂತರ್‌ಸಂಬಧೀಯವಾಗಿ ದುಡಿಯುತ್ತಿವೆ. ಇದು ಡಾ. ಡಿ. ಎಲ್. ಎನ್. ಪಾಂಡಿತ್ಯ ಪದ್ಧತಿಯ ಮುಂದುವರಿಕೆಯಾಗಿದೆ. ಇಂಥ ಸಂದರ್ಭಗಳಲ್ಲಿ ಅವರ ವಿದ್ವತ್ತು ತುಂಬ ಉತ್ಸಾಹದಿಂದ ಕೆಲಸ ಮಾಡುತ್ತದೆ. ತಮ್ಮ ವ್ಯಾಸಂಗ ಸ್ಪರ್ಶಿಸಿದ ಎಲ್ಲ ಆಕರಗಳನ್ನು ಬಳಸಿಕೊಂಡು - ಮೂಲರೂಪದಲ್ಲಿ ಬಳಸಿಕೊಂಡು - ತಮ್ಮ ಸಮಸ್ತ ಚೈತನ್ಯವನ್ನು ಆದರ ಮೇಲೆ ಕೇಂದ್ರೀಕರಿಸಿ, ಫಲಿತಗಳನ್ನು ಪ್ರಕಟಿಸುವುದು ಶಾಸ್ತ್ರಿಗಳ ರೀತಿಯಾಗಿದೆ.

ಶಬ್ದ ಒಂದು ಕಟ್ಟಡ; ಕಾಲಕಾಲಕ್ಕೆ ರೂಪ ಬದಲಿಸಿಕೊಳ್ಳುತ್ತ ಬರುವ ಕಟ್ಟಡ. ಇದರ ಅಂಗ-ಪ್ರತ್ಯಂಗಗಳ ಅಧ್ಯಯನದಿಂದಾಗಿ ಸೂಕ್ಷ್ಮ ಶಬ್ದಸಂಸ್ಕಾರ ಇವರಿಗೆ ಸಾಧ್ಯವಾಗಿದೆ. ಹೀಗಾಗಿ ಹಳಗನ್ನಡ ಪದಗಳ

ರಚನೆ, ವಿಕಲ್ಪ, ಐತಿಹಾಸಿಕ ಬೆಳವಣಿಗೆ ಇತ್ಯಾದಿ ತಿಳಿವಳಿಕೆಗಳು ಇವರಲ್ಲಿ ಸ್ಪರ್ಧಾತ್ಮಕವಾಗಿ ಕೆಲಸ ಮಾಡುತ್ತಿವೆ. ಶಬ್ದಮಣಿದರ್ಪಣಕ್ಕೆ ಬರೆದ ಸುದೀರ್ಘ ಉಪೋದ್ಘಾತ ಮತ್ತು ಆಗಾಗ ಬರೆದ ಅನೇಕ ಲೇಖನಗಳು ಈ ಮಾತಿಗೆ ನಿದರ್ಶನವೆನಿಸಿವೆ.

ಪದರಚನಾ ತಿಳಿವಳಿಕೆ ಸಹಜವಾಗಿಯೇ ಪದಪರಿಷ್ಕರಣಕ್ಕೆ ದಾರಿಮಾಡಿಕೊಡುತ್ತದೆ. ಡಾ. ಶಾಸ್ತ್ರಿಗಳು ಈ ದಾರಿಯಲ್ಲಿ ನಡೆದು ನೀಡಿದ ಕಾಣಿಕೆಯೂ ವಿಶೇಷವೆನಿಸಿದೆ. ಇಲ್ಲೆಲ್ಲ ಅವರ ಬಹುಶ್ರುತತ್ವ, ಸೂಕ್ಷ್ಮ ಪದಪರಿಜ್ಞಾನ ಇತ್ಯಾದಿಗಳನ್ನು ನಾವು ಕಾಣುತ್ತೇವೆ. ವಡ್ಡಾರಾಧನೆ, ಪಂಪಭಾರತ, ಛಂದೋಂಬುಧಿ, ಗದಾಯುದ್ಧ, ಕರ್ಣಪಾರ್ಯ - ನೇಮಿಚಂದ್ರರ ನೇಮಿನಾಥ ಪುರಾಣಗಳಂಥ ಹಳಗನ್ನಡ ಮುಖ್ಯಕೃತಿಗಳ ಪಾಠಶುದ್ಧಿಯ ವಿಷಯವಾಗಿ ಅವರು ದುಡಿದ ರೀತಿ ಅನನ್ಯವೆನಿಸಿದೆ. ಈ ಸಂದರ್ಭದಲ್ಲಿ ಅವರ ಮನಸ್ಸು ದುರ್ಗಮ ದಾರಿಗಳಲ್ಲಿ ನುಗ್ಗುತ್ತಿರುವ ಬಗೆ ಆಶ್ಚರ್ಯವನ್ನುಂಟು ಮಾಡುತ್ತದೆ.

ಹೀಗೆ ಪದವನ್ನು ಶುದ್ಧರೂಪದಲ್ಲಿ ಸಂಸ್ಕರಿಸಿಕೊಳ್ಳುವ ಶಾಸ್ತ್ರಿಗಳು ಅದರ ಅರ್ಥ ರಹಸ್ಯವನ್ನು ಬಿಡಿಸಿಕೊಳ್ಳುವಲ್ಲಿಯೂ ಸಿದ್ಧಹಸ್ತರೆನಿಸಿದ್ದಾರೆ. ಇದಕ್ಕೆ ಬೇಕಾಗುವ ಸೋದರಭಾಷೆಗಳಾದ ತೆಲುಗು, ತಮಿಳುಗಳಲ್ಲಿ, ಪೋಷಕಭಾಷೆಯಾದ ಸಂಸ್ಕೃತಗಳಲ್ಲಿ ಡಾ. ಶಾಸ್ತ್ರಿಗಳಿಗೆ ಪರಿಶ್ರಮವಿದೆ. ಖರಸಾಣೆ, ಚಕ್ಕಣ, ಖಲ್ವಾಯಿತ ಇತ್ಯಾದಿ ಪದಗಳಿಗೆ ಅರ್ಥ ನೀಡುವಲ್ಲಿ ಅವರು ಬಳಸುವ ಆಕರ ಬಾಹುಳ್ಯ, ನಿರ್ಣಯಕ್ಕೆ ಬರುವಲ್ಲಿ ವಹಿಸುವ ಎಚ್ಚರಗಳು ಶ್ಲಾಘನೀಯವೆನಿಸಿವೆ. 'ಕನ್ನಡ ನಿಘಂಟು ರಚನೆಯಲ್ಲಿ ಶಬ್ದಾರ್ಥ ವಿಚಾರದ ಕೆಲವಂಶಗಳು' ಎಂಬ ಅವರ ಲೇಖನ ಶಬ್ದಸಮಸ್ಯೆಯ ಎಲ್ಲ ಮೈಗಳನ್ನು ಬಿಡಿಸಿತೋರಿಸುತ್ತದೆ. ಇನ್ನೂ ಒಂದು ವಿಶೇಷತೆಯೆಂದರೆ ಇವರ ನಿಘಂಟು ರಚನಾತಜ್ಞತೆ. ಇದು ಅವಸರದ ಮನಸ್ಸನ್ನಲ್ಲ, ಅಚ್ಚುಕಟ್ಟಾದ ಮನಸ್ಸನ್ನು ಅಪೇಕ್ಷಿಸುತ್ತದೆ. ಬೇಸರರಹಿತ ಶ್ರಮವನ್ನೂ, ತಾಳ್ಮೆಯನ್ನೂ ಬಯಸುತ್ತದೆ. ೨೫ ವರ್ಷಗಳಷ್ಟು ಹಿಂದೆಯೇ ಒಬ್ಬ ವಾಸ್ತುವಿದ್ವಾಂಸನಂತೆ ವಿನ್ಯಾಸಗೊಳಿಸಿದ 'ಶ್ರೀವತ್ಸ ನಿಘಂಟು' ಅವರ 'ನಿಘಂಟಿಮ' ಜ್ಞಾನಕ್ಕೆ ಸಾಕ್ಷಿ ನುಡಿಯುತ್ತದೆ. ಈ ಎರಡೂ ನೆಲೆಯ ತಜ್ಞತೆ ಕಾರಣವಾಗಿಯೇ ಶಾಸ್ತ್ರಿಗಳಿಗೆ ಪರಿಷತ್ತಿನ ನಿಘಂಟು ಯೋಜನೆಗೆ ಬೆಲೆಯುಳ್ಳ ಕಾಣಿಕೆ ಸಲ್ಲಿಸಲು ಸಾಧ್ಯವಾಯಿತು.

ಗದ್ಯಭಾಷೆಯಂತೆ ಪದ್ಯಭಾಷೆಯ ಸಂರಚನೆ ಮತ್ತು ಸೌಂದರ್ಯಗಳ ಗ್ರಹಿಕೆಯಲ್ಲಿಯೂ ಡಾ. ಶಾಸ್ತ್ರಿಗಳಿಗೆ ಸಮಾನ ಶ್ರಮವಿದೆ. ಈ ತಲೆಮಾರಿನ ಛಂದೋವಿಜ್ಞಾನಿಯೆಂದಾಕ್ಷಣ ಇವರ ಹೆಸರೇ ಮೊದಲು ನಮ್ಮ ಮನಸ್ಸಿನಲ್ಲಿ ಮೂಡಿನಿಲ್ಲುತ್ತದೆ. ಡಾ. ಶಾಸ್ತ್ರಿಗಳಲ್ಲಿ ಛಂದಸ್ಸಿನ 'ಶಾಸ್ತ್ರಮುಖ'ವೂ 'ಸೌಂದರ್ಯಮುಖ'ವೂ ಮೇಳವಿಸಿದೆ. ಕನ್ನಡ ಛಂದಸ್ಸು, ಕನ್ನಡ ಛಂದಸ್ಸಂಪುಟ, ಕನ್ನಡ ಛಂದೋವಿಹಾರಗಳಲ್ಲಿ ಈ ಮಾತಿಗೆ ವಿಪುಲ ಆಧಾರಗಳಿವೆ. ಇಲ್ಲೆಲ್ಲ ಇವರು ಛಾಂದಸಿಗರಾಗುತ್ತಲೇ ಅಲಂಕಾರಿಕರೂ ಆಗುತ್ತಲಿರುವುದು ಒಂದು ವಿಶೇಷವೆನಿಸಿದೆ. ಹೀಗೆ ಹಳಗನ್ನಡ ಭಾಷೆಯ ಶಬ್ದಗಳ ರೂಪ, ಅರ್ಥ, ಲಯಗಳ ಒಬ್ಬ ಅಪೂರ್ವ ಚಿಂತಕರಾಗಿರುವ ಕಾರಣ, ಅನ್ವರ್ಥಕವೆಂಬಂತೆ ಶಾಸ್ತ್ರಿಗಳು ಒಬ್ಬ ಅರ್ಥಪೂರ್ಣ ಶಬ್ದಶಾಸ್ತ್ರಜ್ಞರೆನಿಸಿದ್ದಾರೆ.

ಶ್ರೀಮುಖ : (ಟಿ. ವಿ. ವೆಂಕಟಾಚಲಶಾಸ್ತ್ರಿ ಅಭಿನಂದನ ಗ್ರಂಥ), ೧೯೯೭.

ಆಕರ : ಮಾರ್ಗ ಸಂಪುಟ–೬

೮೭

ನೆನಪು ಇನ್ನೂ ಹಸಿರಾಗಿದೆ

ನನ್ನನ್ನು ಅಧ್ಯಾಪಕನನ್ನಾಗಿ ರೂಪಿಸಿದ್ದು, ಕರ್ನಾಟಕ ಕಾಲೇಜು. ಈ ಕಾಲೇಜಿನ ಅರಮನೆಯಂತಹ ಕಟ್ಟಡ, ಅದರೊಳಗಿನ ದೇವರ ಮನೆಯಂತಹ ಗ್ರಂಥಾಲಯವನ್ನು ನೆನೆದಾಗಲೆಲ್ಲ ನಾನು ಇಂದಿಗೂ ಪರವಶನಾಗುತ್ತೇನೆ.

ಅಂದವಾದ ನೆಲಗಟ್ಟು, ವಿಸ್ತಾರವಾದ ಮೆಟ್ಟಿಲು, ಕಲಾತ್ಮಕ ಕಮಾನು, ಎಡಬಲಗಳಲ್ಲಿ ಸಮನಾಗಿ ಹಂಚಿಕೊಂಡಿರುವ ಪ್ರಮಾಣಬದ್ಧ ಕೋಣೆ-ಒಳಕೋಣೆಗಳು, ಕೆಂಪು ಇಟ್ಟಂಗಿಯ ಈ ಕಟ್ಟಡ, ನೋಡಿದ ಕ್ಷಣ ನೋಡಬೇಕೆನಿಸುವ ಒಂದು ಸರ್ವತೋಭದ್ರ ಕಲಾಕೃತಿ. ೧೯೬೨-೬೬ರ ಸಂದರ್ಭದಲ್ಲಿ ಅಧ್ಯಾಪಕನಾಗಿ ಈ ಕಟ್ಟಡದೊಳಗೆ ನಡೆದಾಡುವುದೇ ನನಗೆ ಗೌರವದ ವಿಷಯವಾಗಿದ್ದಿತು. ಹೆಜ್ಜೆ ಇಟ್ಟಾಗಲೆಲ್ಲ ಘನತೆ ಉಕ್ಕುತ್ತಲಿದ್ದಿತು.

ಅಧ್ಯಾಪಕನಾದ ಹೊಸದರಲ್ಲಿ ನನಗೆ ದೊಡ್ಡ ಭಾಗ್ಯವಾಗಿ ಬಂದುದು, ಇಲ್ಲಿಯ ಬಹುದೊಡ್ಡ ಗ್ರಂಥಾಲಯ. ವರ್ಗಬೋಧನೆ ಮುಗಿದೊಡನೆಯೇ ನಾನು ಗ್ರಂಥಾಲಯ ಸೇರುತ್ತಲಿದ್ದೆ. ಕಪಾಟು ತೆರೆಯುವುದು, ಅದರ ಮುಂದೆ ಕೆಲವು ದಿನ ಕುಳಿತು ಒಳಗಿನ ಪ್ರತಿಯೊಂದು ಪುಸ್ತಕದ ಪುಟ ಬಿಡಿಸಿ ನೋಡುವುದು, ಅವಶ್ಯವೆನಿಸಿದ ವಿಷಯ ಓದುವುದು, ಟಿಪ್ಪಣಿ ಮಾಡಿಕೊಳ್ಳುವುದು - ಹೀಗೆ ಎಲ್ಲ ಕಪಾಟುಗಳ, ಎಲ್ಲ ಪುಸ್ತಕಗಳ ಮೇಲೆ ಕೈಯಾಡಿಸಿದ, ಕಣ್ಣಾಡಿಸಿದ ಧನ್ಯತೆ ನನ್ನದಾಗಿದೆ. "ಪ್ರೊ. ಕಲಬುರ್ಗಿಯವರು ಒಂದೊಂದು ಪುಸ್ತಕ ಓದುವುದಿಲ್ಲ. ಒಂದೊಂದು ಕಪಾಟು ಓದುತ್ತಾರೆ" ಎಂಬುದು ನನ್ನ ವಿದ್ಯಾರ್ಥಿಗಳ ಪ್ರತಿಕ್ರಿಯೆಯಾಗಿದ್ದಿತು. ಅಂದು ಓದಿದ ವಿಷಯ, ಸಂಗ್ರಹಿಸಿದ ಟಿಪ್ಪಣಿಗಳು ಇಂದಿಗೂ ನನಗೆ ದೊಡ್ಡ ಆಸ್ತಿಯಾಗಿ ಪರಿಣಮಿಸಿವೆ. ಓದನ್ನು ಒಂದು ಗೀಳನ್ನಾಗಿ ಬೆಳೆಸಿಕೊಂಡಿರುವ ನಾನು, ನನ್ನ ಜೀವನದಲ್ಲಿಯೇ ಹೆಚ್ಚು ಓದಿದ್ದು ಕರ್ನಾಟಕ ಕಾಲೇಜಿನಲ್ಲಿ.

ಸಾವಿರ ಸಾವಿರ ವಿದ್ಯಾರ್ಥಿಗಳು, ವರ್ಗಕೋಣೆಯಲ್ಲಿ ಪ್ರತಿಧ್ವನಿಸುತ್ತಲಿದ್ದ ಪಾಠ ಪ್ರವಚನಗಳು, ಕ್ರೀಡಾಂಗಣಕ್ಕೆ ಜೀವ ತುಂಬುತ್ತಲಿದ್ದ ಕ್ರೀಡೆಗಳು, ಯುವಜನಕೂಟ ಮತ್ತು ವಾರ್ಷಿಕೋತ್ಸವಗಳಿಗಾಗಿ ಸಂಭ್ರಮಿಸುತ್ತಲಿದ್ದ ಯುವಕ ಯುವತಿಯರು - ಇದೆಲ್ಲ ನನ್ನ ಕಣ್ಣಮುಂದೆ ಇನ್ನೂ ನಿಚ್ಚಳವಾಗಿ ನಿಂತಿದೆ. ಗ್ಯಾಲರಿಹಾಲ್‌ನಲ್ಲಿ ತೆರೆತೆರೆಯಾಗಿ ಚಾಚಿಕೊಂಡಿದ್ದ ವಿದ್ಯಾರ್ಥಿ ಸಮುದ್ರವನ್ನು ಬೋಧನೆಯ ಮೂಲಕ ನಾನು

ಎದುರಿಸುತ್ತಿದ್ದುದೇ ಒಂದು ಸಂತೋಷ. ಅಧ್ಯಾಪನವನ್ನು ಪ್ರೀತಿಯಿಂದ ಆಯ್ದುಕೊಂಡ ಯುವ ಅಧ್ಯಾಪಕನಾಗಿದ್ದ ನಾನು, ವಿದ್ಯಾರ್ಥಿ ಸ್ತೋಮದಲ್ಲಿ ಕರಗಿ ಹೋಗುತ್ತಲಿದ್ದೆ. ಶಾಸ್ತ್ರವನ್ನೂ ಕಾವ್ಯಾಸಕ್ತಿಯಿಂದ ಕೇಳುತ್ತಲಿದ್ದ ಆ ನನ್ನ ವಿದ್ಯಾರ್ಥಿಗಳು, ನಾನು ಬೋಧಿಸುತ್ತಲಿದ್ದ ಕಾವ್ಯವವನ್ನು ಮೈತುಂಬ ಕಿವಿಯಾಗಿ ಕೇಳುತ್ತಿದ್ದರು. ಮೂವತ್ತು ವರ್ಷ ಕಳೆದರೂ ಅವರು ಭೆಟ್ಟಿಯಾದಾಗಲೆಲ್ಲ ನನ್ನ ಪಾಠಬೋಧನೆಯನ್ನು ಈಗಲೂ ನೆನಪಿಸಿಕೊಳ್ಳುತ್ತಾರೆ, ನನ್ನ ಎದುರೇ ಅದನ್ನು ಅಭಿನಯಿಸಿ ತೋರಿಸುತ್ತಾರೆ. ಆ ಮುಗ್ಧ ವಿದ್ಯಾರ್ಥಿಗಳು, ಆ ತುಂಟ ವಿದ್ಯಾರ್ಥಿಗಳು, ನನ್ನ ಜೀವನದ ಅಪಾರ ಆಸ್ತಿಯಾಗಿ ಉಳಿದಿದ್ದಾರೆ, ಬೆಳೆದಿದ್ದಾರೆ. ಇಂದು ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿರುವ ಡಾ. ವೀಣಾ ಶಾಂತೇಶ್ವರ ಅವರು, ನಾನು ಅಧ್ಯಾಪಕನಾಗಿ ಪ್ರವೇಶಿಸಿದ ಮೊದಲ ದಿನದ ಕ್ಲಾಸಿನಲ್ಲಿ ವಿದ್ಯಾರ್ಥಿನಿಯಾಗಿದ್ದ ನೆನಪು. ಇಂಥ ಎಷ್ಟೋ ನೆನಪುಗಳು ಇನ್ನೂ ಹಸಿರಾಗಿವೆ.

---

* ಧಾರವಾಡ ಕರ್ನಾಟಕ ಕಾಲೇಜಿನ ವಜ್ರಮಹೋತ್ಸವ ಸಂಚಿಕೆ.

ಆಕರ : ಮಾರ್ಗ ಸಂಪುಟ–೬

೮೮

ಪುಸ್ತಕದ ಸಿದ್ಧಲಿಂಗಸ್ವಾಮಿಗಳು

೧೯೯೯

ವ್ಯಾಕರಣದ ಸಿದ್ಧಲಿಂಗಸ್ವಾಮಿ, ನಿಘಂಟಿನ ಸಿದ್ಧಬಸವಸ್ವಾಮಿ, ಟೀಕಿನ ಚೆನ್ನವೀರಸ್ವಾಮಿ - ಇತ್ಯಾದಿ ಹೆಸರಿನ ವಿರಕ್ತಮಠಾಧೀಶರನ್ನು ಇತಿಹಾಸದಲ್ಲಿ ಕಾಣುತ್ತೇವೆ. ಈ ಪರಂಪರೆಯ ಮುಂದುವರಿಕೆಯೆಂಬಂತೆ ಗದುಗಿನ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳು "ಪುಸ್ತಕದ ಸಿದ್ಧಲಿಂಗಸ್ವಾಮಿ" ಎಂದೇ ಹೆಸರಾಗಿದ್ದಾರೆ.

ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ನಾನು ಗಮನಿಸಿದಂತೆ ಶ್ರೀ ಸ್ವಾಮಿಗಳು ಪ್ರೀತಿಸುವುದು ಭಕ್ತರನ್ನು, ಬಿಟ್ಟರೆ ಪುಸ್ತಕಗಳನ್ನು. ಪೂರ್ವಾಶ್ರಮದಲ್ಲಿ ಪೂಜ್ಯರು ನನ್ನ ವಿದ್ಯಾರ್ಥಿ. ಆಗಲೇ ಅವರ ವ್ಯಾಸಂಗಪ್ರಿಯತೆ ಬಗ್ಗೆ ಕೇಳಿದ್ದೆ. ಪಠ್ಯಕ್ಕಿಂತ, ಪಠ್ಯೇತರದ ವಿಸ್ತಾರ ಓದಿಗೆ ಅವರು ತೆರೆದುಕೊಂಡುದು ಅಂದೇ ಜನಜನಿತವಾಗಿದ್ದಿತು. ಪುಸ್ತಕ ಹೊಸದಿರಲಿ-ಹಳೆಯದಿರಲಿ ಅದನ್ನು ಖರೀದಿಸುವ, ವೈಯಕ್ತಿಕ ಗ್ರಂಥಾಲಯವನ್ನು ಬೆಳೆಸಿಕೊಳ್ಳುವ ಆಸಕ್ತಿ ಅವರಲ್ಲಿ ಆಗಲೇ ಎಚ್ಚರವಾಗಿದ್ದಿತು.

ಭಕ್ತರ ಸುದೈವ. ಗದುಗಿನ ಜಗದ್ಗುರುಪೀಠಕ್ಕೆ ಅಧಿಪತಿಗಳಾದರು. ತಕ್ಷಣ ಸಾವಿರಾರು ಅನುಯಾಯಿಗಳ ನೇತೃತ್ವ ಪ್ರಾಪ್ತವಾಯಿತು. ನಂಬಿ ನಿಂತ ಈ ಭಕ್ತರನ್ನು ತಿದ್ದುವ-ತೀಡುವ-ಮಾರ್ಗದರ್ಶನ ಮಾಡುವ ದೊಡ್ಡ ಜವಾಬ್ದಾರಿ ಹೆಗಲೇರಿತು. ಈ ಹೊಸ ಹೊಣೆಗಾರಿಕೆಗೆ ಸರಿಯಾಗಿ ಸ್ಪಂದಿಸುವುದರ ಸಲುವಾಗಿ ಪೂಜ್ಯರು ಪುಸ್ತಕಗಳನ್ನು ಮತ್ತಷ್ಟು ಮೊರೆಹೊಕ್ಕರು.

ಶ್ರೀಗಳು ಹುಬ್ಬಳ್ಳಿ-ಧಾರವಾಡಗಳಿಗೆ ಬಂದರೆ ಸಾಕು, ನೇರವಾಗಿ ಹೋಗುವುದು ಪುಸ್ತಕಗಳ ಅಂಗಡಿಗೆ. ಸಮ್ಮೇಳನ, ವಿಚಾರ ಸಂಕಿರಣಗಳಲ್ಲಿ ಪುಸ್ತಕ ಮಳಿಗೆ ಕಂಡರೆ ಮುಗಿಯಿತು, ಸಾಮಾನ್ಯ ಗ್ರಾಹಕನಂತೆ ಅಲ್ಲಿಗೆ ಧಾವಿಸಿ, ಪುಸ್ತಕಗಳ ಮೇಲೆ ಕಣ್ಣಾಡಿಸಿ-ಕೈಯಾಡಿಸಿ, ಜೋಳಿಗೆಯಲ್ಲಿ ಅವುಗಳನ್ನು ತುಂಬಿಕೊಳ್ಳುತ್ತಾರೆ. ವಿದ್ವಾಂಸರು ಭೆಟ್ಟಿಯಾದರೆ ಹೊಸ ಪುಸ್ತಕಗಳ ಬಗ್ಗೆ ಮಾತನಾಡುತ್ತಾರೆ. ವಾದಗ್ರಸ್ತ ಪುಸ್ತಕಗಳ ಬಗ್ಗೆ ತಿಳಿದುಕೊಳ್ಳಲು ಆಸಕ್ತಿ ವಹಿಸುತ್ತಾರೆ. ಪ್ರಯಾಣ ಪ್ರಸಂಗದಲ್ಲಿ ಕಾರಿನ ತುಂಬಾ ಪುಸ್ತಕ ರಾಶಿಯಿರುವುದು ಕಡ್ಡಾಯ. ಈ ಓದು, ಅವರಿಗೆ ಭಾಷಣದಲ್ಲಿ, ಚರ್ಚೆಯಲ್ಲಿ ಮೂಲನಿಧಿಯಂತೆ ಬಳಕೆಯಾಗುತ್ತದೆ.

ವಾಚನದಷ್ಟೇ ಇವರಿಗೆ ಪ್ರಿಯವಾದುದು ಪುಸ್ತಕ ಪ್ರಕಾಶನ, ೧೯೭೪ರಲ್ಲಿ ಪೀಠವೇರುತ್ತಲೇ ಮಠದಲ್ಲಿ ಆರಂಭಿಸಿದ ಉಪಕ್ರಮಗಳಲ್ಲಿ ಪುಸ್ತಕ ಪ್ರಕಾಶನ ಮುಖ್ಯವಾದುದು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ

ವಚನಸಾಹಿತ್ಯ ಪ್ರಕಾಶನ ಇಳಿಮುಖವಾಗುತ್ತ ನಡೆದ ಸಂದರ್ಭ. ನನ್ನ ಈ ನೋವಿಗೆ ಪೂಜ್ಯರು ಸ್ಪಂದಿಸಿದ ಫಲ, ಗದುಗಿನ ಮಠದಲ್ಲಿ "ವೀರಶೈವ ಅಧ್ಯಯನ ಸಂಸ್ಥೆ"ಯ ಸ್ಥಾಪನೆ. ಇದರ ಅಂಗವಾಗಿ ಪುಣ್ಯಪುರುಷ ಸಾಹಿತ್ಯಮಾಲೆ, ಪ್ರಾಚೀನ ಸಾಹಿತ್ಯಮಾಲೆ, ನೂತನ ಸಾಹಿತ್ಯಮಾಲೆ, ಅನುವಾದ ಸಾಹಿತ್ಯಮಾಲೆಗಳ ಹೆಸರಿನಲ್ಲಿ ಪುಸ್ತಕಗಳು ಒಂದೊಂದಾಗಿ ಬೆಳಕು ಕಾಣತೊಡಗಿದವು. ಶ್ರೀಮಠ ಪುಸ್ತಕದ ಮಠವಾಗಿ ಬೆಳಕಿಗೆ ಬರತೊಡಗಿತು.

ಶ್ರೀ ತೋಂಟದಾರ್ಯ ಮಠ ಶ್ರೀಮಂತವಾದುದಲ್ಲ. ಆದರೆ ಪುಸ್ತಕ ಪ್ರಕಟಣೆ ವಿಷಯದಲ್ಲಿ ಶ್ರೀಗಳದು ಶ್ರೀಮಂತ ಮನಸ್ಸು. ಪ್ರಕಟಣೆಗೆ ಸಂಬಂಧಪಟ್ಟಂತೆ ನಾನು ಮಂಡಿಸಿದ ಯೋಜನೆ ಎಷ್ಟೇ ದೊಡ್ಡದಿರಲಿ; ಭಿಕ್ಷೆಬೇಡಿ-ಸಾಲಮಾಡಿ ನನಗೆ "ಅಸ್ತು" ಹೇಳಿದ್ದಾರೆ. ಸಂಸ್ಥೆ ಆರಂಭವಾಗಿ ಕೆಲವು ವರ್ಷ ಗತಿಸಿದ್ದವು. ಔದಾರ್ಯದ ಸ್ವಾಮಿಗಳು ಸಿಕ್ಕಾಗಲೇ ಪ್ರಾಚೀನ ಕೃತಿಗಳನ್ನು ಪ್ರಕಟಿಸಬೇಕೆಂದು "ವೀರಶೈವ ಅಪ್ರಕಟಿತ ಸಾಹಿತ್ಯ ಪ್ರಕಟನ ಯೋಜನೆ"ಯನ್ನು ಪೂಜ್ಯರ ಮುಂದೆ ಮಂಡಿಸಿದೆ. ಲಕ್ಷೋಪಲಕ್ಷ ರೂಪಾಯಿಗಳ ಯೋಜನೆಯಿದು. ಮರುಮಾತಾಡದೆ ಒಪ್ಪಿಗೆ ನೀಡಿದರು. ಸುಮಾರು ೫೦ರಷ್ಟು ಪ್ರಾಚೀನ ವಚನ ಸಂಕಲನಗಳು, ೧೫ ರಷ್ಟು ಸ್ವರವಚನ ಸಂಕಲನಗಳು, ೧೦ರಷ್ಟು ಕಾವ್ಯಗಳು ಬೆಳಕು ಕಂಡವು. ಇವೆಲ್ಲ ಅಪ್ರಕಟಿತ.

ಸಾಮಾನ್ಯವಾಗಿ ಕೆಲವು ಮಠಗಳು ಅನ್ನದಾನಕ್ಕೆ ಪ್ರಸಿದ್ಧ. ಕೆಲವು ಮಠಗಳು ವಿದ್ಯಾದಾನಕ್ಕೆ ಪ್ರಸಿದ್ಧ, ಗದುಗಿನ ಮಠ ಪುಸ್ತಕ ಪ್ರಕಟಣೆಗೆ ಪ್ರಸಿದ್ಧ. ಈ ಶತಮಾನದಲ್ಲಿ ಯಾವ ಮಠವೂ ಇಷ್ಟು ಸಂಖ್ಯೆಯಲ್ಲಿ, ಇಷ್ಟು ಮಹತ್ವದ ಪುಸ್ತಕಗಳನ್ನು ಪ್ರಕಟಿಸಿಲ್ಲ. ವೀರಶೈವ ಪುಣ್ಯಪುರುಷ ಮಾಲೆ ಈ ಶತಮಾನದ ಅನನ್ಯ ಸಾಧನೆ. ವೀರಶೈವ ಸಮಾಜದ ೧೦೦ ವರ್ಷಗಳ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಇತಿಹಾಸವನ್ನೇ ತೆರೆದು ತೋರಿಸಿದ ಶ್ರೇಯಸ್ಸು ಈ ಮಾಲೆಯದಾಗಿದೆ. ವಚನ ಸಾಹಿತ್ಯಮಾಲೆ ಹತ್ತಾರು ಜನ ಹೊಸ ವಚನಕಾರರನ್ನು, ಸಾವಿರಾರು ಹೊಸ ವಚನಗಳನ್ನು ಬೆಳಕಿಗೆ ತಂದು, ಈ ಸಾಹಿತ್ಯ ಪ್ರಕಟಣೆಯ ಮೂರನೆಯ ಘಟ್ಟ ಮೆರೆದ ಖ್ಯಾತಿಗೆ ಪಾತ್ರವಾಗಿದೆ.

ಪುಸ್ತಕಗಳ ಸಾರ್ಥಕತೆಯಿರುವುದು ಪರಿಚಲನೆಯಲ್ಲಿ. ಇದನ್ನು ಅರ್ಥಮಾಡಿಕೊಂಡ ಪೂಜ್ಯರು ಸಭೆ-ಸಮಾರಂಭಗಳಲ್ಲಿ, ವಿಚಾರ ಸಂಕಿರಣ, ಸಮ್ಮೇಲನಗಳಲ್ಲಿ ಶ್ರೀಮಠದ ಪ್ರಕಟನೆಗಳು ಪ್ರದರ್ಶನಗೊಳ್ಳುವ ಏರ್ಪಾಡು ಮಾಡುತ್ತಾರೆ. ಕೆಲವು ಪುಸ್ತಕಗಳನ್ನು ಬೇರೆ ಬೇರೆ ಗ್ರಾಮಗಳಲ್ಲಿ ಬಿಡುಗಡೆ ಮಾಡುವ ಮೂಲಕವೂ ಪುಸ್ತಕ ಪ್ರಚಾರಕ್ಕೆ ಚಾಲನೆ ನೀಡುತ್ತಾರೆ.

"ಮಠಗಳಲ್ಲಿ ಒಂದು ಪುಸ್ತಕ ಬಿಡುಗಡೆಯಾಗುವುದೆಂದರೆ ಭಕ್ತರ ಮನೆಯಲ್ಲಿ ಒಂದು ಗಂಡು ಮಗು ಹುಟ್ಟಿದಂತೆ" ಎಂದು ಶ್ರೀಗಳು ಪದೇ ಪದೇ ಹೇಳುತ್ತಾರೆ. ಗ್ರಂಥದಾನ ಪಡೆದು, ಈ ಮಹಾಮಣಿಹದಲ್ಲಿ ಸಾರ್ವಜನಿಕರೂ ತೊಡಗುವಂತೆ ಮಾಡಿದುದು ಒಂದು ವಿಶೇಷ. ಇದು ಜನಸಾಮಾನ್ಯರಲ್ಲಿ ಪುಸ್ತಕ ಪ್ರೀತಿ ಹುಟ್ಟಿಸಿದೆ. ಈ ಬಗೆಯ ಚಟುವಟಿಕೆಗಳಿಂದಾಗಿ ಶ್ರೀಮಠ "ಪ್ರಸಾರಾಂಗ"ದ ಒಂದು ಹೊಸ ಪ್ರಯೋಗವನ್ನು ಅಸ್ತಿತ್ವಕ್ಕೆ ತಂದಂತಾಗಿದೆ. ಸಾಮಾನ್ಯವಾಗಿ ಮಠದ ಪ್ರಕಾಶವೆಂದರೆ ಮೂಗು ಮುರಿಯುವುದು ತಪ್ಪಿ. ವಿದ್ವಾಂಸರು ತಮ್ಮ ತಮ್ಮ ಪುಸ್ತಕಗಳನ್ನು ಈ ಸಂಸ್ಥೆಯ ಮೂಲಕ ಪ್ರಕಟಿಸಲು ಮುಂದು ಬರುವ ವಾತಾವರಣ ನಿರ್ಮಾಣ ಮಾಡಿದ್ದಾರೆ.

ಅಂದು ಗದುಗಿನ ಸಂತೆ. ಪೂಜ್ಯರೊಂದಿಗೆ ಮಹತ್ವದ ವಿಷಯವನ್ನು ಕುರಿತು ಮಾತನಾಡುತ್ತಲಿದ್ದೆ. ಸಂತೆಯ ಸಣ್ಣಪುಟ್ಟ ಖರೀದಿ ಮುಗಿಸಿ, ಯಥಾಪ್ರಕಾರ ಮಠಕ್ಕೆ ಬಂದ ಹಳ್ಳಿಯ ಮುದುಕಿ ಪೂಜ್ಯರಿಗೆ

ನಮಸ್ಕರಿಸಿದಳು. ಕಲ್ಲುಸಕ್ಕರೆ ಆಶೀರ್ವದಿಸಲು ಶ್ರೀಗಳು ಕೈಚಾಚಿದರು. "ಬುದ್ಧಿ, ಜೊತೆಗೆ ಎರಡು ಸಣ್ಣಪುಸ್ತಕ ಆಶೀರ್ವಾದ ಮಾಡಿ" ಎಂದಳು ಆ ಮುದುಕಿ. ಪೂಜ್ಯರು ಹರ್ಷಚಿತ್ತರಾಗಿ ೨ ಅಲ್ಲ ೨೦ ಪುಸ್ತಕಗಳನ್ನು ನೀಡಿದರು. ಮುದುಕಿ ಅವುಗಳನ್ನು ಕಣ್ಣಿಗೊತ್ತಿಕೊಂಡು ಉಡಿಯಲ್ಲಿ ತುಂಬಿಕೊಂಡಳು. ಪ್ರಕಾಶನದ ನಿರ್ದೇಶಕನಾದ ನನ್ನ ಕಣ್ಣಲ್ಲಿ ಧನ್ಯತೆಯ ನೀರು ತುಂಬಿತು.

ಪೂಜ್ಯರಿಗೆ ಗುಲ್ಬರ್ಗಾ ವಿಶ್ವವಿದ್ಯಾಲಯ "ಗೌರವ ಡಾಕ್ಟರೇಟ್" ಪದವಿ ನೀಡಿದ ಸಂದರ್ಭದಲ್ಲಿ ಬೆಳಗಾವಿಯ ನಾಗನೂರುಮಠ ಸನ್ಮಾನ ಸಮಾರಂಭ ಹಮ್ಮಿಕೊಂಡಿದ್ದಿತು. ಈ ಕಾರ್ಯಕ್ರಮದ ಅಂಗವಾಗಿ "ವೀರಶೈವ ಅಧ್ಯಯನ ಸಂಸ್ಥೆ"ಯನ್ನು ಕುರಿತು ಬರೆದ ಪುಸ್ತಕ ಬಿಡುಗಡೆಯ ಸಡಗರ. ಪೂಜ್ಯರನ್ನು ಸನ್ಮಾನಿಸುತ್ತ ನಾಗನೂರುಮಠದ ಶ್ರೀಗಳು ಅವರ ಬೆರಳಿಗೆ ಎರಡು ತೊಲೆ ಬಂಗಾದ ಉಂಗುರವನ್ನು ತೊಡಿಸಿದರು. ಮರುಕ್ಷಣ ಆಶೀರ್ವಚನ ನೀಡುತ್ತ ಪೂಜ್ಯರು ತಮ್ಮ ಬೆರಳಿನ ಉಂಗುರ ಕಳಚಿ, ವೀರಶೈವ ಅಧ್ಯಯನ ಸಂಸ್ಥೆಯನ್ನು ಕುರಿತು ಪುಸ್ತಕ ಬರೆದ ಅಧ್ಯಾಪಕರ ಬೆರಳಿಗೆ ತೊಡಿಸಿದರು. ಅಷ್ಟೇನೂ ಮಹತ್ವದ ವಿಷಯವಲ್ಲವೆಂಬಂತೆ ಈ ಘಟನೆ ಜರುಗಿಬಿಟ್ಟಿತು. ಸಭೆ ಬೆರಗಾಯಿತು! ಆ ಪ್ರಾಧ್ಯಾಪಕರು ಇನ್ನೂ ಬೆರಗಾದರು!!

ಸಾಮಾನ್ಯರ ಸ್ವಾಮೀಜಿ : ಸಂ. ಚಂದ್ರಶೇಖರ ವಸ್ತ್ರದ ೧೯೯೯.

ಆಕರ : ಮಾರ್ಗ ಸಂಪುಟ-೬

■■

೮೯

ಎತ್ತರದ ವ್ಯಕ್ತಿ

೧೯೯೯

'ಸಾಸನೂರ' ನನ್ನ ಮಟ್ಟಿಗೆ ಕೇವಲ ಒಂದು ಅಡ್ಡ ಹೆಸರಲ್ಲ. ಅದು ನನ್ನೊಳಗೆ ಯಾವಾಗಲೂ ಜೀವಂತವಾಗಿದ್ದು, ನನ್ನನ್ನು ನಿತ್ಯವೂ ಬೆಳೆಸುತ್ತಲಿರುವ ಜಲಧಾರೆಯಾಗಿದೆ. ಈ ಶಬ್ದವನ್ನು ನೆನೆದಾಗಲೆಲ್ಲ ನಾನು ಹೊಸ ಮನುಷ್ಯನಾಗುತ್ತೇನೆ.

ಸಾಹಿತ್ಯ ವಿದ್ಯಾರ್ಥಿಯಾಗಿರುವ ನನಗೆ ಸಾಸನೂರ ಸಹೋದರರಲ್ಲಿ ಶ್ರೀಮಡಿವಾಳಪ್ಪ ಸಾಸನೂರ, ಪ್ರೊ. ಎ. ಟಿ. ಸಾಸನೂರ ಅವರು ಪರೋಕ್ಷ ಪ್ರಭಾವ ಬೀರಿದವರು; ಎಚ್. ಟಿ. ಸಾಸನೂರ, ಬಿ.ಟಿ. ಸಾಸನೂರ ಪ್ರತ್ಯಕ್ಷ ಪ್ರಭಾವ ಬೀರಿದವರು. ಇನ್ನೂ ವಿಶೇಷವೆಂದರೆ ಬಿ. ಟಿ. ಸಾಸನೂರ ಅವರು ನನ್ನನ್ನು ರೂಪಿಸಿದ ಶಿಲ್ಪಿಗಳು; ನಾನು ಅವರ ಕರಕಮಲಸಂಜಾತ.

ಪ್ರೊ. ಬಿ. ಟಿ. ಸಾಸನೂರ ಅವರು ಆಗಾಗ ಹೇಳುತ್ತಾರೆ: "ನಾನು ಬೋಧಿಸಿದೆ, ಬರೆಯಲಿಲ್ಲ. ಆದರೆ ನನ್ನ ಇಬ್ಬರು ಮಕ್ಕಳು ಬರಹಗಾರರಾಗಿ ಬೆಳೆದಿದ್ದಾರೆ. ಒಬ್ಬ : ವಿಜಯ ಸಾಸನೂರ, ಇನ್ನೊಬ್ಬ : ಎಂ. ಎಂ. ಕಲಬುರ್ಗಿ." ಈ ಮಾತನ್ನು ಅವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅದನ್ನು ಕೇಳಿದಾಗಲೆಲ್ಲ ನನ್ನಲ್ಲಿ ಧನ್ಯತೆ ಉಕ್ಕುತ್ತದೆ.

* * *

ನನ್ನ ಮಾರ್ಗದರ್ಶನದಲ್ಲಿ ಎ. ಟಿ. ಸಾಸನೂರ ಅವರನ್ನು ಕುರಿತು ಎಂ. ಫಿಲ್. ಅಧ್ಯಯನ ಮಾಡುತ್ತಲಿರುವ ವಿದ್ಯಾರ್ಥಿನಿ ಗಾಯತ್ರಿ ಒಮ್ಮೆ ಸಂಕೋಚದಿಂದ ಹೀಗೆ ಸಂಭಾಷಿಸಿದಳು:

ಸರ್,

ಏನು?

ಎ. ಟಿ. ಸಾಸನೂರ ಅವರನ್ನು ಕುರಿತು ಅಭ್ಯಾಸ ಮಾಡುತ್ತ ಬಂದಂತೆ ಒಂದು ಅಂಶ ನನ್ನನ್ನು ಕಾಡತೊಡಗಿದೆ.

ಯಾವುದು?

ಎ. ಟಿ. ಸಾಸನೂರ ಅವರನ್ನು ನೋಡಬೇಕೆನಿಸುತ್ತಲಿದೆ.

ನಿಧನರಾದವರನ್ನು ಕಾಣುವುದು ಹೇಗೆ ಸಾಧ್ಯ?

ಸರ್. ನಿಮ್ಮನ್ನು ನೋಡಿದಾಗಲೆಲ್ಲ ಎ. ಟಿ. ಸಾಸನೂರ ನೆನಪಾಗುತ್ತಾರೆ.

ಈ ಮಾತು ಕೇಳಿ ನನ್ನ ಹೃದಯ ತುಂಬಿ ಬಂದಿತು. ಮೌನದಲ್ಲಿ ಮುಳುಗು ಹೋದೆ.

ಸರ್, ಎ. ಟಿ. ಸಾಸನೂರ ಅವರು ಎಚ್. ಟಿ. ಮತ್ತು ಬಿ. ಟಿ. ಸಾಸನೂರ ಅವರಿಗೆ ಅಣ್ಣನಾಗಿ ಹುಟ್ಟಿ ತೀರಿಕೊಂಡರೇನೋ ನಿಜ. ಈಗ ಮತ್ತೆ ಅದೇ ಕುಟುಂಬದಲ್ಲಿ ಬಿ. ಟಿ. ಸಾಸನೂರ ಅವರ ಮಾನಸಪುತ್ರರಾಗಿ ನಿಮ್ಮ ರೂಪದಲ್ಲಿ ಹುಟ್ಟಿದ್ದಾರೆ.

ಹೌದು, ನೀನು ಮಾತ್ರವಲ್ಲ, ಅನೇಕರು ಹಾಗೆ ಭಾವಿಸಿದ್ದಾರೆ. ನಾನೂ ಹಾಗೆಯೇ ಭಾವಿಸಿದ್ದೇನೆ. ಕನ್ನಡ ಪ್ರಾಧ್ಯಾಪಕರಾಗಿ ತೀರಿಕೊಂಡು, ಕನ್ನಡ ಪ್ರಾಧ್ಯಾಪಕರಾಗಿಯೇ ನನ್ನ ರೂಪದಲ್ಲಿ ಹುಟ್ಟಿದ್ದಾರೆ.

ಅನೇಕರು ಹೇಳುವಂತೆ, ನಾನೂ ತಿಳಿದಿರುವಂತೆ, ಇದು ಸಾಸನೂರ ಕುಟುಂಬದ ಮತ್ತು ನನ್ನ ಭಾವನಾತ್ಮಕ ಸಂಬಂಧ. ಈ ವಿದ್ವತ್ ಕುಟುಂಬ ಪರಿವಾರದಲ್ಲಿ ಎಚ್. ಟಿ. ಮತ್ತು ಬಿ. ಟಿ. ಈ ಇಬ್ಬರನ್ನು ಮಾತ್ರ ಕಾಣುವ, ಅವರ ಶಿಷ್ಯತ್ವವಹಿಸುವ ಭಾಗ್ಯ ನನ್ನದಾಯಿತು.

* * *

೧೯೫೬, ನಾನು ವಿಜಾಪುರದ ವಿಜಯ ಕಾಲೇಜಿಗೆ ವಿದ್ಯಾರ್ಥಿಯಾಗಿ ಸೇರಿದೆ. ಅಂದು ಡಾ. ಎಚ್. ಟಿ. ಸಾಸನೂರ ಅವರು ಕನ್ನಡ, ಇಂಗ್ಲೀಷ್ ಬೋಧಿಸುತ್ತಿದ್ದರು. ಬೋಧಕರಾಗಿ ಅವರು ದೊಡ್ಡವರು; ವ್ಯಕ್ತಿಯಾಗಿ ಇನ್ನೂ ದೊಡ್ಡವರು. ಅಂದಿನಿಂದ ಪ್ರತಿವರ್ಷ ಅವರ ಪ್ರಭಾವ ನನ್ನ ಮೇಲೆ ದಟ್ಟವಾಗುತ್ತ ಹೋಯಿತು. ನಾನು ಹುದ್ದೆ ದೃಷ್ಟಿಯಿಂದ ಅವರನ್ನೂ ಮೀರಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕನಾದೆ, ವಿಭಾಗದ ಮುಖ್ಯಸ್ಥನಾದೆ. ವಿಶ್ವವಿದ್ಯಾಲಯದ ಕುಲಪತಿಯೂ ಆದೆ; ಒಂದಿಷ್ಟು ಬರಹ ಮಾಡಿ ಗಣ್ಯಸಂಶೋಧಕನೂ ಎನಿಸಿದೆ. ಈಗ ಅರುವತ್ತರ ಅಂಚಿನಲ್ಲಿ ನಿಂತುಕೊಂಡೆ. ಹೀಗಿದ್ದೂ ಅವರ ಬಗೆಗಿನ 'ಗುರುಭಾವನೆ' ಗುಂಜಿಯಷ್ಟೂ ಕಡಿಮೆಯಾಗಿಲ್ಲ.

ನಾನು ಬೆಳೆದಿದ್ದೇನೆ, ನಿಜ. ನನ್ನೊಳಗೆ ನನ್ನ ಗುರುಗಳೂ ಬೆಳೆದಿದ್ದಾರೆ. ಹೀಗಾಗಿ ನಮ್ಮಿಬ್ಬರ ನಡುವಿನ ಅಂತರ 'ಅವರು ಗುರು-ನಾನು ಶಿಷ್ಯ' ಎಂಬಂತೆ ಕೊನೆಯ ವರೆಗೂ ಉಳಿದು ಬಂದಿದೆ. ಇದಕ್ಕೆ ಕಾರಣ ಅವರ ದೊಡ್ಡ ಮನಸ್ಸು. ನಾನು ಹೊಸ ಹೊಸ ಹುದ್ದೆಗಳನ್ನು ಏರಿದಾಗಲೆಲ್ಲ, ಪ್ರಶಸ್ತಿಗಳನ್ನು ಪಡೆದಾಗಲೆಲ್ಲ ಅಂತಃಕರಣ ತುಂಬಿದ ಅವರ ಶುಭಾಶಯಪತ್ರ ನನಗೆ ಬರುತ್ತಲಿದ್ದವು. ಇದು, ವಿದ್ಯಾರ್ಥಿಯಾದ ನನ್ನನ್ನು ವೈಯಕ್ತಿಕ ನೆಲೆಯಲ್ಲಿ ಸಂತುಷ್ಟಗೊಳಿಸುವ, ಪ್ರೋತ್ಸಾಹಿಸುವ ರೀತಿ. ಸಾರ್ವಜನಿಕವಾಗಿಯೂ ಅವರು ನನ್ನನ್ನು ದೊಡ್ಡವನನ್ನಾಗಿ ಮಾಡುತ್ತಲಿದ್ದ ರೀತಿ ಇನ್ನೂ ಅನನ್ಯವಾದುದು. ಅಂದರೆ ಸಾಮಾನ್ಯವಾಗಿ ಸಾಸನೂರ ಅವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದು ಕಡಿಮೆ. ಹೀಗಿದ್ದೂ ನನ್ನ ಮಗಳ ಮದುವೆ ಪತ್ರ ಅಂಚೆ ಮೂಲಕ ಕಳಿಸಿದೆ, ಬಂದೇ ಬಿಟ್ಟರು. ನನ್ನ ಸ್ನೇಹಿತರಿಗೆ ಆಶ್ಚರ್ಯ! ನಾನು ವಿಜಾಪುರ ಮಹಾವಿದ್ಯಾಲಯವೊಂದರ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದೆ. ಅಲ್ಲಿಗೂ ಬಂದರು. ಇವೆಲ್ಲ ನನಗೆ ಮುಜುಗರ ಹುಟ್ಟಿಸಿದವುಗಳೇನೋ

ನಿಜ. ಆದರೆ ತಮ್ಮ ಆಗಮನದಿಂದ ಅವರು ಸಾರ್ವಜನಿಕವಾಗಿ ನನ್ನನ್ನು ದೊಡ್ಡವನನ್ನಾಗಿ ಮಾಡಿದ ಸಂದರ್ಭಗಳಿವು.

ಇನ್ನೊಂದು ಸಂದರ್ಭ: ನನ್ನ ಮಗಳಿಗೆ ವಿಜಾಪುರದಲ್ಲಿ ನೌಕರಿ ಕೊಡಿಸುವುದು ಅಗತ್ಯವೆನಿಸಿದ್ದಿತು. ವೈಯಕ್ತಿಕವಾಗಿ ನನಗೆ ಸಾರ್ವಜನಿಕ ಸಂಬಂಧ ಕಡಿಮೆ. ಇಂಥ ಸಂದರ್ಭದಲ್ಲಿ ನಾನು ನನ್ನ ಗುರುಗಳಿಗೇ ಮೊರೆ ಹೋಗುವುದು ಅನಿವಾರ್ಯವೆನಿಸಿತು. ನನ್ನ ಜೀವನದಲ್ಲಿಯೇ ಅವರನ್ನು ಇಂಥ ಕಾರ್ಯಕ್ಕೆ ಬಳಸಿಕೊಂಡವನಲ್ಲ. ಮೇಲಾಗಿ ಆ ಘನವೆತ್ತ ವ್ಯಕ್ತಿಯನ್ನು ಈ ಸಣ್ಣ ಕೆಲಸಕ್ಕೆ ಬಳಸಿಕೊಳ್ಳಲು ನನ್ನ ಮನಸ್ಸು ಒಪ್ಪಲಿಲ್ಲ. "ಲೇಸು ಒಳ್ಳೆವರ ಬೇಡಿಕೊಂಬುದೆ ವ್ಯರ್ಥವಾದರೂನು" - ಈ ವಾಕ್ಯ ನೆನೆದು ಗುರುಗಳ ಹತ್ತಿರ ಹೋದೆ. ಒಂದು ಪತ್ರ ಕೊಡಲು ಸಾಧ್ಯವೇ? ಎಂದು ಕೇಳಿದ. ಒಳಗೆ ಹೋದರು. ಬಟ್ಟೆ ಧರಿಸಿ ಹೊರಬಂದು, ಕಾರ್ ಹತ್ತಿ ನನ್ನೊಂದಿಗೆ ಆ ಸಂಸ್ಥೆಗೇ ಬಂದರು. ಡಾ. ಸಾಸನೂರ ಅವರು ತಮ್ಮ ಸಂಸ್ಥೆಗೆ ಬಂದುದು ಎಲ್ಲರಿಗೂ ಮುಜುಗರ. ಇಡೀ ಸಂಸ್ಥೆಯೇ ಚಲನಶೀಲವಾದ ಸಡಗರ. ಡಾ. ಸಾಸನೂರ ಅವರು ವಿಷಯ ವಿವರಿಸುತ್ತಿದ್ದಂತೆಯೇ ತಡೆದು, ಅದನ್ನು ಈಡೇರಿಸಿಕೊಡುವುದಾಗಿ ಸಂಸ್ಥೆಯ ಅಧ್ಯಕ್ಷರು ಆಶ್ವಾಸನೆ ನೀಡಿದರು. ಐದು ನಿಮಿಷಗಳಲ್ಲಿ ಇದೆಲ್ಲ ನಡೆದುಹೋಯಿತು. ಇದು ಸಾಸನೂರ ಅವರು ಸಮಾಜದಲ್ಲಿ, ಸಂಸ್ಥೆಗಳಲ್ಲಿ ಗಳಿಸಿದ್ದ ಘನತೆ-ಗೌರವ.

ನನ್ನ ವಿಷಯವಾಗಿ ಅವರು ತೋರುತ್ತಲಿದ್ದ ಇಂಥ ಪಿತೃಸದೃಶ ಪ್ರೀತಿ ಅನನ್ಯವಾಗಿದ್ದಿತು. ಈ ಋಣಭಾರವನ್ನು ಸಾರ್ವಜನಿಕವಾಗಿ ಭಾಗಶಃ ಕಡಿಮೆ ಮಾಡಿಕೊಳ್ಳುವ ದೃಷ್ಟಿಯಿಂದ, ಅವರ ಅರುವತ್ತನೆಯ ಹುಟ್ಟುಹಬ್ಬ ಸಂದರ್ಭದಲ್ಲಿ ನನ್ನ 'ಮಲ್ಲಿನಾಥಪುರಾಣ ಸಂಗ್ರಹ'ವನ್ನು ಅವರಿಗೆ ಅರ್ಪಿಸಿದೆ.

ವಿಜಯ ಕಾಲೇಜಿನಲ್ಲಿ ಎಲ್ಲ ಪ್ರಾಧ್ಯಾಪಕರ ರೀತಿಯೇ ಒಂದು, ಡಾ. ಸಾಸನೂರ ಅವರ ರೀತಿಯೇ ಒಂದು. ವೇಷ-ಭೂಷಣ ವಿಷಯದಲ್ಲಿ ಅವರಂಥ ಸದಭಿರುಚಿಯ ವ್ಯಕ್ತಿಯನ್ನು ನಾನು ಇನ್ನೂ ಕಂಡಿಲ್ಲ. ದೇಶೀ ಉಡುಪು ಧರಿಸಲಿ, ವಿದೇಶೀ ಉಡುಪು ಧರಿಸಲಿ. ಅದಕ್ಕೆ ವಿಲಾಸದ ಸ್ಪರ್ಶವಿರುತ್ತಿರಲಿಲ್ಲ; ಅಲ್ಲಿ ಒಂದು ಘನತೆ ಎದ್ದು ಕಾಣುತ್ತಿತ್ತು. ಎತ್ತರದ ಗಂಭೀರ ನಿಲವಿನಲ್ಲಿ, ಕಟ್ಟುಮಸ್ತಾದ ಮೈಕಟ್ಟಿನಲ್ಲಿ ಅವರು ಮಹಾಭಾರತದ ವ್ಯಕ್ತಿಗಳಂತೆ ಎದ್ದು ತೋರುತ್ತಿದ್ದರು. ಅವರು ಬಂದರೆ ಸಾಕು, ದೃಷ್ಟಿಬೀರಿದರೆ ಸಾಕು, ಅಲ್ಲಿ ಒಂದು ವಿಶಿಷ್ಟ ವಾತಾವರಣ ನಿರ್ಮಾಣವಾಗುತ್ತಿತ್ತು. ಅವರು ಅಲ್ಲಿಂದ ಹೋದರೆ ಶೂನ್ಯ ಆವರಿಸುತ್ತಿತ್ತು.

ಡಾ. ಸಾಸನೂರ ಅವರ ಮಾತು ಕಡಿಮೆ, ಆಡಿದ ಮಾತೆಲ್ಲ ಆಜ್ಞೆ. ಅವರು ಒಬ್ಬರೇ ಇದ್ದುದನ್ನು ನಾನು ಒಮ್ಮೆಯೂ ನೋಡಲಿಲ್ಲ. ಮನೆಯಲ್ಲಿರಲಿ. ಊರಲ್ಲಿ ಬರಲಿ, ಪ್ರವಾಸ ಮಾಡುತ್ತಿರಲಿ, ಹಲವರು ಜೊತೆಯಲ್ಲಿರುವುದು ಅವರ ವೈಶಿಷ್ಟ್ಯ. ಯಾವ ಸಂದರ್ಭದಲ್ಲಿಯೂ, ಯಾರೊಡನೆಯೂ ಅವರು ಮರ್ಯಾದೆಯ ರೇಖೆ ಮೀರಿ ವರ್ತಿಸಿದವರೇ ಅಲ್ಲ. ಈ ಎಲ್ಲ ಕಾರಣಗಳಿಂದಾಗಿ ಡಾ. ಸಾಸನೂರ ಅವರು ಒಬ್ಬ ವ್ಯಕ್ತಿಯಲ್ಲ - ಒಂದು ಸಂಘ, ಒಂದು ಸಂಘಟನೆ ಎನಿಸಿದ್ದರು. 'ನಾನು' ಹೋಗಿ 'ನಾವು' ಆಗಿದ್ದರು. ನನ್ನ ಪ್ರೀತಿಯ ವಿಜಾಪುರಕ್ಕೆ ಒಬ್ಬ ಸಾಂಸ್ಕೃತಿಕ ನೇತಾರರಾಗಿ ಬೆಳೆದಿದ್ದರು. ನೇತಾರರಾಗಬೇಕಾದರೆ ಬಹುಜನ ಸಮಾಜದಲ್ಲಿ ಹುಟ್ಟಿರಬೇಕೆಂದೇನೂ ಇಲ್ಲ - ಎಂಬುದನ್ನು ನಿಜಮಾಡಿ ತೋರಿದ್ದರು. ಒಂದು ನಿದರ್ಶನ:

೧೯೫೭-೫೮ ಇರಬಹುದು. ವಿಜಾಪುರದಲ್ಲಿ ಹಿಂದೂ ಮುಸಲ್ಮಾನ ಘರ್ಷಣೆ ಉದ್ಭವಿಸಿ, ಎರಡು ಮೂರು ದಿನ ಮುಂದುವರಿಯಿತು. ರಾಜಕೀಯ ನೇತಾರರು, ಆಡಳಿತಾಧಿಕಾರಿಗಳು ಎಷ್ಟು ಪ್ರಯತ್ನಿಸಿದರೂ ಶಾಂತವಾಗಲಿಲ್ಲ. ಡಾ. ಸಾಸನೂರ ಬೀದಿಗೆ ಬಂದರು. ಕೈಮುಗಿದರು. ಪಕ್ಷ-ಪ್ರತಿಪಕ್ಷಗಳ ಜನಸ್ತೋಮ

ಆಯುಧಗಳನ್ನು ಕೆಳಗಿಟ್ಟು, ಕೈಮುಗಿದು ಮನೆಗೆ ಮರಳಿದರು. ಇದು ಸಾಸನೂರ ಅವರನ್ನು ಎಲ್ಲ ವರ್ಗಗಳು, ಎಲ್ಲ ವರ್ಗಗಳ ಜನತೆ ಗೌರವಿಸುತ್ತಲಿದ್ದ ರೀತಿ.

ಇತ್ತೀಚೆ ಡಾ. ಸಾಸನೂರ ಅವರ ಪಿಎಚ್.ಡಿ. ಪ್ರಬಂಧ ಪ್ರಕಟವಾಯಿತು. ಹನ್ನೊಂದನೆಯ ಮತ್ತು ಹನ್ನೆರಡನೆಯ ಶತಮಾನಗಳ ಕನ್ನಡ ಸಾಹಿತ್ಯ ಅದರ ವಿಷಯ. ಹತ್ತು ಮತ್ತು ಹನ್ನೆರಡರಂಥ ಮಹತ್ವದ ಶತಮಾನಗಳಿಗೆ ಕೊಂಡಿಯಂತೆ ಮುಖ್ಯಪಾತ್ರ ವಹಿಸಿರುವ ಹನ್ನೊಂದನೆಯ ಶತಮಾನವು ಈ ಪ್ರಬಂಧದ ಪೂರ್ವಾರ್ಧವಾಗಿದ್ದುದೇ ಪ್ರಮುಖ ಸಾಧನೆ. ಹಳೆಯ ಯುಗದ ನಿರಾಕರಣವನ್ನು, ಹೊಸ ಯುಗದ ಆವಿಷ್ಕರಣವನ್ನು ಗುರುತಿಸುತ್ತ - ಇಲ್ಲಿ ಜೈನ ಮನಸ್ಸು, ವೀರಶೈವ ಮನಸ್ಸು, ವೈದಿಕ ಮನಸ್ಸುಗಳು ವ್ಯವಹರಿಸಿದ ರೀತಿಯನ್ನು, ಅವುಗಳ ಅಭಿವ್ಯಕ್ತಿಯ ವೈಶಿಷ್ಟ್ಯಗಳನ್ನು ಪ್ರತಿಪಾದಿಸಿದುದು, ಇದರ ವಿಶೇಷತೆಯೆನಿಸಿದೆ. ಈ ಪ್ರಬಂಧವನ್ನು ಅವರು ಅನೇಕ ವರ್ಷಗಳ ಬಳಿಕ ಪ್ರಕಟಿಸಿದರು. ಇಷ್ಟು ಮಹತ್ವದ ಪ್ರಬಂಧವನ್ನು, ಅದೂ ಇಂಗ್ಲಿಷ್‌ದಲ್ಲಿರುವುದನ್ನು ಅವರ ಶಿಷ್ಯರಾದ ನಾವು ಈವರೆಗೆ ಗುರುತಿಸದ ವಿಷಯ ನನಗೆ ವಿಷಾದವನ್ನುಂಟು ಮಾಡಿತು.

ನನ್ನ ಬದುಕಿನುದ್ದಕ್ಕೂ ಅವಿಭಾಜ್ಯ ಅಂಗವೆನಿಸಿದ್ದ, ಉತ್ಸಾಹ-ಘನತೆಗಳ ಸಾಕಾರವೆನಿಸಿದ್ದ ನನ್ನ ಗುರುಗಳು ಇತ್ತೀಚೆ ಅಸ್ವಸ್ಥರಾಗಿದ್ದ ಸುದ್ದಿ ನನ್ನನ್ನು ಗಾಸಿಗೊಳಿಸಿತು. ಮುಂಬಯಿಯಲ್ಲಿ ಆರೈಕೆ ಪಡೆಯುತ್ತಲಿದ್ದರು. ದೂರವಾಣಿ ಮೂಲಕ ಸಂಪರ್ಕಿಸಿದೆ. ಅನಾರೋಗ್ಯದ ನಡುವೆಯೂ ಅವರ ಮಾತಿನಲ್ಲಿ ಅದೇ ಮಮತೆ, ಅದೇ ಗಾಂಭೀರ್ಯ. "ಸಿಂಗದ ಮುಪ್ಪುಂ ನೆಗಳ್ದೀ ಗಾಂಗೇಯನ ಮುಪ್ಪುಂ ಇಳಿಕೆವಡೆಗುಮೇ?" ಪಂಪನ ಈ ವಾಕ್ಯದಂತೆ ಅವರು ಕೊನೆಯ ವರೆಗೂ ಬಾಳಿದರು. ಮುಂಬಯಿಯಿಂದ ವಿಜಾಪುರಕ್ಕೆ ಬಂದರು. ಆರೋಗ್ಯ ಸುಧಾರಿಸಲಿಲ್ಲ. ಕ್ಷೀಣವಾಗುತ್ತ ನಡೆಯಿತು. ವಿಜಾಪುರಕ್ಕೆ ಹೋದೆ, ರಾತ್ರಿ ಒಂಬತ್ತು ಗಂಟೆ. ಒಳಗೆ ಮರಣಶಯ್ಯೆದಲ್ಲಿ ಮಲಗಿಕೊಂಡಿದ್ದರು. ವೈದ್ಯರ ಸಲಹೆ ಮೇರೆಗೆ ನಾನು ಒಳಗೆ ಹೋಗಲಿಲ್ಲ. ಅವರ ಮನೆತುಂಬ ಮೌನ. ನನ್ನ ಮನದ ತುಂಬಾ ಮೌನ. ಮರುಗುತ್ತ ಹಿಂದಿರುಗಿದೆ.

ಹೀಗೆ ಅನೇಕ ಅರ್ಥಗಳಲ್ಲಿ ಎತ್ತರದ ವ್ಯಕ್ತಿಯಾಗಿದ್ದ ಡಾ. ಎಚ್. ಟಿ. ಸಾಸನೂರ ಅವರು ಮುಂದೆ ಕೆಲವೇ ದಿನಗಳಲ್ಲಿ ನಿಧನರಾದರು. ವಿಜಾಪುರದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಅಧ್ಯಾಯ ಮುಗಿಯಿತು. ಅವರಿಲ್ಲದ ವಿಜಾಪುರವನ್ನು ಕಲ್ಪಿಸಿಕೊಳ್ಳುವುದೇ ನನ್ನ ಮನಸ್ಸಿಗೆ ಬೇಸರವೆನಿಸುತ್ತದೆ.

ಸಾಸನೂರ ಸಿರಿ : ಡಾ. ಎಚ್. ಟಿ. ಸಾಸನೂರ ಅಭಿನಂದನ ಗ್ರಂಥ, ೧೯೯೯.

ಆಕರ : ಮಾರ್ಗ ಸಂಪುಟ–೬

೯೦

ಸಾಂಸ್ಕೃತಿಕ ವ್ಯಕ್ತಿ

೧೯೯೯

ಮಾನ್ಯ ಶ್ರೀ ಅಗಡಿ ಸಂಗಣ್ಣನವರದು ಕೊಪ್ಪಳ ಜಿಲ್ಲೆ. ನನ್ನದು ವಿಜಾಪುರ ಜಿಲ್ಲೆ. ಈ ಪ್ರಾದೇಶಿಕ ಅಂತರದ ಜೊತೆ, ತಲಾಮಾರಿನ ಅಂತರವೂ ಸೇರಿ ನನಗೆ ಮೊದಮೊದಲು ಶ್ರೀ ಅಗಡಿ ಅವರು ಅಪರಿಚಿತರಾಗಿದ್ದರು. ಹೀಗಿದ್ದೂ ಅವರ ವ್ಯಕ್ತಿತ್ವ ಸಾಧನೆಗಳ ಬಗೆಗೆ ಕೇಳಿ ಪ್ರಭಾವಿತನಾಗಿದ್ದ ನನ್ನ ದೃಷ್ಟಿಯಲ್ಲಿ ಅವರು ಬಹುದಿನಗಳಿಂದಲೂ ಒಂದು ದಂತಕಥೆಯಾಗಿ ಉಳಿದಿದ್ದರು.

ಕೆಲವು ವರ್ಷಗಳ ಹಿಂದೆ ಘಟಿಸಿದ ಅವರ ಪರಿಚಯ ವಿಶ್ವಾಸಕ್ಕೆ ತಿರುಗಿ ವಾತ್ಸಲ್ಯವಾಗಿ ಪರಿಣಮಿಸಿ, ಅದು, ನನ್ನ ಬದುಕಿನ ದೊಡ್ಡ ಆಸ್ತಿಯಾಗಿ ಬೆಳೆಯಿತು. ಸೌಮ್ಯ ನಿಲುವು, ಹಿತ-ಮಿತ ಮಾತು, ನೇರ ನಿರಾಳ ಮನಸ್ಸಿನ ಶ್ರೀ ಅಗಡಿ ಅವರು 'ಗಾಂಧಿಯುಗದ ವ್ಯಕ್ತಿ' ಮಾದರಿಯವರು.

ಮನೆತನದಿಂದ ಕೃಷಿ-ವಾಣಿಜ್ಯ ಪರಂಪರೆಗೆ ಸೇರಿದ ಇವರು ಸಾರ್ವಜನಿಕ ಜೀವನಕ್ಕೆ ವಿಸ್ತರಿಸಿಕೊಂಡು 'ನಾನು' ಹೋಗಿ 'ನಾವು' ಆಗುವ ದಿಕ್ಕಿನಲ್ಲಿ ಬೆಳೆದು ಬಂದಿದ್ದಾರೆ. ಈ ಭಾವನೆಗೆ ಬುನಾದಿಯಾಗಿ ನಿಂತುದು ಬಸವಣ್ಣನವರ 'ದಾಸೋಹ ಸಿದ್ಧಾಂತ.'

ಶ್ರೀ ಸಂಗಣ್ಣನವರ ಮತ್ತು ನನ್ನ ಸಂಬಂಧ ಗಾಢವಾಗಲು ಕಾರಣ ನಮ್ಮಿಬ್ಬರ ಸಮಾನ ಆಸಕ್ತಿಯಾಗಿರುವ ನಮ್ಮ ನಾಡಿನ 'ಸಂಸ್ಕೃತಿ ಪ್ರೀತಿ.' ರಾಜಕೀಯ ಕ್ಷೇತ್ರದವರಿಗೆ ಮುಖ್ಯವಾದುದು ಭೌತಿಕ ಪ್ರೀತಿಯೇ ಹೊರತು, ಸಾಂಸ್ಕೃತಿಕ ಪ್ರೀತಿಯಲ್ಲ. ಇದಕ್ಕೆ ಅಪವಾದವೆಂಬಂತೆ ಇವರು ಕರ್ನಾಟಕದ ಪ್ರಾಚೀನ ಪರಂಪರೆಯ ಬಗೆಗೆ ಅಪಾರ ತಿಳುವಳಿಕೆಯುಳ್ಳವರಾಗಿದ್ದಾರೆ. ಇಂದಿಗೂ ಈ ಸಂಸ್ಕೃತಿಯ ಶೋಧ, ಪ್ರಸಾರಗಳಿಗಾಗಿ ತನು-ಮನ-ಧನ ವಿನಿಯೋಗಿಸುತ್ತಲಿರುವುದು ಗಮನಿಸಬೇಕಾದ ಸಂಗತಿಯಾಗಿದೆ.

ತಮ್ಮ ಈ ಸಂಸ್ಕೃತಿ ಪ್ರೀತಿಗೆ ಒಂದು ಶಾಶ್ವತ ರೂಪ ಕೊಡುವ ಉದ್ದೇಶದಿಂದ ತಮ್ಮ ಧರ್ಮಪತ್ನಿಯ ವಾರ್ಷಿಕ ಪುಣ್ಯತಿಥಿ ಸಂದರ್ಭವನ್ನು ಆರಿಸಿಕೊಂಡಿದ್ದಾರೆ. ಪ್ರತಿವರ್ಷ ಈ ದಿನದಂದು ಕರ್ನಾಟಕ ಸಂಸ್ಕೃತಿಗೆ, ಶರಣ ಸಂಸ್ಕೃತಿಗೆ ಸಂಬಂಧಿಸಿದ ವಿಚಾರಸಂಕಿರಣ, ವಿಶೇಷೋಪನ್ಯಾಸ ಏರ್ಪಡಿಸುತ್ತಲಿದ್ದಾರೆ. ನೂರಾರು ಜನ ವಿದ್ವಾಂಸರ, ಸಂಸ್ಕೃತಿ ಆಸಕ್ತರ ಈ ಸಮಾವೇಶ ಒಂದು ಅಪರೂಪದ ಸಂಘಟನೆಯೇ ಸರಿ.

ಈ ಸಂಸ್ಕೃತಿ ರೀತಿ ಇನ್ನೂ ಅರ್ಥ ಪಡೆಯುವ ಸಲುವಾಗಿ ಶ್ರೀ ಸಂಗಣ್ಣನವರು "ಅಗಡಿ ಸಂಸ್ಕೃತಿ ಪ್ರತಿಷ್ಠಾನ"ವನ್ನು ಅಸ್ತಿತ್ವಕ್ಕೆ ತಂದಿದ್ದಾರೆ. ಸಂಸ್ಕೃತಿ-ಸಾಹಿತ್ಯಗಳ ಪ್ರಸಾರ, ಸಾರ್ವಜನಿಕ ಹೊಣೆಯೂ ಆಗಿದೆಯೆಂಬುದಕ್ಕೆ ಇದು ಜೀವಂತ ಉದಾಹರಣೆಯೆನ್ನಿಸಿದೆ. ಉತ್ತಮೋತ್ತಮ ಪಿಎಚ್.ಡಿ. ಪ್ರಬಂಧಗಳನ್ನು, ಸಂಶೋಧನಾತ್ಮಕ-ವೈಚಾರಿಕ ಕೃತಿಗಳನ್ನು ಪ್ರಕಟಿಸುವ ಈ ಯೋಜನೆ ಕನ್ನಡ ಪುಸ್ತಕ ಪ್ರಕಟನ ಜಗತ್ತಿಗೆ ಹೊಸ ಸೇರ್ಪಡೆಯೆನಿಸಿದೆ. ಈ ಉಪಕ್ರಮ ನಮ್ಮಿಬ್ಬರನ್ನು ಇನ್ನೂ ಹತ್ತಿರ ತಂದಿದೆ.

ಈ ಸಂದರ್ಭದಲ್ಲಿ ಹೇಳಲೇಬೇಕಾದ ಇನ್ನೊಂದು ವಿಷಯವೆಂದರೆ- ಶ್ರೀ ಸಂಗಣ್ಣನವರ ಪುಸ್ತಕ ಪ್ರೀತಿ. ಅವರ ಮನೆ ಕನ್ನಡ, ಇಂಗ್ಲಿಷ್ ಮೊದಲಾದ ಭಾಷೆಯ ಅಪೂರ್ವ ಪುಸ್ತಕಗಳ ದೊಡ್ಡ ಭಾಂಡಾರವೆನಿಸಿದೆ. ರಾಷ್ಟ್ರನಾಯಕರಾದ ಶ್ರೀ ಜವಾಹರಲಾಲ ನೆಹರೂ ಮೊದಲಾದವರೊಂದಿಗೆ ಲೋಕಸಭೆಯ ಸದಸ್ಯರಾಗಿ ನಡೆಸಿದ ಪತ್ರವ್ಯವಹಾರಗಳ ಅಪೂರ್ವ ದಾಖಲೆಗಳೂ ಇಲ್ಲಿವೆ. ನಾನೂ ಒಳಗೊಂಡಂತೆ ಅನೇಕ ಜನ ವಿದ್ವಾಂಸರು ಈ ಭಂಡಾರದ ಪ್ರಯೋಜನ ಪಡೆದವರಾಗಿದ್ದೇವೆ. ಹೀಗೆ ಎಲ್ಲರಂತೆ ಒಬ್ಬ ರಾಜಕೀಯ ವ್ಯಕ್ತಿಯಾಗಿ ಉಳಿಯದೆ, ಒಬ್ಬ ಸಾಂಸ್ಕೃತಿಕ ವ್ಯಕ್ತಿಯಾಗಿ ಬೆಳೆದಿರುವ ಶ್ರೀ ಅಗಡಿಯವರ ಆಸಕ್ತಿ ಶಾಶ್ವತ ಆಕೃತಿ ಪಡೆಯುವುದರ ಸಲುವಾಗಿ ಒಂದು ಸಂಸ್ಥೆ ಅಸ್ತಿತ್ವಕ್ಕೆ ಬರುವುದೆಂಬ ನಿರೀಕ್ಷೆ ನನ್ನದಾಗಿದೆ.

ಎನಗಿಂತ ಕಿರಿಯರಿಲ್ಲ - (ಸಂಗಣ್ಣ ಅಗಡಿ ಅಭಿನಂದನ ಗ್ರಂಥ) ಸಂ. ಬಸವರಾಜ ಮಲಶೆಟ್ಟಿ, ೧೯೯೯.

ಆಕರ : ಮಾರ್ಗ ಸಂಪುಟ–೬

೯೧

ನೆನಪಿಗೆ ನಮಸ್ಕಾರ

ದೇಶಿ ಚಿಂತನೆ ಮತ್ತು ಪ್ರಸಾರಗಳ ಆದರ್ಶದಲ್ಲಿ ಅಸ್ತಿತ್ವಕ್ಕೆ ಬಂದ ಹಂಪಿ ಕನ್ನಡ ವಿಶ್ವವಿದ್ಯಾಲಯ, ವ್ಯಾಪ್ತಿಯಲ್ಲಿ ಕರ್ನಾಟಕಕ್ಕೆ ಮಿತಿಯಲ್ಲಿ ಬಳ್ಳಾರಿ ಜಿಲ್ಲೆಗೆ ಸಲ್ಲಿಸಿದ ಕಾಣಿಕೆ ವಿಶೇಷವಾಗಿದ್ದು, ಇದಕ್ಕೆ ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ಬಳ್ಳಾರಿ ಜಿಲ್ಲೆಯ ಮರದ ವಾಸ್ತು-ಇತ್ಯಾದಿ ಕೃತಿಗಳು ನಿದರ್ಶನವೆನಿಸಿವೆ. ಇವುಗಳ ಸಾಲಿನಲ್ಲಿ ಪ್ರಕಟವಾಗುತ್ತಲಿದೆ, ಬಳ್ಳಾರಿ ಪರಿಸರದ ಸ್ವಾತಂತ್ರ್ಯಯೋಧನನ್ನು ಕುರಿತ ಕೃತಿ "ಟೇಕೂರ್ ಸುಬ್ರಹ್ಮಣ್ಯಂ" : ಒಂದು ಅನ್ವೇಷಣೆ."

ಬಳ್ಳಾರಿ ಜಿಲ್ಲೆಯ ಟೇಕೂರ್ ಅವರು ಒಂದು ಶಕ್ತಿ, ಒಂದು ಸಂಘಟನೆ ಭಾರತ ಸ್ವಾತಂತ್ರ್ಯ ಸಂಗ್ರಾಮ, ಕನ್ನಡ ಏಕೀಕರಣದ ಚಳುವಳಿ-ಈ ಎರಡೂ ನೆಲೆಗಳಲ್ಲಿ ಅವರು ಭಾರತೀಯ ಕನ್ನಡಿಗ' ಪ್ರಜ್ಞೆಯಿಂದ ದುಡಿದ ರೀತಿ ಅನುಕರಣೀಯ, ಪೂರೈಸಿದ ಕಾರ್ಯ ಉಲ್ಲೇಖನೀಯ. ಬಳ್ಳಾರಿ ಜಿಲ್ಲೆಯಲ್ಲಿ ತೆಲುಗರಾಗಿರುವ ನಾವು ಕನ್ನಡಿಗರು, ಕರ್ನಾಟಕದಲ್ಲಿ ಕನ್ನಡಿಗರಾಗಿರುವ ನಾವು ಭಾರತೀಯರು ಎಂಬ ವಾಸ್ತವ ಸತ್ಯವನ್ನು ನುಡಿದ, ನಡೆದ ಅವರು ನಮ್ಮೆಲ್ಲರಿಗೆ ಆದರ್ಶ. ಈ ಪ್ರಜ್ಞೆ ಕಾರಣವಾಗಿ ಅವರು ಬಳ್ಳಾರಿ ಆಂಧ್ರಕ್ಕೆ ವರ್ಗಾವಣೆಯಾಗುವುದನ್ನು ತಡೆಗಟ್ಟುವಲ್ಲಿ, ಭಾರತವನ್ನು ಬ್ರಿಟಿಶರ ಕೈಯಿಂದ ಬಿಡಿಸಿಕೊಳ್ಳುವಲ್ಲಿ ತುಂಬ ಪ್ರಾಮಾಣಿಕವಾಗಿ ದುಡಿದರು. ಹೀಗಾಗಿ ಅವರನ್ನು ಕನ್ನಡಿಗರು ಉದ್ದಕ್ಕೂ ತಮ್ಮ ನೇತಾರನೆಂದು ನಂಬಿ ನಡೆದರು.

ಶ್ರೀ ಸುಬ್ರಹ್ಮಣ್ಯಂ ಅವರು ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಗಣ್ಯರಾದ ಗಾಂಧಿ, ನೆಹರು, ರಾಜಾಜಿ ಮೊದಲಾದವರ ಮಧ್ಯೆ ಬೆಳೆದವರು, ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಲೋಕಸಭೆಯ ಸದಸ್ಯರಾಗಿ ಬಾಳಿದವರು. ಜನರ ಸಮಸ್ಯೆಗಳನ್ನು ತೀರ ಹತ್ತಿರದಿಂದ ಅರ್ಥ ಮಾಡಿಕೊಂಡಿದ್ದ ಶ್ರೀ ಟೇಕೂರ್ ಅವರು, ಲೋಕಸಭೆಯಲ್ಲಿ ಪರಿಣಾಮಕಾರಿಯಾಗಿ ವಿಷಯಗಳನ್ನು ಪ್ರತಿಪಾದಿಸುವ ಮೂಲಕ ಒಳ್ಳೆಯ ಸಂಸದೀಯ ಪಟುಗಳೆಂದು ಹೆಸರು ಗಳಿಸಿದ್ದರು. ಇವರು ಜನಿಸಿ ಇಂದಿಗೆ ೧೦೦ ವರ್ಷ ತುಂಬಿದವು. ಈ ನೆನಪಿಗೆ ನಮಸ್ಕಾರ ಸಲ್ಲಿಸಲು ಬಳ್ಳಾರಿಯ ಮುಖ್ಯರು ರೂಪಿಸಿದ ಈ ಪುಸ್ತಕಗವನ್ನು ತನ್ನ ಕರ್ತವ್ಯದ ಭಾಗವೆಂದು ಬಗೆದು, ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸುತ್ತಲಿದೆ.

■■

೯೨

ವಯಸ್ಸಿಗೆ ಮೀರಿದ ಸಾಧನೆ

೧೯೯೯

ವಯಸ್ಸಿಗೆ ಮೀರಿದ ಅನುಭವ, ವಯಸ್ಸು-ಅನುಭವಗಳಿಗೆ ಮೀರಿದ ಕಾರ್ಯಸಾಧನೆ, ಇವು ೫೦ರ ಶ್ರೀ ಪ್ರಭಾಕರ ಕೋರೆ ಅವರ ವ್ಯಕ್ತಿತ್ವದ ಮುಖ್ಯ ಲಕ್ಷಣಗಳಾಗಿವೆ. ತಂದೆ ಶ್ರೀ ಬಸವಪ್ರಭು ಕೋರೆ ಅವರಿಂದ ಶ್ರಮ ಸಂಸ್ಕೃತಿ-ಸಮಾಜ ಸೇವೆಗಳನ್ನು ಪಿತ್ರಾರ್ಜಿತವೆಂಬಂತೆ ಮೈಗೂಡಿಸಿಕೊಂಡು, ಅದಕ್ಕೆ ಸ್ವಾರ್ಜಿತದ ಆಧುನಿಕತೆಯ ಅರ್ಥ ತುಂಬಿದ ಶ್ರೇಯಸ್ಸು ಶ್ರೀ ಪ್ರಭಾಕರ ಕೋರೆ ಅವರದಾಗಿದೆ.

ಶ್ರೀಮಂತಿಕೆಯಲ್ಲಿ ಸೌಜನ್ಯ, ಕೈಗೆತ್ತಿಕೊಂಡ ಕೆಲಸವನ್ನು ಪಟ್ಟುಹಿಡಿದು ಸಾಧಿಸುವ ಛಲ, ಎಲ್ಲರನ್ನು ಸೇರಿಸಿಕೊಂಡು ಹೋಗುವ ಸಮೂಹ ಪ್ರಜ್ಞೆಗಳಿಂದಾಗಿ, ಇವರು ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯಲ್ಲಿ ಮಾಡಿದ ಕಾರ್ಯ ಪವಾಡಸದೃಶ. ಅಣ್ಣ ಶ್ರೀ ಚಿದಾನಂದ ಕೋರೆ ಅವರ ಅನಿರೀಕ್ಷಿತ ನಿಧನ ಕಾರಣವಾಗಿ, ಈ ಸಂಸ್ಥೆಯ ಬಹುದೊಡ್ಡ ಹೊಣೆಯನ್ನು ಎಳೆಯ ಹೆಗಲ ಮೇಲೆ ಹೊತ್ತವರು, ಶ್ರೀ ಪ್ರಭಾಕರ ಕೋರೆ. ಇವರು ಇದನ್ನು ಹೊತ್ತುಕೊಳ್ಳುವ, ಮುನ್ನಡೆಸುವ ಬಗ್ಗೆ ಬಹಳ ಜನರಿಗೆ ಅಂದು ಅನುಮಾನಗಳಿದ್ದವು. ಈ ಅನುಮಾನಗಳನ್ನು ಹುಸಿಗೊಳಿಸುವ ರೀತಿಯಲ್ಲಿ ಈ ದೊಡ್ಡ ಸಂಸ್ಥೆಯನ್ನು ಇನ್ನೂ ದೊಡ್ಡದಾಗಿ ಶ್ರೀ ಪ್ರಭಾಕರ ಕೋರೆ ಅವರು ಬೆಳೆಸಿದ್ದಾರೆ. ಭವಿಷ್ಯತ್ತಿನಲ್ಲಿ ಇದನ್ನು ಮುನ್ನಡೆಸಿಕೊಂಡು ಹೋಗುವುದು ಹೇಗೆ? ಎಂಬ ಭಯ ಹುಟ್ಟುವಂತೆ ಅದನ್ನು ವಿಸ್ತಾರದಿಂದ ವಿಸ್ತಾರಕ್ಕೆ ಬೆಳೆಸಿದ ಕೀರ್ತಿ ಇವರದಾಗಿದೆ.

ಶಿಕ್ಷಣದಲ್ಲಿ ಆಧುನಿಕತೆ, ಗುಣಮಟ್ಟ - ಇವು ಶ್ರೀ ಪ್ರಭಾಕರ ಕೋರೆಯವರ ಆದರ್ಶಗಳಾಗಿವೆ. ಈ ಆದರ್ಶಕ್ಕೆ ಚ್ಯುತಿ ಬರುವ ಸಂದರ್ಭದಲ್ಲಿ ಒಂದು ಅಂಗುಲದಷ್ಟೂ ಹಿಂದೆ ಸರಿಯದ ನಿಷ್ಠೆಯನ್ನು ನಾನು ಅವರಲ್ಲಿ ಕಂಡಿದ್ದೇನೆ. ಇದಕ್ಕೆ ಜವಾಹರಲಾಲ ನೆಹರೂ ಕಾಲೇಜು ಕ್ಯಾಂಪಸ್, ಅಲ್ಲಿಯ ಸುಸಜ್ಜಿತ ಹಾಸ್ಪಿಟಲ್ ನಿದರ್ಶನವೆನಿಸಿವೆ.

ಸಂಸ್ಥೆ ಅರ್ಥ ಪಡೆಯುವುದಕ್ಕೆ ಸೌಕರ್ಯಗಳು ಮುಖ್ಯ. ಇದಕ್ಕಿಂತ ಅಲ್ಲಿ ದುಡಿಯುವ ಜನ ಮುಖ್ಯವೆನ್ನುತ್ತಾರೆ, ಶ್ರೀ ಕೋರೆ. ಅವರ ಈ ನಿರೀಕ್ಷೆಗೆ ತಕ್ಕಂತೆ ದುಡಿದು ಕೆ.ಎಲ್.ಇ. ಸಂಸ್ಥೆಯನ್ನು ಇನ್ನೂ ಗುಣಾತ್ಮಕವಾಗಿ ಬೆಳೆಸುವುದು ಅಲ್ಲಿಯ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಯ ಕರ್ತವ್ಯವಾಗಿದೆ.

---

* "ಪ್ರಭಾಂಕಲಿ" - ಶ್ರೀ ಪ್ರಭಾಕರ ಕೋರೆ ಅಭಿನಂದನ ಗ್ರಂಥ.ಪ್ರಕಾಶಕರು : ಶ್ರೀ ಪ್ರಭಾಕರ ಕೋರೆ ಅಭಿನಂದನ ಸಮಿತಿ ಚಿಕ್ಕೋಡಿ.೧೯೯೯

ಆಕರ : ಮಾರ್ಗ ಸಂಪುಟ–೬

೯೩

ಗೆಳೆಯ ಗಿರಡ್ಡಿ ಗೋವಿಂದರಾಜ

೨೦೦೧

"ಗಿರಡ್ಡಿ ಅವರ ವಿಮರ್ಶೆಯನ್ನು ಓದುವಾಗ ಮಲ್ಲಿಕಾರ್ಜುನ ಮನ್ಸೂರ ಅವರ ಸಂಗೀತ ಕೇಳಿದ ಅನುಭವವಾಗುತ್ತದೆ."

ನನ್ನೊಂದಿಗೆ ಸಾಹಿತ್ಯಿಕ ಸಂವಾದ ನಡೆಸುವುದೆಂದರೆ ಡಾ. ಎಸ್. ಎಸ್. ಕೋತಿನ ಅವರಿಗೆ ತುಂಬ ಆಸಕ್ತಿ. ಇಂಥ ಒಂದು ಸಂವಾದ ಪ್ರಸಂಗದಲ್ಲಿ ಅವರು ನನಗೆ ಮೇಲಿನ ಮಾತು ಹೇಳಿದ್ದರು.

೧೯೬೨. ನಾನು ಧಾರವಾಡಕ್ಕೆ ಎಂ. ಎ. ಓದಲು ಬಂದ ಸಂದರ್ಭ. ಆಗ ಗಿರಡ್ಡಿ, ಚಂಪಾ, ಸಿದ್ಧಲಿಂಗ ಪಟ್ಟಣಶೆಟ್ಟಿ, ಕಂಬಾರ, ಕುಳ್ಳಿ, ಕೊಟ್ರಶೆಟ್ಟಿ ಮತ್ತು ನಾನು- ಹೀಗೆ ನಾವೆಲ್ಲ ಏಕಕಾಲಕ್ಕೆ ಬೇರೆ ಬೇರೆ ಊರುಗಳಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳಾಗಿ ಬಂದುದು ಒಂದು ಯೋಗಾಯೋಗ. ಇಂದು ಕರ್ನಾಟಕದ ತುಂಬ ಒಂದಿಷ್ಟು ಮನೆಮಾತಾಗಿರುವ ಈ ಹೆಸರುಗಳನ್ನು ನೆನೆದರೆ, ಆ ಸಂದರ್ಭ ಚಾರಿತ್ರಿಕ ಸಮಾಗಮವೆಂದೇ ಹೇಳಬೇಕಾಗುತ್ತದೆ. ಬಹುಶಃ ನಾಲ್ಕು ದಶಕ ಕಳೆದರೂ ಇಂಥ "ಬ್ಯಾಚ್" ಆ ವಿಶ್ವವಿದ್ಯಾಲಯದಲ್ಲಿ ಬರಲಿಲ್ಲವೆಂಬುದು ಅನೇಕರ ಅಭಿಪ್ರಾಯ.

ಇವರಲ್ಲಿ ಕುಳ್ಳಿ, ಕೊಟ್ರಶೆಟ್ಟಿ ನನ್ನ ವಿಭಾಗದವರು. ನಾನು ಎಷ್ಟು ತಗ್ಗಿ-ಬಗ್ಗಿ ನಡೆದರೂ ಅವರು ನನ್ನೊಂದಿಗೆ ಹೊಂದಿಕೊಳ್ಳಲೇ ಇಲ್ಲ. ನಾನು ಅವರಿಗಿಂತ ವಯಸ್ಸಿನಲ್ಲಿ ಸಣ್ಣವನಾಗಿ ಹುದ್ದೆಯಲ್ಲಿ ದೊಡ್ಡವನಾಗಿದ್ದುದೇ ಇದಕ್ಕೆ ಮುಖ್ಯ ಕಾರಣ. ಮುಂದೆ ಅನೇಕ ಸಣ್ಣ-ಪುಟ್ಟ ಕಾರಣಗಳೂ ಸೇರಿ, ಆ ಬಿರುಕು ದೊಡ್ಡದಾಗುತ್ತಲೇ ಹೋಯಿತು. ಕಂಬಾರ ಅವರು ಎಂ. ಎ. ಮುಗಿಯುತ್ತಲೇ ಬೆಳಗಾವಿ, ಸಾಗರ, ಉಡುಪಿ, ಬೆಂಗಳೂರು ಹೀಗೆ ದೂರದಿಂದ ದೂರಕ್ಕೆ ಹೋದ ಕಾರಣ, ಗಟ್ಟಿ ಸಂಬಂಧ ಅವರೊಂದಿಗೂ ಏರ್ಪಡಲಿಲ್ಲ. ಚಂಪಾ ಕರ್ನಾಟಕ ವಿಶ್ವವಿದ್ಯಾಲಯ ಕ್ಯಾಂಪಸ್ಸಿನಲ್ಲಿದ್ದರೂ ಒಂದಿಷ್ಟು ಪ್ರೀತಿಯಿಂದ ಇರಿಯುವ ಸ್ವಭಾವ ಕಾರಣವಾಗಿ, ನಾನು ಅವನಿಂದ ದೂರ - ಸಮೀಪ ಉಳಿಯುತ್ತ ಬಂದೆನು. ಹತ್ತಾರು ಕಡೆಗೆ ಹಂಚಿಹೋಗುವ ಸ್ವಭಾವದ ಪಟ್ಟಣಶೆಟ್ಟರು, ನನ್ನ ಸ್ನೇಹವರ್ತುಲದಲ್ಲಿ ತಡವಾಗಿ ಬಂದರು. ಸಂಯಮ, ಗಿರಡ್ಡಿಯವರ ಬದುಕು-ಬರಹಗಳ ಮುಖ್ಯ ಲಕ್ಷಣವಾಗಿದ್ದ ಕಾರಣ, ನನ್ನ ಅವರ ಮನಸ್ಸು ಹೊಂದಿಕೊಂಡವು. ನಾವಿಬ್ಬರೂ ಸ್ನೇಹಿತರಾಗಿ ಈಗಲೂ ಮುಂದುವರಿದಿದ್ದೇವೆ.

ಗಿರಡ್ಡಿ ನನಗಿಂತ ಒಂದು ವರ್ಷ ಜ್ಯೂನಿಯರ್. ಎಂ. ಎ. ಇಂಗ್ಲಿಷ್ ಓದುತ್ತಲಿದ್ದ ಅವರು ಐಚ್ಛಿಕವಾಗಿ ಕನ್ನಡ ತೆಗೆದುಕೊಂಡಿದ್ದರು. ಅಂದು ಜ್ಯೂನಿಯರ್ ವಿದ್ಯಾರ್ಥಿಗಳಿಗೂ ಸೀನಿಯರ್ ವಿದ್ಯಾರ್ಥಿಗಳಿಗೂ ಐಚ್ಛಿಕ ವಿಷಯದ ಪಠ್ಯ ಒಂದೇ ಆಗಿದ್ದಿತು. ವರ್ಗಕೋಣೆಯಲ್ಲಿ ಎರಡೂ ವರ್ಗಗಳನ್ನು ಸೇರಿಸಿ ಪಾಠ ಹೇಳುತ್ತಿದ್ದರು. ಹೀಗಾಗಿ ನಾವು ಸಹಪಾಠಿಗಳೇ ಆದೆವು. ವಿದ್ಯಾರ್ಥಿಯಾಗಿರುವಾಗಲೇ ಕವಿಯಾಗಿ ಹೆಸರು ಮಾಡಿದ್ದ ಗಿರಡ್ಡಿ ಅವರ ಬಗ್ಗೆ ನನಗೆ ಒಂದಿಷ್ಟು ಕುತೂಹಲವಿದ್ದಿತು. ಪ್ರಥಮ ಶ್ರೇಣಿಯ ವಿದ್ಯಾರ್ಥಿಯೆಂಬ ತುರಾಯಿ ಕಾರಣವಾಗಿ ನನ್ನ ಸಲುವಾಗಿಯೂ ಪರಿಸರ ಕುತೂಹಲವಿಟ್ಟುಕೊಂಡಿದ್ದಿತು. ನಾವಿಬ್ಬರೂ ಸ್ನೇಹಿತರಾದೆವು. ಅವರು ಜ್ಯೂನಿಯರ್ ವಿದ್ಯಾರ್ಥಿಯಾಗಿರುವಾಗಲೇ 'ರಸವಂತಿ' ಕವನ ಸಂಕಲನ ಹೊರತಂದರು. ಇದರ ಬಿಡುಗಡೆ ಕಾರ್ಯಕ್ರಮ ನಮ್ಮ ವರ್ಗ ಕೋಣೆಯಲ್ಲಿಯೇ ಇಟ್ಟುಕೊಂಡಿದ್ದೆವು. ಕಾರ್ಯಕ್ರಮ ಮುಗಿಯುತ್ತಲೇ ಚಹಾ ವ್ಯವಸ್ಥೆಯಿದ್ದಿತು. ಆಭಾರ ಮನ್ನಣೆ ದೀರ್ಘವಾದ ಕಾರಣ ಎಲ್ಲರೂ ತಣ್ಣೀರಿನಂಥ ಚಹಾ ಕುಡಿದುದು ನನಗೆ ಇನ್ನೂ ನೆನಪಿದೆ.

ವರ್ಗದಲ್ಲಿ, ಸಾರ್ವಜನಿಕ ಜೀವನದಲ್ಲಿ ಗಿರಡ್ಡಿ ಮೌನಿ. ತಮ್ಮನ್ನು ತೋರ್ಪಡಿಸಿಕೊಳ್ಳುವ ಸ್ವಭಾವ ಅವರದಲ್ಲ. ಹೀಗಿದ್ದೂ ಆತ್ಮೀಯರ ವಲಯದಲ್ಲಿ ಅವರು ಚೆನ್ನಾಗಿ ಹರಟಬಲ್ಲರು. ಚಂಪಾ, ಪಟ್ಟಣಶೆಟ್ಟಿ, ಗಿರಡ್ಡಿ, ಶಿಗ್ಲಿ, ಹೆಗಡೆ - ಇವರೆಲ್ಲ ಸೇರಿದರೆ ಸಾಕು, ವಿಶಿಷ್ಟ ಹರಟೆ ನಿರ್ಮಾಣವಾಗುತ್ತಿತ್ತು. ಪರಸ್ಪರರನ್ನು ಹಂಗಿಸುವ, ಹೀಯಾಳಿಸುವ ದಾರಿಯಲ್ಲಿ ಸಾಗುತ್ತಿತ್ತು. ಹಳ್ಳಿಯಿಂದ ಬಂದ ನನಗೆ ಇದೂ ಒಂದು ಬಗೆಯ ಹರಟೆ ಎಂಬುದು ಗೊತ್ತಾದುದು ಆಗಲೇ. ಮೊದಮೊದಲು ಇದು ನನಗೆ ಸರಿಬರುತ್ತಿರಲಿಲ್ಲ. ಬರುಬರುತ್ತ ಇದರಲ್ಲಿ ಸೇರಿಕೊಳ್ಳುವುದು ನನಗೂ ಅನಿವಾರ್ಯವಾಯಿತು. ಆದರೆ ಇವರ ಮಟ್ಟದಲ್ಲಿ ಹರಟುವುದು ನನಗೆ ಸಾಧ್ಯವಾಗಲೇ ಇಲ್ಲ. ಅದು ನನ್ನ ಸ್ವಭಾವವೂ ಅಲ್ಲ.

ಎಂ. ಎ. ಮುಗಿದ ಬಳಿಕ ಎಲ್ಲರೂ ಪೂರೈಸಿಕೊಳ್ಳುವ ಸಾಧನೆಗಳೆಂದರೆ ನೌಕರಿ, ಆಮೇಲೆ ಮದುವೆ. ಹೆಚ್ಚುಕಡಿಮೆ ನಾವು ಒಂದೆರಡು ವರ್ಷದಲ್ಲಿ ನೌಕರಿ ಹಿಡಿದೆವು. ಮದುವೆಯಾದೆವು. ಮದುವೆಯ ತರುವಾಯ ನಮ್ಮೆಲ್ಲರ ಮನೆಗಳಲ್ಲಿ ಮಂಗಲಕಾರ್ಯಗಳು ಜೊತೆಜೊತೆಯೆಂಬಂತೆ ಜರುಗಿದವು. ಈ ಸಮಾರಂಭಗಳಲ್ಲಿ ನಮ್ಮ ಕುಟುಂಬಗಳು ಪರಸ್ಪರ ಸಂಭ್ರಮದಿಂದ ಪಾಲುಗೊಂಡವು. ತುಂಬ ಆತ್ಮೀಯತೆಯನ್ನೂ ಬೆಳೆಸಿಕೊಂಡವು.

ಗಿರಡ್ಡಿ ಅವರದು ನನ್ನಂತೆ ಸಂರಕ್ಷಣಾತ್ಮಕ ವ್ಯಕ್ತಿತ್ವ. ಹಿಂಜರಿಕೆಯ ಸ್ವಭಾವ. ಆದುದರಿಂದ ಅವರು ಅಡ್ಡದಾರಿಯಲ್ಲಿ ಮುನ್ನುಗ್ಗಲಿಲ್ಲ. ಅನ್ಯಾಯಗಳಿಗೆ ತುತ್ತಾಗಿಯೂ ಮರುಗಲಿಲ್ಲ. ಅವರ ವಿಷಯದಲ್ಲಿ ನಾನು ಮೂರು ಸಲ ನೊಂದುಕೊಂಡಿದ್ದೇನೆ. ಒಂದು : ಇಂಗ್ಲೀಷ್ ಎಂ. ಎ. ಮುಗಿಸಿದ್ದರೂ ಅವರಿಗೆ ಕನ್ನಡದ ಮೇಲೆ ಅಪಾರ ಪ್ರೀತಿ, ಪರಿಶ್ರಮ. ಹೊಸಗನ್ನಡವಂತೂ ಸರಿ, ನಡುಗನ್ನಡ - ಹಳಗನ್ನಡಗಳಲ್ಲಿ, ಕಾವ್ಯಮೀಮಾಂಸೆ-ಛಂದಸ್ಸುಗಳಲ್ಲಿ ಅವರಿಗೆ ಪ್ರವೇಶವಿದ್ದುದನ್ನು ಎಲ್ಲರೂ ಬಲ್ಲರು. ಇಂಥ ಶ್ರೀಮಂತ ಹಿನ್ನೆಲೆಯ ಅವರು ಸಹಜವಾಗಿಯೇ ಬಾಹ್ಯವಿದ್ಯಾರ್ಥಿಯಾಗಿ ಕನ್ನಡ ಎಂ. ಎ. ಅಭ್ಯಾಸ ಮಾಡಿದರು. ಉತ್ತೀರ್ಣರಾದರೇನೋ ನಿಜ. ನಿರೀಕ್ಷಿಸಿದ ಫಲಿತಾಂಶ ಬರಲಿಲ್ಲ. ಇದು ನನಗೆ ತುಂಬ ನೋವನ್ನುಂಟು ಮಾಡಿತು. ಇನ್ನೊಂದು : ಎಂ. ಎ. ಮುಗಿದ ತಕ್ಷಣ ಇವರಿಗೆ ಸರಿಯಾದ ಕಾಲೇಜಿನಲ್ಲಿ ಅಧ್ಯಾಪಕ ಹುದ್ದೆ ಸಿಗಲಿಲ್ಲ. ಎಲ್ಲೆಲ್ಲಿಯೋ ಸುತ್ತಾಡಿ, ಕರ್ನಾಟಕ ಕಾಲೇಜಿಗೆ, ಅಲ್ಲಿಂದ ಗುಲ್ಬರ್ಗಾ ವಿಶ್ವವಿದ್ಯಾಲಯ ಮಾರ್ಗವಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬರಬೇಕಾಯಿತು. ಬಂದ ಬಳಿಕವೂ ತಡವಾಗಿ ಪ್ರಾಧ್ಯಾಪಕ ಹುದ್ದೆ ಸಿಕ್ಕಿತು. ಮೂರನೆಯದು : ಧಾರವಾಡದಲ್ಲಿ ಬೇಂದ್ರೆಯವರ 'ಗೆಳೆಯರ ಗುಂಪು' ಒಡೆದು, ಜನರು ಅದನ್ನು ಮರೆಯುವುದರಲ್ಲಿದ್ದರು. ಆಗ ಧಾರವಾಡದಲ್ಲಿ

ಚಂಪಾ, ಗಿರಡ್ಡಿ, ಪಟ್ಟಣಶೆಟ್ಟರಿಂದ "ಸಂಕ್ರಮಣ ಗುಂಪು" ಆಕಾರ ಪಡೆಯಿತು. ನೋಡುನೋಡುತ್ತಲೇ ಅಂಗೈ ಅಗಲದ ಮೋಡ ಆಕಾಶವನ್ನೆಲ್ಲ ವ್ಯಾಪಿಸಿದಂತೆ ಕರ್ನಾಟಕವನ್ನೆಲ್ಲ ವ್ಯಾಪಿಸಿತು. ರಚನಾತ್ಮಕ ಕೆಲಸಗಳನ್ನು ಮೆಚ್ಚುವ ನನ್ನ ಮನಸ್ಸು ಖುಷಿಪಡುತ್ತಿರುವಾಗಲೇ ಗಿರಡ್ಡಿ ಅವರು ಅದರಿಂದ ಹೊರಬಂದರು. ಈ ಮೂರು ಸಂದರ್ಭಗಳು ನನಗೆ ನೋವನ್ನುಂಟು ಮಾಡಿದವು. ಈ ಪ್ರಸಂಗದಲ್ಲಿ ಅವರೊಂದಿಗೆ ಸಮಾಧಾನದ ಮಾತನಾಡುವುದನ್ನು ಬಿಟ್ಟರೆ ನನಗೆ ಬೇರೆ ದಾರಿಗಳೇ ಇರಲಿಲ್ಲ.

ಗಿರಡ್ಡಿಯವರು ಕವಿಯಾಗಿ ಬೆಳೆಯುವರೆಂದು ನಾನು ನಿರೀಕ್ಷಿಸಿದ್ದೆ. ತಮ್ಮದು ಕವಿಮಾರ್ಗವಲ್ಲವೆಂದು ಆರಂಭದ ದಿನಗಳಲ್ಲಿಯೇ ಸ್ಪಷ್ಟಪಡಿಸಿಕೊಂಡ ಇವರು, ಕತೆಗಾರರಾಗಿ ಕೆಲಸಮಾಡಿದರು; ನಾಟಕ ನಿರ್ದೇಶಕರಾಗಿ ದುಡಿದರು. ಆದರೆ ಇವೆಲ್ಲವುಗಳಿಗಿಂತ ಅವರ ಸಾಧನೆ-ಸಿದ್ಧಿಗಳ ಕ್ಷೇತ್ರವಾಗಿರುವುದು, ವಿಮರ್ಶೆ. ಇಂದು ವಿಮರ್ಶೆಗೆ ಪರ್ಯಾಯನಾಮವಾಗಿ ಗಿರಡ್ಡಿಯವರು ಬೆಳೆದಿದ್ದಾರೆ.

"ವಿಮರ್ಶೆಯ ವಿನಯ" ಎಂಬ ಮಾತು ಇತ್ತೀಚೆ ಕೇಳಿಬರುತ್ತಲಿದೆ. ಇದಕ್ಕೂ ಮೊದಲೇ ಗಿರಡ್ಡಿಯವರ ವಿಮರ್ಶೆ, ವಿನಯವನ್ನು ರಕ್ತಗತ ಮಾಡಿಕೊಂಡು ಬೆಳೆದುದು ವಿಶೇಷ. ಇವರಿಗೆ ಭಾರತೀಯ ಕಾವ್ಯಮೀಮಾಂಸೆ ಮತ್ತು ಪಾಶ್ಚಿಮಾತ್ಯ ವಿಮರ್ಶೆಗಳಲ್ಲಿ ಆಳವಾದ ಪ್ರವೇಶವಿದೆ. ಸ್ಥಾಯಿಯಾಗಿ ವಿಮರ್ಶಕನ ಮನೋಧರ್ಮವಿದೆ. ಹೀಗಾಗಿ ಇವರು ವಿಮರ್ಶನ ಸಿದ್ಧಾಂತಗಳನ್ನು ಅರ್ಥಯಿಸುವಲ್ಲಿ, ಅನ್ವಯಿಕಗೊಳಿಸುವಲ್ಲಿ ಸರಿಯಾದ ದಾರಿಯಲ್ಲಿ ನಡೆಯುತ್ತಾರೆ. ವ್ಯಂಗ್ಯ ಕಟೂಕ್ತಿಗಳ ವಿಮರ್ಶಾ ಧಾಟಿ ಇವರ ಬರೆವಣಿಗೆಯಲ್ಲಿ ಸುಳಿಯುವುದಿಲ್ಲ. ಮಾತಿನಲ್ಲಿಯೂ ಆವೇಶ ಅಡ್ಡಬರುವುದಿಲ್ಲ. ಹೀಗಾಗಿ ಇವರ ವಿಮರ್ಶೆ ಓದುವುದೆಂದರೆ, ಕೇಳುವುದೆಂದರೆ ಶ್ರುತಿ ಮಾಡಿದ ವೀಣೆ ಕೇಳಿದ ಅನುಭವವಾಗುತ್ತದೆ.

ಧಾರವಾಡ ಸಾಹಿತ್ಯದೃಷ್ಟಿಯಿಂದ ಮಹತ್ವದ ಪಟ್ಟಣ. ಇಲ್ಲಿ ಪ್ರಯೋಗಗಳಿಗೆ ಸಂಬಂಧಿಸಿದಂತೆ ಅನೇಕ ತಲೆಮಾರುಗಳ ಪರಂಪರೆಯಿದೆ. ಈ ದೃಷ್ಟಿಯಿಂದ ನೋಡಿದರೆ ಆಧುನಿಕ ವಿಮರ್ಶೆಯ ವಿಷಯವಾಗಿ ವಿ. ಕೆ. ಗೋಕಾಕ ಅವರದು ಮೊದಲ ತಲೆಮಾರು, ಕುರ್ತಕೋಟಿ - ಆಮೂರ - ಮೊಕಾಶಿ ಅವರದು ಎರಡನೆಯ ತಲೆಮಾರು. ಇವರಿಗೆ ಇಂದು ವಾರಸುದಾರರಾದವರು ಗಿರಡ್ಡಿ. ಮೊಕಾಶಿಯವರಂತೆ ಗೊಂದಲವಾಗಲೀ, ಕುರ್ತಕೋಟಿ ಅವರಂತೆ ರಭಸವಾಗಲೀ ಇವರಲ್ಲಿ ಕಾಣುವುದಿಲ್ಲ. ಒಂದಿಷ್ಟು ಆಮೂರ ಮಾದರಿ ಇವರಲ್ಲಿ ಕಂಡು ಬರುತ್ತಿದ್ದರೂ, ಅದಕ್ಕೆ ಗಿರಡ್ಡಿತನದ ಮುದ್ರೆಯಿದೆ.

ತಲಸ್ಪರ್ಶಿ - (ಗಿರಡ್ಡಿ ಗೋವಿಂದರಾಜ ಅಭಿನಂದನ ಗ್ರಂಥ), ೨೦೦೧.

ಆಕರ : ಮಾರ್ಗ ಸಂಪುಟ–೬

■■

೯೪

ಕೃತಜ್ಞ

೨೦೦೧

೧೯೬೮, ಹಾಮಾನಾ ಅವರನ್ನು ನಾನು ಮೊದಲ ಸಲ ನೋಡಿದ್ದು. ಅಂದು ಬೆಳ್ಳಿಕೂದಲಿನ ಅವರು ಸಮೃದ್ಧ ಕೇಶರಾಶಿಯ ಸಿಂಹದಂತೆ ಕಂಡರು. ದಿನಗಳೆದಂತೆ ತೀರಹತ್ತಿರವಾದರೂ, ಹಿರಿಯರಾದ ಅವರೊಂದಿಗೆ ನಾನು ಸದೂರ ಪ್ರೀತಿಯನ್ನು ಬೆಳೆಸಿಕೊಳ್ಳುತ್ತ ಬಂದೆನು. ಹೀಗಿದ್ದೂ ಅವರು ಆಗಾಗ ನನ್ನ ಬಗ್ಗೆ ಆಡುತ್ತ ಬಂದ ಒಳ್ಳೆಯ ಮಾತು, ನೀಡುತ್ತ ಬಂದ ನೆರವು, ನಾನು ಉದ್ದಕ್ಕೂ ಕೃತಜ್ಞನಾಗಿರುವಂತೆ ಮಾಡಿವೆ.

೧೯೭೨, ಅದೇ ಆಗ ಪ್ರಕಟವಾಗಿದ್ದ ನನ್ನ "ಕನ್ನಡ ಗ್ರಂಥಸಂಪಾದನ ಶಾಸ್ತ್ರ"ದ ಗೌರವ ಪ್ರತಿಯನ್ನು ಅವರಿಗೆ ಕಳಿಸಿದೆ. "ವಿದ್ವತ್ತು, ಪಾಂಡಿತ್ಯ ಇವು ನಮ್ಮೊಂದಿಗೆ ಕೊನೆಗಾಣುತ್ತವೆಂದು ಭಾವಿಸಿರುವ ಜನ ಇನ್ನೂ ಇರುವಾಗಲೇ ನೀವು ಇಂಥ ಪುಸ್ತಕವನ್ನು ಪ್ರಕಟಿಸಿದುದು ಅಭಿಮಾನದ ಮಾತು" ಎಂದು ಕಾರ್ಡಿನಲ್ಲಿ ಒಂದೇ ವಾಕ್ಯದ ಉತ್ತರ ಬರೆದರು. ತುಂಬಾ ಧ್ವನಿಪೂರ್ಣವಾದ ಈ ವಾಕ್ಯ, ಸಣ್ಣ ವಯಸ್ಸಿನಲ್ಲಿಯೇ ನನಗೆ ದೊಡ್ಡ ಶಿಫಾರಸ್ಸಾಗಿ, ದೊಡ್ಡ ಸ್ಫೂರ್ತಿಯಾಗಿ ಪರಿಣಮಿಸಿತು.

೧೯೭೦, ಧಾರವಾಡದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆ ನಡೆಯಬೇಕಾದ ಸಂದರ್ಭ. ಈ ಹೊತ್ತಿಗಾಗಲೇ ನಾನು ಬರಹಗಳ ಮೂಲಕ ಒಂದಿಷ್ಟು ಪ್ರಸಿದ್ಧಿ ಪಡೆದಿದ್ದೆನು. ಸಂದರ್ಶನದ ಮುಂಜಾನೆ ಇಸ್ತ್ರೀ ಬಟ್ಟೆ ತರಲು ರಸ್ತೆಗುಂಟ ಹೊರಟಿದ್ದೆ. ಅಂದೇ ಆಯ್ಕೆ ಸಭೆಯ ಸದಸ್ಯರಾಗಿ ಮೈಸೂರಿನಿಂದ ಆಗಮಿಸಿದ್ದ ಡಾ. ನಾಯಕರು, ಬೆಳಗಿನ ವಾಯುವಿಹಾರಾರ್ಥ ಎದುರು ಬರುತ್ತಿದ್ದರು. ಇಂದು ಮುಖಾಮುಖಿಯಾಗುವುದು ಸರಿಯಲ್ಲವೆನಿಸಿ, ಪಕ್ಕದ ರಸ್ತೆಗೆ ಹೊರಳಿದೆ. ನಾಯಕರು ನನ್ನನ್ನು ಕೂಗಿ ಕರೆದರು. ಅವರ ಬಳಿ ಹೋದೆ.

ಏನು ವಿಷಯ?

ಏನೂ ಇಲ್ಲ, ಸರ್.

ಹುದ್ದೆ ಎರಡು, ಸ್ಪರ್ಧಿಗಳು ಮೂವರಲ್ಲವೆ?

ಹೌದು ಸರ್,

ಈ ಎರಡರಲ್ಲಿ ನಿಮಗೆ ಇಷ್ಟವಾದ ಹುದ್ದೆ ಯಾವುದು?

ಅದು, ಇಂದು ೧೧ ಘಂಟೆಗೆ ಸಭೆಯಲ್ಲಿ ನೀವೆಲ್ಲ ಸೇರಿ ತೆಗೆದುಕೊಳ್ಳಬೇಕಾದ ನಿರ್ಣಯ.

ನೋಡಿ, ನೀವು ಈ ವರೆಗೆ ಮಾಡಿದ ಕನ್ನಡದ ಕೆಲಸವೇ ನಿಮ್ಮನ್ನು ಆಯ್ಕೆ ಮಾಡುತ್ತದೆ. ಆಯ್ಕೆ ಮಾಡದಿದ್ದರೆ ಜನ ನಮಗೆ ಏನೆಂದಾರು? ನಾನೇನು ಉಪಕಾರ ಮಾಡಲು ಈ ಮಾತು ಆಡುತ್ತಿಲ್ಲ. ಎರಡರಲ್ಲಿ ನಿಮಗೆ ಯಾವುದು ಇಷ್ಟ? ಹೇಳಿರಿ.

ಸರ್, ನಿಮಗೆ ಕೃತಜ್ಞ. ವಿಭಾಗದ ಮುಖ್ಯಸ್ಥರಾದ ಡಾ. ಸುಂಕಾಪುರ ಅವರೂ ನೀವೂ ಸೇರಿ ಸೂಕ್ತವಾದುದನ್ನು ನಿರ್ಣಯಿಸಿರಿ. ನಾನು ಬಸವೇಶ್ವರ ಪೀಠದ ಪ್ರಾಧ್ಯಾಪಕನಾಗಬೇಕೆಂದು ಈ ಭಾಗದ ಜನ ಅಪೇಕ್ಷಿಸುವಂತೆ ಕಾಣುತ್ತದೆ. ನಾವು ಮೂವರಲ್ಲಿ ಇನ್ನೊಬ್ಬರು ಈ ಪೀಠಕ್ಕೆ ಬಂದರೆ ಧಾರವಾಡ ಜನತೆ ಅಸಮಾಧಾನ ಪಡುವ ಸಾಧ್ಯತೆಯಿದೆ. ಅದು ವಿಭಾಗದಲ್ಲಿ ಇಲ್ಲದ ಕಿರಿಕಿರಿಯನ್ನು ಸೃಷ್ಟಿಸಬಹುದು. ಈಗಾಗಲೇ ಮುಕ್ತಿಕಂಠಾಭರಣ ಪ್ರಕಟನೆಯಿಂದಾಗಿ ತುಂಬಾ ಗಾಸಿಯಾಗಿರುವ ವಿಭಾಗದಲ್ಲಿ ಇನ್ನೊಮ್ಮೆ ಅಂಥ ಸಂದರ್ಭ ನಿರ್ಮಾಣವಾಗಬಾರದೆಂಬುದೇ ನನ್ನ ಇಚ್ಛೆ.

"ನೋಡಿ, ನೀವು ಭಾಷೆ, ಸಾಹಿತ್ಯ, ಶಾಸ್ತ್ರ, ಶಾಸನ ಇತ್ಯಾದಿ ಕ್ಷೇತ್ರಗಳಲ್ಲಿ ದುಡಿಯುತ್ತ ಬಂದವರು. ಕನ್ನಡ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆಯಾದರೆ ಕನ್ನಡಕ್ಕೆ ಒಳ್ಳೆಯದಾಗುತ್ತದೆ. ಬಸವೇಶ್ವರ ಪೀಠದಿಂದಾಗಿ ನಿಮ್ಮ ಸೇವೆ ಸೀಮಿತಗೊಳ್ಳುತ್ತದೆ. ಇನ್ನೊಬ್ಬರಿಗಾಗಬಹುದಾದ ಕಿರಿಕಿರಿಯನ್ನು ನಿಮ್ಮ ಮೈಮೇಲೆಳೆದುಕೊಂಡಂತೆಯೂ ಆಗಬಹುದು."

ಇಷ್ಟು ಹೇಳಿ ಮುನ್ನಡೆದರು. ಸಂದರ್ಶನಕ್ಕೆ ಮೊದಲು ತಾವಾಗಿಯೇ ಆಡಿದ ಮಾತುಗಳನ್ನು ಕೇಳಿ ಡಾ. ನಾಯಕರ ಕನ್ನಡದ ಕಾಳಜಿ, ಸಮಗ್ರದೃಷ್ಟಿ, ನ್ಯಾಯಪರತೆಗಳಿಗೆ ಬೆರಗಾದೆ. ಅಂದು ಮಧ್ಯಾಹ್ನ ಅವರ ಮನಸ್ಸಿಗೆ ವಿರುದ್ಧವೆಂಬಂತೆ ನನ್ನನ್ನು ಬಸವೇಶ್ವರಪೀಠಕ್ಕೆ ಆಯ್ಕೆ ಮಾಡಲಾಯಿತು. ನಾನು ಯಾರನ್ನು ರಕ್ಷಿಸಲು ಹೋಗಿ ಬಸವೇಶ್ವರ ಪೀಠಕ್ಕೆ ಪ್ರಾಧ್ಯಾಪಕನಾದೆನೋ ಅವರೇ ಮುಂದಿನ ದಿನಗಳಲ್ಲಿ ನನಗೆ ದೊಡ್ಡ ಕಿರಿಕಿರಿಯನ್ನು ನಿರ್ಮಾಣ ಮಾಡಿ, ಡಾ. ನಾಯಕರು ನುಡಿದಿದ್ದ ಭವಿಷ್ಯವನ್ನು ನಿಜವಾಗಿಸಿದರು.

೧೯೮೫, ಆಗ ನಾನು ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ. ನಮ್ಮ ಪೀಠದ ಪ್ರಾಧ್ಯಾಪಕರ ಬಡತಿಗಾಗಿ ಸಂದರ್ಶನದ ಸಭೆ ಸೇರಬೇಕಾಗಿತ್ತು. ಇದು ಅನೇಕ ದೃಷ್ಟಿಯಿಂದ ಮಹತ್ವದ ಸಭೆ. ವಿಭಾಗದ ಅಧ್ಯಾಪಕರ ಸೀನಿಯಾರಿಟಿಯ ಕ್ರಮಲೋಪವನ್ನು ತಿದ್ದಬೇಕಾದ ನಿಷ್ಠುರ ಸಂದರ್ಭ. ಆಯ್ಕೆ ಸಮಿತಿಯ ಸದಸ್ಯರಾಗಿದ್ದ ನಾಯಕ ಅವರನ್ನು ಕರೆಯಿಸಿಕೊಳ್ಳುವ ಹೊಣೆಯನ್ನು ನಮ್ಮ ಕುಲಪತಿಗಳು ನನ್ನ ಮೇಲೆ ಹೊರಸಿದ್ದರು. ಇನ್ನೇನು ದೂರವಾಣಿಯ ಮೂಲಕ ಮಾತನಾಡಬೇಕೆನ್ನುವಷ್ಟರಲ್ಲಿ ಅವರು ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿಯಾದರೆಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಈ ವರೆಗೆ ನನ್ನೊಂದಿಗೆ ಸದೂರ ಸಂಬಂಧವಿಟ್ಟುಕೊಂಡಿದ್ದ ಅವರು, ಈಗ ಇನ್ನೂ ದೂರವೆನಿಸಿದರು. ದೂರವಾಣಿಯ ಮೂಲಕ ನಿಯೋಜಿತ ಕುಲಪತಿ ನಾಯಕ ಅವರೊಂದಿಗೆ ಅಂಜುತ್ತಲೇ ಮಾತನಾಡಿದೆ. "ಸರ್, ರಾಜ್ಯದ ಎಲ್ಲ ಸ್ನಾತಕೋತ್ತರ ಕನ್ನಡ ವಿಭಾಗಗಳ ಮುಖ್ಯಸ್ಥರಲ್ಲಿ ನೀವು ಸೀನಿಯರ್, ಹೀಗಾಗಿ ಈ ಎಲ್ಲ ವಿಭಾಗಗಳ ಮುಖ್ಯಸ್ಥರೂ ನೀವೇ. ದಾರಿಯಲ್ಲಿ ಆಯ್ಕೆ ಸಮಿತಿಯ ಈ ಸಭೆ ನಡೆಸಿಕೊಟ್ಟು ಗುಲ್ಬರ್ಗಾಕ್ಕೆ ಹೋಗಬಹುದು" ಎಂದು ಬಿನ್ನವಿಸಿದೆ. ಈ ಹೊತ್ತಿಗಾಗಲೇ ಅವರ ಪ್ರಯಾಣದ ಮಾರ್ಗ ನಿರ್ಧಾರವಾಗಿತ್ತು. ಮಾರ್ಗ ಮಧ್ಯದ ತಂಗುವಿಕೆ ಸ್ನೇಹಿತರ ಭೆಟ್ಟಿಗಳೆಲ್ಲ ಏರ್ಪಟ್ಟಿದ್ದವು. ನನ್ನ ಸುದೈವ, ನನ್ನ ಪ್ರೀತಿಗೆ ಕಟ್ಟು ಬಿದ್ದು ಒಪ್ಪಿ ಧಾರವಾಡಕ್ಕೆ ಬಂದರು. ಐದು

ಜನ ರೀಡರ್ ಆಯ್ಕೆಯಲ್ಲಿ ಸಹಮತ ಏರ್ಪಟ್ಟಿತು. ಒಬ್ಬರ ಆಯ್ಕೆಯ ವಿಷಯವಾಗಿ ನಮ್ಮಿಬ್ಬರಲ್ಲಿ ಭಿನ್ನಮತ ನಿರ್ಮಾಣವಾಯಿತು. ಭೋಜನ ವಿರಾಮದ ಬಳಿಕ ಚರ್ಚೆ -ಪ್ರತಿಚರ್ಚೆ ಮುಂದುವರೆಯಿತು. ಸಮಸ್ಯೆ ಇನ್ನೂ ಜಟಿಲವಾಯಿತು. ಕೊನೆಗೆ "ಇದು ನಿಮ್ಮ ವಿಭಾಗದ ಪ್ರಶ್ನೆ, ನಿರ್ಣಯ ನಿಮಗೆ ಬಿಟ್ಟುದು" ಎಂದು ಹೇಳಿ ನಾಯಕರು ಸಮ್ಮತಿ ಸೂಚಿಸಿದರು. ನನ್ನ ನಿಲುವು ಅಂಗೀಕೃತವಾಯಿತಾದರೂ, ಆಗ ಅವರು ನನ್ನ ದೃಷ್ಟಿಯಲ್ಲಿ ಇನ್ನೂ ದೊಡ್ಡವರಾಗಿ ಕಂಡರು.

೧೯೮೬, ನೈತಿಕ ಜವಾಬ್ದಾರಿ ಹೊತ್ತು ನಾಯಕರು ಕುಲಪತಿ ಹುದ್ದೆ ತೊರೆದು ಮೈಸೂರಿಗೆ ಮರಳಿದರು. ಸಂಸ್ಥೆಯ ಮುಖ್ಯಸ್ಥರಾಗದೆ ಪ್ರಾಧ್ಯಾಪಕರಾಗಿ ತಮ್ಮ ಪಾಠ ಪ್ರವಚನ, ಓದು ಬರಹಗಳಿಗೆ ಸೀಮಿತವಾಗುಳಿದರು. ಇಲ್ಲಿಂದ ಮುಂದೆ ನಮ್ಮ ಸಂಬಂಧ ಗಾಢವಾಗುತ್ತ ಹೋಯಿತು. ಈ ಸಂದರ್ಭದಲ್ಲಿ ಮೈಸೂರಿನ ಒಂದು ಸಭೆಗೆ ಪತ್ನಿಯೊಂದಿಗೆ ಹೋಗಿದ್ದೆನು. ಡಾ. ನಾಯಕರು ಮಾತಿನ ಮಧ್ಯ "ದಂಪತಿಗಳು ಬಂದಿದ್ದೀರಿ, ನನ್ನ ಕಾರು-ಡ್ರೈವರ್ ಕೊಡುತ್ತೇನೆ. ಸುತ್ತಾಡಿಕೊಂಡು ಬನ್ನಿರಿ" ಎಂದು ನುಡಿದು, ಯಾರಿಗೋ ಡ್ರೈವರ್‌ಗಾಗಿ ಫೋನ್ ಮಾಡಿದರು. ಏನೋ ತೊಂದರೆ ಇರುವಂತೆ ತೋರಿತು. ಆದರೂ ಮರುಕ್ಷಣದಲ್ಲಿಯೇ ಕಾರು ಬಂದಿತು. ಚಾಮುಂಡಿಬೆಟ್ಟ, ಶ್ರೀರಂಗಪಟ್ಟಣ, ಅರಮನೆ ಇತ್ಯಾದಿ ನೋಡಿದೆವು. ಮರಳಿ ಬರುವಾಗ "ಸರ್, ನಾಯಕರು ಸ್ವತಃ ತಾವೆ ಕಾರ್ ಚಾಲನೆ ಮಾಡುತ್ತಾರೆ. ನಿಮಗಾಗಿ ಡ್ರೈವರ್‌ನನ್ನು ಕಳಿಸಲು ತಮ್ಮ ಸ್ನೇಹಿತರಿಗೆ ಫೋನ್ ಮಾಡಿದರು. ಇಂದು ಅವನಿಗೆ ಅನಾರೋಗ್ಯ. ಹೀಗಾಗಿ ಅವರು ಈ ಬಾಡಿಗೆ ಕಾರ್ ವ್ಯವಸ್ಥೆ ಮಾಡಬೇಕಾಯಿತು" ಎಂದು ಡ್ರೈವರ್ ಆಡಿದ ಮಾತು ಕೇಳಿ ವ್ಯಥೆಯೆನಿಸಿತು. ಸಂಜೆ ಹೊತ್ತಿಗೆ ಸಂಸ್ಥೆಯ ಮುಂದೆ ಕಾರ್ ಇಳಿದೆವು. ಡ್ರೈವರ್‌ನಿಗೆ ಬಾಡಿಗೆ ಹಣ ಕೊಡಲು ಹೋದೆ. ಡಾ. ನಾಯಕರು ಒಪ್ಪಲೇ ಇಲ್ಲ. ತಮ್ಮ ಕಾರ್ ಕೊಡಲು ಮುಂದಾದ ಅವರು, ಬಾಡಿಗೆ ಕಾರ್ ಕೊಡಿಸಬೇಕಾಗಿ ಬಂದ ಸನ್ನಿವೇಶ ನೆನಪಾದಾಗಲೆಲ್ಲ ನನಗೆ ಈಗಲೂ ನೋವು ಮರುಕಳಿಸುತ್ತದೆ.

೧೯೮೮, ನವೆಂಬರ್ ೨೮. ನನ್ನ ೫೦ನೆಯ ಜನ್ಮದಿನ. ಅಂದು ನನ್ನ ಪ್ರಬಂಧ ಸಂಕಲನ "ಮಾರ್ಗ" ಸಂಪುಟಗಳ ಬಿಡುಗಡೆ ಸಮಾರಂಭ. ಈ ಸಂದರ್ಭದಲ್ಲಿ ಡಾ. ನಾಯಕರು ಪ್ರಜಾವಾಣಿಯ ಅಂಕಣದಲ್ಲಿ "ಕಲಬುರ್ಗಿ: ಚಿನ್ನ-ಬೆಳ್ಳಿ" ಹೆಸರಿನ ಲೇಖನ ಬರೆದರು. ಅಲ್ಲಿ ಅವರು ಆಡಿದ ಆತ್ಮೀಯ ಮಾತುಗಳು ನನಗೆ ಇನ್ನೂ ವಿಸ್ತಾರವಾದ ಪ್ರಸಿದ್ಧಿಯನ್ನು ತಂದುಕೊಟ್ಟವು. ಮೂರು ನಾಲ್ಕು ತಿಂಗಳ ಬಳಿಕ ನನ್ನ ಒಂದು ಲೇಖನವನ್ನು ಮುಂದುಮಾಡಿಕೊಂಡು ನನ್ನ ಪರಿಸರ ಅಸಾಹಿತ್ಯಿಕ ಗದ್ದಲ ಸೃಷ್ಟಿಸಿತು. ರಾಜ್ಯದ ತುಂಬ ಅಲ್ಲೋಲ ಕಲ್ಲೋಲ ನಿರ್ಮಾಣವಾಗಿದ್ದ ಈ ಸಂದರ್ಭದಲ್ಲಿ ಡಾ. ನಾಯಕ ಅವರು "ಕಲಬುರ್ಗಿ ಪ್ರಕರಣ" ಹೆಸರಿನ ಅಂಕಣ ಲೇಖನ ಬರೆದು, ನನ್ನ ಪರವಾಗಿ ನಿಂತರು.

ಡಾ. ನಾಯಕರು ಗುಣಪಕ್ಷಪಾತಿಗಳು. ಹಿರಿಯರ ವಿಷಯವಾಗಿ ಷಷ್ಟಿಪೂರ್ತಿ ಸಂಘಟನೆ, ಗೌರವಗ್ರಂಥ ಪ್ರಕಟಣೆ ಇತ್ಯಾದಿ ಕೆಲಸಗಳನ್ನು ತಮ್ಮ ಸಾಮಾಜಿಕ ಜವಾಬ್ದಾರಿಯೆಂಬಂತೆ ಪೂರೈಸುತ್ತ ಬಂದವರು. ಆದರೆ ತಮ್ಮ ಷಷ್ಟಿಪೂರ್ತಿ ಆಚರಿಸಲು ಸಮ್ಮತಿ ನೀಡಲಿಲ್ಲ. ನಾವೆಲ್ಲ ಸೇರಿ ಒಪ್ಪಿಗೆ ಪಡೆಯಲು ಒಂದು ವರ್ಷವೇ ಹಿಡಿಯಿತು. ೧೯೯೧ರ ಬದಲು ೧೯೯೨ರಲ್ಲಿ ಜರುಗಿದ ಈ ಸಮಾರಂಭದಲ್ಲಿ ನಾನೂ ಅತಿಥಿಯಾಗಿ ಭಾಗವಹಿಸಿದ್ದೆ. ಮುಂದೆ ಒಂದು ವಾರದೊಳಗಾಗಿ ಡಾ. ನಾಯಕರು ಮುದ್ದಾದ ಅಕ್ಷರಗಳಲ್ಲಿ ಪತ್ರ ಬರೆದರು. "ಈ ಸಮಾರಂಭ ಸಂಘಟಿಸುವಲ್ಲಿ ಉದ್ದಕ್ಕೂ ಶ್ರಮಿಸಿದಿರಿ. 'ಮಾನ' ಪ್ರಕಟಣೆಯಲ್ಲಿಯೂ ಮುತುವರ್ಜಿ ವಹಿಸಿದಿರಿ. ಅತಿಥಿಯಾಗಿ ಆಗಮಿಸಿ ನನ್ನ ಬಗ್ಗೆ ಉದಾರವಾಗಿ ಮಾತನಾಡಿದಿರಿ. ಕೃತಜ್ಞ. 'ಆತ್ಮೀಯರ ಸಮಾರಂಭಕ್ಕೆ ಪ್ರಯಾಣ ಭತ್ಯೆಯೇ?'

ಎಂದು ನುಡಿದು, ನೀವು ಹಣವನ್ನು ಪ್ರೀತಿಯಿಂದ ಮರಳಿಸಿದಿರೆಂದು ಕೇಳಿದೆ. ಈ ಮನಸ್ಸನ್ನು ಯಾವ ಮಾತುಗಳಿಂದ ಬಣ್ಣಿಸಲಿ?" ಎಂದು ಆ ಸಂದರ್ಭವನ್ನು ಪೋಸ್ಟ ಕಾರ್ಡಿನಲ್ಲಿ ರೆಕಾರ್ಡ್ ಮಾಡಿದರು.

೧೯೯೮, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ಸ್ಪರ್ಧಿಗಳ ಸಾಲಿನಲ್ಲಿ ನನ್ನ ಹೆಸರೂ ಕಾಣಿಸಿಕೊಂಡಿತು. ಈಗಲೂ ನನ್ನ ದುರ್ದೈವವೆಂಬಂತೆ ಆಯ್ಕೆ ಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದ ನನ್ನ ಗುರುಗಳಿಂದಲೇ ತೀವ್ರ ವಿರೋಧ ನಿರ್ಮಾಣವಾಯಿತು. ನನ್ನ ತಲೆಯ ಮೇಲೆ ನ್ಯಾಯಾಲಯ ಆರೋಪದ ಗೂಬೆ ಕುಳ್ಳಿರಿಸುವ ಪ್ರಯತ್ನವೂ ಅವರಿಂದ ನಡೆದು, ಸಮಸ್ಯೆ ತುಂಬ ಜಟಿಲವಾಯಿತು. ಈ ಸಭೆಯಲ್ಲಿ ಸದಸ್ಯರಾಗಿದ್ದ ಡಾ. ಹಾಮಾನಾ ಅವರು ನನ್ನ ಆಯ್ಕೆಯನ್ನು ಬೆಂಬಲಿಸಿ, ಅದರ ಯಶಸ್ಸಿಗೆ ಕಾರಣರಾದರು. ಈಗಲೂ ಅವರು ಹೇಳಿದ್ದು: "ನಿಮ್ಮ ಕೆಲಸ ನಿಮ್ಮನ್ನು ಆಯ್ಕೆ ಮಾಡಿದೆ. ನಾವು ನೆಪ ಮಾತ್ರ."ಈ ಮಾತು ನನ್ನ ಅಂತಃಕರಣವನ್ನೇ ಕಲಕಿತು.

೧೯೯೮ ನವೆಂಬರ್ ೨೮, ನನ್ನ ೬೦ನೇ ಹುಟ್ಟುಹಬ್ಬ. ಸ್ನೇಹಿತರೆಲ್ಲ ಸೇರಿ ಈ ಸಮಾರಂಭವನ್ನು "ನ ಭೂತೋ ನ ಭವಿಷ್ಯತಿ" ಎಂಬಂತೆ ಆಚರಿಸಿದರು. ಅತಿಥಿಗಳಾಗಿ ಆಗಮಿಸಿದ ಡಾ. ನಾಯಕ ಅವರು "ಮಹಾಮಾರ್ಗ" ಹೆಸರಿನ ಅಭಿನಂಧನ ಗ್ರಂಥ ಬಿಡುಗಡೆಮಾಡುತ್ತ, ನನ್ನ ಬಗ್ಗೆ ತುಂಬಾ ಸೊಗಸಾಗಿ ಮಾತನಾಡಿದರು. "ನಮ್ಮ ನಾಡಿನ ಅಭಿನಂದನ ಗ್ರಂಥ ಪ್ರಕಟಣೆಯ ಇತಿಹಾಸದಲ್ಲಿ ಬಿ. ಎಂ. ಶ್ರೀ.ಅವರಿಗೆ ಅರ್ಪಿಸಿದ 'ಸಂಭಾವನೆ' ಮೊದಲ ಮೈಲಿಗಲ್ಲು. ಈ 'ಮಹಾಮಾರ್ಗ' ಎರಡನೆಯ ಮೈಲಿಗಲ್ಲು" ಎಂದು ಹೇಳಿದರು. ಸಾಲದುದಕ್ಕೆ ಈ ಸಂದರ್ಭದಲ್ಲಿಯೂ "ನಮ್ಮ ಕಲಬುರ್ಗಿಯವರು" ಹೆಸರಿನ ಅಂಕಣ ಲೇಖನ ಬರೆದರು.

ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆಯ ವಿಷಯವಾಗಿ ಪರ-ವಿರೋಧ ಅಭಿಪ್ರಾಯಗಳು ನಿರ್ಮಾಣವಾಗಿದ್ದವು. ಆಗ ಡಾ. ನಾಯಕರು ವಿರೋಧಿಸಿ ಬರೆದಿದ್ದರೂ ಕುಲಪತಿಯಾಗಿ ನಾನು ನೀಡಿದ ಆಮಂತ್ರಣವನ್ನು ಮನ್ನಿಸಿ, ನುಡಿಹಬ್ಬ (ಘಟಿಕೋತ್ಸವ)ಕ್ಕೆ ಅತಿಥಿಯಾಗಿ ಆಗಮಿಸಿದರು. ಮುಂದೆ ವಿಶ್ವವಿದ್ಯಾಲಯ ಆವರಣದಲ್ಲಿ ಜರುಗಿದ ನನ್ನ ಮಗನ ಮದುವೆಗೂ ಬಂದರು.

ನಾಯಕರು ಪ್ರಕಟಿಸಿದ ಕೊನೆಯ ಕೃತಿ "ಸೋಗಿಲು" (೨೦೦೦) ಮುನ್ನುಡಿಗಳ ಸಂಗ್ರಹ. ಈ ವರೆಗೆ ನನ್ನ ವಿಷಯವಾಗಿ ತೋರಿದ ಪ್ರೀತಿ ಸಾಲದೆಂಬಂತೆ ಈ ಕೃತಿಯನ್ನು "ಕನ್ನಡ ವಿಶ್ವವಿದ್ಯಾಲಯದ ಕುಲಪತಿ, ಪ್ರಿಯ ಮಿತ್ರ ಡಾ. ಎಂ. ಎಂ. ಕಲಬುರ್ಗಿ ಅವರಿಗೆ" ಎಂಬ ಮಾತಿನ ಮೂಲಕ ನನಗೆ ಅರ್ಪಿಸಿದರು. ಪುಸ್ತಕ ಕೈಸೇರುತ್ತಲೇ "ನೀವು ದೊಡ್ಡವರು.ಇದನ್ನು ನನಗೆ ಅಂಕಿತಗೊಳಿಸಿ, ನಿಮ್ಮ ಹೃದಯವಂತಿಕೆಯನ್ನು ಮೆರೆದಿರಿ. ಇದಕ್ಕೆ ನಾನು ಯಾವ ಮಾತುಗಳಲ್ಲಿ ಕೃತಜ್ಞತೆ ಹೇಳಲಿ?" ಎಂದು ಪತ್ರ ಬರೆದೆ. ಅವರು ಬರೆದ ಕೃತಿಗಳಲ್ಲಿ ನನಗೆ ಅರ್ಪಿಸಿದುದೇ ಕೊನೆಯದು. ಬಹುಶಃ ಅವರು ಓದಿದ ಪತ್ರಗಳಲ್ಲಿ ನಾನು ಬರೆದುದೇ ಕೊನೆಯದು. ಈ ಋಣಾನುಬಂಧಕ್ಕೆ ನನ್ನಲ್ಲಿ ವಿವರಣೆಯಿಲ್ಲ. ಕೃತಜ್ಞ.

ಶಬ್ದಾಂಜಲಿ : (ಹಾ. ಮಾ.ನಾ. ಸಂಸ್ಮರಣ ಗ್ರಂಥ), ೨೦೦೧.

ಆಕರ : ಮಾರ್ಗ ಸಂಪುಟ–೬

೯೫

ಕನ್ನಡ ವಿಶ್ವವಿದ್ಯಾಲಯ ಮತ್ತು ಎಂ. ಪಿ. ಪ್ರಕಾಶ

೨೦೦೧

ಆಧುನಿಕ ಕರ್ನಾಟಕದ ಇತಿಹಾಸದಲ್ಲಿ "ಕನ್ನಡ ನಾಡಿನ ಏಕೀಕರಣ"ದಂತೆ "ಕನ್ನಡ ವಿಶ್ವವಿದ್ಯಾಲಯ"ದ ಸ್ಥಾಪನೆ ಒಂದು ಮುಖ್ಯ ಘಟನೆ. ಈ ಘಟನೆಗೆ ಅರ್ಥ ತುಂಬಿದ, ತುಂಬುತ್ತ ಬಂದ ಪ್ರಮುಖರಲ್ಲಿ ಒಬ್ಬರಾಗಿದ್ದಾರೆ, ಶ್ರೀ ಎಂ. ಪಿ. ಪ್ರಕಾಶ. ಹೀಗೆ ಅರ್ಥ ತುಂಬಲು ಕಾರಣಗಳು ಎರಡು :

ಶ್ರೀ ಪ್ರಕಾಶ ಅವರು ಇಂದು ಪ್ರಥಮ ಶ್ರೇಣಿಯ ರಾಜಕೀಯ ವ್ಯಕ್ತಿಯಾಗಿ ಬೆಳೆದಿದ್ದರೂ ಮೂಲತಃ ಅವರದು ಸಾಂಸ್ಕೃತಿಕ ಪ್ರಜ್ಞೆ. ತಾವು ಅಧಿಕಾರದಲ್ಲಿರಲಿ ಬಿಡಲಿ, ತಮ್ಮ ಊರು ಹೂವಿನಹಡಗಲಿಯನ್ನು ಕುಗ್ರಾಮವಾಗಿ ಉಳಿಯಲು ಬಿಡದೆ ಒಂದು ಸಾಂಸ್ಕೃತಿಕ ಗ್ರಾಮವಾಗಿ ಬೆಳೆಸುತ್ತ ಬಂದುದೇ ಇದಕ್ಕೆ ನಿದರ್ಶನ. ಮಧುರಚೆನ್ನರು ಹಲಸಂಗಿಯನ್ನು, ಕೆ. ವಿ. ಸುಬ್ಬಣ್ಣ ಅವರು ಹೆಗ್ಗೋಡನ್ನು, ಕರ್ನಾಟಕದ ಸಾಂಸ್ಕೃತಿಕ ನಕ್ಷೆಯಲ್ಲಿ ಬೆಳಗಿಸಿದಂತೆ ಇವರು ತಮ್ಮ ಊರನ್ನು ಬೆಳಗಿಸಿದ್ದಾರೆ. ಆದುದರಿಂದ ಸಂಸ್ಕೃತಿಯ ಭಾಗವೇ ಆಗಿರುವ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ಪೋಷಣೆ ವಿಷಯವಾಗಿ ವ್ಯಕ್ತಿಮಟ್ಟದಲ್ಲಿ ಇವರು ಆಸ್ಥೆ ವಹಿಸುತ್ತಬಂದುದು ಸಹಜವೇ ಆಗಿದೆ.

ಎರಡನೆಯದಾಗಿ ಹಂಪಿ ಪರಿಸರದವರೇ ಆಗಿರುವ ಇವರು, ಶಾಸಕರಾಗಿ-ಸಚಿವರಾಗಿ - ಜಿಲ್ಲೆಯ ಉಸ್ತುವಾರಿ ಸಚಿವರಾಗಿಯೂ ನಡೆದುಬಂದ ಕಾರಣ, ತಮ್ಮ ರಾಜಕೀಯ ಜವಾಬ್ದಾರಿಯ ಭಾಗವೆಂಬಂತೆಯೂ ಈ ವಿಶ್ವವಿದ್ಯಾಲಯದ ಬಗ್ಗೆ ಹೆಚ್ಚಿನ ಗಮನಕೊಡುತ್ತ ಬಂದರು.

I

"ಕನ್ನಡ ನಾಡಿಗೆ ನಾಲ್ಕು ವಿಶ್ವವಿದ್ಯಾಲಯಗಳು ಹೊರಟಾವು. ಅದರೆ ಅವುಗಳನ್ನು ಒಂದಾಗಿ ನೋಡುವ, ಮಾಡುವ ವಿಶ್ವವಿದ್ಯಾಲಯ ಬೇಕು. ವಿದ್ಯೆಯನ್ನು ಕಲಿಯಲು ಕನ್ನಡ ವಿಶ್ವವಿದ್ಯಾಲಯ ನಮಗೆ ಕೊನೆಗೂ ಬೇಕು" ಎಂದು ಶಿವಮೊಗ್ಗೆ ಸಾಹಿತ್ಯ ಸಮ್ಮೇಳನದಲ್ಲಿ (೧೯೪೩) ಬೇಂದ್ರೆ ಅವರು ನುಡಿದ ಭವಿಷ್ಯ, ಮೈಸೂರಿನಲ್ಲಿ ಜರುಗಿದ ವಿಶ್ವಕನ್ನಡ ಸಮ್ಮೇಳನದಲ್ಲಿ (೧೯೮೫) ಜೀವ ಪಡೆಯಿತು. ಆಗ ರಾಜ್ಯದಲ್ಲಿ ಹೊಸ ಜನತಾದಳ ಸರ್ಕಾರವು ಉದಯಿಸುವ ಸೂರ್ಯನಂತೆ ಹೊರಹೊಮ್ಮಿದ ಸಂದರ್ಭ. ಶ್ರೀ ರಾಮಕೃಷ್ಣ ಹೆಗಡೆ ಅವರ ಮಂತ್ರಿಮಂಡಲದಲ್ಲಿ ಶ್ರೀ ಪ್ರಕಾಶ ಅವರು ವಾರ್ತಾ ಸಚಿವ, ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ

ಸಮಯವದು. ಅಂದು ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯ ವಿಚಾರವಾಗಿ ಸಾರ್ವಜನಿಕ ಮತ್ತು ರಾಜಕೀಯ ವಲಯದಲ್ಲಿ ಪರ-ವಿರೋಧ ಅಭಿಪ್ರಾಯಗಳು ಕೇಳಿಬರುತ್ತಲಿದ್ದವು. ಆಗ ಶ್ರೀ ಪ್ರಕಾಶ ಅವರು ಪರವಾಗಿ ನಿಂತು, ಈ ವಿಚಾರವನ್ನು ಗಟ್ಟಿಗೊಳಿಸಿದವರಲ್ಲಿ ಒಬ್ಬರೆನಿಸಿದ್ದಾರೆ. ನನ್ನಂತಹ ಕೆಲವರು ಶ್ರೀ ಪ್ರಕಾಶ ಅವರೊಂದಿಗೆ ಅಂದು ಈ ಬಗ್ಗೆ ಸಮಾಲೋಚನೆ ನಡೆಸುತ್ತಿದ್ದುದು ಇಂದು ಇತಿಹಾಸ.

ಜನತಾದಳ ಸರ್ಕಾರ ಈ ವಿಷಯಕ್ಕೆ ಸಂಬಂಧ ಪಟ್ಟಂತೆ ಶೈಕ್ಷಣಿಕ ನೀಲನಕ್ಷೆ ಬಿಡಿಸಲು, ಏಕಸದಸ್ಯ ಆಯೋಗವನ್ನು ರಚಿಸಬೇಕೆಂದು ನಿರ್ಧರಿಸಿತು (೧೯೮೫). ಈ ಸ್ಥಾನಕ್ಕೆ ಅನೇಕ ಹೆಸರುಗಳು ಕೇಳಿಬರುತ್ತಲಿದ್ದವು. ಅವೆಲ್ಲವನ್ನು ಬದಿಗೆ ಸರಿಸಿ, ವಿಶ್ವವಿದ್ಯಾಲಯದ ಬಗೆಗೆ ಅಪಾರ ಅನುಭವವುಳ್ಳವರೂ, ಹಂಪಿ ಪರಿಸರವನ್ನು ಚೆನ್ನಾಗಿ ಬಲ್ಲವರೂ ಆಗಿದ್ದ ಶ್ರೀ ಒಡೆಯರ್ ಅವರು ಅಧ್ಯಕ್ಷರಾಗಲು ಮುಖ್ಯ ಕಾರಣ, ಶ್ರೀ ಪ್ರಕಾಶ ಅವರು. ಶ್ರೀ ಒಡೆಯರ್ ಅವರ ವರದಿ ಸರಕಾರದಲ್ಲಿ ಹಂತಹಂತವಾಗಿ ಸ್ವೀಕೃತವಾಗುವಂತೆಯೂ ಇವರು ನೋಡಿಕೊಂಡರು. ಹೀಗೆ ಕನ್ನಡ ವಿಶ್ವವಿದ್ಯಾಲಯದ ಸಂವಿಧಾನ ರೂಪದ ಒಡೆಯರ್ ಆಯೋಗದ ಆದಿ - ಮಧ್ಯ - ಅಂತ್ಯ ನೆಲೆಗಳಲ್ಲಿ ಶ್ರೀ ಪ್ರಕಾಶ ಅವರು ಮುಖ್ಯಪಾತ್ರ ವಹಿಸಿದರು. ಇದಲ್ಲದೆ ಹೊಸ ವಿಶ್ವವಿದ್ಯಾಲಯಕ್ಕೆ ತಕ್ಷಣ ಅನುದಾನ ಸಿಗುವುದಿಲ್ಲವೆಂದು ತಿಳಿದುಬರುತ್ತಲೇ ತಮ್ಮ ಕನ್ನಡ ಸಂಸ್ಕೃತಿ ಇಲಾಖೆಯ ಆಯ-ವ್ಯಯದಿಂದ ೫೦ ಲಕ್ಷ ರೂಪಾಯಿ ಮಂಜೂರು ಮಾಡಿದರು. ಒಟ್ಟಾರೆ, ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬರಬೇಕೇ? ಎಂಬ ಪ್ರಶ್ನೆಗೆ ಸಕಾರಾತ್ಮಕ ಉತ್ತರವನ್ನು ರೂಪಿಸುವಲ್ಲಿ ನೇರ ಹೊಣೆ ಹೊತ್ತವರು ಪ್ರಕಾಶ ಅವರು. ಶ್ರೀ ಹೆಗಡೆ ಅವರ ಬಳಿಕ ಶ್ರೀ ಬೊಮ್ಮಾಯಿ ಅವರು ಮುಖ್ಯಮಂತ್ರಿಯದಾಗಲೂ ಈ ವಿಷಯದ ಪ್ರತಿ ಅಂಗುಲವೂ ರಾಜಕೀಯ ಕ್ಷೇತ್ರದಲ್ಲಿ ಚಿಗುರುವಂತೆ ಇವರು ನೋಡಿಕೊಂಡರು.

II

೧೯೮೯-೯೪ ಕಾಂಗ್ರೆಸ್ ಆಡಳಿತ ಅಸ್ತಿತ್ವಕ್ಕೆ ಬಂದಿತು. ಈ ಕಡೆ ಶ್ರೀ ಪ್ರಕಾಶ ಅವರೂ ಚುನಾವಣೆಯಲ್ಲಿ ಸೋತರು. ಈಗ ಕೆಲವರು ಕನ್ನಡ ವಿಶ್ವವಿದ್ಯಾಲಯ ಬೆಂಗಳೂರಿನಲ್ಲಿ ಸ್ಥಾಪನೆಯಾಗಬೇಕೆಂದು ತೆರೆಯ ಮರೆಯಲ್ಲಿ ಹುನ್ನಾರ ನಡೆಸಿದರು. ಆಗ ಪ್ರಸಾರ ಮಾಧ್ಯಮಗಳ ಮೂಲಕ ಪ್ರತಿಭಟಿಸಿ, ಹಂಪಿಯಲ್ಲಿಯೇ ಅಸ್ತಿತ್ವಕ್ಕೆ ಬರುವಂತೆ ನೋಡಿಕೊಂಡಿರು. ೧೯೯೧ ರಲ್ಲಿ ಕಾಂಗ್ರೆಸ್ ಸರ್ಕಾರ ಡಾ. ಚಂದ್ರಶೇಖರ ಕಂಬಾರ ಅವರನ್ನು ವಿಶೇಷ ಆಡಳಿತಾಧಿಕಾರಿಯನ್ನಾಗಿ ನೇಮಿಸಿ, ವಿಶ್ವವಿದ್ಯಾಲಯ ಸ್ಥಾಪನೆಯ ವಿಚಾರದಲ್ಲಿ ಎರಡನೆಯ ಘಟ್ಟ ನಿರ್ಮಿಸಿತು. ಶ್ರೀ ಕಂಬಾರ ಮತ್ತು ಪ್ರಕಾಶ ಮೊದಲಿನಿಂದಲೂ ಸಾಂಸ್ಕೃತಿಕ ಸ್ನೇಹಿತರು. ರಾಜಕೀಯವಾಗಿ - ಪಕ್ಷ ಮತ್ತು ವ್ಯಕ್ತಿ ನೆಲೆಯಲ್ಲಿ -ಅಧಿಕಾರವಿಲ್ಲದಿದ್ದರೂ ಇವರೊಳಗಿನ ಸಂಸ್ಕೃತಿ ಪ್ರೀತಿ, ಕಂಬಾರ ಅವರ ಕುಲಪತಿ ಆಯ್ಕೆಗೆ ನೈತಿಕ ಬೆಂಬಲನೀಡಿತು.

ಅಧಿಕಾರದಲ್ಲಿ ಇರಲಿಲ್ಲವಾದರೂ ಪ್ರಥಮ ನುಡಿಹಬ್ಬದ (೧೯೯೨) ಅಂಗವಾಗಿ ಜರುಗಿದ "ನನ್ನ ಕಲ್ಪನೆಯ ಕರ್ನಾಟಕ" ಹೆಸರಿನ ವಿಚಾರಸಂಕಿರಣದಲ್ಲಿ ಭಾಗವಹಿಸಿ ತಮ್ಮ ಆಲೋಚನೆಗಳನ್ನು ಮಂಡಿಸಿದರು. ಅಂದೇ ಸಂಜೆ ಜರುಗಿದ ಶ್ರೀ. ಎಸ್. ಎಸ್. ಒಡೆಯರ್ ದಂಪತಿಗಳ ಸನ್ಮಾನ ಸಮಾರಂಭದಲ್ಲಿ ಅಭಿನಂದನ ಭಾಷಣಮಾಡಿದರು. ೧೯೯೩ರಲ್ಲಿ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ 'ರಂಗನಿರ್ದೇಶನ' ಶಿಬಿರ ಉದ್ಘಾಟಿಸಿ, ಮೌಲಿಕ ಮಾತುಗಳನ್ನಾಡಿದರು. ಕಾಯಕಮನೆ, ನವರಂಗ ಕಟ್ಟಡಗಳನ್ನು ಶ್ರೀ ಮೊಯ್ಲಿ, ಶ್ರೀ ಯಾಹ್ಯಾ ಉದ್ಘಾಟಿಸಿದ ಸಂದರ್ಭದಲ್ಲಿ ಕೇವಲ ಸಭಿಕರಾಗಿ ಹಾಜರಾದರು. ಹೀಗೆ ಅಧಿಕಾರದಲ್ಲಿರಲಿ, ಬಿಡಲಿ, ಕನ್ನಡ

ವಿಶ್ವವಿದ್ಯಾಲಯ ತಮ್ಮ ಅಂತಃಕರಣದ ಭಾಗವೆಂಬಂತೆ ಪ್ರಕಾಶ ಅವರು ನಡೆದುಕೊಂಡರು. ಇಷ್ಟೇ ಏಕೆ, ಕುಲಪತಿಗಳು ಎರಡನೆಯ ಅವಧಿಗೆ ಮುಂದುವರಿಯುವುದಕ್ಕೂ ಶ್ರೀ ಪ್ರಕಾಶ ಅವರ ಮೌನ ಸಮ್ಮತಿಯಿದ್ದಿತು.

III

೧೯೯೪ರಿಂದ ೧೯೯೯ರ ವರೆಗೆ ರಾಜ್ಯದಲ್ಲಿ ಮತ್ತೆ ಜನತಾದಳ ಸರಕಾರದ ಆಡಳಿತ ಆರಂಭ. ರಾಜ್ಯಕ್ಕೆ ಶ್ರೀ ದೇವೇಗೌಡರ ಮತ್ತು ಶ್ರೀ ಜೆ. ಎಚ್. ಪಟೇಲರ ಸಾರಥ್ಯ. ಈ ಮೊದಲು ವಿಶ್ವವಿದ್ಯಾಲಯಕ್ಕೆ ಅಡಿಪಾಯದಂತೆ ದುಡಿದ ಶ್ರೀ ಪ್ರಕಾಶ ಅವರು, ಈಗ ಸ್ಥಾಪಿತ ವಿಶ್ವವಿದ್ಯಾಲಯದ ಪ್ರಗತಿಗೆ ನೇರವಾಗಿ ನೆರವಾಗುತ್ತ ನಡೆದರು. ೧೯೯೫ ರಲ್ಲಿ ಶ್ರೀ ಹೆಗಡೆ ಅವರೊಂದಿಗೆ ವಿಶ್ವವಿದ್ಯಾಲಯದ ಕ್ರಿಯಾಶಕ್ತಿ ಕಟ್ಟಡದ ಅಡಿಗಲ್ಲು ಸಮಾರಂಭದಲ್ಲಿ ಭಾಗವಹಿಸಿದರು. ದುರ್ದೈವದ ಸಂಗತಿಯೆಂದರೆ ವಿಶ್ವವಿದ್ಯಾಲಯ ಈ ಹೊತ್ತಿಗೆ ಸಾರ್ವಜನಿಕವಾಗಿ, ಆಂತರಿಕವಾಗಿ ಅನೇಕ ಸಮಸ್ಯೆಗಳನ್ನು ನಿರ್ಮಿಸಿಕೊಂಡಿದ್ದಿತು. ಆಗ ಶ್ರೀ ಪ್ರಕಾಶ ಅವರು ಮಧ್ಯಸ್ಥಿಕೆ ವಹಿಸಿ, ನೆಮ್ಮದಿ ಸ್ಥಾಪಿಸಿದುದು ಒಂದು ಚಾರಿತ್ರಿಕ ಘಟನೆ. ಇದು ಸಾಲದೆಂಬಂತೆ ಆರ್ಥಿಕ ನೆರವನ್ನು ಒದಗಿಸುತ್ತ ಬಂದು, ವಿಶ್ವವಿದ್ಯಾಲಯ ಮತ್ತೆ ರಕ್ತ- ಮಾಂಸ ತುಂಬಿಕೊಳ್ಳುವಂತೆ ಮಾಡಿದರು.

ನನಗೂ ಸರಕಾರಕ್ಕೂ ದೂರದ ಸಂಬಂಧ, ನನಗೂ ಶ್ರೀ ಪ್ರಕಾಶ ಅವರಿಗೂ ಸಮೀಪದ ಸಂಬಂಧ. ಹೀಗಾಗಿ ಮೂರನೆಯ ಅವಧಿಯ ಕುಲಪತಿ ಆಯ್ಕೆ ಸಂದರ್ಭದಲ್ಲಿ ನನ್ನ ಶಕ್ತಿ-ಆಸಕ್ತಿಗಳನ್ನು ಸರಕಾರದ ಗಮನಕ್ಕೆ ತಂದವರಲ್ಲಿ ಶ್ರೀ ಪ್ರಕಾಶ ಮುಖ್ಯರೆಂದು ನನ್ನ ಭಾವನೆ. ಆಗ ವಿಶ್ವವಿದ್ಯಾಲಯದ ಮೂರು ಕೋಟಿ ವಾರ್ಷಿಕ ಅನುದಾನ ಕರಗಿಹೋಗಿ, ಅದು ಹೆಚ್ಚಿನದಾಗಿ ಎರಡು ಕೋಟಿ ಸಾಲದಲ್ಲಿ ಮುಳುಗಿದ್ದಿತು. ನಾನು ಅಧಿಕಾರ ವಹಿಸಿಕೊಂಡ ಒಂದು ತಿಂಗಳಲ್ಲಿ ಸರಕಾರ ೧ ಕೋಟಿ, ಬಳಿಕ ೩೬ ಲಕ್ಷ ವಿಶೇಷ ಅನುದಾನ ಬಿಡುಗಡೆ ಮಾಡಿಸುವಲ್ಲಿ ಶ್ರೀ ಪ್ರಕಾಶ ಅವರು ಮುಖ್ಯ ಪಾತ್ರವಹಿಸಿದರು. "ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲ" ಸಭೆಯು ಕನ್ನಡ ವಿಶ್ವವಿದ್ಯಾಲಯಕ್ಕೆ ಒಂದೂ ಪೈಸೆ ಕೊಡಲೂ ಸಾಧ್ಯವಿಲ್ಲವೆಂದು ವ್ಯಕ್ತಪಡಿಸಿದ ಅಸಹಾಯಕತೆಯ ನಡುವೆಯೂ ಒಂದು ಕೋಟಿ ರೂಪಾಯಿ ಕೊಡಲು ನಿರ್ಣಯ ಸ್ವೀಕರಿಸುವಂತೆ ಮಾಡುವಲ್ಲಿ ಶ್ರೀ ಪ್ರಕಾಶ ಅವರ ಮಧ್ಯಸ್ಥಿಕೆಯೇ ಕಾರಣವಾಯಿತು. ಆದರೆ ಆರ್ಥಿಕ ಕೊರತೆಯಿಂದಾಗಿ ನಮಗೆ ಆ ಹಣ ಬಿಡುಗಡೆಯಾಗಲಿಲ್ಲವೆಂಬುದು ಬೇರೆ ಮಾತು.

ಹಂಪಿ ಉತ್ಸವ ಎಂ. ಪಿ. ಪ್ರಕಾಶ್ ಅವರ ಕನಸು ಮತ್ತು ನನಸು. ಕನ್ನಡ ವಿಶ್ವವಿದ್ಯಾಲಯ ಈ ಉತ್ಸವದಲ್ಲಿ ಒಂದು ಮಹತ್ವದ ಪುಸ್ತಕ ಪ್ರಕಟಿಸುತ್ತ ಹೋಗುವ ಮೂಲಕ ಇದರಲ್ಲಿ ಭಾಗಿಯಾಗಬೇಕೆಂದೂ, ಸರಕಾರ ಪ್ರತಿವರ್ಷ ೧ ಲಕ್ಷ ರೂಪಾಯಿ ಅನುದಾನ ನೀಡಬೇಕೆಂದೂ ನಾನು ಸೂಚಿಸಿದೆ. ಶ್ರೀ ಪ್ರಕಾಶ ಅವರಿಂದಾಗಿ ಇದು ಕಾರ್ಯರೂಪಕ್ಕೆ ಬಂದು, ಈಗಲೂ ಮುನ್ನಡೆಯುತ್ತಲಿದೆ.

ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ ಕನ್ನಡ ವಿಶ್ವವಿದ್ಯಾಲಯ ಸಂಲಗ್ನಗೊಳ್ಳಬೇಕೆಂಬುದು ನೆನೆಗುದಿಗೆ ಬಿದ್ದ ಪ್ರಶ್ನೆಯಾಗಿದ್ದಿತು. ಮಾನ್ಯ ಶ್ರೀ ಜೆ. ಎಚ್. ಪಟೇಲ್ ಅವರ ಮನವೊಲಿಸಿ, ಮುಖ್ಯಮಂತ್ರಿಗಳಿಗೆ ಬದಲು ರಾಜ್ಯಪಾಲರು ವಿಶ್ವವಿದ್ಯಾಲಯದ ಕುಲಾಧಿಪತಿಯಾಗುವಂತೆ ಮಾಡಿದ ಸರ್ವಶ್ರೇಯಸ್ಸು ಶ್ರೀ ಪ್ರಕಾಶ ಅವರಿಗೆ ಸಲ್ಲಬೇಕು. ಇದರಿಂದಾಗಿ ಈ ವಿಶ್ವವಿದ್ಯಾಲಯ ರಾಷ್ಟ್ರೀಯ ಮುಖ್ಯ ಪ್ರವಾಹಿನಿಯಲ್ಲಿ ಸೇರಿಕೊಳ್ಳಲು ಸಾಧ್ಯವಾದುದು ಒಂದು ಚಾರಿತ್ರಿಕ ಸಾಧನೆಯೆಂದೇ ಹೇಳಬೇಕು.

ಈಗ ವಿಶ್ವವಿದ್ಯಾಲಯಕ್ಕೆ ಹತ್ತು ವರ್ಷ. ಈ ಮಧ್ಯದ ಅವಧಿಯಲ್ಲಿ ವಿಶ್ವವಿದ್ಯಾಲಯದ ಪ್ರತಿಯೊಂದು ನುಡಿಹಬ್ಬದಲ್ಲಿ - ಅತಿಥಿಯಾಗಿರಲಿ, ಬಿಡಲಿ-ಭಾಗವಹಿಸುತ್ತಲೇ ಬಂದುದು ಗಮನಿಸಬೇಕಾದ ಅಂಶವಾಗಿದೆ. ಇತ್ತೀಚಿನ ಚುನಾವಣೆಯಲ್ಲಿ ಶ್ರೀ ಪ್ರಕಾಶ ಜಯಶಾಲಿಯಾಗಲಿಲ್ಲ. ಹೀಗಿದ್ದೂ ೨೦೦೦ನೆಯ ವರ್ಷದ ನುಡಿಹಬ್ಬದ ವಿಚಾರಸಂಕಿರಣಕ್ಕೆ ಅತಿಥಿಯಾಗಿ ಬರಬೇಕೆಂದು ವಿಶ್ವವಿದ್ಯಾಲಯದ ಶಿಕ್ಷಕರು ಅಪೇಕ್ಷೆಪಟ್ಟರು. ಅಧಿಕಾರದಲ್ಲಿರದ ಶ್ರೀ ಪ್ರಕಾಶ ಬಂದರು. ಸೊಗಸಾದ ಭಾಷಣ ಮಾಡಿದರು. ವಿಶ್ವವಿದ್ಯಾಲಯದ ಸಿಬ್ಬಂದಿ ವರ್ಗದವರು, ಪ್ರಕಾಶ ಇನ್ನೂ ಅಧಿಕಾರದಲ್ಲಿರುವರೆಂಬ ಭಾವನೆಯಿಂದಲೇ ಅವರೊಂದಿಗೆ ನಡೆದುಕೊಂಡರು. ಈಗ ವಿಧಾನಪರಿಷತ್ತಿನ ಸದಸ್ಯರಾಗಿ ಮತ್ತೆ ಸರಕಾರದ ಭಾಗವಾಗಿದ್ದಾರೆ. ವಿಶ್ವವಿದ್ಯಾಲಯ ಅವರಿಂದ ಸಹಜವಾಗಿಯೇ ಮತ್ತೆ ಪ್ರತ್ಯಕ್ಷ ನೆರವನ್ನು ನಿರೀಕ್ಷಿಸುತ್ತದೆ.

ಬಹುಮುಖಿ - (ಎಂ.ಪಿ.ಪ್ರಕಾಶ ಅಭಿನಂದನಗ್ರಂಥ), ೨೦೦೧.

ಆಕರ : ಮಾರ್ಗ ಸಂಪುಟ–೬

■■

೯೬

ಇಂಗ್ಲಿಷ್ ಪಾಠ! ಹೋಳಿಗೆ ಊಟ!!

೨೦೦೧

ವಿದ್ಯಾಗುರುಗಳಾದ ಪ್ರೊ. ಬಿ. ಎಸ್. ಗಣಾಚಾರಿ ಅವರನ್ನು ನೆನೆದಾಗಲೆಲ್ಲ ಪ್ರೊಫೆಸರ್, ಪ್ರಿನ್ಸಿಪಾಲ್ ಮತ್ತು ವ್ಯಕ್ತಿ - ಅವರ ಈ ಮೂರು ಆಯಾಮಗಳು ನನ್ನ ಕಣ್ಣ ಮುಂದೆ ನಿಲ್ಲುತ್ತವೆ. ನೈತಿಕತೆಯೇ ಬಹುದೊಡ್ಡ ಆಸ್ತಿಯೆಂದು ನಂಬಿದ್ದ ತಲೆಮಾರಿನವರಾದ ಅವರು, ಈ ಮೂರೂ ಆಯಾಮಗಳಿಗೆ ಬಹುಮಟ್ಟಿಗೆ ನ್ಯಾಯ ಒದಗಿಸಿದವರಾಗಿದ್ದರು.

೧೯೫೬-೬೦. ನಾನು ವಿಜಾಪುರದ ವಿಜಯ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ಅವಧಿ. ಈಗಿನವರಂತೆ ಕಾಲೇಜಿಗೆ ಬಾರದ, ಬಂದರೂ ಕ್ಲಾಸ್‌ರೂಮಿಗೆ ಹೋಗದ ಅಧ್ಯಾಪಕರು ಅಂದು ಇರಲಿಲ್ಲ. ಈಗಿನವರಂತೆ ಕೋಣೆಗಳಲ್ಲಿ ಸಿನಿಮಾ ತಾರೆಯರ ಚಿತ್ರ ಅಂಟಿಸುವುದು ತಮಗೆ ಅಪಮಾನವೆಂದು ಭಾವಿಸುವ ವಿದ್ಯಾರ್ಥಿಗಳ ಸಂಖ್ಯೆ ಅಂದು ಅಧಿಕವಾಗಿದ್ದಿತು. ಇಂಥ ಶಿಕ್ಷಕರು- ವಿದ್ಯಾರ್ಥಿಗಳಿಂದಾಗಿ ನಮ್ಮ ಕಾಲೇಜಿನಲ್ಲಿ ಆಗ ಹೆಸರಿಗೆ ತಕ್ಕಂತೆ "ಶೈಕ್ಷಣಿಕ ವಿಜಯ"ದ ವಾತಾವರಣ ತುಂಬಿಕೊಂಡಿತ್ತು.

ಪ್ರೊ. ಬಿ. ಎಸ್. ಗಣಾಚಾರಿ, ಪ್ರೊ. ಎಚ್. ಟಿ. ಸಾಸನೂರ, ಪ್ರೊ. ಬಿ. ಟಿ. ಸಾಸನೂರ, ಪ್ರೊ. ಟಿ. ರೂಬೆನ್, ಪ್ರೊ. ಎಚ್. ಕೆ. ಲಗಳಿ, ಪ್ರೊ. ಎಸ್. ಆರ್. ಭಿಡೆ ಮೊದಲಾದ ಘನತೆವೆತ್ತ ಪ್ರಾಧ್ಯಾಪಕರಿಂದಾಗಿ ಆ ಆವರಣಕ್ಕೆ ಒಂದು ಪ್ರಭಾವಳಿ ಪ್ರಾಪ್ತವಾಗಿದ್ದಿತು.

ಸಾಧಾರಣ ಎತ್ತರ, ಮಧ್ಯಮ ಗಾತ್ರದ ಮೈಕಟ್ಟು, ದುಂಡನೆಯ ಮುಖ, ಕನ್ನಡದ ಹಿಂದೆ ಹೊಳೆಯುವ ಕಣ್ಣು, ಕಪ್ಪು ಮಿಶ್ರಿತ ಕೆಂಪು ಬಣ್ಣ, ಗಂಭೀರ ನಿಲುವಿನ ಪ್ರೊ. ಗಣಾಚಾರಿ ಅವರು ಬಟ್ಟೆಗಳ ವಿಷಯದಲ್ಲಿ ಒಂದಿಷ್ಟು ಅಚ್ಚುಕಟ್ಟು. ಸಾಮಾನ್ಯವಾಗಿ ಕಪ್ಪು ಇಲ್ಲವೆ ನೀಲಿ -ಹೀಗೆ ದಟ್ಟ ಬಣ್ಣದ, ನಿರಿಗೆ ಮುರಿಯದ ಸೂಟ್ ಧರಿಸುತ್ತಿದ್ದರು. ಪ್ರಿನ್ಸಿಪಾಲರಾದ ಬಳಿಕ ಕೆಲವೊಮ್ಮೆ ನೆಹರೂ ಶರ್ಟ, ಧೋತರ ಧರಿಸಿ ಕಾಲೇಜಿಗೆ ಬಂದರೂ ಆಫೀಸಿನಲ್ಲಿ ಅದನ್ನು ಬದಲಿಸಿ ಕ್ಲಾಸರೂಮನ್ನು ಸೂಟು ಧರಿಸಿಯೇ ಪ್ರವೇಶಿಸುತ್ತಿದ್ದರು.

ಪ್ರೊ. ಗಣಾಚಾರಿ ಅವರು ಇಂಗ್ಲಿಷ್ ಪ್ರಾಧ್ಯಾಪಕರು. ನಮಗೆ ಅವರು ಶೇಕ್ಸಪಿಯರ್‌ನ 'ಅಥೆಲೋ', 'ಕಿಂಗ್ ಹೆನ್ರಿ ದಿ ಫೋರ್ಥ್' ನಾಟಕಗಳನ್ನು, ಗೋಲ್ಡಸ್ಮಿಥ್ ಮತ್ತು ಗಾರ್ಡಿನರ್ ಅವರ ಪ್ರಬಂಧಗಳನ್ನು ಓದಿಸಿದರು. ಗಾಢ ಪಾಂಡಿತ್ಯಕ್ಕೆ ಹೆಚ್ಚು ಬೆಲೆ ಕೊಡುತ್ತಲಿದ್ದ ಕಾಲವದು. ಇದಕ್ಕೆ ತಕ್ಕಂತೆ ಅವರ ಉಪನ್ಯಾಸ

ಗಹನವಾದ ಪದಸಂಪತ್ತು, ವಿದ್ವತ್‌ಪೂರ್ಣ ವ್ಯಾಕರಣಗಳಿಂದ ವಿಜೃಂಭಿಸುತ್ತಿದ್ದಿತು. ಅವರ ಇಂಗ್ಲಿಷ್ ಭಾಷೆಯ ಆಳವಾದ ಜ್ಞಾನ, ಶಾಸ್ತ್ರಶುದ್ಧ ಉಚ್ಚಾರಗಳಿಗೆ ನಾವು ಮಾರು ಹೋಗಿದ್ದೆವು. ಈ ಘನ ಪಾಂಡಿತ್ಯದ ಸೆಳವಿಗೆ ಸಿಕ್ಕು, ಅವರು ಕೆಲವೊಮ್ಮೆ ಕೈಯಲ್ಲಿಯ ಪಠ್ಯವನ್ನೇ ಮರೆತು ಇಂಗ್ಲಿಷ್ ಪದಗಳ ಲ್ಯಾಟಿನ್ ಮೂಲದ ಶೋಧನೆ, ಸಮಾನ ಸಾಹಿತ್ಯ ಭಾಗಗಳ ಬೋಧನೆಗೆ ತೊಡಗುತ್ತಿದ್ದರು. ಹೀಗಾಗಿ ಒಂದು ಪಿರಿಯೆಡ್‌ನಲ್ಲಿ ಒಂದು ಪುಟ, ಕೆಲವೊಮ್ಮೆ ಒಂದು ಫ್ಯಾರ್ಯಾ ಮುಗಿಯುತ್ತಿದ್ದಿತು. ಇದು ಒಮ್ಮೊಮ್ಮೆ ಬೇಸರ ತರಿಸುತ್ತಿದ್ದರೂ ವಿದ್ಯಾರ್ಥಿಗಳನ್ನು ಆಳಕ್ಕೆ ಕರೆದುಕೊಂಡು ಹೋಗಬೇಕೆಂಬ ಕಳಕಳಿಯನ್ನು ನಾವು ಅಲ್ಲಿ ಗುರುತಿಸುತ್ತಿದ್ದೆವು. ಇಂಥ ಕಳಕಳಿ ಕಾರಣವಾಗಿಯೇ ಅವರು ಜಾಗತಿಕ ಸಂಪರ್ಕ ಮಾಧ್ಯಮವಾಗಿರುವ ಇಂಗ್ಲಿಷ್ ಕಲಿಕೆಯ ಮಹತ್ವವನ್ನು ಆಗಾಗ ಒತ್ತಿ ಹೇಳುತ್ತಿದ್ದರು. ಗ್ರಾಮೀಣ ಮಕ್ಕಳಿಗೆ ಈ ಭಾಷೆಯ ಕಡೆಗೆ ಗಮನವಿಲ್ಲದುದನ್ನು ಎತ್ತಿ ನುಡಿಯುವಲ್ಲಿ ಈ ಕಳಕಳಿ ಇನ್ನೂ ವ್ಯಕ್ತವಾಗುತ್ತಲಿದ್ದಿತು.

ಪ್ರೊ. ಗಣಾಚಾರಿಯವರು ಪ್ರಿನ್ಸಿಪಾಲರಾಗಿದ್ದ ಕಾಲದಲ್ಲಿ ಕಾಲೇಜಿನ ಭೌತಿಕ, ಶೈಕ್ಷಣಿಕ ಭಾರವನ್ನು ಇಡಿಯಾಗಿ ಹೊತ್ತು ಹಗಲಿರುಳೂ ದುಡಿಯುತ್ತಿದ್ದರು. ಬರಗಾಲದ ದಾರಿದ್ರ್ಯದಲ್ಲಿಯೂ ದಾನವೀರರಾಗಿದ್ದ, ಅಶಿಕ್ಷಿತರಾಗಿದ್ದರೂ ಸುಸಂಸ್ಕೃತರಾಗಿದ್ದ ಹಿರಿಯರು ಈ ಸಂಸ್ಥೆಗೆ ಶ್ರಮಿಸಿದ ಇತಿಹಾಸ, ಪೂರ್ಣಪ್ರಮಾಣದಲ್ಲಿ ಗೊತ್ತಿದ್ದ ಕಾರಣ, ಇದರ ಉತ್ತಮಭವಿಷ್ಯಕ್ಕಾಗಿ ವರ್ತಮಾನವನ್ನು ಸರಿಯಾಗಿ ಬಳಸಿಕೊಳ್ಳುತ್ತಿದ್ದರು. ಇವರ ಕಾಲಾವಧಿಯಲ್ಲಿ ನಗರ ಮಧ್ಯದಲ್ಲಿದ್ದ ಕಾಲೇಜು ಚಟುವಟಿಕೆ, ಹೊರಗಿನ ಹೊಸ ಕಟ್ಟಡಕ್ಕೆ ವರ್ಗಾವಣೆಗೊಂಡಿತು. ಆಗ ಹೆಗಲೇರಿದ ಈ ಹೊಸ ಆವರಣದ ಅಭಿವೃದ್ಧಿಗೆ ಅವರು ಶ್ರದ್ಧೆಯಿಂದ ದುಡಿದರು.

ವ್ಯಕ್ತಿಯಾಗಿ ಪ್ರೊ. ಗಣಾಚಾರಿ ಅವರದು ಮೌಲ್ಯಾಧಾರಿತ ಬದುಕು. ಶೀಲ ಅವರ ವೃತ್ತಿಗೆ ಪ್ರಭಾವಳಿಯಂತೆ ಕೆಲಸಮಾಡಿ, ನಮ್ಮ ಮೇಲಾಗುತ್ತಿದ್ದ ಅವರ ಪ್ರಭಾವವನ್ನು ಇಮ್ಮಡಿಗೊಳಿಸುತ್ತಿದ್ದಿತು. ಒಂದು ವಿಶಿಷ್ಟ "ವರ್ಚಸ್ಸು" ಹೊಂದಿದ್ದ ಇವರು ಹೂವಿಗಿಂತ ಮೃದುವಾಗಿದ್ದರೂ ನಿರ್ಣಾಯಕ ಸಂದರ್ಭದಲ್ಲಿ ವಜ್ರಕ್ಕಿಂತ ಕಠೋರವಾಗುತ್ತಿದ್ದರು. ಹೀಗಾಗಿ ಯಾವುದೇ ಕೆಲಸವನ್ನು ಪಟ್ಟುಹಿಡಿದು ಮಾಡಿ ಜಯಶಾಲಿಯಾಗುತ್ತಿದ್ದರು. ಕಾಲೇಜ ಪ್ರಿನ್ಸಿಪಾಲರಾಗಿದ್ದ ಇವರು ಎಂ. ಎಲ್. ಸಿ. ಯಾದುದು ಇದಕ್ಕೆ ನಿದರ್ಶನವೆನಿಸಿದೆ.

ಒಮ್ಮೆ ಅಗ್ನಿಪರೀಕ್ಷೆಯ ಕಾಲ ನಿರ್ಮಾಣವಾಯಿತು. ಅದು : ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ ಸದಸ್ಯರಾಗಿದ್ದ ಅವರು ನಮ್ಮ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಆರ್. ಸಿ. ಹಿರೇಮಠ ಅವರೊಂದಿಗೆ ತುಂಬ ಅನ್ಯೋನ್ಯವಾಗಿದ್ದರು. ಆದರೆ ತರುವಾಯದ ಸಿಂಡಿಕೇಟ ಚುನಾವಣೆಗೆ ಇಬ್ಬರೂ ನೇರ ಸ್ಪರ್ಧಿಗಳಾಗುವ ಸಂದರ್ಭ ಸೃಷ್ಟಿಯಾಯಿತು; ಅಲ್ಲ, ಕೆಲವರು ಸೃಷ್ಟಿಮಾಡಿದರು. ಡಾ. ಹಿರೇಮಠ ಮತ್ತು ಶ್ರೀ ಒಡೆಯರ್ ಅವರ ಸಂಬಂಧ ಕೆಡಿಸಿದವರೇ ಈ ಕಿಡಿಯನ್ನು ಹೊತ್ತಿಸಿದ್ದರು. ನಾನು ಡಾ. ಹಿರೇಮಠ ಅವರಿಗೆ ಎಷ್ಟೇ ಹತ್ತಿರದವನಾಗಿದ್ದರೂ ನನ್ನ ಮತ್ತುಅವರ ಸಂಬಂಧ ಶಿಕ್ಷಣಕ್ಕೆ ಮಾತ್ರ. ಅವರು ಒಮ್ಮೆ ನನ್ನನ್ನು ನವಲಗುಂದಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿಯ ಪ್ರಿನ್ಸಿಪಾಲರ ಮತ ಪಡೆಯಲು ಸಂಸ್ಥೆಯ ಅಧ್ಯಕ್ಷರಾದ ವೀರಶೈವ ಸ್ವಾಮಿಗಳನ್ನು ಕಂಡೆವು. ಡಾ. ಹಿರೇಮಠರು ತಾವು ಬಂದ ಕಾರಣವನ್ನು ಪ್ರಿ. ಗಣಾಚಾರಿ ಅವರು ತಮ್ಮ ನೇರ ಸ್ಪರ್ಧಿಯೆಂಬುದನ್ನು ವಿವರಿಸಿದರು. ಆಗ ತಟ್ಟನೇ ಸ್ವಾಮಿಗಳು "ನಮ್ಮ ಸಮಾಜದಲ್ಲಿ ಗಣಾಚಾರಿ ಅವರಿಗಿಂತ ಹಿರೇಮಠರ ಸ್ಥಾನ ದೊಡ್ಡದು. ಕಾರಣ ನಿಮಗೇ ಮತ ಕೊಡಿಸುತ್ತೇನೆ" ಎಂದು ವಚನ ಕೊಟ್ಟರು. ಇಂಥ ಮನಸ್ಸುಗಳ ಮಧ್ಯದಲ್ಲಿ ಚುನಾವಣೆಗೆ ಅರ್ಥವಿಲ್ಲ. ಅದೇನೇ ಇರಲಿ, ಡಾ. ಹಿರೇಮಠರು ಗೆದ್ದರು.

ಇಬ್ಬರ ಸ್ನೇಹ ಸೇತುವೆ ಮುರಿದು ಬಿತ್ತು. ಇದನ್ನು ನೋಡಿ ಮರುಗುವುದನ್ನು ಬಿಟ್ಟರೆ ಸಣ್ಣವರಾಗಿದ್ದ ನಮಗೆ ಬೇರೆ ಮಾರ್ಗವೇ ಇರಲಿಲ್ಲ. ಹೀಗಿದ್ದೂ ಡಾ. ಹಿರೇಮಠರ ಶಿಷ್ಯನಾಗಿದ್ದ ನನ್ನ ಮೇಲಿನ ಅವರ ಪ್ರೀತಿ ಕಡಿಮೆಯಾಗಲಿಲ್ಲ. ಧಾರವಾಡಕ್ಕೆ ಬಂದಾಗ ಶಿಷ್ಯವಾತ್ಸಲ್ಯದಿಂದ ನನ್ನ ಮನೆಗೆ ಅವರು ಬರುತ್ತಿದ್ದರು. ವಿಜಾಪುರಕ್ಕೆ ಹೋದಾಗ ಗುರುಭಕ್ತಿಯಿಂದ ನಾನು ಅವರ ಮನೆಗೆ ಹೋಗುತ್ತಿದ್ದೆನು.

ವರ್ಷದುದ್ದಕ್ಕೂ ಗಂಭೀರವಾಗಿರುತ್ತಿದ್ದ ಪ್ರಿನ್ಸಿಪಾಲ್ ಗಣಾಚಾರಿ ಅವರು ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳೊಂದಿಗೆ ಒಂದಿಷ್ಟು ಮುಕ್ತರೀತಿಯಲ್ಲಿ ವರ್ತಿಸುತ್ತಿದ್ದರು. ಆವರಣದ ತುಂಬ ಸಡಗರ - ಸಂಭ್ರಮ ನಿರ್ಮಿಸುತ್ತಿದ್ದರು. ಆ ಸಂದರ್ಭದಲ್ಲಿ ಅವರು ಸಾವಿರ ಸಂಖ್ಯೆಯ ಎಲ್ಲ ವಿದ್ಯಾರ್ಥಿಗಳಿಗೆ ಹೋಳಿಗೆ ಊಟಮಾಡಿಸಿ ತಾವೂ ತೃಪ್ತಿ ಪಡುತ್ತಿದ್ದರು. ಇದು ಎಷ್ಟು ಮನೆ ಮಾತಾಗಿದ್ದಿತೆಂದರೆ, ಮುಂದಿನ ದಿನಗಳಲ್ಲಿ ವಾರ್ಷಿಕೋತ್ಸವ ಬಂದರೆ ಸಾಕು, ನಾವೆಲ್ಲ ವಿದ್ಯಾರ್ಥಿಗಳು ಹೋಳಿಗೆ ಊಟ ನಿರೀಕ್ಷಿಸುತ್ತಿದ್ದೆವು. ಅಂದು ಆ ನಿರೀಕ್ಷೆ ಈಡೇರುತ್ತಿದ್ದಿತು.

ಹೀಗಾಗಿ ಪ್ರಿನ್ಸಿಪಾಲ ಗಣಾಚಾರಿಯವರನ್ನು ಸ್ಮರಿಸುತ್ತಲೇ ನನಗೆ ತಕ್ಷಣ ನೆನಪಾಗುವುದು. ಇಂಗ್ಲಿಷ್ ಪಾಠ ! ಹೋಳಿಗೆ ಊಟ!!

ಸಮರ್ಪಣೆ : ಪ್ರಿನ್ಸಿಪಲ್ ಬಿ.ಎಸ್.ಗಣಾಚಾರಿ ಸಂಸ್ಮರಣಗ್ರಂಥ, ೨೦೦೧

ಆಕರ : ಮಾರ್ಗ ಸಂಪುಟ–೬

೯೭

ಕ ಕಾ ಬಳ್ಳಿ ಸ್ನೇಹಿತ

೨೦೦೧

ಕಣವಿ, ಕನವಳ್ಳಿ, ಕಾಪಸೆ ಕಲಬುರ್ಗಿ- ನಮ್ಮನ್ನು ಕ ಕಾ ಬಳ್ಳಿ ಸ್ನೇಹಿತರೆಂದು ಸಾಮಾನ್ಯವಾಗಿ ಎಲ್ಲರೂ ಗುರುತಿಸುತ್ತಾರೆ. ನಮ್ಮ ಸ್ನೇಹಕ್ಕೆ ಕಕಾರ ಒಂದು ಆಕಸ್ಮಿಕ. ಮೂಲ ಕಾರಣ, ನಮ್ಮೆಲ್ಲರ ಮನಸ್ಸು ರಚನಾತ್ಮಕ. ಹಿಗಾಗಿ ೪೦ ವರ್ಷ ಕಳೆದರೂ, ಒಂದು ಸಲ ಕುದಿಯುತ್ತಲೇ ಎರಡು ಸಲ ಹಳಸುವ ಸ್ನೇಹ ನಮ್ಮದಾಗಲಿಲ್ಲ. ಈ ಬಳ್ಳಿಯಲ್ಲಿ ಎಲ್ಲರೂ ನನಗಿಂತ ಹಿರಿಯರು. ಇವರೆಲ್ಲ ನನ್ನನ್ನು ಪ್ರೀತಿಸುತ್ತ ಬಂದ ರೀತಿ ನನ್ನಲ್ಲಿ ಧನ್ಯತೆಯನ್ನು ಉಕ್ಕಿಸುತ್ತದೆ. ಹೀಗೆ ವಯಸ್ಸಿನಲ್ಲಿ, ಜೀವನಾನುಭವದಲ್ಲಿ ಹಿರಿಯರಾಗಿರುವ ಇವರೊಂದಿಗೆ, ಕಾಪಸೆಯವರೊಂದಿಗೆ ನಾನು ಸ್ನೇಹವನ್ನು ಮೀರಿದ ಸಂಬಂಧವನ್ನು ಬೆಳೆಸಿಕೊಡು ಬಂದಿದ್ದೇನೆ.

ಡಾ. ಕಾಪಸೆ ಮತ್ತು ನಾನು ಒಂದೇ ಜಿಲ್ಲೆಯವರು. ಬಹುಶಃ ನಾನು ಹೈಸ್ಕೂಲು ವಿದ್ಯಾರ್ಥಿಯಾಗಿರುವಾಗಲೇ ಅವರು ಹೆಸರು ಕೇಳಿದ್ದೆ. ಅಲ್ಲಲ್ಲಿ ಅವರ ಕವನ, ಲೇಖನ ಓದಿದ್ದೆ. ಇದಕ್ಕಿಂತ "ಆದರ್ಶ ಮಾಸ್ತರ" ಶ್ರೇಣಿಯಲ್ಲಿ ಅವರ ಹೆಸರು ಪ್ರಚಾರಲ್ಲಿದ್ದುದನ್ನು ಗಮನಿಸಿದ್ದೆ.

ವಿಜಾಪುರ ಜಿಲ್ಲೆಯಲ್ಲಿ ಕನ್ನಡ ಶಾಲೆಯ ಮಾಸ್ತರರು ಸಾಹಿತಿಗಳಾಗಿ, ಸಾಹಿತ್ಯ ಪರಿಚಾರಕರಾಗಿ ಮಾಡಿದ ಕೆಲಸ ದೊಡ್ಡದು. ಭೀ.ಪ. ಕಾಳೆ, ಎಂ.ಟಿ.ಸಾಸನೂರ- ಈ ತಲೆಮಾರು; ಸಿಂಪಿ ಲಿಂಗಣ್ಣ, ಸಂಗಮೇಶ ಹೊಸಮನಿ - ಈ ತಲೆಮಾರು; ಶ.ಗು. ಬಿರಾದಾರ, ಸಿಸು ಸಂಗಮೇಶ, ಈಶ್ವರ ಚಿಂತಾಮಣಿ. ಗುರುಲಿಂಗ ಕಾಪಸೆ - ಈ ತಲೆಮಾರುಗಳಿಂದಾಗಿ ಅಲ್ಲಿ ಒಂದು ಪರಂಪರೆಯೇ ನಿರ್ಮಾಣವಾಗಿದೆ. ಕಾಪಸೆ ಅವರಿಗೆ ಮಿಕ್ಕವರಿಗಿಂತ ಇರುವ ಒಂದು ವಿಶೇಷ ಹಿನ್ನೆಲೆಯೆಂದರೆ, ಹಲಸಂಗಿ. ಅದು ಅವರ ವ್ಯಕ್ತಿತ್ವದ ಹಿಂದೆ ಪ್ರಭಾವಳಿಯಂತೆ ಕೆಲಸಮಾಡಿದೆ.

ಹಲಸಂಗಿ, ನಮ್ಮ ನಾಡಿನ ಪ್ರಮುಖ ಸಾಹಿತ್ಯಕೇಂದ್ರವಾಗಿ ಬೆಳೆಯುತ್ತಲಿದ್ದ ಕಾಲವದು. ಮಧುರಚೆನ್ನ, ಸಿಂಪಿಲಿಂಗಣ್ಣ, ಕಾಪಸೆ ರೇವಪ್ಪ ಮೊದಲಾದವರು ಆಧ್ಯಾತ್ಮನಿಷ್ಠ ಸಾಹಿತ್ಯವನ್ನು ಅಂದು ಬಿತ್ತಿ ಬೆಳೆದರು. ಇವರ ಮುಂದುವರಿಕೆಯಾಗಿ ಡಾ. ಗುರುಲಿಂಗ ಕಾಪಸೆ ಅವರು ಬೆಳೆದು ಬಂದಿದ್ದಾರೆ. ಆ ಪರಿಸರದ ಏಕೈಕ ಮಾದರಿಯಾಗಿ ಇಂದು ನಮ್ಮ ಮಧ್ಯೆ ಉಳಿದಿದ್ದಾರೆ.

ಕಾಪಸೆ ಅವರ ಭಾಗ್ಯದ ಬಾಗಿಲು ತೆರೆದದ್ದು, ಬಾಗಿಲುಕೋಟೆಯಲ್ಲಿ. ಅಲ್ಲಿ ಮಾಸ್ತರರಾಗಿದ್ದ ಅವರು ಎಂ.ಎ. ಓದಲು ಧಾರವಾಡಕ್ಕೆ ಬಂದರು. ಇಲ್ಲಿಂದ ನನ್ನ ಮತ್ತು ಅವರ ನೇರ ಪರಿಚಯ ಆರಂಭವಾಯಿತು. ಅವರ ಸೌಮ್ಯ ನಿಲುವು, ಅಂತರ್ಮುಖಿ ಜೀವನಶೈಲಿ, ಆಪ್ತ ಮಾತುಗಾರಿಕೆಗಳು ಕ್ರಮೇಣ ನನ್ನನ್ನು ಆಕರ್ಷಿಸಿದವು. ಎಂ.ಎ. ಮುಗಿಸಿ ಬಾಗಿಲುಕೋಟೆ ಬಸವೇಶ್ವರ ಕಾಲೇಜಕ್ಕೆ ಹೋಗಿ, ಧಾರವಾಡದ ಕರ್ನಾಟಕ ಕಾಲೇಜಿಗೆ ಬರುವಲ್ಲಿ ಅವರ ಸಂಪರ್ಕ ಒಂದಿಷ್ಟು ಗಾಢವಾಯಿತು. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬರುವಲ್ಲಿ ಅದು ಬಿಡಿಸಲಾರದ ನಂಟಾಗಿ ಬೆಳೆದು, ದಟ್ಟವಾಗಿ ಮುಂದುವರಿಯಿತು.

ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದ ಕಾಪಸೆ ನೌಕರಿ ಮಾಡುತ್ತಲೇ ಕಾಲೇಜು ಶಿಕ್ಷಣ ಮುಗಿಸಿದರು, ಸ್ನಾತಕೋತ್ತರ ಶಿಕ್ಷಣ ಮುಗಿಸಿದರು, ಪಿಎಚ್.ಡಿ. ಅಧ್ಯಯನವನ್ನೂ ಮುಗಿಸಿದರು. ಈ ಎಲ್ಲ "ಮುಗಿಸುವಿಕೆ"ಗಳನ್ನು ಅವರು ಪೂರೈಸಿದುದು, ನೌಕರಿಯ ಪದೋನ್ನತಿಗಾಗಿ ಅಲ್ಲ; ಜ್ಞಾನದ ಮೇಲಿನ ಅದಮ್ಯ ಪ್ರೀತಿಗಾಗಿ. ಹೀಗಾಗಿ ಹಲವು ಪದವಿಗಳನ್ನು ಕೊರಳಿಗೆ ಕಟ್ಟಿಕೊಂಡ ನಾಮಧಾರಿ ಪದವೀಧರರಾಗಿ ಅವರು ಉಳಿಯಲಿಲ್ಲ; ಸೃಜನಶೀಲ ಪ್ರಾಧ್ಯಾಪಕರಾಗಿ, ಪ್ರಭಾವಶಾಲಿ ವಾಗ್ಮಿಗಳಾಗಿ ಬೆಳೆದರು. ಸಾಮಾನ್ಯವಾಗಿ ಇಂಥ ಹಿನ್ನೆಲೆಯಿಂದ ಬಂದವರು ಶುಷ್ಕಪಂಡಿತರಾಗಿ ಬಿಡುತ್ತಾರೆ. ಇದಕ್ಕೆ ಅಪವಾದವೆಂಬಂತೆ ಕಾಪಸೆ ಅವರು ಒಳ್ಳೆಯ ವಿಮರ್ಶಕರಾಗಿ ಬೆಳೆದರು. ಆಧುನಿಕ ಪ್ರಜ್ಞೆಯ ಲೇಖಕರಾಗಿ ಪ್ರಸಿದ್ಧರಾದರು. ಅವರ ವೈಶಿಷ್ಟ್ಯವಿರುವುದು ಇಲ್ಲಿ; ಊರ್ಧ್ವಮುಖಿ - ವರ್ತಮಾನಮುಖಿ ಆಸಕ್ತಿಯಲ್ಲಿ.

ಡಾ. ಕಾಪಸೆ ಅವರದು ಭೌತಿಕ ಪ್ರಜ್ಞೆಗಿಂತ ಅಭೌತಿಕ ಪ್ರಜ್ಞೆಯ, ಆಧ್ಯಾತ್ಮಿಕ ಪ್ರಜ್ಞೆಯ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಬರೆವಣಿಗೆ ರೂಪಗೊಂಡಿದೆ. ಏನೇ ಬರೆಯಲಿ, ಅದಕ್ಕೆಲ್ಲ "ಆಧ್ಯಾತ್ಮವೆ ನಿಚಿತ ಪ್ರಯೋಜನ". ಹೀಗಾಗಿ ಅವರ ಬರೆವಣಿಗೆ ಕನ್ನಡದಲ್ಲಿ ಪಂಪಭಾರತ ಪರಂಪರೆಯದಲ್ಲ, ಆದಿಪುರಾಣ ಪರಂಪರೆಯದು. ಅವರ ಸಾಹಿತ್ಯದಲ್ಲಿ "ನವೋದಯ ಪ್ರಜ್ಞೆ" ಈಗಲೂ ಸ್ಥಾಯಿಯಾಗಿರುವುದು, ಈ ಕಾರಣಕ್ಕಾಗಿ.

ಹೀಗೆ ಆಧುನಿಕತೆ-ಆಧ್ಯಾತ್ಮಿಕತೆಗಳ ಸಮನ್ವಯವಾಗಿರುವ ಡಾ. ಕಾಪಸೆ ಅವರ ಮಾತುಗಾರಿಕೆಯಂತೆ ಬರೆಹಗಾರಿಕೆಯೂ ತುಂಬ ಆಕರ್ಷಕವಾದುದು. ಅದು ಲಲಿತವೂ ಹೌದು, ಹರಿತವೂ ಹೌದು. ಆದುದರಿಂದ ಭಾವುಕ - ವೈಚಾರಿಕವೆಂಬ ಎರಡು ಆಯಾಮಗಳು ಅದರ ಲಕ್ಷಣಗಳೆನಿಸಿವೆ. ಕ್ಲೀಷೆ ಅಂಟಿಕೊಳ್ಳದಂತೆ ಭಾಷೆಯನ್ನು ದುಡಿಸಿಕೊಂಡು, ದೂಡಿಸಿಕೊಂಡು ಬಂದುದೂ ಅವರ ಇನ್ನೊಂದು ವೈಶಿಷ್ಟ್ಯವೆನಿಸಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಕಾಪಸೆ ಅವರು ಮಾಡಿರುವ ದೊಡ್ಡ ಕೆಲಸವೆಂದರೆ, ಕಣ್ಮರೆಯಾಗುತ್ತಲಿದ್ದ ಹಲಸಂಗಿ ಗೆಳೆಯರ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿದ್ದು, ಇವರ ಪಿಎಚ್.ಡಿ. ಅಧ್ಯಯನ ವಿಷಯವೇ "ಮಧುರಚೆನ್ನ". ಬಳಿಕ ಇವರ ಮಾರ್ಗದರ್ಶನದಲ್ಲಿ ರೂಪಗೊಂಡ ಪಿಎಚ್.ಡಿ. ಪ್ರಬಂಧದ ವಿಷಯ "ಸಿಂಪಿ ಲಿಂಗಣ್ಣನವರ ಬದುಕು-ಬರಹ". ಇದಲ್ಲದೆ ಮಧುರಚೆನ್ನರ ಪ್ರಬಂಧಗಳ ಸಂಕಲನವಾದ "ಮಧುರಚೆನ್ನರ ಲೇಖನಗಳು", ಸೃಜನಶೀಲ ಗ್ರಂಥಗಳ ಸಂಕಲನವಾದ "ಆತ್ಮಶೋಧ" ಈ ಕೃತಿಗಳನ್ನು ಇವರು ಹೊರತಂದರು. ಹಲಸಂಗಿ ಗೆಳೆಯರಿಂದ ಪ್ರಕಟವಾಗಿದ್ದ ಜನಪದ ಸಂಕಲನಗಳನ್ನು "ಹಲಸಂಗಿ ಹಾಡು" ಹೆಸರಿನಲ್ಲಿ ಸಂಕಲಿಸಿಕೊಟ್ಟರು. ಇದರಿಂದಾಗಿ, ವಾಚಕರಿಂದ ದೂರ ಉಳಿದಿದ್ದ ಹಲಸಂಗಿ ಗೆಳೆಯರ ಕೃತಿಗಳು ಮತ್ತೆ ಒಂದು ತಲೆಮಾರು ಮರುಜೀವ ಪಡೆದವು.

ಡಾ. ಗುರುಲಿಂಗ ಕಾಪಸೆ ಅವರು ಹೆಸರಿಗೆ ತಕ್ಕಂತೆ ಗುರು, ಲಿಂಗ ಪ್ರಜ್ಞೆಯವರು. ಅಂದರೆ ಆತ್ಮಕೇಂದ್ರಿತ ವ್ಯಕ್ತಿತ್ವದವರಾಗಿದ್ದಾರೆ. "ಜಂಗಮ" ಕೇಂದ್ರಿತ ಪ್ರಜ್ಞೆಯ ವಿಸ್ತಾರಕ್ಕೆ ಅಂದರೆ ಸಾಮಾಜಿಕ ಚಟುವಟಿಕೆಗಳ

ಗೋಜಿಗೆ ಅವರು ಹೋಗುವುದು ವಿರಳ. ಹೀಗಿದ್ದೂ ಸ್ನೇಹಿತರ, ವಿದ್ಯಾರ್ಥಿಗಳ ಸಣ್ಣ ಪರಿವಾರವನ್ನು ರೂಪಿಸಿಕೊಳ್ಳುತ್ತ ಅವರು ಬೆಳೆದು ಬಂದಿದ್ದಾರೆ. ಈ ವಲಯದ ಸ್ನೇಹಿತರಿಗೆ ನೆರವಾಗುವ, ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗುವ ಕೆಲಸವನ್ನು ಮನಸಾ ಮಾಡುತ್ತ ಬಂದಿದ್ದಾರೆ. ಆತ್ಮಕೇಂದ್ರಿತ ಪ್ರಜ್ಞೆ ಕಾರಣವಾಗಿ ಎಡಬಲದ ಎಲ್ಲರನ್ನೂ ಸಂಭಾಳಿಸಿಕೊಂಡು ಹೋಗುವ, ಮರ್ಜಿ ಹಿಡಿಯುವ ಅಗತ್ಯ ಅವರಿಗೆ ಉದ್ಭವಿಸುವುದಿಲ್ಲ. ಹೀಗಾಗಿ ಸ್ವಾಭಿಮಾನ ಅವರಲ್ಲಿ ಮಡುಗಟ್ಟಿನಿಂತಿದೆ. ಅದಕ್ಕೆ ಧಕ್ಕೆ ಬಂದರೆ ಮೂಲತಃ ಕುಸುಮದಷ್ಟು ಕೋಮಲವಾಗಿರುವ ಅವರು, ವಜ್ರದಷ್ಟು ಕಠಿಣವಾಗುತ್ತಾರೆ.

ಈ ರೀತಿ ಬದುಕಿನ ಹಸನಾದ ಹಾದಿ, ಸಾಹಿತ್ಯದ ಗಣ್ಯ ಸಾಧನೆಗಳಿದ್ದರೂ, ಯಾವುದೇ ಜವಾಬ್ದಾರಿಯನ್ನು ನಿಭಾಯಿಸುವ ಸಾಮರ್ಥ್ಯ ಹೊಂದಿದ್ದರೂ, ಕಾಪಸೆ ಅವರು ಯಾವುದೇ ಸ್ಥಾನವನ್ನು ಅಪೇಕ್ಷಿಸಿದವರಲ್ಲ. ಅಕಾಡೆಮಿ, ಪ್ರಾಧಿಕಾರ ಇತ್ಯಾದಿ ಸಮಿತಿಗಳಿಂದ ಅವರು ಯಾವಾಗಲೂ ದೂರವೇ ಉಳಿದವರು. ಒಂದು ಸಮಿತಿಯಿಂದ ಇನ್ನೊಂದು ಸಮಿತಿಗೆ ಜಿಗಿಯುವ ಮಹನೀಯರನ್ನು ಕಂಡಾಗ, ಕಾಪಸೆಯವರಂಥ ಸಂತ ಮನೋಧರ್ಮದವರು ನಮ್ಮ ಮಧ್ಯ ಇರುವುದು ಒಂದು ವಿಸ್ಮಯವೆನಿಸುತ್ತದೆ.

ಅಂತರಂಗದ ರತ್ನ : ಡಾ. ಗುರುಲಿಂಗ ಕಾಪಸೆ ಅಭಿನಂದನ ಗ್ರಂಥ, ೨೦೦೧

ಆಕರ : ಮಾರ್ಗ ಸಂಪುಟ–೬

■■

೯೮

ಓದು ಬಂತು-ಬರೆಹ ಹೋಯ್ತು ಡುಂ! ಡುಂ!!

೨೦೦೨

ಲೇಖನ ಕಡಿಮೆ, ವಾಚನ ಹೆಚ್ಚು, ಚಿಂತನ ಇನ್ನೂ ಹೆಚ್ಚು. ಪ್ರೊ. ಎ. ಎಸ್. ಹಿಪ್ಪರಗಿ ಅವರನ್ನು ನೋಡಿದಾಗಲೆಲ್ಲ ಈ ಮಾತು ನೆನಪಾಗುತ್ತದೆ.

ಐವತ್ತು ವರ್ಷಗಳ ಹಿಂದಿನ ಕಥೆ. ವಿಜಾಪುರ ಜಿಲ್ಲೆಯಲ್ಲಿ ಉನ್ನತ ಶಿಕ್ಷಣದ ಸೌಲಭ್ಯಗಳಿರಲಿಲ್ಲ, ಆ ಶಿಕ್ಷಣಕ್ಕೆ ತಕ್ಕ ನೌಕರಿಯ ಅವಕಾಶಗಳೂ ಇರಲಿಲ್ಲ. ಹೀಗಾಗಿ ಅಂಥ ಶಿಕ್ಷಣ ಕಲಿಯಲು ಈ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ, ಆಮೇಲೆ ಧಾರವಾಡಕ್ಕೆ ಹೋದ ವಿದ್ಯಾರ್ಥಿಗಳು ಮುಂದೆ ನೌಕರಿಗಾಗಿ ಶಾಶ್ವತವಾಗಿ ಹೋಗಿಯೇ ಬಿಡುತ್ತಿದ್ದರು. ಇದರಿಂದಾಗಿ ಉನ್ನತ ಶಿಕ್ಷಣದವರು ಹೊರಗೆ ಹೋಗುವುದು, ಉಳಿದ ಸುಶಿಕ್ಷಿತರು ಶಿಕ್ಷಕರಾಗಿ ಒಳಗೆ ಉಳಿಯುವುದು, ಇಲ್ಲಿ ವ್ಯವಸ್ಥೆಯಾಗಿಬಿಟ್ಟಿದ್ದಿತು.

ಹೀಗೆ ಈ ಜಿಲ್ಲೆಯಲ್ಲಿ ಉಳಿಯುತ್ತಲಿದ್ದ, ಬೆಳೆಯುತ್ತಲಿದ್ದ ಶಿಕ್ಷಕ ಸಮುದಾಯಕ್ಕೆ ಆರಂಭದಲ್ಲಿ ಸಾಹಿತ್ಯಿಕ ಸಂಸ್ಕಾರ ನೀಡಿದವರು ಹಲಸಂಗಿ ಗೆಳೆಯರು. ಇವರ ಸಹಯೋಗ, ಸಂಪರ್ಕ ಕಾರಣವಾಗಿ, ಕೆಲವು ಶಿಕ್ಷಕರು ಸಾಹಿತ್ಯಿಕ ಒಲವನ್ನು, ಬಲವನ್ನು ಬೆಳೆಸಿಕೊಂಡರು. ಇಂಥ ತಲೆಮಾರುಗಳಿಂದಾಗಿ, ಶಿಕ್ಷಕ ಸಾಹಿತಿಗಳ ಒಂದು ವಿಶಿಷ್ಟ ಸಾಹಿತ್ಯಪರಂಪರೆಯೇ ಈ ಜಿಲ್ಲೆಯಲ್ಲಿ ಹುಟ್ಟುತ್ತ ಬೆಳೆಯುತ್ತ ಬಂದಿತು. ಈ ಪರಂಪರೆಯಲ್ಲಿ ತುಂಬ ಭಿನ್ನರಾದವರು ಪ್ರೊ. ಹಿಪ್ಪರಗಿ ಅವರು. ಇದನ್ನು ನಾನು ಚಿಂತನಶೀಲ ಭಿನ್ನತೆಯೆಂದು ಗುರುತಿಸುತ್ತೇನೆ. ಈ ಭಿನ್ನತೆಗೆ ಪ್ರೇರಣೆ ಇವರಿಗೆ ಯಾವ ಮೂಲೆಯಿಂದ ಪ್ರಾಪ್ತವಾಯಿತೋ ನನಗೆ ಗೊತ್ತಿಲ್ಲ. ಯಾವುದೇ ವಿಷಯವನ್ನು ಸರಿಯಾದ ನಿಟ್ಟಿನಿಂದ ನೋಡುವ, ಸಮಗ್ರವಾಗಿ ವ್ಯಾಖ್ಯಾನಿಸುವ ವ್ಯಕ್ತಿತ್ವ ಇವರದಾಗಿದೆ. ಹೀಗಾಗಿ ಮಕ್ಕಳಸಾಹಿತ್ಯ ರಚನೆ, ಬಹಳೆಂದರೆ ಭಾವನಿಷ್ಠ ಬರೆವಣಿಗೆಗಳಿಗೆ ಸೀಮಿತರಾಗಿರುವ ಇಲ್ಲಿಯ ಶಿಕ್ಷಕ ಸಮುದಾಯದಲ್ಲಿ ಇವರು ಒಡೆದು ಕಾಣುತ್ತಾರೆ.

ಉನ್ನತಶಿಕ್ಷಣದಿಂದ ವಂಚಿತರಾದ ಶಿಕ್ಷಕರಿಗೆ ಸರಕಾರ ಅವಕಾಶ ಕಲ್ಪಿಸಿಕೊಟ್ಟ ಸಂದರ್ಭ. ಆಗ ವಿಜಾಪುರ ಜಿಲ್ಲೆಯಿಂದ ಎಂ.ಎ. ಓದಲು ಪ್ರಾಥಮಿಕ - ಮಾಧ್ಯಮಿಕ ಶಿಕ್ಷಕರ ದಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಧಾವಿಸಿತು. ಇದರ ಭಾಗವಾಗಿ ಕನ್ನಡ ಎಂ. ಎ. ಓದಲು ಧಾರವಾಡಕ್ಕೆ ಬಂದ ಸಂದರ್ಭದಲ್ಲಿ ಶ್ರೀ ಹಿಪ್ಪರಗಿ ಅವರ ಪರಿಚಯ ನನಗಾಯಿತು. ಅವರು ನಮ್ಮ ಜಿಲ್ಲೆಯ ಆದರ್ಶ ಶಿಕ್ಷಕರೆಂದು ಖ್ಯಾತರಾದುದು ಈ ಮೊದಲೇ ನನ್ನ ಗಮನಕ್ಕೆ ಬಂದಿದ್ದಿತು. ಬಹುಶಃ ತಾಳಿಕೋಟೆಯ ಅವರ ವಿದ್ಯಾರ್ಥಿಗಳು, ನನ್ನ ಸಹಪಾಠಿಗಳು ಇದನ್ನು

ನನ್ನ ಮನದಲ್ಲಿ ಸ್ಥಾಪಿಸಿದ್ದರೆಂದು ಕಾಣುತ್ತದೆ. ಕನ್ನಡ ಅಧ್ಯಯನ, ವಿಜಾಪುರ ಜಿಲ್ಲೆ - ಈ ಎರಡು ಕಾರಣಗಳಿಂದಾಗಿ ಧಾರವಾಡದಲ್ಲಿ ನಮ್ಮಿಬ್ಬರ ಸ್ನೇಹ ವರ್ಧಿಸಿತು. ಹೀಗಿದ್ದೂ ಒಂದು ನಿರ್ದಿಷ್ಟ ಅಂತರದಲ್ಲಿಯೇ ನಾವು ಇದ್ದೆವು. ಈಗಲೂ ಅನೇಕ ಕಾರಣಗಳಿಂದಾಗಿ ಅದೇ ಅಂತರ ಉಳಿದು ಬಂದಿದ್ದರೂ, ಪರಸ್ಪರ ಪ್ರೀತಿ-ಬೆರಗುಗಳಿಂದ ನಾವಿಬ್ಬರೂ ಬೆಳೆದಿದ್ದೇವೆ.

ಪ್ರಾಥಮಿಕ ಶಾಲೆಯಲ್ಲಿ ಹಲವು ವರ್ಷ ಸೇವೆ ಸಲ್ಲಿಸಿ ಎಂ. ಎ. ಓದಲು ಬಂದಿದ್ದ ಶ್ರೀ ಹಿಪ್ಪರಗಿ ಅವರು ವಯಸ್ಸಿನಲ್ಲಿ ನನಗಿಂತ ಹಿರಿಯರು. ಓದಿನಲ್ಲಿ ಒಂದು ವರ್ಷ ಕಿರಿಯರು. ಇವರು ಎಂ. ಎ. ಓದುತ್ತಲಿದ್ದ, ನಾನು ಅದೇ ಆಗ ಕರ್ನಾಟಕ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದ ಪ್ರಸಂಗ. ಶಬ್ದಮಣಿ ದರ್ಪಣ ವಿದ್ವತ್ತಿನ ಮಾನದಂಡವಾಗಿದ್ದ ಕಾಲವದು. ಈ ಕೃತಿಯ ಬಗ್ಗೆ ಇಬ್ಬರಿಗೂ ಆಳವಾದ ಪ್ರೀತಿ. "ಕ್ಷಳಸೂತ್ರ" ಈ ವ್ಯಾಕರಣ ಗ್ರಂಥದ ಒಂದು ಮಹತ್ವದ ರಚನೆ. ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ ಒಬ್ಬರು ಈ ಸೂತ್ರವನ್ನು ಹಿಗ್ಗಾ ಮುಗ್ಗಾ ಎಳೆದು ಲೇಖನವೊಂದನ್ನು ಬರೆದು ಪ್ರಕಟಿಸಿದ್ದರು. ಅಧ್ಯಾಪಕನಾಗಿದ್ದ ನನಗೆ ಉತ್ತರಿಸಿದ ಹೊರತು ಸಮಾಧಾನವಿರಲಿಲ್ಲ. ಲೇಖನ ಸಿದ್ಧಪಡಿಸಿದೆ. ಈವರೆಗೆ ಯಾರೂ ಹೇಳದ ಅರ್ಥ ಹೇಳಿದ್ದೇನೆಂಬ ತಿಳಿವಳಿಕೆ ನನ್ನದಾಗಿದ್ದಿತು. ಆಕಸ್ಮಿಕ ಭೆಟ್ಟಿಯಾದ ಶ್ರೀ ಹಿಪ್ಪರಗಿ ಅವರ ಮುಂದೆ ಈ ಸೂತ್ರದ ಬಗ್ಗೆ ಪ್ರಸ್ತಾಪಿಸುತ್ತಲೇ, ತಮ್ಮ ಅಭಿಪ್ರಾಯ ಹೇಳಿದರು. ಅದು ನನ್ನ ಅಭಿಪ್ರಾಯವೇ ಆಗಿದ್ದಿತು. ಅಂದರೆ ನನಗಿಂತ ಮೊದಲೇ ಅವರು ನನ್ನ ಅರ್ಥವನ್ನು ಕಂಡುಕೊಂಡಿದ್ದರು. ಅಂದಿನಿಂದ ಈ ಆದರ್ಶ ಶಿಕ್ಷಕರ ವಿದ್ವತ್ತಿನ ಬಗ್ಗೆ ನನ್ನ ಗೌರವ ಇನ್ನೂ ವರ್ಧಿಸುತ್ತ ನಡೆಯಿತು.

ಪ್ರೊ. ಹಿಪ್ಪರಗಿ ಅವರು ಒಂದು ಸಭೆಯಲ್ಲಿ ನನ್ನ ಪರಿಚಯ ಭಾಷಣ ಮಾಡಿದರು. ನಾನು ಇರುವುದಾದರೂ ಏನು? ಎಂಬುದು ನನಗೇ ಮನವರಿಕೆಯಾಗುವಂತಿತ್ತು, ಅವರ ಮಾತು. ಇನ್ನೊಮ್ಮೆ ಬಸವಣ್ಣನವರ ಬಗ್ಗೆ ಅತಿಥಿ ಭಾಷಣಕಾರರಾಗಿ ಮಾತನಾಡಿದರು. ಬಸವಣ್ಣನವರ ಉದ್ದ-ಅಗಲ -ಆಳಗಳನ್ನು ಅಳತೆ ಮಾಡಿದಂತೆ, ಸಾಹಿತ್ಯ ಶೈಲಿಗಿಂತ ಭಿನ್ನವಾಗಿ, ಶಾಸ್ತ್ರಶೈಲಿಯಲ್ಲಿ ಮಾತನಾಡಿದರು.

ನನ್ನ ವಿದ್ಯಾರ್ಥಿ ಶ್ರೀ ರಮಜಾನ ದರ್ಗಾ ಪ್ರೊ. ಹಿಪ್ಪರಗಿ ಅವರ ವಿದ್ಯಾರ್ಥಿಯೂ ಹೌದು. ಎಡಪಂಥೀಯ ಈ ನನ್ನ ವಿದ್ಯಾರ್ಥಿಯ ವಿಚಾರಗಳ ಬಗ್ಗೆ ನನಗೆ ಆಶ್ಚರ್ಯ. ಇಂಥವನೇ ಪ್ರೊ. ಹಿಪ್ಪರಗಿ ಅವರ ಬಗ್ಗೆ ತೋರಿಸುತ್ತಲಿರುವ ಗೌರವ ಕಾರಣವಾಗಿ, ಅವರ ಬಗೆಗಿನ ನನ್ನ ಮೆಚ್ಚುಗೆ ಹೆಚ್ಚುತ್ತಲೇ ನಡೆಯಿತು.

ಇಷ್ಟೆಲ್ಲ ವಿದ್ವಾಂಸರಿದ್ದೂ ಪ್ರೊ. ಹಿಪ್ಪರಗಿಯವರು ಬರೆಯಲಿಲ್ಲವೆನ್ನುವಷ್ಟು ಬರೆದಿದ್ದಾರೆ. ಇದಕ್ಕೆ ಕಾರಣಗಳು ಎರಡು. ಯಾವುದೇ ಹವ್ಯಾಸ ರಕ್ತಗತವಾಗುವುದು ಸಣ್ಣ ವಯಸ್ಸಿನಲ್ಲಿ. ಮುಂದಿನ ದಿನಗಳಲ್ಲಿ ಅದು ಮೈಗೂಡುವುದು ಕಠಿಣ. ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಕಾಡುಹಳ್ಳಿಗಳಲ್ಲಿದ್ದ ಇವರು ಸಹಜವಾಗಿಯೇ ಬರೆವಣಿಗೆ ಪ್ರಕಟನೆಗಳಿಂದ ವಂಚಿತರಾದರು. ಎಂ. ಎ. ಮುಗಿಸಿ ವಿಜಾಪುರದಂಥ ಜಿಲ್ಲಾಕೇಂದ್ರದಲ್ಲಿ ನೆಲೆನಿಂತರೇನೋ ನಿಜ. ಆದರೆ ಸಮಾನಧರ್ಮೀಯ ಪ್ರಾಧ್ಯಾಪಕರ ಕೊರತೆಯಿಂದ ಏಕಾಕಿತನ ಅನುಭವಿಸಿದರು. ವಾಚನ, ತಪ್ಪಿದರೆ ಚಿಂತನಗಳ ಗವಿ ಸೇರಿದರು.

ತೀ. ನಂ. ಶ್ರೀ. ಹೇಳುವಂತೆ, "ಓದು ಬರೆಹದ ವೈರಿ" ಎಂಬುದು ಪ್ರೊ. ಹಿಪ್ಪರಗಿ ಅವರ ವಿಷಯದಲ್ಲಿ ನಿಜವಾಯಿತು. ಅವರೇ ಹೇಳುವಂತೆ "ಓದು ಬಂತು, ಬರೆಹ ಹೋಯ್ತು ಡುಂ! ಡುಂ!!"

ದೀಪಸ್ತಂಭ : ಪ್ರೊ. ಎ.ಎಸ್.ಹಿಪ್ಪರಗಿ ಅಭಿನಂದನ ಗ್ರಂಥ, ೨೦೦೨.

ಆಕರ : ಮಾರ್ಗ ಸಂಪುಟ-೬

■■

೯೯

ನನ್ನ ಶಕ್ತಿ

೨೦೦೩

ಒಳಗೆ ಜೀವಂತವಾಗಿರುವ ಮೂಲಕ ನನ್ನನ್ನು ದಿನವೂ ತಿದ್ದುತ್ತಲಿರುವ, ಬೆಳೆಸುತ್ತಲಿರುವ ವಿದ್ಯಾಗುರುಗಳಲ್ಲಿ ಪ್ರೊ. ಬಿ. ಟಿ. ಸಾಸನೂರ ಮುಖ್ಯರೆನಿಸಿದ್ದಾರೆ.

೧೯೫೬. ಗ್ರಾಮೀಣ ವಿದ್ಯಾರ್ಥಿಯಾಗಿದ್ದ ನಾನು ಕಾಲೇಜು ಓದಲು ವಿಜಾಪುರಕ್ಕೆ ಬಂದ ಸಂದರ್ಭ. ಪಟ್ಟಣದ ಪರಿಸರ, ಹುಸಿ ಪ್ರತಿಷ್ಠೆಯ ಸಹಪಾಠಿಗಳು, ಇಂಗ್ಲೀಷ್ ಮಾಧ್ಯಮದ ಬೋಧನೆ. ಈ ಹೊಸ ವಾತಾವರಣದಲ್ಲಿ ಪರಕೀಯ ಪ್ರಜ್ಞೆಯಿಂದ ಬಳಲುತ್ತಲಿದ್ದ ನನಗೆ ಕನ್ನಡ ಪಾಠ, ಅದರಲ್ಲಿಯೂ ಬಿ.ಟಿ. ಸಾಸನೂರ ಅವರ ಪಾಠ ಮರಭೂಮಿಯ ತಂಗಾಳಿಯೆನಿಸಿದ್ದಿತು.

ಕನ್ನಡವೆಂದರೇನು? ಕನ್ನಡ ವಿದ್ವಾಂಸನಾಗಿ ಬೆಳೆಯುವುದು ಹೇಗೆ? ಎಂಬುದನ್ನು ತಿಳಿಸಿಕೊಡುವ, ತೋರಿಸಿಕೊಡುವ ಬೋಧನಕ್ರಮ ಬಿ. ಟಿ. ಯವರದಾಗಿದ್ದಿತು. ಹೀಗಾಗಿ ಅವರ ಕ್ಲಾಸಿನಲ್ಲಿ ನಾನು ದಿನವೂ ಮರುಹುಟ್ಟು ಪಡೆಯುತ್ತಲಿದ್ದೆ.

ಮೊದಲ ವರ್ಷದ ವಿದ್ಯಾರ್ಥಿ. 'ಭೇದ' ಶಬ್ದದಲ್ಲಿ ಯಾವ ಅಕ್ಷರ ಮಹಾಪ್ರಾಣ? ಎಂಬುದು ನನ್ನನ್ನು ಕಾಡುತ್ತಲಿದ್ದಿತು. ಬರೆಯುವಾಗ ಈ ಶಬ್ದ ಬರುತ್ತಲೇ ಕೈ ನಡುಗುತ್ತಿತ್ತು. ಸ್ಪಷ್ಟನೆಗಾಗಿ ಗುರುಗಳನ್ನು ಕೇಳುವುದೆಂದರೆ ನನ್ನ ಅಜ್ಞಾನ ಪ್ರದರ್ಶನ. ಹೀಗಿದ್ದೂ ಈ ಗೊಂದಲದಿಂದ ಮುಕ್ತನಾಗಲು ನಿರ್ಧರಿಸಿ, ಒಮ್ಮೆ ಕೇಳಿಯೇ ಬಿಟ್ಟೆ. ನನ್ನಲ್ಲಿ ಅವರು ಅಜ್ಞಾನವನ್ನು ಕಾಣಲಿಲ್ಲ, ಜಿಜ್ಞಾಸೆಯನ್ನು ಗುರುತಿಸಿದರು. "ಇದು ಬಹಳ ಜನರನ್ನು ಕಾಡುವ ಶಬ್ದ. ಯಾವುದೇ ಶಬ್ದದ ನಿಜರೂಪ ತಿಳಿಯಲು ನಿಷ್ಪತ್ತಿಯ ಬಗ್ಗೆ ವಿಚಾರಿಸಬೇಕು. ಭೇದ ಇದರ ಪ್ರಕೃತಿ 'ಭಿದ್', ಇಷ್ಟು ಗೊತ್ತಿದ್ದರೆ ಸಾಕು. ಭೇದ, ಪ್ರಭೇದ, ಅಭೇದ, ವಿಭೇದ, ಭೇದಾಭೇದ ಇತ್ಯಾದಿಗಳನ್ನೆಲ್ಲ ಸರಿಯಾಗಿ ಬರೆಯಬಹುದು" ಎಂದು ಹೇಳುವ ಮೂಲಕ, ಶಬ್ದಶುದ್ಧಿಯನ್ನು ನಿರ್ಣಯಿಸುವ ಹೊಸ ದೃಷ್ಟಿಕೋನವನ್ನು ನನ್ನಲ್ಲಿ ಮೂಡಿಸಿದರು. ಹೀಗಾಗಿ 'ಭೇದ' ಮತ್ತು ಅದರ ಸಾಧಿತ ರೂಪಗಳನ್ನು ಬರೆಯುವಾಗ ಮತ್ತು ಸಂದೇಹ ಹುಟ್ಟಿಸುವ ಈ ಬಗೆಯ ಸದ್ಯ, ದಾರ್ಢ್ಯ, ಬೀಭತ್ಸ, ಧುರಂಧರ, ಷಷ್ಟಿಪೂರ್ತಿ, ಮದ್ಯಪಾನ ಶಬ್ದಗಳನ್ನು ಬರೆಯುವಾಗ ಈಗಲೂ ಬಿ. ಟಿ. ಯವರೇ ನನ್ನ ನೆನಪಿಗೆ ಬರುತ್ತಾರೆ. ಆಮೇಲೆ ನಾನು ಕಾಲೇಜು-ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಪಕನಾದರೂ ಶಬ್ದಸಂದೇಹ ಉದ್ಭವಿಸಿದಾಗಲೆಲ್ಲ ಭೇಟಿಯ ಮೂಲಕ, ಸಾಧ್ಯವಾಗದಿದ್ದರೆ ಪತ್ರವ್ಯವಹಾರ-ದೂರವಾಣಿಗಳ ಮೂಲಕ ಅವರೊಂದಿಗೆ ಚರ್ಚಿಸಿ,

ಶಬ್ದಶುದ್ಧಿಯನ್ನು ವರ್ಧಿಸಿಕೊಳ್ಳುತ್ತ ಬೆಳೆದಿದ್ದೇನೆ. ವಿಶ್ವಸ್ಥ-ವಿಶ್ವಸ್ತಗಳಲ್ಲಿ ಎರಡನೆಯದೇ ಸರಿಯಾದ ರೂಪವೆಂದು, ಡಾ. ಚಿದಾನಂದ ಮೂರ್ತಿಯವರ ಗ್ರಂಥದ 'ಛಂದೋತರಂಗ' ಶೀರ್ಷಿಕೆ ಅಪಪ್ರಯೋಗವೆಂದು ಹೇಳುವಲ್ಲಿ ಅವರು ಆಧಾರವಾಗಿ ಹಿಡಿದ ವ್ಯಾಕರಣ ನಿಯಮ, ನೀಡಿದ ಸಮಾನ ಪ್ರಯೋಗಗಳು ನನಗೆ ಇಂದಿಗೂ ನೆನಪಿನಲ್ಲಿವೆ. ಒಟ್ಟಾರೆ ಶಬ್ದರೂಪಗಳು ಕಾಡಿದಾಗ, ನನಗೆ ಇಂದಿಗೂ ಪರಮಪ್ರಮಾಣ ಬಿ. ಟಿ. ಯವರ ತೀರ್ಪು.

ಬಿಜಾಪುರದಲ್ಲಿ ನಾಗಚಂದ್ರನನ್ನು ಕುರಿತು ಸಾಹಿತ್ಯ ಪರಿಷತ್ತು ವಿಚಾರ ಸಂಕಿರಣ ಹಮ್ಮಿಕೊಂಡಿದ್ದಿತು. ದೊಡ್ಡ ದೊಡ್ಡ ವಿದ್ವಾಂಸರ ಸಮಾವೇಶ. ಆಗ ಬಾಬಾನಗರ ಶಾಸನಪದ್ಯದ ಛಂದಸ್ಸಿನ ಬಗ್ಗೆ ಬಿ. ಟಿ. ಅವರು ಆಡಿದ ಮಾತು, ನೀಡಿದ ಸಮರ್ಥನೆ, ವಿದ್ವಾಂಸರು ಬೆರಗಾಗುವಂತೆ ಮಾಡಿತು. ಛಂದೋವಿದ್ವಾಂಸರಾದ ಡಾ. ವೆಂಕಟಾಚಲಶಾಸ್ತ್ರಿಗಳು ಬಿ. ಟಿ. ಅವರ ಬಗ್ಗೆ ಮಾತನಾಡುವಾಗಲೆಲ್ಲ, ಈ ಪ್ರಸಂಗವನ್ನು ಈಗಲೂ ನೆನಪಿಸಿಕೊಳ್ಳುತ್ತಾರೆ.

ಬಿ.ಟಿ. ಯವರು ನಾನೂ ಸೇರಿ ಶಬ್ದ ಮಣಿದರ್ಪಣವನ್ನು ಸಂಪಾದಿಸಿದ್ದೇವೆ. ಅನವಶ್ಯ ಭಾಗವನ್ನು ತೆಗೆದುಹಾಕಿ, ಸಂದೇಹಗಳನ್ನು ನಿವಾರಿಸಿ, ಪಠ್ಯಕ್ಕೆ ಸಂಗ್ರಹ ಮತ್ತು ಸತ್ಯಗಳ ಶಿಸ್ತು ತಂದುಕೊಟ್ಟಿದ್ದೇವೆ. ಪ್ರಕಟವಾದ ಹೊಸದರಲ್ಲಿ ಇದರ ಒಂದು ಪ್ರತಿಯನ್ನು ವ್ಯಾಕರಣ ವಿದ್ವಾಂಸರಾದ ಡಾ. ವೆಂಕಟಾಚಲಶಾಸ್ತ್ರಿ ಅವರ ಕೈಯಲ್ಲಿಟ್ಟೆ. ತಕ್ಷಣ ಅವರು ಎಲ್ಲರನ್ನೂ ಕಾಡುತ್ತಿದ್ದ ಒಂದು ಜಟಿಲಸೂತ್ರ ಹುಡುಕಿ, ಅದರ ಮೇಲೆ ಕಣ್ಣಾಡಿಸುತ್ತಿರುವಾಗಲೇ "ಬಿ. ಟಿ. ಯವರು ಕೈಯಾಡಿಸಿದ್ದಾರೆ" ಎಂದು ಎಚ್ಚರಿಸಿದೆ. ಆ ಸೂತ್ರದ ಪಾಠನಿರ್ಣಯ, ಅರ್ಥವಿವರಣೆಗೆ ಅವರು ಖುಷಿಪಟ್ಟರು.

ನಾವು "ಶಬ್ದಮಣಿ ದರ್ಪಣ" ಸಂಗ್ರಹಿಸುತ್ತಲಿದ್ದ ಸಂದರ್ಭ. ನನಗೆ ತಿಳಿದಂತೆ ಸಂಗ್ರಹಿಸಿದೆ. ಹೊಳೆದಂತೆ ಹೊಸಗನ್ನಡ ವೃತ್ತಿ ಬರೆದೆ. ಲೋಕಸೇವಾ ಆಯೋಗದ ಸದಸ್ಯರಾಗಿದ್ದ ಬಿ. ಟಿ. ಯವರಿಗೆ ಬಿಡುವಿರಲಿಲ್ಲ. ಒಂದು ವಾರ ಬೆಂಗಳೂರಿನಲ್ಲಿ ಅವರ ಜೊತೆ ಕಾಲಕಳೆಯಬೇಕಾಯಿತು. ಹಗಲು-ರಾತ್ರಿ ಚರ್ಚೆ, ತಿದ್ದುಪಡಿ. ಆಗ "ಶಾಸ್ತ್ರಶಿಸ್ತು" ಎಂದರೇನು?ಎಂಬುದು ನನಗೆ ಗೊತ್ತಾಯಿತು. "ಚೆನ್ನಾಗಿ ಬರೆಯುವುದು ಬೇರೆ-ಸರಿಯಾಗಿ ಬರೆಯುವುದು ಬೇರೆ" ಎಂಬ ತರಬೇತಿಯೂ ನನಗೆ ಪ್ರಾಪ್ತವಾಯಿತು. ನಾನು ಬರೆದ ಅರ್ಥಗಳಿಗೆ ಮೆಚ್ಚುಗೆ ಸೂಚಿಸುತ್ತ, ಮಧ್ಯ ಮಧ್ಯ ನನ್ನ ವಾದವನ್ನು ಮೃದುವಾಗಿ ಮುರಿಯುತ್ತ, ಕೆಲವೊಮ್ಮೆ ತಮ್ಮ ಸೋಲನ್ನ ಒಪ್ಪಿಕೊಳ್ಳುತ್ತಲಿದ್ದ ಆ ದಿನಗಳು ವಿದ್ವತ್ತಿನ ಕ್ರೀಡೆಯಂತೆ ಕಳೆದವು. "ಜ್ಞಾನದ ಮುಂದೆ ಯಾರೂ ದೊಡ್ಡವರಲ್ಲ" ಎಂಬ ಅವರ ನಿಲುವು, ಈ ಮೊದಲು ವಿಜಾಪುರ ಕಾಲೇಜು ದಿನಗಳಲ್ಲಿಯೇ ನನ್ನ ಗಮನಕ್ಕೆ ಬಂದಿದ್ದಿತು.

ಎರಡನೆಯ ವರ್ಷದ ಕ್ಲಾಸು. ಕಾವ್ಯಮಂಜರಿ ಪಠ್ಯದ "ಬಿಜ್ಜಮಹಾದೇವಿ ತ್ರಿಪದಿ" ಕಲಿಸುತ್ತಿದ್ದರು.

> ರಂಜಣಗಿ ಅಗ್ಗವಣಿ। ಮಂಜು ಹರಿಯಲು ಕಾಸಿ
> ನಂಜುಂಡ ನಿನ್ನ ಎರದೇನು। ಮಗನಾಗು
> ಕೆಂಚೆಡೆಯ ಹಿಕ್ಕಿ ಹೆಡಸೊಗೆದು ॥

ಸ್ಫುಟವಾಗಿ ಓದುಗುವು, ನಿರ್ದಿಷ್ಟ ಅರ್ಥ ಹೇಳುವುದು, ಅನ್ವಯಿಕ ವಿಮರ್ಶಾ ಮಾದರಿಯಲ್ಲಿ ಎಲ್ಲ ಮಗ್ಗಲುಗಳಿಂದ ವ್ಯಾಖ್ಯಾನಿಸುವುದು - ಇದು ಬಿ. ಟಿ. ಯವರ ಬೋಧನ ಪದ್ಧತಿ. ಓದಿನ ಗತ್ತಿನಲ್ಲಿಯೇ ಅರ್ಥ ಮತ್ತು ಅರ್ಥಪರಂಪರೆಗಳು ಅವತರಿಸುತ್ತಿದ್ದವು. ಆಮೇಲೆ ಐತಿಹಾಸಿಕ, ತೌಲನಿಕ ಇತ್ಯಾದಿ ಕ್ರಮಗಳನ್ನು

ಅನ್ವಯಿಸಿ ಮಾತನಾಡತೊಡಗಿದರೆ ಪ್ರತಿ ನಿಮಿಷವೂ ಹೊಸ ಸಂಸ್ಕಾರ. ಬೆಲ್ ಬಾರಿಸಿದಾಗಲೇ ವಿದ್ಯಾರ್ಥಿಗಳಿಗೆ ಸ್ವಪ್ನಭಂಗದ ಅನುಭವ. ಮೇಲಿನ ಪದ್ಯದ "ಅಗ್ಗವಣಿ ಮಂಜು ಹರಿಯಲು ಕಾಸಿ" ಎಂಬುದಕ್ಕೆ "ತಂಪು ನೀಗಿ ಬೆಚ್ಚಗಾಗುವಂತೆ ನೀರು ಕಾಸಿ" ಎಂದು ಅರ್ಥ ಹೇಳಿದರು, ವಿದ್ಯಾರ್ಥಿಯಾಗಿದ್ದ ನಾನು "ಸರ್, ಹಳ್ಳಿಯಲ್ಲಿ ಅರುಣೋದಯಕ್ಕೆ ಪರ್ಯಾಯವಾಗಿ ಮಂಜು ಹರಿಯುವುದು ಶಬ್ದ ಬಳಸುತ್ತಾರೆ. ನಸುಕಿನಲ್ಲಿಯೇ ನೀರನ್ನು ಕಾಸಿ ಕೂಸನ್ನು ಎರೆಯುವ ಅರ್ಥ ಇಲ್ಲಿರಬಹುದೆ?" ಎಂದು ಕೇಳಿದೆ. ವಿದ್ಯಾರ್ಥಿಗಳು ನನ್ನನ್ನೇ ನೋಡತೊಡಗಿದರು. ಗುರುಗಳು "ಸೋತವರು ತಾವಲ್ಲ, ಗೆದ್ದವನು ನಾನು" ಎಂಬ ಘನತೆಯಿಂದ ನನ್ನನ್ನು ನೋಡಿದರು, "ಇದು ತ್ರಿಪದಿ, ಗ್ರಾಮೀಣ ಬಂಧ. ಗ್ರಾಮೀಣ ನುಡಿಗಟ್ಟು ಬಳಸಿರುವಂತಿದೆ. ಸರಿಯಾದ ಅರ್ಥ. . ." ಎಂದು ಮುಂತಾಗಿ ವಿವರಣೆ ನೀಡಿ, ಪ್ರೋತ್ಸಾಹಿಸಿದರು. ಮುಂದೆಯೂ ಭೆಟ್ಟಿಯಾದಾಗಲೆಲ್ಲ ನಾನು ಗೆದೆಯಬೇಕೆಂದೇ, ಗೆದೆಯುವ ತರಬೇತಿ ಪಡೆಯಬೇಕೆಂದೇ ಪದೇ ಪದೇ ನನ್ನನ್ನು ಭಾಷಿಕವಾಗಿ, ಸಾಹಿತ್ಯಿಕವಾಗಿ ಕೆಣಕುತ್ತಿದ್ದರು. ಕ್ವಚಿತ್ತಾಗಿ ಭಿನ್ನಮತ ತಾಳುತ್ತಿದ್ದರೂ ಸಹಮತಕ್ಕೆ ಬರುತ್ತಿದ್ದುದೇ ಹೆಚ್ಚು.

ಹೀಗೆ ಕೇವಲ ಬೋಧಕರಾಗದೆ, ಪ್ರೇರಕರೂ ಆಗಿದ್ದ ನನ್ನ ಗುರುಗಳು ಕೆಳಗಿನ ವರ್ಗಗಳಿಗೆ ಪ್ರಾಚೀನ ಪಠ್ಯಗಳನ್ನು, ಮೇಲಿನ ವರ್ಗಗಳಿಗೆ ಮೂಲಭೂತ ವಿಷಯಗಳಾದ ವ್ಯಾಕರಣ, ಅಲಂಕಾರ, ಛಂದಸ್ಸುಗಳನ್ನು ಕಲಿಸುತ್ತಿದ್ದರು. ಅವರು ಪಾಠಮಾಡಿದ ಹರಿಹರನ ರಗಳೆ, ಕುಮಾರವ್ಯಾಸ ಭಾರತಗಳು ಅಂದೇ ನನ್ನಲ್ಲಿ ಏಕಜೀವವಾಗಿಬಿಟ್ಟವು. "ಅಳಿ ಎರಗದ, ಅನಿಲನಲುಗದ, ರವಿಕರಂ ಪುಗದ" ಈ ವಾಕ್ಯಗಳನ್ನು ಓದಿದ ಗತ್ತು ನನ್ನ ಕಣ್ಣು-ಕಿವಿಗಳಲ್ಲಿ ಇನ್ನೂ ತುಂಬಿಕೊಂಡಿವೆ. ಗೋವಿಂದ ಪೈಗಳ 'ಗೊಲ್ಗೊಥಾ' ಏಸುವಿನ ಕೊನೆಯ ದಿನಗಳನ್ನು ಚಿತ್ರಿಸಿದ ಕೃತಿ. ಇದರ ಬೋಧನೆಗಾಗಿ ಅವರು ಬೈಬಲ್ ಅಭ್ಯಾಸ ಮಾಡಿದ್ದರೆಂಬುದು ಇಂದಿನ ಶಿಕ್ಷಕರು ನಂಬಲಾಗದ ವಿಷಯ.

ಭಾಷೆ, ಭಾಷೆಯ ಉತ್ಪಾದನೆಯಾಗಿರುವ ಸಾಹಿತ್ಯ, ಸಾಹಿತ್ಯದ ಭಾಗವಾಗಿರುವ ಪದ್ಯಗಳ ಸ್ವರೂಪ-ಸ್ವಭಾವಗಳ ತಿಳಿವಳಿಕೆಯೇ ಕನ್ನಡ ವಿದ್ಯಾರ್ಥಿಯ ಭೂಮಿ, ಭೂಮಿಕೆ. ವ್ಯಾಕರಣ ಅಲಂಕಾರ ಛಂದಸ್ಸುಗಳ ಬೋಧನೆಯಿಂದ ಈ ಭಾಷೆ, ಸಾಹಿತ್ಯ, ಪದ್ಯಗಳ ತಿಳಿವಳಿಕೆಗೆ ಅವರು ಭದ್ರ ಬುನಾದಿ ಹಾಕುತ್ತಲಿದ್ದ ರೀತಿ, 'ನ ಭೂತೋ ನ ಭವಿಷ್ಯತಿ'. ಆಗ "ಉಕ್ತಿ ವೈಚಿತ್ರಂ ಚ ಅಲಂಕಾರಃ" ಪಾತಳಿಯಲ್ಲಿ ಬೋಧನೆಯನ್ನು ಆರಂಭಿಸಿ, "ಸೌಂದರ್ಯಮಲಂಕಾರಃ" ಪಾತಳಿಗೆ ನಮ್ಮನ್ನು ಕರೆದೊಯ್ಯುತ್ತಿದ್ದರು. ಬಿ. ಟಿ. ಯವರ ಛಂದೋಲಯದ ಜ್ಞಾನ ತಲಸ್ಪರ್ಶಿಯಾದದು. ಹೀಗಾಗಿ ಪದ್ಯಲಯದ ವಹನ-ಪ್ರವಹನಗಳ ದಾರಿ-ಒಳದಾರಿಗಳು ನನಗೆ ಅಂದೇ ಮನವರಿಕೆಯಾದದ್ದು. "ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ" ಚರಣವು ಪಿರಿಯಕ್ಕರ ಗತಿಯಲ್ಲಿ ನಡೆಯುವ ರೀತಿ, ಪಡೆಯುವ ಸೌಂದರ್ಯಗಳನ್ನು ಬಿ. ಟಿ. ಅವರಿಂದಲೇ ಕೇಳಬೇಕು.

ವ್ಯಾಕರಣಕ್ಕೆ, ಅದರಲ್ಲಿಯೂ ಶಬ್ದಮಣಿ ದರ್ಪಣಕ್ಕೆ ಪರ್ಯಾಯ ನಾಮ ಸಾಸನೂರ. ಕರ್ನಾಟಕದ ಬಹುಭಾಗದಲ್ಲಿ ಈಗಲೂ ಇದು ಜನಜನಿತ. ಈ ಕೃತಿಯ ಯಾವ ಮೂಲೆಯಲ್ಲಿ ಯಾವ ವಿಷಯವಿದೆ? ದೋಷ ದೌರ್ಬಲ್ಯಗಳು ಎಲ್ಲಿವೆ? ಸಮಸ್ಯೆ ಸಂದೇಹಗಳೇನು? ಕೇಶಿರಾಜನ ಶಕ್ತಿಗಳೇನು? ಇವೆಲ್ಲವುಗಳನ್ನು ವಿಜಾಪುರದಂಥ ಮೂಲೆಯಲ್ಲಿದ್ದೂ ಕರತಲಾಮಲಕ ಮಾಡಿಕೊಂಡಿದ್ದರು. ತಮ್ಮ ವಿದ್ವತ್‌ಪೂರ್ಣ ಬೋಧನೆಯ ಮೂಲಕ ವಿದ್ಯಾರ್ಥಿಗಳಲ್ಲಿ ಶಾಸ್ತ್ರಕೃತಿಯ ಬಗ್ಗೆ ಕಾವ್ಯಪ್ರೀತಿ ಬೆಳೆಸುತ್ತಿದ್ದರು. ಕಾವ್ಯವೇ ಇರಲಿ, ಶಾಸ್ತ್ರವೇ ಇರಲಿ. ಅದು ಸೃಜನಶೀಲ ವಿಷಯವೆಂಬ ಪರಮಸತ್ಯವನ್ನು ಅನುಭವಕ್ಕೆ ತಂದುಕೊಡುತ್ತಿದ್ದರು. ಹೀಗಾಗಿ ಅವರ ಕಾವ್ಯಬೋಧನೆಗೆ ಹಾಜರು, ಶಾಸ್ತ್ರಬೋಧನೆಗೆ ಗೈರುಹಾಜರು ಎಂಬ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ.

ಬಿ. ಎ. ಮುಖ್ಯವಿಷಯ (ಕನ್ನಡ) ಓದುವ ವಿದ್ಯಾರ್ಥಿಗಳ ಸಂಖ್ಯೆ ಪರಿಮಿತ. ವಿದ್ಯಾರ್ಥಿ ಪ್ರಾಧ್ಯಾಪಕರ ಸಂಬಂಧ ಗಾಢವಾಗುವ ವ್ಯವಸ್ಥೆ. ಅದು ಇನ್ನೂ ಗಾಢವಾಗುತ್ತಲಿದ್ದುದು, ಬಿ.ಟಿ. ಯವರ ಬಿಡುವಿನ ದಿನಗಳ ಬೋಧನೆಯಲ್ಲಿ. ಸಾಮಾನ್ಯವಾಗಿ ಅವರ ಮನೆಯಲ್ಲಿಯೇ ಇದಕ್ಕೆ ಅವಕಾಶ. ೨-೩ ತಾಸುಗಳ ವರೆಗೆ ಜ್ಞಾನಯಾತ್ರೆ. ನನಗೆ ಇನ್ನೂ ನೆನಪಿದೆ. ಶಬ್ದಮಣಿದರ್ಪಣ ಪಾಠದ ಕೊನೆಯ ದಿನ. "ನಿಮ್ಮ ಜೀವನದ ಗುರಿ ಏನು?" ಒಬ್ಬೊಬ್ಬರ ಉತ್ತರ ಒಂದೊಂದು ವಿಧ. "ಶಬ್ದಮಣಿದರ್ಪಣವನ್ನು ಕಲಿಸುವುದು" ನನ್ನ ಉತ್ತರ, ಗುರುಗಳಿಗೆ ತುಂಬ ಸಂತೋಷ. ಈ ಮಾತು ಎರಡು ವರ್ಷಗಳಲ್ಲಿ ಕೃತಿಗಿಳಿಯಿತು. ಕರ್ಣಾಟಕ ಕಾಲೇಜಿನಲ್ಲಿ ಅಧ್ಯಾಪಕನಾದ ವರ್ಷವೇ ಶಬ್ದಮಣಿದರ್ಪಣ ಬೋಧನೆಗೆ ಅವಕಾಶ ಪ್ರಾಪ್ತವಾಯಿತು. ಕ್ಲಾಸಿನಲ್ಲಿ "ಬಿ. ಟಿ. ಬೋಧನ ಶೈಲಿ"ಯಿಂದ ತಪ್ಪಿಸಿಕೊಳ್ಳುವುದು ನನಗೆ ಸಾಧ್ಯವಾಗಲೇ ಇಲ್ಲ. ಅವರಿಂದಾಗಿ ಅಂಟಿಕೊಂಡಿದ್ದ ಶಬ್ದಮಣಿದರ್ಪಣ ಪ್ರೀತಿ, ವ್ಯಾಮೋಹವಾಗಿ ಬೆಳೆಯಿತು. ಡಿ. ಎಲ್. ಎನ್. ಸಂಪಾದಿತ ದರ್ಪಣದಲ್ಲಿಯ ದೋಷಗಳನ್ನು ಶೋಧಿಸಿ, ಎಳೆಯ ವಯಸ್ಸಿನಲ್ಲಿಯೇ "ದರ್ಪಣಾವಲೋಕನ" ಲೇಖನ ಮಾಲೆ ಪ್ರಕಟಿಸಿದ ಅಂದಿನ ನನ್ನ ಶಕ್ತಿಗೆ ಮೂಲ ನೆಲೆಗಟ್ಟು, ಬಿ. ಟಿ. ಯವರ ಬೋಧನೆ.

ಇನ್ನೂ ಒಂದು ವಿಷಯವೆಂದರೆ, ಇವರ ವ್ಯಾಪಕ ಓದು. ಕನ್ನಡ, ಇಂಗ್ಲಿಷ್, ಸಂಸ್ಕೃತ, ಹಿಂದಿ - ಹೀಗೆ ನಾಲ್ಕು ಭಾಷೆಗಳಲ್ಲಿ ಪಾಂಡಿತ್ಯ. ಇದರಿಂದಾಗಿ ಇವರ ವಿದ್ವತ್ತು ನಾಲ್ಕು ದಿಕ್ಕುಗಳಲ್ಲಿ ವಿಸ್ತರಿಸಿದ್ದಿತು. ಇದು ಸಾಲದೆಂಬಂತೆ ವಿದ್ವತ್ತಿನ ಕುತೂಹಲ, ಶಿಸ್ತು, ವಿದ್ಯಾರ್ಥಿಗಳಿಗೆ ಜ್ಞಾನ ಹಂಚಬೇಕೆಂಬ ಉತ್ಕಟ ಹಂಬಲ.

ಸಾಸನೂರ ಕುಟುಂಬದ ವಿಶೇಷ ಲಕ್ಷಣವೆಂದರೆ ಸಾಂಘಿಕ ಜೀವನಶೈಲಿ. ಅವರಿಗೆ ಒಬ್ಬರೇ ಬಾಳಿ ಗೊತ್ತಿಲ್ಲ. ಬೆಳೆದು ಗೊತ್ತಿಲ್ಲ. ತಮ್ಮ ಸುತ್ತ ಪರಿಸರ, ಪರಿವಾರ ಸೃಷ್ಟಿಸಿಕೊಳ್ಳುವ ಸ್ವಭಾವ. ಹೀಗಾಗಿ ತಾವೂ ಬೆಳೆದರು, ಸಂಪರ್ಕಕ್ಕೆ ಬಂದವರನ್ನೂ ಬೆಳೆಸಿದರು. ಈ ಕಾರಣದಿಂದಾಗಿ ತಾವು ಶಿಕ್ಷಣ-ಸಾಹಿತ್ಯ ಕ್ಷೇತ್ರದವರಾದರೂ ಇತರ ಕ್ಷೇತ್ರಗಳ ಜನಸಂಪರ್ಕವನ್ನೂ ನಿಭಾಯಿಸಿಕೊಂಡು ಬಾಳಿದರು. ಒಂದು ರೀತಿ ಅಂತರ್ ಸಂಬಂಧೀಯ, ಅಂತರ್‌ಶಿಸ್ತೀಯ ಸಾಮಾಜಿಕ ಜೀವನಶೈಲಿಯನ್ನು ಬದುಕಿದರು. ಹೀಗೆ ಬಹುಮುಖಿಜ್ಞಾನ ಬಹುಮುಖಿ ಬಾಂಧವ್ಯದಲ್ಲಿ ಬೆಳೆಯುತ್ತ ಬಂದವರು, ಬಿ.ಟಿ. ಯವರು. ಇದರಿಂದಾಗಿ ಅವರ ಸಾಮಾಜಿಕ ಪ್ರಜ್ಞೆ ಉನ್ನತಮಟ್ಟದ್ದಾಗಿದ್ದಿತು. ಹಿರಿಯರೊಂದಿಗೆ, ಸ್ನೇಹಿತರೊಂದಿಗೆ, ಕಿರಿಯರೊಂದಿಗೆ ಅವರು ನಡೆದುಕೊಳ್ಳುವ ರೀತಿಯಲ್ಲಿ ಒಂದು "ಆದರ್ಶ" ಎದ್ದು ಕಾಣುತ್ತಿತ್ತು. ಕಿರಿಯರನ್ನು ತಿದ್ದುವಲ್ಲಿ ಒಂದು ನಯಗಾರಿಕೆಯಿದ್ದಿತು. ನನ್ನ ಅನುಭವಕ್ಕೆ ಬಂದ ಒಂದು ಉದಾಹರಣೆ: ಲೋಕಸೇವಾ ಆಯೋಗದ ಸದಸ್ಯರಾಗಿದ್ದ ಬಿ.ಟಿ.ಯವರು ಬೆಂಗಳೂರಿನ ಜನರಲ್ ಹಾಸ್ಟೆಲ್‌ನಲ್ಲಿ ವಾಸವಾಗಿದ್ದರು. ಒಮ್ಮೆ ಅವರ ಕೋಣೆಯಲ್ಲಿ ಇಳಿದುಕೊಳ್ಳುವ ಸಂದರ್ಭ ಘಟಿಸಿತು. ಮುಂಜಾನೆ ಎದ್ದವನೇ ಸ್ನಾನಕ್ಕೆ ಹೋಗಿದ್ದೆ. ಬರುವುದರೊಳಗಾಗಿ ನನ್ನ ಹೊದಿಕೆಯನ್ನು ಮಡಿಸಿ, ಹಾಸಿಗೆಯನ್ನು ಸುತ್ತಿದ್ದರು. ಈ ಘಟನೆಯನ್ನು ಜೀರ್ಣಿಸಿಕೊಳ್ಳುವುದು ನನಗೆ ಕಷ್ಟವಾಯಿತು. ಸ್ನಾನಕ್ಕೆ ಹೋದವನು ಒಳ ಅಂಗಿಯನ್ನು ಹ್ಯಾಂಗರಕ್ಕೆ ಹಾಕಿ ಬಂದಿದ್ದೆನು. ಬಳಿಕ ಸ್ನಾನಕ್ಕೆ ಹೋದ ಅವರು, ನನ್ನ ಮತ್ತು ಅವರ ಒಳ ಅಂಗಿಗಳನ್ನು ಒಗೆದು ಹಣ ಹಾಕಿದ್ದರು. ಇವು ನನಗೆ ಜೀವನ ಪಾಠಗಳಾಗಿ ಪರಿಣಮಿಸಿದವು. ಮುಂದೆ ಜೀವನದುದ್ದಕ್ಕೂ ನಾನು ಇಂಥ ತಪ್ಪು ಮಾಡಲಿಲ್ಲವೆಂದೇ ಹೇಳಬೇಕು.

ಒಂದು ನೋವು. ಬಿ. ಟಿ. ಯವರು ವಿಜಾಪುರದಲ್ಲಿದ್ದು, ವಿದ್ಯಾರ್ಥಿಗಳನ್ನು ವಿದ್ವಾಂಸರನ್ನಾಗಿ ರೂಪಿಸಿದರು. ಬೀದರ ಕಾಲೇಜನ್ನು ಭೌತಿಕವಾಗಿಯೂ ಕಟ್ಟಿದರು. ಲೋಕಸೇವಾ ಆಯೋಗದ ಸದಸ್ಯರಾಗಿ ಅನೇಕರಿಗೆ ನೆರವಾದರು. ಆದರೆ ಇವರ ವಿದ್ವತ್ತಿಗೆ ಸರಿಯಾದ ಪ್ರಚಾರ ಸಿಗಲಿಲ್ಲ. ಉನ್ನತ ಶಿಕ್ಷಣಕ್ಷೇತ್ರ ಅವರ

ಪ್ರಯೋಜನ ಪಡೆಯಲಿಲ್ಲ. ದೂರದ ಸಂಸ್ಥೆಗಳು ಹೋಗಲಿ, ಇವರ ಶಕ್ತಿ-ಸಾಮರ್ಥ್ಯಗಳನ್ನು ಸಮೀಪದಿಂದ ಅರ್ಥಮಾಡಿಕೊಂಡಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠವೂ ಇವರಿಗಾಗಿ ತನ್ನ ಬಾಗಿಲು ತೆರೆಯಲಿಲ್ಲ. ಬೆಳಕು ವಿಜಾಪುರದಲ್ಲಿಯೇ ಉಳಿಯಿತು.

ಬಿ. ಟಿ. ಯವರು ವಿದ್ಯಾರ್ಥಿಗಳನ್ನು ಕೇವಲ ಶೈಕ್ಷಣಿಕವಾಗಿ ರೂಪಿಸಿ ಕೈಬಿಡುತ್ತಿರಲಿಲ್ಲ. ಅವರ ಜೀವನವನ್ನೂ ರೂಪಿಸುವುದು, ಅವರ ಕಷ್ಟ-ಸುಖಗಳಲ್ಲಿ ಭಾಗಿಯಾಗುವುದು ಇವರ ಸ್ವಭಾವ. ನನ್ನ ಜೀವನದಲ್ಲಿ ಸಂಭವಿಸಿದ ಎರಡು ಅಪಾಯಕಾರಿ ಘಟನೆಗಳಲ್ಲಿ ಬಿ. ಟಿ. ಯವರು ವಹಿಸಿದ ಪಾತ್ರವನ್ನು ನಾನು ದಾಖಲಿಸಲೇಬೇಕು.

೧೯೮೮. ನನ್ನ ಒಂದು ಲೇಖನ ಮುಂದುಮಾಡಿಕೊಂಡು, ಅದನ್ನು ಶಿಕ್ಷಣಕ್ಷೇತ್ರದಿಂದ ಸಾಮಾಜಿಕ ಕ್ಷೇತ್ರಕ್ಕೆ ಒಯ್ದು, ಕೆಲವರು ಐತಿಹಾಸಿಕ ಗದ್ದಲ ಸೃಷ್ಟಿಸಿದಿರು. ವೃತ್ತಿ ದ್ವೇಷ, ಒಳಜಾತಿ ಪಕ್ಷಪಾತ ಇತ್ಯಾದಿ ಸೇರಿಕೊಂಡು, ಅದು ಅತಿ ಗದ್ದಲದ ಅಂಚನ್ನು ತಲುಪಿತು. ನನ್ನ ಮನೆಗೆ ಪೋಲಿಸ ರಕ್ಷಣೆ ಒದಗಿಸುವ ಮಟ್ಟಕ್ಕೆ ಈ ಘಟನೆ ಬೆಳೆಯಿತು. ಇದೆಲ್ಲ ಕೇಳಿ ಮಾತೃವಾತ್ಸಲ್ಯದ ಬಿ.ಟಿ. ಯವರು ನನ್ನ ಮನೆಗೆ ಧಾವಿಸಿ ಬಂದು, ಏಕಾಂತಕ್ಕೆ ಕರೆದು, ನಾನು ನಂಬಿದವರ ಒಳಸುಳಿಗಳನ್ನು ಬಿಡಿಸಿ ಹೇಳಿ ". . . . ಮಾತಿನಲ್ಲಿ ಸೋತವನೆ ಜಾಣ ಸರ್ವಜ್ಞ" ಎಂದು ಬಿಂಬಿಸಿದುದು, ಮರೆಯಲಾರದ ಘಟನೆ.

ಹೀಗೆ ಬಸವಣ್ಣನ ಮೇಲಿನ ನನ್ನ ಅತಿಯಾದ ಭಕ್ತಿಯಿಂದ ಉದ್ಭವಿಸಿದ ಈ ಘಟನೆಯಂತೆ, ಕನ್ನಡದ ಮೇಲಿನ ನನ್ನ ಅತಿಯಾದ ಪ್ರೀತಿಯಿಂದ ಇಂಥದೇ ಇನ್ನೊಂದು ಘಟನೆ ಸಂಭವಿಸಿತು. ಕನ್ನಡವನ್ನು ಶೋಷಿಸುತ್ತಿದ್ದ ಕೆಲವರು ನನ್ನ ವಿರೋಧಿಯಾಗಿ ಬೆಳೆದರು. ನನ್ನ "ಪ್ರೀತಿಪರಿವಾರ"ದಲ್ಲಿ ಭಿನ್ನಮತ ನಿರ್ಮಾಣ ಮಾಡಿದರು. ಈ ಸಂದರ್ಭದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ನನ್ನ ಹೆಸರೂ ಕೇಳ ಬರತೊಡಗಿತು. ಆಯ್ಕೆ ಸಮಿತಿಯ ಸಭೆಯೂ ಸೇರಿತು. ಯಾವ ಸದಸ್ಯರಿಂದಾಗಿ ನನ್ನ ಆಯ್ಕೆ ಖಚಿತವೆಂದು ಸಾರ್ವಜನಿಕರು ನಂಬಿದ್ದರೋ ಆ ಒಬ್ಬ ಸದಸ್ಯರ ಹೊರತಾಗಿ ಎಲ್ಲರೂ ನನ್ನ ಪರವಾದಿಸಿದರು. ಅಂತಿಮ ನಿರ್ಣಯಕ್ಕೆ ಬರದೆ ಸಭೆ ಮುಂದೂಡಲ್ಪಟ್ಟಿತು. ಪತ್ರಿಕೆಯಲ್ಲಿ ಈ ಸುದ್ದಿ ಪ್ರಕಟವಾಗುತ್ತಲೇ ಸಾರ್ವಜನಿಕರು ಆಶ್ಚರ್ಯಪಟ್ಟರು. ಬಿಜಾಪುರದಿಂದ ಕಣ್ಣಿನ ಆಪರೇಶನಕ್ಕಾಗಿ ಹುಬ್ಬಳ್ಳಿಗೆ ಬಂದಿದ್ದ ಬಿ.ಟಿ. ಯವರು ಆಸ್ಪತ್ರೆಯಲ್ಲಿ ಈ ಸುದ್ದಿ ಓದಿ, ನಂಬದೇ ಹೋದರು. ಆಪರೇಶನ್ ಆರೈಕೆಯ ಮಧ್ಯದಲ್ಲಿಯೇ ಎದ್ದು, ಹುಬ್ಬಳ್ಳಿಯಿಂದ ನನ್ನ ಮನೆಗೆ ಧಾವಿಸಿದರು.

"ಇದೇನು ಮಕ್ಕಳ ಮೇಲೆ ಮುನಿಸೇ?"

"ಸರ್, ನಾನು ಮೂವತ್ತು ವರ್ಷಗಳಿಂದ ಮಲಮಗ" ಎನ್ನತ್ತ ಹಿಂದಿನ ಎಲ್ಲ ಘಟನೆಗಳನ್ನು - ನೋವುಗಳನ್ನು ವಿವರಿಸಿದೆ.

"ಮೂವತ್ತು ವರ್ಷಗಳ ನಿನ್ನ ತಾಳ್ಮೆ ದೊಡ್ಡದು. ಇರಲಿ, ನಾನು ಅವರೊಡನೆ ಮಾತನಾಡಿ ಬಂದಿದ್ದೇನೆ, ಭೆಟ್ಟಿಗೆ ಹೋಗೋಣ, ಏಳು" ಎಂದರು.

"ಸರ್ ಒತ್ತಾಯಿಸಬೇಡಿ, ಕುಲಪತಿಯಾದರೇ ಸ್ವರ್ಗ ಸಿಗುವುದೆಂದು ನಾನು ಭಾವಿಸಿಲ್ಲ. ಎಲ್ಲಿ ಕುಳಿತರೇನು? ಕನ್ನಡದ ಕೆಲಸ ಮಾಡುವವರೆಲ್ಲರೂ ಕುಲಪತಿಗಳೇ" ಎಂದು ಹೇಳಿದೆ.

"ಎಲ್ಲವೂ ಸರಿಹೋಗುವ ಹಾಗೆ ಮಾತನಾಡಿ ಬಂದಿದ್ದೇನೆ, ನೀನು ಬಂದರೆ ಸಾಕು" ಎಂದರು.

"ಅವರು ನನ್ನ ಗುರುಗಳು. ಅವರ ಹತ್ತಿರ ಬರಲು ಏನೂ ಅಭ್ಯಂತರವಿಲ್ಲ. ಆದರೆ ನಿಮ್ಮೊಂದಿಗೆ ಈಗ ಬಂದರೆ ಸರಿ ಹೋಗುವುದಿಲ್ಲ. ನನಗೆ ಅವರ ಮನಸ್ಸು ಗೊತ್ತು.ಮೂರನೆಯ ಶಕ್ತಿಗಳು ಅವರನ್ನು ನನ್ನಿಂದ ದೂರ ಎಳೆದಿದೆ, ಎಳೆಯುತ್ತಲಿವೆ" ಎಂದರೂ, ಕೇಳದೆ ಕರೆದುಕೊಂಡು ಹೋದರು. ಬಿ. ಟಿ. ಅವರ ಸೂಚನೆಯ ಪ್ರಕಾರಃನಾನು ಮೌನವಾಗಿದ್ದೆ. ಅವರು ೧೦ ನಿಮಿಷ ಏರುದನಿಯಲ್ಲಿ ಮಾತನಾಡಿದರು. ಈ ಮೊದಲು ಇಲ್ಲಿಯೇ ಕುಳಿತು ಮಾತನಾಡಿಕೊಂಡು, ಬಿ. ಟಿ. ಯವರು ನನ್ನಲ್ಲಿಗೆ ಬಂದಿದ್ದುದು ವ್ಯರ್ಥವಾಯಿತು. ಎದ್ದು ಬಂದೆವು. "ನಿನ್ನನ್ನು ಕರೆದುಕೊಂಡು ಹೋಗಬಾರದಾಗಿತ್ತು" ಎಂದು ಮರುಗುತ್ತ ಬಿ. ಟಿ. ಯವರು ಹುಬ್ಬಳ್ಳಿಗೆ ಮರಳಿದರು.

ಹೀಗೆ, ನನ್ನಲ್ಲಿ ಮನೆಮಾಡಿಕೊಂಡಿರುವ ಅಕ್ಷರ ಶಿಕ್ಷಣ-ಅಭಿಮಾನ ಶಿಕ್ಷಣಗಳಿಗೆ ಶಕ್ತಿ, ಸಾಸನೂರ ಅವರು.

ವಜ್ರಕುಸುಮ : (ಬಿ. ಟಿ. ಸಾಸನೂರ ಅಭಿನಂದನ ಗ್ರಂಥ), ೨೦೦೩.

ಆಕರ : ಮಾರ್ಗ ಸಂಪುಟ–೬

■■

೧೦೦

ವಜ್ರಕಠೋರ - ಕುಸುಮ ಕೋಮಲ

೨೦೦೩

"ಪ್ರಸಾದ ದಂಪತಿ"ಗಳಲ್ಲಿ ನನಗೆ ಮೊದಲು ಪರಿಚಿತರು ಶ್ರೀ ರೇಣುಕ ಪ್ರಸಾದ, ಹೆಚ್ಚು ಪರಿಚಿತರು ಶ್ರೀಮತಿ ಲೀಲಾದೇವಿ ಪ್ರಸಾದ. ಈ ಹೆಚ್ಚು ಪರಿಚಯ ಕಾರಣವಾಗಿಯೇ ಇರಬಹುದು, ಇಬ್ಬರೂ ಆತ್ಮೀಯರೇ ಆಗಿದ್ದರೂ ನಾನು ಬಹಳ ಪ್ರಭಾವಿತನಾದುದು, ಲೀಲಾದೇವಿಯವರ ವ್ಯಕ್ತಿತ್ವದಿಂದ.

ಈ ದಂಪತಿಗಳು ಮೂಲತಃ ಸುಸಂಸ್ಕೃತ ಕುಟುಂಬಗಳ ಸಂತಾನ. ರೇಣುಕ ಪ್ರಸಾದ ಅವರ ತಂದೆ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು ಹೆಚ್ಚು ಸಾಮಾಜಿಕ. ಲೀಲಾದೇವಿಯವರ ತಾಯಿ ಶ್ರೀಮತಿ ಗುರುದೇವಿ ಹೆಚ್ಚು ಸಾಮಾಜಿಕ. ಹೀಗಾಗಿ ಪ್ರಸಾದ ದಂಪತಿಗಳು ಕೇವಲ ಕುಟುಂಬಮುಖಿಯಾಗಿ ಉಳಿಯದೆ, ಸಮಾಜಮುಖಿಯಾಗಿ ಬೆಳೆದಿದ್ದಾರೆ. ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮಹಿಳೆಗೆ ಅಧಿಕ ಅವಕಾಶ ಕೊಡುವ ರಾಜಕೀಯ ಧೋರಣೆ ಕಾರಣವಾಗಿ, ಈ ದಂಪತಿಗಳಲ್ಲಿ ಒಬ್ಬರ ಆಯ್ಕೆಯ ಪ್ರಶ್ನೆ ಬಂದಾಗ, ಕರ್ನಾಟಕ ಸರಕಾರವು ಮಹಿಳೆಯಾದ ಲೀಲಾದೇವಿಯವರಿಗೆ ಆದ್ಯತೆ ನೀಡುತ್ತ ಬಂದುದರಿಂದ, ಪತಿಗಿಂತ ಸತಿ ಅಧಿಕ ಸಾಮಾಜಿಕವೆನಿಸಿದರು. ಅಂದರೆ ಶ್ರೀಮತಿ ಲೀಲಾದೇವಿ ಮಹಿಳೆ ಎಂಬ ಒಂದೇ ಕಾರಣದಿಂದ ಮುಂದೆ ಬಂದರೆಂದು ನನ್ನ ಭಾವನೆಯಲ್ಲ. ಬಾಲ್ಯದಿಂದಲೂ ಬೆಳೆಸಿಕೊಂಡು ಬಂದಿದ್ದ ಸಾಮಾಜಿಕ ವ್ಯಕ್ತಿತ್ವ, ಸಮಾಜಸೇವಾ ಮನೋಧರ್ಮಗಳಿಂದಾಗಿ ಅವರು ಈ ಅವಕಾಶಗಳನ್ನು ಮೀರಿ ಬೆಳೆದರು.

ಸಾಹಿತಿಯಾಗಿದ್ದ ಶ್ರೀ ಶಿವಮೂರ್ತಿಶಾಸ್ತ್ರಿಗಳು ನನಗೆ ಹಿರಿಯ ತಲೆಮಾರಿನವರು. ಹೀಗಾಗಿ ಅವರನ್ನು ದೂರದಿಂದಲೇ ಗೌರವದಿಂದ ಕಾಣುವ ಸಂದರ್ಭಗಳು ಒದಗಿಬಂದವು. ಆಗ ಇನ್ನೂ ದೂರದಿಂದಲೇ ಶ್ರೀ ರೇಣುಕ ಪ್ರಸಾದ ಅವರನ್ನು ಕಂಡದ್ದು, ಬಳಿಕ ಗೋಕಾಕ ಭಾಷಾ ಚಳುವಳಿ ಸಂದರ್ಭದಲ್ಲಿ ಒಂದಿಷ್ಟು ಸಮೀಪದಿಂದ ಕಂಡ ನೆನಪು. ೧೯೯೮ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾದ ಬಳಿಕ ಕನ್ನಡ ಮತ್ತು ಸಂಸ್ಕೃತಿ ಸಚಿವೆಯಾಗಿದ್ದ ಶ್ರೀಮತಿ ಲೀಲಾದೇವಿಯವರನ್ನು ಕಾಣಲು ಆಗಾಗ ಮನೆಗೆ ಹೋಗುತ್ತಲಿದ್ದ ಪ್ರಸಂಗಗಳಲ್ಲಿ ಶ್ರೀ ಪ್ರಸಾದ ಅವರೊಡನೆ ಮಾತನಾಡುವ ಅವಕಾಶ ಒದಗುತ್ತಿತ್ತು. ಅವರ ಮಾತಿನಲ್ಲಿ ಸಾಮಾಜಿಕ ಕಾಳಜಿಯನ್ನು ನಾನು ಗುರುತಿಸಿದೆ. ಅವಶ್ಯವೆನಿಸಿದಲ್ಲಿ ರಾಜಕೀಯ, ಆಡಳಿತಾತ್ಮಕ ವಿಷಯದಲ್ಲಿ ಹೆಂಡತಿಗೆ ಸಲಹೆ ನೀಡುತ್ತಿದ್ದರೂ, ನೇರವಾಗಿ ಕೈಹಾಕದ ಅವರ ಸ್ವಭಾವ ನನಗೆ ತುಂಬ ಹಿಡಿಸಿತು. ಹಂಪಿಯಲ್ಲಿರುವಾಗಲೇ

ಒಮ್ಮೆ ಅವರ ತಂದೆಯವರ ಪುಣ್ಯಸ್ಮರಣೆ ಕಾರ್ಯಕ್ರಮಕ್ಕೆ ಹೋಗಿದ್ದೆನು. ಹಂಪಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಇಲ್ಲವೆ ಡಿ. ಲಿಟ್. ಅಧ್ಯಯನ ನಡೆಸುವ ಅಪೇಕ್ಷೆಯನ್ನು ಅವರು ವ್ಯಕ್ತಪಡಿಸಿದ್ದರು. ರೇಣುಕ ಪ್ರಸಾದ ಅವರು ಬಸವಸಮಿತಿ, ಬಸವೇಶ್ವರ ವಿದ್ಯಾವರ್ಧಕ ಸಂಘಗಳ ಮೂಲಕ ಸಮಾಜಸೇವೆಯನ್ನು, ತಮ್ಮ ತಂದೆಯವರ ಸಾಹಿತ್ಯ ಪ್ರಕಟಣೆಯ ಬಗ್ಗೆ ವಿಶೇಷ ಆಸಕ್ತಿಯನ್ನು ತೋರುತ್ತಲೇ ಬಂದ ಮನೋಧರ್ಮದವರು. ಇಷ್ಟು ಮಾತ್ರ ನಮ್ಮಿಬ್ಬರ ಸಂಬಂಧ.

೧೯೯೮ರ ಜನವರಿ ಶಿರಂದು "ಪಂಪ ಪ್ರಶಸ್ತಿ"ಯನ್ನು ನಾನು ಬನವಾಸಿಯಲ್ಲಿ ಸಂಸ್ಕೃತಿ ಸಚಿವೆ ಶ್ರೀಮತಿ ಲೀಲಾದೇವಿಯವರಿಂದ ಸ್ವೀಕರಿಸಿದೆ. "ಅಂಬಲಿ ಕಂಬಳಿ ಆಸ್ತಿ, ಮಿಕ್ಕಿದ್ದೆಲ್ಲ ಜಾಸ್ತಿ" ಎಂಬ ಸೂಕ್ತಿಯನ್ನು ವ್ಯಕ್ತಪಡಿಸಿ, ಪ್ರಶಸ್ತಿಯನ್ನು ಮಾತ್ರ ಸ್ವೀಕರಿಸಿ, ಪ್ರಶಸ್ತಿ ಹಣ ೧ ಲಕ್ಷ ರೂಪಾಯಿ ಸರಕಾರಕ್ಕೆ ಹಿಂದಿರುಗಿಸಿದೆ. ಅಂದಿನಿಂದ ನಮ್ಮಿಬ್ಬರ ವಿಶ್ವಾಸ ಆರಂಭವಾಗಿ ಬೆಳೆಯುತ್ತಲೇ ಬಂದಿತು.

ಲೀಲಾದೇವಿಯವರು ಕನ್ನಡ ಸಂಸ್ಕೃತಿ ಸಚಿವೆಯಾದುದರಿಂದ, ನಾನು ಕುಲಪತಿಯಾದ ಸಂದರ್ಭದಲ್ಲಿ ಅವರ ಈ ವಿಶ್ವಾಸ ಇನ್ನೂ ಗಾಢವಾಗುತ್ತ ನಡೆಯಿತು. ನಾನು ಅವರ ತವರು ಜಿಲ್ಲೆಯಾದ ಬಿಜಾಪುರ ಪರಿಸರದವನು. ಅವರಿಗೆ ಆತ್ಮೀಯರಾಗಿರುವ ಶ್ರೀಮತಿ ಮಾಳವಾಡ ಶಾಂತಾದೇವಿ ಅವರು ನನಗೂ ಆತ್ಮೀಯರು-ಇವೇ ಮೊದಲಾದ ಕಾರಣಗಳೂ ಸೇರಿ ಆ ವಿಶ್ವಾಸ ಮತ್ತೂ ವರ್ಧಿಸಿತು. ಅದನ್ನು ನಾನು ವಿಶ್ವವಿದ್ಯಾಲಯಕ್ಕೆ ತುಂಬ ಪ್ರಾಮಾಣಿಕವಾಗಿ ಬಳಸಿಕೊಂಡೆನು. ಈ ಸಂದರ್ಭದಲ್ಲಿ ಅವರ ಆಪ್ತಕಾರ್ಯದರ್ಶಿಯಾಗಿದ್ದ ಶ್ರೀ ವಿರೂಪಾಕ್ಷಸ್ವಾಮಿ ಅವರು ನನಗೆ ಆಪ್ತರಾದುದು, ನನ್ನ ಜೀವಮಾನದ ಇನ್ನೊಂದು ಮುಖ್ಯ ಘಟನೆಯೆಂದೇ ಭಾವಿಸುತ್ತೇನೆ.

ವಿಶ್ವವಿದ್ಯಾಲಯ ಸಾಲದಿಂದ ತತ್ತರಿಸುತ್ತಲಿದ್ದ ಸಂದರ್ಭದಲ್ಲಿ ನಾನು ಕುಲಪತಿಯಾಗಿ ಹಂಪಿಗೆ ಹೋದೆನು. ಇದನ್ನು ಅರ್ಥ ಮಾಡಿಕೊಂಡ ಶ್ರೀಮತಿ ಲೀಲಾದೇವಿಯವರು ಸಂಸ್ಥೆಗೆ ನೀಡುತ್ತ ಬಂದ ಸಹಾಯ ಸ್ಮರಣೀಯ.

ಉತ್ತರ ಕರ್ನಾಟಕದ ಶಾಸನಗಳ ಪರಿವೀಕ್ಷಣೆ ತುಂಬ ಅಲಕ್ಷಿತವಾಗಿದ್ದಿತು. ಇದನ್ನು ಮನದಂದು ಪ್ರತಿವರ್ಷ ಎರಡು ಲಕ್ಷ ರೂಪಾಯಿಗಳಂತೆ ೧೦ ವರ್ಷ ಸಹಾಯದಧನವನ್ನು ಸರಕಾರಕ್ಕೆ ಕೋರಲಾಯಿತು. ತಕ್ಷಣ ಇಡೀ ಯೋಜನೆಗೆ ಮಂಜೂರು ನೀಡಿ, ತಾವು ಅಧಿಕಾರದಲ್ಲಿರುವ ವರೆಗೆ ಪ್ರತಿವರ್ಷ ಹಣ ಬಿಡುಗಡೆ ಮಾಡುತ್ತ ಬಂದರು. "ಈ ಸುದೀರ್ಘ ಯೋಜನೆಗಾಗಿ ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳಂತೆ ೧೦ ವರ್ಷಗಳ ವರೆಗೆ ಆರ್ಥಿಕ ಅನುದಾನ ನೀಡಿರುವ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ, ವಿಶೇಷವಾಗಿ ಮಾನ್ಯ ಸಚಿವೆಯಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ ಅವರ ಸಂಸ್ಕೃತಿ ಪ್ರೀತಿಗೆ ನಾವು ಕೃತಜ್ಞರಾಗಿದ್ದೇವೆ" ಎಂದು ಶಾಸನ ಸಂಪುಟಗಳ ಮುನ್ನುಡಿಯಲ್ಲಿ ಕೃತಜ್ಞತೆಯಿಂದ ನೆನೆಯುವಂತೆ ಮಾಡಿದರು.

"ಹಂಪಿ ಉತ್ಸವ" ಉತ್ತರ ಕರ್ನಾಟಕದಲ್ಲಿ ಆರಂಭವಾದ ರಾಜ್ಯಮಟ್ಟದ ಸಾಂಸ್ಕೃತಿಕ ಸಮಾರಂಭ. ಈ ಉತ್ಸವದ ನೆನಪಿಗಾಗಿ ಪ್ರತಿವರ್ಷ ಚರಿತ್ರಾರ್ಹ ಗ್ರಂಥವೊಂದನ್ನು ಪ್ರಕಟಿಸಲು, ಒಂದು ಲಕ್ಷ ರೂಪಾಯಿಗಳನ್ನು ಸಂಸ್ಕೃತಿ ಇಲಾಖೆಯು ಕನ್ನಡ ವಿಶ್ವವಿದ್ಯಾಲಯಕ್ಕೆ ಕೊಡಮಾಡಬೇಕೆಂಬ ಯೋಜನೆ ಮಂಡಿಸಿದೆ. ಸಚಿವೆ ಲೀಲಾದೇವಿ ಪ್ರಸಾದ ತಕ್ಷಣ ಈ ನಿರಂತರ ಯೋಜನೆಗೆ ಒಪ್ಪಿಗೆ ನೀಡಿ, ಆ ವರ್ಷದ ಹಣ ಬಿಡುಗಡೆ ಮಾಡಿದರು. ಮೊದಲ ವರ್ಷ ಮತಂಗನ "ಬೃಹದ್ದೇಶಿ", ಎರಡನೆಯ ವರ್ಷ "ಹರಿಹರನ ರಗಳೆಗಳು" ಹೆಸರಿನ ದೊಡ್ಡ ಗ್ರಂಥಗಳನ್ನು ಬಿಡುಗಡೆ ಮಾಡಲಾಯಿತು.

ಹೀಗೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಎರಡು ಶಾಶ್ವತ ಯೋಜನೆಗಳನ್ನು ಆರಂಭಿಸಿದ ಕೀರ್ತಿ, ಶ್ರೀಮತಿ ಲೀಲಾದೇವಿ ಪ್ರಸಾದ ಅವರಿಗೆ ಸಲ್ಲುತ್ತದೆ. ಇದಲ್ಲದೆ ಇನ್ನೂ ಅನೇಕ ರೀತಿಯಲ್ಲಿ ಅವರು ಈ ವಿಶ್ವವಿದ್ಯಾಲಯಕ್ಕೆ ನೀಡಿದ ನೆರವು ಸ್ಮರಣಾರ್ಹವೆನಿಸಿದೆ.

ಸಚಿವೆಯರಲ್ಲಿ ಶ್ರೀಮತಿ ಲೀಲಾದೇವಿ ಅವರು ತುಂಬಾ ಗಟ್ಟಿಗಿತ್ತಿ. ಹಿಡಿದ ಹಟ, ಕೊಟ್ಟ ಮಾತು ಪೂರೈಸುವಲ್ಲಿ ಅವರು ಹೆಸರು ಮಾಡಿದ್ದಾರೆ. ಅವರ ಅಧಿಕಾರದ ಅವಧಿಯಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಗೂ ಅವರಿಗೂ ಒಮ್ಮೆ ದೊಡ್ಡ ಘರ್ಷಣೆ ಸಂಭವಿಸಿತ್ತು. ಅಕಾಡೆಮಿ ಸದಸ್ಯರೂ ಮಿಕ್ಕ ಸಾಹಿತಿಗಳೂ ಒಂದಾಗಿ ಪ್ರತಿಭಟಿಸಿದರು. ಈ ಹೋರಾಟ ಬಹಳ ದಿನ ಮುಂದುವರಿಯಿತು. ಕುಲಪತಿಯಾಗಿದ್ದ ನಾನು, "ಸಾಹಿತಿಗಳೊಂದಿಗೆ ಸಂಘರ್ಷ ಸರಿಯಲ್ಲ, ನಿಮ್ಮನ್ನು ಪ್ರತಿಭಟಿಸಲು ವಾಗ್ಮಿಗಳಾದ ಅವರಿಗೆ ವೇದಿಕೆಗಳಿವೆ, ಲೇಖಕರಾದ ಅವರಿಗೆ ಪತ್ರಿಕೆಗಳಿವೆ" ಎಂದು ಸೂಚಿಸಿದೆ. ಮುಂದೆ ಇಟ್ಟ ಹೆಜ್ಜೆ ಅವರು ಹಿಂದೆ ಸರಿಸಲಿಲ್ಲ. "ನಾನು ಸತ್ಯದ ಹಾದಿಯಲ್ಲಿದ್ದೇನೆ, ಯಾರ ಭಯವೂ ನನಗಿಲ್ಲ" ಎಂಬ ಅರ್ಥದ ಮಾತುಗಳನ್ನಾಡಿ, ಕೊನೆಗೂ ಅವರು ತಮ್ಮ ವಜ್ರಕಠೋರ ಹಟ ಸಾಧಿಸಿಯೇಬಿಟ್ಟರು.

ಇಂದಿನದು ಮುಕ್ತ ಅವಕಾಶಗಳ ಕಾಲ. ಇದನ್ನು ಬಳಸಿಕೊಂಡು ಅವರವರ ಕ್ಷೇತ್ರಗಳಲ್ಲಿ ಬೆಳೆದ ಅರ್ಹವ್ಯಕ್ತಿಗಳ ಸಂಖ್ಯೆ ವಿಪುಲ. ಈ ದೊಡ್ಡ ಸಮುದಾಯದಲ್ಲಿ ಅರ್ಹರು ಕಣ್ತಪ್ಪಿ, ಸರಕಾರದ ಅವಕಾಶಗಳಿಂದ ವಂಚಿತರಾಗಬಾರದೆಂದು ಒಮ್ಮೆ ಒಬ್ಬ ವಿಜ್ಞಾನಿಯ ಹೆಸರನ್ನು ರಾಜ್ಯೋತ್ಸವ ಪ್ರಶಸ್ತಿಗಾಗಿ, ಇನ್ನೊಮ್ಮೆ ಒಬ್ಬ ಸಾಹಿತಿಯ ಹೆಸರನ್ನು ಅಕಾಡೆಮಿಯ ಅಧ್ಯಕ್ಷತೆಗೆ ನೆನಪಿಸಿದೆ. ತಾವೂ ಹತ್ತಾರು ಜನರಿಂದ ಇವರ ಬಗ್ಗೆ ಮಾಹಿತಿ ಪಡೆದು, ಇವರ ಸಾಮರ್ಥ್ಯ ಸೇವೆಗಳನ್ನು ಗುರುತಿಸಿದರು, ಗೌರವಿಸಿದರು.

ರಾಜಕೀಯ ಕುರುಕ್ಷೇತ್ರದ ನಡುವೆಯೂ ಶ್ರೀಮತಿ ಪ್ರಸಾದ ಅವರು ಬರೆವಣಿಗೆಯ ಮೂಲಕ ರಕ್ಷಿಸಿಕೊಂಡು ಬರುತ್ತಿರುವ ಸಾಹಿತ್ಯಾಸಕ್ತಿ ಮೆಚ್ಚುವಂಥದ್ದು. ಇನ್ನೂ ವಿಶೇಷವೆಂಬಂತೆ ಉಡುತಡಿಯ ಜೀರ್ಣೋದ್ಧಾರ, ಮಹಿಳೆಯರ ಹಿತರಕ್ಷಣೆಯ ಹೋರಾಟಗಳು ಅವರ ಸಂಸ್ಕೃತಿಪರ, ಜನಪರ ಕಾಳಜಿಗಳಿಗೆ ನಿದರ್ಶನವೆನಿಸಿವೆ.

ಇಷ್ಟೆಲ್ಲ ರಾಜಕೀಯ, ಸಾಮಾಜಿಕ ಗೊಂದಲ -ಗದ್ದಲಗಳ ನಡುವೆಯೂ ಶ್ರೀಮತಿ ಪ್ರಸಾದ ಅವರು ಕೌಟುಂಬಿಕ ಪ್ರೀತಿ, ಸಾಮಾಜಿಕ ಸಂಬಂಧಗಳೆಂಬ ಪರಮ ಮೌಲ್ಯಗಳನ್ನು ಜೀವಂತವಾಗಿಟ್ಟುಕೊಂಡುದು ವಿಶೇಷ. ಧಾರವಾಡಕ್ಕೆ ಬಂದಾಗಲೆಲ್ಲ ಶ್ರೀಮತಿ ಶಾಂತಾದೇವಿ ಮಾಳವಾಡ ಮೊದಲಾದ ಆತ್ಮೀಯರನ್ನು ತಪ್ಪದೇ ಭೇಟಿಯಾಗುತ್ತಾರೆ. ಬಂಧುಗಳ-ಸ್ನೇಹಿತರ ಮದುವೆ ಇತ್ಯಾದಿ ಸಮಾರಂಭಗಳಲ್ಲಿ ಪಾಲ್ಗೊಂಡು ಸಂತೋಷ ಹಂಚಿಕೊಳ್ಳುತ್ತಾರೆ. ಇಂಥ ಮಾನವೀಯ ಸಂಬಂಧದ ಪ್ರಶ್ನೆ ಬಂದಾಗ ಹೂವಿಗಿಂತ ಮೃದುವಾಗುತ್ತಾರೆ.

ಹೀಗೆ, ವಜ್ರ ಕಠೋರ-ಕುಸುಮ ಕೋಮಲ ಈ ಎರಡೂ ಗುಣಗಳನ್ನು ನಾನು ಅವರಲ್ಲಿ ಗುರುತಿಸಿದ್ದೇನೆ.

---

* "ಸುವರ್ಣ ಬಹುಮುಖಿ" - ಶ್ರೀಮತಿ ಲೀಲಾದೇವಿ ಪ್ರಸಾದ ಅವರ ಅಭಿನಂದನ ಗ್ರಂಥ ಪ್ರಕಾಶಕರು : ಹಂಸಧ್ವನಿ ಪ್ರಕಾಶನ, ಬೆಂಗಳೂರು

ಆಕರ : ಮಾರ್ಗ ಸಂಪುಟ–೬

೧೦೧

ರಾಜಕಾರಣವೆಂಬ ಪೇಟೆಯ ಸಾಚಾ ನಾಣ್ಯ

೨೦೦೪

ಕೆ. ವಿಶ್ವವಾಥ, ಬಸಣ್ಣ ಗುಬ್ಬೇವಾಡ, ಬಸವರಾಜ ಭೀಮಳ್ಳಿ, ಮಹಾರುದ್ರಪ್ಪ ಮೇಳಕುಂದಿ, ಎಂ.ವಾಯ್ ಪಾಟೀಲ - ವಿದ್ಯಾರ್ಥಿಯಾಗಿದ್ದಾಗಲೇ ದೂರದ ನಾನು, ಈ "ಗೆಳೆಯರ ಬಳಗ" ದ ಸ್ನೇಹಿತನಾದೆ. ಕೂಡಿ ಯೋಚಿಸುವ -ಯೋಜಿಸುವ-ಊಟಮಾಡುವ-ಖರ್ಚುಮಾಡುವ ಇವರಲ್ಲಿ "ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ" ಎಂಬ ಅಪೂರ್ವ ಮನೋಧರ್ಮವನ್ನು ಕಂಡೆ.

ಊರಲ್ಲಿರಲಿ, ಪ್ರವಾಸದಲ್ಲಿರಲಿ, ಕೂಡಿಯೇ ಕಾಲ ಕಳೆಯುವುದು ಇವರ ಸ್ವಭಾವ. ಇವರು ಮನೆಯಲ್ಲಿ ಒಬ್ಬರೇ ಊಟ ಮಾಡಿದುದನ್ನು ನಾನು ನೋಡಲೇ ಇಲ್ಲ. ಕನಿಷ್ಠಪಕ್ಷ ಒಬ್ಬನಾದರೂ ಜೊತೆಯಿಲ್ಲದಿದ್ದರೆ ಇವರಿಗೆ ಊಟ ರುಚಿಸುವುದಿಲ್ಲ. ನಾನು ಹೋದರೆ ಮುಗಿಯಿತು, ಎಲ್ಲರೂ- ಕೊನೆಯ ಪಕ್ಷ ಒಬ್ಬಿಬ್ಬರು -ಬರುವುದು, ಹೋಗುವುದು ತಪ್ಪಿದ್ದಲ್ಲ. ಇಂದು ನಾವೆಲ್ಲ ಪ್ರಿನ್ಸಿಪಾಲ, ವಕೀಲ, ಪ್ರಾಧ್ಯಾಪಕ, ಉದ್ಯಮಿ, ಸಾಹಿತಿ - ಹೀಗೆ ಏನೇನೋ ಆಗಿ ಬೆಳೆದಿದ್ದೇವೆ. ಗೆಳೆಯ ಎಂ.ವಾಯ್.ಪಾಟೀಲ ಅವರು ಅಫಜಲಪುರ ಮತಕ್ಷೇತ್ರದ ಶಾಸಕರಾಗುವ ಮೂಲಕ ರಾಜಕಾರಣಿಯಾಗಿ ಬೆಳೆದಿದ್ದಾರೆ.

ಹೊರಗೆ ಮೈಬಣ್ಣ ಕಬ್ಬಿಣದಂತೆ, ಒಳಗೆ ಮನಸ್ಸು ಬಂಗಾರದಂತೆ. ಈ ಮನಸ್ಸಿನ ಪ್ರತೀಕವೆಂಬಂತೆ ಇವರದು ಸೌಮ್ಯ ವ್ಯಕ್ತಿತ್ವ. ಮಾತು ಕಡಿಮೆ, ಆಡಿದ ಮಾತು ಮೃದು. ಅದನ್ನು ಅನುಷ್ಠಾನಗೊಳಿಸುವ ಸಾತ್ವಿಕ ಛಲ. ಇಂಥವರು ಇಂದಿನ ರಾಜಕಾರಣದಲ್ಲಿ ಬಹಳ ದಿನ ಬಾಳಲಾರರು, ತಾಳಲಾರರು- ಎಂದು ನನ್ನ ಅನಿಸಿಕೆ. ಹೀಗಿದ್ದೂ ಶ್ರೀ ಪಾಟೀಲರು ಶುದ್ಧಹಸ್ತದ, ಪರಿಶುದ್ಧ ಮನಸ್ಸಿನ ಶಾಸಕರಾಗಿ ನಿರ್ವಹಿಸಿದ ಜನಸೇವೆ ಇಂದಿಗೂ ಮನೆಮಾತು. ಈಗ ಶ್ರೀ ಪಾಟೀಲರು ರಾಜಕಾರಣದಿಂದ ಒಂದಿಷ್ಟು ದೂರ ಉಳಿದಿದ್ದಾರೆ. ಇವರನ್ನು ನೋಡಿದಾಗಲೆಲ್ಲ "ಖೋಟಾ ನಾಣ್ಯಗಳು ಪೇಟೆಯನ್ನು ಪ್ರವೇಶಿಸಿದಷ್ಟೂ ಸಾಚಾ ನಾಣ್ಯಗಳು ಚಲಾವಣೆಯಿಂದ ದೂರ ಸರಿಯುತ್ತವೆ" ಎಂಬ ಅರ್ಥಶಾಸ್ತ್ರಜ್ಞನೊಬ್ಬನ ಮಾತು ನೆನಪಾಗುತ್ತದೆ.

---

* ಸಾತ್ವಿಕ : ಅಫಜಲ್‌ಪುರ ತಾಲೂಕಿನ ಶಾಸಕ ಶ್ರೀ. ಎಂ.ವಾಯ್. ಪಾಟೀಲರ ಅಭಿನಂದನಗ್ರಂಥ.

ಆಕರ : ಮಾರ್ಗ ಸಂಪುಟ–೬

೧೦೨

ದೊಡ್ಡ ಬರೆಹ - ದೊಡ್ಡ ಬದುಕು

೨೦೦೫

೧೯೭೦ ಇರಬಹುದು. ಕರ್ನಾಟಕ ವಿಶ್ವವಿದ್ಯಾಲಯದ ನನ್ನ ಕೋಣೆಯಲ್ಲಿ ಅಭ್ಯಾಸ ನಿರತನಾಗಿದ್ದೆ. "ಬರಬಹುದೇ?" ಎಂದು ಕೇಳಿ, ಮಧ್ಯಮ ವಯಸ್ಸಿನ ಮಹಿಳೆಯೊಬ್ಬರು ಒಳಗೆ ಬಂದರು. ಓದಿದವಳಾದರೂ ಹಳ್ಳಿಯವಳೂ ಅಲ್ಲದ-ಪಟ್ಟಣದವಳೂ ಅಲ್ಲದ ಚಹರೆ. ಕುಳಿತುಕೊಳ್ಳಲು ಹೇಳಿದೆ. ಪರಿಚಯ ಮುಗಿದು, ಸಾಹಿತ್ಯಿಕ ಚರ್ಚೆಗೆ ಹೊರಳುತ್ತಲೇ ನಾನು ದಂಗಾದೆ. ಅದರಲ್ಲಿಯೂ ಆಧುನಿಕ ಕಾವ್ಯ, ಮಹಿಳಾ ಸಾಹಿತ್ಯ ವಿಚಾರಗಳನ್ನು ಕೇಳುತ್ತಲೇ, ಇದೇನು ಸೆರಗು ಹೊತ್ತ ಗೌರಮ್ಮನಿಂದ ಹೊಸ ಆಲೋಚನೆ, ಹೊಸ ಭಾಷೆ, ತರ್ಕಬದ್ಧ ಮಾತುಗಾರಿಕೆ! ಅಂದು ನನಗಿಂತ ಅವರೇ ಹೆಚ್ಚು ಮಾತನಾಡಿದರು, ಈಗಲೂ ಅಷ್ಟೇ. ಧಾರವಾಡ ಪರಿಸರದಲ್ಲಿಯೂ ಇಂಥ ಪ್ರಬುದ್ಧ ವಿಚಾರದ ಮಹಿಳೆಯನ್ನು ಕಂಡಿರದ ನನಗೆ, ಈ ಗೌರಮ್ಮನ ಬಗೆಗೆ ಗೌರವ ವರ್ಧಿಸಿತು.

ತಾನು ಕವನಗಳನ್ನೂ ಬರೆದಿದ್ದೇನೆ- ಎನ್ನುತ್ತ ಒಂದೆರಡನ್ನು ಓದಿದರು. ಇನ್ನೆರಡನ್ನು ಓದಿಸಿದೆ. ಇವರು ಬೇರೆ ರೀತಿಯ ಲೋಹದಿಂದ ರೂಪಗೊಂಡ ಮಹಿಳೆಯೆಂಬ ಸಂತೋಷಕ್ಕಿಂತ, ಇವರು ಇಷ್ಟು ವರ್ಷ ಅಜ್ಞಾತವಾಸದಲ್ಲಿರುವ ಅಸಂತೋಷ ವರ್ಧಿಸಿತು. ಇನ್ನು ಮೇಲೆ ಇವರು ಮೊದಲಿನಂತೆ ಇರಬಾರದು. ನೇಪಥ್ಯದಿಂದ ರಂಗಕ್ಕೆ ತರಬೇಕೆಂದು ನಿರ್ಧರಿಸಿದೆ. ಇದರ ಪರಿಣಾಮ ಇವರ ಪ್ರಥಮ ಕವನ ಸಂಕಲನದ (ಒಂದು ಗಳಿಗೆ - ೧೯೭೨) ಪ್ರಕಟನೆ. ಇಲ್ಲಿಂದ ಮುಂದೆ ನಮ್ಮ ಪ್ರೀತಿ-ವಿಶ್ವಾಸ ಬೆಳೆದು, ಈಗ ಅಕ್ಕ-ತಮ್ಮ ತಿರುವು ಪಡೆದಿದೆ.

ನನ್ನ ದೃಷ್ಟಿಯಲ್ಲಿ ಶೈಲಜಾ ಸೃಜನಶೀಲ ಸಾಹಿತಿಯಾಗಿ, ವೈಚಾರಿಕ ವ್ಯಕ್ತಿಯಾಗಿ ರೂಪಗೊಂಡದ್ದು ಆಶ್ಚರ್ಯ, ಸೋಜಿಗ. ಈ ಬೆಳವಣಿಗೆಗೆ ಕಾರಣವಾದುದು ಹೊರಗಿನ ಪರಿಸರವಲ್ಲ, ಒಳಗಿನ ಪ್ರತಿಭೆ. "ಒಡಲ ನೂಲಿನಿಂದ ಜೇಡ ನೇಯುವಂತೆ ಜಾಲ", ಇವರು ಬಾಲ್ಯದಲ್ಲಿಯೇ ತಮ್ಮೊಳಗಿನ ಶಕ್ತಿಯನ್ನು ಗುರುತಿಸಿಕೊಂಡು, ಅದನ್ನು ಆಸಕ್ತಿಯನ್ನಾಗಿ ಪರಿವರ್ತಿಸಿಕೊಂಡು, ವ್ಯಕ್ತಿತ್ವದ ಸಾಂಸ್ಕೃತಿಕ ಆಸ್ತಿಯನ್ನಾಗಿ ಬೆಳೆಸಿಕೊಂಡದ್ದು ಸಣ್ಣ ಮಾತಲ್ಲ.

ಎಲ್ಲರಿಗೂ ತಿಳಿದಿರುವಂತೆ ನಮ್ಮ ನಾಡಿನ ಹಿಂದುಳಿದ ಜಿಲ್ಲೆಗಳ ಚರಿತ್ರೆ ರಾಯಚೂರಿನಿಂದಲೇ ಆರಂಭವಾಗುತ್ತದೆ. ಇದರ ಜೊತೆಯ ಇನ್ನೂ ಕೆಲವು ಕೊರತೆಗಳೆಂದರೆ ಉರ್ದು ಮಾಧ್ಯಮದ ವಿದ್ಯಾಭ್ಯಾಸ, ಅಸಾಹಿತ್ಯಿಕ ವಾತಾವರಣ, ಲಿಂಗಾಯತರ ಶೈಕ್ಷಣಿಕ ಅನಾಸಕ್ತಿ, ಇವೆಲ್ಲವುಗಳಿಗಿಂತ ಹೆಚ್ಚಿನ ಅಡಚಣೆಯೆಂದರೆ

ಸ್ತ್ರೀಶಿಕ್ಷಣದ ಉಪೇಕ್ಷೆ. ಈ ಎಲ್ಲ ಬಂಧನಗಳನ್ನು ಕಳಚಿಕೊಂಡು ಬೆಳೆದರೂ ಸಾಹಿತ್ಯಲೋಕದ, ಪ್ರಸಾರಮಾಧ್ಯಮದ ಪಕ್ಷಪಾತಗಳ ಕಾಟ ತಪ್ಪಿದ್ದಲ್ಲ. ಇಂಥ ಆವರಣಗಳನ್ನು ಅನಾವರಣ ಮಾಡಿಕೊಳ್ಳುತ್ತ ಬೆಳೆದು, ಕರ್ನಾಟಕ ಸರಕಾರದ 'ದಾನ ಚಿಂತಾಮಣಿ' ಪ್ರಶಸ್ತಿ ಪಡೆದುದು, ಇವರ ಸ್ವಸಾಮರ್ಥ್ಯಕ್ಕೆ, ಸ್ವಪ್ರಕಾಶ ವ್ಯಕ್ತಿತ್ವಕ್ಕೆ ನಿದರ್ಶನವೆನಿಸಿದೆ.

ಶೈಲಜಾ ನವೋದಯ ಸಂದರ್ಭದ ಸಾಹಿತಿ (ಜನನ ೧೯೩೫). ೧೯೬೫ರ ಸುಮಾರಿಗೆ ಇವರು ಬರವಣಿಗೆ ಆರಂಭಿಸಿದಾಗ "ನವ್ಯ" ಇನ್ನೂ ಹೈದರಾಬಾದ ಪ್ರದೇಶವನ್ನು ಅಷ್ಟಾಗಿ ಪ್ರವೇಶಿಸಿರಲಿಲ್ಲ. ಹೀಗಿದ್ದೂ ಇವರು ಪ್ರತೀಕಾತ್ಮಕ ನವ್ಯದಿಂದಲೇ ಕಾವ್ಯವ್ಯವಸಾಯ ಆರಂಭಿಸಿದುದು, ಬದಲಾದ ಸಂದರ್ಭಕ್ಕೆ ಸ್ಪಂದಿಸುವ ಅವರ ಮನೋಧರ್ಮಕ್ಕೆ ಸಾಕ್ಷಿಯಾಗಿದೆ.

೧೯೪೭ ರ ಹೊತ್ತಿಗೆ ನಮ್ಮ ಅವಿಭಕ್ತ ಕುಟುಂಬಗಳು ವಿಭಕ್ತವಾಗುವಲ್ಲಿ ವ್ಯಕ್ತಿಗಳಿಗೆ ಅರಕ್ಷಿತ ಸ್ಥಿತಿ ನಿರ್ಮಾಣವಾಗುತ್ತಲಿದ್ದಿತು. "ಉಳುವವನೆ ಹೊಲದೊಡೆಯ" ಕಾಯಿದೆ ಕಾರಣವಾಗಿ ಆಸ್ತಿಕಳೆದುಕೊಂಡು, ನೌಕರಿ ಹುಡುಕುತ್ತ ದೂರಹೋದ ಬ್ರಾಹ್ಮಣ ಆಂಗ್ಲಪ್ರಾಧ್ಯಾಪಕರಲ್ಲಿ ಹೆಚ್ಚಿನದಾಗಿ ಅನಾಥಪ್ರಜ್ಞೆಯೂ ಬೆಳೆಯಿತು. ಹೀಗಾಗಿ ಆಂಗ್ಲ ಪ್ರಾಧ್ಯಾಪಕರು ಆಶಯ-ಆಕೃತಿ ಎರಡೂ ದೃಷ್ಟಿಯಿಂದ ನವ್ಯ ಕಾವ್ಯ ಬರೆದರೆ, ಇಂಥ ಪರಿಸ್ಥಿತಿಗೆ ಪಕ್ಕಾಗದ ಕನ್ನಡ ಪ್ರಾಧ್ಯಾಪಕರು ಆಶಯದಲ್ಲಿ ನವೋದಯರಾಗಿಯೇ ಉಳಿದು, ಆಕೃತಿಯಲ್ಲಿ ನವ್ಯರಾಗಿ ಬೆಳೆದರು. ಇದು ಶೈಲಜಾ ಅವರ ಕಾವ್ಯದ ಲಕ್ಷಣವಾದುದು ಸಹಜ.

ಹೀಗಿದ್ದೂ ಮೂಲತಃ ವೈಚಾರಿಕ ನಿಲವಿನ ಇವರಿಗೆ, ಬಂಡಾಯ-ಸ್ತ್ರೀವಾದಿ ಧೋರಣೆಗಳು ಕನ್ನಡದಲ್ಲಿ ಕಣ್ಣು ತೆರೆದದ್ದು, ಒಂದಿಷ್ಟು ಅನುಕೂಲವೇ ಆಯಿತು. ಮೊದಲಿನಿಂದಲೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿದ್ದ ಇವರ ಕವನಗಳು ವಂಚಿತರಿಗೆ ಅವಕಾಶ ಸಿಗಬೇಕೆಂಬ ದನಿಯೆತ್ತಲು ಅವಕಾಶ ಮಾಡಿಕೊಟ್ಟವು. ಆದರೆ ಇವರ ಈ ದನಿಗೆ ಸಾಮಾಜಿಕ ಜವಾಬುದಾರಿ ಇರುವುದನ್ನು ಮರೆಯಲಾಗದು.

"ಕೇಳು ಮಗಾ" (೧೯೯೭) ಇವರ ವಿಶಿಷ್ಟ ಕವನ ಸಂಕಲನ. ಸ್ವಾನುಭವದ ಕಿಡಿಗಳೋ ಮಿಡಿಗಳೋ ಆಗಿರುವ ಇವುಗಳತ್ತ ವಿಮರ್ಶಕರು ಗಮನ ಹರಿಸದುದು ನೋವಿನ ಸಂಗತಿ. ಕನ್ನಡದಲ್ಲಿ ಇದೊಂದು ಹೊಸ ಪ್ರಯೋಗವೆಂದೇ ಹೇಳಬೇಕು.

ಶೈಲಜಾ ಒಂದಿಷ್ಟು ಗದ್ಯ ಬರೆವಣಿಗೆ ಮಾಡಿದ್ದರೂ, ಪದ್ಯವೇ ಅವರನ್ನು ಕನ್ನಡದಲ್ಲಿ ಇಂದು ನಿಲ್ಲಿಸಿರುವ, ಮುಂದೆಯೂ ನಿಲ್ಲಿಸುವ ಆಸ್ತಿ. ಇವರ ಸಮಕಾಲೀನ ಸಂದರ್ಭದಲ್ಲಿ ಯಾವ ಮಹಿಳೆಯೂ ಇಷ್ಟು ಗಟ್ಟಿ ಕವನ ಬರೆಯಲಿಲ್ಲ - ಎಂಬುದನ್ನು ನೆನೆದು ಈ ಮಾತನ್ನು ಹೇಳುತ್ತೇನೆ.

"ಬರೆಹಕ್ಕಿಂತ ಬದುಕು ದೊಡ್ಡದು" ಎಂದು ಅವರೇ ಒಂದು ಕಡೆ ಹೇಳಿದ್ದಾರೆ. ಬರಹದ ಭರದಲ್ಲಿ ಬದುಕನ್ನು ಹಾಳುಮಾಡಿಕೊಳ್ಳುತ್ತಲಿರುವ ಕೆಲವು ಮಹಿಳೆಯರಾದರೂ ಶೈಲಜಾ ಅವರು ತಮ್ಮ ಬಗ್ಗೆ ಬರೆದ "ಮಡದಿಯಾಗಿ ಪತಿಯ ಪ್ರೀತಿ, ದ್ವೇಷ, ಅಸಹಕಾರ, ವಿರಸಗಳ ಜೊತೆಗೆ ಸಾಮರಸ್ಯ, ಆತ್ಮೀಯತೆ ಇವುಗಳನ್ನು ನಾನು ಪಡೆದಿದ್ದೇನೆ. ತಾಯಿಯಾಗಿ, ನಾನು ನನ್ನ ಮಕ್ಕಳಿಗೆ ಸೂಕ್ತ ಶಿಕ್ಷಣ, ಸ್ವಾವಲಂಬನ ಮತ್ತು ಸಾಮರಸ್ಯದ ದಾಂಪತ್ಯ ನಿರ್ವಹಿಸಲು ನಾನೇ ಆದರ್ಶಳಾಗಿದ್ದೇನೆ" ಎಂಬ ಮಾತುಗಳನ್ನು ಓದಬೇಕು.

ಶೈಲಶ್ರೀ (ಶೈಲಜಾ ಉಡಚಣಾ ಅಭಿನಂದನ ಗ್ರಂಥ), ೨೦೦೫.

ಆಕರ : ಮಾರ್ಗ ಸಂಪುಟ–೬

೧೦೩

ವಜ್ರಕುಸುಮ

೨೦೦೬

ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಕನ್ನಡ ಅಧ್ಯಯನ ಸಂಸ್ಥೆಯಾದುದು ಕರ್ನಾಟಕದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮುಖ್ಯ ತಿರುವು. ಈ ಸಂದರ್ಭದಲ್ಲಿ ಬಿಚ್ಚಿಕೊಂಡ ಅನೇಕ ಜ್ಞಾನಶಾಖೆಗಳೊಂದಿಗೆ ಹೆಚ್ಚು ಕಡಿಮೆ ಒಂದೇ ವಯಸ್ಸಿನ ಸಿ.ಪಿ.ಕೆ., ವೆಂಕಟಾಚಲಶಾಸ್ತ್ರಿ, ಜೀ. ಶಂ. ಪ., ಗುರುದತ್ತ, ಸುಧಾಕರ, ಲಕ್ಕಪ್ಪಗೌಡ, ಚನ್ನಯ್ಯ, ಜಿ. ಎಚ್. ನಾಯಕ ಮೊದಲಾದ ಯುವಪ್ರತಿಭೆಗಳು ಪಲ್ಲವಿಸಿದವು. ಇದಕ್ಕೆ ಮೊದಲು ಒಂದೇ ರೀತಿಯ ಮರಗಳ 'ತೋಪು' ಆಗಿದ್ದ ಈ ಸಂಸ್ಥೆ ಈಗ ಹಲವು ರೀತಿಯ ಗಿಡ ಮರಗಳ 'ಅರಣ್ಯ'ವಾಗಿ ಪರಿಣಮಿಸಿತು. ಹಲವು ಶಿಸ್ತು, ಹಲವು ಶಕ್ತಿ, ಹಲವು ಆಸಕ್ತಿ, ಹೆಚ್ಚಿನದಾಗಿ ಹಲವು ಸಾಮಾಜಿಕ ನೆಲೆ-ಹಿನ್ನೆಲೆಗಳ ಈ ಯುವವಿದ್ವಾಂಸರ ಸಂಕೀರ್ಣ ವಿದ್ಯಾರಣ್ಯದಲ್ಲಿ ತಪ್ಪದೇ ಹೆಸರಿಸಬೇಕಾದವರು ಪ್ರೊ. ರಾಗೌ.

ಹೀಗೆ, ಸಂಕೀರ್ಣ ಸಂಸ್ಥೆಯ ಸದಸ್ಯರಾದ ಇವರು ಜಾನಪದ, ವಿಮರ್ಶೆ, ಗ್ರಂಥಸಂಪಾದನೆ, ಕವಿತೆ, ಸಂಶೋಧನ ವ್ಯವಸಾಯಗಳ ಒಬ್ಬ ಸಂಕೀರ್ಣ ವಿದ್ವಾಂಸರಾಗಿರುವುದು, ಇದಕ್ಕೆ ಪೂರಕವೆಂಬಂತೆ ಒಬ್ಬ ಸಮರ್ಥ ಪ್ರಾಧ್ಯಾಪಕರಾಗಿರುವುದು ತುಂಬ ವಿಶೇಷವೆನಿಸಿದೆ.

ರಾಗೌ ಮೊದಲು ನನ್ನ ಗಮನ ಸೆಳೆದುದು ಅವರ "ಕಿಟೆಲ್ ಕೋಶದ ಗಾದೆಗಳು" ಕೃತಿಯ ಮೂಲಕ. ಕಿಟೆಲ್ ಕೋಶ ನಮ್ಮ ಬೈಬಲ್. ನಿತ್ಯ ಕೈಯಾಡಿಸುವ, ಕಣ್ಣಾಡಿಸುವ ಅನಿವಾರ್ಯ ಗ್ರಂಥ. ಇದರಲ್ಲಿ ಗಾದೆಗಳಿದ್ದುದು ನಮಗೂ ಗೊತ್ತಿತ್ತು. ಆದರೆ ಅವುಗಳನ್ನು ಹೊರತೆಗೆದು ಕೃತಿ ರೂಪಿಸಬಹುದೆಂಬುದು ಹೊಳೆದಿರಲಿಲ್ಲ. ರಾಗೌ ಅವರಿಗೆ ಹೊಳೆದು, ನನ್ನಂಥವರು ಹೊಟ್ಟೆಕಿಚ್ಚುಪಡುವಂತೆ ಅದರ ಒಡಲಿನಿಂದ ಸೊಗಸಾದ ಕೃತಿಯನ್ನು ಹೊರಗೆಳೆದರು. ಇನ್ನೂ ಸೊಗಸಾದ ಪ್ರಸ್ತಾವನೆ ಬರೆದು ತಮ್ಮ ಜಾನಪದ ದೃಷ್ಟಿ ವಿಶೇಷವನ್ನು ಅಲ್ಲಿ ತುಂಬಿದರು. ಹಾಡು, ಬಹಳೆಂದರೆ ಕಥೆಗಳೆಂಬ ಜನಪದ ಸಾಹಿತ್ಯಮುಖ್ಯಪ್ರಕಾರಗಳತ್ತ ಎಲ್ಲ ವಿದ್ವಾಂಸರು ತಮ್ಮ ಗಮನವನ್ನು ಕೇಂದ್ರೀಕರಿಸಿದ್ದ ಸಂದರ್ಭದಲ್ಲಿ, "ನಮ್ಮ ಗಾದೆಗಳು", "ನಮ್ಮ ಒಗಟುಗಳು", "ಕನ್ನಡ ಶಿಶುಪ್ರಾಸಗಳು", "ಜನಪದ ನಂಬಿಕೆಗಳು" ಇತ್ಯಾದಿ ಕೃತಿರಚನೆಯ ಮೂಲಕ ಇವರು ಜಾನಪದಕ್ಷೇತ್ರದ ಕೊರತೆಗಳನ್ನು ತುಂಬಿಕೊಟ್ಟರು. "ಪಾಪಿಯ ಕಣ್ಣಿಗೆ ಪರುಷ ಕಲ್ಲಾಗಿ ಇಪ್ಪಂತೆ" ಬಿದ್ದಿದ್ದನ್ನು, ನಮ್ಮ ದಿನ ಬಳಕೆಯ ಈ ಸಾಹಿತ್ಯವನ್ನು 'ಸಂಗ್ರಹ'ದ ನೆಲೆಯಿಂದ 'ಸಂಪಾದನೆ'ಯ ನೆಲೆಗೆ ಏರಿಸಿ ತೋರಿಸಿದರು.

ಆಕರ್ಷಕ ಚಿತ್ರವನ್ನು ಬಣ್ಣದ ಕ್ಯಾನವಸ್ - ಕಣ್ಣು ಸೆಳೆಯುವ ಚೌಕಟ್ಟಿನ ಹಿನ್ನೆಲೆಯಲ್ಲಿ ಇನ್ನೂ ಆಕರ್ಷಕಗೊಳಿಸುವಂತೆ, ಇವುಗಳಿಗೆ ಪ್ರವೇಶರೂಪದ ವೈಜ್ಞಾನಿಕ ಪ್ರಸ್ತಾವನೆಯನ್ನು ಬರೆಯುವಲ್ಲಿ ಜಾನಪದ ಅಧ್ಯಯನಕ್ಕೆ ಹೊಸ ಆಯಾಮಗಳು ಪ್ರಾಪ್ತವಾಗಿ, ಓದುಗರಿಗೆ ಈ ದಿಕ್ಕಿನಲ್ಲಿ ದುಡಿಯುವ ದಾರಿ-ದಿಕ್ಕುಗಳು ಒದಗಿಬಂದವು.

ಹೀಗೆ ಕೇವಲ ಸಾಹಿತ್ಯ ಪ್ರಕಾರಗಳ "ಸಂಪಾದನೆಗೆ" ನಿಲ್ಲದೆ, ಈ ಕ್ಷೇತ್ರಕ್ಕೆ ಸಂಬಂಧಪಟ್ಟ ಸ್ವತಂತ್ರ ಲೇಖನ, ಗ್ರಂಥಗಳನ್ನು ಬರೆದು, ತಾವು ಜಾನಪದ ವಿದ್ವಾಂಸರಾಗಿ ಬೆಳೆಯುತ್ತಿರುವುದನ್ನು ನಮಗೆಲ್ಲ ಆರಂಭದಲ್ಲಿಯೇ ಮನವರಿಕೆ ಮಾಡಿಕೊಟ್ಟರು. ಇಂದು ರಾಗೌ ಅವರನ್ನು ಬಿಟ್ಟು ಜಾನಪದ ಅಧ್ಯಯನ ಚರಿತ್ರೆಯನ್ನು ಕಲ್ಪನೆಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ ಎಂಬಂತೆ ಇವರು ಈ ಕ್ಷೇತ್ರದ ಭಾಗವಾಗಿದ್ದಾರೆ. ಇವರ ಎಲ್ಲ ಕೃತಿಗಳನ್ನು ಸಂಗ್ರಹಿಸಿ "ರಾಗೌ ಜಾನಪದ" ಹೆಸರಿನ ಸಂಕಲನವನ್ನು ಹೊರತಂದರೆ, ಜಾನಪದ ವಿದ್ವಾಂಸರ - ವಿದ್ಯಾರ್ಥಿಗಳ ಅಭ್ಯಾಸಕ್ಕೆ ತುಂಬ ಪ್ರಯೋಜನವಾಗುತ್ತದೆ.

ಇದೆಲ್ಲ ಪರೋಕ್ಷ ಸಂಬಂಧ. ರಾಗೌ ಅವರಿಗೂ ನನಗೂ ಪ್ರತ್ಯಕ್ಷ ಸಂಬಂಧ ಆರಂಭವಾದುದು, "ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು" ವಿಷಯವನ್ನು ಕುರಿತು ಅವರು ಪಿಎಚ್.ಡಿ. ಅಧ್ಯಯನವನ್ನು ಕೈಗೆತ್ತಿಕೊಂಡ ಸಂದರ್ಭದಲ್ಲಿ. ಇದು ನನಗೆ ತುಂಬ ಪ್ರಿಯವಾದ ವಿಷಯ. ಇತಿಹಾಸ ಬೇರೆಯಲ್ಲ, ಸಾಹಿತ್ಯ ಬೇರೆಯಲ್ಲ. ಜೀವನದ ಗತಿಯನ್ನು ಕಲಾತ್ಮಕವಾಗಿ ಲೇಖಿಸುವುದು ಸಾಹಿತ್ಯ, ದಾಖಲಾತ್ಮಕವಾಗಿ ರೇಖಿಸುವುದು ಇತಿಹಾಸ. ಇವೆರಡರ ಸಂಗಮವಾಗಿವೆ ಇತಿಹಾಸಕಾವ್ಯಗಳು. ಈ ಬಗೆಯ ಸಾಹಿತ್ಯವು ಚರಿತ್ರೆ, ಪುರಾಣ, ಪುರಾಣದ ಚರಿತ್ರೀಕರಣ, ಚರಿತ್ರೆಯ ಪುರಾಣೀಕರಣ ಇತ್ಯಾದಿಯಾಗಿ ಕನ್ನಡದಲ್ಲಿ ಸೃಷ್ಟಿಯಾಗುತ್ತ ಬಂದಿದೆ. ರಾಗೌ ಅವರು ಇಂತಹ ಮಹತ್ವಪೂರ್ಣ ವಿಷಯವನ್ನು ವಿಶಿಷ್ಟರೀತಿಯಲ್ಲಿ ಬಿಚ್ಚಿ, ಇನ್ನೂ ವಿಶಿಷ್ಟ ರೀತಿಯಲ್ಲಿ ಕಟ್ಟಿ "ನಾನು ಓದಿದ ಪ್ರಬಂಧಗಳಲ್ಲೆಲ್ಲ ಇದು ಬಹಳ ಮುಖ್ಯವಾದುದು" ಎಂದು ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗುವಂಥ ಕೃತಿಯನ್ನು ಕನ್ನಡಕ್ಕೆ ನೀಡಿದರು. ಮಂಡ್ಯದಲ್ಲಿ ಜರುಗಿದ ಇದರ ಬಿಡುಗಡೆ ಸಮಾರಂಭಕ್ಕೆ ನನ್ನನ್ನು ಅತಿಥಿಯಾಗಿ ಆಮಂತ್ರಿಸುವ ಮೂಲಕ ಅವರು ನನಗೆ ಇನ್ನೂ ಹತ್ತಿರವಾದರು.

ಹೀಗೆ ಸಂಶೋಧನೆ ಮಾಡುವುದರೊಂದಿಗೆ ಅದರ ಇನ್ನೊಂದು ಮುಖವಾದ ಗ್ರಂಥಸಂಪಾದನೆಯಲ್ಲಿಯೂ ರಾಗೌ ದುಡಿಯುತ್ತ ಬಂದರು. ಈ ಮೊದಲು ಪ್ರಕಟವಾಗಿದ್ದರೂ ಸಾಹಸಭೀಮವಿಜಯಂ, ಅಜಿತತೀರ್ಥಕರ ಪುರಾಣಂ ಎಂಬ ಹಳಗನ್ನಡ ಕೃತಿ, ಜೈಮಿನಿಭಾರತ ಎಂಬ ನಡುಗನ್ನಡ ಕೃತಿಗಳ "ಪಾಠ ವಿಮರ್ಶೆ" ನಡೆಸಿ ಕನ್ನಡದ ಎರಡು ಭಾಷಾ ಅವಸ್ಥೆಗಳ ಹಿನ್ನೆಲೆಯಲ್ಲಿ ಅವುಗಳನ್ನು ಪರಿಷ್ಕರಿಸಿ ಕೊಟ್ಟರು. ಹೀಗೆ "ಗ್ರಂಥಸಂಪಾದನೆ"ಯ ಜೊತೆ ವಿದ್ವಾಂಸರ ಲೇಖನಗಳನ್ನು ಸಂಗ್ರಹಿಸಿ 'ಸಂಪಾದನ' ಕೃತಿಗಳನ್ನು ಪ್ರಕಟಿಸುವ ಮೂಲಕವೂ ಅಂದಂದಿನ ಚಾರಿತ್ರಿಕ ಸಂದರ್ಭಗಳಿಗೆ ಸರಿಯಾಗಿ ಸ್ಪಂದಿಸಿದರು.

ವಿದ್ವತ್ತಿನಂತೆ ರಾಗೌ ಅವರ ಇನ್ನೊಂದು ಮುಖ ವಿಮರ್ಶೆ. ಇಲ್ಲಿ ರಾಘವಾಂಕ, ದುರ್ಗಸಿಂಹರಂಥ ಪ್ರಾಚೀನ ಕವಿಗಳ, ಕುವೆಂಪು ಅವರಂಥ ಆಧುನಿಕ ಕವಿಗಳ ಬಗೆಗೆ ಸಮಗ್ರ ವಿಮರ್ಶಾಕೃತಿಗಳನ್ನು, ಹೆಚ್ಚಿನದಾಗಿ ವಿಮರ್ಶಾ ಪ್ರಬಂಧಸಂಕಲನಗಳನ್ನು ಪ್ರಕಟಿಸಿ, ಸಾಹಿತ್ಯ ಗ್ರಹಣದ ತಮ್ಮ ನಿಲುವು-ನೀತಿಗಳನ್ನು ಕಾಣಿಸಿಕೊಟ್ಟರು.

ಇದರ ಜೊತೆಗೆ ಆಗಾಗ ಕವನ ಬರೆದಿದ್ದರೂ ರಾಗೌ ಅವರದು ಪ್ರಧಾನವಾಗಿ ಸಂಶೋಧನ ಪ್ರತಿಭೆ -ವಿಮರ್ಶನ ಪ್ರತಿಭೆಯೆಂದೇ ಹೇಳಬೇಕು. ಸೃಜನಪ್ರತಿಭೆಯೆನ್ನುವುದು ಕಾಣುವುದು-ಕಟ್ಟುವುದು ಈ ಎರಡೂ ನೆಲೆಗಳಲ್ಲಿ ಜರುಗುವ ಕ್ರಿಯೆಯಾಗಿರುವುದೆಂಬ ಸತ್ಯದ ಬೆಳಕಿನಲ್ಲಿ ಹೇಳುವುದಾದರೆ, ರಾಗೌ ಅವರನ್ನು ಸೃಜನ ಸಂಶೋಧಕ, ಸೃಜನ ವಿಮರ್ಶಕರೆಂದು ಕರೆಯಬೇಕಾಗುತ್ತದೆ. ಹೀಗಿದ್ದೂ ಅವರು ಕಲ್ಪನೆನಿಷ್ಠ ಸೃಜನಶೀಲತೆಯಲ್ಲಿಯೂ ದುಡಿದು, ಎರಡು ಕವನ ಸಂಕಲನಗಳನ್ನು ಹೊರತಂದಿದ್ದಾರೆ.

ಜಾನಪದ ಮನಸ್ಸಿಗೆ ಸರಳವಾಗಿ ಬಾಳುವುದು, ಸರಳವಾಗಿ ಬರೆಯುವುದೆಂದರೆ ತುಂಬ ಇಷ್ಟ. ಹೀಗಾಗಿ ಸರಳ ಬಾಳು-ಸರಳಭಾಷೆಯ ಬಾಲಕರಿಗಾಗಿ ರಾಗೌ ಬರೆದ "ಮಕ್ಕಳ ಸಾಹಿತ್ಯ"ದಲ್ಲಿ ಅಂಥ ಮನಸ್ಸಿನ ಪರಿಚಲನೆಯನ್ನು ಕಾಣಬಹುದು.

ಹೀಗೆ ವಿವಿಧ ವಿಸ್ತಾರಗಳಲ್ಲಿ ಸಾಹಿತ್ಯ ಪ್ರಕಟಿಸಿದರೂ, ಅವರ ಶಕ್ತಿಗೆ ಇನ್ನೂ ಬೇರೆ ಬೇರೆ ಆಸಕ್ತಿಗಳಿವೆಯೆಂಬುದನ್ನು, ಬೇರೆ ಬೇರೆ ಸಾಮರ್ಥ್ಯಗಳಿವೆಯೆಂಬುದನ್ನು ನಾನು ಬಲ್ಲೆ. ರಾಗೌ ಇವುಗಳನ್ನು ದುಡಿಸಿಕೊಳ್ಳಲಿಲ್ಲ, ನಮಗೆ ಬಿಡಿಸಿಕೊಡಲಿಲ್ಲವೆಂಬ ನೋವು ನನ್ನದಾಗಿದೆ.

ಇದೆಲ್ಲ ಸಾಹಿತಿ ರಾಗೌ ಅವರ ಲೇಖನಕ್ರಿಯೆ, ಇಷ್ಟೇ ಮುಖ್ಯವಾದುದು ಅವರ ಬೋಧನ ಕ್ರಿಯೆ. ಇವುಗಳಲ್ಲಿ ಒಂದು ವಾಚನ ಪಾತಳಿಯದು ಇನ್ನೊಂದು ಶ್ರವಣ ಪಾತಳಿಯದು. ಈ ಎರಡೂ ಪಾತಳಿಗಳಿಗೆ ಅವರದು ಪ್ರಾಮಾಣಿಕ ಬದುಕು. ಅವರ ಲೇಖನ - ಬೋಧನ ಬದುಕಿಗಿಂತ ನಾನು ಹೆಚ್ಚು ಮೆಚ್ಚಿಕೊಂಡುದು ರಾಗೌ ಅವರ 'ಹದ'ವಾದ ವ್ಯಕ್ತಿ ಬದುಕನ್ನು. ಈ ಹದದ ರೀತಿ ವಜ್ರಾದಪಿ ಕಠಿಣ, ಮೃದೂನಿ ಕುಸುಮಾದಪಿ. ಕಠಿಣವೆಂದರೆ ಕಠಿಣ, ಮೃದುವೆಂದರೆ ಮೃದು. ಈ ಎರಡೂ ಲೋಹಗಳು ಅವರಲ್ಲಿ ಕೃತಕವಾಗಿಯಲ್ಲ, ನೈಸರ್ಗಿಕವಾಗಿವೆ. ಆದುದರಿಂದ ಅವರನ್ನು ನೋಡಿದಾಗಲೆಲ್ಲ ನನಗೆ ನೆನಪಿಗೆ ಬರುವುದು "ವಜ್ರಕುಸುಮ."

ಅಭಿಜಾತ : ಡಾ. ರಾಗೌ ಅಭಿನಂದನ ಗ್ರಂಥ (೨೦೦೬).

ಆಕರ : ಮಾರ್ಗ ಸಂಪುಟ-೬

■■

೧೦೪

ಅಕ್ಕ

೨೦೦೭

ಮಹಾದೇವಿ ಅಕ್ಕನನ್ನು ಬಿಟ್ಟರೆ, ಅಕ್ಕ ಎಂದಾಕ್ಷಣ ನನಗೆ ನೆನಪಾಗುವವರಲ್ಲಿ ಜಯಾ ರಾಜಶೇಖರ ಮುಖ್ಯರು. ನಾನು ಧಾರವಾಡದವನು, ಇವರು ಬೆಂಗಳೂರಿನವರು. ವೃತ್ತಿಯಿಂದ ನಾನು ಶಿಕ್ಷಕ, ಇವರು ಗೃಹಿಣಿ. ಹೀಗಿದ್ದೂ ನಮ್ಮಿಬ್ಬರನ್ನು ಸಮೀಪ ತಂದುದು ಸಾಹಿತ್ಯ, ಶರಣಸಾಹಿತ್ಯ.

ಮೈಸೂರು ವಿಶ್ವವಿದ್ಯಾಲಯದ ಅಂಚೆ ತೆರಪಿನ ಶಿಕ್ಷಣದ ಮೂಲಕ ಇವರು ಕನ್ನಡ ಎಂ. ಎ. ಮುಗಿಸಿದರು. ಅಲ್ಲಿ ನಾನು ನೀಡಿದ ವಿಶೇಷೋಪನ್ಯಾಸದಿಂದಾಗಿ ಇಬ್ಬರೂ ಪರಿಚಿತರಾದೆವು. ಬೆಂಗಳೂರಿನಲ್ಲಿ 'ಶೂನ್ಯಸಂಪಾದನೆಯ ರಾಚನಿಕ ಸ್ವರೂಪ' ವಿಷಯವನ್ನು ಕುರಿತು ನಾನು ನೀಡಿದ ಉಪನ್ಯಾಸ ನಮ್ಮಿಬ್ಬರನ್ನು ಇನ್ನೂ ಹತ್ತಿರವಾಗಿಸಿತು. ಆಮೇಲೆ ಸಂಪರ್ಕ ಬೆಳೆಯುತ್ತ ನಡೆದು, ಈಗ ನಾನು ಮತ್ತು ನನ್ನ ಹೆಂಡತಿ ಉಮಾ ಅವರ ಕುಟುಂಬದ ಸದಸ್ಯರೇ ಆಗಿದ್ದೇವೆ.

ನನಗೆ ಆಧುನಿಕ ಜೀವನಶೈಲಿಯ ಕುಟುಂಬಕ್ಕಿಂತ ಸಾಂಪ್ರದಾಯಿಕ ಕುಟುಂಬವೆಂದರೆ ತುಂಬ ಇಷ್ಟ. ಜಯಾ ಅವರದು ಬೆಂಗಳೂರಿನ ಕೆಲವೇ ಸಾಂಪ್ರದಾಯಿಕ ಪ್ರತಿಷ್ಠಿತ ಲಿಂಗಾಯತ ಕುಟುಂಬಗಳಲ್ಲಿ ಒಂದು. ಇವರಂತೆ ಇವರ ಯಜಮಾನರಾದ ಡಾ. ರಾಜಶೇಖರ ಅವರೂ ಸಾತ್ವಿಕರು, ಸಭ್ಯರು. ಈ ಕಾರಣ ಅವರ ಇಡೀ ಪರಿವಾರ ನನಗೆ ಆಪ್ತವೆನಿಸಿದೆ, ಆತ್ಮೀಯವೆನಿಸಿದೆ. ಹೀಗಾಗಿ ಜಯಾ ಅವರು ತಮ್ಮ ಸುಖಗಳನ್ನು, ಅದಕ್ಕಿಂತ ಕಷ್ಟಗಳನ್ನು ನನ್ನೊಂದಿಗೆ ಹಂಚಿಕೊಳ್ಳುವ ಮುಗ್ಧ ಸಂಬಂಧ ಬೆಳೆಸಿಕೊಂಡಿದ್ದಾರೆ. ಜಯಾ ಅವರು ಹುಟ್ಟಿದ್ದು ಬೆಳೆದದ್ದು ದೊಡ್ಡ ಕುಟುಂಬದಲ್ಲಿ. ಅದು ದೊಡ್ಡದಿದ್ದಷ್ಟು ಸುಖಗಳಂತೆ ಕಷ್ಟಗಳ ಪ್ರಮಾಣವೂ ದೊಡ್ಡದು. ಮೃದುಸ್ವಾಭಾವದ ಇವರಿಗೆ ಒಂದು ಸಣ್ಣ ನೋವು ದೊಡ್ಡ ಆಘಾತವಾಗಿ ಪರಿಣಮಿಸುತ್ತದೆ. ಆಗೆಲ್ಲ ಭೇಟಿ ಇಲ್ಲವೆ ದೂರವಾಣಿಯ ಮೂಲಕ ಮಾತನಾಡಿ ಮನಸ್ಸು ಹಗುರ ಮಾಡಿಕೊಳ್ಳುತ್ತಾರೆ.

ಜಯಾ ಅವರು ಒಮ್ಮೆ ಧಾರವಾಡಕ್ಕೆ ಬಂದು ನಮ್ಮ ಅತಿಥಿಯಾಗಿ ಉಳಿದಿದ್ದರು. ಆ ಸಂದರ್ಭದಲ್ಲಿ ಅವರ ಸಂಗೀತ, ಗಮಕ, ಸಾಹಿತ್ಯ ಇತ್ಯಾದಿ ಆಸಕ್ತಿಗಳ ಪರಿಚಯ ಗಾಢವಾಯಿತು. ಹೀಗಿದ್ದೂ ನಮ್ಮ ಆತ್ಮೀಯತೆಯ ಸಾಂದ್ರತೆಗೆ ಸಾಹಿತ್ಯವೇ ಮುಖ್ಯ ಸೇತುವೆಯೆನಿಸಿದೆ.

ಇವರು ಸಾಹಿತ್ಯಕ್ಕೆ ಒಲಿಯಲು ಶ್ರೀ ಜೋಳದರಾಶಿ ದೊಡ್ಡಣ್ಣಗೌಡರ ಶೂನ್ಯಸಂಪಾದನೆಯ ಗಮಕವೇ ಮೂಲಬೀಜವಾದಂತಿದೆ. ಅಂದಿನಿಂದ ಆ ಒಲವನ್ನು ಬೆಳೆಸಿಕೊಳ್ಳುತ್ತ ಬಂದು ಶರಣಸಾಹಿತ್ಯ, ಜೀವನ ಚರಿತ್ರೆ,

ಪ್ರವಾಸಕಥನ, ವ್ಯಕ್ತಿಚಿತ್ರ, ರೇಡಿಯೋ ನಾಟಕ, ಕವನ ಮೊದಲಾದ ನೆಲೆಗಳಲ್ಲಿ ದುಡಿದಿದ್ದಾರೆ. ಕನ್ನಡಕ್ಕಾಗಿ ದುಡಿಯುವವರೆಂದರೆ ನನಗೆ ತುಂಬ ಪ್ರೀತಿ. ಅವರವರ ಒಲವು ನೋಡಿ, ಅವರನ್ನು ಕನ್ನಡದ ದಾರಿಗೆ ಎಳೆಯುವುದು, ಪ್ರೋತ್ಸಾಹಿಸುವುದು ನನ್ನ ಸ್ವಭಾವವಾಗಿ ಬಿಟ್ಟಿದೆ.

ಜಯಾ ಅವರ ಬರವಣಿಗೆ ಲಲಿತವಾದುದು ಎಂಬುದನ್ನು ಗುರುತಿಸಿದ ನಾನು, ಅವರಿಂದ ಎಲೆ ಮಲ್ಲಪ್ಪಶೆಟ್ಟರು, ವಾಣಿ ಮರುಳಯ್ಯನವರು, ಡಿ. ಎಂ. ಚಂದ್ರಶೇಖರ್ ಶೀರ್ಷಿಕೆಯ ಜೀವನ ಚರಿತ್ರೆ ಬರೆಯಿಸಿದೆ. ಲಿಂಗಲೀಲಾ ವಿಲಾಸ ಚಾರಿತ್ರವು ಲಿಂಗಾಯತ ಸಿದ್ಧಾಂತದ ಮಹತ್ವದ ಕೃತಿ. ಅದರ ಸಂಗ್ರಹ ಅವಶ್ಯವೆಂದು ಸೂಚಿಸುತ್ತಲೇ ಅವರು ಆ ಕಾರ್ಯವನ್ನು ಪೂರೈಸಿದರು. ಈ ನಾಲ್ಕು ಪುಸ್ತಕಗಳನ್ನು ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಮಠದ "ಲಿಂಗಾಯತ ಅಧ್ಯಯನ ಸಂಸ್ಥೆ"ಯ ಮೂಲಕ ಪ್ರಕಟಿಸುವ ವ್ಯವಸ್ಥೆ ಮಾಡಿದೆ. (ಅದೇ ರೀತಿ ನನ್ನ ಸೂಚನೆಯ ಮೇರೆಗೆ ಶೂನ್ಯ ಸಂಪಾದನೆಯನ್ನೂ ಸಂಗ್ರಹಿಸಿದರು.)

ಶೂನ್ಯಸಂಪಾದನೆ ಜಯಾ ಅವರ ಪ್ರೀತಿಯ ಗ್ರಂಥ. ಈ ಪ್ರೀತಿ ಭಕ್ತಿಯಾಗಿಯೂ ಬೆಳೆದಿದೆ. ಮೂಲತಃ ಒಂದು ಗ್ರಂಥವಾಗಿರುವ ಅದು ಮತ್ತೆ ಮತ್ತೆ ಪರಿಷ್ಕರಣೆಗೊಳ್ಳುತ್ತ ನಡೆದು, ಒಟ್ಟು ನಾಲ್ಕು ಆವೃತ್ತಿ (ನನ್ನ ಪ್ರಕಾರ ಐದು)ಗಳು ಹುಟ್ಟಿಕೊಂಡಿವೆ. ಹೀಗಿರುವಾಗ ನಮ್ಮ ಕಾಲದ ಮೌಲ್ಯಗಳನ್ನು ಅಳವಡಿಸಿ, ಇನ್ನೊಂದು ಶೂನ್ಯಸಂಪಾದನೆಯನ್ನೇಕೆ ನಾವು ರಚಿಸಬಾರದು? ಎಂಬ ನನ್ನ ಸೂಚನೆಯ ಎಳೆ ಹಿಡಿದು ಅವರು ಇನ್ನೊಂದು ಶೂನ್ಯಸಂಪಾದನೆಯನ್ನು ರೂಪಿಸಿದರು. ಈ ಸಂದರ್ಭದಲ್ಲಿ ಅವರ ಜ್ಞಾನದ ಹಸಿವು, ಪ್ರಯತ್ನಶೀಲತೆಗಳನ್ನು ಗುರುತಿಸಿದ್ದೇನೆ. ಚರ್ಚೆ, ಶ್ರಮ ಇವುಗಳ ವಿಷಯದಲ್ಲಿ ಅವರಿಗೆ ದಣಿವೆಂಬುದೇ ಇಲ್ಲ. ಇವೆಲ್ಲದರ ಫಲವಾಗಿ ಹೊಸ ಶೂನ್ಯಸಂಪಾದನೆ ಸೃಷ್ಟಿಯಾಯಿತು. ಇದಕ್ಕೆ ಪೂರಕವೆಂಬಂತೆ ಅಕ್ಕಮಹಾದೇವಿ ಸಂಪಾದನೆ (ವ್ಯಾಖ್ಯಾನ), ಶೂನ್ಯಸಂಪದ, ಶೂನ್ಯಸಂಪಾದನೆಯಲ್ಲಿ ಸ್ತ್ರೀಪಾತ್ರಗಳು, ಶೂನ್ಯಸಂಪಾದನೆಗಳು ಹೆಸರಿನ ಕೃತಿಗಳನ್ನೂ, ಮಹದೇವಿಯಕ್ಕ, ಪ್ರಭುದೇವರ ಆರೋಗಣೆ, ಮುಕ್ತಾಯಕ್ಕ ಅವರ ಸಂಪಾದನೆಗಳ ಕ್ಯಾಸೆಟ್‌ನ್ನೂ ಬೆಳಕಿಗೆ ತಂದಿದ್ದಾರೆ. ಹೀಗಾಗಿ ಹೊಸ ಶೂನ್ಯಸಂಪಾದನೆ ಏಕೆ, ಅವರು ಸೃಷ್ಟಿಸಿರುವ ವಿಪುಲವಾದ ಶೂನ್ಯಸಂಪಾದನ ಸಾಹಿತ್ಯವು ಕನ್ನಡಕ್ಕೆ ವಿಶೇಷ ಕೊಡುಗೆ ಎನಿಸಿದೆ. ಕನ್ನಡದಲ್ಲಿ ಈ ಮಹಾಕೃತಿಯ ಮುಖ್ಯ ಅಭ್ಯಾಸಿಗಳಲ್ಲಿ ಜಯಾ ಅವರು ಒಬ್ಬರೆನಿಸಿದ್ದಾರೆ. ಹೀಗೆ ನಡೆಸಿದ ಈ ಮಹತ್ವದ ಕೃತಿಯ ಒಡನಾಟದಿಂದಾಗಿ, ಇವರು ಅಲ್ಲಿಯ ಪಾತ್ರಗಳಂಥ ಶರಣ ಜೀವನವನ್ನು ರೂಪಿಸಿಕೊಂಡಿದ್ದಾರೆ. ಇದರಿಂದಾಗಿ ಬದುಕು-ಬರಹಗಳಲ್ಲಿ ಸಮನ್ವಯ ಸಾಧಿಸಿದ ವಿರಳವ್ಯಕ್ತಿ ಎನಿಸಿದ್ದಾರೆ.

ಕನ್ನಡದ ಮಹಿಳಾಸಾಹಿತಿಗಳಲ್ಲಿ ಕಥೆ ಕಾದಂಬರಿ ಮೊದಲಾದ ಆಧುನಿಕ ಸಾಹಿತ್ಯ ಕೃಷಿಕರು, ಪ್ರಾಚೀನ ಸಾಹಿತ್ಯದ ಅಧ್ಯಯನ-ವ್ಯಾಖ್ಯಾನ ಕೃಷಿಕರು ಎಂಬ ಎರಡು ವರ್ಗಗಳು ಬೆಳೆದು ಬಂದಿವೆ. ಪರಸ್ಪರ ಪೂರಕವೆನಿಸುವ ಈ ಎರಡು ಕ್ಷೇತ್ರಗಳಿಗೆ ಸಮಾನ ಗೌರವ ಸಿಗುವುದು ಅವಶ್ಯವಿದೆ. ಹಾಗೆ ಸಿಗುವುದೇ ಆದಲ್ಲಿ ಶ್ರೀಮತಿ ಜಯಾ ಅವರಿಗೆ ಸಹಜವಾಗಿಯೇ ಇನ್ನೂ ಹೆಚ್ಚಿನ ಸ್ಥಾನಗೌರವ ಪ್ರಾಪ್ತವಾಗುತ್ತದೆ. ಆ ಕಾಲ ಬೇಗ ಕೂಡಿಬರಲೆಂದು ಹಾರೈಸುತ್ತೇನೆ.

ಶೂನ್ಯ ಪಥಿಕಾ : ಜಯಾ ರಾಜಶೇಖರ ಅಭಿನಂದನ ಗ್ರಂಥ, ೨೦೦೭.

ಆಕರ : ಮಾರ್ಗ ಸಂಪುಟ–೬

೧೦೫

ಫೀನಿಕ್ಸ ಪಕ್ಷಿ

೨೦೦೭

ಒಂದೇ ಊರಿನಲ್ಲಿದ್ದರೂ, ವೃತ್ತಿ-ಪ್ರವೃತ್ತಿಯಲ್ಲಿ ಶಿಕ್ಷಕ-ಸಾಹಿತಿಗಳಾಗಿದ್ದರೂ, ಮಾಲತಿಯವರ ಮತ್ತು ನನ್ನ ಪರಿಚಯ ವಿಶ್ವಾಸವಾಗಿ ಬೆಳೆದುದು ತೀರ ತಡವಾಗಿ. ಈ ವಿಲಂಬಕ್ಕೆ ಕಾರಣ ಅವರು ನನ್ನ ಸಹಪಾಠಿಗಳಲ್ಲ. ಅವರ ವಿಷಯ ಇಂಗ್ಲಿಷ್, ನನ್ನದು ಕನ್ನಡ. ಅವರ ಕ್ಷೇತ್ರ ಸೃಜನ, ನನ್ನದು ಸಂಶೋಧನ. ಅವರ ವೃತ್ತಿನೆಲೆ ವಿದ್ಯಾಗಿರಿ, ನನ್ನದು ಪಾವಟೆಗಿರಿ. ಇನ್ನೂ ಮುಖ್ಯ ಕಾರಣ, ನಾವು ಆಧುನಿಕ ಸಂದರ್ಭದ ಮುಕ್ತ ಸಾಮಾಜಿಕರಲ್ಲ.

ಮಾಲತಿಯವರ ಕೌಟುಂಬಿಕ ಜೀವನದಲ್ಲಿ ದುರಂತ ಸಂಭವಿಸಿತು. ಒಂದೆರಡು ಸಲ ಆಕಸ್ಮಿಕ ಭೆಟ್ಟಿಯಲ್ಲಿ ತಮ್ಮ ನೋವನ್ನು ನನ್ನ - ನನ್ನ ಶ್ರೀಮತಿಯ ಮುಂದೆ ತೋಡಿಕೊಂಡರು. ಆಮೇಲೆ ಆ ವಿಷಯವನ್ನು ಮತ್ತೆ ಪ್ರಸ್ತಾಪಿಸಲಿಲ್ಲವಾದರೂ ಅವರನ್ನು ಕಂಡಾಗಲೆಲ್ಲ, ಮುರಿದ ಬದುಕನ್ನು ಅವರು ಮತ್ತೆ ಕಟ್ಟಿಕೊಳ್ಳುತ್ತಲಿದ್ದ ವಿಧಾನ ಹೆಮ್ಮೆ ಹುಟ್ಟಿಸುತ್ತಿದ್ದಿತು. ಈಗ ತಮ್ಮ ಬದುಕಿಗೆ ಸ್ಥಿರತೆಯನ್ನು, ತಬ್ಬಲಿ ಮಕ್ಕಳ ಬದುಕಿಗೆ ಪ್ರಗತಿಯನ್ನು ಕಲ್ಪಿಸುವ ಜೋಡು ಜವಾಬ್ದಾರಿಯನ್ನು ಮಾಲತಿ ಸರಿಯಾಗಿ ನಿರ್ವಹಿಸಿದರು. ಕರ್ತವ್ಯದೃಷ್ಟಿಯಿಂದ ತಾಯಿ ಮಾಲತಿ, ಅವರಿಗಿಂತ ಮಕ್ಕಳಾದ ಶ್ರೀಶೈಲ, ಸೀಮಾ ದೊಡ್ಡ ರೀತಿಯಲ್ಲಿ ನಡೆದುಕೊಂಡರೆಂದು ನಾನು ಈ ಸಂದರ್ಭವನ್ನು ವ್ಯಾಖ್ಯಾನಿಸುತ್ತೇನೆ.

ಮಾಲತಿಯವರು ನಮಗೆಲ್ಲ ಆಪ್ತರಾಗಲು ಕಾರಣ, ಅವರ ಬರವಣಿಗೆ. ಮಹಿಳೆಯರು ಸಾಂಪ್ರದಾಯಿಕ ಬರೆಹದಿಂದ ಬಿಡಿಸಿಕೊಂಡು, ಆಧುನಿಕ ಕಥೆ ಕಾದಂಬರಿ ಕ್ಷೇತ್ರಗಳನ್ನು ಪ್ರವೇಶಿಸುತ್ತಲಿದ್ದ ಸಂದರ್ಭ. ಇಂಥ ಸಮಯದಲ್ಲಿ ಕಾವ್ಯಕ್ಷೇತ್ರಕ್ಕೆ ನುಗ್ಗಿದ ಮೊದಲಿಗರಲ್ಲಿ ಮಾಲತಿ ಮುಖ್ಯರು. ದಂಪತಿಗಳು ಬರೆಹಗಾರರಾಗಿದ್ದರೆ, ಹೆಂಡತಿಯ ಕೃತಿಯನ್ನು ಸಂದೇಹಿಸುತ್ತಿದ್ದ ಕಾಲವದು. ದಾಂಪತ್ಯ ಬಿರುಕು ಬಿಟ್ಟ ಬಳಿಕವೂ ಸಾಹಿತ್ಯಸೃಷ್ಟಿ ಮುಂದುವರಿಸಿ, ಹಾಗೆ ಸಂದೇಹಿಸುತ್ತಿದ್ದವರಿಗೆ ಅವರು ಉತ್ತರವಾಗಿ ಬೆಳೆದರು.

ಗದ್ಯದಲ್ಲಿ ಕೈಯಾಡಿಸಿದ್ದರೂ ಪದ್ಯ ಮಾಲತಿಯವರ ಸಾಧನೆ - ಸಿದ್ಧಿ. ಕನ್ನಡದ ಮಟ್ಟಿಗೆ ಹೇಳುವುದಾದರೆ ನವ್ಯಕಾವ್ಯಕ್ಕೆ ಇಂಗ್ಲಿಷ್ ಅಧ್ಯಾಪಕರ ಕೊಡುಗೆ ಅಪಾರ. ಅದರ ಪ್ರಯೋಗ ಪ್ರಸಿದ್ಧಿಗಳಿಗೆ ಅವರೇ ಕಾರಣ. ಹೀಗಿದ್ದೂ ಇಲ್ಲಿ ಇಂಗ್ಲಿಷ್ ಅಧ್ಯಾಪಿಕೆಯರದು ಗೈರುಹಾಜರಿ. ಈ ಪರಿಸರದಲ್ಲಿಟ್ಟು ನೋಡಿದರೆ ಇಂಗ್ಲಿಷ್ ಅಧ್ಯಾಪಿಕೆ ಮಾಲತಿಯವರ ಹಾಜರಿ ಎದ್ದು ಕಾಣುತ್ತದೆ.

ಅನಾಥಪ್ರಜ್ಞೆ, ಏಕಾಕಿತನ ಇತ್ಯಾದಿಗಳು ನವ್ಯಕಾವ್ಯದ ಮುಖ್ಯ ಲಕ್ಷಣ. ಇದು ಕವಯಿತ್ರಿ ಮಾಲತಿಯವರ ಜೀವನವೇ ಆಗಿದೆ. ಹೀಗಿದ್ದೂ ಅವರು ಕಾವ್ಯದಲ್ಲಿ ಜೀವಮುಖಿಯಾಗಿ ವಿಜೃಂಭಿಸುತ್ತಾರೆ. ಮೂಲತಃ ಬದುಕನ್ನು ಗಾಢವಾಗಿ ಪ್ರೀತಿಸುವ ಅವರ ಮನೋಧರ್ಮ ಇದಕ್ಕೆ ಕಾರಣವೆನ್ನಬೇಕು. ಹೀಗಾಗಿ ಅವರ ಬರೆಹ ಓದುಗರಲ್ಲಿ ಆಶಾವಾದವನ್ನು ತುಂಬುತ್ತದೆ. ಈ ಜೀವನಪ್ರೀತಿ ಕಾರಣವಾಗಿ ಅಕ್ಕ ಸುಲೋಚನಾ ಅವರಂತೆ ಒಂದು ಮಿತಿಯಲ್ಲಿ ಆಪ್ತವಲಯ ಕಟ್ಟಿಕೊಂಡು, ಸಾರ್ವಜನಿಕ ಕಾರ್ಯಕಲಾಪಗಳನ್ನು ನಿರ್ವಹಿಸುವುದು ಅವರಿಗೆ ಸಾಧ್ಯವಾಗಿದೆ.

ಕನ್ನಡದಲ್ಲಿ ಲೇಖಕಿಯರ ಬರೆವಣಿಗೆಗೆ, ಬೆಳವಣಿಗೆಗೆ ಸೂಕ್ತ ವೇದಿಕೆ-ಅವಕಾಶಗಳಿಲ್ಲ. ಅದರಲ್ಲೂ ಮಾಲತಿಯವರಂಥ ಅಸಹಾಯಕರು ಇಂಥ ವೇದಿಕೆ ಅವಕಾಶಗಳಿಂದ ವಂಚಿತರಾಗುವುದು ಸಹಜ. ಕೆಲವೊಮ್ಮೆ ಮುಂದೆ ಬಂದರೂ ಮುಜಗರದ ಸಂದರ್ಭಗಳು ಸೃಷ್ಟಿಯಾಗುತ್ತವೆ. ಮಾಲತಿಯವರು ಇಂಥ ಸಾರ್ವಜನಿಕ ಸಂದರ್ಭಗಳಲ್ಲಿ ಅನುಭವಿಸುತ್ತಲಿರುವ ಸಂಕೋಚ, ಅದನ್ನು ನಿಭಾಯಿಸುತ್ತಿರುವ ರೀತಿ ಶ್ಲಾಘನೀಯವಾದುದು.

ಹೀಗೆ ಕೌಟುಂಬಿಕ ಅಸಹಾಯಕತೆ, ಸಾರ್ವಜನಿಕ ಸಂಕೋಚಗಳ ನಡುವೆಯೂ ದಿಟ್ಟ ಹೆಜ್ಜೆಯಿಟ್ಟು ನಡೆದುಬಂದ ಮಾಲತಿಯವರನ್ನು ಕಂಡಾಗಲೆಲ್ಲ ಮರುಹುಟ್ಟು ಪಡೆದ ಫೀನಿಕ್ಸ ಪಕ್ಷಿ ನೆನಪಾಗುತ್ತದೆ.

ಮಂದಾರ : ಪ್ರೊ. ಮಾಲತಿ ಪಟ್ಟಣಶೆಟ್ಟಿ ಅಭಿನಂದನ ಗ್ರಂಥ, ೨೦೦೭.

ಆಕರ : ಮಾರ್ಗ ಸಂಪುಟ–೬

೧೦೬

ವಿದ್ಯಾವರ್ಧಕ ಸಂಘ - ದೇಶಪಾಂಡೆಯವರು ಮತ್ತು ನಾನು

೨೦೦೮

ಧಾರವಾಡದಲ್ಲಿ ಬಾಸೆಲ್ ಮಿಶನ್ ಅಸ್ತಿತ್ವಕ್ಕೆ ಬಂದುದು ೧೮೩೭ರಲ್ಲಿ. ಇದರಿಂದಾಗಿ 'ವಿದ್ಯಾವರ್ಧಕ' ಕೇಂದ್ರವಾಗಿ ಪರಿವರ್ತನೆಗೊಂಡ ಈ ನಗರವನ್ನು 'ಕರ್ನಾಟಕ ವಿದ್ಯಾವರ್ಧಕ' ಕೇಂದ್ರವನ್ನಾಗಿ ಪರಿವರ್ತಿಸಿದ ಕೀರ್ತಿ 'ಕರ್ನಾಟಕ ವಿದ್ಯಾವರ್ಧಕ ಸಂಘ'ಕ್ಕೆ, ಅಂದರೆ ಈ ಸಂಸ್ಥೆಯನ್ನು ಸ್ಥಾಪಿಸಿದ ಶ್ರೀ. ರಾ. ಹ. ದೇಶಪಾಂಡೆಯವರಿಗೆ ಸಲ್ಲುತ್ತದೆ.

'ಕರ್ನಾಟಕ ವಿದ್ಯಾವರ್ಧಕ ಸಂಘ' ಶಬ್ದವನ್ನು ಸಾಮಾನ್ಯವಾಗಿ ಕರ್ನಾಟಕ + ವಿದ್ಯಾವರ್ಧಕ ಸಂಘವೆಂದೇ ಬಿಡಿಸಿ, ಅರ್ಥೈಸಲಾಗುತ್ತದೆ. ಆದರೆ ಕರ್ನಾಟಕವಿದ್ಯಾ + ವರ್ಧಕ ಸಂಘವೆಂದು ಬಿಡಿಸಿ, ಅರ್ಥ ಹೇಳುವುದೇ ಸರಿಯೆನಿಸುತ್ತದೆ. ಸಾವಿರಾರು ವರ್ಷಗಳ ಐತಿಹಾಸಿಕ ಪರಂಪರೆಯಿರುವ, ಸಾವಿರಾರು ಚದರು ಮೈಲು ವಿಸ್ತಾರವಾಗಿರುವ ಕರ್ನಾಟಕ ತನ್ನದೇ ಆದ ಸಾಂಸ್ಕೃತಿಕ ವಿದ್ಯೆಯನ್ನು ರೂಪಿಸಿಕೊಳ್ಳುತ್ತ ಬೆಳೆದಿದೆ. ಈ 'ಕರ್ನಾಟಕವಿದ್ಯೆ'ಯನ್ನು ವರ್ಧನಗೊಳಿಸಬೇಕೆಂಬ ಶ್ರೀ. ರಾ. ಹ. ದೇಶಪಾಂಡೆಯವರ ಹಂಬಲ ಪ್ರಯತ್ನಗಳ ಫಲವಾಗಿ ಈ ಸಂಸ್ಥೆ ೧೮೯೦ರಲ್ಲಿ ಹುಟ್ಟಿಕೊಂಡಿತು. ರಾ. ಹ. ದೇಶಪಾಂಡೆಯವರ ಮಗ ಶ್ರೀಪಾದ ದೇಶಪಾಂಡೆ, ಇವನ ಮಗ ಕೃಷ್ಣ ದೇಶಪಾಂಡೆ. ಇವರ ನನ್ನ ನಡುವೆ ೪೫ ವರ್ಷಗಳ ಸಂಬಂಧವಿದೆ.

ವಿಜಾಪುರದಲ್ಲಿ ಬಿ. ಎ. ಮುಗಿಸಿದ ನಾನು ಎಂ. ಎ. ಓದಲು ಧಾರವಾಡಕ್ಕೆ ಬಂದುದು ೧೯೬೦ ರಲ್ಲಿ. ಗ್ರಾಮೀಣ ಪರಿಸರದ ನನಗೆ ವಿಶ್ವವಿದ್ಯಾಲಯದ ಆವರಣ ಪರಕೀಯವೆನಿಸಿದ್ದಿತು. ಇಂಥ ಸಂದರ್ಭದಲ್ಲಿ ನನಗೆ ಆಪ್ತರಾಗಿ ತೋರಿದವರು, ಗ್ರಂಥಾಲಯದ ಅಧಿಕಾರಿಯಾಗಿದ್ದ ಶ್ರೀ ಕೃಷ್ಣ ದೇಶಪಾಂಡೆಯವರು. ವರ್ಗಕೋಣೆ ಬಿಟ್ಟರೆ ನಾನು ಇಡಿಯಾಗಿ ಸಮಯ ಕಳೆಯುತ್ತಿದ್ದುದು, ಗ್ರಂಥಭಾಂಡಾರದಲ್ಲಿ. ಆಗ ದೇಶಪಾಂಡೆಯವರು ದಿನಕ್ಕೆ ಒಂದೆರಡು ಸಲ ಗ್ರಂಥಾಲಯದ ತುಂಬ ವಿದ್ಯಾರ್ಥಿ, ಪುಸ್ತಕ, ಸಿಬ್ಬಂದಿಗಳನ್ನು ಗಮನಿಸುತ್ತ, ತಂಗಾಳಿಯಂತೆ ಸುಳಿಯುತ್ತಿದ್ದರು. ಅವರು ಸಮೀಪಿಸುತ್ತಲೇ ವಿದ್ಯಾರ್ಥಿಯಾಗಿದ್ದ ನಾನು ಎದ್ದು ಗೌರವ ತೋರುತ್ತಲಿದ್ದೆ. ಮಂದಸ್ಮಿತ ಪ್ರತಿಕ್ರಿಯೆ ತೋರುತ್ತ ಅವರು ನನ್ನ ಹತ್ತಿರ ಬಂದು, ಭುಜದ ಮೇಲೆ ಕೈಯಿಟ್ಟು "ನನ್ನಿಂದ ಏನಾದರೂ ಸಹಾಯಬೇಕೇ?" ಎಂದು ಕೇಳುತ್ತಿದ್ದರು. ಕೆಲವೊಮ್ಮೆ ನಾನು ಅಪೇಕ್ಷಿಸಿದ ಪುಸ್ತಕ, ಪತ್ರಿಕೆ ತಕ್ಷಣ ಒದಗಿಸುತ್ತಿದ್ದರು. ಹೀಗಾಗಿ ಅವರೊಂದಿಗಿನ ಆಪ್ತತೆ ನನ್ನಲ್ಲಿ ವರ್ಧಿಸುತ್ತ ನಡೆಯಿತು.

ಮುಂದೆ ನಾನು ಇದೇ ವಿಶ್ವವಿದ್ಯಾಲಯದ ಅಧ್ಯಾಪಕನಾಗುವಲ್ಲಿ ಇವರ ಮತ್ತು ನನ್ನ ನಂಟು ಇನ್ನೂ ವರ್ಧಿಸಿತು, ವಿಶ್ವಾಸಕ್ಕೆ ತಿರುಗಿತು. ಇಂದಿಗೂ ಅದು ಅಚ್ಯುತವಾಗಿ ಮುಂದುವರಿದಿದೆ.

ಈ ಮಧ್ಯೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ನಾನು ೧೯೬೮ರಿಂದ ೧೯೭೮ ರ ವರೆಗೆ ಸಹಕಾರ್ಯದರ್ಶಿಯಾಗಿ - ಕಾರ್ಯದರ್ಶಿಯಾಗಿ, ದೇಶಪಾಂಡೆಯವರು ೧೯೭೩ರಿಂದ ೭೮ರ ವರೆಗೆ ಕಾರ್ಯಾಧ್ಯಕ್ಷರಾಗಿ ದುಡಿದೆವು. ಈ ಅವಧಿಯಲ್ಲಿ ಶ್ರೀ ದೇಶಪಾಂಡೆಯವರ ಪಾರದರ್ಶಕ ವ್ಯಕ್ತಿತ್ವದ ಪರಿಚಯವಾಯಿತು.

ಆರಂಭದ ದಶಕಗಳಲ್ಲಿ ವಿದ್ಯಾವರ್ಧಕ ಸಂಘಕ್ಕಾಗಿ ದುಡಿಯುತ್ತಲಿದ್ದ ಗಣ್ಯ ನಾಗರಿಕರು, ಭಾರತ ಸ್ವಾತಂತ್ರ್ಯ, ಕರ್ನಾಟಕ ಏಕೀಕರಣ ಮೊದಲಾದ ಚಳುವಳಿಗಳಿಗೆ ಕ್ರಮೇಣ ವಾಲುತ್ತ ಬಂದ ಕಾರಣ, ಸಂಘ ನಿಸ್ತೇಜವಾಗಿದ್ದಿತು. ಇಂಥ ಸಂದರ್ಭದಲ್ಲಿ ನಾವಿಬ್ಬರೂ ಈ ಸಂಸ್ಥೆಯನ್ನು ಪ್ರವೇಶಿಸಿದೆವು. ಆಗ ಒಬ್ಬ ಕಾರಕೂನನನ್ನು ಬಿಟ್ಟರೆ ಬೇರೆ ಸಿಬ್ಬಂದಿ ಇರಲಿಲ್ಲ. ನಿವೃತ್ತ ಪೋಲೀಸ್‌ನಾಗಿದ್ದ ಅವನಿಗೆ ಪ್ರತಿತಿಂಗಳು ೧೮ ರೂಪಾಯಿ ಪಗಾರ ಕೊಡಲಾಗುತ್ತಿತ್ತು. ಸಂಜೆ ಬಂದು ಬಾಗಿಲ ತೆರೆದು ಮೇಣಬತ್ತಿ ಹಚ್ಚಿ ಆರಿಸಿ, ಅವನು ಮರಳುತ್ತಿದ್ದ. ನಗರ ಪಾಲಿಕೆಯಿಂದ ವರ್ಷಕ್ಕೆ ೩೦೦ ರೂ ಸಹಾಯಧನ ಸಿಗುತ್ತಿತ್ತು. ಕಟ್ಟಡದ ಮೇಲ್ಭಾಗ ಸಾರ್ವಜನಿಕ ಗ್ರಂಥಾಲಯಕ್ಕೆ, ಕೆಳಗಿನ ಅರ್ಧ ಭಾಗ ಗಾಂಧಿತತ್ವ ಪ್ರಚಾರ ಸಂಸ್ಥೆಗೆ ಬಾಡಿಗೆ ಕೊಡಲಾಗಿದ್ದಿತು. ಇಷ್ಟು ಉತ್ಪನ್ನದಿಂದ ಕಾರಕೂನನ ಪಗಾರ ಕೊಟ್ಟು, ವರ್ಷಕ್ಕೆ ೨-೩ ಕಾರ್ಯಕ್ರಮ ಜರುಗಿಸುತ್ತಿದ್ದರು. ಈ ದುಸ್ಥಿತಿಯ ನಿವಾರಣೆಗಾಗಿ ಸಹಕಾರ್ಯದರ್ಶಿ - ಕಾರ್ಯದರ್ಶಿಯಾದ ನಾನು ಬಹಳ ಹೆಣಗಬೇಕಾಯಿತು. ಈಗ ನನಗೆ ಬೆಂಬಲ ಮುಂಬಲವಾಗಿದ್ದವರು ಶ್ರೀ ದೇಶಪಾಂಡೆಯವರು. ನಮ್ಮ ಈ ಅವಧಿಯನ್ನು ವಿದ್ಯಾವರ್ಧಕ ಸಂಘದ "ಪುನರುಜ್ಜೀವನ ಸಂದರ್ಭ"ವೆಂದು ಕರೆಯಬಹುದು.

ದೇಶಪಾಂಡೆಯವರಿಗೆ ಕರ್ನಾಟಕ ಸರಕಾರದ ಅಧಿಕಾರಿಗಳೆಲ್ಲ ಸ್ನೇಹಿತರು. ಅವರು ಈ ಸ್ನೇಹವನ್ನು ವಿದ್ಯಾವರ್ಧಕ ಸಂಘಕ್ಕೆ ಸಮರ್ಪಕವಾಗಿ ಬಳಸಿಕೊಂಡರು. ಈಗ ಸರಕಾರದಿಂದ ವಾರ್ಷಿಕ ಸಹಾಯಧನ ೫೦ ಸಾವಿರ ರೂಪಾಯಿ ಬರತೊಡಗಿತು. ಇದರಿಂದಾಗಿ ಸಂಘದಲ್ಲಿ ಕ್ರಮೇಣ ಕತ್ತಲೆ ಸಂದು ಬೆಳಕು ಪಸರಿಸಿತು.

ನಾವು ಮಾಡಿದ ಮೊದಲ ಕೆಲಸವೆಂದರೆ, ಬಾಡಿಗೆದಾರರಾಗಿದ್ದ ಸಾರ್ವಜನಿಕ ಗ್ರಂಥಾಲಯ, ಗಾಂಧಿತತ್ವ ಪ್ರಚಾರ ಸಂಸ್ಥೆಯವರನ್ನು ಹೊರಗೆ ಕಳಿಸಿದೆವು. ಒಬ್ಬ ಜವಾನನನ್ನು ನೇಮಿಸಿಕೊಂಡೆವು. ಪೀಠೋಪಕರಣ, ವಿದ್ಯುದ್ದೀಪದ ಅಳವಡಿಕೆ, ಧ್ವನಿವರ್ಧಕ, ಸಭಾಭವನದ ವ್ಯವಸ್ಥೆ, ಕಟ್ಟಡದ ಜೀರ್ಣೋದ್ಧಾರದಂಥ ಭೌತಿಕ ಅನುಕೂಲತೆಗಳಿಂದಾಗಿ ಸಂಘ ಆಕರ್ಷಣೆ ಪಡೆಯಿತು. ಮುಚ್ಚಿಹೋಗಿದ್ದ ಶಾಂತೇಶ ವಾಚನಾಲಯ ಆರಂಭವಾಯಿತು. ಕಾರ್ಯಕ್ರಮಗಳಿಗೆ ಕ್ರಮಬದ್ಧತೆ ಪ್ರಾಪ್ತವಾಯಿತು. ದೂರದ ಅತಿಥಿಗಳ ಆಗಮನದಿಂದ ಇದರ ಹೆಸರು ರಾಜ್ಯದ ತುಂಬ ಪಸರಿಸತೊಡಗಿತು. ನಿಂತು ಹೋಗಿದ್ದ ಸಾಸನೂರ ವ್ಯಾಖ್ಯಾನ ಮಾಲೆ ಮೊದಲಾದುವು ಆರಂಭವಾದವು. ಜೊತೆಗೆ ಗೌರಮ್ಮ ಬೆಲ್ಲದ ದತ್ತಿ, ಶಾಂತಾದೇವಿ ಮಾಳವಾಡ ದತ್ತಿ ಅಸ್ತಿತ್ವಕ್ಕೆ ಬಂದವು. ತುರುಮರಿಯವರ ಬಾಣ ಕಾದಂಬರಿ, ಮ. ಪ್ರ. ಪೂಜಾರಿಯವರ ಜೈನಧರ್ಮ ಪರಿಭಾಷೆ, ಬಾಡಾಲು ರಾಮಯ್ಯನವರ ಪಂಪ - ನನ್ನಯ, ಎಲ್. ಬಸವರಾಜು ಅವರ ಸರ್ವಜ್ಞನ ವಚನಗಳು, ಗೌರೀಶ ಕಾಯ್ಕಿಣಿಯವರ ಚೆನ್ನವೀರ ಕಣವಿ ಕಾವ್ಯದೃಷ್ಟಿ, ಶಂ. ಬಾ. ಜೋಶಿಯವರ ಭಾಷೆ ಮತ್ತು ಸಂಸ್ಕೃತಿ ಪ್ರಕಟವಾದವು. ಇದೇ ಕಾಲದಲ್ಲಿ ಮಾತೋಶ್ರೀ ರತ್ನಮ್ಮ ಹೆಗಡೆ ಮಹಿಳಾ ಸಾಹಿತ್ಯದತ್ತಿ, ಅಮ್ಮಿನಭಾವಿ ಸಾಹಿತ್ಯದತ್ತಿಗಳು ಆರಂಭವಾದವು.

ಹೀಗೆ ಸಂಘ ಎದ್ದು ಕಾಣುವ ಕೆಲಸ ಮಾಡುತ್ತಲಿರುವಾಗ ಶ್ರೀ ದೇಶಪಾಂಡೆಯವರ ಪ್ರಯತ್ನ ಕಾರಣವಾಗಿ ಕರ್ನಾಟಕ ಸರಕಾರದಿಂದ 'ಕಾರ್ಯಾಲಯ ದೀಪಿಕೆ' ಹೆಸರಿನ ಗ್ರಂಥರಚನಾ ಯೋಜನೆ ಮಂಜೂರಾಯಿತು. ವಿದ್ವಾಂಸರನ್ನು ಸಂಘಟಿಸಿ ೫೦೦ ಪುಟಗಳ ರಾಯಲ್ ಆಕಾರದ ಈ ಪುಸ್ತಕವನ್ನು ಬೆಳಕಿಗೆ ತಂದ ಸರ್ವಶ್ರೇಯಸ್ಸು ಶ್ರೀ ದೇಶಪಾಂಡೆಯವರಿಗೆ ಸಲ್ಲುತ್ತದೆ. ಹೀಗೆ ಈ ಯೋಜನೆಯನ್ನು ಅಚ್ಚುಕಟ್ಟಾಗಿ ನಿಗದಿತ ಅವಧಿಯಲ್ಲಿ ಮುಗಿಸಿಕೊಟ್ಟು ಸರಕಾರದ ಮೆಚ್ಚುಗೆ ಗಳಿಸಿದ ಇವರು, ಬಳಿಕ 'ಲಾ ಲೆಕ್ಸಿಕಾನ್ ಯೋಜನೆ'ಯನ್ನು ಮಂಜೂರು ಮಾಡಿಸಿಕೊಂಡು ಬಂದರು.

ಸಂಘದ 'ವಾಗ್ಭೂಷಣ' ಪತ್ರಿಕೆಯ ಬಗ್ಗೆ ಶ್ರೀ ದೇಶಪಾಂಡೆ ಅವರಿಗೆ ಎಲ್ಲಿಲ್ಲದ ಅಭಿಮಾನ. ೧೮೯೬ರಷ್ಟು ಹಿಂದೆಯೇ ಆರಂಭವಾಗಿದ್ದ ಇದು, ಅಂದು ಉತ್ತರ ಕರ್ನಾಟಕದ ನಾಲ್ಕೂ ಜಿಲ್ಲೆಗಳ ಏಕೈಕ ಸಾಹಿತ್ಯ ಪತ್ರಿಕೆಯಾಗಿದ್ದಿತು. ಕೆಲವು ದಿನಗಳ ಬಳಿಕ ಆರ್ಥಿಕ ಕಾರಣದಿಂದಾಗಿ ನಿಂತು ಬಿಟ್ಟಿದ್ದ ಇದರ ಪುನರುಜ್ಜೀವನಕ್ಕಾಗಿ ಶ್ರೀ ದೇಶಪಾಂಡೆ ಅವರು ಹರಸಾಹಸ ಮಾಡಿದರು. ೧೯೭೩ರಲ್ಲಿ ಒಂದು ಸಂಚಿಕೆಯನ್ನು ಮಾತ್ರ ಪ್ರಕಟಿಸಿದರು. ಇನ್ನೊಂದು ಸಂಚಿಕೆ ಪ್ರಕಟವಾಗಲೇ ಇಲ್ಲ.

ಸಂಘಕ್ಕೆ ಸಭಾಭವನದ ಅವಶ್ಯಕತೆಯನ್ನು ಮನಗಂಡು ಶ್ರೀ ದೇಶಪಾಂಡೆಯವರು ಮೊದಲು ಮಾಡಿ ಎಲ್ಲ ಸದಸ್ಯರು ಅದರ ನಿರ್ಮಾಣದ ಸಂಕಲ್ಪ ಮಾಡಿದೆವು. ಸಂಕಲ್ಪ ಸಾಕಾರಗೊಳ್ಳುವ ಸಲುವಾಗಿ ಪ್ರಸಿದ್ಧ ನಾಟಕಕಾರ ಶ್ರೀ ಗಿರೀಶ ಕಾರ್ನಾಡ, ಎಂಜನಿಯರ್ ಶ್ರೀ ಅರುಣ ಹೂಯಿಲಗೋಳ ಮೊದಲಾದವರೊಂದಿಗೆ ಸಮಾಲೋಚಿಸಿದ ಫಲವಾಗಿ, ಶಿಲಾನ್ಯಾಸ-ನೀಲನಕ್ಷೆ ಇತ್ಯಾದಿ ಆರಂಭಿಕ ಕಾರ್ಯಗಳೆಲ್ಲ ಈ ಅವಧಿಯಲ್ಲಿಯೇ ಪೂರೈಸಲ್ಪಟ್ಟವು. ದೇಶಪಾಂಡೆಯವರು ಕಾರ್ಯಾಧ್ಯಕ್ಷರಾಗಿದ್ದ ಕಾಲದಲ್ಲಿ ಹೀಗೆ ಸಂಘ ಮೈಮುರಿದು ಮೇಲೆದ್ದಿತು.

ಒಟ್ಟಾರೆ, ಅವರ ಅವಧಿ ಶುದ್ಧ ಸಾಂಸ್ಕೃತಿಕ, ರಚನಾತ್ಮಕ ಕಾರ್ಯಗಳಿಂದ ತುಂಬಿದ್ದಿತು. ಅದು ಸಂಘದ ಪುನರುಜ್ಜೀವನ ಸಂದರ್ಭವಾಗಿದ್ದಿತು. ಕ್ರಮೇಣ ಅವಿದ್ಯಾವರ್ಧಕ ಸದಸ್ಯರ ಪ್ರಭಾವ ಬೆಳೆದು, ಸಂಘದ ಸುತ್ತ ಅಂಗಡಿ ಕಟ್ಟಡಗಳು ತಲೆಯೆತ್ತುವಲ್ಲಿ, ಅದನ್ನು ಮೌನವಾಗಿ ವಿರೋಧಿಸಿ ಹೊರಬಿದ್ದವರು, ಆ ಕಡೆ ಹೊರಳಿ ನೋಡಲಿಲ್ಲ.

ಪ್ರಬುದ್ಧ : ಶ್ರೀ. ಕೆ.ಎಸ್.ದೇಶಪಾಂಡೆ ಅವರ ಅಭಿನಂದನ ಗ್ರಂಥ, ೨೦೦೮.

ಆಕರ : ಮಾರ್ಗ ಸಂಪುಟ–೬

೧೦೭

ಶಿಷ್ಯೋಭ್ಯೋ ನಮಃ

೨೦೦೯

ನನ್ನಲ್ಲಿ ನಿರಂತರ ಜೀವಂತವಾಗಿರುವವರು, ನನ್ನ ಗುರುಗಳು. ಅವರಿಗಿಂತಲೂ ಹೆಚ್ಚು ಜೀವಂತವಾಗಿರುವವರು, ನನ್ನ ವಿದ್ಯಾರ್ಥಿಗಳು. ಇಂಥ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಶ್ರೀ ರಂಜಾನ್ ದರ್ಗಾ ಅವರು ಕೆಲವು ವಿಷಯಗಳಲ್ಲಿ ನನ್ನನ್ನು ಮೀರಿ ಬೆಳೆದಿದ್ದಾರೆ. 'ಸದ್ಭಕ್ತರು ಗೆದ್ದರು ಕಾಣಾ ಕೂಡಲಸಂಗಮದೇವಾ' ಎಂಬ ವಚನವಾಣಿಯನ್ನು ನನ್ನ ಅವರ ಸಂಬಂಧದಲ್ಲಿ ದಿಟಮಾಡಿ ತೋರಿದ್ದಾರೆ.

ವ್ಯಾಪಕ ಓದು, ನಿರಂತರ ಚಿಂತನೆ, ಮೂಲಸತ್ಯವನ್ನು ಗುರುತಿಸುವ ಗರುಡದೃಷ್ಟಿ, ತರ್ಕಬದ್ಧ - ಸಂಯಮಪೂರ್ಣ ಅಭಿವ್ಯಕ್ತಿಗಳು ಅವರ ಬರೆಹ- ಭಾಷಣಗಳ ಮುಖ್ಯ ಲಕ್ಷಣಗಳಾಗಿವೆ. ಇಂಥ ಸಶಕ್ತ ವಿದ್ವಾಂಸ ಜೀವನದುದ್ದಕ್ಕೂ ಪತ್ರಿಕಾ ವರದಿಗಾರರಾಗಿ ಉಳಿದುದು ಸಾಹಿತ್ಯಕ ಅನ್ಯಾಯವಾಗಿದ್ದು, ಇದು ತರಕಾರಿ ಹೆಚ್ಚಲು ಖಡ್ಗ ಬಳಸಿದಂತಹ ಪ್ರಮಾದವೆಂದೇ ಹೇಳಬೇಕು.

ಬಹುಮುಖೀ ವಿದ್ವಾಂಸರಾಗಿದ್ದರೂ ಶ್ರೀ ದರ್ಗಾ ಅವರ ಕೇಂದ್ರ ಕಾಳಜಿ ಶರಣಸಾಹಿತ್ಯ. ಆ ಸಾಹಿತ್ಯವನ್ನು ಹೊಸ ದೃಷ್ಟಿಯಿಂದ ನೋಡುವ, ಹೊಸ ಪರಿಭಾಷೆಯ ಮೂಲಕ ಸಮಾಜಕ್ಕೆ ಮುಟ್ಟಿಸುವ ಕೆಲಸವನ್ನು ಅವರಷ್ಟು ಸಮರ್ಥವಾಗಿ ಸಮರ್ಪಕವಾಗಿ ಮಾಡಿದವರು ತೀರ ವಿರಳ. ಪೂರ್ವ ಪಶ್ಚಿಮವೆಂಬ ಲೋಕ ಪರಿಧಿಯಲ್ಲಿಟ್ಟು, ಪ್ರಾಚೀನ ಆಧುನಿಕವೆಂಬ ಕಾಲವ್ಯಾಪ್ತಿಯಲ್ಲಿಟ್ಟು, ವಿವಿಧ ವಾದಗಳ ಮಗ್ಗುಲಲ್ಲಿಟ್ಟು ಈ ಸಾಹಿತ್ಯದ ಮಹತ್ವವನ್ನು ಎತ್ತಿ ತೋರಿಸಿದ ಶ್ರೇಯಸ್ಸು ದರ್ಗಾ ಅವರದಾಗಿದೆ. ಈ ಮಾತಿಗೆ ಅವರು ವಚನಸಾಹಿತ್ಯವನ್ನು ಕುರಿತು ಬರೆದಿರುವ ಕೃತಿಗಳೇ ಸಾಕ್ಷಿಯಾಗಿವೆ. ಹೀಗೆ ಬರಹಗಾರರಾಗಿ ಸಾಕ್ಷರಲೋಕಕ್ಕೆ, ಅದರ ಜೊತೆಗೆ ಭಾಷಣಕಾರರಾಗಿ ನಿರಕ್ಷರಿಲೋಕಕ್ಕೆ ತಿಳಿಯಪಡಿಸುವ ಮೂಲಕ ಅವರು ಶರಣಸಾಹಿತ್ಯದ ಪಾರಿಚಾರಕರಂತೆಯೂ ಕೆಲಸ ಮಾಡಿದ್ದಾರೆ. ಈ ರೀತಿ ಬಿಚ್ಚಿಕೊಂಡು ಬೆಳೆದ ಶಿಷ್ಯನಿಗೆ ಗುರು ನೀಡಬಹುದಾದ ಪ್ರಮಾಣಪತ್ರ "ಶಿಷ್ಯೋಭ್ಯೋ ನಮಃ".

ಬಂದೂಕಿನ ಬಾಯಲ್ಲಿ ಗುಬ್ಬಿಗೂಡು - ಶ್ರೀ. ರಮಜಾನ ದರ್ಗಾ ಅಭಿನಂದನ ಗ್ರಂಥ, ೨೦೦೯.

ಆಕರ : ಮಾರ್ಗ ಸಂಪುಟ–೬

೧೦೮

ಕನ್ನಡ ಮಠ

೨೦೦೯

ಭಾರತೀಯ 'ಶಿವೋಹಂ' ಸಿದ್ಧಾಂತವನ್ನು 'ದಾಸೋಹಂ' ವರೆಗೆ ವಿಸ್ತರಿಸಿದ ೧೨ನೆಯ ಶತಮಾನದ ಶರಣಸಂಸ್ಕೃತಿಯು ಧರ್ಮ-ಸಮಾಜಧರ್ಮಗಳ ಕೂಡಲ ಸಂಗಮವೆನಿಸಿದೆ. ಈ ಧರ್ಮ -ಸಮಾಜಧರ್ಮಗಳ ಕೇಂದ್ರ ಸಂಸ್ಥೆಗಳಾಗಿರುವ ಲಿಂಗಾಯತ ಮಠಗಳು ದೇಶ -ಕಾಲಗಳ ಆವಶ್ಯಕತೆಗೆ ಅನುಗುಣವಾಗಿ ಸ್ಪಂದಿಸುತ್ತ ಬಂದುದಕ್ಕೆ ಇತಿಹಾಸದಲ್ಲಿ ಉದ್ದಕ್ಕೂ ಸಾಕ್ಷಿಗಳು ಸಿಗುತ್ತಿದ್ದು, ಇದಕ್ಕೆ ಇತ್ತೀಚಿನ ಉದಾಹರಣೆಯೆನಿಸಿದೆ, 'ಕನ್ನಡ ಮಠ'ವೆನಿಸಿರುವ ಚಿಂಚಣಿಯ ಅಲ್ಲಮಪ್ರಭು ಸಿದ್ಧಸಂಸ್ಥಾನಮಠ.

ಕನ್ನಡ, ಕರ್ನಾಟಕದ ಪ್ರಾಣ. ಕನ್ನಡದ ಬೆಳೆಯಾಗಿರುವ ವಚನಗಳು ಲಿಂಗಾಯತರ ಪ್ರಾಣ. ಹೀಗಾಗಿ ಪ್ರಾಚೀನಕಾಲದಿಂದಲೂ ಅವರು ಕನ್ನಡದ ಬಗ್ಗೆ ವಿಶೇಷ ಪ್ರೀತಿ ತೋರಿಸುತ್ತ ಬಂದಿದ್ದಾರೆ. ಕನ್ನಡಕ್ಕೆ ಕುತ್ತು ಬಂದಾಗಲೆಲ್ಲ ದನಿಯೆತ್ತಿದ್ದಾರೆ. ಸಂಸ್ಕೃತದ ಮಿಶ್ರಣ, ರಾಜರ ಸ್ತುತಿಗಳು ಅತಿರೇಕ ಮುಟ್ಟಿದಾಗ ಶಿವಶರಣರು-ಶಿವಕವಿಗಳು ಕನ್ನಡದ-ಕನ್ನಡ ಸಾಮಾನ್ಯರ ಪಕ್ಷ ಕಟ್ಟಿದರು. ಈ ಧೋರಣೆ ಉರ್ದು-ಮರಾಠಿ ದಾಳಿಯಿಂದಾಗಿ ಹಿಮ್ಮೆಟ್ಟಿದಾಗ, ಡೆಪ್ಯುಟಿ ಚೆನ್ನಬಸಪ್ಪ ಮೊದಲಾದವರು ಕನ್ನಡವನ್ನು ಮುನ್ನೆಲೆಗೆ ತಂದರು. ಚಿಂಚಣಿಮಠ ಒಂದು ಮಿತಿಯಲ್ಲಿ ಈ ಮಣಿಹವನ್ನು ಮುಂದುವರಿಸಿದೆ.

ಚಿಂಚಣಿ ಮಠ, ಗಡಿನಾಡಿನ ಧಾರ್ಮಿಕ ಕೇಂದ್ರ. ಒಳನಾಡಿನ ಧರ್ಮಿಕ ಕೇಂದ್ರಗಳಿಗಿಂತ ಇಂಥವುಗಳ ಸಾಮಾಜಿಕ ಹೊಣೆ ಒಂದಿಷ್ಟು ಭಿನ್ನವಾಗಿರಬೇಕಾಗುತ್ತದೆ. ಇದನ್ನು ಅರ್ಥಮಾಡಿಕೊಂಡು ಈ ಮಠ ಕನ್ನಡದ ಕಲ್ಯಾಣಕ್ಕಾಗಿ ದುಡಿಯುತ್ತ ಬಂದಿದೆ.

ಶ್ರೀಮಠದ ಸಾಮಾಜಿಕ ಸಂಸ್ಥೆಯ ಹೆಸರು 'ಜನಕಲ್ಯಾಣ', ಪುಸ್ತಕ ಮಾಲೆಯ ಹೆಸರು 'ಕನ್ನಡ ಜಾಗೃತಿ'. ಜನಕಲ್ಯಾಣದ ಒಂದು ಭಾಗ ಕನ್ನಡದ ಜಾಗೃತಿ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕನ್ನಡ ಜ್ಞಾನ (Knowledge) ಬೇರೆ, ಕನ್ನಡ ಜಾಗೃತಿ (Awareness) ಬೇರೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಶ್ರೀಮಠ ಪ್ರಕಟಿಸುತ್ತಿರುವ ಪುಸ್ತಕಗಳು ಕನ್ನಡಜ್ಞಾನಪ್ರಸಾರಕ್ಕಿಂತ ಕನ್ನಡಿಗರನ್ನು ಜಾಗೃತಗೊಳಿಸುವ ಧೋರಣೆಯನ್ನು ಹೊಂದಿವೆ. ಈ ವರೆಗೆ ಪ್ರಕಟಿಸಿದ ಸೀಮೆ, ಕನ್ನಡ-ಕನ್ನಡಿಗ-ಕರ್ನಾಟಕ, ಕನ್ನಡಪರ ಚಿಂತನೆ ಮತ್ತು ಪರಂಪರೆ, ಆಧುನಿಕ ಕರ್ನಾಟಕದ ಆತಂಕಗಳು, ದೈನಂದಿನ ಬದುಕಿನಲ್ಲಿ ಕನ್ನಡ, ಕನ್ನಡತನ ಮತ್ತು ಭಾರತೀಯತೆ, ಮಹಾಜನ ವರದಿ; ಅವಲೋಕನ, ನಮ್ಮ ನಾಡು-ನುಡಿ-ಗಡಿ, ಕನ್ನಡ ಕಟ್ಟೋಣ - ಈ ಶೀರ್ಷಿಕೆಗಳೇ ಇವರ ದೃಷ್ಟಿಕೋನಕ್ಕೆ ಸಾಕ್ಷಿಯಾಗಿವೆ. ಇದು ಸರಕಾರ ಅಸ್ತಿತ್ವಕ್ಕೆ ತಂದಿರುವ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ'ದ ಕೆಲಸಕ್ಕೆ ಪೂರಕವೆನಿಸಿದೆ.

ಕೇವಲ ಪುಸ್ತಕ ಪ್ರಕಟಣೆಗೆ ಸೀಮಿತವಾಗದೆ, ಭಾಷಣ, ವಿಚಾರ ಸಂಕಿರಣ, ಜಾಥಾ ಮೊದಲಾದ ಕಾರ್ಯಗಳನ್ನು ಶ್ರೀಮಠ ಹಮ್ಮಿಕೊಳ್ಳುತ್ತ ಬಂದಿದೆ. ಈ ಕೆಲಸಗಳಿಗೆ ಮಠಾಧಿಗರನ್ನೂ ಬಳಸಿಕೊಳ್ಳಲಾಗಿದೆ. ಕೇವಲ ಉತ್ತರ ಕರ್ನಾಟಕದವರನ್ನಲ್ಲ, ದಕ್ಷಿಣ ಕರ್ನಾಟಕದವರನ್ನೂ ಬರಮಾಡಿಕೊಳ್ಳಲಾಗಿದೆ. ಹೀಗೆ ಕನ್ನಡತ್ವವನ್ನು, ಕನ್ನಡತತ್ವವನ್ನು ಅರ್ಥವತ್ತಾಗಿ ಆಚರಿಸುತ್ತ ಬಂದ ಈ ಸಂಸ್ಥೆ, ಇಂದು ಹತ್ತು ವರ್ಷಗಳ ಹೊರಳು ದಾರಿಯಲ್ಲಿ ನಿಂತಿದೆ. ಇನ್ನು ಮುಂದೆ ಇದು ಕನ್ನಡ ಅನುಷ್ಠಾನದ ಹೊಸ ಹಾದಿಯಲ್ಲಿ ಮುನ್ನಡೆಯಲೆಂದು ಹಾರೈಸುತ್ತೇನೆ.

"ಸಿರಿಗನ್ನಡದ ತೇರು" - ದಶಮಾನೋತ್ಸವ ಸಂಪುಟ, ೨೦೦೯

ಆಕರ : ಮಾರ್ಗ ಸಂಪುಟ-೬

■■

೧೯

ನನ್ನ ಉತ್ತರಾಧಿಕಾರಿ

೨೦೧೧

ಸಮಾಜದಲ್ಲಿ ಎರಡು ಮಾದರಿಗಳಿರುತ್ತವೆ : ಕಥಾನಾಯಕ ಮಾದರಿ, ಖಳನಾಯಕ ಮಾದರಿ. ಕೀರ್ತಿ -ಲಾಭಗಳು ಒಂದು ಮಾದರಿಗೆ ವಿಲಂಬ; ಇನ್ನೊಂದು ಮಾದರಿಗೆ ತಕ್ಷಣ. ಹೀಗಾಗಿ, ಕಡಿಮೆ ಜನ ಕಥಾನಾಯಕ ಮಾದರಿಯನ್ನು, ಬಹಳಷ್ಟು ಜನ ಖಳನಾಯಕ ಮಾದರಿಯನ್ನು ಅನುಸರಿಸುತ್ತಾರೆ. ಇದರಿಂದಾಗಿ ಕಥಾನಾಯಕ ಮಾದರಿಯ ಸಮುದಾಯ ಪಾಂಡವರಂತೆ ಸಣ್ಣದಾಗಿ, ಖಳನಾಯಕ ಮಾದರಿಯ ಸಮುದಾಯ ಕೌರವರಂತೆ ದೊಡ್ಡದಾಗಿ, ಆಕಾರ ಪಡೆಯುತ್ತವೆ.

ನೋಡಲಿಕ್ಕೆ ಎರಡೂ ಸಮುದಾಯಗಳಾಗಿದ್ದರೂ ಒಂದನ್ನು 'ಸಂಘಟನೆ' ಎಂದೂ, ಇನ್ನೊಂದನ್ನು 'ಗುಂಪುಗಾರಿಕೆ'ಯೆಂದೂ, ಕರೆಯುವುದು ನ್ಯಾಯಸಮ್ಮತ. ಏಕೆಂದರೆ ಸಂಘಟನೆಯ ಹಿಂದೆ ಪರಿಸರದ ಪೋಷಣೆ ಇರುತ್ತದೆ. ಗುಂಪುಗಾರಿಕೆಯ ಹಿಂದೆ ಪರಿಸರದ ಶೋಷಣೆ ಇರುತ್ತದೆ.

ಸಂಘಟನೆಯವರು ಪರಿಸರಕೇಂದ್ರಿತ ದೃಷ್ಟಿಕೋನದವರಾಗಿದ್ದರೆ, ಗುಂಪುಗಾರಿಕೆಯವರು ವ್ಯಕ್ತಕೇಂದ್ರಿತ ದೃಷ್ಟಿಕೋನದವರಾಗಿರುತ್ತಾರೆ. ಅವರು ಪರಿಸರವನ್ನು ಸದಸ್ಯರಾಗಿ ಬೆಳೆಸಿ, ಅಂತಿಮದಲ್ಲಿ ತಾವೂ ಬೆಳೆಯುತ್ತಾರೆ. ಇವರು ಮಾತ್ರ ವ್ಯಕ್ತಿಯಾಗಿ ಬೆಳೆದು, ಪರಿಸರವನ್ನುನಾಶಮಾಡಿ ಅಂತಿಮದಲ್ಲಿ ತಾವೂ ನಾಶವಾಗುತ್ತಾರೆ. ಇದರ ಪರಿಣಾಮವಾಗಿ ಕಥಾನಾಯಕರು ತಮ್ಮ ಆಯುಷ್ಯ ಪ್ರಮಾಣ ಮುಗಿದ ಬಳಿಕವೂ ಬದುಕುತ್ತಾರೆ. ಖಳನಾಯಕರು ತಮ್ಮ ಆಯುಷ್ಯ ಪ್ರಮಾಣವಿರುವಷ್ಟು ಕಾಲ ಬದುಕುತ್ತಾರೆ.

ಡಾ. ವೀರಣ್ಣ ರಾಜೂರ ಅವರು ವೃತ್ತಿಜೀವನ ಆರಂಭಿಸಿದ ಹೊಸದರಲ್ಲಿ ಈ ಎರಡೂ ಮಾದರಿಗಳು ಅವರ ಕಣ್ಣುಮುಂದಿದ್ದವು. ಅವರ ಸಮವಯಸ್ಕರಲ್ಲಿ ಕೆಲವರು ಆಕರ್ಷಕವಾದ 'ಗುಂಪುಗಾರಿಕೆ'ಮಾದರಿಯನ್ನು ಆಯ್ದುಕೊಂಡರೆ ಡಾ. ರಾಜೂರ ಅವರು ಮಾತ್ರ ಅನಾಕರ್ಷಕವಾದ 'ಸಂಘಟನೆ'ಯ ಮಾದರಿಯನ್ನು ಆಯ್ದುಕೊಂಡರು. ಆಗ, ಇವರ ಜೊತೆ ಬಂದವರು ಅರ್ಧದಾರಿ ನಡೆದು ಆಕರ್ಷಕ ಗುಂಪುಗಾರಿಕೆಯತ್ತ ಹೊರಳಿದರು. ಡಾ. ರಾಜೂರ ಅವರು ಮಾತ್ರ ಇದೇ ಸರಿಯಾದುದೆಂದು, ಹಿಡಿದ ದಾರಿಯಲ್ಲಿಯೇ ಮುನ್ನಡೆದರು. ಇದು ಡಾ. ರಾಜೂರ ಅವರ ವ್ಯಕ್ತಿತ್ವದ ಮೂಲದ್ರವ್ಯವೆಂತಹದೆಂಬುದನ್ನು ಸೂಚಿಸುತ್ತದೆ. ಅದೇನೇ ಇರಲಿ. ಇದರ ಫಲವಾಗಿ ಸಮವಯಸ್ಕರು ಹುಲ್ಲುಬೆಂಕಿಯಂತೆ ಒಮ್ಮೆಲೆ ಆರ್ಭಟಿಸಿ ಬೂದಿಯಾದರು. ಡಾ. ರಾಜೂರ ಅವರು ಮಾತ್ರ ಹೊಗೆಯಾಡದ ಕೆಂಡದಂತೆ ನಿಧಾನವಾಗಿ ಬೆಳೆದರು.

ಒಬ್ಬ ವ್ಯಕ್ತಿಯ ಬೆಳವಣಿಗೆಗೆ ಎರಡು ಪರಿಸರಗಳು ಮುಖ್ಯವೆನಿಸುತ್ತವೆ. ಕೌಟುಂಬಿಕ ಪರಿಸರ ಮತ್ತು ಸಾಂಸ್ಥಿಕ ಪರಿಸರ. ಮಕ್ಕಳ ಅನಾರೋಗ್ಯ ಇತ್ಯಾದಿಗಳಿಂದಾಗಿ ಕೌಟುಂಬಿಕವೂ, ಗುಂಪುಗಾರಿಕೆ ಮಾದರಿಯ ಪ್ರಾಬಲ್ಯದಿಂದಾಗಿ ಸಾಂಸ್ಥಿಕವೂ ಡಾ. ರಾಜೂರ ಅವರಿಗೆ ಅಷ್ಟಾಗಿ ಅನುಕೂಲವಾಗಿರಲಿಲ್ಲವೆಂದೇ ಹೇಳಬೇಕು. ಈ ಪ್ರತಿಕೂಲ ಪರಿಸ್ಥಿತಿಯಿಂದ ಪಾರಾಗಲು ಅವರು ದುರ್ವ್ಯಸನಗಳಿಗೆ ಮೊರೆಹೋಗದೆ, ಅಧ್ಯಯನ, ಅಧ್ಯಾಪನಗಳ ದಾರಿಯನ್ನು ಮೊರೆಹೊಕ್ಕರು. ಅವರನ್ನು ಉಳಿಸಿದ್ದು, ಬೆಳೆಸಿದ್ದು ಈ ದಾರಿ.

ಇಂಥ ಸಂದರ್ಭದಲ್ಲಿ ತೆರೆದುಕೊಳ್ಳುವ ಹಲವು ದಾರಿಗಳಲ್ಲಿ ತನಗೆ ಸೂಕ್ತವಾದುದನ್ನು ಆಯ್ದುಕೊಳ್ಳುವದೂ ಅಷ್ಟೆ ಮುಖ್ಯ. ತಮ್ಮದು ಶಿಕ್ಷಕ ವೃತ್ತಿಯಾದುದರಿಂದ ವಿದ್ಯಾರ್ಥಿಗಳೇ ನನ್ನ ಸಂಪತ್ತು - ಎಂಬ ಸತ್ಯವನ್ನು ಆರಂಭದಲ್ಲಿಯೇ ಇವರು ಅರ್ಥಮಾಡಿಕೊಂಡರು. ವಿದ್ಯಾರ್ಥಿಗಳಲ್ಲಿ ಎರಡು ಪ್ರಕಾರಗಳಿರುತ್ತವೆ. ಅಧ್ಯಾಪಕರಿಗೆ ಭೌತಿಕ ಲಾಭ ಮಾಡಿಕೊಟ್ಟು, ತಾವೂ ಅವರಿಂದ ಭೌತಿಕ ಲಾಭ ಪಡೆಯುವ ತಾಮಸ ವಿದ್ಯಾರ್ಥಿಗಳು ಮತ್ತು ವಿದ್ವಾಂಸ ಅಧ್ಯಾಪಕರ ಸಂಪರ್ಕದಲ್ಲಿದ್ದು, ತಾವೂ ವಿದ್ವಾಂಸರಾಗಿ ಬೆಳೆಯಬೇಕೆಂಬ ಸಾತ್ವಿಕ ವಿದ್ಯಾರ್ಥಿಗಳು. ಡಾ. ರಾಜೂರ ಅವರು ತಮ್ಮ ಸನಿಹಕ್ಕೆ ಬಿಟ್ಟುಕೊಂಡುದು, ಈ ಎರಡನೆಯ ರೀತಿಯ ಸಾತ್ವಿಕ ವಿದ್ಯಾರ್ಥಿಗಳನ್ನು. ಇಂದು ಇಂಥ ವಿದ್ಯಾರ್ಥಿಗಳೇ ಅವರ ಈ ಷಷ್ಟಿಪೂರ್ತಿ ಸಮಾರಂಭವನ್ನು ನಿರಪೇಕ್ಷ ಭಕ್ತಿಯಿಂದ ಆಚರಿಸುತ್ತಿದ್ದಾರೆ. ಇಂಥ ಶೈಕ್ಷಣಿಕ -ಸಾತ್ವಿಕ ವಿದ್ಯಾರ್ಥಿಗಳ ಸಂಖ್ಯೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ವರ್ಧಿಸಲೆಂದು ಹಾರೈಸುತ್ತೇನೆ.

***

ಡಾ. ರಾಜೂರ ಅವರು ಆರಂಭದಲ್ಲಿ ಬೇರೆ ಬೇರೆ ಶೈಕ್ಷಣಿಕ ಕ್ಷೇತ್ರಗಳಲ್ಲಿ ಕೈಯಾಡಿಸಿ ನೋಡಿ, ಅಂತಿಮದಲ್ಲಿ ಪ್ರಾಚೀನಸಾಹಿತ್ಯ, ಅದರಲ್ಲಿಯೂ ಶರಣಸಾಹಿತ್ಯವೇ ತಮ್ಮ ಸರಿಯಾದ ಕ್ಷೇತ್ರವೆಂದು ನಿರ್ಧರಿಸಿಕೊಂಡರು. ಅದರಲ್ಲಿಯೂ 'ವಚನಸಾಹಿತ್ಯ ಪ್ರಕಟನ ಯೋಜನೆ'ಯ ಸಹಾಯಕ ಸಂಶೋಧಕ ಹುದ್ದೆಯಿಂದ ವೃತ್ತಿಜೀವನ ಆರಂಭಿಸಿದ ಅವರು, ಸಹಜವಾಗಿಯೇ ಲಿಂಗಾಯತ ಹಸ್ತಪ್ರತಿ-ಸಾಹಿತ್ಯಗಳತ್ತ ತಮ್ಮ ಒಲವನ್ನು ಕೇಂದ್ರೀಕರಿಸಿಕೊಂಡರು. ನನ್ನ ಅಭಿಪ್ರಾಯದಲ್ಲಿ ಲಿಂಗಾಯತ ಹಸ್ತಪ್ರತಿ ಕ್ಷೇತ್ರದ ಅಭ್ಯಾಸಿಗಳಲ್ಲಿ ಶ್ರೀ ಎಸ್. ಶಿವಣ್ಣ ಅವರು ದಕ್ಷಿಣ ಕರ್ನಾಟಕದಲ್ಲಿ, ಡಾ. ರಾಜೂರ ಅವರು ಉತ್ತರ ಕರ್ನಾಟಕದಲ್ಲಿ ಮುಖ್ಯರು. ಹೀಗಾಗಿ ಈ ವಿಷಯದಲ್ಲಿ ನನಗೆ ಸಂದೇಹ ತಲೆದೋರಿದಾಗಲೆಲ್ಲ ನಾನು ಇವರ ಸಲಹೆ ಪಡೆಯುತ್ತ ಬಂದಿದ್ದೇನೆ.

ಲಿಂಗಾಯತ ಹಸ್ತಪ್ರತಿ - ಸಾಹಿತ್ಯಗಳಿಗೆ ಡಾ. ರಾಜೂರ ನೀಡಿದ ಕೊಡುಗೆ ಐತಿಹಾಸಿಕವೆನಿಸಿದೆ. ರಾಜ್ಯದ ಬೇರೆ ಬೇರೆ ಭಂಡಾರಗಳಲ್ಲಿರುವ ಲಿಂಗಾಯತ ಹಸ್ತಪ್ರತಿಗಳು ಯಾವುವು? ಇವುಗಳಲ್ಲಿ ಪ್ರಕಟಿತ - ಅಪ್ರಕಟಿತ ಯಾವುವು? ಈ ವಿಷಯವಾಗಿ ಅವರದು ವಿಶ್ವಕೋಶ ಮಾದರಿಯ ವಿದ್ವತ್ತು. ಹೀಗಾಗಿ ಅವರು ಈ ಬಗ್ಗೆ ನೂರಾರು ಟಿಪ್ಪಣಿ - ಲೇಖನ ರೂಪದ ಬರೆವಣಿಗೆ ಮಾಡಿ, ಈ ಕ್ಷೇತ್ರದ ಬಗೆಗಿನ ನಮ್ಮ ತಿಳುವಳಿಕೆಯನ್ನು ವಿಸ್ತರಿಸಿದ್ದಾರೆ.

ಇಲ್ಲಿ ಎತ್ತಿ ಹೇಳಬೇಕಾದ ಇನ್ನೊಂದು ಕೊಡುಗೆಯೆಂದರೆ, ಲಿಂಗಾಯತ ಸಾಹಿತ್ಯ ಸಂಪಾದನೆ ಮತ್ತು ಪ್ರಕಟನೆ. ಡಾ. ರಾಜೂರ ಅವರು ಈ ಕ್ಷೇತ್ರಕ್ಕೆ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ವಚನ ಸಾಹಿತ್ಯ ಸಂಪಾದನೆಯನ್ನು ಕುರಿತು ಹೇಳುವುದಾದರೆ, ಇವರು ಸಹಾಯಕ ಸಂಶೋಧಕರಾಗಿ ಡಾ. ಆರ್.ಸಿ.ಹಿರೇಮಠ, ಡಾ. ಎಂ.ಎಸ್.ಸುಂಕಾಪುರ ಅವರಿಗೆ ಸಂಪಾದನ ಕ್ಷೇತ್ರದಲ್ಲಿ ನೀಡಿದ ನೆರವು ಅಪೂರ್ವವಾದುದು. ಸಹಾಯಕ ಸಂಶೋಧಕರಲ್ಲಿ ಮೊದಲಿನ ತಲೆಮಾರಿನ ಪಾಟೀಲ ಮಾಸ್ತರ, ಮೇವುಂಡಿ ಮಲ್ಲಾರಿ, ಕೊಪ್ಪಳ ಮಾಸ್ತರ ಅವರು ನಿವೃತ್ತರಾದ ಬಳಿಕ, ಆ ಕೆಲಸದ ನೇರವಾದ ಭಾರ ಡಾ. ರಾಜೂರ ಅವರೇ ಹೊರಬೇಕಾಗಿ ಬಂದಿತು. ಈ ಭಾರವನ್ನು ಇವರು ಸರಿಯಾಗಿ ನಿರ್ವಹಿಸಿದ ಫಲವಾಗಿ, ಸಕಲ ಪುರಾತನರ ವಚನಗಳು ಭಾಗ-೧, ೨, ೩, ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ, ಪ್ರಸಾದಿಸ್ಥಲದ ವಚನಗಳು, ಪರಮ ಮೂಲಜ್ಞಾನಷಟ್‌ಸ್ಥಲ,

ಸಕಲ ಪುರಾತನರ ಬೆಡಗಿನ ವಚನಗಳು, ನೂತನ ಪುರಾತನರ ರಗಳೆಗಳು, ಶಂಕರಲಿಂಗಾಂಕಿತ ರಗಳೆಗಳು, ಪ್ರಭುಲಿಂಗಲೀಲೆ ಇತ್ಯಾದಿ ಕೃತಿಗಳು ಬೆಳಕು ಕಂಡವು.

ಅವರ ಈ ಬಗೆಯ ಕೆಲಸದ ಎರಡನೆಯ ಘಟ್ಟವೆಂದರೆ ನನ್ನ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದ ಗದುಗಿನ ಶ್ರೀ ತೋಂಟದಾರ್ಯಮಠದ 'ಲಿಂಗಾಯತ ಅಧ್ಯಯನ ಸಂಸ್ಥೆ'ಯ ಅಡಿಯಲ್ಲಿ ಪ್ರಾಚೀನಕೃತಿ ಪ್ರಕಟವಾಗಲು ನೆರವಾದುದು. ಈ ಸಂದರ್ಭದಲ್ಲಿ ತಮ್ಮ ಕೃತಿಗಳಲ್ಲದೆ, ಮಿಕ್ಕವರ ಕೃತಿಗಳೂ ಹೊರಬರಲು ಇವರು ದುಡಿದುದು ಸ್ಮರಣಾರ್ಹವೆನಿಸಿದೆ.

ಮೂರನೆಯ ಘಟ್ಟ ಕರ್ನಾಟಕ ಸರಕಾರದ ವಚನಸಾಹಿತ್ಯ, ತೋಂಟದಾರ್ಯ ಸಾಹಿತ್ಯ ಮತ್ತು ಅಪ್ರಕಟಿತ ಸಾಹಿತ್ಯ ಪ್ರಕಟನ ಯೋಜನೆಗಳಲ್ಲಿ ತೊಡಗಿಕೊಂಡುದು. ಇವುಗಳಲ್ಲಿ, ವಚನಸಂಪಾದನೆ ಯೋಜನೆಯ ಪ್ರಧಾನ ಸಂಪಾದಕನಾದ ನಾನೂ ಒಳಗೊಂಡಂತೆ ಪ್ರತಿಯೊಬ್ಬರೂ ತಲಾ ಎರಡು ಕೃತಿ ಪರಿಷ್ಕರಿಸಿದರೆ, ಇವರು ಐದು ಕೃತಿ ಪರಿಷ್ಕರಿಸಿದರು. ಒಟ್ಟು ೨೧ ಸಾವಿರ ವಚನಗಳಲ್ಲಿ ೫ ಸಾವಿರ ವಚನಗಳನ್ನು ಶೋಧಿಸಿ ಬೆಳಕಿಗೆ ತಂದ ಶ್ರೇಯಸ್ಸಿಗೆ ಪಾತ್ರರಾದರು. ಹಂಪಿ ವಿಶ್ವವಿದ್ಯಾಲಯದ ಕುಲಪತಿಹೊಣೆ ಕಾರಣವಾಗಿ ನಾನು ವಹಿಸಿಕೊಟ್ಟ 'ತೋಂಟದಾರ್ಯ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯನ್ನು ಪ್ರಧಾನ ಸಂಪಾದಕರಾಗಿ ಯಶಸ್ವಿಯಾಗಿ ಪೂರೈಸಿದರು. ಇತ್ತೀಚಿನ ಪತ್ರಾಗಾರ ಇಲಾಖೆಯ "ಅಪ್ರಕಟಿತ ಸಾಹಿತ್ಯ ಪ್ರಕಟನ ಯೋಜನೆ" ಎಂಬ ನನ್ನ ಯೋಜನೆಯಲ್ಲಿಯೂ ಭಾಗವಹಿಸಿದರು.

ಇಂಥ ಇನ್ನೊಂದು ಕೆಲಸವೆಂದರೆ, ನಾನು ರೂಪಿಸಿದ ಮೈಸೂರಿನ ಸುತ್ತೂರು ಮಠದ ಸ್ವರವಚನ ಸಾಹಿತ್ಯ, ಎಲ್ಲ ಪುರಾತನರ ವಚನ ಸಂಕಲನ ಪ್ರಕಟನ ಯೋಜನೆಗಳಲ್ಲಿ ಶ್ರದ್ಧೆಯಿಂದ ದುಡಿದುದು. ನನ್ನ ಪ್ರೋತ್ಸಾಹವಿಲ್ಲದಿದ್ದರೆ ಡಾ. ರಾಜೂರ ಅವರು ಇಷ್ಟು ಕೆಲಸ ಮಾಡುತ್ತಿರಲಿಲ್ಲವೆಂದು ಜನರು ಆಡುವುದನ್ನು ಕೇಳಿದ್ದೇನೆ. ಅವರ ಸಹಾಯವಿಲ್ಲದಿದ್ದರೆ ನನ್ನ ಕೆಲಸಕ್ಕೂ ಒಂದಿಷ್ಟು ಕೊರತೆಯಾಗುತ್ತಲಿದ್ದಿತೆಂದು ಪ್ರಾಂಜಲ ಮನಸ್ಸಿನಂದ ಹೇಳುತ್ತೇನೆ.

ಡಾ. ರಾಜೂರ ಅವರ ಈ ಸಾಹಿತ್ಯ ಸೇವೆಯ ಹಿಂದೆ ಕೆಲಸ ಮಾಡಿದುದು ಅವರ ಕ್ರಿಯಾಶೀಲ - ಸಹನಶೀಲ ವ್ಯಕ್ತಿತ್ವ. ಸಹನಶೀಲತೆಯಲ್ಲಿ ಅವರಂಥ ವ್ಯಕ್ತಿಗಳನ್ನು ನಾನು ಈ ವರೆಗೂ ಕಂಡಿಲ್ಲ. ಬಹುಶಃ ಭೂಮಿಗೆ ಕಳಿಸುವಾಗ ದೇವರು ಅವರೊಳಗೆ ಸಿಟ್ಟು ಹಾಕುವುದನ್ನು ಮರೆತಿದ್ದಾನೆ. ಹೀಗಾಗಿ ಎಂಥ ಕೆಟ್ಟ ಗಳಿಗೆಯಲ್ಲಿಯೂ ಅವರು ತಾಳ್ಮೆಯನ್ನು ಕಳೆದುಕೊಳ್ಳುವುದಿಲ್ಲ.

ವಿದ್ವತ್ತು ಮಾಗುವುದು ಅಧ್ಯಯನಶೀಲತೆ ಮತ್ತು ಕ್ರಿಯಾಶೀಲತೆಗಳಿಂದ. ಈ ಮನೋಧರ್ಮ ಕಾರಣವಾಗಿ ಅವರು ವಿಪುಲ ಪ್ರಮಾಣದ ಕೆಲಸ ಮಾಡಿದ್ದಾರೆ. ಗಾತ್ರಾತ್ಮಕವಾಗಿರುವ ಅದು ಗುಣಾತ್ಮಕವೂ ಆಗಿದೆ. ಇವರು ವಚನ ಸಂಪುಟಗಳಿಗೆ, ಎಲ್ಲ ಪುರಾತನರ ವಚನ ಸಂಕಲನಕ್ಕೆ ಬರೆದ ಪ್ರಸ್ತಾವನೆಗಳು ಇದಕ್ಕೆ ಸಾಕ್ಷಿಯಾಗಿವೆ. ಕೆಲಸದಲ್ಲಿ ಒಂದಿಷ್ಟು ವೇಗ ಕಡಿಮೆ ಎನಿಸಿದರೂ ಗುಣದಲ್ಲಿ ಕಡಿಮೆಯಿಲ್ಲವೆಂದೇ ಹೇಳಬೇಕು.

ಡಾ. ರಾಜೂರ ಅವರೂ ಸೇರಿದಂತೆ ನನ್ನ ವಿದ್ಯಾರ್ಥಿಗಳಿಗಾಗಿ ನಾನು ಬಹಳ ಶ್ರಮಿಸಿದ್ದೇನೆ. ಆದರೆ ಡಾ. ರಾಜೂರ ಅವರು ನನ್ನ ಶ್ರಮದ ಸಾಲವನ್ನು ತಮ್ಮ ಸಹಾಯದ ಮೂಲಕ ಸರಿಯಾಗಿ ತೀರಿಸಿದ್ದಾರೆ. ವಿದ್ವಾಂಸರಾದ ಡಾ. ಆರ್.ಸಿ. ಹಿರೇಮಠರ ಮಗ್ಗುಲಲ್ಲಿ ನಾನು ಬೆಳೆದಂತೆ ನನ್ನ ಮಗ್ಗುಲಲ್ಲಿ ಡಾ. ರಾಜೂರ ಬೆಳೆದಿದ್ದಾರೆ. ಡಾ.ಹಿರೇಮಠರು ಒಂದು ಸಮಾರಂಭದಲ್ಲಿ ನನ್ನನ್ನು 'ತಮ್ಮ ಉತ್ತರಾಧಿಕಾರಿ' ಎಂದು ಹೇಳಿದ್ದು, ಅದನ್ನು ನನ್ನ ಮತ್ತು ರಾಜೂರ ಅವರು ಸಂಬಂಧದಲ್ಲಿಯೂ ಈಗ ಹೇಳಬಹುದಾಗಿದೆ.

ವಿರಾಜಮಾನ : (ವೀರಣ್ಣ ರಾಜೂರ ಅಭಿನಂದನ ಗ್ರಂಥ), ೨೦೧೦

ಆಕರ : ಮಾರ್ಗ ಸಂಪುಟ-೬

■■

೧೧೦

ಇತಿಹಾಸಕ್ಕೆ ಮತಾಂತರ ಹೊಂದಿದ ಕನ್ನಡ ವಿದ್ಯಾರ್ಥಿ

೨೦೧೦

'ಕಾರ್ಯವನ್ನು ಯೋಜಿಸು, ಯೋಜನೆಯನ್ನು ಕಾರ್ಯಗತಗೊಳಿಸು' ಈ ನಿಲುವು ನನಗೆ ತುಂಬ ಪ್ರಿಯವಾದುದು. ಈ ಹಾದಿಯಲ್ಲಿ ದುಡಿಯುವ ನಾನು, ಹೀಗೆ ದುಡಿಯುವವರನ್ನು ತುಂಬ ಪ್ರೀತಿಸುತ್ತೇನೆ. ಇಂಥ ನನ್ನ ಪ್ರೀತಿಗೆ ಪಾತ್ರರಾದ ಕೆಲವೇ ಜನರಲ್ಲಿ ದೇವರ ಕೊಂಡಾರೆಡ್ಡಿ ಅವರೂ ಒಬ್ಬರು. ಇವರು ನನಗೆ ಮೂರು ದಶಕಗಳಿಂದ ಪರಿಚಿತರು. ಸಾಹಿತ್ಯ ಪರಿಷತ್ತು, ಗೆಝೆಟಿಯರ್ ಕಾರ್ಯಾಲಯಗಳಲ್ಲಿ ಸೇವೆ ಸಲ್ಲಿಸುತ್ತ ಕರ್ನಾಟಕ ಇತಿಹಾಸ ಅಕಾಡೆಮಿಯಲ್ಲಿ ಅವರು ತೊಡಗಿಕೊಂಡಿದ್ದ ಕಾಲವದು. ಈ ಎಲ್ಲ ನೆಲೆಗಳಲ್ಲಿ ಇವರು ದುಡಿಯುತ್ತಿದ್ದುದನ್ನು, ಆಗಾಗ ಲೇಖನ ಪ್ರಕಟಿಸುತ್ತಿದ್ದುದನ್ನು ಗಮನಿಸುತ್ತಲಿದ್ದೆ. ಹೀಗೆ ಇವರು ನನ್ನ ಕಣ್ಣ ಮುಂದೆಯೇ ಇತಿಹಾಸ ಕ್ಷೇತ್ರದಲ್ಲಿ ಯುವ ವಿದ್ವಾಂಸರಾಗಿ ಬೆಳೆಯುತ್ತ ಬಂದರು. ಹೀಗಿದ್ದೂ ಈ ಘಟ್ಟದಲ್ಲಿ ಇವರ ನನ್ನ ಸಂಬಂಧ ಅಷ್ಟಕ್ಕಷ್ಟೇ. ಇದಕ್ಕೆ ಕಾರಣ ಧಾರವಾಡ - ಬೆಂಗಳೂರುಗಳ ಭೌಗೋಳಿಕ ಅಂತರ ಮತ್ತು ನಾವು ದುಡಿಯುತ್ತಲಿದ್ದ ಭಿನ್ನಸ್ವರೂಪದ ಸಂಸ್ಥೆಗಳು.

೧೯೯೮, ನಾನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾದ ಸಂದರ್ಭ. ಸಂಶೋಧನೆ, ಶಾಸನ ಸಂಶೋಧನೆ ನನ್ನ ಪ್ರೀತಿಯ ವಿಷಯವಾದುದುರಿಂದ ಅಲ್ಲಿಯ ಶಾಸನ ವಿಭಾಗದ ಬಗ್ಗೆ ನಾನು ವಿಶೇಷ ಗಮನನೀಡಿದೆ. ಈ ವಿಭಾಗದ ಮುಖ್ಯಸ್ಥರು ಡಾ. ದೇವರಕೊಂಡಾರೆಡ್ಡಿ. ಎಲ್ಲರೂ ಯುವಕರು. ಮುಖ್ಯಸ್ಥರು ಸೇರಿ ನಾಲ್ಕು ಜನ ಮಾತ್ರ. ಇವರಲ್ಲಿ ದೇವರಕೊಂಡಾರೆಡ್ಡಿ ಸೇರಿ ೩ ಜನ ಕನ್ನಡ ಎಂ.ಎ. ಓದಿದವರು, ಒಬ್ಬರು ಮಾತ್ರ ಇತಿಹಾಸ ಓದಿದವರು, ಇಂಥ ಸಿಬ್ಬಂದಿ ಇಟ್ಟುಕೊಂಡು ಇತಿಹಾಸ ಕ್ಷೇತ್ರದ ಶಾಸನಸಂಪುಟ ಪ್ರಕಟಿಸುವುದು ಹೇಗೆ? ಎಂಬ ಪ್ರಶ್ನೆ ನನಗೆ ಎದುರಾಯಿತು.

ಒಂದು ದಿನ ಮುಖ್ಯಸ್ಥರನ್ನು ಕರೆಯಿಸಿ "ಧಾರವಾಡ, ಗುಲ್ಬರ್ಗಾ, ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದು ಹಲವು ದಶಕಗಳು ಸಂದಿವೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎರಡು ಇತಿಹಾಸ ಭಾಗ, ಒಂದು ಕನ್ನಡ ಸಂಶೋಧನ ಸಂಸ್ಥೆಗಳಿವೆ. ಹೀಗಿದ್ದೂ ಉತ್ತರಕರ್ನಾಟಕದ ಶಾಸನಗಳು ವ್ಯವಸ್ಥಿತವಾಗಿ ಅಂದರೆ ಜಿಲ್ಲಾವಾರು ಸಂಪುಟಗಳಾಗಿ ಹೊರಬರಲಿಲ್ಲ. ಈ ಕೊರತೆಯನ್ನು ಹಂಪಿ ವಿಶ್ವವಿದ್ಯಾಲಯ ತುಂಬಿಕೊಡುವುದು ಅವಶ್ಯವಿದೆ" ಎನ್ನುತ್ತಲೇ 'ಕುಲಪತಿಗಳ ಪ್ರೋತ್ಸಾಹವಿದ್ದರೆ ಈ ಸಿಬ್ಬಂದಿ ಕಟ್ಟಿಕೊಂಡು ನಾನು ನಿಮ್ಮ ಇಚ್ಛೆಯನ್ನು ಪೂರೈಸುತ್ತೇನೆ' ಎಂದು ದಿಟ್ಟ ಉತ್ತರ ನೀಡಿದರು. ಇನ್ನೂ ದಿಟ್ಟವಾಗಿ ನಾನು ಭರವಸೆ ನೀಡುತ್ತಲೇ ಕ್ಷೇತ್ರಕಾರ್ಯ, ಶಾಸನ

ವಾಚನ, ಪರಿಷ್ಕರಣ, ಮುದ್ರಣ ಕಾರ್ಯಗಳನ್ನು ಜೊತೆಜೊತೆಗೆ ಆರಂಭಿಸಿಯೇ ಬಿಟ್ಟರು. ಪ್ರತಿ ೩ ತಿಂಗಳಿನ ಸಂದರ್ಶನದಲ್ಲಿ ಈ ವಿಭಾಗ ಬೆಟ್ಟದಷ್ಟು ಕಾರ್ಯ ಮಾಡುತ್ತಿರುವುದನ್ನು ಗಮನಿಸಿದೆ. "ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ" ಹೆಸರಿನಲ್ಲಿ ಒಂದರ ಮೇಲೊಂದರಂತೆ ಸಂಪುಟಗಳು, ಅದೂ ಗಜಗಾತ್ರದ ಸಂಪುಟಗಳು ಪ್ರಕಟವಾಗತೊಡಗಿದವು. ಈ ವರೆಗೆ

೧.	ಬಳ್ಳಾರಿ ಜಿಲ್ಲೆ	೧೯೯೯
೨.	ಕೊಪ್ಪಳ ಜಿಲ್ಲೆ	೧೯೯೯
೩.	ಹಂಪಿ ಶಾಸನಗಳು	೨೦೦೦
೪.	ತಮಿಳುನಾಡಿನ ಕನ್ನಡ ಶಾಸನಗಳು	೨೦೦೦
೫.	ಆಂಧ್ರಪ್ರದೇಶದ ಕನ್ನಡ ಶಾಸನಗಳು ೧&೨	೨೦೦೧
೬.	ಮಹಾರಾಷ್ಟ್ರದ ಕನ್ನಡ ಶಾಸನಗಳು	೨೦೦೧
೭.	ರಾಯಚೂರ ಜಿಲ್ಲೆ	೨೦೦೩
೮.	ಬೀದರ ಜಿಲ್ಲೆ	೨೦೦೬
೯.	ಬಾಗಲಕೋಟ ಜಿಲ್ಲೆ	೨೦೦೬

ಹೀಗೆ ಶಾಸನ ಸಂಪುಟಗಳು ಪ್ರಕಟವಾಗಿದ್ದು, ಇವುಗಳಲ್ಲಿ ೪, ೫ನೆಯ ಸಂಪುಟಗಳನ್ನು ಬಿಟ್ಟರೆ ಮಿಕ್ಕ ಸಂಪುಟಗಳೆಲ್ಲ ದೇವರಕೊಂಡಾರೆಡ್ಡಿವರ ನೇರ ನೇತೃತ್ವದ, ಶ್ರಮ-ಶ್ರದ್ಧೆಯ ಫಲವೆಂದೇ ಹೇಳಬೇಕು. ಇವರಿಗೆ ಕೆಲಸ ಮಾಡುವ, ಮಾಡಿಸುವ ಕಲೆ ಗೊತ್ತಿದೆ. ಇಂದಿನ ವಿಭಕ್ತ ಮನಸ್ಸಿನ ಸಹೋದ್ಯೋಗಿಗಳಿಂದ ಅವಿಭಕ್ತ ಕಾರ್ಯಮಾಡಿಸುವುದು ತುಂಬ ಕಠಿಣ. ಅದರಲ್ಲಿಯೂ ಒಬ್ಬೊಬ್ಬರಿಂದ ಒಂದೊಂದು ಕೃತಿ ರಚನೆ ಮಾಡಿಸುವದಲ್ಲ, ಎಲ್ಲರೂ ಸೇರಿ ಒಂದೇ ಕೃತಿ ಕಚನೆ ಮಾಡುವುದು ಇನ್ನೂ ಕಠಿಣ. ಇಲ್ಲಿ ಕೆಲಸದ ತಾರತಮ್ಯ, ಪ್ರತಿಷ್ಠೆಯ ತಾರತಮ್ಯದ ಪ್ರಶ್ನೆಗಳು ಎದುರಾಗುತ್ತವೆ. ಅವು ಎದುರಾಗದಂತೆ ನೋಡಿಕೊಳ್ಳುವ, ಎದುರಾದರೂ ನಿವಾರಿಸಿ ಸಂಪುಟಗಳನ್ನು ಸಾಕಾರಗೊಳಿಸುವ ಯೋಜಕತ್ವ ಅವಶ್ಯ. ಹೆಚ್ಚಿನದಾಗಿ ಸಂಸ್ಕೃತ ಶಾಸನಗಳ ವಾಚನ, ಇಂಗ್ಲಿಷ್ ಟಿಪ್ಪಣಿಯ ಬರೆವಣಿಗೆ ಇತ್ಯಾದಿಗಳಿಗೆ ಅನ್ಯವಿದ್ವಾಂಸರ ನೆರವು ಪಡೆಯುವುದು- ಇವೆಲ್ಲ ಸುಲಭವಲ್ಲ. ಹೀಗಿದ್ದೂ ರೆಡ್ಡಿಯವರು ಈ ಎಲ್ಲ ಅಗ್ನಿದಿವ್ಯಗಳನ್ನು ಸುಲಭವಾಗಿ ಗೆದೆಯುತ್ತಿದ್ದ ರೀತಿ ನನಗೆ ಸೋಜಿಗ, ಸಂತೋಷಗಳನ್ನುಂಟು ಮಾಡುತ್ತಲಿದ್ದಿತು.

ಅದೇನೇ ಇರಲಿ, ನಮ್ಮ ನಾಡಿನ ಶಾಸನಸಾಹಿತ್ಯದ ಪ್ರಕಟನೆಯ ಇತಿಹಾಸದಲ್ಲಿ ದಕ್ಷಿಣ ಕರ್ನಾಟಕದ ಶಾಸನಗಳನ್ನು ಹೊರತಂದ ರೈಸ್ ಅವರಂತೆ ಉತ್ತರ ಕರ್ನಾಟಕದ ಶಾಸನಗಳನ್ನು ಹೊರತಂದ ಕೀರ್ತಿ ಡಾ. ರೆಡ್ಡಿ ಅವರಿಗೆ ಸಲ್ಲುತ್ತದೆ. ಅವರ ಎಪಿಗ್ರಾಫಿಯ ಕರ್ನಾಟಿಕ, ಇವರ ಕನ್ನಡ ಯುನಿವ್ಹರ್ಸಿಟಿ ಎಫಿಗ್ರಾಫಿಕಲ್ ಸೀರೀಜ್ ಮೈಲಿಗಲ್ಲು ಎನಿಸಿವೆ. ರೆಡ್ಡಿಯವರು ನಿವೃತ್ತಿ ಹೊಂದುತ್ತಲೇ ಈ ಕೆಲಸ ನಿಧಾನವಾಗುತ್ತಲಿರುವುದನ್ನು ನೋಡಿದರೆ, ಈ ಯೋಜನೆಗೆ ಅವರು ಕೇಂದ್ರಶಕ್ತಿಯಾಗಿದ್ದರೆಂದು ಸ್ಪಷ್ಟವಾಗುತ್ತದೆ. ಇದೆಲ್ಲವನ್ನು ಗಮನಿಸಿ, ಶಾಸನ ಪ್ರಕಟನೆಗೆ ಸಂಬಂಧಿಸಿದಂತೆ ಇವರು ಬಿ.ಎಲ್.ರೈಸ್ ಮಾದರಿಯ ವ್ಯಕ್ತಿಯೆಂದು ಹೇಳಬಹುದಾಗಿದೆ.

ಈ ಯೋಜನೆಗೆ ಮೊದಲು ಪ್ರಕಟಿಸಿದ "ತಲಕಾಡಿನ ಗಂಗರ ದೇವಾಲಯಗಳು : ಒಂದು ಅಧ್ಯಯನ", ತರುವಾಯ ಪ್ರಕಟಿಸಿದ "ಲಿಪಿಶಾಸ್ತ್ರ" ಇವರ ಇನ್ನೆರಡು ಮೌಲಿಕ ಕೃತಿಗಳೆನಿಸಿವೆ. ವ್ಯಾಪಕ ಕ್ಷೇತ್ರಕಾರ್ಯ, ವಿಪುಲ ಮಾಹಿತಿ ಸಂಗ್ರಹ, ಈ ದೇವಾಲಯಗಳ ವೈಶಿಷ್ಟ್ಯ ಗುರುತಿಸುವಿಕೆ - ಇವು ಗಂಗರ ದೇವಾಲಯ ಕೃತಿಯ

ಸಾಧನೆಗಳೆನಿಸಿವೆ. ಈ ಮೊದಲು ಲಿಪಿಶಾಸ್ತ್ರವನ್ನು ಕುರಿತು ಕನ್ನಡದಲ್ಲಿ ಒಂದೆರಡು ಗ್ರಂಥಗಳು ಬಂದಿದ್ದರೂ ಡಾ. ರೆಡ್ಡಿಯವರದು ಹೆಚ್ಚು ಸಮಗ್ರ, ಹೆಚ್ಚು ಒಳನೋಟಗಳನ್ನೊಳಗೊಂಡಿದೆ.

ಹೀಗೆ, ಇತಿಹಾಸ ಬರೆವಣಿಗೆ, ಶಾಸನ ಸಂಪಾದನೆಗಳಿಗೆ ಗಮನಾರ್ಹ ಕೊಡುಗೆ ನೀಡಿದ ಇವರ ಸಾಧನೆಯನ್ನು ಇನ್ನೊಂದು ದೃಷ್ಟಿಯಿಂದಲೂ ಗುರುತಿಸಬಹುದು. ಅದು : ಮೂಲತಃ ಕನ್ನಡ ಎಂ.ಎ. ಓದಿದ್ದರೂ ಇವರು ಇತಿಹಾಸ ಕ್ಷೇತ್ರದಲ್ಲಿಯೇ ವಿಶೇಷ ಕೆಲಸ ಮಾಡಿದರು. ಹಾಗೆ ನೋಡಿದರೆ ಇತಿಹಾಸ ಮತ್ತು ಸಾಹಿತ್ಯ ಪರಸ್ಪರ ಪೂರಕ ವಿಷಯಗಳು. ಸಾಹಿತ್ಯವಿದ್ಯಾರ್ಥಿಗೆ ಇತಿಹಾಸದ ಅಧ್ಯಯನವು ಸಾಹಿತ್ಯವನ್ನು ಚಾರಿತ್ರಿಕ ಸಂದರ್ಭದಲ್ಲಿಟ್ಟು ನೋಡುವುದನ್ನೂ, ಜೊತೆಗೆ ಇತಿಹಾಸ ಪ್ರಾಧ್ಯಾಪಕರಿಗಿಂತ ಭಿನ್ನದೃಷ್ಟಿಯಿಂದ ಚರಿತ್ರೆ ನೋಡುವುದನ್ನೂ ಕಲಿಸುತ್ತದೆ. ಈ ಕಾರಣದಿಂದಾಗಿ ಇತ್ತೀಚಿನ ದಿನಗಳಲ್ಲಿ ಕನ್ನಡ ಪ್ರಾಧ್ಯಾಪಕರು ಶಾಸನ-ಇತಿಹಾಸ-ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ವಿಪುಲ ಕಾರ್ಯಮಾಡಿದ್ದಾರೆ. ಇವರನ್ನು ಇತಿಹಾಸಕ್ಕೆ ವಲಸೆಹೋದ ಕನ್ನಡ ವಿದ್ಯಾರ್ಥಿಗಳೆಂದು ಕರೆಯಬಹುದು. ಇತರಗಿಂತ ಭಿನ್ನವೆಂಬಂತೆ ಕನ್ನಡ ಮೂಲದವರಾಗಿದ್ದರೂ ಡಾ. ರೆಡ್ಡಿಯವರು ಇಡಿಯಾಗಿ ಇತಿಹಾಸಕ್ಕೆ ಹೊರಳಿದ್ದಾರೆ. ಅದರಲ್ಲಿಯೂ ಶಾಸನ, ಶಿಲ್ಪ - ಈ ಎರಡೂ ನೆಲೆಗಳಲ್ಲಿ ಅಧ್ಯಯನ ಪೂರೈಸಿದ್ದಾರೆ. ಹೀಗಾಗಿ, ರೆಡ್ಡಿಯವರನ್ನು ಇತಿಹಾಸಕ್ಕೆ ವಲಸೆಹೋದ ಕನ್ನಡ ವಿದ್ಯಾರ್ಥಿಯೆನ್ನುವುದಕ್ಕಿಂತ, ಇತಿಹಾಸಕ್ಕೆ ಮತಾಂತರ ಹೊಂದಿದ ಕನ್ನಡ ವಿದ್ಯಾರ್ಥಿಯೆಂದು ಹೇಳಬಹುದಾಗಿದೆ.

ದೇವರಕೊಂಡಾರೆಡ್ಡಿ ಅವರ ಗೌರವ ಗ್ರಂಥಕ್ಕೆ ಬರೆದ ಲೇಖನ, ೨೦೧೦

ಆಕರ : ಮಾರ್ಗ ಸಂಪುಟ–೬

■■

೧೧೧

ಆತ್ಮವಿಶ್ವಾಸದ ಗಾಯಕ

೨೦೧೦

ಬಸವಲಿಂಗಯ್ಯ ಎಂಬುದು ಇಂದು ಆತ್ಮವಿಶ್ವಾಸದ ಹಾಡುಗಾರಿಕೆಗೆ ಪರ್ಯಾಯನಾಮವಾಗಿದೆ. ಬಾಲ್ಯದಿಂದಲೂ ಈ ವಿಶ್ವಾಸವನ್ನೇ ಮೂಲಧನ ಮಾಡಿಕೊಂಡು ಬೆಳೆದಿರುವ ಇವನ ಹಾಡುಗಾರಿಕೆ ಯಾವುದೇ ಸಭೆಯಲ್ಲಿ, ಯಾವುದೇ ಸಂದರ್ಭದಲ್ಲಿ ಸೋಲುವುದಿಲ್ಲವೆಂದೇ ಹೇಳಬೇಕು.

ಕಲೆ ದೈವದತ್ತ ಕಾಣಿಕೆ. ಅದರ ಉದಾತ್ತೀಕರಣ ನಿರಂತರ ಪ್ರಯತ್ನವನ್ನು ಬಯಸುತ್ತದೆ. ಈ ಪ್ರಯತ್ನ ಮುಂದುವರಿದಂತೆ ಕಲಾವಿದನಿಗೆ ಆತ್ಮವಿಶ್ವಾಸ ಕೈವಶವಾಗುತ್ತದೆ. ಒಳ್ಳೆಯ ಹಾಡುಗಾರ ನೂರರಲ್ಲಿ ಒಬ್ಬ. ಆತ್ಮವಿಶ್ವಾಸದ ಹಾಡುಗಾರ ಸಾವಿರದಲ್ಲಿ ಒಬ್ಬ. ನನ್ನ ದೃಷ್ಟಿಯಲ್ಲಿ ಬಸವಲಿಂಗಯ್ಯ ಸಾವಿರದಲ್ಲಿ ಒಬ್ಬ.

ಬಸವಲಿಂಗಯ್ಯ ಮತ್ತು ನನ್ನ ಸಂಬಂಧ ತೀರ ಇತ್ತೀಚಿನದಾದರೂ ಅದಕ್ಕೆ ೧೦-೧೫ ವರ್ಷಗಳ ಇತಿಹಾಸವಿದೆ. ಯಾವುದೇ ವಿದ್ಯೆ ಯಾರಲ್ಲಿಯೇ ಇರಲಿ, ಅವರನ್ನು ಪ್ರೀತಿಸುವ, ಪ್ರೋತ್ಸಾಹಿಸುವ ಮನಸ್ಸು ನನ್ನದು. ಹೀಗಾಗಿ ಇಂಥ ಕೆಲವರೊಂದಿಗೆ ಅಭಿಪ್ರಾಯ ಭೇದವಿದ್ದರೂ ಮರೆತು, ಅವರ ಸಂಬಂಧ ಉಳಿಸಿಕೊಳ್ಳುತ್ತ ಬಂದಿದ್ದೇನೆ. ಈ ಧೋರಣೆ ಕಾರಣವಾಗಿ ನನಗೆ ಬಸವಲಿಂಗಯ್ಯನೆಂದರೆ, ಅವನ ಹಾಡುಗಾರಿಕೆಯೆಂದರೆ ಅತಿಶಯ ಪ್ರೀತಿ.

ಬಸವಲಿಂಗಯ್ಯ ಎಂದಾಕ್ಷಣ ವಿಶ್ವೇಶ್ವರಿ ನೆನಪಾಗುತ್ತಾಳೆ. ಈ ದಂಪತಿ ಎರಡು ಜೀವಗಳಲ್ಲ; ಒಂದೇ ಜೀವದ ಎರಡು ಶ್ವಾಸಕೋಶಗಳು. ಬಸವಲಿಂಗಯ್ಯನಿಗಿಂತ ವಿಶ್ವೇಶ್ವರಿಯದು ಹೆಚ್ಚು ಅಂತಃಕರಣದ ಸ್ವಭಾವ. ಆಕೆ ನಿಂತಲ್ಲಿ, ಕುಳಿತಲ್ಲಿ ಆತ್ಮೀಯ ವಾತಾವರಣ ಸೃಷ್ಟಿಯಾಗುತ್ತದೆ. ಬಸವಲಿಂಗಯ್ಯ ತನ್ನ ನಿಷ್ಠುರ ಸ್ವಭಾವದಿಂದಾಗಿ ಅನೇಕ ಸಲ ಸೃಷ್ಟಿಸಿಕೊಂಡ ತೊಂದರೆಗಳು ವಿಶ್ವೇಶ್ವರಿಯ ಆತ್ಮೀಯ ಸ್ವಭಾವದಿಂದಾಗಿ ನಿವಾರಣೆಯಾದುದನ್ನು ನಾನು ಗಮನಿಸಿದ್ದೇನೆ. ಇದಕ್ಕೆ ಹೆಚ್ಚಿನದಾಗಿ ವಿಶ್ವೇಶ್ವರಿ ಬಸವಲಿಂಗಯ್ಯನ ಕಲೆಗೆ ಮುಂಬಲ-ಬೆಂಬಲವಾಗಿ ದುಡಿಯುತ್ತಿದ್ದಾಳೆ. ಹೀಗಾಗಿ 'ಭಲೆ ಜೋಡಿ' ಎಂಬಂತೆ ಈ ಜೋಡಿ ಬೆಳೆದು ಬಂದಿದೆ.

ಬಸವಲಿಂಗಯ್ಯನನ್ನು ನಿದ್ದೆಯಿಂದ ಎಬ್ಬಿಸುವುದೇ ತಡ, ಎದ್ದವನೇ ಶುದ್ಧರಾಗದಲ್ಲಿ ಹಾಡುವ ಸಂಗೀತ ಸಿದ್ಧಿ ಇವನದು. ಹಾಡಲು ನಿಂತರೆ ಜಲಪಾತದಂತೆ ಅಬ್ಬರ, ಆನಂದ ಸೃಷ್ಟಿಯಾಗುತ್ತದೆ. ಇವನು

ವೇದಿಕೆಯ ಮೇಲಿದ್ದರೆ ಮಿಕ್ಕ ಹಾಡುಗಾರರಿಗೆ, ಭಾಷಣಕಾರರಿಗೆ ಧೈರ್ಯ ಸಾಲುವುದಿಲ್ಲ. ಎಷ್ಟೋ ಸಲ ನಾವಿಬ್ಬರೂ ಹಾಡುಗಾರ - ಭಾಷಣಕಾರರಾಗಿ ವೇದಿಕೆ ಹಂಚಿಕೊಂಡಿದ್ದೇವೆ. ಆಗ 'ನನ್ನ ಭಾಷಣ ಮೊದಲು ಬಸಲಿಂಗಯ್ಯನ ಹಾಡು ಆಮೇಲೆ', ಎಂಬ ಸೂಚನೆಯನ್ನು ಸಂಘಟಕರಿಗೆ ನೀಡುತ್ತ ಬಂದಿದ್ದೇನೆ. ಹೀಗಿದ್ದೂ 'ಭಾಷಣ ಸಾಕು ಬಸಲಿಂಗಯ್ಯ ಬೇಕು' ಎಂಬ ಎಂದು ಶ್ರೋತೃಗಳು ಕೂಗಿದುದನ್ನು ಕೇಳಿದ್ದೇನೆ. ಒಂದು ವೇಳೆ ಬಸವಲಿಂಗಯ್ಯ ಮೊದಲು ಹಾಡಿದರೆ ನನ್ನ ಭಾಷಣಕ್ಕೆ ಸಭಿಕರೇ ಉಳಿಯದುದನ್ನೂ ಅನುಭವಿಸಿದ್ದೇನೆ. ಹೀಗಾಗಿ ಇತ್ತೀಚೆ ಇವನೊಂದಿಗೆ ಸಭೆಗೆ ಹೋಗುವುದನ್ನೇ ನಿಲ್ಲಿಸಿದ್ದೇನೆ. ಇದೆಲ್ಲಕ್ಕೆ ಕಾರಣ, ಎದ್ದು ನಿಂತವನೇ ಆತ್ಮವಿಶ್ವಾಸದಿಂದ ಹಾಡನ್ನು ವಶಪಡಿಸಿಕೊಂಡು, ಸಭಿಕರನ್ನು ವಶೀಕರಣಗೊಳಿಸಿಕೊಳ್ಳುವ ಅವನ ಅಗಾಧಶಕ್ತಿ. ಇದನ್ನು ಗಮನಿಸಿಯೇ "ನಿನ್ನ ಹಾಡಿಗೆ ಸರಿಹೊಂದುವ ಸೂರುಪಟ್ಟಿಯ ಹಾರ್ಮೋನಿಯಂ ಇನ್ನೂ ಹುಟ್ಟಿಲ್ಲ"ವೆಂದು ನಾನು ಎಷ್ಟೋ ಸಲ ವಿನೋದಮಾಡಿದ್ದೇನೆ.

ಜಾನಪದ ಹಾಡೇ ಇರಲಿ, ಅನುಭಾವಗೀತೆಯೇ ಇರಲಿ, ಕಂಪನಿ ನಾಟಕದ ಪದವೇ ಇರಲಿ, ಅದು ಬಸವಲಿಂಗಯ್ಯನ ಅಖಂಡ ಧ್ವನಿಯಲ್ಲಿ ಧುಮ್ಮಿಕ್ಕುತ್ತದೆ. ಎಷ್ಟು ಹಾಡುಗಳನ್ನು ಎಷ್ಟು ಗಂಟೆ ಹಾಡಿದರೂ ದಣಿಯದ ದನಿ ಅವನದು. ಇಂಥ ದೊಡ್ಡ ಕಲಾವಿದನಿಗೆ ಧಾರವಾಡದಂಥ ಸಣ್ಣನಗರ ಸರಿಯಾದ ವೇದಿಕೆಯಲ್ಲ, ರಾಜಧಾನಿ ಬೆಂಗಳೂರು ಸೂಕ್ತ ವೇದಿಕೆ. ಒಂದು ವೇಳೆ ಅಲ್ಲಿ ನೆಲೆಸಿದರೆ 'ನಗರದ ಹಗುರ ಹಾಡುಗಾರರು ಧೂಳಿಪಟವಾಗುವುದರಲ್ಲಿ ಸಂದೇಹವಿಲ್ಲ. ಇನ್ನೂ ಕಾಲ ಮಿಂಚಿಲ್ಲ. ಬಸಲಿಂಗಯ್ಯ ಬೆಂಗಳೂರಿನಲ್ಲಿ ನೆಲೆಯೂರಬೇಕೆಂದು ನಾನು ಆಶಿಸುತ್ತೇನೆ.

ಉತ್ತರ ಕರ್ನಾಟಕದ ಗ್ರಾಮೀಣ ಹಾಡುಗಾರಿಕೆ ಇನ್ನೂ ನಗರೀಕರಣಗೊಂಡಿಲ್ಲ. ಹೀಗಾಗಿ ಇಲ್ಲಿ ಸಿದ್ಧ - ಪ್ರಸಿದ್ಧ ಹಾಡುಗಾರರ ಪರಂಪರೆ ಈಗಲೂ ಬೆಳೆದು ಬರುತ್ತಲಿದೆ. ಈ ಪರಂಪರೆಯಲ್ಲಿ ಎದ್ದು ಕೇಳಿಸುವ ಹೆಸರು ಹುಕ್ಕೇರಿ ಬಾಳಪ್ಪ, ಅವರ ತರುವಾಯದ ಅಭಿನವ ಬಾಳಪ್ಪನೆಂದರೆ ಬಸಲಿಂಗಯ್ಯ. ಕೇವಲ ಹಾಡುಗಾರಿಕೆಗೆ ಸೀಮಿತನಾಗದೆ ನಾಟಕ ತಂಡದ ಸಂಘಟನೆ, ನಾಟಕ-ಬಯಲಾಟಗಳ ನಿರ್ದೇಶನ, ನಟನೆ ಇತ್ಯಾದಿ ಶಕ್ತಿ - ಆಸಕ್ತಿಗಳು ಇವನಲ್ಲಿ ಮನೆಮಾಡಿವೆ. ಇದಕ್ಕೆ ನಿದರ್ಶವೆಂಬಂತೆ ಶ್ರೀ ಕೃಷ್ಣಪಾರಿಜಾತದ ಪರಿಷ್ಕರಣ ಅಚ್ಚರಿಹುಟ್ಟಿಸುತ್ತದೆ. ಸಂಪ್ರದಾಯಕ್ಕೆ ಭಂಗಬರದಂತೆ ಆಧುನಿಕಗೊಳಿಸುವ ಇವನ ಸೃಜನಶೀಲತೆ ಮೆಚ್ಚುಗೆ ಗಳಿಸುತ್ತದೆ.

ನನ್ನ 'ಖರೆ ಖರೇ ಸಂಗ್ಯಾಬಾಳ್ಯಾ' ನಾಟಕಪಠ್ಯ ಇನ್ನೂ ಹಸ್ತಪ್ರತಿ ರೂಪದಲ್ಲಿದ್ದಿತು. ತೆಗೆದುಕೊಂಡು ಹೋಗಿ, ಒಂದು ತಿಂಗಳಲ್ಲಿ ರಂಗದ ಮೇಲೆ ಪ್ರದರ್ಶನಕ್ಕೆ ಸಿದ್ಧಪಡಿಸಿದರು. ಈ ಮೊದಲಿನದು 'ಸುಳ್ಳು ಸಂಗ್ಯಾಬಾಳ್ಯಾ,' ಇದು ಖರೇ ಖರೇ ಸಂಗ್ಯಾಬಾಳ್ಯಾ' ಎಂದು ಹೇಳಿ, ಇದಕ್ಕೆ ನಾಮಕರಣ ಮಾಡಿದವರು, ಈ ದಂಪತಿಗಳೇ. ಆಮೇಲೆ ಒಂದು ವರ್ಷದಲ್ಲಿ ಸುಮಾರು ೨೫ ಪ್ರಯೋಗ ಮಾಡಿ, ಈ ಕೃತಿಗೆ ಪ್ರಚಾರ -ಪ್ರಸಿದ್ಧಿ ತಂದುಕೊಟ್ಟವರೂ ಇವರೇ.

ಈಗ ಬಸವಲಿಂಗಯ್ಯನಿಗೆ ೫೦ ವರ್ಷ. ಕನಿಷ್ಠ ಇನ್ನೂ ೫೦ ವರ್ಷ ಇವನ ಹಾಡುಗಾರಿಕೆ ಕಲ್ಲ ಹೊಳೆಯಂತೆ ಸಶಬ್ದವಾಗಿ ಪ್ರವಹಿಸಲಿ ; ಹುಣ್ಣಿಮೆಯ ಸಾಗರದಂತೆ ಭೋರ್ಗರೆಯಲಿ - ಎಂದು ಹಾರೈಸುತ್ತೇನೆ.

ಹಾಡ ತೂರಾಡ್ಯಾವ : ಬಸಲಿಂಗಯ್ಯ ಹಿರೇಮಠ ಅಭಿನಂದನ ಗ್ರಂಥ, ೨೦೧೦

ಆಕರ : ಮಾರ್ಗ ಸಂಪುಟ–೬

೧೧೨

ಮರೆಯಲಾಗದ ಮನುಷ್ಯ ಅನಕೃ

ಕನ್ನಡದಲ್ಲಿ ಕೆಲಸ ಮಾಡಿದವರ ಸಂಖ್ಯೆ ಹೇರಳ, ಕನ್ನಡಕ್ಕಾಗಿ ಕೆಲಸ ಮಾಡಿದವರ ಸಂಖ್ಯೆ ವಿರಳ. ಇವೆರಡನ್ನೂ ಮಾಡಿದವರು ಇನ್ನೂ ವಿರಳ. ಈ ವಿರಳ ವರ್ಗಕ್ಕೆ ಸೇರಿದವರು ಅನಕೃ. ನಾಡ ಏಕೀಕರಣ, ನಾಡವರ ಜಾಗ್ರತಿ, ನುಡಿಯ ಬೆಳವಣಿಗೆ, ಸಾಹಿತ್ಯದ ನವನಿರ್ಮಾಣ ಕಾರ್ಯ ಇತ್ಯಾದಿ ಶ್ರೇಣಿಗಳಲ್ಲಿಯ ದುಡಿಮೆ ಕಾರಣವಾಗಿ, ಅವರ ಕನ್ನಡ ಸೇವೆಯಲ್ಲಿ ಸಮಗ್ರತೆ ಎದ್ದು ಕಾಣುತ್ತಿದ್ದಿತು. ಅದಕ್ಕಾಗಿಯೇ ಕನ್ನಡಿಗರು ಅವರನ್ನು 'ಹಲವು ಕಾಳಗಗಳ ಕಲಿ' ಎಂದೇ ಗುರುತಿಸಿದರು.

ಅನಕೃ ಕನ್ನಡ ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸುವ ಹೊತ್ತಿಗೆ ಅಲ್ಲಿ ನವೋದಯಪಂಥ ಬೆಳೆದು ಸಿದ್ಧವಾಗಿದ್ದಿತು. ಲೇಖಕರು ಆದರ್ಶ, ಕನಸುಗಾರಿಕೆ, ಮಡಿವಂತಿಕೆ ಇತ್ಯಾದಿಗಳನ್ನು ಬರಹದಲ್ಲಿ ಬಿತ್ತಿ ಬೆಳೆಯುತ್ತಲಿದ್ದ ಕಾಲವದು. ಈ ಸಮಯದಲ್ಲಿ ಅನಕೃ "ವಾಸ್ತವತೆ"ಯ ಕೊಂಬು ಕಹಳೆ ಹಿಡಿದುಕೊಂಡೇ ಈ ಕ್ಷೇತ್ರವನ್ನು ಪ್ರವೇಶಿಸಿದರು. ಸಾಹಿತ್ಯದಲ್ಲಿ 'ವಾಸ್ತವಪ್ರಜ್ಞೆ'ಯ ಬಾಗಿಲು ತೆರೆದು "ಪ್ರಗತಿಶೀಲ ಆಂದೋಲನ"ದ ಪ್ರವರ್ತಕರಾದರು. ಮೈಚಳಿ ಬಿಟ್ಟು ಬರೆಯುವುದರೊಂದಿಗೆ, ಹೀಗೆ ಬರೆಯಬೇಕೆನ್ನುವವರಿಗೆ ದಾರಿದೀಪವಾಗಿ ನಿಂತರು.

ಅನಕೃ ಅವರು ಧೋರಣೆಯಲ್ಲಿ 'ಪ್ರಗತಿಶೀಲ'ರಾಗಿದ್ದಂತೆ ಬರವಣಿಗೆಯಲ್ಲಿ ಪ್ರಯೋಗಶೀಲರೂ ಆಗಿದ್ದರು. ವಸ್ತು ಭಾಷೆ ತಂತ್ರ ಇತ್ಯಾದಿ ದೃಷ್ಟಿಯಿಂದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಹೊಸ ಪ್ರಯೋಗಗಳನ್ನು ಅವರು ರೂಡಿಸಿಕೊಂಡಿರು. ಈ ಮೊದಲು ಗಳಗನಾಥ, ಬಿ. ವೆಂಕಟಾಚಾರ್ಯರ ಕೃತಿವಾಚನದಲ್ಲಿ ತಲ್ಲೀನರಾಗಿದ್ದವರಿಗೆ ಅನಕೃ ಬರವಣಿಗೆ ಹೊಸ ರುಚಿಯಾಗಿ ಪರಿಣಮಿಸಿತು. ಹೀಗಾಗಿ ಏಕಕಾಲಕ್ಕೆ ಸಮಸ್ತ ಕನ್ನಡಿಗರು ಅವರ ಕೃತಿ ವಾಚನದತ್ತ ಧಾವಿಸಿದರು. ಅವರಷ್ಟು ವಾಚಕರನ್ನು ಪಡೆದ ಲೇಖಕರು ಕನ್ನಡದಲ್ಲಿ ವಿರಳವೆಂದೇ ಹೇಳಬೇಕು.

ನೂರಕ್ಕೂ ಮಿಕ್ಕ ಕಾದಂಬರಿ ಬರೆದು 'ಕಾದಂಬರಿ ಸಾಮ್ರಾಟ'ರೆಂದು ಹೆಸರಾಗಿದ್ದರೂ ಅನಕೃ ಕಥೆ, ನಾಟಕ, ಪ್ರಬಂಧ, ಜೀವನಚರಿತ್ರೆ, ಅನುವಾದ ಇತ್ಯಾದಿ ಕ್ಷೇತ್ರಗಳಲ್ಲಿಯೂ ದುಡಿದು ಅಲ್ಲಲ್ಲಿ ಪ್ರಗತಿಶೀಲ ಧೋರಣೆಯನ್ನು ಮೈಗೂಡಿಸಿಕೊಟ್ಟರು. ಇದರಿಂದಾಗಿ ಹತ್ತು ಕೈಗಳನ್ನು ಏಕೀಭವಿಸಿಕೊಂಡು ಬರೆದ ಅದಮ್ಯ ಚೇತನ ಅವರ ಬರವಣಿಗೆಯಲ್ಲಿ ಹಸಿರು ಮುರಿಯುವಂತಾಯಿತು.

'ವಾಸ್ತವತೆ'ಯ ಪ್ರತಿಪಾದನೆಯ ಮೂಲಕ ಆಧುನಿಕರಾಗಿದ್ದರೂ ನಮ್ಮ ನಾಡಿನ ಪ್ರಾಚೀನ ಪರಂಪರೆಯ ಪ್ರೀತಿ, ಪ್ರಜ್ಞೆ, ಅನಕೃ ಅವರಲ್ಲಿ ಗಾಢವಾಗಿದ್ದಿತು. ಭಾರತೀಯ ಪರಂಪರೆಯ ಮೂಲಸೂತ್ರಕ್ಕೆ ಧಕ್ಕೆ ಬಾರದಂತೆ

ಪ್ರಗತಿಶೀಲತೆಯನ್ನು ಸಾಧಿಸಿದ ಅವರಲ್ಲಿ ಪ್ರಾಚೀನ-ನವೀನ, ಪೂರ್ವ-ಪಶ್ಚಿಮ ವಿಚಾರಗಳ ಅಪೂರ್ವಸಂಗಮ ಎದ್ದು ತೋರುತ್ತಲಿದ್ದಿತು. ಈ ಕಾರಣದಿಂದಲೇ ಅವರು ಅನೇಕ ಅಭಿರುಚಿಗಳ ಆರಾಧಕರಾಗಿದ್ದರು, ಅನೇಕ ಕಲೆಗಳ ಅರ್ಚಕರಾಗಿದ್ದರು. ಸಾಹಿತ್ಯದೊಂದಿಗೆ ಸಂಗೀತ, ಚಿತ್ರ, ಶಿಲ್ಪ, ಧರ್ಮ ಇತ್ಯಾದಿ ವಿಷಯಗಳನ್ನು ಅವರು ಅಧಿಕೃತವಾಗಿ ತಿಳಿದುಕೊಂಡಿದ್ದರು. ಅವುಗಳನ್ನು ಕುರಿತು ಅಧಿಕೃತವಾಗಿ ಮಾತನಾಡುತ್ತಿದ್ದರು. ಸಾಲದುದಕ್ಕೆ ಈ ಕ್ಷೇತ್ರಗಳಲ್ಲಿ ಖ್ಯಾತಿವೆತ್ತ ಮಹಾಕೃತಿಗಳ ಅಧ್ಯಯನದಿಂದ, ಮಹಾವ್ಯಕ್ತಿಗಳ ಸಂಪರ್ಕದಿಂದ ಅವರ ಜೀವನ ಸಂಸ್ಕಾರಗೊಂಡಿದ್ದಿತು.

ಪತ್ರಕರ್ತರಾಗಿದ್ದುದು ಸಾಹಿತಿ ಅನಕೃ ಅವರ ಇನ್ನೊಂದು ವೈಶಿಷ್ಟ್ಯವೆಂದೇ ಹೇಳಬೇಕು. ಕಥಾಂಜಲಿ, ವಿಶ್ವವಾಣಿ, ಕನ್ನಡನುಡಿ, ಸಾಹಿತ್ಯ ಪರಿಷತ್ ಪತ್ರಿಕೆಗಳಂಥ ವೈವಿಧ್ಯಪೂರ್ಣ ಕನ್ನಡ ಪತ್ರಿಕೆಗಳ ಮತ್ತು ಬಾಂಬೆ ಕ್ರಾನಿಕಲ್‌ದಂಥ ಇಂಗ್ಲಿಷ್ ಪತ್ರಿಕೆಯ ಸಂಪಾದಕರಾಗಿದ್ದುದು ಅನಕೃ ಅವರ ಅನಂತಮುಖ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ. ಬಾಂಬೆ ಹೆಚ್ಚು ಪತ್ರಿಕೆಗೂ ಅವರು ಅನೇಕ ಇಂಗ್ಲೀಷ ಲೇಖನಗಳನ್ನು ಬರೆದುದುಂಟು.

ಇಷ್ಟೆಲ್ಲವನ್ನು ಅನಕೃ ಏಕಾಂತವನ್ನು ಬಯಸಿ, ಗುಹಾವಾಸಿಯಾಗಿ ಮಾಡಲಿಲ್ಲ; ಸಮಾಜದಲ್ಲಿ ಈಸುಬಿದ್ದು ಮಾಡಿದರು. ಹೀಗಾಗಿ ತಾವು ಬೆಳೆಯುವುದರೊಂದಿಗೆ ಹತ್ತಾರು ಸ್ನೇಹಿತರನ್ನು, ನೂರಾರು ಯುವಕರನ್ನು ತಮ್ಮ ಗರಡಿಯಲ್ಲಿ ಬೆಳೆಸಿದರು. ಎಲ್ಲರೊಂದಿಗೆ ಬೆರೆಯುವ ಅವರ ಸರಳ ಮನಸ್ಸೇ ಎಲ್ಲರನ್ನೂ ಬೆಳೆಸಿತು, ಅವರನ್ನು ದೊಡ್ಡವರನ್ನಾಗಿ ಮಾಡಿತು.

ಸಾಹಿತ್ಯ ನಿರ್ಮಿತಿಯಲ್ಲಿಅನಕೃ ಸಿದ್ಧಹಸ್ತರಾಗಿದ್ದಂತೆ ಮಾತುಗಾರಿಕೆಯಲ್ಲಿಯೂ ಅವರದು ಸಿದ್ಧವಾಣಿ. ಆ ಕಾಲದಲ್ಲಿ ಅವರಷ್ಟು ನಿರರ್ಗಳವಾಗಿ, ಸೃಜನಾತ್ಮಕವಾಗಿ ಸಾರ್ವಜನಿಕ ಉಪನ್ಯಾಸ ನೀಡುವ ವಾಗ್ಮಿಗಳು ಬೇರೊಬ್ಬರು ಇರಲಿಲ್ಲವೆಂದೇ ಹೇಳಬೇಕು. ಯಾರ ಭಿಡೆ ಮುರವತ್ತುಗಳಿಗೂ ಒಳಗಾಗದೆ ನಿರ್ಭೀತರಾಗಿ, ಅದೂ ಸಾಹಿತಿಯ ಸಾಮಾಜಿಕ ಹೊಣೆಗಾರಿಕೆಯಿಂದ ಮಾತನಾಡುತ್ತ ಏಕಕಾಲಕ್ಕೆ ಸಾವಿರಾರು ಸಭಿಕರನ್ನು ಸೆರೆಹಿಡಿಯುವ ಮೋಡಿ ಅವರ ವಾಣಿಗಿದ್ದಿತು.

ಇದೆಲ್ಲಕ್ಕಿಂತ ಅನಕೃ ಅವರ ಬದುಕು ಮೆಚ್ಚುವಂಥದು. ಕನ್ನಡಕ್ಕಾಗಿಯೇ ಹುಟ್ಟಿ ಬಂದ ವ್ಯಕ್ತಿಗಳವರು. ಅದರಷ್ಟು ಕನ್ನಡವನ್ನು ಕನ್ನಡಿಗರನ್ನು ಪ್ರೀತಿಸಿದವರು ವಿರಳ. ಆದುದರಿಂದ ಜೀವನದುದಕ್ಕೂ ಕನ್ನಡದ ಆತ್ಮಗೌರವವನ್ನು ಎತ್ತಿಹಿಡಿಯುವಲ್ಲಿ, ಕನ್ನಡಿಗರ ಸುಖ-ದುಃಖಗಳಿಗೆ ಸ್ಪಂದಿಸುವಲ್ಲಿ ಅವರ ಕಾಯ ಕರಗಿತು, ಜೀವ ಹಣ್ಣಾಯಿತು. ಕನ್ನಡ ಸಂಸ್ಕೃತಿಯ ಪ್ರಚಾರಕರಾಗಿ ಒಳನಾಡಿನ ಹಳ್ಳಿ ಪಟ್ಟಣಗಳನ್ನು ಸುತ್ತುವುದರೊಂದಿಗೆ, ಹೊಸನಾಡಿನಲ್ಲಿಯೂ ಕನ್ನಡಕ್ಕೆ ಕಿಮ್ಮತ್ತು ತಂದುಕೊಡುವ ಕಾರ್ಯವನ್ನು ಅನಕೃ ಮಾಡಿದರು, ಒಳ-ಹೊರಗೂ ಕನ್ನಡದ ಬಳಗವನ್ನು ಬೆಳೆದು, ಮನೆಮಾರು ಮರೆತು ಕನ್ನಡದಲ್ಲಿ, ಕರ್ನಾಟಕದಲ್ಲಿ ಒಂದಾದರು.

ಕನ್ನಡಿಗರು ಅನಕೃ ಅವರಿಗೆ ಗೌರವ ಡಾಕ್ಟರೇಟ ಪದವಿಯನ್ನಿತ್ತರು. ಸಾಹಿತ್ಯ ಸಮ್ಮೇಲನದ ಅಧ್ಯಕ್ಷಸ್ಥಾನ ನೀಡಿದರು. ಸಭೆ ಸಮಾರಂಭಗಳಲ್ಲಿ ಸತ್ಕರಿಸಿದರು. ಇದೆಲ್ಲಕ್ಕೆ ಮಿಗಿಲಾಗಿ ತಮ್ಮ ಹೃದಯದಲ್ಲಿ ಶಾಶ್ವತ ಸ್ಥಾನ ನೀಡಿದುದು, ಅನಕೃ ಅವರ ಚಿರಂಜೀವತ್ವಕ್ಕೆ ನಿದರ್ಶನವೆನಿಸಿದೆ.

ಅನಕೃ ನಿಧನರಾಗಿ ಇಂದಿಗೆ ೧೦ ವರ್ಷ ಸಂದವು. ಇಂಥ ಎಷ್ಟು ದಶಕಗಳು ಸಂದರೂ ಬಂದರೂ ನಮ್ಮಿಂದ ಮರೆಯಾಗದ, ನಾವು ಮರೆಯಲಾಗದ ಮನುಷ್ಯ, ಅನಕೃ.

ಆಕರ : ಮಾರ್ಗ ಸಂಪುಟ–೬

■■

೧೧೩

ಬಿತ್ತ ಬೇಕಾದುದನ್ನು ಬಿತ್ತಿ, ಬೆಳೆಯಬೇಕಾದುದನ್ನು ಬೆಳೆದವರು

೨೦೦೦

ಕನ್ನಡವನ್ನು ಬೆಳೆಸುವವರು ವಿರಳ, ಬೆಳೆಸುತ್ತಲೇ ಕನ್ನಡದಲ್ಲಿ ಬರೆಯುವವರು ಇನ್ನೂ ವಿರಳ. ಈ ವ್ಯಕ್ತಿಗಳ ಶ್ರೇಣಿಗಳಲ್ಲಿ ನಿಂತು ಸಾಹಿತ್ಯ ಕೃಷಿ ಮಾಡಿದ ಶ್ರೇಯಸ್ಸು ದೇಜಗೌ ಅವರದು. ಗ್ರಂಥಸಂಪಾದನೆ, ಜಾನಪದ ಅನುವಾದ, ಆತ್ಮ ಚರಿತ್ರೆ, ಜೀವನ ಚರಿತ್ರೆ ಇವು ದೇಜಗೌ ಸಾಹಿತ್ಯದ ಮುಖ್ಯ ಕ್ಷೇತ್ರಗಳು. ಆಂಡಯ್ಯನ ಕಬ್ಬಿಗರಕಾವ, ನೇಮಿಚಂದ್ರನ ಲೀಲಾವತಿ, ನಾಗರಸನ ಪುಣ್ಯಾಸ್ರವ ಇವರ ಪ್ರಮುಖ ಸಂಪಾದನೆಗಳು. ಪಾಠನಿರ್ಣಯದಲ್ಲಿ ಸತ್ಯನಿಷ್ಠತೆ, ಪ್ರಸ್ತಾವನೆಯಲ್ಲಿ ಸಮಗ್ರತೆ ಇವರ ಸಂಪಾದನೆಯ ವಿಶೇಷಗಳೆಂದು ಡಿ.ಎಲ್.ಎನ್. ಹೇಳಿದುದು ಯಥೋಚಿತವಾಗಿದೆ. ಆತ್ಮ ಚರಿತ್ರೆ, ಜೀವನ ಚರಿತ್ರೆ ಕ್ಷೇತ್ರಗಳಿಗೆ ದೇಜಗೌ ಸಲ್ಲಿಸಿದ ಸೇವೆ ಸಂಖ್ಯಾತ್ಮಕ ಮತ್ತು ಗುಣಾತ್ಮಕವಾಗಿಯು ದೊಡ್ಡದು. 'ಹೋರಾಟದ ಬದುಕು' ಹೆಸರಿನ ಎರಡು ಸಂಪುಟಗಳಲ್ಲಿ, ಸಂಭಾವನೆ ಗ್ರಂಥಗಳಿಗೆ ಬರೆದ ಆತ್ಮ ಕಥೆಗಳಲ್ಲಿ ದೇಜಗೌ ಬದುಕಿನ ಪ್ರಾಮಾಣಿಕ ಚಿತ್ರವಿದೆ. ತಮ್ಮ ದೌರ್ಬಲ್ಯಗಳನ್ನು ಬಿಚ್ಚಿ ಬಯಲಿಗಿಟ್ಟ ಕನ್ನಡದ ಏಕೈಕ ನಿದರ್ಶನವೆನಿಸಿವೆ, ಈ ಆತ್ಮ ಚರಿತ್ರೆಗಳು. ಜೀವನ ಚರಿತ್ರೆ ಕ್ಷೇತ್ರಕ್ಕೆ ದೇಜಗೌ ಅವರಿಂದ ಸಂದ ಸೇವೆ ಒಂದು ಸ್ವತಂತ್ರ ಅಧ್ಯಯನಕ್ಕೆ ವಸ್ತುವಾಗುವಷ್ಟು ಗಣ್ಯವಾಗಿದೆ. ತಮ್ಮ ಪರಿಸರದ ವ್ಯಕ್ತಿಗಳನ್ನು ರಾಷ್ಟ್ರೀಯ ಅಂತಾರಾಷ್ಟ್ರೀಯ ವ್ಯಕ್ತಿಗಳನ್ನು ಕುರಿತು ಬರೆದ ಇವುಗಳಲ್ಲಿ ಕೆಲವು ಕೃತಿಗಳು ಮಹಾವ್ಯಕ್ತಿಗಳನ್ನು ಕನ್ನಡಕ್ಕೆ ಪ್ರಥಮ ಸಲ ಪರಿಚಯಿಸಿದವುಗಳಾಗಿವೆ. ದೇಜಗೌ ದೇಶವಿದೇಶಗಳನ್ನು ಅನೇಕಸಲ ಸುತ್ತಿ ಬಂದವರು. ಲೋಕಾಭಿರಾಮವಾಗಿ ಹೊತ್ತುಗಳೆಯದೆ ಆ ದೇಶಗಳನ್ನು ಒಬ್ಬ ಅಭ್ಯಾಸಿಯಂತೆ ವೀಕ್ಷಿಸಿದವರು. ಇದರ ಫಲವಾಗಿ ಹಲವಾರು ಪ್ರವಾಸ ಸಾಹಿತ್ಯ ಕೃತಿಗಳು ಇವರಿಂದ ಬೆಳಕು ಕಂಡವು. ಮೂಲತಃ ಗ್ರಾಮೀಣ ಪರಿಸರದವರಾದ ದೇಜಗೌ ಅವರದು ಅಪ್ಪಟ ಜಾನಪದೀಯ ವ್ಯಕ್ತಿತ್ವ. ತಮ್ಮ ದೇಶೀಯ ಅನುಭವವನ್ನು ಶಾಸ್ತ್ರಶಿಸ್ತಿಗೆ ಅಳವಡಿಸಿ ಬರೆದ 'ಜಾನಪದ ಅಧ್ಯಯನ' ಒಂದು ಮಿತಿಯಲ್ಲಿ ವಿಶ್ವಕೋಶವೆನಿಸಿದೆ. 'ಜನಪದ ಗೀತಾಂಜಲಿ' ಇವರ ಅಧ್ಯಯನದ ವ್ಯಾಪ್ತಿ ಅಭಿರುಚಿಗಳಿಗೆ ಸಾಕ್ಷಿ ಎನಿಸಿದೆ.

ಇವೆಲ್ಲವುಗಳಿಗಿಂತ ಮುಖ್ಯ ಕೊಡುಗೆಯಾಗಿದೆ, ಭಾಷಾಂತರ ಸಾಹಿತ್ಯ. ಎರಡು ಭಾಷೆಗಳ, ಎರಡು ಸಂಸ್ಕೃತಿಗಳ ತಿಳುವಳಿಕೆಯಲ್ಲಿ ಅವತರಿಸುತ್ತದೆ, ಭಾಷಾಂತರ. ಈ ತತ್ತ್ವವನ್ನು ತಲಸ್ಪರ್ಶಿ ಅರ್ಥಮಾಡಿಕೊಂಡಿರುವ ದೇಜಗೌ ಹಮ್ಮು ಬಿಮ್ಮು, ಯುದ್ಧ ಮತ್ತು ಶಾಂತಿ ಮೊದಲಾದ ಜಾಗತಿಕ ಕೃತಿಗಳನ್ನು ಕನ್ನಡಕ್ಕೆ ತಂದುದು ದೊಡ್ಡ ಕೊಡುಗೆಯೇ ಸರಿ. ಶ್ರಮ–ಸೃಜಶೀಲ ಮನೋಧರ್ಮಗಳ ಫಲವೆನಿಸಿದ ಇವು ಕನ್ನಡದ ಕಣಜವನ್ನು ತುಂಬಿದ ಗದ್ಯ ಮಹಾಕೃತಿಗಳೆನಿಸಿವೆ.

ದೇಜಗೌ ಸಾಹಿತ್ಯವನ್ನು ಕುರಿತು ಬರೆಯುವಾಗ ಅವರ ಗದ್ಯಶೈಲಿಯನ್ನು ಪ್ರಸ್ತಾಪಮಾಡದಿದ್ದರೆ ವಿಷಯ ಅಪೂರ್ಣವೆನಿಸುತ್ತದೆ. ಮೂಲತಃ ಗ್ರಾಮೀಣ ಪರಿಸರದವರಾದ ಅವರ ಜಾನಪದ ಶಬ್ದ ಸಂಪತ್ತು ಸಮೃದ್ಧವಾದುದು. ಅಭ್ಯಾಸ ಬಲದಿಂದ ಕೈವರ್ತಿಸಿಕೊಂಡಿರುವ ಸಂಸ್ಕೃತ ಶಬ್ದ ಭಂಡಾರವು ಶ್ರೀಮಂತವಾದುದು. ಈ ಎರಡರ ಸಮನ್ವಯದಿಂದ ದೇಶಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು ಎಂಬಂಥ ಆಕರ್ಷಕ ಶೈಲಿ ಅವರಲ್ಲಿ ಆಕಾರ ಪಡೆದಿದೆ. ಕನ್ನಡದ ಸಂದರ್ಭದಲ್ಲಿ 'ದೇಜಗೌ ಶೈಲಿ' ಎಂದು ಬೆರಳಿಟ್ಟು ತೋರಿಸಬಹುದಾದ ವೈಶಿಷ್ಟ್ಯ ಅದಕ್ಕೆ ಪ್ರಾಪ್ತವಾಗಿದೆ.

ಹೀಗೆ ವಿಷಯ ವೈವಿಧ್ಯ ವಿಶಿಷ್ಟ ಶೈಲಿಗಳ ಮೂಲಕ ದೊಡ್ಡ ಕೊಡುಗೆಯನ್ನು ನೀಡಿದ್ದೂ ದೇಜಗೌ ಕೃತಿಗಳ ಅಧ್ಯಯನಕ್ಕೆ ಸಾಹಿತ್ಯಕ ನ್ಯಾಯ ಲಭ್ಯವಾಗಿಲ್ಲವೆಂದೇ ತೋರುತ್ತದೆ, ರಾಜ್ಯ, ರಾಷ್ಟ್ರಮಟ್ಟದ ಪ್ರಶಸ್ತಿಗಳಿಗೆ ಪರಿಗಣಿಸಬಹುದಾದ ಕೃತಿಗಳನ್ನು ಸೃಷ್ಟಿಸಿದ್ದರೂ ಆ ಪ್ರಶಸ್ತಿ ಗೌರವಗಳಿಂದ ದೇಜಗೌ ಸಾಹಿತ್ಯ ವಂಚಿತವಾಗುತ್ತ ಬಂದುದು ಅವುಗಳನ್ನು ನೀಡುವ ಸಂಸ್ಥೆ ಸಮಿತಿಗಳ ಪ್ರಾಮಾಣಿಕತೆಯನ್ನು ಸಂದೇಹಿಸುತ್ತದೆ.

ದೇಜಗೌ ಅವರದು ಸಾಂಸ್ಥಿಕ ವ್ಯಕ್ತಿತ್ವ, ಇದಕ್ಕೆ ಅವಶ್ಯವಿರುವ ಸ್ನೇಹಮೌಲ್ಯ ಅವರಲ್ಲಿ ಸಮೃದ್ಧ ವಾಗಿದೆ. ಈ ಬುನಾದಿಯ ಮೇಲೆ ಅವರು ಕಟ್ಟಿದ ಸಂಸ್ಥೆಗಳು ಅನೇಕ. ಕನ್ನಡ ಅಧ್ಯಯನ ಸಂಸ್ಥೆಯಂತೂ ಸರಿಯೇ. ಈ ನಿಟ್ಟಿನಲ್ಲಿ ಅವರು ಎತ್ತಿ ನಿಲ್ಲಿಸಿದ ಸಂಸ್ಥೆಗಳೆಂದರೆ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಕುವೆಂಪು ಪ್ರತಿಷ್ಠಾನ, ದೇಜಗೌ ಟ್ರಸ್ಟ್ ಮತ್ತು ಭಾರತೀಯ ನಾಮವಿಜ್ಞಾನ ಸಂಸ್ಥೆ ಇವು ತುಂಬ ಜೀವಂತವಾಗಿರುವುದು ಒಂದು ವಿಶೇಷ.

ಸಾಹಿತಿಗಳು ಸಿಗಬಹುದು, ಅವರು ಸಂಘಟಕರಾಗಿರುವುದು ವಿರಳ. ಸಮರ್ಥ ಆಡಳಿತಗಾರರಾಗಿರುವುದು ಇನ್ನೂ ವಿರಳ. ಈ ಶಕ್ತಿತ್ರಯ ಏಕೀಭವಿಸಿದ ವ್ಯಕ್ತಿಯಾಗಿದ್ದಾರೆ ದೇಜಗೌ. ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾಗಿ ಅದನ್ನು ದಶರಥ ಶಕ್ತಿಯಿಂದ ಆಳಿದ ಬಾಳಿದ ದೇಜಗೌ, ಕುಲಪತಿಯಾಗಿಯೂ ಮೈಸೂರು ವಿಶ್ವವಿದ್ಯಾನಿಲಯವನ್ನು ಉದ್ದಗಲಗಳಲ್ಲಿ ವಿಸ್ತರಿಸಿದರು. ಮಾನಸ ಗಂಗೋತ್ರಿ ಕುವೆಂಪು ಅವರ ಮಾನಸ ಶಿಶು. ದೇಜಗೌ ಅವರ ಕ್ರತುಶಕ್ತಿಯ ಕೂಸು. ಇದು ಇಂದು ಮನೆಮಾತಾಗಿದೆ. ಹೀಗೆ ತಮ್ಮ ಜೀವಮಾನದಲ್ಲಿ ಬಿತ್ತಬೇಕಾದುದನ್ನು ಬಿತ್ತಿ ಬೆಳೆಯಬೇಕಾದುದನ್ನು ಬೆಳೆದು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ ದೇಜಗೌ.

---

* ನಮ್ಮ ನಾಡೋಜ : ಸಂ. ಸೋಮಶೇಖರ, ಪದ್ಮಾಶೇಖರ, ಸಂವಹನ, ಮೈಸೂರು–೨೦೦೦.

ಆಕರ : ಮಾರ್ಗ ಸಂಪುಟ–೮

೧೧೪

ಪಿಎಚ್.ಡಿ. ಮಾರ್ಗದರ್ಶನ ಶ್ರಮವಲ್ಲ, ಸಂತೋಷ

೨೦೦೩

"ಒಳ್ಳೆಯ ಶಿಕ್ಷಕನಿಂದ ವಿದ್ಯಾರ್ಥಿಗಳು ರೂಪಗೊಳ್ಳುವಂತೆ, ಒಳ್ಳೆಯ ವಿದ್ಯಾರ್ಥಿಗಳಿಂದ ಒಳ್ಳೆಯ ಶಿಕ್ಷಕ ರೂಪಗೊಳ್ಳುತ್ತಾನೆ." ಶಿಕ್ಷಕ ವಿದ್ಯಾರ್ಥಿಗಳಲ್ಲಿ ನೇರ ಸಂಪರ್ಕ ಕಲ್ಪಿಸುವ ಪಿಎಚ್.ಡಿ. ಶಿಕ್ಷಣ ವ್ಯವಸ್ಥೆಯಲ್ಲಿ ಈ ಮಾತು ಇನ್ನೂ ಸತ್ಯವೆನಿಸುತ್ತದೆ. ಡಾ. ಬಿ.ಕೆ. ಹಿರೇಮಠ ಅವರಿಗೆ ಮಾರ್ಗದರ್ಶನ ಸಂದರ್ಭದಲ್ಲಿ ಈ ಮಾತು ನನ್ನ ಅನುಭವಕ್ಕೆ ಬಂದಿದೆ.

ಸಾಮಾನ್ಯವಾಗಿ ಪಿಎಚ್.ಡಿ. ಅಧ್ಯಯನಕ್ಕಾಗಿ ವಿದ್ಯಾರ್ಥಿಗಳು ನನ್ನನ್ನು ಹುಡುಕಿಕೊಂಡು ಬರುವದು ಕಡಿಮೆ. ವಿಶೇಷ ಪರಿಶ್ರಮ ವಿಷಯ ಪರಿಜ್ಞಾನವುಳ್ಳ ವಿದ್ಯಾರ್ಥಿಗಳನ್ನು ನಾನೇ ಹುಡುಕಿಕೊಂಡು ಹೋಗುವುದು ಹೆಚ್ಚು. ನಾನು ಹೀಗೆ ಹುಡುಕಿಕೊಂಡ ವಿದ್ಯಾರ್ಥಿಯಾಗಿದ್ದಾರೆ, ಶ್ರೀ ಬಿ.ಕೆ. ಹಿರೇಮಠರು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಂ.ಎ. ಓದುತ್ತಿರುವಾಗಲೇ ಶ್ರೀ ಹಿರೇಮಠರ ಚಿತ್ರಕಲಾ ವಿದ್ವತ್ತನ್ನು ಗುರುತಿಸಿದ್ದ ನಾನು, ಆ ಮೇಲಿನ ದಿನಗಳಲ್ಲಿ ಅವರು ಗಳಿಸಿಕೊಂಡಿದ್ದ ಹಸ್ತಪ್ರತಿಜ್ಞಾನವನ್ನು ಗಮನಿಸಿದ್ದೆನು. ಇವೆರಡೂ ತಿಳುವಳಿಕೆಗೆ ಅವರ ಸಾಹಿತ್ಯಿಕ ಅಧ್ಯಯನ ಗಟ್ಟಿ ಭೂಮಿಕೆಯಾಗಿದ್ದಿತು. ಕನ್ನಡ ವಿದ್ಯಾರ್ಥಿಗಳಲ್ಲಿ ಈ ಬಗೆಯ ಬಹುಶ್ರುತರು ಸಿಗುವುದು ಅಪರೂಪ. ಇಂಥವರು ಮಾತ್ರ ಹಸ್ತಪ್ರತಿ–ಚಿತ್ರಕಲೆ ಸಾಹಿತ್ಯಗಳೆಂಬ ಬಹುಶಿಸ್ತೀಯ ಅಧ್ಯಯನಕ್ಕೆ ನ್ಯಾಯ ಒದಗಿಸಬಲ್ಲರೆಂದು ಕಂಡುಕೊಂಡ ನಾನು, ಪ್ರೊ.ಹಿರೇಮಠ ಅವರನ್ನು ಪಿಎಚ್.ಡಿ.ಅಧ್ಯಯನಕ್ಕೆ ಎಳೆದುಕೊಂಡೆನು. ಸಾಹಿತ್ಯದ ವಿದ್ಯಾರ್ಥಿಗಳು ಸಾಹಿತ್ಯೇತರ ಕ್ಷೇತ್ರಗಳನ್ನು ಅದರಲ್ಲಿಯೂ ಉಪೇಕ್ಷಿತ ಕ್ಷೇತ್ರಗಳನ್ನು ತೆಕ್ಕೆಗೆ ತೆಗೆದುಕೊಳ್ಳಬೇಕೆಂಬ ಅಪೇಕ್ಷೆಯ ನಾನು, ಹಿರೇಮಠ ಅವರಿಗೆ "ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ" ವಿಷಯವನ್ನು ಸೂಚಿಸಿದುದು ತೀರ ಸಹಜ.

ಇಂದು ಪಿಎಚ್.ಡಿ. ಅಧ್ಯಯನವೆನ್ನುವುದು ಹತ್ತು ಪುಸ್ತಕ ಬಳಸಿ, ಹನ್ನೊಂದನೆಯ ಪುಸ್ತಕ ಸಿದ್ಧಪಡಿಸುವ ಒಂದು ಸರಳ ಶಿಕ್ಷಣ ವ್ಯವಸ್ಥೆಯಾಗಿದೆ. ಶ್ರೀ ಹಿರೇಮಠ ಅವರ ಮನೋಧರ್ಮ ಅಂತಹದಲ್ಲ, ಅವರು ಎತ್ತಿಕೊಂಡ ವಿಷಯವೂ ಅಂತಹದಲ್ಲ. ಈ ವರೆಗೆ ಕನ್ನಡ ಹಸ್ತಪ್ರತಿಗಳನ್ನು

ಕುರಿತು ಒಂದಿಷ್ಟು ಕೃಷಿ ನಡೆದಿದ್ದರೂ, ಅದು ಗ್ರಂಥಸಂಪಾದನ ಶಾಸ್ತ್ರದಲ್ಲಿ ಸೇರಿ ಹೋಗಿದ್ದಿತು. ಸ್ವತಂತ್ರ ಕೆಲಸ ಆರಂಭವಾಗಿದ್ದರೂ, ಅದು ಲೇಖನ ಮಟ್ಟದಲ್ಲಿ ವ್ಯವಹರಿಸುತ್ತಿದ್ದಿತು. ಈ ಎರಡೂ ನೆಲೆಗಳಿಂದ ಆ ಕ್ಷೇತ್ರವನ್ನು ಬಿಡಿಸುವ ಬೆಳೆಸುವ ಪ್ರಥಮ ಅಭ್ಯಾಸಿಯಾಗಿ ಶ್ರೀ ಹಿರೇಮಠರು ದುಡಿಯಬೇಕಾಗಿದ್ದಿತು. "ಆಧಾರ ಸಾಮಗ್ರಿ" ಯಿಲ್ಲದ ಆ ಕಾಲದಲ್ಲಿ "ಆಕರ ಸಾಮಗ್ರಿ"ಯನ್ನೇ ಮೊರೆಹೋಗುವುದು ಅವರಿಗೆ ಅನಿವಾರ್ಯವಾಗಿದ್ದಿತು. ಕರ್ನಾಟಕದಲ್ಲಿ ಈ ಕೆಲಸ ಭಾವಿಸಿದಷ್ಟು ಸುಲಭವಲ್ಲ. ಏಕೆಂದರೆ ಅನೇಕ ಹಸ್ತಪ್ರತಿಗಳು ಸಂಗ್ರಹದಿಂದ ವಂಚಿತವಾಗಿ ರಾಜ್ಯದ ಮೂಲೆ ಮೂಲೆಗಳಲ್ಲಿ ಉಳಿದುಕೊಂಡಿವೆ. ಸಂಗ್ರಹಗೊಂಡರೂ ರಾಜ್ಯದ ಬೇರೆ ಬೇರೆ ಕೇಂದ್ರಗಳಲ್ಲಿ ರಕ್ಷಿತವಾಗಿವೆ. ಹೀಗೆಯೇ ರಕ್ಷಿತವಾದವುಗಳ ಸೂಚಿ ರಚನೆಯೂ ಅಪೂರ್ಣ ಸ್ಥಿತಿಯಲ್ಲಿ ಉಳಿದಿದೆ. ಈ ಮೂರು ತೊಂದರೆಗಳ ಮಧ್ಯದಲ್ಲಿ ನಿಂತು ಹಿರೇಮಠರು ಕಾರ್ಯ ಪೂರೈಸಬೇಕಾಗಿದ್ದಿತು. ನನ್ನ ನಿಷ್ಠುರ ಮಾರ್ಗದರ್ಶನವನ್ನೂ ಅವರು ಸಹಿಸಿಕೊಳ್ಳಬೇಕಾಗಿದ್ದಿತು.

ಮೂಲತಃ ಸೌಮ್ಯ ಸ್ವಭಾವದ ಡಾ. ಹಿರೇಮಠರು ಇದೆಲ್ಲವನ್ನು ಸಮಾಧಾನ ಚಿತ್ತದಿಂದಲೇ ನಿರ್ವಹಿಸಿದುದನ್ನು ನಾನು ಬಲ್ಲೆ. ಶಿವಯೋಗ ಮಂದಿರ ಧರ್ಮಸ್ಥಳಗಳಂಥ ಧಾರ್ಮಿಕ ಸಂಸ್ಥೆ, ಧಾರವಾಡ-ಮೈಸೂರು-ಬೆಂಗಳೂರು ವಿಶ್ವವಿದ್ಯಾಲಯಗಳಂಥ ಸರಕಾರಿ ಸಂಸ್ಥೆ, ಸಾಹಿತ್ಯ ಪರಿಷತ್ತಿನಂಥ ಅರೆ ಸರಕಾರಿ ಸಂಸ್ಥೆಗಳಿಗೆ ಭೇಟ್ಟಿ ನೀಡಿ, ಹಸ್ತಪ್ರತಿಗಳನ್ನು ಹಸ್ತದಿಂದ ಮುಟ್ಟಿ ಕಣ್ಣಿನಿಂದ ಓದಿ ಬೇಸರವಿಲ್ಲದೆ ವಿಷಯ ಸಂಗ್ರಹ ಮಾಡಿದುದು ಒಂದು ದೊಡ್ಡ ಸಾಹವೇ ಸರಿ. ಇದರಿಂದಾಗಿ ಯಾವ ಸಾಮಗ್ರಿಯನ್ನೂ ಹೊರಗುಳಿಸದ ಪ್ರಬಂಧವೆಂಬ ಪರಿಪೂರ್ಣತೆ ಇದಕ್ಕೆ ಪ್ರಾಪ್ತವಾಯಿತು.

ಪಿಎಚ್.ಡಿ. ವಿದ್ಯಾರ್ಥಿಯಾದ ಇವರು ನೌಕರಿ ಮಾಡುತ್ತಿದ್ದುದು ಬಾಗಿಲುಕೋಟೆಯಲ್ಲಿ ಮಾರ್ಗದರ್ಶಕನಾದ ನಾನು ನೌಕರಿ ಮಾಡುತ್ತಿದ್ದುದು ಧಾರವಾಡದಲ್ಲಿ, ಪಿರಿಯಡ್ ವಾರಕ್ಕೆ ೧೬ ತೆಗೆದುಕೊಳ್ಳುವ ಅವರಿಗೆ ಬಿಡುವು ಇರಲಿಲ್ಲ. ವಾರಕ್ಕೆ ಕೇವಲ ೬ ಪಿರಿಯಡ್ ತೆಗೆದುಕೊಂಡು ನನಗೆ ಪುರುಸೊತ್ತು ಇರಲಿಲ್ಲ. ಇಂಥದರಲ್ಲಿಯೆ ತಾವು ಸಂಗ್ರಹಿಸಿದ ಸಾಮಗ್ರಿಯನ್ನು ತಂದು ನನ್ನ ಮುಂದೆ ಹರಡುತ್ತಿದ್ದು, ವಕ್ರರೇಖೆಗಳ ಮಧ್ಯದಿಂದ ಸರಳ ರೇಖೆಯನ್ನು ಹುಡುಕಿಕೊಡುವುದನ್ನು ನನ್ನಿಂದ ನಿರೀಕ್ಷಿಸುತ್ತಿದ್ದರು. ನೆರವಾಗುತ್ತಿದ್ದರು.

ಸಂಗ್ರಹಿಸಿದ ಆಕರವೆನ್ನುವುದು ಅದಿರು ಸ್ವರೂಪದ್ದು. ಅದನ್ನು ಸರಿಯಾಗಿ ಜರಡಿ ಹಿಡಿಯುವುದೇ ಒಂದು ಸಂಶೋಧನೆ. ಇಲ್ಲಿ ಪ್ರಕ್ಷಿಪ್ತ ಸಂಗತಿ, ವಿಸಂಗತ ವಿಷಯ-ಇವನ್ನೆಲ್ಲ ಹಂಸಪ್ರಜ್ಞೆಯಿಂದ ಬಿಡಿಸಬೇಕಾಗುತ್ತದೆ. ಶ್ರೀ ಹಿರೇಮಠ ಅವರು ಈ ವರ್ಜನ-ಸ್ವೀಕರಣ ವಿಷಯದಲ್ಲಿ ವಹಿಸುತ್ತಿದ್ದ ತಾಳ್ಮೆ, ಗ್ರಹಿಸುತ್ತಿದ್ದ ಸತ್ಯಗಳನ್ನು ನಾನು ಗಮನಿಸಿದ್ದೇನೆ. ಇಂಥ ಸತ್ಯ ಸಾಮಗ್ರಿಯನ್ನು ಸಂಗ್ರಹಿಸಿಕೊಂಡು ಪ್ರಬಂಧಕಟ್ಟಡವನ್ನು ರೂಪಿಸುವಲ್ಲಿ ಮೊದಲು ಬರೆದುಕೊಳ್ಳಬೇಕಾಗುವುದು ನೀಲನಕ್ಷೆ. ಈ ಮೊದಲು ಕರ್ನಾಟಕದಲ್ಲಿ ಏಕೆ, ಭಾರತದಲ್ಲಿಯೇ ಈ ವಿಷಯವನ್ನು ಯಾರೂ ಶಾಸ್ತ್ರಶಿಸ್ತಿಗೆ ಅಳವಡಿಸಿರಲಿಲ್ಲ. ಹೀಗಾಗಿ ಇಂಥ ನಕ್ಷೆಯನ್ನು ಮುರಿಮುರಿದು ಬರೆಯುವುದು ಕಲಾವಿದರಾಗಿದ್ದ ಅವರು ಈ ಗುರಿಯನ್ನು ಸರಿಯಾಗಿಯೇ ಸಾಧಿಸಿದರು. ಹಸ್ತಪ್ರತಿ ವಿನ್ಯಾಸಕಾರರು, ಹಸ್ತಪ್ರತಿ ಪ್ರಸರಣ ಕಲಾ ವಿನ್ಯಾಸ-ಈ ಪ್ರಕರಣಗಳ ಪ್ರತಿಪಾದನೆಯಲ್ಲಿ ಅವರು ಇದಕ್ಕೆ ವಿಪುಲ ಸಾಕ್ಷಿ ಪೂರೈಸುತ್ತಿದ್ದುದನ್ನು ಅಂದೇ ನಾನು ಕಂಡುಕೊಂಡೆನು. ನಿಜಹೇಳಬೇಕೆಂದರೆ 'ಕಲಾ ವಿನ್ಯಾಸ' ಪ್ರಕರಣವನ್ನು ರೂಪಿಸುವಲ್ಲಿ ನಾನು ಅವರಿಗೆ ಮಾರ್ಗದರ್ಶನ ಮಾಡಿದುದು ಕಡಿಮೆ. ಅವರಿಂದ ನಾನು ತಿಳಿದುಕೊಂಡುದು

ಹೆಚ್ಚು. ಇಂದಿನ ಸಂದರ್ಭದಲ್ಲಿ ಕರ್ನಾಟಕದ ಯಾವುದೇ ಹಸ್ತಪ್ರತಿ ಅಭ್ಯಾಸಿಗೆ ಸಾಧ್ಯವಾಗದುದನ್ನು ಶ್ರೀ ಹಿರೇಮಠರು ಇಲ್ಲಿ ಸಾಧಿಸಿತೋರಿಸಿದರು. ಹೀಗಾಗಿ ಈ ಪ್ರಬಂಧ ನಿರ್ಮಾಣದಲ್ಲಿ ಮತ್ತು ಪರಿಷ್ಕರಣದಲ್ಲಿ ನಾನು ಶ್ರಮಕ್ಕಿಂತ ಹೆಚ್ಚು ಸಂತೋಷವನ್ನು ಅನುಭವಿಸಿದ್ದೇನೆ.

ಈ ಕೃತಿ ಕಟ್ಟಡವನ್ನು ಹಂತಹಂತವಾಗಿ ಮುಗಿಸುವುದಕ್ಕಿಂತ ಇದರ ಸ್ವರೂಪದ ಬಗೆಗೆ ನಾವು ಮತ್ತೆ ಮತ್ತೆ ಚರ್ಚಿಸುತ್ತಿದ್ದೆವು. ಏಕೆಂದರೆ ಇಂಥ ಚರ್ಚೆಯಿಂದ ವಿಷಯ ಸ್ಪಷ್ಟವಾದರೆ ಶ್ರೀ ಹಿರೇಮಠ ಅವರು ಪ್ರಬಂಧವನ್ನು ಇಡಿಯಾಗಿ ಒಂದೇ ಪಟ್ಟಿಗೆ ಬರೆಯಬಲ್ಲರೆಂಬ ವಿಶ್ವಾಸ ನನ್ನದಾಗಿದ್ದಿತು. ಅದನ್ನು ಇವರು ಮಾಡಿಯೂ ತೋರಿಸಿದರು. ಹೀಗಾಗಿ ಬಹಳೆಂದರೆ ಎರಡು ಕಂತುಗಳಲ್ಲಿ ಪ್ರಬಂಧವನ್ನು ಬರೆದು ನನಗೆ ಒಪ್ಪಿಸಿದರು. ಚರ್ಚೆಯಲ್ಲಿಯೇ ವಿಷಯ ಸ್ಪಷ್ಟಗೊಳಿಸಿಕೊಂಡುದರಿಂದ ಅವರ ಬರೆವಣಿಗೆ ಪರಿಷ್ಕರಣಕ್ಕೆ ಹೆಚ್ಚು ಗುರಿಯಾಗಲಿಲ್ಲ. ಹಲವು ವರ್ಷಗಳ ಅಧ್ಯಾಪನದ ಅನುಭವ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳುವ ಮನೋಭಾವ ಇತ್ಯಾದಿಗಳಿಂದ ಹದಗೊಂಡ ಹಸ್ತ ಅವರದು. ಹೀಗಿದ್ದೂ ಇದು ಕಂಡ ಕಂಡವರು ಮಾಡಬೇಕಾದ, ಕಂಡ ಕಂಡವರು ಮಾಡಿಸಬೇಕಾದ ಕೆಲಸವಲ್ಲವೆಂದು ಮತ್ತು ಇದರ ರಚನೆಯಿಂದ ಕನ್ನಡ ಜ್ಞಾನ ಕ್ಷೇತ್ರದ ಒಂದು ಕಂದಕವನ್ನು ಅಪೂರ್ವ ರೀತಿಯಲ್ಲಿ ತುಂಬಬೇಕೆಂಬ ಎಚ್ಚರ ಕಾರಣವಾಗಿ, ಈ ಪ್ರಬಂಧಕ್ಕೆ ಸರಿಯಾದ ಪೂರ್ಣವಿರಾಮ ಪ್ರಾಪ್ತವಾಯಿತು.

ಮುಗಿಸುವ ಮುನ್ನ ಒಂದು ಮಾತು: ಹಿರೇಮಠರಲ್ಲಿ ಕಂಡ ಒಂದು ದೊಡ್ಡ ದೋಷವೆಂದರೆ ಸಣ್ಣ ಸೋಮಾರಿತನ. ಹೀಗಾಗಿ ಅವರು ಒಂದೆರಡು ಸಲ ನನ್ನ ತೀವ್ರ ನಿಷ್ಠುರಕ್ಕೆ ಗುರಿಯಾಗಬೇಕಾಯಿತು. ಇವರನ್ನು ಬಿಟ್ಟರೆ ಕನ್ನಡದ ಈ ಕೆಲಸವನ್ನು ಇಂದು ಮಾಡಿ ಮುಗಿಸುವವರು ಯಾರು? ಎಂಬ ಸಂಕಟ ನನ್ನದಾಗಿದ್ದಿತು. ಆ ನಿಷ್ಠುರತೆಯ ಹಿಂದೆ "ಎಡದ ಕೈಯ್ಯಲು ಹಾಲ ಬಟ್ಟಲು, ಬಲದ ಕೈಯಲು ಓಜುಗಟ್ಟಿಗೆ" ಎಂಬ ಭಾವ ನನ್ನದೆಂಬುದನ್ನು ಅವರು ಸರಿಯಾಗಿಯೇ ಅರ್ಥಮಾಡಿಕೊಂಡಿದ್ದರು. ಹೀಗಾಗಿ ನನ್ನ ಸಿಟ್ಟನ್ನು ಶಿಸ್ತಿಗೆ ಅಳವಡಿಸಿಕೊಳ್ಳುತ್ತ, ಅವರು ಪ್ರಬಂಧವನ್ನು ಪೂರ್ಣಗೊಳಿಸಿದರು.

ಪ್ರಬಂಧ ಪ್ರಕಟನೆಯ ಬಗ್ಗೆಯೂ ಒಂದು ಮಾತು. "ಪದವಿ ನೀಡಲು ಯೋಗ್ಯವಿದೆ. ಪ್ರಕಟಿಸಲು ಯೋಗ್ಯವಿಲ್ಲ" ಎಂಬ ಶಿಫಾರಸ್ಸಿನ ಪಿಎಚ್.ಡಿ ಪ್ರಬಂಧಗಳೇ ಇಂದು ಉತ್ಪಾದನೆಗೊಂಡು, ವಿಶ್ವವಿದ್ಯಾಲಯಗಳ ಕಪಾಟಿನಲ್ಲಿ ವಿಜೃಂಭಿಸುತ್ತಲಿವೆ. ಇಂಥ ಕಾಲದಲ್ಲಿ ಇವತ್ತು ಈ ಬಗೆಯ ಉತ್ತಮ ಪ್ರಬಂಧಗಳು ಉತ್ಪಾದನೆಗೊಂಡು ಪ್ರಕಟವಾಗುವುದು ಕನ್ನಡದ ಭಾಗ್ಯ. ಕೊನೆಗೂ ಈ ಕೃತಿ ಕಸಬಾ ಜಂಬಗಿ ಹಿರೇಮಠದ "ವೀರಶೈವ ಅಧ್ಯಯನ ವೇದಿಕೆ'ಯ ಮೂಲಕ ಬೆಳಕುಕಂಡಿತು. ಇಂಥ ಕೆಲಸಮಾಡುವ ಯಾವುದೇ ಪೀಠವನ್ನು ನಾನು ಕನ್ನಡ ಅಧ್ಯಯನಪೀಠವೆನ್ನುತ್ತೇನೆ.

---

* ನಿಜದ ನೆಲೆ : ಸಂ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ, ವೈರಾಗ್ಯ ಮಲ್ಲಣಾರ್ಯ ಪ್ರಕಾಶನ, ಬಾಗಲಕೋಟ–೨೦೦೩.

ಆಕರ : ಮಾರ್ಗ ಸಂಪುಟ–೮

೧೧೫

ಜಿ. ಎಸ್. ಶಿವರುದ್ರಪ್ಪ, ಕಣವಿಯವರ ಸಾಲಿಗೆ ಸೇರುವ ಕವಿ

೨೦೦೮

ನಾನು ಪ್ರೀತಿಸುವ ಕೆಲವೇ ಸಾಹಿತಿಗಳಲ್ಲಿ ಜಿನದತ್ತ ದೇಸಾಯಿಯವರು ಒಬ್ಬರು. ಯಾಕೆಂದರೆ ಅವರು ಒಳ್ಳೆಯ ಕವಿ, ಇನ್ನೂ ಒಳ್ಳೆಯ ವ್ಯಕ್ತಿ. ಒಬ್ಬ ಕವಿ ಒಬ್ಬ ಒಳ್ಳೆಯ ಮನುಷ್ಯನೂ ಆಗಿದ್ದರೆ ಒಳ್ಳೆಯ ಕಾವ್ಯವನ್ನು ಕೊಡುತ್ತಾನೆ. ಆ ಮಾತನ್ನು ಜಿನದತ್ತ ದೇಸಾಯಿಯವರೇ ತಮ್ಮ ಮುನ್ನುಡಿಯ ಮಾತಿನಲ್ಲಿ ಹೇಳಿದ್ದಾರೆ. ಮನುಷ್ಯ ಒಳ್ಳೆಯವನಾಗದೇ ಒಳ್ಳೆಯ ಕಾವ್ಯ ಕೊಡಲಿಕ್ಕೆ ಆಗುವುದಿಲ್ಲ ಅನ್ನುವುದು ಅವರ ಧೋರಣೆ. ಅದಕ್ಕೆ ಉದಾಹರಣೆ ಅಂದರೆ ಜಿನದತ್ತ ದೇಸಾಯಿಯವರೇ. ಹೀಗಾಗಿ ಒಬ್ಬ ಒಳ್ಳೆಯ ಕವಿಯಾಗಿ, ಒಳ್ಳೆಯ ವ್ಯಕ್ತಿಯಾಗಿ ನಮ್ಮ ನಡುವೆ ಇರುವ ಅವರನ್ನು ನಾನು ಪ್ರೀತಿಸೋದು ತುಂಬಾ ಸಹಜ. ಒಂದು ಮಾತನ್ನು ಹೇಳಬೇಕು. ನನಗೊಂದು ನೋವಿತ್ತು. ಜಿನದತ್ತ ದೇಸಾಯಿಯವರಂಥ ಒಬ್ಬ ಕವಿಯ ಅಮೃತ ಮಹೋತ್ಸವದಂಥ ಸಂದರ್ಭದಲ್ಲಿ ಯಾವುದೇ ರೂಪದಲ್ಲಿ ನನಗೆ ಭಾಗವಹಿಸಲು ಸಾಧ್ಯವಾಗಲಿಲ್ಲವಲ್ಲ ಅಂತ. ಅವರು ತಮ್ಮ ಪುಸ್ತಕಗಳನ್ನು ಆಗಾಗ ನನಗೆ ಕೊಟ್ಟರು. ನನಗೆ ಪ್ರತಿಕ್ರಿಯೆ ಬರೆಯಲಾಗಲಿಲ್ಲ. 'ಗುಣಾರ್ಣವ'ಕ್ಕೆ ಒಂದು ಲೇಖನ ಬರೀರಿ ಅಂತಾ ಸ್ನೇಹಿತರು ಅಂದರು. ನನಗೆ ಸಾಧ್ಯವಾಗಲಿಲ್ಲ. ಅದು ನನಗೆ ನಾನು ಏನೋ ತಪ್ಪು ಮಾಡುತ್ತಾ ಇದ್ದೀನಿ. ಇಂತಹ ಒಬ್ಬ ಸಜ್ಜನ ವ್ಯಕ್ತಿ, ಒಬ್ಬ ಸತ್ಕವಿ ಇವರ ಬಗ್ಗೆ ಬರೆಯಬೇಕಾದ್ದು ನನ್ನ ಸಾಮಾಜಿಕ ಜವಾಬ್ದಾರಿ. ನಾನು ಆ ಜವಾಬ್ದಾರಿಯನ್ನು ನಿಭಾಯಿಸುತ್ತಿಲ್ಲ ಎನ್ನುವ ನೋವಿತ್ತು. ಯಾವುದೇ ರೂಪದೊಳಗೆ ದೇಸಾಯಿಯವರ ಬಗ್ಗೆ ನಾಲ್ಕು ಒಳ್ಳೆಯ ಮಾತನಾಡಬೇಕು, ಬರೆಯಬೇಕು ಅಂತ ವಿಚಾರ ಇತ್ತು. ಅಂಥ ಮಾತುಗಳನ್ನು ಆಡುವ ಅವಕಾಶ ನನಗೆ ಮಾಡಿಕೊಟ್ಟಿದ್ದೀರಿ ಅದಕ್ಕಾಗಿ ನನಗೆ ತುಂಬಾ ಸಂತೋಷ ಆಗಿದೆ.

ದೇಸಾಯಿಯವರ ಬರವಣಿಗೆಯ ಮಹಾಪೂರದ ಸಂದರ್ಭ ಇದು. ಅಷ್ಟೇ ಏಕೆ, ಕಾರ್ಯಕ್ರಮಗಳ ಒಂದು ಮಹಾಪೂರವೇ ಸರಿ ಇದು. ಅವರು ೩೪ ವರ್ಷಗಳ ಬಳಿಕ 'ಮತ್ತೆ ಬಂದಿದ್ದೇನೆ' ಎಂಬ ಧ್ವನಿಯನ್ನು ಎತ್ತಿದ್ದಾರೆ. ಹೇಗೆ ಬಂದರು ಎಂದರೆ ಕೊಂಬು ಕಹಳೆ ಊದುತ್ತ ಜಯಘೋಷ ಮಾಡುತ್ತಾ ಒಬ್ಬ ಕವಿ ಬಂದ ಅನುಭವ ನನಗೆ ಆಗುತ್ತಾ ಇದೆ. ೧೯೫೪ ರಲ್ಲಿ ವಿದ್ಯಾರ್ಥಿಯಾಗಿದ್ದಾಗ

ಕವನ ಸಂಕಲನ ಬರೆದು, ೫-೬ ವರ್ಷಗಳ ನಂತರ ಮತ್ತೊಂದು ಕವನ ಸಂಕಲನ ಹೊರಗೆ ತಂದು, ೩೪ ವರ್ಷ ಮೌನವಾಗಿದ್ದರು. ಇದಕ್ಕೆ ಬೇರೆ ಯಾರೂ ಅಲ್ಲ ಅವರೇ ಹೊಣೆ ಅಂತ ನನಗೆ ಅನ್ನಿಸುತ್ತದೆ. ಪ್ರತಿಭೆ ಬಂದರೆ ಬಹಳ ಉದ್ದುದ್ದವಾಗಿ ಹೊರಗೆ ಬರುತ್ತದೆ. ಆದರೆ ಕೆಲವು ಸಲ ಅದು ಮೌನ್ನವಾಗುತ್ತದೆ. ಮಧುರಚೆನ್ನರ ಪದ್ಯ ಮತ್ತೆ ಮತ್ತೆ ಓದಬೇಕು ಅನ್ನಿಸಬೇಕಾದರೆ ಅವರ ಪದ್ಯದಲ್ಲಿ ಒಂದು ಆಕರ್ಷಣೆ ಇರಬೇಕಾಗುತ್ತದೆ. ಒಂದೇ ಓದಿಗೆ ಎಲ್ಲಾ ಮುಗಿತು ಅಂದರೆ ಅದು ಪದ್ಯ ಅಲ್ಲ. ಈಗ ನಾವು ನ್ಯೂಸ್ ಪೇಪರ್ ಓದ್ತೀವಲ್ಲಾ; ಒಂದು ಸಾರಿ ಅದನ್ನು ಓದಿಬಿಟ್ಟರೆ ಮತ್ತೆ ಓದಬೇಕಾದ ಅಗತ್ಯ ಇರುವುದಿಲ್ಲ. ಆದರೆ ಕವನ ಹಾಗಲ್ಲ. ಒಂದು ಅರ್ಥ ಮೊದಲ ಓದಿಗೆ ತನ್ನನ್ನೇ ಬಿಚ್ಚಿಕೊಂಡರೂ ಸಹಿತ ಮತ್ತೆ ಮತ್ತೆ ಓದಿದಾಗ ಒಂದು ಹೊಸ ಅನುಭವವನ್ನೇ ಕೊಡುತ್ತದೆ. ಅಂದಾಗ ನಮ್ಮ ವಿಮರ್ಶಾವರ್ತುಲದೊಳಗೆ ಒಂದು ಸಮಸ್ಯೆ ಯಾವಾಗಲೂ ಇರುವುದು. ಕವಿತೆಯ ಕಾವ್ಯ ಎಲ್ಲಿದೆ. ಅದು ಪದ್ಯದೊಳಗಿದೆಯೋ ಅಥವಾ ಓದುವವನ ಮನಸ್ಸಿನಲ್ಲಿದೆಯೋ? ಎರಡೂ ಮುಖ್ಯ. ಪದ್ಯದೊಳಗೆ ಅಂದರೆ ಹೊಳೆಯುವಂಥದ್ದೆಂದರೆ ಪದ್ಯದೊಳಗೆ ಮಾತ್ರ ಇದ್ದರೆ ಅದು ಎಲ್ಲರಿಗೂ ಒಂದೇ ರೀತಿ ಅರಿವಾಗಬೇಕಲ್ಲವೇ? ಆಗುವುದಿಲ್ಲ. ಉದಾಹರಣೆಗೆ ಹ್ಯಾಮ್ಲೆಟ್ ನಾಟಕವನ್ನು ನಾನು ೨೦ ವರ್ಷದವನಿದ್ದಾಗ ಓದಿದರೆ ಒಂದು ರೀತಿ ಅರ್ಥವಾಗಬಹುದು. ೭೦ ವರ್ಷ ಹತ್ತತ್ತರ ಬಂದಾಗ ಓದಿದರೆ ಬೇರೆ ರೀತಿಯ ಅರ್ಥ ಹೊಳೆಯಬಹುದು. ಅರ್ಥಾತ್ ಪದ್ಯದ ಅರ್ಥಗಳಲ್ಲಿ ಅನೇಕ ಪದರುಗಳಿರುತ್ತವೆ. ಆ ಪದರುಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಪದ್ಯ ಎಷ್ಟು ಆಧಾರವೋ ನನ್ನ ಬೆಳವಣಿಗೆ ಕೂಡಾ ಅಷ್ಟೇ. ನಾನೊಬ್ಬ ಓದುಗ. ಇದು ಕವಿ ಮತ್ತು ಓದುಗರ ನಡುವಿನ ಸಮಸ್ಯೆಗಳು. Reders Respons ಅಂತ ಒಂದು ಥಿಯರಿನೇ ಬಂದುಬಿಟ್ಟಿದೆ, ಈಗ. ಅಂದರೆ ಕವನ ಇರುವುದು ಪಠ್ಯದಲ್ಲಲ್ಲ. ಆದರೆ ಓದುಗನ Respons ಅಂತ. Ultimately ಅದು ಕೂಡ ಮುಖ್ಯ. ಏನು ನನ್ನೆದೆಯಿಂದ ನಿನ್ನೆದೆಗೆ ನೇರ ಸೇತುಬಂಧ. ಅಂದರೆ ಅದು ಕವಿ ಓದುಗರಿಗೆ ಸಂಬಂಧಪಟ್ಟದ್ದೇ ಹೊರತು ದಲ್ಲಾಳಿಗಳಂತಹ ಪೂಜಾರಿಗಳಂತಿರುವ ಪುರೋಹಿತರಂತಹ ವಿಮರ್ಶಕರಿಗಲ್ಲ. ವಿಮರ್ಶಕರು ನಮಗೆ ಸ್ವಲ್ಪ ಸಹಾಯ ಮಾಡಬಹುದು. ಆದರೆ ಇದು Ultimately ಕವಿ ಮತ್ತು ಓದುಗನ ನಡುವೆ ನೇರವಾದ ಮುಖಾಮುಖಿ. ನೇರವಾದ encouonter ಅಂತಾ ಹೇಳಬಹುದು. ಆ ದೃಷ್ಟಿಯಿಂದ ಆರೋಗ್ಯಪೂರ್ಣವಾದಂಥ ಒಂದು ಕಾವ್ಯಧೋರಣೆಯನ್ನು ಜೀವನದ ಧೋರಣೆಯನ್ನು ಇಟ್ಟುಕೊಂಡು ಬರೆದಿರತಕ್ಕಂಥ ಇನ್ನು ಬರೆಯುತ್ತಾ ಇರತಕ್ಕಂಥ ಕವಿ ನಮ್ಮ ಜಿನದತ್ತ ದೇಸಾಯಿ ಅವರು ಅಂತ ನನಗೆ ಅನ್ನಿಸುತ್ತದೆ. ಅವರು ಹೇಳ್ತಾಯಿದ್ರು.

ನನ್ನ ಗುರು ವಿನಾಯಕ ಮತ್ತು ದ್ರೋಣ ಎಂದು. ದ್ರೋಣ ಅಂತ ಅಂದ ತಕ್ಷಣ ನಮಗೆ ನೆನಪಾಗುವುದು ಅವರ ಶಿಷ್ಯ ಅರ್ಜುನ ಅಲ್ಲ. ಆದರೆ ಇನ್ನೊಬ್ಬ ಶಿಷ್ಯ ಏಕಲವ್ಯ. ಅರ್ಜುನನ ಬಿಡ್ರಿ. ಅವನು Tution ಹೋಗಿ ಕಲಿತವನು. ಆದರೆ ಏಕಲವ್ಯ ಹಾಗಲ್ಲ ನಾವೀಗ Distance Eduction ಅಂತೀವಲ್ಲ, ಅದನ್ನು ಪಡೆದ ಶಿಷ್ಯ ಏಕಲವ್ಯ. ಆ ದೃಷ್ಟಿಯಿಂದ ನನ್ನ ಗುರು ವಿನಾಯಕ. ನನಗೂ ಗುರು ವಿನಾಯಕರೇ. ನಾನು ಮೊನ್ನೆ ಒಂದು ಮಾತು ಹೇಳಿದ್ದೆ. ಅವರು ನಮ್ಮ ಕಾವ್ಯ ಗುರುವಾದರೂ ನನ್ನ ಅವರ ಕಾವ್ಯದ ಮಾರ್ಗ ಒಂದೇ ಆಗಬೇಕಾಗಿಲ್ಲ; ಆ ಮಾತು ಬೇರೆ. ಕಾವ್ಯ ಮಾರ್ಗ ಬೇರೆ

ಆಗಬಹುದು. ಆದರೆ ಈ ಕಡೆ ಹೋಗಪ್ಪ ಎಂದು ದಾರಿದೀಪವಾಗಿ ಪ್ರಾರಂಭ ಪಥದಲ್ಲಿ ಬೆರಳು ತೋರಿಸುತ್ತಾರೆ. ಅವರನ್ನು ನಾವು ಎಂದೂ ಮರೆಯಲು ಸಾಧ್ಯವಿಲ್ಲ. ಆ ದೃಷ್ಟಿಯಿಂದ ಆ ಕಾವ್ಯದ ದೂರವನ್ನು ಅರಿತಂಥ ಜಿನದತ್ತ ದೇಸಾಯಿ ಅವರ ಕಾವ್ಯ ಅದು. ನಿರಂತರ ಕಾವ್ಯ ಬರೆಯಬಹುದು, ಬಿಡಬಹುದು. ಆ ಮಾತು ಬೇರೆ. ಆದರೆ ಒಳಗಿನ ಜೀವನ ಸದಾ ಹಸಿರು ಆಗಿರುವುದರಿಂದ ಅದು ಸದಾ ನವನವೋನ್ಮೇಷಶಾಲಿನಿ ಕವಿತಾ ಅನ್ನೋ ರೀತಿಯಲ್ಲಿ ಬೆಳೆಯುತ್ತದೆ ಅನ್ನೋದರಲ್ಲಿ ನನಗೇನೋ ಅನುಮಾನವಿಲ್ಲ. ಆ ಮೇಲೆ ಜರಗನಹಳ್ಳಿಯವರು ಅವರ ಹನಿಗವನದ ಬಗ್ಗೆ ಕೆಲವು ಬಹಳ ಅಮೂಲ್ಯವಾದ ಮಾತುಗಳನ್ನು ಹೇಳಿದರು. ಹನಿಗವನಗಳಿಗೆ ಒಂದು ಸಿದ್ಧ ಪರಂಪರೆ ಇಲ್ಲ. ಎಲ್ಲ ಭಾಷೆಯಲ್ಲೂ ಚೀನಿ ಇರಬಹುದು. ಜಪಾನೀಸ, ಸಂಸ್ಕೃತ ಇರಬಹುದು. ಹನಿಗವನ ಒಂದು ಚುಟುಕಿನ ಮೂಲಗುಣ ಏನಪ್ಪಾ ಅಂದ್ರೆ ಸ್ವಲ್ಪದ್ರೊಳಗೆ ಬಹಳ ಹೇಳುವುದು. ಹಿಡಿದರೆ ಹಿಡಿತುಂಬ ಬಿಟ್ಟರೆ ಮನೆ ತುಂಬಾ ಅಂತ ಅಂತೀವಲ್ಲ ನಾವು. ಕೆಲವೇ ಕೆಲವು ಶಬ್ದಗಳಲ್ಲಿ ಅಪಾರ ಅರ್ಥವನ್ನು ನೀಡುವ ಯಾವುದೇ ಒಂದು ರಚನೆಯನ್ನು ನಾವು ಚುಟುಕು ಅಂತಾ ಕರೆಯಬಹುದು. ಅಲ್ಲಿ ಅದ್ಭುತವಾದ ಗ್ರಹಣ ಶಕ್ತಿಯನ್ನು ಕವಿ ಹೊಂದಿರಬೇಕು. ಆ ಅರ್ಥವನ್ನು ತುಂಬಿರಬೇಕು. ಆದರೆ ಅಪಾರವಾದ ಆ ಅರ್ಥವನ್ನು ನಮ್ಮದಾಗಿ ಮಾಡಿಕೊಳ್ಳಬೇಕು ಅನ್ನುವ ಹುಮ್ಮಸ್ಸು ಓದುಗರಲ್ಲಿರಬೇಕಾಗುತ್ತದೆ. ಆದರೆ ಪ್ರತಿಯೊಂದು ಸಾಹಿತ್ಯಪ್ರಕಾರಕ್ಕೆ ತನ್ನದೇ ಆದ ಮಿತಿಗಳಿರುತ್ತವೆ. ತನ್ನದೇ ಆದ ಸಾಧ್ಯತೆಗಳಿರುತ್ತವೆ. ಕ್ರೀಡೆಗಳಲ್ಲಿ ಪಂದ್ಯಗಳು ನಡೀತಾವಲ್ಲ ನಮ್ಮ ಜರಗನಹಳ್ಳಿ ಅವರು ಪದೇ ಪದೇ ಹೇಳುತ್ತಾರೆ. ನೂರು ಮೀಟರ ಓಡುವುದು ಒಂದು ರೀತಿ. ಸಾವಿರಾರು ಮೀಟರ ಓಡುವುದೂ ಒಂದು ರೀತಿ. ಅಲ್ಲೂ ಸಿಕ್ಕೋದು ಗೋಲ್ಡ, ಇಲ್ಲೂ ಸಿಕ್ಕೋದು ಗೋಲ್ಡ. ಅದು ಬರೋಬ್ಬರಿ. ಆ ದೃಷ್ಟಿಯಿಂದ ಎರಡೂ ಒಂದೇ, ಆದರೆ ಮಿತಿಗಳು ಬಹಳ ಇರುತ್ತವೆ. ಒಂದು ಹನಿಗವನದೊಳಗೆ ಚಮತ್ಕಾರವಾಗಿ, ಅರ್ಥ ಗರ್ಭಿತವಾಗಿ ಸ್ವಲ್ಪೇ ಶಬ್ದಗಳಲ್ಲಿ ನಾವು ಅನೇಕ ಅರ್ಥಗಳನ್ನು ಚಿಮ್ಮಿಸಬಹುದು. ಮಿಂಚು ಹೊಡೆಸಬಹುದು. ಆದರೆ ದೀರ್ಘವಾದ ಕವನದೊಳಗೆ ನನಪಾಗುವ ಲಾಭ ಏನಪ್ಪಾ ಅಂದ್ರೆ ಒಂದು ಅನುಭವದ ಪ್ರಕ್ರಿಯೆ ಸಿಗುತ್ತದೆ ನಮಗೆ. ಹನಿಗವನದೊಳಗೆ ಎಲ್ಲಾ ಅನುಭವದ ಮಂಥನ. ಹೇಳುತ್ತಾರಲ್ಲ 'ಏನಪ್ಪಾ ಪ್ರತಿಭೆ, ನೀನು ಈಸು ದಿನ ಎಲ್ಲಿದ್ದೆ, ನೀನು ಎಲ್ಲಿಂದ ಬಂದೆ ೧೪ ವರ್ಷ ಮೌನವಿದ್ದು ಮೌನ ಮುರಿದರೆ, ಇವರು ೩೪ ವರ್ಷ ಮೌನವಿದ್ದು ಮೌನ ಮುರಿದವರು. ಇದಕ್ಕೆ ಯಾರು ಕಾರಣ. ಅವರೇ ಕಾರಣ. ಏಕೆಂದರೆ ಅವರು ಎತ್ತಿಕೊಂಡ ವೃತ್ತಿ ಇದೆಯಲ್ಲ ಆ ವೃತ್ತಿಯ ಸ್ವರೂಪವೇ ಅಂತಹುದು. ಅವರು ನ್ಯಾಯಾಧೀಶರು. ಹೀಗಾಗಿ ಹೆಚ್ಚು ಜನಸಂಪರ್ಕ ಇಟ್ಟುಕೊಳ್ಳಬಾರದು ಮತ್ತು ಹೆಚ್ಚು ಮಾತನಾಡಬಾರದು. ಈ ಬಂಧನ, ಬಹುಶಃ ಆ ವೃತ್ತಿಯ ಆಯ್ಕೆ ಇದೆಯಲ್ಲ ಅದೇ ತಪ್ಪಾಯಿತೇನೋ ಅನ್ನಿಸುತ್ತ ಇದೆ. 'ಹಿತ್ತಲ ಗಿಡ ಮದ್ದಲ್ಲ' ಅಂತಾರಲ್ಲ, ಆದರೆ ಹಿತ್ತಲಲ್ಲಿ ಗಿಡ ಇರಲೇ ಇಲ್ಲ. ಆ ರೀತಿ ಆ ಗಿಡ ನಮ್ಮಿಂದ ದೂರವಾಗಿತ್ತು. ಈಗ ಒಂದರ ಮೇಲೊಂದು ಕವನ ಸಂಕಲನಗಳನ್ನು ಪ್ರಕಟಮಾಡುವುದರ ಮೂಲಕ, ತನ್ನಲ್ಲಿ ಎಂತಹ ಒಂದು ಶಕ್ತಿ ಇದೆ. ಅನ್ನುವುದನ್ನು ಅವರು ತೋರಿಸಿದ್ದಾರೆ. ಹೇಗೆ ಕೋಗಿಲೆ ಮಾಗಿಯ ಒಳಗೆ ಮೌನವಾಗಿದ್ದು ವಸಂತ ಬಂದ ಕೂಡಲೇ ಒಮ್ಮೆಲೆ ಕೂಗುತ್ತದಲ್ಲ ಹಾಗೆ, ಅವರ ಬದುಕಿಗೆ ಈಗ ಮಾಗಿ ದೂರವಾಗಿ ವಸಂತ ಬಂದಿದೆ

ಅನ್ನೋ ರೀತಿ. ಬಹಳ ಜನ ಕವಿಗಳನ್ನು ನಾವು ನೋಡುತ್ತೇವೆ. ವಿದ್ಯಾರ್ಥಿ ದೆಸೆಯಲ್ಲೂ ಬಹಳಷ್ಟು ಕವಿಗಳ ಹೆಸರನ್ನು ನಾವು ಕೇಳಿದ್ದೇವೆ. ಇದೇ ಬೆಳಗಾವಿ ಜಿಲ್ಲೆಯಲ್ಲೇ ಶ್ರೀಕಾಂತ ಶಮನೇವಾಡಿ, ಬಾಳು ಬಿ. ಉಪಾಧ್ಯಾಯ ಮೊದಲಾದ ೫–೬ ಜನ ಕವಿಗಳಿದ್ದರು. ಎಲ್ಲಿಗೆ ಹೋದರು ಈ ಎಲ್ಲ ಕವಿಗಳು? ಅವರು ಅಲ್ಲೇ ಆಗಾಗ ಕಾಣಿಸಿಕೊಳ್ಳುತ್ತಾ ಇರುತ್ತಾರೆ. ಆದರೆ ಇವರ ರೀತಿಯೇ ಬೇರೆ. ಒಮ್ಮೆಲೆ ನ್ಯಾಯಾಧೀಶರಾದ ಕೂಡಲೇ ಕವನ ಬರೆಯೋದು ನಿಲ್ಲಿಸಿಬಿಟ್ಟರು. ಆದರೆ ಈ ಕವಿತ್ವವನ್ನು ೩೪ ವರ್ಷಗಳ ಕಾಲ ಹೇಗೆ ತಡೆಹಿಡಿದಿಟ್ಟುಕೊಂಡರು? ಅದೇ ಆಶ್ಚರ್ಯವಾಗುತ್ತದೆ. ಏಕೆಂದರೆ ಅವರು ಬಹಳ ದೊಡ್ಡ ಕವಿ. ಕವಿತ್ವ ಅವರಲ್ಲಿದೆ. ಹೀಗಿದ್ದೂ ಆ ವೃತ್ತಿಯ ಕಾರಣದಿಂದಾಗಿ ಅವರು ಮೌನವನ್ನು ಧರಿಸಬೇಕಾಯಿತೇನೋ ಅನ್ನಿಸುತ್ತದೆ. ಆದರೆ ಇತ್ತೀಚೆಗೆ ಅವರ ಕವನ ಸಂಕಲನಗಳು ಹೊರಗೆ ಬರುವುದರ ಮೂಲಕ ಜಿ. ಎಸ್. ಶಿವರುದ್ರಪ್ಪ, ಕಣವಿ ಅವರ ಸಾಲಿಗೆ ಸೇರುವ ಇನ್ನೊಬ್ಬ ಕವಿ ಇದ್ದಾರೆ ಅನ್ನುವುದು ನಮ್ಮ ಗಮನಕ್ಕೆ ಬಂದಿದೆ. ಜಿನದತ್ತ ದೇಸಾಯಿಯವರ ಕವಿತೆಗಳ ರಚನೆ ಒಳಗೆ ಮುಕ್ತ ಬಂಧ ಅಂತೀವಲ್ಲಾ ಹಾಗೆ ಇದೆ. ನವ್ಯ ರಚನೆ ಇದ್ದರೂ ಪಟ್ಟಣಶೆಟ್ಟಿಯವರು ಹೇಳಿದ ಹಾಗೆ, ಅವರದು ನವೋದಯದ ಧೋರಣೆಯೇ. ಗೋಕಾಕರು ಒಂದು ಮಾತು ಹೇಳುತ್ತಾರೆ. ಅವರದು ಸೂತ್ರರೂಪದ ಶೈಲಿ ಅಂತ. ಅದು ಸತ್ಯ. ಅವರ ಪದ್ಯಗಳನ್ನು ನೋಡಿದರೆ ಅರ್ಧಪುಟ, ಬಹಳವೆಂದರೆ ಒಂದು ಪುಟ, ಎರಡನೆ ಪುಟಕ್ಕೆ ಹೋಗುವುದಿಲ್ಲ ಅವರ ಪದ್ಯಗಳು. ಸಣ್ಣಸಣ್ಣ ಪದ್ಯಗಳು. ಸೂತ್ರವನ್ನು ವ್ಯಾಖ್ಯಾನ ರೂಪದಲ್ಲಿ ಬೆಳೆಸುವುದಕ್ಕಿಂತ ಸೂತ್ರ ರೂಪದಲ್ಲೇ ಒಂದು ಪದ್ಯವನ್ನು ಬರೆದು ಮುಗಿಸುವ ಕಲೆ ಅವರದು. ಹೀಗೆ ಬರಬರುತ್ತ ಸೂತ್ರರೂಪದ ಕವನಗಳು ಎಷ್ಟು ಸೂತ್ರ ರೂಪಕ್ಕೆ ಬರುತ್ತವೆ ಎಂದರೆ, ಅವು ಚುಟುಕುಗಳಾಗಿ ಬಿಡುತ್ತವೆ. ಅವರ ಕವಿತೆಗಳ ಗುಣವೇ ಇದು ಎನ್ನಿಸುತ್ತದೆ. ಮೊದಲೇ ಸೂತ್ರರೂಪದಲ್ಲಿ ಬರೆಯುತ್ತಿದ್ದ ದೇಸಾಯಿಯವರು ಮುಂದೆ ಇನ್ನೂ ಸೂತ್ರಬದ್ಧ ರಚನೆಯಲ್ಲಿ ತೊಡಗಿ, ಚುಟುಕಿಗೆ ಹೊರಳಿದರೇನೋ ಅಂತ ನಮಗೆ ಅನ್ನಿಸುತ್ತಾ ಇದೆ. ಅವರೇ ತಮ್ಮ ಮುನ್ನುಡಿಯಲ್ಲಿ ಹೇಳುತ್ತಾರೆ. ನನ್ನನ್ನು ಸಾಹಿತ್ಯಲೋಕಕ್ಕೆ ಎಳೆದ ಕವಿ ರನ್ನ ಅಂತ. ಸಾಮಾನ್ಯವಾಗಿ ಒಬ್ಬ ಕನ್ನಡ ಸಾಹಿತಿಯನ್ನು ಸಾಹಿತ್ಯಲೋಕಕ್ಕೆ ಎಳೆವ ಕವಿಗಳೆಂದರೆ ಜೈನ ಕವಿಗಳೇ. ಒಮ್ಮೆ ರನ್ನನ ಕಾವ್ಯದ ರುಚಿ ಹತ್ತಿತೆಂದರೆ, ಸಾಹಿತ್ಯಲೋಕದ ದರ್ಶನ ಪಡೆಯಲೇಬೇಕೆಂದು ಅನ್ನಿಸುತ್ತದೆ. ನಮ್ಮಲ್ಲಿ ಅಂತಹ ಆಕರ್ಷಕ ಕವಿ ಆತ. ಒಳಗೆ ಎಳೆಯುವ ಶಕ್ತಿ ಇರುವಂತಹವನು. ರನ್ನನನ್ನು ಶಕ್ತಿ ಕವಿ ಅಂತ ಕರೆಯುತ್ತೇವೆ. ಹೀಗಾಗಿ ಅವರು ಹೇಳುವುದು ಸತ್ಯವೆನಿಸುತ್ತದೆ. ಆದರೆ ಅವರ ಕವಿತೆಗಳಲ್ಲಿ ರನ್ನನ ಆವೇಶವಿಲ್ಲ. ಜೈನ ಸಂಸ್ಕೃತಿ ಇದೆಯಲ್ಲ. ಅದರಲ್ಲಿ ಯಾರಾದರೂ ಒಬ್ಬ ಒಳ್ಳೆಯ ಕವಿಯನ್ನು ಹೇಳಿ ಎಂದರೆ, ನಾನು ನಾಗಚಂದ್ರನ ಹೆಸರನ್ನು ಹೇಳುತ್ತೇನೆ. ನಾನು ಇದುವರೆವಿಗೂ ರನ್ನ, ಪಂಪ ಅಂತ ಹೇಳುತ್ತಿದ್ದೆ. ಆದರೆ ಕವಿತ್ವ ಅಂದರೇನು ಅನ್ನುವುದನ್ನು ಅರ್ಥ ಮಾಡಿಕೊಂಡವನು ನಾಗಚಂದ್ರ. ಕಾವ್ಯಗುಣ, ಕಾವ್ಯತತ್ವ ಏನಿದೆಯಲ್ಲ ಅದನ್ನು ಸರಿಯಾಗಿ ಅರ್ಥಮಾಡಿಕೊಂಡವನು ನಾಗಚಂದ್ರ. 'ವಿದ್ಯಾಗರ್ವ ಗ್ರಹಪೀಡಿತರುಂ ಬಿತ್ತಿ ಬೆಳೆವ ವಿಷೋದ್ಯಾನಂ' ಅಂತ. ಬಹಳ ವಿದ್ಯಾವಂತರು ಅಭ್ಯಾಸ ಮಾಡಿದ್ದೀವಿ ಅಂತ ತಿಳ್ಕೊಂಡು ಕಂಡ ಕಂಡದ್ದನ್ನು ಬರೆದು ಉದ್ಯಾನ ಬೆಳೆಸುತ್ತೇವೆ ಅಂತಾ ತಿಳ್ಕೊಂಡು ವಿಷೋದ್ಯಾನ ಬೆಳೆಸುತ್ತ ಇದ್ದಾರೆ ಸಾಹಿತ್ಯದೊಳಗೆ ಅನ್ನುತ್ತಾನೆ ಆತ. ಇನ್ನೊಂದು ಕಡೆ ಹೇಳುತ್ತಾನೆ

ಆತ. 'ವಿದ್ಯಾಗರ್ವ ಗ್ರಹಪೀಡಿತರ್' ಅಂತ. ಇದೀಗ ಪಾಂಡಿತ್ಯದ ಗರ್ವವೆಂಬ ಗ್ರಹ ಬಡಿದಿದೆ. ಹೀಗಾಗಿ ಆತ ಪಂಪ, ರನ್ನ ಮೊದಲಾದವರನ್ನೆಲ್ಲ ದೂರ ಸರಿಸುತ್ತಾನೆ. ಇವರು ಬರೆದುದು ಸಾಹಿತ್ಯವೇ ಅಲ್ಲ ಎನ್ನುತ್ತಾನೆ ಆತ. ಸಾಹಿತ್ಯ ಬರೆಯುವುದರ ಮೂಲಕ ಸಮಾಜ ಆರೋಗ್ಯಕರವಾಗಬೇಕು. ಇಂತಹ ಒಂದು ಧೋರಣೆಯನ್ನು ಕನ್ನಡ ಸಾಹಿತ್ಯದೊಳಗೆ ಕೊಟ್ಟ ಮೊಟ್ಟಮೊದಲ ಕವಿ ಅಂದರೆ ನಾಗಚಂದ್ರ. ನನಗೆ ಜಿನದತ್ತ ದೇಸಾಯಿಯವರ ಕಾವ್ಯವನ್ನು ಓದಿದಾಗ, ರನ್ನನ ನೆನಪಾಗಲಿಲ್ಲ, ಪಂಪನ ನೆನಪಾಗಲಿಲ್ಲ, ನೆನಪಾದವನು ನಾಗಚಂದ್ರ. ಸಾಮಾಜಿಕ ಆರೋಗ್ಯ ಇದೆಯಲ್ಲ, ಅದು ಬಹಳ ಮುಖ್ಯ. ಅವರು ಒಂದು ಮಾತು ಹೇಳುತ್ತಾರೆ. "ನಾನು ಕಾವ್ಯ ಬರೆಯುವಾಗ ನನ್ನೊಂದಿಗೆ ಒಬ್ಬ ಸಹೃದಯ ಇರುತ್ತಾನೆ" ಅಂತ. ನಿಜ, ಏಕೆಂದರೆ ಸಹೃದಯರಿಗಾಗಿ ನಾನು ಬರೀತಾ ಇರೋದು. ಸಾಹಿತ್ಯಕ್ಕಾಗಿ ಸಾಹಿತ್ಯವಲ್ಲ. ಸಹೃದಯರಿಗಾಗಿ ಸಾಹಿತ್ಯ, ಸಮಾಜಕ್ಕಾಗಿ ಸಾಹಿತ್ಯ, ಸಮಾಜದ ಆರೋಗ್ಯಕ್ಕಾಗಿ ಸಾಹಿತ್ಯ. ಅವರ ತತ್ವಗಳಲ್ಲಿ, ಅವರ ಕವಿತೆಗಳಲ್ಲಿ ಇದು ಸಮಾಜಕ್ಕಾಗಿ ಸಾಹಿತ್ಯ ಅಂತ ಭಾವಿಸುತ್ತಿದ್ದರೂ ಸಹ, ಸಮಾಜದ ಬಗ್ಗೆ ಸಿಟ್ಟಿನಿಂದ ಮಾತನಾಡುವುದಿಲ್ಲ. ಅಲ್ಲಿ ಅತ್ತೆಯ ಸಿಟ್ಟಿಲ್ಲ. ತಾಯಿಯ ಮಮತೆ ಇದೆ. ಅವರ ಸಾಹಿತ್ಯದೊಳಗೆ ಒಬ್ಬ ತಾಯಿ ಸಮಾಧಾನವಾಗಿ ಅವರು ಒಬ್ಬ ದಾರ್ಶನಿಕರಿದ್ದಂತೆ ಅವರಿಗೊಂದು ದರ್ಶನ ಇದೆ. ಅಂದರೆ ವ್ಯಕ್ತಿ ಸಂಪನ್ನನಾಗಬೇಕು. ಸಮಾಜ ಸುಸಂಪನ್ನವಾಗಬೇಕು. ನಮ್ಮ ಸಾಹಿತ್ಯ ಆ ಕೆಲಸ ಮಾಡಬೇಕು ಅನ್ನುವ ಒಂದು ದರ್ಶನವಿದೆಯಲ್ಲ, ಆ ಆದರ್ಶದ ವಿವಿಧ ಅಭಿವ್ಯಕ್ತಿಯ ರೂಪಗಳೇ ಅವರ ಕವನಗಳು ಅಂತ ನಾವು ಹೇಳಬಹುದು.

ನೋಡಿ, ಇಲ್ಲಿ ಒಂದು ಕವನ ಇದೆ. ಆತನಿಗೆ ಮದುವೆಯಾಗಿರುತ್ತದೆ. ಹೆಂಡತಿಗೆ ಕೇಳುತ್ತಾನೆ. ನಿನಗೆ ಸೀರೆ ಬೇಕೆ? ಒಡವೆ ಬೇಕೆ? ಅಂತೇ. ಅವಳು ಸುಮ್ಮನಿರುತ್ತಾಳೆ. ಆದರೆ ಆಕೆಗೆ ಬೇಕಾಗಿದ್ದು ಮಗು. ಗಂಡ ಶ್ರೀಮಂತನಿರುತ್ತಾನೆ. ವರ್ಷಕ್ಕೆ ಬೇಕಾದಷ್ಟು ಒಡವೆ ಕೊಡಿಸುತ್ತಾನೆ. ಸೀರೆ ಕೊಡಿಸುತ್ತಾನೆ. ಆದರೂ ಯಾಕೆ ಹೀಗೆ ಮಾಡುತ್ತಾಳೆ ಈಕೆ ಎಂದು ಅನ್ನಿಸಬಹುದು. ಆದರೆ ಆಕೆ ಹೇಳುತ್ತಾಳೆ. ಇದೆಲ್ಲಾ ಬೇಡಾ ಮಹರಾಯ, ನಿನ್ನ ಪ್ರೀತಿಯನ್ನು ಕೊಡು ಸಾಕು. ಇದು ಬಹಳ ಮುಖ್ಯ ಇಂಥ ಕೆಲವು ಮಾತುಗಳ ಮೂಲಕ ಸಂದೇಶಗಳನ್ನು ಕೊಡುತ್ತಾರೆ. ಸಮಾಜ ಸುಸಂಸ್ಕೃತವಾಗಿ ರೂಪುಗೊಳ್ಳಬೇಕು, ಚೆನ್ನಾಗಿ ಬಾಳಬೇಕು ಎಂಬ ಧೋರಣೆಯೇ ಅವರ ಕವನಗಳ ಹಿಂದಿರುವ ಮುಖ್ಯ ತತ್ವ. ಹೀಗಾಗಿ ಇವರ ಕವನಗಳು ನಮಗೆ ಮೆಚ್ಚುಗೆಯಾಗುತ್ತವೆ.

ಇದು ಆಶಯದ ದೃಷ್ಟಿಯಿಂದ ಆಯಿತು. ಅಭಿವ್ಯಕ್ತಿಯ ದೃಷ್ಟಿಯಿಂದ ಇನ್ನೊಂದು ಮಾತನ್ನು ಹೇಳುತ್ತಾರೆ. 'ಕವಿತೆಯ ಯಾವುದೇ ಒಂದು ಭಾಗದಲ್ಲಿ Thrill ಇರುತ್ತದೆ. ಅನ್ನುವುದನ್ನು ನಾನು ಒಪ್ಪುವುದಿಲ್ಲ. ಇಡೀ ಕವಿತೆಯೇ ಒಂದು Thrill ಆದಾಗ ಮಾತ್ರ ಕಾವ್ಯದ ಸಾರ್ಥಕತೆ.' ಎಷ್ಟೋ ಸಲ ನೋಡುತ್ತೇವೆ. ಕೆಲವು ಜನರು ಪದ್ಯ ಬರೆಯುತ್ತಾರೆ. ಒಂದೆರಡು ಸಾಲು Thrill ಎನ್ನಿಸುವಂತಿರುತ್ತದೆ. ನಂತರ Narrtion ಬಂದು ಬಿಡುತ್ತದೆ. ನಂತರ ಮತ್ತೆ ಒಂದೆರಡು ಸಾಲು Thrill ನಂತರ ಮತ್ತೆ Narrtion ಹೀಗೆ Thrill ಇದ್ದಾಗ ಆ ಪದ್ಯ ಓದಬೇಕೆನಿಸುತ್ತದೆ. Narrtion ಬಂದಾಗ ಆ ಪದ್ಯ ಬಿಡಬೇಕೆನಿಸುತ್ತದೆ. ಒಂದು ಸಾಲೇ ಸಾಕು, ಆದ್ದರಿಂದ ಇದೆಲ್ಲದರ ಬಗ್ಗೆ ನಂದ್ಯಾವ ವಿರೋಧವೂ ಇಲ್ಲ. ಅದು ಒಂದು ರೂಪಕ, ಸಂಕೇತ, ಬಹಳ ತಾಜಾತನದಿಂದ

ಹೇಳಿರುವ ಒಂದು ಕ್ರಮ. ಅದನ್ನು ಬಿಟ್ಟು ಅದೇ ಒಂದು ದೊಡ್ಡ ಚರ್ಚೆ. ಇದು ಎಲ್ಲಕ್ಕಿಂತ ಬೇರೆಯಾದದ್ದು. ಇವತ್ತಿನ ಸಮೂಹ ಮಾಧ್ಯಮಗಳ ಬೇಡಿಕೆಯಿಂದಾಗಿ ಅವುಗಳ ರಚನೆಯೂ ವಿಪುಲವಾಗುತ್ತಾ ಇದೆ. ಇಲ್ಲಿ ಹೇಳಬೇಕಾಗಿರುವುದ ಸಾಮಾನ್ಯ ಸಂಗತಿಯನ್ನು ಕಾವ್ಯವಾಗಿಸುವುದು. ಅಂದರೆ ದಿನನಿತ್ಯವನ್ನೇ ಕಾವ್ಯಕ್ಕೆ ದ್ರವ್ಯವನ್ನಾಗಿಸಿಕೊಳ್ಳುವುದು. ಕವಿ ನೈತಿಕವಾದ, ಸಿದ್ಧನೈತಿಕವಾದ ನೆಲೆಗಳನ್ನು ಮುಂದುಮಾಡುವವನಲ್ಲ. ಹೊಸ ನೈತಿಕತೆಯನ್ನು ತೋರುವವನು. ಅಂಥ ಹೊಸ ನೈತಿಕತೆಯನ್ನು ತೋರುವವನು, ಅಂಥ ಹೊಸ ನೈತಿಕತೆಯ ಕಡೆಗೆ ಓದುಗನೊಬ್ಬ ಯೋಚಿಸುವಂತೆ ಮಾಡುವವನು ಸಮರ್ಥನಾದಂಥ ಕವಿ.

ಇಂತಹ ಎಲ್ಲ ಮಹತ್ವದ ಅಂಶಗಳನ್ನು ಫ್ರೆಶ್‌ನೆಸ್‌ನ್ನು ಮತ್ತು ಹೇಳುವುದಕ್ಕೆ ಒಂದು ಜಾಣ್ಮೆಯನ್ನು, ವಿಟ್ಟನ್ನು, ಒಂದು ಪೊಯೆಟಿಕ್ ವಿಟ್‌ನ್ನು ದೇಸಾಯಿಯವರು ರೂಢಿಸಿಕೊಂಡಿದ್ದಾರೆ. ಅವರ ಸಾಮರ್ಥ್ಯವನ್ನು ನೋಡಿದರೆ ಅವರಿಗೆ ವಯಸ್ಸಾಗಿದೆಯೇನೋ ಅನಿಸಲ್ಲ. ಕವಿತೆಗಿರುವ ಫ್ರೆಶ್‌ನೆಸ್ ಇದೆಯಲ್ಲ ಅದು ಅವರಿಂದ ಇನ್ನೂ ಮಹತ್ವದ ಅರ್ಥಪೂರ್ಣವಾದಂಥ ಕಾವ್ಯವನ್ನು ನಿರೀಕ್ಷಿಸಿದೆ. ಕನ್ನಡ ಕಾವ್ಯಲೋಕಕ್ಕೆ ಅದನ್ನು ಅವರು ಕೊಡಲಿ, ಕೊಡುತ್ತಾರೆ ಎನ್ನುವ ವಿಶ್ವಾಸ ಅವರ ಈ ಸಮಗ್ರ ಕಾವ್ಯದಿಂದ ಉಂಟಾಗಿದೆ.

---

* ಗುಣಾರ್ಣವ(ಜಿನದತ್ತ ದೇಸಾಯಿ ಅಭಿನಂದನ ಗ್ರಂಥ) ಕಾರ್ತಿಕ್ ಎಂಟರ ಪ್ರೈಸಸ್, ಬೆಂಗಳೂರು–೨೦೦೮.

ಆಕರ : ಮಾರ್ಗ ಸಂಪುಟ–೮

೧೧೬

ವಿನಯ ವಿದ್ವತ್ತು

೨೦೧೧

ಜಾನಪದವು ಅಧ್ಯಯನ ಶಿಸ್ತಿಗೆ ಒಳಪಟ್ಟದ್ದು ನಮ್ಮ ನಾಡಿನ ಶೈಕ್ಷಣಿಕ ಇತಿಹಾಸದಲ್ಲಿ ಒಂದು ಮುಖ್ಯ ಹಂತ. ಈ ಹಂತದ ಆರಂಭದಲ್ಲಿ ಜಾನಪದ ವಿದ್ವಾಂಸರ ಹೆಸರಿನಲ್ಲಿ ಒಮ್ಮೆಲೇ ದೊಡ್ಡ ತಂಡವೊಂದು ಸೃಷ್ಟಿಯಾಯಿತು. ಇವರಲ್ಲಿ ಜಾನಪದದಿಂದ ಬೆಳೆದವರು ಹೆಚ್ಚು; ಜಾನಪದವನ್ನು ಬೆಳೆಸಿದವರು ಕಡಿಮೆ. ಈ ಕಡಿಮೆ ಜನರಲ್ಲಿ ಒಬ್ಬರು ಡಾ. ಅಂಬಳಿಕೆ ಹಿರಿಯಣ್ಣ.

ಅಂಬಳಿಕೆ ನನ್ನ ಸಂಬಂಧ ಮೂರು ದಶಕಗಳಷ್ಟು ಹಳೆಯದು. ಈ ಅವಧಿಯಲ್ಲಿ ತಮ್ಮ ಅಧ್ಯಾಪಕ ವೃತ್ತಿಯ ಕಷ್ಟ-ಸುಖಗಳನ್ನೂ ತಮ್ಮ ಅಧ್ಯಯನದ ನೀತಿ- ನಿಲುವುಗಳನ್ನೂ ನನ್ನೊಂದಿಗೆ ಹಂಚಿಕೊಳ್ಳುತ್ತ ಬಂದ ಅವರಲ್ಲಿ ನಾನು ಗುರುತಿಸಿದ ತುಂಬು ಗುಣಗಳು ವಿನಯ ಮತ್ತು ವಿದ್ವತ್ತು.

ವಿದ್ವತ್ತಿಗೆ ವಿನಯವೇ ಭೂಷಣವೆಂಬ ಮಾತು ತುಂಬ ಪ್ರಸಿದ್ಧ. ಡಾ. ಅಂಬಳಿಕೆಯವರು ಇದಕ್ಕೆ ತಕ್ಕ ವ್ಯಕ್ತಿ. ಲೆಕ್ಚರರ್, ರೀಡರ್, ಪ್ರೊಫೆಸರ್, ಸಂಸ್ಥೆಯ ನಿರ್ದೇಶಕ, ಕುಲಪತಿ ಹೀಗೆ ಹುದ್ದೆಗಳನ್ನೇರುತ್ತ ಬಂದ ಅವರು ಉದ್ದಕ್ಕೂ ಬಾಗಿ ನಡೆದವರೇ ವಿನಃ ಬೀಗಿ ಬೆಳೆದವರಲ್ಲ, "ತಾಳ್ಮೆಗಿಂತ ಮಿಗಿಲಾದ ತಪಸ್ಸಿಲ್ಲ" ಎಂಬ ಮಾತನ್ನು ನಂಬಿರುವ ಅವರು ಎಲ್ಲವನ್ನೂ, ಎಲ್ಲರನ್ನೂ ಸಹಿಸಿಕೊಂಡು ಹೋಗುವ ಸ್ವಭಾವ ಬೆಳೆಸಿಕೊಂಡಿದ್ದಾರೆ. ಹೀಗೆ ಮೃದುವಾಗಿದ್ದರೂ ಅವರಲ್ಲಿ ರೇಶಿಮೆಯ ಗುಣವಿದೆ. ಅವರು ಮೃದುವೆಂದರೆ ಮೃದು, ಗಟ್ಟಿಯೆಂದರೆ ಗಟ್ಟಿ. ಹೀಗಿದ್ದೂ ತಮ್ಮ ಮೃದುಗುಣದಿಂದಾಗಿ ಅವರು ವಿರೋಧಿಗಳನ್ನು ಅಷ್ಟಾಗಿ ಸೃಷ್ಟಿಸಿಕೊಂಡಿಲ್ಲ. ಹಿರಿಯರು ಗೆಳೆಯರು ವಿದ್ಯಾರ್ಥಿಗಳು, ಮೊದಲು ಮಾಡಿ ಎಲ್ಲರೂ ಅವರನ್ನು ಪ್ರೀತಿಸುತ್ತಾರೆ. ಪರೋಕ್ಷರಲ್ಲಿ ಅವರ ಬಗ್ಗೆ ಒಳ್ಳೆಯ ಮಾತುಗಳನ್ನಾಡುತ್ತಾರೆ.

ನಿಜವಾದ ವಿನಯದಿಂದ ವಿದ್ವತ್ತು, ನಿಜವಾದ ವಿದ್ವತ್ತಿನಿಂದ ವಿನಯ ಬೆಳೆಯುತ್ತವೆ. ಈ ಆದರ್ಶದಲ್ಲಿ ಸ್ವಭಾವತಃ ವಿನಯಶಾಲಿಗಳಾದ ಅಂಬಳಿಕೆ ವಿದ್ವಾಂಸರಾಗಿಯೂ ಬೆಳೆದಿದ್ದಾರೆ. ಬೋಧನೆ ಬರೆಹಗಳಲ್ಲಿ ಒಂದು ದುರ್ಬಲವಾದರೂ ಅವನು ಅಪೂರ್ಣ ಶಿಕ್ಷಕನೆಂದೇ ನನ್ನ

ಅಭಿಪ್ರಾಯ. ಏಕೆಂದರೆ ಬೋಧನೆಯಿಂದ ಬರೆಹಕ್ಕೆ, ಬರೆಹದಿಂದ ಬೋಧನೆಗೆ ನಿರ್ದಿಷ್ಟತೆ ಪ್ರಾಪ್ತವಾಗುತ್ತದೆ. ಆರಂಭದಲ್ಲಿಯೇ ಇದನ್ನು ಅರ್ಥಮಾಡಿಕೊಂಡ ಅಂಬಳಿಕೆ ಉತ್ತಮ ಬೋಧಕರೆಂದು, ಉತ್ತಮ ಬರೆಹಗಾರರೆಂದು ಖ್ಯಾತರಾಗಿದ್ದಾರೆ. ಈ ಮೂಲಕ ಸಾಧಿಸಿದ ವಿದ್ವತ್ತು ಅವರ ಮುಖ್ಯ ಆಸ್ತಿಯಾಗಿದೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಲೇ, ಇದಕ್ಕಿಂತ ನೌಕರಿ ಕೈಗೆ ಸಿಗುತ್ತಲೇ ಓದಿನತ್ತ ಬೆನ್ನು ತಿರುಗಿಸುವ ಶಿಕ್ಷಕರೇ ಅಧಿಕವಾಗಿರುವ ಇಂದಿನ ಕಾಲದಲ್ಲಿ ನಿರಂತರ ವ್ಯಾಸಂಗದ ಮೂಲಕ ಅಂಬಳಿಕೆ ತಮ್ಮ ವಿದ್ವತ್ತನ್ನು ವರ್ಧಿಸಿಕೊಂಡಿದ್ದಾರೆ. ಅವರ ಉತ್ತಮೋತ್ತಮ ಜಾನಪದ ಕೃತಿಗಳೇ ಇದಕ್ಕೆ ಸಾಕ್ಷಿಯಾಗಿವೆ.

ಇಂದು ಜಾನಪದ ಕೆಲವರಿಗೆ ಸರಳ ಶಿಕ್ಷಣವೆನಿಸಿದೆ. ನಿಜ ಹೇಳುವುದಾದರೆ ಜನಸಮುದಾಯದ ಸಾಂಸ್ಕೃತಿಕ ಮೂಲ-ವಿಕಾಸಗಳನ್ನು ಗುರುತಿಸುವ ಈ ಅಧ್ಯಯನ ತುಂಬ ಆಂತರ್ಯದಿಂದ ಕೂಡಿದೆ. ಇದು ಕೇವಲ ಗ್ರಂಥಾಲಯದಲ್ಲಿ ಸಂಗ್ರಹಿಸುವ ಜ್ಞಾನವಲ್ಲ; ಸಮುದಾಯದ ಆಂತರ್ಯದಿಂದ ಆರ್ಜಿಸಿಕೊಳ್ಳಬೇಕಾದ ನಿಧಿ. ಹಳ್ಳಿಯ ಮೂಲಕ ಅಂಬಳಿಕೆ ಅವರು ಈ ಕಾರ್ಯವನ್ನು ಶ್ರದ್ಧೆಯಿಂದ ಪೂರೈಸಿ, ನಮ್ಮ ಕೈಗೆ ನೀಡಿರುವ ಗ್ರಾಮೀಣ ವ್ಯಾಸಂಗದ ಕೃತಿಗಳೇ ಇದಕ್ಕೆ ನಿದರ್ಶನ.

ಇತ್ತೀಚೆಗೆ ಡಾ. ಅಂಬಳಿಕೆಯವರು ಜಾನಪದ ವಿಶ್ವವಿದ್ಯಾಲಯದ ಆಡಳಿತಗಾರರಾಗಿ, ಇದೀಗ ಕುಲಪತಿಗಳಾಗಿದ್ದಾರೆ. ಹೊಸದಾಗಿ ಅಸ್ತಿತ್ವಕ್ಕೆ ಬರಲಿರುವ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳ ಎದುರಿಗೆ ಸಿದ್ಧ ಮಾದರಿಗಳಿವೆ. ಜನಪದ ವಿಶ್ವವಿದ್ಯಾಲಯದ ಸ್ಥಿತಿ ಹೀಗಲ್ಲ. ಇಲ್ಲಿ ಕುಲಪತಿಗಳೇ ಒಂದು ಹೊಸ ಮಾದರಿಯನ್ನು ರೂಪಿಸಬೇಕಾಗುತ್ತದೆ. ಇಂಥ ಮಾದರಿಯನ್ನು ಡಾ. ಅಂಬಳಿಕೆಯವರು ಸಿದ್ಧಪಡಿಸುವರೆಂಬ ವಿಶ್ವಾಸ ನನ್ನದಾಗಿದೆ. ಹೀಗೆ ಹೇಳಲು ಕಾರಣ ಕಳೆದ ಆರು ತಿಂಗಳ ಅವಧಿಯಲ್ಲಿ ಆಡಳಿತಗಾರರಾಗಿ ಅವರು ಮಾಡಿದ ಕೆಲಸ-ಸಾಮಾನ್ಯವಾಗಿ ವಿದ್ವಾಂಸ ವ್ಯಕ್ತಿಗಳಿಗೆ ಆಡಳಿತ ಸಾಮರ್ಥ್ಯ ಕಡಿಮೆಯೆಂಬ ಮಾತಿದೆ. ಇದಕ್ಕೆ ಅಪವಾದವೆಂಬಂತೆ ಇವರು ಜಾನಪದ ವಿಶ್ವವಿದ್ಯಾಲಯದ ಆಡಳಿತ ಅಧಿಕಾರಿಗಳಾಗುತ್ತಲೆ ನಮಗೆ ಈ ವರೆಗೆ ಗೊತ್ತಿಲ್ಲದ ತಮ್ಮ ಆಡಳಿತ ಸಾಮರ್ಥ್ಯವನ್ನು ತೋರಿಸಿದರು. ವಿಶ್ವವಿದ್ಯಾಲಯದ ಆವರಣ ಗುರುತಿಸುವಲ್ಲಿ ಅದನ್ನು ಪಡೆಯುವಲ್ಲಿ ವಿಶ್ವವಿದ್ಯಾಲಯದ ಪರಿನಿಯಮ ರೂಪಿಸುವಲ್ಲಿ ಅದಕ್ಕೆ ಸರಕಾರದ ಸಮ್ಮತಿ ದೊರಕಿಸಿಕೊಳ್ಳುವಲ್ಲಿ ಅವರು ತೋರಿದ ಚಾಕಚಕ್ಯತೆಯನ್ನು ನಾನು ಸಮೀಪದಿಂದ ಗಮನಿಸಿದ್ದೇನೆ. ಇಂಥ ವ್ಯಕ್ತಿತ್ವಕಾರಣವಾಗಿ ಇವರು ಜಾನಪದ ವಿಶ್ವವಿದ್ಯಾಲಯಕ್ಕೆ ಸರಿಯಾದ ಅಡಿಪಾಯ ಹಾಕಿ ಅದನ್ನು ಸರಿಯಾಗಿ ಅಭಿವೃದ್ಧಿ ಪಡಿಸುವರೆಂದು ಆಶಿಸುತ್ತೇನೆ.

---

* ಹಿರಿಯಣ್ಣ: (ಅಂಬಳಿಕೆ ಹಿರಿಯಣ್ಣ ಅಭಿನಂದನ ಸಂಪುಟ) ಹೊಸಪೇಟೆ-೨೦೧೧.

ಆಕರ : ಮಾರ್ಗ ಸಂಪುಟ-೮

೧೧೭

ಗೆಳೆಯರಲ್ಲಿ ಗೆಳೆಯ

೨೦೧೧

೧೯೬೦-೬೨. ಧಾರವಾಡಲ್ಲಿ ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಾಗಿದ್ದ ಸಂದರ್ಭ. ಈ ಸಮಯದಲ್ಲಿ ಮಂಗಳೂರು ಪ್ರದೇಶದಿಂದ ಬಂದಿದ್ದ ಎಂ. ರಾಮಚಂದ್ರ ಆಚಾರ್ಯರನ್ನು ಬಿಟ್ಟರೆ ಮಿಕ್ಕವರೆಲ್ಲ ಉತ್ತರ ಕರ್ನಾಟಕದವರು. ಭಿನ್ನ ಸಂಸ್ಕೃತಿ ಕಾರಣವಾಗಿ ನಮ್ಮ ಪರಿಸರ ಮೈತ್ರಿ ಬೆಳೆಯದಿದ್ದರೂ ರಾಮಚಂದ್ರ ಅವರ ವ್ಯಕ್ತಿತ್ವ ನನ್ನನ್ನು ತುಂಬ ಆಕರ್ಷಿಸಿದ್ದಿತು. ಇದಕ್ಕೆ ಕರಣ ಅನ್ಯಾಯದ ಕೂಡ ಸಹಕರಿಸದ ನಮ್ಮಿಬ್ಬರ ಸ್ವಭಾವ. ಹೀಗಾಗಿ ನಾವಿಬ್ಬರೂ ಏಕಾಂಗಿವೀರ ವಿದ್ಯಾರ್ಥಿಗಳಾಗಿಯೇ ಎರಡು ವರ್ಷ ಕಳೆದವು.

ಆಕರ್ಷಕ ನಿಲವು. ಸ್ವಭಾವಕ್ಕೆ ಒಪ್ಪುವಂತೆ ಬಿಳಿಯ ಬಟ್ಟೆ. ಬಟ್ಟೆಯಂತೆ ಭಾವನೆಯೂ ಶುಭ್ರ. ಮಾತು ಕಡಿಮೆ. ಆಡಿದರೆ ಮುತ್ತಿನಹಾರ. ಈ ಮೌಲ್ಯ ನಮ್ಮಲ್ಲಿ ಗೊತ್ತಾದುದು ಅವರು ವಿದ್ಯಾರ್ಥಿ ವಿಚಾರಸಂಕಿರಣದಲ್ಲಿ ಮಂಡಿಸಿದ ಪ್ರಬಂಧದಿಂದ. ಅಂದಿನ ಆಲೋಚನೆಯ ಕ್ರಮ, ಅಭಿವ್ಯಕ್ತಿಯ ರೀತಿ ಇತ್ಯಾದಿಗಳಿಂದಾಗಿ ನನಗೆ ಇವರಲ್ಲಿ ಅಡಗಿರುವ ಸಾಹಿತಿಯ ಪರಿಚಯವಾಯಿತು.

ಎರಡನೆಯ ವರ್ಷ ಪ್ರಾಧ್ಯಾಪಕ ಡಾ. ವೃಷಭೇಂದ್ರಸ್ವಾಮಿಗಳು ವಿದ್ಯಾರ್ಥಿಗಳಾದ ನಮಗಾಗಿ ಮಂಗಳೂರು ಪ್ರವಾಸ ಯೋಜಿಸಿದ್ದರು. ಇದರ ವ್ಯವಸ್ಥೆಯ ಪೂರ್ಣ ಜವಾಬ್ದಾರಿ ಹೊತ್ತವರು ರಾಮಚಂದ್ರ. ಆ ಸಂದರ್ಭದಲ್ಲಿ ರೂಪಿಸಿದ ಕಾಲಬದ್ಧ ಯೋಜನೆ ಅವರೊಬ್ಬ ಸಮರ್ಥ ಸಂಘಟಕರೆಂಬುದನ್ನು ಸ್ಪಷ್ಟಪಡಿಸಿತು. ಬಯಲುಸೀಮೆಯ ನಮಗೆ ಹಳ್ಳದ ದಂಡೆಯ ಚಳಿಯ ಅನುಭವ. ಸಮುದ್ರ ತೀರದಲ್ಲಿ ಇನ್ನೂ ಹೆಚ್ಚು ಚಳಿಯಿರಬಹುದೆಂದು ಭಾವಿಸಿ ನಾವು ಊಲನ್ ಸೂಟ್-ಬೂಟ್ ಧರಿಸಿ ಬೆವರಿದುದನ್ನು ನೆನಪಿಸಿಕೊಂಡರೆ ಈಗಲೂ ಮೈ ನೀರೊಡೆಯುತ್ತದೆ.

ರಾಮಚಂದ್ರ ಅವರು ಮಂಗಳೂರು, ಉಡುಪಿ, ಮಂಜೇಶ್ವರಗಳಲ್ಲಿ ಗೋವಿಂದ ಪೈ, ಸೇಡಿಯಾಪು ಕೃಷ್ಣಭಟ್. ಕಡೆಗೊಂಡ್ಲ ಶಂಕರಭಟ್, ಗೋಪಾಲಭಟ್ಟ ಮೊದಲಾದವರ ಸಂದರ್ಶನ ವ್ಯವಸ್ಥೆಯನ್ನು ಅಂದು ಏರ್ಪಡಿಸಿದ್ದರು. ವಿದ್ಯಾರ್ಥಿಯಾಗಿ ಈ ಗಣ್ಯರೊಂದಿಗೆ ಬೆಳೆಸಿಕೊಂಡಿದ್ದ ಪೂರ್ಣ ಸಲುಗೆ ಇವರ ಬಗೆಗಿನ ನಮ್ಮ ಪ್ರೀತಿಯನ್ನು ಇಮ್ಮಡಿಸಿತು.

ಧಾರವಾಡ ಶಿಕ್ಷಣ ಮುಗಿಸಿ ನಾವು ನಮ್ಮ ನಮ್ಮ ಬದುಕಿನ ನೆಲೆ ಹುಡುಕಿಕೊಂಡೆವು. ರಾಮಚಂದ್ರ ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. ದೂರದ ವಾಸ್ತವ್ಯ ಕಾರಣವಾಗಿ ನಮ್ಮ ಸಂಪರ್ಕ ಕಡಿದುಹೋದರೂ, ನನ್ನ ಮನಸ್ಸಿನಲ್ಲಿ ಅವರು ಉಳಿದರು. ಶಿಕ್ಷಣಸಂಸ್ಥೆ ಭುವನೇಂದ್ರ ಕಾಲೇಜು ಇವರ ಪ್ರಯತ್ನದಿಂದಾಗಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಹೆಸರು ಮಾಡಿತು. ಕ್ರಮೇಣ ಇವರು ಒಬ್ಬ ಸಾಂಸ್ಕೃತಿಕ ಪರಿಚಾರಕರಾಗಿ ಬೆಳೆದು, ಕಾರ್ಕಳ ನಗರವನ್ನು ನಮ್ಮ ನಾಡಿನ ನಕ್ಷೆಯಲ್ಲಿ ಎದ್ದು ಕಾಣುವಂತೆ ಮಾಡಿದರು. ರಾಜ್ಯದ ಗಣ್ಯ ಸಾಹಿತಿ–ಕಲಾವಿದರನ್ನು ಬರಮಾಡಿಕೊಂಡು ಇಲ್ಲಿಯ ಸಾಹಿತ್ಯ ಸಂಘಕ್ಕೆ ಘನತೆ–ಗೌರವ ತಂದುಕೊಟ್ಟರು.ಈ ವೇದಿಕೆಗೆ ನನ್ನನ್ನು ಆಮಂತ್ರಿಸಿ, ಯೋಜಿಸಿದ್ದ ಸಭೆ, ಆಯೋಜಿಸಿದ ಭೋಜನಕೂಟಗಳು ರಾಮಚಂದ್ರ ಅವರು ಕಾರ್ಕಳ ಜನರಲ್ಲಿ ಗಳಿಸಿದ್ದ ಎತ್ತರದ ಸ್ಥಾನ ಸಾಕ್ಷಿಯಾಗಿದ್ದವು. ಇವರ ಸಂಘಟನಾ ಶಕ್ತಿಯನ್ನ ಮೆಚ್ಚಿಕೊಂಡ ನಾನು ಕಾರ್ಕಳದಲ್ಲಿ "ಕನ್ನಡ ಪರಿಚಾರಕ ರಾಜ್ಯಮಟ್ಟದ ಸಮ್ಮೇಳನ" ವನ್ನು ಇವರ ನೇತೃತ್ವದಲ್ಲಿ ಏರ್ಪಡಿಸ ಬಯಸಿದ್ದೆನು. ಅದು ಕೈಗೂಡದ ಕಾರಣ ಈಗಲೂ ವ್ಯಥೆ ಪಡುತ್ತಿದ್ದೇನೆ.

ರಾಮಚಂದ್ರ ಅವರ ಓದು ವಿಶಾಲ. ಕನ್ನಡ ಪರಿಚಾರಿಕೆಯಲ್ಲಿಯೇ ಶಕ್ತಿ ವ್ಯಯವಾಗಿ, ಬರವಣಿಗೆಗೆ ಸಮಯ ಉಳಿಯಲಿಲ್ಲ–ಹೀಗಿದ್ದೂ ಗುರು ಸೇಡಿಯಾಪು ಕೃಷ್ಣಭಟ್ ಅವರಂತೆ ಬರೆದಿದ್ದರೆ ಅವರ ಬರವಣಿಗೆ ಬದುಕಿನ ಚೊಕ್ಕ ಚಿನ್ನ. ಕೆಲವರಲ್ಲಿ ಶಕ್ತಿ ಇದ್ದೂ ಶಿಸ್ತು, ಶಿಸ್ತು ಇದ್ದೂ ಶಕ್ತಿ ಇರುವುದಿಲ್ಲ. ರಾಮಚಂದ್ರ ಅವರದು ಶಕ್ತಿಯನ್ನು ಶಿಸ್ತನ್ನಾಗಿ ಪರಿವರ್ತಿಸಿಕೊಂಡ ವ್ಯಕ್ತಿತ್ವ ಹೀಗೆ ಪರಿವರ್ತನೆಗೊಂಡ ಕೇವಲ ವ್ಯಕ್ತಿಕೇಂದ್ರಿತವಾಗಿ ಬೆಳೆಯುವುದೂ ಅದರ ಸಾಮಾಜೀಕರಣವೇ ಪೂರ್ಣ ಬದುಕು. ಇಂಥ ಬದುಕನ್ನು ರೂಪಿಸಿಕೊಂಡ ಕಾರಣ ರಾಮಚಂದ್ರ ನನಗೆ ಪ್ರೀತಿಯ ಗೆಳೆಯ, ಗೆಳೆಯರಲ್ಲಿ ಗೆಳೆಯ.

---

* ಚಂದ್ರಮ (ರಾಮಚಂದ್ರ ಅಭಿನಂದನ ಗ್ರಂಥ) ಅಭಿನಂದನ ಸಮಿತಿ, ಕಾರ್ಕಳ–೨೦೧೧.

ಆಕರ : ಮಾರ್ಗ ಸಂಪುಟ–೮

೧೧೮

'ಕೇಳುವ ಸಂಸ್ಕೃತಿ' ಗೆ ಒತ್ತು ನೀಡಿದ ಕವಿ

೨೦೧೨

ಗೆಳೆಯ ಬರತೇನಿ ಮನದಾಗ್ಹಿಡಿ ನೆನಪ...
ನಾನು ನೀನು ಯಾರೋ ಏನೋ ಎಂತೋ ...
ಅಂತು ಕೂಡಿಸಿತು ಪ್ರೇಮದ ತಂತು ...

ಈ ಕವನದ ಸಾಲುಗಳು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ೧೯೬೨ ರಲ್ಲಿ ಕೇಳಿಬಂದಿದ್ದವು. ಇವು ಇನ್ನೂ ಜೀವಂತ. ಈ ಸಾಲುಗಳನ್ನು ಬರೆದು ಹಾಡಿದವರು ಬೇರಾರೂ ಅಲ್ಲ, ಜ್ಞಾನಪೀಠ ಪ್ರಶಸ್ತಿಗೆ ಭಾಜನರಾಗುವ ಮೂಲಕ, ಕನ್ನಡ ಸಾಹಿತ್ಯ ಶಿಖರಕ್ಕೆ ಮತ್ತೊಂದು ಗರಿ ಮೂಡಿಸಿರುವ ದೇಸಿ ಕವಿ ಡಾ. ಚಂದ್ರಶೇಖರ ಕಂಬಾರ.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ೧೯೬೦ ರಿಂದ ೧೯೬೨ ರವರೆಗೆ ಕಂಬಾರರು ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿದ್ದರು. ಅಂತಿಮ ವರ್ಷದ ಬೀಳ್ಕೊಡುಗೆ ಸಮಾರಂಭದಲ್ಲಿ ತಾವು ರಚಿಸಿದ ಕವನದ ಈ ಸಾಲುಗಳನ್ನು ಹಾಡುವ ಮೂಲಕ ಎಲ್ಲರ ಗಮನ ಸೆಳೆದಿದ್ದರು; ಅನೇಕರ ಮೇಲೆ ಪ್ರಭಾವ ಬೀರಿದ್ದರು. ಹೀಗೆ ಪ್ರಭಾವಕ್ಕೊಳಗಾದವರಲ್ಲಿ ನಾನೂ ಒಬ್ಬ.

ಜ್ಞಾನಪೀಠ ಪ್ರಶಸ್ತಿ ಈ ಬಾರಿ ಕನ್ನಡಕ್ಕೆ, ಅದರಲ್ಲೂ ನನ್ನ ಸ್ನೇಹಿತನಿಗೆ ಸಿಕ್ಕಿದ್ದರಿಂದ ಸಂತೋಷವಾಗಿದೆ. ಕಂಬಾರರು ನಮ್ಮ ತಲೆಮಾರಿನ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರು. ದೇಸಿ ಸಂವೇದನೆಯನ್ನು ಬೇಂದ್ರೆಯವರ ತರುವಾಯ ಸಮರ್ಥವಾಗಿ ಕಟ್ಟಿಕೊಟ್ಟವರು. ಈ ದಿನಗಳಲ್ಲಿ ಮತ್ತೊಬ್ಬ ಕಂಬಾರರು ಸಿಗುವುದು ಕಠಿಣ.

ಕಂಬಾರರು ಬೆಳಗಾವಿ ಲಿಂಗರಾಜ ಕಾಲೇಜಿನಿಂದ, ನಾನು ವಿಜಾಪುರದ ವಿಜಯ ಕಾಲೇಜಿನಿಂದ ೧೯೬೦ ರಲ್ಲಿ ಸ್ನಾತಕೋತ್ತರ ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠಕ್ಕೆ ಪ್ರವೇಶ ಪಡೆದೆವು. ನನ್ನದು ಅಧ್ಯಯನಶೀಲ ಪ್ರವೃತ್ತಿ. ಸರಿಯಾಗಿ ತರಗತಿಗಳಿಗೆ ಹಾಜರಾಗುವುದು, ನಿರಂತರ ಅಭ್ಯಾಸ ಮಾಡುವುದು ನನ್ನ ಸ್ವಭಾವವಾಗಿತ್ತು. ಆದರೆ ಕಂಬಾರರು

ಸೃಜನಶೀಲ ಸಾಹಿತಿಯಾಗಿದ್ದರು. ಇಂಥವರು ಯಾವುದೇ ಚೌಕಟ್ಟಿಗೆ, ಶಿಸ್ತಿಗೆ ಒಳಗಾಗುತ್ತಿರಲಿಲ್ಲ. ಸರಿಯಾಗಿ ತರಗತಿಗೆ ಬರುತ್ತಿರಲಿಲ್ಲ. ಆದರೆ ಇಬ್ಬರೂ ಉನ್ನತ ಶ್ರೇಣಿಯಲ್ಲಿಯೇ ಪಾಸಾಗಿದ್ದೆವು.

೧೯೬೦-೬೨ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಕನ್ನಡ ಸಾರಸ್ವತ ಲೋಕದ ಮೇಲೆ ಅತ್ಯಂತ ಪ್ರಭಾವ ಬೀರುವ ಮಟ್ಟದಲ್ಲಿ ಕೆಲಸ ಮಾಡಿರುವ ಕಂಬಾರ, ಚಂದ್ರಶೇಖರ ಪಾಟೀಲ, ಸಿದ್ಧಲಿಂಗ ಪಟ್ಟಣಶೆಟ್ಟಿ, ಗಿರಡ್ಡಿ ಗೋವಿಂದರಾಜ ನನ್ನ ಜೊತೆಗಿದ್ದರು. ನಾನು ಮತ್ತು ಕಂಬಾರರು ಕನ್ನಡ ವಿಭಾಗದ ಸಹಪಾಠಿಗಳು. ಚಂಪಾ, ಗಿರಡ್ಡಿ ಹಾಗೂ ಪಟ್ಟಣಶೆಟ್ಟಿ ನಮಗಿಂತ ಒಂದು ವರ್ಷ ಚಿಕ್ಕವರು. ಇಂಥ ಬ್ಯಾಚ್ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಯಾವ ವರ್ಷವೂ ಬರಲಿಲ್ಲ. ವಿವಿಧ ಕ್ಷೇತ್ರಗಳಲ್ಲಿ ಎಲ್ಲರೂ ಸಾಧನೆ ಮಾಡಿದವರೇ ಆಗಿದ್ದೇವೆ.

ನಾನು ಸಂಶೋಧನಾ ಕ್ಷೇತ್ರದಲ್ಲಿದ್ದರೆ, ಕಂಬಾರರು ನಾಟಕ, ಪಟ್ಟಣಶೆಟ್ಟಿ ಕಾವ್ಯ, ಗಿರಡ್ಡಿ ವಿಮರ್ಶೆ ಹಾಗೂ ಚಂಪಾ ಚಳವಳಿ ಮೂಲಕ ಗುರುತಿಸಿಕೊಂಡವರು. ನಾನು ಹಾಗೂ ಕಂಬಾರರು ಒಂದೇ ಕ್ಲಾಸ್‌ನಲ್ಲಿದ್ದರೂ ನಾವಿಬ್ಬರೂ ಅಷ್ಟಕ್ಕಷ್ಟೇ ಎಂಬಂತೆ ಇದ್ದೆವು. 'ಮುಗುಳು' ಎಂಬ ಕವನ ಸಂಕಲನ ಪ್ರಕಟ ಮಾಡಿದ್ದ ಅವರು, ಪದ್ಯ ಬರೆಯುವುದು, ಹಾಡುವುದರಿಂದ ಕ್ಲಾಸ್‌ನಲ್ಲಿ ಪಾಪ್ಯುಲರ ಆಗಿದ್ದರು.

ಸ್ನಾತಕೋತ್ತರ ಕೋರ್ಸ್‌ನ ಕೊನೆಯ ವರ್ಷದ ಬೀಳ್ಕೊಡುಗೆ ಸಮಾರಂಭದಲ್ಲಿ ಕಂಬಾರರು ತಾವೇ ರಚಿಸಿ ಹಾಡಿದ ಹಾಡು ನನ್ನ ಮೇಲೆ ಪ್ರಭಾವ ಬೀರಿತು. ಇದರಿಂದ ಕಂಬಾರರ ಜೊತೆಗಿನ ನಂಟು ಹೆಚ್ಚಾಯಿತು.

ಕಂಬಾರರು ಬೆಳಗಾವಿಯ ಲಿಂಗರಾಜ ಕಾಲೇಜಿಗೆ ಉಪನ್ಯಾಸಕರಾಗಿ ಸೇರಿದರೆ, ನಾನು ಕರ್ನಾಟಕ ಕಾಲೇಜಿಗೆ ಸೇರಿದೆ. ನಂತರ ಕಂಬಾರರು ಉಡುಪಿ, ಸಾಗರದಲ್ಲಿ ಸೇವೆ ಸಲ್ಲಿಸಿ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹೋದರು. ಬೆಂಗಳೂರಿಗೆ ಹೋದ ನಂತರ ಅವರಿಗೆ ಶುಕ್ರದೆಸೆ ಬಂತು.

ಕಂಬಾರರು ಉತ್ತರ ಕರ್ನಾಟಕದ ಸಂಸ್ಕೃತಿ, ಗ್ರಾಮೀಣ ಮೂಲ ಸಂಸ್ಕೃತಿ, ಭಾಷೆ ಬಳಸಿಕೊಂಡು ಭಿನ್ನವಾಗಿ ಬರೆದರು. ಹೀಗಾಗಿ ಅವರ ಬರವಣಿಗೆ ಭಿನ್ನವಾಗಿ ಕಂಡಿತು. ಕಂಬಾರರು ಇಲ್ಲಿಯೇ ಇದ್ದಿದ್ದರೆ ಅಷ್ಟೊಂದು ಪ್ರಭಾವ ಬೀರುತ್ತಿರಲಿಲ್ಲ. ಮೂಲತಃ ಅವರೊಬ್ಬ ಕವಿ ಎಂದು ತಿಳಿದುಕೊಂಡಿದ್ದೆ. ನಂತರ ಗೊತ್ತಾಯಿತು, ಅವರು ಬಹುಮುಖಿ ವ್ಯಕ್ತಿತ್ವ ಹೊಂದಿದವರು ಎಂದು, ಬೆಂಗಳೂರಿನಲ್ಲಿ ಅವರಿಗೆ ದೊಡ್ಡ ವೇದಿಕೆ ಸಿಕ್ಕಿತು. ಪ್ರಚಾರಕ್ಕಾಗಿ ಸಹಾಯ ದೊರೆಯಿತು. ಇವೆಲ್ಲಕ್ಕಿಂತ ಮಿಗಿಲಾಗಿದ್ದುದು ಅವರಲ್ಲಿದ್ದ ದೊಡ್ಡ ಶಕ್ತಿ. ಹೀಗಾಗಿ ಅವರು ಸಂಪೂರ್ಣವಾಗಿ ಬೆಳೆಯಲು ಸಾಧ್ಯವಾಯಿತು.

ಗೋಪಾಲಕೃಷ್ಣ ಅಡಿಗ, ಕೀರ್ತಿನಾಥ ಕುರ್ತಕೋಟಿ ಅವರಂಥವರ ಸಂಪರ್ಕದಿಂದ ಕಂಬಾರರಿಗೆ ಹೆಚ್ಚಿನ ಅವಕಾಶ ಸಿಕ್ಕಿತು. ನೆಲಮೂಲ ಪ್ರತಿಭೆಯ ವ್ಯಕ್ತಿ ಕಂಬಾರರು ಬೆಳಗಾವಿ ಜಿಲ್ಲೆಯ ಸಣ್ಣಾಟ, ಲಾವಣಿಯ ಪ್ರಭಾವಕ್ಕೆ ಒಳಗಾದವರು. ನಾಟಕ ಬರೆಯಿರಿ ಅಂದರೆ ಸಣ್ಣಾಟ, ಕಾವ್ಯ ಬರೆಯಿರಿ ಅಂದರೆ ಲಾವಣಿ ಬರೆಯುತ್ತಾರೆ. ಓದು ಸಂಸ್ಕೃತಿಯಿಂದ ಭಿನ್ನವಾಗಿದ್ದನ್ನು ನಾಟಕ ಹಾಗೂ ಕಾವ್ಯದ ಕೇಳುವ ಸಂಸ್ಕೃತಿಯನ್ನಿಟ್ಟುಕೊಂಡು ಬರೆಯುತ್ತಾರೆ. ಇದು ಕಂಬಾರರ ವೈಶಿಷ್ಟ್ಯ.

ಕಂಬಾರರ ಸಾಹಿತ್ಯದಲ್ಲಿ ದ್ವಂದ್ವದ ಮುಖಾಮುಖಿ ಇದೆ. ಅವರ ಸಾಹಿತ್ಯದ ಮುಖ್ಯ ಲಕ್ಷಣ ಇದು. ಕಾಮಕೇಂದ್ರಿತವಾದ ವಿಚಾರಗಳನ್ನು ಅವರ ಕವನಗಳಲ್ಲಿ, ನಾಟಕಗಳಲ್ಲಿ ಕಾಣಬಹುದು. ಇತ್ತೀಚೆಗೆ ಅವರು ಬರೆದಂಥ 'ಶಿವರಾತ್ರಿ' ಅತ್ಯುತ್ತಮವಾಗಿ ಮೂಡಿ ಬಂದಿದೆ.

---

* ಚಂದ್ರಶೇಖರ ಕಂಬಾರ : ಸಂ. ಜಯಪ್ರಕಾಶ ಮಾವಿನಕುಳಿ,ಅಂಕಿತ ಪ್ರಕಾಶನ, ಬೆಂಗಳೂರು –೨೦೧೨.

ಆಕರ : ಮಾರ್ಗ ಸಂಪುಟ–೮

೧೧೯

ಹೊಸ ಒಲವಿನ ಕನ್ನಡ ಅಧ್ಯಾಪಕ

೨೦೦೦

ನರಹಳ್ಳಿಯವರದು ಮತ್ತು ನನ್ನದು ಹಲವು ಅಂತರಗಳ ಸಂಬಂಧ. ಇವುಗಳನ್ನು ಭೌಗೋಳಿಕ ಅಂತರ, ತಲೆಮಾರಿನ ಅಂತರ, ಆಸಕ್ತಿಗಳ ಅಂತರವೆಂದು ಬಿಡಿಸಿ ಹೇಳಬಹುದು. ಭೌಗೋಳಿಕವಾಗಿ ನರಹಳ್ಳಿಯವರ ಬೆಂಗಳೂರು ನನ್ನ ಧಾರವಾಡದಿಂದ ತುಂಬ ದೂರ. ಎರಡನೆಯದಾಗಿ ನಾನು ಅವರಿಗಿಂತ ಸ್ವಲ್ಪ ಹಿರಿಯ-ಹಿರಿಯ ತಲೆಮಾರಿನವ. ಇವುಗಳಿಗಿಂತ ಮುಖ್ಯವಾದುದು ನನ್ನ ಒಲವು ಸಂಶೋಧನೆ, ಅವರ ಒಲವು ವಿಮರ್ಶೆ. ಹೀಗಿದ್ದೂ ಕನ್ನಡ ಅಧ್ಯಾಪಕರು ಕನ್ನಡ ಅಭ್ಯಾಸಿಗಳೆಂಬ ಕಾರಣದಿಂದಾಗಿ ಸಹಜವಾಗಿಯೇ ನಮ್ಮಿಬ್ಬರ ಆಸಕ್ತಿಯ ರೇಖೆಗಳು ಕ್ವಚಿತ್ತಾಗಿಯಾದರೂ ಪರಸ್ಪರ ಸ್ಪರ್ಶಿಸುತ್ತ ಬಂದಿವೆ. ನರಹಳ್ಳಿಯವರ ಬರಹ-ಭಾಷಣವೂ ನನ್ನನ್ನು ಆಕರ್ಷಿಸಿವೆ.

ಸಾಮಾನ್ಯವಾಗಿ ಕನ್ನಡ ಅಧ್ಯಾಪಕರಿಗೆ ಆಧುನಿಕ ಸಾಹಿತ್ಯಕ್ಕಿಂತ ಪ್ರಾಚೀನ ಸಾಹಿತ್ಯದತ್ತ ಒಲವು ಹೆಚ್ಚು. ಈ ಒಲವು ಎರಡು ತೆರನಾಗಿದೆ. ಒಂದು ಪ್ರಾಚೀನ ಸಾಹಿತ್ಯದ ಶೋಧ-ಪರಿಷ್ಕರಣ-ಪ್ರಕಟಣೆಯ ಮೂಲಕ ಒಂದು ಸಾವಿರ ವರ್ಷಗಳ ಸಾಹಿತ್ಯನಿಧಿಯನ್ನು ಹೊಸ ತಲೆಮಾರಿನವರಿಗೆ ಉಳಿಸಿಕೊಡುವುದು. ಎರಡು ಹಳೆಯ ಸಾಹಿತ್ಯವನ್ನು ಕುರಿತು ವಿಪುಲ ಪ್ರಮಾಣದಲ್ಲಿ ರಸನಿಷ್ಠ ವಿಮರ್ಶೆಯನ್ನು ಸೃಷ್ಟಿಸುತ್ತ ಬಂದುದು. ಕನ್ನಡ ಅಧ್ಯಾಪಕರಾಗಿರುವ ನರಹಳ್ಳಿಯವರು ಈ ಎರಡೂ ದಾರಿಗಳನ್ನು ಕೈಬಿಟ್ಟು, ಪ್ರಾಚೀನ ಸಾಹಿತ್ಯವನ್ನು ಆಧುನಿಕ ವಿಮರ್ಶಾದೃಷ್ಟಿಯಿಂದ ಅನುಸಂಧಾನ ಮಾಡುತ್ತ ಬಂದಿದ್ದಾರೆ. ಹೀಗೆ, ಹಳೆಯ ಸಾಹಿತ್ಯವನ್ನು ಹೊಸದೃಷ್ಟಿಯಿಂದ ಮೌಲ್ಯಮಾಪನ ಮಾಡುವ ಅವಶ್ಯಕತೆಯನ್ನು ಅರಿತು, ಆ ದಿಸೆಯಲ್ಲಿ ನಡೆದುದು ಇವರ ವೈಶಿಷ್ಟ್ಯವಾಗಿದೆ.

ಆಧುನಿಕ ಸಾಹಿತ್ಯಕ್ಕೆ ಬಂದರೆ ನವೋದಯವು ಕನ್ನಡ ಅಧ್ಯಾಪಕರ (ಕುವೆಂಪು, ಬೇಂದ್ರೆ, ಶಿವರುದ್ರಪ್ಪ, ಕಣವಿ) ಕೊಡುಗೆಯಾಗಿದ್ದು, ನವ್ಯವು ಇಂಗ್ಲಿಷ್ ಅಧ್ಯಾಪಕರ(ಗೋಕಾಕ, ಅಡಿಗ, ಲಂಕೇಶ, ರಾಮಚಂದ್ರಶರ್ಮ) ಕೊಡುಗೆಯಾಗಿದೆ. ಸಾಮಾನ್ಯವಾಗಿ ಕನ್ನಡ ಅಧ್ಯಾಪಕರು ಪ್ರಾಚೀನ ಸಾಹಿತ್ಯದಂತೆ ನವೋದಯ ಸಾಹಿತ್ಯವನ್ನು ರಸನಿಷ್ಠವಾಗಿ ಅಭ್ಯಸಿಸುತ್ತ ಬಂದರೆ, ನರಹಳ್ಳಿಯವರು

ಅದನ್ನೂ ಆಧುನಿಕ ವಿಮರ್ಶಾದೃಷ್ಟಿಯಿಂದ ಅಭ್ಯಸಿಸುತ್ತ ಬಂದಿದ್ದಾರೆ. ಇನ್ನೂ ವಿಶೇಷವೆಂದರೆ ಈ ನವೋದಯದ ಮುಂದಿನ ಹಂತವಾಗಿರುವ ನವ್ಯಸಾಹಿತ್ಯದ ಅಭ್ಯಾಸಿಗಳೂ ಆಗಿದ್ದಾರೆ. 'ನವ್ಯತೆ' ಹೆಸರಿನ ಕೃತಿರಚನೆಯ ಮೂಲಕ ತಮ್ಮ ಈ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಹೀಗೆ ಪ್ರಾಚೀನ ಸಾಹಿತ್ಯ-ನವೋದಯ ಸಾಹಿತ್ಯ-ನವ್ಯ ಸಾಹಿತ್ಯಗಳ ವಿಮರ್ಶೆಯ ವಿಷಯವಾಗಿ ತಾಳುತ್ತ ಬಂದ ಹೊಸ ನಿಲುವನ್ನು ಇವರ ಬರವಣಿಗೆಯಲ್ಲಿ ಉದ್ದಕ್ಕೂ ಕಾಣಬಹುದಾಗಿದೆ.

ಇಂದು ವಿಮರ್ಶೆಯ ಭಾಷೆ ಕ್ಲಿಷ್ಟವಾಗುತ್ತಲಿದೆ. ಕನ್ನಡ ಭಾಷೆಯ ಜಾಯಮಾನ ಅರ್ಥಮಾಡಿಕೊಳ್ಳದುದು, ಇಂಗ್ಲಿಷ್ ವಾಕ್ಯಗಳನ್ನು ಶುಷ್ಕವಾಗಿ ಭಾವಿಸಿಕೊಳ್ಳುವುದು ಇದಕ್ಕೆ ಕಾರಣ. ಇಂಥ ಸಂದರ್ಭದಲ್ಲಿ ನರಹಳ್ಳಿಯವರು ಸಾಹಿತ್ಯ ವಿಮರ್ಶೆಗೆ ಹದವಾದ ಕನ್ನಡವನ್ನು ಬಳಸುತ್ತ ಬಂದಿದ್ದಾರೆ. ಇಂಗ್ಲಿಷ್ ಮೂಲದವರಿಗಿಂತ ಕನ್ನಡ ಮೂಲದವರ ವಿಮರ್ಶಾ ಭಾಷೆ ಭಿನ್ನವಾಗಿರುವುದಕ್ಕೆ ಇವರು ಸಾಕ್ಷಿಯಾಗಿದ್ದಾರೆ. ಇದರಿಂದಾಗಿ ತೀರ ಸಾಂಪ್ರದಾಯಿಕವೂ, ತೀರ ಆಧುನಿಕವೂ ಅಲ್ಲದ ಇವರ ಬರವಣಿಗೆ ಏಕಕಾಲಕ್ಕೆ ಸಹೃದಯ-ವಿಮರ್ಶಕ ಇಬ್ಬರಿಂದಲೂ ಓದಿಸಿಕೊಳ್ಳುತ್ತದೆ.

ಇವು ನರಹಳ್ಳಿಯವರ ಬರಹವನ್ನು ಕುರಿತು ಹೇಳಬೇಕಾದ ಮುಖ್ಯ ಮಾತುಗಳು. ಇದಕ್ಕೆ ಪೂರಕವೆಂಬಂತೆ ಅನುವಾದ ಸಾಹಿತ್ಯ, ಲಲಿತ ಪ್ರಬಂಧ ಸಾಹಿತ್ಯ ಕ್ಷೇತ್ರಗಳಿಗೂ ಇವರ ಕೊಡುಗೆ ಸಂದಿದೆ. ಇಲ್ಲಿಯೂ ಇವರ ಪಾರದರ್ಶಕ ಶೈಲಿಯನ್ನು ನಾವು ಗುರುತಿಸಬಹುದಾಗಿದೆ.

ನನಗೆ ನರಹಳ್ಳಿಯವರ ಬರಹದ ಜೊತೆಗೆ ಭಾಷಣವೂ ತುಂಬ ಇಷ್ಟ. ವೇದಿಕೆಯ ಮೇಲೆ ನಿಂತು ಸಮಯಸ್ಫೂರ್ತಿಯಿಂದ ಮಾತುಗಳನ್ನಾಡಿ ಸಭಿಕರಿಗೆ ಅನ್ಯಾಯ ಮಾಡುವ ವಿದ್ವಾಂಸರಿಗೆ ನಮ್ಮಲ್ಲಿ ಕೊರತೆಯಿಲ್ಲ. ಇದಕ್ಕೆ ಅಪವಾದವೆಂಬಂತೆ ನರಹಳ್ಳಿಯವರ ಭಾಷಣ ಅಭ್ಯಾಸಪೂರ್ಣವಾದುದು. ವಿಷಯಕ್ಕೆ ಅಗತ್ಯವಿರುವ ಹೋಂ ವರ್ಕ ಪೂರ್ಣಪ್ರಮಾಣದಲ್ಲಿ ಪೂರೈಸಿಕೊಂಡು, ಅದನ್ನು ಕ್ರಮವತ್ತಾಗಿ ಸಭಿಕರಿಗೆ ಸಂವಹನಗೊಳಿಸುವ ಇವರ ರೀತಿ ಅನನ್ಯವಾದುದು. ಅನವಶ್ಯ ಮಾತಾಗಲೀ, ಆಡಂಬರದ ಶೈಲಿಯಾಗಲೀ ಅಲ್ಲಿ ಸುಳಿಯುವುದಿಲ್ಲ. ಅದಕ್ಕೆ ಕಳಸವಿಟ್ಟಂತೆ ಇವರ ವಾಣಿಯಲ್ಲಿರುವ ಸ್ಪಷ್ಟತೆ, ಮಾರ್ದವತೆ, ಮಧ್ಯಮಗತಿ ಇತ್ಯಾದಿಗಳು ಕೇಳುಗರಿಗೆ ಮೋಡಿ ಮಾಡುತ್ತವೆ. ಹೀಗಾಗಿ ಇವರು ನಮ್ಮ ಮಧ್ಯೆ ಒಬ್ಬ ಉತ್ತಮ ವಾಗ್ಮಿಯಾಗಿ ಬೆಳೆದಿದ್ದಾರೆ.

ನರಹಳ್ಳಿಯವರ ವ್ಯಕ್ತಿತ್ವದ ಬಗ್ಗೆಯೂ ಒಂದೆರಡು ಮಾತು ಹೇಳದಿದ್ದರೆ ಈ ಲೇಖನ ಅಪೂರ್ಣವೆನಿಸುತ್ತದೆ. ವ್ಯಕ್ತಿಗಳಲ್ಲಿ ಎರಡು ಪ್ರಕಾರ. ಒಬ್ಬರದು ಸಂರಕ್ಷಣಾತ್ಮಕ ವ್ಯಕ್ತಿತ್ವ, ಇನ್ನೊಬ್ಬರದು ಆಕ್ರಮಣಕಾರಿ ವ್ಯಕ್ತಿತ್ವ, ಗೆದ್ದರೆ ಲಾಭ, ಸೋತರೆ ಕಳೆದುಕೊಳ್ಳುವುದು ಏನೂ ಇರುವುದಿಲ್ಲವಾಗಿ ಋಣಾತ್ಮಕ ವ್ಯಕ್ತಿಗಳು ಆಕ್ರಮಣಕಾರಿಯಾಗಿರುತ್ತಾರೆ. ಗೆದ್ದರೆ ಲಾಭ, ಸೋತರೆ ಇರುವುದೆಲ್ಲ ಕೈ ಬಿಡುವುದಾಗಿ ಧನಾತ್ಮಕ ವ್ಯಕ್ತಿಗಳು ಸಂರಕ್ಷಣಾತ್ಮಕವಾಗಿರುತ್ತಾರೆ. ಧನಾತ್ಮಕ ವ್ಯಕ್ತಿಯಾಗಿರುವ ಕಾರಣ ನರಹಳ್ಳಿಯವರದು ಸಂರಕ್ಷಣಾತ್ಮಕ ವ್ಯಕ್ತಿತ್ವವಾಗಿದೆ. ಈ ಸಮಾನ ಮನೋಧರ್ಮ ನಮ್ಮಿಬ್ಬರನ್ನು ಸಮೀಪ ತಂದಿದೆಯೆಂದು ಭಾವಿಸುತ್ತೇನೆ.

ಇತ್ತೀಚೆಗೆ ಈ ಸಾಮೀಪ್ಯ ಇನ್ನೂ ನಿಕಟವಾಗಿದೆ. ಇದಕ್ಕೆ ಕಾರಣ ಇಂದು ನಾವು ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾದುದು. ಈಗ ಹಲವು ಉದ್ದೇಶಗಳಿಗಾಗಿ ನಾವು ನರಹಳ್ಳಿಯವರನ್ನು

ಕನ್ನಡದ ಸಂಚಾಲಕರೆಂದು ಆಯ್ಕೆ ಮಾಡಿದೆವು. ಈ ಪ್ರಸಂಗದಲ್ಲಿ ಇವರು ಶ್ಲಾಘನೀಯ ವಿನಯವನ್ನು ಮೆರೆದರು. ಬಳಿಕ ಕನ್ನಡದ ಬಗ್ಗೆ, ಕನ್ನಡ ಸಾಹಿತಿಗಳ ಬಗ್ಗೆ ಇವರು ತಾಳುತ್ತ ಬಂದ ಸಾಹಿತ್ಯಿಕ ನ್ಯಾಯ, ಸಮಿತಿ ಸದಸ್ಯರೊಂದಿಗೆ ನಡೆದುಕೊಳ್ಳುವ ರೀತಿಗಳಿಂದಾಗಿ ನಾವಿಬ್ಬರು ಇನ್ನೂ ಹತ್ತಿರವಾಗಿದ್ದೇವೆ.

ಮೊದಲಿನಿಂದಲೂ ಸಾಹಿತ್ಯ ಅಕಾಡೆಮಿಯಲ್ಲಿ ಕನ್ನಡಿಗರು ತಮ್ಮ ವರ್ಚಸ್ಸನ್ನು ಉಳಿಸಿಕೊಂಡು, ಕನ್ನಡದ ಘನತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಇದನ್ನು ಮುಂದುವರಿಸುವ ಜವಾಬ್ದಾರಿ ಇಂದು ಇವರದಾಗಿದೆ. ಇತ್ತೀಚೆಗೆ ನಿರ್ದಿಷ್ಟ ಅವಧಿಯ ಉತ್ತಮ ಕೃತಿಗೆ ಪ್ರಶಸ್ತಿ ನೀಡುತ್ತ ಬಂದಿರುವುದರಿಂದ, ಜೀವಮಾನದುದ್ದಕ್ಕೂ ದುಡಿದು ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದವರಿಗೆ ಅನ್ಯಾಯವಾಗುತ್ತಲಿದೆ. ಕರ್ನಾಟದ ಎಲ್ಲ ಪ್ರದೇಶಗಳಿಗೆ ಸಾಹಿತ್ಯಿಕ ನ್ಯಾಯ ಒದಗಿಸುವುದು ಇಂದಿನ ಅಗತ್ಯವಾಗಿದೆ. ಅಕಾಡೆಮಿಯಲ್ಲಿ ಕನ್ನಡ ಸಾಹಿತ್ಯದ ಸಂಚಾಲಕರಾಗಿರುವ ಇವರು ಈ ಎಲ್ಲ ತಪ್ಪುಗಳನ್ನು ನಿವಾರಿಸುವರೆಂಬ ನಿರೀಕ್ಷೆ ಕನ್ನಡಿಗರದಾಗಿದೆ.

ಈಗ ನರಹಳ್ಳಿಯವರಿಗೆ ಅರುವತ್ತು ತುಂಬಿದ ಸಂಭ್ರಮ. ಹೀಗಿದ್ದೂ ಗಜ್ಜರಿಯ ಮೈಬಣ್ಣ, ಮುಗುಳ್ನಗೆಯ ಮುಖಮುದ್ರೆ, ಲವಲವಿಕೆಯ ವರ್ತನೆ ಇತ್ಯಾದಿಗಳಿಂದಾಗಿ ಇವರು ಈಗಲೂ ಯುವಕರಂತೆ ಕಾಣುತ್ತಾರೆ, ಯುವಕರಾಗಿದ್ದಾರೆ. ಕನ್ನಡಕ್ಕೆ ಒಳ್ಳೆಯದಾಗುವುದರ ಸಲುವಾಗಿ ಈ ಯುವ ವಯಸ್ಸು-ಯುವ ಮನಸ್ಸು ಇನ್ನೂ ಮುಂದುವರಿಯಲೆಂದು ಹಾರೈಸುತ್ತೇನೆ.

---

* ನೆಲದನಿ(ನರಹಳ್ಳಿ ಅಭಿನಂದನ ಗ್ರಂಥ) ಐಸಿರಿ ಪ್ರಕಾಶನ, ಬೆಂಗಳೂರು-೨೦೦೦.

ಆಕರ : ಮಾರ್ಗ ಸಂಪುಟ-೮

೧೨೦

ಅರ್ಧವಿರಾಮ

೨೦೧೩

ಶಾಲಿನಿ ನನ್ನ ವಿದ್ಯಾರ್ಥಿನಿ, ನನ್ನ ಸಹೋದ್ಯೋಗಿ ಇವರ ಸಾಂಸಾರಿಕ ಶೈಕ್ಷಣಿಕ ಜೀವನ ಪಯಣವನ್ನು ಸಮೀಪದಿಂದ ಗಮನಿಸುತ್ತ ಬಂದ ಆಪ್ತವರ್ಗದವರಲ್ಲಿ ನಾನೂ ಒಬ್ಬ. ನನಗೆ ಆತ್ಮೀಯರಾಗಿದ್ದ ಡಾ. ರಘುನಾಥ ಭಟ್ಟರು ಶಾಲಿನಿಯ ಬಾಳ ಸಂಗಾತಿ. ಅಪ್ಪಟ ಉತ್ತರ ಕನ್ನಡ ಜಿಲ್ಲೆಯ ಸ್ವರೂಪ, ಸ್ವಭಾವದ ಜೋಡಿಯಿದು .

ಈ ದಂಪತಿಗಳದು ಸಂರಕ್ಷಣಾತ್ಮಕ ವ್ಯಕ್ತಿತ್ವ. ತಾವಾಯಿತು. ತಮ್ಮ ಕೆಲಸವಾಯಿತು ಎಂಬಂತೆ ಬದುಕಿದ ಇವರದು ಇನ್ನೊಬ್ಬರ ನೆರಳಿಗೆ ಅಂಜುವ ಸ್ವಭಾವ. ಹೀಗಾಗಿ ಯಾವುದಕ್ಕೂ ರಿಸ್ಕ್ ತೆಗೆದುಕೊಳ್ಳದ ಈ ದಂಪತಿಗಳು ಆರು-ಮೂರರ ನಡುವೆ ನಡೆದುಬಂದರು. ಹೀಗೆ ಮಧ್ಯಮವರ್ಗದಲ್ಲಿ ಸಾಗಿದ್ದ ಈ ಬಾಳಬಂಡಿಯ ಒಂದು ಚಕ್ರ ಕಳಚಿತೆಂಬಂತೆ ಡಾ. ರಘುನಾಥ ಭಟ್ಟರು ಅಕಾಲಿಕ ನಿಧನಹೊಂದಿದರು. ಶಾಲಿನಿಯ ಸಂಸಾರದಲ್ಲಿ ಅರ್ಧವಿರಾಮದ ಅಧ್ಯಾಯ ಘಟಿಸಿತು. ಅಂದಿನಿಂದ ಶಾಲಿನಿಯ ಬದುಕಿನಲ್ಲಿ ಇಬ್ಬರು ಎಳೆಯ ಮಕ್ಕಳನ್ನು ಬೆಳೆಸುವ ಹೊಣೆಯೊಂದಿಗೆ ಹೊಸ ಅಧ್ಯಾಯ ಆರಂಭವಾಯಿತು. ಈಗ ತಾಯಿಗೆ ಮಕ್ಕಳು ಮಕ್ಕಳಿಗೆ ತಾಯಿ ಆಶ್ರಯವೆಂಬಂತೆ ಬದುಕು ಮುಂದುವರಿಯಿತು. ಸುದೈವವೆಂದರೆ ಇಬ್ಬರು ಮಕ್ಕಳು ಗುಣವಂತರು, ಪ್ರತಿಭಾವಂತರು. ಮಾದರಿಯ ತಾಯಿಯೆಂಬಂತೆ ಶಾಲಿನಿ ಮಕ್ಕಳನ್ನು ಸರಿಯಾಗಿ ಬೆಳೆಸಿ, ಮದುವೆ ಪೂರೈಸಿ, ಅವರಿಗೆ ಭದ್ರ ನೆಲೆಯನ್ನು ಒದಗಿಸಿದ್ದುದು ಇವಳ ಕರ್ತೃತ್ವಶಕ್ತಿಗೆ ನಿದರ್ಶನವೆಂದೇ ಹೇಳಬೇಕು.

ಶಾಲಿನಿ ಬುದ್ಧಿವಂತೆ. ಕುತೂಹಲ ಇವಳ ಸ್ಥಾಯೀಭಾವ. ಕಂಡ ಯಾವುದೇ ವಿಷಯವನ್ನು ಆಳವಾಗಿ ತಿಳಿದುಕೊಳ್ಳಬೇಕೆಂಬ ಹಂಬಲ ಇವಳದು. ಈ ಹಂಬಲ ಈಡೇರಿಸಿಕೊಳ್ಳಲು ಪುಸ್ತಕದ ಮೊರೆಹೋಗುವುದಕ್ಕೆ, ವಿದ್ವಾಂಸರೊಂದಿಗೆ ಚರ್ಚೆಗೆ ಇಳಿಯುವುದಕ್ಕೆ ಇವರಿಗೆ ತುಂಬಾ ಉತ್ಸಾಹ. ಸುಲಭವಾಗಿ ಸೋಲು ಒಪ್ಪಿಕೊಳ್ಳುವ ಜಾಯಮಾನದವರಲ್ಲವೆಂಬುದು ನನ್ನೊಂದಿಗೆ ನಡೆಸುತ್ತ

ಬಂದ ಚರ್ಚೆಗಳಿಂದ ತಿಳಿದುಕೊಂಡಿದ್ದೇನೆ. ಶಿಕ್ಷಕರಾದವರಿಗೆ ಇರಬೇಕಾದ ಇಂಥ ತೀವ್ರ ಹಸಿವು ಶ್ಲಾಘನೀಯವೆಂದೇ ಹೇಳಬೇಕು.

ಅದೇನೇ ಇದ್ದರೂ ಇವರ ಶೈಕ್ಷಣಿಕ ಜೀವನ ಹಲವು ದಾರಿಗಳನ್ನು ಬದಲಿಸುತ್ತ ಬಂದುದು ಒಂದು ವಿಶೇಷ. ವಿಜ್ಞಾನ ವಿಷಯದ ವಿದ್ಯಾರ್ಥಿಯಾಗಿದ್ದವಳು ಕಲಾ ವಿಷಯದ ಕನ್ನಡ ಎಂ.ಎ. ಓದಿದಳು. ಭಾಷಾಶಾಸ್ತ್ರದಲ್ಲಿ ಪಿಎಚ್. ಡಿ. ಪೂರೈಸಿದಳು. ಕನ್ನಡ ವಿಭಾಗದಲ್ಲಿ ಅಧ್ಯಾಪಿಕೆಯಾದಳು. ಬಳಿಕ ಕನ್ನಡ ವಿಭಾಗವನ್ನು ಅರ್ಧದಲ್ಲಿಯೇ ಬಿಟ್ಟು ಜಾನಪದ ವಿಭಾಗಕ್ಕೆ ಹೊರಳಿದಳು. ಇವೆಲ್ಲವನ್ನು ಗಮನಿಸಿದರೆ ವಿಧಿಯು ಇವರ ವಿಷಯದಲ್ಲಿ ಒಂದು ಬಾಗಿಲಿನಿಂದ ಒಳಗೆ ಕಳಿಸುವ, ಇನ್ನೊಂದು ಬಾಗಿಲಿನಿಂದ ಹೊರಗೆ ಕರೆತರುವ ಆಟವಾಡಿತೆನಿಸುತ್ತದೆ.

ಜಾನಪದ ವಿಭಾಗ ಪ್ರಾರಂಭವಾಗುವಾಗ ಶಾಲಿನಿಗೆ ಕನ್ನಡ ವಿಭಾಗ ಬಿಟ್ಟು, ಜಾನಪದ ವಿಭಾಗಕ್ಕೆ ಹೋಗುವ ಆಯ್ಕೆಯನ್ನು ನೀಡಲಾಯಿತು. ದೊಡ್ಡ ಸಂಸ್ಥೆಯಾದ ಕನ್ನಡ ವಿಭಾಗದಲ್ಲಿ ಬಡತಿ ಅವಕಾಶ ನಿಧಾನವೆಂಬ ಕಾರಣದಿಂದ ಸಣ್ಣ ವಿಭಾಗವಾದ ಜಾನಪದ ವಿಭಾಗಕ್ಕೆ ಬೋಧಕರಾಗಿ ಹೋದರೇನೋ ನಿಜ. ಆ ವಿಭಾಗವನ್ನು ವಿಸ್ತರಿಸಲು ಎತ್ತರಿಸಲು ಶಾಲಿನಿ ಮಾಡಿದ ಪ್ರಯತ್ನವನ್ನು ಯಾರೂ ಅಲ್ಲಗಳೆಯಲಾರರು. ವ್ಯಕ್ತಿ ನೆಲೆಯಲ್ಲಿ ಬೋಧನೆ ಬರವಣಿಗೆಯತ್ತ ಮೊದಲಿನಂತೆಯೆ ಗಮನ ಮುಂದುವರಿಸಿದರು. ಶಿಕ್ಷಕರ ಕೊರತೆಯಲ್ಲಿಯೂ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ ನೋಡಿಕೊಂಡರು. ಶೈಕ್ಷಣಿಕ ಸಭೆ-ಸಮ್ಮೇಳನಗಳನ್ನು ಸಂಘಟಿಸಿದರು. ಇದಕ್ಕೂ ಮಿಗಿಲಾಗಿ ಜಾನಪದ ವಸ್ತುಸಂಗ್ರಹಾಲಯವನ್ನು ಜನಮೆಚ್ಚುವಂತೆ ಬೆಳೆಸಿದರು.

ಶಾಲಿನಿ ಈಗ ಅಧ್ಯಾಪನ ವೃತ್ತಿಯಿಂದ ನಿವೃತ್ತಳಾಗುತ್ತಿದ್ದಾಳೆ. ಅವಳಿಗೆ ಇನ್ನು ತನ್ನ ಇಷ್ಟದಂತೆ ಕೆಲಸಮಾಡುವ ಸ್ವಾತಂತ್ರವಿರುತ್ತದೆ. ಜೊತೆಗೆ ಬಹುನೆಲೆಯಲ್ಲಿ ಸಂಶೋಧನೆ ಕೈಕೊಳ್ಳುವ ಸಿದ್ಧತೆ ಸಾಮರ್ಥ್ಯವೂ ಅವಳಲ್ಲಿವೆ. ಸಂಶೋಧನ ಕ್ಷೇತ್ರದಲ್ಲಿ ಮಹತ್ವವಾದ ಸಾಧನೆಯನ್ನು ಮಾಡಬೇಕೆಂಬ ಅವಳ ಹಂಬಲ ವಿಶ್ರಾಂತ ಜೀವನ ಘಟ್ಟದಲ್ಲಿ ಕೈಗೂಡಲಿ ಎಂದು ಹಾರೈಸುತ್ತೇನೆ.

---

* ದೇಶೀ ಸಂಪದ(ಶಾಲಿನಿ ರಘುನಾಥಭಟ್ಟ ಅಭಿನಂದನ ಗ್ರಂಥ), ಧಾರವಾಡ-೨೦೧೩.

ಆಕರ : ಮಾರ್ಗ ಸಂಪುಟ-೮

೧೨೧

ಗೆಳೆತನಕ್ಕೆ ಇನ್ನೊಂದು ಹೆಸರು

೨೦೧೩

ಬಹಳ ವರ್ಷಗಳ ಹಿಂದಿನ ಘಟನೆ ತಾಳ್ತಜೆ ವಸಂತಕುಮಾರ ಅವರ ಮೊದಲ ಭೇಟಿ ಸಂಭವಿಸಿದುದು ಮಂಗಳೂರಿನ ಒಂದು ವಿಚಾರ ಸಂಕಿರಣದಲ್ಲಿ. ನೀಳದೇಹ, ಕೋಲು ಮುಖ, ನೇರ ಮೂಗು, ನಿಷ್ಕಲ್ಮಷ ನಗು. ಈ ನಿಲವಿನ ಇವರನ್ನು ಕಾಣುತ್ತಲೇ ಯುವ ವಯಸ್ಸಿನಲ್ಲಿ ಶಂಬಾ ಜೋಶಿ ಅವರು ಹೀಗೆಯೇ ಇದ್ದಿರಬಹುದೇ ಎನಿಸಿತು. ಅಂದು ಸಂಜೆಯೊಳಗಾಗಿ ಯಾವುದೋ ಒಂದು ಸೆಳೆತ ನಮ್ಮಿಬ್ಬರನ್ನು ಹತ್ತಿರ ತಂದಿತು. ಎರಡು ದಿನ ಕಳೆಯುವಲ್ಲಿ ಅವರ ಸ್ವಚ್ಛ ಮನಸ್ಸು, ವಿಶಾಲ ಹೃದಯ, ಆಪ್ತಮಾತು ಇತ್ಯಾದಿಗಳೇ ನಮ್ಮಿಬ್ಬರನ್ನು ಇನ್ನೂ ಹತ್ತಿರ ತಂದವು. ಆಮೇಲೆ ಮಂಗಳೂರು ವಿಶ್ವವಿದ್ಯಾಲಯಕ್ಕೆ ಹೋದಾಗಲೆಲ್ಲ ಜರುಗುತ್ತಲಿದ್ದ ಭೇಟ್ಟಿಯಿಂದಾಗಿ 'ದೇಹ ಎರಡು ಜೀವ ಒಂದು' ಎಂಬ ಭಾವ ಬೆಳೆಯಿತು.

ಮುಂದೆ ಕೆಲವೇ ವರ್ಷಗಳಲ್ಲಿ ತಾಳ್ತಜೆಯವರು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಡಾ. ಹಾವನೂರ ಅವರ ಸ್ಥಾನಕ್ಕೆ ಮುಖ್ಯಸ್ಥರಾಗಿ ಹೋದರು. ಗ್ರಂಥಾಲಯ ಮೂಲದಿಂದ ಕನ್ನಡಕ್ಕೆ ಅಭ್ಯಾಸಿಯಾಗಿದ್ದ ಡಾ. ಶ್ರೀನಿವಾಸ ಹಾವನೂರ ಅವರಿಗೆ, ಕನ್ನಡ ಅಧ್ಯಯನ ಮೂಲದವರಾಗಿದ್ದ ಮತ್ತು ಅಷ್ಟೇ ಸಾಹಿತ್ಯ ಚರಿತ್ರೆ ಸಂಸ್ಕೃತಿಗಳ ಗಣಿಯಾಗಿದ್ದ ಶ್ರೀ ತಾಳ್ತಜೆಯವರು ವಾರಸುದಾರರಾಗಿ ಬರುವಲ್ಲಿ ವಿಭಾಗಕ್ಕೆ ಮತ್ತೊಂದು ಸ್ವರೂಪ ಪ್ರಾಪ್ತವಾಯಿತು. ಅದು ಅಗಲದ ಜೊತೆ ಆಳಕ್ಕೆ ಹೊರಳತೊಡಗಿತು.

ಕರ್ನಾಟಕದ ಒಳಗಿನ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರ ಅರ್ಹತೆಗಿಂತ ಭಿನ್ನರೂಪದ ಅರ್ಹತೆ ಹೊರನಾಡಿನ ಕನ್ನಡ ಅಧ್ಯಾಪಕರಿಗೆ ಅವಶ್ಯ. ಅದರಲ್ಲಿಯೆ ಮುಂಬಯಿಯಂಥ ಬಹುಸಂಸ್ಕೃತಿಯ ನಗರದಲ್ಲಿ ಅವರು ಬೇರೆ ರೀತಿಯಿಂದ ದುಡಿಯಬೇಕಾಗುತ್ತದೆ. ತಾಳ್ತಜೆಯವರಲ್ಲಿ ಈ ಎಲ್ಲ ಶಕ್ತಿ ಆಸ್ತಕಿಗಳು ಇದ್ದ ಕಾರಣ ಈ ವಿಭಾಗಕ್ಕೆ ವಿದ್ವತ್ತಿನೊಂದಿಗೆ ಜನಪ್ರಿಯತೆ ಇತ್ಯಾದಿ ವಿಸ್ತಾರಗಳನ್ನು ಅವರು ಕಲ್ಪಿಸಿದರು. ಸ್ಥಳೀಯ ಕಾಲೇಜುಗಳ ಕನ್ನಡ ಅಧ್ಯಾಪಕರ ಸಹಕಾರದಿಂದ ಕನ್ನಡ ವಿಭಾಗ ಗಟ್ಟಿಗೊಳ್ಳುತ್ತಲೇ ಸ್ಥಳೀಯ ಕನ್ನಡಿಗರ ಕನ್ನಡ ಸಂಘಟನೆಗಳ ಸಹಕಾರದಿಂದ ಆ ವಿಭಾಗ ಮುಂಬಯಿನಗರ ಭಾಗವಾಗಿ ಬೆಳೆಯಿತು. ಅಂದರೆ ಅದು ಕೇವಲ ವಿದ್ಯಾರ್ಥಿಗಳ ಅಧ್ಯಯನ ಕೇಂದ್ರವಾಗಿ ಉಳಿಯದೆ ಅಲ್ಲಿಯ ಸಮಸ್ತ ಕನ್ನಡಿಗರ ವೇದಿಕೆಯಾಗಿ ಪರಿಣಮಿಸಿತು.

ವಿಭಾಗ ಪರಕೀಯವಾಗಿ, ದ್ವೈತವಾಗಿ ಉಳಿಯಬಾರದೆಂದು ಕರ್ನಾಟಕದ ವಿದ್ವಾಂಸರನ್ನು ಹೆಚ್ಚು ಸಲ ಹೆಚ್ಚು ಸಂಖ್ಯೆಯಲ್ಲಿ ಆಮಂತ್ರಿಸಿ ವಿದ್ಯಾರ್ಥಿ ವಿದ್ವಾಂಸರೊಂದಿಗೆ ಸಭೆ ಸಮಾರಂಭ ಜರುಗಿಸುವ ಮೂಲಕ ಹೊರಗಿನ ಸಂಬಂಧಗಳನ್ನು ಇನ್ನೂ ಗಟ್ಟಿಗೊಳಿಸಿದರು. ಕ್ರಮೇಣ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಾತ್ರಾತ್ಮಕವಾಗಿ ಅಧ್ಯಯನದ ಶಿಸ್ತನ್ನು ಗುಣಾತ್ಮಕವಾಗಿ ಬೆಳೆಸಿದರು.

ಹೀಗೆ ವಿಭಾಗವನ್ನು ಸಂಘಟಿಸುವ ಸಂವರ್ಧಿಸುವುದರಲ್ಲಿ ತೊಡಗಿದರೂ ವೈಯಕ್ತಿಕ ವಿದ್ವತ್ತಿನ ಕೆಲಸವನ್ನು ಅವರು ಕಡೆಗಣಿಸಲಿಲ್ಲ. ಈ ಅವಧಿಯಲ್ಲಿಯೇ ಅವರು ಕರ್ನಾಟಕದಲ್ಲಿ ಬೌದ್ಧಧರ್ಮ ವಿಷಯವನ್ನು ಕುರಿತು ಪಿಎಚ್.ಡಿ. ಅಧ್ಯಯನ ನಡೆಸಿ, ಅಪೂರ್ವ ಕೃತಿ ರಚಿಸಿದರು. ಈವರೆಗೆ ಕನ್ನಡದಲ್ಲಿ 'ಬೌದ್ಧಧರ್ಮ ವನ್ನು ಕುರಿತು ಪ್ರಕಟವಾದ ಒಂದು ವಿಷಯ ಹೊರಗುಳಿಯದಂತೆ ಓದಿ ಸ್ವೀಕೃತ-ಅಸ್ವೀಕೃತಗಳನ್ನು ನಿರ್ಣಯಿಸಿ ತಾವು ಶೋಧಿಸಿದ್ದ ಹೊಸ ಅಂಶಗಳನ್ನು ಸೇರಿಸಿ ರೂಪಿಸಿದ ಈ ಕೃತಿ ಕನ್ನಡದ ಕೆಲವೇ ಪ್ರಮುಖ ಪಿಎಚ್.ಡಿ. ಪ್ರಬಂಧಗಳ ಸಾಲಿನಲ್ಲಿ ನಿಲ್ಲುತ್ತದೆ. ಈ ಕಾಲದಲ್ಲಿ ಯಾರೂ ಇದನ್ನು ಮೀರಿ ಬರೆಯಲಾರರು ಎಂಬ ಖ್ಯಾತಿಯನ್ನು ಇದು ಈಗಲೂ ಉಳಿಸಿಕೊಂಡಿದೆ. ಈ ಸಾಧನೆಯ ಇವರು ಹಲವು ಸಂಶೋಧನ ಶಾಸ್ತ್ರ ಕೃತಿಯನ್ನು ವಿಮರ್ಶಾಕೃತಿಗಳನ್ನು ಬರೆಯುವ ಮೂಲಕ ತಮಗೆ ಹಳೆಯ ಸಾಹಿತ್ಯದಷ್ಟೇ ಹೊಸ ಸಾಹಿತ್ಯದಲ್ಲಿಯೂ ಶ್ರಮವಿದೆಯೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಇದಕ್ಕೆ ಪೂರಕವಾಗಿ ತಾಳ್ತಜೆ ಒಬ್ಬ ಸಮರ್ಥ ಶೈಕ್ಷಣಿಕ ಆಡಳಿತಗಾರರೆಂಬುದನ್ನು ನಾನು ಗಮನಿಸಿದ್ದೇನೆ. ಹೀಗಿದ್ದೂ ಕರ್ನಾಟಕದಲ್ಲಿ ಇವರಿಗೆ ಸೂಕ್ತ ಹುದ್ದೆ(ಹಂಪಿ ವಿಶ್ವವಿದ್ಯಾಲಯದ ಕುಲಪತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಇತ್ಯಾದಿ) ಪ್ರಾಪ್ತವಾಗದುದು ದುರ್ದೈವದ ಸಂಗತಿ. ಹೀಗೆ ಇವರ ಸಾಮರ್ಥ್ಯಕ್ಕೆ ತಕ್ಕ ಬಹುಮಾನ ಪ್ರಶಸ್ತಿ ಹುದ್ದೆ ಮೊದಲಾದ ಅವಕಾಶಗಳು ಲಭ್ಯವಾಗದುದು ನನ್ನಂತೆ ಅನೇಕರಿಗೆ ನೋವನ್ನುಂಟು ಮಾಡಿದೆ. ತಾಳ್ತಜೆಯವರು ಮಾತ್ರ ಈ ಬಗ್ಗೆ ಸ್ಥಿತಪ್ರಜ್ಞರಾಗಿ ಬಂದಿದ್ದಾರೆ.

ಹೀಗೆ ಸಾರ್ವಜನಿಕ ಜೀವನದಿಂದ ಅನ್ಯಾಯಕ್ಕೆ ಗುರಿಯಾದ ಅವರು ದೇವರಿಂದಲೂ ಅನ್ಯಾಯಕ್ಕೆ ಗುರಿಯಾದರು. ಪ್ರೀತಿಯ ಹೆಂಡತಿ ಮಣಿಮಾಲಿನಿಯನ್ನು ನಡುವಯಸ್ಸಿನಲ್ಲಿಯೇ ಕಳೆದುಕೊಂಡರು. ವ್ಯಾಪಕ ಓದು ತರ್ಕಬದ್ಧ ಮಾತುಗಾರಿಕೆ, ವಿಮರ್ಶನಶೀಲ ಬರೆವಣಿಗೆಯನ್ನು ರೂಪಿಸಿಕೊಂಡಿದ್ದ ಮಣಿಮಾಲಿನಿಯಲ್ಲಿ ನಾವು ಹೆಚ್ಚಿನದಾಗಿ ಕಂಡುದು ಆತ್ಮೀಯತೆ. ಅನ್ಯಾಯದೊಂದಿಗೆ ಒಪ್ಪಂದ ಮಾಡಿಕೊಳ್ಳದ ವಾದ ಸಾಮರ್ಥ್ಯ, ನ್ಯಾಯನಿಷ್ಠೆ, ಪ್ರೀತಿ ಅವರ ಧೋರಣೆಯಾಗಿದ್ದಿತು. ಇಂಥ ಆತ್ಮಸಂಗಾತಿಯನ್ನು ಆಗಲಿ ಇಂದು ತಮ್ಮ ಹಳ್ಳಿಯಲ್ಲಿ ನಿವೃತ್ತ ವಸಂತಕುಮಾರ ಹೇಗೆ ಕಾಲ ಕಳೆಯುವರೊ ಎಂಬುದನ್ನು ನೆನದಾಗಲೆಲ್ಲ ನನಗೆ ಕಳವಳವಾಗುತ್ತದೆ, ಕಸಿವಿಸಿಯೆನಿಸುತ್ತದೆ.

---

* ಅಯನ(ತಾಳ್ತಜೆ ವಸಂತಕುಮಾರ ಅಭಿನಂದನ ಗ್ರಂಥ), ಪುತ್ತೂರು-೨೦೧೩.

ಆಕರ : ಮಾರ್ಗ ಸಂಪುಟ-೮

೧೨೨

ಸೃಜನಶೀಲ ವ್ಯಕ್ತಿತ್ವ

೨೦೧೩

ವ್ಯಕ್ತಿಗಳಲ್ಲಿ ಬಹುಜನರು ತಮ್ಮ ವೃತ್ತಿಗೆ ಸೀಮಿತವಾಗಿದ್ದರೆ ಕೆಲವರು ಮಾತ್ರ ಹೆಚ್ಚಿನದಾಗಿ ಪರಿಸರಕ್ಕೆ ಸ್ಪಂದಿಸುತ್ತಾರೆ. ಇಂಥವರದು ವ್ಯಕ್ತಿನಿಷ್ಠ ಮತ್ತು ಸಮಾಜನಿಷ್ಠ ವ್ಯಕ್ತಿತ್ವವಾಗಿರುತ್ತದೆ. ಇದಕ್ಕೆ ನಿದರ್ಶನವೆನಿಸಿದ್ದಾರೆ, ಚಿ. ಸೋಮಶೇಖರ.

ಇವರು ಮೂಲತಃ ಸರಕಾರದ ವರಿಷ್ಠ ಅಧಿಕಾರಿ. ಬೇರೆ ಬೇರೆ ಹುದ್ದೆಗಳ ನಿರ್ವಹಣೆ ಇವರಿಗೆ ಅನಿವಾರ್ಯ. ಉಸಿರಾಟಕ್ಕೂ ಬಿಡುವಿಲ್ಲದ ಹೊಣೆಗಳಿವು. ಸ್ವಲ್ಪ ಹೆಜ್ಜೆ ತಪ್ಪಿದರೆ ಇಲ್ಲಿ ಪ್ರಪಾತವೇ ಗತಿ. ಇಂಥ ಅಪಾಯಗಳ ನಡುವೆಯೂ ಸೋಮಶೇಖರ ಅವರು ಸಮಾಜವಾಗಿ ಹಿಗ್ಗುತ್ತ, ಅಲ್ಲಲ್ಲ ತಮ್ಮ ಹೆಚ್ಚುವರಿ ಶ್ರಮ-ಸಮಯಗಳನ್ನು ವಿನಿಯೋಗಿಸುತ್ತ ಬಂದಿದ್ದಾರೆ.

ಸಮಾಜವೆನ್ನುವುದು ಬಹುಮುಖೀ ಸಂಘಟನೆ. ಇದರ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ, ಧಾರ್ಮಿಕ ಇತ್ಯಾದಿ ಕ್ಷೇತ್ರಗಳ ಪ್ರಸಾರ ಪ್ರಸಿದ್ಧಿಗಾಗಿ ಸೋಮಶೇಖರ ಉದ್ದಕ್ಕೂ ದುಡಿಯುತ್ತ ಬಂದುದು ಒಂದು ವಿಶೇಷ. ಇಂಥ ಕೆಲಸಗಳ ಯಶಸ್ಸು ಸಮರ್ಥ ಸಂಘಟಕರನ್ನು ಬಯಸುತ್ತದೆ. ಸೋಮಶೇಖರ ಅವರಲ್ಲಿ ಈ ಸಂಘಟನಾಶಕ್ತಿ ದೈವದತ್ತವಾದುದು. ಹೀಗಾಗಿ ಯಾವುದೇ ಕಾರ್ಯಕ್ರಮವಿರಲಿ ಎಷ್ಟೇ ದೊಡ್ಡ ಸಮಾರಂಭವಿರಲಿ ಅದನ್ನು ಇವರು ಸೃಜನಶೀಲವಾಗಿ ನಿರ್ವಹಿಸುತ್ತಾರೆ.

ಸೋಮಶೇಖರ ಅವರಲ್ಲಿ ಸ್ನೇಹಿತರನ್ನು ಆಕರ್ಷಿಸುವ ಚುಂಬಕ ಶಕ್ತಿಯಿದೆ. ಇವರು ನಿಂತರೆ ಸುತ್ತಲು ಜನ ನಿಲ್ಲುತ್ತಾರೆ. ನಡೆದರೆ ಅವರೊಂದಿಗೆ ನಡೆಯುತ್ತಾರೆ. ಈ ಬಗೆಯ ಸಾಂಘಿಕ ವ್ಯಕ್ತಿತ್ವದಿಂದಾಗಿ ಇವರು ಕೈಗೆತ್ತಿಕೊಂಡ ಕಾರ್ಯ-ಕಾರ್ಯಕ್ರಮಗಳು ಯಶಸ್ಸನ್ನು ಸಾಧಿಸುತ್ತವೆ.

ಗಮನಿಸಬಹುದಾದ ಇನ್ನೊಂದು ಅಂಶವೆಂದರೆ, ಸೋಮಶೇಖರ ಅವರು ವಾಗ್ಮಿಯಾಗಿರುವುದು. ವಿಷಯದ ಆಯ್ಕೆ, ಅದರ ಅಭಿವ್ಯಕ್ತಿಗೆ ಅಗತ್ಯವಿರುವ ಶ್ರೀಮಂತ ಶಬ್ದಭಾಂಡಾರ, ತರ್ಕಬದ್ಧ ಸಂವಹನಗಳಿಂದಾಗಿ ದೊಡ್ಡ ಸಮುದಾಯವನ್ನು ಮಾತಿನ ಮೋಡಿಯಲ್ಲಿ ಇವರು ಸೆರೆ ಹಿಡಿಯುತ್ತಾರೆ. ಇದನ್ನು ಗುರುತಿಸಿ ತಾಲೂಕು ಜಿಲ್ಲೆಯ ಸಾಹಿತ್ಯಸಮ್ಮೇಳನಗಳು, ದೇಶ-ವಿದೇಶಗಳ ಸಮ್ಮೇಲನ ಇವರನ್ನು ಆಮಂತ್ರಿಸಿವೆ.

ಇದಕ್ಕೆ ಪೂರಕವೆಂಬಂತೆ ಬರವಣಿಗೆಯನ್ನೂ ಇವರು ಕೈವರ್ತಿಸಿಕೊಂಡಿದ್ದಾರೆ. ಕನ್ನಡದಲ್ಲಿ ಆಡಳಿತಗಾರರು ಸೃಜನಶೀಲ ಸಾಹಿತಿಗಳಾಗಿರುವ ಒಂದು ಸುದೀರ್ಘ ಪರಂಪರೆಯಿದೆ. ಇವರಲ್ಲಿ ಕೆಲವರು ತಮ್ಮ ವೃತ್ತಿಯ ಅಭ್ಯಾಸ-ಅನುಭವಗಳನ್ನು ಸೃಜನಸಾಹಿತ್ಯಕ್ಕೆ ಒಗ್ಗಿಸಿದ್ದರೆ, ಇನ್ನು ಕೆಲವರು ಮಿಕ್ಕವರಂತೆ ಕಥೆ, ಕಾದಂಬರಿ ಪ್ರಬಂಧಗಳನ್ನು ಸೃಷ್ಟಿಸಿದ್ದಾರೆ. ಇವರಲ್ಲಿ ಚಿ. ಸೋಮಶೇಖರ ಅವರ ಆಸಕ್ತಿ ಪ್ರಬಂಧಕ್ಕೆ ಮೀಸಲಾಗಿದ್ದು, ಅದರ ಫಲವಾಗಿ ಚಿಂತನ ಚಿಲುಮೆ, ಚಿಂತನ ಕಿರಣ, ಚಿಂತನ ಚೇತನ ಕೃತಿಗಳು ಬೆಳಕುಕಂಡಿವೆ. ಶರಣಸಾಹಿತ್ಯ ಇವರ ಅಂಗ-ಪ್ರಾಣ, ಭಾವ. ಪಿಎಚ್.ಡಿ. ಪದವಿಗಾಗಿ "ವಚನಗಳಲ್ಲಿ ಸಾಮಾಜಿಕ ಚಿಂತನೆ" ಹೆಸರಿನ ಮಹಾಪ್ರಬಂಧ ಬರೆದುದು ಇದಕ್ಕೆ ನಿದರ್ಶನವೆನಿಸಿದೆ.

ಈ ಎಲ್ಲ ರೀತಿಯ ಸೃಜನಶೀಲ ವ್ಯಕ್ತಿತ್ವವನ್ನು ಗುರುತಿಸಿ ಸಮಾಜ ಸೋಮಶೇಖರ ಅವರನ್ನು ಅನೇಕಸಲ ಗೌರವಿಸಿದೆ. ಇವರಿಗೆ ಇಂಥ ಗೌರವಗಳು ಇನ್ನೂ ವರ್ಧಿಸಲೆಂದು ಹಾರೈಸುತ್ತೇನೆ.

---

* ಸೋಮಶೇಖರ(ಚಿ. ಸೋಮಶೇಖರ ಅಭಿನಂದನ ಗ್ರಂಥ), ಅಭಿನಂದನ ಸಮಿತಿ, ಬೆಂಗಳೂರು-೨೦೧೩.

ಆಕರ : ಮಾರ್ಗ ಸಂಪುಟ-೮

■■

೧೨೩

ಬಾದಾಮಿ ಚಾಲುಕ್ಯರ ಅಭ್ಯಾಸಿ

೨೦೧೪

ಬಾದಾಮಿ ಎಂದಾಕ್ಷಣ ಇತಿಹಾಸ ವಿದ್ವಾಂಸರಿಗೆ ತಕ್ಷಣ ನೆನಪಾಗುವ ಹೆಸರು ಡಾ. ಶೀಲಾಕಾಂತ ಪತ್ತಾರ. ಇವರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಲ್ಲ; ಮಹಾವಿದ್ಯಾಲಯದ ಪ್ರಾಧ್ಯಾಪಕರೂ ಅಲ್ಲ; ಬಾದಾಮಿಯ ಒಂದು ಸಾಮಾನ್ಯ ಜ್ಯೂನಿಯರ್ ಕಾಲೇಜಿನ ಅಧ್ಯಾಪಕ. ಹೀಗಿದ್ದೂ ಇವರು ರಾಜ್ಯದ ವಿದ್ವಾಂಸರ ಗಮನ ಸೆಳೆಯಲು ಕಾರಣ ಬಾದಾಮಿ ಚಾಲುಕ್ಯರ ಬಗೆಗೆ ಮಾಡಿದ ಅಭ್ಯಾಸ; ಕೈಕೊಂಡ ಕ್ಷೇತ್ರಕಾರ್ಯ; ಪೂರೈಸಿದ ಬರವಣಿಗೆ.

ಕರ್ನಾಟಕದಲ್ಲಿ ಹತ್ತಾರು ರಾಜಮನೆತನಗಳಿವೆ. ನೂರಾರು ಪಾಳೆಯ ಪಟ್ಟುಗಳಿವೆ. ಇವರು ಆಳಿದ ಸ್ಥಳದಲ್ಲಿ ಅಪಾರ ಇತಿಹಾಸ ಸಾಮಗ್ರಿಯಿದೆ. ಅಲ್ಲಲ್ಲಿಯ ಅಧ್ಯಾಪಕರು ಶೀಲಾಕಾಂತ ಅವರಂತೆ ಸ್ಥಳೀಯ ಅಧ್ಯಯನ ಕೈಕೊಂಡರೆ ಇಡೀ ಕರ್ನಾಟಕದ ಇತಿಹಾಸ ಬಯಲಿಗೆ ಬರುತ್ತದೆ.

ಒಂದರ್ಥದಲ್ಲಿ ಶೀಲಾಕಾಂತ ಒಬ್ಬ ಹವ್ಯಾಸಿ ಇತಿಹಾಸಕಾರ. ತನ್ನ ಪರಿಸರದ ಚರಿತ್ರೆಯ ಬಗ್ಗೆ ಎಳೆಯ ವಯಸ್ಸಿನಲ್ಲಿಯೇ ಆಕರ್ಷಿತರಾಗಿ, ಇವರು ಅದನ್ನು ಎಳೆಎಳೆಯಾಗಿ ಸಂಗ್ರಹಿಸುತ್ತ ಬಂದರು. ಇದಕ್ಕೆ ಪೂರಕವಾದ ಸಾಹಿತ್ಯವನ್ನು ಓದುತ್ತ, ತಾವು ಗಮನಿಸಿದ ಹೊಸ ವಿಷಯವನ್ನು ಕುರಿತು ಪ್ರಬಂಧ ಬರೆಯುತ್ತ, ವಿಚಾರ ಸಂಕಿರಣಗಳಲ್ಲಿ ಅದನ್ನು ಮಂಡಿಸುತ್ತ, ಪ್ರಕಟಿಸುತ್ತ ಬಂದರು. ಹೀಗಾಗಿ ಇವರ ತಲೆಮಾರಿನ ಸಂಶೋಧಕರ ಸಾಲಿನಲ್ಲಿ ಶ್ರೀ ಪತ್ತಾರ ಅವರಿಗೆ ವಿಶಿಷ್ಟ ಸ್ಥಾನವಿದೆ.

ಸಂಶೋಧಕನಿಗೆ ಅವಶ್ಯವಿದ್ದುದು ನಿರಂತರ ಅಧ್ಯಯನ, ಶೋಧ, ಬರವಣಿಗೆ, ವಿದ್ವಾಂಸರ ಒಡನಾಟ. ಈ ಗುಣಗಳಿಂದಾಗಿ ಶೀಲಾಕಾಂತ ಅವರು ಬೆಲೆಯುಳ್ಳ ಸಂಗತಿಗಳನ್ನು ತರುತ್ತಲಿದ್ದಾರೆ. ರಾಜ್ಯ, ರಾಷ್ಟ್ರ, ಅಂತಾರಾಷ್ಟ್ರೀಯ ವಿದ್ವಾಂಸರ ಒಡನಾಟ ವರ್ಧಿಸಿಕೊಳ್ಳುತ್ತ ಬಂದಿದ್ದಾರೆ.

ಬಾದಾಮಿ, ಐಹೊಳೆ, ಪಟ್ಟದಕಲ್ಲು, ನಂದಿಕೇಶ್ವರ ಮಹಾಕೂಟಗಳನ್ನು ಕುರಿತು ಈ ವರೆಗೆ ಎಷ್ಟೇ ಅಭ್ಯಾಸ ಮಾಡಿದ್ದರೂ ಅದು ತೀರದ ಗಣಿ. ಅಲ್ಲಿಯ ಗುಡ್ಡ-ಬೆಟ್ಟ ದರಿ-ಕೊಳ್ಳ ಇತ್ಯಾದಿಗಳಲ್ಲಿ

ಆಕರ ಸಾಮಾಗ್ರಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದೆ; ವಾಸ್ತುಗಳ ಒಡಲಲ್ಲಿ ಅಡಗಿ ಕುಳಿತಿದೆ. ಈ ಆಕರಗಳ ಮೈ-ಮಗ್ಗಲುಗಳನ್ನು ಹೊರಳಿಸುತ್ತ, ಹುಡುಕುತ್ತ ಇವರು ಬೆಳೆದಿದ್ದಾರೆ. ಈ ಕಾರ್ಯಕ್ಕಾಗಿ ದಿನ, ತಿಂಗಳು, ವರ್ಷ ಸಂಚರಿಸಿ ಅದೆಲ್ಲವನ್ನು ಗುರುತುಮಾಡಿಕೊಂಡಿದ್ದಾರೆ. ಹೀಗಾಗಿ ಯಾವ ಸಾಮಗ್ರಿ ಯಾವ ದಿಕ್ಕಿನಲ್ಲಿದೆ. ಯಾವ ಮೂಲೆಯಲ್ಲಿದೆ ಎಂಬುದನ್ನು ತುದಿ ಬೆರಳಿನ ಮೇಲೆ ಎಣಿಸಿ ಹೇಳುವ ತಜ್ಞತೆ ಇವರದಾಗಿದೆ.

ಇಂಥ ದುಡಿಮೆ ಹಿನ್ನೆಲೆ ಸಹಜವಾಗಿಯೇ ಬರವಣಿಗೆಯನ್ನು ಪ್ರಚೋದಿಸುತ್ತದೆ. ಶೀಲಾಕಾಂತ ಅವರು ಈ ಕಾರ್ಯವನ್ನು ವಿಪುಲ ಪ್ರಮಾಣದಲ್ಲಿ ಮಾಡಿದ್ದಾರೆ. ಪ್ರಬಂಧಗಳಿಂದ ಡಿ.ಲಿಟ್. ಪ್ರಬಂಧದ ವರೆಗೆ ನೂರಾರು ಲೇಖನಗಳನ್ನು ಹತ್ತಾರು ಗ್ರಂಥಗಳನ್ನು ಬರೆದ ಹಿರಿಮೆ ಇವರದಾಗಿದೆ. ಇವೆಲ್ಲ ಕೇವಲ ಬರವಣಿಗೆಗಾಗಿ ಮಾಡಿದ ಬರವಣಿಗೆಯಲ್ಲ; ಇತಿಹಾಸ ರಚನೆ ಮರುರಚನೆಗಾಗಿ ಮಾಡಿದ ಬರವಣಿಗೆಯಾಗಿವೆ. ವಿಷಯದ ಆಯ್ಕೆ, ಸಾಮಗ್ರಿಯ ಸಂಗ್ರಹ, ವ್ಯವಸ್ಥಿತ ವರ್ಗೀಕರಣ ಪ್ರಬಂಧದ ವಿನ್ಯಾಸ, ಸರಿಯಾದ ಅಭಿವ್ಯಕ್ತಿ ಇತ್ಯಾದಿ ಗುಣ ಲಕ್ಷಣಗಳಿಂದಾಗಿ ಪತ್ತಾರ ಅವರ ಬರವಣಿಗೆ ವಿದ್ವಾಂಸರನ್ನು ಆಕರ್ಷಿಸಿದೆ.

ಈ ಶೋಧಕಾರ್ಯ-ಸಾಹಿತ್ಯ ನಿರ್ಮಿತಿಯೆಂಬ ಕ್ರಿಯಾಶೀಲತೆಯಿಂದಾಗಿ ಇವರು ಬಾದಾಮಿ ಪರಿಸರದ ಸಾಂಸ್ಕೃತಿಕ ಕೇಂದ್ರಬಿಂದುವಾಗಿದ್ದಾರೆ. ಅಲ್ಲಿಯ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಘಟನೆ, ವಿದ್ವತ್ ಸಭೆಯ ವ್ಯವಸ್ಥೆ, ಪುಸ್ತಕ ಪ್ರಕಟಣೆ ಇತ್ಯಾದಿಗಳಿಗೆ ಶೀಲಾಕಾಂತ ಅವಶ್ಯ ಬೇಕಾಗಿದ್ದಾರೆ. ಹೀಗೆ ಜನಸಮುದಾಯಕ್ಕೆ ಅನಿವಾರ್ಯವಾಗಿ ಬೆಳೆದುದು ಸಣ್ಣ ಸಾಧನೆಯೇನಲ್ಲ. ಈ ರೀತಿ ತಮ್ಮ ಮಿತಿಯಲ್ಲಿ ಬಾದಾಮಿ ಪರಿಸರವನ್ನು ವ್ಯಾಪಿಸಿದ ಇವರು ಸ್ಥಳೀಯರಿಗೆ ಸಾಂಸ್ಕೃತಿಕ ಆಸ್ತಿಯೆನಿಸಿದ್ದಾರೆ. ರಾಜ್ಯದ ವಿದ್ವಾಂಸರಿಗೆ ಬಾದಾಮಿ ಚಾಲುಕ್ಯರ ಅಭ್ಯಾಸಿಯಾಗಿ ಕಂಡಿದ್ದಾರೆ.

---

* ಕಲ್ಲೋಜ(ಶೀಲಾಕಾಂತ ಪತ್ತಾರ ಅಭಿನಂದನ ಗ್ರಂಥ), ಅಭಿನಂದನ ಸಮಿತಿ, ಬಾದಾಮಿ-೨೦೧೪.

ಆಕರ : ಮಾರ್ಗ ಸಂಪುಟ-೮

■■

೧೨೪

ಕಾಲೇಜು ಕರೆಯಿತು

೨೦೧೪

* ಒಳಗೆ ಬರಬಹುದೇ?

* ಬನ್ನಿ, ನಿಮ್ಮ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದೆ.

* ಬಸ್ ಇಳಿದು ನೇರವಾಗಿ ನಿಮ್ಮಲ್ಲಿಗೇ ಬಂದಿದ್ದೇನೆ. ಇಂದು ಮಧ್ಯಾಹ್ನ ಇಂಟರವ್ಯೂ. ನನ್ನ ಆಯ್ಕೆಯಾಗುವುದಿಲ್ಲವಾಗಿ ಬರಬಾರದೆಂದೇ ನಿರ್ಧರಿಸಿದ್ದೆ. ಹಾಗೆ ಮಾಡಿದರೆ ನೀವು ಸಿಟ್ಟಾಗಬಹುದುದೆಂದು ಬಂದಿದ್ದೇನೆ.

* ನಿಮ್ಮ ಆಯ್ಕೆ ಆಗುವುದೆಂಬ ದೊಡ್ಡ ಭರವಸೆ ನನ್ನದಾಗಿದ್ದಿತು. ಅದಕ್ಕಾಗಿಯೇ ತಪ್ಪಿಸಬೇಡಿರೆಂದು ಎಚ್ಚರಿಸಿದೆ. ಆದರೆ ಕಳೆದ ಎರಡು ದಿನಗಳಿಂದ ಇಲ್ಲಿ ಏನೇನೋ ನಡೆದು ಬೇರೆಯವರನ್ನು ನಿಯಮಿಸಿಕೊಳ್ಳುವ ನಿರ್ಧಾರವಾದಂತಿದೆ.

* ಸರ್. ಈ ಇಂಟರ್‌ವ್ಯೂ ಒಂದು ಪ್ರಹಸನವೆಂದ ಮೇಲೆ ನಾನು ಅದಕ್ಕೆ ಹಾಜರಾಗುವುದಿಲ್ಲ. ಮರಳಿ ಊರಿಗೆ ಹೋಗುತ್ತೇನೆ.

* ಹಾಗೆ ಮಾಡಬೇಡಿ, ಇಂಟರವ್ಯೂ ಎದುರಿಸಿರಿ.

* ಬೇಡಿ ಸರ್, ನಾನು ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಸುಖವಾಗಿದ್ದೇನೆ.

* ಇರಬಹುದು, ಇಂಟರವ್ಯೂಗೆ ಹಾಜರಾಗಿರಿ.

* ಒತ್ತಾಯಿಸಬೇಡಿ ಸರ್. ನಾನು ಅಂಥ ಮಹತ್ವಾಕಾಂಕ್ಷೆಯ ಮಹಿಳೆಯಲ್ಲ.

* ನನಗೆ ಗೊತ್ತು, ಯಾರ ದೈವ ಯಾರು ನೋಡಿದ್ದಾರೆ. ಹಾಜರಾಗಿರಿ. ತಪ್ಪಿಸಬೇಡಿ.

* ಸರ್. ನನಗೆ ಮನಸ್ಸಿಲ್ಲ. ನಿಮ್ಮ ಒತ್ತಾಯ ಕಾರಣ ಇಂಟರ್‌ವ್ಯೂಗೆ ಹೋಗುತ್ತೇನೆ.

* ಒಳ್ಳೆಯದಾಗಲಿ ಹೋಗಿ.

ಇದು ಕರ್ನಾಟಕ ಕಾಲೇಜ ಕನ್ನಡ ಅಧ್ಯಾಪಕ ಹುದ್ದೆಯ ಇಂಟರ್‌ವ್ಯೂಗಾಗಿ ನನ್ನ ಒತ್ತಾಯದ ಮೇರೆಗೆ ಧಾರವಾಡಕ್ಕೆ ಬಂದಿದ್ದ, ನನ್ನ ಪ್ರಥಮ ದರ್ಜೆಯ ವಿದ್ಯಾರ್ಥಿ ಶ್ರೀಮತಿ ಎಚ್.ಎಂ. ಬೀಳಗಿ ಅವರೊಂದಿಗೆ ನನ್ನ ಛೇಂಬರ್‌ನಲ್ಲಿ ನಡೆದ ಮಾತುಕತೆ.

* ಸರ್. ಇಂಟರ್‌ವ್ಯೂ ಮುಗಿಯಿತು ಚೆನ್ನಾಗಿಯೇ ಜರುಗಿತು. ಊರಿಗೆ ಹೋಗುತ್ತೇನೆ.

* ಹೋಗಿ ಬನ್ನಿ.

* ಹೋಗುತ್ತೇನೆ, ಬರುವುದು ಕನಸಿನ ಮಾತು.

* ಕನಸು ನನಸಾಗಲಿ, ಹೋಗಿ ಬನ್ನಿ.

ಶ್ರೀಮತಿ ಬೀಳಗಿ ನನ್ನಿಂದ ಬೀಳ್ಕೊಂಡು ಹೋಗಿ ಎರಡು ಗಂಟೆ ಕಳೆದಿರಬಹುದು. ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಆರ್.ಸಿ. ಹಿರೇಮಠರು ಇಂಟರ್‌ವ್ಯೂ ಕಮೀಟಿ 'ಮೀಟಿಂಗ್' ಮುಗಿಸಿಕೊಂಡು ವಿಭಾಗಕ್ಕೆ ಬಂದರು. ಸಾಯಂಕಾಲ ಸಮಯ. ಮಾತಿನ ಮಧ್ಯೆ ತಾವೇ ಇಂಟರ್‌ವ್ಯೂ ಪ್ರಸ್ತಾಪಮಾಡಿ 'ಬೀಳಗಿ ಆಯ್ಕೆ ಆಗಿದೆ' ಎನ್ನುತ್ತಲೇ ನನಗೆ ಹೋದ ಜೀವ ಬಂದಂತಾಯಿತು. ಕಳ್ಳದಾರಿಯಿಂದ ಪರೀಕ್ಷೆ ಬರೆದು ಪ್ರಥಮ ವರ್ಗ ಪಡೆದು, ಹಿಂಬಾಗಿಲಿನಿಂದ ಶಿಕ್ಷಣ ಸಂಸ್ಥೆ ಪ್ರವೇಶಿಸುವ ಇಂದಿನ ಮೇಲಾಟದ ದಿನಗಳಲ್ಲಿ ಶ್ರೀಮತಿ ಬೀಳಗಿ ಅವರನ್ನು ಹೀಗೆ ಕರ್ನಾಟಕ ಕಾಲೇಜಿನ ಬಾಗಿಲು ಬರಮಾಡಿಕೊಂಡಿತು.

* * *

ಧಾರವಾಡದ ಕರ್ನಾಟಕ ಕಾಲೇಜು ಉತ್ತರ ಕರ್ನಾಟಕದ ಪ್ರತಿಷ್ಠಿತ ವಿದ್ಯಾಸಂಸ್ಥೆ. ಅಲ್ಲಿಯ ವಿಭಾಗ ಬಲಿಷ್ಠವಾಗಿರಬೇಕೆಂಬುದು ಅಪೇಕ್ಷಣೀಯ. ಇದಕ್ಕೆ ಉತ್ತರವೆಂಬಂತೆ ಶ್ರೀಮತಿ ಬೀಳಗಿ ಅಧ್ಯಾಪಕರಾಗಿ ಬಂದರು. ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕಿ, ಕರ್ನಾಟಕ ಕಾಲೇಜಿನ ವೇದಿಕೆ ಏರಿದುದು ಒಂದು ಸಾಧನೆಯೆಂದೇ ಹೇಳಬೇಕು.

ದಿನ ಗತಿಸಿದವು. ಶ್ರೀಮತಿ ಬೀಳಗಿ ಕಾಲೇಜು ವಾತಾವರಣಕ್ಕೂ ಬೇಗ ಹೊಂದಿಕೊಂಡರು. ಉತ್ತಮ ಅಧ್ಯಾಪಕನಿಗೆ ಇರಬೇಕಾದ ಅಧ್ಯಯನಶೀಲತೆ, ಬೋಧನೆ ಬಗೆಗಿನ ಪ್ರೀತಿ, ಸಮಯ ಪ್ರಜ್ಞೆ ಇತ್ಯಾದಿಗಳನ್ನು ರೂಢಿಸಿಕೊಂಡು ಅಲ್ಪಾವಧಿಯಲ್ಲಿಯೇ ಜನಪ್ರಿಯತೆ ಗಳಿಸಿದರು.

ಶಿಕ್ಷಕನಾದವನು ಲೇಖಕನೂ ಆದರೆ ಅವರ ವಿದ್ವತ್ತಿಗೆ ಒಂದು ಖಚಿತತೆ ಪ್ರಾಪ್ತವಾಗುತ್ತದೆ. ಪರಸ್ಪರ ಪೂರಕವಾಗಿ ಎರಡೂ ಬೆಳೆದು ಪೂರ್ಣ ಶಿಕ್ಷಕವ್ಯಕ್ತಿತ್ವ ರೂಪಗೊಳ್ಳುತ್ತದೆ. ನಾಣ್ಯದ ಒಂದು ಮುಖ ಸವೆದರೂ ಅದು ಅಪ್ರಯೋಜಕವೆನಿಸುವ ರೀತಿಯಿದು. ಆದರೆ ನಮ್ಮ ಕಾಲೇಜುಗಳಲ್ಲಿ ಬೋಧನೆಯ ಭಾರ ವರ್ಧಿಸಿ, ಬರೆವಣಿಗೆಯ ಹವ್ಯಾಸವೇ ಕ್ಷೀಣಿಸುತ್ತದೆ. ಪ್ರಕಾಶನ ವ್ಯವಸ್ಥೆ ಇತ್ಯಾದಿಗಳ ಕೊರತೆಯೇ ಇದಕ್ಕೆ ಇನ್ನೊಂದು ಕಾರಣವಾಗುತ್ತದೆ. ಮಹಿಳೆಯಾಗಿದ್ದರಂತೂ ಈ ಕೊರತೆಯನ್ನು ತುಂಬಿಕೊಳ್ಳುವುದು ಸಾಧ್ಯವಾಗುವುದೇ ಇಲ್ಲ. ಇದರ ಪರಿಣಾಮವಾಗಿ ಅಲ್ಲಿ 'ಉತ್ತಮ ಶಿಕ್ಷಕ'ನಾಗಿ ಬೆಳೆಯುವುದೇ ಒಂದು ದೊಡ್ಡ ಸಾಧನೆಯಾಗಿ ಬಿಡುತ್ತದೆ. ಶಿಕ್ಷಣ ಕುಸಿಯುತ್ತಲಿರುವ ಇತ್ತೀಚಿನ ದಿನಗಳಲ್ಲಿಯಂತೂ ಈ ಮಾತು ಇನ್ನೂ ನಿಜವೆನಿಸುತ್ತದೆ. ಅಧ್ಯಾಪಿಕೆ ಬೀಳಗಿ ಅವರನ್ನು ಈ ಹಿನ್ನೆಲೆಯಲ್ಲಿ ನೋಡುವುದು ಹೆಚ್ಚು ಸೂಕ್ತವೆನಿಸುತ್ತದೆ.

ಇಂದು ಕಾಲೇಜಿನ ಶಿಕ್ಷಕರಲ್ಲಿ ಬೋಧನೆಗೆ ವಿಮುಖರಾದವರು, ಸಮ್ಮುಖರಾದವರು ಎಂಬ ಎರಡು ವರ್ಗಗಳಿದ್ದು, ಸಮ್ಮುಖರಾದವರಲ್ಲಿ ಹಳಗನ್ನಡ ಬೋಧಕರು, ಹೊಸಗನ್ನಡ ಬೋಧಕರು ಎಂಬ ಇನ್ನೆರಡು ವರ್ಗಗಳಿರುತ್ತವೆ. ಇವುಗಳಲ್ಲಿ ಶಬ್ದಮಣಿದರ್ಪಣವನ್ನೊಳಗೊಂಡು ಹಳಗನ್ನಡ ಬೋಧಿಸುವವರಿಗ ವಿಶೇಷ ಗೌರವ. ಶ್ರೀಮತಿ ಬೀಳಗಿ ಅವರು ಈ ಗೌರವಕ್ಕೆ ಪಾತ್ರರಾದ ಪ್ರಾಧ್ಯಾಪಕಿಯಾಗಿ ಬೆಳೆದಿದ್ದಾರೆ. ಮತ್ತು ತಮ್ಮ ಬೋಧನೆಯ ಫಲಿತವೆಂಬಂತೆ ಶಬ್ದಮಣಿದರ್ಪಣವನ್ನು ಕುರಿತು ಬರೆವಣಿಗಯನ್ನೂ ಮಾಡಿ ವಿಷಯದ ಕೆಲವೇ ಜನ ತಜ್ಞರಲ್ಲಿ ಒಬ್ಬರೆನಿಸಿದ್ದಾರೆ. ತೀರ ಇತ್ತೀಚಿನ ದಿನಗಳಲ್ಲಿ ಶಬ್ದಮಣಿದರ್ಪಣವೆಂದ ಕೂಡಲೇ ಬೆಂಕಿ ತುಳಿದಂತೆ ಭೀತರಾಗುವ ಶಿಕ್ಷಕ ಸಮುದಾಯದಲ್ಲಿ ಬೀಳಗಿಯವರು ಇನ್ನೂ ಎದ್ದು ಕಾಣುತ್ತಲಿದ್ದಾರೆ. ಇದಕ್ಕೆ ಪೂರಕವಾಗಿ ಇವರು ತಮ್ಮ ಆಸಕ್ತಿ ಕ್ಷೇತ್ರಗಳಾದ ಮಹಿಳಾ ಅಧ್ಯಯನ, ವಚನಸಾಹಿತ್ಯ, ಇಸ್ಲಾಮ ಸಂಸ್ಕೃತಿಗಳಿಗೆ ಸಂಬಂಧಪಟ್ಟ ಕೃತಿ ರಚನೆ ಮಾಡಿದ್ದಾರೆ. ಹೀಗಿದ್ದೂ ನನ್ನಂಥವರು ಇವರಿಂದ ಇನ್ನೂ ಹೆಚ್ಚಿನ ಬರೆವಣಿಗೆ ನಿರೀಕ್ಷಿಸಿದ್ದೆವು. ಪರಿಸರ ನಮ್ಮನ್ನು ಬೆಳೆಸುತ್ತದೆ ಎನ್ನುವುದು ಎಷ್ಟು ಸತ್ಯವೋ ಬೆಳೆಯುಗೊಡುವುದಿಲ್ಲವೆಂಬುದೂ ಅಷ್ಟೇ ಸತ್ಯ ಎಂಬ ಮಾತನ್ನು ನೆನೆದು ನಾವು ಸುಮ್ಮನಾಗಬೇಕಾಗುತ್ತದೆ. ಈ ದುಡಿಮೆಗೆ ತಕ್ಕಂತೆ ಇವರು ರಾಜ್ಯ ಸಾಹಿತ್ಯ ಅಕಾಡೆಮಿ ಸದಸ್ಯರೂ ಆದರು. ಅದರ ಪ್ರಶಸ್ತಿಯನ್ನೂ ಪಡೆದರು. ನನ್ನ ದೃಷ್ಟಿಯಲ್ಲಿ ಇಂಥವರು ಏನು ಪಡೆದರು ಎನ್ನುವುದಕ್ಕಿಂತ ವೃತ್ತಿ ಜೀವನದಲ್ಲಿ ಹೇಗೆ ನಡೆದರು? ಹೇಗೆ ದುಡಿದರು? ಎನ್ನುವುದು ಮುಖ್ಯ. ಈ ವಿಷಯದಲ್ಲಿ ಇವರ ಬಗ್ಗೆ ನನ್ನಂತೆ ಅನೇಕರಿಗೆ ತೃಪ್ತಿಯಿದೆ.

ಶ್ರೀಮತಿ ಬೀಳಗಿಯವರು ಈಗ ನಿವೃತ್ತರು. ಬಹಳ ಜನ ವೃತ್ತಿಯಲ್ಲಿರುವಾಗಲೇ ನಿವೃತ್ತರಂತೆ ಜೀವಿಸುತ್ತಿರುತ್ತಾರೆ. ಇವರು ನಿವೃತ್ತಿ ಬಳಿಕವೂ ಧಾರವಡದ ಸಾಂಸ್ಕೃತಿಕ ಸಾಮಾಜಿಕ ಜೀವನದಲ್ಲಿ ಹೆಚ್ಚು ತೊಡಗಿಕೊಳ್ಳುತ್ತಲಿದ್ದಾರೆ. ವ್ಯಕ್ತಿತ್ವದ ಸಾಮಾಜೀಕರಣವೇ ಪೂರ್ಣಜೀವನ ಎಂದು ನಂಬಿದ ನನಗೆ ಇದು ಸಂತೋಷವನ್ನುಂಟುಮಾಡಿದೆ.

---

* ಶಬ್ದ ಸಂಪದ(ಎಚ್.ಎಂ. ಬೀಳಗಿ ಅಭಿನಂದನ ಗ್ರಂಥ), ಚಂದ್ರನಾಥ ಪ್ರಕಾಶನ, ಧಾರವಾಡ-೨೦೧೪.

ಆಕರ : ಮಾರ್ಗ ಸಂಪುಟ-೮

■■

೧೨೫

ಸಾತ್ವಿಕ

೨೦೧೪

ಶ್ರೀ ನರಸಿಂಹ ಪರಾಂಜಪರಯವರು ಇಂಜಿನಿಯರ್, ನಾನು ಶಿಕ್ಷಕ. ಇವೆರಡೂ ಪರಸ್ಪರ ದೂರದ ಶಿಸ್ತುಗಳು. ಹೆಚ್ಚಿನದಾಗಿ, ಧಾರವಾಡದ ಒಂದು ಮೂಲೆಯ ಸಾಧನಕೇರಿಯಲ್ಲಿ ಅವರ ಮನೆ, ಇನ್ನೊಂದು ಮೂಲೆಯ ಕಲ್ಯಾಣನಗರದಲ್ಲಿ ನನ್ನ ಮನೆ. ಹೀಗೆ ವೃತ್ತಿಯಿಂದ ಮಾತ್ರವಲ್ಲ ವಾಸಸ್ಥಳ ದೃಷ್ಟಿಯಿಂದಲೂ ನಮ್ಮಿಬ್ಬರದು ದೂರದ ಸಂಬಂಧ. ಹೀಗಿದ್ದು ನಮ್ಮನ್ನು ತೀರ ಸಮೀಪ ತಂದುದು ಕಾರ್ಯತತ್ಪರ ಮನೋಧರ್ಮ.

ನಾನು ಸಾಧನಕೇರಿಯಲ್ಲಿರುವ ಬೇಂದ್ರೆ ಪ್ರತಿಷ್ಠಾನದ ಅಧ್ಯಕ್ಷನಾಗಿದ್ದ ಸಂದರ್ಭ ಸದಸ್ಯರಾಗಿದ್ದ ನಾವೆಲ್ಲ ಈ ಪ್ರತಿಷ್ಠಾನದ ಕಟ್ಟಡದಿಂಥ ದೂರ ವಾಸಿಸುತ್ತಿದ್ದೆವು. ಪರಾಂಜಪೆಯವರ ಮನೆ ಅದಕ್ಕೆ ಹತ್ತಿರ ಇರುವುದು ಗೊತ್ತಾಗುತ್ತಲೇ ಅದನ್ನು ಮತ್ತೆ ಮತ್ತೆ ನೋಡಿಕೊಳ್ಳುವ ಸೂಕ್ತವ್ಯಕ್ತಿ ಇವರೆಂದು ನನಗೆ ಮನವರಿಕೆಯಾಯಿತು. ಹೆಚ್ಚಿನದಾಗಿ ಒಬ್ಬ ಬರಹಗಾರ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆಸಕ್ತಿ ಹೊಂದಿರುವ ಸಭಿಕ ಮತ್ತು ಸಾತ್ವಿಕ. ಈ ಎಲ್ಲ ಅಂಶಗಳು ಕಾರಣವಾಗಿ ಇವರನ್ನು ಪ್ರತಿಷ್ಠಾನದ ಸದಸ್ಯರನ್ನಾಗಿ ಬಳಸಿಕೊಳ್ಳಲಾಯಿತು. ನಿಜ ಹೇಳಬೇಕೆಂದರೆ, ಇದರಿಂದಾಗಿ ನನ್ನ ಬಹಳಷ್ಟು ಕೆಲಸಗಳು ಹಗುರಾದವು ಮತ್ತು ಯಾವುದೇ ಮುಖ್ಯ ನಿರ್ಣಯ ತೆಗೆದುಕೊಳ್ಳುವಾಗ ಅವಶ್ಯವೆನಿಸಿದ್ದೊಬ್ಬ ಆಪ್ತವ್ಯಕ್ತಿ ನನಗೆ ಸಿಕ್ಕರು.

ಪರಾಂಜಪೆ ವೃತ್ತಿಯಿಂದ ಎಂಜನಿಯರ್ ಆಗಿದ್ದರೂ ಅವರು ಸಾಹಿತ್ಯ, ಸಂಗೀತ ಇತ್ಯಾದಿಗಳ ಬಗ್ಗೆ ತೀವ್ರ ಆಸಕ್ತಿಯುಳ್ಳವರು. ಬೇಂದ್ರೆಯವರು ಇರುವವರೆಗೆ ಅವರ ಮನೆ ಸಾಹಿತಿಗಳ ಕೇಂದ್ರವಾಗಿದ್ದಿತು. ಆ ಬಳಿಕ ಪ್ರತಿತಿಂಗಳು ತಮ್ಮ ಮನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಯೋಜಿಸುವ ಮೂಲಕ ಆ ಪರಂಪರೆಯನ್ನು ಇನ್ನೊಂದು ರೀತಿಯಿಂದ ಸಾಧನಕೇರಿಯಲ್ಲಿ ಜೀವಂತವಾಗಿಟ್ಟವರು ಪರಾಂಜಪೆ ಮತ್ತು ಅವರ ಶ್ರೀಮತಿ ಸೀಮಾ ಅವರು. ಧಾರವಾಡದಲ್ಲಿ ಒಂದು ಕುಟುಂಬವನ್ನು ಹೋಲುವ ಇನ್ನೊಂದು ಕುಟುಂಬ ಸಿಗಬಹುದು. ಆದರೆ ಸಾಂಸಾರಿಕ, ಸಾಂಸ್ಕೃತಿಕ ದಾಂಪತ್ಯದ ಇಂಥ ಇನ್ನೊಂದು ಕುಟುಂಬ ಈ ನಗರದಲ್ಲಿ ಸಿಗುವುದು ಅಪರೂಪವೆಂದೇ ಹೇಳಬಹುದು. ಇದು ಧಾರವಾಡದ ಜನ ಗುರುತಿಸಲೇಬೇಕಾದ ವಿಷಯ.

ಇಂಥ ಆಸಕ್ತಿಯನ್ನು ಇವರಲ್ಲಿ ಗುರುತಿಸಿದ ನಾನು ಪ್ರತಿತಿಂಗಳು ಟ್ರಸ್ಟ ಮೂಲಕ ಆರಂಭಿಸಿದ "ಯುವ ಕಲಾವಿದರ ಭಾವಗೀತೆ ಗಾಯನ" ಕಾರ್ಯಕ್ರಮದ ಹೊಣೆಯನ್ನು ಪರಾಂಜಪೆಯವರಿಗೆ ವಹಿಸಿದೆ. ಇದನ್ನು ಕಳೆದ ಆರು ವರ್ಷಗಳಿಂದ ಆವರು ಅಚ್ಚುಕಟ್ಟಾಗಿ ನಿರಂತರ ನಡೆಸಿಕೊಂಡು ಬರುತ್ತಲಿರುವುದು ಒಂದು ಸಾಧನೆಯೇ ಸರಿ. ಸಂಸ್ಥೆಗಳಲ್ಲಿ ಕೆಲವೊಮ್ಮೆ ತಾವೂ ಮಾಡದ, ಮಾಡುವವರಿಗೆ ಅಡ್ಡಗಾಲು ಒಡ್ಡುವ ಸದಸ್ಯರಿರುವುದು ಸಹಜ. ಆದರೆ ಪರಾಂಜಪೆಯಂಥ ರಚನಾತ್ಮಕ ಮನೋಧರ್ಮದ ಸದಸ್ಯರಿದ್ದರೆ ಏಕಕಾಲಕ್ಕೆ ಇಂಥ ಹತ್ತು ಸಂಸ್ಥೆಗಳು ಪ್ರೀತಿಯಿಂದ ಮುನ್ನಡೆಸಬಹುದು.

ಇವುಗಳಿಗಿಂತ ಮುಖ್ಯವಾಗಿ ಇವರು ಕವಿಗಳು. ಮೊದಲಿನಿಂದಲೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಹೊಣೆ ಹೊತ್ತು ಅವುಗಳನ್ನು ನಿರ್ವಹಿಸುವ ಸಂಸ್ಕಾರಗಳು ಸಹಜವಾಗಿಯೇ ಇವರನ್ನು ಕವಿತೆಗಳ ಬರವಣಿಗೆಗೆ ಹೊರಳಿಸಿದವೆಂದು ತೋರುತ್ತದೆ. ಒಮ್ಮೆ ಈ ವ್ಯವಸಾಯಕ್ಕೆ ಹೊರಳಿದರೆ ಅದು ಬೆಳೆಯುತ್ತಲೇ ಹೋಗುತ್ತದೆ. ಈ ಬೆಳಕಿನಲ್ಲಿ ಬರೆಯುತ್ತ ಬಂದ ಪರಾಂಜಪೆಯವರು ನವೋದಯ ಧೋರಣೆಯವರಾಗಿದ್ದಾರೆ. ಆದರ್ಶ, ಆತ್ಮನಿವೇದನೆ ಇತ್ಯಾದಿಗಳಿಂದಾಗಿ ಇವರ ಕವಿತೆಗಳಲ್ಲಿ 'ರಮ್ಯ' ಗುಣ ಮುಖ್ಯವೆನಿಸಿದೆ. ಹೀಗಾಗಿ ಇವರ ಕವಿತೆಗಳನ್ನು ಧಾರವಾಡದ ಕಲಾವಿದರು ಹಾಡುವುದು ಸಹಜವೆನಿಸಿದೆ. ಒಟ್ಟಂದದಲ್ಲಿ ಶ್ರೀ ಪರಾಂಜಪೆಯವರು ಒಬ್ಬ 'ಸಾತ್ವಿಕ' ವ್ಯಕ್ತಿಯೆನಿಸಿದ್ದಾರೆ. ಸತ್ವಪೂರ್ಣ, ಸಜ್ಜನ ಹೀಗೆ ಎರಡೂ ಅರ್ಥಗಳು ಇವರ ವ್ಯಕ್ತಿತ್ವದಲ್ಲಿ ಮೇಳವಿಸಿವೆ.

---

* ಚೈತ್ರಾಂಗಣ(ನರಸಿಂಹ ಪರಾಂಜಪೆ ಅಭಿನಂದನ ಗ್ರಂಥ)೨೦೧೪.

ಆಕರ : ಮಾರ್ಗ ಸಂಪುಟ–೮

■■

೧೨೬

ಸೃಜನಶೀಲ ಪರಿಚಾರಕ

೨೦೧೪

ಗೊ.ರು.ಚ. ದೊಡ್ಡ ಸಾಹಿತಿಗಳೇ? ದೊಡ್ಡ ಶರಣ ಸಾಹಿತ್ಯ ಅಭ್ಯಾಸಿಗಳೇ? ದೊಡ್ಡ ಜಾನಪದ ವಿದ್ವಾಂಸರೇ? ಇವಾವುದೂ ಅಲ್ಲ. ಹೀಗಿದ್ದೂ ಇವರದು ಸಾಹಿತ್ಯ, ಜಾನಪದ, ಶರಣ ಸಂಸ್ಕೃತಿ ಇತ್ಯಾದಿ ಕ್ಷೇತ್ರಗಳಲ್ಲಿ ಪದೇ ಪದೇ ಕೇಳಿ ಬರುವ ಹೆಸರು. ಇದಕ್ಕೆ ಕಾರಣ, ಇವರು ದೊಡ್ಡ ಯೋಜಕರು, ಬಹುದೊಡ್ಡ ಸೃಜನಶೀಲ ಯೋಜಕರು. ಸಮಾಜದಲ್ಲಿ ಯೋಜಕರು ಸಿಗಬಹುದು, ಸೃಜನಶೀಲರು ಸಿಗಬಹುದು, ಸೃಜನಶೀಲ ಯೋಜಕರು ಸಿಗುವುದು ದುರ್ಲಭ. ನಮ್ಮ ತಲೆಮಾರಿನ ಇಂತಹ ಅಪರೂಪದ ಸೃಜನಶೀಲ ಯೋಜಕರಾಗಿದ್ದಾರೆ ಗೊ.ರು.ಚ.

ಯೋಜಕನೆಂಬವನು ಒಬ್ಬ ಚತುರ ಸಂಘಟಕನಾಗಿರುತ್ತಾನೆ. ಯಾವುದೇ ಕಾರ್ಯಕ್ರಮವನ್ನು ಮಾಂತ್ರಿಕವಾಗಿ ಮಾಡಿ ಮುಗಿಸುತ್ತಾನೆ. ಅಂತಹವನು ಕಲಾವಿದ (Artist)ಅಲ್ಲ, ಕಲಾ ಕಸಬುದಾರ (Artisan). ನಮ್ಮಲ್ಲಿ ಇಂಥ ಕಲಾ ಕಸಬುದಾರರು ಅನೇಕರಿದ್ದಾರೆ. ಅವರು ಪ್ರತಿಫಲಕ್ಕಾಗಿ ಕೆಲಸ ಮಾಡುತ್ತಾರೆ. ಆದರೆ ಸೃಜನಶೀಲ ಯೋಜಕ ಆ ಕ್ಷೇತ್ರದ ಅಭ್ಯಾಸಿಯಾಗಿರುತ್ತಾನೆ. ಅದರ ಅಭಿವೃದ್ಧಿಗಾಗಿ ದುಡಿಯುತ್ತಾನೆ. ಇವನನ್ನು 'ಪರಿಚಾರಕ'ನೆಂಬ ಹೊಸ ಹೆಸರಿನಿಂದ ಕರೆಯಬಹುದಾಗಿದೆ.

ಪರಿಚಾರಕನ ಬಗ್ಗೆ ಜಿ.ಪಿ. ರಾಜರತ್ನಂ ಒಂದು ಮಾತು ಹೇಳುತ್ತಾರೆ. ಒಳಗೆ ಅಡುಗೆ ಸಿದ್ಧವಾಗಿದೆ. ಹೊರಗೆ ಎಲ್ಲರೂ ಹಸಿದು ತಟ್ಟೆಯ ಮುಂದೆ ಕುಳಿತಿದ್ದಾರೆ. ಒಳಗೆ ಅಡುಗೆ ತಣ್ಣಗಾಗುತ್ತಿದೆ. ಹೊರಗಿನವರ ಹಸಿವೆ ಹೆಚ್ಚುತ್ತಲಿದೆ. ತಂದು ಬಡಿಸುವವರೇ ಇಲ್ಲ. ಇಂಥ ಪ್ರಸಂಗಗಳು ಉದ್ಭವಿಸದಂತೆ ನೋಡಿಕೊಳ್ಳುವವನೇ ಪರಿಚಾರಕನೆಂದು ಅವರು ಹೇಳುತ್ತಾರೆ. ಆದರೆ ನಿಜವಾದ ಪರಿಚಾರಕನ ಕೆಲಸ ಕೇವಲ ಮಾತಿನ ಅಡುಗೆಯನ್ನು ತಂದು ಉಣಬಡಿಸುವುದಲ್ಲ. ಅಡುಗೆಯ ಪದಾರ್ಥವನ್ನು ಪ್ರಸಾದವಾಗಿಸುವ ಕಲೆಯನ್ನೂ ಅವನು ಬಲ್ಲನು. ಗೊ.ರು.ಚ. ಇಂಥ ಪರಿಚಾರಕರಾಗಿದ್ದಾರೆ.

ಸರಕಾರಿ ಇಲಾಖೆಯಲ್ಲಿ ಸಾಮಾನ್ಯ ನೌಕರಿ ಮಾಡುತ್ತಲಿದ್ದ ಸಂದರ್ಭದಲ್ಲಿಯೇ ಇವರು ತಮ್ಮ ಪರಿಚಾರಕ ಶಕ್ತಿ ಆಸಕ್ತಿಗಳನ್ನು ತೋರಿಸಿದ್ದರು. ಅಲ್ಲಿಂದ ಮುಕ್ತರಾಗುವುದೇ ತಡ ಪರಿಚಾರಕತ್ವವನ್ನು ವಿಸ್ತಾರದಿಂದ ವಿಸ್ತಾರಕ್ಕೆ ಬೆಳೆಸುತ್ತ ನಡೆದರು. ಯಾವ ಕೆಲಸ ಮಾಡಬೇಕು? ಹೇಗೆ ಮಾಡಬೇಕು? ಯಾರಿಂದ ಮಾಡಿಸಬೇಕು? ಇತ್ಯಾದಿ ವ್ಯವಹಾರ ಜ್ಞಾನನಿಷ್ಠ ಪ್ರತಿಭೆ ಇವರದಾಗಿದೆ. ಹೀಗಾಗಿ ಯಾವುದೇ ಕಾರ್ಯವನ್ನು ಕಾರ್ಯಕ್ರಮವನ್ನು ಇವರು ಅಚ್ಚುಕಟ್ಟಾಗಿ, ಅರ್ಥಪೂರ್ಣವಾಗಿ ಮಾಡುತ್ತಾರೆ. ಮಾಡಿಸುತ್ತಾರೆ. ಈ ವಿಶೇಷ ಗುಣಕಾರಣವಾಗಿ ಹೆಜ್ಜೆ ಇಟ್ಟಲ್ಲೆಲ್ಲ ಹೆಜ್ಜೆ ಮೂಡಿಸುತ್ತ ಬಂದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತು ಸಾಮಾನ್ಯವಾಗಿ ಸಾಹಿತಿಗಳೇ ಅಧ್ಯಕ್ಷರಾಗುವ ಸಂಸ್ಥೆ. ಆದರೆ ಕನ್ನಡ ಜನತೆ ಸಂಘಟನಾಶಕ್ತಿ ಸೃಜನಶೀಲ ಗುಣವನ್ನು ಗುರುತಿಸಿ ಗೊ.ರು.ಚ. ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ಇವರಿಂದಾಗಿ ಮೂರು ವರ್ಷಗಳ ಅವಧಿಯಲ್ಲಿ ಪರಿಷತ್ತಿನ ದತ್ತಿ ಕಾರ್ಯಗಳು ನೂರಾರು ಸಂಖ್ಯೆಯಲ್ಲಿ ಬೆಳೆದವು. ಪ್ರಕಟನೆಗಳು ಸಾಲುಸಾಲಾಗಿ ಬೆಳಕು ಕಂಡವು. ಸಭೆ-ಸಮಾರಂಭ ಸಮ್ಮೇಳನಗಳು ಅರ್ಥಪೂರ್ಣವಾಗಿ ಜರುಗಿದವು.

ಇವರ ಇನ್ನೊಂದು ಕಾರ್ಯ ಕ್ಷೇತ್ರ ಶರಣ ಸಾಹಿತ್ಯ ಪರಿಷತ್ತು. ಶರಣ ಸಿದ್ಧಾಂತ ಕನ್ನಡಿಗರ ಸೃಷ್ಟಿ. ಇದು ಕರ್ನಾಟಕದ ಒಳಗೆ ಸರಿಯಾಗಿ ಹಬ್ಬಬೇಕು. ಹೊರಗೆ ಸರಿಯಾಗಿ ಹರಡಬೇಕು-ಎಂಬ ಆದರ್ಶದಲ್ಲಿ ಇವರು ಇದನ್ನು ಬೆಳೆಸುತ್ತಾ ನಡೆದರು. ಇದರ ಅಂಗವಾದ 'ಶರಣ ಸಾಹಿತ್ಯ ಸಮ್ಮೇಳನವು' 'ಕನ್ನಡ ಸಾಹಿತ್ಯ ಸಮ್ಮೇಳನ'ವನ್ನು ನೆನಪಿಸುವಂತೆ ಬೆಳೆಯಿತು. ಶರಣ ಸಿದ್ಧಾಂತ ಕರ್ನಾಟಕೇತರ ರಾಜ್ಯಗಳಲ್ಲಿ, ಕನ್ನಡೇತರ ಭಾಷೆಗಳಲ್ಲಿ ವಿಸ್ತರಿಸಿಕೊಳ್ಳಬೇಕೆಂಬ ಉದ್ದೇಶದಿಂದ ದಿಲ್ಲಿ ಮುಂಬೈ ಮೊದಲಾದ ನಗರಗಳಲ್ಲಿ ಈ ಸಮ್ಮೇಳನ ಜರುಗಿಸಿದುದು, ಇಂಗ್ಲಿಷ್‌ನಲ್ಲಿ ಕೃತಿಗಳನ್ನು ಪ್ರಕಟಿಸಿದುದು ಗಮನಾರ್ಹ ಘಟನೆಗಳೆನಿಸಿವೆ. ಇಲ್ಲಿ ಎತ್ತಿ ಹೇಳಬೇಕಾದ ಇನ್ನೊಂದು ವಿಷಯವೆಂದರೆ 'ಶರಣ ಕ್ಷೇತ್ರ ಸಂಪುಟ'ದ ಪ್ರಕಟನೆ. ಹಾಳಾಗುವ ಮೊದಲೇ ಈ ಕ್ಷೇತ್ರಗಳನ್ನು ಚಿತ್ರಗಳ ಮೂಲಕ ಪರಿಚಯಿಸುವ ಈ ಕೃತಿಯು ಹೆಚ್ಚಿನದಾಗಿ ಇತಿಹಾಸ ಮತ್ತು ಶಿಲ್ಪ ಕ್ಷೇತ್ರಗಳಿಗೂ ನೀಡಿದ ಕಾಣಿಕೆಯಾಗಿದೆ. ಹೀಗೆ ಬೆಳೆದು ನಿಂತ ಶರಣ ಸಾಹಿತ್ಯ ಪರಿಷತ್ತು ಮಹಿಳೆಯರಿಗಾಗಿ 'ಕದಳಿ ವೇದಿಕೆ' ಹೆಸರಿನ ಘಟಕ ಅಸ್ತಿತ್ವಕ್ಕೆ ತಂದುದು ಗೊ.ರು.ಚ. ಅವರ ಪೂರ್ಣದೃಷ್ಟಿಗೆ ನಿದರ್ಶನವೆನಿಸಿದೆ.

ಗೊ.ರು.ಚ. ನಿಂತ ನೀರಲ್ಲ, ಹರಿಯುವ ತೊರೆ. ಇದಕ್ಕೆ ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿ ಮಾಡಿದ ಕಾರ್ಯ ಉದಾಹರಣೆಯಾಗಿದೆ. ಜನಪದ ಕ್ಷೇತ್ರವು ಮೊದಮೊದಲು ಕೃಷಿ ಸಂಸ್ಕೃತಿಯ ನಿಷ್ಪನ್ನಗಳಾದ ಹಾಡು, ಕುಣಿತ ಇತ್ಯಾದಿ ಕಲೆಗಳ ಪ್ರದರ್ಶನ, ಅಧ್ಯಯನಗಳಿಗೆ ಮಾತ್ರ ಸೀಮಿತವಾಗಿದ್ದಿತು. ಗೊ.ರು.ಚ. ಅವರು ಬುಡಕಟ್ಟು ಸಂಸ್ಕೃತಿಯತ್ತ ದೃಷ್ಟಿ ಹಾಯಿಸಿ, ಆ ಕ್ಷೇತ್ರದ ಸೀಮೆಯನ್ನು ಒಂದಿಷ್ಟು ವಿಸ್ತರಿಸಿದರು. ಇದೇ ರೀತಿ ಕರ್ನಾಟಕ ಮತ್ತು ಕರ್ನಾಟಕೇತರ ರಾಜ್ಯಗಳ ಜಾನಪದ ಕಲೆಗಳ ಪ್ರದರ್ಶನಕ್ಕೆ ಆದಾನ-ಪ್ರದಾನ ಅವಕಾಶ ಕಲ್ಪಿಸಿ, ನಮ್ಮ ರಾಜ್ಯದ ಕಲೆಗಳಿಗೆ ರಾಷ್ಟ್ರೀಯ ಪ್ರಚಾರ ಸಿಗುವಂತೆ ಶ್ರಮಿಸಿದರು. ಇವೆಲ್ಲವುಗಳಿಗೆ ಕಳಸವಿಟ್ಟಂತೆ ನಿವೃತ್ತಿ ಸಂದರ್ಭದಲ್ಲಿ 'ಜಾನಪದ ನಿಘಂಟು' ಸಂಪುಟಗಳನ್ನು ಪ್ರಕಟಿಸಿದರು.

ಮೂಲತಃ ಗ್ರಾಮೀಣ ಪರಿಸರದ ಗೊ.ರು.ಚ. ಅವರು ಹೀಗೆಯೇ ಉದ್ದಕ್ಕೂ ಜಾನಪದ ಕ್ಷೇತ್ರ ಬದುಕುವುದಕ್ಕಾಗಿ, ಬೆಳೆಯುವುದಕ್ಕಾಗಿ ಶ್ರಮಿಸುತ್ತ ಬಂದರು. ತರೀಕೆರೆಯಲ್ಲಿ ಪ್ರಥಮ ಜಾನಪದ

ಸಮ್ಮೇಲನ ಜರುಗಿಸಿ "ಹೊನ್ನು ಬಿತ್ತೇವು ಹೊಲಕೆಲ್ಲ" ಗ್ರಂಥ ಪ್ರಕಟಿಸಿ ಏಕಕಾಲಕ್ಕೆ ಸಮ್ಮೇಳನ–ಪ್ರಕಟನೆಗಳೆಂಬ ಎರಡು ಮಾದರಿಗಳನ್ನು ನಮ್ಮ ಮುಂದೆ ಸ್ಥಾಪಿಸಿದರು. ಬೀಜರೂಪದ ಈ ಘಟನೆ ವಿಶ್ವವಿದ್ಯಾಲಯಗಳಲ್ಲಿ ಜಾನಪದ ವಿಭಾಗಗಳಾಗಿ ಪಲ್ಲವಿಸಿ, ಜಾನಪದ ಅಕಾಡೆಮಿಯಾಗಿ ಕುಸುಮಿಸಿ, ಜಾನಪದ ವಿಶ್ವವಿದ್ಯಾಲಯವೆಂಬ ಫಲಬಿಟ್ಟಿತು.

ಹೀಗೆ ಕನ್ನಡ ಸಂಸ್ಕೃತಿಯನ್ನು ಬಹುಮುಖಿಯಾಗಿ ಕಟ್ಟುವಲ್ಲಿ ಉದ್ದಕ್ಕೂ ಶ್ರಮಿಸುತ್ತ ಬಂದ ಮುಖ್ಯರಲ್ಲಿ ಒಬ್ಬರಾಗಿರುವ ಗೊ.ರು.ಚ. ಅವರು ನಮ್ಮ ನಾಡಿನ ಒಬ್ಬ "ಸೃಜನಶೀಲ ಪರಿಚಾರಕ" ರಾಗಿದ್ದಾರೆ.

---

* ಹಳ್ಳಿಯ ಬಳ್ಳಿ : ಗೊ.ರು.ಚ. ಅಭಿನಂದನ ಸಂಪುಟ, ಬೆಂಗಳೂರು–೨೦೧೪.

ಆಕರ : ಮಾರ್ಗ ಸಂಪುಟ–೮

■■

೧೨೭

ಕಾಡಿನಲ್ಲಿ ಬೆಳೆದ ಕಲ್ಪವೃಕ್ಷ

೨೦೧೪

೧೯೯೩.

ಸರ್, ಇಲ್ಲಿ ಡಾ. ಕಲಬುರ್ಗಿಯವರು ಎಲ್ಲಿ ಇದ್ದಾರೆ? ನನ್ನ ಜೊತೆ ಬನ್ನಿ, ತೋರಿಸುತ್ತೇನೆ. ಹೀಗೆ ಕರೆದುಕೊಂಡು ಬಂದು, ಕೋಣೆ ಪ್ರವೇಶಿಸಿ, ಖುರ್ಚಿಯಲ್ಲಿ ಕುಳಿತು, 'ನಾನೇ ಕಲಬುರ್ಗಿ' ಎಂದು ಹೇಳಿದೆ. ಜೊತೆಯಲ್ಲಿ ಬಂದವರು ಹೌಹಾರಿದರು. ಕ್ಷಮಿಸಿ ಸರ್, ನನಗೆ ಗೊತ್ತಾಗಲಿಲ್ಲ. ಪರವಾಗಿಲ್ಲ, ಹೇಳಿ. ನಾನು ಬೆಳಗಲ್ಲು ವೀರಣ್ಣ. ಜನಪದ ಕಲಾವಿದ. ತೊಗಲುಗೊಂಬೆಯಾಟ ನನ್ನ ವೃತ್ತಿ. ನಿಮಗೆ ಎಡ್ರಾಮನಹಳ್ಳಿ ದೊಡ್ಡಭರಮಪ್ಪ ಗೊತ್ತಿದ್ದಾರೆ? ಗೊತ್ತಿದ್ದಾರೆ. ಸರ್, ಅವರು ನನ್ನ ಮಾವ. ದೊಡ್ಡ ಕಲಾವಿದರು. ಹಾಗಾದರೆ ದೊಡ್ಡ ಕಲಾವಿದ ಮಾವ, ನೀವು ದೊಡ್ಡ ಕಲಾವಿದ ಅಳಿಯ. ಹಾಗೇನೂ ಇಲ್ಲ ಸರ್, ಏನೋ ಸ್ವಲ್ಪ.....ಇರಲಿ, ನನ್ನ ಹತ್ತಿರ ಏನು ಕೆಲಸ?

ಕಿತ್ತೂರು ಚೆನ್ನಮ್ಮನನ್ನು ಕುರಿತು ತೊಗಲುಗೊಂಬೆ ಆಟ ಸಿದ್ಧಪಡಿಸಬೇಕೆಂದಿದ್ದೇನೆ. ಚಾರಿತ್ರಿಕ ಸಂಗತಿಗಳು ಬೇಕು.

ಈವರೆಗೆ ಪ್ರಚಾರದಲ್ಲಿರುವುಗಳನ್ನು ಬಿಟ್ಟರೆ ಹೊಸ ಸಂಗತಿಗಳು ಬೆಳಕಿಗೆ ಬಂದಿಲ್ಲ. ಪ್ರಚಲಿತ ಸಂಗತಿಗಳನ್ನೇ ಬಳಸಿಕೊಂಡು ಒಂದು ಆಟ ಸಿದ್ಧಪಡಿಸಬಹುದು. ಇದಕ್ಕಿಂತ ಹೆಚ್ಚಿಗೆ ಏನೂ ಹೇಳಲಾರೆ.

ಹಾಗಿದ್ದರೆ, ಇಷ್ಟೇ ಮಹತ್ವದ ಇನ್ನೊಂದು ವಿಷಯವಿದ್ದರೆ ತಿಳಿಸಿರಿ.

ಈ ರೀತಿಯ ಸಂವಾದದ ಕೊನೆಯಲ್ಲಿ ನಾನು 'ಬಸವಣ್ಣನವರ' ವಿಷಯ ಸೂಚಿಸಿದೆ. ತುಂಬ ಹರ್ಷಿತರಾದ ವೀರಣ್ಣ ತನ್ನ ಕಂಚಿನ ಕಂಠದಿಂದ ಕೆಲವು ವಚನ ಹೇಳಿ, ವ್ಯಾಖ್ಯಾನಿಸಿದರು. ಕನ್ನಡ ಅಧ್ಯಯನ ಪೀಠದ ಮೂರು ಅಂತಸ್ತು, ಮೂವತ್ತು ಕೋಣೆಗಳು ಪ್ರತಿಧ್ವನಿಸಿದವು. ಆ ಸಂದರ್ಭ "ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು" ಎಂಬಂತಿದ್ದಿತು. ಆಮೇಲೆ ತಾವು ಕೇಂದ್ರ ಸಂಗೀತ ನಾಟಕ ಅಕಾಡೆಮಿ ಅಡಿಯಲ್ಲಿ 'ಭಾರತ ಸ್ವಾತಂತ್ರ ಸಂಗ್ರಾಮ', ಇಂದಿರಾಗಾಂಧಿ

ಪ್ರತಿಷ್ಠಾನದ ಅಡಿಯಲ್ಲಿ 'ಬಾಪೂಜಿ' ಗೊಂಬೆಯಾಟ ಸಿದ್ಧಪಡಿಸಿ, ಉತ್ತರ ಭಾರತದಲ್ಲಿ ಪ್ರದರ್ಶನ ಪೂರೈಸಿದುದನ್ನು ಹೇಳುತ್ತಲೇ, ವೀರಣ್ಣನವರ ವಿಸ್ತರ ಅರ್ಥವಾಯಿತು. ಇವರು ಬಸವಣ್ಣನನ್ನು ಈ ಕಲಾಮಾಧ್ಯಮದಲ್ಲಿ ಸರಿಯಾಗಿ ಪ್ರಕಟಿಸಬಲ್ಲರೆಂಬ ವಿಶ್ವಾಸ ನನ್ನದಾಯಿತು. ಶರಣ ಚಳುವಳಿಯ ಸಿದ್ಧಾಂತ, ವಸ್ತು, ಘಟನೆ, ಪಾತ್ರ ಇತ್ಯಾದಿಗಳನ್ನು ವಿವರಿಸಿದೆ. ಇದರ ಕಥಾವಿನ್ಯಾಸವನ್ನು ವೀರಣ್ಣ ಒಪ್ಪಿಕೊಂಡರು.

ನನಗೆ ಗೊಂಬೆಯಾಟದವರ ಬಡತನ ಗೊತ್ತಿದ್ದಿತು. ಇಬ್ಬರೂ ಸೇರಿ ಇದಕ್ಕೆ ಅವಶ್ಯವಿರುವ ಖರ್ಚು-ವೆಚ್ಚ ಸಿದ್ಧಪಡಿಸಿದೆವು. ೨೫ ಸಾವಿರ ರೂಪಾಯಿ. ಮುಂದಿನ ವಾರ ಇಬ್ಬರೂ ಮತ್ತೆ ಸೇರುವುದೆಂದು ನಿಶ್ಚಯಿಸಿದೆವು.

ಈ ಎಲ್ಲ ವಿಷಯ ಗದುಗಿನ ಶ್ರೀ ತೋಂಟದಾರ್ಯಮಠದ ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳಿಗೆ ನಿವೇದಿಸಿದೆ. ಒಂದು ವಾರದ ಬಳಿಕ ಬಳ್ಳಾರಿಯಿಂದ ವೀರಣ್ಣ ಬಂದರು. ಗದುಗಿನಿಂದ ೨೫ ಸಾವಿರ ರೂಪಾಯಿ ಬಂದವು. ಹಣ ವೀರಣ್ಣನವರ ಕೈ ಸೇರಿತು. ಕೆಳಗಿನ ನಿಯಮ ರೂಪಿಸಿದೆವು.

೧. ಶ್ರೀ ಜಗದ್ಗುರು ತೋಂಟದಾರ್ಯಮಠ ಗದಗ, ಇವರ ಪ್ರಾಯೋಜಕತ್ವದ ಹೆಸರನ್ನು ಕರಪತ್ರದಲ್ಲಿ ಮುದ್ರಿಸಬೇಕು. ಆಟದ ಆರಂಭ-ಮುಕ್ತಾಯದಲ್ಲಿ ಈ ಹೆಸರು ಪರದೆಯ ಮೇಲೆ ಕಾಣಿಸಬೇಕು.
೨. ನಾವು ಚರ್ಚಿಸಿ ವಿನ್ಯಾಸಗೊಳಿಸಿದ ಕಥೆಯನ್ನು ಕೃತಿಗಿಳಿಸಬೇಕು. ಹೆಸರು "ಪ್ರವಾದಿ ಬಸವೇಶ್ವರ" ಇರಬೇಕು.
೩. ಒಂದು ನೂರು ಪ್ರಯೋಗ ಪ್ರದರ್ಶಿಸುವುದು ಕಡ್ಡಾಯ. ಆಮೇಲೆ ಪ್ರಯೋಗ ಮುಂದುವರಿಸುವುದು ಬಿಡುವುದು ಕಲಾವಿದರಿಗೆ ಬಿಟ್ಟುದು.
೪. ಒಂದು ಪ್ರದರ್ಶನಕ್ಕೆ ಸಂಭಾವನೆ ೧೧ ನೂರು ರೂಪಾಯಿ, ಇದರಲ್ಲಿ ಭಾಗಶಃ ಹಣ ಕಲಾವಿದರು ಉಪಜೀವನಕ್ಕೆ ಬಳಸಿ, ಮಿಕ್ಕುದನ್ನು ಕಲಬುರ್ಗಿಯವರಿಗೆ ಕಳಿಸುತ್ತ ಹೋಗಬೇಕು. ಹೀಗೆ ಕಳಿಸಿದ ಹಣವನ್ನು ಧಾರವಾಡ ಬ್ಯಾಂಕಿನಲ್ಲಿ ಪ್ರತ್ಯೇಕ ಖಾತೆ ತೆಗೆದು ಡಿಪಾಜಿಟ್ ಮಾಡಬೇಕು.

ಇವೇ ಮೊದಲಾದ ನಿಯಮ ರೂಪಿಸಿದೆವು. ತುಮಕೂರಿನ ನಿಸರ್ಗಪ್ರಿಯ ರೂಪಿಸಿಕೊಟ್ಟ ನಾಟಕದ ಕರುಡುಪ್ರತಿಯನ್ನು ವೀರಣ್ಣ, ನಾನು ಪರಿಷ್ಕರಿಸಿದೆವು. ನಾನು ಕರಪತ್ರ ಸಿದ್ಧಪಡಿಸಿದೆ. ವೀರಣ್ಣ ಚರ್ಮದ ಬಣ್ಣಗಾರಿಕೆಯವರ ಸಹಕಾರದಿಂದ ಶರಣ-ಶರಣೆಯರ, ಹಿನ್ನೆಲೆ ಸಂದರ್ಭದ ಗೊಂಬೆ ತಯಾರಿಸಿದರು. ವೀರಣ್ಣನ ಕುಟುಂಬವರ್ಗದವರು, ಹೆಂಡತಿ, ನಾಲ್ವರು ಗಂಡು ಮಕ್ಕಳು, ಒಬ್ಬಳು ಮಗಳು ಮತ್ತು ಸಹ ಕಲಾವಿದರು ಗೊಂಬೆ, ವಾದ್ಯ, ಪರದೆ ಪರಿಕರ ಹೊತ್ತುಕೊಂಡು ಗದುಗಿನ ಮಠಕ್ಕೆ ಬಂದರು.

ಜಗದ್ಗುರುಗಳ ಸನ್ನಿಧಿಯಲ್ಲಿ ಮೊದಲ ಪ್ರದರ್ಶನ, ನನ್ನ ಪ್ರಸ್ತಾವನೆ, ವೀರಣ್ಣ ಮೇಳದಿಂದ ಕಲಾವಿದರ ಸಿದ್ಧತೆ, ದೊಡ್ಡ ಸಂಖ್ಯೆಯಲ್ಲಿ ಹೆಣ್ಣು-ಗಂಡು ಪ್ರೇಕ್ಷಕರು, ಆರಂಭದ ಪ್ರಾರ್ಥನೆಯಿಂದಲೇ

ಆಟ ಪ್ರೇಕ್ಷಕರನ್ನು ಸೆರೆ ಹಿಡಿಯಿತು. ಸ್ಫುಟವಾದ ಗೀತ, ತರ್ಕಬದ್ಧ ಮಾತು, ಗೊಂಬೆಗಳ ಸಮರ್ಪಕ ಅಭಿನಯ ಇತ್ಯಾದಿಗಳಿಂದ ಪ್ರದರ್ಶನ 'ನ ಭೂತೋ ನ ಭವಿಷ್ಯತಿ' ಎನಿಸಿತು.

ಮರು ವಾರದಿಂದಲೇ 'ಪ್ರವಾದಿ ಬಸವೇಶ್ವರ' ತೊಗಲುಗೊಂಬೆ ಆಟದ ಅಶ್ವಮೇಧ ಯಾತ್ರೆ ಆರಂಭವಾಯಿತು. ರಾಜ್ಯದ ಈ ತುದಿಯಿಂದ ಆ ತುದಿಯುವರೆಗೆ ಪ್ರದರ್ಶನಗಳು ಉತ್ತಮೋತ್ತಮಗೊಳ್ಳುತ್ತ ನಡೆದವು. ಜನರ ಬಾಯಿಯಲ್ಲಿ, ಪತ್ರಿಕೆಯ ಪುಟಗಳಲ್ಲಿ 'ಪ್ರವಾದಿ ಬಸವೇಶ್ವರ'ದ ಮಾತು ಪ್ರತಿಧ್ವನಿಸತೊಡಗಿತು. ೨ ವರ್ಷ ಉರುಳಿದವು.

ನೂರನೆಯ ಪ್ರದರ್ಶನ ಮತ್ತೆ ಗದುಗಿನ ಮಠದಲ್ಲಿ. ಇನ್ನೊಮ್ಮೆ 'ನ ಭೂತೋ ನ ಭವಿಷ್ಯತಿ' ಅನುಭವ. ಈ ಹೊತ್ತಿಗೆ ಬ್ಯಾಂಕಿನಲ್ಲಿ ೨೫ ಸಾವಿರ ರೂಪಾಯಿ ಸಂಗ್ರಹವಾಗಿತ್ತು. ಪೂಜ್ಯರ ಹಸ್ತದಿಂದ ಹಣ ವೀರಣ್ಣನವರಿಗೆ ಹಸ್ತಾಂತರಗೊಂಡಿತು. ಮಗಳು ಲಕ್ಷ್ಮೀಯ ವಿವಾಹ ಈ ಹಣದಿಂದ ಸುಸೂತ್ರವಾಗಿ ಜರುಗಿತು.

ಬಸವ ಸಿದ್ಧಾಂತದ ಪ್ರಸಾರ, ಕಲೆಯ ಪ್ರಚಾರ, ಕಲಾವಿದರ ಕುಟುಂಬಕ್ಕೆ ಆಧಾರ ಇತ್ಯಾದಿ ನೆಲೆಗಳಲ್ಲಿ ನಾವೆಲ್ಲ ನಡೆದ-ದುಡಿದ ರೀತಿ ನಮ್ಮೆಲ್ಲರ ಜೀವನದ ಅಪೂರ್ವ ಅಧ್ಯಾಯ.

ಹೀಗೆ ವೀರಣ್ಣ ಮತ್ತು ನನ್ನ ಸಂಬಂಧ ಅರ್ಥಪೂರ್ಣವಾಗಿ ಬೆಳೆಯಿತು. ನಾನು ಅವರ ಮೇಳದ ಸದಸ್ಯನಾದೆ, ಅವರ ಕುಟುಂಬದ ಸದಸ್ಯನೇ ಆದೆ. ವಿಶ್ವವಿದ್ಯಾಲಯದ ಪ್ರಾಧ್ಯಾಪಕನೊಬ್ಬ ಜಾನಪದಕ್ಕೆ ಹೇಗೆ ಸೇವೆ ಸಲ್ಲಿಸಬೇಕೆಂಬುದಕ್ಕೆ ಇದು ನನಗೆ ಉದಾಹರಣೆಯಾಗಿ ಪರಿಣಮಿಸಿತು. ದಿನಗಳೆದಂತೆ ವೀರಣ್ಣನವರಲ್ಲಿ ಅಡಗಿರುವ ಕಲೆಗೆ ನಾನು ಬೆರಗಾಗುತ್ತ ನಡೆದೆ. ಇವರು ಕೇವಲ ಒಬ್ಬ ಕಲೆಗಾರನಲ್ಲ. ಕನಸುಗಾರ ಎಂದು ಮನವರಿಕೆಯಾಯಿತು. ಈ ಮನವರಿಕೆಗೆ ಸಾಕ್ಷಿಯೆಂಬಂತೆ ವೀರಣ್ಣ ಹೊಸ ಹೊಸ ಪ್ರಯೋಗ ಕೈಗೆತ್ತಿಕೊಂಡರು. ರಾಜ್ಯ ಸರಕಾರ, ಕೇಂದ್ರ ಸರಕಾರಗಳಿಂದ ನೆರವು ಪಡೆದು ಬೇರೆ ಬೇರೆ ಕಥಾಪ್ರಸಂಗಗಳನ್ನು ಸಿದ್ಧಪಡಿಸಿ, ಅನೇಕ ರಾಜ್ಯಗಳಲ್ಲಿ ಪ್ರದರ್ಶಿಸಿದರು. ದೇಶ ದಾಟಿ ವಿದೇಶಕ್ಕೂ ಕಲಾಯಾತ್ರೆ ಹಬ್ಬಿತು. ಕಾಡಿನಲ್ಲಿ ಬೆಳೆದ ಕಲ್ಪವೃಕ್ಷವೆಂದು ಕರ್ನಾಟಕದ ಜನ ವೀರಣ್ಣನವರನ್ನು ಗುರುತಿಸಿತು. ಆಗ ಸಹಜವಾಗಿಯೇ ಅವರನ್ನು ಹುಡುಕುತ್ತ ಬಂದಿತು ಕರ್ನಾಟಕ ಸರಕಾರದ ಒಂದು ಲಕ್ಷ ರೂಪಾಯಿ ಮೌಲ್ಯದ 'ಜಾನಪದ ಶ್ರೀ' ಪ್ರಶಸ್ತಿ.

---

* ಕಲಾಧೀಮಂತ (ಬೆಳಗಲ್ಲು ವೀರಣ್ಣ ಅವರ ಜೀವನ ಸಾಧನೆಗಳ ಅವಲೋಕನ), ಅಂಶು ಪ್ರಕಾಶನ, ಬಳ್ಳಾರಿ-೨೦೧೪.

ಆಕರ : ಮಾರ್ಗ ಸಂಪುಟ-೮

೧೨೮

ಹೆಸರಿಗೆ ತಕ್ಕ ವ್ಯಕ್ತಿತ್ವ

ಎ.ವಿ. ಪ್ರಸನ್ ನನ್ನ ಆಪ್ತವಲಯದ ಮುಖ್ಯರಲ್ಲಿ ಮುಖ್ಯರು. ನನ್ನದು ಶಿಕ್ಷಣಕ್ಷೇತ್ರ, ಅವರದು ಆಡಳಿತ ಕ್ಷೇತ್ರ. ಹೀಗಿದ್ದೂ ನಮ್ಮಿಬ್ಬರನ್ನು ಹತ್ತಿರಕ್ಕೆ ತಂದವನು ಮಹಾಕವಿ ಕುಮಾರವ್ಯಾಸ.

ನಾನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಸಂದರ್ಭ. ಉನ್ನತ ಶಿಕ್ಷಣ ಸಚಿವರಿಂದ ಪತ್ರವೊಂದನ್ನು ಪಡೆಯಲು ನಾನು ವಿಧಾನಸೌಧಕ್ಕೆ ಹೋಗಿದ್ದ ಪ್ರಸಂಗ.

"ನಾನು ಎ.ವಿ.ಪ್ರಸನ್ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿ. ಸಚಿವರು ನಿಮಗೆ ಈ ಪತ್ರ ಕೊಡಲು ತಿಳಿಸಿ ಇದೀಗ ದಿಲ್ಲಿ ಪ್ರಯಾಣಕ್ಕಾಗಿ ವಿಮಾನ ನಿಲ್ದಾಣಕ್ಕೆ ಹೋದರು. ಅವಸರದಲ್ಲಿ ಪತ್ರಕ್ಕೆ ಸಹಿಹಾಕುವುದನ್ನು ಮರೆತಿದ್ದು, ನಾವಿಬ್ಬರೂ ವಿಮಾನ ನಿಲ್ದಾಣಕ್ಕೆ ಹೋಗಿ ಸಹಿಪಡೆಯೋಣ ನಡೆಯಿರಿ" ಎನ್ನುತ್ತ ನನ್ನನ್ನು ಕರೆದುಕೊಂಡು ಹೊರಟರು.

"ಸಚಿವರು ದಿಲ್ಲಿಯಿಂದ ಬಂದ ಬಳಿಕ ಸಹಿ ಮಾಡಿಸಲಾಗುವುದು. ಆ ಬಳಿಕ ನೀವು ಈ ಪತ್ರ ಪಡೆಯಬಹುದು" ಎಂಬ ಅಧಿಕಾರಿಗಳ ಶೈಲಿಯಲ್ಲಿ ಹೇಳದಿರುವುದನ್ನು ಕಂಡು ವಿಚಿತ್ರವೆನಿಸಿತು.

ಇಬ್ಬರೂ ಕಾರ್ ಹತ್ತಿದೆವು. ಇದು ನಮ್ಮ ಮೊದಲ ಭೇಟಿಯಾಗಿದ್ದ ಕಾರಣ ಕುಲಪತಿಯಾಗಿ ನಾನು ಗಂಭೀರವಾಗಿಯೇ ಕುಳಿತಿದ್ದೆ. ಪ್ರಸನ್ ಅವರು ಮಾತಿಗೆ ಆರಂಭಿಸುತ್ತ, ಕುಮಾರವ್ಯಾಸನನ್ನು ಬಿಚ್ಚಿದರು. ನನ್ನ ಪ್ರೀತಿಯ ಕವಿಯ ಬಗ್ಗೆ ಕೇಳುತ್ತ ಕೇಳುತ್ತ ಕರಗಿ ಹೋದೆ. "ಸರ್, ನೀವು ಕುಮಾರವ್ಯಾಸನ ಭಕ್ತರೆಂದು ಕೇಳಿದ್ದೇನೆ. ನಿಮ್ಮೊಂದಿಗೆ ಚರ್ಚಿಸುವ ಉದ್ದೇಶದಿಂದ ಈ ನಿಲ್ದಾಣ ಪ್ರಯಾಣ ಸೃಷ್ಟಿಸಿಕೊಂಡಿದ್ದೇನೆ" ಎಂದು ಮುಗ್ಧವಾಗಿ ಹೇಳಿಬಿಟ್ಟರು. ಆ ವಿದ್ವತ್ತು, ಈ ವಿನಯಗಳು ನನ್ನನ್ನು ತಕ್ಷಣ ಬಂಧಿಸಿದವು. ಸಚಿವರಿಂದ ಸಹಿ ಪಡೆದು ಹಿಂದಿರುಗಿದೆವು. ಗಮನ ನಿರ್ಗಮನಗಳ ಉದ್ದಕ್ಕೂ ಅವರು ಉದಾಹರಿಸಿದ ಪದ್ಯಗಳು, ಅವುಗಳಿಗೆ ನೀಡಿದ ವ್ಯಾಖ್ಯಾನ, ಭಾಷೆಯ ಪ್ರಭುತ್ವ ತರ್ಕಬದ್ಧ ಮಾತುಗಾರಿಕೆ ನನ್ನ ತಪ್ಪನ್ನು ತಿದ್ದುವ ನಯ, ತಮ್ಮ ತಪ್ಪನ್ನು ತಿದ್ದಿಕೊಳ್ಳುವ ವಿನಯ ಇತ್ಯಾದಿಗಳಿಗಾಗಿ ಸಹಿಸಂದರ್ಭವು ಸಾಹಿತ್ಯ ಗೋಷ್ಠಿಯಾಗಿ ಪರಿಣಮಿಸಿತು.

ಆಕ್ಷಣದಿಂದ ಇಂದಿನ ವರೆಗೆ ಕುಮಾರವ್ಯಾಸ, ರನ್ನ, ರಾಘವಾಂಕ, ಪಂಪ–ಹೀಗೆ ಕನ್ನಡದ ಕವಿಗಳು ನಮ್ಮ ಬಂಧನವನ್ನು ಬಿಗಿಗೊಳಿಸುತ್ತ ಬಂದಿದ್ದಾರೆ. ನಮ್ಮಿಬ್ಬರ ಈ ಸಂಬಂಧಕ್ಕೆ

ಪೂರಕವೆಂಬಂತೆ ಪ್ರಸನ್ ಅವರ ಶ್ರೀಮತಿ ನಿರ್ಮಲಾ ಅವರು ಪ್ರಸಿದ್ಧ ಗಮಕಿಗಳು. ಮಕ್ಕಳಾದ ಅಶ್ವಿನ್, ಶಿಲ್ಪಾ ಸಾಹಿತ್ಯಾಸ್ತಕರು. ಈ ಕುಟುಂಬವನ್ನು ನೆನೆದಾಗಲೆಲ್ಲ ನನಗೆ "ಹಾಲು ತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು" ಎಂಬ ವಚನ ವಾಕ್ಯ ನೆನಪಾಗುತ್ತದೆ.

ಸರಕಾರ ಪ್ರಕಟಿಸಿದ ಕುಮಾರವ್ಯಾಸ ಭಾರತದ ಜನಪ್ರಿಯ ಆವೃತ್ತಿ, ಮಾರಾಟಕ್ಕೆ ಲಭ್ಯವಿರಲಿಲ್ಲ. ಇದರ ಮರು ಆವೃತ್ತಿ ಪ್ರಕಟಿಸುವುದು ಕನ್ನಡ ವಿಶ್ವವಿದ್ಯಾಲಯದ ಕರ್ತವ್ಯವೆಂದು ಭಾವಿಸಿ, ಸರಕಾರಕ್ಕೆ ಪತ್ರ ಬರೆದೆ, ಈ ವಿಷಯ ಗೊತ್ತಾಗುತ್ತಲೇ, ಪುಸ್ತಕ ಪ್ರಾಧಿಕಾರ ತಾನು ಪ್ರಕಟಿಸುವುದಾಗಿ ಸರಕಾರಕ್ಕೆ ಪ್ರಸ್ತಾವ ಕಳಿಸಿ, ಆ ಅವಕಾಶವನ್ನು ತನ್ನದಾಗಿಸಿಕೊಂಡಿತು. ಈ ಘಟನೆ ನನಗೆ ಒಂದು ಆಹ್ವಾನವಾಗಿ ಪರಿಣಮಿಸಿತು. ಕುಮಾರವ್ಯಾಸನ ದಶಪರ್ವಕ್ಕೆ ಬದಲು, ತಿಮ್ಮಣ್ಣನ ಎಂಟು ಪರ್ವವೂ ಒಳಗೊಂಡಂತೆ ಅಷ್ಟಾದಶಪರ್ವ ಭಾರತ ಪ್ರಕಟಿಸಲು ನಿರ್ಧರಿಸಿದೆ. ಈ ಗಜಗಾತ್ರದ ಕೃತಿಯನ್ನು ಪರಿಷ್ಕರಿಸುವ ಪಾಂಡಿತ್ಯ ಪರಿಶ್ರಮಗಳುಳ್ಳ ಸಮರ್ಥರ ಶೋಧದಲ್ಲಿ ತೊಡಗಿದೆ. ಆಗ ನನಗೆ ಮೊದಲು ನೆನಪಾದವರು ಶ್ರೀ ಪ್ರಸನ್.

ಯಾರೇ ಇರಲಿ. ಶಕ್ತ ಆಸಕ್ತರನ್ನು ಕನ್ನಡದ ಕೆಲಸಗಳಿಗೆ ಬಳಸಿಕೊಳ್ಳುವುದು ನನ್ನ ಜಾಯಮಾನ. ಅಂಥವರಲ್ಲಿರುವ ವಿದ್ವತ್ತು ಕನ್ನಡದ ಆಸ್ತಿಯೆಂದೇ ಭಾವಿಸುತ್ತ ಬಂದ ನಾನು ಪ್ರಸನ್ ಅವರನ್ನು ಈ ಕೆಲಸಕ್ಕೆ ಬಳಸಿಕೊಳ್ಳಲು ನಿರ್ಧರಿಸಿದೆ. ಆಡಳಿತ ಕ್ಷೇತ್ರದ ವ್ಯಕ್ತಿಯನ್ನು ಈ ಪಾಂಡಿತ್ಯದ ಕೆಲಸಕ್ಕೆ ಆಯ್ದುಕೊಂಡ ಬಗ್ಗೆ ಶಿಕ್ಷಣ ಕ್ಷೇತ್ರದ ಒಬ್ಬಿಬ್ಬರು ಗುಸುಗುಸು ಮಾತನಾಡಿದರು. ಆದರೆ ಪ್ರಸನ್ ಅವರಲ್ಲಿ ಕೇಂದ್ರೀಕೃತಗೊಂಡಿದ್ದ ನನ್ನ ಮನಸ್ಸು ಕದಲಲಿಲ್ಲ.

ನನ್ನ ನಿರ್ಧಾರವನ್ನು ಶ್ರೀ ಪ್ರಸನ್ ಅವರ ಮುಂದೆ ಮಂಡಿಸಿದೆ. ಈ ಅನಿರೀಕ್ಷಿತ ಆಮಂತ್ರಣದಿಂದ ಅವರು ಒಂದು ಕ್ಷಣ ಹಿಂಜರಿದರು."ನಾನು ಕುಮಾರವ್ಯಾಸನ ಗಮಕ ವ್ಯಾಖ್ಯಾನಕಾರ, ಪರಿಷ್ಕರಣ ಇತ್ಯಾದಿ ಶೈಕ್ಷಣಿಕ ಶಿಸ್ತುಗಳನ್ನು ನಿರ್ವಹಿಸಬಲ್ಲೆನೇ? ನನ್ನ ಕೈಬಿಡಿರಿ" ಎಂದು ವಿನಯದಿಂದಲೇ ಉತ್ತರಿಸಿದರು. " ಕನ್ನಡದ ಕೆಲಸ ಕಾರ್ಯಗಳಲ್ಲಿ ನಾನು ಅರ್ಜುನ. ಹೂಡಿದ ಗುರಿಯನ್ನು ಬದಲಿಸುವುದು ನನಗೆ ಗೊತ್ತಿಲ್ಲ. ಈಗ ನನ್ನ ಬಾಣಕ್ಕೆ ನೇತ್ರ ಗುರಿ ಮಾಡಬೇಕಾದವರು ನೀವು, ಮಾಡಿಸಬೇಕಾದವನು ನಾನು" ಎಂದು ಹೇಳಿ ಕೈಚಾಚಿದೆ. ಪ್ರಸನ್ ಅವರು ಕೈಮೇಲೆ ಕೈಹಾಕಿದರು; ಪರಿಷ್ಕರಣದ ಕುರುಕ್ಷೇತ್ರಯುದ್ಧ ಆರಂಭಿಸಿದರು. ಕುಮಾರವ್ಯಾಸ ಭಾರತ ಪ್ರಸನ್ ಅವರಿಗೆ ನೀರು ಕುಡಿದಷ್ಟು ಸಹಜ. ಕೇವಲ ಆರು ತಿಂಗಳಲ್ಲಿ ೧೨ ಸಾವಿರ ಭಾಮಿನಿ ಷಟ್ಪದಿಗಳ ಪರಿಷ್ಕರಣ ಕಾರ್ಯ, ಮುಂದಿನ ಆರು ತಿಂಗಳಲ್ಲಿ ಮುದ್ರಣಕಾರ್ಯ ಮುಗಿಸಿದರು. ರಾಯಲ್ ಆಕಾರದ (xxxii+ 1092) ಪುಟ ವ್ಯಾಪ್ತಿಯ ಈ ಗ್ರಂಥಕ್ಕೆ ಒಂದು ಸಾವಿರ ರೂಪಾಯಿ ಬೆಲೆ ನಿರ್ಧರಿಸಿ ಪ್ರಸಾರಾಂಗದ ನಿರ್ದೇಶಕರು ನನ್ನ ಮುಂದೆ ಕಡತ ಮಂಡಿಸಿದರು. ಜನಪ್ರಿಯ ಕವಿ ಕುಮಾರವ್ಯಾಸ ನೆನಪಾದ. ಈ ಕೃತಿ ಜನಸಾಮಾನ್ಯರಿಗೂ ಮುಟ್ಟಬೇಕೆಂದು ಮನಸ್ಸು ಹೇಳಿತು. "ಒಂದು ಸಾವಿರ ರೂಪಾಯಿ" ಶಬ್ದವನ್ನು ಹೊಡೆದು ಹಾಕಿ "ಇನ್ನೂರು ರೂಪಾಯಿ" ಎಂದು ಬರೆದು ಕಡತಕ್ಕೆ ಸಹಿಹಾಕಿದೆ. ಕುಲಸಚಿವ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ನಿರ್ದೇಶಕ ಡಾ. ನಾವಡ "ಸರ್..." ಎಂದು ನುಡಿದರೇ ವಿನಃ ಮಾತು ಮುಂದುವರಿಸಲಿಲ್ಲ. ಪುಸ್ತಕ ಬೆಳಕುಕಂಡಿತು. ನನ್ನ ಕುಲಪತಿ ಅವಧಿಯ

ಕೊನೆಯ ಗ್ರಂಥವಿದು. "ವೇದಪಾರಾಯಣದ ಫಲ"ವನ್ನು ಗಳಿಸಿದ ಭಾವನೆಯಿಂದ ವಿಶ್ವವಿದ್ಯಾಲಯದಿಂದ ನಿರ್ಗಮಿಸಿದೆ.

ಈ ಗ್ರಂಥದ ಪರಿಷ್ಕರಣಕಾರ್ಯದಲ್ಲಿ ಪ್ರಸನ್ ಅವರು, ಅವರ ಸಮಸ್ತ ಕುಟುಂಬವರ್ಗ ಒಂದು ದೊಡ್ಡ ಯಂತ್ರಗಳಂತೆ ದುಡಿದರು. ವಿದ್ವಜ್ಜನಪ್ರಿಯ ಕಾವ್ಯಕ್ಕೆ ಪಾಠಾಂತರ ಕಡಿಮೆ, ಜನಪ್ರಿಯ ಕಾವ್ಯಕ್ಕೆ ಹೆಚ್ಚು; ಅದರಲ್ಲಿಯೂ ಮನೆಮಾತಾಗಿರುವ ಕುಮಾರವ್ಯಾಸ ಭಾರತದಲ್ಲಿ ಪಾಠಾಂತರ ಅರಣ್ಯದಂತೆ ಬೆಳೆದಿದೆ. ಈ ಅರಣ್ಯಭೇದನ ಕಾರ್ಯದಲ್ಲಿ ಪ್ರಸನ್ ಅವರು ಗಜಪಥ ನಿರ್ಮಿಸಿದರು. ಮೊದಲು ಮೂಗುಮುರಿದ ವಿಶ್ವವಿದ್ಯಾಲಯ ಪ್ರಾಧ್ಯಾಪಕರು, ಪ್ರಕಟಿತ ಪುಸ್ತಕ ನೋಡಿ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಒಬ್ಬ ಕುಲಪತಿಗೆ ಇದಕ್ಕಿಂತ ಹೆಚ್ಚಿನ ಹೆಮ್ಮೆ ಯಾವುದಿದೆ?

ಈ ವರೆಗೆ ಸಾರ್ವಜನಿಕ ಸಭೆಯ ಗಮಕವ್ಯಾಖ್ಯಾನಕಾರರಾಗಿದ್ದ ಪ್ರಸನ್ ಅವರಲ್ಲಿ ಇದರಿಂದಾಗಿ ಶೈಕ್ಷಣಿಕ ಶಿಸ್ತು ಭರವಸೆಗಳು ಮೂಡಿದವು. ಆಗ ಅವರು ಲೇಖಕರಾಗಿ ಬಯಸಿ ಡಿ.ಲಿಟ್. ಅಧ್ಯಯನದತ್ತ ಹೊರಳಿದರು. "ಕುಮಾರವ್ಯಾಸನ ಕಾವ್ಯಚಿತ್ರಗಳು" ವಿಷಯವನ್ನು ಕುರಿತು ಎರಡು ವರ್ಷಗಳಲ್ಲಿ ಅಧ್ಯಯನ ಪೂರೈಸಿ ಪದವಿ ಪಡೆದರು. ಓದುವ ಕೇಳುವ ಕಾವ್ಯದಲ್ಲಿ ಹುದುಗಿದ್ದ ನೋಡುವ ಚಿತ್ರಗಳನ್ನು ಬಿಡಿಸಿ ತೋರಿಸಿದ ಈ ಮಹಾಪ್ರಬಂಧವನ್ನು ಮರುವರ್ಷವೇ ಅಚ್ಚಿಸಿ ನನ್ನಿಂದ ಬಿಡುಗಡೆ ಮಾಡಿಸಿದರು. ಅಂದು ಒಂದು ಉತ್ತಮ ಪ್ರಬಂಧ ಬಿಡುಗಡೆ ಮಾಡಿದ ಹರ್ಷ ನನ್ನದಾಯಿತು.

ನ್ಯೂಝಿಲ್ಯಾಂಡಿನಲ್ಲಿ ಕನ್ನಡಿಗರೊಬ್ಬರು ಭೆಟ್ಟಿಯಾಗಿ, ತಾವೆ ರೆಕಾರ್ಡ್ ಮಾಡಿಕೊಂಡಿರುವ ಗದಾಯುದ್ಧ ಸಿ.ಡಿಯನ್ನು ನಾನು ಕೇಳಬೇಕೆಂದು ಒತ್ತಾಯಿಸಿದ್ದರು. ಅದರ ವ್ಯಾಖ್ಯಾನ ವಿಶೇಷತೆಯನ್ನು ಹೊಗಳಿದರು. ಮರುದಿನ ಅದನ್ನು ಕೇಳುತ್ತಲೇ ಪರಿಚಿತಧ್ವನಿ! ಪ್ರಸನ್ ಅವರದು!! ನನಗೆ ವಿದೇಶದಲ್ಲಿಯೇ ಅವರನ್ನು ನೋಡಿದಷ್ಟು ಸಂತೋಷ. ಅಲ್ಲಿ ಇರುವಷ್ಟು ಕಾಲವೂ ಅದನ್ನು ಮತ್ತೆ ಮತ್ತೆ ಕೇಳಿದೆ. ನವನವೋನ್ಮೇಷಶಾಲಿಯಾಗಿ ಅವರ ವ್ಯಾಖ್ಯಾನ, ಆಪ್ತಧ್ವನಿ ನನ್ನ ಪರದೇಶೀತನವನ್ನು ದೂರಮಾಡಿದವು.

ಇತ್ತೀಚೆ ಬೆಂಗಳೂರಿನ ಇಸ್ಕಾನ್ ಆವರಣದಲ್ಲಿ ಕುಮಾರವ್ಯಾಸನನ್ನು ಕುರಿತು ವಿಚಾರ ಸಂಕಿರಣ ವೇದಿಕೆಯ ಮೇಲೆ ನನ್ನೊಂದಿಗೆ ಶ್ರೀ ಪ್ರಸನ್ ಸಹಿತ ಅನೇಕರಿದ್ದರು, ಸಮಾರೋಪ ಭಾಷಣ ಮಾಡುತ್ತ 'ಕುಮಾರವ್ಯಾಸ ಭಾರತದ ಅಧಿಕೃತ ಪರಿಷ್ಕರಣ ಅಗತ್ಯವಿದೆ' ಎಂದು ಹೇಳಿದೆ. ಬಳಿಕ ಮಾತನಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಶ್ರೀ ಅಗ್ರಹಾರ ಕೃಷ್ಣಮೂರ್ತಿ ಅವರು "ಕಲಬುರ್ಗಿಯವರು ಸಂಪಾದಕರಾಗುವುದಾದರೆ ಕೇಂದ್ರಸಾಹಿತ್ಯ ಅಕಾಡೆಮಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದು" ಎಂದು ಘೋಷಿಸಿದರು. ಈ ಅನಿರೀಕ್ಷಿತ ಆಮಂತ್ರಣ ಪ್ರಕಟವಾಗುತ್ತಲೆ ಪ್ರಸನ್ ಅವರ ಸಹಾಯವಿಲ್ಲದೆ ಇದು ಸಾಧ್ಯವಿಲ್ಲವೆಂಬಂತೆ ನಾನು ಅವರತ್ತ ನೋಡಿದೆ. ನನ್ನ ಇಂಗಿತವನ್ನು ಅರ್ಥಮಾಡಿಕೊಂಡ ಸಭಿಕರಿಂದ ಅನುಮೋದನೆಯ ಚಪ್ಪಾಳೆ ಸುರಿಮಳೆ.

ಇವೆಲ್ಲ ನಮ್ಮಿಬ್ಬರಿಗೆ ಸಂಬಂಧಿಸಿದ ಕೆಲವು ಪ್ರಸಂಗಗಳು. ಇವುಗಳನ್ನು ಹೊರತುಪಡಿಸಿ ನಾವು ಆಗಾಗ ಭೆಟ್ಟಿಯಾಗಿದ್ದೇವೆ. ಆ ಸಮಯದಲ್ಲಿ ನಮ್ಮ ಕಾಲಕ್ಷೇಪದ ವಸ್ತು ಕುಮಾರವ್ಯಾಸ. ಈ ಚರ್ಚೆಯಲ್ಲಿ ಒಮ್ಮೆ ನಾನು ಮತ್ತೊಮ್ಮೆ ಅವರು ಸೋತಿದ್ದೇವೆ, ಸೋತು ಗೆದ್ದಿದ್ದೇವೆ.

ಇದೆಲ್ಲವನ್ನೂ ಹೊರತುಪಡಿಸಿ ಹೇಳಬೇಕಾದ ಒಂದು ವಿಷಯವಿದೆ. ಅದು–ಪ್ರಸನ್ ಅವರ ವ್ಯಕ್ತಿತ್ವ, ಅವರು ಸರಕಾರವೆಂಬ ಕೆಸರಿನಲ್ಲಿ ಅರಳಿದ ಕಮಲ. ಅಂದ ಮತ್ತು ಗಂಧ ಕಮಲದ ಗುಣವಿಶೇಷ, ಈ ವಿಶೇಷತೆಯಿಂದಾಗಿ ಅವರದು ಹೆಸರಿಗೆ ತಕ್ಕ ವ್ಯಕ್ತಿತ್ವ.

ಆಕರ : ಮಾರ್ಗ ಸಂಪುಟ–೮

೧೨೯

ಕ್ರಿಯಾಶಕ್ತಿ

೨೦೧೬

ಇಂದು ಮಾತು ಮುಖ್ಯವಾಗಿ ಕೃತಿ ಮೂಲೆಗೆ ಸರಿಯುತ್ತಲಿದೆ ಸರಕಾರಿ ಇಲಾಖೆಗಳಲ್ಲಿ ಈ ರೀತಿಯ ಸೋಮಾರಿತನ ಇನ್ನೂ ಬೆಳೆದಿದ್ದು, ಇಂಥ ಸಂದರ್ಭದಲ್ಲಿ ತಮ್ಮ ಕ್ರಿಯಾಶೀಲತೆಯ ಮೂಲಕ ಡಾ. ವೆಂಕಟೇಶಯ್ಯ ಎದ್ದು ಕಾಣುವ ಅಧಿಕಾರಿಗಳಾಗಿದ್ದಾರೆ. ಈ ಮನೋಧರ್ಮ ಕಾರಣವಾಗಿ ಇವರು ನನ್ನ ಆಪ್ತವಲಯದ ವ್ಯಕ್ತಿಗಳೆನಿಸಿದ್ದಾರೆ.

ಸರಕಾರಿ ಇಲಾಖೆಯಲ್ಲಿ ಕೆಲವು ಕಾಲೈಕ್ಯತೆ ಪ್ರಧಾನ, ಕೆಲವು ಆನ್ಯೈಕ್ಯತೆ ಪ್ರಧಾನವಾದುವು. ಇವುಗಳಲ್ಲಿ ಪುರಾತತ್ವ ಇಲಾಖೆ ಐಕ್ಯತೆ ಪ್ರಧಾನವಾದುದು. ಈ ಇಲಾಖೆ ಮುಖ್ಯವಾಗಿ ಶೋಧನ –ವಾಸ್ತುವಿಗ್ರಹ ಜೀರ್ಣೋದ್ಧಾರ–ಶಾಸನಾಧ್ಯಯನವೆಂಬ ಮೂರು ವಿಭಾಗಳನ್ನು ಒಳಗೊಂಡಿದೆ. ಇವುಗಳಲ್ಲಿ ಡಾ. ವೆಂಕಟೇಶಯ್ಯ ಅವರು ವಾಸ್ತುವಿಗ್ರಹ ಜೀರ್ಣೋದ್ಧಾರ ಕೆಲಸಕ್ಕೆ ಹೇಳಿ ಮಾಡಿಸಿದ ವ್ಯಕ್ತಿ. ಅವರು ಈ ಕ್ಷೇತ್ರದಲ್ಲಿ ಎರಡು ತಲೆಮಾರಿನಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ.

ಡಾ. ವೆಂಕಟೇಶಯ್ಯ ದೂರದ ಮೈಸೂರು ಪ್ರದೇಶದವರು. ನಾನು ಧಾರವಾಡ ಪ್ರದೇಶದವ. ಹೀಗಿದ್ದೂ ನಮ್ಮಿಬ್ಬರನ್ನು ಹತ್ತಿರ ತಂದುದು ನನಗೆ ಪ್ರಿಯವಾಗಿರುವ ಪುರಾತತ್ವ ಕ್ಷೇತ್ರ ಮತ್ತು ಇವರು ಈ ವರೆಗೆ ಈ ಕ್ಷೇತ್ರದಲ್ಲಿ ಮಾಡಿರುವ ದೈತ್ಯಕಾರ್ಯಗಳು.

ಕನ್ನಡ ವಿಶ್ವವಿದ್ಯಾಲಯದಿಂದ ನಿವೃತ್ತನಾದ ನಾನು ಹಂಪಿಯಿಂದ ನೇರವಾಗಿ ಮಗನ ಜೊತೆ ಕಾಲ ಕಳೆಯಲು ಪುಣೆಗೆ ಹೋಗಿದ್ದ ಸಂದರ್ಭ. ಈಗ ಮಹಾರಾಷ್ಟ್ರದ ಒಂದೆರಡು ಐತಿಹಾಸಿಕ ಸ್ಥಳಗಳನ್ನು ನೋಡಲು ಬಯಸಿದಾಗ, ನನ್ನ ನೆನಪಿಗೆ ಬಂದವರು ಔರಂಗಾಬಾದ ವಲಯದ ಪುರಾತತ್ವ ಅಧಿಕಾರಿಗಳಾಗಿದ್ದ ಕನ್ನಡಿಗ ಡಾ. ವೆಂಕಟೇಶಯ್ಯ. "ಮುಂದಿನ ವಾರ ಅಜಂತಾ ಇತ್ಯಾದಿ ನೋಡಲು ನಿಮ್ಮಲ್ಲಿಗೆ ಬರಬಹುದೇ?" ವ್ಯಕ್ತಪಡಿಸುತ್ತಲೇ "ಮುಂದಿನ ವಾರ ಏಕೆ? ಇದೇ ವಾರ ಬನ್ನಿರಿ. ಇಂದೇ ಈಗಲೇ ಬನ್ನಿರಿ" ಎಂಬ ಪ್ರೀತಿಯ ಮಾತಿನಿಂದ ನನ್ನನ್ನು ಅವರು ತಮ್ಮತ್ತ ಸೆಳೆದರು, ಎಳೆದರು.

ಮಡದಿಯೊಂದಿಗೆ ಹೋಗಿ ಇಲಾಖೆಯ ಅತಿಥಿಗೃಹದಲ್ಲಿ ಇಳಿದುಕೊಂಡ ಕ್ಷಣದಿಂದ ಮರಳಿ ಬರುವವರೆಗೆ ಇವರು ತೋರಿದ ಪ್ರೀತಿ, ಅಲ್ಲಿ ಪೂರೈಸಿದ ಪುರಾತತ್ವ ಕೆಲಸಗಳು ನನ್ನ ಮೇಲೆ ದೊಡ್ಡ ಪ್ರಭಾವ ಬೀರಿದವು. ಅಷ್ಟೂ ದಿನ ನಾವು ಇವರ ಕುಟುಂಬದ ಸದಸ್ಯರೇ ಆಗಿದ್ದೆವು. ಡಾ. ವೆಂಕಟೇಶಯ್ಯ ಅವರು ಅವರಿಗಿಂತ ಅವರ ಪತ್ನಿ ಶ್ರೀಮತಿ ಸರೋಜಾ ನೀಡಿದ ಆತಿಥ್ಯ, ತೋರಿದ ಪ್ರೀತಿ ಶಬ್ದಾತೀತ. ಆ ಮುಗ್ಧ ಮಹಿಳೆ ಅಂದಿನಿಂದ ನಮ್ಮ ಮಗಳಾಗಿ ಬಿಟ್ಟಳು. ಆ ಸಂಬಂಧ ಇಂದಿಗೂ ಗಾಢವಾಗುತ್ತಲೇ ಬಂದಿದೆ.

ಔರಂಗಾಬಾದ ವಲಯ ಅಜಂತಾ ಎಲ್ಲೋರಾ ದೇವಾಲಯ ದೇವಗಿರಿ ಕೆಲವು ಇತ್ಯಾದಿಗಳಿಂದ ಕಿಕ್ಕಿರಿದು ತುಂಬಿದೆ. ಹುಡುಕಿದರೆ ಇನ್ನೂ ಸಿಗಬಹುದಾದ ಪುರಾತತ್ವ ಸಂಪತ್ತು ಅಪಾರ. ಇವನೆಲ್ಲವುಗಳ ಶೋಧ, ರಕ್ಷಣೆಗೆ ಪ್ರಚಾರ ಇತ್ಯಾದಿ ಕೆಲಸ ಇಬ್ಬರು ಅಧಿಕಾರಿಗಳಿಗೂ ಮೀರಿದ್ದು. ಅದೆಲ್ಲವನ್ನು ಶ್ರೀ ವೆಂಕಟೇಶಯ್ಯ ಒಬ್ಬರೆ ಸಮರ್ಥವಾಗಿ ನಿರ್ವಹಿಸಿದ ರೀತಿ ಬೆರಗು ಹುಟ್ಟಿಸುತ್ತದೆ. ಅಜಂತಾಗಳನ್ನು ಇವರು ಶತಾಯಲಕ್ಷ್ಮಿ ತಾಯಿಯಂತೆ ಕಾಪಾಡಿದ್ದಾರೆ. ಕೇವಲ ಸಿಬ್ಬಂದಿಯಲ್ಲ. ಪ್ರವಾಸಿಗರೂ ಅಲ್ಲ ಗಾಳಿಯೂ ಇವರ ಅಪ್ಪಣೆ ಪಡೆದು ಒಳಗೆ ಬರುವಂಥ ನಿಷ್ಠುರ ನಿಯಮ ರೂಪಿಸಿ ಅವುಗಳ ರಕ್ಷಣೆಯಲ್ಲಿ ತೋರಿದ ಆಸಕ್ತಿ, ವಹಿಸಿದ ಶ್ರಮ ಯಾರಿಗೂ ಸಂತೋಷ ಪಡಿಸುವಂತಹದು. ಇಷ್ಟು ಸಮರ್ಥ ಕನ್ನಡಿಗರಸೇವೆ ಕನ್ನಡ ನಾಡಿಗೆ ಸಲ್ಲುವುದು ಅವಶ್ಯವೆಂದು ಅಲ್ಲಿರುವಷ್ಟು ದಿನ ನನ್ನ ಮನಸ್ಸು ಹೇಳುತ್ತಲೇ ಇದ್ದಿತು. ನಾವು ಅಲ್ಲಿಂದ ಧಾರವಾಡಕ್ಕೆ ಬಂದು ಬಹಳ ದಿನ ಗತಿಸಿರಲಿಲ್ಲ, ಶ್ರೀ ವೆಂಕಟೇಶಯ್ಯ ಧಾರವಾಡ ವಲಯಕ್ಕೆ ಅಧಿಕಾರಿಯಾಗಿ ಬಂದುಬಿಟ್ಟರು.

ಈವರೆಗೆ ಬೆಂಗಳೂರು ಪುರಾತತ್ವ ವಲಯಕ್ಕೆ ಸೇರಿದ್ದ ಧಾರವಾಡ ಪ್ರದೇಶ ಕೇಂದ್ರ ಸಚಿವರಾದ ಶ್ರೀ ಎಸ್. ಆರ್. ಬೊಮ್ಮಾಯಿ ಅವರಿಂದಾಗಿ ಅದೇ ಆಗ ಸ್ವತಂತ್ರ ವಲಯವಾಗಿ ಅಸ್ತಿತ್ವಕ್ಕೆ ಬಂದಿದ್ದಿತು. ಹೊಸದಾಗಿ ಆಕಾರ ಪಡೆದ ಈ ವಲಯಕ್ಕೆ ಸೂಕ್ತ ನೀತಿ ನಿಯಮ ನಿರ್ಧರಿಸಿ ಅದಕ್ಕೂ ಕ್ರಿಯಾಶೀಲ ಚಾಲನೆ ನೀಡುವ ಸಮರ್ಥ ಅಧಿಕಾರಿ ಯಾರು ಎಂಬ ಪ್ರಶ್ನೆ ಸರಕಾರಕ್ಕೆ ಕಾಡುತ್ತಿತ್ತು. ಇದಕ್ಕೆ ಉತ್ತರವೆಂಬಂತೆ ಶ್ರೀ ವೆಂಕಟೇಶಯ್ಯ ಉತ್ತರಾಧಿಕಾರಿಯಾಗಿ ಬಂದರು. ಬಾಡಿಗೆ ಕಟ್ಟಡಕ್ಕೆ ಬದಲು ಒಂದು ಸ್ವತಂತ್ರ ಕಟ್ಟಡ ಕಟ್ಟಿಸಿದರು. ಜೊತೆ ಜೊತೆಗೆ ವಾಸ್ತು ವಿಗ್ರಹಗಳ ಶೋಧ ಜೀರ್ಣೋದ್ಧಾರ ಇತ್ಯಾದಿ ಕೆಲಸ ಆರಂಭಿಸಿದರು.

ಈ ವಲಯದ ದೊಡ್ಡ ಸಂಕೀರ್ಣವೆಂದರೆ ಬಾದಾಮಿ ಐಹೊಳೆ ಪಟ್ಟದಕಲ್ಲು. ವೆಂಕಟೇಶಯ್ಯ ಈ ಶಿಲ್ಪಕಲಾ ಸಾಮ್ರಾಜ್ಯಕ್ಕೆ ಮೊದಲು ಲಗ್ಗೆ ಹಾಕಿದರು. ನೋಡು ನೋಡುತ್ತಲೇ ಒತ್ತುವರಿಯಾಗಿದ್ದ ಮನೆಗಳ ತೆರವು, ರಸ್ತೆಯ ಅಗಲೀಕರಣ, ಉದ್ಯಾನ ನಿರ್ಮಾಣ, ಪ್ರವಾಸಿಗರ ಸೌಕರ್ಯ ಇತ್ಯಾದಿಗಳಿಂದ ಈ ಪ್ರದೇಶದ ಚಿತ್ರವೇ ಬದಲಾಯಿತು. ಈ ಬಹುಮುಖಿ ಕೆಲಸಗಳಲ್ಲಿ ಮುಖ್ಯವಾದುದು– ಪಟ್ಟದಕಲ್ಲಿನ ಜೈನ ಬಸದಿಯ ಜೀರ್ಣೋದ್ಧಾರ. ಶಿಥಿಲವಾಗಿದ್ದ ಅದನ್ನು ಅಡಿಯಿಂದ ತುದಿಯ ವರೆಗೆ ಬಿಚ್ಚಲು ಸಿದ್ಧರಾದರು. ಸಿಬ್ಬಂದಿಗಳು ಸಾರ್ವಜನಿಕರು ನೀಗದ ಈ ಕೆಲಸಕ್ಕೆ ಕೈಹಾಕ ಬೇಡಿರೆಂದು ಬಿನ್ನವಿಸಿದರು. ಇರುವ ದೇವಾಲಯವನ್ನು ಕೆಡವಿ ಕೈಲಾಗದೆ ಕೆಲಸ ಅರ್ಧಕ್ಕೆ ನಿಲ್ಲಿಸುವ ವ್ಯರ್ಥಪ್ರಯತ್ನವಿದೆಂದು ಮಾತಾಡತೊಡಗಿದರು. ಹಾಗೆ ಹೇಳುವುದು ಸಹಜವೇ ಆಗಿತ್ತು. ಇಂಥ ಅಧೀರನನ್ನಾಗಿಸುವ ಇಂಥ ಸನ್ನಿವೇಶವನ್ನು ಲೆಕ್ಕಿಸದೆ ವೆಂಕಟೇಶಯ್ಯ ಮಾಳಿಗೆಯ ಗಜಗಾತ್ರದ

ತೊಲೆಗಳನ್ನು ಇಳಿಸಿದರು. ಕಂಬಗಳನ್ನು ಮಗ್ಗುಲಲ್ಲಿ ಎತ್ತಿ ಮಲಗಿಸಿದರು. ಜೀರ್ಣಗೋಡೆ ಕಲ್ಲುಗಳನ್ನು ಒಂದೊಂದಾಗಿ ಬಿಚ್ಚಿಸಿದ್ದರು. ಶಿಥಿಲವಾಗಿದ್ದ ಬುನಾದಿಯನ್ನು ಅಗಿದು, ಗಟ್ಟಿಯಾದ ಹೊಸ ಬುನಾದಿ ಹೊಸ ನೆಲಗಟ್ಟು ನಿರ್ಮಿಸಿದರು. ಬಿಚ್ಚಿದ್ದ ಗೋಡೆ, ಉರುಳಿಸಿದ್ದ ಕಂಬ, ಇಳಿಸಿದ್ದ ತೊಲೆ ಜಥಿತಿ ಒಂದೊಂದಾಗಿ ಮತ್ತೆ ಸೇರಿಕೊಂಡವು. ಒಬ್ಬ ಮಹಾ ಶಿಲ್ಪಿಗೂ ಸಾಧ್ಯವಾಗದ ಕೆಲಸವನ್ನು ಆಹ್ವಾನವೆಂಬಂತೆ ಶ್ರೀ ವೆಂಕಟೇಶಯ್ಯ ಮಾಡಿ ಮುಗಿಸಿದುದು ಒಂದು ಮಾಂತ್ರಿಕತೆಯೇ ಸರಿ. ಈ ಮೊದಲು ಅನುಮಾನ ವ್ಯಕ್ತಪಡಿಸಿದವರೆಲ್ಲ ಈಗ ಜಯಕಾರ ರೀತಿಯಲ್ಲಿ ಹೊಗಳಲಾರಂಭಿಸಿದರು. ನಾನೂ ಒಳಗೊಂಡಂತೆ ಅದರ ಉದ್ಘಾಟನೆಗೆ ಹೋಗಿದ್ದವರೆಲ್ಲ. 'ಪ್ರಾಚೀನಕಾಲವಾಗಿದ್ದರೆ ಈ ಕೆಲಸಕ್ಕಾಗಿ ರಾಜಾಸ್ಥಾನದಲ್ಲಿ ಕನಕಾಭೀಷೇಕ ಮರ್ಯಾದೆ ಸಲ್ಲುತ್ತಿದ್ದಿತು.' ಎಂದು ಉದ್ಗಾರ ವ್ಯಕ್ತಪಡಿಸಿದರು. ಈ ಸಂಕೀರ್ಣವನ್ನಲ್ಲದೆ ಈ ವಲಯದ ಡಂಬಳ ಮೊದಲಾದ ಸ್ಥಳಗಳಲ್ಲಿ ಕೈಕೊಂಡ ಜೀರ್ಣೋದ್ಧಾರ ಕಾರ್ಯಗಳು ದಾಖಲೆಯೆನಿಸಿವೆ.

ಡಾ. ವೆಂಕಟೇಶಯ್ಯ ಧಾರವಾಡ ವಲಯದಿಂದ ಮಧ್ಯಪ್ರದೇಶಕ್ಕೆ ವರ್ಗವಾಗಿ ದೇಶ ಹೋದರು. ಅದು ಹೆಸರಿಗೆ ತಕ್ಕಂತೆ ಭಾರತೀಯ ಪುರಾತತ್ವ ಸ್ಮಾರಕಗಳ ಮಧ್ಯ ಅಲ್ಲಿ ಬೌದ್ಧವಿಹಾರ ಹಿಂದೂ ದೇವಾಲಯಗಳು ಪರಸ್ಪರ ಸ್ಪರ್ಧೆಯಿಂದ ಬೆಳೆದುನಿಂತಿವೆ. ಅಲ್ಲಿ ಇವರು ಕೈಕೊಂಡ ಸ್ಮಾರಕಗಳ ಕಾಯಕಲ್ಪ ಸ್ಥಳೀಯರ ಪ್ರವಾಸಿಗರ ಮನವನ್ನು ಸೂರೆಗೊಂಡವೆ. ಈ ಎಲ್ಲ ಸಾಧನೆಗಳಿಂದಾಗಿ ಒಬ್ಬ ವ್ಯಕ್ತಿಯ ಇವರು ಒಂದು ಕ್ರಿಯಾಶಕ್ತಿಯೆಂದು ಪ್ರಸಿದ್ಧಿಪಡೆದರು.

ಹೀಗೆ ಹಲವು ವಲಯಗಳಲ್ಲಿ ಇವರು ಮಾಡಿದ ಕೆಲಸ ಚರಿತ್ರಾರ್ಹವಾಗಿದೆ ಇದೀಗ ನೌಕರಿಯಿಂದ ವೆಂಕಟೇಶಯ್ಯ ನಿವೃತ್ತರು. ಹೀಗಿದ್ದು ಇವರನ್ನು ಬಳಸಿಕೊಳ್ಳುವುದು ಸಮಾಜದ ಕರ್ತವ್ಯವೆಂದು ಭಾವಿಸಿ ಬೆಂಗಳೂರಿನ ಇನ್‌ಫೋಸಿಸ್ ಸಂಸ್ಥೆ ತಾನು ದತ್ತು ತೆಗೆದುಕೊಂಡ ಲಕ್ಷ್ಮೇಶ್ವರದ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರ ಹೊಣೆಯನ್ನು ಇವರಿಗೆ ಹೊರಿಸಿತು. ಈಗ ಸಂಪೂರ್ಣ ಜೀರ್ಣೋದ್ಧಾರವಾಗಿದ್ದ ಇತಿಹಾಸ ಪ್ರಸಿದ್ಧ ದೇವಾಲಯಕ್ಕೆ ಮರುಜೀವ ನೀಡುತ್ತಲಿದ್ದಾರೆ. ನಿಜವಾದ ಶೈಕ್ಷಣಿಕ ಆಸಕ್ತಿಯುಳ್ಳ ಅಧಿಕಾರಿ ನಿವೃತ್ತಿ ಹೊಂದುವುದಿಲ್ಲವೆಂಬುದಕ್ಕೆ ಇದು ಒಂದು ನಿದರ್ಶನ; ಒಂದು ಆದರ್ಶ.

---

* ರೂವಾರಿ : ಡಾ. ಎಸ್.ವಿ ವೆಂಕಟೇಶಯ್ಯ ಅಭಿನಂದನಗ್ರಂಥ, ಪ್ರ. ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ-೨೦೧೬.

ಆಕರ : ಮಾರ್ಗ ಸಂಪುಟ-೮

■■

೧೩೦

ಪರಿವಾರ ಪ್ರಜ್ಞೆ–ಪಕ್ಷನಿಷ್ಠೆ

ಶ್ರೀ ವೀರಣ್ಣ ಮತ್ತಿಕಟ್ಟಿ ಅವರದು ಸ್ವಯಂಭೂ ವ್ಯಕ್ತಿತ್ವ. ಹರಿವ ನೀರು ತನ್ನ ದಾರಿಯನ್ನು ತಾನೇ ಕಂಡುಕೊಳ್ಳುವಂತೆ, ಹಳ್ಳವಾಗಿ–ಹೊಳೆಯಾಗಿ ಅದು ತನ್ನ ಪಾತ್ರವನ್ನು ತಾನೇ ಹಿಗ್ಗಿಸಿಕೊಳ್ಳುವಂತೆ ಹಳ್ಳಿಮೂಲದ ಇವರು ತಮ್ಮ ಸಮಾಜೋ ರಾಜಕೀಯ ವ್ಯಕ್ತಿತ್ವವನ್ನು ತಾವೇ ರೂಪಿಸಿಕೊಳ್ಳುತ್ತ ಬೆಳೆದವರು.

ಈ ವ್ಯಕ್ತಿತ್ವದ ಮುಖ್ಯ ಲಕ್ಷಣ ಪರಿವಾರಪ್ರೀತಿ. ವಿದ್ಯಾರ್ಥಿಯಾಗಿದ್ದಾಗಲೂ ಇವರೊಂದಿಗೆ ಸ್ನೇಹಿತರ ದೊಡ್ಡ ಪರಿವಾರವಿರುತ್ತಿದ್ದುದನ್ನು ನಾನು ಗಮನಿಸಿದ್ದೇನೆ. ಇವರು ಚಲಿಸಿದರೆ ಆ ಪರಿವಾರ ಚಲಿಸುತ್ತಿತ್ತು; ನಿಂತರೆ ನಿಲ್ಲುತ್ತಿತ್ತು. ಇವರ ಆದೇಶವನ್ನು ನಿರೀಕ್ಷಿಸುತ್ತಿತ್ತು. ಹೀಗೆ ವಿದ್ಯಾರ್ಥಿ ದೆಸೆಯಿಂದಲೂ ಶ್ರೀ ಮತ್ತಿಕಟ್ಟಿ ಅವರು ನಾಯಕವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತ ಬೆಳೆದು ಬಂದಿದ್ದಾರೆ. ಈ ಸುದೀರ್ಘ ಅವಧಿಯಲ್ಲಿ ಇವರು ಬಾಲ್ಯ ಅನೇಕ ಸ್ನೇಹಿತರನ್ನು ಗಳಿಸಿದ್ದಾರೆ. ಇವರಿಗೆ ವಿರೋಧ ಪಕ್ಷದಲ್ಲಿಯೂ ದೊಡ್ಡ ಬಳಗವಿದೆ. ಬರುಬರುತ್ತಾ ಭೌಗೋಳಿಕವಾಗಿಯೂ ತಾಲೂಕು, ಜಿಲ್ಲೆ, ರಾಜ್ಯವ್ಯಾಪ್ತಿಯಲ್ಲಿ ಆ ಪರಿವಾರ ದೊಡ್ಡದಾಗುತ್ತಲೇ ಬೆಳೆದ ಕಾರಣ, ಇವರು ಅನೇಕ ಸಂಸ್ಥೆಗಳ ಸದಸ್ಯರಾಗಿ, ಅಧ್ಯಕ್ಷರಾಗಿ, ಶಾಸಕರಾಗಿ ಬಿಚ್ಚಿಕೊಂಡಿದ್ದಾರೆ. ಇಂದು ಸಭಾಪತಿ ಸ್ಥಾನ ಪಡೆದಿರುವುದಕ್ಕೆ ಇವರ ಈ ಪರಿವಾರಪ್ರಜ್ಞೆಯೂ ಒಂದು ಕಾರಣವೆಂದು ಹೇಳಬಹುದು.

ಶ್ರೀ ಮತ್ತಿಕಟ್ಟಿಯವರ ವ್ಯಕ್ತಿತ್ವದ ಇನ್ನೊಂದು ಲಕ್ಷಣ ಪಕ್ಷನಿಷ್ಠೆ. ಇವರು ಮೊದಲಿನಿಂದಲೂ ಕಾಂಗ್ರೆಸ್ ಪಕ್ಷದ ಶ್ರದ್ಧೆಯ ಸದಸ್ಯರು. ನೆಹರೂ ಕಾಲದಲ್ಲಿ ಸ್ಥಿರವಾಗಿದ್ದ ರಾಜಕೀಯ ನಾಯಕರ ಭವಿಷ್ಯ ಇತ್ತೀಚಿನ ದಿನಗಳಲ್ಲಿ ಅಸ್ಥಿರವಾಗುತ್ತ ಬಂದಿತು. ಹೀಗಾಗಿ ತಮ್ಮ ಅಸ್ತಿತ್ವಕ್ಕಾಗಿ ನಾಯಕ ವ್ಯಕ್ತಿಗಳು ಪಕ್ಷಾಂತರ ಮಾಡುವುದು ಸಹಜಕ್ರಿಯೆಯಾಯಿತು. ತಮಗೆ ಪಕ್ಷ ಮುಖ್ಯವಲ್ಲ. ತಮ್ಮ ರಾಜಕೀಯ ಭವಿಷ್ಯ ಮುಖ್ಯವೆಂಬ ಧೋರಣೆ ಎಲ್ಲರಲ್ಲಿಯೂ ಹುಟ್ಟಿಕೊಂಡಿತು. ಇದಕ್ಕೆ ಅಪವಾದವೆಂಬಂತೆ ಶ್ರೀ ಮತ್ತಿಕಟ್ಟಿಯವರು ಎಂಥ ದುಸ್ಥಿತಿಯಲ್ಲಿಯೂ ತಮ್ಮ ಪಕ್ಷದ ಕಷ್ಟಸುಖಗಳಲ್ಲಿ ಪಾಲುಗಾರರಾಗುತ್ತ ಬಂದಿದ್ದಾರೆ. ಇಂದು ಕರ್ನಾಟಕದ ಕಾಂಗ್ರೆಸ್ ಪಕ್ಷ, ಜನತಾದಳ, ಭಾರತೀಯ ಜನತಾಪಕ್ಷಗಳಲ್ಲಿ ಮುಂಜಾನೆ ಒಂದು, ಮಧ್ಯಾಹ್ನ ಇನ್ನೊಂದು, ಸಂಜೆ ಮತ್ತೊಂದು ಎಂಬಂತೆ

ಪಕ್ಷಾಂತರ ನಿರಂತರ ನಡೆದಿದೆ. ಎಲ್ಲರೂ ನಾಳೆಯ ಬಗ್ಗೆ ಚಿಂತಿಸುವುದು ಅನಿವಾರ್ಯವಾಗಿದೆ. ಇಂಥ ಇಕ್ಕಟ್ಟು-ಬಿಕ್ಕಟ್ಟು ಪರಿಸ್ಥಿತಿಯಲ್ಲಿಯೂ ಶ್ರೀ ಮತ್ತಿಕಟ್ಟಿ ಅವರು ಮಾತೃಪಕ್ಷಕ್ಕೆ ಏಕನಿಷ್ಠರಾಗಿ ನಿಂತುದನ್ನು ಗಮನಿಸಿ, ಕೇಂದ್ರ ನಾಯಕರು ಅವರಿಗೆ ಸಭಾಪತಿ ಮೊದಲಾದ ಅವಕಾಶಗಳನ್ನು ನೀಡಿರುವರೆಂದು ನನ್ನ ಭಾವನೆ. ಇಲ್ಲಿ ಹೇಳಲೇಬೇಕಾದ ಇನ್ನೊಂದು ವಿಷಯ: ಜನಪ್ರಿಯ ಜನಮುಖಿ ಶಬ್ದಗಳು ರಾಜಕೀಯ ವ್ಯಕ್ತಿಗಳಿಗೆ ಇಂದು ಮತ್ತೆ ಮತ್ತೆ ಬಳಕೆಯಾಗುತ್ತಲಿವೆ. ಸ್ಥೂಲವಾಗಿ ಇವು ಸಮಾನಾರ್ಥ ನೀಡುತ್ತಿದ್ದರೂ ಜನಪ್ರಿಯವ್ಯಕ್ತಿ ಜನಮುಖಿಯಾಗಿರಬೇಕೆಂದೇನಿಲ್ಲ. ಏಕೆಂದರೆ ಚುನಾವಣೆಯ ಮೇಲೆ ಕಣ್ಣಿಟ್ಟಿರುವ ಜನಪ್ರಿಯವ್ಯಕ್ತಿ ಕೆಲವು ಜನರ ಪ್ರೀತಿಗಾಗಿ ಒಳ್ಳೆಯದಲ್ಲದ ಕೆಲಸವನ್ನೂ ಮಾಡುತ್ತಿದ್ದರೆ, ಜನಮುಖಿವ್ಯಕ್ತಿ ಇದಾವುದನ್ನು ಗಮನಿಸದೆ, ಕೇವಲ ಜನಪದರ ಕೆಲಸವನ್ನು ಪೂರೈಸುತ್ತಾನೆ. ಇದರಿಂದಾಗಿ ಒಬ್ಬ ಸೋಲಿಲ್ಲದ ಸರದಾರನೆಂಬಂತೆ ಎಲ್ಲ ಚುನಾವಣೆಗಳಲ್ಲಿ ಜಯಶಾಲಿಯಾಗುತ್ತಿದ್ದರೆ, ಇನ್ನೊಬ್ಬ ಕೆಲವೊಮ್ಮೆ ಸೋಲುತ್ತಾನೆ. ಶ್ರೀ ಮತ್ತಿಕಟ್ಟಿಯವರು ಸಣ್ಣ ದೊಡ್ಡ ಚುನಾವಣೆಗಳಲ್ಲಿ ನಿರಂತರ ಗೆದ್ದಿದ್ದರೂ ಒಂದೆರಡು ಸಲ ಸೋತುದಕ್ಕೆ ಅವರ ಜನಮುಖಿಧೋರಣೆಯೇ ಕಾರಣವಾಗಿದೆ. ಇಂಥ ಸೋಲುಗಳನ್ನು ಗೆಲುವಿನ ಸೋಪಾನ ಮಾಡಿಕೊಂಡು ಬೆಳೆದಿರುವ ಶ್ರೀ ವೀರಣ್ಣ ಮತ್ತಿಕಟ್ಟಿ ಅವರು, ರಾಜಕೀಯವಾಗಿ ಸಾಮಾಜಿಕವಾಗಿ ಇನ್ನೂ ಬೆಳೆಯಲೆಂದು ಹಾರೈಸುತ್ತೇನೆ.

ಆಕರ : ಮಾರ್ಗ ಸಂಪುಟ-೮

■■

೧೩೧

ಸಾರ್ಥಕ ಬದುಕು–ಸಾರ್ಥಕ ಬರೆಹ

೨೦೧೪

ಬಿ.ಎಂ. ಶ್ರೀ. ಬೇಂದ್ರೆ ಮೊದಲಾದವರು ಆದ್ಯರಾಗಿ ಹೊಸಗನ್ನಡ 'ಸಾಹಿತ್ಯ'ವನ್ನು ಸೃಷ್ಟಿಸಿದರೆ, ಅದಕ್ಕೆ ಪೂರ್ವಭಾವಿಯಾಗಿ ಹೊಸಗನ್ನಡ 'ಭಾಷೆ'ಯನ್ನು ಹದಗೊಳಿಸಿದವರು ಕನ್ನಡ ಶಾಲೆಯ ಶಿಕ್ಷಕರು. ವಿಜಾಪುರ ಜಿಲ್ಲೆಯಲ್ಲಿ ಮಡಿವಾಳಪ್ಪ ಸಾಸನೂರ, ಸಿಂಪಿ ಲಿಂಗಣ್ಣ ಮೊದಲಾದವರು ಈ ಮಾಲಿಕೆಯಲ್ಲಿ ಸ್ಮರಣೀಯರೆನಿಸಿದ್ದಾರೆ. ಗಮನಿಸಬೇಕಾದ ಅಂಶವೆಂದರೆ ಆಗ ಈ ಜಿಲ್ಲೆಯಲ್ಲಿ ಉನ್ನತ ಅಧ್ಯಯನ ಕೇಂದ್ರಗಳಾದ ಕಾಲೇಜು ವಿಶ್ವವಿದ್ಯಾಲಯಗಳಿರಲಿಲ್ಲ. ಇಲ್ಲಿಯ ವಿದ್ಯಾರ್ಥಿಗಳು ಅಂದು ಸ್ನಾತಕ ಸ್ನಾತಕೋತ್ತರ ಪದವಿಗಳಿಗಾಗಿ, ಈ ಪದವಿಗಳಿಗೆ ತಕ್ಕ ನೌಕರಿಗಾಗಿ ಬೇರೆ ಜಿಲ್ಲೆಗಳಿಗೆ ಶಾಶ್ವತವಾಗಿ ವಲಸೆಹೋಗುತ್ತಿದ್ದರು. ಹೀಗಾಗಿ 'ಭಾಷೆ'ಯನ್ನು ಹದಗೊಳಿಸುವ 'ಸಾಹಿತ್ಯ'ವನ್ನು ಸೃಷ್ಟಿಸುವ ಎರಡೂ ಹೊಣೆಗಳನ್ನು ಜಿಲ್ಲೆಯಲ್ಲಿಯೇ ಉಳಿದುಕೊಳ್ಳುವ ಮಾಸ್ತರ ಜನರೇ ಹೊರುವುದು ಅನಿವಾರ್ಯವಾಗಿದ್ದಿತು.

ಗಮನಿಸಬೇಕಾದ ಇನ್ನೂ ಒಂದು ಅಂಶವೆಂದರೆ ಈ ಜಿಲ್ಲೆಯಲ್ಲಿ ಮೊದಲ ಉನ್ನತ ಶಿಕ್ಷಣ ಸಂಸ್ಥೆಯಾದ ವಿಜಯ ಕಾಲೇಜು ಅಸ್ತಿತ್ವಕ್ಕೆ ಬಂದುದು ೧೯೪೫ರಲ್ಲಿ. ಈ ಹೊತ್ತಿಗೆ ಕನ್ನಡ ಹಿನ್ನೆಲೆಯ 'ಭಾವಗೀತೆಯುಗ' ಮುಗಿದು, ಇಂಗ್ಲಿಷ ಹಿನ್ನೆಲೆಯ 'ನವ್ಯಕಾವ್ಯಯುಗ' ಆರಂಭವಾಗಿದ್ದಿತು. ಈಗ ಕಳೆದು ಹೋಗಿದ್ದ ಭಾವಗೀತೆ, ನಿಲುಕದಾದಾಗ ನವ್ಯಕಾವ್ಯಕ್ಕೆ ಎರವಾಗಿ ಸ್ಥಳೀಯ ಕನ್ನಡ ಶಾಲೆಯ ಶಿಕ್ಷಕರು ಆರಂಭದಿಂದಲೂ ತಾವು ತೊಡಗಿಕೊಂಡಿದ್ದ ಮಕ್ಕಳ ಸಾಹಿತ್ಯ ಕೃಷಿಯನ್ನೇ ಮುಂದುವರೆಸಿದರು. ನಿರಂತರ ದುಡಿಮೆಯ ಮೂಲಕ ಇವರು ವಿಜಾಪೂರವು ಮಕ್ಕಳ ಸಾಹಿತ್ಯದ ಜಿಲ್ಲೆಯೆಂಬ ಪರಿಸರವನ್ನೇ ಸೃಷ್ಟಿಸಿದರು. ಈ ಸೃಷ್ಟಿಕಾರ್ಯದ ಮುಖ್ಯಭಾಗವಾಗಿದ್ದಾರೆ ಶ್ರೀ ಶರಣಪ್ಪ ಕಂಚ್ಯಾಣಿ ಅವರು.

೩೯ ವರ್ಷ ಶಿಕ್ಷಕರಾಗಿದ್ದ ಇವರ ಒಡನಾಡಿಗಳೆಂದರೆ ಮಕ್ಕಳು. ಒಳ್ಳೆಯ ಶಿಕ್ಷಕರಾಗಿ ಅವರನ್ನು ಶೈಕ್ಷಣಿಕವಾಗಿ ತಿದ್ದಿದ, ಶ್ರೀ ಕಂಚ್ಯಾಣಿ ಅವರು ಒಳ್ಳೆಯ ಸಾಹಿತಿಯಾಗಿ ಅವರಲ್ಲಿ

ಸಾಹಿತ್ಯದ ಅಭಿರುಚಿಯನ್ನು ಬೆಳೆಸಿದರು. ಮಕ್ಕಳ ಮನೋಧರ್ಮ–ಭಾಷಾಧರ್ಮಗಳಿಗನುಗುಣವಾಗಿ ಬಾಗುವ ಬಳಕುವ ಇವರ ಪ್ರತಿಭೆಯಿಂದ ಈವರೆಗೆ ೨೦ರಷ್ಟು ಮಕ್ಕಳ ಸಾಹಿತ್ಯ ಕೃತಿಗಳು ಬೆಳಕುಕಂಡಿವೆ.

ಮಕ್ಕಳಿಗೆ ಹಾಡುಗಳೆಂದರೆ ಪ್ರೀತಿ, ಕಥೆಗಳೆಂದರೆ ಇನ್ನೂ ಪ್ರೀತಿ. ಇದನ್ನು ಅರ್ಥಮಾಡಿಕೊಂಡ ಶ್ರೀ ಕಂಚ್ಯಾಣಿ ಅವರು ಈ ಎರಡೂ ಪ್ರಕಾರಗಳಲ್ಲಿ ಕೃಷಿಮಾಡಿದ್ದಾರೆ. ಇವು ಮಕ್ಕಳ ಮನಸ್ಸನ್ನು ತಣಿಸುತ್ತಲೇ ಮಣಿಸುವ ಮಾಧ್ಯಮವಾಗಿಯೂ ಪರಿಣಮಿಸಿವೆ. ಶೀರ್ಷಿಕೆಗಳ ಮೂಲಕ ಅವರನ್ನು ಆಕರ್ಷಿಸುತ್ತಲೇ ಅವರಿಗೆ ಜೀವನವೌಲ್ಯ ತಿಳಿಸುವ ಸಾಮರ್ಥ್ಯ ಹೊಂದಿವೆ.

ಈ ಬಗೆಯ ಬರವಣಿಗೆಯನ್ನು ಗಮನಿಸಿ ರಾಜ್ಯ ರಾಷ್ಟ್ರಮಟ್ಟದ ಪ್ರಶಸ್ತಿಗಳು ಇವರ ಮುಡಿಯನ್ನಲಂಕರಿಸಿವೆ. ತಾಲೂಕು–ಜಿಲ್ಲೆ–ರಾಜ್ಯಮಟ್ಟದ ಸಮ್ಮೇಳನದ ಘನತೆ ಇವರಿಗೆ ಪ್ರಾಪ್ತವಾಗಿದೆ. ಇವರ ಜೀವನ ಸಾಧನೆಗಳನ್ನು ಕುರಿತು ವಿದ್ಯಾರ್ಥಿಗಳು ಬರೆದು ಸಲ್ಲಿಸಿದ ಮಹಾಪ್ರಬಂಧಗಳಿವೆ. ವಿಶ್ವವಿದ್ಯಾಲಯಗಳ ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿಗಳು ಸಂದಿವೆ. ಇವುಗಳಿಗಿಂತ ಮುಖ್ಯವಾದುದು ಇಂದು 'ಮಕ್ಕಳ ಸಾಹಿತ್ಯ'ವೆಂದಾಕ್ಷಣ ಕಂಚ್ಯಾಣಿಯವರು ನೆನಪಾಗುವ ಮಟ್ಟದಲ್ಲಿ ಇವರ ಸಾಹಿತ್ಯ ಪ್ರಸಿದ್ಧ ಸುಪ್ರಸಿದ್ಧಿ ಪಡೆದಿದೆ.

ಶ್ರೀ ಕಂಚ್ಯಾಣಿ ಅವರ ಬರೆಹ ಸಾರ್ಥಕ, ಬದುಕು ಇನ್ನೂ ಸಾರ್ಥಕ. ಇದನ್ನು ಗಮನಿಸಿ ಆತ್ಮೀಯರು ಅಭಿಮಾನಿಗಳು ಅವರಿಗೆ ಸಮಾರಂಭಪೂರ್ವಕ ಗೌರವಗ್ರಂಥ ಅರ್ಪಿಸಲು ಮುಂದಾಗಿದ್ದಾರೆ. ಈ ಮಣಿಹಕ್ಕೆ ಎಲ್ಲ ಬಗೆಯ ಯಶಸ್ಸು ಸಿಗಲೆಂದು ಹಾರೈಸುತ್ತೇನೆ.

ಚಿಣ್ಣರ ಅಜ್ಜ : ಶರಣಪ್ಪ ಕಂಚಾಣಿ ಅಭಿನಂಧನಗ್ರಥ–೨೦೧೪

ಆಕರ : ಮಾರ್ಗ ಸಂಪುಟ–೮

■■

೧೩೨

ಕೋಚೆ : ವ್ಯಕ್ತಿ–ವ್ಯವಸಾಯ

'ಕೋಚೆ' ಕೇವಲ ಸಾಹಿತ್ಯ ಓದಿ ಸಾಹಿತಿಯಾದವರಲ್ಲ ಸಮಾಜದೊಂದಿಗೆ ಸಂವಾದ ಸಂಘರ್ಷ ನಡೆಸಿ ಸಾಹಿತಿಯಾದವರು. ಇವರ ಸಾಹಿತ್ಯದಲ್ಲಿ ಕಲ್ಪಿತ ವಸ್ತುವಿಗಿಂತ ವಾಸ್ತವ ಜೀವನಪ್ರಜ್ಞೆ, ಪ್ರಗತಿಪರ ಧೋರಣೆಗಳು ಎದ್ದು ಕಾಣುತ್ತವೆ. ಇವೆಲ್ಲ ಇವರು ಭಾಗಿಯಾದ "ಪ್ರಗತಿಶೀಲ ಸಾಹಿತ್ಯ ಚಳುವಳಿ"ಯಿಂದ ಸಂದ ಬಳುವಳಿ. ಈ ಸಾಮಾಜಿಕ ಸಂವೇದನೆಯ ಹಿಂದೆ ಶಿವಶರಣರ, ರಾಮಕೃಷ್ಣ ವಿವೇಕಾನಂದರ ಆಧ್ಯಾತ್ಮಿಕ ಶ್ರುತಿ ಕೇಳಿಸುತ್ತಿರುವುದು ಒಂದು ವಿಶೇಷ. ಇವೆಲ್ಲವನ್ನೊಳಗೊಂಡ ಇವರ ಬರೆವಣಿಗೆ ಸಂವಹನಶೀಲವಾಗಿರುವುದು ಇನ್ನೂ ವಿಶೇಷ.

ಚಲೇ ಜಾವ್ ಚಳುವಳಿಯಲ್ಲಿ ಭಾಗವಹಿಸಿದ ಕಾರಣ ಜೈಲುವಾಸ, ಏಕೀಕರಣ ಮಹಾ ಸಮಿತಿಯ ಕಾರ್ಯಕಾರಿ ಮಂಡಳಿ ಸದಸ್ಯ, ಬಳ್ಳಾರಿಯಲ್ಲಿ ವಕೀಲವೃತ್ತಿ, ಪೂರ್ವ ಕರ್ನಾಟಕ ಏಕೀಕರಣ ಪರಿಷತ್ತಿನ ಸ್ಥಾಪನೆ, ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಸದಸ್ಯ, ತುಂಗಭದ್ರಾಕಾಲುವೆ ನೀರಿನ ಸತ್ಯಾಗ್ರಹ ಸಂಚಾಲಕ, ಬಳ್ಳಾರಿ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿ ಕಾರ್ಯದರ್ಶಿ, ೩೫ನೇ ಸಾಹಿತ್ಯ ಸಮ್ಮೇಲನ (ಬಳ್ಳಾರಿ)ಕಾರ್ಯದರ್ಶಿ, ಮೈಸೂರು ವಿಶ್ವವಿದ್ಯಾಲಯದ ಸಿನೇಟ್ ಸದಸ್ಯ, ಬಳ್ಳಾರಿ ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ೧೯೬೫–೭೭ರ ವರಗೆ ಜಿಲ್ಲಾ ಮತ್ತು ಸೆಶನ್ ನ್ಯಾಯಾಧೀಶ, ಬಿ.ಇ. ಎಚ್. ಕರ್ನಾಟಕ ಕಾರ್ಮಿಕ ಹಿತರಕ್ಷಣ ಸಮಿತಿ ಅಧ್ಯಕ್ಷ, ಕನ್ನಡ ಆಡಳಿತ ಭಾಷಾ ಕ್ರಿಯಾಸಮಿತಿ ಅಧ್ಯಕ್ಷ, ಕರ್ನಾಟಕ ಜಾತ್ಯತೀತ ಮತ್ತು ಶಾಸನಬದ್ಧ ಆಳಿಕೆ ವೇದಿಕೆಯ ಅಧ್ಯಕ್ಷ–ಇವು ಇವರ ದುಡಿಮೆಯ ನೆಲೆಗಳು. ಈ ನೆಲೆಗಳಿಗೆ ಇವರಿಂದ ಸಂದ ಕಾಣಿಕೆಗಳಲ್ಲಿ ಮುಖ್ಯವಾದುದು ಕರ್ನಾಟಕ ಏಕೀರಣಕ್ಕಾಗಿ ದುಡಿದುದು ಮತ್ತು ಆ ಮೂಲಕ ಆಂಧ್ರರ ಹಿಡಿತದಿಂದ ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕಕ್ಕೆ ಉಳಿಸಿಕೊಟ್ಟುದು.

ಹರ್ಡೇಕರ ಮಂಜಪ್ಪನವರ 'ಶರಣ ಸಂದೇಶ' ಪತ್ರಿಕೆ(೧೯೬೮)ಯಲ್ಲಿ ಪ್ರಕಟವಾದ ವೀರ ಸಾವರಕರ ಕವನ ಇವರ ಸಾಹಿತ್ಯದ ಮೊದಲ ಬೀಜ. ಅಲ್ಲಿಂದ ಇಲ್ಲಿಯ ವರೆಗೆ ಸುಮಾರು ೮೦ ಕೃತಿಗಳ ರಚನೆ. ಅರವಿಂದರ ಡಿವೈನ್ ಲೈಫ್ ಮತ್ತು ಸಾವಿತ್ರಿ ಮಹಾಕೃತಿಗಳ ಅನುವಾದ, ರಾಮಾಯಣದರ್ಶನಂ ಮಹಾಕಾವ್ಯಸಮೀಕ್ಷೆ, ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಸಾರ ಸಂಗ್ರಹ

ಬೇಡಿ ಕಳಚಿತು ದೇಶ ಒಡೆಯಿತು(ಕಾದಂಬರಿ)ಇವು ಇವರ ಮುಖ್ಯ ಕೃತಿಗಳು. ಜೊತೆಗೆ ಕಾನೂನು ಶಿಕ್ಷಣ ಸಂವಿಧಾನ, ಜಾತಿ ಇತ್ಯಾದಿ ಸಾಹಿತ್ಯೇತರ ಮುಖ್ಯ ಕೃತಿಗಳು. ವೃತ್ತ ಪತ್ರಿಕೆಯ ಸಂಪಾದಕ (೧೯೪೮–೬೨).

ಕರ್ನಾಟಕ ಸಾಹಿತ್ಯ (ಅಕಾಡೆಮಿ) ಪ್ರಶಸ್ತಿ, ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಡಿ.ಲಿಟ್ ಪ್ರಶಸ್ತಿ ಇವು ಇವರಿಗೆ ಸಂದ ಗೌರವಗಳು. ಈಗ ೭೯ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮೇಲನದ ಅಧ್ಯಕ್ಷತೆಯ ಗೌರವ.

ಆಕರ : ಮಾರ್ಗ ಸಂಪುಟ–೮

■■

೧೩೩

ವಿಶಿಷ್ಟ ವ್ಯಕ್ತಿತ್ವದ ಕನ್ನಡ ಪ್ರಾಧ್ಯಾಪಕ

ಕನ್ನಡದ ಕೆಲಸದಲ್ಲಿ ಸಣ್ಣದು ದೊಡ್ಡದು ಎಂಬ ಭೇದವಿಲ್ಲ; ಇರಬಾರದು. ನಾನು ಈ ವಿಚಾರ ಸಂಕಿರಣದ ಒಂದು ಗೋಷ್ಠಿಯ ಅಧ್ಯಕ್ಷತೆ ಒಪ್ಪಿಕೊಂಡು ಬಂದಿರುವುದು ಈ ಕಾರಣಕ್ಕಾಗಿ. ಇದಲ್ಲದೆ ಕನ್ನಡ ಪ್ರಾಧ್ಯಾಪಕ ಪರಂಪರೆಯ ಆದ್ಯರಲ್ಲಿ ಒಬ್ಬರಾದ ಮಾಳವಾಡ ಅವರ ಕಾರ್ಯಕ್ರಮದಲ್ಲಿ ಭಾಗವಹಿಸುವುದು ನನ್ನ ಕರ್ತವ್ಯವೂ ಆಗಿದೆ. ಪ್ರೊ. ಮಾಳವಾಡರು ನವೋದಯ ಆರಂಭಕಾಲದ ಕನ್ನಡ ಪ್ರಾಧ್ಯಾಪಕರು. ಇಂಥವರು ಬೋಧನೆಯೊಂದಿಗೆ ಸಾಹಿತ್ಯದಲ್ಲಿ ಹೊಸಹಾದಿ ನಿರ್ಮಿಸುವ, ಸಮಾಜದಲ್ಲಿ ಕನ್ನಡಪ್ರಜ್ಞೆ ಬೆಳೆಸುವ ಹೊಣೆ ಹೊರುವುದು ಅಂದು ಅನಿವಾರ್ಯವಾಗಿದ್ದಿತು. ಈ ಮೂರು ನೆಲೆಗಳಲ್ಲಿ ಬಿಚ್ಚಿ ಬೆಳೆದ ಕನ್ನಡ ಪ್ರಾಧ್ಯಾಪಕರಲ್ಲಿ ಮಾಳವಾಡ ಅವರು ಮುಖ್ಯರು. ಕನ್ನಡ ಶಿಕ್ಷಣ ಆರಂಭಗೊಂಡ ಕಾಲವದು ಪಠ್ಯಕ್ರಮ, ಪಠ್ಯಪುಸ್ತಕ, ಪಠ್ಯಬೋಧನೆಗಳ ಹಾದಿ ಅಸ್ಪಷ್ಟವಾಗಿದೆ. ಆ ಸಂಕ್ರಮಣ ಕಾಲದಲ್ಲಿ ಪ್ರಾಧ್ಯಾಪಕನ ಜವಾಬ್ದಾರಿಯೆಂತಹದೆಂದು ಬೇರೆ ಹೇಳಬೇಕಿಲ್ಲ. ದೇಶಕ್ಕೆ ಸಂವಿಧಾನದಂತೆ ಶಿಕ್ಷಣ ಸಂಸ್ಥೆಗೆ ಸಿಲೆಬಸ್. ಸಂಕ್ರಮಣ ಸನ್ನಿವೇಶದವರಿಗೆ ಇದು ಒಂದು ಆಹ್ವಾನವೂ ಹೌದು, ಅವಕಾಶವೂ ಹೌದು. ಈ ವಿಷಯವಾಗಿ ಮಾಳವಾಡರು ರೂಪಿಸಿದ ಮಾರ್ಗ ಪ್ರಶಂಸನೀಯವಾದುದು. ಸ್ನಾತಕ ಮತ್ತು ಸ್ನಾತಕೋತ್ತರ ವರ್ಗಗಳಿಗಷ್ಟೇ ಅಲ್ಲ ಪ್ರಾಥಮಿಕ ಮಾಧ್ಯಮಿಕ ಹಂತದಿಂದಲೂ ಅವರು ಮಾಡಿದ ಇಂಥ ಕೆಲಸದಿಂದಾಗಿ ಕನ್ನಡ ಪಠ್ಯಕ್ರಮಕ್ಕೆ ಒಂದು ಶೈಕ್ಷಣಿಕ ಶಿಸ್ತು ಪ್ರಾಪ್ತವಾಯಿತು.

ಇದರ ಜೊತೆಯಲ್ಲಿ ಹೊಸ ಸಾಹಿತ್ಯಪಥ ನಿರ್ಮಾಣವೂ ಅಂದಿನ ಅಗತ್ಯವಾಗಿದ್ದಿತು. ಅದು ಭಾವನಿಷ್ಠ ಬರೆವಣಿಗೆಯ ಉತ್ಸಾಹದ ಕಾಲ. ಇದಕ್ಕೆ ವಿಮರ್ಶಾನಿಷ್ಠ ಸಾಹಿತ್ಯಪಥ ಜೋಡಿಸುವ ಹೊಣೆ ಹೊತ್ತ ಹಲವರಲ್ಲಿ ಮಾಳವಾಡ ಅವರೂ ಒಬ್ಬರು. ಇದಕ್ಕಾಗಿ ಇವರೆಲ್ಲ 'ಮಂಗಮಠ' ಹೆಸರಿನ ವೇದಿಕೆಯನ್ನು ಅಸ್ತಿತ್ವಕ್ಕೆ ತಂದುದು, ವೈಚಾರಿಕ ಸಾಹಿತ್ಯದ ಮಹತ್ವವನ್ನು ಬಿಂಬಿಸಿದುದು ಇಂದು ಇತಿಹಾಸ.

ಈ ಸಂದರ್ಭದಲ್ಲಿ ಹೇಳಬೇಕಾದ ಇನ್ನೊಂದು ಮಾತೆಂದರೆ ಈ ಸಾಹಿತ್ಯಕ್ಕೆ ಅವರು ಬಳಸಿದ ಗದ್ಯಶೈಲಿ. ಆ ಕಾಲದ ಕನ್ನಡ ಅಧ್ಯಾಪಕರಲ್ಲಿ ವರ್ಣಪರ ಇಲ್ಲವೆ ವಿವರಣಪರ ಶೈಲಿ

ಎದ್ದು ಕಾಣುತ್ತಿತ್ತು. ಮಾಳವಾಡರು ಇದಕ್ಕೆ ಭಿನ್ನವೆಂಬಂತೆ ತರ್ಕಬದ್ಧ ತೂಕಬದ್ಧ ಶೈಲಿಯನ್ನು ರೂಢಿಸಿಕೊಂಡುದು ಗಮನಾರ್ಹ ಸಾಧನೆಯಾಗಿದೆ. ಅವರ ವ್ಯಕ್ತಿತ್ವದಂತೆ ಸಂಯಮ ಅವರ ಬರವಣಿಗೆಯ ಮುಖ್ಯ ಲಕ್ಷಣವಾಗಿದ್ದು, ಇದರಿಂದಾಗಿ ಸಾಹಿತ್ಯವನ್ನು ಸರಿಯಾದ ದಾರಿಯಲ್ಲಿ ಮುನ್ನಡೆಸುವ ವಿಮರ್ಶಾಮಾರ್ಗವೊಂದು ಈ ಭಾಗದಲ್ಲಿ ತೆರೆದುಕೊಂಡಿತು. ರಾಜಕೀಯ ಕಾರಣಗಳಿಂದಾಗಿ ಕರ್ನಾಟಕ ಅಂದು ಉತ್ತರ ದಕ್ಷಿಣವೆಂದು ಎರಡು ಹೋಳಾಗಿದ್ದಿತು. ಇದನ್ನು ಒಂದುಗೂಡಿಸುವ ಸಲುವಾಗಿ ಮಾಳವಾಡರು ಸೇತುವೆಯಂತೆ ದುಡಿದರು. ಉತ್ತರ ಕರ್ನಾಟಕದ ಪ್ರಾಧ್ಯಾಪಕ ಸಾಹಿತಿಯೆಂದರೆ ಮಾಳವಾಡ ಒಬ್ಬರೇ ಎಂಬಂತೆ ಮೈಸೂರು ಭಾಗದ ಕುವೆಂಪು, ಮಾಸ್ತಿ ಮೊದಲಾದವರೊಂದಿಗೆ ಬಾಂಧವ್ಯ ಕಲ್ಪಿಸಿಕೊಂಡರು. ಇದು ಇನ್ನೂ ವ್ಯಾಪಕತೆ ಪಡೆಯುವ ದೃಷ್ಟಿಯಿಂದ ಓರಿಯಂಟಲ್ ಕಾನ್ಫರೆನ್ಸ್, ಕೇಂದ್ರಸಾಹಿತ್ಯ ಅಕಾಡೆಮಿಗಳಲ್ಲಿ ಕನ್ನಡವನ್ನು ಪ್ರತಿನಿಧಿಸಿದರು.

ಇವುಗಳಿಗಿಂತ ಮುಖ್ಯಸಾಧನೆಯೆಂದರೆ ಧಾರವಾಡ ಪ್ರದೇಶದಲ್ಲಿ ಕನ್ನಡಪ್ರಜ್ಞೆಯನ್ನು ಜಾಗ್ರತಗೊಳಿಸಿದುದು. ಈ ಕೆಲಸವನ್ನು ಮಾಳವಾಡರು ತಾವು ದುಡಿಯುತ್ತಿದ್ದ ಕರ್ನಾಟಕ ಕಾಲೇಜಿನಿಂದಲೇ ಆರಂಭಿಸಿದರು. ಅಂದಿನದು ಮರಾಠಿ ಪ್ರಾಬಲ್ಯದ ಕಾಲ. ಕಾಲೇಜಿನ ಅಧ್ಯಾಪಕರಲ್ಲಿ, ವಿದ್ಯಾರ್ಥಿಗಳಲ್ಲಿ ಮರಾಠಿ ಗಟ್ಟಿಯಾಗಿ ಕಾಲೂರಿತ್ತು. ಶ್ರೀರಂಗ ಏ.ಟಿ. ಸಾಸನೂರರಿಂದ ಆರಂಭವಾಗಿದ್ದ ಮರಾಠಿ ಪ್ರಾಬಲ್ಯವನ್ನು ದುರ್ಬಲಗೊಳಿಸುವ ಮಣಿಹವನ್ನು ಮಾಳವಾಡ, ಗೋಕಾಕ ಮುಂದುವರಿಸಿ, ಕಾಲೇಜ್ ಆವರಣದಲ್ಲಿ ಕನ್ನಡ ವಾತಾವರಣವನ್ನು ತುಂಬಿದರು.

ಈ ಮನೋಧರ್ಮದ ಮಾಳವಾಡರು ಕ್ರಮೇಣ ಧಾರವಾಡ ಸಾರ್ವಜನಿಕ ಜೀವನಕ್ಕೂ ಅನಿವಾರ್ಯವಾದರು. ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ, ಆಕಾಶವಾಣಿ ಆರಂಭ ಇತ್ಯಾದಿ ಮಹತ್ವದ ಮೈಲುಗಲ್ಲು ಸ್ಥಾಪಿಸುವಲ್ಲಿ ಇವರ ಪಾತ್ರ ಮುಖ್ಯವೆನಿಸಿತು. ಸರಕಾರಿ ಅಧಿಕಾರಿಗಳು, ವಕೀಲ ಡಾಕ್ಟರ್‌ರಂಥ ವೃತ್ತಿನಿರತ ವ್ಯಕ್ತಿಗಳು, ಸಾರ್ವಜನಿಕಗಣ್ಯರು–ಹೀಗೆ ಸಂಬಂಧ ಬೆಳೆಸುತ್ತ, ಅಲ್ಲಲ್ಲಿ ಕನ್ನಡಪ್ರಜ್ಞೆ, ಸಾಂಸ್ಕೃತಿಕ ಜಾಗ್ರತಿಯ ಹುಟ್ಟುಹಾಕಿದರು. ಈ ಕೆಲಸದಲ್ಲಿ ಅವರ ಪತ್ನಿ ಶಾಂತಾದೇವಿ ಮಾಳವಾಡ ಸಾಹಚರ್ಯ ಎತ್ತಿ ಹೇಳಲೇಬೇಕು. ಇವರು ಕಲಿತುದು ಕೇವಲ ೪ನೆಯ ವರ್ಗದವರೆಗೆ. ಅಂದಿನದು ಮಹಿಳೆ ಹೊಸ್ತಿಲದಾಟದ ಸಂದರ್ಭ. ಹೀಗಿದ್ದೂ ಮಾಳವಾಡರು ನೀಡಿದ ಪ್ರೋತ್ಸಾಹದಿಂದ ಇವರೂ ಸಾಹಿತಿಯಾಗಿ ಹಲವಾರು ಮಹಿಳಾ ಸಂಸ್ಥೆಗಳ ಸ್ಥಾಪಕರಾಗಿ ಬೆಳೆದರು. ಅಷ್ಟು ಹಿಂದೆಯೇ ಮಾಳವಾಡರು ತೋರಿದ ಔದಾರ್ಯ ಅವರ ಪ್ರಗತಿಪರ ನಿಲವಿಗೆ ನಿದರ್ಶನವೆನಿಸಿದೆ. ಈ ಬಗೆಯ ಬಹುಮುಖಿ ಸೇವೆಯಿಂದಾಗಿ ಈ ದಂಪತಿಗಳು ಧಾರವಾಡದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮಹತ್ವದ ಅಧ್ಯಾಯವಾಗಿ ಉಳಿದಿದ್ದಾರೆ.

ಹೀಗೆ ವೈಯಕ್ತಿಕತೆಯನ್ನು ಸಾರ್ವತ್ರಿಕತೆಯಲ್ಲಿ ವಿಸ್ತರಿಸಿಕೊಂಡ ಮಾಳವಾಡರ ದಣಿದ ಮನಸ್ಸು ಕ್ರಮೇಣ ಆಧ್ಯಾತ್ಮದತ್ತ ಸರಿಯಿತು. ಈಗ ಆಶ್ರಯವಾಗಿ ಬಂದುದು ಪಾಂಡಿಚೇರಿಯ ಅರವಿಂದ ಆಶ್ರಮ. ಈ ಪಂಥ ಕರ್ನಾಟದಲ್ಲಿ ನೆಲೆನಿಲ್ಲುವಂತೆ ಶ್ರಮಿಸಿದವರಲ್ಲಿ ಮಾಳವಾಡರೂ ಒಬ್ಬರು ಸಾಹಿತ್ಯ ಸೃಷ್ಟಿಸಿ, ಮನೆ ಮನೆಗಳಲ್ಲಿ, ಸಾರ್ವಜನಿಕ ವೇದಿಕೆಗಳಲ್ಲಿ ಈ ಪಂಥದ ಮಹತ್ವವನ್ನು

ಮನಗಾಣಿಸಿಕೊಡುವ ಮೂಲಕ ಅರವಿಂದಮಾರ್ಗದ ಮುಖ್ಯ ಪರಿಚಾರಕರಾಗಿಯೂ ಕಂಗೊಳಿಸಿದರು.

ಈ ಎಲ್ಲ ಹೊಣೆಗಳನ್ನು ಹೊತ್ತ ಮಾಳವಾಡರದು ಆಂಗ್ಲೇಯ ಶಿಸ್ತು, ಶರಣ ಸ್ವಾಭಿಮಾನ. ಹೀಗಾಗಿ ಇವರು ಜೀವನದುದ್ದಕ್ಕೂ ಗಡಿಯಾರದ ಜೊತೆ ನಡೆದರು. ಯಾರಿಗೂ ಬಾಗದೆ ಬೀಗಿ ಬೆಳೆದರು. ಇದರಿಂದಾಗಿ ಇವರು ಇಂದಿಗೂ ಕನ್ನಡ ಪ್ರಾಧ್ಯಾಪಕರಲ್ಲಿಯೇ ವಿಶಿಷ್ಟ ವ್ಯಕ್ತಿಗಳಾಗಿ ಉಳಿದರು.

ಆಕರ : ಮಾರ್ಗ ಸಂಪುಟ–೮

■■

೧೩೪

ಹೆಜ್ಜೆಯಿಟ್ಟಲ್ಲಿ ಹೆಜ್ಜೆ ಮೂಡಿಸಿದ ಗೊ.ರು.ಪ.

ಗೊ.ರು.ಚ. ನನ್ನ ನಿಡುಗಾಲದ ಗೆಳೆಯರು. ಇವರು ಹೆಜ್ಜೆಯಿಟ್ಟಲ್ಲಿ ಹೆಜ್ಜೆ ಮೂಡಿಸಿದರು. ಈ ಅಣ್ಣನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟವರು ಈ ತಮ್ಮ ಗೊ.ರು.ಪ. ಇದು ನಮ್ಮ ತಲೆಮಾರಿನ ಒಂದು ಅಪರೂಪದ ನಿದರ್ಶನ.

ಮನುಷ್ಯನು ವ್ಯಕ್ತಿಕೇಂದ್ರಿತವಾಗಿ ಉಳಿಯದೆ, ಸಮಾಜಕೇಂದ್ರಿತವಾಗಿ ಬೆಳೆಯಬೇಕು. ಅದು ಪೂರ್ಣವ್ಯಕ್ತಿತ್ವ. ಈ ಸಮುದಾಯ ಪ್ರಜ್ಞೆಗೊ.ರು.ಪ. ಅವರಲ್ಲಿ ಮೊದಲಿನಿಂದಲೂ ಜೀವಂತವಾಗಿರುವ ಕಾರಣ. ನೀರಾವರಿ ಇಲಾಖೆಯ ಅಧಿಕಾರಿಯಾಗಿದ್ದರೂ ಇವರು ಅದನ್ನು ಮೀರಿ ಸಾಮಾಜೀಕರಣಗೊಳ್ಳುತ್ತ ಬೆಳೆದಿದ್ದಾರೆ.

ಇಂದು ಸಮಾಜಸೇವೆ ಪ್ರಚಾರ ಪ್ರಸಿದ್ಧಿಯ ಸಾಧನವಾಗಿದೆ. ಇದಕ್ಕೆ ಅಪವಾದವೆಂಬಂತೆ ಇವರು ಸಮಾಜಕ್ಕಾಗಿ ನಿರಪೇಕ್ಷ ಭಾವದಿಂದ ದುಡಿಯುತ್ತ ಬಂದಿದ್ದಾರೆ. ಹೆಜ್ಜೆಯಿಟ್ಟಲ್ಲಿ ಹೆಜ್ಜೆಮೂಡಿಸಿದ್ದಾರೆ. ಮೈಸೂರು ನಗರದ ಧಾರ್ಮಿಕ ಸಂಘಟನೆಗಳನ್ನು ಸಮರ್ಥವಾಗಿ ಮುನ್ನಡೆಸುತ್ತ ಬಂದ ಇವರ ದಶರಥಶಕ್ತಿ ಅನನ್ಯವೆಂದೇ ಹೇಳಬೇಕು. ಇದರಿಂದಾಗಿ ಮೈಸೂರು ನಗರದ ಸಾಂಸ್ಕೃತಿಕ ಅಂತರ್ಜಲ ಪಾತಳಿ ಕುಸಿಯದಂತೆ ನೋಡಿಕೊಂಡ ಕೀರ್ತಿ ಇವರಿಗೂ ಸಲ್ಲುತ್ತದೆ.

ಹೀಗೆ ನಗರಕೇಂದ್ರಿತವಾಗಿ ದುಡಿಯುತ್ತಲೇ ಹಳ್ಳಿಗಳಿಗೆ ಹತ್ತಾರು ಸವಲತ್ತುಗಳನ್ನು ಪೂರೈಸಲು, ಇಚ್ಛೆಸಿ, ಹುಟ್ಟೂರಿನಲ್ಲಿ ಇವರು ಸ್ಥಾಪಿಸಿದ 'ಗೊ.ರು.ಪ. ಗ್ರಾಮವಿಕಾಸ ಪ್ರತಿಷ್ಠಾನ'ವು ಇಂದು ನಗರಮುಖಿಯಾಗಿ ಬೆಳೆಯುತ್ತಲಿರುವ ವಿದ್ಯಾವಂತರಿಗೆ ಒಂದು ಮಾದರಿಯೆನಿಸಿದೆ. ಇಂತವರನ್ನು ಸಮಾರಂಭಪೂರ್ವಕ ಅಭಿನಂದಿಸುವುದೆಂದರೆ ಮುಂದಿನ ಪೀಳಿಗೆಗೆ ಒಂದು ಆದರ್ಶವನ್ನು ಸ್ಥಾಪಿಸುವುದೇ ಆಗಿದೆ. ಈ ಸಮಾರಂಭಕ್ಕೆ ಎಲ್ಲ ಬಗೆಯ ಯಶಸ್ಸುಗಳಿರಲೆಂದು ಹಾರೈಸುತ್ತೇನೆ.

ಆಕರ : ಮಾರ್ಗ ಸಂಪುಟ–೮

■■

ಮುನ್ನುಡಿ

೧೩೫

ಹಾಲು ತೊರೆಯಿಂದ ಉಪ್ಪು ನೀರಿಗೆ

೧೯೭೧

ಕೇವಲ ಪಾಠ ಓದಿಸುವ 'ಗಿಳಿರಾಮ' ಆಗುವುದನ್ನು ಕಡಿಮೆ ಮಾಡುತ್ತ, ಹೊಸ ಹೊಸ ಪ್ರಾಧ್ಯಾಪಕರು ಲೇಖನ ವ್ಯವಸಾಯದಲ್ಲಿ ತೊಡುಗುತ್ತಿರುವುದು ನನಗೆ ಇಷ್ಟ ವಿಷಯ. ಬೆಳಕಿಗೆ ಬರಲು ಹಾತೊರೆಯುತ್ತಿರುವವರ ಘರ್ಷಣೆ - ಘೋಷಣೆಗಳ ನೂಕು ನುಗ್ಗಾಟದ ಈಗಿನ ಕಾಲದಲ್ಲಿ ಶ್ರೀ ಪಾಟೀಲರು ಮುಂದೆ ಬಂದು, ತಮ್ಮ ಹಾಡುಗಳನ್ನು ಬಿಚ್ಚಿ ಬಿಸಿಲಿಗೆ ಹಿಡಿದಿರುವುದು ನನಗೆ ಇನ್ನೂ ಸಂತೋಷದ ಸಂಗತಿ. ಈ ಒಂದು ಸ್ವಾರ್ಥತೃಪ್ತಿ ನನ್ನಿಂದ ಇವರ ಕೃತಿಗೆ ಮುನ್ನುಡಿ ಬರೆಸುತ್ತಲಿದೆ.

ಒಂದು ಕೃತಿಯ ಬೆಲೆಕಟ್ಟುವಾಗ ಕವಿಯ ವ್ಯಕ್ತಿತ್ವ ಮತ್ತು ಪರಿಸರಗಳನ್ನು ಗಮನಿಸುವುದು ಅತ್ಯವಶ್ಯ. ಶ್ರೀ ಪಾಟೀಲರ ವ್ಯಕ್ತಿತ್ವ, ಕವಿತ್ವಗಳನ್ನು ನಾನು ಕಳೆದ ಹತ್ತು ವರ್ಷಗಳಿಂದ ಅರಿತಿದ್ದೇನೆ. ಇವರು ಹುಟ್ಟಿ ಬೆಳೆದ ಕಲಬುರ್ಗಿಯಲ್ಲಿ, ಮೈಸೂರು ಧಾರವಾಡಗಳ ಲೇಖನೋದ್ಯಮದ ರಭಸವಾಗಲೀ, ಸಾಹಿತ್ಯದ ಹೊಚ್ಚಹೊಸ ಪ್ರಕಾರಗಳ ತೀವ್ರ ಪ್ರವೇಶವಾಗಲೀ ಕಂಡುಬರುವುದಿಲ್ಲ. ಹೀಗಾಗಿ, ಸಾಹಿತ್ಯದೃಷ್ಟಿಯಿಂದ ರಣಗುಟ್ಟುವ ಇಂಥ ಪರಿಸರದಲ್ಲಿ ಹುಟ್ಟಿದ ಈ ಸಂಕಲನವನ್ನು ವಿಶಿಷ್ಟ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಶ್ರೀ ಪಾಟೀಲರು ಹಳಗನ್ನಡ ಸಾಹಿತ್ಯವನ್ನು ಶ್ರದ್ಧೆಯಿಂದ ಅಭ್ಯಸಿಸಿದವರು. ವಚನಗಳ ವಚೋಧರ್ಮವನ್ನು ಅರಿಯಲು ಪ್ರಯತ್ನಿಸಿದವರು. ಈ ದುಡಿಮೆಯ ಸಾರ್ಥಕ ಪರಿಣಾಮ ಅವರ ಕವನಗಳಲ್ಲಿ ಕಂಡುಬರುವುದು, ಹಳೆಯ ಸಾಹಿತ್ಯಕ್ಕೆ ಮುಟ್ಟಿಸಿದ ಋಣವೂ ಹೌದು; ಹೊಸ ಸಾಹಿತ್ಯಕ್ಕೆ ನೀಡಿದ ಧನವೂ ಹೌದು. ಇದಕ್ಕೆ -

'ಬಾಧಿಪ್ಪ ಕಲಿಯು' ಎಂಥವನೆ ಇರಲಿ
ಆ 'ಕಲಿಗೆ ಕಲಿ'ಯು ನಾವು.
ಒಳ್ಳಿದಗೆ ಒಲಿದು ಬಾಗುವೆವು ಮಣಿದು
'ಸಾಧುವಿಗೆ ಸಾಧು' ನಾವು.

ಇತ್ಯಾದಿ ಪ್ರಯೋಗಗಳನ್ನು ನೋಡಬಹುದು. ಹಳಗನ್ನಡ ಗರ್ಭಕೋಶದಲ್ಲಿ ಹೊಸಗನ್ನಡ ಕಾವ್ಯಕೂಸು ರೂಪ ಬದಲಿಸುತ್ತಿರುವ ರೀತಿ ಇಲ್ಲಿ ಮನೋಜ್ಞವಾಗಿದೆ.

ಶ್ರೀ ಪಾಟೀಲರು ಕವನ ರಚಿಸಲು ಪ್ರಾರಂಭಿಸಿದ ಕಾಲಕ್ಕೆ ಭಾವಗೀತೆಯ ಬಣ್ಣಮೋಡಗಳನ್ನು ಭೇದಿಸಿ, ನವ್ಯಕಿರಣದ ಬಿಸಿ ಭೂಮಿಗೆ ಅಷ್ಟಾಗಿ ತಾಗಿರಲಿಲ್ಲ. ಹೀಗಾಗಿ ಅವರು ಮೊದಲು ಕವನಿಸಿದುವು ಭಾವಗೀತೆ; ಯುಗಧರ್ಮದೊಂದಿಗೆ ಈಸಿ ಕವನಿಸಿದುವು ನವಕಾವ್ಯ. ಈ ಸಂಕಲನದಲ್ಲಿ ಅವೆರಡರ ಮಿಶ್ರಣ ಈ ಕಾರಣದಿಂದಾಗಿ ಅನಿವಾರ್ಯವಾಗಿದೆ. 'ಹೂವಿನ ಬದುಕು', 'ಮಾತೃ ದೇವೋಭವ', 'ಆಷಾಢಭೂತಿ'ಗಳು ಎಳಮೆಯ ಭಾವಗೀತೆಗಳಾಗಿ ಕಂಡರೂ, 'ಸತ್ಯಮೇವ ಜಯತೇ' ಇತ್ಯಾದಿ ಒಂದೆರಡರಲ್ಲಿ ಭಾವ ಬೆಚ್ಚಗೆ ಉಳಿದಿದೆ.

ಹಳಗನ್ನಡದಲ್ಲಿ ಹುಟ್ಟಿ ಭಾವಗೀತೆಯಲ್ಲಿ ಬೆಳೆದರೂ ಶ್ರೀ ಪಾಟೀಲರು ಬದುಕುತ್ತಿದ್ದುದು ನವ್ಯಕಾವ್ಯವನ್ನು. 'ಹಾಲು ತೊರೆಯಿಂದ ಉಪ್ಪು ನೀರಿಗೆ', 'ನೀನುಂಟು ನಾವುಂಟು', 'ಹೋಟೆಲಿನಲ್ಲಿ', 'ಹೆಣ', 'ಆ ದಿನಗಳು', 'ಕೌರವ ವಿಜಯ', ಮೊದಲಾದ ಕವನಗಳಲ್ಲಿ ನವ್ಯತೆಯ ಸತ್ವವಿದೆ. ಎತ್ತಿಕೊಂಡ ವಸ್ತುವನ್ನು ಎಳೆ ಕಡಿದು ಹೋಗದಂತೆ ಕೊನೆಯ ವರೆಗೆ ಮುಟ್ಟಿಸುವಲ್ಲಿ ಒಂದು ಜಿಗುಟುತನವಿದೆ. ಹೀಗಾಗಿ ಇವರ ಬಹಳಷ್ಟು ಕವನಗಳು ಒಡೆದ ಕನ್ನಡಿಯಾಗಿಲ್ಲ. ಹೀಗಿದ್ದರೂ ಕೆಲವು ಕವನ ವಿಗ್ರಹಗಳು ಇನ್ನೂ ಪೂರ್ಣವಾಗಬೇಕಿತ್ತು; ಕೆಲವು ಪದಗಳ ರೂಪಶುದ್ಧಿ, ಅಚ್ಚುದೋಷಗಳನ್ನು ಗಮನಿಸುವುದು ಅವಶ್ಯವಿತ್ತುಯೆನಿಸುತ್ತದೆ. ಆದರೆ ಸಾಹಿತ್ಯಿಕ ರುಕ್ಷಭೂಮಿಯಲ್ಲಿ ತನಗೆ ತಾನೇ ಮಾರ್ಗದರ್ಶಿಯಾಗಿ ನಡೆದವನು ಬರೆದ ಕವನಗಳಿವು ಎಂದು ನೆನಪಿಸಿಕೊಂಡರೆ ಮೇಲಣ ಆರೋಪಗಳನ್ನು ಅವಶ್ಯ ಮರೆಯಬೇಕಾಗುತ್ತದೆ. ಕೆಲವು ಕಡೆಗಳಲ್ಲಂತೂ ಅವರು ನವ್ಯದ ಪ್ರತಿಮಾವಿಧಾನ; ಅಭಿವ್ಯಕ್ತಿಯ ಶಕ್ತಿ, ಮಾತಿನ ಕೆಚ್ಚುಗಳಲ್ಲಿ ಜಯಗಳಿಸಿದ್ದಾರೆ.

"ಖದಲ್ ಬದಲ್ ಕಡಲೇ ಕಾಳ್
ಇವರು ಬಿಟ್ಟು . . . . ಇವರ‍್ಯಾರು" ಎಂದು
ಯಕ್ಷ ಪ್ರಶ್ನೆಯ ಹಾಕಿ
ಗರಗರ ತಿರುಗಿಸಿ ಬಿಟ್ಟರು

[ಹಾಲುತೊರೆಯಿಂದ ಉಪ್ಪು ನೀರಿಗೆ]

ಮನೆಯ ನೆಲಗೋಡೆ ಜಂತಿ
ಗಳಲಿ ಸೇರಿಕೊಂಡಿರುವ ನನ್ನ 'ಕರುಳಿ'ನ ಚೂರು ಚೂರು
ಗಳನ್ನೆಲ್ಲಾ ಆಯ್ದು
ಕಬ್ಬಿಣದ ಪೆಟ್ಟಿಗೆಯಲ್ಲಿ ಹಾಕಿ ಉಕ್ಕಿನ ಕೀಲಿ ಜಡಿದು
ಇರಿಸಬೇಕೆಂದು ಮಾಡಿದ್ದೇನೆ
ಭದ್ರವಾಗಿ.

[ಹೀಗೆ ಮಾಡಿದ್ದೇನೆ]

ಇದು ಸಿಟ್ಟಿನಿಂದ ಫೂತ್ಕರಿಸಿದರೆ
....
ಅವನ ಅಂಗೈಯ ಆಯುಷ್ಯದ ಗೆರೆ
ಅಳಿಸಿ ಹೋಗುವದು.

[ಫಣಿ]

ನಮ್ಮ ಗೋಡ್ಸೆ ಹೇಗೆ ಗುಂಡಿಟ್ಟು ಹೊಡೆದ
'ಧಾಡ್, ಧಾಡ್, ಧಾಡ್' ಎಂದು
ಉಬ್ಬಿಸಿದ ನಿನ್ನ ಎದೆಗೆ

[ನೀನುಂಟು ನಾವುಂಟು]

ಬ್ಲೌಜಿನಲಿ ಅಡಗಿರುವ ಮೊಲೆಗಳನು
ಹುಡುಕಿ ಹೊರದೆಗೆದು ಹಿಂಡಿ
ಹಾಲನುಕ್ಕಿಸುವ 'ಕಾಮಣ್ಣ'

[ಯಾರಿವನು?]

ಕಟ್ಟಿಗೆ ಕಡಿದು
ತೆಪ್ಪಗೆ ಗೋಡೆಗೆ ಆತುಕೊಳ್ಳುವ ಚೇಳು

[ಗುಮ್ಮನಗುಸುಗ]

ಹೀಗೆ, ಕಣ್ಣಿಗೆ ಕಟ್ಟುವ ಹಾಗೆ ಕವನಿಸುವಲ್ಲಿ ಭಾಷೆಯನ್ನು ದುಡಿಸಿಕೊಳ್ಳುತ್ತಿರುವುದು ಸಾರ್ಥಕ ಸಾಧನೆಯೆನಿಸುತ್ತದೆ. ಜೊತೆಗೆ ಹಾಸ್ಯ ಅಣಕಗಳಲ್ಲಿಯಂತೂ ಹೋಗುತ್ತ ಕೊಯ್ಯ ಬರುತ್ತ ಕೊಯ್ಯ ಕರಗಸವಾಗಬಹುದಾದ ಚಿಹ್ನೆ ಇವರ ಭಾಷೆಯಲ್ಲಿ ತೋರುತ್ತಿವೆ. ಇಂಥ ಧೋರಣೆಗಳು ಪದ್ಯಕ್ಕೆ ಬಿರುಸುತನ, ಮೊನಚುತನವನ್ನುಂಟು ಮಾಡಿ, ಅವು ನಾಲ್ಕು ಕಾಲ ಬಾಳುವ ಶಕ್ತಿ ನೀಡುತ್ತವೆ.

ಒಟ್ಟಾಗಿ, ಈ ಸಂಗ್ರಹ ರಮ್ಯ-ನವ್ಯ ಎರಡೂ ಸಂಪ್ರದಾಯದ ಕವನಗಳಿಂದ ಕೂಡಿದ್ದರೂ, ಇಲ್ಲಿ ಭಾವಗೀತೆಗಿಂತ ನವ್ಯಕಾವ್ಯಗಳು ಶಕ್ತಿಶಾಲಿಯಾಗಿರುವುದರಿಂದ ಶ್ರೀ ಪಾಟೀಲರು ತಮ್ಮ ಭವಿಷ್ಯತ್ತಿನ ಬರವಣಿಗೆಯ ಬಗ್ಗೆ ಭರವಸೆ ಕೊಡಬಲ್ಲ ಕವಿಯೆಂದು ಹೇಳಬಹುದು.

ಶಿವಶರಣ ಜಾವಳಿ ಪಾಟೀಲ, ಕಲಬುರ್ಗಿ

ಆಕರ : ಮಾರ್ಗ ಸಂಪುಟ–೬

■■

೧೩೬

ಬಾಳಗೋಪಾಳನ ಲಾವಣಿಗಳು

೧೯೭೪

ಜನಪದರೊಂದಿಗೆ ನಿತ್ಯ ಹುಟ್ಟುತ್ತ, ದೇಶ, ಕಾಲ, ಪರಿಸರಗಳಿಗೆ ತಕ್ಕಂತೆ ಬದಲಾಗುತ್ತ ಬರುವುದು ಜನಪದ ಸಾಹಿತ್ಯದ ಲಕ್ಷಣ. ಇದರ ಗದ್ಯ, ಪದ್ಯ, ದೃಶ್ಯ ಪ್ರಕಾರಗಳಲ್ಲಿ ಪದ್ಯಪ್ರಕಾರ ತುಂಬ ಜನಪ್ರಿಯವಾದುದು. ಈ ಪದ್ಯಪ್ರಕಾರದಲ್ಲಿ ಉಪಜೀವನದ ಹಾಡು, ಉತ್ಸಾಹದ ಹಾಡು, ಉತ್ಸವದ ಹಾಡು - ಎಂಬ ಮೂರು ವರ್ಗಗಳಲ್ಲಿ ಲಾವಣಿಯು 'ಉಪಜೀವನದ ಹಾಡು' ವರ್ಗಕ್ಕೆ ಸೇರುತ್ತದೆ. ಇದನ್ನು ಹಾಡುವವರು ವೃತ್ತಿಗಾಯಕರೆಂದು ಕರೆಯಿಸಿಕೊಳ್ಳುತ್ತಾರೆ.

ಲಾವಣಿಯ ಉಗಮ ಆಗಮಗಳ ವಿಷಯ ಇನ್ನೂ ಅನಿಶ್ಚಿತದಲ್ಲಿ ನಿಂತಿದೆ. ಪ್ರಾಚೀನ ಕನ್ನಡ ಸಾಹಿತ್ಯ ಇದರ ಬಗ್ಗೆ ಮೌನವಾಗಿರುವುದು, ಮಹಾರಾಷ್ಟ್ರದ ಗಡಿಯಲ್ಲಿ ಈ ಸಾಹಿತ್ಯ ವಿಪುಲವಾಗಿರುವುದು, ಇದು ಆ ಪ್ರದೇಶದಲ್ಲಿ ಉಗಮಿಸಿತು ಇಲ್ಲವೆ ಆ ಪ್ರದೇಶದಿಂದ ಆಗಮಿಸಿತು ಎಂದು ಹೇಳಲು ಪ್ರಚೋದಿಸುತ್ತದೆ. ಒಂದು ವೇಳೆ ಅಲ್ಲಿಂದ ಬಂದಿದ್ದರೂ, ಇದು ಗೊಂದಲ ಹಾಡು ಮೊದಲಾದವುಗಳಷ್ಟು ಪ್ರಾಚೀನವಾಗಿರದೆ, ಬಹುಶಃ ಮರಾಠಾ ಪೇಶ್ವೆಯರ ಕಾಲದಲ್ಲಿ ಕಣ್ಣು ತೆರೆದಿರಬೇಕೆನಿಸುತ್ತದೆ.

ಲಾವಣಿ, ರಗಳೆಯಂತೆ ಛಂದೋಪ್ರಕಾರವೂ ಹೌದು; ಸಾಹಿತ್ಯಪ್ರಕಾರವೂ ಹೌದು. ಈ ವರೆಗೆ ವಿದ್ವಾಂಸರು ಲಾವಣಿಯ ಲಕ್ಷಣವನ್ನು ಅದರ 'ನಾಮ' ಮತ್ತು 'ಶಿಲ್ಪ'ಗಳನ್ನು ಗುರಿಯಿಟ್ಟು ಹೇಳುತ್ತ ಬಂದಿದ್ದಾರೆ. ಲವಣ (=ರುಚಿ), ಲಾವಣ್ಯ (=ಸೌಂದರ್ಯ) ಈ ಅರ್ಥದ ಹಿನ್ನೆಲೆಯಲ್ಲಿ "ಲಾವಣಿ" ಹೆಸರು ಹುಟ್ಟಿದೆ - ಎಂದು ಅವರ ಅಭಿಪ್ರಾಯ. ಆದರೆ ಹದಿನೇಳನೆಯ ಶತಮಾನದ ಗುಣಚಂದ್ರನ ಛಂದಸ್ಸಾರದಲ್ಲಿ ಬರುವ

ಲಘುಗಳ ಮಿಳಿತವ ಮಾಡಿ
ಕೊನೆಯಲಿ ಗುರುಗಳ ಹೂಡಿ
ಅರ್ಥದ ಸಾರವ ನೋಡಿ,
ಪ್ರಾಸನು ಕೊನೆಯಲಿ ಕೂಡಿ
ಪಾದ ಮಿತಿಯ ಬೀಸಾಡಿ
ಲಾವಳಿ ಕೃತಿಗಳ ಪಾಡಿ

ಎಂಬ ಲಾವಣಿ ಲಕ್ಷಣ ಪದ್ಯದಲ್ಲಿಯ 'ಲಾವಳಿ' ಪದವನ್ನು ಒಪ್ಪಿಕೊಂಡರೆ, ಲವಣ-ಲಾವಣ್ಯಗಳನ್ನಾಧರಿಸಿ, ಅರ್ಥ ಹೇಳುವುದು ತೀರ ತಪ್ಪೆನಿಸುತ್ತದೆ. ಕಾರಣ ಲಾವಳಿ>ಲಾವಣಿ = ಸಮೂಹ, ಗುಂಪು- ಈ ಅರ್ಥ ಪರಂಪರೆಯಲ್ಲಿ ಈ ಹೆಸರು ಹುಟ್ಟಿರಬೇಕೆನಿಸುತ್ತದೆ.

'ಶಿಲ್ಪ' ದೃಷ್ಟಿಯಿಂದ ಲಾವಣಿಯನ್ನು 'ಛಂದೋಶಿಲ್ಪ', 'ಸಂಗೀತಶಿಲ್ಪ' ಎಂಬ ಎರಡು ಮಗ್ಗಲುಗಳಿಂದ ಲಕ್ಷಣಿಸಬಹುದಾಗಿದೆ. ಮೇಲಿನ ಪದ್ಯದಲ್ಲಿ ೧. ಮಧ್ಯ ಮಧ್ಯ ಲಘುಗಳಿದ್ದರೂ, ಕೊನೆ ಕೊನೆಗೆ ಗುರುವು ಅವಶ್ಯ. ೨. [ಆದಿಪ್ರಾಸ ಇರಲಿಕ್ಕಿಲ್ಲ]. ಅಂತ್ಯಪ್ರಾಸ ಅವಶ್ಯ. ೩. ಪಾದ ಸಂಖ್ಯೆ ಅನಿಯಮಿತ ಎಂದು ಗುಣಚಂದ್ರ ಹೇಳುವುದು 'ಲಾವಣಿ' ಛಂದೋಶಿಲ್ಪದ ಲಕ್ಷಣವಾಗಿದೆ.

ಪ್ರಾಚೀನರು ಹೇಳದ ಕಾರಣ ಕರ್ನಾಟಕದಲ್ಲಿ ಸಿಗುವ ಲಾವಣಿ ಸಾಹಿತ್ಯವನ್ನು ನೋಡಿ, ಅದರ 'ಸಂಗೀತ ಶಿಲ್ಪ'ವನ್ನು ಹೀಗೆ ಹೇಳಬಹುದು. ಪ್ರತಿಯೊಂದು ಲಾವಣಿಯಲ್ಲಿ ಪಲ್ಲ ಮತ್ತು ಚೌಕ ಒಡೆದು ಕಾಣುತ್ತವೆ. ಹಾಡಿನ ಕೇಂದ್ರ ಆಶಯನ್ನೊಳಗೊಂಡು ಪ್ರಾರಂಭದಲ್ಲಿ ಬರುವ ಪಲ್ಲ, ಪ್ರತಿಯೊಂದು ಚೌಕಗಳ ತರುವಾಯವೂ ಪುನರುಕ್ತಗೊಳ್ಳುತ್ತ ಹೋಗುತ್ತದೆ. ಪ್ರತಿಯೊಂದು ಚೌಕಿನಲ್ಲಿ ಸಾಮಾನ್ಯವಾಗಿ ಖ್ಯಾಲ, ಚಾಲ, ಏರಚಾಲ, ದುಡುಕಿ, ದುಯಿರಿ, ಕೂಡಪಲ್ಲಗಳೆಂಬ ಹಂತಗಳಿರುತ್ತವೆ. ಒಂದು ಚೌಕದಲ್ಲಿ ಈ ಎಲ್ಲವೂ ಇರಬೇಕೆಂಬ, ಇದೇ ಕ್ರಮದಲ್ಲಿ ಇರಬೇಕೆಂಬ ನಿಯಮ ಇಲ್ಲ. ಕನ್ನಡದಲ್ಲಿ ಸ್ತೋತ್ರ, ಆಧ್ಯಾತ್ಮ, ಕಥೆ (ಪೌರಾಣಿಕ, ಐತಿಹಾಸಿಕ, ಸಾಮಾಜಿಕ), ನೀತಿ, ಶೃಂಗಾರ, ಈ ವಸ್ತುಜಲವನ್ನು ತುಂಬಿಕೊಂಡು, ಲಾವಣಿ ಸಾಹಿತ್ಯ ವಾಹಿನಿ ಪ್ರವಹಿಸುತ್ತದೆ.

ಹೀಗೆ ಲಾವಣಿ ಎನ್ನುವುದು ಛಂದಸ್ಸು ಮತ್ತು ಸಂಗೀತ ವಿಶಿಷ್ಟವಾದ ಪ್ರಕಾರವೇ ಹೊರತು, ವಸ್ತು ವಿಶಿಷ್ಟ ಪ್ರಕಾರವಲ್ಲ. ಆದುದರಿಂದ "ಜನಪದ ಗೀತಸಾಹಿತ್ಯ ಕಥನಾತ್ಮಕ ಹಾಗೂ ಭಾವಗೀತಾತ್ಮಕವಾದುದು. ಕಥಾನಾತ್ಮಕ ಗೀತಗಳನ್ನೆಲ್ಲ ಲಾವಣಿಗಳೆಂದು ಕರೆಯಬಹುದು" ಎಂದು ಇತ್ತೀಚೆಗೆ ಕೇಳಿಬರುತ್ತಿರುವ ಮಾತುಗಳು, ಲಾವಣಿಯನ್ನು ಅರ್ಥ ಮಾಡಿಕೊಳ್ಳದೆ ಹೇಳಿದವುಗಳೆನ್ನಬೇಕಾಗುತ್ತದೆ.

೧. ಲಾವಣಿಯಲ್ಲಿ ಎರಡು ಪ್ರಕಾರಗಳು :

ಒಂದು : ಬಯಲು ಲಾವಣಿ, ಎರಡು: ಮೇಳ ಲಾವಣಿ.

೨. ಬಯಲು ಲಾವಣಿಗಳನ್ನು ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು, ಬರಿಗೈಯಿಂದ ಚಿಟಕಿ ನುಡಿಸುತ್ತ ಭಾವಭಂಗಿಯಿಂದ ಒಬ್ಬನೇ ಹಾಡುತ್ತಾನೆ. ಮೇಳ ಲಾವಣಿಯಲ್ಲಿ ಮುಮ್ಮೇಳದಲ್ಲಿ ಒಬ್ಬ. ಹಿಮ್ಮೇಳದಲ್ಲಿ ಕನಿಷ್ಠಪಕ್ಷ ಇಬ್ಬರು ಇದ್ದು ಡಪ್ಪ, ತುಂತುಣಿ, ತಾಳ ಮೊದಲಾದ ವಾದ್ಯಗಳನ್ನು ಬಳಸುತ್ತಾರೆ.

೩. ಮೇಳ ಲಾವಣಿಗಳಲ್ಲಿ ಕೆಲವೊಮ್ಮೆ ಎರಡು ಪಕ್ಷಗಳು ಸ್ಪರ್ಧೆಗೆ ನಿಲ್ಲುತ್ತವೆ. ಸ್ತ್ರೀ ಪರವಾದ ಪಕ್ಷ ನಾಗೇಶಿ (ಕಲ್ಗಿ), ಪುರುಷ ಪರವಾದ ಪಕ್ಷ ಹರದೇಶಿ (ತುರಾಯಿ).

೪. ನಾಗೇಶಿ ಪಕ್ಷದವರು ಸರಸ್ವತಿ ಸ್ತುತಿಯಿಂದ, ಹರದೇಶಿ ಪಕ್ಷದವರು ಗಣಪತಿ ಸ್ತುತಿಯಿಂದ ಲಾವಣಿಯನ್ನು ಪ್ರಾರಂಭಿಸುವರು.

ಹೀಗೆ ಏಕ ಶರೀರಿಯಾಗಿ ಹುಟ್ಟಿ ಎರಡು ರೀತಿಯಲ್ಲಿ ಪ್ರದರ್ಶಿತವಾಗುತ್ತ ಜಾತ್ರೆ ಉತ್ಸವಗಳಲ್ಲಿ ಜನ ಮನೋರಂಜಕವಾಗಿ, ಚುನಾವಣೆ, ಮದ್ಯಪಾನನಿರೋಧ, ಮಿತಸಂತಾನ ಧೋರಣೆಗಳ ಪ್ರಚಾರಕ್ಕೆ ವಾಹಕವಾಗಿ, ಲಾವಣಿಸಾಹಿತ್ಯ ಎಲ್ಲ ಪ್ರಕಾರಗಳಿಗಿಂತ ವೇಗವಾಗಿ, ವ್ಯಾಪಕವಾಗಿ ಬೆಳೆಯುತ್ತಲಿದೆ. ಈ ಪ್ರಸಂಗಗಳಲ್ಲಿ ಅಂತ್ಯಪ್ರಾಸ ಆಧಾರದಿಂದ ಗದ್ಯ ಲಾವಣಿ, ಪದ್ಯವಾಗುವುದೇ ಹೆಚ್ಚು. ಹೀಗಾಗಿ ಸಾಹಿತ್ಯ ದೃಷ್ಟಿಯಿಂದ ಇಲ್ಲಿ ಹೂವು, ಹಣ್ಣು, ಕಡಿಮೆ; ಎಲೆ ಹೀಚು ಅಧಿಕ. ಇದಕ್ಕೆ ಮುಖ್ಯ ಕಾರಣ ಧಾಟಿಯ ಪ್ರಾಧಾನ್ಯತೆ, ರಚನೆಯ ಕಸಬು, ಸ್ಪರ್ಧಾಮೂಲ ಜನನ.

ಜನಪದ ಸಾಹಿತ್ಯವನ್ನು ಹೊಸ ದೃಷ್ಟಿಯಿಂದ ನೋಡುತ್ತಲಿರುವ ಇಂದಿನ ಸಮಯದಲ್ಲಿ ಲಾವಣಿಯ ಸಂಗ್ರಹ, ಸಂಪಾದನೆ, ಸಮಾಲೋಚನೆಯ ಕಾರ್ಯಕ್ಕೂ ವಸಂತಕಾಲ ಪ್ರಾಪ್ತವಾಗಿದೆ. ಈ ಸಾಹಿತ್ಯವನ್ನು ವಸ್ತು, ಪ್ರದೇಶ ನಿಷ್ಠವಾಗಿ ಸಂಗ್ರಹಿಸುವಂತೆ, ಕವಿನಿಷ್ಠವಾಗಿ ಸಂಗ್ರಹಿಸುವುದೂ ಪ್ರಯೋಜಕವಾಗಿದೆ. ಇದರಿಂದ ಒಬ್ಬ ಕವಿಯ ಲಾವಣಿಸಾಹಿತ್ಯದ ವ್ಯಾಪ್ತಿ, ಸತ್ವ, ಧೋರಣೆಗಳೆಲ್ಲಾ ಗಮನಕ್ಕೆ ಬರುತ್ತವೆ. ಕರ್ನಾಟಕದಲ್ಲಿ ಹಲಸಂಗಿಯ ಖಾಜಾಭಾಯಿ, ತೇರದಾಳ ತುಕಾರಾಮ, ಮುರಗೋಡದ ಕುಬಣ್ಣ, ಮದರಖಂಡಿಯ ಯಲ್ಲಣ್ಣ, ಗೋಕಾವಿಯ ಸಾತು ಕ್ಯಾಮಣ್ಣ, ಅಂಕಲಿ ಇಮಾಮ ಮೊದಲಾದವರು ಸುಪ್ರಸಿದ್ಧ ಲಾವಣಿ ಕವಿಗಳು. ಒಂದೊಂದು ಸ್ವತಂತ್ರ ಗ್ರಂಥಕ್ಕೆ ವಸ್ತುವಾಗಬಲ್ಲ ವ್ಯಕ್ತಿಗಳು. ಇವರ ಪರಂಪರೆಯಲ್ಲಿ ನಿಲ್ಲುತ್ತಾನೆ, ಪ್ರಸ್ತುತ ಲಾವಣಿಗಳನ್ನು ಬರೆದ ಕವಿ ಬಾಳಗೋಪಾಳ. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ, ಬೆಳಗಾಂವಿ ಜಿಲ್ಲೆಯ ಒಳ-ಹೊರಗೆ ಲಾವಣಿ ಸಾಹಿತ್ಯವನ್ನು ಜೀವಂತವಾಗಿ ಇಟ್ಟವರಲ್ಲಿ ಈತನೂ ಒಬ್ಬ. ತನ್ನ ಜೀವಮಾನದಲ್ಲಿ ಬರೆದು ಹಾಡಿದ ಅನೇಕ ಲಾವಣಿಗಳಲ್ಲಿ ಕೆಲವು ಮಾತ್ರ ಈ ಕೃತಿಯಲ್ಲಿ ಸಂಗ್ರಹಗೊಂಡಿವೆ. ಒಬ್ಬ ಕವಿಯ ಲಾವಣಿಗಳು ಒಂದೆಡೆ ಸಮುಚ್ಚಯಗೊಂಡ ಪ್ರಥಮ ಸಂಕಲನವಿದು.

ಈ ದೃಷ್ಟಿಯಿಂದ ಇದು ಮಾರ್ಗದರ್ಶಿ ಕೃತಿ. ಆದರೆ ಒಟ್ಟು ಲಾವಣಿ ಸಾಹಿತ್ಯದಲ್ಲಿಯೇ ಕಾವ್ಯತೇಜ, ಅನುಭವದ ಆಳ, ಕಡಿಮೆ ಎಂಬ ಮಾತಿಗೆ ಈ ಕವಿ ಅಪವಾದವಲ್ಲ.

ಜನಪದ ಸಾಹಿತ್ಯವನ್ನು ಸಂಗ್ರಹಿಸುವುದು ಸುಲಭ; ಸಂಪಾದಿಸುವುದು ಕಷ್ಟ. ಹರಿಯುವ ನೀರಿನಂತೆ ದೇಶ, ಕಾಲ, ಪರಿಸರಕ್ಕನುಗುಣವಾಗಿ ನಿತ್ಯಪರಿವರ್ತನಶೀಲವಾದ ಈ ಸಾಹಿತ್ಯವನ್ನು ಸಂಪಾದಿಸುವ ನಿರ್ದಿಷ್ಟ ನೀತಿ-ನಿಯಮಗಳು ಕನ್ನಡದಲ್ಲಿ ಇನ್ನೂ ರೂಪಗೊಂಡಿಲ್ಲ. ಕಾರಣ, ಜಾನಪದ ವಿದ್ವಾಂಸರ ಮತ್ತು ಜಾನಪದ ಹವ್ಯಾಸಿಗಳ ಸಂಕಲನಗಳಲ್ಲಿ ವಿಶೇಷ ಅಂತರ ತೋರುವದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿಂತ ಜಾನಪದ ಅಭ್ಯಾಸಿಗಳಲ್ಲಿ ಶ್ರೀ ನಿಂಗಣ್ಣ ಸಣ್ಣಕ್ಕಿಯವರೂ ಒಬ್ಬರು. ಜಾನಪದವನ್ನು ಅವರು ಬಹಳ ಹಚ್ಚಿಕೊಂಡಿದ್ದಾರೆ. ಹವ್ಯಾಸಿ ಮಟ್ಟದಿಂದ ಹೊರಬರಲು ಹವಣಿಸುವ ಅವರ ಶ್ರಮ, ಶ್ರದ್ಧೆಗಳನ್ನು ನಾನು ತುಂಬಾ ಮೆಚ್ಚಿಕೊಂಡಿದ್ದೇನೆ. ಶಾಸ್ತ್ರದ ನೆಲಗಟ್ಟಿನ ಮೇಲೆ ನಿಲ್ಲುವುದರಿಂದ ಈ ಶ್ರಮ, ಶ್ರದ್ಧೆಗಳು ಸಾರ್ಥಕತೆ ಪಡೆಯುತ್ತವೆ. ಶ್ರೀ ನಿಂಗಣ್ಣ ಸಣ್ಣಕ್ಕಿಯವರ ಜಾನಪದ ಅಧ್ಯಯನ ಅಂತಹ ಅರ್ಥವಂತಿಕೆಯನ್ನು ಪಡೆಯಲಿ ಎಂದು ಹಾರೈಸುತ್ತೇನೆ.

ನಿಂಗಣ್ಣ ಸಣ್ಣಕ್ಕಿ, ಗೋಕಾಕ

ಆಕರ : ಮಾರ್ಗ ಸಂಪುಟ–೬

೧೩೭

ಸಾಹಿತ್ಯದೃಷ್ಟಿ

೧೯೭೯

ಒಂದು ಸಂಜೆ, ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರೊ. ಮಾಳವಾಡ ಅವರ ಅನಿರೀಕ್ಷಿತ ಭೆಟ್ಟಿ. "ನನ್ನ ಒಂದು ಪುಸ್ತಕ ಅಚ್ಚಾಗುತ್ತಲಿದೆ. ಅದಕ್ಕೆ ನೀವು ಪ್ರವೇಶ ರೂಪದ ನಾಲ್ಕು ಮಾತು ಬರೆಯಬೇಕು." ಆ ಮಾತಿನಲ್ಲಿ ಹಿರಿಯ ವಿಶ್ವಾಸವಿತ್ತು; ಹಿರಿಯರ ವಾತ್ಸಲ್ಯವಿತ್ತು.

ಸಾಮಾನ್ಯವಾಗಿ ಮುನ್ನುಡಿ, ಗ್ರಂಥಕ್ಕೆ ಗೌರವವನ್ನು ತಂದುಕೊಡುತ್ತದೆ. ಆದರೆ ಈ ಮುನ್ನುಡಿ ಪ್ರೊ. ಮಾಳವಾಡ ಅವರ ವಿದ್ಯಾರ್ಥಿಗಳ ವಿದ್ಯಾರ್ಥಿಯಾದ ನನಗೆ ದೊಡ್ಡ ಗೌರವವನ್ನು ತಂದುಕೊಟ್ಟಿದೆ-ಎಂದು ಭಾವಿಸಿ ಇಲ್ಲಿ ನಾಲ್ಕು ಮಾತುಗಳನ್ನು ಬರೆಯುತ್ತೇನೆ.

ಪ್ರೊ. ಮಾಳವಾಡ ಅವರದು ಕನ್ನಡ ಸಾಹಿತ್ಯ-ಸಂಸ್ಕೃತಿ ಕ್ಷೇತ್ರಗಳಲ್ಲಿ ಬಹು ದೊಡ್ಡ ಹೆಸರು. ಕಳೆದ ಐದು ದಶಕಗಳಿಂದ ಅವರು ಈ ಕ್ಷೇತ್ರಗಳಲ್ಲಿ ಹಾಸುಹೊಕ್ಕಾಗಿ ಬೆಳೆದು, ಇವುಗಳ ಬೆಳವಣಿಗೆಗೆ ಕಾರಣರಾಗಿದ್ದಾರೆ. ಉತ್ತರ ಕರ್ನಾಟಕದ ಮಟ್ಟಿಗಂತೂ ಕನ್ನಡದ ಗುಡಿಗೋಪುರಗಳಿಗೆ ಅಡಿಪಾಯ ಹಾಕಿದ ಆದ್ಯರಲ್ಲಿ ಒಬ್ಬರು. ಪ್ರಾಚೀನ - ಅರ್ವಾಚೀನ ಸಾಹಿತ್ಯ ಮತ್ತು ಆಧ್ಯಾತ್ಮಗಳ ಸಮನ್ವಯ ವ್ಯಕ್ತಿತ್ವ ಅವರದು. ನವೋದಯ ಕಾಲದ ವಿಮರ್ಶಾಪಥದ ಪ್ರವರ್ತಕರಲ್ಲಿ ಅವರೂ ಒಬ್ಬರೆಂಬುದನ್ನು ಈಗಾಗಲೇ ಇತಿಹಾಸ ಒಪ್ಪಿಕೊಂಡ ಮಾತು.

ಪ್ರೊ. ಮಾಳವಾಡ ಅವರು ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತರಾಗಿ ಇಂದಿಗೆ ಹದಿನಾಲ್ಕು ವರ್ಷಗಳು ಸಂದಿವೆ. ವಿಶ್ರಾಂತ ಪ್ರಾಧ್ಯಾಪಕರು ಓದು, ಬರೆಹ, ಪ್ರಕಟನೆಗಳಿಗೂ ವಿಶ್ರಾಂತಿ ಕೊಟ್ಟು, ಸರಕಾರದ ಸಹಾಯಧನ, ಅರ್ಧ ಅವಧಿಯ ನೌಕರಿ ಇತ್ಯಾದಿ ಹಪಾಹಪಿ ಹಚ್ಚಿಕೊಳ್ಳುವುದು ಸಾಮಾನ್ಯ ನೋಟ. ಇದಕ್ಕೆ ಅಪವಾದವೆಂಬಂತೆ ಪ್ರೊ. ಮಾಳವಾಡರು ಗಾಢವಾದ ವ್ಯಾಸಂಗ ಮತ್ತು ಲೇಖನ ವ್ಯವಸಾಯಗಳಲ್ಲಿ ತೊಡಗಿದುದು ಅವರ ಪವಿತ್ರ ಹವ್ಯಾಸಗಳ ದ್ಯೋತಕವಾಗಿದೆ. ಅದರಲ್ಲಿಯೂ ಇಂದಿನ ನಿರುತ್ತೇಜಕ ಕಾಲದಲ್ಲಿ ತಮ್ಮ ಗ್ರಂಥಗಳನ್ನು ತಾವೇ ಪ್ರಕಟಿಸುತ್ತಿರುವುದು ಅವರ ಸಾಹಿತ್ಯಶ್ರದ್ಧೆಯ ಕುರುಹಾಗಿದೆ. ಸಾಹಿತ್ಯವನ್ನೇ ಆಳಿದವರಿಗೆ, ಸಾಹಿತ್ಯವನ್ನೇ ಬಾಳಿದವರಿಗೆ ಇದು ಅನಿವಾರ್ಯವೆಂದೇ ಹೇಳಬೇಕು.

"ಸಾಹಿತ್ಯದೃಷ್ಟಿ"- ಪ್ರೊ. ಮಾಳವಾಡ ಅವರು ಆಗಾಗ ನೀಡಿದ ಉಪನ್ಯಾಸ, ಪೂರೈಸಿದ ಮುನ್ನುಡಿ, ಬರೆದ ವಿಮರ್ಶೆಗಳ ಸಂಕಲನವಾಗಿದೆ. ಹೀಗಾಗಿ ಅಧ್ಯಯನಶೀಲ ಪ್ರಾಧ್ಯಾಪಕರೊಬ್ಬರ ಐದು ದಶಕಗಳ ಬರಹ ಜೀವನದ ಒಂದು ಭಾಗವಾಗಿದೆ, ಈ ಕೃತಿ. ವಿಭಿನ್ನ ಸಂದರ್ಭ ಕಾರಣವಾಗಿ ಇಲ್ಲಿಯ ಲೇಖನಗಳಲ್ಲಿ

ತಾರತಮ್ಯ ಕಂಡುಬಂದರೂ ಅವುಗಳಲ್ಲಿ ಪ್ರವಹಿಸುವ ಪ್ರಧಾನವಾಹಿನಿಯೆಂದರೆ ಬದುಕೇ ಬರಹವಾಗಿರುವ ಅನನ್ಯ ಸಾಂಗತ್ಯ. ಹೀಗಾಗಿ ಪ್ರತಿಯೊಂದು ಲೇಖನದಲ್ಲಿ 'ಮಾಳವಾಡ ಮುದ್ರೆ'ಯನ್ನು ತಪ್ಪದೇ ಕಾಣುತ್ತೇವೆ. ಅದರಲ್ಲಿಯೂ ನಮಗೆಂತಹ ಸಾಹಿತ್ಯ ಬೇಕು? ಸತ್ಪ್ರೇರಣೆಯ ಸಾಹಿತ್ಯ, ಸಾಹಿತ್ಯ ಸಲ್ಲಾಪ, ಲಲಿತ ಪ್ರಬಂಧಗಳು, ಪ್ರಬಂಧ-ವಿಮರ್ಶೆಗಳಲ್ಲಿ ಹೊಸ ಒಲವು - ಈ ಲೇಖನದಲ್ಲಿ ಮಾಳವಾಡರೇ ಮೂಡಿ ಬರುತ್ತಾರೆ. ಇಲ್ಲಿ ಸಾಹಿತ್ಯದ ಬಗೆಗೆ ಎತ್ತಿದ ಮೂಲಭೂತ ಪ್ರಶ್ನೆಗಳು, ನೀಡಿದ ಸಮರ್ಪಕ ಉತ್ತರಗಳು ವಾಚಕರ ಜ್ಞಾನಕ್ಷಿತಿಜವನ್ನು ವಿಸ್ತರಿಸುತ್ತ, ಪ್ರೊ. ಮಾಳವಾಡ ಅವರ ಸಾಹಿತ್ಯಕ ನಿಲುವನ್ನು ಎತ್ತಿ ಹೇಳುತ್ತವೆ. ಸಾಹಿತ್ಯದ ಹೆಸರಿನಲ್ಲಿ ತಪ್ಪುದಾರಿ ತುಳಿಯುತ್ತಲಿರುವ ಕಚ್ಚಾ ಲೇಖಕರು ಒಮ್ಮೆ ಇವುಗಳನ್ನು ತಪ್ಪದೇ ಓದಬೇಕು. ಇಲ್ಲಿಯ "ಸ್ವತಂತ್ರ ಮನುಷ್ಯ ತನ್ನನ್ನು ತಾನು ನಿಯಂತ್ರಿಸಿಕೊಳ್ಳಲು ಸಮರ್ಥನಾಗಬೇಕು, ಸಾಹಿತ್ಯದಲ್ಲಿಯ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಈ ಮಾತು ಅನ್ವಯಿಸುತ್ತದೆ." "ಸಾಹಿತ್ಯ ನಿರ್ಮಾಣವು ಹೊಣೆಗಾರಿಕೆಯ ಗಂಭೀರವಾದ ಕಾರ್ಯ" ಎಂಬ ಹೇಳಿಕೆಗಳು ಬರೆಯಲು ನಿರತನಾಗುವ ಲೇಖಕನನ್ನು ಗಾಢವಾದ ಆಲೋಚನೆಗೆ ಈಡುಮಾಡುತ್ತವೆ.

"ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಕಾವ್ಯದ ಮೂಲಕ ಸಾಧಿಸಬಹುದೆಂಬ ಭಾವನೆ ಹಿಂದೆ ಇತ್ತು. ಇಂದಿನ ಅನೇಕರಿಗೆ ಧರ್ಮದಲ್ಲಿ ಶ್ರದ್ಧೆಯಿಲ್ಲ. ಮೋಕ್ಷ ಕಾಣದ ವಸ್ತು. ಆದಕಾರಣ ಕಾವ್ಯವನ್ನು ಅರ್ಥ, ಕಾಮಗಳಿಗೆ ಸೀಮಿತಗೊಳಿಸುವ ದೃಷ್ಟಿಯಿದೆ," ಎಂಬ ಮಾತು ನ್ಯಾಯಾಧೀಶನ ತೀರ್ಪಿನಂತೆ ನೇರ, ಸ್ಪಷ್ಟ, ನಿಜ.

ಸತ್ಪ್ರೇರಣೆಯ ಸಾಹಿತ್ಯವೇ ಪರಮ ಪ್ರಯೋಜಕವೆಂಬುದು ಪ್ರೊ. ಮಾಳವಾಡ ಅವರ ಗಟ್ಟಿ ನಿಲುವು, "ಉದ್ವೇಗದ ಪ್ರತಿಕ್ರಿಯೆಯನ್ನು ಬರಹದಲ್ಲಿ ಮೂಡಿಸುವ ಉತ್ಸಾಹವು ಸಾಹಿತ್ಯರಂಗವನ್ನು ಹದಗೆಡಿಸುವುದು. ಉದ್ವೇಗವು ಶಮನವಾದ ನಂತರವೇ ಸಾಹಿತ್ಯ ಸೃಷ್ಟಿ" ಎಂಬ ಮಾತಾಗಲೀ "ಸಾಹಿತ್ಯವು ಬಾಳಿನ ಬಗೆಗೆ ಗೌರವಪರ ದೃಷ್ಟಿಯುಳ್ಳ ಸೃಜನಾತ್ಮಕ ಕಲೆ" ಎಂಬ ಮಾತಾಗಲೀ ಬದುಕಿನ ಉದ್ದೀಪನಕ್ಕೆ ಸಾಹಿತ್ಯವು ದೀವಿಗೆಯಾಗಬೇಕೆಂದು ಪ್ರತಿಪಾದಿಸುತ್ತವೆ.

ಇಲ್ಲಿಯ ಇನ್ನೊಂದು ಲೇಖನ 'ಸಾಹಿತ್ಯ ಸಲ್ಲಾಪ'ವು ಆಕಾಶವಾಣಿಯಲ್ಲಿ ಪ್ರಸಾರಗೊಂಡ ಸಂವಾದವಾಗಿದೆ. ಲೋಕಾಂತದ ಈ ಗಂಭೀರ ವಿಷಯಕ ಸಂವಾದವು ಮಾಳವಾಡ ದಂಪತಿಗಳ ಏಕಾಂತದ ಸಲ್ಲಾಪದಂತೆ ಕೇಳಿಸುತ್ತದೆ. ಕ್ವಚಿತ್ತಾಗಿ ಆದರೆ ಔಚಿತ್ಯಪೂರ್ಣವಾಗಿ ಸಿಡಿಯುವ ಹಾಸ್ಯ ಚಟಾಕಿಗಳು ವಿಷಯದ ಗಾಂಭೀರ್ಯವನ್ನು ಸಡಿಸಲುಗೊಳಿಸಿದರೂ ಸರಸಕ್ಕೆ ಇಳಿಯುವುದಿಲ್ಲ. ಇಲ್ಲಿ ಪ್ರೊ. ಮಾಳವಾಜರು ತಮ್ಮ ಅಂತರಂಗವನ್ನು ಬಿಚ್ಚಿಕೊಳ್ಳುತ್ತ ನಡೆದಿದ್ದಾರೆ. ತಮ್ಮದು ಗಂಭೀರ ಪ್ರಕೃತಿ, ಗಂಭೀರ ಸಾಹಿತ್ಯವೇ ತಮಗೆ ಒಲವಿನದು ಎಂದು ಹೇಳುತ್ತ ಸಾಹಿತ್ಯದ ಬಗೆಗೆ ತಮ್ಮ ಧೋರಣೆ ಏನೆಂಬುದನ್ನು ಇನ್ನೂ ಸ್ಪಷ್ಟಪಡಿಸಿದ್ದಾರೆ.

'ಲಲಿತ ಪ್ರಬಂಧ'ಗಳು ಎಂಬ ಲೇಖನ ಒಂದು ಅಪೂರ್ವ ವಿವೇಚನೆ. ಸ್ವಚ್ಛಂದ ಲಹರಿಯ ಈ ಸಾಹಿತ್ಯಪ್ರಕಾರದ ಸ್ವರೂಪ, ಸಂಬಂಧ, ಪರಿಣಾಮಗಳನ್ನು ತುಂಬ ಆಳವಾಗಿ ಆಲೋಚಿಸುತ್ತ, ಇದರ ಬೆಳವಣಿಗೆಯ ಸಾಧ್ಯತೆಯನ್ನು ಸೂಚಿಸಿದ್ದಾರೆ. ಇದೇ ನಿಟ್ಟಿನಲ್ಲಿ ನಿಲ್ಲುವ 'ಪ್ರಬಂಧ ವಿಮರ್ಶೆಗಳಲ್ಲಿ ಹೊಸ ಒಲವು' ಎಂಬ ಲೇಖನದಲ್ಲಿ ಈ ಉಭಯ ಪ್ರಕಾರಗಳು ನಡೆದು ಬಂದ ದಾರಿಯನ್ನು ಸರಿಯಾಗಿಯೇ ಗುರುತಿಸಿದ್ದಾರೆ, ಲಲಿತ ಪ್ರಬಂಧ 'ಸರಸ ಸಜ್ಜನಿಕೆ' ಮತ್ತು 'ತೀಕ್ಷ್ಣ ಪ್ರಹಾರ' ಗುಣಗಳನ್ನು ದಕ್ಕಿಸಿಕೊಂಡು ಮುನ್ನಡೆಯುತ್ತಿರುವುದನ್ನು, ಇಂದಿನ ಕನ್ನಡ ವಿಮರ್ಶೆಯು ಹಿಂದಿನ ಪ್ರಶಸ್ತಿವಲಯವನ್ನು ದಾಟಿ ಮೌಲ್ಯಮಾಪನದ ಹಾದಿಯಲ್ಲಿ ಸಾಗಿದುದನ್ನೂ ಎತ್ತಿ ಹೇಳುವಲ್ಲಿ ವಿಮರ್ಶಕ ಮಾಳವಾಡರು ಸಾಹಿತ್ಯಚರಿತ್ರಕಾರನ ಕಾರ್ಯವನ್ನೂ ನಿರ್ವಹಿಸಿದ್ದಾರೆ. ಇಲ್ಲಿ ಆವೇಶದ ನವ್ಯವಿಮರ್ಶೆಯ ಅರ್ಥಹೀನತೆಯನ್ನು ಎತ್ತಿ ಹೇಳಿದುದು ಸಕಾಲಿಕ ಎಚ್ಚರವೂ ಆಗಿದೆ, ಈ ವಿಭಾಗದಲ್ಲಿರುವ ಇತರ ಲೇಖನಗಳಾದ ಹೊನ್ನಮ್ಮನ ಹದಿಬದೆ, ನಿಜಗುಣರ ನೀತಿಸಂಗ್ರಹ, ಸರ್ವಜ್ಞಕವಿ ಮತ್ತು ಚೆನ್ನಪ್ಪ ಉತ್ತಂಗಿ ಲೇಖನಗಳು ತಮ್ಮ ಕಿರುವ್ಯಾಪ್ತಿಯಲ್ಲಿ ತಕ್ಕ ಪರಿಣಾಮವನ್ನು ಬೀರುತ್ತವೆ.

ಹದಿನಾಲ್ಕು ಲೇಖನಗಳ ದ್ವಿತೀಯ ಭಾಗ ಹಿರಿಕಿರಿಯರ, ಸ್ನೇಹಿತರ ಕೃತಿಗಳಿಗೆ ಬರೆದ, ಮುನ್ನುಡಿ, ಹಿನ್ನುಡಿ, ಸವಿನುಡಿಗಳನ್ನೊಳಗೊಂಡಿದೆ. ಹೀಗಾಗಿ ಇವು 'ಮಿತ್ರಸಮ್ಮಿತ'ದ ದಾರಿಯಲ್ಲಿ ನಡೆದಿದ್ದರೂ "ಮುನ್ನುಡಿಯೆಂದರೆ ಅವಾಸ್ತವ ಹೊಗಳಿಕೆಯೆಂದೂ ನಾನು ತಿಳಿದುಕೊಂಡಿಲ್ಲ" ಎಂಬ ತಮ್ಮ ನಿಲುವನ್ನು ಕಾಯ್ದುಕೊಂಡೇ ಹೋಗಿದ್ದಾರೆ. ಒಂದೆರಡು ಸಲ ಪ್ರಶಂಸೆಯ ಬಣ್ಣ ಒಡೆದು ತೋರಿದರೂ ಅದು ಹಿತ-ಮಿತ. ಆಗಾಗ ತರುಣ ಲೇಖಕರಿಗೆ ಪ್ರೋತ್ಸಾಹಪರ ಮಾತನಾಡಿದ್ದರೂ ಅವರ ಓರೆಕೋರೆಗಳನ್ನು ಸೂಚಿಸದೇ ಬಿಟ್ಟಿಲ್ಲ. "ಮಠಾಧೀಶರು ಗಾಜಿನ ಮನೆಯ ಲತೆಗಳಂತೆ ಸಮಾಜಸೂರ್ಯನನ್ನು ತೊರೆದು ಪೇಲವವಾಗಿ ಬದುಕುತ್ತಲಿದ್ದಾರೆ" ಎಂಬಂತಹ ಕಟು ಸತ್ಯ;" ಡಾ. ಕೆ. ವ್ಹಿ. ಪುಟ್ಟಪ್ಪನವರ ನಿರೂಪಣೆಯ ಬಗೆಯನ್ನೂ, ಅವರ ಭಾಷಾಶೈಲಿಯನ್ನೂ ಅನುವಾದಿಸುವ ಕಾರ್ಯ ಸುಲಭವಲ್ಲ" ಎಂಬಂತಹ ಸೂಕ್ಷ್ಮಾವಲೋಕನಗಳನ್ನು ಇಲ್ಲಿ ಗಮನಿಸಬೇಕು. ಸಾಮಾನ್ಯವಾಗಿ ಪರಿವಿಡಿಯನ್ನು ನೋಡಿ, ಪ್ರಸ್ತಾವನೆಯನ್ನು ಓದಿ ಮುನ್ನುಡಿ ಬರೆಯುವ ಇಂದಿನ ಕಾಲದಲ್ಲಿ ಪ್ರೊ. ಮಾಳವಾಡರು ಪುಸ್ತಕಗಳನ್ನು ಆದ್ಯಂತ ಓದಿ, ಚಿಂತನ ನಡೆಸಿ, ತೂಕದ ಮುನ್ನುಡಿ ಬರೆದುದು, ಪುಟಪುಟಗಳಲ್ಲಿ ವ್ಯಕ್ತವಾಗುತ್ತದೆ.

ತೃತೀಯ ಭಾಗ ಪುಸ್ತಕ ವಿಮರ್ಶೆಗಳಿಗೆ ಮೀಸಲು. ಕಾದಂಬರಿ, ಸಾಹಿತ್ಯ ಚರಿತ್ರೆ, ಕವನ, ಸಂಶೋಧನೆ, ವ್ಯಕ್ತಿಚಿತ್ರ, ಪ್ರಬಂಧಸಂಕಲನಗಳ ವಿಮರ್ಶಾ ಗುಚ್ಛವಿದು. ರಾಗದ್ವೇಷರಹಿತ ದೃಷ್ಟಿ, ಪ್ರಾಮಾಣಿಕ ನಿಲುವುಗಳಿಂದ ಇಲ್ಲಿ ಪ್ರೊ. ಮಾಳವಾಡ ಅವರ ಬರವಣಿಗೆಗೆ ತೀರ್ಪುಸ್ವರೂಪ ಪ್ರಾಪ್ತವಾಗಿದೆ.

"ಐತಿಹಾಸಿಕ ವ್ಯಕ್ತಿಗಳು ಕಾಲ್ಪನಿಕ ಪಾತ್ರಗಳಷ್ಟು ಅದ್ಭುತರಮ್ಯವಾಗುವಂತೆ, ಕಾಲ್ಪನಿಕ ಪಾತ್ರಗಳು ಐತಿಹಾಸಿಕ ವ್ಯಕ್ತಿಗಳಷ್ಟು ಸಜೀವವಾಗಿ ಕಾಣುವಂತೆ ಮಾಡುವ ಕೌಶಲ್ಯ ಗ್ರಂಥಕರ್ತರಿಗಿದೆ."

"ಧಾರ್ಮಿಕ ಮಹಾಪುರುಷರ ಬಾಳಿನ ವ್ಯಾಪ್ತಿಯನ್ನು ಐತಿಹಾಸಿಕ ಅಂಶಗಳ ಚೌಕಟ್ಟಿಗೆ ಪರಿಮಿತಗೊಳಿಸುವುದು ಸಾಧ್ಯವಲ್ಲವೆಂಬುದನ್ನು ನಾವು ಗಮನಿಸಬೇಕಾಗುತ್ತದೆ."

ಬಸವಣ್ಣನವರನ್ನು ಕುರಿತು ಬರೆದ ಒಂದು ಕಾದಂಬರಿ ಒಂದು ಇತಿಹಾಸ ಕೃತಿಗಳನ್ನು ಕುರಿತ ಸೂತ್ರರೂಪದ ಈ ವಿಮರ್ಶೆಗಳ ಅರ್ಥಪೂರ್ಣತೆ, ಧ್ವನಿಪೂರ್ಣತೆಗಳನ್ನು ಪರಿಭಾವಿಸಬೇಕು. ಇಂಥ ಬರವಣಿಗೆಯಿಂದಾಗಿ ಈ ಭಾಗ ಆ ಆ ಕೃತಿಗಳ ಅಂತರಂಗ-ಬಹಿರಂಗಗಳನ್ನು ಗಜದರ್ಪಣ ನ್ಯಾಯದಂತೆ ಪರಿಚಯಿಸಿ ಕೊಡುವ ಸಾಮರ್ಥ್ಯವನ್ನು ಹೊಂದಿದೆ.

ಇನ್ನೊಂದು ಮಾತು : ಯಾವುದೇ ವಿಷಯವನ್ನು, ಪುಸ್ತಕವನ್ನು ಕುರಿತು ಬರೆಯಲಿ, ಸಮಗ್ರತೆಯೇ ಪ್ರೊ. ಮಾಳವಾಡ ಅವರ ದೃಷ್ಟಿಕೋನ. ಇದಕ್ಕೆ ತಕ್ಕಂತೆ ಅವರದು ಸರಳವೆಂದರೂ ವಾಚ್ಯವಲ್ಲದ, ಸಂಕೀರ್ಣವೆಂದರೂ ಜಟಿಲವಲ್ಲದ ಸೃಷ್ಟಿಕ್ರಿಯೆ. ಇಂಥ ಸಮತೂಕದ ದೃಷ್ಟಿಕೋನ-ಸೃಷ್ಟಿಕ್ರಿಯೆಗಳ ದಾಂಪತ್ಯ ಅವರ ಲೇಖನಗಳ ಗುಣಧರ್ಮವಾಗಿದೆ. ಐವತ್ತು ವರ್ಷಗಳ ಅಧ್ಯಯನ, ಅನುಭವಗಳ ಫಲವೆನಿಸಿದ ಇಲ್ಲಿಯ ಬಹಳಷ್ಟು ಲೇಖನಗಳು ಖಂಡಿತವಾಗಿಯೂ ನಮ್ಮ ಸಾಹಿತ್ಯಕ್ಷೇತ್ರಕ್ಕೆ ಉತ್ತಮ ಕೊಡುಗೆಗಳಾಗಿವೆ. ಇಂಥ ಆರೋಗ್ಯಕರ, ಮೌಲಿಕ ಲೇಖನಗಳನ್ನು ಹೊತ್ತು ಬಂದ ಈ ಹೊತ್ತಿಗೆಗೆ 'ತೋರಣ' ನುಡಿಗಳನ್ನು ಮೂಡಿಸುತ್ತಿರುವುದು ನನಗೆ ಗೌರವವೆಂದು ಭಾವಿಸಿ, ಈ ಗೌರವವನ್ನು ನನ್ನದನ್ನಾಗಿಸಿದ ಪ್ರೊ. ಮಾಳವಾಡ ಅವರಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಸ.ಸ. ಮಾಳವಾಡ, ಧಾರವಾಡ ಸ.ಸ. ಮಾಳವಾಡ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೧೩೮

ವರ್ತಮಾನ

೧೯೮೦

ಶ್ರೀಮತಿ ಲತಾ ಪಾಟೀಲ, ಕನ್ನಡ ಎಂ. ಎ. ವರ್ಗದಲ್ಲಿ ನನ್ನ ವಿದ್ಯಾರ್ಥಿನಿ; ಬದುಕು-ಬರಹಗಳನ್ನು 'ವ್ರತ'ದಂತೆ ತುಂಬ ಜವಾಬ್ದಾರಿಯಿಂದ ನಿರ್ವಹಿಸುತ್ತಲಿದ್ದ ಅಪರೂಪದ ವಿದ್ಯಾರ್ಥಿನಿ. ಇಂಥ ನಡೆ-ನುಡಿಗಳ ವಿದ್ಯಾರ್ಥಿಗಳಿಗೂ ನನಗೂ ಪರಸ್ಪರ ವಿಶ್ವಾಸ, ಬಾಂಧವ್ಯ ಅಧಿಕ. ಇವುಗಳನ್ನು ನನ್ನಲ್ಲಿ ಲತಾ ಅವರು, ಲತಾ ಅವರಲ್ಲಿ ನಾನು ಗುರುತಿಸಿಕೊಂಡ 'ಭಾವಬಂಧ'ದ ಹಂಗು, ಈ ಮುನ್ನುಡಿ.

ಶ್ರೀಮತಿ ಪಾಟೀಲ ಮೊದಲಿನಿಂದಲೂ ಸಾಹಿತ್ಯದ ಬಗೆಗೆ ತೀವ್ರ ಆಸಕ್ತಿಯುಳ್ಳವರು. ಮದುವೆಯಾಗಿ ಶ್ರೀಮತಿ ಗುತ್ತಿ ಆದ ತರುವಾಯವೂ ಈ ಆಸಕ್ತಿ ತಕ್ಕಮಟ್ಟಿಗೆ ಬಾಡದಿರುವುದಕ್ಕೆ ಅದರ ಪ್ರಖರತೆ, ವೈಯಕ್ತಿಕ ಕಾಳಜಿ ಮತ್ತು ಕೌಟುಂಬಿಕ ಅವಕಾಶಗಳು ಕಾರಣವೆನ್ನಬೇಕು. ಭಾರತೀಯ ಮಹಿಳೆ ಮದುವೆಯಾದ ಮರುದಿನದಿಂದ ಗೃಹಸ್ಥಜೀವನಕ್ಕೆ ತನ್ನನ್ನು ಬಂಧಿಸಿಕೊಳ್ಳುವಲ್ಲಿಯೇ ಮಗ್ನಳಾಗಿ, ಸಾಹಿತ್ಯ ಮೊದಲಾದ ಆಸಕ್ತಿಗಳನ್ನು ಕೈಬಿಡುವುದು ಸಾಮಾನ್ಯವಾಗಿರುವ ಇಂದಿನ ಕಾಲದಲ್ಲಿ ಇವರು 'ಕಾವ್ಯಲತೆ'ಯನ್ನು ಕೂಸಿನಂತೆ ಜೋಪಾನ ಮಾಡಿಕೊಂಡು ಬರುತ್ತಲಿರುವುದು ಒಂದು ಸೋಜಿಗ, ಆಶ್ಚರ್ಯ.

ಶ್ರೀಮತಿ ಪಾಟೀಲ ಅವರದು ಪ್ರಾಚೀನ ಮತ್ತು ಆಧುನಿಕ ಸಾಹಿತ್ಯಾಭ್ಯಾಸದಿಂದ ಕಸಿಗೊಳ್ಳುತ್ತಲಿರುವ ವ್ಯಕ್ತಿತ್ವ. ಕಥೆಗಳನ್ನು ಬರೆಯುತ್ತಲಿದ್ದರೂ ಕವನ ಅವರ ಪ್ರಥಮಪ್ರೀತಿ. ಈ ಸಂಕಲನದ ಬಹಳಷ್ಟು ಕವನಗಳು ಸಂಪ್ರದಾಯಸ್ಥ ಮನೆತನದಲ್ಲಿ ಹುಟ್ಟಿದ ಮಹಿಳೆಯೊಬ್ಬಳು ವಿದ್ಯಾರ್ಥಿ ದೆಸೆಯಲ್ಲಿಯೇ ಬರೆದುವು; ಕೆಲವು ಮಾತ್ರ ಗೃಹಿಣಿಯಾದ ಮೇಲೆ ಬರೆದುವು. ಈ ಪರಿಮಿತಿಗಳು ಈ ಸಂಕಲನದ ಸೋಲೂ ಹೌದು; ಗೆಲವೂ ಹೌದು. ಹಾಗೆ ನೋಡಿದರೆ ಬಹಳಷ್ಟು ಸಲ ಈ ಪರಿಮಿತಿಗಳನ್ನು ದಾಟಿಯೂ ಅನುಭವಗಳಿಗೆ ಆಕಾರ ಕೊಡುತ್ತಲಿರುವ ಚಟುವಟಿಕೆ ಇಲ್ಲಿ ಒಡೆದು ಕಾಣುತ್ತದೆ.

ಕವನಕ್ರಿಯೆಗೆ ಅನುಭವ ಸಾಮಗ್ರಿಯಷ್ಟೇ ಮುಖ್ಯವಾದುದು, ಭಾಷಾ ಮಾಧ್ಯಮದಲ್ಲಿ ಅದನ್ನು ಪಾಕಗೊಳಿಸುವುದು. ಈ ಪಾಕಕ್ರಿಯೆಯೆನ್ನುವುದು ಕವಿ-ಕಾವ್ಯಗಳ ನಿರಂತರ ಒಡನಾಟ, ರಚನೆಯ ಗಾಢ ತರಬೇತಿಗಳಿಂದ ಕೈವಶವಾಗುವಂತಹದು. ಶ್ರೀಮತಿ ಪಾಟೀಲರು ಬೆಳೆಯುತ್ತಿದ್ದಂತೆಯೇ ಈ ಒಡನಾಟ-ತರಬೇತಿಗಳ ಪರಿಸರದಿಂದ ಗೃಹಿಣಿಜೀವನಕ್ಕೆ ಸರಿದಕಾರಣ, ಇಲ್ಲಿಯ ಕೆಲವು ಕವನಗಳು ಅಪೂರ್ಣ ಶಿಲ್ಪಗಳಾಗಿ ಉಳಿದಿವೆ; ಪೂರ್ಣಶಿಲ್ಪವಾಗುವ ಭರವಸೆಯನ್ನು ಉಳಿಸಿಕೊಂಡಿವೆ. ಹೀಗಿದ್ದೂ ವರ್ತಮಾನ, ಬಂಧನ, ಹೊಲ,

ಸಹನೆ, ವೇದನೆ, ಆಶಾಂಕುರ, ಶೂನ್ಯ ಮೊದಲಾದ ಕವನಗಳು, ಕೊನೆಯ ಒಂದಿಷ್ಟು ಹನಿಗವನಗಳು ಇವರ ಕಾವ್ಯಸಿದ್ಧಿಯ ದ್ಯೋತಕವಾಗಿದ್ದು, ಇಂಥ ಗಟ್ಟಿ ಬರವಣಿಗೆಯ ಲೇಖಕಿಯೊಬ್ಬಳು ನೋಡು ನೋಡುತ್ತಿರುವಂತೆಯೇ ನಮ್ಮ ಕಣ್ಣು ಮುಂದೆ ಈ ಕ್ಷೇತ್ರದಿಂದ ದೂರ ಹೋಗುತ್ತಲಿರುವ ಸಂಗತಿ ವ್ಯಥೆಯನ್ನುಂಟುಮಾಡುತ್ತದೆ.

ಸಣ್ಣಕಥೆ, ಕಾದಂಬರಿ ವಲಯಗಳಲ್ಲಿಯೇ ನಮ್ಮ ಮಹಿಳಾ ಲೇಖಕರು ಪ್ರಧಾನ ಸುತ್ತುಗಳನ್ನು ಹಾಕುತ್ತಲಿರುವ ಇಂದಿನ ಸಂದರ್ಭದಲ್ಲಿ ಶ್ರೀಮತಿ ಪಾಟೀಲರು ಕವನದ ಹಾದಿ ತುಳಿಯುತ್ತಲಿರುವುದು ಒಂದು ವಿಶೇಷ. ಇನ್ನೂ ಅರ್ಥವತ್ತಾಗಿ ತುಳಿಯುವುದರ ಮೂಲಕ ಇವರಿಂದ ಬೆಲೆಯುಳ್ಳ ಬರವಣಿಗೆಯನ್ನು ನಿರೀಕ್ಷಿಸಬಹುದಾಗಿದೆ. ಈಗ ವಿದೇಶದಲ್ಲಿ ಹೊಸ ಅನುಭವಗಳ ಮಧ್ಯದಲ್ಲಿರುವ ಶ್ರೀಮತಿ ಪಾಟೀಲರು ನನ್ನ ಈ ನಿರೀಕ್ಷೆಯನ್ನು ಸುಳ್ಳಾಗಿಸದಿರಲೆಂದು ಹಾರೈಸುತ್ತೇನೆ.

ಲತಾ ಪಾಟೀಲ, ಬೆಂಗಳೂರು

ಆಕರ : ಮಾರ್ಗ ಸಂಪುಟ–೬

೧೩೯

ಪರಿಶೋಧನೆ

೧೯೮೧

ಬಹಳಷ್ಟು ಸಲ 'ಮುನ್ನುಡಿ' ಪ್ರಶಂಸೆಯಾಗುವ ಸಾಧ್ಯತೆಯಿರುವುದರಿಂದ ಅದನ್ನು ಬರೆಯುವ ವಿಷಯದಲ್ಲಿ ನಾನು ತುಂಬಾ ನಿರಾಸಕ್ತ. ಹೀಗಿದ್ದೂ ಈ ಪುಸ್ತಕಕ್ಕೆ ಮುನ್ನುಡಿ ಬರೆಯಲು ಒಪ್ಪಿಕೊಳ್ಳಲು ಕಾರಣ, ಶ್ರೀ ಎಸ್. ಎಸ್. ತಾರಾನಾಥ ಅವರು ನಿಜವಾದ ಸಂಶೋಧಕನ ಮುಕ್ತ ಮನೋಧರ್ಮದವರಾಗಿರುವುದು; ಅಂದರೆ ಸರಿಯಾದ ಪ್ರತಿಕ್ರಿಯೆಯನ್ನು ಸ್ವಾಗತಿಸುವ ತೆರೆದ ಮನಸ್ಸಿನವರಾಗಿರುವುದು.

ಈಗಾಗಲೇ ಹಲವು ಲೇಖನಗಳ ಮೂಲಕ ತಮ್ಮದು ಸಂಶೋಧನ ಕ್ಷೇತ್ರವೆಂದು ಸ್ಪಷ್ಟಪಡಿಸಿರುವ ಶ್ರೀ ತಾರಾನಾಥ, ಕನ್ನಡ "ಶೋಧನಲೋಕ"ದ ಒಂದು ಗಟ್ಟಿದನಿ. ಅವರಿಗೆ ತರುಣ ವಯಸ್ಸಿನಲ್ಲಿಯೇ ಸಂಶೋಧನರಂಗದ ಆ್ಯಂಗಲ್ ಸರಿಯಾಗಿ ಸಿಕ್ಕಿದೆ. ಅದರ ಕಷ್ಟ-ನಷ್ಟಗಳನ್ನು ತಿಳಿದೂ, ಕಷ್ಟದಲ್ಲಿಯೇ ಸುಖವಿರುವುದನ್ನು ಅರ್ಥಮಾಡಿಕೊಂಡು, ಈ ಕ್ಷೇತ್ರವನ್ನು ಅವರು ಮನಃಪೂರ್ವಕ ಒಪ್ಪಿಕೊಂಡಿದ್ದಾರೆ. ಇಂಥ ಶ್ರದ್ಧಾವಂತರಿಂದ ಸಂಶೋಧನರಂಗಕ್ಕೆ ಬಂಜೆತನದ ಭಯವಿಲ್ಲವೆಂದೇ ಹೇಳಬೇಕು.

ಪ್ರಸ್ತುತ 'ಪರಿಶೋಧನ' ಆಗಾಗ ಬರೆದ ಹತ್ತು ಲೇಖನಗಳ ಸಮುಚ್ಚಯ. ಇವು ಸಂಶೋಧನ ಪ್ರತಿಭೆ, ಸಂಯೋಜನ ಪ್ರತಿಭೆ, ವಿಮರ್ಶನ ಪ್ರತಿಭೆಯ ಲೇಖನಗಳಾಗಿದ್ದರೂ ಇವುಗಳ ಸ್ಥಾಯೀಭಾವ 'ಶೋಧ'ವಾಗಿರುವುದರಿಂದ ಈ ಗ್ರಂಥಕ್ಕೆ 'ಪರಿಶೋಧನ' ಸಾರ್ಥಕ ಶೀರ್ಷಿಕೆಯಾಗಿದೆ.

ಈ ಲೇಖನಗಳಲ್ಲಿ ತಾವಾಗಿಯೇ ಬರೆದುವು ಕೆಲವು, ಇನ್ನೊಬ್ಬರು ಬರೆಯಿಸಿದುವು ಕೆಲವು. ಬರೆದುವು ಪರಿಶೋಧನದ ಮಟ್ಟಕ್ಕೇರಿದರೆ, ಬರೆಯಿಸಿದುವು ಪರಿಚಯದ ಮಟ್ಟಕ್ಕೆ ನಿಂತುಬಿಡುತ್ತವೆ. ಸಂಶೋಧಕ ಇನ್ನೊಬ್ಬರ ಬೇಡಿಕೆಯನ್ನು ಪೂರೈಸಲು ಬರೆದರೆ ಹೊಸದೇನನ್ನೂ ಹೇಳುವುದು ಕಠಿಣವಾಗಿ, ಹಳೆಯದನ್ನೇ ಅಚ್ಚುಕಟ್ಟಾಗಿ ಪರಿಚಯಿಸಿ ಕೊಡುವುದು ಅನಿವಾರ್ಯವಾಗುತ್ತದೆ. ಈ ಮಾತಿಗೆ ಇಲ್ಲಿಯ 'ಬೊಪ್ಪಣನ ಗೊಮ್ಮಟಸ್ತುತಿ', 'ರುದ್ರಭಟ್ಟನ ಇತಿವೃತ್ತವಿಚಾರ' ಉದಾಹರಣೆಯಾಗಿದ್ದು, ಏನೇ ಹೇಳಿದರೂ ಸುತ್ತುಹಾಕಿ ಮತ್ತೆ ಅಲ್ಲಿಗೇ ಬಂದುನಿಂತ ಸ್ಥಿತಿ ಈ ಲೇಖನಗಳದ್ದಾಗಿದೆ. ಹೀಗಿದ್ದೂ ಇವುಗಳಿಗೆ ಸಮಗ್ರತೆ, ಸಾವಯವತೆ ತರುವಲ್ಲಿ ಶ್ರೀ ತಾರಾನಾಥರು ತೋರಿದ ಸಂಯೋಜಕ ಪ್ರತಿಭೆ ಶ್ಲಾಘನೀಯವಾಗಿದೆ.

'ಷಟ್ಖಂಡಾಗಮ ಮತ್ತು ಕನ್ನಡ ಸಾಹಿತ್ಯ', 'ಸಮಂತಭದ್ರರ ಗಂಧಹಸ್ತಿಮಹಾಭಾಷ್ಯ' ಲೇಖನಗಳು ಹೊಸ ಫಲಿತಾಂಶಗಳನ್ನು ಪ್ರಕಟಿಸದಿದ್ದರೂ ಇಲ್ಲಿ ಹೊಸ ಆಕರಗಳನ್ನು ಖಂಡಿತ ಸಂಗ್ರಹಿಸಲಾಗಿದೆ. 'ಅನಂತ ಕವಿಯ ಬೆಳ್ಗುಳದ ವಿಸ್ತಾರ', 'ಪೂಜ್ಯಪಾದಚರಿತೆ: ಒಂದು ಪರಿಚಯ', 'ನೊಳಂಬ ಶಾಸನಗಳ ಸಾಹಿತ್ಯಿಕ ಮೌಲ್ಯ' ಎಂಬವು ಪರಿಚಯಾತ್ಮಕ ಲೇಖನಗಳಾಗಿದ್ದು, ಇಲ್ಲಿ ಹಸ್ತಪ್ರತಿ ಹಂತದಲ್ಲಿಯೇ ಅವುಗಳನ್ನು ಆಳವಾಗಿ ಅಭ್ಯಸಿಸಿದ

ಸಾರ್ಥಕ ಶ್ರಮವಿದೆ. ಇಂಥ ಸಾರ್ಥಕ ಶ್ರಮ 'ದೇಪರಾಜನ ಅಮರುಕ'ದಲ್ಲಿ ತೌಲನಿಕ ಕ್ರಮದಲ್ಲಿ ಮುನ್ನಡೆದುದೊಂದು ವಿಶೇಷ. 'ಪಂಚಪದಿ : ಕೆಲವು ವಿಚಾರಗಳು', 'ಕುವೆಂಪು ಪ್ರಗಾಥಗಳು' ಲೇಖನಗಳಲ್ಲಿ ಹೊಸ ವಿಷಯ ಓದಿದ ಅನುಭವವಾಗುತ್ತಿದ್ದು, ಪಂಚಪದಿ 'ಗಾಥಾ' ಜಾತಿಗೆ ಸೇರಿದುದೆಂಬ ಹೇಳಿಕೆ ಹೊಸ ಶೋಧವಾದರೆ, ಕುವೆಂಪು ಪ್ರಗಾಥಗಳ ಚರ್ಚೆ ವಿಮರ್ಶನ ಪ್ರತಿಭೆಯ ಒಂದು ಪ್ರಬುದ್ಧ ಪ್ರಯತ್ನವಾಗಿದೆ.

ಸಂಶೋಧನೆಯಲ್ಲಿ ಸಮಸ್ಯೆಯನ್ನು ಹುಡುಕಿಕೊಳ್ಳುವುದೂ ಒಂದು ಸಂಶೋಧನೆಯೇ. ಈ ವಿಷಯಾನ್ವೇಷಣದೃಷ್ಟಿ ಶ್ರೀ ತಾರಾನಾಥ ಅವರಲ್ಲಿ ನಿತ್ಯಜಾಗ್ರತವಾಗಿರುವುದಕ್ಕೆ, ಷಟ್ಖಂಡಾಗಮ, ಗಂಧಹಸ್ತಿ ಮಹಾಭಾಷ್ಯಗಳಂಥ ಎದೆ ನಡುಗಿಸುವ ವಸ್ತುಗಳನ್ನು ಕೈಗೆತ್ತಿಕೊಂಡುದೇ ನಿದರ್ಶನವಾಗಿದೆ.

ಹೀಗೆ ಎತ್ತಿಕೊಂಡ ಸಮಸ್ಯೆಯನ್ನು ಬಿಡಿಸುವ ಸಂಶೋಧಕ ಅದರ ಬಗೆಗೆ ಈ ಮೊದಲು ನಡೆದ ಕೆಲಸಗಳನ್ನು, ಸಾಧನಸಾಮಗ್ರಿಯ ಸರ್ವಮೂಲಗಳನ್ನು ಆದ್ಯಂತ ಗುರುತಿಸಿಕೊಳ್ಳಬೇಕಾಗುತ್ತದೆ. ಈ ವಿಷಯವಾಗಿಯಂತೂ ಶ್ರೀ ತಾರಾನಾಥ ಯಾರಿಗೂ ಎರಡನೆಯವರಲ್ಲ. ಬಿ. ಎಲ್. ರೈಸರಿಂದ ಹಿಡಿದು ಇತ್ತೀಚಿನ ವಿದ್ವಾಂಸರ ವರೆಗಿನ ಬರವಣಿಗೆಗಳ ಮೇಲೆ ಕಣ್ಣಾಡಿಸುವ ಅಧ್ಯಯನ ಶೀಲತೆ, ಹಲವು ಮೂಲಗಳಿಂದ - ಹಲವು ಭಾಷೆಗಳಿಂದ ಆಧಾರ ಸಾಮಗ್ರಿಯನ್ನು ಸಂಗ್ರಹಿಸುವ ಬಹುಶ್ರುತತ್ವ ಇವರಲ್ಲಿ ಒಡೆದು ಕಾಣುತ್ತದೆ. ಇವುಗಳ ಬಲದಿಂದ ಸಮಸ್ಯೆಯನ್ನು ಬಿಡಿಸುವಾಗ ವಯೋನುಗುಣವಾಗಿ ಅವಸರವಾಗಲೀ, ದೂಷಣೆ-ವ್ಯಂಗ್ಯಗಳಾಗಲೀ ಗೋಚರಿಸದುದು ಇವರ ಸಂಯಮ-ಸಮಚಿತ್ತಗಳನ್ನು ಸೂಚಿಸುತ್ತದೆ. ಹೀಗಾಗಿ ಲೇಖನಗಳುದ್ದಕ್ಕೂ ರಾಗದ್ವೇಷರಹಿತವಾದ-ವಸ್ತುನಿಷ್ಠ ಸಂಗತಿಗಳು ಪ್ರಕಟವಾಗುತ್ತ ಹೋಗುತ್ತವೆ.

ಸಂಶೋಧನೆಯ ಭಾಷೆ ಅಲಂಕಾರಿಕವೂ ಆಗಿರಬಾರದು, ಶುಷ್ಕವೂ ಆಗಿರಬಾರದು. ನೇರ, ಸ್ಪಷ್ಟ, ಪರಿಣಾಮಕಾರಿಯಾಗಿರಬೇಕು. ಶ್ರೀ ತಾರಾನಾಥ ಭಾಷೆಯನ್ನು ಈ ಎಚ್ಚರದಿಂದ ಬಳಸುತ್ತಾರೆ. "ಇಲ್ಲಿಯ ಗದ್ಯದ ಧಾಟಿ ಒಂದು ಕಾನೂನು ಪತ್ರದ ಬರವಣಿಗೆಯನ್ನು ಹೋಲುತ್ತದೆ. ಇದು ನಿರ್ಲಿಪ್ತವಾದ ಒಕ್ಕಣೆಯೆನಿಸಿದರೂ ಶುಷ್ಕವರದಿಯಂತೆ ಭಾಸವಾಗುವುದಿಲ್ಲ. ವಿಷಯವನ್ನು ಸ್ಫುಟವಾಗಿ ದಾಖಲಿಸಲು ತೋರಿರುವ ಎಚ್ಚರ ಕಾಳಜಿಗಳಲ್ಲಿಯೇ ಒಂದು ಬಿಗಿ, ಅಚ್ಚುಕಟ್ಟು, ನೇರಾಭಿವ್ಯಕ್ತಿ ಕಾಣುತ್ತದೆ." ನೊಳಂಬರ ಶಾಸನಗಳನ್ನು ಕುರಿತು ಶ್ರೀ ತಾರಾನಾಥ ಅವರೇ ಹೇಳಿದ ಈ ತೂಕದ ಮಾತುಗಳು ಸಾಮಾನ್ಯವಾಗಿ ಅವರ ಭಾಷೆಗೂ ಅನ್ವಯಿಸುತ್ತವೆ.

ಸಂಶೋಧನಾತ್ಮಕ ಬರೆವಣಿಗೆಯ ಬಗೆಗೆ ಎರಡು ಮಾತುಗಳು : ಸಂಶೋಧಕನಾದವನು ಒಂದು ವಿಷಯವನ್ನು ಕುರಿತು ಈ ಮೊದಲು ಹೇಳಿದ ಗಟ್ಟಿ ಅಭಿಪ್ರಾಯಗಳನ್ನು ಮಾತ್ರ ಸಂಗ್ರಹಿಸಬೇಕೇ ಹೊರತು, ಅವುಗಳನ್ನು ಪುನರುಚ್ಚರಿಸಿದವರ ಮಾತುಗಳನ್ನೂ ಸಂಗ್ರಹಿಸುವುದು ವ್ಯರ್ಥಶ್ರಮ. ಇದಕ್ಕೆ ಇಲ್ಲಿಯ ರುದ್ರಭಟ್ಟ, ಬೊಪ್ಪಣಪಂಡಿತರ ಕಾಲವಿಚಾರ ನಿದರ್ಶನವೆನಿಸಿವೆ. ಬೊಪ್ಪಣನ ಕಾಲನಿರ್ಣಯದಲ್ಲಿ ಆರ್. ನರಸಿಂಹಾಚಾರ್, ಎ. ವೆಂಕಟಸುಬ್ಬಯ್ಯನವರಿಗಿಂತ ಬೇರೆ ಏನನ್ನೂ ಹೇಳದ ಅಂದರೆ ಇವರ ಅಭಿಪ್ರಾಯಗಳನ್ನೇ ಪ್ರತಿಧ್ವನಿಸಿದ ತ. ಸು. ಶಾಮರಾಯ, ಎಂ. ಮರಿಯಪ್ಪ ಭಟ್ಟ, ರಂ. ಶ್ರೀ. ಮುಗಳಿ, ಜಿ. ಪಿಯ ರಾಜರತ್ನಂ, ಕೆ. ವೆಂಕಟರಾಮಪ್ಪ, ಬಿ. ಎ. ವಿವೇಕ ರೈ ಅವರ ಅಭಿಪ್ರಾಯಗಳನ್ನು ಇಲ್ಲಿ ಪೇರಿಸುತ್ತ ಹೋದುದು ಅನವಶ್ಯವೆನಿಸುತ್ತದೆ. ಹಳೆಯ ತಲೆಮಾರಿನ ವಿದ್ವಾಂಸರು ಅನುಸರಿಸುತ್ತಿದ್ದ ಈ ವಿಧಾನವನ್ನು ಇಂದು ಕೈಬಿಡುವುದು ಲೇಸು. ಇದಲ್ಲದೆ ಒಬ್ಬನಿಗೆ ಸಲ್ಲಬೇಕಾದ ಒಂದು ಸಂಶೋಧನೆಯ ನ್ಯಾಯವಾದ ವಾರಸುದಾರಿಕೆಯಲ್ಲಿ ಇನ್ನೊಬ್ಬರ ಹೆಸರನ್ನು ಜೋಡಿಸುವುದು ಅನವಶ್ಯವಷ್ಟೇ ಅಲ್ಲ, ಅದರಿಂದ ಮೊದಲಿನವನಿಗೆ ಅನ್ಯಾಯ ಮಾಡಿದಂತಾಗುತ್ತದೆ (ಪು. ೩೧ ಅ. ಟಿ.).

ಇಂಥ ಒಂದೆರಡು ಸಂಗತಿಗಳ ಕಡೆಗೆ ಗಮನಕೊಡಬಹುದಿತ್ತು ಎಂಬುದನ್ನು ಬಿಟ್ಟರೆ ಶ್ರೀ ತಾರಾನಾಥ ಅವರ ನಿರೂಪಣಾಪದ್ಧತಿ ನಿಜಕ್ಕೂ ಶಾಸ್ತ್ರಶುದ್ಧವಾಗಿದೆ.

ಸಂಶೋಧಕನಿಗಾಗಲೀ, ಅವನ ಬರೆವಣಿಗೆಗಾಗಲೀ ಯಾವ ಕಾಲಕ್ಕೂ ಸಾರ್ವಜನಿಕ ಮನ್ನಣೆಯಿಲ್ಲ; ಇಂದು ಶೈಕ್ಷಣಿಕ ವಲಯದಲ್ಲಿ ಕೂಡ ಆ ಮನ್ನಣೆ ಕಡಿಮೆಯಾಗುತ್ತ ನಡೆದಿದೆ. ಇಂಥ ದುಷಮಕಾಲದಲ್ಲಿಯೂ ನಮ್ಮ ಪ್ರಾಚೀನ ಪರಂಪರೆಯಲ್ಲಿ ಕೆಲಸ ಮಾಡಲು ಶ್ರೀ ತಾರಾನಾಥ ಮುಂದೆ ಬಂದು ನಮಗೆಲ್ಲ ತುಂಬ ಭರವಸೆ ಹುಟ್ಟಿಸಿದ್ದಾರೆ. ಅವರಿಂದ ಒಳ್ಳೆಯ ಬರೆವಣಿಗೆ ಪ್ರಕಟವಾಗುತ್ತ ಹೋಗುವುದರ ಮೂಲಕ, ನಮ್ಮ ಭರವಸೆ ಬತ್ತದಿರಲೆಂದು ಹಾರೈಸುತ್ತೇನೆ.

ಎನ್.ಎಸ್. ತಾರಾನಾಥ, ಮೈಸೂರು

ಆಕರ : ಮಾರ್ಗ ಸಂಪುಟ–೬

■■

೧೪೦

ಬೆತ್ತಲೆ ಗಾದೆಗಳು

೧೯೮೧

ವಿಶ್ವವಿದ್ಯಾಲಯದ ವಿದ್ವಾಂಸರಿಂದ ಹಿಡಿದು ಓದು-ಬರಹ ಬಲ್ಲ ಹವ್ಯಾಸಿಗಳ ವರೆಗೆ ಇಂದು ಅನೇಕರು ಜಾನಪದ ಕ್ಷೇತ್ರವನ್ನು ವ್ಯಾಪಿಸಿ ನಿಂತಿದ್ದಾರೆ. ಇವರಲ್ಲಿ 'ಜಾನಪದ'ವನ್ನು ಮೂಲಭೂತವಾಗಿ ಮುಟ್ಟಿದವರು ಎಷ್ಟು ಜನ? ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಹೀಗಿದ್ದರೂ ನಮ್ಮ ನಾಡಿನಲ್ಲಿ ಪ್ರತಿವರ್ಷ ಜಾನಪದ ಸಭೆ-ಸಮ್ಮೇಲನಗಳು ಜರುಗುತ್ತಲಿವೆ; ಹಲವಾರು ಪುಸ್ತಕಗಳು ಪ್ರಕಟವಾಗುತ್ತಲಿವೆ. ಬಹುಶಃ ಆ 'ಮೂಲಭೂತ'ವನ್ನು ಅರ್ಥಮಾಡಿಕೊಳ್ಳಲು ಇವೆಲ್ಲ ಸಾಧನಗಳೆಂದು ಇಂದು ಸಮಾಧಾನ ಪಟ್ಟುಕೊಳ್ಳಬಹುದು. ಇಂಥ ಸಾಧನಗಳಲ್ಲಿ ವಿಲಕ್ಷಣಕೃತಿ "ಬೆತ್ತಲೆ ಗಾದೆಗಳು."

ಎರಡು ವರ್ಷಗಳ ಹಿಂದಿನ ಘಟನೆ. ಶ್ರೀ ಬಿ. ಬಿ. ಬಿರಾದಾರ ಅವರು ತಾವು ಸಂಗ್ರಹಿಸಿದ ಕೆಲವು ಗಾದೆಗಳ ಹಸ್ತಪ್ರತಿಯನ್ನು ನನ್ನ ಮುಂದಿಟ್ಟು ಪ್ರತಿಕ್ರಿಯೆಯನ್ನು ನಿರೀಕ್ಷಿಸಿದರು. "ನೀವು ಕೇವಲ ಆಶ್ಲೀಲ ಗಾದೆಗಳನ್ನೇಕೆ ಸಂಗ್ರಹಿಸಬಾರದು?" ಎಂದು ಪ್ರಶ್ನಿಸಿದೆ. ಈ ಮಾತಿಗೆ ಆರು ತಿಂಗಳು ಕಳೆದಿರಲಿಲ್ಲ "ಬೆತ್ತಲೆ ಗಾದೆಗಳು" ಹೆಸರಿನ ಹಸ್ತಪ್ರತಿಯನ್ನು ನನ್ನ ಮುಂದಿಟ್ಟರು. ಅವರ ಪರಿಶ್ರಮ ಪ್ರವೃತ್ತಿ ನನ್ನನ್ನು ಸುಪ್ರೀತಗೊಳಿಸಿತು.

ಈ 'ಬೆತ್ತಲೆ ಗಾದೆಗಳು' ಕೃತಿಯನ್ನು, ಇದರ ಸಂಪಾದಕರನ್ನು, ಕೊನೆಗೆ ಮುನ್ನುಡಿ ಬರೆದವನನ್ನು ಕೆಲವು ಜನ 'ಸಂಪನ್ನ' ಸಹೃದಯರು ದೂಷಿಸಬಹುದು. ಅಂಥವರು ಇದನ್ನು ಕದ್ದು ಓದುತ್ತಾರೆ; ಎಲ್ಲರಿಗಿಂತ ಮೊದಲು ಓದುತ್ತಾರೆ ಎಂಬುದನ್ನು ನಾನು ಬಲ್ಲೆ. ಹೀಗೆ ಆತ್ಮವಂಚನೆಮಾಡಿಕೊಳ್ಳುವುದಕ್ಕಿಂತ ನಮ್ಮ ಬದುಕಿನ ಭಾಗವಾದ ಇದನ್ನು ಅಭ್ಯಾಸಿಯ ದೃಷ್ಟಿಯಿಂದ, ನಿರ್ವಿಕಾರ ಚಿತ್ತದಿಂದ ಓದಬೇಕೆಂದು ಆಶಿಸುತ್ತೇನೆ.

ಜಾನಪದ ವಾಚಿಕ ಸಂಪತ್ತನ್ನು ಭಾಷೆ ಮತ್ತು ಸಾಹಿತ್ಯವೆಂದು ವರ್ಗೀಕರಿಸಿದಲ್ಲಿ ಗಾದೆ ಪ್ರಥಮವಾಗಿ ಭಾಷೆಯ ಘಟಕ, ದ್ವಿತೀಯವಾಗಿ ಸಾಹಿತ್ಯದ ಪ್ರಕಾರ. ಏಕೆಂದರೆ ಇದು ಸಾಹಿತ್ಯದಂತೆ ವಿಶೇಷ ಸಂದರ್ಭದಲ್ಲಿ ಮಾತ್ರ ಬಳಕೆಯಾಗದೆ, ಭಾಷೆಯಲ್ಲಿ ನಿತ್ಯವೂ ಈಸುತ್ತ ಹೋಗುತ್ತದೆ. ಇದರಿಂದಾಗಿ ಭಾಷೆಗೆ ಸಾಹಿತ್ಯಿಕ ಗುಣ, ತೀಕ್ಷ್ಣ ಪರಿಣಾಮಗಳೂ ಪ್ರಾಪ್ತವಾಗುತ್ತವೆ. ಹೀಗಾಗಿ ಶಿಷ್ಟಪದ ಮತ್ತು ಜಾನಪದ ಭಾಷೆಯ 'ಸಾಹಿತ್ಯಿಕ ನೆಲೆ'ಗಳಲ್ಲಿ ಗಾದೆ ಗಮನಾರ್ಹವಾದುದೆಂದೇ ಹೇಳಬೇಕು.

ಶಬ್ದಗಳಲ್ಲಿ ವಾಚ್ಯ, ಲಕ್ಷ್ಯ, ವ್ಯಂಗ್ಯವೆಂಬ ಮೂರು ಅರ್ಥಶಕ್ತಿಗಳನ್ನು ಆಲಂಕಾರಿಕರು ಗುರುತಿಸಿದ್ದಾರೆ. ಇವುಗಳಲ್ಲಿ ಗಾದೆ, ವಾಚ್ಯಾರ್ಥವನ್ನು ಮೀರಿ ಲಕ್ಷ್ಯ, ವ್ಯಂಗ್ಯ ಪಾತಳಿಗಳಲ್ಲಿ ವ್ಯವಹರಿಸುತ್ತದೆ. ಇದರ ಒಂದು ಭಾಗ, ಅಶ್ಲೀಲ ಗಾದೆಯಾಗಿದ್ದರೂ ಅದನ್ನು ಹಾಗೆ ಕರೆಯುವುದು ಸಮಂಜಸವಲ್ಲವೆಂದೇ ನನ್ನ ಭಾವನೆ.

ಏಕೆಂದರೆ ಅದು 'ಗಾದೆ' ಎನಿಸಿಕೊಳ್ಳುವಲ್ಲಿ ಶಬ್ದದ ಅಶ್ಲೀಲತೆ ಗೌಣವಾಗಿ, ಅರ್ಥದ ಪರಿಣಾಮ ಪ್ರಧಾನವಾಗಿರುತ್ತದೆ. ಇದು 'ಬೆತ್ತಲೆ ಗಾದೆ'ಯ ಮುಖ್ಯ ಲಕ್ಷಣ. ನಿಜವಾದ 'ಬೆತ್ತಲೆ ಗಾದೆ'ಯನ್ನು ಅಶ್ಲೀಲವೆಂದರೆ ಗೊಮ್ಮಟೇಶ್ವರನನ್ನು ಬೆತ್ತಲೆಯೆಂದಂತೆ. ಈ ದೃಷ್ಟಿಯಿಂದ ಇವುಗಳನ್ನು 'ಗೊಮ್ಮಟ ಗಾದೆ' ಎಂದು ಕರೆಯುವುದು ಇನ್ನೂ ಅರ್ಥಪೂರ್ಣ.

'ಗುರೂಪದೇಶ ಮಂತ್ರವೈದ್ಯ, ಜಂಗಮೋಪದೇಶ ಶಸ್ತ್ರವೈದ್ಯ'ವೆಂಬುದೊಂದು ವಚನ ವಾಕ್ಯ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಪರಿಣಾಮದೃಷ್ಟಿಯಿಂದ ಶ್ಲೀಲಗಾದೆ ಮಂತ್ರವೈದ್ಯ, ಅಶ್ಲೀಲಗಾದೆ ಶಸ್ತ್ರವೈದ್ಯ. ಒಂದರಿಂದ ನೋವು ನಿಷಿದ್ಧ - ಪರಿಣಾಮ ನಿಧಾನ; ಇನ್ನೊಂದರಿಂದ ನೋವು ಕ್ಷಣ - ಪರಿಣಾಮ ತತ್‌ಕ್ಷಣ. ಆದರೆ ಅಶ್ಲೀಲ ಗಾದೆಗಳನ್ನು ಸಮಾಜದಲ್ಲಿ ಶಸ್ತ್ರವೈದ್ಯದಂತೆ ತುಂಬ ಎಚ್ಚರದಿಂದ ಪ್ರಯೋಗಿಸಬೇಕೆಂಬುದನ್ನು ಮರೆಯುವಂತಿಲ್ಲ.

'ಬೆತ್ತಲೆ ಗಾದೆ'ಗಳ ಬಳಕೆ ಶಿಷ್ಟರಲ್ಲಿ ಇಲ್ಲವೆನ್ನುವಷ್ಟು ಕಡಿಮೆ; ಜಾನಪದರಲ್ಲಿ ಅನಿವಾರ್ಯವೆಂಬಷ್ಟು ಅಧಿಕ. ನಾಗರಿಕರು ಭಾವನೆಗಳನ್ನು ಹತ್ತಿಕ್ಕಿಕೊಂಡು ಬದುಕುಮಾಡುತ್ತಿದ್ದರೆ, ಜಾನಪದರು ಸ್ವಾಭಾವಿಕ ಭಾವನೆಗಳನ್ನೇ ಬದುಕುತ್ತಾರೆ. ಹೀಗಾಗಿ ಅವರ ಬದುಕಿನ ಭಾಗವಾದ ಭಾಷೆಯಲ್ಲಿ, ಭಾಷೆಯ ಭಾಗವಾದ ಗಾದೆಗಳಲ್ಲಿ ಶ್ಲೀಲ-ಅಶ್ಲೀಲಗಳು ವ್ಯತ್ಯಾಸ ಕಳೆದುಕೊಂಡು ಮುಕ್ತಸಂಚಾರದ ಮುದ್ರೆ ಪಡೆಯುತ್ತವೆ. ಒಟ್ಟಿನಲ್ಲಿ ಮೊದಲೇ ವಾಚ್ಯಾರ್ಥವನ್ನು ಮೀರಿ ಅಶ್ಲೀಲತೆಯನ್ನು ಗೌಣ ಮಾಡಿಕೊಂಡ ಇವು, ನಿತ್ಯ ಬಳಕೆಯಿಂದಾಗಿ 'ಸಾಧುಪ್ರಯೋಗ'ಗಳಾಗಿ ವ್ಯವಹರಿಸುತ್ತವೆ.

ಕಾಮಕ್ಕೆ ಸಂಬಂಧಪಟ್ಟ ಯಾವುದೇ ವಿಷಯ ಯಾವಾಗಲೂ ಹೆಚ್ಚು ಕುತೂಹಲಕಾರಿ; ಪರಿಣಾಮಕಾರಿ. ಇದಕ್ಕೆ ವಿವರಣೆ ಅನಗತ್ಯ. ಈ ದೃಷ್ಟಿಯಿಂದಲೂ ಇವು ಮಾತಿನಲ್ಲಿ ಮಹತ್ವದ ಸ್ಥಾನ ಪಡೆದಿದೆ.

ಇಷ್ಟೆಲ್ಲ ವ್ಯಾಖ್ಯಾನಕ್ಕೆ ವಸ್ತುವಾದ 'ಬೆತ್ತಲೆ ಗಾದೆಗಳು' ಒಂದು ವಿಶಿಷ್ಟ ಸಂಕಲನವಾಗಿದೆ. ಉತ್ತರ ಕರ್ನಾಟಕದ ಗಾದೆಗಳು ಇಲ್ಲಿ ಅಧಿಕವಾಗಿದ್ದರೂ ಇತರ ಪ್ರದೇಶದಲ್ಲಿಯ ಗಾದೆಗಳಿಗೂ ಅವಕಾಶ ಲಭಿಸಿದೆ. ಗ್ರಂಥಸ್ಥ ಬೆತ್ತಲೆ ಗಾದೆಗಳೂ ಅನುಬಂಧವಾಗಿ ಬಂದುದು ಇಲ್ಲಿಯ ಇನ್ನೊಂದು ವಿಶೇಷತೆ. ಚರಪಾಠ ವಿಶಿಷ್ಟವಾದ ಜನಪದಸಾಹಿತ್ಯವನ್ನು ಸಂಪಾದಿಸುವುದು ಮೇಲು ನೋಟಕ್ಕೆ ಸುಲಭವೆನಿಸಿದರೂ ಸುಲಭವೇನಲ್ಲ. ಈ ಎಚ್ಚರಿಕೆಯಿಂದ ಶ್ರೀ ಬಿರಾದಾರ ಅವರು ಪ್ರಸ್ತುತ ಕೃತಿಯನ್ನು ಪ್ರಕಟಿಸಿದ್ದಾರೆ. ಇದರಿಂದಾಗಿ ಜಾನಪದ 'ಅಷ್ಟಾದಶವರ್ಣನೆ' ಈ ವರೆಗೆ ಕೈಬಿಟ್ಟಿದ್ದ ತನ್ನ ಮುಖವೊಂದನ್ನು ಹೊಸದಾಗಿ ಕಟ್ಟಿಕೊಂಡಿತೆಂದು ನಾನು ಭಾವಿಸುತ್ತೇನೆ. ಜನತೆ ಮತ್ತು ವಿದ್ವಜ್ಜನತೆ ಜಾನಪದ ವ್ಯಾಸಂಗಕ್ಕೋಸುಗ, ಕೊನೆಯ ಪಕ್ಷ ಕುತೂಹಲಕ್ಕೋಸುಗವಾದರೂ ಈ ಕೃತಿಯನ್ನು ಓದುವರೆಂಬ ವಿಶ್ವಾಸ ನನಗಿದೆ.

ಬಿ.ಬಿ. ಬಿರಾದಾರ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೧೪೧

ಛಂದೋರಚನಾ ಸಂಶೋಧನೆಗಳು

೧೯೮೪

ಡಿಸ್ಕವರಿ, ಇನ್‌ವೆನ್‌ಶನ್ ಮತ್ತು ರಿಸರ್ಚ್ - ಈ ಕ್ರಿಯೆಗಳಲ್ಲಿ ತೊಡಗಿದವರನ್ನೆಲ್ಲ ನಾವು "ಸಂಶೋಧಕ" ಎಂದು ಕರೆಯುತ್ತೇವೆ. ಹಾಗೆಯೇ ಹಸ್ತಪ್ರತಿ ಅನ್ವೇಷಣ, ಮಹಾಛಂದಸ್ಸಿನ ಆವಿಷ್ಕರಣ, ಶೋಧನಿಷ್ಠ ಲೇಖನಕ್ರಿಯೆಗಳನ್ನೆಲ್ಲ "ಸಂಶೋಧನೆ" ಎಂದೇ ಸೂಚಿಸುತ್ತೇವೆ. ಹೀಗಾಗಿ ನಿಜವಾದ ಸಂಶೋಧಕನೆಂದರೆ ಯಾರು?ಸಂಶೋಧನೆ ಎಂದರೆ ಏನು? ಎಂಬುದೇ ಮೊದಲು ನಮ್ಮಲ್ಲಿ ಸ್ಪಷ್ಟವಾಗಬೇಕಿದೆ. ಇಂಥ ಅಸ್ಪಷ್ಟತೆಯ ಮಧ್ಯದಲ್ಲಿ ಸೀತಾರಾಮ ಜಾಗೀರ್‌ದಾರರು ಒಬ್ಬ "ಸಂಶೋಧಕ" ಎಂದು ಸ್ಪಷ್ಟವಾಗಿ ಒಡೆದು ಕಾಣುತ್ತಾರೆ. ಈ ಸಂಶೋಧನ ಹವ್ಯಾಸದ ಫಲವಾಗಿ ಅವರು ಆಗಾಗ ಬರೆದು ಪ್ರಕಟಿಸಿದ ಕೆಲವು ಲೇಖನಗಳ ಗುಚ್ಛ "ಛಂದೋರಚನಾ ಸಂಶೋಧನೆಗಳು." ಹೆಸರೇ ಸೂಚಿಸುವಂತೆ ಇದು ಛಂದಸ್ಸಿಗೆ ಸಂಬಂಧಪಟ್ಟ ಆರು ಲೇಖನಗಳ ಸಂಕಲನ. ಪದ್ಯದ ಪರಿಕರಗಳಲ್ಲಿ ಛಂದಸ್ಸು ತೀರ ಅವಜ್ಞೆಗೆ ಗುರಿಯಾದ ಜ್ಞಾನಶಾಖೆ. ಅದರ ಬಗೆಗೆ ಮಾತನಾಡುವುದೂ ಬರೆಯುವುದೂ "ಎಲುಬು ಕಡಿಯುವ ಕೆಲಸ" ಎಂದು ಪ್ರಜ್ಞಾವಂತರೇ ಭಾವಿಸುತ್ತಿರುವ ಇಂದಿನ ಕಾಲದಲ್ಲಿ ಛಂದಸ್ಸನ್ನು ಪ್ರೀತಿಸುತ್ತಿರುವುದಕ್ಕಾಗಿ, ಅದರ ಬಗ್ಗೆ ಬರೆಯುತ್ತಿರುವುದಕ್ಕಾಗಿ ನಾನು ಜಾಗೀರ್‌ದಾರರನ್ನು ಅಭಿನಂದಿಸುತ್ತೇನೆ.

ಕನ್ನಡ ಛಂದಸ್ಸನ್ನು ಕುರಿತು ಈವರೆಗೆ ಬರೆದ ಅನೇಕ ಲೇಖನಗಳು, ಪುಸ್ತಕಗಳು, ಕನ್ನಡೇತರ ಕೃತಿಗಳನ್ನು ಒಂದು ಪರಿಮಿತಿಯಲ್ಲಿ ಬಳಸಿಕೊಂಡಿವೆ. ಪ್ರಸ್ತುತ ಲೇಖನಗಳಲ್ಲಿ ಜಾಗೀರ್‌ದಾರ್ ಆ ಪರಿಮಿತಿಯನ್ನು ದಾಟುವ ಪ್ರಯತ್ನ ಮಾಡಿದ್ದಾರೆ. ಇದಕ್ಕೆ ಈ ಪುಸ್ತಕದ ಹೃದಯದಂತಿರುವ ರಗಳೆಯನ್ನು ಕುರಿತ ಎರಡು ಲೇಖನಗಳು ನಿದರ್ಶನವೆನಿಸಿವೆ. ಇಲ್ಲಿನ ನಿರ್ಣಯಗಳು ತುಂಬ ಕುತೂಹಲಕಾರಿಯಾಗಿವೆ, ಬೆಲೆಯುಳ್ಳವಾಗಿವೆ. ರಗಳೆಗೆ ಸಂಸ್ಕೃತ ಅಕ್ಷರವೃತ್ತಗಳೇ ಮೂಲವೆಂದು ಒಂದು ಕಾಲಕ್ಕೆ ದಿವಂಗತ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಹೇಳಿದ್ದರು. ಆದರೆ ತೀ.ನಂ.ಶ್ರೀ., ಡಿ. ಎಲ್. ಎನ್.ಅವರು ಸೂಚಿಸಿದ, ಅವರ ಶಿಷ್ಯವರ್ಗ ಬೆಂಬಲಿಸಿದ "ಷಜ್ಝಟಿಕಾವೃತ್ತವೇ ಮೂಲ"ವೆಂಬ ಘೋಷಣೆಯ ಗದ್ದಲದಲ್ಲಿ ಮುಳಿಯ ಅವರ ಮಾತು ಯಾರಿಗೂ ಸರಿಯಾಗಿ ಕೇಳಿಸಲಿಲ್ಲ. ಈಗ ಜಾಗೀರ್‌ದಾರ್ ಅವರು ಮುಳಿಯ ಅವರ ವಾದವನ್ನು ಅವರಿಗಿಂತ ಸ್ವಲ್ಪ ಬೇರೆಯಾಗಿ, ಹೆಚ್ಚು ವಿವರವಾಗಿ, ಮತ್ತೆ ಮಂಡಿಸಿದ್ದಾರೆ. ರಗಣ ಪ್ರಧಾನ ದಂಡಕವೇ ರಗಳೆಗೆ ಮೂಲವೆಂಬ ಕುಕ್ಕಿಲ ಕೃಷ್ಣಭಟ್ಟರ ಮೂರನೆಯ ವಾದವೊಂದು ಇತ್ತೀಚೆಗೆ ತಲೆಯೆತ್ತಿದೆ. ಆದರೆ ಜಯಕೀರ್ತಿಯ "ಅಕ್ಷರ

ಸಮೋದಿತಾ" ಎಂಬ ಲಕ್ಷಣವಾಕ್ಯವು ರಗಳೆಯ ಮೂಲವನ್ನು ಜಾಗೀರ್‌ದಾರರು ಹೇಳಿರುವಂತೆ ಸಂಸ್ಕೃತದ ಕಡೆಗೇ ಒಯ್ಯುತ್ತಿದ್ದರೂ, ಈ ಸಿದ್ಧಾಂತ ಇನ್ನೂ ಹೆಚ್ಚಿನ ಆಧಾರಗಳನ್ನು ಬಯಸುತ್ತದೆ. ಜೊತೆಗೆ ಈ ಎರಡೂ ಲೇಖನಗಳು ಅನೇಕ ಉಪಶೋಧ, ಉಪಸಂದೇಹಗಳಿಗೆ ಅವಕಾಶ ಮಾಡಿಕೊಡುತ್ತವೆ.

ಇವುಗಳಂಥ ಇನ್ನೊಂದು ಪ್ರೌಢಲೇಖನ "ಛಂದಶ್ಶಾಸ್ತ್ರಕ್ಕೆ ಶ್ರವಣಬೆಳಗೊಳದ ಶಾಸನಗಳ ಕಾಣಿಕೆ." ಇಲ್ಲಿ ಕೆಲವೆಡೆಗಳಲ್ಲಿ ಅಪೂರ್ಣ ಶಾಸನಪದ್ಯಗಳನ್ನು ಊಹೆಯಿಂದ ತುಂಬಿಕೊಳ್ಳುವ, ಹೀಗೆ ತುಂಬಿಕೊಂಡ ಪದ್ಯಗಳನ್ನು ಪರಿಶ್ರಮದಿಂದ ಹೆಸರಿಸುವ ಮೂಲಕ ಜಾಗೀರ್‌ದಾರ್ ಛಂದಶ್ಶಾಸ್ತ್ರದ ಜೊತೆಗೆ ಗ್ರಂಥ ಸಂಪಾದನಶಾಸ್ತ್ರದ ಸೂಕ್ಷ್ಮ ಪ್ರಜ್ಞೆಯನ್ನು ಮೆರೆದಿದ್ದಾರೆ. ಹೀಗೆ ಗುರುತಿಸಿದುವು ಅಪ್ರಸಿದ್ಧ ಅಕ್ಷರ ವೃತ್ತಗಳೆಂಬುದನ್ನು ನೆನೆದಾಗ ಅವರ ಅಭ್ಯಾಸದ ಗಾಢತೆ ಇನ್ನೂ ಸ್ಪಷ್ಟವಾಗುತ್ತದೆ. ಶಾಸನದ ಕೆಲವು ಅಕ್ಷರ ವೃತ್ತಗಳಲ್ಲಿ ಆದಿಪ್ರಾಸಕ್ಕೆ ಚ್ಯುತಿ ಬಂದುದನ್ನು ಎತ್ತಿತೋರಿಸಿದುದು ಇಲ್ಲಿಯ ಇನ್ನೊಂದು ವೈಶಿಷ್ಟ್ಯ. ಇದು ಬಹುಶಃ "ಪ್ರಾಸ ವಿಲಂಘನ"ವಾಗಿರದೆ ಕನ್ನಡಿಗರು ಸಂಸ್ಕೃತ ವೃತ್ತಗಳಿಗೆ ಪ್ರಾಸವನ್ನು ತೊಡಿಸಲು ಪ್ರಾರಂಭಿಸಿದ "ಪ್ರಾಸಪ್ರಯೋಗ" ಕಾಲವಾಗಿರಬಹುದೆಂದು ಜಾಗೀರ್‌ದಾರರು ಸರಿಯಾಗಿಯೇ ಊಹಿಸಿದ್ದಾರೆ.

ಇವುಗಳ ಎತ್ತರಕ್ಕೆ ಉಳಿದ ಮೂರು ಲೇಖನಗಳು ಬರದಿದ್ದರೂ ತಂತಮ್ಮ ಪರಿಮಿತಿಯಲ್ಲಿ ಪರಿಪೂರ್ಣವಾಗಿವೆ. ಇವುಗಳಲ್ಲಿ "ಒಂದು ಅನುಪಲಬ್ಧ ಛಂದಃಶಾಸ್ತ್ರಗ್ರಂಥ" ತುಂಬ ಕುತೂಹಲಕಾರಿ ಲೇಖನ. ಪಂಪನಿಗೂ ಪ್ರಾಕೃತ ಪೈಂಗಲಕಾರನಿಗೂ ಆಕರವಾಗಿರಬಹುದಾದ ಬೇರೊಂದು ಅನುಪಲಬ್ಧ ಛಂದೋಗ್ರಂಥದ ಕಡೆಗೆ ಇದು ಬೆರಳು ತೋರುತ್ತದೆ. ಪಂಪನ "ಟಾಠಡಾಢಣಂ" ನುಡಿಗಟ್ಟು, ಜಾಗೀರ್‌ದಾರರು ಹೇಳಿರುವಂತೆ ಈ ಪ್ರಯೋಗವನ್ನೊಳಗೊಂಡ ಯಾವುದೋ ಅನುಪಲಬ್ಧ ಛಂದೋಗ್ರಂಥದಿಂದ ಪ್ರೇರೇಪಿತವಾಗಿದ್ದರೆ ಆಶ್ಚರ್ಯವೇನಲ್ಲ. "ಹೆಗ್ಗರೆಯ ಶಾಸನ ಮತ್ತು ಜಯಕೀರ್ತಿಯ ಕಾಲದ ವಿಚಾರ" ಒಂದು ಪ್ರಯತ್ನವೇ ಹೊರತು ಆತ್ಯಂತಿಕ ನಿರ್ಣಯವೆನಿಸುವುದಿಲ್ಲ. "ಶಾಸನದಲ್ಲಿ ಒಂದು ತ್ರಿಪದಿ" ಟಿಪ್ಪಣಿ ರೂಪದ ಒಂದು ಡಿಸ್ಕವರಿ ಮಾತ್ರ. ಈ ಲೇಖನಗಳಿಗೆ ಹೆಚ್ಚಿನದಾಗಿ ಅನುಬಂಧ ರೂಪದಲ್ಲಿ ಜೋಡಿಸಿದ "ವೃತ್ತರೂಪ ನಾಮಸೂಚೀ" ಕೇವಲ ಒಂದು ಕೋಷ್ಟಕವಲ್ಲ; ಟಿಪ್ಪಣಿ-ಅಡಿಟಿಪ್ಪಣಿಗಳನ್ನೊಳಗೊಂಡ ಆಳವಾದ ಒಂದು ಅಭ್ಯಾಸವೆನಿಸಿದೆ. ಈ ಎಲ್ಲ ಕಾರಣಗಳಿಂದಾಗಿ "ಛಂದೋರಚನಾ ಸಂಶೋಧನೆಗಳು" ಒಂದು ಉಪಯುಕ್ತ ಲೇಖನ ಸಂಕಲನ. ಆದರೆ ವಿಶಿಷ್ಟ ಅಭ್ಯಾಸಿಗಳು, ಅದರಲ್ಲಿಯೂ ಸಹನಶೀಲ ವ್ಯಕ್ತಿಗಳು ಮಾತ್ರ, ಇಲ್ಲಿಯ ಲೇಖನಗಳನ್ನು ಆದ್ಯಂತ ಓದಬಲ್ಲರು; ಓದಿ ಅರ್ಥಮಾಡಿಕೊಳ್ಳಬಲ್ಲರು. ಇದು ಅನಿವಾರ್ಯ. ಸಾಹಸಶೀಲ ಸ್ನೇಹಿತರ ಈ ಗ್ರಂಥಕ್ಕೆ ಶುಭವನ್ನು ಕೋರುತ್ತೇನೆ.

ಸೀತಾರಾಮ ಜಾಗೀರದಾರ, ಮೈಸೂರು

ಆಕರ : ಮಾರ್ಗ ಸಂಪುಟ–೬

■■

೧೪೨

ಶಾಸನಗಳಲ್ಲಿ ಕರ್ನಾಟಕದ ವರ್ತಕರು

೧೯೮೬

ಮುನ್ನುಡಿ ಬರೆಯುವ ವಿಷಯವಾಗಿ ನಾನು ತೀರ ನಿರಾಸಕ್ತ. ಹೀಗಿದ್ದೂ ಈ ಗ್ರಂಥವನ್ನು ಕುರಿತು ಮುನ್ನುಡಿರೂಪದ ಮಾತುಗಳನ್ನು ಬರೆಯುತ್ತಿರುವುದಕ್ಕೆ ಎರಡು ಕಾರಣಗಳಿವೆ. ಒಂದು : ಡಾ. ಬಿ. ಆರ್. ಹಿರೇಮಠ ಅವರು ಒಬ್ಬ ತರುಣ ಸಂಶೋಧಕರಾಗಿರುವುದು; ಎರಡು : "ಶಾಸನಗಳಲ್ಲಿ ಕರ್ನಾಟಕದ ವರ್ತಕರು" ಒಂದು ಉತ್ತಮ ಗ್ರಂಥವಾಗಿರುವುದು.

ಕವಿ-ಕಾವ್ಯ ವಿವೇಚನೆಗೆ ಮಾತ್ರ ಸೀಮಿತವಾಗಿದ್ದ ಕನ್ನಡ ಪಿಎಚ್.ಡಿ. ಅಧ್ಯಯನ ಇತ್ತೀಚಿನ ದಿನಗಳಲ್ಲಿ ತನ್ನ ಹೊಸ ಹೊಸ ಮೈಗಳನ್ನು ಪ್ರಕಟಿಸುತ್ತಲಿರುವುದರ ಜೊತೆಗೆ, ಸಂಲಗ್ನ ವಿಷಯಗಳನ್ನೂ ತನ್ನಲ್ಲಿ ಅಳವಡಿಸಿಕೊಳ್ಳುತ್ತ ಪ್ರಗತಿಯತ್ತ ನಡೆದಿದೆ. ಇದು ಸಂತೋಷದ ವಿಷಯವಾಗಿದ್ದರೂ ಅನೇಕ ಸಲ ಉತ್ತಮವಲ್ಲದ ಪ್ರಬಂಧಗಳೂ ಹುಟ್ಟಿಕೊಳ್ಳುತ್ತಲಿರುವ ಕಾರಣ, ಈ ಪ್ರಗತಿಗೆ ಸಮಾನವಾಗಿ ವಿಗತಿಯೂ ಅಲ್ಲಿ ಕಾಣಿಸಿಕೊಂಡಿದೆ. ಇದರಿಂದಾಗಿ ಏಕಕಾಲಕ್ಕೆ ಸಂತೋಷ-ವಿಷಾದಗಳೆರಡನ್ನೂ ವ್ಯಕ್ತಪಡಿಸಬೇಕಾದ ಪ್ರಸಂಗ ಇಂದು ಪ್ರಾಪ್ತವಾಗಿದೆ. ಇಂಥ ವಾತಾವರಣದ ಮಧ್ಯದಲ್ಲಿಯೂ ಒಂದು ಉತ್ತಮ ಮಹಾಪ್ರಬಂಧವನ್ನು ಬರೆದು ಕೊಟ್ಟುದಕ್ಕಾಗಿ ಡಾ. ಬಿ. ಆರ್. ಹಿರೇಮಠ ಅವರನ್ನು ಮೊದಲು ಅಭಿನಂದಿಸುತ್ತೇನೆ.

"ಶಾಸನಗಳಲ್ಲಿ ಕರ್ನಾಟಕದ ವರ್ತಕರು" ಮಹಾಪ್ರಬಂಧ ಎರಡು ದೃಷ್ಟಿಯಿಂದ ಗಮನಾರ್ಹವಾಗಿದೆ. ಒಂದು : ಸಾಹಿತ್ಯವನ್ನು ಬಿಟ್ಟು ಶಾಸನಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಂಡುದು; ಎರಡು: ಶಾಸನಗಳ ಸಾಹಿತ್ಯಿಕ ಅಧ್ಯಯನವನ್ನು ಬಿಟ್ಟು ಅವು ತಿಳಿಸುವ ಪ್ರಾಚೀನ ವಾಣಿಜ್ಯ ಚಲನವಲನಗಳನ್ನು ಅಭ್ಯಸಿಸಿದುದು. ಇದರಿಂದಾಗಿ ಕರ್ನಾಟಕದ ಸಂಶೋಧನಕ್ಷೇತ್ರಕ್ಕೆ ಒಂದು ಹೊಸಪುಟ ಸೇರ್ಪಡೆಯಾದಂತಾಗಿದೆ.

ಪ್ರಾಚೀನ ಕರ್ನಾಟಕದ ಧಾರ್ಮಿಕ, ರಾಜಕೀಯ ಕ್ಷೇತ್ರಗಳ ಅಧ್ಯಯನ ವಿಪುಲಪ್ರಮಾಣದಲ್ಲಿ ನಡೆದಿದೆ, ನಡೆಯುತ್ತಲಿದೆ. ಅಂದರೆ ವಿದ್ವಾಂಸರು ಈ ವರೆಗೆ ಪ್ರಾಚೀನ ಕಾಲದ ಬ್ರಾಹ್ಮಣ, ಕ್ಷತ್ರಿಯ ಚಟುವಟಿಕೆಗಳನ್ನು ಬಹುಮಟ್ಟಿಗೆ ಗುರುತಿಸಿದ್ದಾರೆ. ಆದರೆ ಇಷ್ಟೇ ಮಹತ್ವದ 'ವೈಶ್ಯ' ಚಟುವಟಿಕೆಗಳ ಸಮಗ್ರ ಅಧ್ಯಯನ ಈ ವರೆಗೆ ನಡೆಯಲೇ ಇಲ್ಲ. ಇದನ್ನು ಗಮನಿಸಿ ಒಂದು ಹೊಸ ಕ್ಷೇತ್ರವನ್ನು ಇಲ್ಲಿ ಪ್ರಥಮ ಸಲ ಇಡಿಯಾಗಿ ಬೆಳಕಿಗೆ ತರಲಾಗಿದೆ.

ಶಾಸನಗಳು ಒಂದು ನಾಡಿನ ಪ್ರಾಚೀನ ಜೀವನವ್ಯಾಪಾರದ ದಾಖಲೆಗಳಾಗಿರುತ್ತವೆ. ಇವುಗಳ ವಿಷಯ ಸಾಹಿತ್ಯಕೃತಿಗಳಿಗಿಂತ ಹೆಚ್ಚು ವಸ್ತುನಿಷ್ಠವಾಗಿರುತ್ತದೆ. ಈ ಕಾರಣದಿಂದಾಗಿ ಪ್ರಾಚೀನ ಜೀವನವನ್ನು

ಪುನರ್‌ರಚಿಸಿಕೊಡಲು ಇತ್ತೀಚಿನ ವಿದ್ವಾಂಸರು ಶಾಸನಗಳಿಗೆ ಹೆಚ್ಚು ಮೊರೆಹೋಗುತ್ತಲಿದ್ದಾರೆ. ಈ ಮಾಲಿಕೆಯಲ್ಲಿ "ಶಾಸನಗಳಲ್ಲಿ ಕರ್ನಾಟಕದ ವರ್ತಕರು" ಮಹಾಪ್ರಬಂಧ ಒಂದು ಮೈಲುಗಲ್ಲಾಗಿ ನಿಲ್ಲುತ್ತದೆ.

ಈ ಅಧ್ಯಯನಕ್ಕಾಗಿ ಡಾ. ಬಿ. ಆರ್. ಹಿರೇಮಠ ಅವರು ಕರ್ನಾಟಕದ ಒಳ-ಹೊರಗಿನ ಶಾಸನಗಳನ್ನೂ ಪ್ರಾಚೀನ ವಾಣಿಜ್ಯವಿಷಯವನ್ನು ಕುರಿತು ಈ ವರೆಗೆ ವಿದ್ವಾಂಸರು ರಚಿಸಿದ ಅನೇಕ ಗ್ರಂಥಗಳನ್ನೂ ಅವಲೋಕಿಸಿದ್ದಾರೆ. ಅವಶ್ಯವೆನಿಸಿದಲ್ಲಿ ವಡ್ಡಾರಾಧನೆ, ಧರ್ಮಾಮೃತಗಳಂಥ ಸಾಹಿತ್ಯಕೃತಿಗಳನ್ನೂ ವ್ಯವಹಾರಗಣಿತದಂಥ ಲೋಕೋಪಕಾರಶಾಸ್ತ್ರಗಳನ್ನೂ ಇಲ್ಲಿ ಪರಿಶೀಲಿಸಿದ್ದಾರೆ. ಈ ಪರಿಶೀಲನೆ - ಪರಿಶ್ರಮವನ್ನು ಇಲ್ಲಿಯ ಅನೇಕ ಪುಟಗಳಲ್ಲಿ ಕಾಣಬಹುದು.

ಶಾಸನಗಳು ಎಲ್ಲ ವಿಷಯವನ್ನು ಒಂದೇ ಕಡೆಗೆ ಒದಗಿಸಿಕೊಡುವ ಗ್ರಂಥಗಳಲ್ಲ. ಒಂದು ವಿಷಯಕ್ಕೆ ಸಂಬಂಧಿಸಿದ ವಿಷಯ ತುಂಡುತುಂಡಾಗಿ ನೂರಾರು ಶಾಸನಗಳಲ್ಲಿ ಚದುರಿಹೋಗಿರುತ್ತದೆ. ಇದನ್ನು ಸಂಗ್ರಹಿಸುವಲ್ಲಿ ಸಹನಶೀಲತೆ, ಜೋಡಿಸುವಲ್ಲಿ ಸಂಯೋಜಕ ಪ್ರತಿಭೆ, ನಿರೂಪಿಸುವಲ್ಲಿ ಸ್ಪಷ್ಟತೆ ಇತ್ಯಾದಿ ಗುಣವಿಶೇಷಗಳು ಅಭ್ಯಾಸಿಗೆ ಅವಶ್ಯ ಬೇಕಾಗುತ್ತದೆ. ಈ ಮಹಾಪ್ರಬಂಧದಲ್ಲಿ ಅಂಥ ಗುಣವಿಶೇಷಗಳನ್ನು ಪದೇಪದೇ ಕಾಣುತ್ತೇವೆ.

ಪ್ರಾಚೀನ ಕಾಲದಿಂದ ವಿಜಯನಗರ ಸಾಮ್ರಾಜ್ಯ ಪತನದ ವರೆಗಿನ ಕಾಲಾವಧಿಯನ್ನು ವ್ಯಾಪಿಸಿದ ಈ ಮಹಾಪ್ರಬಂಧ ಪೀಠಿಕೆ, ವರ್ತಕರು ಮತ್ತು ವರ್ತಕ ಪ್ರಕಾರಗಳು, ವರ್ತಕಸಂಘಗಳು, ವರ್ತಕರ ವ್ಯಾಪಾರ ಸ್ವರೂಪ-ಅಧಿಕಾರ ಸ್ವರೂಪ, ವರ್ತಕರ ಸಾಮಾಜಿಕ-ಧಾರ್ಮಿಕ-ವೀರ ಜೀವನ, ಸಮಾರೋಪ ಎಂಬ ಆರು ಅಧ್ಯಾಯಗಳನ್ನೊಳಗೊಂಡಿದೆ.

ಪ್ರಾರಂಭದಲ್ಲಿಯೇ ವೃತ್ತಿಗಳನ್ನು ಉತ್ಪಾದಕ ವೃತ್ತಿ, ವಿನಿಮಯ ವೃತ್ತಿ, ಉತ್ಪಾದಕ-ವಿನಿಮಯ ವೃತ್ತಿ ಮತ್ತು ಇತರ ವೃತ್ತಿ ಎಂದು ವರ್ಗೀಕರಿಸಿಕೊಳ್ಳುವಲ್ಲಿ ಡಾ. ಬಿ. ಆರ್. ಹಿರೇಮಠ ಅವರು ವಿಷಯವನ್ನು ಹೇಗೆ ಬಿಡಿಸಿಕೊಳ್ಳುತ್ತಾರೆ, ಮಹಾಪ್ರಬಂಧಕ್ಕೆ ಸ್ಪಷ್ಟವಾದ ಆಸ್ತಿವಾರವನ್ನು ಹೇಗೆ ಹಾಕಿಕೊಳ್ಳುತ್ತಾರೆ ಎಂಬ ಕಲ್ಪನೆ ಬರುತ್ತದೆ. ಇವುಗಳಲ್ಲಿ ವಿನಿಮಯವೃತ್ತಿಯವರಾದ ವಿನಿಮಯ ವರ್ತಕರು, ಉತ್ಪಾದಕ-ವಿನಿಮಯ ವೃತ್ತಿಯವರಾದ ಉತ್ಪಾದಕ-ವಿನಿಮಯ ವರ್ತಕರು ಮಾತ್ರ ವರ್ತಕವರ್ಗದಲ್ಲಿ ಪರಿಗಣಿತರಾಗುತ್ತಾರೆಂದು ಹೇಳಿ, ಮುಂದಿನ ಅಧ್ಯಾಯಕ್ಕೆ ಸಾಗಿದುದು, ವಿಷಯವನ್ನು ನಿರ್ದಿಷ್ಟಪಡಿಸಿಕೊಳ್ಳುವ ಅವರ ಮನಸ್ಸನ್ನು ಸೂಚಿಸುತ್ತದೆ. ಇಲ್ಲಿಯ ವಿನಿಮಯ ವರ್ತಕರಲ್ಲಿ ಸೆಟ್ಟಿ-ಬಣಂಜಿಗ, ಸೆಟ್ಟಿಗುತ್ತ, ನಕರ, ಮುಂಮುರಿದಂಡ, ವಡ್ಡವ್ಯವಹಾರಿ, ಗವಱೆ, ಗಾತ್ರಿಗ, ಸೆಟ್ಟಿಕಾಱ, ಹಲರು, ಎಳಮೆ, ಸಾಲಿಕೆ ಬಲ್ಲಾಳುಗಳೆಂಬ ಪ್ರಕಾರಗಳನ್ನು ಗುರುತಿಸಿ, ಇವರ ಜೀವನದ ಎಲ್ಲ ಮಗ್ಗಲುಗಳನ್ನು ತಲಸ್ಪರ್ಶಿಯಾಗಿ ಬಿಡಿಸಿ ನೋಡಲಾಗಿದೆ. ಈ ವಿನಿಮಯ ವರ್ತಕರು ಎಂದೋ ನಾಶವಾಗಿದ್ದ 'ಅಯ್ಯಾವೊಳೆ ಐನೂರ್ವರು' ಎಂಬ ವಿನಿಮಯ ವರ್ತಕಸಂಘದ ಸದಸ್ಯರಾಗಿರಲಿಲ್ಲವೆಂಬುದನ್ನೂ ಇವರು ತಮಗಾಗಿ ವರ್ತಕಸಂಘ ರೂಪಿಸಿಕೊಂಡಿರಲಿಲ್ಲವೆಂಬುದನ್ನೂ ಸಾಧಾರವಾಗಿ ಹೇಳಿರುವುದು ಈ ಮಹಾಪ್ರಬಂಧದ ಪ್ರಮುಖ ವೈಶಿಷ್ಟ್ಯವಾಗಿದೆ. ಆದರೆ ಉತ್ಪಾದಕ-ವಿನಿಮಯ ವರ್ತಕರ ಬಗ್ಗೆ ಇದೇ ರೀತಿ ಇನ್ನೂ ಕೆಲವು ಮಾತುಗಳನ್ನು ಇಲ್ಲಿ ಹೇಳಬೇಕಿತ್ತು.

ಸಮಾನವೃತ್ತಿಯವರು ಸೇರಿ ರಚಿಸಿಕೊಂಡವುಗಳೇ ಸಂಘಗಳು. ಸಹಕಾರತತ್ವ ಇವುಗಳ ತಾಯಿಬೇರು. ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದ್ದ ಇಂಥ ಸಂಘಗಳನ್ನು ಉತ್ಪಾದಕಸಂಘ, ವಿನಿಮಯಸಂಘ, ಉತ್ಪಾದಕ-ವಿನಿಮಯಸಂಘ ಹಾಗೂ ಇತರ ಸಂಘವೆಂದು ವರ್ಗೀಕರಿಸಿಕೊಳ್ಳುವಲ್ಲಿ ಹಿಂದಿವ ವರ್ಗೀಕರಣವನ್ನು ಎಳೆಕಡಿದು ಹೋಗದಂತೆ ಮುಂದುವರಿಸಿಕೊಂಡು ಹೋಗುವ ಸಂಶೋಧನೆಶಿಸ್ತು ಎದ್ದು ಕಾಣುತ್ತದೆ. ಇವುಗಳಲ್ಲಿ ತಮ್ಮ ಮಹಾಪ್ರಬಂಧದ ಪರಿಮಿತಿಗೆ ಒಳಪಡುವ ವಿನಿಮಯಸಂಘ, ಉತ್ಪಾದಕ-

ವಿನಿಮಯಸಂಘಗಳ ಮೇಲೆ ಮಾತ್ರ ಗಮನವನ್ನು ಕೇಂದ್ರೀಕರಿಸಿರುವುದು, ಅತಿವ್ಯಾಪ್ತಿದೋಷದಿಂದ ದೂರವಾಗುವ ಇವರ ಎಚ್ಚರ ಮನೋಭಾವಕ್ಕೆ ನಿದರ್ಶನವೆನಿಸಿದೆ.

"ವರ್ತಕರ ವ್ಯಾಪಾರ ಸ್ವರೂಪ-ಅಧಿಕಾರ ಸ್ವರೂಪ" ಅಧ್ಯಾಯದಲ್ಲಿ ಅವರ ವೃತ್ತಿಯ ಕ್ರಿಯಾತ್ಮಕತೆ ಮತ್ತು ಅವರ ಅಧಿಕಾರದ ಕ್ರಿಯಾತ್ಮಕತೆಗಳ ವಿವರಗಳನ್ನು ಕಾಣಬಹುದಾಗಿದೆ.

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ವರ್ತಕರು ಕೇವಲ ತಮ್ಮ ವಾಣಿಜ್ಯಕ್ಕೆ ಮಾತ್ರ ಸೀಮಿತವಾಗಿರದೆ, ಸಮಾಜದ ಘಟಕವಾಗಿದ್ದ ಇವರು ಆ ಕಾಲದ ಸಾಮಾಜಿಕ-ಧಾರ್ಮಿಕ ಮೊದಲಾದ ಕ್ಷೇತ್ರಗಳಲ್ಲಿಯೂ ಹೇಗೆ ಹರಡಿಕೊಂಡಿದ್ದರೆಂಬುದನ್ನು ವಿವರಿಸಿದುದು, ಈ ಮಹಾಪ್ರಬಂಧದ ಇನ್ನೊಂದು ವೈಶಿಷ್ಟ್ಯವಾಗಿದೆ. ಇಲ್ಲಿಯೇ ಇವರು ತಮ್ಮ ಸರಕು-ಸಂಪತ್ತಿನ ಸಂರಕ್ಷಣೆಗಾಗಿ ವೀರಜೀವನ ನಡೆಸಿದ, ವೀರಪಡೆಯನ್ನು ಸಾಕಿದ ಸಂಗತಿಗಳನ್ನೂ ಹೇಳಲಾಗಿದೆ.

ಇದು ಒಟ್ಟು ಮಹಾಪ್ರಬಂಧದ ಹಂದರವಾಗಿದ್ದರೂ ಪ್ರತಿಯೊಂದು ಅಧ್ಯಾಯದ ಒಳಗೆ ಅನೇಕ ವಿಷಯಗಳ, ಉಪವಿಷಯಗಳ ವಿವೇಚನೆ ವಿಪುಲವಾಗಿ ನಡೆದಿದೆ. ಇದರಿಂದಾಗಿ ಈ ವರೆಗೆ ನಮಗೆ ಗೊತ್ತಿಲ್ಲದ ಅನೇಕ ಅಂಶಗಳು ಪ್ರಪ್ರಥಮಸಲ ಬೆಳಕಿಗೆ ಬಂದಿವೆ. ಕೆಲವೊಮ್ಮೆ ಈ ಮೊದಲಿನ ಶೋಧಗಳು ಪರಿಷ್ಕರಣಗೊಂಡಿವೆ. ಸಮಾರೋಪ ಅಧ್ಯಾಯವನ್ನಲ್ಲದೆ ಶ್ರಮವಹಿಸಿ ಜೋಡಿಸಿದ ಉಪಯುಕ್ತ ಅನುಬಂಧಗಳು ಈ ಮಹಾಪ್ರಬಂಧದ ಮೌಲಿಕತೆಯನ್ನು ಇನ್ನೂ ಹೆಚ್ಚಿಸಿದೆ. ಈ ಎಲ್ಲ ಅಂಶಗಳಿಂದಾಗಿ ಈ ಮಹಾಪ್ರಬಂಧಕ್ಕೆ "ಪ್ರಾಚೀನ ವಾಣಿಜ್ಯಕೋಶ"ದ ಮಹತ್ವ ಪ್ರಾಪ್ತವಾಗಿದೆ.

ಇಲ್ಲಿಯ ಪ್ರತಿಯೊಂದು ಅಧ್ಯಾಯದ ಮುಖ್ಯಲಕ್ಷಣವೆಂದರೆ ಅಪಾರ ವಿಷಯ ಸಂಗ್ರಹ, ಅದರ ವ್ಯವಸ್ಥಿತ ವರ್ಗೀಕರಣ. ಸಾಮಗ್ರಿ ಸಂಗ್ರಹ ತುಸು ಹೆಚ್ಚಾಯಿತೆನ್ನುವಷ್ಟು ವಿಪುಲವಾಗಿದೆ. ಆಧಾರಗಳ ಕೊರತೆಯಿಂದಾಗಿ ಕೆಲವೊಮ್ಮೆ ಅಂತಿಮ ನಿರ್ಣಯ ಸಾಧ್ಯವಾಗಿಲ್ಲವೆನಿಸುತ್ತದೆ. ಈ ಮಹಾಪ್ರಬಂಧದ ಮಾರ್ಗದರ್ಶಕನಾದ ನಾನೂ ಇದಕ್ಕೆ ಹೊಣೆಯೆಂದು ಒಪ್ಪಿಕೊಳ್ಳುತ್ತ ಸಂಶೋಧನೆಯೆಂಬುದು ಅಲ್ಪವಿರಾಮ, ಅರ್ಧವಿರಾಮಗಳಿಂದ ಪೂರ್ಣವಿರಾಮದತ್ತ ಸಾಗುವ ಒಂದು ವಿದ್ವತ್ ಕ್ರಿಯೆಯಾಗಿರುವುದರಿಂದ, ಇಂಥ 'ಕೊರತೆ' ಸಂಶೋಧನೆಯ ಒಂದು ಅನಿವಾರ್ಯ ಭಾಗವೆಂದೇ ಹೇಳಬಯಸುತ್ತೇನೆ.

ಕೊನೆಯದಾಗಿ ಒಂದು ಮಾತು: ಸಂಸ್ಥೆಯೆಂದರೆ ಕೇವಲ ಒಂದು ಕಟ್ಟಡವಲ್ಲ; ಅಲ್ಲಿಯ ಸದಸ್ಯರು. ಆ ಸದಸ್ಯರು ಬೆಳೆದಾಗ ಆ ಸಂಸ್ಥೆ ಬೆಳೆಯುತ್ತದೆ. ಸಂಸ್ಥೆಯ ಋಣ ಮುಟ್ಟಿಸುವ ದಿಸೆಯಲ್ಲಿ ಬೆಳೆಯುತ್ತಲಿರುವ ಡಾ. ಬಿ. ಆರ್. ಹಿರೇಮಠ ಅವರು ಭವಿಷ್ಯತ್ತಿನಲ್ಲಿ ಇನ್ನೂ ಉತ್ತಮೋತ್ತಮ ಕೃತಿಗಳನ್ನು ಪ್ರಕಟಿಸಲೆಂದು ಹಾರೈಸುತ್ತೇನೆ.

ಬಿ.ಆರ್. ಹಿರೇಮಠ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೧೪೩

ಬಿನ್ನವತ್ತಳೆ

೧೯೮೬

ಅಕಾಡೆಮಿಗಳು, ಸಾಂಸ್ಕೃತಿಕ ಸಂಸ್ಥೆಗಳು, ಸ್ನಾತಕೋತ್ತರ ಸಾಹಿತ್ಯ ವಿಭಾಗಗಳು, ಆಕಾಶವಾಣಿ-ಸರಕಾರಿ ಗ್ರಂಥಾಲಯಗಳು, ಬಹುಮಾನ-ಸನ್ಮಾನ ಯೋಜನೆಗಳು ಬೆಳೆಯಬಾರದ ರೀತಿಯಲ್ಲಿ ಬೆಳೆದು ಸಾಹಿತ್ಯಿಕ ಶುದ್ಧ ವಾತಾವರಣ ಇಂದು ಕರ್ನಾಟಕದಲ್ಲಿ ಹಾಳಾಗುತ್ತ ನಡೆದಿದೆ. ಧಾರವಾಡದಲ್ಲಿಯೂ ಧಾರಾಳವಾಗಿರುವ ಇಂಥ ಹವಾಮಾನದಿಂದಾಗಿ ಬೆಳೆಯಬೇಕಾದ ಯುವಕವಿಗಳಿಗೆ ಇಲ್ಲಿ ಆರೋಗ್ಯಕರ, ಆತ್ಮೀಯ ಪರಿಸರ ಇಲ್ಲವಾಗಿದೆ. ಈ ಬಗೆಯ ಕೆಟ್ಟಕಾಲದಲ್ಲಿಯೂ ಉತ್ಸಾಹದಿಂದ ಅಂಕುರಿಸುತ್ತಿರುವ, ಅರಳುತ್ತಿರುವ ಬಸವರಾಜರಂಥವರನ್ನು ಕಂಡಾಗ ಸಂತೋಷ-ಸಂಕಟಗಳೆರಡೂ ಏಕಕಾಲಕ್ಕೆ ಉಕ್ಕಿ ಬರುತ್ತವೆ.
'ಬಿನ್ನವತ್ತಳೆ' ವಕ್ಕುಂದ ಅವರ ಎರಡನೆಯ ಪದ್ಯ ಸಂಕಲನ. ಮೊದಲ ಸಂಕಲನದ ಮೂಲಕ ತಮ್ಮ ನೆಲೆಯನ್ನು ನಿರ್ದಿಷ್ಟಪಡಿಸಿಕೊಂಡಿರುವ, ಸೃಜನಶೀಲತೆಯನ್ನು ನಿರಂತರ ಮುಂದುವರಿಸಿಕೊಂಡು ನಡೆದಿರುವ ಇವರ ಈ ಸಂಕಲನಕ್ಕೆ ಯಾರ ಮುನ್ನುಡಿಯೂ ಅಗತ್ಯವಿಲ್ಲ. ಹೀಗಿದ್ದೂ ವಿದ್ಯಾಗುರುಗಳ ಮಾತನ್ನು ಮೀರಬಹುದಾದ ನಾನು, ವಿದ್ಯಾರ್ಥಿಗಳ ವಿಶ್ವಾಸದ ಗೆರೆಯನ್ನು ದಾಟದ ದೌರ್ಬಲ್ಯಕ್ಕೆ ಒಳಗಾಗಿ, ಈ ಮುನ್ನುಡಿಯನ್ನು ಬರೆಯುತ್ತಿದ್ದೇನೆ.

ಶ್ರೀ ವಕ್ಕುಂದ ಹುಟ್ಟಾ ಪ್ರತಿಭಾವಂತ ಕವಿ. ಈ ಪ್ರತಿಭೆಗೆ ಕನ್ನಡ ಭಾಷೆ-ಸಾಹಿತ್ಯಗಳ ಗಾಢವ್ಯಾಸಂಗದ ನೆಲೆ ಸಿಕ್ಕಿದೆ. ಜೊತೆಗೆ ಜೀವನಾನುಭವದ ನೆಲ ಸಿಕ್ಕಿದೆ. ಇದರಿಂದಾಗಿ 'ವ್ಯುತ್ಪತ್ತಿ'ಯೆಂಬ ರಕ್ತಹೀನತೆಯಿಂದ ಬಳಲುತ್ತಿರುವ ಇಂದಿನ ಬಹಳಷ್ಟು ಕವಿಗಳಿಂದ ಇವರು ಪ್ರತ್ಯೇಕವಾಗಿ ನಿಲ್ಲುತ್ತಾರೆ. ಪ್ರತಿಭಾ ಪ್ರಕೃತಿಗೆ ವ್ಯುತ್ಪತ್ತಿ ಪುರುಷ ಜೊತೆಯಾದರೆ ಅಭಿವ್ಯಕ್ತಿ ಮಟ್ಟದಲ್ಲಿ ಎಂಥ ಸೃಷ್ಟಿ ಅವತರಿಸಿಬಲ್ಲುದೆಂಬುದಕ್ಕೆ ಈ ಸಂಕಲನದ 'ಬನವಾಸಿ' ಒಂದು ತುದಿಯ ಉದಾಹರಣೆಯಾದರೆ, 'ಮೊಲಾಯಿಸ್ ಸಾಯುವುದಿಲ್ಲ' ಇನ್ನೊಂದು ತುದಿಯ ಉದಾಹರಣೆಯಾಗಿದೆ. ಈ ಎರಡು ಸೀಮೆಗಳ ನಡುವೆ ಸೃಷ್ಟಿಗೊಳ್ಳುವ ಇವರ ಯಾವುದೇ ರಚನೆಯ ಮುಖ್ಯಲಕ್ಷಣ ಸ್ಪಷ್ಟತೆಯಾಗಿದೆ. ಇದರಿಂದಾಗಿ 'ಇಂದಿನ ನವ್ಯ ಕಾವ್ಯದಲ್ಲಿ ಸ್ಪಷ್ಟತೆ ಕಡಿಮೆ' ಎಂಬ ಆರೋಪಕ್ಕೆ ಶ್ರೀ ವಕ್ಕುಂದ ಅಪವಾದವೆನಿಸುತ್ತಾರೆ.

ಈ ಸ್ಪಷ್ಟತೆ ಗಟ್ಟಿಯಾದ ಅಭ್ಯಾಸ ಮತ್ತು ದಟ್ಟವಾದ ಜೀವನಾನುಭವಗಳ ಪರಿಣಾಮದಿಂದಾಗಿ ಇಲ್ಲಿ ಸಾಧ್ಯವಾಗಿದೆ. ವಕ್ಕುಂದ ಅವರು ಕನ್ನಡ ಭಾಷೆ-ಸಾಹಿತ್ಯಗಳ ಶ್ರದ್ಧಾವಂತ ವಿದ್ಯಾರ್ಥಿ. ಭಾಷೆಯು ಸಾಹಿತ್ಯದಲ್ಲಿ - ಸಾರ್ವಜನಿಕರಲ್ಲಿ ,ಹೇಗೆ ದುಡಿಯುತ್ತಿದೆ, ಕನ್ನಡ ಭಾಷೆ ಹೇಗೆ ದುಡಿದಿದೆ ಎಂಬುದನ್ನು

ಸೂಕ್ಷ್ಮವಾಗಿ ಓದಿದವರು. ಈ ಅಭ್ಯಾಸದ ಜತೆಗೆ ಪದ್ಯರಚನಾ ಅಭ್ಯಾಸದಲ್ಲಿಯೂ ಗಾಢವಾಗಿ ತೊಡಗಿಕೊಂಡವರು. ಇದರಿಂದಾಗಿ 'ಸಾಹಿತ್ಯಭಾಷೆ'ಯ ಮರ್ಮವನ್ನು ಮುಟ್ಟಬಲ್ಲ ಶಕ್ತಿ ಇವರಲ್ಲಿ ಸಂಚಯವಾಗಿದೆ.

ವಕ್ಕುಂದ ಅವರು ಜೀವನಾನುಭವವನ್ನು ಪರಕಾಯ ಪ್ರವೇಶದಿಂದ ಪಡೆದವರಲ್ಲ. ಬಡತನ ಪ್ರಥಮ ಆಸ್ತಿ, ಯಂತ್ರ ದುಡಿಮೆ ಪ್ರಥಮವಿಶ್ರಾಂತಿಯನ್ನಾಗಿಸಿಕೊಂಡು, ಬೆಂಕಿಯಲ್ಲಿ ಬಿದ್ದ ಬಂಗಾರದಂತೆ ನೇರವಾಗಿ ಪಡೆದವರು. ಹೀಗಾಗಿ ಇವರದು ಜೀವನದ 'ಅಭಿನಯಾತ್ಮಕ ಬರೆವಣಿಗೆ'ಯಲ್ಲ, 'ಅನುಭವಾತ್ಮಕ ಬರೆವಣಿಗೆ'ಯಾಗಿದೆ. ಈ ಮಾತಿಗೆ

"ಅಪ್ಪನ ಸುಕ್ಕುಗಳ ಅವ್ವನ ಕಣ್ಣೀರುಗಳ
ಕಾಪೀ ಮಾಡುತ್ತಿದ್ದೇನೆ"

ಎಂಬಂಥ ಸಾಲುಗಳು ನಿದರ್ಶನವಾಗಿ ನಿಂತು, ಇವರ ಕಾವ್ಯದ ಮೂಲ ಸೆಲೆಗಳತ್ತ ಬೆರಳು ತೋರುತ್ತವೆ.

ಸಾಹಿತ್ಯ ಪ್ರಕಾರಗಳಲ್ಲಿ ಪದ್ಯ ಹೆಚ್ಚು ಸಾಂದ್ರವಾದ ಸೃಷ್ಟಿ. ಈ ಸಾಂದ್ರೀಕರಣ ಕ್ರಿಯೆಯಲ್ಲಿ ಕವಿಯಾದವನು ಪದ(Word)ಗಳ ಮೂರು ಆಯಾಮಗಳಾದ ಶಬ್ದ (Sound), ಅರ್ಥ, ಲಯಗಳನ್ನು ಔಷಧಕ್ಕೆ ವಿಷ ಬಳಸುವಂತೆ ಎಚ್ಚರಿಕೆಯಿಂದ ಬಳಸಬೇಕಾಗುತ್ತದೆ. ಈ ಸಂಕಲನದ 'ಹೂವಾಗಿ ಅರಳುವ ಕವಿತೆ ಹಾವಾಗಿ ಕಾಡುತ್ತದೆ', 'ಹೊತ್ತಭಾರದಲಿ ಹೊರಡದಾಗಿದೆ ಹೂವಿನಂಥ ಮಾತು' ಎಂಬ ಅಭಿವ್ಯಕ್ತಿಗಳಲ್ಲಿ ಅಳತೆ ಮಾಡಿಟ್ಟಂಥ ಲಯ, ಆವರ್ತನಗೊಳ್ಳುವ ಶಬ್ದ(Sound)ಗಳ ಸಾಮರಸ್ಯಗಳನ್ನು ಗುರುತಿಸಬಹುದು. ಅಭಿವ್ಯಕ್ತಿಗೆ ಸಂಬಂಧಪಟ್ಟ ಇವು ಏನೇ ಇದ್ದರೂ ಪೂರಕ ಆಯಾಮಗಳು. ಪದ್ಯಕ್ಕೆ ವಜ್ರಸಾಂದ್ರತೆ ಪ್ರಾಪ್ತವಾಗುವುದು ಅರ್ಥದ ಆಯಾಮದಲ್ಲಿ. ಇದು ಭಾಷೆಯ ಅಂತಸ್ತರದಲ್ಲಿ ಕವಿ ನಡೆಸುವ ಕ್ರಿಯೆ. ಇಲ್ಲಿ ಪದಗಳು ಹೆಚ್ಚು ಉತ್ಕಟ ಸ್ಥಿತಿಯಿಂದ ವ್ಯವಹರಿಸಿದಷ್ಟು ಕಾವ್ಯ ಹೆಚ್ಚು ಸ್ಪಂದನಶೀಲತೆಯನ್ನು ಪಡೆಯುತ್ತದೆ. ಬೇಂದ್ರೆಯವರನ್ನು ಕುರಿತ -

ಈತ ಹೂತ ಹುಣಸೀಮರಾ
ಚಿವುಟಿದಷ್ಟೂ ಚಿಗುರೊಡೆವ ಮುಗುಳು
ಕಚ್ಚಿದರೆ ಮೈ ಜುಮ್ಮೆನುವ ಹುಳಿ
ಎಲೆಗೊಂದು ಹೂ ಬಿಡುವ ಏಕಮಾತ್ರ ತಳಿ !

ಈ ಸಾಲುಗಳನ್ನು ಓದಿ ಮುಗಿಸಿದರೂ ಅರ್ಥ ಪ್ರಪಂಚದ 'ಧ್ವನಿ' ತರಂಗಗಳು ಕಿವಿಗೆ ಆವರಿಸುತ್ತಲೇ ಹೋಗುತ್ತವೆ. ಇದರಿಂದಾಗಿ ಆನಂದ, ಆಲೋಚನಾ ಅಲೆಗಳ ಗುಂಗು ನಮ್ಮನ್ನು ಬಹಳ ಹೊತ್ತು ಆವರಿಸುತ್ತದೆ. ಇದು ಶಕ್ತ, ಸಶಕ್ತ ಕವಿಯ ಲಕ್ಷಣವಾಗಿದೆ.

ಕನ್ನಡದ ನವ್ಯೋತ್ತರ ದಿನಗಳಲ್ಲಿ ದಲಿತ-ಬಂಡಾಯ, ಲೈಂಗಿಕ ಪ್ರಜ್ಞೆ, ಕಾವ್ಯವಾಚನ, ಗೀತರಚನೆಗಳು ಒಂದು ಗೀಳಾಗಿ ಬೆಳೆಯುತ್ತಲಿದೆ. ಈ ಯಾವ ಆಕರ್ಷಣೆಗೂ ಒಳಗಾಗದೆ, ಯಾವ ಗೊಂದಲಗಳಲ್ಲಿಯೂ ಭಾಗಿಯಾಗದೆ, ವಕ್ಕುಂದ ಅವರು ತಮ್ಮ ದಾರಿಯಲ್ಲಿ - ಸರಿಯಾದ ದಾರಿಯಲ್ಲಿ ನಡೆದಿದ್ದಾರೆ. ದಲಿತವೆಂಬುದು ಒಂದು ಆಶಯ; ಬಂಡಾಯವೆಂಬುದು ಒಂದು ಅಭಿವ್ಯಕ್ತಿ. ನಮ್ಮ ಬಂಡಾಯ ಕವಿಗಳ ಅಭಿವ್ಯಕ್ತಿ ಅತಿರೇಕಕ್ಕೆ ಹೋಗುವಲ್ಲಿ 'ಬ್ರಹ್ಮಶಿವನ ಭಾಷೆ' ಅವತರಿಸಿ, ಕನ್ನಡ ಕಾವ್ಯ ಕೆಲವೊಮ್ಮೆ ಕಲಕಿದುದು ನಿಜ. ವಕ್ಕುಂದ ಅವರಲ್ಲಿ ಸತ್ಯವನ್ನು ಸರಿಯಾಗಿ ಹೇಳುವ ನಿಶ್ಚಿತ ನಿಲುವು ಸ್ಥಾಯಿಯಾಗಿದೆಯೇ ಹೊರತು, ಬಂಡಾಯದ ಆಕ್ರೋಶವಿಲ್ಲ. ಇಂಥದೇ ಇಂದಿನ ಇನ್ನೊಂದು ಹವ್ಯಾಸವೆಂದರೆ ಯುವಕರ ಪದ್ಯಗಳಲ್ಲಿ ಲೈಂಗಿಕ ಭಾವಗಳು ಒಂದು ಕ್ಲೀಷೆಯಾಗಿ (ಯುವತಿಯರಲ್ಲಿ ಇನ್ನೂ ಹೆಚ್ಚು, ಇದಕ್ಕೆ ಕಾರಣಗಳು ಬೇರೆ ಇವೆ) ವರ್ಧಿಸುತ್ತ ನಡೆದುದು.

ಆದರೆ ಎಂಥ ಸಂದರ್ಭದಲ್ಲಿಯೂ ಶ್ರೀ ವಕ್ಕುಂದ ಅವರ 'ಪದ್ಯವತಿ' ಲಕ್ಷ್ಮಣರೇಖೆಯನ್ನು ದಾಟುವುದಿಲ್ಲ. ಬಿನ್ನಹ, ಸಮುದ್ರ - ಭೂಮಿಯ ಪ್ರಣಯ ಪ್ರಸಂಗ, ಮುತ್ತುಗಳು, ಪ್ರೀತಿ, ಸಂಭವಾಮಿ ಉಫೇ ಉಫೇ - ಪದ್ಯಗಳಲ್ಲಿ ಈ ತರುಣ ಕವಿಯ ಸಂಯಮ, ಸದಭಿರುಚಿಯ ಗಡಿ ಮೀರದಿರುವಿಕೆ, ಇವರ ಸುಸಂಸ್ಕೃತ ನೆಲಗಟ್ಟನ್ನು ಬಿಂಬಿಸುತ್ತದೆ. ಬಂಡಾಯ, ಲೈಂಗಿಕತೆಗಳ ವಿಷಯದಲ್ಲಿ ಕವಿಯಾದವನ ವೈಯಕ್ತಿಕ, ಸಾಮಾಜಿಕ ಜವಾಬ್ದಾರಿ ಏನು? ಎಂಬ ಎಚ್ಚರವಿರುವವನ ಬರವಣಿಗೆಯಿದು.

ಪದ್ಯವನ್ನು ಪದವಾಗಿಸುವಲ್ಲಿ ಗೇಯಗುಣದಿಂದಾಗಿ ಕಾವ್ಯದ ದಟ್ಟತೆ ತೆಳುವಾಗುತ್ತ ಹೋಗುವ ಅಪಾಯವಿದೆ. ಅನೇಕರಿಗೆ ಇದು ಆಕರ್ಷಣೆಯೆನಿಸಿದರೆ ಇವರಿಗೆ ಒಂದು ಪ್ರಯೋಗವಾಗಿ ಪರಿಣಮಿಸಿದೆ. ಇದರ ಫಲವಾಗಿ 'ಆಲಾಪ'ದಂಥ ಪದ್ಯಗಳು ಯಶಸ್ವೀ ಗೀತಗಳೆನಿಸಿವೆ. ಇಲ್ಲಿಯ ಕೊನೆಯ ನಾಲ್ಕು ಸಾಲುಗಳ ವ್ಯಂಜಕತೆ, ಲಯಗಳಲ್ಲಿ ಬೇಂದ್ರೆಯವರ ಹದ ಕಾಣಬಹುದು. ಇನ್ನೊಂದು ವಿಷಯ: ಸಾಮಾನ್ಯ ರಚನೆಯನ್ನೂ ಒಂದು ಗತ್ತಿನಲ್ಲಿ ಪ್ರಭಾವಶಾಲಿಯಾಗಿ ಓದಿ, ಅದೂ ಒಂದು ಕವನವೆಂಬ ಭ್ರಮೆಯನ್ನು ಅನೇಕರು ಹುಟ್ಟಿಸುತ್ತಲಿದ್ದಾರೆ. ಆ ಪದ್ಯ ಬರೆವಣಿಗೆಗೆ ಇಳಿದಾಗ ಇಂಥವರ ಬಣ್ಣ ಬಯಲಾಗುತ್ತದೆ. ಶ್ರೀ ವಕ್ಕುಂದ ಅವರ ಕವನಗಳು ಮಾತ್ರ ಬರಹದಲ್ಲಿ, ವಾಚನದಲ್ಲಿ ಸಮಪ್ರಮಾಣದ ಪ್ರಭಾವವನ್ನು ಉಳಿಸಿಕೊಳ್ಳುತ್ತವೆ.

ಈ ಎಲ್ಲ ಅಗ್ನಿದಿವ್ಯಗಳನ್ನು ದಾಟಿಬಂದ ಯಾವುದೇ ಕವಿಯ ಕಾವ್ಯದಲ್ಲಿ ಸಮಕಾಲೀನತೆ-ಸಾರ್ವಕಾಲೀನತೆ, ವೈಯಕ್ತಿಕತೆ-ಸಾರ್ವತ್ರಿಕತೆಗಳ ಪಾಲನ್ನು ಕೆಲವರು ಹುಡುಕುತ್ತಾರೆ. ಆದರೆ ನಿಜವಾದ ಕವಿ ಹೇಳುವುದು ಸಾರ್ವಕಾಲೀನ ಸಾರ್ವತ್ರಿಕ ವಿಚಾರಗಳನ್ನು; ಅದಕ್ಕೆ ಮಾಧ್ಯಮಮಾಡಿಕೊಳ್ಳುವುದು ಸಮಕಾಲೀನತೆ ಮತ್ತು ವೈಯಕ್ತಿಕತೆಗಳನ್ನು. ಇದರಿಂದಾಗಿ ಯಾವುದೇ ಕಾವ್ಯ ಏಕಕಾಲಕ್ಕೆ ವೈಯಕ್ತಿಕವೂ ಸಮಕಾಲೀನವೂ ಆಗಿರುವಂತೆ ಸಾರ್ವತ್ರಿಕವೂ ಸಾರ್ವಕಾಲೀನವೂ ಆಗಿರುತ್ತದೆ. ಆದರೆ ಕಾವ್ಯದಲ್ಲಿ ಇದರ ಪ್ರಮಾಣ ಅವರವರ ಶಕ್ತಿಯನ್ನು ಅವಲಂಬಿಸಿರುತ್ತದೆ. ಶ್ರೀ ವಕ್ಕುಂದ ಅವರಲ್ಲಿ ನಿಸ್ಸಂದೇಹವಾಗಿ ಈ ಶಕ್ತಿ ವಯಸ್ಸಿಗೆ ಮೀರಿದ ಪ್ರಮಾಣದಲ್ಲಿದೆ. ಹೀಗಿದ್ದೂ ಅಭಿವ್ಯಕ್ತಿಗೆ ಸಂಬಂಧಿಸಿದಂತೆ (ಕವಿಯ ಅನುಭವಕ್ಕೆ ಸಂಬಂಧಿಸಿದಂತೆ ಮಾತನಾಡುವ ಅಧಿಕಾರ ವಿಮರ್ಶಕನಿಗೆ ಇರುವುದಿಲ್ಲವೆಂದು ತೋರುತ್ತದೆ.) ಇವರ ಕವನಗಳಲ್ಲಿ ಒಂದೆರಡು ಸಣ್ಣ ದುರ್ಬಲ ಅಂಶಗಳು ಉಳಿದುಕೊಂಡಿವೆ:

ಕವಿಯಾದವನು ಅಮೂರ್ತವಾದ ಅನುಭವಗಳನ್ನು ಅನಿರ್ದಿಷ್ಟ ಮಾಧ್ಯಮವಾದ ಭಾಷೆಯಲ್ಲಿ ನಿರ್ದಿಷ್ಟಗೊಳಿಸುತ್ತಾನೆ. ನಮ್ಮ ಪ್ರಾಚೀನ ಕವಿಗಳಿಗೆ ಸಂಸ್ಕೃತ 'ಪದ'ಗಳನ್ನು ಕನ್ನಡಕ್ಕೆ 'ಹದ' ಮಾಡಿಕೊಳ್ಳುವುದು ಮುಖ್ಯ ಸಮಸ್ಯೆಯಾಗಿದ್ದಿತು. ಅದನ್ನು ಅವರು ಉಭಯ ಭಾಷಾಪಾಂಡಿತ್ಯದಿಂದ ಬಗೆಹರಿಸಿಕೊಳ್ಳುತ್ತಿದ್ದರು. ಆಧುನಿಕರಿಗೆ ಈ ಕಾವ್ಯಭಾಷಾ ಪರಂಪರೆಯ ವ್ಯಾಸಂಗವೂ ಇಲ್ಲ; ಸಂಸ್ಕೃತದ ನೇರ ಪರಿಜ್ಞಾನವೂ ಇಲ್ಲ. ಹೆಚ್ಚಿನದಾಗಿ ಇವರು ಇಂಗ್ಲಿಷ್ 'ಪದ'ಗಳನ್ನು ಕನ್ನಡಕ್ಕೆ 'ಹದ'ಗೊಳಿಸಿಕೊಳ್ಳಬೇಕಾಗಿದೆ. ಈ 'ಪಾಕಪ್ರಯೋಗ'ದಲ್ಲಿ ಆಧುನಿಕ ಕವಿಗಳು ಕೆಲವೊಮ್ಮೆ ವಿಫಲರಾಗುವುದರಿಂದ ಅವರ ವಾಕ್ಯವ್ಯವಸ್ಥೆ ವಿಕೃತ ಶಿಶುಗಳಂತೆ ಕಾಣುತ್ತವೆ. ಕನ್ನಡ ಕಾವ್ಯಭಾಷೆಯ ಗಾಢವ್ಯಾಸಂಗಿಗಳಾದ ವಕ್ಕುಂದ ಅವರಲ್ಲಿ ಈ ದೋಷ ಇಲ್ಲವೆನ್ನುವಷ್ಟು ಕಡಿಮೆ. ಹೀಗಿದ್ದೂ 'ಕಾವ್ಯಾಕ್ಷಿಯ ಗುಡ್ಡಿಯಲ್ಲಿ ರೇಡಿಯಂ ರಾಟಾಳಿಸಿ' ಎಂಬ ಪ್ರಯೋಗದಲ್ಲಿಯ 'ರೇಡಿಯಂ ರಾಟಾಳಿಸಿ' ಭಿನ್ನಭಾಷೆಯ ಪದಗಳಾದರೂ ಮಿತ್ರನಂತೆ ವರ್ತಿಸಿವೆ; 'ಕಾವ್ಯಾಕ್ಷಿಯ ಗುಡ್ಡಿಯಲ್ಲಿ' ಇದಕ್ಕೆ ತೀರ ವ್ಯತಿರಿಕ್ತ. 'ಬನವಾಸಿ'ಯ ವೈಭವದ ವರ್ಣನೆಯಲ್ಲಿ ಬರುವ 'ಕೆನ್ನೆಗುಳಿಗಳಲಿ ಮೆತ್ತಿರುವ ಪಾವಡರಿನಾಭಾಸ' ಎಂಬುದು ಪದಮೈತ್ರಿ, ಸನ್ನಿವೇಶದ ಔಚಿತ್ಯ ಎರಡೂ ದೃಷ್ಟಿಯಿಂದಲೂ ಆಭಾಸ. ಈ ಶಬ್ದಸಂಘಟನೆಯಂತೆ ಶಬ್ದವಿಘಟನೆಯ ಪ್ರಯೋಗಗಳಾದ 'ಸದಾ Son ಜಯಗಾಗಿ', 'ಇಂದ್+ಇರಾಜೀವ' ಇಂಥವು ಹೊಸ ಅರ್ಥಛಾಯೆ

ನೀಡುತ್ತಿದ್ದರೂ ಇದು ಚಪಲವಾಗದಂತೆ ನೋಡಿಕೊಳ್ಳುವುದು ಅವಶ್ಯ. ಇದಲ್ಲದೆ ಒಂದೆರಡು ಪದ್ಯಗಳ ಶಿಲ್ಪ ಇನ್ನೂ ಸಾಂದ್ರವಾಗಬೇಕಿತ್ತು. (ಇಂಥ ಮಾತುಗಳು ಎಲ್ಲ ಕವಿಗಳಿಗೂ ಅನ್ವಯಿಸುತ್ತವೆ). ಇಲ್ಲಿ ಇವು ಮುಖ್ಯವಲ್ಲ, ಶ್ರೀ ವಕ್ಕುಂದ ಅವರ ಕಾವ್ಯ ಇವುಗಳನ್ನು ಮೀರಿ ಬೆಳೆದಿದೆಯೆಂಬುದು ಮುಖ್ಯ.

ಇಂದು ಕರ್ನಾಟಕದಲ್ಲಿ ಒಂದು ಕಡೆ ಸಾಹಿತಿಗಳ ಹುಡದಿ ಕಡಿಮೆಯಾಗಿರುವುದು ಸಂತೋಷ; ಇನ್ನೊಂದು ಕಡೆ ಅವರು ಸಾಹಿತ್ಯಸಂಸ್ಥೆಗಳಲ್ಲಿಯೇ ಎರಡನೆಯ ದರ್ಜೆ ಪ್ರಜೆಗಳಾಗಿ ರೂಪಗೊಳ್ಳುತ್ತಿರುವುದು ವಿಷಾದ. ಇದಕ್ಕೆ ಅಪವಾದವೆಂಬಂತೆ ಬಸವರಾಜರ ವ್ಯಕ್ತಿತ್ವ ಬೆಳೆದಲ್ಲಿ ಅವರ ಕವಿತ್ವವೂ ಬೆಳೆಯುತ್ತದೆ. ಅದನ್ನು ನೋಡುವ ಭಾಗ್ಯವೂ ನಮ್ಮದಾಗುತ್ತದೆ.

ಬಸವರಾಜ ವಕ್ಕುಂದ, ಧಾರವಾಡ

ಆಕರ : ಮಾರ್ಗ ಸಂಪುಟ–೬

೧೪೪

ನಾನು ಕಂಡ ಅಮೇರಿಕೆ

೧೯೮೮

ರಾ. ಯ. ಧಾರವಾಡಕರ ಎಂದಾಕ್ಷಣ ಪ್ರಾಧ್ಯಾಪಕ, ಪ್ರಿನ್ಸಿಪಾಲ, ಸಾಹಿತಿ-ಈ ತ್ರಿವಿಕ್ರಮ ವ್ಯಕ್ತಿತ್ವ ಕಣ್ಣಮುಂದೆ ಅವತರಿಸುತ್ತದೆ. ಜೊತೆಗೆ ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯರಾಶಿಯೂ ತೆರೆದುಕೊಳ್ಳುತ್ತದೆ. ಕನ್ನಡದ ಪುನರುಜ್ಜೀವನ ಕಾಲಾವಧಿಯ ಪ್ರಾಧ್ಯಾಪಕರು ಮನೆಯ ಹಿರಿಯ ಮಗನಂತೆ ಕನ್ನಡಕ್ಕೆ ಸಂಬಂಧಿಸಿದ ಏನೆಲ್ಲ ಕೆಲಸಗಳನ್ನು ಮಾಡುವ ಹೊಣೆ ಹೊರಬೇಕಾಗಿದ್ದಿತು. ಇವರಲ್ಲಿ ಒಬ್ಬರಾಗಿ, ಮೇಲೆ ಹೇಳಿದ ಕನ್ನಡದ ಹತ್ತಾರು ಕೆಲಸಗಳನ್ನು ಮಾಡುತ್ತಬಂದಿರುವ ಡಾ. ಧಾರವಾಡಕರ ಅವರ ವಿಷಯವಾಗಿ ನನಗೆ ಮೊದಲಿನಿಂದಲೂ ವಿಶೇಷ ಗೌರವ.

ವಿದ್ಯಾರ್ಥಿದೆಸೆಯಲ್ಲಿ ಪಾಠಹೇಳಿದವರೆಂಬ ಒಂದೇ ಕಾರಣಕ್ಕಾಗಿ ಆ ಎಲ್ಲ ಶಿಕ್ಷಕರ ಗುರುತ್ವವನ್ನು ಒಪ್ಪಿಕೊಳ್ಳದ ಸ್ವಭಾವ ನನ್ನದು. ಹೀಗಿದ್ದೂ ನನಗೆ ಶಿಕ್ಷಕರಾಗಿರದ ಡಾ. ಧಾರವಾಡಕರ ಅವರ ಗುರುತ್ವವನ್ನು ಒಪ್ಪಿಕೊಂಡವನು ನಾನು. ಇದಕ್ಕೆ ಕಾರಣ, ಹಳೆಯ ತಲೆಮಾರಿನಲ್ಲಿ ಕನ್ನಡಕ್ಕಾಗಿ ದುಡಿದ ಅವರು ಹೊಸ ತಲೆಮಾರಿನ ನನ್ನನ್ನು, ನನ್ನಂಥವರನ್ನು, ಅಂತಃಕರಣಪೂರ್ವಕ ಪ್ರೀತಿಸುತ್ತಿರುವುದು. ನನ್ನಿಂದ ತಮ್ಮ ಈ ಕೃತಿಗೆ ಮುನ್ನುಡಿಯನ್ನು ಬಯಸಿರುವುದು, ಆ ಪ್ರೀತಿಯ ಒಂದು ರೀತಿಯೆಂದೇ ಭಾವಿಸಿ, ಈ ಕಾರ್ಯವನ್ನು ಗೌರವದಿಂದ ಪೂರೈಸುತ್ತಿದ್ದೇನೆ.

ಡಾ. ಧಾರವಾಡಕರ ಅವರು ೧೯೬೪, ೧೯೮೩, ೧೯೮೭ ಹೀಗೆ ಮೂರು ಸಲ ಅಮೇರಿಕೆಯನ್ನು ಸಂದರ್ಶಿಸಿದವರು. ಒಂದು ಸಲ ಫುಲ್‌ಬ್ರೈಟ್ ಪ್ರವಾಸಿಯಾಗಿ, ಎರಡು ಸಲ ನಿವಾಸಿಯಾಗಿ ಅಲ್ಲಿಗೆ ಹೋದವರು, ಹೆಚ್ಚಿನದಾಗಿ ಒಬ್ಬ 'ಅಭ್ಯಾಸಿ'ಯಾಗಿ ಆ ದೇಶವನ್ನು ವ್ಯಾಖ್ಯಾನಿಸಬೇಕೆಂಬ ಉದ್ದೇಶವಿಟ್ಟುಕೊಂಡವರು. ಹೀಗಾಗಿ 'ನಾನು ಕಂಡ ಅಮೇರಿಕೆ' ಕೇವಲ ಒಬ್ಬ ಪ್ರವಾಸಿಯ ಅನಿಸಿಕೆಯಾಗಿ ಉಳಿದಯೆ, ಒಬ್ಬ ವಿದ್ವಾಂಸನ ಅಧ್ಯಯನವಾಗಿಯೂ ಬೆಳೆದಿದೆ; ಅನೇಕ ವಿಷಯಗಳನ್ನೊಳಗೊಂಡ ಜ್ಞಾನಕೋಶಕ್ಕೆ ತಿರುಗುವ ಮೂಲಕ ಸಂದರ್ಭಗ್ರಂಥದ ಮಹತ್ವವನ್ನೂ ಪಡೆದಿದೆ.

ದಕ್ಷಿಣದ ಆರೇಂಜಬರ್ಗದಲ್ಲಿ ಕೆಲವು ತಿಂಗಳು, ಉತ್ತರದ ಪಿಟ್ಸಬರ್ಗದಲ್ಲಿ ಮೂರು ತಿಂಗಳು, ಲೂಸಿಯಾನಾ ರಾಜ್ಯದ ನ್ಯೂಆರ್ಲಿನ್ಸದಲ್ಲಿ ಎರಡು ತಿಂಗಳು ನಿಂತುದೂ, ಸಾಲದುದಕ್ಕೆ Visit U.S.A. ಟೀಕಿಟನ್ನು ಖರೀದಿಸಿ ೧೦-೧೨ ಸ್ಥಳಗಳನ್ನು ನೋಡಿದುದೂ ಕಾರಣವಾಗಿ ಇವರಿಗೆ ಅಮೇರಿಕೆಯ ಬೇರೆ ಬೇರೆ ಭಾಗಗಳನ್ನು

ಗಾಢವಾಗಿ ಅಭ್ಯಸಿಸಲು, ಆ ಸಮಾಜದ ಬಾಹ್ಯರೂಪ, ಒಳರಚನೆ, ಇನ್ನೂ ಒಳಗಿನ ಸಂವೇದನೆಗಳನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗಿದೆ. ಕನ್ನಡಿಗರ ಕಮ್ಮಟ, ವಾರ್ಷಿಕೋತ್ಸವ, ಭಾರತೀಯರ ಗಣರಾಜ್ಯೋತ್ಸವಗಳಂಥ ಸಭೆಗಳಲ್ಲಿ ನೇರವಾಗಿ ಭಾಗವಹಿಸುವಿಕೆ. ಅಲ್ಲಿಯ ಪತ್ರಿಕೆಗಳ ನಿರಂತರ ಅವಲೋಕನ, ಅಲ್ಲಲ್ಲಿ ಸಿಗುವ ಕರಪತ್ರ-ಪರಿಚಯ ಪುಸ್ತಿಕೆ, ಪ್ರೌಢಗ್ರಂಥಗಳ ಅಧ್ಯಯನ, ಕಣ್ಮುಟ್ಟಕಂಡ, ಕಿವಿಯಾರೆ ಕೇಳಿದ ವಿಷಯಗಳ ಟಿಪ್ಪಣಿ ಇತ್ಯಾದಿ ಸಾಮಗ್ರಿಗಳ ನೆಲಗಟ್ಟಿನ ಮೇಲೆ ಈ ಕೃತಿಕಟ್ಟಡ ತಲೆಯೆತ್ತಿದೆ.

ಡಾ. ಧಾರವಾಡಕರ ಅವರು ಅಮೇರಿಕೆಯಲ್ಲಿ ಒಬ್ಬ ಪ್ರವಾಸಿಯಂತೆ ಪ್ರತ್ಯೇಕ ನಿಲ್ಲದೆ, ಸ್ಥಳೀಯ ನಿವಾಸಿಯಂತೆ ಅಲ್ಲಿಯ ಸಾಮಾಜಿಕ ಜೀವನದೊಂದಿಗೆ ಬೆರೆತುದು ಒಂದು ವಿಶೇಷ. ಸ್ಟೇಟ್ ಕಾಲೇಜಿನ ಪ್ರೆಸಿಡೆಂಟ್, ಎಂಜಿನೀಯರಿಂಗ್ ಟೆಕ್ನಾಲಜಿಯ ಡೀನ್ ಮೊದಲಾದವರೊಂದಿಗೆ ಗಂಭೀರ ಸಮಾಲೋಚನೆ ನಡೆಸಿದುದು, "ಡೇಲಿ ಅಡ್ವರ್ಟೈಜರ್" ಪತ್ರಿಕೆಗೆ ಪತ್ರ ಬರೆದುದು, ಪ್ರಕಟವಾದ ಆ ಪತ್ರಕ್ಕೆ ಪ್ರತಿಕ್ರಿಯಿಸಿ ಅನೇಕ ಜನ ಅಮೇರಿಕನ್ನರು ಇವರಿಗೇ ನೇರವಾಗಿ ಉತ್ತರಿಸಿದುದು, Tirnes Picayune ಪತ್ರಿಕೆಯಲ್ಲಿ ಮೇರಿ ಬೆಥ್ ಎಲಿಸ್ ಅವರು ಭಾರತವನ್ನು ಅವಹೇಳನಮಾಡಿ ಬರೆದ ಲೇಖನಕ್ಕೆ ಇವರು ಪತ್ರದ ಮೂಲಕ ಪ್ರತಿಭಟಿಸಿದುದು.ಆಗ ಎಲಿಸ್ ಫೋನ್ ಮೂಲಕ ಸಮಜಾಯಿಸಿ ಮಾತನಾಡಿದುದು- ಹೀಗೆ ಆಗಾಗ ಅಮೇರಿಕನ್ನರ ಅಂತರಂಗವನ್ನು ಸ್ಫೋಟಗೊಳಿಸುತ್ತ ಹೋದಕಾರಣ, ಆ ಜನರ ಮನಸ್ಸಿನ ತಳದಲ್ಲಿರುವ ಮೂಲಭಾವನೆಗಳನ್ನು ಸರಿಯಾಗಿ ಗ್ರಹಿಸಲು ಸಾಧ್ಯವಾಗಿದೆ.

ಈ ಎಲ್ಲ ಪರಿಕರಗಳಿಗೆ ಕೇಂದ್ರ ಬಿಂದುವಾಗಿರುವ ಡಾ. ಧಾರವಾಡಕರ ಅವರ ಜೀವನಾಸಕ್ತಿ ಅದ್ಭುತ, ಕುತೂಹಲ ಅದಮ್ಯ, ನಿರೀಕ್ಷಣೆ ತೀಕ್ಷ್ಣ, ಅನ್ವೇಷಣಪ್ರಜ್ಞೆ ಉತ್ಸಾಹಪೂರ್ಣ. ಈ ಮಾತಿಗೆ ಪ್ರಸ್ತುತ ಗ್ರಂಥದ ಯಾವುದೇ ಪುಟ ಉತ್ತರವಾಗಿ ನಿಲ್ಲುತ್ತದೆ. ಅಪಾಯದ ಮಧ್ಯಯದಲ್ಲಿಯೂ ಬೀದಿಗಿಳಿದು ಆರೇಂಜಬರ್ಗದ ಹಿಮಪಾತದೊಂದಿಗೆ ಹುಡುಗನಂತೆ ಆಡಿದ ಆಟ, ಪಿಟ್ಸಬರ್ಗ ಪ್ರಾಣಿಸಂಗ್ರಹಾಲಯದಲ್ಲಿ ಮಕ್ಕಳ ಜೊತೆ ಮಾಡಿದ ಪುಠಾಣಿ ರೈಲುಪ್ರವಾಸ-ಇಳಿವಯಸ್ಸಿನಲ್ಲಿಯೂ ಉಳಿಸಿಕೊಂಡಿರುವ ಇಂಥ ಜೀವನಾಸಕ್ತಿ ಕಾರಣವಾಗಿ, ಸಣ್ಣದು-ದೊಡ್ಡದು ಎನ್ನದೆ ಅಮೇರಿಕೆಯ ಅಂಗಾಂಗಗಳ ಸಿಹಿ-ಕಹಿಗಳನ್ನು ಕಚ್ಚಿನೋಡಿ, ೩೦೦ ಪುಟಗಳಲ್ಲಿ ಆ ದೇಶದ ಜೀವನಸಮಗ್ರತೆಯನ್ನು ಹಿಡಿದಿಟ್ಟಿದ್ದಾರೆ.

ಅಮೇರಿಕೆಯ ಯಾವ ಯಾವ ಮೂಲೆಗಳಲ್ಲಿ ಭಾರತೀಯತ್ವವಿದೆಯೋ, ಕನ್ನಡತ್ವವಿದೆಯೋ, ಅದೆಲ್ಲವನ್ನೂ ಕಾಣುವುದು ಅವರ ಜೀವನವಿಧಾನ. ನೋವು-ನಲಿವುಗಳನ್ನು ಅರಿಯುವುದು ಡಾ. ಧಾರವಾಡಕರ ಅವರ ಮುಖ್ಯ ಆಸಕ್ತಿಗಳಲ್ಲಿ ಒಂದು. ಹೀಗಾಗಿ ಅಲ್ಲಿಯ ನೂರಾರು ಅಮೇರಿಕನ್ ಮತ್ತು ಭಾರತೀಯ ಕುಟುಂಬಗಳನ್ನು, ಪಿಟ್ಸಬರ್ಗ ವೆಂಕಟೇಶ ದೇವಾಲಯ-ರಾಧಾಕೃಷ್ಣ ದೇವಾಲಯ-ಹರೇಕೃಷ್ಣ ಪಂಥ-ಜೈನ ದೇವಾಲಯಗಳಂಥ ಧಾರ್ಮಿಕ ಕೇಂದ್ರಗಳನ್ನು, ಇಂಡಿಯನ್ ಸ್ಟೋರ್-ಭಾರತೀಯ ರೆಸ್ಟೊರೆಂಟ್‌ಗಳನ್ನು, ಹಿಂದೂಹಬ್ಬಗಳನ್ನು, ದಣಿವನ್ನೂ ಲೆಕ್ಕಿಸದೆ, ಹುಡುಕಿಕೊಂಡು ಹೋಗಿದ್ದಾರೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಬರ್ಮಿಂಗ್ಹ್ಯಾಮ್ ಸಹ್ಯಾದ್ರಿ ಕನ್ನಡಕೂಟದ ವಾರ್ಷಿಕೋತ್ಸವ, ಫಿಲೆಡೆಲ್ಫಿಯಾದ ಕನ್ನಡ ಕಮ್ಮಟಗಳಲ್ಲಿ ಭಾಗವಹಿಸಿ, ನೂರಾರು ಕನ್ನಡ ಕುಟುಂಬಗಳಲ್ಲಿ ಅತಿಥಿಯಾಗಿ ಉಳಿದಿದ್ದಾರೆ. ಈ ಮೂಲಕ ಅಮೇರಿಕೆಯ ಹೊಟ್ಟೆಯಲ್ಲಿ ಸೇರಿಕೊಂಡಿರುವ ಭಾರತೀಯರನ್ನು, ಕನ್ನಡಿಗರನ್ನು, ಕಣ್ಣಲ್ಲಿ ಕಣ್ಣಿಟ್ಟು ಹುಡುಕಿ, ಕೆಲವೊಮ್ಮೆ ಅದು ಸಮಸ್ಯೆಯಾಗಿ ಕಾಡುತ್ತಿರುವುದನ್ನು ಗುರುತಿಸಿದ್ದಾರೆ. ಹೀಗೆ ಈ ಗ್ರಂಥದ ಉದ್ದಕ್ಕೂ ಎಳೆ ಕಡಿಯದಂತೆ ಅಲ್ಲಲ್ಲಿ ಭಾರತೀಯತೆ, ಕರ್ನಾಟಕೀಯತೆ ಮಡುಗಟ್ಟಿ ನಿಂತು, ಅದು ನಮ್ಮ ಜನರ ಬದುಕಿನ ಒಟ್ಟು ಚಿತ್ರವನ್ನು ಪೂರೈಸುತ್ತದೆ.

ಇದನ್ನು ಬಿಟ್ಟರೆ, ಈ ಪುಸ್ತಕದ ಮಿಕ್ಕ ಭಾಗವೆಲ್ಲ ಅಪ್ಪಟ ಅಮೇರಿಕ. ಸಾಮಾನ್ಯವಾಗಿ ಪ್ರವಾಸಕಥನಗಳು ವಿದೇಶವನ್ನು ವೈಭವೀಕರಿಸಿ ಬರೆಯುವುದೇ ಹೆಚ್ಚು. ಡಾ. ಧಾರವಾಡಕರರು ಮಾತ್ರ ಆ ದೇಶದ ಬಲವೇನು? ದೌರ್ಬಲ್ಯವೇನು? ಶಕ್ತಿಯೇನು? ಮಿತಿಯೇನು? ಎಂಬುದನ್ನು ಉದ್ದಕ್ಕೂ ಸೂಚಿಸುತ್ತ ಹೋಗಿದ್ದಾರೆ. ಮೂಲತಃ ಬೇರೆ ಬೇರೆ ದೇಶಗಳಿಂದ ಬಂದ ಅಮೇರಿಕನ್ನರಿಗೆ ತಮ್ಮ ಮೂಲನೆಲೆಗಳ ಬಗ್ಗೆ ತೀವ್ರ ಅಭಿಮಾನವಿದ್ದರೂ, ಅದು ಅಮೇರಿಕೆಯ ಸಮಗ್ರತೆಗೆ ಭಂಗಬರದ ರೀತಿಯಲ್ಲಿ ಸಾಮರಸ್ಯಗೊಂಡುದನ್ನು ಗುರುತಿಸಿದ್ದಾರೆ. "ಅಮೇರಿಕೆಯಲ್ಲಿ ಹಣ ಗಳಿಕೆಗೆ ಅವಕಾಶವಿದೆ, ಆದರೆ ಮನಸ್ಸಿಗೆ ತೃಪ್ತಿಯಿಲ್ಲ" ಎಂಬ ಮಾತು ಆ ಜನದ ಭೌತಿಕ-ಮಾನಸಿಕ ಬದುಕಿಗೆ ಬರೆದ ಸೂತ್ರವಾಗಿದೆ.

ನಿಸರ್ಗವೇ ಇರಲಿ, ನಗರವೇ ಇರಲಿ, ಅದನ್ನು ತಮ್ಮ ಉಪಭೋಗಕ್ಕಾಗಿ ಪರಿವರ್ತಿಸಿಕೊಳ್ಳುವಲ್ಲಿ ಅಮೇರಿಕನ್ನರು ತೋರುವ ಜೀವನಾಭಿರುಚಿ ಎಂತಹದೆಂಬುದನ್ನು ಮರೆಯದೇ ತೋರಿಸುತ್ತ ಹೋಗಿದ್ದಾರೆ. ಇಂಥ ಸಂದರ್ಭದಲ್ಲಿ ದೊಡ್ಡ ವಿಷಯಗಳನ್ನು ಹೇಳವಾಗ, ಸಣ್ಣಸಣ್ಣ ವಿಷಯಗಳನ್ನೂ ಗಮನಿಸಿದುದು ಈ ಪುಸ್ತಕದ ಮಹತ್ವವನ್ನು ಹೆಚ್ಚಿಸಿದೆ. ಒಂದು ಘಟನೆಯನ್ನು ಹೇಳುತ್ತ, ಒಂದು ಸ್ಥಳವನ್ನು ವರ್ಣಿಸುತ್ತ, ಅದರ ಇತಿಹಾಸವನ್ನು ಹೇಳುವ, ಭಾರತಕ್ಕೆ ಸಂಬಂಧಿಸಿದ ಅಂಥಘಟನೆ, ಅಂಥಸ್ಥಳಗಳೊಂದಿಗೆ ಅದನ್ನು ಹೋಲಿಸಿನೋಡುವ, ಅನೇಕ ಪೂರಕ ಅಂಶಗಳನ್ನು ಅಡಕಗೊಳಿಸುವ ರೀತಿಯಿಂದಾಗಿ, ಕೊಟ್ಟ ಹೆಚ್ಚಿನ ವಿವರಗಳು ವಿಷಯಸ್ಪಷ್ಟತೆಗೆ ಪೂರಕವೇ ಆಗುತ್ತವೆ.

ಡಾ. ಧಾರವಾಡಕರ ಅವರು ಕೊಡುವ ಅಂಕಿ-ಸಂಖ್ಯೆಗಳಂತೂ ತುಂಬ ಉಪಯುಕ್ತವೆನಿಸಿವೆ. "ಮಾಂಸಾಹಾರಿಗಳಿಗಾಗಿ ಅಮೇರಿಕೆಯಲ್ಲಿ ೩೪೩ ಮಿಲಿಯನ್ ಪ್ರಾಣಿಗಳನ್ನು, ೩೦ ಕೋಟಿ ಪಕ್ಷಿಗಳನ್ನು ಪ್ರತಿವರ್ಷ ಕೊಲ್ಲಲಾಗುತ್ತದೆ." ಇಂಥ ವಿವರಗಳು ಇವರ ದಾಖಲಾತಿ ಪ್ರಜ್ಞೆಗೆ ನಿದರ್ಶನವೆನಿಸಿವೆ. ಪ್ರಸ್ತುತ ಗ್ರಂಥದಲ್ಲಿ ಈ ಬಗೆಯ ನೂರಾರು ಅಂಕಿಸಂಖ್ಯೆಯ ದಾಖಲೆಗಳು ಸಿಗುತ್ತವೆ. ಹೆಚ್ಚಿನದಾಗಿ ನೈಗರಾಜಲಪಾತ ಮತ್ತು ಸಾಹಸಿಗರು, ಬಂಗಾರದ ಅರಮನೆ, ಅಮೇರಿಕೆಯ ಹಬ್ಬಗಳು, ಅಮೇರಿಕನ್ನಡ, ಅಮೇರಿ ಇಂಗ್ಲೀಶ್, ವಿಚಿತ್ರ ಅಮೇರಿಕಾ - ಈ ಪ್ರಕರಣಗಳು ಈ ಗ್ರಂಥದ ಮುಖ್ಯ ಆಕರ್ಷಣೆಗಳೆನಿಸಿವೆ. ಅಲ್ಲಲ್ಲಿ ಮಾಡಿಕೊಂಡ ಉಪ ಪ್ರಕರಣಗಳಿಂದಾಗಿ ವಿಷಯ ತುತ್ತುಮಾಡಿ ಉಣಿಸಿದ ಅನುಭವವುಂಟಾಗುತ್ತದೆ.

ಡಾ. ಧಾರವಾಡಕರ ಅವರದು ಮೂಲತಃ ವಿದ್ವತ್ತು-ವಿನೋದಗಳ ಗಂಭೀರ ಪ್ರವೃತ್ತಿ. ಅವರು ಆಳವಾಗಿ ಆಲೋಚಿಸಲು ಸಮರ್ಥರು, ಲಘುವಾಗಿ ಹರಟೆಹೊಡೆಯಲು ಸಮರ್ಥರು. ಈ ಸುಂದರ ಪ್ರವಾಸಗ್ರಂಥದಲ್ಲಿ ಇವೆರಡೂ ರೀತಿಗಳ ಸುರಮ್ಯ ಸಂಗಮವನ್ನು ಕಾಣುತ್ತೇವೆ. ಹೀಗಾಗಿ ಅವರ ಈ ಗ್ರಂಥವು ನಮ್ಮನ್ನು ಒಮ್ಮೆ ಆಳವಾದ ಆಲೋಚನೆಗೆ ಎಳೆಯುತ್ತದೆ, ಮತ್ತೊಮ್ಮೆ ನಮ್ಮೊಂದಿಗೆ ಲಘು ಹರಟೆಗೆ ಇಳಿಯುತ್ತದೆ. ಓಥೆಲೋ ನಾಟಕಪ್ರದರ್ಶನ, ಅಮೇರಿಕನ್ನಡ, ಅಮೇರಿ ಇಂಗ್ಲೀಷ್ ಇತ್ಯಾದಿಗಳು ಉತ್ತಮ ವಿಮರ್ಶನ-ಸಂಶೋಧನ ಬರೆವಣಿಗೆಗಳಾದರೆ, ಡಾ. ವಾಯ್. ಆರ್. ಮೋಹನ ಅವರ ಹರಟೆಪ್ರಸಂಗಗಳು, ಧಾರವಾಡಕರ - ಡಾವಾಕಾ - ಡಾವಾ ಆದ 'ಹೆಸರಿನ ಹಗರಣ'ಗಳು ವಿಮೋದದ ಮಡುಗಳಾಗಿವೆ. ನೆಳಲು-ಬೆಳಕಿನ ಆಟದಂಥ ಈ ಬಗೆಯ ನಿರೂಪಣೆಯಿಂದಾಗಿ ೩೦೦ ಪುಟಗಳ ಈ ಪುಸ್ತಕ ಓದುಗರ ಕುತೂಹಲವನ್ನು ಉದ್ದಕ್ಕೂ ಉಳಿಸಿಕೊಂಡು ಹೋಗುತ್ತದೆ.

ಈ ಗ್ರಂಥ ಬಳಸಿಕೊಂಡಿರುವ ಭಾಷೆಯೂ ಲವಲವಿಕೆಯಿಂದ ಕೂಡಿದೆ, ಮನೋಜ್ಞವಾಗಿದೆ. ನೈಗರಾಜಲಪಾತವನ್ನು ಕುರಿತು "ಯಾವ ಆತ್ಮಹತ್ಯೆಗಾಗಿ ಈ ನೀರು ಹೀಗೆ ರಭಸದಿಂದ ಧುಮ್ಮಿಕ್ಕುತ್ತದೋ ದೇವರೇ ಬಲ್ಲ." "ಇಲ್ಲಿ ಮಧುಚಂದ್ರಕ್ಕಾಗಿ ಬಂದ ದಂಪತಿಗಳ ಪ್ರೇಮ ಈ ನೀರು ಇರುವ ವರೆಗೂ ನಿರಂತರ

ಇರುತ್ತದೆ" ಎಂಬಂಥ ಧ್ವನಿಪೂರ್ಣ ಬರವಣಿಗೆ ಒಂದು ಕ್ಷಣ ಪರವಶತೆಯನ್ನುಂಟು ಮಾಡಿದರೆ, "ಏಳು ಸಾವಿರ ರೂಪಾಯಿ ಚೆಂಡು ಬಿದ್ದ ಹಾಗಾಯಿತು", "ಚಪಾತಿ, ಪಲ್ಲೆ, ಬುತ್ತಿ, ಚಟ್ನಿ, ಉಪ್ಪಿನಕಾಯಿ-ಮೊದಲಾದವನ್ನು ಕತ್ತರಿಸಿದೆವು" ಎಂಬಂಥ ಮನೆಮಾತುಗಳಿಂದಾಗಿ ಈ ಕೃತಿ ಆತ್ಮೀಯವಾಗುತ್ತದೆ. ಈ ಎಲ್ಲ ಉತ್ತಮಾಂಶಗಳಿಂದಾಗಿ 'ನಾನು ಕಂಡ ಅಮೇರಿಕೆ' ಒಂದು ಅತ್ಯುತ್ತಮ ಕೃತಿಯೆನಿಸಿದೆ.

ಒಂದು ಮಾತು : ಸಾಮಾನ್ಯವಾಗಿ ಪ್ರಾಧ್ಯಾಪಕರಾದವರು ನಿವೃತ್ತಿಯೊಂದಿಗೆ ಅಂದರೆ ಪಗಾರ ನಿಲ್ಲುವುದರೊಂದಿಗೆ ಓದು-ಬರಹವನ್ನು ನಿಲ್ಲಿಸಿಬಿಡುತ್ತಾರೆ. ಅಂಥವರಿಗೆ ಓದು-ಬರಹ ಉಪಜೀವನದ ಮಾರ್ಗ. ಡಾ. ಧಾರವಾಡಕರ ಅವರಿಗೆ ಮಾತ್ರ ಓದು-ಬರಹ ಜೀವನದ ಮಾರ್ಗ. ಹೀಗಾಗಿ ನಿವೃತ್ತಿಯ ತರುವಾಯವೂ ಇವರು ಓದು-ಬರಹವನ್ನು ಇನ್ನೂ ಹೆಚ್ಚು ಮುಂದುವರಿಸಿದ್ದಾರೆ. ಮಕ್ಕಳಾದ ಶ್ರೀರಾಮ, ಅಜಿತ ಅವರಿಂದ ಒದಗಿಬಂದ ಈ ವಿದೇಶ ಪ್ರವಾಸವನ್ನು ಸುಖವಿಹಾರದ ಸಾಧನಮಾಡಿಕೊಳ್ಳದೆ, ಸಾಹಿತ್ಯಕೃತಿಗೆ ವಸ್ತುವಾಗಿಸಿಕೊಂಡುದೇ ಈ ಮಾತಿಗೆ ಸಾಕ್ಷಿಯೆನಿಸಿದೆ. ಈ ಮೂಲಕ ಕನ್ನಡಕ್ಕೆ ಒಂದು ಉತ್ತಮ ಪ್ರವಾಸ ಸಾಹಿತ್ಯಕೃತಿಯನ್ನು ನೀಡಿದ ಅವರಿಗೆ ಕನ್ನಡಿಗರ ಕೃತಜ್ಞತೆಗಳು ಸಲ್ಲುತ್ತವೆ.

ರಾ.ಯ. ಧಾರವಾಡಕರ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೧೪೫

ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರಮಠದ ವರ್ಣನಾತ್ಮಕ ಹಸ್ತಪ್ರತಿ ಸೂಚಿ

೧೯೮೮

ಶ್ರೀ ಕೆಳದಿ ಗುಂಡಾಜೋಯಿಸರು ಕಳೆದ ೨೦ ವರ್ಷಗಳಿಂದ ನನಗೆ ಪರಿಚಿತರು. ಕೆಳದಿ ಸಾಮ್ರಾಜ್ಯದ ಬಗ್ಗೆ, ಕೆಳದಿ ಅವಶೇಷಗಳ ಬಗ್ಗೆ ಅವರಿಗೆ ವಿಶೇಷ ಆಸಕ್ತಿ. ಇದು ಇವರ ಜೀವನ ವ್ಯಸನವಾಗಿಯೂ ಬೆಳೆದಿದೆ. ಇದರ ಫಲವಾಗಿ ವಿಗ್ರಹ, ನಾಣ್ಯ, ಹಸ್ತಪ್ರತಿ ಸಂಗ್ರಹ, ಪ್ರದರ್ಶನ ಇತ್ಯಾದಿ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಶ್ರೀ ಜೋಯಿಸ್ ಅವರು ಈಗ ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರ ಮಠದ ಹಸ್ತಪ್ರತಿಗಳ ಸೂಚಿ ರಚನೆಯತ್ತ ಗಮನ ಹರಿಸಿ, ಅದನ್ನು ಪುಸ್ತಕ ರೂಪದಲ್ಲಿ ಪೂರೈಸಿದ್ದಾರೆ.

ಶ್ರೀ ಮೂರುಸಾವಿರ ಮಠದ ಪೀಠಪರಂಪರೆಯು ಐತಿಹಾಸಿಕ ಪರಂಪರೆ, ಭೌಗೋಲಿಕ ವಿಸ್ತಾರ, ಸಾಮಾಜಿಕ ಪ್ರತಿಷ್ಠೆಗಳ ದೃಷ್ಟಿಯಿಂದ ಅಗ್ರಮಾನ್ಯ ಧರ್ಮಸಂಸ್ಥೆಯೆನಿಸಿದೆ. ಈ ಹಿರಿಮೆಗೆ ತಕ್ಕಂತೆ ಶ್ರೀ ಮಠದಲ್ಲಿ ಉಳಿದುಬಂದಿರುವ ಅನೇಕ ಅವಶೇಷಗಳಲ್ಲಿ ಹಸ್ತಪ್ರತಿ ಸಂಪತ್ತು ವಿಶಿಷ್ಟವೆನಿಸಿದೆ. ಹುಳು ಹುಪ್ಪಡಿಗಳಿಗೆ ಆಹಾರವಾಗಿಯೂ, ಮಳೆಗಾಳಿಗಳಿಗೆ ತುತ್ತಾಗಿಯೂ ಹಾಳಾಗಿ ಹೋದವುಗಳನ್ನು, ವಾಚನ-ಪ್ರವಚನಗಳಿಗಾಗಿ ವ್ಯಾಸಂಗಪ್ರಿಯರು ಒಯ್ದವುಗಳನ್ನು, ಆಧುನಿಕ ವಿದ್ಯಾಸಂಸ್ಥೆಗಳು ಎರವಲು ಹೆಸರಿನಲ್ಲಿ ತೆಗೆದುಕೊಂಡವುಗಳನ್ನು ಬಿಟ್ಟರೂ ಈಗ ಶ್ರೀ ಮಠದಲ್ಲಿ ೩೮೬ ಹಸ್ತಪ್ರತಿ ಕಟ್ಟುಗಳು ಉಳಿದುಕೊಂಡಿವೆ. ಇವುಗಳಲ್ಲಿ ತಾಳೆಪ್ರತಿ ೨೨೭, ಕಾಗದ ಪ್ರತಿ೧೫೯. ಭಾಷೆಯ ದೃಷ್ಟಿಯಿಂದ ಕನ್ನಡ ೩೮೬, ಸಂಸ್ಕೃತ ೮೪, ಮಿಕ್ಕುವು ೪.

ಪೂಜ್ಯ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರಿಗೆ ಈ ಹಸ್ತಪ್ರತಿಗಳ ಸೂಚಿಯನ್ನು ಸಿದ್ಧಪಡಿಸಬೇಕೆಂಬ ಹಂಬಲ ಬಹಳ ದಿನಗಳಿಂದಲೂ ಇದ್ದಿತು. ಆಗಾಗ ನನ್ನ ಮುಂದೆ ಈ ವಿಷಯವನ್ನು ಅವರು ಪ್ರಸ್ತಾಪಿಸಿದ್ದುಂಟು. ಆದರೆ ಪ್ರಾಚೀನ ಅಕ್ಷರಗಳ ಪರಿಚಯವುಳ್ಳ, ಶ್ರಮವಹಿಸುವ ಮನೋಧರ್ಮವುಳ್ಳ ಹಸ್ತಪ್ರತಿ ವಾಚಕರ ಸಂಖ್ಯೆ ಕ್ಷೀಣಿಸುತ್ತಿರುವ ಇಂದಿನ ಕಾಲದಲ್ಲಿ, ಸಹಜವಾಗಿಯೇ ಈ ಕಾರ್ಯ ಹಿಂದೆ ಬೀಳುತ್ತ ನಡೆದಿದ್ದಿತು. ಇಂತಹ ಸಂದರ್ಭದಲ್ಲಿ ಶ್ರೀ ಕೆಳದಿ ಗುಂಡಾಜೋಯಿಸರು ಈ ಕಾರ್ಯವನ್ನು ಕೈಕೊಂಡು ಪೂರೈಸಿದುದು ಸಂತೋಷದ ವಿಷಯ.

ಪ್ರಾಚೀನ ಕಾಲದಲ್ಲಿ ಜೈನ, ವೀರಶೈವ, ಬ್ರಾಹ್ಮಣ - ಹೀಗೆ ಈ ಮೂರು ಸಮಾಜಗಳು ಕನ್ನಡ ಸಾಹಿತ್ಯವನ್ನು ಸೃಷ್ಟಿಸುತ್ತ ಬಂದರೂ ವೀರಶೈವರಿಗೆ ಮಾತೃಭಾಷೆಯೂ, ಧರ್ಮಭಾಷೆಯೂ ಕನ್ನಡವೇ ಆಗಿರುವ ಕಾರಣ ವಿಪುಲಪ್ರಮಾಣದಲ್ಲಿ ಈ ಸಾಹಿತ್ಯವನ್ನು ರಚಿಸುತ್ತ ಬಂದ ಅವರು, ವಿಶೇಷ ಶ್ರಮವಹಿಸಿ ಈ ಭಾಷೆಯನ್ನೂ ಪೋಷಿಸುತ್ತ ಬಂದರು. ಬ್ರಾಹ್ಮಣ, ಜೈನ, ಸಮಾಜಗಳಿಗಿಂತ ಬಹು ದೊಡ್ಡ ಸಮಾಜದವರಾಗಿರುವ ಇವರು ಮನಸ್ಸು ಮಾಡಿದುದರಿಂದ, ಕನ್ನಡ ಸಾಹಿತ್ಯದ ರಚನೆ, ಕನ್ನಡ ಭಾಷೆಯ ಪೋಷಣೆಗಳಿಗೆ ಒಂದು ವ್ಯಾಪಕ ನೆಲೆಗಟ್ಟು ಪ್ರಾಪ್ತವಾಯಿತು. ಈ ನೆಲೆಗಟ್ಟಿನ ಮುಂದುವರಿಕೆ ಕಾರಣವಾಗಿ ವೀರಶೈವ ಹಸ್ತಪ್ರತಿಗಳು ಅಪಾರಸಂಖ್ಯೆಯಲ್ಲಿ ಅವತರಿಸುತ್ತ ಬಂದವು. ಒಂದು ಅಂದಾಜಿನ ಪ್ರಕಾರ ಈಗ ಲಭ್ಯವಿರುವ ಕನ್ನಡ ಹಸ್ತಪ್ರತಿಗಳ ಒಟ್ಟು ಸಂಖ್ಯೆ ಸುಮಾರು ೨೫ಸಾವಿರ. ಇವುಗಳಲ್ಲಿ ವೀರಶೈವ ಹಸ್ತಪ್ರತಿಗಳದು ಸಿಂಹಪಾಲು.

ಹೀಗೆ ವಿಪುಲ ಸಂಖ್ಯೆಯಲ್ಲಿರುವ ವೀರಶೈವ ಹಸ್ತಪ್ರತಿಸಂಪತ್ತಿಗೆ ವಿಪತ್ತೂ ವಿಪುಲ. ಅದಕ್ಕೆ ಕಾರಣಗಳೂ ಅನೇಕ. ವೀರಶೈವ ಸಾಹಿತ್ಯದ ಪ್ರಥಮ ಪೈರು ವಚನ ಸಾಹಿತ್ಯ. ಇದು ನಮ್ಮ ನಾಡಿನ ಪ್ರಥಮ ಪ್ರತಿಭಟನಾ ಸಾಹಿತ್ಯವಾದುದರಿಂದ ರಾಜಸತ್ತೆ, ಪುರೋಹಿತಸತ್ತೆಗಳು ಈ ಸಾಹಿತ್ಯವನ್ನು ನಾಶಗೊಳಿಸಲು ಪ್ರಯತ್ನಿಸಿರುವ, ಅದರಲ್ಲಿಯೂ ಬಿಜ್ಜಳನ ರಾಜಸತ್ತೆಯು ಇದನ್ನು ಬಹಿಷ್ಕರಿಸಿರುವ ಸಾಧ್ಯತೆಯಿದೆ, ರಾಷ್ಟ್ರೀಯ ಸಾಹಿತ್ಯವನ್ನು ಬ್ರಿಟಿಷರು ಬಹಿಷ್ಕರಿಸಿದಂತೆ. ಇದರಿಂದಾಗಿ ಈ ಸಾಹಿತ್ಯ ಅಲ್ಲಲ್ಲಿ ಭೂಗತವಾಯಿತು. ಆಮೇಲೆ ಹರಿಹರ ರಾಘವಾಂಕಾದಿಗಳು ಸೃಷ್ಟಿಸಿದ ಸಾಹಿತ್ಯವು ಎರಡನೆಯ ವಿಪತ್ತು ಎನಿಸಿದ ಮುಸಲ್ಮಾನರ ದಾಳಿಗಳಿಂದ ಇತರ ಸಾಹಿತ್ಯದ ಜೊತೆ ಮಣ್ಣು ಪಾಲಾಯಿತು. ಹೀಗೆ ಅನೇಕ ಅಪಾಯಗಳ ಅಗ್ನಿಕುಂಡಗಳನ್ನು ದಾಟಿ, ಉಳಿದು ಬಂದ ವೀರಶೈವ ಪ್ರಾಚೀನ ಹಸ್ತಪ್ರತಿಸಂಪತ್ತು ವಿಶೇಷವಾಗಿ ಆಶ್ರಯ ಪಡೆದುದು, ವೀರಶೈವ ಮಠಗಳಲ್ಲಿ.

ಮಠಗಳು ಧರ್ಮ, ಶಿಕ್ಷಣ, ಸಂಸ್ಕೃತಿಗಳ ಕೇಂದ್ರಸ್ಥಾನಗಳು. ಇವುಗಳ ಸಂವರ್ಧನೆ ಪ್ರಚಾರ ದೃಷ್ಟಿಯಿಂದ ಹಸ್ತಪ್ರತಿ ಸಂಪತ್ತು ಅಲ್ಲಿ ಶತಮಾನದಿಂದ ಶತಮಾನಕ್ಕೆ ಬೆಳೆಯುತ್ತಲೇ ಬಂದಿತು. ಧಾರ್ಮಿಕ ಗ್ರಂಥಗಳ ಲೇಖನಕಾರ್ಯ ಧರ್ಮಕಾರ್ಯದ ಒಂದು ಪವಿತ್ರ ಭಾಗವೆಂದೇ ವೀರಶೈವರು ಭಾವಿಸಿದ್ದರು. ಈ ಎಲ್ಲ ಪ್ರವೃತ್ತಿ ಪ್ರಯತ್ನಗಳ ಫಲವೆಂಬಂತೆ ಹಸ್ತಪ್ರತಿ ಭಾಂಡಾರಗಳು ವೀರಶೈವ ಮಠಗಳಲ್ಲಿ ಉದ್ದಕ್ಕೂ ಬೆಳೆದು ಬಂದವು. ಹೀಗೆ ತಮ್ಮ ಮಠಗಳಲ್ಲಿ ಬೆಳೆದು ಬಂದ ಸಂಪತ್ತನ್ನು ಈಗ ಪೂಜ್ಯ ಶ್ರೀಗಳು ಶ್ರೀ ಗುಂಡಾಜೋಯ್ಸ್ ಅವರ ಮುಖಾಂತರ ಸೂಚಿಗೊಳಿಸುತ್ತಿರುವುದು ಇತರ ಮಠಾಧೀಶರಿಗೆ ಆದರ್ಶವೆನಿಸಿದೆ. ಮಿಕ್ಕ ಮಠಾಧೀಶರೂ ಈ ರೀತಿ ಕಾರ್ಯಪ್ರವೃತ್ತರಾಗುವುದು ಅವಶ್ಯವಿದೆ. ಇದರಿಂದ ಅಲ್ಲಲ್ಲಿ ಉಳಿದುಕೊಂಡಿರುವ ಅಪೂರ್ವ ಹಸ್ತಪ್ರತಿಗಳು ವಿದ್ವಾಂಸರ ಗಮನಕ್ಕೆ ಬಂದು, ಸಾಹಿತ್ಯದ ಅಭ್ಯಾಸಕ್ಕೆ ವಿಶೇಷ ಸಹಾಯವಾಗುತ್ತದೆ.

'ಹಸ್ತಪ್ರತಿಸೂಚಿ' ಕೇವಲ ಒಂದು ಯಾದಿ ಸಿದ್ಧತೆಯಲ್ಲ. ಕೃತಿಪರಿಚಯ ಪ್ರತಿಪರಿಚಯಗಳ ಒಂದು ವೈಜ್ಞಾನಿಕ ವಿಧಾನವಾಗಿದೆ. ಈವರೆಗೆ ದೇಶ ವಿದೇಶಗಳಲ್ಲಿ ಅನೇಕ ವಿದ್ವಾಂಸರು ಹಸ್ತಪ್ರತಿ ಸೂಚಿ ರಚನೆಗೆ ಸಂಬಂಧಿಸಿದಂತೆ ಅನೇಕ ಬಗೆಯ ಪ್ರಯೋಗಗಳನ್ನು ಮಾಡಿದ್ದುಂಟು. ಅಲ್ಲಿ ಅವ್ಯಾಪ್ತಿ, ಅತಿವ್ಯಾಪ್ತಿ ದೋಷಗಳು ಉಳಿದುಕೊಂಡಿವೆ. ಒಂದು ಕ್ರಮಬದ್ಧ ವಿಚಾರವ್ಯವಸ್ಥೆಗೆ ಬದಲು, ಹಸ್ತಪ್ರತಿಯನ್ನು ಪರಿಚಯಿಸಿ ಕೊಡುವ ಅವಶ್ಯ-ಅನವಶ್ಯ ಅಂಶಗಳನ್ನು ಕಲೆಹಾಕಿದುದು ಅಲ್ಲಿ ಕಂಡುಬರುತ್ತದೆ. ವಿದ್ವಾಂಸರು ಬರೆದುಕೊಟ್ಟ ಇಂಥ ಹಾದಿಯಲ್ಲಿ ರೂಪಗೊಳ್ಳುವ ಯಾವುದೇ ಸೂಚಿ, ಅಪೂರ್ಣವೆನಿಸುವ, ಜಟಿಲವೆನಿಸುವ ಸಾಧ್ಯತೆಯಿದೆ. ಶ್ರೀ ಗುಂಡಾ ಜೋಯ್ಸ್ ಅವರೂ ಎಲ್ಲರಂತೆ ಈಗ ರೂಢಿಯಲ್ಲಿರುವ ಇಂಥ ದಾರಿಯನ್ನು ಅನುಸರಿಸಿದ ಕಾರಣ ಕೆಲವು ಮೂಲಭೂತ ಕೊರತೆಗಳು ಇವರ ಸೂಚಿಯಲ್ಲಿಯೂ ಉಳಿದುಕೊಂಡಿವೆ. ಎರಡನೆಯದಾಗಿ, ಒಂದು ಕಟ್ಟಿನಲ್ಲಿರಬಹುದಾದ ಅನೇಕ ಕೃತಿಗಳಲ್ಲಿ ಮೊದಲನೆಯ ಕೃತಿಯನ್ನು ಪರಿಚಯಿಸಿ ಮಿಕ್ಕವುಗಳನ್ನು ಕೇವಲ

ಸೂಚಿಸಿಬಿಡುವ ಕ್ರಮವನ್ನು ಇಲ್ಲಿ ಅನುಸರಿಸಿರುವುದರಿಂದ ಅಲ್ಲಿಯ ಮಿಕ್ಕ ಕೃತಿಗಳ ವಿವರವಾದ ಪರಿಚಯ ಓದುಗನಿಗೆ ಲಭ್ಯವಾಗದೆ ಹೋಗುತ್ತದೆ. ಶ್ರೀ ಜೋಯಿಸ್‌ರವರಿಗೆ ಇರುವ ಕೆಲವು ವೈಯಕ್ತಿಕ ಮಿತಿಗಳು ಸಹಜವಾಗಿಯೇ ಈ ಸೂಚಿಗೆ ಒಂದು ಮಿತಿಯನ್ನು ಒದಗಿಸಿದೆ. ಬೇರೊಬ್ಬರು ಈ ಕಾರ್ಯ ಮಾಡಿದ್ದರೆ ಬೇರೊಂದು ರೀತಿಯ ಕೊರತೆ ಮಿತಿಗಳು ಉಳಿದುಕೊಳ್ಳುತ್ತಿದ್ದವೇನೋ?ಆ ಮಾತು ಬೇರೆ. ಆದರೆ ಮಾಡಲು ಯಾರೂ ಮುಂದುಬಾರದ ಈ ಕಷ್ಟಕರ ಕೆಲಸವನ್ನು ಶ್ರೀ ಜೋಯಿಸರು ಕೈಗೆತ್ತಿಕೊಂಡು ಪೂರೈಸಿದುದೇ ಒಂದು ಮುಖ್ಯ ಘಟನೆ. ದೂರದ ಕೆಳದಿಯಿಂದ ಹುಬ್ಬಳ್ಳಿಯ ವರೆಗೆ ಅನೇಕ ಸಲ ಬರುವ ಶ್ರಮವನ್ನು, ವರ್ಷಗಟ್ಟಲೆ ಇಲ್ಲಿ ಉಳಿದುಕೊಂಡು ಬೇಸರವಿಲ್ಲದೆ ಹಗಲಿರುಳೂ ಹಸ್ತಪ್ರತಿ ಓದಿದ ಶ್ರಮವನ್ನು, ಸೂಚಿಪಟ್ಟಿಕೆ ಸಿದ್ಧಪಡಿಸಿಕೊಂಡ ಶ್ರಮವನ್ನು, ಕರಡಚ್ಚು ನೋಡಿದ ಶ್ರಮವನ್ನು ನೆನೆದಾಗ ಅವರಿಗೆ ಸಹಜವಾಗಿಯೇ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಪೂಜ್ಯ ಶ್ರೀಗಳಲ್ಲಿ ಒಂದು ಅರಿಕೆ : ವೀರಶೈವ ಸಂಸ್ಕೃತಿಯ ಶೋಧ ಮತ್ತು ಪ್ರಚಾರಗಳ ವಿಷಯವಾಗಿ ಪೂಜ್ಯರಿಗೆ ಅಪಾರ ಆಸಕ್ತಿ; ಉತ್ಸಾಹ. ಇದು ಒಂದು ವ್ಯವಸ್ಥಿತ ರೂಪದಲ್ಲಿ ಮುನ್ನಡೆದರೆ ವೀರಶೈವಕ್ಕೆ ಇನ್ನೂ ಹೆಚ್ಚಿನ ಲಾಭ. ಹಸ್ತಪ್ರತಿ ಸೂಚಿ ರಚನೆಯತ್ತ ಗಮನ ಹರಿಸಿರುವ ಇವರು ಈಗ "ಸಮಗ್ರ ವೀರಶೈವ ಹಸ್ತಪ್ರತಿ ಶೋಧ-ಸಂಗ್ರಹ ಯೋಜನೆ"ಯತ್ತ ಧೀರ ಹೆಜ್ಜೆ ಇಡಬೇಕು." ಹಳ್ಳಿಯಿಂದ ಹಳ್ಳಿಗೆ ಹಸ್ತಪ್ರತಿ ಶೋಧ - ಸಂಚಾರ ಯೋಜನೆ"ಯನ್ನು ರೂಪಿಸಿಕೊಂಡು, ಈ ಒಂದು ಐತಿಹಾಸಿಕ ಕಾರ್ಯವನ್ನು ಮಾಡಿ ಮುಗಿಸಬೇಕು. ಇದರಿಂದ ಪ್ರತಿ ತಿಂಗಳು ಬಂಡಿಗಟ್ಟಲೆ ಹಸ್ತಪ್ರತಿಗಳನ್ನು ಸಂಗ್ರಹಿಸಬಹುದಾಗಿದೆ. ಈ ಕೆಲಸವನ್ನು ಮಾಡಿದರೆ ಮಾತ್ರ ಅವರು ಅಸ್ತಿತ್ವಕ್ಕೆ ತರಬೇಕೆಂದಿರುವ "ವೀರಶೈವ ಸಂಶೋಧನ ಕೇಂದ್ರ"ಕ್ಕೆ ಅರ್ಥವಂತಿಕೆ ಪ್ರಾಪ್ತವಾಗುತ್ತದೆ. ಈಗಾಗಲೇ ವಿನಾಶದ ಹಾದಿಯಲ್ಲಿರುವ ಹಸ್ತಪ್ರತಿಗಳನ್ನು ಉಳಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿರುವುದರಿಂದ, ಪೂಜ್ಯರು ಆದಷ್ಟು ಬೇಗ ಈ ಕೆಲಸಕ್ಕೆ ಚಾಲನೆ ಕೊಡುವರೆಂದು ಆಶಿಸುತ್ತೇನೆ.

ಕೆಳದಿ ಗುಂಡಾ ಜೋಯಿಸ, ಕೆಳದಿ

ಆಕರ : ಮಾರ್ಗ ಸಂಪುಟ–೬

■■

೧೪೬

ನಾಗಚಂದ್ರನ ಕಾಲ - ಸ್ಥಳ

೧೯೮೯

"ಸಂಶೋಧನೆ ಎನ್ನುವುದು ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣ ವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ" - ಎಂಬ ಮಾತು ನಾಗಚಂದ್ರನ ವಿಷಯವಾಗಿ ಈವರೆಗೆ ನಡೆದ ಸಂಶೋಧನೆಗೆ ಸರಿಯಾಗಿ ಒಪ್ಪುತ್ತದೆ. ಡಾ. ಕಿಟೆಲ್ ಅವರು ಛಂದೋಂಬುಧಿಗೆ ಬರೆದ ಉಪೋದ್ಘಾತದಲ್ಲಿ (೧೮೭೫) ತಮಿಳು ರಾಮಾಯಣದ ಕಂಬ, ಕನ್ನಡ ರಾಮಾಯಣದ ಪಂಪ ಒಬ್ಬನೇ ಆಗಿರಬಹುದೆಂಬ ತಪ್ಪು ಗ್ರಹಿಕೆಯಿಂದ ಪ್ರಾರಂಭವಾದ ಈ ಸಂಶೋಧನೆ, ಡಾ. ಹಂಪನಾ ಅವರ ಈ ಪುಸ್ತಕದ ವರೆಗೆ ವ್ಯಾಪಿಸಿದೆ. ನಾಗಚಂದ್ರನನ್ನು ಕುರಿತು ನಡೆದ ಈ ನೂರು ವರ್ಷಗಳ ಸಂಶೋಧನೆಯ ಇತಿಹಾಸದಲ್ಲಿ ಈ ಪುಸ್ತಕ ಒಂದು ವ್ಯಾಪಕ ಪ್ರಯತ್ನವೆನಿಸಿದೆ.

ನಾಗಚಂದ್ರನ ಜನ್ಮಗ್ರಾಮ, ಜೀವಿತದ ಕಾಲಾವಧಿ, ರಾಜಾಶ್ರಯ, ಕಟ್ಟಿಸಿದ ಬಸದಿ, ಕೃತಿರಚನೆಯ ಕಾಲ, ಗುರುಪರಂಪರೆ, ವಂಶಾವಳಿ, ಪಂಚಲಿಂಗಾಲ-ವಿಜಾಪುರ-ಬಾಬಾನಗರ ಮತ್ತು ಕೊಲ್ಲಾಪುರ ಶಾಸನಗಳ ವಿಷಯ-ಇತ್ಯಾದಿ ಸಂಗತಿಗಳು ಕಳಚಿಬಿದ್ದ ಮುತ್ತುಗಳಂತೆ, ಅಲ್ಲಲ್ಲಿ ಉಳಿದುಕೊಂಡಿರುವ ಕಾರಣ, ಈ ಕವಿಯ ಜೀವನ ಚರಿತ್ರೆಯನ್ನು ಮಾಲೆಯಾಗಿ ಹೆಣೆಯುವುದು ಕಷ್ಟಕರವೆನಿಸಿದೆ. ಹೀಗಿದ್ದೂ ಈವರೆಗೆ ಲಭ್ಯವಿರುವ ಎಲ್ಲ ಆಕರಗಳನ್ನೂ, ಈಗ ಲಭ್ಯವಾದ ಹೊಸ ಆಕರಗಳನ್ನೂ ಸಮಗ್ರವಾಗಿ ತಕ್ಕೆಯಲ್ಲಿ ತಬ್ಬಿಕೊಂಡುದು ಈ ಕೃತಿಯ ಒಂದು ಸಾಧನೆಯಾದರೆ, ಅವೆಲ್ಲವನ್ನೂ ಸುಸಂಗತವಾಗಿ ವ್ಯಾಖ್ಯಾನಿಸಿ, ಕವಿಚರಿತ್ರೆಯನ್ನು ಅಪ್-ಟು-ಡೇಟ್‌ಗೊಳಿಸಿದುದು ಇನ್ನೊಂದು ಸಾಧನೆಯಾಗಿದೆ. ಹೀಗಾಗಿ ಕನ್ನಡ ಸಂಶೋಧನೆಗೆ ನೂರು ವರ್ಷ ತುಂಬಿದ ಇಂದಿನ ಸಂದರ್ಭದಲ್ಲಿ ನಮ್ಮ ಇತರ ಕವಿಗಳ ಚರಿತ್ರೆಯನ್ನೂ ಇದೇ ರೀತಿ ಅಪ್-ಟು-ಡೇಟ್ ಗೊಳಿಸುವುದರತ್ತ ಸೂಚನೆ ನೀಡುವ ಈ ಕೃತಿ, ಅಂಥ ಕೆಲಸಗಳಿಗೆ ಮಾದರಿಯಾಗಿ ನಿಲ್ಲುತ್ತದೆ.

ಡಾ. ಹಂಪನಾ ಅನೇಕ ವರ್ಷಗಳಿಂದ ನಾಗಚಂದ್ರನ ಚರಿತ್ರೆಯ ಶೋಧದಲ್ಲಿ ತೊಡಗಿಕೊಂಡವರು. ಇದರ ಫಲವೆನಿಸಿದ ಈ ಪುಸ್ತಿಕೆ ೫೮ ಪ್ಯಾರಾಗಳಲ್ಲಿ ಹಂಚಿ ಹೋಗಿದೆ. ಮೊದಲಿನ ೪೮ ಪ್ಯಾರಾಗಳಲ್ಲಿ ನಾಗಚಂದ್ರನ ಜೀವಿತದ ಕಾಲಾವಧಿ-ಗುರುಪರಂಪರೆಗಳನ್ನೂ, ಆಮೇಲಿನ ಪ್ಯಾರಾಗಳಲ್ಲಿ ಕವಿಯ ಗ್ರಾಮ-ವಂಶಾವಳಿಗಳನ್ನೂ ಚರಿತ್ರಿಸಲಾಗಿದೆ. ಪೂರ್ವಾರ್ಧ ಹೊಸ ಹೊಸ ಆಕರ-ವ್ಯಾಖ್ಯಾನಗಳಿಂದ ಇಡಿಕಿರಿದಿದ್ದು, ಉತ್ತರಾರ್ಧ ಈವರೆಗಿನ ಶೋಧಗಳ ಆಳವಾದ ಪರಿಶೀಲನೆಯೆನಿಸಿದೆ.

ಶಾಖೋಪಶಾಖೆಯಾಗಿ ಹಬ್ಬಿರುವ ಜೈನ ಗುರುಪರಂಪರೆಯ ಅಧ್ಯಯನ ದಿಕ್ಕು ತಪ್ಪಿಸುವಷ್ಟು ಜಟಿಲವಾಗಿದೆ. ನಾಗಚಂದ್ರನ ಗುರುಪರಂಪರೆ ಇದಕ್ಕೆ ಪರಮಾವಧಿ ನಿದರ್ಶನ. ಹೀಗಿದ್ದೂ ಎಲ್ಲ ಎಳೆಗಳನ್ನು ಸೂಕ್ಷ್ಮವಾಗಿ ಬಿಡಿಸಿಕೊಂಡು ಮತ್ತೆ ಗಟ್ಟಿಯಾಗಿ ಜೋಡಿಸಿಕೊಳ್ಳುವಲ್ಲಿ ವಹಿಸಿದ ಶ್ರಮ, ತೋರಿದ ಸಂಯಮ, ಮೆರೆದ ಚಾರಿತ್ರಿಕ ಪ್ರಜ್ಞೆ ಡಾ. ಹಂಪನಾ ಅವರಿಗೆ ಮಾತ್ರ ಸಾಧ್ಯವೆಂದು ನನ್ನ ಸ್ಪಷ್ಟ ಅಭಿಪ್ರಾಯ. ಆಕರಗಳನ್ನು ಆಧಾರವಾಗಿರಿಸಿಕೊಳ್ಳುವವರಿಗೆ ಮಾದರಿಯೆಂಬಂತೆ ಮೂಡಿ ಬಂದಿರುವ ಈ ಭಾಗ, ಈ ಪುಸ್ತಕದ ಬೆಲೆಯುಳ್ಳ ಬರವಣಿಗೆಯಾಗಿದ್ದು, ಇದರ ನಿರೂಪಣೆಯೂ ಗಣಿತದಂತೆ ನಿರ್ದಿಷ್ಟ ಗತಿಯಲ್ಲಿ ನಡೆದು, ಸಂಶೋಧನೆಯ ಶಿಸ್ತಿಗೆ ಒಳಪಟ್ಟಿದೆ.

ಉತ್ತರಾರ್ಧದಲ್ಲಿ ಈವರೆಗೆ ಪ್ರಕಟವಾದ ವಿಪುಲ ಸಾಮಗ್ರಿ ಅಡಕವಾಗಿದೆ. ಹೊಸ ಸಾಮಗ್ರಿಯ ಶೋಧದಂತೆ, ಹಳೆಯ ಸಾಮಗ್ರಿಯ ಹೊಸ ವ್ಯಾಖ್ಯಾನವೂ ಸಂಶೋಧನೆಯೇ ಸರಿ. ಆದರೆ ಕೊಂಡಿರೂಪದ ಸಾಮಗ್ರಿಯ ಕೊರತೆಯಿಂದಾಗಿ ಇಲ್ಲಿ ಆಗಾಗ ಊಹೆ ಅನಿವಾರ್ಯವಾಗಿದೆ. ನಾಗಚಂದ್ರ, ಪಂಪರಾಜ, ಹಂಪಕವಿ, ಪಂಪ-ಇತ್ಯಾದಿ ಹೆಸರುಗಳನ್ನು ಒಬ್ಬ ವ್ಯಕ್ತಿಗೆ ಅನ್ವಯಿಸುವ, ಒಂದು ಶತಮಾನದ ಅವಧಿಯಲ್ಲಿ ಇಡೀ ಕುಟುಂಬ ಅಥವಾ ಕುಟುಂಬದ ಸದಸ್ಯರು ಪೊಟ್ಟಲಕೆರೆ ಕುಣಿಲಂಗೆರೆ ವಿಜಾಪುರ ಕೊಲ್ಲಾಪುರಗಳಂಥ ದೂರ ದೂರದ ಊರುಗಳಿಗೆ ವಲಸೆಹೋದರೆಂದು ಭಾವಿಸುವ, ವಂಶಾವಳಿಯಲ್ಲಿ ಬರುವ ಆರೆಂಟು ಹೆಸರುಗಳಲ್ಲಿ ಮಗ ಮೊಮ್ಮಗ ಮರುಮೊಮ್ಮಗ ಎಂಬ ಸಂಬಂಧ ಕಲ್ಪಿಸುವ ವಿಚಾರದಲ್ಲಿ, ಮೈತುಂಬ ಕಣ್ಣಾಗಿ ಕೆಲಸಮಾಡಿದ್ದರೂ ಈ ಭಾಗ ಇನ್ನೂ ಹೆಚ್ಚಿನ ಆಧಾರಗಳನ್ನು ಬಯಸುತ್ತದೆ. ಈ ಬಗೆಯ ಅನಿವಾರ್ಯ ಕೊರತೆಗಳಿದ್ದರೂ ಅವೆಲ್ಲವನ್ನು ಮೀರಿ ಬೆಳೆದುದು ಈ ಸಣ್ಣ ಪುಸ್ತಕದ ದೊಡ್ಡ ಸಾಧನೆಯಾಗಿದೆ.

ಆರ್. ನರಸಿಂಹಾಚಾರ್ ಅವರ 'ಕರ್ಣಾಟಕ ಕವಿಚರಿತೆ'ಯ ಆಮೂಲಾಗ್ರ ಪರಿಷ್ಕರಣ ಇಂದಿನ ಬಹುಮುಖ್ಯ ಕೆಲಸವಾಗಿರುವಂತೆ, ಈ ತಲೆಮಾರಿನ ಸಂಶೋಧಕರಿಗೆ ಬಹು ದೊಡ್ಡ ಆಹ್ವಾನವೂ ಆಗಿದೆ. ಆಗಾಗ ಈ ಆಹ್ವಾನಕ್ಕೆ ವಿನಮ್ರವಾಗಿ ಸ್ಪಂದಿಸುತ್ತ ಬಂದ ಡಾ. ಹಂಪನಾ ಅವರ ಈ ಕೃತಿ, ಆಕರಗಳ ಸಂಗ್ರಹ-ಶೋಧ, ಅವುಗಳ ಪರಿಶೀಲನ-ವರ್ಗೀಕರಣ-ವ್ಯಾಖ್ಯಾನ ಮತ್ತು ಕ್ರಮಬದ್ಧ ನಿರೂಪಣೆ ಇತ್ಯಾದಿ ಗುಣಗಳಿಂದಾಗಿ 'ಕರ್ಣಾಟಕ ಕವಿಚರಿತೆ'ಗೆ ಒಂದು ಯೋಗ್ಯ ತಿದ್ದುಪಡಿಯಾಗಿದೆ; ಕನ್ನಡ ವಿದ್ವತ್ತಿಗೆ ಮಹತ್ವದ ಕೊಡುಗೆಯಾಗಿದೆ.

ಡಾ. ಹಂಪನಾ ಅವರು ಕಳೆದ ಮೂರು ದಶಕಗಳಿಂದ ಕನ್ನಡದ ಪ್ರಸಿದ್ಧಿ-ಪ್ರಸಾರ ಚಟುವಟಿಕೆಗಳ ಮುಖ್ಯಭಾಗವಾಗಿ ಬೆಳೆದಿದ್ದಾರೆ. ಈ ಚಟುವಟಿಕೆಗಳ ಅಬ್ಬರದಲ್ಲಿ ಅವರ ವಿದ್ವತ್ತಿನ ಧ್ವನಿ, ನನ್ನಂಥ ಕೆಲವರನ್ನು ಬಿಟ್ಟರೆ, ಬಹುಜನರಿಗೆ ಕೇಳಿಸದೆ ಹೋದುದು ವಿಷಾದದ ಸಂಗತಿ. ಆ ಧ್ವನಿಯ ಒಂದು ಅಲೆಯಾಗಿರುವ ಈ ಕೃತಿಯಿಂದಾಗಿ ಹಂಪನಾ ಅವರ 'ನಿಜದ ನೆಲೆ'ಯನ್ನು ಕನ್ನಡ ಲೋಕ ಇನ್ನು ಮೇಲಾದರೂ ವ್ಯಾಪಕವಾಗಿ ಗುರುತಿಸುವುದೆಂದು ನಂಬುತ್ತೇನೆ. ಈ ಉತ್ತಮ ಕೃತಿರಚನೆಗಾಗಿ ಅವರನ್ನು ಅಭಿನಂದಿಸುತ್ತೇನೆ.

ಹಂಪ ನಾಗರಾಜಯ್ಯ, ಬೆಂಗಳೂರು

ಆಕರ : ಮಾರ್ಗ ಸಂಪುಟ–೬

೧೪೭

ವಚನಾನುಶೀಲನ

೧೯೮೯

ಸೌಮ್ಯ ವ್ಯಕ್ತಿತ್ವ, ಲೇಖನ ವ್ಯವಸಾಯಗಳ ಮೂಲಕ ಡಾ. ಎಸ್. ವಿದ್ಯಾಶಂಕರ ಅವರು ಕಳೆದ ಇಪ್ಪತ್ತು ವರ್ಷಗಳಿಂದಲೂ ನನ್ನ ಗಮನ ಸೆಳೆದಿದ್ದಾರೆ. ಬಹುಜನರ ಉಪೇಕ್ಷೆಗೆ ಗುರಿಯಾಗಿರುವ ಸಂಶೋಧನ ಮತ್ತು ಸಂಪಾದನ ಕ್ಷೇತ್ರಗಳನ್ನು ಆರಿಸಿಕೊಂಡು, ಮಹತ್ವದ ಲೇಖಕರಾಗಿ ಬೆಳೆದಿರುವ ಡಾ. ವಿದ್ಯಾಶಂಕರ ಅವರ ಪ್ರಥಮ ಪ್ರೀತಿ ವೀರಶೈವಸಾಹಿತ್ಯ. ಈ ಸಾಹಿತ್ಯದ ಮೊದಲ ಬೆಳೆಯಾದ ವಚನಗಳ ಪ್ರಧಾನ ಅಧ್ಯಯನವಾಗಿದೆ, ಅವರ 'ವಚನಾನುಶೀಲನ.' ಗಾತ್ರದಲ್ಲಿ ಅಷ್ಟೇ ಅಲ್ಲ ಗುಣದೃಷ್ಟಿಯಿಂದಲೂ ಅಭ್ಯಾಸಿಗಳನ್ನು ಆಕರ್ಷಿಸುವ ಕಾಂತಶಕ್ತಿಯುಳ್ಳ ಈ ಕೃತಿಯನ್ನು ರೂಪಿಸಿದ ಡಾ. ವಿದ್ಯಾಶಂಕರ ಅವರನ್ನು ಪ್ರಥಮದಲ್ಲಿ ಅಭಿನಂದಿಸುತ್ತೇನೆ.

ಅಭ್ಯಾಸ ಬಹಳ ನಡೆದಷ್ಟೂ ಬಹಳ ಅಭ್ಯಾಸಕ್ಕೆ ದಾರಿಮಾಡಿಕೊಡುವುದು ನಿಜವಾದ ಸಾಹಿತ್ಯದ ಲಕ್ಷಣವಾಗಿದೆ. ಇದಕ್ಕೆ ಪರಮಾವಧಿ ನಿದರ್ಶನವಾಗಿರುವ ವಚನಸಾಹಿತ್ಯದಲ್ಲಿ ಡಾ. ವಿದ್ಯಾಶಂಕರ ಅವರು ಮಾಡಿ ಮುಗಿಸಿದ ಒಂದು ಕೆಲಸವು ಎರಡು ಕೆಲಸಗಳಿಗೆ ದಾರಿ ತೆರೆದುಕೊಟ್ಟುದರ ಫಲವೆನಿಸಿವೆ, ಈ ಲೇಖನಗಳು. ಇದರಿಂದಾಗಿ ವಚನಾಭ್ಯಾಸಿಗಳ ಸಾಲಿನಲ್ಲಿ ಅವರಿಗೆ ವಿಶಿಷ್ಟ ಸ್ಥಾನವೂ ಪ್ರಾಪ್ತವಾಗಿದೆ.

ವಚನಸಾಹಿತ್ಯ ೧೨ನೆಯ ಶತಮಾನದ ಮುಕ್ತಸಮಾಜದ ಸೃಷ್ಟಿ. ಹೀಗಾಗಿ ಕಳೆದ ೮೦೦ ವರ್ಷಗಳ ಅವಧಿಯಲ್ಲಿ ಇದರ ಸರಿಯಾದ, ಸಮಗ್ರವಾದ ಅರ್ಥವಿವೇಚನೆ ಸಾಧ್ಯವಾದುದು, ಮುಕ್ತಸಮಾಜವಾದ ಇಂದಿನ ೨೦ನೆಯ ಶತಮಾನದಲ್ಲಿ ಮಾತ್ರ. ಹೀಗೆ ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿ ವಚನಕೃತಿಗಳ ಅನ್ವೇಷಣ-ಪರಿಷ್ಕರಣ, ವಚನಗಳ ವಿಮರ್ಶನ-ಸಂಶೋಧನ ಮತ್ತು ತಾತ್ವಿಕ ಅಧ್ಯಯನ ಇತ್ಯಾದಿ ಕೆಲಸಗಳು ಈವರೆಗೆ ಜರುಗಿವೆ. ಈಗ ಎರಡನೆಯ ಘಟ್ಟದಲ್ಲಿ ವಚನಗಳ ಸಾಮಾಜಿಕ, ತೌಲನಿಕ ಅಭ್ಯಾಸದ ಬಾಗಿಲುಗಳು ತೆರೆದುಕೊಂಡಿವೆ; ಈ ರಚನೆಗಳ ಶಕ್ತಿ-ಮಿತಿಗಳ ವಸ್ತುನಿಷ್ಠ ಅಧ್ಯಯನಕ್ಕೂ ಅವಕಾಶ ಪ್ರಾಪ್ತವಾಗಿದೆ. ಹೀಗಾಗಿ ವಚನವನ್ನು ಅನೇಕ ಮಗ್ಗಲುಗಳಿಂದ ಸ್ಫೋಟಗೊಳಿಸುವ ಕ್ರಿಯೆ ಇಂದು ಗಾಢವಾಗಿ ನಡೆಯತೊಡಗಿದೆ. ಕಳೆದ ಇಪ್ಪತ್ತು ವರ್ಷಗಳಿಂದ ಬರೆಯುತ್ತ ಬಂದ ಲೇಖನಗಳ ಸಂಕಲನವಾಗಿರುವ 'ವಚನಾನುಶೀಲನ'ದಲ್ಲಿ ಮೊದಲ ಘಟ್ಟದ ಲಕ್ಷಣಗಳ ಜೊತೆ, ಎರಡನೆಯ ಘಟ್ಟದ ಲಕ್ಷಣಗಳೂ ಕಂಡುಬರುತ್ತಿರುವುದು ಸಂತೋಷದ ವಿಷಯವಾಗಿದೆ.

ಸಮಸ್ಯೆಗಳಿಗೆ ಉತ್ತರ ಹುಡುಕುವಂತೆ ಹೊಸ ಸಮಸ್ಯೆಗಳನ್ನು ಎತ್ತುವುದೂ, ಸಾಧ್ಯತೆರೂಪದ ಪರಿಹಾರಗಳನ್ನು ಮಂಡಿಸುವುದೂ ಸಂಶೋಧನೆಯೇ ಆಗಿದೆ. ಆದರೆ ವಿರೋಧಾಭಾಸಗಳಿಂದ ಕೂಡಿದ ನಮ್ಮ ಪ್ರಾಚೀನ ಆಕರಸಾಮಗ್ರಿಯನ್ನು ಬಳಸಿಕೊಂಡು ಆತ್ಯಂತಿಕ ಉತ್ತರ ಹುಡುಕುವ ಅವಕಾಶಗಳು ಕನ್ನಡದಲ್ಲಿ ಕಡಿಮೆ; ಹೊಸ ಸಮಸ್ಯೆಗಳನ್ನು ಎತ್ತುವ ಮತ್ತು ಸಾಧ್ಯತೆಗಳನ್ನು ಮಂಡಿಸುವ ಅವಕಾಶಗಳೇ ಹೆಚ್ಚು. ಕನ್ನಡದ ಯಾವುದೇ ವಿದ್ವಾಂಸರ ಸಂಶೋಧನ ಗ್ರಂಥದಲ್ಲಿ ಕಾಣುವ ಈ ಬಗೆಯ ಎಲ್ಲ ಮಾದರಿಗಳನ್ನು 'ವಚನಾನುಶೀಲನ'ದಲ್ಲಿಯೂ ಕಾಣಬಹುದಾಗಿದೆ.

ನಾಲ್ಕಾರು ಲೇಖನಗಳನ್ನು ಬಿಟ್ಟರೆ ಈ ಸಂಕಲನ ಬಸವಪೂರ್ವಯುಗದ ಶರಣರು-ಸಾಹಿತ್ಯ, ಪ್ರಾಚೀನ ಧರ್ಮ-ಪಂಥಗಳು, ಶರಣಸಾಹಿತ್ಯ-ತತ್ವ, ವಚನಗಳ ಸಮಾಜೋಧಾರ್ಮಿಕ ಅಧ್ಯಯನ ಎಂದು ನಾಲ್ಕು ಬಗೆಯಲ್ಲಿ ವರ್ಗೀಕರಣಗೊಳ್ಳುತ್ತದೆ. ಇದು ಡಾ. ವಿದ್ಯಾಶಂಕರ ಅವರ ಅಭ್ಯಾಸದ ಆಯಾಮಗಳನ್ನು ಕಾಣಿಸಿಕೊಡುತ್ತದೆ.

'ಬಸವಪೂರ್ವದ ವಚನಶಿಲ್ಪ'ದಿಂದ 'ತಮಿಳು ತೇವಾರಂ ಹಾಗೂ ಕನ್ನಡ ದೇಹಾರಂ-ಒಂದು ಟಿಪ್ಪಣಿ' ವರೆಗಿನ ಲೇಖನಗಳು ಒಂದು ನಿಟ್ಟಿನವಾಗಿವೆ. ತಮಿಳು ನಾಡಿನ ಅಧ್ಯಯನವನ್ನು ಮೈಗೂಡಿಸಿಕೊಂಡ 'ಮಾದಾರ ಚೆನ್ನಯ್ಯನು ಒಬ್ಬನೆ? ಇಬ್ಬರೇ?', 'ತಮಿಳುನಾಡಿನ ಪುರಾತನರು ಹಾಗೂ ವಚನಕಾರರು', 'ತಮಿಳು ತೇವಾರಂ ಹಾಗೂ ಕನ್ನಡ ದೇಹಾರಂ - ಒಂದು ಟಿಪ್ಪಣಿ' - ಇತ್ಯಾದಿ ಲೇಖನಗಳು ಖಂಡಿತವಾಗಿಯೂ ನಮ್ಮ ತಿಳುವಳಿಕೆಯನ್ನು ಹೆಚ್ಚಿಸುತ್ತವೆ. ಆದರೆ ಇಲ್ಲಿ ಚರ್ಚಿತವಾಗಿರುವ ಜೇಡರ ದಾಸಿಮಯ್ಯ, ಡೋಹರ ಕಕ್ಕಯ್ಯ, ಮಾದರ ಚೆನ್ನಯ್ಯಾದಿಗಳು ಬಸವಣ್ಣನವರಿಗೆ ಎಷ್ಟು ಹಿರಿಯರೆಂಬುದು ಇನ್ನೂ ತೆರೆದ ಪ್ರಶ್ನೆಯೇ ಆಗಿದೆ. ಬಸವಣ್ಣನವರು ಮೇಲುವರ್ಗದ ಶರಣರನ್ನು ಬಿಟ್ಟು ಕೇವಲ ಕೆಳವರ್ಗದ ಶರಣರಿಗೆ ಮಾತ್ರ ಅಯ್ಯ, ಹಿರಿಯಯ್ಯ, ಅಪ್ಪ, ಬೊಪ್ಪ, ಇತ್ಯಾದಿ ಪದಗಳನ್ನು ಬಳಸಿರುವುದರಿಂದ, ನಾವು ಈವರೆಗೆ ಭಾವಿಸಿದಂತೆ ಈ ಪದಗಳು ಅವರ ವಯಸ್ಸನ್ನು ಸೂಚಿಸಿವುದಿಲ್ಲ; ದಲಿತ ಪ್ರೀತಿಯನ್ನು ಸೂಚಿಸುತ್ತವೆ. ಇವೇ ಮೊದಲಾದ ಹೊಸ ವ್ಯಾಖ್ಯಾನಗಳಿಂದ ಈ ಪ್ರಶ್ನೆಯನ್ನು ಮರುಪರಿಶೀಲಿಸಬಹುದಾಗಿದೆ.

ಕಾಪಾಲಿಕರು, ಕಾಳಾಮುಖರು, ಲಕುಲೀಶ ಪಾಶುಪತರು ಹೆಸರಿನ ಶೀರ್ಷಿಕೆಗಳು ತಟ್ಟನೇ ನಮ್ಮ ಗಮನ ಸೆಳೆದರೂ, ಉಪಲಬ್ಧವಿರುವ ವಿರೋಧಾಭಾಸ ರೂಪದ ಸಾಮಗ್ರಿಯಿಂದಾಗಿ ಅವುಗಳ ನಿಶ್ಚಿತ ಸ್ವರೂಪವನ್ನು ಗುರುತಿಸುವುದು ಇಂದು ಅಸಾಧ್ಯವೇ ಆಗಿದೆ. 'ಕಾಳಾಮುಖ' ಪದಕ್ಕೆ ಮುಖದ ಮೇಲೆ ಭಸ್ಮ (ಬೂದಿ) ಧರಿಸಿಕೊಳ್ಳುವವರು ಎಂಬ ಅರ್ಥವಿರುವಂತೆ ತೋರುತ್ತದೆ. 'ತಾಂತ್ರಿಕ ಪಂಥವೊಂದರ ಆಚರಣೆಗಳ ಬಗೆಗಿನ ಒಂದು ಹೊಸ ಉಲ್ಲೇಖ' ಈ ಬಗೆಗಿನ ನಮ್ಮ ತಿಳುವಳಿಕೆಯನ್ನು ವಿಸ್ತರಿಸುವ ಒಂದು ಉತ್ತಮ ಸೇರ್ಪಡೆಯಾಗಿದೆ. ಕನ್ನಡ ಸಂಸ್ಕೃತ ಸಾಹಿತ್ಯಕೃತಿಗಳಿಂದ, ಶಾಸನಗಳಿಂದ ಸಂಗ್ರಹಿಸಿದ ವಿಪುಲ ಸಾಮಗ್ರಿ ಇಲ್ಲಿಯ ವಿಶೇಷತೆಯಾಗಿದೆ.

'ಸೃಷ್ಟಿಯ ವಚನಸಾಹಿತ್ಯ'ದಿಂದ 'ವಚನಕಾರರು ಹಾಗೂ ಪುಣ್ಯಪಾಪಗಳ ಕಲ್ಪನೆ'ವರೆಗಿನದು ತಾತ್ವಿಕ ವಿಚಾರವನ್ನೊಳಗೊಂಡ ಭಾಗ. ಈವರೆಗೆ ನಮ್ಮಲ್ಲಿ ವಚನಸಾಹಿತ್ಯವನ್ನು ಗಮನಿಸಿ ಕೆಲವರು ಬರೆದ ತಾತ್ವಿಕ ಬರವಣಿಗೆ ವೆಗ್ಗಳವಾಗಿದ್ದರೂ ಪುನರುಕ್ತಿ, ಗೊಂದಲ, ವೈರುಧ್ಯಗಳ ಮೊತ್ತವಾಗಿರುವ ಅದು ನಮಗೆ ಹೊಸದೇನನ್ನೂ ತಿಳಿಸುವದಿಲ್ಲ. ತಪ್ಪುವಿವರಣೆ ಇಲ್ಲವೆ ಪರಿಭಾಷೆಗಳ ಮರೆಯಲ್ಲಿ ಜಾರಿಕೊಂಡ ಬರಹಗಳೇ ಹೆಚ್ಚು. ಇಂಥ ಸಂದರ್ಭದಲ್ಲಿ ಇಲ್ಲಿಯ 'ವಚನಗಳ ಸತಿಪತಿ ಭಾವ', 'ಸನ್ಯಾಸ : ಒಂದು ಪುನರಾಲೋಚನೆ', 'ವಚನಕಾರರು ಹಾಗೂ ಪುಣ್ಯಪಾಪಗಳ ಕಲ್ಪನೆ' - ಇವು ಹೊಸ ರೀತಿಯ ಪ್ರಯತ್ನಗಳಾಗಿ, ನಮ್ಮನ್ನು ಆಕರ್ಷಿಸುತ್ತ ಒಂದು ಮಿತಿಯಲ್ಲಿ ಸೂಕ್ತ ಉತ್ತರ ನೀಡಿವೆ ಎಂದೇ ಹೇಳಬೇಕು.

ಕೊನೆಯದು, ವಚನಗಳ ಸಾಮಾಜಿಕ ಅಧ್ಯಯನದ ವಿಭಾಗ. ಇಲ್ಲಿಯ 'ಕೆಳವರ್ಗದವರು ಹಾಗೂ ಪ್ರತಿಭಟನೆ' ವಿಪುಲ ಉದಾಹರಣೆಗಳಿಂದ ವಿಷಯವನ್ನು ವಿವರ ವಿವರವಾಗಿ ಬಿಡಿಸಿ ತೋರಿಸುತ್ತದೆ. ಇವರು

ತಮ್ಮನ್ನು ತುಳಿದವರ ವಿರುದ್ಧ 'ಪ್ರತಿಭಟನೆ' ವ್ಯಕ್ತಪಡಿಸುವುದಕ್ಕಿಂತ, ವಾಮಾಚಾರ ಇತ್ಯಾದಿಗಳನ್ನು ಅಲ್ಲಗಳೆಯುವುದೇ ಹೆಚ್ಚು. ಅಲ್ಲಗಳೆಯುವಿಕೆ ಪ್ರತಿಭಟನೆ ಅಲ್ಲವೆಂದು ತೋರುತ್ತದೆ. 'ಚೆನ್ನಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಚಿತ್ರ' ಲೇಖನದಲ್ಲಿ ಅವರ ಮೂದಲಿಕೆಯ ವಚನಗಳು ಒದಗಿಸುವ ಸಾಮಗ್ರಿಯಿಂದ ವೀರಶೈವೇತರ ಸಮಾಜದ ಒಂದು ವಿಸ್ತಾರವಾದ ಚಿತ್ರವನ್ನು ಕಟ್ಟಿಕೊಡಲಾಗಿದೆ. 'ಲಿಂಗವಂತ ಹರಿಜನರು' ಇತ್ತೀಚೆ ವೀರಶೈವಕ್ಕೆ ಬಂದ, ಬರುತ್ತಿರುವ ಮೈಸೂರು ಪ್ರಾಂತದ ಹರಿಜನ ವರ್ಗದ ಪರಿಚಯಾತ್ಮಕ ಶೋಧವಾಗಿದೆ.

ಹೀಗೆ ಹಲವು ಮೈ-ಮಗ್ಗಲುಗಳನ್ನು ಅಳವಡಿಸಿಕೊಂಡಿರುವ 'ವಚನಾನುಶೀಲನ' ಒಂದು ಉತ್ತಮ ಸಂಶೋಧನ ಸಂಕಲನವೆನಿಸಿದೆ. ಆದರೆ ಸಾಹಿತ್ಯದ ಬಿಡಿಪ್ರಕಾರಗಳಾದ ಕಥೆ, ಕವನ, ಲಲಿತಪ್ರಬಂಧ ಸಂಕಲನಗಳಿಗೆ ಸಮಾನವಾದ ಗೌರವ, ನಮ್ಮಲ್ಲಿ ಸಂಶೋಧನಪ್ರಬಂಧ ಸಂಕಲನಗಳಿಗೆ ಸಿಗದಿರುವುದು ವಿಷಾದದ ಸಂಗತಿಯಾಗಿದೆ. ಕಾಳಿದಾಸನಷ್ಟೇ ಪಾಣಿನಿಯೂ ದೊಡ್ಡವ. ಒಬ್ಬನದು ಪ್ರತಿಭೆ, ಇನ್ನೊಬ್ಬನದು ಪಾಂಡಿತ್ಯ. ಒಬ್ಬ ಮಹಾಕವಿ, ಇನ್ನೊಬ್ಬ ಮಹಾಸಂಶೋಧಕ. ನಮ್ಮ ಸಾಹಿತಿಗಳು, ಸಾಹಿತ್ಯಸಂಸ್ಥೆಗಳು ಇಂದು ಈ ಸತ್ಯವನ್ನು ಸ್ಥಾಪಿಸುವುದು ಅವಶ್ಯವಿದೆ. ಇದರಿಂದಾಗಿ ಸಾರ್ವಜನಿಕರಲ್ಲಿಯೂ ಒಟ್ಟು ಸಾಹಿತ್ಯದ ಬಗ್ಗೆ ಸರಿಯಾದ ದೃಷ್ಟಿಕೋನ ಮೂಡುತ್ತದೆ. 'ವಚನಾನುಶೀಲನ'ದಂಥ ಕೃತಿಗಳನ್ನು ಈ ದೃಷ್ಟಿಯಿಂದ ಕನ್ನಡಿಗರು
ನೋಡಬೇಕೆಂಬುದನ್ನು ಸೂಚಿಸುತ್ತ, ಡಾ. ವಿದ್ಯಾಶಂಕರ ಅವರನ್ನು ಇನ್ನೊಮ್ಮೆ ಅಭಿನಂದಿಸುತ್ತೇನೆ.

ಎಸ್. ವಿದ್ಯಾಶಂಕರ, ಬೆಂಗಳೂರು.

ಆಕರ : ಮಾರ್ಗ ಸಂಪುಟ–೬

■■

೧೪೮

ಕನ್ನಡ ಸಾಹಿತ್ಯದರ್ಶನ

೧೯೮೯

ಇಪ್ಪತ್ತು ವರ್ಷಗಳ ಹಿಂದಿನ ಘಟನೆ: ಹೈದರಾಬಾದಿನಿಂದ ಕನ್ನಡ ವಿದ್ವಾಂಸರಾದ ಶ್ರೀ. ಡಿ. ಕೆ. ಭೀಮಸೇನರಾವ, ಶ್ರೀ ಮಾನ್ವಿ ನರಸಿಂಗರಾವ ಅವರ ಹೆಸರು ಕೇಳಿ ಬರುತ್ತಲಿದ್ದ ಕಾಲ. ಈ ಪರಿವಾರದಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಶ್ರೀ ಪಾಂಡುರಂಗಾಚಾರ್ಯ ವೈದ್ಯ ಅವರಿಗೂ ನನಗೂ ಹೈದರಾಬಾದಿನಲ್ಲಿ ಪ್ರಥಮ ಭೆಟ್ಟಿ ಸಂಭವಿಸಿತು. ಆಗ ನಮ್ಮಿಬ್ಬರಲ್ಲಿ ಸಾಹಿತ್ಯಿಕ ಸಮಾಲೋಚನೆ ನಡೆಯುತ್ತಿದ್ದಂತೆಯೇ ಶ್ರೀ ವೈದ್ಯ ಅವರನ್ನು ಅಜ್ಞಾತ ವಿದ್ವಾಂಸರೆಂದು ನಾನು ಗುರುತಿಸಿದೆ. ಮುಂದುವರಿದು "ನಿಮ್ಮಿಂದ ಕನ್ನಡಕ್ಕೆ ಲೇಖನ ಸೇವೆ ಸಲ್ಲಬೇಕು" ಎಂದು ಪ್ರಸ್ತಾಪಿಸುತ್ತಲೇ "ಕನ್ನಡದ ಕುರುಕ್ಷೇತ್ರದಲ್ಲಿ ನಾನೊಬ್ಬ ಬೆರಳು ಕತ್ತರಿಸಿಕೊಂಡ ಏಕಲವ್ಯ, ಹೇಗೆ ಬರೆಯಲಿ?" ಎಂದು ಧ್ವನಿಪೂರ್ಣವಾಗಿ ಉತ್ತರಿಸಿದರು. ಆ ಉತ್ತರದಲ್ಲಿ ನೋವು ವಿಷಾದ ತುಂಬಿದ್ದಿತು. ಅವರ ವಿದ್ವತ್ತಿನ ಬಗ್ಗೆ ಅದೇ ಆಗ ಉಂಟಾಗಿದ್ದ ನನ್ನ ಪ್ರೀತಿ ಇನ್ನೂ ವರ್ಧಿಸಿತು.

ಆ ಮೇಲಿನ ವರ್ಷಗಳಲ್ಲಿ ನಾವಿಬ್ಬರೂ ಮತ್ತೆ ಮತ್ತೆ ಸಂಧಿಸಿದ್ದೆವು. ಆ ಸಂದರ್ಭಗಳಲ್ಲಿ ತಮ್ಮ ತರ್ಕಬದ್ಧ ಮಾತುಗಾರಿಕೆಯಿಂದ ಅವರು ನನ್ನ ಮೇಲೆ ಪ್ರಭಾವ ಬೀರುತ್ತಲೇ ನಡೆದರು.

ಇಂದು ವೈದ್ಯರು ನಮ್ಮ ಮಧ್ಯದಲ್ಲಿ ಇಲ್ಲ. "ನಿಮ್ಮಿಂದ ಕನ್ನಡಕ್ಕೆ ಲೇಖನಸೇವೆ ಸಲ್ಲಬೇಕು" ಎಂಬ ನನ್ನ ಅಂದಿನ ಮಾತಿಗೆ ಉತ್ತರವೆಂಬಂತೆ ಈ ಪುಸ್ತಕ 'ಮುನ್ನುಡಿ'ಗಾಗಿ ನನ್ನ ಕಡೆಗೇ ಬಂದುದು, ಭವಿಷ್ಯ ಸತ್ಯವಾದಂಥ ಘಟನೆ. ಈ ವಿಸ್ಮಯಮಿಶ್ರಭಾವದಿಂದ ಶ್ರದ್ಧಾಂಜಲಿ ರೂಪದ ಮುನ್ನುಡಿ ಬರೆಯುತ್ತಲಿದ್ದೇನೆ.

ಕಿಟೆಲ್ ಅವರು ಛಂದೋಂಬುಧಿಗೆ ಬರೆದ ಮುನ್ನುಡಿ (೧೮೭೨)ಯೇ ಕನ್ನಡದ ಮೊದಲ ಸಾಹಿತ್ಯ ಚರಿತ್ರೆಂದಿಟ್ಟುಕೊಂಡರೆ, ನಮ್ಮ ಸಾಹಿತ್ಯಚರಿತ್ರೆಯ ಬರೆವಣಿಗೆಗೆ ನೂರು ವರ್ಷ ತುಂಬಿದವು. ಈ ಅವಧಿಯಲ್ಲಿ ವೈಯಕ್ತಿಕ ಮತ್ತು ಸಾಂಸ್ಥಿಕ ಮಟ್ಟದಲ್ಲಿ ಕೆಲವು ಸಾಹಿತ್ಯಚರಿತ್ರೆಗಳು ಕನ್ನಡದಲ್ಲಿ ಹುಟ್ಟಿಕೊಂಡಿವೆ. ಅವುಗಳಲ್ಲಿ ಒಂದು ವೈಯಕ್ತಿಕ ವಿನಮ್ರ ಪ್ರಯತ್ನವಾಗಿದೆ, ಶ್ರೀ ವೈದ್ಯ ಅವರ ಈ "ಕನ್ನಡ ಸಾಹಿತ್ಯದರ್ಶನ."

ಈ ಗ್ರಂಥವನ್ನು 'ಓದುವ ಮೊದಲು ಎರಡು ಮಿತಿಗಳನ್ನು ಅವಶ್ಯ ಗಮನಿಸಬೇಕು. ಇದು ನವೋದಯ ಕಾಲದ ಬರೆವಣಿಗೆ; ಇದನ್ನು ಬರೆದವರು ಹೊರನಾಡ ಕನ್ನಡ ವಿದ್ವಾಂಸರು. ಹೀಗಿದ್ದೂ ಈ ಮಿತಿಗಳನ್ನು ದಾಟಲು ಪ್ರಯತ್ನಿಸಿದುದು ಈ ಕೃತಿಯ ಒಂದು ಸಾಧನೆಯಾಗಿದೆ.

ಸಾಹಿತ್ಯ ಚರಿತ್ರೆಯನ್ನು ಬರೆಯುವವರು ಸಮಗ್ರ ಸಾಹಿತ್ಯವನ್ನು ಕಣ್ಣುಮುಂದೆ ಇಟ್ಟುಕೊಂಡು, ಹೇಗೆ ಹೇಳಲಾಗಿದೆ? ಏನು ಹೇಳಲಾಗಿದೆ? ಯಾಕೆ ಹೇಳಲಾಗಿದೆ? ಎಂಬ ಮೂರು ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ ಹೋಗಬೇಕಾಗುತ್ತದೆ. ಇವುಗಳಲ್ಲಿ ,ಒಂದು ಶೈಲಿಯ ನಿರೂಪಣೆಗೆ ಸಂಬಂಧಿಸಿದ್ದು, ಇನ್ನೊಂದು ವಸ್ತುವಿನ

ನಿರ್ವಹಣೆಗೆ ಸಂಬಂಧಿಸಿದ್ದು, ಮತ್ತೊಂದು ಅದರ ಹಿಂದೆ ಕವಿಗಿರುವ ಒತ್ತಡಗಳಿಗೆ ಸಂಬಂಧಿಸಿದ್ದು. ಈ ಮೂರು ನೆಲೆಗಳಲ್ಲಿ ನಿಂತು ಬರೆದ ಸಾಹಿತ್ಯಚರಿತ್ರೆ ಮಾತ್ರ ಸಾಹಿತ್ಯದ ಆತ್ಮ ಚರಿತ್ರೆಯಾಗುತ್ತದೆ. ಇಷ್ಟು ವಿಸ್ತಾರವಾದ ಭೂಮಿಕೆ ಮಾತ್ರ ಆ ಚರಿತ್ರೆಗೆ ಪರಿಪೂರ್ಣತೆಯನ್ನು ಒದಗಿಸಬಲ್ಲುದು. ಪ್ರಸ್ತುತ 'ಕನ್ನಡ ಸಾಹಿತ್ಯ ದರ್ಶನ'ದಿಂದ ಇದೆಲ್ಲವನ್ನು ಅಪೇಕ್ಷಿಸಬಾರದು; ಅದು ಶ್ರೀ ವೈದ್ಯರ ಉದ್ದೇಶವೂ ಅಲ್ಲ.

ಸಾಹಿತ್ಯಚರಿತ್ರೆಯನ್ನು ಬರೆಯುವ ವಿಧಾನಗಳು ಅನೇಕ. ಅವುಗಳಲ್ಲಿ ಶತಮಾನನಿಷ್ಠ ಬರೆವಣಿಗೆಯೂ ಒಂದು. 'ಕನ್ನಡಸಾಹಿತ್ಯ ದರ್ಶನ' ಅಂಥ ಒಂದು ಕೃತಿ. ಶ್ರೀ ವೈದ್ಯ ಅವರು ಮೂಲತಃ ಅಧ್ಯಾಪಕರು. ವಿದ್ಯಾರ್ಥಿಗಳಿಗೆ ಅನೇಕ ವರ್ಷ ಸಾಹಿತ್ಯಚರಿತ್ರೆಯನ್ನು ಬೋಧಿಸಿದವರು. ಆ ಬೋಧನೆಯ ನಿರೂಪಣಕ್ರಮ ಇಲ್ಲಿ ಪುಸ್ತಕದ ಮೈ ಪಡೆದು, ಅದು ಕವಿ ಮತ್ತು ಕೃತಿಗಳ ಶೋಧ-ಪರಿಚಯ-ವಿಮರ್ಶೆಗಳ ಮೇಳ ರೂಪದಿಂದ ಶತಮಾನದಿಂದ ಶತಮಾನಕ್ಕೆ ವಾಹಿನಿಯಾಗಿ ಹರಿದಿದೆ. ಒಬ್ಬ ಪ್ರಾಮಾಣಿಕ ಪ್ರಾಧ್ಯಾಪಕ ತನ್ನ ತಿಳಿವಳಿಕೆಯನ್ನು ಪ್ರತಿವರ್ಷ ನವೀಕರಿಸಿಕೊಳ್ಳುತ್ತ ಹೋಗಬೇಕಾಗುತ್ತದೆ. ಕನ್ನಡದ ಶ್ರದ್ಧಾವಂತ ಅಧ್ಯಾಪಕರಾದ ಶ್ರೀ ವೈದ್ಯ ಅವರು, ತಮ್ಮ ಕಾಲದ ಎಲ್ಲ ಶೋಧ-ವಿಮರ್ಶೆಗಳನ್ನು ಮೈಗೂಡಿಸಿಕೊಂಡು, ಈ ಗ್ರಂಥವನ್ನು ರೂಪಿಸಲು ಪ್ರಯತ್ನಿಸಿದ್ದಾರೆ.

ಹನ್ನೆರಡು ಪ್ರಕರಣಗಳಲ್ಲಿ ಹರಡಿಕೊಂಡಿರುವ ಇದರ ಮುಖ್ಯಲಕ್ಷಣವೆಂದರೆ ಸರಳತೆ, ಸಂಕ್ಷಿಪ್ತತೆ ಮತ್ತು ಸಮಗ್ರತೆ. ಪ್ರಾರಂಭದ ಮೂರು ಪ್ರಕರಣಗಳು ಸಾಹಿತ್ಯ ಚರಿತ್ರೆಗೆ ಸರಿಯಾದ ತಳಪಾಯವಾಗಿ ಪರಿಣಮಿಸಿವೆ. ಇಲ್ಲಿ ಶ್ರೀ ವೈದ್ಯ ಅವರ ಅಭ್ಯಾಸದ ವ್ಯಾಪ್ತಿ, ವಿಷಯವನ್ನು ಕ್ರೋಢೀಕರಿಸುವ ರೀತಿ, ನಿರೂಪಣಾ ಪದ್ಧತಿಗಳು ಸುಸಂಬದ್ಧವಾಗಿ ಮೇಳವಿಸಿವೆ. ಆಮೇಲೆ ೯ನೆಯ ಶತಮಾನದಿಂದ ೧೯ನೆಯ ಶತಮಾನಗಳ ವರೆಗಿನ ಕನ್ನಡ ಸಾಹಿತ್ಯವನ್ನು ಶತಮಾನಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಈ ಸಂದರ್ಭದಲ್ಲಿ ಆಯಾ ಶತಮಾನಗಳ ಪ್ರಮುಖ ಲಕ್ಷಣದ ಪ್ರತಿಪಾದನೆ, ಪ್ರಧಾನ ಕವಿ ಮತ್ತು ಕೃತಿಗಳ ಪರಿಚಯಾತ್ಮಕ ವಿಮರ್ಶೆ -ಈ ಕ್ರಮದಲ್ಲಿ ಗ್ರಂಥ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಸಾಹಿತ್ಯಕೃತಿಗಳನ್ನು ನೇರವಾಗಿ ಓದಿದ ಶ್ರಮ, ರಾಗ-ದ್ವೇಷರಹಿತ ದೃಷ್ಟಿ ಕಾರಣವಾಗಿ, ಒಂದು ವಿಶ್ವಾಸಾರ್ಹ ಬರೆವಣಿಗೆಯ ಮುದ್ರೆ ಇದಕ್ಕೆ ಪ್ರಾಪ್ತವಾಗಿದೆ. ಆದುದರಿಂದ ಹೊಸದಾಗಿ ಕನ್ನಡ ಸಾಹಿತ್ಯಚರಿತ್ರೆಯನ್ನು ತಿಳಿದುಕೊಳ್ಳಬೇಕೆನ್ನುವವರಿಗೆ ಒಂದು ಉತ್ತಮ ಪ್ರವೇಶಿಕೆಯಂತೆ ನೆರವಾಗುವುದು ಈ ಕೃತಿಯ ಮುಖ್ಯ ವೈಶಿಷ್ಟ್ಯವಾಗಿದೆ.

ಯಾವುದೇ ಸಾಹಿತ್ಯ ಚರಿತ್ರೆ ಪರಿಪೂರ್ಣವಲ್ಲ. ಅಜ್ಞಾತ ವಿಷಯಗಳ ಬೆಳಕು ಕಾಣುವಿಕೆ, ಚರಿತ್ರೆಕಾರನ ಶೈಕ್ಷಣಿಕ ಬೆಳವಣಿಗೆ ಇವುಗಳಿಂದಾಗಿ ಸಾಹಿತ್ಯಚರಿತ್ರೆಯ ಬರೆವಣಿಗೆಯೆನ್ನುವುದು ಪೂರ್ಣತೆಯತ್ತ ಸಾಗುವ ಒಂದು ಪ್ರಕ್ರಿಯೆಯಾಗಿದೆ. ಹೀಗಾಗಿ ಅನೇಕ ನಿಟ್ಟಿನಿಂದ, ಅನೇಕ ಗುಣಮಟ್ಟದ ಚರಿತ್ರೆಗಳನ್ನು ಬರೆಯುವ ಕ್ರಿಯೆ ಒಂದು ಸಾಹಿತ್ಯ ಸಂದರ್ಭದಲ್ಲಿ ಜರುಗುತ್ತ ಹೋಗುತ್ತವೆ. ಈ ದೃಷ್ಟಿಯಿಂದ ಶ್ರೀ ವೈದ್ಯ ಅವರ ಈ 'ಮರಣೋತ್ತರ ಪ್ರಕಟಣೆ' ಕನ್ನಡ ಸಾಹಿತ್ಯ ಚರಿತ್ರೆಯ ವಾಹಿನಿಗೆ ಒಂದು ಹೊಸ ಸೇರ್ಪಡೆಯಾಗಿದೆ.

ಮುನ್ನುಡಿ ಬರೆಯುವುದಕ್ಕಿಂತ, ಈ ನೆಪದಲ್ಲಿ ಅಗಲಿದ ಮಿತ್ರರನ್ನು ಸ್ಮರಿಸಿದ ತೃಪ್ತಿ-ಧನ್ಯತೆ ನನಗಾಗಿದೆ. ಈ ಅವಕಾಶವನ್ನು ನನ್ನದಾಗಿಸಿದ ಮಿತ್ರರಾದ ಶ್ರೀ ಶಂಕರ ಪಾಟೀಲ ಅವರಿಗೆ ಕೃತಜ್ಞನಾಗಿದ್ದೇನೆ.

ಪಾಂಡುರಂಗಾಚಾರ್ಯ, ವೈದ್ಯ

ಆಕರ : ಮಾರ್ಗ ಸಂಪುಟ–೬

■■

೧೪೯

ಸಂಶೋಧನ ವ್ಯಾಸಂಗ

೧೯೯೦

ಬೋಧನೆ, ಸಂಶೋಧನೆಗಳು ಸ್ನಾತಕೋತ್ತರ ಶಿಕ್ಷಣನಾಣ್ಯದ ಎರಡು ಮುಖಗಳು. ಇವುಗಳಲ್ಲಿ ಒಂದು ಮುಖ ಸವೆದರೂ ನಾಣ್ಯ ಅಪ್ರಯೋಜಕ. ಎರಡೂ ಮುಖಗಳು ವೇಗವಾಗಿ ಸವಕಳಿಯಾಗುತ್ತಲಿರುವ ಇಂದಿನ ಕಾಲದಲ್ಲಿ ಡಾ. ಬಿ. ವ್ಹಿ. ಶಿರೂರ ಅವರ 'ಸಂಶೋಧನವ್ಯಾಸಂಗ' ಬೆಳಕು ಕಾಣುತ್ತಲಿದೆ. ಸ್ನಾತಕೋತ್ತರ ಶಿಕ್ಷಣದೀಪಕ್ಕೆ ಇಂಥ ಪ್ರಯತ್ನಗಳೇ ಎಣ್ಣೆ-ಬತ್ತಿಯಾಗಿ ಪರಿಣಮಿಸುತ್ತವೆ.

ಸ್ನಾತಕೋತ್ತರ ಕನ್ನಡ ವಿಭಾಗಗಳು ಈವರೆಗೆ ಶೈಕ್ಷಣಿಕವಾಗಿ ಎರಡು ಪ್ರಯೋಗಗಳನ್ನು ಅನುಭವಿಸಿವೆ. ಟಿ. ಎಸ್. ವೆಂಕಣ್ಣಯ್ಯ, ಕೆ. ಜಿ. ಕುಂದಣಗಾರರ ಕಾಲದಲ್ಲಿ 'ವಿಭಾಗ' ರೂಪದಲ್ಲಿ ಕಣ್ಣುತೆರೆದ ಅವು, ಡಾ. ದೇಜಗೌ, ಡಾ. ಆರ್. ಸಿ. ಹಿರೇಮಠರ ಅವಧಿಯಲ್ಲಿ 'ಸಾಂಸ್ಥಿಕ' ರೂಪದ ಮರುರಚನೆ ಪಡೆದವು. ಈಗ ಇದರ ಪುಣ್ಯವೂ ತೀರಿದ್ದು, ಕನ್ನಡ ಅಧ್ಯಯನ ಸಂಸ್ಥೆಗಳನ್ನು ಹೊಸ ಪ್ರಯೋಗಕ್ಕೆ ಗುರಿಪಡಿಸುವುದು ಇಂದಿನ ಬಹುಮುಖ್ಯ ಅಗತ್ಯವೆನಿಸಿದೆ. ಬಹಿರಂಗದ ಪರಿವರ್ತನೆಯನ್ನು ಬಿಟ್ಟರೂ ಸಂಸ್ಥೆಯ ಅಂತರಂಗ ಪರಿವರ್ತನೆಗಾಗಿ ಸಂಶೋಧನೆ ಮೊದಲಾದ ಹೊಸ ಹೊಸ ವಿಷಯಗಳಿಗೆ ಸಂಬಂಧಪಟ್ಟ ಕೃತಿಗಳ ರಚನೆ ಇಲ್ಲಿ ನಡೆಯಬೇಕಾಗುತ್ತದೆ. ಅಂಥ ಒಂದು ಪ್ರಯತ್ನ 'ಸಂಶೋಧನ ವ್ಯಾಸಂಗ'.

ಕರ್ನಾಟಕದಲ್ಲಿ ಉನ್ನತ ಶಿಕ್ಷಣದ ಭಾಗವಾಗಿ ಬೆಳೆಯುತ್ತಲಿರುವ 'ಸಂಶೋಧನೆ'ಗೆ ನೂರು ವರ್ಷ ತುಂಬಿವೆ. ಈ ಅವಧಿಯಲ್ಲಿ ಅದು ಅನೇಕ ಪ್ರಯೋಗಗಳಿಗೆ ಗುರಿಯಾಗುತ್ತ, ಆ ಕಾರಣದಿಂದಾಗಿ ಆಕರಶೋಧಮುಖಿ, ಸಂಗತಿಶೋಧಮುಖಿ, ವಿಚಾರಶೋಧಮುಖಿ ಘಟ್ಟಗಳನ್ನು ಕ್ರಮಿಸುತ್ತ ಬಂದಿದೆ. ಏಕಕ್ಷೇತ್ರಿಯ ಪದ್ಧತಿಯನ್ನು ಮೀರಿ, ಬಹುಕ್ಷೇತ್ರಗಳ ಅಂತರ್‌ಸಂಬಂಧೀಯ ಪದ್ಧತಿಯಲ್ಲಿಯೂ ಅದು ಬೆಳೆಯುತ್ತಲಿದೆ. ಹೀಗೆ ಬೆಳೆಯುತ್ತಲಿರುವ ಅಧ್ಯಯನಕ್ಕೆ ಒಂದು ವೈಜ್ಞಾನಿಕ ಶಿಸ್ತನ್ನು ಒದಗಿಸುವ ದೃಷ್ಟಿಯಿಂದ ಇಂಗ್ಲಿಷ್, ಹಿಂದಿ ಮೊದಲಾದ ಭಾಷೆಗಳಲ್ಲಿ ಅನೇಕ "ಸಂಶೋಧನಶಾಸ್ತ್ರ" ಗ್ರಂಥಗಳು ಹುಟ್ಟಿಕೊಂಡಿವೆ. ವಿಜ್ಞಾನ, ಸಮಾಜವಿಜ್ಞಾನ, ಸಾಹಿತ್ಯ-ಕಲಾ ಕ್ಷೇತ್ರಗಳಿಗೆ ಸಂಬಂಧಪಟ್ಟ ವಿಶಿಷ್ಟ ಗ್ರಂಥಗಳೂ ಅಲ್ಲಿ ಬೆಳಕುಕಂಡಿವೆ. ಕನ್ನಡದಲ್ಲಿಯೂ ಈ ಬಗೆಯ ನಾಲ್ಕಾರು ಗ್ರಂಥಗಳು ಹೊರಬಂದಿವೆ. ಈಗ ಇವುಗಳಿಗೆ ಪೂರಕವಾಗಿ ಡಾ. ಶಿರೂರ ಅವರ ಕೃತಿ ಪ್ರಕಟಗೊಳ್ಳುತ್ತಲಿದೆ.

"ಸಂಶೋಧನಶಾಸ್ತ್ರ" ಹೆಸರಿನ ಗ್ರಂಥವೊಂದನ್ನು ಬರೆಯಬೇಕೆಂಬ ನನ್ನ ಆಸೆ ಹತ್ತು ವರ್ಷಗಳಷ್ಟು ಹಳೆಯದು. ಹೊಸ ಹೊಸ ಹೊಣೆ-ಎದುರಾದ ಎಡರು ಕಾರಣವಾಗಿ ಆ ಬರವಣಿಗೆ ಅರ್ಧಕ್ಕೇ ನಿಂತುಬಿಟ್ಟಿತು. ನನ್ನ ವಿದ್ಯಾರ್ಥಿ ಮಿತ್ರ ಡಾ. ಶಿರೂರ ಅವರ ಮೂಲಕ ಆ ನನ್ನ ಆಸೆ ಆಕಾರ ಪಡೆಯುತ್ತಿರುವುದು ಸಂತೋಷದ ವಿಷಯ. ಹೀಗೆ ಹತ್ತು ಜನ ದುಡಿದಾಗ ಮಾತ್ರ ಒಂದು ಹಾದಿ ಸಿದ್ಧವಾಗುತ್ತದೆ. ಅಂಥ ಹಾದಿಯ ಹೊಳಹು ಈ ಗ್ರಂಥದಲ್ಲಿರುವುದರಿಂದ ಇವರ ಪ್ರಯತ್ನವನ್ನು ಪ್ರೀತಿಸುತ್ತೇನೆ.

ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 'ಸಂಶೋಧನೆ'ಯೂ ಬೋಧನೆಯ ವಿಷಯವಾಗಿರಬೇಕೆಂದು ಇಚ್ಛಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಭ್ಯಾಸಕ್ರಮದಲ್ಲಿ ಹತ್ತು ವರ್ಷಗಳ ಹಿಂದೆಯೇ ಅದಕ್ಕೆ ಅವಕಾಶ ಮಾಡಿಕೊಡಲಾಯಿತು. ಒಂದು ಸ್ವತಂತ್ರ ಪುಸ್ತಕದ ನೀಲನಕ್ಷೆಯನ್ನು ಅಲ್ಲಿ ರೂಪಿಸಲಾಗಿದ್ದು, ಅಧ್ಯಾಪಕರಾದ ಡಾ. ಶಿರೂರ ಅವರು, ಆ ನಕ್ಷೆಯನ್ನು ಬೋಧಿಸುತ್ತ, ತಮ್ಮ ಅಧ್ಯಯನದ ಹೊಸ ಹೊಸ ಅನುಭವಗಳನ್ನು ಜೋಡಿಸುತ್ತ, ಆ ಬೋಧನೆಗೆ ಒಂದು ಪುಸ್ತಕರೂಪ ಒದಗಿಸಿದ್ದಾರೆ. ಹೀಗಿದ್ದೂ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಮಾತ್ರ ಸೀಮಿತವಾಗಿ ಉಳಿಯದೆ, ವಿದ್ವಾಂಸರ ಆಸಕ್ತಿಗೂ ಆಹಾರವಾಗಿ ಬೆಳೆದುದು ಇದರ ಮುಖ್ಯಲಕ್ಷಣವಾಗಿದೆ.

'ಪ್ರಸ್ತಾವನೆ'ಯಿಂದ ಪ್ರಾರಂಭಿಸಿ 'ಕರ್ನಾಟಕದಲ್ಲಿ ಸಂಶೋಧನೆ'ಯ ವರೆಗಿನ ಹತ್ತು ಪ್ರಕರಣಗಳ ಈ ಗ್ರಂಥ 'ಸಂಶೋಧನೆ'ಯನ್ನು ಪರಿಚಯ ಶೈಲಿಯಲ್ಲಿ ತಿಳಿಸಿಕೊಡುತ್ತದೆ. ಇವರ ಶೈಲಿಯ ಒಳಗೆ ತಾತ್ವಿಕಮುಖಿ, ಅನ್ವಯಿಕಮುಖಿಗಳು ಸಮನ್ವಯಗೊಳ್ಳುತ್ತ ಇಲ್ಲಿ ಮುಂದುವರಿದಿವೆ. ಹೀಗಾಗಿ ಸಂಶೋಧನೆಗೆ ಸಂಬಂಧಿಸಿದ ತತ್ವಗಳನ್ನಲ್ಲದೆ, ಸಂಶೋಧನ ಮಾಡುವ ಕಾರ್ಯವಿಧಾನಗಳನ್ನು ತಿಳಿಸಿಕೊಡುತ್ತಿರುವುದು ಈ ಕೃತಿಯ ಒಂದು ವಿಶೇಷತೆಯಾಗಿದೆ.

ಸಾಹಿತ್ಯ-ಕಲಾಕ್ಷೇತ್ರಕ್ಕೆ ಸಂಬಂಧಪಟ್ಟ 'ಸಂಶೋಧನ ಶಾಸ್ತ್ರ' ಸಾಮಾನ್ಯ ಸ್ವರೂಪದ್ದಾಗಿದ್ದರೂ ಭಾಷೆ-ಸಂಸ್ಕೃತಿಗಳ ಭಿನ್ನತೆಯಿಂದಾಗಿ, ಅದು ಕೆಲಮಟ್ಟಿಗೆ ಭಿನ್ನರೂಪ ಪಡೆಯಬೇಕಾಗುತ್ತದೆ. ಅಂದರೆ ಕನ್ನಡ 'ಸಂಶೋಧನಶಾಸ್ತ್ರ' ಕನ್ನಡ ಪರವಾಗಬೇಕಾಗುತ್ತದೆ. ಡಾ. ಶಿರೂರ ಅವರು ತಾತ್ವಿಕ ಹಾಗೂ ಅನ್ವಯಿಕ - ಈ ಎರಡೂ ನೆಲೆಗಳಲ್ಲಿ ತಮ್ಮ ಬರೆವಣಿಗೆಯನ್ನು ಕನ್ನಡಪರಗೊಳಿಸಿದುದನ್ನು ಇಲ್ಲಿ ಕಾಣುತ್ತೇವೆ. ಕನ್ನಡದ ಶ್ರೇಷ್ಠಶೋಧಗಳನ್ನು ಉದ್ಧರಿಸುವುದರ ಮೂಲಕ ನಮ್ಮಲ್ಲಿ ನಡೆದಿರುವ ಮಹತ್ವದ ಸಂಶೋಧನ ಚಟುವಟಿಕೆಗಳನ್ನು ಗುರುತಿಸಿಕೊಟ್ಟುದನ್ನು ಇಲ್ಲಿ ನೋಡಬಹುದಾಗಿದೆ. ಹೀಗಿದ್ದೂ ವಿಷಯದ ವರ್ಗೀಕರಣ, ಪರಿಕಲ್ಪನೆಗಳ ಅರ್ಥಗ್ರಹಣ, ಪಾರಿಭಾಷಿಕ ಪದನಿರ್ಮಾಣ ಮತ್ತು ನಿರೂಪಣೆಯ ವಿಧಾನಗಳಲ್ಲಿ ಕೆಲವೊಮ್ಮೆ ಇನ್ನೂ ಉತ್ತಮವಾದ 'ಶಾಸ್ತ್ರಶಿಸ್ತು' ಇಲ್ಲಿ ಅಪೇಕ್ಷಣೀಯವೆನಿಸುತ್ತದೆ.

ಭಾಷೆ-ಸಾಹಿತ್ಯ-ಸಂಸ್ಕೃತಿಗಳಲ್ಲಿ ನಡೆಯುವ ಸಂಶೋಧನೆಯ ಗತಕಾಲವನ್ನು ಕುರಿತುದು. ಇದು ಆಕರಸಾಮಗ್ರಿಯನ್ನು ಅವಲಂಬಿಸಿರುತ್ತದೆ. ಕರ್ನಾಟಕದಲ್ಲಿ ಈ ಬಗೆಯ ಸಾಮಗ್ರಿಯ ಕೊರತೆಯಿದೆ. ಇರುವ ಸಾಮಗ್ರಿಯೂ ಅಪೂರ್ಣತೆ ಮತ್ತು ಅತ್ಯುಕ್ತಿಯಿಂದ ಕೂಡಿದೆ. ಇಂಥ ಆಕರವನ್ನು ಅವಲಂಬಿಸಿ ಮಾಡುವ ಸಂಶೋಧನೆಯನ್ನು ನೋಡಲು ಸಮಾಜಕ್ಕೆ ವಿಶಿಷ್ಟದೃಷ್ಟಿ ಬೇಕು, ಪ್ರತಿಕ್ರಿಯಿಸುವ ವಿಶಿಷ್ಟ ವಿಧಾನಬೇಕು. ಇಲ್ಲದಿದ್ದರೆ ಸಂಶೋಧಕರ ಪ್ರಾಮಾಣಿಕತೆ ಸಾಮಾಜಿಕ ದಬ್ಬಾಳಿಕೆಗೆ ಗುರಿಯಾಗುತ್ತದೆ. ಇಂಥ ಅಪಾಯವನ್ನು ತಪ್ಪಿಸುವುದಕ್ಕಾಗಿ ಸಾಮಾಜಿಕರ ದೃಷ್ಟಿಯನ್ನೇ ತಿದ್ದುವ ಮೂಲಭೂತ ಕೆಲಸ ನಮ್ಮ ನಾಡಿನಲ್ಲಿ ನಡೆಯಬೇಕಾಗಿದೆ. ಈ ಕೆಲಸಕ್ಕೆ ಇಂಥ ಕೃತಿಗಳ ಅಧ್ಯಯನ ನೆರವಾಗುವುದೆಂದು ಭಾವಿಸುತ್ತೇನೆ.

ಕಳೆದ ಇಪ್ಪತ್ತು ವರ್ಷಗಳಿಂದ ಸ್ನಾತಕಪೂರ್ವ-ಸ್ನಾತಕೋತ್ತರ ನೆಲೆಗಳಲ್ಲಿ ಬೋಧನೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡ ಪ್ರಾಮಾಣಿಕ ಅಧ್ಯಾಪಕರಲ್ಲಿ ಡಾ. ಶಿರೂರ ಅವರೂ ಒಬ್ಬರು. ಈ ಅವಧಿಯಲ್ಲಿ ಅವರು ಸಂಶೋಧನ ಮಾರ್ಗದತ್ತ ಹೊರಳಿ ಹಲವು ಗ್ರಂಥ, ಲೇಖನಗಳ ಮೂಲಕ ಶ್ರಮ-ಶ್ರದ್ಧೆಗಳನ್ನು ಈಗಾಗಲೇ ಪ್ರಕಟಿಸಿದ್ದಾರೆ. ಇಂಥವರ ಬೋಧನೆ-ಬರೆವಣಿಗೆಯಿಂದಾಗಿ ಸ್ನಾತಕೋತ್ತರ ವಿಭಾಗಗಳು ಉಳಿಯುತ್ತವೆ, ಬೆಳೆಯುತ್ತವೆ. ಈ ಹಿನ್ನೆಲೆಯಲ್ಲಿ ಮೂಡಿ ಬಂದ ಪ್ರಸ್ತುತ ಗ್ರಂಥಕ್ಕಾಗಿ ಡಾ. ಬಿ. ವ್ಹಿ. ಶಿರೂರ ಅವರನ್ನು ಅಭಿನಂದಿಸುತ್ತ, ಅವರಿಗೆ ಉತ್ತರೋತ್ತರ ಭವಿಷ್ಯವನ್ನು ಹಾರೈಸುತ್ತೇನೆ.

ಬಿ.ವಿ.ಶಿರೂರ, ಹುಬ್ಬಳ್ಳಿ

ಆಕರ : ಮಾರ್ಗ ಸಂಪುಟ–೬

■■

೧೫೦

ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ

೧೯೯೦

ಹದಿನೈದು ವರ್ಷಗಳಷ್ಟು ಹಿಂದಿನ ಘಟನೆ. ನಾನು ಅದೇ ಆಗ ಪಿಎಚ್.ಡಿ. ಮಾರ್ಗದರ್ಶಕನಾಗಿದ್ದ ಉತ್ಸಾಹದ ಕಾಲದಲ್ಲಿ ಶ್ರೀಮತಿ ಚೆನ್ನಕ್ಕ ಎಲಿಗಾರ ಅವರು ಅಷ್ಟೇ ಉತ್ಸಾಹದಿಂದ ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಅಧ್ಯಯನ ಕೈಕೊಂಡರು. ಹೀಗೆ ಪ್ರಥಮ ವಿದ್ಯಾರ್ಥಿನಿಯಾಗಿ ಬಂದ ಅವರನ್ನು ಅಧ್ಯಯನದ ವಿವಿಧ ಘಟ್ಟಗಳಲ್ಲಿ ಐದು ವರ್ಷಗಳ ಕಾಲ ದುಡಿಸಿದ ರೀತಿಯನ್ನು ನೆನೆದರೆ, ನನಗೆ ಈಗಲೂ ಅಭಿಮಾನವೆನಿಸುತ್ತದೆ.

ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣ ಕ್ಷೇತ್ರಗಳಲ್ಲಿ ಮಿಕ್ಕ ಅಧ್ಯಾಪಕರಿಗಿಂತ ಕನ್ನಡದವರ ಹೊಣೆ ವಿಶಿಷ್ಟವಾಗಿದೆ. ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಬೋಧಿಸುವುದರೊಂದಿಗೆ ಅದನ್ನು ಶೋಧಿಸುವ ಮತ್ತು ಜನತೆಯಲ್ಲಿ ಪ್ರಸಾರಮಾಡುವ ಕೆಲಸಗಳಲ್ಲಿಯೂ ಇವರು ಮಗ್ನರಾಗಬೇಕಾಗುತ್ತದೆ. ಈ ಹೊಣೆಯ ಒಂದು ಭಾಗವೆಂಬಂತೆ ಡಾ. ಚೆನ್ನಕ್ಕ ಎಲಿಗಾರ ಅವರ 'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ' ಹೆಸರಿನ ಮಹಾಪ್ರಬಂಧ ಇಂದು ಬೆಳಕು ಕಾಣುತ್ತಲಿದೆ.

ಸಾಮಾನ್ಯವಾಗಿ ಮಹಿಳೆಯರು ಪಿಎಚ್. ಡಿ. ಅಧ್ಯಯನದಂಥ ಉನ್ನತವ್ಯಾಸಂಗಗಳ ಗೋಜಿಗೆ ಹೋಗದೆ ಕತೆ, ಕಾದಂಬರಿಗಳನ್ನು 'ಚಾರುಸಾಹಿತ್ಯ'ದ ಮಟ್ಟದಲ್ಲಿ ರೂಪಿಸುವ ಹವ್ಯಾಸ ಬೆಳೆಸಿಕೊಂಡಿರುತ್ತಾರೆ. ಇದಕ್ಕೆ ಅಪವಾದವೆನ್ನುವಂತೆ ಡಾ. ಎಲಿಗಾರ ಅವರು ಜಟಿಲವೂ ವ್ಯಾಪಕವೂ ಆಗಿರುವ ವಿಷಯವನ್ನು ಆಯ್ದುಕೊಂಡು, ಮಹಾಪ್ರಬಂಧ ರಚಿಸಿದುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಕನ್ನಡದಲ್ಲಿ ಪಿಎಚ್.ಡಿ. ಅಧ್ಯಯನವೆಂದರೆ ಕವಿ ಮತ್ತು ಕೃತಿಗಳ ವಿಷಯವಾಗಿ ನಡೆಸಿದ ಶೋಧ ಮತ್ತು ವಿಮರ್ಶೆ ಎಂಬ ಪರಿಕಲ್ಪನೆ ಮುಗಿದು, ಸಾಂಸ್ಕೃತಿಕ ವ್ಯಾಸಂಗದ ಒಲವು ಎರಡು ದಶಕಗಳ ಹಿಂದೆ ಅದೇ ಆಗ ಆರಂಭವಾಗಿದ್ದಿತು. ಡಾ. ಚೆನ್ನಕ್ಕ ಅವರು ಈ ಹೊಸ ಪರಿಕಲ್ಪನೆಗೆ ಸ್ಪಂದಿಸಿದರು. 'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ' ಎಂಬ ಮಹತ್ವದ ವಿಷಯವನ್ನು ಆಯ್ದುಕೊಂಡರು. ಈ ಎರಡು ಕಾರಣಗಳಿಂದಾಗಿ ಅವರೂ ಅವರ ಈ ಪ್ರಬಂಧವೂ ನಮ್ಮ ಗಮನ ಸೆಳೆಯುತ್ತವೆ.

ಪ್ರಾಚೀನ ಕರ್ನಾಟಕದಲ್ಲಿ 'ಅಗ್ರಹಾರಸಂಸ್ಕೃತಿ'ಗಿಂತ 'ದೇವಾಲಯಸಂಸ್ಕೃತಿ' ಗಣ್ಯವಾದುದು. ಹೀಗಾಗಿ ವೈಯಕ್ತಿಕ ಒಡೆತನದ ಅಗ್ರಹಾರಸಂಸ್ಕೃತಿಯ ದಾಖಲೆಗಳಾದ ತಾಮ್ರಪಟಗಳಿಗಿಂತ, ಸಾಮೂಹಿಕ ಒಡೆತನದ ದೇವಾಲಯಸಂಸ್ಕೃತಿಯ ದಾಖಲೆಗಳಾದ ಶಿಲಾಶಾಸನಗಳ ಸಂಖ್ಯಾಪ್ರಮಾಣ ನಮ್ಮಲ್ಲಿ ಅಧಿಕವೆನಿಸಿದೆ.

ಎರಡನೆಯದಾಗಿ ಅಗ್ರಹಾರಸಂಸ್ಕೃತಿಯೊಂದಿಗೆ ಹೋಲಿಸಿದರೆ ದೇವಾಲಯಸಂಸ್ಕೃತಿಯಲ್ಲಿ ಮಹಿಳೆಗೆ ಹೆಚ್ಚು ಮುಕ್ತ ಅವಕಾಶವಿರುವುದರಿಂದ, ಕರ್ನಾಟಕ ಶಿಲಾಶಾಸನಗಳಲ್ಲಿ ಮಹಿಳಾಜೀವನಕ್ಕೆ ಸಂಬಂಧಪಟ್ಟ ವಿಷಯ ಪದೇ ಪದೇ ಬರುತ್ತದೆ. ಆದರೆ ಅದು ಸಿಗುವುದು ಅಲ್ಲಿಷ್ಟು ಇಲ್ಲಿಷ್ಟು. ಇದನ್ನು ಆಯ್ದುಕೊಳ್ಳುವುದು ಕೇವಲ ಶ್ರಮದ ಕೆಲಸವಲ್ಲ, ಬೇಸರದ ಕೆಲಸವೂ ಆಗಿದೆ. ಡಾ. ಚೆನ್ನಕ್ಕ ಅವರು ಈ ಎರಡನ್ನೂ ಲೆಕ್ಕಿಸದೆ ತೆಕ್ಕೆ ತುಂಬ ವಿಪುಲ ಸಾಮಗ್ರಿಯನ್ನು ಆಯ್ದುಕೊಂಡುದು, ಈ ಪ್ರಬಂಧದ ಪ್ರಥಮ ಶ್ರೇಯಸ್ಸಾಗಿದೆ. ಹೀಗೆ ಆಯ್ದುಕೊಂಡ ಸಾಮಗ್ರಿಯಿಂದ ಅಂದಿನ ಮಹಿಳಾಜೀವನದ ವಿವಿಧ ಮಗ್ಗಲುಗಳನ್ನು ಶೋಧಿಸುವ, ಅವುಗಳಿಗೆ ತಕ್ಕಂತೆ ಸಾಮಗ್ರಿಯನ್ನು ಸಂಯೋಜಿಸುವ ಪರಸ್ಪರ ಪೂರಕಕಾರ್ಯ ಇಲ್ಲಿ ನಡೆಯಬೇಕಾಗುತ್ತದೆ. ಆಗ ಪಾಂಡಿತ್ಯಪೂರ್ಣ ವಿಶ್ಲೇಷಣೆ, ಪ್ರತಿಭಾಪೂರ್ಣ ಸಂಶ್ಲೇಷಣೆಗಳ ದಾಂಪತ್ಯದಲ್ಲಿ ಪ್ರಬಂಧವನ್ನು ಸೃಷ್ಟಿಸುವುದಕ್ಕಾಗಿ ಅಭ್ಯಾಸಿ ತನ್ನ ಶಕ್ತಿಯನ್ನು ಒರೆಗೆ ಹಚ್ಚಬೇಕಾಗುತ್ತದೆ. ಹದಿನಾಲ್ಕು ಅಧ್ಯಾಯಗಳ ಪ್ರಸ್ತುತ ಪ್ರಬಂಧ ಈ ದೃಷ್ಟಿಯಿಂದ ಗೆದ್ದುದೇ ಹೆಚ್ಚು.

'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ'ವೆಂಬ ಈ ಅಧ್ಯಯನಕ್ಕೆ ಪ್ರಥಮ ಸಾಮಗ್ರಿ ಶಾಸನ. ದ್ವಿತೀಯ ಸಾಮಗ್ರಿ ಸಾಹಿತ್ಯವಾಗಿದ್ದರೂ ಇಲ್ಲಿ ಇವೆರಡರ ಸಹಾಯ ಅಗತ್ಯ. ಈ ಉಭಯ ಕ್ಷೇತ್ರಗಳ ತರಬೇತಿ ಶಕ್ತಿಯಿಂದ ವಿಷಯದುರ್ಗವನ್ನು ಪ್ರವೇಶಿಸಿದ ಡಾ. ಎಲಿಗಾರ ಅವರು ಇತಿಹಾಸದ ವಿದ್ಯಾರ್ಥಿಗಿಂತ ಭಿನ್ನವಾಗಿಯೇ ಈ ಪ್ರಬಂಧ ರಚಿಸಿದುದು ಸಹಜವೆನಿಸಿದೆ. ಈ ಸಂದರ್ಭದಲ್ಲಿ ಶಾಸನಗಳಿಂದ ವ್ಯಕ್ತವಾಗುವ ಸ್ತ್ರೀಸಮಾಜದ ಸಂಗತಿಗಳನ್ನು ಇವರು ಸಾಹಿತ್ಯದಿಂದ ಸಮರ್ಥಿಸಿಕೊಂಡಿದ್ದಾರೆ; ಸರಿಪಡಿಸಿಕೊಂಡಿದ್ದಾರೆ. ಹೀಗಾಗಿ ಎರಡು ಆಕರಗಳ ಏಕೀಕೃತ ಅಭ್ಯಾಸ ಇಲ್ಲಿ ಉದ್ದಕ್ಕೂ ಕಂಡುಬರುತ್ತದೆ.

ಪಿಎಚ್.ಡಿ. ಪ್ರಬಂಧದಲ್ಲಿ ಸಾಮಗ್ರಿ ಸಂಗ್ರಹದಷ್ಟೇ ಮುಖ್ಯವಾದುದು ಅದರ ವರ್ಗೀಕರಣ. ವ್ಯಾಖ್ಯಾನ ಮತ್ತು ಸಂಯೋಜನ. ಅದು ವೈವಿಧ್ಯಪೂರ್ಣ ಸಾಮಗ್ರಿಯಿಂದ ಕಟ್ಟಿದ ಒಂದು ಸುಸಂಬದ್ಧ ಕಟ್ಟಡ. ಬಿಡಿಯಲ್ಲಿ ಒಂದು ಘಟಕವಾಗಿ, ಇಡಿಯಲ್ಲಿ ಒಂದು ಸಂಘಟನೆಯಾಗಿ ಅದು ಬೆಳೆಯಬೇಕಾಗುತ್ತದೆ. ಹದಿನಾಲ್ಕು ಅಧ್ಯಾಯಗಳ ವರ್ಗೀಕರಣ ಮತ್ತು ಅವುಗಳ ಒಳ ಅಧ್ಯಾಯಗಳ ವ್ಯವಸ್ಥೀಕರಣಗಳಲ್ಲಿ ಈ ಎಚ್ಚರವನ್ನು ಡಾ. ಚೆನ್ನಕ್ಕ ಬಹುಮಟ್ಟಿಗೆ ಕಾಯ್ದುಕೊಂಡಿದ್ದಾರೆ.

ಪ್ರಾಚೀನ ಕರ್ನಾಟಕದ ಸ್ತ್ರೀಸಮಾಜವನ್ನು ಕುರಿತು ನಮ್ಮ ನಾಡಿನಲ್ಲಿ ಈ ಮೊದಲು ಅಲ್ಪ ಸ್ವಲ್ಪ ಅಧ್ಯಯನ ನಡೆದಿದ್ದರೂ ಅದೆಲ್ಲವನ್ನು ಒಳಗು ಮಾಡಿಕೊಂಡು, ಹೊಸ ಹೊಸ ಮಗ್ಗಲುಗಳನ್ನು ಹೊಂದಿಸಿಕೊಂಡು, ವೈವಿಧ್ಯಪೂರ್ಣವಾಗಿ ಬೆಳೆದ ಇದು, ಒಂದು ಸಮಗ್ರ ಅಭ್ಯಾಸವಾಗಿದೆ. ಇದರಿಂದಾಗಿ ಮುಚ್ಚಿದ ಅನೇಕ ಬಾಗಿಲುಗಳು ಮೊದಲ ಬಾರಿಗೆ ತೆರೆದುಕೊಂಡು, ಮಹಿಳಾ ಜೀವನದ ಸಣ್ಣದೊಡ್ಡ ಚಟುವಟಿಕೆಗಳೆಲ್ಲ ಈ ಕೃತಿಯಲ್ಲಿ ಪ್ರವೇಶ ಪಡೆದಿವೆ. ಇಲ್ಲಿ ಮದುವೆಯನ್ನು ಕುರಿತಂತೆ ಮದುವೆಯ ವಯಸ್ಸು, ಮದುವೆಯ ಪ್ರಕಾರಗಳು, ಮದುವೆಯ ಸಂದರ್ಭ, ಮದುವೆಯ ಸಂಬಂಧ, ಮದುವೆಯ ಸಮಾರಂಭ-ಉಡುಗೊರೆ, ಮದುವೆದೆರೆ-ಹಂದರವಣ, ಅಳಿಯ ಸಂತಾನ, ಬಹುಪತ್ನಿತ್ವ- ಎಂದು ಮುಂತಾಗಿ ವಿಷಯವನ್ನು ಬಿಚ್ಚಿಕೊಂಡು, ಬಿಡಿಸಿ ಹೇಳಿದುದೇ ಇದಕ್ಕೆ ನಿದರ್ಶನ. ಇಂಥ ಕ್ರಮವನ್ನು ಉದಕ್ಕೂ ಅನುಸರಿಸಿದ ಕಾರಣ, ಉಪಲಬ್ಧವಿರುವ ಸ್ತ್ರೀಜೀವನದ ಒಂದು ಸಣ್ಣ ಸಂಗತಿಯೂ ಹೊರಗುಳಿಯದೆ ಪ್ರಬಂಧದ ಒಳಗೆ ಸೇರಿಕೊಂಡಿದೆ.

ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಸಂಪ್ರದಾಯದ ಹೊಸ್ತಿಲಲ್ಲಿಯೇ ಸ್ತ್ರೀ ಆಡಿದ ಪಾತ್ರವನ್ನು ಚಿತ್ರಿಸುತ್ತ, ಕೆಲವೊಮ್ಮೆ ಮುಕ್ತಗೃಹಿಣಿಯಾಗಿಯೂ ಅವಳು ದಾಟಿದ, ದಾಟಲಾರದ ಹೊಸ್ತಿಲುಗಳನ್ನು ಇಲ್ಲಿ ಗುರುತಿಸಿಕೊಡಲಾಗಿದೆ. ಮಹಿಳೆಯು ಪುರುಷನಿಂದ ಪೋಷಿತಳಾದ ಅಂಶಗಳನ್ನಲ್ಲದೆ ವಿಧವೆಯಾಗಿ, ಮಾಸ್ತಿಯಾಗಿ, ದೇವಾಲಯದ ಸೂಳೆಯಾಗಿ ಅನುಭವಿಸಿದ ವೈಭವೀಕೃತ ನೋವುಗಳನ್ನೂ ವ್ಯಕ್ತಿಸೂಳೆಯಾಗಿ, ಸಾಮಾಜಿಕ

ಸೂಳೆಯಾಗಿ, ತೊತ್ತಾಗಿ ಅನುಭವಿಸಿದ ಹಿಂಸೆಗಳನ್ನೂ ಬೆರಳಿಟ್ಟು ತೋರಿಸಿದ ಶ್ರೇಯಸ್ಸು ಈ ಪ್ರಬಂಧಕ್ಕಿದೆ. ಕುಟುಂಬಕ್ಕೆ ಸೀಮಿತಳಾದ ಸ್ತ್ರೀ ತನಗೆ ಸುರಕ್ಷಿತವೆನಿಸಿದ ಧಾರ್ಮಿಕ ರಂಗದಲ್ಲಿ ಕಾಣಿಸಿಕೊಂಡುದಲ್ಲದೆ, ಕೆಲವೊಮ್ಮೆ ಇದನ್ನೂ ಮೀರಿ ರಾಜಕೀಯರಂಗ ಸಾಮಾಜಿಕ ರಂಗಗಳಿಗೂ ಅವಳು ವಿಸ್ತರಿಸಿಕೊಂಡುದನ್ನು ಹತ್ತೂ ದಿಕ್ಕಿನಿಂದ ಆಯ್ದು ಹೇಳಲಾಗಿದೆ. ಹೀಗೆ ಮನುಷ್ಯರಲ್ಲಿ ಹೆಣ್ಣಾಗಿ ಬಾಳಿದ, ಸಮಾಜದಲ್ಲಿ ವ್ಯಕ್ತಿಯಾಗಿ ಬದುಕಿದ ಪ್ರಾಚೀನ ಕರ್ನಾಟಕದ ಮಹಿಳೆಯ ಜೀವನವನ್ನು ನಿದರ್ಶನಪೂರ್ವಕ ಪ್ರತಿಪಾದಿಸುವ ಈ ಪ್ರಬಂಧದಲ್ಲಿ ಮಹಿಳೆಯ ಚರಿತ್ರೆ, ಮಹಿಳಾವ್ಯಕ್ತಿಗಳ ಚರಿತ್ರೆಗಳೆರಡೂ ಸಿಗುತ್ತವೆ.

ಈ ಪ್ರಬಂಧಕ್ಕೆ ಪದವಿ ಲಭ್ಯವಾದುದು ೧೯೮೧ರಲ್ಲಿ. ಆಮೇಲೆ ಕನ್ನಡ ಸಂಶೋಧನೆಯು ಆಲೋಚನಾವಿಧಾನ, ನಿರೂಪಣಾರೀತಿಗಳಲ್ಲಿ ಹೊಸ ಹೊಸ ಪದ್ಧತಿಗಳನ್ನು ಅಳವಡಿಸಿಕೊಂಡು ಬೆಳೆದಿದೆ. ಹೀಗಿದ್ದೂ ತನ್ನ ಆಕರ ಶ್ರೀಮಂತಿಕೆ, ಬೆಳಕಿಗೆ ತಂದ ಹೊಸ ನೆಲೆಗಳಿಂದ ಈ ಪ್ರಬಂಧ ಯಾವ ಕಾಲಕ್ಕೂ ತನ್ನ ಮಹತ್ವವನ್ನು ಉಳಿಸಿಕೊಳ್ಳುತ್ತದೆ; ಈ ಕ್ಷೇತ್ರದ ಅಭ್ಯಾಸಿಗಳಿಗೆ ಓದಲೇಬೇಕಾದ ಸಂದರ್ಭಗ್ರಂಥವಾಗಿ ನಿಲ್ಲುತ್ತದೆ. ಈ ಮಾತನ್ನು ಸಂತೋಷದಿಂದ ಬರೆಯುತ್ತ, ನನ್ನ ನಿಷ್ಠುರ ಮಾರ್ಗದರ್ಶನದಲ್ಲಿ ಈ ಪ್ರಬಂಧ ರೂಪಗೊಂಡ ಅಂದಿನ ಕ್ಷಣಗಳನ್ನು ನೆನೆಸಿಕೊಳ್ಳುತ್ತ, ಡಾ. ಚನ್ನಕ್ಕ ಅವರಿಗೆ ಶುಭವನ್ನು ಹಾರೈಸುತ್ತೇನೆ.

ಚನ್ನಕ್ಕ ಎಲಿಗಾರ (ಪಾವಟೆ), ಧಾರವಾಡ.

ಆಕರ : ಮಾರ್ಗ ಸಂಪುಟ–೬

■■

೧೫೧

ತರ್ದವಾಡಿ ನಾಡು : ಒಂದು ಅಧ್ಯಯನ

೧೯೯೦

'ತರ್ದವಾಡಿ ನಾಡು : ಒಂದು ಅಧ್ಯಯನ' - ಇದು ಉತ್ತಮ ಪಿಎಚ್.ಡಿ. ಪ್ರಬಂಧವಾಗಿರುವುದರಿಂದ ನಾನು ಬರೆಯಬೇಕಾಗಿರುವ ಮೆಚ್ಚುಗೆಯ ಮಾತಿನ 'ಮುನ್ನುಡಿ' ವಾಸ್ತವ ಬರವಣಿಗೆಯಾಗುತ್ತಲಿದೆ. ಹೀಗೆ ಬರೆಯುವ ಮೊದಲು ಈ ಉತ್ತಮ ರಚನೆಗಾಗಿ ಡಾ. ಎಸ್. ಕೆ. ಕೊಪ್ಪಾ ಅವರನ್ನು ಅಭಿನಂದಿಸುತ್ತೇನೆ.

ಕರ್ನಾಟಕದ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಹೆಚ್ಚು ಕಡಿಮೆ ಒಂದು ಸಾವಿರಜನ ಕನ್ನಡ ಅಧ್ಯಾಪಕರಿರಬಹುದು. ಕನ್ನಡೇತರ ಅಧ್ಯಾಪಕರಿಗಿಂತ ಈ ಕನ್ನಡ ಅಧ್ಯಾಪಕರ ಹೊಣೆ ವಿಶಿಷ್ಟವಾಗಿದೆ. ಬೋಧನೆ-ಬರವಣಿಗೆಗಳ ಮೂಲಕ, ಸಭೆ-ಸಮಾವೇಶಗಳ ಮೂಲಕ ಇವರು ಕನ್ನಡಭಾಷೆ, ಸಾಹಿತ್ಯ, ಸಂಸ್ಕೃತಿಗಳ ಪ್ರತಿನಿಧಿಗಳಾಗಿಯೂ ಕೆಲಸ ಮಾಡಬೇಕಾಗುತ್ತದೆ. ಈ ಕೆಲಸದ ಒಂದು ಭಾಗ ಪಿಎಚ್.ಡಿ. ಅಧ್ಯಯನ. ಇವರೆಲ್ಲ ತಮ್ಮ ತಮ್ಮ ಕಾಲೇಜುಗಳ ಪ್ರದೇಶವನ್ನೇ ಅಧ್ಯಯನಕ್ಕೆ ಆಯ್ದುಕೊಂಡರೆ ಸಾಂಸ್ಕೃತಿಕ ಕರ್ನಾಟಕದ ಸಮಗ್ರಚರಿತ್ರೆಯೇ ಬೆಳಕಿಗೆ ಬರುತ್ತದೆ.

ವಿಜಾಪೂರ ಜಿಲ್ಲೆಯ ಇಂಡಿಯಲ್ಲಿ ಪದವಿ ಕಾಲೇಜಿನ ಕನ್ನಡ ಅಧ್ಯಾಪಕರಾಗಿರುವ ಶ್ರೀ ಎಸ್. ಕೆ. ಕೊಪ್ಪಾ ಅವರು ಆ ಪ್ರದೇಶದ 'ತರ್ದವಾಡಿ -೧೦೦೦' ನಾಡನ್ನು ಕುರಿತು ಪಿಎಚ್.ಡಿ. ಅಧ್ಯಯನ ಮಾಡುವುದರ ಮೂಲಕ, ಇದೇ ರೀತಿ ಪುಲಿಗೆರೆ-೩೦೦, ಸಗರ-೫೦೦, ಅಲಂದೆ-೧೦೦೦, ಕೂಂಡಿ-೩,೦೦೦, ಕರಹಡ-೪,೦೦೦, ಬನವಾಸಿ-೧೨,೦೦೦ ಇತ್ಯಾದಿ ಪ್ರಾಚೀನ ರಾಜಕೀಯ ವಿಭಾಗಗಳನ್ನು ಕುರಿತು ಅಲ್ಲಲ್ಲಿಯ ಕನ್ನಡ ಅಧ್ಯಾಪಕರು ಸಾಂಸ್ಕೃತಿಕ ಅಧ್ಯಯನ ನಡೆಸುವುದು ಸಾಧ್ಯವೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಮಾಡಬೇಕಾದ ಇಂಥ ಯಾವುದೇ ಕೆಲಸ ಆಗದಿರುವುದಕ್ಕೆ ತಮ್ಮ ಸುತ್ತಲಿನ ಅಸಾಹಿತ್ಯಿಕ ವಾತಾವರಣವೆ ಕಾರಣವೆಂದು ಸಾಮಾನ್ಯವಾಗಿ ನಮ್ಮ ಅಧ್ಯಾಪಕ ಮಿತ್ರರು ಹೇಳುವುದುಂಟು. ನನಗೆ ತಿಳಿದಮಟ್ಟಿಗೆ ಇಂಡಿಯಲ್ಲಿ ಇರುವಷ್ಟು ಅಸಾಹಿತ್ಯಿಕ ವಾತಾವರಣ ಇಂಡಿಯಾದ ಯಾವ ಭಾಗದಲ್ಲಿಯೂ ಇಲ್ಲ. ಹೀಗಿದ್ದೂ ಶ್ರೀ ಕೊಪ್ಪಾ ಅವರು ಈ ಪ್ರಬಂಧ ರಚನೆಯ ಮೂಲಕ, ಮನಸ್ಸು ಮಾಡಿದರೆ ಎಂಥ ಅನುತ್ತೇಜಕ ವಾತಾವರಣದಲ್ಲಿಯೂ ಉತ್ತಮ ಕೆಲಸ ಮಾಡಬಹುದೆಂಬುದಕ್ಕೆ ನಿದರ್ಶನವೆನಿಸಿದ್ದಾರೆ.

'ತರ್ದವಾಡಿ ನಾಡು: ಒಂದು ಅಧ್ಯಯನ' - ಇದು ಮೂಲತಃ ಇತಿಹಾಸದ ವಿದ್ಯಾರ್ಥಿಗಳ ವಿಷಯ. ಆದರೆ ಕಳೆದ ಇಪ್ಪತ್ತು ವರ್ಷಗಳಿಂದ ಕನ್ನಡದಲ್ಲಿ ಅಂತರ್‌ಶಿಸ್ತೀಯ ಅಧ್ಯಯನದ ದಾಹ ಬೆಳೆದ ಕಾರಣ ಕನ್ನಡ ವಿದ್ಯಾರ್ಥಿಗಳು ಶಾಸನಕ್ಷೇತ್ರವನ್ನೂ ಪ್ರವೇಶಿಸಿ, ಇತಿಹಾಸದ ವಿದ್ಯಾರ್ಥಿಗಳಿಗಿಂತ ಭಿನ್ನವಾದ ಆಯಾಮವನ್ನು ಈ ಅಧ್ಯಯನಕ್ಕೆ ಒದಗಿಸಿದ್ದಾರೆ.

ಜೀವನದ ಗತಿಯನ್ನು ಕಲಾತ್ಮಕವಾಗಿ ಹೇಲುವುದು ಕಾವ್ಯವಾದರೆ, ದಾಖಲಾತ್ಮಕವಾಗಿ ಹೇಳುವುದು ಶಾಸನ. ಹೀಗಾಗಿ ಎರಡು ದೃಷ್ಟಿಗಳಿಂದ ಒಂದು ನೋಟ ಸ್ಥಾಪಿಸುವ ಕೆಲಸ ಇಲ್ಲಿ ನಡೆಯುತ್ತಲಿದೆ. ಇಂಥ ಅಧ್ಯಯನಕ್ಕೆ ಮಾದರಿಯಾಗಬಲ್ಲ ಪ್ರಬಂಧಗಳ ಶ್ರೇಣಿಯಲ್ಲಿ ಪರಿಗಣಿಸಲ್ಪಡುತ್ತದೆ; 'ತರ್ದವಾಡಿ ನಾಡು : ಒಂದು ಅಧ್ಯಯನ'.

ಪ್ರಾಚ್ಯಸಂಶೋಧನೆಯ ದೃಷ್ಟಿಯಿಂದ ಉತ್ತರ ಕರ್ನಾಟಕ ಉಪೇಕ್ಷಿತ ಪ್ರದೇಶವಾಗಿದೆ. ಇಲ್ಲಿಯ ಎಲ್ಲ ಶಾಸನಗಳು ಇನ್ನೂ ಪ್ರಕಟವಾಗಿಲ್ಲ, ಸ್ಮಾರಕಗಳ ಸರ್ವೇಕ್ಷಣೆಗೆ ಗಮನಹರಿಸಿಲ್ಲ, ಗ್ರಾಮನಾಮಗಳ ಅಧ್ಯಯನಕ್ಕೆ ಶಾಸ್ತ್ರೀಯ ಶಿಸ್ತು ಪ್ರಾಪ್ತವಾಗಿಲ್ಲ, ಇವೆಲ್ಲವುಗಳಿಗೆ ಹೆಚ್ಚಿನದಾಗಿ ಇಂಡಿಯಲ್ಲಿ ಸಂಶೋಧನೆಗೆ ಯೋಗ್ಯ ವಾತಾವರಣವಿಲ್ಲ. ಇಂಥ ಅನೇಕ 'ಇಲ್ಲ'ಗಳನ್ನು, 'ಇವೆ'ಯಾಗಿಸಿಕೊಂಡು ಕಟ್ಟಿದ ಕೃತಿಕಟ್ಟಡವಿದು. ಈ ಕಟ್ಟಡದ ಮೂಲ ಆಕರ ಶಾಸನ. ಹೀಗಿದ್ದೂ ನಾಣ್ಯ, ವಾಸ್ತು, ವಿಗ್ರಹ ಇತ್ಯಾದಿ ಸಾಮಗ್ರಿಗಳನ್ನೂ, ಈ ಕುರಿತು ಇಂದಿನ ವರೆಗೆ ವಿದ್ವಾಂಸರು ಮಂಡಿಸಿದ ವಿಚಾರಗಳನ್ನೂ ತುಂಬ ಎಚ್ಚರಿಕೆಯಿಂದ ಆಯ್ದುಕೊಂಡು ವಿವೇಚಿಸಿರುವುದರಿಂದ, ಈ ಬರವಣಿಗೆ 'ಅಧಿಕೃತ'ವೆನಿಸಿದೆ; 'ಅಪ್-ಟು-ಡೇಟ್' ಆಗಿದೆ.

ಪ್ರಾಚೀನ ರಾಜಕೀಯ ವಿಭಾಗಗಳಿಗೆ ಸಂಬಂಧಿಸಿದ ಅಧ್ಯಯನವು ಗ್ರಂಥಾವಲೋಕನದೊಂದಿಗೆ ಕ್ಷೇತ್ರಕಾರ್ಯವನ್ನೂ ಬಯಸುತ್ತದೆ. ಶ್ರೀ ಕೊಪ್ಪಾ ಅವರು ಸರಕಾರದ,ಸಂಸ್ಥೆಯ ಸಹಾಯವಿಲ್ಲದೆ ಈ ಎರಡೂ ಕೆಲಸವನ್ನು ಪೂರೈಸಿ, ಪ್ರಬಂಧಕ್ಕೆ ಪೂರ್ಣತ್ವವನ್ನು ಒದಗಿಸಿದ್ದಾರೆ. ಗೋಲೆಯಭಟ್ಟನ ಹೂವಿನ ಹಿಪ್ಪರಗಿ ಶಾಸನದ ಮೇಲೆ ಅಮೋಘವರ್ಷ ನೃಪತುಂಗನ ರೇಖಾಚಿತ್ರವಿರುವುದನ್ನು, ಬಾದುಬ್ಬೆ ಶಿಲ್ಪಗಳು ಅಲ್ಲಲ್ಲಿ ಅನೇಕ ಸಂಖ್ಯೆಯಲ್ಲಿ ಸಿಗುವುದನ್ನು ಪ್ರಥಮಸಲ ಬೆಳಕಿಗೆ ತಂದುದು ಕ್ಷೇತ್ರಕಾರ್ಯದ ಫಲವಾಗಿದೆ. ಈ ವರೆಗೆ ಶಾಸನತಜ್ಞರು ಮಂಡಿಸಿದ ಅನೇಕ ವಿಷಯಗಳಿಗೆ ಭಿನ್ನವಾದ ಹೊಸ ವಿಚಾರಗಳನ್ನು ಮಂಡಿಸುವಲ್ಲಿ ಇವರ ರಾಗ-ದ್ವೇಷರಹಿತ ದೃಷ್ಟಿ ಎದ್ದುಕಾಣುತ್ತಿದ್ದು, ಮಠದ ತಪೋಧನರು-ವಿದ್ಯಾರ್ಥಿಗಳು, ಬತ್ತಗಾವೆ-ಅಗ್ರಹಾರಗಳು ಕೆಲವೊಮ್ಮೆ ಸಮಾನಾರ್ಥ ನೀಡುತ್ತವೆ, ಇತ್ಯಾದಿಗಳೆಲ್ಲ ಇದಕ್ಕೆ ನಿದರ್ಶನವೆನಿಸಿದೆ.

ಶಾಸನಗಳಲ್ಲಿ ದಾಖಲಾಗಿರುವ ಒಂದು ಸಣ್ಣ ವಿಷಯವೂ ಹೊರಗುಳಿಯದಂತೆ ನೋಡಿಕೊಂಡುದು ಈ ಪ್ರಬಂಧದ ಇನ್ನೊಂದು ವೈಶಿಷ್ಟ್ಯವಾಗಿದೆ. ಬಹಿಷ್ಕಾರ, ನದಿಸ್ನಾನ, ವೈಧವ್ಯ, ದನಕರುಗಳು -ಇಂಥ ವಿಷಯಗಳನ್ನೂ ಕುರಿತು ಚರ್ಚಿಸಿರುವುದರಿಂದ ಸಾಮಾಜಿಕ ಅಧ್ಯಯನದಲ್ಲಿ ಯಾವುದೂ ಅಮುಖ್ಯವಲ್ಲವೆಂದು ಶ್ರೀ ಕೊಪ್ಪಾ ಅವರು ಭಾವಿಸಿದುದನ್ನು ಮೆಚ್ಚಲೇಬೇಕು. ಇನ್ನೂ ಶಿಸ್ತಿಗೆ ಒಳಪಡಬಹುದಾದರೂ ಸ್ಥಳನಾಮ ಚರ್ಚೆ ಈ ಪ್ರಬಂಧದ ಒಂದು ವಿಶೇಷ ಅಧ್ಯಯನವೆಂದೇ ಹೇಳಬೇಕು.

ಈ ವರೆಗೆ ವಿದ್ವಾಂಸರು ನಡೆಸಿದ ಎಲ್ಲ ಶೋಧಗಳನ್ನು ಅವಲೋಕಿಸುವುದು, ಅವರ ಅಭಿಪ್ರಾಯಗಳಿಗೆ ಸೂಕ್ತ ಗೌರವ ಕೊಡುವುದು ಇಲ್ಲವೆ ಸಕಾರಣ ಸಂದೇಹಿಸುವುದು, ತಾನು ಶೋಧಿಸಿದ ವಿಚಾರಗಳನ್ನು ವಿನಯದಿಂದ ಮಂಡಿಸುವುದು ಇತ್ಯಾದಿಗಳು ಒಳ್ಳೆಯ ಸಂಶೋಧಕನ ಲಕ್ಷಣಗಳಾಗಿವೆ. ಈ ಎಲ್ಲ ಅಂಶಗಳು ಶ್ರೀ ಕೊಪ್ಪಾ ಅವರಲ್ಲಿ ಸಂಗಮಿಸಿರುವುದರಿಂದ, ಇವರ ಬರವಣಿಗೆಗೆ ಒಂದು ಪ್ರಾಮಾಣಿಕ ಸ್ವರೂಪ ಪ್ರಾಪ್ತವಾಗಿದೆ.

ಆಕರಗಳ ಸಂಗ್ರಹ, ಸಂಗ್ರಹಿತ ಆಕರಗಳನ್ನು ಆಧಾರವಾಗಿಸಿಕೊಳ್ಳುವ ರೀತಿ, ಅವೆಲ್ಲವನ್ನೂ ಬರವಣಿಗೆಗೆ ಬಾಗಿಸಿಕೊಳ್ಳುವ ವಿಧಾನ, ಇದಕ್ಕೆ ಹೆಚ್ಚಿನದಾಗಿ ಯಾವುದೇ ಪುಟ ತೆರೆದರೂ ಸೃಜನಶೀಲ ಕೃತಿಯಂತೆ ಓದಿಸಿಕೊಂಡು ಹೋಗುವ ಕಾಂತಗುಣ ಇತ್ಯಾದಿಗಳಿಂದಾಗಿ, ಪಿಎಚ್.ಡಿ. ಅಧ್ಯಯನಕ್ಕೆ ಇಂಥ ವಿಷಯ ಆಯ್ದುಕೊಳ್ಳುವವರಿಗೆ ಒಂದು ಮಾರ್ಗದರ್ಶಿ ಕೃತಿ ಎಂಬಂತೆ ಇದು ರೂಪಗೊಂಡಿದೆ.

ಇದು ಡಾ. ಕೊಪ್ಪಾ ಅವರ ಅಧ್ಯಯನದ ಮೊದಲ ಹೆಜ್ಜೆ. ಅವರು ನಡೆಯಬೇಕಾದುದು ಬಹಳ ಇದೆ.ಅವರಿಗೆ ನಡೆಯಬಲ್ಲ ಶಕ್ತಿಯೂ ಇದೆ. ಇಂದು ಸಾಹಿತ್ಯೇಕರ ಕಾರಣಗಳಿಂದಾಗಿ ಸಾಹಿತ್ಯಕ್ಷೇತ್ರದಲ್ಲಿ ದೊಡ್ಡವರಾಗುತ್ತಲಿರುವವರ ಮಧ್ಯೆ ಶ್ರೀ ಕೊಪ್ಪಾ ಅವರಂಥ ಶ್ರದ್ಧಾವಂತರು ಅಲ್ಲೊಬ್ಬ ಇಲ್ಲೊಬ್ಬರಾದರೂ ಬೆಳೆಯಬೇಕು. ಆಗ ಮಾತ್ರ ಕನ್ನಡ ಬೆಳೆಯುತ್ತದೆ. ಅಂಥ ಬೆಳವಣಿಗೆಯನ್ನು ನಿರೀಕ್ಷಿಸುತ್ತ, ಶ್ರೀ ಎಸ್. ಕೆ. ಕೊಪ್ಪಾ ಅವರಿಗೆ ಶುಭವನ್ನು ಹಾರೈಸುತ್ತೇನೆ.

ಎಸ್.ಕೆ.ಕೊಪ್ಪ, ಇಂಡಿ.

ಆಕರ : ಮಾರ್ಗ ಸಂಪುಟ–೬

■■

೧೫೨

ಶ್ರೀ ಕೃಷ್ಣಪಾರಿಜಾತ : ಒಂದು ಅಧ್ಯಯನ

೧೯೯೧

ಕನ್ನಡದಲ್ಲಿ "ಜಾನಪದ ಅಧ್ಯಯನ"ವೆಂಬುದು ಇತ್ತೀಚೆ ಬೆಳೆದು ಬಂದ ಶೈಕ್ಷಣಿಕ ಶಿಸ್ತು. ಈ ಕ್ಷೇತ್ರವನ್ನು ಗುಣ, ಗಾತ್ರ - ಎರಡೂ ಬಗೆಗಳಲ್ಲಿ ಬೆಳೆಸಿದವರು ಕನ್ನಡ ಅಧ್ಯಾಪಕರು. ಇವರಲ್ಲಿ ಜಾನಪದ ವಾತಾವರಣದಲ್ಲಿಯೇ ಬೆಳೆದು, ಜಾನಪದ ಶೈಕ್ಷಣಿಕ ಶಿಸ್ತನ್ನು ಅಳವಡಿಸಿಕೊಂಡಿರುವ ವಿರಳರಲ್ಲಿ ಡಾ. ಶ್ರೀರಾಮ ಇಟ್ಟಣ್ಣವರ ಅವರೂ ಒಬ್ಬರು. ಈ ಕಾರಣದಿಂದಾಗಿಯೇ ಇವರು 'ಶ್ರೀಕೃಷ್ಣ ಪಾರಿಜಾತ: ಒಂದು ಅಧ್ಯಯನ' ವಿಷಯವನ್ನು ಪಿಎಚ್.ಡಿ. ವ್ಯಾಸಂಗಕ್ಕೆ ಆಯ್ದುಕೊಂಡುದು.

ಆಟ, ಬಯಲಾಟ, ದೊಡ್ಡಾಟ, ಸಣ್ಣಾಟ- ಈ ಪದಗಳು ಉತ್ತರ ಕರ್ನಾಟಕದ ಜಾನಪದ ದೃಶ್ಯಪರಂಪರೆಯ ನಾಲ್ಕು ಘಟ್ಟಗಳನ್ನು ಸೂಚಿಸುತ್ತಿದ್ದು, ಇವುಗಳಲ್ಲಿ ಶ್ರೀಕೃಷ್ಣಪಾರಿಜಾತ ಸಣ್ಣಾಟ ಘಟ್ಟದ ಒಂದು ವಿಶೇಷ ದೃಶ್ಯಪ್ರಕಾರವಾಗಿದೆ. ಈ ವಿಶೇಷತೆ ಕಾರಣವಾಗಿಯೇ ಅದು ಸಣ್ಣಾಟ ವರ್ಗದಿಂದ ಪ್ರತ್ಯೇಕ ನಿಲ್ಲುತ್ತದೆ. ಈ ಮೂಲಭೂತ ಎಳೆಯನ್ನು ಹಿಡಿದುಕೊಂಡು ಆರು ಪ್ರಕರಣಗಳಲ್ಲಿ ಅರಳಿದ ಮಹಾಪ್ರಬಂಧವಾಗಿದೆ; ಈ "ಶ್ರೀಕೃಷ್ಣಪಾರಿಜಾತ: ಒಂದು ಅಧ್ಯಯನ".

ಶ್ರೀ ಕೃಷ್ಣಪಾರಿಜಾತ ಭಕ್ತಿಯುಗದ ದೃಶ್ಯಕಲೆಯಾಗಿದೆ. ಹೀಗಾಗಿ ಭಕ್ತಿಪಂಥ ಮತ್ತು ಕಲಾಪರಿಸರಗಳ ಅವಲೋಕನದಿಂದಲೇ ಇದರ ಅಭ್ಯಾಸ ಆರಂಭಗೊಳ್ಳಬೇಕಾಗುತ್ತದೆ. ಈ ಕಾರಣದಿಂದಾಗಿಯೇ ಡಾ. ಇಟ್ಟಣ್ಣವರ ಅವರು ಮೊದಲ ಪ್ರಕರಣದಲ್ಲಿ ಈ ಬಗೆಗಿನ ಒಂದು ಸಣ್ಣ ಹಿನ್ನೆಲೆ ಒದಗಿಸಿದ್ದಾರೆ. ಇಲ್ಲಿಯ "ಕಲಾಪರಿಸರದ ಪ್ರೇರಣೆ" ಅನೇಕ ಹೊಸವಿಷಯಗಳನ್ನು ನಮ್ಮ ಗಮನಕ್ಕೆ ತರುತ್ತದೆ.

ಶ್ರೀಕೃಷ್ಣಪಾರಿಜಾತ ಇಂದು ದೃಶ್ಯಪ್ರಕಾರವಾಗಿ ಪ್ರಸಿದ್ಧಿ ಪಡೆದಿದ್ದರೂ ಮೂಲತಃ ಅದು ಶ್ರವ್ಯಪ್ರಕಾರದ ಕೀರ್ತನಕಾವ್ಯವಾಗಿದೆ. ಆ ಕೀರ್ತನಕಾವ್ಯವನ್ನು ಅರ್ಧದಷ್ಟು ಬರೆದವ ಅಪರಾಳ ತಮ್ಮಣ್ಣ, ಮಿಕ್ಕರ್ಧವನ್ನು ಬರೆದವ ಸಿರಗುಪ್ಪಿ ಸದಾಶಿವಯ್ಯ. ಉಪಲಬ್ಧ ಆಕಾರಗಳಿಂದ ಈ ಇಬ್ಬರು ಕವಿಗಳ ಚರಿತ್ರೆಯನ್ನು ಕಟ್ಟಿಕೊಡುತ್ತ, ಉಭಯ ಕರ್ತೃಕವಾದರೂ ಏಕಕರ್ತೃಕವೆಂಬಂತೆ ಈ ಕೃತಿ ಪಡೆದ ಸಾವಯವ ಶಿಲ್ಪವನ್ನು ವಿವೇಚಿಸುತ್ತ, ಅದು ಸಾರುವ ಜೀವನ ಮೌಲ್ಯವನ್ನು ಇಲ್ಲಿ ವಿವರಿಸಲಾಗಿದೆ. ಹೀಗಾಗಿ "ಶ್ರೀಕೃಷ್ಣಪಾರಿಜಾತ ಕೀರ್ತನೆ"ಯ ಸಮಗ್ರ ಅಭ್ಯಾಸವನ್ನು ಇಲ್ಲಿ ಪ್ರಥಮ ಬಾರಿಗೆ ಕಾಣಬಹುದಾಗಿದೆ.

ಈವರೆಗಿನ ವಿವೇಚನೆ ಏನೇ ಇದ್ದರೂ ಅದು ಈ ಪ್ರಬಂಧಕ್ಕೆ ಹಿನ್ನೆಲೆ, ಅಗತ್ಯವೆನಿಸಿದ ಹಿನ್ನೆಲೆ. ನಿಜವಾಗಿ ಪ್ರಬಂಧ ತೆರೆದುಕೊಳ್ಳುವುದು ಮೂರನೆಯ ಪ್ರಕರಣದಿಂದ. ಶ್ರೀಕೃಷ್ಣಪಾರಿಜಾತ ಕೀರ್ತನಕಾವ್ಯವನ್ನು ಶ್ರವ್ಯದಿಂದ ದೃಶ್ಯಕ್ಕೆ ತಿರುಗಿಸಿದ ಕುಲಗೋಡ ತಮ್ಮಣ್ಣನ ಪರಿಸರ, ಚರಿತ್ರೆ ಮತ್ತು ಹಾಗೆ ತಿರುಗಿಸಿಕೊಳ್ಳಲು ತಮ್ಮಣ್ಣನಿಗೆ ಒದಗಿ ಬಂದ ಪ್ರೇರಣೆ, ಪ್ರಭಾವಗಳ ವಿಶೇಷ ಅಭ್ಯಾಸ ಇಲ್ಲಿದೆ. ಶ್ರವ್ಯಪಾತಳಿಯ ಕೃತಿಯನ್ನು ದೃಶ್ಯಪಾತಳಿಗೆ ತರುವಲ್ಲಿ ತನ್ನ ಕೃತಿಯನ್ನು ಆಸ್ವಾದಿಸಬೇಕಾದವರು ಶ್ರೋತೃಗಳಲ್ಲ, ಪ್ರೇಕ್ಷಕರು - ಎಂಬ ಪ್ರಜ್ಞೆ ಅಗತ್ಯಬೇಕಾಗುತ್ತದೆ. ಕುಲಗೋಡ ತಮ್ಮಣ್ಣ ಒಬ್ಬ ಕಲಾವಿದನಾಗಿ ಪೂರೈಸಿದ ಈ ಕಾರ್ಯವನ್ನು ಇಲ್ಲಿ ತುಂಬ ಎಚ್ಚರದಿಂದ ವಿವೇಚಿಸಲಾಗಿದೆ.

ನಾಟಕಕೃತಿಯೆನ್ನುವುದು ಕಚ್ಚಾ ಸರಕು. ಅದು ಪಕ್ಕಾ ವಸ್ತುವಾಗುವುದು ರಂಗಭೂಮಿಯ ಮೇಲೆ. ಹೀಗಾಗಿ ನಾಟಕದ ನಿಜವಾದ ಅಭ್ಯಾಸವು ಕೃತಿಗಿಂತ ಪ್ರದರ್ಶನಕ್ಕೆ ಸಂಬಂಧಪಟ್ಟುದಾಗಿರುತ್ತದೆ. ಶ್ರೀ ಇಟ್ಟಣ್ಣವರ ಅವರು ಬಾಲ್ಯದಿಂದಲೂ ಶ್ರೀಕೃಷ್ಣಪಾರಿಜಾತ ಪ್ರದರ್ಶನವನ್ನು ಒಬ್ಬ ಪ್ರೇಕ್ಷಕನಾಗಿ ನೋಡುತ್ತ, ಒಬ್ಬ ಶ್ರಾವಕನಾಗಿ ಕೇಳುತ್ತ, ಒಬ್ಬ ವಾಚಕನಾಗಿ ಓದುತ್ತ ಬಂದವರು, ಅನೇಕ ಮೇಳಗಳ ಸಂಪರ್ಕ ಇಟ್ಟುಕೊಂಡವರು. ಹೀಗಾಗಿ ಇದರ ರಂಗಸಾಧ್ಯತೆಯ ಅನೇಕ ಆಯಾಮಗಳ ತಲಸ್ಪರ್ಶಿ ಅಭ್ಯಾಸ ಇವರಿಗೆ ಸಾಧ್ಯವಾಗಿದೆ. ಪಂಚಘಟಕಗಳು, ಅಭಿನಯಚತುರ್ಥ, ರಂಗಪ್ರಯೋಗ - ಈ ಭಾಗಗಳು ಇದಕ್ಕೆ ನಿದರ್ಶನವೆನಿಸಿವೆ. ಒಟ್ಟು ಪ್ರಬಂಧದ ಕೇಂದ್ರಭಾಗವೆಂಬಂತೆ ಇಲ್ಲಿಯ ವಿಷಯ ನಿರೂಪಣೆಯಿದೆ.

ಕರ್ನಾಟಕದಲ್ಲಿ ಇತಿಹಾಸ ಬರೆಯುವುದು, ಅದರಲ್ಲಿಯೂ ಮೌಖಿಕ ಪರಂಪರೆಯ ಇತಿಹಾಸ ಬರೆಯುವುದು ಕಷ್ಟದ ಕೆಲಸ. ಇದು ಕೇವಲ ಮೊತ್ತವನ್ನು ಗುರುತಿಸುವುದಲ್ಲ, ಮೊತ್ತದಿಂದ ಮೌಲ್ಯವನ್ನು ನಿರ್ಧಸಿರುವುದೂ ಆಗಿದೆ. ಇದನ್ನು ಅರ್ಥಮಾಡಿಕೊಂಡ ಡಾ. ಇಟ್ಟಣ್ಣವರ ಶ್ರೀಕೃಷ್ಣಪಾರಿಜಾತ ಎಷ್ಟು ಮೇಳಗಳಲ್ಲಿ ಮಿಂಚಿದೆ? ಆ ಮೇಳಗಳ, ಕಲಾವಿದರ ಸ್ಥಿತಿಗತಿಯೇನು? ಅದು ಪರಿಸರದ ಮೇಲೆ ಬೀರುತ್ತ ಬಂದ ಪ್ರಭಾವ ಯಾವ ಬಗೆಯದು? - ಇತ್ಯಾದಿ ಕಳೆದುಹೋದ ಸಂಗತಿಗಳನ್ನು ಮರಳಿ ದೊರಕಿಸಿಕೊಂಡು, ಚರಿತ್ರೆಯನ್ನು ದಟ್ಟವಾಗಿ ಚಿತ್ರಿಸಿದ್ದಾರೆ. ಹೀಗಾಗಿ ಕರ್ನಾಟಕದ ಜಾನಪದ ರಂಗಭೂಮಿಯ ಇತಿಹಾಸಕ್ಕೆ ಇದು ಹೊಸ ಸೇರ್ಪಡೆಯೆನಿಸಿದೆ.

ಈ ಮಹಾಪ್ರಬಂಧ ಕಲಾವಿದರ ಪರಿಚಯದೊಂದಿಗೆ ಕೊನೆಗೊಂಡಿದೆ. ದೂರದಿಂದ ದೇವಾಲಯದ ಶಿಖರಶಿಲೆ ಮಾತ್ರ ಕಾಣಿಸುತ್ತದೆ, ಸಮೀಪ ಹೋದರೆ ಮಾತ್ರ ಕಲ್ಲಿನ ಕಂಬ-ಬಾಗಿಲು-ತೊಲೆಗಳು ಕಾಣಿಸುತ್ತವೆ. ಇವೆಲ್ಲವನ್ನೂ ಹೊತ್ತುನಿಂತ ಬುನಾದಿಯ ಕಲ್ಲುಗಳು ಕಾಣುವುದೇ ಇಲ್ಲ. ಹೀಗೆ ಶ್ರೀಕೃಷ್ಣ ಪಾರಿಜಾತದ ಪ್ರದರ್ಶನೇತಿಹಾಸದಲ್ಲಿ ಕೆಲವೇ ಜನ ಕಲಾವಿದರು ಎದ್ದು ಕಾಣಿಸುತ್ತಾರೆ. ಕೆಲವರು ಕಾಣಿಸುವುದೇ ಇಲ್ಲ. ಶ್ರೀರಾಮ ಇಟ್ಟಣ್ಣವರ ಅವರು ಒಬ್ಬ ಉತ್ತಮ ಕ್ಷೇತ್ರಕಾರ್ಯಕರ್ತರಾದುದರಿಂದ, ಕರ್ನಾಟಕ-ಆಂಧ್ರ ಪ್ರದೇಶ-ಮಹಾರಾಷ್ಟ್ರಗಳ ಪರ್ಯಟನ, ಪರಿವೀಕ್ಷಣೆಗಳಿಂದಾಗಿ ಅನೇಕ ಜನ ಅಜ್ಞಾತ ಕಲಾವಿದರನ್ನು ಗುರುತಿಸಿ, ಈ ಪ್ರಬಂಧದಲ್ಲಿ ಬದುಕಿಸಿದ್ದಾರೆ. ಅವರ ಜೀವನ, ಕಲಾಜೀವನಗಳ ಸುಖ-ದುಃಖ, ಸಾಧನೆ-ಸೋಲುಗಳನ್ನು ಚಿತ್ರವತ್ತಾಗಿ ಬಿಡಿಸಿದ್ದಾರೆ. ಸಾಲದುದಕ್ಕೆ ಅನುಬಂಧದಲ್ಲಿ ಕಲಾವಿದರ ಸಮಗ್ರಪಟ್ಟಿಯನ್ನು, ಹೆಚ್ಚಿನದಾಗಿ ಮೇಳವನ್ನೊಳಗೊಂಡ ಇಂದಿನ ಊರುಗಳ, ಸಂದರ್ಶಿಸಿದ ವ್ಯಕ್ತಿಗಳ ಪಟ್ಟಿಯನ್ನು ಕೊಟ್ಟು, ಅಧ್ಯಯನ ವರ್ತುಲವನ್ನು ಪೂರ್ಣಗೊಳಿಸಿದ್ದಾರೆ.

ಶ್ರೀಕೃಷ್ಣಪಾರಿಜಾತಕ್ಕೆ ಶ್ರವ್ಯಕೃತಿ-ದೃಶ್ಯಕೃತಿ, ದೃಶ್ಯದಲ್ಲಿಯೇ ಶ್ರವ್ಯಪ್ರಧಾನ ಕೃತಿ, ಶ್ರವ್ಯ ಪ್ರಧಾನತೆಯಲ್ಲಿಯೇ ಮಾತು-ಗೀತೆಗಳು ಮೇಳವೆನಿಸಿದ ಕೃತಿ, ತತ್ವ-ನೀತಿಗಳು ಸಂಗಮಿಸಿದ ಕೃತಿ ಎಂಬ

ಆಯಾಮಗಳಿವೆ. ಶಿಷ್ಟಕೃತಿ-ಜಾನಪದ ಕೃತಿ, ಪುರಾಣ ಪ್ರೇರಿತ ಕೃತಿ-ಪರಿಸರ ಪ್ರಭಾವಿತ ಕೃತಿ ಎಂಬ ಮಗ್ಗಲುಗಳೂ ಇವೆ. ಪ್ರಭಾವಶಾಲಿ ಕೃತಿಯೆಂಬ ಹೆಸರನ್ನೂ ಇದು ಗಳಿಸಿದೆ. ಇದಕ್ಕೆ ವಾಹನವಾಗಿ ಮೇಳಗಳಿವೆ, ಕಲಾವಿದರಿದ್ದಾರೆ, ಪ್ರೇಕ್ಷಕರಿದ್ದಾರೆ - ಈ ಎಲ್ಲ ಅಧ್ಯಯನಗಳಿಗೆ ಪ್ರಬಂಧದಲ್ಲಿ ಸರಿಯಾದ ನ್ಯಾಯ ಲಭಿಸಿದೆ.

ಕ್ಷೇತ್ರಕಾರ್ಯವು ಜಾನಪದ ಅಧ್ಯಯನದ ಅದಕು, ಇದಕು, ಎದುಕು ಆಧಾರವಾಗಿರುವ ನೆಲೆಯಾಗಿದೆ. ಈ ದೃಷ್ಟಿಯಿಂದ ಸಂಗ್ರಹಿಸಿದ ಆಕರ ಸಾಮಗ್ರಿಯಲ್ಲಿ ಅಪ್ರಾಮಾಣಿಕವಾದುದನ್ನು ನಿರಾಕರಿಸಿ, ಪ್ರಾಮಾಣಿಕವಾದುದನ್ನು ವಿಭಜಿಸುವ, ವಿಶ್ಲೇಷಿಸುವ, ವೈಜ್ಞಾನಿಕವಾಗಿ ಸಂಯೋಜಿಸುವ ಕೆಲಸ ಇಲ್ಲಿ ನಡೆಯಬೇಕಾಗುತ್ತದೆ. ಶ್ರೀರಾಮ ಇಟ್ಟಣ್ಣವರ ಅವರು ಈ ಎಲ್ಲ ಕೆಲಸವನ್ನು ಸಮರ್ಪಕವಾಗಿ ಮಾಡಿದುದಕ್ಕೆ ಈ ಪ್ರಬಂಧ ಸಾಕ್ಷಿ ನುಡಿಯುತ್ತದೆ.

ಉತ್ತಮ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುವುದು ಅಧ್ಯಾಪಕನಿಗೂ ಒಂದು ಶೈಕ್ಷಣಿಕ ತರಬೇತಿ. ಮಾರ್ಗದರ್ಶನ ಸಂದರ್ಭದಲ್ಲಿ ಅಂಥ ಅನುಭವನ್ನು ನನ್ನದಾಗಿಸಿದ ಶ್ರೀರಾಮ ಇಟ್ಟಣ್ಣವರ ಅವರಿಗೆ ಮುನ್ನುಡಿಯ ಮುಕ್ತಾಯದಲ್ಲಿ ಶುಭವನ್ನು ಹಾರೈಸುತ್ತೇನೆ.

ಶ್ರೀರಾಮ ಇಟ್ಟಣ್ಣವರ, ಬೀಳಗಿ

ಆಕರ : ಮಾರ್ಗ ಸಂಪುಟ–೬

೧೫೩

ಕರ್ನಾಟಕದಲ್ಲಿ ಸತಿಪದ್ಧತಿ

೧೯೯೧

ಕನ್ನಡ ಅಧ್ಯಯನ ಹಲವು ದಾರಿಗಳಲ್ಲಿ, ಹಲವು ಹಂತಗಳಲ್ಲಿ ತುಂಬ ಸಂಕೀರ್ಣವೂ, ಸಮೃದ್ಧವೂ ಆಗಿ ಬೆಳೆದು ಬರುತ್ತಲಿದೆ. ಇವುಗಳಲ್ಲಿ ವಿದ್ಯಾರ್ಥಿಯೊಬ್ಬನ ಪ್ರೌಢವ್ಯಾಸಂಗವೆನಿಸಿದ ಪಿಎಚ್. ಡಿ. ಅಧ್ಯಯನವು ಜ್ಞಾನಸಂಪುಟಕ್ಕೆ ಹೊಸಪುಟವನ್ನು ಸೇರಿಸುವ ಪ್ರಯತ್ನವಾಗಿರುತ್ತದೆ. ಇಂದು ಕರ್ನಾಟಕದ ಒಳ-ಹೊರಗಿನ ವಿಶ್ವವಿದ್ಯಾಲಯಗಳಲ್ಲಿ ಪಿಎಚ್.ಡಿ. ಅಧ್ಯಯನ ವಿಪುಲ ಪ್ರಮಾಣದಲ್ಲಿ ನಡೆದಿದೆ. ಒಂದು ಅಂದಾಜಿನ ಪ್ರಕಾರ ಇವತ್ತಿನ ವರೆಗೆ ಕನ್ನಡದಲ್ಲಿ ಈ ಉನ್ನತ ಪದವಿ ಪಡೆದವರ ಒಟ್ಟು ಸಂಖ್ಯೆ ಸುಮಾರು ೩೦೦. ಸಂಖ್ಯೆ ಸಮಾಧಾನಕರವಾಗಿದ್ದರೂ ಸತ್ವ ಅಸಮಾಧಾನಕರವಾಗುತ್ತಲಿರುವ ಇಂದಿನ ಸಂದರ್ಭದಲ್ಲಿ, ಈ ಉತ್ತಮ ಪ್ರಬಂಧಕ್ಕಾಗಿ ಡಾ. ಬಿ. ಎಸ್. ಶೇಠೆ ಅವರನ್ನು ಅಭಿನಂದಿಸುತ್ತೇನೆ.

ಡಾ. ಶೇಠೆ ಕನ್ನಡದ ಒಬ್ಬ ಮಹತ್ವದ ಯುವಸಂಶೋಧಕ. ವಿಷಯದ ಜಟಿಲತೆ, ಆಕರಗಳ ಕೊರತೆ, ಆಧಾರಗಳ ವೈರುಧ್ಯತೆಗಳ ಚಕ್ರವ್ಯೂಹವನ್ನು ಭೇದಿಸಿ, ಪ್ರಾಮಾಣಿಕ ಫಲಿತಾಂಶವನ್ನು ಹಿಡಿದುಕೊಂಡು ಹೊರಬರುವ ಒಬ್ಬ ಸಶಕ್ತ ತರುಣ ವಿದ್ವಾಂಸ. ಸೃಜನ ಸಾಹಿತಿಗಳಿಗೆ ಸಿಗುವ ಜನಪ್ರಿಯತೆ ಮತ್ತು ಭೌತಿಕ ಲಾಭಗಳ ಅಬ್ಬರದಿಂದಾಗಿ ಸಂಶೋಧನ ಸಾಹಿತಿಗಳು ಧೃತಿಗೆಡಬಹುದಾದ ಇಂದಿನ ಸಂದರ್ಭದಲ್ಲಿ ಡಾ. ಶೇಠೆಯವರು ಈ ಕ್ಷೇತ್ರದಲ್ಲಿ ಧೈರ್ಯದಿಂದ ನಿಂತಿರುವುದು, ವಿಜಾಪುರದಂಥ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಸಂಶೋಧನಾಸಕ್ತಿಯನ್ನು ಉಳಿಸಿಕೊಂಡಿರುವುದು ವಿಶೇಷ ಸಂಗತಿಯಾಗಿದೆ.

ಕನ್ನಡದಲ್ಲಿ ಸಾಹಿತ್ಯ, ಸಾಹಿತ್ಯಶಾಸ್ತ್ರಗಳಿಗೆ ಸೀಮಿತವಾಗಿದ್ದ ಪಿಎಚ್.ಡಿ. ಅಧ್ಯಯನ ಇಂದು ಭಾಷಾವಿಜ್ಞಾನ, ಜಾನಪದ, ಸಂಸ್ಕೃತಿ, ಕಲೆ, ಶಾಸನ ಇತ್ಯಾದಿ ಕ್ಷೇತ್ರಗಳನ್ನು ಆವರಿಸಿಕೊಂಡು ನಡೆಯುತ್ತಲಿದೆ. ಇದಲ್ಲದೆ ಏಕಕ್ಷೇತ್ರೀಯ ಸಂಶೋಧನೆಯೊಂದಿಗೆ ಬಹುಕ್ಷೇತ್ರೀಯ ಸಂಶೋಧನೆ ಅಸ್ತಿತ್ವಕ್ಕೆ ಬಂದಿದ್ದು, ಇದರ ಫಲವಾಗಿ ಅನೇಕ ಬಗೆಯ ಆಕರ ಸಾಮಗ್ರಿಯನ್ನು ಬಳಸಿಕೊಂಡು ವಿಷಯವನ್ನು ಬಿಚ್ಚಿಕೊಳ್ಳುವ, ಕಟ್ಟಿಕೊಡುವ ಕಾರ್ಯ ಇಲ್ಲಿ ಬೆಳೆಯುತ್ತಲಿದೆ. ಡಾ. ಶೇಠೆ ಅವರ ಪ್ರಬಂಧ ಈ ಎರಡೂ ಬಗೆಗಳಿಗೆ ನಿದರ್ಶನವಾಗಿದೆ.

"ಸತಿಪದ್ಧತಿ" ಜಾಗತಿಕ ವ್ಯಾಪ್ತಿಯ ಒಂದು ಪ್ರಾಚೀನ ಜೀವನಮೌಲ್ಯ. ಭಾರತದಲ್ಲಿ, ಹಾಗೆಯೇ ಕರ್ನಾಟಕದಲ್ಲಿ ಇದಕ್ಕೆ ಸುದೀರ್ಘ ಪರಂಪರೆಯಿದೆ. ಸಾಮಾಜಿಕ ಕಾರಣಗಳಿಂದಾಗಿ ಅಸ್ತಿತ್ವಕ್ಕೆ ಬಂದು, ಸಂಪ್ರದಾಯದ ಪರಿವೇಷ ಕಟ್ಟಿಕೊಂಡು ಬೆಳೆದಿರುವ ಈ ಪದ್ಧತಿಯ ಸರ್ವಸಮಗ್ರ ಅಧ್ಯಯನ ಈ ವರೆಗೆ ನಮ್ಮ ನಾಡಿನಲ್ಲಿ ನಡೆದಿರಲಿಲ್ಲ. ಆ ಕೊರತೆಯನ್ನು ತುಂಬಿಕೊಟ್ಟ ಪ್ರಥಮ ಶ್ರೇಯಸ್ಸು ಈ ಪ್ರಬಂಧಕ್ಕೆ ಸಲ್ಲುತ್ತದೆ.

"ಸತಿಪದ್ಧತಿ" ಪ್ರಾಚೀನ ಜನಜೀವನದ ಒಂದು ಮುಖ್ಯ ಆಚರಣೆಯಾಗಿದ್ದುದರಿಂದ ಜೀವನದ ಅನೇಕ ಮಾಧ್ಯಮಗಳಲ್ಲಿ, ಅನೇಕ ಬಗೆಯಾಗಿ ಅದು ದಾಖಲಾಗುತ್ತ ಬಂದಿದೆ. ಈ ಬಗೆಯ ಎಲ್ಲ ಆಕರಗಳನ್ನು ಬಳಸಿಕೊಂಡು ಕಟ್ಟಿದ ಪ್ರಯತ್ನವಾಗಿದೆ, ಈ ಪ್ರಬಂಧ.

"No source no history" ಎಂಬ ಮಾತು ಪ್ರಸಿದ್ಧ. ಆದರೆ ಈ ವರೆಗೆ ಕೇವಲ ಶಾಸನಪಾಠವನ್ನು, ಒಂದೆರಡು ಪ್ರಮುಖ ಕಾವ್ಯಗಳನ್ನು ಗಮನಿಸಿ ಮಾತ್ರ ಈ ವಿಷಯದ ಅಧ್ಯಯನ ನಡೆದಿದ್ದಿತು. ಇದರಿಂದಾಗಿ ಸತಿಪದ್ಧತಿಯ ಅನೇಕ ಆಯಾಮಗಳು ಉಪೇಕ್ಷಿತವಾಗಿದ್ದವು. ಈ ಪ್ರಬಂಧದಲ್ಲಿ ಶಾಸನ ಪಾಠದೊಂದಿಗೆ ಶಾಸನಶಿಲ್ಪವನ್ನೂ, ಪ್ರಮುಖಕಾವ್ಯಗಳೊಂದಿಗೆ ಅಪ್ರಮುಖ (ಮಾಸ್ತಿ ದೃಷ್ಟಿಯಿಂದ ಪ್ರಮುಖ) ಕಾವ್ಯಗಳನ್ನೂ, ಬಳಸಿಕೊಂಡುದಲ್ಲದೆ, ಪ್ರಥಮ ಬಾರಿಗೆ ಸಮಗ್ರ ಜನಪದ ಗದ್ಯ-ಪದ್ಯ ಸಾಹಿತ್ಯವನ್ನು ಅಳವಡಿಸಿಕೊಳ್ಳಲಾಗಿದೆ. ಇಷ್ಟರಿಂದಲೂ ಈ ಅಧ್ಯಯನ ಅಪೂರ್ಣವೆಂಬುದನ್ನು ಮನಗಂಡು ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿ ಕ್ಷೇತ್ರಕಾರ್ಯ ನಡೆಸಿ, ವಿಷಯವನ್ನು ಸಂಗ್ರಹಿಸಿಕೊಂಡುದು ಈ ಪ್ರಬಂಧದ ಬಹುಮುಖ್ಯ ಸಾಧನೆಯಾಗಿದೆ. ಇದರ ಫಲವಾಗಿ ಅಲ್ಲಲ್ಲಿ ಕಂಡುಬರುವ ಮಾಸ್ತಿಕುರುಹುಗಳು, ಅವಳ ಹೆಸರಿನಲ್ಲಿ ನಿಲ್ಲಿಸಿದ ಅನೇಕ ಬಗೆಯ ಸ್ಮಾರಕಗಳು, ಕೇಳಿಬರುವ ವದಂತಿಗಳು, ನಡೆಸುತ್ತಲಿರುವ ಆಚರಣೆಗಳು ಸಮೃದ್ಧ ಆಕರಗಳಾಗಿ ಬಂದು, ಈ ಪ್ರಬಂಧಕ್ಕೆ ಪರಿಪೂರ್ಣತೆಯನ್ನೊದಗಿಸಿವೆ.

ಆಕರಗಳ ಸಂಗ್ರಹದಷ್ಟೇ ಅವುಗಳ ಅಧಿಕೃತತೆಯನ್ನು ಗುರುತಿಸುವುದು ಮುಖ್ಯವಾಗಿದೆ. ಒಂದು ಘಟನೆಯನ್ನು ಏಕಕಾಲಕ್ಕೆ ಶಿಷ್ಟರು ಪುರಾಣೀಕರಣಗೊಳಿಸುವುದೂ, ಜಾನಪದರು ಐತಿಹ್ಯೀಕರಣಗೊಳಿಸುವುದೂ ಸಮಾಜದಲ್ಲಿ ನಡೆದೇ ಇರುತ್ತದೆ. ಇಂಥ ಸಂದರ್ಭದಲ್ಲಿ ಅನವಶ್ಯ ವಿಷಯಗಳನ್ನು ಕೈಬಿಟ್ಟು ಅವುಗಳ ತಳದಲ್ಲಿರುವ ಮುಖ್ಯ ಆಶಯಗಳನ್ನು ಗ್ರಹಿಸಬೇಕಾಗುತ್ತದೆ. ಲಿಖಿತ ಸಾಮಗ್ರಿಯ ಇತಿಹಾಸಕಾರನಾಗಿಯೂ, ಮೌಖಿಕ ಸಾಮಗ್ರಿಯ ಇತಿಹಾಸಕಾರನಾಗಿಯೂ ಅವನು ದುಡಿಯಬೇಕಾಗುತ್ತದೆ. ಈ ಪ್ರಬಂಧದಲ್ಲಿ ಅಂಥ ಪ್ರಯತ್ನ ಉದ್ದಕ್ಕೂ ಕಂಡುಬರುತ್ತದೆ.

ಆಕರಗಳನ್ನು ಸಂವೇದನಾರಹಿತವಾಗಿ ಬಳಸಿಕೊಂಡು ಕಳೆದುಹೋದ "ಸಾಮಾಜಿಕ ಸ್ವರೂಪ"ವನ್ನು ರಚಿಸಿಕೊಡುವ ಕ್ರಿಯೆಯೊಂದಿಗೆ, ಅವುಗಳನ್ನು ಸಂವೇದನಾಸಹಿತವಾಗಿ ಬಳಸಿಕೊಂಡು ಕಳೆದುಹೋದ "ಸಾಮಾಜಿಕ ಸಂವೇದನೆ"ಗಳನ್ನು ಕಾಣಿಸಿಕೊಡುವ ಕೆಲಸ ಸಂಶೋಧನೆಯಲ್ಲಿ ನಡೆಯಬೇಕಾಗುತ್ತದೆ. ಪ್ರಸ್ತುತ ಪ್ರಬಂಧದಲ್ಲಿ ಈ ಎರಡೂ ಪ್ರಯತ್ನಗಳನ್ನು ಕಾಣಬಹುದಾಗಿದೆ.

ಇಲ್ಲಿ ಒಂದು ಮಾತನ್ನು ಎತ್ತಿ ಹೇಳಬೇಕು. ಅದು: ಗತಕಾಲದ ಶೋಧಕ್ಕೆ ಬಳಸಿಕೊಳ್ಳಬೇಕಾದ ಸಾಮಗ್ರಿಗಳಲ್ಲಿ ಶಾಸನಗಳು ಮುಖ್ಯವಾದುವು. ಈ ಸಾಮಗ್ರಿಯನ್ನು ಇತಿಹಾಸದ ವಿದ್ಯಾರ್ಥಿಗಳಿಗಿಂತ ಕನ್ನಡದ ವಿದ್ಯಾರ್ಥಿಗಳು ಭಿನ್ನ ರೀತಿಯಲ್ಲಿ ಬಳಸಿಕೊಂಡು ಕರ್ನಾಟಕದಲ್ಲಿ ಸಾಂಸ್ಕೃತಿಕ ಅಧ್ಯಯನದ ಹೊಸ ಆಯಾಮವನ್ನೇ ಸ್ಥಾಪಿಸಿದ್ದಾರೆ. ಇದರ ಫಲವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಶಾಸನಗಳಲ್ಲಿ ಕರ್ನಾಟಕದ ವರ್ತಕವರ್ಗ, ಶ್ರವಣಬೆಳ್ಗೊಳ : ರಾಜಕೀಯ ಸಾಹಿತ್ಯಿಕ ಸಾಂಸ್ಕೃತಿಕ ಮಹತ್ವ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಆರನೆಯ ವಿಕ್ರಮಾದಿತ್ಯನ ಶಾಸನಗಳು, ತರ್ದವಾಡಿನಾಡು: ಒಂದು ಅಧ್ಯಯನ- ಹೆಸರಿನ ಒಳ್ಳೆಯ ಪ್ರಬಂಧಗಳು ಹುಟ್ಟಿಕೊಂಡಿದ್ದು, ಆ ಸಾಲಿನಲ್ಲಿ ನಿಲ್ಲುವ ಒಂದು ಮೌಲಿಕ ಕೃತಿಯಾಗಿದೆ, ಡಾ. ಬಿ. ಎಸ್. ಶೇಠೆ ಅವರ "ಕರ್ನಾಟಕದಲ್ಲಿ ಸತಿಪದ್ಧತಿ."

ಯಾವುದೇ ವಿಚಾರ ಸರಿಯಾಗಿ ಪ್ರಕಟವಾಗಬೇಕಾದರೆ ಅದು ಒಂದು ಬಗೆಯ ಶಿಸ್ತನ್ನು ಅಪೇಕ್ಷಿಸುತ್ತದೆ. ಪಿಎಚ್.ಡಿ.ಯಂತಹ ಗಾತ್ರಬಾಹುಳ್ಯದ ಪ್ರೌಢಪ್ರಬಂಧದಲ್ಲಿ ಈ ಶಿಸ್ತು ಇನ್ನೂ ಅಪೇಕ್ಷಣೀಯ. ಶೇಠೆ ಅವರು ಸಾಮಗ್ರಿಯ ಸಂಗ್ರಹ-ವ್ಯಾಖ್ಯಾನಗಳಲ್ಲಿಯಷ್ಟೇ ವಿಷಯದ ವರ್ಗೀಕರಣ, ಮರು ವರ್ಗೀಕರಣಗಳಲ್ಲಿಯೂ

ಎಚ್ಚರವಹಿಸಿದ್ದಾರೆ. ಹೀಗಾಗಿ ಪ್ರಬಂಧದುದ್ದಕ್ಕೂ ವಿಷಯ ವಿನ್ಯಾಸ ತುಂಬ ವೈಜ್ಞಾನಿಕವಾಗಿ ಬೆಳೆದುಕೊಂಡು ಬಂದಿದೆ.

ವಿಷಯವಿನ್ಯಾಸದಷ್ಟೇ ಮುಖ್ಯವಾದುದು, ಅದರ ನಿರೂಪಣೆ. ಅನೇಕ ಬಗೆಯ ಆಕರಗಳ ನಿಯಂತ್ರಣದಲ್ಲಿ ಮುಂದುವರಿಯಬೇಕಾದ ಸಂಶೋಧನ ಬರವಣಿಗೆಯಲ್ಲಿ ನಿರೂಪಣೆ ಜಟಿಲತೆಗೆ ಹೊರಳುವುದೇ ಹೆಚ್ಚು. ಹೀಗಿದ್ದೂ ವಿಷಯಕ್ಕೆ ಅನ್ಯಾಯವಾಗದಂತೆ ಶ್ರೀ ಶೇತೆ ಅವರ ನಿರೂಪಣೆ ಪ್ರವಹನಶೀಲವಾಗಿದೆ, ಪರಿಣಾಮಕಾರಿಯಾಗಿದೆ. ವಿಷಯದ ಬಗೆಗಿನ ಸ್ಪಷ್ಟ ತಿಳುವಳಿಕೆಯು ನಿರೂಪಣೆಯ ನಿರರ್ಗಳತೆಗೆ ದಾರಿ ಮಾಡಿಕೊಡುವುದು ಸಹಜವಾಗಿದೆ.

ಇಂದು ಸಂಶೋಧನೆ ಕೇವಲ ವಿದ್ವಾಂಸರ ವಲಯದಲ್ಲಿ ಮಡುಗಟ್ಟಿನಿಲ್ಲದೆ, ಸಹೃದಯರ ಪರಿಸರದಲ್ಲಿಯೂ ಪ್ರವಹಿಸಬೇಕಾಗಿದೆ. ಓದುಗರ ಸಂಖ್ಯೆಯನ್ನು ಹೆಚ್ಚಿಸಿಕೊಂಡು, ಅವರ ಪ್ರತಿಕ್ರಿಯೆಗೆ ತಕ್ಕಂತೆ ಸ್ಪಂದಿಸಿದಾಗ ಮಾತ್ರ ಅದು ಹೊಸ ಹೊಸ ಮಗ್ಗಲುಗಳನ್ನು ಬಿಚ್ಚಿಕೊಂಡು ಬೆಳೆಯುತ್ತದೆ. ಈ ಬಗೆಯ ಬೆಳವಣಿಗೆಯು ಸರಳ ನಿರೂಪಣೆಯ ಇಂಥ ಸಂಶೋಧನ ಪ್ರಬಂಧಗಳಿಂದ ಸಾಧ್ಯವೆಂಬ ವಿಶ್ವಾಸ ನನ್ನದಾಗಿದೆ.

ಸೃಜನೇತರ ಸಾಹಿತ್ಯಕ್ಕೆ, ಅದರಲ್ಲಿಯೂ ಸಂಶೋಧನ ಸಾಹಿತ್ಯಕ್ಕೆ ಓದುಗರ ಸಂಖ್ಯೆ ಕಡಿಮೆ. ಲಾಭದಾಯಕವಲ್ಲದ ಈ ಸಾಹಿತ್ಯಕ್ಕೆ ಪ್ರಕಾಶಕರೂ ಕಡಿಮೆ. ಕಾಗದ ಬೆಲೆ, ಮುದ್ರಣ ವೆಚ್ಚ ಮುಗಿಲು ಮುಟ್ಟಿರುವ ಇಂದಿನ ದಿನಗಳಲ್ಲಿ ಈ ಕಾರ್ಯ ಇನ್ನೂ ನಿರುತ್ಸಾಹದಾಯಕವಾಗಿದೆ. ಆರ್ಥಿಕ ಮುಗ್ಗಟ್ಟು ಕಾರಣವಾಗಿ ವಿಶ್ವವಿದ್ಯಾಲಯ, ಸಾಹಿತ್ಯ ಪರಿಷತ್ತುಗಳಂಥ ಶಿರೋಸಂಸ್ಥೆಗಳೇ ಈ ಬಗ್ಗೆ ಕೈಚೆಲ್ಲಿ ಕುಳಿತುಬಿಟ್ಟಿವೆ. ಇಂಥ ಸನ್ನಿವೇಶದಲ್ಲಿ ವೀರಶೈವ ಮಠಗಳು ಮುಂದೆ ಬರುತ್ತಿರುವುದು ಧಾರ್ಮಿಕ ಸಂಸ್ಥೆಗಳು ನವೀಕರಣಗೊಳ್ಳುತ್ತಿರುವ ಸೂಚನೆಯಾಗಿದೆ. ಗದುಗಿನ ಶ್ರೀ ತೋಂಟದಾರ್ಯಮಠ ಈ ಮೊದಲು ಕೆಲವು ಪಿಎಚ್.ಡಿ. ಪ್ರಬಂಧಗಳನ್ನು ಪ್ರಕಟಿಸಿದೆ. ಈಗ ಶಿಕ್ಷಣಕ್ಷೇತ್ರಕ್ಕೆ ದೊಡ್ಡ ಸೇವೆ ಸಲ್ಲಿಸುತ್ತಿರುವ "ಬೆಳಗಾವಿಯ ನಾಗನೂರು ರುದ್ರಾಕ್ಷಿಮಠ" ಮುಂದು ಬಂದಿರುವುದು ಮಿಕ್ಕ ಮಠಗಳಿಗೆ ಆದರ್ಶವೆನಿಸುವ ಉಪಕ್ರಮವಾಗಿದೆ. ಮಠಗಳು ಕೇವಲ ಧಾರ್ಮಿಕ ಕೇಂದ್ರಗಳಲ್ಲ, ಸಾಮಾಜಿಕ ಕೇಂದ್ರಗಳೆಂಬ ಮೂಲಸತ್ಯವನ್ನು ಅನುಷ್ಠಾನಗೊಳಿಸುವ ಪ್ರಯತ್ನವಿದು. ಈ ಪ್ರಯತ್ನಕ್ಕಾಗಿ ನಾಗನೂರು ರುದ್ರಾಕ್ಷಿಮಠದ 'ವೀರಶವೈವ ಅಧ್ಯಯನ ಅಕಾಡೆಮಿ'ಗೆ ವಿದ್ವತ್ತಿನ ವಲಯದ ಕೃತಜ್ಞತೆಗಳು ಸಲ್ಲುತ್ತವೆ.

ಸ್ನಾತಕೋತ್ತರ ಕನ್ನಡ ವಿಭಾಗಗಳಲ್ಲಿ ಸಂಶೋಧನೆ ಕುಸಿಯುತ್ತಲಿದೆಯೆಂಬ ದನಿ ದಟ್ಟವಾಗಿ ಕೇಳಿಬರುತ್ತಲಿದೆ. ಇಂಥ ಸಂದರ್ಭದಲ್ಲಿ ವಿಭಾಗದ ಹೊರಗೆ ಸೃಷ್ಟಿಯಾದ "ಕರ್ನಾಟಕದಲ್ಲಿ ಸತಿಪದ್ಧತಿ"ಯಂಥ ಉತ್ತಮ ಪ್ರಬಂಧಕ್ಕಾಗಿ ನಾವು ಸಂತೋಷಪಡಬೇಕಾಗಿದೆ. ಈ ಸಂತೋಷವನ್ನು ನಮ್ಮದಾಗಿಸಿದ ಡಾ. ಬಿ. ಎಸ್. ಶೇತೆ ಅವರಿಂದ ಇನ್ನೂ ಉತ್ತಮೋತ್ತಮ ಬರೆವಣಿಗೆ ಬೆಳಕುಕಾಣಲೆಂದು ಹಾರೈಸುತ್ತೇನೆ.

ಬಿ.ಎಸ್. ಶೇತೆ, ವಿಜಾಪುರ

ಆಕರ : ಮಾರ್ಗ ಸಂಪುಟ-೬

೧೫೪

ಕೆಳದಿ ಅರಸರ ಶಾಸನ ಸಂಪುಟ

೧೯೯೧

ಕರ್ನಾಟಕದ ಶಾಸನಸಂಪತ್ತು ಸಂಖ್ಯಾತ್ಮಕ ಮತ್ತು ಗುಣಾತ್ಮಕ ದೃಷ್ಟಿಯಿಂದ ಭಾರತೀಯ ಮಹತ್ವವುಳ್ಳುದಾಗಿದೆ. ೧೯ನೆಯ ಶತಮಾನದಿಂದ ಅನೇಕ ಸಂಸ್ಥೆಗಳು, ಅನೇಕ ವ್ಯಕ್ತಿಗಳು ಈ ಸಂಪತ್ತನ್ನು ಪರಿವೀಕ್ಷಿಸುವ, ಪ್ರಕಟಿಸುವ ಕೆಲಸವನ್ನು ಕೈಕೊಂಡಿದ್ದರೂ ಅದು ಅಪೂರ್ಣ ಹಂತದಲ್ಲಿ, ಅವ್ಯವಸ್ಥೆಯ ಸ್ಥಿತಿಯಲ್ಲಿ ಉಳಿದುಕೊಂಡುದು ವಿಷಾದದ ಸಂಗತಿಯಾಗಿದೆ. ಈವರೆಗೂ ಉತ್ತರಕರ್ನಾಟಕ, ಕರಾವಳಿ ಕರ್ನಾಟಕದ ಶಾಸನಗಳ ಪರಿವೀಕ್ಷಣ ಪ್ರಕಟನಕಾರ್ಯ ಕ್ರಮವತ್ತಾಗಿ ನಡೆಯಲಿಲ್ಲ. ಹೊರನಾಡಿನ ಕನ್ನಡ ಶಾಸನಗಳು ತುಂಬ ಉಪೇಕ್ಷಿತವಾಗಿವೆ. ಇಂಥ ಸಂದರ್ಭದಲ್ಲಿ ದಕ್ಷಿಣಕರ್ನಾಟಕದ ಶಾಸನಗಳ ಪರಿವೀಕ್ಷಣ ಕಾರ್ಯ ತೃಪ್ತಿಕರವಾಗಿ ನಡೆದು, ಎಪಿಗ್ರಫಿಯ ಕರ್ನಾಟಕ ಸಂಪುಟಗಳ ಮೂಲಕ ಪ್ರಕಟವಾದುದು ಹರ್ಷದ ವಿಷಯವಾಗಿದೆ.

ಎಡವಮುರಾರಿಕೋಟೆಯನ್ನು ಕೋಲಾಹಲಗೊಳಿಸುವ ಮೂಲಕ ಸ್ಥಿರಸಾಮ್ರಾಜ್ಯವನ್ನು ಸ್ಥಾಪಿಸಿದ ಕೆಳದಿ ಅರಸರು, ದಕ್ಷಿಣ ಕರ್ನಾಟಕದ ಪಶ್ಚಿಮಭಾಗದಲ್ಲಿ ಆಳಿದವರು. ಹೀಗಾಗಿ ಶಿವಮೊಗ್ಗೆ, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ- ಈ ಜಿಲ್ಲೆಗಳಲ್ಲಿ ಅವರ ಶಾಸನಗಳು ಅಧಿಕ ಪ್ರಮಾಣದಲ್ಲಿ ಸಿಗುವುದು ಸಹಜ. ಈ ಪ್ರದೇಶದ ಶಾಸನಗಳು ಎಪಿಗ್ರಫಿಯ ಕರ್ನಾಟಕ ಸಂಪುಟಗಳ ಮೂಲಕ ವಿಶೇಷವಾಗಿ, ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ ಮೊದಲಾದವುಗಳ ಮೂಲಕ ವಿರಳವಾಗಿ ಪ್ರಕಟಗೊಂಡಿವೆ. ಮಲೆನಾಡಿನ ಕಾಡು-ಮೇಡು ಕಾರಣವಾಗಿ ಕೆಲವು ಅಲ್ಲಲ್ಲಿ ಪ್ರಕಟವಾಗದೆ ಉಳಿದಿವೆ. ಹೀಗೆ ಬೇರೆಬೇರೆ ಪ್ರಕಟನೆಗಳಲ್ಲಿ ಚದುರಿಹೋಗಿರುವ, ಅಲ್ಲಲ್ಲಿ ಅಜ್ಞಾತವಾಗಿರುವ ಕೆಳದಿ ಅರಸರ ಶಾಸನಗಳನ್ನು ಒಂದೆಡೆ ಸಂಗ್ರಹಿಸಿ, ಅಚ್ಚುಕಟ್ಟಾಗಿ ವಿನ್ಯಾಸಗೊಳಿಸಿಕೊಡುತ್ತಿರುವ ಪರಿಶ್ರಮಕ್ಕಾಗಿ ಡಾ. ಕೆಳದಿ ವೆಂಕಟೇಶ ಜೋಯಿಸ ಅವರನ್ನು ಅಭಿನಂದಿಸುತ್ತೇನೆ.

ಕೆಳದಿ, ಕರ್ನಾಟಕದ ಮಹತ್ವಪೂರ್ಣ ರಾಜಮನೆತನಗಳಲ್ಲಿ ಒಂದು. ವಿಜಯನಗರ ಸಾಮ್ರಾಜ್ಯದ ತರುವಾಯ ಅಸ್ತಿತ್ವಕ್ಕೆ ಬಂದ ರಾಜಮನೆತನಗಳಲ್ಲಿಯೇ ಇದು ದೊಡ್ಡದು. ರಾಜ್ಯವಿಸ್ತಾರ, ಆರ್ಥಿಕ ಸಂಪತ್ತು, ಧಾರ್ಮಿಕ ಚಟುವಟಿಕೆ, ಜನಪರ ಕಾರ್ಯಕ್ರಮ, ಕೃಷಿ-ವಾಣಿಜ್ಯಗಳ ಪ್ರಗತಿ -ಇತ್ಯಾದಿ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯದ ನಿಜವಾದ ಉತ್ತರಾಧಿಕಾರಿಯಾಗಿ ಬೆಳೆದ ರಾಜಮನೆತನವಿದು. ಶಿವಪ್ಪನಾಯಕ, ಚೆನ್ನಮ್ಮಾಜಿಯಂಥ ದೊರೆಗಳು ರೂಪಿಸಿದ ಈ ಅರಸೊತ್ತಿಗೆ ಒಳಗಿನ ಮೈಸೂರು-ಮರಾಠಾ ಮೊದಲಾದ ದೊರೆಗಳೊಂದಿಗೆ, ಹೊರಗಿನ ಪೋರ್ತುಗೀಜ್- ಡಚ್ಚ ಮೊದಲಾದವರೊಂದಿಗೆ ತನ್ನ ಸಂಬಂಧವನ್ನು ಬೆಳೆಸಿಕೊಂಡಿದ್ದಿತು. ಹೀಗಾಗಿ ಇವರಿಗೆ ಸಂಬಂಧಪಟ್ಟ ದಾಖಲೆಗಳು ಬಹುಮುಖಿಯಾಗಿವೆ, ಬಹುಭಾಷಿಕವಾಗಿವೆ. ಶಿಲಾಶಾಸನ, ತಾಮ್ರಪಟ, ಉಪಕರಣ,

ನಿರೂಪ, ಕಡತ, ದಾಖಲೆಪತ್ರ, ಇತ್ಯಾದಿ ರೂಪಗಳಲ್ಲಿ ಸಿಗುವ ಈ ಆಕರಸಾಮಗ್ರಿಯನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ, ಸಂಪುಟಶ್ರೇಣಿಯಲ್ಲಿ ಪ್ರಕಟಿಸುವುದು ಅವಶ್ಯವಾಗಿದೆ. ಈ ಮಹಾಕಾರ್ಯದ ಅಂಗವೆಂಬಂತೆ ಕೆಳದಿ ಅರಸರ ಬಹುಪಾಲು ಶಾಸನಗಳನ್ನು ಇಲ್ಲಿ ಸಂಗ್ರಹಿಸಿ, ಸಂಯೋಜಿಸಲಾಗಿದೆ. ಇವುಗಳನ್ನು ಪ್ರತಿಯೊಬ್ಬ ಅರಸರ ಆಳಿಕೆಯಲ್ಲಿ ಬರೆಯಿಸಲ್ಪಟ್ಟವುಗಳಾಗಿ ವರ್ಗೀಕರಿಸಿ, ಪ್ರತಿಯೊಂದು ಶಾಸನದ ತಲೆಯ ಮೇಲೆ ವಿವರಗಳನ್ನು ಕೊಟ್ಟು, ಕೆಳಗೆ ಆಕರಗಳನ್ನು ಸೂಚಿಸಿದ ರೀತಿಗಳಿಂದಾಗಿ ಈ ಸಂಯೋಜನೆಗೆ ಒಂದು ಶಿಸ್ತು ಪ್ರಾಪ್ತವಾಗಿದೆ. ಪ್ರಾರಂಭದ ಅಭ್ಯಾಸಪೂರ್ಣ ಪ್ರಸ್ತಾವನೆ, ಕೊನೆಯ ಅನುಬಂಧಗಳು ಈ ಸಂಪುಟದ ವಿಶೇಷತೆಗಳಾಗಿವೆ.

ಕೆಳದಿ ಅಭ್ಯಾಸಿಗಳಿಗೆ ಈ ಸಂಪುಟದಿಂದ ಒದಗುವ ಪ್ರಯೋಜನ ಅಪಾರ. ಆಕರಗಳಲ್ಲಿಯೇ ಬಹುಮುಖ್ಯವಾದವು ಶಾಸನಗಳು. ಇನ್ನುಮೇಲೆ ವಿದ್ವಾಂಸರು ಇವುಗಳಿಗಾಗಿ ಬೇರೆ ಬೇರೆ ಸಂಪುಟಗಳನ್ನು, ವರದಿಗಳನ್ನು, ಪತ್ರಿಕೆಗಳನ್ನು ಹುಡುಕಿಕೊಂಡು ಹೋಗಬೇಕಿಲ್ಲ. ಅಂಗೈ ಮೇಲೆಯೇ ಇವು ಸಿಗುವಂತಾದುದರಿಂದ ಉಂಟಾಗುವ ಶ್ರಮದ ಉಳಿತಾಯ, ಅಭ್ಯಾಸದ ಅನುಕೂಲತೆಗಳನ್ನು ಬಲ್ಲವರೇ ಬಲ್ಲರು.

ಕೆಳದಿ ಅರಸು ಮನೆತನ ಮಲೆನಾಡಿನದಾದರೂ ಈ ಕಡೆ ಬಯಲುನಾಡಿನಲ್ಲಿಯೂ; ಆ ಕಡೆ ಕರಾವಳಿ ನಾಡಿನಲ್ಲೂ ಅದರ ಅಧಿಕಾರ ವಿಸ್ತರಿಸಿಕೊಂಡಿದ್ದಿತು. ಒಂದು ಕಡೆಯಿಂದ ವಿಜಯನಗರದ ಪತನಾನಂತರ ಅಸ್ಥಿರವಾದ ರಾಜಕೀಯ ಪರಿಸ್ಥಿತಿ, ಇವರಿಂದಾಗಿ ಇನ್ನೊಂದು ಕಡೆಯಿಂದ ಸುಸ್ಥಿರಗೊಳ್ಳುತ್ತಲಿದ್ದಿತು. ಒಳಗಿನ ಒಡೆದು ನಿಂತ ಪಾಳೆಯಗಾರರ ಪ್ರಾಬಲ್ಯ, ಹೊರಗಿನ ಡಚ್ಚ-ಪೋರ್ತುಗೀಜರ ಪ್ರವೇಶಗಳು ನಿರಂತರ ನಡೆದಿದ್ದವು. ದೇಶೀಯ ಮತಗಳೊಂದಿಗೆ ಇಸ್ಲಾಂ, ಕ್ರಿಶ್ಚಿಯನ್ ಮತಗಳೂ ತಲೆಯೆತ್ತಿದ್ದವು. ಇಂಥ ಸಂಕ್ರಮಣ, ಸಂಕೀರ್ಣ ಸಮಯದ ರಾಜಮನೆತನವಾದ ಕೆಳದಿಗೆ ಸಂಬಂಧಪಟ್ಟ ಈ ಶಾಸನಗಳು ಯುಗಧರ್ಮವನ್ನು ಬಹುಮಟ್ಟಿಗೆ ಸರಿಯಾಗಿ, ಸಮಗ್ರವಾಗಿ ಬಿಂಬಿಸುತ್ತವೆ.

ರಾಜಧಾನಿ ಕೆಳದಿಗೆ ಆಧುನಿಕ ಸಂಪರ್ಕ ಸಾಧನಗಳು ಅಷ್ಟಾಗಿ ಇರಲಿಲ್ಲ. ೧೭೬೩ರಲ್ಲಿ ಕೊನೆಗೊಂಡ ಕಾರಣ ಈ ಮನೆತನಕ್ಕೆ ಆಧುನಿಕ ಚರಿತ್ರೆಕಾರರ ನೇರ ಸಂಪರ್ಕವೂ ಒದಗಿಬರಲಿಲ್ಲ. ಮೈಸೂರು ಅರಸು ಮನೆತನ ಈ ಎರಡೂ ದೃಷ್ಟಿಯಿಂದ ತುಂಬ ಅದೃಷ್ಟಶಾಲಿಯೆಂದೇ ಹೇಳಬೇಕು. ಹಯವದನರಾವ, ವಿಲ್‌ಕ್ಸರಂಥ ಅರಮನೆಯ ಸಂಬಂಧ - ನೆರವು ಪಡೆದ ಆಧುನಿಕ ಇತಿಹಾಸಕಾರರು ಈ ಮನೆತನಕ್ಕೆ ಒದಗಲಿಲ್ಲ. ಹೀಗಾಗಿ ಹೆಸರಾದ ಕೆಳದಿಯ ಇತಿಹಾಸ ರಚನೆಗೆ ಸರಿಯಾದ ನ್ಯಾಯ ಸಿಗಲಿಲ್ಲ. ಅಲ್ಲಲ್ಲಿ ಪ್ರಯತ್ನಗಳು ನಡೆದಿದ್ದರೂ ವ್ಯಾಪಕವಾದ, ಕ್ರಮಬದ್ಧ ಇತಿಹಾಸ ಯಾರೂ ಬರೆಯಲಿಲ್ಲ. ಹೀಗೆ ಬರೆಯಬೇಕಾದರೆ ಸಮಗ್ರ ಆಕರ ಸಾಮಗ್ರಿಯನ್ನು ಮೊದಲು ಪ್ರಕಟಿಸಬೇಕಾಗುತ್ತದೆ. ಈ ದಿಸೆಯಲ್ಲಿ ಪ್ರಸ್ತುತ ಸಂಪುಟ ಒಂದು ಮಹತ್ವದ ಕೃತಿಯೆಂದೇ ಹೇಳಬೇಕು.

ಕೆಳದಿ ಅರಸುಮನೆತನದ ಬಗ್ಗೆ ಬಹಳ ಹಚ್ಚಿಕೊಂಡವರು ಶ್ರೀ ಕೆಳದಿ ಗುಂಡಾ ಜೋಯಿಸರು. ಇವರ ಮಕ್ಕಳಾದ ಡಾ. ಕೆಳದಿ ವೆಂಕಟೇಶ ಅವರು ಆ ಆಸಕ್ತಿಯನ್ನು ವ್ಯವಸ್ಥಿತವಾಗಿ ಮುಂದುವರಿಸಿಕೊಂಡು ಹೊರಟಿರುವುದು ಸಹಜ. ಇಂದು 'ಶ್ರಮ' ಒಂದು ಮೌಲ್ಯವಾಗಿ ಉಳಿಯುತ್ತಿಲ್ಲ. ಅರ್ಥ, ಅಧಿಕಾರ, ಪ್ರಚಾರಗಳೇ ಯುವವಿದ್ವಾಂಸರ ಮುಖ್ಯ ಆಕರ್ಷಣೆಗಳಾಗಿವೆ. ಇಂಥ ಕಾಲದಲ್ಲಿ ಡಾ. ವೆಂಕಟೇಶ ಅವರು ಕೆಲಸವನ್ನು ಪ್ರೀತಿಸುತ್ತ, ಶ್ರಮ-ಶ್ರದ್ಧೆಗಳಿಂದ ದುಡಿಯುತ್ತಲಿರುವುದು ಒಂದು ವಿಶೇಷ.

ಈ ಸಂದರ್ಭದಲ್ಲಿ ಪ್ರಸ್ತುತ ಸಂಪುಟವನ್ನು ಪ್ರಕಟಿಸುತ್ತಲಿರುವ ಗದುಗಿನ ಶ್ರೀ ತೋಂಟದಾರ್ಯ ಮಠದ 'ವೀರಶೈವ ಅಧ್ಯಯನ ಸಂಸ್ಥೆ'ಯ ಬಗ್ಗೆ ಒಂದು ಮಾತು ಹೇಳಬೇಕು. ವೀರಶೈವಕ್ಕೆ ಸಂಬಂಧಪಟ್ಟ

ಬಹುಮುಖಿಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಈ ಸಂಸ್ಥೆ, ಇಂದಿನ ವರೆಗೆ ಜನಪ್ರಿಯ ಗ್ರಂಥಗಳ ಜೊತೆಗೆ ವಿದ್ವಜ್ಜನಪ್ರಿಯ ಗ್ರಂಥಗಳನ್ನೂ ಪ್ರಕಟಿಸಿದೆ. ಗ್ರಂಥಗಳ ಆಯ್ಕೆಯಲ್ಲಿ, ಅವುಗಳ ಪ್ರಕಟನೆಯಲ್ಲಿ ಗುಣಮಟ್ಟವನ್ನು ಎತ್ತಿಹಿಡಿದು, ಸಾಹಿತ್ಯಲೋಕನ ಗಮನವನ್ನು ತನ್ನತ್ತ ಸೆಳೆದಿದೆ. ಈಗ "ಕೆಳದಿ ಅರಸರ ಶಾಸನಸಂಪುಟ"ವನ್ನು ಪ್ರಕಟಿಸುತ್ತಿರುವ ಈ ಸಂಸ್ಥೆಗೆ ಶಾಸನವಿದ್ವಾಂಸರ ಕೃತಜ್ಞತೆಗಳು ಸಲ್ಲುತ್ತವೆ.

ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯಮಠ ಮತ್ತು ಕೆಳದಿ ಅರಸು ಮನೆತನದ ಸಂಬಂಧ ಅನ್ಯೋನ್ಯವಾದುದು. ಕಷ್ಟಕಾಲದಲ್ಲಿ ಶ್ರೀ ತೋಂಟದಾರ್ಯರ ಕೃಪೆ ಈ ಅರಸು ಮನೆತನಕ್ಕೆ ಸಂದಿತು. ಅರಸರ ಭಕ್ತಿ-ಗೌರವ ಶ್ರೀಮಠಕ್ಕೆ ಸಂದಿತು. ವೀರಶೈವ ರಾಜಮನೆತನವೆಂಬ ಅಭಿಮಾನದೊಂದಿಗೆ ಈ ವೈಯಕ್ತಿಕ ಸಂಬಂಧವೂ ಸೇರಿ, ಪ್ರಸ್ತುತ ಗ್ರಂಥದ ಪ್ರಕಟಣೆ ಸಾಧ್ಯವಾಗಿದೆ. ಈ ಪ್ರಕಟಣೆಯ ಮೂಲಕ ವೀರಶೈವ ಅಧ್ಯಯನಸಂಸ್ಥೆ ಹೊಸ ಕ್ಷೇತ್ರವನ್ನು ಭೇದಿಸಿಕೊಂಡು ಹೋಗುತ್ತಲಿದೆ.

ಡಾ. ವೆಂಕಟೇಶ ಜೋಯಿಸರಂಥ ಯುವವಿದ್ವಾಂಸರು ಇಂಥ ಬೇರೆ ಸಂಪುಟಗಳನ್ನೂ ರಚಿಸಿಕೊಡಲಿ, ವೀರಶೈವ ಅಧ್ಯಯನ ಸಂಸ್ಥೆ ಅವುಗಳನ್ನು ಪ್ರಕಟಿಸುತ್ತ ಹೋಗಲಿ, ಆ ಮೂಲಕ ಕರ್ನಾಟಕದ ಇತಿಹಾಸ ಬೆಳಕಿಗೆ ಬರಲೆಂದು ಹಾರೈಸುತ್ತೇನೆ.

ವೆಂಕಟೇಶ ಜೋಯಿಸ್, ಕೆಳದಿ

ಆಕರ : ಮಾರ್ಗ ಸಂಪುಟ–೬

೧೫೫

ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ

೧೯೮೨

ಪ್ರಾಚೀನ ಕರ್ನಾಟಕದ ಆಡಳಿತ ಪದ್ಧತಿಯನ್ನು ಅರ್ಥೈಸುವ ಪ್ರಯತ್ನ ಕಳೆದ ಶತಮಾನದಿಂದಲೂ ನಮ್ಮ ನಾಡಿನಲ್ಲಿ ನಡೆದು ಬಂದಿದೆ. ಈ ಅವಧಿಯಲ್ಲಿ ವಿದೇಶೀ ವಿದ್ವಾಂಸರಿಗೆ ಆಂಗ್ಲಪದ್ಧತಿ, ದೇಶೀ ವಿದ್ವಾಂಸರಿಗೆ ಆರ್ಯಕೃತಿಗಳು ಆದರ್ಶವಾಗಿ ನಿಂತವು. ಇದರಿಂದಾಗಿ ನಮ್ಮ ಪ್ರಾಚೀನ ಆಡಳಿತ ಪದ್ಧತಿಯ ನಿಜಸ್ವರೂಪ ಈವರೆಗೆ ಸ್ಪಷ್ಟವಾಗಿ ಪ್ರಕಟವಾಗಲೇ ಇಲ್ಲ. ಈ ಆಂಗ್ಲ-ಆರ್ಯ ಪ್ರಭಾವಗಳತ್ತ ಹೊರಳಿ ನೋಡದೆ, ಕೇವಲ ಶಾಸನಗಳಲ್ಲಿಯೇ ಮುಖವಿಟ್ಟು, ಅಲ್ಲಿ ಕಂಡುಬರುವ ಆಡಳಿತ ಸ್ವರೂಪದ ಸತ್ಯಚಿತ್ರವನ್ನು ಪ್ರಕಟಿಸಿದ ಶ್ರೇಯಸ್ಸು ಈ ಮಹಾಪ್ರಬಂಧಕ್ಕೆ ಸಲ್ಲುತ್ತದೆ.

ಸಾಹಿತ್ಯಕೃತಿಗಳು ಜೀವನಗತಿಯ ಕಲಾತ್ಮಕ ಅಭಿವ್ಯಕ್ತಿಯಾದರೆ, ಶಾಸನಗಳು ದಾಖಲಾತ್ಮಕ ಅಭಿವ್ಯಕ್ತಿಯಾಗಿವೆ. ಗತಕಾಲದ ಸರಿಯಾದ ಅಧ್ಯಯನ ಈ ಎರಡೂ ಶಿಸ್ತುಗಳ ಅಭ್ಯಾಸಿಯಿಂದ ಮಾತ್ರ ಸಾಧ್ಯವಾಗುತ್ತದೆ. ಈ ವ್ಯಾಸಂಗಕ್ಕೆ ಹೇಳಿ ಮಾಡಿಸಿದಂತಿರುವ ಡಾ. ಜೆ. ಎಂ. ನಾಗಯ್ಯ ಅವರು, ಕನ್ನಡ ಸಾಹಿತ್ಯದ ವಿದ್ಯಾರ್ಥಿಯಾಗಿರುವಂತೆ, ಶಾಸನಶಾಸ್ತ್ರದ ವಿದ್ಯಾರ್ಥಿಯಾಗಿರುವುದೂ ಒಂದು ವಿಶೇಷ. ಈ ಕಾರಣದಿಂದಾಗಿ ಅವರು ಇತಿಹಾಸದ ವಿದ್ಯಾರ್ಥಿಗಿಂತ ಭಿನ್ನರೀತಿಯಲ್ಲಿ ವಿಕ್ರಮಾದಿತ್ಯನ ಆಡಳಿತ ಲೋಕವನ್ನು ಪ್ರವೇಶಿಸಿದ್ದಾರೆ. ಹೆಚ್ಚಿನದಾಗಿ ಗ್ರಂಥಾಲಯ ವಿಜ್ಞಾನದ ವಿದ್ಯಾರ್ಥಿಯಾಗಿರುವ ಕಾರಣ, ಬರವಣಿಗೆಗೆ ವೈಜ್ಞಾನಿಕ ಶಿಲ್ಪಕೊಡುವಲ್ಲಿ ಯಶಸ್ಸು ಸಾಧಿಸಿದ್ದಾರೆ. ಆದುದರಿಂದ "ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ" ಖಂಡಿತವಾಗಿಯೂ ಕರ್ನಾಟಕದ ಆಡಳಿತಾತ್ಮಕ ಇತಿಹಾಸ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿದೆ. ಈ ಪ್ರಯತ್ನಕ್ಕಾಗಿ ಡಾ. ನಾಗಯ್ಯ ಅವರನ್ನು ಪ್ರಾರಂಭದಲ್ಲಿಯೇ ಅಭಿನಂದಿಸುತ್ತೇನೆ.

ಕರ್ನಾಟಕದ ಚಕ್ರವರ್ತಿ ಪರಂಪರೆಯಲ್ಲಿ ಆರನೆಯ ವಿಕ್ರಮಾದಿತ್ಯ ಅದ್ವಿತೀಯ ವ್ಯಕ್ತಿ. ತನ್ನ ೫೦ ವರ್ಷಗಳ ಸುದೀರ್ಘ ಆಡಳಿತಾವಧಿಯಲ್ಲಿ ಈತ ಬರೆಯಿಸಿದ ಶಾಸನಗಳ ಸಂಖ್ಯೆ ಸುಮಾರು ಒಂದು ಸಾವಿರ. ಮೂಲಸಾಮಗ್ರಿಯಾಗಿ ಈ ಶಾಸನಗಳನ್ನು, ಪೂರಕಸಾಮಗ್ರಿಯಾಗಿ ಸಾಹಿತ್ಯಕೃತಿಗಳನ್ನು, ಸಹಾಯಕಸಾಮಗ್ರಿಯಾಗಿ ಈ ವರೆಗೆ ವಿದ್ವಾಂಸರಿಂದ ಪ್ರಕಟವಾದ ಗ್ರಂಥ-ಲೇಖನಗಳನ್ನು ಆಧರಿಸಿ ನಡೆಸಿದ ವಿಶ್ಲೇಷಣಾತ್ಮಕ, ವ್ಯಾಖ್ಯಾನಾತ್ಮಕ ಸಂಶೋಧನೆ ಇಲ್ಲಿಯ ಪುಟಗಳಲ್ಲಿ ಹರಡಿಕೊಂಡಿದೆ. ಹೊಸ ಅಭಿಪ್ರಾಯಗಳನ್ನು ಗಟ್ಟಿಯಾಗಿ

ಸ್ಥಾಪಿಸುವುದು, ಈ ಮೊದಲಿನ ತಪ್ಪು ಅಭಿಪ್ರಾಯಗಳನ್ನು ವಿನಯದಿಂದ ಅಲ್ಲಗಳೆಯುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ಹೀಗಾಗಿ ಇಲ್ಲಿಯ ನಿರ್ಣಯಗಳೆಲ್ಲ ಮಹತ್ವಪೂರ್ಣವೆನಿಸಿದೆ.

ಈ ಮಹಾಪ್ರಬಂಧದ ಕಟ್ಟಡ "ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಾಮಗ್ರಿ" ಎಂಬ ನೀಲನಕ್ಷೆಯನ್ನು ಆಧರಿಸಿ, ವಿಕ್ರಮಾದಿತ್ಯನ ಜೀವನಚರಿತ್ರೆಯ ಬುನಾದಿಯ ಮೇಲೆ ಬೆಳೆದು ನಿಂತಿದೆ. ಪ್ರಸ್ತುತ ಕೃತಿ ನೇರವಾಗಿ ತೆರೆದುಕೊಳ್ಳುವುದೇ ಎರಡನೆಯ ಅಧ್ಯಾಯದಿಂದ. ಈ ಅಧ್ಯಾಯದ ಪೂರ್ವಾರ್ಧ "ಆಡಳಿತ ಪದ್ಧತಿ"ಯ ನಿಜಸ್ವರೂಪವನ್ನು ನೀಡುತ್ತದೆ. ಶಾಸನಗಳಲ್ಲಿ ಬರುವ "ಆಳುತ್ತುಮಿರೆ" ಎಂಬ ಶಬ್ದವನ್ನು ವಿದ್ವಾಂಸರು ಈ ವರೆಗೆ ತುಂಬ ಸಂದಿಗ್ಧ ಅರ್ಥದಲ್ಲಿ ಬಳಸುತ್ತಿದ್ದರು. ಡಾ. ನಾಗಯ್ಯ ಅವರು ಪ್ರಥಮಬಾರಿಗೆ ಇದಕ್ಕೆ ಆಳುವುದು (Ruling), ಆಡಳಿತ ಮಾಡುವುದು (Administration) ಎಂಬ ಎರಡು ಅರ್ಥಗಳಿವೆಯೆಂದೂ, ಇದು ರಾಜವರ್ಗದ ಸಂದರ್ಭದಲ್ಲಿ "ರಾಜ್ಯವಾಳು" ಎಂಬ ಅರ್ಥವನ್ನು, ಆಡಳಿತ ವರ್ಗದ ಸಂದರ್ಭದಲ್ಲಿ "ಆಡಳಿತಮಾಡು" ಎಂಬ ಅರ್ಥವನ್ನು ನೀಡುವುದೆಂದು ಹೇಳಿದುದು ಮಹತ್ವದ ಶೋಧವಾಗಿದೆ. ಚಕ್ರವರ್ತಿ, ಮಹಾಮಂಡಳೇಶ್ವರ, ಮಹಾಸಾಮಂತ, ಪ್ರಭುಗಾವುಂಡ, ಗಾವುಂಡರು ಆಳುವ ವರ್ಗದವರೆಂದೂ ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ, ಸುಂಕದ ಮಹಾಸಾಮಂತ, ದಂಡ ನಾಯಕ, ಪೆರ್ಗಡೆಗಳು ಆಡಳಿತವರ್ಗದವರೆಂದೂ ಪ್ರಥಮಸಲ ಬಿಡಿಸಿ ಹೇಳುವ ಮೂಲಕ, ಈ ಪ್ರಬಂಧ ಅಭ್ಯಾಸಿಗಳ ದಾರಿಯನ್ನು ಸುಗಮಗೊಳಿಸಿದೆಯೆಂದೇ ಹೇಳಬೇಕು. ಆಳುವ ವರ್ಗಕ್ಕೆ ಸಂಬಂಧಿಸಿದ ತ್ರಿಭೋಗ, ಏಕಭೋಗ, ಉಭಯಸ್ವಾಮ್ಯ, ಬೀಳಾನುವೃತ್ತಿ, ಕುಟ್ಟುಂಬಿಟ್ಟೆಯಣುಗಜೀವಿತವೆಂಬ ಪಾರಿಭಾಷಿಕ ಪದಗಳಿಗೆ ನೀಡಿದ ಅರ್ಥ ಈ ವರೆಗಿನ ನಮ್ಮ ಗೊಂದಲವನ್ನು ಬಹುಮಟ್ಟಿಗೆ ನಿವಾರಿಸಿದೆ. ಇಲ್ಲಿಯೇ ಕೇಂದ್ರಾಡಳಿತ, ಪ್ರಾಂತೀಯ ಆಡಳಿತವೆಂಬ "ಜೋಡು ಆಡಳಿತ ಪದ್ಧತಿ" ಅಂದು ದೇಶದಲ್ಲಿ ಅಸ್ತಿತ್ವದಲ್ಲಿದ್ದ ವಿಷಯವನ್ನು ಬೆಳಕಿಗೆ ತರಲಾಗಿದೆ.

"ಆಡಳಿತ ವಿಭಾಗ"ಗಳ ವಿವೇಚನೆಯಂತೂ ಡಾ. ನಾಗಯ್ಯ ಅವರ ಬೇಸರವಿಲ್ಲದ ದುಡಿಮೆಗೆ ಸಾಕ್ಷಿಯಾಗಿದೆ. ಮಂಡಲ, ವಿಷಯ, ದೇಶ, ನಾಡು, ಕಂಪಣ ಹೆಸರುಗಳಲ್ಲಿ ವಿಭಾಗಿಸಲ್ಪಟ್ಟ ವಿಕ್ರಮಾದಿತ್ಯನ ಸಾಮ್ರಾಜ್ಯದ ಎಲ್ಲ ಘಟಕ-ಉಪಘಟಕಗಳನ್ನು ಹುಡುಕಲು ಮಾಡಿದ ದೊಡ್ಡ ಪ್ರಯತ್ನ ಇಲ್ಲಿದೆ. ಆಲಂದೆ-೧೦೦೦, ಮನ್ನೆದಡಿ-೧೦೦೦, ಅಟ್ಟಳೆನಾಡು-೩೦೦, ಸಗರ-೩೦೦, ಸಾಯಿರಬಾಡ, ಬೆರಣೆ-೬೦೦, ಬೋಧನ-೭೦೦, ತರ್ದವಾಡಿ-೧೦೦೦, ಕರಹಾಡ-೪೦೦೦, ಸೇವುಣದೇಶ, ಪಳಿಯಂಡ-೪೦೦೦, ಪ್ರತ್ಯಂಡಕ-೪೦೦೦, ಎರಡರುನೂರು, ಕೆಳವಾಡಿ-೩೦೦, ಪಾನಂಗಲ್ಲು-೫೦೦, ಬನವಾಸಿ-೧೨೦೦೦, ಗಂಗವಾಡಿ-೯೬೦೦೦, ಮಹಾರಾಜವಾಡಿ-೭೦೦೦, ಮಜಿಕಿನಾಡು-೩೦೦, ಪುಲಿನಾಡು ಎಳುವತ್ತು, ಆಳುವಖೇಡ-೬೦೦೦, ಸಾಂತಳಿಗೆ ೧೦೦೦, ನೊಳಂಬವಾಡಿ-೩೨೦೦೦, ಎಡದೊರೆ-೨೦೦೦, ಕಲ್ಲಕೆಳಗೆ-೫೦೦, ಮಾರಾಜನಾಡು-೩೦೦, ಕೋಸವಳ ಸವಲಕ್ಕ, ಬೆಂಗಿ-೧೪೦೦೦, ಅಯಿಜೆ-೩೦೦, ಕನ್ನೆ-೩೦೦, ಪೆಡಕಲ್ಲು-೮೦೦, ನರವಾಡಿ-೫೦೦, ಸಬ್ಬಿ-೧೦೦೦, ಚಬ್ಬಿಜೋಯಿ-೭೧೦೦೦, ರೇನಾಡು-೭೦, ಎಮ್ಮೆದೆಲೆ-೬೦೦೦, ಕೊಂಡಪಳ್ಳಿ-೩೦೦, ಹಲಸಿಗೆ-೧೨೦೦೦, ಕೊಲ್ಲಿಪಾಕಿ-೭೦೦೦, ಕಂದೂರು-೧೦೦೦, ಕೂಂಡಿ-೩೦೦೦, ಕೊಂತಕುಳಿ-೩೦, ಪೊಳಲ್ಗುಂದೆ-೩೦, ಕಲಿಗೆ-೧೨, ಹೈವೆನಾಡು-೫೦೦, ಕೊಂಕಣ-೯೦೦, ಕವಡಿದ್ವೀಪ ಸವಲಕ್ಕ-ಇಷ್ಟು ಮುಖ್ಯ ವಿಭಾಗಗಳನ್ನೂ ಇವುಗಳ ಉಪವಿಭಾಗ - ಮೇರೆಗಳನ್ನೂ, ಇಲ್ಲಿ ಅಡಕವಾಗುವ ಊರುಗಳನ್ನೂ ಹುಡುಕಿಕೊಟ್ಟುದು, ಈ ವರೆಗಿನ ಶಾಸನಾಧ್ಯಯನದ ಇತಿಹಾಸದಲ್ಲಿಯೇ ಪ್ರಥಮ ವ್ಯಾಪಕ ಪ್ರಯತ್ನವಾಗಿದೆ.

ಮುಂದುವರಿದು ಈ ಪ್ರಬಂಧ ವಿಕ್ರಮಾದಿತ್ಯನ ಕೈಕೆಳಗಿನ ಆಳುವ ವರ್ಗದ ಸಮಗ್ರ ಚಿತ್ರವನ್ನು ಕೊಡುತ್ತದೆ. ಮಹಾಮಂಡಳೇಶ್ವರರು, ಮಹಾಸಾಮಂತರು, ಪ್ರಭುಗಾವುಂಡರು, ಗಾವುಂಡರು ಇವರೇ ಆ ವರ್ಗಕ್ಕೆ ಸೇರಿದವರು. ಮಹಾಮಂಡಳೇಶ್ವರರಲ್ಲಿ ಕದಂಬರು, ಪಾಂಡ್ಯರು, ಗಂಗರು, ಹೊಯ್ಸಳರು, ಸಿಂದರು, ಕಲಚುರಿಗಳು, ಸೇವುಣರು, ಗುತ್ತರು, ಕಾಕತೀಯರು, ಚೋಳರು, ಹೈಹಯರು, ಸಗರರು, ಸಾಂತರರು, ಬಾಣರು, ರಟ್ಟರು, ವಹ್ನಿವಂಶದವರು, ಪರಮಾರರು, ಆಳುಪರು, ಇತರ ಮಂಡಳೇಶ್ವರರು - ಇಷ್ಟು ವಂಶಗಳನ್ನೂ, ಮಹಾಸಾಮಂತ ವರ್ಗದ ಆಳುವ ಮಹಾಸಾಮಂತ, ಸುಂಕದ ಮಹಾಸಾಮಂತ ವ್ಯಕ್ತಿಗಳನ್ನೂ ಗುರುತಿಸುತ್ತ ಪ್ರಭುಗಾವುಂಡ, ಗಾವುಂಡರಲ್ಲಿ ಅನೇಕರನ್ನು ಪ್ರಥಮ ಸಲ ಬೆಳಕಿಗೆ ತರಲಾಗಿದೆ.

ಈ ಆಳುವವರ್ಗದಷ್ಟೇ ಮಹತ್ವದ ಅಧ್ಯಯನವಾಗಿದೆ, ಆಡಳಿತವರ್ಗವನ್ನು ಕುರಿತುದು. ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ, ದಂಡನಾಯಕ, ರಾಜ್ಯಾಧ್ಯಕ್ಷ, ಅಂತಃಪುರಾಧ್ಯಕ್ಷ, ನಿಯೋಗಿ, ಪಡೆವಳ, ಹಡಪವಳ, ಪಡಿಹಾರ, ಪೆರ್ಗಡೆ, ಕರಣಿಕ-ಸೇನಬೋವ-ಕುಳಕರಣಿ, ತಳಾರ -ಹೀಗೆ ಎಲ್ಲ ಅಧಿಕಾರಶ್ರೇಣಿಗಳನ್ನು ಶೋಧಿಸಿ, ಇವುಗಳ ಸ್ವರೂಪ-ವ್ಯಾಪ್ತಿಗಳನ್ನು ಗುರುತಿಸಿ, ಈ ಹುದ್ದೆಗಳನ್ನು ಮುನ್ನಡೆಸಿದ ವ್ಯಕ್ತಿಗಳ ಚರಿತ್ರೆಯನ್ನು ಇಲ್ಲಿ ಬಿಡಿಸಲಾಗಿದೆ. ಹೆಚ್ಚಿನದಾಗಿ ವಿಕ್ರಮಶಕೆ ಪ್ರಾರಂಭವಾದ ದಿನವು ಅನಳ ಸಂವತ್ಸರದ ಚೈತ್ರ ಶುದ್ಧ ೧ ಅಂದರೆ ೧೦೭೬ನೆಯ ಮಾರ್ಚ್ ೮ ಎಂಬ ಹೊಸ ವಿಚಾರವನ್ನು ಈ ಪ್ರಬಂಧ ನಮ್ಮ ಮುಂದಿಡುತ್ತದೆ. ಮತ್ತು ಚಕ್ರವರ್ತಿಯಿಂದ ಗಾವುಂಡರ ವರೆಗಿನ ಎಲ್ಲ ಅಧಿಕಾರಿಗಳ ಪ್ರಶಸ್ತಿಗಳನ್ನು ವಿವರವಾಗಿ ಕೊಟ್ಟು, ಈ ವರೆಗಿನ ತನ್ನ ಶೋಧವನ್ನು ಸಂಗ್ರಹಿಸಿ ಹೇಳಿ, ಮುಕ್ತಾಯಗೊಳ್ಳುತ್ತದೆ.

ಇದು ಈ ಪ್ರಬಂಧದ ಆತ್ಮವಾಗಿದ್ದು, ಆಡಳಿತ ವಿಭಾಗಗಳ ಶೋಧ, ಆಡಳಿತ ಪದ್ಧತಿಯ ಶೋಧ, ಆಡಳಿತಗಾರರ ಚರಿತ್ರೆ ಶೋಧ- ಇದರ ಮುಖ್ಯ ಮೂರು ಕೊಡುಗೆಗಳಾಗಿದೆ. ಆಕರಗಳನ್ನು ಸಂಗ್ರಹಿಸುವುದು, ಆಧಾರಗಳನ್ನು ಆಯ್ಕೆಮಾಡುವುದು, ಅವುಗಳ ಸಂಯೋಜನೆಯಿಂದ ಫಲಿತಾಂಶವನ್ನು ಪ್ರಕಟಿಸುವುದು ಸಂಶೋಧನೆಯಲ್ಲಿ ನಡೆಯುತ್ತದೆ. ಈ ಕೆಲಸ ಶಾಸನಕ್ಷೇತ್ರದಲ್ಲಿ ತುಂಬ ಶ್ರಮದಾಯಕವಾದುದು. ಈ ಪ್ರಬಂಧಕ್ಕೆ ಒಂದು ಸಾವಿರ ಶಾಸನಗಳು ಸಾಮಗ್ರಿಯಾಗಿದ್ದರೂ ಮತ್ತೆ ಹಲವು ಶಾಸನಗಳನ್ನು ಆಧಾರವಾಗಿ ಬಳಸಿಕೊಳ್ಳಲಾಗಿರುವುದರಿಂದ ಈ ಅಧ್ಯಯನದ ಕ್ಷಿತಿಜ ಆಳದಲ್ಲಿ ವಿಸ್ತರಿಸುತ್ತ ಹೋಗಿದೆ.

ಇಷ್ಟು ದೊಡ್ಡಗಾತ್ರದ ಪ್ರಬಂಧದಲ್ಲಿ ಎಲ್ಲ ಫಲಿತಾಂಶಗಳು ಆತ್ಯಂತಿಕ ಸತ್ಯಗಳೇ ಆಗುವುದು ಸಾಧ್ಯವಿಲ್ಲ. ಸಂಶೋಧನೆಯೆನ್ನುವುದು ಸಂದರ್ಭ-ಸಾಧನಸಾಮಗ್ರಿಗಳನ್ನವಲಂಬಿಸಿರುತ್ತದೆ. ಬದಲಾದ ಸಂದರ್ಭದಲ್ಲಿ, ಹೊಸ ಸಾಮಗ್ರಿಗಳ ಲಭ್ಯತೆಯಲ್ಲಿ ಇಲ್ಲಿಯ ಕೆಲವು ನಿರ್ಣಯಗಳು ಬದಲಾಗಬಹುದು. ಅದೇನೇ ಸಂಭವಿಸಿದರೂ ಈ ಪ್ರಬಂಧದ ಬಹುಪಾಲು ನಿರ್ಣಯಗಳು ಶಾಶ್ವತನಿಲ್ಲುವಲ್ಲಿ ಸಂದೇಹವಿಲ್ಲ. ಒಟ್ಟಾರೆ ಶ್ರಮ-ಶ್ರದ್ಧೆಗಳನ್ನು ಮೂಲಧನವನ್ನಾಗಿ ಇಟ್ಟುಕೊಂಡಲ್ಲಿ ಎಂಥ ಉತ್ತಮ ಪ್ರಬಂಧ ರೂಪಗೊಳ್ಳಬಹುದೆಂಬುದಕ್ಕೆ ನಿದರ್ಶನವೆನ್ನುವಂತೆ ಈ ಕೃತಿ ಆಕೃತಿ ಪಡೆದಿದೆ. ಶ್ರೀ. ನಾಗಯ್ಯ ಅವರು ಇದನ್ನು ಪಿಎಚ್.ಡಿ. ಪದವಿಯ ಆಸೆಗಾಗಿ ಬರೆದವರಲ್ಲ, ವಿಷಯದ ಮೇಲಿನ ಪ್ರೀತಿಗಾಗಿ ಬರೆದವರು. ಅವರ ಈ ಮನೋಗತವನ್ನು ಮಾರ್ಗದರ್ಶನದುದ್ದಕ್ಕೂ ನಾನು ಅರ್ಥಮಾಡಿಕೊಂಡಿದ್ದೇನೆ. ಇಂಥ ವಿದ್ಯಾರ್ಥಿಗಳಿಗೆ, ಇಂಥ ವಿಷಯಗಳಿಗೆ ಮಾರ್ಗದರ್ಶನ ಮಾಡುವುದೆಂದರೆ ವಿದ್ಯಾರ್ಥಿಯ ಜೊತೆ ಮಾರ್ಗದರ್ಶಕರೂ ಶೈಕ್ಷಣಿಕವಾಗಿ ಬೆಳೆಯುವುದು ಎಂಬ ಅನುಭವ ನನ್ನದಾಗಿದೆ.

ಡಾ. ನಾಗಯ್ಯ ಅವರಲ್ಲಿ ಅನೇಕ ಶೈಕ್ಷಣಿಕ ಶಿಸ್ತುಗಳ ಸಂಗಮಿಸಿದೆ. ಇಂಥ ಅಂತರ್ ಶಿಸ್ತೀಯ ವಿದ್ಯಾರ್ಥಿಗಳು ಕನ್ನಡದಲ್ಲಿ ಸಿಗುವುದು ಅಪರೂಪ. ಕಾರಣ, ಕನ್ನಡದ ವಿದ್ವತ್ತು ಬೆಳೆಯುವುದರ ಸಲುವಾಗಿ, ಇವರು ಇಂಥ ಕೃತಿಗಳನ್ನು ಮುಂದೆಯೂ ರಚಿಸಲೆಂದು ಹಾರೈಸುತ್ತೇನೆ.

ಪ್ರಕಾಶನದ ಬಗ್ಗೆ ಒಂದು ಮಾತು : ಪುಸ್ತಕ ಬರೆಯುವುದು ಸುಲಭ. ಪ್ರಕಟಿಸುವುದು ಕಷ್ಟ-ಎಂಬ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ. ವೈಯಕ್ತಿಕ ಪ್ರಕಾಶನ ಸಂಸ್ಥೆಗಳು ಬಿಡಲಿ, ವಿಶ್ವವಿದ್ಯಾಲಯಗಳಂಥ ಸರಕಾರಿ ಸಂಸ್ಥೆಗಳೂ ಕೈಚೆಲ್ಲಿ ಕುಳಿತುಕೊಳ್ಳುವ ಪರಿಸ್ಥಿತಿ ಬೆಳೆದು ನಿಂತಿದೆ. ಇಂಥ ಸಂದರ್ಭದಲ್ಲಿ "ವರುಷಕ್ಕೆ ಒಂದು ಪಿಎಚ್.ಡಿ. ಪ್ರಬಂಧ ಪ್ರಕಟನ ಯೋಜನೆ"ಯನ್ನು ಬೆಳಗಾವಿಯ ಶ್ರೀನಾಗನೂರುಮಠ ಕೈಗೆತ್ತಿಕೊಂಡುದು ಸಕಾಲಿಕ, ಅರ್ಥಪೂರ್ಣ. ಈಗಾಗಲೇ ಈ ಉಪಕ್ರಮವನ್ನು ವಿದ್ವಾಂಸರು, ವಿಶ್ವವಿದ್ಯಾಲಯಗಳು ಗುರುತಿಸಿವೆ, ಮೆಚ್ಚುಗೆ ವ್ಯಕ್ತಪಡಿಸಿವೆ. ಪೂಜ್ಯ ಶ್ರೀ ಶಿವಬಸವಸ್ವಾಮಿಗಳ ಅನ್ನದಾಸೋಹಕ್ಕೆ ಪೂಜ್ಯ ಶ್ರೀ ಸಿದ್ಧರಾಮಸ್ವಾಮಿಗಳು ಗ್ರಂಥದಾಸೋಹವನ್ನು ಜೋಡಿಸಿದುದು ಒಂದು ಅಪೂರ್ವವಿಚಾರ. ಶ್ರೀಗಳವರ ಈ ಪುಸ್ತಕ ಪ್ರೀತಿಗೆ ವಿದ್ವತ್‌ಲೋಕದ ಕೃತಜ್ಞತೆಗಳು ಸಲ್ಲುತ್ತವೆ.

ಜೆ.ಎಂ. ನಾಗಯ್ಯ, ಹುಬ್ಬಳ್ಳಿ

ಆಕರ : ಮಾರ್ಗ ಸಂಪುಟ-೬

■■

೧೫೬

ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ

೧೯೯೨

ಕನ್ನಡದಲ್ಲಿ ಪಿಎಚ್.ಡಿ. ಅಧ್ಯಯನ ಹೊಸ ದಿಗಂತಗಳನ್ನು ತೆರೆಯುತ್ತಲಿರುವುದಕ್ಕೆ 'ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ' ಇತ್ತೀಚಿನ ಉದಾಹರಣೆಯಾಗಿದೆ. ವಿಶಿಷ್ಟ ವಿಷಯವನ್ನು ಆಯ್ದುಕೊಂಡು, ಅಚ್ಚುಕಟ್ಟಾಗಿ ಈ ಅಧ್ಯಯನವನ್ನು ಪೂರೈಸಿದವರು ಬಾಗಿಲುಕೋಟೆಯ ಬಸವೇಶ್ವರ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ. ಬಿ. ಕೆ. ಹಿರೇಮಠ ಅವರು. ಈ ವಿಷಯಕ್ಕೆ ಹೇಳಿಮಾಡಿಸಿದಂತೆ ಇವರು ಮೂಲತಃ ಕನ್ನಡ ಪ್ರಾಧ್ಯಾಪಕರು, ಹಸ್ತಪ್ರತಿ ಭಾಂಡಾರದಲ್ಲಿ ಕೆಲಕಾಲ ಕೆಲಸ ಮಾಡಿದವರು ಮತ್ತು ಹಸ್ತಪ್ರತಿಗಳಲ್ಲಿಯ ಚಿತ್ರಕಲೆಯ ಅಧ್ಯಯನಕ್ಕೆ ಅವಶ್ಯವಾದ ಚಿತ್ರಕಲಾ ಪರೀಕ್ಷೆಯಲ್ಲಿ 'ಮಾಸ್ಟರ್' ಪದವಿಯನ್ನು ಪಡೆದವರು.

ಈ ಶಕ್ತಿತ್ರಯದ ಬಲದಿಂದ ಇವರು ದುರ್ಗಮವಾದ ಹಸ್ತಪ್ರತಿ ದುರ್ಗವನ್ನು ನಿರಾತಂಕವಾಗಿ ಪ್ರವೇಶಿಸಿದ್ದಾರೆ; ಸಮರ್ಪಕ ಅಧ್ಯಯನವನ್ನು ಪೂರೈಸಿ, ಕನ್ನಡ ವಿದ್ವತ್ ಕ್ಷೇತ್ರಕ್ಕೆ ಒಂದು ಹೊಸಪುಟವನ್ನು ಸೇರಿಸಿದ್ದಾರೆ.

ಕನ್ನಡ ಪಿಎಚ್.ಡಿ. ಅಧ್ಯಯನ ಆರಂಭವಾದುದು ಇಂಗ್ಲೀಷ್ ಮಾಧ್ಯಮದ ಮೂಲಕ. ಸುಮಾರು ೬೦ ವರ್ಷಗಳಷ್ಟು ಹಿಂದೆ ಲಂಡನ್ ವಿಶ್ವವಿದ್ಯಾಲಯದಲ್ಲಿ ಎಲ್.ಡಿ. ಬಾರ್ನೆಟ್ ಅವರ ಮಾರ್ಗದರ್ಶನದಲ್ಲಿ ಡಾ. ಎಸ್. ಸಿ. ನಂದಿಮಠ ಅವರು (೧೯೩೦), ಆರ್. ಎಲ್. ಟರ್ನರ್ ಅವರ ಮಾರ್ಗದರ್ಶನದಲ್ಲಿ ಡಾ. ಎ. ಎನ್. ನರಸಿಂಹಯ್ಯ ಅವರು (೧೯೩೩) ವಿದ್ಯಾರ್ಥಿಯಾಗಿ ತಮ್ಮ ಅಧ್ಯಯನವನ್ನು ಪೂರೈಸಿದವರು.

ಆಮೇಲೆ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಈ ಅಧ್ಯಯನ ಆರಂಭವಾಯಿತು. ಆಗ ಶ್ರೀ ಆರ್. ಎಸ್. ಪಂಚಮುಖಿ ಅವರ ಮಾರ್ಗದರ್ಶನದಲ್ಲಿ ಶ್ರೀ ಎನ್. ಕೆ. ಕುಲಕರ್ಣಿ ಅವರು ಪ್ರಥಮ ವಿದ್ಯಾರ್ಥಿಯಾಗಿ ಕುಮಾರವ್ಯಾಸನನ್ನು ಕುರಿತು ಅಧ್ಯಯನ ಕೈಕೊಂಡರಾದರೂ ಅಭ್ಯಾಸ ಪೂರ್ಣವಾಗಲಿಲ್ಲ. ಹೀಗಾಗಿ ಅದೇ ಪಂಚಮುಖಿ ಅವರ ಮಾರ್ಗದರ್ಶನದಲ್ಲಿ ಡಾ. ಎ. ಟಿ. ಪಾಟೀಲ ಅವರು (ಪ್ರಸನ್ನ ವೆಂಕಟದಾಸರು-೧೯೪೭); ಪ್ರೊ. ಕೆ. ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಡಾ. ಡಿ. ಎಸ್. ಕರ್ಕಿ ಅವರು (ಕನ್ನಡ ಛಂದೋವಿಕಾಸ-೧೯೪೯) ಪ್ರಥಮ ವಿದ್ಯಾರ್ಥಿಯಾಗಿ ಪಿಎಚ್.ಡಿ. ಪದವಿ ಪಡೆದರು. ಇವರಿಗೆ ಬರವಣಿಗೆಯ ಮಾಧ್ಯಮವಾದುದು ಕನ್ನಡ.

ಲಂಡನ್, ಮುಂಬಯಿಗಳ ತರುವಾಯ ಈ ಅಧ್ಯಯನ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಈ ಪ್ರಾಂತದಲ್ಲಿ ಕರ್ನಾಟಕ ವಿಶ್ವವಿದ್ಯಾಲಯವೇ ಮೊದಲು ಪಿಎಚ್.ಡಿ. ಪದವಿ ನೀಡಿದ್ದು, ಅದನ್ನು ಪಡೆದ ಕೀರ್ತಿ ಪ್ರೊ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿದ ಡಾ. ಬಿ. ಎಸ್. ಗದ್ದಗಿಮಠ ಅವರಿಗೆ (ಕನ್ನಡ ಜಾನಪದ ಗೀತೆಗಳು-೧೯೫೫) ಸಲ್ಲುತ್ತದೆ.

ಆಮೇಲೆ ಕರ್ನಾಟಕದ ಒಳಹೊರಗಿನ ವಿಶ್ವವಿದ್ಯಾಲಯಗಳ ಮೂಲಕ ಪಿಎಚ್.ಡಿ. ಪ್ರಬಂಧ ರಚನೆಯ ಪರಂಪರೆ ಮುಂದುವರಿದಿದ್ದು, ಡಾ. ಎಂ. ಚಿದಾನಂದಮೂರ್ತಿ ಅವರು 'ಸಾಂಸ್ಕೃತಿಕ ಕ್ಷೇತ್ರ'ದ ಮೇಲೆ ಒತ್ತು ನೀಡಿದರೆ, ನಾನು 'ಉಪೇಕ್ಷಿತ ಕ್ಷೇತ್ರ'ದ ಮೇಲೆ ಒತ್ತು ಹಾಕುತ್ತ ಬಂದಿದ್ದೇನೆ. ನನ್ನ ಈ ಧೋರಣೆ ಕಾರಣವಾಗಿ 'ಶಾಸನಗಳಲ್ಲಿ ಕರ್ನಾಟಕದ ವರ್ತಕರು', 'ಕೊಡೆಕಲ್ಲ ಬಸವಣ್ಣ : ಒಂದು ಅಧ್ಯಯನ' ಇತ್ಯಾದಿ ಉಪೇಕ್ಷಿತ ಕ್ಷೇತ್ರಗಳ ಅಧ್ಯಯನ ಸಾಧ್ಯವಾಗಿದೆ. ಈಗ ಅಂಥದೇ ಉಪೇಕ್ಷಿತ ಕ್ಷೇತ್ರವೊಂದು 'ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ' ಈ ಕೃತಿಯ ಮೂಲಕ ಬೆಳಕಿಗೆ ಬರುತ್ತಲಿದೆ.

ಹಸ್ತಪ್ರತಿಗಳ ಸಂಗ್ರಹ, ಸೂಚೀಕರಣ ಕೆಲಸಗಳು ಒಂದು ಹಂತಕ್ಕೆ ಬಂದು, ಕನ್ನಡದಲ್ಲಿ 'ಹಸ್ತಪ್ರತಿ ಶಾಸ್ತ್ರ' ರೂಪದ ಅಧ್ಯಯನ ಮೊದಲು ಕಾಣಿಸಿಕೊಂಡುದು 'ಗ್ರಂಥಸಂಪಾದನ ಶಾಸ್ತ್ರ'ದ ಭಾಗವಾಗಿ. ಆಮೇಲೆ ಅಲ್ಲಲ್ಲಿ ಈ ಅಧ್ಯಯನ ನಡೆದರೂ ಸಮಗ್ರ ಅಧ್ಯಯನ ಮೊದಲ ಸಲ ಸಾಧ್ಯವಾದುದು ಈ ಮಹಾಪ್ರಬಂಧದಲ್ಲಿ. ಹೀಗಾಗಿ ನಮ್ಮ ಪಿಎಚ್.ಡಿ. ಅಧ್ಯಯನದ ಇತಿಹಾಸದಲ್ಲಿ ಈ ಪ್ರಬಂಧಕ್ಕೆ ವಿಶಿಷ್ಟಸ್ಥಾನ ಸಲ್ಲುತ್ತದೆ. ಈ ಬಗೆಯ, ಈ ವ್ಯಾಪ್ತಿಯ ಅಧ್ಯಯನ ಭಾರತದ ಬೇರೆ ಭಾಷೆಗಳಲ್ಲಿ ಜರುಗಿದುದು ಸಂದೇಹ.

ಕನ್ನಡ ಹಸ್ತಪ್ರತಿಗಳನ್ನು ಮನೆಮನೆಗಳಲ್ಲಿ ಪರದೇಶಿಯಂತೆ ಬಿದ್ದುಕೊಂಡಿರುವ 'ಅರಕ್ಷಿತ ಪ್ರತಿಗಳು', ಮಠಮಾನ್ಯಗಳಲ್ಲಿ ಕೆಲಮಟ್ಟಿಗೆ ಕೂಡಿಹಾಕಿರುವ 'ಸಂಗ್ರಹಿತ ಪತ್ರಿಗಳು', ಆಧುನಿಕ ಸಂಶೋಧನ ಸಂಸ್ಥೆಗಳಲ್ಲಿರುವ 'ಸಂರಕ್ಷಿತ ಪ್ರತಿಗಳು' ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆ, ರೀಸರ್ಚ ಇನ್‌ಸ್ಟಿಟ್ಯೂಟ್‌ದಂಥ ಸಂಶೋಧನ ಸಂಸ್ಥೆಗಳಲ್ಲಿಯೇ ವೈಜ್ಞಾನಿಕ ರಕ್ಷಣೆ, ಸೂಚೀಕರಣದಂಥ ಕೆಲಸ ಅಪೂರ್ಣ ಸ್ಥಿತಿಯಲ್ಲಿ ನಿಂತುಬಿಟ್ಟಿದೆ. ಹೀಗಿರುವಾಗ 'ಸಂಗ್ರಹಿತ ಪ್ರತಿ' ಮತ್ತು 'ಅರಕ್ಷಿತ ಪ್ರತಿ'ಗಳ ಅನಾಥ ಸ್ಥಿತಿಯನ್ನು ವರ್ಣಿಸುವುದೇ ಬೇಡ. ಇದರಿಂದಾಗಿ ಅಭ್ಯಾಸಿಗೆ ನಿರ್ಮಾಣವಾಗಿರುವ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಡಾ. ಬಿ. ಕೆ. ಹಿರೇಮಠ ಅವರು ಈ ಮೂರು ನೆಲೆಗಳನ್ನು ತಮ್ಮ ಅಧ್ಯಯನಕ್ಕೆ ಅಳವಡಿಸಿಕೊಂಡುದು ಈ ಪ್ರಬಂಧದ ಪ್ರಥಮ ಯಶಸ್ಸಾಗಿದೆ. ಹೆಚ್ಚಿನದಾಗಿ ಸಾಹಿತ್ಯದಂಥ ಅನ್ಯ ಆಕರಗಳಲ್ಲಿ ಲಭ್ಯವಾಗುವ ಆಧಾರಗಳನ್ನು, ಈ ವರೆಗೆ ಪ್ರಕಟವಾದ ಸೂಚಿಗಳನ್ನು, ಹಸ್ತಪ್ರತಿ ಶಾಸ್ತ್ರಕ್ಕೆ ಸಂಬಂಧಿಸಿದ ಲೇಖನ, ಗ್ರಂಥಗಳನ್ನು ಕಣ್ಣುಮುಂದೆ ಹರಡಿಕೊಳ್ಳುತ್ತ, ಈ ವರೆಗೆ ಆಗಿರುವ, ಇನ್ನು ಮೇಲೆ ಆಗಬೇಕಾಗಿರುವ ಕೆಲಸದ ಉದ್ದ-ಅಗಲಗಳನ್ನು, ಮಹತ್ವವನ್ನು ಅರ್ಥಮಾಡಿಕೊಂಡೇ ಈ ದುರ್ಗಮ ಕ್ಷೇತ್ರವನ್ನು ಪ್ರವೇಶಿಸಿದುದಕ್ಕೆ ಈ ಪ್ರಬಂಧ ಸಾಕ್ಷಿಯಾಗಿದೆ.

ಸಂಗ್ರಹಿತ ಆಕರ ಸಾಮಗ್ರಿಯನ್ನು ಕ್ರಮಬದ್ಧವಾಗಿ ವರ್ಗೀಕರಿಸಿಕೊಂಡರೆ ಮಾತ್ರ ತರ್ಕಬದ್ಧ ಫಲಿತಾಂಶ ಪ್ರಕಟವಾಗುತ್ತದೆ. ಇಲ್ಲದಿದ್ದರೆ ವಿಷಯದ ಪುನರುಕ್ತಿ, ಫಲಿತಾಂಶದ ವೈರುಧ್ಯ ಇತ್ಯಾದಿ ದೋಷಗಳು ತಲೆಹಾಕುತ್ತವೆ. ಇಂಥ ಸೂತಕಗಳಿಗೆ ಅವಕಾಶ ನೀಡಿದ ರೀತಿಯಲ್ಲಿ ಡಾ. ಹಿರೇಮಠ ಅವರು ಹತ್ತು ಪ್ರಕರಣಗಳಲ್ಲಿ, ಹಲವು ಉಪಪ್ರಕರಣಗಳಲ್ಲಿ ಒಟ್ಟು ಪ್ರಬಂಧವನ್ನು ಹಂಚಿಹಾಕಿದ್ದಾರೆ. ಈ ಬಗೆಯಿಂದಾಗಿ ಹೇಳಬೇಕಾದ ಸಣ್ಣ-ದೊಡ್ಡ ಅಂಶಗಳೆಲ್ಲ ಸ್ಫುಟವಾಗಿ ಈ ಪ್ರಬಂಧದೊಳಗೆ ಸೇರಿಕೊಂಡಿವೆ.

ಪ್ರಾಚೀನರ ವಿದ್ಯಾಭಿಮಾನ, ಧರ್ಮಾಭಿಮಾನ, ಬದುಕಿನ ಒಲವು ಇತ್ಯಾದಿಗಳನ್ನು ಅರಿತುಕೊಳ್ಳುವುದೇ ಹಸ್ತಪ್ರತಿಗಳ ಅಧ್ಯಯನದ ಅಂತಿಮ ಉದ್ದೇಶವೆಂಬ ಸರಿಯಾದ ಗ್ರಹಿಕೆಯಿಂದಲೇ ತೆರೆದುಕೊಳ್ಳುವ ಈ ಪ್ರಬಂಧ, ಹಸ್ತಪ್ರತಿಯ ಅರ್ಥ-ಲಕ್ಷಣಗಳನ್ನು ವಿವರಿಸಿ, ಕನ್ನಡ ಹಸ್ತಪ್ರತಿಗಳ ಸಂಪತ್ತು, ವೈವಿಧ್ಯ ಮತ್ತು

ಪ್ರಾಚೀನತೆಗಳನ್ನು ಪ್ರತಿಪಾದಿಸುವ ಮೂಲಕ ಕ್ರಮೇಣ ಆಳವನ್ನು ಒದಗಿಸಿಕೊಳ್ಳುತ್ತ ನಡೆದಿದೆ. ಈ ವರೆಗೆ ಕೆಲವು ಗ್ರಂಥಗಳು ಲೇಖನ ಸಾಮಗ್ರಿಯನ್ನು ಕುರಿತು ವಿವರಿಸಿದ್ದರೂ, ಹೊಸ ಹೊಸ ಆಕರ, ಅವುಗಳ ವ್ಯವಸ್ಥಿತ ವಿಮರ್ಶೆಯಿಂದಾಗಿ ಇಲ್ಲಿಯ ಅಧ್ಯಯನ ಈ ವರೆಗಿನ ನಮ್ಮ ತಿಳುವಳಿಕೆಗೆ ವಿಸ್ತಾರವನ್ನು ಕಲ್ಪಿಸಿದೆ.

ಈ ಪ್ರಬಂಧ ಗಾಢವಾಗಿ ತೊಡಗಿಕೊಳ್ಳುವುದು 'ಹಸ್ತಪ್ರತಿ ವಿನ್ಯಾಸಕಾರರು' ಅಧ್ಯಾಯದಿಂದ, ಹರಿಯುವ ನೀರು ತನ್ನ ದಾರಿಯನ್ನು ತಾನು ಹುಡುಕಿಕೊಂಡು ಮುನ್ನಡೆಯುವಂತೆ, ಇಲ್ಲಿ ಸಂಗ್ರಹಿಸಿದ ಆಕರ ಸಾಮಗ್ರಿ ಹೊಸ ಹೊಸ ವಿಷಯಗಳನ್ನು ಪ್ರಕಟಿಸುತ್ತ ಸಾಗಿದೆ. ಹಸ್ತಪ್ರತಿ ನಿರ್ಮಾಣಪ್ರಸಂಗದ ಅಲೇಖ ಹಂತ, ಲೇಖನ ಹಂತ, ಗ್ರಥನ ಹಂತ ಎಂಬ ವರ್ಗೀಕರಣವೇ ಈ ವಿಷಯವನ್ನು ಇವರು ಎಷ್ಟು ವೈಜ್ಞಾನಿಕವಾಗಿ ಬಿಚ್ಚಿಕೊಂಡಿರುವರೆಂಬುದನ್ನು ತೋರಿಸಿಕೊಡುತ್ತದೆ. ಹಸ್ತಪ್ರತಿಯ ನಿರ್ಮಾಣ ಕಾರ್ಯದಲ್ಲಿ ಓಲೆಯವರು, ಬಡಿಗ, ಚಿತ್ರಕ, ಲೋಹಕಾರ, ಲಿಪಿಕರ, ವಸ್ತ್ರದವರು, ಬರೆಪಕಾರರು - ಹೀಗೆ ಹಲವು ಹಸ್ತಗಳು ದುಡಿಯುತ್ತಿದ್ದುದನ್ನು ಮೊದಲ ಬಾರಿಗೆ ಎಣಿಸಿ ಹೇಳುತ್ತ, ಬರೆಪಕಾರರ ಬಗ್ಗೆ ನೀಡಿರುವ ವೈವಿಧ್ಯಪೂರ್ಣ ವಿವರ ನಮಗೆ ಗೊತ್ತಿಲ್ಲದ ಅನೇಕ ಅಂಶಗಳನ್ನು ಕಣ್ಣಿಗೆ ಹಿಡಿಯುತ್ತವೆ.

ಹೀಗೆ ನಿರ್ಮಾಣಗೊಂಡ ಸಾವಿರ ಸಾವಿರ ಹಸ್ತಪ್ರತಿಗಳು ನಾಡಿನ ತುಂಬ ಹಲವು ಮುಖಗಳಲ್ಲಿ ಬೆಳೆದುನಿಂತ ಬಗೆಯನ್ನು ಆಧಾರ ಸಹಿತ ಸ್ಥಾಪಿಸಿದ್ದಾರೆ. ಈ ಬೆಳವಣಿಗೆಯ ಹಿಂದಿರುವ ಕಾರಣಗಳನ್ನು ರಾಜಶಕ್ತಿ, ಧರ್ಮಶಕ್ತಿ, ಪ್ರಜಾಶಕ್ತಿಗಳೆಂದು ಸರಿಯಾಗಿಯೇ ಗುರುತಿಸಿದ್ದಾರೆ.

ಈ ಪ್ರಬಂಧದ ಹೃದಯ 'ಹಸ್ತಪ್ರತಿಗಳ ಕಲಾವಿನ್ಯಾಸ.' ಸ್ವತಃ ಪ್ರಥಮದರ್ಜೆಯ ಚಿತ್ರ ಕಲಾವಿದರಾಗಿರುವ ಡಾ. ಹಿರೇಮಠರು ಕನ್ನಡಕ್ಕೆ ನೀಡಿದ ವಿಶೇಷ ಕೊಡುಗೆಯಿದು. ಹಸ್ತಪ್ರತಿಗಳ 'ಬರಹದ ವಿನ್ಯಾಸ', 'ಚಿತ್ರಕಲಾ ವಿನ್ಯಾಸ' ಎಂದು ಕವಲೊಡೆದ ಈ ಅಧ್ಯಯನ ಶಾಖೋಪಶಾಖೆಗಳಲ್ಲಿ ಬಿಚ್ಚಿಕೊಂಡು, ನಿದರ್ಶನಗಳ ಮೂಲಕ ವಿಷಯವನ್ನು ಸ್ಪಷ್ಟಗೊಳಿಸುತ್ತದೆ. ಈ ಚಿತ್ರಕಲೆಯು ಜೈನ, ವೀರಶೈವ, ಬ್ರಾಹ್ಮಣ ವಿಶಿಷ್ಟವಾಗಿಯಲ್ಲದೆ ಮತಾತೀತವಾಗಿ ಬೆಳೆದುಬಂದ ರೀತಿಯನ್ನು ಪ್ರತಿಪಾದಿಸುವಲ್ಲಿ ಕರ್ನಾಟಕದ ಚಿತ್ರಕಲೆಯ ಇತಿಹಾಸವನ್ನೇ ಪುನರ್‌ರಚಿಸಿಕೊಡುವ ಪ್ರಯತ್ನ ಕಾಣಿಸುತ್ತದೆ. ಹಸ್ತಪ್ರತಿಗಳಲ್ಲಿಯ ರೇಖಾವಿನ್ಯಾಸ, ಬಣ್ಣಗಾರಿಕೆಗಳಂಥ ವಿಷಯಗಳ ಬಗ್ಗೆ ಅಧಿಕೃತವಾಗಿ ಮತ್ತು ವ್ಯಾಪಕವಾಗಿ ತಿಳಿದುಕೊಳ್ಳಬೇಕಾದರೆ ಕನ್ನಡದಲ್ಲಿ ನಾವು ಈ ಅಧ್ಯಾಯಕ್ಕೇ ಮೊರೆಹೊಗಬೇಕಾಗುತ್ತದೆ.

ಅಧ್ಯಯನದ ಯಾವ ಮಗ್ಗಲೂ ಉಳಿದುಕೊಳ್ಳದಂತೆ ವಿಷಯವನ್ನು ಬಹುಮುಖಗಳಿಂದ ಮುಟ್ಟಿನೋಡುವುದು ಸಮಗ್ರ ಅಧ್ಯಯನದ ಲಕ್ಷಣ. ಹೀಗಾಗಿ, ಈ ಪ್ರಬಂಧ 'ಹಸ್ತಪ್ರತಿ ಸಂರಕ್ಷಣಾ ವಿಧಾನಗಳು ಮತ್ತು ಆಪತ್ತುಗಳು', 'ಹಸ್ತಪ್ರತಿ ಅಧ್ಯಯನ ಸಮೀಕ್ಷೆ' ಎಂಬ ಎರಡು ಅಧ್ಯಾಯಗಳನ್ನು ಅಳವಡಿಸಿಕೊಂಡಿದೆ. ಇಲ್ಲಿಯೂ ತಲಸ್ಪರ್ಶಿ ಅಧ್ಯಯನದ ಹಂಬಲ ಎದ್ದುಕಾಣುತ್ತದೆ. ಈ ಎಲ್ಲ ಗುಣಮೌಲ್ಯಗಳಿಂದಾಗಿ ಈ ಕೃತಿಗೆ ಕನ್ನಡದ ಪಿಎಚ್.ಡಿ. ಮಹಾಪ್ರಬಂಧ ಪರಂಪರೆಯಲ್ಲಿಯೇ ಒಂದು ವಿಶಿಷ್ಟಸ್ಥಾನ ಸಲ್ಲುತ್ತದೆ.

ಇಂದು ಪಿಎಚ್.ಡಿ. ಪ್ರಬಂಧ ರಚನೆ ತುಂಬ ಯಾಂತ್ರಿಕವಾಗಿದೆ. ಇನ್ನೂ ದುರ್ದೈವದ ಸಂಗತಿ ಎಂದರೆ ಬಾಡಿಗೆಯ ಬರವಣಿಗೆಗಳೂ, ಕೃತಿಚೌರ್ಯ, ಸ್ವಜನ ಪಕ್ಷಪಾತಗಳೂ ಸಹಜಕ್ರಿಯೆಗಳಾಗಿವೆ. ಮೈಮುರಿದು ದುಡಿದು ಬೆವರನ್ನು ಬರವಣಿಗೆಯನ್ನಾಗಿಸುವವರು ಸಿಕ್ಕಾರಯೇ? ಎಂದು ಕೇಳುವ ಪರಿಸ್ಥಿತಿ ಕನ್ನಡದಲ್ಲಿ ಇಂದು ನಿರ್ಮಾಣವಾಗಿದೆ. ಮಾರ್ಗದರ್ಶಕ, ವಿದ್ಯಾರ್ಥಿಗಳೆಂಬ 'ಉಭಯ ಭ್ರಷ್ಟರು' ಸೇರಿ ಈ ಕ್ಷೇತ್ರವನ್ನು ಅಪವಿತ್ರಗೊಳಿಸುತ್ತಲಿದ್ದಾರೆ. ಇಂಥ ಸಂದರ್ಭದಲ್ಲಿ ಅಲ್ಲೊಂದು ಇಲ್ಲೊಂದು ಆಶಾಕಿರಣಗಳು ಕಾಣಿಸಿಕೊಳ್ಳುತ್ತಿರುವುದೇ ಸಂತೋಷ. ಅಂಥವುಗಳಲ್ಲಿ ಒಂದು ಆಶಾಕಿರಣ ಈ ಪ್ರಬಂಧ. ಇದರ ರಚನೆಗಾಗಿ

ಡಾ. ಹಿರೇಮಠರು ವಹಿಸಿದ ಶ್ರಮವನ್ನು ನೆನಪುಮಾಡಿಕೊಂಡಾಗಲೆಲ್ಲ ನನ್ನ ನಿಷ್ಠುರ ಮಾರ್ಗದರ್ಶನ ಸ್ವಲ್ಪ ಅತಿಯಾಯಿತೇನೋ ಎನಿಸುತ್ತದೆ. ಅದೆಲ್ಲವನ್ನೂ ಗಂಭೀರವಾಗಿ ಸಹಿಸಿಕೊಂಡು ಬರೆದ ಮಹಾಪ್ರಬಂಧವಿದು. ಇನ್ನು ಮೇಲೆ ಈ ವಿಷಯವಾಗಿ ಯಾರೇ ಬರೆದರೂ ಇದಕ್ಕಿಂತ ಹೆಚ್ಚಿಗೆ ಹೇಳಲಾರರು. ಹೇಳಿದರೂ ಈ ಚೌಕಟ್ಟಿನಲ್ಲಿಯೇ ಹೇಳುತ್ತಾರೆ ಎಂಬಂತೆ ಈ ಪ್ರಬಂಧ ರೂಪುಪಡೆದಿದೆ. ಯಾವ ಕಾಲಕ್ಕೂ ಸಂದರ್ಭಗ್ರಂಥವೆನಿಸಲಿರುವ ಈ ಮೌಲಿಕ ಕೃತಿರಚನೆಗಾಗಿ ಡಾ. ಬಿ. ಕೆ. ಹಿರೇಮಠ ಅವರಿಗೆ ಕನ್ನಡಿಗರ ಕೃತಜ್ಞತೆಗಳು ಸಲ್ಲುತ್ತವೆ.

ಬಿ. ಕೆ. ಹಿರೇಮಠ, ಬಾಗಲಕೋಟ

ಆಕರ : ಮಾರ್ಗ ಸಂಪುಟ–೬

■■

೧೫೭

ಅಕ್ಕ ಮಹಾದೇವಿತ್ವದ ಹಲವು ಎತ್ತರಗಳು

೧೯೯೨

"ವಿಚಾರ ಪತ್ನಿ "ಯಾಗಿ ಬಸವಣ್ಣನೊಂದಿಗೆ ಬದುಕು ಮಾಡಿದೆನೆಂದು ನೀಲಲೋಚನೆ ಹೇಳುತ್ತಾಳೆ. "ಕೂಟಕ್ಕೆ ಸತಿಪತಿಯಲ್ಲದೆ ಜ್ಞಾನಕ್ಕೆ ಸತಿಪತಿಯೆ?" ಎಂದು ಆಯ್ದಕ್ಕಿ ಲಕ್ಕಮ್ಮ ಗಂಡನಿಗೆ ಪ್ರಶ್ನಿಸುತ್ತಾಳೆ. ಇದು ವೀರಶೈವ ಮಹಿಳೆಯ ವಿಚಾರಪಥ. ಎಂಟುನೂರು ವರುಷಗಳ ಹಿಂದೆ ಕರ್ನಾಟಕವೆಂಬ ರಾಜ್ಯದ ವೀರಶೈವ ಕುಟುಂಬಗಳಲ್ಲಿ ಪತ್ನಿಯರು ಪತಿಯೊಂದಿಗೆ ಹೀಗೆ ಬಾಳಿದರೆಂಬುದು ನಂಬಲಾಗದ ಜಾಗತಿಕ ಸತ್ಯ.

ಸಮಾಜವಿಜ್ಞಾನಿಗಳು ಕುಟುಂಬಗಳನ್ನು ಪುರುಷಪ್ರಧಾನ-ಸ್ತ್ರೀ ಅಪ್ರಧಾನ. ಸ್ತ್ರೀಪ್ರಧಾನ-ಪುರುಷ ಅಪ್ರಧಾನ, ಉಭಯ ಪ್ರಧಾನವೆಂದು ವರ್ಗೀಕರಿಸುತ್ತಾರೆ. ಇವುಗಳಲ್ಲಿ ಶರಣರು ಕಟ್ಟಬೇಕೆಂದುದು ಉಭಯ ಪ್ರಧಾನ ಪದ್ಧತಿಯ ಕುಟುಂಬವನ್ನು. ಈ ಉಭಯಪ್ರಧಾನವೆಂಬುದು ಕೌಟುಂಬಿಕ ಚೌಕಟ್ಟಿನಲ್ಲಿ ಇದ್ದೂ, ಪರಸ್ಪರರು ವಿಚಾರಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವುದಾಗಿದೆ. ಸಾಮಾನ್ಯವಾಗಿ ಎಲ್ಲ ಶರಣ ದಂಪತಿಗಳು ಈ ಚೌಕಟ್ಟಿನಲ್ಲಿ ನಿಂತು ಗಂಡನೊಂದಿಗೆ ವಿಚಾರ ಸ್ವಾತಂತ್ರ್ಯದಿಂದ ಬಾಳಿದರು. ಅಕ್ಕಮಹಾದೇವಿ ಮಾತ್ರ ವಿಚಾರ ಸ್ವಾತಂತ್ರ್ಯಕ್ಕೆ ಗಂಡನಿಂದ ಧಕ್ಕೆ ಬಂದಾಗ ಕೌಟುಂಬಿಕ ಚೌಕಟ್ಟನ್ನು ಮುರಿದು ಹೊರ ಬಂದಳು. ಗಂಡನಿಗಾಗಿ ವಿಚಾರ ಸ್ವಾತಂತ್ರ್ಯವನ್ನು ತೊರೆಯದೆ ವಿಚಾರ ಸ್ವಾತಂತ್ರ್ಯಕ್ಕಾಗಿ ಗಂಡನನ್ನೇ ತೊರೆದು, ಮಿಕ್ಕ ಶರಣೆಯರಿಗಿಂತ ಪ್ರತ್ಯೇಕವಾಗಿ ಕಾಣಿಸಿಕೊಂಡಳು. ಹೀಗಾಗಿ ಮಾನವಜೀವದ ವಿಚಾರಸ್ವಾತಂತ್ರ್ಯ ಮತ್ತು ವ್ಯಕ್ತಿಜೀವನದ ಆತ್ಮಗೌರವಗಳಿಗೆ ಬರೆದ ವ್ಯಾಖ್ಯಾನವಾಗಿದೆ, ಅವಳ ಬದುಕು. ಈ ಬದುಕಿನ ಹಲವು ಎತ್ತರಗಳನ್ನು ಹೊಸ ರೀತಿಯಲ್ಲಿ ಗುರುತಿಸಿದ ಪ್ರಯತ್ನಕ್ಕಾಗಿ ಡಾ. ಗಂಗಮ್ಮ ಸತ್ಯಂಪೇಟೆ ಅವರನ್ನು ಮೊದಲು ಅಭಿನಂದಿಸುತ್ತೇನೆ.

ಎಲ್ಲ ಶರಣರಂತೆ ಅಕ್ಕಮಹಾದೇವಿಯ ಚರಿತ್ರೆಯೂ ಹದಿನೈದನೆಯ ಶತಮಾನದಲ್ಲಿ ಮರುಹುಟ್ಟು ಪಡೆಯಿತು. ಈ ಕೆಲಸವನ್ನು ಚಾಮರಸ ಮತ್ತು ಶೂನ್ಯಸಂಪಾದನೆಕಾರರು ಪೂರ್ಣಗೊಳಿಸಿದರು. ಡಾ. ಗಂಗಮ್ಮ ಸತ್ಯಂಪೇಟೆಯವರು ಎಲ್ಲರಂತೆ ಮುಖ್ಯವಾಗಿ ೧೫ನೆಯ ಶತಮಾನದಲ್ಲಿ ಸಿಗುವ ಚಾರಿತ್ರಿಕ ಮತ್ತು ಸಾಹಿತ್ಯಿಕ ಸಾಮಗ್ರಿಯನ್ನು ಆಧರಿಸಿ ತಮ್ಮ ಬರವಣಿಗೆಯನ್ನು ಪೂರೈಸಿದ್ದರೂ ಭಿನ್ನ ರೀತಿಯಲ್ಲಿ ಅಕ್ಕನೊಳಗೆ ಪ್ರವೇಶಿಸಿದ್ದಾರೆ. ಇಲ್ಲಿಯ ಒಂದೆರಡು ನಿರ್ಣಯಗಳಿಗೆ ನನ್ನ ಸಹಮತವಿರದಿದ್ದರೂ ಶರಣರ ಬಗ್ಗೆ ಅನನ್ಯ ಭಕ್ತಿಯುಳ್ಳ ಅವರ ಅಭಿಪ್ರಾಯ ಸ್ವಾತಂತ್ರ್ಯವನ್ನು ನಾನು ಗೌರವಿಸುತ್ತೇನೆ.

ಚರಿತ್ರೆಯನ್ನು ಪರಿಚಯಿಸುವ ಪ್ರಯತ್ನಕ್ಕಿಂತ, ಅರ್ಥೈಸುವ ಪ್ರಯತ್ನ ಈ ಕೃತಿಯ ವೈಶಿಷ್ಟ್ಯವಾಗಿದೆ. ಚರಿತ್ರೆ ತನ್ನ ಗುರುತಿಗಾಗಿ ಕೆಲವು ಆಕರ ಸಾಮಗ್ರಿಗಳನ್ನು ನಮಗೆ ಬಿಟ್ಟುಹೋಗಿರುತ್ತದೆ. ಈ ಸಾಮಗ್ರಿಯ ನೆರವಿನಿಂದ ಕಳೆದು ಹೋಗಿರುವ ಆ ಚರಿತ್ರೆಯನ್ನು ವಿದ್ವಾಂಸರು ಕಟ್ಟಿಕೊಡಬೇಕಾಗುತ್ತದೆ. ಇಲ್ಲಿ ಎರಡು ವಿಧಾನಗಳಿವೆ. ಆಕರ ಸಾಮಗ್ರಿಯನ್ನು ಸಂಯೋಜಿಸುವುದು ಮತ್ತು ವ್ಯಾಖ್ಯಾನಿಸುವುದು. ಇವುಗಳಲ್ಲಿ ಸಂಯೋಜಿಸುವುದು ಚರಿತ್ರೆಯ ಮೈಯ್ಯನ್ನು ಶೋಧಿಸಿಕೊಟ್ಟರೆ, ವ್ಯಾಖ್ಯಾನಿಸುವುದು ಮನಸ್ಸನ್ನು ಶೋಧಿಸಿ ಕೊಡುತ್ತದೆ. ಡಾ.ಗಂಗಮ್ಮ ಸತ್ಯಂಪೇಟೆ ಅವರದು ಇಲ್ಲಿ ವ್ಯಾಖ್ಯಾನಿಸುವ ವಿಧಾನವಾಗಿದೆ. ಈ ವಿಧಾನ ಆಯಾ ವಿದ್ವಾಂಸರ ಅಧ್ಯಯನ ಸಂಪತ್ತು, ವೈಚಾರಿಕ ನಿಲವುಗಳಿಗೆ ತಕ್ಕಂತೆ ಕೆಲವೊಮ್ಮೆ ಬೇರೆ ಬೇರೆಯಾಗುವುದರಿಂದ, ಅದು ಸಂಶೋಧನೆಯನ್ನು ಮೀರಿ ವಿಮರ್ಶೆಯನ್ನು ತಬ್ಬಿಕೊಳ್ಳುತ್ತದೆ. "ಈ ಪುಸ್ತಕ ಸಂಶೋಧನೆಯೂ ಹೌದು, ವಿಮರ್ಶೆಯೂ ಹೌದು" ಎಂದು ತೋರಿಬರುವುದು, ಈ ಕಾರಣಕ್ಕಾಗಿ.

ಕೌಶಿಕನ ಸಂದರ್ಭ, ಕಿನ್ನರಿ ಬ್ರಹ್ಮಯ್ಯನ ಸಂದರ್ಭ, ಅಲ್ಲಮನ ಸಂದರ್ಭಗಳು ಮಹಾದೇವಿಗೆ ಅಗ್ನಿದಿವ್ಯಗಳಾದುದನ್ನು ಹಾಗೂ ಈ ಸಂದರ್ಭಗಳನ್ನು ಒಂದು ಹೆಣ್ಣಾಗಿ ಅವಳು ಎದುರಿಸಿದ ರೀತಿಗಳನ್ನು, ಅಲ್ಲಲ್ಲಿ ಏರಿದ ಎತ್ತರಗಳನ್ನು, ಜೊತೆಗೆ ಸಾಹಿತ್ಯರಚನೆಯಲ್ಲಿಯೂ ಅವಳು ಮುಟ್ಟಿದ ಉನ್ನತ ನೆಲೆಯನ್ನು ಗುರುತಿಟ್ಟು ತೋರುವುದೇ ಈ ಕೃತಿಯ ಹೃದಯವಾಗಿದೆ. ಶರಣರ ಚರಿತ್ರೆ ಚಾರಿತ್ರ್ಯಗಳನ್ನು ಚಿತ್ರಿಸುವಲ್ಲಿ ಆತ್ಮಗೀತೆಯಂಥ ಅವರ ವಚನಗಳೇ ಪ್ರಥಮ, ಪ್ರಾಮಾಣಿಕ ಸಾಮಗ್ರಿಯಾಗಿವೆ. ಈ ಸಾಮಗ್ರಿಯನ್ನೇ ಬಳಸಿಕೊಂಡು ಪ್ರಸ್ತುತ ಕೃತಿಕಟ್ಟಡ ನಿರ್ಮಾಣಗೊಳ್ಳುತ್ತ ನಡೆದಿದೆ. ಈ ವರೆಗೆ ಪುರುಷ ಲೇಖಕರು ಅಕ್ಕಮಹಾದೇವಿಯನ್ನು ಒಬ್ಬ ಶರಣೆಯೆಂದು ಚಿತ್ರಿಸುತ್ತಾ ಬಂದಿದ್ದಾರೆ. ಡಾ. ಗಂಗಮ್ಮ ಸತ್ಯಂಪೇಟೆಯವರು ಮಾತ್ರ ಅವಳನ್ನು ಒಂದು ಹೆಣ್ಣಾಗಿ ನೋಡುತ್ತ, ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಿದ್ದಾರೆ. ಇದರಿಂದಾಗಿ ಈ ವರೆಗೆ ಯಾರ ಗಮನಕ್ಕೂ ಬರದ ಕೆಲವು ಮಗ್ಗಲುಗಳು ಅಲ್ಲಲ್ಲಿ ತೆರೆದುಕೊಂಡಿವೆ.

ವ್ಯಾಖ್ಯಾನಮುಖಿ ಸಂಶೋಧನೆಯ ಮುಖ್ಯ ಲಕ್ಷಣವೆಂದರೆ ಲೇಖಕರು ತಾವೇ ಪ್ರಶ್ನೆ ಎತ್ತುವುದು, ತಾವೇ ಉತ್ತರ ಹೇಳುವುದು. ಈ ಬಗೆಯ "ಸಂವಾದಾತ್ಮಕ ಶೈಲಿ" ಸಹಜವಾಗಿಯೇ ಓದುಗನನ್ನು ಎಲ್ಲ ದಿಕ್ಕುಗಳಿಂದಲೂ ಬಂಧಿಸಿ, ಅಲ್ಲಿಯ ಅಭಿಪ್ರಾಯಗಳನ್ನು ಒಪ್ಪುವಂತೆ ಮಾಡುತ್ತದೆ. ಈ ಬಗೆಯ ಶೋಧನ ಶೈಲಿಯಿಂದಾಗಿ ಡಾ. ಗಂಗಮ್ಮ ಸತ್ಯಂಪೇಟೆಯವರು ತಮ್ಮ ವಿಚಾರಗಳ ಕಡೆಗೆ ನಮ್ಮನ್ನು ಕರೆದೊಯ್ಯುವುದರೊಂದಿಗೆ ಒಮ್ಮೊಮ್ಮೆ ಎಳೆದೊಯ್ಯುವರೇನೋ ಎನಿಸುತ್ತದೆ. ಹಾಗೆ ಎಳೆದೊಯ್ದು ನಂಬಿಸುವ ರೀತಿ ಇಲ್ಲಿ ಮನೋಜ್ಞವಾಗಿದೆ.

ಅಕ್ಕಮಹಾದೇವಿ ಸಾರ್ವಜನಿಕವಾಗಿಯೇ ದಿಗಂಬರೆಯಾದಳು. ಬೌದ್ಧಿಕ ಸಾಹಚರ್ಯದ ಗಂಡ ಸಿಕ್ಕಿದ್ದರೆ ಅವಳು ಸಂಸಾರವನ್ನು ಗಾಢವಾಗಿ ಪ್ರೀತಿಸುತ್ತಿದ್ದಳು - ಇತ್ಯಾದಿ ಮಾತುಗಳು ಇತಿಹಾಸದ ಮೌನವನ್ನು ಮುರಿಯಲು ಮಾಡಿದ ಪ್ರಯತ್ನಗಳಾಗಿವೆ. ಗಂಡನೇ ದೇವರೆಂದು ನಂಬಿದ ಅಂದಿನ ಸಮಾಜದಲ್ಲಿ ದೇವರೇ ಗಂಡನೆಂದು ನಂಬಿದವಳು, ಕೊನೆಗೆ ದೇವರಿಗೆ ಮಗಳಾಗಿ ಪರಿವರ್ತಿತಳಾದಳು ಎಂಬ ಈ ಅಭಿಪ್ರಾಯಗಳು ನಮ್ಮನ್ನು ವಿಚಾರಮಾಡಲು ಹಚ್ಚುತ್ತವೆ. ವಚನಗಳು ಬದುಕೇ ಬಾಯ್ದೆರೆದು ನಿಂತ ಭಾಷೆಗಳು ಎನ್ನುತ್ತ "ಎರೆಯಂತೆ ಕರಕರಗಿ......" ಎಂಬ ವಚನವನ್ನು ಕುರಿತು ನಡೆಸಿದ 'ಆನ್ವಯಿಕ ವಿವೇಚನೆ' ಅನೇಕ ಒಳನೋಟಗಳನ್ನು ನೀಡುತ್ತದೆ.

'ಹೀಗೆ ಏಕಕಾಲಕ್ಕೆ ಸಂಶೋಧನೆಯೂ ವಿಮರ್ಶೆಯೂ' ಆಗಿರುವ ಈ ಕೃತಿ ಓದುಗರ ವಿಚಾರಗಳನ್ನು ಅರಳಿಸುವಂತೆ, ಕೆರಳಿಸುವ ಕೆಲಸವನ್ನೂ ಮಾಡುತ್ತದೆ. ಓದಿದಷ್ಟೂ ಓದಿಸಿಕೊಂಡು ಹೋಗುವುದು, ವಿಚಾರಗಳನ್ನು

ಒದಗಿಸುತ್ತಲೇ ವಿಚಾರ ಮಾಡಲು ಹಚ್ಚುವುದು ಉತ್ತಮ ಬರವಣಿಗೆಯ ಲಕ್ಷಣ. ಇಂಥ ಲಕ್ಷಣ ಈ ಗ್ರಂಥದ ಹೃದಯವಾಗಿದೆ. ಒಮ್ಮೊಮ್ಮೆ ಅಕ್ಕಮಹಾದೇವಿಯ ಪರ ತರ್ಕಬದ್ಧ ವಕಾಲತ್ತು ವಹಿಸುವರೇನೋ ಎನಿಸಿದರೂ ಒಟ್ಟು ಬರವಣಿಗೆ ಅವಳನ್ನು ಕುರಿತ ಹೊಸ ಅಧ್ಯಯನವಾಗಿದೆ.

ಡಾ. ಗಂಗಮ್ಮ ಸತ್ಯಂಪೇಟೆ ಅವರು ಒಂದು ಕಾಲಕ್ಕೆ ನನ್ನ ವಿದ್ಯಾರ್ಥಿನಿ. ವಚನಸಾಹಿತ್ಯದ ಬಗ್ಗೆ ಅವರಿಗಿರುವ ಒಲವನ್ನು, ಅದನ್ನು ಬೆಳೆಸಿಕೊಳ್ಳಲು ಅವರು ಮಾಡುತ್ತಿರುವ ಪ್ರಯತ್ನವನ್ನು ನಾನು ಅಂದೇ ಗುರುತಿಸಿದ್ದೆನು. ಇಂದು ನನ್ನ ನಿರೀಕ್ಷೆಗೆ ನಿದರ್ಶನವೆಂಬಂತೆ ಈ ಕೃತಿ ರಚಿಸಿದುದಕ್ಕಾಗಿ ಅವರನ್ನು ಇನ್ನೊಮ್ಮೆ ಅಭಿನಂದಿಸುತ್ತೇನೆ.

ಗಂಗಮ್ಮ ಸತ್ಯಂ ಪೇಟೆ, ಶಹಾಪುರ

ಆಕರ : ಮಾರ್ಗ ಸಂಪುಟ–೬

■■

೧೫೮

ಅಭಿವ್ಯಕ್ತಿ

೧೯೯೩

ಡಾ. ಸಾ. ಶಿ. ಮರುಳಯ್ಯನವರದು ಅನೇಕ ಅರ್ಥಗಳಲ್ಲಿ ಸಮನ್ವಯ ವ್ಯಕ್ತಿತ್ವ. ಸೃಜನ-ವಿಮರ್ಶನ, ಹಳಗನ್ನಡ-ಹೊಸಗನ್ನಡ, ಪೌರ್ವಾತ್ಯ-ಪಾಶ್ಚಿಮಾತ್ಯ ಹೀಗೆ ಅನೇಕತೆಗಳನ್ನು ಏಕತೆಯಲ್ಲಿ ಅಳವಡಿಸಿಕೊಂಡ ಅವರ ಬರವಣಿಗೆಯ ಸ್ಥಾಯಿ, ಬಹುಶ್ರುತತ್ವ. ಅದು ಬರೆಹಕ್ಕೆ ಇಳಿಯುವಾಗ ಗೊಂದಲವನ್ನು ನಿರ್ಮಿಸಿಕೊಳ್ಳದೆ, ಗರಿ ಗರಿಯಾಗಿ ಬಿಚ್ಚಿಕೊಳ್ಳುತ್ತಿರುವುದು ಒಂದು ವಿಶೇಷ. ಈ ಮಾತಿಗೆ ಅವರ ಪ್ರಬಂಧ ಸಂಕಲನವಾದ 'ಅಭಿವ್ಯಕ್ತಿ' ನಿದರ್ಶನವೆನಿಸಿದೆ.

ಇಲ್ಲಿಯ 'ಕವಿ ವಿಮರ್ಶಕನಾಗಿ, ವಿಮರ್ಶಕನು ಕವಿಯಾಗಿ', 'ಗೀತ ನಾಟಕಗಳಲ್ಲಿ ಭಾಷೆ' ಲೇಖನಗಳಲ್ಲಿ ತಾತ್ವಿಕ ವಿವೇಚನೆ, 'ಆದಿಪುರಾಣದೊಳರಿವುದು', 'ರಾಘವಾಂಕ ಮತ್ತು ವಚನಕಾರರ ವಿಚಾರಕ್ರಾಂತಿ' ಲೇಖನಗಳಲ್ಲಿ ಕೃತಿವಿಮರ್ಶೆ ಅವಕಾಶ ಪಡೆದಿದೆ. 'ವಚನಾಭಿವ್ಯಕ್ತಿ' ಶರಣಸಾಹಿತ್ಯದ ಬಹುಮುಖೀ ಅಧ್ಯಯನವಾದರೆ, 'ಮನುಜಮತ, ವಿಶ್ವಪಥ' ವಿಶ್ವಮಾನವ ಸ್ವರೂಪವನ್ನು ಪ್ರತಿಪಾದಿಸುತ್ತದೆ.

ಅಭಿವ್ಯಕ್ತಿಯಲ್ಲಿ ವ್ಯಕ್ತಿ ಕಾಣಿಸಿಕೊಳ್ಳುತ್ತಾನೆ, ಕಾಣಿಸಿಕೊಳ್ಳಬೇಕು. ವ್ಯಕ್ತಿನಿಷ್ಠ ಸೃಜನಸಾಹಿತ್ಯದಲ್ಲಿ ಅನಿವಾರ್ಯವಾಗಿರುವ ಇದು, ವಸ್ತುನಿಷ್ಠವಾಗಿರಬೇಕೆನ್ನುವ ವಿಮರ್ಶನ ಸಾಹಿತ್ಯದಲ್ಲಿಯೂ ಪಸರಿಸಿಕೊಳ್ಳುತ್ತದೆ. ಇದಕ್ಕೆ ನಿದರ್ಶನವೆನ್ನುವಂತೆ ವ್ಯಕ್ತಿ ಮರುಳಯ್ಯನವರ 'ರಸಪ್ರಜ್ಞೆ' ಮತ್ತು 'ವಿಚಾರಪರತೆ'ಗಳು ಈ ಲೇಖನಗಳಲ್ಲಿ ಪ್ರವಹಿಸಿವೆ. ಉಸಿರುಗಟ್ಟಿಸುವ 'ವೈಚಾರಿಕತೆ.' ಮೈ ಮರೆಯಿಸುವ 'ಭಾವುಕತೆ'ಗಳ ಅತಿರೇಕಕ್ಕೆ ಹೋಗದ ಒಂದು ಸಮನ್ವಯ ನಿಲವು ಈ ಪ್ರಬಂಧಗಳ ಹೃದಯವೆನಿಸಿದೆ.

ಸಾ.ಶಿ. ಮರುಳಯ್ಯ, ಬೆಂಗಳೂರು.

ಆಕರ : ಮಾರ್ಗ ಸಂಪುಟ–೬

೧೫೯

ರೆ॥ ಎಫ್. ಕಿಟೆಲ್ : ಒಂದು ಅಧ್ಯಯನ

೧೯೯೪

"ಕನ್ನಡಕ್ಕೆ ದುಡಿದ ಕ್ರೈಸ್ತವಿದ್ವಾಂಸರು" ಎಂದಾಕ್ಷಣ ಮೊದಲು ನೆನಪಾಗುವವರು ಕಿಟೆಲ್, "ಕನ್ನಡಕ್ಕೆ ಕ್ರೈಸ್ತರ ಸಾಹಿತ್ಯಿಕ ಕೊಡುಗೆ" ಎಂದಾಕ್ಷಣ ಮೊದಲು ನೆನಪಾಗುವುದು ಕಿಟೆಲ್ ಕೋಶ. ಹೀಗೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವ್ಯಕ್ತಿ ಮತ್ತು ಕೃತಿ ದೃಷ್ಟಿಯಿಂದ ಮಹತ್ವದ ಪಶ್ಚಿಮವಿದ್ವಾಂಸರೆನಿಸಿದ್ದಾರೆ, ಡಾ. ಫರ್ಡಿನಾಂಡ್ ಕಿಟೆಲ್.

ವ್ಯಾಪಾರಕ್ಕಾಗಿ ಬಂದ ಪಾಶ್ಚಿಮಾತ್ಯರು ಭಾರತದಲ್ಲಿ ರಾಜಕೀಯ ಚಟುವಟಿಕೆಗಳನ್ನು ವಿಸ್ತರಿಸುವದರೊಂದಿಗೆ ಧಾರ್ಮಿಕ ಚಟುವಟಿಕೆಗಳನ್ನೂ ಪ್ರಾರಂಭಿಸಿದರು. ಧಾರ್ಮಿಕ ಶ್ರದ್ಧೆಯ ಕ್ರೈಸ್ತ ಪಾದ್ರಿಗಳು ಧರ್ಮಪ್ರಸಾರಕ್ಕೆ ಮಾತ್ರ ಸೀಮಿತಗೊಳ್ಳದೆ, ಅನ್ಯಕ್ಷೇತ್ರಗಳನ್ನೂ ಆವರಿಸಿದರು. ಇದಕ್ಕೆ ಕಾರಣ ಕ್ರೈಸ್ತಧರ್ಮ ಕೇವಲ ವ್ಯಕ್ತಿಕೇಂದ್ರಿತವಾಗಿರದೆ, ಸಮಾಜಕೇಂದ್ರಿತವೂ ಆಗಿರುವುದು. ಹೀಗಾಗಿ ಧಾರ್ಮಿಕ ಮಧ್ಯಬಿಂದುವಿನಲ್ಲಿ ನಿಂತು ಸಮಾಜದ ಎಲ್ಲ ಆಯಾಮಗಳಲ್ಲಿ ಚಾಚಿಕೊಂಡ ಅವರು, ಶಿಕ್ಷಣ-ಸಾಹಿತ್ಯಗಳಲ್ಲಿಯೂ ಬಿಚ್ಚಿಕೊಂಡುದು ಸಹಜವೇ ಆಗಿದೆ.

ಸಾಹಿತ್ಯಕ್ಕೆ ಬಂದರೆ ಹೆಜ್ಜೆ ಇಟ್ಟಲ್ಲೆಲ್ಲ ಹೆಜ್ಜೆಗುರುತುಗಳನ್ನು ಮೂಡಿಸಿದ ಈ ಕ್ರೈಸ್ತ ಬರಹಗಾರರಲ್ಲಿ ಕಿಟೆಲ್‌ಹೆಜ್ಜೆ ವಾಮನನಂತೆ ಮೂರು ನೆಲೆಗಳನ್ನು ವ್ಯಾಪಿಸಿದೆ; ಭಾಷೆ, ಸಾಹಿತ್ಯ, ಧರ್ಮ. ಈ ನೆಲೆಗಳ ಫಲಿತವನ್ನು ಅವರು ಗ್ರಂಥ ಲೇಖನಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ಕಿಟೆಲರ ಬರಹವನ್ನು, ಅದರ ಹಿಂದಿರುವ ಅವರ ಬದುಕನ್ನು ಸಮಗ್ರವಾಗಿ ಒಂದು ಮಹಾಪ್ರಬಂಧದಲ್ಲಿ ಬಂಧಿಸುವುದು ಸಣ್ಣ ಕೆಲಸವೇನಲ್ಲ. ಇದು ಕ್ರೈಸ್ತ-ಕ್ರೈಸ್ತೇತರ ಧರ್ಮಪ್ರಜ್ಞೆ, ಕನ್ನಡ-ಇಂಗ್ಲಿಷ್ ಭಾಷಾಜ್ಞಾನ, ಸಾಹಿತ್ಯ-ಶಾಸ್ತ್ರ ಅಭಿರುಚಿ, ಮೂಲ-ಅನುವಾದ ಪರಿಣತಿಗಳನ್ನು ಬಯಸುತ್ತವೆ. ಡಾ. ಕೆ. ಎಮ್. ಮ್ಯಾಥ್ಯೂ ಅವರಲ್ಲಿ ಈ ಬಯಕೆಗಳನ್ನು ಪೂರೈಸಿಕೊಡುವ ಶಿಸ್ತುಗಳು ಮೇಳವಿಸಿಕೊಂಡಿವೆ. ಈ ನೆಲೆಯಲ್ಲಿ, ಹಿನ್ನೆಲೆಯಲ್ಲಿ ನಿಂತು ಅವರು, ಪ್ರಸ್ತುತ ಪಿಎಚ್. ಡಿ. ಪ್ರಬಂಧವನ್ನು ರೂಪಿಸಿದ್ದಾರೆ.

ಇಂದು ಪಿಎಚ್.ಡಿ. ಪದವಿಸಂಪಾದನೆ ಸ್ನಾತಕೋತ್ತರ ಪದವಿ ಸಂಪಾದನೆಗಿಂತ ಸುಲಭವೆನಿಸಿದೆ. ವಿಷಯದ ಆಯ್ಕೆಯಲ್ಲಿಯೇ ಆರಂಭವಾಗುವ ಈ ಸುಲಭೀಕರಣಕ್ರಿಯೆ ಪದವಿ ಪ್ರದಾನದ ವರೆಗೂ ಮುಂದುವರಿಯುತ್ತಿರುವದು ವಿಷಾದದ ಸಂಗತಿಯಾಗಿದೆ. ಇಂಥ ಸಂದರ್ಭದಲ್ಲಿ ಡಾ. ಮ್ಯಾಥ್ಯೂ ಅವರು

ಕಿಟೆಲ್ ಕಡಲನ್ನು ಅಭಿಮುಖೀಕರಿಸಿಕೊಂಡುದು ಧೈರ್ಯದ ವಿಷಯವೇ ಸರಿ. ಪಿಎಚ್.ಡಿ. ಅಧ್ಯಯನಕ್ಕೆ ಕಿಟೆಲ್‌ಕೋಶ ಒಂದೇ ಸಾಕೆನಿಸುವಾಗ ಬಾಸೆಲ್ ಮಿಶನ್ ಪರಂಪರೆಯಿಂದ ಪ್ರಾರಂಭಿಸಿ, ಕಿಟೆಲ್ ಜೀವನ ವಿವರಗಳನ್ನು ನಿರೂಪಿಸಿ, ಧರ್ಮಗ್ರಂಥ-ಪಠ್ಯಪುಸ್ತಕ - ಗ್ರಂಥಸಂಪಾದನೆ - ಸಾಹಿತ್ಯಚರಿತ್ರೆ - ಭಾಷಾಶಾಸ್ತ್ರ - ಶಬ್ದಕೋಶ, ಹೀಗೆ ಒಂದೊಂದಾಗಿ ಕಿಟೆಲ್ ಆಯಾಮಗಳನ್ನು ತೆಕ್ಕೆಗೆ ತೆಗೆದುಕೊಳ್ಳುತ್ತ, ಈ ಪ್ರಬಂಧ ಮುನ್ನಡೆದಿದೆ. ಮತ್ತು ವಿಷಯದ ಆಯ್ಕೆಯಲ್ಲಿ ತೋರಿದ ಧೈರ್ಯ, ಅಧ್ಯಾಯಗಳಿಗೆ ಅರ್ಥ ತುಂಬುವಲ್ಲಿ ಪ್ರಯತ್ನವಾಗಿ ಪರಿಣಮಿಸಿದೆ. ಹೀಗೆ ಅರ್ಥ ತುಂಬಬೇಕಾದರೆ ಈ ರೀತಿಯ ಅಧ್ಯಯನ ಪ್ರಸಂಗದಲ್ಲಿ ಎರಡು ನೆಲೆಗಳನ್ನು ಅವಲಂಬಿಸಬೇಕಾಗುತ್ತದೆ. ಒಂದು - ಆಕರ ಸಾಮಗ್ರಿಯ ಸಂಗ್ರಹ, ಎರಡು-ಆಕರಸಾಮಗ್ರಿಯ ವ್ಯಾಖ್ಯಾನ.

ಕಿಟೆಲ್ ಅವರನ್ನು ಕುರಿತ ಆಕರಶೋಧ ಸುಲಭ ಕೆಲಸವಲ್ಲ, ಈ ಆಕರ ಮಂಗಳೂರು, ಧಾರವಾಡ, ಮಡಿಕೇರಿಗಳಿಗೆ ಸಿಮೀತವಾಗಿ ನಿಲ್ಲದೆ ದೂರದ ಜರ್ಮನಿಯನ್ನೂ ವ್ಯಾಪಿಸಿದೆ. ಸಾಲದುದಕ್ಕೆ ಕಿಟೆಲ್‌ರನ್ನು ಕುರಿತ ಈವರೆಗಿನ ಬರವಣಿಗೆಗಳಲ್ಲಿ ಅನೇಕ ವಿರೋಧಾಭಾಸಗಳು ನುಸುಳಿಕೊಂಡಿವೆ. ಆದುದರಿಂದ ಆಕರಸಾಮಗ್ರಿಯ ಶೋಧದಲ್ಲಿ ದೈಹಿಕಶ್ರಮ, ವಿರೋಧಾಭಾಸ ನಿವಾರಣೆಯಲ್ಲಿ ಬೌದ್ಧಿಕಶ್ರಮ ಅವಶ್ಯವೆನಿಸುತ್ತವೆ. ಡಾ. ಮ್ಯಾಥ್ಯೂ ಅವರು ಕಿಟೆಲ್ ಅವರ ಮಾತೃಸಂಸ್ಥೆ ಬಾಸೆಲ್‌ಮಿಶನ ಕೇಂದ್ರಸ್ಥಳವಾದ ಮಂಗಳೂರು ಪ್ರದೇಶದವರಾಗಿರುವುದು, ಕಿಟೆಲ್ ನೆಲೆನಿಂತಿದ್ದ ಧಾರವಾಡ ಮಡಿಕೇರಿಗಳ ಸಂಪರ್ಕ ಹೊಂದಿರುವುದು, ಹೆಚ್ಚಿನದಾಗಿ ಕಿಟೆಲರ ಧರ್ಮಪರಂಪರೆಗೆ ಸಂಬಂಧಿಸಿದುದು- ಇವು ಆಕರ ಸಂಗ್ರಹದಲ್ಲಿ ಅವರಿಗೆ ಅನುಕೂಲಕರ ಅಂಶಗಳಾಗಿ ಪರಿಣಮಿಸಿದೆ. ಇದಕ್ಕಿಂತ ಹೆಚ್ಚಿನ ಅನುಕೂಲವೆಂದರೆ ದಾಖಲೆಗಳ ಸಂಶೋಧಕರೂ, ಕಡಲಾಚೆಯ ಕನ್ನಡ ದಾಖಲೆಗಳ ಸಂಗ್ರಾಹಕರೂ ಆಗಿರುವ ಡಾ. ಶ್ರೀನಿವಾಸ ಹಾವನೂರ ಅವರು ಮಾರ್ಗದರ್ಶಕರಾಗಿರುವುದು. ಹೀಗಾಗಿ ಈ ಕೃತಿ ಬೇರೆಲ್ಲಿಯೂ ಸಿಗದ ಆಕರಸಾಮಗ್ರಿಯನ್ನು ಒಳಗುಮಾಡಿಕೊಂಡ ವಿಶೇಷತೆಯನ್ನು ಹೊಂದಿದೆ.

ಹೀಗೆ ವಿಪುಲ ಪ್ರಮಾಣದಲ್ಲಿ ಆಕರ ಸಂಗ್ರಹಿಸುವುದಕ್ಕಿಂತ ಹೆಚ್ಚು ಕಠಿಣವಾದ ಕಾರ್ಯವೆಂದರೆ, ಸಂಗ್ರಹಿಸಿದ ಆಕರಗಳನ್ನು ಸರಿಯಾಗಿ ಮತ್ತು ಆಳವಾಗಿ ವಿಮರ್ಶಿಸಿ, ಪ್ರಬಂಧವನ್ನು ಸಂಯೋಜಿಸುವುದು. ಕಿಟೆಲರ ವಿದ್ವತ್ತು ಅನೇಕ ಆಯಾಮಗಳಾಗಿ ಕವಲೊಡೆದ ಕಾರಣ ಅವರನ್ನು ಕುರಿತ ಸಂಶೋಧನೆ ಬಹುಕ್ಷೇತ್ರೀಯ ಪರಿಶ್ರಮವನ್ನು ಅಪೇಕ್ಷಿಸುತ್ತದೆ. ಈ ಎಲ್ಲ ಆಯಾಮಗಳಿಗೆ ನ್ಯಾಯ ಒದಗಿಸಲು ಪ್ರಯತ್ನಿಸಿದ್ದರೂ, ಕೆಲವೆಡೆ ಅನಿವಾರ್ಯವೆಂಬಂತೆ ಇಲ್ಲಿಯ ಬರವಣಿಗೆ ಪರಿಚಯದ ನೆಲೆಯಲ್ಲಿ ವ್ಯವಹರಿಸಿದೆ. ಹೀಗಿದ್ದೂ ಎತ್ತಿ ಹೇಳಬೇಕಾದ ಒಂದು ಮುಖ್ಯ ಅಂಶವೆಂದರೆ ಪ್ರಶಂಸೆಯಾಗಬೇಕಿದ್ದ ಅಪಾಯದಿಂದ ಪಾರಾದುದು. ಇಂದು ಕಿಟೆಲ್ ಹೆಸರು ಒಂದಿಷ್ಟು ದಂತಕಥೆಯ ಹಂತವನ್ನು ತಲುಪಿದೆ. ಡಾ. ಮ್ಯಾಥ್ಯೂ ಆ ಭ್ರಮೆಯಿಂದ ಹೊರಬಂದು, ಕಿಟೆಲರ ವ್ಯಕ್ತಿ ದೌರ್ಬಲ್ಯಗಳನ್ನೂ, ಅವರ ಬರವಣಿಗೆಯ ಕೊರತೆಗಳನ್ನೂ ಸೂಚಿಸಿದುದು ಸಂಶೋಧಕನ ನಿರ್ಲಿಪ್ತ ಮನೋಧರ್ಮಕ್ಕೆ ಸಾಕ್ಷಿಯಾಗಿದೆ.

ಪಾದ್ರಿಯಾಗಿದ್ದ ಕಿಟೆಲ್ ಧರ್ಮಪ್ರಸಾರದ ಉಪಕರಣವಾದ ಧಾರ್ಮಿಕ ಸಾಹಿತ್ಯ ರಚನೆಗೆ ಸೀಮಿತಗೊಳ್ಳದೆ ಪಠ್ಯರಚನೆ, ಗ್ರಂಥಸಂಪಾದನೆ, ಭಾಷಾಶಾಸ್ತ್ರ, ಕೋಶವಿಜ್ಞಾನ, ಸಾಹಿತ್ಯಚರಿತ್ರೆಯ ಸಂಯೋಜನೆಗಳಿಗೆ ತೊಡಗಿದುದನ್ನು ನೋಡಿದರೆ, ಅವರ ಧಾರ್ಮಿಕ ಮನಸ್ಸಿನಲ್ಲಿ ಶಿಕ್ಷಣ-ಸಾಹಿತ್ಯ-ಶಾಸ್ತ್ರ ಮೊದಲಾದ ಶಿಸ್ತುಗಳು ಗಾಢವಾಗಿ ಸ್ಪಂದಿಸುತ್ತಿರುವದು ಸಹಜವೆನಿಸುತ್ತದೆ. ಡಾ. ಮ್ಯಾಥ್ಯೂ ಅವರು ಈ ಶಿಸ್ತುಗಳನ್ನು ಒಂದೂ ಬಿಡದಂತೆ ಗುರುತಿಸಿದ್ದರೂ ಜಾನಪದಶಿಸ್ತು ಕಣ್ತಪ್ಪಿ ಉಳಿದುದು ಈ ಪ್ರಬಂಧದ ಒಂದು ಲೋಪವೆನಿಸಿದೆ. ಮಿಕ್ಕ ಕ್ಷೇತ್ರಗಳನ್ನು ಬಿಟ್ಟರೂ ಕಿಟೆಲ್ ಎಂದಾಕ್ಷಣ ಅವರ ಕೋಶ ನಮ್ಮ ಕಣ್ಣೆದುರು

ಬರುತ್ತದೆ. ಇದರ ವಿವೇಚನೆ ಬಹುಮುಖಿಯಾಗಿ ನಡೆದಿದ್ದರೂ ಆಧುನಿಕ ನಿಘಂಟುವಿಜ್ಞಾನದ ಹಿನ್ನೆಲೆಯಲ್ಲಿ ಈ ದೊಡ್ಡ ಕೋಶವನ್ನು ದೊಡ್ಡ ಪ್ರಮಾಣದಲ್ಲಿ ವಿಮರ್ಶಿಸುವುದು ಅವಶ್ಯವಿದ್ದಿತು. ಕಿಟೆಲರ "ಎ ಗ್ರಾಮರ್ ಆಫ್ ದಿ ಕನ್ನಡ ಲ್ಯಾಂಗ್ವೇಜ್" ಕೃತಿ ವಿವೇಚನೆಯ ಸಂದರ್ಭಕ್ಕೂ ಈ ಮಾತು ಅನ್ವಯಿಸುತ್ತದೆ.

ಪ್ರಾರಂಭದ ಪಾಶ್ಚಿಮಾತ್ಯ ವಿದ್ವಾಂಸರಾದ ಮೊಗ್ಲಿಂಗ್ ಅವರು ಗ್ರಂಥಸಂಪಾದನ ಕ್ಷೇತ್ರಕ್ಕೆ, ರೀವ್ಹ ನಿಘಂಟು ಕ್ಷೇತ್ರಕ್ಕೆ ಹುಟ್ಟುಹಾಕಿದ್ದರೂ, ಈ ಮತ್ತು ಇಂತಹ ಅನ್ಯ ಕ್ಷೇತ್ರಗಳನ್ನು ನವೀಕರಿಸಿ, ವರ್ತಮಾನ ವಿದ್ವತ್ತಿಗೆ ಸೇತುವೆ ಕಲ್ಪಿಸಿದವರು ಕಿಟೆಲ್. ಹೀಗೆ ಸೇತುವೆಯಾದ ಪರಿಗಳನ್ನೂ, ಅದರಿಂದ ಹೊಸಗನ್ನಡ ವಿದ್ವತ್ತಿನಲ್ಲಿ ತೆರೆದುಕೊಂಡ ದಾರಿಗಳನ್ನೂ ಗುರುತಿಸಿದ್ದರೆ, ಈ ಪ್ರಬಂಧದ ಮೌಲಿಕತೆ ಇನ್ನೂ ವರ್ಧಿಸುತ್ತಿದ್ದಿತು.

ಈ ಬಗೆಯ ಕೆಲವು ಪರಿಮಿತಿಗಳ ಮಧ್ಯದಲ್ಲಿಯೂ ಕಿಟೆಲ್ ಅವರನ್ನು ಕುರಿತು ಪ್ರಥಮ ಸಲ ಒಂದು ಸಮಗ್ರ ಕೃತಿ, ವಿಶ್ವವಿದ್ಯಾಲಯ ಮಾನ್ಯಕೃತಿ ಹೊರಬರುತ್ತಿರುವುದು ವಿಶೇಷ ಕೊಡುಗೆಯೆಂದೇ ಹೇಳಬೇಕು. ಕಿಟೆಲ್ ಅವರ ಬಗೆಗೆ ಅಭ್ಯಾಸ ಮಾಡಬೇಕೆನ್ನುವವರು ಅವಲೋಕಿಸಬೇಕಾದ ಈ ಅಧಿಕೃತ ಪ್ರಬಂಧ ರಚನೆಗಾಗಿ ಡಾ. ಮ್ಯಾಥ್ಯೂ ಅವರು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಕಿಟೆಲ್ ಅವರನ್ನು ಕುರಿತು ಇಂಥ ಒಂದು ಮುಖ್ಯ ಕೃತಿ ಪ್ರಕಟವಾಗುತ್ತಿರುವುದು, ಅದರಲ್ಲಿಯೂ ಧಾರವಾಡದ ಕಿಟೆಲ್ ಆರ್ಟ್ಸ್ ಕಾಲೇಜಿನ ಮೂಲಕ ಪ್ರಕಟವಾಗುತ್ತಲಿರುವುದು, 'ಕೃತಜ್ಞತೆ'ಯ ವಿಷಯವಾಗಿದೆ. ಇದೇ ರೀತಿ ಪ್ರತಿವರ್ಷ ಉತ್ತಮೋತ್ತಮ ಕೃತಿಗಳನ್ನು ಬೆಳಕಿಗೆ ತರುವ ಮೂಲಕ ಕಿಟೆಲ್ ಆರ್ಟ್ಸ್ ಕಾಲೇಜು ಕನ್ನಡ ಪ್ರಕಟಣೆಗಳ ಮಹತ್ವದ ಕೇಂದ್ರವಾಗಿ ಬೆಳೆಯಲೆಂದು ಹಾರೈಸುತ್ತೇನೆ.

ಕೆ. ಎಂ. ಮ್ಯಾಥ್ಯೂ, ಮಂಗಳೂರು

ಆಕರ : ಮಾರ್ಗ ಸಂಪುಟ-೬

■■

೧೬೦

ಭಾರತೀಯ ಛಂದಶ್ಶಾಸ್ತ್ರ

೧೯೯೪

ಮರಣೋತ್ತರ ಪ್ರಕಟಿತ ಮಹಾಕೃತಿಯಾದ "ಭಾರತೀಯ ಛಂದಶ್ಶಾಸ್ತ್ರ"ಕ್ಕೆ ಶ್ರದ್ಧಾಂಜಲಿರೂಪದ ಮುನ್ನುಡಿಯನ್ನು ಬರೆಯುತ್ತಲಿದ್ದೇನೆ. ನಮಗಾಗಿ ಇದನ್ನು ಬರೆದು ಅಗಲಿದ ಶ್ರೀ. ಪ್ರ. ಗೋ. ಕುಲಕರ್ಣಿ ಅವರ ವಿದ್ವತ್ತಿಗೆ ಕೈಮುಗಿಯುತ್ತ, ನಮಗಾಗಿ ಇದನ್ನು ಪ್ರಕಟಿಸುತ್ತಿರುವ ಅವರ ಪತ್ನಿ ಯಮುನಾಬಾಯಿ ಅವರ ಪತಿಭಕ್ತಿಯನ್ನು ಸ್ಮರಿಸುತ್ತ, ನನ್ನ ಪ್ರೀತಿಯ ಛಂದಸ್ಸನ್ನು ಪ್ರತಿಪಾದಿಸುವ ಈ ಕೃತಿಯನ್ನು ಕುರಿತು ಕೆಲವು ಅನಿಸಿಕೆಗಳನ್ನು ಸಹೃದಯರಾದ ನಿಮ್ಮೊಂದಿಗೆ ಹಂಚಿಕೊಳ್ಳುತ್ತಲಿದ್ದೇನೆ.

ಶ್ರೀ. ಪ್ರ. ಗೋ. ಕುಲಕರ್ಣಿ ಅವರು ಹಿರಿಯ ತಲೆಮಾರಿನ ಹಿರಿಯ ವಿದ್ವಾಂಸರು. ವಿದ್ವತ್ತನ್ನು ವ್ರತನಿಷ್ಠೆಯಿಂದ ಗಳಿಸಿಕೊಂಡಿದ್ದವರು, ಬೆಳೆಸಿಕೊಂಡಿದ್ದವರು. ಈ ಮೊದಲು "ಕನ್ನಡ ಭಾಷೆಯ ಚರಿತ್ರೆ"ಯನ್ನು ನೀಡಿದ್ದ ಇವರು ಈಗ "ಭಾರತೀಯ ಛಂದಶ್ಶಾಸ್ತ್ರ"ವನ್ನು ನೀಡಿದುದು ಭಾಷೆಯ "ರೂಪವಿನ್ಯಾಸ" ಮತ್ತು "ಲಯವಿನ್ಯಾಸ" ಬಗೆಗಿನ ಇವರ ತಿಳಿವಳಿಕೆಗೆ ನಿದರ್ಶನವೆನಿಸಿದೆ. ಇದು ಕೇವಲ ಕನ್ನಡ ಛಂದಶಾಸ್ತ್ರವಲ್ಲ, "ಭಾರತೀಯ ಛಂದಶಾಸ್ತ್ರ." ಕನ್ನಡವನ್ನೂ ಒಳಗು ಮಾಡಿಕೊಂಡು ಭಾರತೀಯ ವ್ಯಾಪ್ತಿಗೆ ವಿಸ್ತರಿಸಿಕೊಳ್ಳುವ ಸಾಹಸ ಇಲ್ಲಿದೆ.

ಛಂದಸ್ಸು, ಅಲಂಕಾರ, ವ್ಯಾಕರಣ, ನಿಘಂಟು- ಇವು ಸಾಹಿತ್ಯಶಾಸ್ತ್ರ ಪರಿಕರಗಳಾಗಿವೆ. ಇವುಗಳಲ್ಲಿ ಮಿಕ್ಕುವು ಆಧುನಿಕ ವಿಜ್ಞಾನಗಳಾಗಿ ಬೆಳೆದು, ಜಾಗತಿಕ ಮನ್ನಣೆ ಗಳಿಸಿದ್ದರೆ, ಛಂದಸ್ಸು ಮಾತ್ರ ತನ್ನ ಹಳೆಯ ದಾರಿಯಲ್ಲಿಯೇ ಜಾರುತ್ತ ನಡೆದಿದೆ. ಇಂಥ ಸಂದರ್ಭದಲ್ಲಿ ಅದರ ಹೃದಯವನ್ನು ಅಧಿಕೃತವಾಗಿ ಅರ್ಥೈಸಿಕೊಡಲು, ಆಧುನಿಕವಾಗಿ ವ್ಯಾಖ್ಯಾನಿಸಿಕೊಡಲು ಸಮರ್ಥರಾಗಿರುವ ಕೆಲವೇ ಜನ ಛಂದೋವಿದ್ವಾಂಸರಲ್ಲಿ ಶ್ರೀ ಕುಲಕರ್ಣಿ ಅವರು ಅಗ್ರಮಾನ್ಯರೆನಿಸಿದ್ದಾರೆ. ಈ ದೊಡ್ಡ ಪ್ರಯತ್ನಕ್ಕೆ ಅವಶ್ಯವಿರುವ ಪೂರ್ವಸಿದ್ಧತೆಗಳು ಇವರೊಳಗೆ ದೊಡ್ಡ ಪ್ರಮಾಣದಲ್ಲಿವೆಯೆಂಬುದಕ್ಕೆ ಈ ದೊಡ್ಡ ಗ್ರಂಥ ಸಾಕ್ಷಿ ನುಡಿಯುತ್ತದೆ.

ಸಂಜ್ಞಾಧಿಕರಣ, ವೈದಿಕ ಛಂದೋಧಿಕರಣ, ಅಕ್ಷರ ವೃತ್ತಾಧಿಕರಣ, ಕರ್ಣಾಟ ವಿಷಯ ಜಾತ್ಯಧಿಕರಣ, ಮಾತ್ರಾವೃತ್ತಾಧಿಕರಣ, ಪರಿಶಿಷ್ಟಾಧಿಕರಣಗಳಿಗೆ ಹೆಚ್ಚಿನದಾಗಿ 'ವೃತ್ತ ಮಂಜೂಷ'ವೆಂಬ ಅಧ್ಯಾಯವನ್ನು ಇಲ್ಲಿ ಜೋಡಿಸಲಾಗಿದೆ. ಶಾಸ್ತ್ರವೆನ್ನುವುದು ಶಿಸ್ತನ್ನು ಬಯಸುತ್ತದೆ. ವಿಷಯದ ಸಮಗ್ರಜ್ಞಾನ ಮತ್ತು ಅಧಿಕೃತ ಜ್ಞಾನ ಮಾತ್ರ ಇಂಥ ಶಾಸ್ತ್ರಶಿಸ್ತನ್ನು ತಂದು ಕೊಡುತ್ತದೆ. ಪ್ರಕರಣ ವಿಭಜನೆಯಲ್ಲಿ ಖಂಡಿತ ಕೈಗೂಡಿರುವ ಈ ಶಿಸ್ತು, ವಿಷಯ ನಿರೂಪಣೆಯಲ್ಲಿ ಇನ್ನಷ್ಟು ಅಪೇಕ್ಷಿತವೆನಿಸುತ್ತದೆ.

ಛಂದಸ್ಸಿನ ಪ್ರಯೋಗ ಎರಡು ನೆಲೆಗಳನ್ನೊಳಗೊಂಡಿರುತ್ತದೆ. ಶಾಸ್ತ್ರೀಯತೆ ಮತ್ತು ಸೃಜನಶೀಲತೆ. ಶಾಸ್ತ್ರೀಯತೆ ಸೃಜನಶೀಲತೆಯಾಗಿ ಮಾರ್ಪಡುವಲ್ಲಿ ಮಾತ್ರ ಅದರ ಸಾರ್ಥಕತೆಯಿದೆ. ಆಗ ಛಂದೋವಿಜ್ಞಾನ ಛಂದೋಲಂಕಾರವಾಗುತ್ತದೆ. ಪದ್ಯವನ್ನು ಕಾವ್ಯವನ್ನಾಗಿಸುವ ಪರಿಕರಗಳಲ್ಲಿ ಛಂದಸ್ಸೂ ಒಂದು ಎನ್ನುವುದು, ಈ ಕಾರಣಕ್ಕಾಗಿ. ಈ ರಹಸ್ಯವನ್ನು ಶ್ರೀ ಕುಲಕರ್ಣಿಯವರು ಸರಿಯಾಗಿಯೇ ಕಂಡಿದ್ದಾರೆ. ಭಾಷಾಲಯ, ಪದ್ಯಲಯ, ಸಂಗೀತಲಯ, ಪದ್ಯವು ಕಾವ್ಯವಾಗುವ ರೀತಿ - ಇತ್ಯಾದಿ ಸೂಕ್ಷ್ಮಗಳ ಅಭ್ಯಾಸ ಇವರಲ್ಲಿ ಮೇಳವಿಸಿರುವುದರಿಂದ ಪದ, ಪಾದ, ಲಯ, ಗಣ, ಯತಿ, ಪ್ರಾಸ, ವಡಿ ಇತ್ಯಾದಿ ಛಂದಸ್ಸಿನ ಮೂಲಭೂತ ವಿಚಾರಗಳ ಸಾರ-ವಿಸ್ತಾರಗಳು ಇಲ್ಲಿ ಸರಿಯಾಗಿಯೇ ಪ್ರತಿಪಾದಿತವಾಗಿವೆ. ಅನೇಕ ಭಾಷೆ-ಸಾಹಿತ್ಯಗಳ, ಹಳಗನ್ನಡ-ನಡುಗನ್ನಡ-ಹೊಸಗನ್ನಡಗಳ ಉದಾಹರಣೆಗಳ ಮೂಲಕ ವಿಷಯವನ್ನು ಪಾರದರ್ಶಕಗೊಳಿಸಿದ ಶ್ರೇಯಸ್ಸು ಈ ಪ್ರಕರಣಕ್ಕೆ ಸಲ್ಲುತ್ತದೆ. ಕಾರಣ, ಛಂದಸ್ಸಿನ ಪ್ರಾಥಮಿಕ - ಪ್ರಮಾಣಭೂತ ತಿಳಿವಳಿಕೆಯನ್ನು ಬಯಸುವವರು ಅವಶ್ಯ ಓದಬೇಕಾದ ಪ್ರಕರಣವಿದು.

ಇಲ್ಲಿಂದ ಮುಂದೆ ವೈದಿಕ ಛಂದಸ್ಸು, ಅಕ್ಷರ ಛಂದಸ್ಸು, ಅಂಶ ಛಂದಸ್ಸು, ಮಾತ್ರಾ ಛಂದಸ್ಸುಗಳಿಗಾಗಿ ಒಂದೊಂದು ಪ್ರಕರಣಗಳು ಮೀಸಲಾಗಿದೆ. ನಿಜವಾಗಿ ಈ ಛಂದಶ್ಶಾಸ್ತ್ರ ಪ್ರಾರಂಭವಾಗುವುದು ಇಲ್ಲಿಂದ. ಇದನ್ನು ವೈದಿಕ ಛಂದಸ್ಸಿನಿಂದಲೇ ಪ್ರಾರಂಭಿಸಿದುದು "ಭಾರತೀಯ ಛಂದಶಾಸ್ತ್ರ" ಹೆಸರಿಗೆ ಔಚಿತ್ಯವನ್ನು ತಂದುಕೊಟ್ಟಿದೆ. ಕನ್ನಡದಲ್ಲಿ ವೇದಛಂದಸ್ಸನ್ನು ಕುರಿತು ಇಷ್ಟು ಸೂಕ್ಷ್ಮವಾದ, ಇಷ್ಟು ವಿವರವಾದ ಅಧ್ಯಯನ ನಡೆದುದು ಇದೇ ಮೊದಲು. ಹೀಗಾಗಿ ಸಂಸ್ಕೃತ ಛಂದಸ್ಸಿನ ತಲವಿನ್ಯಾಸವನ್ನರಿಯಲು ಈ ಪ್ರಕರಣ ತುಂಬ ಸಹಾಯ ನೀಡುತ್ತದೆ.

"ವೇದಕಾಲದಲ್ಲಿ ಗಾಯತ್ರಿಗೆ ಇದ್ದ ಮಹತ್ವವು ಪುರಾಣಕಾಲದಲ್ಲಿ ಅನುಷ್ಟುಪ್ ಶ್ಲೋಕಕ್ಕೆ ಬಂದಿತು" ಎಂಬ ಸರಿಯಾದ ಪೀಠಿಕೆಯಿಂದ ಪ್ರಾರಂಭವಾಗುವ ಅಕ್ಷರಛಂದಸ್ಸಿನ ಪ್ರಕರಣ, "ವೈದಿಕ ಛಂದಗಳು ಕಾಲಾನಂತರದಲ್ಲಿ ಉದಾತ್ತಾನುದಾತ್ತಸ್ವರಿತ ಸ್ವರೋಚ್ಚಾರಗಳನ್ನು ಕಳೆದುಕೊಂಡು ಸಮಾನ ಲಘುಗುರ್ವಾಕ್ಷರಗಳುಳ್ಳ ಲೌಕಿಕ ಛಂದಸ್ಸುಗಳಲ್ಲಿ ರೂಪಾಂತರ ಹೊಂದಿದವು" ಎಂಬ ಹೇಳಿಕೆಯಿಂದ ಮುನ್ನಡೆದುದು ಸೂಕ್ತವೇ ಆಗಿದೆ. ಇಲ್ಲಿಯೇ ಉಪಜಾತಿ ಸಮೂಹವನ್ನು, ಸಮವೃತ್ತಗಳನ್ನು ವಿವರವಾಗಿ ಚರ್ಚಿಸಿದ್ದಾರೆ.ಇದಕ್ಕೆ ಅನ್ವಯಿಕ ಸ್ವರೂಪ ಕೊಡುತ್ತಿರುವಂತೆ ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಇಂಥ ನೂರಾರು ವೃತ್ತಗಳನ್ನು ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸಿದ್ದಾರೆ.

"ಕರ್ಣಾಟ ವಿಷಯ ಜಾತ್ಯಧಿಕರಣ" ಅನೇಕ ಹೊಸ ಹೊಸ ವಿಷಯಗಳನ್ನು ಹೊತ್ತು ತಂದಿದೆ. ಕನ್ನಡ, ತೆಲುಗು, ತಮಿಳು ಛಂದಸ್ಸಿನ ಅಭ್ಯಾಸ ಅಲ್ಲಲ್ಲಿ ಹೆಣೆದುಕೊಂಡು ವಿಷಯವನ್ನು ಸಮರ್ಥಿಸಿದೆ. ಅಂಶ ಛಂದಸ್ಸಿನ ಲಕ್ಷಣಗಳನ್ನು ಪ್ರತಿಪಾದಿಸುವ ಎಲ್ಲ ಭಾಷೆಗಳ ಎಲ್ಲ ಗ್ರಂಥಗಳಿಂದ ವಿಷಯವನ್ನು ಸಂಗ್ರಹಿಸಿ, ವಿವರಿಸಿದ ಕ್ರಮದಿಂದಾಗಿ ನಮ್ಮ ಜಾತಿ ಛಂದೋಜ್ಞಾನ ವಿಸ್ತಾರಗೊಳ್ಳುವಂತೆ ಮಾಡಿದ್ದಾರೆ. ಕೊನೆಯಲ್ಲಿ ಬಂದ ಉತ್ಸಾಹ ಮತ್ತು ಉತ್ಸಾಹ ದಂಡಕಗಳು ವಿಶೇಷ ಅಧ್ಯಯನವಾಗಿದ್ದು, ಕನ್ನಡಕ್ಕೆ ಸೇರಿದ ತೆಲುಗು ಜಾತಿವೃತ್ತಗಳು ಮತ್ತು ನಡುಗನ್ನಡ-ಹೊಸಗನ್ನಡ ಸಾಹಿತ್ಯದ ಅಂಶಗಣಾತ್ಮಕ ಜಾತಿವೃತ್ತಗಳು ಇನ್ನೂ ವಿಶೇಷ ಅಧ್ಯಯನವೆನಿಸಿವೆ.

ಮಾತ್ರಾ ಛಂದಸ್ಸಿನ ಪ್ರಕರಣ ಸಂಸ್ಕೃತ ಪ್ರಾಕೃತ ಮಾತ್ರಾವೃತ್ತಗಳ ವಿವೇಚನೆಯೊಂದಿಗೆ ತೆರೆದುಕೊಳ್ಳುತ್ತದೆ. ಮತ್ತು ಪ್ರಾಕೃತದಲ್ಲಿ ಹುಟ್ಟಿ ಇವು ಸಂಸ್ಕೃತದಲ್ಲಿ ಸೇರಿಕೊಂಡಿವೆಯೆಂಬುದು ಸರಿಯಾದ ಹೇಳಿಕೆಯಾಗಿದೆ. ಬಳಿಕ, ಕನ್ನಡದಲ್ಲಿ ಬಳಕೆಯಾಗುವ ಸಂಸ್ಕೃತ-ಪ್ರಾಕೃತ ಮಾತ್ರಾವೃತ್ತ ವಿಷಯವನ್ನು

ಕೈಗೆತ್ತಿಕೊಂಡು, ಕಂದ ರಗಳೆ ಷಟ್ಪದಿಗಳನ್ನು ಸಮಗ್ರವಾಗಿ ಚರ್ಚಿಸಿದ್ದಾರೆ. ಇವುಗಳಲ್ಲಿ ರಗಳೆ, ಷಟ್ಪದಿಗಳು ಆಧುನಿಕ ಕಾಲದಲ್ಲಿ ಚಾಚಿಕೊಂಡು ಹೇಗೆ ಬೆಳೆದಿವೆಯೆಂಬುದನ್ನು ತರ್ಕಬದ್ಧವಾಗಿ ಪ್ರತಿಪಾದಿಸಿದ್ದಾರೆ. ಈ ಹಿಂದೆ ತೆಲುಗು ಜಾತಿವೃತ್ತ ಮತ್ತು ನಡುಗನ್ನಡ-ಹೊಸಗನ್ನಡದ ಅಂಶಗಣಾತ್ಮಕ ಜಾತಿವೃತ್ತಗಳಾದ ದ್ವಿಪದ, ಸೀಸ, ಆಟವೆಲದಿ, ತೇಟಗೀತಗಳಂತೆ, ಈ ಪ್ರಕರಣದಲ್ಲಿ ನಡೆದ ತ್ರಿಪುಡೆ, ದ್ವಿಪದಿ, ಚೌಪದಿಗಳ ವಿವೇಚನೆ ಕನ್ನಡಕ್ಕೆ ಹೊಸ ವಿಚಾರವೆನಿಸಿದೆ. ಇದಕ್ಕೆ ಕಳಸವಿಟ್ಟಂತೆ "ಆಧುನಿಕ ಮಾತ್ರಾವೃತ್ತಗಳು" ಹೆಸರಿನಲ್ಲಿ ಬರೆದ ೧೨೫ ಪುಟ ವ್ಯಾಪ್ತಿಯ ವಿಷಯ ಖಂಡಿತವಾಗಿಯೂ ಕನ್ನಡ ಛಂದಸ್ಸಿಗೆ ಹೊಸ ಕೊಡುಗೆಯಾಗಿದೆ. ಶ್ರೀ ಕುಲಕರ್ಣಿಯವರು ಎಷ್ಟು ಪ್ರಾಚೀನರೋ ಅಷ್ಟು ಆಧುನಿಕರು-ಎಂಬಂಥ ವಿದ್ವತ್ತು ಅವರದೆಂಬುದಕ್ಕೆ ಈ ಪ್ರಕರಣ ಸಾಕ್ಷಿ ನೀಡುತ್ತದೆ. ಹತ್ತಂಗಡಿ ನಾರಾಯಣರಾವ್, ಎಸ್. ಜಿ. ನರಸಿಂಹಾಚಾರ್ ಅವರಿಂದ ಧೋಂಡೋ ನರಸಿಂಹ ಮುಳಬಾಗಿಲ ಅವರು ಆಧುನಿಕ ಪದ್ಯರಚನೆಯ ವಿಷಯವಾಗಿ ಹೇಗೆ ಭಿನ್ನರಾಗಿ ನಿಲ್ಲುವರೆಂಬುದನ್ನು ತೋರಿಸುತ್ತ, ಪಂಜೆ, ಗೋವಿಂದ ಪೈ, ಬಿ. ಎಂ. ಶ್ರೀ. ಅವರಿಂದಾಗಿ ಆಧುನಿಕ ಛಂದಸ್ಸು ಅರಳಿನಿಂತ ಕ್ರಮವನ್ನು ಸರಿಯಾಗಿಯೇ ಪ್ರತಿಪಾದಿಸಿದ್ದಾರೆ. ಸಮವೃತ್ತಗಳು, ಅರ್ಧಸಮ ಚೌಪದಿಗಳು, ವಿಷಮಚೌಪದಿಗಳು, ಪಂಚಪದಿಗಳು, ಷಟ್ಪದಿಗಳು, ಸಪ್ತಪದಿಗಳು, ಅಷ್ಟಪದಿಗಳು, ಬಹುಪದಿಗಳು ಎಂದು ವರ್ಗೀಕರಿಸಿಕೊಂಡು, ಆಂತರಿಕವಾಗಿ ಮತ್ತೆ ಸಮ, ವಿಷಮವೆಂದು ಬಿಡಿಸಿಕೊಂಡು ಆಧುನಿಕ ಛಂದಸ್ಸನ್ನು ಒಂದು ವ್ಯವಸ್ಥೆಗೆ ಒಳಪಡಿಸಿದುದು ಹೊಸ ಪ್ರಯತ್ನವಾಗಿದೆ. ತೀ. ನಂ. ಶ್ರೀ, ಕರ್ಕಿ ಅವರಿಗಿಂತ ಹೆಚ್ಚು ವ್ಯಾಪಕವಾಗಿ, ಹೆಚ್ಚು ಸುಸಂಬದ್ಧವಾಗಿ ಎರಕ ಹೊಯ್ದಿರುವ ಈ ಭಾಗವನ್ನು ಒಂದಿಷ್ಟು ಪರಿಷ್ಕರಿಸಿದರೆ ಆಧುನಿಕ ಛಂದಸ್ಸನ್ನು ಕುರಿತ ಒಂದು ಒಳ್ಳೆಯ ಗ್ರಂಥ ರೂಪಗೊಳ್ಳಬಹುದಾಗಿದೆ. ಇಲ್ಲಿಯೇ ಸುನೀತ, ಸರಳರಗಳೆ - ಮಹಾಛಂದಸ್ಸು, ಮುಕ್ತಚ್ಛಂಧ, ಪ್ರಗಾಥಗಳ ವಿವೇಚನೆಗೂ ಅವಕಾಶ ಕಲ್ಪಿಸಿಕೊಡುವ ಮೂಲಕ ವಿಷಯಕ್ಕೆ ಸಮಗ್ರತೆಯನ್ನೊದಗಿಸಲಾಗಿದೆ.

ಪರಿಶಿಷ್ಟಾಧಿಕರಣ, ಕನ್ನಡವೂ ಸೇರಿದಂತೆ ಭಾರತೀಯ ಛಂದೋಗ್ರಂಥಗಳ ಪರಿಚಯ ವೈಶಿಷ್ಟ್ಯಗಳನ್ನೊಳಗೊಂಡಿದೆ. ನೂರು ಪುಟಗಳ ವರೆಗೆ ಬೆಳೆದ ಈ ಛಂದೋಚರಿತ್ರೆ ಪರ್ಯಾಯವಾಗಿ ಸಾಹಿತ್ಯಚರಿತ್ರೆಯೂ ಆಗಿದೆ. ಈ ಪುಸ್ತಕದ ಕೊನೆಯ ಭಾಗ 'ಷಟ್ಪ್ರತ್ಯಯವನ್ನು ಒಳಗುಮಾಡಿಕೊಂಡ ವೃತ್ತ ಮಂಜೂಷ' ಹೆಸರಿನ ಪ್ರಕರಣವಾಗಿದೆ. ಭಾರತೀಯ ಸಾಹಿತ್ಯದ ಎಲ್ಲ ವೃತ್ತ ಲಕ್ಷಣಗಳನ್ನು ಇಲ್ಲಿ ಒಂದೆಡೆ ಸಂಗ್ರಹಿಸಿ ಕೊಡಲಾಗಿದೆ. ಇಂಥ ಪ್ರಯತ್ನವನ್ನು ಸಂಸ್ಕೃತದಲ್ಲಿ ಡಾ. ಎಚ್. ಡಿ. ವೇಲಣಕರ ಅವರು, ಮರಾಠಿಯಲ್ಲಿ ಶ್ರೀ. ಮಾ. ತ್ರಿಂ. ಪಟವರ್ಧನ ಅವರೂ ಮಾಡಿದ್ದರು. ಇವರಿಗಿಂತ ಹೆಚ್ಚು ವ್ಯಾಪಕವಾದ ಸಂಗ್ರಹಕಾರ್ಯ ಇಲ್ಲಿ ಕಂಡುಬರುತ್ತದೆ. ಇದರಿಂದ ವೃತ್ತಗಳನ್ನು ತುಲನಾತ್ಮಕವಾಗಿ ಅಭ್ಯಸಿಸಿ ಛಂದಸ್ಸಿನ ನಿಜಸ್ವರೂಪವನ್ನು ಅರಿಯಲು ಅನುಕೂಲವಾಗುತ್ತಿದ್ದು, ಶ್ರೀ ಕುಲಕರ್ಣಿ ಅವರ ಶ್ರಮ, ಸಂಯಮ ಇಲ್ಲಿ ಎದ್ದುಕಾಣುತ್ತದೆ.

ಸಾವಿರಕ್ಕೂ ಮೇಲ್ಪಟ್ಟ ಪುಟವ್ಯಾಪ್ತಿಯ ಈ ಗ್ರಂಥದ ಇನ್ನೊಂದು ಶ್ರೇಯಸ್ಸು ವಿಪುಲ ಉದಾಹರಣೆಗಳ ಬಳಕೆ. ಸಂಸ್ಕೃತ, ಪ್ರಾಕೃತ, ತೆಲುಗು, ತಮಿಳು ಭಾಷೆಗಳ ಸಾವಿರಾರು ಪದ್ಯಗಳನ್ನು ಛಂದಸ್ಸಿನ ಸ್ಪಷ್ಟತೆಗಾಗಿ ಇಲ್ಲಿ ದುಡಿಸಲಾಗಿದೆ. ಕನ್ನಡಕ್ಕೆ ಬಂದರೆ ಕೇವಲ ಹಳಗನ್ನಡ, ನಡುಗನ್ನಡವಷ್ಟೇ ಅಲ್ಲ, ಹೊಸಗನ್ನಡದ ನೂರಾರು ಕವಿಗಳ ಸಾವಿರಾರು ಪದ್ಯಗಳನ್ನು ಪರೀಕ್ಷೆಗೆ ಗುರಿಪಡಿಸಿದ್ದಾರೆ. ವೇದವಾಙ್ಮಯದಷ್ಟು ಪ್ರಾಚೀನ, ನವ್ಯಕಾವ್ಯದಷ್ಟು ಅರ್ವಾಚೀನವಾಗಿದೆ - ಈ ಪ್ರಯೋಗಗಳ ಹರಹು. ಗದ್ಯ ಪದ್ಯವಾಗುವ, ಪದ್ಯ ಕಾವ್ಯವಾಗುವ ರೀತಿಯನ್ನು ತಿಳಿಸಿಕೊಡುವಾಗಲಂತೂ, ಶ್ರೀ ಕುಲಕರ್ಣಿ ಅವರ ಛಂದಶ್ಶಾಸ್ತ್ರ ಜ್ಞಾನ, ಛಂದೋಲಂಕಾರಜ್ಞಾನ ಆಶ್ಚರ್ಯ ಹುಟ್ಟಿಸುತ್ತದೆ. ಈ ವರೆಗೆ ಕನ್ನಡದಲ್ಲಿ ಪ್ರಕಟವಾದ ಛಂದೋಗ್ರಂಥಗಳಿಗಿಂತ ಗುಣ-ಗಾತ್ರ

ಎರಡರಲ್ಲಿಯೂ ಹೆಚ್ಚು ಪ್ರೌಢವಾಗಿರುವ ಇದು ನಿಸ್ಸಂದೇಹವಾಗಿಯೂ ನಮ್ಮ ಛಂದೋಜ್ಞಾನವನ್ನು ವಿಸ್ತರಿಸುತ್ತದೆ. ಇಂದಿನ ಕಾಲದಲ್ಲಿ ಇಂಥ ಕೃತಿಯನ್ನು ಬರೆಯುವುದು ಹೋಗಲಿ, ಇದನ್ನು ಓದಿ ಅರಗಿಸಿಕೊಳ್ಳುವವರೂ ಯಾರಿದ್ದಾರೆ? ಎಂದು ಕೇಳುವಷ್ಟು ಪ್ರೌಢವಾಗಿದೆ.

ಮುನ್ನುಡಿಯ ಮಾತುಗಳನ್ನು ಮುಗಿಸುವಾಗ ಎರಡು ವಿಷಾದಗಳು ನನ್ನನ್ನು ಕಾಡುತ್ತವೆ. ಇದು ಪ್ರಕಟವಾಗುವಾಗ ಲೇಖಕರು ನಮ್ಮ ನಡುವೆ ಇಲ್ಲದಿರುವುದು ಒಂದು ವಿಷಾದವಾದರೆ, ಇಷ್ಟು ದೊಡ್ಡ ವಿದ್ವಾಂಸರು ಸರಿಯಾಗಿ ಬೆಳಕಿಗೆ ಬಾರದೆ ಹೋದುದು ಇನ್ನೊಂದು ವಿಷಾದವಾಗಿದೆ. ಹುಲ್ಲೂರು ಶ್ರೀನಿವಾಸ ಜೋಯಿಸ, ಫ. ಗು. ಹಳಕಟ್ಟಿ, ಗೋವಿಂದ ಪೈ. ಕಪಟ್ರಾಳ ಕೃಷ್ಣರಾಯ, ಬೆಟಗೇರಿ ಕೃಷ್ಣಶರ್ಮ ಮೊದಲಾದ ಹವ್ಯಾಸಿ ಸಂಶೋಧಕರ ಸಾಲಿನಲ್ಲಿ ಎದ್ದು ಕಾಣುವ ಹಿರಿಯ ವಿದ್ವಾಂಸರಾದ ಇವರು ಈ ಕೃತಿಯಿಂದಾಗಿ ಖಂಡಿತವಾಗಿಯೂ ನಮ್ಮ ಕನ್ನಡಜ್ಞಾನವನ್ನು ವಿಸ್ತರಿಸಿದ್ದಾರೆ.

ಕನ್ನಡದ ಖ್ಯಾತ ಪ್ರಾಧ್ಯಾಪಕರಾದ ಪ್ರೊ. ಪ್ರಹ್ಲಾದಕುಮಾರ ಭಾಗೋಜಿ ಅವರು ಶ್ರೀ. ಪ್ರ. ಗೋ. ಕುಲಕರ್ಣಿ ಅವರ ಮಕ್ಕಳು. ಈ ಲೆಕ್ಕದಂತೆ ಕನ್ನಡ ಪ್ರಾಧ್ಯಾಪಕನಾದ ನಾನೂ ಶ್ರೀ ಕುಲಕರ್ಣಿಯವರ ಪುತ್ರವರ್ಗಕ್ಕೆ ಸೇರಿದವನು. ಹೀಗಿದ್ದೂ ನಮ್ಮಿಂದ ಈ ಪುಸ್ತಕವನ್ನು ಸುಂದರವಾಗಿ, ಶುದ್ಧವಾಗಿ ಪ್ರಕಟಿಸುವುದು ಸಾಧ್ಯವಾಗಲಿಲ್ಲವಲ್ಲ - ಎಂದು ಬಡವರ ಮಕ್ಕಳಂತೆ ಮರುಗುತ್ತ ಮುನ್ನುಡಿಯನ್ನು ಮುಗಿಸುತ್ತೇನೆ.

ಪ್ರ. ಗೋ. ಕುಲಕರ್ಣಿ, ಬೆಳಗಾವಿ.

ಆಕರ : ಮಾರ್ಗ ಸಂಪುಟ–೬

■■

೧೬೧

ಯಲಹಂಕ ಪ್ರಭುಗಳು : ಒಂದು ಅಧ್ಯಯನ

೧೯೯೪

"ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು" - ಎನ್ನುತ್ತಾರೆ, ಡಾ. ಅಂಬೇಡ್ಕರ. ಈ ಮಾತು, ಇತಿಹಾಸವೆನ್ನುವುದು ಕೇವಲ ಗತಕಾಲದ ಬದುಕಲ್ಲ, ವರ್ತಮಾನಕ್ಕೆ ಬುನಾದಿ, ಭವಿಷ್ಯಗೆ ಬೆಳಕು- ಎಂದು ತಿಳಿಸುತ್ತದೆ. ಹೀಗಾಗಿ ವರ್ತಮಾನದಲ್ಲಿ ಮಾತ್ರವಲ್ಲ, ಗತಕಾಲದಲ್ಲಿಯೂ ತನಗೆ ಇದ್ದ ಸ್ಥಾನವನ್ನು ಪುನಃ ಸ್ಥಾಪಿಸಿಕೊಳ್ಳಬೇಕೆನ್ನುವ ಪ್ರಜ್ಞೆ ಇಂದು ಎಲ್ಲ ಸಮಾಜಗಳಲ್ಲಿ ಎಚ್ಚರಗೊಂಡಿದೆ. ಈ ಪ್ರಜ್ಞೆ ಮುಖ್ಯವಾಗಿ ಎರಡುದಾರಿಗಳಲ್ಲಿ ಚಲಿಸತೊಡಗಿದೆ. ಒಂದು : ತನ್ನ ಪರಂಪರೆಯ ನಿಜಸ್ವರೂಪವನ್ನು ಮತ್ತು ಅದರ ಬೆಳವಣಿಗೆಯ ಹಂತಗಳನ್ನು ಶೋಧಿಸುವುದು. ಎರಡು: ಆ ಪರಂಪರೆಗೆ ಇತಿಹಾಸದ ಪುಟಗಳಲ್ಲಿ ನ್ಯಾಯವಾದ ಪಾಲು ದೊರಕಿಸಿಕೊಡುವುದು. ದಕ್ಷಿಣ ಕರ್ನಾಟಕದ ಬಹುದೊಡ್ಡ ಶಕ್ತಿಯಾಗಿರುವ ಗೌಡ ಒಕ್ಕಲಿಗ ಸಮಾಜ ಈ ದಿಕ್ಕಿನಲ್ಲಿ ಹವಣಿಸುತ್ತಿರುವುದಕ್ಕೆ ಪ್ರಸ್ತುತ ಪುಸ್ತಕ ನಿದರ್ಶನವಾಗಿದೆ.

ಕನ್ನಡಿಗರಿಗೆ ಚಾರಿತ್ರಿಕ ಪ್ರಜ್ಞೆ ಕಡಿಮೆ. ಹೀಗಿದ್ದೂ ನಮ್ಮ ಪ್ರಾಚೀನ ಕವಿಗಳು ಆಗಾಗ ದೊಡ್ಡ ದೊಡ್ಡ ಅರಸುಮನೆತನಗಳ ಇತಿಹಾಸವನ್ನು ಮಾತ್ರ ಸಾಹಿತ್ಯದಲ್ಲಿ ದಾಖಲಿಸುತ್ತ ಬಂದ ಕಾರಣ, ಸಣ್ಣ ಸಣ್ಣ ಅರಸು ಮನೆತನಗಳು ಅವರ ಅಲಕ್ಷ್ಯಕ್ಕೆ ಗುರಿಯಾದವು. ನಮ್ಮ ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಮೊದಮೊದಲು ಪಾಶ್ಚಿಮಾತ್ಯ ರಾಜಕೀಯ ಇತಿಹಾಸ, ಆಮೇಲೆ ಮೌರ್ಯ ಗುಪ್ತರಂಥ ಔತ್ತರೇಯ ದೊಡ್ಡ ಮನೆತನಗಳ ಇತಿಹಾಸ, ಬಳಿಕ ಕದಂಬ, ಚಾಲುಕ್ಯರಂಥ ದಾಕ್ಷಿಣಾತ್ಯ ದೊಡ್ಡ ಮನೆತನಗಳ ಇತಿಹಾಸಗಳು ವಿಜೃಂಭಿಸಿದವು. ಮತ್ತು ಇವು ಬಹುಪುಟಗಳನ್ನು ಆಕ್ರಮಿಸಿ, ಸಣ್ಣ ಅರಸುಮನೆತನಗಳನ್ನು ಇತಿಹಾಸ ಕೃತಿಗಳಿಂದ ಹೊರದೂಡಿದವು. ಅರವತ್ತು ವರ್ಷಗಳಷ್ಟು ಪೂರ್ವದಲ್ಲಿಯೇ ಶ್ರೀ ಎಂ. ಎಸ್. ಪುಟ್ಟಣ್ಣ ಅವರನ್ನು ಬಿಟ್ಟರೆ ಸಾಮಾನ್ಯವಾಗಿ ಯಾವುದೇ ಆಧುನಿಕ ಚರಿತ್ರಕಾರರು ಈ ಮನೆತನಗಳನ್ನು ಪುಸ್ತಕಪುಟಗಳಲ್ಲಿ ಸ್ಥಾಪಿಸುವ ಕೆಲಸ ಮಾಡಲಿಲ್ಲ. ಈ ತಪ್ಪನ್ನು ತಿದ್ದಿಕೊಳ್ಳುವ ರೀತಿಯಲ್ಲಿ ಕಳೆದ ೫-೬ ವರ್ಷಗಳಿಂದ ಕರ್ನಾಟಕದ ಸಣ್ಣ ಮನೆತನಗಳ ಚರಿತ್ರೆಯ ಶೋಧ- ಪ್ರಕಟನೆಯ ಬಗ್ಗೆ ಒಂದು ಹೊಸ ಪ್ರಜ್ಞೆ ಜಾಗ್ರವಾಗಿದೆ. ಈ ದಿಕ್ಕಿನಲ್ಲಿ ಸ್ವಾದಿ ಅರಸುಮನೆತನ, ಬೆಳಗಾವಿ ಜಿಲ್ಲೆಯ ದೇಶಗತಿಗಳು (ತೋಂಟದಾರ್ಯಮಠ, ಗದಗ), ಕೆಳದಿ ಅರಸುಮನೆತನ (ಬೆಕ್ಕಿನಕಲ್ಮಠ, ಶಿವಮೊಗ್ಗೆ), ಕಳಲೆ ಅರಸುಮನೆತನ (ಸುತ್ತೂರುಮಠ, ಮೈಸೂರು) ಹಾಗಲವಾಡಿ ಅರಸುಮನೆತನ (ಸಿದ್ಧಗಂಗಾಮಠ, ತುಮಕೂರು), ಹದಿನಾಡುಅರಸುಮನೆತನ (ಸರ್ಪಭೂಷಣಮಠ, ಬೆಂಗಳೂರು), ಸುಗಟೂರು ಅರಸುಮನೆತನ (ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ)- ಹೀಗೆ ವಿಚಾರಸಂಕಿರಣಗಳು ಜರುಗಿ ಕೆಲವು ಪುಸ್ತಕಗಳು

ಪ್ರಕಟವಾಗಿವೆ. ಬಿಜ್ಜಾವರ, ಬೀಳಗಿ, ಕೊಡಗು ಅರಸರ ಬಗ್ಗೆ ವಿಚಾರಸಂಕಿರಣಗಳು ಜರುಗಲಿವೆ. ಹೀಗೆ ಬಿಚ್ಚಿಕೊಂಡಿರುವ ಇತಿಹಾಸ ಪ್ರವಾಹಕ್ಕೆ ಸೇರಿಕೊಳ್ಳಲಿರುವ ಹೊಸ ತೊರೆಯಾಗಿದೆ, ಗೌಡ ಒಕ್ಕಲಿಗ ಸಮಾಜ ಯಲಹಂಕ ಪ್ರಭುಗಳನ್ನು ಕುರಿತ ಈ ಪುಸ್ತಕ.

ಒಕ್ಕಲಿಗರದು ಭೈರವ ಸಂಪ್ರದಾಯ. ಭೈರವ ಶಿವನ ಹಳೆಯ ರೂಪವಾಗಿರುವುದರಿಂದ ಈ ದೊಡ್ಡ ಸಮಾಜ, ಕರ್ನಾಟಕದ ಇನ್ನೊಂದು ದೊಡ್ಡ ಸಮಾಜವಾಗಿರುವ ವೀರಶೈವದ ಹಿಂದಿನ ಘಟ್ಟವನ್ನು ಪ್ರತಿನಿಧಿಸುತ್ತಿದೆಯೆಂಬುದು ಗಮನಾರ್ಹ ಸಂಗತಿಯಾಗಿದೆ. ಅಂದಿನಿಂದ ಸಂಖ್ಯಾಪ್ರಮಾಣ, ಭೌಗೋಲಿಕ ಪ್ರಸಾರ, ಕೃಷಿವೃತ್ತಿ, ಗ್ರಾಮೀಣ ಆಡಳಿತವ್ಯವಸ್ಥೆ ಮೊದಲಾದ ದೃಷ್ಟಿಗಳಿಂದಲೂ ನಮ್ಮ ನಾಡಿನಲ್ಲಿ ತನ್ನ ಪ್ರಮುಖಸ್ಥಾನವನ್ನು ನಿರಂತರ ಉಳಿಸಿಕೊಂಡು ಬಂದಿದೆ.

ಈ ಸಮಾಜ ನೆಲೆನಿಂತಿರುವ ಪ್ರದೇಶವನ್ನು ಉದ್ದಕ್ಕೂ ಆಳಿದವರು ಗಂಗ, ಹೊಯ್ಸಳ ಅರಸರು. ಒಕ್ಕಲಿಗರಲ್ಲಿ 'ಗಂಗಡಿಕಾರ ಒಕ್ಕಲಿಗರು', 'ಮರಸು ಒಕ್ಕಲಿಗರು' ಮೊದಲಾದ ಪಂಗಡಗಳಿವೆ. ಗಂಗರು ಆಳುತ್ತಲಿದ್ದ ಗಂಗವಾಡಿ ಪ್ರದೇಶದ ಈ ಒಕ್ಕಲಿಗರು, ಗಂಗರು ಆಳುತ್ತಲಿದ್ದ ಮರಸುನಾಡಿಗೆ ಸಂಬಂಧಿಸಿದ ಒಕ್ಕಲಿಗರೆಂದು ಇವುಗಳಿಗೆ ಅರ್ಥ. ಇದರಿಂದ ಒಕ್ಕಲಿಗರು ಗಂಗಸಾಮ್ರಾಜ್ಯದ ಬಹುಮುಖ್ಯ ಪ್ರಜೆಗಳಾಗಿದ್ದರೆಂದು ವ್ಯಕ್ತವಾಗುತ್ತದೆ. ಎಂಟನೆಯ ಶತಮಾನಪೂರ್ವದ ಗಂಗ ಅರಸರು ಬಹುಶಃ ಅಜೈನರಾಗಿದ್ದರು. ಈ ಮನೆತನಕ್ಕೂ ಈ ರಾಜ್ಯದ ಬಹುಮುಖ್ಯ ಪ್ರಜೆಗಳಾಗಿದ್ದ ಒಕ್ಕಲಿಗರಿಗೂ ಇದ್ದಿರಬಹುದಾದ ಸಂಬಂಧದ ಬಗ್ಗೆ ಶೋಧ ನಡೆಯಬೇಕಾಗಿದೆ. ಇದಕ್ಕಿಂತ ಗಾಢ ಸಂಬಂಧ ಹೊಯ್ಸಳರಿಗೂ ಒಕ್ಕಲಿಗರಿಗೂ ಇರುವಂತೆ ತೋರುತ್ತದೆ. ಯಲಹಂಕ ಪ್ರಭುಗಳ ಆರಾಧ್ಯದೈವ ಶಿವಗಂಗೆಯ ಗಂಗಾಧರೇಶ್ವರನಾಗಿರುವುದೂ, ಹೊಯ್ಸಳ ಮಹಾರಾಣಿ ಶಾಂತಲೆ ಶಿವಗಂಗೆಗೆ ಬಂದು ಮರಣವನ್ನಪ್ಪುವದೂ, ಅವಳಿಗೆ ಆ ಸ್ಥಳದೊಂದಿಗೆ ಇದ್ದಿರಬಹುದಾದ ಪ್ರಾದೇಶಿಕ ಅಥವಾ ಸಾಮಾಜಿಕ ಸಂಬಂಧವನ್ನು ಸೂಚಿಸುತ್ತದೆ. ಹೊಯ್ಸಳರ ಅನೇಕ ದಂಡನಾಯಕರು ಒಕ್ಕಲಿಗ ಸಮಾಜಕ್ಕೆ ಸಂಬಂಧಪಟ್ಟವರೆಂದು ಸಾಧಿಸಬಹುದಾಗಿದೆ. ಈ ದಂಡನಾಯಕರ ಸಂಬಂಧಿಕರು ನಾಗಮಂಗಲ ತಾಲೂಕಿನ ಆಳಿಸಂದ್ರ ಮೊದಲಾದ ಸ್ಥಾನಗಳಲ್ಲಿರುವುದು ತಿಳಿದುಬಂದಿದೆ. ಸಾಲದುದಕ್ಕೆ ಗಂಗ - ಹೊಯ್ಸಳ ಮನೆತನಗಳ ಅವಧಿಯಲ್ಲಿ ಒಕ್ಕಲಿಗರು 'ಗೌಡ' ಹುದ್ದೆಯಿಂದ ಈ ಪ್ರದೇಶದ ಬಹುಭಾಗಗಳನ್ನು ಆಡಳಿತಾತ್ಮಕವಾಗಿ ನಿಯಂತ್ರಿಸಿದ್ದರೆಂಬುದು ಸತ್ಯ. ಈ ಪರಂಪರೆಯ ಶಿಖರಸದೃಶ ಮನೆತನದವರಾಗಿದ್ದಾರೆ, ಯಲಹಂಕ ಪ್ರಭುಗಳು.

ಇತಿಹಾಸ ನಮಗಾಗಿ ಆಕರ ಸಾಮಗ್ರಿಯನ್ನು ಬಿಟ್ಟುಹೋಗಿರುತ್ತದೆ. ಯಲಹಂಕ ಅರಸರ ವಿಷಯವಾಗಿ ಸಿಗುವ ಇಂಥ ಆಕರಗಳಲ್ಲಿ ಶಾಸನಗಳು, ಕೆಂಪೇಗೌಡ ಜಯಸ್ತುತಿ, ಕೆಂಪರಾಯನ ಪದಗಳು, ವೀರಭದ್ರ ವಿಜಯ (ಏಕಾಮ್ರ ದೀಕ್ಷಿತ), ಕಂಠೀರವ ನರಸರಾಜ ವಿಜಯ, ಜಗದೇವರಾಯನ ಕಾವ್ಯ, ಸೊಣ್ಣ ಭೈರೇಗೌಡನ ಚರಿತ್ರೆ, ಬತ್ತೀಸ ಪುತ್ಥಳಿ ಕಥೆ, ಸೌಂದರಕಾವ್ಯ, ಕಳಲೆ ನಂಜರಾಜನ ಕೃತಿಗಳು, ತೆಲುಗುಕೃತಿ ಗಂಗಾ ಗೌರಿ ಸಲ್ಲಾಪಂ, ಜನಪದ ಹಾಡು - ವದಂತಿ - ಆಕರಣೆಗಳು, ಈ ಅರಸರು ಕಟ್ಟಿಸಿದ ಕೆರೆ-ದೇವಾಲಯ-ಕೋಟೆ - ಕೊತ್ತಲಗಳು ಮುಖ್ಯವಾಗಿದ್ದು, ಇವರ ಚರಿತ್ರೆಯನ್ನು ಕಟ್ಟುವಲ್ಲಿ ಇವು ಗಚ್ಚು ಗಾರೆಯಂತೆ ನೆರವಾಗುತ್ತವೆ.

ಇಂಥ ಆಕರ ಸಾಮಗ್ರಿಯನ್ನು ಬಳಸಿಕೊಂಡು ವಿದ್ವಾಂಸರು ಬರೆದ ಲೇಖನಗಳ ಸಂಗ್ರಹವಾಗಿದೆ, ಈ ಸಂಪುಟ. ಯಲಹಂಕ ರಾಜವಂಶಾವಳಿಯ ಇತಿಹಾಸ, ಪ್ರಮುಖ ಅರಸರ ಸಾಹಸ-ಸಾಧನೆ, ಸಾಮಾಜಿಕ ಕಾರ್ಯ, ಆಡಳಿತ ವ್ಯವಸ್ಥೆ, ಧಾರ್ಮಿಕ ಸೇವೆ, ಶಿಲ್ಪ - ಕಲೆಗಳಿಗೆ ಸಲ್ಲಿಸಿದ ಕಾಣಿಕೆ ಇತ್ಯಾದಿಗಳ ಅಧ್ಯಯನಕ್ಕೆ ಇಲ್ಲಿ ಅವಕಾಶ ಪ್ರಾಪ್ತವಾಗಿದೆ. ಇದು ಈ ಅರಸರ ಚರಿತ್ರೆಯನ್ನು ವಿವಿಧ ಮಗ್ಗುಲುಗಳಿಂದ ನೋಡಿ ಏಕೀಕರಿಸಿಕೊಟ್ಟ ಪ್ರಥಮಪ್ರಯತ್ನವಾಗಿದೆ. ಮುಂದಿನ ದಿನಗಳಲ್ಲಿ ಈ ಚರಿತ್ರೆ ಆಕಾರದಲ್ಲಿ ಇನ್ನೂ ಸಮಗ್ರ,

ಆಶಯದಲ್ಲಿ ಇನ್ನೂ ಅಧಿಕೃತವಾಗುವುದರತ್ತ ನಾವು ಹೆಜ್ಜೆ ಹಾಕಬೇಕಾಗಿದೆ. ಈ ದೃಷ್ಟಿಯಿಂದ ವಿದ್ವಾಂಸರು ಮಾಡಬೇಕಾದ ಕೆಲಸ ಹಲವು ಬಗೆಯಾಗಿದೆ. ಅವು: ಯಲಹಂಕಪ್ರಭುಗಳಿಗೆ ಸಂಬಂಧಪಟ್ಟ ಆಕರ ಸಾಮಗ್ರಿಯಲ್ಲಿ ಮತ್ತು ಈವರೆಗೆ ಪ್ರಕಟವಾದ ಚರಿತ್ರೆಗಳಲ್ಲಿ ತೋರಿಬರುವ ವೈರುಧ್ಯಗಳನ್ನು ನಿವಾರಿಸುವುದು; ಎರಡನೆಯದಾಗಿ, ಮೂಲ ಆಕರಗಳನ್ನು ನೋಡದೆ ಇನ್ನೊಬ್ಬರ ಬರವಣಿಗೆಯನ್ನೇ ಬಳಸಿಕೊಂಡು ಬರೆದಿರಬಹುದಾದ ಲೇಖನಗಳಲ್ಲಿ ಹೊಸ ಶೋಧಗಳು ಬೆಳಕಿಗೆ ಬರುವುದಿರಲಿ, ಹಳೆಯ ತಪ್ಪುಗಳೇ ಮುಂದುವರಿದಿರುವ ಸಾಧ್ಯತೆಯಿದೆ. ಇವುಗಳನ್ನೂ ತೀವ್ರ ಪರೀಕ್ಷೆಗೆ ಗುರಿಪಡಿಸಬೇಕಾಗಿದೆ. ಕೊನೆಯದಾಗಿ, ಅಸ್ಪಷ್ಟವಾಗಿರುವ ನೆಲೆಗಳನ್ನು ಸ್ಪಷ್ಟಪಡಿಸುವುದು ಮತ್ತು ಅಜ್ಞಾತವಾಗಿರುವ ನೆಲೆಗಳನ್ನು ಜ್ಞಾತಗೊಳಿಸುವುದು. ಅವು : ಹೊಯ್ಸಳ-ಆವತಿ-ಯಲಹಂಕ -ಸುಗಟೂರು ಅರಸರ ಕೌಟುಂಬಿಕ ಸಂಬಂಧವನ್ನು ಬೆಳಕಿಗೆ ತರುವುದು. ಯಲಹಂಕ ಮನೆತನದ ಆರಂಭಕಾಲದ ಇತಿಹಾಸವನ್ನು ಸ್ಪಷ್ಟಪಡಿಸುವುದು ನಮ್ಮ ಕರ್ತವ್ಯವಾಗಿದೆ. ಕೆಂಪನಂಜಯ್ಯ ಹೆಸರಿನಲ್ಲಿಯ ಕೆಂಪ ಏನನ್ನು ಸೂಚಿಸುತ್ತದೆ. ಇಲ್ಲಿಯ ನಂಜಯ್ಯ ಎಂಬುದಕ್ಕೆ ಬದಲು ನಾಚಯ್ಯ ಎಂಬುದೂ ಕಂಡುಬರುತ್ತಿದ್ದು ಇವುಗಳಲ್ಲಿ ಯಾವುದು ಸರಿ? ಅಧಿರಾಜರಾದ ವಿಜಯನಗರದವರೊಂದಿಗೆ, ಚನ್ನಪಟ್ಟಣ, ಶಿರಾ, ಸುಗಟೂರು, ಮೈಸೂರು ಇತ್ಯಾದಿ ಸಹಪಾಳೆಯಗಾರರೊಂದಿಗೆ ಮತ್ತು ಮುಸಲ್ಮಾನ, ಮರಾಠಾ ಮೊದಲಾದ ಅರಸರೊಂದಿಗೆ ಇವರಿಗಿದ್ದ ಸಹಕಾರ-ಸಂಘರ್ಷಗಳ ಸ್ವರೂಪವೇನು? ರಾಜಧಾನಿಗಳಾದ ಆವತಿ, ಯಲಹಂಕ, ಬೆಂಗಳೂರು, ಮಾಗಡಿ, ನೆಲಪಟ್ಟಣ ಮತ್ತು ರಾಜ್ಯದ ಇತರೆಡೆಗಳಲ್ಲಿ ಇವರು ನಿರ್ಮಿಸಿದ ಕೆರೆ-ದೇವಾಲಯ, ಕೋಟೆ-ಕೊತ್ತಲಗಳ ಸಂಖ್ಯೆ-ಸ್ವರೂಪವೇನು? ಇತ್ಯಾದಿ ಪ್ರಶ್ನೆಗಳಿಗೆ ವಿದ್ವಾಂಸರು ಉತ್ತರ ಹುಡುಕಬೇಕಾಗಿದೆ.

ಯಲಹಂಕ ಪ್ರಭುಗಳೆಂದ ಕೂಡಲೆ ಕೆಂಪೇಗೌಡ ನೆನಪಾಗುತ್ತಾನೆ, ಕೆಂಪೇಗೌಡ ಎಂದಾಕ್ಷಣ ಆತ ನಿರ್ಮಿಸಿದ ಬೆಂಗಳೂರು ನೆನಪಾಗುತ್ತದೆ. ಇಂದು ಯಾರು ಕಟ್ಟಿಸಿದ ಬೆಂಗಳೂರು ನಮ್ಮ ರಾಜಧಾನಿಯಾಗಿದೆಯೋ ಆತನೂ, ಆತನ ವಂಶಸ್ಥರೂ ನಿರ್ಮಿಸಿರುವ ಪ್ರಾಚೀನ ಸ್ಮಾರಕಗಳನ್ನು ರಕ್ಷಿಸುವುದು ಈ ರಾಜಮನೆತನವನ್ನು ಕುರಿತು ಸಮಗ್ರ ಅಧ್ಯಯನ ಯೋಜನೆಯನ್ನು ಕೈಗೆತ್ತಿಕೊಳ್ಳುವುದು, ರಾಜ್ಯ ಸರಕಾರದ ಪ್ರಥಮ ಕರ್ತವ್ಯವಾಗಿದೆ.

ಬೆಂಗಳೂರು ರಾಜಧಾನಿಯಿಂದಾಳಿದ ಕೆಂಪೇಗೌಡನ ವಂಶಸ್ಥರನ್ನು ಸೋಲಿಸಿ, ಒಡೆಯರ ವಂಶದವರು ಮೈಸೂರನ್ನು ರಾಜಧಾನಿಯನ್ನಾಗಿ ಬೆಳೆಸಿದ್ದರು. ಆದರೆ 'ಕರ್ನಾಟಕದ ನಿಜವಾದ ರಾಜಧಾನಿ ಕೆಂಪೇಗೌಡನ ಬೆಂಗಳೂರು' ಎಂಬಂತೆ ಮತ್ತೆ ಅದಕ್ಕೆ ರಾಜಧಾನಿ ಗೌರವ ಪ್ರಾಪ್ತವಾದುದೂ ಒಂದು ಯೋಗಾಯೋಗ. ಹೀಗಾಗಿ ಕೆಂಪೇಗೌಡ ಗತಕಾಲದ ಒಬ್ಬ ವ್ಯಕ್ತಿಯಾಗಿ ಉಳಿಯದೆ, ಒಂದು ಪರಂಪರೆಯಾಗಿ ವರ್ತಮಾನದಲ್ಲಿಯೂ ಮುಂದುವರಿದಿದ್ದಾನೆ, ಭವಿಷ್ಯತ್ತಿನಲ್ಲಿಯೂ ಮುಂದುವರಿಯುತ್ತಾನೆ.

ಇಂಥ 'ಧರ್ಮಪ್ರಭು'ವಿನ ರಾಜವಂಶವನ್ನು ಕುರಿತು ವಿಚಾರಸಂಕಿರಣ ಜರುಗಿಸಿ - ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸುತ್ತಿರುವುದು, ಚರಿತ್ರೆಯನ್ನು ಕಟ್ಟುವ, ಸಂಸ್ಕೃತಿಜ್ಞಾನವನ್ನು ಶೋಧಿಸಿಕೊಡುವ ಕೆಲಸವಾಗಿದೆ. ಈ ಮೂಲಕ ಯಲಹಂಕಪ್ರಭುಗಳ ಬಗೆಗಿನ ನಮ್ಮ ತಿಳುವಳಿಕೆಯನ್ನು ವಿಸ್ತರಿಸಿದ ಮಂಡ್ಯ ಪಟ್ಟಣದ ಸ್ನೇಹಿತರಿಗೆ, ಕರ್ನಾಟಕ ಋಣಿಯಾಗಿದೆ.

ಕರ್ನಾಟಕ ಸಂಘ, ಮಂಡ್ಯ.

ಆಕರ : ಮಾರ್ಗ ಸಂಪುಟ–೬

■■

೧೬೨

ಮಳೆ : ಒಂದು ಜಾನಪದೀಯ ಅಧ್ಯಯನ

೧೯೯೪

"ಜಾನಪದ" ಕರ್ನಾಟಕದಲ್ಲಿ ಹೊಸ ಅಧ್ಯಯನಕ್ಷೇತ್ರ. ಕನ್ನಡ ಸಾಹಿತ್ಯದ ಭಾಗವಾಗಿ ಜನಪದ ಸಾಹಿತ್ಯವನ್ನು ಅಭ್ಯಾಸ ಮಾಡುತ್ತ ಬಂದ ಕನ್ನಡ ಅಧ್ಯಾಪಕರು, ಸಹಜವಾಗಿಯೇ ಈ ಹೊಸ ಕ್ಷೇತ್ರವನ್ನು ಮೊದಲು ಪ್ರವೇಶಿಸಿದರು. ಇವರಲ್ಲಿ ಗಂಭೀರ ಅಧ್ಯಯನದವರ ಸಂಖ್ಯೆ ವಿರಳ. ಈ ವಿರಳ ವಿದ್ವಾಂಸರದಲ್ಲಿ ಡಾ. ಎಸ್. ಪಿ. ಪದ್ಮಪ್ರಸಾದ್ ಅವರೂ ಒಬ್ಬರಾಗಿದ್ದಾರೆ.

ಡಾ. ಪದ್ಮಪ್ರಸಾದ್, ಅಭ್ಯಾಸ-ಆಲೋಚನೆಗಳನ್ನು ತುಂಬಿಕೊಂಡಿರುವ ತಣ್ಣನೆಯ ವಿದ್ವಾಂಸ. ಶಿಷ್ಟಪದ-ಜನಪದಗಳು ಪರಸ್ಪರ ಪೂರಕವೆಂಬ ಆತ್ಯಂತಿಕ ಸತ್ಯವನ್ನು ಅರ್ಥಮಾಡಿಕೊಂಡಿರುವ ಕಾರಣ, 'ಗ್ರಂಥಾಧ್ಯಯನ', 'ಕ್ಷೇತ್ರಾಧ್ಯಯನ'ಗಳಲ್ಲಿ ನಿರಂತರ ತೊಡಗಿಕೊಂಡಿರುವ ವೈಶಿಷ್ಟ್ಯ ಇವರದಾಗಿದೆ. ಇವುಗಳಲ್ಲಿ ಕ್ಷೇತ್ರಾಧ್ಯಯನಕ್ಕೆ ಉತ್ತಮ ನಿದರ್ಶನವೆನಿಸಿದೆ, ಈ "ಮಳೆ : ಒಂದು ಜಾನಪದೀಯ ಅಧ್ಯಯನ."

"ಜೀವನ" ಎನ್ನುವುದು ನೀರಿಗೆ ಇನ್ನೊಂದು ಹೆಸರು. ಇದು ನೀರಿನ ಮಹತ್ವವನ್ನು ಧ್ವನಿಸುವ ಹೆಸರು. ಈ ಮಹತ್ವ ಕಾರಣವಾಗಿ ಭೂತಪಂಚಕಗಳಲ್ಲಿ ಪರಿಗಣಿತವಾಗಿರುವ ಅದು, ಮಾನವ ಸಂಸ್ಕೃತಿಯನ್ನು ನಿಯಂತ್ರಿಸುವಲ್ಲಿ ಬಹು ದೊಡ್ಡ ಪಾತ್ರವಹಿಸುತ್ತ ಬಂದಿದೆ. ಸಿಂಧೂನದಿ ಸಂಸ್ಕೃತಿ, ನೈಲ್‌ನದಿ ಸಂಸ್ಕೃತಿಯೆಂದು ಮಾನವ ಸಂಸ್ಕೃತಿಯನ್ನು ವಿದ್ವಾಂಸರು ಗುರುತಿಸುವುದು, ಈ ಕಾರಣಕ್ಕಾಗಿ.

ಭಾರತೀಯರು ನೀರನ್ನು ದೇವಮಾತೃಕ, ನದೀಮಾತೃಕ ಹೆಸರಿನಲ್ಲಿ ವರ್ಗೀಕರಿಸುತ್ತಿದ್ದು, ಇವುಗಳ ಬಗೆಗೆ ಅವರು ಅಗಾಧ ಪರಿಭಾವನೆಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಇಲ್ಲಿ ದೇವಮಾತೃಕವೆನ್ನುವುದೇ ಮಳೆ. ಡಾ. ಪದ್ಮಪ್ರಸಾದ್ ಅವರ ಈ ಕೃತಿ, ಮಳೆಯನ್ನು ಕುರಿತು ನಂಬಿಕೆ-ಆಚರಣೆ ಪಾತಳಿಯಲ್ಲಿ ಮತ್ತು ಐತಿಹ್ಯ-ಪುರಾಣ ಪಾತಳಿಯಲ್ಲಿ ನಡೆಸಿದ ಅಧ್ಯಯನವಾಗಿದೆ.

ಸಮೃದ್ಧ ಸಾಮಗ್ರಿ, ಸಮರ್ಪಕ ವರ್ಗೀಕರಣ, ವೈಜ್ಞಾನಿಕ ನಿರೂಪಣೆಗಳು ಉತ್ತಮ ಸಂಶೋಧನೆಯ ಮುಖ್ಯ ಲಕ್ಷಣಗಳಾಗಿವೆ. ಈ ಲಕ್ಷಣದ ಅನೇಕ ಅಂಶಗಳನ್ನೊಳಗೊಂಡಿದೆ, "ಮಳೆ : ಒಂದು ಜಾನಪದೀಯ ಅಧ್ಯಯನ."

ಜಾನಪದ ಅಧ್ಯಯನ, ಕ್ಷೇತ್ರಕಾರ್ಯವನ್ನು ಅಪೇಕ್ಷಿಸುತ್ತದೆ. ಈ ಕೃತಿಯ ಮುಖ್ಯ ಹೂರಣವೆಂದರೆ ಕರ್ನಾಟಕ ವ್ಯಾಪ್ತಿಯಲ್ಲಿ ನಡೆಸಿದ ಪ್ರತ್ಯಕ್ಷ-ಪರೋಕ್ಷ ಕ್ಷೇತ್ರ ಕಾರ್ಯ ಮತ್ತು ಕ್ಷೇತ್ರಕಾರ್ಯ ನಡೆಸಿ ಅನ್ಯರಾಜ್ಯ, ಅನ್ಯರಾಷ್ಟ್ರಗಳ ವಿದ್ವಾಂಸರು ಸ್ಥಾಪಿಸಿಧ ವಿಚಾರಗಳ ಬಳಕೆ. ಇದರಿಂದ ನೇರವಾಗಿ ಕರ್ನಾಟಕವನ್ನು ಗಮನಿಸುವ

ಈ ಕೃತಿ, ಭಾರತದ ಮತ್ತು ಜಗತ್ತಿನ ಅನೇಕ ಭಾಗಗಳ ಅಧ್ಯಯನವನ್ನೂ ಒಳಗು ಮಾಡಿಕೊಂಡು, ಮಳೆಯ ಬಗೆಗಿನ ನಮ್ಮ ಜಾನಪದ ತಿಳಿವಳಿಕೆಯನ್ನು ವಿಸ್ತಾರಗೊಳಿಸುತ್ತದೆ.

ಸಂಗ್ರಹಿಸಿದ ಆಕರವನ್ನು ಸಮರ್ಪಕವಾಗಿ ವರ್ಗೀಕರಿಸಿಕೊಂಡರೆ ಅಧ್ಯಯನವನ್ನು ಸರಿಯಾದ ದಾರಿಯ ಮೇಲೆ ನಿಲ್ಲಿಸಿದಂತೆ. ಈ ದೃಷ್ಟಿಯಿಂದ ಆರಂಭದ 'ಪ್ರಸ್ತಾವನೆ', ಅಂತ್ಯದ 'ಕೊನೆಯ ತುಂತುರು'ಗಳ ನಡುವೆ ಒಟ್ಟು ವಿಷಯವನ್ನು ಆರು ಅಧ್ಯಾಯಗಳಲ್ಲಿ ಸರಿಯಾಗಿ ಹಂಚಿಹಾಕಿದ್ದಾರೆ. ಇಲ್ಲಿ ಮಳೆ ಕರೆಯುವ ಆಚರಣೆಗಳು-ಮಳೆ ತಡೆಯುವ ಆಚರಣೆಗಳು ಒಂದು ಬಗೆಯ ಮುಖ್ಯವರ್ಗವಾದರೆ, ಮಳೆ ಆಚರಣೆಗಳ ವಿಶ್ಲೇಷಣೆ - ಮಳೆ ನಂಬಿಕೆಗಳ ವಿಶ್ಲೇಷಣೆ ಇನ್ನೊಂದು ಬಗೆಯ ಮುಖ್ಯವರ್ಗವಾಗಿದೆ. ಮಳೆಯ ಲೆಕ್ಕಾಚಾರದ ಕೆಲವು ಅಂಶಗಳು, ಕನ್ನಡ ಜನಪದಗೀತೆಗಳಲ್ಲಿ ಮಳೆ - ಎಂಬಿವು ಪೂರಕವರ್ಗದಂತೆ ಅಳವಟ್ಟಿವೆ. ಸಂಶೋಧಕನಿಗಿರಬೇಕಾದ ಶಾಸ್ತ್ರಶಿಸ್ತು ಈ ವರ್ಗೀಕರಣದಲ್ಲಿ ಎದ್ದು ತೋರುತ್ತದೆ.

ವೈಜ್ಞಾನಿಕ ನಿರೂಪಣೆಯೆನ್ನುವುದು ವಸ್ತುವಿವೇಚನೆ, ಭಾಷಾನಿರ್ವಹಣೆಗಳನ್ನು ಮೇಳವಿಸಿಕೊಂಡು ಮುಂದುವರಿಯುವ ಕ್ರಿಯೆಯಾಗಿದೆ. ಮೂಲತಃ ಸಂಯಮಪ್ರಧಾನ ವಿದ್ವಾಂಸರಾಗಿರುವುದರಿಂದ ಡಾ. ಪದ್ಮಪ್ರಸಾದ್ ಅವರು ಈ ಕೃತಿಯಲ್ಲಿ ನಡೆಸಿದ ವಿಷಯವಿನ್ಯಾಸರೀತಿ ಗೊಂದಲರಹಿತವಾಗಿದೆ. ಮಳೆ ಕರೆಯುವ ಆಚರಣೆಗಳು, ಮಳೆ ತಡೆಯುವ ಆಚರಣೆಗಳು ಎಂದು ವಿಷಯವನ್ನು ಗುರುತಿಸಿಕೊಂಡುದು, ಜಾನಪದ ಚಟುವಟಿಕೆಯು ವೈಜ್ಞಾನಿಕ ವಿಚಾರ-ವೈಜ್ಞಾನಿಕ ವಿಧಾನಗಳಿಗೆ ಬದಲು ನಂಬಿಕೆ-ಆಚರಣೆಗಳನ್ನು ಅವಲಂಬಿಸಿರುವುದರಿಂದ ಮಳೆಯ ಅಧ್ಯಯನವನ್ನು ನಂಬಿಕೆ-ಆಚರಣೆಗಳ ನೆಲೆಯಲ್ಲಿ ನಡೆಸಿದುದು, ಡಾ. ಪದ್ಮ ಪ್ರಸಾದ್ ಅವರ ಪಾರಂಪರಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ. ಇಲ್ಲಿ "ಮಳೆ ಕರೆಯುವ ಆಚರಣೆ" ೮೫ ಪುಟ, "ಮಳೆ ತಡೆಯುವ ಆಚರಣೆ" ೮ ಪುಟಗಳನ್ನು ವ್ಯಾಪಿಸಿವೆ. ಜಗತ್ತಿನಲ್ಲಿ ಯಾವ ಕಾಲಕ್ಕೂ ಅನಾವೃಷ್ಟಿ ಹೆಚ್ಚು, ಅತಿವೃಷ್ಟಿ ಕಡಿಮೆಯೆಂಬುದನ್ನು ಇದು ಸೂಚಿಸುತ್ತದೆ. ಮಾನವ ಜೀವನ ಇತಿಹಾಸದಲ್ಲಿ ಬೇಟೆಸಂಸ್ಕೃತಿ ಮೊದಲ ಹಂತ, ಕೃಷಿಸಂಸ್ಕೃತಿ ಎರಡನೆಯ ಹಂತ. ಇವುಗಳಲ್ಲಿ ಕೃಷಿಸಂಸ್ಕೃತಿಯು ಪ್ರಧಾನವಾಗಿ ಮಳೆಯನ್ನಾಶ್ರಯಿಸಿದುದಾಗಿದೆ. ಹೀಗಾಗಿ ಮಳೆಯನ್ನು ಕುರಿತ ಈ ಅಧ್ಯಯನ ಪದೇ ಪದೇ ಕೃಷಿ ನೆಲೆಯಲ್ಲಿಯೇ ನಡೆದುದು ಸಹಜವೆನಿಸಿದೆ.

ಎಷ್ಟೇ ವೈಜ್ಞಾನಿಕವೆಂದರೂ ವ್ಯಾಖ್ಯಾನವೆನ್ನುವುದು ವ್ಯಕ್ತಿನಿಷ್ಠವಾದುದು. ಅದು ಕೆಲವೊಮ್ಮೆ ಅಪವ್ಯಾಖ್ಯಾನವಾಗುವುದೂ ಉಂಟು. ಆದುದರಿಂದ ವ್ಯಾಖ್ಯಾನದ ಹೊಣೆಯನ್ನು ಓದುಗರಿಗೇ ಬಿಟ್ಟುಕೊಟ್ಟು, ಈ ಕೃತಿಯನ್ನು ಆಕರ ಸಂಗ್ರಹವೆನಿಸಿ, ಆಕರ ವಿಶ್ಲೇಷಣಮುಖಿಯಾಗಿ ರೂಪಿಸಿದುದು, ವಿಷಯ ದೃಷ್ಟಿಯಿಂದ ತುಂಬ ಸುರಕ್ಷಿತ ವಿಧಾನವೆನಿಸಿದೆ.

ಈ ಸಣ್ಣ ಪುಸ್ತಕದ ಹಿಂದೆ ದೊಡ್ಡ ಶ್ರಮವಿದೆ, ಸಮಗ್ರ ಶಿಸ್ತು ಇದೆ; ಹೊಸ ವಸ್ತುವಿವೇಚನೆಯ ಶ್ರೇಯಸ್ಸೂ ಇದೆ. ಈ ಕಾರಣಕ್ಕಾಗಿ ಡಾ. ಪದ್ಮಪ್ರಸಾದ್ ಅವರನ್ನು ಅಭಿನಂದಿಸುತ್ತೇನೆ.

ಎಸ್. ಪಿ. ಪದ್ಮಪ್ರಸಾದ, ತುಮಕೂರು.

ಆಕರ : ಮಾರ್ಗ ಸಂಪುಟ–೬

■■

೧೬೩

ಕುಮಾರವ್ಯಾಸನ ರೂಪಕಗಳು

೧೯೯೫

"ಕುಮಾರವ್ಯಾಸ ಭಾರತ" ಕನ್ನಡದ ಬಹುಮುಖ್ಯ ಕೃತಿಯಾಗಿರುವಂತೆ, "ಕುಮಾರವ್ಯಾಸನ ರೂಪಕಗಳು : ಒಂದು ಅಧ್ಯಯನ" ಕನ್ನಡದ ಬಹುಮುಖ್ಯ ಪಿಎಚ್.ಡಿ. ಪ್ರಬಂಧವಾಗಿದೆ. ಇದಕ್ಕೆ ಕಾರಣ ಯಾವುದೇ ವಿಷಯವನ್ನು ಸರಿಯಾಗಿ ಪರಿಭಾವಿಸಿ, ಸರಿಯಾಗಿ ಪ್ರತಿಪಾದಿಸುವುದು ಡಾ. ಶ್ರೀನಿವಾಸ ಕುಲಕರ್ಣಿ ಅವರ ಚೈತನ್ಯದ ಎರಡು ತುದಿಗಳಾಗಿರುವುದು. ಕುಮಾರವ್ಯಾಸನ ರೂಪಕಗಳ ಅಭ್ಯಾಸದಲ್ಲಿ ಈ ಎರಡೂ ಪ್ರಜ್ಞೆಗಳನ್ನು ಪೂರ್ಣಪ್ರಮಾಣದಲ್ಲಿ ದುಡಿಸಿರುವ ಅವರನ್ನು 'ಮುನ್ನುಡಿ'ಗೆ ಮೊದಲು ಅಭಿನಂದಿಸುತ್ತೇನೆ.

ಕನ್ನಡದಲ್ಲಿ ಸಾಹಿತ್ಯಕೃತಿಗಳನ್ನು ಕುರಿತು ಪಿಎಚ್.ಡಿ. ಪ್ರಬಂಧಗಳು ಮೂರು ಬಗೆಗಳಲ್ಲಿ ಆಕಾರಪಡೆಯುತ್ತಲಿವೆ: ಕೃತಿಯ ಭಾಷಿಕ ಅಧ್ಯಯನ, ಸಾಹಿತ್ಯಿಕ ಅಧ್ಯಯನ, ಮತ್ತು ಸಾಹಿತ್ಯೇತರ ಅಧ್ಯಯನ. ಪ್ರಸ್ತುತ ಪ್ರಬಂಧ ಸಾಹಿತ್ಯಿಕ ಅಧ್ಯಯನಕ್ಕೆ ಸಂಬಂಧಪಟ್ಟರೂ ಇದಕ್ಕೆ ಕನ್ನಡದಲ್ಲಿ ಒಂದು ಪ್ರತ್ಯೇಕ ಸ್ಥಾನ ಸಲ್ಲುತ್ತದೆ. ಏಕೆಂದರೆ ಇದು ಒಬ್ಬ ಕವಿಯ ಸಾಹಿತ್ಯಭಾಷೆಯ ಅಂಗವಾದ 'ರೂಪಕ ವಿಧಾನ'ದ ಅಭ್ಯಾಸವಾಗಿದೆ.

ದೊಡ್ಡ ಕೃತಿಯಾಗಿರುವ ಕುಮಾರಸವ್ಯಾಸ ಭಾರತದ ಅಧ್ಯಯನ ಈ ವರೆಗೆ ದೊಡ್ಡ ಪ್ರಮಾಣದಲ್ಲಿಯೇ ಉಪೇಕ್ಷೆಗೆ ಗುರಿಯಾಗಿದೆ. ಅದರ ದೊಡ್ಡ ಗಾತ್ರವೂ ಇದಕ್ಕೆ ಕಾರಣವಾಗಿರುವಂತೆ ತೋರುತ್ತದೆ. ಹೀಗಿದ್ದೂ ನಡೆದ ಒಂದೆರಡು ಪ್ರಯತ್ನಗಳಿಗಿಂತ ಪ್ರಸ್ತುತ ಪ್ರಬಂಧದ ನೆಲೆಯೇ ಬೇರೆ, ನಿಲವೇ ಬೇರೆಯಾಗಿದೆ.

ಈ ಪ್ರಬಂಧದ ವಸ್ತು ತುಂಬ ಅಮೂರ್ತವಾದುದು. 'ಸೌಂದರ್ಯ ಭೂಮಿಕೆ'ಯಲ್ಲಿ ಕೇಂದ್ರೀಕೃತಗೊಂಡು, 'ರೂಪಕ ಸೌಂದರ್ಯ'ದ ಗ್ರಹಿಕೆ ಮತ್ತುಅದರ ಅರ್ಥವಿಸುವಿಕೆಗಳಲ್ಲಿ ಬಿಚ್ಚಿಕೊಳ್ಳುವುದು ಪ್ರಬಂಧದ ಒಂದು ಮುಖವಾಗಿದೆ. ಅವುಗಳ ಆನ್ವಯಿಕ ಅಧ್ಯಯನವು ಇನ್ನೊಂದು ಮುಖವಾಗಿದೆ.

ಕುಮಾರವ್ಯಾಸ ಭಾರತ ಅಂಜಿಕೆ ಹುಟ್ಟಿಸುವಷ್ಟು ವಿಸ್ತಾರವಾದ ಕೃತಿ. ಸಾವಿರ ವರ್ಷಗಳ ಸಾಹಿತ್ಯ ಪರಂಪರೆಯಲ್ಲಿ ಗುಣ-ಗಾತ್ರ ಎರಡರಲ್ಲಿಯೂ ಕನ್ನಡದ ಯಾವುದೇ ಕೃತಿಗಿಂತ ದೊಡ್ಡದಾಗಿರುವ ನಿರ್ಮಾಣವದು. ಈ ಕೃತಿಯನ್ನು ಇಡಿಯಾಗಿ ಓದುವುದು, ಸರಿಯಾಗಿ ಅರ್ಥಮಾಡಿಕೊಳ್ಳುವುದು ಇಲ್ಲಿನ ಮೊದಲ ಸವಾಲು. ಡಾ. ಕುಲಕರ್ಣಿಯವರು ಈ ಸವಾಲನ್ನು ಸರಿಯಾಗಿ ಸ್ವೀಕರಿಸಿ, ಈ ಕೃತಿಯ ಮೂಲೆ ಮೂಲೆಗಳನ್ನು ಹೊಕ್ಕು ಮನನ ಮಾಡಿಕೊಂಡಿರುವುದಕ್ಕೆ ಇಲ್ಲಿಯ ಉದ್ಧರಣೆಗಳು, ಪ್ರತಿಪಾದಿತ ವಿಷಯಗಳು ಸಾಕ್ಷಿ ನುಡಿಯುತ್ತವೆ.

ಹೀಗೆ ವಾಚನವಶೀಕರಣದ ಬಳಿಕ ಮಾಡಬೇಕಾದುದು, ಈ ಕೃತಿ ಸಮುದ್ರದಲ್ಲಿ ಅಂತರ್ಗತವಾಗಿರುವ ರೂಪಕ ತರಂಗಗಳ ಶೋಧ. ಕುಮಾರವ್ಯಾಸನಲ್ಲಿ ಯಾವುದು ರೂಪಕ? ಯಾವುದು ರೂಪಕವಲ್ಲ? ಎಂದು

ಗುರುತಿಸುವುದು ತುಂಬ ಕಷ್ಟದ ಕೆಲಸ. ಈ ಹಿಂದೆ ಅನೇಕ ಜನ ವಿದ್ವಾಂಸರು ಈ ಕೆಲಸದಲ್ಲಿ ಎಡವಿರುವುದನ್ನು ನೋಡಿದರೆ, ಈ ಗುರುತಿಸುವಿಕೆಯ ಜಟಿಲತೆ ಇನ್ನೂ ಸ್ಪಷ್ಟವಾಗುತ್ತದೆ. ನೇರವಾಗಿ ಕುಮಾರವ್ಯಾಸನ ರೂಪಕ ಪ್ರಪಂಚದ ಮೇಲೆಯೇ ತಮ್ಮ ಸಮಸ್ತ ಚೈತನ್ಯವನ್ನು ಕೇಂದ್ರೀಕರಿಸಿರುವ ಕಾರಣ ಡಾ. ಕುಲಕರ್ಣಿಯವರು ರೂಪಕಗಳನ್ನು ದೂರ ಸರಿಸಿ, ಸಣ್ಣ-ದೊಡ್ಡ ಎಲ್ಲ ರೂಪಕಗಳನ್ನು ಸರಿಯಾಗಿ ಗುರುತಿಸಿ, ಇಲ್ಲಿ ಸಂಗ್ರಹಿಸಿದ್ದಾರೆ. ಕೊನೆಗೆ ಜೋಡಿಸಿರುವ ನೂರು ಪುಟಗಳ ಅನುಬಂಧ ಈ ಮಾತಿಗೆ ನಿದರ್ಶನವೆನಿಸಿದೆ.

ಹೀಗೆ ಸಂಗ್ರಹಿಸಿದ ರೂಪಕ ರಾಶಿ ಸಣ್ಣದೇನಲ್ಲ. ಇದು ಮಹಾಭಾರತದ ವಿಶ್ವರೂಪದರ್ಶನ, ಅಕ್ಷಯಾಂಬರ, ಅಕ್ಷಯಪಾತ್ರೆ ಸನ್ನಿವೇಶಗಳನ್ನು ನೆನಪಿಸುವಂತಹದು. ಒಂದು ಅಂದಾಜಿನ ಪ್ರಕಾರ ಈ ಸಂಖ್ಯೆ ಐದು ಸಾವಿರ. ಬಹುಶಃ ಜಗತ್ತಿನ ಯಾವ ಕವಿಯೂ ಇಷ್ಟು ಸಂಖ್ಯೆಯಲ್ಲಿ ರೂಪಕಗಳನ್ನು ಬಳಸಿಲ್ಲವೆಂದು ತೋರುತ್ತದೆ. ಈ ಮಹಾರಾಶಿಯನ್ನು ಕ್ರೋಡೀಕರಿಸುವುದಕ್ಕಿಂತ ವೈಜ್ಞಾನಿಕವಾಗಿ ವರ್ಗೀಕರಿಸುವುದು, ಆಮೂಲಾಗ್ರವಾಗಿ ವಿವೇಚಿಸುವುದು ಸುಲಭದ ಕೆಲಸವೇನಲ್ಲ.

ಕುಮಾರವ್ಯಾಸ ಭಾರತ ಮೂಲತಃ ಒಂದು ಕಥೆ. ಈ ಕಥೆಯನ್ನು ಕೃತಿಯನ್ನಾಗಿಸಿರುವಲ್ಲಿ, ದುಡಿದ ವಿನ್ಯಾಸಗಳು ಅನೇಕ. ಅವುಗಳಲ್ಲಿ 'ಭಾಷಾವಿನ್ಯಾಸ' ಮುಖ್ಯವಾದುದು. ಪದ್ಯಸಾಹಿತ್ಯಕ್ಕೆ ಬಂದರೆ ಈ ಭಾಷಾವಿನ್ಯಾಸಕ್ಕೆ 'ಅಲಂಕಾರ', ಹೆಚ್ಚಿನದಾಗಿ 'ಛಂದಸ್ಸು' ಎಂಬ ಎರಡು ನೆಲೆಗಳಿರುತ್ತದೆ. ಅಲಂಕಾರವೆನ್ನುವುದು ಮತ್ತೆ ಶಬ್ದಾಲಂಕಾರ, ಅರ್ಥಾಲಂಕಾರಗಳಲ್ಲಿ ಕವಲೊಡೆಯುತ್ತದೆ. ಈ ಮೂರು ಪರಿಪಾಕಗೊಳ್ಳುವಲ್ಲಿ ಪದ್ಯವು ಕಾವ್ಯದ ತಿರುವು ಪಡೆಯುತ್ತದೆ. ಈ ಕಲೆಯನ್ನು ಪರಮಾವಧಿ ಪ್ರಮಾಣದಲ್ಲಿ ಕೈವಶಿಸಿಕೊಂಡ ಕೆಲವೇ ಜನ ಕನ್ನಡ ಕವಿಗಳಲ್ಲಿ ಒಬ್ಬನಾಗಿದ್ದಾನೆ, ಕುಮಾರವ್ಯಾಸ.

ಕಾವ್ಯಕಟ್ಟುವಲ್ಲಿ ಅನುಕೂಲವಾಗಿ ಬರುವ ಈ ಅಂಶಗಳಲ್ಲಿ ಅರ್ಥಾಲಂಕಾರ ಮುಖ್ಯವಾದುದು. ಅರ್ಥದ ಮೂಲಕ ಕಾವ್ಯವನ್ನು ಅಲಂಕರಿಸುವುದು ಇದರ ಉದ್ದೇಶ. ಹೀಗೆ ಅಲಂಕೃತಿಸುವ ಅನೇಕ ಬಗೆಗಳಲ್ಲಿ "ರೂಪಕ ವಿಧಾನ" ತುಂಬ ಪರಿಣಾಮಕಾರಿಯಾದುದು. ಇದು ಅಲಂಕಾರ ಚಕ್ರವರ್ತಿನಿಯಾದ 'ಉಪಮೆ'ಯ ಘನೀಕೃತ ರೂಪ. ಅಂದರೆ ಉಪಮೇಯ ಇಲ್ಲಿ ಉಪಮಾನವಾಗಿ ಬಿಡುತ್ತದೆ. ಉಪಮೇಯ ಉಪಮಾನ ಲೋಕದಲ್ಲಿ ವ್ಯವಹರಿಸುತ್ತದೆ. ಇಂಥ ಅಲಂಕಾರದ ನಿರ್ವಹಣೆಯಲ್ಲಿ ಕುಮಾರವ್ಯಾಸ ಅನುಸರಿಸುವ ವಿಧಾನ, ಬಳಸುವ ವಸ್ತು, ಇದರಿಂದಾಗಿ ಕಾವ್ಯ ಕಳೆ ಕಟ್ಟಿರುವ ಬಗೆ, ಇತ್ಯಾದಿಗಳ ವಿವೇಚನೆ ಈ ಪ್ರಬಂಧದ ಪ್ರಾಣವಾಗಿದೆ.

ಕುಮಾರವ್ಯಾಸನಿಗೆ ರೂಪಕವೆನ್ನುವುದು ಕೇವಲ ಒಂದು ಅಲಂಕಾರವಲ್ಲ, ಅಭಿವ್ಯಕ್ತಿಯ ವಿಧಾನ. ಪ್ರಸ್ತುತ ನೆಲಗಟ್ಟಿನ ಮೇಲೆ ಈ ಪ್ರಬಂಧ ಕಟ್ಟಡ ನಿಂತುಕೊಂಡಿದೆ. ಇದನ್ನು ಕಟ್ಟುವಲ್ಲಿ ಪ್ರಾಚೀನ ಕಾವ್ಯ ಮೀಮಾಂಸಕರ ವರ್ಗೀಕರಣ ಸಾಲದೇ ಹೋಗುತ್ತದೆ. ಮತ್ತು ಅಪ್ರಯೋಜಕವೆನಿಸುತ್ತದೆ. ಹೀಗಾಗಿ ಇಲ್ಲಿ ಅಭ್ಯಾಸಿ ತಾನೇ ಕುಮಾರವ್ಯಾಸನ ಕಾವ್ಯಮೀಮಾಂಸಕನಾಗಬೇಕಾಗುತ್ತದೆ. ಡಾ. ಕುಲಕರ್ಣಿ ಅವರು ಅಂಥ ಒಬ್ಬ ತಾತ್ವಿಕ ಮತ್ತು ಆನ್ವಯಿಕ ಕಾವ್ಯಮೀಮಾಂಸಕನಂತೆ ಕೆಲಸಮಾಡಿದ್ದಾರೆ. ಇದರ ಫಲವಾಗಿ ಆ ಕೃತಿಯಲ್ಲಿಯ ರೂಪಕ ಸಂಪತ್ತನ್ನು ಸಾಂಪ್ರದಾಯಿಕ ರೂಪಕ, ಸರಳರೂಪಕ, ಸಂಯೋಜಿತ ರೂಪಕ, ಸಂಕೀರ್ಣರೂಪಕ, ಮೂಲಾರೂಪಕ, ಸರ್ವಾಂಗ ರೂಪಕ ಎಂದು ಮೊದಲಾಗಿ ಮಾಡಿಕೊಂಡ ವರ್ಗೀಕರಣ ತುಂಬ ವೈಜ್ಞಾನಿಕವಾಗಿದೆ. ವಿಷಯದ ಸರಿಯಾದ ವರ್ಗೀಕರಣ ಸರಿಯಾದ ಫಲಿತಾಂಶಕ್ಕೆ ದಾರಿಮಾಡಿಕೊಡುತ್ತದೆ. ಹೀಗಾಗಿ ಸಹಜವಾಗಿಯೇ ಇಲ್ಲಿಯ ಪ್ರತಿಯೊಂದು ರೂಪಕ ವಿಭಾಗದ ಲಕ್ಷಣ, ಪರಿಣಾಮಗಳನ್ನು ಸರಿಯಾಗಿ ಗ್ರಹಿಸಿ, ಕುಮಾರವ್ಯಾಸನಲ್ಲಿ ಅದು ಕೃತಾರ್ಥವಾಗಿರುವ ಬಗೆಯನ್ನು ನಿದರ್ಶನಗಳ ಮೂಲಕ ದಿಟ ಮಾಡಿ ತೋರಿಸಿದ್ದಾರೆ.

ಕುಮಾರವ್ಯಾಸ ರೂಪಕ ರಚಿಸುವುದಿಲ್ಲ, ಸೃಷ್ಟಿಸುತ್ತಾನೆ. ಸಂಕೀರ್ಣವಾಗಿ ಬೆಳೆಯವುದು, ಓದುಗರ ಶಕ್ತಿಗನುಸಾರವಾಗಿ ಅರ್ಥಗಳನ್ನು ದಾಟಿ ಬೆಳೆಯುವುದು ಅವನ ರೂಪಕಗಳ ವಿಶಿಷ್ಟ ಲಕ್ಷಣವೆನಿಸಿದೆ. ಉಭಯ ಪದನಿಷ್ಠ ನಾಮರೂಪಕ, ಕ್ರಿಯಾರೂಪಕಗಳಲ್ಲಿ ನಿಲ್ಲದೆ "ಪಡುವಣ ಶೈಲ ವಿಪುಲ ಸ್ತಂಭ ದೀಪಿಕೆ" ಎಂಬಂಥ ವಿಸ್ತಾರಿತ ನಾಮರೂಪಕ, "ಮುನಿಯ ಮಾತಿನ ಬಲೆಗೆ ಸಿಲುಕಿತು ಜನಪತಿಯ ಚೈತನ್ಯಮೃಗ" ಎಂಬಂಥ ವಿಸ್ತೃತ ಕ್ರಿಯಾರೂಪಕಗಳನ್ನು ಕಟ್ಟಿಕೊಡುವುದು ಈ ಕವಿಯ ಮುಖ್ಯ ಗುಣವಾಗಿದೆ. ಈ ಎರಡು ಬಿಂದುಗಳ ನಡುವೆ ಸಂಭವಿಸುವ ರೂಪಕ ರೂಪಿಕೆ (Metoporical Pattern) ಹತ್ತಾರು ಅಲ್ಲ, ನೂರಾರು. ಇವು ಉತ್ಪಾದಿಸಿರುವ ಉದಾಹರಣೆಗಳು ನೂರಾರು ಅಲ್ಲ, ಸಾವಿರಾರು. ಇಂಥ ಅರಣ್ಯವನ್ನು ಭೇದಿಸುವ, ಶೋಧಿಸುವ, ವರ್ಗೀಕರಿಸುವ, ರೂಪಗ್ರಹಿಸುವ, ಮೌಲ್ಯ ನಿರ್ಧರಿಸುವ ಮೊದಲಾದ ವಿದ್ವತ್‌ಕ್ರಿಯೆಗಳನ್ನು ಈ ಪ್ರಬಂಧದ ಪುಟ ಪುಟಗಳಲ್ಲಿ ಕಾಣಬಹುದು.

ಈ ಅಲಂಕಾರಗಳನ್ನು ಕೇವಲ ಅಲಂಕಾರಗಳನ್ನಾಗಿ, ಅಭಿವ್ಯಕ್ತಿಯ ವಾಹಕಗಳನ್ನಾಗಿ ಅಭ್ಯಸಿಸದೆ, ಅವು ಹುದುಗಿಸಿಕೊಂಡಿರುವ ಸಂಸ್ಕೃತಿಯನ್ನು ತೋರಿಸಿಕೊಡುವ ಆಳಕ್ಕೂ ಈ ಪ್ರಬಂಧ ಇಳಿದಿದೆ. ಅಲಂಕಾರಗಳ ಮೂಲಕ ಸಂಸ್ಕೃತಿಯ ಗ್ರಹಿಕೆಯೆನ್ನುವುದೇ ಇಲ್ಲಿಯ ಹೊಸಬಗೆಯ ಅಧ್ಯಯನವಾಗಿದೆ.

ಇಲ್ಲಿ ಅಭ್ಯಾಸದಷ್ಟೇ ಪರಿಣಾಮಕಾರಿಯಾಗಿದೆ ಅಭಿವ್ಯಕ್ತಿ. ವಿಷಯ ಸ್ಪಷ್ಟವಾದಷ್ಟೂ ಅಭಿವ್ಯಕ್ತಿಗೆ ಸರ್ವಸಮಗ್ರತೆ ಪ್ರಾಪ್ತವಾಗುತ್ತದೆ. ಈ ಮಾತು ಸಾರ್ಥಕವೆನಿಸುವಂತೆ ಡಾ. ಕುಲಕರ್ಣಿಗೆ ಅವರು ಬರೆವಣಿಗೆಯನ್ನು ಪೂರೈಸಿದ್ದಾರೆ.

ಇದಕ್ಕೆ ಪೂರಕವೆಂಬಂತೆ ಈ ಪ್ರಬಂಧದಲ್ಲಿ ಚರ್ಚಿಸಲಾದ ಮತ್ತು ಚರ್ಚೆಗೆ ಹೊರಗುಳಿದ ಕುಮಾರವ್ಯಾಸನ ಎಲ್ಲ ರೂಪಕಗಳನ್ನು ಅನುಬಂಧ ರೂಪದಲ್ಲಿ ಕೊಡಲಾಗಿದೆ. ಈ ಸೂಚಿಕ್ರಮ ಶ್ರಮ ಮತ್ತು ತಾಳ್ಮೆಗಳನ್ನು ಅಪೇಕ್ಷಿಸುತ್ತದೆ; ಬೆವರನ್ನು ಬಯಸುತ್ತದೆ. ಇದರ ಫಲವಾಗಿ ಕನ್ನಡದಲ್ಲಿ ಮೊದಲ ಸಲ ಇಂಥ ಸೂಚಿ ಲಭ್ಯವಾಗಿದೆಯೆಂದೇ ಹೇಳಬೇಕು.

ಹೀಗೆ ಅರ್ಥಪೂರ್ಣ ಅನೇಕ ಆಯಾಮಗಳನ್ನೊಳಗೊಂಡ ಈ ಕೃತಿ, ಕನ್ನಡ ಲೋಕಕ್ಕೆ ವಿಶೇಷ ಕಾಣಿಕೆಯಾಗಿದೆ. ಡಾ. ಕುಲಕರ್ಣಿ ಅವರಲ್ಲಿ ಹರಿತ ವಿಮರ್ಶನ ಪ್ರಜ್ಞೆಯಿದೆ, ಪ್ರತಿಪಾದನ ಶಕ್ತಿಯಿದೆ. ಇವುಗಳನ್ನು ದುಡಿಸಿಕೊಂಡು ಅವರು ಇನ್ನೂ ಉತ್ತಮ ಕೃತಿಗಳನ್ನು ಕನ್ನಡಕ್ಕೆ ನೀಡಲೆಂದು ಹಾರೈಸುತ್ತೇನೆ.

ಶ್ರೀನಿವಾಸ ಕುಲಕರ್ಣಿ, ಬೆಳಗಾವಿ.

ಆಕರ : ಮಾರ್ಗ ಸಂಪುಟ–೬

■■

೧೬೪

ಕುರಗೋಡ ಸಿಂದರು : ಒಂದು ಅಧ್ಯಯನ

೧೯೯೫

ಇತಿಹಾಸ ಮತ್ತು ಸಾಹಿತ್ಯ ಇಂದು ವಿಭಿನ್ನ ಕ್ಷೇತ್ರಗಳಾಗಿದ್ದರೂ ಪ್ರಾಚೀನ ಕರ್ನಾಟಕದಲ್ಲಿ ಸಾಹಿತ್ಯವೆನ್ನುವುದು ಬಹಳಷ್ಟು ಸಲ ಇತಿಹಾಸವನ್ನು ಪ್ರಕಟಿಸುವ ಒಂದು ಮಾಧ್ಯಮವಾಗಿದ್ದಿತು. ಈ ಮೇರೆಗೆ 'ಕುಮಾರರಾಮನ ಸಾಂಗತ್ಯ'ದಂತಹ ಪ್ರತ್ಯಕ್ಷ ಇತಿಹಾಸ ಕಾವ್ಯಗಳಲ್ಲದೆ 'ವಿಕ್ರಮಾರ್ಜುನ ವಿಜಯ'ದಂತಹ ತಗುಳ್ಚಿ ಹೇಳಿದ ಇತಿಹಾಸಕಾವ್ಯಗಳೂ ನಮ್ಮಲ್ಲಿ ಹುಟ್ಟಿಕೊಂಡಿವೆ. ಈ ಶ್ರೇಣಿಯಲ್ಲಿ ಇನ್ನೊಂದು ಬಗೆಯ ಇತಿಹಾಸಕಾವ್ಯವೆಂದರೆ ಪುರಾಣ. ವರ್ಧಮಾನ ಪುರಾಣ, ಸಿದ್ಧರಾಮ ಪುರಾಣಗಳು ಕಾವ್ಯಕೃತಿಗಳಾಗಿದ್ದರೂ ಇವು ಪವಾಡರೂಪದ ಇತಿಹಾಸಗಳೇ ಆಗಿವೆ. ಇಂಥ ಕೃತಿಗಳನ್ನು ಬಿಟ್ಟರೂ ಒಂದು ಉತ್ತಮಕಾವ್ಯ ತನ್ನ ಕಾಲದ ಇತಿಹಾಸವನ್ನು ಕಲಾತ್ಮಕವಾಗಿ ದಾಖಲಿಸುತ್ತದೆ. ಕನ್ನಡದಲ್ಲಿ 'ಮೋಹನ ತರಂಗಿಣಿ' ಮೊದಲಾದವುಗಳಲ್ಲಿ ಇಂಥ ಇತಿಹಾಸದ ಚಿತ್ರವಿರುವುದನ್ನು ಇಲ್ಲಿ ನೆನೆಯಬಹುದು.

ಈ ರೀತಿ ಕಾವ್ಯಗಳು ಇತಿಹಾಸದ ನಂಟನ್ನು ಬೆಳೆಸಿಕೊಂಡು ಬಂದಿದ್ದು, ಇದಕ್ಕೆ ಪೂರಕವೆನ್ನುವಂತೆ ಇತಿಹಾಸದ ದಾಖಲೆಗಳಾದ ಶಾಸನಗಳೂ ಸಾಹಿತ್ಯದ ನಂಟನ್ನು ಬೆಳೆಸಿಕೊಂಡು ಬಂದಿವೆ. ಹೀಗೆ ನಮ್ಮ ಸಾಹಿತ್ಯ ಸಾಮಗ್ರಿಯಲ್ಲಿ ಇತಿಹಾಸವಿದೆ. ಇತಿಹಾಸ ಸಾಮಗ್ರಿಯಲ್ಲಿ ಸಾಹಿತ್ಯವಿದೆ. ಇಂಥ ಎರಡೂ ಸಾಮಗ್ರಿಯನ್ನು ಓದಿ ಬೆಳೆಯುತ್ತಾನೆ, ಕನ್ನಡ ಸಾಹಿತ್ಯದ ವಿದ್ಯಾರ್ಥಿ. ಈ ರೀತಿ ಬೆಳೆದ ಸಾಹಿತ್ಯದ ವಿದ್ಯಾರ್ಥಿ ಡಾ. ಚನ್ನಬಸವಯ್ಯ ಹಿರೇಮಠ ಅವರು "ಕುರುಗೋಡು ಸಿಂದರು: ಒಂದು ಅಧ್ಯಯನ" ಪಿಎಚ್.ಡಿ. ಪ್ರಬಂಧವನ್ನು ರೂಪಿಸಿ, ಇತಿಹಾಸ ಪ್ರೇಮಿಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಇತ್ತೀಚಿನ ವರೆಗೂ ಇತಿಹಾಸವೆಂದರೆ ರಾಜಕೀಯ ಇತಿಹಾಸ, ಅದರಲ್ಲಿಯೂ ಗಣ್ಯರಾಜಮನೆತನಗಳ ಇತಿಹಾಸವೆಂಬ ದೃಷ್ಟಿಕೋನ ಬೆಳೆದು, ಅಗಣ್ಯ ರಾಜಮನೆತನಗಳು ಅಲಕ್ಷ್ಯಕ್ಕೆ ಗುರಿಯಾಗುತ್ತ ಬಂದಿವೆ. ಇಂದಿನದು ರಾಜಸತ್ತಾಯುಗವಲ್ಲ. ಪ್ರಜಾಸತ್ತಾಯುಗ. ಹೀಗಾಗಿ ಇಂದು ನಮ್ಮ ಇತಿಹಾಸದ ಅಧ್ಯಯನ ರಾಜರಿಂದ ಪ್ರಜೆಗಳತ್ತ ಸರಿಯುತ್ತಲಿದೆ. ಶಿಷ್ಟಸಾಹಿತ್ಯದೊಂದಿಗೆ ಜನಪದಸಾಹಿತ್ಯದ ಕಡೆಗೆ ಹರಿದ ನಮ್ಮ ಗಮನವೇ ಇದಕ್ಕೆ ಸಾಕ್ಷಿಯಾಗಿದೆ. ಸಾಮ್ರಾಟರ ಅಧ್ಯಯನದ ಜೊತೆಗೆ ಸಾಮಂತರ ಅಧ್ಯಯನದ ಕಡೆಗೂ ಇಂದು ಅಭ್ಯಾಸಿಗಳು ಗಮನ ಹರಿಸುತ್ತಲಿರುವುದು, ಈ ಕಾರಣಕ್ಕಾಗಿ. ಈ ಮಾತಿಗೆ ಒಂದು ಉತ್ತಮ ಉದಾಹರಣೆಯೆನಿಸಿದೆ ಪ್ರಸ್ತುತ ಕೃತಿ.

ಕರ್ನಾಟಕದಲ್ಲಿ ಇಂಥ ಅಧ್ಯಯನಕ್ಕೆ ಮುಖ್ಯ ಆಧಾರ ದಾಖಲೆಗಳು ಮತ್ತು ಸಾಹಿತ್ಯಕೃತಿಗಳು. ಇವೆರಡೂ ನಮ್ಮಲ್ಲಿ ಪೂರ್ಣಪ್ರಮಾಣದಲ್ಲಿ ಬೆಳಕಿಗೆ ಬಂದಿಲ್ಲ. ದಾಖಲೆಯ ಭಾಗವೆನಿಸುವ ಶಾಸನಗಳ ಪ್ರಕಟನಕಾರ್ಯವಂತೂ ತುಂಬ ಶೋಚನೀಯವೆನಿಸಿದೆ. ಕೇಂದ್ರ, ರಾಜ್ಯ ಪುರಾತತ್ವ ಇಲಾಖೆಗಳು ಅಸ್ತಿತ್ವಕ್ಕೆ ಬಂದು ಒಂದು ನೂರು ವರ್ಷ ಗತಿಸಿದವು. ಹೆಚ್ಚಿನದಾಗಿ ರಾಜ್ಯದ ತುಂಬ ಆರೆಂಟು ವಿಶ್ವವಿದ್ಯಾಲಯಗಳು, ಮೂರು-ನಾಲ್ಕು ಸಾರ್ವಜನಿಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಇಷ್ಟಿದ್ದೂ ಶಾಸನ-ಹಸ್ತಪ್ರತಿ-ಪತ್ರ ದಾಖಲೆಗಳು ನಿರೀಕ್ಷಿಸಿದ ಪ್ರಮಾಣದಲ್ಲಿ ಪ್ರಕಟವಾಗಲಿಲ್ಲ. ಈ ಸಾಮಗ್ರಿಗಳು ಓಡುತ್ತ ವಿನಾಶದ ಹಾದಿ ಹಿಡಿದಿವೆ; ಈ ಸಂಸ್ಥೆಗಳು ಕುಂಟುತ್ತ ಕೆಲಸ ಮಾಡುತ್ತಲಿವೆ. ಇಂಥ ವಾತಾವರಣದಲ್ಲಿ ಸಂಶೋಧನೆ ತುಂಬ ಶ್ರಮದಾಯಕವೆನಿಸುತ್ತದೆ. ಈ ಆಹ್ವಾನವನ್ನು ಸ್ವೀಕರಿಸಿ ಮಾಡಿದ ಅಧ್ಯಯನವಾಗಿದೆ, ಪ್ರಸ್ತುತ ಪ್ರಬಂಧ.

ಡಾ. ಹಿರೇಮಠರು ಇಲ್ಲಿ ಮೊದಲು ಮಾಡಿದ ಕೆಲಸವೆಂದರೆ, ಈ ವಿಷಯಕ್ಕೆ ಸಂಬಂಧಪಟ್ಟ ಪ್ರಕಟಿತ ಲೇಖನ, ಗ್ರಂಥಗಳನ್ನು ಸಮಗ್ರವಾಗಿ ಪರಿಶೀಲಿಸಿದುದು. ಎರಡನೆಯದಾಗಿ, ಈ ಮನೆತನದ ವ್ಯಾಪ್ತಿಗೆ ಒಳಪಟ್ಟ ಪ್ರದೇಶದಲ್ಲಿ ದಣಿವನ್ನು ಲೆಕ್ಕಿಸದೆ ಕ್ಷೇತ್ರಕಾರ್ಯಮಾಡಿ, ಶಾಸನ, ವಾಸ್ತು, ವಿಗ್ರಹಗಳನ್ನು ಅಭ್ಯಸಿಸಿದುದು. ಸಂಶೋಧನೆಯೆನ್ನುವುದು ಆಕರ ಸಾಮಗ್ರಿಯ ಶ್ರೀಮಂತಿಕೆ ಹೆಚ್ಚಿದಷ್ಟೂ ಸಮಗ್ರವಾಗುತ್ತ ಹೋಗುವ ವಿದ್ಯಾ ಪ್ರಕ್ರಿಯೆಯೆನಿಸಿದೆ. ಇದನ್ನು ಅರ್ಥಮಾಡಿಕೊಂಡ ಡಾ. ಹಿರೇಮಠರು ಈ ವಿಷಯದಲ್ಲಿ ಪೂರ್ಣತೆಯನ್ನು ಸಾಧಿಸಿದ್ದಾರೆ. ನಿರ್ಣಯಗಳನ್ನು ವಿಪುಲ ಆಧಾರ ಸಂದರ್ಭದಲ್ಲಿ ದೃಢವಾಗಿ ಸ್ಥಾಪಿಸುವುದು, ವಿರಳ ಆಧಾರ ಸಂದರ್ಭದಲ್ಲಿ ಅನುಮಾನದಿಂದ ಮಂಡಿಸುವುದು, ವಿದ್ವಾಂಸರ ದುರ್ಬಲ ನಿರ್ಣಯಗಳನ್ನು ವಿನಮ್ರತೆಯಿಂದ ನಿರಾಕರಿಸುವುದು, ಈ ಬರವಣಿಗೆಯ ಶ್ರೇಷ್ಠ ಗುಣಗಳೆನಿಸಿದೆ.

ಹನ್ನೆರಡು ಅಧ್ಯಾಯಗಳಲ್ಲಿ ಹಬ್ಬಿದ ಈ ಪ್ರಬಂಧ ಸಿಂದ ಮನೆತನದ ಎಲ್ಲ ಆಯಾಮಗಳನ್ನು ನಿಷ್ಠೆಯಿಂದ ಅಭ್ಯಸಿಸಿದೆ. ಸಿಂದ ಪದದ ಅರ್ಥ, ಮೂಲನೆಲೆ - ಇವುಗಳಿಂದ ಈ ಅಧ್ಯಯನ ಆರಂಭವಾಗುತ್ತಿದ್ದು, ಕೋಗಳಿನಾಡಿನ ಸಿಂದರಿಗೆ ಸ್ವತಂತ್ರ ಅಸ್ತಿತ್ವ ಕಲ್ಪಿಸಿಕೊಡುತ್ತ, ಸಾಲಗುಂದೆ ಸಿಂದರನ್ನು ಹೊಸದಾಗಿ ಹುಡುಕಿದುದು ಇಲ್ಲಿಯ ವಿಶೇಷ ಕಾಣಿಕೆಯೆನಿಸಿದೆ.

ಕುರುಗೋಡು ಸಿಂದ ಅರಸುಗಳ ಚರಿತ್ರೆಯ ಎಲ್ಲ ತೊಡಕುಗಳನ್ನು ಬಿಡಿಸಿಕೊಂಡು, ಅದನ್ನು ಸರ್ವಸಮರ್ಪಕವಾಗಿ ಕಟ್ಟಿಕೊಟ್ಟುದು ಈ ಅಧ್ಯಾಯದ ವಿಶೇಷತೆಯಾಗಿದೆ. ಇವರು ಕೇವಲ ರಾಜರಲ್ಲ, ರಾಜರ್ಷಿಗಳು ಎಂಬ ಅವರ ವ್ಯಕ್ತಿತ್ವದ ವಿಶಿಷ್ಟ ಆಯಾಮವನ್ನೂ ಇಲ್ಲಿ ಗುರುತಿಸಲಾಗಿದೆ. ರಾಚಮಲ್ಲನ ದೈವೀವ್ಯಕ್ತಿತ್ವವನ್ನು ಈ ಪ್ರಬಂಧ ದಟ್ಟವಾಗಿ ಬಿಡಿಸಿ, ಶರಣಪರಂಪರೆಯಲ್ಲಿ ಅವನಿಗಿರುವ ಸ್ಥಾನವನ್ನು ಎತ್ತಿ ಹೇಳಲಾಗಿದೆ. ಪೂರಕವೆಂಬಂತೆ ವೀರಶೈವ ಕಾವ್ಯಗಳಲ್ಲಿ ಬರುವ ಚಾರಿತ್ರಿಕ ಎಳೆಗಳನ್ನು ಸಂಗ್ರಹಿಸಿ, ಇವನ ಪೂರ್ಣಚಿತ್ರವನ್ನು ಇಲ್ಲಿ ಬಿಡಿಸಲಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಈ ಅಧ್ಯಾಯ ಪ್ರಸ್ತುತ ಪ್ರಬಂಧದ ಹೃದಯವೆನಿಸಿದೆ.

ಆಡಳಿತ ವಿಭಾಗವನ್ನು ವಿವೇಚಿಸುತ್ತ ಗಣ್ಯ, ಗೌಣ ವಿಭಾಗಗಳನ್ನು ಶೋಧಿಸಿದುದು ಡಾ. ಚನ್ನಬಸವಯ್ಯ ಅವರ ಶ್ರಮವನ್ನು ಸೂಚಿಸುತ್ತದೆ. ಬಲ್ಲಕುಂದೆ ನಾಡಿನ ವ್ಯಾಪ್ತಿ, ರಾಜಧಾನಿ, ರಾಜಕೀಯ ವಿಭಾಗಗಳಾದ ದೊರವಡಿ, ತೆಕ್ಕೆಕಲ್ಲು ಮೊದಲಾದವುಗಳನ್ನು ಗುರುತಿಸಿದುದು, ಸಾಲದುದಕ್ಕೆ ಈ ವಿಭಾಗಗಳಲ್ಲಿ ಅಂತರ್ಗತವಾಗುವ ಸಣ್ಣ ಘಟಕಗಳನ್ನು, ಹಳ್ಳಿ-ಪಳ್ಳಿಗಳನ್ನು ಎಣಿಸಿದುದು ಇವರ ಸಹನೆಯ ದ್ಯೋತಕವೇ ಸರಿ. ಇದಕ್ಕೆ ಪೂರಕವೆಂಬಂತೆ ಈ ರಾಜ್ಯದ ಗ್ರಾಮನಾಮಗಳನ್ನು ಕುರಿತು ನಡೆಸಿದ ಅಧ್ಯಯನ ತುಂಬ ವೈಜ್ಞಾನಿಕವೆನಿಸಿದೆ. ಗ್ರಾಮನಾಮಾಧ್ಯಯನ ಮಾಡುವವರಿಗೆ ಒಂದು ಸಣ್ಣ ಪ್ರಮಾಣದ ಮಾದರಿ ಎನಿಸಿದೆ.

ತಮ್ಮ ಪ್ರಬಂಧ ಪರಿಪೂರ್ಣವಾಗಬೇಕೆಂಬ ಹಂಬಲ ಡಾ. ಹಿರೇಮಠ ಅವರದಾಗಿದೆ. ಹೀಗಾಗಿ ಅವರು ಸಿಂದರ ಕಾಲದ ಆಡಳಿತ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯಂಥ ಸಾಹಿತ್ಯದ ವಿದ್ಯಾರ್ಥಿಗೆ ಬಾಹ್ಯವೆನಿಸುವ ವಿಷಯಗಳಿಗೂ ಕೈಹಾಕಿದ್ದಾರೆ, ಮತ್ತು ಇತಿಹಾಸದ ವಿದ್ಯಾರ್ಥಿಗಳಿಗೂ ಸಾಧ್ಯವಾಗದ ಹೊಚ್ಚ ಹೊಸ ವಿಷಯವನ್ನು ಇಲ್ಲಿ ಮಂಡಿಸಿದ್ದಾರೆ. ಇದರಿಂದ ಸಿಂದರಾಜ್ಯದ ಚರಿತ್ರೆಗೆ ಅಷ್ಟೇ ಅಲ್ಲ, ಕರ್ನಾಟಕ ರಾಜ್ಯದ ಚರಿತ್ರೆಗೂ ನೆರವಾಗುವ ವಿಚಾರಗಳು ಇಲ್ಲಿ ಸಿಗುವಂತಾಗಿದೆ. ಸಾಮ್ರಾಟರು, ಸಾಮಂತರು, ಮಂಡಳೇಶ್ವರರು ಎಂದು ಮುಂತಾಗಿ ಬಿಚ್ಚಿಕೊಂಡ ಇಲ್ಲಿಯ ಅಭ್ಯಾಸ ಯಾರನ್ನಾದರೂ ತೃಪ್ತಿಪಡಿಸುತ್ತದೆ. ಕೇಂದ್ರಾಡಳಿತ ಪ್ರಾಂತೀಯ ಆಡಳಿತ, ಊರಾಡಳಿತವೆಂದು ವಿಷಯವನ್ನು ಬಿಡಿಸಿಕೊಂಡುದು ಇವರ ಮನಸ್ಸು ಹೇಗೆ ವೈಜ್ಞಾನಿಕವಾಗಿ ವ್ಯವಹರಿಸುತ್ತವೆಂಬುದಕ್ಕೆ ಸಾಕ್ಷಿ ನುಡಿಯುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಗ, ವರ್ಣ, ಜಾತಿಗಳು ವಹಿಸುತ್ತಿದ್ದ ಪಾತ್ರ, ಕುಟುಂಬ ವ್ಯವಸ್ಥೆ, ಸಂಪ್ರದಾಯ-ನಂಬಿಕೆ, ವಿದ್ಯಾಭ್ಯಾಸ ಮೊದಲಾದ ಮಗ್ಗಲುಗಳನ್ನು ಸರಿಯಾಗಿ ವಿವೇಚಿಸಿದ್ದಾರೆ. ಸಮಾಜದ ಬಹುದೊಡ್ಡ ಆಧಾರವಾಗಿರುವ ಆರ್ಥಿಕ ವ್ಯವಸ್ಥೆಯನ್ನೂ ಶಾಸನೋಕ್ತ ಪಾರಿಭಾಷಿಕ ಪದ, ಘಟಿತ ಸಂಗತಿಗಳ ಸಹಾಯದಿಂದ ತುಂಬ ಸಮರ್ಪಕವಾಗಿ-ವಿವರವಾಗಿ ಚಿತ್ರಿಸಿದ್ದಾರೆ. ಒಂದು ಸಣ್ಣ ವಿಷಯವೂ ಹೊರಗುಳಿಯದಂತೆ ನೋಡಿಕೊಂಡುದರ ಫಲವಾಗಿ ಈ ಪ್ರಕರಣಗಳು ತಮತಮಗೆ ಪೂರ್ಣ, ಪರಿಪೂರ್ಣವೆನಿಸಿವೆ.

ಧರ್ಮವನ್ನು ವಿವೇಚಿಸದೆ ಇಂಥ ಅಧ್ಯಯನ ಸಮರ್ಪಕವೆನಿಸುವುದಿಲ್ಲ. ಹೀಗಾಗಿ ಧಾರ್ಮಿಕ ವ್ಯವಸ್ಥೆಯನ್ನು ಪರಿಶೀಲನೆಗೆ ಎತ್ತಿಕೊಂಡು, ಬೌದ್ಧ, ಜೈನ, ವೈಷ್ಣವಗಳನ್ನೂ ವಿಸ್ತಾರವಾಗಿ ಚರ್ಚಿಸಿದ್ದಾರೆ. ಕುರುಗೋಡು ಸಿಂದರು ಪರಮ ಶಿವಭಕ್ತರು. ಇವರ ಅವಧಿಯಲ್ಲಿ ಶಿವಧರ್ಮ ಹೆಚ್ಚು ಪ್ರಸಿದ್ಧಿ ಪಡೆದುದು ಸಹಜ. ರಾಚಮಲ್ಲನಂಥ ವ್ಯಕ್ತಿಗಳು ದೇವರನ್ನು ಪೂಜಿಸಿ ದೇವರೇ ಆಗಿ ವೀರಶೈವದಲ್ಲಿ ಪಡೆದ ಮಹತ್ವವನ್ನು ಇಲ್ಲಿ ಎತ್ತಿ ಹೇಳಲಾಗಿದೆ.

ರಾಜರ ಆಶ್ರಯದ ಅನಿವಾರ್ಯ ಬೆಳವಣಿಗೆಗಳೆಂದರೆ ದೇವಾಲಯಗಳು ಮತ್ತು ಸಾಹಿತ್ಯ. ಇದನ್ನು ಅರ್ಥಮಾಡಿಕೊಂಡ ಡಾ. ಹಿರೇಮಠ ಅವರು ಈ ಅರಸರ ಕಾಲದ ಮೂವತ್ತಕ್ಕೂ ಹೆಚ್ಚು ದೇವಾಲಯಗಳನ್ನು ಗುರುತಿಸಿ, ನೀಡಿದ ವಿವರಣೆ ತುಂಬ ಉಪಯುಕ್ತವಾಗಿದೆ. ಈ ದೇವಾಲಯಗಳ ಶಿಲ್ಪವೈಶಿಷ್ಟ್ಯ, ಆಡಳಿತ ರೀತಿಗಳು ಇಲ್ಲಿ ವಿವರಿಸಲ್ಪಟ್ಟಿವೆ. ಸಾಹಿತ್ಯವಿವೇಚನೆಯನ್ನು ಶಾಸನಸಾಹಿತ್ಯದಿಂದ ಆರಂಭಿಸಿ, ಈ ಅರಸರನ್ನು ಉಲ್ಲೇಖಿಸುವ ಕವಿಗಳನ್ನು ಕುರಿತು ಹೇಳುತ್ತ, ವಚನಕಾರರಾದ ಬಳ್ಳೇಶ ಮಲ್ಲಯ್ಯ, ಹುಳಿಯಮೇಶ್ವರ ಚಿಕ್ಕಯ್ಯಗಳೆಂಬ ವಚನಕಾರರನ್ನು ಈ ಅಧ್ಯಾಯ ಪರಿಶೀಲಿಸುತ್ತದೆ. ಹೀಗೆ ಒಂದು ಉತ್ತಮ ಪಿಎಚ್.ಡಿ. ಪ್ರಬಂಧ ಹೇಗಿರಬೇಕೆಂಬುದಕ್ಕೆ ಮಾದರಿಯೆಂಬಂತೆ ಈ ಪ್ರಬಂಧ ರೂಪಗೊಂಡಿದೆ. ಕರ್ನಾಟಕದ ಇತಿಹಾಸದಲ್ಲಿ ವಿಜಯನಗರಕ್ಕೆ ವಿಶೇಷ ಸ್ಥಾನವಿದೆ. ಈ ಮನೆತನಕ್ಕೆ ಕಂಬ-ಗೋಡೆಗಳಾಗಿ ನಿಂತುದು ಕಂಪಿಲ ಅರಸರ ಮನೆತನ. ಕಂಪಿಲ ಅರಸರ ಮನೆತನಕ್ಕೆ ಬುನಾದಿಯಾಗಿದ್ದುದು ಕುರುಗೋಡು ಸಿಂದ ಮನೆತನ. ಹೀಗೆ ವಿಜಯನಗರ ಸಾಮ್ರಾಜ್ಯದ ಬೇರುಗಳನ್ನು ಗರ್ಭೀಕರಿಸಿಕೊಂಡ ಈ ವಂಶದ ಚರಿತ್ರೆಯನ್ನು ಪ್ರಥಮ ಸಲ ಸಮಗ್ರವಾಗಿ ಬೆಳಕಿಗೆ ತಂದ ಡಾ. ಚನ್ನಬಸವಯ್ಯ ಹಿರೇಮಠ ಅವರಿಗೆ ಕನ್ನಡಿಗರ ಕೃತಜ್ಞತೆಗಳು ಸಲ್ಲುತ್ತವೆ.

ಪ್ರಕಾಶನದ ಬಗ್ಗೆ ಒಂದು ಮಾತು ಹೇಳದಿದ್ದರೆ ಈ ಮುನ್ನುಡಿ ಪೂರ್ಣವಾಗುವುದಿಲ್ಲ. ಇಂದು ಒಂದು ಕಡೆ ಕನ್ನಡದ ಪ್ರಜ್ಞೆ ಜಾಗೃತವಾಗುತ್ತಲಿದೆ; ಇನ್ನೊಂದು ಕಡೆ ಅದನ್ನು ಪ್ರತಿಪಾದಿಸುವ ಕೃತಿಗಳ ಪ್ರಕಟನೆ ಮಂದಗಾಮಿಯಾಗಿದೆ. ಹೀಗಾಗಿ ಯಾವುದೇ ಮುಖದಿಂದ ಪ್ರಕಟಿಸುವುದು ಕನ್ನಡದ ಕೆಲಸವೇ ಸರಿ. ಈ ಸತ್ಯವನ್ನು ಅರ್ಥಮಾಡಿಕೊಂಡು ಧಾರ್ಮಿಕ ಸಂಸ್ಥೆಗಳು, ಸಾರ್ವಜನಿಕ ಸಂಸ್ಥೆಗಳು, ಸಾರ್ವಜನಿಕ ವ್ಯಕ್ತಿಗಳು

ಮುಂದುಬರುವಂತೆ ನಾವು ಪ್ರಯತ್ನಿಸಬೇಕಾಗಿದೆ. ಈ ದಿಸೆಯಲ್ಲಿ ಮುಂದು ಬಂದವರು ಕೊಪ್ಪಳದ ಗಣ್ಯ ವ್ಯಕ್ತಿಗಳಾದ ಶ್ರೀ ಅಗಡಿ ಸಂಗಣ್ಣನವರು. ಸಂಗಣ್ಣನವರಿಗೆ ಕರ್ನಾಟಕ ಸಂಸ್ಕೃತಿಯ ಬಗೆಗ ಅಪಾರ ಭಕ್ತಿ, ಅಗಾಧ ಪ್ರೀತಿ. ಇದಕ್ಕೆ ನಿದರ್ಶನವೆನ್ನುವಂತೆ ಶ್ರೀಯುತರು ಪ್ರತಿವರ್ಷ ಒಂದು ಉತ್ತಮ ಕೃತಿ ಪ್ರಕಟಿಸಲು ಸಂಕಲ್ಪ ಮಾಡಿದ್ದಾರೆ. ಅದರ ಫಲವಾಗಿ "ಕುರುಗೋಡು ಸಿಂದರು: ಒಂದು ಅಧ್ಯಯನ" ಹೆಸರಿನ ಈ ಕೃತಿ "ಸಂಗಣ್ಣನವರು ಅಗಡಿ ಸಂಸ್ಕೃತಿ ಪ್ರತಿಷ್ಠಾನ"ದ ಮೂಲಕ ಹೊರಬರುತ್ತಿದೆ. ಈ ಔದಾರ್ಯಕ್ಕಾಗಿ ಮಾನ್ಯರಾದ ಶ್ರೀ ಸಂಗಣ್ಣ ಅಗಡಿ ಅವರಿಗೆ ಸಾಹಿತ್ಯಲೋಕ ಋಣಿಯಾಗಿದೆ.

ಡಾ. ಚನ್ನಬಸವಯ್ಯ ಹಿರೇಮಠ, ರಾಯಚೂರು.

ಆಕರ : ಮಾರ್ಗ ಸಂಪುಟ–೬

■■

೧೬೫

ಸಂಶೋಧನೆಯ ಸಿರಿ

೧೯೯೬

"ಹುಲ್ಲುಕೊಯ್ಯುವವರು ಒಬ್ಬರು, ಹಿಂಡಿ ಹಾಲು ಕುಡಿಯುವವರು ಇನ್ನೊಬ್ಬರು" - ಕರ್ನಾಟಕದ ಅಧ್ಯಯನ ಸಂದರ್ಭದಲ್ಲಿ ಸಂಶೋಧನೆಗೆ ಮತ್ತು ಸಂಶೋಧಕರಿಗೆ ಒದಗಿರುವ ದುರವ್ಯವಸ್ಥೆಯ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಕರ್ನಾಟಕ ಸಂಸ್ಕೃತಿಯ ಸಂಶೋಧನೆಗಾಗಿಯೇ ಹುಟ್ಟಿದ ಸಂಸ್ಥೆಗಳು ಸಂಶೋಧಕರಲ್ಲದವರ ಸ್ವರ್ಗಗಳಾಗಿ ಪರಿವರ್ತನಗೊಳ್ಳುತ್ತಿರುವುದನ್ನು ನಿಜವಾದ ಸಂಶೋಧಕರು ಬಡವರ ಮಕ್ಕಳಂತೆ ನೋಡುತ್ತ ಕುಳಿತು ಕೊಳ್ಳುವ ಪರಿಸ್ಥಿತಿ ನಮ್ಮಲ್ಲಿ ಬೆಳೆಯುತ್ತ ನಡೆದಿದೆ. ಈ ವಿಷಯವಾಗಿ ಹಿರಿಯ ಸಂಶೋಧಕರು, ಸಾಹಿತಿಗಳು, ರಾಜಕೀಯ ಧುರೀಣರು ಜಾಣಗುರುಡು ರೀತಿಯಲ್ಲಿ ಸಾಗಿದ್ದಾರೆ. ಹೀಗಾಗಿ ಕರ್ನಾಟಕ ಸಂಸ್ಕೃತಿಯ ಅಧ್ಯಯನಕ್ಕೋಸುಗ ಈವರೆಗೆ ದುಡಿಯುತ್ತಲಿದ್ದ ಯುವ ವಿದ್ವಾಂಸರು "ಇದು ಲೌಕಿಕವಾಗಿ ಪ್ರಯೋಜನವಲ್ಲದ ಕ್ಷೇತ್ರ"ವೆಂದು ಕೈಬಿಡುತ್ತ ನಡೆದಿದ್ದಾರೆ; ಹೊಸ ಸಂಶೋಧಕರು ಇದರ ಬಗ್ಗೆ ಉದಾಸೀನತೆ ತಾಳುತ್ತಲಿದ್ದಾರೆ. ಇಂತಹ ಸಂದರ್ಭದಲ್ಲಿ ಉಪಜೀವನಕ್ಕೆ ಅವಶ್ಯವಾಗಿರುವ ವೃತ್ತಿವಂಚಿತ ಯುವ ಸಂಶೋಧಕ ಡಾ. ಡಿ. ವಿ. ಪರಮಶಿವಮೂರ್ತಿಯವರು ಪರಂಪರೆಯ ಮೇಲಿನ ಪ್ರೀತಿ ಕಾರಣವಾಗಿ, ಸಂಶೋಧನೆಯನ್ನು ತುಂಬ ಆಸಕ್ತಿಯಿಂದ ಮುಂದುವರಿಸಿದವರಾಗಿದ್ದಾರೆ. ಈ ವ್ಯಾಮೋಹಕ್ಕಾಗಿ ಅವರನ್ನು ಮುನ್ನುಡಿಯ ಆರಂಭದಲ್ಲಿಯೇ ಅಭಿನಂದಿಸುತ್ತೇನೆ.

'ಸಂಶೋಧನೆಯ ಸಿರಿ' ಪ್ರಾಚೀನ ಕರ್ನಾಟಕದ ಐದು ಪಾಳೆಯಗಾರ ಮನೆತನಗಳ ಅಧ್ಯಯನಕ್ಕೆ ಸಂಬಂಧಪಟ್ಟ ಒಂದು ಉಪಯುಕ್ತ ಕೃತಿ. ನಮ್ಮ ನಾಡಿನ ಸುಪ್ರಸಿದ್ಧ ರಾಜಮನೆತಗಳಾದ ಚಾಲುಕ್ಯ, ಹೊಯ್ಸಳ, ವಿಜಯನಗರ ಮೊದಲಾದವುಗಳನ್ನು ಕುರಿತು ಕಳೆದ ಒಂದು ಶತಮಾನದಿಂದಲೂ ಆಕರ ಶೋಧ, ಆಕರ ವಿಶ್ಲೇಷಣೆ, ಗ್ರಂಥಪ್ರಕಟನೆ ಮೊದಲಾದ ಕೆಲಸಗಳು ರಾಜ್ಯ ಮತ್ತು ಕೇಂದ್ರ ಪುರಾತತ್ವ ಇಲಾಖೆ, ವಿಶ್ವವಿದ್ಯಾಲಯ ಮೊದಲಾದ ಸಂಸ್ಥೆಗಳಿಂದ ಉದ್ದಕ್ಕೂ ಸಾಗಿ ಬಂದಿದೆ. ಇದಕ್ಕೆ ವಿರುದ್ಧವೆಂಬಂತೆ ಪ್ರಾದೇಶಿಕ ಖ್ಯಾತಿಯ ಸಣ್ಣ-ಪುಟ್ಟ ರಾಜಮನೆತನಗಳ ಬಗೆಗೆ ನಡೆದ ಅಭ್ಯಾಸ ತೀರ ಕಡಿಮೆ. ಇತ್ತೀಚಿನ ಹತ್ತು ವರ್ಷಗಳಲ್ಲಿ ವೀರಶೈವ ಮಠಗಳು ಒಂದು ಚಳುವಳಿ ರೂಪದಲ್ಲಿ ಈ ಅಧ್ಯಯನವನ್ನು ಕೈಗೆತ್ತಿಕೊಂಡಿದ್ದು,ಈಗಾಗಲೇ ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಅನೇಕ ವಿಚಾರ ಸಂಕಿರಣಗಳನ್ನು ಜರುಗಿಸಿ ಗ್ರಂಥಗಳನ್ನು ಪ್ರಕಟಿಸಿವೆ. ಹೀಗೆ ಸಣ್ಣ

ರಾಜಮನೆತನಗಳ ಅಭ್ಯಾಸದ ಬಗೆಗೆ ಸಂಭವಿಸಿರುವ ಎಚ್ಚರದ ಹಿನ್ನೆಲೆಯಲ್ಲಿ ಬರೆಯಲಾದ ಐದು ಲೇಖನಗಳನ್ನೊಳಗೊಂಡಿದೆ 'ಸಂಶೋಧನೆಯ ಸಿರಿ.'

"ನಿಡುಗಲ್ಲು ಪಾಳೆಯಗಾರ"ರನ್ನು ಕುರಿತು ಈವರೆಗೆ ಆರ್. ನರಸಿಂಹಾಚಾರ್ ಮೊದಲಾದವರು ಒಂದಿಷ್ಟು ಅಭ್ಯಾಸ ಮಾಡಿದ್ದರೂ ಈ ಕೃತಿಯಲ್ಲಿಯ ಅಧ್ಯಯನ ಅವುಗಳಿಗಿಂತ ಭಿನ್ನವಾಗಿದೆ ವ್ಯಾಪಕವಾಗಿದೆ. ಇತ್ತೀಚೆ ಲಭ್ಯವಾದ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ, ಶಾಸನಗಳನ್ನು ಶೋಧಿಸಿ ಕೊಟ್ಟ ಕಾರಣ ಈ ಮನೆತನದ ಬಗೆಗೆ ನಮ್ಮ ಸಂದೇಹಗಳು ನಿವಾರಣೆಯಾಗಿ, ತಿಳುವಳಿಕೆ ಖಂಡಿತ ವಿಸ್ತಾರವಾಗುತ್ತದೆ.

"ಬಿಜ್ಜಾವರದ ಅರಸರನ್ನು" ಕುರಿತು ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ ಮೊದಲಾದ ಕೃತಿಗಳು, ಒಂದಿಷ್ಟು ಶಾಸನಗಳು ಬೆಳಕಿಗೆ ಬರುವುದರೊಂದಿಗೆ 'ವಿಚಾರ ಸಂಕಿರಣ' ನಡೆದು ಹೊಸ ಮಾಹಿತಿಗಳು ಹೊರಬಿದ್ದಿವೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಇನ್ನಷ್ಟು ಮಾಹಿತಿಯನ್ನು ಸಂಗ್ರಹಿಸಿ ಈ ಮೊದಲಿನ ಶೋಧಗಳಿಗೆ ತಕ್ಕ ತಿದ್ದುಪಡಿಯನ್ನು ಡಾ. ಡಿ. ವಿ. ಪರಮಶಿವಮೂರ್ತಿಯವರು ಮಾಡಿದ್ದಾರೆ. ಅದರಲ್ಲೂ ಜಿರಲೆ ಮಲ್ಲಮ್ಮನ ಶಾಸನಗಳನ್ನು ಗಮನಿಸಿ, ಅವಳ ಶಿಲ್ಪವನ್ನು ಪತ್ತೆ ಹಚ್ಚಿ ಬರೆದ ಕೆಲವು ವಿಷಯಗಳು ವಿನೂತನವೆಂದೇ ಹೇಳಬೇಕು.

ಎಂ. ಎಸ್. ಪುಟ್ಟಣ್ಣ ಅವರು ಹಾಗಲವಾಡಿ ಅರಸರನ್ನು ಕುರಿತು ಪ್ರಕಟಿಸಿದ ಒಂದು ಪುಸ್ತಿಕೆಯನ್ನು ಬಿಟ್ಟರೆ ಈ ಮನೆತನದ ಬಗ್ಗೆ ವಿಶೇಷ ಅಧ್ಯಯನ ನಡೆದಿರಲಿಲ್ಲ. ಹೀಗಾಗಿ ಶ್ರೀ ಸಿದ್ಧಗಂಗಾಮಠದ ಆಶ್ರಯದಲ್ಲಿ "ಹಾಗಲವಾಡಿ ಮನೆತನ"ವನ್ನು ಕುರಿತು ಜರುಗಿದ ವಿಚಾರ ಸಂಕಿರಣದಲ್ಲಿ ಡಾ. ಪರಮಶಿವಮೂರ್ತಿಯವರು ಮಂಡಿಸಿದ್ದ "ಹಾಗಲವಾಡಿ ಅರಸುಮನೆತನ -ಆಕರಗಳು (ಶಾಸನ-ಶಾಸನೇತರ ಸಾಮಗ್ರಿ)" ಎಂಬ ಲೇಖನ ಮತ್ತು ಇದಕ್ಕೆ ಜೋಡಿಸಿದ ಅನುಬಂಧ, ಈ ಮನೆತನದ ಚರಿತ್ರೆಯ ಅಧ್ಯಯನವನ್ನು ಮುಂದುವರಿಸುವವರಿಗೆ ಒಳ್ಳೆಯ ಆಕರ ಸಾಮಗ್ರಿಯನ್ನು ಪೂರೈಸುತ್ತದೆ.

"ಹದಿನಾಡು ಪಾಳೆಯಗಾರರು" ಈವರೆಗೆ ತೀರ ಉಪೇಕ್ಷೆಗೆ ಗುರಿಯಾಗಿದ್ದ ಪಾಳೆಯಗಾರರು. ಹೀಗಾಗಿ ಈ ರಾಜಕುಟುಂಬದ ಬಗೆಗೆ ತೀವ್ರ ಗಮನಕೊಟ್ಟು ಬೆಂಗಳೂರಿನ ಶ್ರೀ ಸರ್ಪಭೂಷಣ ಮಠ ನಡೆಸಿದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧವಾಗಿದೆ, 'ಹದಿನಾಡು ಪಾಳೆಯಗಾರರು.' ಇಲ್ಲಿ ಸಂಶೋಧಕ ಡಾ. ಪರಮಶಿವಮೂರ್ತಿಯವರು ಮೂಲ ಆಕರಗಳಿಗೇ ಹೋಗಿ ಚರಿತ್ರೆಯನ್ನು ಕಟ್ಟಿಕೊಟ್ಟ ರೀತಿ ಶ್ಲಾಘನೀಯವಾಗಿದೆ. ಹಸ್ತಪ್ರತಿಗಳಲ್ಲಿ ಬರುವ ಸಣ್ಣ ಸಣ್ಣ ಉಲ್ಲೇಖಗಳನ್ನೂ ಬಿಡದೆ ಈ ಲೇಖನಗಳನ್ನು ಪರಿಪೂರ್ಣಗೊಳಿಸುವಲ್ಲಿ ಅವರು ತೋರಿದ ಶ್ರಮ ನಮ್ಮ ಮೆಚ್ಚುಗೆಯನ್ನು ಗಳಿಸುತ್ತದೆ.

ಪ್ರಾಚೀನ ಕರ್ನಾಟಕದಲ್ಲಿ ಕೋಟೆಗಳ ಸಂಖ್ಯೆ ವಿಪುಲ. ಬದಲಾದ ಸಂದರ್ಭ ಕಾರಣವಾಗಿ ಉಪೇಕ್ಷೆಗೆ ಗುರಿಯಾಗುತ್ತ, ವೈರಿಗಳ ದಾಳಿಗೆ ತುತ್ತಾಗುತ್ತಾ ಬಂದ ಅವುಗಳ ಅಧ್ಯಯನ ಇಂದು ನಡೆಯಬೇಕಿದೆ. ಈ ದಿಸೆಯಲ್ಲಿ "ಗುಮ್ಮನಾಯಕನ ಕೋಟೆ : ಒಂದು ಪರಿಚಯ" ಲೇಖನ ತುಂಬ ಗಮನಾರ್ಹವೆನಿಸುತ್ತದೆ. ಇಲ್ಲಿ ಡಾ. ಪರಮ ಶಿವಮೂರ್ತಿಯವರು ನಡೆಸಿದ ಕ್ಷೇತ್ರಕಾರ್ಯ, ಅದನ್ನು ಬಳಸಿಕೊಂಡು ಕಟ್ಟಿಕೊಟ್ಟ ಚರಿತ್ರೆಯ ವಿವರ ಮೊದಲಾದವು ಆ ಪ್ರದೇಶವನ್ನು ಕಣ್ಣ ಮುಂದೆ ನಿಲ್ಲಿಸುತ್ತವೆ. ಈ ಲೇಖನದಿಂದಾಗಿ ಈವರೆಗೆ ಗೊತ್ತಿಲ್ಲದ ಅಲ್ಲಿಯ ಅನೇಕ ಬಿಡಿ ಮಾಹಿತಿಗಳು ಪ್ರಥಮ ಸಲ ಬೆಳಕಿಗೆ ಬರುತ್ತಲಿವೆ.

ಹೀಗೆ ಒಂದೊಂದು ಲೇಖನದಲ್ಲಿಯೂ ಸಂಶೋಧನೆಯ ಶ್ರಮ, ಸಂಸ್ಕೃತಿ ಚರಿತ್ರೆ, ಬರವಣಿಗೆಯ ಶಿಸ್ತು ಎದ್ದು ಕಾಣುತ್ತಿರುವುದು ಈ ಕೃತಿಯ ವೈಶಿಷ್ಟ್ಯವೆನಿಸಿದೆ. ಪೂರಕವೆನ್ನುವಂತೆ ಅನೇಕ ಚಿತ್ರಗಳನ್ನೂ ಜೋಡಿಸಿಕೊಳ್ಳುವ ಮೂಲಕ ಇದರ ಮಹತ್ವ ಇನ್ನೂ ವರ್ಧಿಸಿದೆ.

ಶಿಕ್ಷಣ ಸಂಸ್ಥೆಗಳ ಧನಸಹಾಯವೂ ಇಲ್ಲದ, ಸರಿಯಾದ ವೃತ್ತಿಯ ಆಧಾರವೂ ಇಲ್ಲದ ಡಾ. ಪರಮಶಿವಮೂರ್ತಿಯವರು ಕೈಯಿಂದ ಖರ್ಚುಮಾಡಿ ಕ್ಷೇತ್ರಕಾರ್ಯ ಪೂರೈಸಿ, ಕೃತಿಯನ್ನು ಮುದ್ರಿಸುತ್ತಿರುವುದನ್ನು ಸಂಶೋಧನ ಸಂಸ್ಥೆಗಳಲ್ಲಿ ಹುದ್ದೆಗಳನ್ನು ಅಲಂಕರಿಸಿ ಕುಳಿತಿರುವ ಜನ ಗಮನಿಸಿ, ಆತ್ಮನಿರೀಕ್ಷೆ ಮಾಡಿಕೊಳ್ಳುವರೆಂದು ಆಶಿಸುತ್ತ, ಡಾ. ಪರಮಶಿವಮೂರ್ತಿಯವರಿಗೆ ಭವಿಷ್ಯದಲ್ಲಿ ಯಶಸ್ಸನ್ನು ಹಾರೈಸುತ್ತೇನೆ. ಅಲ್ಲದೆ ಇಂತಹ ಒಳ್ಳೆಯ ಸಂಶೋಧನಕೃತಿಯನ್ನು ಸಾರಸ್ವತಲೋಕಕ್ಕೆ ನೀಡಿದ್ದಕ್ಕಾಗಿ ತುಂಬು ಹೃದಯದಿಂದ ಅಭಿನಂದಿಸುತ್ತೇನೆ.

ಡಿ.ವಿ. ಪರಶಿವಮೂರ್ತಿ, ಹೊಸಪೇಟೆ

ಆಕರ : ಮಾರ್ಗ ಸಂಪುಟ-೬

■■

೧೬೬

ಸಾಹಿತ್ಯ ಮತ್ತು ಸಹೃದಯತೆ

೧೯೯೬

ಮುನ್ನುಡಿ ಬರೆಯುವ ವಿಷಯದಲ್ಲಿ ನಾನು ತುಂಬ ನಿರಾಸಕ್ತ. ಹೀಗಿದ್ದೂ ಡಾ. ಜಿ. ಎಂ. ಹೆಗಡೆಯವರ ಈ ಕೃತಿಗೆ ಕೆಲವು ಮಾತುಗಳನ್ನು ಸಂತೋಷದಿಂದ ಬರೆಯುತ್ತಲಿದ್ದೇನೆ. ಇದಕ್ಕೆ ಕಾರಣ ಕನ್ನಡದ ಉತ್ತಮ ಪ್ರಾಧ್ಯಾಪಕ-ಲೇಖಕರಾದ ಇವರು, ಅತ್ಯುತ್ತಮ ಸಾಹಿತ್ಯ ಪರಿಚಾರಕರೂ ಆಗಿರುವುದು.

ಕನ್ನಡಕ್ಕೆ ಸಂಬಂಧಪಟ್ಟಂತೆ ಇಂದು ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳುವವರೇ ಹೆಚ್ಚು, ಹೊರುವವರು ಕಡಿಮೆ. 'ಕನ್ನಡದ ಊಳಿಗದಲ್ಲಿ ಮೇಲು ಕೀಳುಗಳಿಲ್ಲ' ಎಂಬ ಮನೋಧರ್ಮದ ಡಾ. ಹೆಗಡೆಯವರು ಕನ್ನಡದ ಪಲ್ಲಕ್ಕಿ ಹೊತ್ತ ಒಬ್ಬ ಪ್ರಮಾಣಿಕ ಸಾಹಿತ್ಯ ಪರಿಚಾರಕರಾಗಿದ್ದಾರೆ. ಹೀಗಾಗಿ ಅವರು ಧಾರವಾಡದ ಸಾಹಿತಿಗಳಂತೆ, ದೂರದ, ಇನ್ನೂ ದೂರದ ಸಾಹಿತಿಗಳಿಗೂ ಸಂಪರ್ಕಸೇತುವೆಯಾಗಿ ಬೆಳೆದು, ತಮ್ಮ ಸಾಹಿತ್ಯ ಪರಿಚಾರಕಕ್ಷೇತ್ರವನ್ನು ವಿಸ್ತರಿಸಿಕೊಂಡಿದ್ದಾರೆ. ನಿರಂತರ ಅಭ್ಯಾಸ-ಬರವಣಿಗೆಗಳಿಂದಾಗಿ ಅದಕ್ಕೆ ಗಟ್ಟಿ ಹಿನ್ನೆಲೆಯನ್ನು ಒದಗಿಸಿಕೊಂಡಿದ್ದಾರೆ.

ಸಾಹಿತ್ಯ ಪರಿಚಾರಕರ ಸೃಷ್ಟಿಯಲ್ಲಿ ಇವರಾಗಿಯೇ ಬರೆದುದಕ್ಕಿಂತ ಇನ್ನೊಬ್ಬರು ಬರೆಯಿಸಿಕೊಂಡ ಲೇಖನಗಳ ಪಾಲು ಅಧಿಕವಾಗಿರುತ್ತದೆ. ಅಂದರೆ ಅವು, ಗೌರವಗ್ರಂಥ, ಸ್ಮರಣಸಂಪುಟ, ದೀಪಾವಳಿ ವಿಶೇಷಾಂಕಗಳ ಪ್ರಕಟನ ಸಂದರ್ಭದಲ್ಲಿ ಸ್ನೇಹಿತರು, ಸಂಪಾದಕರು ಬರೆಯಿಸಿಕೊಂಡವುಗಳಾಗಿರುತ್ತವೆ. ಡಾ. ಹೆಗಡೆಯವರು ಇಂಥ ಸಾಂಸ್ಕೃತಿಕ ಸಂದರ್ಭಗಳಲ್ಲಿ ಸ್ಪಂದಿಸುವ ಸಂವೇದನಶೀಲ ವ್ಯಕ್ತಿಯಾಗಿರುವುದರಿಂದ, ಈ ಸಂಕಲನದ ಬಹಳಷ್ಟು ಪ್ರಬಂಧಗಳು 'ಸಾಹಿತ್ಯ ಪರಿಚಾರಕ ಪ್ರಜ್ಞೆ'ಯಲ್ಲಿ ಹುಟ್ಟಿದವುಗಳಾಗಿವೆ.

ಆರಂಭದಲ್ಲಿಯೇ ನಾನು ಡಾ. ಹೆಗಡೆಯವರನ್ನು ಅಭಿನಂದಿಸುವುದು, ಅವರ ವ್ಯಾಪಕ, ವೈವಿಧ್ಯಪೂರ್ಣ ಅಭ್ಯಾಸಕ್ಕಾಗಿ. ಪಠ್ಯಪುಸ್ತಕವನ್ನು ಓದದ ಪ್ರಾಧ್ಯಾಪಕರ ಇಂದಿನ ಪರಿಸರದಲ್ಲಿ ಕಥೆ, ಕಾದಂಬರಿ, ನಾಟಕ, ಕವನ ಮತ್ತು ಮಹಾಕಾವ್ಯ ಮೊದಲಾದ ಸೃಜನಸಾಹಿತ್ಯ, ಇವುಗಳ ವಿಮರ್ಶನ ಸಾಹಿತ್ಯ - ಈ ಎರಡೂ ಕ್ಷೇತ್ರಗಳನ್ನು ಇವರು ಆಳವಡಿಸಿಕೊಂಡಿರುವುದನ್ನು ಇಲ್ಲಿಯ ಪ್ರಬಂಧಗಳು ಸಾಕ್ಷಿ ನುಡಿಯುತ್ತವೆ. ಕನ್ನಡದ ಮಹತ್ವದ ಲೇಖಕರಂತೆ, ಮಹತ್ವದ ಕೃತಿಗಳೂ ಇಲ್ಲಿ ವಸ್ತುವಾಗಿ ಕಾಣಿಸಿಕೊಂಡಿವೆ.

ನವೋದಯ ಸಂದರ್ಭ 'ಸಹೃದಯ ಪ್ರಧಾನ' ಘಟ್ಟವಾದರೆ, ನವ್ಯ ಸಂದರ್ಭ 'ವಿಮರ್ಶಕ ಪ್ರಧಾನ' ಘಟ್ಟ. ಹೆಗಡೆಯವರು ಈ ಎರಡರ 'ಸಮನ್ವಯ' ನೆಲೆಯಲ್ಲಿ ನಿಂತು, ವಿಷಯದ ಗ್ರಹಿಕೆಯಲ್ಲಿ ವಿಮರ್ಶಕ, ಪ್ರತಿಪಾದನೆಯಲ್ಲಿ ಸಹೃದಯ- ಎಂಬುದನ್ನು ತಮ್ಮ ಬರವಣಿಗೆಯುದ್ದಕ್ಕೂ ಸ್ಪಷ್ಟಪಡಿಸುತ್ತ ಬಂದಿದ್ದಾರೆ. ಈ

ಸಂಕಲನಕ್ಕೆ ಇರುವ 'ಸಾಹಿತ್ಯ ಮತ್ತು ಸಹೃದಯತೆ' ಎಂಬ ಹೆಸರೂ ಇದನ್ನು ಧ್ವನಿಸುತ್ತದೆ. ಇನ್ನೊಬ್ಬರ ಮೇಲೆ ಆಕ್ರಮಣ ಮಾಡದಿರುವುದು, ತಮ್ಮನ್ನು ರಕ್ಷಿಸಿಕೊಳ್ಳುವುದು ಡಾ. ಹೆಗಡೆಯವರ ಬದುಕಿನ ಧೋರಣೆಯೇ ಆಗಿದ್ದು, ಅದು ಬರವಣಿಗೆಯಲ್ಲಿಯೂ ಕೆಲಸಮಾಡುವುದು ಸಹಜ. ಈ ಧೋರಣೆಗೆ ಒಂದು ಸಣ್ಣ ಮಾದರಿ 'ಬುದ್ಧಚರಿತ ಮಹಾಮಧು' ಮಹಾಕಾವ್ಯದ ವಿಮರ್ಶೆ:

"ಬುದ್ಧನ ಜೀವನ, ಸಂದೇಶ ಮಹಾಕಾವ್ಯದ ಪರಿಧಿಯಲ್ಲಿ ಅಳವಡಿಸಬೇಕೆನ್ನುವ ಆಶಯ ಸಮರ್ಥನೀಯವೇ ಆದರೂ ಮಹಾಕಾವ್ಯದಲ್ಲಿ ಒರಬೇಕಾದ ಮಹಾದರ್ಶನ, ವಿದ್ವತ್ ಪ್ರತಿಭೆಯ ಫಲವಾಗಿ ಅರಳುವ ವಿಧವಿಧದ ಸನ್ನಿವೇಶ, ಕಾವ್ಯಭಾಷೆ, ಛಂದಸ್ಸು ಮೊದಲಾದವುಗಳ ಹಿನ್ನೆಲೆಯಲ್ಲಿಯೂ ಈ ಮಹಾಕಾವ್ಯ ಸಫಲಕೃತಿಯಾಗಬೇಕಿತ್ತೆಂಬ ವಿಮರ್ಶಕರ ವಿಚಾರ ಉಪಾದೇಯವಾಗಿದೆ. ಆದರೂ ಈ ಮಹಾಕಾವ್ಯ ಒಂದು ಮಹತ್ವಾಕಾಂಕ್ಷೆಯ ಕೃತಿಯಾಗಿದೆ."

ಈ ಮಾತುಗಳನ್ನು ಬರೆಯುತ್ತಿರುವ ಡಾ. ಹೆಗಡೆಯವರಿಗೆ ಮಹಾಕಾವ್ಯದ ಲಕ್ಷಣಗಳೇನು? ಖಂಡಿತ ಗೊತ್ತಿದೆ. ಈ ಕಾವ್ಯದ ವೈಫಲ್ಯಗಳೇನು? ಎಂಬುದೂ ಗೊತ್ತಿದೆ. ಮಾತಿನ ಧಾಟಿ ಮಾತ್ರ 'ಪರ್ಯಾಯ ರೀತಿ'ಯಲ್ಲಿ ಮುನ್ನಡೆದು ಸುರಕ್ಷಿತ ನೆಲೆಯಲ್ಲಿ ವಿರಮಿಸುತ್ತದೆ.

ಮೂವತ್ಮೂರು ಪ್ರಬಂಧಗಳ ಈ ಸಂಕಲನ ಸಾಹಿತ್ಯಪರಂಪರೆ, ಸಾಹಿತ್ಯಸಮೀಕ್ಷೆ, ಸಾಹಿತ್ಯ ಮೀಮಾಂಸೆ, ಸಾಹಿತ್ಯಕೃತಿವಿಮರ್ಶೆ ಹೀಗೆ ನಾಲ್ಕು ಕವಲುಗಳಲ್ಲಿ ಬಿಚ್ಚಿಕೊಂಡಿದೆ. ಈ ಬಗೆಯ ಪ್ರಬಂಧಗಳಲ್ಲೆಲ್ಲ ಡಾ. ಹೆಗಡೆಯವರು ಮಾಡುವ ಮೊದಲ ಸಾಹಸವೆಂದರೆ ವಿಷಯವನ್ನು ಸಮಗ್ರವಾಗಿ ಗ್ರಹಿಸಿಕೊಳ್ಳುವುದು ಮತ್ತು ಸಂಗ್ರಹಿಸಿಕೊಳ್ಳುವುದು. ಈ ಬಗ್ಗೆ ಅವರಿಗೆ ದಣಿವೆಂಬುದೇ ಇಲ್ಲ. 'ಸಾಹಿತ್ಯ ಪರಂಪರೆ' ವಿಭಾಗದ ಆರೂ ಲೇಖನಗಳ ಮೇಲೆ ಕಣ್ಣಾಡಿಸಿದರೆ, ಅವರು ಓದಿದ ಕೃತಿಸಂಖ್ಯೆ, ತಿರುವಿಹಾಕಿದ ಪುಟಸಂಖ್ಯೆಗಳು ಈ ಅಭಿಪ್ರಾಯವನ್ನು ಬೆಂಬಲಿಸುತ್ತವೆ. ಈ ಲೇಖನಗಳು ಸಮೀಕ್ಷೆಗಳೆನಿಸಿದರೂ ಸಂಗ್ರಹಿಸಿಕೊಂಡ ಸಮಗ್ರ ಮಾಹಿತಿ, ವರ್ಗೀಕರಿಸಿಕೊಂಡ ವ್ಯವಸ್ಥಿತ ರೀತಿ ತುಂಬ ಸಮರ್ಪಕವೆನಿಸಿವೆ. "ಬೇಂದ್ರೆಯವರು ೧೯೨೦ರಲ್ಲಿ 'ನೋವಿನ ನೆಲೆ-ಹಿಗ್ಗಿನ ಬೆಲೆ' ಎಂಬ ವಚನವನ್ನು ಮೊದಲು ಬರೆದರು. ೧೯೧೦ರಷ್ಟೊತ್ತಿಗೆ ಮಂಗಳೂರಿನ 'ಕೃಷ್ಣಸೂಕ್ತಿ'ಯಲ್ಲಿ ಬರೆದ ಸತಿಹಿತೈಷಿಣಿ ಗ್ರಂಥಮಾಲೆಯ ವಿಮರ್ಶೆ ಕನ್ನಡದ ಮೊದಲ ಕೃತಿ ವಿಮರ್ಶೆಯಾಗಿದೆ- ಎಂಬಂಥ ದಾಖಲೆಗಳಂತೂ ಓದುಗರ ಗಮನ ಸೆಳೆಯುತ್ತವೆ. ಇವುಗಳ ನಡುವೆ ಅಲ್ಲಲ್ಲಿ ಆಡಿತ ಮಾತು, ನೀಡಿತ ತೀರ್ಪುಗಳು ಅವರ ಒಳನೋಟವನ್ನು ತೆರೆದು ತೋರಿಸುತ್ತವೆ.

'ಸಾಹಿತ್ಯ ಸಮೀಕ್ಷೆ' ವಿಭಾಗ, ಒಬ್ಬ ಸಾಹಿತಿಯ ಸಮಗ್ರಸಾಹಿತ್ಯ, ಸಾಹಿತ್ಯಪ್ರಕಾರ, ಸಾಹಿತ್ಯಕೃತಿ, ಪರಿಕಲ್ಪನೆಗಳನ್ನು ಕೇಂದ್ರೀಕರಿಸಿಕೊಂಡು ಆಕಾರ ಪಡೆದ ಪ್ರಬಂಧಗಳನ್ನೊಳಗೊಂಡಿದೆ. 'ಮಾಸ್ತಿಜೀವನ ಹಾಗೂ ಸಾಹಿತ್ಯ', 'ಅನಂದಮೂರ್ತಿ ಅವರ ಸಾಹಿತ್ಯ' ಸಮಗ್ರತೆಗೆ ಗಮನಕೊಟ್ಟರೆ, 'ರಾಮಾಯಣ ದರ್ಶನಂ', 'ಸಖೀಗೀತ', 'ಸಮರಸವೇ ಜೀವನ' ಪ್ರಬಂಧಗಳು ಕೃತಿನಿಷ್ಠ ಬರವಣಿಗೆಗಳಾಗಿವೆ. ಬೇಂದ್ರೆಸುನೀತ, ಕಾರಂತರ ಪ್ರಬಂಧ ಮೊದಲಾದವು ಒಂದು ಸಾಹಿತ್ಯ ಪ್ರಕಾರವನ್ನು ತೆಕ್ಕೆಗೆ ತೆಗೆದುಕೊಂಡು ನಡೆಸಿದ ವಿಮರ್ಶೆಯ ಫಲಗಳೆನಿಸಿವೆ. ಇಲ್ಲಿಯೇ ಕಂಡು ಬರುವ 'ಮಾಸ್ತಿಯವರ ನಮ್ಮ ಮೇಷ್ಟ್ರು ಕಥೆಯಲ್ಲಿ ಕಾಲಪ್ರಜ್ಞೆ', ಭೈರಪ್ಪನವರ ಕಾದಂಬರಿಗಳಲ್ಲಿ ಪ್ರೇಮದ ಪರಿಕಲ್ಪನೆ' ತುಂಬ ವಿಶಿಷ್ಟ ಬರಹಗಳಾಗಿವೆ. ಒಟ್ಟಿನಲ್ಲಿ ಈ ಸಂಕಲನದ ಹೃದಯವೆನಿಸಿದೆ, ಈ ವಿಭಾಗ.

'ನವೋದಯ ಕವಿತೆಗಳಲ್ಲಿ ಕಾವ್ಯಮೀಮಾಂಸೆ', 'ಹಾ.ಮಾ.ನಾ. ಸಾಹಿತ್ಯ ಮೀಮಾಂಸೆಯ ವಿಚಾರಗಳು' ಹಾಗೂ 'ಶಿವರುದ್ರಪ್ಪ ಅವರ ಕವಿತೆಗಳಲ್ಲಿ ಕಾವ್ಯಮೀಮಾಂಸೆ' ವಿಚಾರಗಳನ್ನೊಳಗೊಂಡಿದೆ, 'ಸಾಹಿತ್ಯಮೀಮಾಂಸೆ' ವಿಭಾಗ. ಇಲ್ಲಿಯೇ ಕಣವಿ ಕಾವ್ಯಧೋರಣೆ, ಎನ್ಕೆಸಾಹಿತ್ಯ ವಿಮರ್ಶಾ ಕೊಡುಗೆಗಳನ್ನೂ ನಾವು ಗ್ರಹಿಸಿದರೆ,

ಡಾ. ಹೆಗಡೆ ಅವರು ಎತ್ತಿಕೊಳ್ಳುವ ವಿಷಯವೈಶಿಷ್ಟ್ಯ ಮನವರಿಕೆಯಾಗುತ್ತದೆ. ನಮ್ಮ ಸಮಕಾಲೀನ ಮಹತ್ವದ ಸಾಹಿತಿಗಳಾದ ಇವರು ಸಾಹಿತ್ಯಮೀಮಾಂಸೆ, ವಿಮರ್ಶೆಗಳ ಬಗೆಗೆ ತಳೆದ ನಿಲುವುಗಳೇನು? ಎಂದು ಪ್ರಶ್ನಿಸಿ ಪಡೆದ ಉತ್ತರಗಳು ಇಲ್ಲಿವೆ.

ಹೀಗೆ ಹಲವು ಮಗ್ಗಲುಗಳನ್ನು ಹೊಂದಿರುವ 'ಸಾಹಿತ್ಯ ಮತ್ತು ಸಹೃದಯತೆ'ಯಲ್ಲಿ ಶ್ರಮವಿದೆ, ಶ್ರದ್ಧೆಯಿದೆ. ಈ ಕಾರಣಗಳಿಂದಾಗಿ ಈ ಕೃತಿ ಕನ್ನಡಕ್ಕೆ ಒಂದು ಹೊಸ ಸೇರ್ಪಡೆಯೆನಿಸಿದೆ. ಅದಕ್ಕಾಗಿ ಡಾ. ಹೆಗಡೆಯವರು ಅಭಿನಂದನಾರ್ಹರಾಗಿದ್ದಾರೆ.

ಜಿ. ಎಂ. ಹೆಗಡೆ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೧೬೭

ವಚನ ಪ್ರಸಾದ

೧೯೯೭

ನವೋದಯ ಸಾಹಿತ್ಯಸಂದರ್ಭದಲ್ಲಿ ಶಿಕ್ಷಕಸಾಹಿತಿಗಳ ದುಡಿಮೆ ಸಣ್ಣದೇನಲ್ಲ. ಉತ್ತರ ಕರ್ನಾಟಕದ ಮಟ್ಟಿಗಂತೂ ಗಂಗಾಧರ ಮಡಿವಾಳೇಶ್ವರ ತುರಮರಿ, ವೆಂಕಟರಂಗೋ ಕಟ್ಟಿ ಮೊದಲಾದ ಶಿಕ್ಷಕರು ನವೋದಯಕ್ಕೆ ನಾಂದಿಹಾಡಿ, ಹೊಸ ಸಾಹಿತ್ಯದ ವಾತಾವರಣವನ್ನು ನಿರ್ಮಿಸಿದರೆ, ಸಿಂಪಿ ಲಿಂಗಣ್ಣ, ಮಿರ್ಜಿ ಅಣ್ಣಾರಾಯ ಮೊದಲಾದವರು ಆ ಪರಂಪರೆಯ ಸಮರ್ಥ ವಾರಸುದಾರರಾಗಿ ಬೆಳೆದರು. ಈ ಸಾಲಿನಲ್ಲಿ ತಪ್ಪದೇ ನೆನೆಯಬೇಕಾದ ಇನ್ನೊಂದು ಅಜ್ಞಾತ ಹೆಸರು, ಶ್ರೀ ಸಂಗಮೇಶ ಹೊಸಮನಿ.

ವಿಜಾಪುರ ಜಿಲ್ಲೆಯ "ಹಲಸಂಗಿ ಗೆಳೆಯರು" ಸಾಹಿತ್ಯಕ್ಷೇತ್ರದಲ್ಲಿ ಒಂದು ಪವಾಡವನ್ನೇ ಸೃಷ್ಟಿಸಿದರು. ಆ ಪರಿಸರದ ಒಬ್ಬ ಪ್ರತಿನಿಧಿಯೆಂಬಂತೆ ಬೆಳೆದ ಹೊಸಮನಿ ಅವರಲ್ಲಿ ಮಧುರಚೆನ್ನರ ಅನುಭಾವವಿದೆ, ಲಿಂಗಣ್ಣನವರ ದೇಶೀಯತೆಯಿದೆ, ಸ್ವಪ್ರತಿಭೆಯ ಸಂಪತ್ತೂ ಇದೆ. ಪ್ರಸಾರ ಸೌಕರ್ಯದ ಕೊರತೆ, ಅಸಾಹಿತ್ಯಿಕ ವಾತಾವರಣಗಳು ಕಾರಣವಾಗಿ ಇವರು ಶ್ರೀಮಂತ ಚೈತನ್ಯದ ಬಡ ಮಕ್ಕಳಂತೆ ಅಪ್ರಸಿದ್ಧರಾಗಿ ಉಳಿದರೆಂದೇ ನನ್ನ ಅನಿಸಿಕೆ.

"ನಿಮ್ಮ ಕವಿತೆಯಲ್ಲಿ ಜೀವಕಳೆಯಿದೆ. ನಾನು ಮುಖ್ಯವಾಗಿ ಇದನ್ನೇ ನೋಡುತ್ತಿರುತ್ತೇನೆ. ತಪ್ಪು, ಒಪ್ಪುಗಳ ಪ್ರಶ್ನೆ ಮುಖ್ಯವಲ್ಲ" - ಶ್ರೀ ಹೊಸಮನಿ ಅವರ "ಪುಷ್ಪಗುಚ್ಛ" ಕವನಸಂಕಲನಕ್ಕೆ ಮುನ್ನುಡಿ ಬರೆಯುತ್ತ ಶ್ರೀ ಮಧುರಚೆನ್ನರು ಆಡಿದ ಮಾತಿದು. ವೃದ್ಧಾಪ್ಯದಲ್ಲಿಯೂ ಶ್ರೀ ಹೊಸಮನಿ ಅವರ ಬರೆವಣಿಗೆ ಬತ್ತದಿರುವುದಕ್ಕೆ ಮುಖ್ಯ ಕಾರಣ, ಅವರೊಳಗಿರುವ ಆ 'ಜೀವಕಳೆ.'

ಶ್ರೀ ಹೊಸಮನಿ ಅವರು ಭಾವಗೀತೆಯ ಕವಿಯಾಗಿ ಬಿಚ್ಚಿಕೊಂಡು ವಚನಕವಿಗಳಾಗಿ, ಉತ್ತಮ ವಚನಕವಿಗಳಾಗಿ ಬೆಳೆದಿದ್ದಾರೆ. ಇದಕ್ಕೆ ಮುಖ್ಯ ಕಾರಣ ವಚನವ್ಯಾಸಂಗ, ಆಧ್ಯಾತ್ಮಿಕ ನಿಲವು ಮತ್ತು ಕೂಡಲಸಂಗಮದ ಪ್ರಭಾವ. ಶಿಕ್ಷಕರಾಗಿದ್ದ ಇವರು ಕೃಷಿಕರಾಗಿ ಮುಂದುವರಿದುದೂ ಒಂದು ಅನುಕೂಲವಾಗಿ ಪರಿಣಮಿಸಿ, "ನೂರೊಂದು ವಚನ", "ವಚನತೀರ್ಥ"ಗಳ ವಾರಸುಕೃತಿಯಾಗಿ ಪ್ರಸ್ತುತ "ವಚನಪ್ರಸಾದ" ಬೆಳಕಿಗೆ ಬರುತ್ತಲಿದೆ.

"ವಚನ" ಕನ್ನಡ ಸಾಹಿತ್ಯಸಂದರ್ಭದಲ್ಲಿ ಒಂದು ಧ್ವನಿಪೂರ್ಣ ಹೆಸರು. ಮೂಲತಃ "ಗುರುವಿನಲ್ಲಿ ಉತ್ಪತ್ತಿ, ಲಿಂಗದಲ್ಲಿ ಸ್ಥಿತಿ, ಜಂಗಮದಲ್ಲಿ ಐಕ್ಯ" - ಈ ಮೌಲ್ಯವನ್ನು ಆಳುವವರಿಂದ, ಬಾಳುವವರಿಂದ ಸೃಷ್ಟಿಯಾದ, ಸೃಷ್ಟಿಯಾಗಬೇಕಾದ ಸಾಹಿತ್ಯವಿದು. ಅಂದರೆ ಇದು ಕೇವಲ ಕವಿಗಳ "ಭಾವಸಾಹಿತ್ಯ"ವಲ್ಲ,

ಆಚಾರ್ಯರ "ಆತ್ಮಸಾಹಿತ್ಯ"ವಲ್ಲ, ದಾಸೋಹಿಗಳ "ಅನುಭಾವ ಸಾಹಿತ್ಯ." ಹನ್ನೆರಡನೆಯ ಶತಮಾನದ ವಚನಸಾಹಿತ್ಯದ ಸ್ವರೂಪ ಈ ರೀತಿಯದ್ದಾಗಿದೆ.

ಇಂದು ಈ ಎಲ್ಲ ಲಕ್ಷಣಗಳು ಕಳೆದುಹೋಗಿ, ವಚನವೆನ್ನುವುದು ಒಂದು ಸಾಹಿತ್ಯ ಪ್ರಕಾರವೆಂಬಂತೆ ಆಕಾರ ಪಡೆಯುತ್ತಲಿದೆ. ಪ್ರಾಚೀನ ಚಂಪೂ, ಷಟ್ಪದಿ ಮೊದಲಾದ ಪ್ರಕಾರಗಳು ಇಂದಿನ ಕಾಲದಲ್ಲಿ ಮುಂದುವರಿಯದೆ, ವಚನ ಮಾತ್ರ ಮುಂದುವರಿಯಿತು. ಇದಕ್ಕೆ ಕಾರಣ ಅವು ಬದ್ಧರಚನೆ, ಇದು ಮುಕ್ತರಚನೆ. ಅವು ಸ್ಥಾವರ, ಇದು ಜಂಗಮ. ಹೀಗಾಗಿ "ಸ್ಥಾವರಕ್ಕಳಿವುಂಟು" ಎಂಬಂತೆ ಅವು ಅಳಿದುಹೋದವು. "ಜಂಗಮಕ್ಕಳಿವಿಲ್ಲ"ವೆಂಬಂತೆ ಇದು ಬೆಳೆದುಬಂದಿತು. ಈ ದಾರಿಯಲ್ಲಿ ಕಾಣಿಸಿಕೊಂಡ ಮೊದಲ ಆಧುನಿಕ ವಚನಕೃತಿ, ಶ್ರೀ ಹರ್ಡೇಕರ ಮಂಜಪ್ಪನವರ "ಜನಸೇವಕನ ವಚನಗಳು" (೧೯೩೨). ಆ ಬಳಿಕ ಎಸ್. ವಿ. ರಂಗಣ್ಣ, ಸಿದ್ಧಯ್ಯ ಪುರಾಣಿಕ, ಮಹಾದೇವ ಬಣಕಾರ ಮೊದಲಾದವರ ಪ್ರಬುದ್ಧ ಪ್ರಯತ್ನಗಳಿಂದಾಗಿ "ಆಧುನಿಕ ವಚನಸಾಹಿತ್ಯ"ವೆಂಬ ಸ್ವತಂತ್ರಪ್ರಕಾರವೇ ನಮ್ಮಲ್ಲಿ ಬೆಳೆದುನಿಂತಿದೆ. ಈ ಗಣ್ಯವಚನಕಾರರ ಸಾಲಿನಲ್ಲಿ ನಿಲ್ಲುತ್ತಾರೆ, ಶ್ರೀ ಹೊಸಮನಿ ಸಂಗಮೇಶ ಅವರು.

* * *

"ವಚನ ಪ್ರಸಾದ" ಶ್ರೀ ಹೊಸಮನಿ ಅವರ ಮಹತ್ವಾಕಾಂಕ್ಷಿ ಕೃತಿ. ಸಾವಿರದಷ್ಟು ವಚನಗಳ ಬೃಹತ್ ಕೃತಿ. ಸಾಹಿತ್ಯವೆನ್ನುವುದು ವೈಯಕ್ತಿಕತೆ, ಸಾಮಾಜಿಕತೆ, ಮಾನವೀಯತೆ - ಈ ಮೂರು ನೆಲೆಗಳಲ್ಲಿ, ಸ್ವಬೋಧ ಪರಬೋಧ ಧ್ವನಿಗಳಲ್ಲಿ, ಉತ್ತಮಪುರುಷ -ಪ್ರಥಮಪುರುಷ ತಂತ್ರಗಳಲ್ಲಿ, ಸಾಮಾನ್ಯ-ನಿರ್ದಿಷ್ಟ ರೀತಿಗಳಲ್ಲಿ ಬಿಚ್ಚಿಕೊಳ್ಳುತ್ತದೆ. ಈ ಎಲ್ಲ ಆದರ್ಶಗಳ ಬೆಳಕಿನಲ್ಲಿ ಶ್ರೀ ಹೊಸಮನಿಯವರ ವಚನಗಳು ಆಕಾರ ಪಡೆದಿವೆ.

ಇಂದು ಯಾರೇ ವಚನ ಬರೆದರೂ ಹನ್ನೆರಡನೆಯ ಶತಮಾನದ ವಚನಪ್ರಭಾವದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಹೀಗಿದ್ದೂ ಆ ಪ್ರಭಾವವನ್ನು ಸೃಜನಶೀಲವಾಗಿ ಬಳಸಿಕೊಳ್ಳುವಲ್ಲಿ ಕವಿಯ ಸಾರ್ಥಕತೆ ಇರುತ್ತದೆ.

ಬಿಸಿನೀರಿಗೆ ಬೆಂಕಿ ಎನಬಹುದೇ? ಬಾರದಯ್ಯಾ
ಬೆಂಕಿಗೆ ವಡಬಾಗ್ನಿ ಎನಬಹುದೇ? ಬಾರದಯ್ಯಾ
ವಡಬಾಗ್ನಿಗೆ ನಿಮ್ಮ ಹಣೆಗಣ್ಣೆನಬಹುದೇ? ಬಾರದಯ್ಯಾ
ಹಣೆಗಣ್ಣಿಗೆ ನೀವೆನಬಹುದೇ? ಬಾರದಯ್ಯಾ
ಬೆಂಕಿಗೆ ಬೆಂಕಿ ನೀನು
ಶಾಂತಿಗೆ ಶಾಂತಿ ನೀನು
ಸಕಲವೂ ನಿನ್ನಿಂದ, ಸರ್ವವೂ ನೀನಾಗಿದ್ದರೂ
ಅವಿರಳ-ನಿರಾಳ, ನಿಶ್ಚಿಂತ-ಪ್ರಶಾಂತ ನೀನು
ಶ್ರೀ ಸಂಗಮನಾಥಯ್ಯಾ,
ಈ ನಿಮ್ಮ ಗುಡುಗು-ಬೆಡಗು ಕಂಡು
ಬೆರಗಾದೆನಯ್ಯಾ (೧೧೭)

ಇದು ಬಸವಣ್ಣನವರ "ಕರಿಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯ" ಎಂಬ ವಚನದ ಪ್ರಭಾವದಲ್ಲಿ ಪ್ರಾರಂಭವಾದರೂ ಮುಂದೆ ಪಡೆದುಕೊಳ್ಳುತ್ತ ಹೋದ ಹಂತ, ತೆಗೆದುಕೊಂಡ ತಿರುವು, ಕಂಡ ಕಾಣ್ಕೆಗಳಲ್ಲಿ ಶ್ರೀ ಹೊಸಮನಿ ಅವರ ಹೊಸತನ ಗೋಚರಿಸುತ್ತದೆ. ಬೆಂಕಿಯಂತೆ ಸುಡುವ ಇದು, ತಂಗಾಳಿಯಂತೆ ತಿರುವು

ಪಡೆದ ರೀತಿಯಲ್ಲಿ ಕವಿತ್ವವಿದೆ, ದಾರ್ಶನಿಕತೆಯೂ ಇದೆ. ಬೆಳೆದುನಿಂತ ಶರಣರ ವಚನವೃಕ್ಷದ ಮಗ್ಗುಲಲ್ಲಿಯೂ ಹೊಸ ಚಿಗುರೊಡೆಯುವ ಬಗೆಯನ್ನು ಇವರ ಅನೇಕ ವಚನಗಳಲ್ಲಿ ಕಾಣುತ್ತೇವೆ.

ವಚನಸಾಹಿತ್ಯದ ಪ್ರಧಾನಗುಣ ಅಹಂ ನಿರಸನ ಮತ್ತು ಆತ್ಮವಿಮರ್ಶೆ. ನಾನು - ನನ್ನ ಇತ್ಯಾದಿ ಪದಗಳಿಂದ ಇಂಥ ವಚನಗಳು ಮೈಪಡೆಯುತ್ತಲೇ, ಇದಕ್ಕಾಗಿ ಶಿವನನ್ನು ಮೊರೆ ಹೊಕ್ಕಕಾರಣ ನೀನು-ನಿನ್ನ ಪದಗಳಿಂದಲೂ ಕಂಗೊಳಿಸುತ್ತವೆ.

ನುಡಿಯಲಿ ಅರಿಯದ
ನಡೆಯಲು ಬಾರದ
ಮಾಡಿಕೆಟ್ಟ ಮಡಿವಂತರು ನಾವು,
ನೋಡಿಕೆಟ್ಟ ಮತಿವಂತರು ನಾವು (೪೬)

ಅಯ್ಯಾ, ಅವರುಂಟು, ಇವರುಂಟು
ಎಲ್ಲರೊಳು ನಾನುಂಟು
ನೀನೆಲ್ಲಿ? ಶ್ರೀ ಸಂಗಮನಾಥಾ (೬೪)

ನಾ ಗಾಣದೆತ್ತು, ನೀ ಗಾಣಿಗನು
ಸುತ್ತು ಹತ್ತೇನು? ಸಾವಿರವೇನು?
ಸುತ್ತುವೆನಯ್ಯಾ ನಿಮ್ಮ ಶ್ರೀಪಾದವ.... (೪೭)

ಆತ್ಮಾವಲೋಕನದ ಇಂಥ ನೂರು ನೂರು ವಚನಗಳು ಇಲ್ಲಿ ಕಂಡುಬರುತ್ತವೆ. ಆತ್ಮೋದ್ಧಾರವೇ ಇಲ್ಲಿಯ ಮುಖ್ಯ ಗುರಿಯಾಗಿರುವುದರಿಂದ ಇವುಗಳನ್ನು ವ್ಯಕ್ತಿ ಕೇಂದ್ರಿತ ವಚನಗಳೆಂದು ಕರೆಯಬಹುದು.

ವ್ಯಕ್ತಿ ಬದುಕಬೇಕಾದುದು ಸಮಾಜದಲ್ಲಿ. ಇಲ್ಲಿ ವ್ಯಕ್ತಿ ಸದಸ್ಯನಾಗಿ ಮಾರ್ಪಡುತ್ತಾನೆ. ಹೀಗೆ ತಾನು ಸದಸ್ಯನಾಗಿರುವ ಸಮಾಜದ ಶುದ್ಧೀಕರಣವೂ ಅವನಿಗೆ ಅನಿವಾರ್ಯವಾಗುತ್ತದೆ. ಇಂಥಲ್ಲೆಲ್ಲ ಸಮಾಜಕೇಂದ್ರಿತ ವಚನಗಳು ಹುಟ್ಟಿಕೊಳ್ಳುತ್ತವೆ. ವ್ಯಕ್ತಿಕೇಂದ್ರಿತ ವಚನಗಳಲ್ಲಿ ಒಳಮುಖಿ ವಿಮರ್ಶೆಯಿದ್ದರೆ, ಸಮಾಜಕೇಂದ್ರಿತ ವಚನಗಳಲ್ಲಿ ಹೊರಮುಖಿ ವಿಮರ್ಶೆಯಿರುತ್ತದೆ. ಸಮಾಜವೆನ್ನುವುದು ವರ್ಣ, ವರ್ಗ, ಲಿಂಗ, ದೇಶ, ಭಾಷೆ, ಧರ್ಮ, ನಂಬಿಕೆ, ಆಚರಣೆ, ಕ್ರಿಯೆ ಮೊದಲಾದವುಗಳ ನೆಲಗಟ್ಟಿನ ಮೇಲೆ ಜನಸಮೂಹ ರೂಪಿಸಿರುವ ಒಂದು ವ್ಯವಸ್ಥೆ. ಇವುಗಳ ಗುಣ-ದೋಷಗಳಿಗೆ ಪ್ರತಿಕ್ರಿಯಿಸಿದ ಸಮಾಜವಿಮರ್ಶೆ ಈ ಗ್ರಂಥದ ಪ್ರತಿ ಪುಟಗಳಲ್ಲಿ ಕಂಡುಬರುತ್ತಿದೆ.

ಯಾವ ಜನುಮದ ಪಾಪಕ್ಕಾಗಿ ಈ ಹೆಸರು?
ಹರಿಜನ ಗಿರಿಜನರೆಂದು
ಯಾವ ಜನುಮದ ಶಾಪಕ್ಕಾಗಿ ಈ ಹಿಂಸೆ
ಮುಟ್ಟದಿರಿ, ಮುಟ್ಟರಿದಿಯೆಂದು (೬೪೮)

ಇದು ಜಾತಿ ಆಧಾರಿತ ಸಮಾಜರಚನೆಯನ್ನು ಕಂಡು ಆಡಿದ ಬೇಸರದ ನುಡಿ.

ಬಚ್ಚಲ ಮನೆಗೆ ಅಮೃತಶಿಲೆಯ ಸಿಂಗಾರ
ದೇವರ ಜಗುಲಿಯ ಧೂಳು ಜಾಡಿಸುವರೆಷ್ಟು ಜನ?

ಮಾಯೆಗೆ ಮಸ್ತಕಾಭಿಷೇಕದ ಪೂಜೆ
ತಾಯ್ಗುರುಳಿಗೆ ಕಾಟಿ ಕುಡಿಸುವರೆಷ್ಟು ಜನ? (೬೬೨)

ಮನೆಯುಂಟು, ಬೆಳಕಿಗೆ ಎಣ್ಣೆಯಿಲ್ಲ
ಕೊಡವುಂಟು, ತರಲು ನೀರಿಲ್ಲ
ಹಣವುಂಟು, ರೇಶನ್ ಅಂಗಡಿಯಲ್ಲಿ ಕಾಳಿಲ್ಲ (೬೨೩)

ಎಣ್ಣೆಯೊಳು ನೀರಿನ ಬೆರಕೆ
ಕಾಳು ಬೇಳೆಯಲಿ ಹರಳಿನ ಬೆರಕೆ
ಹಿಟ್ಟಿನಲಿ ಹೊಟ್ಟು, ಗೊಬ್ಬರ ಸಿಮೆಂಟಿನಲಿ ಬೂದಿ (೬೨೪)

ಎಂಬಂಥ ವಚನಗಳಲ್ಲಿ ಸಮಕಾಲೀನ ಸಮಾಜದ ಚಿತ್ರಗಳಿವೆ. ಅವುಗಳ ಹಿಂದೆ ನೋವುಗಳಿವೆ. ಈ ಬಗೆಯ ವಚನಗಳು ಸಾಮಾಜಿಕ ಅಧ್ಯಯನಕ್ಕೆ ಸಮೃದ್ಧ ಸಾಮಗ್ರಿಯನ್ನು ಪೂರೈಸುತ್ತವೆ.

ಹೀಗೆ ವ್ಯಕ್ತಿ, ಸಮಾಜಗಳನ್ನಲ್ಲದೆ ಈ ವಚನಗಳು ವ್ಯಾಪಿಸಿರುವ ಇನ್ನೊಂದು ಕ್ಷೇತ್ರವೆಂದರೆ ಮಾನವೀಯತೆ. ಶ್ರೀ ಹೊಸಮನಿಯವರ ವಚನಗಳಲ್ಲಿ ಈ ಮೌಲ್ಯನೀತಿ ದೊಡ್ಡ ಪ್ರಮಾಣದಲ್ಲಿ ಕಂಡುಬರುತ್ತದೆ.

ಈ ಬಾಳಸಂತೆಯೊಳೆ ದುಡಿದು ಪಡೆದಷ್ಟು
ಲೆಕ್ಕಹಾಕುತ ನೀನು ರೊಕ್ಕ ಬಳಸು
ಅನ್ಯರನು ಬಾಯ್ಬಿಟ್ಟು ಬೇಡೀಯಾ ಜೋಕೆ
ಬಲವಿರಲು ದುಡಿದುಣ್ಣು, ಒಣ ಚಿಂತೆಯೇಕೆ?
ಅಯ್ಯಾ, ದೂರ ದಾರಿಯ ಪಯಣ,
ಹೆಗಲ ಬುತ್ತಿಯ ಗಂಟು,
ಬಗಲ ಬಿಂದಿಗೆ ನೀರು
ಕತ್ತಲಾಗದ ಮುನ್ನ ಧರ್ಮಶಾಲೆಯ ಸೇರು
ಪಥಿಕ........(೫೭)

ಇಂಥ ವಚನಗಳು ನಮ್ಮ ಕಣ್ಣು ತೆರೆಯಿಸಿ, ನಿಜವಾದ ಜೀವನಮೌಲ್ಯವನ್ನು ಎದುರು ನಿಲ್ಲಿಸುತ್ತವೆ. ಇಲ್ಲೆಲ್ಲ ಬಾಳ್ವೆ, ಸಹಬಾಳ್ವೆ, ವಿಶ್ವಕುಟುಂಬಿತ್ವದ ಆಶಯ ಎದ್ದು ತೋರುತ್ತದೆ.

* * *

ವಾಕ್ಯ ಕಾವ್ಯವಾಗುವುದು ಉತ್ಕಟನೆಯ ನೆಲೆಯಲ್ಲಿ. ಆಗ ಅದು ತಾನಾಗಿಯೇ ಕಲೆಯ ಎಲ್ಲ ಅಂಶಗಳನ್ನು ಜೋಡಿಸಿಕೊಳ್ಳುತ್ತದೆ. ಸ್ವಭಾವೋಕ್ತಿಯಲ್ಲಿ, ತಪ್ಪಿದರೆ ಮಿಕ್ಕ ಅರ್ಥಾಲಂಕಾರಗಳಲ್ಲಿ ಪ್ರಕಟವಾಗುತ್ತದೆ; ಶಬ್ದಾಲಂಕಾರಗಳಿಂದ ಶ್ರುತಿಸುಭಗವಾಗುತ್ತದೆ. ವಚನಗಳಲ್ಲಿಯಂತೂ ಆಡುಮಾತಿನ ಲಯದ ಸಮತೋಲನ, ಪ್ರಶ್ನೆ ಇಲ್ಲವೆ ಉತ್ತರ, ಪ್ರಶ್ನೋತ್ತರ, ನಿಷೇಧ ಇಲ್ಲವೆ ಆಶ್ಚರ್ಯ ಇತ್ಯಾದಿಗಳು ಹೆಚ್ಚಿನದಾಗಿ ಗರಿಗಟ್ಟಿ ನಿಲ್ಲುತ್ತವೆ.

ಸುತ್ತಲಾಗದ ಗುಡಿಯು,
ಕೆತ್ತಲಾಗದ ಮೂರ್ತಿ,
ಕತ್ತಲಾಗದ ಬೆಳಕು ನೀನಯ್ಯಾ..... (೩೭)

ಹೂವು ಮುಡಿಯುವರುಂಟು, ಬೇವು ಮುಡಿಯುವರುಂಟೆ?
ನೋವು ನುಂಗಲುಬಹುದು, ಸಾವು ನುಂಗುವರುಂಟೇ?..... (೭೬೧)

ವಚನಕಾರರ ಮಾತಿನ ಓಟ-ಮಾಟಗಳೆಲ್ಲ ಇಲ್ಲಿ ಪ್ರತಿಫಲಗೊಂಡಿವೆ. "ಕತ್ತಲಾಗದ ಬೆಳಕು ನೀನಯ್ಯಾ" ರಚನೆಯ ದೃಷ್ಟಿಯಿಂದಷ್ಟೇ ಅಲ್ಲ, ಅರ್ಥದೃಷ್ಟಿಯಿಂದಲೂ ಆಳವಾಗಿರುವ ಅಭಿವ್ಯಕ್ತಿಯಾಗಿದೆ.

ಹಾದಿ ತಪ್ಪಿದ ಮೇಲೆ ಊರ ಮುಟ್ಟುವುದೆಂತು?
ಗುರಿಯು ತಪ್ಪಿದ ಬಳಿಕ ಗುಂಡು ಬಡಿಯುವುದೆಂತು?.... (೩೦೪)

ಕಡಲುಕ್ಕು ತಡೆಯಬಹುದು
ಒಡಲುಕ್ಕು ತಡೆಯುವುದೆಂತಯ್ಯಾ?..... (೫೬೩)

ಹೀಗೆ ಪ್ರಶ್ನೆ ಭೂಮಿಕೆಯಲ್ಲಿ ಮೇಲೇಳುವ ಈ ವಚನಗಳು ತಮ್ಮ ಸೊಗಸಾದ ಶಿಲ್ಪ, ಅನನ್ಯ ಅನುಭವಗಳಿಂದಾಗಿ ನಮ್ಮನ್ನು ಸಮ್ಮೋಹನಗೊಳಿಸುತ್ತವೆ. ಇವರ ಎಲ್ಲ ವಚನಗಳನ್ನು ವರ್ಗೀಕರಿಸಿ ರಾಚನಿಕ ಅಧ್ಯಯನ ನಡೆಸಿದರೆ, ಅನೇಕ ಸಂಖ್ಯೆಯ ವಿನ್ಯಾಸಗಳು ಪ್ರಕಟವಾಗಬಹುದಾಗಿದೆ.

ಮೂಲತಃ ಹೊಸಮನಿಯವರು ಭಾವಗೀತೆಯ ಕವಿ. ಆದರ್ಶ, ರಮ್ಯತೆ, ಭಕ್ತಿ, ಶೃಂಗಾರ, ಮಾನವೀಯತೆ ಭಾವಗೀತೆಯ ಈ ಎಲ್ಲ ಲಕ್ಷಣಗಳು ಅವರ ವಚನಗಳಲ್ಲಿ ಸಹಜವಾಗಿಯೇ ಮೈವೆತ್ತಿವೆ. ಕೆಲವು ವಚನಗಳನ್ನು ಓದುತ್ತಿದ್ದಂತೆಯೇ ಸುಂದರ ಭಾವಗೀತೆಗಳನ್ನು ಓದಿದ ಅನುಭವವುಂಟಾಗುತ್ತದೆ.

ಈ ದೂರ ದಾರಿಯನು ಯಾರು ತೋರಲು ಬೇಕು?
ದಾರಿ ತಪ್ಪಿದ ಅರಿವು ನಮಗಾಗಬೇಕು
ಬರುವವರ ಹೋದವರ ಬಾಯ್ಬಿಟ್ಟು ಕೇಳಿ
ಬಲ್ಲವರು ಹೇಳಿದುದ ನೆನಪಿಟ್ಟು ತಾಳಿ
ಹೆಗಲ ಭಾರವ ಹೊತ್ತು
ಕಣಿವೆ ಕಂದರ ದಾಟಿ
ಗುಡ್ಡ ಬೆಟ್ಟಗಳೇರಿ
ಅಡ್ಡದಾರಿಯ ಬಿಟ್ಟು ಸಾಗಬೇಕಯ್ಯಾ..... (೧೫)

ಹೀಗೆ ಸಾಗುವ ಈ ವಚನ ಒಂದು ಪರಿಪೂರ್ಣ ಭಾವಗೀತೆಯಾಗಿಯೇ ಬೆಳೆದಿದೆ.

ಹೊಂಗಿರಣ ಹೊಳೆ ಈಸಿ
ತಂಗಾಳಿ ತೊಡೆಯೇರಿ
ಮುಂಗೋಳಿ ಕೂಗುತಿಹುದು..... (೫೮)

ಈ ಬನದ ಮಲ್ಲಿಗೆಗೆ ಉಸುರು ತಾಗದಿರಲಿ,
ಉರಿ ಬಿಸಿಲು ಸೋಂಕದಿರಲಿ
ಈ ಗಿರಿನವಿಲ ಬಣ್ಣ ಮಾಸದಿರಲಿ
ಕುಣಿತ ಹಿಂಗದಿರಲಿ... (೨೮೪)

ಇಲ್ಲೆಲ್ಲ ಭಾವಗೀತೆಯ ರಮ್ಯರಚನೆ, ಕಲಾಸೂಕ್ಷ್ಮತೆಗಳನ್ನು ಕಾಣಬಹುದು.

ಕಾದ ಹಂಚಿನ ಮೇಲೆ ಕೈಯ್ಯಾಡಿಸುವ ಕಾಮ
ಹರಿವ ಕರಗಸಕೆ ಮೈಯಾಡಿಸುವ ಕ್ರೋಧ
ಮಂಜಿನ ನೀರನು ಕುಡಿಯ ಬಯಸುವ ಮೋಹ . . . . (೩೨೫)

ಇಲ್ಲಿಯ ಅಭಿವ್ಯಕ್ತಿ ದಟ್ಟವೂ, ಪರಿಣಾಮಕಾರಿಯೂ ಆಗಿದೆ. ಇಂಥ ಅನುಭೂತಿ, ಅಭಿವ್ಯಕ್ತಿಗಳೇ ಅಧಿಕ ಪ್ರಮಾಣದಲ್ಲಿರುವುದರಿಂದ ಶ್ರೀ ಹೊಸಮನಿ ಅವರ ರಚನೆಗಳು "ಭಾವಗೀತಾತ್ಮಕ ವಚನ"ಗಳೆನಿಸುತ್ತವೆ.

ಸಾಹಿತಿ, ವಿಮರ್ಶಕ, ಸಹೃದಯರೊಂದಿಗೆ ಕವಿ ಹೆಚ್ಚು ಮುಖಾಮುಖಿಯಾದಷ್ಟು ಅವನ ರಚನೆಗಳು ಉತ್ತಮ ಶಿಲ್ಪವಾಗಿ ಬೆಳೆಯುತ್ತವೆ. ಈ ದೃಷ್ಟಿಯಿಂದ ಶ್ರೀ ಹೊಸಮನಿ ಅವರು ಅದೃಷ್ಟವಂತರಲ್ಲ. ಹಳ್ಳಿಯ ವಾತಾವರಣ, ಬಿಡುವಿಲ್ಲದ ಕೃಷಿ ದುಡಿಮೆ- ಇವೆಲ್ಲವುಗಳ ನಡುವೆ ಸಾಹಿತ್ಯಕೃಷಿಗೆ, ಚಿಂತನೆಗೆ ಸಮಯವೆಲ್ಲಿ? ಹೀಗಿದ್ದೂ ಇದ್ದುದರಲ್ಲಿಯೇ ಬಿಡುವುಮಾಡಿಕೊಂಡು, ತನಗೆ ತಾನೇ ಮುಖಾಮುಖಿಯಾಗಿ ಬರೆದ ವಚನಗಳಿವು. ಪ್ರತಿಕ್ರಿಯೆಯ ಉಳಿಹಚ್ಚದ ಸ್ವಯಂಭೂಲಿಂಗ ಮಾದರಿಯ ಸೃಷ್ಟಿಗಳಿವು. ಸ್ವಯಂಭೂಲಿಂಗವನ್ನು ನಿರ್ಮಾಣಲಿಂಗದ ಶಿಸ್ತಿಗೆ ಒಳಪಡಿಸುವಂತೆ ಅಲ್ಲಲ್ಲಿ ವಚನರಚನೆಯನ್ನು ಕಠಿಣ ಶಿಸ್ತಿಗೆ ಒಳಪಡಿಸಬೇಕಾಗಿದ್ದಿತು.

ಇನ್ನೊಂದು ವಿಷಯ : ಇಂಥ ಸಂಪುಟವನ್ನು ಹೊರತರುವಾಗ ಆಯ್ಕೆ ಮುಖ್ಯವಾಗುತ್ತದೆ. ಏಕೆಂದರೆ ಸ್ಫುರಣಗೊಂಡ ಭಾವ ಹರಳುಗಟ್ಟುವಲ್ಲಿ ಎಷ್ಟೇ ಶಿಸ್ತಿಗೆ ಗುರಿಪಡಿಸಿದರೂ ಉತ್ತಮ ರಚನೆಗಳೊಂದಿಗೆ ಕೆಲವೊಮ್ಮೆ ಅನುತ್ತಮ ರಚನೆಗಳೂ ಆಕಾರಪಡೆಯುತ್ತವೆ. ಅನುಭವದಲ್ಲಿ ಗಾಢತೆ, ಶಿಲ್ಪದಲ್ಲಿ ಸಂಕೀರ್ಣತೆ, ಬಂಧದಲ್ಲಿ ಬಿಗುವು ಸರಿಯಾಗಿ ಸಾಕಾರಗೊಳ್ಳದೆ ಹೋಗುತ್ತವೆ. ಇಂಥ ವಚನಗಳೂ ಇಲ್ಲಿ ಕ್ವಚಿತ್ತಾಗಿ ಕಾಣುತ್ತವೆ. ಇವು ಕಾರಣವಾಗಿ ಮಗ್ಗುಲಿನ ಉತ್ತಮರಚನೆಗಳೂ ಆಕರ್ಷಣೆ ಕಳೆದುಕೊಳ್ಳುವುದರಿಂದ, ನಿಷ್ಠುರ ಆಯ್ಕೆಗೆ ಆದ್ಯತೆ ಕೊಟ್ಟಿದ್ದರೆ ಈ ಸಂಪುಟ ಇನ್ನೂ ಉತ್ತಮವಾಗುತ್ತಿದ್ದಿತು. ಈ ಕೊರತೆಗಳ ನಡುವೆಯೂ ಇದು ಒಂದು ಒಳ್ಳೆಯ ಸಂಕಲನವೆನಿಸಿದೆ. ಇದನ್ನು ರೂಪಿಸಿಕೊಡುವ ಮೂಲಕ ಶ್ರೀ ಹೊಸಮನಿಯವರು ಆಧುನಿಕ ವಚನಪ್ರಕಾರಕ್ಕೆ ಒಂದು ಉತ್ತಮ ಕೊಡುಗೆ ನೀಡಿದ್ದಾರೆ; ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಸಂಗಮೇಶ ಹೊಸಮನಿ, ರಾಮವಾಡಗಿ

ಆಕರ : ಮಾರ್ಗ ಸಂಪುಟ–೬

■■

೧೬೮

ಜಾವಳಿ ಸಮಗ್ರಕಾವ್ಯ

೧೯೯೮

ವ್ಯಕ್ತಿತ್ವ, ಕವಿತ್ವ - ಈ ಎರಡೂ ದೃಷ್ಟಿಯಿಂದ ನನ್ನ ಗಮನಸೆಳೆದ ಮಹತ್ವದ ಕವಿಗಳಲ್ಲಿ ಶ್ರೀ ಶಿವಶರಣ ಜಾವಳಿ ಪಾಟೀಲ ಅವರೂ ಒಬ್ಬರು. ವಿದ್ಯಾರ್ಥಿದೆಸೆಯಿಂದಲೂ ಹಂತಹಂತವಾಗಿ ಸುಂದರ ವ್ಯಕ್ತಿತ್ವದೊಂದಿಗೆ ಸುಂದರ ಕವಿತ್ವವನ್ನೂ ಅವರು ಬೆಳೆಸಿಕೊಂಡು ಬಂದಿರುವುದು ನನ್ನಿಂದ ಈ ಮಾತುಗಳನ್ನು ಬರೆಯಿಸುತ್ತದೆ. ಜಾವಳಿಯವರದು ತೆರೆದ ಮನಸ್ಸು. "ನಾನೇ ಕಟ್ಟಿಕೊಂಡ ಮನೆ" ಕವಿತೆಯಲ್ಲಿ ಬರುವ

ಬೇಕಾದವರು ಒಳಗೆ ಬರಲು
ಮನೆಯ ಸುತ್ತೆಲ್ಲ ಬಾಗಿಲು.
ಈ ಮನೆಗೆ ಇದೊಂದೇ ದೋಷವೆಂದು
ಕೆಲವರು ಹೇಳುತ್ತಾರೆ.
ಆದರೆ
ಮನೆಯ ಸೌಂದರ್ಯದ ರಹಸ್ಯವೇ ಇದುಯೆಂದು
ನಾನು ಮಾತ್ರ ಭಾವಿಸಿಕೊಂಡಿದ್ದೇನೆ.

ಎಂಬ ಸಾಲುಗಳು ಅವರ ಮನೆಯನ್ನು ಅಂದರೆ ಅವರ ಮನವನ್ನು ಪ್ರತಿನಿಧಿಸುತ್ತವೆ. ಇಂಥ ಸಾರ್ಥಕ ಪದ್ಯಗಳನ್ನು ೨೫ ವರ್ಷಗಳ ಹಿಂದೆ ಒಬ್ಬ ಕವಿ, ಗುಲ್ಬರ್ಗಾ ಪ್ರದೇಶದಲ್ಲಿ ಬರೆದುದೇ ಒಂದು ಸೋಜಿಗ. ಸಾಹಿತ್ಯ ನಿರ್ಮಿತಿಗೆ ವ್ಯಕ್ತಿ ಪ್ರಯತ್ನದಷ್ಟೇ ಮುಖ್ಯವಾದುದು ಸಾಹಿತ್ಯಿಕ ವಾತಾವರಣ. ಹೊಸಗನ್ನಡ ಸಾಹಿತ್ಯದ ಆರಂಭದ ಕಾಲದಲ್ಲಿ ಗುಲ್ಬರ್ಗಾ ಪ್ರದೇಶದ ಮೇಲೆ ಕತ್ತಲು ಕವಿದಿದ್ದಿತು. ಉರ್ದುವಿನ ಪ್ರಭಾವ, ಆಧುನಿಕ ಶಿಕ್ಷಣದ ಅಭಾವಗಳಿಂದಾಗಿ ನಿರ್ಮಾಣವಾಗಿದ್ದ ನಿರ್ವಾತ ಪರಿಸರದಲ್ಲಿ ಶ್ರೀ ಜಾವಳಿಯವರು ಕವಿಯಾಗಿ ಉಸಿರಾಡಿಸಲು ಆರಂಭಮಾಡಿದುದೇ ಆಶ್ಚರ್ಯ; ಆ ಪ್ರದೇಶದಲ್ಲಿ ಹೊಸಗನ್ನಡ ಸಾಹಿತ್ಯದ ಮೊದಲ ಕವಿಯಾಗಿ ತಲೆಯೆತ್ತಿದುದೇ ಒಂದು ಪವಾಡ. ಆದುದರಿಂದ ಕವಿ ಜಾವಳಿಯವರು ಒಂದರ್ಥದಲ್ಲಿ "ಸ್ವಯಂಭೂ" ಎನಿಸಿದ್ದಾರೆ. ನೇರವಾಗಿ ಯಾರ ಪ್ರಭಾವಕ್ಕೂ ಒಳಗಾಗದೆ, ತಣ್ಣನೆಯ ವ್ಯಕ್ತಿತ್ವದ ನೆಲೆಯಿಂದ ಬೆಚ್ಚನೆಯ ಕವನಗಳನ್ನು ಸೃಷ್ಟಿಸಿದ್ದಾರೆ.

ಕವಿಯಾಗಿ ಹುಟ್ಟುವುದು ಮುಖ್ಯ, ಕವಿಯಾಗಿ ಬೆಳೆಯುವುದು ಇನ್ನೂ ಮುಖ್ಯ. ಧಾರವಾಡ, ಮೈಸೂರುಗಳಂಥ ಸಾಹಿತ್ಯಿಕ ವಾತಾವರಣದಲ್ಲಿಯೂ ಕವಿಯಾಗಿ ಹುಟ್ಟಿದವರು ಬೆಳೆಯದೇ ಒಣಗಿಹೋದ

ಉದಾಹರಣೆಗಳನ್ನು ನೋಡುತ್ತೇವೆ. ಇದಕ್ಕೆ ವಿರುದ್ಧವೆನ್ನುವಂತೆ ಬಂಜರು ಭೂಮಿಯಲ್ಲಿಯೂ ಶ್ರೀ ಜಾವಳಿಯವರು ತಾವೇ ಬೀಜ-ನೀರು-ಗೊಬ್ಬರವಾಗಿ ಪಲ್ಲವಿಸುತ್ತಲೇ ಹೋದುದಕ್ಕೆ ಅವರ ಸಂಕಲನಗಳು ಸಾಕ್ಷಿ ನುಡಿಯುತ್ತವೆ. "ಹಾಲು ತೊರೆಯಿಂದ ಉಪ್ಪು ನೀರಿಗೆ" ರಮ್ಯಪಂಥದ ಸ್ಪರ್ಶವುಳ್ಳ ಸಂಕಲನ. ಬಳಿಕ ನವ್ಯಕ್ಕೆ ಹೊರಳಿ, ಆ ನೆಲೆಯಲ್ಲಿ ಗಟ್ಟಿಯಾಗಿ ಬೆಳೆದ ಅವರ ರಚನೆಗಳಲ್ಲಿ ಪ್ರಗತಿಯ ಹೆಜ್ಜೆ ಗುರುತುಗಳನ್ನು ಉದ್ದಕ್ಕೂ ಕಾಣುತ್ತೇವೆ. ಹೀಗಾಗಿ ಇವರ ಕವಿತ್ವ ನವೋದಯಕ್ಕಿಂತ ನವ್ಯದಲ್ಲಿಯೇ ತನ್ನ ಸಾರ್ಥಕತೆಯನ್ನು ಕಂಡುಕೊಂಡಿದೆಯೆನ್ನಬೇಕು.

ಯಾವುದೇ ಸಾಹಿತ್ಯಪ್ರಕಾರಕ್ಕೆ ಒಂದಕ್ಕಿಂತ ಹೆಚ್ಚು ಆಯಾಮಗಳಿರುತ್ತವೆ. ನಮ್ಮ ನವೋದಯ ಕಾಲದಲ್ಲಿ ಮೂಡಿದ ಗಣಪಾತಳಿಯ ಕುವೆಂಪುಶಿಲ್ಪ, ಲಯಪಾತಳಿಯ ಬೇಂದ್ರೆ ಶಿಲ್ಪಗಳಂತೆ, ನವ್ಯದಲ್ಲಿಯೂ ಇಂಗ್ಲಿಷ್ ನೆಲೆಯಿಂದ ಬಂದ ಗೋಕಾಕ-ಅಡಿಗರ ಜಟಿಲ-ಸಂಕೀರ್ಣಶಿಲ್ಪ, ಕನ್ನಡ ನೆಲೆಯಿಂದ ಬಂದ ಕಣವಿ-ಶಿವರುದ್ರಪ್ಪನವರ ಸಹಜ-ಸಂಕೀರ್ಣಶಿಲ್ಪಗಳ ಎರಡು ದಾರಿಗಳು ತೆರೆದುಕೊಂಡಿವೆ. ಶ್ರೀ ಜಾವಳಿ ಅವರದು ಎರಡನೆಯ ಗುಂಪಿಗೆ ಸೇರುವ ಶೈಲಿಯಾಗಿದ್ದು, ಈ ಮಾತಿಗೆ -

ಇದು ಕಾಲಮಾನದ ಪ್ರವಾಹ
ಎದುರು ಈಸಬಲ್ಲವರಾರು?
ಈಸಿ ಜೈಸಬಲ್ಲವರಾರು?
ಅದಕ್ಕೆಂದೇ
ಕೈಕಾಲು ಸಡಿಲುಬಿಟ್ಟು
ತೇಲಿ ನಡೆದಿದ್ದೇನೆ, ನಾನೂ.

ಎಂಬಂಥ ಅವರ ರಚನೆಗಳು ನಿದರ್ಶನವೆನಿಸಿವೆ. ಇಲ್ಲಿ ತುಂಡು ವಾಕ್ಯಗಳ ಕೃತಕ ಜೋಡಣೆಯಾಗಲಿ, ಮಧ್ಯಮಧ್ಯ ಅರ್ಥದ ಕಂದರಗಳಾಗಲಿ ಇಲ್ಲ. ತನ್ನಷ್ಟಕ್ಕೆ ತಾನು ಆಳವಾದ ಅರ್ಥ ತೋರಿಸುತ್ತ ಹೋಗುವ ಸಹಜ ಅಷ್ಟೇ ಸಂಕೀರ್ಣ ಶಿಲ್ಪ ಇಲ್ಲಿ ಮೈತಾಳಿದೆ.

ಶ್ರೀ ಜಾವಳಿಯವರ ಶೈಲಿಯಲ್ಲಿ ಎದ್ದುಕಾಣುವ ಇನ್ನೊಂದು ಮುಖ್ಯಲಕ್ಷಣ ಧ್ವನಿಪೂರ್ಣ ಪ್ರತಿಮಾ ನಿರ್ಮಾಣ.

ಊರಿಗಿದ್ದದ್ದು ರಂಗಮ್ಮನದೊಂದೇ
ಸಾರ್ವಜನಿಕ ಸಿಹಿನೀರಿನ ಭಾವಿ

ಈ ಸಾಲುಗಳು ಸ್ಫೋಟಿಸುವ ಅರ್ಥಪರಂಪರೆ ಪರಿಣಾಮಕಾರಿಯಾಗಿದೆ. ವಿಧವೆ ರಂಗಮ್ಮನನ್ನು ಪ್ರತಿಮಾತ್ಮಕವಾಗಿ ಚಿತ್ರಿಸುವ ಈ ಕವಿತೆ ಉದ್ದಕ್ಕೂ ಸಾರ್ವಜನಿಕ ಭಾವಿ ಮತ್ತು ಬಳಕೆದಾರರ ಸಂಬಂಧವನ್ನು ಧ್ವನಿಸುತ್ತ ಹೋಗುತ್ತದೆ. ಇದಕ್ಕೆ ಪೂರಕವೆಂಬಂತೆ ಪದ್ಯದ ತಿರುವುಗಳಲ್ಲಿ ಹುಟ್ಟಿಕೊಳ್ಳುವ ಸೂಕ್ಷ್ಮ ವಿನೋದಗಳು ಪದ್ಯದ ಲವಲವಿಕೆಯನ್ನು ಉಳಿಸಿಕೊಡುತ್ತವೆ.

ಶ್ರೀ ಜಾವಳಿಯವರದು ಪ್ರಯೋಗಶೀಲ ಕವಿಮನಸ್ಸು. ದೀರ್ಘಕವನಗಳಂತೆ ಅವರು ಅರ್ಥಪೂರ್ಣ ಹನಿಗವನಗಳನ್ನೂ ಬರೆಯಬಲ್ಲರು. ಆದರೆ ಪ್ರಯೋಗಶೀಲತೆ ವಿಶೇಷವಾಗಿ ಕಂಡುಬರುವುದು ದೀರ್ಘಕವನಗಳಲ್ಲಿಯೇ ಎಂದು ಹೇಳಬೇಕು. "ನಮ್ಮ ಭಾವೈಕ್ಯದ ಕಥೆ" ಇದಕ್ಕೆ ಉತ್ತಮ ಉದಾಹರಣೆ. ವೇದಿಕೆಯ ಭಾಷಣದ ಆರಂಭದೊಂದಿಗೆ ಮಲಗತೊಡಗಿದ ನಾಯಿ ಕ್ರಮೇಣ ಎಚ್ಚರವಾಗುತ್ತ ನಡೆದ ಕವನಶಿಲ್ಪ

ವಿನೂತನ ಪ್ರಯೋಗವೆನಿಸಿದೆ. ಇಂಥ ಹೊಸ ಹೊಸ ಕವನ ನಮೂನೆಗಳನ್ನು 'ಮೆರವಣಿಗೆ', 'ನಾವು-ಅವರು' ಇತ್ಯಾದಿ ಕವನಗಳಲ್ಲಿ ಗುರುತಿಸಬಹುದಾಗಿದೆ.

ಒಬ್ಬ ಉತ್ತಮ ಕವಿ ಉತ್ತಮ ವಿಮರ್ಶಕನೂ ಹೌದು. ತಮ್ಮ ಸಮಕಾಲೀನ ನವ್ಯಕಾವ್ಯವನ್ನು ಕುರಿತು "ಇಂದಿನ ಕಾವ್ಯವು ತನ್ನ ಬಿಗುವಿನ ಧೋರಣೆಯನ್ನು ಸಡಿಲಿಸಿಕೊಂಡು, ಸೀಮಿತ ಸಂಖ್ಯೆಯ ಓದುಗರ ಗೆರೆಯನ್ನು ಭೇದಿಸಿಕೊಂಡು, ಜನಸಾಮಾನ್ಯರ ಬಳಿಗೆ ಬರಬೇಕಾಗಿದೆ" (೧೯೭೭) ಎಂದು ಶ್ರೀ ಜಾವಳಿಯವರು ಅದಕ್ಕೆ ತೋರಿದ ಪ್ರತಿಕ್ರಿಯೆ ಸಕಾಲಿಕವಾದುದು. ಇವರ ಈ ಮಾತನ್ನು ಬಂಡಾಯದವರು ಆಮೇಲೆ ಕೃತಿಗಿಳಿಸಿದುದು ಇಂದು ಇತಿಹಾಸಕ್ಕೆ ಸೇರಿದ ಸಂಗತಿಯಾಗಿದೆ. ಈ ನವ್ಯದ ತರುವಾಯ ತೆರೆದುಕೊಂಡ ಬಂಡಾಯ ಚಲುವಳಿಯ ಬಗೆಗೂ ಶ್ರೀ ಜಾವಳಿಯವರು ಎತ್ತಿದ ಎರಡೂ ಆಕ್ಷೇಪಗಳು (೧೯೮೦) ಮನನೀಯವೆನಿಸಿವೆ; "ಇಂದಿನ ಸಾಮಾಜಿಕ ಕಾಳಜಿಗಳನ್ನು ಬರೆದರಷ್ಟೇ ಸಾಲದು, ಬರೆಯುವವನು ತನ್ನನ್ನು ಹೋರಾಟದಲ್ಲಿ ತೊಡಗಿಸಿಕೊಳ್ಳಬೇಕು. ಹಾಗೆ ತೊಡಗಿಸಿಕೊಳ್ಳದವರಿಗೆ ಬಹಿಷ್ಕಾರ" ಹೇಳುತ್ತಾರೆ, ಬಂಡಾಯ ಸಾಹಿತಿಗಳು. "ಹೋರಾಟವೆಂದರೇನು ಭಾಷಣ ಮಾಡುವುದೆ? ಘೋಷಣೆ ಕೂಗುವುದೆ?. . . . ಭಾಷಣ ಘೋಷಣೆಗಳನ್ನು ಕ್ರಿಯೆಯೆಂದು ಅಪ್ಪಿಕೊಳ್ಳುತ್ತಿರುವುದು, ಬರೆವಣಿಗೆಯನ್ನು ನಿಷ್ಕ್ರಿಯವೆಂದು ತಳ್ಳಿಹಾಕುತ್ತಿರುವುದು ತೀರಾ ವಿಚಿತ್ರ" ಎಂದು ಹೇಳಿದುದು, ಮಾತಿನ ಮಟ್ಟದಲ್ಲಿ ವ್ಯವಹರಿಸುವ ಬಂಡಾಯ ಕವಿಗಳಿಗೆ ಹಾಕಿದ ಅರ್ಥಪೂರ್ಣ ಸವಾಲಾಗಿದೆ.

ಇಂಥದೇ ಇನ್ನೊಂದು ಪ್ರಶ್ನೆ: "ಧಾರ್ಮಿಕವಾಗಿ, ಆರ್ಥಿಕವಾಗಿ ಶೋಷಣೆಗೊಳಗಾದವರೇ ಬಿದ್ದ ಜನರಿಗಾಗಿ ದನಿಯೆತ್ತಲು ಬಾಧ್ಯಸ್ಥರು" - ಹೀಗೆ ಹೇಳುವುದು ಸರಿಯೇ? ಎಂದು ಕೇಳುತ್ತ, "ಹೀಗೆನ್ನುವುದಾದರೆ ಬುದ್ಧ ಬಸವರು ಈ ನೆಲದಲ್ಲಿ ನಡೆಸಿದ ಕ್ರಾಂತಿಯ ಐತಿಹಾಸಿಕತೆಗೆ ಅರ್ಥವೇ ಇಲ್ಲವೇ?" ಎಂಬ ಪ್ರಶ್ನೆಯನ್ನು ದಲಿತ ನೆಲೆಗಳಿಂದ ಬಂದ ಬರಹಗಾರರು ಪರಿಭಾವಿಸುವುದು ಅವಶ್ಯವಿದೆ.

ಈ ಪ್ರತಿಕ್ರಿಯೆಗಳು ಶ್ರೀ ಜಾವಳಿ ಅವರು ಸಾಹಿತ್ಯದ ವಿಷಯವಾಗಿ ತಾಳಿದ ಧೋರಣೆ, ನಡೆದ ದಾರಿಗಳನ್ನು ಸ್ಪಷ್ಟಪಡಿಸುತ್ತವೆ. "ಶೋಷಣೆಯ ಕಾರ್ಯಕಾರಣಗಳಿಗೆ ಸಂಬಂಧಿಸಿದಂತೆ ಕೆಲವು ಭಾವನೆಗಳಿಗೆ ರೂಪ ಕೊಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ" (ಪರಿಸ್ಥಿತಿಯ ೨೦, ೫ ಕವಿತೆ -೧೯೭೭) ಎನ್ನುತ್ತ ಬರೆದ ಕೊನೆಯ ಐದು ಕವಿತೆಗಳನ್ನು ಬಂಡಾಯದವರು ಓದಬೇಕು; ಇಲ್ಲಿಯ ಜನಪರ ಮೌಲ್ಯದ ಕಾಳಜಿಯನ್ನು-ಯಜಮಾನಪರ ಮೌಲ್ಯದ ತಿರಸ್ಕಾರವನ್ನು ಪರಿಗಣಿಸಬೇಕು.

ಗುಲ್ಬರ್ಗಾ ಪ್ರದೇಶದಲ್ಲಿ ಇತ್ತೀಚೆಗೆ ಕವಿಗಳ ಸಂಖ್ಯೆ ಬೆಳೆದು, ಅವರು ಅನೇಕ ವಾದಗಳ ವಾರಸುದಾರರಂತೆ ವಿಜೃಂಭಿಸುತ್ತಲಿದ್ದಾರೆ. ಇದರಿಂದಾಗಿ ಗೊಂದಲ-ಘರ್ಷಣೆಗಳ ವಾತಾವರಣ ಅಲ್ಲಿಯೂ ನಿರ್ಮಾಣವಾಗಿದೆ. ಇಂಥ ಪ್ರಕ್ಷುಬ್ಧ ಪರಿಸರದಲ್ಲಿಯೂ ಶ್ರೀ ಜಾವಳಿ ಅವರು ಆನೆಯಂತೆ ತಮ್ಮ ದಾರಿಯಲ್ಲಿ ತಾವು ನಡೆದಿದ್ದಾರೆ. "ನಡೆದಷ್ಟೂ ದಾರಿಯಿದೆ" ಎಂಬುದನ್ನು ತಮ್ಮ ಸಾರ್ಥಕ ರಚನೆಗಳಿಂದ ಸಾಬೀತುಗೊಳಿಸಿದ್ದಾರೆ. ಹೀಗೆ ಎಲ್ಲ ಅರ್ಥಗಳಲ್ಲಿಯೂ ಹಿಂದುಳಿದ ಗುಲ್ಬರ್ಗಾ ಪ್ರದೇಶದಲ್ಲಿ ಹುಟ್ಟಿದ ಈ ಗಟ್ಟಿ ಕವನಗಳನ್ನು ಇನ್ನುಮೇಲಾದರೂ ರಾಜ್ಯದ ಪ್ರತಿಷ್ಠಿತ ಸಾಹಿತಿಗಳು ಕಣ್ಣು ತೆರೆದು ಓದಬೇಕು. ಇವುಗಳಿಗೆ ನ್ಯಾಯವಾದ ಸ್ಥಾನಮಾನ ಒದಗಿಸಿಕೊಡಬೇಕು.

ಶಿವಶರಣ ಜಾವಳಿ ಪಾಟೀಲ, ಕಲಬುರ್ಗಿ

ಆಕರ : ಮಾರ್ಗ ಸಂಪುಟ-೬

■■

೧೬೯

ಲೋಕಾವಲೋಕನ

೧೯೯೮

ಮುನ್ನುಡಿ ಬರೆಯುವ ವಿಷಯದಲ್ಲಿ ನಾನು ತುಂಬ ನಿರಾಸಕ್ತ. ಒದಗಿ ಬಂದ ಅಂತಹ ಸಂದರ್ಭಗಳನ್ನು ತಪ್ಪಿಸಿಕೊಳ್ಳುವುದು ನನ್ನ ಸ್ವಭಾವ. ಹೀಗಿದ್ದೂ 'ಲೋಕಾವಲೋಕನ'ಕ್ಕೆ ಮುನ್ನುಡಿ ಬರೆಯಲು ಕಾರಣ ನನ್ನ ವಿದ್ಯಾರ್ಥಿನಿ, ಡಾ. ಲೋಕಾಪೂರ ಅವರ ಪತ್ನಿ, ಶ್ರೀಮತಿ ಅಕ್ಕಮಹಾದೇವಿ ಅವರ ಆಗ್ರಹ. ನಿಜ ಹೇಳಬೇಕೆಂದರೆ, ನನಗೆ ಈ ಆಗ್ರಹ ಲೋಕಪರಿಚಯ-ಲೋಕಾಪೂರ ಪರಿಚಯಗಳ ಒಂದು ಅಪೂರ್ವ ಅವಕಾಶವನ್ನು ಒದಗಿಸಿಕೊಟ್ಟಿದೆ. ಮತ್ತು ಈ ಕೃತಿಯಲ್ಲಿ ತುಂಬಿ ತುಳುಕುತ್ತಿರುವ ಡಾ. ಲೋಕಾಪೂರ ಅವರ ಸಂಕೀರ್ಣ ವ್ಯಕ್ತಿತ್ವ ನನಗೆ ಖುಷಿ ಕೊಟ್ಟಿದೆ.

ಪ್ರವಾಸಿಗಳಿಗೆ ಈ ಶತಮಾನದ ಮುಖ್ಯ ಆಕರ್ಷಣೆ ಅಮೆರಿಕೆ. ಜ್ಞಾನದ ಹಸಿವು, ದ್ರವ್ಯದ ದಾಹಗಳನ್ನು ತಣಿಸಿಕೊಳ್ಳುತ್ತಲೇ ಭೋಗಜೀವನ ನಡೆಸಬೇಕೆನ್ನುವವರಿಗೆ ಅದು ಭೋಗಭೂಮಿಯೆನಿಸಿದೆ. ಈ ಕಾರಣಕ್ಕಾಗಿ ಅಲ್ಲಿಗೆ ವಲಸೆ ಹೋಗುವವರ, ಪ್ರವಾಸ ಕೈಕೊಳ್ಳುವವರ ಸಂಖ್ಯೆ, ಅದನ್ನು ಕುರಿತ ಪ್ರವಾಸಕೃತಿಗಳ ಸಂಖ್ಯೆ ಕನ್ನಡದಲ್ಲಿ ವರ್ಧಿಸುತ್ತ ನಡೆದಿದೆ. ಡಾ. ಲೋಕಾಪೂರ ಅವರ 'ಲೋಕಾವಲೋಕನ' ಈ ದಾರಿಯಲ್ಲಿ ಅನೇಕ ದೃಷ್ಟಿಯಿಂದ ಮಹತ್ವದ ಕೃತಿಯೆನಿಸಿದೆ. ಇದು ಒಬ್ಬ ಪ್ರವಾಸಿಯ "ಅನುಭವ ಕಥೆ"ಯಾಗುತ್ತಲೇ, ಒಬ್ಬ ಶಿಕ್ಷಕನ "ಅಧ್ಯಯನ ಕೃತಿ"ಯಾಗಿ, "ಸಾಂಸ್ಕೃತಿಕ ಸಂಕಥನ"ವಾಗಿ ಸಾಗಿದೆ. ಹೀಗಾಗಿ ಗೊತ್ತು ಗುರಿಯಿಲ್ಲದೆ ವಿದೇಶಗಳಿಗೆ ಹೋಗಿ, ಬಂಧುಮಿತ್ರರಲ್ಲಿ ಹೊತ್ತು ಕಳೆದವರ ಪ್ರವಾಸಿ ಬರವಣಿಗೆಗಿಂತ ಇದರ ಸ್ವರ ಭಿನ್ನವಾಗಿದೆ. ಇನ್ನೂ ಒಂದು ವಿಶೇಷವೆಂದರೆ ತಮ್ಮ ನಾಯಕತ್ವಗುಣದಿಂದಾಗಿ ಒಂದು ಪ್ರವಾಸಿ ಮೇಳದ ಸದಸ್ಯರಾಗುತ್ತಲೇ ಡಾ. ಲೋಕಾಪೂರ ಅವರು ಆಗಾಗ ನೇತಾರರಾಗಿಯೂ ಕಾಣಿಸಿಕೊಳ್ಳುತ್ತಾರೆ. ಈ ಪಾತಳಿ ಪಲ್ಲಟದಿಂದಾಗಿ ಸಮೂಹ ಪ್ರವಾಸಕಥನವೊಂದು ವ್ಯಕ್ತಿಪ್ರವಾಸಕಥನವಾಗುವ, ವ್ಯಕ್ತಿಪ್ರವಾಸಕಥನವೊಂದು ಸಮೂಹ ಪ್ರವಾಹಕಥನವಾಗುವ ಸಾಧ್ಯತೆಗಳನ್ನು ಈ ಕೃತಿ ಪಡೆದಿದೆ.

ಶ್ರೀ ಲೋಕಾಪೂರ ಅವರ ಪ್ರವಾಸದ ಪ್ರಾಯೋಜಕರು ಚಿತ್ರದುರ್ಗದ ಅಂತಾರಾಷ್ಟ್ರೀಯ ರೋಟರಿ ಸಂಸ್ಥೆಯವರು. ಕರ್ನಾಟಕ-ಆಂಧ್ರಪ್ರದೇಶಗಳ ರೋಟರಿ ಜಿಲ್ಲೆಯಿಂದ ಅಮೇರಿಕಾ ಕೆನಡಾ ದೇಶಗಳ ರೋಟರಿ ಜಿಲ್ಲೆಗೆ ಇವರೂ ಸೇರಿದಂತೆ ನಾಲ್ಕು ಜನ ಪುರುಷರು, ಇಬ್ಬರು ಮಹಿಳೆಯರ ಮೇಳ ಕೈಕೊಂಡ ಸಾಂಸ್ಕೃತಿಕ ಅಧ್ಯಯನ ಪ್ರವಾಸವಿದು. ೧೨ ಕುಟುಂಬಗಳಲ್ಲಿ ವಾಸವಾಗಿ, ೧೫ ಸಭೆಗಳಲ್ಲಿ ಭಾಗವಹಿಸಿ, ೬೦ ರಷ್ಟು ಆಪ್ತರನ್ನು ಗಳಿಸಿಕೊಂಡು, ೪೦ ದಿನಗಳಲ್ಲಿ ಮುಗಿಸಿದ ಪ್ರಯಾಣವಿದು.

ಕಾರ್ಯವನ್ನು ಯೋಜಿಸುವ, ಯೋಜನೆಯನ್ನು ಕಾರ್ಯಗತಗೊಳಿಸುವ ಲೋಕಾಪೂರ ಅವರ ರೀತಿ ವಿಶಿಷ್ಟವಾದುದು. ತಾವು ಅಮೇರಿಕೆಗೆ ಸಾಮಾನ್ಯ ಕುಟುಂಬಗಳೊಂದಿಗೆ, ಅಸಾಮಾನ್ಯ ಸಂಸ್ಥೆಗಳೊಂದಿಗೆ ಸಂಬಂಧವಿಟ್ಟುಕೊಳ್ಳಬೇಕಾಗಿರುವುದರಿಂದ ಅವರಿಗೆ ಕೊಡಬೇಕಾದ ಪ್ರೀತಿಯ ಕಾಣಿಕೆ, ಅಗತ್ಯವೆನಿಸಬಹುದಾದ ಚಿತ್ರ, ಧ್ವನಿಸುರುಳಿ, ಪುಸ್ತಕ, ನಾಣ್ಯ, ಧ್ವಜ ಇತ್ಯಾದಿ ವಸ್ತುಗಳ ಸಂಗ್ರಹದಂತಹ ಪೂರ್ವಸಿದ್ಧತೆಯಿಂದ ಹಿಡಿದು, ಪ್ರವಾಸದ ಪ್ರತಿಯೊಂದು ಘಟ್ಟದಲ್ಲಿಯೂ ಇಡುವ ಹೆಜ್ಜೆ, ವಹಿಸುವ ಎಚ್ಚರ, ತೋರುವ ಕಾರ್ಯಪಟುತ್ವಗಳು, ಪ್ರವಾಸದ ಪ್ರತಿ ಅಂಗುಲವೂ ಪರಿಪೂರ್ಣವಾಗಬೇಕೆಂಬ ಅವರ ಪ್ರಜ್ಞೆಯನ್ನು ಧ್ವನಿಸುತ್ತವೆ.

ಮೂಲತಃ ಶಿಕ್ಷಕರಾದ ಶ್ರೀ ಲೋಕಾಪೂರ ಅವರ ಶಿಕ್ಷಣದ ಹಸಿವು ದೊಡ್ಡದು. ಆ ಕ್ಷೇತ್ರವನ್ನು ಕಂಡರೆ ಸಾಕು, ಭೌತಿಕವಾಗಿ ಮತ್ತು ವೈಚಾರಿಕವಾಗಿ ಅದನ್ನು ಸಂಪೂರ್ಣ ದಾಖಲಿಸುತ್ತಾರೆ. "ಕೊಲಿನ್ಸ್ ಮೆಮೋರಿಯಲ್ ಗ್ರಂಥಾಲಯದಲ್ಲಿ ಲಕ್ಷಾಂತರ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲದೆ, ೮೫,೯೯೧ ಸರ್ಕಾರಿ ದಾಖಲೆಗಳು, ೧,೦೫,೪೬೪ ಮೈಕ್ರೊಫಿಲ್ಮಗಳಿವೆ. ೨ ಮೈಕ್ರೊ ಕಂಪ್ಯೂಟರ್ ವರ್ಕ್‌ಸ್ಪೇಶನ್‌ಗಳಿವೆ. ಪ್ರಪಂಚದ ೧೭ ರಾಷ್ಟ್ರಗಳಿಂದ ಹಾಗೂ ಅಮೇರಿಕದ ೪೬ ರಾಜ್ಯಗಳಿಂದ ಆಗಮಿಸುವ ವಿದ್ಯಾರ್ಥಿಗಳು ಈ ವಿಶ್ವವಿದ್ಯಾಲಯದಲ್ಲಿ ಅಭ್ಯಾಸಗೈಯುತ್ತಿದ್ದಾರೆ." ಇಂಥ ನೂರಾರು ಭೌತಿಕ ಮಾಹಿತಿಗಳು ಈ ಕೃತಿಯಲ್ಲಿ ಅಡಕಗೊಂಡಿವೆ. ಪ್ರೊ. ಬಾಬ್ ಅವರೊಂದಿಗೆ ನಡೆಸಿದ ಪ್ರಬುದ್ಧ ಚರ್ಚೆ, ಪ್ರೊ. ರೆಸಿನ್ ಅವರ ಸಂಶೋಧನ ಕೈಪಿಡಿ ಬಗೆಗಿನ ಮೆಚ್ಚುಗೆ - ಇತ್ಯಾದಿಗಳು ಶ್ರೀ ಲೋಕಾಪೂರ ಅವರ ಶಿಕ್ಷಣ ಪ್ರೀತಿಗೆ ನಿದರ್ಶನವೆನಿಸಿವೆ. ಈ ಕಾರಣಕ್ಕಾಗಿಯೇ ಅವರು ಶಿಸ್ತಿಗೆ ಹೆಸರಾದ ಶಾನಿಗನ್ ಲೇಕ್ ಶಾಲೆ, ರೊಬ್ರೋನ್ ಸೆಕೆಂಡರಿ ಶಾಲೆಗಳನ್ನು ಕೇವಲ ಅವಲೋಕಿಸುವುದಿಲ್ಲ, ಅನುಭವಿಸುತ್ತಾರೆ.

ಹೀಗೆ ಶಿಕ್ಷಣದಲ್ಲಿ ಸ್ಥಾಯಿಯಾಗುತ್ತಲೇ, ಪಾಶ್ಚಿಮಾತ್ಯ ಸಮಾಜ-ಸಂಸ್ಕೃತಿಗಳಲ್ಲಿ ಸಂಚಾರಿಯಾಗುವ ಅವರ ಚಲನಶೀಲ ವ್ಯಕ್ತಿತ್ವ, ಈ ಕೃತಿಯ ಏಕತಾನತೆಯನ್ನು ಭೇದಿಸಿ, ಅದು ಅನೇಕ ಮುಖಿಯಾಗಿ ಬೆಳೆಯುಂತೆ ಮಾಡಿದೆ. ಕೆನಡಾ ಧ್ವಜಚಿಹ್ನೆಯಾಹಿರುವ ಮ್ಯಾಪಲ್ ಎಲೆಯ ಫೋಟೋ ತೆಗೆದುಕೊಳ್ಳುವಂತಹ ಸಣ್ಣ ವಿಷಯ ಮೊದಲುಮಾಡಿ, ಶವಸಂಸ್ಕಾರ ಪೆಟ್ಟಿಗೆಯನ್ನು ರಚಿಸುವ ವಿಧಾನ, ಬಳಸುವ ಉಪಕರಣ, ಆಕಾರ, ಬೆಲೆಗಳನ್ನು ತಿಳಿದುಕೊಳ್ಳುವುದು - ಇತ್ಯಾದಿಗಳೆಲ್ಲ ಇದಕ್ಕೆ ನಿದರ್ಶನವೆನಿಸಿವೆ.

ಈ ಮೇಳದ ಸದಸ್ಯರೆಲ್ಲ ಪಾಶ್ಚಿಮಾತ್ಯ ಕುಟುಂಬಗಳ ಅತಿಥಿಗಳು, ಸಂಸ್ಥೆಗಳ ಸಂದರ್ಶಕರು, ಸಮಾಜದ ಸಂಪರ್ಕದಲ್ಲಿ ದಿನ ಕಳೆಯುವವರು. ಈ ಉಪಕ್ರಮಗಳು ಇವರಿಗೆ ಅಮೇರಿಕೆಯ ಎಲ್ಲ ಮಗ್ಗಲುಗಳನ್ನು ಹೊರಳಿಸಿ, ಹೊರಳಿಸಿ ನೋಡಿ, ಅದರ ಗುಣ-ದೋಷಗಳನ್ನು ಗ್ರಹಿಸುವ-ಸಂಗ್ರಹಿಸುವ ಅವಕಾಶ ಮಾಡಿಕೊಟ್ಟಿವೆ. ಈ ಸಂದರ್ಭದಲ್ಲಿ ಆ ಸಮಾಜದ ನಲಿವು-ನೋವು, ಬಲ-ದೌರ್ಬಲ್ಯ ಇತ್ಯಾದಿಗಳನ್ನು ವಿಶ್ಲೇಷಿಸಿ ನ್ಯಾಯಧೀಶನಂತೆ ನೀಡುವ ಇವರ ತೀರ್ಪುಗಳು ಅನನ್ಯವೆನಿಸಿದೆ. "ಅಮೇರಿಕನ್ನರಿಗಿಂತಲೂ ಕೆನಡಾದವರು ಸ್ವಲ್ಪ ಮಟ್ಟಿಗೆ ಬಿಗುಮಾನದವರು." "ಕೆಲಸಗಳಲ್ಲಿ ಮೇಲು-ಕೀಳುಗಳಿಲ್ಲ, ಕಾಯಕಗೌರವ ತತ್ವ ಇಲ್ಲಿ ಪರಿಪಾಲನೆಯಲ್ಲಿದೆ." "(ಭಾರತೀಯ) ಹುಡುಗರಿಗೆ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಿದ್ದರೂ ಅವರು ಪಾಶ್ಚಿಮಾತ್ಯ ಸಂಸ್ಕೃತಿಯೊಂದಿಗೆ ಹೇಗೋ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಹುಡುಗಿಯರು ಹೆಚ್ಚು ಕಷ್ಟ ಎದುರಿಸಬೇಕಾಗುತ್ತದೆ." "ಭಾರತ ಇಂದಿಗೂ ಅನೇಕ ಪಾಶ್ಚಿಮಾತ್ಯರ ಕಣ್ಣಲ್ಲಿ ಕೆಳಮಟ್ಟದ ರಂಜಕ ನಾಡಾಗಿರುವುದು ನಗ್ನಸತ್ಯ." "ವಲಸೆ ಹೋದ ಎಲ್ಲ ಬಗೆಯ ಜನರನ್ನು ತನ್ನಲ್ಲಿ ಅಡಗಿಸಿಕೊಳ್ಳುವ ಸಾಂಸ್ಕೃತಿಕ ಮೃದುತ್ವ ಪಶ್ಚಿಮ ನಾಡಿಗಿದೆ." "ಭಾರತದಿಂದ ಪ್ರತಿಶತ ೨೦ರಷ್ಟು ನಾವು ಕೊಡುವುದಿದ್ದರೆ, ಪ್ರತಿಶತ ೮೦ರಷ್ಟು ಅವರಿಂದ ಕಲಿಯಬೇಕಾದ ಅಂಶಗಳಿವೆ." "ಅಮೇರಿಕನ್ನರ ಭೌತಿಕ ಪ್ರಗತಿಯಿಂದ ಭಾರತ ಕಲಿಯಬೇಕಿದೆ ಮತ್ತು ಭಾರತೀಯರ ಮಾನಸಿಕ ನೆಮ್ಮದಿಯ ಮರ್ಮ ಅಮೇರಿಕನ್ನರು ಗ್ರಹಿಸಬೇಕಿದೆ." - ಇತ್ಯಾದಿ ಸೂತ್ರರೂಪದ ವಾಕ್ಯಗಳು ಬಹುದೊಡ್ಡ ವ್ಯಾಖ್ಯಾನವನ್ನು

ಗರ್ಭೀಕರಿಸಿಕೊಂಡಿವೆ. ಮೇಲಿನ ಉದಾಹರಣೆಗಳು ಕೆಲವೊಮ್ಮೆ ಪಶ್ಚಿಮವನ್ನು ವಿಶ್ಲೇಷಿಸಿದರೆ, ಮತ್ತೆ ಕೆಲವೊಮ್ಮೆ ಪೂರ್ವ-ಪಶ್ಚಿಮಗಳನ್ನು ತೂಗಿ ನೋಡುತ್ತ, ನಿಜಸ್ಥಿತಿಯನ್ನು ಬಯಲಿಗೆಳೆಯುತ್ತವೆ. ಇಲ್ಲೆಲ್ಲ ಉಭಯ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗಕ್ಕೆ ಈ ಪುಸ್ತಕ ದಾರಿ ತೆರೆದುಕೊಟ್ಟಿದೆ.

ಶ್ರೀ ಲೋಕಾಪೂರ ಅವರು ಅಮೇರಿಕೆಗೆ ಹೋದುದು ಭಾರತದ ಸಾಂಸ್ಕೃತಿಕ ರಾಯಭಾರಿಯಾಗಿ. ಹೀಗಾಗಿ ಭಾರತದ ಬಗೆಗೆ ಪಾಶ್ಚಿಮಾತ್ಯರಿಗೆ ಇರುವ ತಪ್ಪು ಕಲ್ಪನೆಯನ್ನು ಹೋಗಲಾಡಿಸುವ, ಇದರ ಉತ್ತಮಾಂಶಗಳನ್ನು ಪ್ರತಿಪಾದಿಸುವ, ಸಂದರ್ಭ ಒದಗಿಸಿದರೆ ಆಚರಿಸಿ ತೋರಿಸುವ ಕೆಲಸವನ್ನು ಇವರು ತ್ರಿಕರಣಪೂರ್ವಕ ಮಾಡಿದುದು ಶ್ಲಾಘನೀಯವೆನಿಸಿದೆ. "ಭಾರತದಲ್ಲಿಯೂ ದೂರದರ್ಶನಗಳಿವೆಯೇ?" ಎಂದು ಲಘುವಾಗಿ ಮಾತನಾಡಿದ ಅತಿಥೇಯ ಕುಟುಂಬದ ಯಜಮಾನಿ ಶ್ರೀಮತಿ ಸ್ಯಾಂಡಿ ಅವರನ್ನು ದಾರಿಗೆ ಎಳೆದು ತಂದ ರೀತಿ, ಅತಿಥೇಯ ವೇನ್ ವಿವರಿಸಿದ "ಕಾಡಿನ ಬೆಂಕಿ ನಂದಿಸುವ ವಿಧಾನ"ದ ಎಳೆಯನ್ನು ಹಿಡಿದುಕೊಂಡು "It is the need of the hour to control not only external fire, but also internal fire.... Now you are leader of the world. As leader of the world, you should provide good model in each and every walk of life. Otherwise in future course of time, the history will hold you responsible for lapses in discharging national and international responsibilities" ಎಂದು ಮಾಡಿದ ಭಾಷಣಗಳು ಇವರ ರಾಯಭಾರಿತ್ವದ ಜವಾಬ್ದಾರಿಯನ್ನು ಸರಿಯಾಗಿ ಚಿತ್ರಿಸುತ್ತವೆ. "ಕೈಜೋಡಿಸಲು ಕಲಿತವರು", "ಆಂಗ್ಲ ನಾಡಿನಲ್ಲಿ ಕನ್ನಡ ಹಾಡು" ಅಧ್ಯಾಯಗಳನ್ನು ಇಲ್ಲಿ ನೆನೆದಾಗ ಆ ಚಿತ್ರ ಇನ್ನೂ ಢಾಳವಾಗಿ ನೆಮ್ಮೆದುರು ನಿಲ್ಲುತ್ತದೆ.

"Look beyond yourself" ಇದು ೧೯೯೧-೯೨ರ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ಧ್ಯೇಯವಾಕ್ಯ. 'ನಾನು' ಹೋಗಿ 'ನಾವು' ಆಗುವುದು ಇದರ ಅರ್ಥ. ಈ ಮಾತಿಗೆ ಅರ್ಥ ತುಂಬುವ ರೀತಿಯಲ್ಲಿ ಪ್ರತಿಕ್ಷಣವೂ ತಮ್ಮನ್ನು ತಾವು ಮೀರುತ್ತ ಮಾಡಿದ ವಾಸ-ಪ್ರವಾಸಗಳ ಈ ಕಥನಕೃತಿಯ 'ಶೈಲಿ'ಯನ್ನು ಕುರಿತು ಹೇಳದಿದ್ದರೆ ಪ್ರಸ್ತುತ ಮುನ್ನುಡಿ ಅಪೂರ್ಣವೆನಿಸುತ್ತದೆ.

ವೈವಿಧ್ಯಪೂರ್ಣ ಅನುಭವಗಳನ್ನು ಸೃಜನಶೀಲ ಮನಸ್ಸು ಮಾತ್ರ ಕೃತಿಯಾಗಿಸುತ್ತದೆ. ಈ ನಿಲವಿನ ಲೋಕಾಪೂರ ಅವರ ನಿರೂಪಣಪ್ರಧಾನ ಶೈಲಿಯು ಪ್ರವಾಸಕೃತಿಯನ್ನು ನೀರಸವಾಗಲು ಬಿಡುವುದಿಲ್ಲ. ಕೆಲವೊಮ್ಮೆ ತಮ್ಮ ಎಡಪಂಥೀಯ ಧೋರಣೆಯಿಂದಾಗಿಯೂ ಭಾವನೆಗಳಿಗೆ ವೈಚಾರಿಕ ಬೆಸುಗೆಯನ್ನು ಹಾಕುತ್ತಾರೆ. "ಭಾರತದ ಇನ್ನೊಂದು ಹೆಸರೇ ಹಳ್ಳಿಗಳು." "ಉಪಸಂಸ್ಕೃತಿಗಳ ಸಮಗ್ರರೂಪವೇ ಭಾರತೀಯ ಸಂಸ್ಕೃತಿ." "ಅಮೇರಿಕೆಯ ನೆಲದಲ್ಲಿ ನಮ್ಮ ಕಾರಿನ ಚಕ್ರಗಳು ಉರುಳತೊಡಗಿದವು." "ರಾತ್ರಿ ೧೦ ಗಂಟೆ. . . . ಭೇಟಿ, ಪರಿಚಯ, ಸ್ನೇಹ, ಅಗಲುವಿಕೆ, ಹಲವು ಹನ್ನೊಂದು ಕಲಿಯುವಿಕೆ, ಕಲಿಸುವಿಕೆ ಹೀಗೆ ವಿಚಾರದ ರೈಲು ಓಡುತ್ತಿತ್ತು. ನಿದ್ರೆಯ ಸ್ಟೇಶನ್ ಬರಲು ವಿಳಂಬವಾಯಿತು." "ಅವರು ತೆಲುಗರು, ನಾವು ಕನ್ನಡಿಗರು ಎಂಬ ಭಿನ್ನತೆಯ ಅಡ್ಡಗೋಡೆ ನಮ್ಮ ಆತ್ಮೀಯ ಅಪ್ಪುಗೆಯಲ್ಲಿಯೇ ಪುಡಿಪುಡಿಯಾಗಿತ್ತು" ಮೊದಲಾದವು ಈ ಪ್ರವಾಸಕಥೆಯನ್ನು ಕೃತಿಯನ್ನಾಗಿ ಮುನ್ನಡೆಸುವ ಚಕ್ರಗಳಂತೆ ಕೆಲಸ ಮಾಡಿವೆ. ಹೀಗೆ ತುಂಬ ಸಂಕೀರ್ಣವೂ, ಸಾಹಿತ್ಯಿಕವೂ ಆಗಿರುವ ಈ ಪ್ರವಾಸ ಕೃತಿಗೆ ಮುನ್ನುಡಿ ಬರೆಯುವುದು ಕೇವಲ ಸಂತೋಷದ ಕೆಲಸವಲ್ಲ, ತಿಳುವಳಿಕೆಯನ್ನು ವಿಸ್ತಾರ ಮಾಡಿಕೊಳ್ಳುವ ಕೆಲಸವೆಂದೇ ಭಾವಿಸುತ್ತ 'ಲೋಕಾವಲೋಕನ'ದ ಅವಲೋಕನಕ್ಕೆ ವಿರಾಮ ಹೇಳುತ್ತೇನೆ.

ಆರ್. ಆರ್. ಲೋಕಾಪುರ, ಹರಿಹರ

ಆಕರ : ಮಾರ್ಗ ಸಂಪುಟ–೬

೧೭೦

ಬೃಹದ್ದೇಶಿ

೧೯೯೮

ದೇಸಿಯೊಳ್ ಪುಗುವುದು

ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಗುರಿ 'ಕನ್ನಡ ಸಂಸ್ಕೃತಿ'ಯ ಶೋಧ, ವಿಮರ್ಶೆ ಮತ್ತು ಪ್ರಸಾರ. ಅಂತಿಮ ಗುರಿ ಸುತ್ತಲಿನ ಸಂಸ್ಕೃತಿಗಳ ವಿವೇಕಪೂರ್ಣ ವಿನಿಯೋಗ. ಆದಿಕವಿ ಪಂಪ, ಸಾಹಿತ್ಯಕ್ಕೆ ಅನ್ವಯಿಸಿ ಹೇಳಿರುವ 'ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳೆ ತಳ್ವುದು' ಎಂಬ ಮಾತು ಪರ್ಯಾಯವಾಗಿ ಇದನ್ನೇ ಧ್ವನಿಸುತ್ತದೆ.

ಮೂಲತಃ ಸಮಾಜವೊಂದು ಸ್ವ-ರೂಪ, ಸ್ವ-ಭಾವ ವಿಶಿಷ್ಟವಾಗಿರುತ್ತದೆ. ಹೀಗಿದ್ದೂ ಅದು ತನ್ನಷ್ಟಕ್ಕೆ ತಾನು ಪ್ರತ್ಯೇಕವಾಗಿ ನಿಲ್ಲದೆ, ಅನ್ಯಸಂಸ್ಕೃತಿಗಳನ್ನು ಸ್ವೀಕರಿಸುತ್ತ ಒಮ್ಮೊಮ್ಮೆ ನಿರಾಕರಿಸುತ್ತ ಮುಂದುವರಿಯುತ್ತದೆ. ಪ್ರಧಾನವಾಗಿ ಆರ್ಯ-ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕುಮಾಡಿದೆ. ಹಿಂದಿನದು ಕನ್ನಡ -ಸಂಸ್ಕೃತ ದ್ವಿಭಾಷಾ ಸಂದರ್ಭ. ಇಂದಿನದು ಕನ್ನಡ - ಇಂಗ್ಲಿಷ್ ದ್ವಿಭಾಷಾ ಸಂದರ್ಭ. ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲಿಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗುತ್ತಲಿದೆ.

ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶಿ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶೀ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ, ಪ್ರಕ್ರಿಯೆ ರೂಪದ 'ಸ್ವದೇಶಿ ಸತ್ಯ'ಗಳನ್ನು ಶೋಧಿಸುವುದು; ಬಳಿಕ ಅಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ ಸರಿಸಿ, ಗುಣಾಂಶಗಳನ್ನು ಗುರುತಿಸುವುದು ; ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರವಹಿಸಿ ತುಂಬಿಕೊಳ್ಳುವದು. ಒಟ್ಟಾರೆ, ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಬದುಕಿಸಬೇಕಾಗಿದೆ, ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ.

ಹೆಗಲ ಮೇಲೆ ಈ ಹೊಣೆಯನ್ನು ಹೊತ್ತು, ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ, 'ಎಲ್ಲ ರಸ್ತೆಗಳು ರೋಮ್‌ದ ಕಡೆಗೆ' ಎಂಬಂತೆ ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕರಣಗೊಳ್ಳುವ ಮತ್ತು ಇಲ್ಲಿಂದಲೇ ಜಗತ್ತಿನ ಅಂಚಿನತ್ತ ವಿಕೇಂದ್ರೀಕರಣಗೊಳ್ಳುವ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿದೆ. ಈ ರೀತಿ ಐತಿಹಾಸಿಕ ಪರಂಪರೆ ಮತ್ತು ಭೌಗೋಲಿಕ ಪರಿಸರಗಳಲ್ಲಿ ಶ್ರಮಿಸಬೇಕಾಗಿರುವ ಕನ್ನಡ ವಿಶ್ವವಿದ್ಯಾಲಯ, 'ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗೃತವಾಗಿರುವಂತೆಯೂ ನೋಡಿಕೊಳ್ಳಬೇಕಾಗಿದೆ.

ಈ ಎಲ್ಲ ನೆಲೆಗಳಲ್ಲಿ ಸೃಷ್ಟಿಯಾಗಿರುವ ತನ್ನ ಶೋಧನೆ-ಚಿಂತನೆಗಳನ್ನು ದಾಖಲಿಸಬೇಕೆಂಬ ಮತ್ತು ಸಂವಹನಗೊಳಿಸಬೇಕೆಂಬ ತೀವ್ರ ಹಂಬಲದಿಂದ ಈ ವಿಶ್ವವಿದ್ಯಾಲಯ 'ಪ್ರಸಾರಾಂಗ' ಹೆಸರಿನ ಪ್ರಸಾರಮಾಧ್ಯಮ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿದೆ. ಶ್ರವ್ಯ, ದೃಶ್ಯ, ವಾಚನ ಸಾಮಗ್ರಿಗಳ ಉತ್ಪಾದನೆ -ವಿತರಣೆ ಇತ್ಯಾದಿ ಕಾರ್ಯಗಳನ್ನು ಕೈಗೆತ್ತಿಕೊಂಡಿರುವ ಇದು, ವಾಚನ ಸಾಮಗ್ರಿಯಾಗಿರುವ ಪುಸ್ತಕಗಳ ಉತ್ಪಾದನೆಗೆ ವಿಶೇಷ ಕಾಳಜಿ ವಹಿಸಿದೆ. ಆಂತರಿಕ ಸತ್ವ, ಬಾಹ್ಯ ಸೌಂದರ್ಯಗಳಿಂದ ಕೂಡಿರುವ ವಿಶಿಷ್ಟ 'ಪುಸ್ತಕ ಸಂಸ್ಕೃತಿ'ಯನ್ನು ಅಸ್ತಿತ್ವಕ್ಕೆ ತರುತ್ತಲಿರುವ ಈ ಪ್ರಸಾರಾಂಗದ ಇತ್ತೀಚಿನ ಪ್ರಕಟಣೆಯಾಗಿದೆ, ಶ್ರೀ ಮತಂಗಮುನಿ ವಿರಚಿತ 'ಬೃಹದ್ದೇಶೀ'.

ಶ್ರೀ ಮತಂಗಮುನಿ ವಿರಚಿತ 'ಬೃಹದ್ದೇಶೀ' ಗ್ರಂಥದ ಶಾಸ್ತ್ರೀಯ ಪಠ್ಯವನ್ನು ರೂಪಿಸಿ, ಅದರ ಕನ್ನಡಾನುವಾದವನ್ನು ಸಿದ್ಧಪಡಿಸಿಕೊಟ್ಟವರು, ಸೃಜನಶೀಲ ವಿದ್ವಾಂಸರಾದ ಡಾ. ರಾ. ಸತ್ಯನಾರಾಯಣ ಅವರು. ಭಾರತೀಯ ಸಂಗೀತ ಹಾಗೂ ನೃತ್ಯಗಳನ್ನು ಕುರಿತಂತೆ ಅಂತರರಾಷ್ಟ್ರೀಯ ಖ್ಯಾತಿಯ ವಿದ್ವಾಂಸರೂ ಬಹುಭಾಷಾ ತಜ್ಞರೂ ಆಗಿರುವ ರಾ. ಸತ್ಯನಾರಾಯಣ ಅವರು ದೇಶ-ವಿದೇಶಗಳ ಅನೇಕ ಸಾಂಸ್ಕೃತಿಕ -ಶೈಕ್ಷಣಿಕ ಸಂಘಟನೆಗಳ ಜೊತೆಗೆ ಸಾಹಚರ್ಯ ಇರಿಸಿಕೊಂಡು, ಭಾರತೀಯ ವಿದ್ವತ್ತನ್ನು ಪ್ರಸರಣ ಮಾಡುತ್ತಲಿರುವ ಘನವಿದ್ವಾಂಸರು, ಸಂತ ಶ್ರೀ ತ್ಯಾಗರಾಜರ ಶಿಷ್ಯ ಪರಂಪರೆಯ ಇಂತಹ ಮಹಾವಿದ್ವಾಂಸರೇ ಬೃಹದ್ದೇಶಿಯಂತಹ ಸಂಗೀತ ಶಾಸ್ತ್ರಗ್ರಂಥವನ್ನು ಪರಿಷ್ಕರಿಸಬಲ್ಲರು. ಕನ್ನಡಕ್ಕೆ ಅನುವಾದಿಸಬಲ್ಲರೆಂಬ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯ ಈ ಘನ ಕಾರ್ಯವನ್ನು ಅವರಿಗೆ ಒಪ್ಪಿಸಿತು. ಅವರ ಎರಡು ವರ್ಷಗಳ ಕಠಿಣ ಪರಿಶ್ರಮದ ಫಲವಾಗಿ ಈ ಗ್ರಂಥದ ಪಠ್ಯ ಹಾಗೂ ಅನುವಾದಕಾರ್ಯ ಸಿದ್ಧವಾಗಿದೆ. ಈ ಮಹೋನ್ನತ ಕಾರ್ಯಕ್ಕಾಗಿ ವಿಶ್ವವಿದ್ಯಾಲಯ ರಾ. ಸತ್ಯನಾರಾಯಣ ಅವರಿಗೆ ಋಣಿಯಾಗಿದೆ.

'ದೇಶೀ' ಸಂಸ್ಕೃತಿಯ ಶೋಧ - ಪ್ರಸಾರಗಳಿಗಾಗಿ ಅಸ್ತಿತ್ವಕ್ಕೆ ಬಂದಿರುವ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಈ 'ಬೃಹದ್ದೇಶಿ'ಯನ್ನು 'ಹಂಪಿ ಉತ್ಸವ - ೯೯೮' ರ ನೆನಪಿಗಾಗಿ ಬಿಡುಗಡೆ ಮಾಡುತ್ತಿರುವುದು ತುಂಬ ಪ್ರಸ್ತುತವೆಂದು ನಾನು ಭಾವಿಸುತ್ತೇನೆ. ಈ ಮಹಾಕೃತಿಯ ಪ್ರಕಟಣೆಗೆ ಆರ್ಥಿಕ ನೆರವು ನೀಡಿದ 'ಹಂಪಿ ಉತ್ಸವ-೯೮'ರ ಸಮಿತಿಗೆ, ವಿಶೇಷವಾಗಿ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ ಅವರಿಗೆ, ಕನ್ನಡ ಮತ್ತು ಸಂಸ್ಕತಿ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಡಾ। ರಾ. ಸತ್ಯನಾರಾಯಣ. ಇದು ಕನ್ನಡ ವಿಶ್ವವಿದ್ಯಾಲಯದ ಎಲ್ಲ ಪ್ರಕಟನೆಗಳಿಗೆ ಬರೆಯಲಾದ ಕುಲಪತಿಯ ಮಾತು. ಪ್ರತಿಯೊಂದು ಪುಸ್ತಕಕ್ಕೆ ಕೊನೆಯ ಒಂದೆರಡು ಪ್ಯಾರಾ ಬದಲಿಸಲಾಗುತ್ತದೆ.

ಆಕರ : ಮಾರ್ಗ ಸಂಪುಟ–೬

■■

೧೭೧

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ : ೧

೧೯೯೮

'ಆಕರಗಳು' ಇತಿಹಾಸವನ್ನು ಕಟ್ಟುವ ಮೂಲ ಮತ್ತು ಮುಖ್ಯ ಸಾಮಗ್ರಿ. ಕರ್ನಾಟಕದಲ್ಲಿ ಇಂಥ ಆಕರಗಳ ಶೋಧ ಮತ್ತು ಪ್ರಕಟನ ಕಾರ್ಯಕ್ಕೆ ೧೫೦ ವರ್ಷಗಳ ಇತಿಹಾಸವಿದೆ. ಈ ಸುದೀರ್ಘ ಅವಧಿಯಲ್ಲಿ ಹಲವು ಜನ ಆಕರ ಆಸಕ್ತರು ಹತ್ತಾರು ಬಗೆಯ ಸಾಮಗ್ರಿಯನ್ನು ಸಂಗ್ರಹಿಸಿಕೊಡುತ್ತ ಬಂದಿದ್ದಾರೆ. ಹೀಗಿದ್ದೂ ಈವರೆಗೆ ನಡೆದ ಆಕರಶೋಧ ಅಲ್ಪ, ನಡೆಯಬೇಕಾದುದು ಅಧಿಕ, ಹೀಗಾಗಿ ಕನ್ನಡ ವಿಶ್ವವಿದ್ಯಾಲಯ ವಸ್ತು, ಭಾಷೆ, ವಿಚಾರ, ಕ್ರಿಯೆ-ಈ ನಾಲ್ಕೂ ಬಗೆಯ ಆಕರ ಸಂಗ್ರಹಕಾರ್ಯವನ್ನು ಕೈಗೆತ್ತಿಕೊಂಡಿದೆ. ಇವುಗಳಲ್ಲಿ ಭಾಷೆಗೆ ಸಂಬಂಧಪಟ್ಟ ಆಕರವೆನಿಸಿದ ಶಾಸನಗಳ ಪರಿವೀಕ್ಷಣೆಗೆ ಇಲ್ಲಿ ವಿಶೇಷ ಗಮನ ಕೊಡಲಾಗಿದೆ. ಇದರ ಫಲವಾಗಿ, ಈ ವರ್ಷದಿಂದ ಆರಂಭವಾಗಿರುವ "ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ಮಾಲೆ"ಯಲ್ಲಿ ಪ್ರಸ್ತುತ ಕೃತಿ ಹೊರಬರುತ್ತಲಿದೆ.

ಆಕರ ಶೋಧವೆಂಬ ಸಾಂಸ್ಕೃತಿಕ ಶ್ರಮಕ್ಕೆ ಶ್ರೀಕಾರ ಹಾಕಿದವ, ಕರ್ನಲ್ ಮೆಕೆಂಝಿ. ಆ ಬಳಿಕ ದಕ್ಷಿಣ ಕರ್ನಾಟಕದಲ್ಲಿ ಬಿ.ಎಲ್.ರೈಸ್, ಉತ್ತರ ಕರ್ನಾಟಕದಲ್ಲಿ ಜೆ.ಎಫ್.ಫ್ಲೀಟ್ ಅವರಿಂದ ಸಂದ ಕಾಣಿಕೆ ಅಪೂರ್ವವಾದುದು. ಇವರ ತರುವಾಯ ದಕ್ಷಿಣ ಕರ್ನಾಟಕದಲ್ಲಿ ಆರ್. ನರಸಿಂಹಾಚಾರ್, ಎಂ.ಎಚ್. ಕೃಷ್ಣ, ಬಾ.ರಾ. ಗೋಪಾಲ್ ಮೊದಲಾದವರೂ, ಕರಾವಳಿ ಕರ್ನಾಟಕದಲ್ಲಿ ಕೆ.ವಿ. ರಮೇಶ್ ಅವರೂ, ಹೈದ್ರಾಬಾದ್ ಕರ್ನಾಟಕದಲ್ಲಿ ಪಿ.ಬಿ. ದೇಸಾಯಿ, ಎಸ್.ಎಚ್.ರಿತ್ತಿ, ಹನುಮಾಕ್ಷಿ ಗೋಗಿ ಅವರೂ ಅಲ್ಲಲ್ಲಿಯ ಶಾಸನಗಳ ಪರಿವೀಕ್ಷಣ ಮತ್ತು ಸಂಪಾದನ ಕಾರ್ಯವನ್ನು ಪೂರೈಸುತ್ತ ಬಂದಿದ್ದಾರೆ. ಈ ಎಲ್ಲ ಪ್ರಯತ್ನಗಳಲ್ಲಿ 'ಎಪಿಗ್ರಫಿಯಾ ಕರ್ನಾಟಿಕ" ಹೆಸರಿನಲ್ಲಿ ಬಿ.ಎಲ್. ರೈಸ್ ಪ್ರಕಟಿಸಿದ ದಕ್ಷಿಣ ಕರ್ನಾಟಕ ಶಾಸನ ಸಂಪುಟಗಳು ಗಮನಾರ್ಹವಾದುವು. ಈ ಪ್ರದೇಶದ ಶಾಸನಗಳನ್ನು ತಾಲೂಕು, ಹೋಬಳಿ ಹಾಗೂ ಗ್ರಾಮನಿಷ್ಠವಾಗಿ ವಿಂಗಡಿಸಿ, ಅವುಗಳನ್ನು ಕನ್ನಡ ಪಾಠ, ರೋಮನ್ ಲಿಪಿಯಲ್ಲಿ ಮುದ್ರಿಸಿ, ಇಂಗ್ಲಿಷ್ ಭಾಷಾಂತರವನ್ನು ಜೋಡಿಸಿ, ಸುದೀರ್ಘ ಪ್ರಸ್ತಾವನೆ ಬರೆದ ರೀತಿ ಅನನ್ಯವಾಗಿದೆ.

ಉಳಿದ ಪ್ರದೇಶಗಳ ಶಾಸನಾಭ್ಯಾಸ ಈ ಮಾದರಿಯಲ್ಲಿ ನಡೆಯಲಿಲ್ಲ. ಈ ಪ್ರದೇಶಗಳ ಶಾಸನಗಳು ಇಂಡಿಯನ್ ಆಂಟಿಕ್ವರಿ, ಎಪಿಗ್ರಫಿಯಾ ಇಂಡಿಕಾ, ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಶನ್ಸ್, ಹೈದ್ರಾಬಾದ್ ಆರ್ಕಿಯೋಲಾಜಿಕಲ್ ಸೀರೀಸ್ ಸಂಪುಟಗಳಲ್ಲಿ ಹಂಚಿಹೋಗಿವೆ. ಕೆಲವು ಶಾಸನಗಳು ಗೌರವಗ್ರಂಥ, ಪತ್ರಿಕೆಗಳಲ್ಲಿ

ಪ್ರಕಟವಾಗಿವೆ. ಕೆಲವೊಮ್ಮೆ ಒಂದು ಊರಿನ ಒಂದಿಷ್ಟು ಶಾಸನಗಳನ್ನು ಪ್ರಕಟಿಸಿ, ಉಳಿದವುಗಳನ್ನು ಕೈಬಿಡಲಾಗಿದೆ. ಕೆಲವು ಪ್ರದೇಶಗಳನ್ನು ಇಡಿಯಾಗಿ ಅಲಕ್ಷಿಸಲಾಗಿದೆ. ಹೀಗೆಯೇ ಉಪೇಕ್ಷಿಸಿದರೆ ಈ ಸಾಂಸ್ಕೃತಿಕ ದಾಖಲೆಗಳು ಖಂಡಿತ ನಮ್ಮ ಕೈಬಿಟ್ಟು ಹೋಗುತ್ತವೆ. ಈ ಭಯ ಕಾರಣವಾಗಿ ಕನ್ನಡ ವಿಶ್ವವಿದ್ಯಾಲಯ ಉತ್ತರ ಕರ್ನಾಟಕ ಮತ್ತು ಹೊರನಾಡಿನ ಶಾಸನಗಳ ವ್ಯಾಪಕ ಸಂಗ್ರಹಕಾರ್ಯವನ್ನು ಕೈಗೆತ್ತಿಕೊಂಡಿದ್ದು, ಈ ದೆಸೆಯಲ್ಲಿ ಪ್ರಥಮ ಸಂಪುಟವೆನಿಸಿದೆ, ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದ ಈ ಕೃತಿ.

ಬಳ್ಳಾರಿ ಜಿಲ್ಲೆಯ ಶಾಸನದ ಇತಿಹಾಸ ಅಶೋಕನಷ್ಟು ಪ್ರಾಚೀನ. ಅಂದಿನಿಂದ ಶಾಸನಗಳು ಈ ಜಿಲ್ಲೆಯಲ್ಲಿ ನಿರಂತರ ಹುಟ್ಟುತ್ತ ಬಂದಿವೆ. ಆಧುನಿಕ ಕಾಲದಲ್ಲಿ ಈ ಜಿಲ್ಲೆ ರಾಜಕೀಯವಾಗಿ ಮದರಾಸ್ ಕರ್ನಾಟಕ, ಮೈಸೂರ ಕರ್ನಾಟಕಗಳಿಗೆ, ಶೈಕ್ಷಣಿಕವಾಗಿ ಮುಂಬೈ ಕರ್ನಾಟಕ, ಹೈದ್ರಾಬಾದ್ ಕರ್ನಾಟಕಗಳಿಗೆ ಹಸ್ತಾಂತರವಾಗುತ್ತ ಬಂದ ಕಾರಣ ಎಸ್.ಐ.ಐ. ix-i,ii ಸಂಪುಟಗಳ ತರುವಾಯ, ಇಲ್ಲಿ ಶಾಸನಗಳ ಪ್ರಕಟಣೆಯ ವ್ಯಾಪಕ ಪ್ರಯತ್ನ ನಡೆಯಲಿಲ್ಲ. ಬಹಳೆಂದರೆ ಹಂಪಿಯ ಅಧ್ಯಯನದ ಭಾಗವಾಗಿ ಪುರಾತತ್ವ ಇಲಾಖೆಯಿಂದ ಕೆಲವು ಬಿಡಿಶಾಸನಗಳು ಪ್ರಕಟವಾದವು.

ಆದರೆ ಒಂದು ಸಮಗ್ರ ಸರ್ವೇಕ್ಷಣೆ ನಡೆಯುವುದಕ್ಕಾಗಿ ಈ ಜಿಲ್ಲೆ, ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬರುವ ವರೆಗೆ ಕಾಯಬೇಕಾಯಿತು.

ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗವು ಎಸ್.ಐ.ಐ. ix-i,ii ಸಂಪುಟಗಳನ್ನು, ಈವರೆಗೆ ಬೇರೆ ಬೇರೆ ಕಡೆಗಳಲ್ಲಿ ಪ್ರಕಟವಾಗಿದ್ದ ಶಾಸನಗಳನ್ನು ಮೂಲನಿಧಿಯಾಗಿ ಗ್ರಹಿಸಿ, ಇದಕ್ಕೆ ತನ್ನ ಹೆಚ್ಚಿನ ಪಾಲನ್ನು ಜೋಡಿಸಿದೆ. ಈ ಹೆಚ್ಚಿನ ಪಾಲು ಪ್ರಕಟಿತ ಶಾಸನಗಳ ಪರಿಷ್ಕರಣ ಮತ್ತು ಹೊಸ ಶಾಸನಗಳ ಜೋಡಣೆ ಎಂಬ ಎರಡು ಪ್ರಯತ್ನಗಳನ್ನು ಒಳಗೊಂಡಿದೆ. ಈ ಕಾರ್ಯಕ್ಕಾಗಿ ಶಾಸನಶಾಸ್ತ್ರ ವಿಭಾಗದ ಅಧ್ಯಾಪಕರು ಬಿಸಿಲು, ಮಳೆ, ಗಾಳಿ ಎನ್ನದೆ ಹಳ್ಳಿ-ಪಳ್ಳಿಗಳನ್ನು ಸುತ್ತಿ, ಶಾಸನ ಪಡಿಯಚ್ಚುಗಳನ್ನು ದೊರಕಿಸಿಕೊಂಡು, ಈ ಸಂಪುಟಕ್ಕೆ ಒಂದು ಪೂರ್ಣಸ್ವರೂಪವನ್ನು ಒದಗಿಸಿಕೊಟ್ಟಿದ್ದಾರೆ. ಇದರಿಂದಾಗಿ ಬಳ್ಳಾರಿ ಜಿಲ್ಲೆಯ ಶಾಸನಗಳ ಸಮಗ್ರ ಶೋಧ ಬಹುಮಟ್ಟಿಗೆ ಪೂರ್ಣವಾಗಿದೆ ಎಂದೇ ನಾನು ಭಾವಿಸುತ್ತೇನೆ.

ಮುಂದಿನ ದಿನಗಳಲ್ಲಿ ಇದೇ ರೀತಿ ಉತ್ತರ ಕರ್ನಾಟಕ - ಕರಾವಳಿ ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳ ಮತ್ತು ಹೊರನಾಡಿನ ಶಾಸನ ಸಂಪುಟಗಳನ್ನು ಹೊರತರುವ ೧೦ ವರ್ಷಗಳ ಸುದೀರ್ಘ ಯೋಜನೆಯನ್ನು ಹೀಗೆ ಕೈಗೆತ್ತಿಕೊಂಡಿದೆ:

೧೯೯೮ : ಬಳ್ಳಾರಿ ಜಿಲ್ಲೆ - ಕೊಪ್ಪಳ ಜಿಲ್ಲೆ, ೧೯೯೯ : ರಾಯಚೂರ ಜಿಲ್ಲೆ - ಗುಲಬರ್ಗಾ ಜಿಲ್ಲೆ, ೨೦೦೦: ಬೀದರ್ ಜಿಲ್ಲೆ - ಹಾವೇರಿ ಜಿಲ್ಲೆ, ೨೦೦೧ : ಧಾರವಾಡ ಜಿಲ್ಲೆ - ಗದಗ ಜಿಲ್ಲೆ, ೨೦೦೨: ಬಿಜಾಪುರ ಜಿಲ್ಲೆ - ಬಾಗಲಕೋಟೆ ಜಿಲ್ಲೆ, ೨೦೦೩ : ಬೆಳಗಾವಿ ಜಿಲ್ಲೆ - ಉತ್ತರಕನ್ನಡ ಜಿಲ್ಲೆ, ೨೦೦೪ : ದಕ್ಷಿಣ ಕನ್ನಡ - ಉಡುಪಿ ಜಿಲ್ಲೆ, ೨೦೦೫ : ಮಹಾರಾಷ್ಟ್ರ - ಗೋವೆ, ೨೦೦೬ : ಆಂಧ್ರ ಪ್ರದೇಶ - ತಮಿಳುನಾಡು, ೨೦೦೭: ಹೆಚ್ಚುವರಿ ಶಾಸನ ಸಂಪುಟ.

ಈ ಸುದೀರ್ಘ ಯೋಜನೆಗಾಗಿ ವರ್ಷಕ್ಕೆ ೨ ಲಕ್ಷ ರೂಪಾಯಿಗಳಂತೆ ೧೦ ವರ್ಷಗಳ ವರೆಗೆ ಆರ್ಥಿಕ ಅನುದಾನ ನೀಡಿರುವ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ, ವಿಶೇಷವಾಗಿ ಮಾನ್ಯ ಸಚಿವೆಯರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರ ಸಂಸ್ಕೃತಿ ಪ್ರೀತಿಗೆ ನಾವು ಕೃತಜ್ಞರಾಗಿದ್ದೇವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸಗುಪ್ತ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ವೈ.ಕೆ. ಮುದ್ದುಕೃಷ್ಣ ಅವರಿಗೂ ನಾವು ಋಣಿಯಾಗಿದ್ದೇವೆ. ಕನ್ನಡಿಗರು ಈ ಐತಿಹಾಸಿಕ ಪ್ರಕಟನೆಯನ್ನು ವಿಶ್ವಾಸದಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇವೆ.

■■

ಸಂಪಾದಕ : ಡಾ. ದೇವರಕೊಂಡಾರೆಡ್ಡಿ ಮತ್ತು ಇತರರು. ಇದು ಕನ್ನಡ ವಿಶ್ವವಿದ್ಯಾಲಯದ ಎಲ್ಲ ಶಾಸನ ಸಂಪುಟಗಳಿಗೆ ಬರೆಯಲಾದ ಕುಲಪತಿಯ ಮಾತು. ಪ್ರತಿಯೊಂದು ಸಂಪುಟಕ್ಕೆ ಕೊನೆಯ ಒಂದೆರಡು ಪ್ಯಾರಾ ಬದಲಿಸಲಾಗುತ್ತದೆ.

ಆಕರ : ಮಾರ್ಗ ಸಂಪುಟ–೬

೧೭೨

ಸಜ್ಜನ

೧೯೯೯

ರಾಜಕಾರಣಿಗಳಿಗೂ ನನಗೂ ಎಣ್ಣೆ-ಸೀಗೆ ಸಂಬಂಧ. ಸ್ವತಂತ್ರ ಭಾರತದ ೫೦ ವರ್ಷಗಳ ಇತಿಹಾಸದಲ್ಲಿ ನನ್ನ ಸಂಪರ್ಕಕ್ಕೆ-ಸಮೀಪಕ್ಕೆ ಬಂದ ರಾಜಕಾರಣಿಗಳು ಇಬ್ಬರು, ಇವರಲ್ಲಿ ಮೊದಲಿಗರು, ಶ್ರೀ ಎಂ. ಎಂ. ಸಜ್ಜನ ಅವರು.

ಜಯಶ್ರೀ ಸಜ್ಜನ ಎಂ. ಎಂ. ದಲ್ಲಿ ನನ್ನ ವಿದ್ಯಾರ್ಥಿನಿ. ಅವಳನ್ನು ಕಾಣಲು ತಂದೆ ಶ್ರೀ ಸಜ್ಜನರು ಒಮ್ಮೆ ಕನ್ನಡ ಅಧ್ಯಯನ ಪೀಠಕ್ಕೆ ಬಂದರು. ಅದೇ ಸಜ್ಜನರ ಮತ್ತು ನನ್ನ ಪ್ರಥಮ ಸಮಾಗಮ. ಈ ಘಟನೆ ಜರುಗಿದುದು ೨೫ ವರ್ಷಗಳಷ್ಟು ಹಿಂದೆ. ಆ ಬಳಿಕ ನಮ್ಮ ಪರಿಚಯ ಸ್ನೇಹವಾಗಿ, ಸ್ನೇಹ ಆತ್ಮೀಯತೆಯಾಗಿ, ಆತ್ಮೀಯತೆ ಆಪ್ತತೆಯಾಗಿ ಬೆಳೆಯುತ್ತ ಬಂದಿದೆ.

ಆಕಾರಬದ್ಧ ಅಂಗರಚನೆ, ಮಾಟವಾದ ಮೈಕಟ್ಟು, ಗಜ್ಜರಿಯಂಥ ಮೈಬಣ್ಣ, ಮೇಲೆ ಬಿಳಿಯ ಖಾದಿ-ಈ ಕೆಂಪು ಬಿಳುಪುಗಳ ಸಹಯೋಗದಲ್ಲಿ ಎರಕಗೊಂಡ ಅವರ ನಿಲುವು ತುಂಬ ಆಕರ್ಷಕ. ಉತ್ಸಾಹ ತುಂಬಿದ ಮುಖಮುದ್ರೆ; ಮಲ್ಲಿಗೆ ಸುರಿದಂತೆ ಮಾತುಗಾರಿಕೆ. ತುಟಿ ಬಿಚ್ಚಿದರೆ ಸಾಕು, ಇವರು ನ್ಯಾಯವಾದಿಗಳೇ ಇರಬೇಕು ಎಂದು ಯಾರೂ ತೀರ್ಮಾನಕ್ಕೆ ಬರಬಹುದಾದ ವಾಕ್ಪಟುತ್ವ ಅವರಿಗೆ ಜನ್ಮಜಾತವಾದುದು. ಹೀಗಾಗಿ ಪ್ರಥಮ ಸಂದರ್ಶನದಲ್ಲಿಯೇ ಅವರು ತುಂಬಿ ಹರಿಯುವ ಹಳ್ಳದಂತೆ ಎಡಬಲದ ಪರಿಸರವನ್ನು ತಮ್ಮೊಳಗೆ ಸೆಳೆದುಕೊಳ್ಳುತ್ತಾರೆ. ಅವರು ನಿಂತಲ್ಲಿ, ಕುಳಿತಲ್ಲಿ ಒಂದು "ಸಂದರ್ಭ" ತಾನಾಗಿಯೇ ಸೃಷ್ಟಿಯಾಗುತ್ತದೆ.

ನನ್ನ ದೃಷ್ಟಿಯಲ್ಲಿ ಶ್ರೀ ಸಜ್ಜನರು ನಿರ್ಮಾಣಲಿಂಗವಲ್ಲ; ಸ್ವಯಂಭೂಲಿಂಗ. ರಾಜ್ಯದ ಮೂಲೆಯಲ್ಲಿರುವ ಮಿಶ್ರಸಮಾಜದ ಮುದ್ದೇಬಿಹಾಳದಲ್ಲಿ, ಪ್ರತಿಕೂಲ ಸನ್ನಿವೇಶದಲ್ಲಿ ಇದ್ದಕ್ಕಿದ್ದಂತೆಯೇ ಒಡೆದು ಮೂಡಿದ ಕಾರಣ, ನಾನು ಇವರನ್ನು ಹೀಗೆ ಕರೆಯುತ್ತೇನೆ. ಸಂಖ್ಯಾಬಾಹುಲ್ಯವಿದ್ದರೂ ನಿದ್ರೆ ಹೋದ ಸ್ವಸಮಾಜ, ಮನೆಗೆ ಮಾತ್ರ ಸೀಮಿತವಾಗಿದ್ದ ಕುಟುಂಬ. ಇವುಗಳ ನಡುವೆ ಗದ್ದಲವನ್ನಲ್ಲ, ಸದ್ದು ಮಾಡುತ್ತಲೇ ಇವರು ಶಾಲೆ ಕಾಲೇಜುಗಳಲ್ಲಿ ಮೇಲೆದ್ದು ಬಂದರು. ಮುಂದೆ ಸಹಜವಾಗಿಯೇ ತಮ್ಮ ತಾಲೂಕು ಪ್ರದೇಶದಲ್ಲಿ, ರಾಜಕಾರಣ ಗೊತ್ತಿಲ್ಲದ ಪ್ರಭಾವಶಾಲಿಗಳನ್ನೂ - ರಾಜಕಾರಣವನ್ನೇ ಬದುಕುವ ಪುಢಾರಿಗಳನ್ನೂ ಭೇದಿಸಿ ಅನಿರೀಕ್ಷಿತವೆಂಬಂತೆ ಸಾರ್ವಜನಿಕ ಕ್ಷಿತಿಜದ ಮೇಲೆ ಕೊಂಬು-ಕಳಹೆ ಹಿಡಿದುಕೊಂಡೇ ಮೂಡಿಬಂದರು. ಮೇಲುಸ್ತರದವರು ಮೇಲೆಯೇ ಇರಬೇಕು, ಕೆಳಸ್ತರದವರು ಕೆಳಗೇ ಇರಬೇಕು-ಎಂಬ ಸಾಮಾಜಿಕ ಚೌಕಟ್ಟನ್ನು

ಶತಶತಮಾನಗಳಿಂದ ಗಟ್ಟಿಯಾಗಿ ನಂಬಿಕೊಂಡು ಬಂದ ಭಾರತೀಯ ಸಮಾಜವು ಈ ಸಿದ್ಧ ಚೌಕಟ್ಟನ್ನು ಮುರಿದು ಮೂಡುವ ಇಂಥ ಅನಿರೀಕ್ಷಿತಗಳನ್ನು ಜೀರ್ಣಿಸಿಕೊಳ್ಳುವುದು ತುಂಬ ಕಷ್ಟ. ಆದುದರಿಂದ ಶ್ರೀ ಸಜ್ಜನರ ಈ ಅನಿರೀಕ್ಷಿತ ಆಗಮನದಿಂದಾಗಿ ಇವರ ಸುತ್ತ ಒಮ್ಮೆಲೇ ದೊಡ್ಡ ಪ್ರಮಾಣದ ಸಂತೋಷ-ಸಿಟ್ಟುಗಳ ಮಿಶ್ರವಾತಾವರಣ ಆರಂಭದಲ್ಲಿಯೇ ನಿರ್ಮಾಣವಾಯಿತು. ಇದೆಲ್ಲವನ್ನೂ ಲೆಕ್ಕಿಸದೆ ದೇವರಾಜ ಅರಸರಂಥ ಧೀಮಂತ ರಾಜಕಾರಣಿಯ ಪ್ರಭಾವವನ್ನು ಸರಿಯಾಗಿ ಬಳಸಿಕೊಂಡು, ಇವರು ತಮ್ಮ ಪ್ರದೇಶದಲ್ಲಿ ಆರು ವರ್ಷ ಸಶಬ್ದ ಶಾಸಕರಾಗಿ ಬೆಳೆದರು. ಇವರು ಮಾಡಿದ ಜನಪರಕಾರ್ಯಗಳು ಇವರ ಹೆಸರು ಹೇಳುತ್ತ ಅಲ್ಲಲ್ಲಿ ನಿಲ್ಲುವ ಹೊಸ ವಾತಾವರಣವನ್ನು ಸೃಷ್ಟಿಸಿದವು.

ಸ್ನೇಹಪರತೆ, ವ್ಯವಹಾರ ಕುಶಲತೆ, ಕ್ರಿಯಾಶೀಲತೆ, ನಿಷ್ಠುರತೆ - ಇವು ಶ್ರೀ ಸಜ್ಜನರ ಚತುರ್ಮುಖಗಳು. ಒಮ್ಮೆ ಸಂಪಾದಿಸಿದ ಸ್ನೇಹವನ್ನು ಇವರು ಕಳೆದುಕೊಳ್ಳುವುದು ಕಡಿಮೆ. ಪ್ರತಿಷ್ಠೆಯನ್ನು ಮೂಲೆಗಿಟ್ಟು ಗೆಳೆತನವನ್ನು ಉಳಿಸಿಕೊಳ್ಳುವುದು ಇವರ ಜಾಯಮಾನ. ಜೀವನವನ್ನು ಸಕಾರಾತ್ಮವಾಗಿ ಮುನ್ನಡೆಸಬೇಕೆಂಬ ಧೋರಣೆಯ ಶ್ರೀ ಸಜ್ಜನ ಅವರು ಸ್ನೇಹದ ಮಹತ್ವವನ್ನು ಸರಿಯಾಗಿಯೇ ತಿಳಿದುಕೊಂಡಿದ್ದಾರೆ. ಬಾಲ್ಯದ ಎಲ್ಲ ಗೆಳೆಯರೊಂದಿಗೆ ಈಗಲೂ ಮಜಬೂತ ಕೊಂಡಿಯಾಗಿಯೇ ಇವರು ಬೆಳೆದುಬಂದುದು ಇದಕ್ಕೆ ನಿದರ್ಶನ. ವೈರವನ್ನು ಸಾಧಿಸಿಕೊಂಡು ಹೋಗುವಷ್ಟು ಆಯುಷ್ಯ ಸುದೀರ್ಘವಾಗಿಲ್ಲವೆಂದು ಅರಿತ ಇವರು, ಸ್ನೇಹಿತರ ಮುನಿಸು ನಿವಾರಣೆಗಾಗಿ ಅನೇಕ ಸಲ ಒಪ್ಪಂದವನ್ನು ತಾವಾಗಿಯೇ ಮಾಡಿಕೊಳ್ಳುತ್ತಾರೆ. ಅಂದರೆ ಇವರು ಮಾಡಿಕೊಳ್ಳುವ ಒಪ್ಪಂದ, ಸ್ನೇಹಿತರು ತಿಳಿದೂ ಮಾಡಿದ ಅನ್ಯಾಯದೊಂದಿಗೆ ಅಲ್ಲ, ತಿಳಿಯದೇ ಮಾಡಿದ ತಪ್ಪುಗಳೊಂದಿಗೆ.

ವ್ಯವಹಾರ ಕುಶಲತೆಯನ್ನುವುದು ಹೊತ್ತುಬಂದಂತೆ ಬಣ್ಣಬದಲಿಸುವ ಸಮಯಸಾಧಕತನವಲ್ಲ; ತನ್ನ ಮೂಲ ಬಣ್ಣವನ್ನು ಉಳಿಸಿಕೊಂಡು, ಸನ್ನಿವೇಶವನ್ನು ಸರಿಯಾಗಿ ನಿರ್ವಹಿಸುವುದು. ಇದನ್ನು ಅರ್ಥಮಾಡಿಕೊಂಡ ಶ್ರೀ ಸಜ್ಜನರು ಒದಗಿಬಂದ ಅವಕಾಶಗಳನ್ನು ಅನುಕೂಲವಾಗಿಸಿಕೊಳ್ಳುತ್ತಾರೆ, ಅದಕ್ಕೆ ಅರ್ಥ ತುಂಬುತ್ತಾರೆ. ರಾಜ್ಯದಲ್ಲಿ ದೇವರಾಜ ಅರಸು ಅವರ ಗಾಳಿಬೀಸುತ್ತಿರುವಾಗ ಅದನ್ನು ತಮ್ಮ ರಾಜಕೀಯ ಜೀವನಕ್ಕೆ ಪ್ರಾಣವಾಯುವಾಗಿಸಿಕೊಂಡುದೇ ಇದಕ್ಕೆ ಸಾಕ್ಷಿ. ಅಂದರೆ ಶ್ರೀ ಸಜ್ಜನರಿಗೆ ಅವಕಾಶವನ್ನು ಸೃಷ್ಟಿಸಿಕೊಳ್ಳುವುದಕ್ಕಿಂತ, ಸೃಷ್ಟಿಯಾದ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಳ್ಳುವುದು ಗೊತ್ತಿದೆಯೆಂದು ತೋರುತ್ತದೆ.

ಇವೆಲ್ಲ ಇತ್ಯಾತ್ಮಕ ಗುಣಗಳೊಂದಿಗೆ ಇವರ ಇನ್ನೊಂದು ಇತ್ಯಾತ್ಮಕ ಗುಣವೇ ಆಗಿರುವ ನಿಷ್ಠುರತೆಯನ್ನು ಸರಿಯಾಗಿ ನಿರ್ವಹಿಸಿಕೊಳ್ಳಲು ಇವರಿಗೆ ಬರುವುದಿಲ್ಲವೆಂದು ಸ್ನೇಹಿತರು ಹೇಳುತ್ತಾರೆ. ಎಲ್ಲ ಇದ್ದೂ, ರಾಜಕೀಯವಾಗಿ, ಇವರು ಸೋಲುತ್ತ ಹೋಗಲು ಇದೇ ಕಾರಣವೆಂದು ಅವರ ಅಭಿಪ್ರಾಯ. ಇದು ಸತ್ಯವಾಗಿರಬಹುದು. ಅಂದರೆ ಸ್ಥಾಪಿತ ಹಳೆಯ ವ್ಯವಸ್ಥೆಗಳ ಮೇಲೆ ಸ್ಥಾಪನೆಗೊಳ್ಳುತ್ತಲಿರುವ ತನ್ನ ಹೊಸ ವ್ಯವಸ್ಥೆ ಯಾವ ಪರಿಣಾಮ ಬೀರಬಹುದು? ಎಂಬುದರ ಕಡೆಗೆ ಅಷ್ಟಾಗಿ ಗಮನ ಕೊಡದಿದ್ದುದೇ ಇವರ ರಾಜಕೀಯ ಕ್ಷೇತ್ರದ ನಿರ್ಗಮನಕ್ಕೆ ಕಾರಣವೆಂದು ತೋರುತ್ತದೆ. ಇದಲ್ಲದೆ ಮೇಲುವರ್ಗದವರ ಅಸಮಾಧಾನ, ಕೆಳವರ್ಗದವರ ಅವಕಾಶವಾದಗಳಿಂದುಂಟಾದ ಸಂದರ್ಭಗಳ ಒತ್ತಡದಿಂದಾಗಿ ತಮ್ಮ ಜನವಲಯವನ್ನು ಸೀಮಿತಗೊಳಿಸಿಕೊಳ್ಳುತ್ತ ಹೋದುದರಿಂದ, ಸಮಾಜದ ಒಳಗೆ ಆಳವಾಗಿ ಇಳಿಯತೊಡಗಿದ್ದ ಇವರ ರಾಜಕಾರಣದ ಬೇರುಗಳು, ಕ್ರಮೇಣ ಹೊರಗೆ ಬರತೊಡಗಿದವೆಂದು ಕಾಣುತ್ತವೆ. ಈ ಎಲ್ಲ ಕಾರಣಗಳಿಂದಾಗಿ ಶ್ರೀ ಸಜ್ಜನರು ರಾಜಕಾರಣದ ಆಕಾಶದಿಂದ ಕ್ರಮೇಣ ನಿರ್ಗಮಿಸಿದರೂ ಆರು ವರ್ಷ, ಮಧ್ಯಾಹ್ನದ ಸೂರ್ಯನಂತೆ ಬೆಳಗಿದ್ದು, ಸಮಾಜವನ್ನು ಬೆಳಗಿಸಿದ್ದು ಸುಳ್ಳಲ್ಲ.

ಇದನ್ನು ಅರ್ಥಮಾಡಿಕೊಂಡ ಇವರ ಅಭಿಮಾನಿಗಳು, "ಸಜ್ಜನ" ಹೆಸರಿನ ಗೌರವಗ್ರಂಥವನ್ನು ಪ್ರಕಟಿಸಲು ಮುಂದಾದುದು, ಕೃತಜ್ಞತೆ ಸಮಾಜದಲ್ಲಿ ಇನ್ನೂ ಜೀವಂತವಾಗಿರುವುದರ ಲಕ್ಷಣವೆನಿಸಿದೆ. ಈ ಗ್ರಂಥ ಸರಿಯಾಗಿ ತೆರೆದುಕೊಳ್ಳುವುದೇ 'ಸ್ವಗತಿ' ಲೇಖನದೊಂದಿಗೆ. ಶ್ರೀ ಸಜ್ಜನ ಅವರ ಜೀವನದ ಗತಿ-ಪ್ರಗತಿ-ವಿಗತಿಗಳನ್ನು ಕಾರ್ಯ-ಕಾರಣಗಳ ನೆಲೆಯಲ್ಲಿ ಪ್ರತಿಪಾದಿಸುವ ಈ ನಿರ್ಭೀತ ಆತ್ಮಚರಿತ್ರೆ ಮುದ್ದೇಬಿಹಾಳ ಕ್ಷೇತ್ರವನ್ನು ಕೇಂದ್ರವಾಗಿಟ್ಟುಕೊಂಡು, ಜಿಲ್ಲೆ-ರಾಜ್ಯಗಳ ರಾಜಕಾರಣವನ್ನೂ ತಬ್ಬಿಕೊಂಡಿದೆ. ಭಾಷೆಯಲ್ಲಿ ಸ್ಥಾಪಿಸಲ್ಪಟ್ಟ ಒಂದು ಕಾಲಘಟ್ಟದ ತಾಜಾ ಅನುಭವಗಳ ಈ ಲೇಖನ, ಯುವ ರಾಜಕಾರಣಿಗಳಿಗೆ ನಿನ್ನೆಗಳ ನೆನಪು ಮಾಡಿಕೊಡುತ್ತ, "ಮಾರ್ಗದರ್ಶಿ"ಯಾಗುವಷ್ಟು ಸತ್ವಶಾಲಿಯಾಗಿದೆ. ಅಂಥವರಿಗೆ ಏಕಕಾಲಕ್ಕೆ ದಾರಿ ತೋರುವ ದೀಪವೂ, ಎಚ್ಚರಿಕೆ ನೀಡುವ ಗಂಟೆಯೂ ಆಗಿ ಪರಿಣಿಸಿದುದು ಇದರ ವಿಶೇಷತೆ ಎನಿಸಿದೆ.

ಈ 'ಆತ್ಮಕಥನ'ಕ್ಕೆ ಪೂರಕವೆನಿಸಿವೆ, 'ವ್ಯಕ್ತಿತ್ವ ದರ್ಶನ'ದ ಲೇಖನಗಳು. ಶ್ರೀ ಸಜ್ಜನರ ವಿದ್ಯಾರ್ಥಿ ಜೀವನ ಮೊದಲು ಮಾಡಿ, ಅವರ ಬದುಕಿನ ಎಲ್ಲ ಘಟ್ಟಗಳನ್ನು, ಘಟನೆಗಳನ್ನು ಇವು ಬಿಡಿಸಿ ತೋರಿಸುತ್ತವೆ. ಕೇವಲ ಸ್ತುತಿಗೆ ನಿಲ್ಲದೆ ವ್ಯಕ್ತಿ ವಿಮರ್ಶೆಗೂ ಇವು ಇಳಿದುದನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಇದಕ್ಕೆ ಇನ್ನೂ ಪೂರಕವೆಂಬಂತೆ "ಗೌರವ ಲೇಖನ"ಗಳನ್ನೂ ಇಲ್ಲಿ ಸಂಯೋಜಿಸಲಾಗಿದೆ.

ಹೀಗೆ ರೂಪಗೊಂಡ ಈ ಕೃತಿಯ ಬಹುಪಾಲು ಬರವಣಿಗೆಯಲ್ಲಿ ತುಂಬಿತುಳುಕುತ್ತಾರೆ, ಸಜ್ಜನರು. ಇವರ ಒಂದು ಅವಧಿಯ 'ಶಾಸಕ' ಜೀವನಕ್ಕೆ ಬರೆದ 'ಶಾಸನ'ವಾಗಿದೆ, ಈ ಕೃತಿ.

ಎಂ. ಎಂ. ಸಜ್ಜನ ಮುದ್ದೇಬಿಹಾಳ.

ಆಕರ : ಮಾರ್ಗ ಸಂಪುಟ–೬

■■

೧೭೩

ಗಳಗನಾಥ ಕಾದಂಬರಿ ಸಂಪುಟ

೧೯೯೯

ಗಳಗನಾಥರಿಗೆ ನಮಸ್ಕಾರ

ಕನ್ನಡ ಕಾದಂಬರಿಗೆ ನೂರು ವರ್ಷ. ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯ ಗಳಗನಾಥರ ಸಮಗ್ರ ಕಾದಂಬರಿಗಳನ್ನು ಆರು ಸಂಪುಟಗಳಲ್ಲಿ ಪ್ರಕಟಿಸುತ್ತಲಿದೆ. ಇದು, ಕನ್ನಡ ಕಾದಂಬರಿ ಕ್ಷೇತ್ರದ "ಶತಮಾನ ಸ್ಮರಣೆ"ಯಾಗಿರುವಂತೆ, ನೂರು ವರ್ಷಗಳ ಹಿಂದೆ, ೧೮೯೮ರಲ್ಲಿ ತಮ್ಮ ಮೊದಲ ಕಾದಂಬರಿ 'ಪ್ರಬುದ್ಧ ಪದ್ಮನಯನೆ' ಬರೆದ ಗಳಗನಾಥರಿಗೆ ಸಲ್ಲಿಸುವ ಗೌರವ ಸಮರ್ಪಣೆಯೂ ಆಗಿದೆ.

ಕನ್ನಡವನ್ನು ಸಾವಿರ ವರ್ಷಗಳಿಂದ ಆಳಿದ ಪದ್ಯದ ಪ್ರಕಾರವನ್ನು ಹಿಂದೆ ಸರಿಸಿ, ಇತ್ತೀಚಿನ ನೂರು ವರ್ಷ ಅದನ್ನು ಆಳಿದುದು ಗದ್ಯಪ್ರಕಾರ. ಶಿವಕೋಟ್ಯಾಚಾರ್ಯ, ಹರಿಹರ, ನಯಸೇನರಂಥವರ ವೈಯಕ್ತಿಕ ಪ್ರಯತ್ನಗಳನ್ನು ಬಿಟ್ಟರೆ, ಸಾವಿರ ವರ್ಷದ ಸುದೀರ್ಘ ಅವಧಿಯಲ್ಲಿ ಕನ್ನಡ ಗದ್ಯ ತೆವಳುತ್ತಲೇ ಬಂದಿತು. ಮುದ್ದಣನಲ್ಲಿ ಆಧುನಿಕ ಗದ್ಯದ ಲಕ್ಷಣಗಳು ಕಂಡುಬಂದರೂ ಆ ಹಾದಿ ಒಂದು ಮಾರ್ಗವಾಗಿ ಬೆಳೆಯಲಿಲ್ಲ. ಆದರೆ ತಮ್ಮ ಸಾಹಿತ್ಯಕೃಷಿ ಮತ್ತು ಪತ್ರಿಕಾಸಾಹಿತ್ಯಕೃಷಿಗಳ ಮೂಲಕ ಆಧುನಿಕ ಗದ್ಯಮಾರ್ಗವನ್ನು ಸಿದ್ಧಗೊಳಿಸಿದವರಲ್ಲಿ ಮುಖ್ಯರೆನಿಸಿದ್ದಾರೆ, ಗಳಗನಾಥರು.

೨೦ನೆಯ ಶತಮಾನದಲ್ಲಿ ಈ ಗದ್ಯಯುವನ್ನು ಆಳಿದುದು ಕಾದಂಬರಿ. ಹೀಗಾಗಿ ಈ ಶತಮಾನವನ್ನು "ಕಾದಂಬರಿ ಪ್ರಧಾನಯುಗ"ವೆಂದು ಕರೆಯಬಹುದಾಗಿದೆ. ಇದು ನವೋದಯ, ಪ್ರಗತಿಶೀಲ, ನವ್ಯವೆಂಬ ಮೂರು ಹಂತಗಳಲ್ಲಿ ಸಾಗಿಬಂದಿದೆ. ಇವುಗಳಲ್ಲಿ ಪ್ರಗತಿಶೀಲವೆಂಬುದು ಒಂದು ಪ್ರಯೋಗವಾಗಿ ಉಳಿಯಿತೇ ಹೊರತು, ಪರಂಪರೆಯಾಗಿ ಬೆಳೆಯಲಿಲ್ಲ. ಇತ್ತೀಚೆ ನವ್ಯ ಕಾದಂಬರಿ ಒಂದು ಪರಂಪರೆಯಾಗಿ ಬೆಳೆಯುತ್ತಲಿದ್ದರೂ ಅದರ ಸಂಖ್ಯೆ ಕಡಿಮೆ ಆದುದರಿಂದ ಇಂದಿಗೂ ಕಾದಂಬರಿ ಕ್ಷೇತ್ರವನ್ನು ಬಹುಪಾಲು ವ್ಯಾಪಿಸಿದುದು, ನವೋದಯ ಪ್ರಜ್ಞೆಯ ಕಾದಂಬರಿ. ಈ ಪ್ರಜ್ಞೆಯ ಮೂಲಪುರುಷರಲ್ಲಿ ಮುಖ್ಯರೆನಿಸಿದ್ದಾರೆ, ಕಾದಂಬರಿ ಪಿತಾಮಹ ಗಳಗನಾಥರು.

ಕಾದಂಬರಿ ಸಾಹಿತ್ಯ, ಧಾರ್ಮಿಕ ಸಾಹಿತ್ಯ, ನಿಬಂಧ ಸಾಹಿತ್ಯ ನೆಲೆಗಳಲ್ಲಿ ದುಡಿದಿದ್ದರೂ "ಗಳಗನಾಥರೆಂದರೆ ಕಾದಂಬರಿ, ಕಾದಂಬರಿಯೆಂದರೆ ಗಳಗನಾಥರು" ಎಂಬಂತೆ ಅವರ ಹೆಸರು ಕಾದಂಬರಿಗೆ ಪರ್ಯಾಯವೆಸಿದೆ. ಸುಮಾರು ಐದು ಸಾವಿರ ಪುಟವ್ಯಾಪ್ತಿಯ ಕಾದಂಬರಿ ಸಾಹಿತ್ಯ ಸೃಷ್ಟಿ, ಕೆಲವೊಮ್ಮೆ ಒಂದು

ಕಾದಂಬರಿಗೆ ಐದು ಆವೃತ್ತಿ, ಒಂದು ಆವೃತ್ತಿಗೆ ಐದು ಸಾವಿರ ಪ್ರತಿ, ಮಾರಾಟಕ್ಕೆ ಪುಸ್ತಕದ ಗಂಟುಹೊತ್ತು ಗ್ರಾಮದಿಂದ ಗ್ರಾಮಕ್ಕೆ ನಡೆಸಿದ ಸುತ್ತಾಟ- ಇವೆಲ್ಲವುಗಳಿಗೆ ಕನ್ನಡ ಕಾದಂಬರಿಯ ನೂರು ವರ್ಷಗಳ ಇತಿಹಾಸದಲ್ಲಿ ಇಂದಿಗೂ ಏಕೈಕ ನಿದರ್ಶನವೆನಿಸಿದ್ದಾರೆ, ಗಳಗನಾಥರು.

ಒಂದು ಸಂಸ್ಕೃತಿಯ ಸಾಹಿತ್ಯ ಇನ್ನೊಂದು ಸಂಸ್ಕೃತಿಯಲ್ಲಿ ಮೊದಲು ಪ್ರವೇಶಿಸುವುದು, ಭಾಷಾಂತರದ ಮೂಲಕ. ಆಮೇಲೆ ಅದು ಭಾವಾಂತರ, ಸ್ವತಂತ್ರ ಸಾಹಿತ್ಯಗಳಿಗೆ ದಾರಿಮಾಡಿಕೊಡುತ್ತದೆ. ಇದಕ್ಕೆ ಅನುಗುಣವಾಗಿ ನವೋದಯ ಆರಂಭದ ಕನ್ನಡ ಭಾವಗೀತೆ ಮತ್ತು ನಾಟಕಗಳು ಅನುವಾದದ ದಾರಿ ಹಿಡಿದೇ ಕನ್ನಡದೊಳಗೆ ಬಂದವು. ಅಂದರೆ ಇಂಗ್ಲಿಷ್‌ನಿಂದ ಕಾವ್ಯಸಾಹಿತ್ಯವನ್ನು, ಇಂಗ್ಲಿಷ್ ಮತ್ತು ಸಂಸ್ಕೃತಗಳಿಂದ ನಾಟಕಸಾಹಿತ್ಯವನ್ನು ಕನ್ನಡಿಗರು ಅನುವಾದಗೊಳಿಸಿಕೊಂಡರು. ಆದರೆ, ಅದೇ ಕಾಲದ ಕಾದಂಬರಿ ಮಾತ್ರ, ಇಂಗ್ಲಿಷ್ ಅನುವಾದ ದಾರಿಯನ್ನು ಬಿಟ್ಟು, ಮರಾಠಿ, ಬೆಂಗಾಲಿ ಕಾದಂಬರಿಗಳ ಆದರ್ಶದಲ್ಲಿ ಕನ್ನಡಕ್ಕೆ ಅನುವಾದವಾಗಿ ಬಂದಿತು; ಐತಿಹಾಸಿಕ ಮತ್ತು ಸಾಮಾಜಿಕವೆಂಬ ಎರಡು ಮುಖ್ಯ ಕವಲುಗಳಲ್ಲಿ ಬಿಚ್ಚಿಕೊಂಡಿತು. ಇವುಗಳಲ್ಲಿ ಐತಿಹಾಸಿಕ ಕಾದಂಬರಿ ಲೋಕವನ್ನು ಸರಿಯಾಗಿ ರೂಪಿಸಿ, ಅದನ್ನು ಗುಣಾತ್ಮಕವಾಗಿ ಮತ್ತು ಗಾತ್ರಾತ್ಮಕವಾಗಿ ಬೆಳೆಸಿದವರು, ಗಳಗನಾಥರು.

ನವೋದಯ ಕಾಲದ ಸಾಹಿತ್ಯಕ್ಕೆ "ಭಾವನೆ"ಯೇ ಮುಖ್ಯ ಭೂಮಿಕೆ. ಇದನ್ನು ಉದ್ದೀಪಿಸಿ, ರಸ ಉಕ್ಕಿಸುವುದೇ ಆ ಸಾಹಿತ್ಯದ ಗುರಿ. ಇದಕ್ಕೆ ಹೇಳಿಮಾಡಿಸಿದ ಬರವಣಿಗೆಯಾಗಿದೆ. ಗಳಗನಾಥರ ಕಾದಂಬರಿ ಸಾಹಿತ್ಯ. ಪರಂಪರೆಯ ಪ್ರೀತಿ, ದೇಶಭಕ್ತಿ ಮೊದಲಾದ ಭಾವಕೇಂದ್ರಿತ ವಸ್ತುಗಳನ್ನು ಒಳಗೊಂಡ ಇವರ ಕಾದಂಬರಿಗಳು, ಸಮಕಾಲೀನ ವಾತಾವರಣದಲ್ಲಿ ಆಯಸ್ಕಾಂತದಂತೆ ಕಾರ್ಯಮಾಡಿದವು. ಹೀಗಾಗಿ ಗಳಗನಾಥರ ಕೃತಿಗಳು ಕೆಲವೇ ದಿನಗಳಲ್ಲಿ ಕನ್ನಡಿಗರ ಮನೆಮನೆಗಳಲ್ಲಿ, ಮನಮನಗಳಲ್ಲಿ, ತುಂಬಿ ನಿಂತವು. ಕ್ರಮೇಣ ಓದುವ ರುಚಿಸಂಸ್ಕಾರವನ್ನೂ ಕನ್ನಡ ಸಮಾಜದಲ್ಲಿ ಬೆಳೆಸಿದವು.

ಗಳಗನಾಥರ ಕಾದಂಬರಿಗಳ ವಸ್ತು ಸಾಮಾನ್ಯವಾಗಿ ಇತಿಹಾಸ. ದಾಖಲಾತ್ಮಕ ಇತಿಹಾಸವನ್ನು ಕಲಾತ್ಮಕ ಕಾದಂಬರಿಯನ್ನಾಗಿರುವ ಕೌಶಲ ಅವರಿಗೆ ಕೈವಶವಾಗಿದ್ದಿತು. ಇದಕ್ಕೆ ನಿದರ್ಶನ, ಮಹಾಕಾವ್ಯದಂತೆ ಆ ಕಾಲಘಟ್ಟವನ್ನಾಳಿದ ಇವರ ಮಾಧವ ಕರುಣಾವಿಲಾಸ. ಕರ್ನಾಟಕದ ಮೊದಲ "ಮಹಾಕಾದಂಬರಿ"ಯೆಂಬಂತೆ ರೂಪಗೊಂಡ ಇದರ ಎಡಬಲದಲ್ಲಿ ಬೇರೆ ಬೇರೆ ಕಾದಂಬರಿಗಳು ಹುಟ್ಟಿದವು. 'ಪ್ರಬುದ್ಧ ಪದ್ಮನಯನೆ'ಯಿಂದ (೧೯೧೮), 'ಸ್ವರಾಜ್ಯ ಸುಗಂಧ'ದ (೧೯೩೮)ವರೆಗಿನ ೪೦ ವರ್ಷಗಳ ಸುದೀರ್ಘ ಅವಧಿಯಲ್ಲಿ ಆ ಸಂಖ್ಯೆ ೨೨ನ್ನು ತಲುಪಿತು. ಇವುಗಳನ್ನು ಕನ್ನಡಿಗರಿಗೆ ಸಂಬಂಧಿಸಿದುವು ೨ ಸಂಪುಟ, ಮರಾಠಿಗರಿಗೆ ಸಂಬಂಧಿಸಿದುವು ೨ ಸಂಪುಟ, ರಜಪೂತರಿಗೆ ಸಂಬಂಧಿಸಿದುದು ೧ ಸಂಪುಟ, ಸಂಕೀರ್ಣ ವಸ್ತುಗಳನ್ನೊಳಗೊಂಡುದು ೧ ಸಂಪುಟ - ಹೀಗೆ ನಾವು ೬ ಸಂಪುಟಗಳಲ್ಲಿ ಕೆಳಗಿನಂತೆ ಹಂಚಿಹಾಕಿದ್ದೇವೆ.

	ಕನ್ನಡಿಗರಿಗೆ ಸಂಬಂಧಿಸಿದ ಕಾದಂಬರಿಗಳು	ಪ್ರಥಮ ಆವೃತ್ತಿ	ಬಳಸಿದ ಆವೃತ್ತಿ
ಸಂಪುಟ ೧			
೧.	ಮಾಧವ ಕರುಣಾ ವಿಲಾಸ	೧೯೨೩	೧೯೬೪
ಸಂಪುಟ ೨			
೧.	ಕನ್ನಡಿಗರ ಕರ್ಮಕಥೆ	೧೯೧೬	೧೯೬೯
೨.	ಕುಮುದಿನಿ	೧೯೧೬	೧೯೬೩
೩.	ದುರ್ಗದ ಬಿಚ್ಚುಗತ್ತಿ	೧೯೩೮	೧೯೩೮

ಮರಾಠಿಗರಿಗೆ ಸಂಬಂಧಿಸಿದ ಕಾದಂಬರಿಗಳು

ಸಂಪುಟ ೩

೧.	ಈಶ್ವರೀ ಸೂತ್ರ	೧೯೧೩	೧೯೪೭
೨.	ಮರಾಠರ ಅಭ್ಯುದಯ	೧೯೧೮	೧೯೬೨
೩.	ಕಮಲ ಕುಮಾರಿ	೧೯೧೦	೧೯೫೭
೪.	ಛತ್ರಪತಿ	೧೯೧೯	೧೯೫೨

ಸಂಪುಟ ೪

೧.	ಗೃಹಕಲಹ	೧೯೨೧	೧೯೫೪
೨.	ಶಿವಪ್ರಭುವಿನ ಪುಣ್ಯ	೧೯೧೮	೧೯೬೧
೩.	ಸ್ವರಾಜ್ಯ ಸುಗಂಧ	೧೯೩೮	೧೯೬೩
೪.	ಕುರುಕ್ಷೇತ್ರ	೧೯೧೯	೧೯೫೬

ರಜಪೂತರಿಗೆ ಸಂಬಂಧಿಸಿದ ಕಾದಂಬರಿಗಳು

ಸಂಪುಟ ೫

೧.	ಕ್ಷಾತ್ರತೇಜ	೧೯೧೪	೧೯೬೦
೨.	ಸತ್ವಸಾರ	೧೯೧೫	೧೯೫೫
೩.	ತಿಲೋತ್ತಮೆ	೧೯೧೭	೧೯೬೫
೪.	ಧಾರ್ಮಿಕ ತೇಜ	೧೯೨೮	೧೯೬೩
೫.	ರಾಣಾ ರಾಜಾಸಿಂಹ	೧೯೨೮	೧೯೫೨

ಸಂಕೀರ್ಣ ಕಾದಂಬರಿಗಳು

ಸಂಪುಟ ೬

೧.	ಪ್ರಬುದ್ಧ ಪದ್ಮನಯನೆ	೧೮೯೮	೧೯೫೭
೨.	ರಾಣೀ-ಮೃಣಾಲಿನಿ	೧೯೧೧	೧೯೫೮
೩.	ವೈಭವ	೧೯೧೨	೧೯೬೦
೪.	ಧರ್ಮರಹಸ್ಯ	೧೯೧೪	೧೯೩೩
೫.	ಸಂಸಾರಸುಖ	೧೯೨೬	೧೯೫೯

ಈ ವಸ್ತುವೈವಿಧ್ಯವನ್ನು ನೋಡಿದರೆ, ಕನ್ನಡದಲ್ಲಿ ಬರೆದ ಇವುಗಳ ವಾಚನವೆಂಬುದು ಕೇವಲ ಕರ್ನಾಟಕದ ಅಧ್ಯಯನವಲ್ಲ, ಕರ್ನಾಟಕ, ಮಹಾರಾಷ್ಟ್ರ, ರಾಜಸ್ಥಾನ - ಹೀಗೆ ಭಾರತದ ವಿವಿಧ ಪ್ರಾಂತಗಳ ವೀರಪರಂಪರೆಯ ಅಧ್ಯಯನವೇ ಆಗಿದೆಯೆಂದು ಸ್ಪಷ್ಟವಾಗುತ್ತದೆ. ಹೀಗಾಗಿ ಈ ಕಾದಂಬರಿಗಳು ಕನ್ನಡಿಗರ ವ್ಯಷ್ಟಿಪ್ರಜ್ಞೆಗೆ ಸೀಮಿತವಾಗಿ ನಿಲ್ಲದೆ, ಭಾರತೀಯ ಸಮಷ್ಟಿಪ್ರಜ್ಞೆಗೆ ಪೂರಕವೆಂಬಂತೆ ಕೆಲಸಮಾಡಿದವು. ಕರ್ನಾಟಕದ ಎಚ್ಚಮನಾಯಕ ಅಳಿಯ ರಾಮರಾಯ ವಿದ್ಯಾರಣ್ಯರಂತೆ, ಮಹಾರಾಷ್ಟ್ರದ ಶಿವಾಜಿ ಸಮರ್ಥ ರಾಮದಾಸ, ರಾಜಸ್ಥಾನದ ಪ್ರತಾಪಸಿಂಹ, ಉತ್ತರ ಪ್ರದೇಶದ ಪೃಥ್ವೀರಾಜರೂ ನಮ್ಮವರೆಂಬ ಭಾವವನ್ನು ಕನ್ನಡಿಗರಲ್ಲಿ ಬೆಳೆಸಿ, ಅಖಂಡ ಭಾರತದ ಪ್ರಜ್ಞೆಯನ್ನು ಅವರಲ್ಲಿ ಮೂಡಿಸಿದವು; ರಾಷ್ಟ್ರ ಜೀವನದ ಪುನಾರಚನೆಗೆ ನೆರವಾದವು.

ಸಾಮಾನ್ಯವಾಗಿ ಯುದ್ಧವೇ ಎಲ್ಲ ಕಾದಂಬರಿಗಳ ಕೇಂದ್ರ ಕಥೆಯಾಗಿದ್ದರೂ ಅವುಗಳಲ್ಲಿ ಭಾರತೀಯ ಸಂಸ್ಕೃತಿಸಂಕಥನದ ಶ್ರುತಿ ಉದ್ದಕ್ಕೂ ಕೇಳಿಬರುತ್ತಲಿರುವುದು ಒಂದು ವಿಶೇಷ.

'ಸದ್ಗುರು ಪ್ರಭಾವ' ಒಂದರ್ಥದಲ್ಲಿ ಗಳಗನಾಥರ ಆತ್ಮಚರಿತ್ರೆಯೆನಿಸಿದೆ. ಅವರ ಜೀವನ-ಸಾಹಿತ್ಯಜೀವನಗಳನ್ನು ತಿಳಿಸಿಕೊಡಲು ಅದಕ್ಕಿಂತ ಉತ್ತಮ ಸಾಧನ ಇನ್ನೊಂದಿಲ್ಲ. ಹೀಗಾಗಿ ಈ ಕೃತಿಯ ಆಯ್ದ ಭಾಗಗಳನ್ನು ಪ್ರತಿಯೊಂದು ಸಂಪುಟದ ಆರಂಭಕ್ಕೆ 'ತೋರಣ' ಶೀರ್ಷಿಕೆಯೊಂದಿಗೆ ಸೇರಿಸಿದ್ದೇವೆ. ಕಾದಂಬರಿಗಳನ್ನು ಓದುವವರಿಗೆ ಯೋಗ್ಯ ಪ್ರವೇಶಿಕೆಯಂತೆ ಇದು ನೆರವಾಗುವುದೆಂದು ನಂಬಿದ್ದೇವೆ.

ಕನ್ನಡ ಕಾದಂಬರಿಗೆ ನೂರು ವರ್ಷ ತುಂಬುತ್ತಲಿರುವ ಸಂದರ್ಭದಲ್ಲಿ ಗಳಗನಾಥರ ಕಾದಂಬರಿಯನ್ನು ಪ್ರಕಟಿಸುವುದಕ್ಕಿಂತ ಮಿಗಿಲಾದ ಸ್ಮರಣೆ ಇನ್ನೊಂದಿಲ್ಲವೆಂದು ನಮ್ಮ ಭಾವನೆ. ಈ ಯೋಜನೆಯನ್ನು ರೂಪಿಸುತ್ತಿರುವಾಗಲೇ ತೀರ ಅನಿರೀಕ್ಷಿತವೆಂಬಂತೆ ಹುಬ್ಬಳ್ಳಿಯ "ಲೋಕಶಿಕ್ಷಣ ಟ್ರಸ್ಟ್"ನಿಂದ ಆರ್ಥಿಕ ನೆರವು ನಮಗೆ ಒದಗಿಬಂದಿತು. ಈ ಟ್ರಸ್ಟಿನ "ಸಂಯುಕ್ತ ಕರ್ನಾಟಕ"ಪತ್ರಿಕೆ ಕರ್ನಾಟಕ ಸಂದರ್ಭದಲ್ಲಿ ಕೇವಲ ಒಂದು ಪತ್ರಿಕೆಯಲ್ಲ, ವಿಭಕ್ತವಾಗಿದ್ದ ಕರ್ನಾಟಕವನ್ನು ಸಂಯುಕ್ತಗೊಳಿಸುವಲ್ಲಿ, ಹೆಸರಿಗೆ ತಕ್ಕಂತೆ ಇದು ವಹಿಸಿದ ಪಾತ್ರ ಅನನ್ಯವಾಗಿದೆ; ಮೇಲಾಗಿ ಭಾರತೀಯರಲ್ಲಿ ಸ್ವಾತಂತ್ರ್ಯಪ್ರಜ್ಞೆ ತುಂಬುವಲ್ಲಿ ಅಹರ್ನಿಶಿ ದುಡಿದಿದೆ. ಗಳಗನಾಥರು ಮಾಡಿದುದೂ ಈ ಕೆಲಸವನ್ನೇ. ಅಂದರೆ ರಾಷ್ಟ್ರಪ್ರಜ್ಞೆಯ ಜಾಗೃತಿ ವಿಷಯದಲ್ಲಿ ಗಳಗನಾಥರ ಕಾದಂಬರಿಗಳು ಮಾಡಿದ ಕೆಲಸವನ್ನೇ ಸಂಯುಕ್ತ ಕರ್ನಾಟಕ ಮಾಡಿತು, ಸಂಯುಕ್ತ ಕರ್ನಾಟಕ ಮಾಡಿದ ಕೆಲಸವನ್ನೇ ಗಳಗನಾಥರ ಕಾದಂಬರಿಗಳು ಮಾಡಿದವು. ಈ ಅನ್ಯೋನ್ಯತೆಗೆ ನಿದರ್ಶನವೆಂಬಂತೆ ಈ ಪತ್ರಿಕೆಯ "ಲೋಕಶಿಕ್ಷಣ ಟ್ರಸ್ಟ್" ಗಳಗನಾಥರ ಕಾದಂಬರಿ ಪ್ರಕಟಿಸುವುದರ ಸಲುವಾಗಿ, ಕನ್ನಡ ವಿಶ್ವವಿದ್ಯಾಲಯಕ್ಕೆ ಬಹುದೊಡ್ಡ ಮೊತ್ತದ ಆರ್ಥಿಕ ನೆರವು ನೀಡಿತು. ಇದಕ್ಕೆ ಕೇಂದ್ರ ಕಾರಣ ಈ ಟ್ರಸ್ಟಿನ ಕಾರ್ಯದರ್ಶಿಗಳಾದ ಮಾನ್ಯ ಶ್ರೀ ಕೆ. ಶಾಮರಾವ ಅವರು.

ಪತ್ರಿಕೆ ಶ್ರೀ ಶಾಮರಾಯರ ಆತ್ಮ, ಪ್ರಾಣ. ಸಂಯುಕ್ತ ಕರ್ನಾಟಕದ ಎಲ್ಲ ಮಜಲುಗಳಲ್ಲಿ ದುಡಿದ ಅವರು, ಪತ್ರಿಕಾ ಪ್ರಪಂಚದ ವ್ಯಕ್ತಿರೂಪವೆನಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಮೇಲಿನ ಪ್ರೀತಿ ಕಾರಣವಾಗಿ ಈ ಉದಾರ ಕೊಡುಗೆ ನೀಡಿದ ಶ್ರೀ ಶಾಮರಾವ ಅವರಿಗೆ, ಲೋಕಶಿಕ್ಷಣ ಟ್ರಸ್ಟಿನ ಆಡಳಿತವರ್ಗಕ್ಕೆ ನಮ್ಮ ನಮಸ್ಕಾರಗಳು ಸಲ್ಲುತ್ತವೆ. ಈ ಸಂಪುಟಗಳನ್ನು ಪ್ರಕಟಿಸಲು ದೊಡ್ಡ ಮನಸ್ಸುಮಾಡಿ ಒಪ್ಪಿಗೆ ನೀಡಿದ ಗಳಗನಾಥಕೃತಿಗಳ ವಾರಸುದಾರರಾದ ಶ್ರೀ ಬಿಷ್ಟೇಶ ವೆಂಕಟೇಶ ಗಳಗನಾಥ ಅವರಿಗೂ, ಶ್ರೀ ಶ್ರೀಧರ ಶಂಕರ ಜೋಶಿ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

ಗಳಗನಾಥರ ಕಾದಂಬರಿಗಳನ್ನು ಸಂಗ್ರಹಿಸುವಲ್ಲಿ, ವರ್ಗೀಕರಿಸುವಲ್ಲಿ ನೆರವಾದ ಡಾ. ಕೃಷ್ಣಮೂರ್ತಿ ಕಿತ್ತೂರ, ಈ ಸಂಪುಟಗಳು ಹೊರಗೆ ಬರುವುದರ ಸಲುವಾಗಿ ತೀವ್ರ ಆಸಕ್ತಿವಹಿಸಿದ ಹಾವೇರಿಯ ಶ್ರೀ ವೆಂಕಟೇಶ ಗಳಗನಾಥ - ಶ್ರೀ ಸತೀಶ್ ಕುಲಕರ್ಣಿ, ಮುಖಪುಟದ ವರ್ಣಚಿತ್ರ ರಚಿಸಿದ ಶ್ರೀ ಎನ್.ಸಿ. ದೇಸಾಯಿ ಅವರಿಗೂ, ತಮ್ಮ ವಶದಲ್ಲಿರುವ ಗಳಗನಾಥರ ಕಾದಂಬರಿಗಳನ್ನು ಒದಗಿಸಿದ ಎಲ್ಲ ಮಹನೀಯರಿಗೂ, ಹಗಲೆಂದರೆ ಹಗಲು - ರಾತ್ರಿಯೆಂದರೆ ರಾತ್ರಿ ದುಡಿದು, ಮೂರು ತಿಂಗಳಲ್ಲಿ ಈ ಸಂಪುಟಗಳು ಆಕಾರಗೊಳ್ಳುವುದಕ್ಕೆ ಶ್ರಮಿಸಿದ ಪ್ರಕಟನ ಸಮಿತಿಯ ಎಲ್ಲ ಸದಸ್ಯರಿಗೂ ಅಭಿನಂದನೆಗಳು. ಕರಡು ತಿದ್ದುವಲ್ಲಿ ನೆರವಾದ ಡಿ. ಮೀನಾಕ್ಷಿ ಸಿ. ಪೂವಯ್ಯ ಅವರಿಗೂ ಕೃತಜ್ಞತೆಗಳು.

ಆಕರ : ಮಾರ್ಗ ಸಂಪುಟ–೬

೧೭೪

ಶಕಪುರುಷ

೨೦೦೦

ನೆನಪಿಗೆ ನಮಸ್ಕಾರ

ಡಾ. ನಂದೀಮಠ ಅವರು ಒಬ್ಬ ಪ್ರಾಧ್ಯಾಪಕರಲ್ಲ, ಒಂದು ಪರುಂಪರೆ. ನನ್ನನ್ನೂ ಒಳಗು ಮಾಡಿಕೊಂಡು ಆ ಪರಂಪರೆ ಹಲವು ಕವಲುಗಳಾಗಿ ಇಂದಿಗೂ ಹಬ್ಬುತ್ತಲಿದೆ. ಈ ಕವಲುಗಳ ತಾಯಿಬೇರಾಗಿರುವ ಡಾ. ನಂದೀಮಠ ಅವರು ಜನಿಸಿ ೧೯೯೯ ಡಿಸೆಂಬರ್ ೭ಕ್ಕೆ ೧೦೦ನೆಯ ವರ್ಷ ಆರಂಭವಾಗುತ್ತದೆ. ಈ ಪವಿತ್ರ ನೆನಪಿಗೆ ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘ ಬೆಳಗಿಸಿದ ನಂದಾದೀಪವೆನಿಸಿದೆ, 'ಶಕಪುರುಷ.'

ಶಿಕ್ಷಣ-ಸಂಶೋಧನೆ ನಂದೀಮಠ ವ್ಯಕ್ತಿತ್ವದ ಎರಡು ಶಕ್ತಿಕೋಶಗಳು. ಇವು ಪರಸ್ಪರ ಪೂರಕವೆಂಬಂತೆ ಅವರು ೮೭ ವರ್ಷ ಬದುಕಿದುದು ಇಂದು ಇತಿಹಾಸ.

ಇತಿಹಾಸವೆನ್ನುವುದು ಒಂದು ಸಾಗರ. ಅದರಲ್ಲಿ ಉಪ್ಪು ಇರುತ್ತದೆ, ಮುತ್ತೂ ಇರುತ್ತದೆ. ಉಪ್ಪು ಕರಗುತ್ತದೆ, ಮುತ್ತು ಕರಗುವುದಿಲ್ಲ. ನಂದೀಮಠರದು ಮುತ್ತಿನಂಥ ವ್ಯಕ್ತಿತ್ವ. ಹೀಗಾಗಿ ಕರಗದೇ ಮುಂದುವರಿಯುತ್ತಲಿರುವ ಅವರ ಚೈತನ್ಯ ನಮ್ಮೊಂದಿಗೆ ಯಾವಾಗಲೂ ಜೀವಂತ. ಆದುದರಿಂದ ಇವತ್ತಿಗೂ ಡಾ.ನಂದೀಮಠ ಅವರ ಹೆಸರನ್ನು ಕೇಳಿದರೆ ಸಾಕು ನಮ್ಮ ಕೈ ತಾನಾಗಿಯೇ ಮುಗಿಯುತ್ತವೆ, ಶಿಕ್ಷಣ - ಸಂಶೋಧನೆ ಎಂಬ ಮೌಲ್ಯಗಳು ಕಣ್ಣೆದುರು ನಿಲ್ಲುತ್ತವೆ.

ಎತ್ತರವಲ್ಲದ ನಿಲುವು, ತುಂಬು ಮೈ, ದುಂಡುಮುಖ. ದೋತರ-ಕೋಟು-ರುಮಾಲು. ಮಾತು ಕಡಿಮೆ. ಮೌನವನ್ನೇ ಅವರು ಬಾಳಿದರು, ಆಳಿದರು. ನೋಡಿದರೆ ಸಾಕು, ತುಂಬಿದ ಕೊಡದ ನೆನಪು.

೧೯೧೫ರ ಸುಮಾರಿಗೆ ಲಿಂಗಾಯತರಲ್ಲಿ ಕೇವಲ ೧೫ ಜನ ಬಿ. ಎ. ಪದವೀಧರರು. ಇಂಥ ಕಗ್ಗತ್ತಲೆಯಲ್ಲಿ ಮೂಡಿಬಂದ ಡಾ. ನಂದೀಮಠರು ಪಿಎಚ್.ಡಿ. ಪದವಿ ಪಡೆದ ಪ್ರಥಮ ಕನ್ನಡಿಗರು, ಕಾಲೇಜು ಪ್ರಿನ್ಸಿಪಾಲ್ ಹುದ್ದೆಯೇರಿದ ಪ್ರಥಮ ಲಿಂಗಾಯತರು. ಆ ಸಂದರ್ಭದಲ್ಲಿ ಹುಟ್ಟಿದವರಿಗೆ ವ್ಯಕ್ತಿಕೇಂದ್ರಿತ ಬೆಳವಣಿಗೆಗಿಂತ ಸಮಾಜಕೇಂದ್ರಿತ ಬೆಳವಣಿಗೆ ಮುಖ್ಯವಾಗಿದ್ದಿತು. ಈ ಪ್ರಜ್ಞೆಗೆ ಸರಿಯಾಗಿ ಸ್ಪಂದಿಸುತ್ತ ಬೆಳೆದವರು, ಡಾ.ನಂದೀಮಠರು.

ಹೀಗಾಗಿ, ಲಂಡನ್ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವೀಧರರಾಗಿದ್ದರೂ ಮಾಸ್ತರರಾಗಿ ಹೈಸ್ಕೂಲ್‌ನಲ್ಲಿ ದುಡಿದರು, ಪ್ರಾಧ್ಯಾಪಕರಾಗಿ ಸಂಸ್ಕೃತ ವಿಭಾಗ ಬೆಳೆಸಿದರು, ಪ್ರಿನ್ಸಿಪಾಲರಾಗಿ ಕಾಲೇಜು

ಬೆಳೆಸಿದರು. ಅವರು ಬೆಳೆಸಿದ ಕಾಲೇಜು ಒಂದಲ್ಲ, ಎರಡು. ಸಾಮಾನ್ಯವಾದುವಲ್ಲ, ಬೆಳಗಾವಿಯ ಲಿಂಗರಾಜ ಕಾಲೇಜು ಮತ್ತು ಬಾಗಲಕೋಟೆಯ ಬಸವೇಶ್ವರ ಕಾಲೇಜು. ಇವುಗಳನ್ನು ಭೌತಿಕವಾಗಿಯೂ ಬೌದ್ಧಿಕವಾಗಿಯೂ ಬೆಳೆಸುತ್ತ, ಡಾ. ನಂದೀಮಠರು ಆ ಕಾಲದ ಶಿಕ್ಷಣ ಶಿಖರವೆಂಬಂತೆ ಬೆಳೆದ ಕಾರಣ, ಅವರು ಮುಂಬಯಿ, ಕರ್ನಾಟಕ ಎರಡೂ ರಾಜ್ಯಗಳ ಶಿಕ್ಷಣಕ್ಷೇತ್ರಗಳಲ್ಲಿ "ತೇನ ವಿನಾ ತೃಣಮಪಿ ನ ಚಲತಿ" ಎನಿಸಿದ್ದರು.

ಕರ್ನಾಟಕವನ್ನು ಶಿಕ್ಷಣದಿಂದ ತುಂಬುವ ಕೆಲಸದಲ್ಲಿ ಅವರು ಹೀಗೆ ಹೈಸ್ಕೂಲ್ ಹಂತ, ಕಾಲೇಜು ಹಂತಗಳಿಗೆ ನಿಲ್ಲದೆ, ವಿಶ್ವವಿದ್ಯಾಲಯ ಕಟ್ಟುವುದಕ್ಕೂ ಕೈಕೂಡಿಸಿದರು. ಕರ್ನಾಟಕ ವಿಶ್ವವಿದ್ಯಾಲಯವೆನ್ನುವುದು, ಅನೇಕರಂತೆ ನಂದೀಮಠರೂ ಕಂಡ ಕನಸಿನ ಕೂಸು. ಸಿಂಡಿಕೇಟ್, ಸೆನೆಟ್, ಅಭ್ಯಾಸ ಮಂಡಲಿ ಇತ್ಯಾದಿ ಸಮಿತಿಗಳ ಸದಸ್ಯರಾಗಿ- ಅಧ್ಯಕ್ಷರಾಗಿ, ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿ, ಕುಲಸಚಿವರಾಗಿ ಅವರು ಈ ಸಂಸ್ಥೆಗೆ ನಿರಂತರ ಪ್ರಾಣತುಂಬುತ್ತ ಬಂದರು. ಆದರೆ, ಮೇಲಿನವರು ಮತ್ತು ಮೇಲೆ ಬರಬೇಕೆನ್ನುವ ಕೆಳಗಿನವರು ಕಾರಣವಾಗಿ ನಡುವಿನವರಾದ ನಂದೀಮಠರಿಗೆ ಸಿಗಬೇಕಾಗಿದ್ದ ಕುಲಪತಿ ಹುದ್ದೆಯ ಅವಕಾಶ ತಪ್ಪಿಹೋಯಿತು. ವಿಶ್ವವಿದ್ಯಾಲಯಕ್ಕಾಗಿ ದುಡಿದ ಬಸವನಾಳರಂತೆ ನಂದೀಮಠರೂ ನ್ಯಾಯದಿಂದ ವಂಚಿತರಾದರು. ಲಿಂಗಾಯತ ಸಮಾಜದಲ್ಲಿ ಇದೆಲ್ಲ ಸಹಜ.

ವಿದ್ವತ್ತಿಗೆ ಇನ್ನೊಂದು ಹೆಸರು, ಡಾ. ನಂದೀಮಠ. ಅವರು ಸಂಸ್ಕೃತ-ಪ್ರಾಕೃತ - ಕನ್ನಡ - ಮರಾಠಿ - ಇಂಗ್ಲೀಷಗಳೆಂಬ ಬಹುಭಾಷಿಕ, ಭಾಷೆ - ಸಾಹಿತ್ಯ - ಧರ್ಮ - ಶಾಸನಗಳೆಂಬ ಬಹುವಿಷಯಕ ಜ್ಞಾನನಿಧಿಯಾಗಿದ್ದರು. ಅಂದು ಪಶ್ಚಿಮ ಮತ್ತು ಪೂರ್ವ ವಿದ್ವಾಂಸರು ಪ್ರಾರಂಭಿಸಿದ್ದ 'ಭಾರತಶಾಸ್ತ್ರ' ರೂಪಣಕಾರ್ಯದಲ್ಲಿ ಡಾ. ನಂದೀಮಠರೂ ಭಾಗಿಗಳಾಗಿ ದುಡಿದರು. 'ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನ'ಗಳಲ್ಲಿ ಭಾಗವಹಿಸುವುದು, ರಾಷ್ಟ್ರಮಟ್ಟದ ವಿದ್ವತ್ ಪತ್ರಿಕೆಗಳಿಗೆ ಪ್ರಬಂಧ ಬರೆಯುವುದು, ಸಮ್ಮೇಳನ-ವಿಚಾರ ಸಂಕಿರಣವನ್ನು ಸಂಘಟಿಸುವುದು, ಪತ್ರಿಕೆ-ಪುಸ್ತಕಗಳನ್ನು ಸಂಪಾದಿಸುವುದು, ಸ್ವತಂತ್ರ ಕೃತಿಗಳನ್ನು ರಚಿಸುವುದು ಇತ್ಯಾದಿ ಕಾರ್ಯಗಳಲ್ಲಿ ಅವರು ಗಾಢವಾಗಿ ತೊಡಗಿಕೊಂಡರು.

ಹಳೆಯದನ್ನು ಹುಡುಕುವುದು, ಹೊಸದನ್ನು ಕಟ್ಟುವುದು - ಈ ಲಕ್ಷಣಗಳ ಕಾಲದಲ್ಲಿ ಬದುಕಿದ ಅವರು, ಹೊಸದನ್ನು ಕಟ್ಟುವುದರೊಂದಿಗೆ ಹಳೆಯದನ್ನು ಹುಡುಕುವಲ್ಲಿಯೂ ವಿಶೇಷ ಶ್ರಮವಹಿಸಿದರು. ಪ್ರಾಚೀನ ಹಸ್ತಪ್ರತಿಗಳನ್ನು, ಶಾಸನಗಳನ್ನು ಶೋಧಿಸುವ ಕೆಲಸ ಡಾ. ನಂದೀಮಠರಿಗೆ ತುಂಬ ಪ್ರಿಯವಾದುದು. ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಗೆ ಇವರು ಹಸ್ತಪ್ರತಿಗಳನ್ನು ಸಂಗ್ರಹಿಸಿದುದು ನೆನೆಯಲೇಬೇಕಾದ ವಿಷಯ. ಇದಕ್ಕಿಂತ ಶಾಸನಗಳ ಸಂಶೋಧನ ಹವ್ಯಾಸ ಅಪೂರ್ವವಾದುದು. ಲಂಡನ್‌ನಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ಇಲಿಯಟ್‌ನ ಹಸ್ತಪ್ರತಿಯನ್ನಾಧರಿಸಿ ಶಿವಾನುಭವ ಪತ್ರಿಕೆಗೆ ಬರೆದ ಶಾಸನ ಪ್ರಬಂಧಗಳು ಇವರ ಶಾಸನ ಪ್ರೀತಿಗೆ ನಿದರ್ಶನವೆನಿಸಿವೆ. ಬಸವಣ್ಣನನ್ನು ಕುರಿತ ಅರ್ಜುನವಾಡ ಶಾಸನವನ್ನು ಸರಿಯಾಗಿ, ಸಂಪೂರ್ಣವಾಗಿ ಮೊದಲು ಓದಿದವರು ಡಾ. ನಂದೀಮಠರೆಂದು ಕಾಣುತ್ತದೆ. ಆಮೇಲೆ ಅವರು ಉದ್ದಕ್ಕೂ ಶಾಸನಗಳ ಶೋಧ, ಪರಿಷ್ಕರಣ, ಪ್ರಕಟನ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತ ಬಂದರು.

ಹೀಗೆ ವೈವಿಧ್ಯಪೂರ್ಣವಾಗಿ ಭಾರತವ್ಯಾಪ್ತಿಗೆ ಹಿಗ್ಗಿದ್ದರೂ ನಂದೀಮಠರ ಮುಖ್ಯ ಒಲವು ವೀರಶೈವ. ಸಮಾಜ-ಸಾಹಿತ್ಯಗಳ ನೆಲೆಯಲ್ಲಿ ವೀರಶೈವದ ಬಗೆಗೆ ಇವರು ನೀಡಿದ ಕಾಣಿಕೆ ಬಹುಕಾಲ ನಿಲ್ಲುವಂಥದು. ಲಂಡನ್‌ದಲ್ಲಿ ಸಿದ್ಧಪಡಿಸಿದ ಪಿಎಚ್.ಡಿ. ಪ್ರಬಂಧ ಆಗಮಗಳನ್ನು ಕುರಿತುದು. ಇದನ್ನು ಬಿಟ್ಟರೆ ಇವರು ಪ್ರಕಟಿಸಿದ ಗ್ರಂಥಗಳು, ಲೇಖನಗಳು ಅಮೂಲ್ಯ ಕೊಡುಗೆಯೆನಿಸಿವೆ. ಎಲ್ಲ ಮೂಲಗಳಿಂದ ಮಾಹಿತಿ ಸಂಗ್ರಹಿಸುವುದು, ತರ್ಕಬದ್ಧವಾಗಿ ಸಂಯೋಜಿಸುವುದು, ನಿರ್ಲಿಪ್ತವಾಗಿ ನಿರೂಪಿಸುವುದು, ಇವರ ಬರೆವಣಿಗೆಯ

ಲಕ್ಷಣವಾಗಿದೆ. ಈ ಬಗೆಯ ಸೇವೆ ಕಾರಣವಾಗಿ ಇವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು, ಅನೇಕ ಸಂಸ್ಥೆ-ಗ್ರಾಮಗಳು ಗೌರವಿಸಿದವು.

ಹೀಗೆ ಉದ್ದಕ್ಕೂ ಕನ್ನಡ ಸಮಾಜ, ವೀರಶೈವ ಸಮಾಜಗಳಿಗಾಗಿ ದುಡಿದ ಡಾ. ನಂದೀಮಠ ಅವರ ಜನ್ಮಶತಮಾನೋತ್ಸವವನ್ನು 'ಶಕಪುರುಷ' ಹೆಸರಿನ ಸಂಸ್ಮರಣ ಗ್ರಂಥ ಪ್ರಕಟನೆಯ ಮೂಲಕ ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘ ಆಚರಿಸುತ್ತಲಿದೆ. ಶ್ರೀ ವೀರಣ್ಣ ಚರಂತಿಮಠ ಅವರ ನೇತೃತ್ವದಲ್ಲಿ ಹೊಸ ಅಧ್ಯಾಯವನ್ನು ತೆರೆದುಕೊಳ್ಳುತ್ತಲಿರುವ ಸಂಘವು ತನ್ನ ಹಿರಿಯರಿಗೆ ತೋರಿಸುತ್ತಲಿರುವ ಕೃತಜ್ಞತೆಗೆ ನಿದರ್ಶನವೆನಿಸಿದೆ, ಈ ಕೃತಿ. ಶ್ರೀ ಚರಂತಿಮಠ ಅವರ ಮತ್ತು ಸಂಘದ ಪದಾಧಿಕಾರಿಗಳ ಈ ಸುಸಂಸ್ಕೃತ ಮನಸ್ಸಿಗೆ ಧನ್ಯವಾದಗಳು.

ಬಿ. ಕೆ. ಹಿರೇಮಠ, ಬಾಗಲಕೋಟ

ಆಕರ : ಮಾರ್ಗ ಸಂಪುಟ-೬

■■

೧೭೫

ಕೊಲ್ಹಾಪುರ ಜಿಲ್ಲೆಯ ಶಾಸನಗಳು

೨೦೦೦

ನಮ್ಮ ಪ್ರಾಚೀನ ಪರಂಪರೆಯ ಅಧ್ಯಯನಕ್ಕೆ ದೊಡ್ಡ ಪ್ರಮಾಣದಲ್ಲಿ ನೆರವಾಗುವ ಶಾಸನಗಳ ಅಭ್ಯಾಸ ಇತ್ತೀಚೆ ದೊಡ್ಡಪ್ರಮಾಣದಲ್ಲಿ ಉಪೇಕ್ಷೆಗೆ ಗುರಿಯಾಗುತ್ತಲಿರುವುದು ವ್ಯಸನದ ಸಂಗತಿ. ಶಾಸನಗಳ ಸರ್ವೇಕ್ಷಣೆ ಪ್ರಕಟಣೆಗಾಗಿ ಹುಟ್ಟಿದ ಸರಕಾರಿ ಸಂಸ್ಥೆಗಳು, ವಿಶ್ವವಿದ್ಯಾಲಯಗಳಂಥ ಆರೆಂಟು ಶಿಕ್ಷಣಸಂಸ್ಥೆಗಳು. ಪ್ರಮುಖ ಸಾರ್ವಜನಿಕ ಸಂಸ್ಥೆಗಳು ಅಸ್ತಿತ್ವದಲ್ಲಿದ್ದರೂ ನಮ್ಮ ರಾಜ್ಯದ ಶಾಸನಗಳ ಸರ್ವೇಕ್ಷಣ ಕಾರ್ಯ ಇನ್ನೂ ಪೂರ್ಣಗೊಳ್ಳಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಹೀಗಿರುವಾಗ ಹೊರರಾಜ್ಯಗಳಲ್ಲಿರುವ ಕನ್ನಡ ಶಾಸನಗಳ ಸರ್ವೇಕ್ಷಣಕಾರ್ಯ ದೂರವೇ ಉಳಿಯಿತು.

ಇಂಥ ಸಂದರ್ಭದಲ್ಲಿ ಹೊರರಾಜ್ಯದ ಶಾಸನಗಳ ಬಗ್ಗೆ, ಅದರಲ್ಲೂ ಕನ್ನಡ ಶಾಸನಗಳ ಬಗ್ಗೆ ತುಂಬ ಆಸಕ್ತಿ ವಹಿಸಿ ದುಡಿಯುತ್ತಲಿರುವ ಅಪರೂಪದ ವಿದ್ವಾಂಸರೆಂದೆನಿಸಿದ್ದಾರೆ, ಡಾ. ಶ್ರೀನಿವಾಸ ರಿತ್ತಿ ಅವರು. ಮಹಾರಾಷ್ಟ್ರದ ನಾಂದೇಡ್ ಜಿಲ್ಲೆ. ಸೊಲ್ಲಾಪುರಜಿಲ್ಲೆಗಳಲ್ಲಿ ಸಿಗುವ ಶಾಸನಗಳನ್ನು ಸಂಗ್ರಹಿಸಿ, ಪ್ರಕಟಿಸಿದ ಅವರ ಸೇವೆ ಶ್ಲಾಘನೀಯವೆನಿಸಿದೆ. ಈಗ ಕೊಲ್ಹಾಪುರ ಜಿಲ್ಲೆಯ ಶಾಸನಗಳ ಪರಿವೀಕ್ಷಣೆ ಮತ್ತು ಪರಿಷ್ಕರಣ ಕಾರ್ಯದ ಮೇಲೆ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿದ ಫಲವೆನಿಸಿದೆ, ಪ್ರಸ್ತುತ ಪುಸ್ತಕ.

ಕೊಲ್ಹಾಪುರ ಜಿಲ್ಲೆ ಮೊದಲಿನಿಂದಲೂ ಕನ್ನಡ ನೆಲ. ಆ ಪ್ರದೇಶದಲ್ಲಿ ಬಾಳಿದವರು ಕನ್ನಡ ಪ್ರಜೆಗಳು. ಆಳಿದವರು ಕನ್ನಡ ಪ್ರಭುಗಳು. ಹೀಗಾಗಿ ಇಲ್ಲಿ ಸಹಜವಾಗಿ ಕನ್ನಡ ಶಾಸನಗಳು ಕಣ್ಣು ತೆರೆದಿವೆ. ಈ ಮೊದಲು ಪ್ರೊ. ಕುಂದಣಗಾರ, ಪ್ರೊ. ಮಿರಾಶಿ ಮೊದಲಾದವರು ಇಲ್ಲಿಯ ಶಾಸನಗಳನ್ನು ಶೋಧಿಸಿದ್ದು, ಡಾ. ರಿತ್ತಿ ಅವರು ಅದನ್ನು ಮುಂದುವರಿಸಿ ಶ್ರೀ ಎ.ಬಿ. ಕರವೀರಕರ ಅವರೊಂದಿಗೆ ರೂಪಿಸಿದ ಈ ಸಂಪುಟ, ಅವರ ಶ್ರಮ ಮತ್ತು ಶ್ರದ್ಧೆಗಳಿಗೆ ಸಾಕ್ಷಿಯೆನಿಸಿದೆ.

ಕನ್ನಡ ವಿಶ್ವವಿದ್ಯಾಲಯ, ಉಪೇಕ್ಷೆಗೆ ಗುರಿಯಾಗಿರುವ ಪ್ರದೇಶಗಳ ಶಾಸನ ಸರ್ವೇಕ್ಷಣಕಾರ್ಯದ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದೆ. ಇದರ ಫಲವಾಗಿ ಒಳನಾಡಿಗೆ ಸಂಬಂಧಪಟ್ಟಂತೆ ಈಗಾಗಲೇ ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಕೊಪ್ಪಳ ಜಿಲ್ಲೆಯ ಶಾಸನ ಸಂಪುಟಗಳನ್ನು ಪ್ರಕಟಿಸಿದೆ. ಹೊರನಾಡಿಗೆ ಸಂಬಂಧಪಟ್ಟಂತೆ ತಮಿಳುನಾಡಿನ ತನ್ನಡ ಶಾಸನಗಳು, ಆಂಧ್ರಪ್ರದೇಶದ ಕನ್ನಡ ಶಾಸನಗಳು, ಮಹಾರಾಷ್ಟ್ರದ

ಕನ್ನಡ ಶಾಸನಗಳು ಹೆಸರಿನ ಕೃತಿಗಳನ್ನು ಹೊರತರಲಿದ್ದು, ಆ ದಾರಿಯಲ್ಲಿ ಒಂದು ಪ್ರಮುಖ ಪ್ರಕಟಣೆಯಾಗಿದೆ, ಕೊಲ್ಹಾಪುರ ಜಿಲ್ಲೆಯ ಶಾಸನಗಳು. ಶ್ರಮವಹಿಸಿ ಈ ಕೃತಿಯನ್ನು ರೂಪಿಸಿಕೊಟ್ಟ ಡಾ. ಶ್ರೀನಿವಾಸ ರಿತ್ತಿ ಮತ್ತು ಶ್ರೀ ಎ.ಬಿ. ಕರವೀರಕರ ಅವರ ವ್ಯಾಸಂಗ ಶ್ರದ್ಧೆಯನ್ನು ನೆನೆಯುವುದು ನಮಗೆ ಪ್ರೀತಿಯ ವಿಷಯವೆನಿಸಿದೆ.

ಡಾ. ಶ್ರೀನಿವಾಸ ರಿತ್ತಿ ಮತ್ತು ಅನಂತ ಬಿ. ಕರವೀರಕರ.

ಆಕರ : ಮಾರ್ಗ ಸಂಪುಟ–೬

■■

೧೭೬

ಕುವೆಂಪು ಸಮಗ್ರಕಾವ್ಯ

೨೦೦೦

ಶತಮಾನದ ಪ್ರತಿಭೆ

ಋಷಿಪ್ರಜ್ಞೆ-ಕವಿಪ್ರತಿಭೆಗಳ ಅದ್ವೈತ ವ್ಯಕ್ತಿತ್ವದ "ಕುವೆಂಪು'ಕಾವ್ಯನಾಮ, ಕನ್ನಡಿಗರಿಗೆ ಒಂದು ರೋಮಾಂಚನ. ನಿರಂಕುಶ ನಿಲವು, ಅನನ್ಯ ಅಂತರ್ಮುಖತೆಗಳಿಂದ ಎರಕಗೊಂಡ ಇವರು ಕನ್ನಡಿಗರ ಮನಸ್ಸನ್ನು ಉದ್ದಕ್ಕೂ ಆಳಿದುದು, ಇಂದು ಇತಿಹಾಸ.

"ನಾಡಿನ ಪುಣ್ಯದ ಪೂರ್ವದಿಗಂತದಿ ನವ ಅರುಣೋದಯ" ಮೂಡುತ್ತಲಿರುವಾಗ ಮೂಡಿಬಂದವರು, ಕುವೆಂಪು. ಹೊಸ ಮೌಲ್ಯಗಳನ್ನು ಸ್ಥಾಪಿಸುವುದು, ಹೊಸ ಭಾಷೆಯನ್ನು - ಹೊಸ ಕಾವ್ಯಭಾಷೆಯನ್ನು ಸೃಷ್ಟಿಸುವುದು ಈ ಸಂಕ್ರಮಣ ಸಂದರ್ಭದ ಕವಿಗಳ ಜವಾಬ್ದಾರಿಯಾಗಿದ್ದಿತು, ಇಂಥ ಹೊಚ್ಚ ಹೊಸ ಸಾಹಿತ್ಯಿಕ ಪರಿಸರವನ್ನು ಬೆಳೆಸುತ್ತಲೇ ಸಾಹಿತಿಯಾಗಿ ಬೆಳೆದ ಗಣ್ಯರಲ್ಲಿ ಗಣ್ಯರೆನಿಸಿದ್ದಾರೆ, ಕುವೆಂಪು.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಭಾವನಾತ್ಮಕ- ವೈಚಾರಿಕ-ಆಧ್ಯಾತ್ಮಿಕ ಆಶಯಗಳೂ, ಗದ್ಯನಿಷ್ಠ-ಪದ್ಯನಿಷ್ಠ ಆಕೃತಿಗಳೂ, ಮಾರ್ಗಮುಖಿ -ದೇಶೀಮುಖಿ ಸಂವೇದನೆಗಳೂ, ಕಥಾತ್ಮಕ -ಅಕಥಾತ್ಮಕ ರೂಪಗಳೂ, ಖಂಡಕಾವ್ಯ - ಮಹಾಕಾವ್ಯ ಶಿಲ್ಪಗಳೂ ಆಗಾಗ ಮೂಡುತ್ತ - ಮುಳುಗುತ್ತ ಸಾಗಿಬಂದಿವೆ. ಸಾವಿರ ವರ್ಷದ ಈ ಸಾಧನೆಗಳೆಲ್ಲ ಕುವೆಂಪು ಅವರ ಬರವಣಿಗೆಯಲ್ಲಿ ಏಕೀಭವಿಸಿರುವುದು, ಒಂದು ವಿಶೇಷ. ಹೀಗಾಗಿ ಇವರ ಸಾಹಿತ್ಯದಲ್ಲಿ ಆಧುನಿಕ ಪ್ರವಾಹಗಳೊಂದಿಗೆ ಪ್ರಾಚೀನ ಪರಂಪರೆಗಳನ್ನೂ ಓದಿದ ಅನುಭವವಾಗುತ್ತದೆ.

ಕುವೆಂಪು ಅವರದು ದೈತ್ಯಪ್ರತಿಭೆ. ಇದು ಗದ್ಯ - ಪದ್ಯ - ನಾಟಕವೆಂಬ ಪ್ರಕಾರ, ಉಪಪ್ರಕಾರಗಳಲ್ಲಿ ಬಿಚ್ಚಿಕೊಂಡಿದ್ದರೂ ಕುವೆಂಪು ಎಂದಾಕ್ಷಣ ಪದ್ಯಪ್ರಪಂಚವೇ ನಮ್ಮ ನೆನಪಿಗೆ ಬರುತ್ತದೆ. ಇದು ಶಿಶುಗೀತೆ, ವಚನಕಾವ್ಯ, ಚುಟುಕು, ಮಹಾಪ್ರಗಾಥ, ಅಷ್ಟಷಟ್ಪದಿ, ಭಾವಗೀತೆ, ಖಂಡಕಾವ್ಯ, ಮಹಾಕಾವ್ಯ -ಹೀಗೆ ಹಲವು ಪ್ರಯೋಗಗಳಲ್ಲಿ ಕವಲೊಡೆದಿದೆ. ಇಲ್ಲೆಲ್ಲ ಸಹ್ಯಾದ್ರಿಮುಖಿಯಾಗಿರುವ "ನಿಸರ್ಗಪ್ರೀತಿ", ವ್ಯಕ್ತಿ ನೆಲೆಯಿಂದ ವಿಶ್ವಮಾನವ ನೆಲೆಗೆ ವಿಸ್ತರಿಸಿಕೊಳ್ಳುವ "ಜೀವನದೃಷ್ಟಿ"ಗಳು ಅನನ್ಯವೆಂಬಂತೆ ಗರಿಬಿಚ್ಚಿಕೊಂಡಿವೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಿಸರ್ಗ ನಿರೂಪಣೆ ಹಸಿರು ಮುರಿಯುವುದು ಪಂಪನಲ್ಲಿ. ಆಮೇಲಿನ ಮಹಾಮೌನವನ್ನು ವ್ಯಾಪಕವಾಗಿ ಮುರಿದವರು, ಕುವೆಂಪು. ಅವರ ರಚನೆಗಳಲ್ಲಿ ಸಮಗ್ರ ಸಹ್ಯಾದ್ರಿಯೇ ಅನಾವರಣಗೊಂಡಿದೆ. ನವೋದಯ ಸಂದರ್ಭದಲ್ಲಿ ಅವರನ್ನು "ನಿಸರ್ಗಕವಿ" ಎಂದು ಕನ್ನಡಿಗರು ಗುರುತಿಸಿದುದು, ಈ ಕಾರಣಕ್ಕಾಗಿ. ನಿಸರ್ಗವನ್ನು ಬಿಟ್ಟರೆ ವ್ಯಕ್ತಿ, ಸಮಾಜಗಳಿಗೆ ಸಂಬಂಧಿಸಿದ ಅವರ ಜೀವನನೀತಿ 'ಕೊಳಲು' ಆಗುತ್ತಲೇ 'ಪಾಂಚಜನ್ಯವೂ' ಆಗಬಲ್ಲುದು. ಹೀಗಾಗಿ ಅವರ ಕವನಗಳಲ್ಲಿ ಕೃತಕವನ್ನು ಕೆಡಹುವ, ಸಹಜವನ್ನು ಕಟ್ಟುವ ಉಭಯ ಕ್ರಿಯೆಗಳು ಉದ್ದಕ್ಕೂ ಕಾಣಿಸಿಕೊಳ್ಳುತ್ತವೆ.

ನಿಸರ್ಗಪ್ರೀತಿ ಇರಲಿ, ಜೀವನನೀತಿ ಇರಲಿ, ಈ ಎರಡೂ ನೆಲೆಗಳಿಗೆ ಸಂಬಂಧಿಸಿದ ಇವರ ಕಾವ್ಯಕರ್ಮ, ಮನೋಪಾತಳಿಗಿಂತ ಆತ್ಮಪಾತಳಿಯಲ್ಲಿಯೇ ದಳಬಿಚ್ಚುವುದು ಒಂದು ವಿಶೇಷತೆಯಾಗಿದೆ. "ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೋ" ಎಂದು ನಿಸರ್ಗವನ್ನು ವರ್ಣಿಸುವಲ್ಲಿ, " ನಾ ನಿನಗೆ ನೀ ನನಗೆ ಜೇನಾಗುವಾ" ಎನ್ನುತ್ತಲೇ "ರಸರೂಪಿ ಭಗವತಿಗೆ ಮುಡಿಪಾಗುವಾ" ಎಂದು ದಾಂಪತ್ಯ ಜೀವನವನ್ನು ಹಾರೈಸುವಲ್ಲಿ, ಕುವೆಂಪು ಕಾವ್ಯ ಭೌತಿಕ ಸ್ತರಕ್ಕೆ ನಿಲ್ಲದೆ, ಮುಂದೆ ಸಾಗಿ ದೈವಿಕ ಸ್ತರದಲ್ಲಿ ವಿರಮಿಸುತ್ತದೆ. ಹೀಗಾಗಿ ಇವರ ಒಂದೊಂದು ಪದ್ಯ "ಧ್ಯಾನಸ್ಥ ಸ್ಥಿತಿ"ಯ ಸೃಷ್ಟಿಯೆನಿಸುತ್ತದೆ. ಅಲ್ಲಿ "ದೈವಿಕರಣಕ್ರಿಯೆ" ಜರುಗುತ್ತಲಿರುವುದು ಎದ್ದು ಕಾಣುತ್ತದೆ.

ಈ ಗುಣಲಕ್ಷಣಗಳ ಕುವೆಂಪು ಅವರ ಕಾವ್ಯ ವಿಸ್ತಾರ-ವೈವಿಧ್ಯತೆಗಳಿಂದ ಕೂಡಿದೆ. ಇದರಲ್ಲಿ ಮಹಾಕಾವ್ಯ "ರಾಮಾಯಣ ದರ್ಶನಂ" ಮತ್ತು ಖಂಡಕಾವ್ಯ "ಚಿತ್ರಾಂಗದಾ"ಗಳನ್ನು ಹೊರತುಪಡಿಸಿ, ಮಿಕ್ಕ ಕನ್ನಡ - ಇಂಗ್ಲಿಷ್ ಸೇರಿ ಎಲ್ಲ ಮೂವತ್ತಮೂರು ಕವನ ಸಂಕಲನಗಳನ್ನು ಅಳವಡಿಸಿದ ಸಂಪುಟವಾಗಿದೆ, "ಕುವೆಂಪು ಸಮಗ್ರಕಾವ್ಯ"

ಐದು ದಶಕಗಳ ಅವಧಿಯಲ್ಲಿ (೧೯೩೦-೧೯೮೫) ಪ್ರಕಟವಾಗುತ್ತ ಬಂದ ಈ ಮಹಾಕವಿಯ ಎಲ್ಲ ಕವನ ಸಂಕಲನಗಳು ಅಲ್ಲಿ - ಇಲ್ಲಿ ಚದರಿಹೋಗಿದ್ದವು. ಸಹೃದಯರಿಗೆ, ವಿಮರ್ಶಕರಿಗೆ ಇವು ಏಕಕಾಲಕ್ಕೆ ಲಭ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದ್ದಿತು. ಈ ಕೊರತೆಯನ್ನು ನೀಗಿಸುವ ಮತ್ತು ಶತಮಾನದ ಪ್ರತಿಭೆಯ ಕವನಗಳು ಮನೆ ಮನೆಗಳಲ್ಲಿ ಸಿಗುವಂತೆ ಮಾಡುವ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯ ಈ ಸಂಪುಟವನ್ನು ಹೊರತರುತ್ತಲಿದೆ.

ಕನ್ನಡ ವಿಶ್ವವಿದ್ಯಾಲಯಕ್ಕೆ ಈಗ "ದಶಮಾನೋತ್ಸವ" ಸಂಭ್ರಮ. ಈ ಸಂಭ್ರಮದ ನಾಂದಿಯೆಂಬಂತೆ ಈ ಕೃತಿ ಪ್ರಕಟಗೊಳ್ಳುತ್ತಲಿದೆ. ಇದಕ್ಕೆ ಕಳಸವಿಟ್ಟಂತೆ ನಮ್ಮ ರಾಷ್ಟ್ರಕವಿಯ ಈ ಸಮಗ್ರ ಕಾವ್ಯಸಂಪುಟ ಅಂತರರಾಷ್ಟ್ರೀಯ ನೆಲೆಯಲ್ಲಿ ಜರುಗಲಿರುವ ವಿಶ್ವಕನ್ನಡ ಸಮ್ಮೇಳನ (ಹೂಸ್ಟನ್)ದಲ್ಲಿ ಬಿಡುಗಡೆಯಾಗುತ್ತಲಿದೆ. ಈ ಅವಕಾಶವನ್ನು ಒದಗಿಸಿದ ಕರ್ನಾಟಕ ಸರ್ಕಾರಕ್ಕೆ, ಅಮೇರಿಕೆಯ ಕನ್ನಡಿಗರಿಗೆ ಧನ್ಯವಾದಗಳು.

ನಮ್ಮ ನಾಡಿನ ಹಿರಿಯ ಕವಿಗಳಾಗಿರುವ ಡಾ. ಜಿ. ಎಸ್. ಶಿವರುದ್ರಪ್ಪ ಅವರು ಈ ಕೃತಿಗೆ ಅಭ್ಯಾಸಪೂರ್ಣ ಪ್ರಸ್ತಾವನೆ ಬರೆದುಕೊಟ್ಟಿದ್ದಾರೆ. ಶ್ರೀ ಕುವೆಂಪು ಕುಟುಂಬವರ್ಗದವರು, ಅದರಲ್ಲಿಯೂ ಶ್ರೀ ಪೂರ್ಣಚಂದ್ರ ತೇಜಸ್ವಿ ಅವರು ಈ ಕೃತಿ ಪ್ರಕಟನೆಗೆ ಸಮ್ಮತಿ - ಸಹಕಾರ ನೀಡಿದ್ದಾರೆ. ಅಮೇರಿಕೆಯ ಕನ್ನಡ ಕೂಟಗಳ ಆಗರವಾಗಿರುವ 'ಅಕ್ಕ' ಸಂಸ್ಥೆಯ ಅಧ್ಯಕ್ಷ ಶ್ರೀ ಎಚ್.ಎಸ್. ಜಯಸ್ವಾಮಿಯವರೂ, ಎಲ್ಲ ಸದಸ್ಯರೂ ಆರ್ಥಿಕ ನೆರವು ನೀಡಿದ್ದಾರೆ. ಈ ನೆರವನ್ನು ದೊರಕಿಸಿಕೊಡುವಲ್ಲಿ 'ಅಕ್ಕ' ಸಂಸ್ಥೆಯ ಧರ್ಮದರ್ಶಿಗಳಾದ ಶ್ರೀ ವಿ.ಎಂ. ಕುಮಾರಸ್ವಾಮಿಯವರು ರಾಯಭಾರಿಯಂತೆ ಕೆಲಸಮಾಡಿದ್ದಾರೆ. 'ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಕುವೆಂಪು ಸಂದೇಶಕ್ಕೆ ಸ್ಪಂದಿಸಿದ ಅಮೇರಿಕೆಯ ಕನ್ನಡ ಬಂಧುಗಳಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಪ್ರೊ.ಜಿ. ಎಚ್.ನಾಯಕ, ಡಾ. ಎಚ್. ಸಿ. ವಿಷ್ಣುಮೂರ್ತಿ, ಪ್ರೊ. ಶ್ರೀರಾಮ್ ಅವರು ಉದ್ದಕ್ಕೂ ನೆರವಾಗಿದ್ದಾರೆ. ಪ್ರಕಟನ ಸಮಿತಿಯ ಸದಸ್ಯರು, ಅದರಲ್ಲಿಯೂ ಡಾ. ಕೆ.ಸಿ. ಶಿವಾರೆಡ್ಡಿ ಅವರು ಶ್ರದ್ಧೆ - ಶ್ರಮಗಳಿಂದ ದುಡಿದಿದ್ದಾರೆ. ಕುಲಸಚಿವರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಉದ್ದಕ್ಕೂ ಸಹಕರಿಸಿದ್ದಾರೆ. ಮೈಸೂರಿನ "ಸ್ಕಂದ ಪ್ರಿಂಟರ್ಸ್" ಒಡೆಯರಾದ ಶ್ರೀ ಸನತ್‌ಕುಮಾರ್ ಅವರು ಅಂದವಾಗಿ ಮುದ್ರಿಸಿದ್ದಾರೆ. ಇವರೆಲ್ಲರಿಗೂ ನಾವು ಋಣಿಯಾಗಿದ್ದೇವೆ.

ಆಕರ : ಮಾರ್ಗ ಸಂಪುಟ–೬

■■

೧೭೭

ಸಿಲಪ್ಪದಿಗಾರಂ

೨೦೦೦

ಎರಡು ಮಾತು

'ದ್ರಾವಿಡ'ವೆಂಬ ಅವಿಭಕ್ತ ಕುಟುಂಬ ಇತಿಹಾಸದುದ್ದಕ್ಕೂ ವಿಭಕ್ತಗೊಳ್ಳುತ್ತ ನಡೆದು, ಇಂದು ಉತ್ತರ - ಮಧ್ಯ - ದಕ್ಷಿಣ ಭಾರತಗಳಲ್ಲಿ ಚದರಿಹೋಗಿದೆ. ಇವುಗಳಲ್ಲಿ ಪ್ರಧಾನವಾದುದು ದಕ್ಷಿಣದ್ರಾವಿಡ. ತಮಿಳು, ಕನ್ನಡ, ತೆಲುಗು, ಮಲಯಾಳಂ - ಇದರ ಮುಖ್ಯ ಶಾಖೆಗಳು. ಇವುಗಳಲ್ಲಿ ಮೂಲದ್ರಾವಿಡದ ಲಕ್ಷಣಗಳನ್ನು ಅಧಿಕ ಪ್ರಮಾಣದಲ್ಲಿ ಉಳಿಸಿಕೊಂಡುದು, ತಮಿಳು. ಇದರ ಭಾಷಿಕ, ಸಾಹಿತ್ಯಿಕ, ಸಾಂಸ್ಕೃತಿಕ ಇತ್ಯಾದಿ ನೆಲೆಗಳಲ್ಲಿ ದ್ರಾವಿಡತನದ ಮುದ್ರೆ ದಟ್ಟವಾಗಿ ಮೂಡಿರುವುದರಿಂದಲೇ, ಇಂದು ದ್ರಾವಿಡ ಎಂದಾಕ್ಷಣ ತಮಿಳು ಮೊದಲು ನೆನಪಿಗೆ ಬರುತ್ತದೆ.

ಸಾಹಿತ್ಯವೆನ್ನುವುದು ಮೂಲತಃ ಸಾರ್ವಜನಿಕ ಆಸ್ತಿಯಂತೆ, ಬಳಿಕ ಅರೆಖಾಸಗಿ ಆಸ್ತಿಯಂತೆ ಹುಟ್ಟುತ್ತ ಬಂದು, ಈಗ ಖಾಸಗಿ ಆಸ್ತಿಯಂತೆ ವ್ಯವಹರಿಸುತ್ತಲಿದೆ. ಇದಕ್ಕೆ ತಮಿಳು ಹೊರತಲ್ಲ. ಇದರ ಮೊದಲ ಘಟ್ಟದಲ್ಲಿ ಅನೇಕ ಜನ ಅನಾಮಧೇಯರಿಂದ ಸಾರ್ವಜನಿಕ ಸೃಷ್ಟಿಯೆಂಬಂತೆ ತಮಿಳು ಸಾಹಿತ್ಯ ಕಣ್ಣು ತೆರೆದಂತಿದೆ. ವಾರಸುದಾರರಿಲ್ಲದ ಆಸ್ತಿಯಂತೆ ಹಾಳಾಗುತ್ತಲಿದ್ದ ಇದನ್ನು ಸಂರಕ್ಷಿಸುವ ಸಾಂಸ್ಥಿಕ ಪ್ರಯತ್ನವೊಂದು ಬಹಳ ವರ್ಷದ ಹಿಂದೆ ಮದುರೈಯಲ್ಲಿ ನಡೆಯಿತು. ಹೀಗೆ ಸಾಂಸ್ಥಿಕ ಪ್ರಯತ್ನದಿಂದ ಸಂಕಲನಗೊಂಡುದೇ ಸಂಘಂ ಸಾಹಿತ್ಯ. ತಮಿಳು ನಾಡಿನ ಕಂಚೀ ನಗರದ ದಂಡಿ ತನ್ನ ಕಾವ್ಯಾದರ್ಶದಲ್ಲಿ ಮೊದಲ ಸಲ ಪ್ರಸ್ತಾಪ ಮಾಡುವ 'ಸಂಘಾತ' ಹೆಸರಿನ ಸಾಹಿತ್ಯಪ್ರಕಾರ ಈ ಸಂಘಂ ಸಾಹಿತ್ಯವನ್ನೇ ಸೂಚಿಸುವಂತಿದೆ. ಕನ್ನಡದಲ್ಲಿಯೂ 'ಇಡುಕುಂಗಬ್ಬ' ಹೆಸರಿನಲ್ಲಿ ಇಂಥ ಸಂಕಲನಗಳು ರಚನೆಗೊಂಡಿರುವ ಸಾಧ್ಯತೆಯಿದೆ. ಅದರ ಚರ್ಚೆ ಇಲ್ಲಿ ಅಪ್ರಸ್ತುತ.

ಈ ಸಂಘಂ ಸಾಹಿತ್ಯದ ತರುವಾಯ ತಮಿಳಿನಲ್ಲಿ ಪಂಚಮಹಾಕಾವ್ಯಗಳು ಹುಟ್ಟಿಕೊಂಡವು. ಅವುಗಳಲ್ಲಿ ಸಿಲಪ್ಪದಿಗಾರಂ, ಮಣಿಮೇಗಲೈ, ಜೀವಕ ಚಿಂತಾಮಣಿ ಲಭ್ಯ. ಕುಂಡಲಕೇಶಿ, ವಳಯಾಪತಿ ಅಲಭ್ಯ. ಇವು ಕೇವಲ ಸಾಹಿತ್ಯಪ್ರಧಾನ ಕೃತಿಗಳಲ್ಲ; ಸಂಸ್ಕೃತಿ ಪ್ರಧಾನ ಕೃತಿಗಳೂ ಕೂಡ. ಹೀಗಾಗಿ ಕಳೆದುಹೋದ ದ್ರಾವಿಡಸಂಸ್ಕೃತಿಯ ಪರಿಚಯಕ್ಕೆ ನಾವು ಈ ಮಹಾಕೃತಿಗಳನ್ನು ಮೊರೆಹೊಗಬೇಕಾಗುತ್ತದೆ. ದ್ರಾವಿಡ ಭಾಷೆಗಳಾದ ಕನ್ನಡ, ತೆಲುಗು, ಮಲೆಯಾಳಗಳು ಆರ್ಯರ ಸಾಂಸ್ಕೃತಿಕ ದಾಳಿಗೆ ತುತ್ತಾಗಿ, ಅವರ ರಾಮಾಯಣ, ಮಹಾಭಾರತಗಳನ್ನೇ ವಸ್ತುವಾಗಿಸಿಕೊಳ್ಳುತ್ತ ಬಂದವು. ಇಂಥ ಸಂದರ್ಭದಲ್ಲಿ ದ್ರಾವಿಡ ವಸ್ತುಗಳನ್ನೊಳಗೊಂಡ ಈ ತಮಿಳು ಕೃತಿಗಳು ಸಹಜವಾಗಿಯೇ ನಮಗೆ ಮುಖ್ಯವೆನಿಸುತ್ತವೆ. ಇವುಗಳಲ್ಲಿ ಆದ್ಯಕೃತಿ ಸಿಲಪ್ಪದಿಗಾರಂ.

ಇದರ ಕರ್ತೃ ಇಳಂಗೋವಡಿಗಳ್. ಈತನು ಜೈನನೆಂದೂ ಶೈವನೆಂದೂ ವಾದಗಳಿವೆ. ಕಾಲ ಕ್ರಿ.ಶ. ೨ನೆಯ ಮತ್ತು ೮ನೆಯ ಶತಮಾನಗಳ ನಡುವೆ ತೂಗುತ್ತಿದೆ.

ಸಿಲಪ್ಪದಿಗಾರಂ ಎಂಬುದರ ವಿಗ್ರಹರೂಪ ಸಿಲುಂಬು + ಅಧಿಕಾರಂ. ಇಲ್ಲಿ ಸಿಲಂಬು ಅಂದರೆ ಕಾಲ್ಗಡಗ. ಕಾಲ್ಗಡಗ ಸಂಬಂಧಿ ಕಥಾಖಂಡ (ಅಧಿಕಾರ)ವನ್ನಾಧರಿಸಿದ ಕಾರಣ ಇದಕ್ಕೆ ಸಿಲಪ್ಪದಿಗಾರಂ ಎಂದು ಹೆಸರಿಡಲಾಗಿದೆ. ಕಡಗದ ಕಥೆಯಾದ ಸಿಲಪ್ಪದಿಗಾರಂ, ಉಂಗುರದ ಕಥೆಯಾದ ಶಾಕುಂತಲವನ್ನು ನೆನಪಿಗೆ ತರುತ್ತದೆ. ಅಲ್ಲಿ ಕೈಯ ಉಂಗುರದ ಸುತ್ತ, ಇಲ್ಲಿ ಕಾಲಿನ ಕಡಗದ ಸುತ್ತು ಕಥೆ ಬೆಳೆದುದು, ಎರಡರಲ್ಲಿಯೂ ಹೆಣ್ಣುಪಾತ್ರ ಮುಖ್ಯವಾದುದು ಗಮನಾರ್ಹವೆನಿಸಿದೆ. ಸಿಲಪ್ಪದಿಗಾರಂ ಕಥೆಯ ಮುಂದುವರಿಕೆಯಾಗಿರುವ ತಮಿಳಿನ ಇನ್ನೊಂದು ಕೃತಿ 'ಮಣಿಮೇಗಲೈ'. ಮಹಿಳೆ ಬಳಸುವ ಮಣಿಖಚಿತ ಕಟಿಪಟ್ಟಿ ಎಂದು ಇದರ ಅರ್ಥ. ಹೀಗೆ ಮಹಿಳೆಯ ಆಭರಣಗಳ ಸುತ್ತ ಈ ಕೃತಿಗಳು ಹುಟ್ಟಿಕೊಂಡುದು ಕುತೂಹಲದ ಸಂಗತಿಯಾಗಿದೆ.

* * * * *

ಸಿಲಪ್ಪದಿಗಾರಂ ತಮಿಳು ದೇಶದ ಚೋಳ ಪಾಂಡ್ಯ ಚೇರ - ಈ ಮೂರು ರಾಜ್ಯಗಳನ್ನು ವ್ಯಾಪಿಸಿದ ಕತೆ. ಹೊರಗೆ ಈ ರಾಜ್ಯಗಳು ಮೂರು ಖಂಡಗಳಾಗಿ ತೋರಿದರೂ ತಮಿಳುನಾಡಿನ ಒಳಗಿರುವುದು ಒಂದು ಅಖಂಡ ಸಂಸ್ಕೃತಿಯೆಂದು ಈ ಕೃತಿ ನಂಬಿಸುತ್ತದೆ. ಈ ಸಂಸ್ಕೃತಿಯಲ್ಲಿ ದ್ರಾವಿಡ - ಆರ್ಯ ಬದುಕು ಜೊತೆ ಜೊತೆಯಾಗಿ ಎದ್ದು ಕಾಣುವುದರಿಂದ, ಈ ಕೃತಿ ಎರಡು ಸಂಸ್ಕೃತಿಗಳ "ಮಿಶ್ರಣ ಪ್ರಕ್ರಿಯೆ" ಸಂದರ್ಭದಲ್ಲಿ ಸೃಷ್ಟಿಯಾಗಿರಬಹುದೆನಿಸುತ್ತದೆ.

ಕನ್ನಗಿ ಎಂಬ ಕನ್ಯೆ ಚೋಳದೇಶದ ರಾಜಧಾನಿ ಪುಗಾರ್ ನಗರದಲ್ಲಿ ಗೃಹಿಣಿಯಾಗಿ, ಪಾಂಡ್ಯದೇಶದ ರಾಜಧಾನಿ ಮದುರೈ ನಗರದಲ್ಲಿ ವಿಧವೆಯಾಗಿ, ಚೇರದೇಶದ ರಾಜಧಾನಿ ವಂಜಿ ನಗರದಲ್ಲಿ 'ಸತಿ' ದೇವತೆಯಾಗಿ ಸ್ಥಾಪನೆಗೊಳ್ಳುವುದಾಗಿದೆ, ಈ ಕಥೆಯ ಪಯಣ.ಈ ಪಥಕ್ರಮಣದಲ್ಲಿ ಅದು ಕ್ರಮವಾಗಿ ಶೃಂಗಾರದಿಂದ, ಕರುಣಕ್ಕೆ, ಕರುಣದಿಂದ ವೀರಕ್ಕೆ ವಿಸ್ತರಿಸಿಕೊಳ್ಳುತ್ತ ಸಾಗಿದೆ.

ದ್ರಾವಿಡ ಸಂಸ್ಕೃತಿಯು ಅನ್ಯಸಂಸ್ಕೃತಿಗಳ ಸಂಪರ್ಕವಿಲ್ಲದೆ, ದ್ವೀಪಜೀವಿಯಾಗಿದ್ದ ಕಾಲವೊಂದಿರಬಹುದು. ಬಹುಶಃ ಅದು ಶಿವ, ಭೈರವ, ಕಾಳಿಗಳನ್ನೊಳಗೊಂಡು ಶೈವಮಯವಾಗಿದ್ದ ಕಾಲ. ಸಿಲಪ್ಪದಿಗಾರಂದಲ್ಲಿ ಈ ಶೈವವಲ್ಲದೆ ವೈಷ್ಣವ, ಜೈನ, ಬೌದ್ಧ ಸಂಬಂಧಿ ಆಚಾರ - ವಿಚಾರಗಳ ಪ್ರಸ್ತಾಪ ದಟ್ಟವಾಗಿಯೇ ಕಂಡುಬರುವುದರಿಂದ, ದ್ರಾವಿಡದೇಶದಲ್ಲಿ ಮಿಶ್ರಸಂಸ್ಕೃತಿಯೊಂದು ರೂಪಗೊಂಡಿದ್ದ ಕಾಲಘಟ್ಟದಲ್ಲಿ ಈ ಕಥೆ ಜರುಗಿದಂತೆ, ಇಲ್ಲವೆ ಈ ಕವಿ ಬರೆದಂತೆ ತೋರುತ್ತದೆ. ತುಂಬ ಉದಾರವೆಂಬಂತೆ ಚಿತ್ರಿತವಾಗಿರುವ ಇಲ್ಲಿಯ ಧಾರ್ಮಿಕತೆ ಅಂದಿನ ಸಾಮಾಜಿಕ ಸೌಹಾರ್ದತೆಗೆ ನಿದರ್ಶನವೆನಿಸಿದೆ. ಹೀಗಿದ್ದೂ ರಾಜಕೀಯದಲ್ಲಿ ಔತ್ತರೇಯ - ದಾಕ್ಷಿಣಾತ್ಯವೆಂಬ ಭಿನ್ನಭಾವ ಅಲ್ಲಲ್ಲಿ ವ್ಯಕ್ತವಾಗಿದೆ. ಈ ಭಾವವನ್ನು ಬಲಗೊಳಿಸುವಂತೆ ಚೋಳ, ಪಾಂಡ್ಯ, ಚೇರ ಅರಸುಗಳು ಆಗಾಗ ಉತ್ತರಾಪಥದ ಶಕ್ತಿಯನ್ನು ಪ್ರಶ್ನಿಸುವ, ತಾವು ಮೂವರೂ ತಮಿಳುನಾಡನ್ನು ಆಳುತ್ತಿರುವ ಬಗ್ಗೆ ಹೆಮ್ಮೆ ಪಡುವ ಮಾತುಗಳು ಈ ಕಾವ್ಯದಲ್ಲಿ ಮತ್ತೆ ಮತ್ತೆ ಕೇಳಿಬರುತ್ತವೆ.

ಹೆಂಡತಿ ಕನ್ನಗಿಯನ್ನು ಗಂಡ ಕೋವಲ ಅಪ್ರಧಾನ ರೀತಿಯಲ್ಲಿ ನಡೆಸಿಕೊಂಡರೂ ಕೃತಿಯುದ್ದಕ್ಕೂ ಕನ್ನಗಿಯೇ ಎದ್ದುಕಾಣುವುದರಿಂದ, ಇದರ ನಾಯಕ ಪಾತ್ರ (Hero) ಗಂಡನಲ್ಲ, ಹೆಂಡತಿ. ಬಹುಶಃ ದ್ರಾವಿಡದಲ್ಲಿ ಹೊಸ ಪಿತೃಪ್ರಧಾನ ಕುಟುಂಬ ಪದ್ಧತಿ ಪ್ರಚಾರದಲ್ಲಿದ್ದರೂ, ಹೆಣ್ಣು ತನ್ನ ಮಹತ್ವ ಕಳೆದುಕೊಳ್ಳದ ಕಾಲದಲ್ಲಿ ಕೆತ್ತಿದ ವಿಗ್ರಹದಂತೆ ಈ ಕೃತಿ ಮೈಪಡೆದಿದೆ.

ಸ್ತ್ರೀಗೆ ಪಾತಿವ್ರತ್ಯ, ರಾಜನಿಗೆ ನ್ಯಾಯಪರತೆ ಪರಮಮೌಲ್ಯ. ಇದನ್ನು ಸಾರುವುದೇ ಈ ಕೃತಿಯ ಮುಖ್ಯ ಉದ್ದೇಶ. ನ್ಯಾಯಪರತೆಯಿಂದ ವಿಮುಖನಾದ ಪಾಂಡ್ಯ ಚಕ್ರವರ್ತಿಯ ಮದುರೈ ನಗರವು ಕನ್ನಗಿಯ

ಶಾಪದಿಂದ ಅಗ್ನಿಗೆ ಆಹುತಿಯಾಗುವುದು, ಸತ್ತ ಗಂಡ ಎಚ್ಚರವಾಗುವುದು, ಅವನನ್ನು ದೇವತೆಗಳು ಸ್ವರ್ಗಲೋಕಕ್ಕೆ ಕರೆದೊಯ್ಯುವುದು, ಇವೆಲ್ಲ ಪಾತಿವ್ರತ್ಯದ ಮಹತ್ವವನ್ನು ಸಾರುವ ಅಂಶಗಳಾಗಿವೆ.

ಕನ್ನಗಿಯನ್ನು ಮಾಸ್ತಿ ವಿಗ್ರಹ ರೂಪದಲ್ಲಿ ಚೇರರಾಜ್ಯದ ಗಿರಿಶಿಖರದಲ್ಲಿ ಸ್ಥಾಪಿಸುವುದರೊಂದಿಗೆ ಕೃತಿ ಕೊನೆಗೊಳ್ಳುತ್ತದೆ. ಈ ವಿಗ್ರಹ ಸ್ಥಾಪನೆಗಾಗಿ ಸೆಂಗುಟ್ಟುವನ್ ಅರಸು ಅಪಾರಸೈನ್ಯದೊಂದಿಗೆ ಉತ್ತರಕ್ಕೆ ಹೊರಟು, ಮಾರ್ಗದಲ್ಲಿಯ ರಾಜಾಧಿರಾಜರನ್ನು ವಶಪಡಿಸಿಕೊಂಡು, ಹಿಮಾಲಯದಲ್ಲಿರುವ ಬೃಹತ್‌ಶಿಲೆಯನ್ನು ಮೆರವಣಿಗೆಯೊಂದಿಗೆ ತಂದು, ವಿಗ್ರಹ ಕಂಡರಿಸಿ, ಸಮಾರಂಭಪೂರ್ವಕ ಸ್ಥಾಪಿಸಿ, ಅದಕ್ಕೆ ಶಾಶ್ವತ ಪೂಜಾವ್ಯವಸ್ಥೆ ಮಾಡಿಸುವುದರಿಂದ, ನಮ್ಮ ಸಂಸ್ಕೃತಿಯ ಮಹತ್ವದ ಆಚರಣೆಯಾಗಿರುವ ಮಾಸ್ತಿಸ್ಮಾರಕ ಸ್ಥಾಪನೆಯ ಕಥೆಯೊಂದು ಇಲ್ಲಿ ಕೃತಿಯಾಗಿ ಬೆಳೆದಿದೆಯೆನ್ನಬಹುದು.

* * * * *

ಕನ್ನಡ ವಿಶ್ವವಿದ್ಯಾಲಯದ ಹಲವು ಗುರಿಗಳಲ್ಲಿ ದ್ರಾವಿಡವೆಂಬ ಮಾತೃಸಂಸ್ಕೃತಿಯ ಶೋಧ ಮುಖ್ಯವಾದುದು. ಬಹುಮುಖಿಯಾದ ಈ ಕಾರ್ಯದ ಒಂದು ಭಾಗ, ದ್ರಾವಿಡ ಕುಟುಂಬದ ಸಂಸ್ಕೃತಿನಿಷ್ಠ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸುವುದು. ಈ ಉದ್ದೇಶದಿಂದ ತಮಿಳಿನ ಸಂಘಂ ಸಂಕಲನ ಕೃತಿಗಳನ್ನೂ ಸಿಲಪ್ಪದಿಗಾರಂ ಮೊದಲಾದವುಗಳನ್ನೂ ಕನ್ನಡ ವಿಶ್ವವಿದ್ಯಾಲಯದ ಮೂಲಕ ಅನುವಾದಿಸಬೇಕೆಂದು ಯೋಚಿಸುತ್ತಿರುವಲ್ಲಿ, ಮಾನನೀಯ ಶ್ರೀ ಕುಕ್ಕಿಲ ಕೃಷ್ಣ ಭಟ್ಟರು ಬದುಕಿರುವಾಗಲೇ ಸಿಲಪ್ಪದಿಗಾರಂ ಅನುವಾದಿಸಿದ ವಿಷಯ ನನ್ನ ಗಮನಕ್ಕೆ ಬಂದಿತು. ಕೂಡಲೇ ಮಿತ್ರರಾದ ಶ್ರೀ ಪ್ರಭಾಕರ ಜೋಶಿ ಅವರನ್ನು ಸಂಪರ್ಕಿಸಿದೆ. ಕೃಷ್ಣಭಟ್ಟರ ಮಗ ಶ್ರೀ ನಾರಾಯಣ ಭಟ್ ಅವರ ಮೂಲಕ ಹಸ್ತಪ್ರತಿಯನ್ನು ಪಡೆದು, ಶ್ರೀ ಜೋಶಿಯವರು ಅದನ್ನು ನನಗೆ ಕಳುಹಿಸಿಯೇ ಬಿಟ್ಟರು. "ಅನುವಾದ ಮೂಲಕ್ಕೆ ಪ್ರಾಮಾಣಿಕವಾಗಿದೆ. ಇಲ್ಲಿಯ ಪಾಂಡಿತ್ಯಪೂರ್ಣ ಭಾಷೆಯನ್ನು ಸಮಗ್ರವಾಗಿ ಮುರಿದು ಕಟ್ಟಿ ಹೃದ್ಯಗೊಳಿಸುವುದು ಅವಶ್ಯವಿದೆ. ನೀವಾಗಲೀ, ಬೇರೆಯವರಾಗಲೀ ಈ ಭಾರವಾದ ಕಾರ್ಯವನ್ನು ಪೂರೈಸಿಕೊಟ್ಟಲ್ಲಿ ಅವರ ಹೆಸರನ್ನು ಸಹ ಅನುವಾದಕರೆಂದು ಪರಿಗಣಿಸಬಹುದಾಗಿದೆ" ಎಂದು ಶ್ರೀ ಜೋಶಿ ಅವರಿಗೆ ಬರೆದೆ. "ನನಗೆ ಸಾಧ್ಯವಿಲ್ಲ. ಈ ಕೆಲಸಕ್ಕೆ ಯಾರೂ ಮುಂದುಬರುತ್ತಿಲ್ಲ. ಆದುದರಿಂದ ಕುಲಪತಿ ಕಾರ್ಯಭಾರದ ನಡುವೆಯೂ ನೀವೇ ಈ ಕಾರ್ಯ ಮಾಡಿದರೆ ನಮಗೆಲ್ಲ ತುಂಬ ಸಂತೋಷ. ಕುಕ್ಕಿಲ - ಕಲಬುರ್ಗಿ ಹೆಸರಿನಲ್ಲಿ ಈ ಕೃತಿ ಹೊರಬರಲಿ" ಎಂದು ಮುಂತಾಗಿ ಬರೆದರು. ಶ್ರೀ ನಾರಾಯಣ ಭಟ್ಟರೂ ಇದನ್ನು ಅನುಮೋದಿಸಿದರು.

ನನಗೆ ಶ್ರೀ ಕುಕ್ಕಿಲ ಕೃಷ್ಣಭಟ್ಟರ ಬಗ್ಗೆ ಗೌರವ, ನನ್ನ ಬಗ್ಗೆ ಅವರಿಗೆ ಪ್ರೀತಿ. ಪತ್ರಗಳ ಮೂಲಕ ನಾವಿಬ್ಬರೂ ಈ ಬಾಂಧವ್ಯವನ್ನು ಬೆಳೆಸಿಕೊಂಡಿದ್ದೆವು. ಈ ಕಳ್ಳುಬಳ್ಳಿ ಸಂಬಂಧ ಕಾರಣವಾಗಿ ಹಸ್ತಪ್ರತಿಯನ್ನು ಭಾಷಾದೃಷ್ಟಿಯಿಂದ ಆಳವಾಗಿ ಪರಿಷ್ಕರಿಸಿದೆ. ಒಂದು ಪುಟ, ಅರ್ಧ ಪುಟಗಳ ವರೆಗೆ ಬೆಳೆದಿದ್ದ ದೀರ್ಘ ವಾಕ್ಯಗಳನ್ನು ಕಿರುವಾಕ್ಯಗಳನ್ನಾಗಿ ಪರಿವರ್ತಿಸಿದೆ. ವಾಕ್ಯವಿನ್ಯಾಸಕ್ಕೆ ಹೊಸ ರೂಪ ನೀಡಿದೆ. ಅಸ್ಪಷ್ಟ ಭಾಗಗಳಿಗೆ ತಮಿಳು ವಿದ್ವಾಂಸರ ಸಹಾಯದಿಂದ ಸ್ಪಷ್ಟರೂಪ ನೀಡಿದೆ. ಅನುವಾದ ಒಂದಿಷ್ಟು ಸುಲಲಿತವಾಯಿತು. ಪ್ರಕಟನ ಸಂದರ್ಭದಲ್ಲಿ ಶ್ರೀ ಕುಕ್ಕಿಲ ಅವರ ಹೆಸರನ್ನು ಮಾತ್ರ ಉಳಿಸಿ, ನನ್ನ ಹೆಸರನ್ನು ಕೈಬಿಟ್ಟೆ. ಇದು ಹಿರಿಯ ವಿದ್ವಾಂಸರಿಗೆ ನಾನು ಸಲ್ಲಿಸಿದ ಶ್ರಮಸೇವೆಯೆಂದು ಭಾವಿಸುತ್ತೇನೆ. ಈ ಕೃತಿ ಪ್ರಕಟನೆಯಲ್ಲಿ ರಾಯಭಾರಿ ಪಾತ್ರವಹಿಸಿದ ಆತ್ಮೀಯ ಶ್ರೀ ಪ್ರಭಾಕರ ಜೋಶಿ ಅವರಿಗೂ, ಪ್ರಕಟನೆಗಾಗಿ ಹಸ್ತಪ್ರತಿ ನೀಡಿದ ಶ್ರೀ ನಾರಾಯಣ ಭಟ್ ಅವರಿಗೂ, ಅವರ ಸಹೋದರರಿಗೂ ವಂದನೆಗಳು.

ಕನ್ನಡಕ್ಕೆ : ಕುಕ್ಕಿಲ ಕೃಷ್ಣಭಟ್ಟ, ಪ್ರಥಮ ಆವೃತಿ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಕರ : ಮಾರ್ಗ ಸಂಪುಟ–೬

೧೭೮

ಜನಸಮುದಾಯ ಸಂಪುಟ

೨೦೦೦

ಕನ್ನಡಿಗರಲ್ಲಿ ಕನ್ನಡಪ್ರಜ್ಞೆಯ ಅಂತರ್ಜಲ ಪಾತಳಿ ಕುಸಿಯುತ್ತ ನಡೆದಿದ್ದು, ಇದನ್ನು ತಡೆಯುವುದು ಮತ್ತು ಮೇಲೆತ್ತುವುದು ಇಂದಿನ ಬಹುಮುಖ್ಯ ಅಗತ್ಯವಾಗಿದೆ. ನರ್ಮದೆಯ ವರೆಗಿದ್ದ ನಮ್ಮ ನಾಡಿನ ಉತ್ತರದ ಸೀಮಾರೇಖೆ, ಕವಿರಾಜಮಾರ್ಗ ಕಾಲಕ್ಕೆ ಗೋದಾವರಿಗೆ ಸರಿಯಿತು; ಇಂದು ಭೀಮೆಯ ತನಕ ಇಳಿದಿದೆ. ಗಡಿನಾಡು ಅಭದ್ರವಾಗುತ್ತಲಿದೆ. ಒಳನಾಡಿನಲ್ಲಿ ಅನ್ಯಭಾಷಾದ್ವೀಪಗಳು ತಲೆಯೆತ್ತುತ್ತಲಿವೆ. ಕನ್ನಡ ಮಾತೃಭಾಷಿಕರ ಸಂಖ್ಯೆ ಆಡಳಿತದಲ್ಲಿ ಕಡಿಮೆಯಾಗುತ್ತಲಿದೆ. ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯುವಲ್ಲಿ ನಮ್ಮ ಉತ್ಸಾಹ ಕುಗ್ಗುತ್ತ ಸಾಗಿದೆ. ಹೊರನಾಡಿನಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತ ನಡೆದಿವೆ. ಇವುಗಳಿಗೆ ಕಾರಣಗಳನ್ನು ಕಂಡುಹಿಡಿಯುವುದು, ಅದನ್ನು ತಡೆಗಟ್ಟಲು ಮಾರ್ಗೋಪಾಯಗಳನ್ನು ಶೋಧಿಸುವುದು ಇಂದಿನ ಅಗತ್ಯವೆನಿಸಿದೆ.

ಈ ದೌರ್ಬಲ್ಯಕ್ಕೆ ಇರುವ ಅನೇಕ ಕಾರಣಗಳಲ್ಲಿ ಮುಖ್ಯವಾದುದು ನಮ್ಮ ಗತ ಮತ್ತು ವರ್ತಮಾನಗಳ ನಿಜಸ್ವರೂಪವನ್ನು, ಭೌತಿಕ ಮತ್ತು ಸಾಂಸ್ಕೃತಿಕ ಸಂಪತ್ತನ್ನು ನಮ್ಮ ಜನತೆ ತಿಳಿಯದಿರುವುದು. ನಮ್ಮ ಮಕ್ಕಳು ಡಾಕ್ಟರ್ ಆಗಲಿ, ಇಂಜಿನಿಯರ್ ಆಗಲಿ - ಏನೇ ಆಗುವ ಮೊದಲು ಕನ್ನಡಿಗರಾಗಬೇಕು. ಅವರು ಅನ್ಯಭೂಖಂಡಗಳ ಬಗ್ಗೆ ತಿಳಿದುಕೊಳ್ಳಲಿ, ಬಾಹ್ಯಾಕಾಶವನ್ನು ತಿಳಿದುಕೊಳ್ಳಲಿ - ಏನೇ ತಿಳಿದುಕೊಳ್ಳುವ ಮೊದಲು ಕರ್ನಾಟಕವನ್ನು ತಿಳಿದುಕೊಳ್ಳಬೇಕು. ಈ ಕರ್ನಾಟಕ ಜ್ಞಾನ(Knowledge) ಅವನಲ್ಲಿ ಕರ್ನಾಟಕ ಪ್ರಜ್ಞೆ(Awareness)ಯನ್ನು ಮೂಡಿಸುತ್ತದೆ. ಈ ಪ್ರಜ್ಞೆ ಮೂಡಿದರೆ ಸಾಕು ಅವನು ಏಕಕಾಲಕ್ಕೆ ಕನ್ನಡಿಗನೂ ಆಗುತ್ತಾನೆ, ವಿಶ್ವಮಾನವನೂ ಆಗುತ್ತಾನೆ. ಈ ಹಿನ್ನೆಲೆಯಲ್ಲಿ ನಮ್ಮ ನಾಡನ್ನು ದಾಖಲಿಸಬೇಕೆಂಬ ಉದ್ದೇಶದಿಂದ "ಕರ್ನಾಟಕ ರಾಜ್ಯಕೋಶ ಮಾಲೆ" ಹೆಸರಿನ ಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯ ಕೈಗೆತ್ತಿಕೊಂಡಿದೆ.

ಈ ಯೋಜನೆ ಭೌತಿಕ ಕರ್ನಾಟಕ, ಪ್ರಾಗತಿಕ ಕರ್ನಾಟಕ ಮತ್ತು ಸಾಂಸ್ಕೃತಿಕ ಕರ್ನಾಟಕವೆಂಬ ಮೂರು ಘಟಕಗಳನ್ನು ಒಳಗೊಂಡಿದ್ದು, ಪ್ರತಿಯೊಂದು ಘಟಕದಲ್ಲಿ ೫ ರಂತೆ ಒಟ್ಟು ೧೫ ಸಂಪುಟಗಳು ಸಿದ್ಧಗೊಳ್ಳಲಿವೆ.

ಮೊದಲ ಹಂತವಾಗಿ ಭೌತಿಕ ಕರ್ನಾಟಕ ಸಮಗ್ರ ಅಧ್ಯಯನವನ್ನೊಳಗೊಂಡ ೫ ಸಂಪುಟಗಳು ಹೀಗಿವೆ : ಭೂಮಿಸಂಪುಟ, ಸಸ್ಯಸಂಪುಟ, ಪ್ರಾಣಿ-ಪಕ್ಷಿ ಸಂಪುಟ, ಜನಸಮುದಾಯ ಸಂಪುಟ ಮತ್ತು ಭಾಷಾಸಂಪುಟ. ಇವುಗಳಲ್ಲಿ "ಜನಸಮುದಾಯ ಸಂಪುಟ" ಈಗ ಪ್ರಕಟವಾಗುತ್ತಲಿದೆ.

ಕರಾವಳಿ, ಮಲೆನಾಡು, ಬಯಲುನಾಡು - ಹೀಗೆ ಕರ್ನಾಟಕದ ಭೂಪರಿಸರ ವೈವಿಧ್ಯಮಯವಾಗಿರುವುದರಿಂದ, ಇಲ್ಲಿಯ ಜನಸಮುದಾಯ ಸಹಜವಾಗಿಯೇ ವಿಭಿನ್ನ ಘಟಕಗಳಾಗಿ ಒಡೆದು ನಿಂತಿದೆ. ಮುಂದೆ ದೈವ-ಧರ್ಮ-ರಾಜ್ಯಾಡಳಿತಗಳ ಹೆಸರಿನಲ್ಲಿ ಇವು ಧರಿಸಿದ ಆಕಾರಗಳೂ ಅನೇಕ. ಕರ್ನಾಟಕವು ಉತ್ತರ-ದಕ್ಷಿಣ ಭಾರತಗಳ ಹೊಸ್ತಿಲಲ್ಲಿರುವುದರಿಂದ ಮತ್ತು ದಕ್ಷಿಣದಲ್ಲಿ ಅನ್ಯಪ್ರಾಂತಗಳಿಂದ ಆವೃತವಾಗಿರುವುದರಿಂದ ಕಾಲಕಾಲಕ್ಕೆ ಬೇರೆ ಬೇರೆ ಜನಸಮುದಾಯಗಳೂ ಈ ನಾಡಿನಲ್ಲಿ ತೂರಿಬಂದವು. ಅವುಗಳ ಸಂಗಮದಿಂದಾಗಿ ಮೂಲದ ಸಮುದಾಯಗಳು ಮಿಶ್ರರೂಪಕ್ಕೆ ತಿರುಗಿದವು. ಹೀಗಾಗಿ ಕರ್ನಾಟಕ ಸಮುದಾಯ ಸಂಖ್ಯಾದೃಷ್ಟಿಯಿಂದ ಅನೇಕ, ಸ್ವರೂಪ ದೃಷ್ಟಿಯಿಂದ ವಿಶಿಷ್ಟವೆನಿಸಿವೆ.

ಇತ್ತೀಚೆ ಸ್ಥಿರಸಮಾಜವು ಚರಸಮಾಜವಾಗುತ್ತಲಿರುವುದರಿಂದ, ಈ ಸಮುದಾಯಗಳ ಮೂಲಸ್ವರೂಪ ಮೊದಲಿನಕಿಂತ ಹೆಚ್ಚು ವೇಗದಿಂದ ಬದಲಾಗುತ್ತ ನಡೆದಿದೆ. ಮೂಲಸ್ವರೂಪ ಸಂಪೂರ್ಣ ಮರೆಯುವ ಮೊದಲು ಅವುಗಳನ್ನು ದಾಖಲಿಸುವುದು ಇಂದು ತೀರ ಅವಶ್ಯವೆನಿಸಿದೆ. ಆಂಗ್ಲರ ಆಗಮನದ ಬಳಿಕ ಇಂಥ ಸಮುದಾಯಗಳ ದಾಖಲಾತಿ ಪ್ರಯತ್ನಗಳು ಆಗಾಗ ಕರ್ನಾಟಕದಲ್ಲಿ ಜರುಗಿದ್ದರೂ, ಈ ಕಾರ್ಯ ಪೂರ್ಣಪ್ರಮಾಣದಲ್ಲಿ ನೆರವೇರಲಿಲ್ಲ. ಇಂಥ ಕೊರತೆಯನ್ನು ತುಂಬಿಕೊಡುವ ಉದ್ದೇಶದಿಂದ ಸಿದ್ಧಗೊಂಡಿದೆ, ಜನಸಮುದಾಯ ಸಂಪುಟ.

ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗ ಅಧ್ಯಾಪಕರಾದ ಶ್ರೀ ಹೆಚ್.ಡಿ.ಪ್ರಶಾಂತ್ ಅವರು ಕಷ್ಟಪಟ್ಟು ಪ್ರಕಟಿತ ಆಕರಗಳನ್ನು, ಕ್ಷೇತ್ರಕಾರ್ಯದ ಫಲಿತಗಳನ್ನು ಅವಲಂಬಿಸಿ ಈ ಕೃತಿರಚನೆಯನ್ನು ಪೂರೈಸಿದ್ದಾರೆ. ನಮ್ಮ ಸುದೈವಕ್ಕೆ ಡಾ.ಜೋಗನ್ ಶಂಕರ್, ಪ್ರೊ.ಮಹೇಶ ತಿಪ್ಪಶೆಟ್ಟಿ, ಶ್ರೀ ಸುರೇಶ ಪಾಟೀಲ ಅವರಂಥ ಶ್ರಮಸಂಸ್ಕೃತಿಯ ವಿದ್ವಾಂಸರ ಸಹಾಯ ಲಭ್ಯವಾಗಿದೆ. ಹೀಗಾಗಿ ಪ್ರಕಟಿತ ಆಕರ ಸಾಮಗ್ರಿ, ಕ್ಷೇತ್ರಕಾರ್ಯ, ವಿದ್ವಾಂಸರ ನೆರವು ಈ ಮೂರು ನೆಲೆಗಳಿಂದ ಈ ಕಾರ್ಯವನ್ನು ಪೂರೈಸಲಾಗಿದೆ. ಇವರೆಲ್ಲರಿಗೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ.

ಜನಸಮುದಾಯದ ದಾಖಲೆಯನ್ನುವುದು ಬೆರಳು ಸಂದುಗಳಲ್ಲಿ ಸೋರಿ ಹೋಗಿ, ಉಳಿದಿರುವ ನೀರನ್ನು ಬೊಗಸೆಯಲ್ಲಿ ಹಿಡಿದಂತೆ. ಮೇಲಾಗಿ ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ಬದಲಾದ, ಬದಲಾಗುತ್ತಿರುವ ಸಮುದಾಯಗಳ ನಿರ್ದಿಷ್ಟ ದಾಖಲೆ ಅಸಾಧ್ಯವೇ ಸರಿ. ಹೀಗಿದ್ದೂ ಸಮುದಾಯಗಳ ಬಗೆಗಿನ ಗೌರವದಿಂದ ಈ ಕೃತಿಯನ್ನು ರೂಪಿಸಲಾಗಿದೆ. ಇಂಥ ಕೋಶಗಳಿಗೆ ಇರುವುದು ಅರ್ಧವಿರಾಮವೇ ಹೊರತು, ಪೂರ್ಣ ವಿರಾಮವಲ್ಲ ಎಂಬುದನ್ನು ಅರ್ಥಮಾಡಿಕೊಂಡು, ಈ ಗ್ರಂಥವನ್ನು ನೋಡಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ.

ಸಂ : ಹೆಚ್.ಡಿ.ಪ್ರಶಾಂತ, ಪ್ರ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಕರ : ಮಾರ್ಗ ಸಂಪುಟ–೬

೧೭೯

ಕನ್ನಡ ಹಸ್ತಪ್ರತಿಗಳ ಅಕಾರಾದಿಸೂಚಿ : ಭಾಗ - ೧

೨೦೦೧

ಧರ್ಮಸ್ಥಳದ ಇತಿಹಾಸದಲ್ಲಿ ಕುಡುಮ ಗ್ರಾಮವು 'ಧರ್ಮಸ್ಥಳ'ವಾದುದು ಒಂದು ಘಟ್ಟವಾದರೆ, ಈ ಧಾರ್ಮಿಕ ಕ್ಷೇತ್ರ ಇಂದು 'ಸಾಂಸ್ಕೃತಿಕ ಕ್ಷೇತ್ರ'ವಾಗುತ್ತಲಿರುವುದು ಇನ್ನೊಂದು ಘಟ್ಟ, ಈ ಎರಡನೆಯ ಘಟ್ಟದ ರೂವಾರಿಗಳು ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರು. ಈ ಪರಿವರ್ತನೆಯ ಮುಖ್ಯ ನೆಲೆ 'ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ'; ಈ ಪ್ರತಿಷ್ಠಾನದ ಒಂದು ಮುಖ್ಯ ಶಾಖೆ 'ಹಸ್ತಪ್ರತಿ ಭಂಡಾರ.'

ಹಸ್ತಪ್ರತಿಗಳು ನಮ್ಮ ಪಿತ್ರಾರ್ಜಿತ ಆಸ್ತಿ. ಯಂತ್ರಪ್ರತಿಗಳ ಸೃಷ್ಟಿಯಿಂದಾಗಿ ಮೂಲೆಗುಂಪಾಗುತ್ತ ನಡೆದಿರುವ ಈ ಜ್ಞಾನವಾಹಿನಿಯ ಸಂಗ್ರಹ, ಸಂರಕ್ಷಣೆ, ಸೂಚೀರಚನೆ, ಪರಿಷ್ಕರಣ, ಪ್ರಕಟನೆ ನಮ್ಮ ಆದ್ಯ ಕರ್ತವ್ಯವಾಗಿದೆ. ಇದನ್ನು ಅರ್ಥಮಾಡಿಕೊಂಡ ಪಾಶ್ಚಾತ್ಯ ಮತ್ತು ಪೌರಾತ್ಯ ವಿದ್ವಾಂಸರು ಹಸ್ತಪ್ರತಿ ಸಂಗ್ರಹಕಾರ್ಯವನ್ನು ಕರ್ನಾಟಕದಲ್ಲಿ ಉದ್ದಕ್ಕೂ ಕೈಗೆತ್ತಿಕೊಳ್ಳುತ್ತ ಬಂದಿದ್ದಾರೆ. ಈ ಪ್ರಯತ್ನದ ಮುಂದುವರಿಕೆಯಾಗಿದೆ, 'ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ'ದ ಹಸ್ತಪ್ರತಿ ಸಂಗ್ರಹ ಯೋಜನೆ.

ಹಸ್ತಪ್ರತಿ ವ್ಯಾಮೋಹಕ್ಕೆ ಇನ್ನೊಂದು ಹೆಸರು ಪ್ರೊ. ಗೌ.ಮ. ಉಮಾಪತಿ ಶಾಸ್ತ್ರಿ. ಬಾಗಿಲಕೋಟೆಯ ಬಸವೇಶ್ವರ ಕಾಲೇಜಿನಲ್ಲಿರುವಾಗಲೇ ಇವರು ಆರಂಭಿಸಿದ್ದ ಹಸ್ತಪ್ರತಿ ಸಂಗ್ರಹ, ಧರ್ಮಸ್ಥಳದ ಹಸ್ತಪ್ರತಿ ಭಂಡಾರಕ್ಕೆ ಮೂಲಧನವಾಗಿದೆ. ಪ್ರೊ. ಶಾಸ್ತ್ರಿಗಳ ಮತ್ತು ಶ್ರೀ. ಎಸ್. ಡಿ. ಶೆಟ್ಟಿ ಅವರ ಸಂಯುಕ್ತ ಪ್ರಯತ್ನದ ಫಲವಾಗಿ ಈ ಮೂಲಧನ ಇನ್ನೂ ವರ್ಧಿಸಿದೆ. 'ದೇವಾಲಯವನ್ನು ಕಟ್ಟುವುದು ಮುಖ್ಯ, ಕಾಪಾಡುವುದು ಇನ್ನೂ ಮುಖ್ಯ' ಎಂಬಂತೆ ಇಲ್ಲಿ ಸಂಗ್ರಹಿಸಿದ ಈ ಸಂಪತ್ತನ್ನು ವೈಜ್ಞಾನಿಕವಾಗಿ ಸಂರಕ್ಷಿಸುತ್ತಿರುವುದು, ಸೂಚಿ ರಚಿಸುತ್ತಿರುವುದು ಮತ್ತು ಪರಿಷ್ಕರಿಸಿ ಕೃತಿಗಳನ್ನು ಪ್ರಕಟಿಸುತ್ತಿರುವುದು ಇನ್ನೂ ಮುಖ್ಯವೆನಿಸಿದೆ. ವಿಶ್ವವಿದ್ಯಾಲಯಗಳಲ್ಲಿ, ಸರಕಾರಿ ಸಂಸ್ಥೆಗಳಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳು ಮೂಲೆಗುಂಪಾಗುತ್ತಲಿರುವ ಇಂದಿನ ಸಂದರ್ಭದಲ್ಲಿ 'ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ'ದ ಈ ಬಹುಮುಖಿ ಕೆಲಸ ಮೆಚ್ಚುವಂತಹದಾಗಿದೆ.

'ಸೂಚಿ' ರಚನೆ ಇಂದು ವೈಜ್ಞಾನಿಕ ವಿಧಾನವಾಗಿ ಪರಿಣಮಿಸಿದೆ. ಅನೇಕ ಬಗೆಯ ಸೂಚಿಗಳು ಸಿದ್ಧವಾಗುವುದರೊಂದಿಗೆ 'ಸೂಚಿಗಳ ಸೂಚಿ'ಗಳೂ ಸಿದ್ಧವಾಗುವಲ್ಲಿ ಇದರ ಪ್ರಪಂಚ ವಿಸ್ತಾರವಾಗುತ್ತ ನಡೆದಿದೆ.

ಸಾಲದುದ್ದಕ್ಕೆ ಹಲವು ಬಗೆಯ 'ಸೂಚಿಶಾಸ್ತ್ರ'ಗಳೂ ಹುಟ್ಟುತ್ತಲಿವೆ. ಈ ವಿದ್ವತ್ ಕ್ಷೇತ್ರಕ್ಕೆ ಈಗಾಗಲೇ 'ಯಕ್ಷಗಾನ ಹಸ್ತಪ್ರತಿಗಳ ವಿವರಣ ಸೂಚಿ', ಮತ್ತು 'ತುಳುಲಿಪಿ ಹಸ್ತಪ್ರತಿಗಳ ವಿವರಣ ಸೂಚಿ', ಹೆಸರಿನ ಎರಡು ಸಂಪುಟಗಳನ್ನು ನೀಡಿರುವ ಈ ಸಂಸ್ಥೆ, ಈಗ 'ಕನ್ನಡ ಹಸ್ತಪ್ರತಿಗಳ ಅಕಾರಾದಿ ಸೂಚಿ' ಹೆಸರಿನ ಸಂಪುಟವನ್ನು ನೀಡುತ್ತಲಿದೆ. ಹಸ್ತಪ್ರತಿಗಳನ್ನು ಸಂಗ್ರಹಿಸುವುದು - ಸಂರಕ್ಷಿಸುವುದು ಕಷ್ಟ, ಪ್ರತಿಯೊಂದು ಗರಿಯನ್ನು ಓದಿ ಸೂಚಿ ರಚಿಸುವುದು ಇನ್ನೂ ಕಷ್ಟ. ಮಾರ್ಗದರ್ಶಿಯಾಗಬೇಕಾಗಿರುವ ಇಂಥ ಕೃತಿ ಅವಸರ, ಆಲಸ್ಯಗಳಿಂದಾಗಿ ಮಾರ್ಗ ತಪ್ಪಿಸುವ ಸಾಧ್ಯತೆಯಿದೆ. ಈ ಅಪಾಯವನ್ನು ಅರ್ಥಮಾಡಿಕೊಂಡು, ಎಚ್ಚರಿಕೆಯಿಂದ ರಚಿಸಿದ ಕೃತಿಯಾಗಿದೆ, ಈ ಸೂಚಿ.

ಕಾವ್ಯ, ಯಕ್ಷಗಾನ, ವಚನಸಾಹಿತ್ಯ ಹೀಗೆ ೨೦ ವಿಭಾಗಗಳಲ್ಲಿ ಹಸ್ತಪ್ರತಿಗಳನ್ನು ವರ್ಗೀಕರಿಸಿ ಕೊಂಡಿರುವುದರಿಂದ, ಇದನ್ನು ವಿಷಯನಿಷ್ಠ ಸೂಚಿ ಎಂದು ಕರೆಯಬಹುದು. ಈ ಒಂದೊಂದು ವರ್ಗದಲ್ಲಿ ಸೇರ್ಪಡೆಯಾಗುವ ಕೃತಿಗಳ ಹೆಸರನ್ನು ಅಕಾರಾದಿಯಾಗಿ ಜೋಡಿಸಲಾಗಿದೆ. ಇಲ್ಲಿ ಒಂದು ಕೃತಿಗೆ ಒಂದಕ್ಕಿಂತ ಹೆಚ್ಚು ಪ್ರತಿಗಳಿದ್ದರೆ, ಒಂದು ಪ್ರತಿಯನ್ನು ಮಾತ್ರ ಮೇಲೆ ಹೆಸರಿನೊಂದಿಗೆ ಸೂಚಿಸಿ, ಮಿಕ್ಕ ಪ್ರತಿಗಳ ಸಂಖ್ಯೆಗಳನ್ನು ಅಡಿಯಲ್ಲಿ ಸೂಚಿಸಿರುವುದು ಹೊಸ ಉಪಕ್ರಮವೆನಿಸಿದೆ. ಹೀಗಾಗಿ ಈ ಸೂಚಿಯಲ್ಲಿಯ ಕೃತಿಗಳು ೧೫೩೧, ಪ್ರತಿಗಳು ೫೬೫೯ಯೆಂದು ಮೇಲು ನೋಟಕ್ಕೆ ವ್ಯಕ್ತವಾಗಿದೆ. ಒಂದು ಕೃತಿಗೆ ಒಂದು ಪ್ರತಿಯಿರುವಂತೆ ಹತ್ತಾರು ಪ್ರತಿಗಳೂ ಇಲ್ಲಿವೆ. ಈ ಸಂಖ್ಯೆ, ಪ್ರಾಚೀನ ಕಾಲದಲ್ಲಿ ಈ ಕೃತಿಗಳು ಪಡೆದಿದ್ದ ಹೆಚ್ಚು-ಕಡಿಮೆ ಜನಪ್ರಿಯತೆಯನ್ನು ಸೂಚಿಸುತ್ತದೆ.

ಪ್ರಸ್ತುತ ಪ್ರತಿಷ್ಠಾನದಲ್ಲಿ ಕವಿರಾಜಮಾರ್ಗ, ಆದಿಪುರಾಣ, ಚಂದ್ರಪ್ರಭ ಪುರಾಣ, ಜೀವ ಸಂಬೋಧನೆ, ಧರ್ಮಾಮೃತ, ಧರ್ಮಪರೀಕ್ಷೆ, ಪಂಚತಂತ್ರ, ಪುಣ್ಯಾಸ್ರವ, ಕಬ್ಬಿಗರ ಕಾವ, ಲೋಕೋಪಕಾರ, ವಾತುಲಾಗಮ ಟೀಕೆ, ಸಿದ್ಧರಾಮ ಚಾರಿತ್ರ, ಸೂತ್ರಗಣಿತ - ಇತ್ಯಾದಿ ಮಹತ್ವಪೂರ್ಣ ಕೃತಿಗಳಿರುವುದು ಒಂದು ವಿಶೇಷ.

ಈವರೆಗೆ ಪ್ರಕಟವಾಗದಿರುವ ಕಂಚಿಯಪುರಾಣ, ಮೂಲಸ್ತಂಭ ಮಹಾಪುರಾಣ, ಬಸವಲಿಂಗ ಮಹಿಮಾರ್ಣವ ಪುರಾಣ, ನಂದೀಶ್ವರಸ್ವಾಮಿಗಳ ನಿರೂಪ- ಇತ್ಯಾದಿ ಅಪ್ರಕಟಿತ ಕೃತಿಗಳು ಇಲ್ಲಿದ್ದು, ಇವುಗಳನ್ನು ಅಭ್ಯಸಿಸುವುದು, ಪ್ರಕಟಿಸುವುದು ಅಗತ್ಯವಿದೆ. ಕೆಲವು ಕೃತಿಗಳಲ್ಲಿ ಸುಂದರವಾದ ಚಿತ್ರಗಳನ್ನು ಬಿಡಿಸಲಾಗಿದೆ.

ಈ ಸೂಚಿ ಕೈಯಲ್ಲಿ ಇದ್ದರೆ ಅಭ್ಯಾಸಿಯ ಅಂಗೈಯಲ್ಲಿ ಧರ್ಮಸ್ಥಳದ ಈ ಹಸ್ತಪ್ರತಿ ಭಾಂಡಾರವಿದ್ದಂತೆ. ಇದು ತನಗೆ ಅಗತ್ಯವಿರುವ ಹಸ್ತಪ್ರತಿಯನ್ನು ಪಡೆಯಲು ಅಭ್ಯಾಸಿಗೆ ಒಂದು ದೊಡ್ಡ ನೆರವು ನೀಡುತ್ತದೆ. ಕಷ್ಟಪಟ್ಟು ಇದನ್ನು ರಚಿಸಿದ ಶ್ರೀ. ಗೌ. ಮ. ಉಮಾಪತಿ ಶಾಸ್ತ್ರಿ ಅವರಿಗೆ ಕನ್ನಡಿಗರ ಧನ್ಯವಾದಗಳು ಸಲ್ಲುತ್ತವೆ. ಹಸ್ತಪ್ರತಿ ಸಂಗ್ರಹ, ಸೂಚೀ ರಚನೆಗಳ ಜೊತೆಗೆ ಪ್ರಾಚೀನ ಕೃತಿಗಳ ಪ್ರಕಟನ ಕಾರ್ಯವನ್ನೂ ಕೈಗೆತ್ತಿಕೊಂಡರೆ, ಈ ಭಾಂಡಾರಕ್ಕೆ ವಿಶೇಷ ಪ್ರಸಿದ್ಧಿ ಪ್ರಾಪ್ತಿಯಾಗುತ್ತದೆ. ಆ ದಿಸೆಯಲ್ಲಿ ಈ ಸಂಸ್ಥೆ ಇನ್ನಷ್ಟು ಪ್ರಯತ್ನಿಸಲಿ ಎಂದು ಹಾರೈಸುತ್ತೇನೆ.

ಗೌ.ಮ.ಉಮಾಪತಿಶಾಸ್ತ್ರಿ, ಧರ್ಮಸ್ಥಳ

ಆಕರ : ಮಾರ್ಗ ಸಂಪುಟ–೬

೧೮೦

ಕರ್ನಾಟಕ ದೇವದಾಸಿಯರ ಸಮಾಜೋಧಾರ್ಮಿಕ ಆರ್ಥಿಕ ಶೈಕ್ಷಣಿಕ ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳ ಸಮಗ್ರ ಅಧ್ಯಯನ

೨೦೦೧

ಕನ್ನಡಿ

ಮನುಷ್ಯ ಹುಟ್ಟುತ್ತ ವ್ಯಕ್ತಿ, ಬೆಳೆಯುತ್ತ ಸದಸ್ಯ. ಬೆಳೆಯುತ್ತಿದ್ದಂತೆ "ಸಮಾಜದ ನೀತಿಸಂಹಿತೆಗಳು" ಅವನನ್ನು ಬಂಧಿಸುತ್ತ ಬರುತ್ತವೆ. ಈ ಬಂಧನಗಳ ನಡುವೆಯೂ ಅವನು ಶೋಷಣೆ ರೂಪದ ಅನೇಕ ಜಾಣ ಸವಲತ್ತುಗಳನ್ನು ಸ್ಥಾಪಿಸಿಕೊಂಡಿದ್ದಾನೆ. ಇವುಗಳಲ್ಲಿ ಅಕ್ರಮ ಲೈಂಗಿಕ ಸವಲತ್ತುಗಳ, ಅದರಲ್ಲಿಯ "ದೇವರ ಸೂಳೆ" ಸವಲತ್ತಿನ ಸಮಗ್ರ ಅಧ್ಯಯನವಾಗಿದೆ, ಈ ಕೃತಿ. ಒಂದು ಭಾಗದಲ್ಲಿ ಐದರಂತೆ ಐದು ಭಾಗಗಳಲ್ಲಿ ಇಪ್ಪತ್ತೈದು ಅಧ್ಯಾಯಗಳನ್ನು ಅಳವಡಿಸಿಕೊಂಡ ಈ ಬೃಹತ್ ಕೃತಿ ರಚನೆಗಾಗಿ, ಡಾ. ವಾಲೀಕಾರ ಅವರನ್ನು ಆರಂಭದಲ್ಲಿಯೇ ಅಭಿನಂದಿಸುತ್ತೇನೆ.

ಪಂಚೇಂದ್ರಿಯಗಳಲ್ಲಿ ನಾಲಗೆಯು ರುಚಿಸುಖದೊಂದಿಗೆ "ಜೀವವನ್ನು ಬದುಕಿಸುವ" ವಿಶೇಷತೆಯನ್ನು ಹೊಂದಿದ್ದರೆ, ಚರ್ಮವು ಸ್ಪರ್ಶಸುಖದೊಂದಿಗೆ "ಜೀವವನ್ನು ಉತ್ಪಾದಿಸುವ" ವಿಶೇಷತೆಯನ್ನು ಹೊಂದಿದೆ. ಈ ಸ್ಪರ್ಶಸುಖ ಮತ್ತು ಜೀವೋತ್ಪಾದನೆಗಳ ಸಂದರ್ಭದಲ್ಲಿ ಪುರುಷನಷ್ಟೇ ಸ್ತ್ರೀ ಮುಖ್ಯಳಾಗಿದ್ದರೂ, ಪುರುಷಪ್ರಧಾನ ಸಮಾಜದಲ್ಲಿ ಅವಳು ಅಮುಖ್ಯ ನೆಲೆಗೆ ತಳ್ಳಲ್ಪಡುತ್ತಾಳೆ. ಹೀಗೆ ತಳ್ಳಿಸಿಕೊಳ್ಳುವ ವ್ಯವಸ್ಥೆ ಕಾರಣವಾಗಿ, ಭಾರತದಲ್ಲಿ ಮಹಿಳೆ ಬಹುಮುಖಿ ಶೋಷಣೆಗೆ ಗುರಿಯಾಗುತ್ತ ಬಂದಿದ್ದಾಳೆ.

ಪುರುಷ ಮಹಿಳೆಯನ್ನು ಶೋಷಣೆಗೆ ಗುರಿಪಡಿಸಿಕೊಳ್ಳುವ ವಿವಿಧ ರೀತಿಗಳಲ್ಲಿ ಅವನ ಮೊದಲ ಆಯ್ಕೆಯೆಂದರೆ ಲೈಂಗಿಕತೆ. ಈ ಲೈಂಗಿಕತೆಯು ಸಮಾಜ ಅಸಮ್ಮತ, ಸಮಾಜ ಸಮ್ಮತ ಎಂದು ಎರಡು ತೆರವಾಗಿದೆ. ಸಮಾಜ ಅಸಮ್ಮತವು ಅತ್ಯಾಚಾರ (ಆಕ್ರಮಣಕಾರಿ ಲೈಂಗಿಕತೆ), ವ್ಯಭಿಚಾರ (ರಹಸ್ಯ ಲೈಂಗಿಕತೆ) ಎಂದು ಎರಡು ಬಗೆಯಾಗಿದ್ದು, ಇವುಗಳನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆ. ಸಮಾಜ ಸಮ್ಮತವು ಪತ್ನಿ, ಪತ್ನಿಯೇತರವೆಂದು ಎರಡು ತೆರನಾಗಿದೆ. ಪತ್ನಿ ಸಂಬಂಧದಲ್ಲಿ ಪುರುಷ ಒಬ್ಬಳಿಗೆ ಮಾತ್ರ ಸೀಮಿತನಾಗದೆ, ಬಹುಪತ್ನಿ ಸವಲತ್ತನ್ನು ಪಡೆದಿದ್ದಾನೆ. ಇಷ್ಟಕ್ಕೆ ನಿಲ್ಲದೆ ಇನ್ನೂ ಮುಂದುವರಿದ ಕಾರಣ, ಅವನ ಪತ್ನಿಯೇತರ ಲೈಂಗಿಕ ಸವಲತ್ತು ವ್ಯಕ್ತಿಸೂಳೆ, ದಾಸಿ, ದೇವರ ಸೂಳೆ, ದೇವಾಲಯ ಸೂಳೆ, ರಾಜಾಲಯ ಸೂಳೆ, ಅರೆಸೂಳೆ, ಸಮಾಜ ಸೂಳೆಯೆಂದು ಏಳು ಬಗೆಗಳಲ್ಲಿ ವಿಸ್ತರಿಸಿಕೊಂಡಿದ್ದು, ಇವು ಸಮಾಜ ಸಮ್ಮತ ಲೈಂಗಿಕ ಶೋಷಣೆಗಳೇ ಆಗಿವೆ.

'ವ್ಯಕ್ತಿಸೂಳೆ' (ಉಪಪತ್ನಿ) ಪದ್ಧತಿ ಪ್ರತಿಷ್ಠಿತ ಪುರುಷರು ರೂಪಿಸಿದ ವ್ಯವಸ್ಥೆಯಾಗಿದೆ. ಸಾಮಾನ್ಯವಾಗಿ ಇವಳು ಅವಿವಾಹಿತೆ, ಪತಿತ್ಯಕ್ತೆ ಇಲ್ಲವೆ ವಿಧವೆಯಾಗಿರಬಹುದು. ಕೆಲವು ಸಮಾಜಗಳಲ್ಲಿ ತವರು ಮನೆಯವರು ತಮ್ಮೊಂದಿಗೆ ವಾಸಿಸಲು ಅವಕಾಶ ಮಾಡಿಕೊಡುವ ಮೂಲಕ, ಅವಿವಾಹಿತೆಯಾದ ವ್ಯಕ್ತಿಸೂಳೆಯನ್ನು ಆದಾಯದ ಮಾಧ್ಯಮ ಮಾಡಿಕೊಂಡಿರುತ್ತಿದ್ದರು. ಇಂದು ಈ ಪದ್ಧತಿ ನಾಶವಾಗುತ್ತಲಿದೆ. ಆದರೆ ತವರು ಮನೆಯಿಂದ ಹೊರಗೆ ವಾಸಿಸುವ ವ್ಯಕ್ತಿಸೂಳೆ ಪದ್ಧತಿ ಒಂದಿಲ್ಲ ಒಂದು ರೀತಿ ಈಗಲೂ ಅಸ್ತಿತ್ವದಲ್ಲಿದೆ. ಇದು ಶೋಷಿತೆ-ಶೋಷಕ ಎಂಬ ಅನಾರೋಗ್ಯಕರ ಸ್ತರದಿಂದ ಪ್ರಿಯತಮೆ-ಪ್ರಿಯತಮರೆಂಬ ಆರೋಗ್ಯಕರವೆನ್ನಬಹುದಾದ ಸ್ತರದಲ್ಲಿ ಮುಂದುವರಿಯುತ್ತಲೇ ಇದೆ. ದಾಸಿಪದ್ಧತಿ ಪ್ರಾಚೀನ ಕಾಲದಲ್ಲಿ ರೂಢವಾಗಿದ್ದಿತು. ಇವಳು ಖರೀದಿಸಿದ ಹೆಣ್ಣು, ಒಡೆಯ ಇವಳನ್ನು ಭೋಗಿಸಲು ಅಂದಿನ ಸಮಾಜ ಸಮ್ಮತಿ ನೀಡಿದ್ದಿತು. ಈಗ ಈ ಪದ್ಧತಿ ನಾಶವಾಗಿದೆ. 'ಅರೆಸೂಳೆ' ಎನ್ನುವವಳು ಗಂಡ ಮೊದಲಾದ ಕುಟುಂಬ ವರ್ಗದವರ ಸಮ್ಮತಿಯಿಂದ ವ್ಯಭಿಚಾರ ನಡೆಸಿ ಹಣಗಳಿಸಿಕೊಡುವ ಹೆಣ್ಣು. ಕೆಳವರ್ಗದ ಕುಟುಂಬಗಳಲ್ಲಿ,ಅದರಲ್ಲಿಯೂ ಕಲಾವಿದ ಕುಟುಂಬಗಳಲ್ಲಿ ಪ್ರಚಲಿತವಿದ್ದ ಈ ಪದ್ಧತಿಯು ಇಂದು ನಶಿಸುತ್ತಲಿದೆ.

'ದೇವರಸೂಳೆ'ಯರು ಅಲ್ಲಲ್ಲಿಯ ದೇವರ ಹೆಸರಿನಲ್ಲಿ ತಾಳಿ ಕಟ್ಟಿಕೊಂಡು ಲೈಂಗಿಕ ವ್ಯಾಪಾರಕ್ಕಿಳಿಯುವ ಅವಿವಾಹಿತ ಹೆಣ್ಣುಗಳಾಗಿದ್ದಾರೆ. ಇವರು ಕರ್ನಾಟಕದಲ್ಲಿ ಬಸವಿ, ಜೋಗತಿ, ಮುರುಳೆ, ಲೇಸಿ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಾರೆ. ದೇವರ ಹೆಸರಿನಲ್ಲಿ ಮುದ್ರೆಹಾಕಿ ಬಿಟ್ಟ ಎತ್ತು 'ಬಸವ'ನೆನ್ನಿಸಿಕೊಳ್ಳುವ ಹಿನ್ನೆಲೆಯಲ್ಲಿ, ಮುದ್ರೆ ಹಾಕಿ ದೇವರಿಗೆ ಬಿಟ್ಟ ಈ ಹೆಣ್ಣುಗಳಿಗೆ 'ಬಸವಿ' ಎಂದು ಕರೆಯುವುದು ರೂಢಿಯಲ್ಲಿ ಬಂದಂತಿದೆ. ಇದು ಯಾವುದೇ ದೇವರಿಗೆ (ಗಂಡು-ಹೆಣ್ಣು) ಬಿಟ್ಟ ಸೂಳೆಯರಿಗೂ ಬಳಸುವ ಸಾಮಾನ್ಯ ಪದ. ಇಂಥವರನ್ನು ಸವದತ್ತಿ ಯಲ್ಲಮ್ಮನ ಸಂಪ್ರದಾಯದಲ್ಲಿ ಜೋಗತಿ ಎಂದು, ಮಂಗಸೂಳಿ ಮಲ್ಲಯ್ಯನ ಸಂಪ್ರದಾಯದಲ್ಲಿ ಮುರುಳೆ ಎಂದು, ಮೇಲಾರನ ಸಂಪ್ರದಾಯದಲ್ಲಿ ಲೇಸಿಯೆಂದು ಕರೆಯುತ್ತಾರೆ. ಇವುಗಳಲ್ಲಿ ಮುರುಳೆಯೆಂಬುದರ ನಿಜ ರೂಪ ಮರುಳೆ, ದೇವರಿಗೆ ಮರುಳಾದವಳು ಎಂದು ಇದರ ಅರ್ಥ. ಲೇಸಿ ಎಂಬುದರ ಅರ್ಥ ಇನ್ನೂ ನಿಗೂಢವಾಗಿದೆ.

'ದೇವಾಲಯ ಸೂಳೆ' ಪದ್ಧತಿ ಆಮೇಲೆ ಅಸ್ತಿತ್ವಕ್ಕೆ ಬಂದಂತಿದೆ. ಅಂದರೆ ಪುರುಷರು ದೇವರ ಸೂಳೆಯನ್ನು ಹುಟ್ಟು ಹಾಕಿದರೆ, ಪುರೋಹಿತರು ಈ ದೇವಾಲಯ ಸೂಳೆಯರನ್ನು ಹುಟ್ಟುಹಾಕಿದರು. ದೇವಾಲಯ ನಿರ್ಮಾಣ ಸಂದರ್ಭದಲ್ಲಿ 'ಅಂಗಭೋಗ', 'ರಂಗಭೋಗ' ಸೇವೆಗೆ ತಳ್ಳಲ್ಪಟ್ಟ ಅವಿವಾಹಿತ ಹೆಣ್ಣುಗಳಿವರು. ದೇವಾಲಯ ಆಡಳಿತದ ಭಾಗವೇ ಆಗಿರುತ್ತಿದ್ದ ಇವರು ಅದರ ಆವರಣದಲ್ಲಿಯೇ (ದೇವಾಲಯ ಆವರಣಕ್ಕೆ ಪುರ ಎನ್ನುತ್ತಿದ್ದರು) ವಾಸಮಾಡುತ್ತಿದ್ದರು. ನಿರ್ದಿಷ್ಟ ಸಂಖ್ಯೆಯಲ್ಲಿರುವ ಇವರಲ್ಲಿ 'ಅಂಗಭೋಗ'ದವರು ದೇವರ ಪೂಜೆ ಆರಂಭವಾಗುತ್ತಲೇ ಶೃಂಗರಿಸಿಕೊಂಡು ಬಂದು ಗರ್ಭಗುಡಿಯಲ್ಲಿ ಗಂಧತೇಯುವ, ಮಾಲೆಕಟ್ಟುವ, ಪೂಜಾ ಪರಿಕರಗಳನ್ನು ಸಿದ್ಧಪಡಿಸುವ ಕೆಲಸಗಳಲ್ಲಿ ಅರ್ಚಕರಿಗೆ ನೆರವಾಗುತ್ತಿದ್ದರು. 'ರಂಗಭೋಗ'ದ ಕೆಲವರು ದೇವಾಲಯದ ಮೆಟ್ಟಿಲು, ಕಂಬ, ಮಾಡಗಳ ಹತ್ತಿರ ವಿಗ್ರಹದ ಹಾಗೆ ನೃತ್ಯಭಂಗಿಯಲ್ಲಿ ನಿಂತುಕೊಳ್ಳುತ್ತಿದ್ದರೆ, ಇನ್ನು ಕೆಲವರು ನವರಂಗದಲ್ಲಿ ಗೀತ, ವಾದ್ಯ, ನೃತ್ಯ ಗೋಷ್ಠಿಗಳನ್ನು ಜರಗಿಸುತ್ತಿದ್ದರು. ಜನಸಾಮಾನ್ಯರನ್ನು ಬಹುಸಂಖ್ಯೆಯಲ್ಲಿ ಆಕರ್ಷಿಸಿ, ಲಘುಪ್ರಸಿದ್ಧಿ ಪಡೆಯಲು ಮಾಡಿಕೊಂಡ ಹಿಂದೂ ದೇವಾಲಯದ ಈ ವ್ಯವಸ್ಥೆಯನ್ನು, ಜೈನರು ಜಿನಾಲಯಕ್ಕೂ ವರ್ಗಾಯಿಸಿಕೊಂಡುದಕ್ಕೆ ನಮ್ಮಲ್ಲಿ ಉದಾಹರಣೆಗಳಿವೆ.

'ರಾಜಾಲಯ ಸೂಳೆ'ಯರು ರಾಜನ ಅರಮನೆಯಲ್ಲಿ ದಾಸಿಯರಾಗಿ ಅಂಗಭೋಗದವರಂತೆ, ಆಸ್ಥಾನದಲ್ಲಿ ಕಲಾವಿದೆಯರಾಗಿ ರಂಗಭೋಗದವರಂತೆ ಕಾರ್ಯನಿರ್ವಹಿಸುತ್ತಿದ್ದರು. ಯಾವುದೇ ಕಾರಣದಿಂದ ಅರಮನೆ ಆಸ್ಥಾನಗಳು ನಾಶವಾಗುತ್ತಲೇ ಅವಿವಾಹಿತೆಯರಾದ ಇವರು ಸಮಾಜದ ಪಾಲಾಗುತ್ತಿದ್ದರು. ಇತ್ತೀಚೆ

ಹಾಳಾದ ವಿಜಯನಗರ, ಕೆಳದಿ, ಮೈಸೂರು ಪರಿಸರದಲ್ಲಿ ಈ ವರ್ಗದವರು ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತಿದ್ದು, ಕೆಲವೊಮ್ಮೆ ಶ್ರೀಮಂತರ ಸಂತೋಷಕೂಟದಲ್ಲಿ ಸಂಗೀತ-ನೃತ್ಯ ಪ್ರದರ್ಶಿಸುತ್ತ, ರಂಗನಟಿಯರಾಗುತ್ತ ಜೀವನ ಸಾಗಿಸುತ್ತಲಿದ್ದಾರೆ. ದೇವರ ಸೂಳೆಯರೇ ಇರಲಿ, ದೇವಾಲಯ ಸೂಳೆಯರೇ ಇರಲಿ, ರಾಜಾಲಯ ಸೂಳೆಯರೇ ಇರಲಿ, ಭಕ್ತಿಯ ಹೆಸರಿನಲ್ಲಿ, ಕಲೆಯ ಹೆಸರಿನಲ್ಲಿ, ರಾಜಸೇವೆಯ ಹೆಸರಿನಲ್ಲಿ ಅವಳನ್ನು ಕೌಟುಂಬಿಕ 'ಹೆಂಡತಿ'ಯಾಗಲು ಬಿಡದೆ ಸಾರ್ವಜನಿಕ 'ಹೆಣ್ಣು' ಆಗಿಯೇ ಮುಂದುವರಿಸುವ ನೀಚಪದ್ಧತಿ ಇದಾಗಿದೆ. ಇವುಗಳಿಗೆ ಎಷ್ಟೇ ದೈವೀ ಪಾವಿತ್ರ್ಯ, ಕಲಾಪ್ರತಿಷ್ಠೆ ಆರೋಪಿಸಿದರೂ ಪತಿ ವಿರಹಿತ ಈ ಹೆಣ್ಣುಗಳು ಅಂತಿಮದಲ್ಲಿ ಪ್ರತಿಷ್ಠಿತ -ಅಪ್ರತಿಷ್ಠಿತ ಸಮಾಜ ಸೂಳೆಯರಾಗುವುದು ತಪ್ಪುವುದಿಲ್ಲ.

'ಸಮಾಜಸೂಳೆ' (Sex worker) ಲೈಂಗಿಕತೆಯನ್ನು ನೇರವಾಗಿ ಮುಕ್ತವ್ಯಾಪಾರಸ್ಥಿತಿಗೆ ಇಳಿಸಿಕೊಂಡವಳಾಗಿದ್ದು, ಪ್ರಾಚೀನ ಕಾಲದಲ್ಲಿ ಇವರಲ್ಲಿ ಪ್ರತಿಷ್ಠಿತರಾದವರು ನಗರಗಳಲ್ಲಿ ಶಾಶ್ವತ ವಾಸಿಸುತ್ತಿದ್ದರೆ, ಅಪ್ರತಿಷ್ಠಿತರಾದವರು ಹೊರಸು, ಹಾಸಿಗೆ ಹೊತ್ತುಕೊಂಡು ಸಂತೆಯಿಂದ ಸಂತೆಗೆ, ಜಾತ್ರೆಯಿಂದ ಜಾತ್ರೆಗೆ ಸಂಚರಿಸುತ್ತಿದ್ದರು. ಈಗ ದೊಡ್ಡ ನಗರಗಳಲ್ಲಿ ಈ ವೃತ್ತಿ ನಡೆಯುತ್ತಿದ್ದು, ಘರವಾಲಿಗಳು ನಡೆಸುವ 'ಸೂಳೆ ಕೇಂದ್ರ'ಗಳೂ ಅಲ್ಲಲ್ಲಿ ಅಸ್ತಿತ್ವದಲ್ಲಿರುತ್ತವೆ. ಮೇಲೆ ಹೇಳಿದ ದೇವರ ಸೂಳೆಯರು ಆರಂಭದಿಂದಲೂ, ದೇವಾಲಯ ಸೂಳೆ ರಾಜಾಲಯ ಸೂಳೆಗಯರು ಇಳಿ ವಯಸ್ಸಿನಲ್ಲಿಯೂ ಸೇರಿಕೊಳ್ಳುವ ಮೂಲಕ ಸಮಾಜಸೂಳೆ ವಾಹಿನಿ ವಿಸ್ತಾರಪಡೆಯುತ್ತಲಿದ್ದಿತು. ಇಂದು ದೇವಾಲಯ ಸೂಳೆ, ರಾಜಾಲಯ ಸೂಳೆ ಪದ್ಧತಿಗಳು ನಾಶವಾಗಿರುವುದರಿಂದ ದೇವರ ಸೂಳೆಯರು ಮಾತ್ರ ಸಮಾಜಸೂಳೆ ವಾಹಿನಿಯೊಂದಿಗೆ ಸೇರಿಕೊಳ್ಳುವುದು ಚಾಲ್ತಿಯಲ್ಲಿದೆ. ಇವರಲ್ಲಿ ಮಹಿಳೆ ದೇವರ ಸೂಳೆಯಾಗಲು ಅಜ್ಞಾನ, ಬಡತನಗಳೇ ಕಾರಣವಾಗಿದೆ. ಈ ಅಜ್ಞಾನ, ಬಡತನಗಳು ದಲಿತ ಸಮಾಜದಲ್ಲಿ ಸಾಮಾನ್ಯವಾಗಿರುವುದರಿಂದ ಅವರು ಮಾತ್ರ ದೇವರ ಹೆಸರಿನಲ್ಲಿ ಬಲಿಪಶುವಾಗುತ್ತ ನಡೆದಿದ್ದಾರೆ. ಇವೆರಡರಲ್ಲಿ ಸಮಾಜದ ಸ್ವಾಸ್ಥ್ಯಕ್ಕೆ ಅನಿವಾರ್ಯವಾಗಿರುವ ಸಮಾಜ ಸೂಳೆಪದ್ಧತಿ ಮುಂದುವರೆಯುವ ವ್ಯವಸ್ಥೆಯಾಗಿದ್ದರೆ, ಶೂದ್ರ ಹೆಣ್ಣುಮಕ್ಕಳನ್ನು ದೈವೀಭ್ರಮೇಯಲ್ಲಿ ದಾರಿ ಬಿಡಿಸುವ ದೇವರ ಸೂಳೆತನವೆಂಬ ಕ್ರೂರಪದ್ಧತಿಯನ್ನು ಮುಂವದುವರಿಯಲು ಬಿಡಬಾರದು. ಹೀಗಾಗಿ ಇಂದು ಇದರ ಬಗ್ಗೆ ಸರಕಾರ, ಪ್ರಜ್ಞಾವಂತ ಸಂಘಟನೆಗಳು ಹೋರಾಟಕ್ಕೆ ಇಳಿದಿವೆ. ಸಾಹಿತ್ಯ-ಸಮೂಹ ಮಾಧ್ಯಮಗಳು ತಿಳಿವಳಿಕೆ ನೀಡುತ್ತಲಿವೆ. ಕರ್ನಾಟಕದಲ್ಲಿ ಈ ಅನಿಷ್ಟ ಪದ್ಧತಿಯನ್ನು ಅಭ್ಯಸಿಸಿ ಬರೆದ ಹಲವು ಸಾಹಿತ್ಯಕೃತಿಗಳು ಪ್ರಕಟವಾಗಿದ್ದರೂ ಅವುಗಳಿಂಗಿಂತ ವ್ಯಾಪಕ ಮತ್ತು ಆಳವಾದ ಅಧ್ಯಯನವನ್ನೊಳಗೊಂಡಿರುವ ಈ ಕೃತಿ, ಇದರ ಇತಿಹಾಸವನ್ನು, ಇದನ್ನು ತಡೆಯಲು ಮಾಡಿದ ಪ್ರಯತ್ನಗಳ ಪರಿಣಾಮ - ಪ್ರಗತಿಗಳನ್ನು, ಅಂಕಿ ಅಂಶಗಳಿಂದ ಬಿಡಿಸಿ ತೋರಿಸಿ, ನಡೆದ-ನಡೆಯಬೇಕಾದ ದಾರಿಯನ್ನು ಸ್ಪಷ್ಟವಾಗಿ ಮಂಡಿಸುತ್ತದೆ.

ಬದುಕು ಕ್ರಿಯಾನಿಷ್ಠ ಮತ್ತು ಪ್ರಕ್ರಿಯಾನಿಷ್ಠವಾಗಿದೆ. ಕ್ರಿಯಾನಿಷ್ಠ ಬದುಕಿನ ಶೋಧಕ್ಕೆ ಕೊನೆಯಿದೆ. ಪ್ರಕ್ರಿಯಾನಿಷ್ಠ ಬದುಕಿನ ಶೋಧಕ್ಕೆ ಕೊನೆಯಿಲ್ಲವಾಗಿ ಅಲ್ಲಿ ಸಂಶೋಧಕನ ಸಾಮರ್ಥ್ಯ, ಸಂಸ್ಕಾರಗಳಿಗೆ ತಕ್ಕಂತೆ ಫಲಿತಾಂಶ ವ್ಯತ್ಯಾಸಗೊಳ್ಳುತ್ತ ಹೋಗುತ್ತದೆ. ಇಂತಹ ಪ್ರಕ್ರಿಯಾತ್ಮಕ ವಿಷಯವು ಕಾರ್ಯ-ಕಾರಣ ಸಂಬಂಧದಲ್ಲಿ ಆವಿರ್ಭವಿಸಿರುತ್ತದೆ. ಹೀಗೆ ಆವಿರ್ಭವಿಸುವ 'ಕಾರಣ'ವೆನ್ನುವುದು ಚಾರಿತ್ರಿಕ-ಭೌಗೋಲಿಕಗಳು ಛೇದಿಸುವ ಬಿಂದುವಿನಲ್ಲಿ ಸೃಷ್ಟಿಯಾಗುತ್ತದೆ. ಈ ಕಾರಣ ಮತ್ತು ಅದರಿಂದ ಆಕಾರ ಪಡೆಯುವ ಪ್ರಕ್ರಿಯಾತ್ಮಕ ಬದುಕುಗಳ ಗುಣಲಕ್ಷಣಗಳನ್ನು ಡಾ. ವಾಲೀಕಾರ ಅವರು ಸರಿಯಾಗಿ ಗ್ರಹಿಸಿದುದಕ್ಕೆ ಇಲ್ಲಿ ನಿದರ್ಶನಗಳು ಲಭಿಸುತ್ತವೆ. ಈ ಆಚರಣೆ ನಾಶವಾಗಬೇಕಾದರೆ ಇದಕ್ಕೆ ಹಿನ್ನೆಲೆಯಾಗಿರುವ ಕಾರಣಗಳು ಮೊದಲು ನಾಶವಾಗಬೇಕೆಂಬ ನಿರ್ದಿಷ್ಟ ನಿಲವು ಇಲ್ಲಿದೆ.

ಕ್ರಿಯಾತ್ಮಕವೆ ಇರಲಿ-ಪ್ರಕ್ರಿಯಾತ್ಮಕವೇ ಇರಲಿ, ಸಂಶೋಧನೆ ಕಾರ್ಯಶೋಧವೇ ಇರಲಿ - ಕಾರಣ ಶೋಧವೇ ಇರಲಿ, ಅದು ಬಯಸುವುದು ಆಕರಗಳನ್ನು. ಸಾಮಾನ್ಯವಾಗಿ ಕ್ರಿಯಾತ್ಮಕ ವಸ್ತುವಿಗೆ ಬರಹವನ್ನು,

ಪ್ರಕ್ರಿಯಾತ್ಮಕ ವಸ್ತುವಿಗೆ ಬದುಕನ್ನು ಆಕರವಾಗಿ ಬಳಸಿಕೊಳ್ಳಬೇಕಾಗುತ್ತದೆ. ದೇವರ ಸೂಳೆ ಪ್ರಕ್ರಿಯಾತ್ಮಕ ವಸ್ತುವಾಗಿರುವುದರಿಂದ ಡಾ. ವಾಲೀಕಾರ ಅವರು ಕಣ್ಣೆದುರಿನ ಜೀವಂತ ಬದುಕನ್ನೇ ಕ್ಷೇತ್ರಕಾರ್ಯದ ಮೂಲಕ ತಬ್ಬಿಕೊಂಡಿದ್ದಾರೆ. ಬಹುಶಃ ಈ ವಸ್ತುವನ್ನು ಕುರಿತು, ಇಷ್ಟು ದೊಡ್ಡ ಪ್ರಮಾಣದ ಕ್ಷೇತ್ರಕಾರ್ಯವನ್ನು ಈವರೆಗೂ ಯಾರು ಮಾಡಿಲ್ಲವೆಂದೇ ಹೇಳಬೇಕು. ದೇವರ ಸೂಳೆಯರನ್ನು ಉತ್ಪಾದಿಸುವ ಎಲ್ಲ ಧಾರ್ಮಿಕ ಕೇಂದ್ರಗಳನ್ನು, ಲೈಂಗಿಕ ವ್ಯಾಪಾರದ ಮುಖ್ಯ ನೆಲೆಗಳನ್ನು, ಪ್ರಸಿದ್ಧ ಕಲಾವಿದೆಯರ ಮನೆಗಳನ್ನು ಇವರು ಬಹುಮಟ್ಟಿಗೆ ಸಂದರ್ಶಿಸಿದುದಕ್ಕೆ ಉದಾಹರಣೆಗಳು ಇಲ್ಲಿ ಉದ್ದಕ್ಕೂ ಕಂಡುಬರುತ್ತವೆ. ಇದರಿಂದ ಲಭ್ಯವಾದ ಸಮೃದ್ಧ ಸಾಮಗ್ರಿಯನ್ನು ಐತಿಹಾಸಿಕ-ಭೌಗೋಳಿಕ ಸ್ತರಗಳಲ್ಲಿ, ಧಾರ್ಮಿಕ-ಸಾಮಾಜಿಕ ಸ್ತರಗಳಲ್ಲಿ, ಆರ್ಥಿಕ-ರಾಜಕೀಯ ಸ್ತರಗಳಲ್ಲಿ ಇಟ್ಟು ನೋಡಿದ ಕಾರಣ ಈ ಅಧ್ಯಯನ ಹಲವು ಆಯಾಮಗಳನ್ನು ಪಡೆದುಕೊಂಡಿದೆ. ಇನ್ನೂ ವಿಶೇಷವೆಂದರೆ ಜನಪದ ಆಕರ ಸಾಮಗ್ರಿ ಮತ್ತು ಜನಪರ ನಿಲುವುಗಳಿಂದಾಗಿ ಇಲ್ಲಿ, ಗತ ಮತ್ತು ವರ್ತಮಾನಗಳ ಎದೆಯಲ್ಲಿ ಅಡಗಿರುವ ಕಹಿ ಸಂಗತಿಗಳು ದಾಖಲಾಗಿವೆ, ಕಹಿ ಫಲಿತಾಂಶಗಳು ಪ್ರಕಟವಾಗಿದೆ. ಅವುಗಳ ಒಡಲಲ್ಲಿ ಲೇಖಕರ ಸಿಟ್ಟು-ನೋವು-ಮರುಕ-ಕಳಕಳಿಗಳು ನೆಲೆ ಪಡೆದಿದೆ.

ಸಂಶೋಧನೆಯೆನ್ನುವುದು ಪ್ರಾಮಾಣಿಕತೆಯನ್ನು ಬಯಸುತ್ತದೆ. ಇದಕ್ಕೆ ಇಲ್ಲಿಯ ನೀರಮಾನ್ವಿ ಪ್ರಸಂಗವನ್ನು ಉದಾಹರಿಸಬಹುದು. ನೀರಮಾನ್ವಿ ಎಲ್ಲಮ್ಮನ ಜಾತ್ರೆಗೆ ಹೆಣ್ಣುಗಳನ್ನು ಖರೀದಿಸಲು ಮುಂಬಯಿಯಿಂದ ಬಂದಿದ್ದ ಘರವಾಲಿಯೊಬ್ಬಳು ಹೊಸದಾಗಿ ಮುತ್ತು ಕಟ್ಟಿಸಿಕೊಂಡ ಇಬ್ಬರು ಹುಡುಗಿಯರ ತಂದೆ ತಾಯಿಗಳಿಗೆ, ಮುತ್ತು ಕಟ್ಟಿದ ಪೂಜಾರಿಗೆ ಕೈತುಂಬ ಹಣ ಸುರಿದಳು. "ಬಂದೋಬಸ್ತಿಗಾಗಿ ಪೋಲೀಸರು ಬಂದಿದ್ದರು. ಆ ಘರವಾಲಿ ಅವರಿಗೆ ಕೊಡಬೇಕಾದುದನ್ನು ಕೊಟ್ಟು, ತನ್ನ ಕಡೆ ಅವರು ಬರದಂತೆ ಮಾಡಿದ್ದಳು" ಎಂದು ಹೇಳಿ ನಿಲ್ಲದೆ, "ಕ್ರಾಂತಿಮಾಡಲು ಬಂದ ದಲಿತ ಸಂಘರ್ಷ ಸಮಿತಿ ಯುವಕರಿಗೆ ರಾಯಚೂರಿನ ಬಾರಿಗೆ ಕರೆದುಕೊಂಡು ಹೋಗಲು. . . . . . . ಒಬ್ಬ ಮನುಷ್ಯನಿಗೆ ವ್ಯವಸ್ಥೆ ಮಾಡಿದ್ದಳು" ಎಂದು ಹೇಳಿಬಿಡುತ್ತಾರೆ. ಡಾ. ವಾಲೀಕಾರ ಅವರು ದಲಿತ ಸಂಘರ್ಷ ಸಮಿತಿ ಸದಸ್ಯರಾಗಿದ್ದೂ ಹೀಗೆ ಬರೆದುದು ಅವರ ಮುಗ್ಧ ಪ್ರಾಮಾಣಿಕತೆಗೆ ನಿದರ್ಶನವೆನಿಸಿದೆ. ಇಂಥ ಮುಗ್ಧ ಪ್ರಾಮಾಣಿಕತೆಯಿಂದಾಗಿ ಈ ಗ್ರಂಥದಲ್ಲಿ ಅನೇಕ ರಹಸ್ಯಗಳು ಅನಾವರಣಗೊಂಡಿರುವುದರಿಂದಲೂ ಇದು ಕನ್ನಡದ ವಿಶಿಷ್ಟ ಕೃತಿ ಎನಿಸಿದೆ.

ಡಾ. ವಾಲೀಕಾರ ಅವರು ಸಮಕಾಲೀನ ಮಹತ್ವದ ಸೃಜನಶೀಲ ಲೇಖಕರು. ಸೃಜನಶೀಲತೆಯೆನ್ನುವುದು ವಿಷಯದ ವ್ಯಾಖ್ಯಾನ ಮತ್ತು ಪ್ರತಿಪಾದನೆಯ ವಿಧಾನ - ಈ ಎರಡು ಮೈಗಳಲ್ಲಿ ಚಿಗುರೊಡೆಯುವುದಾಗಿದ್ದು, ಸಂಶೋಧನ ಸಂದರ್ಭದಲ್ಲಿ ಅದು ವ್ಯಾಖ್ಯಾನಕ್ಕೆ ಸೀಮಿತವಾಗಿರುತ್ತದೆ. ಇಂಥ ವ್ಯಾಖ್ಯಾನನಿಷ್ಠ ಸೃಜನಶೀಲತೆ ಕಾರಣವಾಗಿ ಈಕೃತಿ ಸಂಶೋಧನೆಯ ಸಿದ್ಧಮಾದರಿಗಳಿಗಿಂತ ಭಿನ್ನವಿಧಾನಗಳ ಮೂಲಕ ತೆರೆದುಕೊಳ್ಳುತ್ತ ಹೋಗುತ್ತದೆ.

'ಮುನ್ನುಡಿ'ಗೆ ಪರ್ಯಾಯವಾಗಿ 'ಕನ್ನಡಿ' ಎಂದು ಶೀರ್ಷಿಕೆಯನ್ನು ಈ ಮಾತುಗಳಿಗೆ ಬಳಸಿದ್ದೇನೆ. ಡಾ. ವಾಲೀಕಾರ ಅವರು 'ದೇವರ ಸೂಳೆ'ಯೆಂಬ ಅಮಾನವೀಯ ವ್ಯವಸ್ಥೆಗೆ ಇಲ್ಲಿ ಕನ್ನಡಿ ಹಿಡಿದಿದ್ದಾರೆ. ಈ ಕೃತಿಕನ್ನಡಿಗೆ ನಾನು ಕನ್ನಡಿ ಹಿಡಿದಿದ್ದೇನೆ. ಎರಡೂ ನೆಲೆಗಳಲ್ಲಿ ಈ ಶೀರ್ಷಿಕೆ ಸಾರ್ಥಕವೆಂದು ಭಾವಿಸುತ್ತೇನೆ.

ಚೆನ್ನಣ್ಣ ವಾಲೀಕಾರ, ಕಲಬುರ್ಗಿ

ಆಕರ : ಮಾರ್ಗ ಸಂಪುಟ–೬

೧೮೧

ಕೆ. ಎಲ್. ಇ. ಸೊಸೈಟಿ : ಸಂಪುಟ - ೧

೨೦೦೨

ಇಪ್ಪತ್ತನೆಯ ಶತಮಾನ, ಭಾರತೀಯರ ಬದುಕಿನಲ್ಲಿ ಹಳೆಯದನ್ನು ಕೆಡವಿ-ಹೊಸದನ್ನು ಕಟ್ಟುವ ನವನಿರ್ಮಾಣ ಸಂದರ್ಭ. ಈ ಪರಿವರ್ತನೆಯ ಪರ್ವಕಾಲದಲ್ಲಿ ಹುಟ್ಟಿ, ಇಂದು ಭಾರತ ಪ್ರಸಿದ್ಧಿಯ ಶಿಕ್ಷಣಸಂಸ್ಥೆಯಾಗಿ ಬೆಳೆದಿದೆ, ಬೆಳಗಾವಿಯ 'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ.'

ಪ್ರಾಚೀನ ಕರ್ನಾಟಕದ ಪ್ರತಿಷ್ಠಿತ ಧರ್ಮಗಳಲ್ಲಿ ಮಿಕ್ಕವು ಎಲ್ಲಿಯೋ ಹುಟ್ಟಿ, ಇಲ್ಲಿ ಬೆಳೆದಿವೆ. ಲಿಂಗಾಯತ ಧರ್ಮ ಹುಟ್ಟಿದ್ದು ಕರ್ನಾಟಕದಲ್ಲಿ, ಬೆಳೆದದ್ದು ಕರ್ನಾಟಕದಲ್ಲಿ. ಹೀಗಾಗಿ ಕರ್ನಾಟಕದ ಆ ತುದಿಯಿಂದ ಈ ತುದಿಯ ವರೆಗೆ ಹಬ್ಬಿರುವ ಲಿಂಗಾಯತ ಸಮಾಜ, ಈ ನಾಡು-ನುಡಿ-ಸಂಸ್ಕೃತಿಗಳನ್ನು ಅಂಗೈ ಲಿಂಗದಂತೆ ಆರಾಧಿಸುತ್ತ ಬಂದಿದೆ. 'ಸಕಲ ಜೀವಾತ್ಮರಿಗೆ ಲೇಸು' ಬಯಸುವ ಇದರ ಸಿದ್ಧಾಂತಕ್ಕೆ ಆಕರ್ಷಿತರಾಗಿ ಒಳಗೆ ಬಂದ, ಎಲ್ಲ ವರ್ಣ- ಎಲ್ಲ ವರ್ಗಗಳಿಂದಾಗಿ, ಇದು 'ಸಂಕ್ಷಿಪ್ತ ಕರ್ನಾಟಕ'ವೆನಿಸಿದೆ. ಇಂಥ ಸಂರಚನೆಯುಳ್ಳ ಈ ಸಮಾಜದ ಕೇಂದ್ರಸಿದ್ಧಾಂತ 'ದಾಸೋಹ.'

ಭಾರತೀಯ ತತ್ವಶಾಸ್ತ್ರ 'ವ್ಯಕ್ತಿಶುದ್ಧಿ' ಹಂತವನ್ನು ದಾಟಿ, ಬುದ್ಧನ ಕಾಲಕ್ಕೆ 'ಸಮಾಜಶುದ್ಧಿ' ಹಂತವನ್ನು ತಲುಪಿದ್ದಿತು. ಬಸವಣ್ಣನವರು ಇದನ್ನು 'ಸಮಾಜಸಮೃದ್ಧಿ' ಹಂತಕ್ಕೆ ವಿಸ್ತರಿಸಿದರು. ಈ ಸಮಾಜ ಸಮೃದ್ಧಿ ತತ್ವದ ಅಂಗವಾಗಿ ಕಾಯಕ-ದಾಸೋಹ ಪರಿಕಲ್ಪನೆಗಳು ಕಣ್ಣು ತೆರೆದವು. ಅಂದರೆ ವ್ಯಕ್ತಿಶುದ್ಧಿಯ 'ಸೋಹಂ' ಸಿದ್ಧಾಂತವನ್ನು ಬಸವಣ್ಣನವರು ವ್ಯಕ್ತಿ - ಸಮಾಜ ಸಮೃದ್ಧಿಯ 'ದಾಸೋಹಂ' ಸಿದ್ಧಾಂತದ ವರೆಗೆ ಬೆಳೆಸಿದರು; 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ' ಎಂದು ಸಾರಿದರು. ಅಲ್ಲಿಂದ ಇಲ್ಲಿಯ ವರೆಗೆ ಬೇರೆ ಬೇರೆ ರೂಪಗಳಲ್ಲಿ ಪ್ರಕಟಗೊಳ್ಳುತ್ತ ಬಂದ ಈ ದಾಸೋಹ ಸಿದ್ಧಾಂತ, ೨೦ನೆಯ ಶತಮಾನದಲ್ಲಿ ಶಿಕ್ಷಣರೂಪದಿಂದ ವ್ಯಕ್ತವಾಯಿತು. ಉತ್ತರ ಕರ್ನಾಟಕದಲ್ಲಿ ಈ 'ಶಿಕ್ಷಣ ದಾಸೋಹ'ದ ಪ್ರಥಮ ಸಂಸ್ಥೆಯಾಗಿದೆ, ಬೆಳಗಾವಿಯ'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ.' ಈ ಸಂಸ್ಥೆಯ ಹೆಸರಿನಲ್ಲಿರುವ 'ಕರ್ನಾಟಕ' ಮತ್ತು 'ಲಿಂಗಾಯತ' ಪದಗಳು, ಏಕಕಾಲಕ್ಕೆ ಕರ್ನಾಟಕ ರಾಜ್ಯ ಮತ್ತು ಲಿಂಗಾಯತ ಸಮಾಜಗಳಿಗೆ ಶಿಕ್ಷಣಸಂಸ್ಕಾರ ಕೊಡುವ ಉದ್ದೇಶವನ್ನು ಧ್ವನಿಸುತ್ತವೆ.

ಪ್ರಾಚೀನ ಕಾಲದಲ್ಲಿ ಶಿಕ್ಷಣವೆಂದರೆ ಧರ್ಮತತ್ವಗಳ ಅಭ್ಯಾಸವಾಗಿದ್ದು, ಅದು ಆಯಾ ಧರ್ಮೀಯರಿಗೆ ಸೀಮಿತವಾಗಿದ್ದಿತು. ಹೀಗೆ ಕೆಲವರಿಗೆ ಮಾತ್ರ ಸೀಮಿತವಾಗಿದ್ದ ಶಿಕ್ಷಣಕ್ಷೇತ್ರವನ್ನು ಈ ನಾಡಿನಲ್ಲಿ ಮೊತ್ತ ಮೊದಲು ಸಾರ್ವಜನಿಕಗೊಳಿಸಿದವರು, ೧೨ನೆಯ ಶತಮಾನದ ಶರಣರು. ಇವರು ಅಸ್ಪೃಶ್ಯರ ಮನೆಗೂ

ಅಕ್ಷರಶಿಕ್ಷಣ ವಿಸ್ತರಿಸಿದ ಫಲವಾಗಿ, ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಹೊಲೆಯರ ಉರಿಲಿಂಗಪೆದ್ದಿ, ಕೊರವರ ನುಲಿಯ ಚಂದಯ್ಯ ಮೊದಲಾದ ಅಸ್ಪೃಶ್ಯ ಪುರುಷರು, ಕಾಳವ್ವೆಯಂಥ ಅಸ್ಪೃಶ್ಯ ಮಹಿಳೆಯರು ಸುಶಿಕ್ಷಿತರಾಗಿ-ಸುಸಂಸ್ಕೃತರಾಗಿ ಬೆಳೆದು, ವಚನಸಾಹಿತ್ಯವನ್ನು ಬೆಳೆಸಿದರು. ದುರ್ದೈವದ ಸಂಗತಿಯೆಂದರೆ, ತರುವಾಯದ ದಿನಗಳಲ್ಲಿ ಪ್ರಭುವರ್ಗ-ಪುರೋಹಿತವರ್ಗ-ಪುರುಷವರ್ಗಗಳು ಮತ್ತೆ ಪ್ರಬಲವಾಗಿ, ಪ್ರಜಾವರ್ಗ-ಭಕ್ತವರ್ಗ-ಸ್ತ್ರೀವರ್ಗಗಳನ್ನು ಅಕ್ಷರ ಸಂಸ್ಕೃತಿಯಿಂದ ವಂಚಿತಗೊಳಿಸಿದವು. ಹೀಗಿದ್ದೂ ವಿದ್ಯಾರ್ಥಿಗಳಿಗಾಗಿ ಸಾಲಿಮಠಗಳನ್ನು, ಯುವಕರಿಗಾಗಿ ಸಂಜೆಮಠಗಳನ್ನು ಸ್ಥಾಪಿಸುತ್ತ ಬರುವ ಮೂಲಕ 'ಸಾರ್ವಜನಿಕ ಶಿಕ್ಷಣ' ವ್ಯವಸ್ಥೆಯನ್ನು ೧೯ನೆಯ ಶತಮಾನದ ವರೆಗೂ ಬದುಕಿಸುತ್ತ ಬಂದಿದ್ದ ಲಿಂಗಾಯತರು, ಆಂಗ್ಲರಿಂದಾಗಿ ಅಸ್ತಿತ್ವಕ್ಕೆ ಬಂದ ಹೊಸ ಬಗೆಯ ಸಾರ್ವಜನಿಕ ಶಿಕ್ಷಣಪದ್ಧತಿಗೆ ಸಹಜವಾಗಿಯೇ ಸ್ಪಂದಿಸಿದರು. ಹೀಗೆ ಸ್ಪಂದಿಸಿದ ಉತ್ತರ ಕರ್ನಾಟಕದ ಪ್ರಥಮ ಸಾರ್ವಜನಿಕ ಶಿಕ್ಷಣ ಸಂಸ್ಥೆಯಾಗಿದೆ, 'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ.'

ಈ ಸಂಸ್ಥೆ ಅಸ್ತಿತ್ವಕ್ಕೆ ಬಂದುದು ೧೯೧೬ರಲ್ಲಿ. ಆ ಹೊತ್ತಿಗೆ ಈ ಸಂಸ್ಥೆಯೂ ಒಳಗೊಂಡಂತೆ ಲಿಂಗಾಯತ ಸಮಾಜದಲ್ಲಿ ಮೂರು ಶೈಕ್ಷಣಿಕ ದೊಡ್ಡ ಪ್ರಯತ್ನಗಳು ಹೀಗೆ ಬೆಳೆದು ಬಂದವು.

೧. ಬೆಳಗಾವಿಯ ಲಿಂಗಾಯತ ಬೋರ್ಡಿಂಗ್

೨. ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ

೩. ಬೆಳಗಾವಿಯ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ

ಅಂದಿನ ಅಗತ್ಯಗಳನ್ನು ಗಮನಿಸಿ ಲಿಂಗಾಯತರು ಈ ಸಂಸ್ಥೆಗಳನ್ನು ಸ್ಥಾಪಿಸಿದರು. ಅಂದರೆ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು, ಇವುಗಳಲ್ಲಿ ಮೊದಲನೆಯದು 'ಅನ್ನದಾಸೋಹ'ದ ಅಗತ್ಯವನ್ನು, ಎರಡನೆಯದು 'ಅರ್ಥದಾಸೋಹ'ದ ಅಗತ್ಯವನ್ನು, ಮೂರನೆಯದು ನೇರವಾಗಿ 'ಶಿಕ್ಷಣ ದಾಸೋಹ'ದ ಅಗತ್ಯವನ್ನು ಪೂರೈಸಿದವು. ಇವುಗಳಲ್ಲಿ ಮೊದಲನೆಯದು ಶಿಕ್ಷಣಕ್ಕಾಗಿ ಬೆಳಗಾವಿಗೆ ಬಂದು ಊಟದ ನೆರವು ಪಡೆಯುವ ವ್ಯವಸ್ಥೆಯಾದರೆ, ಎರಡನೆಯದು ಶಿಕ್ಷಣಕ್ಕಾಗಿ ಬೆಳಗಾವಿಗೆ ಬರದೆ ಅಲ್ಲಲ್ಲಿಯೇ ಉಳಿದು ಧಾರವಾಡದ ಮೂಲಕ ಆರ್ಥಿಕ ನೆರವು ಪಡೆಯುವ ವ್ಯವಸ್ಥೆಯಾಗಿದೆ. ಇದು ಕೇಂದ್ರೀಕೃತ ವ್ಯವಸ್ಥೆಯೊಂದು ವಿಕೇಂದ್ರೀಕೃತ ವ್ಯವಸ್ಥೆಯಾಗಿ ಮಾರ್ಪಟ್ಟುದನ್ನು ಸೂಚಿಸುತ್ತದೆ. ಏನೇ ಇರಲಿ, ಇವೆರಡೂ ಲಿಂಗಾಯತರಿಗೇ ಸೀಮಿತ. ಮೂರನೆಯದಾಗಿ ಕೆ. ಎಲ್. ಇ.ಸಂಸ್ಥೆ ಶಿಕ್ಷಣಕ್ಕಾಗಿ ಊಟದ ವ್ಯವಸ್ಥೆ, ಆರ್ಥಿಕ ನೆರವುಗಳಿಗೆ ಬದಲು ನೇರವಾಗಿ ಶಿಕ್ಷಣ ನೀಡಲು ತೊಡಗಿದುದಲ್ಲದೆ, ಲಿಂಗಾಯತರನ್ನೂ ಲಿಂಗಾಯತೇತರರನ್ನೂ ಒಳಗೊಳ್ಳುವ ಮೂಲಕ ಇನ್ನೂ ವಿಕೇಂದ್ರಿತವೆನಿಸಿತು. ಇಂಜಿನಿಯರಿಂಗ್, ಮೆಡಿಕಲ್‌ಗಳಂಥ ಕಾಲೇಜುಗಳ ಸ್ಥಾಪನೆಯಿಂದಾಗಿ ದೇಶ-ವಿದೇಶಗಳಲ್ಲಿಯೂ ವಿಕೇಂದ್ರಿತಗೊಂಡಿತು. ಜಾತಿ, ದೇಶ, ಭಾಷೆ ಇತ್ಯಾದಿಗಳನ್ನು ಮೀರಿದ ವಿಕೇಂದ್ರಿತ ಸೇವೆಯೇ 'ದಾಸೋಹ' ಎಂಬುದನ್ನು ಕೆ. ಎಲ್. ಇ.ಸಂಸ್ಥೆ, ಶಿಕ್ಷಣದ ಮೂಲಕ ಮನಗಾಣಿಸಿಕೊಟ್ಟಿತು. ಇದರಿಂದಾಗಿ ಈ ಸಂಸ್ಥೆ, ಒಂದೇ ಜಾತಿಯ ಮರಗಳ ತೋಪು ಆಗದೆ, ಎಲ್ಲ ಜಾತಿಯ ಮರಗಳ ಅರಣ್ಯವಾಗಿ, ವಿದ್ಯಾರಣ್ಯವಾಗಿ ಬೆಳೆಯಿತು.

ಹೀಗೆ, ಬೆಳಗಾವಿಯಲ್ಲಿ 'ಲಿಂಗಾಯತ ಬೋರ್ಡಿಂಗ್'ನ್ನು ಸ್ಥಾಪಿಸುವ ಮೂಲಕ, ಡೆಪ್ಯೂಟಿ ಚೆನ್ನಬಸಪ್ಪನವರು ಲಿಂಗಾಯತರು ಕಳೆದುಕೊಂಡಿದ್ದ ಶಿಕ್ಷಣದ ನೆಲವನ್ನು ಅವರಿಗೆ ಗುರುತಿಸಿಕೊಟ್ಟರು. ಧಾರವಾಡದಲ್ಲಿ 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ'ಯನ್ನು ಸ್ಥಾಪಿಸುವ ಮೂಲಕ ಶ್ರೀ ಗಿಲಗಂಚಿ-ಶ್ರೀ ಅರಟಾಳರು ಆ ನೆಲವನ್ನು ಹೊಲವನ್ನಾಗಿ ಪರಿವರ್ತಿಸಿದರು. ಆಮೇಲೆ ಈ ಹೊಲವನ್ನು ತೋಟವನ್ನಾಗಿ ಮಾರ್ಪಡಿಸಿದವರು,

'ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ'ಯನ್ನು ಬೆಳಗಾವಿಯಲ್ಲಿ ಸ್ಥಾಪಿಸಿದ ಏಳು ಜನ ಲಿಂಗಾಯತ ಬಂಧುಗಳು. ಅವರಿಗೆ ಶ್ರೀರಕ್ಷೆಯಾಗಿ ಶ್ರಮಿಸಿದರು, ಸಂಸ್ಥಾಪಕ ಸದಸ್ಯರಾದ ಅರಟಾಳ್ ರುದ್ರಗೌಡರು, ಚಚಡಿ ದೇಸಾಯರು ಹಾಗೂ ವೈಜಪ್ಪ ಅನಿಗೋಳ್ ಅವರು.

ಲಿಂಗಾಯತ ಸಮಾಜದ ಇತಿಹಾಸದಲ್ಲಿ, ಕನ್ನಡ ನಾಡಿನ ಶಿಕ್ಷಣದ ಇತಿಹಾಸದಲ್ಲಿ ಈ ಏಳು ಜನರು ಪ್ರಾತಃಸ್ಮರಣೀಯರೆನಿಸಿದ್ದಾರೆ. ಪುಣೆಯಲ್ಲಿ ಪದವಿ ಪರೀಕ್ಷೆಗಾಗಿ ಓದುತ್ತಿರುವಾಗಲೇ ಇವರು ಅಲ್ಲಿಯ 'ಡೆಕ್ಕನ್ ಎಜ್ಯುಕೇಶನ್ ಸೊಸೈಟಿ'ಯ ಚಟುವಟಿಕೆಯಿಂದ ಪ್ರಭಾವಿತರಾಗಿ, ಇಲ್ಲಿ 'ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸೈಟಿ'ಯನ್ನು ಅಸ್ತಿತ್ವಕ್ಕೆ ತಂದರು. ಪದವಿ ಮುಗಿಸಿ ಉಪಜೀವನಕ್ಕಾಗಿ ನೌಕರಿ ಹುಡುಕಬೇಕಾದ, ಮದುವೆಗಾಗಿ ಹೆಣ್ಣು ಹುಡುಕಬೇಕಾದ ಸಮಯದಲ್ಲಿ, ಈ ಎರಡೂ ಹಸಿವುಗಳನ್ನು ಮರೆತು, ಶಿಕ್ಷಣದ ಮೂಲಕ ಸಮಾಜಸೇವೆಯ ಹಸಿವನ್ನು ಹಿಂಗಿಸಿಕೊಳ್ಳಲು ಮುಂದಾದರು. ಕೈಯಲ್ಲಿ ಹಣವಿರಲಿಲ್ಲ, ತಲೆಯಲ್ಲಿ ವಿಚಾರಗಳಿದ್ದವು. ಇದಕ್ಕಿಂತ ಎದೆಯಲ್ಲಿ ಶುದ್ಧ ಸಂಕಲ್ಪವಿದ್ದಿತು. ಇದನ್ನೇ ಮೂಲಧನ ಮಾಡಿಕೊಂಡು ಎ.ವಿ.ಸ್ಕೂಲ್ ಸ್ಥಾಪಿಸಿದರು. ಮುಂದಿನ ದಿನಗಳಲ್ಲಿ ಸ್ಕೂಲ್, ಹೈಸ್ಕೂಲ್, ಕಾಲೇಜು, ಸ್ನಾತಕೋತ್ತರ ವಿಭಾಗ- ಈ ರೀತಿ ಸಂಸ್ಥೆಗಳ ಶ್ರೇಣಿ ರಾಜ್ಯದ ಒಳ-ಹೊರಗೆ ಸಾಲುಗಟ್ಟಿ ನಿಂತಿತು. ಆದುದರಿಂದ ಇವೆಲ್ಲವುಗಳಿಗೆ ತಾಯಿಯಾಗಿರುವ 'ಕರ್ನಾಟಕ ಲಿಂಗಾಯತ ಶಿಕ್ಷಣಸಂಸ್ಥೆ' ಭೌಗೋಲಿಕವಾಗಿ ಬೆಳಗಾವಿಯ ನೆಲದ ಮೇಲೆ ನಿಂತಿದ್ದರೂ ತಾತ್ವಿಕವಾಗಿ ಈ ಏಳು ಜನರ ಇಚ್ಛಾಶಕ್ತಿಯ ಮೇಲೆ ನಿಂತಿದೆಯೆಂದೇ ಹೇಳಬೇಕು.

ಸಂಸ್ಥೆಯೆನ್ನುವುದು ಹಲವು ಜನ, ಹಲವು ಮನಗಳ ಸಂಕೀರ್ಣ ವ್ಯವಸ್ಥೆ. ಹೀಗಾಗಿ ಈ ಸಂಸ್ಥೆಯೂ ಅನೇಕ ಸಲ ಸಂಘಟನೆಯ ಜೊತೆಗೆ ಸಂಘರ್ಷದ ಅಗ್ನಿದಿವ್ಯಗಳನ್ನು ದಾಟಿ ಬಂದಿದೆ. ಅಂಥ ಕಠಿಣ ಸಂದರ್ಭಗಳಲ್ಲಿ ಬೆಂಕಿಯಲ್ಲಿ ಬಿದ್ದ ಬಂಗಾರದಂತೆ ಹೊಸ ಹೊಳಪಿನಿಂದ ಹೊರಹೊಮ್ಮಿದೆ. ಗೆಲುವಿನಂತೆ ಸೋಲನ್ನೂ ಸೋಪಾನ ಮಾಡಿಕೊಂಡು ಶಿಖರಸಿದ್ಧಿಗೇರಿದೆ.

ಬದಲಾವಣೆಗೆ ಸರಿಯಾಗಿ ಸ್ಪಂದಿಸುವುದೇ ಬೆಳವಣಿಗೆ. ಈ ದೃಷ್ಟಿಯಿಂದ ಅಂದಿನ ಆವಶ್ಯಕತೆಯಾಗಿದ್ದ ಜ್ಞಾನನಿಷ್ಠ ಶಿಕ್ಷಣ ನೀಡುವುದಕ್ಕಾಗಿ ಪ್ರಾಥಮಿಕ-ಮಾಧ್ಯಮಿಕ-ಪದವಿ-ಪದವಿಯೋತ್ತರ ಶಾಖೆಗಳನ್ನು ಸ್ಥಾಪಿಸುವ ಮೂಲಕ ಈ ಸಂಸ್ಥೆ, 'ಆರಂಭದ ಘಟ್ಟ'ವನ್ನು ರೂಪಿಸಿಕೊಂಡಿತು. ಆಮೇಲಿನ ಆವಶ್ಯಕತೆಯಾಗಿದ್ದ ವೃತ್ತಿನಿಷ್ಠ ಶಿಕ್ಷಣ ನೀಡುವುದಕ್ಕಾಗಿ ಇಂಜಿನೀಯರಿಂಗ್-ಮೆಡಿಕಲ್-ಡೆಂಟಲ್-ಬಿಜಿನೆಸ್ ಮ್ಯಾನೇಜ್‌ಮೆಂಟಂ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ 'ವಿಸ್ತಾರದ ಘಟ್ಟ'ವನ್ನು ತಲುಪಿತು. ಇಂದು ಕಂಪ್ಯೂಟರ್-ಹೊಟೇಲ್ ಮ್ಯಾನೇಜ್‌ಮೆಂಟ್ ಅ್ಯಂಡ್ ಕೇಟರಿಂಗ್, ಟೂರಿಜಮ್ ಎಡ್‌ಮಿನಿಸ್ಟ್ರೇಶನ್, ಫ್ಯಾಶನ್ ಟೆಕ್ನಾಲಜಿ ಕೋರ್ಸ್ ಇತ್ಯಾದಿ ಆಧುನಿಕ ಜೀವನಾವಶ್ಯಕ ಶಿಕ್ಷಣ ಶಾಖೆಗಳಿಗೆ ಸ್ಪಂದಿಸಿ 'ವಿಸ್ತಾರೋನ್ನತ ಘಟ್ಟ'ವನ್ನು ಮುಟ್ಟಿದೆ.

ಹೀಗೆ ಲೋಕದ ಹೊಸ ಹೊಸ ಜ್ಞಾನಗಳಿಗೆ ಸ್ಪಂದಿಸುತ್ತ, ನಮ್ಮ ಮಧ್ಯದ ಅತ್ಯಾಧುನಿಕ ವಿದ್ಯಾಸಂಸ್ಥೆಯೆಂಬ ಖ್ಯಾತಿಗಳಿಸಿದ ಇದು, ಎಷ್ಟೇ ಜಾಗತಿಕವಾದರೂ ಸ್ಥಾನಿಕವನ್ನು ಮರೆಯದೆ ಒಂದು ಪೂರ್ಣಪ್ರಮಾಣದ ವಿಶ್ವವಿದ್ಯಾಲಯದ ವಿಸ್ತಾರ ಪಡೆದಿದೆ. ಕರ್ನಾಟಕ ಸರ್ಕಾರದಲ್ಲಿ ಇನ್ನೊಂದು ಶಿಕ್ಷಣ ಸರ್ಕಾರವೆಂಬಂತೆ ಬೆಳೆದುನಿಂತಿದೆ.

ಈ ರೀತಿ ಆರಂಭ, ವಿಸ್ತಾರ, ವಿಸ್ತಾರೋನ್ನತವೆಂಬ ಶೈಕ್ಷಣಿಕ ಹಂತಗಳಲ್ಲಿ ಮತ್ತು ರಾಜ್ಯ-ರಾಷ್ಟ್ರ-ಅಂತರ್‌ರಾಷ್ಟ್ರೀಯವೆಂಬ ಭೌಗೋಲಿಕ ನೆಲೆಗಳಲ್ಲಿ ತನ್ನ ಸೀಮಾರೇಖೆಗಳನ್ನು ವಿಸ್ತರಿಸಿಕೊಳ್ಳುತ್ತ ಬೆಳೆದ ಈ 'ಕರ್ನಾಟಕ ಲಿಂಗಾಯತ ಶಿಕ್ಷಣಸಂಸ್ಥೆ' ಲಿಂಗಾಯತರು ಕರ್ನಾಟಕಕ್ಕೆ, ಕನ್ನಡಿಗರು ಭಾರತಕ್ಕೆ ನೀಡಿದ ಬಹುದೊಡ್ಡ ಶೈಕ್ಷಣಿಕ ಆಸ್ತಿಯೆನಿಸಿದೆ.

ಇಂಥ ಸುದೀರ್ಘ ಮತ್ತು ಸಮೃದ್ಧ ಪರಂಪರೆಯುಳ್ಳ ಸಂಸ್ಥೆಯ ಇತಿಹಾಸವನ್ನು ಬರೆಯಿಸಿದವರು, ಸಂಸ್ಥೆಯನ್ನು ಸರ್ವತೋಮುಖವಾಗಿ ಬೆಳೆಸುತ್ತಲಿರುವ ಇಂದಿನ ಕಾರ್ಯಾಧ್ಯಕ್ಷರಾದ ಶ್ರೀ ಪ್ರಭಾಕರ ಕೋರೆ ಅವರು. ಪ್ರಾಮಾಣಿಕತೆ ಮತ್ತು ಪರಿಶ್ರಮಗಳ ನೆಲೆಯಲ್ಲಿ ಈ ಕೃತಿಯನ್ನು ಆಕೃತಿಗೊಳಿಸಿದವರು, ಶ್ರೀ ಬಿ. ಎಸ್. ಗವಿಮಠ, ಪ್ರೊ. ಎ. ಆರ್. ಪಾಟೀಲ ಅವರು. ಇದು ಒಂದು ತಲೆಮಾರಿನ ಕಥೆಯಲ್ಲ, ನಾಲ್ಕು ತಲೆಮಾರುಗಳ ಆತ್ಮಕಥೆ. ಇಂಥ ಬರವಣಿಗೆಯು ಎಲ್ಲ ಮೂಲಗಳಿಂದ ಆಕರ ಸಂಗ್ರಹಿಸುವ ಶ್ರಮವನ್ನು, ಬಳಿಕ ಆ ಶ್ರಮವನ್ನು ಕ್ರಮಗೊಳಿಸುವ ಹೊಣೆಯನ್ನು ಅಪೇಕ್ಷಿಸುತ್ತದೆ. ಶ್ರೀ ಬಿ. ಎಸ್. ಗವಿಮಠ, ಪ್ರೊ. ಎ. ಆರ್. ಪಾಟೀಲ ಅವರು ಈ ಎರಡೂ ಕೆಲಸಗಳನ್ನು ಸಮರ್ಪಕ ರೀತಿಯಲ್ಲಿ ಪೂರೈಸಿದ್ದಾರೆ. ಏಕಕಾಲಕ್ಕೆ ಸಂಸ್ಥೆಯ ಚರಿತ್ರೆಯಾಗುತ್ತಲೇ ಸಮಾಜದ ಚರಿತ್ರೆಯಾಗುವ, ಶಿಕ್ಷಣದ ಚರಿತ್ರೆಯಾಗುತ್ತಲೇ ಸಂಸ್ಕೃತಿಯ ಚರಿತ್ರೆಯಾಗುವ ಆದರ್ಶದಲ್ಲಿ ಈ ಕೃತಿ ಕಟ್ಟಡವನ್ನು ಪೂರ್ಣಗೊಳಿಸಿದ್ದಾರೆ.

ಶ್ರೀ ಪ್ರಭಾಕರ ಕೋರೆ ಅವರ, ಸಂಸ್ಥೆಯ ಸರ್ವ ಸದಸ್ಯರ, ಶ್ರೀ ಬಿ. ಎಸ್. ಗವಿಮಠ, ಪ್ರೊ. ಎ. ಆರ್. ಪಾಟೀಲ ಅವರ ಇತಿಹಾಸ ಪ್ರೀತಿಗೆ-ಐತಿಹಾಸಿಕ ಪ್ರಯತ್ನಕ್ಕೆ ಅಭಿನಂದನೆ ಸಲ್ಲಿಸುತ್ತ, ಈ ಸಂಸ್ಥೆ ತನ್ನ ಶತಮಾನೋತ್ಸವ ಹೊತ್ತಿಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ರಾಷ್ಟ್ರದ ಎಲ್ಲ ರಾಜ್ಯಗಳಲ್ಲಿ ಕನಿಷ್ಠ ಪಕ್ಷ ಒಂದರಂತೆ ವಿದ್ಯಾಕೇಂದ್ರಗಳನ್ನು ಸ್ಥಾಪಿಸಿ, ಭೌತಿಕವಾಗಿಯೂ ರಾಜ್ಯವಾಪ್ತಿಯಾಗಲೆಂದು, ರಾಷ್ಟ್ರವ್ಯಾಪ್ತಿಯಾಗಲೆಂದು ಹಾರೈಸುತ್ತೇನೆ.

ಸಂ: ಎಚ್. ವಿ. ನಾಗೇಶ, ಧಾರವಾಡ

ಆಕರ : ಮಾರ್ಗ ಸಂಪುಟ–೬

೧೮೨

ಸಿರಿ ಸಂಪದ

೨೦೦೨

"ಶಿಕ್ಷಕ" ವರ್ಗಕೋಣೆಯಿಂದ ವಿಚಾರ ಸಂಕಿರಣದ ವೇದಿಕೆಗೆ, ಇನ್ನೂ ಇತ್ತೀಚೆ ಬೀದಿಯ ಮೆರವಣಿಗೆಗೆ ಇಳಿದಿರುವ ಸಂದರ್ಭದಲ್ಲಿ ಡಾ. ಬಿ. ವ್ಹಿ. ಶಿರೂರ ಅವರಂಥ ವರ್ಗಕೋಣೆಯನ್ನು ಪ್ರೀತಿಸುವ ಶಿಕ್ಷಕರು ತುಂಬ ಮುಖ್ಯರೆನಿಸುತ್ತಾರೆ. ಈ ಮುಖ್ಯತೆಯನ್ನು ಗಮನಿಸಿ, ಅವರಿಗೆ ಅರ್ಪಿಸುತ್ತಲಿರುವ ಈ ಗ್ರಂಥ, ಅವರೊಳಗಿನ ಶುದ್ಧ ಶಿಕ್ಷಕನಿಗೆ ಅರ್ಪಿತವಾಗಿದೆಯೆಂದು ಭಾವಿಸುತ್ತೇನೆ.

ಡಾ. ಬಸವರಾಜ ಶಿರೂರ ಅವರು ನನ್ನ ವಿದ್ಯಾರ್ಥಿ, ನನ್ನ ಸಹೋದ್ಯೋಗಿ. ಅವರ ವೈಯಕ್ತಿಕ ಜೀವನ, ವೃತ್ತಿಜೀವನ ಅಂತಿಮದಲ್ಲಿ ನಲಿವಿನಿಂದ ಕೂಡಿದ್ದರೂ, ಅವುಗಳ ಹಿಂದೆ 'ನೋವು' ನಿರಂತರ ಶ್ರುತಿ ಹಿಡಿದಿದೆ. ಎಳೆಯ ವಯಸ್ಸಿನಲ್ಲಿ ತಾಯಿ ಅಗಲಿದಳು. ಸಮಾಜಕ್ಕೆ ಶ್ರೀಮಂತ ಸೇವೆ ಸಲ್ಲಿಸಿ, ಮಗನಿಗೆ ಬಡತನ ಉಳಿಸಿ, ತಂದೆ ವೀರಭದ್ರಪ್ಪನವರು ಅಗಲಿದರು. ಮದುವೆಯಾದ ಹೊಸದರಲ್ಲಿ ಮಡದಿ ಅಗಲಿದರು. ಮದುವೆ ಮಾಡಿದ ಹೊಸದರಲ್ಲಿ ಮಗ ಅಲಗಿದ. ಇದು ಇವರ ಜೀವನ ಗತಿ. ವೃತ್ತಿಜೀವನಕ್ಕೆ ಬಂದರೆ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಹುದ್ದೆಯನ್ನು ಮತ್ತೆ ಮತ್ತೆ ಏರುವುದೂ, ಇಳಿಯುವುದೂ ಇವರಿಗೆ ತಪ್ಪಲಿಲ್ಲ. ಅಲ್ಲಿಂದ ವಿಶ್ವವಿದ್ಯಾಲಯಕ್ಕೆ ಬಂದರೆ ಮುಖ್ಯಸ್ಥ ಹುದ್ದೆ ಕೊನೆಗೂ ತಪ್ಪಿಹೋಯಿತು. ಇಂಥ ಕತ್ತಲೆ-ಬೆಳಕುಗಳ ನಡುವೆಯೂ ಡಾ. ಶಿರೂರ ಅವರು ಶಿಕ್ಷಣದ ಶೋಷಕರಾಗಿ ಬೆಳೆಯದೆ, ಶ್ರಮಿಕರಾಗಿ ದುಡಿದರು.

ಡಾ. ಶಿರೂರ ಅವರದು ಶ್ರಮಸಂಸ್ಕೃತಿ. ಅದಕೂ ಇದಕೂ ಎದಕೂ ಶ್ರಮವನ್ನೇ ಬಳಸಿ, ಬೋಧನೆ-ಸಂಶೋಧನೆ ಎರಡೂ ನೆಲೆಗಳಿಂದ "ಶಿಕ್ಷಕಹುದ್ದೆ"ಗೆ ನ್ಯಾಯ ಒದಗಿಸಿದರು. ಏಕಾಂತನಿಷ್ಠೆಯ ಅಧ್ಯಯನ, ಕಾಯಕನಿಷ್ಠೆಯ ಅಧ್ಯಾಪನ ಪೂರೈಸುತ್ತ ಬಂದ ಅಧ್ಯಾಪಕರೆನಿಸಿರುವ ಇವರದು, ಸಂಶೋಧನನಿಷ್ಠ ವ್ಯಕ್ತಿತ್ವ. "ಶ್ರವಣಬೆಳ್ಗೊಳ : ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವ" ಹೆಸರಿನ ಇವರ ಪಿಎಚ್.ಡಿ. ಪ್ರಬಂಧ ಇದಕ್ಕೆ ನಿದರ್ಶನವೆನಿಸಿದ್ದು, ಅದು ಇಂದಿಗೂ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಜೊತೆಗೆ ಉದ್ದಕ್ಕೂ ನಡೆಸಿದ ಸಂಶೋಧನ ಅನುಭವಗಳನ್ನೇ ಅಕ್ಷರಕ್ಕೆ ಇಳಿಸಿದ ಕೃತಿಯಾಗಿದೆ, ಇವರ "ಸಂಶೋಧನ ಸ್ವರೂಪ."

ಡಾ. ಶಿರೂರ ಅವರ ಸಂಶೋಧನೆಯ ವಿಶೇಷ ಕ್ಷೇತ್ರ, ಗ್ರಂಥಸಂಪಾದನೆ. ಇವರು ವಚನ, ಕಾವ್ಯ, ಗದ್ಯ ಸಾಹಿತ್ಯಗಳಿಗೆ ಸಂಬಂಧಿಸಿದ ಹಲವು ಗ್ರಂಥಗಳನ್ನು ಸಂಸ್ಕರಿಸಿ ಕನ್ನಡಕ್ಕೆ ನೀಡಿದ್ದಾರೆ. ಈ ವಿಶೇಷತೆ ಕಾರಣವಾಗಿಯೇ ಕನ್ನಡ ಗ್ರಂಥಸಂಪಾದನಕ್ಷೇತ್ರದ ವಿದ್ವಾಂಸರನ್ನು ಕುರಿತ ಈ ಗೌರವಗ್ರಂಥವನ್ನು ಸಂಯೋಜಿಸಿ, ಇವರಿಗೆ ಅರ್ಪಿಸಲಾಗಿದೆ.

* * *

ಕನ್ನಡದಲ್ಲಿ ಗ್ರಂಥಸಂಪಾದನ ವ್ಯವಸಾಯಕ್ಕೆ, ಪೂರಕ ಶಾಖೆಗಳಾದ ಹಸ್ತಪ್ರತಿ ಸಂಗ್ರಹ-ಸೂಚೀ ರಚನೆ ಇತ್ಯಾದಿಗಳಿಗೆ ನೂರವರ್ಷಕ್ಕೆ ಮೇಲ್ಪಟ್ಟ ಇತಿಹಾಸವಿದೆ. ಈ ಕಾಲಾವಧಿಯಲ್ಲಿ ವಿದೇಶೀ ವಿದ್ವಾಂಸರು, ಸ್ವದೇಶೀ ವಿದ್ವಾಂಸರು ನಡೆದು-ದುಡಿದು ಒಂದು ಹೆದ್ದಾರಿಯನ್ನೇ ನಿರ್ಮಿಸಿದ್ದಾರೆ. ಇದರ ಫಲವಾಗಿ ಪ್ರಾಚೀನ ಎಲ್ಲ ಮುಖ್ಯ ಕೃತಿಗಳು ಬೆಳಕು ಕಂಡಿವೆ. ಕೆಲವು ಒಂದಕ್ಕಿಂತ ಹೆಚ್ಚು ಆವೃತ್ತಿಯಾಗಿ ಹೊರ ಬಂದಿವೆ. ಕನ್ನಡದಲ್ಲಿ ಇದು ಎಷ್ಟು ಜವಾಬ್ದಾರಿಯ ಕೆಲಸವೆಂದರೆ ಇಲ್ಲಿ ಪಠ್ಯಪರಿಷ್ಕರಣ ಹೋಗಲಿ, ಕವಿ-ಕೃತಿಗಳ ಹೆಸರಿನ ಸತ್ಯಪಾಠವನ್ನೂ ನಿರ್ಣಯಿಸಬೇಕಾಗುತ್ತದೆ. ಬೃಹತ್ಪಥ>ಬೃಹತ್ಕಥೆ, ರೇವಾಕೋಟ್ಯಾಚಾರ್ಯ> ಶಿವಕೋಟ್ಯಾಚಾರ್ಯ, ಬ್ರಹ್ಮಶಿವ>ಬ್ರಹ್ಮದೇವ, ಮಾದಿರಾಜ>ವಾದಿರಾಜ, ಅಂಡಯ್ಯ>ಆಂಡಯ್ಯ ಇತ್ಯಾದಿಗಳು ಇದಕ್ಕೆ ನಿದರ್ಶನವೆನಿಸಿವೆ. ಪಠ್ಯಕ್ಕೆ ಬಂದರೆ ಮತ್ತೆಮತ್ತೆ ಕಾಡುವ ತುಂಬ ಜಟಿಲ ಸಮಸ್ಯೆಗಳನ್ನು ನಮ್ಮ ಸಂಪಾದಕರು ಬಿಡಿಸಿದ್ದಾರೆ. ದೇಶಂ ವರರಾಷ್ಟ್ರಾದಿ ನಿವೇಶಾಂತಂ>ದೇಶಂ [ವನ ರಾಷ್ಟ್ರಾದ್ರಿ] ನಿವೇಶಾಂತಂ, ಉಂಬುದು ಉಡುವುದು ಶಿವಾಚಾರ>ಉಂಬುದು [ಊ]ಡುವುದು ಶಿವಾಚಾರ, ಹುತ್ತ ಕಂಡಲ್ಲಿ ಹಾವಾಗಿ ನೀರ ಕಂಡಲ್ಲಿ ಹೊಳೆಯಾಗುವವನು ಭಕ್ತನೇ?>ಹುತ್ತ ಕಂಡಲ್ಲಿ ಹಾವಾಗಿ, ನೀರ ಕಂಡಲ್ಲಿ [ಒಳ್ಳೆ]ಯಾಗುವವನು ಭಕ್ತನೇ? ಇವೇ ಮೊದಲಾದ ಪರಿಷ್ಕರಣಗಳು ನಮ್ಮ ಸಂಪಾದಕರ ಅಂತಃಸಂಭಾವ್ಯತಾಪ್ರಜ್ಞೆಗೆ ಸಾಕ್ಷಿಯೆನಿಸಿವೆ.

೧. ಪ್ರಾಚೀನ ಕನ್ನಡಿಗರದು ಓದುವ ಸಂಸ್ಕೃತಿಯಲ್ಲ, ಕೇಳುವ ಸಂಸ್ಕೃತಿ. ಇವರ ಸಲುವಾಗಿ ನಮ್ಮ ಕವಿಗಳು ಕೇಳಲು ಯೋಗ್ಯವಾದ ಪಠ್ಯವನ್ನು ರಚಿಸಿ, ಆ ಪಠ್ಯದ ಯೋಗ್ಯತೆಯನ್ನು ಇನ್ನೂ ವರ್ಧಿಸುವ ರಾಗ-ತಾಳಗಳನ್ನು ಪ್ರತಿಯೊಂದು ಸಂಧಿಯ ತಲೆಯ ಮೇಲೆ ಸೂಚಿಸಿದರು. ಆದರೆ ನಮ್ಮಲ್ಲಿ ಗ್ರಂಥಸಂಪಾದನೆಯ ಆದಿಮ ವಿದ್ವಾಂಸರಾದ ಆಂಗ್ಲರದು ನಮ್ಮಂತೆ ಕೇಳುವ ಸಂಸ್ಕೃತಿಯಲ್ಲ, ಓದುವ ಸಂಸ್ಕೃತಿ. ಹೀಗಾಗಿ ಅವರು ಓದುವುದಕ್ಕೆ ಅಗತ್ಯವಲ್ಲದ ರಾಗ-ತಾಳ ಸೂಚನೆಗಳನ್ನು ಕೈಬಿಟ್ಟು, ಬಸವಪುರಾಣ-ಕುಮಾರವ್ಯಾಸ ಭಾರತ-ಜೈಮಿನಿ ಭಾರತ ಇತ್ಯಾದಿಗಳನ್ನು ಪರಿಷ್ಕರಿಸಿ ಪ್ರಕಟಿಸಿದರು. ಅವರ ಈ ತಪ್ಪು ಪದ್ಧತಿಯನ್ನೇ ನಾವು ಇಂದಿಗೂ ಮುಂದುವರಿಸುತ್ತಲಿದ್ದೇವೆ. ಶ್ರವಣಪಾತಳಿಯ ಪದ್ಯಕಾವ್ಯಗಳನ್ನು ಸಂಪಾದನೆಯ ನೆವದಲ್ಲಿ ವಾಚನಪಾತಳಿಗೆ ತರುತ್ತಲಿದ್ದೇವೆ. ಈ ತಪ್ಪನ್ನು ತಿದ್ದಿಕೊಂಡು, ಅಂದರೆ ಪದ್ಯಕಾವ್ಯಗಳ ಪರಿಷ್ಕರಣ ಪ್ರಸಂಗದಲ್ಲಿ ಹಸ್ತಪ್ರತಿಯಲ್ಲಿರುವ ರಾಗ-ತಾಳಗಳ ಸೂಚನೆಗಳನ್ನು ಉಳಿಸಿಕೊಳ್ಳಬೇಕಾಗಿದೆ ಮತ್ತು ಪ್ರಸ್ತಾವನೆಯಲ್ಲಿ ಆಯಾ ರಾಗ-ತಾಳಗಳ ಸ್ವರೂಪ ಲಕ್ಷಣಗಳನ್ನು ವಿವರಿಸಿ, ಆಯಾ ಸಂಧಿಗಳ ಸಂಗೀತ-ಗಮಕ ಮೌಲ್ಯವನ್ನೂ ವಿಮರ್ಶಿಸುವ ಕೆಲಸ ನಡೆಯಬೇಕಾಗಿದೆ. ಹಾಡುಗಬ್ಬಗಳಲ್ಲಿಯಂತೂ ಇದು ಅವಶ್ಯ ಪೂರೈಸಬೇಕಾದ ಕೆಲಸವಾಗಿದೆ.

೨. ಕೆಲವು ಪಠ್ಯಗಳು ಕವಿಯಿಂದಲೇ ಸಚಿತ್ರವಾಗಿ ರೂಪಗೊಂಡಿವೆ. ಕೆಲವೊಮ್ಮೆ ಕಲಾವಿದ ಲಿಪಿಕಾರರು ಪಠ್ಯಗಳನ್ನು ಸಚಿತ್ರಗೊಳಿಸಿರುತ್ತಾರೆ. ಇಂಥಲ್ಲಿ "ಕವಿಪ್ರತಿ"ಯನ್ನು ಸಚಿತ್ರವಾಗಿ ಪ್ರಕಟಿಸುವುದು ಕಡ್ಡಾಯ. "ಲಿಪಿಕಾರಪ್ರತಿ"ಯನ್ನು ಸಚಿತ್ರವಾಗಿ ಪ್ರಕಟಿಸುವುದು ಐಚ್ಛಿಕ. ಅದೇನೇ ಇರಲಿ. ಇಂಥ ಪಠ್ಯಗಳಿಗಾಗಿ ಸಂಪಾದನೆಯ ಹೊಸ ನಿಯಮಗಳನ್ನು ರೂಪಿಸುವುದು, ಈ ನಿಯಮಗಳ ಬೆಳಕಿನಲ್ಲಿ ಅವುಗಳನ್ನು ಪರಿಷ್ಕರಿಸಿ ಪ್ರಕಟಿಸುವುದು ಅಂದರೆ ಈಗಿನಂತೆ ಚಿತ್ರಗಳನ್ನು ಕೈಬಿಡದೆ ಪರಿಷ್ಕರಿಸುವುದು ನಡೆಯಬೇಕಾಗಿದೆ. ಒಟ್ಟಾರೆ ರಾಗ-ತಾಳಗಳನ್ನೊಳಗೊಂಡುದೇ, ಚಿತ್ರಗಳನ್ನೊಳಗೊಂಡುದೇ ಪೂರ್ಣಪಠ್ಯವಾಗಿದ್ದು, ಇವುಗಳನ್ನು ಕೈಬಿಟ್ಟು ಮಾಡಿದ ಕೆಲಸ ಅಪೂರ್ಣ ಸಂಪಾದನೆಯೇ ಸರಿ.

೩. ಇದಕ್ಕಿಂತ ಇನ್ನೊಂದು ದೊಡ್ಡ ತಪ್ಪು ಮಾಡುತ್ತಲಿದ್ದೇವೆ. ಅದು: ಮಾರ್ಗಸಾಹಿತ್ಯಕ್ಕೆ ಅನ್ವಯಿಸುವ ಗ್ರಂಥಸಂಪಾದನ ನಿಯಮಗಳನ್ನೇ ದೇಶೀಸಾಹಿತ್ಯ ಸಂಪಾದನೆಗೂ ಅನ್ವಯಿಸುವುದು. ಮಾರ್ಗಸಾಹಿತ್ಯಕ್ಕೆ ಹೆಚ್ಚು ಹಸ್ತಪ್ರತಿ ಬಳಸಿದಷ್ಟು ಸಂಪಾದನೆ ಹೆಚ್ಚು ಶುದ್ಧವಾಗುತ್ತದೆ. ದೇಶೀಸಾಹಿತ್ಯಕ್ಕೆ ಹೆಚ್ಚು ಹಸ್ತಪ್ರತಿ ಬಳಸಿದಷ್ಟು

ಸಂಪಾದನೆ ಹೆಚ್ಚು ಅಶುದ್ಧವಾಗುತ್ತದೆ. ಇದನ್ನು ಅರ್ಥಮಾಡಿಕೊಳ್ಳದೆ ನಂಬಿಯಣ್ಣನ ರಗಳೆ, ಸೋಮನಾಥ ಚಾರಿತ್ರಗಳಂಥ ಕಾವ್ಯಗಳಿಗೆ, ವಚನ-ಕೀರ್ತನಗಳಂಥ ರಚನೆಗಳಿಗೆ ಹೆಚ್ಚು ಹಸ್ತಪ್ರತಿ ಬಳಸಿ, ಆ ಪ್ರತಿಯಿಂದ ಒಂದು ಶಬ್ದ, ಈ ಪ್ರತಿಯಿಂದ ಒಂದು ಶಬ್ದ ಸ್ವೀಕರಿಸಿ, ನಮ್ಮ ಮೂಗಿನ ನೇರಕ್ಕೆ ತೇಪೆ ಹಚ್ಚುವ ಕೆಲಸ ಮಾಡಲಾಗಿದೆ. ಸಂಪಾದನೆಯೆಂದರೆ ಹತ್ತು ಹಸ್ತಪ್ರತಿ ಬಳಸಿ ಹನ್ನೊಂದನೆಯ ಹಸ್ತಪ್ರತಿ ರೂಪಿಸುವುದೆಂಬಂತೆ ದುಡಿದಿದ್ದೇವೆ. ಇನ್ನು ಮೇಲೆ ದೇಶೀಸಾಹಿತ್ಯಸಂಪಾದನೆಯ ಪ್ರಸಂಗದಲ್ಲಿ ಈ ಪದ್ಧತಿಯನ್ನು ಕೈಬಿಟ್ಟು, ಒಂದು ಕೃತಿಯ ಅನೇಕ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಎಲ್ಲ ರೀತಿಯಿಂದಲೂ ಉತ್ತಮವಾದ ಒಂದನ್ನು ಆಯ್ದುಕೊಂಡು, ಲಿಪಿಕಾರನ ಪಾಠದೋಷ ನಿವಾರಣೆ ಮಾಡಬೇಕು. ಪಾಠಸಮಸ್ಯೆ ಬಗೆಹರಿಯದ ಸಂದರ್ಭದಲ್ಲಿ ಮಾತ್ರ ಕ್ವಚಿತ್ತಾಗಿ ಬೇರೆ ಪ್ರತಿಗಳ ನೆರವು ಪಡೆದು, ಆಧಾರ ಪ್ರತಿಯ ಗುಣ-ರೂಪಗಳನ್ನು ಉಳಿಸಿಕೊಳ್ಳಬೇಕು. ಇದರಿಂದ ಕನಿಷ್ಠಪಕ್ಷ ಒಂದು ಪ್ರತಿಯ ಅಂದರೆ ಒಂದು ಪೀಳಿಗೆಯ ವಂಶಶುದ್ಧಿಯನ್ನಾದರೂ ಸಂರಕ್ಷಿಸಿಕೊಟ್ಟಂತಾಗುತ್ತದೆ.

೪. ಪಾಠನಿರ್ಣಯ ಸಂದರ್ಭದಲ್ಲಿ ಕೇವಲ ಶಾಬ್ದಿಕ ಸಂಸ್ಕರಣಕ್ಕಿಂತ ಸಾಂಸ್ಕೃತಿಕ ಸಂಸ್ಕರಣಕ್ಕೂ ಗಮನಕೊಡಬೇಕು. ಅಂದರೆ ಒಂದು ಕೃತಿ ಹುಟ್ಟಿದ ಸಂಸ್ಕೃತಿಯ ಆವರಣದಲ್ಲಿಟ್ಟು ಅದನ್ನು ಪರಿಷ್ಕರಿಸಬೇಕು. ಕರ್ನಾಟಕ ವಿಶ್ವವಿದ್ಯಾಲಯದ ಆವೃತ್ತಿಯಲ್ಲಿರುವಂತೆ ಬಸವಣ್ಣನವರ ವಚನದ ಒಂದು ಸಾಲು "ಸೋಂಕಿನಲ್ಲಿ ಸುಖಿ, ಸರ್ವಾಂಗ ಕಲಿ" ಅಲ್ಲ, "ಸೋಂಕಿನಲ್ಲಿ ಶುಚಿ, ಸರ್ವಾಂಗ ಕಲಿ." ಪ್ರಾಚೀನ ಕಾಲದಲ್ಲಿ (ಸ್ತ್ರೀ ವಿಷಯದಲ್ಲಿ) ಶುಚಿ, (ವೈರಿ ವಿಷಯದಲ್ಲಿ) ಶೌರ್ಯ-ಇವು ವೀರಜೀವನದ ಮೌಲ್ಯವಾಗಿದ್ದವು. ಇಂಥ ತಿಳುವಳಿಕೆ ಮಾತ್ರ ಒಂದು ಕಾವ್ಯವನ್ನು ಸಾಂಸ್ಕೃತಿಕವಾಗಿ ಪರಿಷ್ಕರಿಸಿ ಕೊಡಬಲ್ಲದು.

೫. ನೂರು ವರ್ಷದ ಹಿಂದೆ ಕೈಯಿಂದ ಬರೆದ 'ಹಸ್ತಪ್ರತಿ'ಗಳೇ ವಾಚನ ಸಾಮಗ್ರಿಯಾಗಿದ್ದವು. ಆಗ ಅವುಗಳಲ್ಲಿ ಮುಖ್ಯವಾದ ಕೃತಿಗಳನ್ನು ಪರಿಷ್ಕರಿಸಿ ಮುದ್ರಿಸಿರುವ ಕಾರಣ, ಅವುಗಳ ಹಸ್ತಪ್ರತಿಗಳು ಯಂತ್ರಪ್ರತಿಗಳಾಗಿಬಿಟ್ಟಿವೆ. ಇಂದು ಅಂಥ ಆವೃತ್ತಿಗಳ ಸಂಪಾದನೆಯನ್ನು ಇನ್ನೂ ಬಹಳಷ್ಟು ಉತ್ತಮಪಡಿಸುವ ಸಾಧ್ಯತೆಯಿದ್ದರೆ - ಮೊದಲು ಬಳಸಿದವುಗಳನ್ನು ಬಿಟ್ಟು ಹೊಸ ಪ್ರತಿಗಳು ಸಿಗದ ಪಕ್ಷದಲ್ಲಿ ಸಂಪಾದಕ ಏನು ಮಾಡಬೇಕು? ಇದು ಇವತ್ತಿನ, ಇನ್ನು ಮೇಲಿನ ಪ್ರಶ್ನೆ. ಈ ಹಿಂದಿನವರು ಬಳಸಿದ ಹಸ್ತಪ್ರತಿಗಳನ್ನೇ ಮತ್ತೆ ಬಳಸಿಕೊಂಡರೆ ಏನು ಪ್ರಯೋಜನ? ಇಂಥ ಸಂದರ್ಭದಲ್ಲಿ ಆ ಆವೃತ್ತಿಯ ಅಡಿಯಲ್ಲಿ ಸಂಗ್ರಹಗೊಂಡಿರುವ ಭಿನ್ನಪಾಠಗಳನ್ನೇ ಭಿನ್ನಹಸ್ತಪ್ರತಿಗಳೆಂದು ಭಾವಿಸಿ, ಯೋಗ್ಯಪಾಠವನ್ನು ನಿರ್ಣಯಿಸುತ್ತ ಹೋಗಬೇಕು. ಹೀಗೆ ಮಾಡುವುದರಿಂದ ತನ್ನ ಪರಿಷ್ಕರಣವು ತಾನು ಬಳಸಿದ ಆವೃತ್ತಿಗಿಂತ ತುಂಬ ಭಿನ್ನವಾಗಿದ್ದರೆ ಮಾತ್ರ, ಅಲ್ಲಿ ತನ್ನ ಹೆಸರನ್ನು ಸಂಪಾದಕನೆಂದು ನಮೂದಿಸಬಹುದು. ಇಂಥದನ್ನು ಇನ್ನು ಮೇಲೆ "ಪರಿಷ್ಕರಣದ ಪರಿಷ್ಕರಣ ಪದ್ಧತಿ" ಎಂದು ಕರೆಯಬಹುದು. ಪಂಪಭಾರತ, ಹರಿಹರನ ರಗಳೆ, ಜನ್ನನ ಯಶೋಧರಚರಿತೆ ಮೊದಲಾದ ಕೃತಿಗಳಿಗೆ ಹೊಸಹೊಸ ಹಸ್ತಪ್ರತಿಗಳು ಸಿಗುವ ಸಂಭವ ಕಡಿಮೆಯಾಗಿರುವುದರಿಂದ, ಕನ್ನಡದಲ್ಲಿ ಇನ್ನು ಮೇಲೆ ಇಂಥ ಪರಿಷ್ಕರಣವೇ ಅನಿವಾರ್ಯವಾಗಬಹುದೇನೋ!

"ಸಿರಿಸಂಪದ" ಹೆಸರಿನ ಈ ಕೃತಿಯ ಕೇಂದ್ರ ವಸ್ತು "ಗ್ರಂಥಸಂಪಾದನೆ"ಯಾಗಿರುವುದರಿಂದ, ಇಲ್ಲಿ ಆ ಶಾಸ್ತ್ರಕ್ಕೆ ಸಂಬಂಧಪಟ್ಟ ಒಂದಿಷ್ಟು ಮಾರ್ಗದರ್ಶಿ ಮಾತುಗಳನ್ನಾಡಬೇಕಾಯಿತು. ಈ ಮಾತುಗಳ ಬೆಳಕಿನಲ್ಲಿ ನಮ್ಮ ಗ್ರಂಥಸಂಪಾದನೆಯ ಕೆಲಸ ಹೊಸಘಟ್ಟ ರೂಪಿಸಿಕೊಂಡು, ಉತ್ತರೋತ್ತರವಾಗಿ ಬೆಳೆಯಲೆಂದು ಆಶಿಸುತ್ತೇವೆ. ಡಾ. ಶಿರೂರ ಅವರಿಗೆ ಎಲ್ಲ ಬಗೆಯ ಸುಖ-ಶಾಂತಿಗಳನ್ನು ಬಯಸುತ್ತೇನೆ.

* * *

ಕನ್ನಡದಲ್ಲಿ ಗೌರವ ಗ್ರಂಥಗಳಿಗೆ ಸುದೀರ್ಘ ಪರಂಪರೆಯಿದೆ. ಬಿ. ಎಂ. ಶ್ರೀ.ಅವರಿಗೆ ಅರ್ಪಿಸಿದ "ಸಂಭಾವನೆ" ಈ ಪರಂಪರೆಯ ಮೊದಲ ಕೃತಿ. ಅಲ್ಲಿಂದೀಚೆ ಒಂದು ಅಂದಾಜಿನ ಪ್ರಕಾರ ಇಂಥ ೪೦೦ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ. ಬಹಳಷ್ಟು ಒಂದು ಬಗೆಯ ಸಿದ್ಧವಿನ್ಯಾಸ, ಅನುಕರಣೆಯೆನಿಸುತ್ತಿದ್ದರೂ, ಅಪವಾದವೆಂಬಂತೆ ಕೆಲವು ಮಾತ್ರ ಮೌಲಿಕ ಲಕ್ಷಣಗಳನ್ನೊಳಗೊಂಡಿವೆ. ಈ ಮೌಲಿಕ ಪರಂಪರೆಗೆ ಸೇರುವ ಕೃತಿಯಾಗಿದೆ, "ಸಿರಿಸಂಪದ." ಕನ್ನಡದ ೬೪ ಜನ ಗ್ರಂಥಸಂಪಾದಕರನ್ನು ಕೇಂದ್ರವಾಗಿಟ್ಟುಕೊಂಡು, ಅವರ ಚರಿತ್ರೆ, ಶ್ರಮ, ಸಾಧನೆಗಳನ್ನು ನಿರೂಪಿಸುವ ಇದು, ೬೫ನೆಯವರೆಂಬಂತೆ ಡಾ. ಶಿರೂರ ಅವರ ಜೀವನ ಸಾಧನೆ, ಗ್ರಂಥಸಂಪಾದನೆಯ ಕೃಷಿಗಳನ್ನೊಳಗೊಂಡು, ಕನ್ನಡದಲ್ಲಿ ಸಂದರ್ಭಗ್ರಂಥವಾಗಿ ಬಹುಕಾಲ ಉಳಿಯುವ ಅರ್ಹತೆಯನ್ನು ಗಳಿಸಿದೆ. ಈ ಗ್ರಂಥಗೌರವಕ್ಕೆ ಪಾತ್ರರಾದ ಡಾ. ಬಿ. ವಿ. ಶಿರೂರ ಅವರಿಗೆ ವಿಶ್ರಾಂತಿ ಜೀವನದಲ್ಲಿಎಲ್ಲ ಬಗೆಯ ಸುಖಶಾಂತಿಗಳನ್ನು ಹಾರೈಸುತ್ತೇನೆ. ಗೌರವಗ್ರಂಥ ಹೊರತರುವುದು ಸುಸಂಸ್ಕೃತ ಸಮಾಜದ ಲಕ್ಷಣ. ಪ್ರೀತಿಯ ಈ ಕೆಲಸ ಇಂದು ಭಾವಿಸಿದಷ್ಟು ಸುಲಭವಾಗಿಲ್ಲ. ಹೀಗಿದ್ದೂ ಡಾ. ಎಫ್. ಟಿ. ಹಳ್ಳಿಕೇರಿ, ಡಾ. ಕೆ. ರವೀಂದ್ರನಾಥ ಅವರು ಡಾ. ಶಿರೂರ ಅವರ ಮೇಲಿನ ಅಭಿಮಾನದಿಂದ, ವಿದ್ವತ್ತಿನ ಮೇಲಿನ ಪ್ರೀತಿಯಿಂದ ಈ ಕಾರ್ಯವನ್ನು ಪೂರೈಸಿದ್ದಾರೆ. ಅನೇಕ ಜನ ಅಭಿಮಾನಿಗಳು ನೆರವಾಗಿದ್ದಾರೆ. ಈ ಸಾರಸ್ವತ ಕಾರ್ಯಕ್ಕೆ ದುಡಿದ ಎಲ್ಲರಿಗೂ ಧನ್ಯವಾದಗಳನ್ನು ಕೋರುತ್ತೇನೆ.

ಎಫ್.ಟಿ. ಹಳ್ಳಿಕೇರಿ - ಕೆ. ರವೀಂದ್ರನಾಥ, ಹೊಸಪೇಟೆ

ಆಕರ : ಮಾರ್ಗ ಸಂಪುಟ–೬

■■

೧೮೩

ಕರ್ನಾಟಕದ ವೀರಶೈವ ಮಠಗಳು

೨೦೦೨

ನಮ್ಮಲ್ಲಿ ವಿಶ್ವವಿದ್ಯಾಲಯಗಳಿವೆ, ಅಲ್ಲಿ ವಿದ್ವಾಂಸರಿದ್ದಾರೆ, ಅವರಿಗೆ ಕೈತುಂಬ ಸಂಬಳವೂ ಇದೆ. ಕ್ಷೇತ್ರಕಾರ್ಯದ ಅನುಕೂಲತೆಗಳಿವೆ, ಓದು-ಬರಹ-ಪ್ರಕಟನ ಸೌಲಭ್ಯಗಳೂ ಇವೆ. ಅವರು ಕರ್ನಾಟಕ ಸಂಸ್ಕೃತಿಯ ಭಾಗವೇ ಆಗಿರುವ ಈ ಶ್ರಮನಿಷ್ಠ "ಆಕರಶೋಧ ಕೃತಿ"ಯನ್ನು ನೋಡಬೇಕು.

ಹೀಗೆ ಹೇಳಲು ಕಾರಣ, ಇದನ್ನು ರೂಪಿಸಿರುವ ಶ್ರೀ ಎನ್. ಚಂದ್ರಶೇಖರ ಅವರಿಗೆ ಪದವಿಯಿಲ್ಲ, ಸರಕಾರಿ ನೌಕರಿಯಿಲ್ಲ. ಶ್ರದ್ಧೆಯಿದೆ, ಶ್ರಮಶೀಲ ಮನಸ್ಸಿದೆ. ಹೀಗಾಗಿ ಇವರು ವ್ಯಕ್ತಿಯಾಗಿ ಉಳಿಯದೆ, ಸಂಸ್ಥೆಯಾಗಿ ದುಡಿದು, ಪುಸ್ತಕವಾಗಿ ರೂಪಗೊಂಡಿದ್ದಾರೆ. ಚಿಕ್ಕಮಗಳೂರಿನಂಥ ವಿದ್ವತ್ ಸೌಲಭ್ಯವಂಚಿತ ನಗರದಲ್ಲಿದ್ದೂ ೧೦೮೮ ಮಠಗಳ ದಾಖಲಾತಿಯನ್ನು ಪೂರೈಸಿದ ಈ ಐತಿಹಾಸಿಕ ಪ್ರಯತ್ನಕ್ಕಾಗಿ ಇವರನ್ನು ಆರಂಭದಲ್ಲಿಯೇ ಅಭಿನಂದಿಸುತ್ತೇನೆ.

ಆಧುನಿಕ ವೀರಶೈವ ಅಧ್ಯಯನಕ್ಕೆ ಒಂದು ನೂರು ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ಎಲ್ಲರೂ ಮಾಡಿದುದು ಸಾಹಿತ್ಯದ ಅಭ್ಯಾಸ-ಸಿದ್ಧಾಂತದ ಅಭ್ಯಾಸ. ಅದೂ ಗ್ರಂಥಾಲಯದಲ್ಲಿ ಕುಳಿತು ಮಾಡಿದ ಕೇಂದ್ರೀಯ ಅಭ್ಯಾಸ. ಇಂಥ ಸಂದರ್ಭದಲ್ಲಿ ಗ್ರಂಥಾಲಯದಿಂದ ಹೊರಗೆ ಬಂದು ಮಾಡಿದ ಕ್ಷೇತ್ರೀಯ ಅಭ್ಯಾಸವೆನಿಸಿದೆ, ಪ್ರಸ್ತುತ "ಕರ್ನಾಟಕದ ವೀರಶೈವ ಮಠಗಳು."

ಇಂದಿನದು ಸಂಕ್ರಮಣ ಕಾಲ. ಹಳೆಯ ಮೌಲ್ಯಗಳು, ಹಳೆಯ ವ್ಯವಸ್ಥೆಗಳು ವೇಗವಾಗಿ ಮರೆಯಾಗುತ್ತಲಿರುವ ಕಾಲ. ವೀರಶೈವ ಮಠಗಳು ಇದಕ್ಕೆ ಹೊರತಲ್ಲ. ಒಂದು ಅಂದಾಜಿನ ಪ್ರಕಾರ ಕರ್ನಾಟಕದಲ್ಲಿದ್ದ ೫೭೦೬ ಮಠಗಳಲ್ಲಿ ೩೮೩೩ ಮಠಗಳು ಶಾಶ್ವತ ನಾಶವಾಗಿದೆ. ಉಳಿದಿದ್ದ ೧೮೭೩ ಮಠಗಳನ್ನು ಗುರುತಿಸಬಹುದಾದರೂ ಅಸ್ತಿತ್ವದಲ್ಲಿರುವುವು ೧೦೮೮ ಮಾತ್ರ. ಈ ವಿವರಣೆ ಲಿಂಗಾಯತ ಮಠಾಧಿಪತಿಗಳ, ಮಠಗಳ ನಿಜವಾದ ಯಜಮಾನರಾಗಿರುವ ಭಕ್ತರ ಹೊಣೆಗೇಡಿತನಕ್ಕೆ ಹಿಡಿದ ಕನ್ನಡಿಯಾಗಿದೆ. ಉಳಿದ ಜಿಲ್ಲೆಗಳು ಹೋಗಲಿ, ವಿರಕ್ತಪೀಠದ ಗಂಗೋತ್ರಿಯಾಗಿರುವ ಬಸವಕಲ್ಯಾಣವನ್ನೊಳಗೊಂಡ ಬೀದರ ಜಿಲ್ಲೆಯಲ್ಲಿ ಇದ್ದವೆಂದು ಹೇಳಲಾಗುವ ಮಠಗಳು ೧೩೪೧, ಅಸ್ತಿತ್ವದಲ್ಲಿರುವುವು ೪೯. ಗುರುಪೀಠದ ಬಾಳೆಹಳ್ಳಿ ಮಠವನ್ನೊಳಗೊಂಡ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದ್ದುವೆಂದು ಹೇಳಲಾಗುವ ಮಠಗಳು ೭೭, ಅಸ್ತಿತ್ವದಲ್ಲಿರುವುವು ೧೬. ಉಜ್ಜಯನಿ ಮಠವನ್ನೊಳಗೊಂಡ ಬಳ್ಳಾರಿ ಜಿಲ್ಲೆಯಲ್ಲಿ ಇದ್ದುವೆಂದು ಹೇಳಲಾಗುವ

ಮಠಗಳು ೧೧೮, ಅಸ್ತಿತ್ವದಲ್ಲಿರುವುವು ೩೯. ಹೀಗೆ ತಮ್ಮ ತಮ್ಮ ಜಿಲ್ಲೆಯಲ್ಲಿಯೇ ವೀರಶೈವಮಠಗಳು ಕಾಲವಾಹಿನಿಯಲ್ಲಿ ಕೊಚ್ಚಿಹೋಗುತ್ತಲಿದ್ದಾಗ ಈ ಎರಡೂ ವರ್ಗದ ಜಗದ್ಗುರು ಪೀಠಗಳು ಏನು ಮಾಡುತ್ತಿದ್ದವು?

ಈ ಮೊದಲು ಮಠಗಳು ಸ್ವಾಮಿಗಳ ಸಂಬಂಧಿಕರ ಮನೆಗಳಾಗುತ್ತಿದ್ದವು. ಇಂದು ಮಾರಾಟದ ಮಳಿಗೆಗಳಾಗುತ್ತಲಿವೆ, ಸಿನಿಮಾ ಟಾಕೀಜಗಳಾಗುತ್ತಲಿವೆ, ಮತ್ತೆ ಏನೇನೋ ಆಗುತ್ತಲಿವೆ. ಬೆಂಗಳೂರು ನಗರ ಒಂದನ್ನೇ ಕುರಿತು ಹೇಳುವುದಾದರೆ ೧೯ನೆಯ ಶತಮಾನದ ಮಧ್ಯದಲ್ಲಿ ಇದ್ದ ೭೪ ವೀರಶೈವ ಮಠಗಳಲ್ಲಿ ಈಗ ೩೫ ಮಾತ್ರ ಉಳಿದಿವೆ. ಈ ೩೫ರಲ್ಲಿ ೧೮ ಮಠಗಳಿಗೆ ಅಧಿಪತಿಗಳಿಲ್ಲ. ಇವುಗಳಲ್ಲಿ ಸ್ವಾತಂತ್ರ್ಯಪೂರ್ವಕ್ಕಿಂತ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮರೆಯಾದುವು ಅಧಿಕ. ನಮ್ಮ ಸ್ಥಳೀಯ ಧಾರ್ಮಿಕ ರಾಜಧಾನಿಗಳಾಗಿರುವ ಮಠಗಳು ಹೀಗೆ ಮರೆಯಾಗುವ ಮೊದಲು, ಕರ್ನಾಟಕ ವ್ಯಾಪ್ತಿಯ ಪರಿವೀಕ್ಷಣೆ ನಡೆಸಿ, ಅವುಗಳ ಸ್ವರೂಪ ಮತ್ತು ಇತಿಹಾಸಗಳನ್ನು ದಾಖಲಿಸಬೇಕೆಂದು ಅನೇಕರು ಹೇಳುತ್ತಲಿದ್ದರು. ಈ ಮಾತು ಕೃತಿಗಿಳಿಯುವ ಸಲುವಾಗಿ ನಾವು ಶ್ರೀ ಚಂದ್ರಶೇಖರ ಅವರು ಹುಟ್ಟಿಬರುವ ವರೆಗೆ ಕಾಯಬೇಕಾಯಿತು. ಈ ಗ್ರಂಥದ ಮಹತ್ತು-ಬೃಹತ್ತು ನೋಡಿದರೆ, ದೇವರು ಈ ಮಣಿಹಕ್ಕಾಗಿಯೇ ಇವರನ್ನು ಭೂಮಿಗೆ ಕಳಿಸಿರುವನೆಂದು ಭಾಸವಾಗುತ್ತದೆ.

* * *

ಮುನಿಗಳಿರುವುದು ಆಶ್ರಮ, ವ್ರತಿಗಳಿರುವುದು ಮಠ - ಎಂದು ನಿಘಂಟು ಹೇಳುತ್ತದೆ. ಮುನಿಗಳು ಆತ್ಮೋದ್ಧಾರಕ್ಕಾಗಿ ಅರಣ್ಯದ ಆಶ್ರಮದಲ್ಲಿ ತಪೋಮಗ್ನರಾದರೆ, ವ್ರತಿಗಳು ಗ್ರಾಮದ ಮಠದಲ್ಲಿ ತಪೋಮಗ್ನರಾಗಿರುತ್ತಾರೆ. ಈ 'ಮಠದ ವ್ರತಿ' ವೈದಿಕ ಧರ್ಮದಲ್ಲಿ 'ಸನ್ಯಾಸಿ' ಎನಿಸುತ್ತಾನೆ, ಶರಣಧರ್ಮದಲ್ಲಿ 'ಜಂಗಮ'ನೆನಿಸುತ್ತಾನೆ. "ಸನ್ಯಾಸಿಸಂಸ್ಕೃತಿ"ಗಿಂತ "ಜಂಗಮಸಂಸ್ಕೃತಿ" ತುಂಬ ಭಿನ್ನವಾದುದು. ಜಂಗಮನು ಸನ್ಯಾಸಿಯ ಆತ್ಮೋದ್ಧಾರದೊಂದಿಗೆ ಹೆಚ್ಚಿನದಾಗಿ ವರ್ಗಭೇದ, ವರ್ಣಭೇದ, ಲಿಂಗಭೇದವಿಲ್ಲದೆ ಸಮಾಜ ಸೇವಾದೀಕ್ಷಿತನಾಗಿರುತ್ತಾನೆ. ತನ್ನ ಈ ದೀಕ್ಷೆಯನ್ನು ಸಾಮಾಜಿಕರ ಆತ್ಮಶುದ್ಧಿಯ ಜೊತೆಗೆ, ಅನ್ನ-ಶಿಕ್ಷಣ-ಔಷಧ-ನ್ಯಾಯದಾನ-ಸಾಹಿತ್ಯಸೃಷ್ಟಿ ಇತ್ಯಾದಿ ಜೀವನಾವಶ್ಯಕ ಕ್ಷೇತ್ರಗಳಿಗೆ ವಿಸ್ತರಿಸಿ, ಸಮಾಜ ಸಮೃದ್ಧಿಗೂ ಕಾರಣನಾಗುತ್ತಾನೆ. ಅವನ ಮಠ ಆಯಾ ಗ್ರಾಮದ ಅನಧಿಕೃತ ಸರಕಾರವೆಂಬಂತೆ ಕಾರ್ಯ ನಿರ್ವಹಿಸುತ್ತದೆ. ಹೀಗಾಗಿ ವೀರಶೈವಮಠಗಳ ಅಭ್ಯಾಸ, ಉಳಿದ ಧಾರ್ಮಿಕ ಮಠಗಳಂತೆ ಕೇವಲ ಧರ್ಮಮುಖಿಯಾಗದೆ, ಹೆಚ್ಚಿನದಾಗಿ ಸಮಾಜಮುಖಿಯೂ ಆಗುತ್ತದೆ.

ಇಂಥ ಅಭ್ಯಾಸಕ್ಕೆ ಮೂಲಸಾಮಗ್ರಿ ಆಕರಗಳು. ಇತರ ಮಠಗಳಿಗಿಂತ ಅಧಿಕ ಸಂಖ್ಯೆಯಲ್ಲಿರುವ ವೀರಶೈವಮಠಗಳು, ಆಕರ ಸಾಮಗ್ರಿ ಸಂಗ್ರಹಿಸುವ ಕ್ಷೇತ್ರಕಾರ್ಯಕರ್ತನಿಗೆ ದೊಡ್ಡ ಅವಕಾಶವೂ ಹೌದು, ದೊಡ್ಡ ಆಹ್ವಾನವೂ ಹೌದು. ಈ ಎರಡರಲ್ಲಿಯೂ ಶ್ರೀ ಚಂದ್ರಶೇಖರ ಅವರು ಜಯಶಾಲಿಯಾಗಿದ್ದಾರೆ.

ಈವರೆಗೆ ಕರ್ನಾಟಕದ ಸಂಸ್ಕೃತಿಶೋಧವು ಗ್ರಂಥಸ್ಥ ಆಕರವನ್ನು ಅವಲಂಬಿಸಿದ್ದಿತು. ಇತ್ತೀಚೆ ಕ್ಷೇತ್ರಕಾರ್ಯದ ದೇಶೀ ಹಾದಿಯೊಂದು ತೆರೆದುಕೊಂಡಿದೆ. ಈ ಹಾದಿಯಲ್ಲಿ ಪ್ರಯಾಣಿಸಿ, ಶ್ರೀ ಚಂದ್ರಶೇಖರ ಅವರು ಕರ್ನಾಟಕದ ಎಲ್ಲ ೨೭ ಜಿಲ್ಲೆಗಳನ್ನೂ, ಎಲ್ಲ ೧೭೫ ತಾಲೂಕುಗಳನ್ನೂ ಸುತ್ತಿದ್ದಾರೆ. ಬಹುಶಃ ಈ ಶತಮಾನದ ಬಹುದೊಡ್ಡ ಏಕವ್ಯಕ್ತಿ ಕ್ಷೇತ್ರಕಾರ್ಯವೆಂಬಂತೆ ಈ ಕೆಲಸವನ್ನು ಪೂರೈಸಿದ್ದಾರೆ. ಇದು ಭಾವಿಸಿದಷ್ಟು ಸುಲಭವಲ್ಲ. ಗಟ್ಟಿಮುಟ್ಟಾದ ಕಾಲು ಬೇಕು, ಮಳೆ-ಗಾಳಿಗೆ ಅಂಜದ ಮೈಬೇಕು, ಅನ್ಯಾಯ-ಅಪಮಾನಗಳನ್ನು ಸಹಿಸುವ ಮನಸ್ಸು ಬೇಕು. ಕೈಯೊಳಗಿನ ಉದ್ಯೋಗ, ಕೈಹಿಡಿದ ಹೆಂಡತಿ, ಅವಲಂಬಿಸಿದ ಕುಟುಂಬ ಸದಸ್ಯರನ್ನು ದಿನಗಟ್ಟಲೆ, ವಾರಗಟ್ಟಲೆ ಅಲ್ಲ, ತಿಂಗಳುಗಟ್ಟಲೆ ಮರೆಯಬೇಕು. ಇವೆಲ್ಲವುಗಳನ್ನು ಪವಾಡಸದೃಶ ರೀತಿಯಲ್ಲಿ ಹೊಂದಿಸಿಕೊಂಡು, ಮೈಯಲ್ಲಿ ಆವೇಶ ತುಂಬಿಕೊಂಡವರಂತೆ ಶ್ರೀ ಚಂದ್ರಶೇಖರ ಅವರು ಹಿಡಿದ ಕೆಲಸವನ್ನು

ಆಗುಮಾಡಿದ್ದಾರೆ. ಪ್ರತಿಷ್ಠಿತ ಪಂಡಿತರಂತೆ ಸಂಸ್ಥೆಯಲ್ಲಿ ಬೆಚ್ಚಗೆ ಕುಳಿತು, ಪ್ರಶ್ನಾವಳಿ ಮೂಲಕ ಮಾಹಿತಿ ತರಿಸಿಕೊಳ್ಳದೆ, ಸ್ವತಃ ಪ್ರಯಾಣಿಸಿ, ಕಂಡು, ಕೇಳಿ ಸಂಗ್ರಹಿಸಿಕೊಂಡಿದ್ದಾರೆ. ವಿಮರ್ಶಿಸಿ ದಾಖಲಿಸಿಕೊಂಡಿದ್ದಾರೆ.

ಸಂಶೋಧನೆಯು ಇಂದು ಆಕರಗಳ ವ್ಯಾಖ್ಯಾನ ಪಾತಳಿಯಲ್ಲಿ ವ್ಯವಹರಿಸುತ್ತಲಿದೆ. ಇದಕ್ಕೆ ಮೊದಲು ಆಕರಗಳ ವಿಶ್ಲೇಷಣೆಯ ಕೆಲಸ, ಇದಕ್ಕೂ ಮೊದಲು ಆಕರಗಳ ಶೋಧ ಕೆಲಸ ಅಗತ್ಯ. ಇಲ್ಲಿ ಶ್ರೀ ಚಂದ್ರಶೇಖರ ಅವರು ಮಾಡಿದ್ದು, ಆಕರಗಳ ಶೋಧ ಕೆಲಸ. ಲಿಂಗಾಯತರಲ್ಲಿ ಮುಖ್ಯವಾಗಿ ಸಂಪ್ರದಾಯವಾದಿ ಮತ್ತು ಉದಾರವಾದಿಯೆಂದು ಹೇಳಿಕೊಳ್ಳುವ ಎರಡು ಮತ ಸಂಪ್ರದಾಯಗಳಿವೆ. ಅವುಗಳ ಗುಣದೋಷಗಳೇನೇ ಇರಲಿ, ಆ ಚರ್ಚೆಗೆ ಹೋಗದೆ, ಇವರು ದಾಖಲಾತಿಯಲ್ಲಿ ಪ್ರಾಮಾಣಿಕತೆ, ವಿಷಯ ಸಂಗ್ರಹದಲ್ಲಿ ಸಮಗ್ರತೆ, ನಿರೂಪಣೆಯಲ್ಲಿ ನಿರಾಡಂಬರತೆ- ಈ ಆದರ್ಶದಲ್ಲಿ ತಮ್ಮ ಕೃತಿಯನ್ನು ವಿನ್ಯಾಸಗೊಳಿಸಿದ್ದಾರೆ. ಅನುಬಂಧದಲ್ಲಿ ಉಪಯುಕ್ತ ಮಾಹಿತಿಯನ್ನೂ ಜೋಡಿಸಿದ್ದಾರೆ.

ಪ್ರಥಮ ಬಾರಿಗೆ ಬೆಳಕುಕಂಡ ಈ ಮಾಹಿತಿಯನ್ನು ಬಳಸಿಕೊಂಡು ಅಭ್ಯಾಸ ಮುಂದುವರಿಸುವುದು ವಿದ್ವಾಂಸರಿಗೆ ಬಿಟ್ಟ ವಿಷಯ. ಸಂಖ್ಯಾನಿಷ್ಠ ಸಂಶೋಧನೆ ಕೈಕೊಳ್ಳುವವರು, ಯಾವ ಜಿಲ್ಲೆಗಳಲ್ಲಿ ಯಾವ ಸಂಪ್ರದಾಯದ ಮಠಗಳು ಹೆಚ್ಚು? ಯಾವ ಸಂಪ್ರದಾಯದ ಮಠಗಳು ಕಡಿಮೆ? ಇದಕ್ಕೆ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಕಾರಣಗಳೇನು? ಎಂದು ಸೊಗಸಾದ ಅಭ್ಯಾಸಮಾಡಬಹುದು. ಕೇವಲ ಹೆಸರುಗಳನ್ನೇ ತೆಗೆದುಕೊಂಡರೆ ಇನ್ನೊಂದು ಬಗೆಯ ಅಭ್ಯಾಸ ಹೀಗೆ ಆಕಾರ ಪಡೆಯುತ್ತದೆ. ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಂಡುಬರುವ 'ಹಿರೇಮಠ' ಹೆಸರುಗಳು ಗುರುಪರಂಪರೆಯ, 'ವಿರಕ್ತಮಠ' ಹೆಸರುಗಳು ಜಂಗಮಪರಂಪರೆಯ "ಸಮೂಹಸಂಸ್ಕೃತಿ"ಯನ್ನು ಸೂಚಿಸುತ್ತವೆ. ಕುತೂಹಲದ ವಿಷಯವೆಂದರೆ ಇವುಗಳ ಜೊತೆಗೆ ಇವರ ಶಾಖೆಯನ್ನು ಸೂಚಿಸುವ (ಮುರುಘಾಮಠ, ಉಜ್ಜಯನಿಮಠ) ಹೆಸರುಗಳಿವೆ. ಶಾಖೆಗಳಲ್ಲಿಯೇ ಇವರ ಪರಂಪರೆಯ ಸ್ವಾಮಿಯೊಬ್ಬನನ್ನು ಸೂಚಿಸುವ (ಹಾಲಸ್ವಾಮಿಮಠ, ಶಿವಲಿಂಗಸ್ವಾಮಿಮಠ) ಹೆಸರುಗಳು ದೊಡ್ಡ ಸಂಖ್ಯೆಯಲ್ಲಿವೆ. ಇವು ಸಮೂಹಪ್ರಧಾನ ಸಂಸ್ಕೃತಿಯಿಂದ, ವ್ಯಕ್ತಿಪ್ರಧಾನ ಸಂಸ್ಕೃತಿಯತ್ತ ವೀರಶೈವ ಮಠಗಳು ಸಾಗಿಬಂದುದನ್ನು ಸೂಚಿಸುತ್ತವೆ. ಕಲ್ಮಠ, ಗಚ್ಚಿನಮಠ, ಗವಿಮಠ, ಹಳೆಯಮಠ, ಹೊಸಮಠ, ಚಿಕ್ಕಮಠ ಇತ್ಯಾದಿಗಳು ಆಯಾ ಮಠಗಳ ಸ್ವರೂಪ ಮತ್ತು ಪ್ರಾಚೀನತೆಗಳನ್ನು ಸ್ಪಷ್ಟಪಡಿಸುತ್ತವೆ. ಮೇಗಲ್ಮಠ-ಹಳ್ಳದಮಠ-ಗುಡ್ಡದಮಠ-ತಿಪ್ಪಿಮಠ-ಪಡುವಲಮಠ-ಮೂಡಲಮಠ-ಹೆಸರುಗಳು ಅವುಗಳ ಸ್ಥಾನವನ್ನು ಸೂಚಿಸುತ್ತವೆ. ಇದಕ್ಕಿಂತ ಓಲೆಮಠ-ಟೀಕಿನಮಠ - ಸಂಪಾದನೆಮಠ ಇತ್ಯಾದಿಗಳ ಹಿಂದೆ ಸಾಹಿತ್ಯಚರಿತ್ರೆಯ, ಸ್ಥಿರಪಟ್ಟಾಧ್ಯಕ್ಷಮಠ -ಚರಪಟ್ಟಾಧ್ಯಕ್ಷಮಠ - ಪಂಚವಣ್ಣಿಗೆಮಠ - ಕಬ್ಬಿಣಕಂಥೆಮಠ - ಶೀಲಸಂಪಾದನೆಮಠ - ಮಕ್ಕಳದೇವರಮಠ ಇತ್ಯಾದಿಗಳ ಹಿಂದೆ ಸಮಾಜೋ-ಧಾರ್ಮಿಕ ಚರಿತ್ರೆಯ, ದಳವಾಯಿಮಠ ಮೊದಲಾದವುಗಳ ಹಿಂದೆ ರಾಜಕೀಯ ಚರಿತ್ರೆಯ ಸುದೀರ್ಘ ಇತಿಹಾಸಗಳಿವೆ, ಪರಿಕಲ್ಪನೆಗಳಿವೆ, ಸಂಸ್ಕೃತಿಗಳಿವೆ. ಇವು ಬಹುಮುಖಿ ಅಧ್ಯಯನಕ್ಕೆ ನಮ್ಮ ದಾರಿ ನೋಡುತ್ತಿವೆ.

* * *

ಇಂದಿನದು ಪ್ರಭುಸತ್ತಾಯುಗವಲ್ಲ, ಪ್ರಜಾಸತ್ತಾಯುಗ. ಈ ಬದಲಾದ ಸಂದರ್ಭಕ್ಕೆ ತಕ್ಕಂತೆ, ವೀರಶೈವಮಠಗಳು ತಮ್ಮ ಪ್ರಭುಸತ್ತಾತ್ಮಕ ವ್ಯವಸ್ಥೆಯನ್ನು, ಧೋರಣೆಯನ್ನು ಪ್ರಜಾಸತ್ತಾತ್ಮಕವಾಗಿ ಪರಿವರ್ತಿಸಿಕೊಳ್ಳುವುದು ಇಂದಿನ ಬಹುಮುಖ್ಯ ಅಗತ್ಯವೆನಿಸಿದೆ.

೫೭೦೬ ಮಠಗಳಲ್ಲಿ ೩೮೩೩ ಮಠಗಳು ಶಾಶ್ವತ ನಾಶವಾಗಿ ಹೋಗಿವೆ. ಹೀಗೆಂದು, ಅವುಗಳ ಸ್ಥಾನದಲ್ಲಿ ಹೊಸಮಠಗಳನ್ನು ಸ್ಥಾಪಿಸಬೇಕೆಂದಿಲ್ಲ; ಕೆಲಸಕ್ಕೆ ಬಾರದ ಹಳೆಯ ಭಾವನೆಗಳ ಸ್ಥಾನದಲ್ಲಿ ಹೊಸ ಭಾವನೆಗಳನ್ನು ಸ್ಥಾಪಿಸಿಕೊಳ್ಳಬೇಕಿದೆ. ಅಂದರೆ ಭಕ್ತವರ್ಗ-ಜಂಗಮವರ್ಗ, ಜಂಗಮವರ್ಗದಲ್ಲಿಯೇ ಗುರುಪೀಠ-ಜಂಗಮಪೀಠವೆಂಬ ಭೇದಸಂಸ್ಕೃತಿಯನ್ನು ನಾಶಮಾಡಿಕೊಂಡರೆ ಮಾತ್ರ ವೀರಶೈವಮಠಗಳಿಗೆ, ವೀರಶೈವಮತಕ್ಕೆ

ಉತ್ತಮ ಭವಿಷ್ಯವಿದೆ. ಆದುದರಿಂದ "ಒಬ್ಬರಿಗೊಬ್ಬರು ಮತ್ಸರಿಸಬೇಕೆಂದು ಕೊಟ್ಟನೆ ಶ್ರೀಗುರು ಲಿಂಗವನು?" ಎಂಬ ಚೆನ್ನಬಸವಣ್ಣನವರ ಮಾತನ್ನು ಭಕ್ತರೂ ಮಠಾಧೀಶರೂ ನೆನಪಿಸಿಕೊಂಡು, ಕ್ರೈಸ್ತ ಚರ್ಚುಗಳ ಮಾದರಿಯಲ್ಲಿ ಅಥವಾ ಬೇರೆ ಮಾದರಿಯಲ್ಲಿ ವೀರಶೈವ ಮಠಗಳನ್ನು ಮತ್ತೆ ಸಂಘಟಿಸುವ ನವನಿರ್ಮಾಣ ಚಳುವಳಿಯನ್ನು ಆರಂಭಿಸಿ, ಸಮಸಮಾಜಕ್ಕೆ, ಸಮೃದ್ಧಸಮಾಜಕ್ಕೆ ನಾಂದಿಹಾಡಬೇಕಿದೆ.

ಇದು, ಒಂದರ್ಥದಲ್ಲಿ ವಿಶ್ವಕೋಶ ಮಾದರಿಯ ಕೃತಿ. ಅಲ್ಪವಿರಾಮ, ಅರ್ಧವಿರಾಮಗಳೇ ಇಂಥ ಕೃತಿಗಳ ಲಕ್ಷಣ. ವಿದ್ವಾಂಸರು ಕಾಲಕಾಲಕ್ಕೆ ಈ ಕೆಲಸವನ್ನು ಪೂರ್ಣವಿರಾಮದೆಡೆಗೆ ಮುನ್ನಡೆಸಬೇಕಾಗುತ್ತದೆ. ಈ ದೃಷ್ಟಿಯಿಂದ, ಕನ್ನಡಿಗರು ಪ್ರಸ್ತುತ ಗ್ರಂಥವನ್ನು ಬರಮಾಡಿಕೊಳ್ಳುವರೆಂದು ಆಶಿಸುತ್ತ, ಶ್ರೀ ಚಂದ್ರಶೇಖರ ಅವರನ್ನು ಇನ್ನೊಮ್ಮೆ ಅಭಿನಂದಿಸುತ್ತೇನೆ.

ಎಫ್.ಟಿ. ಹಳ್ಳಿಕೇರಿ - ಕೆ. ರವೀಂದ್ರನಾಥ, ಹೊಸಪೇಟೆ

ಆಕರ : ಮಾರ್ಗ ಸಂಪುಟ–೬

೧೮೪

ಅನುಶಾಸನ : ಸಂಪುಟ - ೧

೨೦೦೨

ಕರ್ನಾಟಕದ ಮಹಿಳಾ ಸಾಹಿತಿಗಳಲ್ಲಿ ತುಂಬ ವಿಶಿಷ್ಟವೆನಿಸಿದ್ದಾರೆ, ಶ್ರೀಮತಿ ಹನುಮಾಕ್ಷಿ ಗೋಗಿ. ಹೀಗೆ ಹೇಳಲು ಕಾರಣ, ಸಾಮಾನ್ಯವಾಗಿ ಮಹಿಳೆಯರು ಕಥೆ, ಕಾದಂಬರಿ, ಕವಿತೆಗಳಲ್ಲಿ ಅವಿತುಕೊಂಡವರು. ಬೆರಳೆಣಿಕೆಯಷ್ಟು ಜನ ಮಾತ್ರ ಸಂಶೋಧನೆಯಲ್ಲಿ, ಅದರಲ್ಲಿಯೂ ಶಾಸನ ಸಂಶೋಧನೆಯಲ್ಲಿ ತೊಡಗಿಸಿಕೊಂಡವರು. ಈ ಸಾಲಿನಲ್ಲಿ ಇನ್ನೂ ವಿಶಿಷ್ಟರೆನಿಸಿದ್ದಾರೆ, ಶ್ರೀಮತಿ ಗೋಗಿಯವರು. ಈ ಇನ್ನೂ ವಿಶಿಷ್ಟತೆಗೆ ಕಾರಣವೆಂದರೆ, ಮಿಕ್ಕವರು ಯಾರೋ ಶೋಧಿಸಿದ ಶಾಸನಗಳನ್ನು ಬಳಸಿಕೊಂಡು ಸಂಶೋಧನೆ ಮಾಡುತ್ತಲಿದ್ದರೆ ಇವರು ಮಾತ್ರ ಶಾಸನ ಶೋಧಿಸುತ್ತ, ಶೋಧಿತ ಶಾಸನಗಳನ್ನಾಧರಿಸಿ ಸಂಶೋಧನೆ ಮಾಡುತ್ತ ಬಂದಿದ್ದಾರೆ.

ಕರ್ನಾಟಕದಲ್ಲಿ ಕ್ಷೇತ್ರಕಾರ್ಯ ನಡೆಸಿ, ಶಾಸನಶೋಧಿಸುವ ಕೆಲಸ ಕರ್ನಲ್ ಮೆಕೆಂಝಿ ಕಾಲದಿಂದ ಅಂದರೆ ೧೯ನೆಯ ಶತಮಾನದಿಂದ ಆರಂಭವಾಗಿದೆ. ಅಲ್ಲಿಂದ ಇಲ್ಲಿಯ ವರೆಗೆ ರೈಸ್, ಫ್ಲೀಟ್, ನರಸಿಂಹಾಚಾರ್, ದೇಸಾಯಿ, ಗೋಪಾಲ, ರಿತ್ತಿ, ರಮೇಶ್ ಮೊದಲಾದ ಪುರುಷರು ಶಾಸನಗಳ ಶೋಧ-ಸಂಪಾದನ ಕಾರ್ಯವನ್ನು ಮುಂದುವರಿಸುತ್ತ ಬಂದಿದ್ದಾರೆ. ಎರಡುನೂರು ವರ್ಷಗಳ ಈ ಅವಧಿಯಲ್ಲಿ ಕಂಡುಬರುವ ಪ್ರಥಮ ಮತ್ತು ಏಕೈಕ ಶಾಸನ ಸಂಶೋಧನಕಿ - ಸಂಪಾದಕಿ ಎನಿಸಿದ್ದಾರೆ, ಶ್ರೀಮತಿ ಗೋಗಿಯವರು.

ಕ್ಷೇತ್ರಕಾರ್ಯ, ಅದರಲ್ಲಿಯೂ ಶಾಸನ ಕ್ಷೇತ್ರಕಾರ್ಯ ಸುಲಭ ಕೆಲಸವಲ್ಲ. ಮಳೆಯೆನ್ನದೆ, ಚಳಿಯೆನ್ನದೆ ಹಳ್ಳಿ-ಪಳ್ಳಿಗಳನ್ನು ಸುತ್ತಬೇಕು, ಸಂದಿ-ಗೊಂದಿಯಲ್ಲಿಯ ಶಾಸನ ಹುಡುಕಬೇಕು, ದುಸ್ಥಿತಿಯಲ್ಲಿರುವ ಅವುಗಳನ್ನು ಸ್ವಚ್ಛಗೊಳಿಸಿ ಪಡಿಯಚ್ಚು ತೆಗೆಯಬೇಕು, ಕಷ್ಟಪಟ್ಟು ಪಡಿಯಚ್ಚು ಓದಿ ಪಠ್ಯ ಸಿದ್ಧಪಡಿಸಬೇಕು, ಸಿದ್ಧಪಡಿಸಿದ ಪಠ್ಯವನ್ನು ವಿಶ್ಲೇಷಿಸಿ, ವ್ಯಾಖ್ಯಾನಿಸಿ ಅಭ್ಯಾಸ ಪೂರೈಸಬೇಕು. ಸಹಾಯಕ ಸಂಶೋಧಕರು ಇತ್ಯಾದಿ ಸಿಬ್ಬಂದಿಗಳ ಸಹಾಯವಿಲ್ಲದೆ ಇಷ್ಟೆಲ್ಲ ಪೂರೈಸಿದುದಲ್ಲದೆ, ಕೈಯಿಂದ ಹಣಹಾಕಿ ಪ್ರಕಟಿಸುವ ಕಾರ್ಯವನ್ನೂ ಪೂರೈಸುತ್ತ ಬಂದಿದ್ದಾರೆ, ಶ್ರೀಮತಿ ಗೋಗಿಯವರು. ಇದರ ಫಲವಾಗಿ ಸುರಪುರ ತಾಲೂಕಿನ ಶಾಸನಗಳು, ಕಲ್ಬುರ್ಗಿ ಜಿಲ್ಲೆಯ ಶಾಸನಗಳು ಹೆಸರಿನ ಸಂಪುಟಗಳನ್ನು ಬೆಳಕಿಗೆ ತರುವ ಮೂಲಕ, ಈ ಕ್ಷೇತ್ರದಲ್ಲಿ ನಾನೂ ಒಳಗೊಂಡಂತೆ ಸಮಕಾಲೀನ ಅನೇಕ ಸಂಶೋಧಕರನ್ನು ಮೀರಿಸುವ ರೀತಿಯಲ್ಲಿ ದೈತ್ಯ ಹಸಿವಿನಿಂದ ದುಡಿದಿದ್ದಾರೆ. ಇಂಥ ಕೆಲಸಗಳಿಗಾಗಿಯೇ ವಿಶ್ವವಿದ್ಯಾಲಯಗಳಲ್ಲಿ, ಶಾಸನ ಇಲಾಖೆಗಳಲ್ಲಿ ಸೇರಿಕೊಂಡಿರುವ ವಿದ್ವಾಂಸ ಮಹನೀಯರು

ತಲೆತಗ್ಗಿಸುವಂತೆ, ಸಹಕಾರಿ ಇಲಾಖೆಯಲ್ಲಿದ್ದೂ ಶ್ರಮಿಸುತ್ತಲಿರುವ ಶ್ರೀಮತಿ ಗೋಗಿಯವರನ್ನು ಆರಂಭದಲ್ಲಿಯೇ ಅಭಿನಂದಿಸುತ್ತೇನೆ.

ಶಾಸನಗಳ ಸಂಪಾದನೆ-ಸಂಶೋಧನೆಗಳು, ಶಾಸನ ಸಾಹಿತ್ಯ, ಹಳಗನ್ನಡ ಸಾಹಿತ್ಯ ಮತ್ತು ದಾಖಲು ಸಾಹಿತ್ಯಗಳ ಬಹುದೊಡ್ಡ ಅಭ್ಯಾಸವನ್ನು ಬಯಸುತ್ತವೆ. ಈ ಅಭ್ಯಾಸ ಶ್ರೀಮತಿ ಗೋಗಿಯವರಲ್ಲಿ ದೊಡ್ಡ ಪ್ರಮಾಣದಲ್ಲಿರುವುದನ್ನು ನಾನು ಮೊದಲಿನಿಂದಲೂ ಗಮನಿಸುತ್ತ ಬಂದಿದ್ದೇನೆ. ಹೀಗಾಗಿ ಈ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅವರು ಪ್ರಕಟಿಸಿದ ಸಾಹಿತ್ಯ ಪರಿಪೂರ್ಣ ಲಕ್ಷಣಗಳನ್ನು ಒಳಗೊಂಡಿದೆ. ಇದಕ್ಕೆ ಹೊಚ್ಚ ಹೊಸ ಉದಾಹರಣೆಯಾಗಿದೆ ಈ "ಅನುಶಾಸನ:ಸಂಪುಟ-೧."

ಶಾಸನಕ್ಷೇತ್ರದ ವಿವಿಧ ವಿಷಯಗಳನ್ನೊಳಗೊಂಡ ಐವತ್ತು ಸಂಪ್ರಬಂಧಗಳ ಸಂಕಲನವಾಗಿದೆ, ಈ ಕೃತಿ. ಇದರಲ್ಲಿ ಹೊಸದಾಗಿ ಹುಡುಕಿದ ಶಾಸನಗಳನ್ನು ಕುರಿತ ಲೇಖನ, ಪ್ರಕಟಿತ ಶಾಸನಗಳನ್ನು ಕುರಿತ ಲೇಖನ -ಹೀಗೆ ಎರಡು ಮುಖ್ಯ ಅಧ್ಯಯನಗಳು ಕಂಡುಬರುತ್ತವೆ. ಬೀದರ್, ಕಲಬುರ್ಗಿ, ರಾಯಚೂರು, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಬೆಳಗಾಂವ ಜಿಲ್ಲೆಗಳಲ್ಲಿ, ಹೆಚ್ಚಿನದಾಗಿ ಮಹಾರಾಷ್ಟ್ರದಲ್ಲಿ ಶೋಧಿಸಿದ ಹೊಸ ಶಾಸನಗಳನ್ನು ಕುರಿತ ಲೇಖನಗಳ ಸಂಖ್ಯೆ ಇಲ್ಲಿ ಅಧಿಕವಾಗಿದೆ. ಬೈಚಬಾಳ ಶಾಸನ, ಎಳವತ್ತಿ ಶಾಸನ, ನವಿಲೆ ಶಾಸನ ಇತ್ಯಾದಿ ೪೦ರಷ್ಟು ಪ್ರಬಂಧಗಳು ಇದಕ್ಕೆ ನಿದರ್ಶನವೆನಿಸಿವೆ. ಈ ಹೊಸ ಶಾಸನಗಳು ತಿಳಿಸುವ ಹೊಸ ವಿಷಯ ವಿಪುಲವಾಗಿದೆ. ಕೆಲ್ಲೂರಿನ ಶಾಸನದಲ್ಲಿ ಬರುವ ಸಿದ್ಧಸಾತೇಶ್ವರ ದೇವರ ಉಲ್ಲೇಖ ಶಿರವಾಳ ಶಾಸನಕ್ಕೆ ಪೂರಕವಾಗಿದೆ. ಇವನ ಶಿಷ್ಯ ರೇವಣಸಿದ್ಧನನ್ನು ಉಲ್ಲೇಖಿಸುವ ಶಿರವಾಳ, ಕಕ್ಕೇರಿ ಶಾಸನಗಳು ವೀರಶೈವ ಅಭ್ಯಾಸಿಗಳಿಗೆ ಹೊಸಹಾದಿ ತೋರಿಸುತ್ತವೆ. ಸಾಮಾನ್ಯವಾಗಿ ಧಾರವಾಡ, ಹಾವೇರಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಕಾಣಸಿಗುವ ಕಾಳಾಮುಖ ಮೂವರ ಕೋಣೆಯ ಸಂತತಿಯ ಉಲ್ಲೇಖ ಶಹಾಪುರ ತಾಲೂಕಿನ ಸಂಗಮ ಶಾಸನದಲ್ಲಿ ದಾಖಲಾದುದು ವಿಶೇಷವೆನಿಸಿದೆ. ಅಣ್ಣಿಗೆರೆಯ ಗೊಗ್ಗಿದೇವನ ಶಾಸನದಲ್ಲಿ ಬರುವ ಹೈಹಯ ಅರಸರ ಬಗೆಗಿನ ನಮ್ಮ ತಿಳಿವಳಿಕೆಯನ್ನು ಇಲ್ಲಿಯ ಅನೇಕ ಶಾಸನಗಳು ವಿಸ್ತರಿಸುತ್ತವೆ. ನಿಪ್ಪಾಣಿ ಶಾಸನವು ಕವಿ ದುರ್ಗಸಿಂಹನ ಬಗ್ಗೆ ತಿಳಿಸುವ ಮಾಹಿತಿ ಅಪೂರ್ವವೆನಿಸಿದೆ. ಬೊಮ್ಮನಹಳ್ಳಿ ಶಾಸನದ ಧಾರಲದೇವಿಯು ವಿಕ್ರಮಾದಿತ್ಯನ ಇನ್ನೊಬ್ಬ ರಾಣಿಯೆಂಬ ವಿಷಯವು ಇತಿಹಾಸಕ್ಕೆ ಹೊಸ ಸೇರ್ಪಡೆಯೆನಿಸಿದೆ. ಆರನೆಯ ವಿಕ್ರಮಾದಿತ್ಯನ ಪಟ್ಟಬಂಧೋತ್ಸವ ಇತ್ಯಾದಿಗಳ ಬಗ್ಗೆ ಇಡ್ಲೂರು ಶಾಸನ ನೀಡುವ ಹೊಸ ಮಾಹಿತಿ ಇಲ್ಲಿ ಗಮನಾರ್ಹವೆನಿಸಿದೆ. ಇಂಥ ಕರ್ನಾಟಕಪ್ರಸಿದ್ಧ ಸಂಗತಿಗಳನ್ನು ಬಿಟ್ಟರೂ ಸ್ಥಳಪ್ರಸಿದ್ಧ ಸಂಗತಿಗಳನ್ನು ತಿಳಿಸಿಕೊಡುವಲ್ಲಿ ಇಲ್ಲಿಯ ಬಹಳಷ್ಟು ಶಾಸನಗಳು ಕೃತಾರ್ಥವೆನಿಸಿವೆ.

ಈ ಹೊಸಶಾಸನಗಳನ್ನು ಬಿಟ್ಟರೂ, ಈ ಮೊದಲು ಪ್ರಕಟವಾಗಿದ್ದ ಶಾಸನ ಮತ್ತು ಇತಿಹಾಸಗಳಲ್ಲಿ ಮೌನವಾಗಿದ್ದ ವಿಷಯಗಳು ಮಾತನಾಡುವಂತೆ ಮಾಡಿದುದು ಶ್ರೀಮತಿ ಗೋಗಿಯವರ ಶೋಧಪ್ರಜ್ಞೆಗೆ ಸಾಕ್ಷಿಯೆನಿಸಿದೆ. ಇವುಗಳಲ್ಲಿ 'ಕುಹುಂಡಿ ಪಟ್ಟಣ ಎಲ್ಲಿದೆ' ಲೇಖನ ಮುಖ್ಯವಾದುದು. ಜೆ. ಎಫ್. ಫ್ಲೀಟ್ ಮೊದಲು ಮಾಡಿ ಈ ವರೆಗಿನ ಅನೇಕ ವಿದ್ವಾಂಸರ ಪಾತಾಳಗರಡಿಗೆ ಲಭ್ಯವಾಗದ ರಾಜಧಾನಿ ಪಟ್ಟಣ ಕುಹುಂಡಿಯನ್ನು ನಿರ್ದಿಷ್ಟವಾಗಿ ಹುಡುಕಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಒಂದು ಸಣ್ಣ ಸೂಚನೆಯನ್ನವಲಂಬಿಸಿ, ಸರ್ವಮೂಲಗಳಿಂದ ವಿಷಯವನ್ನು ಸಂಗ್ರಹಿಸುವ, ದಣಿವನ್ನು ಲೆಕ್ಕಿಸದೆ ಕ್ಷೇತ್ರಕಾರ್ಯ ಮಾಡುವ, ವೈಫಲ್ಯದಲ್ಲಿಯೂ ವಿಮುಖವಾಗದ ಇವರ ಶೋಧತೀವ್ರತೆ ಆಶ್ಚರ್ಯ ಹುಟ್ಟಿಸುತ್ತದೆ. ಪ್ರತಿಪಾದಿಸಬೇಕಾದ ವಿಷಯದ ಸಮಗ್ರತೆ ಹೇಗಿರಬೇಕೆಂಬುದಕ್ಕೆ ಇದು ಉದಾಹರಣೆಯೆನಿಸಿದೆ.

ಹೆಚ್ಚಿನದಾಗಿ ಪ್ರಕಟಿತ ಶಾಸನಗಳಲ್ಲಿ ಮರೆಯಾಗಿರುವ ತ್ರಿಪದಿ, ಷಟ್ಪದಿ, ಪಿರಿಯಕ್ಕಗಳನ್ನು ಶೋಧಿಸಿದುದು ಇವರ ಛಂದೋತಜ್ಞತೆಗೆ ನಿದರ್ಶನವೆನಿಸಿದೆ.

ಶ್ರೀಮತಿ ಗೋಗಿಯವರ ಕ್ಷೇತ್ರಕಾರ್ಯದ ಉತ್ಸಾಹ ಅಪರಿಮಿತವಾದುದು. ಮೇಲೆ ಸೂಚಿಸಿದ ಕುಹುಂಡಿ ಪಟ್ಟಣ ಎಲ್ಲಿದೆ? ಎಂಬ ಲೇಖನವಲ್ಲದೆ, ಈ ಬಗ್ಗೆ ಹೇಳಲೇಬೇಕಾದವುಗಳೆಂದರೆ "ಶಾತವಾಹನರ ಕಾಲದ ಶಾಸನಗಳು" ಮತ್ತು "ಕಲಬುರ್ಗಿ ಜಿಲ್ಲೆಯಲ್ಲಿ ಇತ್ತೀಚೆಗೆ ದೊರೆತ ಬ್ರಾಹ್ಮಿ ಶಿಲಾಫಲಕಗಳು." ಸಾಮಾನ್ಯವಾಗಿ ಕಲ್ಯಾಣ ಚಾಲುಕ್ಯೋತ್ತರ ಶಾಸನಗಳ ವಾಚನದತ್ತ ಗಮನ ಕೊಡುವ ವಿದ್ವಾಂಸರೇ ಅಧಿಕವಾಗಿರುವಾಗ, ಶ್ರೀಮತಿ ಗೋಗಿಯವರು ಬ್ರಾಹ್ಮೀಶಾಸನ, ರಾಷ್ಟ್ರಕೂಟ ಶಾಸನಗಳತ್ತ ಗಮನ ಹರಿಸಿದುದು ವಿಶೇಷವೆನಿಸುತ್ತದೆ.

ಮುಳುಗುಂದ, ಅಣ್ಣಿಗೇರಿ, ಕಲಕೇರಿ ಇತ್ಯಾದಿ ಗ್ರಾಮಗಳಲ್ಲಿ ಹುಡುಕಿದ ಹೆಚ್ಚಿನ ಶಾಸನಗಳು: ಬಿರಾಳ, ಹೊನಗುಂಟಿ ಇತ್ಯಾದಿ ಗ್ರಾಮಗಳಲ್ಲಿ ಮೊದಲ ಬಾರಿಗೆ ಕಂಡುಹಿಡಿದ ಶಾಸನಗಳಿಂದಾಗಿ ಈ ಕೃತಿ ಪ್ರಧಾನವಾಗಿ ಒಂದು 'ಸಂಪಾದಿತ ಶಾಸನ ಸಂಪುಟ'ವೇ ಆಗಿದ್ದು, ರೇವಣಸಿದ್ಧನನ್ನು ಕುರಿತ ಸಿರವಾಳ ಶಾಸನ, ಬಸವಪೂರ್ವಯುಗದ ಶರಣೆ ಸುಗ್ಗಲೆ ಮೊದಲಾದ ಲೇಖನಗಳಿಂದಾಗಿ 'ಶಾಸನಾಧಾರಿತ ಸಂಶೋಧನ ಸಂಪುಟ'ವೂ ಎನಿಸಿದೆ.

ಹೀಗೆ, ಶಾಸನಕ್ಷೇತ್ರದ ಬಿಡಿಪತ್ಯ-ಪ್ರಬಂಧಗಳ ಪ್ರಕಟಣೆಯ ಮೂಲಕ ಉತ್ತರ ಕರ್ನಾಟಕದ ಸಾಂಸ್ಕೃತಿಕ ತಿಳಿವಳಿಕೆಯನ್ನು ವಿಸ್ತರಿಸಿದ ಶ್ರೀಮತಿ ಗೋಗಿಯವರ ಈ ಕೃತಿಗೆ ವ್ಯಾಪಕ ಸ್ವಾಗತವನ್ನು ಹಾರೈಸುತ್ತೇನೆ.

ಹನುಮಾಕ್ಷಿ ಗೋಗಿ, ಹುಬ್ಬಳ್ಳಿ

ಆಕರ : ಮಾರ್ಗ ಸಂಪುಟ-೬

■■

೧೬೫

ಅಪರೂಪದವರು

೨೦೦೨

ವ್ಯಕ್ತಿ, ಪರಿಸರದ ಮಗುವೂ ಹೌದು; ತಂದೆಯೂ ಹೌದು. ಸಾಮಾನ್ಯರು ಮಗುವಾಗಿ ಪರಿಸರದಿಂದ ರೂಪಗೊಳ್ಳುತ್ತಾರೆ; ಅಸಾಮಾನ್ಯರು ತಂದೆಯಾಗಿ ಪರಿಸರವನ್ನು ರೂಪಿಸುತ್ತಾರೆ. ಹೀಗೆ ತಂದೆಯಾಗಿ ಪರಿಸರವನ್ನು ರೂಪಿಸುವವರು ಮಾತ್ರ "ಅಪರೂಪದವರು" ಎನಿಸಿಕೊಳ್ಳುತ್ತಾರೆ. ಅವಿಭಜಿತ ವಿಜಾಪುರ ಜಿಲ್ಲೆಯಲ್ಲಿ ಶೈಕ್ಷಣಿಕ, ಸಾಹಿತ್ಯಿಕ, ರಾಜಕೀಯ ಇತ್ಯಾದಿ ಪರಿಸರಗಳನ್ನು ಸೃಷ್ಟಿಸಿದ ಇಂಥ ಸಾಂಸ್ಕೃತಿಕ ಮಹಾಪುರುಷರ 'ವ್ಯಕ್ತಿಚಿತ್ರ'ಗಳ ಸಂಕಲನವಾಗಿದೆ, ಈ ಕೃತಿ.

"ಅಪರೂಪರದವರು" ಕೃತಿ ರೂಪಿಸಿದ ಶ್ರೀ ಎನ್. ಜಿ. ಕರೂರ ಅವರೂ ಒಬ್ಬ ಅಪರೂಪದವರೇ ಆಗಿದ್ದಾರೆ. ಇವರ ಪ್ರವೃತ್ತಿ ಆದಾಯ ಅಪೇಕ್ಷೆಯದಲ್ಲ, ಸಮುದಾಯ ಕ್ಷೇಮದ್ದು. ಆದುದರಿಂದ ಜೀವನದುದ್ದಕ್ಕೂ ಸಂಸ್ಥೆಗಳಲ್ಲಿ ತಮಗಾಗಿ ಭೌತಿಕ ಸಂದರ್ಭಗಳನ್ನು ಸೃಷ್ಟಿಸಿಕೊಳ್ಳದೆ, ಸಮುದಾಯಕ್ಕಾಗಿ ಸಾಂಸ್ಕೃತಿಕ ಸಂದರ್ಭಗಳನ್ನು ಸೃಷ್ಟಿಸುತ್ತ ಬಂದವರಾಗಿದ್ದಾರೆ. ಇಂಥ ನಿರಪೇಕ್ಷ ವ್ಯಕ್ತಿತ್ವ ಕಾರಣವಾಗಿ, ಈ ಕೃತಿಯಲ್ಲಿ ಅಪರೂಪದವರನ್ನು ಸರಿಯಾಗಿ ದೃಷ್ಟಿಸಿ, ಚೆನ್ನಾಗಿ ಸೃಷ್ಟಿಸಿದ್ದಾರೆ. ಇವರಲ್ಲಿ ಕೆಲವರ ಬಗ್ಗೆ ಕೇಳಿ ಗ್ರಹಿಸಿದ, ಕೆಲವರನ್ನು ಕಂಡು ಸಂಗ್ರಹಿಸಿದ, ಕೆಲವರೊಡನೆ ದುಡಿದು ಸಂಪಾದಿಸಿದ ಅನುಭವದ್ರವ್ಯ ಇಲ್ಲಿ ಅಕ್ಷರಸ್ಥಗೊಂಡಿದೆ.

"ಸತ್ತ ಬಳಿಕವೂ ಬದುಕಬೇಕಾದರೆ ಓದಲು ಯೋಗ್ಯವಾದ ಸಾಹಿತ್ಯವನ್ನು ಬರೆಯಬೇಕು, ಇಲ್ಲವೆ ಬರೆಯಲು ಯೋಗ್ಯವಾದ ಜೀವನವನ್ನು ಬದುಕಬೇಕು" ಎಂಬುದು ಸುಪ್ರಸಿದ್ಧ ಹೇಳಿಕೆ. ಈ ಅಪರೂಪದವರಲ್ಲಿ ಓದಲು ಯೋಗ್ಯವಾದ ಸಾಹಿತ್ಯ ಬರೆದವರೂ ಇದ್ದಾರೆ, ಬರೆಯಲು ಯೋಗ್ಯವಾದ ಜೀವನ ಬದುಕಿದವರೂ ಇದ್ದಾರೆ. ಇವೆರಡನ್ನು ಪೂರೈಸಿದವರೂ ಇದ್ದಾರೆ. ಈ ಕಾರಣದಿಂದಾಗಿ ವಿಜಾಪುರ ಜಿಲ್ಲೆಯ ಶತಮಾನ ಸಂಸ್ಕೃತಿಯನ್ನು ಒಂದು ಮಿತಿಯಲ್ಲಿ ಆಕೃತಿಗೊಳಿಸಿದ ಮಹತ್ವ ಈ ಕೃತಿಗೆ ಸಲ್ಲುತ್ತದೆ.

ವಿಜಾಪುರ ಜಿಲ್ಲೆ, ಏಳನೂರು ವರ್ಷಗಳಿಂದ ಮುಸಲ್ಮಾನ-ಮರಾಠರ ಆಕ್ರಮಣಗಳಿಗೆ ಗುರಿಯಾಗುತ್ತ ಬಂದಿದೆ. ಇದರ ಪರಿಣಾಮವಾಗಿ ೨೦ನೆಯ ಶತಮಾನದ ವರೆಗೆ ಭೌತಿಕ-ಸಾಂಸ್ಕೃತಿಕ ಬರಗಾಲವೇ ಅಲ್ಲಿ ಸೃಷ್ಟಿಯಾಗುತ್ತ ಬಂದಿದ್ದಿತು. ನೆಲವೂ ಆಗಿ, ನೀರೂ ಆಗಿ ದುಡಿದು, ಹೊಸ ಬೆಳೆಯನ್ನು ಉತ್ಪಾದಿಸುವವರ ಅಗತ್ಯ ಅಲ್ಲಿ ನಿರ್ಮಾಣವಾಗಿದ್ದಿತು. ಈ ಅಗತ್ಯವನ್ನು ಆಹ್ವಾನವನ್ನಾಗಿ ಸ್ವೀಕರಿಸಿ, ಎಲ್ಲ ಮಗ್ಗಲುಗಳಿಂದ ಈ ಜಿಲ್ಲೆಯನ್ನು ಕಟ್ಟಿ ನಿಲ್ಲಿಸಿದವರಾಗಿದ್ದಾರೆ, ಈ ಅಪರೂಪದವರು. ಹೀಗಾಗಿ ಈ ಅಪರೂಪದವರ ಚರಿತ್ರೆಯೆಂದರೆ ಈ ಜಿಲ್ಲೆಯ ಅಭಿವೃದ್ಧಿ ಚರಿತ್ರೆಯೇ ಆಗಿದೆ.

ಇದು ಮೂರು ತಲೆಮಾರುಗಳ ಇತಿಹಾಸವನ್ನೊಳಗೊಂಡ ಕೃತಿ. ಬೀಳೂರು ಗುರುಬಸವಸ್ವಾಮಿಗಳು ಮೊದಲು ಮಾಡಿ ಬಿ. ಕೆ. ಗುಡದಿನ್ನಿಯವರ ವರೆಗೆ ಇದು ವ್ಯಾಪಿಸಿದೆ. ಮೊದಲನೆಯ ತಲೆಮಾರಿವರು ಜಿಲ್ಲೆಯ ಶೈಕ್ಷಣಿಕ ಮಗ್ಗಲನ್ನು, ಎರಡನೆಯ ತಲೆಮಾರಿನವರು ಹೆಚ್ಚಿನದಾಗಿ ಸಾಮಾಜಿಕ-ಸಾಹಿತ್ಯಿಕ ಮಗ್ಗುಲುಗಳನ್ನು, ಕೊನೆಯ ತಲೆಮಾರಿವರು ಇನ್ನೂ ಹೆಚ್ಚಿನದಾಗಿ ರಾಜಕೀಯ ಮಗ್ಗುಲನ್ನು ಬೆಳೆಸಿದವರಾಗಿದ್ದಾರೆ. ಹೀಗೆ ದುಡಿದ ಕ್ಷೇತ್ರಗಳು ಭಿನ್ನವಾಗಿದ್ದರೂ, ಜಿಲ್ಲೆಯನ್ನು ಶೈಕ್ಷಣಿಕವಾಗಿ ಬೆಳೆಸುವುದು, ಸುಶಿಕ್ಷಿತಗೊಳಿಸುವದು ಇವರೆಲ್ಲರ ಪ್ರಥಮ-ಅಂತಿಮ ಗುರಿಯಾಗಿದ್ದಿತು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಇವರೆಲ್ಲ ಭೌತಿಕ-ತಾತ್ವಿಕವಾಗಿ ವಿಜಾಪೂರ ಜಿಲ್ಲೆಯ ಬಸವಣ್ಣನವರ ಪರಂಪರೆಯವರೇ ಆಗಿದ್ದಾರೆ. ಈ ಪರಂಪರೆಯದು ವ್ಯಕ್ತಿಕೇಂದ್ರಿತ ಸಿದ್ಧಾಂತವಲ್ಲ- ಸಮಾಜಕೇಂದ್ರಿತ ಸಿದ್ಧಾಮಂತ;ಸೋಹಂ ಸಂಸ್ಕೃತಿಯಲ್ಲ- ದಾಸೋಹಂ ಸಂಸ್ಕೃತಿ. ಹೀಗಾಗಿ ಬ್ರಿಟಿಶರು ಸಾಮಾಜೀಕರಣಗೊಳಿಸಿದ ಶಿಕ್ಷಣಕ್ಕೆ ಸಮಾಜಕೇಂದ್ರಿತ ಸಿದ್ಧಾಂತದ ಇವರು, ಸಹಜವಾಗಿಯೇ ಸ್ಪಂದಿಸಿದರು. ಈ ಶಿಕ್ಷಣದ ಸಾಮಾಜೀಕರಣವೆಂಬುದು ತಮ್ಮ ದಾಸೋಹ ಸಿದ್ಧಾಂತದ ಇನ್ನೊಂದು ರೂಪವೇ ಆಗಿದೆಯೆಂಬುದನ್ನು ಅರ್ಥಮಾಡಿಕೊಂಡು, ಪ್ರಾಥಮಿಕ, ಮಾಧ್ಯಮಿಕ, ಸ್ನಾತಕ ಶಿಕ್ಷಣಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದರು. ಅನಕ್ಷರತೆಯ ಅಂಚಿಗೆ ತಳ್ಳಲ್ಪಟ್ಟಿದ್ದ ಎಲ್ಲ ವರ್ಗದ ಜನಸಮುದಾಯಕ್ಕೆ ಈ ಸಂಸ್ಥೆಗಳ ಬಾಗಿಲನ್ನು ತೆರೆದರು. ಈ ಆಂದೋಲನಕ್ಕೆ ಅರ್ಥತುಂಬಿದ ಶ್ರೇಯಸ್ಸು ಸಾಮಾನ್ಯವಾಗಿ ಈ ಗ್ರಂಥದ ಎಲ್ಲ ನಾಯಕ ವ್ಯಕ್ತಿಗಳಿಗೂ ಸಲ್ಲುತ್ತದೆ. ವಿಜಾಪುರ ಜಿಲ್ಲೆಯ ಶೈಕ್ಷಣಿಕ ಪ್ರಗತಿಯ ಇತಿಹಾಸವೆಂದರೆ ಬಸವ ಸಿದ್ಧಾಂತದ ವಾರಸುದಾರರ ಇತಿಹಾಸವೆಂಬುದನ್ನು ಈ ಕೃತಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ತೋರಿಸಿಕೊಟ್ಟಿದೆ. ಪ್ರೊ. ಕರೂರ ಅವರು ಶಿಕ್ಷಣತಜ್ಞರೇ ಆಗಿರುವುದರಿಂದ, ಇವರ ಪ್ರಯತ್ನದ ಪರಿಶ್ರಮ-ತ್ಯಾಗಗಳನ್ನು ಅಂಕಿ-ಅಂಶ ಸಹಿತ ದಾಖಲಿಸಿದ್ದಾರೆ. ಅಲ್ಲಲ್ಲಿ ತಾತ್ವಿಕ ಒಳವಿನ್ಯಾಸಗಳನ್ನು ಬಿಡಿಸಿ ಹೇಳಿದ್ದಾರೆ.

ಹೀಗೆ ಶೈಕ್ಷಣಿಕ ಜಾಗೃತಿಯೊಂದಿಗೆ ರಾಷ್ಟ್ರೀಯಪ್ರಜ್ಞೆಯನ್ನು ಉದ್ದೀಪನಗೊಳಿಸಿದ ಇತಿಹಾಸ ಇಲ್ಲಿದೆ. ಈ ದಿಸೆಯಲ್ಲಿ ಕರ್ನಾಟಕದ ಗಾಂಧಿ ಎಂದೇ ಹೆಸರಾಗಿದ್ದ ಹರ್ಡೇಕರ ಮಂಜಪ್ಪನವರು ಒಂದು ಶಕ್ತಿಯಾಗಿ, ಒಂದು ತತ್ವವಾಗಿ ದುಡಿದರು. ಮಂಜಪ್ಪನವರ 'ಧನುರ್ಧಾರಿ' ಸಾಂಪ್ರದಾಯಿಕ ವರ್ಗ-ವರ್ಣಗಳ ಕೋಟೆಯನ್ನು ಕೆಡುಹಬೇಕೆಂಬುದನ್ನು, ಹಳಕಟ್ಟಿಯವರ 'ನವಕರ್ನಾಟಕ' ಹೊಸ ಕರ್ನಾಟಕವನ್ನು ಕಟ್ಟಬೇಕೆಂಬುದನ್ನು ಧ್ವನಿಸುವ ಪತ್ರಿಕೆಗಳಾಗಿ ದುಡಿದವು. ಒಟ್ಟಾರೆ ಜಿಲ್ಲೆಯನ್ನು ರಾಷ್ಟ್ರೀಯ ಮುಖ್ಯಪ್ರವಾಹಕ್ಕೆ ಜೋಡಿಸಬೇಕೆಂಬ ಪ್ರಯತ್ನವನ್ನು ಈ 'ಅಪರೂಪದವರು' ಕೈಕೊಂಡರು.

ಇವೆಲ್ಲವುಗಳಿಗೆ ಪೂರಕವಾಗಿ ಸಾಹಿತ್ಯಿಕ ವ್ಯವಸಾಯ ಮಾಡಿದವರಾಗಿದ್ದಾರೆ ಹಳಕಟ್ಟಿ, ಮಧುರಚೆನ್ನ ಮತ್ತು ಸಿಂಪಿ ಲಿಂಗಣ್ಣ. ವಚನಸಾಹಿತ್ಯ ಪ್ರಕಟನೆ, ಅನುಭಾವ ಸಾಹಿತ್ಯದ ಸೃಷ್ಟಿ ವಿಷಯವಾಗಿ ಇನ್ನೊಬ್ಬ ಹಳಕಟ್ಟಿ, ಇನ್ನೊಬ್ಬ ಮಧುರಚೆನ್ನರು ಇನ್ನೂ ಹುಟ್ಟಿಬರಬೇಕಾಗಿದೆ. ಸಿಂಪಿಲಿಂಗಣ್ಣನವರ ಎತ್ತರದ ಇನ್ನೊಬ್ಬ ಶಿಕ್ಷಕ ಸಾಹಿತಿ ಇನ್ನೂ ಹುಟ್ಟಿಲ್ಲವೆಂದು ಹೇಳಬೇಕಾಗಿದೆ. ಇವರಲ್ಲಿ ಮಧುರಚೆನ್ನ, ಸಿಂಪಿ ಲಿಂಗಣ್ಣ ಅವರ ನೇರ ಸಂಪರ್ಕ ಹೊಂದಿದ್ದ ಶ್ರೀ ಕರೂರ ಅವರು ಅನೇಕ ಹೊಸ ಪ್ರಸಂಗಗಳನ್ನು ಇಲ್ಲಿ ಮೊದಲಬಾರಿ ಅನಾವರಣಗೊಳಿಸಿದುದು ಈ ಕೃತಿಯ ವಿಶೇಷತೆಯೆನಿಸಿದೆ.

ಹೀಗೆ ೫೦ ವರ್ಷಗಳ ಕಾಲ ಈ ಅನಧಿಕೃತ ಶಾಸಕರಿಂದ ನವಚೈತನ್ಯ, ನವೀನ ಪ್ರಜ್ಞೆ ತುಂಬಿಕೊಳ್ಳುತ್ತ ಬಂದ ಈ ಜಿಲ್ಲೆ, ಅಧಿಕೃತ ಶಾಸಕರನ್ನು ಎದುರು ನೋಡುತ್ತಲಿದ್ದಿತು. ಆಗ ರಾಜಕಾರಣವನ್ನು ಒಂದು ಸೇವೆಯೆಂಬ ಭಾವದಿಂದ ಎದ್ದು ಬಂದವರು ಎಸ್. ಆರ್. ಕಂಠಿ, ಪಿ. ಎಂ. ನಾಡಗೌಡ, ಬಿ. ಎಂ. ಪಾಟೀಲ ಮತ್ತು ಬಿ. ಕೆ.

ಗುಡದಿನ್ನಿಯವರು. ಬೆಂಗಳೂರು, ರಾಜ್ಯದ ಪ್ರತ್ಯಕ್ಷ ರಾಜಧಾನಿಯಾದರೂ ಒಂದು ಕಾಲಕ್ಕೆ ಬಾಗಿಲಕೋಟೆಯೇ ಪರೋಕ್ಷ ರಾಜಧಾನಿಯಾಗುವಂತೆ, ಈ ಜಿಲ್ಲೆಯ ಧುರೀಣರು ರಾಜ್ಯದಲ್ಲಿ ನಾಯಕಪಾತ್ರವಾಡಿದುದು, ಇಂದು ಇತಿಹಾಸ. ಇವರನ್ನು ಕುರಿತ ಇಲ್ಲಿಯ ಬರಹಗಳು ಅನೇಕ ಹೊಸ ಸಂಗತಿಗಳನ್ನು ಪ್ರಕಟಿಸುತ್ತ, ಜಿಲ್ಲೆಯನ್ನು ಇವರು ಹೊಸ ಹಾದಿಯಲ್ಲಿ ಮುನ್ನಡೆಸಿದುದನ್ನು ಸಮರ್ಪಕವಾಗಿ ದಾಖಲಿಸಿವೆ.

"ಮಾಡಬೇಕಾದ ಕೆಲಸಗಳು ಹೆಚ್ಚು, ದುಡಿಯಬೇಕಾದ ಧುರೀಣರು ಕಡಿಮೆ" ಎಂಬ ಸಾಮಾಜಿಕ ಸಂದರ್ಭದಲ್ಲಿ ಈ ಹದಿನಾರು ಜನ ಮನೆಯ ಹಿರಿಯ ಮಗನಂತೆ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ದುಡಿಯಬೇಕಾಗಿ ಬಂದಿತು. ಒಮ್ಮೆ ಆಳೂ ಇವರೇ ಆಗಿ ಮತ್ತೊಮ್ಮೆ ಆಳುವವರೂ ಇವರೇ ಆಗಿ ದುಡಿದರು. ಈ ಧುರೀಣರಿಗೆ ಮುಖ್ಯವಾದುದು ಅಭಿಮಾನವಲ್ಲ, ಅಭಿವೃದ್ಧಿ. ಈ ಅಭಿವೃದ್ಧಿಗಾಗಿ ಕೈಕೊಂಡ ಬಹುಮುಖಿ ಶ್ರಮ, ಪೂರೈಸಿದ ಬಹುಮುಖಿ ಸಾಧನೆಗಳನ್ನು ಚಾರಿತ್ರಿಕ-ಭೌಗೋಲಿಕ ನೆಲೆಯಲ್ಲಿ, ಸಂಕ್ಷಿಪ್ತ-ಸಮರ್ಪಕ ರೀತಿಯಲ್ಲಿ ಕಟ್ಟಿಕೊಡುವ ಈ ಕೃತಿ ಜಿಲ್ಲೆಯ ಒಂದು ಸಣ್ಣ ಸಾಂಸ್ಕೃತಿಕ ಕೈಪಿಡಿಯೆನಿಸಿದೆ.

ಭವಿಷ್ಯವೆನ್ನುವುದು ಕತ್ತಲೆ. ಬೆಳಕು ಚೆಲ್ಲಿ ಈ ಕತ್ತಲೆಯನ್ನು ಕಡಿಮೆ ಮಾಡುವುವೆಂದರೆ ಭೂತಕಾಲದ ಅನುಭವಗಳು, ಘಟನೆಗಳು ಮತ್ತು ಸಂಘಟನೆಗಳು. ಇವುಗಳನ್ನು ದಾಖಲಿಸಿದ ಈ ಕೃತಿ, ಯುವಜನರ ಭವಿಷ್ಯದ ಹಾದಿಗೆ ಬೆಳಕಾಗಲೆಂದು ಹಾರೈಸುತ್ತೇನೆ.

ಆಕರ : ಮಾರ್ಗ ಸಂಪುಟ–೬

೧೮೬

ಕರ್ನಾಟಕ ಗಾಂಧಿ

೨೦೦೨

ಆಲಮಟ್ಟಿಯ ಹರ್ಡೇಕರ ಮಂಜಪ್ಪನವರು, ವಿಜಾಪುರದ ಹಳಕಟ್ಟಿ ಫಕೀರಪ್ಪನವರು, ಶಿವಯೋಗ ಮಂದಿರದ ಹಾನಗಲ್ಲ ಕುಮಾರಸ್ವಾಮಿಯವರು - ಈ ಮೂವರು ಏಕಕಾಲಕ್ಕೆ ಹೊರಗಿನಿಂದ ಬಂದು, ವಿಜಾಪುರ ಜಿಲ್ಲೆಗೆ ಹೆಸರು ತಂದವರು. ಶರಣಸಂಸ್ಕೃತಿ ನಿಷ್ಠರಾಗಿದ್ದ ಇವರಲ್ಲಿ ಒಬ್ಬರ ದೃಷ್ಟಿ ರಾಷ್ಟ್ರೀಯ, ಇನ್ನೊಬ್ಬರ ದೃಷ್ಟಿ ಸಾಮಾಜಿಕ, ಮತ್ತೊಬ್ಬರ ದೃಷ್ಟಿ ಧಾರ್ಮಿಕ. ಇದು ಮಂಜಪ್ಪನವರ ಮಹತ್ವವನ್ನು ಸ್ಪಷ್ಟಪಡಿಸುತ್ತದೆ.

ಮಂಜಪ್ಪನವರು ಒಬ್ಬ ವ್ಯಕ್ತಿಯಲ್ಲ, ಒಂದು ತತ್ತ್ವ. ಧೋರಣೆಯಲ್ಲಿ ಬಸವಣ್ಣನವರಷ್ಟು ಪ್ರಾಚೀನ, ಗಾಂಧೀಜಿಯವರಷ್ಟು ಆಧುನಿಕರಾಗಿದ್ದ ಅವರು, ಏಕಕಾಲಕ್ಕೆ ಲಿಂಗಾಯತನೂ ಭಾರತೀಯನೂ ಆಗುವುದು ಹೇಗೆ? ಎಂಬುದನ್ನು ಬದುಕಿ ತೋರಿದವರು.

ಮರೆಯಾಗಿ ಹೋಗಲಿದ್ದ ಮಂಜಪ್ಪನವರ ಜೀವನವನ್ನು, ಸಾಹಿತ್ಯವನ್ನು ಜನಮನಮದಲ್ಲಿ ಮತ್ತೆ ಮತ್ತೆ ಸ್ಥಾಪಿಸಿದ ಪುಸ್ತಕ ಪ್ರಯತ್ನಗಳಲ್ಲಿ "ಹರ್ಡೇತರ ಮಂಜಪ್ಪನವರು: ಸ್ಮಾರಕ ಗ್ರಂಥ", "ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ" ಮತ್ತು "ಕರ್ನಾಟಕ ಗಾಂಧಿ: ಹರ್ಡೇಕರ ಮಂಜಪ್ಪ" ಮುಖ್ಯವಾದುವು. ಇವುಗಳ ಮಹತ್ವಪೂರ್ಣ ಮುಂದುವರಿಕೆಯಾಗಿದೆ, ಡಾ. ಮಲ್ಲಿಕಾರ್ಜುನ ಮೇತ್ರಿಯವರ "ಕರ್ನಾಟಕ ಗಾಂಧಿ."

ಎಂ. ಎ. ಪದವಿ ಪಡೆಯುವುದು ಕಠಿಣ, ಪಿಎಚ್.ಡಿ. ಪದವಿ ಪಡೆಯುವುದು ಸುಲಭ - ಎಂಬ ಪರಿಸ್ಥಿತಿ ಇಂದು ನಮ್ಮ ವಿಶ್ವವಿದ್ಯಾಲಯಗಳಲ್ಲಿ ನಿರ್ಮಾಣವಾಗಿದೆ. ಇಂಥ ಪರಿಸ್ಥಿತಿಯಲ್ಲಿಯೂ ಈ ಉತ್ತಮ ಪ್ರಬಂಧ ರೂಪಿಸಿದ ಡಾ. ಮೇತ್ರಿ ಅವರನ್ನು ಆರಂಭದಲ್ಲಿಯೇ ಅಭಿನಂದಿಸುತ್ತೇನೆ.

ಮಂಜಪ್ಪನವರ ಜೀವನ ತುಂಬ ಶಿಸ್ತು-ಸಂಯಮದಿಂದ ಕೂಡಿದ್ದಿತು. ಆದರೆ ಆ ಶಿಸ್ತಿಗೆ ಸ್ಥಿರತೆ ಬಾರದ ರೀತಿಯಲ್ಲಿ ವಿಧಿ ಅವರನ್ನು ಬನವಾಸಿ, ಸಿರಸಿ, ದಾವಣಗೆರೆ, ಹರಿಹರ, ಆಲಮಟ್ಟಿಗಳಿಗೆ ವಲಸೆ ಹೋಗುವಂತೆ ಮಾಡಿತು. ಅಂತಿಮವಾಗಿ ಆಲಮಟ್ಟಿಯಲ್ಲಿ ನೆಲೆ ನಿಂತರೂ ಪರಿವ್ರಾಜಕನಂತೆ ಗ್ರಾಮದಿಂದ ಗ್ರಾಮಕ್ಕೆ ಅಲೆಯುವುದು ಕಾರಣವಾಗಿ, ಅವರಿಗೆ ಸಂಬಂಧಿಸಿದ ಆಕರ ಸಾಮಗ್ರಿ ಹತ್ತಾರು ಕಡೆಗಳಲ್ಲಿ ಹಂಚಿ ಹೋಯಿತು; ಹಾಳಾಗಿಯೂ ಹೋಯಿತು. ಆದುದರಿಂದ ಮಂಜಪ್ಪನವರನ್ನು ಕುರಿತು ಸಂಶೋಧನೆ ಮಾಡುವವರಿಗೆ ಆಕರ ಶೋಧವೇ ದೊಡ್ಡ ಆಹ್ವಾನವಾಗಿ ಪರಿಣಮಿಸುತ್ತದೆ. ಡಾ. ಮೇತ್ರಿಯವರು ಈ ಕೆಲಸಕ್ಕಾಗಿ ಮಂಜಪ್ಪನವರು ವಾಸವಾಗಿದ್ದ, ಪ್ರವಾಸಮಾಡಿದ್ದ ಎಲ್ಲ ಗ್ರಾಮಗಳನ್ನು ಸಂದರ್ಶಿಸಿ, ಸಮರ್ಪಕವಾಗಿ ಸಂಗ್ರಹಿಸಿದ ಆಕರ ಸಾಮಗ್ರಿಯಲ್ಲಿ ಆಕಾರಗೊಂಡಿದೆ, ಈ ಪ್ರಬಂಧ.

ಮಂಜಪ್ಪನವರದು ರಾಷ್ಟ್ರೀಯ, ಸಾಮಾಜಿಕ, ಧಾರ್ಮಿಕ - ಹೀಗೆ ಬಹುಮುಖ ವ್ಯಕ್ತಿತ್ವ. ಈ ಕ್ಷೇತ್ರಗಳ ಪ್ರಗತಿಗಾಗಿ ಅವರು ವ್ಯಕ್ತಿಯಾಗಿ ದುಡಿದರು, ಸಾಹಿತಿಯಾಗಿ ಬರೆದರು. ವ್ಯಕ್ತಿ ಮಂಜಪ್ಪ, ಸಾಹಿತಿ ಮಂಜಪ್ಪ-ಇವುಗಳ ಅದ್ವೈತ ರೂಪವೆನಿಸಿದ ಅವರ ಬರೆವಣಿಗೆ ಪತ್ರಿಕಾಸಾಹಿತ್ಯ, ಪುಸ್ತಕಸಾಹಿತ್ಯವೆಂಬ ಎರಡು ಮಾಧ್ಯಮಗಳಲ್ಲಿ ಮುನ್ನಡೆಯಿತು. ಇವುಗಳಲ್ಲಿ ಪುಸ್ತಕಸಾಹಿತ್ಯದ ಸಮಗ್ರ ಅಧ್ಯಯನವಾಗಿದೆ, ಈ ಪ್ರಬಂಧ.

ಮಂಜಪ್ಪನವರ ಪುಸ್ತಕಸಾಹಿತ್ಯದ ಅಭ್ಯಾಸಕ್ಕೆ ತೊಡಗುವವರಿಗೆ ಮೊದಲು ಎದುರಾಗುವ ಸಮಸ್ಯೆಯೆಂದರೆ ಅವುಗಳ ಸಂಖ್ಯೆಯ ಅನಿರ್ದಿಷ್ಟತೆ ಮತ್ತು ಅಲಭ್ಯತೆ. ಡಾ. ಮೇತ್ರಿಯವರು ಇವುಗಳ ಹಿಂದಿರುವ ಕಾರಣಗಳನ್ನು ಗುರುತಿಸಿ, ಇಂದಿನ ಸಂದರ್ಭದಲ್ಲಿ ಸಿಗುವ ಅವರ ೫೯ ಕೃತಿಗಳನ್ನು ಶೋಧಿಸಿ, ವರ್ಗೀಕರಿಸಿ, ವಿಮರ್ಶಿಸಿದ ಶ್ರಮ ಇಲ್ಲಿ ಎದ್ದು ಕಾಣುತ್ತದೆ.

ಪತ್ರಿಕಾಸಾಹಿತ್ಯವು ಘಟನೆಯನ್ನು ನಿರ್ದಿಷ್ಟವಾಗಿ ನಿರೂಪಿಸಿದರೆ, ಪುಸ್ತಕ ಸಾಹಿತ್ಯವು ಅದನ್ನು ಸಾಮಾನ್ಯೀಕರಿಸುತ್ತದೆ. ಈ ಪುಸ್ತಕ ಸಾಹಿತ್ಯದಲ್ಲಿ ಭಾವನಿಷ್ಠ, ಆಲೋಚನನಿಷ್ಠವೆಂದು ಎರಡು ಬಗೆಯಿದ್ದು, ಮಂಜಪ್ಪನವರು ಭಾವನಿಷ್ಠ ಲಲಿತಸಾಹಿತ್ಯಕ್ಕಿಂತ, ಆಲೋಚನನಿಷ್ಠ ವಿಚಾರಸಾಹಿತ್ಯ ನಿರ್ಮಿತಿಗಾಗಿ ವಿಶೇಷ ದುಡಿದರು. ಈ ವಿಷಯವನ್ನು "ಮಂಜಪ್ಪನವರ ಸಾಹಿತ್ಯಸ್ವರೂಪ" ಅಧ್ಯಾಯದಲ್ಲಿ ಸ್ಪಷ್ಟಪಡಿಸಿಕೊಂಡು, ಅದೆಲ್ಲವನ್ನು ಡಾ.ಮೇತ್ರಿಯವರು ಸಂಶೋಧನ ಸಾಹಿತ್ಯ, ರಾಷ್ಟ್ರೀಯ ಸಾಹಿತ್ಯ, ಸಾಮಾಜಿಕ ಸಾಹಿತ್ಯ, ಮಕ್ಕಳ ಸಾಹಿತ್ಯ ಇತ್ಯಾದಿಯಾಗಿ ವರ್ಗೀಕರಿಸಿದ್ದಾರೆ. ಈ ಸರಿಯಾದ ವರ್ಗೀಕರಣವು ಸರಿಯಾದ ಪ್ರತಿಪಾದನೆಗೆ ದಾರಿಮಾಡಿ ಕೊಟ್ಟಿದೆ. ಹೀಗಾಗಿ ಈ ಪ್ರಬಂಧದ ಎಲ್ಲ ಅಧ್ಯಾಯಗಳೂ ಮಂಜಪ್ಪನವರ ಬರೆವಣಿಗೆಯ ಸಾಧನೆಗಳನ್ನು ಸಮರ್ಪಕವಾಗಿ ಬಿಚ್ಚಿತೋರಿಸಿವೆ.

ಮಂಜಪ್ಪನವರ ಮುಖ್ಯ ಕಾಳಜಿ ರಾಷ್ಟ್ರ, ಸಮಾಜ ಮತ್ತು ಮಕ್ಕಳ ಭವಿಷ್ಯ. ಈ ಮೂರು ವಿಷಯಗಳ ಬಗೆಗಿನ ಅವರ ಸಾಹಿತ್ಯ ನಿಜಕ್ಕೂ ಮೌಲಿಕ. ಇದನ್ನು ಶ್ರೀ ಮೇತ್ರಿಯವರು ನಿರ್ದಿಷ್ಟವಾಗಿ ಗುರುತಿಸಿದ್ದಾರೆ ಮತ್ತು ಇವುಗಳಿಗಾಗಿ ಅಧಿಕ ಪುಟಗಳನ್ನು ಮೀಸಲಿಟ್ಟಿದ್ದಾರೆ. ವ್ಯಕ್ತಿಕೇಂದ್ರಿತ ತತ್ವಜ್ಞಾನ ಪ್ರಧಾನವಾಗಿ, ಭಾರತೀಯನು ವೈಯಕ್ತಿಕವಾಗಿ ಸಬಲ, ಸಾಮಾಜಿಕವಾಗಿ ದುರ್ಬಲನೆನಿಸಿದೆ. ಇಂಥ ಪರಿಸರ ಕಾರಣವಾಗಿ ನಮ್ಮಲ್ಲಿ ರಾಷ್ಟ್ರೀಯತೆ ಬೆಳೆದು ಬರಲೇ ಇಲ್ಲ. ಅದು ನಮಗೆ ಪಾಶ್ಚಿಮಾತ್ಯರ ಕೊಡುಗೆ. ಈ ಹೊಚ್ಚ ಹೊಸ ಪರಿಕಲ್ಪನೆಯನ್ನು ಕರ್ನಾಟಕದಲ್ಲಿ ಬಿತ್ತಿ ಬೆಳೆದ ಆದ್ಯರಲ್ಲಿ ಮಂಜಪ್ಪನವರೂ ಒಬ್ಬರು. ಈ ಹೊಸ ಪರಿಕಲ್ಪನೆಯ ಅರ್ಥವನ್ನು ಸರಿಯಾಗಿಯೇ ಗ್ರಹಿಸಿ, ರಾಷ್ಟ್ರೀಯ ಸಾಹಿತ್ಯವನ್ನು ನಿರ್ಮಿಸಿದ ಡಿ. ವಿ. ಗುಂಡಪ್ಪ, ಆಲೂರ ವೆಂಕಟರಾವ್ ಮೊದಲಾದವರ ಎತ್ತರಕ್ಕೆ ಏರಿ, ಅವರಿಗಿಂತ ಭಿನ್ನರೀತಿಯಲ್ಲಿ ಮಂಜಪ್ಪನವರು ಆಲೋಚಿಸಿದರು. ಅವರ ಈ ಭಿನ್ನತೆಗೆ ಗ್ರಾಮೀಣ ನೆಲೆಯಲ್ಲಿ ಹುಟ್ಟಿಬೆಳೆದವನ ಸೊಬಗು, ಸೊಗಡು ಪ್ರಾಪ್ತವಾಗಿದೆ. ಈ ವಿಶೇಷತೆಯಿಂದಾಗಿ ಅವರು ಭಾರತಪ್ರಸಿದ್ಧಿಯ ರಾಷ್ಟ್ರೀಯ ಸಾಹಿತ್ಯ ನಿರ್ಮಾಪಕರೆಂಬ ಖ್ಯಾತಿ ಗಳಿಸಿದರು. ಇದೇ ರೀತಿ ಸಾಮಾಜಿಕ ಸಾಹಿತ್ಯದ ಮೇಲೆಯೂ "ಮಂಜಪ್ಪ ಮುದ್ರೆ" ಒಡೆದು ಕಾಣುತ್ತದೆ. ನಮ್ಮ ಸಮಾಜವನ್ನು ನಮ್ಮ ಐತಿಹಾಸಿಕ-ಭೌಗೋಲಿಕ ಸಂದರ್ಭದಲ್ಲಿಟ್ಟು ಅರ್ಥೈಸುವ, ವ್ಯಾಖ್ಯಾನಿಸುವ, ತನ್ಮೂಲಕ ಅಭಿವ್ಯಕ್ತಿಸುವ ಅವರ ಸಾಮಾಜಿಕ ವಿಚಾರಗಳ ಆಕೃತಿ-ಆದರ್ಶಗಳು ಬೆರಗು ಹುಟ್ಟಿಸುತ್ತವೆ. ರಾಷ್ಟ್ರೀಯ-ಸಾಮಾಜಿಕಗಳಿಗೆ ಸಂಬಂಧಿಸಿದಂತೆ ಗಾಂಧೀಜಿಯವರ ದೇಶೀಚಿಂತನೆಯನ್ನು ಹೋಲುತ್ತಿದ್ದರೂ, ಕೆಲವೊಮ್ಮೆ ಅವರಿಂದ ಭಿನ್ನರಾಗಿ ನಿಲ್ಲುತ್ತಾರೆ, ಈ ಕರ್ನಾಟಕದ ಗಾಂಧಿ. "ಹರಿಜನ" ಶಬ್ದಕ್ಕೆ ಪರ್ಯಾಯವಾಗಿ "ಆದಿಜನ" ಬಳಸಬೇಕೆಂದು, ತುಕಾರಾಮ್ ಮೊದಲಾದವರಂತೆ ಬಸವಣ್ಣನವರು ಸಂತನಲ್ಲ, ಬುದ್ಧನಂತೆ ಸಮಾಜೋಧಾರ್ಮಿಕ ಮಹಾಪುರುಷನೆಂದು, ಗಾಂಧೀಜಿಯವರೊಂದಿಗೆ ನಡೆಸಿದ ಚರ್ಚೆಗಳು ಇದಕ್ಕೆ ಉದಾಹರಣೆಯೆನಿಸಿವೆ. ಇಂಥ ಮಹತ್ವದ ಎಳೆಗಳು ಕೈತಪ್ಪಿ ಹೊರಗುಳಿಯದಂತೆ ವಹಿಸಿದ ಎಚ್ಚರವನ್ನು ಈ ಪ್ರಬಂಧದುದ್ದಕ್ಕೂ ಕಾಣುತ್ತೇವೆ.

ಮಕ್ಕಳ ಸಾಹಿತ್ಯದ ಕೊರತೆಯನ್ನು ಅಷ್ಟು ಹಿಂದೆಯೇ ಗಮನಿಸಿ, ಅದನ್ನು ದೊಡ್ಡ ಪ್ರಮಾಣದಲ್ಲಿ ತುಂಬಿಕೊಟ್ಟವರು, ಮಂಜಪ್ಪನವರು. ಈ ಕೃಷಿಯಿಂದಾಗಿ, ಅವರು ಮೊದಲ ತಲೆಮಾರಿನ ಮಕ್ಕಳ ಸಾಹಿತಿಯಾಗಿ ನಿಂತುದನ್ನು ಸೂಚಿಸುವಲ್ಲಿ, ಅದರ ಲಕ್ಷಣ ವಿಶೇಷತೆಯನ್ನು ಗುರುತಿಸುವಲ್ಲಿ ಈ ಪ್ರಬಂಧ ತುಂಬ ಕಾಳಜಿ ವಹಿಸಿದೆ.

ಮೇಲೆ ಹೇಳಿದ ಯಾವುದೇ ಸಾಹಿತ್ಯ ಪ್ರಕಾರವಿರಲಿ, ಅದರ ಹಿಂದೆ ಚಿಂತನಶೀಲತೆಯ ಶ್ರುತಿ ಉದ್ದಕ್ಕೂ ಕೇಳಿಸುತ್ತದೆ. ಇಂಥ ಚಿಂತನೆಯ ಅಭಿವ್ಯಕ್ತಿಗೆ ಹೇಳಿ ಮಾಡಿಸಿದ ಶೈಲಿ, ಮಂಜಪ್ಪನವರದು. ಭಾಷೆ ಬಂಧನವಾಗಬಾರದು, ಮಾಧ್ಯಮವಾಗಬೇಕೆಂಬ ಎಚ್ಚರದಿಂದ ಅವರು ಬರೆಯುತ್ತಾರೆ. ಆವೇಶಕ್ಕಿಂತ ಸಂಯಮವೇ ಅವರ ಬರೆವಣಿಗೆಯ ಮುಖ್ಯ ಲಕ್ಷಣ. ಮಂಜಪ್ಪನವರ ಶೈಲಿಯ ಈ ಎಲ್ಲ ಮಗ್ಗಲುಗಳ ಚರ್ಚೆಗೆ ಈ ಪ್ರಬಂಧ ಆಸ್ಪದ ನೀಡಿದೆ.

ಮಂಜಪ್ಪನವರು ವೈಚಾರಿಕ ಲೇಖಕರಾದರೂ ಆ ಸಾಹಿತ್ಯಚರಿತ್ರೆಯಲ್ಲಿ ಅವರಿಗೆ ಸ್ಥಾನ ಸಿಗಲಿಲ್ಲ. ರಾಷ್ಟ್ರೀಯ ಸಾಹಿತ್ಯ ಬರೆದರೂ ಅದನ್ನು ಸಾರ್ವತ್ರಿಕವಾಗಿ ಕನ್ನಡಿಗರು ಗಮನಿಸಲಿಲ್ಲ. ಮಕ್ಕಳ ಸಾಹಿತ್ಯ ನಿರ್ಮಿಸಿದರೂ ಆ ಸಾಹಿತ್ಯಚರಿತ್ರೆಯಲ್ಲಿ ಅವರು ಸರಿಯಾಗಿ ದಾಖಲಾಗಲಿಲ್ಲ. ಈ ಸಾಹಿತ್ಯಿಕ ಅನ್ಯಾಯದಿಂದ ಮಂಜಪ್ಪನವರನ್ನು ಮುಕ್ತಗೊಳಿಸಿದ ಡಾ. ಮಲ್ಲಿಕಾರ್ಜುನ ಮೇತ್ರಿಯವರನ್ನು ಇನ್ನೊಮ್ಮೆ ಅಭಿನಂದಿಸುತ್ತ, ಅವರಿಂದ ಅಭ್ಯಾಸಪೂರ್ಣ ಕೃತಿಗಳು ಇನ್ನೂ ಬರಲೆಂದು ಆಶಿಸುತ್ತೇನೆ.

ಮಲ್ಲಿಕಾರ್ಜುನ ಮೇತ್ರಿ, ವಿಜಾಪುರ

ಆಕರ : ಮಾರ್ಗ ಸಂಪುಟ–೬

■■

೧೮೭

ಲಿಂಗಾಯತ ಅಸ್ಪೃಶ್ಯರು : ಒಂದು ಅಧ್ಯಯನ

೨೦೦೩

"ಜಂಗಮಕ್ಕೆ ಜಾತಿಯಿಲ್ಲ, ಲಿಂಗಕ್ಕೆ ಹೊಲೆಯಿಲ್ಲ" - ಇದು ಲಿಂಗಾಯತ ಧರ್ಮವನ್ನು ಕುರಿತು ಹೇಳಿದ ಸೂಕ್ತಿ. ಇಂದು ಜಂಗಮತತ್ವ ಮನೆಯಲ್ಲಿ ಪುರೋಹಿತನೂ, ಮಠದಲ್ಲಿ ಆಚಾರ್ಯನೂ, ದೇವಾಲಯದಲ್ಲಿ ಅರ್ಚಕನೂ, ಒಟ್ಟಾರೆ ಧರ್ಮದ ಹೆಸರಿನಲ್ಲಿ ಶೋಷಕನೂ ಆಗುವಲ್ಲಿ, ಈ ಸೂಕ್ತಿ ಅರ್ಥಕಳೆದುಕೊಂಡಿದೆ. ಕಳೆದುಕೊಂಡ ಈ ಅರ್ಥದ ಹುಡುಕಾಟದ ಒಂದು ಭಾಗವೆನಿಸಿದೆ, "ಲಿಂಗಾಯತ ಅಸ್ಪೃಶ್ಯರು: ಒಂದು ಅಧ್ಯಯನ."

ಲಿಂಗಾಯತವೆನ್ನುವುದು ಒಂದು ಜಾತಿಯಲ್ಲ, ಜೀವನಪದ್ಧತಿ. ಆತ್ಮಮುಖಿ, ಮಾನವಮುಖಿ, ಸಮಾಜಮುಖಿ, ಸಮೃದ್ಧಿ ಮುಖಿ - ಹೀಗೆ ಇದು ಚತುರ್ಮುಖಿ ಜೀವನಪದ್ಧತಿಯಾಗಿದೆ. ಪಾರಂಪರಿಕವಾಗಿ ಬೆಳೆದುಬಂದಿದ್ದ ಭಾರತೀಯ ಜಾತಿನಿಷ್ಠ ಜೀವನಪದ್ಧತಿಗೆ ತೀವ್ರ ಪ್ರತಿಕ್ರಿಯೆ ತೋರಿದ ಇದರ ಉದಯಕಾಲ ೧೨ನೆಯ ಶತಮಾನ, ಉದಯರವಿ ಬಸವಣ್ಣ. ಉತ್ತಮವರ್ಣದವರು ಉತ್ತಮವರ್ಗದವರಾಗಿರಬೇಕು, ಕನಿಷ್ಠವರ್ಣದವರು ಕನಿಷ್ಠ ವರ್ಗದವರಾಗಿರಬೇಕು, ಉತ್ತಮವರ್ಣದವರು ಕನಿಷ್ಠವರ್ಗದವರಾಗಿದ್ದರೂ ವರ್ಣದ ಉತ್ತಮಿಕೆ ಕಾರಣವಾಗಿ ಅವರಿಗೆ ಉತ್ತಮವರ್ಗದ ಎಲ್ಲ ಮರ್ಯಾದೆಗಳು ಸಿಗುತ್ತಿರಬೇಕು. ಈ ಮೂರು ಮಾದಿರಗಳನ್ನು ಭಾರತೀಯರು ಬೆಂಬಲಿಸುತ್ತಾರೆ. ಆದರೆ ಕನಿಷ್ಠವರ್ಣದವರು ಉತ್ತಮವರ್ಗದವರಾಗುವ ಮಾದರಿಯನ್ನು ಭಾರತೀಯರು ಬೆಂಬಲಿಸುವುದಿಲ್ಲ. ಹೀಗಿದ್ದೂ ಈ ನಾಲ್ಕನೆಯ ಮಾದರಿಯನ್ನು ಪೂರ್ಣಪ್ರಮಾಣದಲ್ಲಿ ದರ್ಶಿಸಿದ-ಅನುಷ್ಠಾನಗೊಳಿಸಿದ ಮೊದಲ ಭಾರತೀಯನಾದ ಬಸವಣ್ಣ, "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೊಂದೇ ಎಂಬೆ" ಎಂದು ಘೋಷಿಸಿದುದಲ್ಲದೆ, ಜಾತಿಯಿಂದ ಕನಿಷ್ಠನಾದ ಅಲ್ಲಮನಿಗೆ ಧಾರ್ಮಿಕ ಅಧಿಕಾರ ನೀಡಿ, ಬ್ರಾಹ್ಮಣನ ಮಗಳಿಗೂ ಶೂದ್ರನ ಮಗನಿಗೂ ಮದುವೆ ಏರ್ಪಡಿಸಿ, ಇದನ್ನು ಆಚರಿಸಿ ತೋರಿದ. ದುರ್ದೈವದ ಸಂಗತಿಯೆಂದರೆ ಜಾತಿನಿರಸನದ ಈ ಶರಣ ಚಳುವಳಿ ಪುರೋಹಿತಶಾಹಿಗಳಿಂದಾಗಿ ಒಳಗೆ ಒಡೆಯಿತು, ಆಡಳಿತಶಾಹಿಯಿಂದಾಗಿ ಹೊರಗೆ ಆಘಾತ ಅನುಭವಿಸಿತು. ಇದರ ಪರಿಣಾಮವಾಗಿ ಶರಣರು ಹತ್ತೂ ಕಡೆಗೆ ಚದರಿದರು.

ಹೀಗೆ ಚದರಿದ ಶರಣರಲ್ಲಿ ಅಸ್ಪೃಶ್ಯಮೂಲದ ಚನ್ನಯ್ಯನ ಮಾದರ ಕುಲ, ಕಕ್ಕಯ್ಯನ ಡೋಹರ ಕುಲ, ಚಂದಯ್ಯನ ಕೊರವರ ಕುಲ, ಹರಳಯ್ಯನ ಸಮಗಾರ ಕುಲ, ಉರಿಲಿಂಗಪೆದ್ದಿಯ ಹೊಲೆಯರ ಕುಲ

ಇಂದು ಪ್ರತ್ಯೇಕವಾಗಿದ್ದರೂ, ಶರಣಸಿದ್ಧಾಂತದ ಎಳೆಹಿಡಿದು ಬದುಕುತ್ತಲಿವೆ. ಇವರಲ್ಲಿ ಹೊಲೆಯರ ಕುಲದವರು ಮತ್ತೆ ಮೇಲು-ಕೀಳು ಸ್ತರಗಳನ್ನು ನಿರ್ಮಿಸಿಕೊಂಡಿದ್ದಾರೆ. ಮೇಲು ಸ್ತರದವರು ಉರಿಲಿಂಗಪೆದ್ದಿ ಸಂಪ್ರದಾಯದವರೆಂಬ ವರ್ಗವಾಗಿ ನಿಂತಿದ್ದಾರೆ. ಇವರು ಆ ಕಡೆ ಹೊಲೆಯರಿಂದಲೂ, ಈ ಕಡೆ ಲಿಂಗಾಯತರಿಂದಲೂ ದೂರವಾಗಿ, ತ್ರಿಶಂಕುಸ್ಥಿತಿ ಅನುಭವಿಸುತ್ತಲಿದ್ದಾರೆ. ಈ ವರ್ಗದ ಅಭ್ಯಾಸವಾಗಿದೆ, "ಲಿಂಗಾಯತ ಅಸ್ಪೃಶ್ಯರು : ಒಂದು ಅಧ್ಯಯನ".

ಈ ವರ್ಗವನ್ನು ಕುರಿತು ಮೊದಲು ಪ್ರಸ್ತಾಪ ಮಾಡಿದವರು, ಡಾ. ಫ. ಗು. ಹಳಕಟ್ಟಿ ಅವರು. ಆಮೇಲಿನ ಒಂದೆರಡು ಲೇಖನಗಳನ್ನು ಬಿಟ್ಟರೆ ಈ ಬಗ್ಗೆ ಸಮಗ್ರ ಅಧ್ಯಯನ ಈ ವರೆಗೆ ನಡೆಯಲೇ ಇಲ್ಲ. ಈ ಕೊರತೆಯನ್ನು ಪ್ರಸ್ತುತ ಪ್ರಬಂಧದ ಮೂಲಕ ಪ್ರಥಮ ಸಲ ತುಂಬಿಕೊಟ್ಟಿದ್ದಾರೆ, ಡಾ. ಸಾವುಕಾರ ಎಸ್. ಕಾಂಬಳೆ.

ಈ ಪರಂಪರೆಗೆ ೧೨ನೆಯ ಶತಮಾನದಷ್ಟು ಪ್ರಾಚೀನತೆ ಇದ್ದರೂ ಹದಿನೇಳನೆಯ ಶತಮಾನದ ವರೆಗೆ ಇದು ಗುಪ್ತಗಾಮಿಯಾಗಿದ್ದಿತು. ೧೮ನೆಯ ಶತಮಾನದಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಕೋಡ್ಲಾ ಗ್ರಾಮದಲ್ಲಿ ಶ್ರೀ ಶಿವಯೋಗಿಶ್ವರಸ್ವಾಮಿಗಳು ಒಂದು ಮಠ ಸ್ಥಾಪಿಸುವ ಮೂಲಕ, ಇದಕ್ಕೆ ಒಂದು "ಸಮಾಜ" ಸ್ವರೂಪ ಪ್ರಾಪ್ತವಾಯಿತು. ಆಮೇಲೆ ಈ ಮಠಕ್ಕೆ ಶಾಖಾಮಠಗಳು, ಇವುಗಳ ಮಾದರಿಯಲ್ಲಿ ಅನ್ಯಮಠಗಳು ಹುಟ್ಟಿಕೊಂಡವು. ಹೀಗೆ ಇತ್ತೀಚಿನ ಎರಡನೂರು ವರ್ಷ ಅವಧಿಯಲ್ಲಿ ಗುಲ್ಬರ್ಗಾ ಜಿಲ್ಲೆ-೬, ಬೀದರ ಜಿಲ್ಲೆ-೧೧, ಮೈಸೂರು ಜಿಲ್ಲೆ -೧೧, ಚಾಮರಾಜನಗರ ಜಿಲ್ಲೆ -೮, ಮಂಡ್ಯ ಜಿಲ್ಲೆ-೩, ಹಾಸನ ಜಿಲ್ಲೆ-೧ ಹೀಗೆ ಒಟ್ಟು ೪೦ ಮಠಗಳು ಹುಟ್ಟಿಕೊಂಡು, ಶರಣರ ಆದರ್ಶದಲ್ಲಿ ಸಾಮಾಜಿಕ ಸಂಘಟನೆ ಮತ್ತು ಪ್ರಗತಿಗಳತ್ತ ಮುನ್ನಡೆದಿವೆ. ಈ ಸಮಾಜದ ಸರ್ವಮುಖಿ ಅಧ್ಯಯನವೆನಿಸಿದೆ, ಈ ಕೃತಿ.

ಭಾರತದೇಶದಲ್ಲಿ ಜಾತಿ ಸೃಷ್ಟಿಗೊಂಡ ಕಾರಣಗಳನ್ನು ಹುಡುಕಿ, ಇದರಿಂದಾದ ಸಾಮಾಜಿಕ ದುಷ್ಪರಿಣಾಮಗಳನ್ನು ಸ್ಪಷ್ಟಪಡಿಸುತ್ತ, ನಮ್ಮಲ್ಲಿ ಇದರ ವಿರುದ್ಧ ನಡೆದ ಚಳುವಳಿಗಳನ್ನು ಗುರುತಿಸಿದ ಒಂದು ಸರಿಯಾದ ಭಿತ್ತಿ ಈ ಪ್ರಬಂಧದ ಆರಂಭದಲ್ಲಿದೆ. ಇದರ ಮುಂದುವರಿಕೆ ಎಂಬಂತೆ, ಕರ್ನಾಟಕದಲ್ಲಿ ಶರಣರು ನಡೆಸಿದ ಜಾತಿವಿರೋಧಿ ಚಳುವಳಿಯ ಸ್ವರೂಪವನ್ನು ಸೈದ್ಧಾಂತಿಕ, ಆನ್ವಯಿಕ ನೆಲೆಗಳಲ್ಲಿ ಈ ಕೃತಿ, ಬಿಡಿಸಿತೋರಿಸಿದೆ. ಇದರ ಚಾರಿತ್ರಿಕ ಬೆಳವಣಿಗೆಯನ್ನು ಉರಿಲಿಂಗಪೆದ್ದಿ ಪೂರ್ವಯುಗ, ಉರಿಲಿಂಗಪೆದ್ದಿಯುಗ, ಉರಿಲಿಂಗಪೆದ್ದಿ ಸಂಪ್ರದಾಯ, ಉದಾರವಾದಿಲಿಂಗಾಯತಮಠ ಸಂಪ್ರದಾಯಗಳೆಂದು ವಿಂಗಡಿಸಿ ಹೇಳಿದುದು, ಒಂದು ವ್ಯವಸ್ಥಿತ ಅಧ್ಯಯನವೆನಿಸಿದೆ.

ಈ ಪ್ರಬಂಧದ ಉತ್ತರಾರ್ಧ ನೇರವಾಗಿ ಈ ಮಠಗಳ-ಅನುಯಾಯಿಗಳ ಸಮಗ್ರ ಅಧ್ಯಯನಕ್ಕೆ ಮೀಸಲಾಗಿದೆ. ಇದಕ್ಕೆ ಅನಿವಾರ್ಯವೆನಿಸಿದ ಕ್ಷೇತ್ರೀಯ ಅಧ್ಯಯನವನ್ನು ಶ್ರೀ ಕಾಂಬಳೆಯವರು ಬೇಸರವಿಲ್ಲದೆ ಪೂರೈಸಿದ್ದಾರೆ. ಕರ್ನಾಟಕದ ಉತ್ತರ-ದಕ್ಷಿಣ, ಪೂರ್ವ-ಪಶ್ಚಿಮಗಳನ್ನು, ಸಾಲದುದಕ್ಕೆ ಮಹಾರಾಷ್ಟ್ರ-ಆಂಧ್ರಪ್ರದೇಶಗಳನ್ನು ಸುತ್ತಿದ ಫಲವಾಗಿ, ಸಮಗ್ರ ಮಾಹಿತಿ ಇವರ ಕೈವಶವಾಗಿದೆ. ಈ ಮಾಹಿತಿಯನ್ನವಲಂಬಿಸಿ ಇವರ ಸಾಮಾಜಿಕ ಜೀವನ, ಧಾರ್ಮಿಕ ಜೀವನ, ಬದುಕಿನ ಸ್ಥಿತಿಗತಿಗಳು, ಸಂಬಂಧಗಳು ಮತ್ತು ಭವಿಷ್ಯಗಳನ್ನು ಕುರಿತು, ಇಲ್ಲಿ ಅಭ್ಯಾಸ ಪೂರೈಸಲಾಗಿದೆ. ಇವರ ಆಚಾರ-ಉಟೋಪಚಾರ ಲಿಂಗಾಯತರನ್ನು ಹೋಲುತ್ತವೆ. ಧಾರ್ಮಿಕ ಸ್ಥಿತಿ ಲಿಂಗಾಯತವೇ ಆಗಿದೆ. ಹೀಗಿದ್ದೂ ಅನಿಶ್ಚಿತ ಸಮಾಜವಾಗಿ ನಿಂತಿರುವ ಇವರ ಭವಿಷ್ಯವನ್ನು

ನಿರ್ಧರಿಸಲು ಇಂದಿನ ಲಿಂಗಾಯತ ಸಮಾಜ ಮುಂದು ಬರದಿದ್ದರೆ ಅನುಭವಿಸಬೇಕಾಗುವ ಹಾನಿಯನ್ನೂ, ಲಿಂಗಾಯತ ಮಠಾಧೀಶರು ಅಪ್ಪಿಕೊಳ್ಳುವ ಮೂಲಕ ತಮ್ಮ ಬಸವಪರ ನಿಲುವಿಗೆ ಬದ್ಧರಾಗಬೇಕೆಂಬುದನ್ನೂ ಇಲ್ಲಿ ತುಂಬ ಕಳಕಳಿಯಿಂದ ಪ್ರತಿಪಾದಿಸಲಾಗಿದೆ.

ಪಿಎಚ್.ಡಿ. ಅಧ್ಯಯನ ಇಂದು ಕೇವಲ "ಕನ್ನಡ"ಕ್ಕೆ ಸೀಮಿತವಾಗದೆ "ಕರ್ನಾಟಕ"ಕ್ಕೆ ವಿಸ್ತಾರಗೊಂಡಿದೆ. ಈ ವಿಸ್ತಾರಕ್ಕೆ ಹೊಸ ಸೇರ್ಪಡೆಯಾಗಿರುವ ಪ್ರಸ್ತುತ ಪ್ರಬಂಧ ರಚನೆಗಾಗಿ ಡಾ. ಕಾಂಬಳೆ ಅವರನ್ನು ಇನ್ನೊಮ್ಮೆ ಅಭಿನಂದಿಸುತ್ತೇನೆ.

ಸಾವಕಾರ, ಕಾಂಬಳೆ, ಬೆಳಗಾವಿ

ಆಕರ : ಮಾರ್ಗ ಸಂಪುಟ-೬

■■

೧೮೮

ಕುಮಾರವ್ಯಾಸನ ಭೀಷ್ಮ

೨೦೦೪

ಭಾವನಿಷ್ಠ, ಚಿಂತನನಿಷ್ಠ - ಇವು ಬರೆವಣಿಗೆಯ ಎರಡು ಮುಖ್ಯ ಆಯಾಮಗಳು. ಚಿಂತನನಿಷ್ಠತೆಯ ಕವಲುಗಳಾಗಿವೆ, ಸಂಶೋಧನೆ ಮತ್ತು ವಿಮರ್ಶೆ. ಇವುಗಳಲ್ಲಿ ಸಂಶೋಧನೆಯೆನ್ನುವುದು ವಿಶ್ಲೇಷಣಾತ್ಮಕ ವಿಮರ್ಶೆ, ವಿಮರ್ಶೆಯೆನ್ನುವುದು ವ್ಯಾಖ್ಯಾನಾತ್ಮಕ ಸಂಶೋಧನೆ. ಈ ಪೂರಕ ಶಿಸ್ತುಗಳನ್ನು ಅರ್ಥಮಾಡಿಕೊಂಡು ಬರೆದ ವ್ಯಾಖ್ಯಾನಾತ್ಮಕ ಸಂಶೋಧನೆಯಾಗಿದೆ, "ಕುಮಾರವ್ಯಾಸ ಭೀಷ್ಮ" ಹೆಸರಿನ ಈ ಪಿಎಚ್.ಡಿ. ಮಹಾಪ್ರಬಂಧ.

ಪಾತ್ರವನ್ನು ಕುರಿತ ವ್ಯಾಖ್ಯಾನಾತ್ಮಕ ಸಂಶೋಧನೆಗೆ, ಬಾಹ್ಯ ಆಕರಗಳಿಗಿಂತ ಪಾತ್ರದ ಮಾತು, ವರ್ತನೆ, ಸಂದರ್ಭದ ಪ್ರತಿಕ್ರಿಯೆ ಇತ್ಯಾದಿಗಳನ್ನು ಆಕರವಾಗಿಟ್ಟುಕೊಂಡು ನಡೆಸುವ ಸುಸಂಗತ ತರ್ಕವೇ ಮುಖ್ಯ. ಇಲ್ಲಿ ವ್ಯಾಖ್ಯಾನವು ಅಪವ್ಯಾಖ್ಯಾನವಾಗದಂತೆ ನೋಡಿಕೊಳ್ಳುವ ನೇರ ಜವಾಬ್ದಾರಿ ಸಾಹಿತಿಯ ಮೇಲಿರುತ್ತದೆ. ತನ್ನ ನಿರ್ಣಯಗಳನ್ನು ಬಾಹ್ಯ ಆಕರಗಳ ಮೇಲೆ ಹೇರಿ ಜಾರಿಕೊಳ್ಳದ ಪರಿಸ್ಥಿತಿಯಲ್ಲಿ ನಿಂತು, ಅವನು ಬರೆವಣಿಗೆಯನ್ನು ಪೂರೈಸಬೇಕಾಗುತ್ತದೆ. ಇಂಥ ಜವಾಬ್ದಾರಿಯಲ್ಲಿ ಯಶಸ್ವಿಯಾಗಿರುವ ಡಾ. ಮಹಾದೇವ ಜಿಡ್ಡಿಮನಿ ಅವರನ್ನು ಆರಂಭದಲ್ಲಿಯೇ ಅಭಿನಂದಿಸಿ, ಮುನ್ನುಡಿಯನ್ನು ಮುಂದುವರಿಸುತ್ತೇನೆ.

ಕನ್ನಡದಲ್ಲಿ ಕುಮಾರವ್ಯಾಸ ಒಬ್ಬ ಮಹತ್ವದ ಕವಿ. ವಿಮರ್ಶಿಸಿದಷ್ಟೂ ತಾಳಿ ಕೊಳ್ಳುವ, ಹೊಸ ಹೊಸ ಮೈಗಳನ್ನು ತೋರಿಸಿಕೊಳ್ಳುವ ಕವಿ. ಹೀಗಾಗಿ ಅವನ ಕಾವ್ಯದಲ್ಲಿ ಹುಡುಕಿದಷ್ಟೂ ಅವಕಾಶಗಳಿವೆ, ಆಹ್ವಾನಗಳಿವೆ. ಕೃತಿಯ ಗಾತ್ರಬಾಹುಳ್ಯ ಕಾರಣವಾಗಿ, ಮುಗಿಯದ ಮಹತ್ವವೂ ಇದಕ್ಕೆ ಪ್ರಾಪ್ತವಾಗಿದೆ.

ವ್ಯಾಸಭಾರತ ಒಂದು ಪುರಾಣ. ಇದನ್ನು ಗುರಿಯಿಟ್ಟು ನಡೆಸಿದ ಎರಡು ಪ್ರಬುದ್ಧ ಪ್ರಯೋಗಗಳೆನಿಸಿವೆ, ಪಂಪಭಾರತ ಮತ್ತು ಕುಮಾರವ್ಯಾಸ ಭಾರತ. ಇವುಗಳಲ್ಲಿ ಪಂಪನದು ಅಪುರಾಣಪ್ರಜ್ಞೆ, ಕುಮಾರವ್ಯಾಸನದು ಪುರಾಣಪ್ರಜ್ಞೆ. ಹೀಗೆ ವ್ಯಾಸ, ಕುಮಾರವ್ಯಾಸರದು ಪುರಾಣಪ್ರಜ್ಞೆಯೇ ಆಗಿದ್ದರೂ ಕುಮಾರವ್ಯಾಸನದು ವ್ಯಾಸರ ಪುರಾಣ ಪ್ರಜ್ಞೆ-ಪ್ರತಿಭೆಗಳ ಪರಿಷ್ಕೃತರೂಪವೆನಿಸಿದೆ. ಈ ಪರಿಷ್ಕರಣದ ಒಂದು ಮಹತ್ವಪೂರ್ಣ ಪ್ರಯೋಗ, ಕುಮಾರವ್ಯಾಸನ ಭೀಷ್ಮ.

ಮಹಾಭಾರತವು ರಾಮಾಯಣದಂತೆ ಏಕನಾಯಕ ಕೃತಿಯಲ್ಲ, ಬಹುನಾಯಕ ಕೃತಿ. ಅಲ್ಲಿ ಒಂದೊಂದು ಸಂದರ್ಭದಲ್ಲಿ ಒಬ್ಬೊಬ್ಬರು ನಾಯಕ ವ್ಯಕ್ತಿಗಳು. ಹೀಗಿದ್ದೂ ಈ ಕೃತಿಗೆ ಸಮಗ್ರ ನಾಯಕನಾಗುವ ಯೋಗ್ಯತೆಯವರೆಂದರೆ ಕೃಷ್ಣ ಮತ್ತು ಭೀಷ್ಮ. ಇವರಲ್ಲಿ ಒಬ್ಬನದು ದೈವಿಕವನ್ನು ಮಾನವಿಕಗೊಳಿಸುವ ಅವತರಣ

ದೃಷ್ಟಿ, ಇನ್ನೊಬ್ಬನದು ಮಾನವಿಕವನ್ನು ದೈವಿಕಗೊಳಿಸುವ ಉತ್ತರಣ ದೃಷ್ಟಿ. ಇಷ್ಟು ಮಹತ್ವದ ಇವರಲ್ಲಿ, ಒಬ್ಬನನ್ನು ಕುರಿತು ಮಹಾಕವಿ ಕುಮಾರವ್ಯಾಸ "ಕೃಷ್ಣಕಥೆ"ಯನ್ನು ಹೇಳಿದ. ಇನ್ನೊಬ್ಬನನ್ನು ಕುರಿತು ಮಹಾಕವಿಯೊಬ್ಬ ಹುಟ್ಟಿಬಂದು, 'ಭೀಷ್ಮಕಥೆ'ಯನ್ನು ಹೇಳಬೇಕಾಗಿದೆ. ಈ ಮಹತ್ವ ಕಾರಣವಾಗಿ, ಜಾಗತಿಕ ಮುಖ್ಯಪಾತ್ರಗಳ ಸಾಲಿನಲ್ಲಿ ನಿಲ್ಲುವ ಯೋಗ್ಯತೆ ಭೀಷ್ಮನಿಗೆ ಪ್ರಾಪ್ತವಾಗಿದೆ. ಬಹುಶಃ ಈ ಬಗೆಯ ಸ್ವ-ಭಾವದ ಸ್ವ-ರೂಪದ ಪಾತ್ರ ಜಾಗತಿಕ ಸಾಹಿತ್ಯದಲ್ಲಿ ಸಿಗುವುದು ಅಪರೂಪ.

ಶೌರ್ಯ, ಶೌಚಗಳು ಭೀಷ್ಮನ ಬದುಕಿನ ಮೌಲ್ಯಗಳು. ಇವುಗಳಲ್ಲಿ ಒಂದು ಭೌತಿಕ ಸಾಮರ್ಥ್ಯ, ಇನ್ನೊಂದು ಅಭೌತಿಕ ಶೀಲ. ಇವೆರಡನ್ನು ಪೂರ್ಣಪ್ರಮಾಣದಲ್ಲಿ ಬದುಕಿದುದೇ ಈ ಪಾತ್ರದ ದುರಂತವೆನಿಸಿತು. ಪರಿಸ್ಥಿತಿ ಕಾರಣವಾಗಿ ಗುಣವೇ ದೋಷವೆಂಬಂತೆ ಪರಿಣಮಿಸಿತು. ಮಹಾಭಾರತದಲ್ಲಿ ವಯಸ್ಸಿನಿಂದ ಎಲ್ಲರಿಗೂ ಹಿರಿಯ ಪಾತ್ರವಿದು. ತಂದೆ ಶಂತನು, ತಾನು, ತಮ್ಮನ ಮಕ್ಕಳಾದ ಧೃತರಾಷ್ಟ್ರ ಪಾಂಡು, ಇವರ ಮಕ್ಕಳಾದ ಕೌರವ ಪಾಂಡವರು, ಇವರ ಮಕ್ಕಳಾದ ಲಕ್ಷಣಕುಮಾರ ಅಭಿಮನ್ಯು-ಹೀಗೆ ಐದು ತಲೆಮಾರುಗಳನ್ನು ಕಂಡು, ಅವರೊಂದಿಗೆ ಬದುಕುಮಾಡಿದವ ಭೀಷ್ಮ. ಈ ಐದೂ ತಲೆಮಾರುಗಳಲ್ಲಿ ಶೌರ್ಯವನ್ನು ಮೆರೆದ ಇವನದು ಗುರುವನ್ನೂ ಸೋಲಿಸಿದ ಪರಾಕ್ರಮ. ೧೮ ದಿನಗಳಲ್ಲಿ ೧೦ ದಿನ ಯುದ್ಧಕಾರ್ಯ ನಿರ್ವಹಿಸಿದ ಸಾಮರ್ಥ್ಯ, ಅದೂ ವೃದ್ಧಾಪ್ಯದಲ್ಲಿ.

ಇಂಥವನು ಶೌಚನೀತಿಗೆ ಒಳಗಾಗಿ ಅಸಹಾಯಕ ಸ್ಥಿತಿ ಅನುಭವಿಸಬೇಕಾಯಿತು. ತಾಯಿ, ಹೆಂಡತಿ, ಮಗಳು - ಈ ಯಾವುದೇ ರೂಪದ ಹೆಣ್ಣನ್ನು ಮುಟ್ಟದ ಪಾತ್ರವಿದು. ಇವುಗಳಲ್ಲಿ ಹೆಂಡತಿ ತುಂಬ ಮುಖ್ಯ. ಆದರೆ ಈ ಪಾತ್ರ ತಾನೇ ನಿಂತು ತಂದೆಯ (ಶಂತನು) ಮದುವೆಮಾಡಿತು. ತಮ್ಮಂದಿರ (ಚಿತ್ರವೀರ್ಯ, ವಿಚಿತ್ರವೀರ್ಯ) ಮದುವೆಮಾಡಿತು. ತಮ್ಮನ ಮಕ್ಕಳ (ಧೃತರಾಷ್ಟ್ರ, ಪಾಂಡು) ಮದುವೆ ಮಾಡಿತು. ಅವರ ಮಕ್ಕಳ (ಕೌರವ, ಪಾಂಡವ) ಮದುವೆ ಮಾಡಿತು. ಅವರ ಮಕ್ಕಳ (ಅಭಿಮನ್ಯು ಇತ್ಯಾದಿ) ಮದುವೆಯನ್ನೂ ಮಾಡಿತು. ತಾನು ಮಾತ್ರ ಅವಿವಾಹಿತವಾಗಿ ಉಳಿಯಿತು. ಜೀವನದಲ್ಲಿ ಒಲಿದು ಬಂದ ಅಂಬೆಯೆಂಬ ಹೆಣ್ಣು ಮತ್ತು ಶಿಖಂಡಿಯೆಂಬ ಗಂಡುರೂಪದ ಹೆಣ್ಣು -ಹೀಗೆ ಹೆಣ್ಣಿನ ಎರಡು ರೂಪಗಳು ಅವನನ್ನು ಉದ್ದಕ್ಕೂ ಕಾಡಿದವು, ಕೊಂದವು. ಅಂದರೆ ಅಂಬೆಯೆಂಬ ಹೆಣ್ಣು ಗುರು ಪರಶುರಾಮನೊಂದಿಗೆ ಯುದ್ಧ ಮಾಡಿಸಿತು. ಶಿಖಂಡಿಯಾಗಿ ಪ್ರಾಣಹಿಂಡಿತು. ಒಟ್ಟಾರೆ ಪೌರುಷನಿಷ್ಠ ಪರಶುರಾಮನನ್ನು ಗೆದ್ದ ಭೀಷ್ಮ, ಪೌರುಷಹೀನ ಶಿಖಂಡಿಯಿಂದ ಸೋಲು ಅನುಭವಿಸಿದ ಈ ವಿಪರ್ಯಾಸ ಈ ಪಾತ್ರದ ಒಂದು ಮುಖ.

ಬ್ರಹ್ಮಚರ್ಯವ್ರತ ಕಾರಣವಾಗಿ ತನಗೆ ಸಾಧ್ಯವಿಲ್ಲದಿದ್ದರೂ ತಮ್ಮ ವಂಶವಾಹಿನಿ ಮುಂದುವರಿಯಬೇಕೆಂಬ ಆದಮ್ಯ ಆಸೆ, ಪ್ರಯತ್ನ ಈ ಪಾತ್ರದ ಇನ್ನೊಂದು ಮುಖವಾಗಿದೆ. ಮೇಲೆ ಹೇಳಿದಂತೆ ಕೇವಲ ಮದುವೆ ಮಾಡುವುದಕ್ಕೆ ನಿಲ್ಲದೆ, ಅದರ ಸಾರ್ಥಕತೆಯಾದ ಸಂತಾನ ಫಲಪ್ರಾಪ್ತಿಗಾಗಿಯೂ ಅವನ ಪ್ರಯತ್ನ ಮುಂದುವರಿಯುತ್ತದೆ. ವ್ಯಾಸರ ನಿಯೋಗ, ಕುಂತಿಯ ವಿವಾಹಪೂರ್ವ ಮಾತೃತ್ವ, ಕುಂತಿ ಮಾದ್ರಿಯರ ಪತಿಸಂಪರ್ಕರಹಿತ ಮಾತೃತ್ವ, ದ್ರೌಪದಿಯ ಐವರ ಪತಿತ್ವ, ಗರ್ಭದಲ್ಲಿಯೇ ಸತ್ತು ಹುಟ್ಟಿದ ಪರೀಕ್ಷಿತರಾಜನ ಪ್ರಸವ -ಇವೆಲ್ಲ ಗೋಜಲುಗಳಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಭೀಷ್ಮವಹಿಸಿದ ಪಾತ್ರ, ವಂಶವಾಹಿನಿಯ ಮುಂದುವರಿಕೆಯ ಬಗ್ಗೆ ಅವನಿಗಿರುವ ಮೋಹಕ್ಕೆ ನಿದರ್ಶನವೆನಿಸಿವೆ. ಕೊನೆಯಲ್ಲಿ ಈ ಸಂತಾನಗಳೇ ಅವನಿಗೆ ಸಣ್ಣ ದೊಡ್ಡ ಅನ್ಯಾಯಗಳಾಗಿ ಸುತ್ತಿಕೊಳ್ಳುತ್ತವೆ.

ಮನುಷ್ಯನ ಜೀವನದಲ್ಲಿ ಘಟಿಸುವ ಅನ್ಯಾಯಗಳು ನಾಲ್ಕು ವಿಧ: ಆಕಸ್ಮಿಕ, ಸ್ವಯಂಕೃತ, ಕೌಟುಂಬಿಕ ಮತ್ತು ಸಾಮಾಜಿಕ. ಆಕಸ್ಮಿಕವೆನ್ನುವುದು ಅವ್ಯಕ್ತ ದೈವಘಟಿತ ಅನ್ಯಾಯ. ಇದನ್ನು ಬಿಟ್ಟರೂ ತನ್ನ ಕಾಲ ಮೇಲೆ ತಾನೇ ಪ್ರಜ್ಞಾಪೂರ್ವಕ ಕಲ್ಲು ಹಾಕಿಕೊಳ್ಳುವುದು, ಸ್ವಯಂಕೃತ ಅನ್ಯಾಯ. ಭೀಷ್ಮನ ಜೀವನದಲ್ಲಿ

ಇವುಗಳ ಕೈವಾಡ ಕಡಿಮೆ. ಮಿಕ್ಕವುಗಳಲ್ಲಿ ಕರ್ಣ ಸಾಮಾಜಿಕ ಅನ್ಯಾಯಕ್ಕೆ ತುತ್ತಾದರೆ, ಭೀಷ್ಮ ಕೌಟುಂಬಿಕ ಅನ್ಯಾಯಕ್ಕೆ ಬಲಿಯಾದ. ಸಾಮಾಜಿಕ ಅನ್ಯಾಯವನ್ನು ವ್ಯಕ್ತವಾಗಿ ಪ್ರತಿಭಟಿಸಬಹುದು. ಕೌಟುಂಬಿಕ ಅನ್ಯಾಯವನ್ನು ಮನೆಯ ಮರ್ಯಾದೆ ದೃಷ್ಟಿಯಿಂದ ನುಂಗಿಕೊಂಡು ಬಾಳಬೇಕಾಗುತ್ತದೆ. ಹೀಗಾಗಿ ಇವರಿಬ್ಬರ ಜೀವನದಲ್ಲಿ ಮೌನ ಮತ್ತು ಮಾತುಗಳು ವಹಿಸಿದ ಪಾತ್ರ ಗಮನಾರ್ಹವೆನಿಸಿದೆ. ಕರ್ಣನು ಪೂರ್ವಾರ್ಧ ಜೀವನದಲ್ಲಿ ಮೌನವಹಿಸಿದರೂ ತನ್ನ ಜನನಸತ್ಯ ತಿಳಿದ ಉತ್ತರಾರ್ಧ ಜೀವನದಲ್ಲಿ ಸಶಬ್ದವಾಗಿ ಮಾತನಾಡಿದ, ಪ್ರತಿಭಟನಾ ರೂಪದ ಮಾತುಗಳನ್ನೇ ಆಡಿದ. ಭೀಷ್ಮ ಮಾತ್ರ ಉದ್ದಕ್ಕೂ ಮಾತು ಕಡಿಮೆ, ಮೌನ ಹೆಚ್ಚು ಎಂಬಂತೆ ಬಾಳಿದ. ಕುಟುಂಬದ ಹಿರಿಯರಿಗೆ, ಅದರಲ್ಲಿಯೂ ಕಿರಿಯರ ಯಜಮಾನತ್ವದಲ್ಲಿ ಬಾಳುವ, ತೊಡೆಯ ಮೇಲೆ ಬೆಳೆದ ಮಕ್ಕಳೇ ತಲೆಯ ಮೇಲೆ ಕುಳಿತ ಪರಿಸ್ಥಿತಿಯ ಹಿರಿಯರಿಗೆ, ಈ ನಿಲವು ಅನಿವಾರ್ಯ. ಭೀಷ್ಮ ಇಂಥ ಸಹನೆ ಅಸಹಾಯಕತೆ ಅಪಮಾನಗಳ ನೆಲೆಯಲ್ಲಿಯೇ ಬದುಕು ಮುಂದುವರಿಸುತ್ತಾನೆ. ತನ್ನ ದುರುಪಯೋಗವನ್ನೂ ತಾಳಿಕೊಳ್ಳುತ್ತಾನೆ. ಇದನ್ನೇ ಧ್ವನಿಸುವಂತಿದೆ, ಅವನ ಶರಶಯನ ಮರಣ.

ಹೀಗೆ ನೀತಿನಿಷ್ಠೆ ಮತ್ತು ಸಂತತಿಯ ಸಂರಕ್ಷಣೆ -ಈ ನೆಲೆಗಳಲ್ಲಿ ಶ್ರಮಿಸಿದ ಮತ್ತು ಅನ್ಯಾಯ ಅನುಭವಿಸಿದ ಈ ಉದಾತ್ತ ಲೌಕಿಕ ಪಾತ್ರ, ಕುಮಾರವ್ಯಾಸನಲ್ಲಿ ಆಧ್ಯಾತ್ಮಿಕ ಆಯಾಮಕ್ಕೆ ಹೊರಳಿದೆ. "ಸಂಸಾರ ವಿಶ್ರಾಮದೇಶ"ದಲ್ಲಿ ವಿರಮಿಸುತ್ತ ಸಾಗುತ್ತದೆ. ಕೃಷ್ಣನಿಗೆ ಮುಖಾಮುಖಿಯಾದ ಸಂದರ್ಭದಲ್ಲಿ ಈ ದೈವಭಕ್ತಿ, ಉಕ್ಕುವಂತೆ ಚಿತ್ರಣಗೊಂಡಿದೆ. ಪಂಪನಂಥವನು ಪಾತ್ರ ಚಿತ್ರಿಸಿದ ಬಳಿಕ ಇನ್ನೊಬ್ಬ ಆ ಕಾರ್ಯಕ್ಕೆ ಕೈಹಾಕುವುದು ಒಂದು ದೊಡ್ಡ ಸವಾಲು. ಕುಮಾರವ್ಯಾಸ ಆ ಸವಾಲನ್ನು ದೊಡ್ಡ ಪ್ರಮಾಣದಲ್ಲಿ ನಿರ್ವಹಿಸಿದ. ಈ ಚಿತ್ರಣದ ಶುಚಿ, ಶೌರ್ಯ, ಅಸಾಹಯಕತೆ, ಮೌನ, ಮಾತು-ಇತ್ಯಾದಿ ಪ್ರಸಂಗಗಳು ದೈವೀ ಲೇಪನದಿಂದಾಗಿ ಪರಿಷ್ಕಾರಗೊಂಡಿವೆ. ವ್ಯಾಸರ ಭೀಷ್ಮ, ಪಂಪನ ಭೀಷ್ಮರಿಗಿಂತ ಕುಮಾರವ್ಯಾಸನ ಭೀಷ್ಮ ಭಿನ್ನವೆಂಬಂತೆ ಕಾಣುವುದು, ಈ ಕಾರಣಕ್ಕಾಗಿ. ಹೀಗಾಗಿ "ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ" ಎಂಬ ಮಾತು ಪಂಪಭಾರತಕ್ಕಿಂತ ಕುಮಾರವ್ಯಾಸನಲ್ಲಿ ಹೆಚ್ಚು ಅರ್ಥ ಪಡೆದಿದೆ.

ಈ ಪಾತ್ರವು ವ್ಯಾಸ, ಪಂಪರಲ್ಲಿ ತಾಳಿದ ಆಕಾರವನ್ನು, ಆಮೇಲೆ ಕುಮಾರವ್ಯಾಸನಲ್ಲಿ ಪಡೆದ ಸಂಸ್ಕಾರವನ್ನು ಡಾ. ಜಿಡ್ಡಿಮನಿಯವರು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆ. ಈ ಮೂವರೂ ನಿರ್ಮಿಸಿದ ಪಾತ್ರಗಳನ್ನು, ಅಲ್ಲಿಯ ಸೂಕ್ಷ್ಮಗಳನ್ನು ಗುರುತಿಸುವುದು ಸುಲಭ ಕಾರ್ಯವಲ್ಲ. ಗುರುತಿಸಿದುದನ್ನು ಸರಿಯಾಗಿ ಅಭಿವ್ಯಕ್ತಗೊಳಿಸುವುದೂ ಸುಲಭವಲ್ಲ. ಡಾ. ಜಿಡ್ಡಿಮನಿಯವರು ಈ ಎರಡೂ ಕಾರ್ಯಗಳಲ್ಲಿ ಬಹುಮಟ್ಟಿಗೆ ಯಶಸ್ಸು ಸಾಧಿಸಿದ್ದಾರೆ. ಈ ಯಶಸ್ಸಿಗೆ ಕಾರಣ, ಅವರಲ್ಲಿರುವ ಚಿಂತನಶೀಲಪ್ರಜ್ಞೆ ಮತ್ತು ವ್ಯಾಪಕ ವ್ಯಾಸಂಗ. ಇಲ್ಲಿ ಮೂಲಕೃತಿಗಳಲ್ಲದೆ, ಈ ವಿಷಯ ಕುರಿತು ಕನ್ನಡ ಮತ್ತು ಇತರ ಭಾಷೆಗಳಲ್ಲಿ ಪ್ರಕಟವಾದ ವಿಮರ್ಶೆಗಳು ಇವರಿಗೆ ಸರಿಯಾದ ದಾರಿತೋರಿಸಿವೆ. ಇದೆಲ್ಲದರ ಫಲವಾಗಿ ಈ ಉತ್ತಮ ಪ್ರಬಂಧ ಮೂಡಿಬಂದಿದೆ.

ಸಾಮಾನ್ಯವಾಗಿ, ನಮ್ಮ ಪಿಎಚ್.ಡಿ. ಪ್ರಬಂಧಗಳು ಸಂಗತಿನಿಷ್ಠ ಶೋಧ, ವಿವರಣಾತ್ಮಕ ಬರೆವಣಿಗೆಗಳಿಗೆ ಸೀಮಿತವಾಗಿರುವ ಇಂದಿನ ಸಂದರ್ಭದಲ್ಲಿ. ಈ ಪ್ರಬಂಧ ಸಂಗತಿನಿಷ್ಠಕ್ಕಿಂತ ಸ್ವಭಾವನಿಷ್ಠ ಶೋಧ, ವಿವರಣಾತ್ಮಕ್ಕಿಂತ ವ್ಯಾಖ್ಯಾನಾತ್ಮಕ ಬರೆವಣಿಗೆಗಳಿಗೆ ತನ್ನಶಕ್ತಿಯನ್ನು ಕೇಂದ್ರೀಕರಿಸಿದೆ. ಡಾ. ಜಿಡ್ಡಿಮನಿಯವರು ತಮ್ಮಲ್ಲಿ ಇಂಥ ಶಕ್ತಿ ಇರುವುದನ್ನು ವಿದ್ಯಾರ್ಥಿ ದೆಸೆಯಲ್ಲಿಯೇ ತೋರಿಸಿಕೊಟ್ಟಿದ್ದರು. ಈಗ ವರ್ಧಿಸಿದೆ. ಅದು ಇನ್ನೂ ವರ್ಧಿಸಲೆಂದು ಹಾರೈಸುತ್ತೇನೆ.

ಮಹಾದೇವ ಜಿಡ್ಡಿಮನಿ, ಮೂಡಲಗಿ

ಆಕರ : ಮಾರ್ಗ ಸಂಪುಟ–೬

೧೪೯

ಆಂಧ್ರ - ಕರ್ನಾಟಕ ಗಡಿ ಪ್ರದೇಶದ ಸ್ಥಳನಾಮಗಳು

೨೦೦೪

ಪಿಎಚ್.ಡಿ. ಪದವಿ ಪಡೆಯುವುದು ತುಂಬ ಸುಲಭ - ಎಂಬ ಪರಿಸ್ಥಿತಿ ಇಂದು ನಮ್ಮ ವಿಶ್ವವಿದ್ಯಾಲಯಗಳಲ್ಲಿ ನಿರ್ಮಾಣವಾಗಿದೆ. ಇದರ ಪರಿಣಾಮವಾಗಿ ನಮ್ಮಲ್ಲಿ ಪ್ರತಿವರ್ಷ ಸಾಂಪ್ರದಾಯಿಕ ಪ್ರಬಂಧಗಳು ದೊಡ್ಡ ಪ್ರಮಾಣದಲ್ಲಿ ಹುಟ್ಟುತ್ತಲಿವೆ. ಇಂಥ ಸಂದರ್ಭದಲ್ಲಿ ಸೃಷ್ಟಿಯಾಗಿದೆ, ಈ ಅಸಂಪ್ರದಾಯಿಕ ಪ್ರಬಂಧ "ಆಂಧ್ರ - ಕರ್ನಾಟಕ ಗಡಿಭಾಗದ ಸ್ಥಳನಾಮಗಳು."

"ಎಡೆಗಳು ಹೇಳುವ ಕಂನಾಡ ಕಥೆ"ಯ ಮೂಲಕ ೧೯೪೭ರಲ್ಲಿ ಸ್ಥಳನಾಮಗಳ ಅಧ್ಯಯನ ನಮ್ಮಲ್ಲಿ ನಿರ್ದಿಷ್ಟವಾಗಿ ಕಾಣಿಸಿಕೊಂಡು, ೧೯೭೯ರಲ್ಲಿ ಕೆಮ್ತೂರು ರಘುಪತಿಭಟ್ ಅವರು ಪಿಎಚ್.ಡಿ. ಅಧ್ಯಯನಕ್ಕೆ ಆಯ್ದುಕೊಳ್ಳುವ ಮೂಲಕ ಅದಕ್ಕೆ ಶೈಕ್ಷಣಿಕ ಶಿಸ್ತು-ಮಾನ್ಯತೆ ಪ್ರಾಪ್ತವಾಯಿತು. ಇಲ್ಲಿಂದ ಮುಂದೆ ೩-೪ ಪಿಎಚ್.ಡಿ. ಪ್ರಬಂಧಗಳು ಹೊರಬಂದರೂ ಅಲ್ಲಿ ರೂಪನಿಷ್ಠ ಅಧ್ಯಯನ, ಕಲ್ಪಿತ ಫಲಿತಗಳು ಎದ್ದುಕಾಣುತ್ತವೆ. ಇಂಥ ಪರಿಸ್ಥಿತಿಯಲ್ಲಿ ರೂಪಗೊಂಡ ಡಾ. ದೇವೇಂದ್ರಪ್ಪ ಅವರ ಕೃತಿ ತನ್ನ ವೈಜ್ಞಾನಿಕ ನಿಲುವು, ಹೊಸ ಆಯಾಮಗಳಿಂದಾಗಿ ಕನ್ನಡಕ್ಕೆ ಒಂದು ಉತ್ತಮ ಕೊಡುಗೆಯೆನಿಸಿದೆ.

ಒಂದು ಮಾತನ್ನು ಆರಂಭದಲ್ಲಿಯೇ ಹೇಳಬೇಕು. ಕನ್ನಡದಲ್ಲಿ ಸ್ಥಳನಾಮ ಅಧ್ಯಯನಕ್ಕೆ ಅವಶ್ಯವಾಗಿರುವ ಪೂರಕ ಸಾಮಗ್ರಿ, ಪ್ರಬಂಧ ಮಾದರಿಗಳು ಪೂರ್ಣಪ್ರಮಾಣದಲ್ಲಿ ಬೆಳೆದುನಿಂತಿಲ್ಲ. ದ್ವಿಭಾಷಿಕ ಪ್ರದೇಶದ ಸ್ಥಳನಾಮಗಳ ಅಧ್ಯಯನ ಮಾದರಿ ಇನ್ನೂ ಕಣ್ಣು ತೆರೆದಿಲ್ಲ. ಹೀಗಾಗಿ ಇಲ್ಲಿ ಹೊಸ ಮಾದರಿಯನ್ನು ಸೃಷ್ಟಿಸಿಕೊಂಡು "ದಾರಿಯೂ ತಾನೇ, ದಾರಿಕಾರನೂ ತಾನೇ" ಎಂಬಂತೆ ಶ್ರೀ ದೇವೇಂದ್ರಪ್ಪ ಅವರು ಈ ಕಾರ್ಯವನ್ನು ಪೂರೈಸಿದ್ದಾರೆ.

ಸ್ಥಳನಾಮ ಶಾಸ್ತ್ರಜ್ಞನಿಗೆ ಬಹೂಜ್ಞತೆ ಅಗತ್ಯ. ಸ್ಥಳನಾಮಗಳು ಭಾಷಿಕ ಘಟಕಗಳಾಗಿರುವುದರಿಂದ ಅವನು ಪ್ರಥಮದಲ್ಲಿ ಭಾಷಾಶಾಸ್ತ್ರಜ್ಞನಾಗಬೇಕಾಗುತ್ತದೆ. ಹಳೆಯ ರೂಪ, ಹೊಸರೂಪ, ಹೊಸರೂಪದಲ್ಲಿಯೇ ಬರೆಹರೂಪ-ಬಳಕೆಯ ರೂಪ, ಇವುಗಳ ರಚನೆ-ಅರ್ಥ, ಈ ರಚನೆ-ಅರ್ಥಗಳ ಐತಿಹಾಸಿಕ ಬೆಳವಣಿಗೆ ಇತ್ಯಾದಿಗಳ ತಿಳಿವಳಿಕೆ ಅವನಿಗೆ ಅವಶ್ಯ. ಸಾಲದುದಕ್ಕೆ ಇಂಥ ನಾಮಗಳು ಹುಟ್ಟಲು ಕಾರಣವಾಗಿರುವ ಭೌಗೋಳಿಕ, ಐತಿಹಾಸಿಕ, ಸಾಂದರ್ಭಿಕ ಅಂಶಗಳನ್ನು ಅವನು ತಿಳಿದಿರಬೇಕಾಗುತ್ತದೆ. ಈ ಬರೆವಣಿಗೆ ಇಂಥ ಎಲ್ಲ ಮಗ್ಗಲುಗಳ ಬಗ್ಗೆ ತೀವ್ರ ಗಮನ ಹರಿಸಿದೆ.

ಎಂಟು ಅಧ್ಯಾಯಗಳ ಈ ಪ್ರಬಂಧವು ಪೀಠಿಕೆ, ರೂಪನಿಷ್ಠ ಅಧ್ಯಯನ, ಗುಣನಿಷ್ಠ ಅಧ್ಯಯನಗಳೆಂಬ ಮೂರು ಮೈಗಳನ್ನು ಪಡೆದುಕೊಂಡಿದೆ. ವಿದ್ವಾಂಸನಾದವನಿಗೆ ತನ್ನ ಕೃತಿರಚನೆಯ ಉದ್ದೇಶ, ವ್ಯಾಪ್ತಿ ಮತ್ತು ವಿಧಾನಗಳ ಸ್ಪಷ್ಟ ತಿಳಿವಳಿಕೆ, ಈವರೆಗೆ ಆ ಕ್ಷೇತ್ರದಲ್ಲಿ ನಡೆದ ಕೆಲಸದ ಸ್ವರೂಪಗಳು ನಿಖರವಾಗಿ ಗೊತ್ತಿದ್ದಷ್ಟೂ ಅವನ ಬರೆವಣಿಗೆ ಹೆಚ್ಚು ಶಿಸ್ತಿಗೆ ಒಳಪಡುತ್ತದೆ. ಡಾ. ದೇವೇಂದ್ರಪ್ಪ ಇಂಥ ಗಟ್ಟಿಮುಟ್ಟಾದ ಹಿನ್ನೆಲೆ ಗಳಿಸಿಕೊಂಡೇ ವಿಷಯ ಪ್ರವೇಶ ಮಾಡಿದುದನ್ನು ಆರಂಭದ ಎರಡು ಅಧ್ಯಾಯಗಳು ಸ್ಪಷ್ಟಪಡಿಸುತ್ತವೆ.

"ಸ್ಥಳನಾಮಗಳ ಸ್ವರೂಪ ಮತ್ತು ವರ್ಗೀಕರಣ" ಪ್ರಕರಣವು ಸ್ಥಳ ಮತ್ತು ನಾಮಗಳ ಸಂಬಂಧವನ್ನು, "ಸ್ಥಳನಾಮಗಳ ಭಾಷಿಕ ಅಧ್ಯಯನ" ಪ್ರಕರಣವು ನಾಮಗಳ ರಚನೆಯನ್ನು ತಿಳಿಸಿಕೊಡುವ ರೂಪಾತ್ಮಕ ಅಭ್ಯಾಸಗಳೆನಿಸಿವೆ. ಇಲ್ಲಿ ಕ್ಷೇತ್ರಾಧ್ಯಯನ ಮತ್ತು ಶಾಸ್ತ್ರಾಧ್ಯಯನಗಳು ತುಂಬ ಗಾಢವಾಗಿ ಮೇಳೈಸಿವೆ. ಸ್ಥಳನಾಮಗಳಲ್ಲಿ ಹೆಚ್ಚು ಸವಕಳಿಗೆ ಗುರಿಯಾಗುವವು ವಾರ್ಗಿಕಗಳು. ಇವುಗಳನ್ನು ಬಿಡಿಸಿಕೊಳ್ಳುವುದು, ಅರ್ಥ ಹೇಳುವುದು ಕಷ್ಟದ ಕೆಲಸ. ಹೀಗಿದ್ದೂ ನಾಲ್ಕು ತಾಲೂಕುಗಳ ೪೮೯ ಗ್ರಾಮಗಳಿಂದ ೬೮ ವಾರ್ಗಿಕಗಳನ್ನು ಇಲ್ಲಿ ಗುರುತಿಸಲಾಗಿದೆ. ಈ ಪಟ್ಟಿ ಬಹುಮಟ್ಟಿಗೆ ಸಮಗ್ರವಾಗಿದ್ದರೂ ವಾರ್ಗಿಕವನ್ನು ಬಿಚ್ಚಿಕೊಳ್ಳುವಲ್ಲಿ, ಅದಕ್ಕೆ ಅರ್ಥ ಹೇಳುವಲ್ಲಿ ಇನ್ನಷ್ಟು ಗಮನಕೊಡುವುದು ಅವಶ್ಯವಿತ್ತು. ಈ ೬೮ರಲ್ಲಿ ಕನ್ನಡ ವಾರ್ಗಿಕ ಹೆಚ್ಚು, ತೆಲುಗು ವಾರ್ಗಿಕ ಕಡಿಮೆ ಎಂಬ ಹೇಳಿಕೆ, ಬಳ್ಳಾರಿ ಸಿರುಗುಪ್ಪ ಏಕೆ? ಆದವಾನಿ ಆಲೂರು ತಾಲೂಕುಗಳೂ ಮೂಲತಃ ಕನ್ನಡಿಗರ ನೆಲೆಗಳೆಂದು ಸ್ಪಷ್ಟಪಡಿಸುತ್ತದೆ. ಈ ಪ್ರಕರಣದಲ್ಲಿಯ ವಾರ್ಗಿಕಗಳ ಪ್ರಸರಣ, ಪ್ರಮಾಣ, ವಿಶೇಷಣ, ಸ್ವರಾಂತ-ವ್ಯಂಜನಾಂತ, ಮಹಾಪ್ರಾಣ, ಹ್ರಸ್ವೀಕರಣ, ಬರೆಹ-ಬಳಕೆ, ದ್ವಿಭಾಷಿಕಸ್ವರೂಪ, ತೆಲುಗಿನ ಪ್ರಭಾವ ಇತ್ಯಾದಿಗಳು, ಯಾವ ಅಂಶವೂ ಚರ್ಚೆಯಿಂದ ಹೊರಗುಳಿಯದಂತೆ ವಹಿಸಿದ ಎಚ್ಚರವನ್ನು ಸೂಚಿಸುತ್ತವೆ.

ಈ ಪ್ರಬಂಧದ ಮೂರನೆಯ ಮೈ, ಮುಖ್ಯ ಮೈಯೆಂದರೆ ಮೌಖಿಕ ಪರಂಪರೆ, ಭಾಷೆಯ ಅವಸ್ಥಾಂತರದ ಕುರುಹುಗಳು, ಸಾಮಾಜಿಕ ಅಧ್ಯಯನ -ಈ ಪ್ರಕರಣಗಳನ್ನೊಳಗೊಂಡ ಭಾಗ. ಇದು ಅರ್ಥನಿಷ್ಠ ಅಧ್ಯಯನವನ್ನು ಪ್ರತಿನಿಧಿಸುತ್ತಿದ್ದು, ಇಲ್ಲೆಲ್ಲ ಈ ಪ್ರದೇಶದ ಪ್ರಾಣವನ್ನು ಶೋಧಿಸುವ ಪ್ರಯತ್ನಕಂಡುಬರುತ್ತದೆ. ಸ್ಥಳನಾಮಗಳನ್ನು ಕುರಿತು ಈವರೆಗಿನ ಕನ್ನಡ ಬರೆವಣಿಗೆ ರೂಪನಿಷ್ಠ ಅಧ್ಯಯನದ ನೆಲೆಗೆ ಬಂದು ನಿತಿದ್ದರೆ, ಈ ಭಾಗವು ಅರ್ಥನಿಷ್ಠ ನೆಲೆಯನ್ನು ಹೇಗೆ ಕಂಡುಕೊಳ್ಳಬೇಕೆಂಬುದನ್ನು ಪ್ರಥಮಬಾರಿಗೆ ತೋರಿಸಿ ಕೊಟ್ಟಿದೆ. ಒಟ್ಟಾರೆ ಇದನ್ನು "ಸ್ಥಳನಾಮಗಳ ಸಾಂಸ್ಕೃತಿಕ ಅಧ್ಯಯನ"ವೆಂದು ಕರೆಯಬಹುದಾಗಿದೆ. ಇಲ್ಲಿ ವದಂತಿ, ಪುರಾಣ, ಗಾದೆ, ಒಗಟು, ಒಡಪು, ಕಥೆ, ಜನಪದ ಹಾಡುಗಳಲ್ಲಿ ಸ್ಥಳನಾಮಗಳು ಹಾಸುಹೊಕ್ಕಾಗಿ ಸೇರಿಕೊಂಡಿರುವ ರೀತಿಯ ಶೋಧವು ಈ ಪ್ರದೇಶದ ಜನಪದರ ಭಾವನೆಗಳ ಶೋಧವೇ ಆಗಿದೆ. ಇದಲ್ಲದೆ ಸ್ಥಳನಾಮಗಳು ಚರಿತ್ರೆಯಲ್ಲಿ ಹೆಪ್ಪುಗಟ್ಟುವ, ಕಾಲಕ್ರಮದಲ್ಲಿ ಅವಸ್ಥಾಂತರ ಪಡೆಯುವ ರೀತಿಯನ್ನು ಶಾಸನ, ಕೈಫಿಯತ್ತು ಇತ್ಯಾದಿಗಳನ್ನಾಧರಿಸಿ ತೋರಿಸಿದ ರೀತಿ ಹೊಸಬಗೆಯದಾಗಿದೆ. ಸಮಾಜದಲ್ಲಿ ಭಾಷೆ ಹುಟ್ಟುತ್ತದೆ, ಭಾಷೆಯಲ್ಲಿ ನಾಮ ಹುಟ್ಟುತ್ತದೆ. ಹೀಗಾಗಿ ನಾಮಗಳ ಅಭ್ಯಾಸವು ಸಮಾಜದ ಅಭ್ಯಾಸವೇ ಆಗಿದೆ ಎಂಬ ಆತ್ಯಂತಿಕ ಸತ್ಯವನ್ನು ಅರ್ಥಮಾಡಿಕೊಂಡಿರುವ ಡಾ. ದೇವೇಂದ್ರಪ್ಪ ಅವರು ಇಲ್ಲಿ ಜಾತಿ, ವೃತ್ತಿ, ವ್ಯಕ್ತಿ ಇವುಗಳಿಂದ ನಾಮ ನಿರ್ಮಾಣವಾಗುವುದನ್ನು, ಇವು ಅನುಭವಿಸುವ ಸಂಸ್ಕೃತಕರಣ, ದೇಶೀಕರಣ, ಪ್ರತಿನಾಮಕರಣ ಪ್ರಕ್ರಿಯೆಗಳನ್ನು ತುಂಬ ವಿವರವಾಗಿ ಪ್ರತಿಪಾದಿಸಿದ್ದಾರೆ.

ಹೀಗೆ ಅಧ್ಯಯನಕ್ಕೆ ಎತ್ತಿಕೊಂಡಿರುವ ವಿಷಯದ ಬಗೆಗಿನ ಸ್ಪಷ್ಟ ತಿಳಿವಳಿಕೆ, ಅದರ ಬಾಹ್ಯ "ಸ್ವರೂಪ"ವನ್ನು ಬಿಚ್ಚಿಕೊಡುವ, ಆಂತರಿಕ "ಸ್ವಭಾವ"ವನ್ನು ಬಿಡಿಸಿ ನೋಡುವ ಸರಿಯಾದ ರೀತಿಗಳಿಂದಾಗಿ ಇದು ಕನ್ನಡದ ಉತ್ತಮ ಪ್ರಬಂಧವೆನಿಸಿದೆ. 'ನಿರ್ದಿಷ್ಟ'ದ ಚರ್ಚೆಗೆ ಇನ್ನಷ್ಟು ಅವಕಾಶ ಪ್ರಾಪ್ತವಾಗಿದ್ದರೆ, ಪುನರುಕ್ತಿ ಒಂದಿಷ್ಟು ಕಡಿಮೆಯಾಗಿದ್ದರೆ ಇದು ಇನ್ನೂ ಉತ್ತಮ ಪ್ರಬಂಧವೆನಿಸುತ್ತಿದ್ದಿತು. ನಾಮವಿಜ್ಞಾನ ಕನ್ನಡದಲ್ಲಿ ಬೆಳೆಯುತ್ತಲಿರುವ ಶಿಸ್ತು, ಇದರ ಬೆಳವಣಿಗೆಗಾಗಿ ಡಾ. ದೇವೇಂದ್ರಪ್ಪ ಅವರೂ ಬೆಳೆಯಲೆಂದು ಹಾರೈಸುತ್ತೇನೆ.

ದೇವೇಂದ್ರಪ್ಪ ಜಾಜಿ, ಪಿ.ಜಿ. ಸೆಂಟರ್, ಸಂಡೂರ

ಆಕರ : ಮಾರ್ಗ ಸಂಪುಟ–೬

■■

೧೯೦

ಶರಣಸಮಾಜ

೨೦೦೪

ಇಂದು ಶಿಕ್ಷಣಸಂಸ್ಥೆಗಳಲ್ಲಿ ಸದಸ್ಯರ ಸಂಖ್ಯೆ ಕ್ಷೀಣಿಸುತ್ತ, ವ್ಯಕ್ತಿಗಳ ಸಂಖ್ಯೆ ವರ್ಧಿಸುತ್ತ ನಡೆದಿದೆ. ಪ್ರತಿಯೊಬ್ಬರೂ ಸದಸ್ಯಸ್ವಾತಂತ್ರ್ಯಕ್ಕೆ ಬದಲು ವ್ಯಕ್ತಿಸ್ವಾತಂತ್ರ್ಯವನ್ನು ಬಯಸುತ್ತಲಿದ್ದಾರೆ. ಇದರಿಂದಾಗಿ ಸಂಸ್ಥೆ ಬಡವಾಗಿ, ವ್ಯಕ್ತಿ ಬಲವಾಗುತ್ತಲಿದ್ದಾನೆ. ಈ ಕೆಟ್ಟ ವಾತಾವರಣದಿಂದ ಶಿಕ್ಷಣಸಂಸ್ಥೆಗಳು ಮುಕ್ತವಾಗಲೆಂದು ಹಾರೈಸುತ್ತ, ಸದಸ್ಯಪ್ರಜ್ಞೆಯಿಂದ ಪ್ರಿನ್ಸಿಪಾಲ ಹುದ್ದೆ ನಿರ್ವಹಿಸಿದ ಶ್ರೀ ಸಿ. ವಿ. ಮುಳಗುಂದ ಅವರನ್ನು ಕುರಿತ ಈ ಗೌರವ ಗ್ರಂಥಕ್ಕೆ ನಾಲ್ಕು ಮಾತು ಬರೆಯುತ್ತಲಿದ್ದೇನೆ.

ಶ್ರೀ ಮುಳಗುಂದ ಅವರಿಗೂ ನನಗೂ ನಾಲ್ಕು ದಶಕಗಳ ಸಂಬಂಧ. ನಾನು ಮೊದಲು ನೋಡಿದ್ದು ಪ್ರಾಧ್ಯಾಪಕ ಮುಳಗುಂದ ಅವರನ್ನು, ಆಮೇಲೆ ಪ್ರಿನ್ಸಿಪಾಲ ಮುಳಗುಂದ ಅವರನ್ನು, ನಿವೃತ್ತರಾದ ಬಳಿಕ ಬಹುಮುಖಿ ಆಸಕ್ತಿಯ ಮುಳಗುಂದ ಅವರನ್ನು. ಇದೆಲ್ಲದಕ್ಕೂ ತಾಯಿಬೇರು ಅವರ ಸದಸ್ಯಪ್ರಜ್ಞೆ.

ನಾನು ವ್ಯಕ್ತಿಗಳನ್ನು ಬುದ್ಧಿವಂತರು, ಶ್ರದ್ಧಾವಂತರು ಎಂದು ವರ್ಗೀಕರಿಸುತ್ತೇನೆ ಮತ್ತು ಶ್ರದ್ಧಾವಂತರನ್ನು ವಿಶೇಷ ಮೆಚ್ಚುತ್ತೇನೆ. ನಮ್ಮಿಬ್ಬರ ಸಂಬಂಧದ ಪ್ರಥಮ ಹಂತದಲ್ಲಿಯೇ ನಾನು ಶ್ರೀ ಮುಳಗುಂದ ಅವರಲ್ಲಿ ಗುರುತಿಸಿದ್ದು, ಶ್ರದ್ಧಾವಂತಿಕೆಯನ್ನು. ಈ ಮೌಲ್ಯದ ಆವರಣದಲ್ಲಿ ಅವರು ವಿದ್ಯೆಯನ್ನು, ವಿದ್ಯಾರ್ಥಿಗಳನ್ನು, ವಿದ್ಯಾಸಂಸ್ಥೆಯನ್ನು ಪ್ರೀತಿಸುವ ಸದಸ್ಯಪ್ರಾಧ್ಯಾಪಕರಾಗಿ ವಿಜಾಪುರದಲ್ಲಿ ಬೆಳೆದುಬಂದರು.

ಇದನ್ನು ಗುರುತಿಸಿದ ಮುದ್ದೇಬಿಹಾಳ ನಾಗರಿಕರು, ತಮ್ಮಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದ ಕಾಲೇಜಿಗೆ ಶ್ರೀ ಮುಳಗುಂದ ಅವರನ್ನು ಪ್ರಿನ್ಸಿಪಾಲರೆಂದು ಬರಮಾಡಿಕೊಂಡರು. ಉತ್ತರ ಕರ್ನಾಟಕದ ಶಿಕ್ಷಣಸಂಸ್ಥೆಗಳು ಲಿಂಗಾಯತರ ತ್ಯಾಗದಲ್ಲಿ ತಲೆಯೆತ್ತಿದುದು ಇಂದು ಇತಿಹಾಸ. ಅವು ಸಾಮಾನ್ಯವಾಗಿ ಸಾಂಘಿಕ ಕನಸುಗಳು. ಮುದ್ದೇಬಿಹಾಳ ಕಾಲೇಜು ಮಾತ್ರ ವೈಯಕ್ತಿಕ, ಅದರಲ್ಲಿಯೂ ಮಹಿಳೆಯ ಕನಸು. ಈ ಕನಸುಗಾರ್ತಿ ಮಾತೋಶ್ರೀ ಚಿನಿವಾರ ಗಂಗಮ್ಮನವರು 'ಸೋಹಂ' ಸಂಸ್ಕೃತಿಯ ಸೃಷ್ಟಿಯಲ್ಲ. ೧೨ನೆಯ ಶತಮಾನದಷ್ಟು ಪೂರ್ವದಲ್ಲಿಯೇ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಿದ ಬಸವಣ್ಣನವರ 'ದಾಸೋಹಂ' ಸಂಸ್ಕೃತಿಯ ಸೃಷ್ಟಿ. ಹೀಗಾಗಿ ಮುದ್ದೇಬಿಹಾಳದಂಥ ನಿರ್ವಾತ ಪ್ರದೇಶದಲ್ಲಿ ಪವಾಡವೆಂಬಂತೆ ಅವರಿಂದ ಕಾಲೇಜು ಉದ್ಭವಿಸಿತು. ಇಂಥ ಶುದ್ಧ ಸಂಕಲ್ಪದ ವಿದ್ಯಾಸಂಸ್ಥೆಗೆ ಪ್ರಿ. ಮುಳಗುಂದ ಅವರು ಪ್ರಿನ್ಸಿಪಾಲರಾಗಿ ಬಂದರು.

ಪ್ರಥಮ ಪ್ರಿನ್ಸಿಪಾಲ ಒಂದು ಅವಕಾಶವೂ ಹೌದು, ಒಂದು ಆಹ್ವಾನವೂ ಹೌದು. ಪ್ರಿ. ಮುಳಗುಂದ ಅವರು ಇಲ್ಲಿಯೂ ಪ್ರಯೋಗಿಸಿದುದು ವ್ಯಕ್ತಿಪ್ರಜ್ಞೆಯನ್ನಲ್ಲ, ಸದಸ್ಯಪ್ರಜ್ಞೆಯನ್ನು. ವ್ಯಕ್ತಿಗೆ 'ನಾನು' ಮುಖ್ಯ, ಸದಸ್ಯನಿಗೆ 'ನಾವು' ಮುಖ್ಯ. ಈ ಮನೋಧರ್ಮವಿದ್ದರೆ ಮಾತ್ರ ಪ್ರಿನ್ಸಿಪಾಲರು ನೆಲದ ಮರೆಯ ಬೀಜವಾಗಿ, ಕಾಲೇಜನ್ನು ನೆಲದ ಮೇಲೆ ಮರವಾಗಿ-ಮಾಮರವಾಗಿ ಬೆಳೆಸುತ್ತಾರೆ. ಪ್ರಿ. ಮುಳಗುಂದ ಅವರು ಕಾಲೇಜನ್ನು ಬೆಳೆಸಿದ್ದು ಹೀಗೆ.

ಇಂದು 'ಜ್ಞಾನ' ವಿದ್ಯೆಯಾಗಿಯೂ ಉಳಿಯದೆ, ಶಿಕ್ಷಣವಾಗಿ ಬಿಟ್ಟಿದೆ. ಏಕೆ? ಶಿಕ್ಷಣವಾಗಿಯೂ ಉಳಿಯುತ್ತಿಲ್ಲ. ಇಂಥ ಕಾಲದಲ್ಲಿ ಶಿಕ್ಷಣವು ಒಂದು ಸೃಜನಶೀಲ ಪ್ರಕ್ರಿಯೆಯಾಗಬೇಕೆಂಬ - ಎಚ್ಚರದಿಂದ ಶ್ರೀ ಮುಳಗುಂದ ಅವರು ಕಾಲೇಜನ್ನು ಕಟ್ಟಿದರು. ಹೀಗಾಗಿ ಕ್ಷಿಪ್ರದಲ್ಲಿಯೇ ಅದಕ್ಕೆ ದೊಡ್ಡ ಹೆಸರು ಪ್ರಾಪ್ತವಾಯಿತು.

ಇಂದು ಶ್ರೀ ಮುಳಗುಂದ ಅವರು ಧಾರವಾಡದಲ್ಲಿ ನಿವೃತ್ತ ಜೀವನ ನಡೆಸುತ್ತಲಿದ್ದಾರೆ. ನನ್ನ ದೃಷ್ಟಿಯಲ್ಲಿ ನಿವೃತ್ತಜೀವನವನ್ನು ಸಾರ್ವಜನಿಕವಾಗಿ ಬೆಳೆಸಬೇಕು. ದುರ್ದೈವದ ಸಂಗತಿಯೆಂದರೆ ಸಾರ್ವಜನಿಕ ಹಣದಲ್ಲಿ ವಿದ್ಯೆಕಲಿತು, ಸಾರ್ವಜನಿಕ ಹಣದಲ್ಲಿ ನೌಕರಿ ಮಾಡಿ, ಇಷ್ಟು ಸಾಲದೆಂಬಂತೆ ನಿವೃತ್ತರಾದ ಬಳಿಕ ಸಾರ್ವಜನಿಕ ಸಂಸ್ಥೆಯಲ್ಲಿ ಮತ್ತೂ ದೊಡ್ಡ ಪಗಾರದ ನೌಕರಿ ಮುಂದುವರಿಸುವುದು ಸಾಮಾಜಿಕ ಶೋಷಣೆಯೇ ಸರಿ. ಶ್ರೀ ಮುಳಗುಂದ ಅವರು ಇಂಥ ಯಾವ ಗೋಜಿಗೂ ಹೋಗದೆ, ತಮ್ಮ ನಿವೃತ್ತ ಜೀವನವನ್ನು ಧಾರವಾಡದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡರು.

ಹೀಗೆ ಶಿಕ್ಷಕರಾಗಿ ಜೀವನ ಪ್ರಾರಂಭಿಸಿ, ಪ್ರಿನ್ಸಿಪಾಲರಾಗಿ ಜೀವನ ಸವೆಯಿಸಿ, ಈಗ ಸಾಮಾಜಿಕವಾಗಿ ವಿಸ್ತರಿಸಿಕೊಳ್ಳುತ್ತಲಿರುವ ಶ್ರೀ ಮುಳಗುಂದ ಅವರಿಗೆ 'ಶರಣ ಸಮಾಜ' ಹೆಸರಿನ ಗೌರವಗ್ರಂಥ ಅರ್ಪಿಸುತ್ತಿರುವುದು ತುಂಬ ಸೂಕ್ತ.

'ಶರಣ' ಎಂದರೆ ಯಾರು? 'ಸಮಾಜ' ಎಂದರೆ ಏನು? ನನ್ನ ದೃಷ್ಟಿಯಲ್ಲಿ ಶರಣನೆಂದರೆ ವ್ಯಕ್ತಿಯಲ್ಲ, ಸದಸ್ಯ. ಭಾರತೀಯರದು 'ಅಹಂ ಬ್ರಹ್ಮಾಸ್ಮಿ' ಎಂಬ 'ವ್ಯಕ್ತಿಪ್ರಜ್ಞೆ'ಯ ಸಂಸ್ಕೃತಿ. ಜೀವ-ದೇವರಲ್ಲಿ ಅಭೇದ ಹೇಳುವ ಇದು, ಜೀವ-ಜೀವರಲ್ಲಿ ಭೇದವನ್ನು ಹೇಳುತ್ತ ಬಂದ ಸಂಸ್ಕೃತಿ. ಇದರಿಂದಾಗಿ ಭಾರತದಲ್ಲಿ ಒಳ್ಳೆಯ ವ್ಯಕ್ತಿಗಳು ಬೆಳೆದರೇ ಹೊರತು, ಒಳ್ಳೆಯ ಸದಸ್ಯರು ಬೆಳೆಯಲಿಲ್ಲ. ಹೀಗಾಗಿ ಭಾರತೀಯರು ವೈಯಕ್ತಿಕವಾಗಿ ಪ್ರಬಲರೂ, ಸಾಮಾಜಿಕವಾಗಿ ದುರ್ಬಲರೂ ಎನಿಸಿದರು. ಇಂಥ ದೌರ್ಬಲ್ಯ ಕಾರಣವಾಗಿ ಅವರು ಅನ್ಯರ ದಾಳಿಗೆ ಸೋಲುತ್ತಲೇ ಬಂದುದರಿಂದ, ಭಾರತ ಆಕ್ರಮಣಗಾರರ ನೆಲೆ ಎನಿಸಿತು.

ಈ ಸಾಮಾಜಿಕ ದೌರ್ಬಲ್ಯವನ್ನು ಅರ್ಥಮಾಡಿಕೊಂಡ ಬಸವಣ್ಣ ಜೀವ-ದೇವರಲ್ಲಿಯ ಅಭೇದದಂತೆ ಹೆಚ್ಚಿನದಾಗಿ ಜೀವ-ಜೀವರಲ್ಲಿಯೂ ಅಭೇದ ಸಂಸ್ಕೃತಿಯ ಬೀಜ ಬಿತ್ತಿದ. ಇದರಿಂದಾಗಿದ ವ್ಯಕ್ತಿಯೂ ಸಶಕ್ತ, ಸಮಾಜವೂ ಸಶಕ್ತವಾಗಿ ಬೆಳೆಯುವ ಹೊಸ ವಾತಾವರಣ ಸೃಷ್ಟಿಯಾಯಿತು. ಸಾಮಾಜಿಕ ಬೇಜವಾಬ್ದಾರಿಯ ದೈವಿಕ 'ವ್ಯಕ್ತಿ'ಗಳಿಗೆ ಬದಲು, ಸಾಮಾಜಿಕ ಜವಾಬ್ದಾರಿಯ ದೈವಿಕ 'ಸದಸ್ಯ'ರು ಅಂದರೆ ಶರಣರು ಬೆಳೆದು ಬಂದರು. ವಚನಕಾರರ ದೃಷ್ಟಿಯಲ್ಲಿ ಇಂಥವರ ಜೀವನ ಸಮುದಾಯವೇ ಸಮಾಜ.

೧೨ನೆಯ ಶತಮಾನದಲ್ಲಿ ಸೃಷ್ಟಿಯಾದ ಇಂಥ ಶರಣ ಸಮಾಜದ ಅಧ್ಯಯನವನ್ನು ಕೇಂದ್ರವಾಗಿಟ್ಟುಕೊಂಡು ರೂಪಿಸಿದುದಾಗಿದೆ, ಈ ಗೌರವ ಗ್ರಂಥ. ಈ ವರೆಗೆ ಶರಣರನ್ನು ಕುರಿತು ನಡೆದ ಧಾರ್ಮಿಕ, ಸಾಹಿತ್ಯಿಕ ಅಧ್ಯಯನ ವಿಪುಲ, ಸಾಮಾಜಿಕ ಅಧ್ಯಯನ ವಿರಳ. ಈ ಕೊರತೆಯನ್ನು ತುಂಬಿಕೊಡುವ ದೃಷ್ಟಿಯಿಂದ ರೂಪಗೊಂಡ ಈ ಸಮಾಜಶಾಸ್ತ್ರೀಯ ಅಧ್ಯಯನದ ಗ್ರಂಥವನ್ನು ಸಮಾಜಶಾಸ್ತ್ರದ ಅಧ್ಯಾಪಕರಿಗೆ ಅರ್ಪಿಸುತ್ತಿರುವುದು ತುಂಬ ಔಚಿತ್ಯಪೂರ್ಣವಾದುದು.

ಕರ್ನಾಟಕದಲ್ಲಿ ಗೌರವಗ್ರಂಥ ಸಮರ್ಪಣೆ ಸಾಹಿತಿಗಳ ವಿಷಯದಲ್ಲಿ ಆರಂಭವಾಗಿ ಕ್ರಮೇಣ ಶಿಕ್ಷಣ, ಆಡಳಿತ, ಸಮಾಜ, ರಾಜಕಾರಣ, ಧರ್ಮ ಇತ್ಯಾದಿ ಕ್ಷೇತ್ರಗಳ ಗಣ್ಯರನ್ನೂ ತಬ್ಬಿಕೊಂಡು, ಒಂದು ಪ್ರಕಾರವಾಗಿಯೇ ಬೆಳೆದುಬಂದಿತು. ಏಕತಾನತೆಯನ್ನು ಮುರಿಯುವ ಉದ್ದೇಶದಿಂದ ಇದರಲ್ಲಿ ಕ್ವಚಿತ್ತಾಗಿ ಹಲವು ಪ್ರಯೋಗಗಳೂ ಜರುಗಿದವು. ಇಂಥ ಒಂದು ಪ್ರಯತ್ನವಾಗಿದೆ, ಈ ಗ್ರಂಥ.

ಸಂಪಾದಕರಾದ ಶ್ರೀ ಎಚ್. ವಿ. ನಾಗೇಶ ಅವರದು ಪ್ರಯೋಗಶೀಲ ಮನಸ್ಸು. ವಿಶೇಷತೆ ಅವರ ಕಾರ್ಯವಿಧಾನ, ಕಾರ್ಯ ವೈಖರಿ. ಹೀಗಾಗಿ ಅವರು ಸಂಭಾವನೆ ಗ್ರಂಥಗಳ ಸರಳ ದಾರಿ ಹಿಡಿಯದೆ, ಈ ಕೃತಿಗೆ ಒಂದು ಶೈಕ್ಷಣಿಕ ಶಿಸ್ತು ತಂದುಕೊಟ್ಟಿದ್ದಾರೆ. "ಶರಣರ ಸಮಾಜಶಾಸ್ತ್ರ"ದ ಹೊಸ ಹೊಳಹನ್ನು ಇಲ್ಲಿ ಮೂಡಿಸಿದ್ದಾರೆ.

ಇಂಥ ಮೌಲಿಕ ಗ್ರಂಥವನ್ನು ಶ್ರೀ ಮುಳಗುಂದ ಅವರು ಪ್ರಿನ್ಸಿಪಾಲರಾಗಿದ್ದ ಕಾಲೇಜಿನ "ಮಾತೋಶ್ರೀ ಗಂಗಮ್ಮ ವೀರಪ್ಪ ಚಿನಿವಾರ ಟ್ರಸ್ಟ" ಪ್ರಕಟಿಸುತ್ತಿರುವುದು ಗಮನಾರ್ಹ. ಸಂಸ್ಥೆಗಾಗಿ ದುಡಿದವರನ್ನು ಗೌರವಿಸುತ್ತಿರುವ ಈ ರೀತಿ ಅಭಿನಂದನಾರ್ಹ.

ಸಂ: ಎಚ್. ವಿ. ನಾಗೇಶ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೯೯೧

ಬೇಂದ್ರೆ ಅನುಸಂಧಾನ

೨೦೦೬

ಮೋಡದಿ ಮುಸುಕಿದ ರಾತ್ರಿ ತೀರಿತು
ನೋಡಿರಿ ಮುಗಿಲಿನ ಕೆಂಪು ಏರಿತು
ಹೂಡಿರಿ ಹಡಗವ, ಕಡ[ಲು]ಕ್ಕೇರಿತು
ನೋಡಿ ಕಡಿಯಿರೈ, ಮೇಲೆ ನಡೆಯಿರೈ, ತುತೂ ತುತೂ

ಬೇಂದ್ರೆಯವರ ಮೊದಲ ಕವನ (೧೯೧೮) 'ತುತ್ತೂರಿ'ಯ ಈ ಪದ್ಯ, ಒಂದು ಅರ್ಥಪೂರ್ಣ ರೂಪಕವಾಗಿದೆ. ಮೋಡ ಕವಿದಿದ್ದ ರಾತ್ರಿ ಹಿಂದೆ ಸರಿಯಹತ್ತಿದೆ; ಹಗಲಿಗಾಗಿ ಮುಗಿಲು ಕೆಂಪೇರುತ್ತಲಿದೆ; ಉಕ್ಕೇರುತ್ತಲಿರುವ ಕಡಲ ಮೇಲೆ ಹಡಗನ್ನು ಹೂಡಿರಿ; ಎಚ್ಚರದಿಂದ ಹುಟ್ಟು ಹಾಕಿ, ನೀರು ಕಡಿಯಿರಿ; ಸಮುದ್ರದ ಮೇಲೆ ಮುನ್ನಡೆಯಿರಿ- ಎಂದು ತುತ್ತೂರಿಯನ್ನೂದಿ ಊದಿ ಸಂಗಡಿಗರನ್ನು ಕೂಗಿ ಕರೆಯುವ ನಾವಿಕನ ಚಿತ್ರ ಈ ಪದ್ಯದಲ್ಲಿದೆ. ಇಲ್ಲಿಯ ನಾವಿಕ (ನಾಯಕ) ಮತ್ತಾರೂ ಅಲ್ಲ, ಆಧುನಿಕ ಕನ್ನಡ ಸಾಹಿತ್ಯದ ಅರುಣೋದಯ ಕಾಲದಲ್ಲಿ ಕನ್ನಡಿಗರನ್ನು ಎಚ್ಚರಿಸುತ್ತಲಿರುವ ದ. ರಾ. ಬೇಂದ್ರೆ ಅವರೇ ಆಗಿದ್ದಾರೆ.

ಹೀಗೆ, ಬೇಂದ್ರೆಯವರು ಗೆಳೆಯರನ್ನು ಕೂಗಿ ಕರೆದ ಕಾಲಘಟ್ಟದಲ್ಲಿ, ನಮ್ಮ ಹಳೆಯ ಸಾಹಿತ್ಯ ಮಾದರಿಗಳು ಸವಕಲಾಗಿದ್ದವು, ಹೊಸ ಮಾದರಿ ಹುಟ್ಟಿರಲಿಲ್ಲ. ಹೀಗಾಗಿ ನವೋದಯ ಸಾಹಿತ್ಯದ ಮೂಲ ಮಾದರಿಗಳನ್ನು ಶೋಧಿಸಿ, ಪರಿಷ್ಕರಿಸಿ ಕನ್ನಡಿಗರ ಕೈಗೆ ಕೊಡುವ ಕೆಲಸವನ್ನು ಇವರೇ ಮಾಡಬೇಕಾಗಿ ಬಂದಿತು.

ಈ ಸಾಹಿತ್ಯಮಾದರಿ ಬೇಂದ್ರೆಯವರಿಗೆ ಲಭ್ಯವಾದುದು. ಗೋಂದವಲೇಕರ ಮಹಾರಾಜ ಮೊದಲಾದವರ ಪ್ರಭಾವದಲ್ಲಿ ರೂಪಗೊಂಡ ಅವರ ಮನೆತನದ ಅವಧೂತ ಪರಂಪರೆಯಲ್ಲಿ. ಅವರು ಈ ಪರಂಪರೆಯ 'ಅವಧೂತಗೀತೆ' ಪ್ರಕಾರವನ್ನೇ 'ಭಾವಗೀತೆ'ಯನ್ನಾಗಿ ಪರಿಷ್ಕರಿಸಿಕೊಂಡಂತಿದೆ. ಈಗ ಅವರು, ಪಾರಮಾರ್ಥಕ್ಕೆ ಸೀಮಿತವಾಗಿದ್ದ ಆ ಪ್ರಕಾರವನ್ನು ಹೆಚ್ಚಿನದಾಗಿ ಸಾಂಸಾರಿಕ, ಸಾಮಾಜಿಕ, ನೈಸರ್ಗಿಕ ಇತ್ಯಾದಿಗಳಿಗೂ ವಿಸ್ತರಿಸಿಕೊಂಡರು. ಕನ್ನಡದಲ್ಲಿ ವಸ್ತುವಿನ ಹೊಸ ಹಾದಿಯನ್ನೂ ತೆರೆದರು.

ದೇಶಭಾಷಾಪ್ರೀತಿ ಅವಧೂತರ ಇನ್ನೊಂದು ಲಕ್ಷಣ. ಅವರು ತಮ್ಮ ತಮ್ಮ ರಾಜ್ಯಭಾಷೆಗಳಲ್ಲಿ, ಅದರಲ್ಲಿಯೂ ದೇಶೀಶೈಲಿಯಲ್ಲಿ ಸಾಹಿತ್ಯ ಸೃಷ್ಟಿಸುತ್ತ ಬಂದಿದ್ದಾರೆ. ಬೇಂದ್ರೆಯವರ ದೇಶೀಯ ಕನ್ನಡ ಬಳಕೆಗೆ ಕಾರಣ, ಪ್ರೇರಣೆ ಇಲ್ಲಿದೆ. ಇವರು ಪಂಡಿತ-ಪಾಮರ, ಬಡವ-ಬಲ್ಲಿದ, ನಾಗರಿಕ-ನಾಡಾಡಿ ಎಂಬ ಭೇದವನ್ನಲ್ಲಗಳೆದು 'ಕನ್ನಡ ಜೀವಾಳ'ವು ಕನ್ನಡಿಗರಿಗಾಗಿ ಕನ್ನಡಿಸಲ್ಪಡಬೇಕಾಗಿದೆ ಎನ್ನುತ್ತ, ಕನ್ನಡಿಗರ

ಜೀವಾಳವಾಗಿರುವ ದೇಶಿಯನ್ನು ಬಳಸಿದರೇನೋ ನಿಜ. ಮಿಕ್ಕವರು ಮಾತ್ರ ಅಂದು ಈ ಮಾತಿಗೆ ಕಿವಿಗೊಡದೆ ಶಿಷ್ಟಭಾಷೆ ಬಳಸಿ 'ಅಸ್ಮಿತೆ'ಯನ್ನು ಅವಗಣಿಸಿದರೆಂದೇ ಹೇಳಬೇಕು. ಆದುದರಿಂದ ಬೇಂದ್ರೆಯವರೊಂದಿಗೆ ಮರೆಯಾದ ಆ ದೇಶೀಶೈಲಿಯ ಕಾವ್ಯಪದ್ಧತಿಯನ್ನೂ, ಅವರು ಆರಂಭಿಸಿದ್ದ ಆಲೋಚನೆಗಳನ್ನೂ ಹುಡುಕುವ ಮತ್ತು ಹುಟ್ಟಿಸುವ ಕಾರ್ಯವನ್ನು ಅವರ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿರುವ "ದ. ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್" ಮಾಡಬೇಕಿದೆ. ಈ ಸಂಕಲ್ಪವನ್ನು ಸಾಕಾರಗೊಳಿಸುವುದಕ್ಕಾಗಿ ಪ್ರತಿಯೊಬ್ಬ ಕನ್ನಡಿಗನನ್ನು "ಬಾರೊ ಸಾಧನಕೇರಿಗೆ" ಎಂದು ಆತ್ಮೀಯವಾಗಿ ಸ್ವಾಗತಿಸುತ್ತೇನೆ.

'ಪ್ರಸಾರಾಂಗ' ಈ ವರ್ಷ ಟ್ರಸ್ಟ್ ಆರಂಭಿಸಿದ ಹೊಸ ಉಪಕ್ರಮ. ಇದರ ಅಂಗವಾಗಿ ಟ್ರಸ್ಟಿನ ಈ ಮೊದಲ ಪುಸ್ತಕ ಬೆಳಕು ಕಾಣುತ್ತಲಿರುವುದು ಹರುಷದ ಸಂಗತಿ. ಪ್ರಸಾರಾಂಗಕ್ಕೆ ಸೂಕ್ತ ತಳಹದಿ ಹಾಕುತ್ತಲಿರುವ ನಿರ್ದೇಶಕ ಡಾ. ಶ್ಯಾಮಸುಂದರ ಬಿದಕುಂದಿ ಅವರ ಪುಸ್ತಕ ಪ್ರೀತಿಗೆ ಅಭಿನಂದನೆಗಳು.

"ದ. ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್" ೨೦೦೨-೦೩ನೆಯ ವರ್ಷಗಳಲ್ಲಿ ಹಮ್ಮಿಕೊಂಡಿದ್ದ ವಿದ್ವಾಂಸರ ಉಪನ್ಯಾಸಗಳನ್ನು ಈಗ "ಬೇಂದ್ರೆ ಅನುಸಂಧಾನ" ಹೆಸರಿನಿಂದ ಹೊರತರುತ್ತಲಿದ್ದೇವೆ. ಈ ಭಾಷಣಮಾಲೆ ನಡೆಸಿಕೊಟ್ಟ ಪ್ರೊ. ಕೀರ್ತಿನಾಥ ಕುರ್ತಕೋಟಿ ಹಾಗೂ ಡಾ. ಕೆ. ರಾಘವೇಂದ್ರರಾವ ಅವರಿಗೂ, ಲೇಖನ ನೀಡಿದ ಎಲ್ಲ ವಿದ್ವಾಂಸರಿಗೂ, ಪುಸ್ತಕ ಹೊರಬರುವಲ್ಲಿ ದುಡಿದ ಟ್ರಸ್ಟಿನ ಎಲ್ಲ ಸದಸ್ಯರಿಗೂ ಧನ್ಯವಾದಗಳು.

ಈ ಪುಸ್ತಕವನ್ನು ಉಚಿತವಾಗಿ ಮುದ್ರಿಸಿಕೊಟ್ಟ ನಮ್ಮ ನಾಡಿನ ಪ್ರಸಿದ್ಧ ಮುದ್ರಣೋದ್ಯಮಿಗಳೂ, ಬೆಂಗಳೂರಿನ ಲಕ್ಷ್ಮೀ ಮುದ್ರಣಾಲಯದ ಒಡೆಯರೂ ಆಗಿರುವ ಶ್ರೀ ಅಶೋಕಕುಮಾರ ಅವರ ಔದಾರ್ಯಕ್ಕೆ ಅಭಿನಂದನೆಗಳು.

ಸಂ. ಕೆ. ರಾಘವೇಂದ್ರರಾವ್, ದ. ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೧೯೨

ಬೆಳಗುತ್ತಲಿರುವ ಬೆಳಗಾವಿ ಮತ್ತು ಇತರ ಲೇಖನಗಳು

೨೦೦೭

ಈ ಕೃತಿಗೆ ಮುನ್ನುಡಿ ಬರೆಯಲು ಕಾರಣ, ಶ್ರೀ. ಯ. ರು. ಪಾಟೀಲರು ಕಂದಾಯ ಇಲಾಖೆಯ ಚಕ್ರವ್ಯೂಹದ ನಡುವೆಯೂ ಬರೆವಣಿಗೆಯ ಪ್ರೀತಿ ಉಳಿಸಿಕೊಂಡಿರುವುದು ಮತ್ತು ಆಡಳಿತದ ಸಂತೆಯಲ್ಲಿದ್ದೂ ಬಿಡುವು ಮಾಡಿಕೊಂಡು ಬರೆಯುತ್ತಲಿರುವುದು. ಇವರ ಹಾಗೆಯೇ ನಮ್ಮಲ್ಲಿ ವೈದ್ಯಕೀಯ, ಎಂಜನೀಯರಿಂಗ್, ಕಾನೂನು, ಪೋಲೀಸ್ ಮೊದಲಾದ ಇಲಾಖೆಗಳ ಬರಹಗಾರರ ದೊಡ್ಡ ಸಂಖ್ಯೆಯೇ ಇದೆ. ಅದು ಇತ್ತೀಚೆ ದೊಡ್ಡದಾಗುತ್ತಲೂ ನಡೆದಿದೆ. "ಸಾಹಿತ್ಯ"ವನ್ನೇ ಬರೆಯಲಿ, ತಮ್ಮ "ಇಲಾಖೆಯ ಸಾಹಿತ್ಯ"ವನ್ನೇ ಬರೆಯಲಿ, ಇಂಥವರಿಂದಾಗಿ ಬರೆಹಲೋಕದಲ್ಲಿ ಹೊಸ ಅನುಭವಗಳು ಸೇರಿಕೊಂಡು, ಹೊಸ ಕ್ಷೇತ್ರಗಳು ತೆರೆದುಕೊಂಡು ಕನ್ನಡ ಬಹುಮುಖಿಯಾಗುತ್ತದೆ. ಈ ದೃಷ್ಟಿಯಿಂದ, ಸಾಹಿತ್ಯ ಮತ್ತು ಇಲಾಖೆಯ ಸಾಹಿತ್ಯ ಸೃಷ್ಟಿಸುತ್ತಲಿರುವ ಶ್ರೀ. ಯ. ರು. ಪಾಟೀಲರಂಥವರನ್ನು ಸ್ವಾಗತಿಸಬೇಕಾಗುತ್ತದೆ.

"ಬೆಳಗುತ್ತಲಿರುವ ಬೆಳಗಾವಿ ಮತ್ತು ಇತರ ಲೇಖನಗಳು" ಶ್ರೀ. ಪಾಟೀಲ ಅವರ ಇತ್ತೀಚಿನ ಕೃತಿ. ಇತಿಹಾಸ ಮತ್ತು ವರ್ತಮಾನಗಳಿಗೆ ಸಂಬಂಧಿಸಿದ ಹನ್ನೆರಡು ಲೇಖನಗಳನ್ನೊಳಗೊಂಡ ಇದು, ಇಲಾಖೆಯ ಸಾಹಿತ್ಯಕ್ಕಿಂತ ಸಾಹಿತ್ಯವಲಯಕ್ಕೆ, ಅದರಲ್ಲಿಯೂ ಒಂದು ಬಗೆಯ ಸಂಶೋಧನ ಸಾಹಿತ್ಯ ವಲಯಕ್ಕೆ ಸಂಬಂಧಿಸಿದೆ. "ಒಂದು ಬಗೆಯ" ಎನ್ನಲು ಕಾರಣ, ಇಲ್ಲಿ ಶೋಧಕ್ಕಿಂತ ಶೋಧಗಳ ಸಂಗ್ರಹ ಸಂಯೋಜನ ಒಡೆದು ಕಾಣುತ್ತದೆ. ಪ್ರಕಟಿತ ಸಾಹಿತ್ಯ, ಅಪ್ರಕಟಿತ ದಾಖಲೆ, ಮೌಖಿಕ ಸಾಹಿತ್ಯ ಇತ್ಯಾದಿ ಮೂಲಗಳಿಂದ ಮೈತುಂಬಿ ಕೊಂಡಿರುವುದು ಈ ಪುಸ್ತಕದ ಲಕ್ಷಣವೆನಿಸಿದೆ. ಸವದತ್ತಿ ಕೋಟೆ-ವಾಡೆಗಳು, ಅಂಕೇಶ್ವರ ಪುರುದೇಶ್ವರ ದೇವಾಲಯಗಳು ಮೊದಲಾದವು ಇತಿಹಾಸವನ್ನು, ಜಿಲ್ಲಾಧಿಕಾರಿಗಳ ಹುದ್ದೆ - ಬೆಳಗಾವಿ ಜಿಲ್ಲೆಯ ಉದಯ, ಸ್ವಾತಂತ್ರ್ಯಯೋಧರ ಅನುಭವಗಳು ಮೊದಲಾದವು ವರ್ತಮಾನವನ್ನು ನಿರ್ದೇಶಿಸುತ್ತವೆ. ಇದು ನಿರೂಪಣಾತ್ಮಕ ಬರವಣಿಗೆ, ಇಂಥ ಪ್ರಯತ್ನಗಳಿಂದ ಓದುಗರಿಗೆ ಒಂದೆಡೆ ಮಾಹಿತಿ ಸಿಗುತ್ತದೆ, ಕೆಲವೊಮ್ಮೆ ಹೊಸ ಮಾಹಿತಿಗಳೂ ಕೈಸೇರುತ್ತವೆ. ಒಂದು ಅಪಾಯವೆಂದರೆ, ನಮ್ಮಲ್ಲಿ ಮೊದಲಿನಿಂದಲೂ ಬೆಳೆದು ಬಂದ ಇತಿಹಾಸ - ಪುರಾಣ - ವದಂತಿಗಳ ಮಿಶ್ರಣ ರೂಪದ ಬರವಣಿಗೆಯಿಂದಾಗಿ, ಸಿಕ್ಕ ಇತಿಹಾಸದ ಎಳೆಗಳೂ ಕೆಲವೊಮ್ಮೆ ಕೈತಪ್ಪಿ ಹೋಗುತ್ತವೆ. ನವೋದಯ ಸಂದರ್ಭದ ವೈಭವೀಕರಣ ಧೋರಣೆಯಿಂದಾಗಿಯೂ ಈ ಅಪಾಯ ಸಂಭವಿಸುತ್ತದೆ. ಇದು ಶ್ರೀ ಪಾಟೀಲರ ಬರವಣಿಗೆಯ ಶಕ್ತಿಯೂ ಹೌದು, ಮಿತಿಯೂ ಹೌದು. "ಪ್ರತಿಯೊಬ್ಬ ವಾಚಕನಿಗೂ ಅವನದೇ ಆಗ ಗ್ರಂಥವಿರುತ್ತದೆ. ಪ್ರತಿಯೊಂದು ಗ್ರಂಥಕ್ಕೂ ಅದರದೇ ಆದ ವಾಚಕನಿರುತ್ತಾನೆ" ಎಂಬ ಗ್ರಂಥಾಲಯ ವಿಜ್ಞಾನದ ಹೇಳಿಕೆಯನ್ನು ಓದುಗರಿಗೆ ನೆನಪು ಮಾಡಿಕೊಡುತ್ತ, ಶ್ರೀ ಪಾಟೀಲ ಅವರಿಗೆ ಯಶಸ್ಸು ಹಾರೈಸುತ್ತೇನೆ.

ಯ.ರು.ಪಾಟೀಲ, ಬೆಳಗಾವಿ

ಆಕರ : ಮಾರ್ಗ ಸಂಪುಟ–೬

■■

೧೯೩

ನೂರೊಂದು ಬರೆಹ

೨೦೦೮

ನಿಜನುಡಿ

ವಚನಸಾಹಿತ್ಯದ ಸಂಶೋಧನ-ಸಂಪಾದನ-ಪ್ರಕಟನ ವಿಷಯವಾಗಿ ತಮ್ಮ ತಲೆಮಾರಿನ ವಿದ್ವಾಂಸರಿಗಿಂತ ವಿಶೇಷ ರೀತಿಯಲ್ಲಿ ದುಡಿಯುತ್ತಲಿರುವ ಡಾ. ವೀರಣ್ಣ ರಾಜೂರ ಅವರ ಹೆಸರು ಡಾ. ಫ. ಗು. ಹಳಕಟ್ಟಿ, ಶ್ರೀ ಎಸ್. ಎಸ್. ಬಸವನಾಳ, ಡಾ. ಆರ್.ಸಿ. ಹಿರೇಮಠರಂತೆ ಭವಿಷ್ಯತ್ತಿನಲ್ಲಿ ಸ್ಮರಣೀಯವಾಗಿರಲೆಂದು ಹಾರೈಸುತ್ತ, ಅವರ ಈ ಕೃತಿಗೆ ಮುನ್ನುಡಿಯ ಮಾತುಗಳನ್ನು ಬರೆಯುತ್ತೇನೆ.

ಕನ್ನಡದಲ್ಲಿ ಸಾಹಿತಿಯೊಬ್ಬನ ಕವನ, ಸಣ್ಣಕತೆ, ವಿಮರ್ಶೆಗಳ ಸಮಗ್ರ ಸಂಪುಟಗಳು ಪ್ರಕಟವಾಗುತ್ತಲಿವೆ. ಇವುಗಳ ಜೊತೆಗೆ ನಾಟಕ, ಕಾದಂಬರಿಗಳಂಥ ದೊಡ್ಡ ಪ್ರಕಾರಗಳ ಮತ್ತು ಪ್ರಾಚೀನ ಕವಿಕೃತಿಗಳ ಸಮಗ್ರಸಂಪುಟಗಳೂ ಬೆಳಕು ಕಾಣುತ್ತಲಿವೆ. ಇದು ಸಾಹಿತಿಯೊಬ್ಬನ ಸಮಗ್ರ ಬರಹವನ್ನು ಒಂದೆಡೆ ಸಂರಕ್ಷಿಸುವ, ಅವನ ಒಟ್ಟು ಕೊಡುಗೆಯನ್ನು ಕಾಣಿಸಿಕೊಡುವ ಕೆಲಸವಾಗಿದೆ. ಈ ಬಗೆಯ ಸಾಹಿತ್ಯವಾಹಿನಿಗಳ ನಡುವೆ ಸಂಶೋಧಕನೊಬ್ಬನ ಪ್ರಬಂಧಗಳ ಸಮಗ್ರಸಂಪುಟಗಳೂ ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಂಡಿವೆ. ಈ ದಾರಿಯಲ್ಲಿ ಕೆಲವು ಸಂಶೋಧನ ಸಂಪುಟಗಳು ಮೈಲುಗಲ್ಲುಗಳೆನಿಸಿದ್ದು, ಡಾ. ವೀರಣ್ಣ ರಾಜೂರ ಅವರ 'ನೂರೊಂದು ಬರಹ' ಇದಕ್ಕೆ ಇನ್ನೊಂದು ಮಹತ್ವದ ಸೇರ್ಪಡೆಯಾಗಿದೆ.

ಡಾ. ರಾಜೂರ ಅವರು ಒಂದು ಕಾಲಕ್ಕೆ ಕನ್ನಡ ಅಧ್ಯಯನಪೀಠದಲ್ಲಿ ನನ್ನ ವಿದ್ಯಾರ್ಥಿ ಮತ್ತು ಸಹೋದ್ಯೋಗಿ. ಯಾವುದೇ ಸಂಸ್ಥೆಯಲ್ಲಿ ಎರಡು ವರ್ಗದ ಸದಸ್ಯರಿರುತ್ತಾರೆ. ಒಬ್ಬರು ಸಂಸ್ಥೆಯನ್ನು ಬೆಳೆಸುವವರು, ಇನ್ನೊಬ್ಬರು ಸಂಸ್ಥೆಯನ್ನು ಬಳಸಿಕೊಳ್ಳುವವರು. ಇವರಲ್ಲಿ ಮೊದಲಿನ ವರ್ಗಕ್ಕೆ ಸೇರುವ ಡಾ. ರಾಜೂರ ಅವರು, ಸಂಶೋಧಕ ಸಹಾಯಕ ಮತ್ತು ಶಿಕ್ಷಕ ಈ ಎರಡು ನೆಲೆಗಳಲ್ಲಿ ತ್ರಿಕರಣಪೂರ್ವಕ ದುಡಿದು, ಸಂಸ್ಥೆಯ ಋಣ ತೀರಿಸಿದ್ದಾರೆ.

ಅಧ್ಯಾಪಕರಾಗಿರುವ ಡಾ. ರಾಜೂರ ಅವರು ಸಾಹಿತ್ಯದ ಇತರ ಕ್ಷೇತ್ರಗಳ ಬಗ್ಗೆ ಆಸಕ್ತಿಹೊಂದಿದ್ದರೂ ಅವರ ನ್ಯಾಯವಾದ ಕ್ಷೇತ್ರ ಸಂಶೋಧನೆ. ಇದರ ವಸ್ತು ಗತಕಾಲ. ಅಂದರೆ ಗತದ ಸತ್ಯವನ್ನು ಶೋಧಿಸುವುದರ ಮೂಲಕ ವರ್ತಮಾನವನ್ನು ಅರ್ಥೈಸಿಕೊಳ್ಳಲು ನೆರವಾಗುವುದು. ಹೀಗೆ ಗತವನ್ನು ಭೇದಿಸಬೇಕೆನ್ನುವವ ಪ್ರಾಚೀನ ಆಕರಗಳ ನಿರಂತರ ಅಭ್ಯಾಸಿಯಾಗಿರಬೇಕಾಗುತ್ತದೆ; ಈ ಆಕರಗಳ ಹಿಂದಿನ ಸತ್ಯಗಳ ಚಿಂತಕನಾಗಿರಬೇಕಾಗುತ್ತದೆ. ಡಾ. ರಾಜೂರ ಅವರು ಕನ್ನಡ ಅಧ್ಯಯನಪೀಠದಲ್ಲಿ ಸಂಶೋಧನ ಸಹಾಯಕನಾಗುವ ಮೂಲಕ ಇಂಥ ಆಕರಗಳ, ಅದರಲ್ಲಿಯೂ ವಚನಸಾಹಿತ್ಯದ ಆಕರಗಳ ಒಡನಾಟದಲ್ಲಿ

ಬೆಳೆದರು. ವಚನ ಹಸ್ತಪ್ರತಿ-ಶರಣ ಸಂಗತಿಗಳಿಗೆ ಸಂಬಂಧಪಟ್ಟ ಯಾವುದೇ ಸಮಸ್ಯೆಗೆ ಪರಿಹಾರ ಸೂಚಿಸುವ ಇಂದಿನ ಮುಖ್ಯರಲ್ಲಿ ಇವರೂ ಒಬ್ಬರೆಂಬಂತೆ ಈ ಅಭ್ಯಾಸ ಇವರಲ್ಲಿ ಘನೀಭೂತಗೊಂಡಿದೆ. ಈ ಸಂಪತ್ತು ಕಾರಣವಾಗಿ ಅವರು ಮೊದಲಿನಿಂದಲೂ ಹಸ್ತಪ್ರತಿ ಗಣಿಯಿಂದ ಲಿಂಗಾಯತಕ್ಕೆ ಸಂಬಂಧಿಸಿದ ಅದಿರು ರೂಪದ ಸಣ್ಣ ದೊಡ್ಡ ಪ್ರಮಾಣದ ಆಕರ ಸಾಮಗ್ರಿಯನ್ನು ಪ್ರಕಟಿಸುತ್ತಲೇ ಬಂದರು. ಇದರ ಫಲವಾಗಿ ಅಜ್ಞಾತ ಶರಣರಲ್ಲದೆ, ಅಜ್ಞಾತ ವಚನ-ಸ್ವರವಚನ ಕೃತಿಗಳು ಬೆಳಕಿಗೆ ಬಂದವು. ಇವುಗಳನ್ನಾಧರಿಸಿ ಬರೆದ ಟಿಪ್ಪಣಿ, ಲೇಖನ ಮತ್ತು ಪ್ರಕಟಿಸಿದ ಮೂಲಗ್ರಂಥ ಇವೆಲ್ಲವುಗಳನ್ನೂ ಒಗ್ಗೂಡಿಸಿ ನೋಡಿದರೆ, ಡಾ. ರಾಜೂರ ಅವರ ಶರಣಸಾಹಿತ್ಯ ಸೇವೆಯ ವ್ಯಾಪ್ತಿ, ಮಹತ್ವ ಅರ್ಥವಾಗುತ್ತದೆ.

ಇಂಥ ಶ್ರದ್ಧೆ-ಶ್ರಮ ಕಾರಣವಾಗಿ ಕನ್ನಡ ಅಧ್ಯಯನಪೀಠದ 'ವಚನಸಾಹಿತ್ಯ ಪ್ರಕಟನ ಯೋಜನೆ'ಯ ಉತ್ತರಾರ್ಧ ಸಂದರ್ಭದಲ್ಲಿ ಇವರು ಮಹತ್ವದ ಪಾತ್ರವಹಿಸಿದರು. ಆಗ ವಿಭಾಗದ ಹೆಸರಿನಲ್ಲಿ ಹೊರಬಂದ ಎಲ್ಲ ವಚನಸಂಪುಟಗಳ ಹಿಂದೆ ದುಡಿಯುತ್ತ ಬಂದು, ಶಿಕ್ಷಕರಾದ ಬಳಿಕ ಈ ದುಡಿಮೆಯನ್ನು ಇನ್ನೂ ಗಾಢವಾಗಿಸಿಕೊಂಡರು. ಹೀಗಾಗಿ ಗದುಗಿನ ಶ್ರೀ ತೋಂಟದಾರ್ಯಮಠದ ಪುಸ್ತಕ ಪ್ರಕಟನ ಯೋಜನೆ, ಕರ್ನಾಟಕ ಸರಕಾರದ ಸಮಗ್ರ ವಚನಸಾಹಿತ್ಯ ಮತ್ತು ಸಮಗ್ರ ಶ್ರೀ ತೋಂಟದ ಸಿದ್ಧಲಿಂಗ ಸಾಹಿತ್ಯ ಪ್ರಕಟನ ಯೋಜನೆ, ಮೈಸೂರಿನ ಶ್ರೀ ಶಿವರಾತ್ರೀಶ್ವರ ಮಠದ 'ಎಲ್ಲ ಪುರಾತನರ ವಚನಗಳು' ಸಂಪುಟ ಪ್ರಕಟನ ಯೋಜನೆ, ವಿಜಾಪುರದ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆಗಳಲ್ಲಿ ತೊಡಗಿಸಿಕೊಂಡು ಇವರು ದುಡಿದುದರ ನೇರ ಮತ್ತು ಪರ್ಯಾಯ ಸೃಷ್ಟಿಯೆನಿಸಿರುವ ಲೇಖನಗಳು ಈ ಸಂಪುಟದಲ್ಲಿ ಅಧಿಕ ಪ್ರಮಾಣದಲ್ಲಿವೆ; ಬೇರೆ ಲೇಖನಗಳೂ ಇಲ್ಲಿವೆ.

ಈ 'ನೂರೊಂದು ಬರಹ' ಆರು ವಿಭಾಗಘುಲ್ಲಿ ವರ್ಗೀಕೃತಗೊಂಡಿದ್ದು, ನಾವು ನಿಜವಾದ ಡಾ. ರಾಜೂರ ಅವರನ್ನು ಕಾಣುವುದು ಆರಂಭದ ವಚನಸಾಹಿತ್ಯ, ವಚನ ಸಂಪಾದನ ಸಾಹಿತ್ಯ, ವೀರಶೈವ ಸಾಹಿತ್ಯ ವಿಭಾಗಗಳಲ್ಲಿ, ಇಲ್ಲಿ ತತ್ವ, ವಿಮರ್ಶೆಗಳಿಗೆ ಸಂಬಂಧಿಸಿದ ಲೇಖನಗಳಿದ್ದರೂ ಸಂಶೋಧನೆಗೆ ಸೇರಿದವುಗಳದೇ ಸಿಂಹಪಾಲು. ತತ್ವಕ್ಕೆ ಸಂಬಂಧಿಸಿದ ಅಷ್ಟಾವರಣ, ಶರಣರ ಭಕ್ತಿ, ಶೀಲ, ಯೋಗ-ಶಿವಯೋಗ, ಅನುಭಾವಗಳನ್ನು ಕುರಿತ ಲೇಖನಗಳು ವಚನಸಾಹಿತ್ಯದ ಕೇಂದ್ರತತ್ವವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಅಮೂರ್ತವಾದ ವಿಷಯವನ್ನು ಸಮಗ್ರವಾಗಿ, ಸರಳವಾಗಿ ನಿರೂಪಿಸಿದ ಶ್ರೇಯಸ್ಸು ಈ ಲೇಖನಗಳಿಗೆ ಸಲ್ಲುತ್ತದೆ. ಈ ವಿಭಾಗದ ಮಿಕ್ಕ ಲೇಖನಗಳಲ್ಲಿ ೧೨ನೆಯ ಶತಮಾನದ ಬದುಕಿಗೆ ಬಸವಣ್ಣನವರು ನೀಡಿದ ನಾಯಕತ್ವ, ವಚನಸಾಹಿತ್ಯದ ಪ್ರಯೋಗಶೀಲತೆ : ಭಾಷೆ-ತಂತ್ರ ಮೊದಲಾದವು ಶರಣರ ಚರಿತ್ರೆಯೊಂದಿಗೆ ಅವರ ವ್ಯಕ್ತಿತ್ವವನ್ನು, ವಚನಗಳ ಶಿಲ್ಪ-ಭಾಷೆಗಳ ವೈಶಿಷ್ಟ್ಯವನ್ನು ಸರಿಯಾಗಿ ಬಿಡಿಸಿತೋರಿಸಿವೆ. ಇವುಗಳನ್ನು ಬಿಟ್ಟರೆ ಮಿಕ್ಕವುಗಳಲ್ಲಿ ಬೋಳಬಸವೇಶ್ವರ: ಒಂದು ಸ್ಥೂಲ ಅಧ್ಯಯನ, ಶರಣ ನಾಲ್ಕು ಅಂಕಿತಗಳ ತೊಡಕುಗಳಂಥವು ಇವರು ಎಂಥ ಜಟಿಲ ಸಮಸ್ಯೆಗಳಿಗೆ ಕೈಹಾಕಿ ನಿರ್ವಹಿಸಬಲ್ಲರೆಂಬುದಕ್ಕೆ ನಿದರ್ಶನವೆನಿಸಿವೆ. ಇಲ್ಲೆಲ್ಲ ಕಳೆದುಹೋದ ಸಂಗತಿಗಳನ್ನು ಕಾಣಿಸಿಕೊಡುವ, ಕಂಡ ವಿಷಯಗಳ ತೊಡಕನ್ನು ಬಿಡಿಸಿಕೊಡುವ ಪ್ರಯತ್ನ ಎದ್ದು ಕಾಣುತ್ತದೆ.

'ವಚನ ಸಂಪಾದನಸಾಹಿತ್ಯ' ಹೆಸರಿನ ಇನ್ನೊಂದು ವಿಭಾಗವು ಪ್ರಕಟಿತ ಪುಸ್ತಕಗಳಿಗೆ ಬರೆದ ಪ್ರಸ್ತಾವನೆಗಳನ್ನೊಳಗೊಂಡಿದೆ. ಇಲ್ಲಿಯ 'ಎಲ್ಲ ಪುರಾತನರ ವಚನಗಳು' ಮೊದಲಾದವು ಇವತ್ತಿನ ಸಂದರ್ಭದಲ್ಲಿ ಯಾರೂ ಇದಕ್ಕಿಂತ ಉತ್ತಮ ಪ್ರಸ್ತಾವನೆ ಬರೆಯಲಾರರೆಂಬ ರೀತಿಯಲ್ಲಿ ಬೆಳೆದಿವೆ. ವಚನಸಾಹಿತ್ಯದ ಸಂಪಾದನ-ಪ್ರಕಟನ ವಿಷಯಕ್ಕೆ ಸಂಬಂಧಪಟ್ಟಂತೆ ಡಾ. ರಾಜೂರ ಅವರ ತಲೆಮಾರಿನಲ್ಲಿ ಯಾರೂ ಇವರನ್ನು ಸರಿಗಟ್ಟಲಾರರು - ಎಂಬುದಕ್ಕೆ ಇವರು ಮೊದಲ ಬಾರಿ ಬೆಳಕಿಗೆ ತಂದ ವಚನಾಮೃತಸಾರ, ಶೀಲಸಂಪಾದನೆ, ಭಕ್ತ್ಯಾನಂದ

ಸುಧಾರ್ಣವ, ಸೂಕ್ಷ್ಮ ಮಿಶ್ರಷಟ್‌ಸ್ಥಲ, ಎಲ್ಲ ಪುರಾತನರ ಸ್ತೋತ್ರದ ವಚನಗಳು, ಪ್ರಭುದೇವರ ಷಟ್‌ಸ್ಥಲ ಜಂಗಮಸ್ಥಲ ನಿರ್ದೇಶ, ವಚನಸಾರ, ಎಲ್ಲ ಪುರಾತನರ ವಚನಗಳು, ಜ್ಞಾನಷಟ್‌ಸ್ಥಲಸಾರ ಕೃತಿಗಳು ಸಾಕ್ಷಿಯಾಗಿದೆ. ಇವುಗಳ ಜೊತೆಗೆ ಶಿವಯೋಗ ಪ್ರದೀಪಿಕೆ, ಮುದ್ವೀರಸ್ವಾಮಿಯ ಸ್ವರವಚನಗಳು, ಗುರುಬಸವಾರ್ಯನ ಕೈವಲ್ಯ ಪದ್ಧತಿ - ಇವು ಸ್ವರವಚನ ಸಾಹಿತ್ಯಕ್ಕೂ ಇವರಿಂದ ಸಂದ ಸೇವೆಗೆ ನಿದರ್ಶನವೆನಿಸಿವೆ. ಈ ಕೃತಿಗಳಿಗೆ ಬರೆದ ಈ ಪ್ರಸ್ತಾವನೆಗಳ ಮುಖ್ಯ ಲಕ್ಷಣ 'ಸಮಗ್ರತೆ' ಎಂದು ಹೇಳಿದರೆ ಎಲ್ಲ ಹೇಳಿದಂತಾಯಿತೆಂದು ಭಾವಿಸುತ್ತೇನೆ.

ಮೇಲೆ ವಿವೇಚಿಸಿದ ಶಿವಶರಣರ ಸಾಹಿತ್ಯದೊಂದಿಗೆ ಹೋಲಿಸಿದರೆ, ಶಿವಕವಿಸಾಹಿತ್ಯ ಸೇವೆ ಕಡಿಮೆಯೆನಿಸಿದರೂ 'ವೀರಶೈವ ತಾರಾವಳಿ ಸಾಹಿತ್ಯ' ಪ್ರಕಟನೆ ಒಂದು ಮಹತ್ವದ ಪ್ರಯತ್ನವಾಗಿದೆ. ಒಂದೂ ತಾರಾವಳಿ ಹೊರಗುಳಿಯದಂತೆ ಶೋಧಿಸಿ, ಪರಿಶೀಲಿಸಿ ಇದಕ್ಕೆ ಬರೆದ ಪ್ರಸ್ತಾವನೆಯು ಅನೇಕ ಹೊಸ ವಿಷಯಗಳನ್ನು ಪ್ರಥಮ ಬಾರಿ ನಮ್ಮ ಗಮನಕ್ಕೆ ತರುತ್ತದೆ. ಇಲ್ಲಿಯೇ ಕಂಡುಬರುವ 'ಪ್ರೌಢದೇವರಾಯನ ಕಾಲದ ವೀರಶೈವ ಸಾಹಿತ್ಯ-ಸಂಶೋಧನೆ' ಮೊದಲಾದವು ಈವರೆಗಿನ ಶೋಧದ ಮುಂದುವರಿಕೆಯಾಗಿದ್ದರೆ, 'ವಿರಕ್ತತೋಂಟದಾರ್ಯನ ಕೃತಿಗಳು' ಮೊದಲಾದವು ಇಂಥ ಕ್ಷೇತ್ರಗಳ ಅಭ್ಯಾಸದ ಮುಂದುವರಿಕೆಗೆ ಮಾರ್ಗಸೂಚಿಯೆನಿಸಿವೆ.

ಮುಂದಿನ ವಿಭಾಗಗಳು ಇಷ್ಟು ಗಂಭೀರವಲ್ಲದಿದ್ದರೂ, ಮಾಹಿತಿ ಸಂಗ್ರಹ, ಪರಿಚಯ -ಇಷ್ಟಕ್ಕೆ ವಿರಮಿಸುತ್ತಿದ್ದರೂ, ಕೆಲವೊಮ್ಮೆ ಹೊಸ ಸಂಗತಿಗಳನ್ನು ಎತ್ತಿತಂದಿವೆ. ಸಾಂಗತ್ಯ-ಸಂಗೀತ, ತಾರಾವಳಿ ಛಂದಸ್ಸು ಮೊದಲಾದವು ಸಂಶೋಧನೆಯು ಇವರ ಬೆನ್ನು ಬಿಡುವುದಿಲ್ಲವೆಂಬಂತೆ ಇಲ್ಲಿ ಸೇರಿವೆ. 'ವೀರಶೈವ ಸಂಘಟಕ ಹರ್ಡೇಕರ ಮಂಜಪ್ಪ' ಇಂಥ ಲೇಖನಗಳು ಬರವಣಿಗೆ ಸಮಗ್ರವಾಗುವುದರತ್ತ ಡಾ. ರಾಜೂರ ವಹಿಸುವ ಎಚ್ಚರಕ್ಕೆ ಉದಾಹರಣೆಯೆನಿಸಿವೆ. ಈ ಬಗೆಯಲ್ಲಿ ಇತಿಹಾಸವನ್ನು ಬಗಿಯುವ ಲೇಖನಗಳಿಂದಾಗಿ 'ನೂರೊಂದು ಬರಹ' ಲಿಂಗಾಯತ ಸಂಶೋಧಕರು ಪದೇ ಪದೇ ಬಳಸಿಕೊಳ್ಳುವ ಕೃತಿಯಾಗಿದೆ.

ಈ ಎಲ್ಲ ಲೇಖನಗಳ ಮುಖ್ಯ ಲಕ್ಷಣವೆಂದರೆ, ಸಂಬಂಧಪಟ್ಟ ವಿಷಯದ ಬಗ್ಗೆ ಈವರೆಗೆ ನಡೆದ ಶೋಧವನ್ನು ಸಮಗ್ರವಾಗಿ ತಿಳಿದುಕೊಳ್ಳುವುದು, ಅದರಾಚೆ ಉಳಿದಿರುವ ರಹಸ್ಯ ನೆಲೆಗಳನ್ನು ಗುರುತಿಸಲು ಪ್ರಯತ್ನಿಸುವುದು. ಈ ಉಭಯ ಪ್ರಜ್ಞೆಗಳ ಸಮಾಗಮ ಮತ್ತು ಸಂಘರ್ಷಗಳಲ್ಲಿ ಶೋಧಕಾರ್ಯ ಮಾಡುವುದಾಗಿದೆ. ಹೀಗೆ ಮಾಡುವಲ್ಲಿ ಆಕರಗಳ ಶೋಧ ಮತ್ತು ಅವುಗಳ ಅಂತರಂಗವನ್ನು ಬಗಿದು, ಒಂದು ಘಟನೆಯ - ಒಂದು ವಿಷಯದ ನಿಜಸ್ವರೂಪವನ್ನು ಇವರು ನಿಶ್ಚಯಿಸುತ್ತಾರೆ. ಅಂದರೆ ಇವರು ಘಟನೆ ಅಥವಾ ಕಾರ್ಯ - ಇವುಗಳ ಶೋಧಮಾಡುತ್ತಾರೆ; ಅದರ ಹಿಂದಿನ ಕಾರಣ, ಮುಂದಿನ ಪರಿಣಾಮಗಳ ಶೋಧವನ್ನು ಮಿಕ್ಕವರಿಗೆ ಬಿಡುತ್ತಾರೆ. ಇದು ಓರಿಯಂಟಾಲಿಸ್ಟ್ ವಿದ್ವಾಂಸರ ಶೋಧಪದ್ಧತಿ. ಕಳೆದ ಶತಮಾನದಲ್ಲಿ ಕಣ್ಮರೆಯಾಗಿದ್ದ ಘಟನೆಗಳನ್ನು ಹುಡುಕುವುದೇ ಮುಖ್ಯವಾಗಿದ್ದ ಕಾರಣ, ಆರ್. ನರಸಿಂಹಾಚಾರ್, ಗೋವಿಂದ ಪೈ ಇಂಥ ಕೆಲಸ ಮಾಡಿದ್ದು, ಆ ದಾರಿಯಲ್ಲಿ ಡಾ. ರಾಜೂರ ಮುನ್ನಡೆದಿದ್ದಾರೆ. ಈ ಅಡಿಪಾಯ ಸ್ವರೂಪದ ಕೆಲಸ ಪೂರೈಸಿಕೊಟ್ಟರೆ ಮಾತ್ರ ಕಾರಣ ಶೋಧ, ಪರಿಣಾಮ ಶೋಧಗಳ ಮಾರ್ಗ ಸುಗಮವಾಗುತ್ತದೆ. ಅಂಥ ಸುಗಮತೆಗಾಗಿ ಈ ಬಗೆಯ ಶೋಧಕಾರ್ಯವನ್ನು ಡಾ. ರಾಜೂರ ಅವರು ನಿರಂತರ ಮುನ್ನಡೆಸಲೆಂದು ಹಾರೈಸುತ್ತೇನೆ.

ಇಲ್ಲಿ ಇನ್ನೊಂದು ಮಾತನ್ನು ಹೇಳಲೇಬೇಕು. ಈ ಕೃತಿ ರಾಜೂರ ಅವರ ಬರವಣಿಗೆಯ ಒಂದು ಭಾಗ. ಇತರ ಭಾಗಗಳನ್ನೂ ಗಮನಿಸಿದರೆ, ಇಷ್ಟೆಲ್ಲ ಬರೆಯಲು ಬೆಳೆಯಲು ಸಾಧ್ಯವಾದುದು, ಇವರು ಸಜ್ಜನರಲ್ಲದ,

ವಿದ್ವಾಂಸರಲ್ಲದ ಸಹೋದ್ಯೋಗಿಗಳನ್ನೂ, ವಿದ್ಯಾರ್ಥಿಗಳನ್ನೂ ದೂರವಿಟ್ಟುದು. ಒಂದು ವೇಳೆ ಅಂಥವರನ್ನು ಸಮೀಪ ಇಟ್ಟುಕೊಂಡಿದ್ದರೆ ಅವರಂತೆ ಇವರೂ ವರ್ತಮಾನದಲ್ಲಿ ವಿಜೃಂಭಿಸಿ, ಭವಿಷ್ಯತ್ತಿನಲ್ಲಿ ಕಳೆದುಹೋಗುತ್ತಿದ್ದರು. ಈ ಪರಮಸತ್ಯವನ್ನು ಎಳೆ ವಯಸ್ಸಿನಲ್ಲಿಯೇ ಅರ್ಥಮಾಡಿಕೊಂಡು ಬದುಕಿದ - ಬರೆದ ಡಾ. ರಾಜೂರ ಅವರಿಗೆ ಭವಿಷ್ಯತ್ತಿನಲ್ಲಿಯೂ ಶಾಶ್ವತ ಕೀರ್ತಿಯನ್ನು ಹಾರೈಸಿ, ಈ ಮುನ್ನುಡಿಯ ಮಾತುಗಳಿಗೆ ವಿರಾಮ ನೀಡುತ್ತೇನೆ.

ವೀರಣ್ಣ ರಾಜೂರ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೧೯೪

ಗದ್ಯಗಂಧ

೨೦೦೮

ಪ್ರೀತಿಯ ಮಾತು

ಪ್ರತಿಯೊಬ್ಬ ವ್ಯಕ್ತಿಗೆ ಒಳಸುತ್ತು, ಹೊರಸುತ್ತು - ಹೀಗೆ ಎರಡು ಸಂಬಂಧ ವರ್ತುಲಗಳಿರುತ್ತವೆ. ಕೆಲವರು ಹೊರಗೆ ಹೋಗುವುದರ ಸಲುವಾಗಿ ಒಳಗೆ ಬರುತ್ತಾರೆ. ಇವರು ಹೊರಸುತ್ತಿನವರು. ಇನ್ನು ಕೆಲವರು ಶಾಶ್ವತ ಉಳಿಯುವುದರ ಸಲುವಾಗಿ ಒಳಗೆ ಬರುತ್ತಾರೆ. ಇವರು ಒಳಸುತ್ತಿನವರು, ನನ್ನ ಜೀವನದಲ್ಲಿ ಒಳಸುತ್ತಿನ ವ್ಯಕ್ತಿಗಳು ಕೆಲವರಿದ್ದು, ಇವರಲ್ಲಿ ನನ್ನ ವಿದ್ಯಾರ್ಥಿ ರವೀಂದ್ರ ಕರ್ಜಗಿ ಅವರೂ ಒಬ್ಬರು.

ಎಂ.ಎ. ವಿದ್ಯಾರ್ಥಿಯಾಗಿ ಕರ್ಜಗಿ ಅವರು ನನ್ನ ಸಂಪರ್ಕಕ್ಕೆ ಬಂದರು. ಅಂದವಾದ ಅಕ್ಷರಗಳ ಮೂಲಕ ನನ್ನ ಗಮನ ಸೆಳೆದ ಅವರು, ನಾನು ಹೊರಿಸಿದಷ್ಟು ಲಿಪಿಕರಣ ಕೆಲಸ ಹೊರುವ ಮೂಲಕ ನನ್ನ ಮನವನ್ನು ಸೆಳೆದರು. ಆ ಮೇಲೆ ಜೀವನವೃತ್ತಿ ಕಾರಣವಾಗಿ ದೂರ ಹೋದರೂ ಅವರು ಮಾನಸಿಕವಾಗಿ ನನ್ನ ಹತ್ತಿರವೇ ಉಳಿದರು. ಬರೆಯುವ ವಿಷಯದಲ್ಲಿ ಉತ್ಸಾಹಿಯಾಗಿರುವ ನನಗೆ ಮುನ್ನುಡಿ ಬರೆಯುವುದೆಂದರೆ ತುಂಬ ಹಿಂಜರಿಕೆ, ಹೀಗಿದ್ದೂ ಕೆಲವೊಮ್ಮೆ ಗುರುಗಳ ಮಾತನ್ನು ಮೀರಬಹುದಾದ ನಾನು, ವಿದ್ಯಾರ್ಥಿ ಪರಾಧೀನ ಸ್ಥಿತಿಯಲ್ಲಿ ನಿಂತು ಈ ಪುಸ್ತಕಕ್ಕೆ ನಾಲ್ಕು ಮಾತು ಬರೆಯುತ್ತಿದ್ದೇನೆ.

ವ್ಯಕ್ತಿಯ ಬೆಳವಣಿಗೆಯಲ್ಲಿ ಪರಿಸರದ ಪಾತ್ರವೂ ಮುಖ್ಯವಾಗಿರುತ್ತದೆ. ಕೆಲವರು ಪರಿಸರ ಮೀರಿಯೂ ಬೆಳೆಯುತ್ತಾರೆ, ಇನ್ನು ಕೆಲವರು ಪರಿಸರಕ್ಕೆ ಸೀಮಿತವಾಗಿ ಉಳಿಯುತ್ತಾರೆ. ಗುಲ್ಬರ್ಗಾ ನಗರದ ಪರಿಸರವನ್ನು ಮೀರಿ ಬೆಳೆಯಬಹುದಾಗಿದ್ದ ಕರ್ಜಗಿ ಅವರು, ಕೊನೆಯಪಕ್ಷ ಆ ಪರಿಸರಕ್ಕೆ ತಕ್ಕ ಬೋಧಕ, ಲೇಖಕರಾಗಿ ರೂಪಗೊಂಡುದು ಸಮಾಧಾನದ ಸಂಗತಿಯಾಗಿದೆ.

ಓದುಗರಲ್ಲಿ ಕೆಲವು ವರ್ಗಗಳಿರುತ್ತಿದ್ದು, ಇವರಿಗೆ ತಕ್ಕ ವರ್ಗಗಳು ಲೇಖಕರಲ್ಲಿಯೂ ಇರುತ್ತವೆ. ಹೀಗೆ ಇರುವುದರಿಂದಾಗಿ ಆಯಾ ಪ್ರದೇಶಗಳಲ್ಲಿ ಹಲವು ವರ್ಗದ ಓದುಗ ಶ್ರೇಣಿಗಳು ನಿರ್ಮಾಣವಾಗುತ್ತವೆ. ಕರ್ಜಗಿ ಅವರ ಸಾಹಿತ್ಯಕ್ಕೆ ಅಂಥ ಒಂದು ಓದುವ ವರ್ಗವಿರುವುದು ಸುಳ್ಳಲ್ಲ. ಅವರಿಗಾಗಿ ಲೇಖನಕಾರ್ಯ ಪೂರೈಸುತ್ತ ಬಂದ ಇವರ ಇತ್ತೀಚಿನ ಪ್ರಕಟನೆಯಾಗಿದೆ, "ಗದ್ಯಗಂಧ".

ಆರಂಭದಿಂದಲೂ ದಿನಪತ್ರಿಕೆ, ಆಕಾಶವಾಣಿಯಂಥ ಮಾಧ್ಯಮಗಳೊಂದಿಗೆ ಸಜೀವ ಸಂಬಂಧವಿಟ್ಟುಕೊಂಡ ಕರ್ಜಗಿಯವರು ಬರೆಹದೊಂದಿಗೆ ಬದುಕಿದ್ದಾರೆ. ಅದರ ಫಲಿತವೆಂಬಂತೆ ಈ ಮೊದಲು ಕವನ-ಕತೆ-ಪ್ರಬಂಧಗಳ ಸಂಕಲನ, ಜೀವನ ಚರಿತ್ರೆಗಳನ್ನು ಪ್ರಕಟಿಸಿದ ಇವರು, ಮಿಕ್ಕುಳಿದ ಗದ್ಯಸಾಹಿತ್ಯವನ್ನು

ಈಗ ಲೇಖನ, ಹಾಸ್ಯಲೇಖನ, ರೂಪಕ, ವ್ಯಕ್ತಿಪರಿಚಯ, ಪುಸ್ತಕ ಪರಿಚಯ, ಚಿಂತನ, ಮಾತು-ಕತೆ, ಸಂಕೀರ್ಣ, ನಾಟಕ- ಹೀಗೆ ಒಂಬತ್ತು ಭಾಗಗಳಲ್ಲಿ ವಿಂಗಡಿಸಿದ್ದು, ಇದು ೧೪೪ ಲೇಖನ ೬೦೦ ಪುಟಗಳನ್ನು ವ್ಯಾಪಿಸಿದೆ.

ಹೀಗೆ ಇವರು ವೈವಿಧ್ಯಪೂರ್ಣ ವಿಷಯಗಳನ್ನು ಕುರಿತು ವಿಪುಲ ಪ್ರಮಾಣದಲ್ಲಿ ಬರೆದುದಕ್ಕೆ ಸಾಹಿತಿಯೆನಿಸಿಕೊಳ್ಳಬೇಕೆಂಬ ಹಪಹಪಿ ಕಾರಣವಲ್ಲ. ಬರವಣಿಗೆಯಲ್ಲಿ ಸ್ವಲ್ಪ ಪಳಗಿದ್ದರೂ ಸಾಕು, ಅಂಥವರು ಗುಲ್ಬರ್ಗಾದಂಥ ಪ್ರದೇಶದಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳ ಅಗತ್ಯಗಳನ್ನು ಪೂರೈಸಿಕೊಡುವುದು ಅನಿವಾರ್ಯವಾಗುತ್ತದೆ. ಅಂದರೆ ಇವರು ಜನರ ಅಪೇಕ್ಷೆಯ ಈಡೇರಿಕೆಗಾಗಿ ಸ್ಥಳೀಯ ಬೇಂದ್ರೆ, ಕಾರಂತ, ಶ್ರೀರಂಗ, ಬೀಚಿ, ಮಾಸ್ತಿ, ಪ್ರಸಂಗ ಬಿದ್ದರೆ ಮುಖಕ್ಕೆ ಬಣ್ಣ ಹಚ್ಚಿಕೊಂಡು ರಾಜಕುಮಾರ್ ಕೂಡ ಆಗಬೇಕಾಗುತ್ತದೆ. ಇದೆಲ್ಲವನ್ನು ನೋಡಿದರೆ ಕರ್ಜಗಿಯಂಥವರು ಸ್ಥಳೀಯ ಸಾಹಿತ್ಯಿಕ ಆವಶ್ಯಕತೆಗಳನ್ನು ಪೂರೈಸಿಕೊಡುವಲ್ಲಿ ಎಷ್ಟು ಮಹತ್ವದ ಪಾತ್ರವಹಿಸಿರುವರೆಂದು ವಿದಿತವಾಗುತ್ತದೆ.

ಇಂಥವರು ಯಾವ ಮಟ್ಟದ ಬರೆವಣಿಗೆ ಮಾಡಿರುವರೆನ್ನುವುದಕ್ಕಿಂತ, ಎಂಥ ಕ್ಷಾಮ ಸಂದರ್ಭದಲ್ಲಿ ಓದುಗರ ಸಾಹಿತ್ಯಿಕ ಹಸಿವನ್ನು ಹಿಂಗಿಸಿದರೆಂಬುದು ಮುಖ್ಯವೆನಿಸುತ್ತದೆ. ಏಕೆಂದರೆ, ಐದು ದಶಕಗಳ ಹಿಂದೆ ಸಾಹಿತ್ಯಿಕ ವಾತಾವರಣದ ಅಭಾವವಿರುವ ಗುಲ್ಬರ್ಗಾಪ್ರದೇಶದಲ್ಲಿ ದಾರಿಕಾರರೂ, ದಾರಿಯೂ ಇಂಥವರೇ ಆಗಿದ್ದರೆನ್ನುವುದು ಗಮನಿಸಬೇಕಾದ ಅಂಶವಾಗಿದೆ. ಒಂದು ಮನೆತನದಲ್ಲಿ ಎಲ್ಲ ತಲೆಮಾರಿನವರೂ ಎತ್ತರದ ವ್ಯಕ್ತಿತ್ವದವರಿರುವುದಿಲ್ಲ. ಕೆಲವರಿಗೆ ಕೇವಲ ವಂಶವಾಹಿನಿಯನ್ನು ಮುಂದುವರಿಸಿದ ಸಾರ್ಥಕತೆ ಇರುತ್ತದೆ. ಒಂದು ಪ್ರದೇಶದ ಸಾಹಿತ್ಯವಾಹಿನಿಯನ್ನು ಈ ದೃಷ್ಟಿಯಲ್ಲಿ ನೋಡಬೇಕಾಗುವುದೆಂದು ಸೂಚಿಸುತ್ತ, ನನ್ನ ಆತ್ಮೀಯ ವಿದ್ಯಾರ್ಥಿಯ ಗ್ರಂಥಮುನ್ನುಡಿಗೆ ಮುಕ್ತಾಯ ಹೇಳುತ್ತೇನೆ.

ರವೀಂದ್ರ ಕರ್ಜಗಿ, ಗುಲ್ಬರ್ಗ

ಆಕರ : ಮಾರ್ಗ ಸಂಪುಟ–೬

೧೯೫

ವಿಜಯನಗರ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ

೨೦೦೯

ಮುನ್ನುಡಿ ಬರೆಯುವುದೆಂದರೆ ನನಗೆ ಬೇಸರದ ವಿಷಯ. ಹೀಗಿದ್ದೂ ಈ ಗ್ರಂಥಕ್ಕೆ ಬರೆಯಲು ಕಾರಣ, ಡಾ. ಸೋಮಶೇಖರ ಅವರು ಭರವಸೆಯ ಸಂಶೋಧಕರಾಗಿ ಬೆಳೆಯುತ್ತಲಿರುವುದು ಮತ್ತು ಪಿಎಚ್.ಡಿ ಅಧ್ಯಯನಕ್ಕೆ ವಿಶಿಷ್ಟ ವಿಷಯವನ್ನು ಆಯ್ದುಕೊಂಡುದು. ಹೀಗಾಗಿ ಇಂಥ ಕೃತಿಗೆ ನಾಲ್ಕು ಮಾತು ಬರೆಯುವುದು ಶ್ರಮ - ಸಮಯಗಳ ಅಪವ್ಯಯವಲ್ಲ; ಒಂದು ಒಳ್ಳೆಯ ಗ್ರಂಥವನ್ನು ಕಡ್ಡಾಯವಾಗಿ ಓದಿದ ಮತ್ತು ಯುವ ಸಂಶೋಧಕರಿಗೆ ಪ್ರೋತ್ಸಾಹಿಸುವ ಅವಕಾಶವೆಂದೇ ನಾನು ಭಾವಿಸುತ್ತೇನೆ.

ಸಂಸ್ಥೆಗಾಗಿ ನಾನು, ನನಗಾಗಿ ಸಂಸ್ಥೆ - ಹೀಗೆ ಎರಡು ರೀತಿಯ ವ್ಯಕ್ತಿಗಳನ್ನು ನಾನು ಶಿಕ್ಷಣ ಸಂಸ್ಥೆಗಳಲ್ಲಿ ಗಮನಿಸಿದ್ದೇನೆ. ಡಾ. ಸೋಮಶೇಖರ ವೃತ್ತಿಜೀವನದ ಆರಂಭದಲ್ಲಿಯೇ 'ಸಂಸ್ಥೆಗಾಗಿ ನಾನು' ಎಂಬ ಒಲವನ್ನು ರೂಢಿಸಿಕೊಳ್ಳುವ ಮೂಲಕ, ನನ್ನ 'ಸಾಂಸ್ಥಿಕ ಪ್ರಜ್ಞೆ'ಯ ವಲಯವನ್ನು ಪ್ರವೇಶಿಸಿದ್ದಾರೆ. ಈ ಪ್ರೀತಿ ಕಾರಣವಾಗಿಯೂ ನಾನು ಈ ಮುನ್ನುಡಿ ಬರೆಯಲು ಒಪ್ಪಿಕೊಂಡಿದ್ದೇನೆ.

ಇದು ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ಕೃತಿ. ಇದಕ್ಕೆ ಮುನ್ನುಡಿ ಬರೆಯಬೇಕಾದವರು ಇತಿಹಾಸ ಪ್ರಾಧ್ಯಾಪಕರು. ಹೀಗಿದ್ದೂ ಸಾಹಿತ್ಯ ಪ್ರಾಧ್ಯಾಪಕನಾದ ನನ್ನಿಂದ ಡಾ. ಸೋಮಶೇಖರ ಮುನ್ನುಡಿ ಅಪೇಕ್ಷಿಸಿದುದಕ್ಕೆ ಕಾರಣ, ನಾನು ರಾಜಕೀಯವೂ ಒಳಗೊಂಡಂತೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ದುಡಿಯುತ್ತ, ಸ್ನೇಹಿತರನ್ನು ದುಡಿಸುತ್ತ ಬಂದುದು. ಹೀಗಾಗಿ, ಈ ಕೃತಿಗೆ ಮುನ್ನುಡಿ ಬರೆಯುವ ಅಧಿಕಾರವೂ ನನಗಿದೆಯೆಂಬ ಭಾವನೆಯಿಂದ ಇಲ್ಲಿ ನಾಲ್ಕು ಮಾತುಗಳನ್ನು ಬರೆಯುತ್ತಲಿದ್ದೇನೆ.

ಪ್ರಜಾಪೋಷಣೆಯಂತೆ ಪ್ರಜಾರಕ್ಷಣೆಯೂ ರಾಜನ ಕರ್ತವ್ಯವಾಗಿದೆ. ಇವುಗಳಲ್ಲಿ ರಾಜನೊಬ್ಬ ತನ್ನ ಪ್ರಜಾರಕ್ಷಣೆಗಾಗಿ ನಡೆಸುವ ಯುದ್ಧ ನ್ಯಾಯಸಮ್ಮತವೆನಿಸುತ್ತಿದ್ದರೆ, ತನ್ನ ರಾಜ್ಯವಿಸ್ತರಣೆಗಾಗಿ ನಡೆಸುವ ಯುದ್ಧವು ನ್ಯಾಯಸಮ್ಮತವೆನಿಸುವುದಿಲ್ಲ. ಹಾಗೆ ನೋಡಿದರೆ ರಾಜ್ಯ ವಿಸ್ತರಣೆಯ ದಾಹವೇ 'ಯುದ್ಧ'ವೆಂಬ ಪರಿಕಲ್ಪನೆ ಅಂಕುರಿಸಲು ಕಾರಣವಾಗಿದೆ. ಈ ದಾಹ ಮಾನವ ಸ್ವಭಾವದ ಭಾಗವೇ ಆಗಿರುವುದರಿಂದ, ಅಪಾರ ಸೈನ್ಯ ಸಂಘಟಿಸುವುದು, ಅಘೋರಯುದ್ಧ ಕೈಕೊಳ್ಳುವುದು ಹಿಂದಿನಿಂದಲೂ ನಡೆದು ಬಂದಿದೆ. ಇಂದು ನಡೆಯುತ್ತಲಿದ್ದು, ಮುಂದೆಯೂ ನಡೆಯಲಿದೆ. ಹೀಗೆ ಬದುಕಿನ ಭಾಗವಾಗಿರುವ 'ಯುದ್ಧ ಪರಂಪರೆ'ಯ

ಒಂದು ಘಟಕವೆಂಬಂತೆ ಕರ್ನಾಟಕ ರಾಜ್ಯವೆಂಬ ನೆಲ; ವಿಜಯನಗರ ಸಾಮ್ರಾಜ್ಯವೆಂಬ ಕಾಲಗಳಲ್ಲಿ ಸಂಭವಿಸಿದ 'ಯುದ್ಧ'ದ ಅಧ್ಯಯನವನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ವಿಜಯನಗರದ ಪತನ ವರೆಗಿನ ದಕ್ಷಿಣ ಭಾರತದ ಯುದ್ಧ ಪರಂಪರೆಯನ್ನು ೧. ಸ್ವದೇಶೀಯ ರಾಜರ ಪರಸ್ಪರ ಯುದ್ಧಘಟ್ಟ, ೨. ಔತ್ತರೇಯ ಮುಸಲ್ಮಾನರ ದಾಳಿ ಘಟ್ಟ, ೩. ದಾಕ್ಷಿಣಾತ್ಯ ಸ್ಥಾನಿಕ ಮುಸಲ್ಮಾನರೊಂದಿಗಿನ ಯುದ್ಧ ಘಟ್ಟವೆಂದು ವರ್ಗೀಕರಿಸಬಹುದು. ಈ ಮೂರೂ ವಿಭಿನ್ನ ಸ್ವರೂಪದ ಸಂಘರ್ಷಗಳೆನಿಸಿವೆ. ಪ್ರಸ್ತುತ ಪ್ರಬಂಧ ಇಲ್ಲಿಯ ಮೂರನೆಯ ಘಟ್ಟದ ಸೈನ್ಯ ಮತ್ತು ಯುದ್ಧಗಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ಮತ್ತು ಸಮಕಾಲೀನ ರೀತಿ -ನೀತಿಗಳನ್ನು ಚಿತ್ರಿಸಿದೆ.

ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಸೇವುಣ, ಹೊಯ್ಸಳ - ಈ ಇತಿಹಾಸ ಕ್ರಮದಲ್ಲಿ ವಿಜಯನಗರವೇ ಕರ್ನಾಟಕದ ಕೊನೆಯ ಸಾಮ್ರಾಜ್ಯವಾಗಿದೆ. ದೀಪ ಆರುವ ಮೊದಲು ದೊಡ್ಡದಾಗುವಂತೆ ಕೊನೆಯ ಸಾಮ್ರಾಜ್ಯವಾಗಿರುವ 'ವಿಜಯನಗರ' ದೊಡ್ಡದಾಗಿ ಬೆಳೆದು, ದೊಡ್ಡ ರೀತಿಯಲ್ಲಿ ನಾಶವಾಗಿ, ಕನ್ನಡಿಗರಲ್ಲಿ ದೊಡ್ಡ ನೆನಪಾಗಿ ಉಳಿಯಿತು. ಈ ನೆನಪನ್ನು ಮರುನಿರ್ಮಾಣ ಮಾಡುವಲ್ಲಿ ನಮಗೆ ನೆರವಾಗುವುದು ಅಂದಿನ ಆಕರ ಸಾಮಗ್ರಿ.

ಕರ್ನಾಟಕದಲ್ಲಿ ಆಕರ ಸಾಮಗ್ರಿಯು ಪ್ರಕಾರ ಮತ್ತು ಪ್ರಮಾಣ ದೃಷ್ಟಿಯಿಂದ ಕಾಲಕಾಲಕ್ಕೆ ಬೆಳೆಯುತ್ತ ಬಂದಿದೆ. ಆರಂಭದಲ್ಲಿ ವಾಸ್ತು-ವಿಗ್ರಹ ರೂಪದ ಸ್ಮಾರಕ, ಶಾಸನ-ಸಾಹಿತ್ಯರೂಪದ ಬರೆವಣಿಗೆಗಳಿಗೆ ಸೀಮಿತವಾಗಿದ್ದ ಈ ಸಾಮಗ್ರಿಯು, ಬಳಿಕ ಸಮಕಾಲೀನ ಪ್ರವಾಸಿಗಳ ದಿನಚರಿ, ಉತ್ತರಕಾಲೀನ ಕೈಫಿಯತ್ತು ಬಖೈರು ಇತ್ಯಾದಿ ಪ್ರಕಾರಗಳಲ್ಲಿ, ಸಂಸ್ಕೃತ ಕನ್ನಡ ಭಾಷೆಗಳಿಗೆ ಸೀಮಿತವಾಗಿದ್ದ ಅದು ತೆಲುಗು ತಮಿಳು ಇತ್ಯಾದಿ ಭಾಷೆಗಳಲ್ಲಿ ವಿಸ್ತಾರಗೊಳ್ಳುತ್ತ, ತನ್ನ ಪ್ರಮಾಣವನ್ನು ವರ್ಧಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ಈ ದೊಡ್ಡ ಸಾಮ್ರಾಜ್ಯದ ವಿಷಯದಲ್ಲಿ ಇದು ದೊಡ್ಡ ಪ್ರಮಾಣದಲ್ಲಿಯೇ ಸಿಗುತ್ತಿದ್ದು, ಕೆಲವೊಮ್ಮೆ ಅಭ್ಯಾಸಿಗೆ ಆ ದೊಡ್ಡ ಪ್ರಮಾಣವೇ ಒಂದು ತೊಡಕಾಗಿ ಪರಿಣಮಿಸುತ್ತದೆ. ಈ ಬಗೆಯ ಆಕರ ಆಸ್ತಿಯನ್ನು ಎಲ್ಲ ನೆಲೆಗಳಿಂದ ಸಂಗ್ರಹಿಸಿದುದು, ಇದರಲ್ಲಿಯ ತೊಡಕುಗಳನ್ನು ಸರಿಯಾಗಿ ಬಿಡಿಸಿಕೊಂಡುದು ಈ ಪ್ರಬಂಧದ ಪ್ರಥಮ ಸಾಧನೆಯಾಗಿದೆ.

ಈ ಸಂದರ್ಭದಲ್ಲಿ ಹೇಳಲೇಬೇಕಾದ ಇನ್ನೊಂದು ವಿಷಯವೆಂದರೆ, ಪುಸ್ತಕ ಲೇಖನರೂಪದ ಕೇಂದ್ರೀಯ ಆಕರದೊಂದಿಗೆ ಕೋಟೆ ವೀರಗಲ್ಲುಗಳಂಥ 'ಕ್ಷೇತ್ರೀಯ ಆಕರ'ವನ್ನೂ ಸಂಗ್ರಹಿಸಿದುದು ಪ್ರಸ್ತುತ ಪ್ರಬಂಧದ ಒಂದು ವಿಶೇಷತೆಯೆನಿಸಿದೆ. ಇದರಿಂದಾಗಿ 'ಓದಿದ ಮಾಹಿತಿ' 'ನೋಡಿದ ಮಾಹಿತಿ'ಗಳು ಪರಸ್ಪರ ಮುಖಾಮುಖಿಯಾಗಿ ನಿಂತು ಬರೆವಣಿಗೆಗೆ ಅಧಿಕೃತತೆಯನ್ನೊದಗಿಸಿದ್ದು, ಇದಕ್ಕೆ ಇಲ್ಲಿಯ ಎಲ್ಲ ಅಧ್ಯಾಯಗಳೂ ನಿದರ್ಶನವೆನಿಸಿವೆ.

ವಿಷಯದ ವ್ಯವಸ್ಥಿತ ವರ್ಗೀಕರಣ, ಅದರ ಕ್ರಮಬದ್ಧ ವಿನ್ಯಾಸೀಕರಣ ಇಲ್ಲಿಯ ಎದ್ದು ತೋರುವ ಅಂಶಗಳಾಗಿವೆ. ಈ ಅಧ್ಯಾಯಗಳ ಒಳಗನ್ನು ತೋರಿಸುವುದರ ಸಲುವಾಗಿ ಉದ್ದಕ್ಕೂ ಕಲ್ಪಿಸಿರುವ ಉಪಶೀರ್ಷಿಕೆಗಳು ಓದುಗನು ತನಗೆ ಇಷ್ಟವಾದ ವಿಷಯದತ್ತ ಸಾಗಲು ಬೆರಳು ನೀಡುತ್ತವೆ. ಇದಕ್ಕೆ ಸೈನ್ಯದಲ್ಲಿ ಮಹಿಳೆ, ಫಿರಂಗಿದಳ, ನೌಕಾಯುದ್ಧ, ವೀಳೆಯ ಪದ್ಧತಿ, ರಣವಾದ್ಯಗಳು ಮತ್ತಾದಿ ಉಪಶೀರ್ಷಿಕೆಗಳು ಉದಾಹರಣೆಯೆನಿಸಿವೆ.

ವಿಜಯನಗರದ 'ಸೈನ್ಯ' ಮತ್ತು 'ಯುದ್ಧ'ಗಳನ್ನು ಕೇಂದ್ರವಾಗಿಟ್ಟುಕೊಂಡಿರುವ ಇದು, ಕೇವಲ ಇವುಗಳ ಸ್ವರೂಪವನ್ನು ವಿವರಿಸಿ ವಿರಮಿಸದೆ, ಇವುಗಳ ಹಿಂದಿನ 'ಕಾರಣ' - ಮುಂದಿನ 'ಪರಿಣಾಮ'ಗಳನ್ನು ಗಮನಿಸುವುದರಿಂದ

'ಕಾರಣ-ಕಾರ್ಯ-ಪರಿಣಾಮ'ಗಳೆಂಬ ಏಕಸೂತ್ರತೆ ಈ ಪ್ರಬಂಧದಲ್ಲಿ ಅಚ್ಚುಕಟ್ಟಾಗಿ ಅನಾವರಣಗೊಂಡಿದ್ದು, ಸೂಕ್ತ ಅನುಬಂಧ, ಚಿತ್ರಗಳು ಇದಕ್ಕೆ ಸಮಗ್ರತೆಯನ್ನೊದಗಿಸಿವೆ.

ಎತ್ತಿ ಹೇಳಲೇ ಬೇಕಾದ ಇನ್ನೊಂದು ಸಂಗತಿಯೆಂದರೆ, ಪ್ರಾಚೀನ ರಾಜವಂಶ, ವಾಸ್ತುಶಿಲ್ಪ ಇತ್ಯಾದಿಗಳನ್ನು ಕುರಿತು ಈ ವರೆಗೆ ರಚಿತವಾಗಿರುವ ಪ್ರಬಂಧಗಳು ಆ ಬಗೆಯ ಹೊಸ ಪ್ರಬಂಧಗಳಿಗೆ ಸಿದ್ಧ ಮಾದರಿಯಾಗಿ ದಾರಿ ತೋರುತ್ತವೆ. ಸೈನ್ಯಪದ್ಧತಿ-ಯುದ್ಧನೀತಿಯಂಥ ಪ್ರಬಂಧ ಬರೆವಣಿಗೆಗೆ ಸಿದ್ಧ ಮಾದರಿಗಳು ನಮ್ಮಲ್ಲಿ ಅಷ್ಟಾಗಿ ಸೃಷ್ಟಿಯಾಗಿಲ್ಲ. ಹೀಗಾಗಿ ಲೇಖಕನು ಇಲ್ಲಿ ದಾರಿಯೂ ತಾನೇ, ದಾರಿಕಾರನೂ ತಾನೇ ಎಂಬಂತೆ ಹೊಸ ವಿನ್ಯಾಸವನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಅಂಥ ಒಂದು ಹೊಸ ವಿನ್ಯಾಸ ಈ ಕೃತಿಯಲ್ಲಿ ಮೊದಲ ಸಲ ಕಂಡುಬರುತ್ತಿದ್ದು, ಇಂಥ ವಿಷಯದ ಅಭ್ಯಾಸಿಗೆ ಇದು ಮಾರ್ಗದರ್ಶಿಯೆಂಬಂತೆ ಬೆಳೆದು ನಿಂತಿದೆ.

ಹೀಗೆ, ಎಲ್ಲ ರೀತಿಯಿಂದ ಸಮರ್ಪಕವಾಗಿರುವ ಈ ಕೃತಿಯನ್ನು ಶ್ರಮವಹಿಸಿ ರೂಪಿಸಿರುವ ಡಾ. ಸೋಮಶೇಖರ ಅವರಿಂದ ಇನ್ನೂ ಉತ್ತಮ ಕೃತಿಗಳು ಬೆಳಕು ಕಾಣಲೆಂದು ಆಶಿಸುತ್ತೇನೆ.

ಡಾ. ಎಸ್.ವಾಯ್. ಸೋಮಶೇಖರ, ಹಂಪಿ

ಆಕರ : ಮಾರ್ಗ ಸಂಪುಟ–೬

■■

೧೯೬

ಕನ್ನಡ ಸಾಹಿತ್ಯ ದರ್ಶನ

೧೯೮೯

ಇಪ್ಪತ್ತು ವರ್ಷಗಳ ಹಿಂದಿನ ಘಟನೆ: ಹೈದರಾಬಾದಿನಿಂದ ಕನ್ನಡ ವಿದ್ವಾಂಸರಾದ ಶ್ರೀ. ಡಿ. ಕೆ. ಭೀಮಸೇನರಾವ, ಶ್ರೀ ಮಾನ್ವಿ ನರಸಿಂಗರಾವ ಅವರ ಹೆಸರು ಕೇಳಿ ಬರುತ್ತಲಿದ್ದ ಕಾಲ. ಈ ಪರಿವಾರದಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಶ್ರೀ ಪಾಂಡುರಂಗಾಚಾರ್ಯ ವೈದ್ಯ ಅವರಿಗೂ ನನಗೂ ಹೈದರಾಬಾದಿನಲ್ಲಿ ಪ್ರಥಮ ಭೆಟ್ಟಿ ಸಂಭವಿಸಿತು. ಆಗ ನಮ್ಮಿಬ್ಬರಲ್ಲಿ ಸಾಹಿತ್ಯಿಕ ಸಮಾಲೋಚನೆ ನಡೆಯುತಿದ್ದಂತೆಯೇ ಶ್ರೀ ವೈದ್ಯ ಅವರನ್ನು ಅಜ್ಞಾತ ವಿದ್ವಾಂಸರೆಂದು ನಾನು ಗುರುತಿಸಿದೆ. ಮುಂದುವರಿದು "ನಿಮ್ಮಿಂದ ಕನ್ನಡಕ್ಕೆ ಲೇಖನ ಸೇವೆ ಸಲ್ಲಬೇಕು" ಎಂದು ಪ್ರಸ್ತಾಪಿಸುತ್ತಲೇ "ಕನ್ನಡದ ಕುರುಕ್ಷೇತ್ರದಲ್ಲಿ ನಾನೊಬ್ಬ ಬೆರಳು ಕತ್ತರಿಸಿಕೊಂಡ ಏಕಲವ್ಯ. ಹೇಗೆ ಬರೆಯಲಿ?" ಎಂದು ಧ್ವನಿಪೂರ್ಣವಾಗಿ ಉತ್ತರಿಸಿದರು. ಆ ಉತ್ತರದಲ್ಲಿ ನೋವು ವಿಷಾದ ತುಂಬಿತ್ತು. ಅವರ ವಿದ್ವತ್ತಿನ ಬಗ್ಗೆ ಅದೇ ಆಗ ಉಂಟಾಗಿದ್ದ ನನ್ನ ಪ್ರೀತಿ ಇನ್ನೂ ವರ್ಧಿಸಿತು.

ಆಮೇಲಿನ ವರ್ಷಗಳಲ್ಲಿ ನಾವಿಬ್ಬರೂ ಮತ್ತೆ ಮತ್ತೆ ಸಂಧಿಸಿದ್ದೆವು. ಆ ಸಂದರ್ಭಗಳಲ್ಲಿ ತಮ್ಮ ತರ್ಕಬದ್ಧ ಮಾತುಗಾರಿಕೆಯಿಂದ ಅವರು ನನ್ನ ಮೇಲೆ ಪ್ರಭಾವ ಬೀರುತ್ತಲೇ ನಡೆದರು.

ಇಂದು ವೈದ್ಯರು ನಮ್ಮ ಮಧ್ಯದಲ್ಲಿ ಇಲ್ಲ. "ನಿಮ್ಮಿಂದ ಕನ್ನಡಕ್ಕೆ ಲೇಖನಸೇವೆ ಸಲ್ಲಬೇಕು" ಎಂಬ ನನ್ನ ಅಂದಿನ ಮಾತಿಗೆ ಉತ್ತರವೆಂಬಂತೆ ಈ ಪುಸ್ತಕ 'ಮುನ್ನುಡಿ'ಗಾಗಿ ನನ್ನ ಕಡೆಗೇ ಬಂದುದು, ಭವಿಷ್ಯ ಸತ್ಯವಾದಂಥ ಘಟನೆ. ಈ ವಿಸ್ಮಯ ಮಿಶ್ರಭಾವದಿಂದ ಶ್ರದ್ಧಾಂಜಲಿ ರೂಪದ ಮುನ್ನುಡಿ ಬರೆಯುತ್ತಲಿದ್ದೇನೆ.

ಕಿಟಲ್ ಅವರು ಛಂದೋಂಬುಧಿಗೆ ಬರೆದ ಮುನ್ನುಡಿ(೧೮೭೨)ಯೇ ಕನ್ನಡದ ಮೊದಲ ಸಾಹಿತ್ಯ ಚರಿತ್ರೆಯೆಂದಿಟ್ಟುಕೊಂಡರೆ, ನಮ್ಮ ಸಾಹಿತ್ಯ ಚರಿತ್ರೆಯ ಬರೆವಣಿಗೆಗೆ ನೂರುವರ್ಷ ತುಂಬಿದವು. ಈ ಅವಧಿಯಲ್ಲಿ ವೈಯಕ್ತಿಕ ಮತ್ತು ಸಾಂಸ್ಥಿಕ ಮಟ್ಟದಲ್ಲಿ ಕೆಲವು ಸಾಹಿತ್ಯ ಚರಿತ್ರೆಗಳು ಕನ್ನಡದಲ್ಲಿ ಹುಟ್ಟಿಕೊಂಡಿವೆ. ಅವುಗಳಲ್ಲಿ ಒಂದು ವೈಯಕ್ತಿಕ ವಿನಮ್ರ ಪ್ರಯತ್ನವಾಗಿದೆ, ಶ್ರೀ ವೈದ್ಯ ಅವರ ಈ "ಕನ್ನಡ ಸಾಹಿತ್ಯದರ್ಶನ."

ಈ ಗ್ರಂಥವನ್ನು ಓದುವ ಮೊದಲು ಎರಡು ಮಿತಿಗಳನ್ನು ಅವಶ್ಯ ಗಮನಿಸಬೇಕು. ಇದು ನವೋದಯ ಕಾಲದ ಬರವಣಿಗೆ. ಇದನ್ನು ಬರೆದವರು ಹೊರನಾಡ ಕನ್ನಡ ವಿದ್ವಾಂಸರು. ಹೀಗಿದ್ದೂ ಈ ಮಿತಿಗಳನ್ನು ದಾಟಲು ಪ್ರಯತ್ನಿಸಿದುದು ಈ ಕೃತಿಯ ಒಂದು ಸಾಧನೆಯಾಗಿದೆ.

ಸಾಹಿತ್ಯ ಚರಿತ್ರೆಯನ್ನು ಬರೆಯುವವರು ಸಮಗ್ರ ಸಾಹಿತ್ಯವನ್ನು ಕಣ್ಣುಮುಂದೆ ಇಟ್ಟುಕೊಂಡು, ಹೇಗೆ ಹೇಳಲಾಗಿದೆ? ಏನು ಹೇಳಲಾಗಿದೆ? ಯಾಕೆ ಹೇಳಲಾಗಿದೆ? ಎಂಬ ಮೂರು ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ ಹೋಗಬೇಕಾಗುತ್ತದೆ. ಇವುಗಳಲ್ಲಿ ಒಂದು ಶೈಲಿಯ ನಿರೂಪಣೆಗೆ ಸಂಬಂಧಿಸಿದ್ದು, ಇನ್ನೊಂದು ವಸ್ತುವಿನ ನಿರ್ವಹಣೆಗೆ ಸಂಬಂಧಿಸಿದ್ದು. ಮತ್ತೊಂದು ಅದರ ಹಿಂದೆ ಕವಿಗಿರುವ ಒತ್ತಡಗಳಿಗೆ ಸಂಬಂಧಿಸಿದ್ದು. ಈ ಮೂರು ನೆಲೆಗಳಲ್ಲಿ ನಿಂತು ಬರೆದ ಸಾಹಿತ್ಯ ಚರಿತ್ರೆ ಮಾತ್ರ ಸಾಹಿತ್ಯದ ಆತ್ಮಚರಿತ್ರೆಯಾಗುತ್ತದೆ. ಇಷ್ಟು ವಿಸ್ತಾರವಾದ ಭೂಮಿಕೆ ಮಾತ್ರ ಆ ಚರಿತ್ರೆಗೆ ಪರಿಪೂರ್ಣತೆಯನ್ನು ಒದಗಿಸಬಲ್ಲುದು. ಪ್ರಸ್ತುತ 'ಕನ್ನಡ ಸಾಹಿತ್ಯ ದರ್ಶನ'ದಿಂದ ಇದೆಲ್ಲವನ್ನು ಅಪೇಕ್ಷಿಸಬಾರದು; ಅದು ಶ್ರೀ ವೈದ್ಯರ ಉದ್ದೇಶವೂ ಅಲ್ಲ.

ಸಾಹಿತ್ಯ ಚರಿತ್ರೆಯನ್ನು ಬರೆಯುವ ವಿಧಾನಗಳು ಅನೇಕ. ಅವುಗಳಲ್ಲಿ ಶತಮಾನನಿಷ್ಠ ಬರೆವಣಿಗೆಯೂ ಒಂದು. ಕನ್ನಡ ಸಾಹಿತ್ಯ ದರ್ಶನ ಅಂಥ ಒಂದು ಕೃತಿ. ಶ್ರೀ ವೈದ್ಯ ಅವರು ಮೂಲತಃ ಅಧ್ಯಾಪಕರು. ವಿದ್ಯಾರ್ಥಿಗಳಿಗೆ ಅನೇಕ ವರ್ಷ ಸಾಹಿತ್ಯ ಚರಿತ್ರೆಯನ್ನು ಬೋಧಿಸಿದವರು. ಆ ಬೋಧನೆಯ ನಿರೂಪಣಕ್ರಮ ಇಲ್ಲಿ ಪುಸ್ತಕದ ಮೈ ಪಡೆದು; ಅದು ಕವಿ ಮತ್ತು ಕೃತಿಗಳು ಶೋಧ ಪರಿಚಯ ವಿಮರ್ಶೆಗಳ ಮೇಳ ರೂಪದಿಂದ ಶತಮಾನದಿಂದ ಶತಮಾನಕ್ಕೆ ವಾಹಿನಿಯಾಗಿ ಹರಿದಿದೆ. ಒಬ್ಬ ಪ್ರಾಮಾಣಿಕ ಪ್ರಾಧ್ಯಾಪಕ ತನ್ನ ತಿಳಿವಳಿಕೆಯನ್ನು ಪ್ರತಿವರ್ಷ ನವೀಕರಿಸಿಕೊಳ್ಳುತ್ತ ಹೋಗಬೇಕಾಗುತ್ತದೆ. ಕನ್ನಡದ ಶ್ರದ್ಧಾವಂತ ಅಧ್ಯಾಪಕರಾದ ಶ್ರೀ ವೈದ್ಯ ಅವರು ತಮ್ಮ ಕಾಲದ ಎಲ್ಲ ಶೋಧ ವಿಮರ್ಶೆಗಳನ್ನು ಮೈಗೂಡಿಸಿಕೊಂಡು ಈ ಗ್ರಂಥವನ್ನು ರೂಪಿಸಲು ಪ್ರಯತ್ನಿಸಿದ್ದಾರೆ.

ಹನ್ನೆರಡು ಪ್ರಕಣಗಳಲ್ಲಿ ಹರಡಿಕೊಂಡಿರುವ ಇದರ ಮುಖ್ಯಲಕ್ಷಣವೆಂದರೆ ಸರಳತೆ, ಸಂಕ್ಷಿಪ್ತತೆ ಮತ್ತು ಸಮಗ್ರತೆ. ಪ್ರಾರಂಭದ ಮೂರು ಪ್ರಕರಣಗಳು ಸಾಹಿತ್ಯ ಚರಿತ್ರೆಗೆ ಸರಿಯಾದ ತಳಪಾಯವಾಗಿ ಪರಿಣಮಿಸಿವೆ. ಇಲ್ಲಿ ಶ್ರೀ ವೈದ್ಯ ಅವರ ಅಭ್ಯಾಸದ ವ್ಯಾಪ್ತಿ, ವಿಷಯವನ್ನು ಕ್ರೋಡೀಕರಿಸುವ ರೀತಿ, ನಿರೂಪಣಾ ಪದ್ಧತಿಗಳು ಸುಸಂಬದ್ಧವಾಗಿ ಮೇಳವಿಸಿವೆ. ಆಮೇಲೆ ೯ನೆಯ ಶತಮಾನದಿಂದ ೧೯ನೆಯ ಶತಮಾನಗಳ ವರೆಗಿನ ಕನ್ನಡ ಸಾಹಿತ್ಯವನ್ನು ಶತಮಾನಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ಈ ಸಂದರ್ಭದಲ್ಲಿ ಆಯಾ ಶತಮಾನಗಳ ಪ್ರಮುಖ ಲಕ್ಷಣದ ಪ್ರತಿಪಾದನೆ. ಪ್ರಧಾನ ಕವಿ ಮತ್ತು ಕೃತಿಗಳ ಪರಿಚಯಾತ್ಮಕ ವಿಮರ್ಶೆ ಈ ಕ್ರಮದಲ್ಲಿ ಗ್ರಂಥಬಿಚ್ಚಿಕೊಳ್ಳುತ್ತ ಹೋಗುತ್ತದೆ. ಸಾಹಿತ್ಯ ಕೃತಿಗಳನ್ನು ನೇರವಾಗಿ ಓದಿದ ಶ್ರಮ, ರಾಗ, ದ್ವೇಷರಹಿತ ದೃಷ್ಟಿ ಕಾರಣವಾಗಿ ಒಂದು ವಿಶ್ವಾಸಾರ್ಹ ಬರೆವಣಿಗೆಯ ಮುದ್ರೆ ಇದಕ್ಕೆ ಪ್ರಾಪ್ತವಾಗಿದೆ. ಆದುದರಿಂದ ಹೊಸದಾಗಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ತಿಳಿದುಕೊಳ್ಳಬೇಕೆನ್ನುವವರಿಗೆ ಒಂದು ಉತ್ತಮ ಪ್ರವೇಶಿಕೆಯಂತೆ ನೆರವಾಗುವುದು ಈ ಕೃತಿಯ ಮುಖ್ಯ ವೈಶಿಷ್ಟ್ಯವಾಗಿದೆ.

ಯಾವುದೇ ಸಾಹಿತ್ಯ ಚರಿತ್ರೆ ಪರಿಪೂರ್ಣವಲ್ಲ. ಅಜ್ಞಾತ ವಿಷಯಗಳ ಬೆಳಕು ಕಾಣುವಿಕೆ, ಚರಿತ್ರೆಕಾರನ ಶೈಕ್ಷಣಿಕ ಬೆಳವಣಿಗೆಗಳಿಂದಾಗಿ ಸಾಹಿತ್ಯ ಚರಿತ್ರೆಯ ಬರೆವಣಿಗೆಯೆನ್ನುವುದು

ಪೂರ್ಣತೆಯತ್ತ ಸಾಗುವ ಒಂದು ಪ್ರಕ್ರಿಯೆಯಾಗಿದೆ. ಹೀಗಾಗಿ ಅನೇಕ ನಿಟ್ಟಿನಿಂದ, ಅನೇಕ ಗುಣಮಟ್ಟದ ಚರಿತ್ರೆಗಳನ್ನು ಬರೆಯುವ ಕ್ರಿಯೆ ಒಂದು ಸಾಹಿತ್ಯದ ಸಂದರ್ಭದಲ್ಲಿ ಜರುಗುತ್ತ ಹೋಗುತ್ತದೆ. ಈ ದೃಷ್ಟಿಯಿಂದ ಶ್ರೀ ವೈದ್ಯ ಅವರ ಈ 'ಮರಣೋತ್ತರ ಪ್ರಕಟಣೆ' ಕನ್ನಡ ಸಾಹಿತ್ಯ ಚರಿತ್ರೆಯ ವಾಹಿನಿಗೆ ಒಂದು ಹೊಸ ಸೇರ್ಪಡೆಯಾಗಿದೆ.

ಮುನ್ನುಡಿ ಬರೆಯುವುದಕ್ಕಿಂತ ಈ ನೆಪದಲ್ಲಿ ಅಗಲಿದ ಮಿತ್ರರನ್ನು ಸ್ಮರಿಸಿದ ತೃಪ್ತಿ-ಧನ್ಯತೆ ನನಗಾಗಿದೆ. ಈ ಅವಕಾಶವನ್ನು ನನ್ನದಾಗಿಸಿದ ಮಿತ್ರರಾದ ಶ್ರೀ ಶಂಕರ ಪಾಟೀಲ ಅವರಿಗೆ ಕೃತಜ್ಞ ನಾಗಿದ್ದೇನೆ.

ಶ್ರೀ ವೈದ್ಯ : ಕನ್ನಡ ಸಾಹಿತ್ಯ ದರ್ಶನ, ೧೯೮೯.

ಆಕರ : ಮಾರ್ಗ ಸಂಪುಟ-೮

■■

197

KANNADA ONOMASTICS

1997

I am presenting to the learned community a distinctive book called Kannada Onomastics. This book is a writeup of three Endowment Lectures I delivered on January 27, 28, 1988 under the auspices of Prasaranga, Bangalore university.

The Kannada departments of our universities have been modernizing and expanding their fields of study. Which is a achievement of this century. As though to bear this out, textual criticism, the study of culture, linguistics and folklore have been rearing their heads one by one. Onomastics is another new branch rearing its head beside them. The present book is an attempt to subject this new branch of knowledge to scientific treatment. That is why, I have named it Kannada Onomastics.

Although a few articles in Kannada on this subject and a couple of books regarding village names have appeared, a comprehensive study in book form dealing with the whole body of names hasn't so far been done. I am happy that it is being fulfilled for the first time through this book.'

Beginning at the linguistic level and embracing historical, geographical levels, this study ends up at the cultural level. Hence, Onomastics can't help being a joint study of science and culture. I suggest that this work be viewed from that point.

These are lectures held under prof. S. S. Malavada Endowment. I hold late Prof. Malavada in high esteem. So, it is my great good fortune to pay homage to his through these lectures. My thanks are due to Dr. K. Marulasiddappa, Director of Prasaranga who is also my intimate friend, to scholar brethren and to student friends of Bangalore University Who listened to the lectures on both days.

***

Kannada Onomastics is an English Translation of Kannada Namavijnana, my original book in Kannada My thanks are due to Sri Sadsanand Kanwalli for providing an authentic translation.

ಆಕರ : ಮಾರ್ಗ ಸಂಪುಟ-೮

■■

೧೯೮

ಹರಪನಹಳ್ಳಿ ತಾಲೂಕು ಸ್ವಾತಂತ್ರ್ಯ ಹೋರಾಟಗಾರರು

೧೯೯೮

ಭರತಭೂಮಿಯ ಮೇಲೆ ಎರಡು ಚರಿತ್ರಾರ್ಹ ಘಟನೆಗಳು ಜರುಗಿವೆ. ಒಂದು ಕೃಷ್ಣ ಪರಮಾತ್ಮನ ನೇತೃತ್ವದಲ್ಲಿ ನಡೆದ ಹಿಂಸಾರೂಪದ ಕುರುಕ್ಷೇತ್ರ ಯುದ್ಧ. ಇನ್ನೊಂದು ಮಹಾತ್ಮಗಾಂಧಿ ನೇತೃತ್ವದಲ್ಲಿ ನಡೆದ ಅಹಿಂಸಾ ರೂಪದ ಭಾರತ ಸ್ವಾತಂತ್ರ್ಯ ಯುದ್ಧ. ಇದು ವಿನೂತನ ಪ್ರಯೋಗವೆನಿಸಿದೆ. ಈ ಅಹಿಂಸಾಯುದ್ಧದಲ್ಲಿ ಸಾವಿರ ಸಾವಿರ ಜನ ಸ್ವಾತಂತ್ರ್ಯ ಯೋಧರು ಭಾಗವಹಿಸಿದರು. ಇದರಲ್ಲಿ ಹರಪನಹಳ್ಳಿ ತಾಲೂಕಿನ ಯೋಧರ ಹೋರಾಟವನ್ನು ದಾಖಲಿಸುತ್ತದೆ, ಈ ಪುಸ್ತಕ.

ಭಾರತ ಸ್ವಾತಂತ್ರ್ಯ ಸಮರವನ್ನು ಕುರಿತು, ಕಳೆದ ೫೦ ವರ್ಷಗಳಲ್ಲಿ ಅನೇಕ ಗ್ರಂಥಗಳು ಬೆಳಕುಕಂಡಿವೆ. ರಾಷ್ಟ್ರವನ್ನು, ರಾಜ್ಯವನ್ನು ಕೇಂದ್ರವಾಗಿಟ್ಟುಕೊಂಡು ಬರೆದ ಗ್ರಂಥಗಳಿಗಿಂತ ಒಂದು ತಾಲೂಕನ್ನು ಘಟಕವಾಗಿಟ್ಟುಕೊಂಡು ಬರೆದ ಈ ಗ್ರಂಥ ವಿಶಿಷ್ಟವೆನಿಸಿದೆ. ಏಕೆಂದರೆ ಆ ಗ್ರಂಥಗಳು ಮುಖ್ಯವ್ಯಕ್ತಿಗಳನ್ನು, ಮುಖ್ಯ ಘಟನೆಗಳನ್ನು ಕುರಿತು ಬರೆದವು. ಇದರಿಂದಾಗಿ ಈವರೆಗೆ ಮರೆಯಾಗಿ ಹೋಗಿದ್ದ ಸ್ಥಳೀಯ ಹೋರಾಟದ ವಿವರಗಳನ್ನು ದಾಖಲಿಸಿದ ಶ್ರೇಯಸ್ಸು ಈ ಕೃತಿಗೆ ಸಲ್ಲುತ್ತದೆ.

ನಗರಗಳಿಗೆ ಮಾತ್ರ ಸೀಮಿತವಾಗಿದ್ದ ಸ್ವಾತಂತ್ರ್ಯ ಸಮರ ಹಳ್ಳಿಪಳ್ಳಿಗಳನ್ನು ಪ್ರವೇಶಿಸುವಲ್ಲಿ ಹೆಚ್ಚು ಅರ್ಥ ಪಡೆಯಿತು. ಭಾರತೀಯರಲ್ಲಿ ಸಮಷ್ಠಿ ಪ್ರಜ್ಞೆ ಜಾಗೃತವಾಯಿತು. ಹೀಗಾಗಿ ಹರಪನಹಳ್ಳಿ ತಾಲೂಕಿನ ಯೋಧರಂಥವರ ಚರಿತ್ರೆಗಳಿಂದ ಮಾತ್ರ ಭಾರತ ಸ್ವಾತಂತ್ರ್ಯ ಹೋರಾಟ ಚರಿತ್ರೆ ಪರಿಪೂರ್ಣತೆಯನ್ನು ಪಡೆಯುತ್ತದೆ. ಈ ದೃಷ್ಟಿಯಿಂದ ಪ್ರಸ್ತುತ ಪುಸ್ತಕ ಭಾರತ ಸ್ವಾತಂತ್ರ್ಯ ಸಮರದ ಚರಿತ್ರೆಗಳ ಸಾಲಿನಲ್ಲಿ ಸಣ್ಣದಾದರು ವಿಶಿಷ್ಟ ಸೇರ್ಪಡೆಯೆನಿಸುತ್ತದೆ.

ಮುಂಡರಗಿ ಭೀಮರಾಯರಂಥ ಸುಪರಿಚಿತರ ಜೊತೆಗೆ ಅನೇಕ ಜನ ಅಪರಿಚಿತ ಹೋರಾಟಗಾರರ ಜೀವನ ಚರಿತ್ರೆ ಮತ್ತು ಹೋರಾಟದ ಘಟನೆಗಳಿಂದ ತುಂಬಿದ ಈ ಪುಸ್ತಕ ಕಳೆದು ಹೋದ ಸ್ಥಳೀಯ ಚರಿತ್ರೆಯ ಅನೇಕ ಕೊಂಡಿಗಳನ್ನು ಜೋಡಿಸಿಕೊಟ್ಟಿದೆ.

ಲಿಖಿತ ಪುಸ್ತಕ, ಹಸ್ತಪ್ರತಿಗಳನ್ನಲ್ಲದೆ ಮೌಖಿಕ ಆಕರಗಳನ್ನು ಬಳಸಿಕೊಳ್ಳುವ ಮೂಲಕ ಈವರೆಗೆ ಅಜ್ಞಾತವಾಗಿದ್ದ ಅನೇಕ ಸಂಗತಿಗಳನ್ನು ಇಲ್ಲಿ ಮೊದಲ ಬಾರಿಗೆ ಸಂಗ್ರಹಿಸಲಾಗಿದೆ. ಇನ್ನೂ ವಿಶೇಷವೆಂದರೆ ಲೇಖಕರಾದ ಶ್ರೀ ವೀರಭದ್ರಯ್ಯನವರು ಸ್ವಾತಂತ್ರ್ಯ ಚಳುವಳಿಯಲ್ಲಿ ನೇರವಾಗಿ ಭಾಗವಹಿಸಿದವರು. ಕಿವಿಯಾರೆ ಕೇಳಿದವರು, ಕಣ್ಣಾರೆ ಕಂಡವರು. ಹೀಗೆ ಎಲ್ಲಾ ಮೂಲಗಳ ಸಾಮಗ್ರಿ ಇಲ್ಲಿ ಬಳಸಿಕೊಳ್ಳವ ಮೂಲಕ ಈ ಕೃತಿಗೆ ಅಧಿಕೃತತೆ ಮತ್ತು ಪರಿಪೂರ್ಣತೆ ಪ್ರಾಪ್ತವಾಗಿದೆ.

ಶ್ರೀ ವೀರಭದ್ರಯ್ಯನವರು ಗಾಂಧಿಯುಗದ ಮೌಲ್ಯಗಳ ಆದರ್ಶದಲ್ಲಿ ನೇರ ನಡೆ, ನೇರ ನುಡಿಗಳ ಬದುಕನ್ನು ಬಾಳಿದವರು. ಸಾಹಿತ್ಯ, ಕಾನೂನು ಸಾಹಿತ್ಯಗಳ ಸೃಷ್ಟಿಯ ಮೂಲಕ ಪರಿಸರದ ಮನ್ನಣೆಗೆ ಪಾತ್ರರಾದವರು. ಅನೇಕ ವರ್ಷಗಳ ಪರಿಚಯ ಅವರ ಬಗೆಗೆ ನನ್ನಲ್ಲಿ ಗೌರವ ಮೂಡಿಸಿದೆ. ಈ ಗೌರವ ಕಾರಣವಾಗಿ ಪ್ರಸ್ತುತ ಮುನ್ನುಡಿ ಬರೆಯುತ್ತ ಈ ಕೃತಿ ಹೊಸ ಪುಸ್ತಕ ರಚನೆಗೆ ಹೊಸ ತಿಳುವಳಿಕೆಯ ನಿರ್ಮಾಣಕ್ಕೆ ಸ್ಫೂರ್ತಿ ನೀಡಲೇಬೇಕೆಂದು ಹಾರೈಸುತ್ತೇನೆ.

ಶ್ರೀ ಹಿರೇಮಠ ವೀರಭದ್ರಯ್ಯ : ಹರಪನಹಳ್ಳಿ ತಾಲೂಕು ಸ್ವಾತಂತ್ರ್ಯ ಹೋರಾಟಗಾರರು, ೧೯೯೮.

ಆಕರ : ಮಾರ್ಗ ಸಂಪುಟ–೮

■■

೧೯೯

ಕರ್ನಾಟಕ ರಾಜ್ಯಕೋಶ-೪

೨೦೦೦

ಕನ್ನಡಿಗರಲ್ಲಿ ಕನ್ನಡ ಪ್ರಜ್ಞೆಯ ಅಂತರ್ಜಲ ಪಾತಳಿ ಕುಸಿಯುತ್ತ ನಡೆದಿದ್ದು, ಇದನ್ನು ತಡೆಯುವುದು ಮತ್ತು ಮೇಲೆತ್ತುವುದು ಇಂದಿನ ಬಹುಮುಖ್ಯ ಅಗತ್ಯವಾಗಿದೆ. ನರ್ಮದೆಯ ವರೆಗಿದ್ದ ನಮ್ಮ ನಾಡಿನ ಉತ್ತರದ ಸೀಮಾರೇಖೆ, ಕವಿರಾಜಮಾರ್ಗ ಕಾಲಕ್ಕೆ ಗೋದಾವರಿಗೆ ಸರಿಯಿತು; ಇಂದು ಭೀಮೆಯ ತನಕ ಇಳಿದಿದೆ. ಗಡಿನಾಡು ಅಭದ್ರವಾಗುತ್ತಲಿದೆ. ಒಳನಾಡಿನಲ್ಲಿ ಅನ್ಯಭಾಷಾ ದ್ವೀಪಗಳು ತಲೆಯೆತ್ತುತ್ತಲಿವೆ. ಕನ್ನಡ ಮಾತೃಭಾಷಿಕರ ಸಂಖ್ಯೆ ಆಡಳಿತದಲ್ಲಿ ಕಡಿಮೆಯಾಗುತ್ತಲಿದೆ. ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯುವಲ್ಲಿ ನಮ್ಮ ಉತ್ಸಾಹ ಕುಗ್ಗುತ್ತ ಸಾಗಿದೆ. ಹೊರನಾಡಿನಲ್ಲಿ ಕನ್ನಡ ಶಾಲೆಗಳು ಮುಚ್ಚುತ್ತ ನಡೆದಿವೆ. ಇವುಗಳಿಗೆ ಕಾರಣಗಳನ್ನು ಕಂಡುಹಿಡಿಯುವುದು, ಅದನ್ನು ತಡೆಗಟ್ಟಲು ಮಾರ್ಗೋಪಾಯಗಳನ್ನು ಶೋಧಿಸುವುದು ಇಂದಿನ ಅಗತ್ಯವೆನಿಸಿದೆ.

ಈ ದೌರ್ಬಲ್ಯಕ್ಕೆ ಇರುವ ಅನೇಕ ಕಾರಣಗಳಲ್ಲಿ ಮುಖ್ಯವಾದುದು ನಮ್ಮ ಗತ ಮತ್ತು ವರ್ತಮಾನಗಳ ನಿಜಸ್ವರೂಪನವನ್ನು, ಭೌತಿಕ ಮತ್ತು ಸಾಂಸ್ಕೃತಿಕ ಸಂಪತ್ತನ್ನು ನಮ್ಮ ಜನತೆ ತಿಳಿಯದಿರುವುದು, ನಮ್ಮ ಮಕ್ಕಳು ಡಾಕ್ಟರ್ ಆಗಲಿ, ಇಂಜಿನಿಯರ್ ಆಗಲಿ-ಏನೇ ಆಗುವ ಮೊದಲು ಕನ್ನಡಿಗರಾಗಬೇಕು. ಅವರು ಅನ್ಯ ಭೂಖಂಡಗಳ ಬಗ್ಗೆ ತಿಳಿದುಕೊಳ್ಳಲಿ, ಬಾಹ್ಯಾಕಾಶವನ್ನು ತಿಳಿದುಕೊಳ್ಳಲಿ-ಏನೇ ತಿಳಿದುಕೊಳ್ಳುವ ಮೊದಲು ಕರ್ನಾಟಕವನ್ನು ತಿಳಿದುಕೊಳ್ಳಬೇಕು. ಈ ಕರ್ನಾಟಕ ಜ್ಞಾನ (Knowledge) ಅವರಲ್ಲಿ ಕರ್ನಾಟಕ ಪ್ರಜ್ಞೆ (Awareness)ಯನ್ನು ಮೂಡಿಸುತ್ತದೆ.ಈ ಪ್ರಜ್ಞೆ ಮೂಡಿದರೆ ಸಾಕು ಅವನು ಏಕಕಾಲಕ್ಕೆ ಕನ್ನಡಿಗನೂ ಆಗುತ್ತಾನೆ. ವಿಶ್ವಮಾನವನೂ ಆಗುತ್ತಾನೆ. ಇಂದಿನ ಬಹುಮುಖ್ಯ ಅಗತ್ಯವೆನಿಸಿದೆ, ಇಂಥ ಕನ್ನಡಿಗನನ್ನು ನಿರ್ಮಾಣ ಮಾಡುವುದು, ಈ ಹಿನ್ನೆಲೆಯಲ್ಲಿ ನಮ್ಮ ನಾಡನ್ನು ದಾಖಲಿಸಬೇಕೆಂಬ ಉದ್ದೇಶದಿಂದ “ಕರ್ನಾಟಕ ರಾಜ್ಯಕೋಶ ಮಾಲೆ” ಹೆಸರಿನ ಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯ ಕೈಗೆತ್ತಿಕೊಂಡಿವೆ.

ಈ ಯೋಜನೆ ಪ್ರಾಕೃತಿಕ ಕರ್ನಾಟಕ, ಪ್ರಾಗತಿಕ ಕರ್ನಾಟಕ ಮತ್ತು ಸಾಂಸ್ಕೃತಿಕ ಕರ್ನಾಟಕವೆಂಬ ಮೂರು ಘಟಕಗಳನ್ನು ಒಳಗೊಂಡಿದ್ದು, ಪ್ರತಿಯೊಂದು ಘಟಕದಲ್ಲಿ ೫ ರಂತೆ ಒಟ್ಟು ೧೫ ಸಂಪುಟಗಳೂ ಸಿದ್ಧಗೊಳ್ಳಲಿವೆ.

ಮೊದಲ ಹಂತವಾಗಿ ಪ್ರಾಕೃತಿಕ ಕರ್ನಾಟಕದ ಸಮಗ್ರ ಅಧ್ಯಯನವನ್ನೊಳಗೊಂಡ ೫ ಸಂಪುಟಗಳು ಹೀಗಿವೆ. ಭೂಮಿ ಸಂಪುಟ, ಸಸ್ಯ ಸಂಪುಟ, ಪ್ರಾಣಿ–ಪಂಕ್ತಿ ಸಂಪುಟ, ಜನಸಮುದಾಯ ಸಂಪುಟ ಮತ್ತು ಭಾಷಾ ಸಂಪುಟ ಇವುಗಳಲ್ಲಿ "ಜನಸಮುದಾಯ ಸಂಪುಟ" ಈಗ ಪ್ರಕಟವಾಗುತ್ತಲಿದೆ.

ಕರಾವಳಿ, ಮಲೆನಾಡು, ಬಯಲುನಾಡು–ಹೀಗೆ ಕರ್ನಾಟಕದ ಭೂಪರಿಸರ ವೈವಿಧ್ಯಮಯವಾಗಿರುವುದರಿಂದ, ಇಲ್ಲಿಯ ಜನಸಮುದಾಯ ಸಹಜವಾಗಿಯೇ ವಿಭಿನ್ನ ಘಟಕಗಳಾಗಿ ಒಡೆದು ನಿಂತಿದೆ. ಮುಂದೆ ದೈವ–ಧರ್ಮ–ರಾಜ್ಯಾಡಳಿತಗಳ ಹೆಸರಿನಲ್ಲಿ ಇವು ಧರಿಸಿದ ಆಕಾರಗಳೂ ಅನೇಕ. ಕರ್ನಾಟಕವು ಉತ್ತರ ದಕ್ಷಿಣ ಭಾರತಗಳ ಹೊಸ್ತಿಲಲ್ಲಿರುವುದರಿಂದ ಮತ್ತು ದಕ್ಷಿಣದಲ್ಲಿ ಅನ್ಯಪ್ರಾಂತಗಳಿಂದ ಆವೃತವಾಗಿರುವುದರಿಂದ ಕಾಲಕಾಲಕ್ಕೆ ಬೇರೆ ಬೇರೆ ಜನಸಮುದಾಯಗಳು ಈ ನಾಡಿನಲ್ಲಿ ತೂರಿಬಂದವು. ಅವುಗಳ ಸಂಗಮದಿಂದಾಗಿ ಮೂಲದ ಸಮುದಾಯಗಳು ಮಿಶ್ರರೂಪಕ್ಕೆ ತಿರುಗಿದವು. ಹೀಗಾಗಿ ಕರ್ನಾಟಕ ಸಮುದಾಯ ಸಂಖ್ಯಾದೃಷ್ಟಿಯಿಂದ ಅನೇಕ–ಸ್ವರೂಪ ದೃಷ್ಟಿಯಿಂದ ವಿಶಿಷ್ಟವೆನಿಸಿವೆ.

ಇತ್ತೀಚೆ ಸ್ಥಿರಸಮಾಜ ಚರಸಮಾಜವಾಗುತ್ತಲಿರುವುದರಿಂದ, ಈ ಸಮುದಾಯಗಳ ಮೂಲ ಸ್ವರೂಪ ಮೊದಲಿನಕ್ಕಿಂತ ಹೆಚ್ಚು ವೇಗದಿಂದ ಬದಲಾಗುತ್ತ ನಡೆದಿದೆ. ಮೂಲ ಸ್ವರೂಪ ಸಂಪೂರ್ಣ ಮರೆಯಾಗುವ ಮೊದಲು ಅವುಗಳನ್ನು ದಾಖಲಿಸುವುದು ಇಂದು ತೀರ ಅವಶ್ಯವೆನಿಸಿದೆ. ಆಂಗ್ಲರ ಆಗಮನದ ಬಳಿಕ ಇಂಥ ಸಮುದಾಯಗಳ ದಾಖಲಾತಿ ಪ್ರಯತ್ನಗಳೂ ಆಗಾಗ ಕರ್ನಾಟಕದಲ್ಲಿ ಜರುಗಿದ್ದರೂ, ಈ ಕಾರ್ಯ ಪೂರ್ಣ ಪ್ರಮಾಣದಲ್ಲಿ ನೆರವೇರಲಿಲ್ಲ. ಇಂಥ ಕೊರತೆಯನ್ನು ತುಂಬಿಕೊಡುವ ಉದ್ದೇಶದಿಂದ ಸಿದ್ಧಗೊಂಡಿದೆ, ಜನಸಮುದಾಯ ಸಂಪುಟ.

ಕನ್ನಡ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಅಧ್ಯಾಪಕರಾದ ಶ್ರೀ ಹೆಚ್. ಡಿ. ಪ್ರಶಾಂತ್ ಅವರು ಕಷ್ಟಪಟ್ಟು ಪ್ರಕಟಿತ ಆಕರಗಳನ್ನು, ಕ್ಷೇತ್ರಕಾರ್ಯದ ಫಲಿತಗಳನ್ನು ಅವಲಂಬಿಸಿ ಈ ಕೃತಿರಚನೆಯನ್ನು ಪೂರೈಸಿದ್ದಾರೆ. ನಮ್ಮ ಸುದೈವಕ್ಕೆ ಆ. ಜೋಗನ್ ಶಂಕರ್, ಪ್ರೊ. ಮಹೇಶ ತಿಪಶೆಟ್ಟಿ, ಶ್ರೀ ಸುರೇಶ ಪಾಟೀಲ ಅವರಂಥ ಶ್ರಮಸಂಸ್ಕೃತಿಯ ವಿದ್ವಾಂಸರ ಸಹಾಯ ಲಭ್ಯವಾಗಿದೆ. ಹೀಗಾಗಿ ಪ್ರಕಟಿತ ಆಕರ ಸಾಮಗ್ರಿ, ಕ್ಷೇತ್ರಕಾರ್ಯ, ವಿದ್ವಾಂಸರ ನೆರವು ಈ ಮೂರು ನೆಲೆಗಳಿಂದ ಈ ಕಾರ್ಯವನ್ನು ಪೂರೈಸಲಾಗಿದೆ. ಇವರೆಲ್ಲರಿಗೆ ನಮ್ಮ ಅಭಿನಂದನೆಗಳೂ ಸಲ್ಲುತ್ತವೆ.

ಜನಸಮುದಾಯದ ದಾಖಲೆಯೆನ್ನುವುದು ಬೆರಳೂ ಸಂದುಗಳಲ್ಲಿ ಸೋರಿ ಹೋಗಿ, ಉಳಿದಿರುವ ನೀರನ್ನು ಬೊಗಸೆಯಲ್ಲಿ ಹಿಡಿದಂತೆ. ಮೇಲಾಗಿ ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ಬದಲಾದ, ಬದಲಾಗುತ್ತಿರುವ ಸಮುದಾಯಗಳ ನಿರ್ದಿಷ್ಟ ದಾಖಲೆ ಅಸಾಧ್ಯವೇ ಸರಿ. ಹೀಗಿದ್ದೂ ಸಮುದಾಯಗಳ ಬಗೆಗಿನ ಗೌರವದಿಂದ ಈ ಕೃತಿಯನ್ನು ರೂಪಿಸಲಾಗಿದೆ. ಇಂಥ ಕೋಶಗಳಿಗೆ ಇರುವುದು ಅರ್ಧವಿರಾಮವೇ ಹೊರತು, ಪೂರ್ಣ ವಿರಾಮವಲ್ಲ–ಎಂಬುದನ್ನು ಅರ್ಥಮಾಡಿಕೊಂಡು, ಈ ಗ್ರಂಥವನ್ನು ನೋಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಕರ್ನಾಟಕ ರಾಜ್ಯಕೋಶ–೪ (ಜನಸಮುದಾಯ ಸಂಪುಟ)–ಕನ್ನಡ ವಿಶ್ವವಿದ್ಯಾಲಯ ಹಂಪಿ–೨೦೦೦.

ಆಕರ : ಮಾರ್ಗ ಸಂಪುಟ–೮

೨೦೦

ಕನ್ನಡ ಭಾರತ

೨೦೦೧

ಕುಮಾರವ್ಯಾಸ ಭಾರತ ಮತ್ತು ತಿಮ್ಮಣಕವಿ ಭಾರತಗಳನ್ನು ಒಂದು ಸಂಪುಟದಲ್ಲಿ ಹೊರತರಬೇಕೆಂಬ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕನಸು ಎರಡು ವರ್ಷಗಳಷ್ಟು ಹಳೆಯದು, ಇದು ಹಲವು ವಿದ್ವಾಂಸರ, ಹಲವು ವರ್ಷಗಳ ಶ್ರಮವನ್ನು ಬಯಸುವ ಬೃಹತ್ ಯೋಜನೆ. ಹಸ್ತಪ್ರತಿಗಳನ್ನು ಸಂಗ್ರಹಿಸಿ, ಮೂಲಪಾಠವನ್ನು ನಿರ್ಣಯಿಸುವ ಕೆಲಸ ಬಹುಶಃ ಇಂದಿನ ಸಂದರ್ಭದಲ್ಲಿ ಸಾಧ್ಯವಿಲ್ಲವೆಂದೇ ತೋರುತ್ತದೆ. ಆದರೆ ಕನ್ನಡಿಗರಿಗೆ ಮಹಾಭಾರತವನ್ನು ಸಮಗ್ರ ಸ್ವರೂಪದಲ್ಲಿ ಕೊಡಬೇಕೆಂಬ ಅದಮ್ಯ ಆಕಾಂಕ್ಷೆ ನಮ್ಮದಾಗಿದ್ದ ಕಾರಣ, ಬೆಂಗಳೂರಿನ ಸರಸ್ವತೀ ರತ್ನಾಕರ ಬುಕ್ ಡಿಪೋದಿಂದ ಪ್ರಕಾಶಿತವಾದ, ಭಾರತೀ ಸಂಪಂಗಿರಾಮ ಅವರಿಂದ ಪರಿಶೋಧಿತವಾದ ೧೮ ಪರ್ವಗಳ ಮಹಾಭಾರತದ ದ್ವಿತೀಯ ಆವೃತಿ(೧೯೨೮)ಯನ್ನು ಆಧಾರವಾಗಿಟ್ಟುಕೊಂಡು, ಪ್ರಕಟಿತ ಇತರ ಆವೃತ್ತಿಗಳ ನೆರವನ್ನು ಪಡೆದು, ಒಂದು ಸಮಗ್ರ ಸಂಪುಟವನ್ನು ರೂಪಿಸುವುದೇ ಇಂದಿನ ಅನಿವಾರ್ಯತೆಯೆಂಬ ನಿರ್ಣಯಕ್ಕೆ ಬರಲಾಯಿತು. ಆದರೆ ಸುಮಾರು ೧೨ ಸಾವಿರ ಭಾಮಿನಿ ಷಟ್ಪದಿಗಳ ಪರಿಷ್ಕರಣ, ಮುದ್ರಣ–ಈ ಎರಡು ಹಂತದ ಕೆಲಸಗಳನ್ನು ಪೂರೈಸುವ ಸಾಹಿತ್ಯಿಕ ಶ್ರದ್ಧೆ–ಶ್ರಮಗಳ ಸಮನ್ವಯ ವ್ಯಕ್ತಿಗಳು ಸಿಗುವುದು ಇಂದು ತೀರ ದುರ್ಲಭ. ಇಂಥ ಕಾಲದಲ್ಲಿ ಈ ಗುರುಭಾರವನ್ನು ಹೊರಲು ಮುಂದೆಬಂದವರು, ವೃತ್ತಿಯಿಂದ ಕೆ.ಎ.ಎಸ್. ಅಧಿಕಾರಿಗಳಾದ ಶ್ರೀ ಎ.ವಿ.ಪ್ರಸನ್ನ ಅವರು. ಕುಮಾರವ್ಯಾಸನನ್ನು ಕಂಠದಲ್ಲಿಟ್ಟುಕೊಂಡು ಗಂಟೆಗಟ್ಟಲೆ ಅವನನ್ನು ವ್ಯಾಖ್ಯಾನಿಸುವ ಇವರು, ತಮ್ಮ ಜೀವಮಾನದ ಒಂದು ಪುಣ್ಯಕಾರ್ಯವೆಂಬ ಭಾವದಿಂದ ಈ ಕೆಲಸವನ್ನು ಪೂರೈಸಿದ್ದಾರೆ. ಭಾರತ ಕೃತಿಯ ಮೇಲಿನ ಗೌರವ, ಕನ್ನಡ ವಿಶ್ವವಿದ್ಯಾಲಯದ ಮೇಲಿನ ಪ್ರೀತಿ ಕಾರಣವಾಗಿ ಈ ಗ್ರಂಥವನ್ನು ಸಂಪಾದಿಸಿಕೊಟ್ಟ ಶ್ರೀ ಎ.ವಿ. ಪ್ರಸನ್ನ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಈ ಕೃತಿಗೆ ಆಧಾರವಾಗಿಟ್ಟುಕೊಂಡಿರುವ ೧೮ ಪರ್ವಗಳ ೧೯೨೮ರ ಆವೃತ್ತಿಯಲ್ಲಿ ಭಾಮಿನಿ ಷಟ್ಪದಿಯ ಸಾಲುಗಳನ್ನು ಗದ್ಯದಂತೆ, ಅದರಲ್ಲಿಯೂ ಪದ, ಪದಗಳ ನಡುವೆ ಸ್ಥಳ ಬಿಡದೆ ಅಖಂಡವಾಗಿ ಮುದ್ರಿಸಲಾಗಿದೆ. ಮುದ್ರಣದ ಸಲುವಾಗಿ ಪದಗಳನ್ನು ಸರಿಯಾಗಿ ಬಿಡಿಸಿಕೊಳ್ಳುವುದು

ಮೊದಲು ಮಾಡಬೇಕಾದ ಕೆಲಸ. ಈ ವಿದ್ವತ್ ಕಾರ್ಯವನ್ನು ಪೂರೈಸಿಕೊಟ್ಟ ಪ್ರೊ. ಎಚ್. ವಿ.ಶ್ರೀನಿವಾಸ ಶರ್ಮ ಅವರಿಗೆ ಆಭಾರಿಯಾಗಿದ್ದೇವೆ.

ಗುಣ ಮತ್ತು ಗಾತ್ರ ಎರಡೂ ದೃಷ್ಟಿಯಿಂದ ತುಂಬ ದೊಡ್ಡದಾಗಿರುವ ಈ ಕೃತಿ ಪ್ರಕಟಣೆ ದೊಡ್ಡ ಮೊತ್ತದ ಹಣವನ್ನು ಅಪೇಕ್ಷಿಸುವುದು ಸಹಜ. ಈ ಭಾರವನ್ನು ಹಗುರಮಾಡಲು ಮುಂದೆ ಬಂದು, ಆರ್ಥಿಕ ನೆರವು ನೀಡಿದ-ವಿಜಯನಗರ ಉಕ್ಕಿನ ಉದ್ದಿಮೆಯ ಒಡೆಯರಾದ ಶ್ರೀ ಸಜ್ಜನ್ ಜಿಂದಾಲ್ ಅವರಿಗೆ ನಮ್ಮ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ. ಈ ನೆರವನ್ನು ಒದಗಿಸಿಕೊಡುವಲ್ಲಿ ರಾಯಭಾರಿಯಂತೆ ಕೆಲಸ ಮಾಡಿದ ಆತ್ಮೀಯ ಶ್ರೀ ಆರ್. ಪಿ. ರಾಯಚೂರ ಅವರಿಗೆ, ಸ್ನಿಗ್ಧಪ್ರೀತಿ ತೋರಿದ ಶ್ರೀ.ಜೆ.ಕೆ. ಟಂಡನ್, ಶ್ರೀ ಎಚ್.ಕಿಶೋರ್ ಅವರಿಗೆ ನಾವು ಋಣಿಯಾಗಿದ್ದೇವೆ.

ದೊಡ್ಡ ಗಾತ್ರದ ಈ ಕೃತಿಯನ್ನು ದೊಡ್ಡ ಸಹನೆಯಿಂದ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಕೈಲಾಸ್ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್ ಒಡೆಯರಾದ ಶ್ರೀ ಎಂ. ರಾಜಶೇಖರ ಅವರಿಗೂ ನಮ್ಮ ಧನ್ಯವಾದಗಳು ಸಲ್ಲುತ್ತವೆ.

'ಕನ್ನಡ ಭಾರತ' ಕೃತಿಗೆ ಬರೆದ ಮುನ್ನುಡಿಯ ಕೊನೆಯ ಭಾಗ. ಮೊದಲ ಭಾಗ 'ದೇಸೀ ಪರಂಪರೆಯ ಕಾವ್ಯ' ಎಂಬ ಹೆಸರಿನಿಂದ 'ಮಾರ್ಗ-೭'ರಲ್ಲಿ ಪ್ರಕಟವಾಗಿದೆ.

ಆಕರ : ಮಾರ್ಗ ಸಂಪುಟ-೮

■■

201

COMMUNITY DOMINANCE AND POLITICAL MODERNISATION

2002

Though the Lingayata community has been numerically, socially, economically and politically dominant in Karnataka, yet it was not studied from the point of view of political sociology at the macro level. The present work is the first attempt to accomplish such an academic requirement. Dr. S.H.Patil has done well in accomplishing this task and deserves our congratulations.

The work is very comprehensive and is carried through ten chapters which are organically linked with one another and which provide an evolutionary and dynamic face of the Lingayata community. The Chapter I covers the history of the Lingayats, many dimensions of the Lingayata revolutionary movement in the 12th century, legacy and relevance of such movement in the modern and democratic period/religious philosophy and religious structures and social principles and social structures of the Lingayata community, the political culture of the Lingayats, the Lingayata concept of state, the Lingayats in the various fields, etc. This comprehensive background of the Lingayata community is intended to establish a linkage between the nature of the Lingayaata community and its responses to modernisation and democratic process in Karnataka.

The Chapter 2 explains theoretically the various dimensions of modernisation. It examines how the Lingayats made use of the agents of

modernisation like transport and communication, western education, printing press, newspapers and periodicals, co-operative societies, banking institutions, etc., to modernise themselves and help others in such process. It assesses the impact of modernisation on the Lingayata community in various fields. It explains why the Lingayata community re-adopted the Basava model rather than the Sanskritisation process for social change when a vast majority of castes/ communities preferred Sanskritisation process for social change.

The Chapter 3 explains theoretically the concept and dimensions of mobilization. In the light of such theoretical background, it examines the socio-religious mobilization of the masses by the Sharanas to build an egalitarian society in the 12th century and its legacy in the modern period. It explains the role of the All India Veerashaiva Mahasabha in the mobilization of the Lingayat community to achieve certain modern goals in the fields of education, agriculture, industry, civil service, politics, etc., in the 20th century.

The Chapter 4 describes the various means adopted by the traditional ad modern Lingayata elites for mobilization of the Lingayats and the non-Lingayats to achieve certain sectarian and general goals for the Lingayata community and the society in general respectively. These elites used various means like educational associations, monasteries, free boardings, etc., to spread higher education among the Lingayata and non-Lingayata youths. They made use of the Vachana literature for mobilization of the Lingayats and the non-Lingayata to spread the concept of casteless, classless, liberal and democratic society. The present work also highlights the role of the Lingayata monasteries in mobilizing the Lingayats and the non-Lingayats in bringing about modern outlook and social change through inter-caste marriages, mass marriages, widow marriages, removal of untouchability, rural health care, seminars, etc.

The Chapter 5 explains how and why the Lingayats moved from the sectarian mobilization to the mobilization for the national movement. It points out how the Lingayats played an important role in widening the social base of the national movement by involving the rural people in the freedom struggle. It also evaluates the contribution of the Lingayat literary men to the nationalist

literature. It points out how the national movement provided an opportunity for the Lingayats to develop secular leadership at various levels.

The Chapter 6 narrates how the Lingayats had been a partner in the struggle for linguistic identity for the Kannada speaking areas which were distributed among several separate administrative units. It describes how the Lingayata loeders along with others immensely contributed to Kannada identity, Karnataka ideology and struggle for Karnataka unification movement through various means like presentation of petitions to the authorities, processions, demonstrations, agitations, forming associations, literature, mass media, etc. It also points out that the Lingayats have been in the forefront of movements for preserving and promoting the primacy of the Kannada language in state administration and education.

The Chapter 7, which is a core chapter in the book, describes the components of a dominant community and explains with the help of figures how the Lingayata community is dominant. It analyses with the help of tables how the Lingayats have been in a dominant position in the state politics from village panchayat to the state legislature. It points out the hold of the Lingayata community in the educational and cooperative fields. It describes the role of the Lingayats in building up and running the political parties in Karnataka. It also analyses the impact of the Lingayata-Vokkaliga combination on state politics. It explains the nature and dimensions of the Lingayata leadership and the Lingayat rule in Karnataka.

The Chapter 8 identifies the reasons for loss and restoration of political dominance by the Lingayats in Karnataka politics and points out that the legitimate role of the Lingayats in Karnataka politics cannot be eliminated permanently in view of its socio-economic, educational and institutional strength and wide-spread network of Lingayata leadership in various fields.

The chapter 9 explains the factors responsible for social unity among the Lingayats and describes how the Lingayats have been politically divided since 1970 in view of competitive politics, multi-party system, growth in the number of Lingayat leaders, etc.

The last Chapter has dealt with conclusions, suggestions, theoretical contributions and topics for further research.

The book is worth reading for all those who are interested in knowing the dynamics of the dominant communities in state politics and for those who are interested in understanding the dynamics of the Lingayata community whose philosophical foundations were laid down on the egalitarian principles in the 12th century and whose rational and humanitarian ideals and programmes are reflected in the writings and the struggles of Mahatma Gandhi and Dr. B.R. Ambedkar in the 20th century.

Dr. S.H. Patil : Community Dominance and Political Modernisation, A Mittal Publication, New Delhi, 2002

ಆಕರ : ಮಾರ್ಗ ಸಂಪುಟ–೮

■■

೨೦೨

ಹೋರಾಟ

೨೦೦೩

ಬೆಳಗಾವಿ ಮತ್ತು ಕನ್ನಡ ಎಂದಾಕ್ಷಣ ಮೊದಲು ನೆನಪಾಗುವ ಮುಖ್ಯರಲ್ಲಿ "ನಾಡೋಜ" ಪತ್ರಿಕೆಯ ಸಂಪಾದಕ ಶ್ರೀ ರಾಘವೇಂದ್ರ ಜೋಶಿಯವರೂ ಒಬ್ಬರು. ಅವರಿಗೆ ಪತ್ರಿಕೋದ್ಯಮ ಒಂದು ವೃತ್ತಿಯಲ್ಲ, ಕನ್ನಡ-ಕನ್ನಡಿಗ-ಕರ್ನಾಟಕಗಳನ್ನು ಕಟ್ಟುವ ಬೆಳೆಸುವ ಒಂದು ಮಾಧ್ಯಮ. ಈ ಮಾಧ್ಯಮದ ಮೂಲಕ ಬೆಳಗಾವಿ ಪ್ರದೇಶದ ತುಂಬ ಹಂಚಿಹೋಗಿರುವ ಕಾರಣ, ಕನ್ನಡಕ್ಕೆ ಸಂಬಂಧಿಸಿದ ಸಂಘರ್ಷವೆ ಇರಲಿ, ಸಮಾರಂಭವೇ ಇರಲಿ, ಅಲ್ಲಿ ಜೋಶಿಯವರು ಬೇಕು. ಹೀಗೆ ಸಾಮಾಜೀಕರಣಗೊಂಡ ಇವರಿಗೆ ಅರ್ಪಿಸಲಿರುವ ಕನ್ನಡಪರ ಹೋರಾಟಗಳನ್ನೊಳಗೊಂಡ ಈ ಗೌರವ ಗ್ರಂಥಕ್ಕೆ ಮುನ್ನುಡಿ ಬರೆಯುವದು ನನಗೆ ಸಂತೋಷದ ವಿಷಯವೆನಿಸಿದೆ.

* * *

ಬಾದಾಮಿ ಚಾಲುಕ್ಯರ ಕಾಲಕ್ಕೆ ನರ್ಮದೆಯವರೆಗೆ ವ್ಯಾಪಿಸಿದ್ದ ಕರ್ನಾಟಕದ ಸೀಮೆ, ರಾಷ್ಟ್ರಕೂಟರ ಕಾಲಕ್ಕೆ ಗೋದಾವರಿಗೆ ಇಳಿಯಿತು. ಹೀಗೆ ಸಣ್ಣದಾಗುತ್ತಲೇ ಯಾದವ ಹೊಯ್ಸಳರ ಕಾಲಕ್ಕೆ ಎರಡು ತುಂಡಾಯಿತು. ಹೊಯ್ಸಳ ವಿಷ್ಣುವರ್ಧನ ಶ್ರೀ ವೈಷ್ಣವಧರ್ಮ ಸ್ವೀಕರಿಸುವಲ್ಲಿ ತಮಿಳು ಭಾಷಿಕರ, ಶ್ರೀ ಕೃಷ್ಣದೇವರಾಯ ವಿಜಯನಗರ ಸಿಂಹಾಸನವೇರುವಲ್ಲಿ ತೆಲಗು ಭಾಷಿಕರ ವಲಸೆ ವರ್ಧಿಸಿತು. ಮುಂದೆ ಈ ಉಭಯ ಭಾಷಿಕರಿಗೆ ಮೈಸೂರು ಒಡೆಯರು ದೊಡ್ಡ ಅಧಿಕಾರ ಅವಕಾಶಗಳನ್ನು ನೀಡುವ ಮೂಲಕ ಆ ವಲಸೆ ಮತ್ತೂ ವರ್ಧಿಸಿತು. ಸಾಲದುದಕ್ಕೆ ಮುಸಲ್ಮಾನ ಮರಾಠರ ಆಕ್ರಮಣದಿಂದಾಗಿ ಉರ್ದು, ಮರಾಠಿ ಭಾಷಿಕರೂ ಕಾಲೂರಿದರು. ಇವೇ ಮೊದಲಾದ ಕಾರಣಗಳಿಂದಾಗಿ ಕರ್ನಾಟಕ ಮತ್ತೆ ಮತ್ತೆ ತುಂಡಾಗುತ್ತಲೇ ನಡೆಯಿತು. ಆಮೇಲೆ ಬ್ರಿಟಿಷರ ಕಾಲಕ್ಕೆ ಈ ತುಂಡುಗಳು ನೆರೆಯ ಪ್ರಾಂತಗಳಿಗೆ ಜೋಡಿಸಲ್ಪಟ್ಟು, ೧೯ನೆಯ ಶತಮಾನದ ಹೊತ್ತಿಗೆ ಭಾರತದ ಭೂಪಟದಲ್ಲಿ ಕರ್ನಾಟಕ ನಕ್ಷೆ ಕಳೆದೇ ಹೋಯಿತು. ಮುಂದೆ ಹಲವರ ಹಲವು ದಿನಗಳ ಹೋರಾಟದಿಂದಾಗಿ, ಕೆಲವು ತುಂಡುಗಳು ಮಾತ್ರ ಕೈಗೆ ಬಂದು, ೧೯೫೬ ರ ಹೊತ್ತಿಗೆ ಭಾರತದ ಭೂಪಟದಲ್ಲಿ ಏಕೀಕೃತ ಕರ್ನಾಟಕದ ನಕ್ಷೆ ಮತ್ತೆ ಕಾಣಿಸಿಕೊಂಡಿತು. ಅಲ್ಲಿಂದ

ಮುಂದೆ ಕರ್ನಾಟಕ ಹಲವು ಮುಖಗಳಲ್ಲಿ ರಾಷ್ಟ್ರೀಯ ಅಂತಾರಾಷ್ಟ್ರೀಯ ಗಮನ ಸೆಳೆಯುವಂತೆ ಬೆಳೆದಿದೆ. ಆದರೆ ಕನ್ನಡತ್ವವನ್ನು ಹೊರತುಪಡಿಸಿ ಕರ್ನಾಟಕ ದೇಶ ಎಷ್ಟು ಬೆಳೆದರೇನು? ಅದು ಯಾವುದೋ ಪ್ರದೇಶ ಬೆಳೆದಂತೆ ಎಂಬ ಪ್ರಶ್ನೆ ನಮ್ಮನ್ನು ದಿನವೂ ಕಾಡುತ್ತಲಿದೆ.

* * *

ದೇಶವೆಂದರೆ ಅದರ ಭಾಷೆಯಲ್ಲಿ ವ್ಯವಹರಿಸುವ ಜನಸಮುದಾಯ. ಹೆಚ್ಚು ಜನ ಆ ಭಾಷೆಯಲ್ಲಿ ವ್ಯವಹರಿಸುವುದೆಂದರೆ, ಆ ದೇಶ ವರ್ಧಿಸುವುದೇ ಆಗಿದೆ. ರಾಜಕೀಯ ಆಕ್ರಮಣದಿಂದ ದೇಶ ಭೌಗೋಲಿಕವಾಗಿ ಸಣ್ಣದಾಗುವಂತೆ, ಅನ್ಯಭಾಷಿಕರ ವಲಸೆಯಿಂದ ಮೂಲ ಭಾಷಿಕರು ಅಲ್ಪಸಂಖ್ಯಾತರಾಗುತ್ತಾರೆ. ಸಾಲದುದಕ್ಕೆ ಮೂಲಭಾಷಿಕರು ಇಂಗ್ಲಿಷ ಮೊದಲಾದ ಅನ್ಯ ಭಾಷೆಗಳಲ್ಲಿ ವ್ಯವಹರಿಸುತ್ತ ಹೋದರೆ ಅವರ ಸಂಖ್ಯೆ ಇನ್ನೂ ಇಳಿಮುಖವಾಗುತ್ತದೆ. ಕನ್ನಡಕ್ಕೆ ಇಂದು ಈ ಎಲ್ಲ ಅಪಾಯಗಳು ಆವರಿಸಿವೆ. ಇದಕ್ಕೆ ಕಾರಣ ಶಾಸಕರ ರಾಜಕೀಯ ಲಾಭದೃಷ್ಟಿ, ಅಧಿಕಾರಿಗಳ ನಿರಾಸಕ್ತಿ ಮತ್ತು ಸಾರ್ವಜನಿಕರ ಎಚ್ಚರಗೇಡಿತನ.

ಭಾಷಾವಾರು ಪ್ರಾಂತ ರಚನೆಯ ಪರಿಕಲ್ಪನೆ ಮತ್ತು ಮಾತೃಭಾಷಾ ಮನ್ನಣೆಯ ಸಂವಿಧಾನ ಇವೆರಡರಲ್ಲಿ ಪರಸ್ಪರ ಹೊಂದಿಕೆಯಿಲ್ಲ. ಭಾಷಾವಾರು ಪ್ರಾಂತರಚನೆಯು ಪ್ರಾಂತಭಾಷೆಗೆ ಮಹತ್ವ ನೀಡಿದ್ದರೆ, ಸಂವಿಧಾನವು ಮಾತೃಭಾಷೆಗೆ ಮಹತ್ವ ನೀಡಿದೆ. ಇಂದು ಇವೆರಡರಲ್ಲಿ ಒಂದನ್ನು ತಿದ್ದಿಕೊಳ್ಳುವುದು ತೀರ ಅವಶ್ಯವೆನಿಸಿದೆ. ಬಹುಶಃ ಹಳೆಯ ಸಮಾಜ ವ್ಯವಸ್ಥೆಯ ಸೃಷ್ಟಿಯಾಗಿರುವ "ಮಾತೃ ಭಾಷಾ ಪರಿಕಲ್ಪನೆ"ಯನ್ನೇ ಹೊಸ ಸಮಾಜ ವ್ಯವಸ್ಥೆಗೆ ತಕ್ಕಂತೆ ಬದಲಿಸಿ, ಸಂವಿಧಾನದಲ್ಲಿ ತಿದ್ದುಪಡಿ ತರಬೇಕು.

ಹಳೆಯ ಕಾಲದ್ದು ಸ್ಥಿರ ಸಮಾಜ, ಇಂದಿನದು ಚರ (ಚಲನಶೀಲ)ಸಮಾಜ. ಆ ಕಾಲದಲ್ಲಿ ಕುಟುಂಬಗಳು ಹೊಲ ಮನೆಗಳನ್ನು ಆಶ್ರಯಿಸಿ, ಒಂದೇ ಊರಿನಲ್ಲಿ ಶಾಶ್ವತ ನೆಲೆಸುತ್ತಿದ್ದವು. ಅನೇಕ ತಲೆಮಾರುಗಳ ನೆಲಸುವಿಕೆ, ಹಳ್ಳಿಯ ಸಣ್ಣಗಾತ್ರಗಳಿಂದಾಗಿ ಮಾತೃಭಾಷೆಯೆನ್ನುವುದು ಅಲ್ಲಿ ಹೆಸರಿಗೆ ಮಾತ್ರ ಇದ್ದು ಸಾಮಾನ್ಯವಾಗಿ ಪರಿಸರ ಭಾಷೆಯೇ ಕುಟುಂಬದಲ್ಲಿ ಮಾತೃಭಾಷೆಯಂತೆ ಬಳಕೆಯಾಗುತ್ತಿತ್ತು. ಈಗಲೂ ಹಳ್ಳಿಗಳಲ್ಲಿ ಮುಸಲ್ಮಾನ ಮರಾಠಾ ಕುಟುಂಬಗಳಿಗೆ ಉರ್ದು, ಮರಾಠಿ ಮಾತನಾಡಲು ಬರುವುದಿಲ್ಲವೆಂಬುದನ್ನು ಇಲ್ಲಿ ಸ್ಮರಿಸಬಹುದು.

ಇಂದು ಸಮಾಜ ಬದಲಾಗಿದೆ. ಕುಟುಂಬಗಳು ನೌಕರಿ, ಉದ್ಯೋಗ ಇತ್ಯಾದಿಗಳಿಗಾಗಿ ಚಲನಶೀಲವಾಗಿವೆ. ಇದರಿಂದಾಗಿ ಒಂದು ರಾಜ್ಯದ ಕುಟುಂಬ ಇನ್ನೊಂದು ರಾಜ್ಯಕ್ಕೆ ವಲಸೇ ಬಂದರೆ, ಆ ಹೊಸ ಪರಿಸರದಲ್ಲಿ ಅದಕ್ಕೆ ದ್ವೀಪದಂತೆ ಬದುಕುವ ಪರಿಸ್ಥಿತಿ ನಿರ್ಮಾಣವಾಗುತ್ತಲಿದೆ. ಇಂಥ ಸಂದರ್ಭದಲ್ಲಿ ಪರಿಸರ ಭಾಷಾ ಪ್ರವಾಹದಲ್ಲಿ ಸೇರುವುದನ್ನು ಬಿಟ್ಟು ತ್ಯಜಿಸಿ ಬಂದ ತಮ್ಮ ರಾಜ್ಯದ ಭಾಷೆಯನ್ನು ಮಾತೃಭಾಷೆ ಹೆಸರಿನಿಂದ ಬಳಸುವುದು ವ್ಯರ್ಥ ಪ್ರಯತ್ನವೆನಿಸುತ್ತದೆ. ಅದು ಮಡಕೆಯಲ್ಲಿ ಊರಿದ ಸಸಿಯಂತೆ ಕೆಳಗೆ ಬೇರೂರುವುದಿಲ್ಲ; ಮೇಲೆ ಫಲ ಬಿಡುವುದಿಲ್ಲ. ಆದುದರಿಂದ ಈ ರಾಜ್ಯದಲ್ಲಿದ್ದು, ಆ ರಾಜ್ಯದ ಭಾಷೆಯನ್ನು ಆ ರಾಜ್ಯದಲ್ಲಿದ್ದು, ಈ ರಾಜ್ಯದ ಭಾಷೆಯನ್ನು ಅಪೇಕ್ಷಿಸುವುದು ಹುಸಿ ಪ್ರತಿಷ್ಠೆಯೆನಿಸುತ್ತದೆ; ದೇಶವನ್ನು ನಿರಂತರ ಕಾಡುವ ಪ್ರಶ್ನೆಯಾಗಿ ಉಳಿಯುತ್ತದೆ. ಹೀಗಾಗಿ ತಾವು ವಾಸಿಸುವ ರಾಜ್ಯದ ಭಾಷೆಯೇ ತಮ್ಮ ಮಾತೃಭಾಷೆಯೆಂದು

ಒಪ್ಪಿಕೊಂಡರೆ ಮಾತ್ರ ಈ ಸಮಸ್ಯೆ ಬಗೆಹರಿಯುತ್ತದೆ. ಅಲ್ಲಿಯವರು ಇಲ್ಲಿದ್ದರೆ ಈ ಭಾಷೆಯನ್ನು, ಇಲ್ಲಿಯವರು ಅಲ್ಲಿದ್ದರೆ ಆ ಭಾಷೆಯನ್ನು ಒಪ್ಪಿಕೊಂಡುಬಿಟ್ಟರೆ ಜನಸಂಖ್ಯೆಯಲ್ಲಿಯೂ ವ್ಯತ್ಯಾಸವೆನಿಸುವುದಿಲ್ಲ. ಇದನ್ನು ತಿಳಿದುಕೊಂಡು, ಅಂತಿಮದಲ್ಲಿ ನಾವೆಲ್ಲ ಭಾರತೀಯರೆಂಬ ಭಾವನೆ ಬೆಳೆಸಿಕೊಳ್ಳಬೇಕಾಗಿದೆ. ಆದುದರಿಂದ ಸ್ಥಿರ ಸಮಾಜದ ಮಾತೃಭಾಷಾ ಪರಿಕಲ್ಪನೆಯನ್ನು ಚರಸಮಾಜದ ಇಂದಿನ ಸಂದರ್ಭಕ್ಕನುಗುಣವಾಗಿ ಮೇಲಿನಂತೆ ಮರು ವ್ಯಾಖ್ಯಾನಿಸಿ ಪ್ರಚಾರಕ್ಕೆ ತರುವುದು, ಸಂವಿಧಾನದಲ್ಲಿ ಇದಕ್ಕೆ ಸ್ಥಾನ ಕಲ್ಪಿಸುವದು ಮೊದಲು ಮಾಡಬೇಕಾದ ಕೆಲಸವಾಗಿದೆ. ಇದು ಭಾರತದ ಒಳಗಿನ ಭಾಷಾ ಸಮಸ್ಯೆಯನ್ನು ಬಹಳಷ್ಟು ನಿವಾರಿಸುತ್ತದೆ.

ಇದೇ ರೀತಿ "ಮಗುವಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದೇ ವೈಜ್ಞಾನಿಕ" ವೆಂಬ ಗಾಂಧೀಜಿ ಕಾಲದ ಅಭಿಪ್ರಾಯವನ್ನು ಇಂದು ಮರು ಚರ್ಚೆಗೆ ಗುರಿಪಡಿಸಬೇಕಾಗಿದೆ. ಏಕೆಂದರೆ ವಲಸೆ ಬಂದವರ ಮಗು ಇಂದು ದೂರ ಪರಿಸರದ ಇಂಗ್ಲೀಷ ಮಾಧ್ಯಮದಲ್ಲಿ ಓದುವುದಾದರೆ ಪರಿಸರದ ಕನ್ನಡ ಮಾಧ್ಯಮದಲ್ಲಿ ಓದುವುದು ಅದಕ್ಕೆ ಏಕೆ ಸಾಧ್ಯವಾಗುವುದಿಲ್ಲ ? ಭಾಷಾ ಕಲಿಕೆ ಪರಿಸರವೆಂದರೆ ಕನ್ನಡ ಮಕ್ಕಳ ದೊಡ್ಡ ಪರಿವಾರವೇ ಹೊರತು ಅದರ ತಂದೆ ತಾಯಿಗಳ ಸಣ್ಣ ಕುಟುಂಬವಲ್ಲ. ಮೇಲಾಗಿ ನಗರವಾಸಿಯಾದ ಇಂಥ ಕುಟುಂಬಗಳಲ್ಲಿ ಇಂಗ್ಲಿಷ್ ಪತ್ರಿಕೆ, ಪುಸ್ತಕ ಬಳಕೆ, ಪ್ರತಿಷ್ಠೆಗಾಗಿ ಮನೆಯಲ್ಲಿ ಇಂಗ್ಲಿಷ್ ಮಾತನಾಡುವುದು ಇತ್ಯಾದಿಗಳಿಂದಾಗಿ ಅಲ್ಲಿ ಮಾತೃಭಾಷೆಯೂ ಮರೆಯಾಗುವ ಸ್ಥಿತಿಯಲ್ಲಿರುತ್ತದೆ. ಇವರು ಮಾತೃಭಾಷೆಯನ್ನು ರಾಜ್ಯ ಭಾಷೆಯನ್ನೂ, ಕೈಬಿಟ್ಟು ಮಗುವನ್ನು ಇಂಗ್ಲೀಷ ಮಾಧ್ಯಮದಲ್ಲಿ ಓದಿಸುತ್ತಾರೆ. ಇಂಥ ವರ್ತನೆಯಿಂದಾಗಿ ಅವರ ಇನ್ನೂ ಮುಂದಿನ ತಲೆಮಾರಿನ ಮಗು ಮನೆಯ ಹೊರಗಿನ ರಾಜ್ಯ ಭಾಷೆಗೂ, ಮನೆಯ ಒಳಗೆ ಮಾಯವಾಗುತ್ತಲಿರುವ ಮಾತೃಭಾಷೆಗೂ ಎರವಾಗಿ, ದೂರ ಪರಿಸರದ ಇಂಗ್ಲೀಷ್ ವಾತಾವರಣ ನಿರ್ಮಿಸಿಕೊಂಡು, ಇನ್ನೂ ದ್ವೀಪವಾಗುವ ಭಯವಿದೆ. ಈ ಭಯದಿಂದ ಮುಕ್ತವಾಗುವುದೆಂದರೆ ವಾಸಿಸುವ ರಾಜ್ಯಭಾಷೆಯೇ ಮಗುವಿನ ಶಿಕ್ಷಣ ಮಾಧ್ಯಮವಾಗುವುದು. ಇಂದಿನ ಭಾಷಾಕಲಿಕೆಯ ಹೊಸ ವಿಧಾನ, ಉಪಕರಣಗಳ ಅನುಕೂಲತೆಯಿಂದಾಗಿ ಇದು ಇನ್ನು ಸುಲಭವಾಗುತ್ತದೆ. ಇದಲ್ಲದೆ ಮೊದಲಿನಂತೆ ಮಾತೃಭಾಷೆ ಮಾತನಾಡುವುದನ್ನು ಕಲಿತು, ಆರನೆಯ ವರ್ಷಕ್ಕೆ ಶಾಲೆಗೆ ಹೋಗುವ ಬದಲು, ಇಂದು ಯು.ಕೆ.ಜಿ.ಯಂಥ ಶಾಲೆಗಳಿಗೆ ಹೋಗುವುದರಿಂದ ಮಗು ಮಾತೃಭಾಷೆ ಕಲಿಯಲಾರಂಭಿಸುವ ಈ ಹಂತದಲ್ಲಿ ಯಾವದೇ ಭಾಷೆಯನ್ನು ಗ್ರಹಿಸುವ ಮನಸ್ಥಿತಿ ಹೊಂದಿರುತ್ತದೆ. ಆದುದರಿಂದ ಇಂದಿನ ಚಲನಶೀಲ ಸಮಾಜದಲ್ಲಿ "ಮಾತೃಭಾಷಾ ಶಿಕ್ಷಣ ಮಾಧ್ಯಮ" ವೆಂಬ ಹಳೆಯ ಪರಿಕಲ್ಪನೆಯನ್ನು ಕೈಬಿಟ್ಟು ಪರಿಸರದ ರಾಜ್ಯಭಾಷಾ ಶಿಕ್ಷಣ ಮಾಧ್ಯಮವೆಂಬ ಹೊಸ ಪರಿಕಲ್ಪನೆಯನ್ನು ಅಸ್ತಿತ್ವಕ್ಕೆ ತರಬೇಕಾಗಿದೆ.

ಒಟ್ಟಾರೆ, ವಲಸೆಗಾರರಿಗೆ ವಾಸಿಸುವ "ರಾಜ್ಯಭಾಷೆಯೇ ಮಾತೃ ಭಾಷೆ" ಅವರ ಮಕ್ಕಳಿಗೆ ಪರಿಸರದ "ರಾಜ್ಯ ಭಾಷೆಯೇ ಶಿಕ್ಷಣ ಮಾಧ್ಯಮ" ಎಂದು ಭಾವಿಸುವುದು ತುಂಬ ವೈಜ್ಞಾನಿಕ, ವಾಸ್ತವವೆನಿಸುತ್ತದೆ. ಈ ತಿಳಿವಳಿಕೆಯ ಹಿನ್ನೆಲೆಯಲ್ಲಿ ಕನ್ನಡೀಕರಣ, ಕೆಲಸ ಮೂರು ನೆಲೆಗಳಲ್ಲಿ ನಡೆಯಬೇಕು. ಆಡಳಿತ, ಶಿಕ್ಷಣ ಮತ್ತು ಸಮಾಜ.

ಆಡಳಿತ ಶಿಕ್ಷಣ ಇವೆರಡರ ಅನುಷ್ಠಾನ ಮುಖ್ಯವಾಗಿ ಶಾಸಕರ ಮತ್ತು ಅಧಿಕಾರಿಗಳ ಧೋರಣೆಯನ್ನವಲಂಬಿಸಿರುತ್ತದೆ. ನಮ್ಮದು ಪ್ರಜಾಪ್ರಭುತ್ವದ ಸರಕಾರ. ಚುನಾಯಿತ ಪ್ರತಿನಿಧಿಗಳು

ಇದನ್ನು ನಡೆಸುತ್ತಾರೆ. "ಚುನಾವಣೆಯ ಮತ" ಮತ್ತು "ಕನ್ನಡ ಭಾಷೆಗಳ ಪ್ರಶ್ನೆ" ಬಂದಾಗ ಇವರು ಕನ್ನಡಪರ ನಿಲ್ಲುವುದಿಲ್ಲ. ಆಡಳಿತಕ್ಕೆ ಸಂಬಂಧಪಟ್ಟಂತೆ ಗಡಿಯಲ್ಲಿ ದ್ವಿಭಾಷಿಕತೆಯನ್ನೋ ಇನ್ನೇನನ್ನೋ ಎತ್ತಿ ಹಿಡಿಯುತ್ತಾರೆ. ಶಿಕ್ಷಣಕ್ಕೆ ಸಂಬಂಧಪಟ್ಟಂತೆ ವಲಸೆಗಾರರ ಮಾತೃಭಾಷೆಯನ್ನೋ ಇನ್ನೇನನ್ನೋ ಮುಂದು ಮಾಡುತ್ತಾರೆ. ಈ ವರ್ತನೆಯಿಂದಾಗಿ ಕರ್ನಾಟಕದ ಮಾತೃಭಾಷೆಯಾದ ಕನ್ನಡ, ಆಡಳಿತ ಮತ್ತು ಶಿಕ್ಷಣಗಳಲ್ಲಿ ದ್ವಿತೀಯ ಸ್ಥಾನಕ್ಕೆ ತಳ್ಳಲ್ಪಡುತ್ತದೆ.

ನೇರವಾಗಿ ಆಡಳಿತಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ಇಲ್ಲಿ ಕನ್ನಡದ ಬಳಕೆಯೆಂಬುದು ಪ್ರಶ್ನೆಯೇ ಅಲ್ಲ. ಗಡಿಪ್ರದೇಶವೇ ಇರಲಿ, ಒಳಪ್ರದೇಶವೇ ಇರಲಿ ಭಾಷಾವಾರು ಪ್ರಾಂತರಚನೆಯ ತತ್ವ ಎಲ್ಲರಿಗೂ ಸಮಾನವೆಂದು ಶಾಸಕರು ನಿಸ್ವಾರ್ಥ ನಿಲುವು ತಾಳಿದರೆ, ಅಧಿಕಾರಿಗಳು ಇದನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಿದರೆ ಎಲ್ಲ ಇಲಾಖೆಗಳಲ್ಲಿ ಕನ್ನಡ ತಾನಾಗಿಯೇ ಆಡಳಿತ ಭಾಷೆಯಾಗುತ್ತದೆ. ಇದಕ್ಕೆ ಪೂರಕವೆಂಬಂತೆ ಆಯಾ ಇಲಾಖೆಗಳ ನೌಕರವರ್ಗದವರು "ಕನ್ನಡ ಹಿತರಕ್ಷಣ ಸಂಘ" ಸ್ಥಾಪಿಸಿಕೊಂಡು, ಆಡಳಿತದಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕಗಳ ಹಿತಕ್ಕೆ ಚ್ಯುತಿ ಬರದಂತೆ ಎಚ್ಚರವಹಿಸುವುದು ಅವಶ್ಯವಿದೆ. ಇಲ್ಲಿ ಹೇಳಬೇಕಾದ ಇನ್ನೊಂದು ವಿಷಯವೆಂದರೆ ಆಡಳಿತ ಭಾಷೆಯನ್ನು ಹದಗೊಳಿಸುವುದು. ಇಂದು ಆಡಳಿತ ಭಾಷೆ ಮೇಲುಹಂತದ ಕಚೇರಿಗಳಲ್ಲಿ ಸಂಸ್ಕೃತ ಮಿಶ್ರಣದಿಂದ ಜಟಿಲಗೊಂಡಿದ್ದರೆ, ಕೆಳ ಹಂತದ ಕಚೇರಿಗಳಲ್ಲಿ ಉರ್ದು, ಮರಾಠಿ, ಶಬ್ದಗಳ ಮಿಶ್ರಣದಿಂದ ಗೋಜಲಾಗಿದೆ. ಅರ್ಥವೇ ಆಗದ ಈ ಎರಡೂ ದೋಷಗಳಿಂದ ಆಡಳಿತ ಭಾಷೆಯನ್ನು ಮುಕ್ತಗೊಳಿಸುವುದಕ್ಕಾಗಿ ಅದನ್ನು 'ಪ್ರಮಾಣಭಾಷೆ"ಯನ್ನಾಗಿ ರೂಪಿಸಬೇಕಾಗಿದೆ.

ಆಡಳಿತಕ್ಕಿಂತ ಶಿಕ್ಷಣ ಮತ್ತು ಭಾಷೆಗಳ ಸಂಬಂಧ ತುಂಬ ಗಂಭೀರವಾದುದು. ಜ್ಞಾನಾರ್ಜನೆ, ದ್ರವ್ಯಾರ್ಜನೆ, ಜಾಗತಿಕ ಸಂಪರ್ಕ, ಅಧಿಕಾರ ಪ್ರತಿಷ್ಠೆ ಇತ್ಯಾದಿ ವಿಷಯಗಳು ಇಲ್ಲಿ ಸೇರಿಕೊಂಡಿರುತ್ತವೆ. ಇವೆಲ್ಲವನ್ನು ಭಾಷಾಯಾನಕ್ಕಾಗಿ ತ್ಯಾಗ ಮಾಡಬೇಕೆನ್ನುವುದು ಅವಾಸ್ತವವೆನಿಸುತ್ತದೆ. ವಾಸ್ತವದ ತಳಹದಿಯ ಮೇಲೆ ಈ ಪ್ರಶ್ನೆಯನ್ನು ಬಿಡಿಸಬೇಕು. ಮೇಲೆ ಸೂಚಿಸಿದಂತೆ ರಾಜ್ಯ ಭಾಷೆಯೇ ಆ ರಾಜ್ಯದಲ್ಲಿರುವವರ ಮಾತೃಭಾಷೆಯೆಂದು ಸಂವಿಧಾನ ತಿದ್ದುಪಡಿಯಾದರೆ, ಒಳಗಿನ ಭಾಷೆಗಳ ಸಮಸ್ಯೆ ನಿವಾರಣೆಯಾಗುತ್ತದೆ. ಆದರೆ ಸಂಪರ್ಕ ಭಾಷೆಯಲ್ಲಿರುವ ಇಂಗ್ಲೀಷಿನ ಸಮಸ್ಯೆ, ಇದರಿಂದ ಭಿನ್ನವಾದುದು. ಪ್ರಾಚೀನ ಕಾಲದಲ್ಲಿ ಮಾತೃಭಾಷೆಯಾದ ಸಂಸ್ಕೃತದ ದಾಳಿಯನ್ನು ಜೀರ್ಣಿಸಿಕೊಂಡಂತೆ ಇಂದು ಜೀವಂತ ಭಾಷೆಯಾದ ಇಂಗ್ಲೀಷ ದಾಳಿಯನ್ನು ಜೀರ್ಣಿಸಿಕೊಳ್ಳುವುದು ಕನ್ನಡಕ್ಕೆ ಅಷ್ಟು ಸುಲಭವಲ್ಲ. ಇವತ್ತಿನ ಜಾಗತೀಕರಣ ಸಂದರ್ಭದಲ್ಲಿ ಇದು ಇನ್ನೂ ದೊಡ್ಡ ಸವಾಲಾಗಿ ಪರಿಣಮಿಸಿದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ತಿಳಿವಳಿಕೆಯಿಂದ "ಶಿಕ್ಷಣ ಮತ್ತು ಭಾಷೆ" ಈ ಸಮಸ್ಯೆಯನ್ನು ಬಿಡಿಸಬೇಕಾಗಿದೆ.

ಭಾಷಾವಾರು ಪ್ರಾಂತರಚನೆಯ ತತ್ವದ ಹಿನ್ನೆಲೆಯಲ್ಲಿ ಹೇಳುವುದಾದರೆ. ಇಂಗ್ಲೀಷ ಮಾಧ್ಯಮ ನಮಗೆ ಸಂವಿಧಾನಾತ್ಮಕ ಬಂಧನವಲ್ಲ. ಆದುದರಿಂದ ಈವರೆಗೆ ಮಾಡಿದ ತಪ್ಪನ್ನು ತಿದ್ದಿಕೊಳ್ಳುವ ರೀತಿಯಲ್ಲಿ ರಾಜ್ಯದ ಎಲ್ಲ ಇಂಗ್ಲಿಷ ಮಾಧ್ಯಮ ಶಾಲೆಗಳನ್ನು ಕನ್ನಡ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಬೇಕು. ರಾಜ್ಯಭಾಷೆಯೇ ರಾಜ್ಯದಲ್ಲಿರುವವರ ಮಾತೃಭಾಷೆಯೆಂಬ ತಿದ್ದುಪಡಿ ಬಂದ

ಬಳಿಕ ಮಿಕ್ಕ ಮಾಧ್ಯಮದ ಶಾಲೆಗಳನ್ನು ಕನ್ನಡ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಬೇಕು. ಇದರ ಜೊತೆಗೆ ವಿದ್ಯಾರ್ಥಿಯು ಒಂದು ಹಂತದಲ್ಲಿ ಇಂಗ್ಲೀಷನ್ನು, ಇನ್ನೊಂದು ಹಂತದಲ್ಲಿ ಇನ್ನೊಂದು ಭಾಷೆಯನ್ನು ಒಂದು ಪತ್ರಿಕೆಯಾಗಿ ಓದುವ ಅವಕಾಶವಿರಬೇಕು.

ಪಿ.ಯು.ಸಿ. ವರ್ಗವು ವಿದ್ಯಾರ್ಥಿ ತನ್ನ ಭವಿಷ್ಯವನ್ನು ನಿರ್ಧರಿಸಿಕೊಳ್ಳುವ ಪೂರ್ವ ತಯಾರಿ ಹಂತವಾಗಿರುವುದರಿಂದ ಇಲ್ಲಿಂದ ಮುಂದೆ ಕನ್ನಡ ಮಾಧ್ಯಮ, ಇಂಗ್ಲೀಷ ಮಾಧ್ಯಮವೆಂಬ ಎರಡು ಪ್ರತ್ಯೇಕ ಅವಕಾಶಗಳನ್ನು ಕಲ್ಪಿಸಬೇಕು. ಆಯ್ಕೆ ವಿದ್ಯಾರ್ಥಿಗಳಿಗೆ ಬಿಟ್ಟಿದ್ದು. ಇದರಿಂದ ಕನ್ನಡ ಮಾಧ್ಯಮದವರು ಆಧುನಿಕ ಜ್ಞಾನದ ಅಭಿವ್ಯಕ್ತಿಗೆ ಕನ್ನಡವನ್ನು ಪಳಗಿಸುತ್ತ ಬೆಳೆಸುತ್ತಾರೆ. ಇಂಗ್ಲೀಷ ಮಾಧ್ಯಮದವರು ಇಂಗ್ಲೀಷ ಮಾಧ್ಯಮದಲ್ಲಿ ಬೆಳೆಯುತ್ತಾರೆ. ಇವರಲ್ಲಿ ಕನ್ನಡ ಮಾಧ್ಯಮದವರಿಗೆ ನೌಕರಿಯಲ್ಲಿ ಒಂದಿಷ್ಟು ಹೆಚ್ಚು ಅವಕಾಶ ಕಲ್ಪಿಸಿದರೆ ಕನ್ನಡಕ್ಕೆ '(Language of power, position and money)' ಎಂಬ ಮರ್ಯಾದೆ ಪ್ರಾಪ್ತವಾಗಿ, ವಿದ್ಯಾರ್ಥಿಗಳನ್ನು ತನ್ನತ್ತ ಆಕರ್ಷಿಸುತ್ತದೆ. ಈ ಕ್ರಮದಿಂದಾಗಿ ಕರ್ನಾಟಕದ ಮಕ್ಕಳು ಎಂಜನಿಯರ್ ಆಗಲಿ, ಡಾಕ್ಟರ ಆಗಲಿ, ಏನೇ ಆಗಲಿ ಮೊದಲು ಕನ್ನಡಿಗನಾಗಲಿ–ಎಂಬ ಧೋರಣೆ ಅರ್ಥ ಪಡೆಯುತ್ತದೆ. ಅವಶ್ಯವೆನಿಸಿದರೆ ಈ ಭಾಷಾನೀತಿಯನ್ನು ಒಂದಿಷ್ಟು ಪರಿಷ್ಕರಿಸಿಕೊಂಡು ಅನುಷ್ಠಾನಗೊಳಿಸಿದರೆ ವಿದ್ಯಾರ್ಥಿಗಳು ಕನ್ನಡಿಗರೂ ಆಗುತ್ತಾರೆ; ಜಾಗತಿಕರೂ ಆಗುತ್ತಾರೆ.

ಆಡಳಿತ, ಶಿಕ್ಷಣಗಳಿಗಿಂತ ಮುಖ್ಯವಾದುದು, ಮಾಯವಾದುದು ಸಾಮಾಜಿಕರಲ್ಲಿ ಕನ್ನಡಾಭಿಮಾನ. ೧೩ನೆಯ ಶತಮಾನದಿಂದ ಮುಸಲ್ಮಾನ, ಮರಾಠಾ, ಇಂಗ್ಲೀಷ ಆಡಳಿತ ಮತ್ತು ವಲಸೆ ಕಾರಣವಾಗಿ ಕನ್ನಡಿಗರ ಅಭಿಮಾನ ಪ್ರಜ್ಞೆ ಕರಗುತ್ತ ನಡೆದು ಅನುಯಾಯಿ ಪ್ರಜ್ಞೆ ಬೆಳೆಯುತ್ತ ಬಂದಿತು. ಅಂದರೆ ಕಳೆದ ೭೦೦ ವರ್ಷಗಳಿಂದ ಕನ್ನಡಿಗರಲ್ಲಿ ಸ್ವಾಭಿಮಾನವು "ಸಮೂಹ ಸಂಸ್ಕೃತಿ" ಯಾಗಿ ರೂಪಗೊಳ್ಳಲೇ ಇಲ್ಲ. ಮೇಲೆ ಹೇಳಿದ ಭಾಷಾನೀತಿಯಿಂದ ಕನ್ನಡವು ಅಧಿಕಾರಿ, ಅರ್ಥ ಇತ್ಯಾದಿಗಳ ಸಾಧನವಾಗುವುದರ ಜೊತೆಗೆ ಈ ಅಭಿಮಾನವೂ ಸೇರಿಕೊಂಡರೆ ಕರ್ನಾಟಕದಲ್ಲಿ ಕನ್ನಡತ್ವ ತುಂಬಿಕೊಳ್ಳುತ್ತದೆ. ಈ ಕೆಲಸ ನಿರಂತರ ಮುನ್ನಡೆಯುವ ಸಲುವಾಗಿ ಅಲ್ಲಲ್ಲಿಯ ಕನ್ನಡ ಸಂಘಗಳು ವಿಕೇಂದ್ರೀಕರಣ ವ್ಯವಸ್ಥೆಯಂತೆ ಪ್ರಯತ್ನಿಸಬೇಕು. ಈಗಿನಂತೆ ಕೇವಲ ಕಾರ್ಯಕ್ರಮಗಳಿಗೆ ಸೀಮಿತವಾಗದೆ ಕಾರ್ಯ ಮಾಡುವಂತೆ ಇವುಗಳನ್ನು ಸಮಗ್ರವಾಗಿ ಸಂಘಟಿಸಿ, ಪುನಶ್ಚೇತನಗೊಳಿಸಬೇಕು.

ಒಟ್ಟಾರೆ ಕನ್ನಡ ಭಾಷೆಯ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಆಡಳಿತದಲ್ಲಿ ಪ್ರಭುಸಮ್ಮಿತ, ಶಿಕ್ಷಣದಲ್ಲಿ ಮಿತ್ರ ಸಮ್ಮಿತ, ಸಮಾಜದಲ್ಲಿ ಕಾಂತಾಸಮ್ಮಿತ ಧೋರಣೆಯನ್ನು ಅನುಸರಿಸಿದರೆ ಕರ್ನಾಟಕದ ನೆಲ, ಶಿಕ್ಷಣ, ಆಡಳಿತ, ನೌಕರಿ, ವಲಸೆ, ಇತ್ಯಾದಿ ಸಮಸ್ಯೆಗಳೆಲ್ಲ ತಾವಾಗಿಯೇ ಪರಿಹಾರವಾಗುವುದರಿಂದ, ಏಕೀಕರಣವೆಂಬುದು ಕೇವಲ ನೆಲದ ತುಂಡುಗಳ ಒಕ್ಕೂಟವಲ್ಲ "ಕನ್ನಡೀಕರಣ" ವೆಂಬ ಪ್ರಜ್ಞಾ ಪಾತಳಿಯಲ್ಲಿ ನಾವೆಲ್ಲ ದುಡಿಯುವುದು, ಇಂಥ ದುಡಿಮೆಗಾಗಿ ಶ್ರೀ ರಾಘವೇಂದ್ರ ಜೋಶಿಯಂಥವರ ಸಂಖ್ಯೆ ವರ್ಧಿಸಲೆಂದು ಹಾರೈಸುತ್ತೇನೆ.

ಆಕರ : ಮಾರ್ಗ ಸಂಪುಟ–೮

■■

೨೦೩

ಬಸವಣ್ಣನವರ ವಚನಗಳು

೨೦೦೯

ಕನ್ನಡದಲ್ಲಿ 'ವಚನ' ವೆನ್ನುವುದು ಕೇವಲ ಒಂದು ಸಾಹಿತ್ಯ ಪ್ರಕಾರವಲ್ಲ, ಸೃಷ್ಟಿ ಸಂಯೋಜನ ರೂಪದಲ್ಲಿ ಇಂದಿಗೂ ಮುಂದುವರಿದ ಒಂದು ಸಾಹಿತ್ಯಪರಂಪರೆಯಾಗಿದೆ. ಈ ನಿರಂತರತೆಗೆ ಕಾರಣ ಗದ್ಯಪದ್ಯ ಸಮನ್ವಿತವಾಗಿರುವ ಅದು ರೂಪದಲ್ಲಿ ಮುಕ್ತಕವಾಗಿರುವುದು ಮತ್ತು ಗುಣದಲ್ಲಿ ಆಧ್ಯಾತ್ಮಿಕ, ಮಾನವಿಕ, ಸಾಮಾಜಿಕ ಇತ್ಯಾದಿ ಬದುಕಿನ ಎಲ್ಲ ಆಯಾಮಗಳನ್ನು ಒಳಗೊಂಡಿರುವುದು. ೧೨ನೆಯ ಶತಮಾನದ ಬಸವಣ್ಣನವರ ನೇತೃತ್ವದಲ್ಲಿ ಜರುಗಿದ ಜನಮುಖಿ ಧಾರ್ಮಿಕ ಚಳುವಳಿಯಲ್ಲಿ ಭಾಗವಹಿಸಿದ ಬೇರೆ ಬೇರೆ ಸ್ತರದ ನೂರಾರು ಜನ ಸ್ತ್ರೀ-ಪುರುಷರು ಈ ಸಾಹಿತ್ಯವನ್ನು ಸೃಷ್ಟಿಸಿದರು. ಅರ್ಥದೃಷ್ಟಿಯಿಂದ ಸ್ವತಂತ್ರ, ಗಾತ್ರದೃಷ್ಟಿಯಿಂದ ಚಿಕ್ಕ, ರಚನಾದೃಷ್ಟಿಯಿಂದ ಸರಳವಾಗಿರುವ ಇದಕ್ಕೆ, ಬಿಡಿಸಿ ನೋಡಿದರೆ ಮುತ್ತಿನ ಬೆಲೆಯಿದೆ. ಕೂಡಿಸಿ ನೋಡಿದರೆ ಮುತ್ತಿನ ಹಾರದ ಬೆಲೆಯಿದೆ.

ಈ ರೀತಿ ಸೃಜನದಲ್ಲಿ ಮುತ್ತಾಗಬಲ್ಲ, ಸಂಯೋಜನೆಯಲ್ಲಿ ಮುತ್ತಿನ ಹಾರವಾಗಬಲ್ಲ ಉಭಯಗುಣ, ವಚನದ ಮುಖ್ಯ ಲಕ್ಷಣವಾಗಿದೆ. ಈ ಗುಣವನ್ನು ಗುರುತಿಸಿದ ತರುವಾಯದ ಲಿಂಗಾಯತ ಅನುಭಾವಿಗಳು ಈ ಸಾಹಿತ್ಯವನ್ನು ಬಳಸಿಕೊಂಡು ಸಂಗ್ರಹ, ಸಂಕಲನ, ಸಂಪಾದನ ರೂಪದ 'ಸಂಯೋಜನ ಸಾಹಿತ್ಯ'ವನ್ನು ರೂಪಿಸಿದರು. ಈ ಮೂರು ಪ್ರಕಾರಗಳಿಗೆ ಅವುಗಳ ಮಹತ್ವ ಅವುಗಳಿದ್ದರೂ ಸಂಗ್ರಹವೆಂಬುದು ಸಾಮಗ್ರಿಮುಖಿ, ಸಂಕಲನವೆಂಬುದು ವಿವರಣಮುಖಿ, ಸಂಪಾದನೆಯೆಂಬುದು ಸೃಜನಮುಖಿಯಾಗಿದೆ. ಪ್ರಾಚೀನ ಸಾಹಿತ್ಯವನ್ನು ಬಳಸಿಕೊಂಡು ಮರುರಚನೆ ಮಾಡಿದ ಈ ಬಗೆಯ ಸಂಯೋಜನ ಸಾಹಿತ್ಯ ಅನ್ಯಭಾಷೆಗಳಲ್ಲಿಯೂ ಕಂಡು ಬರುತ್ತದೆ. ತಮಿಳಿನ 'ಸಂಗಂ ಸಾಹಿತ್ಯ' ಇಂಥ ಒಂದು ಲೋಕವಿಖ್ಯಾತ ಪ್ರಯತ್ನ. ಆದರೆ ಅದು 'ಸಂಗ್ರಹ' ಮಟ್ಟಕ್ಕೆ ನಿಂತು ಬಿಟ್ಟಿದೆ. ಬಹಳೆಂದರೆ 'ಸಂಕಲನ' ಮಟ್ಟಕೇರಿದೆ. ಸಂಪಾದನೆಯ ಸೃಜನಶೀಲತೆ ಅಲ್ಲಿ ಕಾಣುವುದೇ ಇಲ್ಲ. ಈ ದೃಷ್ಟಿಯಿಂದ ವಚನಸಾಹಿತ್ಯದಂತೆ, ಇದನ್ನು ಬಳಸಿಕೊಂಡು ಹುಟ್ಟಿದ 'ಸಂಯೋಜನ ಸಾಹಿತ್ಯ'ಕ್ಕೆ ಅದರಲ್ಲಿಯೂ 'ಸಂಪಾದನ ಸಾಹಿತ್ಯ'ಕ್ಕೆ ಜಾಗತಿಕ ಮಹತ್ವವಿದೆ. 'ಶೂನ್ಯಸಂಪಾದನೆ' ಇದಕ್ಕೆ ಪರಮಾವಧಿ ನಿದರ್ಶನವೆನಿಸಿದೆ.

ಬಸವಣ್ಣನವರ ವಚನಗಳು : ವಿದ್ಯಾ ಎನ್. ಆಚಾರ್ಯ, ಬಸವ ಇಂಟರ್ ನ್ಯಾಷನಲ್ ಫೌಂಡೇಷನ್, ಧಾರವಾಡ-೨೦೧೪

ಆಕರ : ಮಾರ್ಗ ಸಂಪುಟ-೮

೨೦೪

ವಿಶ್ವಕನ್ನಡ ಸಮ್ಮೇಳನ ಮತ್ತು ಇತರ ಲೇಖನಗಳು

೨೦೧೦

ಈ ಕೃತಿಗೆ ಮುನ್ನುಡಿ ಬರೆಯಲು ಕಾರಣ ಶ್ರೀ ಯ.ರು. ಪಾಟೀಲರು ಕಂದಾಯ ಇಲಾಖೆಯ ಚಕ್ರವ್ಯೂಹದ ನಡುವೆಯೂ ಬರವಣಿಗೆಯ ಪ್ರೀತಿ ಉಳಿಸಿಕೊಂಡಿರುವುದು ಮತ್ತು ಆಡಳಿತ ಸಂತೆಯಲ್ಲಿದ್ದೂ ಬಿಡುವು ಮಾಡಿಕೊಂಡು ಬರೆಯುತ್ತಲಿರುವದು. ಇವರ ಹಾಗೆಯೇ ನಮ್ಮಲ್ಲಿ ವೈದ್ಯಕೀಯ, ಎಂಜನೀಯರಿಂಗ್, ಕಾನೂನು, ಪೋಲೀಸ್ ಮೊದಲಾದ ಇಲಾಖೆಗಳ ಬರೆಹಗಾರರ ದೊಡ್ಡ ಸಂಖ್ಯೆಯೇ ಇದೆ. ಅದು ಇತ್ತೀಚಿಗೆ ದೊಡ್ಡದಾಗುತ್ತಲೂ ನಡೆದಿದೆ. "ಸಾಹಿತ್ಯ"ವನ್ನೇ ಬರೆಯಲಿ, ತಮ್ಮ "ಇಲಾಖೆಯ ಸಾಹಿತ್ಯ" ವನ್ನೇ ಬರೆಯಲಿ, ಇಂಥವರಿಂದಾಗಿ ಬರೆಹಲೋಕದಲ್ಲಿ ಹೊಸ ಅನುಭವಗಳು ಸೇರಿಕೊಂಡು, ಹೊಸ ಕ್ಷೇತ್ರಗಳು ತೆರೆದುಕೊಂಡು ಕನ್ನಡ ಬಹುಮುಖಿಯಾಗುತ್ತದೆ. ಈ ದೃಷ್ಟಿಯಿಂದ ಸಾಹಿತ್ಯ ಮತ್ತು ಇಲಾಖೆಯ ಸಾಹಿತ್ಯ ಸೃಷ್ಟಿಸುತ್ತಲಿರುವ ಶ್ರೀ. ಯ.ರು. ಪಾಟೀಲರಂಥವರನ್ನು ಸ್ವಾಗತಿಸಬೇಕಾಗುತ್ತದೆ.

"ವಿಶ್ವ ಕನ್ನಡ ಸಮ್ಮೇಳನ ಮತ್ತು ಇತರ ಲೇಖನಗಳು" ಶ್ರೀ ಪಾಟೀಲ ಅವರ ಇತ್ತೀಚಿನ ಕೃತಿ. ಇತಿಹಾಸ ಮತ್ತು ವರ್ತಮಾನಗಳಿಗೆ ಸಂಬಂಧಿಸಿದ ಹನ್ನೆರಡು ಲೇಖನಗಳನ್ನೊಳಗೊಂಡ ಇದು, ಇಲಾಖೆಯ ಸಾಹಿತ್ಯಕ್ಕಿಂತ ಸಾಹಿತ್ಯವಲಯಕ್ಕೆ ಅದರಲ್ಲಿಯೂ ಒಂದು ಬಗೆಯ ಸಂಶೋಧನ ಸಾಹಿತ್ಯ ವಲಯಕ್ಕೆ ಸಂಬಂಧಿಸಿದೆ. ಪ್ರಕಟಿತ ಸಾಹಿತ್ಯ, ಪ್ರಕಟಿತ ದಾಖಲೆ, ಮೌಖಿಕ ಸಾಹಿತ್ಯ ಇತ್ಯಾದಿ ಮೂಲಗಳಿಂದ ಮೈತುಂಬಿಕೊಂಡಿರುವದು ಈ ಪುಸ್ತಕದ ಲಕ್ಷಣವೆನಿಸಿದೆ. ಸವದತ್ತಿಕೋಟೆ-ವಾಡೆಗಳು, ಅಂಕೇಶ್ವರ-ಪುರದೇಶ್ವರದೇವಾಲಯ ಮೊದಲಾದವುಗಳ ಇತಿಹಾಸವನ್ನು, ಜಿಲ್ಲಾಧಿಕಾರಿಗಳ ಹುದ್ದೆ-ಬೆಳಗಾವಿ ಜಿಲ್ಲೆಯ ಉದಯ, ಸ್ವಾತಂತ್ರ್ಯ ಯೋಧರ ಅನುಭವಗಳು ಮೊದಲಾದವು ವರ್ತಮಾನವನ್ನು ನಿರ್ದೇಶಿಸುತ್ತವೆ.

ಇದು ನಿರೂಪಣಾತ್ಮಕ ಬರವಣಿಗೆ. ಇಂಥ ಪ್ರಯತ್ನಗಳಿಂದ ಓದುಗರಿಗೆ ಒಂದಡೆ ಮಾಹಿತಿ ಸಿಗುತ್ತದೆ. ಕೆಲಮೊಮ್ಮೆ ಹೊಸ ಮಾಹಿತಿಗಳು ಕೈಸೇರುತ್ತವೆ. ಒಂದು ಅಪಾಯವೆಂದರೆ ನಮ್ಮಲ್ಲಿ ಮೊದಲಿನಿಂದಲೂ ಬೆಳೆದುಬಂದ ಇತಿಹಾಸ ಪುರಾಣ ವದಂತಿಗಳ ಮಿಶ್ರಣ ರೂಪದ

ಬರವಣಿಗೆಯಿಂದಾಗಿ, ಸಿಕ್ಕ ಇತಿಹಾಸದ ಎಳೆಗಳೂ ಕೆಲವೊಮ್ಮೆ ಕೈತಪ್ಪಿ ಹೋಗುತ್ತವೆ. ನವೋದಯ ಸಂದರ್ಭದ ವೈಭವೀಕರಣ ಶೈಲಿಯಿಂದಾಗಿಯೂ ಈ ಅಪಾಯ ಸಂಭವಿಸುತ್ತದೆ. ಇದು ಶ್ರೀ ಪಾಟೀಲರ ಬರವಣಿಗೆಯ ಶಕ್ತಿಯೂ ಹೌದು, ಮಿತಿಯೂ ಹೌದು, "ಪ್ರತಿಯೊಬ್ಬ ವಾಚಕನಿಗೂ ಅವರದೇ ಆದ ಗ್ರಂಥವಿರುತ್ತದೆ. ಪ್ರತಿಯೊಂದು ಗ್ರಂಥಕ್ಕೂ ಅದರದೇ ಆದ ವಾಚಕನಿರುತ್ತಾನೆ" ಎಂಬ ಗ್ರಂಥಾಲಯ ವಿಜ್ಞಾನದ ಹೇಳಿಕೆಯನ್ನು ಓದುಗರಿಗೆ ನೆನಪು ಮಾಡಿಕೊಡುತ್ತ ಶ್ರೀ ಪಾಟೀಲ ಅವರಿಗೆ ಯಶಸ್ಸು ಹಾರೈಸುತ್ತೇನೆ.

ಶ್ರೀ ಯ.ರು. ಪಾಟೀಲ : ವಿಶ್ವಕನ್ನಡ ಸಮ್ಮೇಳನ ಮತ್ತು ಇತರ ಲೇಖನಗಳು.

ಆಕರ : ಮಾರ್ಗ ಸಂಪುಟ-೮

■■

೨೦೫

ಕೆ.ಬಿ. ನಾವಲಗಿಮಠ : ೭೦

೨೦೧೦

ಬಹಳ ಜನರ ಸಂಪರ್ಕ ಬಹಳ ಸಂಕಷ್ಟಗಳನ್ನು ಸೃಷ್ಟಿಸುತ್ತದೆ. ಯುವಕನಿರುವಾಗಲೇ ಇದನ್ನು ಅರ್ಥಮಾಡಿಕೊಂಡ ನಾನು, ಬುದ್ಧಿಜೀವಿಗಳ ಧಾರವಾಡದಲ್ಲಿ ನನ್ನದೇ ಆದ ಸಣ್ಣ ಪ್ರೀತಿ ಪರಿವಾರವನ್ನು ಕಟ್ಟಿಕೊಂಡಿದ್ದೇನೆ. ನನ್ನ ಈ ಪರಿವಾದದಲ್ಲಿ ಶ್ರೀ ಕೆ.ಬಿ. ನಾವಲಗಿಮಠ ಅವರೂ ಒಬ್ಬರು. ಈ ಸ್ನೇಹ ಸಂಬಂಧಕ್ಕೆ ಕಾರಣ ನಮ್ಮಿಬ್ಬರ ವೃತ್ತಿ ಭಿನ್ನವಾಗಿದ್ದರೂ ಪ್ರವೃತ್ತಿ ಒಂದೇ ಆಗಿರುವುದು. ಅದು, ನಾವು ಸತ್ಯದ ವಿಷಯದಲ್ಲಿ ವಜ್ರಕ್ಕಿಂತ ಹೆಚ್ಚು ಕಠೋರ, ಕುಸುಮಕ್ಕಿಂತ ಹೆಚ್ಚು ಕೋಮಲ. ವಜ್ರಕುಸುಮ ವ್ಯಕ್ತಿತ್ವದ ಶ್ರೀ ನಾವಲಗಿಮಠ ವಕೀಲರು ನಮ್ಮ ತಲೆಮಾರಿನ ವಕೀಲರಲ್ಲಿ ಪ್ರಸಿದ್ಧರೆನಿಸಿದ್ದಾರೆ.

ಆಧುನಿಕ ಭಾರತ ನಿರ್ಮಾಣದಲ್ಲಿ ನೆಹರೂ ಮೊದಲು ಮಾಡಿ ನಿಜಲಿಂಗಪ್ಪನವರ ವರೆಗೆ ವಕೀಲರ ಪಾತ್ರ ಸ್ಮರಣೀಯವಾದುದು. ಸರಕಾರವನ್ನು ಪ್ರಶ್ನಿಸುವ ಕಾನೂನು ಜ್ಞಾನ, ವಕೀಲತ್ವವೆಂಬ ಸ್ವತಂತ್ರ ವೃತ್ತಿ ಕಾರಣವಾಗಿ ಗಾಂಧಿಯುಗದಲ್ಲಿ ಅಂದಿನ ವಕೀಲರು ರಾಷ್ಟ್ರನಿರ್ಮಾಣ ಕಾರ್ಯವನ್ನು ಸರಿಯಾಗಿ ನಿರ್ವಹಿಸಿದರು. ಆದರೆ ಸ್ವಾತಂತ್ರ್ಯದ ಬಳಿಕ ಎಲ್ಲ ಕ್ಷೇತ್ರಗಳಂತೆ ಕಾನೂನು ಕ್ಷೇತ್ರವೂ ಭ್ರಷ್ಟವಾಗುತ್ತ ನಡೆದಿದೆ. ಇಂಥ ದೂಷಿತ ವಾತಾವರಣದಲ್ಲಿಯೂ ತನ್ನ ಕಕ್ಷಿದಾರ ಗೆಲ್ಲುವುದು ಮುಖ್ಯವಲ್ಲ ಸತ್ಯ ಗೆಲ್ಲುವುದು ಮುಖ್ಯವೆಂಬ ನಿಲವು ನಾವಲಗಿಮಠ ವಕೀಲರದು. ಇದಕ್ಕೆ ಕಾರಣ ವಕೀಲ ನಾವಲಗಿಮಠರ ಒಳಗೆ ಒಬ್ಬ ಉದಾತ್ತ ನಿಲವು ಮನುಷ್ಯ ನೆಲೆಸಿರುವುದು. ಹೀಗಾಗಿ ನನ್ನ ದೃಷ್ಟಿಯಲ್ಲಿ ನಾವಲಗಿಮಠರು ಕಾನೂನು ತಜ್ಞರಾಗಿ ದೊಡ್ಡವರು, ವ್ಯಕ್ತಿಯಾಗಿ ಇನ್ನೂ ದೊಡ್ಡವರು. ಇದನ್ನು ಗುರುತಿಸಿದ ಅವರ ಅಭಿಮಾನಿಗಳು 'ನಾವಲಗಿಮಠ-೭೦' ಅಭಿನಂದನ ಸಮಾರಂಭ ಹಮ್ಮಿಕೊಂಡ ಸಂದರ್ಭದಲ್ಲಿ ಸಂಗ್ರಹಿಸಿದ ಲೇಖನಗಳನ್ನೊಳಗೊಂಡಿದೆ, ಈ ಕೃತಿ. ವೃತ್ತಿಗೆ ನ್ಯಾಯ ಒದಗಿಸಿದ, ವೃತ್ತಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿದ, ವೃತ್ತಿಯಾಚೆಗೂ ಸಾಮಾಜಿಕ ಸೇವೆ ಕೈಕೊಂಡ ಹಿರಿಯರನ್ನು ಗೌರವಿಸುವುದು ಸುಸಂಸ್ಕೃತ ಸಮಾಜದ ಲಕ್ಷಣವಾಗಿದೆ. ಇಲ್ಲಿ ಆ ಕೆಲಸವನ್ನು ಶ್ರದ್ಧಾಪೂರ್ವಕ ಪೂರೈಸಿದುದಕ್ಕೆ ಸಾಕ್ಷಿಯಾಗಿದೆ.

ಇಲ್ಲಿ ಮೂರು ತಲೆಮಾರಿನವರ ಲೇಖನಗಳಿವೆ. ಇವರೆಲ್ಲರ ದನಿ ಅಂತಿಮದಲ್ಲಿ ಒಂದೇ ಆಗಿದ್ದರೂ ಹಿರಿಯರಿಗಿಂತ ಓರಿಗೆಯವರು ಓರಗೆಯವರಿಗಿಂತ ಕಿರಿಯರ ಬರೆಹಗಳು ಹೆಚ್ಚು ಆಪ್ತವಾಗಿವೆ. ಇದಕ್ಕೆ ಕಾರಣ ಭಾವನಾತ್ಮಕ ಸಂಬಂಧ. ಬೆಳೆಯುತ್ತಲಿರುವ ಕಿರಿಯರೊಂದಿಗೆ ಭಾವನಾತ್ಮಕದೊಂದಿಗೆ ಕ್ರಿಯಾವೃತ್ತಿ ಸಂಬಂಧವನ್ನಿಟ್ಟುಕೊಂಡಿರುವುದು. ಅಂದರೆ ಪ್ರೀತಿಸುತ್ತಲೇ ಕಿರಿಯರ ಶೈಕ್ಷಣಿಕ ಪ್ರಾಪಂಚಿಕ ಬೆಳವಣಿಯಲ್ಲಿ ನಿಜವಾದ ಶಿಕ್ಷಕನಂತೆ, ವಾತ್ಸಲ್ಯದ ತಂದೆಯಂತೆ ನಡೆದುಕೊಂಡುದು. ಇದರಿಂದಾಗಿ ಇವರು ಹಿರಿಯರ ಲೇಖನಗಳಲ್ಲಿ ತುಂಬಿದ ಕೊಡವಾಗಿ, ಕಿರಿಯರ ಲೇಖನಗಳಲ್ಲಿ ತುಂಬಿ ಹರಿಯುವ ಹೊಳೆಯಾಗಿ ಮೂಡಿದ್ದಾರೆ.

ಇಲ್ಲಿಯ ಯುವ ವಿದ್ಯಾರ್ಥಿ ಲೇಖನಗಳು ನಾವಲಗಿಮಠರ ಶಿಕ್ಷಕ-ವಕೀಲ ವ್ಯಕ್ತಿತ್ವವನ್ನು ಚೆನ್ನಾಗಿ ಗುರುತಿಸಿವೆ. ವರ್ಗದಲ್ಲಿ ಬೋಧಕರಾಗಿ, ನ್ಯಾಯಾಲಯದಲ್ಲಿ ನ್ಯಾಯಾದಿಗಳಾಗಿ, ಸಾರ್ವಜನಿಕ ವೇದಿಕೆಯಲ್ಲಿ ವಿಷಯ ಪ್ರತಿಪಾದಕರಾಗಿ ನಾವಲಗಿಮಠರು ಬಿಚ್ಚಿಕೊಳ್ಳುವ ಬಗೆಯನ್ನು ವಿದ್ಯಾರ್ಥಿಗಳು ದಾಖಲಿಸುತ್ತಲೇ ಇವರ ಬೆಚ್ಚನೆಯ ವಿಚಾರಗಳ ತಣ್ಣನೆಯ ಶೈಲಿಯೆಂದು ಹೇಳುತ್ತ ಇದೇ ಇವರ ಶಕ್ತಿಯೆಂದು ತಿಳಿಸಿದ್ದಾರೆ. ಜೊತೆಗೆ ರಾತ್ರಿಯನ್ನು ಹಗಲು ಮಾಡಿ ದುಡಿಯುವ ಅವರ ಶ್ರಮಸಂಸ್ಕೃತಿಯನ್ನೂ ಸರಿಯಾದ ಸಮಯಕ್ಕೆ ಸರಿಯಾದ ಕೆಲಸಮಾಡುವ ಸಮಯಪ್ರಜ್ಞೆಯನ್ನೂ ಶಿಸ್ತುಬದ್ಧ ಜೀವನಕ್ರಮವನ್ನೂ ಬಿಡಿಸಿಬಿಡಿಸಿ ಹೇಳಿದ್ದಾರೆ.

ನನ್ನ ದೃಷ್ಟಿಯಲ್ಲಿ ಇವುಗಳಿಗಿಂತ ಮುಖ್ಯವಾದುದು ನಾವಲಗಿಮಠ ಅವರಿಗಿರುವ ಕಾನೂನು ವಿದ್ಯೆಯ ಅಭಿವೃದ್ಧಿ ಪ್ರಜ್ಞೆ, ಮತ್ತು ಕಾನೂನು ಕ್ಷೇತ್ರದವರನ್ನು ಒಳಗೊಳ್ಳುವ ಸಮಷ್ಟಿಪ್ರಜ್ಞೆ, ಅದಕ್ಕಾಗಿಯೇ ಅವರು “ಧಾರವಾಡ ಲಾ ಅಕಾಡೆಮಿ” ಸ್ಥಾಪಿಸಿ ಅದರ ತೆಕ್ಕೆಯಲ್ಲಿ ಕಿರಿಯರನ್ನು ಬರಮಾಡಿ ಕೊಳ್ಳುತ್ತ ಹೆಚ್ಚಿನದಾಗಿ ಕಿರಿಯರ ಬೆಳವಣಿಗೆಗೆ ವಿಶೇಷ ಗಮನ ಕೊಡುತ್ತ ಬಂದಿದ್ದಾರೆ. ಈ ಕಾನೂನುಕ್ಷೇತ್ರವನ್ನು ಮೀರಿ ಸಾಮಾಜಿಕ ಶ್ರೀ ಕ್ಷೇತ್ರಕ್ಕೂ ವಿಸ್ತಾರಗೊಂಡುದನ್ನು ಓರಗೆಯವರೂ ಹಿರಿಯರೂ ಉಲ್ಲೇಖಿಸಿದ್ದಾರೆ. ಇಂಥ ನಿಷ್ಕಳ ಸಾಮಾಜಿಕ ವ್ಯಕ್ತಿಯೇ ವಚನಪರಿಭಾಷೆಯಲ್ಲಿ ಶರಣನೆನಿಸಿಕೊಳ್ಳುತ್ತಾನೆ. ಶ್ರೀ ನಾವಲಗಿಮಠ ಅವರು ಇನ್ನೂ ಸಾಮಾಜಿಕವಾಗಿ ಬೆಳೆಯುವುದರ ಮೂಲಕ ಶರಣ ಪರಿಸರ ಸೃಷ್ಟಿಯಾಗಲೆಂದು ಹಾರೈಸುತ್ತೇನೆ.

ಶ್ರೀ ಕೆ.ಬಿ. ನಾವಲಗಿಮಠ : ೭೦. ಅಭಿನಂದನ ಗ್ರಂಥ, ೨೦೧೦

ಆಕರ : ಮಾರ್ಗ ಸಂಪುಟ-೮

■■

೨೦೬

ಅಮೋಘಸಿದ್ಧ ಪರಂಪರೆ

೨೦೧೨

ಆಧುನಿಕ ಕುರುಬ ಸಮಾಜದಲ್ಲಿ ಎರಡು ಸಾಂಸ್ಕೃತಿಕ ಧಾರೆಗಳು ಬೆಳೆದು ಬರುತ್ತಲಿವೆ. ಒಂದು ರಾಜಕಾರಣಿಗಳು ರೂಪಿಸುತ್ತಿರುವ 'ಕನಕದಾಸ' ನನ್ನು ಕುರಿತ ಪ್ರಚಾರಧಾರೆ. ಎರಡು: ವಿದ್ವಾಂಸರು ಶೋಧಿಸಿ ಮಂಡಿಸುತ್ತಿರುವ ರೇವಣಸಿದ್ಧ-ಸಿದ್ಧರಾಮ-ಅಮೋಘಸಿದ್ಧರನ್ನು ಕುರಿತ ವಿಚಾರಧಾರೆ. ಒಂದು ಧಾರೆಗೆ ಸರಕಾರದ ಬೆಂಬಲವಿದೆ; ಇನ್ನೊಂದು ಧಾರೆಗೆ ಸಮುದಾಯದ ಬೆಂಬಲವಿದೆ. ಇಂದು ಸಹಜವಾಗಿಯೇ ಕ್ಷೀಣವಾಗಿರುವ ಸಮುದಾಯದವರ ಧ್ವನಿಯ ಇಂಥ ಪ್ರಬಂಧಗಳಿಂದಾಗಿ ಏರುಧ್ವನಿಯಾಗಿ, ಈ ಸಮಾಜಕ್ಕೆ ತನ್ನ ಮೂಲ ಸಂಸ್ಕೃತಿಯ ನ್ಯಾಯ ಸಿಗಲೆಂದು ಹಾರೈಸುತ್ತೇನೆ.

೨೦೦೪ ನಾನು 'ಸಿದ್ಧಮಂಕ ಚರಿತೆ' ಮತ್ತು 'ತಗರ ಪವಾಡ' ಕೃತಿಗಳ ವ್ಯಾಸಂಗ ಪರಿಷ್ಕರಣ ಕಾರ್ಯದಲ್ಲಿ ನಿರತನಾಗಿದ್ದ ಸಂದರ್ಭ. ಡಾ. ವೈ.ಸಿ. ಭಾನುಮತಿ, ಶ್ರೀ ಸಿ.ಕೆ. ಪರಶುರಾಮಯ್ಯ, ಡಾ. ಎಫ್. ಟಿ. ಹಳ್ಳಿಕೇರಿಯವರು ಈ ಕೆಲಸದಲ್ಲಿ ನನ್ನೊಂದಿಗೆ ಕೈಗೂಡಿಸಿದರು. ಈ ಕೃತಿಗಳು ಪ್ರಕಟವಾಗುತ್ತಲೇ ಹಾಲುಮತ ಸಮಾಜದಲ್ಲಿ ರೇವಣಸಿದ್ಧನ ಶಿಷ್ಯ ಶಾಂತಮುತ್ತಯ್ಯನ 'ಶಾಂತ' ಸಂಪ್ರದಾಯ, ಸೊಲ್ಲಾಪುರ ಸಿದ್ಧರಾಮನ ಶಿಷ್ಯ ಸಿದ್ಧಮಂಕನ 'ಮಂಕ' ಸಂಪ್ರದಾಯಗಳ ಮೇಲೆ ಹೊಸಬೆಳಕು ಬಿದ್ದಿತು. ಇದರ ಬೆನ್ನ ಹಿಂದೆಯೇ ಹಾಲುಮತವನ್ನು ಕುರಿತು ಪ್ರಕಟವಾದ ಬಗೆಬಗೆಯ ಬರವಣಿಗೆಯಿಂದಾಗಿ, ಹೊಸ ಹೊಸ ಸಂಗತಿಗಳು ತೆರೆದುಕೊಂಡವು. ಇವೆಲ್ಲವುಗಳಿಂದ ಉತ್ತೇಜಿತರಾದ ಹಾಲುಮತದ ಯುವ ವಿದ್ವಾಂಸರಾದ ಡಾ.ಎಫ್. ಟಿ. ಹಳ್ಳಿಕೇರಿ ಮೊದಲಾದವರು ಈ ದಿಸೆಯಲ್ಲಿ ಉತ್ಸಾಹದ ಹೆಜ್ಜೆ ಹಾಕಿದರು. ಇದಕ್ಕೆ ಪೂರಕವಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಅಸ್ತಿತ್ವಕ್ಕೆ ಬಂದ 'ಹಾಲುಮತ ಅಧ್ಯಯನಪೀಠ'ವು (೨೦೦೬) ಕಾಗಿನೆಲೆಯಲ್ಲಿ ಅಸ್ತಿತ್ವಕ್ಕೆ ಬಂದ 'ಕನಕಗುರುಪೀಠ'ಕ್ಕಿಂತ ಮತ್ತು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಅಸ್ತಿತ್ವಕ್ಕೆ ಬಂದಿರುವ 'ಕನಕ ಅಧ್ಯಯನ ಪೀಠ'ಗಳಿಗಿಂತಲೂ ಸಾಂಸ್ಕೃತಿಕವಾಗಿ ಮಹತ್ವದ್ದೆಂದು ನಾನು ಭಾವಿಸುತ್ತೇನೆ.

ಹೀಗೆ ನಡೆದ ಹೊಸಹೊಸ ಅಧ್ಯಯನಗಳ ಆರೋಗ್ಯಪೂರ್ಣ ಗದ್ದಲದಲ್ಲಿ ಡಾ. ಚನ್ನಪ್ಪ ಕಟ್ಟಿಯವರು ಸದ್ದುಗದ್ದಲವಿಲ್ಲದೆ 'ಅಮೋಘಸಿದ್ಧ' ಸಂಪ್ರದಾಯವನ್ನು ಪಿಎಚ್.ಡಿ. ಪ್ರಬಂಧದ

ಮೂಲಕ ಎತ್ತಿ ತರುವ ಕೂರ್ಮಸಾಹಸ ಮಾಡಿದ್ದಾರೆ. ರೇವಣಸಿದ್ಧ ಮೊದಲಾದವರೊಂದಿಗೆ ಹೋಲಿಸಿದರೆ ವಿದ್ವತ್ ಲೋಕದಲ್ಲಿ ಅಮೋಘಸಿದ್ಧನದು ಅಪರಿಚಿತ ಸಂಪ್ರದಾಯ. ನಿಜವಾದ ಸಂಶೋಧನೆಯೆನ್ನುವುದು ಅಪರಿಚಿತವನ್ನು ಪರಿಚಿತವಾಗಿಸುವುದು. ಡಾ. ಕಟ್ಟಿಯವರು ಪ್ರಸ್ತುತ ಪ್ರಬಂಧದ ಮೂಲಕ ಈ ಕಾರ್ಯವನ್ನು ತುಂಬ ಸಮರ್ಥವಾಗಿ ಸಮಗ್ರವಾಗಿ ಮಾಡಿದ ಮೊದಲಿಗರೆನಿಸಿದ್ದಾರೆ. ಇದರಿಂದಾಗಿ ಹಾಲುಮತದ ಇನ್ನೊಂದು ಶಾಖೆ ಪೂರ್ಣ ಪ್ರಮಾಣದಲ್ಲಿ ಅನಾವರಣಗೊಂಡಿದೆ.

ಇಂದು ಪ್ರಭುಸತ್ತೆ ಸರಿದು ಪ್ರಜಾಸತ್ತೆ ಅವತರಿಸಿದೆ. ಇದರಿಂದಾಗಿ ಸಾಮಾನ್ಯ ಪ್ರಜಾವರ್ಗದ ಬದುಕಿಗೆ ಸಂಬಂಧಪಟ್ಟ ಪ್ರಪಂಚದಿಂದ ಪಾರಮಾರ್ಥಿಕ ವರೆಗಿನ ಎಲ್ಲ ವಿಷಯಗಳು ಅಧ್ಯಯನದ ವಸ್ತುಗಳಾಗತೊಡಗಿವೆ. 'ಮಾರ್ಗ'ವೇ ತಮ್ಮ ತಾಯಿಯೆಂಬ ಭ್ರಮೆಯಿಂದ ಸ್ಥಳೀಯ ಪ್ರಜೆಗಳು ಹೊರಬಂದು ತಮ್ಮ ಮೂಲ ಬೇರುಗಳನ್ನು ದೇಶಿಯಲ್ಲಿ ಹುಡುಕತೊಡಗಿದ್ದಾರೆ. ಈ ದೃಷ್ಟಿಯಿಂದ ಇತ್ತೀಚೆ ಬೆಳಕಿಗೆ ಬಂದ ಕೃತಿಗಳಲ್ಲಿಯೇ ಇದು ಮುಖ್ಯವಾದುದು.

ಹಾಲುಮತ ಸಮಾಜ ಇತಿಹಾಸ ದೃಷ್ಟಿಯಿಂದ ಪ್ರಾಚೀನ, ಸಂಸ್ಕೃತಿ ದೃಷ್ಟಿಯಿಂದ ಸಮೃದ್ಧವಾಗಿದ್ದರೂ ಕರ್ನಾಟಕದಲ್ಲಿ ಹೊರಸುತ್ತಿನಲ್ಲಿ ಬದುಕಿದ ಕಾರಣ, ಇದರ ಎಲ್ಲ ಆಯಾಮಗಳು ದಾಖಲೆಯಿಂದ ವಂಚಿತವಾದವು. ಇಷ್ಟೇ ಏಕೆ? ಹಾಲುಮತದ ಪ್ರಥಮ ಸಾಹಿತ್ಯ ಕೃತಿಗಳಾದ ೧೭ನೆಯ ಶತಮಾನದ ತಗರ ಪವಾಡ, ಸಿದ್ಧಮಂಕ ಚರಿತೆಗಳು ಶಾಂತಸಂಪ್ರದಾಯ, ಮಂಕಸಂಪ್ರದಾಯಗಳನ್ನು ಮಾತ್ರ ದಾಖಲಿಸಿ, ಅಮೋಘಸಿದ್ಧ ಸಂಪ್ರದಾಯವನ್ನು ಕಡೆಗಣಿಸಿದ್ದವು. ಆಧುನಿಕ ವಿದ್ವಾಂಸರಿಂದಲೂ ಇದು ಉಪೇಕ್ಷೆಗೆ ಗುರಿಯಾಗಿದ್ದಿತು. ಈ ಸಂಪ್ರದಾಯ ತನ್ನ ಸಮಗ್ರ ಅಧ್ಯಯನಕ್ಕಾಗಿ ಡಾ. ಕಟ್ಟಿಯವರು ಬರುವವರೆಗೂ ಕಾಯಬೇಕಾಯಿತು.

ಹೀಗೆ ಲಿಖಿತ ದಾಖಲೆಗಳಿಂದ ವಂಚಿತವಾಗಿರುವ ಈ ಸಂಪ್ರದಾಯ ಮೌಖಿಕ, ಆಚರಣಾತ್ಮಕ, ಅವಶೇಷಾತ್ಮಕ ಆಕರಗಳನ್ನು ಅಪೇಕ್ಷಿಸುತ್ತದೆ. ಇದನ್ನು ಅರ್ಥಮಾಡಿಕೊಂಡ ಡಾ. ಕಟ್ಟಿಯವರು ಅಮೋಘಸಿದ್ಧನ ವಿಷಯದಲ್ಲಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರಗಳಲ್ಲಿ ವ್ಯಾಪಕ ಕ್ಷೇತ್ರಕಾರ್ಯ ಮಾಡಿದ್ದಾರೆ. ನಾಲ್ಕು ಜನ ಮಕ್ಕಳು, ಮೂರು ಜನ ಶಿಶುಮಕ್ಕಳಿಂದ ಆರಂಭವಾದ ಈ ವಂಶವಾಹಿನಿ ಬೆರಗು ಹುಟ್ಟುವಂತೆ ೩-೪ ಜಿಲ್ಲೆಗಳ ಪ್ರದೇಶದಲ್ಲಿ ನೆಲೆಯೂರಿ, ಮುಖ್ಯವಾಗಿ ಹಾಲುಮತ ಜನವರ್ಗವನ್ನು ಧಾರ್ಮಿಕ ಸಾಮಾಜಿಕವಾಗಿ ಆಳುತ್ತಲಿದೆ. ಈ ಮೌಖಿಕ ಸಂಪ್ರದಾಯದೊಳಗೆ ಇತಿಹಾಸ ಪುರಾಣ ಕಲ್ಪನೆ ಏನೆಲ್ಲ ಸೇರಿಕೊಂಡಿವೆ. ಆಚರಣೆಗಳಂತೂ ಅನಂತಮುಖಿಯಾಗಿ ಹೆಣೆದುಕೊಂಡಿವೆ. ಈ ಅರಣ್ಯವನ್ನು ಭೇದಿಸಿ-ಶೋಧಿಸಿ ವ್ಯಾಖ್ಯಾನಿಸಿ ಅದನ್ನು ಒಂದು ಶೈಕ್ಷಣಿಕ ಶಿಸ್ತಿಗೆ ಅಳವಡಿಸುವುದು ತುಂಬ ಕಷ್ಟ. ಏಕೆಂದರೆ ನಿರ್ದಿಷ್ಟವಾದ ಲಿಖಿತ ಆಕರಗಳನ್ನು ವಿಶ್ಲೇಷಿಸಿ ಒಂದು ನೆಲೆ ತಲುಪುವುದು ಸುಲಭ, ಅನಿರ್ದಿಷ್ಟ ರೂಪದ ಮೌಖಿಕ ಆಕರಗಳನ್ನು ಸರಿಯಾಗಿ ವ್ಯಾಖ್ಯಾನಿಸುವುದು ಸುಲಭವಲ್ಲ. ಇಲ್ಲಿ ಸ್ವಲ್ಪ ಹೆಜ್ಜೆ ತಪ್ಪಿದರೆ ಸಾಕು, ವ್ಯಾಖ್ಯಾನ ಅಪವ್ಯಾಖ್ಯಾನವಾಗಿ ಬಿಡುತ್ತದೆ. ಶ್ರೀ ಕಟ್ಟಿಯವರು ಇಂಥಲ್ಲೆಲ್ಲ ತುಂಬ ಎಚ್ಚರ ವಹಿಸಿದ್ದಾರೆ.

ಡಾ. ಕಟ್ಟಿಯವರನ್ನು ಮೊದಲು ಕಾಡಿದ ಎರಡು ಪ್ರಶ್ನೆಗಳೆಂದರೆ ಇದು ಯಾವ ಮೂಲದ ಪಂಥ? ಈ ಪಂಥದ ಅಮೋಘಸಿದ್ಧ ಯಾವ ಕಾಲದವ? ಇದಕ್ಕಾಗಿ ಒಂದಿಷ್ಟು ಯೋಗಮಾರ್ಗದ

ನಾಥಸಿದ್ಧ ಮೂಲದ್ದಾದರೂ ಸಿದ್ಧಟಿಕೆ ಮೊದಲಾದ ಪ್ರಾದೇಶಿಕ ಲಕ್ಷಣಗಳನ್ನು ಧಾರಣೆ ಮಾಡಿಕೊಂಡಿದೆಯೆಂದು ಸರಿಯಾಗಿಯೇ ಗುರುತಿಸಿದ್ದಾರೆ.

ಕಾಲನಿರ್ಣಯ ವಿಷಯದಲ್ಲಿಯೂ ಇವನು ೧೨ನೆಯ ಶತಮಾನದ ವಚನಕಾರ ಅಮುಗಿದೇವನಿಂದ ಭಿನ್ನನೆಂದು ಸೂಚಿಸಿದುದು ಸೂಕ್ತವಾಗಿದೆ. ಏಕೆಂದರೆ ೩೦ ವಚನ ಬರೆದಿರುವ ಅಮುಗಿದೇವ, ೧೧೬ ವಚನ ಬರೆದಿರುವ ಈತನ ಹೆಂಡತಿ ಅಮುಗಿರಾಯಮ್ಮ ತುಂಬ ಶಿಷ್ಟರೆನಿಸಿ, ಈ ದೇಶಿ ಅಮೋಘಸಿದ್ಧನಿಂದ ಭಿನ್ನರೆನಿಸುತ್ತಾರೆ. ಇದಲ್ಲದೆ ಅವನ ಹೆಂಡತಿಯ ಹೆಸರು ರಾಯಮ್ಮ ಇವನ ಹೆಂಡತಿಯ ಹೆಸರು ಪದ್ಮಾವತಿ.

ಹೀಗೆ ೧೨ನೆಯ ಶತಮಾನದವರಿಂದ ಭಿನ್ನನಾಗಿರುವ ಈತ ೧೬ನೆಯ ಶತಮಾನದವನೆಂದು ಒಂದೆರಡು ದಾಖಲೆ ಮತ್ತು ಸಮಕಾಲೀನ ವ್ಯಕ್ತಿಗಳನ್ನಾಧರಿಸಿ ಹೇಳಿದುದು ಒಪ್ಪತಕ್ಕ ಮಾತಾಗಿದೆ. ಇಲ್ಲಿ ಎತ್ತಿ ಹೇಳಿದ ಇನ್ನೊಂದು ಸಂಗತಿಯೆಂದರೆ ಹಾಲುಮತದ ಶಾಂತಮುತ್ತಯ್ಯ ಸಂಪ್ರದಾಯ, ಮಂಕಸಿದ್ಧ ಸಂಪ್ರದಾಯ ಮತ್ತು ಅಮೋಘಸಿದ್ಧ ಸಂಪ್ರದಾಯಗಳಿಗೆ ವಿಜಾಪೂರ ಜಿಲ್ಲೆಯೇ ಗಂಗೋತ್ರಿಯಾದುದು. ಆದರೆ ಮೊದಲಿನ ಎರಡು ಸಂಪ್ರದಾಯಗಳು ೧೨ನೆಯ ಶತಮಾನಕ್ಕೆ ಸಂಬಂಧಿಸಿದ ಕಾರಣ ಅವುಗಳಲ್ಲಿ ಸಿದ್ಧ ಶರಣ ಸಂಪ್ರದಾಯಗಳ ನಾಥ ಮಿಶ್ರಣ ಕಂಡುಬರುತ್ತದೆ. ೧೬ನೆಯ ಶತಮಾನದ ಇದು, ಆದಿಲ್‌ಶಾಹಿಯ ರಾಜಧಾನಿಯಾದ ವಿಜಾಪೂರಕ್ಕೆ ನೆರೆಯ ಅರಕೇರಿಗೆ ಸಂಬಂಧಿಸಿದುದರಿಂದ ಇಲ್ಲಿ ಹೆಚ್ಚಿನದಾಗಿ ಸೂಫಿ ಸಂಪ್ರದಾಯವೂ ಸೇರಿಕೊಂಡಿದೆ.

ಇನ್ನೂ ಒಂದು ಅಂಶವೆಂದರೆ, ವೈಚಾರಿಕ ಶರಣಧರ್ಮವನ್ನು ಭೇದಿಸಿ ಒಳನಾಡಿನತ್ತ ನುಗ್ಗುವುದು ಸಾಧ್ಯವಾಗದೆ ಕರ್ನಾಟಕ ಮಹಾರಾಷ್ಟ್ರಗಳ ಸೀಮೆಯ ಮುಗ್ಧ ಪಶುಪಾಲಕರ ನಡುವೆ ಇದು ಮಡುಗಟ್ಟನಿಂತಿದೆ. ಕೆಳ ಮಧ್ಯಮ ವರ್ಗದಲ್ಲಿ ಹುಟ್ಟಿ ಅವರ ಧಾರ್ಮಿಕ ಒಡೆಯನಾಗಿ ಬೆಳೆದ ಇವನ ಹೆಸರು ಸಂಸ್ಕೃತನಿಷ್ಠ ಅಮೋಘಸಿದ್ಧನಾಗಿರದೆ ದೇಶೀ ಬೂತಗ, ಮೈಳುಗಿಗಳಂತೆ ಅಮ್ಮ ಮೂಲದ ಅಮ್ಮುಗ ಅಮ್ಮುಗಿಯಾಗಿರಬೇಕೆಂದು ತರ್ಕಿಸಿದುದು ಶಾಸ್ತ್ರಶುದ್ಧವೆನಿಸಿದೆ. ಇಂಥ ಸೂಕ್ಷ್ಮಗಳನ್ನು ಗುರುತಿಸುತ್ತಲೇ ಸುಮಾರು ೧೫೦ ಪುಟಗಳನ್ನು ವ್ಯಾಪಿಸಿರುವ ಅಮೋಘಸಿದ್ಧನ ಪರಿವಾರ, ಜಾತ್ರೆ ಉತ್ಸವ ಹರಕೆ ನಂಬಿಕೆ ಆಚರಣೆಗಳು ಹೊಸ ಮಾಹಿತಿ, ಸರಿಯಾದ ವ್ಯಾಖ್ಯಾನದಿಂದಾಗಿ ಮತ್ತೆ ಮತ್ತೆ ಓದಿಸಿಕೊಳ್ಳುತ್ತವೆ.

ಡಾ. ಕಟ್ಟಿಯವರು ಮೂಲತಃ ಸೃಜನಶೀಲ ಲೇಖಕರು. ಸೃಜನತೆ ಮತ್ತು ಸಂಯಮ ಇವರ ಬರವಣಿಗೆಯ ಮೂಲ ಲಕ್ಷಣ. ಈ ಎರಡೂ ಲಕ್ಷಣಗಳು ಈ ಸಂಶೋಧನೆಯನ್ನು ಉದ್ದಕ್ಕೂ ನಿಯಂತ್ರಿಸಿದುದನ್ನು ಇಲ್ಲಿ ಕಾಣಬಹುದು ಹೀಗೆ ಆಶಯ ಮತ್ತು ಅಭಿವ್ಯಕ್ತಿ ದೃಷ್ಟಿಯಿಂದ ತುಂಬ ಮೌಲಿಕವಾಗಿರುವ ಈ ಕೃತಿಯ ಓದು ಹಾಲುಮತದ ಬಗೆಗಿನ ನನ್ನ ತಿಳಿವಳಿಕೆಯನ್ನು ವಿಸ್ತರಿಸಿದೆ. ಹೀಗಾಗಿ ಜಾನಪದ ವಿದ್ವಾಂಸರೆಂದು ಕರೆದುಕೊಳ್ಳುವವರು ಈ ಪ್ರಬಂಧವನ್ನು ಅವಶ್ಯ ಓದಬೇಕು. ಇಂಥ ಅಧ್ಯಯನ ಕೈಕೊಳ್ಳುವ ವಿದ್ಯಾರ್ಥಿಗಳು ಇದನ್ನು ಒಂದು ಮಾದರಿಯನ್ನಾಗಿ ಇಟ್ಟುಕೊಳ್ಳಬೇಕು. ವ್ಯವಸ್ಥೆಯನ್ನು ಓಲೈಸುವುದರಲ್ಲಿಯೇ ತಮ್ಮ ಜನ್ಮ ಸಾರ್ಥಕತೆಯಿದೆಯೆಂದು ನಂಬಿದ ಇಂದಿನ ಶಿಕ್ಷಕರ ಮಧ್ಯದಲ್ಲಿದ್ದು ಇಂಥ ಮೌಲಿಕ ಪ್ರಬಂಧ ರಚಿಸಿದುದಕ್ಕಾಗಿ ಡಾ. ಚನ್ನಪ್ಪ ಕಟ್ಟಿ ಅವರಿಗೆ

ಮತ್ತು ಸ್ಥಳೀಯ ಸಾಂಸ್ಕೃತಿಕ ನಾಯಕರ ಅಧ್ಯಯನಕ್ಕೆ ಪ್ರೋತ್ಸಾಹಿಸಿದ ವಿಜಾಪೂರದ ಬಿ.ಎಲ್.ಡಿ. ಶಿಕ್ಷಣ ಸಂಸ್ಥೆಯ ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರಕ್ಕೆ ನನ್ನ ಮತ್ತು ಕನ್ನಡಿಗರ ಅಭಿನಂದನೆಗಳು ಸಲ್ಲುತ್ತವೆ.

ಡಾ. ಚೆನ್ನಪ್ಪ ಕಟ್ಟಿ : ಅಮೋಘಸಿದ್ಧ ಪರಂಪರೆ, ೨೦೧೨.

ಆಕರ : ಮಾರ್ಗ ಸಂಪುಟ–೮

೨೦೭

ಬೃಹತ್ ಕರ್ನಾಟಕದ ಶಿಲ್ಪಾಚಾರಿಯರ ಚರಿತೆ

೨೦೧೩

ಇದು ಈ ವರೆಗೆ ಉಪೇಕ್ಷಿತವಾಗಿದ್ದ ಸಂಶೋಧನಾಕ್ಷೇತ್ರವನ್ನು ಕುರಿತದ್ದಾಗಿದೆ. ಈ ಕ್ಷೇತ್ರದ ಎಲ್ಲ ಆಯಾಮಗಳನ್ನು ಬಿಡಿಸಿ, ವಿವರವಾಗಿ ಚರ್ಚಿಸಿ ವ್ಯಾಖ್ಯಾನಿಸುವ ಮೂಲಕ ಅನೇಕ ಹೊಸ ಹೊಸ ಅಂಶಗಳನ್ನು ಇಲ್ಲಿ ಪ್ರಥಮಬಾರಿಗೆ ಹೊರತರಲಾಗಿದೆ. ಇಂಥ ವಿಷಯಗಳಿಗೆ ಸಿಗುವ ಆಕರ ಸಾಮಗ್ರಿಯು ಬಿಡಿಬಿಡಿರೂಪದ್ದಾಗಿರುತ್ತದೆ. ಅಂದರೆ ಒಂದೊಂದು ವಾಕ್ಯ, ಒಂದು ಪದ, ಅನೇಕ ಸಾರಿ ಒಂದಕ್ಷರ ಮಾತ್ರವಾಗಿರಬಹುದು. ಅದೂ ಅನೇಕ ಆಕರಗಳಲ್ಲಿ ಚಾಣ-ಛಿದ್ರವಾಗಿರುತ್ತದೆ. ಅವನ್ನೆಲ್ಲ ಸಮಗ್ರವಾಗಿ ಸಂಗ್ರಹಿಸಿ, ಶುದ್ಧೀಕರಿಸಿ, ಸಂಯೋಜಿಸಿ, ವ್ಯಾಖ್ಯಾನಿಸುವ ದಿಸೆಯಲ್ಲಿ ಈ ಗ್ರಂಥ ತುಂಬ ಮಹತ್ವದ ಸಾಧನೆಯನ್ನು ಮಾಡಿದೆ.

ನಮ್ಮ ನಾಡಿನ ಶಿಲ್ಪಿಗಳ ಜೀವನಚರಿತ್ರೆ ಮತ್ತು ಸಾಧನೆಗಳನ್ನು ಉಪಲಬ್ಧವಿರುವ ಎಲ್ಲಾ ಮೂಲಗಳಿಂದ ಇಲ್ಲಿ ಸರಿಯಾಗಿ ಕಟ್ಟಿಕೊಡಲಾಗಿದೆ. ಕುಶಲ ಕೆಲಸಗಾರರ ಕಾರ್ಯವಿಧಾನವನ್ನು ವಿವರಿಸುವ ಭಾಗದ ಅಧ್ಯಯನವು ತುಂಬ ಉತ್ತಮಮಟ್ಟದ್ದಾಗಿದೆ. ವ್ಯಾಖ್ಯಾನವೂ ಚೆನ್ನಾಗಿದೆ. ಅನೇಕ ಶಾಸನಗಳು ಹಾಗೂ ಕಾವ್ಯಗಳಿಂದ ಸಂಗ್ರಹಿಸಿದ ಮಾಹಿತಿಯಿಂದಾಗಿ ಇದು ಪ್ರಾಚೀನಕಾಲದ ಕೆರೆ-ಕಟ್ಟೆಗಳ ನಿರ್ಮಾಣ ವಿಧಾನವನ್ನು ಕಣ್ಣಿಗೆ ಕಟ್ಟುತ್ತದೆ. 'ಕೊತ್ತಳಿ' 'ಸರಸ್ವತಿಗಣ' ಎಂಬ ವೃತ್ತಿಸಂಘಗಳನ್ನು ಕುರಿತ ಪದಗಳನ್ನು ಈ ಅಧ್ಯಯನವು ಸರಿಯಾಗಿಯೇ ಅರ್ಥೈಸುತ್ತದೆ. ಆರ್ಥಿಕ ಸ್ಥಿತಿ-ಗತಿಗೆ ಸಂಬಂಧಿಸಿದ ವಿಷಯವನ್ನು ಸರಿಯಾಗಿಯೇ ಗುರುತಿಸಲಾಗಿದೆ. ಇಲ್ಲಿ ಅಂಕಿ-ಅಂಶಗಳಿಂದ ಡಾ.ಕೆ.ಎಸ್. ಕುಮಾರಸ್ವಾಮಿಯವರು ನಿರ್ಣಯಕ್ಕೆ ಬರುವ ರೀತಿ ನಿಜವಾಗಿಯೂ ಮೆಚ್ಚತಕ್ಕದ್ದಾಗಿದೆ. ಅನೇಕ ಜನ ಶಿಲ್ಪಿಗಳ ತೌರೂರುಗಳನ್ನು ಸರಿಯಾಗಿ ಶೋಧಿಸಿರುತ್ತಾರೆ. ಕೆಲವು ಮಹತ್ವದ ಪಾರಿಭಾಷಿಕ ಪದಗಳ ಉತ್ಪತ್ತಿಯನ್ನು, ಶಿಲ್ಪಿಗಳ ಬಿರುದುಗಳ ಆಧಾರದ ಮೇಲೆ ಅವರವರೊಳಗಿದ್ದ ಪೈಪೋಟಿಯನ್ನು ವೃತ್ತಿಮಾತ್ಸರ್ಯವನ್ನು, ಗುರು ಶಿಷ್ಯರ ಸಂಬಂಧವನ್ನು ಬಹುಮಟ್ಟಿಗೆ ಸರಿಯಾಗಿ ವಿವೇಚಿಸಿದ್ದಾರೆ.

ಶಿಲ್ಪಿಸಮಾಜದ ಸಾಂಸ್ಕೃತಿಕ ಹಿನ್ನೆಲೆಯನ್ನು ಈ ಕೃತಿಯು ದಟ್ಟವಾಗಿ ಚರ್ಚಿಸುತ್ತದೆ. ಇಲ್ಲಿ ವೈದಿಕೇತರ ಮೂಲದಿಂದಲೂ ಈ ಸಮಾಜವನ್ನು ನೋಡುವ ಪ್ರಯತ್ನ ನಡೆಸಿರುವುದು ವಿಶೇಷವೆಂದೇ ಹೇಳಬೇಕು. ಕ್ರಿ.ಶ. ೧೭ನೆಯ ಶತಮಾನವು ಕರ್ನಾಟಕದ ಇತಿಹಾಸದಲ್ಲಿ ಒಂದು ಸಂಕ್ರಮಣಯುಗ. ಈ ಅವಧಿಯಲ್ಲಿ ಶಿಲ್ಪಿಗಳ ಜೀವನ ವಿವರಕೊಡುವ ಪ್ರಯತ್ನ ಗಮನಾರ್ಹವಾಗಿದೆ.

ಜನಪದರು ಕಂಡಂತೆ ಕುಶಲಕೆಲಸಗಾರರ ಬದುಕನ್ನು ಬಿಡಿಸಿದುದು ಈ ಸಂಶೊಧನೆಯ ಇನ್ನೊಂದು ಮೇಲ್ಮೆ ಆಗಿದೆ. ಅಲ್ಲಲ್ಲಿ ತುಂಡುತುಂಡಾಗಿ ಸಿಗುವ ಐತಿಹ್ಯಗಳನ್ನು ಸಂಗ್ರಹಿಸಿ ಅರ್ಥೈಸಲು ಪ್ರೊ. ಎ.ಎಸ್. ಕುಮಾರಸ್ವಾಮಿಯವರು ಸೊಗಸಾದ ಪ್ರಯತ್ನಮಾಡಿದ್ದಾರೆ. ಇಲ್ಲಿ ಕುಶಲಕರ್ಮಿಗಳ ಸ್ಪರ್ಧಾಮನೋಭಾವ. ವಲಸೆಗಳ ವಿವರಣೆ ಸರಿಯಾಗಿ ಮೂಡಿಬಂದಿದೆ. ಜೊತೆಗೆ ಕೆಲಸಗಾರರ ದುರಂತವನ್ನು ಚಿತ್ರಿಸಿರುವುದು ಈ ಸಂಶೋಧಕರ ಸಮಗ್ರ ಪ್ರಯತ್ನಕ್ಕೆ ಸಾಕ್ಷಿಯಾಗಿದೆ. ಕುಶಲ ಕಲಾಕಾರ ಸುದೀರ್ಘವಾದ ವರ್ಣನಾತ್ಮಕ ಪಟ್ಟಿಯ ಕುಮಾರಸ್ವಾಮಿಯವರ ವ್ಯಾಪಕ ಅಧ್ಯಯನಕ್ಕೆ ಇದು ಕನ್ನಡಿ ಅನ್ನಿಸಿದೆ. ಇವರ ಅಭ್ಯಾಸದ ವಿಸ್ತಾರ ಕಣ್ಣಿಗೆ ಕಟ್ಟುತ್ತದೆ.

ಶಿಲ್ಪಕಲಾ ಕುಶಲಕರ್ಮಿಗಳೆಲ್ಲರನ್ನೂ ವಿಶ್ವಕರ್ಮಿಗಳೆಂದೇ ಇಲ್ಲಿ ಪರಿಗಣಿಸಲಾಗಿದೆ. ಆದರೆ ಕೆಳವರ್ಗದ ಕಲ್ಲುಕುಟಿಗ ಶ್ರಮಿಕರೂ ಇದರಲ್ಲಿ ಸೇರುತ್ತಿದ್ದು ಅವರಿಗೆ ಸರಿಯಾದ ಸ್ಥಾನ ಇಲ್ಲಿ ಸಿಗಬೇಕಾಗಿದೆ. 'ಪಂಚಾಲ' ಪದಘಟಕವನ್ನು 'ಪಂಚಾಯಿಲ' ಪಂಚಮಸಾಲಿ ಎಂಬುದರ ಹಿನ್ನೆಲೆಯಲ್ಲೂ ವಿವೇಚಿಸಬಹುದಾಗಿತ್ತು. ಪ್ರಾಚೀನಕಾಲದಲ್ಲಿ ಕಲ್ಲಿನ ದೇವಾಲಯಗಳಿಗಿಂತ ಕಟ್ಟಿಗೆಯ ದೇವಾಲಯಗಳು ಅಧಿಕ ಸಂಖ್ಯೆಯಲ್ಲಿದ್ದವು ಎಂಬ ಕುಮಾರಸ್ವಾಮಿಯವರ ನಿರ್ಣಯವು ಸರಿಯಾದದ್ದಲ್ಲ. ಪಂಚಾಳರು ವೀರಶೈವರ ಸಂಬಂಧವನ್ನು ನಾಥಪಂಥದ ಹಿನ್ನೆಲೆಯಲ್ಲಿ ನೋಡುವ ಅಗತ್ಯವಿದೆ. ಏಕೆಂದರೆ ಸಿದ್ಧಪ್ಪಾಜಿಯ ಗುರುವಾಗಿರುವ ಮಂಟೆಸ್ವಾಮಿಯು ನಾಥಪಂಥೀಯನಾಗಿದ್ದನು.

ಕಟ್ಟಿಗೆಯ ಮೇಲೆ ಕೊರೆದ ಶಾಸನಗಳ ಉಲ್ಲೇಖ, ಹಾವಿನಹಾಳ ಕಲ್ಲಯ್ಯನ ಉಲ್ಲೇಖ ಸಿದ್ಧರಾಮನ ಶಿಲ್ಪಜ್ಞಾನದ ಪ್ರಸ್ತಾಪ, ಖಂಡ ಸ್ಫುಟಿತ ಜೀರ್ಣೋದ್ಧಾರಗಳ ವಿವರಣೆ, ಮಾಟ-ಕೂಟಗಳ ಅರ್ಥ ಸರಸತಿಗಣಮಿತ್ರ ಎಂಬುದರ ಶುದ್ಧಪಾಠ 'ಸರಸ್ವತಿಗಣ ಛಾತ್ರ' ಆಗಿರುವ ಸಾಧ್ಯತೆ, ಚಿಕ್ಕೇಶ ಕರಸ್ಥಲದನಾಗಲಿಂಗರ ಕಾಲ ಸೂಚನೆ ವಿಚಾರ ಶಾಸನಗಳಲ್ಲಿ ಸರಸ್ವತಿಗಣ ಕಡೆ ಬರುವ ಶೈವ ಮೂರುಜಾವಿದೇವನ ಉಲ್ಲೇಖ, ಅಲ್ಲಲ್ಲೇ ಇರುವ ಪಾಂಚಾಳರ ಮೂರುಜಾವಿದೇವರ ಮಠಗಳ ಸೂಚನೆ, "ಇಟ್ಟಿಗೆಗೆಂದು ಗೆಯ್ದು ಗುಳುಗಳ್ ಕೆರೆಯಾದವು.." ಎಂಬಂಥ ಶಾಸನೋಕ್ತಿ ಪದ್ಯಗಳ ಪರಿಶೀಲನೆ ಇಲ್ಲಿ ಅವಶ್ಯವಿತ್ತು. ಒಟ್ಟು ಬರವಣಿಗೆಯಲ್ಲಿ ಮೂಲ ಶಾಸನದ ಪಾಠವನ್ನಾಗಲಿ, ಅದರ ಸಾರವನ್ನಾಗಲಿ ಅವಶ್ಯವಿರುವಲ್ಲಿಯಾದರೂ ಕೊಡುವುದು ವಿಷಯದ ಸ್ಪಷ್ಟತೆಯ ದೃಷ್ಟಿಯಿಂದ ಅವಶ್ಯವಾಗಿದೆ. ಅವಶ್ಯವಿರುವ ಕಡೆ ಒಡಲಿನಲ್ಲಿ ಗ್ರಾಮದ ಹೆಸರನ್ನೂ ಅಡಿಟಿಪ್ಪಣಿಯಲ್ಲಿ ಸಂಪುಟದ ಶಾಸನ ಸಂಖ್ಯೆಯ ಜೊತೆಗೆ ತಾಲೂಕು ಮತ್ತು ಜಿಲ್ಲೆಯ ಹೆಸರನ್ನೂ ಹೇಳಬೇಕಾಗಿತ್ತು. ಇದರಿಂದ ಅಭ್ಯಾಸಿಗೆ ತುಂಬ ಅನುಕೂಲವಾಗುತ್ತದೆ.

ಇದೇನೇ ಇದ್ದರೂ ಇದು ಈವರೆಗೆ ಉಪೇಕ್ಷಿತವಾಗಿದ್ದ ವಿಷಯವನ್ನು ಆಯ್ದುಕೊಂಡು ಸಿದ್ಧಪಡಿಸಿದ ಒಂದು ಅತ್ಯುತ್ತಮ ಸಂಶೋಧನೆಯಾಗಿದೆ. ಆಕರಗಳ ಆಯ್ಕೆಯಲ್ಲಿ, ಅವುಗಳ

ಪರೀಕ್ಷೆಯಲ್ಲಿ ಮತ್ತು ವ್ಯಾಖ್ಯಾನದಲ್ಲಿ ತುಂಬ ಎಚ್ಚರವಹಿಸಿದ ಶ್ರೇಯಸ್ಸು ಇದಕ್ಕೆ ಸಲ್ಲುತ್ತದೆ. ಇಲ್ಲಿ ಶ್ರಮ ಇದೆ, ಸಂಯಮ ಇದೆ. ಶೈಕ್ಷಣಿಕ ಶಿಸ್ತು ಇದೆ ಮತ್ತು ತುಂಬ ತಡವಾಗಿಯಾದರೂ ಇದು ಇಂದು ಪ್ರಕಟಣೆಯಾಗುತ್ತಿರುವುದರಿಂದ ಇಂದಿನ ಬಹುಮುಖ್ಯ ಅಗತ್ಯವನ್ನು ಡಾ. ಕೆ.ಎಸ್. ಕುಮಾರಸ್ವಾಮಿಯವರು ತುಂಬಿಕೊಟ್ಟಂತಾಗಿದೆ.

ಡಾ. ಕೆ.ಎಸ್. ಕುಮಾರಸ್ವಾಮಿ : ಬೃಹತ್ ಕರ್ನಾಟಕದ ಶಿಲ್ಪಾಚಾರಿಯರ ಚರಿತೆ.

ಆಕರ : ಮಾರ್ಗ ಸಂಪುಟ–೮

■■

೨೦೮

ವಿಜಯನಗರ ಪರಿಸರ

ಚರಿತ್ರೆ–ಕಲೆ–ಸಂಸ್ಕೃತಿ

೨೦೧೩

"ಸಂಶೋಧನೆಯು ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ." ನನ್ನ ಈ ಮಾತು ತುಂಬ ಪ್ರಸಿದ್ಧವಾದುದು. ಹಿರಿಯ ತಲೆಮಾರಿನವರು ಆರಂಭಿಸಿದ ಶೋಧಕಾರ್ಯವನ್ನು ಹೊಸತಲೆಮಾರಿನವರು ಮುಂದುವರಿಸಬೇಕೆಂಬ ಅರ್ಥವನ್ನು ಇದು ಒಳಗೊಂಡಿದೆ. ಹೀಗೆ ಕನ್ನಡದಲ್ಲಿ ಶೋಧಕಾರ್ಯವನ್ನು ಮುಂದುವರಿಸುತ್ತಲಿರುವ ಹೊಸ ತಲೆಮಾರಿನ ಮುಖ್ಯ ಇತಿಹಾಸಕಾರರಲ್ಲಿ ಡಾ. ಶರಣಬಸಪ್ಪ ಕೋಲ್ಕಾರ ಅವರೂ ಒಬ್ಬರು. ಇದಕ್ಕೆ "ಶಿಲ್ಪಯುಗದ ಗವಿಚಿತ್ರಗಳು" ಹೆಸರಿನ ಇವರ ಪಿಎಚ್.ಡಿ. ಪ್ರಬಂಧ ನಿದರ್ಶನವೆನಿಸಿದೆ.

ನಾನು ಪ್ರಧಾನವಾಗಿ ಸಾಹಿತ್ಯದ ಪೂರಕವಾಗಿ ಇತಿಹಾಸದ ಅಭ್ಯಾಸಿ. ಈ ಕಾರಣಕ್ಕಾಗಿ ಡಾ. ಕೋಲ್ಕಾರ ಅವರು ತಮ್ಮ ಇತಿಹಾಸ ಪ್ರಬಂಧಗಳ ಸಂಕಲನವಾಗಿರುವ "ವಿಜಯನಗರ ಪರಿಸರ : ಚರಿತ್ರೆ–ಕಲೆ–ಸಂಸ್ಕೃತಿ" ಕೃತಿಗೆ ನನ್ನಿಂದ ಮುನ್ನುಡಿ ಬಯಸಿದ್ದಾರೆ. ಕ್ರಿಯಾಶೀಲ ಯುವ ವಿದ್ವಾಂಸರು ಬಗೆಗಿನ ಪ್ರೀತಿ ಕಾರಣವಾಗಿ ನಾನು ಈ ಮುನ್ನುಡಿ ಬರೆಯಲು ಒಪ್ಪಿಕೊಂಡಿದ್ದೇನೆ.

ಪ್ರಾಚೀನಕಾಲದಲ್ಲಿ ಇತಿಹಾಸಕ್ಕೆ ಅವಶ್ಯವಿರುವ ಆಕರಗಳನ್ನು ಸೃಷ್ಟಿಸುತ್ತ ಬಂದವರು, ಆಧುನಿಕ ಕಾಲದಲ್ಲಿ ಇತಿಹಾಸ ಬರೆಯುತ್ತ ಬಂದವರು ಅಕ್ಷರಲೋಕದ ವೈದಿಕ ವಿದ್ವಾಂಸರು. ಇವರು ಸಹಜವಾಗಿಯೇ ಆ ಆಕರಗಳನ್ನು ಬಳಸಿಕೊಂಡು ತಮ್ಮ ಮೂಗಿನ ನೇರಕ್ಕೆ ಅನುಗುಣವಾದ ಇತಿಹಾಸ ಬರೆದರು. ಅದೇ ನಿಜವಾದ ಇತಿಹಾಸವೆಂದು ಮಿಕ್ಕವರು ನಂಬುತ್ತ ಬಂದರು.

ಇತ್ತೀಚೆ ಇಂಗ್ಲಿಷ್‌ರ ಉದಾರ ಧೋರಣೆಯಿಂದಾಗಿ ಎಲ್ಲರೂ ಸಾಕ್ಷರರಾಗುತ್ತಿರುವಲ್ಲಿ ಮತ್ತು ಸಾಂಪ್ರದಾಯಿಕ ಆಕರಗಳೊಂದಿಗೆ ಅಸಾಂಪ್ರದಾಯಿಕ ಆಕರಗಳನ್ನು ಬಳಸಿಕೊಳ್ಳುತ್ತಿರುವಲ್ಲಿ ನಮ್ಮ ಇತಿಹಾಸ ರಚನೆ ಹೊಸದಿಕ್ಕಿನಲ್ಲಿ ಮುನ್ನಡೆಯಲಾರಂಭಿಸಿದೆ. ಇದರ ಒಂದು ಭಾಗ "ಸ್ಥಳೀಯ ಚರಿತ್ರೆ." ಪ್ರಸ್ತುತ ವಿಜಯನಗರ ಪರಿಸರ ಕೃತಿ ಇಂಥ ಸ್ಥಳೀಯ ಚರಿತ್ರೆಗೆ ಒಂದು ಮಹತ್ವಪೂರ್ಣ ಕಾಣಿಕೆಯೆನಿಸಿದೆ.

"ವಿಜಯನಗರ ಪರಿಸರ" ಎಂಬ ಶೀರ್ಷಿಕೆಯೇ ಸೂಚಿಸುವ ವಿಜಯನಗರ ಹಂಪಿ, ಆನೆಗೊಂದಿಗಳೆಂಬ ಒಳಸುತ್ತಿನ ಕನಕಗಿರಿ, ಗಂಗಾವತಿ, ಕೊಪ್ಪಳ, ಬುಕ್ಕಸಾಗರ, ಕುರುಗೋಡ, ಎಮ್ಮಿಗುಡ್ಡಗಳೆಂಬ ಹೊರಸುತ್ತಿನ ಸ್ಥಳಗಳನ್ನು ಇಲ್ಲಿ ಗಮನಿಸಲಾಗಿದೆ. ಇದರಿಂದಾಗಿ ಈ ವರೆಗೆ ಅಪ್ರಮುಖವೆಂದು ಉಪೇಕ್ಷಿಸಲಾಗಿದ್ದ ಸ್ಥಳೀಯ ಪರಿಸರವೊಂದರ ರಾಜಕೀಯ ಧಾರ್ಮಿಕ ಸಾಮಾಜಿಕ ಇತಿಹಾಸ ಮತ್ತು ವಾಸ್ತು ಶಿಲ್ಪ ಚಿತ್ರ ಇತ್ಯಾದಿ ಕಲಾಸಂಪತ್ತು ಇಲ್ಲಿ ತೆರೆದುಕೊಂಡಿದೆ. ಇಂಥ ಸ್ಥಳೀಯ ಚರಿತ್ರೆಗೆ ಅವಶ್ಯವಾಗಿರುವ ಆಕರಗಳಿಗಾಗಿ ಸಂಶೋಧಕನು ಗ್ರಂಥಾಲಯಕ್ಕೆ ಬದಲು ಕ್ಷೇತ್ರಕಾರ್ಯವನ್ನು ಅವಲಂಬಿಸಬೇಕಾಗುತ್ತದೆ. ಹೀಗಾಗಿ ಡಾ. ಕೋಲ್ಕಾರ ಅವರು ಮೇಲೆ ಸೂಚಿಸಿದ ಎಲ್ಲ ಸ್ಥಳಗಳನ್ನು ಒಬ್ಬ ಇತಿಹಾಸ ಸಂಶೋಧಕನಾಗಿ ಬೇಸರವಿಲ್ಲದೆ ಸುತ್ತಿದ್ದಾರೆ. ಇದಕ್ಕೆ ಇಲ್ಲಿಯ ವಿಜಯನಗರ ಪಟ್ಟಣದ ವಿಸ್ತಾರ, ಬಸವಪಟ್ಟಣದ ದ್ವಾರಶೋಧನೆ, ಬುಕ್ಕಸಾಗರ, ಕರಿಸಿದ್ಧೇಶ್ವರ ಮಠದ ಚರಿತ್ರೆ, ಕನಕಗಿರಿ ರಾಣಿಯರು ಕನಕಗಿರಿಯ ಲೌಕಿಕ ಶಿಲ್ಪಪಟ್ಟಿಕೆ ಇತ್ಯಾದಿ ಲೇಖನಗಳು ಸಾಕ್ಷಿಯಾಗಿವೆ. ಕಂತಲಿ ಇತಿಹಾಸ ಕನಕಗಿರಿ ಪಾಳೆಯಗಾರರನ್ನು ಕುರಿತವು ಪ್ರೌಢಪ್ರಬಂಧಗಳೇ ಆಗದೇ ಒಂದು ಸ್ವತಂತ್ರ ಪುಸ್ತಕದ ವಿನ್ಯಾಸ ಹೊಂದಿವೆ. ಕೊಪ್ಪಳ ಜಿಲ್ಲೆ ಆನೆಗೊಂದಿ ಕುರಗೋಡ ಪ್ರದೇಶಗಳ ಪ್ರಾಚೀನ ಚಿತ್ರಕಲೆ ಮತ್ತು ಕೊಪ್ಪಳ ಜಿಲ್ಲೆ ಆನೆಗೊಂದಿ ವಾಸ್ತು-ವಿಗ್ರಹಗಳನ್ನು ಕುರಿತ ಬರೆವಣಿಗೆಗಳಲ್ಲಿ ಸಂಶೋಧನೆ ಕಲೆಗಳ ಅನುಸಂಧಾನ ಎದ್ದುಕಾಣುತ್ತದೆ. ವಿಜಯನಗರದ ನ್ಯಾಯಾಂಗ ವ್ಯವಸ್ಥೆ ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ ಡಾ.ಕೋಲ್ಕಾರ ಅವರ ವಿಭಿನ್ನ ಆಸಕ್ತಿಗಳನ್ನು ಸೂಚಿಸುತ್ತವೆ. ವಿಜಯನಗರೋತ್ತರ ಕಾಲದ ಆನೆಗೊಂದಿ ವರಪತಿ ಸಂಸ್ಥಾನ ಲೇಖನವು ಬ್ರಿಟಿಶ್ ವರೆಗೆ ಬೆಳೆದು ಬಂದ ವಿಜಯನಗರ ರಾಜಮನೆತನದ ಪತನಮುಖಿ ಬದುಕನ್ನು ಬಿಡಿಸಿತೋರಿಸಿದೆ. ಇಂಥ ಸಣ್ಣ ದೊಡ್ಡ ಪ್ರಬಂಧಗಳಿಂದಾಗಿ ಈ ಕೃತಿ ತನ್ನ ಶೀರ್ಷಿಕೆಗೆ ನ್ಯಾಯ ಒದಗಿಸಿದೆಯೆಂದೇ ಹೇಳಬೇಕು.

ಭಾರತದ ಆತ್ಮ ಹಳ್ಳಿಗಳಲ್ಲಿದೆ ಎಂದು ಗಾಂಧಿಜಿ ಎಂದೋ ಹೇಳಿದ್ದಾರೆ. ಈ ಆತ್ಮಶೋಧದ ಒಂದು ಭಾಗವೆಂಬ ಇಂದಿನ ವಿದ್ವಾಂಸರು ಸ್ಥಳೀಯ ಚರಿತ್ರೆಗಾಗಿ ದುಡಿಯಬೇಕಾಗಿದೆ. ಈ ಬಗೆಯ ಕೆಲಸ ಅಲ್ಲಲ್ಲಿಯ ಕಾಲೇಜುಗಳ ಕನ್ನಡ ಇತಿಹಾಸ-ಸಮಾಜಶಾಸ್ತ್ರ ಪ್ರಾಧ್ಯಾಪಕರಿಂದ ಮಾತ್ರ ಸಾಧ್ಯ. ಹೀಗಿರುವಾಗ ನಮ್ಮ ಬಹುಪಾಲು ಕಾಲೇಜು ಪ್ರಾಧ್ಯಾಪಕರು ಈ ಹೊಣೆಯನ್ನು ಮರೆತಂಥ ಪ್ರಸಂಗದಲ್ಲಿ ಡಾ. ಕೋಲ್ಕಾರ ಅಪವಾದವೆಂಬಂತೆ ದುಡಿದು ಈ ಲೇಖನಗಳನ್ನು ಬರೆದಿದ್ದಾರೆ.

ಇಲ್ಲಿ ಹೇಳಬೇಕಾದ ಮುಖ್ಯ ಮಾತೆಂದರೆ ಬಹಳಜನ ಇತಿಹಾಸ ಪ್ರಾಧ್ಯಾಪಕರು ಪ್ರತಿಷ್ಠಿತರ ಸೃಷ್ಟಿಯಾದ ಪುರಾಣಕಥೆ, ಗ್ರಾಮೀಣರಿಂದ ಸೃಷ್ಟಿಯಾದ ದಂತಕಥೆಗಳನ್ನು ನಿಜವೆಂದು ನಂಬುತ್ತ, ನಂಬದಿದ್ದರೂ ದಾಖಲಿಸುತ್ತ ಬಂದಿದ್ದಾರೆ. ಇನ್ನುಮೇಲೆ ಸತ್ಯಕ್ಕೆ ಪೂರಕವಾದವುಗಳನ್ನು ಮಾತ್ರ ಬಳಸಿಕೊಂಡು ಮಿಕ್ಕವುಗಳನ್ನು ಇತಿಹಾಸ ಪುಟಗಳಿಂದ ಹೊರಗೆ ತಳ್ಳುವುದೇ ಲೇಸು. ಎರಡನೆಯದಾಗಿ ಭಾರತೀಯರಾದ ನಾವು ಇತಿಹಾಸ ಬರೆಯುತ್ತ ಬಂದವರಲ್ಲ. ಪುರಾಣ ಬರೆಯುತ್ತ ಬಂದವರು. ಇವರ ವಾರಸುದಾರರಾಗಿರುವ ನಮ್ಮ ಇತಿಹಾಸ ಬರೆಹಗಾರರು ಇಂದಿಗೂ ಪುರಾಣದ ವೈಭವೀಕರಣ ಶೈಲಿಯಿಂದ ಪೂರ್ಣ ಮುಕ್ತರಾಗಿಲ್ಲ. ಇನ್ನುಮೇಲಾದರೂ ನಾವು ಇತಿಹಾಸ ರಚನಾಯೋಗ್ಯ

ಶೈಲಿಯನ್ನು ರೂಢಿಸಿಕೊಳ್ಳಬೇಕಾಗಿದೆ. ಡಾ. ಕೋಲ್ಕಾರ ಅವರು ಈ ಅಂಶಗಳ ಕಡೆಗೂ ಗಮನಕ್ಕೊಡುವರೆಂದು ಆಶಿಸುತ್ತೇನೆ. ಇದಲ್ಲದೆ ದೊಡ್ಡ ಶ್ರಮ, ವ್ಯಾಪಕ ಅಭ್ಯಾಸಗಳನ್ನೊಳ್ಳಗೊಂಡ ಲೇಖನಗಳ ಈ ಸಂಪುಟ ಕಳೆದುಹೋದ ವಿಷಯವಸ್ತು ಘಟನೆಗಳ ಶೋಧವಾಗಿದೆ. ಸಂಶೋಧನೆಯಲ್ಲಿ ಇಂಥ ಕೆಲಸ ಅವಶ್ಯವಾಗಿದ್ದರೂ ಮುಂದುವರಿದು ಮಾಡಬೇಕಾದುದು ಇದರ ಹಿಂದಿನ ಕಾರಣಶೋಧ ಮುಂದಿನ ಪರಿಣಾಮಶೋಧ. ಇಂಥ ಕಾರಣ-ಪರಿಣಾಮಗಳೆಂಬ ವಿಮರ್ಶಾ ರೂಪದ ಶೋಧಗಳನ್ನೂ ಮೈಗೂಡಿಸಿಕೊಂಡು ಡಾ. ಕೋಲ್ಕಾರ ಅವರು ಬೆಳೆಯಲೆಂದು ಹಾರೈಸುತ್ತೇನೆ.

ಶರಣಬಸವಪ್ಪ ಕೋಲ್ಕಾರ : ವಿಜಯನಗರ ಪರಿಸರ : ಚರಿತ್ರೆ-ಕಲೆ-ಸಂಸ್ಕೃತಿ.

ಆಕರ : ಮಾರ್ಗ ಸಂಪುಟ-೮

209

WOMEN SAINTS OF KARNATAK IN SEARCH OF TRUTH

2013

ಡಾ. ಉಜ್ವಲಾ ಹಿರೇಮಠ ಅವರ ವಯಸ್ಸು ಈಗ ಎಪ್ಪತ್ತೆರಡು. ಇಂಗ್ಲೀಷ್ ಮಾಧ್ಯಮದಲ್ಲಿ ಓದಿ, ಇಂಗ್ಲೀಷ್ ಭಾಷೆಯನ್ನು ಬೋಧಿಸಿ, ಒಂದಿಷ್ಟು ಇಂಗ್ಲೀಷ್ ಜೀವನ ಶೈಲಿಯನ್ನು ಬದುಕಿದ ಇವರು. ಇತ್ತೀಚಿಗೆ ಶರಣ ಸಂಸ್ಕೃತಿಯ ದಾಹ ಬೆಳೆಸಿಕೊಂಡಿದ್ದಾರೆ. ಈ ದಾಹಕ್ಕೆ ಕಾರಣ ಇವರು ಆರಂಭಿಸಿದ ವಚನ ಸಾಹಿತ್ಯದ ಓದು. ಇದು ಓದಿದಷ್ಟೂ ಓದಬೇಕೆನಿಸುವ ಸಾಹಿತ್ಯ. ಇದರ ಪರಿಣಾಮವೆಂಬಂತೆ ಕನ್ನಡಿಗಳಾಗಿ ಅದರಲ್ಲಿಯೂ ಲಿಂಗಾಯತಳಾಗಿ ಈವರೆಗೆ ಈ ಸಾಹಿತ್ಯ ಓದಲಿಲ್ಲವೆಂಬ ಪಶ್ಚಾತ್ತಾಪ ಅವರಲ್ಲಿ ವರ್ಧಿಸಿದ ಫಲ ಈ ಕೃತಿ.

ಡಾ. ಉಜ್ವಲಾ ಅವರ ತವರುಮನೆ ಬೆಳಗಾವಿ. ತಂದೆ ಷಣ್ಮುಖಪ್ಪ ಅಂಗಡಿ ಪ್ರಸಿದ್ಧ ವಕೀಲರು. ತಾಯಿ ಪದ್ಮಾವತಿ ಅಂಗಡಿ ಸುಪ್ರಸಿದ್ಧ ಸಮಾಜ ಕಾರ್ಯಕರ್ತೆ. ವಚನಸಾಹಿತ್ಯದ ದೊಡ್ಡ ಅಭ್ಯಾಸಿ, ಹೀಗಿದ್ದೂ ಈ ಸಾಹಿತ್ಯದಿಂದ ವಂಚಿತಳಾಗಿದ್ದ ನೋವು ಅವರನ್ನು ಕಾಡತೊಡಗಿತು. ನಮ್ಮ ನಮ್ಮ ರೀತಿಯಲ್ಲಿ ನಮ್ಮ ಸಮಾಜದ ಋಣ ತೀರಿಸಬೇಕೆಂಬ ಪ್ರಜ್ಞೆ ಎಚ್ಚರವಾಯಿತು. ಹೀಗಾಗಿ ಪ್ರಸಿದ್ಧ ಇಂಗ್ಲೀಷ್ ಪ್ರಾಧ್ಯಾಪಕರಾಗಿರುವ ಇವರು ಈ ಭಾಷೆಯನ್ನೇ ಮಾಧ್ಯಮಮಾಡಿಕೊಂಡು ಋಣ ತೀರಿಸಲು ಸಿದ್ಧರಾದರು.

ವಚನ ಸಾಹಿತ್ಯವನ್ನು ಕನ್ನಡ ಭಾಷೆಯಿಂದ ಮುಕ್ತಗೊಳಿಸುವುದು ಮೊದಲಿಗಿಂತ ಇಂದು ತೀರ ಅವಶ್ಯವೆನಿಸಿದೆ. ಈ ಅವಶ್ಯಕತೆಯನ್ನು ಕನ್ನಡೇತರ ಭಾಷಾವಿದ್ವಾಂಸರು ಮಾತ್ರ ಪೂರೈಸಬಲ್ಲರು. "Women saints of karnatak in search of Truth" ಕೃತಿಯ ಮೂಲಕ ಅದನ್ನು ಪೂರೈಸಲು ಪ್ರಯತ್ನಿಸಿದ ಡಾ. ಉಜ್ವಲಾ ಅವರಿಗೆ ಕನ್ನಡಿಗರ ಲಿಂಗವಂತರ ಅನಂತ ಅಭಿನಂದನೆಗಳು ಸಲ್ಲುತ್ತವೆ.

೧೨ನೆಯ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಸಂಸ್ಕೃತಿ ಪಲ್ಲಟ ಸಂದರ್ಭ. ಈ ಪಲ್ಲಟಕ್ಕೆ ಕಾರಣ ಬಸವಣ್ಣನವರ ನೇತೃತ್ವದಲ್ಲಿ ಕನ್ನಡಿಗರು ಕೈಗೆತ್ತಿಕೊಂಡ ಶರಣ ಚಳುವಳಿ. ಇದರ ಫಲವಾಗಿ ಉತ್ತರಭಾರತದ ವಲಸೆ ಧರ್ಮಗಳ ಸಾಂಸ್ಕೃತಿಕ ದಬ್ಬಾಳಿಕೆ ಪ್ರತಿಯಾಗಿ ಕನ್ನಡಿಗರಿಂದ

ಲಿಂಗಾಯತವೆಂಬ ಸ್ಥಳೀಯ ಧರ್ಮ ಅಸ್ತಿತ್ವಕ್ಕೆ ಬಂದಿತು. ಈ ಹೊಸ ಧರ್ಮ ಸ್ಥಾಪನೆಯಲ್ಲಿ ಪುರುಷರೊಂದಿಗೆ ಸ್ತ್ರೀಯರೂ ಮೈಮುರಿದು ದುಡಿದುದು ಒಂದು ಜಾಗತಿಕ ದಾಖಲೆ. ಈ ಸ್ತ್ರೀ ಸಮುದಾಯದ ಚರಿತ್ರೆ, ಸಿದ್ಧಾಂತ, ಸಾಹಿತ್ಯಗಳ ಅಧ್ಯಯನವಾಗಿದೆ, ಈ ಪುಸ್ತಕ.

ಇಂಥ ಕೃತಿ ರಚನೆ ಸುಲಭದ ಕೆಲಸವಲ್ಲ. ಏಕೆಂದರೆ ನಮ್ಮ ಪ್ರಾಚೀನರಿಗೆ ಬದುಕುವುದು ಮುಖ್ಯವಾಗಿದ್ದಿತೇ ಹೊರತು ಬರೆಯುವುದಲ್ಲ. ಈ ಮನೋಧರ್ಮದ ಅವರು ಶರಣರ ಆದರ್ಶವನ್ನು ಬದುಕಿದರೇ ಹೊರತು ಅವರ ಬರವಣಿಗೆಯನ್ನು ಸರಿಯಾಗಿ ರಕ್ಷಿಸಿಕೊಂಡು ಬರಲಿಲ್ಲ. ತರುವಾಯ ಬಂದ ಕವಿಗಳು ಶರಣರನ್ನು ಕುರಿತು ಬರೆದುದು ಪುರಾಣವನ್ನೇ ಹೊರತು ಚರಿತ್ರೆಯನ್ನಲ್ಲ. ಇಂಥ ಕೊರತೆಗಳ ಸಂದರ್ಭದಲ್ಲಿ ವಚನಗಳ ಶುದ್ಧ ಪಾಠವನ್ನು ಅಲ್ಲಿಯ ಶುದ್ಧ ತತ್ವವನ್ನು ಗುರುತಿಸುವುದು, ವಚನಕಾರರ ಶುದ್ಧ ಚರಿತ್ರೆ ಬರೆಯುವುದು ತುಂಬ ಕಷ್ಟದ ಕೆಲಸ. ಇದೆಲ್ಲ ಗೊತ್ತಿದ್ದೂ ಡಾ. ಉಜ್ವಲಾ ಅವರು ತಮ್ಮ ಜೀವಮಾನದ ಒಂದು ಮಹತ್ವದ ಸೇವೆಯೆಂಬ ಭಾವದಿಂದ ಕೃತಿ ರಚನೆಗೆ ಕೈಹಾಕಿದ್ದಾರೆ.

ಶರಣ ಚಳುವಳಿಯ ಉಗಮದ ಅಗತ್ಯ, ಸಾಧನೆ, ಸಿದ್ಧಿಗಳನ್ನು ವಿವರಿಸುವ ಆರಂಭದ 'ಪ್ರಸ್ತಾವನೆ' ಈ ಪುಸ್ತಕ ಪ್ರವೇಶಕ್ಕೆ ತೆರೆದ ಬಾಗಿಲೆನಿಸಿದೆ. ಇಲ್ಲಿ ಏನೇ ಹೇಳಲಿ ಅಲ್ಲೆಲ್ಲ ಮತ್ತೆ ಮತ್ತೆ ಬಸವಣ್ಣನನ್ನು ಪ್ರಸ್ತಾಪಿಸುತ್ತಿರುವುದು, ಅವರು ಶರಣರ ಗ್ರಹಮಂಡಲದ ಸೂರ್ಯನೆಂದು ಡಾ. ಉಜ್ವಲಾ ಸರಿಯಾಗಿಯೇ ಮನವರಿಕೆ ಮಾಡಿಕೊಂಡುದಕ್ಕೆ ನಿದರ್ಶನವೆನಿಸಿದೆ. ಹೀಗಾಗಿ ಅವರ ಸಿದ್ಧಾಂತದ ಸಮಗ್ರ ಚರ್ಚೆಗೆ ಇಲ್ಲಿ ಅವಕಾಶ ಪ್ರಾಪ್ತವಾಗಿದೆ.

ಭಾರತೀಯರದು ವ್ಯಕ್ತಿಕಲ್ಯಾಣದ 'ಸೋಹಂ' ಸಿದ್ಧಾಂತ.. ಶರಣರದು ಇದನ್ನೂ ಒಳಗೊಂಡ ಸಮಾಜ ಕಲ್ಯಾಣದ 'ದಾಸೋಹಂ' ಸಿದ್ಧಾಂತ. ಈ ಸಿದ್ಧಾಂತದ ಎಲ್ಲ ಆಯಾಮಗಳ ಸಮಾಲೋಚನೆಯಿಂದಾಗಿ ಈ ಪ್ರಕರಣ ತುಂಬ ಉಪಯುಕ್ತವೆನಿಸಿದೆ. ಇಲ್ಲಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳೆಂಬ ವ್ಯಕ್ತಿಕಲ್ಯಾಣ ತತ್ವಗಳನ್ನು ವರ್ಗಭೇದ, ವರ್ಣಭೇದ, ಲಿಂಗಭೇದ ನಿರಸನವೆಂಬ ಸಮಾಜ ಕಲ್ಯಾಣ ತತ್ವಗಳನ್ನು ಜೊತೆಗೆ ಕಾಯಕ, ದಾಸೋಹಗಳನ್ನು ಕುರಿತ ವಿವರಣೆ ಸರಿಯಾಗಿಯೇ ಮೂಡಿಬಂದಿದೆ.

ಶರಣರ ಈ ಎಲ್ಲ ಸಿದ್ಧಾಂತ ಅಭಿವ್ಯಕ್ತಗೊಂಡುದು ವಚನ ಮಾಧ್ಯಮದಲ್ಲಿ. ಹೀಗಾಗಿ ವಚನ ಸಾಹಿತ್ಯದ ಹಾಸು ಬೀಸುಗಳನ್ನು ಇಲ್ಲಿ ಪರಿಣಾಮಕಾರಿಯಾಗಿ ಚರ್ಚಿಸಲಾಗಿದೆ. ಇದು ಮಹಿಳಾ ಶರಣರ ಕೃತಿಯಾಗಿರುವುದರಿಂದ ಸಿದ್ಧಾಂತಕ್ಕೆ ಸಾಹಿತ್ಯಕ್ಕೆ ಅವರ ಕೊಡುಗೆಯೇನೆಂಬುದನ್ನು ಇಲ್ಲಿ ವಿಸ್ತಾರವಾಗಿಯೇ ನಿರೂಪಿಸಲಾಗಿದೆ.

ನೇರವಾದ ಅಧ್ಯಯನ ಆರಂಭವಾಗುವುದು ಮುಂದಿನ ಪ್ರಕಟಗಳಲ್ಲಿ. ಅಕ್ಕಮಹಾದೇವಿಯಿಂದ ಆರಂಭಗೊಂಡು, ಸೂಳೆ ಸಂಕವ್ವೆವರೆಗೆ ೩೩ ಜನ ಶರಣೆಯರ ವಿವರವಾದ ಅಧ್ಯಯನವಿಲ್ಲಿದೆ. ಚರಿತ್ರೆಯ ವಿವರಣೆ, ಸಿದ್ಧಾಂತದ ಪ್ರತಿಪಾದನೆ, ಸಾಹಿತ್ಯದ ವಿಮರ್ಶೆ ಈ ಮೂರು ಆಯಾಮಗಳು ಇಲ್ಲಿಯ ಅಧ್ಯಯನ ಪ್ರತಿಯೊಬ್ಬ ಶರಣೆಯರ ಮಿತಿ ವ್ಯಾಪ್ತಿಗಳನ್ನು ಸ್ಪಷ್ಟಪಡಿಸುತ್ತದೆ. ಇಲ್ಲೆಲ್ಲ ಡಾ. ಉಜ್ವಲಾ ಅವರ ಗಾಢ ವ್ಯಾಸಂಗ, ಧ್ಯಾನಸ್ಥ ಬರವಣಿಗೆ, ಸೋಲದ ಶ್ರಮಗಳನ್ನು ನಾವು

ಗುರುತಿಸಬಹುದಾಗಿದೆ. ಶರಣರ ಚರಿತ್ರೆ ಬರೆಯುವವರಿಗೆ ಸಿಗುವ ವಚನ, ಪುರಾಣ, ಶಾಸನ ವದಂತಿಗಳೆಂಬ ಆಕರಗಳ ಮೊತ್ತ ದೊಡ್ಡದು. ಅಲ್ಲಿ ಎದುರಾಗುವ ಸಮಸ್ಯೆಗಳ ಮೊತ್ತ ಇನ್ನೂ ದೊಡ್ಡದು. ಇಂಥ ದುರ್ಗಮ ದಾರಿಯಲ್ಲಿ ಇವರು ಅನುಸರಿಸಿದುದು ಈಗಾಗಲೇ ಎಲ್ಲರಿಗೂ ಮಾನ್ಯವಾಗಿರುವ ಚರಿತ್ರೆಯನ್ನು ವಿದೇಶಿ ಭಾಷಿಕರಿಗೆ ಯಾವುದು ಬೇಕು, ಯಾವುದು ಬೇಡವೆಂಬ ವಿವೇಕವನ್ನು ಇಲ್ಲಿ ಮೆರೆದಿದ್ದಾರೆ. ಸಿದ್ಧಾಂತ, ಜೀವನ ಸಿದ್ಧಾಂತ ನಿರೂಪಣೆಯಲ್ಲಿ ಮಾತ್ರ ಯಾವ ಆಕರವೂ ಹೊರಗುಳಿಯದಂತೆ ನೋಡಿಕೊಂಡಿದ್ದಾರೆ. ಹೀಗಾಗಿ ಅಕ್ಕಮಹಾದೇವಿ, ಮುಕ್ತಾಯಿ, ಮೋಳಿಗೆಯ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮಳ ವಿಷಯದಲ್ಲಿ ಬಳಸಿಕೊಂಡ ಶೂನ್ಯಸಂಪಾದನೆಯ ಸಂವಾದ ಇತ್ಯಾದಿಗಳಿಂದಾಗಿ ಈ ಪ್ರಕರಣಗಳು ಬಹುಮುಖಿಯಾಗಿ ಬಿಚ್ಚಿಕೊಂಡಿವೆ. ಮಿಕ್ಕವರಲ್ಲಿ ನಾಗಲಾಂಬಿಕೆ, ನೀಲಾಂಬಿಕೆ, ಗಂಗಾಂಬಿಕೆಯರ ವಿಷಯ ಸಹಜವಾಗಿಯೇ ಏಕಮುಖಿಯಾಗಿದೆ. ಒಂದೇ ಒಂದು ವಚನ ಬರೆದವರ ವಿಷಯ ಇನ್ನೂ ಸಹಜವೆಂಬಂತೆ ಸ್ವಲ್ಪದರಲ್ಲಿಯೇ ಮುಗಿದಿದೆ. ಅದೇನೆ ಇದ್ದರು ವಚನಗಳ ಆಯ್ಕೆ ಅವುಗಳ ಆತ್ಮಮುಖಿ, ಸಮಾಜಮುಖಿ, ಜನಮುಖಿ ಸ್ತರಗಳ ವಿವೇಚನೆಯಿಂದಾಗಿ ಈ ಪ್ರಕರಣಗಳು ಶರಣರ ಪ್ರಾಪಂಚಿಕ ಪಾರಮಾರ್ಥಿಕ ನಿಲುವನ್ನು ತೆರೆದು ತೋರಿಸುತ್ತವೆ.

ಲಿಂಗಾಯತದ ಮಹತ್ವಪೂರ್ಣ ಪಾರಿಭಾಷಿಕ ಪದಗಳಿಗೆ ಅರ್ಥವನ್ನು, ಮುಖ್ಯ ಶರಣರ ಚರಿತ್ರೆಯನ್ನೂ ಈ ಕೃತಿಗೆ ಅನುಬಂಧಗಳಾಗಿ ಜೋಡಿಸಿದುದು ಓದುಗರಿಗೆ ತುಂಬ ನೆರವು ನೀಡುತ್ತದೆ. ಹೀಗೆ ಶ್ರಮ ಶ್ರದ್ಧೆಗಳಿಂದ ರೂಪಿಸಿದ ಈ ಕೃತಿ ರಚನೆಗಾಗಿ ಡಾ. ಉಜ್ವಲಾ ಹಿರೇಮಠ ಅವರನ್ನು ಅಭಿನಂದಿಸುತ್ತ ಇದು ದೊಡ್ಡ ಪ್ರಮಾಣದಲ್ಲಿ ಪ್ರಚಾರ ಪಡೆಯಲೆಂದು ಹಾರೈಸುತ್ತೇನೆ.

Dr. Ujjavala Hiremath : Women saints of karnatak in search of Truth.

ಆಕರ : ಮಾರ್ಗ ಸಂಪುಟ–೮

■■

೨೧೦

ಹಾಲುಮತ ಸಾಂಸ್ಕೃತಿಕ ಪದಕೋಶ

೨೦೧೪

ಕನ್ನಡದಲ್ಲಿ ಇತ್ತೀಚೆ ಬರೆವಣಿಗೆ ಬಹುಮುಖಿಯಾಗಿ ಬೆಳೆಯುತ್ತಲಿದೆ. ಬೇರೆ ಬೇರೆ ವಿಷಯಗಳಂತೆ ಬೇರೆ ಬೇರೆ ವೃತ್ತಿಮೂಲದ ಬರೆಹಗಾರರೂ ಇದಕ್ಕೆ ಕಾರಣರಾಗಿದ್ದಾರೆ. ಇವರಲ್ಲಿ ಆಡಳಿತ ವೃತ್ತಿಯವರ ಕೊಡುಗೆ ಮೊದಲಿನಿಂದಲೂ ಗಣ್ಯವಾಗಿದ್ದು, ಈ ಹಾದಿಯಲ್ಲಿ ಹೆಜ್ಜೆಯಿಡುತ್ತಲಿರುವ ಡಾ. ಹಾಲಪ್ಪ ಲಿಂಗದಹಳ್ಳಿ ಅವರು ಸೃಜನೇತರ ಸಾಹಿತ್ಯಕ್ಕೆ ಅದರಲ್ಲಿಯೇ ಹಾಲುಮತ ಸಂಸ್ಕೃತಿ ಶೋಧಕ್ಕೆ ನೀಡುತ್ತಲಿರುವ ಕಾಣಿಕೆ ಗಮನಸೆಳೆಯುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಸಂಶೋಧನ ಯೋಜನೆಗಳನ್ನು ಒಂದು ದಂಧೆಯನ್ನಾಗಿಸಿಕೊಂಡ ಅಧ್ಯಾಪಕರ ಸಂಖ್ಯೆ ಬೆಳೆದಿರುವ ಇಂದಿನ ಸಂದರ್ಭದಲ್ಲಿ ಇಂಥವರು ಇನ್ನೂ ವಿದ್ಯುತ್ ಗಮನ ಸೆಳೆಯುತ್ತಾರೆ.

ಡಾ. ಹಾಲಪ್ಪ ಅವರು ವೃತ್ತಿಯಿಂದ ವಿದ್ಯುತ್ ಇಲಾಖೆಯ ಎಂಜಿನಿಯರ್. ಹೀಗೆ ಭೌತಿಕ ಕ್ಷೇತ್ರದ ಆಡಳಿತಗಾರರಾಗಿಯೂ ಇವರು ಸಾಂಸ್ಕೃತಿಕ ಕ್ಷೇತ್ರದತ್ತ ಒಲವು ಬೆಳಸಿಕೊಂಡಿದ್ದಾರೆ. ಹೀಗಾಗಿ ಅಧ್ಯಯನ, ಗ್ರಂಥ ಪ್ರಕಟನ, ಕ್ಷೇತ್ರಕಾರ್ಯ ಇತ್ಯಾದಿಗಳಲ್ಲಿ ಕ್ರಿಯಾಶೀಲರಾಗಿರುವ ಇವರು ಪ್ರಸ್ತುತ ಹಾಲುಮತ ಸಾಂಸ್ಕೃತಿಕ ಕೋಶ ರಚಿಸಿದುದು ಸಹಜವೆನಿಸಿದೆ.

ಮುನ್ನುಡಿ ಬರೆಯುವ ವಿಷಯದಲ್ಲಿ ನಾನು ತುಂಬ ನಿರಾಸಕ್ತ. ಹೀಗಿದ್ದೂ ಈ ಪುಸ್ತಕಕ್ಕೆ ನಾಲ್ಕು ಮಾತು ಬರೆಯುವುದು ನನಗೆ ಒದಗಿ ಬಂದ ಒಂದು ಸದಾವಕಾಶವೆಂದೇ ಭಾವಿಸುತ್ತೇನೆ. ಏಕೆಂದರೆ ಕನ್ನಡದಲ್ಲಿ ಈ ಬಗೆಯ ಕೋಶಗಳು ಸೃಷ್ಟಿಯಾಗದಿದ್ದ ಸಂದರ್ಭದಲ್ಲಿ ಒಬ್ಬಿಬ್ಬರು ಅಧ್ಯಾಪಕರಿಂದ ಇಂಥ ಕೋಶಗಳನ್ನು ಬರೆಯಿಸಿ ಪ್ರಕಟಿಸುವ ಮೂಲಕ ಈ ಅಧ್ಯಯನಕ್ಕೆ ನಾಂದಿ ಹಾಡಿದ್ದೆನು. ಡಾ. ಬಸವರಾಜ ಬಿರಾದಾರ ಅವರ "ಕುರುಬರ ಗುರು ಒಡೆಯರು" ಗ್ರಂಥವನ್ನು ಬಿಡುಗಡೆ ಮಾಡುತ್ತ "ಹಾಲುಮತಕ್ಕೆ ಸಂಬಂಧಿಸಿದ ಒಂದು ಸಮಗ್ರ ಸಂಸ್ಕೃತಿ ಕೋಶ" ರಚಿಸುವುದು ಅಗತ್ಯವಿದೆ ಎಂದು ಸೂಚಿಸಿದ್ದೆನು. ಈ ಮಾತನ್ನು ಕೇಳಿಸಿಕೊಂಡ ಡಾ. ಹಾಲಪ್ಪ ಅವರು ಮರುಕ್ಷಣವೇ ಕಾರ್ಯಪ್ರವೃತ್ತರಾಗಿ, ಉತ್ಸಾಹದಿಂದ ಸಂಯೋಜಿಸಿದ ಕೃತಿಯಾಗಿದೆ, ಹಾಲುಮತ ಸಾಂಸ್ಕೃತಿಕ ಪದಕೋಶ.

ಇಂದು ಉಪೇಕ್ಷಿತ ದೇಶಿ ಸಂಸ್ಕೃತಿಗಳ ಅಧ್ಯಯನಕ್ಕೆ ಹೆಚ್ಚು ಮಹತ್ವ ಬಂದಿದೆ. ಈ ದೃಷ್ಟಿಯಿಂದ ಕರ್ನಾಟಕದಲ್ಲಿ ಗಮನ ಕೊಡಬೇಕಾದ ಉಪೇಕ್ಷಿತ ದೊಡ್ಡ ಸಮಾಜವೆಂದರೆ ಕುರುಬರು. ಆ ಕಡೆ ಬೇಟೆ ಸಂಸ್ಕೃತಿ, ಈ ಕಡೆ ಕೃಷಿ ಸಂಸ್ಕೃತಿಗಳ ನಡುವಿನ ಪಶುಪಾಲನ ಹಂತದ ಸಮಾಜವಿದು. ಈ ಸಮಾಜದವರು ಗೋವು ಸಾಕಿ ಗೋವಳಿಗರೆಂದು, ಕುರಿ ಸಾಕಿ ಕುರುಬರೆಂದು ಎರಡು ಕವಲುಗಳಾಗಿ ಬೆಳೆದರು. ಕರ್ನಾಟಕದಲ್ಲಿ ಗೌಳಿಗರಿಗಿಂತ ಕುರುಬರ ಸಮುದಾಯ ದೊಡ್ಡದು. ಸಾಂಸ್ಕೃತಿಕವಾಗಿ ಸಮೃದ್ಧವೂ ಆಗಿದೆ. ಹೀಗಾಗಿ ಕಳೆದ ೧೦ ವರ್ಷಗಳ ಅವಧಿಯಲ್ಲಿ ಈ ಸಮಾಜದ ಬಹುಮುಖಿ ಅಧ್ಯಯನಕ್ಕೆ ಒತ್ತುಕೊಟ್ಟು, ವಿದ್ವಾಂಸರು ಅದರ ಬಾಗಿಲುಗಳನ್ನು ಒಂದೊಂದಾಗಿ ತೆರೆಯುತ್ತಲಿದ್ದಾರೆ. ಇವುಗಳ ಸಾಲಿನಲ್ಲಿ ಖಂಡಿತ ಪರಿಗಣಿತವಾಗುತ್ತದೆ ಈ ಕೃತಿ.

ಭಾರತದಲ್ಲಿ ಸುಮಾರು ಆರು ಸಾವಿರ ಜಾತಿಗಳಿವೆಯೆಂದು ತಿಳಿದುಬಂದಿದೆ. ಇದು ವೈವಿಧ್ಯ ದೃಷ್ಟಿಯಿಂದ ವರವೂ ಹೌದು. ವೈಷಮ್ಯ ದೃಷ್ಟಿಯಿಂದ ಶಾಪವೂ ಹೌದು. ಅದೇನೇ ಇದ್ದರೂ ಈ ಜಾತಿಗಳನ್ನು ತತ್ವಕೇಂದ್ರಿತ (ಜೈನ, ವೈದಿಕ ಇತ್ಯಾದಿ)ವೃತ್ತಿಕೇಂದ್ರಿತ (ಕುರುಬ, ಅಂಬಿಗ ಇತ್ಯಾದಿ)ವೆಂದು ವಿಂಗಡಿಸಬಹುದು. ಇವು ತಮತಮಗೆ ವಿಶಿಷ್ಟ ಪಾರಿಭಾಷಿಕ ಪದಗಳನ್ನು ಸೃಷ್ಟಿಸಿಕೊಂಡಿರಬಹುದಾದ ಪಾರಿಭಾಷಿಕ ಪದಗಳಿದ್ದರೆ, ವೃತ್ತಿಕೇಂದ್ರಿತ ಜಾತಿಗಳಲ್ಲಿ ಸಮುದಾಯ ಸೃಷ್ಟಿಸಿದ ಸಹಜವೆನ್ನಬಹುದಾದ ಪಾರಿಭಾಷಿಕ ಪದಗಳಿರುತ್ತವೆ. ಕುರುಬರದು ವೃತ್ತಿಕೇಂದ್ರಿತ ಜಾತಿಯಾಗಿರುವುದರಿಂದ ಇಲ್ಲಿ ಇವರ ಆಶಯ ಆಚರಣೆಗಳನ್ನು ಪ್ರತಿನಿಧಿಸುವ ಸಹಜ ಪಾರಿಭಾಷಿಕ ಪದಗಳೆ ಬಹುಸಂಖ್ಯೆಯಲ್ಲಿವೆ.

ಈ ಸಹಜ ಪಾರಿಭಾಷಿಕ ಪದಗಳನ್ನು ಸಮಾಜನಿಷ್ಠ (ಉಣ್ಣೆ ಕಂಕಣದವರು, ಹತ್ತಿ ಕಂಕಣದವರು), ವೃತ್ತಿನಿಷ್ಠ(ತಮ್ಮಡಿಗಳು, ಒಡೆಯರು)ಆಚರಣೆ ನಿಷ್ಠ (ಇಡಿಆಯಿ, ಕಡಬಿನ ಕಾಳಗ)ಇತ್ಯಾದಿಯಾಗಿ ವರ್ಗೀಕರಿಸಬಹುದು. ಹೀಗಿದ್ದೂ ಒಂದು ನಿರ್ದಿಷ್ಟ ಸಮಾಜಕ್ಕೆ ಸಂಬಂಧಿಸಿರುವುದರಿಂದ ಇವು ಸಾಮಾಜಿಕ ಭಾಷಾ ಶಾಸ್ತ್ರೀಯ ವಲಯಕ್ಕೆ ಸೇರುತ್ತವೆ. ಮತ್ತು ಇವುಗಳ ಅಭ್ಯಾಸವೆಂದರೆ ಆಯಾ ಸಮಾಜಗಳ ಸಮಗ್ರ ಅಭ್ಯಾಸವೇ ಆಗುತ್ತದೆ. ಈ ವಿವರಣೆಯ ಹಿನ್ನೆಲೆಯಲ್ಲಿ ಪ್ರಸ್ತುತ ಕೋಶವನ್ನು ಸ್ಥೂಲವಾಗಿ ಕುರುಬ ಸಮಾಜದ ಪಾರಿಭಾಷಿಕ ಪದಕೋಶವೆಂದೂ ಕರೆಯಬಹುದಾಗಿದೆ.

ಹೀಗೆ ಸಮುದಾಯನಿಷ್ಠವಾಗಿರುವ ಇಂಥ ಪದಗಳಿಗೆ ವಾಚಾರ್ಥ್ಯವನ್ನು ಮೀರಿದ ಚಹರೆ ಅಥವಾ ಲಕ್ಷಣವಿರುತ್ತದೆ. ಉದಾ: ಗುಗ್ಗರಿಹಬ್ಬ ಇದು ನಿರ್ದಿಷ್ಟ ಹಬ್ಬದಂದು ವಿಶಿಷ್ಟ ಧಾನ್ಯಗಳನ್ನು ಕುದಿಸಿ ಮಾಡಿದ ಗುಗ್ಗರಿಯನ್ನು ಕುದುರೆಪ್ಪನಿಗೆ, ಗೊರವರ ದೋಣಿಗೆ ನೀಡುವ, ಬಳಿಕ ಎಲ್ಲರಿಗೂ ಹಂಚುವ ಹಬ್ಬವಾಗಿದೆ. ಇಷ್ಟೆಲ್ಲ ವಿವರ ಗೊತ್ತಿದ್ದವರಿಗೆ ಮಾತ್ರ ಈ ಶಬ್ದದ ಅರ್ಥ ಸ್ಪಷ್ಟವಾಗುತ್ತದೆ. ಇದು ಇಂಥ ಸಾವಿರಾರು ಶಬ್ದ-ಅರ್ಥಗಳ ಕೋಶವಾಗಿದೆ.

ಇನ್ನೊಂದು ವೈಶಿಷ್ಟ್ಯವೆಂದರೆ ಈ ಪದಗಳು ಪ್ರದೇಶ ವಿಶಿಷ್ಟವಾಗಿರುತ್ತವೆ ಮತ್ತು ಅಲ್ಲಲ್ಲಿಯ ಆಡು ಭಾಷೆಯ ಸೃಷ್ಟಿಯಾಗಿರುತ್ತವೆ. ಇದರಿಂದಾಗಿ ನಾಲಗೆಯಲ್ಲಿ ಸವೆದ ತಪ್ಪು ಅರ್ಥ ಆರೋಪಿತ ಪದಗಳು ಕಾಣಸಿಗುತ್ತವೆ. ಏಳು ಬೆಟ್ಟಗಳ ಒಡೆಯ ಅರ್ಥದಲ್ಲಿ "ಏಳು ಕೂಟಯ್ಯ ಉಘೇ" ಎನ್ನುವ ಬದಲು "ಏಳು ಕೋಟಿ ಉಘೇ" ಎನ್ನುತ್ತಾರೆ. ಮತ್ತು ಇದಕ್ಕೆ ಏಳುಕೋಟಿ ಜನ ಸಮುದಾಯವೆಂಬ ಅರ್ಥ ಹೇಳುತ್ತಾರೆ. ಇಂಥ ಎಲ್ಲ ಗೊಂದಲಗಳನ್ನು ಪರಿಹರಿಸಿಕೊಳ್ಳುವಲ್ಲಿ ಭಾಷಾಜ್ಞಾನ, ಇತಿಹಾಸ ಖಗೋಳ ಪರಿಜ್ಞಾನ, ಆಚರಣೆಗಳ ಪರಿಚಯ ಇತ್ಯಾದಿ ಅಗತ್ಯವೆನಿಸುತ್ತದೆ.

ಹೀಗೆ ಅಭ್ಯಾಸದ ಅನೇಕ ಆಯಾಮಗಳನ್ನು ಬಯಸುವ ಪದಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಇದು ಕೇವಲ ಗ್ರಂಥಗಳ ಅಭ್ಯಾಸವನ್ನಲ್ಲ; ಕ್ಷೇತ್ರಕಾರ್ಯದ ಶ್ರಮವನ್ನು ಅಪೇಕ್ಷಿಸುತ್ತದೆ. ಈ ತಿಳಿವಳಿಕೆಯ ಬೆಳಕಿನಲ್ಲಿ ಡಾ. ಹಾಲಪ್ಪ ಅವರು ಅನೇಕ ಪ್ರಾಚೀನ ಆಧುನಿಕ ಗ್ರಂಥಗಳನ್ನು ಅಭ್ಯಸಿಸಿ ವಿಪುಲ ಕ್ಷೇತ್ರಕಾರ್ಯ ಪೂರೈಸಿ ಆಡುಮಾತನ್ನು ಕೇಳಿ ಆಚರಣೆಯನ್ನು ನೋಡಿ ಶಬ್ದಗಳನ್ನು ಸಂಗ್ರಹಿಸಿದ್ದಾರೆ; ಅರ್ಥವಿವರಣೆ ನೀಡಿದ್ದಾರೆ.

ಇದು ಒಂದು ವ್ಯಾಪಕ ಪ್ರಯತ್ನ. ಹೀಗಾಗಿ ಅರ್ಥ ಬರೆಯುವಲ್ಲಿ, ವ್ಯಾಖ್ಯಾನಿಸುವಲ್ಲಿ ಕೆಲವೊಮ್ಮೆ ಕೊರತೆಗಳು ಉಳಿದುಕೊಂಡಿರಬಹುದು. ಅನ್ಯ ಸಮಾಜದ ಶಬ್ದಗಳೂ ಇಲ್ಲಿ ಸೇರಿರಬಹುದು. ಇಂಥ ಕೊರತೆಗಳ ನಡುವೆಯೂ ಈ ಕೃತಿಗೆ ಒಂದು ಅನನ್ಯತೆಯಿದೆ. ಆದುದರಿಂದ ಇಂಥ ಶಬ್ದಕೋಶ ಸಿದ್ಧಮಾಡುವವರಿಗೆ ಇದು ಮಾದರಿಯೆನಿಸಿದೆ. ಡಾ. ಹಾಲಪ್ಪ ಅವರ ಶ್ರಮ ಶ್ರದ್ಧೆಗಳಿಗೆ ಮೆಚ್ಚುಗೆ ಸೂಚಿಸುತ್ತ, ಅವರಿಂದ ಇಂಥ ಅನೇಕ ಕೃತಿಗಳನ್ನು ಅಪೇಕ್ಷಿಸುತ್ತೇನೆ.

ಡಾ. ಹಾಲಪ್ಪ : ಹಾಲುಮತ ಸಾಂಸ್ಕೃತಿಕ ಪದಕೋಶ, ೨೦೧೪

ಆಕರ : ಮಾರ್ಗ ಸಂಪುಟ–೮

■■

೨೧೧

ಡಾ. ಫ.ಗು. ಹಳಕಟ್ಟಿ ಪತ್ರಿಕಾ ಸಾಹಿತ್ಯ

೨೦೧೪

"ಕೆಲಸ ಮಾಡುವವನ ಮನಸ್ಸು ಸ್ವಚ್ಛವಿರುತ್ತದೆ"–ಇದು ಡಾ. ಫ.ಗು. ಹಳಕಟ್ಟಿಯವರ ಮಾತು. ಈ ಮಾತನ್ನು ಆದರ್ಶವಾಗಿಟ್ಟುಕೊಂಡಿರುವ ನಾನು ಕ್ರಿಯಾಶೀಲ ವಿದ್ಯಾರ್ಥಿಗಳನ್ನು ಪ್ರೀತಿಸುತ್ತ ಬಂದಿದ್ದೇನೆ. ಇಂಥ ಪ್ರೀತಿ ಕಾರಣವಾಗಿ ಡಾ. ಪಿ.ಕೆ. ರಾಠೋಡ ಅವರ ಈ ಪಿಎಚ್.ಡಿ. ಪ್ರಬಂಧಕ್ಕೆ ಮುನ್ನುಡಿ ಬರೆಯುತ್ತಲಿದ್ದೇನೆ.

ಗಾಂಧಿಯುಗ, ಭಾರತದ ಇತಿಹಾಸದಲ್ಲಿ ಪುನರುಜ್ಜೀವನಕಾಲ. ಅಂದು ಈ ಪುನರುಜ್ಜೀವನ ಕಾರ್ಯದಲ್ಲಿ ಕಾನೂನು ಪದವೀಧರರು ವಹಿಸಿದ ಪಾತ್ರ ಗಣ್ಯವಾಗಿದ್ದು, ಭಾರತ ಸ್ವಾತಂತ್ರ್ಯ ಚಳುವಳಿಯೊಂದಿಗೆ ಇತರ ಕ್ಷೇತ್ರಗಳಿಗೂ ಇವರು ಸಲ್ಲಿಸಿದ ಸೇವೆ ಗಮನಾರ್ಹವಾದುದು. ಈ ದೃಷ್ಟಿಯಿಂದ ಹೇಳುವುದಾದರೆ ಕಾನೂನು ಪದವೀಧರರಾಗಿದ್ದ ಪಿ.ವಿ. ಕಾಣೆಯವರು ಧರ್ಮಶಾಸ್ತ್ರವನ್ನು ಕುರಿತು, ಬಾಲಗಂಗಾಧರ ತಿಲಕ ಅವರು ಭಗವದ್ಗೀತೆಯನ್ನು ಕುರಿತು ಪೂರೈಸಿದ ಬರವಣಿಗೆಯಂತೆ, ಕಾನೂನು ಪದವೀಧರರಾಗಿದ್ದ ಡಾ। ಫ.ಗು ಹಳಕಟ್ಟಿಯವರು ಲಿಂಗಾಯತ ಸಾಹಿತ್ಯ–ಸಮಾಜಗಳಿಗೆ ಸಲ್ಲಿಸಿದ ಸೇವೆ ಚರಿತ್ರಾರ್ಹವಾದುದು.

ಲಿಂಗಾಯತವು ಕೇವಲ ವ್ಯಕ್ತಿಕಲ್ಯಾಣ ಸಿದ್ಧಾಂತವಲ್ಲ, ಹೆಚ್ಚಿನದಾಗಿ ಸಮಾಜ ಕಲ್ಯಾಣಸಿದ್ಧಾಂತವೂ ಆಗಿದೆ. ಈ ಸಿದ್ಧಾಂತದ ಸಾಕಾರವಾಗಿದ್ದ ಡಾ. ಹಳಕಟ್ಟಿಯವರು ಸಹಜವಾಗಿಯೇ ಸಮಾಜಮುಖಿಯಾಗಿ ಬೆಳೆದರು. ಅವರ ಈ ಸಮಾಜಮುಖಿ ಜೀವನ ಬಹುಮುಖಿಯಾದುದು. ಹೀಗಾಗಿ ಅವರು ವಚನಸಾಹಿತ್ಯ, ಚರಿತ್ರೆ, ಶಿಕ್ಷಣ, ಉದ್ಯೋಗ, ಪತ್ರಿಕೆ ಇತ್ಯಾದಿ ಕ್ಷೇತ್ರಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಬೆಳೆದರು. ಆದರೆ ಈವರೆಗೆ ಅವರ ಸಾಹಿತ್ಯಕ್ಕೆ, ಅದರಲ್ಲಿಯೂ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಅಭ್ಯಾಸ ಜರುಗಿ, ಇತರ ಕ್ಷೇತ್ರಗಳ ಅಭ್ಯಾಸ ಉಪೇಕ್ಷೆಗೆ ಗುರಿಯಾಗಿದೆ. ಹೀಗೆ ಉಪೇಕ್ಷಿತವಾಗಿದ್ದ ಹಳಕಟ್ಟಿಯವರ 'ಪತ್ರಿಕಾಸಾಹಿತ್ಯ'ವನ್ನು ಕುರಿತ ಈ ಅಧ್ಯಯನ, ಅವರ ಸಾಧನೆಯ ಇನ್ನೊಂದು ಮುಖವನ್ನು ಬೆಳಕಿಗೆ ತಂದ ಪ್ರಯತ್ನವಾಗಿದೆ.

ಕನ್ನಡ ಪತ್ರಿಕಾಸಾಹಿತ್ಯಕ್ಕೆ ನೂರೈವತ್ತು ವರ್ಷಗಳ ಇತಿಹಾಸವಿದೆ. ಈ ಸುದೀರ್ಘ ಅವಧಿಯಲ್ಲಿ ದುಡಿದವರು ನೂರಾರು ಜನರಿದ್ದರೂ ಗಣ್ಯವೆನಿಸಿದವರು ಹತ್ತಾರು ಜನ ಮಾತ್ರ. ಇವರಲ್ಲಿ ಹಳಕಟ್ಟಿಯವರೂ ಒಬ್ಬರು. 'ಶಿವಾನುಭವ' ಪತ್ರಿಕೆಯನ್ನು ೩೫ ವರ್ಷ, 'ನವಕರ್ನಾಟಕ'ಪತ್ರಿಕೆಯನ್ನು ೨೫ ವರ್ಷ ಮುನ್ನಡೆಸಿದುದು, ಅದರಲ್ಲಿಯೂ ವಿಜಾಪುರದಂಥ ಮರಾಠಿ-ಉರ್ದು ಪ್ರಭಾವಿತ ಪ್ರದೇಶದಲ್ಲಿ ಮುನ್ನಡೆಸಿದುದು ಸಣ್ಣ ಸಾಧನೆಯಲ್ಲ. ಹೀಗಿದ್ದೂ ಪತ್ರಿಕಾಸಾಹಿತ್ಯವನ್ನು ಓದಿಸುವ ಅಧ್ಯಾಪಕರು, ಓದುವ ವಿದ್ಯಾರ್ಥಿಗಳು ಡಾ. ಹಳಕಟ್ಟಿಯವರ ಹೆಸರನ್ನು ತಪ್ಪಿಯೂ ಹೇಳುವುದಿಲ್ಲ. ಇಂಥ ಜಾಣ ಮರೆವು ಆವರಿಸಿದ ಸಂದರ್ಭದಲ್ಲಿ ಡಾ. ರಾಠೋಡ ಅವರು ಈ ಪ್ರಬಂಧದ ಮೂಲಕ ಡಾ. ಹಳಕಟ್ಟಿ ಅವರಿಗೆ ನ್ಯಾಯ ಒದಗಿಸಿದ್ದಾರೆ.

ಡಾ. ಹಳಕಟ್ಟಿಯವರು ವ್ಯಷ್ಟಿಯಲ್ಲಿ ಲಿಂಗಾಯತರು, ಸಮಷ್ಟಿಯಲ್ಲಿ ಕನ್ನಡಿಗರು. ಒಂದು ಕಡೆ 'ಶಿವಾನುಭವ'ಪತ್ರಿಕೆ, ಇನ್ನೊಂದು ಕಡೆ 'ನವಕರ್ನಾಟಕ' ಪತ್ರಿಕೆ ಬೆಳೆಸಿದುದೇ ಇದಕ್ಕೆ ನಿದರ್ಶನ. ವ್ಯಕ್ತಿಗತ ಶಿವಪ್ರಜ್ಞೆಯ ಸಾಮಾಜೀಕರಣವೇ ಶಿವಾನುಭವವಾಗಿದ್ದು, ಇದರ ಪ್ರಸಾರ 'ಶಿವಾನುಭವ'ಪತ್ರಿಕೆಯ ಧ್ಯೇಯವಾಗಿದ್ದಿತು. ಹೆಸರೇ ಸೂಚಿಸುವಂತೆ ನಮ್ಮ ನಾಡು ನವೀಕರಣಗೊಳ್ಳಬೇಕೆಂಬುದು 'ನವಕರ್ನಾಟಕ' ಪತ್ರಿಕೆಯ ಆಶಯವಾಗಿದ್ದಿತು. ಇಂಥ ನಿಲವು ಕಾರಣವಾಗಿ ಡಾ. ಹಳಕಟ್ಟಿಯವರು ಈ ಎರಡೂ ಪತ್ರಿಕೆಗಳನ್ನು ಹುಟ್ಟುಹಾಕಿ, ಕಷ್ಟದಲ್ಲಿಯೇ ಅವುಗಳನ್ನು ಬದುಕಿಸಿದರು, ಬೆಳಸಿದರು.

ಈ ಎರಡೂ ಪತ್ರಿಕೆಗಳ ಅಧ್ಯಯನವಾಗಿದೆ, ಈ ಪಿಎಚ್.ಡಿ. ಪ್ರಬಂಧ. ಇಲ್ಲಿ ಅಭ್ಯಾಸಿಯಾದವನು ಎರಡು ನೆಲೆಗಳಲ್ಲಿ ಶ್ರಮಿಸಬೇಕಾಗುತ್ತದೆ. ಒಂದು: ಈ ಪತ್ರಿಕೆಗಳ ಎಲ್ಲ ಸಂಚಿಕೆಗಳನ್ನು ಹುಡುಕುವುದು. ಇದು ಹೇಳಿದಷ್ಟು ಸುಲಭವಲ್ಲ. ಕಷ್ಟಪಟ್ಟರೆ 'ಶಿವಾನುಭವ'(ಮಾಸಿಕ, ದ್ವೈಮಾಸಿಕ, ತ್ರೈಮಾಸಿಕ)ಪತ್ರಿಕೆಯ ಸಂಚಿಕೆಗಳು ಸಿಗಬಹುದು. 'ನವಕರ್ನಾಟಕ'ದ(ವಾರಪತ್ರಿಕೆ) ಸಂಚಿಕೆಗಳು ಲಭಿಸುವುದು ತೀರ ಕಷ್ಟ. ಹೀಗಿದ್ದೂ ಡಾ. ರಾಠೋಡ ಅವರು ಶಿವಾನುಭವದ ಎಲ್ಲ ೩೧೯ ಸಂಚಿಕೆ, ನವಕರ್ನಾಟಕದ ಬಹಳಷ್ಟು ಸಂಚಿಕೆಗಳನ್ನು ಸಂಗ್ರಹಿಸಿದುದು ಸಾಹಸವೇ ಸರಿ. ಎರಡು: ಶಿವಾನುಭವ ಪತ್ರಿಕೆಯ ಸುಮಾರು ೨೦ ಸಾವಿರ ಪುಟಗಳನ್ನು, ಅದರಲ್ಲಿಯ ನೂರಾರು ವಿಷಯಗಳನ್ನು ಬೇಸರವಿಲ್ಲದೆ ಓದುವುದು, ವಿಷಯವನ್ನು ಸರಿಯಾಗಿ ವರ್ಗೀಕರಿಸುವುದು, ಇನ್ನೂ ಸರಿಯಾಗಿ ಬರೆವಣಿಗೆ ಮಾಡುವುದು-ಈ ಎಲ್ಲ ಪ್ರಯತ್ನಗಳ ಫಲವಾಗಿದೆ, ಸಫಲವಾಗಿದೆ ಈ ಪ್ರಬಂಧ. ಇದೇ ದಾರಿಯಲ್ಲಿ ಮುನ್ನಡೆದರೂ ಸಂಚಿಕೆಗಳ ಅಲಭ್ಯತೆಯಿಂದಾಗಿ 'ನವಕರ್ನಾಟಕ' ಪತ್ರಿಕೆಯ ಅಭ್ಯಾಸ ಇಲ್ಲಿ ಅನಿವಾರ್ಯವಾಗಿ 'ಅನುಬಂಧ'ದಂತೆ ಆಕಾರಪಡೆದಿದೆ.

ಡಾ. ಹಳಕಟ್ಟಿ ಎಂದಾಕ್ಷಣ ವಚನಸಾಹಿತ್ಯದ ಜೊತೆ ಶಿವಾನುಭವ ಪತ್ರಿಕೆ ನೆನಪಾಗುತ್ತದೆ. ಈ ಪತ್ರಿಕೆಗಿಂತ ಮೊದಲು ಮತ್ತು ತರುವಾಯ ನೂರಾರು ಲಿಂಗಾಯತ ಪತ್ರಿಕೆಗಳು ಹುಟ್ಟಿದ್ದರೂ, ಅದು ಈಗಲೂ ತನ್ನ ಪ್ರಥಮಸ್ಥಾನ ಉಳಿಸಿಕೊಂಡಿದೆ. ಡಾ. ರಾಠೋಡ ಅವರು ಮಾಡಿರುವ ಈ ಪತ್ರಿಕೆಯ ಸಾವಿರಾರು ಪುಟಗಳ ಅಧ್ಯಯನ ಸಣ್ಣ ಸಾಹಸವೇನಲ್ಲ. ಅಲ್ಲಿ ಅಡಕವಾಗಿರುವ ಅಪಾರ ವಿಷಯ ಸಾಮಗ್ರಿಯನ್ನು ಪ್ರಾಚೀನ ವಚನಸಾಹಿತ್ಯ :

ಶೋಧ–ಸಂಪಾದನೆ, ಪ್ರಾಚೀನ ವಚನೇತರಸಾಹಿತ್ಯ: ಶೋಧ–ಸಂಪಾದನೆ, ಹಳಕಟ್ಟಿಯವರ ಆಧುನಿಕ ಸಾಹಿತ್ಯಕೃತಿಗಳು, ಹಳಕಟ್ಟಿಯವರ ಲೇಖನಸಾಹಿತ್ಯವೆಂದು ಬಿಚ್ಚಿ ನೋಡಿದುದು ಹಳಕಟ್ಟಿಯವರ ಅಭ್ಯಾಸವೇ ಆಗಿದೆ. ಹಳಕಟ್ಟಿಯವರು ಪೂರೈಸಿದ ಪ್ರಾಚೀನ ಶರಣಸಾಹಿತ್ಯ–ಕವಿಸಾಹಿತ್ಯ ದಾಖಲುಸಾಹಿತ್ಯಗಳ ಸಂಪಾದನೆ, ಶಿವಶರಣರಚರಿತ್ರೆಯ ಸಂಪುಟ ಮತ್ತು ವಚನಶಾಸ್ತ್ರಸಾರ ಸಂಕಲನ, ಇವುಗಳ ಅಭ್ಯಾಸವನ್ನು ಇಲ್ಲಿ ಸರಿಯಾಗಿಯೇ ಪೂರೈಸಲಾಗಿದೆ. ಇಷ್ಟು ಸಾಲದೆಂಬಂತೆ 'ಲೇಖನಸಾಹಿತ್ಯ' ವಿಭಾಗದಲ್ಲಿ ಸಾಮಾಜಿಕ, ಧಾರ್ಮಿಕಗಳಂಥ ಗಂಭೀರ ವಿಚಾರಗಳಿಗೂ, ಮುನ್ನುಡಿ, ಪತ್ರಸಾಹಿತ್ಯ, ಭಾಷಣ, ಶ್ರದ್ಧಾಂಜಲಿ, ಜಾಹಿರಾತುಗಳಂಥ ಸಣ್ಣಸಣ್ಣ ವಿಷಯಗಳಿಗೂ ಡಾ. ಹಳಕಟ್ಟಿಯವರು ತೋರಿದ ಆಸಕ್ತಿಗಳನ್ನು ಡಾ. ರಾಠೋಡ ಗುರುತಿಸಿದ್ದಾರೆ. ಈ ಲೇಖನಗಳಲ್ಲಿ ಅವರು ಸಮಕಾಲೀನ ಸಮಾಜವನ್ನು ಎಚ್ಚರಿಸಿದ, ಅದಕ್ಕೆ ಮಾರ್ಗದರ್ಶನ ತೋರಿದ ವಿವರಗಳನ್ನೂ ಎತ್ತಿ ತೋರಿಸಿದ್ದಾರೆ. ಈ ಪತ್ರಿಕೆಯ ಇನ್ನೊಂದು ದೊಡ್ಡ ಸಾಧನೆಯೆಂದರೆ ಸಮಕಾಲೀನ ನೂರಾರು ಲೇಖಕರಿಗೆ ವೇದಿಕೆಯಾದುದು. ಇವರ ಮತ್ತು ಹಳಕಟ್ಟಿಯವರ ಸಾಮೂಹಿಕ ಬರೆವಣಿಗೆಯಿಂದಾಗಿ ಲಿಂಗಾಯತ ಸಂಸ್ಕೃತಿಯ ಮೇಲೆ ಕವಿದಿದ್ದ ಕತ್ತಲೆ ಕ್ರಮವಾಗಿ ದೂರಸರಿದುದನ್ನು ಈ ಪ್ರಬಂಧ ಸ್ಪಷ್ಟಪಡಿಸಿದೆ.

'ನವಕರ್ನಾಟಕ' ಸ್ಥಳೀಯದಿಂದ ಪ್ರಾಂತೀಯ, ರಾಷ್ಟ್ರೀಯ, ಅಂತಾರಾಷ್ಟ್ರೀಯ ವರೆಗಿನ ಸುದ್ದಿಗಳಿಗೆ ವೇದಿಕೆಯಾಗಿ ಬೆಳೆದಿದೆ. ಸುದ್ದಿಗಳೊಂದಿಗೆ ರಚನಾತ್ಮಕ ಸಲಹೆ–ಮಾರ್ಗದರ್ಶನ ನೀಡುವ ಮೂಲಕ ಇದು ಜನಜೀವನವನ್ನು ಉದಾತ್ತೀಕರಿಸುವ ಮಾಧ್ಯಮವಾಗಿ ದುಡಿದಿದೆ. ಈ ಪತ್ರಿಕೆಯ ಎಲ್ಲ ಸಂಚಿಕೆಗಳ ವಿಷಯಗಳನ್ನು ಕ್ರಮವಾಗಿ ವಿವರಿಸುತ್ತ, ಅದು ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಇತ್ಯಾದಿ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳನ್ನು ಈ ಪ್ರಬಂಧ ಗಮನಿಸಿದೆ. ಶುಷ್ಕವೆನಿಸಬಹುದಾದ ಸುದ್ದಿಗಳನ್ನು ಓದಿ, ವಿಷಯ ಪ್ರತಿಪಾದಿಸಿದ ಡಾ. ರಾಠೋಡ ಅವರ ಸಹನೆ ಮೆಚ್ಚಲೇಬೇಕು. ಜನತೆ ಈ ಪತ್ರಿಕೆಯನ್ನು ಮರೆತ ಸಂದರ್ಭದಲ್ಲಿ ನಡೆಸಿದ ಪ್ರಸ್ತುತ ಅಧ್ಯಯನ ಶ್ಲಾಘನೀಯವೆಂದೇ ಹೇಳಬೇಕು.

ಒಟ್ಟಾರೆ, ಈ ಪ್ರಬಂಧ ಸಾಮಗ್ರಿಮುಖಿಯಾಗುತ್ತಲೇ ವಿಮರ್ಶಾತ್ಮಕವೂ ಆಗಿದೆ. ಈಗ ನಮ್ಮ ಮುಂದಿರುವ ಸವಾಲು, ಹಳಕಟ್ಟಿಯವರನ್ನು ಉಳಿಸುವುದು. ಅಂದರೆ ಹಳಕಟ್ಟಿಯವರ ಬಹುಮುಖಿ ಸಾಧನೆಗಳನ್ನು, ಕೊನೆಯ ಪಕ್ಷ ಈ ಸಾಧನೆಗಳ ಭಾಗವಾಗಿರುವ ಈ ಪತ್ರಿಕೆಯ ಸಂಚಿಕೆಗಳನ್ನು ಉಳಿಸಿಕೊಳ್ಳುವುದು. ಹೀಗೆ ಉಳಿಸಿಕೊಳ್ಳುವುದಕ್ಕೆ ಈ ಕೃತಿ ಪ್ರೇರಣೆ ನೀಡಲೆಂದು ಹಾರೈಸುತ್ತೇನೆ.

ಡಾ. ಪಂಡಿತ. ಕೆ. ರಾಠೋಡ : ಫ. ಗು. ಹಳಕಟ್ಟಿ ಪತ್ರಿಕಾ ಸಾಹಿತ್ಯ.

ಆಕರ : ಮಾರ್ಗ ಸಂಪುಟ–೮

■■

212

THE ESSENTIAL OF CHANNABASAVANNA

2014

The 12th Century Kannada Vachana literature enjoys a rare distinction of being both literature and scripture. As a literature, it ranks high among world literatures, and as a scripture, it is comparable to such world famous sacred texts as the Vedas, the Bible and the Quran. The Vedas, the Bible and the Quran have been rendered into English and other world languages. Though time and again attempts are being made to render Vachana literature into English and other Indian languages, since the Vachana literature is as vast as ocean, it has not been possible to render entire Vachana literature into English at one stretch. Whatever attempts have been made so far in this direction, it has been possible to touch only its fringe, leaving a major portion of it still untouched. Dr. C.R. Yaravinatelimath has been in this field since long. He has already translated into English some of Basavanna's and almost all of Shivasharaneyas' vachanas, and his Vachanas of Women Saints has bagged the Karnataka State Sahitthya Akademy Award, 2006. "The Essential Chennabasavanna" is another bold venture of Dr. Yaravinatelimath's in the field of Vachana translation.

It gives me great pleasure to write a foreword to "The Essential Chennabasavanna" If there is any authority on matters pertaining to Veerashaiva (Lingayata) religion and philosophy, it is undoubtedly Chennabasavanna, who is hailed as the emperor of the Shat Shtala doctrine. The Shat Sthala doctrine,

which forms the heart and soul of Lingayata Philosophy, was interpreted ably by Chennabasavanna. Shat Sthala is supposed to be the path way to God, realization. After a close scrutiny, one feels the necessity of a restatement of the much discussed Shat Sthala doctrine. This can be done in the light of the total darshana (vision) of Sharanas.

Over the past several years scholars have attempted to interpret the Shat Sthala doctrine. But unfortunately their attempts have made it not only complicated but have left it an incomplete concept. As all know, Lingayata religion unlike other religions, is not an individualistic - "I am He"- religion, but a socialistic - "I am a servant" (of society) - religion. This being the true nature of Lingayata religion, one is compelled to ask whether the meaning which scholars in the past and present have attributed to the term Shat Sthala comprises both individualistic and socialistic aspects.

At the beginning itself, such baffling questions raise their hydra head. Up to a certain point, what the Scholars have interpreted is logical and understandable. That is, the concept of Six Anga-Sthalas - Bhakta, Mahesh, Prasadi, Pranalingi, Sharana and Aikya, and Six Linga Sthalas-Acharalinga, Gurulinga, Shivalinga, Jangamalinga, Prasadalinga and Mahalinga - is very logical and intelligible. But the notion of 36 Anga Sthalas- conceiving each of these six sthalas as containing Bhakta, Mahesha, Prasadi, Pranalingi, Sharana and Aikya Sthalas - creates confusion. Further, the notion of 101 Sthalas makes the Shat Sthala concept more confounding. Moreover, the notion of 101 Sthalas, Mallanarya's 101 Sthalas are different from Mahalingadeva's. And the 101 Sthalas of Shivayogi Shivacharya are different from those enumerated by both Mallanayra and Mahalingdeva. As if this is not enough to make a mess of the Sthalas notion, 216 Sthalas are mentioned in some work. All this sounds most artificial. Also the Vachana anthologies in the subsequent years coming after 12th century have failed to clarify the doubt raised regarding the Shat Sthalas. One more development that has added to the difficulty of the Shat Sthala doctrine is the arbitrary ways in which the Acharyas have interpreted it so as to make what is virtually socialistic sound individualistic.

Keeping all these issues in mind, the Shat Sthala doctrine can be subjected to reinterpretation. Hence here is an honest and humble attempt to interpret it as a socialistic mysticism.

According to the prevalent notion of the Shat sthala, this dynamic cosmos is the Mahalinga which holds in its womball conceivable things under the sun and beyond. As the waves are hid in the unruffled state of the ocean, so the entire creation, animate and inanimate, is inherent in Mahalinga. Linga atoms are being constantly created by Mahaiinga. At the time of Linga atoms merging in Mahalinga, some of them to whom impurity clings assume human form which is nothing but impure Anga. This Anga is of three types - gross, subtle and causal. These impure Angas undergo the process of purification while passing through the six stages- Bhakta, Mahesha, Prasadi, Pranalingi, Sharana, Aikya, and becoming Linga ultimately merge in Mahalinga. This is, in brief, the gist of the Shat Stala doctrine as understood by traditional scholars. Thus a Sharana, who attains consubstantial Union with Mahalinga is able to transform his six organs- eyes, ears, nose, tongue, skin and mind- into six Lingas, i.e., Acharalinga. Gurulinga, Shivalinga, Jangamalinga, Prasada Linga Mahalinga, and through these transformed organs enjoy whatever is worth enjoying in this world made of the five elements. Anga becoming Linga and Linga further merging inseparably in Mahalinga seems to have been the ultimate goal of the Shat Sthala path. This age long interpretation makes the Shat Sthala doctrine look somewhat narrow- minded, since it is individualistic in its nature and scope, seeking as its does an individual's self-redemption. But this doctrine needs to enlarge its scope so as to become socialistic by seeking the salvation of the entire community.

Although outwarldly there are six Sthalas, virtually there are only three Sthalas. Bhakta and Mahesha together make one and they represent Guru tathava, Prasadi and Pranalingi represent Linga tatthva, and Sharana and Aikya represent Jangama tathva. Thus the evolution of Shat Sthala can be applied to the triple principle of Guru, Linga and Jangama.

"Prabhulinga" Leele says that these three principles are embedded in an individual, which means that one should become Guru, Linga and Jangama.

Becoming Guru means Bhakta's gross body should achieve awareness by developing within oneself Ishtalinga consciousness at the Bhakta and Maheshwara Sthalas. Becoming Linga means Bhakta's subtle body's achieving Pranalinga consciousness at the Prasadi and Pranalingi Sthalas. Here the awareness accrued previously should merge in conduct inseparably. Because Anga turns towards Linga at this stage, the consubstantial Union of Anga and Linga takes place at the Pranalingi Sthala itself, that is, one's personality gets divinized at this stage only.

At the Sharana and Aikya Sthalas a Bhakta's causal body develops Bhavalinga consciousness. By transforming the consubstantial Union of awareness and conduct realized in the previous stages into mystic experience one can become a perfect human being, and one's personality can blossom fully and attain fulfilment. At this stage, Linga merges into Mahalinga. This is what our traditional scholars have attempted to interpret. If we accept this conventional interpretation, an individual ends his spiritual pursuit with self-realization and the whole business amounts to personal salvation never ever bothering about one's community's redemption. But if a person, instead of seeking consubstantial union with Mahalinga, proceeds to achieve consubstantial union with his community, his existence becomes more fruitful and meaningful. This is a desirable twist intended to give to the Shat Sthala doctrine which otherwise would wither at the individual level only. By doing this, we can save Lingayata religion from stagnating at the individual level. By doing this, Lingayata religion, instead of seeking realization of God dwelling within an individual, will enable the individual to seek God in his own community. By doing this, we can widen the scope of Lingayata religion so as to make it embrace the entire community as an embodiment of God. Divinizing one's community is more desirable than stopping at the stage of divinizing one's own self and one's own Anga. By becoming God, one's personality becomes, at best, only half personality, and hence half perfect. But further by merging one's self in, and identifying oneself with, one's community, one's personality gets enlarged and becomes fully perfect and that way it assumes universally acceptable meaning. At this stage, one is made to shed class and colour

consciousness and to stop gender discrimination, and more importantly, to engage in such socializing activities as Kayaka and Dasoha.

In fine, as discussed above, one who is a Guru at the Bhakta and Mahesha Sthalas, attains consubstantial Union of Anga and Linga (Linganga Samarasya) at the Prasadi and Pranalingi Sthalas, and at the Sharana and Aikya Sthalas, he achieves consubstantial Union of his own self with his community. Thus the circle becomes complete. And the saying - "Awareness itself is Guru, Achara (conduct) Linga and Anubhava (socio mystic experience) Jangama", becomes meaningful. Although the word Jangama has several connotations, a community with the awareness of Linga is its prime meaning. Such a statement of Basavanna as "I alone am a Bhakta and all others in this world are Jangamas" endorses our view point explained above. In all, a person who is divinized at the Prasadi and Pranalingi Sthalas becomes a Jangama, that is, gets himself socialized, at the Sharana and Aikya Sthalas.

In continuation of the above explanation I would like to add one more point. An ego-centric person, that is 'I am he', passing through Bhakta, Mahesha, Prasadi and Pranalingi Sthalas becomes a Jangama, who is a community conscious person, that is, I am a servant of community' at the Sharana and Aikya Sthalas. In other words, an egocentric person becomes a socio- centric Sharana. Here the community to which an individual belongs becomes divinity. Shri Shankaracharya of the 8th century stopped at the Soham - 'I am He'- stage. But the 12th century Basavanna went far ahead of Shankaracharya to complete the incomplete concept of 'I am He' (Soham) by saying, "Make me say 'I am a servant' (Dasoham) instead of 'I am He' (Soham). There by Basavanna indicated that Dasoha doctrine is a complete doctrine.

Another point worth noting at this juncture is that a person cannot become a Jangama (a socialist) without first becoming a Linga (an individualist). In fact, he should become both, that is, an individualist mystic and a socialist mystic at once. Then only he becomes a complete individual. If Basavanna prays to Koodala Sangamadeva, "Make me a Linga-addict and a Jangama-lover", it is precisely for this reason. There is one more saying – "One is to

be born in Guru, exist in Linga and dossolve in Jangama." Dossilving In Jangama means merging in (becoming one with) one's community, that is, attaining consubstantial union with society. A person who become's Linga's Bhakta at the Prasadi and Pranalingi Sthalas, before becoming a Sharana. At the Sharana and Aikya Sthalas, that is, before surrendering himself to Mahalinga, should surrender himself to society. According to Lingayata religion, Sharana means one who has surrendered himself to the society which is divinity incarnate.

It is far more easy to become an ego-centric Bhakta than a socio-centric Jangama. Therefore Chennabasavanna syas, "A Bhakta is one among lakhs where as a Sharana is one among crores." The worshipping of Linga by the egocentric Bhakta is like the morning sunshine which is warm and pleasant but Jangama Dasoha, that is, rendering service to the society for the welfare of all people in it is like the scorching heat of the mid-day sun, almost unbearable, says Basavanna. By saying, "All those who sought realization of Linga became a dead weight to the earth, O Koodala Channasanapamadeva, your Basavanna alone sought salvation througha Jangama, i.e., through society, Chennabasavanna suggested that Basavanna become a model of a Bhakta who sought consubstantial Union of Linga and Jangama through Kayaka-Dasoha.

Many have translated Basavanna's Vachanas into Englsih, more or less. But not a single person has come forward to translaste terse Chennabasavanna's Vachanas even in a small measure. Dr. C.R. Yaravintelimath seems to be the first to translate more than a thousand Vachanas of this great jnani, if not all. Clarity is the hall mark of his translation. As a close friend of mine, I have known him ever since our college days. He is simple, sincere and hard-working. These translations of Chennabasavanna bear the marks of fidelity, simplicity and clarity. They are faithful to the originals without being literal. I am sure this book will play a big role in introducing one of the major Vachana writers to non-Kannadigas not only in India but also abroad.

Of what use are the writings of an author, if they are not made to see the light of the day? Basava Samithi, Bangalore, which, under the able leadership of Shri Aravind Jatti spares no efforts to publish whatever pertaining to Vachana literature is worth .publishing, deserves all applause.

I hope "The Essential Chennabasavanna" will bring credit to both its author and its publisher, besides enriching the treasure of Indian writing in English translation.

Dr. C.R. Yaravintelimath : The Esssential Chennabasavanna, Basava Samiti, Bangalore-2014

ಆಕರ : ಮಾರ್ಗ ಸಂಪುಟ-೮

■■

೨೧೩

ಎಮ್ಮವರು ಸಾವನರಿಯರು

ಲಿಂಗಾಯತ ಸಮಾಜದ ಮಠವ್ಯವಸ್ಥೆಯಲ್ಲಿ ಎರಡು ಮಾದರಿಗಳಿವೆ: ವಿರಕ್ತಮಠಗಳು, ಪಟ್ಟದ್ದೇವರ ಮಠಗಳು. ಇವುಗಳಲ್ಲಿ ವಿರಕ್ತಮಠಗಳು ಬಸವಪರ, ಪಟ್ಟದ್ದೇವರ ಮಠಗಳು ಬಸವವಿರೋಧಿಯೆಂಬ ಅಭಿಪ್ರಾಯ ಸಮಾಜದಲ್ಲಿ ಬೆಳೆದುಬಂದಿದೆ. ಇತಿಹಾಸದ ಪುಟಗಳನ್ನು ಬಿಡಿಸಿ ನೋಡಿದರೆ ಇವೆರಡೂ ಮೂಲತಃ ಬಸವನಿಷ್ಠೆ ಮಠಗಳೇ ಆಗಿದ್ದು, ಬರಬರುತ್ತ ಅಭಿಪ್ರಾಯಭೇದ ಬೆಳೆಸಿಕೊಂಡಿವೆಯೆಂದು ಸ್ಪಷ್ಟವಾಗುತ್ತದೆ.

ಬಾಳೇಹಳ್ಳಿಪೀಠ ಪರಂಪರೆಯಲ್ಲಿ ಪ್ರಸಿದ್ಧನಾದವ ಜಗದ್ಗುರು ಕುಮಾರ ಚೆನ್ನಬಸವ (೧೬ನೆಯ ಶತಮಾನ)ಈತನು "ಬಸವಪುರಾಣದ ಪುರಾತನರ ಚರಿತ್ರೆ" ಹೆಸರಿನ ಕೃತಿ ಬರೆದುದಲ್ಲದೆ, ತಾನು "ಶಶಿಧರಾರ್ಚಕ ಜನಕೆ ಬಸವನಂದದೆ" ಇರುವುದಾಗಿ ಅಲ್ಲಿ ಹೇಳಿಕೊಂಡಿದ್ದಾನೆ. ಇದು ಇವನ ಬಸವಭಕ್ತಿಗೆ ನಿದರ್ಶನವೆನಿಸಿದೆ. ಇದೇ ಕೃತಿಯಲ್ಲಿ ಬಸವಾದಿ ಶರಣರನ್ನು ಸ್ಮರಿಸಿರುವನೇ ಹೊರತು ತಪ್ಪಿಯೂ ರೇಣುಕಾಚಾರ್ಯನ ಪ್ರಸ್ತಾಪ ಮಾಡಿಲ್ಲ. ಇದರಿಂದ ಮೂಲತಃ ಬಸವನ ಭಕ್ತರಾಗಿದ್ದ ಬಾಳೆಹಳ್ಳಿ ಮಠದವರು ಮುಂದೆ ಯಾವುದೊ ಕಾಲದಲ್ಲಿ ಕಲ್ಪಿತ ರೇಣುಕಾಚಾರ್ಯನನ್ನು ಸೃಷ್ಟಿಸಿಕೊಂಡರೆನಿಸುತ್ತದೆ.

ಇದೇ ರೀತಿ ಕಾಶೀಪೀಠ ಪರಂಪರೆಯ ಹೂಲಿ ಪಟ್ಟದ್ದೇವರ ಮಠದ ಸಿದ್ಧನಂಜೇಶ (೧೭ನೆಯ ಶತಮಾನದ)ಬಸವಣ್ಣನನ್ನು ಕುರಿತು 'ಬಸವ ಶತಕ', ಬಸವಪರಂಪರೆಯ ತೋಂಟದ ಸಿದ್ಧಲಿಂಗನನ್ನು ಕುರಿತು, "ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ" ಹೆಸರಿನ ಕೃತಿ ಬರೆದುದಲ್ಲದೆ "ಬಸವನಿಂದತ್ಯಧಿಕ ಮಿಲ್ಲವೀ ಲೋಕದೊಳು" ಎಂದು ಹೇಳಿದುದು ಬಸವ ಪರಂಪರೆಗೆ ತೋರಿದ್ದ ಗೌರವವಾಗಿದೆ. ಇದೇ ರೀತಿ ಶ್ರೀಶೈಲ ಉಜ್ಜನಿ ಕೇದಾರ ಪೀಠಗಳೂ ಬಸವಣ್ಣನಿಗೆ ಭಕ್ತಿ ಸಲ್ಲಿಸಿದ ಉದಾಹರಣೆಗಳಿವೆ.

ಇದಕ್ಕೆ ನೇರ ಸಾಕ್ಷಿಯೆಂಬಂತೆ ನಮ್ಮ ರಾಜ್ಯದ ವಿರಕ್ತಮಠಗಳಂತೆ ಪಟ್ಟದ್ದೇವರ ಮಠಗಳಲ್ಲಿಯೂ ಸಿಗುವ ಪ್ರಾಚೀನ ತಾಳೆಗರಿ ಗ್ರಂಥಗಳು (ಸಿದ್ಧಾಂತ ಶಿಖಾಮಣಿಸಹಿತ) "ಶ್ರೀ ಗುರು ಬಸವಲಿಂಗಾಯ ನಮಃ" ಎಂಬ ಸ್ತುತಿಯಿಂದಲೇ ಪ್ರಾರಂಭವಾಗುತ್ತವೆ. ಇದರಿಂದಲೂ ಈ ಉಭಯ ಸಂಪ್ರದಾಯಗಳಿಗೆ ಬಸವಣ್ಣನೇ ಗುರುವೆಂದು ಸ್ಪಷ್ಟವಾಗುತ್ತದೆ. ಈ ಸತ್ಯವನ್ನು ಅರ್ಥಮಾಡಿಕೊಂಡು ಇನ್ನು ಮೇಲಾದರೂ ಲಿಂಗಾಯತವನ್ನು ಒಪ್ಪಿಕೊಂಡರೆ ಇತಿಹಾಸಕ್ಕೆ ಗೌರವ ತೋರಿದಂತಾಗುತ್ತದೆ. ಸಮಾಜದ ಏಕೀಕರಣಕ್ಕೆ ನಾಂದಿ ಹಾಡಿದಂತಾಗುತ್ತದೆ.

ಹೀಗೆ ಲಿಂಗಾಯತ ಸಮೂಹದ ಎಲ್ಲ ಮಠಗಳಿಗೂ ಬಸವಣ್ಣನೇ ಗುರುವೆಂಬ ಸತ್ಯವನ್ನು ಮುಂದುವರಿಸಿಕೊಂಡು ಬಂದಿರುವ ಇಂದಿನ ಏಕೈಕ ಧಾರ್ಮಿಕಸಂಸ್ಥೆಯಾಗಿದೆ, ಭಾಲ್ಕಿ ಪಟ್ಟದ್ದೇವರ ಮಠ. ೨೦ನೆಯ ಶತಮಾನದ ಏಕೈಕ ಮಹಾಪುರುಷರಾಗಿದ್ದರು, ಈ ಮಠದ ಶ್ರೀ ಚೆನ್ನಬಸವ ಪಟ್ಟದ್ದೇವರು. ಇದಲ್ಲದೆ ಲಿಂಗಾಯತಧರ್ಮದಲ್ಲಿ ಜಂಗಮರಂತೆ ಭಕ್ತರೂ ಮಠಾಧಿಕಾರಿಗಳಾಗಲು ಅವಕಾಶವಿದೆಯೆಂಬುದಕ್ಕೆ ನಿದರ್ಶನವೆಂಬ ಇವರು ಭಕ್ತಕುಟುಂಬದಿಂದ ಬಂದವರಾಗಿದ್ದರು.

ಭಾಲ್ಕಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಒಂದು ದೊಡ್ಡ ಹಳ್ಳಿ. ಕರ್ನಾಟಕದ ಮಿಕ್ಕ ಪ್ರದೇಶಗಳಿಗಿಂತ ಹೈದ್ರಾಬಾದ ಪ್ರದೇಶದಲ್ಲಿ ಧರ್ಮಜಾಗ್ರತಿ ಕೆಲಸ ಮಾಡುವುದು ತುಂಬ ಕಠಿಣ; ಅದೂ ಕಳೆದ ಶತಮಾನದ ಪೂರ್ವಾರ್ಧದಲ್ಲಿ ಊರಿಗೆ ದಾರಿಯಿಲ್ಲ. ಊರಲ್ಲಿ ಅನುಕೂಲತೆಗಳಿಲ್ಲ. ಜನರಿಗೆ ಶಿಕ್ಷಣವಿಲ್ಲ. ಮೇಲಾಗಿ ಅನ್ಯಸಂಸ್ಕೃತಿಯ ಆಳಿಕೆ ದಬ್ಬಾಳಿಕೆ. ಒಳಗೊಳಗೆ ಬಸವ ವಿರೋಧಿ ಅಲೆಗಳು. ಇವುಗಳ ಮಧ್ಯದಲ್ಲಿಯೂ ಪೂಜ್ಯರು ಮಾಡಿದ ಜಾಗ್ರತಿ ಚರಿತ್ರಾರ್ಹವಾಗಿದೆ. ಇವರು ಹೆಚ್ಚು ಓದಿದವರಲ್ಲ. ಹೆಚ್ಚು ಮಾತನಾಡುವವರೂ ಅಲ್ಲ. ಅವರ ಮೌನವೇ ಆ ಪರಿಸರವನ್ನು ಆಳುತ್ತಲಿದ್ದಿತು. ಬಿಸಿಲನ್ನು ಬೆಳದಿಂಗಳಾಗಿಸಿದ ಪವಾಡ ಅಲ್ಲಿ ಜರುಗಿತು.

ಧರ್ಮ ಮತ್ತು ಸಮಾಜ ಪರಸ್ಪರ ಪೂರಕವೆಂಬುದನ್ನು ಬಸವಸಾಕ್ಷಿಯಾಗಿ ಆಚರಿಸುತ್ತ ಬಂದ ಶ್ರೀಮಠವು ಶ್ರೀಚೆನ್ನಬಸವ ಪಟ್ಟದ್ದೇವರಿಂದಾಗಿ ಶರಣಸಿದ್ಧಾಂತದ ಸುಪ್ರಸಿದ್ಧ ಕ್ಷೇತ್ರವೆನಿಸಿತು. ಅಸ್ಪೃಶ್ಯರು ಮೊದಲು ಮಾಡಿ ಎಲ್ಲ ಜನವರ್ಗಕ್ಕೆ ಮುಕ್ತದ್ವಾರವೆನಿಸಿತು. ಮಠ ನನ್ನದಲ್ಲ ನಮ್ಮೆಲ್ಲರದು ಎಂಬ ಭಾವದಿಂದ ಪೂಜ್ಯರು ಸ್ಥಾಪಿಸಿದ ಧಾರ್ಮಿಕ ಸಾಮಾಜಿಕ ಸಂಸ್ಥೆಗಳು ಅನ್ಯರ ಪಾಲಾದರೂ ಏನೂ ಆಗಲ್ಲವೆಂಬಂತೆ ಸ್ಥಿತಪ್ರಜ್ಞರಾಗಿಯೇ ಉಳಿದರು.

ಬಸವಣ್ಣ ಮತ್ತು ಕನ್ನಡ ಲಿಂಗಾಯತ ವ್ಯಕ್ತಿಯ ಕೇಂದ್ರಪ್ರಜ್ಞೆಗಳು. ಈ ಆದರ್ಶದಲ್ಲಿ ಬಾಳಿದ ಪೂಜ್ಯರು ಕರ್ನಾಟಕ ಏಕೀಕರಣ ಕನ್ನಡಭಾಷೆಯ ಪುನರುಜ್ಜೀವನಗಳಿಗೆ ಸಲ್ಲಿಸಿದ ಸೇವೆ ಐತಿಹಾಸಿಕವಾಗಿದೆ. ನಿಜಾಮ್ ಆಡಳಿತದಿಂದಾಗಿ ಕಳೆದು ಹೋಗುತ್ತಲಿದ್ದ ಕನ್ನಡವು ಶಾಲೆಗಳ ಸ್ಥಾಪನೆಯ ಮೂಲಕ ಇವರಿಂದಾಗಿ ಉಳಿದು ನಿಂತಿತು.

ಹೀಗೆ ಸಮಾಜೋಧರ್ಮವನ್ನು ಸಾಕಾರಗೊಳಿಸುತ್ತ ನೂರುವರ್ಷ ಬಾಳಿದ ಶ್ರೀಗಳು ೧೯೯೯ ಎಪ್ರಿಲ್ ರಂದು ಲಿಂಗೈಕ್ಯರಾದರು. ಈ ವಾರ್ತೆ ಪ್ರಸಾರವಾಗುತ್ತಲೇ ಎಲ್ಲ ದಿಕ್ಕುಗಳಿಂದ ಹರಿದು ಬಂದ ಭಕ್ತವರ್ಗ ಅಶ್ರುಪೂರಿತ ಶ್ರದ್ಧಾಂಜಲಿ ಸಮರ್ಪಿಸಿತು. ಹಗಲಿನಲ್ಲಿಯೇ ಸೂರ್ಯ ಮುಳುಗಿದನೆಂದು ದುಃಖಿಸಿತು. ಅನಿವಾರ್ಯ ಕಾರಣಗಳಿಂದಾಗಿ ಅಂತ್ಯಕ್ರಿಯೆಗೆ ಬರಲು ಸಾಧ್ಯವಾಗದವರು ಪತ್ರಗಳ ಮೂಲಕ ತಮ್ಮ ದುಃಖ ವ್ಯಕ್ತಪಡಿಸಿದರು. ಪತ್ರಿಕೆಗಳು ಸುದ್ದಿಯ ಮೇಲೆ ಸುದ್ದಿ ಪ್ರಕಟಿಸಿದವು. ಬಾನುಲಿ ದೂರದರ್ಶನಗಳು ನಿರಂತರ ಶ್ರದ್ಧಾಂಜಲಿ ಬಿತ್ತರಿಸಿದವು. ಈ ಎಲ್ಲ ವಿವರ ದಾಖಲಾಗುವುದು ಇತಿಹಾಸ ದೃಷ್ಟಿಯಿಂದ ತುಂಬ ಅವಶ್ಯವೆಂದು ಪೂಜ್ಯ ಶ್ರೀ ಬಸವಲಿಂಗಸ್ವಾಮಿಗಳು ಕಂಡ ಕನಸು ಈ ಪುಸ್ತಕ. ಇಲ್ಲಿಯ ಪತ್ರಗಳಲ್ಲಿ ಮಠಾಧೀಶರ ರಾಜಕಾರಣಿಗಳ ಶಿಕ್ಷಣ ತಜ್ಞರ ಶ್ರೀಸಾಮಾನ್ಯರ ನೋವು ದುಃಖ ವ್ಯಥೆ ದಾಖಲಾಗಿದೆ. ಈ ಮುನ್ನುಡಿಯ ಮೂಲಕ ಪೂಜ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲು ಅವಕಾಶ ಒದಗಿ ಬಂದುದು ನನ್ನ ಜೀವನದ ಭಾಗ್ಯವೆಂದು ಭಾವಿಸುತ್ತೇನೆ.

ಆಕರ : ಮಾರ್ಗ ಸಂಪುಟ–೮

■■

೨೧೪

ಕನ್ನಡ ಕಾರಣಪುರುಷ

ಮುಡಿಬಾಗಿ ಬರೆದ ಮುನ್ನುಡಿ

೨೦೧೫

'ಕನ್ನಡದ ಕಾರಣಪುರುಷ' ರಾ. ಹ. ದೇಶಪಾಂಡೆಯವರ (೧೮೬೧)ಹೆಸರನ್ನು ಕೇಳುತ್ತಲೇ ನಮ್ಮ ಕೈ ತಾನಾಗಿಯೇ ಮುಗಿಯುತ್ತವೆ. ಇಂಥವರನ್ನು ನೆನೆಯುವುದೆಂದರೆ ನಮ್ಮ ಬದುಕಿನ ಸೂರ್ಯೋದಯ, ಮರೆಯುವುದೆಂದರೆ ನಮ್ಮ ಬದುಕಿನ ಅಸ್ತಮಾನ. ಇದನ್ನು ಅರ್ಥಮಾಡಿಕೊಂಡು ಬರೆದ ಈ ಕೃತಿಗೆ ಮೂಲ ಆಕರ ರಾಹದೇ. ವಿದ್ಯಾರ್ಥಿ ದೆಸೆಯಿಂದ (೧೮೮೨)ವೃದ್ಧಾಪ್ಯ ದೆಸೆಯ ವರೆಗೆ(೧೯೨೬)೪೪ ವರುಷ ಬರೆದ ದಿನಚರಿಗಳು. ೨೦೦೦ ಪುಟ ವ್ಯಾಪ್ತಿಯ ಈ ದಿನಚರಿಗಳಲ್ಲಿ ಕರ್ನಾಟಕದ ಒಳ ಹೊರಗಿನ ಸುಮಾರು ೨೦೦೦ ಸಾವಿರ ಜನ ದಾಖಲಾಗಿದ್ದಾರೆ. ಈ ಅಪೂರ್ವ ಗಣಿಯನ್ನು ಬಳಸಿಕೊಂಡು, ಪ್ರಸ್ತುತ ಪುಸ್ತಕ ಬರೆದ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರಿಗೆ ಕನ್ನಡಿಗರ ಅಭಿನಂದನೆಗಳು ಸಲ್ಲುತ್ತವೆ.

೧೯ನೆಯ ಶತಮಾನದ ಉತ್ತರಾರ್ಧ ಕನ್ನಡಿಗರ ಬದುಕಿನಲ್ಲಿ ಕತ್ತಲೆಯ ಕಾಲ. ಮರಾಠಿಭಾಷೆಯ ಆಕ್ರಮಣ- ಇಂಗ್ಲಿಷ್ ಭಾಷೆಯ ಆಗಮನಗಳ ನಡುವೆ ಕಳೆದು ಹೋಗಿದ್ದ ಕನ್ನಡವನ್ನು ಡೆಪ್ಯೂಟಿ ಚೆನ್ನಬಸಪ್ಪನವರು 'ಶಿಕ್ಷಣದ ಮಾಧ್ಯಮ'ಕ್ಕೆ ಎತ್ತರಿಸಿದರೆ, ಅದನ್ನು 'ಸಮಾಜದ ಮಾಧ್ಯಮ' ಕ್ಕೆ ವಿಸ್ತರಿಸಿದವರು, ರಾ.ಹ. ದೇಶಪಾಂಡೆಯವರು.

ಮುಂಬಯಿ ವಿಶ್ವವಿದ್ಯಾಲಯದಿಂದ ಎಂ.ಎ. ಪದವೀಧರರಾದ ಈ ಮೊದಲ ಕನ್ನಡಿಗ ಮನಸ್ಸು ಮಾಡಿದ್ದರೆ ಸರಕಾರಿ ದೊಡ್ಡ ಅಧಿಕಾರಿಯಾಗಿ ಬಾಳಬಹುದಿತ್ತು. ಆದರೆ ಇದಕ್ಕಿಂತ ಮರೆಯಾಗುತ್ತಲಿದ್ದ ಕನ್ನಡಪ್ರಜ್ಞೆಯನ್ನು ಬದುಕಿಸುವುದು ಅವರಿಗೆ ಮುಖ್ಯವೆನಿಸಿದ್ದಿತು. ಈ ಕನಸನ್ನು ಸಾಕಾರಗೊಳಿಸಲು ಏಕಕಾಲಕ್ಕೆ ಮರಾಠಿಭಾಷೆಯನ್ನು ಕೆಡಹುವ, ಕನ್ನಡಭಾಷೆಯನ್ನು ಕಟ್ಟುವ. ಜೋಡು ಜವಾಬ್ದಾರಿಯ ಸವ್ಯಸಾಚಿಯೊಬ್ಬನ ಆಗಮನವನ್ನು ಅಂದಿನ ಸಂದರ್ಭ ಎದುರು ನೋಡುತ್ತಿದ್ದಿತು. ಇದಕ್ಕೆ ಉತ್ತರವಾಗಿ ಕಾರಣ ಪುರುಷನಂತೆ ಮೂಡಿಬಂದವರು, ರಾಹದೇ.

ಶಿಕ್ಷಣ ಇಲಾಖೆ ಇವರ ವೃತ್ತಿಕ್ಷೇತ್ರ, ಅಂದು ಈ ಇಲಾಖೆಯ ಮೇಲಾಧಿಕಾರಿಗಳೆಲ್ಲ ಕನ್ನಡ ವಿರೋಧಿ ಮರಾಠಿ ಭಾಷಿಕರು. ಕನ್ನಡದ ರಾಹದೇ. ಅವರು ಸಹಜವಾಗಿಯೇ ಈ ಅಧಿಕಾರಿಗಳ ಚಿತ್ರಹಿಂಸೆಗೆ ಗುರಿಯಾದರು. ನ್ಯಾಯವಾಗಿ ಸಿಗಬೇಕಾದ ಮುಂಬಡ್ತಿಗಳಿಂದ ವಂಚಿತರಾದರು. ಸಹಾಯಕ ಹೆಡ್‌ಮಾಸ್ತರರಾಗಿ ವೃತ್ತಿಜೀವನ ಆರಂಭಿಸಿದ (೧೮೮೫)ಇವರು ಬೇರೆ ಬೇರೆ ಸಣ್ಣ ಹುದ್ದೆಗಳಿಗೆ ಗುರಿಯಾಗಿ, ಶಿಕ್ಷಣ ಇಲಾಖೆಯ ನಿರ್ದೇಶಕರಾಗುವ ಬದಲು ಹೆಡ್‌ಮಾಸ್ತರಾಗಿಯೇ ನಿವೃತ್ತಿ ಹೊಂದಿದರು. ೧೮೮೭ರಿಂದ ೧೯೦೭ರ ವರೆಗಿನ ೨೦ ವರ್ಷಗಳಲ್ಲಿ ೨೧ ಸಲ, ಊರಿಂದೂರಿಗೆ ವರ್ಗವಾಗುತ್ತ ಬಂದರು. ಆದರೆ ಮರಾಠಿ ಅಧಿಕಾರಿಗಳ ಈ ಕಾಟ-ತೊಂದರೆ ಹಿಂಸೆಗಳ ಬೆಂಕಿಯಲ್ಲಿ ಬೆಂದುಹೋಗದೆ. ಇವರು ಕಾಸಿದಷ್ಟೂ ಶುದ್ಧವಾಗುವ ಬಂಗಾರದಂತೆ ಬೆಳಗುತ್ತ ಬಂದರು. ಈ ನೋವು ನನ್ನೊಂದಿಗೇ ಕೊನೆಗಾಣಬೇಕಾದರೆ, ಮರಾಠಿಗರ ಅಟ್ಟಹಾಸವನ್ನು ಅಡಗಿಸಲು ಮಲಗಿರುವ ಕನ್ನಡಿಗರನ್ನು ಎಚ್ಚರಿಸುವುದೇ ಸರಿಯಾದ ಕ್ರಮವೆಂಬ ಪರಮಸತ್ಯವನ್ನು ಕಂಡುಹಿಡಿದರು. ಅದರ ಫಲವೇ ಧಾರವಾಡಲ್ಲಿ ಇವರು ಸ್ಥಾಪಿಸಿದ ಕರ್ನಾಟಕ ವಿದ್ಯಾವರ್ಧಕ ಸಂಘ (೧೮೯೦). ೩೦ ವರ್ಷದ ಈ ತರುಣ ಸ್ಥಾಪಿಸಿದಾಗ ಕನ್ನಡದ ಕಣ್ವ ಬಿ.ಎಂ. ಶ್ರೀ. ೩ ವರ್ಷದ ಮಗು, ಕರ್ನಾಟಕದ ಕುಲಪೂರೋಹಿತ ಆಲೂರು ವೆಂಕಟರಾವ್ ೭ ವರ್ಷದ ಬಾಲಕ-ಎಂಬುದನ್ನು ನೆನೆದರೆ ಎಂಥ ಕಷ್ಟಕಾಲದಲ್ಲಿ ಇವರು ಬಾಳಿದರೆಂದು, ಸ್ಪಷ್ಟವಾಗುತ್ತದೆ.

ನಮ್ಮ ದೃಷ್ಟಿಯಲ್ಲಿ ಇವರು ಕಟ್ಟಿದುದು 'ಕರ್ನಾಟಕ+ವಿದ್ಯಾವರ್ಧಕ ಸಂಘ' ಆದರೆ ದಾರ್ಶಕ ರಾಹದೇ. ಅವರ ದೃಷ್ಟಿಯಲ್ಲಿ ಇದು 'ಕರ್ನಾಟಕವಿದ್ಯಾ+ವರ್ಧಕ ಸಂಘ' ಕರ್ನಾಟಕವೆಂಬುದು ಒಂದು ಸಂಸ್ಕೃತಿ, ಒಂದು ವಿದ್ಯೆ ಅದನ್ನು ವರ್ಧಿಸುವುದೇ ಅವರ ಗುರಿಯಾಗಿದ್ದಿತು. ಈ ವಿದ್ಯೆಯನ್ನು ಶೋಧಿಸಿದ, ಸಾಧಿಸಿದ ರಾಹದೇ ಅವರು ಕನ್ನಡ ಭಾಷೆಯ ಏಕೀಕರಣ, ಕನ್ನಡ ದೇಶದ ಏಕೀಕರಣ, ಕನ್ನಡ ಮನಸ್ಸುಗಳ ಏಕೀಕರಣಗಳಿಗಾಗಿ ದುಡಿದ ಪಯಣದ ಕಥೆಯಾಗಿದೆ, ಈ ಪುಸ್ತಕ.

ಇಂದು ಬೆಂಗಳೂರಿನ ಸಾಹಿತ್ಯ ಪರಿಷತ್ತು ಬಳಸುತ್ತಲಿರುವ 'ಸಿರಿಗನ್ನಡಂ ಗೆಲ್ಗೆ' ಎಂಬ ಧ್ಯೇಯವಾಕ್ಯ ಮೂಲತಃ ಈ ವಿದ್ಯಾವರ್ಧಕ ಸಂಘಕ್ಕೆ ಸೇರಿದ್ದು. ಇದನ್ನು ಸೃಷ್ಟಿಸಿದವರು (೧೮೯೨)ರಾಹದೇ-ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಇಲ್ಲಿಯ ವರೆಗೆ ಸೋಲುತ್ತ ಬಂದ ಕನ್ನಡ ಇನ್ನು ಮುಂದೆ ಗೆದೆಯುತ್ತ ಹೋಗಬೇಕೆಂಬ ಉದ್ದೇಶ ಇಲ್ಲಿದೆ. ಪೂರಕವಾಗಿ ಸಂಘದ ವತಿಯಿಂದ ವಾಗ್ಭೂಷಣ ಪತ್ರಿಕೆ, ಪುಸ್ತಕ, ಕನ್ನಡ ಬರಹ ಭಾಷಣಗಳಿಗೆ ಬಹುಮಾನ ವಿತರಣೆ, ಹೀಗೆ ಕನ್ನಡಿಗರಿಗೆ ಎಲ್ಲ ರೀತಿಯಿಂದಲೂ ಉತ್ತೇಜಿಸಿದ ಸಾಹಸ ಕಥೆ ಪುಸ್ತಕದಲ್ಲಿದೆ.

ತಿರುಮಲಾಂಬಾ ಅವರೇ ಇಂಗ್ಲಿಷ್ ಶಬ್ದ-ಅಂಕಿ ಬಳಸಬೇಡಿರಿ. ಎಂ.ಎಸ್. ಪುಟ್ಟಣ್ಣನವರೇ ನನಗೆ ಬರೆಯುವ ಪತ್ರದಲ್ಲಿ ಆರ್. ಎಚ್. ದೇಶಪಾಂಡೆಗೆ ಬದಲು ರಾ. ಹ.ದೇಶಪಾಂಡೆ ಎಂದು ಬಳಸಿರಿ; ಕುಲಕರ್ಣಿಯವರೇ ನಿಮ್ಮ ಮುಂಜಿವಿ ಆಮಂತ್ರಣಪತ್ರ ಮರಾಠಿಯಲ್ಲಿದ್ದುದನ್ನು ಕಂಡು ವಿಷಾದವಾಯಿತು. ಅಶ್ವಥ್ ನಾರಾಯಣ ಶಾಸ್ತ್ರೀ ಅವರೇ ಇನ್ನು ನಿಮ್ಮ ಇಂಗ್ರೇಜಿ ಪತ್ರಕ್ಕೆ ನನ್ನಿಂದ ಉತ್ತರ ದೊರೆಯಲಾರದು ಎಂದು ಮುಂತಾಗಿ ಬರೆದ ದಿನಚರಿಯ ಟಿಪ್ಪಣಿಗಳು ರಾಹದೇ ಅವರ ಆಳವಾದ ಕನ್ನಡ ಪ್ರೀತಿಯನ್ನು ಸೂಚಿಸುತ್ತದೆ. ಕನ್ನಡ ಮಾತು ತಲೆಯೆತ್ತುವ ಬಗೆ ವಿಷಯವನ್ನು ಕುರಿತು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮಾತಾಡಿ ಮರುದಿನವೇ ಮೈಸೂರಿನಿಂದ ಬಿ.ಎಂ. ಶ್ರೀ ಅವರು ಬರೆದ ಇಂಗ್ಲಿಷ್ ಪತ್ರಕ್ಕೆ "ನೀವು ಕನ್ನಡದ ಬಗ್ಗೆ ಹೇಳುತ್ತೀರಿ. ಆದರೆ ಇಂಗ್ಲಿಷಿನಲ್ಲಿ ಬರೆಯುತ್ತೀರಿ" ಎಂದು ಉತ್ತರಿಸಿದುದು, ಕನ್ನಡದ ಪ್ರಶ್ನೆ ಬಂದಾಗ ಇವರು

ಯಾರ ಭಿಡೆಗೂ ಒಳಗಾಗುತ್ತಿರಲಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. "ಮಾಧ್ಯಮಿಕ ಶಾಲೆಗಳಲ್ಲಿ ದೇಶೀ ಭಾಷೆಗಳನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡಬೇಕು" ಎಂದು ೧೯೧೫ರಷ್ಟು ಹಿಂದೆಯೇ ದಿನಚರಿಯಲ್ಲಿ ಬರೆದುದು ಇಂದಿನ ನಮ್ಮ ಕಣ್ಣು ತೆರೆಸುವ ಮಾತಾಗಿದೆ.

ಹೀಗೆ, ಕನ್ನಡದ ಬಹುಮುಖಿ ಏಳ್ಗೆಗಾಗಿ ಹಂಬಲಿಸಿದ ಇವರು ತಾವೇ ವ್ಯಕ್ತಿಚಿತ್ರ, ಇತಿಹಾಸ, ಪಠ್ಯಪಸ್ತಕ ಪ್ರಕಾರದ ಹದಿನಾಲ್ಕು ಪುಸ್ತಕ ಬರೆದು ಪ್ರಕಟಿಸಿದುದಲ್ಲದೆ, ಬಿ.ಎಸ್.ಸಿ. ಪದವೀಧರನಾದ ಇದ್ದೊಬ್ಬ ಮಗನನ್ನು ನೌಕರಿಗೆ ಕಳಿಸದೇ ಶ್ರೀ ಶಂಕರ ಪುಸ್ತಕ ಮಂದಿರ ಸ್ಥಾಪಿಸಿ (೧೯೧೯)ಪುಸ್ತಕವ್ಯಾಪಾರಕ್ಕೆ ತೊಡಗಿಸಿದರು. ಕಾದಂಬರಿಕಾರ ಗಳಗನಾಥ ಮೊದಲಾದವರು ಧಾರವಾಡಕ್ಕೆ ಬಂದರೆ ರಾ.ಹ. ದೇಶಪಾಂಡೆಯವರ ಮನೆಯೇ ಅವರೆಲ್ಲರ ವಾಸಸ್ಥಳ. ಸಾಲದುದಕ್ಕೆ ಕರ್ನಾಟಕದ ಒಳ-ಹೊರಗಿನ ಸರ್. ವಿಶ್ವೇಶ್ವರಯ್ಯ, ಆರ್.ಜಿ. ಭಂಡಾರಕರ್, ಕನ್ನಡೇತರ ಭಾಷೆಯ ಕಿಟಲ್, ರೈಸ್, ಫ್ಲೀಟ್ ಮೊದಲಾದವರನ್ನು ಕನ್ನಡಕ್ಕಾಗಿ ಬಳಸಿಕೊಂಡರು. ಇವೆಲ್ಲ ಕನ್ನಡವನ್ನು ಎಲ್ಲ ಮಗ್ಗಲುಗಳಿಂದ ಗಟ್ಟಿಗೊಳಿಸುತ್ತಲಿದ್ದ ಪ್ರಯತ್ನಕ್ಕೆ ಸಾಕ್ಷಿಯಾಗಿವೆ.

ಮನಸ್ಸು ದೊಡ್ಡದಾಗದೆ ಕೆಲಸ ದೊಡ್ಡದಾಗದು. ಇದು ರಾಹದೇ ಅವರ ಸಾಮಾಜಿಕ ನೀತಿಯಾಗಿದ್ದಿತು. ಮುಂಬಯಿ ಕರ್ನಾಟಕದ ಬ್ರಾಹ್ಮಣ ಲಿಂಗಾಯತರ, ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣರ, ಕರ್ನಾಟಕದ ದೇಶಸ್ಥ ಬ್ರಾಹ್ಮಣರ ಮನಸ್ಸು ಒಂದಾಗಬೇಕೆಂದು ಪ್ರಯತ್ನಿಸುತ್ತಿದ್ದ ಇವರು, ಮುಂಬಯಿ ಕರ್ನಾಟಕ ಮೈಸೂರು ಕರ್ನಾಟಕಗಳ ಮನಸ್ಸುಗಳೂ ಒಂದಾಗಬೇಕೆಂಬ ಹಂಬಲವುಳ್ಳವರಾಗಿದ್ದರು. ಹೀಗಾಗಿ ತಾವು ಕೈಗೆತ್ತಿಕೊಂಡ ಕನ್ನಡದ ಕೈಂಕರ್ಯವನ್ನು ಮೈಸೂರು ಕರ್ನಾಟಕದವರೆಗೂ ಹಬ್ಬಿಸುವ ಹೆಜ್ಜೆಯಿಟ್ಟರು. ಇದರ ಫಲವಾಗಿ ಧಾರವಾಡದಲ್ಲಿ ಇವರು ಜರುಗಿಸಿದ ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನಕ್ಕೆ ಬೆಂಗಳೂರಿನ ಎಸ್.ಜಿ. ನರಸಿಂಹಾಚಾರ್ಯರನ್ನು ಅಧ್ಯಕ್ಷರನ್ನಾಗಿ ಆಹ್ವಾನಿಸಿದರು. ಎರಡನೆಯ ಸಮ್ಮೇಲನವನ್ನು ಧಾರವಾಡದಲ್ಲಿ ಜರುಗಿಸಿ, ಬೆಂಗಳೂರಿನಲ್ಲಿ ಇವರು ೧೯೧೫ರಲ್ಲಿ ಜರುಗಿಸಿದ ಮೂರನೆಯ ಸಮ್ಮೇಳನದ ಕೂಸು, ಅಲ್ಲಿಯ ಕನ್ನಡ ಸಾಹಿತ್ಯ ಪರಿಷತ್ತು.

ಒಟ್ಟಿನಲ್ಲಿ, ಧಾರವಾಡ ವಿದ್ಯಾವರ್ಧಕ ಸಂಘದ ಮುಂದುವರಿಕೆ ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು, ಧಾರವಾಡ ಅಖಿಲ ಕರ್ನಾಟಕ ಗ್ರಂಥಕರ್ತರ ಸಮ್ಮೇಳನದ ಮುಂದುವರಿಕೆ ಇಂದಿನ ಕನ್ನಡ ಸಾಹಿತ್ಯ ಸಮ್ಮೇಳನಗಳು. ಈ ಎರಡೂ ನೆಲೆಗಳಲ್ಲಿ ಅಂದರೆ ಸಾಹಿತ್ಯ ಪರಿಷತ್ತು ಮತ್ತು ಸಾಹಿತ್ಯ ಸಮ್ಮೇಳನಗಳಲ್ಲಿ ರಾಹದೇ ಸಕಾರಾತ್ಮಕವಾಗಿ ದುಡಿಯುತ್ತ ಬಂದರು. ಹೀಗೆ ಕನ್ನಡ ಪ್ರಜ್ಞೆಯನ್ನು ಉತ್ತರಕರ್ನಾಟಕದಲ್ಲಿ ಹುಟ್ಟುಹಾಕಿ ದಕ್ಷಿಣಕರ್ನಾಟಕಕ್ಕೂ ವಿಸ್ತರಿಸಿದ ಈ ಕಾರಣಪುರುಷನನ್ನು ಕುರಿತ ಪ್ರಸ್ತುತ ಕೃತಿ ವ್ಯಕ್ತಿ ಚರಿತ್ರೆಯಾಗಿ ಉಳಿಯದೆ. ಪರಿಸರದ ಚರಿತ್ರೆಯೂ ಆಗಿ ಬೆಳೆದಿದೆ. ಇದನ್ನು ರಚಿಸಿದ ಡಾ. ಕೃಷ್ಣಕೊಲ್ಹಾರ ಕುಲಕರ್ಣಿಯವರ ಶ್ರದ್ಧೆಗೆ ಶ್ರಮಕ್ಕೆ ಇನ್ನೊಮ್ಮೆ ಧನ್ಯವಾದಗಳು.

ಡಾ. ಕೃಷ್ಣಕೊಲ್ಹಾರ ಕುಲಕರ್ಣಿ : ಕನ್ನಡ ಕಾರಣಪುರುಷ, ೨೦೧೫

ಆಕರ : ಮಾರ್ಗ ಸಂಪುಟ-೮

■■

೨೧೫

ಹಳಗನ್ನಡ

೨೦೧೪

ಹೆಸರಿಗೆ ತಕ್ಕಂತೆ ನಮ್ಮ ತಲೆಮಾರಿನ ಪ್ರಾಧ್ಯಾಪಕ ಪರಿವಾರದಲ್ಲಿ 'ಶ್ರೇಷ್ಠರು' ಎನಿಸಿರುವ ಪ್ರೊಫೆಸರ್ ಷ.ಶೆಟ್ಟರ್ ಬೋಧನೆಯಂತೆ ಬರಹದ ಮೂಲಕವೂ ಪ್ರಸಿದ್ಧರು. ಇವರ ಇತ್ತೀಚಿನ ಬರವಣಿಗೆಯಾಗಿರುವ 'ಹಳಗನ್ನಡ ಲಿಪಿ, ಲಿಪಿಕಾರ, ಲಿಪಿವ್ಯವಸಾಯ'ವು ಮಹತ್ವಾಕಾಂಕ್ಷೆಯ ಕೃತಿಯಾಗಿದೆ; ಶೀರ್ಷಿಕೆಯನ್ನೂ ಮೀರಿ ಬೆಳೆದ ಅಭ್ಯಾಸವಾಗಿದೆ.

ಅಶೋಕನ ಕಾಲದ (ಕ್ರಿ.ಪೂ. ಮೂರನೆಯ ಶತಮಾನ) ಬ್ರಾಹ್ಮೀಲಿಪಿ ಮತ್ತು ಪ್ರಾಕೃತಭಾಷಾ ಶಾಸನಗಳಿಂದ ಪ್ರಾರಂಭವಾಗುವ ಈ ಅಧ್ಯಯನ ನಮ್ಮ ದೇಶದ ಪ್ರಪ್ರಥಮ ಲಿಪಿಯನ್ನು ಮತ್ತು ಲಿಪಿಕಾರನಾಗಿರುವ 'ಚಪಡ'ನನ್ನು ಕರ್ನಾಟಕದಲ್ಲಿ ಗುರುತಿಸಿ ಮುಂದುವರಿದಿದೆ. ಚಿತ್ರದುರ್ಗ ಜಿಲ್ಲೆಯ ಮೂರು ಸ್ಥಳಗಳಲ್ಲಿ ಅಶೋಕನ ಶಾಸನ ಬರೆದ ಇವನು ಗಾಂಧಾರ (ಇಂದಿನ ಅಫಘಾನಿಸ್ತಾನ) ದೇಶದವನು. 'ಭರತಖಂಡದ ಲಿಪಿಕಾರರ ಇತಿಹಾಸ ಆರಂಭವಾಗುವುದೇ ಇಲ್ಲಿಂದ, ಇಂದಿನಿಂದ, ಇವನಿಂದ' ಎಂದು ಆರಂಭದ ಪುಟಗಳಲ್ಲಿ ಹೇಳುವ ಮೂಲಕ ಮೂಡಿಸಿದ ಸಂಚಲನವನ್ನು ಗ್ರಂಥದುದ್ದಕ್ಕೂ ಪ್ರೊ. ಶೆಟ್ಟರ್ ಕಾಯ್ದುಕೊಂಡು ಬಂದಿರುವರು.

ಅಶೋಕನ ಕಾಲದಿಂದ (ಕ್ರಿ.ಪೂ. ಮೂರನೆಯ ಶತಮಾನ) ಕದಂಬರ ಆರಂಭ ಕಾಲದ(ಕ್ರಿ.ಶ. ನಾಲ್ಕನೆಯ ಶತಮಾನ) ವರೆಗೆ ಬರೆಸಿದ ಬ್ರಾಹ್ಮೀಲಿಪಿ–ಪ್ರಾಕೃತಭಾಷಾ ಶಾಸನಗಳು ಕೆಳದಕ್ಖಿಣದ ಬಹುಭಾಗವನ್ನು (ಗುಲಬರ್ಗಾ ಜಿಲ್ಲೆಯ ಸನ್ನತಿ–ಕನಗನಹಳ್ಳಿಯಿಂದ ಹಿರೇಹಡಗಲಿ, ಬನವಾಸಿ, ಮಳವಳ್ಳಿ ವರೆಗೆ) ವ್ಯಾಪಿಸಿವೆ. ಈ ಅವಧಿಯ ಖಂಡ ಮತ್ತು ಅಖಂಡ ಶಾಸನಗಳ ಒಟ್ಟು ಸಂಖ್ಯೆ ಸು. ೩೦೦. ಬಳಿಕ ಕದಂಬರಿಂದ ಮೊದಲ್ಗೊಂಡು ರಾಷ್ಟ್ರಕೂಟರ ಕೊನೆಯ ವರೆಗೆ ಬರೆಸಿದ ಸಂಸ್ಕೃತ ಶಾಸನಗಳ ಲೆಕ್ಕವಿನ್ನೂ ನಮ್ಮ ಕೈಗೆಟುಕಿಲ್ಲ. ಹೀಗಿದ್ದೂ ಈ ಸಂಖ್ಯೆ ಬಹುಶಃ ೩೦೦ನ್ನು ದಾಟಲಾರದು. ಈ ಸಂಸ್ಕೃತ ಶಾಸನಗಳ ಜೊತೆಜೊತೆಗೆ ಕನ್ನಡ ಶಾಸನಗಳು ಕಾಣಲಾರಂಭಿಸಿದವು. ಇಲ್ಲಿಂದ ಮುಂದೆ ಬ್ರಾಹ್ಮೀಲಿಪಿಯಿಂದ ಬೇರ್ಪಟ್ಟು (ಕ್ರಿ.ಶ. ಮೂರು–ನಾಲ್ಕನೆಯ ಶತಮಾನ) ಹುಟ್ಟಿದ ಮೊದಲ ಸಹಸ್ರಮಾನದ ಕನ್ನಡ ಲಿಪಿ–ಭಾಷೆಗಳ ಸುಮಾರು ೨೦೨೦ ಶಾಸನಗಳನ್ನು

ಡಾ. ಶೆಟ್ಟರ್ ಅನೇಕ ಆಕರಗಳಿಂದ ಸಂಗ್ರಹಿಸಿ, ಇಲ್ಲಿ ಅಧ್ಯಯನಕ್ಕೆ ಅಳವಡಿಸಿಕೊಂಡಿದ್ದಾರೆ. ಇದು ದಿಗ್ಭ್ರಮೆಗೊಳಿಸುವ ಸಂಖ್ಯಾಪ್ರಮಾಣ. ಏಕೆಂದರೆ ಇಷ್ಟೊಂದು ಸಂಖ್ಯೆಯ ದೇಶೀಭಾಷಾ ಶಾಸನಗಳು ಮೊದಲ ಸಹಸ್ರಮಾನದಲ್ಲಿ ಭಾರತ ದೇಶದ ಯಾವ ಭಾಷೆಯಲ್ಲೂ, ಭಾಗದಲ್ಲೂ ಕಂಡುಬರುವುದಿಲ್ಲ. ತಮಿಳಿನಲ್ಲಿ ಅತ್ಯಧಿಕ ಸಂಖ್ಯೆಯ ಶಾಸನಗಳಿರುವುದು ನಿಜ, ಆದರೆ ಅದು ಈ ಪ್ರಮಾಣದ ಸಂಖ್ಯಾಬಾಹುಳ್ಯ ಪಡೆದದ್ದು ಎರಡನೆಯ ಸಹಸ್ರಮಾನದಲ್ಲಿ, ತಾಂಜಾವೂರಿನ ಚೋಳರು ಬರೆಸಲಾರಂಭಿಸಿದಂದಿನಿಂದ.

ಪ್ರೊ. ಶೆಟ್ಟರ್ ಅವರ ಅಭಿಮತದಂತೆ ಬ್ರಾಹ್ಮೀಲಿಪಿಯಿಂದ ಬೇರ್ಪಟ್ಟು ಕನ್ನಡ ಲಿಪಿಯ ಬಳಕೆ ಪ್ರಾರಂಭವಾಗುವುದು ಸುಮಾರು ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ. ಇದರ ಸೂಕ್ಷ್ಮ ಹೆಜ್ಜೆ ಗುರುತು ಮಳವಳ್ಳಿ ಮತ್ತು ಹಿರೇಹಡಗಲಿಯ ಪ್ರಾಕೃತ ಶಾಸನಗಳಲ್ಲಿ; ಸ್ಪಷ್ಟ ಹೆಜ್ಜೆ ಗುರುತು (ಸುಮಾರು ೪೦೦) ಗಂಗರ ಶಾಸನಗಳಲ್ಲಿ ಕಂಡುಬರುತ್ತವೆ.

ಕಳೆದ ನೂರು ವರ್ಷಗಳಿಂದ ಕನ್ನಡ ನಾಡಿನ ಶಾಸನಗಳನ್ನು ಬಳಸಿಕೊಂಡು ಅನೇಕ ವಿದ್ವಾಂಸರು ಕೃತಿ ರಚಿಸಿದ್ದುಂಟು. ಇವೇ ಶಾಸನಗಳನ್ನು ಬಳಸಿಕೊಂಡು ಶೆಟ್ಟರ್ ಇಲ್ಲಿ ಭಿನ್ನ ಫಲಿತಾಂಶ ಪ್ರಕಟಿಸಿದ್ದಾರೆ. ನಿಜವಾದ ಸಂಶೋಧಕನಿಗೆ ಹೊಸ ಆಕರ ಬೇಕೆಂದೇನೂ ಇಲ್ಲ. ತನ್ನ ವ್ಯಾಖ್ಯಾನ ಸಾಮರ್ಥ್ಯದಿಂದ ಅವನು ಹಳೆಯ ಆಕರಗಳಿಂದಲೇ ಹೊಸ ಮಾತುಗಳನ್ನು ಹೊರಡಿಸಬಲ್ಲನೆಂಬುದಕ್ಕೆ ಈ 'ಮರುವ್ಯಾಖ್ಯಾನಶೋಧ' ನಿದರ್ಶನವಾಗಿದೆ. ಇನ್ನೊಂದು ವಿಷಯ: ಸಂಶೋಧನೆಯಲ್ಲಿ ಅಧ್ಯಯನ ವಿಧಾನಕ್ಕೆ (Methodology) ಮಹತ್ವದ ಸ್ಥಾನವಿದೆ. ಈವರೆಗೂ ಕನ್ನಡ ಶಾಸನಗಳ ಅಧ್ಯಯನದಲ್ಲಿ ಸಾಂಪ್ರದಾಯಿಕ ಸಂಶೋಧನ ವಿಧಾನವೊಂದು ರೂಢಿಯಲ್ಲಿದ್ದಿತು. ಇದಕ್ಕೆ ಭಿನ್ನವೆಂಬಂತೆ ಆಕರನಿಷ್ಠ–ವಿಶ್ಲೇಷಣನಿಷ್ಠ–ವ್ಯಾಖ್ಯಾನನಿಷ್ಠ, ಇನ್ನೂ ಮುಖ್ಯವಾಗಿ ಕಾಲದೇಶಗಳನ್ನು ಗಮನಿಸುತ್ತ ಮುಂದುವರಿದ 'ಸಂಖ್ಯಾನಿಷ್ಠಶೋಧ'ದ ಅಸಾಂಪ್ರದಾಯಿಕ ಹಾಗೂ ಅಪೂರ್ವ ಸಂಶೋಧನ ವಿಧಾನವೊಂದು ಇಲ್ಲಿ ತೆರೆದುಕೊಂಡಿದೆ.

'ನಾವು ಶಿಲ್ಪವನ್ನು ಅಭ್ಯಸಿಸಿದ್ದೇವೆ, ಶಿಲ್ಪಿಗಳನ್ನು ಮರೆತಿದ್ದೇವೆ; ಲಿಪಿಯನ್ನು ಅಭ್ಯಸಿಸಿದ್ದೇವೆ, ಲಿಪಿಕಾರರನ್ನು ಮರೆತಿದ್ದೇವೆ' ಎಂದು ಮೇಲಿಂದ ಮೇಲೆ ಎಚ್ಚರಿಸುತ್ತ ಬಂದಿರುವ ಪ್ರೊ. ಶೆಟ್ಟರ್, ಈಗ ಮೊದಲ ಸಹಸ್ರಮಾನದ ನಮ್ಮ ಶಾಸನ ಲಿಪಿಕಾರರನ್ನು ಕುರಿತು ಇನ್ನೊಬ್ಬರು ಕೈಯಿಡದಂತೆ ಪೂರ್ಣ ಅಭ್ಯಾಸವನ್ನು ಪೂರೈಸಿದ್ದಾರೆ.

ಲಿಪಿಕಾರರ ಬಗ್ಗೆ ಇವರಿಗಿರುವ ಗೀಳು ಇಂದು ನಿನ್ನೆಯದಲ್ಲ, ಸುಮಾರು ಅರ್ಧ ಶತಮಾನದಷ್ಟು ಹಿಂದಿನದು. ೧೯೬೦ರಲ್ಲಿ ಶ್ರವಣಬೆಳ್ಗೊಳದ ಲಿಪಿಶಿಲ್ಪಿಗಳ ಶೋಧದಿಂದ ಆರಂಭವಾದ ಇವರ ಈ ಅಧ್ಯಯನ ಮೈಸೂರು ಪ್ರಾಕ್ತನ ವರದಿಗಳ ಮರುಸಂಪಾದನೆಯ (೧೯೭೬) ಮೂರು ಸಂಪುಟಗಳ ಅಡಿಟಿಪ್ಪಣಿಗಳಲ್ಲಿ ಹರಡಿಕೊಂಡು, ನಂತರ ಪ್ರಕಟಗೊಂಡ 'ಹೊಯ್ಸಳ ಟೆಂಪಲ್ಸ್'ದ ಎರಡು ಸಂಪುಟಗಳಲ್ಲಿ (೧೯೯೨) ಸಮಗ್ರತೆ ಪಡೆದುಕೊಂಡು, ದೇಶವಿದೇಶೀ ಪಂಡಿತರ ಗಮನ ಸೆಳೆಯಿತು. ಇವರು ಸಂಪಾದಿಸಿ ಪ್ರಕಟಿಸಿದ 'ಮೆಮೋರಿಯಲ್ ಸ್ಟೋನ್ಸ್' (೧೯೮೨) ಗ್ರಂಥದಲ್ಲಿ ಬಾದಾಮಿ ಚಾಲುಕ್ಯರು ಮೊದಲುಮಾಡಿ ವಿಜಯನಗರ ಅರಸರ ವರೆಗಿನ ವೀರಗಲ್ಲು ಬರೆದ ಲಿಪಿಶಿಲ್ಪಿಗಳ

ಸಮಗ್ರ ಚರ್ಚೆಯನ್ನು ಪೂರೈಸಿದ್ದರು. ಈ ಲಿಪಿಶಿಲ್ಪಿ ಕ್ಷೇತ್ರದೊಡನೆ ಇವರೆಷ್ಟು ತೊಡಗಿಕೊಂಡಿದ್ದರೆಂದರೆ, ೨೦೦೩ರಲ್ಲಿ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್‌ನ (Indian History Congress) ೫೦ ಪುಟಗಳ ಇವರ ಸರ್ವಾಧ್ಯಕ್ಷ ಭಾಷಣವೂ ಆರಂಭ ಕಾಲದ ಲಿಪಿಶಿಲ್ಪಿಗಳನ್ನು ವಸ್ತುವನ್ನಾಗಿ ಮಾಡಿಕೊಂಡಿದ್ದಿತು. ೨೦೧೧ರಲ್ಲಿ ಇದನ್ನು ಮತ್ತಷ್ಟೂ ಮುಂದುವರೆಸಿ, ಬ್ರಾಹ್ಮೀ-ಖರೋಷ್ಠೀ ಭಾಷಾ ಲಿಪಿಶಿಲ್ಪಿಗಳ ಬಗ್ಗೆ ಸುದೀರ್ಘ ಪ್ರಬಂಧವೊಂದನ್ನು ಪ್ರಕಟಿಸಿದರು. ರಾಷ್ಟ್ರ-ಅಂತಾರಾಷ್ಟ್ರೀಯ ಪ್ರಕಟಣೆಗಳಾಗಿರುವ ಇವೆಲ್ಲವೂ ಇಂಗ್ಲಿಷ್ ಭಾಷೆಯಲ್ಲಿದ್ದು ಸುಲಭವಾಗಿ ಕನ್ನಡಿಗರಿಗೆ ನಿಲುಕಿರಲಿಲ್ಲ.

ಪುರಾತನ ಶಿಲ್ಪಿಗಳು ತಮ್ಮ ಬಗ್ಗೆ ಹೇಳಿಕೊಂಡಿರುವುದು ತೀರ ಕಡಿಮೆ. ಇದಕ್ಕೆ ಕಾರಣ ಅದೊಂದು ಧಾರ್ಮಿಕ ಸೇವೆ ಎಂದು ಭಾವಿಸಿ ಅವರು ತೆರೆಮರೆಯಲ್ಲಿ ಉಳಿದಿದ್ದರೆಂಬ ವಾದವಿದೆ. ಸುಪ್ರಸಿದ್ಧ ಚಿಂತಕ ಆನಂದಕುಮಾರಸ್ವಾಮಿಯನ್ನೊಳಗೊಂಡು ಹಿರಿಯ ತಲೆಮಾರಿನ ಕಲಾಇತಿಹಾಸಕಾರರು ೧೯೪೦ರ ದಶಕದಲ್ಲಿ ಈ ವಾದವನ್ನು ಪ್ರತಿಪಾದಿಸಿದ್ದರು. ಇದನ್ನು ಪ್ರೊ. ಶೆಟ್ಟರ್ ಒಪ್ಪುವುದಿಲ್ಲ. ಒಂದು ವಾಸ್ತು ಹಲವು ಜನ ಸಣ್ಣ-ದೊಡ್ಡ ಶಿಲ್ಪಿಗಳ ಸಾಮೂಹಿಕ ಕಲಾಕೃತಿಯಾಗಿರುತ್ತಿದ್ದ ಕಾರಣ, ಅಲ್ಲಿ ಒಬ್ಬಿಬ್ಬರ ಹೆಸರನ್ನು ದಾಖಲಿಸುತ್ತಿರಲಿಲ್ಲವೆಂದು ಇವರ ವಾದ. ಎಲ್ಲ ವೃತ್ತಿಕಾರರಂತೆ ಈ ಶಿಲ್ಪವೃತ್ತಿಕಲಾವಿದರೂ ಜೀವನ ನಿರ್ವಹಣೆಗೆ ಪೋಷಕರಿಂದ ಆರ್ಥಿಕ ನೆರವನ್ನು ಅಪೇಕ್ಷಿಸುತ್ತಿದ್ದರು. ಈ ಪೋಷಣೆ ದೊರೆಯುವ ವರೆಗೂ ಒಂದು ಶಿಲ್ಪಕಾರ್ಯದಲ್ಲಿ ತೊಡಗಿಸಿಕೊಂಡು, ಅದು ನಿಲ್ಲುತ್ತಲೇ ಆ ವಾಸ್ತುಕೆಲಸವನ್ನು ಪೂರ್ಣ ಇಲ್ಲವೆ ಅಪೂರ್ಣ ಸ್ಥಿತಿಯಲ್ಲಿ ಬಿಟ್ಟು, ಮತ್ತೊಂದು ಸ್ಥಳದ ವಾಸ್ತುಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದರೆಂಬುದು ಇವರ ಅಭಿಮತ.

ವಾಸ್ತುಶಿಲ್ಪಿಗಳನ್ನು ಬಿಟ್ಟರೆ ನಮಗೆ ಲಿಪಿಶಿಲ್ಪಿಗಳ ಬಗ್ಗೆ ಒಂದು ಸ್ಥೂಲ ಕಲ್ಪನೆ ಇದೆ. ಇವರಿಗೆ ಬಳಸುತ್ತಲಿದ್ದ ಓಜ, ಆಚಾರ್ಯ, ತ್ವಷ್ಟಕಾರ, ವಿಶ್ವಕರ್ಮ ಪದಗಳ ಅರಿವಿದೆ. ಆದರೆ ಈ ಲಿಪಿಶಿಲ್ಪಿಗಳ ಸಮಾಜದ ಸ್ಪಷ್ಟ ಕಲ್ಪನೆ ನಮಗಿಲ್ಲ. ಆರಂಭ ಕಾಲದಲ್ಲಿ ಶಾಸನಕ್ಕೆ ಪಠ್ಯರಚಿಸುವವನೂ ಅದನ್ನು ಕಂಡರಿಸುವವನೂ ಒಬ್ಬನೇ ಆಗಿರುತ್ತಿದ್ದನು. ಎಂಟನೆಯ ಶತಮಾನದ ನಂತರ ಈ ಕ್ರಿಯೆಯನ್ನು ಹಂಚಿಕೊಳ್ಳುವ ರೂಢಿ ಆರಂಭವಾಯಿತು. ಸಂಸ್ಕೃತಭಾಷೆಯ ಮೇಲಿನ ಪ್ರಭುತ್ವ ಬ್ರಾಹ್ಮಣರಿಗಿದ್ದರೂ ಶಾಸನಗಳನ್ನು ಸಂಯೋಜಿಸಿ ಕಂಡರಿಸುವಲ್ಲಿ ಅವರ ಪಾತ್ರ ವಾಸ್ತವವಾಗಿ ಅತ್ಯಲ್ಪವಾಗಿದ್ದಿತು. ಈ ಕ್ಷೇತ್ರದಿಂದ ಬ್ರಾಹ್ಮಣರನ್ನು ದೂರವಿಟ್ಟು ವೃತ್ತಿನಿರತ ಬ್ರಾಹ್ಮಣೇತರ ಲಿಪಿಕಾರರಾದ ತ್ವಷ್ಟರು, ವಿಶ್ವಕರ್ಮಿಗಳು ಈ ಕೆಲಸದ ಮೇಲೆ ಏಕಸ್ವಾಮ್ಯ ಸ್ಥಾಪಿಸಿಕೊಂಡಿದ್ದರು. ಇವರಲ್ಲಿ ಸಂಸ್ಕೃತ ಮತ್ತು ಸಂಸ್ಕೃತ-ಕನ್ನಡ ದ್ವಿಭಾಷಾ ಪ್ರಶಸ್ತಿ ಶಾಸನಗಳನ್ನು ಬರೆದವರು ಮಾರ್ಗೀಯ ಕ್ರಮವನ್ನನುಸರಿಸಿದರೆ, ಕನ್ನಡದಲ್ಲಿ ಬರೆದವರು ಬಹುಶಃ ದೇಶೀಕ್ರಮವನ್ನನುಸರಿಸಿದರು. ಮಾರ್ಗೀಯ ಕ್ರಮದವರು ರಾಜ್ಯದಲ್ಲಿ ಅಧಿಕಾರ, ಅಂತಸ್ತು ಪಡೆದುಕೊಂಡು, ಅರಸನ ಆಪ್ತವಲಯದಲ್ಲಿದ್ದು, ಅವನ ಆಜ್ಞೆಯನ್ನು ಶಾಸನಭಾಷೆಗೆ ಅಳವಡಿಸಿ, ಸುದೀರ್ಘ ಪ್ರಶಸ್ತಿಗಳನ್ನು ಬರೆದರು. ಕದಂಬ, ಬಾದಾಮಿ ಚಾಳುಕ್ಯ ಮತ್ತು ರಾಷ್ಟ್ರಕೂಟರ ಆಶ್ರಯದಲ್ಲಿ 'ಭೋಜಕ', 'ಸೇನಾಪತಿ', 'ಆಯುಕ್ತಕ', 'ಮಹಾಸಾನ್ಧಿವಿಗ್ರಹಿಕ', 'ಅಕ್ಷಪಟಲಕ', 'ಕುಲಪುತ್ರಕ'

ಎಂಬ ಅಧಿಕಾರ ಸ್ಥಾನದಲ್ಲಿದ್ದ ಇವರಲ್ಲಿ ಕೆಲವರು ಅರಸನ ವಲ್ಲಭ, ಪುಣ್ಯವಲ್ಲಭ, ನಿರವದ್ಯ ಅನಿವಾರಿತ ಎಂಬ ವಿಶೇಷಣಗಳನ್ನು ಬಳಸಿಕೊಂಡಿದ್ದಾರೆ. ಏಳನೆಯ ಶತಮಾನದ ಉತ್ತರಾರ್ಧದಲ್ಲಿ ಮೂವರು ಚಾಳುಕ್ಯ ಅರಸರನ್ನು ನೆರಳಿನಂತೆ ಹಿಂಬಾಲಿಸಿ ಸಾನ್ಧಿವಿಗ್ರಹಿಕರಾದ ಜಯಸೇನ ಮತ್ತು ಇವನ ಅಳಿಯ ಶ್ರೀರಾಮಪುಣ್ಯವಲ್ಲಭ ಸುಮಾರು ೨೦ ತಾಮ್ರಪಟಗಳನ್ನು ಬರೆದು, ಅರಸರಿಗೆ ತಾವೆಷ್ಟು ಆಪ್ತರಾಗಿದ್ದೇವೆಂಬುದನ್ನು ತೋರಿಸಿಕೊಟ್ಟಿರುವರು. ಇದಕ್ಕೆ ಸ್ವಲ್ಪ ಭಿನ್ನವಾದ ನೀತಿಯನ್ನು ಗಂಗರು ಅನುಸರಿಸಿದರು. ಆರಂಭದ ಕೆಲವರು ತಮ್ಮನ್ನು 'ಸರ್ವರಹಸ್ಯಾಧಿಕಾರಿ', 'ಸರ್ವಮಂತ್ರಾಧಿಕಾರಿ', 'ಪುರಾಧಿಪತಿ' ಎಂದು ಕರೆದುಕೊಂಡಿದ್ದರೂ ಇವರು ಹೆಚ್ಚಾಗಿ ಗುರುತಿಸಿಕೊಂಡದ್ದು 'ವಿಶ್ವಕರ್ಮ' ಪದದಿಂದ. ಇವರಲ್ಲಿ ಅನೇಕರು ರಾಜ್ಯದ ಅಧಿಕೃತ ಲಿಪಿಕಾರರಾರಿದ್ದರು. ತಾವು ಬರೆದ ಪ್ರತಿಯೊಂದು ತಾಮ್ರಪಟಕ್ಕೆ ಪ್ರತಿಫಲವಾಗಿ ಇವರು ಬ್ರಾಹ್ಮಣರಿಗಿಂತ ಮಿಗಿಲಾದ ಭೂದತ್ತಿಯನ್ನು ಪಡೆದುಕೊಳ್ಳಲಾರಂಭಿಸಿದರು. 'ಸರ್ವಕಲಾಧಾರ ಚಿತ್ರಕಲಾಭಿಜ್ಞ'ನೆನಿಸಿದ ವಿಶ್ವಕರ್ಮಾಚಾರ್ಯನೆಂಬ ಲಿಪಿಕಾರನೊಬ್ಬ ಎಂಟು ತಾಮ್ರಪಟಗಳನ್ನು ಬರೆದು, ೧೬ ಖಂಡುಗ ವ್ರೀಹಿ, ೮ ಖಂಡುಗ ಕಂಗು, ೧೨ ನಿವರ್ತನ ವಾಪಿ, ೧೨ ನಿವರ್ತನ ಎರೆಭೂಮಿ ಅಲ್ಲದೆ ಎರಡು ಗ್ರಾಮಗಳನ್ನು 'ಬ್ರಹ್ಮದೇಯ ಕ್ರಮೇಣ' (ಅಂದರೆ ಬ್ರಾಹ್ಮಣರಿಗೆ ಒದಗಿಸುತ್ತಿದ್ದ ಬ್ರಹ್ಮದೇಯದ ರೀತಿಯಲ್ಲಿ) ಪಡೆದುಕೊಂಡ ನಿದರ್ಶನವಿದೆ. ಅಂದು ರಾಜರಿಂದ ಇಷ್ಟೊಂದು ಆಸ್ತಿಯನ್ನು ಸಂಪಾದಿಸಿದ ವೈದಿಕ ಬ್ರಾಹ್ಮಣರ ಉದಾಹರಣೆಗಳು ಕಂಡುಬರುವುದಿಲ್ಲ. ದ್ವಿಜರಾಗಿದ್ದರೂ ಬ್ರಾಹ್ಮಣರಲ್ಲದ ಕಾರಣ ಇವರು ಸಹಜವಾಗಿಯೇ ಅಧಿಕೃತ ವೈದಿಕ ಗೋತ್ರಗಳಿಂದ ಗುರುತಿಸಿಕೊಳ್ಳಲಿಲ್ಲ. ಒಬ್ಬಿಬ್ಬರು ಹೀಗೆ ಗುರುತಿಸಿಕೊಂಡರೂ ಮಿಕ್ಕವರೆಲ್ಲ ವಿಶ್ವಕರ್ಮ ಗೋತ್ರದಿಂದಲೇ ಗುರುತಿಸಿಕೊಳ್ಳುತ್ತಿದ್ದರು. ಹತ್ತನೆಯ ಶತಮಾನದ ರಾಷ್ಟ್ರಕೂಟರ ಶಾಸನಗಳ ಒಬ್ಬಿಬ್ಬರು ಲಿಪಿಕಾರರು ಕಾಯಸ್ಥರೆಂದೂ ಕಾಯಸ್ಥಗೋತ್ರದವರೆಂದೂ ಹೇಳಿಕೊಂಡಿರುವರು. ಬ್ರಾಹ್ಮಣರೊಡನೆ ಸ್ಪರ್ಧೆಯಲ್ಲಿದ್ದ ಈ ಲಿಪಿಕಾರರು ಅಂದು ತಮ್ಮ ವೃತ್ತಿಗೆ ತಕ್ಕ ಗೋತ್ರಗಳನ್ನು ಹೊಸದಾಗಿ ನಿರ್ಮಿಸಿಕೊಂಡರೆಂದು ಕಾಣುತ್ತದೆ. ಇವರಿಬ್ಬರಿಗಿಂತ ಭಿನ್ನರಾದ ನೂರಾರು ಶಿಲ್ಪಿಗಳ ಇನ್ನೊಂದು ವರ್ಗವಿದ್ದು, ಅದು ಯಾವ ವಿಶೇಷಣ, ಅಧಿಕಾರಸ್ಥಾನ, ಭೂಕೊಡುಗೆಗಳನ್ನು ಪಡೆಯುತ್ತಿರಲಿಲ್ಲ. ಬಾದಾಮಿ ಚಾಳುಕ್ಯರ ಆಶ್ರಯದಲ್ಲಿ ಕೋಟೆ, ಗುಹಾಲಯ, ದೇವಾಲಯ ಕಟ್ಟಿದ ೧೫೦ಕ್ಕೂ ಹೆಚ್ಚು ಸಂಖ್ಯೆಯ ಇಂಥ ಲಿಪಿಶಿಲ್ಪಿಗಳನ್ನು ಶೋಧಿಸಿ, ಅವರ ಹಸ್ತಾಕ್ಷರಗಳನ್ನು ಸಂಗ್ರಹಿಸಿ, ನವೀನ ಬಗೆಯಲ್ಲಿ ಗಣಕಯಂತ್ರದಲ್ಲಿ ಶುದ್ಧೀಕರಿಸಿ, ನಮ್ಮ ಮುಂದಿಟ್ಟಿದ್ದು ಮಾತ್ರವಲ್ಲ, ಇವರ ಕಾಲ, ಸ್ಥಳ, ಕಾರ್ಯವಿಧಾನವನ್ನು ಪ್ರೊ. ಶೆಟ್ಟರ್ ಪರಿಚಯಿಸಿರುವರು. ಈ ಲಿಪಿಶಿಲ್ಪಿಗಳ ಹೆಜ್ಜೆ ಗುರುತುಗಳನ್ನು ಅರ್ಥಮಾಡಿಕೊಂಡರೆ ಚಾಳುಕ್ಯರು ನಿರ್ಮಿಸಿದ ಬಹಳಷ್ಟು ಸ್ಮಾರಕಗಳ ಇತಿಹಾಸವು ಬಿಚ್ಚಿಕೊಳ್ಳುತ್ತದೆ.

ಆರಂಭ ಕಾಲದ (ನಾಲ್ಕು-ಐದನೆಯ ಶತಮಾನದ) ಶರ್ಮ ಮತ್ತು ವರ್ಮ ಪದಾಂತ್ಯ ಹೆಸರಿನ ನಾಲ್ಕಾರು ಜನರನ್ನು ಬಿಟ್ಟರೆ, ಮೊದಲ ಸಹಸ್ರಮಾನದ ಬಹುತೇಕ ಲಿಪಿಕಾರರು ಬ್ರಾಹ್ಮಣೇತರಾಗಿದ್ದರು. ಈ ತ್ವಷ್ಟರು ತಾಮ್ರಪಟ ಟಂಕಿಸುವುದರಲ್ಲಿ ಎಲ್ಲರಿಗಿಂತ ಹೆಚ್ಚು ನಿಷ್ಣಾತರಾಗಿದ್ದರು. ಸಂಸ್ಕೃತ ಮತ್ತು ಕನ್ನಡಭಾಷೆಯ ಪಠ್ಯವನ್ನು ಪದ್ಯ ಮತ್ತು ಗದ್ಯದಲ್ಲಿ ರಚಿಸಿ ಕಂಡರಿಸುವಷ್ಟು ವಿದ್ಯಾವಂತರೂ ಆಗಿದ್ದರು. ಇದರಿಂದಾಗಿ ಬ್ರಾಹ್ಮಣರೇ ಪ್ರಶಸ್ತಿಗಳನ್ನು ಬರೆಯುತ್ತಿದ್ದರೆಂಬ ಸ್ಥೂಲ

ಕಲ್ಪನೆಯನ್ನೀಗ ನಾವು ಕೈಬಿಡುವಂತಾಗಿದೆ. ಇದನ್ನು ಹೆಚ್ಚು ಸ್ಪಷ್ಟಪಡಿಸಲು ಪ್ರೊ. ಶೆಟ್ಟರ್ ಅವರು ಕೊಳಗಲ್ ಶಾಸನ ಬರೆದ ಕಮ್ಮಾರ ಕುಲದ ಮಧುಸೂದನ ಹೆಸರಿನ ಲಿಪಿಕಾರನನ್ನು ಪರಿಣಾಮಕಾರಿಯಾಗಿ ಉದಾಹರಿಸಿರುವರು.

ಲಿಪಿಕಾರರ ಚರ್ಚೆಯೊಂದಿಗೆ ಹಳಗನ್ನಡ ಲಿಪಿ-ವರ್ಣ-ಭಾಷೆಗಳ ವೈವಿಧ್ಯತೆಯನ್ನು ಚರ್ಚೆಗೆ ಎತ್ತಿಕೊಂಡು, ಕನ್ನಡಭಾಷಾ ಚರಿತ್ರೆಯನ್ನು ಭಿನ್ನ ಬಗೆಯಲ್ಲಿ ಪ್ರೊ. ಶೆಟ್ಟರ್ ಇಲ್ಲಿ ನೋಡಿರುವರು. ಪ್ರಾಕೃತ ಸ್ವಾಮ್ಯವು ಮೂರನೆಯ ಶತಮಾನದಲ್ಲಿ ಅಂತ್ಯಗೊಂಡಾಗ, ಅದರ ಸ್ಥಾನವನ್ನು ಸಂಸ್ಕೃತ ಪಡೆದುಕೊಳ್ಳಲೆತ್ನಿಸಿದ್ದನ್ನು, ಆಗ ಲಿಪಿರಹಿತ ಸಂಸ್ಕೃತ ಭಾಷೆಗೆ ಕನ್ನಡಲಿಪಿಯನ್ನೇ ಬಳಸುತ್ತಿದ್ದುದನ್ನು ಸ್ಪಷ್ಟಪಡಿಸಿದ್ದಾರೆ. ಇದರ ಮೊದಲ ಹೆಜ್ಜೆಯನ್ನು ಕರ್ನಾಟಕದ ಪ್ರಾಕೃತ ಶಾಸನಗಳಲ್ಲಿ ಕಾಣುವ ಪ್ರಯತ್ನಮಾಡಿ, ಆರಂಭ ಕಾಲದ (ಕ್ರಿ.ಶ. ೪೦೦) ಗಂಗರ ಶಾಸನ ಮತ್ತು ಕ್ರಿ.ಶ. ೩೫೦ರದೆಂದು ರೈಸ್ ಭಾವಿಸಿದ ತಗರ್ತಿ ಅಗ್ರಹಾರದ ಶಾಸನಗಳು ಹಲ್ಮಿಡಿ ಶಾಸನಕ್ಕೆ ಪ್ರಾಚೀನವಾಗಿರಬಹುದೆಂಬ ವಾದವನ್ನು ಮಂಡಿಸಿದ್ದಾರೆ. ಬ್ರಾಹ್ಮೀ ಹೊಕ್ಕಳ ಬಳ್ಳಿಯಿಂದ ಕ್ರಮೇಣ ಬೇರ್ಪಡುವ ಸಂಧಿಕಾಲದಲ್ಲಿ ಕನ್ನಡವು 'ಋ' ಮುಂತಾದ ಸ್ವರಾಕ್ಷರಗಳನ್ನು, ವರ್ಗೀಯ ಮಹಾಪ್ರಾಣಾಕ್ಷರಗಳನ್ನು, ಅವರ್ಗೀಯ ಶ, ಷ, ಹ ಮುಂತಾದವುಗಳನ್ನು ಈವರೆಗೆ ಭಾವಿಸಿದಂತೆ ಸಂಸ್ಕೃತದ ಬದಲು ಬಹುಶಃ ಪ್ರಾಕೃತದಿಂದ ಪಡೆದಿರುವುದೆಂದು ತೋರಿಸಿಕೊಟ್ಟು, ನಮ್ಮ ಅರಿವನ್ನು ತಿದ್ದಿರುವರು. ಸಂಸ್ಕೃತಭಾಷೆಗೆ ಕನ್ನಡಲಿಪಿಯೇ ಬಳಕೆಯಾಗಿರುವುದರಿಂದ ಕನ್ನಡಕ್ಕಾದ ಲಾಭ ಹಾನಿಗಳನ್ನು, ಸಂಸ್ಕೃತವು ಕನ್ನಡದ ಮೇಲೆ ಬೀರಿದಂತೆ ಕನ್ನಡವೂ ಸಂಸ್ಕೃತದ ಮೇಲೆ ಬೀರಿದ ಪ್ರಭಾವವನ್ನು ಇಲ್ಲಿ ಬಿಚ್ಚಿ ತೋರಿಸಿದ್ದಾರೆ. ಹಳಗನ್ನಡ ಬರಹಗಳನ್ನು ಜಾಲಾಡಿ, ಅಲ್ಲಿ ಕಂಡುಬರುವ ಮಿಶ್ರಭಾಷಾ ಹಾಗೂ ದ್ವಿಭಾಷಾ ಬರಹಗಳನ್ನೆತ್ತಿ ತೋರಿಸಿದ್ದಾರೆ.

ಹೀಗೆ ಲಿಪಿವ್ಯವಸಾಯವನ್ನು ಚರ್ಚಿಸುತ್ತ ಮೊದಲ ಸಹಸ್ರಮಾನದ ಕನ್ನಡ ಕವಿಚರಿತ್ರೆ, ಸಾಹಿತ್ಯಚರಿತ್ರೆ ಮತ್ತು ಸಾಮಾಜಿಕ ಚರಿತ್ರೆಗಳನ್ನು ಇವರು ಮರುವ್ಯಾಖ್ಯಾನಿಸಿದ್ದಾರೆ. ತಾಮ್ರಪಟಗಳನ್ನು, ಶಿಲಾಶಾಸನಗಳನ್ನು ಬರೆದು ಕಂಡರಿಸುವ ತಾಂತ್ರಿಕ ಕ್ರಿಯೆಯನ್ನಲ್ಲದೆ, ಕನ್ನಡ ವರ್ಣವಿಕಾಸ, ಭಾಷಾವಿಕಾಸ, ಸಂಸ್ಕೃತ-ಹಳಗನ್ನಡಗಳ ಒಡನಾಟ, ಪದ್ಯಗದ್ಯದ ಸ್ವರೂಪ ಮತ್ತು ದೇವಸ್ವ, ಬ್ರಹ್ಮಸ್ವ, ವೀರಗೊಡುಗೆ, ಅಧಿಕಾರಕೊಡುಗೆ, ಬಿತ್ತುವಾಟಕೊಡುಗೆ-ಈ ಮುಂತಾದವುಗಳನ್ನು ಇಲ್ಲಿ ಸಮಗ್ರವಾಗಿ ಚರ್ಚಿಸಿದ್ದಾರೆ. ಈವರೆಗೂ ಬ್ರಾಹ್ಮಣ ಮತ್ತು ಕ್ಷತ್ರಿಯರ ಸುತ್ತ ಹೆಣೆದಿದ್ದ ಇತಿಹಾಸವನ್ನು ಶೂದ್ರರ ವರೆಗೂ ವಿಸ್ತರಿಸಿ, ಸಮಾಜಕ್ಕಾಗಿ ಜೀವತೆತ್ತ ಮಾದಿಗ, ಚರ್ಮಕಾರ, ಇನ್ನಿತರ ಶೂದ್ರರಿಗೆ ಇತಿಹಾಸದಲ್ಲಿ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ವಾಸ್ತವವಾಗಿ ಸಮಾಜಚರಿತ್ರೆಯ ಮರು ಅಧ್ಯಯನವಾಗಿರುವ ಇದು, ಮೊದಲ ಸಹಸ್ರಮಾನದ ಸಾಮಾಜಿಕ ಚರಿತೆಯಲ್ಲಿದ್ದ ಕಂದಕಗಳನ್ನು ತುಂಬಿಕೊಡುವ ಪ್ರಯತ್ನವಾಗಿದೆ. ಇವರು ಮಂಡಿಸಿರುವ ಈ ಮುಂದಿನ ಎರಡು ಹೊಸ ವಾದಗಳು ವಿಶೇಷ ಗಮನ ಸೆಳೆಯುತ್ತವೆ: ಎಂಟನೆಯ ಶತಮಾನದ ವರೆಗೆ ಆಳಿದ ಬಹುತೇಕ ಅರಸು ಮನೆತನಗಳು ತಮ್ಮ ಶೂದ್ರ ಹಾಗೂ ಬುಡಕಟ್ಟಿನ ಹಿನ್ನೆಲೆಯನ್ನು ಉದಾತ್ತೀಕರಿಸಿಕೊಳ್ಳುವ ಅವಸರದಲ್ಲಿ ಉತ್ತರದ ಅಹಿಚ್ಛತ್ರ ಹಾಗೂ ಗಂಗಾತೀರದ ಬ್ರಾಹ್ಮಣರನ್ನು ಬರಮಾಡಿಕೊಂಡು ಅವರಿಗೆ ಬ್ರಹ್ಮದೇಯಗಳನ್ನು ಪೂರೈಸಿ, ತಮ್ಮ ರಾಜ್ಯದ ನೆಲಕ್ಕೆ ಪಾವಿತ್ರ್ಯಯನ್ನುಂಟುಮಾಡಿಕೊಳ್ಳುವ ಭ್ರಮೆಯಲ್ಲಿದ್ದವು. ಸುಮಾರು ಎಂಟನೆಯ

ಶತಮಾನದಲ್ಲಿ ಇದು ಬದಲಾಗಿ, ತಮ್ಮ ರಾಜ್ಯವನ್ನು ಉಳಿಸಿ ಬೆಳೆಸಲು ವೈದಿಕರ ಯಜ್ಞಯಾಗಾದಿಗಳ ಮಂತ್ರಶಕ್ತಿಗಿಂತ ನೆರಳಿನಂತೆ ತಮ್ಮೊಡನಿರುವ ಶ್ರಮಿಕ-ಶೂದ್ರರ ದೈಹಿಕ ಹಾಗೂ ನೈತಿಕ ಶಕ್ತಿ ಹೆಚ್ಚು ಮುಖ್ಯವೆಂಬುದನ್ನು ಮನದಂದು, ಬ್ರಾಹ್ಮಣರನ್ನು ಗೌರವಿಸಿದಂತೆ ಇವರನ್ನೂ ಗೌರವಿಸತೊಡಗಿದರು. ಇದರ ಪರಿಣಾಮವಾಗಿ, ಎಂಟನೆಯ ಶತಮಾನಕ್ಕಿಂತ ಮುಂಚೆ ಅಪರೂಪವಾಗಿದ್ದ ವೀರಗೊಡುಗೆಗಳು ಅನಂತರ ಹೆಚ್ಚುಗೊಂಡ ಚಿತ್ರವನ್ನು ಇವರು ನಮ್ಮ ಮುಂದಿಟ್ಟಿದ್ದಾರೆ. ರಾಜ್ಯರಕ್ಷಣೆ, ಸಮಾಜರಕ್ಷಣೆ, ಪಶುರಕ್ಷಣೆಗಳಿಗಾಗಿ ಒಡೆಯನ ಉಪ್ಪಿನ ಋಣ ತೀರಿಸಲು ದೇಹತೆತ್ತ ವೀರರನ್ನು ಸನ್ಮಾನಿಸಿ ಅವರ ಕುಟುಂಬಕ್ಕೆ 'ನೆತ್ತರ್ಪಟ್ಟಿ', 'ಬಾಳ್ಗಚ್ಚು', 'ಕಲ್ನಾಟು', 'ಮೆಚ್ಚುಗೊಡುಗೆ', 'ಪೆರ್ಜ್ಜರಪು' ಮುಂತಾದ ಕೊಡುಗೆಗಳನ್ನು ಅಂದಿನ ಅರಸರು ಪ್ರಥಮ ಬಾರಿಗೆ ಜಾರಿಗೆ ತಂದದ್ದನ್ನು, ಈ ಪದಗಳಿಂದ ಕನ್ನಡ ನಿಘಂಟು ಸಮೃದ್ಧಗೊಂಡುದನ್ನು ಇವರು ತಿಳಿಸಿರುವರು. ರಾಷ್ಟ್ರಕೂಟರು ಬ್ರಾಹ್ಮಣರಿಗೆ ಭೂದತ್ತಿ ಕೊಡುವುದನ್ನು ಕಡಿಮೆಮಾಡಿ, ದೇವಾಲಯ ಸಂಸ್ಕೃತಿಯನ್ನು ಒಂದು ಮಿತಿಯಲ್ಲಿ ಪ್ರೋತ್ಸಾಹಿಸಿ, ವೀರಕೊಡುಗೆಗಳಿಗೆ ಹೆಚ್ಚು ಗಮನಹರಿಸಿದ್ದನ್ನು ಇಲ್ಲಿ ಅಂಕಿ-ಸಂಖ್ಯೆ ಸಹಿತ ದಾಖಲಿಸಿದ್ದಾರೆ. ಬ್ರಾಹ್ಮಣದತ್ತಿಗಳನ್ನು ಒಂದಿಷ್ಟು ಅಂತ್ಯಗೊಳಿಸಿ, ರಾಜ್ಯಸೇವೆಯಲ್ಲಿ ತೊಡಗಿಕೊಂಡ ವೀರರಿಗೆ, ಅಧಿಕಾರಿಗಳಿಗೆ, ಸಮಾಜಸೇವಕರಿಗೆ ನೊಳಂಬಪಲ್ಲವ, ಆಳುಪ, ಬಾಣ, ವೈದುಂಬ ಮತ್ತು ಚೋಳ ಅರಸರು ಹೆಚ್ಚಿನ ಗೌರವ ಸಲ್ಲಿಸಿದ ವಿಚಾರವಿಲ್ಲಿದೆ ಮತ್ತು ಈಗ ಕಲ್ನಾಡು, ಬಾಳ್ಗರ್ಚು, ಕೀಳ್ಗುಂಟೆ, ಬಿತ್ತುವಾಟ ನಗರತ್ತರಕೊಡುಗೆ, ಗಾವುಂಡಕೊಡುಗೆ, ವೈಶ್ಯದತ್ತಿ ಎಂಬ ಕೊಡುಗೆಗಳನ್ನಿತ್ತ, ಸಮಾಜ ಸೇವಕರಿಗೆ ಕಡಗ ತೊಡಿಸಿ, ರಾಜಚಿಹ್ನೆಗಳನ್ನಿತ್ತ, ಪಟ್ಟಗಟ್ಟಿ ಗೌರವಿಸಿದ ಚಿತ್ರವನ್ನು ಇಲ್ಲಿ ಬಿಡಿಸಿರುವರು. ಹೆಚ್ಚಿನದಾಗಿ ಈ ಅರಸರು ಸಂಸ್ಕೃತಭಾಷೆಯನ್ನು ಬಳಸಿದುದು, ಬ್ರಾಹ್ಮಣರಿಗೆ ದಾನದತ್ತಿ ನೀಡಿದುದು ಅತ್ಯಲ್ಪವೆಂಬುದನ್ನು ತೋರಿಸಿಕೊಟ್ಟಿರುವರು.

ಈ ಗ್ರಂಥದ ಹಿರಿಮೆ ಸಂಶೋಧನೆಗೆ ಮಾತ್ರ ಸೀಮಿತವಾಗಿಲ್ಲ; ಅದನ್ನು ಅಭಿವ್ಯಕ್ತಿಸಿದ ಬಗೆಗೂ ಆ ಹಿರಿಮೆ ವಿಸ್ತರಿಸಿಕೊಂಡಿದೆ. ಹಳಗನ್ನಡದ ಓದು ಮತ್ತು ಚರ್ಚೆ ಬೇಸರ ತರುವ ವಿಷಯವೆಂದು ಬೇರೆ ಹೇಳಬೇಕಿಲ್ಲ. ಹೀಗಾಗಿ ಅನೇಕ ಕನ್ನಡ ಭಾಷಾಸಕ್ತರೂ ಈ ಕ್ಷೇತ್ರದಿಂದ ದೂರ ಸರಿಯುತ್ತಲಿದ್ದಾರೆ. ಶಾಸನ ಅಧ್ಯಯನ ಇದಕ್ಕಿಂತಲೂ ಬೇಸರದ ವಿಷಯವೆಂಬ ಭಾವನೆಯಿದೆ. ಇದನ್ನು ಗಮನಿಸಿ ಪ್ರೊ. ಶೆಟ್ಟರ್ ಈ ಗ್ರಂಥವನ್ನು ಆದಷ್ಟು ಆಕರ್ಷಕಗೊಳಿಸಲು ಪ್ರಯತ್ನಿಸಿರುವರು. ಆಕರಗಳನ್ನೆಲ್ಲ ಟಿಪ್ಪಣಿ ಮತ್ತು ಅನುಬಂಧದಡಿ ಜೋಡಿಸಿ, ಪಠ್ಯವನ್ನು ಇವುಗಳ ಹೊರೆಯಿಂದ ಮುಕ್ತಗೊಳಿಸಿ, ಇದನ್ನು ಆಕರ್ಷಕ ಓದನ್ನಾಗಿಸಿದ್ದಾರೆ. ಅಲ್ಲದೆ, ಅನೇಕ ಪುಟಗಳ ಮೇಲ್ಭಾಗದಲ್ಲಿ ಶಾಸನಪಠ್ಯದ ಚಿತ್ರಗಳನ್ನು ಕೊಟ್ಟು, ಈವರೆಗೂ ಮರೀಚಿಕೆಯಾಗಿದ್ದ ಶಾಸನಗಳ ಲಿಪಿವಿನ್ಯಾಸ, ಭಾಷಾವೈಶಿಷ್ಟ್ಯಗಳನ್ನು ವಾಚಕರು ನೇರವಾಗಿ ಅನುಭವಿಸಲು ಅನುವು ಮಾಡಿಕೊಟ್ಟಿರುವರು. ಇದೊಂದು ಕನ್ನಡದಲ್ಲಿ ಹೊಸ ರೀತಿ, ಭಾರತೀಯ ಬರವಣಿಗೆಯಲ್ಲಿ ಪ್ರಥಮ ಪ್ರಯೋಗವೆನಿಸಿದೆ. ಇದಲ್ಲದೆ ಶಾಸನಗಳನ್ನು ಗಣಕಯಂತ್ರದಲ್ಲಿ ಶುದ್ಧೀಕರಿಸಿ, ಪ್ರತಿಯೊಂದು ವರ್ಣವನ್ನು ಸರಿಯಾಗಿ ಅರಿತುಕೊಳ್ಳುವ ತಂತ್ರವೊಂದನ್ನು ಶೆಟ್ಟರ್ ಇತ್ತೀಚೆ ಆವಿಷ್ಕಾರಗೊಳಿಸಿದ್ದು, ಇದು ಶಾಸನ ಅಧ್ಯಯನಕ್ಕೊಂದು ಮಾದರಿಯನ್ನು ಒದಗಿಸಿದೆ; ವೈಜ್ಞಾನಿಕ ನಿರೂಪಣೆಗೆ ಇದೆಷ್ಟು ಅವಶ್ಯವೆಂಬುದನ್ನು ತೋರಿಸಿಕೊಟ್ಟಿದೆ.

ಕರ್ನಾಟಕದ ಶಾಸನ ಲಿಪಿವ್ಯವಸಾಯವನ್ನು ಕೇಂದ್ರವಾಗಿಟ್ಟುಕೊಂಡಿದ್ದರೂ ಲಿಪಿಗೆ ಸಂಬಂಧಿಸಿದ ಭಾಷೆ, ಭಾಷೆಗೆ ಸಂಬಂಧಿಸಿದ ಪಠ್ಯ, ಪಠ್ಯವನ್ನು ನಿಯಂತ್ರಿಸಿದ ಧರ್ಮ ಮತ್ತು ರಾಜಧರ್ಮ, ಇವೆಲ್ಲವುಗಳಿಗೆ ನೆಲೆಯಾದ ಸಮಾಜ ಇತ್ಯಾದಿಗಳನ್ನು ತನ್ನ ತೆಕ್ಕೆಗೆ ತಬ್ಬಿಕೊಳ್ಳುವ ಮೂಲಕ ಈ ಗ್ರಂಥ ಹಲವು ಶಿಸ್ತುಗಳ ಸಂಗಮವಾಗಿ ಬೆಳೆದಿದೆ. ಈ ಎಲ್ಲ ಶಿಸ್ತುಗಳ ಮೇಲೆ ಈ ಕೃತಿ ಕಟ್ಟಡ ಎದ್ದು ನಿಂತಿದೆ.

ಅಶೋಕನ ಶಾಸನಗಳಲ್ಲಿ ಒಬ್ಬ ವ್ಯಕ್ತಿ, ಒಂದು ರಾಜಮನೆತನ, ಒಂದು ಧರ್ಮ, ಒಂದು ಉದ್ದೇಶವಿದ್ದರೆ, ಅನಂತರದ ಶಾಸನಗಳಲ್ಲಿ ಹಲವು ವ್ಯಕ್ತಿ, ಹಲವು ರಾಜಮನೆತನ, ಹಲವು ಧರ್ಮ, ಹಲವು ಉದ್ದೇಶಗಳು ಬಿಚ್ಚಿಕೊಂಡು ಬೆಳೆದವು. ಇವುಗಳ ಮಾಧ್ಯಮವಾದ ಹಲವು ಚಹರೆಯ ಬ್ರಾಹ್ಮೀಲಿಪಿಗಳು, ಪ್ರಾಕೃತ–ಸಂಸ್ಕೃತ–ಕನ್ನಡಭಾಷೆಗಳು, ಇವುಗಳಿಗಿಂತ ಲಿಪಿಕಾರರ ವೈವಿಧ್ಯಪೂರ್ಣ ಜೀವನದ ಮಾಹಿತಿಗಳು ಶಾಸನಗಳಲ್ಲಿ ಬಿಡಿಬಿಡಿಯಾಗಿ ಬಿದ್ದುಕೊಂಡಿರುತ್ತವೆ. ಇವೆಲ್ಲವನ್ನೂ ಬೇಸರವಿಲ್ಲದೆ ಸಂಗ್ರಹಿಸಿ, ಸರಿಯಾಗಿ ವ್ಯವಸ್ಥೆಗೊಳಿಸಿ, ಆಳವಾಗಿ ಪರಾಮರ್ಶಿಸಿದ ಪ್ರಥಮ ಪ್ರಯತ್ನವಿದು. ವಿದ್ವತ್ತಿನ ಮೇಲಿನ ಪ್ರೀತಿಗಾಗಿ ಇದೆಲ್ಲವನ್ನು ಪೂರೈಸಿ ತಮ್ಮ ಸಂಶೋಧನಸೂಕ್ಷ್ಮಗಳಿಂದ ನಮ್ಮ ತಿಳಿವಳಿಕೆಯನ್ನು ವಿಸ್ತರಿಸಿದ ಪ್ರೊ. ಶೆಟ್ಟರ್ ಅವರಿಗೆ ಕನ್ನಡಿಗರ ಕೃತಜ್ಞತೆಗಳು ಸಲ್ಲುತ್ತವೆ.

ಆಕರ : ಮಾರ್ಗ ಸಂಪುಟ–೭

■■

೨೧೬

ಅಪ್ರಕಟಿತ ಪ್ರಾಚೀನ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರ ಮಾತು

೨೦೦೭

ಪ್ರಾಚೀನ ಹಸ್ತಪ್ರತಿಗಳು ರಾಷ್ಟ್ರದ ಸಾಂಸ್ಕೃತಿಕ ಸಂಪತ್ತು. ಇವುಗಳ ಶೋಧ-ಸಂರಕ್ಷಣೆ-ಪ್ರಕಟಣೆ-ಪ್ರಸಾರ ಸರಕಾರದ ಮತ್ತು ಸಾರ್ವಜನಿಕರ ಕರ್ತವ್ಯದ ಭಾಗವಾಗಿದೆ. ಹೀಗಿದ್ದೂ ನಮ್ಮ ಕೆಲವು ಪ್ರಾಚೀನ ಗ್ರಂಥಗಳು ಒಮ್ಮೆ-ಇನ್ನೊಮ್ಮೆ-ಮತ್ತೊಮ್ಮೆ ಬೆಳಕು ಕಂಡರೆ, ಇನ್ನು ಕೆಲವು ಒಮ್ಮೆಯೂ ಬೆಳಕು ಕಾಣದೆ ಕತ್ತಲಲ್ಲಿ ಉಳಿದುಬಿಟ್ಟಿವೆ. ಈ ಉಳಿಯುವಿಕೆಗೆ ನಮ್ಮ ಕಾಲದ ಬದಲಾದ ಒಲವುಗಳೇ ಕಾರಣವೆನಿಸಿವೆ.

ನಮ್ಮಲ್ಲಿ ಹಳೆಯ ಕಾವ್ಯಗಳ ಮುದ್ರಣ ಆರಂಭವಾದುದು ನವೋದಯ ಕಾಲದಲ್ಲಿ. ಆಗ ರಸನಿಷ್ಠ ರಮ್ಯಸಾಹಿತ್ಯದ ಪ್ರಕಟಣೆಗೆ ತೋರಿದಷ್ಟು ಉತ್ಸಾಹ, ಉಳಿದ ಸಾಹಿತ್ಯದ ವಿಷಯದಲ್ಲಿ ನಮ್ಮ ವಿದ್ವಾಂಸರು ತೋರಲಿಲ್ಲ. ಇದರಿಂದಾಗಿ ಬೇರೆ ದೃಷ್ಟಿಯಿಂದ ಮೌಲಿಕವೆನಿಸುವ ಅನೇಕ ಕೃತಿಗಳು ಅವಗಣನೆಗೆ ಗುರಿಯಾದವು. ಹೀಗೆ ಅವಗಣನೆಗೆ ಗುರಿಯಾದವುಗಳಲ್ಲಿ ಸಿರುಮನ ಚರಿತೆಯಂಥ ಚಾರಿತ್ರಿಕ ಕಾವ್ಯಗಳು, ಬಸವಣ್ಣನವರ ಟೀಕಿನ ವಚನಗಳಂಥ ಟೀಕಾಗ್ರಂಥಗಳು, ಲೋಕೋಪಕಾರದಂಥ ಲೌಕಿಕಶಾಸ್ತ್ರ ಕೃತಿಗಳು, ಶ್ರಾವಕಾಚಾರದಂಥ ಧಾರ್ಮಿಕ ಗ್ರಂಥಗಳು ಮುಖ್ಯವಾದವು. ತತ್ವಪದ, ಗ್ರಂಥಸ್ಥ ಲಾವಣಿ, ಸ್ಥಳ ಮಹಾತ್ಮೆ, ದಾಖಲು ಸಾಹಿತ್ಯ ಇತ್ಯಾದಿ ಪ್ರಕಾರಗಳನ್ನೂ ಇಲ್ಲಿ ಹೆಸರಿಸಬಹುದು.

ಮುಂದುವರಿದು ಹೇಳುವುದಾದರೆ, ಒಂದು ಕಾಲದಲ್ಲಿ ಮಹತ್ವದ್ದೆನಿಸಿದ್ದ ಗ್ರಂಥ ಬದಲಾದ ಕಾಲದಲ್ಲಿ ಮಹತ್ವವನ್ನು ಕಳೆದುಕೊಳ್ಳಬಹುದಾಗಿದೆ. ೧೯-೨೦ನೆಯ ಶತಮಾನಗಳಲ್ಲಿ ರಾಜಶೇಖರ ವಿಳಾಸಕ್ಕೆ ಇದ್ದ ಆಕರ್ಷಣೆ ಇಂದು ಅಷ್ಟಾಗಿ ಕಂಡುಬರುವುದಿಲ್ಲ. ಪ್ರಾಚೀನ ಕಾಲದಲ್ಲಿ ಮಂತ್ರಗೋಪ್ಯ, ಕರಣಹಸಿಗೆ ಪ್ರತಿಗಳೇ ಹೆಚ್ಚು ಸಿಗುವುದರಿಂದ, ಅಂದು ವಚನಕ್ಕಿಂತ ಈ ಸಾಹಿತ್ಯವೇ ಹೆಚ್ಚು ಮಹತ್ವಪಡೆದುದು ಸ್ಪಷ್ಟವಾಗುತ್ತದೆ.

ಹೀಗೆ ಸಮಕಾಲೀನ ಸಾಹಿತ್ಯದ ಅಭಿರುಚಿಯಲ್ಲದೆ, ವಿವಿಧ ಸಮಾಜಗಳ ಸಂಖ್ಯಾಪ್ರಮಾಣ, ಸಾಕ್ಷರತೆ ಇತ್ಯಾದಿಗಳೂ ಇಲ್ಲಿ ಕಾರಣವೆನಿಸುತ್ತವೆ. ಸಂಸ್ಕೃತದ ಒಲವಿನ ಕಾರಣವಾಗಿ ವೈದಿಕ ಸಮಾಜ ತಮ್ಮ ಕನ್ನಡ ಗ್ರಂಥಗಳ ಪ್ರಕಟಣೆಗೆ ಅಷ್ಟಾಗಿ ಆಸಕ್ತಿ ತೋರಲಿಲ್ಲ. ವಿಪುಲ ಸಾಹಿತ್ಯವಿದ್ದರೂ ಅಲ್ಪಸಂಖ್ಯೆ ಕಾರಣವಾಗಿ ಜೈನಕೃತಿಗಳು ಹೆಚ್ಚು ಪ್ರಕಟವಾಗಲಿಲ್ಲ. ಲಿಂಗಾಯತ ಕೃತಿಗಳು ಮಾತ್ರ ಸಾಮಾಜಿಕ ಬಹುಸಂಖ್ಯೆ ಇತ್ಯಾದಿ ಕಾರಣಗಳಿಂದಾಗಿ ತಕ್ಕ ಪ್ರಮಾಣದಲ್ಲಿ ಬೆಳಕು ಕಂಡವು.

ಈ ವರೆಗಿನ ವಿವರಣೆಯಿಂದ "ತಾತ್ವಿಕವಾಗಿ ಯಾವುದೇ ಕೃತಿ ಮುಖ್ಯವಲ್ಲ –ಅಮುಖ್ಯವಲ್ಲ; ಅದಕ್ಕೆ ಅದರದ್ದೇ ಆದ ಓದುಗರು ಇರುತ್ತಾರೆ"–ಎಂದು ಗ್ರಂಥಾಲಯ ಶಾಸ್ತ್ರಜ್ಞರು ಹೇಳುವುದು ಸಾಮಾನ್ಯವಾಗಿ ನಿಜವೆನಿಸುತ್ತದೆ. ಇದನ್ನು ಗಮನಿಸಿಯೇ "ಕಳೆದು ಹೋಗುವ ಮುನ್ನ ಪ್ರಾಚೀನ ಎಲ್ಲ ಗ್ರಂಥಗಳನ್ನು ಒಮ್ಮೆಯಾದರೂ ಮುದ್ರಿಸಬೇಕು" ಎಂಬ ವಿದ್ವಾಂಸರ ಹೇಳಿಕೆ ಇಲ್ಲಿ ಮುಖ್ಯವೆನಿಸುತ್ತದೆ. ಕಾಗದ ರಹಿತ ಸಂಸ್ಕೃತಿಯ ಇಂದಿನ ಕಾಲದಲ್ಲಿ ಕೊನೆಯ ಪಕ್ಷ ಇವುಗಳ ಕಂಪ್ಯೂಟರೀಕರಣ ಕಾರ್ಯವಾದರೂ ನಮ್ಮಲ್ಲಿ ಜರುಗಬೇಕಿದೆ. ಇಂಥ ಧೋರಣೆಗಳ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಕೈಗೆತ್ತಿಕೊಂಡಿರುವ "ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನ ಯೋಜನೆ", ಏಕೀಕೃತ ಕರ್ನಾಟಕದ ಸುವರ್ಣ ಸಂದರ್ಭಕ್ಕೆ ಸಲ್ಲಿಸುವ, ಒಂದು 'ಸುವರ್ಣ ಯೋಜನೆ'ಯೆಂದೇ ಹೇಳಬೇಕು.

ಕನ್ನಡದಲ್ಲಿ ಪ್ರಾಚೀನ ಗ್ರಂಥಮುದ್ರಣಕಾರ್ಯಕ್ಕೆ ಸುಮಾರು ೧೫೦ ವರ್ಷಗಳ ಇತಿಹಾಸವಿದೆ. ಅಂದಿನಿಂದ ಇದು ನಮ್ಮಲ್ಲಿ ನಿಲ್ಲದೆ ನಡೆದು ಬಂದಿದೆ. ಆರಂಭದಲ್ಲಿ ಕಲ್ಲಚ್ಚು ಮುದ್ರಣದ ಮೂಲಕ ಈ ಮಣಿಹವನ್ನು ಆರಂಭಗೊಳಿಸಿದವರು ಕ್ರೈಸ್ತಪಾದ್ರಿಗಳು ಮತ್ತು ಸ್ಥಳೀಯ ವ್ಯಾಪಾರಿವರ್ಗದ ಶೆಟ್ಟರು. ಕ್ರಮೇಣ ಇದು "ಗ್ರಂಥಸಂಪಾದನೆ" ಹೆಸರಿನಿಂದ ವಿದ್ವಾಂಸರ ಕೈಯಲ್ಲಿ ಶಾಸ್ತ್ರವಾಗಿ ಬೆಳೆಯಿತು. ಇವರು ಹಲವು ಹಸ್ತಪ್ರತಿಗಳ ಭಿನ್ನಪಾಠಗಳನ್ನು ಸಂಗ್ರಹಿಸಿ, ಮೂಲವೆನ್ನಬಹುದಾದ ಪಾಠವನ್ನು ನಿರ್ಣಯಿಸುವ ವಿದ್ವತ್ ಪದ್ಧತಿಯನ್ನು ಅಸ್ತಿತ್ವಕ್ಕೆ ತಂದರು. ಆರಂಭದಲ್ಲಿ ಉತ್ತಮವೆನಿಸುವ ಒಂದು ಹಸ್ತಪ್ರತಿಯನ್ನು ಮುಖ್ಯವಾಗಿ ಇಟ್ಟುಕೊಂಡು, ಮಿಕ್ಕವುಗಳನ್ನು ಸಹಾಯಕ ಪ್ರತಿಯೆಂದು ಪರಿಗಣಿಸುತ್ತಿದ್ದರು. ಕ್ರಮೇಣ ಎಲ್ಲ ಭಿನ್ನಪಾಠಗಳನ್ನು ದಾಖಲಿಸುವ ಹವ್ಯಾಸಕ್ಕೆ ಇಳಿಯುವಲ್ಲಿ ಎಲ್ಲವೂ ಮುಖ್ಯಪ್ರತಿಯ ಸ್ಥಾನಗೌರವ ಪಡೆದವು. ಇದರಿಂದಾಗಿ ಈ ಪದ್ಧತಿ ಹತ್ತು ಹಸ್ತಪ್ರತಿ ಬಳಸಿ ಹನ್ನೊಂದನೆಯ ಮಿಶ್ರಪ್ರತಿ ಸಿದ್ಧಪಡಿಸುವ ದೋಷಪೂರ್ಣ ವಿಧಾನದ ನೆಲೆಯನ್ನು ಮುಟ್ಟಿತು. ಹೀಗಾಗಿ ಒಂದು ಉತ್ತಮ ಪ್ರತಿಯನ್ನು ಇಟ್ಟುಕೊಂಡು, ಅನಿವಾರ್ಯವೆನಿಸಿದಲ್ಲಿ ಮಾತ್ರ ಬೇರೆ ಪ್ರತಿ ಅಥವಾ ಪ್ರತಿಗಳ ಪಾಠ ಬಳಸುವ ಹೊಸ ವಿಧಾನ ಇಂದು ಮಾನ್ಯತೆ ಪಡೆಯುತ್ತಲಿದೆ. ಇದರಿಂದ ಮಿಶ್ರಪ್ರತಿರೂಪದ ಪರಿಷ್ಕರಣಕ್ಕೆ ಬದಲು ಕೊನೆಯ ಪಕ್ಷ ಒಂದು ಉತ್ತಮ ಹಸ್ತಪ್ರತಿಯನ್ನಾದರೂ ಶುದ್ಧೀಕರಿಸಿ–ಉಳಿಸಿ ಕೊಟ್ಟಂತಾಗುತ್ತದೆ. ಪ್ರಸ್ತುತ ಯೋಜನೆಯಲ್ಲಿ ಸಾಮಾನ್ಯವಾಗಿ ಈ ವಿಧಾನವನ್ನು ಅನುಸರಿಸಲಾಗಿದೆ.

ಪ್ರಾಚೀನಕೃತಿಗಳ ಪ್ರಕಟನಕಾರ್ಯ ನಮ್ಮ ನಾಡಿನಲ್ಲಿ ಸರಕಾರ ಮತ್ತು ಸಾರ್ವಜನಿಕ ಸಂಸ್ಥೆಗಳ ಮೂಲಕ ಕೈಗೂಡುತ್ತ ಬಂದಿದೆ. ೧೮೫೮ರಷ್ಟು ಹಿಂದೆಯೇ ಮದ್ರಾಸ ಸರಕಾರ ಪ್ರಾಚ್ಯಸಂಶೋಧನಾಲಯವನ್ನು ಅಸ್ತಿತ್ವಕ್ಕೆ ತಂದಿತು. ಇಂಥ ಇನ್ನೊಂದು ಸಂಸ್ಥೆ ೧೮೯೪ರಷ್ಟು

ಹಿಂದೆ ಮೈಸೂರಿನಲ್ಲಿ ತಲೆಯೆತ್ತಿತು. ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆ ೧೯೩೯ರಲ್ಲಿ ಸ್ಥಾಪನೆಗೊಂಡಿತು. ಬಳಿಕ ಮೈಸೂರು, ಕರ್ನಾಟಕ ಮೊದಲಾದ ವಿಶ್ವವಿದ್ಯಾಲಯಗಳು ಹಸ್ತಪ್ರತಿ ವಿಭಾಗ ಆರಂಭಿಸಿದವು. ಕನ್ನಡ ಸಾಹಿತ್ಯ ಪರಿಷತ್ತು ಈ ದಿಸೆಯಲ್ಲಿ ಒಂದಿಷ್ಟು ಕೆಲಸ ಮಾಡಿತು. ಜೈನ, ಲಿಂಗಾಯತ ಮಠಗಳು ಮತ್ತು ಸಾಮಾಜಿಕ ಸಂಸ್ಥೆಗಳು ಈ ಕಾರ್ಯಕ್ಕೆ ಕೈಜೋಡಿಸಿದವು. ಈ ಎಲ್ಲ ಸಂಸ್ಥೆಗಳು ಸಂಸ್ಕೃತಿಯ ರಕ್ಷಣೆ ತಮ್ಮ ಕರ್ತವ್ಯವೆಂಬ ಭಾವನೆಯಿಂದ ಅನೇಕಾನೇಕ ಪ್ರಾಚೀನಕೃತಿಗಳನ್ನು ಪ್ರಕಟಿಸಿದವು. ಹೀಗಿದ್ದೂ ಈ ಕ್ಷೇತ್ರದಲ್ಲಿ ಪೂರೈಸಬೇಕಾದ ಕೆಲಸ ಇನ್ನೂ ಬಹಳ ಉಳಿದುಕೊಂಡಿದೆ. ಇದನ್ನು ಮನಗಂಡು ಕರ್ನಾಟಕ ರಾಜ್ಯಪತ್ರಾಗಾರ ಇಲಾಖೆ, ಈ ಯೋಜನೆಯನ್ನು ಅಸ್ತಿತ್ವಕ್ಕೆ ತಂದಿದೆ.

ಈ ಯೋಜನೆ ಪ್ರಸ್ತುತ ಆರ್ಥಿಕ ವರ್ಷದ (೨೦೦೬-೦೭) ಆರಂಭದಲ್ಲಿ ಮಂಜೂರಾದರೂ ಆಡಳಿತಾತ್ಮಕ ಎಲ್ಲ ತೊಡಕುಗಳನ್ನು ನೀಗಿಸಿಕೊಂಡು ಅಸ್ತಿತ್ವಕ್ಕೆ ಬಂದುದು, ಆರ್ಥಿಕ ವರ್ಷದ ಅಂತ್ಯದಲ್ಲಿ. ೧೭ ಫೆಬ್ರುವರಿ ೨೦೦೭ರಂದು ಸೇರಿದ ಸಂಪಾದಕ ಮಂಡಳಿಯ ಪ್ರಥಮಸಭೆಯಲ್ಲಿ ಸ್ವೀಕೃತವಾದ ನಿರ್ಣಯಗಳ ಬೆಳಕಿನಲ್ಲಿ, ಈ ಗ್ರಂಥಗಳು ಬೆಳಕು ಕಾಣುತ್ತಲಿವೆ.

ಈವರೆಗೆ ಪ್ರಸಿದ್ಧ ಕವಿಗಳ ಪ್ರಸಿದ್ಧ ಕೃತಿಗಳ ಪ್ರಕಟನೆಯ ಬಗ್ಗೆ ಆಸಕ್ತಿವಹಿಸುವ ಮೂಲಕ ಸ್ಥಳೀಯ ಚಾರಿತ್ರಿಕ ಕೃತಿಗಳು ಉಪೇಕ್ಷಿಸಲ್ಪಟ್ಟಿವೆ. ಇಲ್ಲಿಯ ನುಂಕೆಮಲೆ ಸಿದ್ಧೇಶ್ವರ ಪುರಾಣ, ಬೊಮ್ಮಲಿಂಗ ಕಾವ್ಯ, ಗುಂಡಬಸವ ಚರಿತ್ರೆ, ಮೋನಪ್ಪಯ್ಯನ ಚಾರಿತ್ರ, ಕಂಚಿಪುರಾಣ, ರಾಮನಾಥ ವಿಲಾಸ ಸ್ಥಳೀಯ ಮಹಾತ್ಮರ ಚರಿತ್ರೆಗಳಾಗಿದ್ದು, ಇವು ಕಳೆದುಹೋದ ಸ್ಥಾನಿಕ ಇತಿಹಾಸದ ಕೊಂಡಿಗಳೆನಿಸಿವೆ. ಈವರೆಗೆ ಕಡೆಗಣಿಸಲ್ಪಟ್ಟ ಟೀಕಾಸಾಹಿತ್ಯದ ಏಕೋತ್ತರಶತಸ್ಥಲೀ, ವಾತುಲಶುದ್ಧಾಗಮ ಟೀಕೆ, ಸ್ವರ ಏಕೋತ್ತರಶತಸ್ಥಲ ಟೀಕೆಗಳು ಇಲ್ಲಿ ಬೆಳಕು ಕಾಣುತ್ತಲಿವೆ. ಚರಿತ್ರೆಯ ಆಕರ ಸಂಪುಟ, ಮೂಡಬಿದರೆ ಬಸ್ತಿಗಳಲ್ಲಿರುವ ಬಿಂಬಗಳ ಲೆಕ್ಕಪುಸ್ತಕಗಳು ದಾಖಲು ಸಾಹಿತ್ಯವರ್ಗಕ್ಕೆ ಸೇರುತ್ತವೆ. ಅಂಜನಾಚರಿತೆ, ಮುನಿವಂಶಾಭ್ಯುದಯ, ಜೈನಸಾಹಿತ್ಯವಾಗಿದ್ದು, ಚಂದಯ್ಯೋಪಾಧ್ಯಾಯನ ಸಮಗ್ರ ಸಾಹಿತ್ಯ ಸಂಪುಟವೂ ಇದರ ಭಾಗವಾಗಿದೆ. ಭೈರವೇಶ್ವರ ಪುರಾಣ, ದೇವರ ದಾಸಿಮಯ್ಯನವರ ಪುರಾಣ ಪ್ರಸಿದ್ಧ ಶಿವಶರಣರ ಇತಿಹಾಸ ತಿಳಿಸುತ್ತವೆ. ಗ್ರಂಥಸ್ಥ ಲಾವಣಿ ಸಂಪುಟವು ಹಳೆಯ ಜಾನಪದ ಬಂಧಗಳನ್ನೊಳಗೊಂಡಿದೆ. ಸ್ವರವಚನ ತರಂಗಿಣಿ, ಈವರೆಗೆ ಉಪೇಕ್ಷಿಸಲ್ಪಟ್ಟ ಗೀತಸಾಹಿತ್ಯಕ್ಕೆ ಸಂಬಂಧಿಸಿದೆ. ಶಿಲ್ಪಶಾಸ್ತ್ರ ಮತ್ತು ರಸಮಂಜರಿ ಶಾಸ್ತ್ರಕೃತಿಗಳಾಗಿವೆ. ಕಲ್ಪನಾ ರತ್ನಮ್ ಸಂಸ್ಕೃತಭಾಷೆಯದಾಗಿದ್ದರೂ ಪ್ರಸಿದ್ಧ ಗಂಗ ಅರಸು ಶಿವಮಾರನದೆಂಬ ಕಾರಣದಿಂದ, ಇದನ್ನು ಕನ್ನಡ ವಿವರಣೆಯೊಂದಿಗೆ ಪ್ರಕಟಿಸುತ್ತಿದ್ದೇವೆ. ಹೀಗೆ ಈ ಕೃತಿಗಳ ಪ್ರಕಟಣೆಯ ಹಿಂದೆ ಒಂದು ನಿರ್ದಿಷ್ಟ ಉದ್ದೇಶವಿರುವುದನ್ನು ಗಮನಿಸಬಹುದಾಗಿದೆ. ಒಟ್ಟಾರೆ ಈ ಯೋಜನೆ ಸಾಹಿತ್ಯಕೃತಿಗಳನ್ನಲ್ಲದೆ ದಾಖಲು ಸಾಹಿತ್ಯಕೃತಿಗಳನ್ನೂ ಅಳವಡಿಸಿಕೊಳ್ಳುವ ಮೂಲಕ 'ಪತ್ರಾಗಾರ ಇಲಾಖೆ' ಹೆಸರಿಗೆ ನ್ಯಾಯ ಒದಗಿಸಿದೆ.

ನಮ್ಮ ಹಸ್ತಪ್ರತಿ ಸಂಪತ್ತು ತುಂಬ ದೊಡ್ಡದು. ಇದರಲ್ಲಿ ಅಪ್ರಕಟಿತ ಕೃತಿಗಳ ಸಂಖ್ಯೆಯೂ ಗಣನೀಯವೆನಿಸಿದೆ. ಆದುದರಿಂದ ಈ ಯೋಜನೆ ಈ ವರ್ಷಕ್ಕೇ ನಿಲ್ಲಬಾರದು, ಮುಂದುವರಿಯಬೇಕು. ಹೀಗೆ ಬಿಡಿ ಬಿಡಿ ಕೃತಿಗಳನ್ನಲ್ಲದೆ ಅಪ್ರಕಟಿತ ಸ್ಥಳಪುರಾಣಗಳು, ತತ್ವಪದಗಳು, ಟೀಕಾಕೃತಿಗಳು,

ಲೌಕಿಕ ಶಾಸ್ತ್ರಗ್ರಂಥಗಳು– ಇತ್ಯಾದಿ ಒಳಯೋಜನೆ ರೂಪಿಸಿಕೊಳ್ಳಲೂ ಇಲ್ಲಿ ಅವಕಾಶವಿದೆ. ಹೆಚ್ಚಿನದಾಗಿ ಪತ್ರಾಗಾರ ಇಲಾಖೆಗೆ ಸಂಬಂಧಪಟ್ಟಂತೆ ಪ್ರತಿಯೊಂದು ಸಂಸ್ಥಾನದ, ಪ್ರತಿಯೊಬ್ಬ ಗಣ್ಯವ್ಯಕ್ತಿಯ ಕಾಗದ–ಪತ್ರ ಸಂಪುಟಗಳನ್ನೂ ಪ್ರಕಟಿಸಬಹುದಾಗಿದೆ. ಎಲ್ಲ ಹಸ್ತಪ್ರತಿಗಳ ಸೂಚಿಗಳನ್ನು, ಸೂಚಿಗಳ ಸೂಚಿಗಳನ್ನೂ ಯೋಜನಾ ಬದ್ಧವಾಗಿ ಬೆಳಕಿಗೆ ತರಬಹುದಾಗಿದೆ. ಆದುದರಿಂದ ಸರಕಾರ ಈ ಯೋಜನೆಗಾಗಿ ಪ್ರತಿವರ್ಷ ಹಣ ತೆಗೆದಿಡುವುದು ಅವಶ್ಯವಿದೆ.

ಈ ಬೃಹತ್ ಯೋಜನೆ ಒಬ್ಬರಿಂದ ಮುಗಿಯುವಂಥದ್ದಲ್ಲ. ಅನೇಕ ಜನ ಪರಿಣಿತರ, ಅದರಲ್ಲಿಯೂ ಹಸ್ತಪ್ರತಿ ಅಧ್ಯಯನಶೀಲರ ನೆರವನ್ನು ಬಯಸುತ್ತದೆ. ಶ್ರಮವಂತೂ ಅವಶ್ಯಬೇಕು. ಹಣ–ಕೀರ್ತಿಗಳಿಗೆ ಎರವಾಗಿರುವ ಈ ಕ್ಷೇತ್ರ ಸಹಜವಾಗಿಯೇ ಅನಾಕರ್ಷಕವಾದುದು. ಹೀಗಿದ್ದೂ, ಸಂಸ್ಕೃತಿಯ ಮೇಲಿನ ಪ್ರೀತಿ ಕಾರಣವಾಗಿ ವಿದ್ವಾಂಸರು ಈ ಕೆಲಸಕ್ಕೆ ಮುಂದುಬರಬೇಕಾಗುತ್ತದೆ. ಪ್ರಸ್ತುತ ಯೋಜನೆ ಈ ದೃಷ್ಟಿಯಿಂದ ಸುದೈವಿಯೆಂದೇ ಹೇಳಬೇಕು. ಏಕೆಂದರೆ, ಆರಂಭವಾಗುತ್ತಲೇ ಎಲ್ಲ ವಿದ್ವಾಂಸರು ಇದರಲ್ಲಿ ತೊಡಗಿಸಿಕೊಳ್ಳಲು ಉತ್ಸಾಹದಿಂದ ಮುಂದೆ ಬಂದರು. ಇವರೆಲ್ಲರಿಗೆ ಕೃತಜ್ಞ.

ಸಂಪಾದಕ ಮಂಡಳಿಯ ಸದಸ್ಯರು ತೀವ್ರ ಆಸಕ್ತಿವಹಿಸಿ, ಸಲಹೆ ಸೂಚನೆ ನೀಡಿ, ಈ ಯೋಜನೆಯ ಬುನಾದಿ–ಕಟ್ಟಡಗಳ ವಿನ್ಯಾಸದಲ್ಲಿ ನೆರವಾಗಿದ್ದಾರೆ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ ಅವರು ಈ ಬಗ್ಗೆ ತೋರಿದ ಆಸಕ್ತಿ ಅನನ್ಯ. ಈ ಇಲಾಖೆಯ ಶ್ರೀ.ಟಿ.ಇ.ಮಲ್ಲಿಕಾರ್ಜುನಪ್ಪ ಮೊದಲಾದ ಸಿಬ್ಬಂದಿ ವರ್ಗದವರ ನೆರವು ಸ್ಮರಣೀಯ. ಇವರೆಲ್ಲರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಕರ್ನಾಟಕ ಸರಕಾರ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು–೨೦೦೭

ಆಕರ : ಮಾರ್ಗ ಸಂಪುಟ–೭

■■

೨೧೭

ಅಪ್ರಕಟಿತ ಪ್ರಾಚೀನ ದಾಖಲೆ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರ ಮಾತು

೨೦೧೧

ಕರ್ನಾಟಕ ಏಕೀಕರಣದ 'ಸುವರ್ಣವರ್ಷ' ಸಂದರ್ಭದಲ್ಲಿ ರಾಜ್ಯ ಪತ್ರಾಗಾರ ಇಲಾಖೆ "ಪ್ರಾಚೀನ ಅಪ್ರಕಟಿತ ಸಾಹಿತ್ಯ ಪ್ರಕಟನ ಯೋಜನೆಯ ಅಡಿಯಲ್ಲಿ ೨೫ ಪುಸ್ತಕಗಳನ್ನು ಪ್ರಕಟಿಸಿತು. ಇದರ ಮುಂದುವರಿಕೆಯೆಂಬಂತೆ ಈ ವರ್ಷ ಪ್ರಸ್ತುತ ೨೬ ಪುಸ್ತಕಗಳನ್ನು ಪ್ರಕಟಿಸುತ್ತಿದೆ.

ಪ್ರಾಚೀನ ಸಾಹಿತ್ಯ ಮತ್ತು ದಾಖಲೆಗಳು ನಮ್ಮ ಪರಂಪರೆಯ ಅಪೂರ್ವ ಆಕರ ಸಾಮಗ್ರಿಯೆನಿಸಿವೆ. ಕಳೆದ ೧೫೦ ವರ್ಷಗಳಿಂದ ಇವುಗಳ ಶೋಧ–ಪರಿಷ್ಕರಣ–ಪ್ರಕಟನ ಕಾರ್ಯವನ್ನು ವಿದ್ವಾಂಸರು ಮುನ್ನಡೆಸಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಇವರೆಲ್ಲ ಸಾಹಿತ್ಯಿಕ ಮೌಲ್ಯದ ಮತ್ತು ಮಾರ್ಗೀಯ ಪರಂಪರೆಯ ಕವಿ ಕೃತಿಗಳತ್ತ ಹೆಚ್ಚು ಗಮನ ಹರಿಸಿದರು. ಹೀಗಾಗಿ ಸಾಹಿತ್ಯೇತರ ಮೌಲ್ಯದ ಮತ್ತು ಪ್ರಾದೇಶಿಕ ಪರಂಪರೆಯ ಕವಿ ಕೃತಿಗಳು ಉಪೇಕ್ಷೆಗೆ ಒಳಗಾದವು. ಇಂಥ ಸಾಹಿತ್ಯ ಪ್ರಕಟನೆಯ ಮಹತ್ವವನ್ನು ಅರ್ಥಮಾಡಿಕೊಂಡು ರಾಜ್ಯ ಪತ್ರಾಗಾರ ನಿರ್ದೇಶನಾಲಯ ಪ್ರಸ್ತುತ ಯೋಜನೆಯನ್ನು ಮುಂದುವರಿಸಿದೆ.

ಕಳೆದ ವರ್ಷ ಮೈಸೂರು ಒಡೆಯರ ಆಕರ ಸಾಹಿತ್ಯ ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು, ಚರಿತ್ರೆಯ ಆಕರ ಸಂಪುಟ, ಮೂಡಬಿದರೆ ಬಸದಿಗಳಲ್ಲಿರುವ ಬಿಂಬಗಳ ಲೆಕ್ಕ ಪುಸ್ತಕ ಹೆಸರಿನ ಶುದ್ಧ ಚರಿತ್ರೆಗಳನ್ನೂ ಚಂದಯ್ಯೋಪಾಧ್ಯಾಯನ ಸಮಗ್ರ ಸಾಹಿತ್ಯ ಸಂಪುಟ, ಶರಣ ಮೋನಪ್ಪಯ್ಯನ ಚಾರಿತ್ರ, ನುಂಕೆಮಲೆ ಸಿದ್ಧೇಶ್ವರ ಪುರಾಣ, ಬೊಮ್ಮಲಿಂಗದೇವರ ಕಾವ್ಯ, ಗುಂಡಬಸವೇಶ್ವರ ಚರಿತ್ರೆ, ಕಂಚಿಪುರಾಣ ಹೆಸರಿನ ಪ್ರಾದೇಶಿಕ ಸ್ಥಳ ಪುರಾಣಗಳನ್ನೂ, ಗ್ರಂಥಸ್ಥ ಲಾವಣಿಯಂಥ ಜನಪದ ಸಾಹಿತ್ಯ ಕೃತಿಯನ್ನೂ, ಸ್ವರವಚನತರಂಗಿಣಿ, ದಾಸರಾಯರ ಪದಗಳು ಹೆಸರಿನ ವಚನ–ಕೀರ್ತನ ಸಾಹಿತ್ಯವನ್ನೂ ಸ್ವರ ಏಕೋತ್ತರಶತಸ್ಥಲಟೀಕೆ, ವಾತುಲಶುದ್ಧಾಗಮ ಟೀಕಾ, ಜಕ್ಕಣಾರ್ಯವಿರಚಿತ ಏಕೋತ್ತರಶತಸ್ಥಲೀಯಯಂತಹ ಟೀಕಾ ಗ್ರಂಥಗಳನ್ನೂ ಗೃಹ ವಾಸ್ತು

ಮತ್ತು ಶಿಲ್ಪಶಾಸ್ತ್ರ, ಕಲ್ಪನಾರತ್ನಂ, ರಸಮಂಜರಿಯಂಥ ಶಾಸ್ತ್ರ ಕೃತಿಗಳನ್ನು, ಬೇತಾಳ ಪಂಚವಿಂಶತಿ, ಬೊಮ್ಮಲಿಂಗದೇವರ ಕಾವ್ಯ, ಭೈರವೇಶ್ವರ ಪುರಾಣ, ರಾಮನಾಥ ವಿಲಾಸಂ, ಅಂಜನಾ ಚರಿತೆ, ದೇವರದಾಸಿಮಯ್ಯನವರ ಪುರಾಣ ಹೆಸರಿನ ಪೌರಾಣಿಕ, ಐತಿಹಾಸಿಕ ಕೃತಿಗಳನ್ನೂ ಪ್ರಕಟಿಸಿದ ನಾವು ಈ ವರ್ಷ ಇದೇ ಮಾದರಿಯ ಗ್ರಂಥಗಳನ್ನು, ಅದರಲ್ಲಿಯೂ ವಿಶೇಷವೆಂಬಂತೆ ಐತಿಹಾಸಿಕ-ಸಾಹಿತ್ಯ ಕೃತಿ ಮತ್ತು ದಾಖಲು ಸಾಹಿತ್ಯ ಕೃತಿಗಳನ್ನು ಹೊರತರುತ್ತಲಿದ್ದೇವೆ.

ಇವುಗಳಲ್ಲಿ ಚಾರಿತ್ರಿಕ ಕಾವ್ಯ, ಚಾರಿತ್ರಿಕ ದಾಖಲೆ, ಶಾಸ್ತ್ರ, ಕೋಲುಪದ, ಹೋಳಿಪದ, ಧವಳದ ಹಾಡು, ಕೀರ್ತನೆ ಇತ್ಯಾದಿ ಕೃತಿಗಳಿವೆ. ಹೊನ್ನಕವಿಯ ಸಮಗ್ರ ಸಾಹಿತ್ಯ, ಚಂದ್ರಸಾಗರವರ್ಣಿಯ ಸಾಹಿತ್ಯ ಸಂಪುಟದಂಥ ಸಂಕಲನಗಳಿವೆ. ಪ್ರಾಚೀನ ಪದ್ಯ ಸಂಕಲನ (ವೆಂಕ)ದಂತ ಪದ್ಯ ಸಂಗ್ರಹ ಕೃತಿಯಿದೆ. ವಿಶ್ವಕರ್ಮ ಸಮಾಜದ ವಿಶ್ವಕರ್ಮಪುರಾಣ, ಜೈನ ಸಮಾಜದ ಭವ್ಯಜನ ಚಿಂತಾಮಣಿ, ಲಿಂಗಾಯತ ಸಮಾಜದ ಸಕಲೇಶ ಮಾದರಸ, ವಜ್ರಬಾಹು, ಶಿವಲಿಂಗ, ಅಮರೇಶ, ಗಾಜುಲು ಬೊಮ್ಮಯ್ಯರನ್ನು ಕುರಿತ ಕೃತಿಗಳಿವೆ. ಮೈಸೂರು ಒಡೆಯರು, ಕೆಳದಿ ಅರಸರು, ಕದಿರೆ ರಾಯರು, ವೇಣುಪುರದ ಅರಸರು, ಬಿಳಗಿಲ ಅರಸರು, ಬಾಗುಳಿ ಅರಸರು, ಕೆಂಪೇಗೌಡರು ಮೊದಲಾದವರ ಚರಿತ್ರೆಗಳೂ ಇಲ್ಲಿ ಇಂಬು ಪಡೆದಿವೆ. ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಕುರಿತು ಸಿ.ಕೆ.ವೆಂಕಟರಾಮಯ್ಯನವರು ಬರೆದ ಆಳಿದ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ ಕೃತಿಯ ಪರಿಷ್ಕೃತ ಕೃತಿಯೂ ಇಲ್ಲಿದೆ. ಸಂಗೀತ ಶಾಸ್ತ್ರ, ವೈದ್ಯಶಾಸ್ತ್ರ ಕೃತಿಗಳಿಗೆ ಇಲ್ಲಿ ಅವಕಾಶ ಕೊಡಲಾಗಿದೆ. ಹೀಗೆ ವೈವಿಧ್ಯಪೂರ್ಣ ಪ್ರಕಾರಗಳನ್ನೊಳಗೊಂಡ ಸಾಹಿತ್ಯ ರಾಶಿಯ ಈ ಎರಡನೆಯ ಕಂತು ಈಗ ಹೊರಬರುತ್ತಲಿದೆ. ಈ ಕೃತಿಗಳು ನಮ್ಮ ಸಂಸ್ಕೃತಿಯ ಪುನರ್‌ರಚನೆ-ವಿಸ್ತರಣೆಗಳಿಗೆ ನೆರವಾಗುವ ಸಾಧ್ಯತೆಯಿದೆ.

ಈ ಮಾದರಿಯನ್ನು ಮುಂದುವರೆಸಿ ಜಗದೇವರಾಯನ ಕಾವ್ಯ, ರಾಜನೃಪ ಚರಿತ್ರೆ, ಸೊಣ್ಣ ಭೈರೇಗೌಡನ ಕಾವ್ಯ, ಹೂಲಿಕಲ್ಲ ಸಂಸ್ಥಾನ ಚರಿತ್ರೆ, ಹೊನ್ನಾವರದ ಹೊನ್ನೇಗೌಡರ ವಂಶಾವಳಿ, ಹೊಯ್ಸಳರಾಜರ ಚರಿತ್ರೆ ಇತ್ಯಾದಿ ಕೃತಿಗಳನ್ನು ಶೋಧಿಸಿ ಪ್ರಕಟಿಸುವುದರತ್ತ ಪತ್ರಾಗಾರ ಇಲಾಖೆ ಗಮನಕೊಡುವುದೆಂದು ಆಶಿಸುತ್ತೇನೆ.

ಇಂಥ ಯೋಜನೆಯ ಯಶಸ್ಸಿಗೆ ಇಲಾಖೆಯ ಅಧಿಕಾರಿಗಳ, ಸಲಹಾ ಸಮಿತಿಯ, ಸಂಪಾದಕರ ಸಹಾಯ-ಸಲಹೆ-ಶ್ರಮ ಅತ್ಯವಶ್ಯ. ಇದೆಲ್ಲವನ್ನು ಪಡೆದ ಭಾಗ್ಯ ನನ್ನದಾಗಿದ್ದು, ಇವರೆಲ್ಲರಿಗೂ ಕೃತಜ್ಞನಾಗಿದ್ದೇನೆ. ಕಾರ್ಯದರ್ಶಿಗಳಾದ ಶ್ರೀ ರಮೇಶ ಝಳಕಿ ಅವರಿಗೂ, ಇಲಾಖೆಯ ನಿರ್ದೇಶಕರಾದ ಶ್ರೀ ಕಂಚಿ ವರದಯ್ಯ ಅವರಿಗೂ, ಉಪನಿರ್ದೇಕರಾದ ಶ್ರೀ ಟಿ.ಇ. ಮಲ್ಲಿಕಾರ್ಜುನಪ್ಪ ಅವರಿಗೂ ಮಿಕ್ಕ ಸಿಬ್ಬಂದಿ ವರ್ಗಕ್ಕೂ ಕೃತಜ್ಞತೆಗಳು.

ಕರ್ನಾಟಕ ಸರಕಾರ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು-೨೦೧೧.

ಆಕರ : ಮಾರ್ಗ ಸಂಪುಟ-೭

■■

೨೧೮

ಸ.ಸ. ಮಾಳವಾಡ ಜನ್ಮಶತಮಾನೋತ್ಸವ ಆವೃತ್ತಿ : ದಾರಿಸಾಗಿದೆ

೨೦೧೧

ಆಧುನಿಕ ಕರ್ನಾಟಕದ ಸಾಹಿತ್ಯ-ಸಂಸ್ಕೃತಿಗಳ ಇತಿಹಾಸದಲ್ಲಿ ಪ್ರೊ. ಸ.ಸ. ಮಾಳವಾಡ ಅವರದು ಸುಪ್ರಸಿದ್ಧ ಹೆಸರು. ದಕ್ಷಿಣೋತ್ತರ ಕರ್ನಾಟಕದ ಸಾಂಸ್ಕೃತಿಕ ಸೇತುವೆಯಾಗಿ, ಧಾರವಾಡ ನಗರಕ್ಕೆ ಸಾಂಸ್ಕೃತಿಕ ರಾಜಧಾನಿ ವರ್ಚಸ್ಸು ತಂದುಕೊಟ್ಟ ಮುಖ್ಯರಲ್ಲಿ ಒಬ್ಬರಾಗಿ, ಅವರು ದುಡಿದ ರೀತಿ ಚರಿತ್ರಾರ್ಹವೆನಿಸಿದೆ.

ಪ್ರೊ. ಮಾಳವಾಡರು ನವೋದಯ ಕಾಲಘಟ್ಟದ ಕನ್ನಡ ಪ್ರಾಧ್ಯಾಪಕರು. ವ್ಯಕ್ತಿತ್ವದ ಸಾಮಾಜೀಕರಣ ಈ ಸಂದರ್ಭದ ಗಣ್ಯರ ಗುರಿಯಾಗಿದ್ದಿತು. ಹೀಗಾಗಿ ಮೂಲತಃ ಶಿಕ್ಷಕರಾಗಿದ್ದ ಇವರು ಶಿಕ್ಷಣತಜ್ಞರಾಗಿ, ಸಾಹಿತಿಯಾಗಿ, ಸಾಂಸ್ಕೃತಿಕ ವ್ಯಕ್ತಿಯಾಗಿ ತಮ್ಮನ್ನು ವಿಸ್ತರಿಸಿಕೊಳ್ಳುತ್ತಲೇ ಹೋದರು. ಕರ್ನಾಟಕಕ್ಕೆ ಸೀಮಿತರಾಗದೆ, ಕೇಂದ್ರ ಸಾಹಿತ್ಯ ಅಕಾಡೆಮಿ-ಪ್ರಾಚ್ಯವಿದ್ಯಾ ಸಮ್ಮೇಳನಗಳ ಸದಸ್ಯರಾಗಿ ಭಾರತ ವ್ಯಾಪ್ತಿಯಲ್ಲಿ ನಮ್ಮ ನಾಡನ್ನು ಪ್ರತಿನಿಧಿಸಿದರು. ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ, ಧಾರವಾಡ ಆಕಾಶವಾಣಿ ಅಸ್ತಿತ್ವ, ನಾಡಹಬ್ಬ ಆಚರಣೆಗಳಂಥ ಐತಿಹಾಸಿಕ ಘಟನೆಗಳಲ್ಲಿ ಭಾಗಿಯಾದರು. ಉತ್ತರ ಕರ್ನಾಟಕದಲ್ಲಿ ಕನ್ನಡ ಶಿಕ್ಷಣ ಪರಂಪರೆಯ ನಿರ್ಮಾಪಕ, ಮರಾಠಿ ಭಾಷೆಯ ದಬ್ಬಾಳಿಕೆಯನ್ನು ದುರ್ಬಲಗೊಳಿಸಿದ ಕನ್ನಡ ಪರಿಚಾರಕರೆಂದು ಖ್ಯಾತರಾದರು.

ಈ ರೀತಿ ಬಹುಮುಖಿ ಕ್ರಿಯಾಶೀಲರಾಗಿದ್ದ ಕಾರಣ, ಅವರು ಬರೆದ 'ದಾರಿ ಸಾಗಿದೆ' ಹೆಸರಿನ ಆತ್ಮಕಥೆ ಕೇವಲ ವ್ಯಕ್ತಿಚರಿತ್ರೆಯಾಗಿ ಉಳಿಯದೆ, ಒಂದು ಕಾಲಘಟ್ಟದ ಸಾಂಸ್ಕೃತಿಕ ಮಾಹಿತಿಕೋಶವಾಗಿ ಬೆಳೆದಿದೆ. ನಿರ್ದಿಷ್ಟ ಅಂತರದಲ್ಲಿ ನಿಂತು ತಮ್ಮ ಪರಿಸರವನ್ನು, ತಮ್ಮನ್ನು ಕುರಿತು ಆಪ್ತಗದ್ಯಶೈಲಿಯಲ್ಲಿ ಬರೆದ ಕಾರಣ, ಇದು ಚರಿತ್ರೆಗೆ ಚರಿತ್ರೆ, ಸಾಹಿತ್ಯಕ್ಕೆ ಸಾಹಿತ್ಯದ ಆಕಾರ ಪಡೆದು, ಕನ್ನಡದ ಒಂದು ಮಹತ್ವಪೂರ್ಣ ಆತ್ಮಚರಿತ್ರೆಯೆಂಬ ಕೀರ್ತಿ ಗಳಿಸಿದೆ.

ಸ್ವಾಭಿಮಾನ-ಶಿಸ್ತು ಮಾಳವಾಡ ಅವರ ವ್ಯಕ್ತಿತ್ವದ ತಾಯಿ ಬೇರು. 'ನ್ಯಾಯ, ನಿಷ್ಠುರಿ, ದಾಕ್ಷಿಣ್ಯಪರ ನಾನಲ್ಲ' ಎಂಬ ಸೂತ್ರಕ್ಕೆ ಅವರ ವ್ಯಕ್ತಿತ್ವ ವ್ಯಾಖ್ಯಾನವಾಗಿದ್ದಿತು. ಇಂಥ ಕಾರ್ಯ ವೈವಿಧ್ಯ, ಇಂಥ

ವ್ಯಕ್ತಿತ್ವದಿಂದಾಗಿ ಆ ಕಾಲದ ಕನ್ನಡ ಪ್ರಾಧ್ಯಾಪಕರೆಲ್ಲಯೇ ಮಾಳವಾಡ ಅವರು ವಿಶಿಷ್ಟವೆನಿಸಿದ್ದರು. ಬೋಧನೆಯಿಂದ ಬರೆಹಕ್ಕೂ ವಿಸ್ತರಿಸಿಕೊಂಡು, ಸಾಹಿತ್ಯಕೃತಿಯನ್ನು ಮಾತ್ರವಲ್ಲ ಸಾಹಿತ್ಯಪಥವನ್ನೂ ಕನ್ನಡದಲ್ಲಿ ನಿರ್ಮಿಸಿದರು.

೨೦೧೦ ಪ್ರೊ. ಮಾಳವಾಡ ಅವರ ಜನ್ಮ ಶತಮಾನವರ್ಷ. ಈ ಸಂದರ್ಭದಲ್ಲಿ ಧಾರವಾಡ, ವಿಜಾಪುರ ಮೊದಲಾದ ನಗರಗಳಲ್ಲಿ ಅವರ ಜನ್ಮಶತಮಾನ ಸಮಾರಂಭ ಜರುಗಿದವು. ಈ ಶತಮಾನ ಸ್ಮರಣೆಗೆ ಶಾಶ್ವತರೂಪ ಕೊಡುವ ಉದ್ದೇಶದಿಂದ ಅವರ ಆತ್ಮಕಥೆ 'ದಾರಿ ಸಾಗಿದೆ' ಕೃತಿಯ ದ್ವಿತೀಯ ಆವೃತ್ತಿ ಈಗ ಪ್ರಕಟವಾಗುತ್ತಲಿದೆ. ಈ ಕೃತಿಯ ಮೊದಲ ಭಾಗದಲ್ಲಿ ಉಪಶೀರ್ಷಿಕೆಗಳನ್ನು ಹೊಸತಾಗಿ ಕಲ್ಪಿಸಿದುದು, ಕೊನೆಯಲ್ಲಿ ಜೀವನಪಥ ಹೆಸರಿನ ಅನುಬಂಧ ಜೋಡಿಸಿದುದನ್ನು ಬಿಟ್ಟರೆ ಮೂಲರೂಪದಲ್ಲಿಯೇ ಈ ಆವೃತ್ತಿ ಬೆಳಕು ಕಾಣುತ್ತಲಿದೆ.

"ಸ.ಸ.ಮಾಳವಾಡ ಜನ್ಮ ಶತಮಾನೋತ್ಸವ ಸಮಿತಿ" ಸದಸ್ಯರ ಮಾರ್ಗದರ್ಶನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಧನಸಹಾಯ ಕಾರಣವಾಗಿ ಈ ಕೃತಿ ಪ್ರಕಟವಾಗುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಕಾರ್ಯದರ್ಶಿ ಶ್ರೀ ಬಿ.ಆರ್. ಜಯರಾಮರಾಜೇ ಅರಸ್, ಇಂದಿನ ಕಾರ್ಯದರ್ಶಿ ಶ್ರೀ ರಮೇಶ ಝುಳಕಿ ಅವರಿಗೂ, ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಮನು ಬಳಿಗಾರ ಅವರಿಗೂ ಧನ್ಯವಾದಗಳು. ಸ.ಸ. ಮಾಳವಾಡ ಜನ್ಮಶತಮಾನೋತ್ಸವ ಸಮಿತಿಯ ಸದಸ್ಯರಿಗೂ ಈ ಕೃತಿಯ ಮೊದಲ ಆವೃತ್ತಿಯನ್ನು ಪ್ರಕಟಿಸಿದ ಬೆಂಗಳೂರಿನ ಸ್ನೇಹಾ ಪ್ರಕಾಶನದ ಡಾ. ಎಸ್. ವಿದ್ಯಾಶಂಕರ ಅವರಿಗೂ ಕೃತಜ್ಞತೆಗಳು.

ಸ.ಸ. ಮಾಳವಾಡ : ದಾರಿಸಾಗಿದೆ, ಜನ್ಮಶತಮಾನೋತ್ಸವ ಸಮಿತಿ, ಧಾರವಾಡ–೨೦೧೧.

ಆಕರ : ಮಾರ್ಗ ಸಂಪುಟ–೭

■■

೨೧೯

ಪ್ರಾಚೀನ ಗದ್ಯಸಾಹಿತ್ಯ ಮಾಲೆ

ಗೌರವ ಸಂಪಾದಕರ ಮಾತು

೨೦೧೨

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪದ್ಯಕ್ಕೆ ಪ್ರಧಾನ ಪಟ್ಟ; ಗದ್ಯಕ್ಕೆ ಗೌಣಸ್ಥಾನ. ವಸ್ತು ಸ್ಥಿತಿ ಹೀಗಿರುವಾಗ, ಆಧುನಿಕ ವಿದ್ವಾಂಸರು ಪ್ರಾಚೀನ ಪದ್ಯಸಾಹಿತ್ಯಕ್ಕೆ ಆಕರ್ಷಿತರಾಗಿ, ಅಂದಿನ ಗದ್ಯ ಸಾಹಿತ್ಯದ ಪ್ರಕಟನೆ ಅಧ್ಯಯನಗಳನ್ನು ಅವಗಣಿಸುತ್ತ ಬಂದರು. ಇದರಿಂದಾಗಿ ಮೂಲೆಗೆ ಸರಿದಿರುವ ಈ ಸಾಹಿತ್ಯಪ್ರಕಾರವನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರ 'ಪಾಚೀನ ಗದ್ಯ ಸಾಹಿತ್ಯ ಮಾಲೆ' ಹೆಸರಿನ ಯೋಜನೆಯನ್ನು ಕೈಗೆತ್ತಿಕೊಂಡು, ಹತ್ತು ಮುಖ್ಯಕೃತಿಗಳನ್ನು ಪ್ರಕಟಿಸುತ್ತಿದೆ.

ಭಾವನೆ, ಚಿಂತನೆಗಳು ಭಾಷೆಯ ಮೂಲಕ ತಮ್ಮ ಸೆರೆ ಬಿಡಿಸಿಕೊಳ್ಳುವ ಸಂದರ್ಭದಲ್ಲಿ ಅವಲಂಬಿಸುವ ಮುಖ್ಯ ಮಾರ್ಗಗಳು ಎರಡು: ಗದ್ಯ ಮತ್ತು ಪದ್ಯ. ಗದ್ಯಕ್ಕೆ ಲಯ ಕೂಡಿದರೆ ಪದ್ಯವಾಗುತ್ತದೆ. ಆಗ ಅದಕ್ಕೆ ಒಂದು ಬಗೆಯ ಹೆಚ್ಚಿನ ಸೌಂದರ್ಯ ಪ್ರಾಪ್ತವಾಗುತ್ತದೆ. ಹೀಗೆ ಒದಗಿ ಬರುವ ಲಯಸೌಂದರ್ಯದ ಸವಲತ್ತು ಬಳಸಿಕೊಂಡು ಪದ್ಯವು ಕವಿತ್ವದ ಕೊರತೆಯನ್ನು ತುಂಬಿಕೊಳ್ಳುತ್ತದೆ ಎಂಬ ವಾದವನ್ನು ಮಂಡಿಸಿ, 'ಗದ್ಯಂ ಕವೀನಾಂ ನಿಕಷಂ ವದಂತಿ' ಅಂದರೆ ಗದ್ಯವೇ ಕವಿಯ ಸಾಹಿತ್ಯದ ನಿಜವಾದ ಒರೆಗಲ್ಲು ಎಂದು ಗದ್ಯಕವಿಗಳು ಸಾರುತ್ತ ಬಂದಿದ್ದಾರೆ. ಇದು, ಈ ಸಾಹಿತ್ಯ ಪ್ರಕಾರದ ಸೃಜನಕ್ರಿಯೆಯು ಒಂದು ಆಹ್ವಾನವೆಂಬುದನ್ನು ಸೂಚಿಸಿದರೆ, ಕನ್ನಡದ ಮುದ್ದಣನ 'ಗದ್ಯಂ ಹೃದ್ಯಂ ಪದ್ಯಂ ವದ್ಯಂ' ಎಂಬ ಮಾತು ಅದರ ಶ್ರೇಷ್ಠತೆಯನ್ನು ಸಾರುತ್ತದೆ.

ಗದ್ಯವೇ ಇರಲಿ, ಪದ್ಯವೇ ಇರಲಿ, ಕವಿಯ ಕೈಯಲ್ಲಿ ಸಾಹಿತ್ಯವಾಗುವುದರಲ್ಲಿ ಅದರ ಸಾರ್ಥಕತೆ ಇರುತ್ತದೆ. ಇಂಥ ಸಾರ್ಥಕತೆಯನ್ನು ಭಾಷೆಯ ಸಂಕ್ಷೇಪೀಕರಣ ಕಲೆಯಾದ ಪದ್ಯದಲ್ಲಿ ಸಾಧಿಸುವುದು ಸುಲಭ, ವಿಶದೀಕರಣ ಕಲೆಯಾದ ಗದ್ಯದಲ್ಲಿ ಸಾಧಿಸುವುದು ಕಷ್ಟ. ಹೀಗಿದ್ದೂ ಪ್ರಾಚೀನ ಕನ್ನಡದ ಕೆಲವು ಕವಿಗಳು ಇದನ್ನು ಆಹ್ವಾನವಾಗಿ ಸ್ವೀಕರಿಸಿ ಜಯಶಾಲಿಯಾಗಿದ್ದಾರೆ.

ಒಂದು ರಚನೆ ಅಭಿವ್ಯಕ್ತಿ (Exression) ಯೆಂದೂ, ನಿರೂಪಣೆ (Narration)ಯೆಂದೂ ಎರಡು ರೀತಿಯಲ್ಲಿ ಪ್ರಕಟವಾಗುತ್ತದೆ. ನಮ್ಮ ನೆನಪಿನಲ್ಲುಳಿಯುವ ಕವಿಯೊಬ್ಬನ ಗದ್ಯದ ಸಾಲು ಇಲ್ಲವೆ ಪದ್ಯದ ಸಾಲುಗಳೇ ಅಭಿವ್ಯಕ್ತಿ. ಅದು ತನ್ನ ಸೃಜನಶೀಲ ಗುಣದಿಂದಾಗಿ ನಮ್ಮ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತದೆ. ಇಂಥ ಸುಂದರ ಅಭಿವ್ಯಕ್ತಿತ್ವವನ್ನೊಳಗೊಂಡ ಮತ್ತು ಐತಿಹಾಸಿಕ ಕಾರಣದಿಂದಾಗಿ ಮಹತ್ವವೆನಿಸುವ ಪ್ರಾಚೀನ ಕನ್ನಡ ಕೃತಿಗಳ ಪ್ರಕಟನೆ ಯೋಜನೆಯಿದು.

ದಂಡಿಯ ಸಂಸ್ಕೃತ ಕಾವ್ಯಾದರ್ಶವು ಸಾಹಿತ್ಯವನ್ನು ಗದ್ಯ, ಪದ್ಯ, ಮಿಶ್ರ (ನಾಟಕ)ವೆಂದು ಮೂರು ಬಗೆಯಾಗಿ ವರ್ಗೀಕರಿಸಿದೆ. ಇದರ ಆದರ್ಶದಲ್ಲಿ ಆಕಾರ ಪಡೆದ ಕನ್ನಡ ಕವಿರಾಜಮಾರ್ಗವು ಪದ್ಯ, ಗದ್ಯಕಥಾ ಎಂದು ಎರಡು ಬಗೆಯಾಗಿ ವರ್ಗೀಕರಿಸುತ್ತದೆ. ಬಹುಶಃ ಅಂದು ಮಿಶ್ರ(ನಾಟಕ)ವು ಸಂಸ್ಕೃತದಲ್ಲಿ ದೃಶ್ಯಪಾತಳಿಯಲ್ಲಿ ವಾಚನಪಾತಳಿಗೆ ಇಳಿದಿದ್ದರೆ, ಕನ್ನಡಲ್ಲಿ ಅದು ಇನ್ನೂ ದೃಶ್ಯಪಾತಳಿಯಿಂದ ವ್ಯವಹರಿಸುತ್ತಲಿದ್ದುದೇ ಹೀಗೆ ಹೇಳಲು ಕಾರಣವಾಗಿರಬೇಕು. ಅದೇನೇ ಇರಲಿ, "ಅಗಣಿತ ಗುಣ ಗದ್ಯಪದ್ಯಗಳ ಮಿಶ್ರಣರೂಪದ 'ಗದ್ಯಕಥಾ' ಹೆಸರಿನ ಗದ್ಯಪ್ರಕಾರವನ್ನು ಕನ್ನಡದಲ್ಲಿ ಚಿರಂತನಾಚಾರ್ಯರು ರಚಿಸಿರುವುದು" ಎಂದು ಕವಿರಾಜಮಾರ್ಗದಲ್ಲಿ ಹೇಳಲಾಗಿದೆ. ಇದು ಚಂಪೂವನ್ನು ಸೂಚಿಸುವುದೆಂದು ಕೆಲವರು ಹೇಳುವರಾದರೂ ಗದ್ಯಪ್ರಧಾನ ಪದ್ಯಗೌಣವಾಗಿರುವ ಆರಾಧನಾ ಕರ್ಣಾಟ ಟೀಕಾ(ವಡ್ಡಾರಾಧನೆ)ದಂಥ ಕೃತಿಗಳನ್ನು ಸೂಚಿಸುವುದೆಂದು ಬಹುಜನ ವಿದ್ವಾಂಸರು ಒಪ್ಪಿದ್ದಾರೆ.

ಸಂಸ್ಕೃತ ಆಲಂಕಾರಿಲ ಭಾಮಹನು ಗದ್ಯವನ್ನು ಆಖ್ಯಾಯಿಕಾ, ಕಥಾ ಎಂದು ವರ್ಗೀಕರಿಸುತ್ತ, ಆಖ್ಯಾಯಿಕಾ ಸಂಸ್ಕೃದಲ್ಲಿ, ಕಥಾ ಎಲ್ಲ ಭಾಷೆಗಳಲ್ಲಿರಬಹುದೆಂದು ಹೇಳುತ್ತಾನೆ. ಮುಂದುವರಿದು ದಂಡಿಯು ಈ ಕಥೆಯಲ್ಲಿ ಆರ್ಯಾ ಮುಂತಾದ ವೃತ್ತಗಳು ಪ್ರವೇಶ ಪಡೆಯುವವೆಂದು ತಿಳಿಸುತ್ತಾನೆ. ಕವಿರಾಜಮಾರ್ಗಕಾರ ತಿಳಿಸುವ 'ಗದ್ಯಕಥಾ' ಇಲ್ಲಿಯ ಕಥಾ ಪ್ರಕಾರವೇ ಆಗಿದೆ. ಈ ಗದ್ಯಕಥೆಯು ಬಾಣ ಕಾದಂಬರಿಯಂತೆ ಅಖಂಡವೂ ಬೃಹತ್ಕಥೆಯಂತೆ ಬಿಡಿ ಕಥಾಕೋಶವೂ ಆಗಿರಬಹುದಾಗಿದೆ. ಮುಂದುವರಿದು ಕವಿರಾಜಮಾರ್ಗಕಾರನು ಗದ್ಯಕಥೆಯು ಸಕಲಕಲಾಭೂಯಿಷ್ಠವಾಗಿರಬೇಕು, ಉತ್ಕೃಷ್ಟ ಭಾಷಾಶೈಲಿಯುಲ್ಲಿ ಎರಕಗೊಂಡಿರಬೇಕು, ಲೌಕಿಕ ಮತ್ತು ಪಾರಮಾರ್ಥಿಕ ವರ್ಣನಾನಿರ್ಣಿಕ್ತವಾಗಿರಬೇಕು, 'ಪ್ರಕಟತರ ವಸ್ತು'ವನ್ನೊಳಗೊಂಡಿರಬೇಕೆಂದು ಹೇಳುತ್ತಾನೆ.

ಒಟ್ಟಿನಲ್ಲಿ, ಪ್ರಾಚೀನ ಕರ್ನಾಟಕದ 'ಗದ್ಯಥಾ'ಪ್ರಕಾರದ ಲಕ್ಷಣವನ್ನು ಹೀಗೆ ಹೇಳಬಹುದು. ೧ ಗದ್ಯ ಪ್ರಧಾನ, ಪದ್ಯ ಗೌಣಪ್ರಮಾಣದಲ್ಲಿರುತ್ತದೆ. ೨. ಅಖಂಡ ಕಥೆ, ಇಲ್ಲವೆ ಬಿಡಿ ಕಥಾಗುಚ್ಛ ರೂಪದಲ್ಲಿರುತ್ತದೆ. ೩. ಸಕಲಕಲಾಭೂಯಿಷ್ಠವೂ ಉತ್ಕೃಷ್ಟ ಭಾಷಾಶೈಲಿಯದೂ, ಲೌಕಿಕ ಪಾರಮಾರ್ಥಿಕ ವರ್ಣನಾ ನಿರ್ಣಿಕ್ತವೂ ಪ್ರಕಟತರ ವಸ್ತುವನ್ನೊಳಗೊಂಡುದೂ ಆಗಿರುತ್ತದೆ. ೪. ಇನ್ನು ಒಂದು ಲಕ್ಷಣವೆಂದರೆ ಈ ಗದ್ಯವನ್ನು 'ಕಥಾ' ಎಂದು ಕರೆದಿರುವುದರಿಂದ 'ಕಥಾ ಪುರಾಣಸಂಬದ್ಧಾ' ಎಂಬ ವ್ಯಾಖ್ಯೆಯು ಪ್ರಕಾರ, ಇದು, ಲೌಕಿಕ(ಚರಿತ್ರೆ)ವಸ್ತುವನ್ನಲ್ಲ, ಪೌರಾಣಿಕ ವಸ್ತುವನ್ನೊಳಗೊಂಡಿರುತ್ತದೆ.

ಇಂಥಲಕ್ಷಣದ ಕೃತಿಗಳನ್ನು ಕನ್ನಡದಲ್ಲಿ ಬರೆದವರು ವಿಮಲೋದಯ, ನಾಗಾರ್ಜುನ ಜಯಬಂಧು, ದುರ್ವಿನೀತ ಮೊದಲಾದವರೆಂದು ಕವಿರಾಜಮಾರ್ಗ ಹೇಳುವನಾದರೂ ಇವರ

ಒಂದೂ 'ಗದ್ಯಕಥಾ ಲಭ್ಯವಿಲ್ಲ. ಇವರಲ್ಲಿ ದುರ್ವಿನೀತನು ಬಹುಶಃ ಗಂಗ ಅರಸನಾಗಿದ್ದು, ಶಾಸನಗಳಲ್ಲಿ ಇವನು ರಚಿಸಿರುವನೆಂದು ಹೇಳಲಾಗಿರುವ ಕಿರಾತಾರ್ಜುನೀಯದ ೧ನೆಯ ಸರ್ಗಕ್ಕೆ ಟೀಕೆ, ಶಬ್ದಾವತಾರಗಳನ್ನು ಹೊರತುಪಡಿಸಿ, ಬೃಹತ್ಕಥೆ(ವಡ್ಡಕಥೆ)ಯೇ ಗದ್ಯಕಥೆಗೆ ಉದಾಹರಣೆಯಾಗಿರಬೇಕೆನಿಸುತ್ತದೆ. ಇದು ಗುಣಾಢ್ಯನ ಪೈಶಾಚಿಭಾಷಾಕೃತಿಯ ದಾಕ್ಷಿಣಾತ್ಯಪಾಠವೆಂದೂ, ಇದನ್ನು ಅಧರಿಸಿ ತಮಿಳಿನ ಪೆರುಂಗದಯ ಹುಟ್ಟಿದೆಯೆಂದೂ, ಇದು ಒಂದಿಷ್ಟು ಜೈನೀಯವಾಗಿಯೆಂದೂ ವಿದ್ವಾಂಸರು ಭಾವಿಸಿದ್ದಾರೆ. ಈವರೆಗಿವ ವಿವರಣೆ ಕಳೆದುಹೋದ ಕನ್ನಡ ಗದ್ಯಸಾಹಿತ್ಯವನ್ನು ಕುರಿತುದಾಗಿದೆ.

* * *

ಕವಿರಾಜಮಾರ್ಗೋತ್ತರಕಾಲೀನ ಗದ್ಯಸಾಹಿತ್ಯದಲ್ಲಿ ಎದ್ದು ಕಾಣುವ ಕೆಳಗಿನ ಕೃತಿಗಳನ್ನು ಪ್ರಸ್ತುತ ಯೋಜನೆಯ ಅಡಿಯಲ್ಲಿ ಪ್ರಕಟಣೆಗೆ ಆಯ್ದುಕೊಳ್ಳಲಾಗಿದೆ.

೧. ಆರಾಧನಾ ಕರ್ಣಾಟಟೀಕಾ (ವಡ್ಡಾರಾಧನೆ)–ಡಾ. ಶಾಂತಿನಾಥ ದಿಬ್ಬರ

೨. ಚಾವುಂಡರಾಯ ಪುರಾಣಂ– ಡಾ. ಎಂ.ಎ.ಜಯಚಂದ್ರ

೩. ಕರ್ಣಾಟಕ ಪಂಚತಂತ್ರಂ–ಡಾ. ಪಿ.ವಿ.ನಾರಾಯಣ

೪. ಧರ್ಮಾಮೃತಂ–ಶ್ರೀ ಶುಭಚಂದ್ರ

೫. ಕನ್ನಡ ಶರಣರ ಕಥೆಗಳು–ಡಾ.ಎಂ.ಎಂ. ಕಲಬುರ್ಗಿ

೬. ವಿವೇಕ ಚಿಂತಾಮಣಿ–ಶ್ರೀ ಜಿ.ಎ. ಶಿವಲಿಂಗಯ್ಯ

೭. ಚಿಕ್ಕದೇವರಾಯ ವಂಶಾವಳಿ–ಶ್ರೀ ಹೆಚ್.ಎಂ. ನಾಗರಾಜರಾವ್

೮. ಮುದ್ರಾಮಂಜೂಷವು–ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ

೯. ರಾಜಾವಳಿ ಕಥೆ–ಡಾ ರಾಮೇಗೌಡ

೧೦. ರಾಮಾಶ್ವಮೇಧಂ–ಡಾ. ಗಾಯತ್ರಿ ನಾವಡ

ಇವುಗಳಲ್ಲಿ ಮೊದಲಿನ ನಾಲ್ಕು ಹಳಗನ್ನಡಕ್ಕೆ, ಆಮೇಲಿನವು ನಡುಗನ್ನಡ– ನಡುಗನ್ನಡೋತ್ತರಕ್ಕೆ ಸಂಬಂಧಿಸಿವೆ. ಪ್ರಾಚೀನ ಪದ್ಯಸಾಹಿತ್ಯದಲ್ಲಿ ಕಾಣಸಿಗದ ಹಳಗನ್ನಡ–ನಡುಗನ್ನಡ–ನಡುಗನ್ನಡೋತ್ತರ ಪಾಚೀನ ಭಾಷಾವಿಕಾಸದ ಸ್ಪಷ್ಟ ಹಜ್ಜೆ ಗುರುತುಗಳು ಈ ಗದ್ಯಸಾಹಿತ್ಯದಲ್ಲಿ ಕಾಣುತ್ತಲಿರುವುದು ವಿಶೇಷ. ಹೀಗಾಗಿ ಪ್ರಾಚೀನ ಕನ್ನಡ ಭಾಷಾಚರಿತ್ರೆಯನ್ನು ಬರೆಯುವಲ್ಲಿ ಪದ್ಯಕೃತಿಗಳಗಿಂತ ಗದ್ಯಕೃತಿಗಳೇ ಹೆಚ್ಚು ನೆರವಾಗುತ್ತವೆ. ಇಲ್ಲಿಯ ಆರಾಧನಾ ಕರ್ಣಾಟಟೀಕಾ, ಕರ್ಣಾಟ ಪಂಚತಂತ್ರ ಧರ್ಮಾಮೃತಗಳನ್ನು ಕಥಾಕೋಶಗಳೆಂದು. ಕನ್ನಡ ಶರಣರ ಕಥೆಗಳು ಚಿಕ್ಕದೇವರಾಯವಂಶಾವಳಿ, ರಾಜಾವಳಿ ಕಥೆ, ಮುದ್ರಾಮಂಜೂಷಗಳನ್ನು ಚರಿತ್ರೆಗಳೆಂದು, ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ, ರಾಮಾಶ್ವಮೇಧಗಳನ್ನು ಪುರಾನಗಳೆಂದು–ಹೀಗೆ ಈ ಮಾಲೆಯ ಕೃತಿಗಳು ವೈವಿಧ್ಯಪೂರ್ಣ ವಿಷಯಗಳನ್ನೊಳಗೊಂಡಿವೆ. ಗದ್ಯಶೈಲಿಯ ದೃಷ್ಟಿಯಿಂದ ಹೇಳುವುದಾದರೆ ಆರಾಧನಾ ಕರ್ಣಾಟಟೀಕಾ, ಕನ್ನಡ ಶರಣರ ಕಥೆಗಳು, ರಾಮಾಶ್ವಮೇಧ ವಿಶಿಷ್ಟ ಗದ್ಯ ಚಹರೆಯನ್ನು ಹೊಂದಿವೆ.

* * *

"ವಡ್ಡಾರಾಧನೆಯೆಂಬುದು ಕೃತಿಯ ಹೆಸರಲ್ಲ, ಶಿವಕೋಟ್ಯಾಚಾರ್ಯನೆಂಬುದು ಕವಿಯ ಹೆಸರಲ್ಲ" ಎಂದು ಹೇಳುತ್ತ, ಈ ಕೃತಿನಾಮ ಆರಾಧನಾ ಕರ್ಣಾಟಟೀಕಾ, ಕವಿನಾಮ ಬ್ರಾಜಿಷ್ಣು ಎಂದು ೧೯೭೦ರಲ್ಲಿಯೇ ನಾನು ಹೇಳಿದ್ದ ಮಾತು, ಇಂದು ಹೊಸ ಆಧಾರ ಲಭಿಸಿ ನಿಜವಾಗುತ್ತಲಿರುವುದರಿಮದ 'ಆರಾಧನಾ ಕರ್ಣಾಟಟೀಕಾ' ಎಂಬ ಹೊಸ ಶೀರ್ಷಿಕೆಯನ್ನು-ಬ್ರಾಜಿಷ್ಣುವೆಂಬ ಹೊಸ ಕವಿನಾಮವನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಈ ಬಗೆಯ ಟೀಕಾರಚನೆ ಕವಿರಾಜಮಾರ್ಗಪೂರ್ವ ಸಾಹಿತ್ಯದ ಲಕ್ಷಣವಾಗಿರುವುದರಿಂದ, ಇದರ ಕಾಲ ಅಷ್ಟು ಹಿಂದೆ ಇರಬಹುದಾದರೂ, ಕ್ರಿ.ಶ. ೯೪೦ ಎಂದು ವಿದ್ವಾಂಸರು ಭಾವಿಸಿದ್ದಾರೆ. ದೇಶಿಯ ಗದ್ಯಶೈಲಿ, ಮನೋಜ್ಞ ಕಥನಕಲೆ, ಇಶಿಷ್ಟ ಕಥಾತಂತ್ರ, ಸಾಂಸ್ಕೃತಿಕ ಜೀವನಪ್ರಜ್ಞೆ ಇತ್ಯಾದಿಗಳಿಂದಾಗಿ ಇದು ಕನ್ನಡದ ಸರ್ವಶ್ರೇಷ್ಠ ಕಥಾಕೋಶವೆನಿಸಿದೆ. ಈ ಗದ್ಯದ ಒಡಲಲ್ಲಿ ಆಗಾಗ ಉದ್ಧೃತ ಪ್ರಾಕೃತ, ಸಂಸ್ಕೃತ ಪದ್ಯಗಳು ಕಂಡುಬರುತ್ತವೆ. ಅಲ್ಲಲ್ಲಿ ತೋರುವ ವೈದಿಕ-ಜೈನ ಘರ್ಷಣೆಗಳು ಆಕಾಲದ ಧಾರ್ಮಿಕ ಸಂಘರ್ಷವನ್ನು ಸೂಚಿಸುತ್ತವೆ. ಜೈನ ಶ್ರಾವಕವರ್ಗ ಮತ್ತು ಮುನಿವರ್ಗ ರಾಜವರ್ಗ, ಜೈನೇತರ ಸಾಮಾಜಿಕ ವರ್ಗಗಳಿಂದಾಗಿ ಇಲ್ಲಿ ಸಾಮುದಾಯಿಕ ಬದುಕು ದಟ್ಟವಾಗಿ ಮೂಡಿ, ಇದು ಒಂದು ಮಹತ್ವದ ಸಾಂಸ್ಕೃತಿ ಕೃತಿಯ ಆಕಾರ ಪಡೆದಿದೆ.

ತ್ರಿಷಷ್ಟಿ ಲಕ್ಷಣ ಶಲಾಕಾ ಪುರಾಣ (೯೭೮)ಜೈನ ೬೩ ಶಲಾಕಾಪುರುಷರನ್ನು ಕುರಿತ ಕೃತಿ. ಜಿನಸೇನ ಗುಣಭದ್ರದ ಸಂಸ್ಕೃತ ಮಹಾಪುರಾಣವನ್ನಾಧರಿಸಿ ಹುಟ್ಟಿದ ಇದರ ಕರ್ತೃ ಗಂಗಮಂತ್ರಿ ಚಾವುಮಡರಾಯ, ಈ ಕೃತಿಯ ಗದ್ಯ ಮಾರ್ಗೀಯ ಶೈಲಿಯದು. ಮಧ್ಯ ಮಧ್ಯ ಪ್ರಾಕೃತ, ಸಂಸ್ಕೃತ ಉದ್ಧೃತಿಗಳಿವೆ. ವಡ್ಡಾರಾಧನೆ ಬಿಡಿ ಕಥಾಕೋಶವಾಗಿದ್ದರೆ, ಇದು ಬಿಡಿಯಲ್ಲಿಯೂ ಅಖಂಡತೆಯನ್ನೊಳಗೊಂಡ ಕೃತಿಯಾಗಿದೆ. ಹೀಗಿದ್ದೂ, ಇದರ ಅಖಂಡ ಶಿಲ್ಪಕ್ಕೆ ಅಲ್ಲಲ್ಲಿ ಸಮನ್ವಯದ ಚ್ಯುತಿ ಬಂದಿದೆ.

ದುರ್ಗಸಿಂಹನ ಕರ್ಣಾಟ ಪಂಚತಂತ್ರ ಅನುಪಲಬ್ಧ ವಸುಭಾಗಭಟ್ಟನ ಸಂಸ್ಕೃತಕಥಾಪರಂಪರೆಗೆ ಸಂಬಂಧಿಸಿದೆ. ಮೂಲತಃ ಪಂಚತಂತ್ರ ವೈದಿಕ ಕಥಾಕೋಶವಾಗಿದ್ದರೂ, ಇದರಲ್ಲಿ ಜೈನೀಯ ಅಂಶಗಳಿರುವುದು ವಿಶೇಷ. ಮಾರ್ಗೀಯ ಕೃತಿಯಾಗಿದ್ದರೂ ಸೂಗಸಾದ ಕಥಾಶೈಲಿ. ದೇಶಿ ಒಲವುಗಳನ್ನೊಳಗೊಂಡಿದೆ. ೪೫೮ ಕನ್ನಡ ಪದ್ಯಗಳಲ್ಲಿ ೨೦೪ರಷ್ಟು ಕಂದಗಳಿವೆ. ಮಿಕ್ಕವುಗಳಲ್ಲಿ ಅಕ್ಷರವೃತ್ತದ ಜೊತೆ ಪಡ್ಡಳಿ ಅಕ್ಕರ, ಪಿರಿಯಕ್ಕರ, ತ್ರಿಪದಿಗಳೆಂಬ ದೇಶೀ ಬಂಧಗಳಿರುವುದೂ ಒಂದು ವಿಶೇಷ ಮುಖ್ಯವಾಗಿ ರಾಜನೀತಿ ಗ್ರಂಥವಾಗಿರುವುದರಿಂದ ರಾಜ್ಯಾಡಳಿತಕ್ಕೆ ಹೆಚ್ಚು ಅವಕಾಶ ನೀಡಿದ್ದರೂ ಸಂಸಾರ ಸಮಾಜ ಸಂಬಂಧಿ ವೈವಿಧ್ಯಮಯ ಜೀವನ ಚಿತ್ರಗಳೂ ಇಲ್ಲಿ ಎಡೆಪಡೆದಿವೆ.

ಕನ್ನಡ ಗದ್ಯಪರಂಪರೆಯಲ್ಲಿ ವಡ್ಡಾರಾಧನೆಯನ್ನು ಬಿಟ್ಟರೆ ಒಂದಿಷ್ಟು ಭಿನ್ನ ರೀತಿಯ ಜೈನಕಥಾಕೋಶವೆನಿಸಿವೆ. ನಯಸೇನನ (೧೧೧೨)ಧರ್ಮಾಮೃತ. ೧೪ ಆಶ್ವಾಸಗಳಲ್ಲಿ ೧೪ ಕಥೆಗಳನ್ನೊಳಗೊಂಡ ಈ ಕೃತಿ ಮಾರ್ಗೀಯವಾಗಿದ್ದರೂ ದೇಶೀಯ ಒಲವು ಅಧಿಕವಾಗಿದೆ. ಹೀಗಾಗಿ ನಾಣ್ನುಡಿಯ ಬಳಕೆಯಲ್ಲಿ, ಇದಕ್ಕಿಂತ ವೆಗ್ಗಳವಾಗಿ ಬಳಸಿರುವ ಉಪಮೆಗಳಲ್ಲಿ ಇವನ ವಿಶೇಷತೆ ಅಡಗಿದೆ. ಮಾಲೋಪಮೆಯೆಂದು ಹೇಳುವಷ್ಟರ ಮಟ್ಟಿಗೆ ಅವು ಮಾಲೆಮಾಲೆಯಾಗಿ ಬರುವುದರಿಂದ ವಿದ್ವಾಂಸರು ಇವನನ್ನು ಉಪಮಾಲಂಪಟನೆಂದು ಕರೆದುದು ಸೂಕ್ತವಾಗಿದೆ.

ಇದಕ್ಕೆ ಕಳಸವಿಟ್ಟಂತೆ ವಿಡಂಬನೆ ಈ ಕೃತಿಯ ವೈಶಿಷ್ಟ್ಯವಾಗಿದ್ದು, ವೈದಿಕ ಬೌದ್ಧಗಳ ದೋಷವನ್ನು ಎತ್ತಿ ಹೇಳುವಲ್ಲಿ ಇದು ಸಾರ್ಥಕತೆ ಪಡೆದಿದೆ. ಇವೆಲ್ಲ ಮೇಳೈಸುವಲ್ಲಿ ಅವನ ವೈವಿಧ್ಯಪೂರ್ಣ ಜೀವನಾನುಭವ ಅಚ್ಚರಿ ಹುಟ್ಟಿಸುತ್ತದೆ. ದುರ್ಗಸಿಂಹನಂತೆ ಮಾರ್ಗೀಯ ಕವಿಯಾಗಿದ್ದರೂ ಅವನಿಗಿಂತ ಹೆಚ್ಚು ಜಾನಪದೀಯುವಾಗಿ ಕಾಣುತ್ತಾನೆ.

ಕನ್ನಡ ಶರಣನ ಕಥೆಗಳು ಹೆಸರೇ ಸೂಚಿಸುವಂತ ಕರ್ಣಾಟಕಕ್ಕೆ ಸಂಬಂಧಿಸಿದ, ಗದ್ಯ-ಪದ್ಯ ಮಿಶ್ರಿತ ರೂಪದ ರಗಳೆಗೆ ವಸ್ತುವಾಗಿರುವ ಶರಣರ ಕೃತಿಗಳನ್ನೊಗೊಂಡಿದೆ. ಶರಣರ ವಚನಗಳ ಗದ್ಯವನ್ನು ಶುದ್ಧಸಾಹಿತ್ಯಕ್ಕೆ ಅಳವಡಿಸಿದ ನಡುಗನ್ನಡ ಸಾಹಿತ್ಯದ ಆದಿಕವಿಯಾಗಿದ್ದಾನೆ ಹರಿಹರ (೧೩ನೆಯ ಶತಮಾನ). ಭಕ್ತಿಕೇಂದ್ರಿತ ಆಶಯ, ಸ್ಥಳೀಯ ಶರಣಚರಿತ್ರೆನಿಷ್ಠ ವಸ್ತು, ರಗಳೆ ಸಾಹಿತ್ಯಪ್ರಕಾರ, ನಡುಗನ್ನಡ ಭಾಷೆ, ಇತ್ಯಾದಿ ಹೊಸ ಉಪಕರಣಗಳನ್ನು ಶೋಧಿಸಿ, ಸೃಜನಶೀಲತೆಯಲ್ಲಿ ಎರಕಹೊಯ್ದವನೀತ. ಭಾಷೆಯ ಲಾಲಿತ್ಯ, ಶೈಲಿಯ ಉತ್ಸಾಹ, ಲಯಬದ್ಧವಕ್ಯ, ವೈವಿಧ್ಯಪೂರ್ಣ ಕಲ್ಪನೆ ಮೊದಲಾದವುಗಳಿಂದಾಗಿ ಇವನ ಗದ್ಯಕ್ಕೆ ಈ ಮೊದಲು ಕನ್ನಡದಲ್ಲಿಲ್ಲದ ಹೊಸ ಸೊಬಗು ಪ್ರಾಪ್ತವಾಗಿದೆ. ವಡ್ಡಾರಾಧನೆಯನ್ನು ಬಿಟ್ಟರೆ ಕನ್ನಡ ಗದ್ಯವನ್ನು ಹೊಸ ಬಗೆಯಲ್ಲಿ ಹದಗೊಳಿಸಿದ ಕೀರ್ತಿ ಹರಿಹರನಿಗೆ ಸಲ್ಲುತ್ತದೆ. ಒಂದು ಸ್ಥಲ ಗದ್ಯ ಒಂದು ಸ್ಥಲ ರಗಳೆಯೆಂಬ ಯೋಜನೆಯಲ್ಲಿ ರಗಳೆಯೇ ಗದ್ಯವಾದ ಗದ್ಯವೇ ರಗಳೆಯಾದ ಅನುಭವ ಓದುಗನಿಗೆ ಉಂಟಾಗುತ್ತದೆ. ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ ಕನ್ನಡ ಸಾಹಿತ್ಯದ ಪ್ರಥಮ ಭಾವಗೀತೆ ಕವಿಯಾಗಿರುವ ಈತ, ಕನ್ನಡ ಸಾಹಿತ್ಯದ ಪ್ರಥಮ ಸಂತಕವಿ. ಹೀಗಾಗಿ ಇವನ ಬರೆಹ ಮನೋಪಾತಳಿಗೆ ನಿಲ್ಲದೆ, ಆತ್ಮಪಾತಳಿಯಲ್ಲಿ ವಿಹರಿಸುತ್ತದೆ, ವಿರಮಿಸುತ್ತದೆ.

ನಿಜಗುಣಶಿವಯೋಗಿ ಶೈವದಲ್ಲಿಯೇ ಶಾಂತಪರಂಪರೆಗೆ ಸಂಬಂಧಿಸಿರಬಹುದಾಗಿದ್ದು(೧೫ ಶತಮಾನ)ಕವಿತ್ವ ಅನುಭಾವಗಳ ಸಂಗಮವಾಗಿರುವ ಇವನ 'ವಿವೇಕ ಚಿಂತಾಮಣಿ' ವಿಶ್ವಕೋಶ ಪ್ರಕಾರದ ಗದ್ಯಕೃತಿ ಈ ಹಿಂದಿನ ಗದ್ಯಕೃತಿಗಳು ಕವಿತ್ವವನ್ನೊಳಗೊಂಡಿದ್ದರೆ, ಇದರಲ್ಲಿ ಶಾಸ್ತ್ರಯೋಗ್ಯ ನಿರೂಪಣಾಗದ್ಯ ನೆಲೆ ಪಡೆದಿದೆ. ಈ ಗುಣದಿಂದಾಗಿ ಈ ಗದ್ಯಕ್ಕೆ ಪ್ರಾಚೀನ ಸಾಹಿತ್ಯದಲ್ಲಿ ಪ್ರತ್ಯೇಕ ಸ್ಥಾನ ಸಲ್ಲುತ್ತದೆ. ವಿಶ್ವಕೋಶವರ್ಗದ ಇದು ಸಹಜವಾಗಿಯೇ ಬದುಕಿನ ವಿವಿಧ ಆಯಾಮಗಳ ಜ್ಞಾನಸಂಪತ್ತನ್ನೊಳಗೊಂಡಿದೆ.

ಮೈಸೂರು ಒಡೆಯರ ಕಾಲದಲ್ಲಿ ಪದ್ಯ ಹಿಂದು ಬಿದ್ದು, ಗದ್ಯ ವಿಪುಲ ಪ್ರಮಾಣದಲ್ಲಿ ಬೆಳೆಯಿತು. ಪಂಡಿತ್ಯ ಪ್ರದರ್ಶನದ ಹಂಬಲ, ನಡುಗನ್ನಡ-ಹೊಸಗನ್ನಡ ಮಿಶ್ರಶೈಲಿಗಳಿಂದಾಗಿ ಒಂದುಬಗೆಯ ಮಧ್ಯಮ ಗುಣಮಟ್ಟದ ಸಾಹಿತ್ಯ ಈ ಕಾಲದಲ್ಲಿ ಹುಟ್ಟಿತು. ಇದಕ್ಕೆ ನಿದರ್ಶನವೆನಿಸುವ ಚಿಕದೇವರಾಯ ವಂಶಾವಳಿ, ರಾಜಾವಳಿ ಕಥೆ ಮುದ್ರಾಮಂಜೂಷಗಳನ್ನು ಇಲ್ಲಿ ಒಟ್ಟಿಗೆ ಪರಿಶೀಲಿಸಬಹುದು. ಚಿಕದೇವರಾಯ ವಂಶಾವಳಿಯ ಕರ್ತೃ ತಿರುಮಲಾರ್ಯ (೧೬೪೫-೧೭೦೬)ಮೈಸೂರು ಚಿಕದೇವರಾಯನ ಸಚಿವ. ಧಾರ್ಮಿಕ ಮುಖವಾಡದಲ್ಲಿ ತಮಿಳುನಾಡಿನಿಂದ ಕರ್ನಾಟಕವನ್ನು ಪ್ರವೇಶಿಸಿದ ಶ್ರೀವೈಷ್ಣವರು. ಈ ಹೊತ್ತಿಗೆ ರಾಜಕೀಯವಾಗಿಯೂ ಪ್ರಬಲರಾಗಿ, ತಮ್ಮ ಶ್ರೀವೆಷ್ಣವ ಸಾಹಿತ್ಯವನ್ನು ಕನ್ನಡದಲ್ಲಿ ಸೃಷ್ಟಿಸಲು ಆರಂಭಮಾಡಿದ ಕಾಲಘಟ್ಟದ ಕೃತಿಯಿದು, ಅನ್ಯರಾಜ್ಯದಿಂದ ಬಂದ ಇವರಿಗೆ ಒಂದು ಕಡೆ ತಮ್ಮ ಧರ್ಮಪ್ರಚಾರವೂ, ಇನ್ನೊಂದು ಕಡೆ ರಾಜನ ಪ್ರೀತಿಸಂಪಾದನೆಯೂ ಅಗತ್ಯವಾಗಿದ್ದ ಕಾರಣ. ತಮ್ಮ ಧಾರ್ಮಿಕ ಕೃತಿಗಳೊಂದಿಗೆ ರಾಜಸ್ತುತಿ ಕಾವ್ಯಗಳನ್ನು ಬರೆದರು. ಈ ಮನೋಧರ್ಮ ಕಾರಣವಾಗಿ ಈ ಗದ್ಯಕೃತಿಯಲ್ಲಿ ರಾಜವಂಶಾವಳಿ,

ಶ್ರೀವೈಷ್ಣವಧರ್ಮ ಪ್ರಶಂಸೆಯೊಂದಿಗೆ ಇವನ ವಂಶಾವಳಿಯೂ ಸೇರಿಕೊಂಡಿದೆ. ಸಮಕಾಲೀನತೆಗಿಂತ ಪ್ರಾಚೀನತೆಯ ಒಲವು ಈ ಗದ್ಯದ ಲಕ್ಷಣವಾಗಿದೆ.

ದೇವಚಂದ್ರನ (೧೭೭೦-೧೮೪೧)ರಾಜಾವಳಿ ಕಥೆ ಮೆಕೆಂಝಿಯ ಸೂಚನೆಯಂತೆ ರಚಿಸಿದ ಕೃತಿಯಾಗಿದೆ. ಸಮಕಾಲೀನ ಮುಖ್ಯ ಘಟನೆಗಳನ್ನು ಅವುಗಳ ಇತಿಹಾಸವನ್ನು ತುಂಬ ವಿವರವಾಗಿ ಬಿಂಬಿಸುವ ಇದು ಚರಿತ್ರೆ, ಪುರಾಣ, ದಂತಕಥೆಗಳ ಮಿಶ್ರಣವಾಗಿದ್ದು, ಮೌಖಿಕ ಇತಿಹಾಸದ ಸ್ವರೂಪ ಪಡೆದಿದೆ. ಜೈನಪರ ಧೋರಣೆಯ ರಾಜಕೀಯ, ಧಾರ್ಮಿಕ ಸಾಮಾಜಿಕ ಸಂಗತಿಗಳನ್ನು ಒಳಗೊಂಡ ಇದರ ಗದ್ಯಶೈಲಿ ಆಧುನಿಕತೆಯತ್ತ ಮುಖಮಾಡಿದೆ.

ನಂದವಂಶೀಯರ ಮಂತ್ರಿಯಾದ ರಾಕ್ಷಸನನ್ನು ಮೌರ್ಯವಂಶೀಯರ ಮಂತ್ರಿ ಚಾಣಕ್ಯನು ಒಲಿಸಿಕೊಂಡ ಕಥೆಯನ್ನು 'ಮುದ್ರಾಮಂಜೂಷ' ಹೆಸರಿನಿಂದ ರಚಿಸಿದ, ಕೆಂಪುನಾರಾಯಣ (೧೮ನೆಯ ಶತಮಾನ). ಉತ್ತರ ಭಾರತದ ಐತಿಹಾಸಿಕ ವಸ್ತುವನ್ನು ಸಮಕಾಲೀನ ಗ್ರಂಥಸ್ಥ ಗದ್ಯದಲ್ಲಿ ಎರಕಹೊಯ್ದಿದ್ದು, ಶೈಲಿಯಲ್ಲಿ ಹಳಗನ್ನಡ ಹೊಸಗನ್ನಡಗಳ ಮಿಶ್ರಣ ಎದ್ದುಕಾಣುತ್ತದೆ.

ಮೈಸೂರು ಅರಸರ ಕಾಲದ ಗ್ರಂಥಸ್ಥ ಅರೆಬೆಂದ ಗದ್ಯಕ್ಕೆ ಭಿನ್ನವಾಗಿ ನಿಲ್ಲುತ್ತದೆ, ಮುದ್ದಣನ ರಾಮಾಶ್ವಮೇಧ ಗದ್ಯ. "ಗದ್ಯಂ ಹೃದ್ಯಂ" ಎನ್ನುತ ಅವನು ಆಧುನಿಕ ಸಾಹಿತ್ಯದ ಅದರಲ್ಲಿಯೂ ಗದ್ಯಸಾಹಿತ್ಯದ ಬಾಗಿಲನ್ನೇ ತೆರೆದನು. ಮೋಡ ಮುಸುಕಿದ ವಾತಾವರಣದಿಂದ ಆರಂಭವಾಗಿರುವ ಈ ಕೃತಿ, ಆ ಕಾಲದ ಕನ್ನಡದ ಮೇಲೆ ಮುಸುಕಿದ್ದ ಕತ್ತಲೆಯನ್ನು ಸಂಕೇತಿಸುತ್ತದೆ. ಇಂಥ ಸಂದರ್ಭದಲ್ಲಿ ಕಲ್ಪಿತ ಪಾತ್ರವಾಗಿ ಬರುವ ಹೆಂಡತಿ ಹೊಸ, ಭಾಷೆ, ಹೊಸ ವಸ್ತು ಹೊಸ ಬಗೆಯ ನಿರೂಪಣೆ ಇತ್ಯಾದಿಗಳ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರಗಳಿಂದ ಮುಂದುವರಿಯುವ ಇದು, ಆಧುನಿಕ ಗದ್ಯಯುಗಕ್ಕೆ ನಾಂದಿ ಹಾಡಿದೆ. ಆದುದರಿಂದ ಮುದ್ದಣನನ್ನು ನವೋದಯದ ಮುಂಗೋಳಿಯೆಂದು ಕರೆದುದು ನ್ಯಾಯವಾಗಿದೆ.

ಹೀಗೆ ಒಂದು ಸಾವಿರ ವರ್ಷದ ಗದ್ಯ ಸಾಹಿತ್ಯೇತಿಹಾಸದಲ್ಲಿ ಮೈಲಿಗಲ್ಲು ಎನಿಸಿದ ೧೦ ಕೃತಿಗಳು ಒಂದು ಮಾಲೆಯಡಿಯಲ್ಲಿ ಈಗ ಪ್ರಕಟವಾಗುತ್ತಲಿವೆ. ಇವು ಒಂದರ್ಥದಲ್ಲಿ ನಮ್ಮ ಗದ್ಯ ಸಾಗಿಬಂದ ಹಾದಿಯನ್ನು ತಿಳಿಸುವ ಕೈಮರಗಳಾಗಿವೆ.

ಕೃತಜ್ಞತೆಗಳು:

ಸಂಪಾದಕನಾಗಿ ಈ ಯೋಜನೆಯನ್ನು ಪೂರೈಸುವ ಹೊಣೆಯನ್ನು ನನಗೆ ವಹಿಸಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೂ, ಕನ್ನಡದ ಮೇಲಿನ ಪ್ರೀತಿಯಿಂದ ಈ ಗದ್ಯಕೃತಿಗಳನ್ನು ಸಂಪಾದಿಸಿಕೊಟ್ಟ ಎಲ್ಲ ವಿದ್ವಾಂಸ ಮಿತ್ರರಿಗೂ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಎಚ್. ಮಲ್ಲಿಕಾರ್ಜುನ ಅವರಿಗೂ, ಸಲಹಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳು.

ಗೌ.ಸಂ. : ಎಂಎಂ.ಕಲಬುರ್ಗಿ : ಹರಿಹರ ಕವಿ ವಿರಚಿತ ಕನ್ನಡ ಶರಣರ ಕಥೆಗಳು, ಕರ್ನಾಟಕ ಸರಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-೨೦೧೨

ಆಕರ : ಮಾರ್ಗ ಸಂಪುಟ-೭

೨೨೦

ಕಾದಂಬರಿಕಾರನ ಕಥೆ

ಅಧ್ಯಕ್ಷರ ಮಾತು
೨೦೧೨

ಸಾಹಿತಿಗಳಲ್ಲಿ ಸ್ಥೂಲವಾಗಿ ಎರಡು ವರ್ಗ: ಸಮಾಜದ ಅನುಭವದಿಂದ ಸಾಹಿತ್ಯ ಬರೆಯುವವರು, ಸಾಹಿತ್ಯದ ಅಭ್ಯಾಸದಿಂದ ಸಾಹಿತ್ಯ ಬರೆಯುವವರು. ಇವರೊಳಗೆ ಮೊದಲನೆಯ ವರ್ಗದವರಲ್ಲಿ ಕಲಾತ್ಮಕತೆಗಿಂತ ಲೋಕಾನುಭವ ಅಧಿಕ, ಎರಡನೆಯ ವರ್ಗದವರಲ್ಲಿ ಲೋಕಾನುವಕ್ಕಿಂತ ಕಲಾತ್ಮಕತೆ ಅಧಿಕ. ಬೇರೆ ಮಾತಿನಲ್ಲಿ ಹೇಳುವುದಾದರೆ ಒಬ್ಬರ ಸೃಷ್ಟಿ ಅರಣ್ಯ, ಇನ್ನೊಬ್ಬರ ಸೃಷ್ಟಿ ಉದ್ಯಾನ. ಬಸವರಾಜ ಕಟ್ಟೀಮನಿಯವರ ಸಾಹಿತ್ಯ ಇವುಗಳಲ್ಲಿ ಒಂದನೆಯ ವರ್ಗಕ್ಕೆ ಸೇರುತ್ತದೆ. ಈ ನಿಲವಿನ ಅವರು ಕಥೆಗಾರರಾಗಿ ಪ್ರಸಿದ್ಧರು, ಕಾದಂಬರಿಕಾರರಾಗಿ ಇನ್ನೂ ಪ್ರಸಿದ್ಧರು. ಈ ಕಾರಣಕ್ಕಾಗಿಯೇ ಅವರು ತಮ್ಮ ಈ ಕೃತಿಗೆ 'ಕಥೆಗಾರನ ಕಥೆ'ಗೆ ಬದಲು 'ಕಾದಂಬರಿಕಾರನ ಕಥೆ' ಎಂದು ಹೆಸರಿಟ್ಟಿದ್ದಾರೆ.

ಕನ್ನಡದಲ್ಲಿ ಆತ್ಮಕಥೆ ಒಂದು ಗಣ್ಯಸಾಹಿತ್ಯ ಪ್ರಕಾರವಾಗಿ ಬೆಳೆದು ಬರುತ್ತಲಿದೆ. ವ್ಯಕ್ತಿಯೊಬ್ಬ ತನ್ನ ಜೀವನವನ್ನು ವಸ್ತುವಾಗಿಟ್ಟುಕೊಂಡು ಬರೆದ ಪ್ರಕಾರವಿದು. ಕೆಲವೊಮ್ಮೆ ಆತ್ಮಕಥೆಯನ್ನು ಆತ್ಮಚರಿತ್ರೆ ಎಂದು ಕರೆಯುತ್ತಿದ್ದರೂ ಆತ್ಮಕಥೆ ಎನ್ನುವುದೇ ಸರಿಯೆನಿಸುತ್ತದೆ. ಏಕೆಂದರೆ ಒಂದು ಘಟನೆ ಇತಿಹಾಸದಲ್ಲಿ 'ಚರಿತ್ರೆ' ಯಾದರೆ ಸಾಹಿತ್ಯದಲ್ಲಿ 'ಕಥೆ' ಯಾಗುತ್ತದೆ. ಅಂದರೆ ಚರಿತ್ರೆಯೇ ಕಲಾತ್ಮಕತೆ ಕಾರಣವಾಗಿ ಕಥೆಯ ರೂಪ ಪಡೆಯುತ್ತದೆ. ಆದುದರಿಂದ ದಾಖಲು ರೂಪದ ಚರಿತ್ರೆ, ಕಲ್ಪನಾ ವಿಕಾಸದ ಕಾದಂಬರಿಗಳ ನಡುವೆ ನಿಲ್ಲುವ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ, ಆತ್ಮಕಥೆ.

ಕಟ್ಟೀಮನಿಯವರು ಕಾದಂಬರಿಗಳನ್ನೂ ಆತ್ಮಕಥೆಯನ್ನೂ ಬರೆದಿದ್ದಾರೆ. ಸಾಮಾನ್ಯವಾಗಿ ಈ ಎರಡೂ ಪ್ರಕಾರಗಳಲ್ಲಿ ಪರಿಣಾಮ ದೃಷ್ಟಿಯಿಂದ ಆತ್ಮಕಥೆಯೇ ಶ್ರೇಷ್ಠವೆಂದು ಹೇಳಬಹುದು. ಏಕೆಂದರೆ ಕಾದಂಬರಿ ಕಲ್ಪಿತ, ಆತ್ಮಕಥೆ ಘಟಿತ. ಕಲ್ಪಿಸಿದುದಕ್ಕಿಂತ ಘಟಿಸಿದುದು ಸಹಜವಾಗಿಯೇ ಸಹೃದಯನಿಗೆ ಹೆಚ್ಚು ಆಪ್ತವೆನಿಸುತ್ತದೆ; ಹುರಿದುಂಬಿಸುತ್ತದೆ. ಹೀಗಾಗಿ ನಮ್ಮ ಯುವಕರಿಗೆ

ಕಟ್ಟೀಮನಿಯವರ ಹೋರಾಟದ ಘಟನೆಗಳು ಪ್ರೇರಣೆ ನೀಡಲೆಂಬ ಉದ್ದೇಶದಿಂದ 'ಕಾದಂಬರಿಕಾರನ ಕಥೆ'ಯನ್ನು ಟ್ರಸ್ಟ್ ಮೂಲಕ ಪ್ರಥಮ ಪ್ರಕಟನೆಯಾಗಿ ಕೈಗೆತ್ತಿಕೊಂಡಿದ್ದೇವೆ.

೧೯೧೯ರಿಂದ ೧೯೮೯ರ ವರೆಗಿನ ೭೦ ವರ್ಷಗಳು ಕಟ್ಟೀಮನಿಯವರ ಜೀವನ ವ್ಯಾಪ್ತಿ. ಈ ಜೀವನವೇ ಈ ಕೃತಿಯ ವಸ್ತು. ಬಡವನಾಗಿ ಹುಟ್ಟಿ, ಬಡವನಾಗಿ ಬೆಳೆದು, ಬಡವನಾಗಿ ಮಡಿದ ಈ ಶ್ರೀಮಂತ ಸಾಹಿತಿ ನಮ್ಮನ್ನು ಅಗಲಿ ೨೨ ವರ್ಷದ ಬಳಿಕ, ಕರ್ನಾಟಕ ರಾಜ್ಯ ಸರಕಾರ ಬೆಳಗಾವಿಯಲ್ಲಿ 'ಬಸವರಾಜ ಕಟ್ಟೀಮನಿ ಟ್ರಸ್ಟ್' ಸ್ಥಾಪಿಸಿದೆ. ಇವರ ಸಾಹಿತ್ಯವನ್ನು ಓದುವುದಕ್ಕೆ ಮೊದಲು, ಅದಕ್ಕೆ ಹಿನ್ನೆಲೆಯ ಶ್ರುತಿಯಾಗಿ ಮಿಡಿದ ಜೀವನ ಕಥೆಯನ್ನು ಸಹೃದಯರು ಓದಲೆಂಬ, ಅಂಥ ಓದು ಇವರ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ನೆರವಾಗಲೆಂಬ ಉದ್ದೇಶದಿಂದ 'ಕಾದಂಬರಿಕಾರನ ಕಥೆ'ಯನ್ನು ಪ್ರಕಟಿಸುತ್ತಿದ್ದೇನೆ.

ಕಾವ್ಯಮೀಮಾಂಸೆಯಲ್ಲಿ ರಸ ಸಂಖ್ಯೆಯ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದರೂ ನಿಜ ಅರ್ಥದಲ್ಲಿ ರಸಸ್ಥಾನಗಳು ಎರಡೇ. ಒಂದು ನಲಿವು, ಇನ್ನೊಂದು ನೋವು. ಇವುಗಳಲ್ಲಿ ನೋವನ್ನು ಕುರಿತ ಸಾಹಿತ್ಯ ಹೆಚ್ಚು ಆಳವಾದ ಪರಿಣಾಮ ಬೀರುತ್ತದೆ. ಅದಕ್ಕಾಗಿಯೇ "Our Sweetest Songs are those that tell us saddest thoughts"ಎಂಬ ಹೇಳಿಕೆಯೊಂದು ಈಗಲೂ ಪ್ರಸಿದ್ಧಿಯಲ್ಲಿ ಉಳಿದಿದೆ. ಇದಕ್ಕೆ ಸಾಕ್ಷಿಯಾಗಿದೆ, ಕಾದಂಬರಿಕಾರನ ಕಥೆ'. ಆದಿಯಿಂದ ಅಂತ್ಯದ ವರೆಗೂ ಕೌಟುಂಬಿಕ ಬಡತನ, ಸಾಮಾಜಿಕ ಅನ್ಯಾಯ–ಈ ಎರಡರ ವಿರುದ್ಧ ಸಾಹಿತಿಯೊಬ್ಬ ನಡೆಸಿದ ಹೋರಾಟ, ಸಾಹಿತ್ಯದಲ್ಲಿ ಅದನ್ನು ಮೂಡಿಸಿದ ಬಗೆ ಇತ್ಯಾದಿಗಳಿಂದಾಗಿ ಇದು ಒಂದು ಮಹಾಕಾದಂಬರಿಯಂತೆ ಬೆಳೆದಿದೆ. ಹೀಗಾಗಿ ಇದನ್ನು ಸ್ಥೂಲವಾಗಿ ಆತ್ಮಕಥಾ ಕಾದಂಬರಿ ಎನ್ನಬಹುದಾಗಿದೆ.

ಈ ಕೃತಿ ಆರಂಭವಾಗುವುದೇ ಬಡತನದ ಹಳ್ಳಿಯಿಂದ, ಬಡ ಪೋಲೀಸ್ ಕುಟುಂಬದ ಮನೆಯಿಂದ. ದುರ್ವ್ಯಸನದಲ್ಲಿ ಹೊರಳಾಡುತ್ತಲಿದ್ದ ಅಪ್ಪ, ದುಸ್ಥಿತಿಯ ವಿರುದ್ಧ ಹೋರಾಡುತ್ತಲಿದ್ದ ಅವ್ವ, ಹಸಿವು ಮತ್ತು ರೋಗಗಳಿಂದ ಸತ್ತು ಹುಟ್ಟುತ್ತಲಿದ್ದ ಪರಿವಾರ–ಇವುಗಳ ಮಧ್ಯ ಬಸವರಾಜ ಉದ್ಭವಿಸುತ್ತಾನೆ.

ಬಡತನ ಕಾರಣವಾಗಿ ಶಾಲೆಯನ್ನು ಅರ್ಧಕ್ಕೆ ನಿಲ್ಲಿಸಿ ೧೪ನೆಯ ವಯಸ್ಸಿಗೆ ದಿನಪತ್ರಿಕೆಯ ಕಾರ್ಯಾಲಯದಲ್ಲಿ ಕೂಲಿಯಾಗಿ ಸೇರಿ, ಒಂದರ ಬಳಿಕ ಒಂದರಂತೆ ಹತ್ತಾರು ಪತ್ರಿಕೆಗಳಿಗೆ ಬೆವರು ಬಸಿದು, ಕೊನೆಗೆ ೨೫ನೆಯ ವರ್ಷಕ್ಕೆ ಒಂದು ಸಾಹಿತ್ಯಪತ್ರಿಕೆಯ ಸಂಪಾದಕನಾದ, ಸ್ವಾತಂತ್ರ ಹೋರಾಟ–ಸೆರೆಮನೆವಾಸ ಅನುಭವಿಸಿದ ಸಾಹಸಗಾಥೆ ಇಲ್ಲಿಯ ಆರಂಭದ ಭಾಗದಲ್ಲಿದೆ.

೨೬ನೆಯ ವಯಸ್ಸಿಗೆ ಪತ್ರಿಕೆಯ ನಂಟು ಬಿಟ್ಟು, ಕಥೆ–ಕಾದಂಬರಿ ಬರೆವಣಿಗೆಗೆ ಹೊರಳಿದ ಕಟ್ಟೀಮನಿ ಮತ್ತೆ ಆ ಕಡೆ ಹೊರಳಿ ನೋಡದೆ ೪೨ ಕಾದಂಬರಿ, ೧೦ ಕಥಾ ಸಂಕಲನ ಇತ್ಯಾದಿ ೬೭ ಕೃತಿ ರಚಿಸಿದ ಇತಿಹಾಸ ಮುಂದಿನ ಭಾಗದಲ್ಲಿದೆ. ಈ ಕೃತಿಸಂಖ್ಯಾ ಬಾಹುಳ್ಯ ಅವರು ಸಹೃದಯರಲ್ಲಿ ವಾಚನಾಭಿರುಚಿ ಬೆಳೆಸಿದುದಕ್ಕೆ ಸಾಕ್ಷಿಯಾಗಿದೆ. ಈ ಸಂದರ್ಭದಲ್ಲಿ ಬರೆದ ಕಟ್ಟೀಮನಿಯವರ ಪ್ರತಿಯೊಂದು ಕೃತಿ ಬದುಕಿನ ಒಂದೊಂದು ಆಕೃತಿ. ಪ್ರತಿಯೊಂದು ಆಕೃತಿಯಲ್ಲಿಯೂ ನವೋದಯದವರು ಹೆದರುತ್ತಿದ್ದ, ಮುಜುಗರು ಪಡುತ್ತಿದ್ದ, ಸಮಾಜದ ಮುಚ್ಚಿದ ಮುಖಗಳೆಲ್ಲ

ಪ್ರಥಮ ಬಾರಿ ಅನಾವರಣಗೊಂಡಿವೆ. ಇವಗಳಲ್ಲಿ ರಾಜಕಾರಣಿ, ವ್ಯಭಿಚಾರಿಣಿ, ವೇಶ್ಯೆ, ಮಠಾಧಿಪತಿಗಳ ಒಳಜಗತ್ತಿನ ಚಿತ್ರಗಳಿವೆ. ಜೊತೆಗೆ ಕಾರ್ಮಿಕ, ದೇಶಭಕ್ತ, ಸರಕಾರಿ ನೌಕರ, ರೈತರ ಬದುಕು-ಬವಣೆಗಳಿವೆ. ಈ ಕೃತಿಗಳಲ್ಲಿ ಭಾಷೆಯು ಮಡಿವಂತಿಕೆಯ ಮಾಲಿನ್ಯದಿಂದ ಮುಕ್ತವಾಗಿದೆ, ಪಾಂಡಿತ್ಯದ ಭಾರದಿಂದ ಪಾರಾಗಿದೆ. ಅರ್ಧದಷ್ಟು ಸಾಹಿತ್ಯ ಸ್ವಗ್ರಾಮ ಮಲಾಮರಡಿಯಲ್ಲಿಯೆಂಬ ಸಣ್ಣ ಹಳ್ಳಿಯ, ಸಣ್ಣ ಗುಡಿಸಲು ಮನೆಯಲ್ಲಿ, ಎಣ್ಣೆದೀಪದ ಮಂದ ಬೆಳಕಿನಲ್ಲಿ ಸೃಷ್ಟಿಯಾದುದು ಕರ್ನಾಟಕದ ಗಣ್ಯಸಾಹಿತಿಗಳು ಸಮುದಾಯದಲ್ಲಿ ಬಹುಶಃ ಏಕೈಕ ಉದಾಹರಣೆಯಾಗಿದೆ. ವಿದೇಶದಲ್ಲಿದ್ದರೆ ಈ ಮನೆಯೇ ಸರಕಾರದ ಸ್ಮಾರಕವಾಗಬಹುದಾಗಿದ್ದ ಸಂಗತಿಯಿದು. ಯಾವ ಸಾಹಿತ್ಯಕೃತಿ ಯಾವ ಊರಿನ ಯಾವ ಸ್ಥಳದಲ್ಲಿ? ಎಂಥ ಸಂದರ್ಭದಲ್ಲಿ? ಹುಟ್ಟಿತೆಂಬ ಬೇರೆ ವಿವರಗಳೂ ಇಲ್ಲಿವೆ. ಪ್ರಕಾಶನದ ಪರದಾಟ, ಮಾರಾಟದ ಸಾಹಸ, ಸಾಹಿತಿಗಳ ಪ್ರೀತಿ-ಗುಂಪುಗಾರಿಕೆ ಇತ್ಯಾದಿ ವ್ಯಥೆಗಳೂ ಇಲ್ಲಿ ಕಥೆಯಾಗಿ ನಿಂತಿವೆ. ಇದಲ್ಲದೆ ಇವರೂ ಒಳಗೊಂಡಂತೆ ೩-೪ ಜನ ದುಡಿದು, ಆತ್ಮಮುಖಿ-ಮನಮುಖಿಯಾಗಿದ್ದ ನವೋದಯ ಸಾಹಿತ್ಯವನ್ನು ಜನಮುಖಿಯನ್ನಾಗಿ 'ಪ್ರಗತಿಶೀಲ ಸಾಹಿತ್ಯ ಚಳುವಳಿ'ಯ ಬಾಗಿಲನ್ನು ತೆರೆದರೇನೋ ನಿಜ. ಆದರೆ ಮಿಕ್ಕವರಿಗಿದ್ದ ಆರ್ಥಿಕ, ಶೈಕ್ಷಣಿಕ, ಕೌಟುಂಬಿಕ ಇತ್ಯಾದಿ ಅನುಕೂಲತೆಗಳು ಇಲ್ಲದಿದ್ದರೂ ಕುಗ್ರಾಮವಾಗಿಯಾದ ಕಟ್ಟೀಮನಿಯವರು ನಗರವಾಸಿಗಳಾದ ಇವರಾರಿಗೂ ಕಡಿಮೆಯಲ್ಲದಷ್ಟು ಬೆಳೆದುದನ್ನು ಇಲ್ಲಿ ಅವಶ್ಯ ನೆನೆಯಬೇಕು. ಈ ಪ್ರಗತಿಶೀಲ ಸಾಹಿತ್ಯದ ಹೆಜ್ಜೆಗುರುತುಗಳೂ, ೫೦ ವರ್ಷಗಳ ಕನ್ನಡ ಸಾಹಿತ್ಯ ಮತ್ತು ಪತ್ರಿಕಾ ಸಾಹಿತ್ಯದ ಕಥನಗಳೂ ಇಲ್ಲಿವೆ. ಇವೆಲ್ಲವುಗಳಿಗೆ ಹಿನ್ನೆಲೆಯಾಗಿ ಸಮಕಾಲೀನ ಹಳ್ಳಿ-ಪಟ್ಟಣ, ದೀನ-ಧನಿಕ, ಸಾಕ್ಷರ-ನಿರಕ್ಷರ, ಶೋಷಣೆ-ಶೋಷಿತ ಸಮಾಜದ ಹಸಿಹಸಿ ಅನುಭವಗಳ ಚಿತ್ರ ಬಿಚ್ಚಿ ನಿಂತಿದೆ.

ಕಟ್ಟೀಮನಿಯವರು ಕೊನೆಕೊನೆಗೆ ಕರ್ನಾಟಕ ವಿಶ್ವವಿದ್ಯಾಲಯದ ಸಿನೇಟ್ ಸದಸ್ಯ. ಕರ್ನಾಟಕ ಸರಕಾರದ ರಾಜ್ಯಸಭಾ ಸದಸ್ಯರಾದರು. ಈಗ ಅವರ ಬದುಕು ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಸರಿಯಿತು. ಇದೆಲ್ಲ ಇಲ್ಲಿ ಮಿಂಚಿನಂತೆ ಹೊಳೆದು ಮಾಯವಾಗುತ್ತದೆ. ಒಂದು ಮಾತು ನಿಜ. ಹಿಂದಿನ ನೆಲೆಗಳಲ್ಲಿಯ ಹೋರಾಟದ ಜೀವನ ಇಲ್ಲಿ ಸಹಜವಾಗಿಯೇ ಗೈರು ಹಾಜರಾಗಿದೆ.

ಆತ್ಮಕಥೆಗಳಲ್ಲಿ ಎರಡು ವಿಧ. ಒಂದು : ವ್ಯಕ್ತಿ ಕೇಂದ್ರಿತ, ಇನ್ನೊಂದು ಸಮಾಜಕೇಂದ್ರಿತ. ಮೊದಲಿನಿಂದಲೂ ಸಮಾಜದೊಂದಿಗೆ ಹೋರಾಟ ನಡೆಸುತ್ತಲೇ ಬೆಳೆದ ಕಟ್ಟೀಮನಿಯವರು ಈ ಆತ್ಮಕಥೆಯನ್ನು ಪ್ರಧಾನವಾಗಿ ಉತ್ತರಕರ್ನಾಟಕದ, ಮುಂದುವರಿದು ಸಮಗ್ರ ಕರ್ನಾಟಕದ ೫೦ ವರ್ಷಗಳ ಕಥೆಯೆಂಬಂತೆ ಕಟ್ಟಿದ್ದಾರೆ. ಹೀಗಾಗಿ ಇದು ಕಟ್ಟೀಮನಿ ಕಥೆಯಾಗುತ್ತಲೇ ಕರ್ನಾಟಕದ ಕಥೆಯಾಗಿಯೂ ಬೆಳೆದಿದೆ. ಇದೇ ರೀತಿ ಉತ್ತರ ಕರ್ನಾಟದ ಆತ್ಮಕಥೆಯಾಗಿರುವ ಶ್ರೀರಂಗರ 'ಸಾಹಿತಿಯ ಆತ್ಮಜಿಜ್ಞಾಸೆ', ಸ.ಸ.ಮಾಳವಾಡರ 'ದಾರಿ ಸಾಗಿದೆ', ಆರ್. ಸಿ. ಹಿರೇಮಠರ 'ಉರಿ ಬರಲಿ-ಸಿರಿ ಬರಲಿ', ಜೋಳದ ರಾಸಿ ದೊಡ್ಡನಗೌಡರ 'ನಂದೇ ನಾನೋದಿದೆ' ಇತ್ಯಾದಿ ಕೃತಿಗಳ ಜೊತೆಯಲ್ಲಿ ಈ 'ಕಾದಂಬರಿಕಾರನ ಕಥೆ'ಯೂ ತನ್ನ ಕಥೆಯೊಂದಿಗೆ ನಮ್ಮ ಕಥೆಯನ್ನೂ ಹೇಳುತ್ತದೆ.

* * *

೨೦೧೨, ಬಸವರಾಜ ಕಟ್ಟೀಮನಿ ಟ್ರಸ್ಟ್ ಬೆಳಗಾವಿಯಲ್ಲಿ ಅಸ್ತಿತ್ವಕ್ಕೆ ಬರುತ್ತಲೇ ಕೈಗೆತ್ತಿಕೊಂಡ ಮಹತ್ವಪೂರ್ಣ ಯೋಜನೆಗಳಲ್ಲಿ 'ಪ್ರಸಾರಾಂಗ'ವೂ ಒಂದು. ಈ ವರ್ಷ ಈ ವಿಭಾಗದ ಮೂಲಕ 'ಕಾದಂಬರಿಕಾರನ ಕಥೆ' ಗ್ರಂಥದ ಮರುಮುದ್ರಣ, 'ಮಾಡಿ ಮಡಿದವರು' ಕಾದಂಬರಿಯ ಇಂಗ್ಲಿಷ ಮತ್ತು ಮರಾಠಿ ಅನುವಾದ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದೇನೆ. ಬೆಂಗಳೂರಿನ 'ಸಪ್ನಾಬುಕ್ ಹೌಸ್' ಒಡೆತನದ ಈ ಪುಸ್ತಕಗಳನ್ನು ಪ್ರಕಟಿಸಿಕೊಳ್ಳಲು ಅನುಮತಿ ನೀಡಿದ ಅದರ ಒಡೆಯರಾದ ಶ್ರೀ ನಿತಿನ್ ಶಹಾ ಅವರಿಗೂ, ಅಲ್ಲಿಯ ಕನ್ನಡ ವಿಭಾಗದ ಸಂಚಾಲಕರಾದ ಶ್ರೀ ದೊಡ್ಡೇಗೌಡ ಅವರಿಗೂ ಕೃತಜ್ಞತೆಗಳು. 'ಬಸವರಾಜ ಕಟ್ಟೀಮನಿ ಟ್ರಸ್ಟ್' ಸಲಹಾಸಮಿತಿ ಸದಸ್ಯರಿಗೆ, ಅದರಲ್ಲಿಯೂ ಬೆಳಗಾವಿ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಎಸ್. ಆಯ್. ಕರಿಶಂಕರಿ ಅವರಿಗೆ, ಈ ಕೃತಿಯ ಮುದ್ರಣ ಕಾರ್ಯದಲ್ಲಿ ಶ್ರದ್ಧೆಯಿಂದ ದುಡಿದ ಪ್ರೊ. ಚಂದ್ರಶೇಖರ ಅಕ್ಕಿ, ಡಾ. ಹನುಮಂತ ಮೇಲಿನಮನಿ–ಡಾ. ಸರಸ್ವತಿದೇವಿ ಭಗವತಿ ಅವರಿಗೆ, ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್ ಮುದ್ರಣಾಲಯದ ಶ್ರೀ ಬಸವರಾಜ ಪಾಟೀಲ ಅವರಿಗೆ ಧನ್ಯವಾದಗಳು.

ಬಸವರಾಜ ಕಟ್ಟೀಮನಿ : ಕಾದಂಬರಿಕಾರನ ಕಥೆ, ಕರ್ನಾಟಕ ಸರಕಾರ, ಪ್ರಸಾರಾಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ–೨೦೧೨.

ಆಕರ : ಮಾರ್ಗ ಸಂಪುಟ–೭

೨೨೧

ಕಟ್ಟಿಮನಿ ವ್ಯಾಸಂಗ

ಅಧ್ಯಕ್ಷರ ಮಾತು
೨೦೧೨

ಕನ್ನಡದ ಪ್ರಗತಿಶೀಲಸಾಹಿತ್ಯ ಪ್ರವರ್ತಕರಲ್ಲಿ ಬಸವರಾಜ ಕಟ್ಟೀಮನಿಯವರು ಒಬ್ಬರೂ ಮತ್ತು ಮುಖ್ಯರು. ಈ ಸಾಹಿತಿಗಳು ನವೋದಯ ಸಾಹಿತಿಗಳಿಗಿದ್ದ ಪದವಿ-ನೌಕರಿ ಸವಲತ್ತಿನಿಂದ ವಂಚಿತರಾದ ಸಾಮಾಜಿಕರು. ಹೀಗಾಗಿ ಇವರ ಬರವಣಿಗೆಯ ವಸ್ತು ನವೋದಯದವರ 'ಆದರ್ಶ'ದಿಂದ 'ವಾಸ್ತವ' ಆಯಾಮಕ್ಕೆ ಹೊರಳಿತು. ಆದರ್ಶದಿಂದಾಗಿ ಅದು 'ಪ್ರಯೋಗ'ವೆನಿಸಿದರೆ ವಾಸ್ತವದಿಂದಾಗಿ ಇದು 'ಚಳುವಳಿ', ಅದರಲ್ಲಿಯೂ ಆಧುನಿಕ ಕನ್ನಡ ಸಾಹಿತ್ಯದ 'ಪ್ರಥಮ ಬಂಡಾಯ ಚಳುವಳಿ'ಎನಿಸಿತು.

ಪ್ರಗತಿಶೀಲಸಾಹಿತಿಗಳಲ್ಲಿ ಮಿಕ್ಕವರು ನಗರವಾಸಿಗಳಾಗಿ, ಸಾಕ್ಷರ ಕುಟುಂಬದ ಹಿನ್ನೆಲೆಯವರಾಗಿ, ಅನ್ಯಪ್ರಾಂತೀಯ ಪ್ರಗತಿಶೀಲ ಚಳುವಳಿಯಿಂದ ಪ್ರಭಾವಿತರಾಗಿ ಬರೆದರು. ಇದಕ್ಕೆ ವಿರುದ್ಧವೆನ್ನುವಂತೆ ಕಟ್ಟೀಮನಿಯವರು ಗ್ರಾಮವಾಸಿಗಳಾಗಿ, ನಿರಕ್ಷರ ಕುಟುಂಬದ ಹಿನ್ನೆಲೆಯವರಾಗಿ, ಈ ಸಾಹಿತ್ಯದ ವಸ್ತುವಿನ ನೈಜ ಪರಿಸರದಲ್ಲಿ ಬದುಕಿದವರಾಗಿ ಬರೆದರು. ಹೀಗಾಗಿ ಇವರ ಬರೆಹ ಮಿಕ್ಕವರಿಗಿಂತ ಒಂದಿಷ್ಟು ಭಿನ್ನವಾಗಿ ಕಾಣುತ್ತದೆ. ನಿರ್ದಿಷ್ಟೀಕರಿಸಿ ಬರೆಯುವ ಸುದ್ದಿ ಪತ್ರಿಕಾಕ್ಷೇತ್ರದಲ್ಲಿ ಹತ್ತು ವರ್ಷ ದುಡಿಯುವ ಮೂಲಕ ಗಳಿಸಿಕೊಂಡ ನಿರ್ಭೀತ ಸ್ವಭಾವವು ಸಾಮಾನ್ಯೀಕರಿಸಿ ಬರೆಯುವ ಸಾಹಿತ್ಯಕ್ಷೇತ್ರಕ್ಕೆ ಹೊರಳಿ ಬರೆದ ಅವರ ಕಥೆ-ಕಾದಂಬರಿಗಳಲ್ಲಿಯೂ ಮುಂದುವರಿಯಿತು.

ನಗರವೆಂಬ ಸುರಕ್ಷಿತ-ಪ್ರಗತಿನಿಷ್ಠ ಪರಿಸರದಲ್ಲಿ ನಿಂತು ಬರೆಯುವವರಿಗಿಂತ ಹಳ್ಳಿಯೆಂಬ ಅರಕ್ಷಿತ-ಸಂಪ್ರದಾಯನಿಷ್ಠ ಪರಿಸರದಲ್ಲಿ ನಿಂತು ಬರೆಯುವವರಿಗೆ ಹೆಚ್ಚು ಧೈರ್ಯಬೇಕು. ಕುಗ್ರಾಮವಾದ ಮಲಾಮರಡಿಯಲ್ಲಿ ಹುಟ್ಟಿ ಬೆಳೆದ ಕಟ್ಟೀಮನಿಯವರಲ್ಲಿ ಅದು ಅಗತ್ಯಕ್ಕಿಂತ ಅಧಿಕ ಪ್ರಮಾಣದಲ್ಲಿದ್ದಿತು. ಹೀಗಾಗಿ 'ಹರಿಜನ್ವಾರ' ಮೊದಲಾದ ಕೃತಿಗಳ ಮೂಲಕ ತಮ್ಮ ಬ್ರಾಹ್ಮಣ ಸಮಾಜದ ದೋಷಗಳನ್ನು ವ್ಯಕ್ತಪಡಿಸಿದ ಶ್ರೀರಂಗರಂತೆ, 'ಜರತಾರಿ ಜಗದ್ಗುರು' ಮೊದಲಾದ ಕೃತಿಗಳ ಮೂಲಕ ತಮ್ಮ

ಲಿಂಗಾಯತ ಸಮಾಜದ ದೋಷಗಳನ್ನು ಕಟ್ಟೀಮನಿಯವರು ವ್ಯಕ್ತಪಡಿಸಿದರು. ಇದಲ್ಲದೆ ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಕಾವ್ಯ-ಕಾದಂಬರಿ ಇತ್ಯಾದಿಗಳನ್ನು ಬರೆಯಲು ಯಾವ ಸಾಹಿತಿಯೂ ಧೈರ್ಯಮಾಡದ ಆ ಕಾಲದಲ್ಲಿ 'ಸ್ವಾತಂತ್ರ್ಯದೆಡೆಗೆ' (೧೯೪೬) ಕಾದಂಬರಿ ಬರೆದುದು ಸಾಮಾನ್ಯಸಂಗತಿಯಲ್ಲ. ಒಟ್ಟಾರೆ, ಏಕಕಾಲಕ್ಕೆ ಸಮಾಜವನ್ನು-ಸರಕಾರವನ್ನು ಲೆಕ್ಕಿಸದ ಸಾಹಿತಿ ಕಟ್ಟೀಮನಿಯವರ ಧೈರ್ಯ ತೀರ ಅಪರೂಪದ್ದೆಂದೇ ಹೇಳಬೇಕು. ಸಾಹಿತ್ಯವು ಸಮಕಾಲೀನ ಸಮಾಜದ ವಿಮರ್ಶೆ ಎಂಬ ಮಾತು ಇಂಥಲ್ಲಿ ಅರ್ಥಪೂರ್ಣವೆನಿಸುತ್ತದೆ. ಹೀಗೆ ವಾಸ್ತವ ಸಮಾಜದ ಚಿತ್ರಣದಿಂದಾಗಿ ಇವರ ಕಾದಂಬರಿಗಳು ಹೆಚ್ಚು ಪರಿಣಾಮಕಾರಿ ಎನಿಸಿದವು. ಇದರಿಂದಾಗಿ ಉತ್ತರ ಕರ್ನಾಟಕದಲ್ಲಿ ಗಳಗನಾಥರ ಕಾದಂಬರಿಯ ಓದುಗರು ಕ್ರಮೇಣ ಕಟ್ಟೀಮನಿಯವರ ಕಾದಂಬರಿಗಳಿಗೆ ವಾಲಿದರು.

ಕಟ್ಟೀಮನಿಯವರು ಹೀಗೆ ಸಾಹಿತ್ಯಿಕ ಬರೆವಣಿಗೆ ಮತ್ತು ಚಿಂತನೆಗಳಿಗೆ ಸೀಮಿತರಾಗದೆ, ನಿಜ ಜೀವನದಲ್ಲಿಯೂ ಸಾಮಾಜಿಕ ರಾಜಕೀಯ ಇತ್ಯಾದಿ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾದ ಕಾರಣ, ಇವುಗಳ ಬಗೆಗೂ ತಮ್ಮದೇ ಆದ ಧೋರಣೆ ಬೆಳೆಸಿಕೊಂಡಿದ್ದರು. ಇವುಗಳ ಅನುಷ್ಠಾನಕ್ಕಾಗಿ ಹೆಣಗಿದರು.

ಹೀಗೆ ಒಬ್ಬ ಸಾಹಿತಿಯಾಗಿ, ಒಬ್ಬ ಸಾಮಾಜಿಕನಾಗಿ ಬಾಳಿದ ಕಟ್ಟೀಮನಿಯವರ ಸಮಗ್ರ ಅಧ್ಯಯನ ಜರುಗಬೇಕೆಂಬ ಉದ್ದೇಶದಿಂದ "ಬಸವರಾಜ ಕಟ್ಟೀಮನಿ ಪ್ರತಿಷ್ಠಾನ"ವು ಬೇರೆ ಬೇರೆ ಪ್ರದೇಶಗಳಲ್ಲಿ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಈ ಸಂಕಿರಣಗಳಲ್ಲಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳನ್ನೊಳಗೊಂಡ ಪುಸ್ತಕಗಳನ್ನು "ಕಟ್ಟೀಮನಿ ವ್ಯಾಸಂಗ" ಹೆಸರಿನಿಂದ ಒಂದೊಂದಾಗಿ ಪ್ರಕಟಿಸುವ ಯೋಜನೆ ನಮ್ಮದಾಗಿದೆ. ಈ ಮಾಲೆಯಲ್ಲಿ ಮೊದಲನೆಯದಾಗಿದೆ, ಪ್ರಸ್ತುತ ಕೃತಿ.

೨೨-೦೭-೨೦೧೨ರಂದು ಗೋಕಾಕ ನಗರದಲ್ಲಿ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸದಸ್ಯರಾದ ಪ್ರೊ. ಚಂದ್ರಶೇಖರ ಅಕ್ಕಿ ಅವರ ಸಂಚಾಲಕತ್ವದಲ್ಲಿ ಜರುಗಿದ ವಿಚಾರ ಸಂಕಿರಣದಲ್ಲಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಕಲನವಿದು. ಈ ಪ್ರಬಂಧಗಳನ್ನು ಪ್ರಸ್ತುತ ಪಡಿಸಿದ ವಿದ್ವಾಂಸರಿಗೂ ಕಟ್ಟೀಮನಿ ಪ್ರತಿಷ್ಠಾನದ ಸದಸ್ಯರಿಗೂ ಇದರ ಯಶಸ್ಸಿಗಾಗಿ ದುಡಿದ ನಾಗರಿಕರಿಗೂ, ಕರ್ಣಧಾರತ್ವ ವಹಿಸಿದ್ದ ಚಂದ್ರಶೇಖರ ಅಕ್ಕಿಯವರಿಗೂ ಧನ್ಯವಾದಗಳು.

ಸಂ. ಪ್ರೊ. ಚಂದ್ರಶೇಖರ ಅಕ್ಕಿ : ಕಟ್ಟೀಮನಿ ವ್ಯಾಸಂಗ, ಕರ್ನಾಟಕ ಸರಕಾರ, ಪ್ರಸಾರಾಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ-೨೦೧೨.

ಆಕರ : ಮಾರ್ಗ ಸಂಪುಟ-೭

■■

೨೨೨

ಜನಜೀವಾಳ ವಾರಪತ್ರಿಕೆ ಮತ್ತು ಬಸವರಾಜ ಕಟ್ಟೀಮನಿ

ಪ್ರಧಾನ ಸಂಪಾದಕರ ಮಾತು

೨೦೧೪

ಕರ್ನಾಟಕ ಸರಕಾರ ಬೆಳಗಾವಿಯಲ್ಲಿ ಸ್ಥಾಪಿಸಿರುವ "ಬಸವರಾಜ ಕಟ್ಟೀಮನಿ ಪ್ರತಿಷ್ಠಾನ"ದ ಮುಖ್ಯವಿಭಾಗ ಪ್ರಸಾರಾಂಗ. ಇದು ಈ ವರೆಗೆ ಕಟ್ಟೀಮನಿಯವರು ರಚಿಸಿದ, ಇವರನ್ನು ಕುರಿತು ಅನ್ಯರು ರಚಿಸಿದ ಸಾಹಿತ್ಯ ಕೃತಿಗಳ ಪ್ರಕಟನೆಯನ್ನು ತುಂಬ ತೃಪ್ತಿಕರವಾಗಿ ಪೂರೈಸಿದೆ.

ಕಟ್ಟೀಮನಿಯವರು ಕೇವಲ ಪುಸ್ತಕ ರಚನೆಗೆ ಸೀಮಿತರಾಗದೆ, ಸುತ್ತಲಿನ ಸಮಾಜದಲ್ಲಿಯೂ ಒಬ್ಬ ಕ್ರಿಯಾಶೀಲ(ಆ್ಯಕ್ಟಿವಿಸ್ಟ್) ವ್ಯಕ್ತಿಯಾಗಿ ತೊಡಗಿಕೊಂಡವರು. ಹೀಗಾಗಿ ಇವರು ದಿನನಿತ್ಯದ ಸಾಮಾಜಿಕ ಘಟನೆಗಳ ಬಗೆಗೆ ದಿನಪತ್ರಿಕೆ, ವಾರ ಪತ್ರಿಕೆಗಳಲ್ಲಿ ಲೇಖನ, ಅಂಕಣ, ಟಿಪ್ಪಣಿಗಳನ್ನು ಬರೆಯುತ್ತ ಬಂದರು. ಇದು ಕಟ್ಟೀಮನಿಯವರ ಬದುಕಿನ–ಬರೆಹದ ಭಾಗವೇ ಆಗಿದ್ದಿತು. ಕಾರಣ, ಆ ಕಾಲದ ಪತ್ರಿಕೆಗಳಲ್ಲಿ ಪ್ರಕಟವಾದ ಅವರ ಸಣ್ಣ ದೊಡ್ಡ ಬರೆಹಗಳೆಲ್ಲವನ್ನು ಒಂದೂ ಬಿಡದಂತೆ ಸಂಗ್ರಹಿಸಿ, ಪುಸ್ತಕರೂಪದಲ್ಲಿ ಪ್ರಕಟಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. ಈ ಯೋಜನೆಯ ಮೊದಲ ಕೃತಿಯಾಗಿದೆ,"ಜನಜೀವಾಳ ವಾರಪತ್ರಿಕೆ ಮತ್ತು ಬಸವರಾಜ ಕಟ್ಟೀಮನಿ."

'ಜನಜೀವಾಳ' ಹೆಸರಿಗೆ ತಕ್ಕಂತೆ ಜನಸ್ಪಂದನೆಗೆ ವೇದಿಕೆಯಾಗಿದ್ದ ಪತ್ರಿಕೆ. ನಾಲ್ಕು ಪುಟಗಳ, ಸೀಮಿತ ಪ್ರಸಾರದ ಇದು ಮೊದಲಿನಿಂದಲೂ ಬೆಳಗಾವಿ ನಗರ ಮತ್ತು ಜಿಲ್ಲೆಗಳಲ್ಲಿ ದೊಡ್ಡ ದನಿಯಾಗಿ ಬೆಳೆಯುತ್ತ ಬಂದಿದೆ. "ನ್ಯಾಯನಿಷ್ಠುರಿ, ಲೋಕವಿರೋಧಿ"ಯಾಗಿದ್ದ ಈ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಶ್ರೀ ಬ.ಮ. ಏಳುಕೋಟಿಯವರು ಕಟ್ಟೀಮನಿಯವರ ಸ್ನೇಹಿತರಾಗಿದ್ದರು. ಈ ಪತ್ರಿಕೆಯ ಕಾರ್ಯಾಲಯ ಆಗಾಗ ಕಟ್ಟೀಮನಿಯವರ ಕಾಲಕ್ಷೇಪದ ಸ್ಥಳವೂ ಆಗಿದ್ದಿತು. ಈ ಸಂಬಂಧವನ್ನು ತಮ್ಮ ಬರೆಹಗಳ ಮೂಲಕ ಇನ್ನೂ ಗಾಢವಾಗಿಸಿಕೊಂಡವರು, ಶ್ರೀ ಕಟ್ಟೀಮನಿ.

ರಾಜ್ಯಪ್ರಸಿದ್ಧಿಯ ಪತ್ರಿಕೆಗಳಂತೆ ಸ್ಥಳೀಯ ಪತ್ರಿಕೆಗಳೂ ಸಮಾಜವನ್ನು ಎಚ್ಚರಿಸುವಲ್ಲಿ, ಶುದ್ಧೀಕರಿಸುವಲ್ಲಿ ವಿಶಿಷ್ಟ ಪಾತ್ರವಹಿಸುತ್ತವೆ. ಇದನ್ನು ಅರ್ಥಮಾಡಿಕೊಂಡ ಕಟ್ಟೀಮನಿಯವರು ಸ್ಥಳೀಯ ಪತ್ರಿಕೆ 'ಜನಜೀವಾಳ'ಕ್ಕೆ ಬಹುಸಂಖ್ಯೆ ಲೇಖನ-ಟಿಪ್ಪಣಿಗಳನ್ನು ಬರೆಯುತ್ತ ಬಂದರು. ಇವುಗಳ ಸಂಗ್ರಹವು ಸಮಕಾಲೀನ ಆಗು-ಹೋಗುಗಳ ಮತ್ತು ಕಟ್ಟೀಮನಿಯವರ ಸಾಮೂಹಿಕ ಕಾಳಜಿಯ ದಾಖಲೀಕರಣವೇ ಸರಿ. ಈ ಮಾತಿಗೆ ಸಾಕ್ಷಿಯೆಂಬಂತೆ ಇಲ್ಲಿ ಅಂದಿನ ರಾಜಕೀಯ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಇತ್ಯಾದಿಗಳ ಚಿತ್ರಣ ಮೂಡಿನಿಂತಿದೆ.

ಇಂಥ ದಾಖಲೆಗಳನ್ನು ಶೋಧಿಸುವುದು, ಸಂಗ್ರಹಿಸುವುದು ತುಂಬ ಕಷ್ಟದ ಕೆಲಸ. ಏಕೆಂದರೆ ಕೆಲವೊಮ್ಮೆ ಪತ್ರಿಕೆಯ ಬಿಡಿಸಂಚಿಕೆಗಳನ್ನು ಅವುಗಳ ಸಂಪಾದಕರೇ ಸಂರಕ್ಷಿಸಿರುವುದಿಲ್ಲ. ಸಂರಕ್ಷಿಸಿದ್ದರೂ ತುಂಬ ಜೀರ್ಣಸ್ಥಿತಿಯಲ್ಲಿರುತ್ತವೆ; ಮುಟ್ಟಿದರೆ ಮುರಿಯುತ್ತವೆ. ಇಂಥಗಳನ್ನು ಎಚ್ಚರಿಕೆಯಿಂದ ಓದಿ, ಇನ್ನೂ ಎಚ್ಚರಿಕೆಯಿಂದ ಬೆರಳಚ್ಚುಗೊಳಿಸಿ, ವರ್ಗೀಕರಿಸಿ ಕೃತಿಯನ್ನಾಗಿಸುವುದು ಬಹುದೊಡ್ಡ ಸಹನೆಯನ್ನು ಅಪೇಕ್ಷಿಸುತ್ತದೆ. ನಮ್ಮ ಸುದೈವಕ್ಕೆ ಈ ಕಾರ್ಯವನ್ನು ಪ್ರಸ್ತುತ ಕೃತಿಯ ಸಂಪಾದಕರಾದ ಶ್ರೀ ಮಹಾಲಿಂಗ ಮಂಗಿ ಮತ್ತು ಶ್ರೀ ಶಿವರಾಯ ಏಳುಕೋಟಿ ತುಂಬ ಜವಾಬ್ದಾರಿಯಿಂದ ಪೂರೈಸಿದ್ದಾರೆ. ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸಲಹಾ ಸಮಿತಿ ಸದಸ್ಯರು ಮುಕ್ತ ಮನಸ್ಸಿನಿಂದ ಇದಕ್ಕೆ ಒಪ್ಪಿಗೆ ನೀಡಿದ್ದಾರೆ. ಪತ್ರಿಕೆಯನ್ನು ಬಳಸಿಕೊಳ್ಳಲು 'ಜನಜೀವಾಳ'ದ ಸಂಪಾದಕರು ಸಮ್ಮತಿಸಿದ್ದಾರೆ. ಈ ಕೃತಿಯ ಅಕ್ಷರ ಸಂಯೋಜನೆಯನ್ನು ಡಾ. ಹನುಮಂತ ಮೇಲಿನಮನಿ ಪ್ರೀತಿಯಿಂದ ಮಾಡಿದ್ದಾರೆ. ಇವರೆಲ್ಲರಿಗೂ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಸಂ.ಮಹಾಲಿಂಗ ಮಂಗಿ, ಶಿವರಾಯ ಏಳುಕೋಟಿ : ಜನಜೀವಾಳ ವಾರಪತ್ರಿಕೆ ಮತ್ತು ಬಸವರಾಜ ಕಟ್ಟೀಮನಿ ಕರ್ನಾಟಕ ಸರಕಾರ, ಪ್ರಸಾರಾಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ-೨೦೧೪.

ಆಕರ : ಮಾರ್ಗ ಸಂಪುಟ-೭

೨೨೩

ಆದಿಲ್ ಶಾಹಿ ಸಾಹಿತ್ಯ ಸಂಪುಟ

ಅಧ್ಯಕ್ಷರ ಮಾತು

೨೦೧೪

ವಿಜಾಪುರ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ "ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ"ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ. ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ. ಸಮಾಜ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್ ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ-ಸಮನ್ವಯದಿಂದ ೧೪೮೯-೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು-ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ, ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ. ವಿಜಾಪುರವು ಜಗತ್ತಿಗೆ ನೀಡಿದ ದೊಡ್ಡಕೊಡುಗೆ ಗೋಳಗುಮ್ಮಟವೆಂಬುದು ಪ್ರಸಿದ್ಧ ಮಾತು. ಸಾಹಿತ್ಯ-ಇತಿಹಾಸದ ವಿದ್ಯಾರ್ಥಿಯಾದ ನನಗೆ

ಗೋಳಗುಮ್ಮಟಕ್ಕಿಂತ ವಿಜಾಪುರವು ಜಗತ್ತಿಗೆ ನೀಡಿದ ದೊಡ್ಡಕೊಡುಗೆಯಾಗಿದೆ ಈ ಗ್ರಂಥರಾಶಿ. ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನು ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟುದು ಈವರೆಗೆ ಇತಿಹಾಸ ಪರ್ಶಿಯನ್, ದಖನಿ–ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ, ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಕೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವಿಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ. ಫ.ಗು. ಹಳ್ಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹದಲ್ಲಿ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್ ಶಾಹಿ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ ಪ್ರಕಟಣ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು. ಹಳ್ಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

ಆದಿಲ್ ಶಾಹಿ ಸಾಹಿತ್ಯ ಸಂಪುಟ : ಬಿ.ಎಲ್.ಡಿ.ಇ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಾಪುರ– ೨೦೧೪.

ಆಕರ : ಮಾರ್ಗ ಸಂಪುಟ–೭

೨೨೪

ಬಸವರಾಜ ಕಟ್ಟೀಮನಿ ಸಮಗ್ರಸಾಹಿತ್ಯ

ಅಧ್ಯಕ್ಷರ ಮಾತು

೨೦೧೫

ಬಸವರಾಜ ಕಟ್ಟೀಮನಿಯವರು ಕನ್ನಡದ ಪ್ರಗತಿಶೀಲ ಸಾಹಿತ್ಯ ಪ್ರವರ್ತಕರಲ್ಲಿ ಒಬ್ಬರು ಮತ್ತು ವಿಶಿಷ್ಟರು. ಇದನ್ನು ಗಮನಿಸಿ ಕರ್ನಾಟಕ ಸರಕಾರ ಅವರ ತವರು ಜಿಲ್ಲೆಯ ಕೇಂದ್ರಸ್ಥಳವಾದ ಬೆಳಗಾವಿಯಲ್ಲಿ "ಬಸವರಾಜ ಕಟ್ಟೀಮನಿ ಪ್ರತಿಷ್ಠಾನ"ವನ್ನು ಸ್ಥಾಪಿಸಿದೆ.

ಈ ಪ್ರತಿಷ್ಠಾನ ಅಸ್ತಿತ್ವಕ್ಕೆ ಬಂದು ಎರಡು ವರ್ಷ ಗತಿಸಿದವು. ಇಷ್ಟು ಸಣ್ಣ ಅವಧಿಯಲ್ಲಿ ಇದು ರಾಜ್ಯಮಟ್ಟದ ದೊಡ್ಡ ಸುದ್ದಿಯಾಗಿ ಬೆಳೆದಿದ್ದು, ಈಗ ಚಾರಿತ್ರಿಕ ದಾಖಲೆಯೆನಿಸಲಿರುವ "ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ಕೈಗೆತ್ತಿಕೊಂಡಿದೆ.

ಕಟ್ಟೀಮನಿಯವರು ಪತ್ರಿಕಾಸಾಹಿತ್ಯದಿಂದ ಸೃಜನಸಾಹಿತ್ಯಕ್ಕೆ ಸಾಗಿಬಂದವರು. ಹೀಗಾಗಿ ಪತ್ರಿಕೆಯ ಜನಮುಖಿ ಭಾಷೆ, ನಿರ್ಭೀತ ನಿಲವುಗಳ ಸೃಷ್ಟಿಯಾಗಿರುವ ಇವರ ಸೃಜನ ಬರೆವಣಿಗೆಯು ಆಧುನಿಕ ಕನ್ನಡ ಸಾಹಿತ್ಯದ ಪ್ರಥಮ ಬಂಡಾಯ ಸಾಹಿತ್ಯವಾಗಿದೆ. ಈ ದೃಷ್ಟಿಯಿಂದ ಹೇಳುವುದಾದರೆ ನವೋದಯ ಸಾಹಿತ್ಯ ಒಂದು ಪ್ರಯೋಗ, ಪ್ರಗತಿಶೀಲ ಸಾಹಿತ್ಯ ಒಂದು ಚಳುವಳಿಯೆನಿಸುತ್ತವೆ.

ಈ ಪ್ರಗತಿಶೀಲ ಚಳುವಳಿಯಲ್ಲಿ ಭಾಗಿಯಾದ ಸಾಹಿತಿಗಳೆಲ್ಲ ಬಹುಮಟ್ಟಿಗೆ ದೂರದಿಂದ ಸಮಾಜವನ್ನು ಗಮನಿಸಿ ಬರೆದವರು. ಕಟ್ಟೀಮನಿಯವರು ಮಾತ್ರ ನೇರವಾಗಿ ಸಮಾಜದಲ್ಲಿ ತೊಡಗಿ ಬರೆದವರು. ಇದರಿಂದಾಗಿ ಮಿಕ್ಕವರು ವಸ್ತುವಿನ ಸಾಮಾನ್ಯೀಕರಣದ ಕಡೆಗೆ, ಇವರು ನಿರ್ದಿಷ್ಟೀಕರಣದ ಕಡೆಗೆ ಹೆಚ್ಚು ಒತ್ತು ಕೊಡುತ್ತಾರೆ. ಹೀಗಾಗಿ ಇವರ ಬರೆಹಗಳು ಅಪಾಯವನ್ನು ಲೆಕ್ಕಿಸದೆ ಸೃಷ್ಟಿಸಿದ ರಚನೆಗಳೆನಿಸುತ್ತವೆ. ಬ್ರಿಟಿಶರು ಆಳುತ್ತಿರುವಾಗಲೇ ಅವರನ್ನು ವಿರೋಧಿಸಿ

ಬರೆದ 'ಸ್ವಾತಂತ್ರ್ಯದೆಡೆಗೆ' (೧೯೪೬) ಇದಕ್ಕೆ ಉದಾಹರಣೆಯಾಗಿದೆ. ಇಷ್ಟೇ ಏಕೆ? ಬ್ರಿಟಿಶರನ್ನು ವಿರೋಧಿಸಿ ಬರೆದ ಕನ್ನಡದ ಮೊದಲ ಕಾದಂಬರಿಯಾಗಿರುವ ಇದು, ಕಟ್ಟೀಮನಿಯವರ ಮೊದಲ ಕಾದಂಬರಿಯೂ ಆಗಿದೆ. ಹೀಗೆಯೆ 'ಜರತಾರಿ ಜಗದ್ಗುರು', 'ಜ್ವಾಲಾಮುಖಿಯ ಮೇಲೆ' ಇತ್ಯಾದಿ ಕೃತಿಗಳ ಮೂಲಕ ಇವರು ವಸ್ತುದೃಷ್ಟಿಯಿಂದ ಅನೇಕ ಮೊದಲುಗಳನ್ನು ತೆರೆದಿದ್ದಾರೆ.

ಕಟ್ಟೀಮನಿ ಎಂದಾಕ್ಷಣ ಮೊದಲು ನೆನಪಾಗುವುದು ಕಾದಂಬರಿ ಪ್ರಕಾರ. ನಿಜ ಹೇಳಬೇಕೆಂದರೆ, ಇವರ ಸೃಜನಶೀಲ ಸಾಹಿತ್ಯ ಆರಂಭವಾದುದು 'ಸಣ್ಣಕಥೆ' ಪ್ರಕಾರದಿಂದ, 'ಕಾರವಾನ್'(೧೯೪೩) ಕಥಾಸಂಕಲನದಿಂದ. ಈ ಎರಡು ಪ್ರಕಾರಗಳಲ್ಲದೆ ಪ್ರವಾಸಕಥನ, ಆತ್ಮಕಥೆ, ಅನುವಾದ, ಮಕ್ಕಳಕಥೆ, ನಾಟಕ, ಕವನ, ಸಂಪಾದನೆ ಕ್ಷೇತ್ರಗಳಲ್ಲಿಯೂ ಇವರು ಕೈಯಾಡಿಸಿದ್ದಾರೆ. ಇವೆಲ್ಲ ಸೇರಿ ಸುಮಾರು ೬೬ ಕೃತಿಗಳು ಇವರ ಸಾಹಿತ್ಯಿಕ ಕೊಡುಗೆಯಾಗಿದೆ. ಆದರೆ ಮೊದಲು ಬೆಂಗಳೂರಿನ 'ಮಂಗಳ' ಪತ್ರಿಕೆಯಲ್ಲಿ ಧಾರವಾಹಿಯಾಗಿ, ಬಳಿಕ ಪುಸ್ತಕವಾಗಿ ಬೆಳಕು ಕಂಡಿದ್ದ(೧೯೮೫) 'ಮಗನ ತಾಯಿ' ಕಾದಂಬರಿ ಪುಸ್ತಕ ಎಷ್ಟು ಪ್ರಯತ್ನಿಸಿದರೂ ಸಿಗಲಿಲ್ಲ. ಮಂಗಳ ಪತ್ರಿಕೆಯ ೧, ೨, ೩, ೬, ೭, ೮ನೆಯ ಸಂಚಿಕೆಗಳು ಮಾತ್ರ ಸಿಕ್ಕವು. ಸಿಕ್ಕಷ್ಟನ್ನಾದರೂ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಈ ಪತ್ರಿಕೆಯಲ್ಲಿ ಲಭ್ಯವಾದ ಅಪೂರ್ಣ ಪಠ್ಯವನ್ನು ಇಲ್ಲಿ ಪ್ರಕಟಿಸಿದ್ದೇವೆ. ಡಾ. ಬಸವರಾಜ ಸಾದರ ಅವರ ಪಿ.ಎಚ್‌ಡಿ. ಪ್ರಬಂಧವನ್ನಾಧರಿಸಿ ಇದರ ವಿಮರ್ಶೆ ಬರೆದಿದ್ದೇವೆ. ಸಂಪಾದಿತ ಕೃತಿ 'ರಸಿಕರಂಗ' ಮತ್ತು ಆಯ್ದ ಕಥೆಗಳ ಸಂಕಲನ 'ಜೀವನ ಕಲೆ'ಗಳನ್ನು ಕೈಬಿಟ್ಟದ್ದೇವೆ. ಇದರಿಂದಾಗಿ ಇವರ ೬೪ ಕೃತಿಗಳು ಈ ಯೋಜನೆಯಲ್ಲಿ ಅಡಕಗೊಂಡಿವೆ.

ಕಟ್ಟೀಮನಿಯವರು ತೀರಿಕೊಂಡು(೧೯೮೯)ಇಂದಿಗೆ ೨೫ ವರ್ಷ ಗತಿಸಿದವು. ಅವರ ಕೃತಿಗಳು ಮರುಮುದ್ರಣವಾಗುತ್ತಿಲ್ಲವೆಂಬಂತೆ ಆಗೊಂದು ಈಗೊಂದು ಬೆಳಕು ಕಾಣುತ್ತಲಿದ್ದವು. ಒಬ್ಬ ಸಾಹಿತಿಯನ್ನು ಜೀವಂತವಾಗಿಡುವುದೆಂದರೆ ಅವನ ಕೃತಿಗಳು ಸಹೃದಯರಿಗೆ ನಿರಂತರ ಲಭ್ಯವಾಗುವಂತೆ ನೋಡಿಕೊಳ್ಳುವುದು ಮತ್ತು ಅವನನ್ನು ಕುರಿತು ವಾದ-ಸಂವಾದ ಜರುಗಿಸುವುದು. ಇಂದು ಕಟ್ಟೀಮನಿಯವರು ಈ ಅವಕಾಶದಿಂದ ವಂಚಿತರಾಗಿರುವರೆಂದೇ ಹೇಳಬೇಕು. ಈ ಕೊರತೆಯನ್ನು ತುಂಬುವುದು ಅವರ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿರುವ ಪ್ರತಿಷ್ಠಾನದ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಪೂರೈಸುವ ಏಕೈಕಮಾರ್ಗವೆಂದರೆ ಮೊದಲು ಅವರ ಸಮಗ್ರ ಸಾಹಿತ್ಯವನ್ನು ಪ್ರಕಟಿಸುವುದು. ಈ ದಿಸೆಯಲ್ಲಿ ಪ್ರತಿಷ್ಠಾನ ಯೋಚಿಸಿ, ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ಈ ಯೋಜನೆಯನ್ನು ಕೈಗೆತ್ತಿಕೊಂಡುದರ ಫಲವೆನಿಸಿವೆ, ಈ ಕೃತಿಗಳು. ಈ ಔದಾರ್ಯಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವೆಯರಾದ ಶ್ರೀಮತಿ ಉಮಾಶ್ರೀ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ ಅವರಿಗೂ ಋಣಿಯಾಗಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ಆಯುಕ್ತರಾಗಿದ್ದ ಶ್ರೀ ಕೆ. ಆರ್. ರಾಮಕೃಷ್ಣ, ಇಂದಿನ ನಿರ್ದೇಶಕರಾದ ಶ್ರೀ ಕೆ.ಎ.ದಯಾನಂದ, ಜಂಟಿ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನಸ್ವಾಮಿ, ಶ್ರೀ ಬಲವಂತರಾವ ಪಾಟೀಲ, ಶ್ರೀ ಅಶೋಕ ಚಲವಾದಿ, ಶ್ರೀಮತಿ ಪ್ರಜ್ಞಾ ಅಮ್ಮೆಂಬಳ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಇಂದು ಬೆಂಗಳೂರಿನ 'ಸಪ್ನಾ ಬುಕ್ ಹೌಸ್' ಕಟ್ಟೀಮನಿಯವರ ಸಮಗ್ರ ಸಾಹಿತ್ಯದ ಸ್ವಾಮಿತ್ವವನ್ನು ಹೊಂದಿದೆ. ಈ ಸಾಹಿತ್ಯದ ಒಂದು ಆವೃತ್ತಿಯನ್ನು ನಮ್ಮ ಪ್ರತಿಷ್ಠಾನದ ಮೂಲಕ ಪ್ರಕಟಿಸಲು ಒಪ್ಪಿಗೆ ನೀಡಿದ ಸಪ್ನಾ ಬುಕ್ ಹೌಸ್ ಮಾಲಿಕರಾದ ಶ್ರೀ ನಿತಿನ್ ಷಾ, ಕನ್ನಡ ವಿಭಾಗದ ಕಾರ್ಯನಿರ್ವಾಹಕರಾದ ಶ್ರೀ ಜಿ. ದೊಡ್ಡೇಗೌಡ ಅವರಿಗೂ, ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಳ್ಳಲು ಪ್ರೀತಿಯಿಂದ ನಿರ್ಣಯ ಸ್ವೀಕರಿಸಿದ 'ಬಸವರಾಜ ಕಟ್ಟೀಮನಿ ಪ್ರತಿಷ್ಠಾನ'ದ ಸಲಹಾ ಸಮಿತಿಗೂ, ಸಂಪಾದನೆಯ ಹೊಣೆಹೊತ್ತು ಅದನ್ನು ಶ್ರಮ-ಶ್ರದ್ಧೆಗಳಿಂದ ಪೂರೈಸಿದ ಪ್ರಧಾನ ಸಂಪಾದಕರಾದ ಪ್ರೊ. ಚಂದ್ರಶೇಖರ ಅಕ್ಕಿ ಅವರಿಗೂ, ಈ ಸಮಿತಿಯ ಇತರ ಸದಸ್ಯರಿಗೂ ನಾವು ಋಣಿಯಾಗಿದ್ದೇವೆ.

ಬಸವರಾಜ ಕಟ್ಟೀಮನಿಯವರು ನಿಧನರಾಗಿ ಕೇವಲ ೨೫ ವರ್ಷ ಗತಿಸಿವೆ. ಹೀಗಿದ್ದೂ ಅವರ ಎಲ್ಲ ಕೃತಿಗಳು ಇಂದು ಲಭಿಸುತ್ತಿಲ್ಲ. ಇಂಥ ಸಂದರ್ಭದಲ್ಲಿ ಪುಸ್ತಕ ನೀಡಿ ನೆರವಾದ ಸಪ್ನ ಬುಕ್‌ಹೌಸ್‌ದವರಿಗೂ ಶ್ರೀ ಚೆನ್ನವೀರ ಕಣವಿ, ಬೆಂಗಳೂರಿನ 'ಪುಸ್ತಕ ಮನೆ'ಯ ಶ್ರೀ ಹರಿಹರಪ್ರಿಯ, ಪಾಂಡವಪುರದ ಶ್ರೀ ಅಂಕೇಗೌಡ, ನಿರಂಜನರ ಮಗಳು ಶ್ರೀಮತಿ ಪ್ರಿಯದರ್ಶಿನಿ, ಪ್ರಾಚಾರ್ಯರಾದ ನೀಲಮ್ಮ, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯದ ಗ್ರಂಥಪಾಲಕರಾದ ಶ್ರೀ ಶಿವಕುಮಾರ ಕೆ. ಅಂಗಡಿ ಮತ್ತು ಶ್ರೀ ಕಟ್ಟೀಮನಿ ಕುಟುಂಬದ ಸದಸ್ಯರಿಗೂ ನಮ್ಮ ಧನ್ಯವಾದಗಳು ಸಲ್ಲುತ್ತವೆ.

ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ : ಕರ್ನಾಟಕ ಸರಕಾರ, ಪ್ರಸಾರಾಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ-೨೦೧೫.

ಆಕರ : ಮಾರ್ಗ ಸಂಪುಟ-೭

■■

೨೨೫

ಕಲ್ಯಾಣದೀಪ್ತಿ

ಕಲ್ಯಾಣವೆಂಬ ಪ್ರಣತೆಯಲ್ಲಿ...

ಗೌರವ ಸಂಪಾದಕರು ಮಾತು

೨೦೧೫

ಲಿಂಗಾಯತ ಸಮಾಜದಲ್ಲಿ ಸಾವಿರಾರು ಮಠಗಳಿವೆ. ಇಲ್ಲಿ ಒಂದನ್ನು ಹೋಲುವ ಇನ್ನೊಂದು ಮಠ ನೂರಾರು ಸಂಖ್ಯೆಯಲ್ಲಿ ಸಿಗುತ್ತವೆ. ಆದರೆ ಭಾಲ್ಕಿ ಪಟ್ಟದ್ದೇವರ ಮಠವನ್ನು ಹೋಲುವ ಮಠ ಇನ್ನೊಂದಿಲ್ಲವೆಂದೇ ಹೇಳಬೇಕು.

ಲಿಂಗಾಯತದಲ್ಲಿ ಗುರು (ವಿರಕ್ತ) ಮತ್ತು ಆಚಾರ್ಯವೆಂಬ ಎರಡು ಮಠಸಂಪ್ರದಾಯಗಳಿವೆ. ಇಂದು ಗುರು ಸಂಪ್ರದಾಯದ ಮಠಗಳು ಬಸವಣ್ಣನಲ್ಲಿ, ಆಚಾರ್ಯ ಸಂಪ್ರದಾಯದ ಮಠಗಳು ಪಂಚಾಚಾರ್ಯರಲ್ಲಿ ತಮ್ಮ ಮೂಲವನ್ನು ಹೇಳುತ್ತವೆ. ಆಚಾರ್ಯ ಸಂಪ್ರದಾಯದವರ ಈ ಹೇಳಿಕೆ ಇತ್ತೀಚಿನ ಕಲ್ಪನೆಯಾಗಿದೆ. ಮೂಲತಃ ಇವರೂ ಬಸವಣ್ಣನೇ ತಮ್ಮ ಗುರುವೆಂದು ನಂಬಿದ್ದರು. "ಶ್ರೀಗುರು ಬಸವಲಿಂಗಾಯ ನಮಃ" ಎಂಬುದು ಇವರಿಗೂ ಮಂತ್ರವಾಗಿದ್ದಿತು. ಈ ಹಳೆಯ ಸಂಪ್ರದಾಯವನ್ನು ಈಗಲೂ ಉಳಿಸಿಕೊಂಡು ಬಂದಿರುವ ಆಚಾರ್ಯ (ಪಟ್ಟದ ದೇವರು)ಸಂಪ್ರದಾಯದ ಏಕೈಕ ಉದಾಹರಣೆಯಾಗಿದೆ, ಭಾಲ್ಕಿ ಪಟ್ಟದ್ದೇವರಮಠ.

ಇನ್ನೊಂದು ವೈಶಿಷ್ಟ್ಯವೆಂದರೆ ಎಲ್ಲ ಲಿಂಗಾಯತ ಮಠಗಳಿಗೆ ಜಂಗಮ ಜಾತಿಯವರೇ ಅಧಿಪತಿಗಳಾಗುವ ಭೇದ ನೀತಿಯ 'ಏಕಸತ್ತಾ' ಪದ್ಧತಿ ಈಚೆಗೆ ಬೆಳೆದು ಬರುತ್ತಲಿದೆ. ಭಾಲ್ಕಿಯದು ಈ ಬಗೆಯ ಭೇದ ನೀತಿಯಿಲ್ಲದ ಹಳೆಯ 'ಲೋಕಸತ್ತಾ' ಪದ್ಧತಿಯನ್ನು ಮಾತ್ರ ಈಗಲೂ ಉಳಿಸಿಕೊಂಡು ಬಂದ ಮಠವಾಗಿದೆ. ಈ ಎರಡು ಕಾರಣಗಳಿಂದಾಗಿ ಇಂದು ಇದನ್ನು ಹೋಲುವ ಇನ್ನೊಂದು ಮಠವಿಲ್ಲವೆಂದು ಹೇಳುವುದು.

ಭಾಲ್ಕಿ ಮಠದ ಇತಿಹಾಸದಲ್ಲಿ ಪೂಜ್ಯ ಶ್ರೀ ಚೆನ್ನಬಸವ ಪಟ್ಟದ ದೇವರು ಒಬ್ಬ ಯುಗಪುರಷರು. "ಒಳಗೆ ಲಿಂಗದ ಕೂಟದಲ್ಲಿ ಮನವಡಗಿರಬೇಕು ಹೊರಗೆ ಜಂಗಮದ ಮಾಟದಲ್ಲಿ ತನುವಿಡಿದಿರಬೇಕು" ಎಂಬ ವಚನ ವಾಕ್ಯಕ್ಕೆ ಅವರು ಜೀವಂತ ನಿದರ್ಶನವೆನಿಸಿದ್ದರು. ಈ ತತ್ವ ಅವರಲ್ಲಿ ೧೨ನೆಯ ಶತಮಾನದಷ್ಟು ಹಳೆಯದು, ೨೧ನೆಯ ಶತಮಾನದಷ್ಟು ಹೊಸದು. ಹೀಗಾಗಿ ಅವರ ವ್ಯಕ್ತಿತ್ವದಲ್ಲಿ ಸಂಪ್ರದಾಯದ ಪರಿಷ್ಕರಣ ಎದ್ದು ಕಾಣುತ್ತಿತ್ತು. ಇವುಗಳಲ್ಲಿ ಜಂಗಮ ಮಾಟದ ಪರಿಷ್ಕರಣವು ಅನ್ನದಾಸೋಹ, ಅಕ್ಷರದಾಸೋಹ, ರಾಷ್ಟ್ರಭಕ್ತಿ, ರಾಜ್ಯಭಾಷಾ ಪ್ರೀತಿ ಇತ್ಯಾದಿ ಶಾಖೆಗಳಲ್ಲಿ ಬಿಚ್ಚಿಕೊಂಡು ಬೆಳೆದಿದ್ದಿತು.

ಚೆನ್ನಬಸವ ಪಟ್ಟದದೇವರ ಬಳಿಕ ಪೀಠಕ್ಕೆ ಬಂದವರು ಪ್ರಸ್ತುತ ಶ್ರೀ ಬಸವಲಿಂಗ ಪಟ್ಟದ್ದೇವರು, ಯುಗಪುರುಷರೊಬ್ಬರಿಗೆ ವಾರಸುದಾರರಾಗಿ ಬರುವ ಸವಾಲು ಸಣ್ಣದೇನಲ್ಲ. ಈ ಅವಕಾಶವನ್ನು ಆಹ್ವಾನವೆಂಬಂತೆ ಸ್ವೀಕರಿಸಿ ನಿರ್ವಹಿಸುತ್ತ ಬಂದವರು ಇವರು. ಮೈಸೂರು, ತುಮಕೂರು, ಚಿತ್ರದುರ್ಗ, ಸಿರಿಗೆರೆ, ಶಿವಮೊಗ್ಗ, ಗದಗ, ಹುಬ್ಬಳ್ಳಿ, ಇಲಕಲ್ಲ ಹೀಗೆ ಉತ್ತರಕ್ಕೆ ಬಂದಂತೆ ಲಿಂಗಾಯತ ಮಠಗಳು ಬೆಳೆಯಲಿಕ್ಕೆ ಅವಕಾಶಗಳು ಕಡಿಮೆ. ಹೀಗಿರುವಾಗ ಇನ್ನು ಉತ್ತರದ ಭಾಲ್ಕಿಮಠಕ್ಕೆ ಅಂಥ ಅವಕಾಶ ಮತ್ತೂ ಕಡಿಮೆ. ಈ ಬಗೆಯ ಸವಲತ್ತು ಕೊರತೆಯನ್ನು ಸೋಪಾನ ಮಾಡಿಕೊಂಡು ಬೆಳೆದವರು, ಮಠವನ್ನು ಸಮಾಜವನ್ನು ಬೆಳೆಸಿದವರು ಶ್ರೀ ಬಸವಲಿಂಗ ಪಟ್ಟದದೇವರು. ಮೇಲೆ ಹೇಳಿದ "ಒಳಗೆ ಲಿಂಗದ ಕೂಟದಲ್ಲಿ ಮನವಡಗಿರಬೇಕು, ಹೊರಗೆ ಜಂಗಮ ಮಾಟದಲ್ಲಿ ತನುವಿಡಿದಿರಬೇಕು" ಎಂಬ ಗುರುಗಳು ನಂಬಿದ್ದ ಸೂತ್ರವನ್ನೇ ಗಟ್ಟಿಯಾಗಿ ಹಿಡಿದು ಇವರು ಲಿಂಗಾಯತ ಸಿದ್ಧಾಂತ ಸಮಾಜಗಳನ್ನು ವಿಸ್ತಾರದಿಂದ ವಿಸ್ತಾರಕ್ಕೆ ಜಾತ್ಯಾತೀತವಾಗಿ ಬೆಳೆಸಿದರು. ಅನೇಕ ಶಿಕ್ಷಣ ಸಂಸ್ಥೆ ಅನೇಕ ಗ್ರಂಥ ಪ್ರಕಾಶನ ಸಂಸ್ಥೆ, ಅನೇಕ ಪ್ರಶಸ್ತಿ, ಬಹುಮಾನ, ಅನೇಕ ಧಾರ್ಮಿಕ ಪರಿಷತ್ತು, ಅನೇಕ ಪ್ರತಿಷ್ಠಾನ, ಅನೇಕ ಸಾಂಸ್ಕೃತಿಕ ಸಂಘಗಳನ್ನು ಹುಟ್ಟುಹಾಕಿದವರು. ಇವುಗಳಲ್ಲಿ ಎತ್ತಿಹೇಳಬೇಕಾದುದು ಹೊರರಾಜ್ಯಗಳಲ್ಲಿ ಬಸವಪ್ರಜ್ಞೆ ಮೂಡಿಸಿದ ಸಂಘಟನಾಕಾರ್ಯ.

ಲಿಂಗಾಯತ ಗುರುಪೀಠ(ವಿರಕ್ತಪೀಠ)ದವರು ತಮ್ಮ ಕಾರ್ಯವ್ಯಾಪಿಯನ್ನು ಕರ್ನಾಟಕಕ್ಕೆ ಸೀಮಿತಗೊಳಿಸುತ್ತ ಬಂದರು. ಇದನ್ನು ಗಮನಿಸಿ ಆಚಾರ್ಯಪೀಠದವರು ಹೊರರಾಜ್ಯಗಳಾದ ಮಹಾರಾಷ್ಟ್ರ ಆಂಧ್ರಪ್ರದೇಶಗಳಲ್ಲಿ ಲಿಂಗಾಯತ ವೀರಶೈವ ಒಂದೇ ಎಂಬ ಭ್ರಮೆಯನ್ನು ಬಿತ್ತಿ 'ಲಿಂಗೀಬ್ರಾಹ್ಮಣ ಗ್ರಂಥಮಾಲೆ' ಇತ್ಯಾದಿಗಳನ್ನು ಆರಂಭಿಸಿ ತಮ್ಮ ಸಿದ್ಧಾಂತ ಶಿಖಾಮಣಿ ಮೊದಲಾದುವು ಲಿಂಗಾಯತದ ಧರ್ಮಗ್ರಂಥಗಳೆಂದು ಬೋಧಿಸಿ, ಅಲ್ಲಿಯ ಜನರು ಮೊದಲಿನಿಂದಲೂ ಅನುಸರಿಸುತ್ತಲಿದ್ದ ಬಸವ ಸಿದ್ಧಾಂತದ ದಾರಿಬಿಡಿಸಿದರು. ಈ ತಪ್ಪನ್ನು ತಿದ್ದುವ ದೃಷ್ಟಿಯಿಂದ ಶ್ರೀ ಬಸಲಿಂಗ ಪಟ್ಟದದೇವರು "ಮಹಾರಾಷ್ಟ್ರ ಬಸವ ಪರಿಷತ್ತು" ಮತ್ತು "ಆಂಧ್ರಪ್ರದೇಶ ಬಸವ ಪರಿಷತ್ತು" ಸ್ಥಾಪಿಸಿದುದು ಐತಿಹಾಸಿಕ ಸಾಧನೆಯೆನಿಸಿದೆ. ಇತ್ತೀಚೆ ಅವರು ಕೈಕೊಂಡ "ಸಮಗ್ರ ಮಹಾರಾಷ್ಟ್ರ ಬಸವಧರ್ಮ ಯಾತ್ರೆ" 'ನ ಭೂತೋ ನ ಭವಿಷ್ಯತಿ' ಎಂದೇ ಹೇಳಬೇಕು. ಹೀಗೆ ಸಂಸ್ಕೃತಿಯನ್ನು ಉಳಿಸಿದ ಬೆಳೆಸಿದ ಶ್ರೀಗಳಿಗೆ ಅರ್ಪಿಸಿದ ಅಭಿನಂದನ ಗ್ರಂಥವಾಗಿದೆ, "ಕಲ್ಯಾಣದೀಪ್ತಿ."

ಕರ್ನಾಟಕ ಸಂದರ್ಭದಲ್ಲಿ 'ಕಲ್ಯಾಣ' ಶಬ್ದ ತುಂಬ ಧ್ವನಿಪೂರ್ಣವಾದುದು. ಇದು ರೂಢನಾಮದಲ್ಲಿ 'ಮಂಗಳ' ಅರ್ಥವನ್ನು ಅಂಕಿತನಾಮದಲ್ಲಿ ಗ್ರಾಮದ ಹೆಸರನ್ನು ಸೂಚಿಸುತ್ತಿದ್ದರೆ, ಶರಣ

ಚಳುವಳಿಯಿಂದಾಗಿ 'ಬಸವಕಲ್ಯಾಣ' ವೆನಿಸಿ, 'ಜನಕಲ್ಯಾಣ' ಅರ್ಥವನ್ನು ಪ್ರತಿಬಿಂಬಿಸುತ್ತದೆ. ಶ್ರೀ ಬಸವಲಿಂಗ ಪಟ್ಟದದೇವರು ಮೇಲೆ ಹೇಳಿದಂತೆ 'ಜನಕಲ್ಯಾಣ ಮಣಿಹ'ವನ್ನು ನಿರ್ವಹಿಸುತ್ತ ಬಂದ ಕಾರಣ ಈ ಗ್ರಂಥಕ್ಕೆ ಜನಕಲ್ಯಾಣದ ಬೆಳಕು ಅರ್ಥದಲ್ಲಿ "ಕಲ್ಯಾಣದೀಪ್ತಿ" ಎಂದು ನಾಮಕರಣ ಮಾಡಲಾಗಿದೆ.

ಇದು ಅಭ್ಯಾಸಿಗಳಿಗೆ ಒಂದು ಸಂದರ್ಭ ಗ್ರಂಥವಾಗಬೇಕೆಂಬ ಅದರಲ್ಲಿಯೂ ಉಪೇಕ್ಷಿತ ಜ್ಞಾನಕ್ಷೇತ್ರವನ್ನು ಬೆಳಕಿಗೆ ತರಬೇಕೆಂಬ ಉದ್ದೇಶ ನಮ್ಮದಾಗಿದೆ. ಈ ದೃಷ್ಟಿಯಿಂದ ಆರಂಭದಲ್ಲಿ ಶ್ರೀಮಠದ ಶ್ರೀಗಳ ಸಾಧನೆ, ಅಂತ್ಯದಲ್ಲಿ ಈ ಸಾಧನೆಗಳ ವಿವರ, ಮಧ್ಯದಲ್ಲಿ 'ಕಲ್ಯಾಣ ಕರ್ನಾಟಕದ ತತ್ವಪದಕಾರರು' ವಿಷಯ ಕುರಿತ ಅಭ್ಯಾಸಪೂರ್ಣ ಪ್ರಬಂಧಗಳನ್ನು ಇಲ್ಲಿ ಸಂಯೋಜಿಸಲಾಗಿದೆ.

ಕಲ್ಯಾಣ ಕರ್ನಾಟಕ ಪ್ರವೇಶ ೧೨ನೆಯ ಶತಮಾನದ ಬಳಿಕ ಅನ್ಯ ಆಕ್ರಮಣಗಳಿಗೆ ತುತ್ತಾಗುತ್ತಲೇ ಬಂದಿತು. ಇದರಿಂದಾಗಿ ಇಲ್ಲಿ ಪ್ರತಿಷ್ಠಿತ ಧರ್ಮಗಳಾಗಲಿ ರಾಜ್ಯಗಳಾಗಲೀ ತಲೆ ಎತ್ತಲೇ ಇಲ್ಲ. ಇದ್ದುದರಲ್ಲಿಯೇ ಸಾಮಾಜಿಕರು ತಮ್ಮ ತಮ್ಮ ಪ್ರದೇಶಗಳ ನಾಥ, ಆರೂಢ, ಸೂಫಿ ಇತ್ಯಾದಿ ಆಧ್ಯಾತಿಕ ಇತ್ಯಾದಿ ಪಂಥಗಳನ್ನು ಅನುಸರಿಸುತ್ತ ಬಂದರು. ಇದರ ಪರಿಣಾಮವಾಗಿ ಇಲ್ಲಿ ಪರಂಪರಾಗತ ಕನ್ನಡ ಶಿಷ್ಟ ಸಾಹಿತ್ಯಪ್ರಕಾರಗಳು ಹುಟ್ಟಿಕೊಳ್ಳಲಿಲ್ಲ. ಇಂಗ್ಲಿಷ್ ಪ್ರಭಾವದಿಂದ ತಲೆಯೆತ್ತಿದ್ದ ಹೊಸ ಸಾಹಿತ್ಯ ಪ್ರಕಾರಗಳು ಹುಟ್ಟಲಿಲ್ಲ. ಬದಲು ಮೇಲೆ ಹೇಳಿದ ಪಂಥೀಯ ತತ್ವಪದಗಳು ಹುಟ್ಟಲಾರಂಭಿಸಿದವು.

ಈ ಸಾಹಿತ್ಯ ಪ್ರಕಾರದ ಬಿಡಿಯಾದ ಅಧ್ಯಯನ ಈ ವೆರೆಗೆ ಜರಗಿದ್ದರೂ ಒಂದು ಸಮಗ್ರ ಅಧ್ಯಯನದ ಕೊರತೆ ಇನ್ನೂ ಉಳಿದುಕೊಂಡಿದ್ದಿತು. ಇದನ್ನು ಪೂರೈಸುವ ಉದ್ದೇಶದಿಂದ 'ಕಲ್ಯಾಣ ಕರ್ನಾಟಕದ ತತ್ವಪದಕಾರರು' ಎಂಬ ವಿಷಯಕ್ಕೆ ಈ ಅಭಿನಂದನ ಗ್ರಂಥದಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ. ಇನ್ನೊಂದು ಉದ್ದೇಶ: ಇತ್ತೀಚೆ ವಿದ್ವಾಂಸರು ಪ್ರತಿಷ್ಠಿತ ವಿಷಯಗಳ ಅಭ್ಯಾಸಕ್ಕೆ ಬದಲು ಸ್ಥಳೀಯ ವಿಷಯಗಳ ಅಭ್ಯಾಸದ ಕಡೆಗೆ ಹೆಚ್ಚು ಒಲುವು ತೋರಿಸುತ್ತಲಿದ್ದು, ಇದಕ್ಕೆ ಪೂರಕವೆಂಬಂತೆಯೂ ಈ ಕೃತಿ ಆಕೃತಿ ಪಡೆದಿದೆ.

'ಕಲ್ಯಾಣದೀಪ್ತಿ' ಕೃತಿ ರಚನೆಗಾಗಿ ಹಗಲೂ ಇರುಳೂ ದುಡಿದವರು ಸಂಪಾದಕರಾದ ಡಾ. ಗುರುಲಿಂಗಪ್ಪ ದಬಾಲೆ. ಇವರು ತೋರಿಸಿದ ಆಸಕ್ತಿ ದುಡಿದ ರೀತಿ ಅನನ್ಯವಾದುದು. ಸಕಾಲದಲ್ಲಿ ಲೇಖನ ಪೂರೈಸಿದ ವಿದ್ವಾಂಸರ ಸಹಕಾರವೂ ಸ್ಮರಣೀಯವಾದುದು. ಇವರಿಗೆಲ್ಲ ಕೃತಜ್ಞತೆಗಳು.

ಗೌ. ಸಂ. ಎಂ. ಎಂ. ಕಲಬುರ್ಗಿ : ಕಲ್ಯಾಣದೀಪ್ತಿ, ಹಿರೇಮಠ ಸಂಸ್ಥಾನ, ಭಾಲ್ಕಿ–೨೦೧೪

ಆಕರ : ಮಾರ್ಗ ಸಂಪುಟ–೭

■■

೨೨೬

ಕುಮಾರರಾಮನ ಸಾಂಗತ್ಯಗಳು

ಡಾ. ಜಿ.ವರದರಾಜರಾವ್ ಅವರು ಕನ್ನಡ ಸಾರಸ್ವತ ಪ್ರಪಂಚಕ್ಕೆ ಚಿರಪರಿಚಿತರು. ಐದು ವರುಷಗಳ ಅಧ್ಯಯನದ ಫಲವೆನಿಸಿದ "ಕುಮಾರರಾಮನ ಸಾಂಗತ್ಯಗಳು" ಎಂಬ ಗ್ರಂಥಕ್ಕೆ ದೊರೆತ ಪಿಎಚ್.ಡಿ. ಪದವಿ ಅವರ ಸಂಶೋಧನ, ಸಂಸ್ಕರಣ, ವಿಮರ್ಶನ ಶಕ್ತಿಗಳಿಗೆ ಸಂದ ಯೋಗ್ಯ ಪುರಸ್ಕಾರವೆನ್ನಬಹುದು.

"ವೀರನಾಗಿ ಹುಟ್ಟಿ ವೀರನಾಗಿ ಬದುಕಿ ವೀರನಾಗಿ ಸತ್ತ" ಕುಮ್ಮಟದುರ್ಗದ ರಾಜಪುತ್ರ ಕುಮಾರರಾಮನೊಬ್ಬ ಸಾಹಸ ಸದ್ಗುಣ–ಸೌಂದರ್ಯಗಳ ಅಪೂರ್ವ ಸಂಗಮ. ಉತ್ತರ ಭಾರತವನ್ನು ನುಂಗಿ ಅರಸುಮನೆತನಗಳನ್ನು ಒಂದೊಂದಾಗಿ ಮುರಿಯುತ್ತ ಮುನ್ನಡೆದ ಸಮಯದಲ್ಲಿ ದಿಕ್ಕೆಟ್ಟ ಕನ್ನಡ ಜನತೆ ತಮಗೆ ಇನ್ನು ಯಾರು ಗತಿಯೆಂದು ನಂಬಿದ್ದರೋ ಆ ಕಂಪಿಲರಾಯನ ರಾಜ್ಯಶಕ್ತಿಯಾಗಿದ್ದ ಕುಮಾರರಾಮನು ಮನೆಮುರುಕ ಹೆಣ್ಣಿನಿಂದ ಹಾದರದ ಹೊರೆ ಹೊತ್ತು ತಲೆತಿರುಕ ಹೆಣ್ಣಿನಿಂದ ಹತನಾದ ದುರಂತ ಘಟನೆ ಕರ್ನಾಟಕದ ಎದೆಯ ಮೇಲೆ ಮಾಯಲಾರದ ಗಾಯವಾಗಿ ಪರಿಣಮಿಸಿತು. ಸಮಸ್ತ ಕನ್ನಡಿಗರ ಮರುಕವನ್ನು ಗಳಿಸಿಕೊಂಡಿತು. ಈ ದುರಂತ ಮರಣವನ್ನು ಕಣ್ಣಾರೆ ಕಂಡ ಜನತೆ ಕಣ್ಣೀರಿಡುತ್ತ ಕತೆ ಕಟ್ಟಿ ಹೇಳಿದರು; ಹಾಡುಕಟ್ಟಿ ಹಾಡಿದರು; ಕಾವ್ಯಕಟ್ಟಿ ಓದಿದರು. ಪ್ರವಾಸಿಗಳು ತಮ್ಮ ಪ್ರವಾಸ ಪುಸ್ತಕಗಳಲ್ಲಿ ಗುರುತಿಸಿಕೊಂಡರು. ಈ ಎಲ್ಲ ಸಾಹಿತ್ಯ ರಾಶಿಯನ್ನು ಕಣ್ಣೆದುರಿಗಿಟ್ಟುಕೊಂಡು ಪೂರ್ವ ಮತ್ತು ಪಶ್ಚಿಮಗಳ ಆಧುನಿಕ ಪಂಡಿತರು ಆಗಾಗ ಲೇಖನ ಮತ್ತು ಪುಸ್ತಕಗಳನ್ನು ಬರೆದಿದ್ದಾರೆ. ಬರೆಯುತ್ತಲಿದ್ದಾರೆ. ಆದರೆ ಈ ದಿಸೆಯಲ್ಲಿ ಕುಮಾರರಾಮ ನನ್ನು ಕುರಿತು ಇಡಿಯಾಗಿ ವಿವೇಚನೆಗೆಯ್ದ ಪ್ರಥಮಕೀರ್ತಿ ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರಿಗೆ ಸಲ್ಲುತ್ತದೆ. ಹಿಂದಣ ಲೋಪದೋಷಗಳನ್ನು ಕೊಚ್ಚಿ ತೆಗೆದು ಆ ಬಗ್ಗೆ ಶಾಸ್ತ್ರೀಯ ಅಧ್ಯಯನಕ್ಕೆ ತೊಡಗಿದ ಹಿರಿಮೆ ಪ್ರಸ್ತುತದಲ್ಲಿ ಈ ಗ್ರಂಥಕರ್ತರಿಗೆ ಸಲ್ಲುತ್ತದೆ.

"ಕುಮಾರರಾಮನ ಸಾಂಗತ್ಯಗಳು" ಎಂದು ವಿಷಯವನ್ನು ಪರಿಮಿತಿಗೊಳಿಸಿಕೊಂಡಿದ್ದರೂ ಶ್ರೀಯುತರು ಕುಮಾರರಾಮನನ್ನು ಕುರಿತ ಮಿಕ್ಕಿ ಸಾಹಿತ್ಯವನ್ನೂ ಸಂಗ್ರಹಿಸಿ ಅದನ್ನು ಎಲ್ಲ ದಿಕ್ಕುಗಳಿಂದ ಪರಿಶೀಲಿಸಿದ್ದಾರೆ. ಗ್ರಂಥದ ಪ್ರಕರಣ ವಿಭಜನೆ ಅಚ್ಚುಕಟ್ಟಾಗಿದೆ, ಶಾಸ್ತ್ರೀಯವಾಗಿದೆ. ೧೫ ಪ್ರಕರಣಗಳಲ್ಲಿ ವಿಷಯವನ್ನೆಲ್ಲ ವ್ಯವಸ್ಥಿತ ರೀತಿಯಲ್ಲಿ ಸಾವಧಾನ ಶೈಲಿಯಿಂದ ಎರಕಹೊಯ್ದಿದ್ದಾರೆ.

ಆರಂಭದ 'ಸಾಂಗತ್ಯ ಗ್ರಂಥಗಳ ಸಮಾಲೋಕನೆ' ಎಂಬ ಪ್ರಕರಣದಲ್ಲಿ ದೇಪರಾಜನೇ ಸಾಂಗತ್ಯದ ಪ್ರಥಮ ಕವಿ ಎಂಬ ಪ್ರಚಲಿತ ವಾದವನ್ನು ಪುರಸ್ಕರಿಸಿ ಅಂದಿನಿಂದ ಬೆಳೆದುಬಂದ ಸಾಂಗತ್ಯಸಾಹಿತ್ಯವನ್ನು ಸಮಾಲೋಕನ ಮಾಡುವಲ್ಲಿ ಗಣಿತದೃಷ್ಟಿ, ವಸ್ತುವೈವಿಧ್ಯ ದೃಷ್ಟಿಗಳಿಗೆ ಹೆಚ್ಚು ಮಹತ್ವ ಕೊಡಲಾಗಿದೆ. ಆದರೆ ಒಂದು ಸಾಹಿತ್ಯ ಪ್ರಕಾರ ಇನ್ನೂ ಜೀವಂತವಾಗಿರುವಾಗ ಇನ್ನೊಂದು ಸಾಹಿತ್ಯ ಪ್ರಕಾರ ತಲೆದೋರುವದಕ್ಕೆ ಸಮಾಜದ ಹೃದಯದಲ್ಲಾದ ಪರಿವರ್ತನೆ ಇಲ್ಲವೆ ಅನ್ಯಸಾಹಿತ್ಯದ ಆಕಸ್ಮಿಕ ಪ್ರಭಾವಗಳು ಮುಖ್ಯ ಕಾರಣಗಳು. ಚಾಮರಸ, ಕುಮಾರವ್ಯಾಸ, ಲಕ್ಷ್ಮೀಶರಂಥ ಮಹಾಕವಿಗಳನ್ನು ಭವಿಷ್ಯದ್ಗರ್ಭದಲ್ಲಿಟ್ಟುಕೊಂಡು ಷಟ್ಪದಿ ಸಾಗಿಬರುತ್ತಿರುವಾಗ ದೇಪರಾಜನ ಮೂಲಕ ಸಾಂಗತ್ಯ ಹುಟ್ಟಿಬಂದ ಆವಶ್ಯಕತೆ ಏನು? ಆ ಆವಶ್ಯಕತೆಯನ್ನು ಅದು ಎಷ್ಟರಮಟ್ಟಿಗೆ ಪೂರೈಸಿಕೊಟ್ಟಿತು? ಎಂದು "ಯುಗಧರ್ಮ ಮತ್ತು ಸಾಹಿತ್ಯ" ದೃಷ್ಟಿಯಿಂದ ವಿವೇಚನೆಗೆಯ್ದಿದ್ದರೆ ಹೊಸದನ್ನು ಹೇಳಿದಂತಾಗುತ್ತಿತ್ತು.

ಕೃತಿಗಳ ಸಂಖ್ಯೆಯನ್ನು ನಿರ್ಣಯಿಸುವಲ್ಲಿ ಕರ್ನಲ್ ಮೆಕೆಂಝಿ ಅವರ ಪ್ರಥಮ ಉಲ್ಲೇಖ(ಕ್ರಿ.ಶ.೧೮೨೮)ವನ್ನು ಮೊದಲುಗೊಂಡು ಈ ವರೆಗಿನ ಎಲ್ಲ ಅಭಿಪ್ರಾಯಗಳನ್ನು ಐತಿಹಾಸಿಕವಾಗಿ ಸಂಗ್ರಹಿಸಿದ್ದಾರೆ. ತರುವಾಯ ನಾಗಸಂಗಯ್ಯ, ಭುಜಂಗೇಶ ಪುತ್ರಗಂಗ, ಕವಿಜಾಣಗಂಗ ಮತ್ತು ಪಾಂಚಾಳಗಂಗ ಈ ನಾಲ್ವರ ಹೆಸರಿನಲ್ಲಿ ಕುಮಾರರಾಮನನ್ನು ಕುರಿತು ನಾಲ್ಕು ಸ್ವತಂತ್ರ ಕೃತಿಗಳಿವೆ ಎಂಬ ಶ್ರೀ ಹುಲ್ಲೂರು ಶ್ರೀನಿವಾಸಜೋಯಿಸರ ವಾದವನ್ನು ಆ ಆ ಪ್ರತಿಗಳಲ್ಲಿ ಹಲವೆಡೆ ಸಾಮ್ಯ ಕಂಡುಬರುತ್ತಿದೆ ಎಂಬ 'ಬಾಯಿ ಮಾತಿನ ಆಧಾರ'ದಿಂದ ಅಲ್ಲಗಳೆದು ಈ ಕೃತಿಗಳೆಲ್ಲ ಒಬ್ಬನಿಗೇ ಅಂದರೆ ಪಾಂಚಾಳಗಂಗನಿಗೇ ಸಂಬಂಧಿಸಿದುವು ಎಂಬ ಆತ್ಯಂತಿಕ ನಿರ್ಣಯ ನೀಡಿದ್ದಾರೆ. ಇದು ಅವರ ಪ್ರಬಂಧದ ಕೇಂದ್ರ ವಿಷಯ. ಈ ಬಗ್ಗೆ ಆಕ್ಷೇಪಣೆ ರೂಪದ ಚರ್ಚೆ ಮುಂದೆ ಬರುತ್ತದೆ.

ಕೃತಿಗಳ ಹೆಸರನ್ನು ಗೊತ್ತುಪಡಿಸುವಲ್ಲಿ ಅಂತ್ಯ ಗದ್ಯದ ಆಧಾರವಿಡಿದು ನಂಜುಂಡನ ಕೃತಿಯನ್ನು "ಕುಮಾರರಾಮ ಚರಿತೆ" ಎಂದು ಕರೆದುದು ಸಾಧುವೆನಿಸುತ್ತದೆ. ಆದರೆ ಮಿಕ್ಕ ಪಾಂಚಾಳಗಂಗ, ಮಹಲಿಂಗಸ್ವಾಮಿ ಇವರ ಕೃತಿನಾಮಗಳನ್ನು ಕ್ರಮವಾಗಿ "ಚನ್ನರಾಮ ಸಾಂಗತ್ಯ", "ಬಾಲರಾಮ ಸಾಂಗತ್ಯ" ಎಂದು ನಿರ್ಣಯಿಸಿದುದಕ್ಕೆ ಕೊಟ್ಟ ಆಧಾರಗಳು ದುರ್ಬಲವಾಗಿದ್ದು, ಮೂರನ್ನೂ ಭಿನ್ನ ನಾಮಗಳಿಂದ ಕರೆಯಬೇಕು ಎಂಬ ಅವರ ಪೂರ್ವಗ್ರಹಿಕೆಯೇ ಇದಕ್ಕೆ ಕಾರಣವಾಯಿತೇನೋ ಎನಿಸುತ್ತಿದೆ. ಇಂಥ ನಿರ್ಣಯ ಕೆಲವು ಸಲ ಮೂಲ ಸತ್ಯಕ್ಕೆ ವಿಪರ್ಯಾಸವೆನಿಸಬಹುದಾದರೂ ಅಭ್ಯಾಸದ ದೃಷ್ಟಿಯಿಂದ ಭಿನ್ನನಾಮಕರಣ ಅನುಕೂಲವೆಂದೇ ಹೇಳಬಹುದು.

ಈ ಮೂರೂ ಜನ ಕವಿಗಳ ಕಾಲನಿರ್ಣಯ ಪ್ರಸಂಗದಲ್ಲಿ ಉಪಲಬ್ಧ ವಿಷಯವನ್ನೆಲ್ಲ ಆಯ್ದುಕೊಂಡು ಎಳೆ ಬಿಡಿಸಿ ನೋಡಿದ್ದಾರೆ. ಕ್ರಿ.ಶ.೧೫೨೦ರ ವರೆಗೂ (ರಾಯಚೂರ ಯುದ್ಧ) 'ಪೆಟಲಂಬು' ಎಂಬ ಮದ್ದಿನ ಆಯುಧದ ಪರಿಚಯ ಕನ್ನಡಿಗರಿರಲಿಲ್ಲವಂತೆ. ನಂಜುಂಡನಾದರೋ ಈ ಪದವನ್ನು ಮೇಲಿಂದ ಮೇಲೆ ಬಳಸಿದ್ದಾನೆ. ಅದಕ್ಕಾಗಿ ನಂಜುಂಡನ ಕೃತಿ ರಚನೆಯ ಕಾಲ

ಕ್ರಿ.ಶ. ೧೫೧೨ರ ತರುವಾಯ ಎಂದು ಊಹಿಸಿದ ಲೇಖಕರು ಕ್ರಿ.ಶ.೧೫೨೦ರ ತರುವಾಯ ಎಂದು ಊಹಿಸಲು ಅವಕಾಶವಿತ್ತು.[೧] ನಂಜುಂಡನಿಗೆ ಮಂಗರಸನು ದೊಡ್ಡಪ್ಪನಾಗಿರಬೇಕು ಎಂದು ಇವರ ವಾದವಿದ್ದಂತೆ, ಮಂಗರಸನಿಗೆ 'ನಂಜುಂಡ ಕವಿಯು ಚಿಕ್ಕಪ್ಪನಾಗಬೇಕು' ಎಂಬ ಇನ್ನೊಂದು ಹೇಳಿಕೆ ಇದೆ.[೨] ಅದರ ಚರ್ಚೆ ಇಲ್ಲಿ ಅವಶ್ಯವಿತ್ತು. ಕೊನೆಯದಾಗಿ ನಂಜುಂಡ ಮತ್ತು ಮಂಗರಸರ ಆಧಾರವಿಡಿದು ರೇಖಿಸಿದ ವಂಶಾವಳಿಯಲ್ಲಿ ವಿಜಯನೃಪನ ಮಗ ವಿಜಯ ಎಂದು ತೋರಿಸಿದ್ದಾರೆ. ಆದರೆ ತಂದೆ ಮಕ್ಕಳಿಗೆ ಒಂದೇ ಹೆಸರಿರುವುದು ಇಲ್ಲವೆನ್ನುವಷ್ಟು ಕ್ವಚಿತ್ತಾದುದರಿಂದ ಇಲ್ಲಿ ರೇಖಿಸಲಾದ ವಂಶಾವಳಿಯ ಬಗ್ಗೆ ಸಂದೇಹವುಂಟಾಗುತ್ತದೆ.

ಪಾಂಚಾಳಗಂಗನ ಕಾಲನಿರ್ಣಯಕ್ಕೆ ಬಾಹ್ಯಾಂತರ ಆಧಾರಗಳು ಏನೂ ಇಲ್ಲದುದರಿಂದ ಕವಿಚರಿತೆಕಾರರು ಹೇಳಿದ ಕ್ರಿ.ಶ.೧೬೫೦ ಎಂಬುದನ್ನೇ ಒಪ್ಪಿಕೊಂಡಿದ್ದಾರೆ. ಅದು ಸಹಜ.

ಮಹಾಲಿಂಗಸ್ವಾಮಿಯ ಕಾಲವನ್ನು ಚರ್ಚಿಸುತ್ತ ಪ್ರಭಾವವನ್ನು ಲಕ್ಷಿಸಿ ಆತನು ಲಕ್ಷ್ಮೀಶನಿಗೆ ತರುವಾಯ ಎಂದು ಹೇಳಿದುದು ಒಪ್ಪತಕ್ಕ ಮಾತು. ಆದರೆ ಮಹಾಲಿಂಗಸ್ವಾಮಿಯಲ್ಲಿ ಕಂಡುಬರುವ ವರರುಚಿಯ ಕಥೆ, ಮಚ್ಚೇಂದ್ರನ ಕಥೆಗಳಿಗೆ ಕನ್ನಡದ ಬತ್ತೀಸ ಪುತ್ಥಳಿ ಕಥೆ(ಕ್ರಿ.ಶ. ೧೭೨೫)ಯೂ, ಜಯಸೇನನ ಕಥೆಗೆ ಕನ್ನಡದ ಮದನಮೋಹಿನಿ ಕಥೆಯೂ (ಕ್ರಿ.ಶ.೧೭೫೦)ಆಕರವಾಗಿರಬಹುದೆಂದು ಊಹಿಸಿ ಆತನ ಕಾಲವನ್ನು ಕ್ರಿ.ಶ.೧೮೦೦ರ ಈಚೆಗೆ ಎಳೆದುತಂದುದು ಸರಿಕಾಣದು. ಏಕೆಂದರೆ ಇವು ಭಾರತೀಯ ಪ್ರಚುರತೆ ಪಡೆದ ಕಥೆಗಳು. ಕ್ರಿ.ಶ.೧೭೨೫ ರ ಪೂರ್ವದಲ್ಲಿ ಇವುಗಳ ಪರಿಚಯ ಕನ್ನಡಿಗರಿಗೆ ಇರಲಿಲ್ಲವೆನ್ನುವಂತಿಲ್ಲ.

ಈ ಮೂರು ಜನ ಕವಿಗಳ ಕಾಲನಿರ್ಣಯಕ್ಕೆ ನೆರವಾಗಬಹುದಾದ 'ಜೋಳರಾಯನ ಸಾಂಗತ್ಯ' ಕರ್ತೃ ಕವಿಲಿಂಗನ 'ತ್ರಿಪುರದಹನ ಸಾಂಗತ್ಯ'[೩] ಎಂಬ ಗ್ರಂಥವನ್ನು ಇಲ್ಲಿ ಸೂಚಿಸಬಯಸುತ್ತೇನೆ. ಈವರೆಗೆ ಇದ್ವಾಂಸರ ದೃಷ್ಟಿಗೆ ಬಾರದ ಈ ಕೃತಿಯ–

ಶ್ರೀಗಿರಿಜಾಸ್ಯಾಂಬುಜ **ದಿನನಾಯಕ** । ನಾಗಕುಂಡಲ ಚಂದ್ರಚೂಡ
ಭಾಗೀರಥಿಧರ ಭವರೋಗ ವೈದ್ಯ ನೀ। ನಾಗು ಶಂಕರ ಶರಣೆಮಗೆ।

ಎಂಬ ಆದಿಪದ್ಯದ ದಪ್ಪಕ್ಷರ ಭಾಗ ಇದ್ದಕ್ಕಿದ್ದಂತೆ ಗಂಗ ಮತ್ತು ನಂಜುಂಡರ ಕೃತಿಗಳ ಆದಿಪದ್ಯದಲ್ಲಿಯೂ ಕಂಡುಬರುತ್ತಿದೆ. ಗಂಗನಿಗಿದ್ದಂತೆ ಈತನಿಗೂ 'ಕನ್ನಡ ಜಾಣ' ಎಂಬ ಬಿರುದಿದೆ. ಮಹಲಿಂಗಸ್ವಾಮಿ ಸ್ಮರಿಸಿದ ಕವಿಲಿಂಗ. ಈತನೇ ಆಗಿರಬಹುದು. ಇವರಿಬ್ಬರ ಗ್ರಾಮ ಹಂಪೆ ಎಂಬುದನ್ನು ಗಮನಿಸಬೇಕು. ಈ ತ್ರಿಪುರದಹನ ಸಾಂಗತ್ಯದಲ್ಲಿ ಬರುವ–

ಬಿರಿದುಸಾಳುವನೆಡವಂಕನಾಧಿಕ ಪೊಳ। ಲರಸು ಹಂಪೆಯ ನಾಯಕನ।
ವರಭುಜ ತಿಮ್ಮಣ್ಣಮಂತ್ರಿಯಾತ್ಮಜ ಲಿಂ। ಗರಸನೊರೆದನೀ ಕೃತಿಯ।

ಎಂಬ ಪದ್ಯವನ್ನೂ ರತ್ನಾಕರವರ್ಣಿಯ ಪ್ರಭಾವದಿಂದ ಹುಟ್ಟಿರಬಹುದಾದ "ಈ ಶಿವ ಕಥೆಯನ್ನು ಕೇಳಿದರ ಪಾಪ । ನಾಶವಹುದು ನಿಮಿಷದಲ್ಲಿ।" ಎಂಬ ಪದ್ಯವನ್ನೂ ಗಮನದಲ್ಲಿಟ್ಟು ಈ ಕವಿಲಿಂಗನ ಕಾಲವನ್ನು ಕಂಡುಹಿಡಿದರೆ ಅದು ಮೇಲಣ ಮೂವರ ಕಾಲನಿರ್ಣಯಕ್ಕೆ ನೆರವಾಗಬಹುದು.

ಈ ಮುಂದೆ ನಡೆಸಿದ ಮೂರು ಕೃತಿಗಳ ಪರಿಶೀಲನೆ ಶ್ರೀ ವರದರಾಜರಾವ್ ಅವರ ಶ್ರಮದ ಸಂಕೇತವೆನಿಸಿದೆ. ನಂಜುಂಡನ ೨೭ ಪ್ರತಿ, ಗಂಗನ ೩೨ ಪ್ರತಿ, ಮಹಲಿಂಗಸ್ವಾಮಿಯ ೧ ಪ್ರತಿಗಳನ್ನು ಸ್ವರೂಪ, ವೈಶಿಷ್ಟ್ಯ, ಹೋಲಿಕೆಗಳ ದೃಷ್ಟಿಯಿಂದ ಆದ್ಯಂತ ಓದಿದ ಅವರ ಪರಿಶ್ರಮ, ತಾಳ್ಮೆ ಓಗುಗರನ್ನು ಧೈರ್ಯಗೆಡಿಸುತ್ತದೆ. ಈ ವರೆಗೆ ಸಂಶೋಧನೆಯಲ್ಲಿ ನಿರತರಾದ ಶ್ರೀಯುತರು ಈಗ ಗ್ರಂಥಸಂಪಾದನೆಯ ಹೊಸ ವಲಯವನ್ನು ಪ್ರವೇಶಿಸಿದ್ದಾರೆ. ಈ ಭಾಗದಲ್ಲಿ ಗೆಯ್ದು ಮೂರು ಕೃತಿಗಳ ಕಥಾಸಂಗ್ರಹ ಒಟ್ಟು ಪುಸ್ತಕದ ಕಾಲುಭಾಗ (ಸುಮಾರು ೧೧೭ ಪುಟ)ದಷ್ಟು ಆಗಿದ್ದು ಇದಕ್ಕೆ ಸರಳಾನುವಾದ ಶ್ರಮದ ಬೆಲೆಯನ್ನು ಕೊಡಬಹುದು. ಆದರೂ ಶುಷ್ಕವಾಗಬಹುದಾಗಿದ್ದ ಈ ಭಾಗಕ್ಕೆ ಲಲಿತಶೈಲಿಯಿಂದಾಗಿ ರುಚಿ ಬಂದಿದೆ.

ನಂಜುಂಡನ ಕೃತಿಯ ವೈಶಿಷ್ಟ್ಯವನ್ನು ಪರಿಚಯ ಮಾಡಿಕೊಡುತ್ತ ವೀರಶೈವನಾಗಿರುವ ಅವನಿಗೆ ಮೊದಲಿನ ಜೈನವಾಸನೆ ಇನ್ನೂ ಹೋಗಿಲ್ಲವೆಂದು ಉದಾಹರಣೆಗಳೊಂದಿಗೆ ತೋರಿಸಿಕೊಟ್ಟಿದ್ದಾರೆ. ಆದರೆ ಕೈಲಾಸ, ಶಿವನ ಒಡ್ಡೋಲಗ, ಗಣಸಭೆ, ಶಿವನು ಅರ್ಜುನಗಣನಾಥನ, ಪಾರ್ವತಿಯು ಊರ್ವಶಿಯ ಪಕ್ಷವಹಿಸಿ ವಾದ ಹೂಡುವುದು, ಅದನ್ನು ನಡೆಸಿ ತೋರಿಸಲು ಅವರು ಕುಮಾರರಾಮ ಮತ್ತು ರತ್ನಾಜಿಯಾಗಿ ಭೂಲೋಕದಲ್ಲಿ ಜನಿಸುವುದು, ಒಂದರ್ಥದಲ್ಲಿ ಮಾಯಾಕೋಲಾಹಲನಂತೆ ವರ್ತಿಸಿದ ಕುಮಾರರಾಮನೆದುರು ಮಾಯೆಯಂತೆ ವರ್ತಿಸಿದ ರತ್ನಾಜಿಯ ಸೋಲು, ಆಗ 'ಪಿಂತಣ ಜನ್ಮದರಿವು ಮೈದೋರಿ' ಆಕೆ ಕಾರ್ಯವಿಫಲತೆಗಾಗಿ ಆತ್ಮಹತ್ಯೆ ಮಾಡಿಕೊಳ್ಳುವುದು, ಕಾವ್ಯಾಂತ್ಯದಲ್ಲಿ ಪುಷ್ಪಕವಿಮಾನ, ಪುಷ್ಪವೃಷ್ಟಿ, ಕುಮಾರರಾಮನಿಗೆ ಗಣಪದವಿ–ಎಲ್ಲ ಅಂಶಗಳನ್ನು ಗಮನಿಸಿದರೆ ನಂಜುಂಡನು ಹರಿಹರನ ಪುರಾಣ ಚೌಕಟ್ಟನ್ನೂ, ನಂಜುಂಡನ ಕೃತಿಯ ವೈಶಿಷ್ಟ್ಯವನ್ನೂ ಹೇಳ ಹೊರಟ ಈ ಸಂದರ್ಭದಲ್ಲಿ ಈ ವೈಶಿಷ್ಟಪೂರ್ಣ ಅಂಶವನ್ನು ಸೂಚಿಸಬೇಕಿತ್ತು.

ಪಾಂಚಾಳ ಗಂಗಕೃತ 'ಚನ್ನರಾಮನ ಸಾಂಗತ್ಯ' ಎಂಬ ಅಧ್ಯಾಯ ಈ ಗ್ರಂಥದ ಹೃದಯವೆನ್ನಬಹುದು. ಶ್ರೀನಿವಾಸ ಜೋಯಿಸರು ಹೇಳುವ ನಾಲ್ಕು ಕೃತಿ(ನಾಗಸಂಗಯ್ಯ, ಭುಜಂಗೇಶ ಪುತ್ರಗಂಗ, ಕವಿಜಾಣಗಂಗ, ಪಾಂಚಾಳಗಂಗ)ಗಳೆಲ್ಲ ಒಬ್ಬನಿಗೇ ಅಂದರೆ ಪಾಂಚಾಳಗಂಗನಿಗೇ ಸಂಬಂಧಿಸಿದುವು ಎಂದು ಈ ಮೊದಲು (ಪು.೯)ಇತ್ತ 'ಬಾಯಿಮಾತಿನ ಹೇಳಿಕೆ'ಯನ್ನು ಶ್ರೀಯುತರು ಇಲ್ಲಿ ಆಧಾರಕೊಟ್ಟು ನಿಜಮಾಡಿ ತೋರಿಸಬೇಕು. ಆದರೆ ಈಗ ತಮಗೆ ದೊರೆತ ೩೨ ಪ್ರತಿಗಳಲ್ಲಿ ಪ್ರತಿನಿಧಿ ರೂಪದ (?)ಏಳನ್ನು ಆರಿಸಿಕೊಂಡು ಇವು ಘಟನೆಯ ದೃಷ್ಟಿಯಿಂದ ನಾಲ್ಕು ವರ್ಗಗಳಾಗುತ್ತವೆ ಎಂದು ಹೇಳಿ ನಿಂತುಬಿಟ್ಟದ್ದಾರೆ. ಈ ಏಳು ಪ್ರತಿಗಳೆಲ್ಲ ಒಬ್ಬನಿಗೇ ಸಂಬಂಧಿಸಿದವು ಎಂಬುದನ್ನು ಮೊದಲು ತೋರಿಸಿಕೊಡದೇ ಈ ರೀತಿ ವರ್ಗೀಕರಣ ಮಾಡಿದುದು 'ಶೂನ್ಯ ಸಂಪಾದನೆ" ಎಂಬ ಹೆಸರಿನ ಏಳು ಕಟ್ಟುಗಳನ್ನಿಟ್ಟು ಕೊಂಡು ಅವುಗಳಲ್ಲಿ ಕಂಡುಬರುವ ಕೆಲವು ಸಮಾನ ವಚನಗಳನ್ನು ನೋಡಿ ಎಲ್ಲ ಶೂನ್ಯಸಂಪಾನೆಗಳ ಕರ್ತೃ (Compiler)ಒಬ್ಬನೇ ಆದರೆ ಕಾಲಕ್ರಮದಲ್ಲಿ ಲಿಪಿಗಾರರ ಪ್ರಕ್ಷೇಪ, ವಿಕ್ಷೇಪಗಳಿಂದಾಗಿ ಘಟನೆಯ ದೃಷ್ಟಿಯಿಂದ ಅವು ನಾಲ್ಕಾಗಿ ನಿಂತಿವೆ ಎಂಬ ನಿರ್ಣಯಕ್ಕೆ ಬಂದಂತಾಗಿದೆ. ಅದಕ್ಕಾಗಿ ಈ ಪ್ರತಿಗಳ ಮೂಲ ಕರ್ತೃ ಒಬ್ಬನೇ ಎಂದು ನಿರ್ಣಯಿಸದೆ ನೀಡಿದ ಈ 'ಏಕಕರ್ತೃ ಸಿದ್ಧಾಂತವನ್ನು' ನಂಬುವುದು ಕಷ್ಟವಾಗುತ್ತದೆ.

ಇನ್ನೂ ಪ್ರತಿನಿಧಿ ಪ್ರತಿಗಳ ವಿಷಯವಾಗಿ "ಮದರಾಸು, ಮೈಸೂರು ಮತ್ತು ಧಾರವಾಡಗಳಲ್ಲಿ ನನಗೆ ದೊರೆತ ಪ್ರತಿಗಳನ್ನೆಲ್ಲ ವಿವರವಾಗಿ ನೋಡಿರುತ್ತೇನೆ. ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರ ಬಳಿಯಲ್ಲಿದ್ದ ಪ್ರತಿಗಳನ್ನು ಸಮೀಕ್ಷಿಸಿ, ಎಲ್ಲ ದೃಷ್ಟಿಗಳಿಂದಲೂ ಉತ್ತಮವೂ ವಿಶಿಷ್ಟವೂ ಅದ ಏಳು ಪ್ರತಿಗಳನ್ನು ಮಾತ್ರ ಇಲ್ಲಿ ಆರಿಸಿಕೊಂಡಿರುತ್ತೇನೆ. ಇವುಗಳು ಬೇರೆ ಬೇರೆ ಪ್ರಭೇದಗಳಿಗೆ ಸೇರಿದ ಪ್ರತಿನಿಧಿಗಳೆನ್ನುವಂತಿವೆ ಎನ್ನಬಹುದು" ಎಂಬ ಮಾತನ್ನು ಹೇಳಿದ್ದಾರೆ. ಆದರೆ ಈ ೭ ಪ್ರತಿಗಳು ೩೨ ಪ್ರತಿಗಳಿಗೆ ಪ್ರತಿನಿಧಿ ರೂಪದಲ್ಲಿವೆ ಎಂದು ಹೇಳಿದುದಕ್ಕೆ ಸಂಪಾದನಾ ಶಾಸ್ತ್ರಸಮ್ಮತ ಆಧಾರ ಕೊಡದೆ ಇಂಥ 'ಬಾಯಿ ಮಾತಿನ ಆಧಾರ' ಕೊಟ್ಟುದರಿಂದ ಈ ಹೇಳಿಕೆಗೆ ಅವರ 'ಮನಸ್ಸಾಕ್ಷಿ' ಎನ್ನಬೇಕಾಗುತ್ತದೆ. ಅಲ್ಲದೆ ಮೈಸೂರ ಪ್ರಾಚ್ಯವಿದ್ಯಾಸಂಶೋಧನಾಲಯದ ಎಂಟು ಪ್ರತಿಗಳಲ್ಲಿ ಒಂದು ಶ್ರೀ ಹುಲ್ಲೂರ ಶ್ರೀನಿವಾಸ ಜೋಯಿಸರ ನಾಲ್ಕು ಪ್ರತಿಗಳಲ್ಲಿ ನಾಲ್ಕೂ, ತಮ್ಮ ಹತ್ತಿರದ ಮೂರು ಪ್ರತಿಗಳಲ್ಲಿ ಎರಡು ಹೀಗೆ ಏಳನ್ನು ಮಾತ್ರ ಪ್ರತಿನಿಧಿಗಳೆಂದು ಇಟ್ಟುಕೊಂಡು, ದೂರದ ಮದರಾಸ ಪ್ರಾಚ್ಯಪುಸ್ತಕ ಭಾಂಡಾರದ ೧೩ ಪ್ರತಿ ಧಾರವಾಡ ಕನ್ನಡ ಸಂಶೋಧನ ಸಂಸ್ಥೆಯ ಬಳಿ ಪ್ರತಿಗಳಿಂದ ಒಂದನ್ನೂ ಪ್ರತಿನಿಧಿಯೆಂದು ಆರಿಸಿಕೊಂಡಿಲ್ಲವಾದುದರಿಂದ ಪ್ರಾದೇಶಿಕ ದೃಷ್ಟಿಯಿಂದಲೂ ಇವುಗಳ ಪ್ರಾತಿನಿಧ್ಯ ಸಮರ್ಪಕವಾಗಿಲ್ಲವೆನ್ನಬೇಕಾಗುತ್ತದೆ.

ಎರಡನೆಯದಾಗಿ ಈ ಪ್ರತಿನಿಧಿಗಳಲ್ಲಿ ಒಂದೆರಡನ್ನು ಬಿಟ್ಟರೆ ಮಿಕ್ಕುವೆಲ್ಲ ತ್ರುಟಿತ ಮತ್ತು ಅಪೂರ್ಣ ಕೃತಿಗಳಾಗಿವೆ. ಇಂಥವುಗಳನ್ನು ಪ್ರತಿನಿಧಿಗಳೆಂದು ಇಟ್ಟು ಕೊಂಡುದರಿಂದ ಕಾವ್ಯಸ್ವರೂಪ. ಪದ್ಯಸಂಖ್ಯೆಗಳ ದೃಷ್ಟಿಯಿಂದ ಆಗಾಗ ತಪ್ಪುನಿರ್ಣಯಗಳು ತಲೆದೋರಲು ಅವಕಾಶವುಂಟಾಗಿದೆ. ಅದಕ್ಕಾಗಿ ಅರಿಸಿಕೊಂಡ ಇವುಗಳನ್ನು ಪ್ರತಿನಿಧಿಗಳೆಂದು ನಂಬುವುದು ಕಷ್ಟವಾಗುತ್ತದೆ.

ಮೂರನೆಯದಾಗಿ, ಪ್ರತಿನಿಧಿಗಳೆಂದು ಆರಿಸಿಕೊಂಡ ಈ ಪ್ರತಿಗಳಲ್ಲಿ ಗಂಗ ೬ ಮತ್ತು ಗಂಗ ೭ ಇವುಗಳನ್ನು ಕುರಿತು. " ಈ ಎರಡೂ ರತ್ನಾಜಿಯ ಪ್ರಸಂಗವನ್ನು ಮಾತ್ರ ಕುರಿತಾಗಿವೆ. ಇವು ಬಹುಮಟ್ಟಿಗೆ ಪರಸ್ಪರ ಹೋಲುತ್ತವೆ" "ಇವು ಪರಸ್ಪರ ಹೋಲುವಂತಿದ್ದು....", "ಗಂಗ ೬ ಮತ್ತು ಗಂಗ ೭ ಒಂದೇ ರೀತಿಯಾಗಿರುವುದರಿಂದ..." "ಇದರ (ಗಂಗ೬)ಪದ್ಯಗಳು ಬಹುಮಟ್ಟಿಗೆ ಮೇಲೆ ಹೇಳಿರುವ ಗಂಗ ೭ ನೆಯ ಪ್ರತಿಯ ಪದ್ಯಗಳನ್ನು ಹೋಲುತ್ತವೆ" ಎಂದು ಆಗಾಗ ಅವರೇ ಹೇಳಿದನ್ನು ಗಮನಿಸಿದರೆ ಇವು ಪ್ರಭೇದಗಳ ಎರಡು ಭಿನ್ನ ಪ್ರತಿನಿಧಿಗಳಲ್ಲ, ಒಂದೇ ಪ್ರಭೇದದೆರಡು ಭಿನ್ನ ಪ್ರತಿಗಳೆನಿಸುತ್ತದೆ. ಒಟ್ಟಿನಲ್ಲಿ ಇದುವರೆಗೆ ಹೇಳಿದ ೩ ಅಂಶಗಳ ಆಧಾರದಿಂದ ಆರಿಸಿಕೊಂಡ ಈ ಎಳು ಪ್ರತಿಗಳು ಪ್ರತಿನಿಧಿಗಳಾಗಿವೆ ಎಂದು ಹೇಳಿದ ಮಾತು ಸಂಪೂರ್ಣ ಸತ್ಯವಲ್ಲವೆನ್ನಬೇಕಾಗುತ್ತದೆ.

ಇನ್ನು ಶ್ರೀಯುತರು ಪ್ರತಿನಿಧಿಗಳೆಂದು ಭಾವಿಸಲಾದ ಈ ೭ ಪ್ರತಿಗಳನ್ನು ಮಾತ್ರ ವೈಶಿಷ್ಟ್ಯ. ವೈದೃಶ್ಯ, ಸಾದೃಶ್ಯಗಳ ದೃಷ್ಟಿಯಿಂದ ಪದರುಪದರಾಗಿ ಪರಿಶೀಲಿಸಿರುವರೆಂಬುದಕ್ಕೆ ಈ ಅಧ್ಯಾಯ ಹೆಜ್ಜೆ ಹೆಜ್ಜೆಗೂ ನಿದರ್ಶನಗಳನ್ನು ಒದಗಿಸುತ್ತದೆ. ಆದರೆ ಇವೆಲ್ಲವುಗಳ ಮೂಲಕರ್ತೃ ಒಬ್ಬನೆ ಎಂಬುದನ್ನು ನಿರ್ಣಯಿಸದೆ ಮಾಡಿದ ಈ ಪ್ರಯತ್ನ ಯಾರಾರಿಗೂ ಸಂಬಂಧಪಟ್ಟಿರಬಹುದಾದ ೭ ಪ್ರತಿಗಳನ್ನು ಘಟನೆಯ ದೃಷ್ಟಿಯಿಂದ ನಾಲ್ಕೂ ವಿಧದಲ್ಲಿ ವರ್ಗೀಕರಿಸಿದಂತಾಗಿದೆ.

ಚಾರಿತ್ರಿಕ ಕಾವ್ಯದ ಘಟನೆಗಳೆಲ್ಲ ಸಾಮಾನ್ಯವಾಗಿ 'ಪೂರ್ವಸಿದ್ಧ'ಗಳಾದುದರಿಂದ ಅಂಥ ಕೃತಿಗಳ ಕರ್ತೃನಿರ್ಣಯಕ್ಕೆ ಘಟನೆಗಳಿಗಿಂತ ಪದ್ಯಗಳೇ ಪ್ರಬಲ ಆಧಾರಗಳೆನಿಸುತ್ತವೆ. ಈ ದೃಷ್ಟಿಯಿಂದ ನೋಡಿದರೆ ಗಂಗನ ಪ್ರತಿಗಳಲ್ಲಿ ೧೮೯೦ ರಿಂದ ೫೨೭ರವರೆಗೆ ಪದ್ಯಗಳಿರುವ ಭಿನ್ನ ಭಿನ್ನ ಪ್ರತಿಗಳು ಲಭಿಸುತ್ತವೆ. ಈ ಹಿನ್ನೆಲೆಯಿಲ್ಲಿ ಶ್ರೀಯುತರು ಗಂಗನ ಮೂಲರಚನೆ ಸುಮಾರು ೩೦೦೦ ಪದ್ಯಗಳ ಒಳಗೇ ಇದ್ದಿರಬಹುದೆಂದು ಊಹಿಸಿದ್ದಾರೆ. ಹಾಗಿದ್ದರೆ ಈ ಹೆಚ್ಚಿನ (೫೭೧೭-೩೦೦=)೨೩೧೭ ಪದ್ಯಗಳಿಗೆ ಹೊಣೆಯಾರು? ಗಂಗ ೩, ಗಂಗ ೧ ರಿಂದ ೪೦೬೪ ಭಿನ್ನ ಪದ್ಯ, ಗಂಗ ೨ ರಿಂದ ೩೩೨೯ ॥ ಭಿನ್ನ ಪದ್ಯ, ಗಂಗ ೫ ರಿಂದ ೩೮೪೧॥ ಭಿನ್ನ ಪದ್ಯ ಗಂಗ ೬ರಿಂದ ೪೦೨೧॥ ಭಿನ್ನ ಪದ್ಯಗಳನ್ನು ಒಳಗೊಂಡಿದೆ. ಇದೆಲ್ಲವನ್ನು ನೋಡಿದಾಗ ಸಾವಿರಗಟ್ಟಲೆ ಪದ್ಯ ಕಟ್ಟುವ ಶಕ್ತಿಯಿದ್ದ ಕವಿ ಸಾಮಾನ್ಯವಾಗಿ ಯಾರದೋ ಕೃತಿಗೆ ಅವುಗಳನ್ನು ಸೇರಿಸಲಾರ. ಅದಕ್ಕಾಗಿ ಒಬ್ಬನಿಗಿಂತ ಹೆಚ್ಚು ಜನರು ಸ್ವತಂತ್ರವಾಗಿ ಕೃತಿ ರಚಿಸಿದ್ದು, ಕಾಲಕ್ರಮೇಣ ಅವುಗಳಲ್ಲಿ ಪರಸ್ಪರ ಪದ್ಯಸಾಗಾಟ ನಡೆದಿರಬಹುದೆನಿಸುತ್ತದೆ.

ಎರಡನೆಯದಾಗಿ ಗಂಗ ೧ರಲ್ಲಿ ಕಾಟಣ್ಣನು ಹಂಪಾಜಿಯ ಮಗ, ಗಂಗ ೨ ರಲ್ಲಿ ಕಂಪಿಲನ ಸೋದರತ್ತೆಯ ಮಗಳ ಮಗ, ಗಂಗ ೪ರಲ್ಲಿ ಹರಿಯಮ್ಮನ ಮಗ, ಗಂಗ ೫ರಲ್ಲಿ ಕಂಪಿಲ ಹರಿಯಮ್ಮರ ಸಾಕುಮಗ ಎಂದು ಹೇಳಲಾಗಿದೆ. ಒಬ್ಬನೇ ಕವಿ ಹೀಗೆ ಹೇಳಲು ಸಾಧ್ಯವಿದೆಯೇ? ಒಂದೊಂದು ವಿಶಿಷ್ಟ ಕಥಾ ಪರಂಪರೆಯನ್ನು ಹೇಳುವ ಇಂಥ ಇನ್ನು ಕೆಲವು ಹೇಳಿಕೆಗಳು ಗಂಗನ ಪ್ರತಿಗಳಲ್ಲಿ ಕಂಡುಬರುವುದರಿಂದ ಕೃತಿ ಕರ್ತರು ಒಬ್ಬನಿಗಿಂತ ಹೆಚ್ಚುಜನ ಎನಿಸುತ್ತದೆ.

ಮೂರುನೆಯದಾಗಿ ಕರ್ತೃನಾಮ ನಿರ್ದೇಶನ ಪದ್ಯವೊಂದು ಕೆಲವು ಪ್ರತಿಗಳಲ್ಲಿ ಹೀಗೆ ಲಭಿಸುತ್ತದೆ:

ಕನ್ನಡ ಕವಿಜಾಣ ರನ್ನನು ಗಂಗುಗ। ಇನ್ನು ಮುನ್ನವೆ ಪಾಂಚಾಳ।
ಚನ್ನನ ಭುಜಂಗನ ಭೃತ್ಯ ಗಂಗಯ್ಯ ಸಂ। ಪನ್ನ ಪೇಳಿದನೀ ಕೃತಿಯ।

ಇಲ್ಲಿಯ 'ಗಂಗು' ಮತ್ತು 'ಗಂಗಯ್ಯ' ಎಂಬ ದ್ವಿರುಕ್ತಿ 'ಇನ್ನು ಮುನ್ನವೆ' ಎಂಬ ಪದ ಇವುಗಳನ್ನು ಗಮನದಲ್ಲಿಟ್ಟುಕೊಂಡರೆ "ಕನ್ನಡ ಕವಿಜಾಣರ ರತ್ನನೆನಿಸಿದ ಗಂಗನಿಗೆ ಪೂರ್ವದಲ್ಲಿ (=ಇನ್ನು ಮುನ್ನವೆ)ಪಾಂಚಾಳ ಚನ್ನ ಭುಜಂಗನ ಭೃತ್ಯ ಗಂಗಯ್ಯನು ಈ ಕೃತಿಯನ್ನು ಹೇಳಿದನು" ಎಂಬ ಅರ್ಥಹೊರಡುವಂತೆ ಕಾಣುತ್ತದೆ. ಈ ಅರ್ಥ ನಿಜವಿದ್ದಪಕ್ಷದಲ್ಲಿ ಪಾಂಚಾಳ (ಚನ್ನ ಭುಜಂಗನ ಭೃತ್ಯ)ಗಂಗಯ್ಯ, ತರುವಾಯ ಕನ್ನಡ ಕವಿ ಜಾಣ ಗಂಗ ಎಂಬವರು ಈ ಕೃತಿಗಳನ್ನು ಬರೆದರೆಂದು ಭಾವಿಸಬೇಕಾಗುತ್ತದೆ. ಕಾಲಕ್ರಮದಲ್ಲಿ ನಾಮಸಾಮ್ಯ (ಗಂಗಯ್ಯ, ಗಂಗ)ಭ್ರಾಂತಿಯಿಂದಲೋ, ಸುಂದರ ಪದ್ಯಗಳ ಆಯ್ಕೆಯ ದೃಷ್ಟಿಯಿಂದಲೂ ಈ ಎರಡಲ್ಲಿ ಮಿಶ್ರಣಕ್ರಿಯೆ ತಲೆದೋರಿರಬಹುದು.

ಇನ್ನು ಗಂಗ ೨ ರಲ್ಲಿ ಕಂಡುಬರುವ "ಆಧಾರವಿಡಿಯ ಪೇಳಿದನಾಗ ಗಂಗಯ್ಯ"[೪] ಎಂಬ ಪದ್ಯ ಮೇಲೆ ಹೇಳಿದ ಕನ್ನಡ ಕವಿಜಾಣ ಗಂಗನದಾಗಿದ್ದರೆ ಆತನು ತನಗೆ ಪ್ರಾಚೀನನಾದ ಪಾಂಚಾಳ ಗಂಗಯ್ಯನ (ಅಥವಾ ಬೇರೊಬ್ಬನ) ಆಧಾರವಿಡಿದು ಹೇಳಿರಬಹುದು. ಒಂದುವೇಳೆ ಪಾಂಚಾಳ ಗಂಗಯ್ಯನದಾಗಿದ್ದರೆ ಆತನು ತನಗೆ ಪ್ರಾಚೀನನಾದ ಇನ್ನೊಬ್ಬ ಅಜ್ಞಾತಕವಿಯ ಆಧಾರವಿಡಿದು ಹೇಳಿರಬಹುದು. ಇದರಿಂದ ಕ್ರಮವಾಗಿ ಅಜ್ಞಾತಕವಿ, ಪಾಂಚಾಳ ಗಂಗಯ್ಯ, ಕನ್ನಡ ಕವಿಜಾಣ

ಗಂಗ ಎಂಬ ಮೂವರು ಕವಿಗಳು ಸ್ವತಂತ್ರವಾಗಿ ಕೃತಿ ರಚಿಸಿದ್ದು ಕಾಲಾಂತರದಲ್ಲಿ ಅವುಗಳ ಪದ್ಯ ಮತ್ತು ಘಟನೆಗಳ ಪರಸ್ಪರ ಸಾಗಾಟ ನಡೆದಿರಬಹುದೆಂದು ಭಾವಿಸಬೇಕಾಗುತ್ತದೆ. ಇದರಿಂದಾಗಿ ಶ್ರೀಯುತರ 'ಏಕಕರ್ತೃ ಸಿದ್ಧಾಂತ', ಸಡಿಲುಗೊಂಡು ಕನಿಷ್ಟ ಪಕ್ಷ ೩ ಜನರಾದರೂ ಸ್ವತಂತ್ರವಾಗಿ ಕೃತಿ ರಚಿಸಿರಬೇಕೆನಿಸುತ್ತದೆ.

ಪ್ರಸ್ತುತದಲ್ಲಿ ಅಜ್ಞಾತಕವಿಯ ವಿಚಾರವನ್ನು ಬಿಟ್ಟು ಪಾಂಚಾಳ ಗಂಗಯ್ಯ, ಕನ್ನಡ ಕವಿಜಾಣ, ಗಂಗ ಇವರಲ್ಲಿ ಒಬ್ಬನಾದರೂ ನಂಜುಂಡನಿಗೆ ಪ್ರಾಚೀನನಾಗಿರಬಹುದೇ? ವಿವೇಚಿಸೋಣ.

ಸಾಂಗತ್ಯ ರೂಪದಲ್ಲಿರುವ ನಂಜುಂಡನ ಪದ್ಯಗಳಿಗಿಂತ ಶ್ರೀ ಯುತರು ಗಂಗನವೆಂದು ಹೇಳುವ ಪದ್ಯಗಳಿಗೆ ಹೆಚ್ಚು ಪಾಠಭೇದಗಳಿವೆ. ಒಂದು ಕೃತಿಯ ಪದ್ಯಗಳಿಗೆ ಅಧಿಕ ಪಾಠಭೇದ ಉಂಟಾಗಲು ಅದರ ಪ್ರಾಚುರ್ಯದಂತೆ ಪ್ರಾಚೀನತೆಯೂ ಒಂದು ಮುಖ್ಯ ಕಾರಣ[೫] ಎಂಬುದನ್ನು ನೆನೆದರೆ ಗಂಗ ಎಂಬವನ ಪದ್ಯ ರಚನೆ ನಂಜುಂಡನ ಪದ್ಯ ರಚನೆಗಿಂತ ಪ್ರಾಚೀನವಿರಬಹುದೆನಿಸುತ್ತದೆ.

ಎರಡನೆಯದಾಗಿ ಒಂದು ಜನಾಂಗದಲ್ಲಿ ಜರುಗಿದ ಹೃದಯವೇಧಕ ಘಟನೆಯು ಮೊದಲು ಸಾಮಾನ್ಯರ ಕಂಠದಲ್ಲಿ, ಕೈಯಲ್ಲಿ ಕೃತಿರೂಪ ತಳೆಯುತ್ತದೆ. ಆಗ ಅದು ೧೮ ವರ್ಣನೆ ಮೊದಲಾದವುಗಳ ಹಂಗಿಲ್ಲದೆ ಘಟನಾಪ್ರಧಾನವಾಗಿದ್ದು ಹೆಚ್ಚು ಜಾನಪದ ಗಂಧದಿಂದ ಕೂಡಿರುತ್ತದೆ. ಮುಂದೆ ಬಂದ ಪಂಡಿತಕವಿ ಅದನ್ನು ಹದಿನೆಂಟು ವರ್ಣನೆ ಮುಂತಾದ ಪಂಡಿತಮಾನ್ಯ ಚೌಕಟ್ಟಿನಲ್ಲಿ ನಿಯೋಜಿಸುತ್ತಾನೆ. ಶ್ರೀಯುತರು ಗಂಗನದೆಂದು ಹೇಳುವ ಕೃತಿ ಘಟನಾಪ್ರಧಾನವೂ, ಜಾನಪದ ಗಂಧಯುಕ್ತವೂ, ಹದಿನೆಂಟು ವರ್ಣನೆ ಮೊದಲಾದವುಗಳಿಂದ ವಿಮುಕ್ತವೂ ಆಗಿದೆ. ನಂಜುಂಡನ ಕೃತಿ ಇದಕ್ಕೆ ವಿರುದ್ಧವಾಗಿ (ಪರನಾರೀ ಸೋದರನ ಕಥೆಯಲ್ಲಿ ಸೂಳೆಗೇರಿಯನ್ನು ತರುವಷ್ಟರ ಮಟ್ಟಿಗೆ) ಪಂಡಿತಮಾನ್ಯ ಪುರಾಣ ಚೌಕಟ್ಟಿನಲ್ಲಿ ನಿಂತಿದೆ. ಅದಕ್ಕಾಗಿ ಮೇಲೆ ಹೇಳಿದ ಪಾಂಚಾಳಗಂಗ, ಕನ್ನಡ ಕವಿಜಾಣಗಂಗ ಇವರಲ್ಲಿ ಒಬ್ಬನಾದರೂ ನಂಜುಂಡನಿಗೆ ಮೊದಲಿಗನಾಗಿರಲು ಸಾಧ್ಯವಿದೆ. ಈ ಮಾತಿಗೆ ರತ್ನಾಜಿಯಿಂದ ಹಾದರದ ಆರೋಪಹೊತ್ತ ರಾಮನನ್ನು ಬೈಚಪ್ಪನು ಮರಣದಂಡನೆಯಿಂದ ಉಳಿಸಿ, ಮುಂದೆ ಅವನಿಂದ ತುರುಕರ ಸೈನ್ಯವನ್ನು ಕೋಲಾಹಲವ "ಮಾಡಿಸಿದನೆಂಬುದು ಕಥಾಮೂಲಂ. ಇದನು ನಾನೊಲಿದು ರಸದಿಂದ ಪುಟ್ಟಸಿ (ಪುಷ್ಠಿಸಿ)ಭಾವದಿಂ ಬಲಿಯಿಸಿ ಪೊಸ ಬಗೆವೆತ್ತಲಂಕೃತಿಯ ಎರಕದಿಂ ಬಳೆಯಿಸಿ ಕೃತಿಯೆನಿಸುವೆನು" ಎಂಬ ನಂಜುಂಡನ ಹೇಳಿಕೆಯನ್ನು ಗಮನಿಸಿದರೆ ಆತನು ತನಗೆ ಪ್ರಾಚೀನವಾಗಿರಬಹುದಾದ ಒಂದು ಕೃತಿಯನ್ನು ಆಧಾರವಾಗಿಟ್ಟು ಕೊಂಡಿರಬಹುದೆನಿಸುತ್ತದೆ. ಈಗ ನಂಜುಂಡನು "ಗಂಗನ ಕೃತಿಯನ್ನು ಹಾಡುತ್ತಿದ್ದುದನ್ನು ಕೇಳಿ ತನ್ನ ಗ್ರಂಥವನ್ನು ಬರೆದನೆಂಬ ದೇವಚಂದ್ರನ ರಾಜಾವಳಿ ಕಥೆಯ[೬] ಹೇಳಿಕೆಯನ್ನು ನೆನೆದರೆ ನಂಜುಂಡನು ಗಂಗನ (ಪಾಂಚಾಳಗಂಗ ಇಲ್ಲವೆ ಕನ್ನಡ ಕವಿಜಾಣಗಂಗ)ಕೃತಿಯನ್ನು ಆಧಾರವಾಗಿಟ್ಟುಕೊಂಡನೆನ್ನಬೇಕಾಗುತ್ತದೆ. ಹಾಗಿದ್ದಲ್ಲಿ ಶ್ರೀ ವರದರಾಜರಾವ್ ಅವರು ಈ ಕವಿಗಳಿಗೆ ಕೊಟ್ಟ ನಂಜುಂಡ, ಪಾಂಚಾಳಗಂಗ, ಮಹಲಿಂಗಸ್ವಾಮಿ ಎಂಬ ಕಾಲನಿರ್ಣಯ ಕ್ರಮವನ್ನು ಮುರಿದು ಗಂಗ, (ಪಾಂಚಾಳಗಂಗ, ಕನ್ನಡಕವಿಜಾಣಗಂಗ) ನಂಜುಂಡ, ಮಹಲಿಂಗಸ್ವಾಮಿ ಎಂದು ತಿರುಗಿ ಹೊಂದಿಸಬೇಕಾಗುತ್ತದೆ. ಪಾಂಚಾಳಗಂಗನ ಕಾಲ ಕ್ರಿ.ಶ.೧೬೫೦ ಎಂದು ಹೇಳಿರುವುದಕ್ಕೆ ದಿ.ಆರ್. ನರಸಿಂಹಾಚಾರರ ಕೇವಲ ಊಹೆಯೇ ಹೊರತು ಅದಕ್ಕೆ ಆಧಾರಗಳಿಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು.

"ಬಾಲರಾಮನ ಸಾಂಗತ್ಯ"ದ ಒಂದೇ ಪ್ರತಿ ಇದ್ದುದರಿಂದ ಅಲ್ಲಿ ಯಾವ ಸಮಸ್ಯೆಗಳೂ ಇಲ್ಲ. ಆದರೆ ಅದರ ಅನುವಾದ ಸೌಂದರ್ಯ ಮತ್ತು ಆನುಷಂಗಿಕ ಕಥಾ ವಿವರಣೆಯಲ್ಲಿ ಶ್ರೀಯುತರ ಕುಶಲತೆ ಮತ್ತು ಶ್ರಮಗಳನ್ನು ಕಾಣಬಹುದು.

'ಮೂರು ಕೃತಿಗಳ ತುಲನೆ' ಎಂಬ ಅಧ್ಯಾಯದಲ್ಲಿ ಮೂರೂ ಕೃತಿಗಳ ಸಮಾನಾಂಶ, ವಿಶೇಷಾಂಶ, ಘಟನೆಗಳ ಪರಸ್ಪರಾವಲೋಕನ ಸಾದೃಶ್ಯಗಳ ಸಮೀಕ್ಷೆ ಎಂಬ ವಿಷಯಗಳನ್ನು ತಳಮುಟ್ಟಿ ವಿವೇಚಿಸಿದ್ದಾರೆ. ಇದರಿಂದ ಮೂರೂ ಸಾಂಗತ್ಯಗಳ ಗರ್ಭದಲ್ಲಿ ಹುದುಗಿದ ವಿಷಯವನ್ನೆಲ್ಲ ಬೇಕೆಂದಾಗ ಶ್ರೀಯುತರು ತುದಿಬೆರಳಿನ ಮೇಲೆ ಕುಣಿಸಬಲ್ಲರೆನಿಸುತ್ತದೆ.

'ಇತರ ರಚನೆಗಳು' ಎಂಬ ಅಧ್ಯಾಯವು ಜಾನಪದ ಕಥೆ, ಯಕ್ಷಗಾನ, ಇತ್ತೀಚಿನ ತೆಲಗು ಕನ್ನಡ ಕೃತಿ, ಇವುಗಳ ವಿವೇಚನೆಯನ್ನೊಳಗೊಂಡಿದೆ. ಆದರೆ ಕಥೆ, ಕಥೆಗಳ ಸಾರ, ಕಥೆಯಮುಖ್ಯಾಂಶ, ಪರಸ್ಪರ ಸಾಮ್ಯ, ವೈಷಮ್ಯ, ಕಥೆಗಳಿಗೂ ಕಾವ್ಯಗಳಿಗೂ ಇರುವ ಹೋಲಿಕೆಯೆಂದು ವಿಷಯವನ್ನು ಪದೇಪದೇ ಹಿಂಜಿ ನೋಡಿದುದು ಪುನರುಕ್ತಿ ಎನ್ನುವಷ್ಟರಮಟ್ಟಿಗೆ ವಿವರವಾಗಿದೆ.

'ಜನಪದ ಸಾಹಿತ್ಯ' ಎಂಬ ಅಧ್ಯಾಯದಲ್ಲಿ ಕುಮಾರ ರಾಮನನ್ನು ಕುರಿತು ಪ್ರಕಟಿತ, ಅಪ್ರಕಟಿತ ಜನಪದ ಹಾಡುಗಳನ್ನು ಸಮಾಲೋಚಿಸಿದ್ದಾರೆ. ಈ ಪ್ರಸಂಗದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ "ವಚನ ಭಾಂಡಾರ" (ಕಾಗದ ಪ್ರತಿ ನಂ ೧೭೧)ದಲ್ಲಿ ಲಭಿಸುವ 'ಕುಮಾರ ರಾಮನ ಚೌಪದನ' ಎಂಬ ಇನ್ನೊಂದು ಕೃತಿಯನ್ನು ಶ್ರೀಯುತರ ಗಮನಕ್ಕೆ ತರುತ್ತೇನೆ.

ದೇಶದೊಳಧಿಕ ಜಾಳಂಬಿ ಸ್ಥಲವಾಸ। ಭಾಷೆಪಾಲಿಪ ಮುನಿದೈವ ವೃಷಭೇಶ।

ಶಿಶುವಿಂಗೆ ಸಲಹುವುದು ರುದ್ರಮುನೀಶ । ಅಸಮಲೋಚನ ಶಿವನೆ ಸಲಹು ಸರ್ವೇಶ॥

ಎಂಬ ಪದ್ಯವೂ "ಚೌಪದನ ೨೯೨, ಜೋಗುಳದಪದ, ೫ ಸವಾಯಿ ೨೦, ವಚನ ಪದ ೧೫ ಸಾಂಗತ್ಯ ೩೩, ಪಾರಿಜಾತ ೧೦, ಶಂಕರಾಭರಣ ೪, ಶ್ಲೋಕ ೧, ಆರತಿಪದ ೪, ಛಂದ ೯, ಭಾಮಿನಿ ೧, ಒಟ್ಟು ೪೦೭" ಎಂಬ ಉಲ್ಲೇಖವೂ ಇದರ ಅಂತ್ಯದಲ್ಲಿ ಬರುತ್ತವೆ. ಶ್ರೀ ವರದರಾಜರಾವ್ ಅವರು ನೋಡಿದ ಕಥೆಗಳಿಗೆ ಕೆಲವು ಅಂಶಗಳಲ್ಲಿ ಭಿನ್ನವಾದ ಕಥೆ ಇದರಲ್ಲಿದೆ. ನಂಜುಂಡ, ಗಂಗ, ಮಹಲಿಂಗಸ್ವಾಮಿ ಇವರ ಕೃತಿಗಳಲ್ಲಿ ಕಂಡುಬರುವ "ಹೊತ್ತಂತ ಕುಚವಲ್ಲ ಸೋರೆಕಾಯಿ", "ಅರಸಿಗಾರು ಬಾಯಿ" ಎಂಬಂಥ ಮಾತುಗಳೂ ಇದರಲ್ಲಿ ಆಗಾಗ ಗೋಚರಿಸುತ್ತವೆ. ಇದೊಂದು ನಾನಾ ಬಂಧಗಳಲ್ಲಿ ಕಟ್ಟಿದ ಜಾನಪದ ನೀಳಗೀತ (ಯಕ್ಷಗಾನ?)ವಾಗಿರಬಹುದು.

"ಕೈಫಿಯತ್ತುಗಳು" ಎಂಬ ಅಧ್ಯಾಯದಲ್ಲಿ ೬ ಕೈಫಿಯತ್ತುಗಳಿಂದ ತಿಳಿದು ಬರುವ ವಿಷಯವನ್ನು ಸಂಗ್ರಹಿಸಿ ಅಲ್ಲಿಯ ಮುಖ್ಯಾಂಶಗಳನ್ನು ಎತ್ತಿ ತೋರಿಸಿದ್ದಾರೆ. ಇದಕ್ಕಿಂತ ಹೆಚ್ಚಿಗೆ ಹೇಳುವ ಅವಕಾಶ ಅಲ್ಲಿ ಇಲ್ಲದುದರಿಂದ ಈ ಅಧ್ಯಾಯ ೫ ಪುಟಗಳಲ್ಲಿ ಮುಗಿದುಬಿಟ್ಟುದು ಸ್ವಾಭಾವಿಕ.

"ಚರಿತ್ರಾಂಶಗಳು" ಎಂಬ ಅಧ್ಯಾಯದಲ್ಲಿ ಕುಮಾರರಾಮನ ಸಾಂಗತ್ಯಗಳಲ್ಲಿ ಕಂಡುಬರುವ ವ್ಯಕ್ತಿಗಳು, ಸ್ಥಳ, ಘಟನೆ, ಯುದ್ಧ ಮುಂತಾದವುಗಳ ಸತ್ಯಾಸತ್ಯತೆಯನ್ನು ಇತಿಹಾಸದ ಒರೆಗೆ ಹಚ್ಚಿ ನೋಡಿದ್ದಾರೆ. ಇದಕ್ಕಾಗಿ ಪ್ರಾಚೀನ ಪ್ರವಾಸಿಗಳ ಹೇಳಿಕೆ, ಪೂರ್ವ ಮತ್ತು ಪಶ್ಚಿಮ ಪಂಡಿತರ ಅಭಿಪ್ರಾಯ, ಶಾಸನ, ಕಾವ್ಯ, ಲೇಖನಗಳಿಂದ ತಿಳಿದುಬರುವ ವಿಷಯವನ್ನೇ ಕೈದಣಿ ಸಂಗ್ರಹಿಸಿ

ಅಲ್ಲಿ ಐತಿಹಾಸಿಕತೆ ಎಷ್ಟು, ಐತಿಹ್ಯ ಎಷ್ಟು ಎಂಬುದನ್ನು ಬಿಡಿಸಿ ತೋರಿಸಿದ್ದಾರೆ. ಆದರೆ ಕುಮಾರರಾಮನನ್ನು ಕುರಿತ ಸಂಗೂರ ಶಾಸನ, ತೀರ್ಥಹಳ್ಳಿ ೨೩ನೆಯ ಶಾಸನ, ರಾಮಘಡ ಶಾಸನಗಳನ್ನು ಇಲ್ಲಿ ಉಲ್ಲೇಖಿಸಿದ ಇವರಿಗೆ "ಕಂಪಲಿಯ ನೆರೆಹಳ್ಳಿಯಾದ ವಸಹಳ್ಳಿಯಲ್ಲಿ ಕುಮಾರ ರಾಮನ ಶಾಸನವಿದೆಯೆಂದು ಮೆಕೆಂಝೆ ಹಸ್ತಪ್ರತಿಯಿಂದ ತಿಳಿದುಬರುತ್ತದೆ."[೭] ಎಂಬ "ಜಟ್ಟಂಗಿ ರಾಮಗಿರಿಯಲ್ಲಿ ರಾಮೇಶ್ವರ ದೇವಾಲಯದ ಮಹಾದ್ವಾರದಲ್ಲಿ ಹಾಸಿರುವ ಕಲ್ಲಿನಲ್ಲಿ"[೮] ಒಂದು ಶಾಸನವಿದೆಯೆಂಬ ಹೇಳಿಕೆಗಳು ಗಮನಕ್ಕೆ ಬಂದಂತಿಲ್ಲ. ಬಂದಿದ್ದರೆ ಅವುಗಳ ಸತ್ಯಾಸತ್ಯತೆಯನ್ನು ಹೇಳಬಹುದಿತ್ತು.

"ಮೂಲ ಕಥೆಯ ಸ್ವರೂಪ" ಎಂಬ ಅಧ್ಯಾಯದಲ್ಲಿ ರತ್ನಾಜಿಯ ವ್ಯಾಮೋಹ ಪ್ರಸಂಗವೇ ಮೊದಮೊದಲು ಕೃತಿರೂಪತಾಳಿ ತರುವಾಯ ಅನೇಕರ ಕೈಯಲ್ಲಿ ವಿಸ್ತಾರಗೊಂಡಿರಬೇಕು ಎಂದು ಸರಿಯಾಗಿಯೇ ಊಹಿಸಿದ್ದಾರೆ. ನಮ್ಮ ನಾಡಿನ, ನೆರೆನಾಡಿನ ಮತ್ತು ಪರನಾಡಿನ ಇಂಥ ಅನೇಕ ಕಥೆಗಳನ್ನು ವಿವರಿಸಿ ಈ ಅಧಾರ್ಮಿಕ ಪ್ರಣಯ ಸಾರ್ವತ್ರಿಕವಾದುದೆಂದು ಸೂಚಿಸಿದ್ದಾರೆ.

ಈ ವರೆಗೆ ಸಂಶೋಧನ, ಸಂಸ್ಕರಣಗಳಲ್ಲಿ ವಿಕಾಸಗೊಳ್ಳುತ್ತ ಬಂದ ಶ್ರೀ ವರದರಾಜರಾವ್ ಅವರ ಬರವಣಿಗೆ ಈಗ ವಿಮರ್ಶನದತ್ತ ವಿಹಾರಗೆಯ್ದಿದೆ. ಮೂರೂ ಕೃತಿಗಳ ವಸ್ತು, ವರ್ಣನೆ. ಪಾತ್ರಗಳನ್ನು ಪರಿಶೀಲಿಸುವಲ್ಲಿ ಅವರ ವಿಮರ್ಶನ ದೃಷ್ಟಿ ಹೇಗೆ ಕಾರ್ಯಮಾಡಿದೆ ಎಂಬುದನ್ನು ಓದಿಯೇ ಅನುಭವಿಸಬೇಕು. ಆದರೆ ವಾಸ್ತವಿಕತೆ, ಪ್ರಮಾಣಜ್ಞಾನ ಇವುಗಳ ಕೊರತೆಯ ನಂಜುಂಡನಕಡೆ ಪಕ್ಷಪಾತ ಕೊಂಚ ಜಾಸ್ತು ಆಯಿತೇನೋ ಎನಿಸುತ್ತದೆ.

"ಸಾಂಗತ್ಯ ಪ್ರಯೋಗ" ಎಂಬ ವಿಷಯವನ್ನು ವಿವೇಚಿಸುತ್ತ ೪, ೩, ೪, ೩, ವಿಷ್ಣು ಗಣಗಳಿರುವ ವಿಶಿಷ್ಟರೂಪದ ಬಂಧವು ಸಾಂಗತ್ಯದ ಪ್ರಥಮ ಕವಿ ಎನಿಸಿದ ದೇಪರಾಜನ ಸೊಬಗಿನ ಸೋನೆಯಲ್ಲಿ ತರುವಾಯ ನಿಜಗುಣನ ಪರಮಾನುಭವ ಬೋಧೆ, ಶಾಂತಮಲ್ಲನ 'ಅನುಭವ ಮುದ್ರೆ' ಗಳಲ್ಲಿ (ವಿರುಪರಾಜನ ತ್ರಿಭುವನತಿಲಕ, ಮಲ್ಲಿಕಾರ್ಜುನನ ಶ್ವೇತ ಸಾಂಗತ್ಯಗಳನ್ನು ಉದಾಹರಿಸಬಹುದು)ಕಂಡುಬರುತ್ತದೆ ಎಂದು ಹೇಳುತ್ತ ಕ್ರಿ.ಶ. ೧೪೧೦ ರ ಮುಂದೆ ಧಾವಿಸಿ ನಡೆದಿದ್ದಾರೆಯೇ ಹೊರತು ಹಿಂದೆ ಹುಡುಕುವ ಶ್ರಮವಹಿಸಿಲ್ಲ. ಇಂಥ ಬಂಧಗಳು–

ಒಡಹುಟ್ಟಿದೈವರು ಹಿಡಿದು ಕೈ ಸುಟ್ಟರು।
ಮಡದಿಯರೈವರ ಮುಡಿಬೆಂದು।
ನಡುಮನೆಯಾಕೆಯ ಕಿಡಿಹತ್ತಿ ಅಂಗಾಲು।
ನಡೆಯಲಾರದೆ ಸತ್ತು ಮಡಿಯಲು।[೯]

ಎಂಬಂಥ ಶರಣರ ಗೀತಗಳಲ್ಲಿ ಕಂಡುಬರುತ್ತಿದ್ದು, ಆ ಸುಮಾರಿಗೆ ಸಾಂಗತ್ಯದ ಸುಳುಹನ್ನು ಶೋಧಿಸಬಹುದಿತ್ತು. ಈ ದೃಷ್ಟಿಯಿಂದ ಪರಿಶ್ರಮಿಸಿದರೆ ಶರಣರಲ್ಲಿ ಸಾಂಗತ್ಯದ ನಿಯತ ಬಂಧಗಳೂ ಲಭಿಸಬಹುದು. ವಸ್ತುಸ್ಥಿತಿ ಹೀಗಿದ್ದರೂ ಶ್ರೀಯುತರು "ಹೆಂಗಸರ ಹಾಡುಗಳಲ್ಲಿಯೂ, ಹರಿದಾಸರ ಕೀರ್ತನೆಗಳಲ್ಲಿಯೂ ಸಾಂಗತ್ಯದ ಧಾಟಿಯನ್ನು ಕಾಣಬಹುದು" ಎಂಬಲ್ಲಿ 'ಶರಣರ ಗೀತೆಗಳಲ್ಲಿಯೂ' ಎಂಬ ಮಾತನ್ನು ಸೇರಿಸಿದ್ದರೆ ಅವರ ಹೇಳಿಕೆಗೆ ಇನ್ನಷ್ಟು ಸತ್ಯತೆ, ಐತಿಹಾಸಿಕತೆ ಬರುತ್ತಿತ್ತು.

‘ಸಾಂಗತ್ಯ ವೀರರಸ ಪ್ರತಿಪಾದನೆಗೆ ತಕ್ಕ ವಾಹಕವಾಗಲಾರದು’ ಎಂಬ ಡಾ. ಕರ್ಕಿಯವರ ಅಭಿಪ್ರಾಯ ಸಾರ್ವತ್ರಿಕವೆನ್ನಲು ಕಷ್ಟವಾದೀತು ಎನ್ನುವಲ್ಲಿ ಡಾ. ವರದರಾಜರಾವ್ ಅವರು ಯುದ್ಧ ಪ್ರಸಂಗಗಳನ್ನೇ ಒಳಗೊಂಡಿರುವ ಕುಮಾರರಾಮನನ್ನು ಕುರಿತ ಈ ಕೃತಿಗಳಿಗೆ ಸಾಂಗತ್ಯವನ್ನೇ ಬಳಸಲಾಗಿದೆ ಎಂದು ಆಧಾರ ನೀಡಿದ್ದಾರೆ. ಆದರೆ ಬಳಸಿರುವದು ಎಷ್ಟರಮಟ್ಟಿಗೆ ಸಫಲವಾಗಿದೆ ಎಂಬುದನ್ನು ಗಮನಿಸಿದಾಗ, ಸಾಂಗತ್ಯ ಸಾರ್ವಭೌಮ ರತ್ನಾಕರನ ವೀರ ಸಂದರ್ಭಗಳನ್ನು ನೋಡಿದಾಗ ಡಾ. ಕರ್ಕಿಯವರ ವಾದವೇ ಸರಿಯೆನಿಸುತ್ತದೆ.

ಮೋಹನ ತರಂಗಿಣಿ, ಭರತೇಶ ವೈಭವಗಳಲ್ಲಿ ಸಾಂಗತ್ಯದ ಸಾರ್ಥಕತೆಯನ್ನು ಕಂಡೂ ತಿರುಮಲಾರ್ಯನು ಅದನ್ನು ‘ಸೂಳೆವಾಡು’ ಎಂದು ಕರೆದುದು ಅದು ಮೊದಲು ಸೂಳೆಗೇರಿಯಲ್ಲಿ ಹುಟ್ಟಿತೆಂಬುದರ ಸೂಚಕವೋ ಅಥವಾ ತಿರುಮಲಾರ್ಯನ ಕಾಲದಲ್ಲಿ ಅದು ಸೂಳೆಗೇರಿ ಸೇರಿತ್ತು ಎನ್ನುವದರ ಸೂಚಕವೋ ವಿವೇಚಿಸಬಹುದಿತ್ತು. ಆದರೆ ತಿರುಮಲಾರ್ಯನ ಹೇಳಿಕೆಯೇ ಅವರ ಗಮನಕ್ಕೆ ಬಂದಂತಿಲ್ಲ.

“ಜೀವನ ಚಿತ್ರಣ” ಎಂಬ ಅಧ್ಯಾಯವು ಈ ಸಾಂಗತ್ಯಗಳಲ್ಲಿ ಕಂಡುಬರುವ ಸಮಾಜ ಜೀವನದ ಅಧ್ಯಯನವನ್ನೊಳಗೊಂಡಿದೆ. ಆದರೆ ಇದರಲ್ಲಿ ಗತಾನುಗತಿಕವೆಷ್ಟು? ಸಮಕಾಲೀನವೆಷ್ಟು? ಎಂದು ಕಾಲದ ಒರೆಗಲ್ಲಿಗೆ ಹಚ್ಚಿ ತೋರಿಸಿದರೆ ಹೆಚ್ಚು ಅರ್ಥಪೂರ್ಣವೆನಿಸುತ್ತಿತ್ತು.

“ಕುಮಾರರಾಮನ ಸಾಂಗತ್ಯಗಳ ಸ್ಥಾನ”ಎಂಬ ಅಧ್ಯಾಯವನ್ನು ಪ್ರಾರಂಭಿಸುತ್ತ (ಈ ಕೃತಿಗಳಲ್ಲಿ)ಸಾಹಿತ್ಯ ಮತ್ತು ಇತಿಹಾಸಗಳು ಬೆರೆತು ಬರುವುದರಿಂದ ಈ ಎರಡು ಅಂಶಗಳನ್ನು ಲಕ್ಷಿಸಬೇಕಾಗುತ್ತದೆ. ಅಲ್ಲದೆ ಈ ಕೃತಿಗಳು ಇತರ ರಚನೆಗಳ ಮೇಲೆ ಏನಾದರೂ ಪ್ರಭಾವವನ್ನು ಬೀರಿರಬಹುದೇ ಎಂಬುದನ್ನು ವಿಚಾರಿಸುವುದಗತ್ಯ” ಎಂದು ಮೂರು ಅಂಶಗಳ (ಸಾಹಿತ್ಯ, ಇತಿಹಾಸ, ಪ್ರಭಾವ)ಪೀಠಿಕೆ ಹಾಕಿ ಕೊಂಡಿದ್ದಾರೆ. ಆದರೆ ಈ ಅಧ್ಯಾಯದ ತುಂಬೆಲ್ಲ ಕೇವಲ ಎರಡು ಅಂಶ(ಇತಿಹಾಸ, ಪ್ರಭಾವ)ಗಳನ್ನೇ ವಿವೇಚಿಸಿದ್ದಾರೆ. ಸಾಹಿತ್ಯದೃಷ್ಟಿಯಿಂದ ಕೊನೆಯ ಪಕ್ಷ ಸಾಂಗತ್ಯ ಸಾಹಿತ್ಯದೃಷ್ಟಿಯಿಂದ ಈ ಸಾಹಿತ್ಯಕೃತಿಗಳ ಸ್ಥಾನವನ್ನು ನಿರ್ಣಯಿಸಿಕೊಟ್ಟಿಲ್ಲ. ಭರತೇಶವೈಭವ, ಮೋಹನ ತರಂಗಿಣಿಗಳ ಮಗ್ಗುಲಲ್ಲಿಟ್ಟು ಇವುಗಳ ಹಿರಿಮೆ ಕಿರಿಮೆಗಳನ್ನು ಗುರುತಿಸಿಲ್ಲ. ಅದಕ್ಕಾಗಿ ಪ್ರಮುಖ ಅಂಶವನ್ನೇ ಒಳಗೊಳ್ಳದ ಈ ಅಧ್ಯಾಯದ ವಿವೇಚನೆ ಪಾರ್ಶ್ವಿಕವೆನ್ನಬೇಕಾಗುತ್ತದೆ.

ಕೊನೆಯ “ಅನುಬಂಧ” ಅಧ್ಯಾಯ ಈ ಗ್ರಂಥಕ್ಕೆ ಪೂರಕರೂಪದಲ್ಲಿದೆ. ಆದರೆ ಪದ್ಯಾರ್ಥವನ್ನೂ ಕನಿಷ್ಟ ಪ್ರಮಾಣವನ್ನಾಗಿಟ್ಟುಕೊಂಡು ಪ್ರತಿಗಳ ಅಂತರ ಸೂಚಿಸಲು ಹೊರಟ ಶ್ರೀಯುತರು ಮೇಲು ನೋಟಕ್ಕೇ ಗಂಗ ೬ ರೊಂದಿಗೆ ೩೦ ಪದ್ಯಗಳ (೧೧೨೦-೧೯೦=೩೦)ಅಂತರ ತೋರಿಸುವ, ಮಿಕ್ಕ ಪ್ರತಿಗಳೊಂದಿಗೆ ಇನ್ನೂ ಹೆಚ್ಚಿನ ಅಂತರ ತೋರಿಸುವ ಗಂಗ ೭ನ್ನು ಇಲ್ಲಿ ಲಕ್ಷಿಸಬೇಕಾಗಿತ್ತು. ಅಲ್ಲದೆ ಗಂಗರನ್ನೂ ಗಮನಿಸಬೇಕಿತ್ತು. “ಅನುಬಂಧ-೨” ಗಂಗನ ಪ್ರತಿಗಳ ವಿಷಯಾನುಕ್ರಮಣಿಕೆಯಾಗಿದ್ದು ಒಟ್ಟು ಕಥೆಯಲ್ಲಿ ಇಪ್ಪತ್ತು ಘಟನೆಗಳನ್ನು ಮಾಡಿಕೊಂಡು ತಮಗೆ ಸರಿ ಎನಿಸಿದ ಒಂದು ಕ್ರಮದಲ್ಲಿ ಇಟ್ಟು ತುಲನೆ ಮಾಡಿದ್ದಾರೆ. ಆದರೆ ೭ ಪ್ರತಿಗಳಲ್ಲಿ ಯಾವುದೋ ಒಂದರ ಘಟನೆಗಳ ಕ್ರಮವನ್ನು ಮೂಲವಾಗಿಟ್ಟುಕೊಂಡು ಮಿಕ್ಕವುಗಳನ್ನು ಹೋಲಿಸಿ ನೋಡಬೇಕಿತ್ತು.

ಇದರಿಂದ ಆ ಆ ಪ್ರತಿಗಳ ವಿಷಯಾನುಕ್ರಮಣಿಕೆಯ ಸಾದೃಶ್ಯ, ವೈದೃಶ್ಯಗಳು ತಟ್ಟನೇ ಹೊಳೆಯುತ್ತಿದ್ದವು.

ಅನುಬಂಧ ೪, ೫, ೬, ೭, ೮ರಲ್ಲಿ ಶಾಸನಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಅವುಗಳನ್ನು ಕಾಲಕ್ರಮದಲ್ಲಿ ಕೊಡಲು ಸಾಧ್ಯವಿತ್ತು. ಕುಮ್ಮಟದುರ್ಗದಲ್ಲಿ 'ಕುಮಾರರಾಮನಿಗೆ ಸಂಬಂಧಿಸಿದ ಶಿಲಾಶಾಸನವನ್ನು ನೋಡಿ ಸಂತೋಷವಾಯಿತು' ಎಂದು ಈ ಪ್ರಬಂಧ(ಪು ೨೭೨)ದಲ್ಲಿ ಹೇಳಿದ್ದು ಆ ಶಾಸನವನ್ನೂ ಕೊಡಬಹುದಿತ್ತು. ಅನುಬಂಧ ೫ರಲ್ಲಿಯ ಶಾಸನದ ತಲೆಯ ಮೇಲಿರುವ 'ತೀರ್ಥಹಳ್ಳಿಯ ಶಾಸನ' ಎಂಬುದಕ್ಕೆ ಬದಲು 'ತೀರ್ಥಹಳ್ಳಿ ೨೫ ನೆಯ ಶಾಸನ' ಎಂದೋ 'ತೀರ್ಥಹಳ್ಳಿ ತಾಲೂಕ ಕೊಳವಳ್ಳಿಯ ಮಾಸ್ತಿಗುಡಿಯ ವೀರಗಲ್ಲು' ಎಂದೋ ಇರಬೇಕಿತ್ತು. ಇಲ್ಲದಿದ್ದರೆ ಈ ಶಾಸನ ತೀರ್ಥಹಳ್ಳಿಯಲ್ಲಿದೆ ಎಂಬ ಭಾವನೆ ಹುಟ್ಟುತ್ತದೆ. ಸಂಗೂರ ಶಾಸನದ ಮೇಲ್ಭಾಗದಲ್ಲಿ ಕುದುರೆ ಏರಿದ ವೀರನೊಬ್ಬನ ಚಿತ್ರವಿದೆ. ಅದು ಕುಮಾರರಾಮನದೆಂದು ಪಂಡಿತರ ಮತ, ಅದಕ್ಕಾಗಿ ಸಂಗೂರ ಶಾಸನವನ್ನು ಈಗಿದ್ದಂತೆ ಕೊಡದೆ ಆ ಚಿತ್ರದೊಂದಿಗೆ ಕೊಟ್ಟಿದ್ದರೆ ಕುಮಾರರಾಮನನ್ನು ಕಣ್ಣು ಅರ್ಥಮಾಡಿ ಕೊಳ್ಳುತ್ತಿದ್ದವು. ಈ ಒಂದು ಚಿತ್ರವಲ್ಲದೆ ಕುಮ್ಮಟದುರ್ಗ, ಹೊಸಮಲೆಗಳ ಚಿತ್ರ, ಜಟಿಂಗರಾಮ. ಕುಮಾರರಾಮರ ದೇವಾಲಯ ಮತ್ತು ವಿಗ್ರಹಗಳ ಚಿತ್ರಗಳನ್ನು ಕೊಟ್ಟಿದ್ದರೆ ಪ್ರಬಂಧ ಹೆಚ್ಚು ಚಾಕ್ಷುಷವಾಗುತ್ತಿತ್ತು.

ಸಹಜವೆನಿಸಬಹುದಾದ ದೋಷಗಳೇನೇ ಇದ್ದರೂ ವಿಷಯ ಸಂಗ್ರಹದಲ್ಲಿ ಶ್ರಮ, ವಿಭಜನೆಯಲ್ಲಿ ಶಿಸ್ತು, ನಿರೂಪಣೆಯಲ್ಲಿ ಸ್ಪಷ್ಟತೆ, ನಿರ್ಣಯದಲ್ಲಿ ತೂಕ, ಶೈಲಿಯಲ್ಲಿ ನಿರಾಡಂಬರತೆಗಳು ಕಂಡುಬರುವುದು–ಈ ಕೃತಿಯ ವೈಶಿಷ್ಟ್ಯವೆನಿಸಿದೆ. ಈ ಸಮಯದಲ್ಲಿ ಕುಮಾರರಾಮನನ್ನು ಕುರಿತು ಇದಕ್ಕಿಂತ ಹೆಚ್ಚು ಬರೆಯಲು ಸಾಧ್ಯವಿಲ್ಲ. ಇಂಥ ವಿಷಯವನ್ನು ಪಿಎಚ್.ಡಿ. ಪದವಿಗಾಗಿ ಆಯ್ದು ಕೊಳ್ಳುವವರಿಗೆ ಈ ಗ್ರಂಥ ಮಾರ್ಗದರ್ಶನ ನೀಡಬಲ್ಲದು. ಒಟ್ಟಿನಲ್ಲಿ ಪರಿಶ್ರಮದ ನೆಲಗಟ್ಟಿನ ಮೇಲೆ ಗೆಯ್ದು ಸಂಶೋಧನ, ಸಂಸ್ಕರಣ, ವಿಮರ್ಶನಗಳ ಸಾಹಸವನ್ನು ಈ ಪ್ರಬಂಧದ ಪುಟಗಳಲ್ಲಿ ಕಾಣಬಹುದಾಗಿದೆ.

ಆಕರ : ಮಾರ್ಗ ಸಂಪುಟ–೭

■■

೨೨೭

ಭಾರತೀಯ ಚಲನಚಿತ್ರದ ಇತಿಹಾಸದಲ್ಲಿ ಮಹತ್ವದ ಕೃತಿ

ಡಾ. ರಾಜಕುಮಾರ ಅವರ ಜೀವನ-ಕಲಾಜೀವನ ಕುರಿತ ಈ ಎರಡು ಸಂಪುಟಗಳು ಭಾರತೀಯ ಚಲನಚಿತ್ರದ ಇತಿಹಾಸದಲ್ಲಿ ಮಹತ್ವದ ಕೃತಿಗಳೆನಿಸಿವೆ. ಹೀಗೆ ಹೇಳಲು ಕಾರಣ, ಒಬ್ಬ ನಟನನ್ನು ಕೇಂದ್ರವಾಗಿಟ್ಟುಕೊಂಡು ಬರೆದ ಈ ಬಗೆಯ ಕೃತಿ ಬಹುಶಃ ಭಾರತದಲ್ಲಿ ಈವರೆಗೆ ಪ್ರಕಟವಾದಂತಿಲ್ಲ.

ಸಮಾಜದಲ್ಲಿ ಉದಾತ್ತ ವ್ಯಕ್ತಿಗಳು ಸಿಗಬಹುದು; ಉದಾತ್ತ ಕಲಾವಿದರೂ ಸಿಗಬಹುದು. ಆದರೆ ಉದಾತ್ತ ವ್ಯಕ್ತಿಯೂ ಉದಾತ್ತ ಕಲಾವಿದನೂ ಸಿಗುವುದು ಅಪರೂಪ. ಇಂಥ ಅಪರೂಪದ ವ್ಯಕ್ತಿಯಾಗಿದ್ದರು, ಡಾ. ರಾಜಕುಮಾರ. ಹೀಗಾಗಿ ಇಲ್ಲಿ ಒಂದು ಸಂಪುಟ ಅವರ ಜೀವನದ ಕಥೆಯನ್ನು, ಇನ್ನೊಂದು ಸಂಪುಟ ಅವರು ಅಭಿನಯಿಸಿರುವ ಚಲನಚಿತ್ರಗಳ ಕಥೆಯನ್ನು ಎಲ್ಲ ಮಗ್ಗಲುಗಳಿಂದಲೂ ಕಟ್ಟಿಕೊಟ್ಟಿವೆ.

ಇಲ್ಲಿಯದು ಕೇವಲ ಪಠ್ಯವಿನ್ಯಾಸವಲ್ಲ; ಕೇವಲ ಚಿತ್ರವಿನ್ಯಾಸವೂ ಅಲ್ಲ. ಇವೆರಡರ ಕಲಾತ್ಮಕ ವಿನ್ಯಾಸ. ಇದನ್ನು ಸಾಧ್ಯವಾಗಿಸುವ ಮೂಲಕ ಇವರು ತಾವು ಒಬ್ಬ ಕಲಾವಿದರೆಂದು ಸ್ಪಷ್ಟಪಡಿಸಿದ್ದಾರೆ. ಇದರಿಂದಾಗಿ ಇದು ಏಕಕಾಲಕ್ಕೆ ನೋಡುವ, ಓದುವ ಕೃತಿಯಾಗಿ ಪರಿಣಮಿಸಿದೆ.

ಇಂದು ಬಹುಮುಖಿಯಾಗಿ ಬೆಳೆದಿರುವ ಮಾಧ್ಯಮಗಳು ಕಾರಣವಾಗಿ, ವ್ಯಕ್ತಿಯ ಮಾಹಿತಿ ಅಲ್ಲಿಷ್ಟು ಇಲ್ಲಿಷ್ಟು ದಾಖಲಾಗಿರುತ್ತದೆ. ಒಂದಿಷ್ಟು ಎಲ್ಲಿಯೂ ದಾಖಲಾಗದೆ ಜನರ ಮಧ್ಯೆ ಜೀವಂತವಾಗಿರುತ್ತದೆ. ಈ ಬಗೆಯ ಕೃತಿ ರಚಿಸುವವರು ಇಂಥ ಎಲ್ಲ ಮಾಹಿತಿಯನ್ನು ಸರ್ವಮೂಲಗಳಿಂದ ಸಂಗ್ರಹಿಸಬೇಕಾಗುತ್ತದೆ. ಇಷ್ಟೇ ಮುಖ್ಯವಾದುದು ಈ ಸಂಗ್ರಹದಿಂದ ಸರಿಯಾದುದರ ಆಯ್ಕೆ; ಇನ್ನೂ ಮುಖ್ಯವಾದುದು ಸರಿಯಾದ ವಿನ್ಯಾಸ. ಈ ಮೂರೂ ಹಂತಗಳಲ್ಲಿ ಶ್ರೀ ರುಕ್ಕೋಜಿರಾವ್ ಅವರು ಮನಃಪೂರ್ವಕ ದುಡಿದಿದ್ದಾರೆ.

ಡಾ. ರಾಜಕುಮಾರ ಅವರ ನಗರ ಜೀವನಚರಿತ್ರೆಯನ್ನು ಯಾರಾದರೂ ಬರೆಯಬಹುದು. ಇದಕ್ಕೆ ಹಿನ್ನೆಲೆಯಾಗಿರುವ ಜನ್ಮಗ್ರಾಮ ಗಾಜನೂರಿನ ಕೌಟುಂಬಿಕ ಜೀವನ, ಮುನ್ನೆಲೆಯಾಗಿರುವ

ಕಾಡುಗಳ್ಳ ವೀರಪ್ಪನ್‌ನಿಂದ ಅನುಭವಿಸಿದ 'ಕಾಳರಾತ್ರಿ' ಜೀವನಗಳ ಚಿತ್ರಗಳು ಈ ಪುಸ್ತಕ ಬಿಟ್ಟರೆ ಇಷ್ಟು ವಿವರವಾಗಿ ಬೇರೆಲ್ಲಿಯೂ ಸಿಗುವುದಿಲ್ಲ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ರಾಜಕುಮಾರ ಅವರು ಕಲಾಪ್ರಪಂಚದಲ್ಲಿ ನಿರಂತರ ಮುಳುಗಿದ್ದರೂ ಪ್ರಸಂಗ ಬಂದರೆ ಅದರಾಚೆಯ ಪರಿಸರಕ್ಕೆ ಸ್ಪಂದಿಸುವವರಾಗಿದ್ದರು. ಕನ್ನಡ ಭಾಷೆಗಾಗಿ ಉದ್ಭವಿಸಿದ್ಧ 'ಗೋಕಾಕ ಚಳುವಳಿ'ಯಲ್ಲಿ ಇವರು ನೇರವಾಗಿ ಭಾಗಿಯಾದುದು ಇದಕ್ಕೆ ಸಾಕ್ಷಿಯಾಗಿದೆ. ಈ ಭಾಗಿತ್ವದಿಂದ ಪ್ರಸ್ತುತ ಚಳುವಳಿಗೆ ದೊಡ್ಡ ಬಲ ಬಂದಿತು. ಆಗ ಈ ಚಳುವಳಿಯ ಕಾರ್ಯದರ್ಶಿಗಳಲ್ಲಿ ಒಬ್ಬನಾಗಿದ್ದುದು ನನ್ನ ಅದೃಷ್ಟವೆಂದು ಭಾವಿಸುತ್ತೇನೆ.

ಹೀಗೆ ಭೌತಿಕ ಜೀವನದೊಂದಿಗೆ ಅವರ ಕಲಾಜೀವನವನ್ನೂ ದೊಡ್ಡ ಪ್ರಮಾಣದಲ್ಲಿ ಈ ಕೃತಿ ಕಟ್ಟಿಕೊಟ್ಟಿದೆ. ಈ ಭಾಗವಂತೂ ಓದುಗರಿಗೆ ಅಭಿನಯ ಕಲಾವಿದನೊಬ್ಬನ ಚಲನಚಿತ್ರ ನೋಡಿದ ಅನುಭವ ನೀಡುತ್ತದೆ. ಗ್ರಾಮೀಣ ಸಮಾಜದ ಡಾ. ರಾಜಕುಮಾರ ಅವರು ನಗರವ್ಯಕ್ತಿಗಳ ಸ್ವಾಮ್ಯದಲ್ಲಿದ್ದ ಚಲನಚಿತ್ರ ಕೋಟೆಯನ್ನು ಭೇದಿಸಿ, ಅದರ ಸಾಮ್ರಾಟನಾಗಿ ಬೆಳೆದು, ೫೦ ವರ್ಷ ಅದನ್ನು ಆಳಿದ ಇತಿಹಾಸ ಇಲ್ಲಿ ಮೂಡಿನಿಂತಿದೆ. ಇದು ಸಾಧ್ಯವಾದುದು ಇವರ ಪ್ರತಿಭೆಯ ಮೂಲಕ. ಹೊರಪಯಣದ ವ್ಯಕ್ತಿತ್ವಕ್ಕಿಂತ ಒಳ ಪಯಣದ ವ್ಯಕ್ತಿತ್ವದ ಮೂಲಕ. ಇಂಥ ಒಳಪಯಣದ ವ್ಯಕ್ತಿತ್ವ ಕಾರಣವಾಗಿಯೇ ಇವರು ಕಾಡುಗಳ್ಳ ವೀರಪ್ಪನ್‌ನ 'ಅಗ್ನಿ ದಿವ್ಯ'ವನ್ನು ದಾಟಿಬಂದರು. ಒಂದರ್ಥದಲ್ಲಿ 'ಹುಲಿಯ ನೆಕ್ಕಿ' ರಾಜಕುಮಾರ ಬದುಕಿದರೆ, 'ಸಿಂಗಕ್ಕೊಲಿದ ಮದಗಜದಂತೆ' ವೀರಪ್ಪನ್ ಮಿದುವಾಗಿಬಿಟ್ಟನು. ಇಂಥ ಒಳಮುಖಿವ್ಯಕ್ತಿಯ ಜೀವನಚಿತ್ರವನ್ನು ಶ್ರೀ ರುಕ್ಕೋಜಿರಾವ್ ಅವರು ತುಂಬ ಎಚ್ಚರದಿಂದ ಬಿಡಿಸಿದ್ದಾರೆ.

ಈ ಬಗೆಯ ಜೀವನ-ಕಲಾಜೀವನಗಳ ಸಾಧನೆಗಾಗಿ ರಾಜಕುಮಾರ ಅವರಿಗೆ ರಾಜ್ಯ ರಾಷ್ಟ್ರಮಟ್ಟದ ಪ್ರಶಸ್ತಿಗಳು ಅರಸಿ ಬಂದವು. ಈ ಮಾಲಿಕೆಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯವು ನಾನು ಕುಲಪತಿಯಾಗಿದ್ದ ಸಂದರ್ಭದಲ್ಲಿ ಇವರಿಗೆ 'ನಾಡೋಜ' ಪ್ರಶಸ್ತಿ ನೀಡಿದುದು ನನ್ನಲ್ಲಿ ಧನ್ಯತೆಯನ್ನುಂಟುಮಾಡಿದೆ.

ಇದೆಲ್ಲ ಈ ಕೃತಿಯ ಪೂರ್ವಭಾಗ. ಇನ್ನೊಂದು ಭಾಗ ಡಾ. ರಾಜಕುಮಾರ ಅಭಿನಯಿಸಿದ ೨೧೨ ಚಲನಚಿತ್ರಗಳ ವಿವರವನ್ನೊಳಗೊಂಡಿದೆ. ಈ ವಿವರಣೆಗಾಗಿ ಲೇಖಕರು ವಹಿಸಿದ ಶ್ರಮ, ತೋರಿದ ಶ್ರದ್ಧೆ ಬೆರಗುಹುಟ್ಟಿಸುತ್ತದೆ. ಪ್ರತಿಯೊಂದು ಚಲನಚಿತ್ರದ ಸರ್ವ ವಿವರಗಳನ್ನೊಳಗೊಂಡ ಅಧಿಕೃತ ದಾಖಲೆಯಿಲ್ಲಿದೆ. ಇದಕ್ಕೆ ಪೂರಕವಾಗಿ ಅಪೂರ್ವ ಭಾವಚಿತ್ರಗಳ ಅಪಾರ ಸಂಗ್ರಹವೂ ಇಲ್ಲಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಭವಿಷ್ಯತ್ತಿನಲ್ಲಿ ಅಭ್ಯಾಸಿಗಳಿಗೆ ಈ ಭಾಗ ತವನಿಧಿಯಂತೆ ನೆರವಾಗುತ್ತದೆ.

ಹೀಗೆ, ಎಲ್ಲ ದೃಷ್ಟಿಯಿಂದಲೂ ಪೂರ್ಣವಾಗಿರುವ, ಪರಿಪೂರ್ಣವಾಗಿರುವ ಈ ಸಂಪುಟಗಳ ರಚನೆಗಾಗಿ ಶ್ರೀ ರುಕ್ಕೋಜಿರಾವ್ ಅವರನ್ನು ನನ್ನ ಪರವಾಗಿ, ಸಮಸ್ತ ಕನ್ನಡಿಗರ ಪರವಾಗಿ ಅಭಿನಂದಿಸುತ್ತೇನೆ.

ಆಕರ : ಮಾರ್ಗ ಸಂಪುಟ-೭

■■

೨೨೮

ಮಹಿಳೆಯರ ಅಲಂಕಾರ

"ಮಹಿಳೆಯರ ಅಲಂಕಾರ" ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ೧೯೫೫ ರಲ್ಲಿ ಸಿದ್ಧಪಡಿಸಿ ೧೯೬೧ ರಲ್ಲಿ ಪ್ರಕಟಿಸಿದ ವಿಶಿಷ್ಟ ಕೃತಿ. ವೈಯಕ್ತಿಕವಾಗಿ ಈ ಲೇಖಕಿಯರಿಗೆ ಸಂಪ್ರದಾಯದ ಒಂದು ಮಿತಿ ಇರುವಂತೆ, ಸಾಮೂಹಿಕವಾಗಿ ಆ ಕಾಲದ ಮಹಿಳಾ ಸಾಹಿತ್ಯಕ್ಕೆ ಸರಳ ರಚನೆಯ ಒಂದು ಪರಿಮಿತಿ ಇದ್ದಿತು. ಈ ಎರಡೂ ಸೀಮಾರೇಖೆಗಳನ್ನು ದಾಟಿ ಬರೆದ ಕಾರಣ "ಮಹಿಳೆಯರ ಅಲಂಕಾರ"ವನ್ನು ಶ್ರೀಮತಿ ಮಾಳವಾಡ ಅವರ ವೈಯಕ್ತಿಕ ಸಾಮರ್ಥ್ಯ ಮತ್ತು ಅಂದಿನ ಮಹಿಳಾ ಸಾಹಿತ್ಯದ ಸಂದರ್ಭಗಳನ್ನು ಮೀರಿದ ಕೃತಿಯೆಂದು ಗುರುತಿಸಬೇಕಾಗುತ್ತದೆ.

ಮೇಲು ನೋಟಕ್ಕೆ ಇದು "ಲಲಿತ ಸಾಹಿತ್ಯ" ವರ್ಗದ ಕೃತಿಯಾಗಿದ್ದರೂ ಇದರ ಅಂತರಂಗದಲ್ಲಿ 'ಸಂಶೋಧನೆ'ಯ ಪ್ರಯತ್ನವೊಂದು ಉದ್ದಕ್ಕೂ ಗೋಚರಿಸುತ್ತದೆ. ಹೀಗಾಗಿ ಇದು ಪ್ರಧಾನವಾಗಿ ಸೃಜನಶೀಲತೆಯನ್ನು, ಗೌಣವಾಗಿ ಸಂಶೋಧನೆಯನ್ನು ಮೈಯಾಗಿ ಪಡೆದ ಗ್ರಂಥವಾಗಿದೆ. ಇಂಥ ಕೃತಿ ಕಟ್ಟಡಕ್ಕೆ ಬೇಕಾಗುವ ಆಕರ ಸಾಮಗ್ರಿಯೆಂದರೆ ಸಾಹಿತ್ಯ ಮತ್ತು ಶಿಲ್ಪ. ಮಹಿಳೆಯರ ಅಲಂಕಾರಗಳನ್ನು ಸಾಹಿತ್ಯ ಮಾತಿನಲ್ಲಿ ಹೇಳಿದರೆ, ಶಿಲ್ಪ ವಿಗ್ರಹದಲ್ಲಿ ಕಂಡರಿಸುತ್ತದೆ. ಈ ಸಾಹಿತ್ಯ ಶಿಲ್ಪಗಳಿಗೆ ಮಹಿಳೆಯರ ಅಲಂಕಾರ ಪ್ರಕಟನೆಯೇ ಮುಖ್ಯ ಉದ್ದೇಶವಲ್ಲವಾದುದರಿಂದ ಅಲ್ಲಿ ಅದರ ಸ್ಥಾನ ಗೌಣವೆಂದೇ ಹೇಳಬೇಕು, ಆದರೂ ಸಾಹಿತ್ಯದಲ್ಲಿಯ ಗೌಣತೆಯನ್ನು ಶಿಲ್ಪದಿಂದ, ಶಿಲ್ಪದಲ್ಲಿಯ ಗೌಣತೆಯನ್ನು ಸಾಹಿತ್ಯದಿಂದ ತುಂಬಿಕೊಳ್ಳುತ್ತ ಶ್ರೀಮತಿ ಮಾಳವಾಡರು ಅದನ್ನು ಈಗ ರೂಢಿಯಲ್ಲಿರುವ ಅಲಂಕಾರಗಳ ಬಲದಿಂದ ಸ್ಥಿರೀಕರಿಸಿದ್ದಾರೆ; ಆಧುನಿಕ ಅಲಂಕಾರಗಳಿಂದ ತುಲನಿಸಿದ್ದಾರೆ; ಚಿತ್ರಗಳಿಂದ ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಇದು ತನ್ನ ಎರಡು ಮೈಗಳಿಗೆ ಮತ್ತೆ ಅನೇಕ ಮಗ್ಗಲುಗಳನ್ನು ಪಡೆದುಕೊಳ್ಳುತ್ತ ನಡೆದ ಕೃತಿಯಾಗಿದೆ. ಇದರಿಂದಾಗಿ ಮೂಲತಃ ಸ್ತ್ರೀಯರಿಗೆ, ಸ್ತ್ರೀಯೇ ತನ್ನ ಅಲಂಕಾರವೆಂದು ಭಾವಿಸಿರುವ ಪುರುಷರಿಗೆ ರುಚಿಸುವ ಈಕೃತಿ ಸಾಹಿತ್ಯ–ಚಿತ್ರ–ಶಿಲ್ಪ ವ್ಯಾಸಂಗಿಗಳನ್ನು ಒಂದು ಪರಿಮಿತಿಯಲ್ಲಿ ತನ್ನತ್ತ ಸೆಳೆಯುತ್ತದೆ.

"ನಾರಿಗೆ ಗುಣವೇ ಶೃಂಗಾರ" ವಾಗಿದ್ದರೂ ರೂಪ-ಅಲಂಕಾರಗಳೆಂಬ ಅವಳ ಬಾಹ್ಯ ಶೃಂಗಾರಗಳನ್ನು ಅಲ್ಲಗಳೆಯುವಂತಿಲ್ಲ. ಇವುಗಳಲ್ಲಿ ಮಹಿಳೆಯ 'ಅಲಂಕಾರ'ಗಳನ್ನು ಮಾತ್ರ ವಿವೇಚಿಸುತ್ತದೆ ಈ ಗ್ರಂಥ.

ಪುರುಷ ಜಡ; ಪ್ರಕೃತಿ ಚೈತನ್ಯಶೀಲ. ಜಡವಾಗಿರುವ ಪುರುಷನನ್ನು ಅನೇಕ ಆಕರ್ಷಣೆಗಳಿಂದ ಚೈತನ್ಯಶೀಲ ಪ್ರಕೃತಿ ತನ್ನತ್ತ ಸೆಳೆಯುತ್ತದೆ. ಈ ಆಕರ್ಷಣೆಯ ಒಂದು ಸಾಧನ ಅಲಂಕಾರ. ಆದುದರಿಂದ ಪುರುಷನನ್ನು ಚೇತನಗೊಳಿಸುವ ಪ್ರಕೃತಿ ಪ್ರಯತ್ನದ ಪರಿಕರಗಳೆನಿಸುತ್ತವೆ. ಮಹಿಳೆಯರ ಅಲಂಕಾರ ಸಾಮಗ್ರಿ. ಹೆಣ್ಣಿನ ಮೈಮೇಲೆ ಶೋಭಿಸುವ ಈ ಅಲಂಕಾರ ಸಾಮಗ್ರಿಯನ್ನು ಈ ಪುಸ್ತಕ ಕೇಶಾಲಂಕಾರ, ಆಭರಣಗಳ ಅಂದ, ಸೀರೆಯ ಸೊಬಗು ಎಂದು ವಿಂಗಡಿಸಿ ವಿವೇಚಿಸುತ್ತದೆ.

ಕೇಶಾಲಂಕಾರವು ತೈಲಲೇಪನ, ಮುಡಿ ವಿನ್ಯಾಸ, ಮುಡಿಯಲಂಕಾರಗಳನ್ನೊಳಗೊಳ್ಳುತ್ತದೆ. ಇಲ್ಲಿ ಕೇಶಗಳ ಆರೋಗ್ಯ ಮತ್ತು ಅಂದಗಳನ್ನು ವರ್ಧಿಸುವ ತೈಲ ಲೇಪನವನ್ನು ಪ್ರಸ್ತಾಪಿಸುತ್ತ ಅಂದಿನ ಸ್ತ್ರೀಯರು ಬಳಸುತ್ತಿದ್ದ ಗಂಧದ ಎಣ್ಣೆ, ಸಂಪಿಗೆ ಎಣ್ಣೆ, ಮಲ್ಲಿಗೆ ಎಣ್ಣೆ, ಕೇದಗೆ ಎಣ್ಣೆ, ಕಸ್ತೂರಿ, ಪುನುಗು, ಜವಾದಿ, ಕವಡಿ ಲೋಬಾನ, ದಶಾಂಗ, ಗುಗ್ಗಳಹೊಗೆ ಇತ್ಯಾದಿ ಪರಿಕರಗಳನ್ನು ಗುರುತಿಸಿ ಕೊಡಲಾಗಿದೆ. ಈ ಪರಿಕರಗಳನ್ನು ಉಪಯೋಗಿಸುವ ವಿಧಾನದ ಒಂದು ಮಾದರಿಯನ್ನು ಕಲ್ಯಾಣದ ಕೋಟೆಯ ಅರಮನೆಯ ಪ್ರಸಾಧನ ಗೃಹದ ವಿವರಗಳಿಂದ ಸ್ಪಷ್ಟಪಡಿಸುತ್ತ ನೀಳವಾದ ಕೂದಲು, ಅದರ ಸೊಂಪಾದ ಬೆಳೆವಣಿಗೆಗಳ ಬಗೆಗೆ ಪ್ರಾಚೀನ ಕನ್ನಡತಿಯರು ವಿಶೇಷ ಗಮನ ಕೊಡುತ್ತಿದ್ದರೆಂದು ಸೂಚಿಸಲಾಗಿದೆ.

ತಮ್ಮ ಮುದ್ದು ಮುಖ, ಮೈಮಾಟಗಳಿಗೆ ಒಪ್ಪುವಂತೆ ಮುಡಿ ಕಟ್ಟುವುದನ್ನು ಒಂದು ಕಲೆಯಾಗಿ ಬೆಳಸಿಕೊಂಡು ಬಂದುದು ಪ್ರಾಚೀನ ಮಹಿಳೆಯರ ಕಲಾಪ್ರಜ್ಞೆಯ ದ್ಯೋತಕವಾಗಿದೆ. ಬಿಡಿಮುಡಿ, ಬಿಡುಮುಡಿ, ಬಳಲ್ಮುಡಿ, ಎಳಲ್ಮುಡಿ, ಸಡಿಲ್ಮುಡಿ, ಸೋರ್ಮುಡಿ, ಸಿರಿಮುಡಿ, ತಳಿರ್ಮುಡಿ, ಜೋಲ್ಮುಡಿ, ಮುತ್ತಿನ ಮುಡಿ, ಗೋಡಂಬಿ ಮುಡಿ, ತೆಕ್ಕೆದುರುಬು, ಕಿರೀಟ ಮುಡಿ, ಪೂಮುಡಿ, ಸೋಗೆದುರುಂಬು, ವಾರಿದುರುಂಬು, ಅಜಂತಾ ಮುಡಿ, ಗ್ರೀಕಮುಡಿ- ಇತ್ಯಾದಿ ಮುಡಿ ರಚನಾ ವಿಧಾನಗಳು ಪ್ರಾಚೀನ ಮಹಿಳೆಯರ ಅಭಿರುಚಿಗೆ ತಕ್ಕ ಅನ್ವೇಷಣೆಗಳಾಗಿವೆ. ಇವುಗಳ ರಚನಾವಿನ್ಯಾಸವನ್ನು ಆಧಾರಸಹಿತ ವಿವರಿಸುತ್ತ ಚಿತ್ರದ ಮೂಲಕ ಚಾಕ್ಷುಸಗೊಳಿಸಿದುದು ಈ ಪುಸ್ತಕದ ಒಂದು ಮಹತ್ವಪೂರ್ಣ ಭಾಗವಾಗಿದೆ. ಈ ಪ್ರಕರಣದ ಇನ್ನೊಂದು ವಿಶೇಷತೆಯೆಂದರೆ ಮುಡಿರಚನಾ ಇತಿಹಾಸದಲ್ಲಿ ೫-೬ನೆಯ ಶತಮಾನ, ೧೧-೧೯ ನೆಯ ಶತಮಾನ, ೨೦ನೆಯ ಶತಮಾನ ಎಂದು ಘಟ್ಟಗಳನ್ನು ಗುರುತಿಸಿದುದು.

ಪುಷ್ಪಾಲಂಕಾರ, ಆಭರಣಾಲಂಕಾರಗಳು ಈ ಕೇಶಾಲಂಕಾರವನ್ನು ವರ್ಧಿಸುತ್ತವೆ. ಕಾಮನಬಿಲ್ಲು ಮುಡಿ, ಮುತ್ತಿನ ಮುಡಿ, ತ್ರಿವರ್ಣಮುಡಿ, ಮಣಿಬಲೆ ಮುಡಿಗಳು ಈ ವರ್ಗಕ್ಕೆ ಸೇರುತ್ತಿದ್ದು, ಇಂದು ಪ್ಯಾಡ ಉಪಯೋಗಿಸುವ ಮುಡಿ ಪ್ರಾಚೀನರ ಸಿಂಬೆ ಮುಡಿಯಾದರೆ, ನೆಟ್ ಉಪಯೋಗಿಸುವುದು ಅವರ ಮಣಿಬಲೆ ಮುಡಿಯಾಗಿದೆಯೆಂದು ಹೇಳಿದುದು ಲೇಖಕಿಯರ

ತೌಲನಿಕ ಅಭ್ಯಾಸಕ್ಕೆ ಸಾಕ್ಷಿಯಾಗಿದೆ. ಇಲ್ಲಿ ಬಿಡಿಸಲಾದ ಮುಡಿ ಚಿತ್ರಗಳಂತೂ ಅಭ್ಯಾಸಿಯ ದೃಷ್ಟಿಯಿಂದ ರಸಿಕನ ದೃಷ್ಟಿಯಿಂದ ಪದೇ ಪದೇ ನೋಡಬೇಕೆನಿಸುವಷ್ಟು ಶಾಸ್ತ್ರಶುದ್ಧವಾಗಿವೆ; ಸುಂದರವಾಗಿವೆ.

'ಆಭರಣಗಳ ಅಂದ' ಎರಡನೆಯ ಅಧ್ಯಾಯ. ತವರು ಮನೆಯಿಂದಲೂ ಗಂಡನ ಮನೆಯಿಂದಲೂ ಪಡೆಯುತ್ತಲಿದ್ದ ಆಭರಣಗಳಿಂದ ಮಹಿಳೆಯ ಆಭರಣ ಬಂಡಾರ ಬೆಳೆಯುತ್ತಲಿದ್ದಿತು. ಅಡಿಯಿಂದ ಮುಡಿಯ ವರೆಗಿನ ಆಭರಣಗಳ ಭಾರವನ್ನು ಅವಳು ಆನಂದದಿಂದ ಹೊರುತ್ತಿದ್ದಳು. ಶಿಲ್ಪ, ಸಾಹಿತ್ಯ, ದಿನಬಳಕೆಯ ವಸ್ತು-ಒಡವೆಗಳ ಅಭ್ಯಾಸದ ಬಲದಿಂದ ಈ ಆಭರಣಗಳನ್ನು ಗುರುತಿಸಿ ಪ್ರಸ್ತುತ ಪ್ರಕರಣವನ್ನು ಕಟ್ಟಲಾಗಿದೆ. ಆಭರಣಗಳ ವಿಕಾಸವನ್ನು ಶಂಖ, ಸಿಂಪು, ಕವಡೆ, ಹಸ್ತಿದಂತ, ಲೋಹ ಕ್ರಮದಲ್ಲಿ ವಿವರಿಸಿ, ಮಸ್ತಕ, ಕರ್ಣ, ನಾಸಿಕ, ಕಂಠ, ಬಾಹು, ಮಣಿಕಟ್ಟು, ಕೈಬೆರಳು, ಕಟಿ, ಪಾದ, ಕಾಲ್ಬೆರಳುಗಳಿಗೆ ಧರಿಸುತ್ತಲಿದ್ದ ಅವುಗಳ ವೈವಿಧ್ಯ, ಸ್ವರೂಪ- ಹೆಸರುಗಳನ್ನು ಸೂಚಿಸುವಲ್ಲಿ ಲೇಖಕಿಯರ ಪರಿಶ್ರಮ ಎದ್ದುಕಾಣುತ್ತದೆ. ಪ್ರಾಗೈತಿಹಾಸಿಕ ಕಾಲ, ಮೌರ್ಯರ ಕಾಲ, ಗುಪ್ತರ ಕಾಲ, ಅಜಂತಾ ಶಿಲ್ಪಕಾಲ, ಚಾಲುಕ್ಯರ ಕಾಲ, ವಿಜಯನಗರ ಕಾಲವೆಂಬ ಹಂತಗಳನ್ನು ಇಲ್ಲಿ ಕಲ್ಪಿಸಿದುದು ಸೂಕ್ತವೆಂದೇ ಹೇಳಬೇಕು. ಈ ಪ್ರಕರಣವನ್ನು ಚಿತ್ರಗಳ ಮೂಲಕ ಸ್ಪಷ್ಟಪಡಿಸುವಲ್ಲಿ ಬೇಲೂರ ಶಿಲಾಬಾಲಿಕೆಯರ ಮೈಮೇಲಿನ ಮತ್ತು ಈಗ ರೂಢಿಯಲ್ಲಿರುವ ಆಭರಣಗಳು ಮೂಲ ಆಕರಗಳಾಗಿ ಪರಿಣಮಿಸಿದೆ.

ಆಭರಣಗಳು 'ಭೂಷಣ' ವಾದರೆ ಸೀರೆ-ಕುಪ್ಪಸ 'ವೇಷ'ವೆನಿಸಿಕೊಳ್ಳುತ್ತವೆ. ಚಳಿ, ಮಳೆ, ಬಿಸಿಲುಗಳಿಂದ ರಕ್ಷಿಸಿಕೊಳ್ಳುವುದು ಬಟ್ಟೆಯ ಮೂಲ ಉದ್ದೇಶವಾಗಿದ್ದರೂ ಆ ಮೇಲೆ ಇದು ಮರ್ಯಾದೆ ಮುಚ್ಚುವ ಸಾಧನವಾಗಿ, ಕೊನೆಗೆ ಅಲಂಕಾರವಾಗಿ ಬೆಳೆಯಿತು. ಆಗ ಇದರ ಬಣ್ಣದಲ್ಲಿ ಬಣ್ಣದ ಸಂಯೋಜನೆಯಲ್ಲಿ ಅಂಚು, ಸೆರಗುಗಳಲ್ಲಿ ಕಲೆ ಮೈವೆತ್ತಿತು; ಅದನ್ನು ಉಡುವಲ್ಲಿ ಕಲಾತ್ಮಕ ದೃಷ್ಟಿ ಕಣ್ದೆರೆಯಿತು. ಮರದ ತೊಗಟೆ-ಎಲೆ, ಚರ್ಮ. ಆಭರಣಗಳ ಸರ, ನಾರು, ಹತ್ತಿ, ಉಣ್ಣೆ, ರೇಶಿಮೆ- ಹೀಗೆ ಬೆಳೆದು ಬಂದ ಈ ಬಟ್ಟೆಯ ಇತಿಹಾಸವನ್ನು ವಿವರಿಸುತ್ತ "ಸೀರೆ ಭಾರತದ ವೈಶಿಷ್ಟ್ಯ", "ಉಡುಪು ಒಂದು ಕಲೆ" ಎಂಬುದನ್ನು ಪ್ರತಿಪಾದಿಸಿದ ಇಲ್ಲಿಯ ರೀತಿ ಮನೋಜ್ಞವಾಗಿದೆ. ಇದಲ್ಲದೆ ಬಣ್ಣ, ಉತ್ಪಾದನಾಸ್ಥಳ, ನೆಯ್ಗೆಯ ವಿನ್ಯಾಸ ಇತ್ಯಾದಿಗಳನ್ನವಲಂಬಿಸಿ ಇಟ್ಟ ಸೀರೆಗಳ ಹೆಸರಿನ ಯಾದಿಯನ್ನು ಓದಿದರೆ ಒಂದು ಸುಸಜ್ಜಿತ ವಸ್ತ್ರ ಭಾಂಡಾರವನ್ನು ಪ್ರವೇಶಿಸಿದ ಅನುಭವವಾಗುತ್ತದೆ. ಅಂದು ಸೊಂಟದಿಂದ ಪಾದದವರೆಗೆ ಬೇರೆ ಬೇರೆ ಅಳತೆಯಲ್ಲಿ ಸೀರೆ ಉಡುತ್ತಲಿದ್ದುದನ್ನು ಶಿಲ್ಪಗಳ ಆಧಾರದಿಂದ ಸ್ಪಷ್ಟಪಡಿಸಿ ಆಯಾ ಉಡಿಗೆಗಳಲ್ಲಿಯ ಅಂದಗಳನ್ನು ಬಿಡಿಸಿ ಹೇಳಲಾಗಿದೆ. ಅಲಂಕಾರವಾಗಿ ಬೆಳೆದ ಈ ಉಡಿಗೆ ಋತುಮಾನಕ್ಕೆ ತಕ್ಕಂತೆ ವ್ಯತ್ಯಾಸಗೊಳ್ಳುವುದನ್ನು ಸೂಚಿಸಲು ಮರೆಯದಂಥ ಎಚ್ಚರಿಕೆಗಳು ಶ್ಲಾಘನೀಯವೆಂದೇ ಹೇಳಬೇಕು.

ಒಟ್ಟಿನಲ್ಲಿ ಈ ಮೂರು ಅಧ್ಯಾಯಗಳು ಕ್ರಮವಾಗಿ ಸಂಶೋಧನೆ, ಸಂಶೋಧನೆ+ವಿವರಣೆ, ವಿವರಣೆ ಪ್ರಧಾನವೆನಿಸಿವೆ. ಇದಕ್ಕೆ ಕಾರಣ ಲೇಖಕರಲ್ಲಿ ಅವರಿಗೆ ಒದಗಿ ಬಂದ ಆಧಾರ ಸಾಮಗ್ರಿಯ ವಿಪುಲತೆ. ಮತ್ತು ವಿರಳತೆಗಳು. ಹೀಗಿದ್ದೂ ವಿಷಯದ ಸಮಗ್ರ ನೋಟ, ನಿರೂಪಣೆಯ

ಸ್ಪಷ್ಟತೆಗಳಿಂದಾಗಿ "ಮಹಿಳೆಯರ ಅಲಂಕಾರ" ಹೆಸರಿನ ಈ ಗ್ರಂಥ ಶ್ರೀಮತಿ ಶಾಂತಾದೇವಿ ಮಾಳವಾಡ ಅವರ ಕೃತಿ ಸಮುದಾಯಕ್ಕೇ ಒಂದು 'ಅಲಂಕಾರ'ವಾಗಿದೆ. ಐತಿಹಾಸಿಕ ಮತ್ತು ತೌಲನಿಕ ತೀರಗಳನ್ನು ತಬ್ಬಿಕೊಂಡು ಪ್ರವಹಿಸುವ ಈ ವಿವರಣ ಪ್ರಧಾನ ಕೃತಿಯಲ್ಲಿ ಸಂಶೋಧನಾತ್ಮಕ ಬರವಣಿಗೆಯಷ್ಟು ಶುಷ್ಕವೂ ಅಲ್ಲದ, ಲಲಿತ ಬರವಣಿಗೆಯಷ್ಟು ರಂಜಕವೂ ಅಲ್ಲದ ಸಮನ್ವಯ ಶೈಲಿ ಮೈವೆತ್ತು ನಿಂತಿದೆ. ಹೀಗಾಗಿ ಮೂರ್ತಿ ಶಿಲ್ಪದ ಜ್ಞಾನ, ಇತಿಹಾಸದ ಆಳ. ಸಂಶೋಧನ ಶಿಸ್ತುಗಳನ್ನು ಇನ್ನೂ ಅಳವಡಿಸಿಕೊಂಡಲ್ಲಿ ಇದು ಒಂದು ಪಿಎಚ್. ಡಿ. ಪ್ರಬಂಧವಾಗಿ ಹಿಗ್ಗಬಲ್ಲ ಕೃತಿಯಾಗಿದ್ದು, ಅಂಥ ಪ್ರಯತ್ನಕ್ಕೆ ಖಂಡಿತವಾಗಿಯೂ ಇದು ನೀಲನಕ್ಷೆಯಾಗಿದೆ.

ಆಕರ : ಮಾರ್ಗ ಸಂಪುಟ–೭

■■

೨೨೯

ಶಾಸನೋಕ್ತ ಲಿಂಗಾಯತ ಹಂಡೆ ಅರಸುಮನೆತನ

೨೦೧೪

ಇತಿಹಾಸವೆನ್ನುವುದು ಕೇವಲ ಗತಕಾಲಕ್ಕೆ ಸೀಮಿತವಾದ ವಿದ್ಯಮಾನವಲ್ಲ. ಪರೋಕ್ಷವಾಗಿ ಅದು ವರ್ತಮಾನದ ಬದುಕಿಗೆ ಬೆಲೆಯುಳ್ಳ ಪಾಠವಾಗಿಯೂ ಪರಿಣಮಿಸುತ್ತದೆ. ಹೀಗಾಗಿ ಪ್ರತಿಯೊಂದು ಸಮಾಜ ತನ್ನ ಬದುಕಿನ ಬೇರುಗಳನ್ನು ಗತಕಾಲದಲ್ಲಿ ಶೋಧಿಸುತ್ತಲೇ ಇರುತ್ತದೆ. ಇತಿಹಾಸವನ್ನು ಹುಡುಕಿಕೊಳ್ಳದ ಸಮಾಜವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಈ ಕ್ರಿಯೆ ಜಗತ್ತಿನಾದ್ಯಂತ ಜರುಗುತ್ತ ಬಂದಿದೆ.

ಲಿಂಗಾಯತ ಹಂಡೆ ಸಮಾಜದವರ ಪ್ರಯತ್ನದಿಂದ ಪ್ರಕಟವಾಗುತ್ತಲಿರುವ ಈ "ಶಾಸನೋಕ್ತ ಹಂಡೆ ಅರಸು ಮನೆತನ" ಪುಸ್ತಕಕ್ಕೆ ಮುನ್ನುಡಿ ಬರೆಯುವಾಗ, ನಾನು ಬೇರೆಡೆ ನಮೂದಿಸಿರುವ ಮೇಲಿನ ಮಾತುಗಳು ನೆನಪಿಗೆ ಬರುತ್ತಿವೆ.

ಲಿಂಗಾಯತವೆನ್ನುವುದು ೧೨ನೆಯ ಶತಮಾನದಲ್ಲಿ ಹಲವು ವೃತ್ತಿ, ಜಾತಿ, ಧರ್ಮಗಳಿಂದ ಬಂದು ಸೇರಿದವರ ಜನಸಮುದಾಯವಾಗಿದೆ. ಅಂದು ಬಸವಣ್ಣನವರ ನೇತೃತ್ವದಲ್ಲಿ ಏಕರೂಪಿಯಾಗಿದ್ದ ಈ ಸಮುದಾಯ ತರುವಾಯದ ದಿನಗಳಲ್ಲಿ ಪರಿಸರದ ಪ್ರಭಾವ, ಒತ್ತಡಗಳಿಗೆ ಒಳಗಾಗಿ ಮತ್ತೆ ಮತ್ತೆ ಬಿಚ್ಚಿಕೊಳ್ಳುತ್ತ ಬಂದಿತು. ಹೀಗಾಗಿ ಇಂದು ಅದರಲ್ಲಿ ಸ್ಪಷ್ಟ-ಅಸ್ಪಷ್ಟ ಪಂಗಡಗಳು ರೂಪತಾಳಿವೆ. ಇವು ಮತ್ತೆ ಹಿಂದಿನಂತೆ ಏಕರೂಪಕ್ಕೆ ಬರುವುದು ಇಂದಿನ ಅಗತ್ಯವಾಗಿದೆ. ಈ ದಿಸೆಯಲ್ಲಿ ಸಮಾಜದ ಧುರೀಣರು, ಮಠಾಧೀಶರು ಪ್ರಯತ್ನ ಮಾಡಬೇಕಿದ್ದು, ಈ ನಿಟ್ಟಿನಲ್ಲಿ ಹಂಡೆ ಲಿಂಗಾಯತ ಪಂಗಡದವರು ಈ ಕಾರ್ಯಕ್ಕೆ ಪ್ರಯತ್ನಿಸುತ್ತಿದ್ದಾರೆ. ಇದರ ಅಂಗವಾಗಿ 'ಶಾಸನೋಕ್ತ ಹಂಡೆ ಅರಸು ಮನೆತನ' ಕೃತಿ ಈಗ ಪ್ರಕಟವಾಗುತ್ತಲಿದೆ.

ಲಿಂಗಾಯತ ಹಂಡೆ ಅರಸರ ಚರಿತ್ರೆಗೆ ಈವರೆಗೆ ಬಳ್ಳಾರಿ-ಅನಂತಪುರ ಕೇಂದ್ರದಿಂದ ಆಳಿದ ಕಾಲಘಟ್ಟದಿಂದ ಸ್ಪಷ್ಟವಾಗಿದ್ದಿತು. ಈ ಬಗ್ಗೆ ಕೈಫಿಯತ್ತು, ಶಾಸನ, ದಾನಪತ್ರಗಳನ್ನಾಧರಿಸಿ ಕೆಲವು ವಿದ್ವಾಂಸರು ಲೇಖನ, ಪುಸ್ತಕ ಬರೆದಿದ್ದರು. ಆದರೆ ಈ ಮನೆತನದ ಬೇರುಗಳು ಬಾದಾಮಿ ಚಾಲುಕ್ಯರ ಕಾಲದಲ್ಲಿ ಕಂಡುಬರುವುದನ್ನು ಈವರೆಗೆ ಯಾರೂ ಗುರುತಿಸಿರಲಿಲ್ಲ. ಈ ಪುಸ್ತಕ ಹಲವು ಮೂಲಗಳಿಂದ ಶಾಸನಗಳನ್ನು ಸಂಗ್ರಹಿಸಿ, ಕಡಿದುಹೋಗಿದ್ದ ಇತಿಹಾಸದ ಎಳೆಗಳನ್ನು ಜೋಡಿಸುವ ಪ್ರಯತ್ನ ಮಾಡಿದೆ.

ಈ ಪ್ರಯತ್ನದ ಫಲವಾಗಿ ಇವರ ಮೂಲಪುರುಷ ಪಳ್ದಿಗನಾಗಿದ್ದು, ಇದೇ ಮುಂದೆ ಪಂದಿಗ–ಹಂದಿಗ, ಪಂಡಿಗ–ಹಂಡಿಗ, ಪಂಡೆ–ಹಂಡೆ ರೂಪತಾಳುತ್ತ ಬಂದಿದೆಯೆಂದು ತೀರ್ಮಾನಿಸಿದುದು ನ್ಯಾಯಯುವೆಂದೇ ಹೇಳಬೇಕು. ಅಂದರೆ ವೈದಿಕಧರ್ಮದಲ್ಲಿ ಕಣ್ವಋಷಿ ಮೂಲದವರು 'ಕಣ್ವಬ್ರಾಹ್ಮಣ'ರೆನಿಸುವಂತೆ, ಪಳ್ದಿಗ ರಾಜ ಮೂಲದವರು ಹಂಡೆ ಲಿಂಗಾಯತರೆನಿಸಿದರೆಂದು ಹೂಡಿದ ಇಲ್ಲಿಯ ವಾದದಲ್ಲಿ ಸತ್ಯಾಂಶವಿದೆಯೆನಿಸುತ್ತದೆ.

ಈ ಅರಸು ಶಿವೋಪಾಸಕರಾಗಿದ್ದರು, ಕಾಳಾಮುಖ ಶೈವ ಯತಿ ಶ್ರೀಕಂಠ ಪಂಡಿತ ಮೊದಲಾದವರಿಗೆ ದಾನ ನೀಡಿದುದು, ಎಮ್ಮಡಿಗೆ ಗ್ರಾಮದಲ್ಲಿ ಪಂದೇಶ್ವರ ದೇವಾಲಯ ಕಟ್ಟಿಸಿದುದು, ಇದಕ್ಕೆ ನೇರ ಆಧಾರಗಳೆನಿಸಿವೆ. ಹೀಗಾಗಿ ಇಂದು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರಗಳಲ್ಲಿ ಹರಡಿಕೊಂಡಿರುವ ಹಂಡೆ ಸಮಾಜದವರು ತಮ್ಮ ಮೂಲವನ್ನು ಲಿಂಗಾಯತದಲ್ಲಿ ಗುರುತಿಸಿಕೊಳ್ಳುತ್ತಿರುವುದು ಸರಿಯಾದ ಕ್ರಮವೆಂದೇ ಹೇಳಬೇಕು.

ಆರಂಭದಲ್ಲಿ ನೇರವಾಗಿ ಆಳಿದ ಈ ಅರಸು ಮನೆತನದವರು ತರುವಾಯ ಮಹಾಮಂಡಳೇಶ್ವರ, ಮಹಾಸಾಮಂತ, ಮಹಾಪಸಾಯಿತರೆಂಬ ಅಧಿಕಾರಿಗಳಾಗಿ ಆದಿಲ್‌ಶಾಹಿಗಳ ಕಾಲದಲ್ಲಿ ಮತ್ತೆ ಬಳ್ಳಾರಿ–ಅನಂತಪುರ ಸೀಮೆಯಲ್ಲಿ ಪಾಳೆಯಗಾರರಾಗಿ ಆಳಿದ್ದಾರೆ. ಹೀಗಾಗಿ ಇಲ್ಲಿ ಆದಿಲ್‌ಶಾಹಿ ಪೂರ್ವಕಾಲೀನ ಅಸ್ಪಷ್ಟ ಇತಿಹಾಸ, ಆದಿಲ್‌ಶಾಹಿ ಉತ್ತರಕಾಲೀನ ಸ್ಪಷ್ಟ ಇತಿಹಾಸವನ್ನು ನಾವು ಗುರುತಿಸಬಹುದಾಗಿದೆ. ಅಸ್ಪಷ್ಟ ಇತಿಹಾಸಕ್ಕೆ ೨೬ ಶಾಸನಗಳನ್ನು, ಸ್ಪಷ್ಟ ಇತಿಹಾಸಕ್ಕೆ ೧೫ ದಾನಪತ್ರಗಳನ್ನು ಇಲ್ಲಿ ಬಳಸಲಾಗಿದೆ.

ಇಂದಿನ ಲಿಂಗಾಯತ ಹಂಡೆ ಸಮಾಜದ ಮೂಲವನ್ನು ಚಾಲುಕ್ಯ ರಾಜಮನೆತನದಲ್ಲಿ ಕಾಣಿಸಿಕೊಡುವ, ಇತಿಹಾಸವನ್ನು ಸ್ಪಷ್ಟಪಡಿಸುವ ಪ್ರಥಮ ಪರಯತ್ನವಿದು. ಈ ದಿಸೆಯಲ್ಲಿ ಮುನ್ನಡೆದು ಡಾ. ಎಸ್.ಸಿ. ಪಾಟೀಲ ಮತ್ತು ಅವರ ಸಹಚರರು, ಸಾಹಿತ್ಯ ಆಸ್ತಕರು ಈ ಶಾಸನ ಪಾಠವನ್ನು ಇನ್ನಷ್ಟು ಶುದ್ಧೀಕರಿಸುವುದರೊಂದಿಗೆ, ಇವುಗಳ ಅರ್ಥವನ್ನು, ಈ ಸಮಾಜದ ಚರಿತ್ರೆಯನ್ನು ಮತ್ತಷ್ಟು ನಿಚ್ಚಳಗೊಳಿಸುವ ಪ್ರಯತ್ನ ಮಾಡಬೇಕಾಗಿದೆ. ಈ ಹೊಣೆ ಈ ಕ್ಷೇತ್ರದ ವಿದ್ವಾಂಸರ ಮೇಲೂ ಇದೆ.

ಲಿಂಗಾಯತ ಹಂಡೆವಜೀರ ಸಮಾಜದ ಹಿತಚಿಂತಕರಾದ ಶ್ರೀ ಬಿ.ಎಸ್. ಪಾಟೀಲ, ಹಿರೇಬೇವನೂರು ಹಾಗೂ ಶ್ರೀ. ಜಿ.ಎನ್. ಪಾಟೀಲ, ಬಾಗಲಕೋಟ ಮುಂತಾದವರು ಇಂತಹ ಕಾರ್ಯಗಳಿಗೆ ಇನ್ನೂ ಹೆಚ್ಚಿನ ಎಲ್ಲ ರೀತಿಯ ಪ್ರೋತ್ಸಾಹ ಮತ್ತು ಸಹಕಾರ ನೀಡುವರಾಗಿ ಆಶೀಸಿದ್ದೇನೆ. ವಿದ್ವಾಂಸರು ಇನ್ನೂ ಈ ಕ್ಷೇತ್ರದಲ್ಲಿ ಹೆಚ್ಚಿನದಾಗಿ ಕೆಲಸ ಮಾಡಬೇಕಾಗಿದೆ. ಇಂದಿನ ಹಂದಿಗನೂರು, ಹಂದ್ರಾಳ, ಹಂಡರಗಲ್, ಹಂದಿಗೊಂದು, ಹಂದೆವಾಡು ಇತ್ಯಾದಿ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ಈ ಕಾರ್ಯವನ್ನು ಪೂರ್ಣಗೊಳಿಸುವರೆಂದು ಆಶಿಸುತ್ತೇನೆ.

ಬಿ.ಎಸ್. ಪಾಟೀಲ, ಶಾಸನೋಕ್ತ ಲಿಂಗಾಯತ ಹಂಡೆ ಅರಸುಮನೆತನ, ೨೦೧೪

ಬೆನ್ನುಡಿ

೨೩೦

ಶರಣರ ನುಡಿಮುತ್ತುಗಳು

೧೯೭೮

ಸಾಹಿತ್ಯ, ಲೋಕಾನುಭವದ ರಸಸೃಷ್ಟಿ. ಅದರ ಅಂತರಂಗದಲ್ಲಿ ಬೆಳಗುತ್ತಲಿರುವ ಮೌಲ್ಯ-ಆದರ್ಶಗಳು ನಮ್ಮ ಬದುಕಿಗೆ ನಿರಂತರ ಬೆಳಕನ್ನು ನೀಡುತ್ತವೆ. ಇಂಥ ಸೂಕ್ತಿಗಳನ್ನು ಆಯ್ದು ರಚಿಸಿದ "ಸೂಕ್ತಿಮುಕ್ತಾವಳಿ" ಮೊದಲಾದ ವಾಕ್ಯಮಾಣಿಕ್ಯ ಕೋಶಗಳು ಸಂಸ್ಕೃತ ಸಾಹಿತ್ಯದಲ್ಲಿ ಅಧಿಕವಾಗಿವೆ. ಕನ್ನಡ ಜಾಣ, ಚೂಡಾರತ್ನ ಮುದ್ರಿಕೆಯ ಕೆಲವು ನೀತಿಕೋಶಗಳು ಕನ್ನಡದಲ್ಲಿ ಹುಟ್ಟಿದ್ದರೂ, ಪ್ರಾಚೀನ ಕಾವ್ಯಗಳಿಂದ ಆಯ್ದು ಸಂಕಲಿಸಿದ ನೀತಿಕೋಶಗಳ ರಚನೆಯ ಕಡೆಗೆ ನಮ್ಮವರು ಗಮನ ಕೊಡಲೇ ಇಲ್ಲ. ಇತ್ತೀಚೆ ಇಂಥ ಒಂದೆರಡು ಪ್ರಯತ್ನಗಳು ನಡೆದಿವೆ. ಈ ಪ್ರಯತ್ನಗಳ ಸಾಲಿನಲ್ಲಿ ನಿಲ್ಲುತ್ತದೆ. ಪ್ರಸ್ತುತ "ಶರಣರ ನುಡಿಮುತ್ತುಗಳು."

ಶರಣರ ವಚನ ವಾಙ್ಮಯ "of the people, by the people, and for the people" ಎಂಬ ಮಾತಿಗೆ ನಿದರ್ಶನವಾಗಿ ಹುಟ್ಟಿದ ಅಪೂರ್ವ ಸಾಹಿತ್ಯವೆನಿಸಿದೆ. ಇದು "ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವೇ ಕಾಣಬಹುದು" ಎಂಬಂಥ ಲಿಂಗಸಾಹಿತ್ಯವೇ ಹೊರತು, ಅಂಗಸಾಹಿತ್ಯವಲ್ಲ. ಇಂಥ ಸಾಹಿತ್ಯ ಸಮುದ್ರದಿಂದ ಆರಿಸಿತಂದ "ಮುತ್ತಿನಹಾರ"ವಾದ ಈ ಕೃತಿ ನೀತಿಗೆ ನೀತಿ, ಸಾಹಿತ್ಯಕ್ಕೆ ಸಾಹಿತ್ಯವಾಗಿರಬೇಕಾದುದು ಸಹಜ. ಇದನ್ನು ಶ್ರಮಪಟ್ಟು ಸಂಕಲಿಸಿದವರು ಒಂದು ಕಾಲದಲ್ಲಿ ನನ್ನ ವಿದ್ಯಾರ್ಥಿಗಳಾಗಿದ್ದ, ಇಂದು ಸಹಪ್ರಾಧ್ಯಾಪಕರಾಗಿರುವ ಪ್ರೊ. ಕಾಶಿಪುಟ್ಟ ಸೋಮಾರಾಧ್ಯ ಮತ್ತು ಡಾ. ವೀರಣ್ಣ ರಾಜೂರ ಅವರು. ವೀರಶೈವ ಸಾಹಿತ್ಯವನ್ನು ಆಸಕ್ತಿಯಿಂದ ಅಧ್ಯಯನಮಾಡುತ್ತಿರುವ ಈ ಉಭಯ ಸ್ನೇಹಿತರ ಶ್ರಮ ಸಾರ್ಥಕವಾಗಲೆಂದು ಹಾರೈಸುತ್ತೇನೆ.

ಕಾಶಿಪುಟ್ಟ ಸೋಮಾರಾಧ್ಯ ಮತ್ತು ವೀರಣ್ಣ ರಾಜೂರ, ಧಾರವಾಡ

ಆಕರ : ಮಾರ್ಗ ಸಂಪುಟ–೬

೨೩೧

ಕ್ಯಾಂಪಸ್ಸಿನ ಕವಿತೆಗಳು

೧೯೮೯

ಇಂದು ಲೆಕ್ಕಣಿಕೆ ಭಯದ ಮಧ್ಯೆ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನೊಂದು ಕಡೆ ಸಾಹಿತಿಗಳೆನಿಸಿದವರ ಕೈಯಲ್ಲಿ ಹಾಲು ಹೆಂಡವಾಗುತ್ತ ನಡೆದಿದೆ. ಇಂಥ ಕೆಟ್ಟ ಕಾಲದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಈ ಯುವಪ್ರತಿಭೆಗಳು ಎತ್ತಿದ ಲೆಕ್ಕಣಿಕೆ, ಎಲ್ಲ ರೀತಿಯಿಂದಲೂ ಸಾಹಿತ್ಯದ ಆತ್ಮಗಾರವವನ್ನು ಎತ್ತಿ ಹಿಡಿಯಲೆಂದು ಹಾರೈಸುತ್ತೇನೆ.

ವಿದ್ಯಾರ್ಥಿಮಿತ್ರರು ಬಾಳಿನ ಮುಂಜಾವಿನ ಹೂವುಗಳಂತೆ ಈ ಸಂಕಲನದಲ್ಲಿ ಅರಳಿದ್ದಾರೆ. ಅರಳುತ್ತಲಿದ್ದಾರೆ. ಜೀವನಾನುಭವ, ಕಾವ್ಯವ್ಯಾಸಂಗ, ರಚನಾಕ್ರಿಯೆಗಳು ಪ್ರತಿಭೆಯನ್ನು ಜೀವಂತವಾಗಿಡುವ ಶಕ್ತಿಗಳಾಗಿವೆ. ಇಂಥ ಪರಿಸರ ಭಾರತೀಯ ವಿಶ್ವವಿದ್ಯಾಲಯಗಳ ಕ್ಯಾಂಪಸ್ಸುಗಳಲ್ಲಿ ಮಾಯವಾಗುತ್ತಿರುವ ಇಂದಿನ ಕಾಲದಲ್ಲಿ 'ಕ್ಯಾಂಪಸ್ಸಿನ ಕವಿತೆಗಳು' ಹುಟ್ಟಿದ್ದೇ ಒಂದು ಪವಾಡ.

ಈ ಹಿಂದೆ ಇಂಥ ಚಟುವಟಿಕೆಗಳಿಗೆ ಕರ್ನಾಟಕ ವಿಶ್ವವಿದ್ಯಾಲಯದ 'ಸ್ನಾತಕೋತ್ತರ ವಿದ್ಯಾರ್ಥಿ ಕೂಟ', 'ಕರ್ನಾಟಕ ಸಂಘ', 'ವಿದ್ಯಾರ್ಥಿ ಭಾರತಿ' ಪತ್ರಿಕೆ ವೇದಿಕೆ ಎನಿಸಿದ್ದವು. ಈಗ ಅದೆಲ್ಲ ಬರಿಯ ನೆನಪು. ಹೀಗಿದ್ದೂ ಈ ಮಿತ್ರರು ಕಾವ್ಯ ನಿರ್ಮಾಣ, ವಾತಾವರಣ ನಿರ್ಮಾಣ - ಈ ಎರಡೂ ಕೆಲಸಗಳನ್ನು ಪ್ರಸ್ತುತ ಸಂಕಲನವನ್ನು ಪ್ರಕಟಿಸುವ ಮೂಲಕ ಪೂರೈಸಿದ್ದಾರೆ. ಆದುದರಿಂದ ಈ 'ಕ್ಯಾಂಪಸ್ಸಿನ ಕವಿತೆಗಳು' ಸಂಕಲನಕ್ಕೆ ಕ್ಯಾಂಪಸ್ಸು ಋಣಿಯಾಗಿದೆ.

ಬಸವರಾಜ ಸೂಳಿಭಾವಿ, ಚಂದ್ರಶೇಖರ ರೊಟ್ಟಿಗವಾಡ, ಚಂದ್ರಕಾಂತ ವಜ್ರಮಟ್ಟಿ, ಮಲ್ಲಿಕಾರ್ಜುನ ಮೇತ್ರಿ

ಆಕರ : ಮಾರ್ಗ ಸಂಪುಟ–೬

■■

ಸತ್ತ ಹುಡುಗಿಯ ನೆನಪಿಗಾಗಿ

೧೯೮೯

ನಮ್ಮ ಶಿಕ್ಷಣಪದ್ಧತಿಯಲ್ಲಿ ಎರಡು ದೋಷಗಳಿವೆ. ವಿದ್ಯಾರ್ಥಿಯಲ್ಲಿ ಸೃಜನಶೀಲತೆಯನ್ನು ಬೆಳೆಸದಿರುವುದು; ಅದನ್ನು ಅಭಿವ್ಯಕ್ತಿಸುವ ತರಬೇತಿಯನ್ನು ನೀಡದಿರುವುದು. ಇಂಥ ಕೆಟ್ಟ ವ್ಯವಸ್ಥೆಯ ಮಧ್ಯದಲ್ಲಿಯೂ ಕೆಲವು ವಿದ್ಯಾರ್ಥಿಗಳು ಸೃಜನಶೀಲರಾಗಿ ಅಂಕುರಿಸುತ್ತಿರುವುದು. ಅರಳುತ್ತಿರುವುದು ಒಂದು ಪವಾಡವೆಂದೇ ಹೇಳಬೇಕು. ಈ ಪವಾಡದ ಒಂದು ಭಾಗ ಶ್ರೀ ಜಿ. ಸಿ. ಕಲಬುರ್ಗಿ ಅವರು.

ಪ್ರತಿಭೆ, ಜೀವನಾನುಭವ, ನಿರಂತರ ವ್ಯಾಸಂಗ, ರಚನಾಪ್ರಯತ್ನ-ಕವಿಯಾಗಿ ಬೆಳೆಯಬೇಕೆನ್ನುವವನಿಗೆ ಈ ಶಕ್ತಿ, ಆಸಕ್ತಿಗಳು ಅವಶ್ಯ. ಕೇವಲ ಪ್ರತಿಭೆಯ ಬಂಡವಳದಿಂದ ಕವಿ ತನ್ನೊಳಗಿರುವ ಕಾವ್ಯಜೀವವನ್ನು ಬಹಳ ದಿನ ಬದುಕಿಸಲಾರ. ಮರವಾಗಿ ಬೆಳೆಯಬೇಕಿದ್ದ ಅನೇಕ ಯುವಕವಿಗಳು ಮಧ್ಯದಲ್ಲಿಯೇ ಒಣಗಿನಿಂತುದು ಇದಕ್ಕೆ ನಿದರ್ಶನ. ಶ್ರೀ ಕಲಬುರ್ಗಿ ಅವರು ಹಾಗಾಗಲಾರರೆಂದೇ ನನ್ನ ಆಸೆ.

ಕವಿಗೆ 'ಅಭಿವ್ಯಕ್ತಿ ಸ್ವಾತಂತ್ರ್ಯ' ಅಗತ್ಯ. ಆದರೆ 'ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂಬಂತೆ ಜೀವನದ ಸತ್ಯಗಳಿಗೆ ಕೇಡು ಬಗೆಯದೆ ಕವಿಯು ತನ್ನ ಬರವಣಿಗೆಯನ್ನು ಮುಕ್ತರೀತಿಯಲ್ಲಿ ಮುಂದುವರಿಸಬೇಕು. ಈ ಸತ್ಯವನ್ನು ಶ್ರೀ ಕಲಬುರ್ಗಿಯವರು ಬರವಣಿಗೆಯಲ್ಲಿ ಬದುಕಿಸುವರೆಂಬ ಭರವಸೆ ನನ್ನದಾಗಿದೆ.

ಒಂದು ಕವನ ಸಂಕಲನದ ಶ್ರೇಯಸ್ಸು ನಿಂತಿರುವುದು ಕವಿ ಏನು ಹೇಳಿದ್ದಾನೆ? ಹೇಗೆ ಹೇಳಿದ್ದಾನೆ? ಎಂಬುದರ ಮೇಲೆ. ಈ ಸಂಕಲನದ ಅನೇಕ ಕವನಗಳಿಗೆ ಈ ಮಾತನ್ನು ದಕ್ಕಿಸಿಕೊಳ್ಳುವ ಶಕ್ತಿಯಿದೆ. ಆದರೆ ಉತ್ಕಟತೆ, ಶಿಸ್ತು ಇನ್ನೂ ಬೇಕು.

ಗುಂಡಣ್ಣ ಕಲಬುರ್ಗಿ

ಆಕರ : ಮಾರ್ಗ ಸಂಪುಟ–೬

■■

೨೩೩

ಸಶಾರದ

೧೯೯೦

ವಾಕ್ಯ 'ಕಾವ್ಯ'ವಾಗುವುದು ಒಂದು ಪರಿವರ್ತನ ಕ್ರಿಯೆಯಾಗಿದೆ. ಹೀಗೆ ಆಗುವಾಗ ಅದರ ಎಲ್ಲ ಅಂಗಗಳನ್ನು ದುಡಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಮೂಲತಃ ಪ್ರತಿಭಾಶಕ್ತಿ ಮತ್ತು ವ್ಯುತ್ಪತ್ತಿಸಂಪತ್ತು ಅಗತ್ಯ, ನಿರಂತರ ಕಾವ್ಯಕೃಷಿ ಅತ್ಯಗತ್ಯ. ಆಗ ಹೆಚ್ಚು ಪ್ರೀತಿಸಿದಷ್ಟೂ ಹೆಚ್ಚು ವಶವಾಗುವ ಪ್ರಿಯತಮೆಯಂತೆ ಕಾವ್ಯಕ್ರಿಯೆ ಕೈವಶವಾಗುತ್ತ ಹೋಗುತ್ತದೆ.

ಶ್ರೀ ಪೋರೆಯವರಲ್ಲಿ ಪ್ರಕೃತಿದತ್ತ ಪ್ರತಿಭೆಯಿದೆ. ಕನ್ನಡದ ಶ್ರದ್ಧಾವಂತ ವಿದ್ಯಾರ್ಥಿಯಾಗಿರುವ ಅವರಲ್ಲಿ ವ್ಯುತ್ಪತ್ತಿಯನ್ನು ಬೆಳೆಸಿಕೊಳ್ಳುವ ಸಾಮರ್ಥ್ಯವಿದೆ, ಆದರೆ ಅವರಿಗೆ ಕಾವ್ಯಕೃಷಿಗೆ ತಕ್ಕವಾತಾವರಣವಿಲ್ಲ. ಉದ್ದಕ್ಕೂ ಪ್ರಥಮದರ್ಜೆಯ ವಿದ್ಯಾರ್ಥಿಯಾಗಿ ಬೆಳೆದುಬಂದ ಇವರು, ಹಳ್ಳಿಗಾಡಿನ ಪ್ರಾಥಮಿಕ ಶಾಲೆಯ ಶಿಕ್ಷಕವೃತ್ತಿಯಲ್ಲಿ ಈ ಸೆಲೆಯನ್ನು ಎಷ್ಟುದಿನ ಉಳಿಸಿಕೊಂಡಾರು? ಮೇಲಾಗಿ ಅಸಾಹಿತಿಗಳೂ, ಅರ್ಧ ಸಾಹಿತಿಹಳೂ ತುಂಬಿರುವ ಇಂದಿನ ಸಾಹಿತ್ಯಿಕ ಗದ್ದಲದಲ್ಲಿ ಇವರ ಧ್ವನಿ ಜನರ ಕಿವಿಗೆ ಹೇಗೆ ಮುಟ್ಟೀತು? ಈ ಕವಿಯ ವಿಷಯದಲ್ಲಿ ಹಾಗಾಗದಿರಲಿ.

'ಸುಸಂಪೋ' ಕಾವ್ಯನಾಮದ ಶ್ರೀ ಪೋರೆ ಅವರು ತಮ್ಮ ಮಿತಿಯಲ್ಲಿ ಸಶಕ್ತ ಕವಿ. 'ಸಶಾರದ' ದಟ್ಟ ಅನುಭವಗಳ ಸಾಂದ್ರರಚನೆಯೆಂದು ನಾನು ಗುರುತಿಸಿದ್ದೇನೆ. ಆದರೆ ಈ ಸಾಂದ್ರತೆ ಸಂವಹನ ಕ್ಲಿಷ್ಟತೆಗೆ ಹೊರಳದಿರಲಿ.

ಸುಭಾಸ ಪೋರೆ

ಆಕರ : ಮಾರ್ಗ ಸಂಪುಟ–೬

■■

ನಿಟ್ಟುಸಿರು ಬಿಡುತ್ತಿದೆ ಕವಿತೆ

೧೯೯೧

"ನಿಟ್ಟುಸಿರು ಬಿಡುತ್ತಿದೆ ಕವಿತೆ"ಯ ಬಗ್ಗೆ ನಾಲ್ಕು ಮಾತು ಬರೆಯುವಾಗ "Our sweetest songs are those that tell us saddest thoughts" ಎಂಬ ಪ್ರಸಿದ್ಧ ವಾಕ್ಯ ನೆನಪಿಗೆ ಬರುತ್ತದೆ. ನಗುವಿನ ಪರಿಣಾಮಕ್ಕಿಂತ, ನೋವಿನ ಪರಿಣಾಮ ಆಳವಾದುದು. ಶ್ರೀ ಯಾಕೊಳ್ಳಿ ಅವರ ಬಹಳಷ್ಟು ಕವನಗಳು ಇಂಥ ನೋವಿನಿಂದ ನರಳುತ್ತಿವೆ.

ಸಾಮಾಜಿಕವಾಗಿ, ಕೌಟುಂಬಿಕವಾಗಿ ಕೆಳವರ್ಗದ ನೆಲೆಯಿಂದ ಬಂದ ಶ್ರೀ ಯಾಕೊಳ್ಳಿ ಅವರದು ಇದೆಲ್ಲವನ್ನೂ ಮರೆತ "ನಿಸ್ಸಂಗತ್ವ" ಸ್ವಭಾವ. ಇದರಿಂದಾಗಿ ನೋವನ್ನು ಸಾಮಾನ್ಯೀಕರಿಸಿ ನೋಡುವ ಕವಿಮನಸ್ಸು ಇವರಲ್ಲಿ ಸಹಜವಾಗಿದೆ. ಇಲ್ಲಿಂದ ಮುಂದೆ ಭಾವ ತಟಕ್ಕನೇ ಬರಹಕ್ಕೆ ಇಳಿಯದೆ, ಉತ್ಕಟಕ್ಕೆ ಏರಿ 'ರಸ'ವಾಗಬೇಕು. ಇದು ಪದ್ಯ ಪಾಕವಾಗುವ ಕ್ರಿಯೆ. ಈ ಕ್ರಿಯೆ ಶ್ರೀ ಯಾಕೊಳ್ಳಿಯವರ ಕೆಲವು ಕವನಗಳಲ್ಲಿ ಕಂಡು ಬರುವುದು ಅವರ ಬೆಳವಣಿಗೆಯ ಲಕ್ಷಣವಾಗಿದೆ.

'ಕವನ'ವೆನ್ನುವುದು ಕಿವಿಯಿಂದ ನೋಡುವ ಒಂದು ಶಾಬ್ದಿಕ ಕಲೆಯಾಗಿದೆ. ಕಣ್ಣಿನ 'ಗಣ' ಮತ್ತು ಕಿವಿಯ 'ಲಯ'ಗಳ ಮಧ್ಯದ ವಿಶಿಷ್ಟ ಭಾಷಾ 'ಗತಿ'ಯೊಂದು ಇಲ್ಲಿ ಆಶಯವನ್ನು ಆಕೃತಿಗೊಳಿಸಬೇಕಾಗುತ್ತದೆ. ಅಂದರೆ ಆಶಯಕ್ಕೆ ತಕ್ಕ 'ಗತಿ'ಯಲ್ಲಿ ಕವನ ಅಭಿನಯಿಸಬೇಕಾಗುತ್ತದೆ. ಅಂಥ 'ಗತಿ'ಯನ್ನು ಆತ್ಮೀಕರಿಸಿಕೊಂಡು, ಶ್ರೀ ಯಾಕೊಳ್ಳಿಯವರು ಬರೆಯುತ್ತಾರೆ. ಬೆಳೆಯುತ್ತಾರೆ ಎಂಬ ಭರವಸೆ ನನ್ನದಾಗಿದೆ.

ಉದ್ದಕ್ಕೂ ಪ್ರಥಮದರ್ಜೆ ಪಡೆಯುತ್ತ ಬಂದ ಇವರು ಕೇವಲ 'ಪಠ್ಯಕ್ರಮನಿಷ್ಠ' ವಿದ್ಯಾರ್ಥಿಯಾಗಿ ಉಳಿಯದೆ, 'ವಿಷಯಜ್ಞಾನನಿಷ್ಠ' ವಿದ್ಯಾರ್ಥಿಯಾಗಿ ಬೆಳೆಯುತ್ತ ಬಂದುದು ವಿಶೇಷ ಸಂಗತಿ. ಈಗ ಕವಿಯಾಗಿ ಕಾಣಿಸಿಕೊಳ್ಳುತ್ತಿರುವುದು ಇನ್ನೂ ವಿಶೇಷ ಸಂಗತಿ.

ವಾಯ್.ಎಮ್.ಯಾಕೊಳ್ಳಿ

ಆಕರ : ಮಾರ್ಗ ಸಂಪುಟ-೬

ನೆನಪುಗಳು ಸಾಯುವುದಿಲ್ಲ

೧೯೯೧

ಇದು ಹಾಮಾನಾ ಕೃತಿಗಳ "ವಾಕ್ಯಮಾಣಿಕ್ಯ ಕೋಶ". ಆಶಯ ಸರಿಯಾಗಿ ಆಕೃತಿ ಪಡೆದಾಗ ಮಾತು ಕೃತಿಯಾಗುತ್ತದೆ. ಇಂಥ ಮಾತುಗಳ ಸಂಕಲನವಾಗಿದೆ, "ನೆನಪುಗಳು ಸಾಯುವುದಿಲ್ಲ."

ವ್ಯಕ್ತಿಯಾಗಿ ಹಾಮಾನಾ ಅವರು ಪರಿಸರದ ಆಗು-ಹೋಗುಗಳಿಗೆ ಪ್ರತಿಕ್ಷಣವೂ ಸ್ಪಂದಿಸುತ್ತ ಬಂದುದರಿಂದ ಅವರ ಜೀವನಾನುಭವಕ್ಕೆ ಆಯಾಮಗಳೂ ಅನೇಕ, ಹಂತಗಳೂ ಹಲವು. ಹೀಗೆ ಪ್ರಚಲಿತ ಸಮಸ್ಯೆಗಳಿಗೆ ಜೀವನಾನುಭವದ ನೆಲೆಯಿಂದಲೇ ಪ್ರತಿಕ್ರಿಯಿಸುವ ಅವರ ವಿಚಾರಗಳಿಗೆ ಆನ್ವಯಿಕ ಮತ್ತು ಸೈದ್ಧಾಂತಿಕ ಮಗ್ಗಲುಗಳಿವೆ.

ಈ ವಿಚಾರಗಳು ಅವರ ಬರಹದಲ್ಲಿ ಜೀವ ಪಡೆಯುವ ರೀತಿ ಬಹಳಷ್ಟು ಸಲ ಸೃಜನಶೀಲವಾದುದು. ಪರಿಸರವನ್ನು ಪ್ರಶ್ನಿಸುವ - ತಿದ್ದುವ ಅದು, ತೀರ್ಪು ರೀತಿಯದಾಗಿರುತ್ತದೆ, ಕೆಲವೊಮ್ಮೆ ಸೂತ್ರಸ್ವರೂಪ ಪಡೆಯುತ್ತದೆ. ಇಂತಹ ಸೃಜನ ಶೀಲ ತೀರ್ಪು-ಸೂತ್ರಗಳ ಆಯ್ಕೆಯಾಗಿದೆ, "ನೆನಪುಗಳು ಸಾಯುವುದಿಲ್ಲ."

"ಆಯ್ಕೆ" ಯಾವತ್ತೂ ತುಂಬ ಕಠಿಣ. ವಿಚಾರ ಮತ್ತು ಭಾಷೆ ಎರಡೂ ದೃಷ್ಟಿಯಿಂದಲೂ 'ಪೂರ್ಣ ಶಿಲ್ಪ' ಪಡೆದ ಸಾಹಿತ್ಯಭಾಗಗಳನ್ನು ಮಾತ್ರ ಆಯ್ದುಕೊಳ್ಳುವ ಕೆಲಸ ಇಲ್ಲಿ ನಡೆಯಬೇಕಾಗುತ್ತದೆ. ಈ ಭಾಗಗಳು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಕಷ್ಟ, ಹೆಚ್ಚು ಇದ್ದರೂ ಕಷ್ಟ. ಹಾಮಾನಾ ಕೃತಿಗಳಲ್ಲಿ ಇವು ವಿಪುಲವಾಗಿರುವುದರಿಂದ ಯಾವುದನ್ನು ಆಯ್ದುಕೊಳ್ಳಬೇಕು, ಯಾವುದನ್ನು ಬಿಡಬೇಕು ಎಂಬುದೇ ಕೆಲವೊಮ್ಮೆ ಸಮಸ್ಯೆಯಾಗುತ್ತದೆ. ಶ್ರೀ ರಾಜಪ್ಪ ಅವರು ಈ ಸಮಸ್ಯೆಯನ್ನು ಸರಿಯಾಗಿಯೇ ನಿವಾರಿಸಿಕೊಂಡಿದ್ದಾರೆ.

ಇದು ಒಂದು ಸಂಗ್ರಹವಲ್ಲ, ಸಂಪಾದನೆ. ಮೂಲತಃ ಪ್ರಬಂಧದ ಅವಿಭಾಜ್ಯ ಅಂಗವಾಗಿರುವ ಗದ್ಯಖಂಡವನ್ನು, ವಾಕ್ಯವನ್ನು ಅರ್ಥಕ್ಕೆ ಚ್ಯುತಿ ಬರದಂತೆ ಬಿಡಿಸಿಕೊಳ್ಳುವುದು, ಅಲ್ಲಿ ಹುದುಗಿರುವ ಕೇಂದ್ರ ವಿಚಾರವನ್ನು ಗುರುತಿಸಿ ಅವುಗಳನ್ನು ವರ್ಗೀಕರಿಸಿಕೊಳ್ಳುವುದು, ಅಗತ್ಯ ಅಂಶಗಳು ಹೊರಗೆ ಉಳಿಯದಂತೆ ಮತ್ತು ಅನಗತ್ಯ ಅಂಶಗಳು ಒಳಗೆ ಬರದಂತೆ ನೋಡಿಕೊಳ್ಳುವುದು, ಪುನರುಕ್ತಗಳನ್ನು ತಪ್ಪಿಸುವುದು, ಒಟ್ಟಿನಲ್ಲಿ ಲೇಖಕನನ್ನು ಅವನ ಆಲೋಚನೆಗಳಲ್ಲಿ ಕಡೆದು ನಿಲ್ಲಿಸುವುದು - ಈ ಎಲ್ಲ ಎಚ್ಚರಗಳನ್ನು ಪಾಲಿಸಿದಾಗ ಮಾತ್ರ ಸಂಗ್ರಹ ಸಂಪಾದನೆಯಾಗುತ್ತದೆ. ಈ ಅರ್ಥದಲ್ಲಿ "ನೆನಪುಗಳು ಸಾಯುವುದಿಲ್ಲ" ಒಂದು ಸಂಪಾದನೆಯಾಗಿದೆ.

ವಿಭಿನ್ನ ಸಂದರ್ಭಗಳಲ್ಲಿ ಹಂಚಿಹೋದ ವಿಚಾರಗಳನ್ನು ಹೀಗೆ ಸಂಗ್ರಹಿಸಿ, ವರ್ಗೀಕರಿಸಿದಲ್ಲಿ ಲೇಖಕನೊಬ್ಬನ ವಿಚಾರಗಳ ವೈವಿಧ್ಯ, ವಿಸ್ತಾರ, ಏಕಮುಖತೆ, ವೈರುಧ್ಯತೆ ಏನೆಲ್ಲ ಗೊತ್ತಾಗುತ್ತದೆ. ಪರಸ್ಪರ ಸಂಬಂಧವಿಲ್ಲದ, ಆದರೆ ಬದುಕಿಗೆ ಸಂಬಂಧಪಟ್ಟ ಒಟ್ಟು ೯೭ ವಿಚಾರವಲಯಗಳನ್ನು ಹಾಮಾನಾ ಅವರ ೩೬ ಗ್ರಂಥಗಳಿಂದ ಈ ಕೃತಿಯಲ್ಲಿ ಸಂಗ್ರಹಿಸಲಾಗಿದೆ. ಇಲ್ಲಿಯ ಮಾತುಗಳಲ್ಲಿ ಗೋಚರಿಸುವ ಏಕಮುಖತೆ ಹಾಮಾನಾ ಅವರಿಗೆ ಆಯಾ ವಿಷಯದ ಬಗೆಗಿರುವ ಸ್ಪಷ್ಟ ತಿಳಿವಳಿಕೆಯ ಕರುಹಾಗಿದೆ. ಇಲ್ಲಿ ಪುಸ್ತಕ, ಪುಸ್ತಕೋದ್ಯಮ,

ಭಾಷೆ, ರಾಷ್ಟ್ರ-ರಾಷ್ಟ್ರೀಯತೆ, ಕನ್ನಡ, ಶಿಕ್ಷಣ ಇವುಗಳ ಕೆಳಗೆ ಹೆಚ್ಚು ಅಡಕುಗಳು ಕಂಡುಬರುತ್ತವೆ. ಈ ವಿಚಾರಗಳ ಬಗೆಗೆ ಹಾಮಾನಾ ಹೆಚ್ಚು ಚಿಂತಿಸಿದ್ದಾರೆ, ಚಿಂತನೆ ನಡೆಸಿದ್ದಾರೆ ಎಂದು ಇದರ ಅರ್ಥ.

ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿದ 'ಮೂಲಭೂತ' ವಿಚಾರಗಳು ಇಲ್ಲಿರುವುದರಿಂದ "ನೆನಪುಗಳು ಸಾಯುವುದಿಲ್ಲ" ಒಂದು ಸಂದರ್ಭಗ್ರಂಥದ ಮೌಲಿಕತೆ ಪಡೆದಿದೆ. ಸಹೃದಯರು ತಮ್ಮ ಆಲೋಚನೆಗಳನ್ನು ಪಲ್ಲವಿಸಿಕೊಳ್ಳಲು ಇಲ್ಲಿಯ ಅಡಕುಗಳು ಬೀಜವಾಕ್ಯದಂತೆ ನೆರವಾಗುತ್ತವೆ.

ಶ್ರೀ ರಾಜಪ್ಪ ದಳವಾಯಿ ಅವರು ಬಿಸಿ ವಿಚಾರಗಳ ತಣ್ಣನೆಯ ಯುವ ವಿದ್ವಾಂಸ, ಸದಭಿರುಚಿಯ ಅಭ್ಯಾಸಿ. "ಸೂಕ್ತಿಸುಧಾರ್ಣವ" ರೂಪದ ಈ ಕೃತಿ ರಚನೆಯ ಮೂಲಕ ಇವರು ಹಾಮಾನಾ ವಿಚಾರಗಳನ್ನು ತಿಳಿದುಕೊಳ್ಳಲು ನಾವು ಬೇರೆ ಬೇರೆ ಗ್ರಂಥಗಳನ್ನು ಹುಡುಕಿಕೊಂಡು ಹೋಗುವುದನ್ನು ತಪ್ಪಿಸಿದ್ದಾರೆ. ಈ ಶ್ರಮ-ಶ್ರದ್ಧೆಗಳಿಗಾಗಿ ಅವರಿಗೆ ಸಹೃದಯರ ಅಭಿನಂದನೆಗಳು ಸಲ್ಲುತ್ತವೆ.

ರಾಜಪ್ಪ ದಳವಾಯಿ, ತುಮಕೂರು

ಆಕರ : ಮಾರ್ಗ ಸಂಪುಟ–೬

■■

೨೩೬

ಚೆನ್ನವೀರ ಕಣವಿ ಹಾಗೂ ಜಿ. ಎಸ್. ಶಿವರುದ್ರಪ್ಪ ಅವರ ಕಾವ್ಯ

೧೯೯೧

ಹೊಸಗನ್ನಡ ಸಾಹಿತ್ಯಸಂದರ್ಭದಲ್ಲಿ ನವೋದಯ ಕ್ಷಿತಿಜದ ಮೇಲೆ ಕಾಣಿಸಿಕೊಂಡ ಕಣವಿ-ಶಿವರುದ್ರಪ್ಪನವರು, ಆಮೇಲಿನ 'ನವ್ಯಪ್ರಯೋಗ', 'ದಲಿತ-ಬಂಡಾಯ ಚಳುವಳಿ'ಗಳ ಗದ್ದಲದ ನಡುವೆಯೂ ಗಟ್ಟಿಯಾಗಿ ಕಾಲೂರಿ ನಿಂತು, ಘಟ್ಟದಿಂದ ಘಟ್ಟಕ್ಕೆ ಏರಿಬಂದ ಕಾರಣ, ಈ ಶಿಖರಸಾಹಿತಿಗಳು ಶಿಖರಗಳ ಶ್ರೇಣಿಯೂ ಎನಿಸಿದ್ದಾರೆ.

ನವೋದಯ ಕಾವ್ಯಕ್ಕೆ ಅರ್ಥ ತುಂಬಿದವರು ಕನ್ನಡ ಪ್ರಾಧ್ಯಾಪಕರಾದ ಬೇಂದ್ರೆ- ಕುವೆಂಪು, ನವ್ಯಕಾವ್ಯಕ್ಕೆ ಅರ್ಥ ತುಂಬಿದವರು ಇಂಗ್ಲಿಷ್ ಪ್ರಾಧ್ಯಾಪಕರಾದ ಗೋಕಾಕ-ಅಡಿಗ. ಕನ್ನಡದ ನೆಲೆಯಿಂದ ಮೂಡಿಬಂದ ಕಣವಿ-ಶಿವರುದ್ರಪ್ಪನವರು ಮಾತ್ರ ಅಲ್ಲಿ ಹುಟ್ಟಿ, ಇಲ್ಲಿ ಬೆಳೆಯುವ ಮೂಲಕ ಇಂಗ್ಲಿಷ್ ಪರಂಪರೆಯವರಿಗಿಂತ ಭಿನ್ನವಾದ ನವ್ಯಕವನಗಳನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ಈ ವಿಶೇಷತೆಯಿಂದಾಗಿ ಕನ್ನಡ ಸಾಹಿತ್ಯದ ಅಖಂಡ ಪರಂಪರೆಯ ಒಂದು ಭಾಗವೆಂಬಂತೆ ತೋರುವ ಅವುಗಳನ್ನು ಓದುವಾಗ, ಪರಕೀಯತೆಯ ಅನುಭವ ಉಂಟಾಗುವುದೇ ಇಲ್ಲ.

ವ್ಯಕ್ತಿಗಿಂತ ಮನುಷ್ಯನ, ಸಮಾಜಕ್ಕಿಂತ ಮಾನವಸಂಬಂಧದ ನೆಲೆಗಳಿಂದ ಇವರು ಕಾವ್ಯವಸ್ತುವನ್ನು ಆಯ್ದುಕೊಳ್ಳುತ್ತಾರೆ. ಇದು ಜೀವನದ ಬಗೆಗಿನ ಗಾಢ ಪ್ರೀತಿಯೂ ಹೌದು, ಸುರಕ್ಷಿತ ನೆಲೆಯ ಆಯ್ಕೆಯೂ ಹೌದು. ಇಂಥ ವಸ್ತುಗಳನ್ನು ಭಾಷೆಯ ಮೂಲಕ ನಿರ್ದಿಷ್ಟಗೊಳಿಸುವಲ್ಲಿ ಇವರಿಬ್ಬರು ಅನುಸರಿಸುವ ವಿಧಾನ ತುಂಬ ಸಂಯಮದ್ದಾಗಿದೆ. ಇದರಿಂದಾಗಿ ತಮ್ಮ ನವೋದಯ ಕವನಗಳು ಗೀತದಲ್ಲಿ ತೇಲಿ ಹೋಗಲು, ನವ್ಯಕವನಗಳು ಮಾತಿನಲ್ಲಿ ಮುಳುಗಿ ಹೋಗಲು ಇವರು ಅವಕಾಶ ಮಾಡಿಕೊಡುವುದಿಲ್ಲ. ಹೀಗಿದ್ದೂ ಶಿವರುದ್ರಪ್ಪನವರಲ್ಲಿ ಅನುಭವ ವೈವಿಧ್ಯ, ಕಣವಿಯವರಲ್ಲಿ ಶಿಲ್ಪ ವೈವಿಧ್ಯ ವಿಶೇಷವೆಂದೇ ಹೇಳಬೇಕು.

ಸಮಕಾಲೀನರಾದ ಕುವೆಂಪು ಮತ್ತು ಬೇಂದ್ರೆ, ಗೋಕಾಕ ಮತ್ತು ಅಡಿಗ - ಈ ಜೋಡಿಗಳು ತಮ್ಮ ತಮ್ಮ ಕಾಲಘಟ್ಟಗಳಲ್ಲಿ ಪರಸ್ಪರ ವಿಮುಖವಾಗಿಯೇ ಬೆಳೆದುದನ್ನು ನೆನೆದರೆ, ಸಮ್ಮುಖವಾಗಿ ಬೆಳೆದ ಕಣವಿ-ಶಿವರುದ್ರಪ್ಪ ಜೋಡಿಯ ಮಾನವಪ್ರೀತಿ ಅಪೂರ್ವವೆನಿಸುತ್ತದೆ.

ಮುಂಡರಗಿ, ಮೂಲೆಯಲ್ಲಿರುವ ಒಂದು ಹಳ್ಳಿ. ಪ್ರತಿವರ್ಷ ಅರ್ಥಪೂರ್ಣ ಕಾರ್ಯಕ್ರಮ ಜರುಗಿಸುತ್ತಿರುವುದು ಇಲ್ಲಿಯ ಕಾಲೇಜಿನ ವೈಶಿಷ್ಟ್ಯ, ಶಿವರುದ್ರಪ್ಪ-ಕಣವಿಯವರ ಕಾವ್ಯವನ್ನು ಕುರಿತ ವಿಚಾರ ಸಂಕಿರಣ ಇಲ್ಲಿ ಜರುಗಿದುದು ಈ ಕವಿಗಳ ಜನಪ್ರಿಯತೆಗೆ ಸಾಕ್ಷಿ, ಜರುಗಿಸಿದುದು ಈ ಕಾಲೇಜಿನ ಶೈಕ್ಷಣಿಕ ಆಸಕ್ತಿಗೆ ನಿದರ್ಶನ. ಇದು ಕನ್ನಡವನ್ನು ಕಾಯುವ ಕೆಲಸದ ಭಾಗವೇ ಆಗಿದ್ದು, ಸಣ್ಣ ಕಾಲೇಜಿನ ಈ ದೊಡ್ಡ ಸಂಪ್ರದಾಯ ಇತರ ಕಾಲೇಜುಗಳಿಗೆ ಮಾದರಿಯಾಗಲೆಂದು ಹಾರೈಸುತ್ತೇನೆ.

ಕರ್ನಾಟಕ ಕಂಫು, ಕೆ.ಆರ್.ಬೆಲ್ಲದ ಕಾಲೇಜು, ಮುಂಡರಗಿ

ಆಕರ : ಮಾರ್ಗ ಸಂಪುಟ-೬

■■

೨೩೭

ಶರಣರ ಬಂಡಾಯದ ವಚನಗಳು

೧೯೯೧

ಸಾಮಾಜಿಕ ಅನ್ಯಾಯವನ್ನು ಗುರುತಿಸುವುದು ಮತ್ತು ಎತ್ತರದ ದನಿಯಲ್ಲಿ ಪ್ರತಿಕ್ರಿಯಿಸುವುದು ಬಂಡಾಯಸಾಹಿತ್ಯದ ಮುಖ್ಯಲಕ್ಷಣವಾಗಿದೆ. ಇಲ್ಲಿ ಅನಿವಾರ್ಯವೆನಿಸುವ ಸಿಟ್ಟು - ಆವೇಶ ಕಾರಣವಾಗಿ ಈ ಸಾಹಿತ್ಯ ಕಲೆಯಾಗುವುದಕ್ಕಿಂತ ಖಡ್ಗವಾಗುವುದೇ ಹೆಚ್ಚು. ಹೀಗಾಗಿ ಕನ್ನಡದ ಪ್ರಥಮ ಬಂಡಾಯ ಸಾಹಿತ್ಯವೆನಿಸಿದ ವಚನಗಳಲ್ಲಿ ಅಂಬಿಗರ ಚೌಡಯ್ಯನಂಥವರ ರಚನೆಗಳು ಖಡ್ಗವಾಗಿಯೇ ಉಳಿದರೆ, ಬಸವಣ್ಣನಂಥವರ ರಚನೆಗಳು ಖಡ್ಗನಿಷ್ಠ ಕಲಾಕೃತಿಗಳಾಗಿ ಬೆಳೆದಿವೆ. ಈ ಬಗೆಯ ವಚನರಾಶಿಯಿಂದ ಆಯ್ದ ವಿಶಿಷ್ಟ ಸಂಕಲನ 'ಶರಣರ ಬಂಡಾಯದ ವಚನಗಳು.'

೧೨ನೆಯ ಶತಮಾನದಲ್ಲಿ ವಚನಗಳ 'ಸೃಷ್ಟಿ' ಕಾರ್ಯ ನಡೆದರೆ, ಆ ತರುವಾಯ ನಡೆದುದು ಅವುಗಳ 'ಸಂಯೋಜನ' ಕಾರ್ಯ. ಇದರ ಅಂಗವಾಗಿ ರೂಪಗೊಂಡ ವೈವಿಧ್ಯಪೂರ್ಣ ಪ್ರಾಚೀನ ಸಂಕಲನಗಳಿಗೆ 'ಪುನಃ ಸೃಷ್ಟಿ' ಸಾಹಿತ್ಯದ ಮಹತ್ವ ಸಲ್ಲುತ್ತದೆ. ಈ ಪರಂಪರೆಯಲ್ಲಿ ಬೆಳೆದು ಬಂದ ಶ್ರೀ ಹಳಕಟ್ಟಿಯವರ 'ವಚನಶಾಸ್ತ್ರಸಾರ' ಮುಂತಾದವುಗಳ ಮುಂದುವರಿಕೆಯಾಗಿದೆ, 'ಶರಣರ ಬಂಡಾಯದ ವಚನಗಳು.'

ಪ್ರಾಚೀನ ಕಾಲದಲ್ಲಿ ಧಾರ್ಮಿಕವಾಗಿ, ನವೋದಯ ಕಾಲದಲ್ಲಿ ಸಾಹಿತ್ಯಿಕವಾಗಿ ಮುಖ್ಯವೆನಿಸಿದ್ದ ವಚನಗಳು ಇಂದು ಸಾಮಾಜಿಕವಾಗಿ ಮಹತ್ವದವೆನಿಸಿವೆ. ಸಾಮಾಜಿಕ ಮನುಷ್ಯ ಎಚ್ಚರವಾಗಿರುವ ಇಂದಿನ ಸಂದರ್ಭದಲ್ಲಿ ಹೊರಬಂದ ಈ ಸಂಕಲನ ಕಾಲೋಚಿತ ಪ್ರಯತ್ನವೆನಿಸಿದರೂ ಪ್ರತಿಭಟನೆ, ನೀತಿಬೋಧೆ, ಆತ್ಮವಿಮರ್ಶೆಗಳ ವ್ಯತ್ಯಾಸದ ಹಿನ್ನೆಲೆಯಲ್ಲಿ ಇದನ್ನು ಇನ್ನೂ ಉತ್ತಮಗೊಳಿಸಬಹುದಾಗಿದೆ.

ಡಾ. ಬಸವರಾಜ ಸಬರದ ಒಂದು ಕಾಲಕ್ಕೆ ನನ್ನ ವಿದ್ಯಾರ್ಥಿ; ಇಂದು ನನ್ನ ನಿರೀಕ್ಷೆ ಮೀರಿ ಬೆಳೆಯುತ್ತಿರುವ ಸಾಹಿತಿ; ಬಂಡಾಯಸಾಹಿತ್ಯ ಚಳುವಳಿಯ ಮುಂಚೂಣಿಯಲ್ಲಿರುವ ಇವರ 'ಶರಣರ ಬಂಡಾಯದ ವಚನಗಳು' ಈವರೆಗಿನ ವಚನ ಸಂಕಲನಗಳಲ್ಲಿಯೇ ವಿಶಿಷ್ಟಕೃತಿ.

ಬಸವರಾಜ ಸಬರದ, ಗುಲ್ಬರ್ಗಾ

ಆಕರ : ಮಾರ್ಗ ಸಂಪುಟ-೬

■■

೨೩೮

ಎಂ.ಕೆ.ಇಂದಿರಾ : ಸಮಗ್ರ ಅಧ್ಯಯನ

೧೯೯೨

ಶ್ರೀಮತಿ ಮಂದಾಕಿನಿ ಸಾಹಿತ್ಯದ ಶ್ರದ್ಧಾವಂತ ವಿದ್ಯಾರ್ಥಿನಿ. ಅನೇಕ ನೋವುಗಳ ಮಧ್ಯದಲ್ಲಿಯೂ ಬತ್ತಿ ಹೋಗದ ಜೀವನೋತ್ಸಹ ಅವರದು. ವಿದ್ಯಾವ್ಯಾಸಂಗ, ಸಾಹಿತ್ಯಜ್ಞರ ಸಂಪರ್ಕ, ಸೌಮ್ಯ ಕ್ರಿಯಾಶೀಲತೆ ಇತ್ಯಾದಿ ಸ್ಥಾಯೀಗುಣಗಳ ಇವರ ಸಾಹಿತ್ಯಾಸಕ್ತಿಗಳೂ ಅನೇಕ. ಜನಪದಕ್ಕೂ ಇಳಿಯುವ, ಶಿಷ್ಟಪದಕ್ಕೂ ಏರುವ ಮನೋಪಾತಳಿಯ ಡಾ. ಮಂದಾಕಿನಿ ಅವರ ಹಲವು ವರ್ಷಗಳ ಪಿ.ಎಚ್.ಡಿ. ಅಧ್ಯಯನದ ಫಲ 'ಎಂ. ಕೆ. ಇಂದಿರಾ : ಸಮಗ್ರ ಅಧ್ಯಯನ.'

ಎಂ. ಕೆ. ಇಂದಿರಾ ನವೋದಯ ಪ್ರಜ್ಞೆಯ ಅಪರೂಪದ ಬರಹಗಾರ್ತಿ. ಪರಂಪರೆಯಲ್ಲಿ ಪ್ರಗತಿಯನ್ನು ಚಿಗುರಿಸುತ್ತ ಬಂದ ಲೇಖಕಿ. ಮಲೆನಾಡಿನ ಪ್ರಾತಿನಿಧಿಕ ಲೇಖಕಿಯಾಗುವ ಭರದಲ್ಲಿ ತಮ್ಮ ಬರವಣಿಗೆಗೆ ಪರಿಮಿತಿಯನ್ನು ತಂದುಕೊಳ್ಳದೆ, ಸುತ್ತಲೂ ಸ್ಪಂದಿಸಿ ಅನೇಕ ಗದ್ಯಪ್ರಕಾರಗಳಲ್ಲಿ ಬಿಚ್ಚಿಕೊಂಡ ಶ್ರೇಯಸ್ಸು ಇವರದಾಗಿದೆ. ಇವರನ್ನು ವಸ್ತುವಾಗಿಟ್ಟು ಕಂಡರಿಸಿದ ವಾಸ್ತು, "ಎಂ. ಕೆ. ಇಂದಿರಾ: ಸಮಗ್ರ ಅಧ್ಯಯನ."

ಸಾಮಾನ್ಯವಾಗಿ ಪಿ.ಎಚ್.ಡಿ. ಅಧ್ಯಯನಕ್ಕೆ ಪ್ರಾಚೀನ ವಿಷಯ, ಪ್ರಾಚೀನ ವ್ಯಕ್ತಿಗಳನ್ನು ಆಯ್ದುಕೊಳ್ಳಲಾಗುತ್ತದೆ. ಹೀಗಿದ್ದೂ ಆಧುನಿಕರನ್ನು ಆಯ್ದುಕೊಳ್ಳುವಲ್ಲಿ ಕೆಲವು ವಿಶೇಷತೆಗಳಿವೆ. ಲೇಖಕರೊಂದಿಗೆ, ಅವರ ಪರಿಸರದೊಂದಿಗೆ ನಡೆಸುವ ಸಂದರ್ಶನ, ಕ್ಷೇತ್ರಕಾರ್ಯಗಳಿಂದಾಗಿ ನಿಜವಾದ ಮಾಹಿತಿ ಸಿಕ್ಕು, ವ್ಯಕ್ತಿಜೀವನ, ಬರಹಜೀವನಗಳಿಗೆ ಅಧಿಕೃತತೆ ಸಾಧ್ಯವಾಗುತ್ತದೆ. ಒಂದೊಂದೂ ಕೃತಿಯ ಸೃಷ್ಟಿಗೆ ಹಿನ್ನೆಲೆಯಾಗಿದ್ದ ಒತ್ತಡ- ಕಾರಣ - ಆವರಣಗಳು ಲಭ್ಯವಾಗಿ ಕೃತಿಯ ಹಿಂದಿರುವ ಸಮಗ್ರ ತುಡಿತಗಳೆಲ್ಲ ಮರೆಯಾಗುವ ಮೊದಲೇ ಅಕ್ಷರರೂಪಕ್ಕಿಳಿಯುತ್ತವೆ. ಇಂಥ ಬರವಣಿಗೆ ಊಹೆ - ತರ್ಕಗಳಿಂದ ಮುಕ್ತವಾಗಿ, 'ನಿಜದನಿ'ಗಳ ನೆಲೆಯಾಗುತ್ತದೆ.

ಡಾ. ಮಂದಾಕಿನಿ ಪುರೋಹಿತ ಅವರು ತಮ್ಮ ಈ ಕೃತಿಯಲ್ಲಿ ಇಂದಿರಾ ಅವರ ಜೀವನ, ಸಾಹಿತ್ಯಗಳ 'ನಿಜದನಿ'ಗಳನ್ನು ಮೂಡಿಸಿದ್ದಾರೆ. ಈ ಸೌಮ್ಯಶೈಲಿಯ ಸಮಗ್ರ ಅಧ್ಯಯನಕ್ಕಾಗಿ ಡಾ. ಮಂದಾಕಿನಿ ಅವರನ್ನು ಅಭಿನಂದಿಸುತ್ತೇನೆ.

ಮಂದಾಕಿನಿ ಪುರೋಹಿತ, ಧಾರವಾಡ

ಆಕರ : ಮಾರ್ಗ ಸಂಪುಟ-೬

■■

೨೩೯

ಚಾವುಂಡರಾಯ ಪುರಾಣ : ಒಂದು ಅಧ್ಯಯನ

೧೯೯೩

ಪ್ರಾಚೀನ ಕರ್ನಾಟಕದ ಅದ್ಭುತಶಿಲ್ಪ ಗೊಮ್ಮಟೇಶ, ಅದ್ಭುತವ್ಯಕ್ತಿ ಆ ಶಿಲ್ಪದ ನಿರ್ಮಾಪಕ ಚಾವುಂಡರಾಯ. ಯುದ್ಧವೀರ-ತ್ಯಾಗವೀರ, ಜಿನೋಪಾಸಕ-ಕಲೋಪಾಸಕ, ಸಚಿವ-ಸಾಹಿತಿ ಹೀಗೆ ಹಲವು ಶಕ್ತಿಗಳ ಸಮನ್ವಯವೆನಿಸಿದ್ದ ಈತನ 'ಚಾವುಂಡರಾಯ ಪುರಾಣ'ದ ಪ್ರೌಢ ಅಧ್ಯಯನವಾಗಿದೆ, ಈ ಕೃತಿ. ಏಳು ಅಧ್ಯಾಯಗಳ ಈ ಪ್ರಬಂಧವನ್ನು ಚಾವುಂಡರಾಯನ ಸಮಗ್ರ ಅಧ್ಯಯನ ಮತ್ತು ಅವನ ಪುರಾಣಕೃತಿಯ ಸಮಗ್ರ ಅಧ್ಯಯನವಾಗುವಂತೆ ನೋಡಿಕೊಂಡುದು ಇಲ್ಲಿಯ ವಿಶೇಷ ಸಾಧನೆಯಾಗಿದೆ.

ಡಾ. ಎಸ್. ಪಿ. ಪಾಟೀಲ ಅವರ ಪ್ರಜ್ಞೆ ಮೊದಲಿನಿಂದಲೂ ಜೈನ ಸಾಹಿತ್ಯ- ಸಿದ್ಧಾಂತ- ಚರಿತ್ರೆಗಳ ಅಧ್ಯಯನದಲ್ಲಿ ಕೇಂದ್ರೀಕೃತವಾಗಿ ಬೆಳೆದುದು. ಹೀಗಾಗಿ ಈ ಪ್ರಬಂಧಕ್ಕೆ ಅವಶ್ಯವಿರುವ ಆಕರ ಸಾಮಗ್ರಿಯನ್ನು ಅವರು ಸಹಜವಾಗಿಯೇ ಸರ್ವಮೂಲಗಳಿಂದ ಸಂಗ್ರಹಿಸಿದ್ದಾರೆ. ಇಲ್ಲೆಲ್ಲ ಅವರ ಶ್ರಮ-ಶ್ರದ್ಧೆ-ಪ್ರಾಮಾಣಿಕ ಪ್ರತಿಪಾದನೆಗಳು ಅಡಕಗೊಂಡಿವೆ. ಕವಿಕೃತಿಗೆ ಸಾಹಿತ್ಯಿಕ ಮತ್ತು ಸಾಹಿತ್ಯೇತರ ಎಂಬ ಎರಡು ಆಯಾಮಗಳಿರುತ್ತವೆ. ಇವುಗಳಲ್ಲಿ ಚಾವುಂಡರಾಯ ಪುರಾಣ ಸಾಹಿತ್ಯಿಕ ಅಧ್ಯಯನಕ್ಕಿಂತ ಸಾಹಿತ್ಯೇತರ ಅಧ್ಯಯನಕ್ಕೆ ಹೆಚ್ಚು ಅವಕಾಶ

ಮಾಡಿಕೊಡುವ ಕೃತಿಯಾಗಿದೆ. ಇದನ್ನು ಅರ್ಥಮಾಡಿಕೊಂಡಿರುವ ಡಾ. ಎಸ್. ಪಿ. ಪಾಟೀಲ ಅವರು ಈ ಮಗ್ಗುಲಿನ ಮೇಲೆ ಹೆಚ್ಚು ಒತ್ತುಕೊಟ್ಟು ಅನೇಕ ಹೊಸ ವಿಷಯಗಳನ್ನು ಅನಾವರಣಗೊಳಿಸಿದ್ದಾರೆ. ಇದಕ್ಕೆ ಇಲ್ಲಿಯ 'ಸಾಹಿತ್ಯಿಕ ಅಧ್ಯಯನ' ಮತ್ತು 'ಸಾಂಸ್ಕೃತಿಕ ಅಧ್ಯಯನ'ಗಳು ನಿದರ್ಶನವೆನಿಸಿವೆ.

ಸಂಸ್ಕೃತ 'ಮಹಾಪುರಾಣ' ಕನ್ನಡದ ಎಲ್ಲ ಜೈನ ಪುರಾಣಗಳಿಗೆ ಮಾತೃಸ್ವರೂಪದಲ್ಲಿದೆ. ಚಾವುಂಡರಾಯ ಪುರಾಣವಂತೂ ಅದರ ನೇರ ಸಂಗ್ರಹವಾಗಿರುವುದರಿಂದ, ಇಲ್ಲಿ ಸಹಜವಾಗಿಯೇ ಇವೆರಡೂ ಕೃತಿಗಳ ತೌಲನಿಕ ಅಧ್ಯಯನ ನಡೆದು ಸಮರ್ಪಕ ರೀತಿಯಲ್ಲಿ ಕೈಗೂಡಿದೆ. ಮತ್ತು ಅದು ಇಲ್ಲಿಯ ಮೌಲಿಕ ಭಾಗವೆನಿಸಿದೆ. ಸಿದ್ಧಾಂತ ಪ್ರತಿಪಾದನೆ ಪುರಾಣಕೃತಿಗಳ ಬಹುಮುಖ್ಯ ಲಕ್ಷಣ. ಈ ಹಿನ್ನೆಲೆಯಲ್ಲಿ ಹುಟ್ಟಿದ ಚಾವುಂಡರಾಯ ಪುರಾಣದಲ್ಲಿ ನಿಕ್ಷಿಪ್ತವಾಗಿರುವ ಸಿದ್ಧಾಂತಸಂಪತ್ತನ್ನು ಬಿಡಿಬಿಡಿಯಾಗಿ ಆಯ್ದುಕೊಂಡು, ಇಡಿಯಾಗಿ ಪರಿಶೀಲಿಸಿರುವುದು ಈ ಪ್ರಬಂಧದ ಇನ್ನೊಂದು ಸಾಧನೆಯಾಗಿದೆ.

ಸಂಶೋಧನೆಯೆನ್ನುವುದು ವಕೀಲರ ವಾದವಲ್ಲ, ನ್ಯಾಯಾಧೀಶರ ತೀರ್ಪು ಎಂಬ ಎಚ್ಚರದಿಂದ ಬರೆದ ಇದು, ಜೈನ ಅಭ್ಯಾಸಿಗಳಿಗೆ ಖಂಡಿತವಾಗಿಯೂ ಒಂದು ಉಪಯುಕ್ತ ಕೃತಿಯಾಗಿದೆ.

ಎಸ್.ಪಿ. ಪಾಟೀಲ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೨೪೦

ಡೆಪ್ಯುಟಿ ಚೆನ್ನಬಸಪ್ಪನವರ - ಜೀವನ ಮತ್ತು ಸಾಧನೆ

೧೯೯೩

ಡಾ. ಬಾಳಣ್ಣ ಸೀಗೀಹಳ್ಳಿ ಉತ್ತರ ಕರ್ನಾಟಕದ ಒಬ್ಬ ಸಶಕ್ತ ಯುವಲೇಖಕ. ರಂಗಭೂಮಿಯ ಬಗ್ಗೆ ತೀವ್ರ ಆಸಕ್ತಿ ಹೊಂದಿರುವ ಇವರು, ದೃಶ್ಯವತ್ತಾಗಿ ಮಾತನಾಡಬಲ್ಲರು, ದೃಶ್ಯವತ್ತಾಗಿ ಬರೆಯಬಲ್ಲರು. ಇದಕ್ಕೆ "ಡೆಪ್ಯೂಟಿ ಚೆನ್ನಬಸಪ್ಪನವರು - ಜೀವನ ಮತ್ತು ಸಾಧನೆ" ಹೆಸರಿನ ಈ ಮಹಾಪ್ರಬಂಧ ನಿದರ್ಶನವೆನಿಸಿದೆ.

ನೂರು ವರ್ಷಗಳ ಸಣ್ಣ ಅವಧಿಯಲ್ಲಿಯೇ ದೊಡ್ಡ ಚರಿತ್ರೆಯನ್ನು ಮರೆತು ಬಿಡುವ ಅವಜ್ಞೆ ನಮ್ಮದು. ಇಂತಹ ಅವಜ್ಞೆಯ ಸಾಗರದಲ್ಲಿ ಮುಳುಗಿ ಹೋಗುತ್ತಲಿದ್ದ ಕನ್ನಡದ ಶಕಪುರುಷ ಡೆಪ್ಯೂಟಿ ಚೆನ್ನಬಸಪ್ಪನವರ ಜೀವನ - ಸಾಧನೆಗಳನ್ನು ತೆಕ್ಕೆಯಲ್ಲಿ ಎತ್ತಿ ತಂದು ನಿಲ್ಲಿಸಿದ ಕೂರ್ಮಸಾಹಸ ಈ ಪ್ರಬಂಧದಲ್ಲಿದೆ.

ಚೆನ್ನಬಸಪ್ಪನವರು ನಮಗೆ ಎರಡು ದೃಷ್ಟಿಯಿಂದ ಮುಖ್ಯರೆನಿಸುತ್ತಾರೆ. ಆಧುನಿಕ ಕನ್ನಡ ಪುನರುಜ್ಜೀವನದ ಇತಿಹಾಸವನ್ನು, ಅದೇ ರೀತಿ ಆಧುನಿಕ ವೀರಶೈವ ಪುನರುಜ್ಜೀವನದ ಇತಿಹಾಸವನ್ನು

ಚೆನ್ನಬಸಪ್ಪನವರಿಂದಲೇ ಉತ್ತರ ಕರ್ನಾಟಕ ಬರೆಯಬೇಕಾಗುತ್ತದೆ. ಅಂದಿನಿಂದ ಇಂದಿನ ವರೆಗೂ ಕರ್ನಾಟಕ ಕಂಡ ಒಬ್ಬ 'ಪ್ರಾಮಾಣಿಕ' ಕನ್ನಡದ ಕಾವಲುಗಾರ ಎನಿಸಿರುವ ಇವರು, ಮರಾಠಿಭಾಷೆಯ ಆಕ್ರಮಣದಿಂದಾಗಿ ಮುಚ್ಚಿಹೋಗಿದ್ದ ಕನ್ನಡ ಭಾಷೆಯನ್ನು ಶಿಕ್ಷಣಮಾಧ್ಯಮದ ಮೂಲಕ ಅನಾವರಣಗೊಳಿಸಿದರು. ಕನ್ನಡದ ಅನಾವರಣವೆಂದರೆ, ವೀರಶೈವರ ಅವಕಾಶಗಳ ಅನಾವರಣವೆಂಬಂತೆ ಅಂದು ಕ್ರಮೇಣ ವೀರಶೈವಸಮಾಜವೂ ಶೈಕ್ಷಣಿಕವಾಗಿ - ಸಾಂಸ್ಕೃತಿಕವಾಗಿ ಅನಾವರಣಗೊಂಡಿತು. ಇಂತಹ ಒಬ್ಬ ಯುಗಪುರುಷನನ್ನು ಕುರಿತ ಈ ಬರವಣಿಗೆ ಪರ್ಯಾಯವಾಗಿ ಆ ಕಾಲಘಟ್ಟದ 'ಸಾಂಸ್ಕೃತಿಕ ಚರಿತ್ರೆ' ಎನಿಸುತ್ತದೆ. ಡಾ. ಬಾಳಣ್ಣ ಸೀಗೀಹಳ್ಳಿಯವರು ಅಂಥ ಚರಿತ್ರೆ ಕಟ್ಟುವ ಕಾರ್ಯವನ್ನು ಇಲ್ಲಿ ತುಂಬ ಸಮರ್ಪಕವಾಗಿ ನಿರ್ವಹಿಸಿದ್ದಾರೆ.

ಗ್ರಂಥಪ್ರಕಟಣೆ ಇಂದು ಸರಕಾರಿ ಸಂಸ್ಥೆಗಳೂ ಹೊರಲಾಗದ ಭಾರವಾಗಿ ಪರಿಣಮಿಸಿದೆ. ಇಂಥ ಸಂದರ್ಭದಲ್ಲಿ ಸಮಾಜೋಧಾರ್ಮಿಕ ಸಂಸ್ಥೆಗಳಾದ 'ವೀರಶೈವ ಮಠಗಳು' ವಹಿಸುತ್ತಿರುವ ಪಾತ್ರ ಧರ್ಮವಾಗಿ ಅಸ್ತಿತ್ವಗೊಳ್ಳುವ ಸಂದರ್ಭದಲ್ಲಿ ಚರಿತ್ರಾರ್ಹವಾದುದು. ಈ ಪ್ರಕಟಣ ಪರಂಪರೆಯ ಮುಖ್ಯಭಾಗವೆಂಬಂತೆ ಬೆಳಗಾವಿಯ ಶ್ರೀ ನಾಗನೂರುಮಠದ 'ವೀರಶೈವ ಅಧ್ಯಯನ ಅಕಾಡೆಮಿ' (೧೯೯೧) ವರ್ಷಕ್ಕೆ ಒಂದರಂತೆ ಪಿಎಚ್.ಡಿ. ಪ್ರಬಂಧ ಪ್ರಕಟಿಸುತ್ತಲಿದೆ. ಈ ಮಾಲಿಕೆಯಲ್ಲಿ 'ಕರ್ನಾಟಕದಲ್ಲಿ ಸತಿಪದ್ಧತಿ.' 'ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ' ಕೃತಿಗಳನ್ನು ಪ್ರಕಟಿಸಿದ ಈ ಸಂಸ್ಥೆಯ ಮೂಲಕ, ಈಗ ಅಷ್ಟೇ ಮಹತ್ವದ "ಡೆಪ್ಯೂಟಿ ಚೆನ್ನಬಸಪ್ಪನವರು - ಜೀವನ ಮತ್ತು ಸಾಧನೆ" ಹೊರಬರುತ್ತಲಿದೆ. ವಿದ್ವತ್ತಿನ ಈ ಮಹಾಕಾರ್ಯಕ್ಕಾಗಿ ಕರ್ನಾಟಕದ ವಿದ್ವತ್‌ಸಮಾಜ 'ವೀರಶೈವ ಅಧ್ಯಯನ ಅಕಾಡೆಮಿ'ಗೆ ಋಣಿಯಾಗಿದೆ.

ಬಾಳಣ್ಣ ಸೀಗಿಹಳ್ಳಿ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೨೪೧

ಕರ್ನಾಟಕ ಜನಪದ ಚಿತ್ರಕಲೆ

೧೯೯೩

ಜಾನಪದ ಅಧ್ಯಯನದಿಂದಾಗಿ ಕನ್ನಡದಲ್ಲಿ ದೇಶೀಸಂಸ್ಕೃತಿಯ ಅಜ್ಞಾತಲೋಕವೊಂದು ಹೊರಬರುತ್ತಲಿದ್ದು, ವಿಶ್ವವಿದ್ಯಾಲಯದಂಥ ಉನ್ನತ ಶಿಕ್ಷಣಸಂಸ್ಥೆಗಳ ಅನನ್ಯ ಆಸಕ್ತಿಯಿಂದಾಗಿ ಅದಕ್ಕೆ ಒಂದು ಶೈಕ್ಷಣಿಕಶಿಸ್ತು ಪ್ರಾಪ್ತವಾಗುತ್ತಲಿದೆ. ಈ ಶಿಸ್ತಿನ ಪ್ರೌಢವ್ಯಾಸಂಗವಾಗಿದೆ "ಪಿಎಚ್.ಡಿ. ಅಧ್ಯಯನ."

ಕರ್ನಾಟಕದಲ್ಲಿ ಜಾನಪದ ಅಧ್ಯಯನ "ಸಾಹಿತ್ಯಕ್ಷೇತ್ರ"ದಿಂದ ಆರಂಭಗೊಂಡು ಜಾನಾಂಗಿಕ ಕ್ಷೇತ್ರಗಳಲ್ಲಿ ಬಿಚ್ಚಿಕೊಳ್ಳುತ್ತಿರುವ ಇಂದಿನ ಕಾಲದಲ್ಲಿ ಚಿತ್ರಕಲೆಯಂಥ ಸೂಕ್ಷ್ಮ ಅಧ್ಯಯನದ ತೆಕ್ಕೆಗೆ ಬಿದ್ದದು

ಈ ಪ್ರಬಂಧದ ವಿಶೇಷತೆಯಾಗಿದೆ. ಇದರಿಂದ ನಮ್ಮ ಜಾನಪದ ಅಧ್ಯಯನದಲ್ಲಿ ಹೊಸ ಆಯಾಮವೊಂದು ಅನಾವರಣಗೊಂಡಿದೆಯೆಂದೇ ಹೇಳಬೇಕು.

ಜಾನಪದ ಅಧ್ಯಯನ ಗ್ರಂಥಾಲಯವನ್ನವಲಂಬಿಸಿ ಮಾಡುವುದಲ್ಲ, ಜಮಸಮೂಹವನ್ನವಲಂಬಿಸಿ, ಆ ಸಮೂಹದ 'ಸಂದರ್ಭ'ವನ್ನವಲಂಬಿಸಿ ಮಾಡುವಂತಹುದು. ಡಾ. ಪಾಟೀಲರು ಪ್ರಾದೇಶಿಕವಾಗಿ, ಸಾಮಾಜಿಕವಾಗಿ, ಸಾಂದರ್ಭಿಕವಾಗಿ ಬಿಚ್ಚಿಕೊಂಡು ಬೆಳೆದಿರುವ ಜನಪದ ಚಿತ್ರಕಲೆಯನ್ನು ಈ ದೃಷ್ಟಿಯಿಂದ ಸಮಗ್ರವಾಗಿ ಸಂಗ್ರಹಿಸಿದುದು, ವೈಜ್ಞಾನಿಕವಾಗಿ ವರ್ಗೀಕರಿಸಿಕೊಂಡುದು, ಪ್ರಾಮಾಣಿಕವಾಗಿ ಪ್ರತಿಪಾದಿಸಿದುದು ಅವರ ಈ ಪ್ರಬಂಧದಲ್ಲಿ ಎದ್ದು ತೋರುತ್ತದೆ. ಅನೇಕ ಕಡೆ ಕಲೆಯನ್ನು ವ್ಯಾಖ್ಯಾನಿಸುವ ಪ್ರಯತ್ನ ನಡೆದುದು ಇದರ ಇನ್ನೊಂದು ವೈಶಿಷ್ಟ್ಯವಾಗಿದೆ.

ದುಡಿಮೆ-ಬಿಡುವು-ಆಚರಣೆ ಸಂದರ್ಭಗಳಲ್ಲಿ ಹುಟ್ಟುವ ಕಲೆ, ವೃತ್ತಿಕಲೆಯಾಗಿಯೂ ಬೆಳೆಯುತ್ತದೆ. ಇವುಗಳಲ್ಲಿ ಚಿತ್ರಕಲೆಯು ಬಿಡುವು, ಆಚರಣೆ, ವೃತ್ತಿ ಸಂದರ್ಭಗಳಲ್ಲಿ ಹುಟ್ಟುತ್ತಿದ್ದು ಲಲಿತಕಲೆ-ಪ್ರಯೋಜಕಕಲೆಯಾಗಿಯೂ ಕವಲೊಡೆಯುವ ವಿಶೇಷತೆಯನ್ನು ಹೊಂದಿದೆ. ಡಾ. ಪಾಟೀಲ ಅವರು ಈ ಎಲ್ಲ ನೆಲೆಗಳಲ್ಲಿ ನಿಂತು, ಇದರ ಮೈ-ಮನಸ್ಸುಗಳನ್ನು ಅಭ್ಯಸಿಸಿದ್ದಾರೆ.

ಶಿಷ್ಟಪದ ಹೂವು, ಜನಪದ ಬೇರು. ಪ್ರಸ್ತುತ ಪ್ರಬಂಧ ಹೂವಿನ ಅಭ್ಯಾಸವಲ್ಲ, ಬೇರುಗಳ ಅಭ್ಯಾಸ, ಬೀಜಗಳ ಅಭ್ಯಾಸ. ಈ ಮೂಲಭೂತ ಅಭ್ಯಾಸಕ್ಕಾಗಿ ಡಾ. ಪಾಟೀಲ ಅವರಿಗೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ.

ಎಸ್.ಸಿ. ಪಾಟೀಲ, ಹೊಸಪೇಟೆ

ಆಕರ : ಮಾರ್ಗ ಸಂಪುಟ–೬

■■

೨೪೨

ವಿಭಾವ

೧೯೯೩

ಡಾ. ಎಂ. ಬಿ. ಕೊಟ್ರಶೆಟ್ಟಿ ಮತ್ತು ನಾನು ಓರಿಗೆಯ ಗೆಳೆಯರು. ಕೂಡಿ ಓದಿದವರು, ಕೂಡಿ ದುಡಿದವರು. ನಾವಿಬ್ಬರೂ ಸಹಮತದಿಂದ ಕನ್ನಡಕ್ಕಾಗಿ, ಕನ್ನಡ ವಿಭಾಗದ ಶ್ರೇಯಕ್ಕಾಗಿ ಶ್ರಮಿಸಬೇಕೆಂಬುದು ನನ್ನ ಪ್ರಾಮಾಣಿಕ ಇಂಗಿತವಾಗಿದ್ದಿತು. ಯಾವು - ಯಾವುದೋ ವ್ಯಕ್ತಿ ಶಕ್ತಿಗಳು, ಕೊನೆಗೆ ದೈವೀಶಕ್ತಿಯೂ ಅಡ್ಡಬಂದು, ಗೆಳೆಯನನ್ನು ನನ್ನಿಂದ ದೂರ ಮಾಡಿದವು. ಕಟ್ಟಿಕೊಂಡಿದ್ದ ಕನ್ನಡದ ಕನಸುಗಳು ನುಚ್ಚುನೂರಾದವು.

ಕನ್ನಡವನ್ನು ಕಟ್ಟುವ ಕೆಲಸಕ್ಕೆ ನಾನು ಡಾ. ಕೊಟ್ರಶೆಟ್ಟಿ ಅವರ ಜೊತೆಯನ್ನು ಅಪೇಕ್ಷಿಸಿದ್ದುದಕ್ಕೆ, ಅದು ತಪ್ಪಿಹೋದ ಬಗ್ಗೆ ಈಗಲೂ ಮರುಗುತ್ತಿರುವುದಕ್ಕೆ ಇರುವ ಒಂದೇ ಒಂದು ಕಾರಣ, ಅವರು ಸಮರ್ಥ ವಿದ್ವಾಂಸರಾಗಿದ್ದುದು, ಸಶಕ್ತ ಬರಹಗಾರರಾಗಿದ್ದುದು.

ವೀರಶೈವ ತತ್ವಜ್ಞಾನ, ಕಾವ್ಯಮೀಮಾಂಸೆ, ವಿಮರ್ಶೆ, ಸಂಸ್ಕೃತಿ, ಜಾನಪದ - ಇವು ಡಾ. ಕೊಟ್ರಶೆಟ್ಟಿ ಅವರ ಶೈಕ್ಷಣಿಕ ಶಿಸ್ತುಗಳಾಗಿದ್ದವು. ಕೆಲವೇ ವರ್ಷಗಳ ಬದುಕಿನಲ್ಲಿ ಅವರು ಈ ಕ್ಷೇತ್ರಗಳಿಗೆ ನೀಡಿದ ಕೊಡುಗೆ ಮೌಲಿಕವಾದುದು. 'ಸಿದ್ಧರಾಮ ಶಿವಯೋಗಿ'ಯನ್ನು ಕುರಿತ ಪಿಎಚ್.ಡಿ. ಕೃತಿಯಲ್ಲಿ, 'ಮಾನಸಿಕ ದೂರ'ವನ್ನು ಕುರಿತ ಲೇಖನದಲ್ಲಿ, 'ಜಾನಪದ ಅಧ್ಯಯನದ ವ್ಯಾಪ್ತಿ' ಹೆಸರಿನ ಪ್ರಬಂಧದಲ್ಲಿ ಅವರ ಶಕ್ತಿ-ಆಸಕ್ತಿಗಳನ್ನು ಗುರುತಿಸಬಹುದಾಗಿದೆ.

ಡಾ. ಕೊಟ್ರಶೆಟ್ಟಿ ಅವರ ಇನ್ನೊಂದು ವೈಶಿಷ್ಟ್ಯವೆಂದರೆ, ಅವರು ಅರ್ಪಣಭಾವದ ಪ್ರಾಧ್ಯಾಪಕರಾಗಿದ್ದುದು. ಇದಕ್ಕೆ ಅವಶ್ಯವಿರುವ ಪೂರ್ವಸಿದ್ಧತೆ ಅವರಲ್ಲಿ ವಿಪುಲವಾಗಿದ್ದಿತು. ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯ ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ ಅವರ ಪ್ರಾಧ್ಯಾಪಕ ವೃತ್ತಿ ಸ್ಮರಣೀಯ.

ಬಡತನ-ಕಷ್ಟಗಳು ವ್ಯಕ್ತಿಯನ್ನು ಅಧೀರನನ್ನಾಗಿಸುತ್ತವೆ. ಡಾ. ಕೊಟ್ರಶೆಟ್ಟಿ ಅವರು ಇದಕ್ಕೆ ಅಪವಾದವಾಗಿದ್ದರು. ಬೆಂಕಿಯಲ್ಲಿ ಬಿದ್ದ ಬಂಗಾರದಂತಹ ವ್ಯಕ್ತಿತ್ವವನ್ನು ಅವರು ರೂಪಿಸಿಕೊಂಡಿದ್ದರು.

ಡಾ. ಕೊಟ್ರಶೆಟ್ಟಿ ಅವರ ಅಗಲಿಕೆ ನನಗೆ, ಅವರ ಕುಟುಂಬ ವರ್ಗಕ್ಕೆ, ಮಿಗಿಲಾಗಿ ಕನ್ನಡಕ್ಕೆ ದೊಡ್ಡ ಹಾನಿ, ಅಪಾರ ನಷ್ಟ.

ಬಸವರಾಜ ಮಲಶೆಟ್ಟಿ, ಹೊಸಪೇಟೆ

ಆಕರ : ಮಾರ್ಗ ಸಂಪುಟ–೬

■■

೨೪೩

ಭಾಷೆ ಸಾಹಿತ್ಯ ಸಂಸ್ಕೃತಿ

೧೯೯೪

ಡಾ. ಶಾಲಿನಿ ರಘುನಾಥ ವಿಶ್ಲೇಷಣಾತ್ಮಕ ಪ್ರತಿಭೆ ಮತ್ತು ವ್ಯಾಖ್ಯಾನಾತ್ಮಕ ಪ್ರತಿಭೆಯ ಕನ್ನಡ ಲೇಖಕಿ. ಇದರಿಂದಾಗಿ ಇವರ ಬರವಣಿಗೆ ಸಂಶೋಧನೆಯಾಗಿ ಬಿಚ್ಚಿಕೊಳ್ಳುತ್ತ ವಿಮರ್ಶೆಯಾಗಿ ಬೆಳೆಯುತ್ತದೆ ಮತ್ತು ಸಂಯೋಜಕ ಪ್ರತಿಭೆಯಲ್ಲಿ ಕ್ರಮಬದ್ಧ ಆಕಾರ ಪಡೆಯುತ್ತದೆ.

'ಭಾಷೆ ಸಾಹಿತ್ಯ ಸಂಸ್ಕೃತಿ' ಹತ್ತು ಪ್ರಬಂಧಗಳ ಸಂಕಲನ. ಭಾಷೆ, ಸಂಸ್ಕೃತಿಯಲ್ಲಿ ಹುಟ್ಟುತ್ತದೆ, ಸಾಹಿತ್ಯದಲ್ಲಿ ಬೆಳೆಯುತ್ತದೆ. ಈ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಂಡವರು ಮಾತ್ರ, ಭಾಷೆ ಸಾಹಿತ್ಯ ಸಂಸ್ಕೃತಿಗಳ ಆಂತರ್ಯ ಮತ್ತು ಅಂತರ ಸಂಬಂಧೀಯತೆಗಳ ಭೂಮಿಕೆಯಲ್ಲಿ ಬರವಣಿಗೆ ಮಾಡುತ್ತಾರೆ. ಈ ಮಾತಿಗೆ ಶಾಲಿನಿಯವರ ಸಂಕಲನ ನಿದರ್ಶನವಾಗಿದೆ.

ಕನ್ನಡ ಭಾಷೆ ಮತ್ತು ವ್ಯಾಕರಣ ಕೃತಿಗಳು : ದಶವಾರ್ಷಿಕ ಸಮೀಕ್ಷೆ, ಹವ್ಯಕ ಭಾಷಾ ಅಧ್ಯಯನ: ಒಂದು ಸಮೀಕ್ಷೆ, ಹೆಸರೇ ಸೂಚಿಸುವಂತೆ ಸಮೀಕ್ಷಾರೂಪದ ಪ್ರಬಂಧಗಳಾಗಿದ್ದರೂ ಇವುಗಳಲ್ಲಿ ಒಂದು ಸಮಗ್ರತೆ ಇದೆ. ಅಭಿಧಾನರತ್ನಮಾಲಾ ಕರ್ಣಾಟಕ ಟೀಕೆ - ಒಂದು ಅಧ್ಯಯನವು ಸಂಪಾದಿತ ನಿಘಂಟುವಿನ ಗುಣನಿಷ್ಠ ವಿಮರ್ಶೆಯಾಗಿದೆ. ಮಿಕ್ಕ ಪ್ರಬಂಧಗಳಲ್ಲಿ 'ಕನ್ನಡ'ವನ್ನು ಕೇಂದ್ರವಾಗಿಟ್ಟುಕೊಂಡು ಭಾಷಾ ಪ್ರಾಚೀನತೆ, ಉಪಭಾಷೆ, ಸಮಾಜಭಾಷೆ, ಕವಿಭಾಷೆ, ಕೃತಿಭಾಷೆಗಳನ್ನು ಕುರಿತು ನಡೆಸಿದ ದಟ್ಟ ವ್ಯಾಸಂಗ ಎದ್ದು ಕಾಣುತ್ತದೆ. ಕನ್ನಡ : ಶಿಷ್ಟ ರೂಪ, ಉತ್ತರ ಕನ್ನಡ ಜಿಲ್ಲೆಯ ಕನ್ನಡ, ಕಣವಿ ಕಾವ್ಯಭಾಷೆ : ಒಂದು ಅಧ್ಯಯನ, ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ : ಸಾಮಾಜಿಕ ಹಾಗೂ ಭಾಷಿಕ ಅಧ್ಯಯನ ಈ ಗ್ರಂಥದ ಬೆಲೆಯುಳ್ಳ ಬರವಣಿಗೆಗಳಾಗಿದ್ದು, ವಿಷಯವನ್ನು ಬಿಡಿಸಿಕೊಳ್ಳುವ, ಶೋಧಮುಖಿ ವಿಮರ್ಶೆಯಲ್ಲಿ ಅದನ್ನು ದುಡಿಸಿಕೊಳ್ಳುತ್ತ ವಿಚಾರ ಮಾತೃಕೆಗಳನ್ನು ಅನಾವರಣಗೊಳಿಸಿಕೊಡುವ ಇಲ್ಲಿಯ ರೀತಿಗಳು ಅನನ್ಯವಾಗಿವೆ. ಭಾಷೆ ಮತ್ತು ಉಪಸಂಸ್ಕೃತಿ ಎನ್ನುವುದು ಹವ್ಯಕ ಶಬ್ದಗಳಲ್ಲಿ ನಿಕ್ಷಿಪ್ತವಾಗಿರುವ ಸಂಸ್ಕೃತಿ ಶೋಧವಾಗಿದ್ದು, ಡಾ. ಶಾಲಿನಿ ಶಬ್ದಗಳನ್ನು ಮಾತನಾಡಿಸಿರುವ ರೀತಿ ಕುತೂಹಲಕಾರಿಯಾಗಿದೆ. ಹವ್ಯಕ ಸಂಸ್ಕೃತಿ ಎನ್ನುವುದು ಒಂದು ಸಮಾಜದ ಮಾತು - ಕೃತಿ - ಮನಸ್ಸುಗಳ ಸಮಗ್ರ ಅಧ್ಯಯನವಾಗಿದೆ. ಬಹಳಷ್ಟು ಲೇಖನಗಳು ಸ್ವತಂತ್ರ ಗ್ರಂಥವ್ಯಾಪ್ತಿಗೆ ಅವಶ್ಯವಿರುವ ವಿಸ್ತಾರವಾದ ತಳವಿನ್ಯಾಸ, ಶಿಲ್ಪರಚನೆಗಳನ್ನು ಒಳಗೊಂಡಿರುವುದು ಇಲ್ಲಿಯ ವೈಶಿಷ್ಟ್ಯ.

ಭಾಷೆಯ ರಾಚನಿಕತೆಯನ್ನು, ಅದು ಕಲಾತ್ಮಕವಾಗುವ ರೀತಿಯನ್ನು ಮತ್ತು ಸಂಸ್ಕೃತಿಯಲ್ಲಿ ಘನೀಕೃತಗೊಳ್ಳುವ ಪರಿಯನ್ನು ಸರಿಯಾಗಿ ತಿಳಿದುಕೊಂಡ ಅಭ್ಯಾಸಿಯೊಬ್ಬರು ಈ ಪ್ರಬಂಧಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಈ ನೆಲೆಗಳ ಗ್ರಹಿಕೆ ವಿನ್ಯಾಸಗಳಲ್ಲಿ ವೈಜ್ಞಾನಿಕತೆ, ಅಭಿವ್ಯಕ್ತಿಯಲ್ಲಿ ಸ್ಪಷ್ಟತೆ, ಸಮಗ್ರತೆ ಇದೆ. ನೀರಿನಂತೆ ನಿರಾಡಂಬರವೂ ಮುಖ್ಯವೂ ಆರೋಗ್ಯಪೂರ್ಣವೂ ಆಗಿರುವ ಈ ಬರವಣಿಗೆಗಾಗಿ ಡಾ. ಶಾಲಿನಿಯವರನ್ನು ಅಭಿನಂದಿಸುತ್ತೇನೆ.

ಶಾಲಿನಿ ರಘುನಾಥ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೨೪೪

ವಚನ ಅಧ್ಯಯನ

೧೯೯೪

ವೀರಶೈವ ವ್ಯಾಸಂಗದ ಯುವ ವಿದ್ವಾಂಸರಲ್ಲಿ ಡಾ. ವೀರಣ್ಣ ರಾಜೂರ ಒಂದು ಮುಖ್ಯ ಹೆಸರು. ಈ ಅಧ್ಯಯನಕ್ಕೆ ಅವಶ್ಯವಿರುವ ಪ್ರಾಚೀನ ಆಕರಗಳ ತಿಳಿವಳಿಕೆಯ ವಿಷಯದಲ್ಲಿ ಇವರ ಸಾಧನೆ ಗಣ್ಯವಾದುದು. ವೀರಶೈವ ಪ್ರಕಟಿತ ಅಪ್ರಕಟಿತ ಆಕರಗಳ ಪರಿಚಯ, ಅಲ್ಲಿರುವ ಸಮಸ್ಯೆಗಳ ಪರಿಚಯ ಇವರಿಗಿದೆ. 'ಶರಣರ ನಾಲ್ಕು ಅಂಕಿತಗಳ ತೊಡಕು' ಎಂಬ ಇಲ್ಲಿಯ ಲೇಖನ ಈ ಮಾತಿಗೆ ನಿಚ್ಚಳ ನಿದರ್ಶನವೆನಿಸಿದೆ.

ವೀರಶೈವ ಅಧ್ಯಯನಕ್ಕೆ ಸಾಹಿತ್ಯಿಕ, ಸಂಶೋಧನಾತ್ಮಕ, ತಾತ್ವಿಕ, ಸಾಮಾಜಿಕ ಇತ್ಯಾದಿ ಮುಖಗಳಿವೆ. ಈ ಪುಸ್ತಕ ಇದಕ್ಕೆ ಉದಾಹರಣೆಯಾಗಬಲ್ಲ ಲೇಖನಗಳನ್ನೊಳಗೊಂಡಿದೆ. 'ವಚನಸಾಹಿತ್ಯದಲ್ಲಿ ಪ್ರಯೋಗಶೀಲತೆ: ಭಾಷೆ ತಂತ್ರ', 'ಮಹಾದೇವಿಯಕ್ಕನ ವಚನಗಳಲ್ಲಿ ಉಪಮೆ' ಎಂಬಿವು ಸಾಹಿತ್ಯಿಕ ಲೇಖನ; 'ಬಸವಪೂರ್ವ ವಚನಕಾರರು', 'ಶರಣರ ನಾಲ್ಕು ಅಂಕಿತಗಳ ತೊಡಕು' ಎಂಬಿವು ಸಂಶೋಧನಾತ್ಮಕ ಲೇಖನಗಳಾದರೆ, 'ಶರಣರ ಉದಯದ ಪೂರ್ವಕಾಲ' ಪ್ರಧಾನವಾಗಿ ಸಾಮಾಜಿಕ ಲೇಖನವಾಗಿದೆ. ಮಿಕ್ಕ 'ಯೋಗ-ಶಿವಯೋಗ: ತೌಲನಿಕ ವಿವೇಚನೆ', 'ಶರಣರ ದೃಷ್ಟಿಯಲ್ಲಿ ಭಕ್ತಿ', 'ಶರಣರ ದೃಷ್ಟಿಯಲ್ಲಿ ಶೀಲ'- ಈ ಲೇಖನಗಳು ತಾತ್ವಿಕ ನಿಲವಿನಲ್ಲಿ ಬೆಳೆದಿವೆ. ಹೀಗೆ ಈ ಪ್ರಬಂಧಗಳು ವೀರಶೈವ ಅಭ್ಯಾಸಿಗೆ ವೈವಿಧ್ಯಪೂರ್ಣ ರೀತಿಯಲ್ಲಿ ನೆರವಾಗುತ್ತವೆ.

ಡಾ. ರಾಜೂರ ಅವರ ಬರವಣಿಗೆಯಲ್ಲಿ ಸಂಯಮ, ಔದಾರ್ಯಗಳ ವಿಶಿಷ್ಟ ಪಾಲು ಕಂಡುಬರುತ್ತದೆ. ಸಂಶೋಧನೆಯಲ್ಲಿ ಸಂಯಮವಿದೆ. ವಿಮರ್ಶೆಯಲ್ಲಿ ಔದಾರ್ಯವಿದೆ. ಹೀಗಾಗಿ ಇವರ ಸಂಶೋಧನಾತ್ಮಕ ಲೇಖನಗಳಿಂದ ರಚನಾತ್ಮಕ ಲಾಭವಿದೆ, ವಿಮರ್ಶನಾತ್ಮಕ ಲೇಖನಗಳಿಂದ ವಿಘಟನಾತ್ಮಕ ಹಾನಿಯಿಲ್ಲವೆಂದು ಹೇಳಬಹುದಾಗಿದೆ. ವಿಷಯಗ್ರಹಿಕೆಯಲ್ಲಿ ಸಮಗ್ರತೆ, ನಿರ್ದಿಷ್ಟತೆ; ಅಭಿವ್ಯಕ್ತಿಯಲ್ಲಿ ಸಂವಹನಶೀಲತೆ ಡಾ. ರಾಜೂರ ಅವರ ಬರವಣಿಗೆಯ ವೈಶಿಷ್ಟ್ಯವೆನಿಸಿದೆ.

ವೀರಣ್ಣ. ರಾಜೂರ

ಆಕರ : ಮಾರ್ಗ ಸಂಪುಟ–೬

■■

ದಾಸ ಸಾಹಿತ್ಯ : ಒಂದು ಸೈದ್ಧಾಂತಿಕ ಅಧ್ಯಯನ

ಗರ್ತಿಕೆರೆ

ಹರಿದಾಸಸಾಹಿತ್ಯ ಕನ್ನಡ ಸಂಸ್ಕೃತಿ - ಪರಂಪರೆಯ ಒಂದು ಮಹತ್ವಪೂರ್ಣ ಭಾಗ. ಗೇಯಗುಣ, ಸಾಹಿತ್ಯಿಕ ಅಂಶ, ಲೋಕನೀತಿ, ಭಕ್ತಿ ಇವೇ ಮೊದಲಾದವುಗಳ ಮೇಲೆ ಹೆಚ್ಚು ಒತ್ತು ಬಿದ್ದು, ಇದರಲ್ಲಿ ಹುದುಗಿರುವ ಮಾಧ್ವಸಿದ್ಧಾಂತದ ಅಧ್ಯಯನ ಈವರೆಗೆ ಉಪೇಕ್ಷೆಗೆ ಗುರಿಯಾಗಿದ್ದಿತು. ಈ ಉಪೇಕ್ಷಿತ ನೆಲೆಯನ್ನು ಶೋಧಿಸಿದುದರ ಫಲವಾಗಿದೆ "ದಾಸಸಾಹಿತ್ಯ: ಒಂದು ಸೈದ್ಧಾಂತಿಕ ಅಧ್ಯಯನ" ಹೆಸರಿನ ಈ ಪಿಎಚ್.ಡಿ. ಮಹಾಪ್ರಬಂಧ.

ಪ್ರಾಚೀನ ಕನ್ನಡ ಸಾಹಿತ್ಯ ಧರ್ಮ - ಕಾವ್ಯಧರ್ಮಗಳ ಅದ್ವೈತ ಸೃಷ್ಟಿಯಾಗಿದೆ. ಹೀಗಾಗಿ ಧಾರ್ಮಿಕ ಸಿದ್ಧಾಂತದ ಅಧ್ಯಯನದ ಬಗೆಗೆ ಅವಜ್ಞೆ ಬೆಳೆಸಿಕೊಂಡಿರುವ ಅಭ್ಯಾಸಿ, ಆ ಸಾಹಿತ್ಯದೊಳಗೆ ಇಡಿಯಾಗಿ ಪ್ರವೇಶಿಸುವುದು ಕಷ್ಟವೆನಿಸುತ್ತದೆ. ಈ ಕಾರಣದಿಂದಾಗಿ ಧಾರ್ಮಿಕ ಆವರಣದಲ್ಲಿ ಹೆಪ್ಪುಗಟ್ಟಿರುವ ದಾಸಸಾಹಿತ್ಯವು ಸಿದ್ಧಾಂತದ ಅಧ್ಯಯನದಂಥ ಪೂರ್ವಸಿದ್ಧತೆಯನ್ನು ತಪ್ಪದೇ ಬಯಸುತ್ತದೆ. ಡಾ. ಆರ್. ಜಿ. ಗುಡಿ ಅವರಲ್ಲಿ ಈ ಬಗೆಯ ಪೂರ್ವಸಿದ್ಧತೆ ವಿಪುಲ ಪ್ರಮಾಣದಲ್ಲಿದೆ. ಗುರುಕುಲಶಿಕ್ಷಣ ಪದ್ಧತಿಯಲ್ಲಿ ಮಾಧ್ವಸಿದ್ಧಾಂತವನ್ನು ಓದಿ, ಆಧುನಿಕ ಶಿಕ್ಷಣಪದ್ಧತಿಯಲ್ಲೂ ಪದವಿ ಗಳಿಸಿದ ವೈಶಿಷ್ಟ್ಯ ಇವರದಾಗಿದೆ. ಈ ಉಭಯ ಸಂಸ್ಕಾರಗಳನ್ನೊಳಗೊಂಡ ಇವರು ಹರಿದಾಸರ ಬರವಣಿಗೆಯ ಒಳಜಗತ್ತನ್ನು ಸಾಹಿತ್ಯಪಾತಳಿ, ಅದಕ್ಕಿಂತ ಸಿದ್ಧಾಂತಪಾತಳಿಯಲ್ಲಿಟ್ಟು ನೋಡುವ ಶಕ್ತಿಪಡೆದಿದ್ದಾರೆ. ಹೀಗಾಗಿ "ದಾಸಸಾಹಿತ್ಯ: ಒಂದು ಸೈದ್ಧಾಂತಿಕ ಅಧ್ಯಯನ"ಕ್ಕೆ ಇವರು ಸರಿಯಾದ ನ್ಯಾಯ ಒದಗಿಸಿದ್ದಾರೆ.

ಈ ಮಹಾಪ್ರಬಂಧದಲ್ಲಿ ಒಂದು ಪಾಲು ಹಿನ್ನೆಲೆಯಿದೆ. ಮೂರು ಪಾಲು ವಿಷಯನೆಲೆಯಿದೆ. ಹಿನ್ನೆಲೆಯ ಭಾಗ ದಾಸಸಾಹಿತ್ಯದ ಇತಿಹಾಸ ಮತ್ತು ಸಾಹಿತ್ಯ ರೂಪಗಳ ಪ್ರತಿಪಾದನೆಯನ್ನೊಳಗೊಂಡಿದೆ. ಇಲ್ಲಿ ಬಹುಮುಖ್ಯವಾದುದು ನವಪ್ರಮೇಯಗಳ ನಿರೂಪಣೆ. ಪುಟ್ಟ ಧಾರ್ಮಿಕ ಕೈಪಿಡಿಯಂತಿರುವ ಇದು, ಮಾಧ್ವಮತದ ಅಭ್ಯಾಸಿಗಳಿಗೆ ಸೂಕ್ತ ಪ್ರವೇಶಿಕೆಯಂತಿದೆ. ಪ್ರಬಂಧದ ಮುಖ್ಯವಿಷಯಕ್ಕೆ ಒಂದು ಭಿತ್ತಿಯನ್ನೊದಗಿಸಿರುವ ಈ ಭಾಗ ಡಾ. ಗುಡಿ ಅವರ ಅವರ ತತ್ವ-ಸಿದ್ಧಾಂತಗಳ ತಲಸ್ಪರ್ಶಿಜ್ಞಾನಕ್ಕೆ ನಿದರ್ಶನವೆನಿಸಿದೆ.

ಈ ಪ್ರಬಂಧದ ಹೃದಯ ಐದು, ಆರು, ಏಳು ಮತ್ತು ಎಂಟನೆಯ ಅಧ್ಯಾಯಗಳು. ನವಪ್ರಮೇಯಗಳ ಅನ್ವಯಿಕ ಅಧ್ಯಯನವೆಂಬಂತೆ, ಕೀರ್ತನೆ- ಸುಳಾದಿ- ಉಗಾಭೋಗ ಮತ್ತು ಇತರ ಪ್ರಕಾರಗಳಲ್ಲಿ ಅಡಗಿಕವಾಗಿರುವ ಮಾಧ್ವತತ್ವಗಳ ಶೋಧ, ಸಂಗ್ರಹ, ವರ್ಗೀಕರಣ, ವಿವೇಚನೆ ಇತ್ಯಾದಿಗಳಿಗೆ ಇಲ್ಲಿ ಅವಕಾಶ ಪ್ರಾಪ್ತವಾಗಿದೆ. ದಾಸಸಾಹಿತ್ಯವನ್ನು ಕುರಿತು ಕನ್ನಡದಲ್ಲಿ ಪ್ರಥಮಸಲ ನಡೆದ ಈ ಅಧ್ಯಯನ, ನಮ್ಮ ಸಾಹಿತ್ಯ ಪ್ರಪಂಚಕ್ಕೆ ಹೊಸ ಕೊಡುಗೆಯೂ ಆಗಿದೆ. ಜೀವ-ಜಗತ್ತು, ಈಶ್ವರ, ಮೋಕ್ಷ - ಮೋಕ್ಷಸಾಧನ ಎಂದು ಮೂರು

ಅಧ್ಯಾಯಗಳಲ್ಲಿ ಮುನ್ನಡೆದ ಇದು, ಅನೇಕ ಅರ್ಥಗಳಲ್ಲಿ ತೂಕದ ಬರೆವಣಿಗೆಯಾಗಿದೆ: ಪ್ರಬಂಧದ ಹೆಸರಿಗೆ ಹೆಸರು ತರುವ ಬರೆವಣಿಗೆಯಾಗಿದೆ. ಇಲ್ಲಿ ದಾಸರ ಹಾಡುಗಳು ಮತ್ತು ಮಾಧ್ವತತ್ವಗಳು ಒಂದನ್ನೊಂದು ಪೋಷಿಸುತ್ತ ಪ್ರಕಟವಾಗುವ ರೀತಿ ಅನನ್ಯವಾಗಿದೆ. ಈ ಅಧ್ಯಾಯಗಳನ್ನು ಓದುವಾಗ ಏಕಕಾಲಕ್ಕೆ ಸಾಹಿತ್ಯ-ಸಿದ್ಧಾಂತಗಳೆರಡನ್ನೂ ಅಭ್ಯಸಿಸಿದ ಅನುಭವವುಂಟಾಗುತ್ತದೆ.

ಪಿಎಚ್.ಡಿ. ಅಧ್ಯಯನಕ್ಕೆ ಸಂಬಂಧಪಟ್ಟಂತೆ ಶ್ರಮ-ಶ್ರದ್ಧೆಗಳು ಕಡಿಮೆಯಾಗುತ್ತಲಿರುವ ಇಂದಿನ ದಿನಗಳಲ್ಲಿ ಕೆಲವೊಮ್ಮೆ ಉತ್ತಮ ಪ್ರಬಂಧಗಳು ಕಣ್ಣಿಗೆ ಬೀಳುತ್ತಿರುವುದು ಸಂತೋಷದ ವಿಷಯ. ಅಂಥ ಸಂತೋಷವನ್ನುಂಟುಮಾಡುವ ಕೃತಿಯಾಗಿದೆ, "ದಾಸಸಾಹಿತ್ಯ: ಒಂದು ಸೈದ್ಧಾಂತಿಕ ಅಧ್ಯಯನ."

ಆರ್.ಜಿ. ಗುಡಿ, ಅಥಣಿ

ಆಕರ : ಮಾರ್ಗ ಸಂಪುಟ–೬

■■

೨೪೬

ಉತ್ತರ ಕರ್ನಾಟಕದ ವೃತ್ತಿರಂಗಭೂಮಿ

೧೯೯೪

ದುಡಿಮೆ, ಬಿಡುವು - ಈ ಎರಡು 'ಸಂದರ್ಭ'ಗಳಲ್ಲಿ ಕಲೆ ಪ್ರಕಟಗೊಳ್ಳುತ್ತದೆ. ಆಚರಣೆಯ ಭಾಗವಾಗಿಯೂ ಕಾಣಿಸಿಕೊಳ್ಳುವ ಇದು, ಉಪಜೀವನದ ಮಾಧ್ಯಮವಾಗಿಯೂ ಬೆಳೆದು ಬಂದಿದೆ. ಇವುಗಳಲ್ಲಿ ಬಿಡುವು, ಆಚರಣೆಗಳ ಸಂದರ್ಭದ್ದು 'ಹವ್ಯಾಸಿ ರಂಗಕಲೆ'ಯಾದರೆ, ಉಪಜೀವನ ಸಂದರ್ಭದ್ದು ವೃತ್ತಿರಂಗಕಲೆಯಾಗಿದೆ. ಈ ವೃತ್ತಿರಂಗಕಲೆಯನ್ನು ನಿರ್ದಿಷ್ಟ ಜಾತಿಸಮುದಾಯಗಳು ಮುನ್ನಡೆಸಿಕೊಂಡು ಬರುವಲ್ಲಿ 'ಜಾತಿನಿಷ್ಠ ವೃತ್ತಿರಂಗಕಲೆ' ಪ್ರಾಚೀನಕಾಲದಲ್ಲಿ ಬೆಳೆದು ಬರುತ್ತಲಿದ್ದಿತು, ಆಧುನಿಕ ಕಾಲದಲ್ಲಿ ಆ ಕಟ್ಟು ಬಿಚ್ಚಿಹೋಗಿ, ಬೇರೆ ಬೇರೆ ನೆಲೆಗಳ ಕಲಾಸಕ್ತರು ಸೇರಿ ದುಡಿಯುವಲ್ಲಿ ಹೊಸ ಬಗೆಯ "ವೃತ್ತಿರಂಗ ಕಲೆ" ಅಸ್ತಿತ್ವಕ್ಕೆ ಬಂದಿತು. "ಕಲಾವಿದರು ಬದುಕುವುದಕ್ಕಾಗಿ ಕಲೆ ದುಡಿಯಿತು, ಕಲೆಯನ್ನು ಬದುಕಿಸುವುದಕ್ಕಾಗಿ ಕಲಾವಿದರು ದುಡಿದರು" ಎಂಬ ದಾರಿಯಲ್ಲಿ ಬೆಳೆದುಬಂದ ಈ ವೃತ್ತಿರಂಗಕಲೆಗೆ ಕರ್ನಾಟಕದಲ್ಲಿ ಸುಮಾರು ೧೦೦ ವರ್ಷಗಳ ಇತಿಹಾಸವಿದೆ. ಉತ್ತರ ಕರ್ನಾಟಕಕ್ಕೆ ಸಂಬಂಧ ಪಟ್ಟಂತೆ ಈ ಇತಿಹಾಸವನ್ನು ಕಲೆಯ ನೆಲೆಯಲ್ಲಿ ಮತ್ತು ವೃತ್ತಿ ನೆಲೆಯಲ್ಲಿ ಅಧ್ಯಯನ ಮಾಡಿದ ಮಹತ್ವಪೂರ್ಣ ಪಿಎಚ್.ಡಿ. ಪ್ರಬಂಧವಾಗಿದೆ, "ಉತ್ತರ ಕರ್ನಾಟಕದ ವೃತ್ತಿರಂಗಭೂಮಿ."

ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯನ್ನು ಬೆಳೆಸುತ್ತ, ನಿಯಂತ್ರಿಸುತ್ತ ಬಂದ ಚಾರಿತ್ರಿಕ ಒಳನೋಟಗಳನ್ನು ನಮ್ಮ ಕಣ್ಣು ಮುಂದೆ ದೃಶ್ಯವತ್ತಾಗಿ ಹಿಡಿಯುವ ಈ ಪ್ರಬಂಧ ರಂಗಕಲಾಕ್ಷೇತ್ರಕ್ಕೆ ಒಂದು

ಉತ್ತಮ ಕೊಡುಗೆಯಾಗಿದೆ. ಶ್ರದ್ಧೆ, ಶ್ರಮ, ಶೈಕ್ಷಣಿಕ ಆಸಕ್ತಿಗಳಿಂದ ಈ ಪ್ರಬಂಧವನ್ನು ರೂಪಿಸಿದ ಡಾ. ರಾಮಕೃಷ್ಣ, ಎಂ. ಮರಾಠೆ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ.

ರಾಮಕೃಷ್ಣ ಮರಾಠೆ, ಬೆಳಗಾವಿ

ಆಕರ : ಮಾರ್ಗ ಸಂಪುಟ–೬

■■

೨೪೭

ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ

ಗ್ರಂಥ

ಡಾ. ಮಲ್ಲಿಕಾ ಘಂಟಿ ಇಂದಿನ ಮಹಿಳಾ ಲೇಖಕರಲ್ಲಿ ಎದ್ದು ಕೇಳಿಸುವ ಹೆಸರು. ಕವನ-ವಿಮರ್ಶೆ ಮೊದಲಾದ ಕ್ಷೇತ್ರಗಳಲ್ಲಿ ಬಂಡಾಯ ಮನೋಧರ್ಮದಿಂದ ದುಡಿಯುತ್ತಿರುವ ಇವರ ಪಿಎಚ್.ಡಿ. ಪ್ರಬಂಧವಾಗಿದೆ, "ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ."

ಹೆಸರೇ ಸೂಚಿಸುವಂತೆ, ಕೊಡಗಿನ ಗೌರಮ್ಮನಿಂದ ಹಿಡಿದು ಒಟ್ಟು ಅರವತ್ತೈದು ವರ್ಷ ವ್ಯಾಪ್ತಿಯ ಮಹಿಳಾ ಕಥಾಜಗತ್ತಿನ ಅಧ್ಯಯನ ಈ ಕೃತಿಯ ವಸ್ತುವಾಗಿದೆ. ಪ್ರಾತಿನಿಧಿಕವೆನಿಸುವ ಐವತ್ತು ಜನ ಕತೆಗಾರ್ತಿಯರ ಒಂದು ನೂರಾ ಇಪ್ಪತ್ನಾಲ್ಕು ಸಂಕಲನಗಳಲ್ಲಿ ವಿಕಾಸಗೊಂಡ ಸ್ತ್ರೀಕಥಾಶಕ್ತಿಯ ಆಕೃತಿ, ಆಶಯಗಳ ವಿಶೇಷ ಚಿತ್ರಣ ಇಲ್ಲಿದೆ.

ಹಲವು ಪ್ರವೃತ್ತಿ, ಪ್ರಯೋಗಗಳನ್ನು ಜೀರ್ಣಿಸಿಕೊಂಡು ಬೆಳೆದ, ಇಷ್ಟು ಕಾಲವಿಸ್ತಾರವಾದ ಸಾಹಿತ್ಯವನ್ನು ಅಧ್ಯಯನದ ಶಿಸ್ತಿಗೆ ಒಳಪಡಿಸುವುದೇ ಒಂದು ಮುಖ್ಯ ಸವಾಲು. ಡಾ. ಮಲ್ಲಿಕಾ ಅವರು ಈ ಪ್ರಶ್ನೆಯನ್ನು ವಿಶಿಷ್ಟ ರೀತಿಯಲ್ಲಿ ಬಿಡಿಸಿಕೊಂಡು, ತಮ್ಮ ಬರವಣಿಗೆಗೆ ಒಂದು ನಿಶ್ಚಿತ ಗತಿಯನ್ನು ಒದಗಿಸಿದ್ದಾರೆ. "ಕಥಾಸಾಹಿತ್ಯದ ಹಿನ್ನೆಲೆ"ಯೊಂದಿಗೆ ನವೋದಯಪೂರ್ವ-ನವೋದಯ, ಪ್ರಗತಿಶೀಲ-ನವ್ಯ, ದಲಿತ-ಬಂಡಾಯವೆಂದು ವಿಷಯವನ್ನು ಬಿಚ್ಚಿಕೊಂಡು ಈ ಘಟ್ಟಗಳನ್ನು ರೂಪಿಸಿದ ಒತ್ತಡಗಳನ್ನು ಚರ್ಚಿಸುತ್ತ, ಪ್ರತಿಯೊಬ್ಬ ಕತೆಗಾರ್ತಿಯ ಪ್ರಾತಿನಿಧಿಕ ಕಥೆಗಳ ಮೌಲ್ಯವಿವೇಚನೆ ನಡೆಸಿದ 'ಚಾರಿತ್ರಿಕ ವಿಧಾನ' ಇಲ್ಲಿದೆ. ದಾರಿ ಸರಳವೆನಿಸಿದರೂ ವಿಷಯ ಸಮಗ್ರವಾಗಿರುವದು, ವಿಮರ್ಶೆ ಮೌಲಿಕವಾಗಿರುವದು ಇಲ್ಲಿಯ ಗುಣಾತ್ಮಕ ಅಂಶವೆನಿಸಿದೆ. ಈ ವಿಧಾನದಿಂದಾಗಿ "ಆಧುನಿಕ ಮಹಿಳಾ ಕಥಾಸಾಹಿತ್ಯ ಚರಿತ್ರೆಯ ಸ್ವರೂಪ ಈ ಕೃತಿಗೆ ಪ್ರಾಪ್ತವಾಗಿರುವುದು ಒಂದು ವಿಶೇಷವೆಂದೇ ಹೇಳಬೇಕು."

ಇಲ್ಲಿಂದ ಮುಂದೆ ಈ ಗ್ರಂಥ ಸೈದ್ಧಾಂತಿಕ ವಿಧಾನಕ್ಕೆ ಹೊರಳಿ; ಕಥೆಯ ವಸ್ತು-ಶಿಲ್ಪ ಇತ್ಯಾದಿಗಳ ಸಂಕೀರ್ಣ ವಿವೇಚನೆಯ ದಾರಿ ಹಿಡಿದಿದೆ. ಮತ್ತು ಒಂದು ಸ್ವತಂತ್ರ ಪುಸ್ತಕದ ಆಕಾರ ಪಡೆದಿರುವ ಇದು, ಈ ಪ್ರಬಂಧದ ಬೆಲೆಯುಳ್ಳ ಭಾಗವಾಗಿದೆ.

ಪರಿಭಾಷೆಯ ಅತಿರೇಕತೆ, ಶೈಲಿಯ ಕೃತಕತೆ, ಅನವಶ್ಯ ಕ್ಲೀಷೆಗಳು ತಲೆ ಹಾಕದಂತೆ ಎಚ್ಚರ ವಹಿಸಿರುವ ಈ ಬರವಣಿಗೆಯಲ್ಲಿ ಅಧ್ಯಯನದ ಸಮಗ್ರತೆಯ ಶ್ರಮವಿದೆ, ಅನೇಕ ಒಳನೋಟಗಳಿವೆ. ಮತ್ತು ಭಿಡೆ ಮುರವತ್ತುಗಳನ್ನು ಮೀರಿದ ದಿಟ್ಟ ಧೋರಣೆಯಿದೆ.

ಮಲ್ಲಿಕಾ ಘಂಟಿ, ಸಂಡೂರ

ಆಕರ : ಮಾರ್ಗ ಸಂಪುಟ–೬

■■

೨೪೮

ಕೊಡೇಕಲ್ಲ ಬಸವಣ್ಣ : ಒಂದು ಅಧ್ಯಯನ

೧೯೯೫

ಕನ್ನಡಿಗರ ಅವಜ್ಞೆಯ ಸಾಗರದಲ್ಲಿ ಮುತ್ತು-ರತ್ನ ತುಂಬಿದ್ದ ದೇಶೀ ಇತಿಹಾಸನೌಕೆಗಳು ಅನೇಕ ಸಂಖ್ಯೆಯಲ್ಲಿ ಮುಳುಗಿಹೋಗಿವೆ. ಶಿಷ್ಟಶೋಧಕ್ಕೆ ಸೀಮಿತವಾಗಿದ್ದ ನಾವು ಇತ್ತೀಚೆ ಅರೆಶಿಷ್ಟ, ಜಾನಪದ ಶೋಧಗಳತ್ತ ಧಾವಿಸಿದುದರ ಫಲವಾಗಿ, ಮುಳುಗಿ ಹೋಗಿದ್ದ ಇಂಥ ನೌಕೆಗಳು ಒಂದೊಂದಾಗಿ ತೇಲಿಬರುತ್ತಲಿವೆ. ಇವುಗಳ ಸಾಲಿನಲ್ಲಿ ನಿಲ್ಲುವ ಗಣ್ಯ ಸ್ವದೇಶೀ ಶೋಧವೆನಿಸಿದೆ, "ಕೊಡೇಕಲ್ಲ ಬಸವಣ್ಣ: ಒಂದು ಅಧ್ಯಯನ."

ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಒಂದು ಹಳ್ಳಿ, ಕೊಡೇಕಲ್ಲು. ಕಲ್ಯಾಣದ ಬಸವಣ್ಣನ ಭಕ್ತನಾಗಿದ್ದರೂ ಅವನಿಂದ ಭಿನ್ನವ್ಯಕ್ತಿಯಾಗಿದ್ದಾನೆ, ಕೊಡೇಕಲ್ಲು ಬಸವಣ್ಣ. ವಿಜಾಪುರದಲ್ಲಿ ಆದಿಲ್‌ಶಾಹಿಗಳು ಆಳುತ್ತಿದ್ದ ೧೫ನೆಯ ಶತಮಾನ ಇವನ ಜೀವಿತದ ಕಾಲಾವಧಿ. ವೀರಶೈವವಾಗಿದ್ದರೂ ವೀರಶೈವವಲ್ಲದ ನಿಗೂಢ ಸಂಪ್ರದಾಯವೊಂದು ಈ ಬಸವಣ್ಣನ ಸುತ್ತ ದ್ವೀಪದಂತೆ ಬೆಳೆದು ನಿಂತಿದೆ. ಈತನ ಒಂದು ಪಾದದಲ್ಲಿ ಹಿಂದುಗಳ ಪಾದರಕ್ಷೆ, ಇನ್ನೊಂದು ಪಾದದಲ್ಲಿ ಮುಸಲ್ಮಾನರ ಕಂಸಿ (ಮುಖ ಮೇಲುಮಾಡಿದ ಚೂಪಾದ ಬೂಟು). ಇವನ ನೇರ-ದತ್ತಕ ವಂಶಸ್ಥರಾಗಿರುವ ಪೀಠಾಧಿಪತಿಗಳು, ಅನುಯಾಯಿಗಳು ವೀರಶೈವರಾದರೂ ಇಷ್ಟಲಿಂಗ ಧರಿಸುವುದಿಲ್ಲ. ಸತ್ತರೆ ಮುಸಲ್ಮಾನರ ಹಾಗೆ ದಫನ್ ಮಾಡುತ್ತಾರೆ. ಇವರು ದೇವರಿಗೆ ಸಿದ್ಧಪಡಿಸುವ ಗಂಧಕ್ಕೆ ಹರಿಜನರು ನೀರು ಹನಿಸುತ್ತಾರೆ. ಪೂಜೆಯಲ್ಲಿ ಹಿಂದುಗಳು ಜಯಘೋಷ ಹೇಳುತ್ತಾರೆ, ಮುಸಲ್ಮಾನರು ದೀನ್ ಹೇಳುತ್ತಾರೆ. 'ಬೋಳಕರು' ಎನಿಸುವ ಇವರದು "ಸಜ್ಜನ ಶುದ್ಧಶಿವಾಚಾರ" ಸಂಪ್ರದಾಯ. ಸಜ್ಜನವಲ್ಲದ, ಶುದ್ಧವಲ್ಲದ ಒಂದು ಪ್ರಾಚೀನ ಸಂಪ್ರದಾಯದಿಂದ ಅಂದರೆ ಬಹುಶಃ ನಾಥಸಂಪ್ರದಾಯದಿಂದ ಇದು ಕವಲೊಡೆದಿರಬಹುದು.

ಈ ಪರಂಪರೆಯಲ್ಲಿ ಬಸವಣ್ಣ, ಪತ್ನಿ ನೀಲಮ್ಮ ಮುಖ್ಯರು. ಇವರ ಪುತ್ರರಾದ ರಾಚಪ್ಪಯ್ಯ, ಗುಹೇಶ್ವರ, ಸಂಗಪ್ಪಯ್ಯ, ವಂಶೀಯರಾದ ನಿಜಲಿಂಗ ಚಿಕ್ಕಯ್ಯ, ವೀರಸಂಗಯ್ಯ ಪ್ರಸಿದ್ಧರು. ಸಂಗಪ್ಪಯ್ಯನ

ಗದ್ದುಗೆ ಕಾಗಿನೆಲೆಯಲ್ಲಿದೆ. ಕಾಗಿನೆಲೆಯ ಕನಕದಾಸರ ಹೆಸರಿನಲ್ಲಿ ಪ್ರಚಾರದಲ್ಲಿರುವ ಕೆಲವು ಹಾಡುಗಳು ರಾಚಪ್ಪಯ್ಯನ ಹೆಸರಿನಲ್ಲಿ ಸಿಗುವುದು ಕುತೂಹಲದ ವಿಷಯವಾಗಿದೆ. ಬಸವಣ್ಣನ ಮಗನಾದ ರಾಚಪ್ಪಯ್ಯ, ಶಿಷ್ಯನಾದ ಮಂಟೇಸ್ವಾಮಿ ದಕ್ಷಿಣಕ್ಕೆ ಸಾಗಿ, ಮೈಸೂರು ಜಿಲ್ಲೆಯಲ್ಲಿ ರಾಚಪ್ಪಾಜಿ ಸಂಪ್ರದಾಯ (ಕಪ್ಪಡಿ), ಮಂಟೇಸ್ವಾಮಿ ಸಂಪ್ರದಾಯ (ಮಳವಳ್ಳಿ)ಗಳಿಗೆ ಗಂಗೋತ್ರಿಯಾದರು.

ಹೀಗೆ ಹಬ್ಬಿರುವ ಈ ಸಂಪ್ರದಾಯದಲ್ಲಿ ಸಾಹಿತ್ಯ ಸೃಷ್ಟಿಯಾಗಿರುವುದು ವಿಶೇಷ. ಇವರಲ್ಲಿ ಬಸವಣ್ಣ, ರಾಚಪ್ಪಯ್ಯ, ವೀರಸಂಗಯ್ಯ ಪ್ರಮುಖರು. ಇವರ ಸಾಹಿತ್ಯದಲ್ಲಿ ಕಾವ್ಯಗಳಿವೆ, ಹಾಡುಗಳಿವೆ, ಸೊಡ್ಡು-ಮುಂಡಿಗೆಗಳಿವೆ, ವಚನಗಳೂ ಇವೆ. ಕಾಲಜ್ಞಾನಸಾಹಿತ್ಯ ಮೊದಲು ಹುಟ್ಟಿದುದು ಇಲ್ಲಿ, ಬೆಳೆದುದೂ ಇಲ್ಲಿ. ಒಂದು ಅಂದಾಜಿನ ಪ್ರಕಾರ ೨೦೦೦.ಪುಟ ವ್ಯಾಪ್ತಿಯ ಈ ಅಜ್ಞಾತಸಾಹಿತ್ಯ ಬೆಳಕಿಗಾಗಿ ಹವಣಿಸುತ್ತಲಿದೆ. ಮಂಟೇಸ್ವಾಮಿ ರಾಚಪ್ಪಾಜಿಯವರನ್ನು ಕುರಿತು ವಿಪುಲ ಜನಪದ ಸಾಹಿತ್ಯ ಅಲ್ಲಲ್ಲಿ ಕೇಳಿಬರುತ್ತಿದೆ.

ಕೊಡೇಕಲ್ಲ ಸಾಹಿತ್ಯಕ್ಕೆ ಬಳಸಿದ ರಹಸ್ಯಲಿಪಿ 'ಅಮರಗನ್ನಡಲಿಪಿ' ಹೆಸರಿನಿಂದ ಪ್ರಸಿದ್ಧವಾಗಿದೆ. ಹನ್ನೊಂದು ರೀತಿಯ ಹೊಸಬಗೆಯ ಲಿಪಿಗಳನ್ನು ಇವರು ಸೃಷ್ಟಿಸಿದ್ದು, ಲಿಪಿ ಸುಧಾರಣೆಯ ಇಂದಿನ ವಿದ್ವಾಂಸರಿಗೆ ಇದು ಮಾರ್ಗದರ್ಶಿಯಾಗಬಹುದಾಗಿದೆ.

ಈ ಎಲ್ಲ ನಿಗೂಢತೆಗಳನ್ನು ಪ್ರಥಮ ಸಲ ಆಳವಾಗಿ ಭೇದಿಸಿದೆ; "ಕೊಡೇಕಲ್ಲ ಬಸವಣ್ಣ: ಒಂದು ಅಧ್ಯಯನ." ಈ ಶ್ರಮ-ಸಾಹಸಗಳಿಗಾಗಿ ಅಭಿನಂದನಾರ್ಹರೆನಿಸಿದ್ದಾರೆ, ಡಾ. ಬಸವಲಿಂಗ ಸೊಪ್ಪಿಮಠ.

ಬಸಲಿಂಗ ಸೊಪ್ಪಿಮಠ, ರಾಯಚೂರು

ಆಕರ : ಮಾರ್ಗ ಸಂಪುಟ–೬

■■

೨೪೯

ಹೊನ್ನಮ್ಮನ ಹದಿಬದೆಯ ಧರ್ಮ : ಒಂದು ಅಧ್ಯಯನ

೧೯೯೫

ಡಾ. ಮಧು ಕನ್ನಡ ಸಾಹಿತ್ಯ ವ್ಯವಸಾಯಕ್ಕೆ ಸ್ವಲ್ಪ ತಡವಾಗಿ ಪ್ರವೇಶಿಸಿದ ಭರವಸೆಯುಳ್ಳ ಲೇಖಕಿ. ಹೊಸ ವಿಷಯಗಳಿಗೆ ಪುಲಕಗೊಳ್ಳುವ ಸಂವೇದನಶೀಲತೆ, ಅದರ ಅಂಗ-ಪ್ರತ್ಯಂಗಗಳನ್ನು ಬಿಡಿಸಿ ನೋಡಬೇಕೆಂಬ ಕುತೂಹಲ, ಸೋತರೂ ಗೆಲ್ಲಬೇಕೆಂಬ ಪ್ರಯತ್ನಶೀಲತೆ ಇತ್ಯಾದಿ ಊರ್ಧ್ವಮುಖಿ ಮೌಲ್ಯಗಳನ್ನು ರೂಢಿಸಿಕೊಂಡಿರುವ ಇವರ ಪಿಎಚ್.ಡಿ. ಪ್ರಬಂಧವಾಗಿದೆ, 'ಹೊನ್ನಮ್ಮನ ಹದಿಬದೆಯ ಧರ್ಮ : ಒಂದು ಅಧ್ಯಯನ.'

'ಹದಿಬದೆಯ ಧರ್ಮ' ಕನ್ನಡದ ಸಂದರ್ಭದಲ್ಲಿ ಒಂದಕ್ಕಿಂತ ಹೆಚ್ಚು ದೃಷ್ಟಿಗಳಿಂದ ವಿಶಿಷ್ಟಕೃತಿ ಎನಿಸಿದೆ. ಸ್ಥಿರಸಮಾಜದ ಸೃಷ್ಟಿಯಾದ ಹೊನ್ನಮ್ಮ ಪ್ರಜ್ಞಾಪೂರ್ವಕವಾಗಿ ಬರವಣಿಗೆಗೆ ತೊಡಗಿಕೊಂಡವಳು. ಸ್ಥಿರಸಮಾಜದ ನಡುವೆಯೂ 'ಕುವರಿಯಾದೊಡೆ ಕುಂದೇನು?' ಎಂದು ಅವಳು ಹಾಕಿದ ಪ್ರಶ್ನೆ ಒಂದು ಮಿತಿಯಲ್ಲಿ ಇಂದಿನ 'ಸ್ತ್ರೀವಾದಿ ಚಳುವಳಿ'ಯ ಮೊದಲ ಹೆಜ್ಜೆಯಾಗಿದೆ. ಇಂಥ ಕಾರಣಗಳಿಂದಾಗಿ ಪ್ರಸ್ತುತ ಪ್ರಬಂಧ ಪ್ರಕಟನೆ ಸಕಾಲಿಕವೆನಿಸಿದೆ.

ಸಿದ್ಧ ಸ್ತ್ರೀನೀತಿಯನ್ನೇ ಪ್ರಧಾನವಾಗಿ ಪ್ರತಿಪಾದಿಸುವ 'ಹದಿಬದೆಯ ಧರ್ಮ' ಆಳವಾದ ವಿಮರ್ಶೆಯನ್ನು ತಾಳಿಕೊಳ್ಳುವ ಕೃತಿಯಲ್ಲ. ಡಾ. ಮಧು ಅವರು ಈ ಮಿತಿಯನ್ನು ಅರ್ಥಮಾಡಿಕೊಂಡು ಇದರ ಇನ್ನೊಂದು ನೆಲೆಯಾದ 'ಪಾತಿವ್ರತ್ಯ ಪರಿಕಲ್ಪನೆ'ಯ ಮೇಲೆ ಹೆಚ್ಚು ಒತ್ತುಕೊಡುತ್ತ ಹೋದುದು ಈ ಪ್ರಬಂಧದ ವೈಶಿಷ್ಟ್ಯವಾಗಿದೆ. ಜೊತೆಗೆ 'ನಾರಿ ನಡೆದುಬಂದ ದಾರಿ', 'ಹದಿಬದೆಯ ಧರ್ಮ-ಸಂಸ್ಕೃತಿಯ ಆಕರ' ಅಧ್ಯಾಯಗಳಲ್ಲಿ ಸಂಶೋಧಕರಿಗೆ ಅವಶ್ಯವಿರುವ ಚಾರಿತ್ರಿಕ ಪ್ರಜ್ಞೆ ಎದ್ದು ಕಾಣುತ್ತದೆ. ಒಟ್ಟಿನಲ್ಲಿ ಏಕಕಾಲಕ್ಕೆ ಸಂಶೋಧನೆ, ವಿವೇಚನೆ ಈ ಎರಡೂ ಪ್ರಶ್ನೆಗಳಿಗೆ ಉತ್ತರ ಕೊಡಲು ಹೊರಟ ಇದು, ಹೊನ್ನಮ್ಮನನ್ನು ಕುರಿತ ಪ್ರಥಮ ಅಧ್ಯಯನವಾಗಿದೆ. ಈ ಕಾರಣಕ್ಕಾಗಿ ಡಾ. ಮಧು ಅವರು ಅಭಿನಂದನಾರ್ಹರೆನಿಸಿದ್ದಾರೆ.

ಮಧು ವೆಂಕಾರೆಡ್ಡಿ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

೨೫೦

ಕರ್ನಾಟಕ ಏಕೀಕರಣ ಇತಿಹಾಸ

೧೯೯೬

ಭಾರತ ಸ್ವಾತಂತ್ರ್ಯ, ಕರ್ನಾಟಕ ಏಕೀಕರಣ - ಇವು ಈ ಶತಮಾನದ ಕನ್ನಡಿಗರ ಜೀವನದಲ್ಲಿ ಸಂಭವಿಸಿದ ಎರಡು ಮಹತ್ವದ ಸಂದರ್ಭಗಳು. ಇವುಗಳಲ್ಲಿ ಏಕೀಕರಣವನ್ನು ಕುರಿತು ಈಗಾಗಲೇ ಬೆಳಕು ಕಂಡ ಗ್ರಂಥಗಳಿಗಿಂತ ಹೆಚ್ಚು ವ್ಯಾಪಕ, ಹೆಚ್ಚು ಗಂಭೀರ ಗ್ರಂಥವೆನಿಸಿದೆ, "ಕರ್ನಾಟಕ ಏಕೀಕರಣ ಇತಿಹಾಸ."

೧೯೫೬ಕ್ಕೆ ಮೊದಲು ಭಾರತದ ಭೂಪಟದಲ್ಲಿ "ಕರ್ನಾಟಕ" ಹೆಸರಿನ ರಾಜ್ಯವೇ ಇರಲಿಲ್ಲ. ಮಾಯವಾಗಿದ್ದ ಅದು, ಮೂಡಿ ಬರಲು ನಡೆಸಿದ ಹೋರಾಟ, ಅದರ ಹಿಂದಿರುವ ಸೋಲು-ಗೆಲವುಗಳ ಕಥೆ-ವ್ಯಥೆ ಈ ಕೃತಿಯ ವಸ್ತು. ಹನ್ನೆರಡು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಇಲ್ಲಿಯ ಬರವಣಿಗೆಯ ವ್ಯಾಪ್ತಿ ಪ್ರಾಗಿತಿಹಾಸದಷ್ಟು ಪ್ರಾಚೀನ, ಕಾವೇರಿ ಜಲವಿವಾದದಷ್ಟು ಆಧುನಿಕ. ಹೀಗಾಗಿ ಏಕೀಕರಣದ ಕಥೆಯಾಗುತ್ತಲೇ ಕರ್ನಾಟಕದ ಕಥೆಯಾಗಿ ಬೆಳೆದುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಅಖಂಡ ಕರ್ನಾಟಕ, ಅದು ಖಂಡವಾಗುತ್ತ ಬಂದ, ಮತ್ತೆ ಅಖಡಂವಾಗಿ ನಿಂದ - ಹೀಗೆ ಮೂರು ಆಯಾಮಗಳು ಈ ಕೃತಿಗಿವೆ. ಈ ಒಂದೊಂದು ಆಯಾಮದಲ್ಲಿ ಸಂಭವಿಸಿದ ತೀವ್ರ ತಿರುವುಗಳನ್ನು ಗಮನಿಸಿ, ಅವುಗಳಿಗೆ ನೀಡಿದ ಅರ್ಥಪೂರ್ಣ ಶೀರ್ಷಿಕೆಗಳು ಓದುಗನನ್ನು ಹಂತಹಂತವಾಗಿ ಮುನ್ನಡೆಸುತ್ತವೆ.

ರಾಜ್ಯವೆನ್ನುವುದು ಅನೇಕ ಭೌತಿಕ ಸಂಸ್ಕೃತಿ, ಅಭೌತಿಕ ಸಂಸ್ಕೃತಿಗಳ ಮಹಾಸಂಗಮ. ಹೀಗಾಗಿ ಕರ್ನಾಟಕ ರಾಜ್ಯದ ಏಕೀಕರಣದ ಬಗೆಗೆ ಬರೆಯುವಾಗ ಅದರ ಪ್ರಾಕೃತಿಕ ಸ್ವರೂಪ - ಸಂಪತ್ತು, ರಾಜಕೀಯ ವಿಭಾಗಗಳ ವಿಸ್ತಾರ-ಸಂಕೋಚ, ಸಾಂಸ್ಕೃತಿಕ ಸಾಧನೆ-ಸೋಲುಗಳೆಲ್ಲ ವಿವೇಚನೆಗೆ ಒಳಪಡಬೇಕಾಗುತ್ತದೆ. ಈ ಮೂಲಸತ್ಯವನ್ನು ಅರ್ಥಮಾಡಿಕೊಂಡ ಈ ಕೃತಿಯಲ್ಲಿ ಏಕೀಕರಣ ಚರಿತ್ರೆಯೊಂದಿಗೆ ಅನೇಕ ಚರಿತ್ರೆಗಳು ಸೇರಿಕೊಂಡಿವೆ.

ಇಂಥ ಪ್ರಯತ್ನ ಅಪಾರ ಮತ್ತು ಅಧಿಕೃತ ಮಾಹಿತಿಯನ್ನು ಅಪೇಕ್ಷಿಸುತ್ತದೆ. ಈ ಬಯಕೆಯನ್ನು ಸಮರ್ಪಕವಾಗಿ ಈಡೇರಿಸಿದ ಪ್ರಯತ್ನ ಇಲ್ಲಿ ಉದ್ದಕ್ಕೂ ಕಂಡುಬರುತ್ತದೆ. ದೊಡ್ಡ ಮಾಹಿತಿಗಳಿಗೆ ಆಕರ್ಷಿತರಾಗಿ, ಸಣ್ಣ-ಪುಟ್ಟ ಮಾಹಿತಿಗಳನ್ನು ಕೈಬಿಡದಂತೆ ವಹಿಸಿದ ಇಲ್ಲಿಯ ಎಚ್ಚರ ಶ್ಲಾಘನೀಯವಾಗಿದೆ. ಈ ಗರುಡಗಮನದಿಂದಾಗಿ ಬೇರೆಲ್ಲಿಯೂ ಸಿಗದ, ಇನ್ನೆಲ್ಲಿಯೂ ದಾಖಲಾಗದ ಅನೇಕ ಹೊಸ ಹೊಸ ಮಾಹಿತಿಗಳು ಇಲ್ಲಿ ಮೊದಲ ಬಾರಿಗೆ ಗೋಚರಿಸುತ್ತದೆ.

ಏಕೀಕರಣ ಹೋರಾಟದ ಹಂತಗಳನ್ನು ಕ್ರಮವಾಗಿ, ಬಿಚ್ಚುತ್ತ ಬರುವ ಈ ಕೃತಿಯ "ಏಕೀಕರಣ: ಅತೃಪ್ತಿ" ಎಂಬ ಅಧ್ಯಾಯ, ಕೊನೆಗೆ ಕನ್ನಡಿಗರಿಗಾದ ಅನ್ಯಾಯವನ್ನು ಮನಗಾಣಿಸುತ್ತ, ಕನ್ನಡಿಗರ ಅಲ್ಪತೃಪ್ತಿ, ರಾಷ್ಟ್ರಮಟ್ಟದ ನಾಯಕರ ಕೊರತೆಗಳೇ ಈ ಅನ್ಯಾಯಕ್ಕೆ ಕಾರಣವೆಂಬುದನ್ನು ಪರ್ಯಾಯವಾಗಿ ತಿಳಿಸುತ್ತದೆ. ಹೀಗೆ ಕರ್ನಾಟಕದ "ಏಕೀಕರಣ"ವನ್ನು ಒಂದು ಅತೃಪ್ತಿಯೆಂದು ಕರೆದ ಈ ಕೃತಿ, ಏಕೀಕೃತ ಕರ್ನಾಟಕದ "ವರ್ತಮಾನ"ವನ್ನು ಒಂದು ಅಸಮಾಧಾನವೆಂದು ಬಿಂಬಿಸುತ್ತ, ನಮ್ಮ ಇಂದಿನ ನಾಯಕರು ರಾಜ್ಯಕಾರಣಿಗಳಾಗದೆ, ರಾಜಕಾರಣಿಗಳಾದುದೇ ಇದಕ್ಕೆ ಕಾರಣವೆಂದು ನಾವು ಒಪ್ಪಿಕೊಳ್ಳುವಂತೆ ಮಾಡುತ್ತದೆ.

ಈ ಬಗೆಯ ಬರವಣಿಗೆಯ ಮೂಲಕ ಸಂವೇದನಶೀಲ ಕನ್ನಡಿಗ ತನ್ನ ನಾಡಿನ ಉತ್ತಮ ಭವಿಷ್ಯಕ್ಕಾಗಿ ಚಿಂತನಶೀಲನಾಗುವಂತೆ, ಕಾರ್ಯಶೀಲನಾಗುವಂತೆ ಪ್ರೇರೇಪಿಸುವುದೂ ಈ ಕೃತಿಯ ಮುಖ್ಯ ಉದ್ದೇಶವೆನ್ನಬೇಕು. ಈ ಧೋರಣೆಯಿಂದಾಗಿ ಇದು, ಕೇವಲ ಇತಿಹಾಸದ ಕೃತಿಯಾಗಿ ಉಳಿಯದೆ, ವರ್ತಮಾನದ ಕೃತಿಯಾಗಿಯೂ ಬೆಳೆದಿದೆ; ಚರಿತ್ರೆಗೆ ಇಲ್ಲಿ ಚಲನಶೀಲತೆ ಪ್ರಾಪ್ತವಾಗಿದೆ.

ಎಚ್.ಎಸ್.ಗೋಪಾಲರಾವ್ ಬೆಂಗಳೂರು.

ಆಕರ : ಮಾರ್ಗ ಸಂಪುಟ–೬

■■

ಸಿಂಪಿಯ ಮುತ್ತು

೧೯೯೭

ನವೋದಯ ಸಾಹಿತ್ಯಸಂದರ್ಭದಲ್ಲಿ ಡಾ. ಸಿಂಪಿ, ಲಿಂಗಣ್ಣ ಅವರದು ಮಹತ್ವದ ಹೆಸರು. ಆ ಕಾಲದ ಬರೆಹಗಾರರಿಗೆ ವೈಯಕ್ತಿಕ ಸಾಹಿತ್ಯನಿರ್ಮಾಣದೊಂದಿಗೆ ಸಾಹಿತ್ಯಮಾರ್ಗ ನಿರ್ಮಾಣ ಮತ್ತು ಸಾಹಿತ್ಯಿಕ ವಾತಾವರಣ ನಿರ್ಮಾಣ ಮೊದಲಾದ ಜವಾಬ್ದಾರಿಗಳಿದ್ದವು. ಲಿಂಗಣ್ಣನವರು ಭಾಷೆ-ಶೈಲಿ, ವಸ್ತು-ರಚನೆ ಇತ್ಯಾದಿ ನೆಲೆಗಳಲ್ಲಿ ನಿಂತು, ಈ ಎಲ್ಲ ಜವಾಬ್ದಾರಿಗಳನ್ನು ಅನುಷ್ಠಾನಗೊಳಿಸಿದ ಮುಖ್ಯರಲ್ಲಿ ಒಬ್ಬರು.

ಹಲಸಂಗಿ ಗೆಳೆಯರ ಬಳಗದ ಭಾಗವಾಗಿ, ಲಿಂಗಣ್ಣನವರು ನವೋದಯ ಸಾಹಿತ್ಯದ ಪ್ರಬಂಧ, ಜೀವನಚರಿತ್ರೆ, ಕಾದಂಬರಿ, ನಾಟಕ ಮೊದಲಾದ ಪ್ರಕಾರಗಳಿಗೆ ಸಲ್ಲಿಸಿದ ಸೇವೆ ಅಮೂಲ್ಯವಾದುದು. ಅನುವಾದ ಸಾಹಿತ್ಯಕ್ಕೂ ಅವರ ಕಾಣಿಕೆ ದೊಡ್ಡದು. ಜನಪದಸಾಹಿತ್ಯ ಲಿಂಗಣ್ಣನವರ ಜೀವಾಳ. ಇವರ ಗರತಿಯ ಹಾಡು, ಜೀವನ ಸಂಗೀತ, ಉತ್ತರ ಕರ್ನಾಟಕದ ಕಥೆಗಳು-ಹೆಸರಿನ ಸಂಪಾದಿತ ಕೃತಿಗಳು ಯಾವ ಕಾಲಕ್ಕೂ ಮಾದರಿಯೆನಿಸಿವೆ. ಗರತಿಯ ಬಾಳು, ಜನಾಂಗದ ಜೀವಾಳಗಳು ಮರೆಯಾಗುತ್ತಿರುವ ಹಳ್ಳಿಯ ಜೀವನವನ್ನು ಹಸಿಹಸಿಯಾಗಿ ಹಿಡಿದಿಟ್ಟಿರುವ ಕೃತಿಗಳೆನಿಸಿವೆ. ಕರ್ನಾಟಕದಲ್ಲಿ ಅರವಿಂದರ ತತ್ತ್ವ ಮತ್ತು ಸಾಹಿತ್ಯಗಳನ್ನು ಕುರಿತು ಇವರು ಬರೆದ ಕೃತಿ, ಮಾಡಿದ ಪ್ರಚಾರಗಳಿಗೆ ಐತಿಹಾಸಿಕ ಮಹತ್ವ ಸಲ್ಲುತ್ತದೆ.

ಹಳ್ಳಿಗಾಡಿನ ಹದವಾದ ಮಾತುಗಾರಿಕೆ, ಹದವಾದ ಗದ್ಯಶೈಲಿಯನ್ನು ನೋಡಬೇಕಾದರೆ ಲಿಂಗಣ್ಣನವರ ಮಾತು ಕೇಳಬೇಕು, ಕೃತಿ ಓದಬೇಕು. ಅಲ್ಲಿ ಕೃತಕತೆಯಾಗಲೀ, ಒಣ ಪಾಂಡಿತ್ಯವಾಗಲೀ ತಲೆ ಹಾಕುವುದಿಲ್ಲ. ಮಾರ್ಗವನ್ನು ಜೀರ್ಣಿಸಿಕೊಂಡ ದೇಶೀಯತೆ ಇವರ ವೈಶಿಷ್ಟ್ಯವಾಗಿದೆ. ಗ್ರಾಮೀಣ ಅನುಭವಗಳನ್ನು ಅವರಷ್ಟು ಉತ್ಕಟವಾಗಿ ಅಭಿವ್ಯಕ್ತಿಸುವ ಬರಹಗಾರರು ಕನ್ನಡದಲ್ಲಿ ಕಡಿಮೆಯೆಂದೇ ಹೇಳಬೇಕು. "ಅರವಿಂದ ಗ್ರಂಥಮಾಲೆ"ಯ ಮೂಲಕ ಗಳಗನಾಥರಂತೆ ಸಾಹಿತ್ಯವನ್ನು ಮನೆಮನೆಗೆ ಹಂಚಿ, ಜನರಲ್ಲಿ ವಾಚನಾಭಿರುಚಿಯನ್ನು ಬೆಳೆಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.

ಮುದ್ದೇಬಿಹಾಳದ 'ಮಾತೋಶ್ರೀ ಗಂಗಮ್ಮ ಚಿನಿವಾರ ಮಹಾವಿದ್ಯಾಲಯ' ತನ್ನ ಸಾಹಿತ್ಯಿಕ-ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಕರ್ನಾಟಕದ ಗಮನ ಸೆಳೆದಿದೆ. ಈಗ ಅದು ಡಾ. ಸಿಂಪಿ ಲಿಂಗಣ್ಣನವರ ಜೀವನ ಮತ್ತು ಸಾಹಿತ್ಯಗಳನ್ನೊಳಗೊಂಡ ಈ ಸಂಪುಟವನ್ನು ಹೊರತರುತ್ತಿದೆ. ಈ ಉತ್ತಮ ಕೆಲಸಕ್ಕಾಗಿ ಪ್ರಸ್ತುತ ವಿದ್ಯಾಸಂಸ್ಥೆಗೆ ಕನ್ನಡ ಸಾಹಿತ್ಯಲೋಕದ ಕೃತಜ್ಞತೆಗಳು ಸಲ್ಲುತ್ತವೆ.

ಚ.ವಿ.ಮುಳಗುಂದ, ಮುದ್ದೇಬಿಹಾಳ

ಆಕರ : ಮಾರ್ಗ ಸಂಪುಟ–೬

ಸುಧಾರ್ಣವ

೧೯೯೮

ಉದಾತ್ತ ಜೀವನ, ಉನ್ನತ ವಿದ್ವತ್ತುಗಳನ್ನು ಏಕೀಭವಿಸಿಕೊಂಡಿರುವ ಡಾ. ಬಿ. ವ್ಹಿ. ಮಲ್ಲಾಪುರ ನಮ್ಮ ಮಧ್ಯದ ಅಪರೂಪದ ವ್ಯಕ್ತಿ. ಅವರನ್ನು ನೋಡಿದಾಗಲೆಲ್ಲ 'ಪದ್ಮಪತ್ರದ ಜಲಬಿಂದು' ನೆನಪಾಗುತ್ತದೆ.

ಡಾ. ಮಲ್ಲಾಪುರ ಅವರು ಒಬ್ಬ ಪೂರ್ಣಪ್ರಮಾಣದ ಪ್ರಾಧ್ಯಾಪಕರೆಂದೇ ಪ್ರಸಿದ್ಧರು. ವ್ಯಾಪಕವಾದ ವ್ಯಾಸಂಗ, ಸತ್ಯಶೋಧದ ಹಂಬಲ, ವಿದ್ಯಾರ್ಥಿ ಪರಾಧೀನ ನಿಲವು-ಇವು ಆ ಪ್ರಸಿದ್ಧಿಯ ಹಿಂದೆ ಕೆಲಸ ಮಾಡಿವೆ.

ವಿದ್ವತ್ತು ಡಾ. ಮಲ್ಲಾಪುರ ಅವರ ಸ್ಥಾಯೀಭಾವ. ಸಾಹಿತ್ಯ, ಶಾಸ್ತ್ರ, ಶಾಸನಗಳ ತ್ರಿವೇಣಿಯಾಗಿರುವ ಅದು, ನಿರಂತರ ಅಭಿವ್ಯಕ್ತಗೊಳ್ಳುತ್ತ ಬಂದುದು ಒಂದು ವಿಶೇಷ. ಇದರ ಫಲವೆನಿಸಿದ ಪ್ರಬಂಧಗಳು ಈಗಾಗಲೇ 'ಶರಣ ಸರೋಜ', 'ವೀರಶೈವ ತತ್ವಾರ್ಥ ವಿವೇಚನೆ' ಸಂಕಲನಗಳ ಮೂಲಕ ಬೆಳಕಿಗೆ ಬಂದಿದ್ದು, ಈಗ ಅರುವತ್ತು ಪ್ರಬಂಧಗಳ ಎರಡು ಸಂಕಲನಗಳು 'ಸುಧಾರ್ಣವ' ಹೆಸರಿನಿಂದ ಅನಾವರಣಗೊಳ್ಳುತ್ತಲಿವೆ.

ಕನ್ನಡದಲ್ಲಿ ಕವನ, ಕತೆ, ಲಲಿತಪ್ರಬಂಧಗಳ ಜೊತೆಗೆ ಸಂಶೋಧನ ಪ್ರಬಂಧಗಳ ಸಮಗ್ರ ಸಂಪುಟಗಳೂ ಬೆಳಕು ಕಾಣುತ್ತಲಿವೆ. ಇವುಗಳ ಸಾಲಿನಲ್ಲಿ ನಿಲ್ಲುವ 'ಸುಧಾರ್ಣವ' ಈವರೆಗಿನ ನಮ್ಮ ತಿಳುವಳಿಕೆಯನ್ನು ಖಂಡಿತ ವಿಸ್ತರಿಸುತ್ತದೆ. ಕನ್ನಡದಲ್ಲಿ ಸಂಶೋಧಕರ ಸಂಖ್ಯೆ ಕಡಿಮೆ. ಕೊನೆಯ ಪಕ್ಷ ಅವರವರ ಎಲ್ಲ ಪ್ರಬಂಧಗಳು ಸಮಗ್ರ ಸಂಪುಟ ರೂಪದಲ್ಲಿ ಹೊರಬಂದರೆ ನಮ್ಮ ಸಂಶೋಧನೆಯ ಅಭಿವೃದ್ಧಿಗೆ ಸಹಾಯವಾಗುತ್ತದೆ. ಆ ದಿಸೆಯಲ್ಲಿ ಈ ಕೃತಿ ತುಂಬಾ ಉಪಯುಕ್ತವೆನಿಸಲಿದೆ.

ಆಕರ ಸಂಗ್ರಹದಲ್ಲಿ ಶ್ರಮ, ವಿಶ್ಲೇಷಣೆಯಲ್ಲಿ ಸಂಯಮ, ನಿರೂಪಣೆಯಲ್ಲಿ ನಿರುದ್ವೇಗ -ಈ ಪ್ರಬಂಧಗಳ ಲಕ್ಷಣವೆನಿಸಿವೆ. ನಿರ್ಣಯ ನೀಡುವಾಗಲೆಲ್ಲ ಅವರ ವ್ಯುತ್ಪತ್ತಿ ಧಾವಿಸಿಬಂದು, ಭದ್ರ ಅಧಿಷ್ಠಾನವಾಗಿ ನಿಲ್ಲುತ್ತದೆ. ಈ ಅಧಿಷ್ಠಾನದ ಮೇಲೆ ತಲೆಯೆತ್ತಿ ನಿಂತಿರುವ ಒಂದೊಂದೂ ಪ್ರಬಂಧಸೌಧ ಸರ್ವತೋಭದ್ರವೆನಿಸಿವೆ.

ಇಂದು, ಪುಸ್ತಕ ಪ್ರಕಟನೆ ವಿಶ್ವವಿದ್ಯಾಲಯದಂತಹ ಉನ್ನತ ವಿದ್ಯಾಸಂಸ್ಥೆಗಳಿಗೂ ಭಾರವೆನಿಸಿದೆ. ಇಂಥ ಸಂದರ್ಭದಲ್ಲಿ ವೀರಶೈವ ಮಠಗಳು ಮುಂದು ಬರುತ್ತಲಿರುವುದು ತುಂಬ ಶ್ಲಾಘನೀಯ. ಈವರೆಗೆ ಅನೇಕ ಸಂಶೋಧನ ಕೃತಿಗಳನ್ನು ಪ್ರಕಟಿಸಿರುವ ಬೆಳಗಾವಿಯ ಶ್ರೀ ನಾಗನೂರು ಮಠದ 'ವೀರಶೈವ ಅಧ್ಯಯನ ಅಕಾಡೆಮಿ' ಈ ಕೃತಿ ಪ್ರಕಟನೆಗೂ ನೆರವಾದುದು ಕನ್ನಡದ ಪುಣ್ಯವೆಂದೇ ಹೇಳಬೇಕು.

ಬಿ.ವಿ. ಮಲ್ಲಾಪುರ, ಧಾರವಾಡ

ಆಕರ : ಮಾರ್ಗ ಸಂಪುಟ–೬

ಇತಿಹಾಸ ಸಂಶೋಧಕ

೧೯೯೮

ಕಾಲೇಜುಗಳಲ್ಲಿಯ ಇತಿಹಾಸ ಮತ್ತು ಕನ್ನಡ ಪ್ರಾಧ್ಯಾಪಕರಿಗೆ ಬೇರೆ ವಿಷಯಗಳ ಪ್ರಾಧ್ಯಾಪಕರಿಗಿಂತ ಹೆಚ್ಚಿನ ಹೊಣೆಗಾರಿಕೆ ಇದೆ. ಇವರು ಕೇವಲ ಬೋಧಕರಾಗಿ ಉಳಿಯದೆ, ಅಲ್ಲಲ್ಲಿ ಕರ್ನಾಟಕ ಸಂಸ್ಕೃತಿಯ ಶೋಧಕರಾಗಿ, ಪ್ರಸಾರಕರಾಗಿ ಬೆಳೆಯಬೇಕಾಗುತ್ತದೆ. ಈ ಮಾತಿಗೆ ಅರ್ಥ ತುಂಬುವ ರೀತಿಯಲ್ಲಿ ವೃತ್ತಿ ಜೀವನ ನಡೆಸಿದ ನಾಡಿನ ಕೆಲವೇ ಜನ ಇತಿಹಾಸ ಪ್ರಾಧ್ಯಾಪಕರಲ್ಲಿ ಡಾ. ಎ.ಕೆ. ಶಾಸ್ತ್ರಿ ಮುಖ್ಯರಾಗಿದ್ದಾರೆ.

ಉತ್ತರ ಕನ್ನಡದ ಶಿರಸಿಯಲ್ಲಿ ಮೂಲೆ ಹಿಡಿದು ಕುಳಿತುಕೊಳ್ಳದೆ, ಆ ಪ್ರದೇಶದಲ್ಲಿ ಸ್ಥಳೀಯ ಸಾಂಸ್ಕೃತಿಕ ರಾಯಭಾರಿಯಂತೆ ಡಾ. ಎ.ಕೆ. ಶಾಸ್ತ್ರಿ ಅವರು ದುಡಿಯುತ್ತ ಬಂದಿದ್ದಾರೆ. ಅವರಂತೆ ಎಲ್ಲರೂ ಅಲ್ಲಲ್ಲಿ ದುಡಿದರೆ ಕರ್ನಾಟಕದ ಪರಂಪರೆ ಬೆಳಕಿಗೆ ಬರುವುದೆಂಬುದಕ್ಕೆ ಡಾ. ಶಾಸ್ತ್ರಿಗಳು ಉತ್ತಮ ನಿದರ್ಶನವೆನಿಸಿದ್ದಾರೆ.

ಡಾ. ಎ.ಕೆ. ಶಾಸ್ತ್ರಿ ಅವರು ಸಂಪ್ರಬಂಧ, ಇತಿಹಾಸ ಗ್ರಂಥಗಳ ಮೂಲಕ ಸಂಶೋಧನ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ್ದರೂ, ಅವರ ವಿಶೇಷ ಆಸಕ್ತಿಯ ಕ್ಷೇತ್ರ ಕರ್ನಾಟಕದ ಕಡತಗಳು. ಸಾಮಾನ್ಯವಾಗಿ ಯಾರೂ ಹೊರಳಿ ನೋಡದ ಈ ಆಕರ ಸಾಮಗ್ರಿಯ ಅಧ್ಯಯನ, ಪ್ರಕಟನ ವಿಷಯದಲ್ಲಿ ಡಾ. ಶಾಸ್ತ್ರಿಗಳನ್ನು ಮೀರಿಸುವವರು ಇಂದು ಯಾರೂ ಇಲ್ಲವೆಂದೇ ಹೇಳಬೇಕು. ಶೃಂಗೇರಿ ಮಠ, ಸ್ವರ್ಣವಲ್ಲಿ ಮಠಗಳಲ್ಲಿಯ ಸಾವಿರ ಸಾವಿರ ಕಡತಗಳ ಅಧ್ಯಯನ, ಪ್ರಕಟನೆ ಈ ಮಾತಿಗೆ ಸಾಕ್ಷಿಯೆನಿಸಿದೆ. ಈ ಮೂಲಕ ಇವರು ಬಹಳ ದಿನ ನಿಲ್ಲುವ ಕೊಡುಗೆಯನ್ನು ಕರ್ನಾಟಕ ಇತಿಹಾಸಕ್ಕೆ ನೀಡಿದ್ದಾರೆ.

ನಮ್ಮ ರಾಜ್ಯದ ಇತಿಹಾಸ ಸಂಶೋಧನೆಗೆ ಸಂಬಂಧಪಟ್ಟಂತೆ ದೊಡ್ಡ ಕಾಣಿಕೆಯನ್ನು ಸಲ್ಲಿಸಿರುವ ಡಾ. ಎ.ಕೆ. ಶಾಸ್ತ್ರಿಯವರನ್ನು ಕುರಿತು ಹೊರಬರುತ್ತಿರುವ 'ಇತಿಹಾಸ ಸಂಶೋಧಕ' ಅಭಿನಂದನ ಗ್ರಂಥ ಕೇವಲ ಡಾ. ಶಾಸ್ತ್ರಿಗಳಿಗೆ ಸಲ್ಲಿಸಿದ ಗೌರವವಾಗಿರದೆ, ಇತಿಹಾಸ ಸಂಶೋಧನೆಗೆ ಸಲ್ಲಿಸಿದ ಗೌರವವೂ ಆಗಿದೆ. ಈ ಉತ್ತಮ ಕಾರ್ಯಕ್ಕಾಗಿ ಸಂಪಾದಕರನ್ನೂ, ಸಂಬಂಧಪಟ್ಟವರನ್ನೂ ಹೃದಯಾರೆ ಅಭಿನಂದಿಸುತ್ತೇನೆ. ಡಾ. ಶಾಸ್ತ್ರಿಗಳ ಸಂಶೋಧನಕಾರ್ಯ ನಿರಂತರವಾಗಿ ಮುಂದುವರಿಯಲೆಂದು ಹಾರೈಸುತ್ತೇನೆ.

ಡಾ. ಎ.ಕೆ. ಶಾಸ್ತ್ರಿ ಅಭಿನಂದನ ಗ್ರಂಥ

ಆಕರ : ಮಾರ್ಗ ಸಂಪುಟ–೬

ಬೃಹದ್ದೇಶಿ

೧೯೯೮

'ದೇಶಿ' ಹಂಪಿಯ ಹುಟ್ಟುಗುಣ. ಅದರ ಸಂರಕ್ಷಣೆ -ಸಂವರ್ಧನೆಗಾಗಿ ಈ ನೆಲದಲ್ಲಿ ಕಾಲಕಾಲಕ್ಕೆ ನಡೆದ ಪ್ರಯತ್ನಗಳು ಚರಿತ್ರಾರ್ಹ ಪ್ರಯೋಗಗಳಾಗಿ ಪರಿಣಮಿಸಿವೆ. ಈ ಪ್ರಯೋಗ ಪರಂಪರೆಯ ಆದಿ ಬಿಂದುವಾಗಿದ್ದಾನೆ, ಇಲ್ಲಿಯ ಮತಂಗ ಪರ್ವತದ ಮತಂಗಮುನಿ. ಬೆಳಕಾಗಿ ಬರುತ್ತಲಿದ್ದ ಮಾರ್ಗಸಂಗೀತ ಕ್ರಮೇಣ ಬೆಂಕಿಯಾಗತೊಡಗಿದ್ದ ಸಂದರ್ಭದಲ್ಲಿದ್ದವ ಮತಂಗ. ಅನೇಕ ವರ್ಷಗಳಿಂದಲೂ ಅನೇಕ ಮುಖಗಳಲ್ಲಿ ಬೆಳೆದು ಬಂದಿದ್ದ ದೇಶೀಯನ್ನು, ಮಾರ್ಗವು ಮೂಲೆಗೆ ಸರಿಸುತ್ತಲಿದ್ದ ಕಾಲದಲ್ಲಿ, ಅವರ ದಾಖಲೆಗಾಗಿ ನಡೆಸಿದ ವ್ಯಾಪಕ ಪ್ರಯತ್ನವೆನಿಸಿದೆ, ಈತನ 'ಬೃಹದ್ದೇಶಿ'.

ಮುಂದಿನ ದಿನಗಳಲ್ಲಿ ದೇಶೀ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಹರಿಹರ ರಾಘವಾಂಕರು ಮಾಡಿದ ತೀವ್ರ ಹೋರಾಟಗಳು, ಆಮೇಲೆ ದೇಶೀ ಸಂಗೀತಕ್ಕೆ ಸಂಬಂಧಪಟ್ಟಂತೆ ಹರಿದಾಸರು ಮಾಡಿದ ಕೀರ್ತನ ಪ್ರಯೋಗಗಳು ಜರುಗಿದುದು, ಈ ಭೂಮಿಯಲ್ಲಿ.

ಹೀಗೆ, ಹಂಪಿಯ ಮಣ್ಣಿಗೂ ದೇಶೀ ಪ್ರಯೋಗಗಳಿಗೂ ಒಂದು ಅವಿನಾಭಾವ ಸಂಬಂಧವಿದೆ. ಈಗ ಇಪ್ಪತ್ತನೆಯ ಶತಮಾನದಲ್ಲಿ ದೇಶಿ ಸಂಸ್ಕೃತಿಯ ಬಹುಮುಖಿ ಅಧ್ಯಯನಕ್ಕಾಗಿ ಕನ್ನಡ ವಿಶ್ವವಿದ್ಯಾಲಯ, ಈ ನೆಲದಲ್ಲಿಯೆ ಅಸ್ತಿಕ್ಕೆ ಬಂದುದು ಒಂದು ಯೋಗಾಯೋಗ. ದೇಶೀಯನ್ನು ಕುರಿತ ಬೃಹತ್ ಅಧ್ಯಯನವನ್ನು ಕೈಗೊಳ್ಳುತ್ತಲಿರುವ ಈ ಸಂಸ್ಥೆಯೇ ಒಂದರ್ಥದಲ್ಲಿ 'ಬೃಹದ್ದೇಶಿ'ಯಾಗಿದೆ.

ಈ ರೀತಿ , ದೇಶೀ ಅಧ್ಯಯನಕ್ಕೆ ಇಲ್ಲಿಯ ಮತಂಗಮುನಿ ಒಂದು ತುದಿಯಾದರೆ, ಇಲ್ಲಿಯ ಕನ್ನಡ ವಿಶ್ವವಿದ್ಯಾಲಯ ಇನ್ನೊಂದು ತುದಿಯಾಗಿದೆ. ಈ ಸಂಸ್ಥೆ ಮತಂಗನ ಬೃಹದ್ದೇಶಿಯನ್ನು ಕನ್ನಡಾನುವಾದದೊಂದಿಗೆ ಪ್ರಕಟಿಸುತ್ತಿರುವುದು, ತನ್ನ ಪರಂಪರೆಗೆ ಸಲ್ಲಿಸುವ ಕೃತಜ್ಞತೆಯಾಗಿದೆ.

ಡಾ। ರಾ. ಸತ್ಯನಾರಾಯಣ

ಆಕರ : ಮಾರ್ಗ ಸಂಪುಟ–೬

■■

ಹರಿಹರನ ರಗಳೆಗಳು

೧೯೯೯

"ದೇಶಿ" ಹಂಪಿಯ ಹುಟ್ಟು ಗುಣ. ಅದರ ಸಂರಕ್ಷಣೆ - ಸಂವರ್ಧನೆಗಾಗಿ ಈ ನೆಲದಲ್ಲಿ ಕಾಲಕಾಲಕ್ಕೆ ನಡೆದ ಪ್ರಯತ್ನಗಳು ಪರಂಪರೆಗಳಾಗಿ ಪರಿಣಮಿಸಿವೆ, ಸಾಹಿತ್ಯಕ್ಕೆ-ಸಂಬಂಧಪಟ್ಟಂತೆ "ಮಾರ್ಗ"ವನ್ನು ನಿರಾಕರಿಸಿ, "ದೇಶಿ"ಗೆ ಪ್ರಾಣ ತುಂಬಿದವ ಹಂಪಿಯ ಹರಿಹರ. ಈ ನೆಲದ ಮೇಲೆ ಘಟಿಸಿದ ಭೌತಿಕ "ವಿಜಯನಗರ" ಸಾಮ್ರಾಜ್ಯಕ್ಕಿಂತ, ಹರಿಹರ ತೆರೆದ ಈ ಸಾಹಿತ್ಯಿಕ "ದೇಶೀ ದಾರಿ" ಹೆಚ್ಚು ಮಹತ್ವಪೂರ್ಣವೆನಿಸಿದೆ.

"ರಗಳೆ" ಹರಿಹರನ ಒಟ್ಟು ಸಾಹಿತ್ಯಕೃಷಿಯ ಬಹುಮುಖ್ಯ ಭಾಗ. ಹಗಲಿರುಳು ದುಡಿಸಿಕೊಳ್ಳುವ ಮೂಲಕ, ಈ ಪ್ರಕಾರಕ್ಕೆ ಅವನೇ ಆದಿ, ಅವನೇ ಅಂತ್ಯವೆನಿಸಿದ.

ಆರ್ಯಮೂಲದ ಕಥಾನಾಯಕರಿಗೆ ಬದಲು ದ್ರಾವಿಡಮೂಲದ ತಮಿಳುನಾಡಿನ ಪುರಾತನರನ್ನು, ಕನ್ನಡ ನಾಡಿನ ಶರಣರನ್ನು ಕಥಾನಾಯಕರನ್ನಾಗಿ ಆಯ್ದುಕೊಂಡುದು, ದೇಶಿ "ವಸ್ತುಗಳ ಶೋಧ ಮತ್ತು ಮೌಲ್ಯಗಳ ಪ್ರಸಾರ"ವೆನಿಸಿದೆ. ಶರಣರ ಆಯ್ಕೆಯಂತೂ ಕನ್ನಡ ನೆಲದ ಮೇಲೆ ಸಂಭವಿಸಿದ "ವಚನಚಳುವಳಿ"ಯ ಪ್ರಥಮ ದಾಖಲೀಕರಣವೆನಿಸಿದೆ.

ಹರಿಹರ ಕೇವಲ "ಧಾರ್ಮಿಕ ಭಕ್ತಿ" ಕವಿಯಲ್ಲ, "ಸಮಾಜೋಧಾರ್ಮಿಕ ಭಕ್ತಿ" ಕವಿ. ಹೀಗಾಗಿ ಇವನ ರಗಳೆಗಳು ದೇವರ ಕೀರ್ತನೆಗಳಾಗಿ ಉಳಿಯದೆ, ವರ್ಗಭೇದ - ವರ್ಣಭೇದ ಲಿಂಗಭೇದದ ನಿರಾಕರಣೆಯ ಉಪಕರಣಗಳೂ ಆಗಿ ಬೆಳೆದಿವೆ. ಈ ನಿರಾಕರಣೆಯ ಸಶಕ್ತಧ್ವನಿಯಿಂದಾಗಿ ಇವನು ಕನ್ನಡದ ಪ್ರಥಮ "ಸಂಘರ್ಷಕವಿ"ಯೆನಿಸಿದ್ದಾನೆ.

ಹೀಗೆ, ದೇಶಿ ಭಾಷೆ - ಛಂದಸ್ಸು - ವಸ್ತುಗಳಿಗೆ ಉದ್ಧಾರಮಾರ್ಗ ತೋರಿದ ಈ ಕವಿಯ ರಗಳೆಗಳನ್ನು ಸಮಗ್ರರೂಪದಲ್ಲಿ ಪ್ರಕಟಿಸುವುದು, ಈ ಜನಮುಖಿಸಾಹಿತ್ಯವನ್ನು ಜನಪ್ರಿಯಗೊಳಿಸುವುದು ದೇಶಿ ಪರಂಪರೆಯ ಅಧ್ಯಯನಕೇಂದ್ರವಾದ ಕನ್ನಡ ವಿಶ್ವವಿದ್ಯಾಲಯದ ಕರ್ತವ್ಯವೇ ಆಗಿದೆ. ಈ ಕರ್ತವ್ಯದ ಭಾಗವೆಂಬಂತೆ ರಗಳೆಗಳ ಜನಪ್ರಿಯ ಆವೃತ್ತಿ ಪ್ರಕಟವಾಗುತ್ತಲಿದೆ.

ಎಂ.ಎಂ. ಕಲಬುರ್ಗಿ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

ಹೊಸಿಲಾಚೆಯ ಹೊಸಹೆಜ್ಜೆ

೧೯೯೯

"ತಣ್ಣನೆಯ ವ್ಯಕ್ತಿತ್ವ-ಬೆಚ್ಚನೆಯ ಬರಹ"ದ ಗೀತಾ ನನ್ನ ಅಪರೂಪದ ವಿದ್ಯಾರ್ಥಿನಿಯರಲ್ಲಿ ಒಬ್ಬರು. ಗೆಳತಿಯರ ಗದ್ದಲದ ನಡುವೆಯೂ ಮೌನವನ್ನು ಕಾಪಾಡಿಕೊಳ್ಳುವ ವಿಶಿಷ್ಟ ಜೀವನಶೈಲಿಯ ಈ "ಮೂಕಿ" ಕವನದಲ್ಲಿಯೂ ಮಾತನಾಡಬಲ್ಲಳೆಂಬುದು ತಿಳಿಯುತ್ತಲೇ, ನಾನು ಸಸಿಯ ಸಲಹುವ ಎಚ್ಚರ ವಹಿಸಿದೆ. ಸಾಲದುದಕ್ಕೆ ವೇದಿಕೆಯ ಮೇಲೆ ಅಳೆದು-ತೂಗಿ ಆಡುವ ಇವರ ಮಾತುಗಾರಿಕೆಗೆ ಮೆಚ್ಚಿ, ಇನ್ನೂ ಎಚ್ಚರ ವಹಿಸಿದೆ.

"ಸಂಬಳಕ್ಕಾಗಿ ಬರುವ ಪ್ರಾಧ್ಯಾಪಕರು, ಸರ್ಟಿಫಿಕೇಟ್‌ಗಾಗಿ ಬರುವ ವಿದ್ಯಾರ್ಥಿಗಳು" ತುಂಬಿಕೊಂಡಿರುವ ಇಂದಿನ ಯಾವುದೇ ವಿಶ್ವವಿದ್ಯಾಲಯದಲ್ಲಿ ಬರೆಯುವ, ಚೆನ್ನಾಗಿ ಬರೆಯುವ ವಿದ್ಯಾರ್ಥಿಗಳನ್ನು ಕಂಡರೆ ನನಗೆ ಪಂಚಪ್ರಾಣ; ಅವರಿಂದ ದೊಡ್ಡ ನಿರೀಕ್ಷೆ. ಈ ನಿರೀಕ್ಷೆಗೆ ಉತ್ತರ ರೂಪದಲ್ಲಿ ಹೊರಬರುತ್ತಿದೆ "ಹೊಸಿಲಾಚೆಯ ಹೊಸ ಹೆಜ್ಜೆ".

ಕವಿಯಾದವನು ವ್ಯಕ್ತಿ, ಸದಸ್ಯ, ಮಾನವ- ಈ ಮೂರು 'ಅವತಾರ'ಗಳ ಮೂಲಕ ಕಾವ್ಯಕ್ಕೆ ಭಾಷಾಮಾಧ್ಯಮದಲ್ಲಿ ಉದ್ಧಾರಮಾರ್ಗ ತೋರಬೇಕಾಗುತ್ತದೆ. ಈ ದಾರಿಯಲ್ಲಿ ನಡೆದು, ತನ್ನೊಳಗಿರುವ ವ್ಯಕ್ತಿಯ ನಿಗೂಢತೆಯನ್ನು, ಸದಸ್ಯನ ವಾಸ್ತವವನ್ನು, ಮಾನವನ ಆದರ್ಶವನ್ನು ಸೃಜನಶೀಲವಾಗಿ ಬಿಚ್ಚುತ್ತಲಿರುವ ಪ್ರಯತ್ನವನ್ನು ಈ ಸಂಕಲನದಲ್ಲಿ ಕಾಣಬಹುದಾಗಿದೆ.

ಕಾವ್ಯ, ಕಣ್ಣು ತೆರೆಯುವುದು ಭಾಷೆಯಲ್ಲಿ. ಈ ಶಬ್ದವ್ಯವಸಾಯಕ್ಕೆ ಪೂರ್ಣ ವಿರಾಮವೆಂಬುದಿಲ್ಲ. ಎಲ್ಲ ಕವಿಗಳೂ ಅಲ್ಪವಿರಾಮದಿಂದ ಪೂರ್ಣವಿರಾಮಕ್ಕೆ ಸಾಗುವ ಯಾತ್ರಿಕರೇ. ಅಲ್ಪವಿರಾಮದ ಸಮೀಪ ನಿಂತಿರುವ ಗೀತಾ ಪೂರ್ಣವಿರಾಮದ ಸಮೀಪ ನಿಲ್ಲುವುದನ್ನು ನೋಡುವ ಸಂತೋಷ ನನ್ನದಾಗಲಿ,

---

ಡಾ. ಗೀತಾ ವಸಂತ

ಆಕರ : ಮಾರ್ಗ ಸಂಪುಟ–೬

■■

ಅಮೃತ ವಾಹಿನಿ

೨೦೦೦

"ಕೃತಿ ವಿಮರ್ಶೆ"ಯು "ಸಂಸ್ಕೃತಿ ವಿಮರ್ಶೆ"ಯ ವಿಸ್ತಾರ ಪಡೆಯತ್ತಲಿರುವ ಕನ್ನಡದ ದಾರಿಯಲ್ಲಿ ಡಾ. ಜಿ.ಎಸ್. ಆಮೂರ ಅವರದು ದೊಡ್ಡ ಹೆಸರು. ಸಂಸ್ಕೃತಮೂಲದ ಪಾರಂಪರಿಕ ಪ್ರಜ್ಞೆ, ಇಂಗ್ಲಿಷ್ ಮೂಲದ ಆಧುನಿಕ ಪ್ರಜ್ಞೆಗಳ ಸಹಯೋಗದಿಂದಾಗಿ ಇವರ ವಿಮರ್ಶೆಗೆ ಒಂದು ಹದ ಪ್ರಾಪ್ತವಾಗಿದೆ. ಈ ಭೂಮಿಕೆಯಲ್ಲಿ ಅನಾವರಣಗೊಳ್ಳುವ ಇವರ ಕನ್ನಡ ವಿಮರ್ಶೆ ಒಂದು ವಿಶಿಷ್ಟ 'ಆವರಣ' ಕಟ್ಟಿಕೊಳ್ಳುವುದನ್ನು ಇವರ ಯಾವುದೇ ಬರವಣಿಗೆಯಲ್ಲಿ ಕಾಣಬಹುದು.

ವಿಮರ್ಶೆ ಎನ್ನುವುದು ಕೃತಿಪರೀಕ್ಷೆ. ಇದು ತೀಕ್ಷ್ಣವಾದ ತರ್ಕ, ಅಪಾರವಾದ ವ್ಯುತ್ಪತ್ತಿಗಳನ್ನು ಅಪೇಕ್ಷಿಸುತ್ತದೆ. ತಮ್ಮ ನಿರಾಳವಾದ ವ್ಯಕ್ತಿತ್ವ ಮತ್ತು ಆಳವಾದ ವ್ಯಾಸಂಗಗಳ ಬಲದಿಂದ ಇವುಗಳನ್ನು ಕೈವಶಗಿಸಿಕೊಂಡಿರುವ ಕಾರಣ ಇವರ ವಿಮರ್ಶೆ, ಅಪವ್ಯಾಖ್ಯಾನದಿಂದ ಬಿಡಿಸಿಕೊಂಡು ಗುರಿಯಿಟ್ಟ ಬಾಣದಂತೆ ನಿಜದ ನೆಲೆಯನ್ನು ಮುಟ್ಟುತ್ತದೆ.

ಡಾ. ಆಮೂರ ಅವರದು ರಚನಾತ್ಮಕ ಮನಸ್ಸು. ಹೀಗಾಗಿ ಕೆಡಹುವುದಕ್ಕಿಂತ ಕಟ್ಟುವುದರ ಕಡೆಗೆ ಇವರ ಒಲವು ಜಾಸ್ತಿ. ಅಂದರೆ ಕೆಡಹುವ ಆವೇಶಕ್ಕಿಂತ ಕಟ್ಟುವ ಸಂಯಮವನ್ನು ಇವರ ರಚನೆಗಳುದ್ದಕ್ಕೂ ಕಾಣಬಹುದಾಗಿದೆ.

ಇಂದು ಕನ್ನಡದಲ್ಲಿ ಬಳಕೆಯಾಗುತ್ತಲಿರುವ ವಿಮರ್ಶೆಯ ಹೊಸ ಭಾಷೆಯನ್ನು ಓದುವುದೇ ಒಂದು ಹಿಂಸೆ. ಇದಕ್ಕೆ ಅಪವಾದವೆಂಬಂತೆ, ಸರಿಯಾದ ವಿಮರ್ಶಾ ಮಾನದಂಡಗಳಿಂದ ವಿನ್ಯಾಸಗೊಳಿಸಿದ ವಿಷಯವನ್ನು ಸರಿಯಾದ ಭಾಷಾಮಾಧ್ಯಮದಲ್ಲಿ ಎರಕಹೊಯ್ಯುವುದೂ ಶ್ರೀ ಆಮೂರ ಅವರ ವಿಶೇಷತೆಯಾಗಿದೆ. ಈ ಎಲ್ಲ ಗುಣಾಂಶಗಳನ್ನೊಳಗೊಂಡಿದೆ 'ಅಮೃತವಾಹಿನಿ'.

ಪ್ರಥಮ ಆವೃತಿ : ಸ್ನೇಹ ಪ್ರಕಾಶನ, ಬೆಂಗಳೂರು

ಆಕರ : ಮಾರ್ಗ ಸಂಪುಟ-೬

■■

ವಾಗ್ದೇವಿಯ ಭಂಡಾರದ ಮುದ್ರೆ

೨೦೦೨

ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಡಾ. ಶಾಂತಿನಾಥ ದಿಬ್ಬದ ಅವರು, ಇಂದು ಪ್ರಭಾವಶಾಲಿ ಪ್ರಾಧ್ಯಾಪಕರಾಗಿ ಬೆಳೆದಿದ್ದಾರೆ. ಸರಕಾರದ ಶಿಕ್ಷಣನೀತಿಯ ವಿಪರ್ಯಾಸದಿಂದಾಗಿ ಹನ್ನೆರಡು ವರ್ಷ 'ವನವಾಸ' ಅನುಭವಿಸಿದ ಇವರು, ಅಧಿಕಾರಿಗಳ ಸಾಂಸ್ಥಿಕ ಜವಾಬ್ದಾರಿಯ ಅಭಾವ ಕಾರಣವಾಗಿ ಇಂದು 'ಅಜ್ಞಾತವಾಸ'ದಲ್ಲಿ ಕಾಲಕಳೆಯುತ್ತಲಿದ್ದಾರೆ. ಹೀಗಿದ್ದೂ ಡಾ. ದಿಬ್ಬದ ಅವರು ತಮ್ಮ ವಿದ್ಯಾವ್ಯಸನ ಬತ್ತದಂತೆ ವಹಿಸಿದ ಎಚ್ಚರ ಮೆಚ್ಚತಕ್ಕ ವಿಷಯವೆನಿಸಿದೆ. ವಿದ್ಯಾರ್ಥಿದೆಸೆಯಲ್ಲಿಯೇ ಈ ವ್ಯಸನಕ್ಕೆ ಒಳಗಾಗಿ, ವ್ಯಾಸಂಗದಿಂದ ಅದನ್ನು ವರ್ಧಿಸಿಕೊಳ್ಳುತ್ತಲೇ ಬಂದಿದ್ದಾರೆ. ಇವರ ಇಂಥ ಶ್ರದ್ಧೆಶ್ರಮಗಳನ್ನು ನಾನು ಉದ್ದಕ್ಕೂ ಗುರುತಿಸಿದ್ದೇನೆ; ನನ್ನಂತೆ ಅನೇಕರೂ ಗುರುತಿಸಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯವೆಂದಾಕ್ಷಣ ಮೊದಲು ನೆಪಾಗುವವ ಮಹಾಕವಿ ಪಂಪ. ಅವನ ಭಾಷಿಕ ನಿರ್ಮಾಣಗಳು ಕೇವಲ ಸಾಹಿತ್ಯಕೃತಿಗಳಲ್ಲ, ಅದನ್ನೂ ಒಳಗೊಂಡ ಸಾಂಸ್ಕೃತಿಕ ಸೃಷ್ಟಿಗಳು. ಈ ಸಾಹಿತ್ಯಿಕ, ಸಾಹಿತ್ಯೇತರ ಆಯಾಮಗಳಿಂದಾಗಿ ಕಳೆದ ನೂರು ವರ್ಷಗಳಿಂದ ಕನ್ನಡದ ಯಾವ ಕವಿಯನ್ನೂ ಕುರಿತು ನಡೆಯದಷ್ಟು ದೊಡ್ಡ ಪ್ರಮಾಣದಲ್ಲಿ ಅವನ ಅಭ್ಯಾಸ ನಿರಂತರ ನಡೆದು ಬಂದಿದೆ. ಈ ಅಭ್ಯಾಸಕ್ಕೆ ಹೊಸ ಸೇರ್ಪಡೆಯಾಗಿದೆ "ವಾಗ್ದೇವಿಯ ಭಂಡಾರದ ಮುದ್ರೆ."

ಡಾ. ದಿಬ್ಬದ ಅವರು ಸ್ನಾತಕೋತ್ತರ ಅಭ್ಯಾಸ ಮುಗಿಸುತ್ತಲೇ ಪಂಪನನ್ನು ತೆಕ್ಕೆಗೆ ತೆಗೆದುಕೊಂಡಿದ್ದಾರೆ. ನಿಜವಾದ ಅರ್ಥದಲ್ಲಿ "ಪಂಪನ ಭಕ್ತ"ರಾಗಿ ಬೆಳೆದಿದ್ದಾರೆ. ಬಹುಶಃ ಇವರ ತಲೆಮಾರಿನಲ್ಲಿ ಪಂಪನನ್ನು ಇವರಷ್ಟು ಹಚ್ಚಿಕೊಂಡವರು ಇಲ್ಲವೆಂದೇ ಹೇಳಬೇಕು. ಇದಕ್ಕೆ ಈ ಪುಸ್ತಕದ ಪ್ರಬಂಧಗಳ ವೈವಿಧ್ಯಪೂರ್ಣತೆಯೇ ಸಾಕ್ಷಿಯೆನಿಸಿದೆ.

ಪಂಪನ ಕೃತಿಗಳನ್ನು ಪಠ್ಯ, ಸಾಹಿತ್ಯ, ಸಂಸ್ಕೃತಿ ಈ ಮೂರು ನೆಲೆಗಳಲ್ಲಿ ಅಭ್ಯಸಿಸಿದ ಪ್ರಯತ್ನವಿದು. ಪಂಪಭಾರತ ಹತ್ತಾರು ಸಲ ಪ್ರಕಟವಾದರೂ ಪರಿಷ್ಕರಣಗೊಂಡುದು ಕೇವಲ ಎರಡು ಸಲ. ಈ ಎರಡೂ ಪರಿಷ್ಕರಣಗಳ ಸೋಲು-ಸಾಧನೆಗಳ ತೌಲನಿಕ ವಿವೇಚನೆ ಇಲ್ಲಿದೆ. ಪಂಪನ ಕಾವ್ಯಕಲೆಗೆ ಆಯಾಮಗಳು ಅನೇಕ. ನಿದರ್ಶನಕ್ಕೆಂದು ಭಾರತೀಯ ಕಾವ್ಯಮೀಮಾಂಸೆಯ ರಸ-ಅಲಂಕಾರಗಳ, ಪಾಶ್ಚಾತ್ಯ ಕಾವ್ಯಮೀಮಾಂಸೆಯ ವಸ್ತುವಿನ್ಯಾಸ-ಪ್ರತಿಮಾವಿಧಾನಗಳ ಹಿನ್ನೆಲೆಯಲ್ಲಿ ಕೆಲವು ಆಯಾಮಗಳನ್ನು ಬಿಡಿಸಿ ತೋರಿಸಿದ್ದಾರೆ. ಸಂಸ್ಕೃತಿಯೆನ್ನುವುದು ಬಹುಮುಖಿಯಾದುದು. ಇವುಗಳಲ್ಲಿ ಧಾರ್ಮಿಕ, ಸಾಮಾಜಿಕ, ರಾಜತಾಂತ್ರಿಕ ಈ ಕೆಲವು ಮುಖಗಳ ಅಭ್ಯಾಸ ಪ್ರಸ್ತುತ ಕೃತಿಯ ಮಹತ್ವದ ಭಾಗವೆನಿಸಿದೆ.

ಹೀಗೆ ನಡೆಸಿದ ಪಂಪನ ಕೆಲವು ನೆಲೆಗಳ ಅಧ್ಯಯನದಲ್ಲಿ ಅವನ "ಪ್ರಾದೇಶಿಕ ಪ್ರಜ್ಞೆ"ಯನ್ನು ಮರೆಯದೇ ದಾಖಲಿಸುತ್ತ ಹೋದುದು ಈ ಕೃತಿಯ ಒಟ್ಟು ಸಾಧನೆಯಾಗಿದೆ.

ಶಾಂತಿನಾಥ ದಿಬ್ಬದ, ಧಾರವಾಡ

ಆಕರ : ಮಾರ್ಗ ಸಂಪುಟ-೬

■■

೨೫೯

ವಜ್ರಕುಸುಮ

೨೦೦೩

ಬಹುಮುಖಿ ವ್ಯಕ್ತಿತ್ವದ ಪ್ರೊ. ಬಿ. ಟಿ. ಸಾಸನೂರ ಅವರು ಪ್ರಸಿದ್ಧ ಪ್ರಾಧ್ಯಾಪಕರು; ಪ್ರಾಧ್ಯಾಪಕರ ಪ್ರಾಧ್ಯಾಪಕರು. ಬೌದ್ಧಿಕವಾಗಿ ರೂಪಿಸಿ, ಭೌತಿಕವಾಗಿ ಬದುಕಿಸುವ ಮೂಲಕ ಅವರು, ವಿದ್ಯಾರ್ಥಿಗಳಿಗೆ ಶಿಕ್ಷಕ-ತಂದೆಯೆನಿಸಿದ್ದರು.

ಕಾವ್ಯವನ್ನೇ ಬೋಧಿಸಲಿ, ಶಾಸ್ತ್ರವನ್ನೇ ಬೋಧಿಸಲಿ, ಸೃಜನಶೀಲತೆ ಅವರ ಉಪನ್ಯಾಸದ ಸ್ಥಾಯೀಭಾವ. ಹೀಗಾಗಿ ಅವರ ಬೋಧನ ಪರಂಪರೆ ಇಂದು "ಸಾಸನೂರ ಘರಾಣೆ"ಯಾಗಿ ಬೆಳೆದಿದೆ.

ವಿಜಾಪುರದಲ್ಲಿ ಪ್ರಾಧ್ಯಾಪಕರಾಗಿ, ಬೀದರಿನಲ್ಲಿ ಪ್ರಿನ್ಸಿಪಾಲರಾಗಿ, ಬೆಂಗಳೂರಿನಲ್ಲಿ ಲೋಕಸೇವಾ ಆಯೋಗದ ಸದಸ್ಯರಾಗಿ ವಿಸ್ತಾರಗೊಂಡ ಈ ಕನ್ನಡ ಪ್ರಾಧ್ಯಾಪಕರು, ಸ್ನೇಹಕ್ಕೆ ಬರೆದ ಸೂತ್ರ, ವಿದ್ವತ್ತಿಗೆ ಬರೆದ ವ್ಯಾಖ್ಯಾನ.

ಎಂ.ಎಂ. ಕಲಬುರ್ಗಿ, ಧಾರವಾಡ

ಆಕರ : ಮಾರ್ಗ ಸಂಪುಟ-೬

■■

ನಾಥಸಂಪ್ರದಾಯದ ಇತಿಹಾಸ

೨೦೦೪

ಭಾಷೆ ಸಣ್ಣದಾದರೆ ದೇಶ ಸಣ್ಣದಾಗುತ್ತದೆ. ಹೀಗಾಗದಂತೆ ನೋಡಿಕೊಳ್ಳುವಲ್ಲಿ ಒಳನಾಡಿಗಿಂತ ಗಡಿನಾಡಿನವರ ಹೊಣೆ ಅಧಿಕವಾಗಿರುತ್ತದೆ. ಈ ಪರಮಸತ್ಯವನ್ನು ಅರ್ಥಮಾಡಿಕೊಂಡು ಈವರೆಗೆ ಉತ್ತಮೋತ್ತಮ ಗ್ರಂಥಗಳನ್ನು ಪ್ರಕಟಿಸಿರುವ ಚಿಂಚಣಿ ಸಿದ್ಧಸಂಸ್ಥಾನ ಮಠದ "ಕನ್ನಡ ಜಾಗೃತಿ ಪುಸ್ತಕ ಮಾಲೆ" ಈಗ, ಗಡಿನಾಡಿನಲ್ಲಿ ವಿಶೇಷವಾಗಿರುವ "ನಾಥ ಸಂಪ್ರದಾಯ" ಕುರಿತ ಈ ಕೃತಿಯನ್ನು ಪ್ರಕಟಿಸುತ್ತಿದೆ.

ಕರ್ನಾಟಕ-ಮಹಾರಾಷ್ಟ್ರ ರಾಜ್ಯಗಳ ಸಾಂಸ್ಕೃತಿಕ ಸತ್ಯಗಳನ್ನು ಶೋಧಿಸುತ್ತ ಬಂದ ಮಹಾರಾಷ್ಟ್ರ "ಸಂಶೋಧಕ ತಪಸ್ವಿ" ಶ್ರೀ ರಾ. ಚಿಂ. ಢೇರೆಯವರ ಸಾಹಿತ್ಯವನ್ನು, ನಮ್ಮ ನಾಡಿಗೆ ಪರಿಚಯಿಸಬೇಕೆಂಬ ಉದ್ದೇಶದಿಂದ ಅವರ ಶ್ರೀ ವಿಠ್ಠಲ, ಖಂಡೋಬಾ, ಲಜ್ಜಾಗೌರಿ, ದತ್ತ ಸಂಪ್ರದಾಯ, ನಾಥ ಸಂಪ್ರದಾಯ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಒಂದು ನಿರ್ದಿಷ್ಟ "ಸಾಂಸ್ಕೃತಿಕ ಯೋಜನೆ"ಯ ಅಂಗವಾಗಿ ಈ ಗ್ರಂಥ ರೂಪುಗೊಂಡಿದೆ.

ನಾವು ಬರೆಯುತ್ತ ಬಂದ ರಾಜಕೀಯ ಗಡಿಗೆರೆಗಳನ್ನು ಧಿಕ್ಕರಿಸಿ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಸಂಚರಿಸುತ್ತಲಿರುವ ಧಾರ್ಮಿಕ ಸಂಪ್ರದಾಯಗಳು ಎರಡೂ ರಾಜ್ಯಗಳ ಸಂಘರ್ಷವನ್ನು ಸ್ನೇಹವನ್ನಾಗಿಸಲು ನೆರವಾಗಬೇಕೆಂಬುದು ಈ ಯೋಜನೆಯ ಹಿಂದಿರುವ ಆಶಯ. ನಮ್ಮ ವಿದ್ವಾಂಸರು ಈ ಗ್ರಂಥ ಗವಾಕ್ಷಿಗಳ ಮೂಲಕ ಆ ಪ್ರದೇಶದ ಹೊಸ ಲೋಕಗಳನ್ನು ಅವಲೋಕಿಸಬೇಕೆಂಬ ಆಶಯವೂ ಇಲ್ಲಿದೆ.

ಧಾರ್ಮಿಕ ಕ್ಷೇತ್ರದಲ್ಲಿ ಅವಧೂತ(ನಾಥ), ಆಚಾರ್ಯ, ಅನುಭಾವಿ - ಹೀಗೆ ಮೂರು ಸಂಪ್ರದಾಯಗಳು ಕಂಡುಬರುತ್ತವೆ. ೧೨ನೇ ಶತಮಾನಕ್ಕೆ ಮೊದಲು ಕರ್ನಾಟಕದ ತುಂಬ ಅಸ್ತಿತ್ವದಲ್ಲಿದ್ದ ಅವಧೂತ, ಆಚಾರ್ಯ ಸಂಪ್ರದಾಯಗಳನ್ನು ಹಿಂದೆ ಸರಿಸಿ ಹುಟ್ಟಿಬಂದುದು ಶರಣರ ಅನುಭಾವ ಸಂಪ್ರದಾಯ. ಹೀಗಾಗಿ ಶರಣ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಆ ಮೊದಲಿನ ಅವಧೂತ ಸಂಪ್ರದಾಯದ ಅಭ್ಯಾಸ ಕನ್ನಡಿಗರಿಗೆ ಅವಶ್ಯವಿದೆ. ಈ ಅವಶ್ಯಕತೆಯನ್ನು ಈಡೇರಿಸುವುದು ಪ್ರಸ್ತುತ ಅನುವಾದದ ಉದ್ದೇಶವಾಗಿದೆ.

ಪ್ರೊ. ಚಂದ್ರಕಾಂತ ಪೋಕಳೆ ನಮ್ಮ ನಾಡಿನ ಪ್ರಸಿದ್ಧ ಭಾಷಾಂತರಕಾರರು. ಈವರೆಗೆ ಅನೇಕ ಮರಾಠಿ ಕೃತಿಗಳನ್ನು ಕನ್ನಡಕ್ಕೆ ತಂದ ಇವರ ಸೃಜನಶೀಲ ಭಾಷಾಂತರ ಪ್ರತಿಭೆಗೆ ಪ್ರಸ್ತುತ ಕೃತಿ ಇತ್ತೀಚಿನ ನಿದರ್ಶನವೆನಿಸಿದೆ.

ಚಂದ್ರಕಾಂತ ಪೋಕಳೆ, ಬೆಳಗಾವಿ

ಆಕರ : ಮಾರ್ಗ ಸಂಪುಟ–೬

೨೬೧

ಹರಿಹರ ಕಥಾಕೋಶ

೨೦೦೬

"ರಗಳೆ" ಮಾಧ್ಯಮದ ಮೂಲಕ ಕನ್ನಡದಲ್ಲಿ ಮಾರ್ಗಕ್ಕೆ ಬದಲು ದೇಶೀ ಪರಂಪರೆಯನ್ನು ತೆರೆದವ, ಮಹಾಕವಿ ಹರಿಹರ. ತಮಿಳುನಾಡಿನ ಪುರಾತನರ -ಕನ್ನಡ ನಾಡಿನ ಶರಣರ ಚರಿತ್ರೆಗಳನ್ನು ಬರೆದು, ನಮ್ಮ ಸಾಹಿತ್ಯದಲ್ಲಿ ರಾಜಪ್ರಭುತ್ವಪ್ರಜ್ಞೆಗೆ ಬದಲು ಪ್ರಜಾಪ್ರಭುತ್ವಪ್ರಜ್ಞೆ ಸ್ಥಾಪಿಸಿದವನೀತ. ಶರಣರನ್ನು ಕುರಿತ ಇವನ ಬರವಣಿಗೆಯಂತೂ ಕನ್ನಡ ನೆಲದ ಮೇಲೆ ಸಂಭವಿಸಿದ ಪ್ರಜಾಚಳುವಳಿಯ ಪ್ರಥಮ ಸಾಹಿತ್ಯಿಕ ದಾಖಲೆಯೆನಿಸಿದೆ.

ಹೀಗೆ, ಸಾಹಿತ್ಯಿಕವಾಗಿ ಸಾಮಾಜಿಕವಾಗಿ ತುಂಬ ಮಹತ್ವದ್ದಾಗಿರುವ ಈತನ ಬರವಣಿಗೆ ನಡುಗನ್ನಡ ಭಾಷೆ ಕಾರಣವಾಗಿ, ಒಂದಿಷ್ಟು ಜನವಿದೂರವಾಗಿದ್ದಿತು. ಸರಳ-ಸೃಜನಶೀಲ ಭಾಷೆಯ ಮೂಲಕ ಈ ವಿದೂರತೆಯನ್ನು ನಿವಾರಿಸಬೇಕಿದ್ದ ಬಹುದಿನಗಳ ಆವಶ್ಯಕತೆಯನ್ನು ಪ್ರಸ್ತುತ "ಕಥಾಕೋಶ" ಪೂರೈಸಿಕೊಟ್ಟಿದೆ.

"ಹರಿಹರನ ರಗಳೆಗಳು: ಒಂದು ಸಾಂಸ್ಕೃತಿಕ ಅಧ್ಯಯನ" ವಿಷಯವನ್ನು ಕುರಿತು ಪಿಎಚ್.ಡಿ. ಅಭ್ಯಾಸ ಮಾಡಿರುವ ಡಾ. ಸದಾನಂದ ಪಾಟೀಲ ಅವರು ಈತನ ರಗಳೆಸಾಹಿತ್ಯದ ಸಂವೇದನೆಯನ್ನು ಸರಿಯಾಗಿ ಅರ್ಥಮಾಡಿಕೊಂಡವರು. ಹೆಚ್ಚಿನದಾಗಿ, ಕಾದಂಬರಿ-ನಾಟಕ ರಚನೆಯ ಮೂಲಕ ಸೃಜನಶೀಲ ಬರವಣಿಗೆಯನ್ನು ರೂಢಿಸಿಕೊಂಡವರು. ಈ ಸಾಧನೆಗಳ ನೆಲೆ-ಹಿನ್ನೆಲೆ ಕಾರಣವಾಗಿ, ಹರಿಹರನನ್ನು ಜನಸಮುದಾಯದ ಮಧ್ಯಕ್ಕೆ ಕರೆತಂದ ಈ ಶ್ರಮ ಸಾರ್ಥಕವೆನಿಸಿದೆ.

ಇತ್ತೀಚಿನ ದಿನಗಳಲ್ಲಿ ಶರಣಸಂಸ್ಕೃತಿಯ ಪ್ರಸಾರಕಾರ್ಯವನ್ನು ರಾಷ್ಟ್ರದ ಉದ್ದಗಲಕ್ಕೂ ವಿಸ್ತರಿಸುತ್ತಲಿರುವ "ಬಸವ ಸಮಿತಿ" ಈ ಕೋಶವನ್ನು ಪ್ರಕಟಿಸಿದುದು, ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸಲು ಮಾಡಿದ ಹೊಸ ಪ್ರಯತ್ನವೆನಿಸಿದೆ.

ಸದಾನಂದ ಪಾಟೀಲ, ಧಾರವಾಡ

ಆಕರ : ಮಾರ್ಗ ಸಂಪುಟ–೬

■■

ಕೆರೂರ ವಾಸುದೇವಾಚಾರ್ಯ ಸಮಗ್ರ ಸಂಪುಟ

೨೦೦೭

ಆಧುನಿಕ ಕನ್ನಡ ಸಾಹಿತ್ಯದ ಆದ್ಯರಲ್ಲಿ ಮೈಸೂರಿನ ಬಿ. ವೆಂಕಟಾಚಾರ್ಯ, ಮಂಗಳೂರಿನ ಗುಳವಾಡಿ ವೆಂಕಟರಾವ್, ಅಗಡಿಯ ಗಳಗನಾಥ, ಬಾಗಿಲುಕೋಟೆಯ ಕೆರೂರ ವಾಸುದೇವಾಚಾರ್ಯ ಮುಖ್ಯರು. ರಾಷ್ಟ್ರೀಯ ಪ್ರಜ್ಞೆ -ಸಮಾಜ ಸುಧಾರಣಾ ನೀತಿಗಳ ನೆಲೆಯಲ್ಲಿ ಸಾಹಿತ್ಯವನ್ನು ಸೃಷ್ಟಿಸಿದ ಇವರಲ್ಲಿ ಕೆರೂರ ವಾಸುದೇವಾಚಾರ್ಯರ 'ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ' ವಿದೇಶದಲ್ಲಿ ಅಸ್ತಿತ್ವಕ್ಕೆ ಬಂದುದು ಅನಿರೀಕ್ಷಿತ ಘಟನೆ. ೧೦೦ಳರಲ್ಲಿ ಕನ್ನಡ ಸಂಘಗಳ ಆಮಂತ್ರಣದ ಮೇರೆಗೆ ನಾನು ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಸಿಂಗಪೂರ, ಮಲೇಶಿಯಾ ದೇಶಗಳಿಗೆ ಹೋಗಿದ್ದ ಸಂದರ್ಭ. ಒಂದು ದಿನ ನ್ಯೂಜಿಲ್ಯಾಂಡ್ ದೇಶದ ಆಕ್ಲಂಡ್ ನಗರದ ಸುಪ್ರಸಿದ್ಧ ವೈದ್ಯ ಡಾ. ಗೋಪಾಲ ಛಬ್ಬಿ ಅವರ ಮನೆಯಲ್ಲಿ ಭೋಜನಕೂಟ - ಸಾಹಿತ್ಯ ಸಲ್ಲಾಪ. ಆಗ ಡಾ. ಛಬ್ಬಿಯವರು ತಾವು ಕೆರೂರ ವಾಸುದೇವಾಚಾರ್ಯರ ಸಂಬಂಧಿಕರೆಂಬ ಅಭಿಮಾನವನ್ನು ವ್ಯಕ್ತಪಡಿಸಿದರು. ಇದನ್ನು ನಾನು ಕನ್ನಡಕ್ಕೆ ಸದುಪಯೋಗಪಡಿಸಿಕೊಂಡುದರ ಫಲವೇ ಈ ಯೋಜನೆ.

ಡಾ. ಛಬ್ಬಿಯವರ ಮಾತೃಭಾಷಾ ಪ್ರೀತಿ- ಪಿತೃಪರಂಪರೆಯ ಅಭಿಮಾನ, ಶ್ರೀಮತಿ ಛಬ್ಬಿಯವರ ಸಾಹಿತ್ಯಿಕ ಆಸಕ್ತಿ ಇತ್ಯಾದಿಗಳು ಈ ಯೋಜನೆಯ ಮೂಲಧನವೆನಿಸಿವೆ.

ಇವರು ನೀಡಿದ ದೊಡ್ಡ ಮೊತ್ತದ ಧನಸಹಾಯದಿಂದಾಗಿ ವಾಸುದೇವಾಚಾರ್ಯರ ಸಾಹಿತ್ಯ ಈಗ ಮತ್ತೆ ಕನ್ನಡಿಗರ ಕೈಸೇರುವಂತಾಗಿದೆ. ವಿದೇಶದಲ್ಲಿರುವ ಕನ್ನಡಿಗರಿಗೆ ಆದರ್ಶವಾಗುವ ಡಾ. ಛಬ್ಬಿಯವರ ಈ ಔದಾರ್ಯಕ್ಕೆ ನಮ್ಮೆಲ್ಲರ ಕೃತಜ್ಞತೆಗಳು ಸಲ್ಲುತ್ತವೆ. ಈ ಯೋಜನೆಯನ್ನು ಸಾಕಾರಗೊಳಿಸುವಲ್ಲಿ ಧಾರವಾಡ ಮನೋಹರ ಗ್ರಂಥಮಾಲೆಯ ಡಾ. ರಮಾಕಾಂತ ಜೋಶಿ ಅವರು ನೀಡಿದ ಸಹಕಾರ ಸಣ್ಣದೇನಲ್ಲ. ಈ ಉಭಯ ವ್ಯಕ್ತಿಗಳ ಸಹಯೋಗದಲ್ಲಿ ವಾಸುದೇವಾಚಾರ್ಯರು ಮತ್ತೆ ನೂರು ವರ್ಷ ಬದುಕಿದಂತಾಗಿದೆ. ಸುವರ್ಣ ಕರ್ನಾಟಕ ಸಂದರ್ಭದಲ್ಲಿ ವಿದೇಶಿ ಕನ್ನಡಿಗನೊಬ್ಬನ ಈ ಕೊಡುಗೆ ಒಂದು ಸ್ಮರಣೀಯ ಘಟನೆಯಾಗಿದೆ.

ಮನೋಹರ ಗ್ರಂಥಮಾಲೆ, ಧಾರವಾಡ

ಆಕರ : ಮಾರ್ಗ ಸಂಪುಟ–೬

೨೬೩

ಬೆಳಗಾವಿ ಜಿಲ್ಲೆಯ ವಿದ್ವತ್ಪರಂಪರೆ

೨೦೦೭

ಬೆಳಗಾವಿ ಜಿಲ್ಲೆಗೆ ಕಿತ್ತೂರು ಸಂಸ್ಥಾನದ ಹಿನ್ನೆಲೆಯಿದೆ. ಅಲ್ಲಿಯ ಆಸ್ಥಾನ ವಿದ್ವಾಂಸರ ಚಟುವಟಿಕೆ ಮತ್ತು ಪಾಠಶಾಲಾ ಶಿಕ್ಷಣಪದ್ಧತಿಗಳು ಈ ಪ್ರದೇಶದ ವಿದ್ವತ್ತಿನ ಮೊದಲ ಘಟ್ಟವನ್ನು ರೂಪಿಸಿದವು.

ಇದರ ಮುಂದುವರಿಕೆಯೆನಿಸಿದ ಬ್ರಿಟಿಶ್ ಆಡಳಿತದ ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯ ಪರಿಣಾಮವಾಗಿ, ಬ್ರಿಟಿಶ್ ರಾಜಧಾನಿಯಾದ ಮುಂಬೈ, ನಿಕಟಪೂರ್ವದ ರಾಜಧಾನಿಗಳಾದ ಪುಣೆ, ಕೊಲ್ಹಾಪುರಗಳು ಉನ್ನತ ಶಿಕ್ಷಣದ ಕೇಂದ್ರಗಳಾಗಿ ಬೆಳೆದವು. ಈ ಪ್ರದೇಶಕ್ಕೆ ಹೊಂದಿಕೊಂಡಿದ್ದ ಕಿತ್ತೂರು ಕರ್ನಾಟಕದ ಬೆಳಗಾವಿ ಜಿಲ್ಲೆಗೆ ಸಹಜವಾಗಿಯೇ ಇದರ ಲಾಭ ಪ್ರಾಪ್ತವಾಯಿತು.

ಇದಕ್ಕೆ ಪೂರಕವೆಂಬಂತೆ, ಮೊದಲಿನಿಂದಲೂ ಬೆಳಗಾವಿ ವಿಭಾಗೀಯ ಕೇಂದ್ರಸ್ಥಳವಾಗಿದ್ದುದರಿಂದ, ವಿದ್ಯಾಭ್ಯಾಸದ ಮೂಲಭೂತ ಅವಕಾಶಗಳು ಈ ಜಿಲ್ಲೆಯಲ್ಲಿ ಕೇಂದ್ರಿಕರಣಗೊಂಡವು. ಇಂಥ ಒಂದಕ್ಕಿಂತ ಹೆಚ್ಚು ಕಾರಣಗಳಿಂದಾಗಿ ಈ ಜಿಲ್ಲೆಯ ಜನ ವಿದ್ವತ್ತಿಗೆ ಸ್ಪಂದಿಸಿ ಬೆಳೆದರು. ಗಮನಿಸಬೇಕಾದ ಅಂಶವೆಂದರೆ, ಇವರೆಲ್ಲ ವಿದ್ವತ್ತಿನ ವಿಕಾಸಕ್ಕೆ ಮತ್ತು ವೃತ್ತಿಜೀವನಕ್ಕೆ ದೊಡ್ಡ ಅವಕಾಶಗಳಿದ್ದ ಮುಂಬೈ, ಪುಣೆ, ಕೊಲ್ಹಾಪುರ, ಧಾರವಾಡ ಮೊದಲಾದ ನಗರಗಳಿಗೆ ವಲಸೆ ಹೋದರು. ಹೀಗಾಗಿ ಇದು ವಿದ್ವತ್ತಿನಿಂದ ತುಂಬಿದ ಜಿಲ್ಲೆಯಾಗಿ ಉಳಿಯದೆ, ವಿದ್ವಾಂಸರ - ರಾಷ್ಟ್ರ ಮಟ್ಟದ ವಿದ್ವಾಂಸರು ಹುಟ್ಟಿದ ಜಿಲ್ಲೆಯೆಂಬ ಕೀರ್ತಿ ಉಳಿಸಿಕೊಂಡಿತು.

ಇವರೆಲ್ಲ ಅಂದಂದಿನ ಆವಶ್ಯಕತೆಯಾಗಿದ್ದ ಗ್ರಂಥಸಂಪಾದನೆ, ವ್ಯಾಕರಣ, ಛಂದಸ್ಸು, ನಿಘಂಟು ಕ್ಷೇತ್ರಗಳಿಗೆ, ಚಾರಿತ್ರಿಕ ಸಂಶೋಧನೆಗಿಂತ ಸಾಂಸ್ಕೃತಿಕ ಸಂಶೋಧನೆಗೆ ದೊಡ್ಡ ಕೊಡುಗೆ ನೀಡಿದ್ದಾರೆ.

ವಿಚಾರ ಸಂಕಿರಣದ ಮೂಲಕ ಈ ವಿದ್ವತ್ ಪರಿವಾರವನ್ನು ಗುರುತಿಸಿ, ಗ್ರಂಥವನ್ನು ರೂಪಿಸಿದ ಸಂಪಾದಕರಾದ ಡಾ. ಗುರುಪಾದ ಮರಿಗುದ್ದಿಯವರಿಗೆ, ಈ ಕೃತಿಯನ್ನು ಪ್ರಕಟಿಸಿದ ಬೆಳಗಾವಿಯ ಶ್ರೀ ನಾಗನೂರು ಮಠದ 'ಲಿಂಗಾಯತ ಸಾಹಿತ್ಯ ಅಕಾಡೆಮಿ'ಯ ಸಂಸ್ಕೃತಿ ಪ್ರೀತಿಗೆ ಕನ್ನಡಿಗರ ಅಭಿನಂಧನೆಗಳು ಸಲ್ಲುತ್ತದೆ.

ಗುರುಪಾದ ಮರಿಗುದ್ದಿ, ಸಂಕೇಶ್ವರ

ಆಕರ : ಮಾರ್ಗ ಸಂಪುಟ-೬

೨೬೪

ಇದು ಭಾರತ

೨೦೦೭

ನಾನು ಕಂಡ ಅದ್ಭುತ ವ್ಯಕ್ತಿಗಳಲ್ಲಿ ಶ್ರೀ ಸುರೇಶ ಕುಲಕರ್ಣಿಯವರೂ ಒಬ್ಬರು. ಅವರ ಈ ಅದ್ಭುತಕ್ಕೆ ಜ್ಞಾನ-ಕ್ರಿಯೆಗಳೆಂಬ ಎರಡು ಮಗ್ಗಲುಗಳಿವೆ, ಇವೆರಡನ್ನೂ ಪೂರ್ಣಪ್ರಮಾಣದಲ್ಲಿ ದುಡಿಸಿಕೊಳ್ಳುವ ಛಲವಿದೆ. ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ, ಇನ್ನೊಬ್ಬರ ಕೆಲಸವನ್ನು ಇನ್ನೂ ಅಚ್ಚುಕಟ್ಟಾಗಿ ಪೂರೈಸುವ ಗುಣ ಇವರಲ್ಲಿದೆ. ಹೀಗಾಗಿ ನನ್ನ ದೃಷ್ಟಿಯಲ್ಲಿ ಶ್ರೀ ಕುಲಕರ್ಣಿಯವರು "ಪರಿಪೂರ್ಣ"ಕ್ಕೆ ಪರ್ಯಾಯವೆನಿಸಿದ್ದಾರೆ. ಇದಕ್ಕೆ "ಇದು ಭಾರತ" ನಮ್ಮ ಕಣ್ಣ ಮುಂದಿನ ನಿದರ್ಶನವೆನಿಸಿದೆ.

ಶ್ರೀ ಕುಲಕರ್ಣಿ ಅವರು ಒಬ್ಬ ಶಿಕ್ಷಕ. ಮಕ್ಕಳಲ್ಲಿ ಶಿಸ್ತು-ಆದರ್ಶಗಳನ್ನು ಇವರು ಬಯಸುತ್ತಾರೆ; ಅವರಿಗೆ ಕಲಿಸುತ್ತಾರೆ. ಇದರಿಂದಾಗಿ ಇವರು ಅಲ್ಲಲ್ಲಿ ಆದರ್ಶದ ಆವರಣಗಳನ್ನು ನಿರ್ಮಿಸುತ್ತ ಬಂದಿದ್ದಾರೆ. ಬೋಧನೆಯೇ ಇರಲಿ, ಬೋಧನೇತರವೇ ಇರಲಿ, ಅಲ್ಲೆಲ್ಲ "ಸುರೇಶಮುದ್ರೆ" ಮೂಡಿಸುತ್ತ ಬೆಳೆದಿದ್ದಾರೆ.

ಶಿಕ್ಷಕರಾಗಿರುವ ಸುರೇಶ ಅವರ ಜ್ಞಾನದಲ್ಲಿ ವಿಜ್ಞಾನವೂ ಇದೆ, ಕಲೆಯೂ ಇದೆ. ಇವೆರಡೂ ಪರಸ್ಪರ ವಿರುದ್ಧವಲ್ಲ, ಪೂರಕವೆಂಬುದನ್ನು ಇವರ ಕ್ರಿಯೆಗಳಲ್ಲಿ ಕಾಣಬಹುದು. ಅಂದರೆ ಕಲೆ ವೈಜ್ಞಾನಿಕರವಾಗಿರುತ್ತದೆ. ವಿಜ್ಞಾನ ಕಲಾತ್ಮಕವಾಗಿರುತ್ತದೆ. ಹೀಗಾಗಿ ಇವರ ಕೆಲಸಗಳು ವಿಜ್ಞಾನವಾಗಿ ಓದಿಸಿಕೊಳ್ಳುತ್ತವೆ. ಕಲೆಯಾಗಿ ನೋಡಿಕೊಳ್ಳುತ್ತವೆ. ಈ ಮಾತಿಗೆ ಮತ್ತೆ ಈ ಗ್ರಂಥವೇ ಉದಾಹರಣೆಯೆನಿಸಿದೆ.

ದೇಶವೆನ್ನುವುದು ಭೌತಿಕ-ಸಾಂಸ್ಕೃತಿಕ ಕೋಶ. ಈ ಎರಡೂ ಆಯಾಮಗಳನ್ನು ತಿಳಿದುಕೊಳ್ಳುವುದೇ ಅದನ್ನು ಪೂರ್ಣವಾಗಿ ಗ್ರಹಿಸುವುದಾಗಿದೆ. ಈ ದೃಷ್ಟಿಕೋನದ ನೆಲೆಯಲ್ಲಿ ಹುಟ್ಟಿಕೊಂಡಿದೆ, 'ಇದು ಭಾರತ.' ಗಣರಾಜ್ಯವಾಗಿರುವ ಈ ದೇಶದಲ್ಲಿ ಹಲವು ರಾಜ್ಯಗಳಿವೆ. ಒಂದೊಂದು ರಾಜ್ಯಕ್ಕೆ ಒಂದೊಂದು ವೈಶಿಷ್ಟ್ಯವಿದೆ. ಈ ವೈಶಿಷ್ಟ್ಯದಲ್ಲಿ ಒಳ ವೈಶಿಷ್ಟ್ಯಗಳೂ ಇವೆ. ಇವೆಲ್ಲವನ್ನು ಸಂಗ್ರಹಿಸುವುದು, ಸಂಯೋಜಿಸುವುದು ಅಂತಿಮವಾಗಿ ಒಂದು ಸೃಜನಶೀಲ ಆಕಾರಕೊಡುವುದು ಇಲ್ಲಿ ಮಾಡಬೇಕಾಗುತ್ತದೆ. ಶ್ರೀ ಕುಲಕರ್ಣಿಯವರು ಈ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಪೂರೈಸಿದ್ದಾರೆ.

ಇದು ಓದುವ ಪುಸ್ತಕವೂ ಹೌದು, ನೋಡುವ ಪುಸ್ತಕವೂ ಹೌದು. ಒಂದರ್ಥದಲ್ಲಿ ಇವೆರಡರ ಸ್ಪರ್ಧೆ ಇಲ್ಲಿ ಎದ್ದು ಕಾಣುತ್ತದೆ. ಹೀಗಾಗಿ ಓದುಗನಿಗೆ ಇಲ್ಲಿ ಎರಡೂ ಬಗೆಯ ತೃಪ್ತಿಸಿಗುತ್ತದೆ. ಆರಂಭದಲ್ಲಿ ಭಾರತದೇಶವನ್ನು ಸ್ಥೂಲವಾಗಿ ವರ್ಣಿಸಿ, ಬಳಿಕ ಅದನ್ನು ಪೂರ್ವ ಪಶ್ಚಿಮ ದಕ್ಷಿಣ ಉತ್ತರ ಮಧ್ಯವೆಂದು ವಿಭಾಗಿಸಿ, ಈ ವಿಭಾಗಗಳಲ್ಲಿ ಸಮಾವೇಶಗೊಳ್ಳುವ ಒಂದೊಂದು ರಾಜ್ಯವನ್ನು, ಹೆಚ್ಚಿನದಾಗಿ ಬಾಹ್ಯದ್ವೀಪಗಳನ್ನು ಶಾಬ್ದಿಕವಾಗಿ-ಚಾಕ್ಷುಷವಾಗಿ ಬಿಡಿಸಿ ಇಟ್ಟ ರೀತಿ ತುಂಬ ಸಮರ್ಪಕವೆನಿಸಿದೆ. ಕೇವಲ ವಿವರಣೆಯಲ್ಲಿ ಪಠ್ಯ ಅವಸಾನಗೊಳ್ಳದೆ, ಇದು ಅಂತಿಮದಲ್ಲಿ ಪ್ರಶ್ನೆಕೋಶವೂ ಆಗಿರುವುದು ಒಂದು ವಿಶೇಷ. ಈ ಪ್ರಶ್ನೆಗಳು ಪರೀಕ್ಷೆಗೆ ಒಡ್ಡಿ, ಓದುಗನನ್ನು ವಿಷಯತಜ್ಞನನ್ನಾಗಿ ಮಾಡುತ್ತವೆ.

ಇದು ಭಾರತದೇಶವನ್ನು ಕುರಿತ ಮಾಹಿತಿಕೋಶ, ವಿಶ್ವಕೋಶ ಮಾದರಿಯ ದೇಶಕೋಶ. ಅನೇಕ ಮೂಲಗಳಿಂದ ಮಾಹಿತಿ ಸಂಗ್ರಹಿಸುವುದು ಸುಲಭ ಕೆಲಸವೇನಲ್ಲ. ಇದು ಹಸಿವು, ಶ್ರಮಗಳನ್ನು ಅಪೇಕ್ಷಿಸುತ್ತದೆ.

ಶ್ರೀ ಕುಲಕರ್ಣಿಯವರ ಜ್ಞಾನದ ಹಸಿವು ದೊಡ್ಡದು. ಅದನ್ನು ಹಿಂಗಿಸಿಕೊಳ್ಳಲು ಅವರು ದುಡಿಯುವ ರೀತಿ ಇನ್ನೂ ದೊಡ್ಡದು. ಈ ಎರಡು ಕಾರಣಗಳಿಂದಾಗಿ ದೊಡ್ಡ ಸಂಗ್ರಹವಾಗಿರುವ ಈ ಪುಟ್ಟಕೃತಿರಚನೆಗಾಗಿ ಶ್ರೀ ಸುರೇಶ ಕುಲಕರ್ಣಿ ಅವರಿಗೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ.

ಸುರೇಶ ಕುಲಕರ್ಣಿ, ಧಾರವಾಡ

ಆಕರ : ಮಾರ್ಗ ಸಂಪುಟ-೬

■■

೨೬೫

ಸಿರಸಂಗಿ ಸಂಸ್ಥಾನ : ಸಂಪುಟ ೧-೨

೨೦೦೭

ಬೆಂಕಿಯಲ್ಲಿ ಬಿದ್ದ ಹುಲ್ಲು ಬೂದಿಯಾಗುತ್ತದೆ; ಕಲ್ಲು ಸೀಳುತ್ತದೆ; ಕಬ್ಬಿಣ ಕರಗುತ್ತದೆ. ಬಂಗಾರ ಮಾತ್ರ ಬೂದಿಯಾಗದೆ, ಸೀಳದೆ, ಕರಗದೆ ಮತ್ತಷ್ಟು ಹೊಳೆಯುತ್ತದೆ. ಈ ಮಾತು, ದತ್ತಕ ತಾಯಿಯ ಹಿಂಸೆ, ಹೆಂಡಿರು-ಮಕ್ಕಳ ಮರಣ ಇತ್ಯಾದಿಗಳಿಂದ ಬೆಂದು, ಕೊನೆಯಲ್ಲಿ ಐತಿಹಾಸಿಕ 'ಮೃತ್ಯುಪತ್ರ' ಬರೆಯುವ ಮೂಲಕ, ಬಂಗಾರದಂತೆ ಬೆಳಗಿದ ಶ್ರೀ ಸಿರಸಂಗಿ ಲಿಂಗರಾಜರಿಗೆ ಸರಿಯಾಗಿ ಅನ್ವಯಿಸುತ್ತದೆ.

"ನನ್ನ ಹತ್ತು ಹಳ್ಳಿಗಳ ಸಮಸ್ತ ಸಂಸ್ಥಾನವನ್ನು ಲಿಂಗಾಯತ ಸಮಾಜದ ಶೈಕ್ಷಣಿಕ ಅಭಿವೃದ್ಧಿಗೋಸುಗ ದಾನವಾಗಿ ನೀಡಿದ್ದೇನೆ" ಎಂಬ ಅವರ ಮೃತ್ಯುಪತ್ರದ ಪ್ರಕಾರ 'ನವಲಗುಂದ ಸಿರಸಂಗಿ ಟ್ರಸ್ಟ್' ೧೯೦೬ ರಲ್ಲಿ ಅಸ್ತಿತ್ವಕ್ಕೆ ಬಂದಿತು. ಹೀಗೆ ಒಂದು 'ಸಂಸ್ಥಾನ'ವು ಒಂದು 'ಟ್ರಸ್ಟ್' ಆಗಿ ಪರಿವರ್ತನೆಗೊಂಡುದು ಭಾರತೀಯ ಸಂಸ್ಥಾನಗಳ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯೆನಿಸಿದೆ.

ಜಿಲ್ಲಾಕೇಂದ್ರ ಬೆಳಗಾವಿಯಲ್ಲಿ ಸ್ಥಾಪನೆಗೊಂಡ ಈ ಟ್ರಸ್ಟದ ಶಿಷ್ಯವೇತನ ಪಡೆದು ಶ್ರೀ ಬಿ. ಡಿ. ಜತ್ತಿ, ಡಾ. ಡಿ. ಸಿ. ಪಾವಟೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ರತ್ನಪ್ಪಣ್ಣ ಕುಂಬಾರ, ಡಾ. ಎಂ. ಸಿ. ಮೋದಿ ಮೊದಲಾದ ಗಣ್ಯರು ಬಾಳಿ ಬೆಳಗಿದ್ದಾರೆ. ಈಗಲೂ ಪ್ರತಿವರ್ಷ ನೂರಾರು ವಿದ್ಯಾರ್ಥಿಗಳು ಇದರ ಲಾಭ ಪಡೆಯುತ್ತಲಿದ್ದಾರೆ.

ಲಿಂಗರಾಜರು ಸಮಾಜಕ್ಕೆ ಮಾಡಿದ ಈ ಉಪಕಾರದ ಸ್ಮಾರಕಗಳೆಂಬಂತೆ ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜು, ವಿಜಾಪುರದಲ್ಲಿ ಲಿಂಗರಾಜ ಹಾಸ್ಟೆಲ್, ಧಾರವಾಡದಲ್ಲಿ ಸಿರಸಂಗಿ ಲಿಂಗರಾಜ ವಿವಿಧೋದ್ದೇಶ ಸಂಘ, ದೇವಿಹೊಸೂರಿನಲ್ಲಿ ಸಿರಸಂಗಿ ಲಿಂಗರಾಜ ಸಂಶೋಧನ ಕೇಂದ್ರ ಅಸ್ತಿತ್ವಕ್ಕೆ ಬಂದಿವೆ. ಬೇರೆ ಬೇರೆ ಊರುಗಳಲ್ಲಿ ಲಿಂಗರಾಜರ ಪುತ್ಥಳಿ ಸ್ಥಾಪನೆಗೊಂಡಿವೆ. ರಸ್ತೆ-ಬಡಾವಣೆಗಳಿಗೆ ಅವರ ನಾಮಕರಣ ಮಾಡಿದ್ದಾರೆ. ಸಂಘ-ಸಂಸ್ಥೆಗಳಲ್ಲಿ ಜಯಂತಿ-ಪುಣ್ಯತಿಥಿ ಜರಗುತ್ತಲಿವೆ. ಕವಿಗಳೂ ವಿದ್ವಾಂಸರೂ ಕಾವ್ಯ, ನಾಟಕ, ಜೀವನ

ಚರಿತ್ರೆ, ಪಿಎಚ್.ಡಿ. ಪ್ರಬಂಧ ರಚಿಸಿದ್ದಾರೆ. ಹಳ್ಳಿ-ಹಳ್ಳಿಗಳಲ್ಲಿ ಸ್ತ್ರೀಯರು ಕುಟ್ಟುವ-ಬೀಸುವ ಪದ, ಪುರುಷರು ಲಾವಣಿಪದ ಕಟ್ಟಿ ಹಾಡುತ್ತಲಿದ್ದಾರೆ. ಹೀಗೆ ಸಂಸ್ಥಾನವನ್ನು ಸಾಮಾಜೀಕರಣಗೊಳಿಸುವ ಮೂಲಕ ಜನ-ಮನದಲ್ಲಿ ಸುಳಿವ ಶಾಸನವಾಗಿರುವ ಲಿಂಗರಾಜರ ಲಿಂಗೈಕ್ಯ (೧೯೦೬-೨೦೦೬) ಶತಮಾನೋತ್ಸವದ ಅಂಗವಾಗಿ ಈಗ ಎರಡು ಸಾಹಿತ್ಯ ಸಂಪುಟಗಳು ಪ್ರಕಟವಾಗುತ್ತಲಿವೆ.

ಸಿರಸಂಗಿ ಸಂಸ್ಥಾನ : ಸಂಪುಟ ೧-೨, ಪ್ರ. ನವಲಗುಂದ ಸಿರಸಂಗಿ ಟ್ರಸ್ಟ್, ಬೆಳಗಾವಿ, ೨೦೦೭.

ಆಕರ : ಮಾರ್ಗ ಸಂಪುಟ-೬

■■

೨೬೬

ರಂಗ-ವೃತ್ತಿರಂಗ

೨೦೦೮

ಪ್ರೀತಿ - ಸಿಟ್ಟುಗಳಿಂದ ಈ ಮಾತುಗಳನ್ನು ಬರೆಯುತ್ತಲಿದ್ದೇನೆ. ಪ್ರೀತಿಗೆ ಕಾರಣ, ಡಾ. ಮೃತ್ಯುಂಜಯ ಹೊರಕೇರಿ ಅವರು ನಿರಾಳ ಮನಸ್ಸಿನ ವಿದ್ಯಾರ್ಥಿಮಿತ್ರರಾಗಿರುವುದು ಮತ್ತು ಉತ್ತಮ ಬರೆವಣಿಗೆಯ ಲಕ್ಷಣ ಹೊಂದಿರುವುದು. ಸಿಟ್ಟಿಗೆ ಕಾರಣ, ಹೀಗಿದ್ದೂ ಇವರು ಬರೆವಣಿಗೆಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳದಿರುವುದು. ಇದಕ್ಕೆ, ಅವರು ದುಡಿಯುತ್ತಲಿರುವ 'ವನವಾಸ' ರೂಪದ ಪರಿಸರ ಕಾರಣವೆಂದು ಹೇಳಬಹುದಾದರೂ, ಅವರವೇ ಆದ ಅನ್ಯಕಾರಣಗಳೂ ಇವೆ.

ಅದೇನೇ ಇರಲಿ, ತಮ್ಮ 'ಅವಿಭಕ್ತಪ್ರಜ್ಞೆ'ಯಿಂದ ಸಂಡೂರು ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಲ್ಲಿ ಪ್ರೀತಿಯ ವಾತಾವರಣವನ್ನು ಸೃಷ್ಟಿಸಿದುದು, ಗ್ರಾಮೀಣ ಪರಿಸರದಲ್ಲಿ ಕನ್ನಡದ ಪರಿಚಾರಕರಂತೆ ಸೇವೆ ಸಲ್ಲಿಸಿದುದು, ಇವರ ಸಾಧನೆಗಳೆನಿಸಿವೆ. ಇಂಥ ಆವರಣ-ವಾತಾವರಣಗಳ ಹಿನ್ನೆಲೆಯಲ್ಲಿ ಸೃಷ್ಟಿಯಾದ ಕೃತಿಯಾಗಿದೆ, "ರಂಗ-ವೃತ್ತಿರಂಗ."

ಪುಸ್ತಕದಿಂದ ಪುಸ್ತಕ ಹುಟ್ಟಿಸುವ ಬುದ್ಧವಂತರ ಸಂಕೀರ್ಣ ಬರವಣಿಗೆಗಿಂತ ನೇರ ಅನುಭವದ ನೆಲೆಯಲ್ಲಿ ಪುಸ್ತಕ ಹುಟ್ಟಿಸುವ ಶ್ರದ್ಧಾವಂತರ ಸರಳ ಬರವಣಿಗೆ ಹೆಚ್ಚು ಹಿತವೆನಿಸುತ್ತದೆ. ಹಳೆಯ ಶೋಧ - ವಿಚಾರಗಳಿಗೆ ಒಂದಿಷ್ಟು ಹೊಸ ಅಂಶ ಸೇರಿಸುವ ಇಂಥವರ ಬರವಣಿಗೆ ಪ್ರಯೋಜಕವೂ ಎನಿಸುತ್ತದೆ. ಡಾ. ಮೃತ್ಯುಂಜಯ ಹೊರಕೇರಿಯವರ 'ರಂಗ-ವೃತ್ತಿರಂಗ' ಈ ಬಗೆಯ ಪುಸ್ತಕವಾಗಿದೆ.

ಹಳ್ಳಿಯಲ್ಲಿ ಹುಟ್ಟಿ, ನಗರದಲ್ಲಿ ಬೆಳೆದ ಶ್ರೀ ಹೊರಕೇರಿಯವರು, ಹಳ್ಳಿಯಲ್ಲಿ ಹುಟ್ಟಿದ ಹವ್ಯಾಸಿ ನಾಟಕರಂಗ, ನಗರದಲ್ಲಿ ಬೆಳೆದ ವೃತ್ತಿನಾಟಕರಂಗಗಳ ಜೊತೆಗೆ ಹೆಜ್ಜೆ ಹಾಕುತ್ತ ಬಂದವರು. ಇದಲ್ಲದೆ ರಂಗಭೂಮಿಯನ್ನು ಒಂದು ವ್ಯಸನವೆಂಬಂತೆ - ವ್ಯಾಸಂಗವೆಂಬಂತೆ ಅವಲೋಕಿಸುತ್ತ - ಅಧ್ಯಯನ ಮಾಡುತ್ತ

ಬಂದವರು. ಹೀಗಾಗಿ ಇವರ ಬರವಣಿಗೆಯಲ್ಲಿ ನೇರವಾಗಿ ಸಂಗ್ರಹಿಸಿದ ವಿಪುಲ ಮಾಹಿತಿಯಿದೆ, ಸ್ವಾನುಭವ ವ್ಯಾಖ್ಯಾನವಿದೆ. ಈ ಪುಸ್ತಕದ ಮಹತ್ವವಿರುವುದು ಇಲ್ಲಿ.

ಮೃತ್ಯುಂಜಯ ಹೊರಕೇರಿ, ಸಂಡೂರ

ಆಕರ : ಮಾರ್ಗ ಸಂಪುಟ–೬

■■

೨೬೭

ವಾರದ ಮಲ್ಲಪ್ಪನವರು

೨೦೦೮

ಆಧುನಿಕ ಲಿಂಗಾಯತ ಸಮಾಜದ ಮೊದಲ ತಲೆಮಾರಿನ ಪುಣ್ಯಪುರುಷರಲ್ಲಿ ಸೊಲ್ಲಾಪುರದ ಶ್ರೀ ವಾರದ ಮಲ್ಲಪ್ಪನವರದು (೧೮೫೧-೧೯೧೧) ಗಣ್ಯ ಹೆಸರು. ವಿಕ್ಟೋರಿಯಾ ಮಹಾರಾಣಿ ಕಾಲದ ಭಾರತೀಯ ೧೨ ಜನ ಅಗ್ರಗಣ್ಯ ವ್ಯಾಪಾರಿಗಳಲ್ಲಿ ಒಬ್ಬರೆನಿಸಿದ್ದ ಇವರು, ಕೃಷಿ-ವಾಣಿಜ್ಯಗಳ ಮೂಲಕ ಗಳಿಸಿದ್ದ ಹಣದ ಬಹುಪಾಲನ್ನು ಸಮಾಜದ ಅಭಿವೃದ್ಧಿಗಾಗಿ ವಿನಿಯೋಗಿಸಿದರು. ಅಂದಿನ ಶಾಲಾ ಪಠ್ಯಪುಸ್ತಕದಲ್ಲಿ "ದಾನಶೂರ ವಾರದ ಮಲ್ಲಪ್ಪನವರು" ಹೆಸರಿನ ಪಾಠವಿದ್ದುದು, ಅವರ ಘನತೆಗೆ ಸಾರ್ವಜನಿಕ ಸಾಕ್ಷಿಯಾಗಿದೆ.

"ಆಧುನಿಕತೆ" ಮಲ್ಲಪ್ಪನವರ ದೃಷ್ಟಿಧೋರಣೆಯಾಗಿದ್ದ ಕಾರಣ, ಅವರು ಕೃಷಿ-ವಾಣಿಜ್ಯ ಮೊದಲಾದ ಕ್ಷೇತ್ರಗಳಲ್ಲಿ ಹೊಸತನವನ್ನು ಅಳವಡಿಸುತ್ತ ಬೆಳೆದರು. ಜೊತೆಗೆ ಧರ್ಮ, ಸಮಾಜ, ಶಿಕ್ಷಣ ಇತ್ಯಾದಿ ಕ್ಷೇತ್ರಗಳನ್ನು ಪ್ರೋತ್ಸಾಹಿಸುತ್ತ, ಲಿಂಗಾಯತ ವ್ಯಕ್ತಿಯೊಬ್ಬ ಹೇಗೆ ಸಮಾಜದಲ್ಲಿ ವಿಸ್ತರಿಸಿಕೊಳ್ಳಬೇಕೆಂಬುದಕ್ಕೆ ನಿದರ್ಶನವೆನಿಸಿದರು. "ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ" ಎಂಬ ಬಸವವಾಣಿಯನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಂಡು ಬದುಕಿದರು.

ಈ ಪುಣ್ಯಪುರುಷನ ಮರಾಠಿ ಮೂಲದ ಸಮಗ್ರ ಚರಿತ್ರೆಯ ಕನ್ನಡ ಅನುವಾದವನ್ನು ಪ್ರಕಟಿಸುತ್ತಿರುವ ಚೆನ್ನಮ್ಮನ ಕಿತ್ತೂರಿನ ರಾಜಗುರು ಸಂಸ್ಥಾನ ಕಲ್ಮಠದ "ಶರಣ ಸಾಹಿತ್ಯ ಅಕಾಡೆಮಿ"ಗೆ ನಮ್ಮೆಲ್ಲರ ಕೃತಜ್ಞತೆಗಳು ಸಲ್ಲುತ್ತವೆ.

ವಾರದ ಮಲ್ಲಪ್ಪನವರು : ಅನು. ಬಿ. ಎಸ್. ಗವಿಮಠ

ಆಕರ : ಮಾರ್ಗ ಸಂಪುಟ–೬

■■

ವೃಷಭೇಂದ್ರ ವಿಳಾಸ

೨೦೦೮

"ವೃಷಭೇಂದ್ರ ವಿಳಾಸ" ಪ್ರಾಚೀನ ಕೃತಿಗಳ ಸಂಪಾದನೆಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಈ ಮೊದಲು ಇಂಥ ಸಚಿತ್ರಕೃತಿ "ಶ್ರೀತತ್ತ್ವನಿಧಿ" ಪ್ರಕಟವಾಗಿದ್ದರೂ ಅದು ಶಾಸ್ತ್ರ-ಇದು ಕಾವ್ಯ, ಒಂದರ್ಥದಲ್ಲಿ ಬಣ್ಣ ಮಾಧ್ಯಮದ ಮಹಾಕಾವ್ಯ.

ಬಸವಣ್ಣನವರನ್ನು ಕುರಿತ ಇದು, ಅವರ ಚರಿತ್ರೆಯಲ್ಲಿ ಕ್ವಚಿತ್ತಾಗಿ ಬಿಡಿಸಿದ ಚಿತ್ರಗಳ ಕೃತಿಯಲ್ಲ, ಇಡಿಕಿರಿದ ಚಿತ್ರೋಪಚಿತ್ರಗಳ ಮಹಾಕೃತಿ. ಅಕ್ಷರಪಠ್ಯಕ್ಕಿಂತ ಚಿತ್ರಪಠ್ಯವೇ ಇಲ್ಲಿ ಎದ್ದು ಕಾಣುವುದರಿಂದ, ಇದು ಮೊದಲು 'ನೋಡುವ', ಆಮೇಲೆ 'ಓದುವ' ಪಠ್ಯವಾಗಿ ಪರಿಣಮಿಸಿದೆ.

ಬೌದ್ಧಗ್ರಂಥಗಳಲ್ಲಿ ಆರಂಭವಾದ ಈ ಉಭಯ ಕಲೆಗಳ ಸಂಯೋಜನ ಪದ್ಧತಿ, ಜೈನ ಪ್ರತಿಷ್ಠಾಕಲ್ಪ ಮೊದಲಾದ ಗ್ರಂಥಗಳಲ್ಲಿ ಬೆಳೆದು, ಮೈಸೂರು ಅರಸರ ಕಾಲದಲ್ಲಿ ಒಂದು ನಿರ್ದಿಷ್ಟ ಪರಂಪರೆಯಾಗಿ ಕರ್ನಾಟಕದಲ್ಲಿಯೂ ಕಾಣಿಸಿಕೊಂಡಿತು. ಪ್ರಸ್ತುತ ಕೃತಿ ಈ ಅವಧಿಗೆ ಸಂಬಂಧಿಸಿದೆ, ಬಹುಶಃ ಮಠಾಧೀಶರ ಇಲ್ಲವೆ ಮಹಾರಾಜರ ಆಶ್ರಯದಲ್ಲಿ ಹುಟ್ಟಿದೆ. ಲಿಂಗಾಯತ ಹಸ್ತಪ್ರತಿಗಳಲ್ಲಿ ಇಂಥ ಸಮೃದ್ಧ ಕಲಾಪ್ರಜ್ಞೆ ಮೊದಲು ಕಾಣುವುದು, ಉದ್ಧರಣೆ ಪಟಲಗಳಲ್ಲಿ. ಇವುಗಳನ್ನು ಬಿಟ್ಟರೆ ಪರಿಗಣಿಸಬೇಕಾದ ಮಹತ್ವದ ಪಠ್ಯವೆಂದರೆ ನಂಜುಂಡ ಕವಿಯ ಈ ಯಕ್ಷಗಾನ. ಬಸವಣ್ಣನವರನ್ನು ಕುರಿತು ಕಾವ್ಯ, ಶಾಸನ ಇತ್ಯಾದಿ ಮಾಧ್ಯಮಗಳಲ್ಲಿ ವಿಪುಲ ಸಾಹಿತ್ಯ ಹುಟ್ಟುತ್ತ ಬಂದಿದೆ. ಅಷ್ಟರಿಂದ ತೃಪ್ತಿಹೊಂದದೆ, ವರ್ಣಮಾಧ್ಯಮದಲ್ಲಿಯೂ ಅವರನ್ನು ಬಿಡಿಸಿ ನೋಡುವ ವಿನೂತನ ಪ್ರಯೋಗ ಇಲ್ಲಿ ಸಾಕಾರಗೊಂಡಿದೆ.

ಕನ್ನಡದಲ್ಲಿ ಈ ಮೊದಲು ಸಚಿತ್ರಕಾವ್ಯ ಸಂಪಾದನೆಯ ಯೋಗ್ಯ ಮಾದರಿಗಳು ಕಂಡುಬರುವುದಿಲ್ಲ. ಹೀಗಾಗಿ ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮಿಗಳು ಇಲ್ಲಿ ಅನುಸರಿಸಿದ ವಿಧಾನ ಹೊಸ ಮಾದರಿಯೆನಿಸಿದೆ. ಸ್ನಾತಕೋತ್ತರ ಪದವೀಧರರಾದ ಇವರು ವಿದ್ಯಾರ್ಥಿಯಾಗಿ ಗ್ರಂಥಸಂಪಾದನ ಶಾಸ್ತ್ರವನ್ನು, ಸಂಪಾದಿತ ಕಾವ್ಯಗಳನ್ನು ಓದಿದ ಅನುಭವದ ಹಿನ್ನೆಲೆಯಲ್ಲಿ ಈ ಕೃತಿಯನ್ನು ಸರಿಯಾಗಿ ಸಂಪಾದಿಸಿದ್ದಾರೆ. ಚಿತ್ರಪಠ್ಯವನ್ನು ಮೂಲರೂಪದಲ್ಲಿ ಉಳಿಸಿಕೊಂಡು, ಅಕ್ಷರಪಠ್ಯವನ್ನು ಆಧುನಿಕಗೊಳಿಸಿಕೊಂಡು, ಇವೆರಡನ್ನೂ ಒಂದೇ ಪುಟದಲ್ಲಿ ಕ್ರಮವಾಗಿ ವಿನ್ಯಾಸಗೊಳಿಸುತ್ತ ಹೋಗಿರುವುದು ಇಲ್ಲಿಯ ವಿಶೇಷತೆಯೆನಿಸಿದೆ.

ಕಾವ್ಯಕಲೆ-ಚಿತ್ರಕಲೆಗಳ ಈ ಸಂಯುಕ್ತಸಂಪುಟದ ಪ್ರಕಟಣೆಯ ಮೂಲಕ ತನ್ನ ಪ್ರಕಾಶನದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ತೆರೆದ ನಮ್ಮ ನಾಡಿನ ಪ್ರಸಿದ್ಧ ಪ್ರಕಾಶನಸಂಸ್ಥೆಯಾದ 'ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ'ಗೆ ಕನ್ನಡಿಗರ ಅಭಿನಂದನೆಗಳು ಸಲ್ಲುತ್ತವೆ.

ವೃಷಭೇಂದ್ರ ವಿಳಾಸ : ಸಂ. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ೨೦೦೮.

ಆಕರ : ಮಾರ್ಗ ಸಂಪುಟ–೬

ಪಂಪಭಾರತ ಸಾಂಸ್ಕೃತಿಕ ಅಧ್ಯಯನ

೧೯೯೪

ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಡಾ. ಶಾಂತಿನಾಥ ದಿಬ್ಬದ ಅವರು ಇಂದು ಪ್ರಭಾವಶಾಲಿ ಪ್ರಾಧ್ಯಾಪಕರಾಗಿ ಬೆಳೆದಿದ್ದಾರೆ. ಡಾ. ದಿಬ್ಬದ ಅವರು ವಿದ್ಯಾರ್ಥಿದೆಸೆಯಲ್ಲಿಯೇ ವ್ಯಾಸಂಗದ ವ್ಯಸನಕ್ಕೆ ಒಳಗಾಗಿ ಅದನ್ನು ವರ್ಧಿಸಿಕೊಳ್ಳುತ್ತಲೇ ಬಂದಿದ್ದಾರೆ. ಇಂಥ ಇವರ ಶ್ರದ್ಧೆ-ಶ್ರಮಗಳನ್ನು ನಾನು ಉದ್ದಕ್ಕೂ ಗುರುತಿಸಿದ್ದೇನೆ. ನನ್ನಂತೆ ಅನೇಕರೂ ಗುರುತಿಸಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯವೆಂದಾಕ್ಷಣ ಮೊದಲು ನೆನಪಾಗುವವ ಮಹಾಕವಿ ಪಂಪ. ಅವನ ಭಾಷಿಕ ನಿರ್ಮಾಣಗಳು ಕೇವಲ ಸಾಹಿತ್ಯ ಕೃತಿಗಳಲ್ಲ, ಅದನ್ನೂ ಒಳಗೊಂಡ ಸಾಂಸ್ಕೃತಿಕ ಸೃಷ್ಟಿಗಳು. ಈ ಸಾಹಿತ್ಯಿಕ, ಸಾಹಿತ್ಯೇತರ ಆಯಾಮಗಳಿಂದಾಗಿ ಕಳೆದ ನೂರು ವರ್ಷಗಳಿಂದ ಕನ್ನಡದ ಯಾವ ಕವಿಯನ್ನೂ ಕುರಿತು ನಡೆದಷ್ಟು ದೊಡ್ಡ ಪ್ರಮಾಣದಲ್ಲಿ ಅವನ ಅಭ್ಯಾಸ ನಿರಂತರ ನಡೆದು ಬಂದಿದೆ. ಈ ಅಭ್ಯಾಸಕ್ಕೆ ಪ್ರಸ್ತುತ ಕೃತಿ ಹೊಸ ಸೇರ್ಪಡೆಯಾಗಿದೆ.

ಡಾ. ದಿಬ್ಬದ ಅವರು ಸ್ನಾತಕೋತ್ತರ ಅಭ್ಯಾಸ ಮುಗಿಸುತ್ತಲೇ ಪಂಪನನ್ನು ತೆಕ್ಕೆಗೆ ತೆಗೆದುಕೊಂಡಿದ್ದಾರೆ. ನಿಜವಾದ ಅರ್ಥದಲ್ಲಿ "ಪಂಪನ ಭಕ್ತ'ರಾಗಿ ಬೆಳೆದಿದ್ದಾರೆ. ಬಹುಶಃ ಇವರ ತಲೆಮಾರಿನಲ್ಲಿ ಪಂಪನನ್ನು ಇವರಷ್ಟು ಹಚ್ಚಿಕೊಂಡವರು ಇಲ್ಲವೆಂದೇ ಹೇಳಬೇಕು.

ಪಂಪನ ಭಾರತವನ್ನು ಪಠ್ಯ, ಸಾಹಿತ್ಯ, ಸಂಸ್ಕೃತಿ ಈ ಮೂರು ನೆಲೆಗಳಲ್ಲಿ ಅಭ್ಯಸಿಸಿದ ಪ್ರಯತ್ನವಿದು. ಸಂಸ್ಕೃತಿಯೆನ್ನುವುದು ಬಹುಮುಖಿಯಾದುದು. ಇವುಗಳಲ್ಲಿ ಧಾರ್ಮಿಕ, ಸಾಮಾಜಿಕ, ರಾಜತಾಂತ್ರಿಕ ಈ ಕೆಲವು ಮುಖಗಳ ಅಭ್ಯಾಸ ಪ್ರಸ್ತುತ ಕೃತಿಯ ಮಹತ್ವದ ಭಾಗವೆನಿಸಿವೆ.

ಹೀಗೆ ನಡೆಸಿದ ಪಂಪನ ಕೆಲವು ನೆಲೆಗಳ ಅಧ್ಯಯನದ 'ಪ್ರಾದೇಶಿಕ ಪ್ರಜ್ಞೆ'ಯನ್ನು ಮರೆಯದೇ ದಾಖಲಿಸುತ್ತ ಹೋದುದು ಈ ಕೃತಿಯ ಒಟ್ಟು ಸಾಧನೆಯಾಗಿದೆ.

ಆಕರ: ಪಂಪ ಭಾರತ ಸಾಂಸ್ಕೃತಿಕ ಅಧ್ಯಯನ-೧೯೯೪

ಆಕರ : ಮಾರ್ಗ ಸಂಪುಟ-೮

೨೭೦

ಹರ್ಡೇಕರ ಮಂಜಪ್ಪ

೧೯೯೫

ಡಾ. ಎಸ್.ಎಸ್. ಕೋತಿನ ಕನ್ನಡದ ಒಬ್ಬ ಚಿಂತನಶೀಲ ಲೇಖಕರು. ವಿಚಾರ ಸಾಮಗ್ರಿಗೆ ವಿಷಯ ಸಾಮಗ್ರಿಯಿಂದ ಮೈದುಂಬಿಸುವುದು ಇವರ ಬರವಣಿಗೆಯ ವಿಶೇಷತೆಯಾಗಿದೆ. ಚಿಂತನೆಯ ಎಳೆ ಹಿಡಿದು ಕಡಿದು ಹೋಗದಂತೆ ಮತ್ತು ತೊಡಕು ಬೀಳದಂತೆ ಅದನ್ನು ಕೊನೆಯವರೆಗೂ ಒಂದು ವಾದಶೈಲಿಯಲ್ಲಿ ಮಂಡಿಸುತ್ತ ಸಾಗುವ ಅನನ್ಯ ಲೇಖನ ಕಲೆ ಇವರಲ್ಲಿದೆ.

ಚಿಂತನಶೀಲತೆಗೆ ಸೃಜನಶೀಲತೆಯ ಸಹಯೋಗವಿರುವುದು ಡಾ. ಕೋತಿನ ಅವರ ವ್ಯಕ್ತಿತ್ವದ ಇನ್ನೊಂದು ಮುಖ್ಯಲಕ್ಷಣವೆನಿಸಿದೆ. ಇವರು ಬರೆದು ಪ್ರಕಟಿಸಿರುವ ಕವನ, ಜೀವನ ಚರಿತ್ರೆಗಳು, ಹಟದಿಂದ ಮುಂದುವರಿದಿದ್ದರೆ ಇವರು ಗಣ್ಯ ಸೃಜನಶೀಲ ಲೇಖಕರಾಗಬಹುದಿತ್ತು ಎಂಬ ಸೂಚನೆ ನೀಡುತ್ತವೆ. ಇದಕ್ಕೆ "ಹರ್ಡೇಕರ ಮಂಜಪ್ಪ" ಹೆಸರಿನ ಈ ದೃಶ್ಯಕೃತಿ ಕಣ್ಣಮುಂದಿನ ಉದಾಹರಣೆಯೆನಿಸಿದೆ.

ರಂಗಭೂಮಿ ಡಾ. ಕೋತಿನ ಅವರ ಆರಾಧನೆಗಳಲ್ಲಿ ಮುಖ್ಯವಾದುದು, ಈಗ ಅದು ಹರ್ಡೇಕರ ಮಂಜಪ್ಪನವರನ್ನು ನೆವವಾಗಿ ಇಟ್ಟುಕೊಂಡು ಪ್ರಕಟಗೊಂಡಿದೆ. ಕೃತಿಯ ಸೃಷ್ಟಿಗಾಗಿ ಮಂಜಪ್ಪನವರನ್ನು ಬಳಸಿಕೊಂಡಿರುವುದು ಕೃತಿಯು ಚಲನೆಗಾಗಿ ಲೇಖಕರೇ ಲಾವಣಿಕಾರರಾಗುತ್ತಿರುವುದು ಈ ನಾಟಕದ ಎರಡು ಪ್ರಮುಖ ಅಂಶಗಳೆನಿಸಿವೆ. ಮಾನವ ಕೇಂದ್ರಿತ ನಾಟಕ, ಇದಕ್ಕಿಂತ ಸಮಾಜಕೇಂದ್ರಿತ ನಾಟಕ, ಇದಕ್ಕಿಂತ ವ್ಯಕ್ತಿ ಕೇಂದ್ರಿತ ನಾಟಕದ ಬರವಣಿಗೆ ಹೆಚ್ಚು ಜವಾಬ್ದಾರಿಯುತವಾದುದು. ಇಲ್ಲಿ ವ್ಯಕ್ತಿಯ ಘನತೆ, ಕಲೆಯ ಘನತೆಗಳೆರಡನ್ನೂ ಸರಿಯಾಗಿಸಬೇಕಾಗುತ್ತದೆ. ಇದಕ್ಕೆ ನಿದರ್ಶನವೆನಿಸಿದೆ, ಈ ನಾಟಕ.

ನನ್ನಂತೆ ಡಾ. ಕೋತಿನ ಅವರೂ ಮಂಜಪ್ಪನವರ ವ್ಯಕ್ತಿತ್ವಕ್ಕೆ ಮಾರು ಹೋದವರು. ಅವರು ನಮಗೆ ಮನೆಯ ಹಣತೆಯಷ್ಟು ಪ್ರಮುಖರು. ಘೋರ ಅನಾರೋಗ್ಯದ ನಡುವೆಯೂ ಮಂಜಪ್ಪನವರನ್ನು ಸೃಜನ ಜ್ಯೋತಿಯಾಗಿಸಿ, ತಾವು ಎಣ್ಣೆ ಬತ್ತಿಯಾದುದು ಡಾ. ಕೋತಿನ ಅವರ ಸುಸಂಸ್ಕೃತ ಮನಸ್ಸಿನ ದ್ಯೋತಕವೆನಿಸಿದೆ.

---

* ಡಾ. ಎಸ್.ಎಸ್. ಕೋತಿನ : ಹರ್ಡೇಕರ ಮಂಜಪ್ಪ.

ಆಕರ : ಮಾರ್ಗ ಸಂಪುಟ–೮

ನಾಯಕರತ್ನ

೧೯೯೫

ಸ್ವತಂತ್ರ ಭಾರತದಲ್ಲಿ ರಾಷ್ಟ್ರಕಾರಣಿಗಳಿಗಿಂತ ರಾಜಕಾರಣಿಗಳ ಸಂಖ್ಯೆ ಗಣನೀಯ ರೀತಿಯಲ್ಲಿ ವರ್ಧಿಸಿ, ರಾಜಕೀಯ ಕ್ಷೇತ್ರ ದಿನದಿಂದ ದಿನಕ್ಕೆ ಅಪಮೌಲ್ಯಗೊಳ್ಳುತ್ತಲಿದೆ. ರಾಜಕಾರಣಿಗೆ ಅಧಿಕಾರ ಮುಖ್ಯ. ರಾಷ್ಟ್ರಕಾರಣಿಗೆ ಜನಸೇವೆ ಮುಖ್ಯ. ಇಂಥ ಸಂದರ್ಭದಲ್ಲಿ ರಾಷ್ಟ್ರಕಾರಣಿ ಖ್ಯಾತಿಯ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ಬಿ.ಕೆ. ಗುಡದಿನ್ನಿ ಅವರೂ ಒಬ್ಬರು. ಜನಸೇವೆ ಮಾರ್ಗದವರಾದ ಶ್ರೀ ಗುಡದಿನ್ನಿಯವರು ಸಹಜವಾಗಿಯೇ ಒಂದಕ್ಕಿಂತ ಹೆಚ್ಚು ಸಲ ವಿಧಾನ ಪರಿಷತ್ತು, ಲೋಕಸಭೆಗಳಿಗೆ ಆಯ್ಕೆಗೊಂಡಿದ್ದಾರೆ. ಮನೆಯ ದೀಪದಂತೆ ತಮ್ಮ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ್ದಾರೆ.

ಶ್ರೀ ಗುಡದಿನ್ನಿ ಅವರದು ವ್ಯಕ್ತಿಕೇಂದ್ರಿತ ಪ್ರಜ್ಞೆಯಲ್ಲ; ಸಮಾಜಕೇಂದ್ರಿತ ಪ್ರಜ್ಞೆ. ಈ ಪ್ರಜ್ಞೆ ಅವರನ್ನು ಮೊದಲಿನಿಂದಲೂ ವ್ಯಕ್ತಿಕೇಂದ್ರಿತವಾಗಿ ಉಳಿಯಗೊಡದೆ, ಸಮಾಜಕೇಂದ್ರಿತವಾಗಿ ಬೆಳೆಸಿದ ಕಾರಣ ಸಹಜ ನಾಯಕತ್ವ ಅವರಿಗೆ ಪ್ರಾಪ್ತವಾಗಿದೆ. "ತೇನ ವಿನಾ ತೃಣಮಪಿ ನ ಚಲತಿ" ಎನ್ನುವ ಹಾಗೆ ವಿಜಾಪುರ ಭೂಪ್ರದೇಶದಲ್ಲಿ ಅವರು ತಮಗರಿಯದಂತೆಯೇ ಪ್ರಶ್ನಾತೀತ ನಾಯಕರಾಗಿ ಬೆಳೆದಿದ್ದಾರೆ.

ಪಿತೃಋಣ, ಮಾತೃಋಣಗಳಂತೆ ಸಮಾಜಋಣವನ್ನು ತೀರಿಸಬೇಕಾದುದು ಪ್ರತಿಯೊಬ್ಬನ ಕರ್ತವ್ಯ. ಮೂರು ದಶಕಗಳವರೆಗೆ ದುಡಿದು ಶ್ರೀ ಗುಡದಿನ್ನಿಯವರು ಸಮಾಜಋಣವನ್ನು ತೀರಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಸಮಾಜ ಅವರನ್ನು ಈ ಗ್ರಂಥದ ಮೂಲಕ ಅಭಿನಂದಿಸುತ್ತಲಿದೆ.

ಕರ್ನಾಟಕದಲ್ಲಿ 'ಅಭಿನಂದನಗ್ರಂಥ' ಒಂದು ಸಾಹಿತ್ಯಪ್ರಕಾರವಾಗಿ ಬೆಳೆದಿದೆ. ವ್ಯಕ್ತಿಯ ಚರಿತ್ರೆ ಸಾಹಸಗಳನ್ನು ಚಿತ್ರಿಸುವುದು, ಜೊತೆಗೆ ಪ್ರೌಢಪ್ರಬಂಧಗಳಿಂದಾಗಿ ಅದು ಆಕರಗ್ರಂಥವಾಗುವಂತೆ ನೋಡಿಕೊಳ್ಳುವುದು ಈ ಪ್ರಕಾರದ ಲಕ್ಷಣವಾಗಿದೆ. ನಾಯಕರತ್ನ ಈ ಲಕ್ಷಣಗಳ ಆದರ್ಶದಲ್ಲಿ ರೂಪಗೊಂಡ ಅಭಿನಂದನಗ್ರಂಥವಾಗಿದೆ. ಇದರಲ್ಲಿ ಮೂರು ಭಾಗಗಳಿವೆ. ಒಂದನೆಯದು ಶ್ರೀ ಗುಡದಿನ್ನಿಯವರ ಅಂತರಂಗ ಬಹಿರಂಗಗಳನ್ನು ಚಿತ್ರಿಸಿದರೆ, ಎರಡನೆಯದು ಅವರ ಕಾರ್ಯರಂಗವಾದ ವಿಜಾಪುರ ಜಿಲ್ಲೆಯನ್ನು ಪರಿಚಯಿಸುತ್ತದೆ. ಮೂರನೆಯದು ಬೇರೆ ಬೇರೆ ವಿಷಯಗಳ ಪ್ರೌಢ ಪ್ರಬಂಧಗಳನ್ನೊಳಗೊಂಡಿದೆ.

ಸಂಪಾದಕರ ಧೋರಣೆಯ ನೇರಕ್ಕೆ ವಿದ್ವಾಂಸರಿಂದ ಲೇಖನಗಳನ್ನು ಬರೆಸಿಕೊಳ್ಳುವುದು, ತರಸಿಕೊಳ್ಳುವುದು, ಬಳಿಕ ಪರಿಷ್ಕರಿಸುವುದು, ಪ್ರಕಟಿಸುವುದು ಸುಲಭದ ಕೆಲಸವೇನಲ್ಲ. ಪುಸ್ತಕ ಪ್ರಪಂಚದ ಮೇಲಿನ ಪ್ರೀತಿ, ಶ್ರೀ ಗುಡದಿನ್ನಿಯವರ ಮೇಲಿನ ಗೌರವ ಕಾರಣವಾಗಿ ಡಾ. ಬಿ.ಎಸ್.

ಶೇಠೆ ಅವರು ರೂಪಿಸಿರುವ ಈ ಗ್ರಂಥ ಅಭಿನಂದನ ಸಾಹಿತ್ಯಕ್ಕೆ ಹೊಸ ಸೇರ್ಪಡೆ, ಮುಖ್ಯ ಸೇರ್ಪಡೆಯೆನಿಸಿದೆ.

---

* ನಾಯಕರತ್ನ (ಶ್ರೀ ಬಿ.ಕೆ. ಗುಡದಿನ್ನಿ ಅಭಿನಂದನ ಗ್ರಂಥ).

ಆಕರ : ಮಾರ್ಗ ಸಂಪುಟ–೮

■■

೨೮೨

ಪಾರಿಜಾತ ಪರಾಮರ್ಶೆ

೧೯೯೭

ಹೂವಿನ ಸುತ್ತ ಹೆಣೆದ ಕಥೆಯಾಗಿದೆ, ಶ್ರೀಕೃಷ್ಣ ಪಾರಿಜಾತ. ಇದು ಅಪರಾಳ ತಮ್ಮಣ್ಣನ ಕೈಯಲ್ಲಿ ಶ್ರವಣ ಪಾತಳಿಯ ಕಾವ್ಯವಾಗಿ, ಕುಲಗೋಡ ತಮ್ಮಣ್ಣನ ಕೈಯಲ್ಲಿ ದೃಶ್ಯಪಾತಳಿಯ ಕಾವ್ಯವಾಗಿ ಕವಲೊಡೆದು ಬೆಳೆದಿದೆ. ಈ ಎರಡೂ ಕವಲುಗಳನ್ನು ಒಳಗೊಳ್ಳದಿದ್ದರೆ ಪಾರಿಜಾತದ ಅಧ್ಯಯನ ಪೂರ್ತಿಯಾಗುವುದಿಲ್ಲ. ದುರ್ದೈವದ ಸಂಗತಿಯೆಂದರೆ, ಇಂದು ಅಪರಾಳ ತಮ್ಮಣ್ಣನ ಪಾರಿಜಾತದ ಶ್ರವಣ ಪರಂಪರೆ ಇನ್ನೇನು ಸಿಗಲಾರದೆಂಬಂತೆ ಕಳೆದುಹೋಗಿದೆ. ಹೀಗಾಗಿ ಉಳಿದು ನಿಂದ ಅಪರಾಳ ಪಾರಿಜಾತ ಪಠ್ಯ ಕುಲಗೋಡ ಪಾರಿಜಾತ ಪಠ್ಯಪ್ರದರ್ಶನಗಳಿಂದ ನಾವು ಸಮಾಧಾನಪಟ್ಟುಕೊಳ್ಳಬೇಕಾಗಿದೆ.

"ಸಮ್ಮೋಹಿನಿ ಎಂಬಂತೆ ಉತ್ತರ ಕರ್ನಾಟಕದ ಜನವರ್ಗವನ್ನು ಆಳುತ್ತ ಬಂದಿದೆ, ಕುಲಗೋಡ ಪಾರಿಜಾತ. ಹಾಸ್ಯದಲ್ಲಿ ಹುಟ್ಟಿ ಗೃಹಕಲಹದಲ್ಲಿ ಬೆಳೆದು ಭಕ್ತಿಮೌಲ್ಯದಲ್ಲಿ ವಿರಮಿಸುತ್ತದೆ, ಈ ರಂಗಕೃತಿ. ಕಲೆಗೆ ಸಂಬಂಧಪಟ್ಟಂತೆ ಇದು ಪ್ರಸಿದ್ಧ ದೃಶ್ಯವೂ ಹೌದು, ಸುಪ್ರಸಿದ್ಧ ಶ್ರವ್ಯವೂ ಹೌದು. ಶ್ರವ್ಯದಲ್ಲಿ ಮಾತು–ಗೀತಗಳ, ದೃಶ್ಯದಲ್ಲಿ ಲೌಕಿಕ ಪೌರಾಣಿಕಗಳ ವೈವಿಧ್ಯಶೋಭೆ ಇಲ್ಲಿ ಏಕೀಭವಿಸಿವೆ. ಈ ರಂಗಕಲೆಯೊಂದಿಗೆ, ಪ್ರೇಕ್ಷಕರಿದ್ದಾರೆ. ಈ ಎಲ್ಲ ಮಗ್ಗಲುಗಳ ಅಧ್ಯಯನವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಹೊರಟ "ಪಾರಿಜಾತ ಪರಾಮರ್ಶೆ" ಒಂದು ಉಪಯುಕ್ತ ಪ್ರಕಟಣೆಯೆನಿಸಿದೆ. ಪ್ರಬುದ್ಧ ಬರೆಹಗಾರರ ಈ ಪೌಢ ಲೇಖನಗಳಲ್ಲಿ ಪಾರಿಜಾತ ತಿಳಿವಳಿಕೆಯನ್ನು ವಿಸ್ತಾರಗೊಳಿಸಬೇಕೆಂಬ ಪ್ರಯತ್ನವಿದೆ.

ಉತ್ತರ ಕರ್ನಾಟಕ, ಜಾನಪದ ಕೃಷಿಯ ಸಮೃದ್ಧ ನೆಲೆ. ಇಲ್ಲಿ ಕ್ಷೇತ್ರಕಾರ್ಯಕ್ಕೆ, ಕಲೆಗಳ ನವೀಕರಣಕ್ಕೆ, ಅಧ್ಯಯನಕ್ಕೆ ಅವಕಾಶಗಳಿವೆ. ಈ ಅವಕಾಶಗಳನ್ನು ಆಹ್ವಾನವೆಂಬಂತೆ ಸ್ವೀಕರಿಸಿ ಹುಟ್ಟಿಕೊಂಡಿದೆ,

ಕಿತ್ತೂರಿನ "ಜಾನಪದ ಸಂಶೋಧನ ಕೇಂದ್ರ". ಇದು ಶ್ರೀ ಬಸವಲಿಂಗಯ್ಯ ವಿಶ್ವೇಶ್ವರಿ ದಂಪತಿಗಳ ಬಹುದಿನಗಳ ಕನಸಿನ ಸೃಷ್ಟಿ. ಶುಷ್ಕ ವಿದ್ವತ್ತಿನಿಂದ ಸರಿಯಾದ ಅಂತರವನ್ನು ಕಲ್ಪಿಸಿಕೊಂಡು ಜಾನಪದ ಕಲೆಯನ್ನು ಆರ್ದ್ರತೆಯ ನೆಲೆಯಲ್ಲಿ ಬದುಕಿಸಲು, ಬೆಳೆಸಲು ದುಡಿಯುತ್ತಲಿರುವ, ಆಳವಾದ ಅಧ್ಯಯನಕ್ಕೂ ಅವಕಾಶ ಕಲ್ಪಿಸುತ್ತಿರುವ ಈ ಕಲಾವಿದ ದಂಪತಿಗಳ ಪ್ರಯತ್ನಕ್ಕೆ ಯಶಸ್ಸುಗಳಿರಲಿ; "ಜಾನಪದ ಸಂಶೋಧನ ಕೇಂದ್ರ"ದ ಪ್ರಥಮ ಪ್ರಕಟಣೆಗೆ ಸ್ವಾಗತವಿರಲಿ.

---

* ಸಂ. ಬಸಲಿಂಗಯ್ಯ, ವಿಶ್ವೇಶ್ವರಿ ಹಿರೇಮಠ : ಪಾರಿಜಾತ ಪರಾಮರ್ಶೆ.

ಆಕರ : ಮಾರ್ಗ ಸಂಪುಟ–೮

೨೭೩

ಬೆಂಗಳೂರಿನ ವೀರಶೈವ ಮಠಗಳು

೨೦೦೧

'ಬೆಂಗಳೂರು ನಗರದ ವೀರಶೈವ ಮಠಗಳು: ಒಂದು ಸಾಂಸ್ಕೃತಿ ಅಧ್ಯಯನ' ಹೆಸರಿನ ಪಿಎಚ್.ಡಿ. ಪ್ರಬಂಧ ರಾಷ್ಟ್ರ ಖ್ಯಾತಿಯ ಮಹಾನಗರವೊಂದರಲ್ಲಿ ಮುಳುಗಿ ಹೋಗಿರುವ ವೀರಶೈವ ಮಠಗಳ ಅನ್ವೇಷಣೆಯನ್ನು ಒಳಗೊಂಡಿದ್ದು ನಮ್ಮ ನಾಡಿನ ಸಂಶೋಧನ ಲೋಕದ ಮಹತ್ವದ ಪ್ರಯತ್ನವಾಗಿದೆ. ಒಂಬತ್ತು ಅಧ್ಯಾಯಗಳಲ್ಲಿ ವ್ಯಾಪಿಸಿರುವ ಈ ಪ್ರಬಂಧ ವಿಷಯ ವರ್ಗೀಕರಣ, ಶೀರ್ಷಿಕೆಗಳ ನಾಮಕರಣ, ಬರವಣಿಗೆಯ ಕ್ರಮಬದ್ಧತೆ ಇತ್ಯಾದಿಗಳಿಂದಾಗಿ ಒಂದು ಉತ್ತಮ ರಚನೆಯೆನಿಸಿದೆ.

ಬೆಂಗಳೂರು ನಗರದ ಹಿನ್ನೆಲೆ, ಯಲಹಂಕ ಪ್ರಭುಗಳ ಪೂರ್ವದ ಬೆಂಗಳೂರಿನ ರಾಜಕೀಯ ಇತಿಹಾಸ ಹಾಗೂ ಬೆಂಗಳೂರಿನ ಹೆಸರಿನ ನಿಷ್ಪತ್ತಿ ಇವುಗಳು ಸರಿಯಾಗಿಯೇ ಚಿತ್ರಿತವಾಗಿವೆ. ಯಲಹಂಕ ಇತಿಹಾಸದ ಅನೇಕ ಹೊಸ ಅಂಶಗಳನ್ನು ಪ್ರಕಟಿಸಿದುದು ಗಮನಾರ್ಹ.

"ಬೆಂಗಳೂರಿನ ವೀರಶೈವ ಮಠಗಳು: ಐತಿಹಾಸಿಕ ಪರಂಪರೆ" ಎಂಬ ಪ್ರಕರಣ ಈ ಪ್ರಬಂಧದ ಹೃದಯವೆನಿಸಿದೆ. ಸುಮಾರು ೧೫೦ ಪುಟಗಳ ವ್ಯಾಪ್ತಿಯಲ್ಲಿ ಬೆಂಗಳೂರಿನ ಎಲ್ಲ ಮಠಗಳ ಪ್ರಾಚೀನತೆ, ಪರಂಪರೆಗಳನ್ನು ಅಧಿಕೃತ ದಾಖಲೆಗಳಿಂದ ಪ್ರತಿಪಾದಿಸಿರುವುದು ಈ ಪ್ರಬಂಧದ ಬಹುದೊಡ್ಡ ಕಾಣಿಕೆಯೆಂದೇ ಹೇಳಬೇಕು. ಇಲ್ಲಿಯ ಮಠಗಳ ಪಟ್ಟಿ, ನಕ್ಷೆಗಳಿಂದಾಗಿ ಈ ಪ್ರಕರಣ

ತುಂಬಾ ಅಧಿಕೃತವೆನಿಸಿದೆ. ಈ ಪ್ರಬಂಧಕ್ಕೆ ಜೋಡಿಸಿರುವ ಅಪೂರ್ವ ಅನುಬಂಧಗಳು ತುಂಬಾ ಉಪಯುಕ್ತವೆನಿಸಿವೆ.

ಒಟ್ಟಿನಲ್ಲಿ ಪ್ರಸುತ್ತ ಅಧ್ಯಯನ ಕಳೆದುಹೋದ ಅನೇಕ ಮಹತ್ವದ ವಿಷಯಗಳನ್ನು ತುಂಬ ಸಮಗ್ರವಾಗಿ, ವ್ಯವಸ್ಥಿತವಾಗಿ ಕಟ್ಟಿಕೊಡುತ್ತದೆ. ಲೇಖಕರ ಪ್ರಯತ್ನಶೀಲತೆ, ಐತಿಹಾಸಿಕ ದೃಷ್ಟಿ, ನಿರೂಪಣೆಯ ವಿಧಾನ ಇತ್ಯಾದಿಗಳು ಮೆಚ್ಚತಕ್ಕ ವಿಷಯವೆನಿಸಿವೆ.

---

* ಡಾ. ಬಿ.ಸಿ. ವೀರಪ್ಪ : ಬೆಂಗಳೂರಿನ ವೀರಶೈವ ಮಠಗಳು.

ಆಕರ : ಮಾರ್ಗ ಸಂಪುಟ–೮

■■

೨೭೪

ಕನ್ನಡ ಭಾರತ

೨೦೦೧

‘ವಿಜಯನಗರ ಸಾಮ್ರಾಜ್ಯ’ ಸಂದರ್ಭದ ಪ್ರಸಿದ್ಧ ಸೃಷ್ಟಿಗಳಲ್ಲಿ ಕುಮಾರವ್ಯಾಸ ಭಾರತ ಸುಪ್ರಸಿದ್ಧವಾದುದು. ಹತ್ತು ವರ್ಷಗಳ ಈ ಮಹಾಕೃತಿಗೆ ವಿಜಯನಗರ ತಿಮ್ಮಣ್ಣಕವಿ ಎಂಟು ಪರ್ವ ಜೋಡಿಸಿ, ಮಹಾಭಾರತ ವರ್ತುಲವನ್ನು ಪೂರ್ಣಗೊಳಿಸಿದ. ಹಂಪಿ ಪರಿಸರದ ಈ ಎರಡೂ ಕೃತಿಗಳ ಸಂಯುಕ್ತ ಸಂಪುಟವಾಗಿರುವ ‘ಕನ್ನಡ ಭಾರತ’ವನ್ನು ಹಂಪಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಕನ್ನಡ ವಿಶ್ವವಿದ್ಯಾಲಯ ಈಗ ಪ್ರಕಟಿಸುತ್ತಲಿದೆ.

ವೀರಮೌಲ್ಯ–ಮಾರ್ಗಶೈಲಿಗಳಿಂದ ದೀಪ್ತವಾದ ಪಂಪಭಾರತದ ತುಂಬ ಭಿನ್ನವೆಂಬಂತೆ ಭಕ್ತಿಮೌಲ್ಯ–ದೇಶೀಶೈಲಿಗಳಿಂದ ವಿಜೃಂಭಿಸುತ್ತಿದೆ, ಕುಮಾರವ್ಯಾಸ ಭಾರತ. ಮಹಾಭಾರತವೆಂಬ ಒಂದೇ ವಸ್ತುವಿನ ಎರಡು ವಿಭಿನ್ನ ಶೈಲಿಶಿಖರಗಳೆನಿಸಿದ ಇವುಗಳಲ್ಲಿ ಒಂದು ವಿದ್ವಜ್ಜನಪ್ರಿಯವಾಗಿ ಉಳಿದರೆ, ಇನ್ನೊಂದು ಜನಪ್ರಿಯವೂ ವಿದ್ವಜ್ಜನಪ್ರಿಯವೂ ಆಗಿ ಬೆಳೆದಿದೆ. ಹೆಚ್ಚಿನದಾಗಿ ವಾಚನ–ಶ್ರವಣ ಪಾತಳಿಗಳಲ್ಲಿ ಸಮಗ್ರ ಕರ್ನಾಟಕವನ್ನು ವ್ಯಾಪಿಸಿದ ಏಕೈಕ ಮಹಾಕಾವ್ಯವಾಗಿ ಬೆಳಗುತ್ತಲಿದೆ.

ಬುಕ್ಕಭೂಪತಿಯ ‘ವೇದಮಾರ್ಗ ಪ್ರತಿಷ್ಠಾಪನಾಚಾರ್ಯ’ ಬಿರುದಿನ ಅರ್ಥ ತುಂಬುವ ಸಾಮೂಹಿಕ ಪ್ರಯತ್ನ ವಿಜಯನಗರ ಕಾಲದ್ದಾಗಿತ್ತು. ಆಗ ಸಾಯಣಾಚಾರ್ಯರು ಭಾಷ್ಯ ಬರೆಯುವ ಮೂಲಕ ಚತುರ್ವೇದಗಳಿಗೆ ಪಾಂಡಿತ್ಯ ವಿಸ್ತಾರದಿಂದ ಸ್ಪಂದಿಸಿದರೆ, ಕುಮಾರವ್ಯಾಸ ಪಂಚಮವೇದವೆಂಬ ಮಹಾಭಾರತಕ್ಕೆ ಪ್ರತಿಭಾ ವಿಸ್ತಾರದಿಂದ ಸ್ಪಂದಸಿದ.

ಮಹಾಭಾರತ ನೂರು ಮನೋಧರ್ಮ, ನೂರಾರು ವಯೋಧರ್ಮದ ವ್ಯಕ್ತಿಗಳನ್ನೊಳಗೊಂಡ ಒಂದು ಸಂಕೀರ್ಣ ಕೃತಿ. ಓದುಗನ ಎಂಟೂ ಸ್ಥಾಯಿ ಭಾವಗಳನ್ನು ಉದ್ರೇಕಿಸಿ, ಪರ್ಯಾಯವಾಗಿ

ಅವುಗಳನ್ನು ಉಪಶಮನಗೊಳಿಸುವ ಅದ್ಭುತ 'ಪ್ರಯೋಗ' ಈ ಕಾವ್ಯದ ಮುಖ್ಯ ಸಾಧನೆಯಾಗಿದೆ. ಹೀಗಾಗಿ ಲೌಕಿಕ ಬದುಕಿನ ಎಲ್ಲ ವಾಹಿನಿಗಳೂ ಕೊನೆಗೆ ಪಾರಲೌಕಿಕವೆಂಬ ಮುಖ್ಯವಾಹಿನಿಯಲ್ಲಿ ಕೃತಾರ್ಥವಾಗುತ್ತವೆ. ಆದುದರಿಂದ 'ಕರ್ಣಾಟ ಭಾರತ ಕಥಾಮಂಜರಿ' ನಮಗರಿಯದೆಯೇ ಅಲ್ಲಲ್ಲಿ 'ಶ್ರೀ ಕೃಷ್ಣ ಚರಿತಾಮೃತ'ವಾಗಿ ಪರ್ಯವಸಾನಗೊಳ್ಳುತ್ತ ಮುಂದುವರಿಯುತ್ತದೆ; 'ದರ್ಶನಧ್ವನಿ'ಯ ಅನುಭವವನ್ನು ನೀಡುತ್ತದೆ.

ಅಮೂರ್ತವಾಗಿರುವ ಭಾವ, ಮಾರ್ಗಭಾಷೆಗಳ ದೇಶೀಭಾಷೆಯಲ್ಲಿ ಹೆಚ್ಚು ಮಣಿಯುತ್ತದೆ. ಹೀಗಾಗಿ ಕುಮಾರವ್ಯಾಸನಲ್ಲಿ ಭಾವ-ಭಾಷೆಗಳು ಹುರಿಗೊಂಡು ಸ್ವಭಾವೋಕ್ತಿ-ವಕ್ರೋಕ್ತಿಗಳಲ್ಲಿ ಮೈಮಣಿಸುವ ರೀತಿ ಅನನ್ಯವೆನಿಸಿದೆ. ಮೇಲಾಗಿ ಈ ಹಿಂದೆ ಕೇಳದ, ಓದದ ಹೊಸಭಾಷಾ ಸಾಮಗ್ರಿ, ಹೊಸ ರಚನಾ ರೀತಿಗಳಿಂದಾಗಿ, ಹೊಸ ವಿನ್ಯಾಸದ ಭವ್ಯ ವಾಸ್ತುವನ್ನು ಪ್ರವೇಶಿಸಿದ ಅನುಭವವಾಗುತ್ತದೆ.

---

* ಸಂ. ಎ.ವಿ. ಪ್ರಸನ್ನ : ಕನ್ನಡ ಭಾರತ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

ಆಕರ : ಮಾರ್ಗ ಸಂಪುಟ-೮

■■

೨೭೫

ದಕ್ಷಿಣದ ದೇಶೀದೇವರು ಶ್ರೀ ಖಂಡೋಬಾ

೨೦೦೩

ಕರ್ನಾಟಕ-ಮಹಾರಾಷ್ಟ್ರ ರಾಜ್ಯಗಳ ಸಮನ್ವಯ ಸತ್ಯಗಳನ್ನು ಶೋಧಿಸುತ್ತ, ಅವುಗಳ ಅಖಂಡತೆಯನ್ನು ಪತ್ರಿಪಾದಿಸುತ್ತ ಬಂದ ಮಹಾರಾಷ್ಟ್ರದ 'ಸಂಶೋಧನ ತಪಸ್ವಿ' ಶ್ರೀ. ರಾ. ಚಿಂ. ಢೇರೆಯವರನ್ನು ನಮ್ಮ ವಿದ್ವಾಂಸರಿಗೆ ಪರಿಚಯಿಸಬೇಕೆಂಬ ಉದ್ದೇಶದಿಂದ ಅವರ ಶ್ರೀ ವಿಠ್ಠಲ, ಖಂಡೋಬಾ, ಲಜ್ಜಾಗೌರಿ, ದತ್ತ ಸಂಪ್ರದಾಯ ಮೊದಲಾದ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿಸುವ ನನ್ನ 'ಸಾಂಸ್ಕೃತಿಕ ಯೋಜನೆ'ಯ ಅಂಗವಾಗಿ ಈ ಗ್ರಂಥ ಪ್ರಕಟವಾಗುತ್ತಲಿದೆ.

ನಾವು ಬರೆಯುತ್ತ ಬಂದ ರಾಜಕೀಯ ಗಡಿರೇಖೆಗಳನ್ನು ಧಿಕ್ಕರಿಸಿ, ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಸಂಚರಿಸುತ್ತಲಿರುವ ಈ ದೇವತೆ, ಈ ಸಂಪ್ರದಾಯಗಳು ಎರಡೂ ರಾಜ್ಯಗಳ ಇಂದಿನ ಸಂಘರ್ಷಕ್ಕೆ ಸ್ನೇಹವನ್ನಾಗಿಸಲು ನೆರವಾಗಬೇಕೆಂಬುದು ಈ ಯೋಜನೆಯ ಹಿಂದಿರುವ ಆಶಯ. ನಮ್ಮ ವಿದ್ವಾಂಸರು ಈ ಗ್ರಂಥ ಗವಾಕ್ಷಗಳ ಮೂಲಕ ಆ ಪ್ರದೇಶದ ಹೊಸ ಲೋಕವನ್ನು ಅವಲೋಕಿಸಬೇಕೆಂಬ ಆಶಯವೂ ಇಲ್ಲಿದೆ.

ಖಂಡೆಯು (ಖಡ್ಗ) ಕನ್ನಡ ಶಬ್ದ ಇದು ಕರ್ನಾಟಕದ ಮೈಲಾರನ ಪ್ರಮುಖ ಆಯುಧವಾಗಿರುವುದರಿಂದ ಇವನು ಖಂಡೋಭಾ ಎಂಬ ಪರ್ಯಾಯ ನಾಮದಿಂದ ಮಹಾರಾಷ್ಟ್ರದಲ್ಲಿ ಪ್ರಸಿದ್ಧಿಪಡೆದಿದ್ದಾನೆ. ಬೇಟೆ ಸಂಸ್ಕೃತಿಯ ಭೈರವನ ಬಳಿಕ ಅಸ್ತಿತ್ವಕ್ಕೆ ಬಂದ ಪಶುಪಾಲನ ಸಂಸ್ಕೃತಿಯ ಈ ದೇವತೆ, ಮಹಾರಾಷ್ಟ್ರದಲ್ಲಿ ಪರಿಶಿಷ್ಟದಿಂದ ಶಿಷ್ಟ ನೆಲೆಗೂ ಬಿಚ್ಚಿಕೊಂಡು ಬೆಳೆದುದರ. ವ್ಯವಸ್ಥಿತ ಅಧ್ಯಯನ ಈ ಕೃತಿಯಲ್ಲಿದೆ.

ಡಾ. ರಾಮಕೃಷ್ಣ ಮರಾಠೆಯವರು ಈಗಾಗಲೇ ರಂಗಭೂಮಿಗೆ ಸಂಬಂಧಿಸಿದಂತೆ ಗಣ್ಯ ಕೆಲಸ ಮಾಡಿರುವ ಇವರು, ಈ ಕೃತಿಯ ಮೂಲಕ ತಮ್ಮ ಭಾಷಾಂತರ ಶಕ್ತಿಯನ್ನು ಅನಾವರಣಗೊಳಿಸಿದ್ದಾರೆ. ಈ ಸಾಂಸ್ಕೃತಿಕ ರಾಯಭಾರತ್ವಕ್ಕಾಗಿ ಇವರು ಅಭಿನಂದನಾರ್ಹರಾಗಿದ್ದಾರೆ.

---

* ಮರಾಠಿ ಮೂಲ–ರಾ. ಚಿಂ. ಢೇರೆ, ಅನು–ಡಾ. ರಾಮಕೃಷ್ಣ ಮರಾಠೆ: ದಕ್ಷಿಣದ ದೇಶೀದೇವರು ಶ್ರೀ ಖಂಡೋಭಾ.

ಆಕರ : ಮಾರ್ಗ ಸಂಪುಟ–೮

■■

276

LETTERS FROM MOSCOW

2005

Dr. Buddanna Hingamire is a recipient of Soviet Land-Nehru Award. He has translated Alexander Pushkin's poems and Gipsies into Kannada language. He has also translated Ukrainian Poet Taras Shevchenko's poems and Lesya Ukrainka's Forest song i.e. Kadina Mohini, He had been to Moscow in 1981,1989-1990.

Dr. Vitaly Fournika of Moscow has written a book in Russian language, which is named as 'Kobjar ja Gimalayami' (Poet beyond Himalaya). The book contains an. article 'From Ukrainia to Kamataka'-which is devoted to Buddanna. Dr. Vitaly has used the portrait sketched by a Russian Painter Muxail Fyodorof of Buddanna.

His Kannada translation has been included in an 'Anthology of Taras's. World Poetry. Kamataka should be proud of it.
"Moscow, Kiev Radios had. broadcast his Interviews.

---

* Dr. Buddanna Hingamire: Letters From Moscow, Yugadhavani Prakasahana, Dharwad 2014

ಆಕರ : ಮಾರ್ಗ ಸಂಪುಟ-೮

■■

೨೭೭

ಮಲ್ಲಿಕಾರ್ಜುನ ಮತ್ತು ಮಹಾರಾಷ್ಟ್ರ

೨೦೦೬

'ಲಿಂಗಾಯತ'ದ ಜನ್ಮಭೂಮಿ ಕರ್ನಾಟಕವಾಗಿದ್ದರೂ ಇದರ ಪೂರ್ಣ ತಿಳಿವಳಿಕೆಗೆ ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳ ಅಧ್ಯಯನ ತುಂಬಾ ಅಗತ್ಯವೆನಿಸಿದೆ. ಇವುಗಳಲ್ಲಿ ಇಂದಿನ ಆಂಧ್ರಪ್ರದೇಶದ ಶ್ರೀಶೈಲ ಪರಂಪರೆಯು ಮೊದಲಿನಿಂದಲೂ ರಾಜಕೀಯ ಸೀಮಾರೇಖೆಗಳನ್ನು ಅಳಿಸಿಹಾಕುತ್ತ, ಕರ್ನಾಟಕವನ್ನು ದಾಟಿ ಮಹಾರಾಷ್ಟ್ರವನ್ನೂ ವ್ಯಾಪಿಸಿದೆ. ಇದರಿಂದಾಗಿ ಈ ಮೂರು ರಾಜ್ಯಗಳು ಮೂಲತಃ ಒಂದೇ ಸಂಸ್ಕೃತಿಯ ಅಖಂಡ ಘಟಕವೆಂದು ಸ್ಪಷ್ಟವಾಗುತ್ತಿದ್ದು, ವಿಸ್ತೃತ ಅಧ್ಯಯನಕ್ಕೆ ನಾಂದಿಯಾಗಿದೆ, ಪ್ರಸ್ತುತ 'ಮಲ್ಲಿಕಾರ್ಜುನ ಮತ್ತು ಮಹಾರಾಷ್ಟ್ರ' ಕೃತಿ.

ಶಿವಾಜಿಯ ಭೌಂಸ್ಲೆ ಮನೆತನದ ಮೂಲಪುರುಷನಾದ ಹೊಯ್ಸಳ ವಂಶೀಯ ಬಳಿಯಪ್ಪನೆಂಬುವನು ತನ್ನ ಗ್ರಾಮವಾದ ಸೊರಟೂರಿನ ಮಲ್ಲಿಕಾರ್ಜುನ ದೇವರನ್ನು ಮಹಾರಾಷ್ಟ್ರದ ಸಾತಾರ ಜಿಲ್ಲೆಯ ಶಿಖರ ಸಿಂಗಣಾಪುರದಲ್ಲಿ ಸ್ಥಾಪಿಸಿ, ದೇವಾಲಯನಿರ್ಮಿಸಿದುದು ಈ ಕೃತಿಯ ಕೇಂದ್ರ ವಿಷಯ. ಮಹಾರಾಷ್ಟ್ರದ ಹಿರಿಯ ಸಂಶೋಧಕರಾದ ಡಾ. ರಾ.ಚಿಂ. ಢೇರೆಯವರು ಕೈಗೊಂಡ ಸಮಗ್ರ ಅಧ್ಯಯನವಾದ 'ಶಿಖರ ಸಿಂಗಣಾಪುರಾ ಶ್ರೀಶಂಭುಮಹಾದೇವ' ಹೆಸರಿನ ಮರಾಠಿ ಗ್ರಂಥದ ಭಾಗಶಃ ಅನುವಾದವಾಗಿರುವ ಈ ಕೃತಿಯು ಮಲ್ಲಿಕಾರ್ಜುನ ಸಂಸ್ಕೃತಿಯ ಅಧ್ಯಯನದ ಮುಂದುವರಿಕೆಗೆ ಪ್ರೇರೇಪಿಸುವ ಬರವಣಿಗೆಯಾಗಿದೆ.

ಕನ್ನಡದ ಕೆಲಸ ಕನ್ನಡ ವಿಶ್ವವಿದ್ಯಾಲಯಕ್ಕೆ ಮಾತ್ರ ಸೀಮಿತವಾದುದಲ್ಲ. ಇಂಥ ಕೆಲಸ ಮಾಡುವ ಯಾವುದೇ ಸಂಸ್ಥೆ ಸಣ್ಣದಿರಲಿ ದೊಡ್ಡದಿರಲಿ, ಅದು ಕನ್ನಡ ವಿಶ್ವವಿದ್ಯಾಲಯವೆಂದೇ ನನ್ನ ಭಾವನೆ. ಈ ದೃಷ್ಟಿಯಿಂದ ಕರ್ನಾಟಕದ ಲಿಂಗಾಯತ ಮಠಗಳು ಮಾಡುತ್ತಾ ಬಂದ ಕನ್ನಡದ ಕೆಲಸ ಚರಿತ್ರಾರ್ಹವೆನಿಸಿದೆ. ಈ ಚರಿತ್ರೆಗೆ ಹೊಸ ಪುಟವನ್ನು ಸೇರಿಸುತ್ತಲಿದೆ ಸೊಂಡೂರಿನ ಶ್ರೀ ಪ್ರಭುದೇವ ಸಂಸ್ಥಾನ ವಿರಕ್ತಮಠದ 'ಪ್ರಭುದೇವ ಜನಕಲ್ಯಾಣ ಸಂಸ್ಥೆ'. ಇದರ ಅಧ್ಯಕ್ಷರಾದ ಪೂಜ್ಯ ಶ್ರೀ ಪ್ರಭುಸ್ವಾಮಿಗಳ 'ಲಿಂಗಾಯತ ಕನ್ನಡ' ಪ್ರೀತಿ ಕಾರಣವಾಗಿ ಈ ಕೃತಿ ಬೆಳಕು ಕಾಣುತ್ತಲಿದ್ದು, ಈ ಬೆಳಕು ಇನ್ನೂ ಪ್ರಕಾಶಮಾನವಾಗಲೆಂದು ಹಾರೈಸುತ್ತೇನೆ.

ಪ್ರಾಚೀನ ಕಾಲದಿಂದಲೂ ಮರಾಠಿ ಭಾಷೆಯು ಕನ್ನಡ ಸಂಸ್ಕೃತಿಯ ನೆಲೆ–ಹಿನ್ನೆಲೆಯಲ್ಲಿಯೇ ಬೆಳೆಯುತ್ತಾ ಬಂದಿದೆ. ಇದನ್ನು ಗ್ರಹಿಸಿ ಇಂದಿನ ಮರಾಠಿ ಸಂಶೋಧಕರು ರಚಿಸಿದ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸುತ್ತಿರುವ ವಿದ್ವಾಂಸದಲ್ಲಿ ವಿಠಲರಾವ್ ಗಾಯಕ್ವಾಡ್ ಅವರೂ ಒಬ್ಬರು. ಇವರಿಂದ ಇಂಥ ಅನುವಾದಗಳನ್ನು ಇನ್ನೂ ಬಯಸುತ್ತಾ ಕನ್ನಡಿಗರು ಇವರನ್ನು ಪ್ರೋತ್ಸಾಹಿಸುವರೆಂದು ಆಶಿಸುತ್ತೇನೆ.

---

* ಮರಾಠಿ ಮೂಲ–ರಾ. ಚಿಂ. ಢೇರೆ, ಅನು–ವಿಠಲರಾವ್ ಗಾಯಕ್ವಾಡ: ಮಲ್ಲಿಕಾರ್ಜುನ ಮತ್ತು ಮಹಾರಾಷ್ಟ್ರ.

ಆಕರ : ಮಾರ್ಗ ಸಂಪುಟ–೮

■■

೨೭೮

ಪತ್ರಕರ್ತರಾಗಿ ಮೊಹರೆ ಹಣಮಂತರಾಯ : ಒಂದು ಅಧ್ಯಯನ

೨೦೦೮

ಭಾರತದ ಸ್ವಾತಂತ್ರ್ಯ ಚಳವಳಿ ಮತ್ತು ಕರ್ನಾಟಕ ಏಕೀಕರಣಕ್ಕೆ ಪತ್ರಕರ್ತ ಮೊಹರೆ ಹಣಮಂತರಾಯರ ಕೊಡುಗೆ ಅಮೋಘವಾದುದು. ಸಂಯುಕ್ತ ಕರ್ನಾಟಕ ಪತ್ರಿಕೆ ಹೆಸರಿಗೆ ತಕ್ಕಂತೆ ಕರ್ನಾಟಕವನ್ನು ಸಂಯುಕ್ತವಾಗಿಸುವಲ್ಲಿ, ಸಮೃದ್ಧವಾಗಿಸುವಲ್ಲಿ ಬಹುದೊಡ್ಡ ಪಾತ್ರ ವಹಿಸುತ್ತ ಬಂದಿದೆ. ಈ ಪತ್ರಿಕೆಗೆ ಇಂಥ ಯೋಗ್ಯತೆ ತಂದುಕೊಟ್ಟವರು ಶ್ರೀ ಮೊಹರೆ ಹಣಮಂತರಾಯರು. ಇವರ ಪತ್ರಿಕೋದ್ಯಮ ಜೀವನ ಕುರಿತು ಈವರೆಗೆ ಪ್ರಕಟವಾದ ಗ್ರಂಥಗಳು ಅರೆ–ಕೊರೆಯಿಂದ ಕೂಡಿದ್ದವು. ಪತ್ರಕರ್ತರಾಗಿ ಮೊಹರೆ ಹಣಮಂತರಾಯ: ಒಂದು ಅಧ್ಯಯನ

ಈ ಕೊರತೆಯನ್ನು ನೀಗಿಸುವ ರೀತಿಯಲ್ಲಿ ಡಾ. ಜೆ. ಎಂ. ಚಂದುನವರ ಅವರು ಪರಿಪೂರ್ಣ ಕೃತಿಯನ್ನು ರಚಿಸಿದ್ದಾರೆ.

---

* ಡಾ. ಜೆ. ಎಂ. ಚಂದುನವರ : ಪತ್ರಕರ್ತರಾಗಿ ಮೊಹರೆ ಹಣಮಂತರಾಯ : ಒಂದು ಅಧ್ಯಯನ.

ಆಕರ : ಮಾರ್ಗ ಸಂಪುಟ–೮

೨೭೯

ಕನ್ನಡ ದಾಖಲು ಸಾಹಿತ್ಯ

೨೦೧೦

ನಿರಂತರ ಅಧ್ಯಯನ, ಅದರ ಫಲಶೃತಿಗಳ ದಾಖಲೀಕರಣದಲ್ಲಿ ಗಾಢವಾಗಿ ತೊಡಗಿಸಿಕೊಂಡಿರುವ ಡಾ. ಕೆ.ರವೀಂದ್ರನಾಥ ಅವರು ಭರವಸೆಯಿಂದ ಬೆಳೆಯುತ್ತಲಿರುವ ಕನ್ನಡ ಪ್ರಾಧ್ಯಾಪಕರು. ಲಿಂಗಾಯತ ಸಂಸ್ಕೃತಿ, ವಚನಸಾಹಿತ್ಯ, ಹಸ್ತಪ್ರತಿ–ಗ್ರಂಥಸಂಪಾದನ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಡಾ. ಕೆ. ರವೀಂದ್ರನಾಥ ಅವರ ಕನ್ನಡ ದಾಖಲು ಸಾಹಿತ್ಯ ಆಕರ ಕ್ಷೇತ್ರದಲ್ಲಿ ಅಪರೂಪದ ಕೃತಿ. ಭಾಷಾ ಸಾಮಾಗ್ರಿಯ ಲಿಖಿತ ರೂಪಗಳಾದ ಶಾಸನ, ಕಡತ, ನಿರೂಪ, ಬಿನ್ನವತ್ತಳೆ, ಕೈಫಿಯತ್ತು, ಬಖೈರು, ನಾಮ, ವಂಶಾವಳಿ, ದಿನಚರಿ ಹಾಗೂ ಸ್ಥಳ ಮಹಾತ್ಮೆಗಳನ್ನು ಮೊದಲಬಾರಿಗೆ ಶಾಸ್ತ್ರೀಯವಾಗಿ ಅಧ್ಯಯನಕ್ಕೆ ಒಳಪಡಿಸಿರುವುದು ಈ ಕೃತಿಯ ವಿಶೇಷ. ಹತ್ತು ವರ್ಷಗಳ ತರುವಾಯ ಮರುಮುದ್ರಣಗೊಳ್ಳುತ್ತಿರುವ ಕಾರಣವಾಗಿ ಇಲ್ಲಿಯ ಅಧ್ಯಯನಕ್ಕೆ ವ್ಯಾಪಕತೆ ಪ್ರಾಪ್ತವಾಗಿದೆ.

'ಸಂಸ್ಕೃತಿ' ಎನ್ನುವುದು ಸಮೂಹಸಮ್ಮತ ಜೀವನ ಪದ್ಧತಿಯಾಗಿದೆ. ಕನ್ನಡಿಗರ ಇಂತಹ ಜೀವನ ಪದ್ಧತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಇಂಥ ಇತಿಹಾಸವನ್ನು ರೂಪಿಸಿಕೊಂಡು ಬಂದ ಕನ್ನಡ ಸಮಾಜ ಬಿಟ್ಟುಹೋಗಿರುವ ದಾಖಲೆಗಳ ಸರ್ವೇಕ್ಷಣೆ, ಸಂಗ್ರಹ ಹಾಗೂ ಅಧ್ಯಯನ ತೀವ್ರವಾಗಿ ನಡೆಯಬೇಕಾಗಿದೆ. ಯಾಕೆಂದರೆ, ಬಹುಪ್ರತಿಯಲ್ಲಿ ಸಿಗುವ ಕಾವ್ಯಸಾಹಿತ್ಯವನ್ನು ಬಿಟ್ಟರೆ, ಏಕಪ್ರತಿಯಲ್ಲಿ ಸಿಗುವ ದಾಖಲು ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ವರ್ಷ ಹಲವಾರು ವಿದ್ವಾಂಸರು ದುಡಿಯುವಷ್ಟು ಕೆಲಸ ಇನ್ನೂ ಇದೆ. ಡಾ. ಕೆ. ರವೀಂದ್ರನಾಥ ಅವರ ಈ ಕೃತಿ ನೆರವಿನಿಂದ ಕಡತ, ಬಖೈರು, ನಾಮೆ, ನಿರೂಪ, ವಂಶಾವಳಿ, ಸ್ಥಳಪುರಾಣ ಇತ್ಯಾದಿ ಸಂಪುಟಗಳನ್ನು ಪ್ರಕಟಿಸುವ ಬಹುದೊಡ್ಡ ಯೋಜನೆಯನ್ನು ಕೈಗೊಳ್ಳಬಹುದಾಗಿದೆ.

ನ್ಯಾಯನಿಷ್ಠುತಿ ದಾಕ್ಷಿಣ್ಯಪರನಲ್ಲದ ಮನೋಭಾವದಿಂದ ತಾವು ಶೋಧಿಸಿದ ಸತ್ಯವನ್ನು ಸಮಾಜಕ್ಕೆ ಗಟ್ಟಿಯಾಗಿ ಹೇಳುವ ನಿಟ್ಟಿನಲ್ಲಿ ಡಾ. ಕೆ.ರವೀಂದ್ರನಾಥ ಅವರಂಥ ಯುವ ಸಂಶೋಧಕರು ಬೆಳೆಯಲೆಂದು ಆಶಿಸುತ್ತೇನೆ.

---

* ಡಾ. ಕೆ.ರವೀಂದ್ರನಾಥ : ಕನ್ನಡ ದಾಖಲು ಸಾಹಿತ್ಯ.

ಆಕರ : ಮಾರ್ಗ ಸಂಪುಟ–೮

೨೮೦

ನೂರೊಂದು ವಿರಕ್ತರು : ಒಂದು ಅಧ್ಯಯನ

೨೦೧೧

ಕನ್ನಡ ಸಂಶೋಧನೆಗೆ ಸಂಬಂಧಪಟ್ಟಂತೆ ನವೋದಯಕಾಲದ ಹಳೆಯ ಶೋಧಗಳನ್ನು ಒಡೆಯುವುದು ವ್ಯಾಖ್ಯಾನಿಸುವುದು ಇಂದು ಅಗತ್ಯವೆನಿಸಿದೆ. ಇದು ಶ್ರಮ ಮತ್ತು ಧೈರ್ಯಗಳನ್ನು ಬಯಸುತ್ತದೆ. ಈ ಬಯಕೆಯನ್ನು ಒಂದು ಮಿತಿಯಲ್ಲಿ ಪೂರೈಸಿದ ಪ್ರಯತ್ನ ಈ ಪ್ರಬಂಧದಲ್ಲಿದೆ.

ಬಸವೋತ್ತರ ಕಾಲದಲ್ಲಿ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಶೈವಪಂಥಗಳನ್ನು ವೀರಶೈವ ಹೆಸರಿನಲ್ಲಿ ಒಗ್ಗೂಡಿಸುವ ಪ್ರಯತ್ನಗಳು ಉದ್ದಕ್ಕೂ ನಡೆದಿವೆ. ಇವುಗಳಲ್ಲಿ ಲಕ್ಕಣದಂಡೇಶ ಮೊದಲು ಮಾಡಿ ಎಲ್ಲರೂ ವಿಜಯನಗರದ ನೂರೊಂದು ವಿರಕ್ತ ಪಂಥವನ್ನು ವೀರಶೈವದಲ್ಲಿ ಪರಿಭಾವಿಸಿದರೆ, ಕವಿಚರಿತೆಕಾರರು ಮೊದಲು ಮಾಡಿ ಎಲ್ಲರೂ ಅದನ್ನು ಕಣ್ಣುಮುಚ್ಚಿ ಒಪ್ಪುತ್ತ ಬಂದರು. ಆದರೆ ಕೆಲವು ವರ್ಷಗಳ ಹಿಂದೆ ಬೆಳಕಿಗೆ ಬಂದಿದ್ದ "ಇದು ವೀರಶೈವ ವಿರಕ್ತ ಪರಂಪರೆಯಿಂದ ಭಿನ್ನವಾಗಿರುವ ಶಾಂತ ಹೆಸರಿನ ಅವಧೂತ ಪಂಥ"ವೆಂಬ ವಿಚಾರದ ವಿಸ್ತರಣೆ ಈ ಪ್ರಬಂಧದ ಕೇಂದ್ರ ಆಶಯವಾಗಿದೆ. ಈ ವಿಸ್ತರಣೆಗಾಗಿ ಸಾಹಿತ್ಯ ಕ್ಷೇತ್ರಕಾರ್ಯಗಳನ್ನು ಸಮಗ್ರ ರೀತಿಯಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ ವ್ಯಾಖ್ಯಾನಿಸಿದ ಪ್ರಯತ್ನ ಇಲ್ಲಿದೆ.

ಹಂಪಿಯು ವಿಜಯನಗರವಾಗಿ ಪಲ್ಲಟಗೊಂಡ ಸಂದರ್ಭದಲ್ಲಿ ಅಲ್ಲಿಯ ನಾಥ ಪಂಥವು ಶಾಂತ ಪಂಥವಾಗಿ ಪಲ್ಲಟಗೊಂಡಿತು. ಆಗ ದೂರದೂರದ ಶಾಂತ ಪರಂಪರೆಯವರು ಇಲ್ಲಿ ಏಕೀಭವಿಸುವಲ್ಲಿ ನೂರೊಂದು ವಿರಕ್ತರ ಸಂಘಟನೆಯೊಂದು ಆಕಾರ ಪಡೆಯಿತು. ಮುಂದೆ ವಿಜಯನಗರದ, ವಿಘಟನೆ, ಸ್ಥಿತ್ಯಂತರ ಸಂದರ್ಭದಲ್ಲಿ ಈ ಸಂಘಟನೆ ಒಡೆದು ಪಂಚಗಣಾಧೀಶರು,

ಬಾಲಬಸವರು ಇತ್ಯಾದಿ ರೂಪಗಳಲ್ಲಿ ನೆಲೆನಿಂತಿತು. ಈ ಎಲ್ಲ ಸಂಘಟನೆ ವಿಘಟನೆಗಳ ಅಧ್ಯಯನ ಇಲ್ಲಿದೆ.

ಸಂಶೋಧನೆಯಲ್ಲಿ ವಿದ್ಯಾರ್ಥಿಗಳು ಸರಳ ದಾರಿ ಹಿಡಿದಿರುವ ಇಂದಿನ ಸಂದರ್ಭದಲ್ಲಿ ಡಾ. ಜೆ.ಕುಮಾರ ಅವರು ಜಟಿಲ ವಿಷಯವನ್ನು ಆಯ್ದುಕೊಂಡು, ಲಭ್ಯ ಮಾಹಿತಿಯನ್ನು ಎಲ್ಲ ಮೂಲಗಳಿಂದ ಸಂಗ್ರಹಿಸಿ, ನಿರೂಪಣಾತ್ಮಕ ಶೈಲಿಯಲ್ಲಿ ಕಟ್ಟಿಕೊಟ್ಟಿರುವುದು ಈ ಪ್ರಬಂಧದ ಲಕ್ಷಣವಾಗಿದೆ. ಈಗಲೂ ಸಮಾಜದ ಮಧ್ಯೆ ಸುಪ್ತ-ವ್ಯಕ್ತಿ ರೀತಿಯಲ್ಲಿ ಬದುಕುತ್ತಿರುವ ಈ ಪಂಥದ ಸ್ವರೂಪವನ್ನು ವಿದ್ಯಾರ್ಥಿ ಸಂಶೋಧಕರು ಇನ್ನೂ ಸ್ಪಷ್ಟಪಡಿಸುವರೆಂದು, ಡಾ. ಕೆ. ರವೀಂದ್ರನಾಥರಂಥ ಮಾರ್ಗದರ್ಶಿ ಪ್ರಾಧ್ಯಾಪಕರು ಈ ದಾರಿಯನ್ನು ಇನ್ನೂ ವಿಸ್ತರಿಸುವರೆಂದು ಆಶಿಸುತ್ತೇನೆ. ಇದು ಉತ್ಸಾಹಕ್ಕಿಂತ ಸಂಯಮವನ್ನು ಬಯಸುವುದೆಂಬ ಎಚ್ಚರವನ್ನೂ ಸೂಚಿಸುತ್ತೇನೆ.

---

* ಡಾ. ಜೆ.ಕುಮಾರ : ನೂರೊಂದು ವಿರಕ್ತರು : ಒಂದು ಅಧ್ಯಯನ.

ಆಕರ : ಮಾರ್ಗ ಸಂಪುಟ-೮

■■

೨೮೧

ಪಂಪಪೂರ್ವ ಕರ್ನಾಟಕದ ಶಾಸನಗಳು

೨೦೧೧

ಡಾ. ಎಸ್. ಕೆ. ಕೊಪ್ಪಾ ಅವರು ಪ್ರಸ್ತುತ ವಿಜಾಪುರ ಜಿಲ್ಲೆಯ ಇಂಡಿಯಲ್ಲಿ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರ. ಸಂಶೋಧನ ಮಹಾಪ್ರಬಂಧ "ತರ್ದವಾಡಿ ನಾಡು : ಒಂದು ಅಧ್ಯಯನ". ಈಗಾಗಲೇ ನಾಡಿನ ವಿದ್ವಾಂಸರ ಗಮನ ಸೆಳೆದಿದೆ. ಅವರು ಪ್ರಕಟಿಸಿದ ಲೇಖನಗಳು, ವಿಚಾರಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು ಇವರ ಸಂಶೋಧನಾಸಕ್ತಿಗೆ ನಿದರ್ಶನಗಳಾಗಿವೆ.

ಪಂಪಪೂರ್ವಯುಗದ ಕನ್ನಡ ಸಾಹಿತ್ಯದ ಕತ್ತಲುಯುಗ. ಅಲ್ಲಿನ ಬೆಳಕಿನ ಕಿರಣಗಳೆಂದರೆ ಶಾಸನಗಳು. ವಿದ್ವಾಂಸರು ಇದುವರೆಗೆ ಪ್ರಕಟಿಸಿದ ಅವು ವಿವಿಧ ಪತ್ರಿಕೆಗಳಲ್ಲಿ ಶಾಸನ ಸಂಪುಟಗಳಲ್ಲಿ, ಗ್ರಂಥಗಳಲ್ಲಿ ಚೆದುರಿ ಹೋಗಿವೆ. ಕೆಲವು ಕನ್ನಡ ಲಿಪಿಯಲ್ಲಿ, ಕೆಲವು ರೋಮನ್ ಲಿಪಿಯಲ್ಲಿ ಪ್ರಕಟವಾಗಿವೆ. ಇವುಗಳನ್ನು ಒಂದೆಡೆ ಸಂಗ್ರಹಿಸಿ ಅಧ್ಯಯನ ನಡೆಸುವುದು ವಿದ್ವಾಂಸರಿಗೆ ತುಂಬ ಕಷ್ಟದ ಕೆಲಸ. ಎಲ್ಲರಿಗೂ ಎಲ್ಲ ಗ್ರಂಥ ಮತ್ತು ಎಲ್ಲ ಪತ್ರಿಕೆಗಳು ಲಭ್ಯವಾಗುವುದು ತುಂಬಾ ದುಸ್ತರ. ಹೀಗಾಗಿ ಪಂಪಪೂರ್ವ ಕರ್ನಾಟಕದ ಎಲ್ಲ ಪ್ರಾಕೃತ, ಸಂಸ್ಕೃತ, ಕನ್ನಡ ಶಾಸನಗಳನ್ನು ಸಂಗ್ರಹಿಸಿ,

ಅಧ್ಯಯನ ನಡೆಸಿ, ಅಲ್ಲಿ ನಿಕ್ಷಿಪ್ತವಾಗಿರುವ ವಿಷಯವನ್ನು ಸರಿಯಾಗಿ ವರ್ಗೀಕರಿಸಿ, ವಿಶ್ಲೇಷಿಸಿ, ವ್ಯಾಖ್ಯಾನಿಸಿದ ಮೊಟ್ಟಮೊದಲ ಗ್ರಂಥ ಇದಾಗಿದೆ. ಕಷ್ಟಪಟ್ಟು ಈ ಕೆಲಸವನ್ನು ಪೂರೈಸಿದ ಡಾ. ಎಸ್. ಕೆ. ಕೊಪ್ಪಾ ಅವರಿಗೆ ಕನ್ನಡಿಗರ ಅಭಿನಂದನೆಗಳು ಸಲ್ಲುತ್ತವೆ.

---

* ಡಾ. ಎಸ್. ಕೆ. ಕೊಪ್ಪಾ : ಪಂಪಪೂರ್ವ ಕರ್ನಾಟಕದ ಶಾಸನಗಳು, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಗುಲಬರ್ಗಾ–೨೦೧೧

ಆಕರ : ಮಾರ್ಗ ಸಂಪುಟ–೮

■■

೨೮೨

ಸಮಯಕ್ಕೊಂದು ಸಕಾರಣ

೨೦೧೧

೧೯೫೭–೬೧ ಸಿದ್ದು ಎಂದೇ ಗೆಳೆಯರ ಬಳಗದಲ್ಲಿ ಪ್ರಸಿದ್ಧವಾಗಿದ್ದ ವಿದ್ಯಾರ್ಥಿಯ ಹೆಸರು ಕರ್ನಾಟಕ ಕಾಲೇಜಿನಲ್ಲಿ ಪ್ರತಿಧ್ವನಿಸುತ್ತಿದ್ದ ಸಂದರ್ಭ. ಪಠ್ಯವಿರಲಿ, ಪಠ್ಯೇತರ ಚಟುವಟಿಕೆ ಇರಲಿ ಆತ ಎದ್ದು ಕಾಣುತ್ತಿದ್ದ. ಆ ವಯಸ್ಸಿನಲ್ಲಿಯೇ ಪ್ರಿನ್ಸಿಪಾಲ್ ವಿ.ಕೃ. ಗೋಕಾಕ ಮೊದಲಾದವರ ಪ್ರೀತಿ ವಲಯದಲ್ಲಿ ಈ ಹೆಸರು ಉದಯೋನ್ಮುಖ ಸಾಹಿತಿಯೆಂದು ದಾಖಲಾಗಿತ್ತು. ಪದ್ಯ ಸಂಕಲನವೊಂದು ಪ್ರಕಟವಾಗಿತ್ತು. ಈ ವಿದ್ಯಾರ್ಥಿ ಬೇರೆ ಯಾರೂ ಅಲ್ಲ; ಗೆಳೆಯ ಆರ್ ವಿ. ಹೊರಡಿ.

ಹೀಗೆ ಬೆಳೆಯುತ್ತಿದ್ದಂತೆಯೇ ಅಧ್ಯಯನಕ್ಕೆ ರಾಜ್ಯಶಾಸ್ತ್ರ ಆಯ್ದುಕೊಂಡು, ಮುಂಬೈಯಂಥ ಅನ್ಯಭಾಷಾ ರಾಜ್ಯದಲ್ಲಿ ವಿದ್ಯಾರ್ಥಿ ಜೀವನ ಕಳೆದು, ಆ ಸಾಹಿತ್ಯಕ ಪ್ರದೇಶದಲ್ಲಿ ವೃತ್ತಿಜೀವನ ಪೂರೈಸುವಲ್ಲಿ ವಿಪುಲ ಬರವಣಿಗೆಯಿಂದ ವಿಮುಖರಾಗಿರಬಹುದಾದರೂ ಇವರಲ್ಲಿ ಮೂಲಧನವಾಗಿದ್ದ ಸೃಜನಶೀಲತೆ ಮಾತ್ರ ನಿರಂತರ ಮುಂದುವರಿಯಿತು. ಇದಕ್ಕೆ ತಾಜಾ ಉದಾಹರಣೆ ಆಗಾಗ ಆಕಾಶವಾಣಿಗೆ ಬರೆಯುತ್ತ ಬಂದ ಹರಟೆಗಳ ಸಂಕಲನವಾಗಿರುವ ಈ "ಸಮಯಕ್ಕೊಂದು ಸಕಾರಣ."

ಹರಟೆಗೆ ಹೇಳಿ ಮಾಡಿಸಿದ ವ್ಯಕ್ತಿ ಹೊರಡಿ. ಇವರು ಇರುವಲ್ಲಿ ವಿನೋದ ವ್ಯಂಗ್ಯ ಜಗತ್ತು ತೆರೆದುಕೊಳ್ಳುತ್ತದೆ. ಮುಳ್ಳು ಮಲ್ಲಿಗೆಯಾಗಿರುವ ಅದು ಯಾರೂ ನಿರೀಕ್ಷಿಸದ ರೀತಿಯಲ್ಲಿ ವ್ಯಕ್ತವಾಗುತ್ತ ಶಬ್ದಶ್ಲೇಷ, ಅರ್ಥ ಚಮತ್ಕಾರಗಳ ಆಟದಲ್ಲಿ ಮುಂದುವರಿಯುತ್ತದೆ.

ಒಂದು ಸಣ್ಣ ವಿಷಯವನ್ನು ಎತ್ತಿಕೊಂಡು ಅದರ ಸುತ್ತ ನಿರಾಯಾಸವಾಗಿ ಬರವಣಿಗೆಯನ್ನು ಹೆಣೆಯುವುದು ಹರಟೆ ಪ್ರಬಂಧದ ಲಕ್ಷಣ. ಇದು ಜೀವನಾನುಭವ. ವೈವಿಧ್ಯ ಪೂರ್ಣ ಅಧ್ಯಯನ, ಸೃಜಶೀಲತೆ ಇತ್ಯಾದಿ ಸಾಮಗ್ರಿಯಲ್ಲಿ ಸಿದ್ಧವಾಗುವ ಒಂದು ಕಲ್ಪನಾ ಕಟ್ಟಡ. ಇಲ್ಲಿ ಬರೆಯುವ ವಿಷಯ ಮುಖ್ಯವಲ್ಲ; ಬರೆಯುವ ಬಗೆ ಮುಖ್ಯ. ಬೇಸರ ಹುಟ್ಟಿಸದೇ ನಗುನಗುತ್ತ ಓದು ಮುಂದುವರಿಯುವಂತೆ ಮಾಡಿ ಅಂತ್ಯದಲ್ಲಿ ಚಿಂತನೆಯ ನೆಲೆಮುಟ್ಟಿಸುವುದು ಇದರ ಮುಖ್ಯಗುಣ.

ಹೊರಡಿಯವರ ಪ್ರಸ್ತುತ ಸಂಕಲನದಲ್ಲಿ ಈ ಎಲ್ಲ ಅಂಶಗಳು ಸಮೃದ್ಧವಾಗಿ ಮೇಳೈಸಿವೆ. ಕನ್ನಡದಲ್ಲಿ ಹರಟೆ ಪ್ರಬಂಧಗಳ ಸೃಷ್ಟಿ ಕ್ಷೀಣಿಸುತ್ತಿರುವ ಇಂದಿನ ಕಾಲದಲ್ಲಿ ನೀಡಿದ ಈ ಉತ್ತಮ ಕೃತಿ ಕಾಣಿಕೆಗಾಗಿ ಪ್ರೊ. ಆರ್.ವಿ. ಹೊರಡಿ ಅವರನ್ನು ಮನಃಪೂರ್ವಕ ಅಭಿನಂದಿಸುತ್ತೇನೆ.

---

* ಶ್ರೀ ಆರ್ ವಿ. ಹೊರಡಿ : ಸಮಯಕ್ಕೊಂದು ಸಕಾರಣ.

ಆಕರ : ಮಾರ್ಗ ಸಂಪುಟ–೮

■■

೨೮೩

ಅತ್ರೇಯ

೨೦೧೨

ವ್ಯಕ್ತಿಯೊಬ್ಬನಿಗೆ ಕುಟುಂಬವೆಂಬ ಏಕಸಂಸ್ಕೃತಿಯ ಒಳಸುತ್ತು, ಸಮಾಜವೆಂಬ ಬಹುಸಂಸ್ಕೃತಿಯ ಹೊರಸುತ್ತು. ಹೀಗೆ ಎರಡು ಆವರಣಗಳಿರುತ್ತವೆ. ಇವೆರಡನ್ನು ಸರಿಯಾಗಿ ನಿಭಾಯಿಸುವುದು ತುಂಬ ಹೊಣೆಗಾರಿಕೆಯ ಕೆಲಸ. ಈ ಹೊಣೆಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವ ನನ್ನ ಆತ್ಮೀಯರಲ್ಲಿ ಡಾ. ಬಿ.ಆರ್. ನಾಡಗೌಡರು ಮುಖ್ಯರೆನಿಸಿದ್ದಾರೆ. ಇದಕ್ಕೆ ಕಾರಣ ಈ ಸುತ್ತುಗಳ ಕೇಂದ್ರವಾಗಿರುವ ಅವರ ಸಮಚಿತ್ತದ ವ್ಯಕ್ತಿತ್ವ. ಇದರ ಬಲದಿಂದ ಅವರು ಸುಸಂಸ್ಕೃತ ಕುಟುಂಬ ರೂಪಿಸಿದ್ದಾರೆ; ಸಾಂಸ್ಕೃತಿಕ ನಗರ ಪರಿಸರ ನಿರ್ಮಿಸಿದ್ದಾರೆ. ವೃತ್ತಿಯಿಂದ ವೈದ್ಯರಾಗಿರುವ ಅವರು ಈ ಎರಡೂ ನೆಲೆಗಳ ಆರೋಗ್ಯಕ್ಕೆ ಭಂಗ ಬರದಂತೆ ನೋಡಿಕೊಳ್ಳುವ ಮೂಲಕ ನಮ್ಮ ಮಧ್ಯದ ವಿಶಿಷ್ಟ ಮಾದರಿಯೆನಿಸಿದ್ದಾರೆ.

ಡಾ. ನಾಡಗೌಡರಿಗೆ ಬಾಲ್ಯದಿಂದಲೂ ಈ ಸಂಸ್ಕಾರ ಪ್ರಾಪ್ತವಾಗಿದೆ. ಇವರಿಗೆ ದೊಡ್ಡವರಂತೆ ಸಣ್ಣವರೂ ಮುಖ್ಯರು. ಇದಲ್ಲದೆ ಇವರಿಗೆ ಲೌಕಿಕವೂ ಬೇಕು ಪಾರಮಾರ್ಥಿಕವೂ ಬೇಕು. ಇವೆರಡನ್ನೂ ಸಮತೋಲಗೊಳಿಸುವ ಸಾಹಿತ್ಯ ಸಂಗೀತ ಇತ್ಯಾದಿ ಸಾಂಸ್ಕೃತಿಕ ಕಲೆಗಳೂ ಬೇಕು. ಹೀಗೆ ಹಲವು ಬೇಕುಗಳ ಹದವಾದ ಮಿಶ್ರಣ ಅವರ ವ್ಯಕ್ತಿತ್ವದಲ್ಲಿದೆ.

ಇಂಥ ಮಾದರಿ ಮನುಷ್ಯನನ್ನು ಗುರುತಿಸುವುದು, ಗೌರವಿಸುವುದೆಂದರೆ ಮುಂದಿನ ತಲೆಮಾರಿನ ಎದುರು ಒಂದು ಆದರ್ಶವನ್ನು ಸ್ಥಾಪಿಸುವುದೇ ಆಗಿದೆ. ಸನ್ಮಾನ ಸಮಾರಂಭದ ಮೂಲಕ ಈ ಜವಾಬ್ದಾರಿಯನ್ನು ಸರಿಯಾಗಿ ಪೂರೈಸಿದ ಅವರ ಮಿತ್ರ ಪರಿವಾರಕ್ಕೆ ಅಭಿನಂದನೆಗಳು.

---

* ಅತ್ರೇಯ : ಡಾ. ಬಿ.ಆರ್. ನಾಡಗೌಡರ ಅಭಿನಂದನಗ್ರಂಥ

ಆಕರ : ಮಾರ್ಗ ಸಂಪುಟ–೮

■■

೨೮೪

ಹಾಲುಮತ ಅಧ್ಯಯನದ ಆಕರಗಳು

ಸ್ವರೂಪ ಮತ್ತು ವಿಶ್ಲೇಷಣೆ

೨೦೧೨

ಇವತ್ತಿನ ಸಂದರ್ಭದಲ್ಲಿ ಈ ವಿಷಯವನ್ನು ಕುರಿತು ಉತ್ತಮ ಕೃತಿಯನ್ನು ಬೇರೊಬ್ಬರು ಬರೆಯಲಾರರು. ಇದು ಪ್ರಶಂಸೆಯಲ್ಲ; ಇತ್ತೀಚಿನ ಪಿಎಚ್.ಡಿ. ಪ್ರಬಂಧಗಳನ್ನು ಗಮನಿಸಿ ಆಡಿದ ಮಾತು.

ಪಿಎಚ್.ಡಿ. ಪ್ರಬಂಧಗಳಲ್ಲಿ ಆಕರಸಂಗ್ರಹ, ಸಂಗ್ರಹಿತ ಆಕರಗಳ ವಿಶ್ಲೇಷಣೆ, ವಿಶ್ಲೇಷಿತ ಆಕರಗಳ ವ್ಯಾಖ್ಯಾನ ಎಂದು ಮೂರು ಪ್ರಕಾರಗಳನ್ನು ಗುರುತಿಸಬಹುದು. ಈ ಕೃತಿಯ ಮುಖ್ಯ ಉದ್ದೇಶ ಆಕರ ಸಂಗ್ರಹವಾಗಿದ್ದರೂ, ಅಲ್ಲಿಗೇ ನಿಲ್ಲದೆ ಮುಂದುವರಿದು ವಿಶ್ಲೇಷಣೆಯ ನೆಲೆಯನ್ನು ಇದು ತಲುಪಿದೆ. ಆಕರ ಸಂಗ್ರಹದಲ್ಲಿ ಸಮಗ್ರತೆ ಇದರ ಮೊದಲ ಸಾಧನೆಯಾಗಿದೆ. ಪ್ರಾಚೀನ ಸಾಹಿತ್ಯ ಕೃತಿಗಳನ್ನು ಶಾಸನ–ಸನದು, ಕೈಫಿಯತ್ತು ರೂಪದ ದಾಖಲೆಗಳನ್ನು, ಆಧುನಿಕ ಗ್ರಂಥ ಲೇಖನಗಳನ್ನು, ಮೌಖಿಕ ಸಾಹಿತ್ಯ ಮತ್ತು ಆಚರಣೆಗಳನ್ನು ಒಂದೂ ಬಿಡದಂತೆ ಸಂಗ್ರಹಿಸುವಲ್ಲಿ ಡಾ. ಅನ್ನಪೂರ್ಣ ಗೋಸ್ಬಾಳ ಅವರು ತುಂಬ ಶ್ರಮವಹಿಸಿದ್ದಾರೆ. ಈ ದೊಡ್ಡರಾಶಿಯನ್ನು ನೋಡಿದರೆ ಇಂದು ಯಾರೂ ಈ ಪ್ರಮಾಣದಲ್ಲಿ ದುಡಿಯಲಾರರೆಂಬ ಭಾವನೆ ಮೂಡುತ್ತದೆ. ಇದು ಕೇವಲ ಆಕರಗಳ ರಾಶಿಯಲ್ಲ; ಈ ರಾಶಿಯನ್ನು ಬೇಸರವಿಲ್ಲದೇ ಓದಿ. ತಾಳ್ಮೆಯಿಂದ

ವರ್ಗೀಕರಿಸಿ. ಅವುಗಳಿಂದ ಪ್ರಕಟವಾಗುವ ಫಲಿತಗಳನ್ನು ನೋಡಿರುವ, ಬರವಣಿಗೆಯಲ್ಲಿ ಭಾಷೆಯ ಮುಗ್ಧತೆ ಉಳಿಸಿಕೊಂಡಿರುವ ಶ್ರೇಯಸ್ಸು ಈ ಕೃತಿಗೆ ಸಲ್ಲುತ್ತದೆ.

ಹಾಲುಮತದ ಗುರುಪರಂಪರೆ ಕಾಲದ ದೃಷ್ಟಿಯಿಂದ ಪ್ರಾಚೀನವೂ ಸಂಸ್ಕೃತಿ ದೃಷ್ಟಿಯಿಂದ ಸಮೃದ್ಧವೂ ತತ್ವದ ದೃಷ್ಟಿಯಿಂದ ಶಿವಪರವೂ ಆಗಿರುವುದನ್ನು ಮನಸಾ ಅರ್ಥಮಾಡಿಕೊಂಡಿರುವ ಇವರು "ಇಂದು ಹಾಲುಮತ ಸಮಾಜ ಕನಕದಾಸನ ಹೆಸರಿನಲ್ಲಿ ಪೀಠ ಸ್ಥಾಪಿಸಿ ಪುರಾತನ ಮೂಲ ಕುರುಹನ್ನು ಕೈಬಿಟ್ಟು ತನಗೇ ತಾನೇ ಅನ್ಯಾಯ ಮಾಡಿಕೊಂಡಿದೆ" ಎಂದು ಮುಂತಾಗಿ ಕೇವಲ ಧೈರ್ಯದ ಮಾತಲ್ಲ: ಸತ್ಯಕ್ಕೆ ತೋರಿದ ಮರ್ಯಾದೆಯಾಗಿದೆ. ಅವಕಾಶವಾದಿ ಸಂಶೋಧಕರ ಮುಖಕ್ಕೆ ಹಿಡಿದ ಕನ್ನಡಿಯಾಗಿದೆ.

---

* ಡಾ. ಅನ್ನಪೂರ್ಣ ಗೋಸ್ಬಾಳ : ಹಾಲುಮತ ಅಧ್ಯಯನದ ಆಕರಗಳು ಸ್ವರೂಪ ಮತ್ತು ವಿಶ್ಲೇಷಣೆ.

ಆಕರ : ಮಾರ್ಗ ಸಂಪುಟ-೮

■■

೨೮೫

ಕಾವ್ಯಾವಲೋಕನ ಹಾಸು-ಬೀಸು

೨೦೧೨

ಗೆಳೆಯರಲ್ಲಿ ಗೆಳೆಯ ಬಿ.ಎ. ಸನದಿ ಅವರ ಪುಸ್ತಕಕ್ಕೆ ಸಂತೋಷ-ಸಂಕೋಚಗಳ ಮಿಶ್ರಣಭಾವದಿಂದ ಈ ಬೆನ್ನುಡಿ ಬರೆಯುತ್ತಿದ್ದೇನೆ. ನಮ್ಮ ತಲೆಮಾರಿನ ಗಣ್ಯ ಸಾಹಿತಿಯಾದ ಅವರ ಕೃತಿಗೆ ಯಾರ ಬೆನ್ನುಡಿ-ಮುನ್ನುಡಿಗಳ ಅಗತ್ಯವಿಲ್ಲ. ಹೀಗಿದ್ದೂ ಗೆಳೆಯನಾದ ನಾನು ತಮ್ಮ ಈ ಪುಸ್ತಕದ ಬಗ್ಗೆ ನಾಲ್ಕು ಮಾತು ಹೇಳಲೇ ಬೇಕು-ಎಂಬ ಅವರ ಹಟಕ್ಕೆ ಮಣಿದು ಇದನ್ನು ಬರೆಯುತ್ತಲಿದ್ದೇನೆ.

ಕನ್ನಡ ಸನದಿಯವರ ಮಾತೃಭಾಷೆಯಲ್ಲ; ಮಾತೃಭೂಮಿ ಭಾಷೆ. ಹೀಗಿದ್ದೂ ಇವರು ಕನ್ನಡವನ್ನು ಕೇವಲ ಬರೆವಣಿಗೆಯ ಮಾಧ್ಯಮವಾಗಿಸಿಕೊಳ್ಳದೆ, ಬದುಕಿನ ಭಾಷೆಯನ್ನಾಗಿ ಬಳಸಿಕೊಂಡಿದ್ದಾರೆ, ಬೆಳಸಿಕೊಂಡಿದ್ದಾರೆ. ಇದಕ್ಕೆ ನಿದರ್ಶನವೆಂಬಂತೆ ಹೋದಲೆಲ್ಲ ಇವರು ಸಾಹಿತ್ಯದ ಜೊತೆಗೆ ಕನ್ನಡ ಪರಿಸರವನ್ನು ಸೃಷ್ಟಿಸುತ್ತಬಂದಿದ್ದಾರೆ. ಇವರಿಗೆ ಕನ್ನಡ ಪರಿಚಾರಕ ಪರಂಪರೆಯಲ್ಲಿ ಪ್ರಮುಖಸ್ಥಾನ ಸಲ್ಲುತ್ತದೆ. ಇದನ್ನು ನಾನು ಇಲ್ಲಿ ವಿಶೇಷ ಕೊಡುಗೆಯೆಂದು

ಪರಿಭಾವಿಸುತ್ತೇನೆ. ಸನದಿ ಇರುವಲ್ಲಿ ಕನ್ನಡವಿರುತ್ತದೆ-ಎಂಬಂತೆ ಅವರು ಒಳನಾಡಿನ ಬೆಳಗಾವಿ, ರಾಯಬಾಗ, ಬೆಂಗಳೂರು, ಕಲಬುರ್ಗಿಗಳಲ್ಲಿರಲಿ, ಹೊರನಾಡಿನ ಅಹಮ್ಮದಾಬಾದ, ಮುಂಬಯಿಗಳಲ್ಲಿರಲಿ ಕನ್ನಡ ಬರವಣಿಗೆಯೊಂದಿಗೆ ಕನ್ನಡ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ.

ಮೊತ್ತದಂತೆ ಮೌಲ್ಯಗಳಲ್ಲಿಯೂ ಗಣ್ಯವಾಗಿರುವ ಇವರ ಸಾಹಿತ್ಯದಲ್ಲಿ ಪದ್ಯಕೃಷಿ ಪ್ರಧಾನವಾಗಿದ್ದರೂ, ಗದ್ಯಕೃಷಿಯೂ ಗಮನಾರ್ಹವಾಗಿದೆ. ಇದಕ್ಕೆ ಇತ್ತೀಚಿನ ಸಾಕ್ಷಿಯಾಗಿದೆ, ಪ್ರಸ್ತುತ "ಕಾವ್ಯಾವಲೋಕನ ಬೀಸು-ಹಾಸು."

ಕಲೆ-ಸಾಹಿತ್ಯ-ವಿಮರ್ಶೆ-ಪರಿಚಯ ಇತ್ಯಾದಿಗಳ ಈ ಕಣಜದಲ್ಲಿ ಚಿಂತನೆಯಿದೆ. ನಿರೂಪಣೆಯಿದೆ. ಇಲ್ಲೆಲ್ಲ ಕಳೆದ ಐದು ದಶಕಗಳ ಕಾಲಮಾನದಲ್ಲಿ ಭಾಷೆ-ಸಾಹಿತ್ಯ-ಸಮಾಜಗಳ ಅನುಸಂಧಾನದ ಮೂಲಕ ಕಂಡ 'ಸನದಿ ಸತ್ಯ'ಗಳು ಒಡೆದು ತೋರುತ್ತವೆ. ಜೊತೆಗೆ ಅಧ್ಯಯನದ ಮೂಲಕ ಕಲೆಹಾಕಿದ ವಿಪುಲಮಾಹಿತಿಯೂ ಇಲ್ಲಿ ಸಂಗ್ರಹಗೊಂಡಿದೆ.

ಸನದಿಯವರ ವ್ಯಕ್ತಿತ್ವದ ಮುಖ್ಯಲಕ್ಷಣ ಸಹೃದಯತೆ ಮತ್ತು ಸೃಜನಶೀಲತೆ. ಇದನ್ನು ಸಹಜವಾಗಿಯೇ ನಾವು ಅವರ ಸಾಹಿತ್ಯ ಸಂದರ್ಭದಲ್ಲಿಯೂ ಕಾಣಬಹುದಾಗಿದೆ. ಗದ್ಯಶೈಲಿಯೂ ಹೇಳಬೇಕಾದ ವಿಷಯ ಸ್ವಲ್ಪವೂ ಹೊರಗುಳಿಯದಂತೆ ಎಚ್ಚರವಹಿಸುತ್ತದೆ. ಇದರಿಂದಾಗಿ ಈ ಲೇಖನಗಳಿಗೆ ಒಂದು ಹದ ಪ್ರಾಪ್ತವಾಗಿದೆ.

ಯಾವುದೇ ಕೃತಿ ಈ ವರೆಗಿನ ನಮ್ಮ ತಿಳಿವಳಿಕೆಯನ್ನು ಗುಣ, ತಪ್ಪಿದರೆ ಗಾತ್ರದಲ್ಲಾದರೂ ವಿಸ್ತರಿಸಬೇಕು. ಪ್ರಸ್ತುತ ಕೃತಿಯಲ್ಲಿ ಅಂಥ ಎರಡೂ ಬಗೆಗಳು ಆಸ್ಪದ ಪಡೆದಿವೆ. ಇಂಥ ಬರೆವಣಿಗೆಯನ್ನು ಓದುವ, 'ಕೆಳೆನುಡಿ' ಬರೆಯುವ ಅವಕಾಶ ಮಾಡಿಕೊಟ್ಟ ಗೆಳೆಯ ಸನದಿ ಅವರ ಪ್ರೀತಿಗೆ ಅಭಿನಂದನೆಗಳು.

---

* ಶ್ರೀ ಬಿ.ಎ. ಸನದಿ : ಕಾವ್ಯಾವಲೋಕನ ಹಾಸು-ಬೀಸು

ಆಕರ : ಮಾರ್ಗ ಸಂಪುಟ-೮

■■

೨೮೬

ಜೀವಿ ವಚನ ಶತಕ

೨೦೧೨

"ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಇದು ವಚನಕಾರರ ಧ್ಯೇಯವಾಕ್ಯ. ತಮ್ಮ ಬದುಕಿನಂತೆ ಬರಹದಲ್ಲೂ ಅವರು ಈ ಸೂತ್ರವನ್ನು ಅನುಷ್ಠಾನಗೊಳಿಸಿದ ಫಲವಾಗಿ, ಪ್ರಾಚೀನ ಸಾಹಿತ್ಯ

ಪ್ರಕಾರಗಳಾದ ಚಂಪೂ, ಷಟ್ಪದಿ ಇತ್ಯಾದಿ ಕಾಲುಸೋತು ನಿಂತರೂ 'ವಚನ' ಪ್ರಕಾರ ಮಾತ್ರ ಈಗಲೂ ಹೆಜ್ಜೆ ಹಾಕುತ್ತ ನಡೆದಿದೆ. ಈ ಶತಮಾನದಲ್ಲಿ ನೂರಾರು ಜನ ವಚನಕಾರರು ಕಂಡುಬರುವದು ಇದಕ್ಕೆ ನಿದರ್ಶನವೆನಿಸಿದೆ. ಇವರಲ್ಲಿ ಮುದ್ರಿಕೆರಹಿತ ಬರೆದ ಪ್ರಯೋಗಶೀಲ ಕವಿಗಳು ವಿರಳ. ಈ ವಿರಳರ ಸಾಲಿಗೆ ಹೊಸ ಸೇರ್ಪಡೆಯಾಗಿದ್ದಾರೆ "ಜೀವಿ."

ಬೇಂದ್ರೆಯವರ "ಕರುಳಿನ ವಚನಗಳು", ಕುವೆಂಪು ಅವರ "ಕಿಂಕಿಣಿ"ಯ ಮಾದರಿಯಲ್ಲಿ ಆಕಾರ ಪಡೆದ ಇವು, ಅನುಭವದ ಕಿಡಿಗಳೆನಿಸಿವೆ. ಇಂಥ ಕಿಡಿಯನ್ನು ನುಡಿಯಲ್ಲಿ ಹಿಡಿಯಲು ವಚನಕಾರರು ಗದ್ಯ-ಪದ್ಯಕ್ಕೆ ಮಧ್ಯದ ಅನನ್ಯ ಆಕೃತಿಯನ್ನು ರೂಪಿಸಿಕೊಂಡರು. ಗದ್ಯಕ್ಕೆ ಹೊರಳದ, ಪದ್ಯಕ್ಕೆ ಉರುಳದ ಆ ಶಿಲ್ಪವನ್ನು "ಜೀವಿ" ಯವರು ಈ ಕೃತಿಯಲ್ಲಿ ಬಳಸಿಕೊಂಡಿದ್ದಾರೆ.

"ಜೀವಿ" ಯವರದು ಮೂಲತಃ ಸೃಜನಶೀಲ ಮನಸ್ಸು. ಏನು ಹೇಳಬೇಕೆಂಬುದು, ಹೇಗೆ ಹೇಳಬೇಕೆಂಬುದು ಸೃಜನಶೀಲತೆಯ ಎರಡು ನೆಲೆಗಳು. ಹೇಗೆ ಹೇಳಬೇಕೆಂಬ ಕಲೆಗಾರಿಕೆಯಲ್ಲಿ ಒಂದಿಷ್ಟು ಕೊರತೆ ಕಂಡು ಬಂದರೂ, ಅದನ್ನು ಓದುಗರು ಮರೆಯುವಷ್ಟು, ಏನು ಹೇಳಬೇಕೆಂಬುದು ಇಲ್ಲಿ ಪ್ರಭಾವಶಾಲಿಯಾಗಿದೆ.

ಏನು ಹೇಳಬೇಕು? ಎಂಬುದು ಬಹುಮುಖ ಅನುಭವವನ್ನು ಅಪೇಕ್ಷಿಸುತ್ತದೆ. "ಜೀವಿ" ಅವರಲ್ಲಿ ಇದು ನೈಸರ್ಗಿಕತೆಯಿಂದ ನಾಗರಿಕತೆಯ ವರೆಗೆ ವಿಸ್ತರಿಸಿಕೊಂಡಿದೆ. ಹೀಗಾಗಿ ಒಂದು ನೂರು ಶೀರ್ಷಿಕೆಯ ಕೆಳಗೆ ಹಲವು ವಚನಗಳೆಂಬ ಈ ಕೃತಿವಿನ್ಯಾಸವು ಒಂದು ವಿಷಯವನ್ನು ಎಷ್ಟು ಬಗೆಯಾಗಿ ಹೇಳಬೇಕೆಂಬುದಕ್ಕೆ ಉದಾಹರಣೆಯೆನಿಸಿದೆ. ಹಾಗೆ ಹೇಳಿ ಈ ವಚನಗಳು ರೂಪಗೊಂಡಿವೆ. ನಿಂತು ಹೋಗಿದ್ದ ಈ ಪದ್ಯ ಪ್ರಕಾರಕ್ಕೆ ಕಾಯಕಲ್ಪ ನೀಡಿದ ವೈದ್ಯ-ಸಾಹಿತಿ "ಜೀವಿ" ಯವರಿಗೆ ಅಭಿನಂದನೆಗಳು.

---

* ಶ್ರೀ ಜೀವಿ : ಜೀವಿ ವಚನ ಶತಕ

ಆಕರ : ಮಾರ್ಗ ಸಂಪುಟ-೮

■■

287

DO OR DIE

2012

At the mention of Basavaraj Kaṭṭimani the novel form of litrature as also his *Do or Die* novel come to mind. As such it has seen fifteen editions. Basavaraj Kaṭṭimani Pratishtana has taken up its translation and publication in English and Marathi.

Kannada Novel Literature has a history of a century. The other forms of literature like poetry, short story turned from the *navodaya* (renaissance) to the *navya* (modernism). But, in the novel form, a brief stage of Progressive Literature has appeared between these two stages. Its focus has been on realism, and not idealism. Makers of 'ideal' literature are the elite Status quoists who have accepted the social order, which makes for experiments in literature. The makers of 'realistic' literature, on the other hand, are common men who don't accept the social order as it is. The literature by such persons gives birth to movements. From this viewpoint, the *Campu* Age of the 10th century was an experiment and the *Vacana* Age of the 12th century was a movement. What transpired, in Kannada, after the Vacana Movement, is the Progressive Movement. Like the *Vacanakāras* , Kaṭṭimani and the *pragatiśeela* ilk are people deprived of position and power. As a consequence, our novel-short story world moved from depiction of the mental moods of an individual to the depiction of the social milieu. This made for a sudden rise in readership two-three fold.

Kaṭṭimani is among the 4-6 persons who ushered in Progressive Literature in Kannada. And a significant one at that. Significant because, if the others wrote in both *navodaya* and *pragatiseela* styles, Kaṭṭmani clung to pragatiseela all along.

If the former, city dwellers that they were, wrote under the influence of principles of progressivism, the latter village dwellers lived through social injustice and protests and wrote prolifically from first hand experience. By the volume of his writing Kaṭṭimani ushered in the Kaṭṭimani Age after the Gaḷaganāth Age in the field of the novel in North Karnataka,. The readers of Gaḷaganāth became readers of Kaṭṭimani.

During the forty years beginning from *Swātantryadeḍégé* (1946) to *Ādhunika Basavaṇṇa* (1986), Basavaraj Kaṭṭimani wrote 40 novels in all. Apart from the three historical novels of *Pouraṣa Pareekṣé, Sangoḷḷi Rāyaṇṇa* and *Naragunda Banḍāya,* all that he wrote were social novels. In addition to the works *Baleya Beesidaru, Bengalurigondu Tikeetu, Cakravyooha, Māji Mantri* on post-

Independence politics which is a part of the social fabric. Kaṭṭimani wrote, against the backdrop of pre-Independence *Quit India Movement* (1942), *Swātantryadéḍégé* on the philosophy of Patriotism, and *Māḍi Maḍidavaru* on the canvas of applied principles. As a result, both these works have come out as a sequel to each other. In both these works, Śekhara being the hero seems to point to the same.

Whatever Kaṭṭimani wrote wasn't merely imaginary. He universalizes the events that happened in his milieu and turns them into art.Hence, the theme of *Māḍi Maḍidavaru* is the struggle for *Calé Jāo* Movement which took place in Beḷagāvi District, especially, the struggle by freedom fighter Wali Channappa. Hence, he has titled it *Māḍi Maḍidavaru* (Those who Did and Died) for the novel which is the story of martyrs who gave their life to answer the call 'Do or Die', which Gandhiji gave in the context of the *Calé Jao* Movement. All in all, here is an experiment that makes art out of real events rather than out of an imaginary story. Depiction of live situations, characters to fill flesh and blood into the situations, their conduct and a picturesque language to bring the conducts before the eyes make *Māḍi Maḍidavaru* a vibrant work. *Swātantryadéḍégé* (1946), a forerunner of *Māḍi Maḍidavaru* (1950), is placed in the context of the Freedom Struggle. And during the British rule, the *navodaya* litterateurs and A.N. Krisna rao, President of the just then founded *Pragatiseela Lekhakara Sangha* (Progressive Writers' Association) wrote on nationalism from the defensive viewpoint, out of fear of the British. They didn't write about the Freedom Movement of the day. As an exception to Dr.V.Seetaramiah's statement "All the literary depiction of the pre-Independence Struggle has come about only after Independence', Basavaraj Kaṭṭimani, it is to be noted, wrote as early as 1946 *Swātantryadéḍégé* directly dealing with the Freedom Struggle. The spark of patriotism kindled in this work has blazed forth in *Māḍi Maḍ idavaru.* When writing about progressive literature and progressive writers, the specialities of Kaṭṭimani have necessarily to be held up for critical appraisal.

Kannadigas have been neglecting Progressive Literature, especially Kaṭṭ imani, who struggled for social justice. Basavaraj Kaṭṭimani Pratiṣṭhāna has

come into existence in order to provide social justice to him now at least. For this purpose not to restrict him to Karnataka alone, the trust has taken up translation of *Māḍi Maḍidavaru* into English and Marathi. If we say thanks to Prof. Sadanand Kanavaḷḷi who has come up with a competent English translation and in an unbelievably short time, it's saying nothing. All the same, we offer him our verbal gratitude.

Our thanks are due to members of Basavaraj Kaṭṭimani Pratiṣṭhāna who have evinced keen interest and support in the publication of this work. And to Dr. Hanumant S. Melinamani for all kinds of help in the publication and to Sri Basavaraj Patil of Print Point, Bengaḷūru.

* Do or Die : Sadanda Kanavalli, Basavaraj Kaṭṭimani Trust, Beḷagāvi-2012

ಆಕರ : ಮಾರ್ಗ ಸಂಪುಟ-೮

೨೮೮

ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ

೨೦೧೩

ಆಸಕ್ತ ಅಭ್ಯಾಸಿಗೆ ಹೊಸ ಹೊಸ ವಿಷಯಗಳು ಹೊಳೆಯುತ್ತವೆ. ಡಾ. ಮಾಣಿಕರಾವ ಧನಶ್ರೀ ಅವರ 'ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ', ಹೆಸರಿನ ಈ ಪಿಎಚ್. ಡಿ. ಪ್ರಬಂಧ ಇದಕ್ಕೆ ನಿದರ್ಶನವೆನಿಸಿದೆ. ಇದು ಅಷ್ಟೇನೂ ಮಹತ್ವದ ವಿಷಯವಲ್ಲವಾದರೂ ಒಂದು ಭಾಷಾ ಸಾಹಿತ್ಯದ ಚರಿತ್ರೆ ಪೂರ್ಣಗೊಳ್ಳಲು, ಇಂಥ ಅಭ್ಯಾಸಗಳು ಅವಶ್ಯವೆನಿಸುತ್ತವೆ. ಈ ದೃಷ್ಟಿಯಿಂದ ಈ ಕೃತಿ ಕನ್ನಡಕ್ಕೆ ಹೊಸ ಬಗೆಯ ಸೇರ್ಪಡೆಯಾಗಿದೆ.

ಕಾಲಜ್ಞಾನ ಕಾವ್ಯ ಪ್ರಕಾರವು ಕನ್ನಡದಲ್ಲಿ ೧೨ನೆಯ ಶತಮಾನದ ಶರಣರ ಹೆಸರಿನೊಂದಿಗೆ ಆರಂಭಗೊಂಡಿದ್ದರೂ ಇದು ಅನ್ಯರ ಸೃಷ್ಟಿಯಾಗಿದೆ. ಕನ್ನಡದಲ್ಲಿ ೧೯ನೆಯ ಶತಮಾನದವರೆಗೆ ಹುಟ್ಟುತ್ತ ಬಂದ ಇದು ತಿಳಿಸುವ 'ಭವಿಷ್ಯ' ವನ್ನು ಪೂರ್ಣ ನಂಬುವಂತಿಲ್ಲ-ಎಂಬ ನಿರ್ಧಾರಗಳು ಡಾ. ಧನಶ್ರೀ ಅವರ ಪ್ರಾಂಜಲ ಮನಸ್ಸನ್ನು ಸೂಚಿಸುತ್ತವೆ. ಪ್ರಾಚೀನರ ಹೆಸರಿನಲ್ಲಿ, ಕವಿಯೊಬ್ಬ ಬರೆದ ತನ್ನ ಸಮಕಾಲೀನ ಪ್ರಕಟನೆಗಳ ಅತಿರಂಜಿತ ದಾಖಲೆಯೇ 'ಕಾಲಜ್ಞಾನ' ವೆಂಬುದು

ಸರಿಯಾದ ತೀರ್ಮಾನವಾಗಿದ್ದು, ಈ ಮಾತು ಇನ್ನು ಮೇಲೆ ಇತಿಹಾಸದ ರಚನೆಗೆ ಈ ಸಾಹಿತ್ಯವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದಕ್ಕೆ ಪ್ರೇರಣೆ ನೀಡುತ್ತದೆ.

ಈ ಪ್ರಬಂಧದ ಗುಣಾತ್ಮಕ ಅಂಶವೆಂದರೆ ಸುಮಾರು ೩೫ ಜನ ಕಾಲಜ್ಞಾನ ಕವಿಗಳನ್ನು ಗುರುತಿಸಿರುವುದು ಮತ್ತು ರಚನೆಗಳ ಸಾಹಿತ್ಯಕ ಅಂಶಗಳನ್ನು ಎತ್ತಿ ಹೇಳಿದುದು. ಇಲ್ಲಿ ಡಾ. ಧನಶ್ರೀಯವರು ಒಬ್ಬ ಸಂಶೋಧಕರಾಗಿ ಒಬ್ಬ ವಿಮರ್ಶಕರಾಗಿ ಕಾಣಿಸಿಕೊಳ್ಳುತ್ತಾರೆ.

ಕನ್ನಡದಲ್ಲಿ ಉಪೇಕ್ಷೆಗೆ ಗುರಿಯಾಗಿರುವ ಇಂಥ ಅನೇಕ ಕ್ಷೇತ್ರಗಳ ಅಧ್ಯಯನಕ್ಕೆ ಈ ಪ್ರಬಂಧ ಪ್ರೇರಣೆ ನೀಡಲೆಂದು ಹಾರೈಸುತ್ತೇನೆ.

---

* ಡಾ. ಎಂ. ವಿ. ಧನಶ್ರೀ : ಕನ್ನಡದಲ್ಲಿ ಕಾಲಜ್ಞಾನ ಸಾಹಿತ್ಯ

ಆಕರ : ಮಾರ್ಗ ಸಂಪುಟ-೮

■■

೨೮೯

ಮೊಗ್ಗಿನ ಮಾತು

೨೦೧೫

ಹೊಸ ಹೊಸ ಸಾಹಿತ್ಯ ಸೃಷ್ಟಿಯಿಂದಾಗಿ ಹಳೆಯ ಸಾಹಿತ್ಯ ಹಿನ್ನೆಲೆಗೆ ಸರಿಯುವುದು ಸಹಜ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದಿಷ್ಟು ವೇಗವಾಗಿಯೇ ಸಂಭವಿಸುತ್ತಿರುವ ಇಂಥ ಕ್ರಿಯೆಯಿಂದಾಗಿ ಹಳೆಯ ತಲೆಮಾರಿನ ಸಾಹಿತಿಗಳು ವಿಸ್ಮೃತಿಗೆ ಒಳಗಾಗುತ್ತಿದ್ದಾರೆ. ಸಮಗ್ರ ಅಭ್ಯಾಸದ ಮೂಲಕ ಇಂಥವರನ್ನು, ಇಂಥವರ ಸಾಹಿತ್ಯವನ್ನು ಮುನ್ನೆಲೆಗೆ ತರುವುದು ನಿರಂತರ ನಡೆಯಬೇಕಾಗುತ್ತದೆ. ಈ ಬಗೆಯ ಅಧ್ಯಯನವಾಗಿದೆ ಮಕ್ಕಳ ಸಾಹಿತಿ ಪಳಕಳ ಸೀತಾರಾಮ ಭಟ್ಟರನ್ನು ಕುರಿತ "ಮೊಗ್ಗಿನ ಮಾತು."

ಇಂದು ಸಾಕ್ಷರತೆ-ಮುದ್ರಣ-ಪ್ರಕಾಶನ-ಮಾರಾಟ ಸೌಲಭ್ಯಗಳಿಂದಾಗಿ ನೂರಾರು ಕೃತಿ, ನೂರಾರು ಲೇಖನ ಬರೆಯುವವರಿದ್ದಾರೆ. ಇವರು ಇಂಥವರು ಬರೆದ, ಇಂಥವರನ್ನು ಕುರಿತು ಬರೆದ ಇವು ಯಾವು ಯಾವುದೋ ಪ್ರಕಾಶನ ಸಂಸ್ಥೆಯಲ್ಲಿ-ಪ್ರತಿಕೆಯಲ್ಲಿ ಹಂಚಿಹೋಗಿರುತ್ತವೆ. ಪಿಎಚ್.ಡಿ. ಸಂಶೋಧನೆಯ ಸಂದರ್ಭದಲ್ಲಿ ಇದೆಲ್ಲವನ್ನು ಒಂದೂ ಬಿಡದಂತೆ ಶೋಧಿಸುವುದೇ ಒಂದು ದೊಡ್ಡ ಸಂಶೋಧನೆಯೆನಿಸುತ್ತದೆ. ಎರಡನೆಯದಾಗಿ ಹೀಗೆ ಶೋಧಿಸಿದ ಆಕರವನ್ನು ವರ್ಗೀಕರಿಸಿ, ವಿಶ್ಲೇಷಿಸುವ ಕಾರ್ಯಶೋಧ, ವ್ಯಾಖ್ಯಾನಿಸುವ ಕಾರಣಶೋಧ-ಪರಿಣಾಮಶೋಧಗಳನ್ನು ಅಭ್ಯಾಸಿ ಪೂರೈಸಬೇಕಾಗುತ್ತದೆ.

ಹೊಸ ತಲೆಮಾರಿನ ಭರವಸೆಯ ಲೇಖಕಿಯಾದ ಡಾ. ಕಾತ್ಯಾಯಿನಿ ಅವರು ಈ ಬಗೆಯ ಆಕರಶೋಧದಲ್ಲಿ ವಹಿಸಿದ ಶ್ರಮ, ವಿಶ್ಲೇಷಣೆಶೋಧ–ವ್ಯಾಖ್ಯಾನಶೋಧಗಳಲ್ಲಿ ಅನುಸರಿಸಿದ ಕ್ರಮ ಇಲ್ಲಿ ತುಂಬ ಸಮರ್ಪಕವೆನಿಸಿದೆ. ಇದರಿಂದಾಗಿ ಈ ಕೃತಿ ಏಕಕಾಲಕ್ಕೆ ಸಂಶೋಧನ–ವಿಮರ್ಶನ–ಸೃಜನಗಳ ಸಂಗಮವಾಗಿ ಪರಿಣಮಿಸಿದೆ. ಸಂವಹನಶೀಲ ಅಭಿವ್ಯಕ್ತಿಯೂ ಈ ಕೃತಿಯ ಇನ್ನೊಂದು ವಿಶೇಷತೆಯಾಗಿದೆ.

---

* ಡಾ. ಕಾತ್ಯಾಯಿನಿ : ಮೊಗ್ಗಿನ ಮಾತು

ಆಕರ : ಮಾರ್ಗ ಸಂಪುಟ–೮

■■

[illegible]

ಸಂದರ್ಶನ

೨೯೦

ಸಮಗ್ರ ವಚನ ಸಂಪುಟ ಲೋಕಾರ್ಪಣೆ

❖

ಸಂದರ್ಶಕರು : ಡಾ. ಜಿ.ಎಂ. ಹೆಗಡೆ

ಜಿ. ಎಂ. ಹೆಗಡೆ : ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಮಗ್ರ ವಚನಗಳ ಹದಿನೈದು ಸಂಪುಟಗಳನ್ನು ಏಕಕಾಲಕ್ಕೆ ಲೋಕಾರ್ಪಣೆ ಮಾಡುತ್ತಿರುವದು ನಾಡಿನ ಜನತೆಗೆ ಅಪಾರವಾದ ಹರ್ಷವನ್ನು ತಂದಿದೆ. ಸಮಗ್ರ ವಚನಗಳ ಸಂಪುಟದ ಸಂಪಾದಕರಾದ ನಾಡಿನ ಖ್ಯಾತ ಸಂಶೋಧಕರೂ, ವಚನ ವಿದ್ವಾಂಸರೂ ಆದ ಡಾ. ಎಂ. ಎಂ. ಕಲಬುರ್ಗಿ ಅವರು ನಮ್ಮೊಂದಿಗಿದ್ದಾರೆ. ಡಾ. ಕಲಬುರ್ಗಿ ಅವರೇ ನಮಸ್ಕಾರ.

ಎಂ.ಎಂ. ಕಲಬುರ್ಗಿ : ನಮಸ್ಕಾರ

ಜಿ. ಎಂ. ಹೆಗಡೆ : ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ ಅದರ ಸ್ವರೂಪಗಳ ಬಗೆಗೆ ಹೇಳುವಿರಾ?

ಎಂ.ಎಂ. ಕಲಬುರ್ಗಿ : ಕನ್ನಡ ನಾಡಿನ ಪ್ರಜಾಸಾಹಿತ್ಯವಾದ ವಚನ ವಾಙ್ಮಯವನ್ನು ಕನ್ನಡಿಗರಿಗೆ ಸಮಗ್ರವಾಗಿ ಒದಗಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಈ ಯೋಜನೆ ರೂಪುಗೊಂಡಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ. ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ. ಜಾಗತಿಕ ಮಹತ್ವವನ್ನು ಪಡೆದ ವಚನಗಳನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸಬೇಕೆಂಬ ಉದ್ದೇಶದಿಂದ ಸಮಗ್ರ ವಚನಗಳ ಸಂಪುಟಗಳನ್ನು ಸಿದ್ಧಪಡಿಸಲಾಗಿದೆ.

ಜಿ. ಎಂ. ಹೆಗಡೆ : ವಚನ ಸಂಪಾದನೆಯ ಕಾರ್ಯ ಅತ್ಯಂತ ಶ್ರಮದಾಯಕವಾದದ್ದು. ಹಿರಿಯ ವಿದ್ವಾಂಸರು ವಚನ ಸಂಪಾದನೆಗಾಗಿ ದುಡಿದಿದ್ದಾರೆ. ವಚನಗಳು ಬೇರೆ ಬೇರೆ ಕಟ್ಟುಗಳಲ್ಲಿ ಸೇರಿಕೊಂಡಿವೆ. ಅವುಗಳನ್ನೆಲ್ಲಾ ಶೋಧಿಸಿ ಸಮಗ್ರ ಸಂಪುಟಗಳಲ್ಲಿ ಅವಳಡಿಸಿದ್ದು ಹೇಗೆ?

ಎಂ.ಎಂ. ಕಲಬುರ್ಗಿ : ಕನ್ನಡ ಪ್ರಾಚೀನ ಕಾವ್ಯಗಳನ್ನು ಮೊದಲು ಮುದ್ರಣಗೊಳಿದವರು ಕ್ರೈಸ್ತ ಮಿಶನರಿಗಳು. ಆದರೆ ಅವರು ವಚನ ಸಾಹಿತ್ಯವನ್ನು ಪ್ರಕಟಿಸಲಿಲ್ಲ. ೧೮೮೬ರಲ್ಲಿ 'ಅಪ್ರಮಾಣಕೂಡಲಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ 'ಶಿಖಾರತ್ನಪ್ರಕಾಶ',

೧೮೮೯ರಲ್ಲಿ 'ಬಸವಣ್ಣನವರ ಷಟ್ ಸ್ಥಲ ವಚನ' ಪ್ರಕಟವಾಯಿತು. ಸರಿಯಾಗಿ ಒಂದು ನೂರು ವರ್ಷ ಮುಗಿಯುವಷ್ಟರಲ್ಲಿ ಸಮಗ್ರ ವಚನ ಸಂಪುಟ ಯೋಜನೆ ಸಿದ್ಧವಾಗಿದೆ. ವಚನ ಪ್ರಕಟನ ಚರಿತ್ರೆಯ ಶತಮಾನದ ಸ್ಮರಣೆಯಾಗಿ ಈ ಯೋಜನೆ ರೂಪಿತವಾಗಿದೆ. ವಿಜಾಪುರದ ಶಿವಾನುಭವ ಗ್ರಂಥಮಾಲೆಯ ಫ.ಗು. ಹಳಕಟ್ಟಿಯವರು, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಆಶ್ರಯದಲ್ಲಿ ಡಾ. ಆರ್. ಸಿ. ಹಿರೇಮಠರಿಂದ ವಚನಗಳ ಸಂಪಾದನೆಯ ಕಾರ್ಯ ಯೋಜನಾಬದ್ಧವಾಗಿ ನಡೆಯಿತು. ಈಗ ಸಮಗ್ರ ವಚನಗಳು ೧೫ ಸಂಪುಟಗಳಲ್ಲಿ ಪ್ರಕಟವಾಗಿವೆ.

ಜಿ. ಎಂ. ಹೆಗಡೆ : ವಚನ ಪ್ರಕಟಣೆಯಲ್ಲಿ ನಾಡಿನ ಲಿಂಗಾಯತ ಮಠಗಳ ಪಾತ್ರವೂ ಇದೆಯಲ್ಲವೇ?

ಎಂ.ಎಂ. ಕಲಬುರ್ಗಿ : ಲಿಂಗಾಯತ ಧರ್ಮ ಪ್ರಸಾರದಲ್ಲಿ ಮಹತ್ವದ ಕಾರ್ಯ ಮಾಡಿದ ಮಠಗಳು ತೋಂಟದಾರ್ಯಮಠದ ಲಿಂಗಾಯತ ಅಧ್ಯಯನ ಸಂಸ್ಥೆ ಕ್ರಮಬದ್ಧವಾದ ಯೋಜನೆಯನ್ನು ರೂಪಿಸಿಕೊಂಡು ಪ್ರಕಟಣೆ ಸಾಂಸ್ಥಿಕವಾಗಿ ಆಗುತ್ತ ಬಂದುದು ಅದರ ಪ್ರಕಟನ ಇತಿಹಾಸವೇ ಹೇಳುತ್ತದೆ. ಈಗ ಕರ್ನಾಟಕ ಸರಕಾರ ಪ್ರಕಟಿಸುವ ಸಮಗ್ರ ವಚನ ಸಂಪುಟಗಳು ಸಾಂಸ್ಥಿಕ ಯೋಜನೆಯಾಗಿದೆ. ಇದು ಶ್ರೀಸಾಮಾನ್ಯರಿಗಾಗಿ ವಚನಗಳನ್ನು ತಲುಪಿಸುವ ಜನಪ್ರಿಯ ಯೋಜನೆಯಾಗಿದೆ. ಹತ್ತು ಸಾವಿರ ಪುಟಗಳಲ್ಲಿ ಇಪ್ಪತ್ತು ಸಾವಿರ ವಚನಗಳನ್ನು ಹದಿನೈದು ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಇದರಲ್ಲಿ ಕೊನೆಯ ಒಂದು ಸಂಪುಟ ವಚನ ಪರಿಭಾಷಾಕೋಶವೂ ಸೇರುತ್ತದೆ. ಎಲ್ಲ ವಚನಕಾರರ ಸಮಗ್ರ ವಚನ ಇದರಲ್ಲಿವೆ. ವಚನಕಾರ್ತಿಯರ ಪ್ರತ್ಯೇಕ ಶಿವಶರಣೆಯರ ಸಂಪುಟವನ್ನೂ ಸಿದ್ಧಪಡಿಸಲಾಗಿದೆ.

ಜಿ. ಎಂ. ಹೆಗಡೆ : ಸಮಗ್ರ ವಚನಗಳ ಸಂಪುಟಗಳ ವಿಭಜನಾಕ್ರಮ ಯಾವ ರೀತಿಯಲ್ಲಿರುತ್ತದೆ. ಯಾರು ಯಾರು? ಸಂಪಾದಕರು?

ಎಂ.ಎಂ. ಕಲಬುರ್ಗಿ : ಬಸವಣ್ಣನವರ ವಚನ, ಅಲ್ಲಮಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರವಚನ ಮತ್ತು ಶಿವಶರಣೆಯರ ವಚನ ಸಂಪುಟ–ಹೀಗೆ ಐದು ಸಂಪುಟಗಳು; ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ಐದು ಸಂಪುಟಗಳು, ಬಸವೋತ್ತರಕಾಲೀನ ಶರಣರ ವಚನಗಳ ಐದು ಸಂಪುಟ ಇದರಲ್ಲಿ ಪಾರಿಭಾಷಿಕಕೋಶವೂ ಸೇರಿದೆ. ಹೀಗೆ ಒಟ್ಟೂ ಹದಿನೈದು ಸಂಪುಟಗಳು. ನಾನು, ಡಾ. ಎಂ.ಎಂ. ಕಲಬುರ್ಗಿ, ಡಾ. ಬಿ.ವ್ಹಿ.ಮಲ್ಲಾಪೂರ, ಡಾ. ಎಸ್. ವಿದ್ಯಾಶಂಕರ, ಡಾ. ವೀರಣ್ಣ ರಾಜೂರ, ಡಾ. ಬಿ.ಆರ್. ಹಿರೇಮಠ. ಶ್ರೀ ಎಸ್. ಶಿವಣ್ಣ, ಸಂಪಾದಕರಾಗಿ ಕಾರ್ಯ ಮಾಡಿದ್ದೇವೆ. ನಾನು ಎರಡು ಸಂಪುಟ. ಡಾ. ಬಿ.ವ್ಹಿ. ಮಲ್ಲಾಪೂರ ಎರಡು ಸಂಪುಟ, ಡಾ. ಎಸ್. ವಿದ್ಯಾಶಂಕರ ಮೂರು ಸಂಪುಟ, ಡಾ. ವೀರಣ್ಣ ರಾಜೂರ ಐದು ಸಂಪುಟ, ಡಾ. ಬಿ.ಆರ್. ಹಿರೇಮಠ ಎರಡು ಸಂಪುಟ, ಶ್ರೀ ಎಸ್. ಶಿವಣ್ಣ ಒಂದು ಸಂಪುಟ ಸಂಪಾದಿಸಿದ್ದೇವೆ.

ಜಿ. ಎಂ. ಹೆಗಡೆ : ವಚನಗಳ ಸಂಪಾದನೆಯಲ್ಲಿ ಅನೇಕ ಸಮಸ್ಯೆಗಳಿವೆ. ಮುಖ್ಯವಾಗಿ ಭಿನ್ನಪಾಠಗಳದ್ದು. ವಚನಗಳ ಪರಿಷ್ಕರಣ ಕಾರ್ಯ ದುಸ್ತರವಾಗಿದ್ದರಿಂದ ವಿದ್ವಾಂಸರಲ್ಲಿ ಬಿಸಿಬಿಸಿ ಚರ್ಚೆ ವಾದ–ವಿವಾದಗಳು ನಡೆದಿವೆ. ನೀವು ಅವುಗಳನ್ನು ಹೇಗೆ ಪರಿಹರಿಸಿಕೊಂಡಿರಿ?

ಎಂ.ಎಂ. ಕಲಬುರ್ಗಿ : ಸಮಗ್ರ ವಚನ ಸಂಪುಟಗಳು ಜನಪ್ರಿಯ ಯೋಜನೆಯಾದದ್ದರಿಂದ ಯೋಗ್ಯವಾದ ಪಾಠವನ್ನು ಸ್ವೀಕರಿಸಿ ಭಿನ್ನಪಾಠಗಳನ್ನು ಕೈಬಿಟ್ಟಿದ್ದೇವೆ. ಇನ್ನು ವಚನಗಳ ಪರಿಷ್ಕರಣ ವಿಚಾರ. ಎಲ್ಲ ಶರಣರ ಎಲ್ಲ ವಚನಗಳ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ಪ್ರಕ್ಷಿಪ್ತ ವಚನಕಾರರು, ಪ್ರಕ್ಷಿಪ್ತ ವಚನಗಳನ್ನು ಕೈಬಿಡುವುದು, ನಿಜ ವಚನಪಾಠವನ್ನು ಪರಿಷ್ಕರಿಸುವ ಕಾರ್ಯ ಕೈಕೊಂಡೆವು. ನಮ್ಮ ಕೆಲಸ ಸುಲಭವಾಗಲು ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ೧೦೮ ಆಕರಗಳಿಂದ ವಚನಗಳನ್ನು ಸಂಗ್ರಹಿಸಿ ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ ವಚನಬ್ಯಾಂಕ್ ಸಿದ್ಧಪಡಿಸಿದೆವು. ಈ ವಚನಬ್ಯಾಂಕ್ ಮೂಲಕವೆ ವಚನಗಳ ಪರಿಷ್ಕರಣ, ನಿಜಪಾಠಗಳ ಶೋಧ ಮಾಡಲು ತುಂಬ ಸಹಾಯಕಾರಿಯಾಯಿತು, ಇದರಲ್ಲಿ ಪ್ರಕ್ಷಿಪ್ತ ವಚನಗಳನ್ನು ಕೈಬಿಟ್ಟಿದ್ದೇವೆ. ವಚನಬ್ಯಾಂಕ್ ಸಂಶೋಧಕರಿಗೆ ಬಹು ಉಪಯೋಗಿಯಾಗಿದೆ.

ಜಿ. ಎಂ. ಹೆಗಡೆ : ಸಮಗ್ರ ವಚನ ಸಂಪುಟಗಳನ್ನು ಸಂಪಾದಿಸುವಲ್ಲಿ ನೀವು ಎದುರಿಸಿದ ಸಮಸ್ಯೆಗಳು ಯಾವವು?

ಎಂ.ಎಂ. ಕಲಬುರ್ಗಿ : ವಚನಸಾಹಿತ್ಯ ಪ್ರಕಟಣ ಯೋಜನೆ ದೊಡ್ಡ ಪ್ರಮಾಣದ್ದು. ಅದನ್ನ ಕಾರ್ಯಗತಗೊಳಿಸಲು ಶ್ರಮಸಂಸ್ಕೃತಿಯ ಮೂಲಕವೇ ಸಾಧ್ಯವಾಗಿದೆ. ಹನ್ನೆರಡನೆಯ ಶತಮಾನದಿಂದ ಹತ್ತೊಂಬತ್ತನೆಯ ಶತಮಾನದವರೆಗೆ ಎಂಟುನೂರು ವರ್ಷಗಳಲ್ಲಿ ಬೆಳೆದು ಬಂದ ವಚನಸಾಹಿತ್ಯವನ್ನು ಕರ್ನಾಟಕದ ಮನೆಮನಗಳಿಗೆ ಮುಟ್ಟಿಸಿದ ಸಾರ್ಥಕಭಾವ ನಮಗಿದೆ. ಬಸವಯುಗ ಮತ್ತು ಬಸವೋತ್ತರಯುಗದ ಎಲ್ಲ ವಚನಕಾರರ ಸಮಗ್ರ ವಚನಸಾಹಿತ್ಯ ಹದಿನೈದು ಸಂಪುಟಗಳಲ್ಲಿ ಪ್ರಕಟಗೊಂಡಿರುವದು ಕರ್ನಾಟಕ ಸರಕಾರದ ಸಾಧನೆಯೂ ಆಗಿದೆ. ಮಗು ಹುಟ್ಟಿದಾಗ ಮಗುವಿನ ಮುಖ ನೋಡಿದಾಗ ತಾಯಿಯ ಹೆರಿಗೆಯ ನೋವು ಕಣ್ಮರೆಯಾಗುವಂತೆ ಸಮಗ್ರ ವಚನ ಸಂಪುಟ ಯೋಜನೆಯಲ್ಲಿ ಎದುರಿಸಿದ ಸಮಸ್ಯೆಗಳು ಅವುಗಳ ಪ್ರಕಟಣೆಯ ಸಂದರ್ಭದಲ್ಲಿ ಕಣ್ಮರೆಯಾಗುತ್ತವೆ. ಸಮಗ್ರ ವಚನ ಸಂಪುಟ ಮಾಡುವಾಗ ಕೆಲವರು ನನ್ನಜೊತೆ ವಾಗ್ವಾದಕ್ಕಿಳಿದರು. ಸಂಶೋಧನೆಯಲ್ಲಿ ಕೊನೆಗೆ ನಿಲ್ಲುವದು ಸತ್ಯಮಾತ್ರ.

ಜಿ. ಎಂ. ಹೆಗಡೆ : ಸಮಗ್ರ ವಚನಗಳ ಸಂಪುಟಗಳು ಲೋಕಾರ್ಪಣೆ ಗೊಳ್ಳುತ್ತಿರುವ ಸಂದರ್ಭದಲ್ಲಿ ನಿಮ್ಮ ಅನಿಸಿಕೆಯನ್ನು ಶ್ರೋತೃಗಳ ಮುಂದೆ ವ್ಯಕ್ತಪಡಿಸುವಿರಾ? ಮುಂದಿನ ಯೋಜನೆ ಯಾವುದು?

ಎಂ.ಎಂ. ಕಲಬುರ್ಗಿ : ಕರ್ನಾಟಕದ ಸಮಾಜೋ–ಧಾರ್ಮಿಕ ಚಳವಳಿಯ ಪ್ರಜಾಸಾಹಿತ್ಯವಾದ ವಚನಸಾಹಿತ್ಯವನ್ನು ಕನ್ನಡಿಗರಿಗೆ ಸಮಗ್ರವಾಗಿ ಒದಗಿಸಿಕೊಡುವ ಸಂಕಲ್ಪ ನೆರವೇರಿದ್ದಕ್ಕೆ ನನಗೆ ಸಂತೋಷವಾಗಿದೆ. ಕರ್ನಾಟದ ಖ್ಯಾತನಾಮರಾದ ವಿದ್ವಾಂಸರು ಸಂಪಾದಕರಾಗಿ ಈ ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ನನ್ನೊಂದಿಗೆ ಶ್ರಮಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜನಪ್ರಿಯ ವಚನ ಸಾಹಿತ್ಯ ಸಂಪುಟಗಳನ್ನು ಕನ್ನಡಿಗರು ಪಡೆದುಕೊಂಡು ಓದಬೇಕು. ಶಿವಶರಣರ ಆತ್ಮಧ್ವನಿಯನ್ನು ಅರ್ಥಮಾಡಿಕೊಳ್ಳಬೇಕು. ಆತ್ಮಕಲ್ಯಾಣ ಮತ್ತು ಸಮಾಜಕಲ್ಯಾಣವನ್ನು ಪ್ರತಿಪಾದಿಸುವ ಜಾಗತಿಕ ಮಹತ್ವ ಪಡೆದ ವಚನಗಳು ಎಲ್ಲರ ಬದುಕಿಗೆ ಮಾರ್ಗದರ್ಶಿಯಾಗಿವೆ. ಈ ವಚನ ಸಂಪುಟಗಳು

ಭಾರತದ ಎಲ್ಲಾ ಭಾಷೆಗಳಿಗೆ ಅನುವಾದವಾಗಬೇಕು ಎಂಬುದ ನನ್ನ ಆಸೆ. ಆಗಲೇ ನನಗೆ ಸಮಾಧಾನ ಸಂತೃಪ್ತಿ.

ಜಿ. ಎಂ. ಹೆಗಡೆ : ಬಸವಯುಗ ಮತ್ತು ಬಸವೋತ್ತರಯುಗದ ಇಪ್ಪತ್ತು ಸಾವಿರ ವಚನಗಳನ್ನು ಹದಿನೈದು ಸಂಪುಟಗಳಲ್ಲಿ ಸಂಪಾದಿಸಿಕೊಟ್ಟ ನಿಮಗೂ ಎಲ್ಲ ಸಂಪಾದಕರಿಗೂ ಸುಲಭ ಬೆಲೆಯಲ್ಲಿ ಇವು ಕನ್ನಡಿಗರಿಗೆ ದೊರಕುವಂತೆ ಮಾಡಿದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೂ ಎಲ್ಲ ಕನ್ನಡಿಗರ ಪರವಾಗಿ ಧನ್ಯವಾದಗಳು.

ಎಂ.ಎಂ. ಕಲಬುರ್ಗಿ : ನಮಸ್ಕಾರ

ಧಾರವಾಡ ಆಕಾಶವಾಣಿ ಬಾನುಲಿ ಸಂದರ್ಶನ–೧೯೯೩

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೨೯೧

ಲಿಂಗಾಯತ ಅಧ್ಯಯನ ಸಂಸ್ಥೆಯ ಕೆಲಸವೆಂದರೆ ಅದು ಕನ್ನಡದ ಕೆಲಸ

❖

ಸಂದರ್ಶಕರು : ಡಾ. ಜಿ.ಎಂ. ಹೆಗಡೆ

ಲಿಂಗಾಯತ ಅಧ್ಯಯನ ಸಂಸ್ಥೆ ಕಳೆದ ೩೮ ವರ್ಷಗಳ ಅವಧಿಯಲ್ಲಿ ನಾಲ್ಕುನೂರಕ್ಕೂ ಮಿಕ್ಕ ಪುಸ್ತಕಗಳನ್ನು ಪ್ರಕಟಿಸುವ ಮೂಲಕ ಒಂದು ಐತಿಹಾಸಿಕ ಘಟ್ಟವನ್ನು ಸ್ಥಾಪಿಸಿದೆ. ಅದರ ಸಾಧನೆಗಳ ಹಿಂದೆ ರೂವಾರಿಯಾಗಿ ದುಡಿಯುತ್ತಿರುವ ಸಂಸ್ಥೆಯ ನಿರ್ದೇಶಕರಾದ ಡಾ. ಎಂ.ಎಂ. ಕಲಬುರ್ಗಿ ಅವರು ದಿ. ೬-೨-೧೯೯೪ ರಂದು ಡಾ. ಜಿ. ಎಂ. ಹೆಗಡೆ ಅವರಿಗೆ ನೀಡಿದ ಸಂದರ್ಶನದ ಭಾಗ ಇಲ್ಲಿದೆ.

* * *

ಜಿ.ಎಂ. ಹೆಗಡೆ : ಲಿಂಗಾಯತ ಅಧ್ಯಯನ ಸಂಸ್ಥೆ ಆರಂಭವಾದಾಗ ಅದನ್ನು ಯಾವ ರೀತಿಯಲ್ಲಿ ಬೆಳೆಸಬೇಕೆಂಬ ವಿಚಾರ ನಿಮ್ಮದಾಗಿತ್ತು?

ಎಂ.ಎಂ. ಕಲಬುರ್ಗಿ : ಲಿಂಗಾಯತ ಜಗತ್ತು ವಿಶಾಲವಾದದ್ದು, ಅಲ್ಲಿ ಮಾಡಬೇಕಾದ ಕೆಲಸವೂ ಅಪಾರವಾದದ್ದು, ಇಲ್ಲಿ ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದ ಆಕರಗಳ ಶೋಧ ಮತ್ತು ಪ್ರಕಟನೆ ಮೊದಲು ನಡೆಯಬೇಕು. ಇವುಗಳನ್ನು ಆಧರಿಸಿ ಧಾರ್ಮಿಕ, ಸಾಮಾಜಿಕ, ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ನಿಜಚರಿತ್ರೆಯನ್ನು ರೂಪಿಸುವುದು ಸಾಧ್ಯವಾಗಬೇಕು. ಬೇರೆ ಬೇರೆ ಭಾಷೆಗಳಲ್ಲಿ ಅನುವಾದ ಮಾಡಿಸಿ, ಶರಣರ ಜನಪರ ವಿಚಾರಧಾರೆಯನ್ನು ಜನತೆಗೆ ಮುಟ್ಟಿಸಬೇಕು-ಎಂಬ ಕಲ್ಪನೆ ಆಗ ಅಂದರೆ ೨೦ ವರ್ಷಗಳ ಹಿಂದೆ ನನ್ನ ಮನಸ್ಸಿನಲ್ಲಿದ್ದಿತು.

ಜಿ.ಎಂ. ಹೆಗಡೆ : ವಿಶ್ವವಿದ್ಯಾಲಯ ಹಾಗೂ ಲಿಂಗಾಯತ ಮಠಗಳಂಥ ಧಾರ್ಮಿಕ ಸಂಸ್ಥೆಗಳು ಹಮ್ಮಿಕೊಂಡ ಯೋಜನೆ ಹಾಗೂ ಮಾಡುವ ಕಾರ್ಯ ಒಂದೇ ಬಗೆಯಾಗಿರುವುದಿಲ್ಲವೆ?

ಎಂ.ಎಂ. ಕಲಬುರ್ಗಿ : ಈಗ ವಿಶ್ವವಿದ್ಯಾಲಯಗಳು ಅನೇಕ ಕಾರಣಗಳಿಂದಾಗಿ ಈ ಕೆಲಸ ಮಾಡುವ ಪರಿಸ್ಥಿತಿಯಲ್ಲಿಲ್ಲ. ಲಿಂಗಾಯತ ಸಾಹಿತ್ಯ ಸಂಸ್ಕೃತಿಯ ಕೆಲಸವೆಂದರೆ ಪರ್ಯಾಯವಾಗಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಕೆಲಸವೆಂದೇ ನನ್ನ ನಿಲುವು. ವಿಶ್ವವಿದ್ಯಾಲಯವೊಂದೇ ಈ ಕೆಲಸ ಮಾಡಬೇಕಿಲ್ಲ. ಜೊತೆಗೆ ಅನೇಕ ಸಂಸ್ಥೆಗಳು ದುಡಿದರೂ ಮುಗಿಯದಷ್ಟು ಕೆಲಸವಿದೆ. ಹೀಗಾಗಿ

ಗದುಗಿನ ತೋಂಟದಾರ್ಯಮಠದಲ್ಲಿ ಲಿಂಗಾಯತ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಬೇಕಾಯಿತು.

ಜಿ.ಎಂ. ಹೆಗಡೆ : ಈ ಕಾರ್ಯಕ್ಕೆ ನೀವು ಗದುಗಿನ ಲಿಂಗಾಯತ ಅಧ್ಯಯನ ಸಂಸ್ಥೆಯನ್ನೇ ಏಕೆ ಆಯ್ಕೆ ಮಾಡಿಕೊಂಡಿರಿ?

ಎಂ.ಎಂ. ಕಲಬುರ್ಗಿ : ಇದಕ್ಕೆ ಎರಡು ಕಾರಣಗಳಿವೆ. ನನ್ನ ದೃಷ್ಟಿಯಲ್ಲಿ ಕನ್ನಡದ ಕೆಲಸವನ್ನು ಮಾಡುವ ಯಾವುದೇ ಸಂಸ್ಥೆ ಅದು 'ಕನ್ನಡ ಅಧ್ಯಯನ ಸಂಸ್ಥೆ' ಯೇ. ನನ್ನ ದೃಷ್ಟಿಯಲ್ಲಿ ಕನ್ನಡ ಅಧ್ಯಯನ ಪೀಠ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಲಿಂಗಾಯತ ಅಧ್ಯಯನ ಸಂಸ್ಥೆ ಬೇರೆ ಬೇರೆ ಅಲ್ಲ. ಕನ್ನಡದ ಕೆಲಸಕ್ಕೆ ಎಷ್ಟು ಸಂಸ್ಥೆ ದುಡಿದರೂ ಕಡಿಮೆಯೇ. ಹೀಗಾಗಿ ಅವಕಾಶವಿರುವ ಎಲ್ಲ ಸಂಸ್ಥೆಗಳನ್ನು ನಾವು ಬಳಸಿಕೊಳ್ಳಬೇಕು. ಇದು ಒಂದು ವಿಚಾರ. ಎರಡನೆಯದಾಗಿ ನಿಜವಾದ ಕೆಲಸಗಾರನಿಗೆ ಸರಕಾರಿ ಸಂಸ್ಥೆಗಳು ಅಂದರೆ ಅಲ್ಲಿಯ ಅಧಿಕಾರಿಗಳು ಕಾನೂನುಗಳು ಬಂಧನಕಾರಿಯಾಗಿರುತ್ತವೆ. ಇಂಥ ಬಂಧನದಿಂದ ದೂರವಾದ ಸಂಸ್ಥೆ ನನಗೆ ಅವಶ್ಯವಾಗಿದ್ದಿತು. ಆಗ ನನ್ನ ಈ ಧೋರಣೆಗೆ ತಕ್ಕಂತೆ ಅವಕಾಶ ಕಲ್ಪಿಸಿಕೊಡಲು ತೋಂಟದಾರ್ಯಮಠ ಮುಂದೆ ಬಂದಿತು. ಈಗಲೂ ಅದು ನನ್ನ ವಿಷಯದಲ್ಲಿ ಹಾಗೆಯೇ ನಡೆದುಕೊಳ್ಳುತ್ತಿದೆ. ಆದುದರಿಂದ ನಾನು ಈ ಮಠವನ್ನು ಆಯ್ಕೆ ಮಾಡಿಕೊಳ್ಳಬೇಕಾಯಿತು. ನನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದರೆ ಅಲ್ಲಿ ಒಂದು ಕ್ಷಣವೂ ನಾನು ನಿಲ್ಲುವುದಿಲ್ಲ–ಎಂಬುದು ಎಲ್ಲರಿಗೂ ಗೊತ್ತು.

ಜಿ.ಎಂ. ಹೆಗಡೆ : ಮಠದಂಥ ಧಾರ್ಮಿಕ ಸಂಸ್ಥೆಗಳಲ್ಲಿ ಸಂಶೋಧನೆಯ ಕೆಲಸ ಕಷ್ಟಕರವಾದುದು. ಇದನ್ನು ಹೇಗೆ ಪರಿಹರಿಸಿಕೊಂಡಿರಿ.

ಎಂ.ಎಂ. ಕಲಬುರ್ಗಿ : ಧಾರ್ಮಿಕ ಸಂಸ್ಥೆಗಳಲ್ಲಿ ಅನೇಕ ಕಟ್ಟುಪಾಡುಗಳಿರುತ್ತವೆ ನಿಜ. ನನ್ನ ದೃಷ್ಟಿಯಲ್ಲಿ ತೋಂಟದಾರ್ಯಮಠದ 'ಲಿಂಗಾಯತ ಅಧ್ಯಯನ ಸಂಸ್ಥೆ' ಒಂದು ಶೈಕ್ಷಣಿಕ ಸಂಸ್ಥೆ. ಈವರೆಗೆ ಮಾಡಿದ ಕೆಲಸಗಳಲ್ಲಿ ಯಾವ ಬಂಧನಗಳೂ ತೊಂದರೆಗಳೂ ನನಗೆ ಎದುರಾಗಿಲ್ಲ. ಅಲ್ಲದೆ ಲಿಂಗಾಯತ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನೆಯನ್ನೊಳಗೊಂಡ ಇತರ ಶಾಖೆಗಳೂ ಇವೆ ಎಂಬುದನ್ನು ಗಮನಿಸಬೇಕು.

ಜಿ.ಎಂ. ಹೆಗಡೆ : ನೀವು ಕರ್ನಾಟಕದ ಬೇರೆ ಬೇರೆ ಲಿಂಗಾಯತ ಮಠಗಳು ಅಂದರೆ ಗದುಗಿನ ತೋಂಟದಾರ್ಯಮಠ, ಬೆಳಗಾವಿಯ ನಾಗನೂರುಮಠ, ನಿಡಸೋಸಿ ಸಿದ್ಧಸಂಸ್ಥಾನಮಠ, ಮೈಸೂರಿನ ಶಿವರಾತ್ರೀಶ್ವರ ಮಠ, ಶಿವಮೊಗ್ಗೆಯ ಬೆಕ್ಕಿನ ಕಲ್ಮಠ ಹೀಗೆ ಬೇರೆ ಬೇರೆ ಕಡೆ ಲಿಂಗಾಯತ ಸಾಹಿತ್ಯ ಪ್ರಕಟನೆಯ ಯೋಜನೆಗಳಲ್ಲಿ ಮಾರ್ಗದರ್ಶಕರಾಗಿ ಅನುಸರಿಸುತ್ತಿರುವ ವಿಧಾನಗಳಾವವು?

ಎಂ.ಎಂ. ಕಲಬುರ್ಗಿ : ನಾನು ದುಡಿಯುತ್ತಿರುವ ಸಂಸ್ಥೆಯಲ್ಲಿ ನನ್ನ ಕನಸುಗಳನ್ನು ಸಾಕಾರಗೊಳಿಸುವ ಪೂರ್ಣ ಅವಕಾಶಗಳು ಇದ್ದರೆ ನಾನು ಈ ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸ ಮಾಡಿಸುವ ಅಗತ್ಯ ಇರಲಿಲ್ಲ. ಹೀಗಾಗಿ ಕಾಡುತ್ತಲಿರುವ ನನ್ನ ಕನಸುಗಳ ಸಮಾಧಾನಕ್ಕಾಗಿ ಒಂದಕ್ಕಿಂತ ಹೆಚ್ಚು ಹೊರಗಿನ ಸಂಸ್ಥೆಗಳನ್ನು ಸಾಹಿತ್ಯ ಪ್ರಕಟನೆಗಾಗಿ, ಸಂಸ್ಕೃತಿ ಪ್ರಸಾರಕ್ಕಾಗಿ ಅವಲಂಬಿಸುವುದು ನನಗೆ ಅನಿವಾರ್ಯವಾಯಿತು. ಈ ಕಾರ್ಯದ ಪುನರುಕ್ತಿಯಾಗದಂತೆ ನಾನು ಎಚ್ಚರವಹಿಸುತ್ತೇನೆ. ಒಮ್ಮೊಮ್ಮೆ ಒಂದೇ ಬಗೆಯ ಕೆಲಸವನ್ನು ಎಲ್ಲ ಸಂಸ್ಥೆಗಳಿಗೂ ಹಂಚಿ ಕೊಡುತ್ತೇನೆ. ಉದಾಹರಣೆಗೆ ಪಿಎಚ್.ಡಿ. ಮಹಾಪ್ರಬಂಧಗಳನ್ನು ಗದುಗಿನ ಲಿಂಗಾಯತ ಅಧ್ಯಯನ ಸಂಸ್ಥೆ, ನಾಗನೂರಿನ ಲಿಂಗಾಯತ

ಅಧ್ಯಯನ ಅಕಾಡೆಮಿ ಪ್ರಕಟಿಸುತ್ತವೆ. ಸ್ವರವಚನಗಳನ್ನು ಗದುಗಿನ ಲಿಂಗಾಯತ ಸಂಸ್ಥೆ, ಮೈಸೂರಿನ ಶಿವರಾತ್ರೀಶ್ವರ ಗ್ರಂಥಮಾಲೆ ಹೊರತರುತ್ತಿವೆ. ಅನುವಾದ ಸಾಹಿತ್ಯವನ್ನು ನಿಡಸೋಸಿ ದುರದುಂಡೀಶ್ವರಮಠದ ಶರಣ ಸಂಸ್ಕೃತಿ ಅಧ್ಯಯನ ಕೇಂದ್ರ ಕೈಗೆತ್ತಿಕೊಂಡಿದೆ. ಲಿಂಗಾಯತ ಪುಣ್ಯಪುರುಷ ಮಾಲೆಯನ್ನು ಲಿಂಗಾಯತ ಅಧ್ಯಯನ ಸಂಸ್ಥೆ ಮಾತ್ರ ಹೊಣೆ ಹೊತ್ತು ಮುಂದುವರಿಸಿದೆ.

ಜಿ.ಎಂ. ಹೆಗಡೆ : ವಚನಗಳ ಸಂಪಾದನೆಯ ಕೆಲಸ ದೊಡ್ಡ ಪ್ರಮಾಣದಲ್ಲಿ ಆಗಿದೆ. ಅವುಗಳ ವಿಮರ್ಶೆಯ ಕಾರ್ಯವನ್ನು ಲಿಂಗಾಯತ ಮಠಗಳು ಹಾಗೂ ಇತರ ಸಂಸ್ಥೆಗಳು ಕೈಗೊಳ್ಳಬೇಕೆಂದು ತಮಗೆ ಅನ್ನಿಸುವುದಿಲ್ಲವೆ?

ಎಂ.ಎಂ. ಕಲಬುರ್ಗಿ : ವಚನಗಳ ವಿಮರ್ಶೆ, ವ್ಯಾಖ್ಯಾನದ ಕೆಲಸವನ್ನು ಖಂಡಿತ ಮಾಡಬೇಕು. ಹಳೆಯ ತಲೆಮಾರಿನ ಸ್ವಾಮಿಗಳು ಸಂಶೋಧನೆ-ವಿಮರ್ಶೆಗಳ ವಿಷಯವಾಗಿ ಉಪೇಕ್ಷೆ ತಾಳಿದ್ದರು. ಅವರಿಗೆ ಆ ಬಗ್ಗೆ ಭಯವೂ ಇತ್ತು. ಆದರೆ ಇತ್ತೀಚೆಗೆ ಪೀಠಕ್ಕೆ ಬಂದ ಯುವ ಸ್ವಾಮಿಗಳು ಮಾತ್ರ ಇಂಥ ಸಾಹಿತ್ಯ ನಿರ್ಮಾಣಕ್ಕೆ ಅವಕಾಶ ಮಾಡಿಕೊಡುತ್ತಲಿದ್ದಾರೆ. ಗದುಗಿನ ತೋಂಟದಾರ್ಯಮಠ, ಸಿರಿಗೆರೆಯ ತರಳಬಾಳು ಮಠ ಈ ದಿಶೆಯಲ್ಲಿ ಹೆಜ್ಜೆ ಹಾಕುತ್ತಲಿವೆ. ಪ್ರಗತಿಪರ ಧೋರಣೆಯ ಲಿಂಗಾಯತ ಮಠಗಳು ಇದಕ್ಕೆ ಇನ್ನಷ್ಟು ಮುಕ್ತ ಅವಕಾಶ ಒದಗಿಸಿಕೊಡುವವೆಂಬ ಆಶಾಭಾವನೆ ತಾಳಿದ್ದೇನೆ. ಲಿಂಗಾಯತಮಠಗಳು ಸತ್ಯಕ್ಕೆ ಮುಕ್ತ ಅವಕಾಶ ನೀಡದಿದ್ದರೆ ಬಸವಣ್ಣನ ವಾರಸುದಾರತ್ವಕ್ಕೆ ಏನು ಅರ್ಥ?

ಜಿ.ಎಂ. ಹೆಗಡೆ : ಮಠದಂಥ ಧಾರ್ಮಿಕ ಸಂಸ್ಥೆಗಳಲ್ಲಿ ನೀವು ಮಾಡುತ್ತಲಿರುವ ಕೆಲಸಗಳ ಬಗೆಗೆ, ಪ್ರಕಟನೆಗಳ ಬಗೆಗೆ ನಮ್ಮ ಸಾಹಿತಿಗಳ ಸಾರ್ವಜನಿಕರ ಪ್ರತಿಕ್ರಿಯೆ ಏನಿರಬಹುದು?

ಎಂ.ಎಂ. ಕಲಬುರ್ಗಿ : ಮಠಗಳೆಂದರೆ ಸ್ಥಾಪಿತ ವ್ಯವಸ್ಥೆಯ ಕೇಂದ್ರವೆಂದು ವಿಚಾರವಾದಿಗಳೂ ಭಾವಿಸುತ್ತಾರೆ. ಆದರೆ ನನ್ನ ದೃಷ್ಟಿಯಲ್ಲಿ ಯಾವುದೇ ಸಂಸ್ಥೆ ಉದ್ದೇಶದಲ್ಲಿ ಒಳ್ಳೆಯದೆ. ಯಾವುದೇ ಸಂಸ್ಥೆ ಕೆಟ್ಟದ್ದಲ್ಲ. ಅದರೊಂದಿಗೆ ನಾವು ಇಟ್ಟುಕೊಳ್ಳುವ ಸಂಬಂಧ ಆ ಸಂಸ್ಥೆಯ ಸ್ವರೂಪವನ್ನು ನಿರ್ಧರಿಸುತ್ತದೆ. ಅಕಾಡೆಮಿ, ಪರಿಷತ್ತುಗಳೊಂದಿಗೆ ಅಪವಿತ್ರ ಸಂಬಂಧ ಇಟ್ಟುಕೊಂಡರೆ, ಮಠಗಳಂತ ಸಂಸ್ಥೆಗಳೊಂದಿಗೆ ಪವಿತ್ರ ಸಂಬಂಧ ಇಟ್ಟುಕೊಂಡರೆ ಯಾವುದು ಉತ್ತಮ? ಯಾವುದು ಅನುತ್ತಮ? ವಿಚಾರವಾದಿಗಳೇ ಹೇಳಬೇಕು. ಲಿಂಗಾಯತ ಪ್ರಕಟನ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಇನ್ನೊಂದು ಬಗೆಯ ಪ್ರಸಾರಾಂಗವೆಂಬ ರೂಪ ಕೊಡುವುದು ನನ್ನ ಉದ್ದೇಶವಾಗಿದ್ದು, ಈಗ ಅಲ್ಲಿಯ ಪ್ರಕಟನೆಗಳಿಗೆ ಶೈಕ್ಷಣಿಕ ರೂಪ ಪ್ರಾಪ್ತವಾಗುತ್ತಲಿದೆಯೆಂದು ಸಾರ್ವಜನಿಕರು ಗಮನಿಸಿದ್ದಾರೆ. ಹೀಗಾಗಿ ಮಠಗಳ ಮೂಲಕ ಗ್ರಂಥಗಳನ್ನು ಪ್ರಕಟಿಸಲು ಹಿಂದೆ ಮುಂದೆ ನೋಡುತ್ತಲಿದ್ದ ವಿದ್ವಾಂಸರು, ಬದಲಾದ ವಾತಾವರಣ ಕಾರಣದಿಂದಾಗಿ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಲ್ಲಿ ತಮ್ಮ ಗ್ರಂಥ ಪ್ರಕಟಿಸಲು ತೋರುತ್ತಿರುವ ಉತ್ಸಾಹವನ್ನೆ ಇಲ್ಲಿಯೂ ತೋರಿಸಲು ಆರಂಭಿಸಿದ್ದಾರೆ. ಇದಕ್ಕೆ ಕಾರಣ ಪ್ರತಿಗಾಮಿ ಸಂಸ್ಥೆಗಳು ಎಂಬ ಶಬ್ದದಿಂದ ಮುಕ್ತವಾಗುವ ರೀತಿಯಲ್ಲಿ ಇವು ಬೆಳೆಯುತ್ತಿವೆ. ಜೈನ ಧರ್ಮೀಯರದಾದರೂ 'ಜ್ಞಾನಪೀಠ'ಕ್ಕೆ ಸಾರ್ವಜನಿಕ ರೂಪ ಬಂದಿದೆ. ಈ ಆದರ್ಶದಲ್ಲಿ ನಮ್ಮ ಸಂಸ್ಥೆ ಮುಂದುವರಿಯುತ್ತಲಿದೆ. ಇನ್ನಷ್ಟು ಮುಕ್ತ ಅವಕಾಶ ಕೊಡುವ ರೀತಿಯಲ್ಲಿ ನಾವು ಇದನ್ನು ಬೆಳೆಯಿಸುವ ಹಂಬಲವುಳ್ಳವರಾಗಿದ್ದೇವೆ. ನಾಟಕ ಕ್ಷೇತ್ರದ 'ಗರುಡ ಸದಾಶಿವರಾಯರು' ಇತಿಹಾಸ ಕ್ಷೇತ್ರದ 'ಕೆಳದಿ ಅರಸರ ಶಾಸನ ಸಂಪುಟ'

'ರಾಮದುರ್ಗ ವಿಮೋಚನಾ ಹೋರಾಟ', ಪಾಶ್ಚಾತ್ಯ ವಿಮರ್ಶಾ ತತ್ವಗಳನ್ನೊಳಗೊಂಡ ಪ್ರೊ. ಮಾಳವಾಡ ಅವರನ್ನು ಕುರಿತ 'ವ್ಯಾಸಂಗ' ಗ್ರಂಥ ಮೊದಲಾದ ಪ್ರಕಟನೆಗಳೇ 'ಲಿಂಗಾಯತ ಅಧ್ಯಯನ ಸಂಸ್ಥೆ'ಯ ಮುಕ್ತ ಮನೋಧರ್ಮಕ್ಕೆ ಸಾಕ್ಷಿಯಾಗಿವೆ. ಇನ್ನೂ ಮುಂದುವರಿದು ಹೇಳುವುದಾದರೆ ಸಾಮಾಜಿಕ ನ್ಯಾಯಕ್ಕಾಗಿ ಹುಟ್ಟುವ ಯಾವುದೇ ಸಾಹಿತ್ಯ ಪ್ರಕಾರವನ್ನು-ದಲಿತ ಬಂಡಾಯಗಳನ್ನೊಳಗೊಂಡಂತೆ ಪ್ರಕಟಿಸುವ ಕೆಲಸವನ್ನು ಇಷ್ಟರಲ್ಲೇ ಕೈಕೊಳ್ಳಲಿದ್ದೇವೆ. ಅದು ಶಿವಶರಣರ ಆದರ್ಶವೂ ಆಗಿದೆ.

ಸಾರ್ವಜನಿಕರ ಉತ್ತಮ ಪ್ರತಿಕ್ರಿಯೆಗೆ 'ಲಿಂಗಾಯತ ಪುಣ್ಯಪುರುಷ ಮಾಲೆ' ಜ್ವಲಂತ ನಿದರ್ಶನವಾಗಿದೆ. ಲಿಂಗಾಯತ ಸಮಾಜದ ನೂರು ವರ್ಷಗಳ ಬಹುಮುಖ ಇತಿಹಾಸ ಇಲ್ಲಿ ಪ್ರಥಮ ಬಾರಿ ಪ್ರಕಟವಾಗಿದೆ.

ಜಿ.ಎಂ. ಹೆಗಡೆ : ಲೇಖಕರ ಪಡೆ ಕಟ್ಟುವಲ್ಲಿ ಲಿಂಗಾಯತ ಅಧ್ಯಯನ ಸಂಸ್ಥೆಯ ಪಾತ್ರವೇನು?

ಎಂ.ಎಂ. ಕಲಬುರ್ಗಿ : ಲಿಂಗಾಯತ ಅಧ್ಯಯನ ಸಂಸ್ಥೆ ವರ್ತಮಾನ ಮತ್ತು ಭವಿಷತ್ತುಗಳ ಕಡೆಗೆ ಹೆಚ್ಚು ಒತ್ತುಕೊಟ್ಟಿದೆ. ಆದುದರಿಂದ ಹಳೆಯ ತಲೆಮಾರಿನ ಬರಹಗಾರರಿಗಿಂತ ಹೊಸ ತಲೆಮಾರಿನ ಬರಹಗಾರರನ್ನು ಗುರುತಿಸುವ, ಅವರ ಕೃತಿಗಳನ್ನು ಪ್ರಕಟಿಸುವ ಕೆಲಸವನ್ನು ಉದ್ದಕ್ಕೂ ಮಾಡುತ್ತ ಬಂದಿದೆ. ಲಿಂಗಾಯತ ಪುಣ್ಯಪುರುಷ ಮಾಲೆಯಲ್ಲಿ ಬಹುಸಂಖ್ಯೆ ಯುವ ಬರಹಗಾರರು ದುಡಿದಿದ್ದಾರೆ. ಪಿಎಚ್.ಡಿ. ಮಹಾಪ್ರಬಂಧಗಳು ಪ್ರಕಟವಾಗದೆ ನಿರಾಶೆಯ ಕತ್ತಲಲ್ಲಿದ್ದ ಯುವ ಸಂಶೋಧಕರಿಗೆ ಒಂದು ಮುಕ್ತ ಅವಕಾಶ ಒದಗಿಸಿಕೊಟ್ಟಂತಾಗಿದೆ. ಯುವ ಸಂಪಾದಕರಿಗೆ ವಚನಸಂಪಾದನ ಕಾರ್ಯ ಮುಂದುವರಿಸಲು ಉತ್ತೇಜನ ನೀಡಿದೆ. ಹೀಗಾಗಿ ಲೇಖಕರ ಒಂದು ಪಡೆಯನ್ನೇ ನಿರ್ಮಿಸುವ ನಮ್ಮ ಗುರಿ ಸಾಧ್ಯವಾಗಿದೆ. ನಾವು ಲೇಖಕರನ್ನು ಆದರ ಭಾವದಿಂದ ನೋಡುತ್ತೇವೆ. ನಿಯಮದ ಪ್ರಕಾರ ಅವರಿಗೆ ಗೌರವಧನ, ಗೌರವಪ್ರತಿ ಮೊದಲಾದವುಗಳನ್ನು ನೀಡಿ ಒಳ್ಳೆಯ ಪರಂಪರೆಯನ್ನು ಸ್ಥಾಪಿಸಿದ್ದೇವೆ.

ಜಿ.ಎಂ. ಹೆಗಡೆ : ಲಿಂಗಾಯತ ಅಧ್ಯಯನ ಸಂಸ್ಥೆಯ ನೂತನ ಯೋಜನೆಗಳಾವುವು?

ಎಂ.ಎಂ. ಕಲಬುರ್ಗಿ : ಈ ಇಪ್ಪತ್ತು ವರ್ಷಗಳಲ್ಲಿ ಹೊಸ ಹೊಸ ಯೋಜನೆಗಳು-ವಿಚಾರಗಳು ಚಿಗುರುತ್ತ ಬಂದಿವೆ. ಲಿಂಗಾಯತ ವಿಶ್ವಕೋಶದ ಕೆಲಸ ಮುಂದುವರಿದಿದ್ದು ಅದನ್ನು ಆದಷ್ಟು ಬೇಗ ಪೂರ್ಣಗೊಳಿಸುವ ಹಂಬಲ ನಮ್ಮದಾಗಿದೆ. ಈವರೆಗೂ ಉಪೇಕ್ಷಿತವಾಗಿರುವ ಲಿಂಗಾಯತ ಅರಸು ಮನೆತನ ಮೊದಲಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಲಿದ್ದೇವೆ. ಹಾಗೂ ದೇಶವಿದೇಶ ಭಾಷೆಗಳಲ್ಲಿ ಶರಣರ ಸಿದ್ಧಾಂತ ವಿಚಾರಗಳನ್ನು, ವಚನಗಳನ್ನು ಅನುವಾದಿಸುವ ಒಂದು ದೊಡ್ಡ ಯೋಜನೆಯನ್ನು ಹಾಕಿಕೊಳ್ಳಬೇಕಾಗಿದೆ.

ಕೇವಲ ಉಪನ್ಯಾಸ, ಗ್ರಂಥ ಪ್ರಕಟನೆ, ಈ ಮಾಧ್ಯಮಗಳನ್ನು ಅವಲಂಬಿಸದೆ ಲಲಿತ ಕಲಾ ವಿಭಾಗವನ್ನು ಪ್ರಾರಂಭಿಸಿ ತೊಗಲು ಗೊಂಬೆ, ಸೂತ್ರದ ಗೊಂಬೆ ಮೊದಲಾದವುಗಳ ಮೂಲಕ, ನಾಟಕ, ಸಂಗೀತ, ನೃತ್ಯ, ಚಿತ್ರ ಇತರ ಮಾಧ್ಯಮಗಳ ಮೂಲಕ, ಒಂದು ಬೃಹತ್ ಮ್ಯೂಜಿಯಂ ಸ್ಥಾಪಿಸುವ ಮೂಲಕ ಶರಣ ಸಿದ್ಧಾಂತವನ್ನು ಪ್ರಸಾರ ಮಾಡುವುದು ನಮ್ಮ ಗುರಿಯಾಗಿದೆ. ಶರಣ ಸಂಸ್ಕೃತಿಗೆ ಸಂಬಂಧಿಸಿದಂತೆ ಪುಣೆಯ ಭಂಡಾರಕರ್ ಓರಿಯಂಟಲ್ ಇನಸ್ಟಿಟ್ಯೂಟ್ ಮಾದರಿಯಲ್ಲಿ ಇದನ್ನು ಒಂದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಯನ್ನಾಗಿ ವಿಸ್ತರಿಸುವ ಹಂಬಲವನ್ನು

ತಾಳಿದ್ದೇವೆ. ದೇಶ ವಿದೇಶಗಳ ಅಭ್ಯಾಸಿಗಳು ಇಲ್ಲಿ ಉನ್ನತ ಅಧ್ಯಯನ ನಡೆಸಲು ಬರುವ ಸಂಸ್ಥೆಯನ್ನಾಗಿ ರೂಪಿಸಬೇಕೆಂಬುದು ನಮ್ಮ ಆಶಯವಾಗಿದೆ.

ಜಿ.ಎಂ. ಹೆಗಡೆ : ಈ ಲಿಂಗಾಯತ ಅಧ್ಯಯನ ಸಂಸ್ಥೆಯ ಪ್ರಕಟನೆಗಳಲ್ಲಿ ನಿಮಗೆ ಯಾವ ಪುಸ್ತಕ ಮಾಲೆಯ ಯೋಜನೆ ಪ್ರಿಯವಾದದ್ದು?

ಎಂ.ಎಂ. ಕಲಬುರ್ಗಿ : ಹುಟ್ಟಿದ ಮಕ್ಕಳಲ್ಲಿ ಯಾರು ಪ್ರೀತಿ ಪಾತ್ರರು? ಎಂದು ಕೇಳಿದಂತಿದೆ ಈ ಪ್ರಶ್ನೆ. ತಂದೆತಾಯಿಗಳಿಗೆ ಎಲ್ಲರಲ್ಲೂ ಸಮಾನಪ್ರೀತಿ ಇರುವ ಹಾಗೆ ಲಿಂಗಾಯತ ಅಧ್ಯಯನ ಸಂಸ್ಥೆಯ ಎಲ್ಲ ಪುಸ್ತಕಮಾಲೆಗಳೂ ನನಗೆ ಸಂತೋಷ ಕೊಟ್ಟಿವೆ. ಒಂದೊಂದಕ್ಕೆ ಒಂದೊಂದು ವೈಶಿಷ್ಟ್ಯವಿದೆ. ಲಿಂಗಾಯತ ಪುಣ್ಯಪುರುಷಮಾಲೆ ತುಂಬ ಜನಪ್ರಿಯವಾಗಿದ್ದು, 'ಈ ಶತಮಾನದ ಲಿಂಗಾಯತದ ಒಂದು ದೊಡ್ಡ ಕೆಲಸ' ಎಂಬ ಖ್ಯಾತಿ ಪಡೆದಿದೆ. ಅಪ್ರಕಟಿತ ವಚನ ಸ್ವರವಚನಗಳಿಂದಾಗಿ ವಚನ ಸಾಹಿತ್ಯ ಪ್ರಕಟನೆಯ ಇತಿಹಾಸದಲ್ಲಿ ಒಂದು ಹೊಸ ಘಟ್ಟ ತೆರೆದುಕೊಂಡಿದೆ. ಪಿಎಚ್.ಡಿ. ಮಹಾಪ್ರಬಂಧಗಳ ಪ್ರಕಟನೆಯಿಂದಾಗಿ ವಿದ್ವಜ್ಜನರಿಗೆ ಬಹುದೊಡ್ಡ ಲಾಭವಾಗಿದೆ.

ವೀರಶೈವ ಅಧ್ಯಯನ ಸಂಸ್ಥೆ, ೬-೨-೧೯೯೪

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೨೯೨

ಸೃಜನ ವ್ಯಕ್ತಿಪ್ರಧಾನ, ಸಂಶೋಧನೆ ವಸ್ತುಪ್ರಧಾನ, ವಿಮರ್ಶೆ ಉಭಯಪ್ರಧಾನ

❖

ಸಂದರ್ಶಕರು : ಡಾ. ಬಸವರಾಜ ಸಾದರ

ಸಂಶೋಧನೆಗೆ ಪರ್ಯಾಯ ಹೆಸರು ಅನ್ನೋ ಹಾಗೆ, ಆ ಕ್ಷೇತ್ರದಲ್ಲಿ ಕೆಲಸ ಮಾಡಿ ಪ್ರಸಿದ್ಧರಾಗಿರುವ ಕನ್ನಡದ ಬೆರಳೆಣಿಕೆಯ ವಿದ್ವಾಂಸರಲ್ಲಿ ಡಾ. ಎಂ.ಎಂ. ಕಲಬುರ್ಗಿಯವರು ಅಗ್ರಗಣ್ಯರು. ಸಂಶೋಧನೆ, ಗ್ರಂಥಸಂಪಾದನೆ, ನಾಮವಿಜ್ಞಾನ, ವೀರಶೈವ ಸಾಹಿತ್ಯ, ಜಾನಪದ, ಶಾಸನಶಾಸ್ತ್ರ ಇವೇ ಹಲವಾರು ಕ್ಷೇತ್ರಗಳಲ್ಲಿ ಮೌಲಿಕವಾದ ಕೆಲಸ ಮಾಡಿರುವ ಅವರು ನಲವತ್ತಕ್ಕೂ ಹೆಚ್ಚು ಗ್ರಂಥಗಳನ್ನು, ಎರಡುನೂರಕ್ಕೂ ಹೆಚ್ಚು ಸಂಶೋಧನ ಪ್ರಬಂಧಗಳನ್ನು ಸಾರಸ್ವತ ಲೋಕಕ್ಕೆ ಕೊಟ್ಟಿದ್ದಾರೆ. ಸಂಶೋಧನಾ ಪ್ರಬಂಧಗಳ ಅವರ ಮಾರ್ಗ-ಒಂದು ಹಾಗೂ ಮಾರ್ಗ-ಎರಡು ವಿಶಿಷ್ಟ ರೀತಿಯಲ್ಲಿ ಹೆಸರು ಮಾಡಿರುವಂಥ ಕೃತಿಗಳು, ಅಷ್ಟೇ ಅಲ್ಲ, ಅವು ಕಲಬುರ್ಗಿಯವರ ಸಂಶೋಧಕ ವ್ಯಕ್ತಿತ್ವವನ್ನು ಸತ್ವ ಪರೀಕ್ಷೆಗೂ ಒಳಪಡಿಸಿದ ಕೃತಿಗಳು. ಮೂರು ದಶಕಗಳಿಂದ ಹಾಗೇ ಅಸಂಖ್ಯ ವಿದ್ಯಾರ್ಥಿಗಳ ಮೆಚ್ಚಿನ ಗುರುಗಳು ಕೂಡಾ. ಸಂಶೋಧನಕ್ಷೇತ್ರದಲ್ಲಿ ಮಾಡಿದ ಅಮೂಲ್ಯ ಸಾಧನೆಗಾಗಿಯೇ ಡಾ. ಕಲಬುರ್ಗಿಯವರಿಗೆ ಬಂದ ಪದವಿ-ಪ್ರಶಸ್ತಿಗಳು ಹಲವಾರು. ಇದೀಗ ೧೯೯೬ ನೆಯ ಸಾಲಿನ, ರಾಜ್ಯಸರ್ಕಾರದ ಪಂಪ ಪ್ರಶಸ್ತಿ ಅವರಿಗೆ ಬಂದಿರೋದು ಈ ಎಲ್ಲ ಪ್ರಶಸ್ತಿಗಳಿಗೂ ಕಿರೀಟಪ್ರಾಯವಾಗಿದೆ. ಸಾಹಿತ್ಯ ಕ್ಷೇತ್ರದ ಉನ್ನತ ಮಟ್ಟದ ಈ ಪ್ರಶಸ್ತಿ ಬಂದಿರುವ ಸಂದರ್ಭದಲ್ಲಿ ಅವರೊಂದಿಗೆ ಒಂದಿಷ್ಟು ಹೊತ್ತು ವಿಚಾರ ವಿನಿಮಯ ಮಾಡುವ ಸಲುವಾಗಿ ಈ ಸಂದರ್ಶನ.

* * *

ಬಸವರಾಜ ಸಾದರ : ನಮಸ್ಕಾರ ಸರ್

ಎಂ. ಎಂ. ಕಲಬುರ್ಗಿ: ನಮಸ್ಕಾರ

ಬಸವರಾಜ ಸಾದರ : ಆರಂಭದಲ್ಲಿ ಒಂದು ವಿರೋಧದ ಸ್ವರದಿಂದೇನೇ ನಮ್ಮ ಮಾತುಕತೆ ಆರಂಭ ಮಾಡೋಣ.

ಎಂ. ಎಂ. ಕಲಬುರ್ಗಿ : ಆಗ್ಲಿ, ಮಾಡ್ರಿ.

ಬಸವರಾಜ ಸಾದರ: ಸಂಶೋಧನ ಕ್ಷೇತ್ರದಲ್ಲಿ ದುಡಿದಂಥ ಹಿರಿಯ ವಿದ್ವಾಂಸರಿದ್ದರೂ ಕೂಡ, ಪ್ರಶಸ್ತಿಯನ್ನು ಕಿರಿಯರಾದ ಕಲಬುರ್ಗಿಯವರಿಗೆ ಕೊಟ್ಟರು ಅನ್ನೋ ವಿರೋಧದ ಮಾತು ಅಲ್ಲಲ್ಲಿ ಕೇಳಿ ಬಂತು. ನಿಮ್ಮ ಪ್ರತಿಕ್ರಿಯೆ ಏನು ಇದಕ್ಕೆ?

ಎಂ. ಎಂ. ಕಲಬುರ್ಗಿ : ಇದು ಕೇಳಬೇಕಾದ ಪ್ರಶ್ನೆಯೇ ಅಂತ ನನಗನಸ್ತದ. ಒಂದು ಮಾತು ಪ್ರಾರಂಭದಲ್ಲೇ ಸ್ಪಷ್ಟಪಡಿಸಬೇಕು, ನಾನು ಇಂದೇ ನನ್ನ ಬರವಣಿಗೆಯನ್ನ ನಿಲ್ಲಿಸಿದ್ರೂ, ಒಟ್ಟು ನನ್ನ ಬರವಣಿಗೆ ಇಂದಿಲ್ಲ ನಾಳೆ ಪಂಪ ಪ್ರಶಸ್ತಿಗೆ ಅರ್ಹವಾದದ್ದು ಅನ್ನುವಂಥ ಆತ್ಮವಿಶ್ವಾಸ ನನ್ನದು. ಅಂದ್ರ ನಾನೂ ಒಳಗೊಂಡಂತೆ ಅನೇಕರು ಈ ಸ್ಪರ್ಧೆಯಲ್ಲಿದ್ರು. ಆದ್ರ ಅದೃಷ್ಟ ನನ್ನನ್ನ ಆರಿಸಿಕೊಂಡಿದೆ. ಇದು ನನ್ನ ಅತ್ಯಂತ ಸ್ಪಷ್ಟವಾದ ನಿಲುವು. ಇನ್ನೂ ಒಂದು ವಿಚಾರ ಅಂತಂದ್ರೆ, ಹಿಂದಿನಕಾಲದೊಳಗೆ, ನಿರ್ದಿಷ್ಟ ಸಮಯಕ್ಕೆ, ನಿರ್ದಿಷ್ಟ ವ್ಯಕ್ತಿಗೆ, ನಿರ್ದಿಷ್ಟ ಪ್ರಶಸ್ತಿಗಳು ಸಿಗತಿದ್ವು. ಅದು ಸ್ಪರ್ಧಾತ್ಮಕ ಯುಗ ಆಗಿರ್ಲಿಲ್ಲ. ಮತ್ತು ಜನಗಳೂ ಹೆಚ್ಚಿಗೆ ಇರ್ಲಿಲ್ಲ. ಆದ್ರ ಈಗ ಜನಾ ಹೆಚ್ಚ ಅದಾರು, ಸ್ಪರ್ಧಾತ್ಮಕ ಯುಗಾ ಅದ, ಆದ್ರೂನೂ ಒಂದಿಷ್ಟು ಹಿಂದ ಮುಂದ ಆಗೂದು ಸಹಜ ಅದ. ಇನ್ನೂ ಒಂದು ವಿಷಯಂತಂದ್ರೆ, ಎಷ್ಟೋ ನನಗ ಸಿಗಬೇಕಾಗಿದ್ವು ತಪ್ಪಿ ಹೋಗ್ಯಾವಲ್ಲ ಅದಕ್ಕೇನಂತಾರ ಜನ? ಬೇಂದ್ರೆಯವರಿಗೆ ಸಿಗಲಿಲ್ಲಾ. ಆಮ್ಯಾಗ ಡಿ.ವಿ. ಗುಂಡಪ್ಪನವರಿಗೆ ಸಿಗಲಿಲ್ಲ, ತೀ.ನಂ.ಶ್ರೀ ಅವರಿಗ ಸಿಕ್ತು. ಅದ್ರಿಂದ ಇವತ್ತಿನ ಈ ಸ್ಪರ್ಧಾತ್ಮಕ ಸಂದರ್ಭದೊಳಗ ಮತ್ತು ಬಹುಜನ ಬರಹಗಾರರಿರುವಂಥ ಸಂದರ್ಭದೊಳಗ ಸ್ವಲ್ಪ ಹೆಚ್ಚೂ ಕಡಿಮೆ ಆಗೂದು ಸಹಜ. ಆದ್ರ ನನ್ನ ಬರವಣಿಗೆ ಇವತ್ತಗೇನ ನಿಲ್ಲಿಸಿದ್ರೂ ಸಹ ಅದು ಪಂಪ ಪ್ರಶಸ್ತಿಗೆ ಯೋಗ್ಯ ಅದ. ಇವತ್ತಲ್ದೆ ಎಂದಾದ್ರೂ ಸಿಗೂವಷ್ಟು ಕೆಲಸಾ ನಾನು ಮಾಡೀನನ್ನೂ ಆತ್ಮವಿಶ್ವಾಸ ನಂದು.

ಬಸವರಾಜ ಸಾದರ: ಬಾಳ ಖಚಿತವಾದ ಉತ್ತರಾ ಕೊಟ್ರಿ. ಈ ಸಂಶೋಧನ ಕ್ಷೇತ್ರ ಸೃಜನಶೀಲ ಅಲ್ಲದ್ದು ಅನ್ನೋ ಮಾತಿದೆ. ಅಂತೇನೇ ಸೃಜನೇತರ ಸಾಹಿತ್ಯಕ್ಕೆ ಕೊಡುವ ಈ ಪ್ರಶಸ್ತಿಯನ್ನು (ಆ ವರ್ಷ ಮಾತ್ರ) ನಿಮಗ ಆ ವರ್ಷಕ್ಕೆ, ಅಂದ್ರ ೧೯೯೬ ಕ್ಕೆ ಕೊಟ್ಟಿದ್ದಾರ. ಈ ಕ್ಷೇತ್ರ ನಿರ್ಲಕ್ಷಿತವಾದದ್ದು ಮತ್ತು ನೀರಸವಾದದ್ದು ಅಂತ ಗೊತ್ತಿದ್ದೂನೂ ಈ ಕ್ಷೇತ್ರದ ಕಡೆ ನೀವು ಯಾಕ ಹೊಳ್ಳಿದ್ರಿ? ಮತ್ತು ಹೆಂಗ ಹೊಳ್ಳಿದ್ರಿ?

ಎಂ.ಎಂ. ಕಲಬುರ್ಗಿ : ಹೊರಳಲಿಕ್ಕ ಎರಡು ಕಾರಣ ಅದಾವ. ಮೊದಲ್ನೇದು, ಮೂಲತಃ ನಾನು ಅವಿಭಕ್ತ ಕುಟುಂಬದಿಂದ ಬಂದಂಥ ವ್ಯಕ್ತಿ. ಅವಿಭಕ್ತ ಕುಟುಂಬದಿಂದ ಬಂದಂಥ ವ್ಯಕ್ತಿಗೆ ತನ್ನ ಕುಟುಂಬದ ಪರಂಪರೆಯ ಬಗ್ಗೆ, ಅದರ ಘನತೆಯ ಬಗ್ಗೆ ಬಾಳ ದೊಡ್ಡ ಅಭಿಮಾನ ಇರ್ತದ. ಅದರ ಇತಿಹಾಸವನ್ನು ಶೋಧ ಮಾಡಬೇಕು, ಆ ಇತಿಹಾಸವನ್ನು ಪ್ರಸಾರ ಮಾಡಬೇಕು, ಮುಂದ ಒಯ್ಯಬೇಕು ಅಂತನ್ನೂವಂಥಾ ಒಂದು ಮನೋಧರ್ಮ ಅವನಲ್ಲಿ ಬಾಲ್ಯದಲ್ಲಿ ಬೆಳದಿರ್ತದ. ಹಿಂಗಾಗಿ ಪರಂಪರೆಯ ಬಗ್ಗೆ ಬಾಲ್ಯದಲ್ಲಿಯೇ ಇಂಥಾ ಒಂದು ವಾತಾವರಣ ಕಾರಣವಾಗಿ ಆ ಪ್ರಜ್ಞೆ, ನನಗೆ ಮೂಡಿಬಂತು. ಆಮೇಲೆ ಇದನ್ನೇ ಸ್ವಲ್ಪ ವಿಸ್ತರಿಸಿಕೊಂಡ್ರೆ ನಮ್ಮ ನಾಡಿನ ಪರಂಪರೆಯ ಬಗ್ಗೆ ಮತ್ತು ನಮ್ಮ ಸಂಸ್ಕೃತಿಯ ಬಗ್ಗೆ ಅಭ್ಯಾಸದ ಆಸಕ್ತಿ ಬೆಳೆಯೂದು ಸಹಜ ಅದ. ಹಿಂಗ ಬಾಲ್ಯದಲ್ಲಿ ನಾನು ಬೆಳೆಸಿಕೊಂಡು ಬಂದಂಥಾ ಈ ಒಂದು ಪ್ರವೃತ್ತಿ ಅದ ಅಲ್ಲಾ, ಇದನ್ನು ಮುಂದ ನನಗ ಇಬ್ಬರು ಗುರುಗಳು ನೀರೆರೆದು ಬೆಳೆಸಿದ್ರು ಅಂತ ಹೇಳಬೇಕು. ಒಬ್ರು ಬಿಜಾಪೂರದಲ್ಲಿ ಬಿ.ಟಿ. ಸಾಸನೂರರು, ಇನ್ನೊಬ್ರು ಧಾರವಾಡದಲ್ಲಿ ಡಾ. ಆರ್. ಸಿ. ಹಿರೇಮಠರು. ಬಿ.ಟಿ. ಸಾಸನೂರರ ಒಂದು ಬೋಧನಾ ಪದ್ಧತಿ

ಇತ್ತಲ್ಲಾ, ಬಾಳ ಖಚಿತತೆ ಮತ್ತು ಸ್ಪಷ್ಟತೆ ಅವರದ್ದು. ಯಾವುದೇ ಒಂದು ವಿಷಯದ ಸಂಶೋಧನೆ, ಸ್ಪಷ್ಟತೆಯನ್ನ ನಿರೀಕ್ಷೆ ಮಾಡ್ತದೆ. ಆದುದರಿಂದ ನನಗ ಆ ರೀತಿಯ ಬೋಧನಾ ಪದ್ಧತಿ ಅದ ಅಲ್ಲಾ, ಅದು ನನಗ ಸತ್ಯವನ್ನು ಸರಿಯಾಗಿ ಹೇಳುವಂಥ ಒಂದು ಚೌಕಟ್ಟನ್ನು ಒದಗಿಸಿ ಕೊಟ್ತು. ಆಮ್ಯಾಲೆ ನಾನು ಧಾರವಾಡಕ್ಕೆ ಬಂದೆ. ಬಂದ ಬಳಿಕ ಡಾ. ಆರ್. ಸಿ, ಹಿರೇಮಠರ ವೈವಿಧ್ಯಪೂರ್ಣವಾದಂಥ ಅಭ್ಯಾಸ ಮತ್ತು ನಿರಂತರವಾದಂಥ ಶ್ರಮ ಇವು ಸಂಶೋಧನೆಗೆ ಅವಶ್ಯವಾದದ್ದು. ಇವು ನನಗ ಮಾರ್ಗದರ್ಶಿ ಆದವು.

ಇನ್ನೂ ಒಂದು ವಿಚಾರ ಅಂತಂದ್ರೆ, ನಾನು ಎಂ. ಎ. ಪಾಸಾದ ಬಳಿಕ ನನ್ನ ಮುಂದೆ ಎರಡು ದಾರಿಗಳಿದ್ದವು. ಸೃಜನಶೀಲ ಸಾಹಿತಿ ಆಗಬೇಕೋ? ಅಥವಾ ಸಂಶೋಧಕನಾಗಬೇಕೋ? ಅಂತ. ಯಾಕಂದ್ರ ನನಗ ಗೊತ್ತದ. ಮೊದ್ಲಿನಿಂದಲೂ ನನ್ನದು ಸೃಜನಶೀಲ ಮನೋಧರ್ಮ. ಆದ್ರ ಆ ಕಾಲದ ಧಾರವಾಡದೊಳಗ ಏನು ವಾತಾವರಣ ಇತ್ತು ಅಂದ್ರ, ನಾನು ಎಂ. ಎ. ವಿದ್ಯಾರ್ಥಿಯಾಗಿ ಅಭ್ಯಾಸ ಮಾಡಿದಂಥಾ ವಿಭಾಗ ಸಂಶೋಧನಾ ಪ್ರಧಾನವಾದದ್ದಿತ್ತು, ಡಾ. ಆರ್. ಸಿ. ಹಿರೇಮಠರು ಮೊದಲಾದವರೆಲ್ಲಾ ಇದ್ರು, ಹಿಂಗಾಗಿ ಅವರ ಪ್ರಭಾವದಿಂದ ಸಂಶೋಧನದ ಕಡೆ ಸ್ವಲ್ಪ ಒಲವು ಬಂತು. ಒಂದು ವೇಳೆ ನಾನು ಮೈಸೂರು ವಿಶ್ವವಿದ್ಯಾಲಯದೊಳಗ ಎಂ. ಎ. ಮಾಡಿದ್ರೆ ನಾನು ಒಬ್ಬ ಸೃಜನಶೀಲ ಬರಹಗಾರ ಆಗ್ತಿದ್ದೆ. ಇದು ಒಂದು, ಎರಡ್ನೇದು ಆ ಸಂದರ್ಭದೊಳಗ ಧಾರವಾಡದೊಳಗೇನಿತ್ತು ಅಂದ್ರೆ, ಒಂದು ಸೃಜನಶೀಲ ಸಾಹಿತಿಗಳಲ್ಲಿ ಬಾಳ ದೊಡ್ಡ ಘರ್ಷಣೆಗಳಿದ್ವು, ಸುಮ್ನೆ ಈ ಘರ್ಷಣೆಯೊಳಗ ನಾನು ಸಿಕ್ಕಿ ಹಾಕ್ಕೊಳ್ಳೂದು ಬ್ಯಾಡಾ, ಸುರಕ್ಷಿತವಾದಂತ ಒಂದು ಸ್ಥಾನಿದ್ರ ಸಾಕು ಅಂತ ಈ ಸಂಶೋಧನೆ ಮುಂದುವರೆಸೋಣಂದ್ಕೊಂಡು ನಾನೀ ಕ್ಷೇತ್ರವನ್ನು ಆಯ್ದುಕೊಂಡೆ.

ಬಸವರಾಜ ಸಾದರ : ಬಹುಶಃ ಬಾಳ ಪ್ರಾಥಮಿಕ ಪ್ರಶ್ನೆ ಅನಸಬಹುದು, ಆದ್ರೂ ತಿಳಕೊಳ್ಳು ಅಗತ್ಯ ಇರೂದ್ರಿಂದ ಈ ಪ್ರಶ್ನೆ- ಸಂಶೋಧನೆ ಅಂದ್ರೆ ಏನು? ಅದರ ಉದ್ದೇಶ, ಗೊತ್ತುಗುರಿಗಳು ಏನು? ಇದರ ಜೊತೆಗೆ ನಾವಿದನ್ನು ಕೇವಲ ಸಾಹಿತ್ಯಕ್ಕ ಸಂಬಂಧಪಟ್ಟಂಗ ಮಾತ್ರ ಬಳಸ್ತಾ ಇದ್ದೇವಿ. ಇದರ ಮಿತಿ ಇಷ್ಟೇನಾ? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸ್ತೀರಾ?

ಎಂ.ಎಂ. ಕಲಬುರ್ಗಿ : ಈ ಸಂಶೋಧನೆ ಅಂತನ್ನೂದು, ಒಂದು-ವಿಜ್ಞಾನ ಮೊದಲಾದ ನಿಕಾಯಗಳಿಗೆ ಸಂಬಂಧಪಟ್ಟಂತೆ ನಡೀತದೆ. ಇನ್ನೂ ಒಂದು ಸಮಾಜವಿಜ್ಞಾನ ಮತ್ತು ಕಲಾನಿಕಾಯಗಳಿಗೆ ಸಂಬಂಧಪಟ್ಟಂತೆ ನಡೀತದೆ. ಇವೆರಡೂ ಭಿನ್ನ ಅಂತನ್ನೂದನ್ನ ನಾವು ಸ್ಪಷ್ಟವಾಗಿ ತಿಳಕೊಳ್ಳಬೇಕು. ಒಬ್ಬ ಸಾಹಿತ್ಯದ ವಿದ್ಯಾರ್ಥಿಯಾದ ನನ್ನ ಸಂಶೋಧನೆ ಅಂತನ್ನೂದು, ಕಲಾನಿಕಾಯಕ್ಕೆ ಸಂಬಂಧಪಟ್ಟಂಥದ್ದು, ಅದು ಗತಕಾಲಕ್ಕ ಸಂಬಂಧಪಟ್ಟಂಥದ್ದು. ಆದ್ರ ವಿಜ್ಞಾನ ಕ್ಷೇತ್ರಕ್ಕ ಸಂಬಂಧಪಟ್ಟಂಥದ್ದು ಅದು ಭವಿಷ್ಯತ್ಕಾಲಕ್ಕ ಸಂಬಂಧಪಟ್ಟಂಥದ್ದು. ಅಂದ್ರ ಗತಕಾಲದಲ್ಲಿ ನಡೆದ, ಜರುಗಿದ ಘಟನೆಗಳು ಯಾವುದೋ ಒಂದು ಕಾರಣದಿಂದ ಮುಚ್ಚಿ ಹೋಗಿರ್ತಾವು, ಅವನ್ನ ನಾವು ಪ್ರಕಟ ಮಾಡಬೇಕಾಗ್ತದ. ಹೀಗಾಗಿ ನಾವು ಮಾಡುವಂಥ ಒಂದು ಸಂಶೋಧನೆ ಅದ ಅಲ್ಲಾ, ಇದು ಡಿಸ್ಕವರಿ ರೂಪದ್ದು ಅಥವಾ ಅನ್ವೇಷಣಾತ್ಮಕ ರೂಪದ್ದು ಅಂತಾ ಹೇಳಬೇಕು. ಈ ಸಂಶೋಧನೆಯಿಂದ ಏನು ಪ್ರಯೋಜನ ಅಂತಂದ್ರ, ಕಾಲ ಅಂತನ್ನೂದು ಅದು ಖಂಡಸ್ವರೂಪದ್ದಲ್ಲ, ಅಖಂಡ ಸ್ವರೂಪದ್ದು. ಭೂತ, ವರ್ತಮಾನ, ಭವಿಷ್ಯ ಹೀಗದು ನಿರಂತವಾಗಿ ಸಾಗುವಂಥದ್ದು, ವರ್ತಮಾನ ಕಾಲ ಅಂತನ್ನೂದು

ಭೂತಕಾಲದ ಪ್ರಭಾವದೊಳಗ ಆಕಾರ ಪಡೆದಿರ್ತದ. ಆದುದರಿಂದ ವರ್ತಮಾನ ಕಾಲವನ್ನು ಅರ್ಥಮಾಡಿಕೋಬೇಕಾದ್ರ ಭೂತಕಾಲಾನ ಅರ್ಥಮಾಡಿಕೊಬೇಕಾಗ್ತದ. ಇದೂ ಅಲ್ದೆ, ಭೂತಕಾಲದ ಸಂದರ್ಭದೊಳಗ ನಮ್ಮ ಸಂಸ್ಕೃತಿಗೆ ಸಂಬಂಧಪಟ್ಟಂತೆ ಅನೇಕ ಉತ್ತಮೋತ್ತಮ ವಿಚಾರಗಳು ಹುಟ್ಟಿ ಅವು ಮುಂದ ಕರಪ್ಟ್ ಆಗಿರ್ತಾವು. ನಾವು ಅವುಗಳನ್ನು ಶೋಧಮಾಡಿ, ಅವುಗಳ ಸರಿಯಾದ ಸ್ವರೂಪವನ್ನು ಪ್ರಕಟ ಮಾಡಿದ್ರೆ ಅವು ನಮ್ಮ ವರ್ತಮಾನದ ಬದುಕನ್ನ ಉದ್ದೀಪನಗೊಳಿಸ್ತಾವು. ಆದುದರಿಂದ ನಾವು ಗತಕಾಲವನ್ನು ಅರ್ಥಾ ಮಾಡಿಕೊಂಡು, ಅಲ್ಲಿಯ ಉತ್ತಮಾಂಶವನ್ನು ಎತ್ತಿ ಹಿಡಿದು, ಅದನ್ನು ಮುಂದುವರೆಸಿದರೆ ನಮ್ಮ ವರ್ತಮಾನಕ್ಕೆ ಬಾಳ ದೊಡ್ಡ ಪ್ರಯೋಜನ ಅದ. ಅದಕ್ಕಾಗೇ ಅಂಬೇಡ್ಕರ ಅವರು ಒಂದ ಮಾತ್ಹೇಳ್ತಾರ, 'ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು' ಅಂತ. ಆದುದರಿಂದ ಪ್ರತಿಯೊಬ್ಬ ವ್ಯಕ್ತಿ ಇತಿಹಾಸವನ್ನು ಅರ್ಥಾಮಾಡಿಕೊಂಡ್ರ ಮಾತ್ರ ವರ್ತಮಾನಕ್ಕೆ ಸರಿಯಾಗಿ ಸ್ಪಂದಿಸ್ಲಿಕ್ಕೆ ಸಾಧ್ಯ ಆಗ್ತದೆ ಮತ್ತು ವರ್ತಮಾನವನ್ನು ಸಾರ್ಥಕವಾಗಿ ಬದುಕ್ಲಿಕ್ಕೆ ಸಾಧ್ಯ ಆಗ್ತದ. ಅದ್ರಿಂದ ಸಂಶೋಧನೆ ಅನ್ನೋದು ಅವಶ್ಯವಾದದ್ದು ಅಂತ ನನ್ನ ಅಭಿಪ್ರಾಯ.

ಬಸವರಾಜ ಸಾದರ : ನಿಮ್ಮ ಸಂಶೋಧನೆಯ ಬಗ್ಗನೇ ಒಂದು ರೀತಿಯ ಅನ್ಯಧ್ವನಿ ಕೇಳಿಬರ್ತದೆ.

ಎಂ.ಎಂ. ಕಲಬುರ್ಗಿ : ಏನದು, ಹೇಳಿ,

ಬಸವರಾಜ ಸಾದರ : ಏನಂತಂದ್ರ ಕಲಬುರ್ಗಿ ಅವರ್ದು ಹೆಚ್ಚು ಪಾಲು ಹೊರ ಆವರಣದ ಸಂಶೋಧನೆ, ಜಾತಿ, ಮತ, ತಂದೆ-ತಾಯಿ, ಕುಲಗೋತ್ರ, ಸಮಾಧಿ, ಗದ್ದಿಗೆ, ಸಂಖ್ಯೆ ಇಂಥವುಗಳನ್ನು ಮಾತ್ರಹೆಚ್ಚಾಗಿ ಕುರಿತದ್ದು. ನೀವು ಆಗಲೆ ಹೇಳಿದ್ರಿ... ನಾನು ಸಮಗ್ರ ಸಂಶೋಧಕ ಅಂತ. ಈ ವೈರುಧ್ಯವನ್ನು ತಗೆದು ಹಾಕೋದು ಹ್ಯಾಗೆ?

ಎಂ.ಎಂ. ಕಲಬುರ್ಗಿ : ನಿಜ ಹೇಳಬೇಕಂದ್ರ ನನ್ನ ಎಲ್ಲಾ ಲೇಖನಗಳನ್ನು, ಪುಸ್ತಕಗಳನ್ನು ಅಭ್ಯಾಸ ಮಾಡಲಾರದೇ ಆಡೂವಂಥಾ ಮಾತು ಇದು ಅನಿಸ್ತದ. ಯಾವುದೇ ಒಬ್ಬ ಸಂಶೋಧಕ ಮೊಟ್ಟ ಮೊದಲು ಆಕರಶೋಧಕ ಆಗಿರ್ತಾನೆ.

ಬಸವರಾಜ ಸಾದರ : ಅದು ಸಂಶೋಧನೆಯಲ್ಲಿ ಬಹಳ ಪ್ರಾಥಮಿಕ ವಾಗಿರುವಂಥದ್ದು.

ಎಂ.ಎಂ. ಕಲಬುರ್ಗಿ : ಹೌದು, ಪ್ರಾಥಮಿಕವಾಗಿರುವಂಥದ್ದು. ಮೊದಲ್ನೆ ಘಟ್ಟದೊಳಗೆ ಆ ಕೆಲಸವನ್ನು ಎಲ್ಲರಂತೆ ನಾನೂ ಮಾಡ್ದೆ. ಆಮ್ಯಾಲೆ ನಾನು ದಾಟಿಬಂದಂಥ ಎರಡು ಘಟ್ಟಗಳೇನದಾವಲ್ಲಾ, ವಿಶ್ಲೇಣಾತ್ಮಕ ಮತ್ತು ವ್ಯಾಖ್ಯಾನಾತ್ಮಕ ಸಂಶೋಧನ ಘಟ್ಟಗಳು, ಇವನ್ನು ಯಾರೂ ಸರಿಯಾಗಿ ನೋಡಿಲ್ಲ. ನೋಡಲಾರ್ದೆ ಅನ್ನುವಂಥಾಮಾತಿದು. ಕೆಲವು ಸಲ ಸುಮ್ನೆ ಸ್ನೇಹಿತ್ರು ವ್ಯಂಗ್ಯಕ್ಕಾಗಿ ಬಳಸೂವಂಥಾ ಮಾತುಗಳಿವು ಅಷ್ಟೆ. ಆದ್ರ ನಿಜವಾಗಿಯೂ ನಾನು ಆಕರಶೋಧಕನಾಗಿ ಅಷ್ಟಕ್ಕೇ ನಿಲ್ಲದೆ, ಆಮೇಲೆ ನಾನು ವಿಶ್ಲೇಷಣೆಗೆ ಬಂದು, ವ್ಯಾಖ್ಯಾನಕ್ಕೆ ಬಂದಂಥವನು. ಹೀಗಾಗಿ ಆ ಮಾತನ್ನ ನಾನು ಬಾಳ ಸ್ಪಷ್ಟವಾಗಿ ತಳ್ಳಿ ಹಾಕ್ತೇನೆ.

ಬಸವರಾಜ ಸಾದರ : ನಿಮ್ಮ ಕೆಲವು ಸಂಶೋಧನೆಗಳು ಬಾಳ ದೊಡ್ಡ ವಿವಾದದಕೇಂದ್ರಗಳಾದ್ದು ಬಹುಶಃ ವಸ್ತುನಿಷ್ಠವಾದ ಚರಿತ್ರೆ, ಆ ವಸ್ತುನಿಷ್ಠ ಚರಿತ್ರೆಯ ಸಂಶೋಧನೆ ಮತ್ತು ಆ ಚರಿತ್ರೆ ಸಾಮಾಜಿಕ ಅಭಿಮಾನಕ್ಕೆ ಉಂಟುಮಾಡಿದಂಥ ನೋವು ಇವೆರಡರ ನಡುವಿನ ಸಂಘರ್ಷ ಇರಬೇಕು ಇದು. ನಮ್ಮಲ್ಲಿ ಪರಂಪರಾಗತವಾಗಿ ಒಂದ ಮಾತನ್ನ ಹೇಳಿಕೊಂಡು ಬರ್ತಾ ಇದ್ದೇವೆ ನಾವು-'ನ ಬ್ರೂಯತ್

ಸತ್ಯಮಪ್ರಿಯಂ' ಅಂತ್ಹೇಳಿ. ಈ ಹಿನ್ನೆಲೆಯಲ್ಲಿ ಒಬ್ಬ ಸಂಶೋಧಕನ ಸಾಮಾಜಿಕ ಜವಾಬ್ದಾರಿಯ ಬಗ್ಗೆ ನಿಮ್ಮ ಅಭಿಪ್ರಾಯ ಏನು?

ಎಂ.ಎಂ. ಕಲಬುರ್ಗಿ : ಈ ಸಂದರ್ಭದೊಳಗ ನನಗ ಬಸವಣ್ಣನ ಒಂದು ವಚನ ನೆನಪಾಗ್ತದ, 'ಕೂಡಲಸಂಗಮದೇವಾ, ನಿನಗೆ ಕೇಡಿಲ್ಲವಾಗಿ, ಆನು ಒಲಿದಂತೆ ಹಾಡುವೆ.' ಇಲ್ಲಿ ನಿನಗೆ ಕೇಡಿಲ್ಲವಾಗಿ ಅಂತನ್ನೂದು ಸಾಮಾಜಿಕ ಸತ್ಯಕ್ಕ ಕೇಡು ಬರದಂತೆ, ಆನು ಒಲಿದಂತೆ ಹಾಡುವೆ ಅಂತನ್ನೂದು ಸಂಶೋಧಕನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ಆತ ಕೆಲಸ ಮಾಡಬೇಕಾಗ್ತದೆ ಅಂತ. ಆದುದರಿಂದ ಸಾಮಾಜಿಕ ಸತ್ಯಕ್ಕ ಧಕ್ಕೆ ತರುವಂಥಾ ರೀತಿಯೊಳಗ ನಾನು ವಿಚಾರ ಮಾಡೂವಂಥಾ ಮನುಷ್ಯ ಅಲ್ಲ. ಯಾಕಂದ್ರ ನನಗ ಗೊತ್ತು, ನಾನು ಅವಿಭಕ್ತ ಕುಟುಂಬದಿಂದ ಬಂದಂಥವನು ಮತ್ತು ಸಮಾಜದ ಬಗ್ಗೆ ಭಾಳ ದೊಡ್ಡ ಕಳಕಳೀ ಇಟ್ಟುಕೊಂಡಂಥವನು. ಆದ್ದರಿಂದ ಸಮಾಜವನ್ನ ನಾಶ ಮಾಡುವ ರೀತಿಯೊಳಗ, ಅದಕ್ಕ ನೋವಾಗಬೇಕು ಅನ್ನೂ ರೀತಿಯೊಳಗ ಬರೀಬೇಕು ಅನ್ನುವಂಥಾ ಮನೋಧರ್ಮ ನನ್ನದು ಅಲ್ಲ. ಏನಾಯ್ತು ಅಂತಂದ್ರ, ಸಂಶೋಧನೆಯೊಳಗ ಆಕರಶೋಧ ಇರ್ತದ, ಆಕರ ವಿಶ್ಲೇಷಣೆ ಇರ್ತದ. ಇಲ್ಲಿವರೆಗೂ ಕನ್ನಡಿಗರು ಏನಾಗ್ಯಾರಂತಂದ್ರ, ಆಕರ ಶೋಧ, ಮತ್ತು ಆಕರ ವಿಶ್ಲೇಷಣೆಯ ಶೋಧವನ್ನು ಮಾತ್ರ ತಿಳಿಕೊಂಡವ್ರದಾರ ಅಷ್ಟೆ. ವ್ಯಾಖ್ಯಾನವನ್ನು ತಿಳಕೊಂಡಿಲ್ಲವ್ರು. ನಾನು ವ್ಯಾಖ್ಯಾನಾತ್ಮಕವಾದಂಥಾ ಒಂದೆರಡು ಲೇಖನ ಬರೆದಾಗ, ಅದನ್ನು ಹ್ಯಾಗ ಗ್ರಹಿಸಬೇಕು ಅನ್ನೂವಂಥಾ ತರಬೇತಿ ಇಲ್ಲದ ಕಾರಣವಾಗಿ ಅದಕ್ಕ ಪ್ರತಿಕ್ರಿಯೆ ಬಂತು ಅಂತ ನನ್ನ ಅಭಿಪ್ರಾಯ. ಆದ್ದರಿಂದ ಒಬ್ಬ ಸಂಶೋಧಕನಾದಂಥಾವಾ ಸತ್ಯವನ್ನು ಹೇಳ್ಬೇಕು. ಸಮಾಜಕ್ಕ ನೋವಾಗ್ತದ ಅನ್ನೋದು ಮುಖ್ಯ ಅಲ್ಲ; ಸತ್ಯಕ್ಕ ನೋವಾಗ್ತದ ಇಲ್ಲೊ ಅನ್ನೋದು ಮುಖ್ಯ. ಅಂದ್ರ ಸಮಾಜ ಮುಖ್ಯ ಅಲ್ಲ, ಸತ್ಯ ಮುಖ್ಯ. ಯಾಕಂದ್ರ ಆ ಸತ್ಯವನ್ನು ಹಿಡಕೊಂಡು ಹೋಗೋದ್ರಿಂದ ಆ ಸಮಾಜಕ್ಕ ಲಾಭ ಇರ್ತದ, ದೀರ್ಘಕಾಲದ ಲಾಭ ಇರ್ತದ, ಭವಿಷ್ಯತ್ತಿನಲ್ಲಿ ಲಾಭ ಇರ್ತದ. ಆದುದರಿಂದ ಈಗ ತಾತ್ಪೂರ್ತಿಕವಾಗಿ ವ್ಯಕ್ತಿಗಳಿಗೆ ನೋವಾಗ್ತದೆ ಅನ್ನೂದಕ್ಕಿಂತಾ ಅದರಿಂದ ಒಟ್ಟು ಸಮಾಜದ ಹಿತಾ ಆಗ್ತದ ಇಲ್ಲೋ ಅದು ಮುಖ್ಯ. ಇದನ್ನು ತಿಳಕೊಂಡು ಸಂಶೋಧನ ಮಾಡ್ಬೇಕಾಗ್ತದ. ಹೀಗಾಗಿ ವ್ಯಕ್ತಿಗಿಂತ ಸಮಾಜ ದೊಡ್ಡದು. ಸಮಾಜಕ್ಕಿಂತ ಸತ್ಯ ದೊಡ್ಡದು. ಅದಕ್ಕಾಗಿ ಸತ್ಯವನ್ನು ನಾವು ಹೇಳಬೇಕಾಗ್ತದ.

ಸ್ವಲ್ಪ ವಿಷಯವನ್ನು ಬೇರೆ ಕಡೆ ತಿರುಗಿಸೋಣ. ಈ ವಿಮರ್ಶೆ ಮತ್ತು ಸಂಶೋಧನ ಅನ್ನುದಕ್ಕಿಂತಾ ಸೃಜನ, ಸಂಶೋಧನ ಮತ್ತು ವಿಮರ್ಶನ ಈ ಮೂರು ನೆಲೆಗಳನ್ನು ಅಭ್ಯಾಸಕ್ಕ ಇಟ್ಟುಕೊಳ್ಳಬೇಕು ಅಂತ ನನಗನ್ನಿಸ್ತದ. ಸೃಜನ, ಅದು ವ್ಯಕ್ತಿ ಪ್ರಧಾನವಾದಂಥ ಒಂದು ಕ್ರಿಯೆ. ಅಲ್ಲಿ ವಸ್ತುವನ್ನು ತನ್ನ ಮನೋಧರ್ಮಕ್ಕೆ ತಕ್ಕಂತೆ ಅಂವಾ ಬೇಕಾದಂಗ ತಿರುಗಿಸಿಕೊಳ್ಳಬಹುದು. ಈಗ ಸೂರ್ಯನ್ನ ವರ್ಣನೆ ಮಾಡುವಾಗ ಅನೇಕ ರೀತಿ ಸೂರ್ಯನನ್ನ ಅವರು ಸೃಷ್ಟಿ ಮಾಡಿಕೊಂಡುಬಿಡ್ತಾರ. ಹೀಗಾಗಿ ಸೃಜನದೊಳಗ ವ್ಯಕ್ತಿ ಪ್ರಧಾನವಾದಂಥ ಒಂದು ಧೋರಣೆ ಇದ್ರೆ, ಸಂಶೋಧನೆಯೊಳಗೆ ವಸ್ತು ಪ್ರಧಾನವಾದದ್ದು. ಅಲ್ಲಿ ವಸ್ತುವನ್ನು ತಿರುಗಿಸ್ಲಿಕ್ಕೆ ಬರೂದಿಲ್ಲ ನಮಗ. ಅಲ್ಲಿ ಹ್ಯಾಗಿರ್ತದೆ ಹಾಗೇ ಅದನ್ನ ಹೇಳಬೇಕಾಗ್ತದೆ. ಇಲ್ಲಿ ವ್ಯಕ್ತಿ ತುಂಬ ಅಪ್ರಧಾನ, ವಸ್ತುವೇ ಪ್ರಧಾನ. ಅಲ್ಲಿ ವ್ಯಕ್ತಿ ಪ್ರಧಾನ ಆಗ್ತದೆ ವಸ್ತು ಅಪ್ರಧಾನ ಆಗ್ತದೆ. ಆದ್ರೆ ವಿಮರ್ಶೆ ಅದ ಅಲ್ಲಾ, ಅಲ್ಲಿ ಉಭಯ ಪ್ರಧಾನ. ಯಾಕಂದ್ರೆ ಒಂದು ವ್ಯಕ್ತಿ

ಇರ್ತದೆ, ಒಂದು ಕೃತಿ ಇರ್ತದೆ, ಆ ಕೃತಿಯನ್ನು ಬಿಡ್ಲಿಕ್ಕೆ ಆಗೂದಿಲ್ಲ. ತನ್ನ ಅನಿಸಿಕೆಯನ್ನು ಬಿಡ್ಲಿಕ್ಕೂ ಆಗೂದಿಲ್ಲ. ಹೀಗಾಗಿ ವಸ್ತು ಮತ್ತು ವ್ಯಕ್ತಿ ಈ ಉಭಯ ಪ್ರಧಾನವಾದದ್ದೇ ವಿಮರ್ಶೆ ಅನಿಸಿಕೊಳ್ತದೆ. ಈ ರೀತಿಯ ಒಂದು ಅಂತರ ಮೂರರಲ್ಲೀನೂ ಐತಿ ಅಂತ ನನಗನ್ನಿಸ್ತಾ ಇದೆ.

ಬಸವರಾಜ ಸಾದರ : ನಿಮ್ಮ ಒಂದೊಂದು ಸಂಶೋಧನ ಅಧ್ಯಯನವೂ ವಿದ್ವತ್ತು, ತೌಲನಿಕ ನೋಟ, ಆಳವಾಧ ಅಧ್ಯಯನ, ತಾಳ್ಮೆ ಇವುಗಳಿಂದ ಅರ್ಥಪೂರ್ಣತೆ ಸಾಧಿಸಿಕೊಂಡಿದೆ. ಒಂದೊಂದರ ಬಗ್ಗೇನೇ ತಾಸು ತಾಸುಗಟ್ಟಲೇ ಮಾತಾಡ್ತಾ ಹೋಗಬಹುದು. ಅನ್ನಿಸ್ತದೆ. ಇಲ್ಲಿ ಅದಕ್ಕೆ ಅವಕಾಶ ಇಲ್ಲ. ಆದ್ರೆ ನಿಮಗೇನೇ ಅತ್ಯಂತ ಖುಷಿಕೊಟ್ಟಂತ ನಿಮ್ಮ ಒಂದು ಸಂಶೋಧನೆ ಬಗ್ಗೆ ಸ್ವಲ್ಪ ಸ್ಥೂಲವಾಗಿ ಹೇಳ್ತೀರಾ?

ಎಂ.ಎಂ. ಕಲಬುರ್ಗಿ : 'ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಮ ಒಂದಧಿಕವೇ' ಅಂತ ಕೇಳಿದಂಗ ಆಗ್ತದೆ ಇದು. ನನಗ ನನ್ನ ಎಲ್ಲಾ ಸಂಶೋಧನೆಗಳೂ ಖುಷಿಯನ್ನೇ ಕೊಟ್ಟಿವೆ. ಅದರಲ್ಲಿಯೂ ಕೆಲವು ವ್ಯಾಖ್ಯಾನಾತ್ಮಕ ಸಂಶೋಧನೆಗಳು ಮತ್ತು ವಿಶ್ಲೇಷಣಾತ್ಮಕ ಸಂಶೋಧನೆಗಳು ಹೆಚ್ಚು ಖುಷಿಯನ್ನು ಕೊಟ್ಟಿವೆ ಅಂತ ಹೇಳ್ಬೇಕು. ವಿಶ್ಲೇಷಣಾತ್ಮಕ ಸಂಶೋಧನೆ ಅಂತಂದ್ರೆ ಪಂಪನನ್ನ ಕುರಿತು ನಾನು ನಡಸಿದಂಥ ಸಂಶೋಧನೆ. ಪಂಪನ ಶಾಸನ ಕುರ್ಕಿಯಾಲದಾಗ ಸಿಕ್ಕಾಗ, ಆ ಕುರ್ಕಿಯಾಲ ಶಾಸನವನ್ನು ವಸ್ತುನಿಷ್ಠವಾಗಿಟ್ಟುಕೊಂಡು ನಾನು ಮಾಡಿದಂಥ ಅಭ್ಯಾಸ ಹಾಗೂ ಅದರಿಂದ ಪ್ರಕಟಿಸಿದಂಥ ಧ್ವನಿಗಳೇನದಾವಲ್ಲ ಅವು ನನಗ ಹೆಚ್ಚು ಖುಷಿಯನ್ನು ಕೊಟ್ಟಿವೆ.

ಇನ್ನು ವ್ಯಾಖ್ಯಾನಾತ್ಮಕ ಸಂಶೋಧನೆಗೆ ಬಂದ್ರೆ, ಉದಾಹರಣೆಗೆ ನಾನು ಪಂಪಭಾರತವನ್ನು ಕಲಿಸುವಾಗ ಒಂದ ಮಾತನ್ನ ಪದೇ ಪದೇ ಹೇಳ್ತಿರ್ತೇನೆ. ದುರ್ಯೋಧನನಲ್ಲಿ ಭಾಳ ದೊಡ್ಡ ಸೈನ್ಯ ಇತ್ತು, ಭೀಷ್ಮ, ದ್ರೋಣ, ಕರ್ಣ, ಶಲ್ಯ ಇಂತ ದೊಡ್ಡ ದೊಡ್ಡ ಸೇನಾಪತಿಗಳಿದ್ರು, ಇಷ್ಟಾಗಿಯೂ ಯಾಕ ಅವಂಗ ಸೋಲು ಉಂಟಾಯ್ತು? ಪಾಂಡವರಲ್ಲಿ ಸೈನ್ಯ ಕಡಿಮೆ ಇತ್ತು, ದೊಡ್ಡ ಸೇನಾಪತಿಗಳೂ ಇರಲಿಲ್ಲ. ಆದ್ರೂ ಅವರು ಯಾಕೆ ಗೆದ್ರು? ದುರ್ಯೋಧನ ಯಾಕ ಸೋತಾ? ಇದು ವ್ಯಾಖ್ಯಾನಾತ್ಮಕವಾದಂಥ ಸಂಶೋಧನೆ. ಇದಕ್ಕ ನಾನು ಹುಡುಕಿದ ಕಾರಣಂತಂದ್ರ, ದುರ್ಯೋಧನ ಒಂದ ಸಂದರ್ಭದೊಳಗ ಹೇಳ್ತಾನ-ತಾನು ಎಲ್ಲಾರನ್ನೂ ಕಳಕೊಂಡು ಏಕಾಂಗಿಯಾದಂಥ ಸಂದರ್ಭದೊಳಗ, ಅಸದಳಮಾಗಿಯುಂ ನಮ್ಮ ಬಲಂ, ಅಂದ್ರ ನಮ್ಮ ಬಲಾ ಬಾಳ ದೊಡ್ಡದು, ಆದ್ರೂ ಬಲವ್ಯಸನದಿಂದ ಕೆಟ್ಟಿತು ಅಂತ. ಅಂದ್ರ ಆಂತರಿಕ ಮನಸ್ತಾಪದ ದೊಡ್ಡ ಸೈನ್ಯಕ್ಕಿಂತ, ಆಂತರಿಕವಾದಂಥ ಏಕ ಮನಸ್ಸಿನ ಸಣ್ಣ ಸೈನ್ಯ ಗೆಲುವನ್ನು ತರ್ತದ ಅಂತ. ಈ ದೃಷ್ಟಿಯಿಂದ ನಾನು ವಿಚಾರ ಮಾಡಿದಾಗ, ಅವನ ಬಹಳ ದೊಡ್ಡ ಸೈನ್ಯದೊಳಗ ಆಂತರಿಕ ಮನಸ್ತಾಪ ಬರ್ಲಿಕ್ಕೆ ಏನು ಕಾರಣಾಯ್ತು ಅನ್ನೂದನ್ನ ಶೋಧ ಮಾಡ್ತಾ ಹೊರಟೆ ನಾನು. ದುರ್ಯೋಧನನ ಸೋಲಿಗೆ ಕರ್ಣನೇ ಕಾರಣನಾದ ಅನ್ನೂದು ನನ್ನ ಅಭಿಪ್ರಾಯ. ಒಂದು ವೇಳೆ ಕರ್ಣ ಬರದೇ ಹೋಗಿದ್ರೆ ದುರ್ಯೋಧನ ಗೆದಿತಿದ್ದ. ಆದ್ರ ದುರ್ಯೋಧನ ತಿಳಕೊಂಡಾ, ಕರ್ಣನಂಥ ಒಬ್ಬ ಬರೂದ್ರಿಂದ ನನಗೊಂದು ಶಕ್ತಿ ಬಂತು ಅಂತಾ. ಆದ್ರ ಕರ್ಣ ಒಳಗ ಬರೂದ್ರಿಂದ ಏನಾಯ್ತಂತಂದ್ರ ಒಂದ ಥರಾ ಸ್ಲೋ ಪಾಯಿಜನ್ ಆದಂತೆ ಆಗಿಬಿಡ್ತು ಅವನ ಸೈನ್ಯದೊಳಗ. ಯಾಕಂದ್ರ ದುರ್ಯೋಧನನ ಆಸ್ಥಾನ ಅಂತಂದ್ರೆ ಬ್ರಾಹ್ಮಣ ಮತ್ತು ಕ್ಷತಿಯರ ಒಂದು ಸಂಘಟನೆ ಅದು. ಅದರೊಳಗ ಒಬ್ಬ ಶೂದ್ರ ಬಂದಾ ಒಳಗ. ಅದೂ ಶೂದ್ರ ಎಲ್ಲಿ ಕೂತಾ ಅಂದ್ರ ಕೋಣೀಗಿ ಕೂಡ್ಲಿಲ್ಲಾ, ದುರ್ಯೋಧನನ ಮಗ್ಗಲಕ್ಕ

ಕುಂತಬಿಟ್ಟಾ. ಇದರಿಂದಾಗಿ ಏನಾಗ್ಬಿಟ್ತು ಅಂದ್ರ ಅಲ್ಲಿ ಕ್ಷತ್ರಿಯ ಮತ್ತು ಬ್ರಾಹ್ಮಣರ ಮನಸ್ಸಿನೊಳಗ ಒಂದ್ ರೀತಿ ಬಿರಕುಗಳು ಬಂದ್ ಬಿಟ್ವು. ಇದು ಕಾರಣವಾಗಿಬಿಟ್ಟು ದುರ್ಯೋಧನ ಯದ್ಧದ ಸಂದರ್ಭದೊಳಗ ಭೀಷ್ಮರಿಗೆ ವೀರಪಟ್ಟ ಕಟ್ಟಿದ್ರೆ ಕರ್ಣ ಬೈಯ್ತಾನೆ, ಹತ್ತು ದಿವಸದವರೆಗೆ ನಾನು ಯುದ್ಧಕ್ಕೆ ಬರೂದಿಲ್ಲಾ ಅಂತ ಅಂವಾ ಬಿಟ್ಟು ಹೋಗ್ಬಿಡ್ತಾನೆ. ಕರ್ಣನಿಗೆ ವೀರಪಟ್ಟ ಕಟ್ಟಿದ್ರೆ ಅಶ್ವತ್ಥಾಮ ಬೈಯ್ತಾನೆ. ಆಮ್ಯಾಲೆ ಶಲ್ಯನಿಗೆ ಸಾರಥಿ ಆಗು ಅಂತಂದ್ರೆ ಶಲ್ಯ ಒಪ್ಪೂದಿಲ್ಲ, ಅಂವಾ ಒರಟದಾನ, ಒಲ್ಲೆ ಅಂತಾನ. ಹೀಗಾಗಿ ಏನಾಗಿಬಿಡ್ತು ಅಂದ್ರೆ ಒಬ್ಬ ಶೂದ್ರ ಬಂದ ಸಂದರ್ಭದೊಳಗ ಮನಸ್ಸೆಲ್ಲಾ ಒಡದು ಹೋಗಿಬಿಟ್ಟು, ಸೈನ್ಯಕ್ಕೊಂದು ಸೋಲು ಬಂತು. ಇದು ಐತೆಲ್ಲಾ, ಇದೆಲ್ಲಾ ವ್ಯಾಖ್ಯಾನಾತ್ಮಕವಾದಂಥ ಸಂಶೋಧನೆ. ಇವೆಲ್ಲಾ ಕಾವ್ಯಾ ಓದಿದ್ರು, ಹೊಸದೇನೂ ಅಲ್ಲಿ ಆಕರ ಸಿಗಲಿಲ್ಲ, ಆದ್ರೂ ಹಳೇ ಆಕರವನ್ನೇ ಇಟಕೊಂಡು ಹೊಸ ರೀತಿಯಿಂದ ಅದನ್ನ ವ್ಯಾಖ್ಯಾನ ಮಾಡಿದ್ದು ಇದು. ಇದೇ ಒಂದು ವಿಮರ್ಶೆ. ಅದಕ್ಕಾಗಿ ಸಂಶೋಧನೆ ಮತ್ತು ವಿಮರ್ಶೆ ಇವತ್ತು ದೂರ ದೂರ ಉಳಿದಿಲ್ಲ. ಹತ್ರ ಹತ್ರ ಬಂದಾವ, ವ್ಯಾಖ್ಯಾನಾತ್ಮಕ ಸಂಶೋಧನೆ ಕಾರಣವಾಗಿ.

ಬಸವರಾಜ ಸಾದರ : ನೀವು ಹೇಳೂ ವಿಶ್ಲೇಷಣೆ ಮತ್ತು ವ್ಯಾಖ್ಯಾನ ಕೇಳಿದ್ರೆ ಇದ್ರಿಂದ ಸಂಶೋಧನೆಯ ಲಾಭ ಏನು ಅನ್ನೋದು ಸ್ಪಷ್ಟ ಆಗ್ತದೆ.

ಎಂ.ಎಂ. ಕಲಬುರ್ಗಿ : ಹೌದು ಇನ್ನೂ ಒಂದ್ ಮಾತಂದ್ರ, ಭಾರತ ಅನ್ನೂದೇನೈತಲ್ಲ, ಇದು ಜಾತಿವಾದಿ ರಾಷ್ಟ್ರ. ಇಲ್ಲಿ ಯಾವ್ದೇ ಸಂಘಟನೆ ಆಗಬೇಕಾದ್ರೂ ಜಾತಿಯಿಂದ ಆಗ್ತದ, ಮತ್ತು ವಿಘಟನೆ ಆಗಬೇಕಾದ್ರೂ ಜಾತಿಯಿಂದನ ಆಗ್ತದೆ.

ಬಸವರಾಜ ಸಾದರ : ಅಂದ್ರ ಇದು ಇತಿಹಾಸ ಕಲ್ಸು ಪಾಠ ಕೂಡ. ಅಂತೀರಿ ನೀವು.

ಎಂ.ಎಂ. ಕಲಬುರ್ಗಿ : ಹೌದು ಹೌದು.

ಬಸವರಾಜ ಸಾದರ : ಸರ್, ಎಲ್ಲಾನೂ ವಾಣಿಜ್ಯದ ಹಿನ್ನೆಲೆಯಲ್ಲಿ ನೋಡ್ತಾ ಇರೂವಂಥಾ ಈ ಕಾಲದಲ್ಲಿ ಸಂಶೋಧನೆಯಿಂದ ಏನು ಪ್ರಯೋಜನ? ಅನ್ನುವಂಥಾ ಒಂದು ವ್ಯವಹಾರಿಕ ಪ್ರಶ್ನೆ ಹುಟ್ಟಿದ್ರೆ, ಅದಕ್ಕೆ ನಿಮ್ಮ ಉತ್ತರ ಏನಿರ್ತದ?

ಎಂ.ಎಂ. ಕಲಬುರ್ಗಿ : ನೋಡಿ, ಪ್ರತಿಯೊಂದನ್ನೂ ವ್ಯಾವಹಾರಿಕ ದೃಷ್ಟಿಯಿಂದನ ಅಳೀ ಬಾರ್ದು ನಾವು.

ಬಸವರಾಜ ಸಾದರ : ನಿಜ, ಆದ್ರ ಇವತ್ತ ಕಾಲ ಹಂಗ ಐತಿ. ಯಾಕಂದ್ರ ಈ ಸಂಶೋಧನೆಯಿಂದಾಗುವ ವೈಯಕ್ತಿಕ ಲಾಭಗಳೇನು? ಮುಂದ ಇದರ ಭವಿಷ್ಯ ಏನು? ಅನ್ನೂ ಪ್ರಶ್ನೆ ಇದ್ದ ಇರ್ತಾವಲ್ಲ?

ಡಾ. ಎಂ.ಎಂ. ಕಲಬುರ್ಗಿ : ಅದೇನೋ ನಿಜ. ಆದ್ರ ಇದನ್ನ ಭೌತಿಕವಾದ ಲಾಭಗಳಿಂದ ಅಳೀಬಾರ್ದು. ಸಾಂಸ್ಕೃತಿಕವಾದ ಲಾಭದಿಂದ ಅಳೀಬೇಕು. ಈ ಸಂಶೋಧನೆಗೆ ಒಂದು ಸಾಂಸ್ಕೃತಿಕ ಮಹತ್ವ ಇದೆ. ಹಾಗ ನೋಡಿದ್ರ ಕಾವ್ಯಕ್ಕ ಏನು ಉಪಯೋಗ ಅದ? ಅದನ್ನ ಯಾಕ ಬರೀಬೇಕು? ನಮ್ಮಲ್ಲಿ 'ಕಾವ್ಯಾಲಾಪಾಂಶ್ಚ ವರ್ಜ್ಯಯೇತ್' ಕಾವ್ಯದ ಆಲಾಪವನ್ನು ವರ್ಜಿಸಬೇಕು ಅಂತ ಹೇಳ್ತಾ ಬಂದ್ರು. ಆದ್ರ ಕಾವ್ಯದಿಂದ ಸಾಹಿತ್ಯದಿಂದ ಸಂಸ್ಕಾರ ಆಗ್ತದೆ, ನಮ್ಮ ಬದುಕಿಗೆ ಒಂದು ಹೊಸಾ ಬೆಳಕು ಮೂಡ್ಲಿಕ್ಕೆ ಸಾಧ್ಯ ಅದೆ. ಅದರಂಗ ಈ ಸಂಶೋಧನೆ ಅದ ಅಲ್ಲಾ, ಇದು ನಮ್ಮ ಇತಿಹಾಸ ಮತ್ತು ಗತಕಾಲದ ಒಳ್ಳೆಯದನ್ನೋ ಅಥವಾ ಕೆಟ್ಟದನ್ನೋ ಹೇಳೋ ಮೂಲಕ ನಾವು ಹೆಂಗ

ನಡೀಬೇಕು, ನಾವು ಹ್ಯಾಗ ರೂಪಗೊಳ್ಳಬೇಕು? ಅನ್ನೂದನ್ನ ತಿಳಿಸಿಕೊಡುವ ಕಾರಣವಾಗಿ ಇದನ್ನ ಭೌತಿಕ ಲಾಭದಿಂದ ನೋಡದೆ, ಸಾಂಸ್ಕೃತಿಕ ಲಾಭದಿಂದ ನೋಡಬೇಕಾಗೈತಿ.

ಬಸವರಾಜ ಸಾದರ : ವಚನ ಸಾಹಿತ್ಯದ ಬಗ್ಗೆ ನಿಮ್ದು ಬಾಳ ಆಳವಾದ ಅಧ್ಯಯನ. ವಿಮರ್ಶೆ ಹಾಗೂ ಸಂಶೋಧನೆ ಎರಡೂ ರೀತಿಯಲ್ಲೂ ನೀವದನ್ನ ಬಾಳ ಸಮಗ್ರವಾಗಿ ಓದಿದವ್ರು. ಕಾಲಾತೀತವಾಗಿ ವಚನ ಸಾಹಿತ್ಯ ಎಲ್ಲ ಸಮಾಜಕ್ಕೂ ಪ್ರಸ್ತುತವಾಗುವ ರೀತಿ ಹ್ಯಾಂಗನ್ನೂದನ್ನ ಸ್ವಲ್ಪ ಹೇಳ್ತೀರಾ?

ಎಂ.ಎಂ. ಕಲಬುರ್ಗಿ : ನೋಡಿ ವಚನ ಸಾಹಿತ್ಯ ನಮ್ಮ ನಾಡಿನ ಒಂದು ಅದ್ಭುತವಾದಂಥಾ ಸೃಷ್ಟಿ. ಹೊಸಾ ದೃಷ್ಟಿಕೋನವನ್ನು ಕೊಟ್ಟಂಥಾ ಒಂದು ಸೃಷ್ಟಿ ಅದು ಅಂತ ನನ್ನ ಅಭಿಪ್ರಾಯ. ಅಂದ್ರೆ ಭಾರತೀಯ ಪರಿಸರವನ್ನೇ ಇಟ್ಟುಕೊಂಡು ನೋಡೂದಾದ್ರೆ, ನಮ್ಮದು ವ್ಯಕ್ತಿವಾದಿ ಸಿದ್ಧಾಂತ ಅದ ಮೊದಲಿನಿಂದ್ಲೂ. ಆದ್ರೆ ಸಮಾಜವಾದಿ ಸಿದ್ಧಾಂತ ಅಲ್ಲ. ವಚನಕಾರರು ಏನು ಮಾಡಿದ್ರು ಅಂದ್ರ ವ್ಯಕ್ತಿವಾದಿ ಸಿದ್ಧಾಂತಕ್ಕ ನಿಲ್ಲದೆ, ಅದನ್ನು ಸಮಾಜವಾದಿ ಸಿದ್ಧಾಂತಕ್ಕೂ ಬೆಳಸಿಕೊಂಡು ಬಂದ್ರು. ಇದು ಅವರ ದೊಡ್ಡ ಕೊಡುಗೆ. ಇದರಿಂದಾಗಿ ಏನಾಯ್ತು ಅಂದರ ವ್ಯಕ್ತಿಕೇಂದ್ರಿತವಾದ ಚಟುವಟಿಕೆಗಳು ಅಲ್ಲಿಗೇ ನಿಲ್ಲದೆ, ಸಮಾಜ ಕೇಂದ್ರಿತ ಚಟುವಟಿಕೆಗಳಾಗಿ ಹಬ್ಬಿದ್ವು. ಇದು ಬಾಳ ದೊಡ್ಡ ಕ್ರಾಂತಿ ಅನಿಸ್ತದ. ಇಡೀ ಇಂಡಿಯಾದೊಳಗ ಇದು ಬಾಳ ದೊಡ್ಡ ಕ್ರಾಂತಿ. ಲಿಂಗಾಯತದೊಳಗ ಕೆಲವು ಪದಗಳದಾವು ಲಿಂಗಪೂಜೆ ಮತ್ತು ಜಂಗಮದಾಸೋಹ ಅಂತ. ವ್ಯಕ್ತಿಕೇಂದ್ರಿತ ಅಂತಂದ್ರೆ ಲಿಂಗಪೂಜೆ, ಸಮಾಜಕೇಂದ್ರಿತ ಅಂದ್ರೆ ಜಂಗಮದಾಸೋಹ. ಅದಕ್ಕಾಗಿ ಲಿಂಗಾಯತದೊಳಗ ಹೆಂಗದಾವಂತಂದ್ರ ಇಲ್ಲಿ ಲಿಂಗವಂತ ಅನ್ನೂ ಪದಾನೂ ಅದ, ಜಂಗಮವಂತ ಅನ್ನೂ ಪದಾನೂ ಅದ. 'ಲಿಂಗವ್ಯಸನಿ, ಜಂಗಮಪ್ರೇಮಿಯೆಂದೆನಿಸಯ್ಯಾ' ಅಂದ್ರ ಏಕಕಾಲಕ್ಕ ಲಿಂಗವ್ಯಸನಿ ಜಂಗಮಪ್ರೇಮಿ ಎರಡೂ ಆಗಬೇಕು ಅನ್ನೂ ಅರ್ಥ. ಅಂದ್ರೆ, ಇದು ಅದ ಅಲ್ಲಾ ವಚನಕಾರರು ಕೊಟ್ಟಂತಾ ಒಂದು ದೊಡ್ಡ ಕೊಡುಗೆ. ಲಿಂಗಪೂಜೆ, ಅದ್ನ ಮಾಡೋದು ತುಂಬಾ ಹಗುರ. ಆದ್ರೆ ಜಂಗಮ ದಾಸೋಹ ಮಾಡೋದು, ಅಂದ್ರ ಸಮಾಜಸೇವೆ ಮಾಡೋದು ತುಂಬಾ ಕಠಿಣ. ಬಸವಣ್ಣನೇ ಒಂದ್ ಕಡೆ ಹೇಳ್ತಾನೆ. ಲಿಂಗಪೂಜೆ ಮುಂಜಾನೆಯ ಬಿಸಿಲು, ಅಂಗಕ್ಕೆ ಹಿತವಾಯ್ತು. ಜಂಗಮ ದಾಸೋಹ ಮಧ್ಯಾಹ್ನದ ಬಿಸಿಲು ಕರಕಷ್ಟವಯ್ಯ ಅಂತ. ಆದ್ರೂ ಅದನ್ನ ಮಾಡಬೇಕು. ಇದನ್ನೆಲ್ಲಾ ಮಾಡಿ ತೋರ್ಸಿದ್ದೇ ಅವರ ದೊಡ್ಡ ಕೊಡುಗೆ ಅನ್ನಸ್ತದ.

ಬಸವರಾಜ ಸಾದರ : ಜಾನಪದ ಕ್ಷೇತ್ರದಲ್ಲು ನಿಮ್ಮದು ಮಹತ್ವದ ಕೊಡುಗೆ. ನಮ್ಮಲ್ಲಿ ಒಂದು ಮಾತು ಬರ್ತದೆ. ನಾವಿನ್ನೂ ಜಾನಪದ ಕ್ಷೇತ್ರವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡೇ ಇಲ್ಲ, ಕೇವಲ ಹತ್ತಾರು ಕೃತಿಗಳನ್ನು ಸಂಪಾದನೆ ಮಾಡೋದ್ರಲ್ಲೇ ತೊಡಗಿದ್ದೇವೆ ಅಂತ. ನೀವು ಏನಂತೀರಿ ಈ ವಿಚಾರಕ್ಕ?

ಎಂ.ಎಂ. ಕಲಬುರ್ಗಿ : ನೋಡಿ, ನಮ್ಮಲ್ಲಿ ಜಾನಪದ ಅಭ್ಯಾಸ ಮಾಡಿದವರಲ್ಲಿ ಎರಡು ವರ್ಗಗಳದಾವ. ಹಿರಿಯ ವಿದ್ವಾಂಸರು ಮತ್ತು ಕಿರಿಯ ವಿದ್ವಾಂಸರು ಅಂತ.

ಬಸವರಾಜ ಸಾದರ : ಅಂದ್ರ ವಯಸ್ಸಿನಿಂದನೋ ಅಥವಾ. . . .

ಎಂ.ಎಂ. ಕಲಬುರ್ಗಿ : ವಯಸ್ಸಿನಿಂದಲೂ ಹಾಗೂ ಅನುಭವದಿಂದಲೂ. ಹಿರಿಯ ವಿದ್ವಾಂಸರು ಹಳ್ಳ್ಯಾಗ ಹುಟ್ಟಿದ್ರು, ಜಾನಪದ ಕೆಲಸಾ ಮಾಡಿದ್ರು, ಆಮ್ಯಾಲೆ ಕಿರಿಯ ವಿದ್ವಾಂಸರು ಪಟ್ಟಣದಾಗ ಹುಟ್ಟ್ಯಾರ ಜಾನಪದ ಅಭ್ಯಾಸ ಮಾಡ್ಯಾರ. ಇದರಿಂದಾಗಿ ಅವರಲ್ಲಿನೂ ಒಂದಿಷ್ಟು ಕೊರತೆ ಕಾಣಿಸ್ತದ, ಇವರಲ್ಲಿಯೂ ಒಂದಿಷ್ಟು ಕೊರತೆ ಕಾಣಿಸ್ತದ. ಅಂದ್ರ ಹಿರಿಯ ವಿದ್ವಾಂಸರು ಕನ್ನಡದ ಮೂಲದಿಂದ ಬಂದವ್ರು, ಜಾನಪದ ಮೂಲದಿಂದ ಬಂದವ್ರಲ್ಲ ಅವ್ರು. ಹಳ್ಳಿಯೊಳಗ ಹುಟ್ಟಿದವರು, ಆದ್ರ ಕನ್ನಡ ಮೂಲದಿಂದ ಜಾನಪದ ವಿದ್ವಾಂಸರಾದವ್ರು. ಕನ್ನಡ ಪ್ರೊಫೆಸರ್ರೇ ಜಾನಪದ ವಿದ್ವಾಂಸರಾದಂಥವ್ರು. ಇವ್ರು ಜಾನಪದದ ಮೂಲದಿಂದ ಬಂದವ್ರಲ್ಲ. ಆದ್ರ ಕಿರಿಯ ವಿದ್ವಾಂಸರೇನದಾರಲ್ಲ ಇವರು ಜಾನಪದ ಅಭ್ಯಾಸ ಮಾಡಿದವ್ರು, ಜಾನಪದ ಅಭ್ಯಾಸ ಮಾಡ್ಕೊಂಡೇ ಬಂದವ್ರು, ಆದ್ರ ಹಳ್ಳಿಗೆ ಹೋಗಿ ಬಂದವ್ರಲ್ಲ. ಹೀಗಾಗಿ ಇವರಿಬ್ಬರಲ್ಲೂ ಒಂದಿಷ್ಟು ಕೊರತೆ ಕಾಣಿಸ್ತದೆ ಅಂತ ನನಗನ್ನಿಸ್ತದೆ ಇಷ್ಟಿದ್ದೂ ಒಂದ್ ಮಾತನ್ನ ಒಪ್ಪಿಕೋಬೇಕು, ನಮ್ಮಲ್ಲಿ ಜಾನಪದದ ಅಭ್ಯಾಸ ತಕ್ಕಮಟ್ಟಿಗೆ ಆಗ್ಯೆತಿ. ಆದ್ರೆ ಏನಾಗಿ ಬಿಟ್ಟಿತಂದ್ರ ಪ್ರತಿಯೊಂದಕ್ಕೂ ನಾವು ಪಾಶ್ಚಾತ್ಯ ಸಿದ್ಧಾಂತಗಳನ್ನೇ ತಂದು ನಮ್ಮ ಜಾನಪದ ಬದುಕನ್ನು ನಾವು ವಿಶಾಲ ಮಾಡ್ಬೇಕಂತೀವಲ್ಲಾ ಅದು ತಪ್ಪಾಗ್ತದ. ನಮ್ಮ ಆಕರ ಸಾಮಗ್ರಿ ಅದು ಸರಿಯಾದಂಥ ರೀತಿಯೊಳಗ ಜಾನಪದವನ್ನು ಬಿಚ್ಚಿಕೊಡ್ತದೆ. ಅಂಥಾ ಕೆಲಸ ಇನ್ನಮ್ಯಾಲೆ ಆಗಬೇಕಂತ ನನ್ನ ಅಭಿಪ್ರಾಯ.

ಬಸವರಾಜ ಸಾದರ : ಹಾಗೇನೇ ನಾಮವಿಜ್ಞಾನ ಕೂಡಾ ನಿಮ್ಮ ಮುಖ್ಯ ಆಸಕ್ತಿಯ ಮತ್ತೊಂದು ಕ್ಷೇತ್ರ. ತುಂಬಾ ಕುತೂಹಲಕರವಾಗಿರುವ ಈ ಕ್ಷೇತ್ರದ ಉದ್ದೇಶ ಮತ್ತು ಗುರಿಗಳ ಬಗ್ಗೆ ಸಂಕ್ಷಿಪ್ತವಾಗಿ ಒಂದೆರಡು ಮಾತು. . . .

ಎಂ.ಎಂ. ಕಲಬುರ್ಗಿ : ಅಂದ್ರ ನಾಮವಿಜ್ಞಾನ ನೀವಂದಂಗ ಬಾಳ ಮಹತ್ವಪೂರ್ಣವಾದ ಒಂದು ಶಾಖೆ. ಕರ್ನಾಟಕದೊಳಗ ಇತ್ತೀಚೆಗೆ ಅದರ ಬಗ್ಗೆ ಆಸಕ್ತಿ ಬೆಳೀತಾ ಇದೆ. ಹೀಗೆ ಆಸಕ್ತಿ ಬೆಳಿಸಿಕೊಂಡಂಥಾ ವಿದ್ವಾಂಸರೊಳಗ ನಾನೂ ಒಬ್ಬಾಂವ ಅಂತ ವಿನಯದಿಂದ ಹೇಳ್ತಾ ಇದ್ದೇನಿ. ಅಂದ್ರ ವ್ಯಕ್ತಿನಾಮ ಇರಬಹುದು, ಗ್ರಾಮನಾಮ ಇರಬಹುದು, ಅಥವಾ ಕುಟುಂಬ ನಾಮ ಇರಬಹುದು. ಏನಿದ್ರೂ ಅದರ ಹಿಂದ ಒಂದು ಸಂಸ್ಕೃತಿ ಮಡುಗಟ್ಟಿರ್ತದ. ಅದು ನೋಡ್ಲಿಕ್ಕೆ ಒಂದು ಹೆಸರಾದ್ರೂ ಬರೇ ಹೆಸರಲ್ಲದು. ಈಗ ನನಗೆ ಬಾಳ ದಿವಸದಿಂದ ಒಂದ್ ವಿಷಯ ಕಾಡ್ತಾ ಇತ್ತು. ಹರಿಹರದೇವ ಅಂತ ನಮ್ಮಲ್ಲಿ ಕವಿ ಆಗಿ ಹೋಗ್ಯಾನ. ಅಂವಾ ತುಂಬಾ ಶಿವಪರನಾದಂಥ ಒಬ್ಬ ಕವಿ. ಕನಸಿನಲ್ಲಾದ್ರೂ ಸಹ ನಾನು ಹರಿಯನ್ನ ನೆನಸೋದಿಲ್ಲ, ಶಿವನಿಗೆ ನಾಲಿಗೆ ಮಾರಿದೆ ಅಂತಾನ. ಆದ್ರ ಅವನ ಹೆಸರಿನೊಳಗನ 'ಹರಿ' ಅನ್ನೂದೈತಿ. ಈ 'ಹರಿ' ಅಂತ ಯಾಕೆ ಬಂತಲ್ಲಿ? ಹರಿಹರ ಸಮನ್ವಯ ಹೆಂಗೆ ಬಂತಿದು? ಇದು ನನಗ ಒಂದ್ ಪ್ರಶ್ನೆ ಆಗಿ ಕಾಡಿತು. ಅವನ ಅಳಿಯನ್ನ ನೋಡಿದ್ರೆ ರಾಘವಾಂಕ! ರಾಘವ ಅಂದ್ರ ಮತ್ತು ರಾಮ ಬಂತು. ರಾಘವಾಂಕನಿಗೆ ಹೆಸರಿಟ್ಟವನೂ ಸೋದರಮಾವ ಹರಿಹರ. ಇಂಥಾಂವಾ ರಾಘವಾ ಅಂತ ಹೆಂಗ್ ಇಟ್ಟ ಅಂವಾ? ಈ ಎಲ್ಲ ಪ್ರಶ್ನೆ ಎದ್ವು. ಯೋಚನೆ ಮಾಡಿದ್ರೆ ಇವೆಲ್ಲ ಹರಿಪರವಾದ ಹೆಸರುಗಳಲ್ಲ, ಇವೇನೋ ಕರಪ್ಟ್ ಆಗ್ಯಾವಂತ ನನಗನ್ನಿಸ್ತು. ಆಮ್ಯಾಲ ವಿಚಾರ ಮಾಡ್ತಾ ಹೊರಟಾಗ ನನಗ ಹರಿಹರನ ಬಗ್ಗೆ ಸಮಾಧಾನ ಸಿಕ್ತು. ರಾಘವಾಂಕನ ಬಗ್ಗೆ ಇನ್ನೂ ಸಮಾಧಾನ ಸಿಕ್ಕಿಲ್ಲ. ಏನಾಯ್ತು ಅಂದ್ರೆ ಕುಮಾರರಾಮನ ತಾಯಿಯ ಹೆಸರು

ಹರಿಹರದೇವಿ ಅಂತ ಶಾಸನದೊಳಗ ಬರ್ತದ. ಆಕಿಗೇ ಇನ್ನೊಂದು ಕಡೆ ಹರಿಯಲದೇವಿ ಅಂತನೂ ಹೆಸರು ಬರ್ತದ. ಅಂದಾಗ ಹರಿಹರ ಮತ್ತು ಹರಿಯಲ ಇವೆರಡೂ ಒಂದೇ ಅರ್ಥದ ಎರಡು ಪದಗಳು ಅಂತ ಗೊತ್ತಾಯ್ತು. ಮತ್ತ ಕೆಲವು ಶಾಸನೊಳಗ ಅಕಿಗೆ ಹೆರೆಯಾಲದೇವಿ ಅಂತನೂ ಬರ್ತದ. ಹರಿಹರದೇವಿ, ಹರಿಯಲದೇವಿ, ಹೆರೆಯಾಲದೇವಿ ಅಂತೆ. ಮುಂದೆ ಹೆರೆಯಾಲ ಅಥವಾ ಹೆರೆಯಾಳದೇವಿ ಅಂತ ಬರ್ತದ. ಹೆರೆಯಾಳ ಅಂದ್ರ ಪೆರೆಯಾಳ ಅದು. ಅಂದ್ರ ಮೂಲರೂಪ ಪೆರೆಯಾಳ. ಪೆರೆ ಅಂದ್ರ ಶಿವನ ತಲೆಯೊಳಗ ಚಂದ್ರ ಏನದಾನಲ್ಲ ಅಂವಂಗ ಪೆರೆ ಅಂತಾರ. ಪೆರೆಯಾಳ ಅಂತಂದ್ರ ಶಿವ. ಅಂದ್ರ ಪೆರೆಯನ್ನು ಧರಿಸಿದ ಆಳ್-ಶಿವ. ಆ ಪೆರೆಯಾಳ ಹೋಗಿ, ಹೆರೆಯಾಳ ಆಯ್ತು. ಹೆರೆಯಾಳ ಹೋಗಿ ಹೆರೆಯಾಲ ಆಯ್ತು. ಹೆರೆಯಾಲ ಹೋಗಿ ಅದು ಹರಿಹರ ಅಂತ ಈ ರೂಪಕ್ಕ ಬಂದುಬಿಟ್ಟಿದೆ. ಅಂದ್ರೆ ಇದು ಹರಿಹರ ಅಲ್ಲ. ಇದಕ್ಕೆ ಶಿವನ ಹೆಸರೇ ಮೂಲ ಅಂತ ತಿಳೀತು. ಈ ರೀತಿ ಒಂದ್ ಹೆಸರನ್ನ ಇಟಗೊಂಡ್ರೂ ಸಹ ಅದರ ಮೂಲಕ ಒಂದು ಸಂಸ್ಕೃತಿ ಬಿಚ್ಚಿಕೊಳ್ತಾ ಹೋಗ್ತದೆ.

ಇನ್ನೂ ಒಂದು ಉದಾಹರಣೆ ಹೇಳಬೇಕಂತಂದ್ರ ಈ ಅಡ್ಡಹೆಸರಿನ ಬಗ್ಗೆ ನಾನು ತುಂಬಾ ಕುತೂಹಲ ಬೆಳೆಸಿಕೊಂಡಂಥ ವ್ಯಕ್ತಿ. ಈಗ ಡಾ. ಚಿದಾನಂದ ಮೂರ್ತಿ ಮತ್ತು ನನ್ನನ್ನ ಕರ್ನಾಟಕದಪ್ರಮುಖ ಸಂಶೋಧಕರು ಅಂತ ಜನಾ ಗಮನಿಸ್ತಾರ. ಅವರು ದಕ್ಷಿಣ ಕರ್ನಾಟಕದವರು, ನಾನು ಉತ್ತರ ಕರ್ನಾಟಕದವನು. ನಮ್ಮ ಇಬ್ಬರ ಹೆಸರನ್ನು ಇಟ್ಟುಕೊಳ್ಳುವ ವಿನ್ಯಾಸ ಅದ ಅಲ್ಲ, ಆ ವಿನ್ಯಾಸದೊಳಗ ನಮ್ಮ ಸಂಸ್ಕೃತಿ ಗೊತ್ತಾಗ್ತದ.

ಬಸವರಾಜ ಸಾದರ : ಹ್ಯಾಂಗದು? ವಿವರಿಸ್ತೀರಾ?

ಎಂ.ಎಂ. ಕಲಬುರ್ಗಿ : ನೋಡಿ ನಾನು ಎಂ. ಎಂ. ಕಲಬುರ್ಗಿ ಅವರು ಎಂ. ಚಿದಾನಂದಮೂರ್ತಿ. ಎಂ. ಅಂತನ್ನೂವಲ್ಲೆ ನನ್ನ ಹೆಸರನ್ನ ಸಣ್ಣದು ಮಾಡಿ ಕಲಬುರ್ಗಿ ಅನ್ನೂ ಕುಟುಂಬದ ಹೆಸರನ್ನ ದೊಡ್ಡದು ಮಾಡ್ಯಾರ. ಇಲ್ಲಿ ವ್ಯಕ್ತಿ ಅಪ್ರಧಾನ, ಕುಟುಂಬ ಪ್ರಧಾನ. ಚಿದಾನಂದಮೂರ್ತಿಯವರ ಹೆಸರಿನ ಹಿಂದಿರುವ ಎಂ. ಅಂದ್ರ ಮಠದ ಅಂತ. ಅಂದ್ರ ಅಲ್ಲಿ ಕುಟುಂಬವನ್ನು ಅಪ್ರಧಾನ ಮಾಡಿ, ಚಿದಾನಂದಮೂರ್ತಿ ಅನ್ನೋ ವ್ಯಕ್ತಿಯನ್ನ ಅವರು ಪ್ರಧಾನ ಮಾಡ್ಯಾರ. ಇದರಿಂದ ಏನು ತಿಳೀತದ ಅಂದ್ರೆ, ಅವರ್ದು ವ್ಯಕ್ತಿಪ್ರಧಾನ ಸಂಸ್ಕೃತಿ, ನಮ್ಮದು ಕುಟುಂಬಪ್ರಧಾನ ಸಂಸ್ಕೃತಿ. ಅವರದು ವ್ಯಷ್ಟಿ ಸಂಸ್ಕೃತಿ, ನಮ್ಮದು ಸಮಷ್ಟೀ ಸಂಸ್ಕೃತಿ. ಅವರದು ಶಿಷ್ಟ ಸಂಸ್ಕೃತಿ, ನಮ್ಮದು ಜನಪದ ಸಂಸ್ಕೃತಿ. ನಾವು ಹಳಬರು, ಅವರು ಹೊಸಬರು. ಅವರು ಸುಧಾರಣೆ ಆದವರು, ನಾವಿನ್ನೂ ಸುಧಾರಣೆ ಆಗದವರು ಅಂತ. ಅಂದ್ರ ಇದೆಲ್ಲಾ ನಮ್ಮ ಹೆಸರನ್ನ ಇಡುವಂಥಾ ಒಂದ್ ಪದ್ಧತಿಯೊಳಗ ನಮ್ಮ ಸಂಸ್ಕೃತಿಯ ರೂಪರೇಷೆಗಳಿರೂದನ್ನ ತಿಳಿಸ್ತದ.

ಬಸವರಾಜ ಸಾದರ : ಅಂದ್ರ ಇದೆಲ್ಲದರ ಹಿಂದ ಸಾಂಸ್ಕೃತಿಕವಾದ ದೊಡ್ಡ ಇತಿಹಾಸನ ಬಿಚ್ಚಿಕೊಳ್ತದ.

ಎಂ.ಎಂ. ಕಲಬುರ್ಗಿ : ಹೌದು ಹೌದು. ಅದನ್ನು ಸರಿಯಾಗಿ ಅಭ್ಯಾಸ ಮಾಡಿದ್ರ ನಮ್ಮ ಜನಾಂಗದ ವಿಚಾರಗಳು ಹ್ಯಾಗಿದ್ವು? ಬದುಕು ಹ್ಯಾಗಿತ್ತು? ಮತ್ತು ಅದರ ಐತಿಹಾಸಿಕ ವಿಕಾಸ ಹ್ಯಾಗೆ ಆಗ್ತಾ ಬಂತು ಅನ್ನುದೆಲ್ಲಾ ಗೊತ್ತಾಗ್ತವ. ಅದರ ಬಗ್ಗೆ ವೈಜ್ಞಾನಿಕವಾದ ಅಭ್ಯಾಸ ನಡೀಬೇಕಾಗೆದ.

ಬಸವರಾಜ ಸಾದರ : ಶಾಸನಗಳ ಕ್ಷೇತ್ರದಲ್ಲೂ ನೀವು ಬಾಳ ಕೆಲಸಾ ಮಾಡೀರಿ. ಕರ್ನಾಟಕ ಇತಿಹಾಸ ಸಂಪತ್ತಿನ ವೈಶಿಷ್ಟ್ಯದ ಬಗ್ಗೆ ಎರಡು ಮಾತು ಹೇಳ್ತೀರಾ?

ಎಂ.ಎಂ. ಕಲಬುರ್ಗಿ : ಕರ್ನಾಟಕದ ಶಾಸನ ಸಂಪತ್ತಿನ ವೈಶಿಷ್ಟ್ಯ ಅಂತಂದ್ರೆ, ಇಡೀ ಭಾರತದೊಳಗ ಕರ್ನಾಟಕದ ಶಾಸನಗಳಿಗೆ ಒಂದು ವಿಶಿಷ್ಟವಾದಂಥ ಸ್ಥಾನ ಅದ. ಸಂಖ್ಯಾದೃಷ್ಟಿಯಿಂದ ಸಂಸ್ಕೃತವನ್ನು ಬಿಟ್ಟರೆ ಎರಡನೆ ಸ್ಥಾನ ತಮಿಳಿಗದೆ, ಮೂರನೆಯ ಸ್ಥಾನ ಕರ್ನಾಟಕಕ್ಕಿದೆ. ಆದ್ರೆ ವಿಷಯದ ವೈವಿಧ್ಯ ಮತ್ತು ಅದರ ಘನತೆಯ ದೃಷ್ಟಿಯಿಂದ ನೋಡಿದ್ರೆ ಕರ್ನಾಟಕಕ್ಕೇ ಪ್ರಥಮ ಸ್ಥಾನ ಐತೆಂತ ಹೇಳಬೇಕು. ಅಂಥಾ ಶಾಸನ ಸಂಪತ್ತು ನಮ್ಮದು. ಸುಮಾರು ೨೫೦೦೦ ಶಾಸನಗಳು ನಮ್ಮಲ್ಲಿ ಅದಾವೆ. ಅವು ಬಾಳ ವಿಶಿಷ್ಟವಾದಂಥಾ ದಾರಿಯನ್ನ ತೋರಿಸ್ತಾವೆ. ಇತ್ತೀಚೆಗೆ ನನಗನಿಸಿದ್ದು ಅಂದ್ರ, ತಾಮ್ರಶಾಸನ ಮತ್ತು ಶಿಲಾಶಾಸನ ನಮ್ಮಲ್ಲದಾವ. ಮೊದಲ ಶಿಲಾಶಾಸನ ಹುಟ್ಟಿಕೊಂಡು ಬಂದ್ವು, ಆಮ್ಯಾಲ ತಾಮ್ರಶಾಸನ ಬಂದ್ವು, ಯಾಕ ತಾಮ್ರಶಾಸನ ಹುಟ್ಟಿದ್ದು? ಈ ವಿಚಾರವನ್ನ ನಾನು ಪ್ರಶ್ನೆಯಾಗಿ ಹಾಕ್ಕೊಂಡೆ. ನನಗೆ ಹೊಳದಂಥ ಒಂದು ಉತ್ತರ ಅಂತಂದ್ರೆ, ಎಲ್ಲಿ ದೇವಾಲಯ ಸಂಸ್ಕೃತಿ ಅದ ಅಲ್ಲಿ ಶಿಲಾಶಾಸನ ಇರ್ತಾವೆ, ಎಲ್ಲಿ ಅಗ್ರಹಾರ ಸಂಸ್ಕೃತಿ ಇರ್ತದೆ ಅಲ್ಲಿ ತಾಮ್ರಶಾಸನ ಇರ್ತಾವೆ ಅಂತ. ಯಾಕಂದ್ರೆ ದೇವಾಲಯ ಸಂಸ್ಕೃತಿ ಸಮಷ್ಟಿ ಸ್ವರೂಪದ್ದು. ಅಗ್ರಹಾರ ಸಂಸ್ಕೃತಿ ವ್ಯಷ್ಟಿಸ್ವರೂಪದ್ದು. ಅಲ್ಲಿ ವ್ಯಕ್ತಿಗಳಿಗೆ ಒಂದು ಊರನ್ನ ಕೊಟ್ಟಿರ್ತಾರೆ, ಆ ವ್ಯಕ್ತಿ ಏನ್ಮಾಡ್ತಾನಂದ್ರೆ, ತನಗೆ ರೆಕಾರ್ಡ ಬೇಕಂತ ತಿಳಕೊಂಡು ತನ್ನ ಮನ್ಯಾಗ ಇಟಗೊಳ್ಳಿಕ್ಕ ತಾಮ್ರಪಟ ನಿರ್ಮಾಣ ಮಾಡ್ತಾನ. ಅದಕ್ಕಾಗಿ ತಾಮ್ರಪಟ ಹುಟ್ಟಬೇಕಾಯ್ತು, ಅದನ್ನ ಒಳಗ ಇಟಗೊಂಡ ಬಿಟ್ಟಾ ಅಂವಾ. ದೇವಾಲಯ ಇಡೀ ಊರಿನ ಆಸ್ತಿ, ಅದಕ್ಕ ಕೊಟ್ಟಂಥಾ ದಾನ ದತ್ತಿ ಇಡೀ ಊರ್‍ಗೇ ಗೊತ್ತಾಗಬೇಕು, ಅದಕ್ಕಾಗಿ ಅದನ್ನ ಬಯಲಿಗಿಟ್ರು. ನಾನು ಈ ದೃಷ್ಟಿಯಿಂದ ಅಭ್ಯಾಸ ಮಾಡ್ತ ಹೋದೆ. ಆಗ ಎಲ್ಲೆಲ್ಲಿ ತಾಮ್ರ ಪಟ ಹೆಚ್ಚು ಸಿಗ್ತಾವ ಅನ್ನೂದನ್ನ ನೋಡಿದ್ರೆ ಅಲ್ಲಿ ಅಗ್ರಹಾರ ಸಂಸ್ಕೃತಿಗಳದಾವ ಅನ್ನೂದು ಗೊತ್ತಾಯ್ತು ಮತ್ತು ಎಲ್ಲೆಲ್ಲಿ ಶಿಲಾಶಾಸನಗಳು ಸಿಗ್ತಾವೆ ಅದು ದೇವಾಲಯ ಸಂಸ್ಕೃತಿ ಅಂತ ನನಗ ಗೊತ್ತಾಯ್ತು. ಹಿಂಗ ನಮ್ಮ ಶಾಸನಗಳ ಬೆಳವಣಿಗೆಯ ವಿಚಾರವನ್ನು ನಾವು ಹೇಳಬಹುದು. ಇನ್ನೂ ಒಂದಂದ್ರ, ನೋಡಿ ಹ್ಯಾಗದ ಅಂದ್ರ, ನಮ್ಮಲ್ಲಿ ದಾನ ಶಾಸನ ಮತ್ತು ವೀರಶಾಸನ ಅಂತದಾವ. ದಾನಶಾಸನ ಬಾಳ ದೊಡ್ಡವು ಅದಾವ, ಬಾಳ ಕಲಾತ್ಮಕ ಅದಾವ, ಬಾಳ ಸುಂದರವಾದ ಭಾಷೆ ಮತ್ತು ಸಾಹಿತ್ಯವನ್ನು ಅಲ್ಲೆ ಬೆಳಸ್ಯಾರ. ಆದರ ವೀರಶಾಸನ ಮಾತ್ರ ಸುಂದರ ಇಲ್ಲ, ಸಣ್ಣ ಸಣ್ಣ ಎರಡು ಮೂರು ವಾಕ್ಯಗಳು ಅಲ್ಲೆದಾವ. ಸುಮ್ನೆ ಒಂದೆರ್‍ಡು ಚಿತ್ರಾ ತೆಗದಾರೆ. ಇದು ಏನನ್ನ ತೋರಿಸ್ತದೆ ಅಂದ್ರೆ, ಈ ಮೇಲು ವರ್ಣದವರನ್ನ ಕುರಿತಿರುವಂಥಾವೆಲ್ಲಾ ಬಾಳ ಸಮೃದ್ಧವಾದಂಥ ಭಾಷೆಯನ್ನ, ಬಾಳ ವಿಪುಲವಾದಂಥ ಸಾಹಿತ್ಯಿಕ ಅಂಶಗಳನ್ನೊಳಗೊಂಡಂಥ ಶಾಸನದಾವೆ. ಈ ಹೋರಾಟ ಮಾಡಿ ಸಾಯುವ ಜನಾ ಏನೈತೆಲ್ಲಾ ಇವರಿಗೆ ಸಂಬಂಧಿಸಿದ್ವೆಲ್ಲಾ ತುಂಬಾ ಸಾಮಾನ್ಯ ಅದಾವೆ. ಅಂದ್ರೆ ಸಂಸ್ಕೃತಿಯೊಳಗ ವರ್ಣವ್ಯತ್ಯಾಸ ಹ್ಯಾಗದೆ ಅನ್ನೂದು ಈ ಶಾಸನದೊಳಗ ಕಂಡು ಬರ್ತದೆ.

ಬಸವರಾಜ ಸಾದರ : ತಮ್ಮ ಸಂಶೋಧನೆಯನ್ನ ಸಾಂಸ್ಕೃತಿಕ ಅಧ್ಯಯನ ಮತ್ತು ವಿಮರ್ಶೆ ಈ ಎರಡೂ ನೆಲೆಗಳಲ್ಲಿ ನಡೆಸಿದಂಥಾ, ನಾಡಿನ ಹೆಸರಾಂತ ಸಂಶೋಧಕ ಶಂಭಾ ಅವರೊಂದಿಗೆ ನಿಮ್ಮನ್ನು ನೀವು ಹೋಲಿಸಿಕೊಂಡು ನೋಡಿದಾಗ ನಿಮ್ಮಲ್ಲಿ ಉಂಟಾಗುವಂಥಾ ಭಾವನೆಗಳೇನು?

ಎಂ.ಎಂ. ಕಲಬುರ್ಗಿ : ಇದು ಬಾಳ ಮಹತ್ವಪೂರ್ಣವಾದಂಥ ಪ್ರಶ್ನೆ. ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದೊಳಗ, ಅದರ ಆರಂಭ ಕಾಲದೊಳಗ ಒಟ್ಟು ಸಾಹಿತ್ಯದೊಳಗ ಎರಡು

ಮಾದರಿಗಳು ಹುಟ್ಟಿಕೊಂಡ್ವು ಅಂತನ್ನಿಸ್ತದ. ಒಂದು ಧಾರವಾಡ ಮಾದರಿ, ಇನ್ನೊಂದು ಮೈಸೂರು ಮಾದರಿ ಅಂತ ಇದನ್ನು ಕರೆದಿದ್ದೇನೆ ನಾನು.

ಬಸವರಾಜ ಸಾದರ : ಅಂದ್ರೆ ಇದನ್ನ ಸಂಶೋಧನೆಯಲ್ಲೂ ಗುರುತಿಸ್ತೀರಾ?

ಎಂ.ಎಂ. ಕಲಬುರ್ಗಿ : ಹಾಂ. ಹೌದು. ಸೃಜನದೊಳಗ ಧಾರವಾಡ ಮಾದರಿಗೆ ಬೇಂದ್ರೆ ಆದರೆ, ಮೈಸೂರು ಮಾದರಿಗೆ ಕುವೆಂಪು. ಸಂಶೋಧನೆಯೊಳಗ ಧಾರವಾಡ ಮಾದರಿಗೆ ಶಂಬಾ ಜೋಶಿ ಆದರೆ, ಮೈಸೂರು ಮಾದರಿಗೆ ಆರ್. ನರಸಿಂಹಾಚಾರ್ ಅಂತ ನಾವು ಹೇಳ್ಬೇಕು. ಆದ್ರ ದುರ್ದೈವದ ಸಂಗತಿ ಅಂತಂದ್ರ ಸೃಜನದೊಳಗೂ ಬೇಂದ್ರೆ ತರುವಾಯ ಧಾರವಾಡ ಮಾದರಿಯನ್ನು ಯಾರೂ ಧಾರವಾಡದವರು ನಾವು ಮುಂದುವರೆಸಲಿಲ್ಲ. ಕಣವಿ ಮೊದಲಾದವರೆಲ್ಲಾ ಬೇಂದ್ರೆ ಮಾದರಿಯನ್ನು ಬಿಟ್ಟು ಒಂದು ರೀತಿ ಕುವೆಂಪು ಮಾದರೀನ ಮುಂದುವರೆಸಿದ್ರು ಅಂತ ನನ್ನ ಅಭಿಪ್ರಾಯ.

ಬಸವರಾಜ ಸಾದರ : ನಿಮ್ಮನ್ನೂ ಒಳಗೊಂಡಂಗ ಅಂತೀರಾ?

ಎಂ.ಎಂ. ಕಲಬುರ್ಗಿ : ನಾನು ಬರೂ ಹೊತ್ತಿಗೇ ಈ ಒಂದು ಮಾದರಿ ಪಲ್ಲಟ ಆಗಿಬಿಟ್ಟಿತ್ತು. ಅಕಸ್ಮಾತ್ ನಾನು ೧೫–೨೦ ವರ್ಷದೊಡ್ಡಾಂವಾಗಿದ್ರೆ ನಾನು ಶಂಬಾ ಮಾದರಿಯನ್ನೇ ಮುಂದುವರಸ್ತಿದ್ದೆ. ಆದ್ರೆ ನಾ ಬರೂದ್ರೊಳಗಾಗಿ ಶಂಬಾ ಮಾದರಿ ಅಲಕ್ಷಿತವಾಗಿ, ಬರೇ ಮೈಸೂರ ಮಾದರಿ ಹಬ್ಬಿಕೊಂಡು ಬಿಟ್ಟಿತ್ತಿಲ್ಲಿ. ನಾವು ಆ ಕಾಲದೊಳಗೆ ಇನ್ನೂ ಯುವಕರಿದ್ದೆವು. ನಾವೂ ಅದೇ ಮಾದರಿಯನ್ನ ಮುಂದುವರೆಸಿದ್ವಿ. ಆದರೆ ಇತ್ತೀಚಿನ ದಿನಗಳಲ್ಲಿ ನನಗ ಶಂಬಾ ಮಾದರಿಯ ಮಹತ್ವ ಗೊತ್ತಾಯ್ತು. ಅಂದ್ರ ಮೈಸೂರು ಮಾದರಿ, ಚರಿತ್ರೆ ಪ್ರಧಾನವಾದದ್ದು, ನಮ್ಮ ಮಾದರಿ ಸಂಸ್ಕೃತಿ ಪ್ರಧಾನವಾದದ್ದು.

ಬಸವರಾಜ ಸಾದರ : ಅಂದ್ರ, ಸಂಸ್ಕೃತಿಯ ಅಧ್ಯಯನಕ್ಕ ಈ ಸಂಶೋಧನೆಯಲ್ಲಿ ಹೆಚ್ಚು ಮಹತ್ವ ಐತಿ ಅಂದಂಗಾಯ್ತು.

ಎಂ.ಎಂ. ಕಲಬುರ್ಗಿ : ಹೌದು. ಮುಂದ ನಾನು ಸಾಹಿತ್ಯಕೃತಿಗಳ ಸಾಹಿತ್ಯೇತರ ಅಧ್ಯಯನ ಮತ್ತು ಜಾನಪದ ಅಧ್ಯಯನ ಮಾಡುವಾಗ ಏನಾಗಿಬಿಟ್ಟು ಅಂದ್ರೆ ಅಲ್ಲಿ ಸಂಸ್ಕೃತಿಯ ಅಧ್ಯಯನವೇ ಪ್ರಧಾನವಾದದ್ದರಿಂದ ಆಗ ಶಂಬಾ ಮಾದರಿಯೊಳಗೆ ಆದ್ರೆ ಅವರ ಸಂಸ್ಕೃತಿಯ ಅಧ್ಯಯನದ ರೀತಿ ಬೇರೆ ಅದೆ, ನನ್ನ ಸಂಸ್ಕೃತಿಯ ಅಧ್ಯಯನ ರೀತಿ ಬೇರೆ ಅದೆ ಆ ಮಾತು ಬೇರೆ. ಸಂಸ್ಕೃತಿಯ ಅಧ್ಯಯನವನ್ನು ಮಾಡ್ತಿದ್ದೇನೆ, ಆದರೂ ತುಂಬಾ ಮಹತ್ವದ ಮಾದರಿಯೊಂದನ್ನ ನಾವು ಕಳೆದುಕೊಂಡೆವು ಅಂತನ್ನೂವಂತಾ ಒಂದು ನೋವು ನನಗದ.

ಬಸವರಾಜ ಸಾದರ : ಡಾ ಕಲಬುರ್ಗಿಯರೆ ನೀವು ಅಧ್ಯಯನಕ್ಕೆ ತೊಡಗಿಕೊಂಡಿರುವಂಥ ಹಲವಾರು ಕ್ಷೇತ್ರಗಳನ್ನು ಗಮನಿಸಿದ್ರೆ ಅವು ಒಂದಕ್ಕೊಂದು ಎಲ್ಲೊ ಒಂದು ರೀತಿಯ ಆಂತರಿಕ ಸಂಬಂಧವನ್ನು ಇಟ್ಟುಕೊಂಡಂಥವು. ಬಹುಶಃ ಅಂತರ್ ಶಿಸ್ತೀಯ ಅಧ್ಯಯನಕ್ಕ ಒಂದು ಬಗೆಯ ಮಾದರಿ ಅನ್ನುವ ರೀತಿಯಲ್ಲಿ ನಿಮ್ಮ ಸಂಶೋಧನೆ ನಡೀತಿದೆ. ಈ ಅಂತರ್ ಶಿಸ್ತೀಯ ಅಧ್ಯಯನಕ್ಕೆ ಇವತ್ತಿನ ದಿನಗಳಲ್ಲಿ ಬಹಳ ಮಹತ್ವ ಬಂದಿದೆ. ಈ ಬಗೆಯ ಅಧ್ಯಯನದ ಬಗ್ಗೆ ಒಂದೆರಡು ಮಾತು ಹೇಳ್ತೀರಾ?

ಎಂ.ಎಂ. ಕಲಬುರ್ಗಿ : ಸಮಾಜದೊಳಗ ಯಾವುದೇ ಒಂದು ವಿಷಯ ಸ್ವತಂತ್ರವಾಗಿರೂದಿಲ್ಲ. ಒಂದಕ್ಕೊಂದು ಸಂಬಂಧ ಇದ್ದೇ ಇರ್ತದೆ. ಒಮ್ಮೊಮ್ಮೆ ಹೊರನೋಟಕ್ಕೆ ಸಂಬಂಧ ಕಾಣಿಸ್ತದೆ, ಮತ್ತೊಮ್ಮೆ ಆಂತರಿಕವಾದಂಥ ಸಂಬಂಧ ಇರ್ತದೆ. ಆದ್ರಿಂದ ಒಂದ್ ವಿಷಯವನ್ನ ಎತ್ತಿಕೊಂಡ್ರೆ ಅನೇಕ ವಿಷಯಗಳು ಅದಕ್ಕೆ ಸುತ್ತಿಕೊಂಡಿರ್ತವೆ. ಇದನ್ನು ನಾವು ಮೊದ್ಲು ತಿಳಕೋಬೇಕು. ಈ ದೃಷ್ಟಿಯಿಂದ ನಾನು ಒಂದು ಕಾವ್ಯವನ್ನು ಅಭ್ಯಾಸ ಮಾಡ್ಲಿಕ್ಕೆ ಹೊರಟ್ರೆ, ಅಥವಾ ಸಂಶೋಧನೆ ಮಾಡ್ಲಿಕ್ಕೆ ಹೊರಟ್ರೆ ಅದರ ಅನೇಕ ಮೌಲ್ಯಗಳು, ಅದರ ಆದರ್ಶಗಳು, ಅದರ ಜಾನಪದ ಅಂಶಗಳು, ಅದರ ಛಂದಸ್ಸು, ಅದರ ಅಲಂಕಾರ ಎಲ್ಲಾ ನನಗ ತೊಡಕಾಗಿ ಕಾಣಿಸ್ತಾವೆ. ಅದ್ರಿಂದೆ ಸಂಶೋಧನೆಯನ್ನು ನಾನು ಬೇರೆ ಬೇರೆ ದೃಷ್ಟಿಕೊನದಿಂದ ಅಭ್ಯಾಸ ಮಾಡಬೇಕಾಗ್ತದೆ. ಈಗ ಉದಾಹರಣೆಗೆ ಹೇಳೂದಂತಂದ್ರ, ಪಂಪಭಾರತದ ಒಂದು ಪ್ರಸಿದ್ಧವಾದ ಪದ್ಯ 'ಒತ್ತಿ ತರುಂಬಿ'ನಿಂದ ರಿಪುಭೂಜ ಸಮಾಜದ ಬೇರ್ಗಳಂ ನಭಕ್ಕೆತ್ತದೆ' ಅಂತನ್ನೂದು. ಈ ಪದ್ಯವನ್ನು ನಾನು ಎಷ್ಟೋ ವರ್ಷದಿಂದ ಕಲಿಸ್ತಾ ಬಂದಿದ್ದೇನೆ. ಆದ್ರ ಒಂದು ದಿವಸ ಏನಾತು ಅಂದ್ರೆ, ನಮ್ಮ ಮನಿಯೊಳಗ ಮುಂಜಾನೆ ನಮ್ಮ ಆಳಿಗೆ ಒಂದು ಸಸಿಯನ್ನ ಒಂದ ಕಡೀಕ ಹಚ್ಲಿಕ್ಕೆ ಹೇಳಿದ್ದೆ, ಅಂವಾ ಮತ್ತೊಂದು ಕಡೆ ಹಚ್ಚಿದ್ದ ಅದನ್ನ. ನಾನದನ್ನ ಕುರುಪಿ ತಗೊಂಡು ಸಸಿ ಕಿತ್ತಿ ಎತ್ತಿ ಇಡತಿದ್ದೆ. ನನ್ನ ಮಗಾ ಓಡಿ ಬಂದು ಅದರ ಬೇರನ್ನ ಎತ್ತಿ ಹಿಡಿದಾಗ, ನಾನು ಯಾಕಂತ ಕೇಳಿದ್ಯಾ. ಅದಕ್ಕ ಅಂವಾ ಇಲ್ಲ ಇದನ್ನ ಮುಗಿಲೀಗೆ ತೋರಿಸಿದ್ರೆ ಹತ್ತುದಿಲ್ಲದು– ಅಂತ್ಹೇಳಿದ. ಇದು ಜಾನಪದ ನಂಬಿಕೆ. ಹಂಗಾದ್ರ ಪಂಪಭಾರತದೊಳಗೆ ಏನ್ ಬರ್ತದಲ್ಲಾ ಆ ಪದ್ಯ, ಅದರೊಳಗೆ ವೈರಿ ಅರಸರೆಂಬ ವೃಕ್ಷದ ಬೇರನ್ನೇ ಮುಗಿಲಿಗೆ ತೋರಿಸಬೇಕು ಅನ್ನೂವಾಗ, ಆ ಮುಗಿಲನ್ನ ಕವಿ ಯಾಕ ಇಟ್ಟಾ ಅಂತ್ಹೇಳಿದ್ರ, ಮುಗಿಲೀಗೆ ತೋರಿಸಿದ್ರ ಬೇರು ಹತ್ತುದಿಲ್ಲಾ ಅಂತನ್ನೂದು ಒಂದು ಜಾನಪದ ನಂಬಿಗಿ ಅಂತ. ಆ ನಂಬಿಕೆಯ ಅರ್ಥಾ ಹೇಳದೇ ಹೋದ್ರೆ ಪಂಪನ ಭಾವನೆಯನ್ನು ಸರಿಯಾಗಿ ಬಿಚ್ಚಿದಂತೆ ಆಗೂದಿಲ್ಲ. ಹಿಂಗ ಅನೇಕ ವಿಷಯಗಳು ಇದರೊಳಗ ತೊಡಗಿಕೊಂಡಿರುವ ಕಾರಣವಾಗಿ ಅಂತರ್ ಶಿಸ್ತೀಯವಾಗಿಯೂ ನಾವು ಅಭ್ಯಾಸ ಮಾಡಬೇಕಾಗ್ತದ.

ಬಸವರಾಜ ಸಾದರ : ಇಡೀ ಕನ್ನಡ ಸಾಹಿತ್ಯ ಪರಂಪರೆಯನ್ನು ಒಟ್ಟಾಗಿ ಅವಲೋಕಿಸಿದರೆ, ಈ ಸಾಹಿತ್ಯದಲ್ಲಿ ಒಂದೋ ನಾಯಕರ ಅನ್ನದ ಋಣ ತೀರಿಸೋದು ಇಲ್ಲಾ ಧಾರ್ಮಿಕ ಕ್ಷೇತ್ರದ ವ್ಯಕ್ತಿಗಳನ್ನು ಪವಾಡ ಪುರುಷರನ್ನಾಗಿ ಚಿತ್ರಿಸೋದು ಇವೆರಡೇ ಪ್ರಮುಖವಾಗಿ ಕಂಡುಬರುವ ಒಲವುಗಳು. ನಿಮ್ಮ ಸಂಶೋಧನ ಮತ್ತು ವಿಮರ್ಶನ ಪ್ರಜ್ಞೆ ಈ ಮಾತನ್ನು ಒಪ್ಪುತದೆಯೋ ಹೇಗೆ?

ಎಂ.ಎಂ. ಕಲಬುರ್ಗಿ : ತಕ್ಕಮಟ್ಟಿಗೆ ಒಪ್ಪಿಕೊಳ್ತದೆ. ಮೊದ್ಲೇದಾಗಿ, ಈ ರಾಜರನ್ನ ಓಲೈಸುವಂಥ ಕವಿಗಳದಾರಲ್ಲ, ಅವರು ತಮ್ಮಕಾವ್ಯದ ವಸ್ತುವಾಗಿ ರಾಜರನ್ನು ಆರಿಸಿಕೊಂಡಿದ್ದು ನನ್ನ ಮನಸ್ಸಿಗೆ ಬಂದಿಲ್ಲ. ಪಂಪನ ಬಗ್ಗೆ ಬಾಳ ಗೌರವ ನನಗ, ಆದ್ರ ಅರಿಕೇಸರಿಯನ್ನ ತನ್ನಕಥಾನಾಯಕನ್ನ ಮಾಡಿಕೊಂಡಿದ್ದು ಸರಿಯಾದ ಕ್ರಮ ಅಂತ ನನಗನಿಸೂದಿಲ್ಲ. ಅದಕ್ಕಾಗಿ ಆ ಕಾಲದೊಳಗ ಜನ್ರು ಪಂಪನನ್ನ ಪ್ರಶ್ನಿಸಿರಬೇಕು, ಇದೇನು ಮಾಡಿಬಿಟ್ಟೆ ನೀನು? ಕಾವ್ಯ ತುಂಬಾ ಪವಿತ್ರವಾದಂಥ ಮಾಧ್ಯಮ, ಅದನ್ನ ಒಬ್ಬ ಸಾಮಂತನನ್ನು ಕಥಾನಾಯಕನಿಗಾಗಿ ಬಳಸೋದು ಎಷ್ಟರ ಮಟ್ಟಿಗೆ ಸರಿ, ಅಂತ್ಹೇಳಿ. ಅದಕ್ಕ ಅಂವಾ ಹೇಳ್ತಾನ "ಇದಾವ ದೋಷಮೊ" ಇದೇನು ದೋಷ ಅಂತ. ಅಂದ್ರೆ ಸಮರ್ಥನೆ ಮಾಡಿಕೊಳ್ಳೋ ರೀತಿ ಇದು. ಮತ್ತ ಇನ್ನೊಂದೇನಾಗ್ತದ ಅಂದ್ರ ಒಂದ ಕಾಲದೊಳಗ ದೊಡ್ಡ ಕವಿಗಳು ಮಾಡಿದಂಥಾ ದಾರೀನ ಮುಂದಿನವರು ಅನುಸರಿಸ್ಲಿಲ್ಲ ಅಂದ್ರ ಅವರು ಅಪಹಾಸ್ಯಕ್ಕ

ಗುರಿಯಾಗ್ತಾರ. ಅದಕ್ಕಾಗಿ ಆ ಕಾಲದವರು ಅದನ್ನ ಮುಂದುವರೆಸಿದ್ರು. ಪಂಪನಂತೆ ರನ್ನ, ಪೊನ್ನ ಹಿಂಗ. ಆದ್ರ ಅರಿಕೇಸರಿಯನ್ನು ಅರ್ಜುನನ ಕೂಡ ಹೋಲಿಸಿದ್ದು ಸರಿಯಾದಂಥ ಕ್ರಮ ಅಂತ ನನಗನಿಸಿಲ್ಲ. ಅದನ್ನ ಮುಂದ ಹನ್ನೊಂದನೆಯ ಶತಮಾನದೊಳಗೇ ನಾಗಚಂದ್ರ ಪ್ರಶ್ನೆ ಮಾಡ್ತಾನೆ. ನಾಗಚಂದ್ರನನ್ನ ಅಭಿನವಪಂಪ ಅನ್ತೇವೆ. ಅಂದ್ರೆ ಅಂವಾ ಪಂಪನ ಶಿಷ್ಯ ಅಂತ ತಿಳಿದಿದ್ವಿ ಇಲ್ಲೀತನಕಾ ನಾವು. ಆದ್ರ ಅಂವಾ ಪಂಪನ ಶಿಷ್ಯ ಅಲ್ಲ, ಪಂಪನನ್ನ ಪ್ರತಿಭಟಿಸಿದಂವಾ, ಅಭಿನವ ಅಂತ, ಈಗ ನೋಡಿರಿ ಅಂಬೇಡ್ಕರ ಅವರಿಗೆ ಅಭಿನವ ಮನು ಅಂತಾರಲ್ಲ, ಅದರರ್ಥ ಮನುವನ್ನ ಮುಂದುವರಿಸಿದವರು ಅಂತಲ್ಲ; ಮನುವನ್ನು ಪ್ರತಿಭಟಿಸಿದವರು ಅಂತ ಅರ್ಥ. ಆ ಅರ್ಥದೊಳಗ ನಾಗಚಂದ್ರ ಏನಂತಾನೆ ಅಂದ್ರೆ, 'ನಾಯಕನನ್ಯನಾಗೆ ಕೃತಿ ವಿಶ್ರುತಮಪ್ಪುದು', 'ಉದಾತ್ತ ರಾಘವಂ ನಾಯಕನಾಗಬೇಕು' ಅಂತ. ಅನ್ಯ ವ್ಯಕ್ತಿಗಳು ಅಂದ್ರೆ ಸಾಮಾನ್ಯ ವ್ಯಕ್ತಿಗಳು ಸಾಹಿತ್ಯಕೃತಿಯ ನಾಯಕರಾಗಬಾರದು, ದೊಡ್ಡ ವ್ಯಕ್ತಿಗಳೇ ನಾಯಕರಾಗಬೇಕು ಅಂತ. ಇದನ್ನ ನೊಡಿಕೊಂಡಾಗ, ಮುಂದ ಹರಿಹರ, ರಾಘವಾಂಕರು ಸ್ಪಷ್ಟವಾಗಿ ಮನುಜರ ಮೇಲೆ, ಸಾವವರ ಮೇಲೆ ಕನಿಷ್ಠರ ಮೇಲೆ ಕಾವ್ಯ ಬರೀಬಾರದು ಅನ್ನುವಂಥಾದ್ದನ್ನ ಹೇಳಿದ್ರು. ಅಂದ್ರೆ ಅವರ ಪ್ರಕಾರ ಇದು ಭಾಷೆಯ ದುರ್ಬಳಕೆ. ಸಾಮಾನ್ಯರನ್ನ ಕುರಿತು ನಾವು ಭಾಷೆಯನ್ನ ಬಳಸೂದದ ಅಲ್ಲಾ, ಇದು ಮಾತಿನ ಮಾಲಿನ್ಯ. ಅದಕ್ಕ ಲಿಂಗಾಯತ ಕವಿಗಳು ಬಂದು ಏನು ಮಾಡಿದರಂದ್ರ ಮಾತಿನ ಮಾಲಿನ್ಯವನ್ನು ಅವ್ರು ದೂರ ಮಾಡಿದ್ರು. ಮಾತನ್ನ ಜಟಿಲವಾಗಿ ಬೆಳಸೂದು ಒಂದು ಕ್ರಮಾ ಇತ್ತು. ಅದನ್ನ ಸರಳವಾಗಿ ಬಳಸಬೇಕಂತಂದ್ರು ಇದು ಒಂದು. ಮಾತನ್ನೇ ಅಪವಿತ್ರವಾಗಿ ಬಳಸುವ ಕ್ರಮಾ ಇನ್ನೊಂದು. ಅದಕ್ಕಾಗೇ ಅವರು 'ಮಾತೆಂಬುದು ಜ್ಯೋತಿರ್ಲಿಂಗ' ಅಂತನ್ನೂ ಮಾತನ್ನ ಹೇಳಬೇಕಾಯ್ತು. ಹಿಂಗ್ ಹೇಳಿದ ಒಂದು ಚಳುವಳಿ ಅದ ಅಲ್ಲಾ, ಇದು ಈ ನಾಯಕನ ದೃಷ್ಟಿಯಿಂದ ಮತ್ತು ಕಾವ್ಯವಸ್ತುವಿನ ದೃಷ್ಟಿಯಿಂದ ಬಾಳ ದೊಡ್ಡ ಚಳುವಳಿ ಮಾಡಿತು ಸರಿ, ಆದ್ರ ಬರಬರುತ್ತ ಏನಾಗಿಬಿಟ್ಟಿತು, ಇದೂ ಒಂದು ರೀತಿ ಪವಾಡ ಮೊದಲಾದವುಗಳನ್ನು ಹೇಳುವುದಕ್ಕೆ ತೊಡಗಿದ್ದರಿಂದ ಇದಕ್ಕೂ ಒಂದು ರೀತಿಯ ದೋಷ ತಗುಲಿತು.

ಬಸವರಾಜ ಸಾದರ : ನಾನು ಅದನ್ನೇ ಕೇಳುವವನಿದ್ದೆ. ಈ ಮಾರ್ಗದ ಹರಿಹರ ಕೂಡಾ ಅದೇ ದಾರಿಯನ್ನ ಹಿಡಿದ್ನಲ್ಲಾ ಅಂತ.

ಎಂ.ಎಂ. ಕಲಬುರ್ಗಿ : ಹಾಂ. ಹಾಂ.ಹಾಂ. ಹರಿಹರ ಆ ಮಾರ್ಗವನ್ನು ಅನುಸರಿಸಿಲ್ಲ. ನೋಡಿ ಮಾದಾರ ಚೆನ್ನಯ್ಯನ್ನ ಅಂವಾ ಕಥಾನಾಯಕನನ್ನ ಮಾಡ್ಕೊಳ್ತಾನಂತಂದ್ರ ಅಂವಂದು ಬ್ಯಾರೇ ಮಾರ್ಗ.

ಬಸವರಾಜ ಸಾದರ : ಅದೇನೋ ಸರಿ. ಅಂಥಾ ಕೆಳವರ್ಗದ ವ್ಯಕ್ತಿಯನ್ನು ಕಥಾನಾಯಕನನ್ನಾಗಿ ಇಟ್ಕೊಂಡಿರಬಹುದು. ಆದ್ರ ಅವರನ್ನೆಲ್ಲಾ ಪವಾಡ ಪುರುಷನ್ನಾಗಿ ಚಿತ್ರಿಸಿದ್ದಿದೆಯಲ್ಲ?

ಎಂ.ಎಂ. ಕಲಬುರ್ಗಿ : ಅದು ಬರೀ ಪವಾಡವಲ್ಲ, ಪವಾಡದ ಹಿಂದೆ, ಆ ಪವಾಡವನ್ನು ಅರ್ಥೈಸುವ ರೀತಿಗಳದಾವ. ನಾವು ಅದು ಪವಾಡ ಅಂದ್ರ ಪವಾಡಂತ ಇಟ್ಕೊಳ್ಳಬಾರ್ದು. ಆ ಪವಾಡದ ಹಿಂದೆ ಒಂದು ಸಿದ್ಧಾಂತ ಇರ್ತದೆ, ಒಂದುಮೌಲ್ಯ ಇರ್ತದೆ. ಅದನ್ನ ಜನಕ್ಕ ತಿಳಿಸುವ ರೀತಿ ಪವಾಡದ ರೂಪದಲ್ಲಿ ಇರ್ತಿತ್ತು. ಆದ್ರ ಆ ಪವಾಡವನ್ನು ಪವಾಡ ಅಂತ ತಿಳಕೊಳ್ಳದೆ ಅದನ್ನ ಒಡದು ನೋಡಬೇಕು. ಈಗ ಒಂದು ಕೇತಕಿ ಹೂವಿನ ಪ್ರಸಂಗ ಬರ್ತದೆ. ಆಸ್ಥಾನದೊಳಗ ಒಬ್ಬ ಕೇತಕಿ

ಹೂವನ್ನ ತಂದುಕೊಡ್ತಾನ. ಬಸವಣ್ಣ ಅದನ್ನ ಲಿಂಗಕ್ಕ ಅರ್ಪಿಸಿಕೊಂಡಾ ಅಂತ ಬರ್ತದ. ಆಗ ಕೇತಕಿ ಹೂವು ದೇವರಿಗೆ ಅರ್ಪಣಾ ಆಗೂದಿಲ್ಲ ಅಂತ ವಾದಾ ಮಾಡ್ತಾರ. ಬಸವಣ್ಣ ಅಂತಾನ, ಭಕ್ತಿಯಿಂದ ಕೊಟ್ರ ಎಲ್ಲಾ ಆಗ್ತದ ಅಂತ. ಅಂದ್ರ ಹೂವಿನೊಳಗೂ ಆಗ ಸ್ಪೃಶ್ಯಾಸ್ಪೃಶ್ಯವನ್ನ ತಂದಿದ್ರು, ಅದನ್ನ ಬಸವಣ್ಣ ನಿರಾಕರಿಸ್ತಾನ. ಈ ರೀತಿ ಪವಾಡಗಳನ್ನ ಪವಾಡ ಅಂತ ತಿಳೀಲಾರ್ದೆ ಅವುಗಳ ಹಿಂದಿರುವಂತಾ ಅರ್ಥವನ್ನ ಆಳವಾಗಿ ಅಭ್ಯಾಸ ಮಾಡಬೇಕು.

ಬಸವರಾಜ ಸಾದರ : ಇನ್ನ ನಿಮ್ಮ ಸೃಜನಶೀಲ ಸಾಹಿತ್ಯದ ಕಡೆ ಬರೋಣ. ಇತ್ತೀಚೆಗೆ ನೀವು 'ನೀರು ನೀರಡಿಸಿತ್ತು' ಅನ್ನುವಂಥ ಕವನ ಸಂಕಲನವನ್ನು ತಂದೀರಿ. ಕಳೆದ ಎರಡು ವರ್ಷಗಳ ಹಿಂದೆ 'ಕೆಟ್ಟಿತ್ತು ಕಲ್ಯಾಣ' ಅನ್ನೋ ನಾಟಕವನ್ನ ಪ್ರಕಟಿಸಿದ್ರಿ. ಈ ಎರಡನ್ನೂ ಗಮನಿಸಿದ ಕನ್ನಡ ವಿಮರ್ಶಾಲೋಕ, ಕಲಬುರ್ಗಿಯವರು ತಾವೂ ಸೃಜನಶೀಲ ಬರಹಗಾರರು ಅನ್ನೋದನ್ನ ಸಾಬೀತು ಮಾಡ್ಕೊಳ್ಳಿಕ್ಕೆ ಇಂಥಾ ಕೃತಿಗಳನ್ನ ತಂದ್ರು ಅನ್ನುವಂಥಾ ಮಾತನ್ನ ಹೇಳ್ತದೆ. ನಿಮ್ಮ ಪ್ರತಿಕ್ರಿಯೆ ಏನಿದಕ್ಕೆ?

ಎಂ.ಎಂ. ಕಲಬುರ್ಗಿ : ನೋಡ್ರಿ, ನನ್ನ ನಾಟಕವನ್ನ ಮತ್ತು ನನ್ನ ಕಾವ್ಯವನ್ನ ಸರಿಯಾಗಿ ಓದದೆ ಮಾಡಿದಂಥಾ ಮತ್ತು ಆಡಿದಂಥಾ ಮಾತಿದು ಅಂತನ್ನಿಸ್ತದ. ನಾನು ಆರಂಭದಲ್ಲೇ ಹೇಳೇನಿ, ಮೂಲತಃ ನನ್ನದು ಸೃಜನಶೀಲ ಮನೋಧರ್ಮ ಅಂತ. ಮತ್ತ ನಾನು ಈ ಕಾವ್ಯ ಮತ್ತು ನಾಟಕ ಬರಿಯೂದನ್ನ ಇವತ್ತ ಸುರೂ ಮಾಡಿದ್ದಲ್ಲ. ನಾನು ಯುವಕನಾಗಿದ್ದಾಗಲೇ ಪದ್ಯಗಳನ್ನ ಬರೀತಾ ಇದ್ದೆ, ಅಲ್ಲಲ್ಲಿ ಒಂದಿಷ್ಟು ಪ್ರಕಟಾನೂ ಮಾಡಿದ್ದೆ. ಆದ್ರ ಈ ಸಂಶೋಧನೆಯ ಗದ್ದಲ, ಇದರ ತನ್ಮಯತೆ, ಗಾಢವಾದ ತೊಡಗುವಿಕೆ ಇದೆಲ್ಲದರೊಳಗ ಪುಸ್ತಕ ರೂಪದಲ್ಲಿ ಅವನ್ನ ತರಾಕ ಆಗಿರ್ಲಿಲ್ಲ. ಆದ್ರ ಒಂದ್ ಮಾತು ಹೇಳ್ತಿನಿ, ನನ್ನ ಕವನಗಳಲ್ಲಿ ಪ್ರಾಮಾಣಿಕವಾದಂಥ ತುಡಿತಗಳದಾವ. ಅದನ್ನ ಅರ್ಥಾ ಮಾಡಿಕೊಂಡವ್ರು ಬಹುಶಃ ಹಿಂಗ ಮಾತಾಡಲಾರರು ಅಂತ ಅನಸ್ತದ. ನನ್ನ ಬರವಣಿಗೆಯೊಳಗ ಸೃಜನಶೀಲತೆ ಸ್ಪಷ್ಟವಾಗಿ ಅದ. ಆದ್ರೆ ನಾನೂ ಒಬ್ಬ ಸೃಜನಶೀಲನಾಗಿ ಉಳೀಬೇಕಂತ್ಹೇಳಿ ಆ ಛಲದಿಂದ ಬರದದ್ದಂತೂ ಅಲ್ಲವೇ ಅಲ್ಲ. ನನಗ ಹಂಗ ಬರೀಲಿಕ್ಕೇ ಬರೂದುಲ್ಲ. ಮತ್ತೆ ಯಾವುದನ್ನೇ ಬರೆದ್ರೂ ಸಹ ನನ್ನೊಳಗೆ ತುಡಿತ, ಒತ್ತಡ ಇರದೇ ನಾನು ಏನೂ ಬರಿಯೂದಿಲ್ಲ.

ಬಸವರಾಜ ಸಾದರ : ಡಾ. ಕಲಬುರ್ಗಿಯವರೆ ಒಟ್ಟಾರೆಯಾಗಿ ನಿಮ್ಮ ವ್ಯಕ್ತಿತ್ವ ಮತ್ತು ಸಾಧನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಿಮ್ಮಲ್ಲಿ ಎಲ್ಲೋ ಒಂದು ರೀತಿಯ ಅತೃಪ್ತಿಯ ಅಲೆ ಪ್ರಬಲ ಆಗಿರುವಂಗ ಕಾಣಿಸ್ತದೆ. ಇದನ್ನ ನೀವು ಒಪ್ತೀರಾ?

ಎಂ.ಎಂ. ಕಲಬುರ್ಗಿ : ಒಪ್ತೇನೆ. ಖಂಡಿತ ಒಪ್ತೇನೆ. ನನಗ ತೃಪ್ತಿ ಅನ್ನೂದ ಇಲ್ಲಾ. ನಾನೇನು ನಿರೀಕ್ಷೆ ಮಾಡಿ ಶಿಕ್ಷಣ ಕ್ಷೇತ್ರಕ್ಕ ಪ್ರವೇಶ ಮಾಡಿದೆ, ಆ ನಿರೀಕ್ಷೆ ವಿಫಲ ಆಯ್ತು ಅಂತ ನನಗನಿಸ್ತದ. ನಾನು ಒಂದು ಒಳ್ಳೆಯ ಪರಿಸರ ನಿರ್ಮಾಣವಾಗಬೇಕು, ಆ ಒಳ್ಳೆಯ ಪರಿಸರಕ್ಕ ನಾನೂ ನನ್ನ ಕಾಂಟ್ರಿಬ್ಯೂಶನ್ ಕೊಡಬೇಕು ಅನ್ನುವಂಥಾ ಮನೋಧರ್ಮ ಇಟ್ಕೊಂಡಿದ್ದಂಥಂವಾ. ಆದ್ರ ನನ್ನ ಒಂದು ಸ್ಥಿತಿ ಹ್ಯಾಗಾಯ್ತು ಅಂದ್ರೆ, ಪಾಂಡವರ ಮಧ್ಯದೊಳಗ ಬೆಳೆಯಬೇಕಾದ ಕರ್ಣ ಎಲ್ಲೊ ಬೆಳದಾ ಅಂತಂತಾರಲ್ಲ ಹಂಗಾಯ್ತು. ಆದರೂ ಅದನ್ನ ಮರಿಯೂ ಸಂಬಂಧ ನಾನು ಹೆಚ್ಚು ಹೆಚ್ಚು ಸಂಶೋಧನೆ ಮತ್ತು ಬರ್ಯೂದು ಓದೂದು ಮಾಡಬೇಕಾಯ್ತು. ನಾ ಯಾಕ ಹೆಚ್ಚು ಬರದ್ಯಾ

ಅಂತಂದ್ರ ನನ್ನ ನೋವುಗಳನ್ನ ಮರೀಲಾಕ ಅಂತ ಹೇಳ್ತೇನಿ. ನನಗ ಒಳ್ಳೇ ಕನಸುಗಳಿದ್ವು. ನನ್ನ ವಿದ್ಯಾರ್ಥಿ ಬೆಳೆಸಬೇಕು ಅಂತ ವಿಚಾರ ಇತ್ತು. ನನ್ನ ವಿದ್ಯಾರ್ಥಿಗಳು, ನಾನು ಯಾವಾಗ್ಲೂ ಕ್ಲಾಸಿನೊಳಗ ಹೇಳೂವಂಗ, ಇಲ್ಲಿಂದ ಹೊರಗ ಹೋಗೂ ವಿದ್ಯಾರ್ಥಿ ಕವಿ ಹೃದಯದಂವಾ ಕವಿಯಾಗಿ ಹೋಗಬೇಕು, ವಿಮರ್ಶಾ ಹೃದಯದಂವಾ ವಿಮರ್ಶಕನಾಗಿ ಹೊರಗ ಹೋಗ್ಬೇಕು, ಸಂಶೋಧನೆ ಮನೋಧರ್ಮದಂವಾ ಸಂಶೋಧಕನಾಗಿ ಹೊರಗ ಹೋಗ್ಬೇಕು, ನಾಟಕದೊಳಗ ಬಲ್ಲಿದವ ನಾಟಕಕಾರನಾಗಿ ಹೊರಗ ಹೋಗ್ಬೇಕು ಅಂತ ನನ್ನ ಕನಸಿತ್ತು. ಆದ್ರ ನಮ್ಮ ಪಠ್ಯ ಕ್ರಮದೊಳಗ ಇದ್ಯಾವುದಕ್ಕೂ ಅವಕಾಶ ಇಲ್ಲ. ಆದ್ದರಿಂದ ಎಲ್ಲೀವರೆಗೆ ಅಪ್ಲೈಡದಂಥ ಒಂದು ಬೋಧನಾ ಕ್ರಮವನ್ನ ನಾವು ತರೂದಿಲ್ಲಾ, ಅಲ್ಲಿಯವರೆಗೂ ನಮ್ಮ ಬೋಧನೆ ಕೇವಲ ಪರೀಕ್ಷೆಯ ಮಾರ್ಕ್ಸ್ ತೆಗೆದುಕೊಳ್ಳಲಿಕ್ಕೆ ಮಾತ್ರ ಸೀಮಿತ ಆಗ್ತದೆ. ಇದೊಂದು ಬಾಳ ದೊಡ್ಡ ಅತೃಪ್ತಿ ನನಗದ. ಇದೂ ಸಾಧ್ಯ ಆಗಿ, ನನ್ನ ವಿದ್ಯಾರ್ಥಿಗಳೆಲ್ಲಾ ಸರಿಯಾಗಿ ಅವರು ಪ್ರಕಟ ಆಗಿ, ತಮ್ಮ ಬರವಣಿಗೆಯನ್ನ ಮುಂದುವರೆಸಿದ್ರ ನನಗ ಬಾಳ ಸಂತೋಷವಾಗ್ತಾ ಇತ್ತು. ಆದ್ರ ನಾನು ಎಷ್ಟೋ ಸಲ ಹೇಳ್ತಿರ್ತೀನಿ ನಾನು ಕಾವ್ಯ ಕಲಿಸಿಯೂ ಒಬ್ಬ ಕವಿ ಹುಟ್ಟಲಿಲ್ಲ. ನಾಟಕ ಕಲಿಸಿಯೂ ಒಬ್ಬ ನಾಟಕಕಾರ ಹುಟ್ಟಲಿಲ್ಲ ಅಂತ. ಅದು ನಮ್ಮ ಕಲಿಸೂ ಪದ್ಧತಿಯೊಳಗ ತಪ್ಪದ ಅಂತಲ್ಲಾ, ನಮ್ಮ ಶಿಕ್ಷಣ ಪದ್ಧತಿಯೊಳಗ ತಪ್ಪದ.

ಬಸವರಾಜ ಸಾದರ : ಅಂದ್ರ Application of Knowledge to the life ಅನ್ನೂದು ಈ ಶಿಕ್ಷಣ ವ್ಯವಸ್ಥೆಯಲ್ಲಿ ಇಲ್ಲ ಅಂತ ನಿಮ್ಮ ವಿಚಾರ.

ಎಂ.ಎಂ. ಕಲಬುರ್ಗಿ : ಹೌದು ಅಲ್ಲಿ ತಪ್ಪದ. ಅದನ್ನ ಏನಾದ್ರೂ ಮಾಡಿ ನಾನು ಕನ್ನಡ ಅಧ್ಯಯನ ಸಂಸ್ಥೆಯೊಳಗ ತರಬೇಕಂತ ಬಾಳ ಪ್ರಯತ್ನ ಮಾಡ್ದೆ. ಆದ್ರ ನನಗ ಅದು ಆಗಲಿಲ್ಲ. ಇದಕ್ಕಾಗಿ ನನಗ ತುಂಬಾ ನೋವದ.

ಬಸವರಾಜ ಸಾದರ : ನಿಮ್ಮ ಸಂಶೋಧನ ಮಾರ್ಗದ ಮುಂದಿನ ಹೆಜ್ಜೆಗಳು....

ಎಂ.ಎಂ. ಕಲಬುರ್ಗಿ : ಸಂಸ್ಕೃತಿ ಪ್ರಧಾನವಾದಂಥಾ ಸಂಶೋಧನೆಯ ಕಡೆ ಇನ್ನು ಮೇಲೆ ಹೆಚ್ಚು ಒಲವು ತೋರಿಸಬೇಕು. ಆದ್ರ ಚರಿತ್ರೆಯನ್ನ ಕಟ್ಟಲಾರದೆ ಸಂಸ್ಕೃತಿಯ ಬಗ್ಗೆ ಹೇಳ್ಲಿಕ್ಕೆ ಬರೂದಿಲ್ಲ. ಅಂದ್ರ ಚರಿತ್ರೆಯನ್ನ ಶುದ್ಧ ಮಾಡದೇ ಶುದ್ಧ ಸಂಸ್ಕೃತಿಯ ಬಗ್ಗೆ ಹೇಳಾಕ ಆಗೋದಿಲ್ಲ. ಹೀಗಾಗಿ ನಾನು ಚರಿತ್ರೆಯ ಒಂದು ಶೋಧ, ಅದರ ಮುಂದುವರಿಕೆಯಾಗಿ ಸಂಸ್ಕೃತಿಯ ಶೋಧದ ಕಡೆ ಮುಂದುವರೀಬೇಕು ಅಂತದೆ. ನನ್ನ ಬಾಳ ದಿವಸದ ಕನಸೊಂದು ಏನಂದ್ರೆ, ಗ್ರಾಮಚರಿತ್ರೆಕೋಶ. ಪ್ರತಿಯೊಂದು ಗ್ರಾಮದ ಬಗ್ಗೆ ಸುಮಾರು ಎಂಟು–ಹತ್ತು ಪುಟದ ಒಂದು ಚರಿತ್ರೆ ಬರೀಬೇಕು. ಹಂಗ ಬರದು ತಾಲೂಕಿಗೊಂದು ಸಂಪುಟದಂತೆ ೧೭೫ ತಾಲೂಕು ನಮ್ಮಲ್ಲಿ ಅದಾವೆ ೧೭೫ ಸಂಪುಟ ಬರೀಬೇಕು. ಅದನ್ನ ಮಾಡಿಸಬೇಕು ಅಂತ ಯೋಜನೆ ಅದ ನನ್ನ ತಲೆಯೊಳಗ. ಅದನ್ನ ಮಾಡಿ ಮುಗಿಸಿದ್ರ ನಮ್ಮ ಟೇಬಲ್ ಮ್ಯಾಲೆ ಇಡೀ ಕರ್ನಾಟಕಾನ ಬಂದು ಬಿಡ್ತದ. ನಮ್ಮ ಇತಿಹಾಸ, ನಮ್ಮ ಸಂಸ್ಕೃತಿ, ನಮ್ಮ ಹಳ್ಳಿಯೊಳಗ ಸಾಕಷ್ಟು ಬಿದ್ದದ. ಅದು ಯಾರಿಗೂ ಗೊತ್ತಿಲ್ಲ. ಅವರ ಮಾತಿನೊಳಗ, ಅವರ ಆಚರಣೆಯೊಳಗ, ಅವರ ಹಾಡಿನೊಳಗ ಅದು ತುಂಬೈತಿ. ಇದನ್ನೆಲ್ಲಾ ಸಂಗ್ರಹಿಸಿ ನಾವು ಗ್ರಾಮಚರಿತ್ರೆ ಕೋಶವನ್ನು ಬರದ್ರ, ಅದರಿಂದ ಕರ್ನಾಟಕಕ್ಕ ಬಾಳ ದೊಡ್ಡ ಕೊಡುಗೆ ಆಗ್ತದ ಅಂತ ನನ್ನ ಅಭಿಪ್ರಾಯ. ಅದನ್ನ ಪೂರೈಸಬೇಕಂತ ನನ್ನ ಇಚ್ಛೆ ಐತಿ.

ಬಸವರಾಜ ಸಾದರ : ಕೊನೆಯ ಪ್ರಶ್ನೆ ಇದು. ಈ ಪಂಪ ಪ್ರಶಸ್ತಿ ಸಂತೋಷದ ಜೊತೆಗೆ ನಿಮ್ಮ ಜವಾಬ್ದಾರಿಯನ್ನು ಹೆಚ್ಚು ಮಾಡಿದೆ ಅಂತ ನಿಮಗನಿಸ್ತದೆಯಾ?

ಎಂ.ಎಂ. ಕಲಬುರ್ಗಿ : ಖಂಡಿತವಾಗಿಯೂ. ಯಾಕಂದ್ರ, ಇಂಥಾ ದೊಡ್ಡ ಪ್ರಶಸ್ತಿ ಬಂದಾಗ, ಆ ಪ್ರಶಸ್ತಿಗೆ ತಕ್ಕ ರೀತಿಯೊಳಗ ಮತ್ತು ಆ ಪ್ರಶಸ್ತಿಗೆ ಇನ್ನೂ ಹೆಚ್ಚಿನ ಗೌರವತರುವ ರೀತಿಯೊಳಗ ನಾವು ಕೆಲಸ ಮಾಡ್ಬೇಕು ಅಂತ ಯಾರಿಗಾದ್ರೂ ಅನ್ನಿಸ್ತದ. ನನಗೂ ಹಂಗನಿಸೆದ. ನಂದು ಶ್ರಮಸಂಸ್ಕೃತಿ ಮತ್ತು ಸಮೂಹ ಸಂಸ್ಕೃತಿ. ಹೀಗಾಗಿ ನಾನು ದುಡೀಬೇಕು, ನನ್ನ ಪರಿಸರವನ್ನು ದುಡಿಸಬೇಕು. ಕರ್ನಾಟಕ ಸಂಸ್ಕೃತಿಯನ್ನ ಪ್ರಕಟಪಡಿಸಬೇಕು ಅನ್ನೂ ವಿಚಾರ ನಂದು. ಕರ್ನಾಟಕ ಸಂಸ್ಕೃತಿಯನ್ನು ಸರಿಯಾಗಿ ಪ್ರಕಟಪಡಿಸಲಾರದ್ದಕ್ಕ ನಮ್ಮಲ್ಲಿ ಸ್ವಾಭಿಮಾನ ಕಡಿಮ್ಯಾಗಿದ್ದು. ಕನ್ನಡಿಗರಿಗೆ ಸ್ವಾಭಿಮಾನ ಇಲ್ಲಂತ ಅಂತಾರಲ್ಲಾ? ಯಾಕಂತಂದ್ರ ನಮ್ಮ ಸಂಸ್ಕೃತಿ ಶೋಧ ಮತ್ತು ಅದರ ಸರಿಯಾದ ಪ್ರಸಾರ ಇದು ನಮ್ಮಲ್ಲಿ ಆಗಲಿಲ್ಲ. ಇನ್ಮೇಲಾದ್ರೂ ಸಹ ನಾವು ನಮ್ಮ ಸಂಸ್ಕೃತಿಯ ಪ್ರಸಾರದ ಕೆಲಸದ ಕಡೆ ಹೆಚ್ಚು ಗಮನ ಕೊಟ್ರ ಅದು ನಮಗ ಉತ್ಸಾಹವನ್ನ ತುಂಬ್ತದೆ, ನಮ್ಮ ಸ್ವಾಭಿಮಾನವನ್ನ ಹೆಚ್ಚಿಸ್ತದೆ. ನಮ್ಮ ಸ್ವಾಭಿಮಾನ ಹೆಚ್ಚಿದರ ನಮ್ಮ ಸಾಹಿತ್ಯ ಬೆಳೀತದೆ, ನಮ್ಮ ಭಾಷೆ ಬದುಕ್ತದೆ. ಆದುದರಿಂದ ಇಂಥಾ ಕೆಲಸಾ ಮಾಡಬೇಕು ಅಂತಾ ನನಗನಿಸ್ತಾ ಇದೆ.

ಬಸವರಾಜ ಸಾದರ : ಕಲಬುರ್ಗಿ ಅವರೆ ಬಾಳಷ್ಟು ವಿವರವಾಗಿ, ತಾಳ್ಮೆಯಿಂದ ನಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿದ್ರಿ. ಪಂಪಪ್ರಶಸ್ತಿ ಬಂದಿರುವ ಈ ಸಂದರ್ಭದಲ್ಲಿ ನಮ್ಮ ಕೇಳುಗರ ಪರವಾಗಿ ನಿಮಗೆ ಅಭಿನಂದನೆಗಳು. ಇದಕ್ಕೂ ಉನ್ನತವಾದ ಪ್ರಶಸ್ತಿಗಳೂ ನಿಮಗೆ ದೊರೆಯಲಿ ಅಂತ ಹಾರೈಸಿ ಈ ಮಾತುಕತೆ ಮುಗಿಸೋಣ, ನಮಸ್ಕಾರ.

ಎಂ.ಎಂ. ಕಲಬುರ್ಗಿ : ನಿಮ್ಮ ಹಾರೈಕೆಗೆ ವಂದನೆಗಳು, ನಮಸ್ಕಾರ.

ಧಾರವಾಡ ಆಕಾಶವಾಣಿ–ಬಾನುಲಿ ಸಂದರ್ಶನ : ೧೯೯೬

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೨೯೩

ಸಮಗ್ರ ಸಂಶೋಧಕ

❖

ಸಂದರ್ಶಕರು : ಪ್ರೊ. ಎಚ್.ವಿ.ನಾಗೇಶ

ಕರ್ನಾಟಕದ ಪ್ರತಿಷ್ಠಿತ ಪಂಪ ಪ್ರಶಸ್ತಿಯನ್ನು ಈ ವರ್ಷ ತಮ್ಮದಾಗಿಸಿಕೊಂಡ ಡಾ. ಎಂ.ಎಂ.ಕಲಬುರ್ಗಿಯವರು ಕರ್ನಾಟಕದ ಸಂಶೋಧನ ಪ್ರಪಂಚದ ಪ್ರಮುಖ ಕ್ರಿಯಾಶೀಲ ಚೇತನ. ಸಂಶೋಧನೆ ಎಂಬುದು ಶುಷ್ಕ ಪಾಂಡಿತ್ಯವಲ್ಲ, ಅದೂ ತನ್ನದೇ ರೀತಿಯಲ್ಲಿ ಸೃಜನಶೀಲವಾಗಬಹುದು ಎಂಬುದನ್ನು ತೋರಿಸಿಕೊಟ್ಟವರು ಅವರು.

ಪಂಪ ಪ್ರಶಸ್ತಿ ಕರ್ನಾಟಕದ ಅತಿ ಪ್ರತಿಷ್ಠಿತ ಗೌರವ. ಪ್ರಶಸ್ತಿಯ ಮೊತ್ತವೂ ಸಾಕಷ್ಟು ದೊಡ್ಡದು–ಒಂದು ಲಕ್ಷ ರೂಪಾಯಿ. ೧೯೮೭ರಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿದ ಈ ಪ್ರಶಸ್ತಿಯ ಮೊದಲ ವಿಜೇತರು ಡಾ. ಕುವೆಂಪು (ಕೃತಿ: ಶ್ರೀರಾಮಾಯಣ ದರ್ಶನಂ). ನಂತರದ ವರ್ಷಗಳಲ್ಲಿ ತೀ.ನಂ.ಶ್ರೀ., ಕಾರಂತ, ಭೂಸನೂರಮಠ, ಪುತಿನ, ಮೂರ್ತಿರಾಯರು, ಸೇಡಿಯಾಪು, ನರಸಿಂಹಸ್ವಾಮಿ ಮೊದಲಾದ ದಿಗ್ಗಜಗಳು ಈ ಕೀರ್ತಿಗೆ ಭಾಜನರೆಂದರೆ ಪಂಪ ಪ್ರಶಸ್ತಿಯ ಮಹತ್ವದ ಅರಿವಾಗುತ್ತದೆ. ಈ ವರ್ಷ ಪ್ರಶಸ್ತಿಪಡೆದವರು ಸುಪ್ರಸಿದ್ಧ ವಿದ್ವಾಂಸರಾದ ಡಾ. ಎಂ.ಎಂ. ಕಲಬುರ್ಗಿ.

ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಯರಗಲ್ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದ (ಜನನ: ೨೮.೧೧.೧೯೩೮) ಡಾ. ಕಲಬುರ್ಗಿ ಅವರು ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಪ್ರಥಮ ರ್‍ಯಾಂಕ್ ಗಳಿಸಿ, ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಮೂರು ವರ್ಷ ಪ್ರಾಧ್ಯಾಪಕರಾಗಿದ್ದು, ಕಳೆದ ೩೨ ವರ್ಷಗಳಿಂದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಭಾಷೆ, ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಶಾಸನ, ಜಾನಪದ, ಗ್ರಂಥಸಂಪಾದನೆ, ನಾಮವಿಜ್ಞಾನ, ವೀರಶೈವಸಾಹಿತ್ಯ ಮೊದಲಾದ ಕ್ಷೇತ್ರಗಳಲ್ಲಿ ಸಂಶೋಧನೆ ಮಾಡಿ, ಈವರೆಗೆ ಸುಮಾರು ೪೦ ಸಂಶೋಧನ ಗ್ರಂಥಗಳು, ೨೦೦ಕ್ಕೂ ಹೆಚ್ಚು ಸಂಶೋಧನ ಪ್ರಬಂಧ ಬರೆದು ಸೃಜನೇತರ ಸಾಹಿತ್ಯದಲ್ಲಿ ಅಪೂರ್ವಸಾಧನೆ ಮಾಡಿದ್ದಾರೆ.

ಶಾಸನಗಳಲ್ಲಿ ಶಿವಶರಣರು, ಶಾಸನ ವ್ಯಾಸಂಗ, ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಚೆನ್ನಬಸವಣ್ಣನವರ ವಚನ ಮಹಾಸಂಪುಟ, ಕನ್ನಡ ಹಸ್ತಪ್ರತಿಶಾಸ್ತ್ರ ಗ್ರಂಥಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಮಾರ್ಗ–೨ ಕೃತಿಗೆ ವರ್ಷದ ಶ್ರೇಷ್ಠ ಕೃತಿಗೌರವ, ದೇಜಗೌ ಟ್ರಸ್ಟಿನ ವಿಶ್ವಮಾನವ ಪ್ರಶಸ್ತಿ, ಕಾಂತಾವರದ ವರ್ಧಮಾನ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೧೯೯೦), ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ (೧೯೯೧) ಪಡೆದಿದ್ದಾರೆ. ದೇಶದ ಹಲವು ವಿಶ್ವವಿದ್ಯಾಲಯಗಳಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು ಬಹುಮುಖ ವ್ಯಕ್ತಿತ್ವದ ಕನ್ನಡ ವಿದ್ವಾಂಸರು.

ಪಂಪ ಪ್ರಶಸ್ತಿ ದೊರೆತ ಸಂದರ್ಭದಲ್ಲಿ 'ಪ್ರಜಾವಾಣಿ'ಯ ಪರವಾಗಿ ನಡೆಸಿದ ಸಂದರ್ಶನಕ್ಕೆ ಅವರು ನೀಡಿದ ಪ್ರತಿಕ್ರಿಯೆ:

* * *

ಸಂದರ್ಶಕ: ನೀವು ಈ ವರ್ಷದ ಪಂಪಪ್ರಶಸ್ತಿಯನ್ನು ಪಡೆದಿದ್ದೀರಿ. ಅಭಿನಂದನೆಗಳು. ಈ ವರ್ಷದ ಪ್ರಶಸ್ತಿ ಸೃಜನೇತರ ಸಾಹಿತ್ಯ ಕ್ಷೇತ್ರಕ್ಕೆ ಮೀಸಲಾಗಿತ್ತು. ಈ ಕ್ಷೇತ್ರದಲ್ಲಿ ನಿಮ್ಮ ಸಾಧನೆಯ ವಿವರಗಳೇನು?

ಕಲಬುರ್ಗಿ: ಸಾಹಿತ್ಯ ಚರಿತ್ರೆ, ಗ್ರಂಥಸಂಪಾದನೆ, ನಾಮವಿಜ್ಞಾನ, ಶಾಸನ, ಸಂಸ್ಕೃತಿ, ಜಾನಪದ ಹೀಗೆ ಏಕಕಾಲಕ್ಕೆ ಆರೇಳು ನನ್ನ ಪ್ರೀತಿಯ ಕಾರ್ಯಕ್ಷೇತ್ರಗಳು. ಸದ್ಯ ಸಿಕ್ಕಿರುವ ಪಂಪಪ್ರಶಸ್ತಿ ನಾನು ಈ ಕ್ಷೇತ್ರದಲ್ಲಿ ನಡೆಸಿರುವ ಸಂಶೋಧನೆಗೆ ಎಂದು ತಿಳಿಯುತ್ತೇನೆ.

ಸಂದರ್ಶಕ: ಸಂಶೋಧನೆ ಕನ್ನಡ ಸಾಹಿತ್ಯ ಕ್ಷೇತ್ರದ ಒಂದು ಗೌಣ ಚಟುವಟಿಕೆ, ಒಂದು ನೀರಸ ಕಾರ್ಯ ಎಂದು ಹೇಳುತ್ತಾರೆ. ಇದನ್ನು ನೀವು ಒಪ್ಪುವಿರಾ?

ಕಲಬುರ್ಗಿ:ಈಗಲೂ ಅದು ಒಂದು ಗೌಣ ಚಟುವಟಿಕೆ, ನಿಜ. ಆದರೆ ನೀರಸ ಕಾರ್ಯವಲ್ಲ. ಅದರತ್ತ ಆಕರ್ಷಿತರಾಗಿ ಬರುವವರ ಸಂಖ್ಯೆ ತೀರಾ ಕಡಿಮೆ. ಬಂದವರಿಗೆ ಸಂಶೋಧನೆಗೆ ಅವಶ್ಯವಾದ ಪರಿಕರಗಳೂ ಸವಲತ್ತುಗಳೂ ಸಿಗುವುದಿಲ್ಲ. ತಕ್ಕ ಮನ್ನಣೆ ಖಂಡಿತ ಇಲ್ಲ.

ಸಂದರ್ಶಕ: ಹಾಗಾದರೆ, ನಿಮಗೆ ಸಾಕಷ್ಟು ಪ್ರಶಸ್ತಿ, ಬಹುಮಾನ, ಮನ್ನಣೆ ಇತ್ಯಾದಿ ದೊರಕಿದೆಯಲ್ಲ?

ಕಲಬುರ್ಗಿ: ಇದು ನನ್ನ ಒಬ್ಬನ ಪ್ರಶ್ನೆಯಲ್ಲ. ನಾನು ವಿಶ್ವವಿದ್ಯಾಲಯದ ಪ್ರಾಧ್ಯಾಪಕನಾಗಿರುವುದರಿಂದ ಪೂರ್ಣಾವಧಿ ಸಂಶೋಧಕರಿಗಿಂತ ಅದೃಷ್ಟಶಾಲಿ ಅನ್ನಿಸುತ್ತದೆ. ಏಕೆಂದರೆ ಪಗಾರ, ಪದೋನ್ನತಿ ಕಾರಣವಾಗಿ ಬದುಕಿನಲ್ಲಿ ಸುಭದ್ರತೆಯಿದೆ. ಇದು ನೆಮ್ಮದಿಯಿಂದ ಸಂಶೋಧನೆ ಮುಂದುವರಿಸಲು ಕಾರಣವಾಗಿದೆ. ಎರಡನೆಯದಾಗಿ, ಪ್ರೌಢ ವಿದ್ಯಾರ್ಥಿಗಳಿಗೆ ಸಂಶೋಧನನಿಷ್ಠ ಬೋಧನೆ ಮಾಡುವುದು ನನ್ನ ವೃತ್ತಿಧರ್ಮವಾಗಿದೆ. ಇದು ನನ್ನನ್ನು ಬೆಳೆಸಿದೆ. ಮೇಲಾಗಿ ಪ್ರಕಟನೆ, ಪ್ರಚಾರಗಳಿಗೆ ವಿಶ್ವವಿದ್ಯಾಲಯ ಒಂದು ಅನುಕೂಲ ವೇದಿಕೆಯೆನಿಸಿದೆ. ಇವುಗಳಿಗೆ ಮಿಗಿಲಾಗಿ ಶ್ರಮಸಂಸ್ಕೃತಿಯು ನನ್ನ ಮನೋಧರ್ಮ. ಅಧಿಕ ಪ್ರಮಾಣದಲ್ಲಿ ಸಂಶೋಧನೆ ಕಾರ್ಯವನ್ನು ಪೂರೈಸಿದೆ. ಹೀಗಾಗಿ ನನಗೆ ಪ್ರಶಸ್ತಿ, ಬಹುಮಾನ, ಮನ್ನಣೆ ಲಭ್ಯವಾಗಿವೆ.

ಸಂದರ್ಶಕ: ನೀವು ಎರಡು ಮೂರು ವರ್ಷಗಳ ಹಿಂದೆ ಕರ್ನಾಟಕ ಇತಿಹಾಸ ಅಕಾಡೆಮಿಯ ಎಂಟನೆಯ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಗೊಂಡಿದ್ದಿರಿ. ಕನ್ನಡ ಪ್ರಧ್ಯಾಪಕರಾದ ನಿಮಗೆ ಈ ಸಮಾಜ ವಿಜ್ಞಾನ ಶಿಸ್ತಿನ ಅತ್ಯುಚ್ಚ ಮನ್ನಣೆ ಹೇಗೆ ಸಿಕ್ಕಿತು?

ಕಲಬುರ್ಗಿ: ವಶೀಲಿಯಿಂದಂತೂ ಅಲ್ಲ. ಬಹು ದೊಡ್ಡ ವಿದ್ವಾಂಸರಿಂದ ತುಂಬಿರುವ ಈ ಸಂಸ್ಥೆಯವರು ನನ್ನನ್ನು ಕರ್ನಾಟಕ ಇತಿಹಾಸ ತಜ್ಞ ಎಂದು ಗುರುತಿಸಿದ್ದು ನನ್ನ ಸೌಭಾಗ್ಯ. ನನ್ನ ಸಂಶೋಧನೆಯ ಬಹುದೊಡ್ಡ ಭಾಗ ಇತಿಹಾಸಕ್ಕೆ, ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದೆ. ಇತಿಹಾಸ ಆಕರವನ್ನು ಬಯಸುತ್ತದೆ. ನಾನು ಅಮೂಲ್ಯ ಆಕರವಸ್ತುಗಳನ್ನು ಸಂಗ್ರಹಿಸಿಕೊಟ್ಟಿದ್ದೇನೆ. ಅಪ್ರಕಟಿತ ಚಾರಿತ್ರಿಕ ಸಾಹಿತ್ಯ ಕೃತಿಗಳನ್ನು ಬೆಳಕಿಗೆ ತಂದಿದ್ದೇನೆ. ಇವುಗಳಲ್ಲಿ ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ನಿಂಬಸಾಮಂತ ಚರಿತೆ, ಸಿರುಮಣನಾಯಕನ ಸಾಂಗತ್ಯ, ಸಿರುಮನ ಚರಿತ್ರೆ, ಗೊಲ್ಲ ಸಿರುಮನ ಚರಿತ್ರೆ, ಕೊಂಡಗುಳಿ ಕೇಶಿರಾಜನ ಕೃತಿಗಳು, ವಿಜಾಪುರ ಜಿಲ್ಲೆಯ ಶಾಸನಸೂಚಿ, ಧಾರವಾಡ ಜಿಲ್ಲೆಯ ಶಾಸನಸೂಚಿ, ಧಾರವಾಡ ತಾಲೂಕಿನ ಶಾಸನಗಳು, ಕರ್ನಾಟಕ ಇತಿಹಾಸವನ್ನು ಕುರಿತ

ಗ್ರಂಥಗಳು. ಇತಿಹಾಸ ರಚನೆಗೆ ಶಾಸನಗಳಂತೆ ಸಾಹಿತ್ಯ ಗ್ರಂಥಗಳೂ ಎಂಥ ಸಾಮಗ್ರಿಯನ್ನು ಒದಗಿಸಬಹುದೆಂಬುದಕ್ಕೆ ಸಾಕ್ಷಿ ಇಲ್ಲಿದೆ. ನಾನು ಪ್ರಕಟಿತ ಆಕರಗಳಿಗಿಂತ ಅಪ್ರಕಟಿತ ಆಕರಗಳಿಂದ ಕರ್ನಾಟಕ ಇತಿಹಾಸವನ್ನು ಹೇಳಲು ಪ್ರಯತ್ನಿಸಿದ್ದೇನೆ. ಇತಿಹಾಸದ ಬಗೆಗಿನ ನನ್ನ ಆಸ್ಥೆಯನ್ನು ಕುರಿತು ಹೇಳವುದಾದರೆ ನಾನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಾರ್ಗದರ್ಶನ ಮಾಡಿದ ಮಹಾಪ್ರಬಂಧಗಳಲ್ಲಿ ಹೆಚ್ಚಿನವು ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿಗೆ ಸೇರಿದವು. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ತರ್ದವಾಡಿ ನಾಡು, ಕೆಳದಿ ಸಂಸ್ಥಾನದ ಸಮಗ್ರ ಅಧ್ಯಯನ, ಯಲಹಂಕ ಪ್ರಭುಗಳು, ಆರನೆಯ ವಿಕ್ರಮಾದಿತ್ಯನ ಶಾಸನಗಳು, ಕೆಳದಿ ಅರಸರ ಶಾಸನಗಳು ಇತ್ಯಾದಿ ಕೃತಿಗಳು ಈಗ ನೆನಪಿಗೆ ಬರುತ್ತವೆ.

ಸಂದರ್ಶಕ: ನೀವು ಮತ್ತು ನಿಮ್ಮಂಥವರು ಮಾಡುತ್ತಿರುವ ಇತಿಹಾಸ ಸಂಶೋಧನೆಯನ್ನು ಸ್ಮಶಾನ ಅಗೆಯುವ ಕೆಲಸವೆಂದೋ, ತಂದೆ-ತಾಯಿಗಳನ್ನು ಹುಡುಕುವ ಕೆಲಸವೆಂದೋ ಕೆಲವರು ಗೇಲಿ ಮಾಡಿದ್ದು ನಿಮಗೆ ಗೊತ್ತಿದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಕಲಬುರ್ಗಿ: ನಾನು ಈ ಟೀಕೆಗಳನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಸಂಶೋಧನೆಯಲ್ಲಿ ಘಟನಾಶೋಧ, ವಿಚಾರ ಶೋಧಗಳೆಂಬ ಎರಡು ಪ್ರಕಾರಗಳಿವೆ, ವಿಚಾರಶೋಧಕ್ಕೆ ಅಡಿಪಾಯವಾದುದು ಘಟನಾಶೋಧ. ಸರಿಯಾದ ಘಟನಾಶೋಧ ವಿಚಾರಶೋಧವನ್ನು ಸರಿಯಾಗಿ ಮುನ್ನಡೆಸುತ್ತದೆ. ಆದುದರಿಂದ ಘಟನಾಶೋಧದ ಅಂಗವಾದ ತಂದೆ, ತಾಯಿ, ಪರಿಸರಗಳ ಅಧ್ಯಯನವನ್ನು ಗೇಲಿ ಮಾಡುವುದು ಅವರ ಅಜ್ಞಾನವನ್ನು ತೋರಿಸುತ್ತದೆ.

ಸಂದರ್ಶಕ: ನೀವು ಅನವಶ್ಯ ವಾದ-ವಿವಾದಗಳನ್ನು ಸೃಷ್ಟಿಸುತ್ತೀರಿ. ಅದು ಪ್ರಚಾರ ಗಿಟ್ಟಿಸುವುದಕ್ಕೆ ಎಂಬ ಅಪಾದನೆ ಇದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಕಲಬುರ್ಗಿ: ಟೀಕಾಕಾರರು ನನ್ನ 'ಮಾರ್ಗ' ಸಂಪುಟಗಳ ಬಗ್ಗೆ ಹೇಳುತ್ತಿದ್ದಾರೆ ಎಂದು ಭಾವಿಸುತ್ತೇನೆ. ಆ ಸಂಪುಟಗಳಲ್ಲಿ ಸಾಹಿತ್ಯ, ಸಂಪಾದನೆ, ವಿಮರ್ಶೆ, ಶಾಸನ, ಜಾನಪದ, ವಚನ ಮತ್ತು ಶಾಸ್ತ್ರ ವಿಚಾರಗಳಿಗೆ ಸಂಬಂಧಿಸಿದ ಒಟ್ಟು ೨೦೦ ಲೇಖನಗಳಿವೆ. ವಾದಗ್ರಸ್ತವಾದ ಒಂದೆರಡು ಲೇಖನವನ್ನು ಬಿಟ್ಟರೆ ಉಳಿದ ಲೇಖನಗಳು ವಿಮರ್ಶಕರಿಂದ, ವಿದ್ವಾಂಸರಿಂದ ಮನ್ನಣೆ ಪಡೆದಿವೆ. ಅವು ಅಂತಿಮ ಸತ್ಯಗಳೆಂದು ನಾನೆಂದೂ ಹೇಳಿಲ್ಲ. ಕೆಲವು ತಾತ್ಪೂರ್ತಿಕ ನಿರ್ಣಯಗಳೋ, ಪ್ರಮೇಯಗಳೋ ಇರಬಹುದು. ಕೇವಲ ಒಂದೋ ಎರಡೋ ಲೇಖನಗಳು ಒಂದು ಸಮುದಾಯದ ಭಾವನೆಗಳನ್ನು ಕೆರಳಿಸಿದರೆ, ಅದು ಏನಕೇನ ಪ್ರಕಾರೇಣ ಪ್ರಸಿದ್ಧಿ ಪಡೆಯುವ ತಂತ್ರವೆಂದು ಹೇಳುವುದು ಸರಿಯೆ? ನಿಜ ಹೇಳುವುದಾದರೆ ವಾದಗ್ರಸ್ಥವಾಗಿಸಿದುದಕ್ಕೆ ಸಾಹಿತ್ಯೇತರ ಕಾರಣಗಳೇ ಮುಖ್ಯವಾಗಿವೆಯೆಂಬುದನ್ನು ಬಹಳ ಜನ ಬಲ್ಲರು.

ಸಂದರ್ಶಕ: ಆ ಒಂದೆರಡು ಲೇಖನಗಳು ಆ ಸಂಪುಟದಲ್ಲಿ ಏಕೆ ಸೇರಿಕೊಂಡವು? ಅವು ವಾದ ವಿವಾದಗಳನ್ನು ಸೃಷ್ಟಿಸಬಹುದು ಎಂಬ ಪೂರ್ವಾನುಮಾನ ನಿಮಗೆ ಇರಲಿಲ್ಲವೆ?

ಕಲಬುರ್ಗಿ: ಅದೇ ನನ್ನ ದೌರ್ಭಾಗ್ಯ. ನನ್ನ ಲಿಂಗಾಯತ ಸಮುದಾಯ ನನ್ನ ಲೇಖನಗಳಲ್ಲಿ ಹೇಳಿದ ವಿಷಯಗಳನ್ನು ಅರಿತುಕೊಂಡು ಪ್ರಗತಿಪರವಾಗಿ ಸ್ಪಂದಿಸುವಷ್ಟು ಪ್ರಬುದ್ಧವಾಗಿದೆ ಎಂದು

ನಾನು ಭಾವಿಸಿದ್ದೆ. ಜಾಗತಿಕ ಧರ್ಮ ಚಿಂತನಗಳಲ್ಲಿ ಲಿಂಗಾಯತ ಧರ್ಮದ ಚಿಂತನೆ ಅತಿ ಪ್ರಬುದ್ಧ-ಪ್ರಗತಿಪರ ಎಂಬುದನ್ನು ಎತ್ತಿ ತೋರಿಸಲು ಆ ಲೇಖನ ಬರೆದೆ. ನನ್ನ ಧರ್ಮವನ್ನು ಕೆಣಕುವ ಅಥವಾ ಪ್ರಚಾರ ಗಿಟ್ಟಿಸುವ ಯಾವ ಉದ್ದೇಶವೂ ನನಗಿರಲಿಲ್ಲ.

ಸಂದರ್ಶಕ: ನೀವು ಸಾಹಿತ್ಯ ವಿಮರ್ಶಕರೂ ಹೌದು. ಹೀಗಿರುತ್ತ ಪಂಪನಿಗಿಂತ ಹರಿಹರನೇ ಶ್ರೇಷ್ಠ ಕವಿ ಎಂದು ನೀವು ಹೇಳಿದ್ದಾಗಿ ವರದಿಯಾಗಿದೆ. ಈ ನಿರ್ಣಯಕ್ಕೆ ನೀವು ಹೇಗೆ ಬಂದಿರಿ? ಇದೂ ಕೂಡ ಪ್ರಚಾರ ಗಿಟ್ಟಿಸುವ ಗಿಮ್ಮಿಕ್ಕು ಅಲ್ಲವಷ್ಟೇ?

ಕಲಬುರ್ಗಿ: ಖಂಡಿತವಾಗಿಯೂ ಅಲ್ಲ. ಸಂದರ್ಭ ಏನಿತ್ತೆಂದರೆ ಮಹಾಕಾವ್ಯದ ನಾಯಕ ಹೇಗಿರಬೇಕು? ಕಾವ್ಯದ ವಸ್ತು ಏನಿರಬೇಕು? ಎಂಬ ವಿಚಾರದಲ್ಲಿ ತೌಲನಿಕ ವಿಮರ್ಶೆ ಮಾಡುತ್ತಿದ್ದೆ. ನಾಯಕನು ಅಸಾಮಾನ್ಯನೂ, ಉದಾತ್ತನೂ ಆಗಿರಬೇಕೆಂದು ಕನ್ನಡದ ಕಾವ್ಯಪರಂಪರೆ ಹೇಳುತ್ತದೆ. ಅದಕ್ಕಾಗಿ ದೇವರುಗಳು, ದೈವತ್ವದ ಎತ್ತರಕ್ಕೆ ಏರುವ ಮನುಷ್ಯರು, ಉದಾತ್ತ ಚರಿತರಾದ ಚಕ್ರವರ್ತಿಗಳು ನಮ್ಮ ಮಹಾಕಾವ್ಯಗಳ ನಾಯಕರಾಗಿದ್ದಾರೆ. ಆದರೆ ಪಂಪ ಅಷ್ಟು ದೊಡ್ಡ ಕವಿಯಿದ್ದೂ, ತನಗೆ ಆಶ್ರಯ ನೀಡಿದ ಸಾಮಂತನನ್ನು ಅಪ್ರತಿಮವೀರ ಅರ್ಜುನನಿಗೆ ಹೋಲಿಸಿದುದು ನನಗೆ ಸರಿಕಾಣಲಿಲ್ಲ. ಇದು ನನ್ನೊಬ್ಬನ ಭಾವನೆಯಲ್ಲ ಎಂದು ಭಾವಿಸುತ್ತೇನೆ. ಪಂಪನ ನಂತರ ಬಂದ ಅಭಿನವಪಂಪನೆಂದು ಹೆಸರಾದ ನಾಗಚಂದ್ರ ಹೆಚ್ಚು ಕಡಿಮೆ ನೇರ ಮಾತುಗಳಲ್ಲಿ ಪಂಪನ ನಾಯಕತ್ವವನ್ನು ನನ್ನಂತೆಯೇ ವಿರೋಧಿಸಿದ್ದಾರೆ. ಹರಿಹರ ಇದನ್ನು ಇನ್ನೂ ದೊಡ್ಡ ದನಿಯಲ್ಲಿ ಹೇಳುತ್ತಾನೆ. ಈ ವಿಷಯದಲ್ಲಿ ಹರಿಹರ ಕನ್ನಡ ಕಾವ್ಯ ಪರಂಪರೆಯ ಅಪೂರ್ವ ವಕ್ತಾರನೆಂದು ನಾನು ಈಗಲೂ ಭಾವಿಸುತ್ತೇನೆ.

ಸಂದರ್ಶಕ: ಹಾಗಾದರೆ ಆದಿಕವಿ ಪಂಪನ ಸಾಧನೆಯೇನು?

ಕಲಬುರ್ಗಿ: ಒಂದು ಮಾತನ್ನು ಇಲ್ಲಿ ನಾನು ಸ್ಪಷ್ಟಪಡಿಸಬಯಸುತ್ತೇನೆ. ಪಂಪನ ಕಾವ್ಯರಚನೆಯ ಸಾಮರ್ಥ್ಯವನ್ನು ಹಾಗೂ ಸಾಧನೆಯನ್ನು ಯಾರೂ ಪ್ರಶ್ನಿಸುವಂತಿಲ್ಲ. ಹಾಗೆ ನೋಡಿದರೆ, ಅಕ್ಷರಛಂದಸ್ಸಿನ ಮಾರ್ಗ ಕಾವ್ಯರಚನೆಯ ವಿಷಯದಲ್ಲಿ ಪಂಪ ಚರಮಸೀಮೆಯನ್ನು ಮುಟ್ಟಿದ್ದಾನೆ. ಅದೇ ರೀತಿ ಮಾತ್ರಾಛಂದಸ್ಸಿನ ದೇಶೀ ಕಾವ್ಯರಚನೆಯ ವಿಷಯದಲ್ಲಿ ಕುಮಾರವ್ಯಾಸ ಅಪ್ರತಿಮ ಎನ್ನಬೇಕು. ಇದನ್ನೇ ಮುಂದುವರಿಸುವುದಾದರೆ ಕವಿ ಬೇಂದ್ರೆ ಅಂಶ ಛಂದಸ್ಸಿನಲ್ಲಿ ಸಾಧಿಸಿದ್ದನ್ನು ಇತರರು ಸಾಧಿಸಲಿಲ್ಲವೆಂದೇ ಹೇಳಬೇಕು.

ಸಂದರ್ಶಕ: ಸಂಶೋಧನೆ ಯಾವ ತರಹದ್ದು ಇರಬೇಕು? ಪ್ರಸ್ತುತ ಸಂಶೋಧನೆ ಯಾವ ಸ್ಥಿತಿಯಲ್ಲಿದೆ?

ಕಲಬುರ್ಗಿ: ಸಂಶೋಧನೆಯಲ್ಲಿ ಮೂರು ರೀತಿಗಳಿವೆ. ಆಕರಶೋಧ, ಶೋಧಿತ ಆಕರಗಳ ವಿಶ್ಲೇಷಣೆ, ಮತ್ತು ವ್ಯಾಖ್ಯಾನ. ನಿಜ ಹೇಳುವುದಾದರೆ, ಸಂಶೋಧನ ಸಂದರ್ಭದಲ್ಲಿ ಇವು ಘಟ್ಟಗಳೇ ಆಗಿವೆ. ಆಕರಗಳ ವಿಶ್ಲೇಷಣೆಯಿಂದ ಸಂಶೋಧನೆ ಆಕಾರ ಪಡೆಯುತ್ತದೆ. ವ್ಯಾಖ್ಯಾನದಿಂದ ಅದರ ಆಶಯ ಪ್ರಕಟವಾಗುತ್ತದೆ. ಪ್ರಸ್ತುತ ಸಂಶೋಧನೆಯ ಒಂದು ದೊಡ್ಡ ನ್ಯೂನತೆಯೆಂದರೆ ಈ ಮೂರನ್ನು ಏಕಕಾಲದಲ್ಲಿ ಸಾಧಿಸಬಲ್ಲವರು ಬಹಳಿಲ್ಲ.

ಸಂದರ್ಶಕ: ನೀವು ಹೇಳುವ ಈ ವಿರಳ ಜಾತಿಯನ್ನು ಸಮಗ್ರಸಂಶೋಧನೆ ಎನ್ನಬಹುದೆ? ನೀವು ಆ ವರ್ಗಕ್ಕೆ ಸೇರಿದವರೇ?

ಕಲಬುರ್ಗಿ: ಸಮಗ್ರ ಸಂಶೋಧನೆ ಎಂಬ ಪದವನ್ನು ಈಗ ಕೆಲವು ವರ್ಷಗಳಿಂದ ಬಳಸಲಾಗುತ್ತಿದೆ. ಇದರಲ್ಲಿ ಮೇಲೆ ಹೇಳಿದ ಆಕರಶೋಧನೆ, ವಿಶ್ಲೇಷಣೆ ಮತ್ತು ವ್ಯಾಖ್ಯಾನ ಮೂರು ಮುಪ್ಪುರಿಗೊಂಡಿರುತ್ತವೆ. ನಾನು ತಕ್ಕಮಟ್ಟಿಗೆ ಈ ಮೂರು ನೆಲೆಗಳಲ್ಲಿ ಕೆಲಸಮಾಡಿದ್ದೇನೆ. ೧೯೮೮ರಲ್ಲಿ ನಾನು ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳನದ ಸರ್ವಾಧ್ಯಕ್ಷನಾದಾಗ ನನಗೆ ಸಮಗ್ರ ಸಂಶೋಧಕನೆಂಬ ಪದ ಬಳಸಲಾಯಿತು.

ಸಂದರ್ಶಕ: ನೀವು ಆಕರ ಸಂಶೋಧನೆ ಕ್ಷೇತ್ರದಲ್ಲಿಯೂ ತುಂಬಾ ಕೆಲಸ ಮಾಡಿದ್ದೀರೆಂಬ ಖ್ಯಾತಿಯಿದೆ. ಈ ಬಗ್ಗೆ ಹೆಚ್ಚಿಗೆ ಹೇಳಲು ಬಯಸುತ್ತೀರಾ?

ಕಲಬುರ್ಗಿ: ಹೌದು, ಈ ಮಾತನ್ನು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಕನ್ನಡ ಇತಿಹಾಸ ಪುನಾರಚನೆಗೆ ನಾನು ಅನೇಕ ಆಕರ ಸಾಮಗ್ರಿ ಒದಗಿಸಿದ್ದೇನೆ. 'ಕರ್ನಾಟಕ ಕೈಫಿಯತ್ತುಗಳು' ಕೃತಿ ಪ್ರಕಟಣೆ ಈ ದಿಸೆಯಲ್ಲಿ ಒಂದು ಮೈಲಿಗಲ್ಲು. ಇಷ್ಟೇ ಮಹತ್ವದ್ದು ನಿಂಬಸಾಮಂತ ಚರಿತ್ರೆ, ಇಮ್ಮಡಿ ಚಿಕ್ಕಭೂಪ ಸಾಂಗತ್ಯ, ಮೂರು ಸಿರುಮ ಚರಿತ್ರೆ, ವಚನ ಸಂಪುಟಗಳು ಇತ್ಯಾದಿ. ಹೀಗಾಗಿ ಸಮಕಾಲೀನ ಸಂಶೋಧಕರಲ್ಲಿಯೇ ನಾನು ಹೆಚ್ಚು ಆಕರಸಾಮಗ್ರಿ ಪ್ರಕಟಿಸಿದವನೆಂದು ವಿದ್ವಾಂಸರು ನನ್ನನ್ನು ಗುರುತಿಸುತ್ತಾರೆ.

ಸಂದರ್ಶಕ: ನೀವು ಯಾವ ಸಂಶೋಧಕರನ್ನು ಮೆಚ್ಚುತ್ತೀರಿ?

ಕಲಬುರ್ಗಿ: ನೀವು ಈ ಪ್ರಶ್ನೆಯನ್ನು ಯಾವ ದೃಷ್ಟಿಯಿಂದ ಕೇಳಿದ್ದೀರೋ ತಿಳಿಯದು. ವ್ಯಕ್ತಿಗಳ ಹೆಸರು ಬೇಡ, ನಾನು ಮೈಸೂರು ಮಾದರಿಯ ಸಂಶೋಧನೆಗಿಂತ ಹೆಚ್ಚಾಗಿ ಧಾರವಾಡ ಮಾದರಿಯ ಸಂಶೋಧನೆಯನ್ನು ಮೆಚ್ಚುತ್ತೇನೆ.

ಸಂದರ್ಶಕ: ಈ ಮಾದರಿಗಳು ಯಾವುವು? ಇದೇನು ಉತ್ತರ ಕರ್ನಾಟಕದ ಅಭಿಮಾನದ ಪ್ರಶ್ನೆಯೇ?

ಕಲಬುರ್ಗಿ: ಅಲ್ಲ. ಬೇರೆ ಹೆಸರುಗಳು ಸಿಗದೇ ಹೋಗಿ ಈ ಹೆಸರುಗಳನ್ನು ಇಟ್ಟುಕೊಂಡಿದ್ದೇನೆ. ಮೈಸೂರು ಮಾದರಿಯೆಂದರೆ ಆರ್.ನರಸಿಂಹಾಚಾರ್, ಡಿ.ಎಲ್.ಎನ್. ಮುಂತಾದವರು ಕೈಗೊಂಡ ಸಂಶೋಧನೆಯ ಮಾದರಿ. ಇಲ್ಲಿ ಆಕರ ಸಂಗ್ರಹ, ಸ್ಥಳ-ಕಾಲನಿರ್ಣಯ, ಕೃತಿಯ ಆಕೃತಿ ಇತ್ಯಾದಿಗಳು ಮಾತ್ರ ಮಹತ್ವಪಡೆಯುತ್ತವೆ. ಇವು ವಿಶ್ಲೇಷಣಾತ್ಮಕ ಮಾದರಿಯವು. ಧಾರವಾಡ ಮಾದರಿಯೆಂದರೆ ಶಂ.ಬಾ.ಜೋಶಿಯವರ ಸಂಶೋಧನೆಯ ಮಾದರಿ. ಇದು ಆಕೃತಿಶೋಧಕ್ಕಿಂತ ಆಶಯಶೋಧಕ್ಕೆ ಹೆಚ್ಚು ವಾಲುತ್ತದೆ. ವ್ಯಾಖ್ಯಾನಾತ್ಮಕ ಮಾದರಿಯಿದು. ಸ್ಥೂಲವಾಗಿ ಹೇಳುವುದಾದರೆ ಮೈಸೂರು ಮಾದರಿಯ ಫಲಿತಾಂಶ ಚರಿತ್ರೆಯ ಶೋಧ, ಧಾರವಾಡ ಮಾದರಿಯ ಫಲಿತಾಂಶ ಸಂಸ್ಕೃತಿಶೋಧ.

ಸಂದರ್ಶಕ: ನೀವು ಇವೆರಡರಲ್ಲಿ ಯಾವುದನ್ನು ಆಯ್ದುಕೊಳ್ಳುತ್ತೀರಿ? ಏಕೆ?

ಕಲಬುರ್ಗಿ: ನಾನು ಮತ್ತು ನನ್ನ ಸಮಕಾಲೀನ ಕನ್ನಡ ವಿದ್ವಾಂಸರು ಹೆಚ್ಚಾಗಿ ಮೈಸೂರು ಮಾದರಿಯನ್ನು ಅನುಸರಿಸಿ ಕೆಲಸ ಮಾಡಿದೆವು. ಆಗ ಸಾಮಾನ್ಯವಾಗಿ ಪೂರಕ ಶಿಸ್ತುಗಳನ್ನು ಬಳಕೆ

ಮಾಡುವ ವಿಧಾನವಾಗಲೀ, ತಿಳಿವಳಿಕೆಯಾಗಲೀ ಇರಲಿಲ್ಲ. ನಾನು ಕೆಲವು ವರ್ಷಗಳಿಂದ ಈ ಬಗ್ಗೆ ಮರುಚಿಂತನೆ ಮಾಡಿ, ಸಂಸ್ಕೃತಿಶೋಧಕ್ಕೆ ಹೊರಳಿದ್ದೇನೆ. ವ್ಯಾಖ್ಯಾನಾತ್ಮಕ ವಿಧಾನವನ್ನು ಪ್ರೀತಿಸುತ್ತಿದ್ದೇನೆ. ಹೀಗಾಗಿ ನನ್ನ ಬರವಣಿಗೆ ಸಂಶೋಧನೆಗೆ ಸಂಶೋಧನೆ, ವಿಮರ್ಶೆಗೆ ವಿಮರ್ಶೆಯೆ ನಿಸತೊಡಗಿದೆ.

ಸಂದರ್ಶಕ: ಸಂಶೋಧಕರಾಗಿ ಬೆಳೆದಿರುವ ನೀವು ಸಂಶೋಧನ ವಾತಾವರಣ ನಿರ್ಮಾಣವಾಗಲು ಮಾಡಿದ ಪ್ರಯತ್ನಗಳೇನು?

ಕಲಬುರ್ಗಿ: ವ್ಯಕ್ತಿಗತವಾಗಿ ಸಂಶೋಧನೆಯ ಜೊತೆಗೆ ಇನ್ನೊಂದು ಸಾಧನೆ ಮಾಡಿದ್ದೇನೆ. ಅದು ಸಾಂಸ್ಥಿಕ ಯೋಜನೆಗಳು. ಉದಾಹರಣೆಗೆ ಕನ್ನಡ ಹಸ್ತಪ್ರತಿಗಳ ಸಂಗ್ರಹಣೆ ಮತ್ತು ಸೂಚಿರಚನೆ, ಸಮಗ್ರ ವಚನಸಾಹಿತ್ಯದ ಪ್ರಕಟನೆ, ಕರ್ನಾಟಕದ ನೆರೆಯ ರಾಜ್ಯಗಳ ಹಸ್ತಪ್ರತಿಗಳ ಸಂಗ್ರಹಕಾರ್ಯ, ಮಾನಸೋಲ್ಲಾಸ ಅನುವಾದ ಯೋಜನೆ, ಗದುಗಿನ ತೋಂಟದಾರ್ಯ ಮಠದ ವತಿಯಿಂದ ಅಪ್ರಕಟಿತ ವೀರಶೈವ ಗ್ರಂಥಗಳ ಪ್ರಕಟನ ಯೋಜನೆ, ಪುಣ್ಯಪುರುಷರ ಮಾಲೆಯಡಿ ನೂರೈವತ್ತಕ್ಕೂ ಹೆಚ್ಚು ಗ್ರಂಥ ಪ್ರಕಟನೆ, ಬೆಳಗಾವಿಯ ನಾಗನೂರು ಮಠದ ಗ್ರಂಥ ಪ್ರಕಟನ ಯೋಜನೆ, ಇವೆಲ್ಲ ನನ್ನ ಪ್ರೀತಿಯ ಕೆಲವು ಸಾಂಸ್ಥಿಕ ಕೆಲಸಗಳು. ಇದರಲ್ಲಿ ಒಂದರ್ಧ ಸಂಶೋಧನೆಯ ಕೆಲಸ. ಇನ್ನೊಂದರ್ಧ ಯೋಜನೆಯ ಕೆಲಸ.

ಸಂದರ್ಶಕ: ಇಂಥ ಕೆಲಸಕ್ಕೆ ನಿಮಗೆ ಸ್ಫೂರ್ತಿಯೆಲ್ಲಿಂದ ಬಂತು?

ಕಲಬುರ್ಗಿ: ನಾನು ಈ ಪ್ರಶ್ನೆಗೆ ಇನ್ನೊಂದು ಸಂದರ್ಭದಲ್ಲಿ ಆಗಲೇ ಉತ್ತರಿಸಿದ್ದೇನೆ. ಆದರೂ ಇನ್ನೊಮ್ಮೆ ಉತ್ತರಿಸುತ್ತೇನೆ. ನಾನು ಅವಿಭಕ್ತ ಕುಟುಂಬದಿಂದ ಬಂದವನು. ಕಠಿಣ ಪರಿಶ್ರಮ ರೈತಾಪಿ ಕುಟುಂಬದ ಹೆಗ್ಗುರುತು. ಈಗಲೂ ನಾನು ಭಾವನಾತ್ಮಕವಾಗಿ ಹಾಗೂ ವ್ಯಾವಹಾರಿಕವಾಗಿ ಅಂಥ ಕುಟುಂಬದ ಸದಸ್ಯನೇ ಆಗಿದ್ದೇನೆ. ಹೀಗಾಗಿ ನನ್ನ ವ್ಯಕ್ತಿತ್ವ ವಿಕಾಸದಲ್ಲಿ ಅವಿಭಕ್ತಪ್ರಜ್ಞೆ ಮತ್ತು ಶ್ರಮಸಂಸ್ಕೃತಿಯ ಹಿನ್ನೆಲೆ ಬಹಳ ಮುಖ್ಯ ಪಾತ್ರ ವಹಿಸಿದೆ. ನನ್ನ ಸಾಂಸ್ಥಿಕ ಕೆಲಸದ ವೈಖರಿ ಇದರಿಂದಲೇ ಸ್ಫೂರ್ತಿ ಪಡೆಯಿತು.

ಸಂದರ್ಶಕ: ಸದ್ಯ ಮತ್ತೆ ಯಾವ ಯೋಜನೆಗಳಿವೆ?

ಕಲಬುರ್ಗಿ: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಾನಸೋಲ್ಲಾಸ ಅನುವಾದ ಯೋಜನೆ ಪೂರ್ತಿಯಾಗಿಲ್ಲ. ಅದರ ಇನ್ನೊಂದು ಭಾಗ ಪ್ರಕಟವಾಗಬೇಕು. "ಸಮಗ್ರ ದಾಸಸಾಹಿತ್ಯ, ಸಂಶೋಧನೆ ಪ್ರಕಟಣೆಗೆ ಯೋಜನೆ" ಹಾಕಿಕೊಟ್ಟಾಗಿದೆ. ವಚನಸಾಹಿತ್ಯ ಸಂಪುಟಗಳ ಮಾದರಿಯಲ್ಲಿ ಆ ಕೆಲಸ ಯೋಜಿಸಿ ಬೇರೆ ಬೇರೆಯವರಿಗೆ ಒಪ್ಪಿಸಿಯಾಗಿದೆ. ಇಂಥದೇ ಸಮಗ್ರ ಜೈನಗೀತಸಾಹಿತ್ಯ ಸಂಪುಟ ಒತ್ತಟ್ಟಿಗೆ ಬಂದು ಪ್ರಕಟವಾದರೆ ನಾವು ಧನ್ಯರು.

ಪ್ರಜಾವಾಣಿ–೧೬ ನವ್ಹೆಂಬರ್ ೧೯೯೭

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೨೯೪

ವಸ್ತು ಸತ್ಯ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ

❖

ಸಂದರ್ಶಕರು : ವಿಜಯಕಾಂತ ಪಾಟೀಲ

ಪ್ರೇರಣೆ :

ಸರ್ ಸಂಶೋಧನೆಗೆ ನಿಮ್ಮನ್ನು ತೊಡಗಿಸಿಕೊಳ್ಳಲು ನೀಡಿದ ಪ್ರೇರಣೆ ಯಾವುದು?

ಪರಂಪರೆಯ ಮೇಲಿನ ಪ್ರೀತಿ ನನ್ನನ್ನು ಸಂಶೋಧನೆಯೆಡೆಗೆ ಎಳೆದುಕೊಂಡು ಬಂದಿತು. ಬಾಲ್ಯದಿಂದಲೇ ನನಗೆ ಪರಂಪರೆಯ ಪ್ರಜ್ಞೆ ಇತ್ತು. ಮನೆತನದ ಪರಂಪರೆ, ಹೆಸರು ಉಳಿಸಿಕೊಂಡು ಹೋಗಬೇಕು ಅನ್ನುವ ಕಳಕಳಿ ಪ್ರೀತಿಯಿಂದಾಗಿ ಶೋಧಿಸುವ ಕೆಲಸಕ್ಕೆ ಹಚ್ಚಿತು. ಮನೀ ಮ್ಯಾಲಿನ ಪ್ರೀತಿ ವಿಸ್ತರಿಸಿದರೆ ನಾಡಿನ ಪ್ರೀತಿ–ದೇಶದ ಪ್ರೀತಿಯೂ ಆಗ್ತದೆ. ಪರಂಪರೆಯ ಮೇಲಿನ ಪ್ರೀತಿ ಸಂಶೋಧಕ ಆಗಲು ಪ್ರೇರೇಪಿಸುತ್ತದೆ. ಮುಂದೆ ಬರಬರುತ್ತ ಅಭ್ಯಾಸ–ಹಿರಿಯ ವಿದ್ವಾಂಸರ ಒಡನಾಟ ಪ್ರೇರಣೆಯಾದವು. ಆಗ ಕನ್ನಡ ವಿಭಾಗದಲ್ಲಿ ನಡೆಯುತ್ತಿದ್ದ ಕನ್ನಡ ಪರ ಚಟುವಟಿಕೆಗಳು, ಕನ್ನಡ ಪರ ಕೆಲಸಗಳು, ವಚನ ಸಾಹಿತ್ಯ, ಶಾಸನಗಳು ಪರಂಪರೆಯ ಭಾಗ ಎನ್ನುವ ಪ್ರೀತಿ ಸಂಶೋಧನೆಗೆ ತೊಡಗಿಸಿಕೊಳ್ಳಲು ಕಾರಣವಾಯ್ತು.

ಪರಂಪರೆಯ ಪ್ರಜ್ಞೆ ಇಲ್ಲದವರು ಸಂಶೋಧಕರಾಗಲು ಸಾಧ್ಯವಿಲ್ಲವೆ?

ಇಲ್ಲ. ಖಂಡಿತವಾಗಿಯೂ ಸಾಧ್ಯವಿಲ್ಲ. ರೆಸಿಡೆನ್ಸ್ ಸ್ಕೂಲ್‌ಗಳಲ್ಲಿ ಕಲಿತ ಮಕ್ಕಳಲ್ಲಿ "ನನ್ನವರು" ಎನ್ನುವ ಪ್ರೀತಿ ಕಡಿಮೆಯಾಗಿ ಪರಂಪರೆಯ ಪ್ರಜ್ಞೆ ಇಲ್ಲವಾಗ್ತದೆ. ಹೊಕ್ಕುಳ ಹುರಿ ಕತ್ತರಿಸಿದವರಿಂದ ಪರಂಪರೆಯ ಪ್ರಜ್ಞೆ ಹೇಗೆ ಬೆಳೆಸಿಕೊಳ್ಳಲು ಸಾಧ್ಯ?

ಹಿಂದೆ ಗುರುಕುಲ ಮಾದರಿಯ ಶಿಕ್ಷಣ ಪದ್ಧತಿ ಇತ್ತಲ್ಲ–

ಹಿಂದಿನ ಗುರುಕುಲ ಮಾದರಿಗಿಂತ ಭಿನ್ನವಾದದ್ದು ರೆಸಿಡೆನ್ಸಿಯಲ್ ಸ್ಕೂಲ್ ವ್ಯವಸ್ಥೆ. ರೆಸಿಡೆನ್ಸಿಯಲ್ ಸ್ಕೂಲ್ ವ್ಯವಸ್ಥೆ ನನ್ನ ಹೊಲ ಮನೆ ಎನ್ನುವ ಆಸಕ್ತಿ–ಪ್ರೀತಿ ಇಲ್ಲವಾಗಿ ಪರಂಪರೆಯ ಶೋಧ ದೂರ ಮಾಡ್ತದೆ. 'ಅವಿಭಕ್ತ ಪ್ರಜ್ಞೆ' ಬಹಳ ಮುಖ್ಯವಾಗ್ತದೆ. ಅದಿಲ್ಲದೆ ಸಂಶೋಧಕನಾಗಲು ಸಾಧ್ಯವಿಲ್ಲ. ರೆಸಿಡೆನ್ಸ ಸ್ಕೂಲ್‌ಗಳಲ್ಲಿ ಕಲಿತವರು ಸಂಶೋಧಕರಾಗಲು ಸಾಧ್ಯವಿಲ್ಲ. ಪರಂಪರೆಯ ಕೊಂಡಿ ಕಳಚಿಕೊಂಡವರಿಗೆ ಶೋಧಿಸುವ ಕೆಲಸ ಹೇಗೆ ಪ್ರಿಯವಾದೀತು.

ಪರಿಶ್ರಮ :

ಸರ್, ನಿಮ್ಮ ಎಲ್ಲ ಕೆಲಸಗಳಲ್ಲಿಯೂ ಪರಿಶ್ರಮ ಎದ್ದು ಕಾಣುತ್ತದೆ. ಹೀಗೆ ಸತತವಾಗಿ ನಿಮ್ಮನ್ನು ಕೆಲಸದಲ್ಲಿ ತೊಡಗಿಸಿಕೊಳ್ಳುವುದರ ಹಿಂದಿನ ಪ್ರೇರಣೆ ಏನು?

ನಮ್ಮ ತಂದೆ-ತಾಯಿ. ಅವರು ಇಪ್ಪತ್ನಾಲ್ಕು ತಾಸು ದುಡೀತಿದ್ದರು. ದುಡಸ್ತಿದ್ದರು. ನನಗೆ ಮೊದಲಿನಿಂದಲೂ ಇದು ದೊಡ್ಡ ಕೆಲಸ-ಸಣ್ಣ ಕೆಲಸ ಅನ್ನೊ ತಾರತಮ್ಯ ಇರಲಿಲ್ಲ. ಎಂ.ಎ ಮುಗಿದ ಮ್ಯಾಲೂ ನಾ ಹುಲ್ಲಿನ ಹೊರೆ ಹೊತ್ತುಕೊಂಡು ಬಂದಿದ್ದೆ. ನಮ್ಮಪ್ಪ ಹೇಳ್ತಿದ್ದರು "ಅಭಿಮಾನ ಅಗಸಿ ಬಾಗಿಲಗಿ ಕಟ್ಟಿ ಬರ್ರಿ" ಅಂತ. ಶ್ರಮವಹಿಸುವುದೇ ಸಂಸ್ಕೃತಿ ಆಯ್ತು. ಮಧ್ಯಮ ವರ್ಗದಿಂದ ಬಂದ ನಾವು ದುಡಿಯುವುದು ತೀರಾ ಅನಿವಾರ್ಯವೇನಾಗಿರಲಿಲ್ಲ. ಆದರೆ ಮನ್ಯಾಗಿನ ವಾತಾವರಣ, ಅಪ್ಪ ಅವ್ವನ ಸತತ ಪರಿಶ್ರಮದ ಕೆಲಸಗಳು ಅನಿವಾರ್ಯವಾಗಿಸಿದ್ದವು. ಇದರ ಜೊತೆ ಜೊತೆಗೆ ಹಳಕಟ್ಟಿಯವರ "ದುಡಿಯುವವನ ಮನಸ್ಸು ಸ್ವಚ್ಛ ಇರ್ತದೆ" ಎನ್ನುವ ಮಾತು ನನ್ನ ಮೇಲೆ ಪರಿಣಾಮ ಮಾಡಿತು ಹಾಗೂ ಕನ್ನಡ ಅಧ್ಯಯನ ಪೀಠದಲ್ಲಿ ಆರ್. ಸಿ. ಹಿರೇಮಠರ ಸತತ ಪರಿಶ್ರಮವೂ ಕೂಡ ನನ್ನನ್ನು ಜಾಗ್ರತವಾಗಿಟ್ಟಿತು.

ಪರಿಸರ :

ಕಾವ್ಯ ಅಭಿವ್ಯಕ್ತಿಯ ಮಾಧ್ಯಮ ಅಂತ ಈಗಲೂ ಅನ್ನಿಸಿದೆಯೆ?

ಹೌದು. ನನ್ನ ಅಭಿರುಚಿಗಳೇ ನನಗೆ ಮಿತಿ ಆದವು. ನಾನು ಸೃಜನಶೀಲ ಲೇಖಕನಾಗಿ ಬೆಳೆಯಬಹುದಿತ್ತು. ನನ್ನ ಹವ್ಯಾಸ ಮಿತಿಗಳನ್ನು ರೂಪಿಸಿದವು. ಸಂಶೋಧನೆಯ ಹವ್ಯಾಸವೇ ಸಂಶೋಧಕನ ಮಿತಿ ಆಗಲಿಲ್ಲ. ಹಳ್ಳಿಯಿಂದ ಬಂದ ಮಧ್ಯಮವರ್ಗದ ನಾನು ರಕ್ಷಣಾತ್ಮಕ ವ್ಯಕ್ತಿತ್ವ ಬೆಳೆಸಿಕೊಂಡು ಬಂದಿದ್ದೆ. ಗ್ರಾಮೀಣ ಪ್ರಜ್ಞೆಯ ಜೀವಾಳವಾದ "ನೈತಿಕತೆ" ನನ್ನನ್ನು ನಿಯಂತ್ರಿಸಿತು. ಸೃಜನಶೀಲವಾಗಿ ಬೆಳೆಯಬಹುದಾದ ಸ್ಪರ್ಧಾತ್ಮಕ ವ್ಯಕ್ತಿತ್ವ , ರಭಸದಿಂದ ಮುನ್ನುಗ್ಗುವ ಧೈರ್ಯ ನನಗಿರಲಿಲ್ಲ. ಧಾರವಾಡದ ಬದಲು ಮೈಸೂರಿನಲ್ಲಿದ್ದಿದ್ದರೆ ಕವಿಯಾಗಿರುತ್ತಿದ್ದೆ. ಆಸಕ್ತಿ ಪ್ರಭಾವಿಯಾಗಲು ಪರಿಸರ ಕಾರಣವಾಯ್ತು. ಸಂಶೋಧನೆಯನ್ನು ಆಯ್ದುಕೊಂಡ ಬಗ್ಗೆ ವಿಷಾದವೇನೂ ಇಲ್ಲ. ಸಂಶೋಧನೆ-ಅಭ್ಯಾಸ, ಶ್ರಮ, ವ್ಯುತ್ಪತ್ತಿ ಬಯಸುತ್ತದೆ. ಕಾವ್ಯಕ್ಕೆ ಬದುಕಿನ ಅನುಭವ ಬೇಕಿದ್ದರೆ, ಸಂಶೋಧಕನಿಗೆ ಪರಂಪರೆಯ ಪ್ರೀತಿ ಬೇಕು. ಕವಿಗೆ ಮನಸ್ಸೇ ಆಕರ. ಸಂಶೋಧಕನಿಗೆ ಅನುಭವದ ಜೊತೆ ಅಧ್ಯಯನದ ಆಕರವೂ ಬೇಕು. ಸಂಶೋಧನೆಯಲ್ಲಿ ಹೊರಗಿನ ಸಮಸ್ಯೆಗಳನ್ನು ಆರೋಪಿಸಿಕೊಂಡು ಕೆಲಸ ಮಾಡಬೇಕಾಗ್ತದೆ. ಒಳಗಿನ ಆಂತರಿಕ ತುಮುಲಗಳನ್ನು ಹೇಳಲು ಕವಿತೆಯ ಮಾಧ್ಯಮ ಬೇಕು ಅನ್ನಿಸ್ತು. ಬದಲಾವಣೆಗಾಗಿ ಕಾವ್ಯ ಬರೆಯಲಾರಂಭಿಸಿದೆ. ಬರವಣಿಗೆಯನ್ನು ಬಿಡುವ ಉದ್ದೇಶ ಇಲ್ಲವೇ ಇಲ್ಲ. ಇಷ್ಟಾಗಿಯೂ ಸಂಶೋಧನೆ ನನ್ನ ಮೊದಲ ಆಯ್ಕೆ. ಆ ಬಗ್ಗೆ ಸಂತಸ ಸಮಾಧಾನ ಖುಷಿ ಇದ್ದೇ ಇದೆ.

ಸೃಜನಶೀಲತೆ :

ಸಂಶೋಧನೆಯನ್ನು ಸೃಜನೇತರ ಎಂದು ಪರಿಗಣಿಸುವುದರ ಬಗ್ಗೆ ಏನು ಹೇಳ್ತೀರಿ?

ಸೃಜನ-ಸೃಜನೇತರ ಅಂತ ಕರೆಯುವುದಾದರೆ ಸಂಶೋಧನೆ-ಸಂಶೋಧನೇತರ ಅಂತ ಯಾಕೆ ಅನ್ನಬಾರದು? ಶೂದ್ರ ಮುಟ್ಟಿದ್ದು ಮೈಲಿಗೆಯಾಗುವುದಾದರೆ ಬ್ರಾಹ್ಮಣ ಮುಟ್ಟಿದ್ದೂ ಮೈಲಿಗೆ

ಯಾಕಾಗುವುದಿಲ್ಲ? ಸೃಜನ–ಸೃಜನೇತರದ ವರ್ಗೀಕರಣ ಅನುಕೂಲತೆಗಾಗಿ ಕರೆದುಕೊಳ್ಳಬೇಕೆ ವಿನಾ ವಿಪರೀತ ಅರ್ಥ ಹಚ್ಚಬಾರದು. ಸಂಶೋಧನೆಯ ಹಿಂದೂ "ಸೃಜನ ಪ್ರಜ್ಞೆ" ಕೆಲಸ ಮಾಡುತ್ತದೆ. ಸೃಜನಕ್ರಿಯೆ ಇರದೆ ಸೃಷ್ಟಿಕ್ರಿಯೆ ಇಲ್ಲ. ಸೃಜನ ಕ್ರಿಯೆಯ ರೀತಿ ಬೇರೆ ಬೇರೆ ಇರಬಹುದು. ಅಭಿವ್ಯಕ್ತಿ ರೀತಿಯಲ್ಲಿ ಕವಿ ಸಾಹಿತ್ಯ, ವಾಚ್ಯ, ಲಕ್ಷ್ಯ, ವ್ಯಂಗ್ಯಗಳನ್ನು ಬಳಸಿಕೊಂಡರೆ, ಸಂಶೋಧಕ ವಾಚ್ಯವನ್ನು ಮಾತ್ರ ಬಳಸಿಕೊಳ್ಳುತ್ತಾನೆ. ಚಿಂತನೆಯಲ್ಲಿ ಸೃಜನಶೀಲತೆ ಇದ್ದೇ ಇರುತ್ತದೆ. ಈಗೀಗ ಸಂಶೋಧನೆ ವಿಮರ್ಶೆಯನ್ನು ಒಳಗೊಳ್ಳುತ್ತಿದೆ. ವಿಮರ್ಶೆ ಸಂಶೋಧನೆಯ ಭಾಗ ಆಗ್ತಿದೆ. ವಿಶ್ಲೇಷಣೆಯಿಂದ ವ್ಯಾಖ್ಯಾನಕ್ಕೆ ಬಂದರೆ ಸೃಜನಶೀಲತೆ ಬರುತ್ತದೆ. Fact ನಿಂದ Truthಗೆ.

ಅಭ್ಯಾಸದ ನೆಲೆಗಟ್ಟು :

ಸರ್, ಸಂಶೋಧನೆ ಸತ್ಯಾನ್ವೇಷಣೆಯಾದರೆ "ಸತ್ಯ" ಒಬ್ಬರಿಂದ ಇನ್ನೊಬ್ಬರಿಗೆ ಭಿನ್ನವಾಗಿರಲು ಸಾಧ್ಯವಿದೆಯಲ್ಲವೆ?

ವಸ್ತುಸ್ಥಿತಿ ಮತ್ತು ವಸ್ತುಸತ್ಯ. Fact ಮತ್ತು Truth ವಸ್ತುಸ್ಥಿತಿಯಲ್ಲಿ ಎಲ್ಲರ ಅಭಿಪ್ರಾಯ ಒಂದೇ ಇರ್ತದೆ. ಅದು ಸ್ಥಗಿತವಾಗಿರುತ್ತದೆ. ವಸ್ತುಸತ್ಯ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತ ಹೋಗುತ್ತದೆ. ಚಲನಶೀಲವಾಗಿರುತ್ತದೆ. ಅದಕ್ಕಾಗಿಯೇ "ಸತ್ಯವನ್ನು ಸಮಗ್ರವಾಗಿ ಕಂಡವರಿಲ್ಲ" ಎನ್ನುವ ಮಾತಿದೆ. ಅಭ್ಯಾಸದ ನೆಲೆಗಟ್ಟು ಸತ್ಯದ ಸಮೀಪಕ್ಕೆ ಹೋಗಲು ಕಾರಣವಾಗ್ತದೆ. ಸರಿಯಾದ ನೆಲೆಗಟ್ಟಿಲ್ಲದೇ ಹೊರಟಾಗ ಕೇಳಿದ ಸತ್ಯದ ಬಗ್ಗೆ ಅನುಮಾನಗಳು ಬರ್ತವೆ. ಸತ್ಯ ಅಪೂರ್ಣ ಅನಿಸ್ತದೆ. ಆದರೆ ಅಲ್ಲ.

ಪಂಪ ಪ್ರಶಸ್ತಿ ಪ್ರಕಟವಾದಾಗ ನಿಮಗೆ ಏನನಿಸಿತು?

ಖುಷಿಯಾಯ್ತು. ಸಂತಸವಾಯ್ತು ಅಂತ ಹೇಳದಿದ್ದರೆ ಆತ್ಮವಂಚನೆಯಾಗ್ತದೆ. ಶ್ರಮಕ್ಕೆ ಬೆಲೆ ಇದೆ, ಶ್ರಮ ವೇಸ್ಟ್ ಅಗುವುದಿಲ್ಲ ಅನಿಸ್ತು.

ಪೂರ್ಣ ಸತ್ಯ :

ಸಂಶೋಧನೆಯ ವಿವಾದಗಳಿಗೆ ಹೇಗೆ ಪ್ರತಿಕ್ರಿಯಿಸುತ್ತೀರಿ? ಸಂಶೋಧಕನಿಗಿರಬೇಕಾದ ಸಾಮಾಜಿಕ ನಿಲುವುಗಳೇನು?

ಆತ್ಮಸಾಕ್ಷಿ ಒಳಗಿನ ಬಾಸ್ ಖುಷಿಯಾದರೆ ಸಾಕು. ಬೇರೆಯವರನ್ನು ಮೆಚ್ಚಿಸಬೇಕಿಲ್ಲ. ಅಸ್ತಿತ್ವವೇ ಹಾಳಾದರೂ ಸಾಮಾಜಿಕ ಒತ್ತಡಗಳಿಗೆ ತಾತ್ವಿಕತೆಗಳನ್ನು ಬಿಡಬಾರದು. ಅಸ್ತಿತ್ವ ಹಾಳಾಗುವ ರೀತಿ ಕೂಡ ಮೇಲ್ನೋಟಕ್ಕೆ ಹಾಗನ್ನಿಸಿದರೂ ಭೌತಿಕವಾದ ಹಾಳಾಗುವಿಕೆಯೇ ಹೊರತು, ಅಸ್ತಿತ್ವದ ನಾಶ ಅಲ್ಲ. ಆಗುವುದಿಲ್ಲ. ವ್ಯಕ್ತಿ ಸಮಾಜದ ಭಾಗ. ತನ್ನ ಅಭಿಪ್ರಾಯವನ್ನು, ಸ್ಪಷ್ಟವಾಗಿ ಕಂಡ ಸತ್ಯವನ್ನು ಹೇಳಲೇಬೇಕು. ಕೆಲವು ಸಲ ಆಘಾತಕ್ಕೆ ಒಳಗಾಗಬೇಕಾಗ್ತದೆ. ಬಸವಣ್ಣನವರ "ಕೂಡಲಸಂಗಮದೇವಾ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ" ಎನ್ನುವ ವಚನವನ್ನು ಇಲ್ಲಿ ಉದಾಹರಿಸಬಹುದು. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸತ್ಯಕ್ಕೆ ಅಪಚಾರವಾಗದ ರೀತಿಯಲ್ಲಿ ಹೇಳಬೇಕು. ಹೇಳುವ ಸತ್ಯದಿಂದ ಸಮಾಜಕ್ಕೆ ಒಳ್ಳೆಯದಾಗುತ್ತದೆ ಎನ್ನುವ ಹಾಗಿದ್ದರೆ ಸತ್ಯ ಎಷ್ಟೇ ಕಹಿಯಾಗಿದ್ದರೂ ಹೇಳಲೇಬೇಕು. ಸಮಾಜೋನ್ನತಿಗೆ ಪೂರಕವಾಗುವ ಮಾತು ಪರಿಸರಕ್ಕೆ ನೋವಾದರೂ ಹೇಳಬೇಕು. ಹೇಳುವ ಮುನ್ನ ಪೂರ್ಣಸತ್ಯ ಪ್ರಮಾಣದಲ್ಲಿ ಕಂಡಿರಬೇಕು.

ವಚನಗಳು :

ವಚನಗಳನ್ನು "ಶುದ್ಧ ಕಾವ್ಯ"ದ ತುಣುಕುಗಳಾಗಿ ಓದಬಹುದೆ?

ಶಾಸ್ತ್ರ ಓದದೇ ವಚನಗಳನ್ನು ಓದಬಹುದು. ಸಾಹಿತ್ಯ ಓದಲು ಸಂಸ್ಕಾರ ಬೇಕು. ಹಾಗೆಯೇ ವಚನ ಓದಲು ಶಾಸ್ತ್ರದ ಸಂಸ್ಕಾರ ಬೇಕು. ವಚನಗಳು ಸಾಹಿತ್ಯವಲ್ಲದಿದ್ದರೆ ಯಾವುದು ಸಾಹಿತ್ಯ? ವಚನ ಸಾಹಿತ್ಯ ಬೇರೆ ಸಾಹಿತ್ಯಕ್ಕಿಂತ ಭಿನ್ನವಾದದ್ದು. ವಚನಕಾರರು ಮೂಲತಃ ಕವಿಗಳಲ್ಲ. ಸಮಾಜ ಸುಧಾರಣೆಗೆ ಹೊರಟು ಕವಿತೆ ನಿಷ್ಪತ್ತಿಯಾಯಿತು. ಕಾವ್ಯ ಕಾಯಸಾಹಿತ್ಯವಾದರೆ, ಆ ವಚನಗಳು ಆತ್ಮ ಸಾಹಿತ್ಯ.

ಸಂಶೋಧನೆಯ ಹಲವು ಭಿನ್ನ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ನಿಮಗೆ ಅತ್ಯಂತ ಪ್ರೀತಿಯ ವಿಭಾಗ ಯಾವುದು?

ಅಂತರ್‌ಶಿಸ್ತೀಯ ಶೋಧ ನನಗೆ ಅತ್ಯಂತ ಪ್ರಿಯವಾದ ವಿಭಾಗ. ಪರಂಪರೆಯ, ಸಂಸ್ಕ್ರತಿಯ ಶೋಧ ಕೂಡ ನನ್ನ ಪ್ರಿಯ ಕ್ಷೇತ್ರ.

ಕನ್ನಡ ಕಾವ್ಯ ಪರಂಪರೆಯಲ್ಲಿ "ಬಸವಣ್ಣ" ನಷ್ಟು ಮತ್ಯಾರು ನಿಮ್ಮನ್ನು ಆವರಿಸಲಿಲ್ಲ?

ಬಸವಣ್ಣ, ಪಂಪ, ಕುಮಾರವ್ಯಾಸ ನನಗೆ ಪ್ರಿಯವಾದ ಕವಿಗಳು, ನಾನು ಬಸವಣ್ಣನಿಗಿಂತ ಪಂಪನ ಬಗ್ಗೆ ಬರೆದುದೇ ಹೆಚ್ಚು. ಕವಿಯಾಗಿ ಪಂಪನ ಸಾಧನೆ ಅತ್ಯದ್ಭುತ. ಪಂಪನ ತಂದೆ ಜೈನನಾಗಿ ಮತಾಂತರ ಹೊಂದಿದ್ದೇ ಪಂಪನೊಳಗಿನ ಕವಿಯನ್ನು ಹುಟ್ಟಿಸಿತು. ಅಗ್ರಹಾರ ಸಂಸ್ಕೃತಿಯಲ್ಲಿ ವಿದ್ವಾಂಸರು ಇರಬಹುದಿತ್ತೇ ಹೊರತು, ಕವಿ ಅಲ್ಲ. ಪಂಪ "ಭಾರತ"ವನ್ನು ಡಿ ಮಿಥಿಫೈ ಮಾಡುವಲ್ಲಿ ವಿಫಲನಾದರೂ ಅವನೊಳಗಿನ ಕವಿತ್ವ ಅನನ್ಯವಾದುದು. ಕುಮಾರವ್ಯಾಸ ಕೂಡ ಅಷ್ಟೇ ಮಹತ್ವದ ಕವಿ, ಆದರೆ ಕುಮಾರವ್ಯಾಸನ ಕಾವ್ಯ ನಿರೀಕ್ಷಿಸುವ ಶ್ರಮ ಕಾಲ ನನ್ನಿಂದ ನೀಡಲಾಗಲಿಲ್ಲ.

ಶೈಕ್ಷಣಿಕ ವ್ಯವಸ್ಥೆ:

ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪ್ರಾಧ್ಯಾಪಕನಾಗಿ ಕಾರ್ಯ ನಿರ್ವಹಿಸಿದ ನಿಮಗೆ ತೃಪ್ತಿ ಸಿಕ್ಕಿದೆಯೆ?

ಪ್ರಾಧ್ಯಾಪಕನಾಗಿ ಕಾರ್ಯನಿರ್ವಹಿಸಿದ ತೃಪ್ತಿ ಇದೆ. ಕ್ಲಾಸ್ ರೂಂ ಶಿಕ್ಷಣ ಮರೆತು ಹೋಗುತ್ತಿದೆ. ಬೋಧನ ಶಿಕ್ಷಣ ಪದ್ಧತಿಯಲ್ಲಿ ತಪ್ಪಿದೆ. ಆಮೂಲಾಗ್ರ ಬದಲಾವಣೆ ಆಗಬೇಕು. ಉನ್ನತ ಶಿಕ್ಷಣದ ಹಂತದಲ್ಲಾದರೂ "ಆನ್ವಯಿಕ ಶಿಕ್ಷಣ" ಬೇಕೇ ಬೇಕು. ಉತ್ತಮ ಶಿಕ್ಷಕ-ಉತ್ತಮ ಶಿಕ್ಷಣ ಅತ್ಯಗತ್ಯ. ನಾವೀಗ ಬಹುಭಾಷಾ ಸಂದರ್ಭದಲ್ಲಿದ್ದೇವೆ. ಒಂದೇ ಭಾಷೆ ಕಲಿತರೆ ಅಪ್ರಸ್ತುತರಾಗುತ್ತೇವೆ.

ಸರ್, ಕನ್ನಡ ವಿಭಾಗಗಳ ಬಗ್ಗೆ-

ಕರ್ನಾಟಕದಲ್ಲಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳೆಲ್ಲ ಹೊಸತನ್ನು ಯೋಚಿಸಲಾಗದೆ, ವಿಚಾರಿಸಲಾಗದೇ ಮಲೆತುಗಟ್ಟಿ ಹೋಗಿವೆ. ಕನ್ನಡ ಮಾಸ್ತರುಗಳಿಗೇ ಕನ್ನಡ ಕಲಿಸಬೇಕು ಎನ್ನುವ ಸ್ಥಿತಿ ಬಂದೊದಗಿದೆ. ಪರಿಸ್ಥಿತಿ ಸುಧಾರಿಸದೇ ಹೋದರೆ ಕನ್ನಡ ವಿಭಾಗಗಳೆಲ್ಲ 'ಅವಶೇಷ'ಗಳಾಗಿ, ನಾನಾ ರೀತಿಯ ಲಾಬಿ ಕೇಂದ್ರಗಳಾಗುತ್ತವೆ. ಎಲ್ಲ ಕನ್ನಡ ವಿಭಾಗಗಳನ್ನು ಮುರಿದು ಕಟ್ಟಬೇಕು. ಪುನರ್‌ರಚನೆ ಮಾಡಬೇಕು. ಇಲ್ಲದಿದ್ದರೆ ಕೆಲವೇ ದಿನಗಳಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಅಧಃಪತನಕ್ಕಿಳಿಯುವುದರಲ್ಲಿ ಸಂಶಯವೇ ಇಲ್ಲ.

ಸಂಸ್ಥೆಗಳು ಮಿತಿಗಳಾಗಬಾರದಲ್ಲವೆ?

ಹೌದು. ಸಂಸ್ಥೆಯ ಮಿತಿಗಳನ್ನು ಮೀರಿ ವ್ಯಕ್ತಿ ಬೆಳೆಯಬೇಕು. ಸಂಸ್ಥೆಯನ್ನು ಶೋಷಿಸಿ ವ್ಯಕ್ತಿ ಬೆಳೆಯಬಾರದು. ಸಾಮೂಹಿಕ ಪ್ರಜ್ಞೆ ಇಲ್ಲದಿರುವ ಸಂಸ್ಥೆಗಳು ಹಾಳಾಗುತ್ತವೆ.

ಕನ್ನಡ ಅಧ್ಯಯನ ಪೀಠದಲ್ಲಿನ ಪರಿಸ್ಥಿತಿ ಕಲ್ಬುರ್ಗಿಯವರಿಗೆ ಪ್ರತಿಕೂಲವಾಗಿರುವುದು ಸುಳ್ಳು. ಅದು ಕನ್ನಡಕ್ಕೆ ಪ್ರತಿಕೂಲವಾಗಿತ್ತು. ನನಗೆ ಯಾವುದೇ ಮಹತ್ವಾಕಾಂಕ್ಷೆಗಳಿಲ್ಲ. ಅಭಿಮಾನಕ್ಕೆ ಚ್ಯುತಿಯಾಗುವುದನ್ನು ಎಂದೂ ಸಹಿಸುವದಿಲ್ಲ. ಒಣ ಹಪಾಹಪಿ ನನಗಿಲ್ಲ. ಆತ್ಮಾಭಿಮಾನ, ಸ್ವಾಭಿಮಾನ ಕಳೆದುಕೊಂಡು ಕೆಲಸ ಮಾಡಲಾರೆ.

“ನನಗೆ ನಾನೇ ಪ್ರತಿಕೂಲ
ನಾನು ಸಾಯುವುದಿಲ್ಲ
ನನ್ನಲ್ಲಿ ಸತ್ಯ ಜೀವಂತವಾಗಿರುವವರೆಗೆ
ಇದು ಶ್ವಾಸ, ಆತ್ಮವಿಶ್ವಾಸ”

ಕಲ್ಬುರ್ಗಿಯವರ ದನಿಯಲ್ಲಿ ವಿಷಾದ, ನೋವು, ಧ್ವನಿಸುತ್ತಿತ್ತು. ಕನ್ನಡದ ಕೆಲಸ ಮಾಡಿ ಪಡೆದ ಮಾನ-ಸಮ್ಮಾನಗಳು, ಅನುಭವಿಸಿದ ನೋವು ಸಮಾನ ರೀತಿಯವು. ಕಲ್ಬುರ್ಗಿ ಹಲವು ಅಪರೂಪದ ಗುಣಗಳ ವಿದ್ವಾಂಸರು. ಅವರಿಗೆ ಮತ್ತೊಮ್ಮೆ ಅಭಿನಂದನೆ ಸಲ್ಲಿಸಿ ಹೊರ ಬಂದಾಗ ಇಡೀ ದಿನ, ವಾರಗಳನ್ನು ಕಲ್ಬುರ್ಗಿ ಆವರಿಸಿದ್ದರು.

ವಾರಪತ್ರಿಕೆ : ೧೯೯೮

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೨೯೫

ವಿಶ್ವವಿದ್ಯಾಲಯಗಳಲ್ಲಿನ ಕನ್ನಡ ವಿಭಾಗಗಳ ಪುನಾರಚನೆ ಅಗತ್ಯ

❖

ಸಂದರ್ಶಕರು : ಕೇಶವ ಆದಿ

ರಾಜ್ಯದಲ್ಲೀಗ ವಿಶ್ವವಿದ್ಯಾಲಯಗಳ ಸ್ಥಾಪನೆಸಂಸ್ಕೃತಿ ಹೆಚ್ಚುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ವಿಶ್ವವಿದ್ಯಾಲಯಗಳ ಗುಣಮಟ್ಟ ಅದರಲ್ಲಿಯೂ ಈ ವಿಶ್ವವಿದ್ಯಾಲಯಗಳಲ್ಲಿನ ಕನ್ನಡ ವಿಭಾಗಗಳ ಗುಣಮಟ್ಟ ಹೇಗಿದೆ?

ನಿಜ ಹೇಳಬೇಕೆಂದರೆ ವಿಶ್ವವಿದ್ಯಾಲಯಗಳ ಗುಣಮಟ್ಟ ಬಹಳ ಕ್ಷೀಣಿಸಿದೆ. ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಪದವಿ ಪಡೆದು ಹೊರಬರುತ್ತಾರೆ. ಕೆಲವರು ಪಿಎಚ್.ಡಿ. ಪಡೆಯುತ್ತಾರೆ. ಆದರೆ ಬಹುತೇಕ ಮಂದಿಯಿಂದ ಸಮಾಜಕ್ಕೆ ಒಳ್ಳೆಯದಾಗುವ ಸೇವೆ ಲಭ್ಯವಾಗುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದೊಂದು ದಿನ ವಿಶ್ವವಿದ್ಯಾಲಯಗಳ ಕಡೆ ಯಾರೂ ಹೊರಳಿ ನೋಡಲಿಕ್ಕಿಲ್ಲ.

(ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗಗಳ ಪರಿಸ್ಥಿತಿ ಅಲ್ಲಿಯ ಗುಣಮಟ್ಟ ಹೇಗಿದೆ ಎಂದು ಮಾತು ಆರಂಭಿಸುತ್ತಿದ್ದಂತೆಯೇ ಕಲಬುರ್ಗಿ ಅವರ ಮುಖದಲ್ಲಿ ಅತೃಪ್ತಿಯ ಭಾವನೆ ಸ್ಪಷ್ಟವಾಗಿ ಕಂಡಿತು.)

ಎಲ್ಲ ವಿಶ್ವವಿದ್ಯಾಲಯಗಳಲ್ಲಿಯ 'ಕನ್ನಡ ವಿಭಾಗಗಳು ಇಂದು ಕುಸಿಯುತ್ತಿವೆ.' 'ಅಸಾಧಾರಣ ಆಲಸ್ಯದಲ್ಲಿ ಮುಳುಗಿ ಹೋಗಿವೆ'. ಬೇರೆ ಯಾವುದೇ ವಿಭಾಗ ಅಂದರೆ ಇಂಗ್ಲೀಷ್, ಹಿಂದಿ, ಸಮಾಜಶಾಸ್ತ್ರ ಮೊದಲಾದವುಗಳು ಕುಸಿದರೆ ಅವು ಬೇರೆ ಕಡೆ ಬೆಳೆಯುತ್ತವೆ. ಆದರೆ ಕರ್ನಾಟಕದಲ್ಲೆ ಕನ್ನಡ ಕುಸಿದರೆ ಹೇಗೆ? ಈ ವಿಭಾಗದಲ್ಲಿ ಮೊದಲಿನಂತೆ ಕ್ರಿಯಾಶೀಲತೆ, ವೈಭವ ಉಳಿದಿಲ್ಲ. 'ಒಂದೇ ಮಾತಿನಲ್ಲಿ ಹೇಳುವುದಾದರೆ, ಇಂದು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗ ಸತ್ತು ಹೋಗಿದೆ.'

ಯಾವುದೇ ಒಂದು ವಿಭಾಗ ಬೆಳೆಯಬೇಕಾದರೆ, ಪ್ರಗತಿಯ ಹಾದಿಯತ್ತ ಸಾಗಬೇಕಾದರೆ ಆ ವಿಭಾಗದಲ್ಲಿ ದಡ್ಡರು, ದುಷ್ಟರು ಹಾಗೂ ಸೋಮಾರಿಗಳು ಇರಬಾರದು. ಆದರೆ ಈ ಮೂರೂ

ಮಂದಿ ಕನ್ನಡ ವಿಭಾಗಗಳಲ್ಲಿದ್ದಾರೆ. ಉತ್ತಮೋತ್ತಮ ಶಿಕ್ಷಕರು ಹಾಗೂ ವಿದ್ಯಾರ್ಥಿಗಳೂ ಹೊರಗುಳಿದಿದ್ದರೆ, ಕೆಲಸಕ್ಕೆ ಬಾರದವರು ಸೇರಿಕೊಂಡಿದ್ದಾರೆ.

ಕನ್ನಡ ಪ್ರಾಧ್ಯಾಪಕರ ಗುಣಮಟ್ಟವೇ ತೀರಾ ಕಳಪೆ ಇದೆ. ಇಂತಹುದರಲ್ಲಿ ಕನ್ನಡ ವಿಭಾಗಗಳ ಉತ್ತಮ ಗುಣಮ್ಮಟ್ಟದ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದ ಎನಿಸುತ್ತದೆ. ನಮಗೆ ಕೆಲ ಕನ್ನಡ ಶಿಕ್ಷಕರು ಪತ್ರಾ ಬರೀತಿರ್ತಾರ. ಅವುಗಳನ್ನು ಓದಲಿಕ್ಕೆ ನಾಚಿಕೆ ಬರುತ್ತದೆ. ಒಂದು ಪತ್ರದೊಳಗ ಐದಾರು ತಪ್ಪು ಇರ್ತಾವ. ನಮಸ್ಕಾರ ಅಂತ ಬರೆಯುವ ಬದಲು ನಮಸ್ಕಾರ ಅಂತ ಬರೀತಾರ. ಇವರು ವಿಶ್ವವಿದ್ಯಾಲಯ ಶಿಕ್ಷಕರು. ಇಂಥವರಿಂದ ಕನ್ನಡ ಹ್ಯಾಂಗ ಬೆಳೀಬೇಕು.

ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವಿಭಾಗಗಳ ಗುಣಮಟ್ಟ ಸುಧಾರಿಸಬೇಕಾದರೆ ಮೊದಲು ಕನ್ನಡ ವಿಭಾಗಗಳ ಪುನಾರಚನೆಯಾಗಬೇಕು. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಈ ವಿಭಾಗಕ್ಕೆ ದೊಡ್ಡ ಶಸ್ತ್ರ ಚಿಕಿತ್ಸೆಯಾಗಬೇಕು. ಇದೆಲ್ಲಾ ಆಗಬೇಕಾದರೆ ಈಗಿರುವ ಅದಕ್ಷ ಸಿಬ್ಬಂದಿವರ್ಗದವರನ್ನು ಕಡ್ಡಾಯ ನಿವೃತ್ತಿ ಗೊಳಿಸಬೇಕು.

ಇವತ್ತು ವಿಶ್ವವಿದ್ಯಾಲಯಗಳಲ್ಲಿನ ಕನ್ನಡ ವಿಭಾಗಗಳು ಹೇಗಿವೆ ಎಂದರೆ ಅಲ್ಲಿ ಕಲಿಯುವ ಶಿಕ್ಷಣಕ್ಕೂ ಸಮಾಜಕ್ಕೂ ಏನೂ ಸಂಬಂಧವಿಲ್ಲ. ಇಲ್ಲಿಗೆ ಬರುವವರು ಮುಂದೆ ಪ್ರಥಮ ದರ್ಜೆಯಲ್ಲಿ ಪಾಸಾಗುತ್ತಾರೆ. ಆದರೆ ಅವರಿಗೆ ಸರಿಯಾಗಿ ಬೋಧನೆ ಮಾಡಲು ಬರುವುದಿಲ್ಲ. ಈ ಕಡೆ ಒಳ್ಳೆಯ ಸಾಹಿತಿಯೂ ಆಗುವುದಿಲ್ಲ. ಅವರ ಉದ್ದೇಶ ನೌಕರಿಗಾಗಿ ಏನು ಮಾಡಬೇಕು, ಅದನ್ನು ಮಾಡುತ್ತಾರೆ. ಒಂದರ್ಥದಲ್ಲಿ ಹೇಳುವುದಾದರೆ 'ಸಂಬಳಕ್ಕಾಗಿ ಬರುವ ಶಿಕ್ಷಕರು, ಸರ್ಟಿಫಿಕೇಟಿಗಾಗಿ ಬರುವ ವಿದ್ಯಾರ್ಥಿಗಳು' ಇದು ಕನ್ನಡ ವಿಭಾಗಗಳ ಇಂದಿನ ಸ್ಥಿತಿ.

ವಿಶೇಷ ಕಾಳಜಿ ಅಗತ್ಯ: ವಿಶ್ವವಿದ್ಯಾಲಯಗಳಲ್ಲಿಯ ಕನ್ನಡ ವಿಭಾಗಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಬೇಕಾದರೆ ಮೊದಲು ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳು ಕನ್ನಡ ವಿಭಾಗಗಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ಆನ್ವಯಿಕ ಬೋಧನಾ ಕ್ರಮವನ್ನು ತಕ್ಷಣ ಜಾರಿಗೆ ತರಬೇಕು. ಇನ್ನೊಂದು ಕಡೆ ಕನ್ನಡದ ಬಗ್ಗೆ ಪ್ರತಿಯೊಬ್ಬರಲ್ಲಿ ಜಾಗೃತಿ, ಅಭಿಮಾನ ಮೂಡಿಸಲು ಈ ಹಿಂದೆ ಆದಂತೆ ಕನ್ನಡ ಚಳುವಳಿ ಆಗಬೇಕು. ಇದಕ್ಕೆ ಕನ್ನಡದ ಬಗ್ಗೆ ಪ್ರೀತಿ ಇರುವಂತಹ ಕುಲಪತಿಗಳು ಬೇಕು.

ಕನ್ನಡ ವಿಶ್ವವಿದ್ಯಾಲಯಕ್ಕೆ ಅಕ್ಟೋಬರ್ ೨೩ ರಂದು ಒಂಬತ್ತು ವರ್ಷ ತುಂಬುವ ಸಂದರ್ಭದಲ್ಲಿ ವಿ.ವಿ.ಯ ಅಭಿವೃದ್ಧಿಗೆ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ?

ಹೌದು. ಹಲವಾರು ಯೋಜನೆಗಳಿವೆ.

ಕರ್ನಾಟಕ ಅಂದ ಕೂಡಲೇ ಕರ್ನಾಟಕದ ನೆಲ ನೆನಪು ಆಗ್ತದ. ನೆಲಾ ನೆನಪಾದ ಕೂಡ್ಲೆ 'ಸಸಿ' ನೆನಪಾಗ್ತದ, ಆಮೇಲೆ 'ಪ್ರಾಣಿ', 'ಜನ' ಹಾಗೂ ಭಾಷೆ ನೆನಪಾಗ್ತವ. ಇವು ಮೂಲಭೂತ ಅವಶ್ಯಕತೆಗಳು. ಆದರೆ ಇವುಗಳ ಮೂಲ ಪರಿಚಯ ನಮಗ್ಯಾರಿಗೂ ಇಲ್ಲ. ಇಷ್ಟು ವರ್ಷ ವಿಶ್ವವಿದ್ಯಾಲಯಗಳು ಸ್ಥಾಪಿತವಾದವು. ಎಷ್ಟೋ ಸರಕಾರಗಳು ಬಂದು ಹೋದವು. ಆದರೆ ಮೂಲಭೂತ ಅವಶ್ಯಕತೆಗಳ

ಜ್ಞಾನ ಒಂದೇ ಕಡೆ ಸಿಗುವುದಿಲ್ಲ. ಆದ್ದರಿಂದ ಈ ನಿಟ್ಟಿನಲ್ಲಿ ನಾವು ಐದು ಕೋಶಗಳನ್ನು ಹೊರತರಲು ಯೋಜಿಸಿದ್ದೇವೆ.

ಇದರ ಹೆಸರು 'ಕರ್ನಾಟಕ ರಾಜ್ಯ ಕೋಶ.' ಇದರಲ್ಲಿ ಮೊದಲ ಸಂಪುಟ ಕರ್ನಾಟಕ ಭೂಮಿ ಕೋಶ. ಇದು ಕರ್ನಾಟಕದ ನೆಲದ ಬಗ್ಗೆ ಅಂದರೆ ಜಲಸಂಪತ್ತು, ಖನಿಜ ಸಂಪತ್ತು ಮೊದಲಾದ ವಿಷಯಗಳ ಮಾಹಿತಿ ಒಳಗೊಂಡಿರುತ್ತದೆ. ಎರಡನೇ ಸಂಪುಟ 'ಕರ್ನಾಟಕ ಸಸ್ಯ ಕೋಶ.' ವಿವಿಧ ಸಸ್ಯಗಳ ವೈವಿಧ್ಯವು ಈ ಕೋಶದಲ್ಲಿರುತ್ತದೆ. ಮೂರನೆಯದು 'ಕರ್ನಾಟಕ ಪ್ರಾಣಿ ಪಕ್ಷಿ ಕೋಶ.' ಭೂಮಿಯ ಮೇಲೆ ಎಷ್ಟು ಜಾತಿಯ ಪ್ರಾಣಿ ಪಕ್ಷಿಗಳಿವೆ. ಸಾವಿನ ಅಂಚಿನಲ್ಲಿರುವ ಪ್ರಾಣಿ-ಪಕ್ಷಿಗಳ ಉಳಿಸುವ ಪ್ರಯತ್ನದ ಮಾಹಿತಿ ಇದರಲ್ಲಿರುತ್ತದೆ. ನಾಲ್ಕನೆಯದು 'ಕರ್ನಾಟಕ ಜನವರ್ಗ ಕೋಶ' ಇದು ನಮ್ಮಲ್ಲಿ ಎಷ್ಟು ಜಾತಿಗಳಿವೆ, ಪ್ರತಿಯೊಂದರ ಆಚಾರ ವಿಚಾರ, ರೀತಿ-ನೀತಿ ಹಾಗು ಸಂಪ್ರದಾಯಗಳ ವಿವರಗಳನ್ನು ಒಳಗೊಂಡಿರುತ್ತದೆ. ಐದನೆಯ ಸಂಪುಟ 'ಕರ್ನಾಟಕ ಭಾಷಾ ಕೋಶ' ಕರ್ನಾಟಕದೊಳಗೆ ೧೮೬ ಭಾಷೆಗಳಿವೆ. ಈ ಭಾಷೆಗಳ ಪಟ್ಟಿ ಮಾಡಿ ಅವುಗಳ ರಾಚನಿಕ ಸ್ವರೂಪ, ಐತಿಹಾಸಿಕ ಬೆಳವಣಿಗೆ ಹಾಗೂ ಭೌಗೋಲಿಕವಾಗಿ ಇವು ಎಲ್ಲಿ ಇವೆ ಎಂಬುದನ್ನು ಈ ಕೋಶದಲ್ಲಿ ಸೇರಿಸಲಾಗುವುದು. ಈ ಎಲ್ಲ ಐದು ಕೋಶಗಳು ಒಂದು ವರ್ಷದೊಳಗೆ ಬಿಡುಗಡೆಯಾಗಬೇಕು. ಸಾಧ್ಯವಾದರೆ ಅಕ್ಟೋಬರ್ ೨೩ ರಂದು ಆಗ ಈ ವಿಶ್ವವಿದ್ಯಾಲಯಕ್ಕೆ ೯ ವರ್ಷ ತುಂಬುತ್ತದೆ. ಈ ಕೋಶಗಳನ್ನು ಹೊರತರುವ ವಿಚಾರ ನಮ್ಮದು.

ಮುಂದೆ ಡಾ. ದ.ರಾ. ಬೇಂದ್ರೆ ಹಾಗೂ ಕುವೆಂಪು ಅವರ ಸಮಗ್ರ ಕವನ ಸಂಕಲನ ಹೊರತರುವ ವಿಚಾರವಿದೆ. ಈ ಕುರಿತು ಅವರ ಮಗ ಪೂರ್ಣಚಂದ್ರ ತೇಜಸ್ವಿಗೆ ಪತ್ರ ಬರೆದಿದ್ದು ಅವರು ಕುವೆಂಪು ಪುಸ್ತಕಗಳನ್ನು ಕೊಡಲು ಒಪ್ಪಿದ್ದಾರೆ. ಇನ್ನು ಬೇಂದ್ರೆ ಅವರ ಮಗ ಡಾ. ವಾಮನ್ ಬೇಂದ್ರೆಗೆ ಸಹ ಪತ್ರ ಬರೆದಿದ್ದು ಅವರಿಂದ ಇನ್ನೂ ಉತ್ತರ ಬಂದಿಲ್ಲ. ಇದರಲ್ಲಿ ಸ್ವಲ್ಪ ತೊಡಕಾಗಿದೆ. ವಾಮನರಿಂದ ಸಕಾರಾತ್ಮಕ ಒಪ್ಪಿಗೆ ದೊರೆತರೆ ಕನ್ನಡ ಸಾಹಿತ್ಯ ಲೋಕದ ದಿಗ್ಗಜರಿಬ್ಬರ ಸಮಗ್ರ ಕವನವನ್ನು ವಾಚಿಸುವ ಸೌಭಾಗ್ಯ ಕನ್ನಡಿಗರಿಗೆ ದೊರೆತಂತಾಗುತ್ತದೆ. ಇದರ ಜೊತೆಯಲ್ಲಿ ಸಾಹಿತ್ಯಿಕವಾಗಿ ಪಂಪನ ಆದಿಪುರಾಣ, ಪಂಪ ಭಾರತ ಸೇರಿ 'ಕವಿತಾ ಗುಣಾರ್ಣವ' ಹಾಗೂ'ಕುಮಾರವ್ಯಾಸ ಭಾರತ' ಪುಸ್ತಕಗಳನ್ನು ಹೊರತರಲು ನಿರ್ಧರಿಸಲಾಗಿದೆ.

ವಿಶ್ವವಿದ್ಯಾಲಯಗಳ ಇಂದಿನ ಶಿಕ್ಷಣದ ಗುಣಮಟ್ಟದಲ್ಲಿ ಪಿ.ಎಚ್.ಡಿ ಹಾಗೂ ಡಿ.ಲಿಟ್‌ಗಳಿಗೆ ಅರ್ಥವಿದೆಯೇ?

ಖಂಡಿತಾ ಇಲ್ಲ. ಪಿಎಚ್.ಡಿ. ಮಾಡುವ ವಿದ್ಯಾರ್ಥಿಗಳು ಹಾಗೂ ಅವರ ಮಾರ್ಗದರ್ಶಕರು- ಇಬ್ಬರೂ ಭ್ರಷ್ಟರು. ಈಗ ಪಿಎಚ್.ಡಿ. ಮಾಡುವವರ ಸಂಖ್ಯೆ ಬಹಳ ಕಡಿಮೆಯಾಗಿದೆ. ಮೂರ್‍ನಾಲ್ಕು ಪುಸ್ತಕ ಇಟ್ಟುಕೊಳ್ತಾರೆ. ಎಲ್ಲಾ ಸೇರಿಸಿ ತಾವೊಂದು ಪ್ರಬಂಧ ಬರೆದು ಅದನ್ನು ಮಂಡಿಸುತ್ತಾರೆ. ಇವರ ಮಾರ್ಗದರ್ಶಕರೂ ಅಂಥವರೇ. ಹೀಗಾಗಿ ಪಿಎಚ್.ಡಿ. ಗುಣಮಟ್ಟ ಬಹಳ ಕಳಪೆಯಾಗಿದೆ.

ಇನ್ನು ಡಿ.ಲಿಟ್. ನಿಜ ಹೇಳಬೇಕೆಂದರೆ ಪಿಎಚ್.ಡಿ.ಗಿಂತ ದೊಡ್ಡ ಪದವಿ ಇದು. ಆದರೆ ಅದರ ಕೈಯಲ್ಲಿ ಸಿಕ್ಕು ಇದು ಹಾಳಾಗಿ ಹೋಗಿದೆ.

ಆದ್ದರಿಂದ ನಾವು ನಮ್ಮ ವಿಶ್ವವಿದ್ಯಾಲಯದಲ್ಲಿ ಈ ವರ್ಷದಿಂದ ಡಿ.ಲಿಟ್. ಪದವಿ ತೆಗೆದುಹಾಕಿದ್ದೇವೆ.

ಕನ್ನಡ ವಿಶ್ವವಿದ್ಯಾಲಯ ಈಗ ವಿಶ್ವವಿದ್ಯಾಲಯ ಧನ ಸಹಾಯ ಆಯೋಗಕ್ಕೆ ಸಂಲಗ್ನಗೊಂಡಿದೆ. ಈ ದಿಸೆಯಲ್ಲಿ ಯು.ಜಿ.ಸಿ. ಯಿಂದ ವಿಶ್ವವಿದ್ಯಾಲಯಕ್ಕೆ ಯಾವ ರೀತಿ ಸಹಾಯವಾಗುತ್ತದೆ?

ನಮ್ಮ ವಿಶ್ವವಿದ್ಯಾಲಯ ರಾಷ್ಟ್ರೀಯ ಮುಖ್ಯ ಪ್ರವಾಹ ವಾಹಿನಿಯಲ್ಲಿ ಹೋಗಬೇಕಿತ್ತು. ಅದು ಈಗ ಈಡೇರಿದೆ. ಯು.ಜಿ.ಸಿ ಯು ವಿಶ್ವವಿದ್ಯಾಲಯಕ್ಕೆ ಐದು ವರ್ಷಗಳ ಯೋಜನೆಯಲ್ಲಿ ೯೦ ಲಕ್ಷ ರೂ. ಮಂಜೂರು ಮಾಡಿದೆ. ಈ ಹಣದಲ್ಲಿ ಕಂಪ್ಯೂಟರ್, ಫ್ಯಾಕ್ಸ್ ಮೊದಲಾದ ಸೌಲಭ್ಯಗಳನ್ನು ಹೊಂದಿರುವ ಆಧುನಿಕ ಗ್ರಂಥಾಲಯ ಸ್ಥಾಪನೆಗೆ ೭೦ ಲಕ್ಷ ರೂ ಹಾಗೂ ಕುಲಪತಿಗಳ ಭವನಕ್ಕೆ ೨೦ ಲಕ್ಷ ರೂ. ವಿನಿಯೋಗಿಸ ಲಾಗುವುದು. ನಮ್ಮ ವಿಶ್ವವಿದ್ಯಾಲಯ ಯು.ಜಿ.ಸಿ.ಗೆ ಸೇರಿರುವದರಿಂದ ಇಲ್ಲಿಯ ಅಧ್ಯಾಪಕರುಗಳಿಗೆ ಅಧ್ಯಯನಕ್ಕೆಂದು ವಿದೇಶಕ್ಕೆ ಹೋಗಿ ಬರಲು ಅನುಕೂಲ ವಾಗುವುದು.

'ಎಲ್ಲ ರಸ್ತೆಗಳು ರೋಮ್ ದ ಕಡೆಗೆ' ಎಂಬ ಗಾದೆಯಂತೆ 'ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ' ಎನ್ನುವ ನಿಟ್ಟಿನಲ್ಲಿ ಈ ವಿಶ್ವವಿದ್ಯಾಲಯ ಕೆಲಸ ಮಾಡಬೇಕಿದೆ. ದೇಶ-ವಿದೇಶದಲ್ಲಿಗುವ ಕನ್ನಡಿಗರೊಂದಿಗೆ ಸಂಪರ್ಕ ಜಾಲ ಕಲ್ಪಿಸಿ ಅವರು ವಿದೇಶದಲ್ಲಿ ಕನ್ನಡ ಶಾಲೆ, ವಾಚನಾಲಯವನ್ನು ಸ್ಥಾಪಿಸಲು, ಅವರ ಸಾರ್ವಜನಿಕ ಕಾರ್ಯಕ್ರಮಗಳಿಗೆ ಸಭೆ-ಸಮಾರಂಭಗಳಿಗೆ ಉತ್ತೇಜನ ನೀಡುವುದು. ರಜಾ ದಿನಗಳಲ್ಲಿ ಕರ್ನಾಟಕಕ್ಕೆ ಬರುವ ಅವರ ಮಕ್ಕಳಿಗೆ ಕನ್ನಡ ಭಾಷೆ, ಸಾಹಿತ್ಯ, ಇತಿಹಾಸ, ಜಾನಪದ, ಲಲಿತ ಕಲೆಗಳು ಆನ್ವಯಿಕ ಬೋಧನೆ ಹಾಗೂ ರಾಜ್ಯದ ಪ್ರೇಕ್ಷಣೀಯ ಸ್ಥಳಗಳ ಪ್ರವಾಸವನ್ನು ಏರ್ಪಡಿಸುವುದು ವಿಶ್ವವಿದ್ಯಾಲಯದ ಮುಖ್ಯ ಗುರಿಯಾಗಿದೆ.

ಅದರಂತೆ ವಿದೇಶಗಳಲ್ಲಿರುವ ಕನ್ನಡಿಗರಿಂದ ಒಂದು ಕೋಟಿ ರೂಗಳ ಶಾಶ್ವತ ನಿಧಿ ಸ್ಥಾಪಿಸಿ, ಅದರ ಬಡ್ಡಿ ಹಣದಲ್ಲಿ ಕರ್ನಾಟಕಕ್ಕೆ ಬರುವ ವಿದೇಶಿ ವಿದ್ವಾಂಸರ ಅಧ್ಯಯನಕ್ಕಾಗಿ ಶಿಷ್ಯವೇತನ ವ್ಯವಸ್ಥೆ ಮಾಡುವುದು ನಮ್ಮ ಇನ್ನೊಂದು ಪ್ರಮುಖ ಉದ್ದೇಶ.

-ಕನ್ನಡ ವಿಶ್ವವಿದ್ಯಾಲಯ ಉಳಿದ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿರಬೇಕು. ಕನ್ನಡದ ಎಲ್ಲ ಹಾದಿಗಳು ಹಂಪಿಯ ಕಡೆಗೆ ಕೇಂದ್ರೀಕ್ರಣಗೊಳ್ಳಬೇಕು. ಕನ್ನಡ ವಿಶ್ವವಿದ್ಯಾಲಯ 'ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಪ್ರಜ್ಞೆ ಕನ್ನಡಿಗರಲ್ಲಿ ಜಾಗ್ರತವಾಗಿರುವಂತೆ ಮಾಡಬೇಕೆಂಬ ಮಹದಾಸೆ ಹೊಂದಿರುವ ಕುಲಪತಿ ಡಾ.ಎಂ. ಎಂ. ಕಲಬುರ್ಗಿ ಹಾಗೂ ಅವರ ಸಿಬ್ಬಂದಿ ವರ್ಗ ಈ ದಿಸೆಯಲ್ಲಿ ಶ್ರಮಿಸುತ್ತಿದೆ. ಅವರ ಆಸೆ ಈಡೇರಲಿ. ಕನ್ನಡದ ಕಂಪು ಎಲ್ಲೆಡೆ ಹರಡಲಿ ಎಂಬುದೇ ನಮ್ಮೆಲ್ಲರ ಹಾರೈಕೆ.

ಜನವಾಹಿನಿ : ೨೦೦೦

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೨೯೬

ಕನ್ನಡದ ಎಲ್ಲ ದಾರಿಗಳೂ ಹಂಪಿಯ ಕಡೆಗೆ

❖

ಸಂದರ್ಶಕರು : ತಿಲಕನಾಥ ಮಂಜೇಶ್ವರ

ತರಂಗ: ಕನ್ನಡ ವಿಶ್ವವಿದ್ಯಾಲಯ ಬೇರೆ ವಿಶ್ವವಿದ್ಯಾಲಯಕ್ಕಿಂತ ಹೇಗೆ ಭಿನ್ನ?

ಎಂ. ಎಂ. ಕಲಬುರ್ಗಿ : ಬೇರೆ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡುವ ಬೋಧನಾ ಕ್ರಮಗಳನ್ನು ರೂಪಿಸಿಕೊಂಡವು. ಆದರೆ ಕನ್ನಡ ವಿಶ್ವವಿದ್ಯಾಲಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡುವ ಉದ್ದೇಶದಿಂದ ಹುಟ್ಟಿಕೊಂಡದ್ದಲ್ಲ. ಕರ್ನಾಟಕದ ಗತ ಮತ್ತು ವರ್ತಮಾನ ಇವೆರಡೂ ನೆಲೆಗಳಲ್ಲಿ ಶೋಧ ನಡೆಸಿ ಕರ್ನಾಟಕತ್ವವನ್ನು ಕಂಡುಹಿಡಿದು, ಅದನ್ನು ಒಂದು ಕಡೆ ಸ್ಥಾನಿಕ ಮತ್ತು ಜಾಗತಿಕ(ಕರ್ನಾಟಕದ ಒಳಗೆ ಮತ್ತು ಹೊರಗೆ) ಪ್ರಸಾರ ಮಾಡುವುದೇ ಕನ್ನಡ ವಿಶ್ವವಿದ್ಯಾಲಯದ ಮುಖ್ಯಗುರಿ. ಹೀಗಾಗಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾದ ಕೆಲಸಗಳು ಈ ವಿಶ್ವವಿದ್ಯಾಲಯದಲ್ಲಿ ನಡೆಯುತ್ತವೆ.

ತರಂಗ: ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾಣರವಾದ ಅಂಶಗಳು ಯಾವುವು?

ಎಂ. ಎಂ. ಕಲಬುರ್ಗಿ : ದಕ್ಷಿಣ ಭಾರತದಲ್ಲಿ ತಮಿಳು ವಿಶ್ವವಿದ್ಯಾಲಯ, ತೆಲುಗು ವಿಶ್ವವಿದ್ಯಾಲಯಗಳು ಈಗಾಗಲೇ ತಲೆ ಎತ್ತಿದ್ದವು. ಅದೇ ಮಾದರಿಯಲ್ಲಿ ಅಲ್ಲವಾದರೂ ಅಂಥದ್ದೊಂದು ವಿಶ್ವವಿದ್ಯಾಲಯ ನಮಗೆ ಬೇಕು ಅನ್ನುವ ವಿಚಾರ ಬಂತು. ನಮಗೆ ದೊಡ್ಡ ಪರಂಪರೆ ಇದೆ; ಸಂಸ್ಕೃತಿ ಇದೆ. ಆದರೆ ಪ್ರಚೋದನೆ ಸಿಕ್ಕಿದ್ದೇ ಅಲ್ಲಿಂದ. ಸಾಮಾನ್ಯವಾಗಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಬೋಧನೆ ಮತ್ತು ಸಂಶೋಧನೆ ಎರಡೂ ಜತೆ ಜತೆಯಾಗಿಯೇ ಹೋಗಬೇಕು. ಆದರೆ ಕೊನೆ ಕೊನೆಗೆ ಏನಾಯಿತು ಎಂದರೆ ಬೋಧನೆ ಮುಂದುವರಿದು ಸಂಶೋಧನೆ ನಿಂತುಬಿಟ್ಟಿತು. ಇಂಥ ಸಂದರ್ಭದಲ್ಲಿ ಸಂಶೋಧನೆ ಮಾಡಿ ಅದರ ಪ್ರತಿಫಲವನ್ನು ದಾಖಲಿಸುವುದು, ಅದನ್ನು ಪ್ರಚಾರ ಮಾಡುವುದು ಬಹಳ ಆವಶ್ಯಕ ಅಂತ ಅನ್ನಿಸಿದ್ದರಿಂದ ಕನ್ನಡ ವಿಶ್ವವಿದ್ಯಾಲಯದ ಉದಯವಾಯಿತು.

ತರಂಗ: ತಮಿಳು-ತೆಲುಗು ವಿಶ್ವವಿದ್ಯಾಲಯಗಳಿಗೆ ಹೋಗಿ ಅಲ್ಲಿ ನಡೆಯುವ ಕೆಲಸಗಳನ್ನು ನೋಡಿ ಬಂದಿದ್ದಿದೆಯೇ?

ಎಂ. ಎಂ. ಕಲಬುರ್ಗಿ : ಹೌದು, ಒಡೆಯರ್ ಅವರ ಏಕ ಸದಸ್ಯ ಆಯೋಗ ಮಾಡಿದ್ದರು. ಅವರು ನೋಡಿ ಬಂದಿದ್ದರು. ನಾನೂ ಉಪಕುಲಪತಿಯಾದ ಮೇಲೂ ಸಂದರ್ಶಿಸಿದ್ದೆ. ಅಲ್ಲಿ

ನಡೆಯುವ ಕೆಲಸ ಮತ್ತು ನಮ್ಮ ಮನಸ್ಸಿನಲ್ಲಿದ್ದುದನ್ನು ಸಮನ್ವಯಗೊಳಿಸಿ ಕನ್ನಡ ವಿಶ್ವವಿದ್ಯಾಲಯ ರೂಪುಗೊಂಡಿತು.

ತರಂಗ: ಕನ್ನಡ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶಗಳೇನು?

ಎಂ. ಎಂ. ಕಲಬುರ್ಗಿ : ಗತ ಮತ್ತು ವರ್ತಮಾನ ಜೀವನ ಅಧ್ಯಯನ ಕರ್ನಾಟಕ ಭಾಷೆ, ಸಾಹಿತ್ಯ, ಪ್ರಜೆ, ಜನಜೀವನಗಳಿಗೆ ತನ್ನದೇ ಆದ ಒಂದು ಪರಂಪರೆ, ಇತಿಹಾಸವಿದೆ. ಜಾಗತೀಕರಣ ನಮ್ಮ ಪರಂಪರೆಗೆ ಧಕ್ಕೆ ತಂದೊಡ್ಡಿದೆ. ಕನ್ನಡಿಗರಲ್ಲಿ ಕನ್ನಡತ್ವವನ್ನು ಜಾಗೃತಗೊಳಿಸಿವುದು ನಮ್ಮ ಮುಖ್ಯ ಉದ್ದೇಶ. ಅದಕ್ಕೆ ಪರಂಪರೆಯನ್ನು ದಾಖಲಿಸುವುದು, ದಾಖಲಿಸಿದ ಪರಂಪರೆಯನ್ನು ವ್ಯಾಖ್ಯಾನಿಸುವುದು, ಅದನ್ನು ಸ್ಥಾನಿಕದಲ್ಲಿ ಪ್ರಚಾರ ಮಾಡುವುದು ಮತ್ತು ಜಾಗತಿಕ ಮಟ್ಟದಲ್ಲಿ ಪ್ರಚಾರ ಮಾಡುವುದು.

ತರಂಗ: ಜನಸಾಮಾನ್ಯರಿಗೆ ಇದನ್ನು ಹೇಗೆ ತಿಳಿಯಪಡಿಸುತ್ತೀರಿ?

ಎಂ. ಎಂ. ಕಲಬುರ್ಗಿ : ಪರಂಪರೆಯ ದಾಖಲೀಕರಣ ಮತ್ತು ವ್ಯಾಖ್ಯಾನ ನಮ್ಮಲ್ಲಿ ಈಗ ನಡೆಯುತ್ತಿದೆ. ಕನ್ನಡದ ಪರಿಚಾರಕರು ಎನ್ನುವ ರೀತಿಯ ಸೈನ್ಯ ಕಟ್ಟಬೇಕಾಗಿದೆ. ಸಭೆ–ಸಮಾರಂಭಗಳನ್ನು ಮಾಡುವುದು, ಪುಸ್ತಕ, ವಿಡಿಯೋ, ಆಡಿಯೋ–ಮೊದಲಾದವುಗಳ ಮೂಲಕ ಅವರಲ್ಲಿ ಕನ್ನಡ ಪ್ರಜ್ಞೆಯನ್ನು ಬೆಳೆಸುವುದು, ಪರಿಸ್ಥಿತಿ ಹೀಗೇ ಮುಂದುವರಿದರೆ ಮುಂದೆ ನಮ್ಮ ಸ್ಥಿತಿ ಏನಾಗಬಹುದು ಎಂಬ ಎಚ್ಚರಿಕೆಯನ್ನು ಮೂಡಿಸುವುದು. ಇದನ್ನೇ ಜಾಗತಿಕ ಮಟ್ಟದಲ್ಲೂ ತಿಳಿಸುವ ಏರ್ಪಾಡು ಆಗಬೇಕಾಗಿದೆ. ಈ ಕೆಲಸಕ್ಕೆ ಒಂದಕ್ಕಿಂತ ಹೆಚ್ಚು ಇತರ ಭಾಷೆಗಳನ್ನು ತಿಳಿದುಕೊಂಡಿರುವ ಜನರ ಅಗತ್ಯವಿದೆ.

ತರಂಗ: ಗೋಕಾಕ್ ಚಳುವಳಿ ನಡೆದಾಗ ಕನ್ನಡ ವಿಶ್ವವಿದ್ಯಾಲಯ ಇರಲಿಲ್ಲ. ಈಗಿನ ಚಳವಳಿಗಳಾದ ಹೈಕೋರ್ಟ್ ಪೀಠ ಸ್ಥಾಪನೆ, ರೈಲ್ವೇ ನೈಋತ್ಯ ವಲಯ ಇಂಥ ವಿಷಯಗಳನ್ನು ಎತ್ತಿಕೊಂಡು ಕನ್ನಡ ವಿಶ್ವವಿದ್ಯಾಲಯ ಜನಜಾಗೃತಿ ಕೆಲಸಗಳನ್ನು ಮಾಡಬೇಕೇ?

ಎಂ. ಎಂ. ಕಲಬುರ್ಗಿ : ನಿಜ, ಮಾಡಬೇಕು. ವಿಶ್ವವಿದ್ಯಾಲಯ ದ್ವೀಪವಾಗಿ ಉಳಿದು ಪುಸ್ತಕ ಪ್ರಕಟಣೆಯನ್ನಷ್ಟೇ ಮಾಡಿದರೆ ಸಾಲದು. ಶಿಕ್ಷಣ, ಸಾಹಿತ್ಯ, ಕಲೆ ಎಲ್ಲವೂ ಸಮಾಜಕ್ಕೆ, ಸಮಾಜದ ಹತ್ತಿರಕ್ಕೆ ಕೊಂಡೊಯ್ಯಬೇಕಾದರೆ ಅದಕ್ಕೆ ಪರಿಕರ ಬೇಕು. ಒಂದು ಸೈನ್ಯ ಬೇಕು. ನಾಡಿನ ಅನೇಕ ಸಾಹಿತ್ಯ ಸಂಘಗಳನ್ನು ಈ ಉದ್ದೇಶಗಳಿಗೆ ಬಳಸಿಕೊಳ್ಳುವ ಆಲೋಚನೆ ಇದೆ. ವಿಶ್ವವಿದ್ಯಾಲಯದ ಎಫಿಲಿಯೇಶನ್ ಪಡೆದ, ಉತ್ತಮವಾಗಿ ಕಾರ್ಯ ನಿರ್ವಹಿಸುವ ಕನ್ನಡ ಸಂಘಗಳಿಗೆ ಈ ಕೆಲಸ ವಹಿಸಿಕೊಡಬೇಕೆಂದಿದ್ದೇನೆ. ಇದು ಹೊಸ ಪ್ರಯೋಗ ಆಗಬಹುದು.

ತರಂಗ: ಹತ್ತು ವರ್ಷಗಳಲ್ಲಿ ಕನ್ನಡ ವಿಶ್ವವಿದ್ಯಾಲಯ ಕಂಡ ಸಾಫಲ್ಯ?

ಎಂ. ಎಂ. ಕಲಬುರ್ಗಿ : ಸಫಲ ಆಗಿದ್ದೇವೆ ಎಂಬ ಭಾವ ಬಂದರೆ ಬೆಳವಣಿಗೆ ನಿಂತುಬಿಡುತ್ತದೆ. ನನಗೆ ಭೌತಿಕ ಸಾಧನೆಗಳಿಗಿಂತ ಸಾರ್ಥಕ ಸಾಧನೆಗಳತ್ತ ಹೆಚ್ಚು ಒಲವು. ನಾನು ವೈಸ್ ಚಾನ್ಸಲರ್ ಆಗಿ ಬಂದ ಎರಡೇ ದಿನಗಳಲ್ಲಿ ಎಲ್ಲರನ್ನೂ ಕರೆದು ಪ್ರತಿಯೊಬ್ಬರೂ ಒಂದು ಸಾಂಸ್ಥಿಕ ಯೋಜನೆ ಮತ್ತೊಂದು ವೈಯಕ್ತಿಕ ಯೋಜನೆ ಅವರವರ ಸಾಧ್ಯತೆ, ಶಕ್ತಿ, ಆಸಕ್ತಿಗೆ ಅನುಗುಣವಾಗಿ ಕೈಗೆತ್ತಿಕೊಳ್ಳಬೇಕೆಂದೆ. ಸಾಂಸ್ಥಿಕ ಯೋಜನೆ ನಿರ್ಧಾರವಾಯಿತು. ವೈಯಕ್ತಿಕ ಯೋಜನೆ ಅವರವರ ಆಸಕ್ತಿಯ ವಿಚಾರಕ್ಕೆ ಬಿಟ್ಟದ್ದು. ಹೀಗೊಂದು ಅಧ್ಯಯನಶೀಲ ಯುಗ ಆರಂಭವಾಯಿತು. ಯೋಜನೆಗಳ

ವಾರ್ಷಿಕ ಪರೀಕ್ಷೆ ಇದೆ. ವಿಚಾರ ಸಂಕಿರಣ, ಹೊರಗಿನ ವಿದ್ವಾಂಸರನ್ನು ಕರೆಸುವುದೂ ಇದೆ. ಹೀಗೆ ಮಾಡದಿದ್ದರೆ ಇಲ್ಲಿನ ಅಧ್ಯಾಪಕರು ಅಸ್ಪೃಶ್ಯರಾಗಿ ಬಿಡುತ್ತಾರೆ. ವರ್ಷಕ್ಕೆ ೧೦೦ ಪುಸ್ತಕಗಳು. ಹಿಂದೆ ೮೦ ಶೇಕಡಾ ಹೊರಗಿನವರದು, ೨೦ ಶೇಕಡಾ ಒಳಗಿನವರದು ಅಂತ ಇತ್ತು. ಈಗ ಹಾಗಲ್ಲ; ೮೦ ಶೇಕಡಾ ಒಳಗಿನವರದು : ೨೦ ಶೇಕಡಾ ಹೊರಗಿನವರದ್ದು.

ತರಂಗ: ನಿಮ್ಮ ಪ್ರಕಟಣೆಗಳು ವಿದ್ವಾಂಸರನ್ನಷ್ಟೇ ತಲುಪಿಸದರೆ ಸಾಕೇ? ಜನಸಾಮಾನ್ಯರನ್ನು ತಲುಪಬೇಡವೇ?

ಎಂ. ಎಂ. ಕಲಬುರ್ಗಿ : ಗಳಗನಾಥರ ಕಾದಂಬರಿ ಸಂಪುಟ ಜನಸಾಮಾನ್ಯರನ್ನು ತಲುಪಬೇಕೆಂಬ ಉದ್ದೇಶದಿಂದ ಮಾಡಿದ್ದು. ೨೨ ಕಾದಂಬರಿಗಳು ೪, ೫೦೦ ಪುಟಗಳು. ಬರೀ ೬೦೦ ರೂಪಾಯಿಗಳಿಗೆ ಕೊಡುತ್ತಿದ್ದೇವೆ. 'ಕುವೆಂಪು ಸಮಗ್ರ ಕವನಗಳು' ೨,೦೦೦ ಪುಟಗಳಲ್ಲಿ ಕೊಡುತ್ತಿದ್ದೇವೆ. ಬೇಂದ್ರೆಯವರ ಸಮಗ್ರ ಕಾವ್ಯ ತರಬೇಕೆಂದಿದ್ದೆವು. ಆದರೆ ಒಪ್ಪಿಗೆ ಸಿಗಲಿಲ್ಲ.

ತರಂಗ: ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳನ್ನು, ಪೋಷಕರನ್ನಾದರೂ ತಲುಪುತ್ತಿದ್ದವು. ಕನ್ನಡ ವಿಶ್ವವಿದ್ಯಾಲಯ ಅಷ್ಟೂ ಇಲ್ಲ. ಈ ಏಕಾಂತತೆ ಬೇಕಿತ್ತೆ?

ಎಂ. ಎಂ. ಕಲಬುರ್ಗಿ :ಈ ಏಕಾಂತತೆಯನ್ನು ಭೇದಿಸಬೇಕಾಗಿದೆ. ಜನಸಾಮಾನ್ಯರಿಗೆಂದೇ 'ಮಂಟಪ ಮಾಲೆ'ಯನ್ನು, 'ಜನಪ್ರಿಯ ಪುಸ್ತಕ ಮಾಲೆ'ಯನ್ನು ಆರಂಭಿಸಿದ್ದು. ವಿಚಾರ ಸಂಕಿರಣಗಳು, ಪ್ರಚಾರೋಪನ್ಯಾಸಗಳು ಇವನ್ನೆಲ್ಲ ಮಾಡಲು, ಮುನ್ನುಗ್ಗಲು ಪರಿಚಾರಕರು ಬೇಕು. ಪ್ರೊ. ಕು.ಶಿ. ಹರಿದಾಸ ಭಟ್ಟರು ಮಾಡಿದಂಥ ಕೆಲಸಗಳು ಆಗಬೇಕು. ಬಾದಾಮಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಕೇಂದ್ರ ಒಂದಿದೆ. ಶಿಲ್ಪಕಲಾ ಶಾಲೆಯನ್ನು ಸ್ಥಾಪಿಸಿದ್ದೇವೆ. ೩೦ ಜನ ವಿದ್ಯಾರ್ಥಿಗಳಿದ್ದಾರೆ. ಅಲ್ಲಿಂದ ಎರಡು ಕಿ.ಮೀ. ದೂರದಲ್ಲಿ ಚೊಳಚಗುಡ್ಡ ಎನ್ನುವ ಊರಿದೆ. ಅಲ್ಲಿಯ ಯೋಧ ಶಿವಬಸಯ್ಯ ಕುಲಕರ್ಣಿ ಕಾರ್ಗಿಲ್ ಯುದ್ಧದಲ್ಲಿ ಮಡಿದ. ಯೋಧನ ಸಮಾಧಿ ಇತ್ತು. ವರ್ಷ ಆಗುತ್ತಲೇ ಅಲ್ಲಿ ಒಂದು ವೀರಗಲ್ಲು ಕೆತ್ತಿಸಿ ಸ್ಥಾಪಿಸಿದೆವು. ಜನ ವಿಶ್ವವಿದ್ಯಾಲಯದ ಕೆಲಸವನ್ನು ಮೆಚ್ಚಿಕೊಂಡರು. ಜನರ ಹತ್ತಿರ ಹೋಗುವುದು ಪ್ರಿಯವಾದ ವಿಷಯ. ಇನ್ನಷ್ಟು ಆಗಬೇಕು ನಿಜ.

ತರಂಗ: ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು, ಇತರ ವಿಶ್ವವಿದ್ಯಾಲಯಗಳ ಪ್ರಕಟಣೆಗಳ ಮಾರಾಟ ವ್ಯವಸ್ಥೆಗಿಂತ ಕನ್ನಡ ವಿಶ್ವವಿದ್ಯಾಲಯದ ಮಾರಾಟ ವ್ಯವಸ್ಥೆಯಲ್ಲಿ ಔದಾಸೀನ್ಯ ಹೆಚ್ಚು ಎಂಬ ಅಪಸ್ವರ ಕೇಳಿದೆ...

ಎಂ. ಎಂ. ಕಲಬುರ್ಗಿ : ಇಲ್ಲ, ಪುಸ್ತಕಗಳ ಉತ್ಪಾದನೆ ಮತ್ತು ಪ್ರಸರಣೆ ಎರಡೂ ದೃಷ್ಟಿಯಿಂದ ಇಡೀ ಕರ್ನಾಟಕದಲ್ಲಿ ನಮ್ಮ ವಿಶ್ವವಿದ್ಯಾಲಯದಲ್ಲಿಯೇ ಹೆಚ್ಚು ವ್ಯವಸ್ಥಿತ. ನಾನು ಬಂದ ವರ್ಷ ೫೦ ಲಕ್ಷ ರೂಪಾಯಿಗಳ ಪುಸ್ತಕ ಮಾರಾಟವಾಗಿದೆ. ಎರಡನೆಯ ವರ್ಷ ೭೫ ಲಕ್ಷಕ್ಕೇರಿತು. ಈ ವರ್ಷ ಒಂದು ಕೋಟಿಯ ಹತ್ತಿರವಾಗಲಿದೆ. ಮೊನ್ನೆ ಬಾಗಲಕೋಟೆ ಸಾಹಿತ್ಯ ಸಮ್ಮೇಳನದಲ್ಲಿ ೬೫–೭೫ ಸಾವಿರ ರೂಪಾಯಿಗಳ ವ್ಯಾಪಾರವಾಗಿದೆ. ಮೊದಲ ಸ್ಥಾನ ನಮ್ಮದೇ. ಸಪ್ನಬುಕ್ ಸ್ಟಾಲ್‌ನವರಿಗೆ ದ್ವಿತೀಯ ಸ್ಥಾನ.

ತರಂಗ: ಡಿಸ್ಕೌಂಟ್ ಜಾಸ್ತಿ ಕೊಡುತ್ತಿದ್ದೀರಿ.

ಎಂ. ಎಂ. ಕಲಬುರ್ಗಿ : ಅದರರ್ಥ ೧.೩೦ ಸಾವಿರ ವ್ಯಾಪಾರ ಆದಂತಲ್ಲವೇ? ಪುಸ್ತಕ ಇಟ್ಟುಕೊಂಡು ಏನು ಉಪಯೋಗ? ೧೯೯೮, ೧೯೯೯, ೨೦೦೦ ಇಸವಿಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು ಅರ್ಧ ಬೆಲೆಗೆ ಕೊಡುವುದಿಲ್ಲ. ಅದಕ್ಕಿಂತ ಹಿಂದಿನವನ್ನಷ್ಟೇ ಕೊಡುತ್ತೇವೆ. ಕನ್ನಡ ವಿಶ್ವವಿದ್ಯಾಲಯ ಪುಸ್ತಕಗಳು ಎಲ್ಲರ ಕೈ ಸೇರಲಿ ಅಂತ. ಪ್ರಸಾರಾಂಗದ ನಿರ್ದೇಶಕ ನಾವಡರು ಬಹಳ ದುಡಿಯುತ್ತಾರೆ. ಪುಸ್ತಕ ಹೊರ ಬಂತು ಅಂತಂದರೆ ಹೇಗೆ ಮಾರಾಟ ಮಾಡಬೇಕು ಅಂತಲೂ ಯೋಚಿಸುತ್ತೇವೆ. ಯಾವುದೇ ಸಭೆ ಸಮಾರಂಭಗಳಲ್ಲಿ ಮಾರಾಟ ವ್ಯವಸ್ಥೆ ಮಾಡುತ್ತೇವೆ. ತುಂಬ ಬೇಡಿಕೆಯೂ ಇದೆ. ನಮ್ಮ ಪ್ರಸಾರಾಂಗದ ಪ್ರಕಟಣೆ ಮತ್ತು ಮಾರಾಟ ವ್ಯವಸ್ಥೆ ಅತ್ಯುತ್ತಮ ಎಂದು ಹೇಳಲೇಬೇಕು.

ತರಂಗ: ಸಂಶೋಧನ ವಿದ್ಯಾರ್ಥಿಗಳಿಗೆ ಏನೇನು ಸೌಲಭ್ಯಗಳಿವೆ?

ಎಂ. ಎಂ. ಕಲಬುರ್ಗಿ : ಓರ್ವ ಅಧ್ಯಾಪಕರಿಗೆ ಆರು ಜನ ಸಂಶೋಧನ ವಿದ್ಯಾರ್ಥಿಗಳು. ಹೊರಗಿನವರೂ ಗೈಡ್ ಆಗಬಹುದೆಂದು ಹಿಂದೆ ಇತ್ತು; ಈಗಿಲ್ಲ. ಬೇರೆ ವಿಶ್ವವಿದ್ಯಾಲಯಗಳಲ್ಲಿ ಆರು ಜನರಿಗಿಂತ ಹೆಚ್ಚಾದವರನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ತೆಗೆದಕೊಳ್ಳುವ ಕ್ರಮವಿತ್ತು. ವಿದ್ಯಾರ್ಥಿ ಯಾರು? ಅವನ ಅರ್ಹತೆ ಏನು? ಎಂದು ತಿಳಿಯದ ಕನ್ನಡ ವಿಶ್ವವಿದ್ಯಾಲಯ ಅವನಿಗೆ ಪಿಎಚ್.ಡಿ. ಕೊಡಬೇಕಾಗುತ್ತಿತ್ತು. ಪ್ರಬಂಧ ಪ್ರಕಟಿಸಬೇಡಿ ಪಿಎಚ್.ಡಿ. ಕೊಡಿ ಅಂತ ಶಿಫಾರಸ್ಸು ಬರುತ್ತಿತ್ತು. ಈಗ ಆ ವ್ಯವಸ್ಥೆ ಇಲ್ಲ. ತಿಂಗಳಿಗೆ ೫೦೦ ರೂಪಾಯಿ ಸ್ಕಾಲರ್‌ಶಿಪ್ ಕೊಡುತ್ತೇವೆ.

ತರಂಗ: ಈವರೆಗೆ ಎಷ್ಟು ಜನ ಡಾಕ್ಟರೇಟ್ ಮಾಡಿದ್ದಾರೆ?

ಎಂ. ಎಂ. ಕಲಬುರ್ಗಿ : ಕಳೆದ ಹತ್ತು ವರ್ಷಗಳಲ್ಲಿ ಸುಮಾರು ೫೦ ಜನ.

ತರಂಗ: ಕನ್ನಡ ವಿಶ್ವವಿದ್ಯಾಲಯ ಕಟ್ಟಡಗಳ ವಾಸ್ತುಶಿಲ್ಪ ಆಸಕ್ತಿದಾಯಕವಾಗಿದೆ.

ಎಂ. ಎಂ. ಕಲಬುರ್ಗಿ : ಈ ಬಗೆಯ ಕಟ್ಟಡಗಳು ಈ ಪ್ರದೇಶದಲ್ಲಿ ಸರ್ವ ಸಾಮಾನ್ಯ. ಮಂಗಳೂರಲ್ಲಿ ಹಂಚು ಅಂತಂದರೆ ನಿಮಗೆ ವಿಶೇಷವೇನಿಲ್ಲ. ಹಾಗೇ ಇದು.

ತರಂಗ: ಆರ್.ಸಿ.ಸಿ. ಕಲ್ಚರ್‌ಗೆ ನೀವು ಒಳಗಾಗಿಲ್ಲ ಎಂದು.

ಎಂ. ಎಂ. ಕಲಬುರ್ಗಿ : ಅದು ನಿಜ. ಹೊರಗೆ ಇದನ್ನೇ ಉಳಿಸಿಕೊಂಡು (ಪರಂಪರೆ) ಒಳಗೆ ಆರ್. ಸಿ.ಸಿ. ಇರಬೇಕು. ಫೋನ್ ಇದೆ. ಕಂಪ್ಯೂಟರ್ ಇದೆ. ಅದರ ರಕ್ಷಣೆ ಆಗಬೇಕು.

ತರಂಗ: ದಶಮಾನೋತ್ಸವದ ಕಾಣಿಕೆಗಳೇನು?

ಎಂ. ಎಂ. ಕಲಬುರ್ಗಿ : ಐದು ವಿಶ್ವಕೋಶಗಳನ್ನು ಹೊರತರಬೇಕೆಂದಿದ್ದೇವೆ. ಕರ್ನಾಟಕ ಭೂಮಿಕೋಶ, ಕರ್ನಾಟಕ ಸಸ್ಯಕೋಶ, ಕರ್ನಾಟಕ ಪ್ರಾಣಿ–ಪಕ್ಷಿಕೋಶ ಮತ್ತು ಕರ್ನಾಟಕ ಭಾಷಾಕೋಶ. ಒಂದೊಂದು ೫೦೦ ಪುಟಗಳ ಸಂಪುಟ. ಮುಂದೆ ಸಾಹಿತ್ಯಕೋಶ, ಕಲಾಕೋಶ, ಸಂಗೀತಕೋಶ ಆಗಬೇಕು. ಮೂರು ಹೊಸ ವಿಭಾಗಗಳ ಸೇರ್ಪಡೆ, ದ್ರಾವಿಡ ಸಂಸ್ಕೃತಿ ವಿಭಾಗ, ವಿಶ್ವ ಕನ್ನಡ ವಿಭಾಗ, ಮಹಿಳಾ ಅಧ್ಯಯನ ವಿಭಾಗದಲ್ಲಿ ಮಹಿಳಾ ಸಾಹಿತ್ಯ ವಿಭಾಗ, ಮಹಿಳಾ ಅಧ್ಯಯನ ಡಿಪ್ಲೋಮಾ ಕೋರ್ಸ್, ಡಿಪ್ಲೋಮಾ ಇನ್ ಕ್ರಿಯೇಟಿವ್ ರೈಟಿಂಗ್ ಸೇರಿವೆ.

ತರಂಗ: ವಿಶ್ವವಿದ್ಯಾಲಯದ ಹಣಕಾಸಿನ ಪರಿಸ್ಥಿತಿ ಹೇಗಿದೆ?

ಎಂ. ಎಂ. ಕಲಬುರ್ಗಿ : ನಾನು ಬಂದಾಗ ಎರಡು ಕೋಟಿ ಸಾಲ ಇತ್ತು. ಖಾತೆಯಲ್ಲಿ ೫೦,೦೦೦ ರೂಪಾಯಿಗಳಷ್ಟೇ ಇತ್ತು. ವರ್ಷಕ್ಕೆ ಮೂರು ಕೋಟಿಗಳಷ್ಟು ಇದ್ದ ಗ್ರಾಂಟ್ ಈ ವರ್ಷ ೨.೫ ಕೋಟಿಗೆ ಇಳಿದಿದೆ.

ನಮಗೆ ಆದಾಯ ಇಲ್ಲ. ಶಿಕ್ಷಣ ಶುಲ್ಕದ ಮಾತೇ ಇಲ್ಲ. ಯುಜಿಸಿ ಕಟ್ಟಡಕ್ಕಷ್ಟೇ ಕೊಡುತ್ತಿದೆ. 'ನೀರಿನಂತೆ ಹಣ ಗಳಿಸು, ತೀರ್ಥದಂತೆ ಖರ್ಚು ಮಾಡು' ಎನ್ನುವವ ನಾನು. ಎಲ್ಲದರಲ್ಲೂ ಮಿತವ್ಯತ ಸಾಧಿಸಿದ್ದೇನೆ. ಮ್ಯೂಸಿಯಮ್ ಕಟ್ಟಡ, ಕುಲಪತಿ ಭವನ, ವಸತಿಗೃಹ, ರಸ್ತೆಗೆ ಡಾಂಬರ್ ಇಷ್ಟೆಲ್ಲ ಮಾಡಿಯೂ ಈಗ ೫೦ ಲಕ್ಷ ಖಾತೆಯಲ್ಲಿದೆ.

ತರಂಗ: ಕನ್ನಡ ವಿಶ್ವವಿದ್ಯಾಲಯದಲ್ಲಿ ನಿಮ್ಮ ಮಹತ್ತ್ವಾಕಾಂಕ್ಷೆ ಏನು?

ಎಂ. ಎಂ. ಕಲಬುರ್ಗಿ : 'ಎಲ್ಲ ರಸ್ತೆಗಳೂ ರೋಮ್‌ನ ಕಡೆಗೆ' ಎನ್ನುವಂತೆ ಕನ್ನಡದ ಎಲ್ಲ ಹಾದಿಗಳೂ ಹಂಪಿಯ ಕಡೆಗೆ. ಎಲ್ಲಾ ವಿಶ್ವವಿದ್ಯಾಲಯಗಳು ಕನ್ನಡ ಪರ ಆಗುವುದಕ್ಕೆ ಇದು ಪೂರಕ ವಿಶ್ವವಿದ್ಯಾಲಯ ಆಗಬೇಕು. ತಿಳಿಸಿಕೊಡುವ, ಮಾರ್ಗದರ್ಶನ ನೀಡುವ, ಸಹಕಾರವೀಯುವ ವಿಶ್ವವಿದ್ಯಾಲಯ ಆಗಬೇಕು. ಕರ್ನಾಟಕ ವಿಶ್ವವಿದ್ಯಾಲಯದಿಂದ ಹಂಪಿ ವಿಶ್ವವಿದ್ಯಾಲಯಕ್ಕೆ ಒಂದು ಬಸ್ ಏರ್ಪಾಡು ಮಾಡಿದೆ. ಜನ ಕಡಿಮೆ ಆದರು ಎಂದು ಅದು ನಿಂತಿತು. ಇಲ್ಲಿಂದ ಮಂಗಳೂರು ವಿಶ್ವವಿದ್ಯಾಲಯಕ್ಕೆ, ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯಗಳಿಗೂ ಬಸ್ ಓಡಾಡುವಂತೆ ಆಗಬೇಕು. ಹೊಸಪೇಟೆ, ವಿದ್ಯಾರಣ್ಯಗಳ ನಡುವೆ ವಿಶ್ವವಿದ್ಯಾಲಯ ಬಸ್ ಒಂದು ಓಡಾಡುತ್ತಿತ್ತು. ಸಿಬ್ಬಂದಿಗಳೆಲ್ಲ ಆ ಬಸ್ ಹತ್ತುತ್ತಿದ್ದರು. ಜನಸಾಮಾನ್ಯರಿಗೆ ಅದಕ್ಕೆ ಪ್ರವೇಶವಿರಲಿಲ್ಲ. ವಿಶ್ವವಿದ್ಯಾಲಯ ಬಸ್ ಬಂದ್ ಮಾಡಿ ಮಾಡಿದೆ. ಕೆ.ಎಸ್. ಆರ್. ಟಿ.ಸಿ.ಯಿಂದ ಎರಡು ಬಸ್ ಹಾಕಿಸಿದೆ. ಈಗ ಜನರೂ ಬರುತ್ತಾರೆ. ವಿಶ್ವವಿದ್ಯಾಲಯ ಏನು ಮಾಡುತ್ತದೆ ಎಂದು ಅವರಿಗೂ ಗೊತ್ತಾಗಬೇಕು. ಅವರು ಕೊಡುವ ತೆರಿಗೆಯಿಂದ ಈ ಸಂಸ್ಥೆ ನಡೆಯುವುದು ಅಲ್ಲವೇ? ದೇಶಿಯೊಳಗೆ ಪೊಗುವುದು ಇಲ್ಲಿಯವರೆಗೆ ಆಯಿತು. ಇನ್ನು ಜಾಗತಿಕ ಆಗಬೇಕು. ಜಾಗತಿಕ ಅಂದರೆ ಸ್ಥಾನಿಕದ ನಿರಾಕರಣೆ ಅಲ್ಲ ಎಂಬುದು ನೆನಪಿರಲಿ!

ತರಂಗ–೧೪ ಡಿಸೆಂಬರ್ ೨೦೦೦

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೨೯೭

ಗ್ರಂಥಸಂಪಾದನೆಯೆನ್ನುವುದು ಸೃಜನಶೀಲ ಸಂಶೋಧನೆ

❖

ಸಂದರ್ಶಕರು : ಡಾ. ವೀರೇಶ ಬಡಿಗೇರ

[ಹಿರಿಯ ಸಂಶೋಧಕರೂ ಸಂಸ್ಕೃತಿ ಚಿಂತಕರೂ ಆದ ಡಾ.ಎಂ.ಎಂ.ಕಲಬುರ್ಗಿ ಯವರೊಂದಿಗಿನ ಈ ಸಂವಾದ ಪೂರ್ವಕಲ್ಪಿತ ಸೈದ್ಧಾಂತಿಕ ಮಾದರಿಯದಾಗಿರದೆ, ಪ್ರಕ್ರಿಯಾತ್ಮಕ(ಚಲನಶೀಲ) ಸ್ವರೂಪದ್ದಾಗಿದೆ. ಯಾಕೆಂದರೆ ಬಹುಮುಖ್ಯವಾಗಿ ಡಾ. ಕಲಬುರ್ಗಿಯವರ ವ್ಯಕ್ತಿಸ್ವಭಾವ ಹಾಗೂ ಕನ್ನಡಪರ ಚಿಂತನೆಗಳಲ್ಲಿಯೇ ಸಿದ್ಧಚೌಕಟ್ಟನ್ನು ನಿರಾಕರಿಸುವ ನೆಲೆಗಳಿವೆ ಎಂಬುದು ಮುಖ್ಯವಾದ ವಿಚಾರ. ಈ ಹಿನ್ನೆಲೆಯಲ್ಲಿ ಇಲ್ಲಿನ ಸಂವಾದ ಮತ್ತು ಅದರ ಫಲಿತಗಳು ತುಂಬ ಹೊಸ ಆಲೋಚನೆಗಳತ್ತ ನಮ್ಮ ಗಮನ ಸೆಳೆಯುತ್ತವೆ. ಹಸ್ತಪ್ರತಿ, ಗ್ರಂಥಸಂಪಾದನೆ, ಸಂಶೋಧನೆ, ಸಂಸ್ಕೃತಿ ಚಿಂತನೆ, ಧರ್ಮ– ಹೀಗೆ ಅವರ ಬಾಲ್ಯದ ಅನುಭವದಿಂದ ಹಿಡಿದು ಇವತ್ತಿನವರೆಗಿನ ಹಲವು ಅರ್ಥಪೂರ್ಣ ಅಧ್ಯಯನ, ಚಿಂತನೆಗಳವರೆಗೂ ತುಂಬ ಪ್ರಾಮಾಣಿಕವಾಗಿ ಹಾಗೂ ದಿಟ್ಟವಾಗಿ; ಅಷ್ಟೇ ಆಪ್ತವಾಗಿ ಮಾತನಾಡಿದ್ದಾರೆ.

ಬಹುಮುಖ್ಯವಾಗಿ ಹಸ್ತಪ್ರತಿ, ಗ್ರಂಥಸಂಪಾದನೆ ಹಾಗೂ ಸಂಪಾದನೆಯ ವಿಧಾನಗಳು, ಅವುಗಳ ಮಿತಿಗಳು, ಅಕ್ಷರ ಪಾತಳಿಯಿಂದಾಗಿ ಕನ್ನಡ ಪಠ್ಯಗಳ ಪೂರ್ಣಪ್ರಮಾಣದ ಸಂವಹನದಲ್ಲಿ ಹುಟ್ಟಿಕೊಂಡ ವ್ಯತ್ಯಯಗಳು. ಪಠ್ಯಗಳ ಚಾರಿತ್ರಿಕ ಮತ್ತು ಶಬ್ದ ಸಂಕಲಿತ ಸಂಪಾದನೆಗಿಂತ ಸಂಸ್ಕೃತಿಮುಖಿ ಸಂಪಾದನೆಗೆ ಒತ್ತು ನೀಡಬೇಕೆನ್ನುವ ಕಳಕಳಿ–ಹೀಗೆ ಹತ್ತು ಹಲವು ಸೂಕ್ಷ್ಮ ವಿಚಾರಗಳ ಕಡೆಗೆ ಅಭ್ಯಾಸಪೂರ್ಣ ಗಮನ ಸೆಳೆದಿದ್ದಾರೆ. ಕನ್ನಡ ಪಠ್ಯಗಳ ಸಂಪಾದನೆಯ ವಿಧಾನಗಳನ್ನೇ ಮರುಪರಿಶೀಲಿಸಬೇಕೆನ್ನುವ ಮೂಲಕ ಕನ್ನಡದ್ದೇ ಆದ ಒಂದು ಆಲೋಚನಾ ಕ್ರಮವನ್ನು ರೂಢಿಸಿಕೊಳ್ಳಬೇಕೆನ್ನುವ ಅಗತ್ಯದ ಕಡೆಗೆ ಇಲ್ಲಿನ ಅವರ ಮಾತುಗಳು ಗಮನಸೆಳೆಯುತ್ತವೆ.

ಯಾವಾಗಲೂ ತಮ್ಮ ನೇರ–ನಿಷ್ಠುರ ಮಾತುಗಳ ಮೂಲಕ ಸತ್ಯವನ್ನೇ ಹೇಳಬೇಕೆಂಬ ತುರ್ತಿನಲ್ಲಿ ವಿವಾದಾತ್ಮಕವಾಗಲೂ ಹಿಂಜರಿಯದೆ ಆಡುವ ಅವರ ಮಾತುಗಳು ಇಲ್ಲಿ ಅನೇಕ ಒಳನೋಟಗಳನ್ನು ತೆರೆದಿಟ್ಟಿವೆ. ಪ್ರತಿ ಮಾತುಗಳ, ಅವರಲ್ಲಿನ ನಿರಂತರ ಶೋಧಕ ಮತ್ತು ಚಿಂತಕನ ಮನಸ್ಸನ್ನು ತೆರೆದುಕೊಡುವಲ್ಲಿ ಕಾಳಜಿವಹಿಸುತ್ತವೆ, ಎಂಬುದು ಗಮನಾರ್ಹ.

–ಸಂಪಾದಕ]

* * *

ಸಂ : ಸರ್, ಭವಿಷ್ಯತ್ತಿನಲ್ಲಿ ಕೈಗೆತ್ತಿಕೊಳ್ಳಬೇಕಾದ ಹಸ್ತಪ್ರತಿಗಳ ಸಂಗ್ರಹ ಹಾಗೂ ಸರ್ವೇಕ್ಷಣೆ ಕುರಿತು ತಮ್ಮ ಅಭಿಪ್ರಾಯ?

ಎಂ.ಎಂ.ಕೆ: ಹೊರನಾಡು ಅಂದರೆ ಕರ್ನಾಟಕದ ಗಡಿಯಾಚೆಗಿನ ಭಾಗಗಳಾದ ಕೇರಳದ ಕಾಸರಗೋಡು, ಆಂಧ್ರದ ಕರ್ನೂಲು-ಕಡಪ, ಮಹಾರಾಷ್ಟ್ರದ ಕೊಲ್ಲಾಪುರ-ನಿಪ್ಪಾಣಿ-ಸೊಲ್ಲಾಪುರ ಮುಂತಾದ ಪ್ರದೇಶಗಳಲ್ಲಿ ಇದುವರೆಗೆ ಕ್ರಮವಾದ, ವ್ಯವಸ್ಥಿತವಾದ ಕ್ಷೇತ್ರಕಾರ್ಯ ಆಗಿಲ್ಲ. ಆದ ಕಾರಣ ಅಲ್ಲಿ ಅಪ್ರಕಟಿತ ಎಷ್ಟೋ ಕನ್ನಡದ ಕೃತಿಗಳು ಇರಬಹುದೆನಿಸುತ್ತದೆ. ಕನ್ನಡ ಹಸ್ತಪ್ರತಿ ಸಂಗ್ರಹ ದೃಷ್ಟಿಯಿಂದ ಆ ಕಡೆ ವಿಶೇಷ ಗಮನಹರಿಸಬೇಕಾದ ತುರ್ತು ಈಗಿನದಾಗಿದೆ. ಯು.ಜಿ.ಸಿ. ನೆರವಿನಿಂದ ನಾನು ಇಂಥ ಯೋಜನೆ ಆರಂಭಿಸಿದ್ದೆ. ಹಂಪಿಗೆ ಹೋದ ಕಾರಣ ಅದನ್ನು ಕೈಬಿಡಬೇಕಾಯಿತು.

ಕರ್ನಾಟಕದಲ್ಲಿ, ಹಸ್ತಪ್ರತಿ ವಿಭಾಗ ಹೆಚ್ಚು ಜೀವಂತವಾಗಿರುವುದು (ಸಕ್ರಿಯವಾಗಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡಿರುವುದು) ಕನ್ನಡ ವಿ.ವಿ. ಯಲ್ಲಿ ಮಾತ್ರ. ಆದಕಾರಣ ಈ ಯೋಜನೆಯನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ ಮತ್ತು ಸಾಮರ್ಥ್ಯ ಗಳೆರಡೂ ಅದಕ್ಕಿದೆ-ಎಂಬುದು ನನ್ನ ಭಾವನೆಯಾಗಿದೆ.

ಬಹುತೇಕವಾಗಿ ಕರ್ನಾಟಕದ ಒಳಭಾಗದಲ್ಲಿ, ವಿವಿಧ ಖಾಸಗಿ ಸಂಸ್ಥೆಗಳು, ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳು ಹಸ್ತಪ್ರತಿಗಳ ಸಂಗ್ರಹ ಹಾಗೂ ಸರ್ವೇಕ್ಷಣ ಕಾರ್ಯವನ್ನು ಪೂರೈಸಿದಂತಾಗಿದೆ. ಉದಾ. ನಾಗನೂರು ರುದ್ರಾಕ್ಷಿಮಠ, ಗದುಗಿನ ತೋಂಟದಾರ್ಯಮಠ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಕರ್ನಾಟಕ-ಬೆಂಗಳೂರು ಮೈಸೂರು-ಧಾರವಾಡ ವಿ.ವಿ. ಮತ್ತು ಕನ್ನಡ ವಿ.ವಿಗಳು.

ಆದರೆ ಗಡಿಭಾಗದಲ್ಲಿಯ ಮಠ, ಮನೆಗಳಲ್ಲಿರುವ ಕನ್ನಡ ಹಸ್ತಪ್ರತಿಗಳ ಬಗ್ಗೆ ಯಾವ ಪ್ರಾಥಮಿಕ ಕಾರ್ಯವೂ ನಡೆದಿರುವುದಿಲ್ಲ. ಆದ್ದರಿಂದ ಕನ್ನಡ ವಿ.ವಿ. ಹಸ್ತಪ್ರತಿ ವಿಭಾಗ ಯು.ಜಿ.ಸಿ. ಅನುದಾನ ಪಡೆದು "ಹೊರನಾಡ ಕನ್ನಡ ಹಸ್ತಪ್ರತಿ ಸಂಗ್ರಹ ಯೋಜನೆ" ಹೆಸರಿನ ಈ ಕಾರ್ಯವನ್ನು ಕೈಗೊಳ್ಳಬಹುದೆಂಬ ಸಲಹೆ ನನ್ನದು.

ಸಂ: ಕನ್ನಡ ಸಾಹಿತ್ಯ ಧರ್ಮಪ್ರಧಾನವಾಗಿ ಬೆಳೆದು ಬಂದಿರುವಂಥದ್ದು. ಈ ಪರಿಧಿಯನ್ನು ಬಿಟ್ಟು ಗ್ರಂಥಸಂಪಾದನೆ ಮತ್ತು ಹಸ್ತಪ್ರತಿಶಾಸ್ತ್ರ ನೋಡೋಕಾಗಲ್ಲ ಅಲ್ಲವೆ?

ಎಂ.ಎಂ.ಕೆ: ಧರ್ಮಾಭಿಮಾನದ ತುಡಿತವೇ ನಮ್ಮ ಸಾಹಿತ್ಯ ರಚನೆಗೆ ಮೂಲ ತಳಹದಿಯಾಗಿ ಬಂದಿರುವುದು ಸರಿಯೇ. ಸರಿಯಾದ ತಿಳಿವಳಿಕೆಯ ಅಂಥ ಅಭಿಮಾನವಿದ್ದರೆ ತಪ್ಪೇನಲ್ಲ. ಮತ್ತು ವ್ಯಕ್ತಿ ತನ್ನ ಬದುಕಿನಲ್ಲಿ ಯಾವುದೇ ಕ್ರಾಂತಿಕಾರಕ ಬದಲಾವಣೆಗೆ ಒಳಗಾದರೂ, ಉದಾಹರಣೆಗೆ ಅಂತರ್ ಜಾತಿಯ ವಿವಾಹವಾದರೂ ಆತನ ಅಂತರ್ ಭವದಲ್ಲಿ ಆ ಜಾತ್ಯಭಿಮಾನದ ಸೆಲೆ ಹೋಗಲಾರದು. ಅದು ಇದ್ದೇ ಇರುತ್ತದೆ. "ಜಾತಿ ಹಾಳಾದರೆ ಇಂಡಿಯಾ ಹಾಳುತ್ತದೆ" ಎಂಬ ಹೇಳಿಕೆಯನ್ನೂ ಇಲ್ಲಿ ಗಮನಿಸಬೇಕು.

ಸಂ: ಉಪೇಕ್ಷಿತ ಅಥವಾ ಲಘುಸಾಹಿತ್ಯ ಕೃತಿಗಳ ಸಂಪಾದನೆಯ ಇಂದಿನ ಅಗತ್ಯ ಏನು?

ಎಂ.ಎಂ.ಕೆ: ಪ್ರಧಾನ ಸಂಸ್ಕೃತಿ ಧಾರೆಯ ಒಳಗಿರುವ ಅನೇಕ ಉಪಸಂಸ್ಕೃತಿಗಳ ಫಲಿತಗಳಾಗಿ ಮೂಡಿಬಂದ, ಇದುವರೆಗೂ ಸಂಗ್ರಹ-ಸಂಪಾದನೆ ಮತ್ತು ಅಧ್ಯಯನಗಳಿಂದ ಆಚೆ ಉಳಿದಿರುವ ಕೃತಿಗಳನ್ನು ಸಂಪಾದಿಸಿ, ಆ ಮೂಲಕ ಮುಂದಿನ ಅಧ್ಯಯನಕ್ಕೆ ಆಕರಗಳನ್ನೊದಗಿಸಿ ಕೊಡುವ ಕಾರ್ಯ ಇಂದು ತುರ್ತಾಗಿ ನಡೆಯಬೇಕಾಗಿದೆ.

ಉದಾಹರಣೆಗಾಗಿ, ಗದುಗಿನ ತೋಂಟದಾರ್ಯ ಸಂಸ್ಥಾನ ಮಠದ ಶ್ರೀ ಲಿಂಗಾಯತ ಅಧ್ಯಯನ ಸಂಸ್ಥೆಯ ಅಪ್ರಕಟಿತ ಕೃತಿಗಳು ಮಾಲಿಕೆಯಲ್ಲಿ ಡಾ. ರಾಜೂರ ಅವರಿಂದ ಸಂಪಾದಿತವಾದ ತಾರಾವಳಿ ಸಂಪುಟ, ಡಾ. ಬಿ.ಬಿ.ಬಿರಾದಾರ, ಡಾ. ಯಕ್ಕುಂಡಿಮಠ ಅವರಿಂದ ಸಂಪಾದಿಸಲ್ಪಟ್ಟ ಸು. ೧೫೦ಕ್ಕೂ ಹೆಚ್ಚು ಅಷ್ಟಕಗಳನ್ನು ಒಳಗೊಂಡಿರುವ 'ವೀರಶೈವ ಅಷ್ಟಕಗಳು' ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಲ್ಪಟ್ಟ 'ಕರಸ್ಥಲ ಸಾಹಿತ್ಯ', 'ಕಾಲಜ್ಞಾನ ಸಾಹಿತ್ಯ', 'ಹಳೆಯ ಲಾವಣಿಗಳು', 'ಬಸವಯುಗದ ವಚನೇತರ ಸಾಹಿತ್ಯ', 'ಸ್ವರವಚನ ತರಂಗ ಸಂಪುಟ.೧, 'ನಾಗಲಿಂಗಸ್ವಾಮಿ ತತ್ವಪದಗಳು' ಇವೇ ಮುಂತಾದ ಕೃತಿಗಳನ್ನಿಲ್ಲಿ ಹೆಸರಿಸಬಹುದು. ಇಂಥ ಯಾವುದೇ ಪುಸ್ತಕಕ್ಕೂ ಅದರದೇ ಆದ ಒಂದು ಓದುಗವರ್ಗ ಇದ್ದೇ ಇರುತ್ತದೆ ಎಂಬುದಂತೂ ನಿಶ್ಚಿತವಾದ ಮಾತು. ಉದಾಹರಣೆಗಾಗಿ, ಅಧ್ಯಯನದಿಂದ ಇದುವರೆಗೂ ಉಪೇಕ್ಷಿತ ನೆಲೆಯಲ್ಲಿಯೇ ಉಳಿದುಕೊಂಡಿದ್ದ "ವಣಿಜೋತ್ಪತ್ತಿ" ಹೆಸರಿನ ಹಸ್ತಪ್ರತಿಯ ವಿಷಯವನ್ನಿಲ್ಲಿ ಪ್ರಸ್ತಾಪಿಸಬಹುದಾಗಿದೆ. ಈ ಹಸ್ತಪ್ರತಿಯಿಂದ ಲಿಂಗಾಯತ ಜನಾಂಗದಲ್ಲಿಯ ಪಂಚಮಸಾಲಿ ಸಮಾಜದ ಬಗ್ಗೆ ಮಹತ್ವಪೂರ್ಣ ಸತ್ಯಾಂಶವು ಬೆಳಕಿಗೆ ಬಂದಂತಾಗಿದೆ. ಈ ಹಸ್ತಪ್ರತಿಯಲ್ಲಿ ಪುರಾಣದ ಚಿತ್ರಣ ಕಂಡುಬಂದರೂ, ಲಿಂಗಾಯತ ಜನಾಂಗದ ವೃತ್ತಿಯ ಐದು ವರ್ಗಗಳ ವಿಭಜನೆ ಮತ್ತು ಸ್ವರೂಪಗಳನ್ನು ಕುರಿತ ಸ್ಪಷ್ಟ ಉಲ್ಲೇಖಗಳು ಹೀಗೆ ದೊರೆಯುತ್ತವೆ.

೧. ಪ್ರಥಮ ಸಾಲು ಅಥವಾ ಪ್ರಥಮ ಶೆಟ್ಟಿ ಅಥವಾ ನಾಡಶೆಟ್ಟಿ
೨. ದ್ವಿತೀಯ ಸಾಲು ಅಥವಾ ದ್ವಿತೀಯ ಶೆಟ್ಟಿ ಅಥವಾ ಮಾಜನಶೆಟ್ಟಿ
೩. ತೃತೀಯ ಸಾಲು ಅಥವಾ ತೃತೀಯ ಶೆಟ್ಟಿ ಅಥವಾ ಗುತ್ತಶೆಟ್ಟಿ
೪. ಚತುರ್ಥ ಸಾಲು ಅಥವಾ ಚತುರ್ಥ ಶೆಟ್ಟಿ ಅಥವಾ ಪಟ್ಟಣಶೆಟ್ಟಿ
೫. ಪಂಚಮ ಸಾಲು ಅಥವಾ ಪಂಚಮಶೆಟ್ಟಿ ಅಥವಾ ಮಿಂಡಗುದ್ದಲಿಶೆಟ್ಟಿ ಇವರಲ್ಲಿ

೧. ಪಂಚಮ ಶೆಟ್ಟಿಗಳು ಭೂಮಿಯಿಂದ ಸರಕನ್ನು ಉತ್ಪಾದನೆ ಮಾಡುವವರು.
೨. ಚತುರ್ಥ ಶೆಟ್ಟಿಗಳು ಭೂ ಉತ್ಪಾದಿತ ಸರಕಿನ ಮಾರಾಟ ವ್ಯವಸ್ಥೆ ನೋಡಿಕೊಳ್ಳುವವರು
೩. ತೃತೀಯ ಶೆಟ್ಟಿಗಳು ಭೂಕಂದಾಯ ವಸೂಲಿ ಮಾಡುವವರು
೪. ದ್ವಿತೀಯ ಶೆಟ್ಟಿಗಳು ಸಮಾಜಕ್ಕೂ ಒಕ್ಕಲಿಗರಿಗೂ ಹುಟ್ಟಿದ ಜಗಳ ಬಗೆಹರಿಸುವವರು
೫. ಪ್ರಥಮ ಶೆಟ್ಟಿಗಳು ಒಕ್ಕಲಿಗರಿಗೂ ರಾಜರಿಗೂ ಉದ್ಭವಿಸುವ ವಿವಾದ ಬಗೆಹರಿಸುವವರು

ಈ ಐದನೆಯ ಪಂಚಮಶೆಟ್ಟಿಗಳೇ ಪಂಚಮಸಾಲಿಗಳು. ಇವರೇ ಮಿಂಡಗುದ್ದಲಿ ಶೆಟ್ಟಿಗಳು. ಹೀಗೆ ನಾಡಶೆಟ್ಟಿ, ಮಾಜನಶೆಟ್ಟಿ, ಗುತ್ತಶೆಟ್ಟಿ, ಪಟ್ಟಣಶೆಟ್ಟಿ, ಮಿಂಡಗುದ್ದಲಿಶೆಟ್ಟಿ ಇವು ಕ್ರಮವಾಗಿ ಐದು ಸಾಲುಗಳಿಗಿರುವ ರೂಢಿಗತ ನಾಮಗಳು.

ಮುಂದೆ ಭೂಕಂದಾಯ ವಸೂಲಿಯನ್ನು ಸರ್ಕಾರ ವಹಿಸಿಕೊಂಡಿತು. ನಾಡಶೆಟ್ಟಿ, ಮಾಜನಶೆಟ್ಟಿಗಳ ನ್ಯಾಯ ಬಗೆಹರಿಸುವ ಕೆಲಸವನ್ನು ಕೋರ್ಟ್‌ಗಳು ಮಾಡಹತ್ತಿದವು. ಆದುದರಿಂದ ಮೊದಲಿನ ನಾಲ್ಕು ವರ್ಗಗಳ ಕೆಲಸವು ಇಲ್ಲದಾಯಿತು. ಇವರೆಲ್ಲರೂ ಸಣ್ಣ ಸಣ್ಣ ಪ್ರಮಾಣದಲ್ಲಿರುವವರಾದ್ದರಿಂದ

(ನಾಲ್ಕು ಸಾಲುಗಳು) ಸೇರಿ ಒಂದಾಗಿ ಬಣಜಿಗರೆನಿಸಿದರು. ಉಳಿದ ಆ ಐದನೇ ಸಾಲಿನ ವರ್ಗವೇ ಪಂಚಮಸಾಲಿ ಸಮಾಜವಾಗಿ ಲಿಂಗಾಯತ ಒಳಪಂಗಡವಾಗಿ ಉಳಿಯಿತು. ಈ ಎಲ್ಲಾ ವಿವರಗಳು ಪಂಚವಣಿಜೋತ್ಪತ್ತಿಯಲ್ಲಿ ಬರುತ್ತವೆ. ಉಪೇಕ್ಷಿತ ಸಾಹಿತ್ಯ, ಲಘುಸಾಹಿತ್ಯದ ಮಹತ್ವಕ್ಕೆ ಇದು ಒಂದು ಉತ್ತಮ ನಿದರ್ಶನ. ಇನ್ನೂ ಮುಂದುವರಿದು ಹೇಳುವುದಾದರೆ, ಈ ಲಘುಕೃತಿಯ ಕಥಾನಾಯಕನನ್ನು ಅಯ್ಯಾವೊಳೆ(ಇಂದಿನ ಐಹೊಳೆ)ಯ ರಾಜನೆಂದು ಚಿತ್ರಿಸಲಾಗಿದೆ. ಶಾಸನಗಳ ಪ್ರಕಾರ ಐಹೊಳೆ(ಐಯ್ಯಪ್ಪನ ಪೊಳಲ್)ಯಲ್ಲಿ ೫೦೦ ಜನ ಸದಸ್ಯರ ವ್ಯಾಪಾರಿ ಕೇಂದ್ರವಿದ್ದಿತು. ನನ್ನ ಮದುವೆಯ ಸಂದರ್ಭದಲ್ಲಿ ಅರಿಸಿಣ ಹಚ್ಚುವಾಗ ಒಬ್ಬಳು "ಐಯ್ಯಪ್ಪಶೆಟ್ಟರ ಮಗನು ಮಲ್ಲಣ್ಣಗ ನೆಯ್ಯ ಏರಿಸುವ ಬನ್ನಿರೇ" ಎಂದು ಹಾಡಿದಳು. ನಮ್ಮ ಅಪ್ಪನ ಹೆಸರು ಮಡಿವಾಳಪ್ಪ ಎಂದು ಗೊತ್ತಿದ್ದೂ ಈಕೆ ಅದರ ಬದಲು ಬಣಜಿಗರ ಮೂಲಪುರುಷನಾದ ಐಯ್ಯಪ್ಪನ ಹೆಸರು ಬಳಸಿದುದು, ಈ ಲಘುಕೃತಿಯ ಹೇಳಿಕೆಗೆ ಜಾನಪದದಿಂದ ಸಿಕ್ಕ ಒಂದು ಸಮರ್ಥನೆಯೇ ಆಗಿದೆ. ಹೀಗೆ ಕಾವ್ಯ, ಶಾಸನ, ಜಾನಪದಗಳು ಅಂತರಶಿಸ್ತೀಯದಲ್ಲಿರುವಂಥ ಸತ್ಯವನ್ನು ಸ್ಥಾಪಿಸಬಹುದೆಂಬುದಕ್ಕೆ ಈ ಲಘುಕೃತಿ ಉದಾಹರಣೆಯೆನಿಸಿದೆ.

ಅದೇನೇ ಇರಲಿ, ಮೇಲೆ ಹೇಳಿದ ಐದು ಸಾಲುಗಳು ಶ್ರಮವಿಭಜನೆಗಳೇ ಹೊರತು ವಿಭಿನ್ನ ಜಾತಿಗಳಲ್ಲ. ಆದರೆ ಲಿಂಗಾಯತ ಪಂಚಾಚಾರ್ಯಪೀಠದವರು ಪಂಚಾಚಾರ್ಯ, ಪಂಚಮಸಾಲಿ ಶಬ್ದಗಳಲ್ಲಿಯ ಪ್ರಾಸ ಮುಂದುಮಾಡಿ, ನಾವೇ ನಿಮ್ಮ ನೇರ ಗುರುಗಳೆಂದು ವಂಚಿಸಿ, ಪರ್ಯಾಯ ಶೋಷಣೆ ನಡೆಸಿರುವುದು ಸಾಮಾಜಿಕ ಅನ್ಯಾಯ. ಇಂಥ ಪ್ರಸಂಗದಲ್ಲಿ ಮೇಲೆ ಹೇಳಿದ ಪಂಚವಣಿಜೋತ್ಪತ್ತಿ ಪ್ರಕಟಣೆ–ಪ್ರಚಾರ ಎಷ್ಟು ಮುಖ್ಯವೆಂಬುದನ್ನು ಬೇರೆ ಹೇಳಬೇಕಿಲ್ಲ.

ಸಂ: ಸಂಶೋಧನೆ ಎಂದರೇನು? ಸಂಶೋಧಕನ ಜವಾಬ್ದಾರಿಗಳೇನು? ಎಂಬುದರ ಬಗ್ಗೆ ತಿಳಿಸಿರಿ.

ಎಂ.ಎಂ.ಕೆ: ಸಂಶೋಧನೆಯೆಂದರೆ ಕೇವಲ ಗತಕಾಲವನ್ನು ಶೋಧಿಸುವುದಲ್ಲ, ವರ್ತಮಾನವನ್ನು ಸೃಷ್ಟಿಸುವುದೂ ಹೌದು. ಸಮಾಜದಲ್ಲಿ ಇತಿಹಾಸವನ್ನು ಮಾಧ್ಯಮವನ್ನಾಗಿ ಮಾಡಿಕೊಂಡು ಸತ್ಯವನ್ನು ತಿರುಚುವ ಮೂಲಕ, ಸಂಸ್ಕೃತಿಯನ್ನು ಕುಲಗೆಡಿಸಿ, ಸಾಮಾಜಿಕ ಶೋಷಣೆ ಮಾಡುವವರ ವಿರುದ್ಧ ನಡೆಸುವ ಸಂಘರ್ಷವದು. ಅಂದರೆ ವರ್ತಮಾನದಲ್ಲಿ ಶೋಷಣೆಯನ್ನು ಹತ್ತಿಕ್ಕಲು, ನಿಜ ಇತಿಹಾಸವನ್ನು ಶೋಧಿಸಿ ಕೊಡುವುದು ಸಂಶೋಧನೆಯ ಕರ್ತವ್ಯವಾಗಿದೆ. ಒಟ್ಟಾರೆ, ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಇತಿಹಾಸವನ್ನು ಮುಂದು ಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವ ರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ನನ್ನನ್ನು ಸತ್ಯವನ್ನು ಹುಡುಕಲು ಒತ್ತಾಯಿಸುತ್ತಿವೆ. ಈ ಕಾರಣಕ್ಕಾಗಿ ನನ್ನ ವಿಷಯದಲ್ಲಿ ಆಗಾಗ ಘರ್ಷಣೆ ಕೇಳಿಬರುತ್ತದೆ. ಒಟ್ಟಾರೆ ನನ್ನ ಜೀವನ ಕ್ರಮ ಒಂದು ಸಣ್ಣ ಪ್ರಮಾದದಲ್ಲಾದರೂ ಸತ್ಯಕ್ಕಾಗಿ ಹೋರಾಟ ನಡೆಸುವಂಥದ್ದು.

ಸಂ: ಸರ್ ನಿಮ್ಮ ಈ ವ್ಯಕ್ತಿತ್ವ ರೂಪಿಸಿದ್ದು ಯಾವುದು?

ಎಂ. ಎಂ. ಕೆ: ಮೂಲತಃ ನನ್ನ ಕೌಟುಂಬಿಕ ಪರಿಸರ. ಮನೆಯಲ್ಲಿ ನಮ್ಮ ತಂದೆಯವರಾಡುತ್ತಿದ್ದ ಮಾತು. 'ಅಂಬಲಿ ಕಂಬಳಿ ಆಸ್ತಿ, ಮಿಕ್ಕದ್ದೆಲ್ಲಾ ಜಾಸ್ತಿ' ಎಂಬ ಮಾತು ನನ್ನನ್ನು ರೂಪಿಸುತ್ತಾ ಬಂದಿದೆ. ಈ ಸಂಸ್ಕಾರದೊಂದಿಗೆ ಮುಂದೆ ಓದಿದ್ದು, ಓದಿದ್ದಕ್ಕಿಂತ ಚಿಂತನೆಮಾಡಿದ್ದು ಹೆಚ್ಚು. ಆ

ಚಿಂತನೆಯಲ್ಲಿನ ಸತ್ಯವನ್ನು ಹೇಗೆ ಸೂತ್ರಬದ್ಧವಾಗಿಸಬೇಕೆಂಬುದರ ತುಡಿತ ನನ್ನದು. ಯಾರೋ ಹೇಳಿದ ನೆನಪು. ಕಲ್ಬುರ್ಗಿಯವರ ಬರವಣಿಗೆ ಸೂತ್ರರೂಪದ್ದು. ಅದು ವ್ಯಾಖ್ಯಾನ ರೂಪದ್ದಲ್ಲ. ಆ ಸೂತ್ರವನ್ನು ಎಷ್ಟಾದರೂ ವ್ಯಾಖ್ಯಾನಿಸಿಕೊಳ್ಳಬಹುದು ಎಂದು. ನನ್ನ ಸಂಶೋಧನಶಾಸ್ತ್ರವನ್ನು ಕುರಿತು "ಏನ್ರಿ ಇದು ಕೇವಲ ೧೦೦ ಪುಟ ಇದೆಯಲ್ಲ, ಇನ್ನೂ ಐವತ್ತು ಪುಟವಾದರೂ ಇರಬೇಕಾಗಿತ್ತು" ಎಂದರು. ಆಗ ನಾನೆಂದೆ: ಶಾಸ್ತ್ರ ಚಿಕ್ಕದಿರಬೇಕು, ದೊಡ್ಡದಿದ್ದಷ್ಟು ಅದು ಶಾಸ್ತ್ರವಾಗಿ ಉಳಿಯುವುದಿಲ್ಲ. ಉದಾ. ಪಾಣಿನಿಯ 'ಅಷ್ಟಾಧ್ಯಾಯಿ' ಎಷ್ಟದ? ಕೆಲವೇ ಪುಟದ್ದು, ಆದರೂ ಭಾಷಾ ಜಗತ್ತನ್ನೇ ಆಳುತ್ತದೆ.

ಸಂ: ಸಂಶೋಧನೆಯನ್ನು ನೀವು ಧಾರವಾಡ ಮಾದರಿ ಮತ್ತು ಮೈಸೂರು ಮಾದರಿ ಎಂದು ವಿಭಾಗಿಸುತ್ತೀರಲ್ಲ?

ಎಂ.ಎಂ.ಕೆ: ೨೦ನೆಯ ಶತಮಾನದ ಆರಂಭದಲ್ಲಿ ಕರ್ನಾಟಕವು ಭೌತಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಎರಡು ಬೇರೆ ಬೇರೆ ಘಟಕಗಳಾಗಿ ಒಡೆದುಹೋಗಿತ್ತು. ಮೈಸೂರು ಕರ್ನಾಟಕದ ಜನರ ಭಾವನೆಗಳೇ ಬೇರೆ, ಇಲ್ಲಿಯವರ ಭಾವನೆಗಳೇ ಬೇರೆ.

ಹಾಸನ ಸಾಹಿತ್ಯ ಸಮ್ಮೇಳನದಲ್ಲಿ ನಾಮವಿಜ್ಞಾನ ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿ ನಾನು ಆಡಿದ ಒಂದು ಮಾತು ಇಲ್ಲಿ ಪ್ರಸ್ತುತವೆನಿಸುತ್ತದೆ. ಅದು : ಕರ್ನಾಟಕದಲ್ಲಿ ಜನತೆ ಚಿದಾನಂದಮೂರ್ತಿ ಮತ್ತು ನನ್ನನ್ನು ಸಂಶೋಧಕರೆಂದು ಗುರುತಿಸುತ್ತಾರೆ. ನಾನು ಎಂ. ಎಂ.ಕಲಬುರ್ಗಿ ಅವರು ಎಂ. ಚಿದಾನಂದಮೂರ್ತಿ. ನಾನು ಎಂ. ಎಂಬಲ್ಲಿ ನನ್ನ ಹೆಸರನ್ನು (ಮಲ್ಲಪ್ಪ)ಸಣ್ಣದು ಮಾಡಿ, ಕುಟುಂಬದ ಹೆಸರನ್ನು (ಕಲಬುರ್ಗಿ)ದೊಡ್ಡದಾಗಿಸಿಕೊಂಡಿದ್ದೇನೆ. ಅವರು ಎಂ. ಎಂಬಲ್ಲಿ ತಮ್ಮ ಕುಟುಂಬದ (ಮಠದ) ಹೆಸರನ್ನು ಸಣ್ಣದು ಮಾಡಿ, ತಮ್ಮ ಹೆಸರನ್ನು ದೊಡ್ಡದಾಗಿರಿಸಿಕೊಂಡಿದ್ದಾರೆ. ಇದು ಮೈಸೂರಿನವರು ವ್ಯಕ್ತಿಪ್ರಧಾನರು, ಧಾರವಾಡದವರು ಕುಟುಂಬ ಪ್ರಧಾನರು–ಎಂಬುದನ್ನು ದೃಢಪಡಿಸುತ್ತದೆ. ಇದಕ್ಕೆ ಪೂರಕವೆಂಬಂತೆ ಪುಣೆಯ ಸಾಂಸ್ಕೃತಿಕ ಸಂಶೋಧನೆ ಧಾರವಾಡದ ಶಂಬಾ ಮೊದಲಾದ ಲೇಖಕರನ್ನು, ಮದ್ರಾಸಿನ ಚಾರಿತ್ರಿಕ ಸಂಶೋಧನೆ ಮೈಸೂರಿನ ಆರ್. ನರಸಿಂಹಾಚಾರ್ ಮೊದಲಾದ ಲೇಖಕರನ್ನು ರೂಪಿಸಿತು. ಇದೆಲ್ಲಾ ಏಕೀಕರಣದ ಪೂರ್ವದ ಕಥೆ. ಏಕೀಕರಣೋತ್ತರ ಕಾಲದಲ್ಲಿ ಧಾರವಾಡದವರು ಮೈಸೂರಿನವರನ್ನು ಅನುಸರಿಸಿದರು. ಅದೇನೆ ಇರಲಿ, ಇಂಥ ಅವಿಭಕ್ತ ಸಂಸ್ಕೃತಿ ಮತ್ತು ಶ್ರಮಸಂಸ್ಕೃತಿಗಳು ನನ್ನನ್ನು ರೂಪಿಸಿವೆ.

ಸಂ: ಅನೇಕ ಕಿರಿಯರನ್ನು ನೀವು ನಿಮ್ಮ ಒಡಲಲ್ಲಿ ಇಟ್ಟುಕೊಂಡು ಬೆಳೆಸಿದುದಕ್ಕೆ ಈ ಅವಿಭಕ್ತ ಸಂಸ್ಕೃತಿಯೇ ಕಾರಣವೆಂದು ಕಾಣುತ್ತದೆ. ಇತ್ತೀಚೆಗೆ ವೆಂಕಟಾಚಲಶಾಸ್ತ್ರೀ ಅವರೂ ನಿಮ್ಮ ಈ ಗುಣವನ್ನು ಎತ್ತಿ ಬರೆದಿದ್ದಾರೆ.

ಎಂ.ಎಂ.ಕೆ: ಇದನ್ನು ನಾನೂ ಗಮನಿಸಿದ್ದೇನೆ. ಇತ್ತೀಚೆ ಮೀರಾಸಾಬಿಹಳ್ಳಿ ಶಿವಣ್ಣ ಸಾರ್ವಜನಿಕ ವೇದಿಕೆಯ ಮೇಲೆಯೇ ಈ ಮಾತುಗಳನ್ನು ಹೇಳಿದರು. ಯಾವುದೇ ಕೆಲಸ ಅವರದು–ನನ್ನದು ಎಂದು ವಿಭಾಗಿಸುವುದು ನನ್ನ ಜಾಯಮಾನವಲ್ಲ. ನಾನು ವಿ.ಸಿ. ಆದಾಗ ಸಿಂದಗಿಯ ನಮ್ಮ ಮನೆಗೆ ಹೋಗಿದ್ದೆ, ಕೈತೊಳೆಯುವ ಸಿಂಕ್ ಮಲಿನವಾಗಿತ್ತು. ತೊಳೆಯತೊಡಗಿದೆ. ಅದನ್ನು ನೋಡಿದ ನಮ್ಮ ಅಣ್ಣ "ನೀನು ವೈಯ್ಸ್ ಚಾನ್ಸಲರ್ ಆಗಿ ಇದನ್ನೆಲ್ಲಾ ಮಾಡಬಾರದು" ಎಂದರು. ಆದರೆ ನನಗೆ ಇದೆಲ್ಲ ಸಹಜ. ಅವಿಭಕ್ತ ಪ್ರಜ್ಞೆ–ಶ್ರಮಸಂಸ್ಕೃತಿಯ ಭಾಗ.

ಸಂ: ನಿಮ್ಮ ಈ ಶ್ರಮಸಂಸ್ಕೃತಿಯು ನಾಗರಿಕ ಬದುಕಿನಿಂದ ಮೂಡಿದ್ದಲ್ಲವಲ್ಲ.

ಎಂ.ಎಂ.ಕೆ: ಹೌದು, ಅದು ಹಳ್ಳಿಯಿಂದ ಬಂದ ಗ್ರಾಮಸಂವೇದನೆ. ನಗರದ ಉಪಭೋಗ ಸಂಸ್ಕೃತಿಯಲ್ಲ. ಎಲ್ಲಿ ಪ್ರತಿಷ್ಠೆ ಬೇಕೋ ಅಲ್ಲಿ ಅದನ್ನು ಇಟಕೋಬೇಕು, ಎಲ್ಲಿ ಬಿಡಬೇಕೋ ಅಲ್ಲಿ ಬಿಡಬೇಕು.

ಸಂ: ಸ.ಸ. ಮಾಳವಾಡ, ಆರ್.ಸಿ. ಹಿರೇಮಠ ನಂತರ ನೀವು ವಾರಸುದಾರರಾಗಿ ಕಾಣುತ್ತೀರಿ. ಆದರೆ ನಿಮ್ಮ ನಂತರ ಅದಿಲ್ಲವೆಂಬ ಪ್ರಶ್ನೆ ಕಾಡುತ್ತದೆ. ಈ ಬಗ್ಗೆ.....

ಎಂ.ಎಂ.ಕೆ: ಹಾಗೇನಿಲ್ಲ ನನ್ನ ಅವಿಭಕ್ತ ಪ್ರಜ್ಞೆಯ ತೆಕ್ಕೆಯಲ್ಲಿ ಅನೇಕರು ಸೇರಿಕೊಂಡಿದ್ದಾರೆ. ಭೌತಿಕ ಲಾಲಸೆಯ ಕೆಲವರು ಅರ್ಧಕ್ಕೆ ನಿಂತುಬಿಟ್ಟಿದ್ದಾರೆ. ರಾಜೂರ, ಶಿರೂರ, ಎಲಿಗಾರರಂಥವರು ವಿಶ್ವವಿದ್ಯಾಲಯಗಳಲ್ಲಿ ಮಿಂಚಿದ್ದಾರೆ. ಕಾಲೇಜುಗಳಲ್ಲಿ ಇಂಥವರ ಸಂಖ್ಯೆ ಇನ್ನೂ ದೊಡ್ಡದಿದೆ. ಬೇರೆ ವಿಶ್ವವಿದ್ಯಾಲಯಗಳಲ್ಲಿಯೂ ನನ್ನ ಪರಿವಾರವಿದೆ. ಹಂಪಿ ವಿಶ್ವವಿದ್ಯಾಲಯವೂ ಸೇರಿ ನನ್ನ ಪರಿವಾರದಲ್ಲಿ ಕೆಲವರು ನನಗಿಂತ ಕೆಲವು ವಿಷಯಗಳಲ್ಲಿ ತಿಳುವಳಿಕೆಯುಳ್ಳವರಿದ್ದಾರೆ. ಕರ್ನಾಟಕದಲ್ಲಿ ಇವತ್ತು ಯಾವ ಹಸ್ತಪ್ರತಿ ಯಾರ ಮನೆಯಲ್ಲಿದೆ? ಅದು ಪ್ರಕಟವಾಗಿದೆಯೋ ಇಲ್ಲವೋ? ಎಂಬ ಬಗ್ಗೆ ಮಾಹಿತಿ ತಿಳಿಯಬೇಕಾದರೆ ರಾಜೂರ ಅಥವಾ ಶಿವಣ್ಣ ಅವರಿಂದ ಮಾತ್ರ ಸಾಧ್ಯ. ಶ್ರೀರಾಮ ಇಟ್ಟಣ್ಣವರ 'ಶ್ರೀ ಕೃಷ್ಣ ಪಾರಿಜಾತ' ಪುಸ್ತಕಕ್ಕೆ ಮುನ್ನುಡಿಯನ್ನು ಬರೆಯುತ್ತಾ "ಇಂಥವರಿಗೆ ಗೈಡ್ ಆಗೋದು ಅಂದ್ರೆ ನಾನು ಎಜ್ಯುಕೇಟ್ ಆಗೋದು" ಎಂದು ಬರೆದಿದ್ದೇನೆ. ಏಕೆಂದರೆ ಪಾರಿಜಾತವನ್ನು ನಾನು ಓದಿರಬಹುದು, ನೋಡಿರಬಹುದು. ಆದರೆ ಆತನಿಗೆ ಅದರೊಂದಿಗಿನ ಗಾಢವಾದ ಸಂಬಂಧವಿದೆ. ಕ್ಷೇತ್ರಕಾರ್ಯದ ಅನುಭವವಿದೆ.

ಸಂ: ದಕ್ಷಿಣ ಕರ್ನಾಟಕದ ಸಂಪಾದಕ ಮತ್ತು ಸಂಶೋಧಕರ ಹೆಸರು ಪದೇ ಪದೇ ಕೇಳಿ ಬರುವಂತೆ ಉತ್ತರ ಕರ್ನಾಟಕದವರ ಹೆಸರು ಕೇಳಿ ಬರದಿರುವುದಕ್ಕೆ ಕಾರಣವೇನು?

ಎಂ.ಎಂ.ಕೆ: ಬಹುಶಃ ಅಲ್ಲಿ ಸಂಗೀತಗಾರರಂತೆ ವ್ಯವಸ್ಥಿತ ಗುರುಪರಂಪರೆ ಬೆಳೆದು ಬಂದುದೇ ಇದಕ್ಕೆ ಕಾರಣವಿರಬಹುದು.

ಸಂ: ಇದಕ್ಕೆ ಇನ್ನೇನಾದರೂ ಕಾರಣವಿರಬಹುದೆ?

ಎಂ.ಎಂ.ಕೆ: ಕೃತಜ್ಞತೆಯ ಕೊರತೆಯೆಂದು ಮಾತ್ರ ಹೇಳಬಹುದು. ಒಂದು ಮಾತು ನಿಜ. ನನ್ನ ಶ್ರಮದ ಬಹುಪಾಲು ನನ್ನ ವಿದ್ಯಾರ್ಥಿಗಳಿಗಾಗಿ ಮೀಸಲಿಡುತ್ತಾ ಬಂದಿದ್ದೇನೆ. ಕೆಲವೊಮ್ಮೆ ಸ್ಪೂನ್ ಫೀಡಿಂಗ್ ಬಹಳ ಆಯಿತೇನೋ ಎನಿಸುತ್ತದೆ.

ಸಂ: ಸರ್, ಇದೇ ಸಂದರ್ಭದಲ್ಲಿ ನನ್ನದೊಂದು ಪ್ರಶ್ನೆ. ನಮ್ಮ ಬಹುತೇಕ ಕನ್ನಡದ ಪ್ರಧಾನ ಕೃತಿಗಳು ತಿರುಳುಗನ್ನಡ ನಾಡಾದ ಉತ್ತರ ಕರ್ನಾಟಕದಲ್ಲಿ ಹುಟ್ಟಿರುವಂಥವು. ಆದರೆ ಇವುಗಳ ಸಂಪಾದನ ಕೆಲಸವನ್ನ ಮೈಸೂರಿನ ವಿದ್ವಾಂಸರು ಹೆಚ್ಚಿನ ಪ್ರಮಾಣದಲ್ಲಿ ಮಾಡಿದರು. ಇದರಿಂದಾಗಿ ಪ್ರಾದೇಶಿಕ ಭಾಷೆಗಿಂತ ಭಿನ್ನವಾದ ಪ್ರಮಾಣೀಕೃತ ಭಾಷೆಯಲ್ಲಿ ಸಂಪಾದನೆಮಾಡಿಕೊಟ್ಟರೇನೋ ಎನಿಸುತ್ತದೆ.

ಎಂ.ಎಂ.ಕೆ: ಎಲ್ಲ. ಇಲ್ಲೊಂದು ಕನ್‌ಫ್ಯೂಜನ್ ಇದೆ. ಅದೇನೆಂದರೆ ಪಠ್ಯದಲ್ಲಿ ಎರಡು ವಿಧ ೧. ಸ್ಥಿರಪಠ್ಯ ೨. ಚರಪಠ್ಯ. ಸ್ಥಿರಪಠ್ಯ ಎಲ್ಲಿಯೇ ಹುಟ್ಟಿರಲಿ, ಅದನ್ನು ಯಾವುದೇ ಪ್ರದೇಶದ ವಿದ್ವಾಂಸರು ಸಂಪಾದಿಸಬಹುದು. ಚರಪಠ್ಯವನ್ನು ಆಯಾ ಪ್ರದೇಶಕ್ಕೆ ಸಂಪಾದಿಸುವುದು ಲೇಸು.

ಅಂದರೆ ಸಂಪಾದಕ ಒಂದು ಕೃತಿಯನ್ನು ಸಂಪಾದಿಸುವಾಗ ಇದು ಸ್ಥಿರಪಥ್ಯದ ವರ್ಗಕ್ಕೆ ಸೇರುತ್ತದೆಯೋ, ಚರಪಥ್ಯದ ವರ್ಗಕ್ಕೆ ಸೇರುತ್ತದೆಯೋ ಎಂದು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕು.

ಸಂ: ಇದಕ್ಕೆ ಮಾನದಂಡಗಳಾವುವು?

ಎಂ.ಎಂ.ಕೆ: ಮಾರ್ಗಸಾಹಿತ್ಯ ಸ್ಥಿರಪಥ್ಯ, ದೇಸೀ ಸಾಹಿತ್ಯ ಚರಪಥ್ಯ, ಸ್ಥಿರಸಮಾಜದ ಪಥ್ಯವಾದ ಮಾರ್ಗಸಾಹಿತ್ಯ : ರಾಜಪ್ರಭುತ್ವ ಕಾಲದ ಸೃಷ್ಟಿಯಾಗಿರುತ್ತದೆ. ಉದಾ: ಪಂಪ ಮೊದಲಾದವರು ಸ್ಥಿರಪಥ್ಯದ ಕವಿಗಳು. ಆದರೆ ಹರಿಹರ, ಕುಮಾರವ್ಯಾಸ, ಸರ್ವಜ್ಞರು ಚರಪಥ್ಯದ ಕವಿಗಳು. ಇಂಥವರ ಕಾವ್ಯ ಸಂಪಾದನೆಯನ್ನು ಈ ಕವಿಗಳ ಪ್ರಾದೇಶಿಕ ವಿದ್ವಾಂಸರು ಕೈಗೆತ್ತಿಕೊಳ್ಳುವುದು ವಿಹಿತ. ನಮ್ಮಲ್ಲಿ ವಿದ್ವತ್ತಿನ ಚಟುವಟಿಕೆ ಮೊದಲು ಮೈಸೂರು ಪ್ರದೇಶದಲ್ಲಿ ಆರಂಭವಾದ ಕಾರಣ ಇಂಥ ಕೃತಿಗಳನ್ನೂ ಅವರೇ ಸಂಪಾದಿಸಿದರು. ನಾನು ಸುಮಾರು ಈ ಆರು ತಿಂಗಳ ಹಿಂದೆ 'ಹಾ.ಮಾ.ನಾಯಕ್ ಪ್ರತಿಷ್ಠಾನ'ದ ಉದ್ಘಾಟನ ಕಾರ್ಯಕ್ರಮಕ್ಕೆ ಮೈಸೂರಿಗೆ ಹೋಗಿದ್ದೆ, ಅಲ್ಲಿ ನಾನು "ಸಾಹಿತ್ಯ: ಸಮೂಹ ಆಸ್ತಿ, ಅರೆ ಖಾಸಗಿ ಆಸ್ತಿ, ಖಾಸಗಿ ಆಸ್ತಿ" ವಿಷಯ ಕುರಿತು ವಿಶೇಷೋಪನ್ಯಾಸ ನೀಡಿದೆ.

ಖಾಸಗಿ ಆಸ್ತಿ ಅಂದರೆ ಮಾರ್ಗಸಾಹಿತ್ಯ, ಅರೆಖಾಸಗಿ ಆಸ್ತಿ ಅಂದರೆ ದೇಸೀ ಸಾಹಿತ್ಯ. ಸಮೂಹ ಆಸ್ತಿ ಅಂದರೆ ಅದು ಜನಪದ ಸಾಹಿತ್ಯ. ಇಂಥ ತಿಳಿವಳಿಕೆಯ ಹಿನ್ನೆಲೆಯಲ್ಲಿ ಸಂಪಾದನೆ ಕೈಗೆತ್ತಿಕೊಳ್ಳಬೇಕು. ಆದರೆ ನಮ್ಮ ಸಂಪಾದಕರು ಮಾಡಿದ ತಪ್ಪು ಎಂದರೆ ಮಾರ್ಗ ಮತ್ತು ದೇಸಿಗೆ ಒಂದೇ ಮಾನದಂಡವನ್ನು ಅಳವಡಿಸಿದ್ದು ಈ ತಪ್ಪನ್ನು ನಾನು ಇಪ್ಪತ್ತು ವರ್ಷಗಳಿಂದ ಎತ್ತಿಹೇಳುತ್ತ ಬಂದಿದ್ದೇನೆ.

ಸಂ: ಈ ತಪ್ಪಿಗೆ ಕಾರಣವೇನು?

ಎಂ.ಎಂ.ಕೆ: ಅಂಧಾನುಕರಣೆ, ಸಂಪಾದಿಸುವುದೆಂದರೆ ಎಲ್ಲ ಹಸ್ತಪ್ರತಿಗಳನ್ನು ಒಂದೆಡೆ ಕೂಡಿಸುವುದು, ಅದರಲ್ಲಿ ಒಂದು ಶುದ್ಧಪ್ರತಿಯನ್ನು ಆಯ್ದುಕೊಂಡು ಉಳಿದವುಗಳಿಂದ ಭಿನ್ನಪಾಠಗಳನ್ನು ಅಡಿಯಲ್ಲಿ ಕೊಡುವುದು ಎಂದು ಮಾತ್ರ ತಿಳಿದಿದ್ದಾರೆ. ಇದೊಂದು ಕೃತಕ ಪಾಂಡಿತ್ಯ. ನಾನು ಎಲ್ಲೋ ಒಂದೆಡೆ ಬರೆದಿದ್ದೇನೆ. ಧರ್ಮ ಬ್ಯಾರೆ, ಕರ್ಮ ಬ್ಯಾರೆ. ಕಣ್ಣು ತೆರೆದು ಮಾಡೋದು ಧರ್ಮ, ಕಣ್ಣು ಮುಚ್ಚಿ ಮಾಡೋದು ಕರ್ಮ.

ನಮ್ಮಲ್ಲಿ ಗ್ರಂಥಸಂಪಾದನೆ ಏನಾಗಿದೆ ಅಂದ್ರೆ ಮಾರ್ಗಕಾವ್ಯ ಸಂಪಾದನೆಯ ಮಾನದಂಡಗಳನ್ನು ದೇಸಿಕಾವ್ಯಗಳಿಗೂ ಅಳವಡಿಸಿದ್ರು ಮತ್ತು ಎಷ್ಟೋ ಜನ ಜನಪದಸಾಹಿತ್ಯಕ್ಕೂ ಅಳವಡಿಸಿದರು. ಗುಲ್ಬರ್ಗ ವಿ.ವಿ. ಯಲ್ಲಿ ಬಿ.ಬಿ. ಹೆಂಡಿಯವರು "ನೂರೆಂಟು ಜನಪದ ಕಥೆಗಳು" ಎಂಬ ಯೋಜನೆಯನ್ನು ತೆಗೆದುಕೊಂಡಿದ್ದರು. ಅದರಡಿಯಲ್ಲಿ ದುಡಿಯುತ್ತಿದ್ದ ಸಹಾಯಕ ಸಂಶೋಧಕ ಊರಿಂದೂರಿಗೆ ಕಥೆಗಳನ್ನು ಸಂಗ್ರಹಮಾಡುತ್ತಾ ನನ್ನ ಹತ್ತಿರ ಬಂದ. ಆತನ ಯೋಜನೆಯ ಪ್ರಗತಿ ವಿಚಾರಿಸಿದೆ. "ಒಂದು ಸಮಸ್ಯೆ ಭಾಳ ಕಾಡಾಕ ಹತ್ಯಾದ. ಒಂದು ಕತೆಯನ್ನು, ಒಂದು ಊರಾಗ ಒಂದು ರೀತಿ ಇನ್ನೊಂದು ಊರಾಗ ಇನ್ನೊಂದು ರೀತಿ ಹೇಳ್ತಾರ" ಅಂದ. ನನಗೆ ನಗು ಬಂತು, ಅವಗ ಜನಪದ ಸಾಹಿತ್ಯ ಸಂಪಾದನೆಯ ಪ್ರಾಥಮಿಕ ಜ್ಞಾನವೂ ಇಲ್ಲ ಅನಸ್ತು. "ಅಲ್ಲೋ ಊರಿಂದೂರಿಗೆ ಯಾಕ? ಒಂದು ಊರಿನಲ್ಲಿ ಒಬ್ಬನೇ ಮತ್ತೆ ಕೇಳಿದ್ರ, ಬ್ಯಾರೆ ಹೇಳ್ತಾನ. ಗಂಡುಮಕ್ಕಳಿದ್ರ ಬ್ಯಾರೆ, ಹೆಣ್ಣುಮಕ್ಕಳಿದ್ರ ಬ್ಯಾರೆ ಹೇಳ್ತಾನ. ಮುದುಕುರಿದ್ರ ಬ್ರಾರೆ ಹೇಳ್ತಾನ.

ಗೆಳೆಯರು ಅಥವಾ ಹುಡುಗರಿಗ್ರೆ ಹಾಸ್ಯ ಕೂಡಿಸಿ ಹೇಳ್ತಾನ. ಹೆಂಗಸರಿದ್ರ ಶೃಂಗಾರ ಕೂಡಿಸಿ ಹೇಳ್ತಾನ. ಮುದುಕುರಿದ್ರ ಆಧ್ಯಾತ್ಮ ಕೂಡಿಸಿಬಿಡ್ತಾನ.

ನಾ ಯೇನ್ ಹೇಳೋದು ಅಂದ್ರ, ಮಾರ್ಗ ಸಾಹಿತ್ಯದ ಸೂತ್ರಗಳನ್ನೇ ದೇಸೀಗೂ ಅನ್ವಯಿಸಿದ್ರು, ಜನಪದಕ್ಕೂ ಅನ್ವಯಿಸಿದ್ರು. ಮಾರ್ಗಸಾಹಿತ್ಯ ಸಂಪಾದನೆಗೆ ಹೆಚ್ಚು ಹಸ್ತಪ್ರತಿ ಬಳಸಿದಷ್ಟು ಪಾಠ ಹೆಚ್ಚು ಶುದ್ಧವಾಗುತ್ತದೆ. ದೇಸಿಸಾಹಿತ್ಯ ಸಂಪಾದನೆಗೆ ಹೆಚ್ಚುಹಸ್ತಪ್ರತಿ ಬಳಸಿದಷ್ಟು ಪಾಠ ಹೆಚ್ಚು ಅಶುದ್ಧವಾಗುತ್ತದೆ ಎಂಬ ಮಾತನ್ನು ನಾನು ಪದೇ ಪದೇ ಹೇಳಿದ್ದೇನೆ.

ದೇಸಿ ಸಂಪಾದನೆಯಲ್ಲಿ ಹೆಚ್ಚು ಹಸ್ತಪ್ರತಿಗಳನ್ನು ಬಳಸುವುದು ಸೂಕ್ತವೇ ಅಲ್ಲ. ಅಲ್ಲಿ ನಾವೇನ್ಮಾಡ್ತೇವೆ ಅಂದರೆ ಅದರಿಂದೊಂದು ಶಬ್ದ, ಇದರಿಂದೊಂದು ಶಬ್ದ, ಮತ್ತೊಂದರಿಂದೊಂದು ಶಬ್ದ ತೆಗೆದುಕೊಂಡು, ನಮ್ಮದೇ ಆದ ಹನ್ನೊಂದನೇ ಹಸ್ತಪ್ರತಿಯನ್ನು ತಯಾರಮಾಡ್ತೇವೆ. ಅದರ ಬದಲು ಸರಿಯಾದ ಒಂದು ಹಸ್ತಪ್ರತಿಯನ್ನಾಯ್ದು, ಅಲ್ಲಿ ಲಿಪಿಕಾರನ ಅಜ್ಞಾನದಿಂದುಂಟಾದ ಭಾಷಾದೋಷಗಳನ್ನು ಸರಿಪಡಿಸಿ, ತೀರ ಅವಶ್ಯವೆನಿಸಿದಲ್ಲಿ ಒಂದೆರಡು ಬೇರೆ ಹಸ್ತಪ್ರತಿಗಳಿಂದ ಪಾಠ ಸ್ವೀಕರಿಸಿ ಸಂಪಾದಿಸಿದರಾಯಿತು. ಇದರಿಂದ ಒಂದು ಹಸ್ತಪ್ರತಿಯನ್ನಾದರೂ ಸರಿಯಾಗಿ ಉಳಿಸಿಕೊಟ್ಟಂತಾಗುತ್ತದೆ.

ಆದರೆ ನಾವೇನ್ಮಾಡ್ತೀವಿ? ಹೀಗೆ ಮಿಶ್ರ ಪ್ರತಿಯೊಂದನ್ನು ಸಿದ್ಧಪಡಿಸಿ, ಅದೇ ಶುದ್ಧ ಎಂಬ ಭ್ರಮೆಗೆ ಒಳಗಾಗುತ್ತೇವೆ. ಇಂಥ ಭ್ರಮೆ ಬಿಡಬೇಕು.

ವಚನ ಸಂಪುಟಗಳ ಸಂಪಾದನೆಯಲ್ಲಿ ಹಳಕಟ್ಟಿಯವರು ಒಂದು ತಪ್ಪು ಮಾಡಿದರು. ಆರ್. ಸಿ. ಹಿರೇಮಠರು ಮತ್ತೊಂದು ತಪ್ಪು ಮಾಡಿದರು. ತಿಳಿದು ಅಲ್ಲ, ತಿಳಿಯಲಾರದೆ. ಅಂದರೆ ಹಳಕಟ್ಟಿಯವರು ಹಳೆಯ ಸಂಕಲನಗಳನ್ನು ಪ್ರತ್ಯೇಕ ಎಡಿಟ್ ಮಾಡಬೇಕಿತ್ತು, ಹೀಗೆ ಮಾಡ್ಲಿಲ್ಲ. ಅವೆಲ್ಲ ಕೂಡಿಸಿದರು. ನಂತರ ತಮಗೆ ಸೂಕ್ತವೆನಿಸುವಂತೆ ವರ್ಗೀಕರಣ ಮಾಡಿ ವಚನ ಶಾಸ್ತ್ರಸಾರ ಭಾಗ ೧, ೨, ೩ ಅಂತ ಹೀಗೆ ಕೃತಿ ರೂಪಿಸಿದರು. ಇದರಿಂದ ಸಾಚಾ ವಚನ ಯಾವುವು? ಖೋಟಾ ವಚನ ಯಾವುವು? ಗೊತ್ತಾಗಲೇ ಇಲ್ಲ. ಹಳಕಟ್ಟಿಯಂತಹ ಪಾರಂಪರಿಕ ವಿದ್ವಾಂಸರು ಪ್ರಕಟಿಸಿದ ಇಂಥ ವಚನಗಳನ್ನು ಆರ್. ನರಸಿಂಹಾಚಾರ್ ರಂತಹ ಅಕಾಡೆಮಿಕ್ ವಿದ್ವಾಂಸರೂ ತೆಗೆದುಕೊಂಡು ಬಿಟ್ಟರು. ಆಗ ವಚನಗಳಿಗೆ ಅಧಿಕೃತ ಮುದ್ರೆ ಬಿದ್ದಿತು. ನಂತರ ಆರ್.ಸಿ. ಹಿರೇಮಠರು, ಎಲ್. ಬಸವರಾಜು ಮೊದಲಾದವರು ಅತಿಹೆಚ್ಚು ಹಸ್ತಪ್ರತಿಗಳನ್ನು ಬಳಸಿ ಸಂಪಾದನೆ ಕೆಲಸ ಮಾಡಿದರು. ಹಳಕಟ್ಟಿಯವರು ವಚನ ಮಿಶ್ರಣವನ್ನು ಮಾಡಿದರೆ, ಇವರು ಪಾಠಮಿಶ್ರಣ ಮಾಡಿದರು. ಹತ್ತು ಹಸ್ತಪ್ರತಿ ಇಟ್ಟುಕೊಂಡು ಹನ್ನೊಂದನೆಯ ಹಸ್ತಪ್ರತಿ ಮಾಡಿದಂತಾಯಿತು. ಹೀಗಾಗಿ ವಚನಸಾಹಿತ್ಯ ಸಂಪಾದನೆ ಬಹುಮಟ್ಟಿಗೆ ಕೆಟ್ಟು ಹೋಯ್ತು.

ಮುಂದೆ ನಾವು ಸರ್ಕಾರದಿಂದ ಸಂಪುಟಗಳನ್ನು ಪ್ರಕಟಮಾಡಬೇಕಾಯ್ತು. ಆಗ ಖೋಟಾ ಕಟ್ಟುಗಳಾದ ಮುಕ್ತಿಕಂಠಾಭರಣ, ಸಿದ್ಧರಾಮ ಮತ್ತು ಶಾಂತಶೆಟ್ಟಿಯ ವಾದದ ವಚನ ಇತ್ಯಾದಿಗಳನ್ನು ದೂರ ಇಟ್ಟೆವು. ಇಷ್ಟರಮಟ್ಟಿಗೆ ಮಾತ್ರ ನಮ್ಮ ಸಂಪುಟಗಳು ಶುದ್ಧ ಎಂದು ಹೇಳಬಹುದು.

ಸಂ: ಸರ್ ಅವು ಖೋಟಾವಚನಗಳು ಅಂತ ಹೇಗೆ ಗೊತ್ತಾಗ್ತದೆ?

ಎಂ.ಎಂ.ಕೆ: ಶರಣರಲ್ಲದವರ ವಚನಗಳು, ಫಲಹಾರೇಶ್ವರಾ ಎಂಬ ಅಂಕಿತವನ್ನು ಬಳಸಿ ಫಲಹಾರಯ್ಯನ ವಚನಗಳು ಎಂದ್ಬಿಡೋದು. ಇಂಥವುಗಳನ್ನು ಹೊರಗಿಟ್ಟೆವು. ಇದರಿಂದ ಕೊನೆ ಪಕ್ಷ ಖೋಟಾವಚನಗಳಾದರೂ ಹೊರಗುಳಿದಂತಾಯ್ತು.

ಒಟ್ಟಾರೆ ಮಾರ್ಗದೊಳಗ ನಿರ್ದಿಷ್ಟ ಪಾಠ ಸಿಗ್ತದ, ಆದರೆ ದೇಸಿಯೊಳಗ ಪಾಠ ಅನಿರ್ದಿಷ್ಟವಾಗಿರ್ತದ. ಸಂಪಾದಕನಾದವನಿಗೆ ಈ ಅಂಶ ಗಮನದಲ್ಲಿರಬೇಕು. ಇಲ್ದೆ ಹೋದ್ರ ಸಂಪಾದನೆ ತಪ್ಪಾಗ್ತದ.

ಪಾಠ ನಿರ್ಣಯಿಸುವುದೆಂದರೆ, ರೂಪ ನಿರ್ಣಯಿಸುವುದು. ರೂಪ ನಿರ್ಣಯಹಿಸುವುದೆಂದರೆ ಗುಣ ನಿರ್ಣಯಿಸುವದೆಂದರ್ಥ. ರೂಪ ಸರಿಯಾಗಿತ್ತಂದರೆ, ಗುಣ ತಾನಾಗೇ ಸರಿಯಾಗ್ತದ. ರೂಪ ಕೆಟ್ಟರೆ ಗುಣ ಹ್ಯಾಂಗ ಉಳಿತದ? ಒಟ್ಟಿನಲ್ಲಿ ಶಬ್ದ ನಿರ್ಣಯ ಮಾಡೋದರಿಂದ ಅರ್ಥ ನಿರ್ಣಯವಾಗ್ತದ, ಅಥವಾ ಶಬ್ದ ಆಕೃತಿ ನಿರ್ಣಯ ಮಾಡೋದರಿಂದ ಆಶಯ ನಿರ್ಣಯವಾಗ್ತದ.

ಕವಿಪಾಠದ ಮೂಲ ರೂಪವನ್ನು ಮಾರ್ಗದೊಳಗ ನಿರ್ಣಯಿಸುವುದು ಸುಲಭ, ದೇಸಿಯೊಳಗ ನಿರ್ಧರಿಸುವುದು ಬಹಳ ಕಠಿಣ, ಜನಪದದೊಳಗಂತೂ ಆ ಪ್ರಸಂಗದಲ್ಲಿ ವಕ್ತೃಗಳು ಏನು ಹೇಳಿರ್ತಾರೋ ಅದೇ ಖರೇ. ಮೈಸೂರು ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ಒಂದು ವಿಚಾರ ಸಂಕಿರಣದ ಗೋಷ್ಠಿಗೆ ಅಧ್ಯಕ್ಷರಾಗಿದ್ದರು, ಎಲ್. ಬಸವರಾಜು ಅವರು. ನಾನು ಆ ಗೋಷ್ಠಿಯಲ್ಲಿ ಮಾತಾಡ್ತಾ "ಮಾರ್ಗ ಸಾಹಿತ್ಯ ಸಂಪಾದನೆ ಸುಲಭ, ದೇಸಿಸಾಹಿತ್ಯ ಸಂಪಾದನೆ ಕಠಿಣ" ಅಂದೆ, ಸಭಿಕರೆಲ್ಲ ನಕ್ಕರು. ಮುಂದೆ ತಮ್ಮ ಅಧ್ಯಕ್ಷೀಯ ಭಾಷಣದೊಳಗ ಎಲ್. ಬಸವರಾಜು ಅವರು "ಕಲ್ಬುರ್ಗಿಯವರು ಹೇಳಿದ್ದು ತಪ್ಪು, ಮಾರ್ಗಸಂಪಾದನೆ ತುಂಬಾ ಕಠಿಣ. ದೇಸಿಸಂಪಾದನೆ ತುಂಬಾ ಸರಳ" ಅಂದರು. ಅವರ ಮಾತು ಕೇಳಿ ಮನಸ್ಸಿನಲ್ಲಿಯೇ ನಾನು ನಕ್ಕು ಬಿಟ್ಟೆ. ಮಾರ್ಗದಲ್ಲಿ ಸ್ವಲ್ಪ ಕಷ್ಟಪಟ್ಟರೆ ಪಾಠ ನಿರ್ಣಯ ಮಾಡಬಹುದು. ಆದರೆ ಎಷ್ಟು ಕಷ್ಟಪಟ್ಟರೂ ದೇಸಿಯಲ್ಲಿ ಪಾಠನಿರ್ಣಯ ಮಾಡೋಕಾಗೋದಿಲ್ಲ. ಕವಿಯ ಪರಿಸರ, ಆ ಕಾವ್ಯದ ವಸ್ತು, ಕವಿ ಮನಸ್ಸು ಗೊತ್ತಿತ್ತಂದ್ರ ಮಾರ್ಗದಲ್ಲಿ ಪಾಠ ನಿರ್ಣಯ ಮಾಡಬಹುದು. ಆದರೆ ದೇಸಿಯಲ್ಲಿ ಇವೆಲ್ಲ ಗೊತ್ತಿದ್ರೂ ಆಗೋದಿಲ್ಲ. ಉದಾ. ಕುಮಾರವ್ಯಾಸ ಭಾರತ ಸಂಪಾದನೆ ಮಾಡಿಕೊಡ್ರಿ. ಕುಮಾರವ್ಯಾಸನಲ್ಲಿ ಸಂಧಿಗಳು ಪರಸ್ಪರ ಸೇರ್ಕೊಂಬಿಟ್ಟಾವ. ಕೀಚಕವಧಾ ಪ್ರಸಂಗದಲ್ಲಿ ಕುಸ್ತಿಪಟ್ಟುಗಳ ಒಂದು ಹೊಸ ಸಂಧಿ ಅದ. ಹರಿಶ್ಚಂದ್ರ ಕಾವ್ಯದ "ಏವೆನೇವೆನೆಲೆ ಮಗನೇ" ಎಂಬ ಭಾಗದಲ್ಲಿಯೂ ಕಂಡುಬರುತ್ತದೆ. ಇವೆಲ್ಲ ಹೊರಗ ಹಾಕೋದು ಭಾಳ ಸೂಕ್ಷ್ಮ, ಭಾಳ ಕಠಿಣ. ಇದು ದೇಸಿ ಸಮಸ್ಯೆ. ಜಾನಪದದೊಳಗೂ ಸ್ವಲ್ಪ ಹೆಚ್ಚು ಕಡಿಮೆ ಇಂಥ ಸಮಸ್ಯೆ ಎದುರಾಗ್ತದ. ಉದಾ: ಅಂದಣವೇರಿದ ಸೊಗಣ, ಅಂತ ಲಕ್ಷ್ಮೇಶ್ವರದಲ್ಲಿ ಒಬ್ಬ ಹೆಣಮಗಳು ಒಂದು ಹಾಡನ್ನು ಹಾಡಿದ್ಲು. ನಾನು ಇದನ್ನು ಸೊಣಗ ಅಂತ ತಿದ್ಕೊಳಿಲ್ಲ. ಆಕೇನ ಕೇಳ್ದೆ. ಸೊಗಣ ಅಂದ್ರ ಏನವಾ ಅಂತ. ನಾಯಿ ಅಂದ್ಳು. ಮಾರ್ಗದಲ್ಲಿ ಶುನಕ ಆಗ್ತಿತ್ತು. ದೇಸಿ ಇದ್ರ ಸೊಣಗ ಆಗ್ತಿತ್ತು. ಜನಪದದಲ್ಲಿ ಸೊಗಣ ಆಯ್ತು. ಇವೆಲ್ಲಾ ಸತ್ಯಪಾಠಗಳೇ. ಇಂಥ ಮೂಲಭೂತ ತಿಳಿವಳಿಕೆ ಸಂಪಾದಕನಿಗಿರಬೇಕು.

ಸಂ:ಬಹುಜನರಲ್ಲಿ ಈ ಪ್ರಜ್ಞೆಯ ಕೊರತೆ ಇರುವುದನ್ನು ಕಾಣಬಹುದು.

ಎಂ.ಎಂ.ಕೆ: ಹೌದು, ಉದಾ: ಬಸವಣ್ಣನವರ ವಚನದಲ್ಲಿ "ಏನಿ ಬಂದಿರಿ ಹದುಳವಿದ್ದಿರೆ? ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೇ" ಅಂತ ಇದೆ. ನನಗ್ಯಾಕೋ ಇದು ಬಸವಣ್ಣನ ಕಾವ್ಯಭಾಷೆಯಲ್ಲ ಅನಿಸ್ತು. ಮೈ ಸಂಪತ್ತು ಅಂದರೆ ಏನು? ಹೀಗೆ ಸಮಾಸ ಪದ ಮಾಡ್ತಾನೇನು ಬಸವಣ್ಣ? ಇದು ನಿಮ್ಮ ಮೈಸಿರಿ ಅಲ್ಲ, ನಿಮ್ಮೈಸಿರಿ (ನಿಮ್ಮ+ಐಸಿರಿ). ಐಸಿರಿ ಎಂಬ ಪದವನ್ನು ಈಗಲೂ ನಾವು ಹಳ್ಳಿಯಲ್ಲಿ ಬಳಸುತ್ತೇವೆ. ಈ ವಚನದ ಮುಂದಿನ ಸಾಲು ನನಗೆ ಇನ್ನೂ

ಕಾಡಿತು. "ಒಡನೆ ನುಡಿದರೆ ನಿಮ್ಮ ಶಿರ ಹೊಟ್ಟೆ ಒಡೆಯುವುದೇ" ಬಸವಣ್ಣ ಸಂಸ್ಕೃತ ಪದ ಶಿರ, ಕನ್ನಡ ಪದ ಹೊಟ್ಟೆ ಕೂಡಿಸಿ ಶಿರಹೊಟ್ಟೆ ಅಂತ ಬಳಸ್ತಾನಾ? ನನಗನಿಸುವುದು 'ನಿಮ್ಮ ಶಿರ ಪೊಟ್ಟನೊಡೆಯುವುದೆ?' ಅಂತ.

ಸಂ: ಗ್ರಂಥಸಂಪಾದನೆ ಸುಲಭ ಕೆಲಸವೆಂದು ಕೆಲವರು ಹೇಳುವುದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಎಂ.ಎಂ.ಕೆ: ಸುಲಭ ಅಂದ್ರ ಸುಲಭ, ಕಠಿಣ ಅಂದ್ರ ಕಠಿಣ. ಸಿರುಮನ ಚರಿತೆಯ ಒಂದು ಪದ್ಯದ ಪಾಠ ಹೀಗಿದೆ:

ವಿಘ್ನ ವಾದನ ಸಮೂಹ ಪರಶುಧರ
ವಿಘ್ನ ಕಾದಲಿ ಗಜವದನ।
ವಿಘ್ನ ಮೂರುತಿ ಸರ್ಪಧರನೆಂದೆನಿಸುವ
ವಿಘ್ನೇಶ್ವರನಡಿಗೆರಗುವೆನು॥

ಇದು ನನಗೆ ಸಿಕ್ಕ ಏಕೈಕ ಹಸ್ತಪ್ರತಿ. ಈ ಪದ್ಯದ ಪಾಠ ಪೂರ್ಣ ಕೆಟ್ಟಿದೆ. ವಾದನ> ವಿಪಿನ, ಕಾದಲಿ>ಕದಳಿ, ಮೂರುತಿ>ಮೂಷಕ ಎಂದು ಪರಿಷ್ಕರಿಸಿಕೊಳ್ಳಬೇಕು. ಆಗ ವಿಘ್ನವೆಂಬ ವಿಪಿನಕ್ಕೆ (ಅರಣ್ಯಕ್ಕೆ)ಕೊಡಲಿ (ಪರಶು) ಯಂತಿದ್ದವನು. ವಿಘ್ನಗಳೆಂಬ ಬಾಳೆ(ಕದಳಿ)ಗೆ ಗಜದಂತೆ ಇದ್ದವನು. ವಿಘ್ನಗಳೆಂಬ ಮೂಷಕಗಳಿಗೆ ಸರ್ಪದಂತಿರುವವನು ಎಂಬ ಸರಿಯಾದ ಅರ್ಥ ಹೊರಡುತ್ತದೆ.

ಇಲ್ಲಿ ಎರಡು ಸಂಭಾವ್ಯತೆ ಅದಾವ. ೧.ಲೇಖನ ಸಂಭಾವ್ಯತೆ ೨. ಅಂತಃ ಸಂಭಾವ್ಯತೆ. ಲೇಖನ ಸಂಭಾವ್ಯತೆ ಅಂದ್ರೆ ಅಕ್ಷರದ ರೂಪಸಾದೃಶ್ಯವನ್ನವಲಂಬಿಸಿ ನಿಜಪಾಠ ನಿರ್ಣಯಿಸುವುದು. ಕೆಲವು ಸಲ ಇದನ್ನೂ ಮೀರಿ ಕವಿಯ ಮನಸ್ಸನ್ನು, ಕಾವ್ಯದ ಸಂದರ್ಭವನ್ನು ಅರ್ಥಮಾಡಿಕೊಳ್ಳಬೇಕಾಗ್ತದ. ಇಂಥಲ್ಲಿ ಅವನ ಶ್ರಮ ಸೃಜನದ ದಾರಿ ಹಿಡಿಯಬೇಕಾಗುತ್ತದೆ. ಹೀಗೆ ತಿಳಿಯೋ ಪಾಂಡಿತ್ಯ ಹೊಳೆಯೋ ಪ್ರತಿಭೆ ಕೂಡಿಯೇ ದುಡಿಯಬೇಕಾಗುತ್ತದೆ. ಹೀಗಾಗಿ ನನ್ನ ದೃಷ್ಟಿಯಲ್ಲಿ ಗ್ರಂಥಸಂಪಾದನೆಯೆಂದರೆ ಸೃಜನಶೀಲ ಸಂಶೋಧನೆ. ಇಲ್ಲಿ ಪ್ರತಿಭೆಯಿರದೆ ಪಾಠ ಹುಡುಕೋಕೆ ಸಾಧ್ಯವಿಲ್ಲ.

ಸಂ: 'ಗ್ರಂಥಸಂಪಾದನೆಯು ಒಂದು ನಿರ್ದಿಷ್ಟ ಸಾಹಿತ್ಯ ಪ್ರಕಾರ ಅಥವಾ ಸಮುದಾಯಕ್ಕೆ ಸೀಮಿತವಾದರೆ ಸಾಹಿತ್ಯದ ಬಹುಭಾಗವನ್ನು ಸಂಸ್ಕೃತಿಯಿಂದ ಹೊರಗಿಟ್ಟಂತಾಗುವುದಿಲ್ಲವೇ?

ಎಂ.ಎಂ.ಕೆ: ವಿದ್ವಾಂಸರಿಗೆ ಬೇರೆ ಬೇರೆ ಪ್ರಕಾರ, ಬೇರೆ ಬೇರೆ ಸಂಪ್ರದಾದಯದ ಕೃತಿ ಓದಲು, ಸಂಪಾದಿಸಲು ಯಾರು ಬೇಡ ಅಂದರು? ನಾನು ಚಂಪೂ, ವಚನ, ರಗಳೆ, ಸಾಂಗತ್ಯ, ಷಟ್ಪದಿ, ಗದ್ಯ ಏನೆಲ್ಲ ಸಂಪಾದಿಸಿದ್ದೇನೆ. ವೀರಶೈವ, ಜೈನ, ಕುರುಬ, ಬೇಡ ಇತ್ಯಾದಿ ಸಮಾಜಗಳಿಗೆ ಸಂಬಂಧಿಸಿದ ಕೃತಿಗಳನ್ನು ಸಂಪಾದಿಸಿದ್ದೇನೆ.

ಸಂ: ಹಂಗಲ್ಲ ಸರ್, ಸಂಪಾದನೆಯ ಸಂದರ್ಭದಲ್ಲಿ ಪಠ್ಯವನ್ನು ಹೀಗೆ ಓದಬೇಕು, ಹೀಗೆ ಗ್ರಹಿಸಬೇಕು ಅನ್ನುವಂಥದ್ದು.

ಎಂ.ಎಂ.ಕೆ: ಒಂದು ಕೃತಿಯ ಪೂರ್ಣಪಠ್ಯವನ್ನು ಕೊಡುವುದಷ್ಟೇ ಸಂಪಾದಕನ ಕೆಲಸ. ಪೂರ್ಣಪಠ್ಯ ಅಂದ್ರೆ ಪೂರ್ಣ ಸಂವಹನವಾಗೋದು. ಅದು ಪೂರ್ಣಸಂವಹನವಾಗೋ ಹಾಗೇ ಸಂಪಾದನೆಯನ್ನು ಮಾಡಬೇಕು, ಹಾಗಾದಾಗ ಅದು ಪೂರ್ಣಪಠ್ಯ ಆಗ್ತದ. ಇತ್ತೀಚೆ ನಾನು "ಸಾಹಿತ್ಯ ಸಂವಹನ: ಪಾತಳಿ ಪಲ್ಲಟ" ಅಂತ ಒಂದು ಲೇಖನ ಬರೆದಿದ್ದೇನೆ. ಸಾಹಿತ್ಯ ಪ್ರಕಾರಗಳಿಗೆ

ಅವುಗಳನ್ನು ಸಂವಹನಗೊಳಿಸುವ ಪಾತಳಿ ಬೇರೆ ಬೇರೆ ಇರತದ. ಈಗ ಎಲ್ಲ ಪ್ರಕಾರಗಳನ್ನೂ ಒಂದೇ ಅಂದರೆ ಓದುವ ಪಾತಳಿಯಲ್ಲಿಟ್ಟು ಅಭ್ಯಾಸಮಾಡ್ತಿದ್ದೀವಿ. ಇದನ್ನ ನಮಗ ಗೊತ್ತಿಲ್ಲದ್ಹಂಗ ತಂದು ಬಿಟ್ಟೆವಿ. ಇದರಿಂದಾಗಿ ಅಪೂರ್ಣ ಪಠ್ಯವನ್ನು ಸಂಪಾದನೆ ಮಾಡಿದಂತಾಗ್ತದ. ಉದಾ:ಪಂಪ ಭಾರತದ ಪೂರ್ಣಪಠ್ಯ ಅಂದ್ರೆ, ಆ ಫಠ್ಯವನ್ನು ಅಂದು ಹ್ಯಾಂಗ ಸಂವಹನಗೊಳಿಸ್ತಿದ್ರು, ಅದೇ ರೀತಿ ಪ್ರಭುಲಿಂಗಲೀಲೆಯನ್ನ ಆ ರೀತಿ ಸಂವಹನಗೊಳಿಸಿದರೆ ಮಾತ್ರ ಪೂರ್ಣಪಠ್ಯ ಆಗ್ತದ, ಇಲ್ಲಂದ್ರ ಅಪೂರ್ಣಪಠ್ಯ ಆಗ್ತದ.

ನಾವು ಎಷ್ಟೋ ಸಲ ಜನಪದ ಹಾಡುಗಾರರನ್ನು ಕರೆದು 'ನೀ ಹೇಳು' ನಾ ಬರ್ಕ್ಕೋತೀನಿ ಅಂತಿವಿ. ಬರ್ಕ್ಕೊಂಡು ಅದನ್ನ ಪ್ರಿಂಟ್ ಹಾಕ್ತೀವಿ. ಇದು ಪೂರ್ಣಪಠ್ಯ ಅಲ್ಲ. ಕೇಳ್ಬೇಕು. ಕೇಳಿದ್ದೇನದ ಅದೇ ಪೂರ್ಣಪಠ್ಯ. ಧ್ವನಿಮುದ್ರಣ ಮಾಡಿದ್ದೂ ಅಲ್ಲ, ವಿಡಿಯೋ ಮಾಡಿದ್ದೆ ಪೂರ್ಣಪಠ್ಯ. ಜನಪದ ಸಾಹಿತ್ಯದಲ್ಲಿ ಇದೇ ಸರಿಯಾದ ಸಂಪಾದನೆ.

ಸಂ: ಆದರೆ ನಮ್ಮ ಜನಪದ ಸಂಪಾದನೆ ಕ್ಷೇತ್ರದಲ್ಲಿ ಎಡಿಟ್ ಮಾಡಿ ಮುದ್ರಿಸಿದ ಪಠ್ಯವೇ ಪ್ರಧಾನವಾಗಿದೆಯಲ್ಲ?

ಎಂ.ಎಂ.ಕೆ: ಹೌದು, ೨೦ ವರ್ಷದ ಹಿಂದೆ ನ್ಯಾಷನಲ್ ಲೆಕ್ಚರ್ ನೀಡುತ್ತ ನಾ ಹೇಳಿದ್ದು; "ಜನಪದ ಸಾಹಿತ್ಯ ಎಡಿಟಿಂಗ ಅಂದ್ರ ಪ್ರಿಂಟ್ ಮಾಡೋದಲ್ಲ, ಟೇಪ್ ಮಾಡೋದು. ಇದರ ವಿಮರ್ಶೆ ಅಂದ್ರನೂ ಪ್ರಿಂಟ್ ಮಾಡಿ ಓದಿ ವಿಮರ್ಶೆ ಮಾಡೋದಲ್ಲ, ಕೇಳಿ ಮಾಡೋದು" ಎಂದು. ಎಲ್ಲಮ್ಮನ ಜೋಗತಿ ಜನಪದ ಸಮ್ಮೇಳನದಲ್ಲಿ ಕುಣಿದು ಹಾಡುವುದು ಪೂರ್ಣಪಠ್ಯವಲ್ಲ. ರಂಡಿಹುಣ್ಣಿಮೆ ದಿವಸ ಸವದತ್ತಿಯಲ್ಲಿ ಎಲ್ಲಮ್ಮನ ಮುಂದೆ ಕುಣಿತಾ ಹಾಡುತಾಳಲ್ಲ, ಅದು ನಿಜವಾದ ಪಠ್ಯ. ಆಗ ಅದರ ನಾದ, ವಾದ್ಯ, ಆಕಿ ಆವೇಶ, ಆಕಿ ಭಕ್ತಿ ಇವೆಲ್ಲಾ ಕೂಡಿರತಾವ. ಅದನ್ನು ಕೇವಲ ಧ್ವನಿಮುದ್ರಣವಲ್ಲ, ವಿಡಿಯೋ ಮಾಡಿಕೊಳ್ಳಬೇಕು. ಇದು ನಿಜವಾದ ಪೂರ್ಣಪಾಠದ ಸಂಪಾದನೆ.

ಇದೇ ರೀತಿ ಕುಮಾರವ್ಯಾಸ ಭಾರತವು ಓದಿ ವಿಮರ್ಶೆಮಾಡೋ ಕಾವ್ಯವಲ್ಲ, ಕೇಳಿ ವಿಮರ್ಶೆಮಾಡೋದು. ಕುಮಾರವ್ಯಾಸ ಅಂತಾನ, ನಂದು ಓದೋ ಕಾವ್ಯವಲ್ಲ, ಕೇಳೋ ಕಾವ್ಯ, ಹಾಡೋ ಕಾವ್ಯ. ಆ ಕಾಲದಲ್ಲಿ ಕುಮಾರವ್ಯಾಸನ ಮುಂದಿದ್ದವರು ಓದೋರಲ್ಲ, ಕೇಳೋರು. ಅವರಲ್ಲಿ ೫ ರಷ್ಟು ಮಂದಿ ಅಕ್ಷರಸ್ಥರಿರಬಹುದು, ಮಿಕ್ಕ ೯೫ ರಷ್ಟು ಮಂದಿ ಅನಕ್ಷರಸ್ಥರಿದ್ದರು. ಈ ಮಂದಿ ಸಲುವಾಗಿ ಬರದಾನವ. ಅದರೊಳಗ ಕೇಳೋದಕ್ಕೆ ಯೋಗ್ಯವಾದ ಮಸಾಲಿ ಹಾಕ್ಯಾನ. ಜನರ ನಾಡಿ ಮಿಡಿತ ಗೊತ್ತಿತ್ತು ಅವಗ. ದೊಡ್ಡ ಕವಿ ಅದನ್ನು ಅರ್ಥಮಾಡ್ಕೋತಾನ. ಏಕದೆಂದರೆ ಸಂವಹನ ಆಗಬೇಕಲ್ಲ. ನಮ್ಮಲ್ಲಿ ಸಾಕ್ಷರತೆ ಹೆಚ್ಚಾತಲ್ಲ, ಆಗ ನಾವು ಕೇಳುವ ಪಾತಳಿಯನ್ನು ಬಿಟ್ಟು, ಓದುವ ಪಾತಳಿಯನ್ನು ಹಿಡಿದೆವು. ಸಾಕ್ಷರತೆ ಹೆಚ್ಚಾದದ್ದು, ಪಾತಳಿ ಪಲ್ಲಟವಾಗಲಿಕ್ಕೆ ಕಾರಣವಾಯಿತು.

ಇದಕ್ಕೆ ಇಂಗ್ಲಿಷನವರು ಕಾರಣ. ನಮ್ಮನ್ನು ಸಾಕ್ಷರರನ್ನಾಗಿ ಮಾಡಿದ್ರು. ಅವರದು ಸಾಕ್ಷರ ಸಂಸ್ಕೃತಿ. ಪ್ರಿಂಟ್ ಮಾಡಿ ಓತ್ತಿದ್ರು. ಅವರ ಸಾಹಿತ್ಯ ಹುಟ್ಟಿದ್ದು ಶ್ರವಣ ಪಾತಳಿಯಲ್ಲಲ್ಲ, ಲಿಪಿ ಪಾತಳಿಯಲ್ಲಿ ವಾಚನ ಪಾತಳಿಯಲ್ಲಿ, ಸಂವಹನದ ಪಾತಳಿ ಪಲ್ಲಟ ಆದ್ರ ಪರಿಣಾಮಗಳು ಬ್ಯಾರೇ ಆಗ್ತಾವ. ಕುಮಾರವ್ಯಾಸ ಭಾರತವನ್ನು ಗಮಕ ಮಾಡ್ರಿ, ಅದರ ಸಂವಹನದ ಪರಿಣಾಮವೇ ಬೇರೆ. ಆಗ ಆ ಪದ ಅಭಿನಯಿಸ್ತದ. ಅದಕ್ಕಾಗಿ ಒಳ್ಳೆಯ ಕಾವ್ಯ ಅಂದ್ರೆ ಕಿವಿಯಿಂದ ನೋಡೋದು. ಒಂದು ವೇಳೆ ಅದನ್ನು ಆಂಗಿಕ ಹಾವಭಾವದಿಂದ ಸಂವಹನಗೊಳಿಸಿದ್ರ ಪಠ್ಯ ಇನ್ನೂ ಪೂರ್ಣ ಆಗ್ತದ.

ಹಳ್ಳ್ಯಾಗ ಕಥಿ ಹೇಳ್ತಾರ. ರಾಜಾಗ ಒಬ್ಬ ಮಗಳಿದ್ಲಂತ. ಆಕಿ ಹೀಂಗಿದ್ಲಂತ ಅನ್ನುತ್ತ ಉಂಗುರ ಬೆರಳು–ಹೆಬ್ಬೆರಳುಗಳ ತುದಿ ಕೂಡಸ್ತಾರ. ಈ ರೀತಿ ಸಂಕೇತಗಳಿದಾವಲ್ಲ, ಅವು ಬಹಳ ಪರ್‌ಫೆಕ್ಟ್. ಹೀಗೆ ಇವನ್ನೆಲ್ಲಾ ಅರ್ಥ ಮಾಡಿಕೊಂಡು, ಮಾರ್ಗದ ಪೂರ್ಣ ಪಾಠವೇನು? ದೇಸಿಯ ಪೂರ್ಣ ಪಾಠವೇನು? ಅಥವಾ ಜನಪದದ ಪೂರ್ಣ ಪಾಠವೇನು? ಅಂತ ತಿಳಿದುಕೋಬೇಕು. ಮಾರ್ಗ ಸಾಹಿತ್ಯವಾದ ಪಂಪಭಾರತವು ವಾಚನಪಾತಳಿಯದಾದರೂ, ಸಶಬ್ದವಾಗಿ ಓದಿಸಿಕೊಳ್ಳುವಂತಹ ಪಠ್ಯವದು. ಅಂತೆಯೇ ಶ್ರವಣ ಪಾತಳಿಯದೂ ಹೌದು.

ಅಂದರ ಚಂಪುವನ್ನು ಸಶಬ್ದವಾಗಿ ಓದಬೇಕು, ಗದ್ಯವನ್ನು ನಿಶ್ಶಬ್ದವಾಗಿ ಓದಬೇಕು. ಇಲ್ಲಿ ಉದ್ದೇಶಪೂರ್ವಕವಾಗಿ ನಾನು ಸಶಬ್ದಪಠ್ಯ ಮತ್ತು ನಿಶ್ಶಬ್ದಪಠ್ಯ ಎಂಬ ಪದಗಳನ್ನು ಬಳಸಿದ್ದೇನೆ.

ಸಂ: ಈ ಹಿನ್ನೆಲೆಯಲ್ಲಿ ಕನ್ನಡದ ಚಂಪೂಕೃತಿಗಳ ಅಧ್ಯಯನಗಳನ್ನು ಕೂಡಾ ದೇಸೀ ಮಾದರಿಯ ಅಧ್ಯಯನಕ್ಕೆ ಒಳಪಡಿಸಬೇಕಾಗ್ತದೆ ಏನೋ ಅನ್ನಿಸ್ತದೆ.

ಎಂ.ಎಂ.ಕೆ: ಹೌದು. ಚಂಪೂ ಅಲ್ಲದು. ಅದನ್ನು ಸ್ವತಃ ಕವಿನೇ ಚಂಪೂ ಅಂತ ಹೇಳಿಲ್ಲ, 'ಪ್ರಬಂಧ' ಅಂತ ಕರೆದಿದ್ದಾನೆ. ಅದಕ್ಕಾಗಿ ಚಂಪೂ form ಅಲ್ಲದು, ಪ್ರಬಂಧ form. ಗದ್ಯ–ಪದ್ಯ ಮಿಶ್ರಣವಾಗಿರುವ ಸಂಸ್ಕೃತದ ಚಂಪೂ ನೋಡಿ, ಈ ಪ್ರಬಂಧವನ್ನು ಚಂಪೂ ಅಂತ ನಾವು ಕರೆದೆವು. ಹರಿಹರ ತನ್ನ 'ಗಿರಿಜಾಕಲ್ಯಾಣ'ವನ್ನು ಚಂಪೂ ಅನಲಿಲ್ಲ. 'ಗಿರಿಜಾಕಲ್ಯಾಣ' ಮಹಾಪ್ರಬಂಧ ಅಂದಾನ. ನೇಮಿಚಂದ್ರನೂ 'ಲೀಲಾವತಿ ಪ್ರಬಂಧ' ಅಂದಾನ. ಪ್ರಬಂಧದಲ್ಲಿ ದೃಶ್ಯವನ್ನು ಶ್ರವ್ಯಕ್ಕೆ ತರೋ ಕೆಲ್ಸ ನಡೆದಿರುತ್ತದೆ. ರನ್ನನ ಗದಾಯುದ್ಧದಲ್ಲಿ ಮೇಳದ ಕೆಳದಿ, ಚೇಟಿ, ವಿದೂಷಕ ಬರ್ತಾರ. ಅವೆಲ್ಲಾ ನಾಟಕದಾಗ ಬರ್ತವಾ, 'ಕಾವ್ಯೇಷು ನಾಟಕಂ ರಮ್ಯಂ'. ಈ ರಮ್ಯತೆಯು ನೋಡಿದರೆ ಅಲ್ಲ, ಕೇಳಿದರೂ ಆಗಬೇಕು. ಆ ದೃಶ್ಯ ಮಾಧ್ಯಮವನ್ನು ಕಾವ್ಯದಲ್ಲಿ ಶ್ರವ್ಯ ಮಾಧ್ಯಮಕ್ಕೆ ತರಬೇಕು. ಅದಕ್ಕಾಗಿ ನಾ ಒಂದ್ಕಡಿ ಬರ್ದೀನಿ "ದೃಶ್ಯದ ಶ್ರವ್ಯೀಕರಣವೇ ಪ್ರಬಂಧ ಅಂತ". ಅದಕ್ಕಾಗಿ ಗದಾಯುದ್ಧ ಓದುತ್ತಿರುವಾಗ, ಕಣ್ಮುಂದ ನಾಟಕ ಬಂದ್ಹಾಂಗ ಆಗ್ತದ.

ಸಂ: ಹೌದು.

ಎಂ.ಎಂ.ಕೆ: ಮೊದಲು ನಿರಕ್ಷರಿಗಳಾದ ನಮಗ ಓದಲು ಕಣ್ಣಿರಲಿಲ್ಲ, ಕಿವಿ ಇದ್ದವು. ಈಗ ಸಾಕ್ಷರತೆ ಬಂದ ಮೇಲೆ ಅಕ್ಷರ ಕಂಡ ಕೂಡ್ಲೆ ಕಣ್ಣು ಬಂದ್ವು, ಓದಿ ಕಾವ್ಯದ ಆಶಯ ಮಾತ್ರ ತಿಳಿಕೊಳ್ಳುದರಲ್ಲಿ ತೃಪ್ತರಾದೆವು. ಹಂಗಲ್ಲದು; ಪೂರ್ಣಪಠ್ಯ ಆಗಬೇಕಂದ್ರ ಅದನ್ನು ಶ್ರವಣ ಆವರಣಕ್ಕೆ ತರಬೇಕು. ಇದು ನಿಜವಾದ ಪೂರ್ಣ ಎಡಿಟಿಂಗ್.

ಸಂ: "ನಗೆ ಕಾಡ್ತಿರೋ ಮುಖ್ಯ ಪ್ರಶ್ನೆ ಇದೇ ಆಗಿತ್ತು. ನಮ್ಮ ಕೃತಿಗಳು ಶ್ರವಣ ಪಾತಳಿಯಲ್ಲಿ ಇದ್ದಾಗ್ಲೂ ಯಾಕೆ ಅವುಗಳ ಎಡಿಟಿಂಗ್ ಅಥವಾ ಅಧ್ಯಯನ ಕ್ರಮ ಭಿನ್ನವಾಗಿದೆ ಅಂತ". ಅಂದ್ರೆ ಇನ್ನು ಮೇಲೆ ನಮ್ಮ ಅಧ್ಯಯನ ಕ್ರಮಬೇರೆ ತರಹ ಆಗ್ಬೇಕಾಗೇದ ಅಂತನಸ್ತದ ಸರ್ .....

ಎಂ.ಎಂ.ಕೆ: ಹೌದು.ನಾವು ಅದ್ನ ಮಾಡೋದು ಬಹಳ ಅವಶ್ಯದ. ಆ ಮಾತನ್ನ ನಾ ಪದೇ ಪದೇ ಹೇಳ್ತಿರ್ತೀನಿ. ಶಬ್ದ ಮಾಧ್ಯಮದ ಕಲಾಕೃತಿಗಳಲ್ಲಿ ಗದ್ಯ–ಪದ್ಯ–ದೃಶ್ಯ ಎಂಬ ೩ ಪ್ರಕಾರಗಳಿದ್ದು, ಇವುಗಳ ವಿಮರ್ಶೆಗೂ ೩ ಪ್ರಭೇದಗಳೂ ಅವಶ್ಯವಾಗಿವೆ. ಅಂದರೆ ವಿಮರ್ಶೆಯಲ್ಲಿ ಗದ್ಯದ ಮಾನದಂಡವೇ ಬೇರೆ, ಪದ್ಯದ ಮಾನದಂಡವೇ ಬೇರೆ, ನಾಟಕದ ಮಾನದಂಡವೇ ಬೇರೆ ಇರಬೇಕು.

ಆದರೆ ಇಂದು ಗದ್ಯಕೃತಿ ವಿಮರ್ಶಾಮಾನದಂಡಗಳಿಂದಲೇ ಪದ್ಯ, ನಾಟಕ ಎಲ್ಲವನ್ನೂ ಅಳೆಯುತ್ತಿದ್ದೇವೆ. ಇನ್ನು ಮುಂದೆ ಇವುಗಳ ಬೇರೆ ಬೇರೆ ವಿಮರ್ಶಾ ಮಾನದಂಡಗಳು ಕನ್ನಡದಲ್ಲಿ ಹುಟ್ಟಬೇಕಾಗಿದೆ. ಕುವೆಂಪು ಅವರನ್ನು ಓದಿ ವಿಮರ್ಶೆ ಮಾಡಬಹುದು. ಯಾಕಂದ್ರ ಅದು ವಾಚನ ಪಾತಳಿಯದಾಗಿದೆ. ಬೇಂದ್ರೆಯವರದು ಶ್ರವಣ ಪಾತಳೀ ಪಥ್ಯ. ಕೇಳಿಯೇ ಅದರ ಸೊಬಗ ಸವಿಯಬೇಕು.

ಸಂ: But ಸಾಹಿತ್ಯ ವಿಮರ್ಶಕರು ಈ ಸೂಕ್ಷ್ಮತೆಯನ್ನು ಯಾಕೆ ಅರ್ಥಮಾಡಿಕೊಂಡಿಲ್ಲ?

ಎಂ.ಎಂ.ಕೆ: ನಾ ಎಷ್ಟು ಸಲ ಇದನ್ನು ಮಾತಾಡೀನಿ. ಆದರ ನನ್ಮೇಲೆ ಸಂಶೋಧಕ ಎಂಬ ಮುದ್ರಿ ಒತ್ಯಾರ. ನಾನು ಹೇಳೋ ವಿಮರ್ಶಕನ ಮಾತು ಇವರೆಂದೂ ಕೇಳೋದಿಲ್ಲ. ನಾ ೨೦ ವರ್ಷಗಳ ಹಿಂದೇನೇ ಈ ಮಾತನ್ನ ಹೇಳೀನಿ. ಮೊನ್ನೆ ಧರ್ಮಸ್ಥಳದ ಲಕ್ಷ ದೀಪೋತ್ಸವ ಸಂದರ್ಭದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ "ಶೈಲಿ ಮತ್ತು ರೀತಿ" ಎರಡೂ ಒಂದೇ ಅಲ್ಲ. ಶೈಲಿ ನಮ್ಮದಲ್ಲ, ಇಂಗ್ಲೀಷರು ಬಂದ ಬಳಿಕ ಅದು ಬಳಕೆಯಾಗುತ್ತಲಿದೆ. ನಮ್ಮದು ರೀತಿ, ಅವರದು ಶೈಲಿ. ಶೈಲಿ ವ್ಯಷ್ಟಿಗತ, ರೀತಿ ಸಮಷ್ಟಿಗತ.

ಸಂ: ಅದಕ್ಕೆ ಸರ್, ಸಮುದಾಯದ ಹಾಗೆ ನಡೆಯದಿದ್ದರ ಅವಗ ರೀತಿ ರಿವಾಜು ಇಲ್ಲ ಅಂತಾರ.

ಎಂ.ಎಂ.ಕೆ: ಹೌದು. ಇಂಗ್ಲಿಷರದು ವ್ಯಕ್ತಿ ಪ್ರಧಾನ ಸಂಸ್ಕೃತಿ. Style is man ಅಂತಾರ. ನಾವು ವ್ಯಕ್ತಿ ಪ್ರಧಾನ ಅಲ್ಲ, ಸಮೂಹ ಪ್ರಧಾನ. ಅದಕ್ಕಾಗಿ ನಮ್ಮ ಕಾವ್ಯ ಓದಿದ್ರ ಸಮಾಜನೇ ಮಾತಾಡ್ತಿರು ಹಂಗೆ ಕೇಳಿಸ್ತದ.

ಉದಾ: ಬೇಂದ್ರೆಯವರ ಒಂದು ಪದ್ಯ ಓದ್ರಿ, ಸಮಾಜವೇ ಮಾತಾಡಿದ ಹಂಗೆ ಕೇಳಸ್ತದ, ಕುವೆಂಪು ಅವರ ಕಾವ್ಯ ಓದ್ರಿ, ವ್ಯಕ್ತಿ ಮಾತಾಡಿದ ಹಂಗ ಕೇಳಸ್ತದ. ಬೇಂದ್ರೆಯರದು ರೀತಿ, ಕುವೆಂಪು ಅವರದು ಶೈಲಿ–ಎಂದಾಗ ಎಲ್ಲಾರು ಚಪ್ಪಾಳೆ ತಟ್ಟಿದರು. ಇಂಥಾ ವ್ಯತ್ಯಾಸ ಯಾರೂ ಹೇಳಿರಲಿಲ್ಲ ಅಂದರು. ರಚನೆ ದೃಷ್ಟಿಯಿಂದ ಕುವೆಂಪು 'ಶೈಲಿ' ಯಾರಾದ್ರು ಅನುಕರಣ ಮಾಡಬಹುದು. ಅದರೆ ಬೇಂದ್ರೆ 'ರೀತಿ' ಅನುಕರಣ ತುಂಬಾ ಕಠಿಣ. ಅದಕ್ಕೆ ರಚನೆ ದೃಷ್ಟಿಯಿಂದ ಕುವೆಂಪು ಉತ್ತರಾಧಿಕಾರಿಗಳು ಹುಟ್ಟಬಹುದು. ಬೇಂದ್ರೆ ಉತ್ತರಾಧಿಕಾರಿಗಳು ಹುಟ್ಟಾಕಾಗೋದಿಲ್ಲ. ನಮ್ಮ ಅಲಂಕಾರಿಕರು ಹೇಳಿರುವ "ರೀತಿರಾತ್ಮಾ ಕಾವ್ಯಸ್ಯ" ಇಲ್ಲಿ ನೆನಪಾಗ್ತದ.

ನಾ ಒಮ್ಮೆ ಕಣವಿ ಬಗ್ಗೆ ಮಾತಾಡ್ತಾ ಹೇಳ್ದೆ. ಕಣವಿಯವರು ಬೇಂದ್ರೆಯವರ ಉತ್ತರಾಧಿಕಾರಿ, ಅಂತ ನಾವು ಹೇಳ್ತೀವಿ. ಅವರು ಒಂದು ಅರ್ಥದಲ್ಲಿ ನಿಜವಾಗಿಯೂ ಉತ್ತರಾಧಿಕಾರಿ, ಆದರೆ ಇನ್ನೊಂದು ಅರ್ಥದಲ್ಲಿ ಉತ್ತರಾಧಿಕಾರಿ ಅಲ್ಲ, ಯಾಕಂದ್ರ ಬೇಂದ್ರೆ ಉತ್ತರಾಧಿಕಾರಿ ಆಗೋ ಶಕ್ತಿ ಯಾರಿಗೂ ಇಲ್ಲ ಅನಿಸ್ತದ.

ಬೇಂದ್ರೆಯವರ ಕವಿತ್ವದಲ್ಲಿ ಕಲಾತ್ಮಕತೆ ಕಡಿಮೆ, ಕಣವಿಯವರಲ್ಲಿ ಹೆಚ್ಚು. ಬೇಂದ್ರೆ ಅರಣ್ಯ ಇದ್ಹಾಂಗ, ಕಣವಿ ಗಾರ್ಡನ್ ಇದ್ಹಾಂಗ. ಅದು ಅರಣ್ಯ ಸೌಂದರ್ಯ, ಇದು ಉದ್ಯಾನ ಸೌಂದರ್ಯ. ಇವೆಲ್ಲಾ ತಿಳುವಳಿಕೆಗಳು ನಮಗ ಎಡಿಟಿಂಗ್ ಮಾಡೋವಾಗ ಬೇಕು. ಪಂಪನದು ಅರಣ್ಯ ಸೌಂದರ್ಯ. ರನ್ನನದು ಉದ್ಯಾನ ಸೌಂದರ್ಯ. ಅಂತೆಯೇ ನಾವು ಪ್ರಯತ್ನ ಪಟ್ಟು ರನ್ನ ಆಗಬಹುದು, ಆದರೆ ಪಂಪ ಆಗುವುದು ಕಠಿಣ.

ಈ ಪ್ರಶ್ನೆಯಿಂದ ಕಾವ್ಯ ಎಡಿಟ್ ಮಾಡ್ಲಕ ಶುರುಮಾಡಬೇಕು. 'ಕುಮಾರವ್ಯಾಸ ಭಾರತ' 'ಪ್ರಭುಲಿಂಗಲೀಲೆ', 'ಜೈಮಿನಿ ಭಾರತ' ಇವುಗಳ ಪ್ರತಿಯೊಂದು ಸಂಧಿ ಮ್ಯಾಲೆ ರಾಗ-ತಾಳಗಳ ನಿರ್ದೇಶನಗಳದಾವು. ಆದರೆ ಅವುಗಳನ್ನು ಎಡಿಟ್ ಮಾಡೋವಾಗ ತೆಗೆದುಬಿಟ್ರು, ಪಾಶ್ಚಾತ್ಯ ವಿದ್ವಾಂಸರು, ಯಾಕೆಂದ್ರ ಅವರು ಶ್ರವಣ ಪಾತಳಿಯವರಲ್ಲ. ವಾಚನ ಪಾತಳಿಯವರು. ಅದನ್ನು ನೋಡಿ ನಾವೂ ರಾಗ, ತಾಳ ತೆಗೆದುಬಿಟ್ಟೆವು. ಎಡಿಟ್ ಮಾಡೋವಾಗ ಅವುಗಳನ್ನು ತೆಗಿಬಾರ್ದು. ಅದು ಪಠ್ಯಕ್ಕೆ ಬಹಳ ಮುಖ್ಯ. ಈ ಸಂಧಿ ಹೀಂಗ ಸಂವಹನಗೊಳಿಸಬೇಕು ಅಂತಿರ್ತದ ಕವಿ ಮನೋಧರ್ಮ. ಹಾಗೆ ಮಾಡದಿದ್ರ ಪೂರ್ಣ ಪಠ್ಯಕ್ಕೆ ಕೊರತೆಯುಂಟಾಗ್ತದ. ಕಾವ್ಯದ ಶಕ್ತಿ-ಸತ್ವ ಅಲ್ಲಿಯೂ ಇರ್ತದ.

ಚಿತ್ರದುರ್ಗದೊಳಗ ಭಾಷಣ ಮಾಡ್ತಾ ನಾನು ವಚನ ಹ್ಯಾಂಗ ಓದಬೇಕು? ಅದನ್ನು ಓದುವ ಪದ್ಧತಿ ತಪ್ಪಾಗೇದ ಅಂತ ಹೇಳಿದೆ. ಉದಾ:

"ವೇದವನೋದಿದವರ ಮುಂದೆ ಅಳು, ಕಂಡೆಯಾ ಹೋತೆ,

ಶಾಸ್ತ್ರನೋದಿದವರ ಮುಂದೆ ಅಳು, ಕಂಡೆಯಾ ಹೋತೆ"

ಹೀಗೆ 'ಅಳು', ಎನ್ನುವುದರ ಮೇಲೆ ಒತ್ತುಕೊಟ್ಟು, ನಿಂತು ಓದಬೇಕು, ಅದು ಪೂರ್ಣಪಠ್ಯ. ಅದೇ ರೀತಿ "ಎನ್ನವರು ಹೊಗಳಿ ಹೊಗಳಿ ಹೊನ್ನ ಶೂಲಕ್ಕಿಕ್ಕಿದ್ದರು" ಎನ್ನುತ್ತಲೇ "ಅಯ್ಯೋ" ಎಂಬುದನ್ನು ಒತ್ತಿ ಉಚ್ಚರಿಸಿ, ಮುಂದೆ ಸಾಗಬೇಕು. ಆಗ ಉಂಟಾಗುವ ಪರಿಣಾಮವೇ ಬೇರೆ. ಇಂಥ ಕ್ರಮಗಳನ್ನು ನಾವು ಎಲ್ಲಿಯವರೆಗೆ ಗ್ರಹಿಸೋದಿಲ್ವೋ ಅಲ್ಲಿಯವರೆಗೆ ಪಠ್ಯ ಪೂರ್ಣ ಆಗೋದಿಲ್ಲ.

ನಾನು ಸಂವಹನದ ಪಾತಳಿ ಪಲ್ಲಟ ಎಂಬ ಹೊಸ ವಿಚಾರ ಹೇಳಿರುವುದನ್ನು ರಹಮತ್ ತರೀಕೆರೆ ತಮ್ಮ "ಕುಮಾರವ್ಯಾಸ ಭಾರತದ ಸಾಂಸ್ಕೃತಿಕ ಮುಖಾಮುಖಿ" ಪುಸ್ತಕದಲ್ಲಿ ಎತ್ತಿ ಉಲ್ಲೇಖಿಸಿರುವುದನ್ನು ಸ್ಮರಿಸಬಹುದು.

ಒಟ್ಟಾರೆ ನಮ್ಮ ಕಾವ್ಯ ೧೦೦೦ ವರ್ಷದಿಂದ ಅನುಸರಿಸುತ್ತಾ ಬಂದಿದ್ದ ಸಂವಹನ ಪಾತಳಿಯನ್ನು ಇಂಗ್ಲಿಷರು ಬಂದ ಬಳಿಕ ಕಳಕೊಂಡಿದೆ.

ಸಂ: "ಸರ್. ಆ ಪಾತಳಿನಿಷ್ಠೋದಿಗೆ ನಾವು ತಿರುಗಬೇಕಾಗಿದೆ ಅಂತೀರಾ...?

ಎಂ. ಎಂ.ಕೆ: ಹೌದು, ಅದು ಪೂರ್ಣ ಗ್ರಂಥಸಂಪಾದನೆಯೂ ಹೌದು.

ಸಂ: "ಅಂದ್ರೆ ವಸಹತುಶಾಹಿ ಶಿಕ್ಷಣ ಮತ್ತು ಜಾಗತೀಕರಣದ ಓದು ಇದಕ್ಕೆ ಕಾರಣವಿರಬಹುದೇ?

ಎಂ.ಎಂ.ಕೆ: ಹೌದು, ಜಾಗತೀಕರಣ ಯಾವ ಕಾಲದಾಗಿಲ್ಲ, ಎಲ್ಲ ಕಾಲದಲ್ಲೂ ಇದೆ. ಬಲಿಷ್ಠರು ದುರ್ಬಲರನ್ನು ಆಳೋದು, ಯಾವಾಗಲೂ ಅದ. ಸಂಸ್ಕೃತಿಯಲ್ಲಿನ ಜಾಗತೀಕರಣ ಅದು. ಆಗ ನಮ್ಮ ಜಗತ್ತು ಅಷ್ಟೇ ಇತ್ತು. ಈಗ ವಿಸ್ತಾರ ಆಗೇದ. ಅದು ಸಂಸ್ಕೃತದ ಜಾಗತೀಕರಣ, ಇದು ಇಂಗ್ಲೀಷ್‌ದ ಜಾಗತೀಕರಣ. ಈ ಜಾಗತೀಕರಣ ಮುಂದೂ ಇರ್ತದ.

ಸಂ: ಹೀಗಿದ್ದೂ ಅಂದಿನ ಸಂದರ್ಭದಲ್ಲಿ ಕನ್ನಡ ಕಾವ್ಯ ಶಕ್ತಿಯುತವಾಗಿ ಹುಟ್ಕೊಂಡು ಬಂತು. ಆ ಎಲ್ಲವನ್ನೂ ಮೀರಿ.

ಎಂ.ಎಂ.ಕೆ: ಒಂದು ಮಾತ ಹೇಳ್ತೇನಿ, ಅದೇನಂದ್ರ "ಬರಗೂರ ಒಂದು ಕಡೆ ಮಾತಾಡ್ತಾ, ಕನ್ನಡ ಸಶಕ್ತವಾದ ಭಾಷೆ, ಸಂಸ್ಕೃತವನ್ನು ಜೀರ್ಣಿಸಿಕೊಂಡಂಥ ಭಾಷೆ. ಇದಕ್ಕೆ ಇಂಗ್ಲೀಷ

ಜೀರ್ಣಿಸಿಕೊಳ್ಳೂದು ದೊಡ್ಡದು ಅಲ್ಲ" ಅಂದ್ರು. ಆಗ ನಾ ಅಂದೆ: "ಬರಗೂರು ಹಾಂಗಲ್ಲ, ಸಂಸ್ಕೃತ ಡೆಡ್‌ಲಾಂಗ್ವೇಜ್ ಆಗಿತ್ತು. ಇಂಗ್ಲಿಷ್ ಲಿವ್ವಿಂಗ್ ಲ್ಯಾಂಗ್ವೇಜ್, ಅದರಲ್ಲಿಯೂ ಇಂದಿನ ವಿಜ್ಞಾನ ಅವಲಂಬಿತ ಬದುಕಿಗೆ ಅನಿವಾರ್ಯ ಭಾಷೆ. ಮೃತಭಾಷೆಯನ್ನು ಜೀರ್ಣಿಸಿಕೊಳ್ಳೋದು ಬ್ಯಾರೆ, ಜೀವಂತ ಭಾಷೆಯನ್ನು ಜೀರ್ಣಿಸಿಕೊಳ್ಳೋದು ಬ್ಯಾರೆ. ಉದಾ: ಒಂದು ನರಿ, ಸತ್ತ ಸಿಂಹವನ್ನು ತಿನ್ನೋದು ಬ್ಯಾರೆ, ಜೀವಂತ ಸಿಂಹವನ್ನು ತಿನ್ನೋದು ಬ್ಯಾರೆ. ಇದು ಭಾಳ ದೊಡ್ಡ ಸವಾಲದ. ಈ ಸೂಕ್ಷ್ಮ ಮೇಲುನೋಟಕ್ಕೆ ಗೊತ್ತಾಗಲ್ಲ" ಅಂದೆ. ಸಂಸ್ಕೃತವೇ ಇರಲಿ, ಇಂಗ್ಲಿಷೇ ಇರಲಿ, ಕನ್ನಡವೇ ಇರಲಿ ಒಂದು ಸ್ಟಾಂಡರ್ಡೈಜೇಶನ್ ಮಾಡಬೇಕಾಗ್ತದ, ಸಂವಹನ ದೃಷ್ಟಿಯಿಂದ.

ಸಂ: "ಸ್ಟ್ಯಾಂಡರ್ಡ್ ಲ್ಯಾಂಗ್ವೇಜ್ ಅನಿವಾರ್ಯವೇ ಸರ್"

ಎಂ.ಎಂ.ಕೆ: ಹೌದು. ಸಾಕ್ಷರತೆ ಬೆಳೆದ್ಹಂಗ ಈ ಸ್ಟಾಂಡರ್ಡೈಜೇಶನ್ ತಾನೇ ಆಗ್ಬಿಡ್ತದ.

ಸಂ: ಸರ್, ನಾವು ಕೃತಿಯೊಂದರ ಸಂವಹನಪಾತಳಿ ನೋಡೋಕೆ ಹೋಗೂದಿಲ್ಲ. ನಿರ್ದಿಷ್ಟ ಒಂದು Text ನ್ನು ತೆಗೆದುಕೊಂಡು ಕುರುಡರಂತೆ ಅಧ್ಯಯನ ಮಾಡುವುದಕ್ಕೆ ಶುರುಮಾಡಿದಾಗ ಈ ತರಹದ ಅಪಾಯಗಳಿಗೆ ಗುರಿಯಾಗುತ್ತೇವೆ.

ಎಂ.ಎಂ.ಕೆ: ಹೌದು ಗುರಿಯಾಗ್ತೇವೆ. ಆದ್ರೂ ಈ ಸಂದರ್ಭದೊಳಗೆ ನಾವು ಇನ್ನೊಂದನ್ನು ವಿಚಾರ ಮಾಡಬೇಕು. ನಮ್ಮ ಪ್ರಾದೇಶಿಕತೆಯ ಜೊತೆಗೆ ಎಲ್ಲರಿಗೂ ಅನುಕೂಲವಾಗುವ ಒಂದು ಸಾಮ್ಯಾನ್ಯತಾ ವ್ಯವಸ್ಥೆ ಬೇಕಲ್ಲ. ಇದಕ್ಕಾಗಿ ಸ್ಟಾಂಡರ್ಡೈಜೇಶನ್ ಅನಿವಾರ್ಯವಾಗ್ತದೆ. ಪ್ರಮಾಣೀಕೃತ ಅಂತ ವಿದ್ವಾಂಸರು ಮಾಡಿದ್ರು, ನಾವು ಸ್ವೀಕಾರ ಮಾಡಿದೆವು. ಹೀಗಿದ್ದೂ ಮೂಲತಃ ಉತ್ತರ ಕರ್ನಾಟಕದ್ದು ಸಂಸ್ಕೃತಿನಿಷ್ಠ ಬರವಣಿಗೆ, ದಕ್ಷಿಣ ಕರ್ನಾಟಕದ್ದು ಚರಿತ್ರೆನಿಷ್ಠ ಬರವಣಿಗೆ.

ಸಂ: But ಇಬ್ರ ಅಪ್ರೋಚದಲ್ಲಿ ಬಹಳ ದೊಡ್ಡ ವ್ಯತ್ಯಾಸವಿತ್ತು.

ಎಂ.ಎಂ.ಕೆ: ಹೌದು. ಇದು ಅಂತರಂಗದ್ದು, ಅದು ಬಹಿರಂಗದ್ದು. ಆದರೆ ಮುಂದೆನಾಯ್ತು ಮುಂದೆ ಉತ್ತರ ಕರ್ನಾಟಕ ತನ್ನತನ ಕಳಕೊಂಡಬಿಡ್ತು.

ಸಂ: ಈ ಅಪಾಯದ ಬಗ್ಗೆ ನಿಮ್ಮ ಗಮನ ಸೆಳೆಯೋಕೆ ಬಯಸ್ತಾ ಇದ್ದೀನಿ. ಮೈಸೂರಿನವರು ನಮ್ಮ ಕಡೆಯ ವಿದ್ವತ್ತನ್ನು ಹಾಗೂ ಸಂಪಾದನೆಯ ಕೃತಿಗಳನ್ನು ಗಂಭೀರವಾಗಿ ಪರಿಗಣಿಸದೇ ಇರೋದು. ಈ ಮಾತಿಗೆ ಸಣ್ಣಯ್ಯನವರು ಇತ್ತೀಚೆಗೆ ಬರೆದ 'ಪ್ರಾಚೀನ ಕನ್ನಡ ಗ್ರಂಥಸಂಪಾದನೆ' ಕೃತಿ ಉತ್ತಮ ಉದಾಹರಣೆ.

ಎಂ.ಎಂ.ಕೆ: ಸಣ್ಣಯ್ಯವರ ಕೃತಿ ನಾನು ನೋಡಿಲ್ಲ, ಎರಡೂ ಕಡೆಗೆ ಉತ್ತಮರು ಇದ್ದಾರೆ, ಅನುತ್ತಮರೂ ಇದ್ದಾರೆ.

ಸಂ: ಅಂದ್ರೆ ಉತ್ತರ ಕರ್ನಾಟಕದ ಭಾಷೆ ಹೊರಟ್ಹೋಗಿ, ಹಳೆ ಮೈಸೂರಿನ ಮಧ್ಯಮ ವರ್ಗದ ಭಾಷೆ ಇಡೀ ಕನ್ನಡ ಸಾಹಿತ್ಯದ ಭಾಷೆಯಾಗಿ ಅಥವಾ ಶ್ರೇಷ್ಠ ಭಾಷೆಯಾಗಿ ರೂಪುಗೊಂಡಿತು.

ಎಂ.ಎಂ.ಕೆ: ಯಾವಾಗ್ಲೂ ರಾಜಧಾನಿಭಾಷೆ ಪ್ರಮಾಣೀಕೃತ ಆಗ್ತದ. ಮೊದಲು ಮೈಸೂರು, ನಂತರ ಬೆಂಗಳೂರು ರಾಜಧಾನಿ ಆಯ್ತು. ಹಾಗಾಗಿ ರಾಜಧಾನಿ ಭಾಷೇನೇ Language ಆಗಿ, ಅದನ್ನು ಎಲ್ಲರೂ ಸ್ವೀಕಾರ ಮಾಡಹತ್ತಿದರು. ಇದು ಎಲ್ಲ ಕಾಲದಲ್ಲಿ ಅನಿವಾರ್ಯ.

ಸಂ: ಕನ್ನಡದ ಬಾಳ ಶ್ರೇಷ್ಠ ಕೃತಿ, ಆರಂಭದ ಕೃತಿ, ಕನ್ನಡದ ಅಸ್ಮಿತೆಯನ್ನು ಹೇಳುವ ಕೃತಿಗಳೆಂದು ಕವಿರಾಜಮಾರ್ಗವನ್ನು ಕಬ್ಬಿಗರ ಕಾವವನ್ನು ನಾವು ಹೆಸರಿಸ್ತೀವಿ. ಆದರೆ ಇವು ಬೇರೆ ಕೃತಿಗಳ ಹಾಗೆ ಹೆಚ್ಚು ವಿಶ್ಲೇಷಣೆಗೆ ಮತ್ತು ಸಂಪಾದನೆಗೆ ಗುರಿಯಾಗಿರುವುದಕ್ಕೆ ಕಾರಣಗಳೇನು?

ಎಂ.ಎಂ.ಕೆ: ಇದಕ್ಕೇನು ಕಾರಣ ಆತು ಅಂದ್ರ, ನಮ್ಮಲ್ಲಿ ಆಧುನಿಕತೆಯು ನವೋದಯದಿಂದಲೇ ಆರಂಭವಾಯಿತು. ಆಗ ರಸ ಸಂಪ್ರದಾಯ ಬೆಳೆದು ರಸನಿಷ್ಠ ಪ್ರಾಚೀನಕಾವ್ಯ ಪರಿಷ್ಕರಣಕ್ಕೆ ಹೆಚ್ಚು ಒತ್ತು ಬಿತ್ತು. ಆಗ ಸಹಜವಾಗಿಯೇ ಶಾಸ್ತ್ರಕೃತಿಗಳ ಪರಿಷ್ಕರಣ, ಅಭ್ಯಾಸ ಒಂದಿಷ್ಟು ಉಪೇಕ್ಷಿಸಲಾಯ್ತು. ಇನ್ನು ಆಂಡಯ್ಯನ ಕಬ್ಬಿಗರ ಕಾವವನ್ನು ಕೂಡಾ ಮಾರ್ಗ ಕಾವ್ಯದ ಒಲವು ಬೆಳೆಸಿಕೊಂಡಿದ್ದ ಕಾರಣ ಅಷ್ಟಾಗಿ ಗಮನಿಸಲಿಲ್ಲ. ಮೇಲಾಗಿ ಅದು ಅಷ್ಟೇನು ಉತ್ತಮ ಕಾವ್ಯವಲ್ಲ.

ಸಂ: ಸರ್, ಷಟ್‌ಸ್ಥಲ ವ್ಯವಸ್ಥೆಯೊಳಗಡೆ ವಚನಗಳನ್ನು ಸಂಪಾದನೆಮಾಡುವ ಮೂಲಕ ಪಠ್ಯವನ್ನು ನಿರ್ದಿಷ್ಟೀಕರಣ ಗೊಳಿಸಿದಂತಾಗಲಿಲ್ಲವೇ? ಇದರಿಂದ ಆಗುವಂಥ ಪರಿಣಾಮಗಳು.......

ಎಂ.ಎಂ.ಕೆ: ಅದು ಹಾಂಗಲ್ಲ. ಪ್ರಾಚೀನ ಕಟ್ಟುಗಳು ಹೇಗಿವೆಯೋ ಹಾಗೆ ಸಂಪಾದನೆ ಮಾಡಬೇಕಾಗ್ತದ. ಏಕೋತ್ತರ ಶತಸ್ಥಲ ಕೃತಿಯಲ್ಲಿ ೧೦೧ ಸ್ಥಲ-ಎಲ್ಲಾ ಶರಣರ ವಚನಗಳಿವೆ. ಬಸವಣ್ಣನ ಷಟ್‌ಸ್ಥಲ ವಚನ ಕಟ್ಟಿನಲ್ಲಿ ಬಸವಣ್ಣನವು ಅಷ್ಟೇ ಇವೆ. ಇವುಗಳನ್ನು ಈಗಿನವರು ಬೇರೆ ರೀತಿ ಹೊಂದಿಸಬಹುದು. ಪ್ರಾಚೀನ ಕಾಲದ ಇಂಥಪ್ರಯತ್ನಕ್ಕೆ ಶೂನ್ಯಸಂಪಾದನೆ ಒಂದು ಉತ್ತಮ ಉದಾಹರಣೆ. ಒಬ್ಬ ಸೂತ್ರಧಾರನ ಕೇಂದ್ರದಲ್ಲಿ ವಚನಗಳನ್ನು ಸಂಯೋಜಿಸಲಾಗಿದೆ.

'ಸೂತ್ರಧಾರನ ವ್ಯಕ್ತರೂಪ ರಂಗಭೂಮಿ, ರಂಗಭೂಮಿ ವ್ಯಕ್ತಿರೂಪ ಸೂತ್ರಧಾರ'. ಏಕೆಂದರೆ ಸೂತ್ರಧಾರನ ಒಳಗೇ ರಂಗಭೂಮಿ ಇರ್ತದ. ವಿಭಿನ್ನ ಪಾತ್ರಗಳನ್ನು ನಿಯಂತ್ರಿಸಿ ಆ ಕಲೆಗೆ ಒಂದು ಸಾವಯವ ಸಂಬಂಧ ತರಬೇಕು. ಪ್ರಮಾಣ ಬದ್ಧತೆ ತರಬೇಕು. ಅದಕ್ಕಾಗಿ ಶೂನ್ಯ ಸಂಪಾದನೆಕಾರನೇ ಸೂತ್ರಧಾರನಾಗಿ ಎಲ್ಲಾ ಪಾತ್ರಗಳನ್ನು ಸಂಘಟಿಸಿದ್ದಾನೆ.

ಸಂ: ಸರ್ ಈ ತರಹದ ಸಂಪಾದನೆಗಳ ಹಿಂದೆ ವೀರಶೈವ ಮನೋಧರ್ಮ ಕೆಲಸ ಮಾಡಿದೆಯೇ?

ಎಂ.ಎಂ.ಕೆ: ಹೌದು. ಅಲ್ಲಿ ತಾತ್ವಿಕತೆ ಅದ. ಆ ತಾತ್ವಿಕತೆ ತಿಳ್ಕೋಳ್ಳಾಕ ಪಾತ್ರಗಳ ಸಂಘಟನೆ-ಸಂವಾದ ಮಾಡಲಾಗಿದೆ. ಸಮಾನತೆ ತರೋದು, ಎಲ್ಲರಿಗೂ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸಮಾನ ಅವಕಾಶವನ್ನು ಮಾಡಿಕೊಡೋದು, ತಪ್ಪನ್ನ ಒಪ್ಪಿಕೊಳ್ಳೋದು, ಪ್ರತಿಯೊಬ್ಬರೂ ಪರಸ್ಪರ ನಮಸ್ಕಾರ ಹೇಳುವುದರ ಮೂಲಕ ಅಹಂಕಾರ ನಿರಸನ ಮಾಡಿಕೊಳ್ಳೋದು-ಇವೆಲ್ಲವುಗಳ ಮೂಲಕ ಸಿದ್ಧಾಂತವೊಂದು ಅಲ್ಲಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ.

ಸಂ: ಸರ್, ಎಲ್. ಬಸವರಾಜು ಅವರ ಸರಳ ಗದ್ಯಾನುವಾದದತ್ತ ಆಸಕ್ತಿ ತೋರಿಸ್ತಿದ್ದಾರೆ. ಇದಕ್ಕ ಕಾರಣವೇನು?

ಎಂ.ಎಂ.ಕೆ: ಅದೂ ಒಂದು ಅಭ್ಯಾಸ ಅಷ್ಟೇ. ಹಿಂದಕ ಸರಳ ಗದ್ಯಾನುವಾದ ಭಾಳ ಜನ ಮಾಡ್ಯಾರ. ಅವರು ಟೀಕೆ ತಾತ್ಪರ್ಯ ಬರ್ತಿದ್ರು, ಈಗಿನವರು ಗದ್ಯಾನುವಾದ ಮಾಡ್ತಿದ್ದಾರೆ.

ಸಂ: ಜನಪ್ರಿಯ ಸಂಪಾದನೆ ಕುರಿತು ನಾಲ್ಕು ಮಾತು.....'

ಎಂ.ಎಂ.ಕೆ: ಜನಪ್ರಿಯ ಸಂಪಾದನೆ ಅಂದ್ರೆ ಹೆಚ್ಚು ಶಾಸ್ತ್ರ ಜಟಿಲ ಮಾಡಬಾರ್ದು. ಹೆಚ್ಚು ಪಾಠಾಂತರಗಳನ್ನು ಹೇರಬಾರ್ದು.

ಸಂ: ಶಾಸ್ತ್ರ ಜಟಿಲ ಪಠ್ಯಗಳನ್ನು ಓದಲಿಕ್ಕೆ ಆಗದಿರುವಂತಹ ಸಂದರ್ಭದಲ್ಲಿ ಈ ತರಹದ ಪ್ರಯತ್ನಗಳು ಹುಟ್ಟಿಕೊಂಡವೋ ಹೇಗೆ?

ಎಂ.ಎಂ.ಕೆ: ಒಂದು ಕಡೆ ಸಂಪಾದನೆಯಲ್ಲಿ ಪಾಂಡಿತ್ಯದ ಅತಿರೇಕಾಯಿತು. ಅಂದ್ರೆ ಹೆಚ್ಚು ಹಸ್ತಪ್ರತಿ ಬಳಸಿ ಹೆಚ್ಚು ಪಾಠಾಂತರಗಳನ್ನು ಸಂಗ್ರಹಿಸಿವುದು, ಅದಕ್ಕೆ ಹೆಚ್ಚು ಅಂಕಿ ಹಾಕೋದು,

ಇವೆಲ್ಲಾ ಬೆಳೆದು ಅದೇನು ಭಾಷಾ ಪುಸ್ತಕವೋ? ಗಣಿತ ಪುಸ್ತಕವೋ? ಅನ್ನೋವಷ್ಟರ ಮಟ್ಟಿಗೆ ಅಂಕಿಗಳು ಹೆಚ್ಚಾಗ್ಬಿಟ್ವು ಡಾ. ಆರ್.ಸಿ. ಹಿರೇಮಠ, ಡಾ. ಎಂ.ಎಸ್. ಸುಂಕಾಪುರ ಸಂಪಾದಿಸಿದ ಸೋಮನಾಥ ಚರಿತ್ರೆ, ತೀ.ನಂ. ಶ್ರೀ. ಸಂಪಾದಿಸಿದ ನಂಬಿಯಣ್ಣನ ರಗಳೆ, ಎಲ್. ಬಸವರಾಜು ಸಂಪಾದಿಸಿದ ಆದಿಪುರಾಣ ಸರಿಯಾದ ಸಂಪಾದನೆಗಳೇ ಅಲ್ಲ. ನಾನು ಇವರ ಸ್ಕಾಲರಶಿಪ್ ಪ್ರಶ್ನೆ ಮಾಡೋದಿಲ್ಲ. ಆದರೆ ಅವರು ಅನುಸರಿಸಿದ ವಿಧಾನ, ನೀಡಿದ ಫಲಿತಾಂಶ ಸರಿಯಲ್ಲ. ಈ ಜಟಿಲತೆಯಿಂದ ಪಠ್ಯವನ್ನು ಮುಕ್ತಗೊಳಿಸಲು ಮತ್ತು ಓದುಗರಿಗೆ ಸರಳ ಗದ್ಯದ ಮೂಲಕ ಕೃತಿಯನ್ನು ಪರಿಚಯಿಸಲು ಈ ಗದ್ಯಾನುವಾದ ಅಸ್ತಿತ್ವಕ್ಕೆ ಬಂದಿತು.

ಸಂ: ಜನಪ್ರಿಯ ಕಾವ್ಯ ಸಂಪಾದನೆ ಉಪೇಕ್ಷೆಗೆ ಗುರಿಯಾಗಿದೆಯೇ?

ಎಂ.ಎಂ.ಕೆ: ನಮ್ಮಲ್ಲಿ ಕುಮಾರವ್ಯಾಸ ಭಾರತ, ಹರಿಶ್ಚಂದ್ರ ಕಾವ್ಯಗಳಂಥ ಜನಪ್ರಿಯ ಕಾವ್ಯಗಳಿವೆ. ಇವು ಓದುಗರಿಗೆ ಬೇಡಿದಾಗ ಸುಲಭ ಬೆಲೆಯಲ್ಲಿ ಸಿಗಬೇಕು. ಇವಲ್ಲದೆ ಇಂಥ ಬೇರೆ ಕಾವ್ಯಗಳ, ಅದರಲ್ಲಿಯೂ ಐತಿಹಾಸಿಕ ಕಾವ್ಯಗಳ ಸಂಪಾದನೆ ನಮ್ಮಲ್ಲಿ ಇನ್ನೂ ಉಪೇಕ್ಷೆಗೆ ಗುರಿಯಾಗಿದೆ. ಇದನ್ನು ಮನಗಂಡು ಸಾಹಿತ್ಯದಲ್ಲಿ ಚರಿತ್ರೆಯನ್ನು, ಸಮಾಜವನ್ನು ಹುಡುಕುವ ನಾನು, ಆ ಕಡೆಗೆ ಗಮನ ಹರಿಸಿ ಉಪಸಂಸ್ಕೃತಿಗೆ ಸಂಬಂಧಿಸಿದ ಸಿರುಮಣನಾಯಕ ಚರಿತ್ರೆ, ಸಿರುಮನ ಚರಿತೆ, ಸಿರುಮನ ಸಾಂಗತ್ಯ ಹೀಗೆ ಸಿರುಮಣನ ೩ ಕಾವ್ಯ, ಆ ಮೇಲೆ ಕುಮಾರರಾಮನ ೪ ಕಾವ್ಯಗಳನ್ನು ಸಂಪಾದಿಸಿದ್ದು, ೨ ಪ್ರಕಟವಾಗಿವೆ. ಇತ್ತೀಚೆ ಕುರುಬ ಸಮಾಜವನ್ನು ಕುರಿತ ೨ ಕಾವ್ಯ ಬೆಳಕು ಕಂಡಿವೆ. ಇಲ್ಲಿಯವರೆಗೆ ಸಂಪಾದಕರಿಗೆ ಬರೇ ಪಂಪಭಾರತದಂಥವು ಕಾಣಿಸಿದವು. ಇವು ಕಾಣಿಸಲಿಲ್ಲ. ಇದ್ರಿಂದ ನಮ್ಮ ಕಲ್ಚರ್ ನಾವು ಪ್ರಕಟ ಮಾಡ್ತೀವಿ. ಪಂಪಭಾರತ ಮೊದಲಾದವುಗಳಲ್ಲಿಯೂ ನಮ್ಮ ಕಲ್ಚರ್ ಇದೆ. ಅದ್ರೂ ಅಲ್ಲಿ ಬರೋ ಕಲ್ಚರ್‌ದ ರೀತಿನೇ ಬ್ಯಾರೇ, ಇಲ್ಲಿ ಬರೋ ಕಲ್ಚರದ ರೀತೀನೇ ಬ್ಯಾರೇ, ಅಲ್ಲಿ ಪ್ರಧಾನ ಸಂಸ್ಕೃತಿ ಮುಖ್ಯವಾಗಿರ್‍ತದೆ, ಇಲ್ಲಿ ಉಪಸಂಸ್ಕೃತಿ ಮುಖ್ಯವಾಗಿರ್‍ತದೆ. ಅಲ್ಲಿ ಪ್ರಭುತ್ವಕ್ಕೆ ನಿಷ್ಠನಾಗೇ ಕಾವ್ಯ ಬರೀಬೇಕಾಗಿತ್ತು. ಇಲ್ಲಿ ಹಾಗಿಲ್ಲ.

ಸಂ: ಆರಂಭದಲ್ಲಿ ನೀವು ವೀರಶೈವ ಕೃತಿಗಳ ಕಡೆಗೇ ಹೆಚ್ಚು ತೊಡಗಿಸಿಕೊಂಡಿರಿ ಅನ್ನೋ ಮಾತದ.

ಎಂ.ಎಂ.ಕೆ: 'ಹಾಗಲ್ಲ, ನಾನು 'ಬಸವಪೀಠ'ಕ್ಕೆ ಪ್ರೊಫೆಸರ್ ಅದೆ. ಅದಕ್ಕೆ ತಕ್ಕಂಗ ಕೆಲ್ಸ ಮಾಡ್ಬೇಕಾಯ್ತು. 'ಜೈನಪೀಠ'ಕ್ಕೆ ಆಗಿದ್ರೆ ಅದನ್ನೇ ಮಾಡ್ತಿದ್ದೆ. ಅದು ನನ್ನ ವೃತ್ತಿಧರ್ಮ. ಮುಂದೆ ನನ್ನ ಆಸಕ್ತಿ ಕಲ್ಚರ್ ಕಡೆಗೆ ಹೊರಳಿತು. ಈ ಉಪೇಕ್ಷಿತ ಕ್ಷೇತ್ರ ನನಗ ಬಹಳ like ಆಗೇದs. ಅದರಲ್ಲಿಯೂ ಚರಿತ್ರೆ, ಸಂಸ್ಕೃತಿ ಎರಡೂ ಒಳಗೊಂಡ ಚಾರಿತ್ರಿಕ ಕಾವ್ಯ ಇನ್ನೂ ಹೆಚ್ಚು like ಆಗೇದ.

ಸಂ: ಮಧ್ಯಕಾಲೀನ ಸಾಹಿತ್ಯಕೃತಿಗಳ ವಿಶೇಷವೇ ಇದು. ಉಪಸಂಸ್ಕೃತಿಯನ್ನು ಕಟ್ಟಿಕೊಡೋದು

ಎಂ.ಎಂ.ಕೆ: ಹೌದು ಹಳೆ ಕಾಲದೊಳಗ ಚರಿತ್ರೆ ಮತ್ತು ಪುರಾಣ ಎರಡೂ ಬ್ಯಾರೆ ಮಾಡಿದ್ರು. ಮಧ್ಯಕಾಲೀನಕ್ಕೆ ಬಂದಾಗ ಚರಿತ್ರೆಯ ಪುರಾಣೀಕರಣ ಮಾಡಿದ್ರು.

ಸಂ: ಇತ್ತೀಚೆಗೆ ಸಮಗ್ರ ಸಂಪುಟಗಳ ಪ್ರಕಟಣೆ ಜಾಸ್ತಿ ಆಗಿದೆ. ಇದರ ಬಗ್ಗೆ ತಮ್ಮ ಅಭಿಪ್ರಾಯ?

ಎಂ.ಎಂ.ಕೆ: ಇರದೊಳಗೆ ತಪ್ಪೇನದ, ಹೀಗ ಮಾಡದಿದ್ರ ಎಲ್ಲಾ ಚಲ್ಲಾಪಿಲ್ಲಿಯಾಗಿ ಹೋಗ್ತವೆ. ಉದಾ: ರಾಘವಾಂಕನ ಸಮಗ್ರ ಕೃತಿಗಳು, ಅದೇ ರೀತಿ ಹರಿಹರನ ರಗಳೆಗಳು. ಓದುಗರ ದೃಷ್ಟಿಯಿಂದ ಈ ಕ್ರಮ ಬಹಳ ಒಳ್ಳೇದು.

ನನಗೆ ಹಂಪಿಯಲ್ಲಿ ಇದ್ದಾಗ ಇನ್ನೊಂದು ಆಶಾ ಇತ್ತು. ಪಂಪಭಾರತ ಮತ್ತು ಆದಿಪುರಾಣ ಎರಡೂ ಕೂಡಿ ಒಂದೇ ಸಂಪುಟ ತರಬೇಕು ಅದಕ್ಕೆ 'ಕವಿತಾ ಗುಣಾರ್ಣವ' ಹೆಸರಿಡಬೇಕು ಅಂತ ಮಾಡಿದ್ದೆ.

ಸಂ: ಇದುವರೆಗಿನ ಗ್ರಂಥ ಸಂಪಾದನೆ ಕ್ಷೇತ್ರದ ಚಟುವಟಿಕೆಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು? ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನಶಾಸ್ತ್ರಗಳ ಮುಂದಿನ ಅಧ್ಯಯನ ಹೇಗಿರಬೇಕು? ಎನ್ನುವುದರ ಬಗ್ಗೆ......

ಎಂ.ಎಂ.ಕೆ: ಮಾರ್ಗಕಾವ್ಯ ಸಂಪಾದನೆ ಸರಿಯಾಗಿ ಸಾಗಿ ಬಂತು. ದೇಶಿ ಕಾವ್ಯ ಸಂಪಾದನೆಯಲ್ಲಿ ಎಡವಿದ್ದೀವಿ. ಮುಖ್ಯ ಕೃತಿಗಳೆಲ್ಲಾ ಪ್ರಕಟವಾಗಿವೆ. ಈಗ ಲಘು ಕೃತಿಗಳ ಸಂಪಾದನೆಯ ಕಡೆಗೆ ಗಮನ ಕೊಡಬೇಕು. ಉದಾ: ವಣಿಜೋತ್ಪತ್ತಿ, ಸಮಾಧಿ ಕ್ರಿಯೆ ಇತ್ಯಾದಿ. ಇಲ್ಲಿ ಸಮಾಧಿಕ್ರಿಯಾ ವಿಧಾನಗಳ ಬಗ್ಗೆ ಹೇಳುತ್ತಾ, ಜೀವಂತ ಸಮಾಧಿ ಇತ್ಯಾದಿಗಳ ವಿವರ ನೀಡಲಾಗಿದೆ. ರಾಘವಾಂಕ ಜೀವಂತ ಸಮಾಧಿ ಹೋದರೆಂಬಂಥ ಚಾರಿತ್ರಿಕ ಅಂಶಗಳು ಇಲ್ಲಿ ಸಿಗುತ್ತವೆ.

ಸಂ: ಇಂತಹ ಕೃತಿಗಳು ಮುನ್ನೆಲೆಗೆ ಬರಲಿಲ್ಲವೇಕೆ?

ಎಂ.ಎಂ.ಕೆ: ಇದಕ್ಕೆ ಕಾರಣ ರಸಸಂಪ್ರದಾಯ. ನವೋದಯ ಕಾಲದಲ್ಲಿ ಶೃಂಗಾರ, ಕರುಣ ಇತ್ಯಾದಿ ರಸನಿಷ್ಠ ಕಾವ್ಯಗಳು ಹೊರಗೆ ಬಂದವು. ಚರಿತ್ರೆ ನಿಷ್ಠ, ಶಾಸ್ತ್ರನಿಷ್ಠ, ಆಚರಣೆನಿಷ್ಠ ಕೃತಿಗಳು ಹಿಂದುಳಿದುಬಿಟ್ಟವು.

ಸಂ: ಇದರಲ್ಲಿ ಧಾರ್ಮಿಕ ಮತ್ತು ವಿದ್ವತ್ ಪ್ರಧಾನ ಮನೋಧರ್ಮಗಳು ಕೆಲಸಮಾಡಲಿಲ್ವೇ?

ಎಂ.ಎಂ.ಕೆ: ಸಾಹಿತ್ಯೇತರ ಕೃತಿಗಳಿವು ಎಂದು ಇವುಗಳನ್ನು ಹಿಂದೆ ಸರಿಸಿದರು. ಆಗ ಸಂಸ್ಕೃತಿ ಮತ್ತು ಶಾಸ್ತ್ರಕೃತಿಗಳತ್ತ ನೋಡುವ ದೃಷ್ಟಿ ಕುಂಠಿತವಾಯಿತು. ಈಗ ಅಂದು ಅಲಕ್ಷಿತವಾದ ಕೃತಿಗಳನ್ನೇ ಲಕ್ಷಿಸುವುದು ಮತ್ತು ಆ ನಿಟ್ಟಿನಲ್ಲಿಯೇ ಅಭ್ಯಾಸ ಮಾಡೋದು ನಡೆದಿದೆ.

ಸಂ: ನಿಮ್ಮ ಗ್ರಂಥಸಂಪಾದನೆ ಮತ್ತು ಸಂಶೋಧನೆಗೆ ಪ್ರೇರಣೆ ಯಾರು? ಮತ್ತು ಯಾವುದು?
ಎಂ.ಎಂ.ಕೆ: ಫ.ಗು.ಹಳಕಟ್ಟಿ ಮತ್ತು ಶಿ.ಶಿ. ಬಸವನಾಳರ ಸಮಾಜ ಪ್ರೀತಿ, ಆರ್.ಸಿ. ಹಿರೇಮಠರ ವ್ಯಾಪಕ ವ್ಯಾಸಂಗ ಮತ್ತು ಶ್ರಮ, ಬಿ.ಟಿ. ಸಾಸನೂರು ಅವರ ವಿದ್ವತ್ತು ಮತ್ತು ಶಿಸ್ತು.

ಸಂ: ತೋಂಟದಾರ್ಯ ಮಠದಿಂದ ಏನು ಕೆಲಸ ಮಾಡಿದಿರಿ. ಅಲ್ಲಿನ ಪ್ರಕಟಣಾ ಕಾರ್ಯ ಸ್ವಲ್ಪ ಹೇಳಿ.

ಎಂ.ಎಂ.ಕೆ: ನನ್ನ ದೃಷ್ಟಿಯಲ್ಲಿ ಕನ್ನಡದ ಕೆಲಸ ಮಾಡುವ ಕೇಂದ್ರಗಳೆಲ್ಲ ಕನ್ನಡ ಅಧ್ಯಯನ ಸಂಸ್ಥೆಗಳೇ. ಕೇವಲ ಕನ್ನಡ ಸಾಹಿತ್ಯ ಪರಿಷತ್ತು, ಪುಸ್ತಕ ಪ್ರಾಧಿಕಾರ ಇತ್ಯಾದಿ ೪-೬ ಸಂಸ್ಥೆಗಳೂ ದುಡಿದರೆ ಕನ್ನಡ ಕೆಲಸ ಮುಗಿಯುವುದಿಲ್ಲ. ಅದಕ್ಕೆ ಎಲ್ಲೆಲ್ಲಿ ಏನೇನು ಅವಕಾಶಗಳಿವೆ. ಅವುಗಳನ್ನೂ ಬಳಸಿಕೊಳ್ಳಬೇಕು. ಆದ್ರೆ ಧಾರ್ಮಿಕ ಸಂಸ್ಥೆಗಳಿಗೆ ಕೆಲವೊಂದು ಮಿತಿಗಳಿರುತ್ತವೆ. ಹೀಗಿದ್ದೂ ಅಲ್ಲಿ ಆ ಮಿತಿಗಳನ್ನು ಮೀರುವ ಕೆಲಸವೂ ಆಗೇದ.

ಉದಾ: ಗದಗಿನ ಮಠಕ್ಕೆ ವೀರಶೈವ ಅಂತ ಒಂದು ಚೌಕಟ್ಟಿದೆ. ಆ ಚೌಕಟ್ಟನ್ನು ಇಟಗೊಂಡೂ ಅದನ್ನ ಮೀರಬೇಕು. ಅದಕ್ಕ ಮೊದ ಮೊದಲು ವೀರಶೈವ ಕೃತಿಗಳನ್ನು ಹೊರತಂದ್ವಿ, ಬರಬರ್ತಾ ಅವೀರಶೈವರು ಮಾಡಿದ ವೀರಶೈವ ಕೆಲಸ, ವೀರಶೈವರು ಮಾಡಿದ ಅವೀರಶೈವ ಕೆಲಸ ಗಮನಿಸಿ ಪ್ರಕಟಿಸಿದೆವು. ಉದಾ: "ವಚನಗಳ ಸಾಂಸ್ಕೃತಿಕ ಅಧ್ಯಯನ" ಕೃತಿ ಪಿ.ವಿ.ನಾರಾಯಣ ಅವರದು. ೧೫ ವರ್ಷಗಳಿಂದ ಪ್ರಿಂಟ್ ಆಗದೇ ಹಾಗೆ ಉಳಿದಿತ್ತು ನಾವು ಪ್ರಿಂಟ್ ಮಾಡಿದ್ವಿ.

"ತಿಂಥಣಿ ಮೋನಪ್ಪಯ್ಯ: ಒಂದು ಅಧ್ಯಯನ" ಎಂ. ಎಂ. ಪಡಶೆಟ್ಟಿ ರಚಿಸಿದ್ದು. ಅದನ್ನೂ ಪ್ರಿಂಟ್ ಮಾಡಿದ್ವಿ, ಅದೇ ರೀತಿ ಡಾ. ಕಡಬಡಿಯವರ 'ವಡ್ಡಾರಾಧನೆ, ಡಾ. ಜಗಜಂಪಿ ಅವರ "ಗರುಡ ಸದಾಶಿವರಾಯ" ಪ್ರಕಟಿಸಿದ್ವಿ, ಒಂದು ರೀತಿ ಚೌಕಟ್ಟಿನೊಳಗೆ ನಾವು ಚೌಕಟ್ಟನ್ನು ಮೀರ್ತಾ ಇದ್ದೀವಿ. ಇದು ನಮ್ಮ ಧೋರಣೆ. ೨ನೆಯ ಧೋರಣೆ ಅಂದ್ರೆ ಒಂದೇ ಸಂಸ್ಥೆ ಎಲ್ಲಾ ಕೆಲಸ್ಸ ಮಾಡಲಿಕ್ಕಾಗೂದಿಲ್ಲ. ಅದಕ್ಕ ಮೈಸೂರಿನ ಸುತ್ತೂರು ಮಠದಲ್ಲಿ ಸ್ವರವಚನ ಪ್ರಕಟನ ಯೋಜನ ಕೈಗೆತ್ತಿಕೊಳ್ಳಲಾಯಿತು. ಬೆಳಗಾವಿ ಕೆ.ಎಲ್.ಇ. ಸೊಸೈಟಿ, ನಾಗನೂರ ಮಠಗಳಿಂದ ಪಿಎಚ್.ಡಿ. ಪ್ರಬಂಧ ಇತ್ಯಾದಿ ಬೃಹತ್ ಗ್ರಂಥ ಪ್ರಕಟವಾಗುವ ಹಾಗೆ ನೋಡಿಕೊಂಡೆ. ಹೀಗೆ ನಾವು broad ಮೈಂಡ್ ಇಟ್ಕೊಂಡು ಒಳ್ಳೇ ಕೆಲ್ಸ ಮಾಡಿಸಬೇಕು. ನನಗ ಇಂಥವು ಮತೀಯ ಮಠಗಳಾಗಿ ಕಾಣೋದಿಲ್ಲ, ಕನ್ನಡದ ಪ್ರಸಾರಕೇಂದ್ರಗಳಾಗಿ ಕಾಣ್ತಾವ. ಈಗ ಗದಗಿನ ಮಠದಿಂದ ಸು. ೧೫ ಥೀಸಸ್, ಬೆಳಗಾವಿ ಮಠದಿಂದ ೬ ಥೀಸಸ್ ಬಂದ್ವು, ಹೀಗೆ ನನ್ನಿಂದಾಗಿ ೧೫–೨೦ ಥೀಸಸ್ print ಆದವು. ಇದೇ ರೀತಿ ಹಲವಾರು ತರದಲ್ಲಿ ಕನ್ನಡದ ಕೆಲಸ ಮಾಡಾಕ ಪ್ರಯತ್ನಪಟ್ಟೀನಿ. ಎಲ್ಲರಿಗೂ ಗೊತ್ತಿರುವಂತೆ "ಸಮಗ್ರ ವಚನ ಸಾಹಿತ್ಯ ಪ್ರಕಟನ ಯೋಜನೆ" ನನ್ನ ಜೀವನದ ಒಂದು ದೊಡ್ಡ ಸಾಧನೆ. ಇತ್ತೀಚೆ ಪ್ರಕಟವಾದ "ಸಮಗ್ರ ಕೀರ್ತನ ಸಂಪುಟ"ಗಳ ಯೋಜನೆಯ ರೂವಾರಿ ನಾನೇ ಎಂಬುದು ಕೆಲವರಿಗೆ ಗೊತ್ತು.

ಸಂ: ಸರ್, ನೀವು ಗ್ರಂಥಸಂಪಾದನೆ ಕೆಲಸ ಮಾಡಿದಿರಿ, ಮಾಡಿಸಿದಿರಿ, ಅವುಗಳ ಪ್ರಕಟನೆಗಾಗಿ ಅನೇಕರಿಗೆ ಅವಕಾಶ ಕಲ್ಪಿಸಿಕೊಟ್ಟಿರಿ, ವಚನ, ಕೀರ್ತನೆಗಳಂಥ ದೊಡ್ಡ ಯೋಜನೆಗಳಿಗೆ ರೂವಾರಿಯಾಗಿ ದೊಡ್ಡ ಕೆಲಸ ಮಾಡಿದಿರಿ. ಗ್ರಂಥಸಂಪಾದನೆ ಹಸ್ತಪ್ರತಿಗಳನ್ನು ಕುರಿತು ಶಾಸ್ತ್ರಗ್ರಂಥ ಬರೆದಿರಿ. ಹೊಸ ಹೊಸ ದಾರಿ ಸೂಚಿಸಿದಿರಿ. ಕರ್ನಾಟಕ ವಿಶ್ವವಿದ್ಯಾಲಯದ ಹಸ್ತಪ್ರತಿ ಬೆಳವಣಿಗೆಯಲ್ಲಿ ಕೈಕೂಡಿಸಿದಿರಿ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಹಸ್ತಪ್ರತಿ ಸಂಗ್ರಹಾಲಯ ಅಸ್ತಿತ್ವಕ್ಕೆ ತಂದಿರಿ. ಈ ಎಲ್ಲ ಆಯಾಮಗಳಿಂದಾಗಿ ಮಿಕ್ಕವರಿಗಿಂತ ನೀವು ಭಿನ್ನರೀತಿಯಲ್ಲಿ ಕಾಣಿಕೆ ಸಲ್ಲಿಸಿದಿರಿ. ಇದುವರೆಗೂ ಅಮೂಲ್ಯವಾದ ವಿಚಾರಗಳನ್ನು ನಮಗೂ ನಮ್ಮ ಪತ್ರಿಕೆ ಓದುಗರಿಗೂ ತಿಳಿಸಿಕೊಟ್ರಿ. ನಮಸ್ಕಾರ.

ಹಸ್ತಪ್ರತಿ ಅಧ್ಯಯನ–ಸಂ. ವೀರೇಶ ಬಡಿಗೇರ,
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೬

■■

೨೯೮

ಮಾರ್ಗ ಅಂದ್ರ ಶೋಧಾನೂ ಹೌದು, ದಾರೀನೂ ಹೌದು

❖

ಸಂದರ್ಶಕರು : ಡಾ. ಬಸವರಾಜ ಸಾದರ

ಬಸವರಾಜ ಸಾದರ : ನಮಸ್ಕಾರ ಕೇಳುಗರೆ. ಸಂಶೋಧನೆಗೆ ಹೊಸಮಾರ್ಗ ತೋರಿಸಿದ ಡಾ. ಎಂ.ಎಂ. ಕಲಬುರ್ಗಿಯವರು ಸಂಶೋಧನೆ ಎಂಬ ಅಧ್ಯಯನ ಶಿಸ್ತಿಗೆ ಪರ್ಯಾಯ ಹೆಸರಾಗಿನೇ ಪ್ರಸಿದ್ಧರಾಗಿದ್ದಾರೆ. ಭೂತದಲ್ಲಿ ಹುದುಗಿ ಹೋಗಿರುವ ಸಂಸ್ಕೃತಿ ಇತಿಹಾಸದ ಪುಟಗಳನ್ನು ಶೋಧಿಸಿ ಪರಿಷ್ಕರಿಸಿ ವಸ್ತುನಿಷ್ಠವಾದ ನಿರ್ಧಾರಗಳನ್ನು ಕೊಡುವಲ್ಲಿ ಅವರ ಸಂಶೋಧನೆ ಅನನ್ಯವಾದ ಕೆಲಸವನ್ನ ಮಾಡಿದೆ.

'ಆನು ಒಲಿದಂತೆ ಹಾಡುವೆ' ಎಂಬುದು ಅವರ ಪ್ರವೃತ್ತಿ ಮತ್ತು ವೃತ್ತಿ ಎರಡಕ್ಕೂ ಅನ್ವಯಿಸುವಂತಹ ತಾತ್ವಿಕತೆ. ತಮ್ಮ ಗಟ್ಟಿ ನಿರ್ಧಾರದ ಸಂಶೋಧನೆಗಳಿಂದ ಡಾ. ಕಲಬುರ್ಗಿಯವರು ಹಲವಾರು ಸಲ ಸಮಾಜವನ್ನು ಎದುರುಹಾಕಿಕೊಂಡಿದ್ದು ಉಂಟು. ಆದರೆ ಅವರೆಂದೂ ತಮ್ಮ ನಿಲುವನ್ನು ಬಿಟ್ಟುಕೊಟ್ಟವರಲ್ಲ. ಇಂತಹ ಗಟ್ಟಿ ನಿರ್ಧಾರದ ಡಾ. ಎಂ.ಎಂ.ಕಲಬುರ್ಗಿಯವರಿಗೆ, ಪಂಪ ಪ್ರಶಸ್ತಿಯನ್ನು ಒಳಗೊಂಡು ಬಂದಿರುವಂತ ಪ್ರಶಸ್ತಿಗಳು ಹಲವು. ಇದೀಗ ಆ ಪ್ರಶಸ್ತಿಗಳ ಜೊತೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸೇರ್ಪಡೆಯಾಗಿದೆ. ಈ ಸಂದರ್ಭದಲ್ಲಿ ಅವರೊಂದಿಗೆ ಕೆಲವೊಂದು ಮಾತುಕತೆ.

* * *

ಬಸವರಾಜ ಸಾದರ : ಸರ್, ನಮಸ್ಕಾರ

ಎಂ.ಎಂ.ಕಲಬುರ್ಗಿ: ನಮಸ್ಕಾರ.

ಬಸವರಾಜ ಸಾದರ : ಈ ಸಂಶೋಧನಾ ಕ್ಷೇತ್ರಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದದ್ದು ಬಹಳ ಕಡಿಮೆ ಸಲ. ಈ ಅಂಶವನ್ನು ಒಳಗೊಂಡ ಹಾಗೆ ಈ ಪ್ರಶಸ್ತಿಗೆ ನಿಮ್ಮ ಪ್ರತಿಕ್ರಿಯೆ ಏನು?

ಎಂ.ಎಂ. ಕಲಬುರ್ಗಿ : ಈಗ ಕನ್ನಡಿಗರಾದ ನಾವು ಸುವರ್ಣ ಕರ್ನಾಟಕದ ಸಂಭ್ರಮದಲ್ಲಿದ್ದೇವೆ. ಅದರಲ್ಲಿಯೂ ಸಾಹಿತ್ಯ ಸಮ್ಮೇಳನದ ಹಬ್ಬದ ಒಂದು ವಾತಾವರಣದಲ್ಲಿ ಈ ಪ್ರಶಸ್ತಿ ನನಗೆ ಪ್ರಾಪ್ತವಾದದ್ದು ವಿಶೇಷ ಸಂತೋಷವನ್ನುಂಟು ಮಾಡಿದೆ.

ಬಸವರಾಜ ಸಾದರ : ನಿಮಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದು ಕೊಟ್ಟ ಕೃತಿ 'ಮಾರ್ಗ–೪' ಎನ್ನುವುದು. ಇದು ನೂರು ಸಂಶೋಧನ ಪ್ರಬಂಧಗಳ ಸಂಕಲನ. ಮಾರ್ಗ ಅನ್ನುವ ಶಬ್ದಾನ ಒಂದು ವಿಶೇಷ ಅರ್ಥವನ್ನು ತುಂಬಿಕೊಂಡದ್ದು. ದೇಸಿಗೆ ಪ್ರತಿಯಾಗಿ ಸಾಮಾನ್ಯವಾಗಿ ನಾವದನ್ನ ಬಳಸ್ತೇವೆ. ನೀವು ದೇಸಿಯನ್ನ ಬಿಟ್ಟಿಲ್ಲ, ಅದನ್ನ ಬಿಡದೇ ಮಾರ್ಗದಲ್ಲಿ ನಡೆದಿದ್ದೀರಿ. ಈ ಸಮನ್ವಯವನ್ನ ನೀವು ಸಾಧಿಸಿದ್ದು ಹೇಗೆ?

ಎಂ.ಎಂ. ಕಲಬುರ್ಗಿ : ಈ ಸಮನ್ವಯ ನಮ್ಮ ಪರಂಪರೆಯೊಳಗೇ ಇದೆ. ನಮ್ಮ ಆದಿ ಕವಿಯಾದ ಪಂಪ "ದೇಶಿಯೊಳೆ ಪೊಗುವುದು, ಪೊಕ್ಕು ಮಾರ್ಗದೊಳೆ ತಳ್ವುದು" ಎಂಬ ಮಾತು ಹೇಳತಾನೆ. ಅದಕ್ಕಾಗಿ ನಾವು ಮಾರ್ಗೀಯ ಆಗೂದು ಅಂತ ಅಂದ್ರ ದೇಶಿಯತೆಯನ್ನ ಬಿಡಬೇಕು ಅಂತ ಅರ್ಥ ಅಲ್ಲ. ಅವೆರಡರ ಒಂದು ಸಮನ್ವಯ ಮಾಡಿಕೋಬೇಕಾಗತದ, ಅಂಥ ಒಂದು ಸಂಪ್ರದಾಯ ನಮ್ಮ ಸಾಹಿತ್ಯದೊಳಗ ಮೊದಲಿನಿಂದಲೂ ಅದ. ಅದರ ಮುಂದುವರಿಕೆಯಾಗಿ ನಾನಿದನ್ನ ಮಾಡತಾ ಇದ್ದೀನಿ. ಇನ್ನೂ ಒಂದು "ಮಾರ್ಗ" ಅಂತ ಹೆಸರಿಡಲಾಕ ಕಾರಣ ಅಂತಂದ್ರ ನನ್ನ ಥಿಸಿಸ್ ವಿಷಯ "ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ". ಆಮೇಲೆ ಇನ್ನೊಂದು ವಿಷಯ ಅಂದ್ರ ನಾನು ಹುಟ್ಟಿದ್ದು ಮಾರ್ಗಶಿರ ಮಾಸದೊಳಗ. ಆಮೇಲೆ ಮಾರ್ಗ ಅಂತಂದ್ರ ಶೋಧ ಅಂತೂ ಹೌದು, ಮಾರ್ಗ ಅಂದ್ರ ದಾರಿ ಅಂತಲೂ ಹೌದು. ಆದ್ದರಿಂದ ಈ ಹೆಸರಿಟ್ಟು ನಾನು ಸಂಶೋಧನೆ ಮಾಡೂದು.

ಬಸವರಾಜ ಸಾದರ : ಈ ಸಂಶೋಧನೆ ಅಂದ್ರೇನ ಒಂದು ಜನಪ್ರಿಯವಲ್ಲದ ಕಷ್ಟದ ಕೆಲಸ. ಶ್ರಮ ಮತ್ತು ತಾಳ್ಮೆ ಎರಡನ್ನು ಬಯಸುವಂತಹುದು. ಇಂಥಾ ಕ್ಷೇತ್ರಕ್ಕೆ ನೀವು ಬಂದದ್ದು ಹೆಂಗ?

ಎಂ.ಎಂ. ಕಲಬುರ್ಗಿ : ನಾನು ಹಳ್ಳಿಯ ಅವಿಭಕ್ತ ಕುಟುಂಬದೊಳಗ ಹುಟ್ಟಿ ಬೆಳದಂತವಾ. ಅವಿಭಕ್ತ ಕುಟುಂಬದಾಗ ಒಂದು ಪರಂಪರೆಯ ಬಗ್ಗೆ ಅತಿಯಾದ ಮೋಹ ಇರ್ತದ. ನನ್ನ ಕುಟುಂಬ, ನನ್ನಣ್ಣ, ನನ್ನ ತಮ್ಮ, ಅನ್ನುವಂತದ್ದು. ಈ ಒಂದು ಪರಂಪರೆಯ ಮೋಹ ಅದೂ ನನ್ನ ರಾಜ್ಯದ ಪರಂಪರೆಯ ಮೋಹ ಆಗಿ ಬೆಳೀತಿದೆ. ಹೀಗಾಗಿ ನಾನು ಸಂಶೋಧನೆಗೆ ಹೊರಳಲಿಕ್ಕೆ ಅದೇ ಮೂಲ ಬೇರು. ಅಮೇಲೆ ಮತ್ತೇನೇನೋ ಒತ್ತಡಗಳು ದಾರಿಗಳು ನನಗೆ ಒದಗಿಬಂದ್ವು, ಮುಂದ ನಾ ಸಂಶೋಧನೆಗೆ ಹೊರಳಿದೆ.

ಬಸವರಾಜ ಸಾದರ : ಇವತ್ತು ಈ ಸಂಶೋಧನೆ ಅನ್ನೋ ಪದವನ್ನ ಸಾಮಾನ್ಯವಾಗಿ ಪಿಎಚ್.ಡಿ. ಗಳಿಗೆ ಅನ್ವಯಿಸಿ ಹೇಳೋರೇ ಹೆಚ್ಚು. ಈ ಪಿಎಚ್.ಡಿ. ಸಂಶೋಧನೆಗೂ ಮತ್ತು ಈ ಇತಿಹಾಸ ಹಾಗೂ ಸಂಸ್ಕೃತಿಯನ್ನು ಕುರಿತ ನಿಜವಾದ ಸಂಶೋಧನೆಗೂ ಇರುವಂಥ ಸಂಬಂಧ ಏನಂತೀರಿ? ಹಾಗೆ ಈ ಸಂಶೋಧನೆ ಅಂದ್ರ ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ್ದೆ?

ಎಂ.ಎಂ. ಕಲಬುರ್ಗಿ : ಸಂಶೋಧನೆ ಅನ್ನೂದು ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧ ಪಟ್ಟಿದ್ದು ಮಾತ್ರವಲ್ಲ. ವಿಜ್ಞಾನ, ಸಮಾಜ ವಿಜ್ಞಾನ, ಕಲೆ ಇವೆಲ್ಲವುಗಳಿಗೂ ಸಂಬಂಧ ಪಟ್ಟಂತ ಒಂದು ಅಧ್ಯಯನ ಶಿಸ್ತು ಇದು. ಸಾಯನ್ಸ್ ಒಳಗ ಸಂಶೋಧನೆ ಮಾಡುದು ಆವಿಷ್ಕರಣ ಆದ್ರ ಈ ಆರ್ಟ್ಸದೊಳಗ ಮಾಡ್ತೀವಲ್ಲಾ ಇದು ಅನ್ವೇಷಣೆ. ಅನ್ವೇಷಣೆ ಅಂದ್ರ ಕಳದದ್ದನ್ನು ಹುಡುಕೂಡು. ಆವಿಷ್ಕರಣ ಅಂದ್ರ ಹೊಸದನ್ನ ಹುಡುಕೂಡು. "Ph.d"ಗೆ ಸಂಬಂಧ ಪಟ್ಟಂತೆ ಹೇಳೋದಾದ್ರೆ

Ph.d ಇವತ್ತ ಕೇವಲ ಒಂದು ಪದವಿಗಾಗಿ ಮಾಡುವಂತಹ ಕೆಲಸಾಗಿ ಬಿಟ್ಟದೆ. ಇವತ್ತ ನೂರಕ್ಕೆ ಎಂಬತ್ತರಷ್ಟು Ph.d ಪ್ರಬಂಧಗಳು ಸಂಶೋಧನಾ ಪ್ರಬಂಧಗಳು ಅಲ್ಲ.

ಬಸವರಾಜ ಸಾದರ : ಈ ಸಂಶೋಧನೆ ಬಯಸುವಂತಹ ಶಿಸ್ತು ಯಾವುದು? ಮತ್ತು ಅದರ ಅಡಿಗೆ ಯಾವ ಹಂತಗಳು ಒಳಗೊಂಡಿರ್ತದೆ?

ಎಂ.ಎಂ. ಕಲಬುರ್ಗಿ : ನನ್ನ ಒಬ್ರು ಸಮಗ್ರ ಸಂಶೋಧಕ ಅಂತ ಕರದ್ರು, ಸಮಗ್ರ ಸಂಶೋಧಕ ಅಂತಂದ್ರ ಅದು ಒಟ್ಟು ಅಧ್ಯಯನದೊಳಗ ಮೂರು ಹಂತಗಳು ಕಂಡುಬರ್ತವೆ. ಒಂದು ಆಕರ ಶೋಧ. ಮತ್ತೊಂದು ಆಕರ ವಿಶ್ಲೇಷಣೆ. ಇನ್ನೊಂದು ಆಕರ ವ್ಯಾಖ್ಯಾನ ಅಂತಾ. ಆಕರ ಶೋಧ ಮೊದಲು ಯಾಕಂದ್ರ No Source No Research ಅಂತಾ ಹೇಳ್ತಾರೆ. ಹೀಗಾಗಿ ಆಕರ ಶೋಧ ಮಾಡಬೇಕಾಗತದ. ಮೊದಲು ಈ ಬ್ರಿಟೀಶ್ ವಿದ್ವಾಂಸರಿದ್ದಂಥ ಸಂದರ್ಭದೊಳಗ ಮತ್ತು ದೇಶಿ ವಿದ್ವಾಂಸರ ಮೊದಲನೇ ಘಟ್ಟದೊಳಗ ಆಕರ ಶೋಧದ ಕೆಲಸವನ್ನ ಬಹಳ ಮಾಡಿದ್ರು. ಕರ್ನಲ್ ಮೆಕೆಂಝಿ ಆರ್. ನರಸಿಂಹಾಚಾರ, ಕುಂದಣಕಾರ ಇವರೆಲ್ಲ ಆಕರ ಶೋಧಧ ಕಡೆ ಹೆಚ್ಚು ಗಮನ ಕೊಟ್ರು. ಆ ಮೇಲೆ ಈ ಆಕರವನ್ನ ವಿಶ್ಲೇಷಣೆ ಮಾಡುದು. ನಮ್ಮ ಒಂದು ಇತಿಹಾಸದ ಕೊಂಡಿ ಕಳಚಿ ಹಿಂದಮುಂದ ಆಗಿಬಿಟ್ಟವು. ಅದನ್ನ ಸಕ್ರಮಗೊಳಿಸಬೇಕಾಗಿತ್ತು. ಅದು ಸಕ್ರಮಗೊಳಿಸುವಲ್ಲಿ ಅದೊಂದು ವಿಶ್ಲೇಷಣೆ ಮಾಡಿದ್ರ ನಮ್ಮ ಹಿರಿಯರು ಇದ್ನ ವ್ಯಾಖ್ಯಾನ ಅಂತಂದ್ರು. ಆ ಇತಿಹಾಸ ನಿರ್ಮಾಣ ಆಗಲಿಕ್ಕ ಹಿಂದಿರೂ ಕಾರಣ ಏನು? ಆ ಕಾರಣ ಶೋಧ ಭಾಳ ಮುಖ್ಯವಾದದ್ದು ಮತ್ತು ಅದರ ಕೂಡ ಪರಿಣಾಮ ಶೋಧ ಒಂದದ. ಹಿಂಗಾಗಿ ಕಾರಣ ಶೋಧ, ಕಾರ್ಯ ಶೋಧ ಮತ್ತು ಪರಿಣಾಮ ಶೋಧ ಈ ಮೂರು ಇದ್ದಾಗ ಮಾತ್ರ ಅದು ಪೂರ್ಣ ಶೋಧ ಆಗ್ತದ ಅಂತ ನನಗನಿಸ್ತು.

ಬಸವರಾಜ ಸಾದರ : ಹಾಗನೇ ಈ ಸಂಶೋಧನೆ ಅನ್ನೂದು ಸಂಸ್ಕೃತ ಶೋಧನ ಆಗೂದು ಹ್ಯಾಗೆ? ಮತ್ತೆ ನೀವು ಹೇಳಿದ ಸಮಗ್ರ ಶೋಧನ ಆಗೋದು ಹ್ಯಾಗೆ?

ಎಂ.ಎಂ. ಕಲಬುರ್ಗಿ : ಸಮಗ್ರ ಶೋಧನೆ ಅನ್ನೂದು ಅದು ಸಂಶೋಧನೆಯ ಘಟ್ಟಗಳ ಮೊತ್ತ. ಸಂಸ್ಕೃತಿ ಶೋಧ ಅಂತಂದ್ರ ಮೊದಲ ಸಂಸ್ಕೃತಿ ಅಂದ್ರೇನು ಅಂತ ವಿಚಾರ ಮಾಡ್ಕೋಬೇಕು. ಸಂಸ್ಕೃತಿ ಅಂತಂದ್ರ ಸಮೂಹ ಸಮ್ಮತವಾದ ಜೀವನ ಪದ್ಧತಿ. ಒಂದು ಸಮುದಾಯ ಒಂದು ಜೀವನ ಪದ್ಧತಿಯನ್ನ ಒಳಗೊಂಡದ ಅಂದ್ರ ಅದು ಅದರ ಸಂಸ್ಕೃತಿ. ಅದು ಸರಿಯೋ ತಪ್ಪೊ ಅದು ಮುಂದಿನ ವಿಚಾರ. ಸಮಗ್ರ ಸಂಶೋಧನೆಯ ಸಂದರ್ಭದೊಳಗ ಎಲ್ಲ ರೀತಿಯ ಜೀವನ ಪದ್ಧತಿಗಳು ಸೇರುತ್ತವೆ. ಯಾಕಂದ್ರ ಪದ್ಧತಿಗಳನ್ನು ಬಿಟ್ಟು ಸಮಾಜದೊಳಗ ಬದುಕಾಕಾಗುದಿಲ್ಲ. ಹೀಗ ಪ್ರಾಚೀನ ಕರ್ನಾಟಕದೊಳಗ ಯಾವ ಪದ್ಧತಿ ಇದ್ವು, ಆ ಪದ್ಧತಿಗಳ ಶೋಧ ಸಂಸ್ಕೃತಿ ಶೋಧ ಅಂತ ಅನಸ್ಕೋತದ. ಆದ್ರ ಪದ್ಧತಿಯೊಳಗ ಒಳ್ಳೆ ಅಂಶ ಕೆಟ್ಟ ಅಂಶ ಎರಡೂ ಇರಬಹುದು. ಅವೆಲ್ಲವನ್ನು ಕೂಡಿ ನಾವು ಸಂಸ್ಕೃತಿ ಅಂತ ಕರೀತೀವಿ. ಬಹುಶಃ ನಾವು ಹಂಗ ಕರಿಬಾರದು ಅಂತ ನನಗ ಅನಿಸ್ತದ. ಕೆಟ್ಟದ್ದು ಸಂಸ್ಕೃತಿ ಹೆಂಗ ಆಗ್ತದ. ಅದಕ್ಕಾಗಿ ಒಟ್ಟು ಜೀವನ ಪದ್ಧತಿಯನ್ನ ಆಕೃತಿ ಅಂತ

ಕರೀಬೇಕು. ಆಕೃತಿಯೊಳಗ ಸಂಸ್ಕೃತಿಯೂ ಇರ್ತದ. ವಿಕೃತಿಯೂ ಇರತದ. ಆದುದರಿಂದ ಇನ್ನು ಮುಂದೆ Culture ಅಂತಂದ್ರ ನಾವು ಸಂಸ್ಕೃತಿ ಅಂತ ಕರಿಬಾರದು; ಆಕೃತಿ ಅಂತ ಅನಬೇಕ ಅಂತ ಹೊಸ ವಿಚಾರ ನನಗೆ ಅನಸ್ತದ.

ಬಸವರಾಜ ಸಾದರ : ಈ ಶಾಸನ, ಜಾನಪದ, ಇತಿಹಾಸ, ಸಂಸ್ಕೃತಿ, ಸ್ಥಳನಾಮ ಹೀಗೆ ಹಲವು ಹತ್ತು ಕ್ಷೇತ್ರಗಳನ್ನು ಕುರಿತು ನೀವು ಸಂಶೋಧನೆ ಮಾಡಿರಿ. ಈ ಒಟ್ಟಾರೆ ಸಂಶೋಧನೆ ಅಧ್ಯಯನ ಮೂಲ ಗುರಿ ಉದ್ದೇಶ ಏನು?

ಎಂ.ಎಂ. ಕಲಬುರ್ಗಿ : ನನ್ನ ದೃಷ್ಟಿಯೊಳಗ ಸಂಶೋಧನೆ ಅನ್ನೂದು ಕೇವಲ ಗತಕಾಲದ ಶೋಧ ಅಲ್ಲ. ಗತಕಾಲದ ಶೋಧವನ್ನು ಮಾಡುತ್ತಲೇ ವರ್ತಮಾನದ ಮೇಲೆ ಬೆಳಕು ಬೀಳಬೇಕು. ವರ್ತಮಾನಕ್ಕೆ ಉಪಯೋಗವಾಗದ ಸಂಶೋಧನೆ ಏನ ಅದಲಾ ಅದು ಅಪೂರ್ಣ ಶೋಧ-ಅರ್ಧಶೋಧ ಅಂತ ನನ್ನ ಭಾವನೆ. ಇಲ್ಲಿಯವರೆಗಿನ ಇತಿಹಾಸದ ಚೌಕಟ್ಟನ್ನು ಹೊಂದಿಸುವ ಸಂಬಂಧ ನಮ್ಮಲ್ಲಿ ಚರಿತ್ರೆ ಶೋಧ ಮಾಡಿದ್ರು, ಆದ್ರ ಅದು ಪೂರ್ಣ ಸಂಶೋಧನೆ ಅನಸುದಿಲ್ಲ. ಆ ಚರಿತ್ರೆಯನ್ನಿಟ್ಟುಕೊಂಡು ಅದರ ಪರಿಣಾಮ ಏನಾಗ್ಯಾದ ಇವತ್ತ ಸಮಾಜದ ಮ್ಯಾಲೆ, ಅದಕ್ಕಾಗಿ ಅದು ಗತಕಾಲದ ಶೋಧನೆಯೂ ಹೌದು; ವರ್ತಮಾನದ ಸೃಷ್ಟಿಯೂ ಹೌದು. ಸಂಶೋಧನೆ ಹೊಸ ವರ್ತಮಾನ ಸೃಷ್ಟಿ ಮಾಡಬೇಕು. ನಮ್ಮ ವರ್ತಮಾನದೊಗಳ ಅನೇಕ ತಪ್ಪುಗಳಿವೆ. ಅನೇಕ ದೋಷಗಳಿವೆ-ಯಾಕಂದ್ರ ಇತಿಹಾಸವನ್ನ ಸರಿಯಾಗಿ ನಾವು ಅರ್ಥ ಮಾಡಿಕೊಂಡಿಲ್ಲ ಅಥವಾ ಕೆಲವು ಜನರು ಉದ್ದೇಶಪೂರ್ವಕವಾಗಿ ಇತಿಹಾಸವನ್ನ ತಿರುಚಿ ಜನರನ್ನ ಮೋಸಗೊಳಿಸುತ್ತಿದ್ದಾರೆ. ಅದಕ್ಕಾಗಿ ಸಂಶೋಧನೆಯ ಒಂದು ಮುಖ್ಯ ಗುರಿ ಅಂದ್ರೆ ವರ್ತಮಾನವನ್ನ ಶುದ್ಧೀಕರಣ ಮಾಡೂದು. ಈ ಕೆಲಸವನ್ನ ಮಾಡಿದ್ರ ಮಾತ್ರ ಅದು ಸರಿಯಾದ ಸಂಶೋಧನೆ ಅನಸ್ಕೋತದ.

ಬಸವರಾಜ ಸಾದರ : ಸಂಶೋಧನೆ ಅಂದ್ರ ಅದೇ ಅಂತಿಮವಾದುದಲ್ಲ ಅಂತಾ ನೀವು ಒಪ್ಪಿಕೋತಿರಿ ಅಂತಿನಿ. ಹಂಗಿದ್ರೂ ನೀವು ಖರೇ ಖರೇ ಸಂಗ್ಯಾ-ಬಾಳ್ಯಾ ಅಂತ ಹೆಸರಿಟ್ಟೇನೆ ಅಂತಿಮ ಸತ್ಯವನ್ನೆ ಹೇಳ್ತಿನಿ ಅನ್ನು ರೀತಿ ನಾಟಕವನ್ನ ಬರದಿದ್ದೀರಿ. ಇದು ಸರಿಯೋ? ಮತ್ತು ನಾಳಿನ ಸಂಶೋಧನ ಇದನ್ನ ಹೊಡದು ಹಾಕಬಹುದಲ್ಲ.

ಎಂ.ಎಂ. ಕಲಬುರ್ಗಿ : ನೋಡಿ ನಾನೇ ಒಂದು ಕಡೆ ಸ್ಪಷ್ಟವಾಗಿ ಹೇಳಿದಿನಿ. 'ಸಂಶೋಧನೆ ಅನ್ನೂದು, ಅಲ್ಪ ವಿರಾಮ, ಅರ್ಧ ವಿರಾಮಗಳ ಮೂಲಕ ಪೂರ್ಣ ವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ' ಅಂತ. ಆದುದರಿಂದ ಸಂಶೋಧನೆಯೊಳಗ ಪರಮ ಸತ್ಯ ಅನ್ನೂದು ಇಲ್ಲ. ಅದಕ್ಕಾಗಿ ಬೇಂದ್ರೆಯವರು ಹೇಳ್ತಾರೆ. 'ನಿಜದನೆಲೆಯ ತಿಳಿದವರಿಲ್ಲ' ಅಂತ ಅದಕ್ಕಾಗಿ ಅದೊಂದು ಕ್ರಿಯೆ. ನನಗ ಸಂಗ್ಯಾ-ಬಾಳ್ಯಾ ಬಗ್ಗೆ ಹೇಳಬೇಕಾಗಿಲ್ಲ. ಅಂದ್ರ ಖರೇ ಖರೇ ಸಂಗ್ಯಾ-ಬಾಳ್ಯಾ ಅಂತ ನಾ ಹೆಸರಿಟ್ಟಿಲ್ಲ. ಅದು ಪ್ರೇಕ್ಷಕರಿಟ್ಟಿದ್ದು. ನಾ ಏನೋ ಹೆಸರಿಡಬೇಕು ಅಂತ ಅನ್ನುದರಾಗ ಪ್ರೇಕ್ಷರದನ್ನು ಖರೇ ಖರೇ ಅಂತ ಕರದಬಿಟ್ರು, ಅದರಿಂದ ನನಗೊಂದು "ವರ್ಶನ್"(verson) ಸಿಕ್ತು ಅದ್ನಬರದೆ. ಮುಂದ ಇನ್ನೊಂದು verson ಸಿಕ್ರ ಮತ್ತೊಬ್ಬ ಬ್ಯಾರೆ ರೀತಿಯಿಂದ ಬರೀಲಿಕ್ಕೆ ಸಾಧ್ಯ ಅದ.

ಬಸವರಾಜ ಸಾದರ : ಮಾರ್ಗ-ಳನ್ನು ಕುರಿತಾಗಿ ಒಂದೆರಡು ಮಾತುಗಳನ್ನು ಹೇಳತೀರಾ?

ಎಂ.ಎಂ. ಕಲಬುರ್ಗಿ : ಹಂಪಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಹೋದ ಸಂದರ್ಭದೊಳಗ ಬರೀಲಾಕ ಸಮಯ ಸಿಗಲಿಲ್ಲ. ಆದರೂ ನನಗ ಆಗಾಗ ವಿಷಯ ಹೊಳಿತಿದ್ವು, ಹೀಗಾಗಿ ಸುಮಾರು ೨೦೦ ಲೇಖನ ಆಗುವಷ್ಟು Raw material collect ಮಾಡಿ ಇಟ್ಟಿದ್ದೆ. ನಿವೃತ್ತನಾದ ಬಳಿಕ ಏಕಕಾಲಕ್ಕೆ ಕೂತಕೊಂಡು ನೂರು ಲೇಖನಗಳನ್ನ ಬರೆದೆ. ಆಗ ಕೆಲವು ಮಾತುಗಳನ್ನು ಮುನ್ನುಡಿಯೊಳಗ ಹೊಸದಾಗಿ ಹೇಳಬೇಕು ಅಂತ ಅನಸ್ತು. ಏನು ಅಂತಂದ್ರ – ಸಂಶೋಧನೆ ಅನ್ನೂದು ಇತ್ತೀಚೆಗೆ ಹುಟ್ಟಿಕೊಂಡ ಒಂದು ಶಿಸ್ತು ಅದು. ಅದರೊಳಗ ಒಂದು ಧಾರವಾಡ ಮಾದರಿ. ಇನ್ನೊಂದು ಮೈಸೂರು ಮಾದರಿ. ಧಾರವಾಡ ಮಾದರಿ ಅಂದ್ರ ಸಂಸ್ಕೃತಿ ಶೋಧ – ಶಂಭಾ ಮಾದರಿ. ಆಮೇಲೆ ಮೈಸೂರು ಮಾದರಿ ಅಂದ್ರ ಚರಿತ್ರೆ ಶೋಧ – ಆರ್. ನರಸಿಂಹಾಚಾರ್ಯ ಮಾದರಿ. ಅವರು ಮೈಸೂರವರು ಮದ್ರಾಸಿನಿಂದ ಪ್ರಭಾವಿತರಾದರು. ಮದ್ರಾಸದಲ್ಲಿ ಬ್ರಿಟೀಷರ ಪ್ರಭಾವ ಇತ್ತು. ಬ್ರಿಟಿಷ್ ಚರಿತ್ರೆ ಬಗ್ಗೆ ಭಾಳ perticular ಅವರು. ಹೀಗಾಗಿ ಅಲ್ಲೆ ಚರಿತ್ರೆ ಶೋಧ ಬೆಳೆದು ಬರ್ತಿತ್ತು. ಪ್ರಭಾವವಿತ್ತು. ಪುಣೆಗೊಳಗ ಸಂಸ್ಕೃತಿ ಶೋಧ ಬಗ್ಗೆ ಭಾಳ ಆಸಕ್ತಿಯಿತ್ತು. ಪುಣೆ ನಮ್ಮ ಸಂಪರ್ಕದಿಂದಾಗಿ ನಾವು ಸಂಸ್ಕೃತಿ ಶೋಧದೆಡೆಗೆ ಮನಸುಮಾಡಿದ್ದು. ಅದಕ್ಕಾಗಿ ನನಗೆ ಅನಿಸ್ತು ಚರಿತ್ರೆಯ ಶೋಧದ ಕಾಲ ಮುಗದದ, ಇನ್ನು ಸಂಸ್ಕೃತಿ ಶೋಧಾ ಮಾಡೂದು ಭಾಳ ಅವಶ್ಯ ಅದ ಅಂತ್ಹೇಳಿ ನನ್ನ ಎಲ್ಲ ಲೇಖನಗಳು ಸಾಮಾನ್ಯವಾಗಿ ಸಂಸ್ಕೃತಿ ಶೋಧವನ್ನು ತೋರಿಸುವ ಕೆಲಸ ಮಾಡುತ್ತವೆ. ಮತ್ತು ಅದರ ಬಗ್ಗೆ ಹೇಳಬೇಕೆಂದ್ರ, ಕೆಲವು ಮಹತ್ವದ ಮಾತುಗಳಿದಾವೆ–ಸಾಹಿತ್ಯ ಅನ್ನೂದು ಅದು ಸಾರ್ವಜನಿಕ ಆಸ್ತಿ, ಅರೆ ಖಾಸಗಿ ಆಸ್ತಿ. ಖಾಸಗಿ ಆಸ್ತಿ ಅಂತ ಒಂದ ಲೇಖನ ಅದ. ಇದರೊಳಗ ಅದರಲ್ಲಿಯೂ ಲಿಂಗಾಯತ ಸಂಸ್ಕೃತಿ ಕುರುಬ ಸಂಸ್ಕೃತಿ ಸಂಬಂಧಿಸಿದಂತೆ ಲೇಖನಗಳು ಇವೆ.

ಬಸವರಾಜ ಸಾದರ : ಜಾಗತೀಕರಣ ಸರ್ವವೂ ವ್ಯಾಪಾರೀಕರಣ ಆಗ್ತ ಇರೋ ಈ ಸಂದರ್ಭದೊಳಗ ಸಂಶೋಧನಾ ಅಧ್ಯಯನದ ದಿಕ್ಕು–ದೆಸೆಗಳು ಇದರ ಭವಿಷ್ಯವೇನು?

ಎಂ.ಎಂ. ಕಲಬುರ್ಗಿ : ಜಾಗತೀಕರಣದ್ದೇನೂ ಪ್ರಭಾವ ಆಗೂದಿಲ್ಲ. ಆದ್ರ ನಮ್ಮ ವಿದ್ಯಾರ್ಥಿಗಳು ತೀವ್ರವಾದ ಆಸಕ್ತಿಯನ್ನ ವಹಿಸಬೇಕು. ಪರಂಪರೆಯ ಪ್ರಜ್ಞೆ ಮುಖ್ಯವಾಗಬೇಕು ನಮ್ಮ ಪರಂಪರೆಯ ಬಗ್ಗೆ ಅಭಿಮಾನ ಕಡಿಮೆ ಆಗ್ಯಾದ. ಇವತ್ತು ಕರ್ನಾಟಕಕ್ಕೆ ಈ ದುಃಸ್ಥಿತಿ ಬರಲಿಕ್ಕೆ ಕಾರಣ ಅಂದ್ರ ಪರಂಪರೆಯ ಬಗ್ಗೆ ಇರುವಂತಹ ನಿರ್ಮೋಹ. ಆ ಮೋಹ ಬೆಳಸಬೇಕಾಗ್ಯಾದ.

ಬಸವರಾಜ ಸಾದರ : ತುಂಬಾ ಸಂತೋಷ ಸರ್, ನಿಮ್ಮ ಬಹು ವರ್ಷಗಳ ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಇನ್ನೂ ಹಲವು ಹತ್ತು ಪ್ರಶಸ್ತಿಗಳು ಬರಲಿ ಅಂತ ಹಾರೈಸಿ ಈ ಮಾತುಕತೆ ಮುಗಿಸೋಣ ನಮಸ್ಕಾರ.

ಎಂ.ಎಂ. ಕಲಬುರ್ಗಿ : ನಮಸ್ಕಾರ.

ಧಾರವಾಡ ಆಕಾಶವಾಣಿ–ಬಾನುಲಿ ಸಂದರ್ಶನ : ೨೦೦೬

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೨೯೯

ಸಮಾಜ ವಿರೋಧಿ ಸಿದ್ಧಾಂತದಲ್ಲಿ ಶರಣರು ಹೋಗುವುದು ತಪ್ಪು

❖

ಸಂದರ್ಶಕರು : ರಹಮತ್ ತರಿಕೆರೆ

ಮಾರ್ಗ ೪ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. ಹೇಗೆ ಅನಿಸ್ತಿದೆ?

ಸಮಾಧಾನ ಆಗಿದೆ; ಸಂತೋಷ ಅಲ್ಲ. ಸಿಗಬಾರದ್ದು ಸಿಕ್ಕಿದರ ಸಂತೋಷ ಆಗತದ. ಸಿಗಬೇಕಾದ್ದು ಸಿಕ್ಕಿದ್ರೆ ಸಮಾಧಾನ ಆಗ್ತದ. ನನಗೆ ಸಿಗಬೇಕಾಗಿತ್ತು ಸಿಕ್ಕದ.

ಮಾರ್ಗದ ಹಿಂದಿನ ಸಂಪುಟಕ್ಕೆ ಹೋಲಿಸಿದರೆ, ಇದರ ರಚನೆಯ ನಿಮ್ಮ ಅನುಭವ ಎಂತಹುದು?

ಇದರೊಳಗಿನ ಲೇಖನಗಳು ಏನವ ಅವು ಹಿಂದೆ ಎಲ್ಲೂ ಪ್ರಕಟವಾಗಿರಲಿಲ್ಲ. ಹಂಪಿ ಯೂನಿವರ್ಸಿಟಿಯೊಳಗೆ ಮೂರು ವರ್ಷ ಇದ್ದಾಗ ಮಾಡಿದ ಟಿಪ್ಪಣಿ ಇದ್ವು. ಮೆಟೀರಿಯಲ್ಲು ಕೈಯೊಳಗಿತ್ತು. ವಿಚಾರ ತಲೀಯೊಳಗಿತ್ತು. ಹಂಪಿಯಿಂದ ಬಂದಕೂಡ್ಲೆ ಒಮ್ಮೆ ಬರೀಬೇಕು ಅಂತ ಕೂತುಬಿಟ್ಟೆ, ನೂರು ಲೇಖನಗಳನ್ನು ಒಂದೂವರೆ ವರ್ಷದೊಳಗೆ ಬರದೆ. ಆದರ ಇದರ ಹಿಂದೆ ಕೆಲವು ವರ್ಷಗಳ ಹಿಂದಿನ ಚಿಂತನ ಅದೆ.

ನಿಮ್ಮ ಸಂಶೋಧನೆಯಲ್ಲಿ ಶ್ರಮದ ಬಗ್ಗೆ ಬಹಳ ಒತ್ತು ಇರುತ್ತೆ., ಅದನ್ನೊಂದು ಮೌಲ್ಯದ ತರಹ ಪ್ರತಿಪಾದನೆ ಮಾಡ್ತೀರಿ. ಇದರ ಹಿನ್ನೆಲೆ ಏನು?

ಇದು ನನ್ನ ತಂದಿಯಿಂದ ಬಂದಿದ್ದು. ನಮ್ಮದೊಂದು ಕೂಡುಕುಟುಂಬ. ತಂದಿಗೆ ಸಣ್ಣದೊಂದು ವ್ಯಾಪಾರ ಇತ್ತು. ಒಕ್ಕಲುತನ ಮಾಡಿಸ್ತಾ ಇದ್ದ. ನಾವು ಅಷ್ಟು ಶ್ರೀಮಂತರೂ ಅಲ್ಲ, ಬಡವರೂ ಅಲ್ಲ. ಆದರೆ ಊರೊಳಗೆ ಘನತೆಗೌರವ ಇಟ್ಟುಕೊಂಡಂತಹ ಸಂಪ್ರದಾಯಸ್ಥ ಕುಟುಂಬ. ನಮ್ಮದು ಪಿತೃಪ್ರಧಾನ ಕುಟುಂಬ. ನನ್ನನ್ನು ಶ್ರಮಸಂಸ್ಕೃತಿಯ ವ್ಯಕ್ತಿ ಮಾಡಿದ್ದೂ ಅಂತಂದ್ರೆ ನಮ್ತಂದೇನ ಅನಿಸ್ತದೆ. ಭಯಂಕರ ದುಡೀತಿದ್ದ. ಮನ್ಯಾಗ ಯಾರನ್ನು ಸುಮ್ಮಗ ಕೂಡಿಸಕೊಡತಿದ್ದಿಲ್ಲ. ಕುಟುಂಬ ಹೆಂಗ್ ಕಟ್ಟಬೇಕು ಅನ್ನೋದು ಇತ್ತು ಅವಗ. ನನಗೆ ವಿಶಾಲ ಬೆಳೀಲಿಕ್ಕೆ ಜೀವನದೊಂದು ಹೋರಾಟ ಮಾಡಲಿಕ್ಕೆ, ಶ್ರಮ ಅಂದ್ರೇನು, ಸಂಬಂಧಗಳೆಂದರೆ ಏನು, ಇವನ್ನೆಲ್ಲ ತಿಳಿಸಿಕೊಟ್ಟಿದ್ದು

ಅವನೆ. ನಮ್ಮ ಕುಟುಂಬದ ಮುಖ್ಯ ಲಕ್ಷಣ ಅಂತೆಂದರೆ ದುಡಿದು ಕೂಡಿ ಬಾಳಬೇಕು. ಆದ ಕಾರಣ, ನಾನು ಶ್ರಮ ಸಂಸ್ಕೃತಿ ಮತ್ತು ಅವಿಭಕ್ತ ಪ್ರಜ್ಞೆ ಅನ್ನೋ ಪದಗಳನ್ನು ಬಳಸ್ತಾ ಇರತೀನಿ.

ನಿಮಗೆ ಸಾಹಿತ್ಯದ ವಿದ್ಯಾರ್ಥಿಯಾಗಲು ಯಾವುದಾದರೂ ಪ್ರೇರಣೆ ಇದೆಯಾ ಅಂದರೆ ಏನು ಹೇಳತೀರಿ?

ನಾನು ಕಲ್ತ ಮೊಟ್ಟಮೊದಲ ಪದ್ಯ ಯಾವುದು ಗೊತ್ತದೆ? 'ಸುಲಿದ ಬಾಳೆಯ ಹಣ್ಣಿನಂದದಿ, ಕಳೆದ ಸಿಗುರಿನ ಕಬ್ಬಿನಂದದಿ, ಅಳಿದ ಉಷ್ಣದ ಹಾಲಿನಂದದಿ,' ಅನ್ನೋ ಮಹಲಿಂಗರಂಗನ ಪದ್ಯ; ನಮ್ಮನೆ ಸ್ವಲ್ಪ ದೊಡ್ಡದಿತ್ತು. ನಮ್ಮಣ್ಣ ಪ್ರೈಮರಿ ಸ್ಕೂಲ್ ಟೀಚರಿದ್ದ. ಎಲ್ಲ ಹುಡುಗ್ರು ರಾತ್ರಿ ಓದೋಕೆ ನಮ್ಮನೆಗೆ ಬರ್ತಿದ್ರು, ದೀಪ ಹಚಕೊಂಡು ಕೂಡ್ತಿದ್ರು. ಅವರು ಗಂಟೆಗಟ್ಟಲೆ ಪದ್ಯ ಓದುತಿದ್ರಲ್ಲ. ನಾನು ಕಲ್ತಬಿಟ್ಟೆ. ಮುಂದೆ ಸಾಲ್ಯಾಗ ಮಾಸ್ತರು ನನ್ನ ಕಡೀಂದ ಪದ್ಯಗಳನ್ನು ಹಾಡಿಸ್ತಿದ್ರು, ಸಾಹಿತ್ಯದ ಬಗ್ಗೆ ನನಗೆ ಆಸಕ್ತಿ ಬೆಳೆದು ಬಂದಿದ್ದು ಹೀಂಗ.

ನಿಮ್ಮ ವ್ಯಕ್ತಿತ್ವದ ಮೇಲೆ ಆಳವಾದ ಪರಿಣಾಮ ಬೀರಿದ ವ್ಯಕ್ತಿಗಳು ಅಂದರೆ ಯಾರನ್ನು ಹೇಳತೀರಿ?

ನನ್ನ ಮ್ಯಾಲ ಭಾಳ ಪ್ರಭಾವ ಬೀರಿದ ವ್ಯಕ್ತಿ ನನ್ನ ತಂದೆನೇ. ಅವನ ಬಿಟ್ಟರೆ ನನ್ನ ಗುರುಗಳಾದ ಬಿ.ಟಿ ಸಾಸನೂರದೊಂದು ಆದರ್ಶ. ಆರ್. ಸಿ. ಹಿರೇಮಠರದೊಂದು ಆದರ್ಶ.

ನೀವು ಬಿ.ಟಿ. ಸಾಸನೂರರನ್ನು ಬಹಳ ಗೌರವದಿಂದ ಅನೇಕ ಕಡೆ ನೆನೀತೀರಿ. ಅವರ ಬಗ್ಗೆ ತಿಳಿಸಿರಿ.

ಭೀಮಸೇನ ತುಳಜಪ್ಪ ಸಾಸನೂರು ಅಂತ ಅವರ ಹೆಸರು. ವಿಜಾಪುರ ವಿಜಯ ಕಾಲೇಜಕ್ಕ ಇದ್ರು. ಅವರ ವಿದ್ವತ್ತು ಮತ್ತು ಬೋಧನ ಇತ್ತಲ್ಲ ಅದು ಬಹಳ ದೊಡ್ಡದು. ಅವರು ಯೂನಿವರ್ಸಿಟಿಗೆ ಬಂದಿದ್ರೆ, ಯೂನಿವರ್ಸಿಟಿ ಚರಿತ್ರೆ ಬೇರೆ ಆಗ್ತಿತ್ತು. ನಮ್ಮ ಕನ್ನಡ ಡಿಪಾರ್ಟಮೆಂಟ್ ಚರಿತ್ರೆ ಬೇರೆ ಆಗ್ತಿತ್ತು. ಅಷ್ಟು ದೊಡ್ಡ ವಿದ್ವಾಂಸರು. ಅವರಿಗೆ ಇಂಗ್ಲೀಷ್ ಮರಾಠಿ ಹಿಂದಿ, ಸಂಸ್ಕೃತ ಗೊತ್ತಿತ್ತು. ಬೋಧನ ಬಗ್ಗೆ ಇಂಥಾ ಕಳಕಳಿ ಇತ್ತಂದ್ರೆ, ಅವರು ನಮಗ ಗೋವಿಂದ ಪೈ ಅವರ 'ಗೊಲ್ಗೊಥಾ' ಹೇಳಬೇಕಾಗಿತ್ತು. ಬೈಬಲ್ ಅಭ್ಯಾಸ ಮಾಡಿ ಬರ್ತಿದ್ರು, ಕ್ರಿಶ್ಚಿಯನ್ ಪ್ರೊಫೆಸರ ಕೂಡ ಚರ್ಚೆ ಮಾಡಿ ಬರ್ತಿದ್ರು, ಮತ್ತ ಯಾವುದೇ ಒಂದು ವಿಷಯ ಹೇಳಬೇಕಾದ್ರೆ ಸ್ಪಷ್ಟವಾಗಿ ನಿಖರವಾಗಿ ಹೇಳೋರು. ವಿದ್ವತ್ತು ಮತ್ತು ಶಿಸ್ತು ಅಂದ್ರೆ ಏನು ಅನ್ನೋದನ್ನ ನಾನು ಅವರಿಂದ ಭಾಳವಾಗಿ ಕಲಿತೆ. ಅನಕೃ ತಮ್ಮ 'ಕನ್ನಡಮ್ಮನ ಗುಡಿಯೊಳಗೆ' ಪುಸ್ತಕದೊಳಗೆ ಸಾಸನೂರ ಬಗ್ಗೆ ಬರದಾರೆ.

ಆರ್ ಸಿಯವರು?

ಒಂದು ಮಾತ ಹೇಳ್ತೀನಿ. ಆರ್‌ಸಿಯವರ ವಿದ್ವತ್ತಿನ ಮುಂದೆ ತೀ. ನಂ. ಶ್ರೀ., ಡಿ.ಎಲ್.ಎನ್ ಏನೂ ಅಲ್ಲ. ಬಹಳ ದೊಡ್ಡ ವಿದ್ವತ್ತು. ಆದರೆ ಶಿಸ್ತಿರಲಿಲ್ಲ. ಬರೀವಾಗ ಒಂದು ಸಿಸ್ಟಮ್ಯಾಟಿಕ್ಕಾಗಿ ಬರೆಯೋದಾಗಲೀ, ಮಾತನಾಡುವಾಗ ಒಂದು ಸಿಸ್ಟಮ್ಯಾಟಿಕ್ಕಾಗಿ ಮಾತೋಡೋದಾಗಲೀ ಇರಲಿಲ್ಲ. ಒಂದು ರೀತಿ ಅಸ್ತವ್ಯಸ್ತ. ಎರಡನೇದು ಶ್ರಮ. ಅವರಷ್ಟು ದುಡಿಯೋರನ್ನ ನಾನು ನೋಡೇ ಇರಲಿಲ್ಲ. ಆರ್. ಸಿ ಯವರು ಕರ್ನಾಟಕ ಕಾಲೇಜಕ್ಕೆ ನನ್ನ ಅಪಾಯಿಂಟ್ ಮಾಡಿದ್ದು ನನ್ನ ಜೀವನದಲ್ಲಿ ಮಾಡಿದ ದೊಡ್ಡ ಉಪಕಾರ. ಆದರೂ ಸಂಶೋಧನೆಯೊಳಗೆ ನನಗೆ ನಾನೇ ದಾರಿ. ನನಗ ನಾನೇ ಗುರಿ. ನನ್ನ ಸಂಶೋಧನ ಕ್ಷೇತ್ರದೊಳಗ ಹಿಂಗಿಂಗ್ ಡೆವಲಪ್ ಆಗ್ತಾಯಿದೆ, ಹಿಂಗಿಂಗ್ ಬರೀಬೇಕು,

ಇಂಥ ಪತ್ರಿಕೆ ಒಳಗ ಬರೀಬೇಕು ಇಂಥ ವಿಚಾರ ಸಂಕಿರಣದೊಳಗ ಭಾಗವಹಿಸಬೇಕು ಇವೆಲ್ಲ ನಾನೇ ಕಲಿತಂಥ ಪಟ್ಟುಗಳು

ಸಂಶೋಧನೆಯಲ್ಲಿ ನಿಮಗೆ ಮಾದರಿ ಅಂತ ಅನ್ನೋದಾದರೆ ಯಾರು?

ನನಗೆ ಇವತ್ತಿಗೂ ಆದರ್ಶ ಅಂತಂದ್ರೆ ಆರ್. ನರಸಿಂಹಾಚಾರ್. ಅವರ 'ಕರ್ನಾಟಕ ಕವಿಚರಿತೆ'ಯ ಮೂರು ಸಂಪುಟಗೆಳು. ಆಗಿನ ಕಾಲಕ್ಕ, ತಾಡೋಲೆಯಿಂದ ಹೊರತರೋದು, ಅಂಥ ಸಂಪುಟಗಳ ತರೋದು ಭಾಳದೊಡ್ಡ ಕೆಲಸ ಅದು. ಅವರಿಗೆ ಕನ್ನಡ ಬರ್ತಿತ್ತು. ತಮಿಳು ಬರ್ತಿತ್ತು. ತೆಲಗು ಬರ್ತಿತ್ತು. ಸಂಸ್ಕೃತ ಬರ್ತಿತ್ತು. ಕವಿಚರಿತೆ ಸಂಪುಟಗಳನ್ನ ನಾನು ನೂರಾರು ಸಲ ಓದಿರಬೇಕು. ಪ್ರತಿಸಲ ಓದ್ದಾಗಲೂ ಹೊಸದೇ. ಕರ್ನಾಟಕ ಕವಿಚರಿತೆ ಪರಿಷ್ಕಾರ ಮಾಡಬೇಕು ಅಂತ ನನಗೆ ಪ್ಲಾನಿತ್ತು. ಆಗಲಿಲ್ಲ. ಇವತ್ತಿಗೂ ನರಸಿಂಹಾಚಾರ್ಯರರು ನನಗ ಒಂದು ಆಶ್ಚರ್ಯ.

ಆಕರ ನಿರ್ಮಾಣ ಮಾಡೋದೇ ಸಂಶೋಧನೆ ಅನ್ನೋ ಸಂಶೋಧನ ಅಧ್ಯಯನ ವಿಧಾನ ಏನಿದೆ, ಅದು ನಿಮಗೆ ಅವರಿಂದ ಬಂದಿದ್ದು ಅನಿಸುತ್ತದೆ.

ಹೌದೌದು. ನರಸಿಂಹಾಚಾರ್ಯರ ಮೆಥೆಡಾಲಜೀನೇ ನನ್ನ ಮೆಥೆಡಾಲಜಿ. ಅದಕ್ಕೆ ನನಗೆ, ಆಕರ ಶೋಧ ಅದೆಯಲ್ಲ, ಅದೇ ಸಂಶೋಧನೆ ಅಂತ ತಿಳಕೊಂಡಿದ್ದೆ ಮೊದಲ. ನೋಡಿ ಮೊನ್ನೆ 'ಟಗರ ಪವಾಡ' ಪುಸ್ತಕ ಮಾಡಿದೆ. ಅದರಿಂದ ಕುರುಬರ ಬಗ್ಗೆ ಹೊಸ ಅಂಶ ಗೊತ್ತಾದವು. ಅವರೊಳಗೆ ಮಂಕ ಸಂಪ್ರದಾಯ ಶಾಂತ ಸಂಪ್ರದಾಯ ಅಂತ ಎರಡು ಸಂಪ್ರದಾಯ ಅದಾವ ಅನ್ನೋದು ಗೊತ್ತಾಯ್ತು.

ಸಂಶೋಧನೆಯ ನಿಮ್ಮ ಪರಿಕಲ್ಪನೆ ಯಾವುದು?

ಆಕರ ಶೋಧ, ಆಕರ ವಿಶ್ಲೇಷಣೆ, ಆಕರ ವ್ಯಾಖ್ಯಾನ. ಈಗ ಇನ್ನೊಂದು ಮಾಡ್ತಾ ಇದ್ದೀನಿ. ಆಕರ ಅನ್ವಯಿಕತೆ.

ಕೊಂಚ ಇದನ್ನ ವಿವರಿಸಬಹುದಾ?

ಮೊದಲ್ನೇದು ಆಕರಮುಖಿ ಸಂಶೋಧನೆ. ಬಹಳ ಮುಖ್ಯ ಇದು. ಹಂಪಿ ಯೂನಿವರ್ಸಿಟಿ ಒಳಗಿದ್ದಾಗ, ಮಹಿಳಾ ಲೇಖಕಿಯರಿಗೆ ಸೂಚಿ ಮಾಡಾಕೆ ಹಚ್ಚಿದ್ದೆ. ಅದಕ್ಕೆ ಕೆಲವರು ಸೂಚಿ ಮಾಡಿದ್ದೇನು ದೊಡ್ಡ ಕೆಲಸ ಅಂದ್ರು. ಅದೆ ಎರಡನೇ ವರ್ಷ ಮಹಿಳಾ ಸಾಹಿತ್ಯ ಚರಿತ್ರೆ ಬರೀಲಿಕ್ಕೆ ಹಚ್ಚಿದೆ. ಆಕರ ಮಾಡದೇ ಹೋದ್ರೆ ಚರಿತ್ರೆ ಹೆಂಗ ಬರೀತೀರಿ? ಮತ್ತ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಕನ್ನಡ ಶಾಸನಗಳು ಹೊರತಂದೆವು. ಇವು ಎಂಥಾ ಸೇರ್ಪಡೆ! ಎರಡ್ನೇದು ಆಕರ ವಿಶ್ಲೇಷಣೆ. ವಿಶ್ಲೇಷಣಾಮುಖಿ ಸಂಶೋಧನೆ ಇದು. ಇಲ್ಲಿ ಚರಿತ್ರೆಯ ಶೋಧ, ಆಗ್ತದೆ. ನಮ್ಮಲ್ಲಿ ಚರಿತ್ರೆ ಅಸ್ತವ್ಯಸ್ತ ಆಗೆದ. ಇದು ನವೋದಯ ಕಾಲದ ದೊಡ್ಡ ಛಾಲೆಂಜಿತ್ತು. ಅದನ್ನು ಮಾಡಿದೀವಿ. ಮೂರನೇದು ವ್ಯಾಖ್ಯಾನಮುಖಿ ಸಂಶೋಧನೆ. ಇಲ್ಲಿ ಅರ್ಥಶೋಧ ನಡೀತದೆ. ಚರಿತ್ರೆಯನ್ನು ಹುಡುಕೋದು ಬ್ಯಾರೆ. ವ್ಯಾಖ್ಯಾನದ ಮೂಲಕ ಅದರ ಅರ್ಥ ಹುಡುಕೋದು ಬ್ಯಾರೆ ಇಬ್ಬರ ವಿಶ್ಲೇಷಣೆ ಮಾಡಿದಾಗ ಒಂದೇ ರಿಜಲ್ಟ ಸಿಗಬಹುದು. ಆದರೆ ವ್ಯಾಖ್ಯಾನ ಮಾಡುವಾಗ ನಾವು ಬ್ಯಾರೆ ಆಗ್ತೀವಿ. ಇಲ್ಲಿ ನಮ್ಮ ನಮ್ಮ ದೃಷ್ಟಿಕೋನ ಸೇರ್ತವೆ. ಕೊನೆಯದು ಅನ್ವಯಮುಖಿ ಸಂಶೋಧನೆ. ಈಗ 'ಪಂಚಾಚಾರ್ಯರು ಜಗದ್ಗುರುಗಳಲ್ಲ. ಜಗಾದಾಚಾರ್ಯರು' ಅನ್ನೋವಂತಹ ಲೇಖನ ಬರ್ದಿದೀನಿ. ಸಣ್ಣಮಾತಲ್ಲ ಇದು. ಇದು ಸಾಮಾಜಿಕವಾಗಿ ಪರಿವರ್ತನೆಗೆ ಕಾರಣವಾಗ್ತದೆ.

ನೀವು ಸಂಶೋಧಕರಾಗಿ ಜನಪ್ರಿಯತೆ ಪಡೆದಿರಿ. ಈಗ ರಾಷ್ಟ್ರಮಟ್ಟದ ಮನ್ನಣೆಯನ್ನೂ ಪಡೆದಿದ್ದೀರಿ. ಆದರೆ ನಿಮ್ಮ ಮಾರ್ಗ ಸಂಪುಟಗಳ ಮುನ್ನುಡಿಯಲ್ಲಿ ಒಂದು ಬಗೆಯ ವೇದನೆಯಿದೆ. ಸಂಶೋಧಕ ಸಣ್ಣ ಶಿಲುಬೆ ಏರಬೇಕಾಗುತ್ತದೆ ಅಗ್ನಿಕುಂಡಗಳನ್ನು ಹಾಯಬೇಕಾಗ್ತದೆ ಅಂದಿದ್ದೀರಿ. ಅದರಲ್ಲೂ ನನ್ನ ಸಮಕಾಲೀನರಿಗೆ ಹೋಲಿಸಿದರೆ ನಾನು ಹೆಚ್ಚು ಇದನ್ನು ಅನುಭವಿಸಿದೆ ಅಂತ ಬರೀತೀರಿ. ಯಾಕೆ?

ನಮ್ಮ ಸಮಕಾಲೀನರಲ್ಲಿ ಇಬ್ಬರು. ಒಬ್ಬರು ಎಂ. ಚಿದಾನಂದ ಮೂರ್ತಿ. ಮತ್ತೊಬ್ಬರು ಟಿ.ವಿ. ವೆಂಕಟಾಚಲಶಾಸ್ತ್ರಿ. ಶಾಸ್ತ್ರಿಗೆ ಅಂಥ ಶಿಲುಬೆ ಏರೋ ಪ್ರಸಂಗ ಬರಲಿಲ್ಲ. ಚಿದಾನಂದಮೂರ್ತಿಗೆ ಸ್ವಲ್ಪ ಬಂತು. ನಮ್ಮಿಬ್ಬರ ಸಂಶೋಧನೆ ಬರೀ ಅಕಾಡೆಮಿಕ್ ಅಲ್ಲ. ಬರೀ ಅಕಾಡೆಮಿಕ್ ಆದ್ರೆ ಅಂಥ ತೊಂದರೆ ಇರಲ್ಲ. ಸಂಶೋಧನೆ ಸ್ವಲ್ಪ ಸಾಮಾಜಿಕ ಆದಕೂಡ್ಲೆ ತೊಂದ್ರೆ ಸುರು ಆಗ್ತವೆ. ಚಿದಾನಂದ ಮೂರ್ತಿ ಕೂಡ ನನ್ನಂತೆ ಆನ್ವಯಿಕ ಸಂಶೋಧನೆ ಮಾಡಿದೋರು. ಆದರೆ ಮೂರ್ತಿಯವರಿಗಿಂತ ನನಗೆ ಹೆಚ್ಚು ವಿರೋಧ ಬಂತು.

ಕಾರಣ?

ಕಾರಣ, ನನ್ನ ವೃತ್ತಿಜೀವನದಲ್ಲಿರೋ ವಿರೋಧಿಗಳು ಅಕೆಡೆಮಿಕ್ ಪ್ರಶ್ನೆಗಳನ್ನು ಸಮಾಜಕ್ಕೆ ಒಯ್ದರು. ಸಮಾಜದ ತೆಲಿ ಕೆಡಿಸಿದ್ರು. ಸಮಾಜ ಆದ್ರಾಗು ಮಠಗಳು ನನ್ನ ವಿರುದ್ಧ ಆಗುವ ಹಾಗೆ ಮಾಡಿದ್ರು. ನಮ್ಮಲ್ಲಿ ಈ ಜಾತೀದು ಬಹಳ ಕೆಟ್ಟ ಅದೆ. ಒಮ್ಮೊಮ್ಮೆ ಅನಿಸ್ತದೆ. ನಾನೊಬ್ಬ ಜಂಗಮಾಗಿದ್ರೆ ಇಷ್ಟು ಗದ್ದಲ ಆಗ್ತಿರಲಿಲ್ಲ ಅಂತ.

ಇದಕ್ಕೆ ನಿಮ್ಮ ಸಂಶೋಧನೆಯಲ್ಲಿರೊ ಒಂದು ಗುಣವು ಕಾರಣ ಇರಬಹುದಾ? ಅಂದರೆ ಆ ವಿಷಯದಲ್ಲಿ ಇನ್ನೂ ಹುಡುಕಾಟ ಸಾಧ್ಯ ಇದೆ ಅನ್ನೋ ಆಯಾಮ ಕಡಿಮೆಯಾಗುವುದು. ಅವಸರದಲ್ಲಿ ತೀರ್ಮಾನಗಳಿಗೆ ಬರೋದು. ದಿಟ್ಟವಾದ ಹೇಳಿಕೆ ಕೊಡೋದು.

ಇಲ್ಲ. ನನಗ ಖಾತ್ರಿ ಅನಸದಾಗ ಹೇಳಬೇಕು ಅನ್ನಾಂವ ನಾ..

ಎಂ. ಚಿದಾನಂದಮೂರ್ತಿ ಅವರು ನಿಮ್ಮ ಸಂಶೋಧನೆ ಬಗ್ಗೆ ಒಂದು ಕಡೆ ಹೇಳಿಕೆ ಮಾಡ್ತಾ, ಊಹೆಗಳನ್ನೇ ಸಂಶೋಧನೆ ಅಂತ ಕಲಬುರ್ಗಿ ಭಾವಿಸ್ತಾರೆ ಅಂತಾರೆ.

ನೋಡಿ ನಿಮಗ ಊಹೆ ಅನಿಸಬಹುದು. ಅದರ ಹಿಂದೆ ಹತ್ತು ವರ್ಷ ಅಭ್ಯಾಸ ನಡಸಿರತೇನಿ. ಅವರು ಆ ಮಾತ ಅಂದಿದ್ರ ಸುಳ್ಳದು. ಊಹೆ ಇದ್ರ ಊಹೆ ಅಂತ ಹೇಳಿಬಿಡ್ತಿನಿ.

ವಿಜಯನಗರದ ಬಗ್ಗೆ ನಿಮ್ಮ ಈಚಿನ ಶೋಧ ಏನಿದೆ, ಕೃಷ್ಣದೇವರಾಯ ಕನ್ನಡ ವಿರೋಧಿ ಅನ್ನುವಂತಹದ್ದು, ಅದಕ್ಕೆ ಏನು ಆಧಾರ?

ನೋಡಿ ಕರ್ನಾಟಕದಲ್ಲಿ ವಿಜಯನಗರದ ಇತಿಹಾಸ ಬರದೋರೆಲ್ಲ ಶ್ರೀವೈಷ್ಣವರು. ತಿರುಪತಿ ಭಕ್ತರು. ಅವರಿಗೆಲ್ಲ ಕೃಷ್ಣದೇವರಾಯ ಆಶ್ರಯಕೊಟ್ಟಿದ್ದ. ಹಿಂಗಾಗಿ ಅವರನ್ನ ಅವರು ವೈಭವೀಕರಿಸಿ ಬರದಬಿಟ್ರು. ನಾ ಎತ್ತಿದ ಪ್ರಶ್ನೆಗೆ ಉತ್ತರ ಕೊಡ್ತಲ್ಲ ಮತ್ತೆ.

ಯಾವ ಪ್ರಶ್ನೆಗಳು?

ಅವನ ಆಸ್ಥಾನದೊಳಗೆ ಎಷ್ಟು ಜನ ಕನ್ನಡ ಕವಿಗಳಿದ್ರು? ತೆಲುಗು ಕವಿಗಳು ಎಷ್ಟು ಜನ ಇದ್ರು? ಮತ್ತ ಸ್ವತಃ ಕೃಷ್ಣದೇವರಾಯನೇ ತೆಲುಗಿನೊಳಗ ಬರದ. ಕನ್ನಡದೊಳಗೆ ಯಾಕೆ ಬರಿಲಿಲ್ಲ? ಅವನ

ಆಸ್ಥಾನದೊಳಗ ಕನ್ನಡಿಗರು ಎಷ್ಟು ಜನ ಇದ್ರು? ಅಂವ ಬಂದ ಬಳಿಕ ಅಲ್ಲಿದ್ದ ಶೈವಸಂಸ್ಕೃತಿಯ ವಾತಾವರಣ ಏನಾತು? ವೈಷ್ಣವ ಸಂಸ್ಕೃತಿ ಎಷ್ಟು ಬೆಳೀತು. ಇವೆಲ್ಲ ನೋಡಿದರೆ ಅಂವ ಹಂಪೀ ಕ್ಷೇತ್ರಕ್ಕೇ ಅನ್ಯಾಯ ಮಾಡ್ಯಾನ ಅನಿಸ್ತದೆ. ಕನ್ನಡಿಗರಿಗೇ ಅನ್ಯಾಯ ಮಾಡ್ಯಾನ ಅನಿಸ್ತದ.

ವಿಜಯನಗರದ ಬಗ್ಗೆ ಕಟ್ಟಿರೊ ಬಹುತೇಕ ಇತಿಹಾಸನೇ ವೈಭವೀಕರಣದ್ದು...

ಅಷ್ಟೇ ಅಲ್ಲ, ಮುಸಲ್ಮಾನ ವಿರೋಧಿ ಧೋರಣೇದು. ನನಗ ತಾಳಿಕೋಟ ಯುದ್ಧ ಅದೆಯಲ್ಲ, ಅದು ಹಿಂದೂ ಮುಸಲ್ಮಾನರ ನಡುವೆ ನಡೆದ ಯುದ್ಧವಲ್ಲ. ಅದು ತೆಲಗರು ಮತ್ತು ಕನ್ನಡಿಗರ ನಡುವೆ ನಡದ ಯುದ್ಧ. ಕನ್ನಡಿಗರು ಮುಸಲ್ಮಾನ್ ಸೈನಿಕರ ಸಹಾಯ ತೆಗೆದುಕೊಂಡು ತೆಲುಗರನ್ನ ಸೋಲಿಸಿದ ಕಥೆಯದು. ಮತ್ತ ಇನ್ನೊಂದು ಪ್ರಶ್ನೆ ಅದೆಯಲ್ಲ, ಹಂಪಿಯಾಗ ವೈಷ್ಣವ ದೇವಾಲಯವೆಲ್ಲ ಒಡದಾವ. ಶೈವದೇವಾಲಯಗಳು ಒಡೆದಿಲ್ಲ. ಇದ ನೋಡುವಾಗ ವೈಷ್ಣವ ಮತ್ತು ಶೈವರ ನಡುವಿನ ಯುದ್ಧ ಅದು. ಇದು ನನ್ನ ಥೀಸಿಸ್ಸು. ಇದಕ್ಕ ಇನ್ನೂ ಹೆಚ್ಚು ಗಟ್ಟಿ ಆಧಾರಗಳು ಸಿಗ್ತಾ ಇದಾವೆ. ನಾನು ಇದನ್ನ ಹೇಳಿದ ಮ್ಯಾಲೆ ಒಬ್ರೂ ಉತ್ತರ ಬರದಿಲ್ಲ.

ನೀವು ಅನೇಕ ಸಂಸ್ಥೆಗಳಲ್ಲಿ ಕೆಲಸ ಮಾಡಿದಿರಿ. ಕನ್ನಡ ಅಧ್ಯಯನಪೀಠ. ಕನ್ನಡ ವಿಶ್ವವಿದ್ಯಾಲಯ, ಗದುಗಿನ ವೀರಶೈವ ಅಧ್ಯಯನ ಸಂಸ್ಥೆ. ಬೆಳಗಾವಿಯ ರುದ್ರಾಕ್ಷಿಮಠ. ಈಗ ಬೇಂದ್ರೆ ಟ್ರಸ್ಟ್ ಅಧ್ಯಕ್ಷರಾಗಿದ್ದೀರಿ. ಸಂಶೋಧಕರಾಗಿ ಸಂಸ್ಥೆ ಕಟ್ಟುವಲ್ಲಿ ನಿಮ್ಮ ಅನುಭವದ ಮುಖ್ಯ ಸಂಗತಿಯಾವುದು?

ನನಗ ನನ್ನ ಕುಟುಂಬದಿಂದ ಬಂದ ಅವಿಭಕ್ತ ಪ್ರಜ್ಞೆ ಅದೆಯಲ್ಲ, ಅದು ಈ ಸಂಸ್ಥೆಗಳನ್ನ ಕಟ್ಟೋಕೆ ಸಹಾಯಕವಾಗಿದೆ. ಒಬ್ಬ ಬೆಳೆಯೋದಕ್ಕಿಂತ ಕೂಡಿ ಹತ್ತು ಮಂದಿ ಬೆಳೀಬೇಕು. ವ್ಯಕ್ತಿ ಮತ್ತು ಸಂಸ್ಥೆಗಳ ಆಯ್ಕೆ ಬಂದಾಗ, ವ್ಯಕ್ತಿಗೆ ಸುಖ ಮಾಡೋಕೆ ಹೋದರೆ ಸಂಸ್ಥಾ ಹಾಳಾಗ್ತದ. ಸಂಸ್ಥೆಗೆ ಸುಖ ಮಾಡೋಕೆ ಹೋದರೆ ವ್ಯಕ್ತಿ ಸಿಟ್ಟಿಗೇಳ್ತಾನ. ಇಂತಹ ಪ್ರಸಂಗದೊಳಗ ನಾನು ಸಂಸ್ಥೆ ಪರವಾಗಿ ಇರೋನು. ಕನ್ನಡ ಅಧ್ಯಯನ ಪೀಠದೊಳಗೆ ಇರುವ ಕಾಲಕ್ಕ ಜಾನಪದ ಸಮ್ಮೇಳನಗಳು ಏನವ, ಅವನ್ನ ಶುರುಮಾಡಿಸ್ದೆ. ಕರ್ನಾಟಕ ಭಾರತಿ ಪತ್ರಿಕೆ ಆರಂಭ ಮಾಡಿಸ್ದೆ.

ಆದರೂ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇದೇ ಕಾಲಕ್ಕೆ ಜಿ. ಎಸ್. ಶಿವರುದ್ರಪ್ಪನವರ ನೇತೃತ್ವದಲ್ಲಿ ನಡೆದ ಸೆಮಿನಾರ್‌ಗಳು ಏನಿವೆ. ಅವು ಆಧುನಿಕ ಸಾಹಿತ್ಯ ವಿಮರ್ಶೆಗೆ ಕೊಟ್ಟ ಕೊಡುಗೆ, ಬೆಳೆಸಿದ ವೈಚಾರಿಕ ಪ್ರಜ್ಞೆದೊಡ್ಡದು. ನಿಮ್ಮಲ್ಲಿ ಕೊಂಚ ಪ್ರಾಚೀನ ಸಾಹಿತ್ಯಕ್ಕೆ, ಸಂಪಾದನೆಗೆ ಹೆಚ್ಚು ಒತ್ತು ಕೊಟ್ಟಿರಿ. ಹೀಗಾಗಿ ಒಂದು ಬಗೆಯ ಸಾಂಪ್ರದಾಯಿಕ ಕೆಲಸ ಆಯ್ತು ಅನಿಸೋಲ್ಲವಾ?

ಅದು ಹಿಂಗಾಗ್ತದ ರಾಜಕೀಯವಾಗಿ ರಾಜಧಾನಿ ಎಲ್ಲಿರ್ತದ ಅಲ್ಲಿ ಅಸಂಪ್ರದಾಯಿಕ ಚಟುವಟಿಕೆ ಹೆಚ್ಚಿರ್ತವ. ನಮ್ಮದು ಸ್ವಲ್ಪ ಸಾಂಪ್ರದಾಯಿಕ ಒಪ್ತೇನಿ. ಆದರ ಆಕರ ಸಾಮಗ್ರಿ ವಿಷಯದಲ್ಲಿ ನಮ್ಮಲ್ಲಿ ಭಾಳ ದೊಡ್ಡ ಕೆಲಸ ಆಯ್ತು.

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾಗಿದ್ದಿರಿ. ಅಲ್ಲಿದ್ದು ಮಾಡಿದ ಕೆಲಸದ ವಿಶೇಷತೆ ಏನು ಅಂತ ತಿಳೀತಿರಿ?

ನನ್ನ ಜೀವನದೊಳಗೆ ಕರ್ನಾಟಕ ಕಾಲೇಜದೊಳಗ ಇದ್ದ ಕಾಲ ಬಿಟ್ರೆ ನಾನು ಸಮಾಧಾನವಾಗಿ ಕೆಲಸ ಮಾಡಿದ ಸಂಸ್ಥಾ ಅಂದರ ಕನ್ನಡ ವಿಶ್ವವಿದ್ಯಾಲಯ. ಮೂರು ವರ್ಷ ಅಲ್ಲಿ ನಾನು

ಸಾರ್ಥಕವಾಗಿ ಕಳೆದಿದೀನಿ. ಅಲ್ಲಿನ ಶಿಕ್ಷಕರ ಸಹಕಾರದಿಂದ ಅಲ್ಲಿ ಅಕೆಡಮಿಕ್ ಸಂಚಲನ ಉಂಟು ಮಾಡೋಕೆ ನಂಗೆ ಸಾಧ್ಯವಾಯ್ತು. ೩೦೦ ಪುಸ್ತಕಗಳು ಹೊರಬಂದವು. ಒಮ್ಮೊಮ್ಮೆ ಅನಿಸ್ತದ. ಕನ್ನಡ ವಿವಿಗೆ ನೇಮಕ ಮಾಡುವಾಗ್ಲೇನೆ, ಅರ್ಧ ಜನರನ್ನ ಎರಡು ಮೂರು ಭಾಷೆ ಗೊತ್ತಿರೋರನ್ನ ಮಾಡಬೇಕಾಗಿತ್ತು ಅಂತ.

ಕನ್ನಡ ವಿವಿಗೆ ನೀವು ಕೊಟ್ಟ ಆಯಾಮದ ಬಗ್ಗೆ ಹೇಳಿದಿರಿ. ಅದು ನಿಮ್ಮ ಸಂಶೋಧನ ವ್ಯಕ್ತಿತ್ವಕ್ಕೆ ಏನಾದರೂ ಆಯಾಮ ಕೊಟ್ಟಿತಾ?

ಯಾಕಿಲ್ಲ. ನನ್ನ ದೇಶೀಯತೆ ಬಗೆಗಿನ ಒಲವು ಏನಿತ್ತಲ್ಲ, ಅದು ಅಲ್ಲಿ ಮತ್ತಷ್ಟು ಬೆಳೀತು. ದಲಿತ, ಸೂಫಿ, ಬುಡಕಟ್ಟು, ಮಹಿಳಾ ಮತ್ತ ಬೇರೆ ಬೇರೆ ಜನಾಂಗದ ಅಧ್ಯಯನ ಹೀಂಗ ಬೇರೆ ಬೇರೆ ವಿಷಯಗಳಲ್ಲಿ ಕೆಲಸ ಮಾಡಿದವರ ಜತೆ ನನಗೆ ಬೇರೆ ಆಯಾಮ ಸಿಕ್ತು.

ಪ್ರಕಟಣೆ ಮಾಡಿಸ್ತೀರಿ. ಆದರೆ ಸರ್ಕಾರದ ಸಂಸ್ಥೆಗಳಲ್ಲಿ ಕೆಲಸ ಮಾಡೋಕು ಮಠಗಳಲ್ಲಿ ನೀವು ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವಾಗ, ಹಲವಾರು ವಿಷಯಗಳಲ್ಲಿ ಸಂಶೋಧನೆ ಕೆಲಸ ಮಾಡೋಕೂ ವ್ಯತ್ಯಾಸ ಇರಬಹುದು. ಮಠಗಳಲ್ಲಿ ಲಿಂಗಾಯತಕ್ಕೆ ಸೀಮಿತವಾದ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗುತ್ತದೆ, ಅದನ್ನು ಮೀರೋಕೆ ಆಗಿದೆಯಾ?

ಅದರೊಳಗೂ ಎಷ್ಟು ಸಾಧ್ಯ ಅದ, ಅಷ್ಟ ಕ್ರಾಸ್ ಮಾಡ್ಲಿಕ್ಕೆ ಪ್ರಯತ್ನ ಮಾಡ್ತೀನಿ. ಈಗ ಗದುಗಿನ ತೋಂಟದಾರ್ಯ ಮಠದಿಂದ ತಿಂಥಣಿ ಮೋನಪ್ಪಯ್ಯನ ಬಗ್ಗೆ ಆತು, ಗರೂಡ ಸದಾಶಿವರಾಯನ ಬಗ್ಗೆ ಆತು, ಮೋಟ್ನಳ್ಳಿ ಹಸನಸಾಬರ ಬಗ್ಗೆ ಆತು, ಪುಸ್ತಕ ಬಂದವು. ಎಲ್ಲರು ಕೂಡಿ ಬದುಕು ಮಾಡೋ ಸಂಸ್ಕೃತಿಯಲ್ಲಿ ಮಿಶ್ರ ಇರ್ತದ ಅಂತಿಳಕೊಂಡು ಪ್ರಕಟ ಮಾಡ್ಲಿಕ್ಕೆ ಅವಕಾಶ ಕೊಟ್ಟೆವು. ಕೆಲವು ಕಡೆ ಗುಜುಗುಜು ಆತು. ಆದರೆ ಗದಗಿನ ಸ್ವಾಮಿಗಳು ನನಗೆ ಬೆಂಬಲವಾಗಿ ನಿಂತ್ರು. ಅವರು ನನ್ನ ವಿದ್ಯಾರ್ಥಿ ಇದ್ರು. ತರಗತಿಯೊಳಗೆ ನಾನು ಸಾಹಿತ್ಯಕ್ಕಿಂತ ಸಮಾಜದ ಬಗ್ಗೆ ಭಾಳ ಮಾತಾಡ್ತಿದ್ದೆ. ಅದರ ಪ್ರಭಾವ ಸ್ವಲ್ಪ ಅವರ ಮೇಲೆ ಆಗಿರಬಹುದು. ಆದರೆ ಇದಕ್ಕಿಂತ ಅವರ ಓದೇ ಭಾಳ ದೊಡ್ಡದು. ತಾನಾಗಿಯೇ ಅಭ್ಯಾಸ ಮಾಡಿಕೊಳ್ಳೋದು, ಯಾವುದಾದರೂ ಹೊಸ ವಿಚಾರ ಬಂತಂದ್ರ, ಆ ಬುಕ್ಕಾ ತರಸ್ಕೊಂಡು ಓದೋರು, ಚರ್ಚಿಸೋರು. ಅವರ ಕಾರಿನಾಗ ಯಾವಾಗ್ಲೂ ಹೊಸ ಪುಸ್ತಕ ಇದ್ದೇ ಇರ್ತಾವ.

ನೀವು ಮರಾಠಿಯ ದೊಡ್ಡ ಸಂಶೋಧಕ ರಾ.ಚಿಂ. ಢೇರೆಯವರ ಸಂಶೋಧನೆಗಳನ್ನ ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟ ಮಾಡಿಸಿದಿರಿ. ಢೇರೆಯವರ ಬಗ್ಗೆ ಹಿಂದೆ ಎಲ್ಲೂ ನಿಮ್ಮ ಬರೆಹದಲ್ಲಿ ಪ್ರಸ್ತಾಪ ಇಲ್ಲ. ಇದು ಹೇಗೆ ಸಾಧ್ಯವಾಯ್ತು?

ಏನಾಯ್ತು, ನನ್ನ ಮಗ ಪುಣೇಕಿದ್ನಲ್ಲ. ಹ್ವಾದೆ. ಹ್ವಾದಾಗ ನನಗ ಯಾರೋ ಒಬ್ಬರು ಢೇರೆಯವರ ಪರಿಚಯ ಮಾಡಿಸಿದ್ರು. ಢೇರೆಯವರ ಕೆಲಸಗಳೆಲ್ಲ ಗಮನಕ್ಕ ಬಂದವು. ಈ ಖಂಡೋಬಾ ಆಯ್ತು, ಲಜ್ಜಾಗೌರಿ ಆಯ್ತು. ದತ್ತಸಂಪ್ರದಾಯ ಆಯ್ತು. ಶ್ರೀ ವಿಠಲ ಆಯ್ತು. ನಾಥಸಂಪ್ರದಾಯ ಆಯ್ತು. ಈ ಪುಸ್ತಕಗಳು ಕರ್ನಾಟಕ ಸಂಸ್ಕೃತಿಗೆ ಬಾಗಿಲು ತೆಗೀತಾವ ಅನಿಸ್ತು. ಕನ್ನಡಕ್ಕೆ ಅನುವಾದ ಮಾಡಸ್ತೀನಿ ಅಂದೆ. ಅವರೂ ಒಪ್ಪಿದ್ರು. ಸಾಂಸ್ಕೃತಿಕವಾಗಿ ಆದಾನ ಪ್ರದಾನ ನಡೀಬೇಕು ಅನ್ನೊ ನನ್ನ ಉದ್ದೇಶ ಈಡೇರ್ತು.

ಥೇರೆಯವರ ವಿದ್ವತ್ತಿನ ಸ್ವರೂಪ ಎಂತಹದ್ದು?

ದೊಡ್ಡ ವಿದ್ವಾಂಸ. ಗೊತ್ತಿರದೆ ಇರೋ ವಿಷಯಗಳನ್ನ ಗೊತ್ತು ಮಾಡಿಕೊಟ್ಟ. ಕಟುವಾದ ಸತ್ಯವನ್ನ ಧೈರ್ಯವಾಗಿ ಹೇಳ್ತಾರೆ. ಇದು ಭಾಳ ದೊಡ್ಡ ವಿಷಯ. ಆದರೆ ಅಕೆಡಮಿಕ್ ಶಿಸ್ತಿಲ್ಲ.

ನಿಮ್ಮ ಆಧುನಿಕ ಸಾಹಿತ್ಯದ ಓದಿನ ಬಗ್ಗೆ ಕೇಳೋಕೆ ಆಸಕ್ತಿಯಿದೆ. ಯಾರು ನಿಮ್ಮ ಆಯ್ಕೆ?

ಮಾಡರ್ನ್‌ದೊಳಗ ನಾನು ಕಾದಂಬರಿ, ಕತೆ ಕಡೆ ಹೆಚ್ಚು ಲಕ್ಷ್ಯ ಕೊಡಲಿಲ್ಲ. ಮುಖ್ಯವಾಗಿ ಕಾವ್ಯ ಮತ್ತು ವಿಮರ್ಶೆ ಲೈಕ್ ಮಾಡ್ತೇನೆ. ವಿಮರ್ಶೆಯೊಳಗ ನಮ್ಮ ಕುರ್ತಕೋಟಿ. ಕಾವ್ಯದ ಬಗ್ಗೆ ಬೇಂದ್ರೆನೆ.

ಇವರಿಬ್ಬರೇ ಯಾಕೆ?

ಯಾಕಂದ್ರ ಕುರ್ತಕೋಟಿ ಬಳಸುವಂಥ ಭಾಷೆ ಕನ್ನಡಕ್ಕೆ ಹೊಸತು. ಇನ್ನು ಬೇಂದ್ರೆದು. ನನ್ನ ದೃಷ್ಟಿಯೊಳಗ ಹೆಚ್ಚಿನ ಕವಿಗಳು ಮಾರ್ಗೀಕರಣದ ಕಡೆ ಹೋದ್ರು. ಸೃಜನದಲ್ಲಿ ಧಾರವಾಡದ ಮಾದರಿಗೆ ಬೇಂದ್ರೆ, ಮೈಸೂರು ಮಾದರಿಗೆ ಕುವೆಂಪು. ಒಂದು ದೇಶೀ ಮಾದರಿ. ಇನ್ನೊಂದು ಮಾರ್ಗೀಯ ಮಾದರಿ. ಮಾರ್ಗೀಯ ಮಾದರೀದು ಗ್ರಂಥಸ್ಥ ಭಾಷೆ. ಕಣವಿ ಮೊದಲಾದ ಉತ್ತರ ಕರ್ನಾಟಕದವರು ಕೂಡ ಮೈಸೂರು ಭಾಷೆಗೆ ಹೋಗಿಬಿಟ್ಟರು. ಆದರೆ ಬೇಂದ್ರೆ ಮಾತ್ರ ಕಂಠಸ್ಥ ಭಾಷೇಲಿ ನಿಂತ್ರು, ನಮ್ಮ ಈ ದೇಶೀ ಪರಂಪರೆ ಅದೆಯಲ್ಲ, ಅದರೊಳಗ ಅವರೊಬ್ಬರೆ ಬರದೋರು. ಬೇಂದ್ರೆಕಾವ್ಯ ಕೇಳಿದ ಕೂಡಲೇ ನಮ್ಮ ಒಂದು ಪರಂಪರೆನೇ ಮಾತಾಡ್ತದ. ಹಾಡ್ತದ ಅನಸ್ತದ.

ಸಂಶೋಧನೆ ವಿಷಯದಲ್ಲಿ ಮೈಸೂರು ಮಾದರಿ ಅನುಕರಣೆ ಆಯ್ತಾ?

ಆಯ್ತಲ್ಲ. ಸಂಶೋಧನೆಯೊಳಗ ಧಾರವಾಡ ಮಾದರಿ ಅಂದ್ರ ಶಂಬಾ. ಆಕಡೆ ಆರ್. ನರಸಿಂಹಾಚಾರ್ಯ ಮೈಸೂರು ಮಾದರಿ. ಶಂಬಾ ಅವರದ್ದು ದೇಶೀ ಮಾದರಿ. ನರಸಿಂಹಾಚಾರ್ಯರದು ಮಾರ್ಗೀಯ ಮಾದರಿ. ಶಂಬಾ ಸಂಸ್ಕೃತಿಶೋಧದ ಮಾದರಿ. ನರಸಿಂಹಾಚಾರ್ಯರದು ಚರಿತ್ರ ಶೋಧದ ಮಾದರಿ. ನಾನು ಶಂಬಾ ಮಾದರಿಯನ್ನು ಮುಂದುವರೆಸಬಹುದಿತ್ತು. ಕಣವಿಯವರು ಬೇಂದ್ರೆಯವರ ಮಾದರಿಯನ್ನ ಮುಂದುವರೆಸಬಹುದಿತ್ತು. ನಾವೇನು ಮಾಡಿದಿವಿ. ರಾಜಧಾನಿಯೊಳಗ ಇರೋದನ್ನ ಶ್ರೇಷ್ಠ ಅಂತ ತಿಳಕೊಂಡು ಬಿಟ್ವಿವಿ. ನಮ್ಮ ಶಂಬಾ ಮತ್ತು ಬೇಂದ್ರೆ ಅನುಯಾಯಿಗಳಿಲ್ಲದ ನಾಯಕರಾಗಿ ಹೋಗಿಬಿಟ್ರು.

ಸಾರ್, ಇದಕ್ಕೆ ಇನ್ನೂ ಆಳವಾದ ಸಾಂಸ್ಕೃತಿಕವಾದ ಕಾರಣಗಳಿರಬಹುದು ಅನಿಸುತ್ತೆ. ಚನ್ನವೀರ ಕಣವಿ, ಬಸವರಾಜ ಕಟ್ಟೀಮನಿ, ಸ.ಸ. ಮಾಳವಾಡ,, ವೃಷಭೇಂದ್ರಸ್ವಾಮಿ, ನೀಲಗಂಗಯ್ಯ ಪೂಜಾರ, ಇವರೆಲ್ಲಾ ಕುವೆಂಪು ಪ್ರಭಾವಕ್ಕೆ ಒಳಗಾದರು. ಇದಕ್ಕೆ ಇಲ್ಲಿ ಮೊದಲಿನಿಂದಲೂ ಇರುವ ಬ್ರಾಹ್ಮಣ ಲಿಂಗಾಯತರ ನಡುವಣ ಸುಪ್ತ ಸಂಘರ್ಷಗಳೂ ಕಾರಣವಾಗಿರಬಹುದಾ?

ಇದೂ ಒಂದು ಕಾರಣ ಅದ ಅನಿಸ್ತದ. ಯಾಕಂದ್ರ ಅನೇಕ ಬ್ರಾಹ್ಮಣ ಲೇಖಕರು ಶೂದ್ರರನ್ನ ಭಾಳ ಹಚಿಗೋತಿದ್ದಿಲ್ಲ. ಅದಕ್ಕ ಇವರೇನು ಮಾಡಿದರೂ, ಕುವೆಂಪು ಶೂದ್ರ ತಾನೇ, ಆ ಕಡೆ ಹೋಗಿಬಿಟ್ಟರು. ಈ ಒಳ ಸೆಳೆತಗಳೂ ಕೆಲಸ ಮಾಡ್ಯಾವೆ.

ಪ್ರಾಚೀನ ಲೇಖಕರಲ್ಲಿ ನಿಮ್ಮ ಆಯ್ಕೆ ಯಾರು?

ಒಬ್ಬ ಬಸವಣ್ಣ. ಒಬ್ಬ ಹರಿಹರ. ಒಬ್ಬ ಕುಮಾರವ್ಯಾಸ. ಕುಮಾರವ್ಯಾಸನ ಬೀಸಿದೆಯಲ್ಲ ಭಾಳದೊಡ್ಡದು. ಅಂವ ರೂಪಕದೊಳಗ ಮಾತಾಡೊ ಕ್ರಮ, ಹೇಳೋ ರೀತಿ, ಜೀವನಾನುಭವ

ಭಾಳ ದೊಡ್ಡದು. ಕನ್ನಡ ಭಾಷೆಯನ್ನ ಅವನ ಹಂಗ ಹಣ್‌ಹಣ್ ಮಾಡಿ ಅಭಿವ್ಯಕ್ತಿ ಮಾಡಿದೋರೇ ಇಲ್ಲ. ಇಷ್ಟೆಲ್ಲ ಅಭಿವ್ಯಕ್ತಿ ದೃಷ್ಟಿಯಿಂದ ಮಾತಾಡ್ತಿದೀನಿ. ಆಶಯದ ದೃಷ್ಟಿಯಿಂದಲ್ಲ. ಅವನು ವೈದಿಕತೆ ಪ್ರತಿಪಾದನೆ ಮಾಡ್ತಾನೆ.

ಹರಿಹರನ ಆಯ್ಕೆಗೆ ಕಾರಣ?

ಅವನ ವಸ್ತುವಿನ ಆಯ್ಕೆ ಮತ್ತು ಅದರೊಳಗಿನ ಸಂಘರ್ಷ ಕಾರಣ. ಕನ್ನಡದ ಮೊಟ್ಟಮೊದಲ ಸಂಘರ್ಷ ಕವಿ ಅಂವ. ಶರಣರ ಆಶಯಗಳಿಗೆ ವ್ಯಕ್ತಿತ್ವದ ಅಭಿವ್ಯಕ್ತಿ ಕೊಟ್ಟಂವ ಹರಿಹರ. ಅಲ್ಲಿ ಬರುವಂತಹ ಸಂಘರ್ಷಗಳು ಅದಾವಲ್ಲ, ಧಾರ್ಮಿಕ ಪುರೋಹಿತಶಾಹಿ ಜತೆ ಸಂಘರ್ಷ, ರಾಜಶಾಹಿ ಜೊತೆ ಸಂಘರ್ಷ, ಕನ್ನಡದಲ್ಲಿ ಅಷ್ಟು ಧೈರ್ಯವಾಗಿ ಮಾತಾಡಿದ್ದು ಹರಿಹರನೇ.

ಪಂಪನೂ ವಿರೋಧ ಇದ್ದ.

ಇದ್ದ. ಆದರೆ 'ಓಲಗಿಸಿ ಬಾಳ್ವುದೇ ಕಷ್ಟನಿಳಾಧಿನಾಥರಂ' ಅಂತಿಳಕೊಂಡು ಬಂದ ರೀತೀಲಿ ಸೂಕ್ಷ್ಮವಾಗಿ ಹೇಳ್ತಾನೆ. ಆದರೆ ಹರಿಹರನ ಧೈರ್ಯ ಭಾಳ ದೊಡ್ಡದು. ಮತ್ತೆ ಕಾವ್ಯದಲ್ಲಿ ದೇಸೀ ಬಳಸುವಂಥ ರೀತಿಯಿದೆಯಲ್ಲಾ, ರಳಕುಳಕ್ಷಳ ನಿರಾಕರಣೆ ಮಾಡಿದ್ದು, ಚಂಪೂ ಫಾರ್ಮ ಕೈಬಿಟ್ಟಿದ್ದು. ನೋಡಿ ಹೀಂಗದ ಈ ಶೈವರು ನೇಟಿವ್ ಜನ ಇದ್ರಲ್ಲಾ, ಅವರಿಗೂ ಈ ದೇಸೀಗೂ ಏನೋ ಸಂಬಂಧ ಇದ್ದಂಗ ಕಾಣಿಸ್ತದ. ಕನ್ನಡದಲ್ಲಿ ದೇಸೀ ಸುರುಮಾಡಿದ್ದ ಹರಿಹರ. ತೆಲಗಿನೊಳಗ ಪಾಲ್ಕುರಿಕೆ ಸೋಮೇಶ್ವರ, ತಮಿಳಿನೊಳಗ ೬೩ ಪುರಾತನರ ಮೇಲೆ 'ಪೆರಿಯ ಪುರಾಣ' ಬರದ್ನಲ್ಲ, ಶೇಕ್ಕಿಮೀರ್ ಎಲ್ಲ ಶೈವರೆ.

ಹರಿಹರ ಸಂಘರ್ಷದ ಕವಿ ನಿಜ. ಆದರೆ ಅವನ ಮತೀಯ ಸಂಘರ್ಷಗಳ ಚಿತ್ರಣ ಮಾತ್ರ ಘೋರವಾಗಿದೆ. ಸವದತ್ತಿಯಲ್ಲಿ ಪದ್ಮಾವತಿ ಯಕ್ಷಿಯ ಬಸದಿಯನ್ನ ಹ್ಯಾಗೆ ಎಲ್ಲಮ್ಮನ ಗುಡಿಯನ್ನಾಗಿ ಧರ್ಮಾಂತರ ಮಾಡಲಾಯಿತು. ಅಂತ ನೀವು ರಿಸರ್ಚ್ ಮಾಡದೋರು. ಹರಿಹರ ಆದಯ್ಯನ ರಗಳೆಯಲ್ಲಿ ಜೈನರ ಸಂಹಾರ ಮಾಡೋದನ್ನ , ಬಸದಿ ನಾಶಮಾಡೋದನ್ನ ಸಂಭ್ರಮದಲ್ಲಿ ಬರೀತಾನೆ. ಇದನ್ನ ನೀವು ಹೆಂಗ ಗ್ರಹಿಸ್ತೀರಿ?

ಹರಿಹರ ಜೈನರನ್ನ ಅಷ್ಟು ಅವಹೇಳನ ಮಾಡಿ ಬರದದ್ದ ನನಗೇನು ಅಷ್ಟು ಸರಿ ಅನಿಸೋದಿಲ್ಲ. ಆ ಕಾಲದೊಳಗೆ ಅದು ಸರಿ ಇದ್ದಿರಬಹುದು. ಆದರೆ ಈಗ ಮಾನವೀಯತೆ ದೃಷ್ಟಿಯಿಂದ ನೋಡುವಾಗ ತುಂಬ ಕೆಟ್ಟ ಅನಿಸ್ತದ. ಈ ಹೊತ್ತು ಅದನ್ನ ಕ್ರಿಟಿಕಲ್ಲಾಗಿ ನೋಡಬೇಕು.

ಕನ್ನಡದಲ್ಲಿ ಈಗ ನಡೆಯುತ್ತಿರುವ ಸಾಂಸ್ಕೃತಿಕ ಅಧ್ಯಯನಗಳ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಯೋ ಕುತೂಹಲದಿಂದ ಕೇಳ್ತಾ ಇದೀನಿ.

ಕನ್ನಡದೊಳಗ ಪ್ರತಿಷ್ಠಿತರ ನೆಲೆಯಿಂದ ಮಾಡೋ ಸಾಂಸ್ಕೃತಿಕ ಅಧ್ಯಯನಗಳು ಅದಾವ. ಮತ್ತ ಕೆಳನೆಲೆಯಿಂದ ಮಾಡೋ ಸಾಂಸ್ಕೃತಿಕ ಅಧ್ಯಯನಗಳೂ ಅದಾವ. ಮೊದಲನೆಯವು ವೈದಿಕಮುಖಿಯಾಗಿ ನಡದಾವ. ಇದು ಅವರು ಮಾಡೋ ದೋಷ. ಕೆಳಗಿನವರು ಮಾಡೋ ಸಂಶೋಧನೆಯೊಳಗ ದೃಷ್ಟಿಕೋನ ಬರೋಬ್ಬರಿ ಅದ. ಆದರೆ ಅಭ್ಯಾಸದ ಕೊರತೆ ಅದ. ಹಿಂಗಾಗಿ ಎರಡೂ ಕಡೆ ಫಲ ಸರಿ ಬರತಿಲ್ಲ. ಇದರಿಂದ ನಿಜವಾದಂಥ ಸಾಂಸ್ಕೃತಿಕ ಅಧ್ಯಯನ ಈ ಎರಡೂ ಮಿತಿಗಳನ್ನ ಮೀರಿ

ಬರಬೇಕಾಗ್ತದ. ಇಲ್ಲಿ ನಾನು ಕೃತಿ ಆಕೃತಿ ಸಂಸ್ಕೃತಿ ವಿಕೃತಿ ಅಂತ ನಾಲ್ಕು ಪರಿಕಲ್ಪನೆ ಬಳಸ್ತೀನಿ. ಕೃತಿ ವೈಯಕ್ತಿಕ. ಅದು ಎಲ್ಲರಿಂದ ಸ್ವೀಕೃತಿ ಆದ್ರೆ ಅದು ಆಕೃತಿ ಸಾಮಾಜಿಕ ನ್ಯಾಯದ ಪರವಾಗಿದ್ರೆ ಸಂಸ್ಕೃತಿ. ಸಾಮಾಜಿಕ ನ್ಯಾಯದ ವಿರೋಧವಾಗಿದೆ ವಿಕೃತಿ. ಈ ಬಗ್ಗೆ ನಾನು ಒಂದು ಲೇಖನ ಬರೆಯೋನಿದ್ದೀನಿ.

ನೀವು ವೈಯಕ್ತಿಕವಾಗಿ ಸಂಶೋಧನೆ ಮಾತ್ರ ಮಾಡದೋರಲ್ಲ. ಹಲವಾರು ಜನರ ಕೈಲಿ ಮಾಡಿಸಿದೋರು ಕೂಡ. ಅವನ್ನ ಪ್ರಕಟ ಮಾಡಿಸಿದೋರು. ಗದುಗಿನ ವೀರಶೈವ ಅಧ್ಯಯನ ಸಂಸ್ಥೆಯಿಂದ ೪೦೦, ಕನ್ನಡ ವಿಶ್ವವಿದ್ಯಾಲಯದಲ್ಲಿದ್ದಾಗ ೩೦೦, ಬೇರೆ ಬೇರೆ ಸಂಸ್ಥೆಗಳಿಂದ ೩೦೦-ಹೀಗೆ ಸುಮಾರು ಒಂದು ಸಾವಿರ ಪುಸ್ತಕಗಳ ಹಿಂದೆ ನಿಮ್ಮ ಪ್ರೇರಣೆ ಒಂದಲ್ಲಾ ಒಂದು ರೀತಿಲಿ ಇದೆ,. ಈ ಪುಸ್ತಕ ಶ್ರದ್ಧೆಗೆ ಕಾರಣ ಏನು?

ನನ್ನ ಪ್ರೀತಿಗಳು ಎರಡೇ. ಒಂದು ಬಸವಣ್ಣ. ಎರಡು ಕನ್ನಡ. ಇದು ಕನ್ನಡದ ಕೆಲಸ ಅನ್ನೋದೆ ಪುಸ್ತಕಗಳನ್ನ ಹೊರತರೋದಿಕ್ಕೆ ಕಾರಣ. ಕರ್ನಾಟಕ ಸಂಸ್ಕೃತಿಯಲ್ಲಿ ಯಾವ್ಯಾವ ಕ್ಷೇತ್ರ ಉಪೇಕ್ಷವಾಗಿದಾವೆ, ಅವನ್ನ ಗುರುತಿಸೋದು, ಅದರೊಳಗೆ ಕೆಲಸ ಮಾಡಸೋದು, ನನ್ನ ಸ್ವಭಾವ. ಒಬ್ಬನೇ ಮಾಡೋ ಕೆಲಸ ಅಲ್ಲಿದು. ಹತ್ತು ಜನ ಸೇರಿ ಮಾಡೋ ಕೆಲಸ ಇದು. ನೋಡಿ. ಸಪ್ನಾಗೆ ಹೇಳಿ ಚಿದಾನಂದಮೂರ್ತಿಗಳ ೭ ಸಮಗ್ರ ಸಂಪುಟ ತರಿಸೋ ಕೆಲಸ ಮಾಡಿದೆ. ವೆಂಕಟಾಚಲಶಾಸ್ತ್ರೀವು ೬ ಸಮಗ್ರ ಸಂಪುಟಗಳು. ಗಿರಡ್ಡೀವು ೩ ಸಂಪುಟಗಳು ತರಿಸಿದೆ. ಈಗ ಚಂಪಾನವು ೫ ಸಂಪುಟಗಳೂ ಹೊರಗ ಬರ್ತಾ ಇವೆ. ಪುಣೇಗೆ ಹೋಗಿದ್ದೆ. ಲೊರಂಜೈನನ ಕಾಳಾಮುಖಾಸ್ ಆ್ಯಂಡ ಕಾಪಾಲಿಕಾಸ್ ಪುಸ್ತಕ ಭಂಡಾರ್ಕರ್‌ನಿಂದ ಜೆರಾಕ್ಸ್ ಮಾಡಿ, ಅಲ್ಲೆ ಇದ್ದ ವಿರೂಪಾಕ್ಷ ಕುಲಕರ್ಣಿ ಹಿಡಿದು ಅನುವಾದ ಮಾಡಿಸ್ದೆ. ಪುಸ್ತಕ ಪ್ರಾಧಿಕಾರದಿಂದ ಅದು ಬಂತು. ಕನ್ನಡ ಕೆಲಸಕ್ಕ ನನಗ ಇಂಥವೇ ಸಂಸ್ಥೆ ಅಂತಿಲ್ಲ. ಯೂನಿವರ್ಸಿಟಿ ಬೇಕು ಸರ್ಕಾರದ್ದೂ ಬೇಕು. ಮಠಗಳೂ ಬೇಕು. ಪ್ರೈವೇಟೂ ಬೇಕು.

ಸದ್ಯ ನಿಮ್ಮ ಮನಸಲ್ಲಿ ಇರುವ ಯೋಜನೆ ಯಾವುದು?

ಕರ್ನಾಟಕದ ಸಮಗ್ರ ಅಧ್ಯಯನಕ್ಕೆ ಸುತ್ತಲಿನ ಪ್ರಾಂತ್ಯಗಳ ಅಧ್ಯಯನ ಆಗಬೇಕು. ಈಗ ಮರಾಠಿಯಿಂದ ಥೇರೆಯವರ ಐದು ಪುಸ್ತಕಗಳು ಬಂದವಾ. ಅದೇ ರೀತಿ ಆಂಧ್ರಪ್ರದೇಶ ತಗೊಂಡೀನಿ. 'ಶ್ರೀಶೈಲದ ಶಾಸನಗಳು' ಪುಸ್ತಕ ಹೊರಗೆ ಬಂತು. ಈಗ ವೀರಶೈವಾಂಧ್ರ ವಾಙ್ಮಯ ಅಂತ ಪ್ರಿಂಟಾಗ್ತಿದೆ. ಇದ ಮುಗಿದ ಬಳಿಕ ತಮಿಳ್ನಾಡವು ಒಂದೈದು. ಕೇರಳದವು ಒಂದು. ಕನ್ನಡದ ಕೆಲಸ ಸರ್ಕಾರವೆ ಮಾಡಬೇಕು ಅಂತಲ್ಲ.

ಆದರೆ ಸಮಗ್ರ ವಚನ ಸಂಪುಟಗಳನ್ನ ಸಂಸ್ಕೃತಿ ಇಲಾಖೆಯಿಂದ ತಂದಿರಿ. ಅದರ ಮುಖ್ಯ ಅನುಭವ ಏನು?

ಈ ಯೋಜನೆ ಮೊದಲು ಕನ್ನಡ ವಿಭಾಗದಲ್ಲಿತ್ತು. ಮುಕ್ತಿ ಕಂಠಾಭರಣ ಸಂಬಂಧ ಸಮಾಜದ ಜೊತೆ ಜಗಳಾ ಆಯ್ತು. ಅದರಿಂದ ಆ ಯೋಜನೆ ನಿಂತು ಬಿಡ್ತು. ಇನ್ನೂ ಹೊಸ ವಚನಗಳ ಕಟ್ಟು ಪ್ರಕಟವಾಗಬೇಕಿತ್ತು. ಸರಕಾರಕ್ಕೆ ಯೋಜನೆ ಕೊಟ್ಟೆ. ಸುಮಾರು ೨೫೦೦೦ ವಚನಗಳನ್ನ ೧೫ ಸಂಪುಟಗಳಲ್ಲಿ ಹೊರಗೆ ತಂದಿವಿ. ಅದರೊಳಗ ಬಸವಣ್ಣನ ಕಾಲದ ಶೇ. ೨೫ ರಷ್ಟು ಹೊಸವಚನಗಳನ್ನ ಹಸ್ತಪ್ರತಿಗಳಿಂದ ಹೊಸದಾಗಿ ಸೇರಿಸಿದೀವಿ. ಅದನ್ನು ಯಾರೂ ಗಮನಿಸ್ತಿಲ್ಲ.

ಸೇರಿಸೋದು ಸರಿ ಸಾರ್. ಆದರ ಕೂಟ ವಚನಗಳು ಅಂತ ವಚನಗಳನ್ನ ಕೈಬಿಡುವ ಪ್ರಸ್ತಾಪ ಇದೆಯಲ್ಲ ಅದು ಎಷ್ಟು ಸರಿ? ಕೂಟವಚನಗಳು ಎಂದು ಪ್ರತಿ ಸಂಪಾದಕರೂ ಅವನ್ನ ಕೈಬಿಡ್ತಾ ಹೋದರೆ ಕೊನೆಗೆ ಏನಾಗಬಹುದು? ಅವು ನಾಶವೇ ಆಗಬಹುದು.

ಹಂಗ ವಿಚಾರ ಮಾಡ್ಲಿಲ್ಲ. ಬೇಕಿದ್ರೆ ಕೂಟ ವಚನಗಳಂತಲೇ ಒಂದೆರಡು ಸಂಪುಟ ಮಾಡಬಹುದು. ಕೂಟ ವಚನವಿದ್ರೂ ಸೈದ್ಧಾಂತಿಕವಾದ ವಿಚಾರ ಅವುಗಳಲ್ಲಿ ಅದ. ಅದಕ್ಕಾಗಿ ಅವನ್ನ ರಕ್ಷಣೆ ಮಾಡಬೇಕ್ತಾದ.

ಕನ್ನಡದಲ್ಲಿ ವರ್ಷಕ್ಕೆ ೩೦೦೦ ಪುಸ್ತಕಗಳು ಬರ್ತಾಯಿವೆ. ಅಷ್ಟರ ಮಟ್ಟಿಗೆ ಓದುವಿಕೆ ಇದೆ ಅನಿಸುತ್ತಾ?

ಈ ಕಡಿ ಟಿವಿ ಬಂದ ಬಳಿಕ ಅದನ್ನ ನೋಡೋರು ಹೆಚ್ಚಾಗಿರಬಹುದು. ಆದ್ರೆ ಪುಸ್ತಕ ಓದೋರ ಸಂಖ್ಯೆ ಕಡಿಮೆಯಾಗಿಲ್ಲ. ಯಾಕಂದರೆ ಪುಸ್ತಕ ನಮಗ ಸಂಗಾತಿಯಾಗಿ ಕೆಲಸ ಮಾಡುವಂತಹ ಒಂದು ಸರಳ ಮಾಧ್ಯಮ. ನಿಧಾನವಾಗಿ ಓದಬಹುದು. ತಿರಗಿತಿರಗಿ ಓದಬಹುದು. ಓದಿ ವಿಚಾರ ಮಾಡ್ಲಿಕ್ಕೆ ಹಚ್ಚದೆ. ಇದು ಟೀವ್ಯಾಗೆಲ್ಲಿ ಸಾಧ್ಯವಾಗತದ? ಆದ್ರ ಒಂದು ಮಾತ ಹೇಳ್ತೀನಿ. ನಮ್ಮ ಕಾಲಕ್ಕಿಂತ ಈಗ ಪುಸ್ತಕದ ಸೌಂದರ್ಯ, ಗುಣಮಟ್ಟ ಹೆಚ್ಚಾಗಿದೆ. ವೇಗಾನೂ ಹೆಚ್ಚಾಗಿದೆ. ಆದ್ರ ಈ ವೇಗದಿಂದ ಪುಸ್ತಕಗಳಲ್ಲಿ ಅಚ್ಚಿನದೋಷಗಳ ಕಡೆ ಯಾರೂ ಗಮನ ಕೊಡ್ತಿಲ್ಲ. ಈ ವೇಗಾನೆ ಒಂದು ರೀತೀಲಿ ಶಾಪ ಆಗೇದ.

ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲೀಷ್ ಕಲಿಕೆಯ ಪ್ರಶ್ನೆ ಈಗ ವಾಗ್ವಾದಕ್ಕೆ ಕಾರಣವಾಗಿದೆ. ನೀವು ಕಲಿಸಬಾರದು ಅಂತ ನಿಲುವು ತೆಗೆದುಕೊಂಡಿರಿ ಯಾಕೆ?

ನೋಡಿ. ಇಂಗ್ಲಿಷ್ ಅಂತಾರಾಷ್ಟ್ರೀಯವಾಗಿ ದೊಡ್ಡ ಭಾಷೆ. ಕನ್ನಡ ಒಂದು ಪ್ರಾಂತೀಯ ಭಾಷೆ. ಪ್ರಾಂತೀಯ ಭಾಷೆ ಜೊತೆ ಅಂತಾರಾಷ್ಟ್ರೀಯ ಭಾಷೇನ ಕಲಿಸೋಕೆ ಸುರುಮಾಡಿದ್ರೆ, ಒಂದು ಸಣ್ಣಂಗಡಿ ಮಗ್ಗುಲಿಗೆ ಒಂದು ದೊಡ್ಡಂಗಡಿ ತಂದಿಟ್ಟಂಗ ಆಗ್ತದ. ಸಣ್ಣಂಗಡಿ ಕೆಲ ದಿವಸದೊಳಗೆ ಮುಚ್ಚಿಹೋಗ ಬಿಡ್ತದ.

ಇದರಿಂದ ಕನ್ನಡ ಪುಸ್ತಕ ಸಂಸ್ಕೃತಿಯ ಮೇಲೂ ಪರಿಣಾಮ ಆಗಬಹುದಾ?

ಆಗಲಿಕ್ಕಿಲ್ಲ. ಆದ್ರೆ ಪುಸ್ತಕ ಸಂಸ್ಕೃತಿ ಅನ್ನೋದು ಯುನಿವರ್ಸಿಟಿಯೊಳಗ ಪಠ್ಯಪುಸ್ತಕ ಹಚ್ಚೋದ್ರಿಂದ ಬೆಳೆಯೋದಿಲ್ಲ. ಸಮಾಜದೊಳಗೆ ಹಚ್ಚೋದ್ರಿಂದ ಬೆಳೀತದೆ.

ಪುಸ್ತಕಗಳು ನಮ್ಮ ಸಂಸ್ಕೃತಿಯ ಮುಖ್ಯ ಸಂಗತಿಗಳು. ಆದರೆ ಅವುಗಳ ಉತ್ಪಾದನೆ ಹಂಚಿಕೆ ಮಾರಾಟ ಇವು ವ್ಯಾಪಾರ ಸಂಸ್ಕೃತಿಯ ಭಾಗವಾಗಿವೆ. ಅಲ್ಲಿ ನಡೆಯುವ ಲಾಭಕೋರತನದಿಂದ ಕೆಟ್ಟ ಲಾಬಿಗಳೂ ಹುಟ್ಟಿಕೊಂಡಿವೆ. ಪುಸ್ತಕಗಳನ್ನು ಕೇವಲ ಮಾರಾಟದ ಸರಕನ್ನಾಗಿ ಮಾಡಿಕೊಂಡ ವ್ಯಾಪಾರಸ್ಥರು ಅದಾರ. ಸಾಹಿತ್ಯದಲ್ಲಿ ಬೂಸಾ ಇದ್ದಂತೆ ಇದು. ಈಗಿನ ಈ ವ್ಯಾಪಾರೀಕರಣದಲ್ಲಿ ಇದು ದೊಡ್ಡ ಪ್ರಮಾಣದೊಳಗೆ ಕಾಣಬಹುದು. ಆದರ ಇದನ್ನ ಮೆಟ್ಟಿ ಸಹ ಒಳ್ಳೇ ವ್ಯವಹಾರಗಳೂ ನಡದಾವ. ಪುಸ್ತಕದಲ್ಲಿ ಅಶುದ್ಧ ವ್ಯಾಪಾರವಾಗದಂಗ ನೋಡಿಕೊಳ್ಳೋದು ನಮ್ಮ ಕೈಯೊಳಗೇ ಅದ.

ನೀವು ೭೦ ೮೦ ಪುಸ್ತಕಗಳನ್ನ ರಚಿಸಿದ್ದೀರಿ. ಕೆಲವು ಸ್ವಂತ ಕೆಲವು ಸಂಪಾದನೆ. ನಿಮಗೆ ಪ್ರಿಯವಾದ ಪುಸ್ತಕ ಯಾವುದು?

ಹಂಗೇನಿಲ್ಲ. 'ಕೂಡಿರ್ದ ಪಂಚೇಂದ್ರಿಯದೊಳಗ ನಾಲ್ಕಧಿಕ, ಒಂದಧಮವೇ?' ಅಂದಂಗ ನನಗ ಎಲ್ಲವೂ ಪ್ರಿಯವೇ. ಆದರ ನನಗ ಪುಸ್ತಕ ಬರವಣಿಗೆಗಿಂತ ಲೇಖನ ಬರಯೋದರೊಳಗ ಬಹಳ ಆಸಕ್ತಿ. ಕಾದಂಬರಿ ಮಹಾಕಾವ್ಯಕ್ಕಿಂತ ಬಿಡಿಕವನಗಳ ಬರದ್ಹಂಗ ಅದು.

ನೀವು ಕವಿತೆ ಬರೆದಿರಿ. ನಾಟಕ ಬರೆದಿರಿ. ಸಂಶೋಧನೆಗೆ ಹೋಲಿಸಿದರೆ ಅದರ ಅನುಭವ ಎಂತಹುದು?

ನನ್ನದು ಮೂಲತಃ ಸೃಜನ ಮನೋಭಾವ. ಮೊದಲು ಅಲ್ಲೇ ಇದ್ದೆ. ಆಮ್ಯಾಲ ಸಂಶೋಧನೆಗೆ ಬಂದೆ. ಸಂಶೋಧನೆಗೆ ಬರಲಿಕ್ಕ ಕಾರಣ. ಬಿ.ಟಿ. ಸಾಸನೂರ ಹಾಗೂ ಆರ್. ಸಿ. ಯವರಂಥ ವಿದ್ವಾಂಸರ ಗಾಢವಾದ ಪ್ರಭಾವ. ನಾನು ಸಿಂದಗಿ–ವಿಜಾಪುರದಿಂದ ಧಾರವಾಡಕ್ಕ ಬಂದಾಗ ಇಲ್ಲಿ ನನ್ನ ಸಮಕಾಲೀನರು ಸೃಜನದೊಳಗಿದ್ರಲ್ಲ, ಈ ಚಂಪಾ, ಗಿರಡ್ಡಿ, ಪಟ್ಟಣಶೆಟ್ಟಿ ಇವರು ಒಳ್ಳೆ ಪವರ್‌ಫುಲ್ಲಾಗಿ ಬಿಟ್ಟಿದ್ರು. ಇವರಗೂಡ ಎಲ್ಲಿಯ ಕುಸ್ತಿ ಹಿಡಿಯೋದು ಅಂತ್ಹೇಳೀ ನಾನನ್ನ ದಾರಿ ಹಿಡಿದೆ.

ಬರವಣಿಗೆಯಲ್ಲಿ ಸೃಜನ ಸಂಶೋಧನೆ ಅಂತ ಪ್ರಜ್ಞಾಪೂರ್ವಕವಾಗಿ ಪ್ರಕಾರದ ಆಯ್ಕೆ ಮಾಡಿಕೊಳ್ಳೋದು ಇರುತ್ತಾ?

ಅದು ಹಿಂಗಿರ್ತದೆ. ನನಗೆ ಮಾತ್ರ ಎರಡೂ ಇದ್ವು. ಧಾರವಾಡದ ವಾತಾವರಣದೊಳಗೆ ಇದ್ದದ್ರಿಂದ ಸಂಶೋಧನೆ ಆಯ್ಕೆ ಮಾಡ್ಕೊಂಡೆ. ನಾನು ಸಂಶೋಧನ ಲೇಖನ ಬರದಾಗ ಮಂದಿ ಮೆಚ್ಚಕೋತಿದ್ರು. ಹಂಗೇ ಬರಕೊಂಡು ಬಂದೆ. ಒಂದೊಮ್ಮೆ ಮೈಸೂರು ಯೂನಿವರ್ಸಿಟಿಯಲ್ಲಿದ್ರೆ ಕವಿಯಾಗ್ತಿದ್ದೆ ಏನೊ?

ಅಂದರೆ ನೀವೇ ಸಂಶೋಧನೆಯನ್ನನ ಸೃಜನೇತರ ಅಂತ ಒಪ್ಪಿಕೊಂಡ ಹಾಗೆ ಆಗೋಲ್ಲವಾ?

ನಾನು ಸೃಜನೇತರ ಅಂತನ್ನೊ ಶಬ್ದ ಬಳಸೋದಿಲ್ಲ. ಕತೆ ಕಾವ್ಯ ಕಾದಂಬರಿ ಇವು ಕಲ್ಪಿತ ರಚನೆಗಳು. ಸಂಶೋಧನೆ ಘಟಿತದ ರಚನೆ.

ಸಂಶೋಧನೆ ಮತ್ತು ವಿಮರ್ಶೆ ಬಗ್ಗೆ ಕೇಳಬೇಕು ಅನಿಸ್ತಿದೆ. ನೀವು ಇವುಗಳ ಒಳಗೆ ವ್ಯತ್ಯಾಸ ಮಾಡ್ತೀರಾ?

ಹಿಂದಾದರೆ ಮಾಡ್ತಿದ್ದೆ. ಈಗಲ್ಲ. ಈಗ ಅವುಗಳ ನಡುವ ಅಂತರಾನೇ ಹೋಗಿಬಿಟ್ಟದ. ಘಟಿತದ ಮಾದರಿಗಳನ್ನು ಅರ್ಥೈಸೋದು ಸಂಶೋಧನೆ ಆಗ್ತದ. ಕಲ್ಪಿತ ಮಾದರಿಗಳನ್ನ ಅರ್ಥೈಸೋದು ವಿಮರ್ಶೆ ಆಗ್ತದ. ಇವೆರಡೂ ಈಗ ಸಮೀಪ ಬಂದುಬಿಟ್ಟಾವ. ಮೊದಲನೆಯ ಹಂತದಲ್ಲೇ ಉಳದೋರು ಬೆಳೀತಿಲ್ಲ. ಗತಕಾಲಕ್ಕ ಸ್ಥಗಿತವಾಗಿ ನಿಂತಬಿಟ್ಟಾರ. ವೆಂಕಟಾಚಲ ಶಾಸ್ತ್ರಿ ಮುಂತಾದೋರು ವಿಶ್ಲೇಷಣಾತ್ಮಕ ಹಂತಕ್ಕ ನಿಂತುಬಿಟ್ಟಾರ. ವ್ಯಾಖ್ಯಾನಾತ್ಮಕ ಹಂತಕ್ಕ ಬಂದರೆ ಮಾತ್ರ ಸಂಶೋಧನೆಯೊಳಗ ಚಲನಶೀಲತೆ ಸಾಧ್ಯ.

ನಿಮ್ಮ ಅಭಿಪ್ರಾಯದಲ್ಲಿ ಕನ್ನಡ ಸಂಶೋಧನೆಯಲ್ಲಿ ಮಾಡಬೇಕಾದ ಕೆಲಸ, ಅದು ಹಿಡೀಬೇಕಾದ ದಿಕ್ಕು ಯಾವುದು?

ಸಾಹಿತ್ಯೇತರ ಕೃತಿಗಳದಾವಲ್ಲ, ಅವುಗಳ ಮ್ಯಾಲೆ ಕೆಲಸ ಆಗಬೇಕು. ನಮ್ಮ ಈ ಪಾರಂಪರಿಕ ಶಾಸ್ತ್ರಗಳ ಅಭ್ಯಾಸ ಮಾಡಬೇಕಿದೆ. ಆಧುನಿಕ ತಂತ್ರಜ್ಞಾನಗಳ ಬಳಕೆಯ ಬಗ್ಗೆ ಪುಸ್ತಕಗಳೂ ಬರಬೇಕು. ಅಲಕ್ಷಿತವಾದ ಕ್ಷೇತ್ರದ ಮ್ಯಾಲ, ಉಪೇಕ್ಷಿತವಾದಂತಹ ಜನವರ್ಗಗಳ ಮ್ಯಾಲ ಅಭ್ಯಾಸ

ಆಗಬೇಕು. ಕರ್ನಾಟಕ ಗ್ರಾಮಚರಿತ್ರೆಕೋಶ ಅಂತನ್ನೋ ಯೋಜನೆ ನನ್ನ ಮನಸಿನೊಳಗದ. ನಮ್ಮ ೧೭೬ ತಾಲೂಕಿನ ಒಂದೊಂದು ಗ್ರಾಮವನ್ನೇ ಘಟಕವಾಗಿ ಇಟಗೊಂಡು ಅಭ್ಯಾಸ ನಡೆಸಬೇಕು. ಕರ್ನಾಟಕದ ಪರಂಪರೆಯನ್ನ ಪ್ರಕಟಪಡಿಸೋ ಪುಸ್ತಕಗಳು ಬರಬೇಕು.

ಹೆಚ್ಚಿನ ಪ್ರಕಾಶನ ಸಂಸ್ಥೆಗಳೆಲ್ಲ ಬೆಂಗಳೂರಲ್ಲೆ ಕೇಂದ್ರೀಕೃತವಾಗಿವೆ. ಆದರೆ ನಾಡಿನ ಸಣ್ಣಪುಟ್ಟ ಊರುಗಳಲ್ಲಿ ಕೂಡ ಪ್ರಕಾಶನಗಳು ಅವೆ. ಅವು ರಾಜಧಾನಿ ಹೊರಗೆ ಇರೋದರಿಂದಲೇ ಅವಕ್ಕೆ ಕೆಲವೊಮ್ಮೆ ಈ ಪುಸ್ತಕೋದ್ಯಮದಲ್ಲಿ ಸ್ಪರ್ಧೆ ಮಾಡೋಕೆ ಕಷ್ಟವಾಗ್ತಿರಬಹುದು.

ಅಂಕಿತ, ಸಪ್ನ, ಸಾಹಿತ್ಯ ಭಂಡಾರ, ನವಕರ್ನಾಟಕ, ಸಿದ್ಧಲಿಂಗೇಶ್ವರ ಬುಕ್ ಡಿಪೋ ಮುಂತಾದವು ನಮ್ಮ ರಾಜ್ಯದ ಮುಖ್ಯ ಪ್ರಕಾಶನ ಸಂಸ್ಥೆಗಳು. ಇವು ಒಳ್ಳೆ ಕೆಲಸ ಮಾಡ್ತಿವೆ. ಈ ಗುಲಬರ್ಗಾದ ಸಿದ್ಧಲಿಂಗೇಶ್ವರ ಬುಕ್ ಡಿಪೊ ಅದೆಯಲ್ಲ, ಅದು ಸ್ಥಳೀಯ ಲೇಖಕರಿಗೆ ಗಂಟುಬಿದ್ದು ಬರಸ್ತದ. ಅದು ಮುಖ್ಯ. ಪುಸ್ತಕ ಪ್ರಾಧಿಕಾರದ ಹತ್ರ ಕರ್ನಾಟಕದ ಪ್ರಕಾಶಕರ ಒಂದು ಯಾದಿ ಇರಬೇಕು. ಅದು ಸ್ಥಳೀಯ ಪ್ರಕಾಶಕರ ತೊಂದರೆಗಳಿಗೆ ಮಾರ್ಗದರ್ಶನ ಮಾಡಬೇಕು.

ನೀವು ನಿಮ್ಮ ಪ್ರೀತಿಯ ಎರಡು ಸಂಗತಿಗಳಲ್ಲಿ ಮೊದಲನೆದು ಬಸವಣ್ಣ, ಎರಡ್ನೇದು ಕನ್ನಡ ಅಂದ್ರಿ, ಬಸವಣ್ಣನ ಆಯ್ಕೆಯ ಹಿನ್ನೆಲೆ ಏನು?

ಒಂದ ಮಾತ ಹೇಳ್ತೀನಿ. ಇಡೀ ಕರ್ನಾಟಕದ ಧಾರ್ಮಿಕ ಮುಖಂಡರೊಳಗ ಬಸವಣ್ಣನಷ್ಟು ಪ್ರಭಾವವನ್ನು ಉಳಿದವರು ಯಾರೂ ಮಾಡಿಲ್ಲ. ಜನಸಾಮಾನ್ಯರ ಮೇಲೆ ದೊಡ್ಡ ಪ್ರಭಾವ ಬೀರಿದಂತಹ ಕರ್ನಾಟಕ ಸಂಸ್ಕೃತಿಯ ಮಹಾಪುರುಷ ಅಂತಂದ್ರ ಬಸವಣ್ಣ ಒಬ್ಬನೇ. ಇಷ್ಟೆ. ಅವನಿಗೆ ಲಿಂಗಾಯತರ ಟಚ್ ಸ್ವಲ್ಪ ಕಡಿಮೆಯಾಗಬೇಕು. ಅವನ ಸೋಶೀಯಲ್ ಫಿಲಾಸಫಿ ಮುಖ್ಯ ಇಟ್ಟಗೋಬೇಕು. ನನಗ ಒಮ್ಮೆ ಗುಲಬರ್ಗಾ ವಿಶ್ವವಿದ್ಯಾಲಯದೊಳಗ ಬಸವ ಪೀಠದಲ್ಲಿ ಲೆಕ್ಚರ್ ಕೊಡಲಿಕ್ಕೆ ಕರಸಿದ್ರು. ದಲಿತಕವಿ ಸಿದ್ದಲಿಂಗಯ್ಯ 'ಶರಣರ ಸಾಮಾಜಿಕ ನ್ಯಾಯ' ಅಂತ ಲೆಕ್ಚರ್ ಕೊಟ್ಟಿದ್ದಾ. ನಾನು 'ಶರಣರಿಗಾದ ಸಾಮಾಜಿಕ ಅನ್ಯಾಯ' ಅಂತ ಲೆಕ್ಚರ್ ಕೊಟ್ಟೆ. ೧೨ನೆಯ ಶತಮಾನದ ತರುವಾಯ ಶರಣರಿಗೆ ಸಾಮಾಜಿಕ ಅನ್ಯಾಯ ಭಾಳ ಆಗೇದ. ನಮ್ಮಲ್ಲಿ ಪುರೋಹಿತಶಾಹಿ ಬೆಳೆದುಬಂತು. ಎಲ್ಲ ಕಡೆ ಈ ಪುರೋಹಿತಶಾಹೀನೆ ಧರ್ಮವನ್ನ ಹಾಳ ಮಾಡೋದು. ಬಸವಣ್ಣ ಪುರೋಹಿತಶಾಹಿ ತೆಗೆದು ಹಾಕಿದ್ದ. ಅದು ಮತ್ತೆ ಸೇರಕೊಂಡಬಿಡ್ತು.

ಅಲ್ಲಮ?

ಅವನಲ್ಲಿ ಎಲ್ಲದೆ ಸೋಶಿಯಲ್ ಫಿಲಾಸಫಿ? ಮಾನವ–ಸಮಾಜ–ವ್ಯಕ್ತಿ. ಮಾನವಿಕ ಸಾಮಾಜಿಕ ವೈಯಕ್ತಿಕ ಅಂತ ಹೀಂಗ ಮೂರು ಸಂಗತಿ ಅವ. ನಾವೊಂದು ತಪ್ಪು ಮಾಡ್ತೀವಿ. ವ್ಯಕ್ತಿ ಉದ್ಧಾರವಾಗಬೇಕು. ಆತ್ಮೋದ್ಧಾರ ಆಗಬೇಕು. ಅಂದು 'ಧರ್ಮಂ ಚರ ಸತ್ಯಂ ವದ' ಅಂತ ಒಮ್ಮೆಲೆ ಮಾನವರೆಲ್ಲ ಒಂದೇ ಅಂತ ಹೋಗಿಬಿಡ್ತಿವಿ. ಧರ್ಮದೊಳಗಿರೊ ಸಾಮಾಜಿಕ ಸ್ಟ್ರಕ್ಚರನ್ನ ಟಚ್ ಮಾಡೋದಿಲ್ಲ. ಧರ್ಮ ನಾವು ಮಾಡಿದ್ದು. ಬಸವಣ್ಣ ಸಾಮಾಜಿಕವನ್ನ ಟಚ್ ಮಾಡ್ತಾನೆ. ಶ್ರಮ ಮತ್ತು ಸಮಾಜ, ಸಮಸಮಾಜ ಮತ್ತು ಶ್ರಮಸಮಾಜ ಇವೆರಡರ ಬಗ್ಗೆ ಶರಣರು ಏನು ಹೇಳ್ಯಾರ ಅದು ದೊಡ್ಡದು.

ಮಾರ್ಗ-೪ ರಲ್ಲಿರೊ ಲೇಖನಗಳ ಮುಖ್ಯವಸ್ತು ಲಿಂಗಾಯತ ಸಮಾಜ ಮತ್ತು ಧರ್ಮ. ಇಡೀ ಕೃತಿಗೆ ಎರಡು ಆಯಾಮಗಳಿವೆ. ಒಂದು ಶರಣ ಸಂಸ್ಕೃತಿಯನ್ನು ಪ್ರತಿಷ್ಠಾಪನೆ ಮಾಡುವ ಹಟ, ಎರಡು- ಅದಕ್ಕೆ ತೊಡಕಾಗಿರುವ ಸಂಗತಿಗಳ ಮೇಲಿನ ಪ್ರತಿರೋಧ. ಈ ಹಠ ಮತ್ತು ಪ್ರತಿರೋಧಗಳಿಗೆ ಏನು ಕಾರಣ?

ದುರ್ದೈವದ ಸಂಗತಿ ಅಂದ್ರ, ಬಸವಣ್ಣ ಯಾವ ಒಂದು ವೈದಿಕತೆಯನ್ನ ವಿರೋಧಿಸಿ ಹೊರಗ ಬಂದಿದ್ದನೊ, ಅದೇ ವೈದಿಕತೆಯ ಬುಟ್ಟಿಯೊಳಗ ಲಿಂಗಾಯತ ಸಮಾಜ ಹೊಂಟಾದ. ಲಿಂಗಾಯತ ಸಮಾಜದೊಳಗ ಇರೋ ಪುರೋಹಿತಶಾಹಿಗಳು ಬಸವಣ್ಣನ ಸಮಾಜವನ್ನ ಎಳಕೊಂಡು ಹೊಂಟಾರ. ಇದಾ ಒಂದು ದೊಡ್ಡ ಅಪಾಯಕ್ಕ ಒಯ್ದು ಮುಟ್ಟಿಸ್ತದ ಅನ್ನೊ ಆತಂಕ ಆಗೇದ ನನಗ. ಸಮಾಜ ವಿರೋಧಿಯಾದ ಯಾವುದೇ ಸಿದ್ಧಾಂತದಲ್ಲಿ ಶರಣರು ಹೋಗೋದು ತಪ್ಪು ಅಂತ ನನಗ ಹೇಳಬೇಕಾಗದ. ಎರಡನೆದಾಗಿ ಸುಳ್ಳು ಇತಿಹಾಸ ಹೇಳಿ ಪುರೋಹಿತಶಾಹಿಗಳು ಸಮಾಜದ ಮೇಲೆ ತಮ್ಮ ಅಧಿಕಾರವನ್ನು ಪ್ರತಿಷ್ಠಾಪಿಸಲಿಕ್ಕ ಯತ್ನ ನಡಸ್ಯಾರ. ಅದಕ್ಕಾಗಿ ಜನರ ಕಣ್ಣ ತಗಸಬೇಕು. ಅಪಾಯದಿಂದ ಸಮಾಜವನ್ನ ದೂರ ಮಾಡಬೇಕು. ಈ ಉದ್ದೇಶದಿಂದ ನಾನು ಏಕಕಾಲಕ್ಕ ಶೈವ ಪುರೋಹಿತಶಾಹಿಯನ್ನ ಕೆಡಹುವ ಕೆಲಸ ಮಾಡಬೇಕಾಯಿತು. ಮುಂದೆ ಕೂಡ ಮಾಡೋನಿದ್ದೇನೆ.

ಪುಸ್ತಕ ಲೋಕ : ೨೦೦೬

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೦೦

ಸಂಶೋಧಕ ಸತ್ಯವನ್ನೇ ಹೇಳಬೇಕಾಗ್ತದ. . . .

❖

ಸಂದರ್ಶಕರು : ಚಾಮರಾಜ ಸವಡಿ

ಸಾಹಿತ್ಯ ಕೃಷಿಗೆ ಸಂಬಂಧಿಸಿದಂತೆ ಎ.ಆರ್. ಕೃಷ್ಣ ಶಾಸ್ತ್ರಿಗಳ ಕುರಿತಾಗಿ ಒಂದು ಮಾತಿದೆ. 'ಕನ್ನಡದ ಹೊಲದಲ್ಲಿ ಕೃಷ್ಣಶಾಸ್ತ್ರಿಗಳು ಕೃಷಿ ಮಾಡಿ ತೆಗೆದ ಬೆಳೆಯಲ್ಲಿ ತಮಗಾಗಿ ತೆಗೆದಿದ್ದು ಒಂದು ಪಾಲಾದರೆ, ಇತರರಿಗೆ ತೆಗೆದಿದ್ದು ಮೂರು ಪಾಲು.' ಈ ಮಾತು ಸಂಶೋಧಕ ಡಾ. ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ ಅವರಿಗೂ ಚೆನ್ನಾಗಿ ಅನ್ವಯವಾಗುತ್ತದೆ. ಅವರ 'ಮಾರ್ಗ–೪' ಎಂಬ ಸಂಶೋಧನ ಪ್ರಬಂಧಗಳ ಸಂಕಲನಕ್ಕೆ ಈ ವರ್ಷದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿರುವ ಹಿನ್ನೆಲೆಯಲ್ಲಿ 'ಪ್ರಜಾವಾಣಿ' ಅವರನ್ನು ಮಾತನಾಡಿಸಿತು.

* * *

ಪ್ರಜಾವಾಣಿ : ನಿಮ್ಮ ಸಂಶೋಧನ ಪ್ರವೃತ್ತಿಗೆ ಬಾಲ್ಯದ ಕೊಡುಗೆ ಏನು?

ಡಾ. ಕಲಬುರ್ಗಿ: ತುಂಬ ಕಷ್ಟದ ಬಾಲ್ಯ ನನ್ನದು. ಪ್ರಾಥಮಿಕ ಶಿಕ್ಷಣ ವಿಜಾಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದಲ್ಲಾಯಿತು. ಆಗ ಕೆ.ವಿ. ಅಯ್ಯರ್ ಅವರ 'ಶಾಂತಲಾ' ಕಾದಂಬರಿ ಓದಿದ್ದೆ. ಅವರ ಕಾದಂಬರಿಗಳಲ್ಲಿ ಬರುವ ಶ್ಲೋಕವೊಂದರ ಮೊದಲೆರಡು ಸಾಲುಗಳು ಕಂಠಪಾಠವಾಗಿದ್ದವು. ಒಮ್ಮೆ ನಮ್ಮೂರಿನ ದೇವಸ್ಥಾನದಲ್ಲಿದ್ದ ಶಿಲಾಶಾಸನದ ಮೇಲೆ ಕುತೂಹಲದಿಂದ ಕಣ್ಣಾಡಿಸುತ್ತಿದ್ದಾಗ ಅವೇ ಶ್ಲೋಕಗಳ ಸಾಲುಗಳು ಅಲ್ಲಿ ಕಂಡವು. ಆಗ ಗ್ರಾಮಸ್ಥರು ತೋರಿದ ಮೆಚ್ಚುಗೆ, ಸಿಕ್ಕ ಹೊಗಳಿಕೆ ನನ್ನನ್ನು ಶಾಸನಗಳು, ಸಂಶೋಧನೆಯತ್ತ ಎಳೆಯಿತು. ಮುಂದೆ ಧಾರವಾಡಕ್ಕೆ ಎಂ.ಎ. ಓದಲು ಬಂದಾಗ, ಅಷ್ಟೊತ್ತಿಗಾಗಲೇ ಹೆಸರು ಮಾಡಿದ್ದ ಚೆನ್ನವೀರ ಕಣವಿ, ಸಿದ್ಧಲಿಂಗ ಪಟ್ಟಣಶೆಟ್ಟಿ , ಚಂದ್ರಶೇಖರ ಪಾಟೀಲ ಅವರೊಂದಿಗೆ ಸ್ಪರ್ಧಿಸಿ ಕಾವ್ಯದಲ್ಲಿ ಛಾಪು ಮೂಡಿಸುವುದಕ್ಕಿಂತ ತುಂಬ ಕಡಿಮೆ ಜನರಿರುವ ಸಂಶೋಧನ ಕ್ಷೇತ್ರವನ್ನೇ ಆಯ್ದುಕೊಳ್ಳುವುದು ಉತ್ತಮ ಅನ್ನಿಸಿತು. ಅದಕ್ಕೆ ತಕ್ಕಂತೆ ನನಗೆ ಮನ್ನಣೆ ದೊರೆಯುತ್ತ ಬಂದಿದೆ.

ಪ್ರಜಾವಾಣಿ : ಕನ್ನಡದಲ್ಲಿ ಸಂಶೋಧಕರ ಸಂಖ್ಯೆ ಕಡಿಮೆ, ಏಕೆ?

ಡಾ. ಕಲಬುರ್ಗಿ: ಸಂಶೋಧಕ ಸತ್ಯನಿಷ್ಠುರತೆ ಹೊಂದಬೇಕಾಗುತ್ತದೆ. ತುಂಬಾ ಜನ ಇಂಥದೊಂದು ಮನಸ್ಥಿತಿ ಹೊಂದಿರುವುದಿಲ್ಲ. ಅಲ್ಲದೇ ಈ ಕ್ಷೇತ್ರದಲ್ಲಿ ಮನ್ನಣೆ ಪಡೆಯುವುದಕ್ಕೆ ತುಂಬ ಶ್ರಮಪಡಬೇಕಾಗುತ್ತದೆ. ಸಾಕಷ್ಟು ಅಧ್ಯಯನ ಮಾಡಬೇಕಾಗುತ್ತದೆ. ಸುಲಭ ಸಾಧನೆ ಸಾಧ್ಯವಿಲ್ಲ.

ಹೀಗಾಗಿ ಸಂಶೋಧಕರಾಗಲು ಬಯಸುವವರು ವಿರಳ. ಇನ್ನು ಆಳ ಸಂಶೋಧನೆಗೆ ತೊಡಗುವವರ ಸಂಖ್ಯೆ ಇನ್ನೂ ವಿರಳ.

ಈ ಕಾರಣಕ್ಕಾಗಿಯೇ ನಾನು ಸತ್ಯನಿಷ್ಠುರತೆ ರೂಢಿಸಿಕೊಳ್ಳಬೇಕಾಯಿತು. ಕಲಬುರ್ಗಿಯವರು ತುಂಬ ಕಠೋರ, ನಿಷ್ಠುರಿ ಎಂಬ ಮಾತು ಕೇಳಿಬರುವುದು ಈ ಕಾರಣಕ್ಕೆ. ಹಾಗಂತ ನನಗೇನೂ ಬೇಸರವಿಲ್ಲ. ಜನ ಇಷ್ಟಪಡಲಿ ಬಿಡಲಿ, ಸಂಶೋಧಕ ಸತ್ಯವನ್ನೇ ಹೇಳಬೇಕಾಗುತ್ತದೆ. ನಾನು ಅದನ್ನೇ ಮಾಡುತ್ತ ಬಂದಿದ್ದೇನೆ. ಆ ಕಾರಣಕ್ಕಾಗಿ ಪ್ರತಿಯೊಂದು ಕಾಲಘಟ್ಟದಲ್ಲಿ ಬೆಲೆ ಕೊಡುತ್ತಲೂ ಬಂದಿದ್ದೇನೆ. ಕೆಲವರು ನನ್ನನ್ನು ಕಾರಣವಿಲ್ಲದೇ ದ್ವೇಷಿಸಲು ಇದೂ ಒಂದು ಕಾರಣವಾಗಿರಬಹುದು.

ಈ ಸಂದರ್ಭದಲ್ಲಿ ನಾನು ಬರೆದ ಕವಿತೆಯ ಒಂದು ಸಾಲು ನೆನಪಾಗುತ್ತದೆ.

'ನಾನು ಸಾಯುವುದಿಲ್ಲ.
ನನ್ನಲ್ಲಿ ಸತ್ಯ ಜೀವಂತವಾಗಿರುವವರೆಗೆ
ಈ ಮಾತು ನನ್ನ ಶ್ವಾಸ, ಆತ್ಮವಿಶ್ವಾಸ.'

ಸಂಶೋಧಕನಾಗಿ ಈ ಕಾರಣಕ್ಕೆ ನಾನು ಒಬ್ಬಂಟಿಯಾಗಬೇಕಾಯಿತು. ಅದೇ ರೀತಿ ನನ್ನೆಲ್ಲ ಸಾಧನೆಗೆ ಅದು ಮೂಲಕಾರಣವೂ ಆಯಿತು.

ಪ್ರಜಾವಾಣಿ : ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಡವಾಗಿ ಬಂದಿತು ಎಂಬ ಭಾವನೆ ಇದೆಯೇ?

ಡಾ. ಕಲಬುರ್ಗಿ: ಹಾಗೇನೂ ಇಲ್ಲ. ಕೆಲವೊಂದು ಪುರಸ್ಕಾರಗಳು ಇತರರಿಗಿಂತ ತುಂಬ ಬೇಗ ಬಂದಿವೆ. ಪಂಪ ಪ್ರಶಸ್ತಿ ಇದಕ್ಕೆ ಉದಾಹರಣೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಡವಾಯಿತು ಎನ್ನುವುದಕ್ಕಿಂತ, ಸಂಶೋಧನಾ ಕೃತಿಗೆ ಬಂತು ಎಂಬ ಖುಷಿ ಇದೆ. ಇದುವರೆಗೆ ಕನ್ನಡದಲ್ಲಿ ಸಂಶೋಧನೆ ಪ್ರಕಾರಕ್ಕೆ ನೀಡಿರುವ ಮೂರನೇ ಪ್ರಶಸ್ತಿ ಇದು. ಶಂ.ಬಾ. ಜೋಶಿ ಹಾಗೂ ಎಂ. ಚಿದಾನಂದಮೂರ್ತಿ ಅವರ ನಂತರ ನನಗೆ ಬಂದಿದೆ. ಸಹಜವಾಗಿ ಖುಷಿಯಾಗಿದೆ.

ಪ್ರಜಾವಾಣಿ : ೩೧ ಡಿಸೆಂಬರ್ ೨೦೦೬

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೦೧

ಇತಿಹಾಸದ ಹುಡುಕಾಟ

❖

ಸಂದರ್ಶನ : ಜನಶ್ರೀ ನ್ಯೂಸ್

ಸಂದರ್ಶಕ : ನಮ್ಮ ಭಾಷೆ ನಮ್ಮ ಸಂಸ್ಕೃತಿಯ ಇತಿಹಾಸದ ಹುಟುಕಾಟ ಯಾವತ್ತೂ ಮುಗಿಯದ ಒಂದು ಪ್ರಯಾಣ. ಅಲ್ಲಿ ದಿನದಿನವು ಕ್ಷಣ ಕ್ಷಣವು ಹೊಸ ಹೊಸ ಅಚ್ಚರಿಗಳು ಹೊಸ ಹೊಸ ಆಘಾತಗಳು ಎದುರಾಗುತ್ತಾ ಇರುತ್ತವೆ. ಅಂತಹ ಆಶ್ಚರ್ಯಗಳನ್ನು ಆಘಾತಗಳನ್ನು ಪ್ರತಿ ನಿತ್ಯ ಹುಡಕಿಕೊಂಡು ತಮ್ಮ ಇಡೀ ಬದುಕನ್ನು ಇತಿಹಾಸ ಸಂಶೋಧನೆಯಲ್ಲಿ ಭಾಷಾ ಇತಿಹಾಸದ ಸಂಶೋಧನೆಯಲ್ಲಿ ಕಳೆದಿರುವಂತಹ ಕನ್ನಡದ ವಿದ್ವಾಂಸ, ಶಿಕ್ಷಣ ತಜ್ಞ, ಸಂಶೋಧಕ ಡಾ. ಎಂ.ಎಂ. ಕಲಬುರ್ಗಿಯವರು ನಮ್ಮ ಜೊತೆಗೆ ಇದ್ದಾರೆ. ಮೊನ್ನೆ ಮೊನ್ನೆ ತಾನೆ ಒಂದು ಸಭೆಯಲ್ಲಿ ಮಾತನಾಡುತ್ತ ಕನ್ನಡ ಭಾಷೆಯ ಇತಿಹಾಸದ ಬಗ್ಗೆ ಮಾತನಾಡುತ್ತ ಇದ್ದಿರಿ. ಪ್ರಾಸ್ತಾವಿಕ ನುಡಿಯಲ್ಲಿ ಕೃಷ್ಣದೇವರಾಯನ ಪ್ರಸ್ತಾಪ ಮೈಸೂರು ಅರಸರ ಪ್ರಸ್ತಾಪ ಬಂದಿತ್ತು. ಅಲ್ಲಿ ಮಾತನಾಡುವಾಗ ಕೃಷ್ಣದೇವರಾಯ ಒಬ್ಬ ಕನ್ನಡ ರಾಜ ಎಂದು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ. ಕೃಷ್ಣದೇವರಾಯ ಒಬ್ಬ ತೆಲಗು ಪಕ್ಷಪಾತಿ ಆಗಿದ್ದ ಎಂದು ಹೇಳಿದ್ದೀರಿ. ಅದನ್ನ ಕೇವಲ ಕೃಷ್ಣದೇವರಾಯನಿಗೆ ಮಾತ್ರವೇ ಸೀಮಿತಗೊಳಿಸುತ್ತೇವೆ. ನಮ್ಮ ಕನ್ನಡ ಇತಿಹಾಸವನ್ನ ಮತ್ತೆ ಹೊಸದಾಗಿ ಹುಡುಕುತ್ತಾ ಹೋಗುವುದಾದರೆ ನಾವು ನಿಜವಾಗಲೂ ಕಂಡುಕೊಳ್ಳಬೇಕಾಗಿದ್ದು ಏನು? ಮುಚ್ಚಿಟ್ಟಿರುವಂತಹದ್ದೇನು. ಇತಿಹಾಸದಲ್ಲಿ ಅಂತಹದ್ದನ್ನು ತಿಳಿದುಕೊಳ್ಳಬೇಕಾಗುತ್ತದೆ. ಕೃಷ್ಣದೇವರಾಯನಿಂದ ಶುರು ಮಾಡಿಕೊಳ್ಳಬೇಕಾದರೆ ಕೃಷ್ಣದೇವರಾಯ ತೆಲಗು ಪಕ್ಷಪಾತಿ ಅಂತ ಹೇಳಲಿಕ್ಕೆ ಏನು ದಾಖಲೆಗಳಿವೆ ಸರ್?

ಎಂ.ಎಂ. ಕಲಬುರ್ಗಿ : ಕೃಷ್ಣದೇವರಾಯ ಓರ್ವ ಪಕ್ಷಪಾತಿ ಅನ್ನಲಿಕ್ಕೆ ಕಳದ ೧೦ ವಷಗಳ ಹಿಂದೆಯೇ ನಾನು ಈ ಪ್ರಶ್ನೆಯನ್ನ ಎತ್ತಿದ್ದೇನೆ ಮತ್ತು ಅದಕ್ಕೆ ತಕ್ಕ ಆಧಾರಗಳನ್ನು ಮಂಡಿಸುತ್ತಾ ಬಂದಿದ್ದೇನೆ. ಅದಕ್ಕೆ ಕೆಲವು ಜನ ಬೆಂಬಲವನ್ನ ಸೂಚಿಸಿದ್ದು ಕಂಡಿದ್ದೇನೆ. ಮೊದಲನೆಯದಾಗಿ ಕೃಷ್ಣದೇವರಾಯ ಪಟ್ಟಕ್ಕೆ ಬಂದ ಬಳಿಕ ವಿರೂಪಾಕ್ಷನ ದೇವಾಲಯಕ್ಕೆ ಹೋಗಿ ಕಾಣಿಕೆಯನ್ನು ಸಲ್ಲಿಸಬೇಕಿತ್ತು. ಏಕೆಂದರೆ ಹಂಪಿಯ ವಿಜಯನಗರ ಸಾಮ್ರಾಜ್ಯದ ದೇವತೆ. ವಿರೂಪಾಕ್ಷ ಸನ್ನಿಧಿಗೆ

ಹೋಗದೆ ಆತ ೧೩ಸಲ ತಿರುಪತಿ ವರೆಗೂ ಹೋಗಿ ತನ್ನ ಕಾಣಿಕೆಯನ್ನು ಸಲ್ಲಿಸಿ ಬಂದ ಎಂಬುದು ದಾಖಲೆಯಲ್ಲಿ ಗೊತ್ತಾಗುತ್ತದೆ. ಮತ್ತು ಆತ ಮಾಡಿದ ಇನ್ನೊಂದು ಕೆಲಸವೆಂದರೆ ಹಂಪಿ ಅದು ವಿರೂಪಾಕ್ಷನ ಸಾಮ್ರಾಜ್ಯ; ಅಲ್ಲಿ ವಿರೂಪಾಕ್ಷನೇ ದೇವರು. ಅಲ್ಲಿ ಉಳಿದ ಯಾರೇ ರಾಜರು ಆಳಿದರು ಸಹ ವಿರೂಪಾಕ್ಷನ ಹೆಸರಿನಲ್ಲಿ ಪ್ರತಿನಿಧಿಯಾಗಿ ಆಳಬೇಕಾಗುತ್ತದೆ. ಯಾರೇ ಕಾವ್ಯ ಬರೆದರು ಸಹ ವಿರೂಪಾಕ್ಷನೇ ಕವಿ, ತಾವು ಲಿಪಿಕಾರ ಎಂದು ಬರೆದಿದ್ದಾರೆ. ಈ ರೀತಿ ವಿರೂಪಾಕ್ಷನ ಸಾಮ್ರಾಜ್ಯದೊಳಗ ಯಾರದೂ ಅಲ್ಲಿ ನಡೆಯುತ್ತಿರಲಿಲ್ಲ. ಅರಸರಾದರೂ ಸಹ ತೆರಿಗೆಯನ್ನು ಉಳಿದ ಊರುಗಳ ಮೇಲೆ ಹಾಕುತ್ತಿದ್ದರೂ ಸಹ ಹಂಪಿಯ ಮೇಲೆ ಹಾಕುತ್ತಿರಲಿಲ್ಲ. ಇಷ್ಟರ ಮಟ್ಟಿಗೆ ಅಲ್ಲಿಯ ಚಕ್ರವರ್ತಿ ವಿರೂಪಾಕ್ಷನು ಎಂಬ ಭಾವನೆ ಕನ್ನಡಿಗರದು. ಇಂತಹ ಒಂದು ವಾತಾವರಣದೊಳಗ ಕೃಷ್ಣದೇವರಾಯ ತಿರುಪತಿಯ ಸಂಸ್ಕೃತಿಯನ್ನು ತಂದು ಹಂಪಿಯಲ್ಲಿ ಸ್ಥಾಪಿಸಲಿಕ್ಕೆ ಶುರು ಮಾಡುತ್ತಾನೆ. ಆ ವಿರೂಪಾಕ್ಷನ ಮುಂದೆ ಆತ ತಿರುಪತಿಯ ಸಂಬಂಧಪಟ್ಟಂತಹ ಪರಂಪರೆಯನ್ನ ಕೃಷ್ಣದೇವರಾಯನನ್ನ ಉಗ್ರನರಸಿಂಹ ದೇವಾಲಯವನ್ನು ಹಜಾರರಾಮ ದೇವಾಲಯವನ್ನ ವಿಜಯವಿಠ್ಠಲ ದೇವಾಲಯವನ್ನು ಇವೆಲ್ಲವನ್ನ ಕಟ್ಟಿಸಿ ಅವನ ವ್ಯಾಪ್ತಿಯೊಳಗ ಯಾರು ಅಲ್ಲಿ ಹೆಜ್ಜೆ ಇಡಬಾರದು. ಆದರೆ ಪ್ರಸಿದ್ಧವಾದಂತಹ ಅದಕ್ಕಿಂತ ಬಹಳ ಶ್ರೇಷ್ಠವಾದಂತಹ ದೇವಾಲಯ ಕಟ್ಟಿಸುತ್ತಾನೆ. ದೇವರಸ್ಥಾಪನೆ ಮಾಡುತ್ತಾನೆ. ಅಲ್ಲಿ ಕ್ರಮೇಣವಾಗಿ ಶೈವಕ್ಕೆ ವಿರೋಧಿಯಾಗಿ ವೈಷ್ಣವ ಸಂಸ್ಕೃತಿ ಬೆಳೆಯುತ್ತದೆ. ಇದು ಕನ್ನಡಿಗರ ಮನಸ್ಸಿಗೆ ಬಹಳ ದೊಡ್ಡ ನೋವಾಗುತ್ತಿದೆ. ಇದು ಒಂದು ವಿಚಾರ. ಎರಡನೆಯದಾಗಿ ಸಾಹಿತ್ಯಿಕವಾಗಿ ಸಹ ಆತ ತನ್ನ ಆಸ್ಥಾನದಲ್ಲಿ ಅಷ್ಟದಿಗ್ಗಜರನ್ನ–೮ ಮಂದಿ ತೆಲಗು ಕವಿಗಳನ್ನೇ–ಆತ ಸಾಕಿದ್ದ. ಉತ್ತರ ಭಾರತವನ್ನ ಬರೆದ ತಿಮ್ಮಣ್ಣನು ಬಹುಶಃ ಅವನು ತೆಲಗು ಮಾತೃ ಭಾಷೆಯವನಾಗಿರಬಹುದು. ಬೇಂದ್ರೆಯವರು ಹೇಗೆ ಮರಾಠಿ ಭಾಷೆಯಲ್ಲಿದ್ದು ಕನ್ನಡ ಬರೆದಿದ್ದಾರ ಹಾಗೆ. ಇದನ್ನು ನೋಡಿಕೊಂಡರೆ ಅವನ ಆಸ್ಥಾನದಲ್ಲಿ ಕನ್ನಡಕ್ಕೆ ಹೆಚ್ಚಿನ ಸ್ಥಾನಮಾನ ಸಿಕ್ಕಿಲ್ಲ ಅನಿಸುತ್ತದೆ. ಸ್ವತಃ ಕೃಷ್ಣದೇವರಾಯನೇ ಅಮುಕ್ತಮಾಲ್ಯದ ಎನ್ನುವಂತಹ ಕೃತಿಯನ್ನು ತೆಲುಗಿನಲ್ಲಿ ಬರೆದಿದ್ದಾನೆ. ಆ ತೆಲಗು ಕೃತಿಯೊಳಗ ದೇಶ ಭಾಷೆಗಳಿಗೆ ತೆಲಗು ಲೇಸು ಎಂಬ ಮಾತುನ್ನು ಹೇಳುತ್ತಾನೆ. ತಾನು ಕುಳಿತದ್ದು ಕನ್ನಡ ಸಿಂಹಾಸನದ ಮೇಲೆ, ತೆಲಗು ಭಾಷೆ ಶ್ರೇಷ್ಠ ಅಂತಾ ಹೇಳೋದು ಎಷ್ಟರ ಮಟ್ಟಿಗೆ ಸಮಂಜಸ. ಇಂಥ ಅನೇಕ ಅಂಶಗಳನ್ನು ನೋಡಿ ಕೇಳಿ ಕನ್ನಡರಿಗೆ ತುಂಬಾ ಬೇಸರವಾಗಲಿಕ್ಕೆ ಸಾಧ್ಯ. ಅದು ಎಷ್ಟರ ಮಟ್ಟಿಗೆ ಆಯಿತು ಎಂದರೆ ತೆಲಗಿನವರೇ ಮುಂದೆಬಂದು ಇಡೀ ಸಾಮ್ರಾಜ್ಯದೊಳಗೆ ದೊಡ್ಡ ದೊಡ್ಡ ಅಧಿಕಾರಗಳನ್ನ ಹಿಡಿದುಕೊಂಡರು. ಸೈನ್ಯದೊಳಗೆ ಅವರ ಸಂಖ್ಯೆಯೇ ಹೆಚ್ಚಾಯಿತು. ಇದನ್ನ ಅಂಕಿ–ಸಂಖ್ಯೆಗಳಿಂದ ಸ್ಪಷ್ಟಪಡಿಸಬಹುದು. ಇಂತಹ ಒಂದು ಧೋರಣೆಯಿಂದಾಗಿ ತೆಲುಗರ ಪ್ರಭುತ್ವ ಕನ್ನಡಿಗರ ಮೇಲೆ ಸವಾರಿ ಆಗಿ ಬಿಟ್ಟಿತು. ಇಂತಹ ಸಂದರ್ಭದೊಳಗ ಕನ್ನಡಿಗರು ಮುಸಲ್ಮಾನ ಸೈನ್ಯದ ಸಹಾಯ ತೆಗೆದುಕೊಂಡು ತೆಲುಗರನ್ನ ಆ ಸಿಂಹಾಸನದಿಂದ ಓಡಿಸಲಿಕ್ಕೆ ವಿಚಾರ ಮಾಡಿದರು. ಕೃಷ್ಣದೇವರಾಯನ ತರುವಾಯ ಅಳಿಯರಾಮರಾಯನ ಕಾಲಕ್ಕೆ ಅದು ಅವನಿಗೆ ಸಾಧ್ಯವಾಯಿತು. ಆ ಕೆಲಸವನ್ನು ಮಾಡಿದರು. ಅದಕ್ಕಾಗಿ ನನ್ನ ವಿಚಾರದೊಳಗ ವಿಜಯನಗರ ಸಾಮ್ರಾಜ್ಯದ ಕೊನೆಯ ತಾಳಿಕೋಟಿ ಕಾಳಗ ಅದಲ್ಲ, ಅದು ಹಿಂದೂ ಮುಸ್ಲಿಂ ಕಾಳಗಕ್ಕಿಂತ ಅದು ತೆಲುಗು ಮತ್ತು ಕನ್ನಡಿಗರ ನಡುವಿನ ಘರ್ಷಣೆ ಅನಿಸುತ್ತದೆ. ಅದು ಒಂದು ವೇಳೆ ಹಿಂದು ಮುಸ್ಲಿಂ ಕಾಳಗವಾಗಿದ್ದರೆ ಮುಸ್ಲಿಂ ಸೈನಿಕರು

ಆ ಸೈನ್ಯವನ್ನು ಕಟ್ಟಿಕೊಂಡುಬಂದಂತಹ ಮುಸಲ್ಮಾನ ಬಾದಶಹರು ಕೇವಲ ವೈಷ್ಣವ ದೇವಾಲಯವನ್ನ ಏಕೆ ಒಡೆಯುತ್ತಿದ್ದರು. ಶೈವದೇವಾಲಯವನ್ನೇಕೆ ಬಿಟ್ಟರು.

ಸಂದರ್ಶಕ : ಶೈವ ದೇವಾಲಯಗಳಿಗೆ ಹಂಪಿಯಲ್ಲಿ ಇವತ್ತಿಗೂ ಏನೂ ಆಗಿಲ್ಲ?

ಎಂ.ಎಂ. ಕಲಬುರ್ಗಿ : ಹೌದು ಏನೂ ಆಗಿಲ್ಲ. ಎಲ್ಲಾ ವೈಷ್ಣವ ದೇವಾಲಗಳನ್ನು ಒಡೆದಿದ್ದಾರೆ. ಕೃಷ್ಣದೇವಾಲಯದೊಳಗ ಕೃಷ್ಣ ವಿಗ್ರಹ ಇಲ್ಲಾ; ಉಗ್ರನರಸಿಂಹ ದೇವಾಲಯ ಪೂರ್ಣ ಒಡೆದು ಹಾಕಿಬಿಟ್ಟರು. ಆನಂತರ ಹಜಾರರಾಮ ದೇವಾಲಯದೊಳಗೆ ದೇವರಿಲ್ಲ. ವಿಜಯ ವಿಠಲ ದೇವಾಲಯ ಅಂತೂ ತುಂಬಾ ದುಸ್ಥಿತಿಯಾಗಿದೆ. ಇದನ್ನು ನೋಡಿಕೊಂಡಾಗ ನಾವು ಇತಿಹಾಸವನ್ನು ಒಂದು ರೀತಿ ವ್ಯಾಖ್ಯಾನ ಮಾಡುವುದು. ಅದರ ಅರ್ಥ ಅದರ ದಾಖಲೆಯನ್ನ ಮಾಡುವುದು ಅದರ ಅರ್ಥ ಅದರ ದಾಖಲೆಯನ್ನ ಓದುವದಲ್ಲ ಅದನ್ನ ಅರ್ಥೈಯಿಸುವುದು ವ್ಯಾಖ್ಯಾನ ಮಾಡುವುದು. ಹೀಗೆ ಇಂಥ ವಿಷಯಗಳನ್ನು ಗಮನಿಸಿದರೆ. ಕೃಷ್ಣದೇವರಾಯನು ಮಾಡಿದ ತಪ್ಪು, ತೆಲಗು ಪಕ್ಷಪಾತಿಯಾಗಿ ಮಾಡಿದ ತಪ್ಪದಲ್ಲಾ, ಒಬ್ಬ ಕನ್ನಡ ಅರಸನಾಗಿ ಮಾಡಿದ ತಪ್ಪದಲ್ಲಾ, ಅದು ವಿಜಯ ನಗರ ಸಾಮ್ರಾಜ್ಯ ಅವನತಿಗೆ ಕಾರಣ ಆಯಿತು. ಇವತ್ತಿಗೂ ತೆಲುಗು ಪ್ರಭಾವ ಕನ್ನಡಿಗರ ಮೇಲೆ ಇರುವುದಕ್ಕೆ ಕೃಷ್ಣದೇರಾಯನೇ ಕಾರಣ.

ಸಂದರ್ಶಕ : ಇನ್ನು ಒಂದು ವಿಷಯದ ಮೇಲೆ ಸಂಶೋಧನೆ ಮಾಡಿ ತಮಿಳು ತೆಲಗು ಹೊರ ಭಾಷೆಗಳ ಪ್ರಾಬಲ್ಯ ಹೆಚ್ಚಾಗಿವೆ. ನಮ್ಮನ್ನ ಆಳಿದ ಅರಸರ ಅಕನ್ನಡ ಪ್ರಜ್ಞೆಯೇ ಕಾರಣ ಅದಕ್ಕೆ ಇನ್ನೇನು ಉದಾಹರಣೆ ಇವೆ.

ಎಂ.ಎಂ. ಕಲಬುರ್ಗಿ : ಅದಕ್ಕೇ ನಾನು ಕನ್ನಡ ನಾಡಿನ ಅರಸರ ಅಕನ್ನಡ ಪ್ರಜ್ಞೆ ಎಂಬ ಪುಸ್ತಕವನ್ನ ಬರೆದಿದ್ದೇನೆ. ಅದಕ್ಕ ನಾನೇನಾದರೂ ನೋವನ್ನು ಅನುಭವಿಸುತ್ತಾ ಇದ್ದರೆ ಅದಕ್ಕೆ ಕಾರಣ ಬೇರುಗಳು ಕನ್ನಡ ನಾಡಿನ ಅರಸರು ಮಾಡಿದಂತಹ ತಪ್ಪು. ಮೊದಲನೆಯದಾಗಿ ನನ್ನ ಗಮನ ಹರಿದದ್ದು ವಿಷ್ಣುವರ್ಧನನ ಮೇಲೆ. ಅಲ್ಲಿಂದಲೇ ಶುರುವಾಗಿದ್ದು. ವಿಷ್ಣುವರ್ಧನ ಮೊದಲಿಗೆ ಜೈನನಾಗಿದ್ದನು. ಜೈನ ಅನುಯಾಯಿಯಾಗಿದ್ದ. ಆಮೇಲೆ ಆತ ಶ್ರೀವೈಷ್ಣವ ಅನುಯಾಯಿಯಾಗಿದ್ದ. ಶ್ರೀವೈಷ್ಣವ ಮೂಲ ಅಂದರೆ ತಮಿಳುನಾಡು. ಅವರ ಸಾಹಿತ್ಯವೆಲ್ಲಾ ತಮಿಳಿನೊಳಗೆ. ಹೀಗಾಗಿ ಒಬ್ಬ ಅರಸ ಜೈನನಾಗುವುದೆಂದರೆ ಕನ್ನಡಿಗನಾಗುವುದು. ಆತ ಶ್ರೀವೈಷ್ಣವನಾಗುವದಾದರೆ ಆತ ತಮಿಳು ಆಗುವುದು. ರಾಜಕೀಯವಾಗಿ ಒಳಬರಲಿಕ್ಕೆ ಸಾಧ್ಯವಾಗದಂತಹ ಸಂದರ್ಭದೊಳಗ ಅವರು ಧಾರ್ಮಿಕ ಹೆಸರು ಬಳಸಿ ಒಳಬಂದು, ಮತ್ತೆ ಪ್ರಬಲರಾಗಿ, ಅಲ್ಲಿ ಬೇಲೂರು ಹಳೇಬೀಡು ಪ್ರದೇಶದೊಳಗೆ ತಮಿಳರ ವಸತಿಗಳು ಬೆಳೆದುಬಂದವು. ಆಮೇಲೆ ಮೇಲುಕೋಟೆಯಲ್ಲಿ ಬೆಳೆಯಿತು. ಆಮೇಲೆ ಶ್ರೀರಂಗಪಟ್ಟಣದೊಳಗೆ ಬೆಳೆಯಿತು. ಆಮೇಲೆ ಮೈಸೂರು ಕಡೆಯೆಲ್ಲಾ ಬೆಳೆದು ಮತ್ತೆ ತಮಿಳಿರ ಬೆಳವಣಿಗೆ ಮೇಲೆ ಬೀಜಾರೋಪಣ ಆರಂಭವಾಗಿದ್ದು ವಿಷ್ಣುವರ್ಧನನ ಕಾಲಕ್ಕೆ. ಆಮೇಲೆ ಅದು ಇನ್ನಷ್ಟು ಬೆಳದದ್ದು ಕೃಷ್ಣದೇವರಾಯನ ಕಾಲಕ್ಕ. ಆತ ಯಾವಾಗ ತಿರುಪತಿಯ ದೇವರನ್ನ ತಂದ ವಿರೂಪಾಕ್ಷ ಸಂಸ್ಕೃತಿಯನ್ನು ತಿರುಪತಿ ಸಂಸ್ಕೃತಿಯನ್ನಾಗಿ ಮಾಡಿದ, ಅದರ ಬೆನ್ನಿನಲ್ಲೇ ತಮಿಳರು ಆಚಾರ್ಯರು ಬಂದರು. ಇಲ್ಲಿ ಮತ್ತೆ ತಮಿಳು ಹೆಚ್ಚಾಯಿತು. ಮತ್ತೆ ಮೈಸೂರು ಅರಸರು ಮಾಡಿದರು. ಇವರು ಮೂಲತಃ ಶೈವರು. ಶೈವ ಪದ್ಧತಿಯನ್ನು ಅನುಸರಿಸುತ್ತಾ ಇದ್ದರು. ಆದರೆ ಯಾವುದೋ ಒಂದು ಕಾಲಘಟ್ಟದೊಳಗೆ ಶ್ರೀವೈಷ್ಣವ ಪದ್ಧತಿಯನ್ನು ಅನುಸರಿಸಿದರು.

ಶ್ರೀವೈಷ್ಣವ ಪದ್ಧತಿಯನ್ನು ಅನುಸರಿಸುತ್ತಿದ್ದಾಗ ಆವಾಗಲೇ ಚಿಕ್ಕದೇವರಾಯನ ಕಾಲದಲ್ಲಿ ಶ್ರೀವೈಷ್ಣವ ಪದ್ಧತಿ ಬಹಳ ಪ್ರಬಲವಾಯಿತು. ಆಗ ನೋಡಿ ಮೈಸೂರು ಅರಸರ ೧೧ಜನ ದಿವಾನರೊಳಗ ೭-೮ಜನ ದಿವಾನರು ತೆಲಗಿನವರೆ ಇದ್ದರು. ಬಹುಶಃ ನಮ್ಮ ರಾಷ್ಟ್ರದ ಯಾವುದೇ ಪ್ರಾಂತದ ಇತಿಹಾಸದೊಳಗೂ ಈರೀತಿಯ ಮರವು ಮೋಸ ಕಂಡಿಲ್ಲ. ಅಥವಾ ನಮ್ಮ ಅರಸರ ಉದಾಶೀನ ಭಾವ ಒಬ್ಬ ತಮಿಳು ಬಂದು ದಿವಾನ ಆದ ಅಂದರೆ ಅವನು ಬಿಡುವಷ್ಟರಲ್ಲಿ ಇನ್ನೊಬ್ಬ ತಮಿಳು ದಿವಾನಬರುವಂತಹ ಅನಿವಾರ್ಯ ಮಾಡಿರುತ್ತಾರೆ. ಹೀಗಾಗಿ ಕ್ರಮೇಣ ೭-೮ಜನ ದಿವಾನ ನಮ್ಮಲ್ಲಿ ಬಂದರು. ದಿವಾನರೆಂದರೆ ಮುಖ್ಯಮಂತ್ರಿಗಳಿದ್ದಂತೆ, ದಿವಾನರೇ ೮ ಜನ ಬಂದಾಗ ಕರ್ನಾಟಕ ಕರ್ನಾಟಕವಾಗಿ ಹೇಗೆ ಉಳಿಯುತ್ತದೆ. ಆದ್ದರಿಂದ ಇವತ್ತು ಏನಾದರೂ ಬೆಂಗಳೂರು, ಮೈಸೂರು ತಮಿಳುಮಯ ಆಗಿದೆ ಎಂದರೆ ಅದಕ್ಕೆ ಮುಖ್ಯ ಕಾರಣ ಮೈಸೂರು ಅರಸರು. ದಿವಾನರನ್ನ ಅವರೇ ತಂದಿದ್ದು. ಅವರು ಮಾಡಿದ ತಪ್ಪನ್ನು ದುಷ್ಫಲವನ್ನು ಇವತ್ತು ಕನ್ನಡಿಗರಾದ ನಾವು ಅನುಭವಿಸುತ್ತಾ ಇದ್ದೇವೆ.

ಸಂದರ್ಶಕ : ಅದು ಭಾಷಾ ಸಾಮರಸ್ಯ ಹೆಚ್ಚಿಸಲಿಕ್ಕೆ ಕಾರಣವಾಗಿರಬಹುದಲ್ಲವೇ? ಕನ್ನಡಿಗರೂ ಹೊರಗಿನವರನ್ನ ಕರೆದುಕೊಂಡು ಬದುಕುಕೊಟ್ಟವರಿಗೆ ಅವರಿಗೊಂದು ಮನ್ನಣೆಕೊಟ್ಟು, ಮಾನ್ಯತೆ ಕೊಟ್ಟು ಬೆಳೆಸಿದ್ದು ಬಹುಶಃ ಕನ್ನಡ ತಮಿಳು ಕನ್ನಡ ತೆಲುಗಿನವರ ಮಧ್ಯ ಒಂದು ಸಾಮರಸ್ಯಕ್ಕೆ ಕಾರಣವಾಗಿದ್ದರಬಹುದಲ್ಲವೇ.

ಎಂ.ಎಂ. ಕಲಬುರ್ಗಿ : ನಿಜವಾಗಲೂ ಸಾಮರಸ್ಯವಾಗಿದ್ದಿರೆ ಸಂತೋಷವಿತ್ತು. ಆದರೆ ಸಾಮರಸ್ಯಕ್ಕಿಂತ ಒಂದು ಪ್ರಭುತ್ವವಿತ್ತು. ಹೊರಗಿನಿಂದ ಬಂದರೂ ಮನುಷ್ಯನ ಸ್ವಭಾವ ಹೊರಗಿನಿಂದ ಬಂದವರು ಏನು ಮಾಡುತ್ತಾರೆ. ತಮ್ಮ ಜನಗಳಿಗೆ ಅವಕಾಶವನ್ನು ಕೊಡುತ್ತಾರೆ. ತಮ್ಮ ಜನರಿಗೆ ನೌಕರಿಯನ್ನು ಕೊಡುವುದು. ಏಕೆಂದರೆ ಮೊನ್ನೆ ಲೇಖನ ಬರೆದ್ದಿದ್ದೇನೆ. ನಮ್ಮ ಮೊದಲನೇ ತಲೆಮಾರು ನವೋದಯದ ಎಲ್ಲಾ ಸಾಹಿತಿಗಳಿದ್ದಾರಲ್ಲಾ ಕನ್ನಡೇತರ ಮಾತೃಭಾಷಿಗಳಿದ್ದಾರೆ. ಕೈಲಾಸಂ, ಮಾಸ್ತಿ ತಮಿಳರು. ಗೋವಿಂದ ಪೈ ಕೊಂಕಣಿ, ಬೇಂದ್ರೆ, ಶಂಬಾ ಮರಾಠಾ, ಟಿ.ಎಸ್. ವೆಂಕಣ್ಣಯ್ಯ ತೆಲುಗು-ಹೀಗೆ ಮೊದಲನೆ ತಲೆಮಾರಿನ ದೊಡ್ಡ ಪ್ರತಿಭೆಗಳಿದಾರಲ್ಲಾ ಕನ್ನಡರಂಗದಲ್ಲಿ ಬಹಳದೊಡ್ಡ ಕೆಲಸಮಾಡಿದ್ದಾರೆ. ಅದರ ಬಗ್ಗೆ ನನ್ನ ಪ್ರಶ್ನೆಯಿಲ್ಲ. ಕನ್ನಡದ ಮೊದಲ ತಲೆಮಾರಿನವರೆಲ್ಲಾ ಅವರೆಲ್ಲಾ ಕನ್ನಡೇತರರೇ. ಕನ್ನಡ ಪ್ರತಿಭೆಗಳೇ ನಾಶವಾಗಿ ಬಿಟ್ಟಿತ್ತು. ಅಷ್ಟೊತ್ತಿಗೆ ರಾಜಕೀಯ ಯಾವಾಗ ಅವರ ಕೈಯೊಳಗೆ ಸಿಕ್ತು, ಶಿಕ್ಷಣ ಯಾವಾಗ ಅವರ ಕೈಯೊಳಗೆ ಸಿಕ್ತು, ಅಧಿಕಾರಿಗಳು ಯಾವಾಗ ಅವರ ಕೈಯಲ್ಲಿ ಸಿಕ್ರು ಅವರ ಒಂದು ಪರಿಸರವನ್ನೇ ಅವರು ಬೆಳಸಿದರು. ಅವರೇ ಪ್ರಬುದ್ಧರಾಗಿ ಬಿಟ್ಟರು. ಕನ್ನಡಿಗರು ೨ನೆಯ ದರ್ಜೆಯ ಪ್ರಜೆಗಳಾಗಿ ಬಿಟ್ಟರು. ಆದ್ದರಿಂದ ನಮ್ಮ ಸಾಹಿತ್ಯದ ಮೊದಲನೆ ತಲೆಮಾರಿನೊಳಗ ನವೋದಯ ಸಾಹಿತ್ಯದೊಳಗ ಎಲ್ಲಾ ಕನ್ನಡೇತರ ಮಾತೃಭಾಷಿಗರೆ ವಿನಃ ಕನ್ನಡ ಮಾತೃಭಾಷೆ ಕವಿಗಳು ಕುವೆಂಪು ೨ನೆಯ ತಲೆಮಾರು, ಮಧುರಚೆನ್ನ ೨ನೆಯ ತಲೆಮಾರು. ಅವರು ಯಾರೇ ಬಂದರು ಸಹ ಅವರು ೨ನೆಯ ತಲೆಮಾರಿನವರೇ ಅಂದರೇ ೧ನೆಯ ತಲೆಮಾರಿನಷ್ಟೊತ್ತಿಗೆ ಕನ್ನಡ ಸಂಪೂರ್ಣ ನಾಶವಾಗಿ ಹೋಗಿತ್ತು. ನೋಡರಿ ನಾವು ಎಂತಹ ಒಂದು ಭಯಂಕರ ವಾತಾವರಣ ಸೃಷ್ಟಿ ಮಾಡಿಕೊಂಡು ಒಂದು ರೀತಿಯಾಗಿ ಗುಲಾಮರಾಗಿ ಇದ್ದೆವು ಎಂಬುದು ತಿಳಿಯುತ್ತದೆ.

ಸಂದರ್ಶಕ : ಎಂ.ಎಂ. ಕಲಬುರ್ಗಿ ಅವರು ಹೇಳಿರುವ ಹಾಗೇ ನಮ್ಮ ಅರಸರ ಮೂರ್ಖತನದಿಂದ ಹೊರಪ್ರದೇಶದ ಜನರು ಇಲ್ಲಿಗೆ ಬಂದು ಇಲ್ಲಿ ಪ್ರಭುತ್ವ ಸಾಧಿಸಲಿಕ್ಕೆ ಪ್ರಯತ್ನಪಟ್ಟರು. ಮೊದಲನೆ ತಲೆಮಾರಿನ ಎಲ್ಲಾ ಸಾಹಿತಿಗಳು ಕನ್ನಡೇತರರು. ಕನ್ನಡೇತರರಿಂದ ಶ್ರೇಷ್ಠವಾದ ಕನ್ನಡ ಸಾಹಿತ್ಯಬಂದಿದೆ ಎಂದು ಖುಷಿ ಪಡುತ್ತಾ ಇದಕ್ಕೆಲ್ಲಾ ಬಹುಶಃ ಇವತ್ತು ನಮ್ಮನ್ನ ಕಾಡುತ್ತಿರುವ ಅನೇಕ ಸಮಸ್ಯೆಗಳ ಮೂಲ ಕಾರಣ ಮೈಸೂರು ಅರಸರ ಕಾಲದಲ್ಲಿತ್ತೇನೋ?

ಸರ್, ಇನ್ನೊಂದು ಕುತೂಹಲಕಾರಕ ಸಂಗತಿ ಸರಿಯೋ ತಪ್ಪೋ ನೀವೇ ಹೇಳಬೇಕು. ಶಿವಾಜಿ ಕನ್ನಡದವನು. ಹೊಯ್ಸಳವಂಶದವನು ಇದು ಸತ್ಯಾನ.

ಎಂ.ಎಂ. ಕಲಬುರ್ಗಿ : ನಿಜ ಶಿವಾಜಿ ಹೊಯ್ಸಳ ವಂಶದವನು. ಭೋಸ್ಲೆ ಅಂತಾ ಶಿವಾಜಿಯ ಅಡ್ಡಹೆಸರು. ಮನೆತನದ ಹೆಸರು ಅದು. ಹೊಯ್ಸಳ ಹೋಗಿ ಭೋಸ್ಲೆ ಆಯಿತು ಅನ್ನೋ ಮಾತನ್ನ ಬಹಳ ದಿನಗಳ ಹಿಂದೆಯೇ ಶಂಬಾ ಜೋಶಿಯವರು ಒಂದು ಕಡೆ ಬರೆದಿದ್ದರು. ಅದು ಬಹಳ ಜನರ ಗಮನಕ್ಕ ಬರಲಿಲ್ಲ. ಆಮೇಲೆ ಮರಾಠಿ ಸಂಶೋಧಕರೇ ಈ ಮಾತು ಹೇಳಿದರು. ಅದು ಗಮನಕ್ಕ ಬಂದಿಲ್ಲ. ಇತ್ತೀಚಿಗೆ ೮–೧೦ ವರ್ಷದ ಹಿಂದೆ ಅಲ್ಲಿನ ಸಂಶೋಧಕ ಒಂದು ಪುಸ್ತಕ ಬರೆದರು. ಶಿವಾಜಿಯ ಬಗೆಗೆ ಬರೆದು ಅವನು ಭೋಂಸ್ಲೆ ಮನೆಯತನದವನಲ್ಲ, ಇದು ಹೊಯ್ಸಳ, ಇದು ಕನ್ನಡ ಮನೆತನ ಎಂದು ನಮ್ಮ ಡೇರೆ ಎಂಬವರು ಬರೆದರು. ಅದನ್ನು ನಮ್ಮ ವಿದ್ಯಾರ್ಥಿ ನವ ಸಾಹಿತಿ ಕಾಟ್ಕರ ಕನ್ನಡಕ್ಕೆ ಅನುವಾದಿಸಿರುತ್ತಾನೆ. ಆ ಪುಸ್ತಕ ಓದಿದರೆ ಸ್ಪಷ್ಟವಾಗುತ್ತದೆ. ಶಿವಾಜಿ ಮೂಲತಃ ಕನ್ನಡದವನು. ನೋಡಿ ಹೊರಗಿನವರ ಇತಿಹಾಸ ನೆನಪಿಡುತ್ತೇವೆ. ನಮ್ಮ ಇತಿಹಾಸ ಮರೆಯುತ್ತೇವೆ. ಹೊರಗಿನವರು ಯಕಶ್ಚಿತ್ ಇದು ಮಿಶ್ರವಾಗುತ್ತದೆ. ನಮ್ಮ ಸಂಸ್ಕೃತಿ ನಾಶ ಮಾಡಿಕೊಂಡು ಇನ್ನೊಬ್ಬರ ಪ್ರಭುತ್ವವನ್ನು ಸ್ವೀಕಾರ ಮಾಡಬಾರದು. ಭೋಂಸ್ಲೆ ಅನ್ನುವುದು ಹೊಯ್ಸಳ ವಂಶಸ್ಥರ ಮುಂದುವರಿಕೆ ಅನ್ನುವುದನ್ನು ನಾವು ಇತಿಹಾಸ ಬರೆಯುತ್ತಾ ಬರೆಯುತ್ತಾ ಹೋಗಿದ್ದರೆ ಬಹುಶಃ ಈ ಮರಾಠರ ಕಾದಾಟ ಕಡಿಮೆಯಾಗುತ್ತಿತ್ತು. ಶಿವಾಜಿ ಕನ್ನಡಿಗ ಅದಾನ ಅಂತಾ ಹೇಳುತ್ತಾ ಬಂದಿದ್ದರ ಅದರಿಂದ ಇತಿಹಾಸಕಾರರು ಏನು ಮಾಡಬೇಕಂದರ ಸತ್ಯವನ್ನ ಪ್ರಜೆಗಳ ಮುಂದೆ ಇಡುವುದರ ಮೂಲಕ ಅವರಿಗೂ ಯಾವಾಗಲೂ ಜಾಗೃತರಾಗಿಡಬೇಕು. ಆದರೆ ನಾವು ಆ ಕೆಲಸವನ್ನು ಮಾಡಲಿಲ್ಲ. ಬರೆ ಪಠ್ಯ ಪುಸ್ತಕ ಬರೆದು ಕಲಿಸೋ ಕೆಲಸ ಮಾಡಿದೆವೆ ವಿನಃ ಅಥವಾ ಸುಳ್ಳ ಇತಿಹಾಸ ಬರೆದು ಸತ್ಯವನ್ನು ಮುಚ್ಚಿಡೋ ಕೆಲಸ ಮಾಡಿದೆವೆ ವಿನಃ, ಇಂತಹ ವಿಷಯದಲ್ಲಿಯಾದರೂ ಸತ್ಯವನ್ನು ಹೇಳಿದ್ದರೆ ನಮಗೆ ಶಿವಾಜಿ ಕನ್ನಡಗ ಅಂತ ಅವರ ಮನಸ್ಸಿನಲ್ಲಿ ಮೂಡಿ ಅವರು ಕನ್ನಡಿಗರ ಬಗ್ಗೆ ಒಳ್ಳೆಯ ಅಭಿಮಾನ ಮೂಡಲಿಕ್ಕ ಕಾರಣವಿತ್ತು. ಘರ್ಷಣೆಗಳು ಕಡಿಮೆಯಾಗುತ್ತಿತ್ತು. ಮರಾಠರು ಪರಕೀಯರು ಅಂತಾ ನಮಗೂ ಅನಿಸುತ್ತಿರಲಿಲ್ಲ. ನಾವು ಇಂತಹ ಮಾತುಗಳನ್ನು ಹೇಳಲಿಲ್ಲ. ಇಲ್ಲಿಯ ವರೆಗೂ ಇದೇ ನಾವು ಮಾಡಿದ್ದು ತಪ್ಪು. ಆದರೆ ಶಿವಾಜಿ ಇದೆಯಲ್ಲಾ ಅದರ ಹೆಸರು ಶಿವ–ಜೀಯ. ಅವನ ಮಗ ಸಂಬಾಜಿ ಇದಾನಲ್ಲ ಸಂಭೋ ಜೀಯ. ಅವರ ಅಜ್ಜನ ಹೆಸರು ಮಲಕೋಜಿ ಮಲಕ–ಜೀಯಾ ಇವೆಲ್ಲಾ ಕನ್ನಡ ಹೆಸರುಗಳೇ ಇದಾವೆ. ಮಲ್ಲಿಕಾರ್ಜುನ ಇದೆಯಲ್ಲಾ ಅದೇ ಮಲಕೋಜಿಯಾಗಿದೆ. ಹೀಗೆ ಅವರ ಮನೆತನಗಳ ಹೆಸರು ಅವರ ಮನೆತನದ ದೇವತೆಗಳ ಹೆಸರು ಕರ್ನಾಟಕದವುಗಳೇ. ಅವು ನಮ್ಮ ಮನೆತನದ ದೇವತೆಗಳು. ಅವನು ಕರ್ನಾಟಕಕ್ಕೆ ಬಂದಾಗಲೆಲ್ಲಾ ದೇವರುಗಳ ದರ್ಶನ ಪಡೆಯುತ್ತಿದ್ದನು. ಅದಕ್ಕೆ ಶಿವಾಜಿ ಮನೆತನ ಅದು ಹೊಯ್ಸಳರ ಕಾಲಕ್ಕೆ ಮರಾಠರ ಒಂದು ಹೆಚ್ಚು ಒಡನಾಟ

ನಮ್ಮಲ್ಲಿ ಆಗಿಬಿಟ್ಟಿತು. ಹೊಯ್ಸಳರ ಮಂತ್ರಿ ಗಂಗರಾಜ ಅಂತಾ ಇದಾನ. ಗಂಗರಾಜ ಏನುಮಾಡುತ್ತಾನೆ ಅಂದರೆ ಶ್ರವಣಬೆಳಗೊಳ ಗೊಮ್ಮಟೇಶ್ವರ ವಿಗ್ರಹದ ಸುತ್ತಲು ಕಂಪೌಂಡ ಕಟ್ಟಿಸಿ ಅವನು ಶಾಸನ ಬರೆಸುತ್ತಾನೆ. ಶಾಸನ ಬರೆಸುವಾಗ 'ಗಂಗರಾಜ ಸುತಾಲಯ ಮಾಡಿದ' ಎಂದು ಬರೆಸುತ್ತಾನೆ. ಅದರ ಕೆಳಗೆ ಗಂಗರಾಜ 'ಸುತ್ತಾಲಯ ಕರ್ವಿಯಲೆ' ಎಂದು ಮರಾಠಿಯಲ್ಲಿ ಬರಸುತ್ತಾನೆ. ಅದರ ಅರ್ಥ ಗಂಗರಾಜ ಮರಾಠಿಯವನಿರಬೇಕು. ಚಾವುಂಡರಾಯ ತಾನು ಮೂರ್ತಿ ಸ್ಥಾಪಿಸಬೇಕಲ್ಲ. ಆತ ಚಾವುಂಡರಾಯ ಶೈವಯುಕ್ತನ ಎಂದು ತಮಿಳಿನಲ್ಲಿ ಬರೆಸುತ್ತಾನೆ. ಬಹುಶಃ ಚಾವುಂಡರಾಯನ ಮಾತೃಭಾಷೆ ತಮಿಳು ಇರಬೇಕು. ಗಂಗರಾಜನ ಮಾತೃಭಾಷೆ ಮರಾಠಿ ಇರಬೇಕು. ಇಷ್ಟೇ ಯಾಕೆ ಅವರ ಆಸ್ಥಾನದ ಕವಿ ಜನ್ನನ ಅನಂತನಾಥ ಪುರಾಣದೊಳಗ ಅಲ್ಲಲ್ಲಿ ಮರಾಠಿ ವಾಕ್ಯಗಳು ಬರುತ್ತವೆ. ಅಲ್ಲಿಯ ದ್ವಾರಪಾಲಕರೆಲ್ಲಾ ಬೈಟೆ, ಉಟೆ, ಮರಾಠಿ ಪದಗಳನ್ನು ಬಳಸಿದ್ದಾರೆ. ಅದಕ್ಕೆ ಇವೆಲ್ಲವನ್ನೂ ನೋಡಿಕೊಂಡರೆ ಹೊಯ್ಸಳ ಕಾಲಕ್ಕೆ ಮರಾಠರ ಒಡನಾಟ ಹೆಚ್ಚಾಯಿತು ಅನಿಸುತ್ತದೆ. ಮುಂದೆ ಗಂಗರಾಜ ಹೊಯ್ಸಳರ ಸಂಪರ್ಕವೇ ಮುಂದುವರೆದು ಅಲ್ಲಿಯ ಶಿವಾಜಿಯು ಭೋಸ್ಲೆಯಾಗಿ ರೂಪಾಂತರವಾದರು ಅಂತಾ ಕಾಣಿಸುತ್ತದೆ.

ಸಂದರ್ಶಕ : ನಮ್ಮ ಕನ್ನಡನಾಡಿನ ಕನ್ನಡ ಅರಸರು ಪ್ರಥಮ ಕದಂಬರ ಅನ್ನೋ ಪ್ರಶ್ನೆ; ಕೆಲವರು ಕನ್ನಡದ ಪ್ರಥಮ ಅರಸರು ಕದಂಬರು ಇರಲಿಕಿಲ್ಲಾ ಎಂಬ ಮಾತನ್ನು ಎತ್ತಿದ್ದಾರೆ.

ಎಂ.ಎಂ. ಕಲಬುರ್ಗಿ : ನನಗೇನೊ ಕದಂಬರು ಕನ್ನಡದವರು ಅನಿಸುತ್ತಿಲ್ಲ, ಅದಕ್ಕೆ ನಾನು ಕೊಡೋ ಕಾರಣಗಳು ಎರಡು. (೧). ಅವರ ಹೆಸರು ನೋಡಿಕೊಂಡರೆ ಯಾವೂ ಕನ್ನಡದ ಹೆಸರುಗಳಲ್ಲ. ಅವರ ಹೆಸರೇ ಮೃಗೇಶವರ್ಮ, ಕಾಕುತ್ಸವರ್ಮ ಮಯೂರವರ್ಮ. ಇವೆಲ್ಲಾ ನೋಡಿಕೊಂಡರೆ ಇವ್ಯಾವು ಕನ್ನಡದ ಹೆಸರುಗಳಲ್ಲ. ಅದಕ್ಕಾಗಿ ಅವರು ಕನ್ನಡಿಗರಾಗಿರಲಿಕ್ಕಿಲ್ಲ. ಒಂದು ವಿಚಾರ. (೨). ಅವರೆಲ್ಲಾ ಶಾಸನಗಳು, ಪ್ರತಿಯೊಂದು ಶಾಸನಗಳು ಸಂಸ್ಕೃತಗಳಲ್ಲಿವೆ. ಸುಮಾರು ಅವರ ೫೦-೬೦ ಶಾಸನಗಳಿರಬಹುದು. ಇವೆಲ್ಲವುಗಳನ್ನು ನೋಡಿಕೊಂಡಾಗ ಇವರನ್ನ ಕನ್ನಡ ಅರಸರು ಎಂದು ಹೇಳೋಕೆ ಆಗ್ತದೇನು? ನಾವು ಒಬ್ಬ ಅರಸನ ಬಗ್ಗೆ ಅಭಿಮಾನ ತೋರಿಸಲಿಕ್ಕೆ ಆಡಿದಂತ ಮಾತುಗಳೇ ಇತಿಹಾಸ ಸತ್ಯವಾಗಿವೆ. ಇದಕ್ಕಿಂತ ಹಿಂದೇನು ಇದ್ದರಲ್ಲಾ, ಚುಟುಗಳಂತ ಇದ್ದರು. ಇಂಥ ಸಣ್ಣಪುಟ್ಟ ಅರಸು ಮನೆತನಗಳು ಅವು ಕನ್ನಡ ಮನೆತನಗಳು. ಆಳುಪರಂತಿದ್ದರು. ಚುಟು ಸಣ್ಣಪುಟ್ಟ ಮನೆತನಗಳಿದ್ದವಲ್ಲ ಅವ್ರ ಕನ್ನಡದ ಮೊದಲ ಅರಸರು ಅನಿಸುತ್ತಿದೆ. ಆದರೆ ಕದಂಬರು ಮಾತ್ರ-ನನಗ ಅದೇನೋ-ಕದಂಬ ವೃಕ್ಷ ಶಾಸನದಲ್ಲಿ ಇದ್ದ ಕೂಡಲೇ ಅದನ್ನ ಸತ್ಯ ಅಂತ ಹೇಳೋಕೆ ಬರುವುದಿಲ್ಲ. ಶಾಸನಗಳಲ್ಲಿಯೂ ಅಸತ್ಯವಿದೆ. ದಾಖಲೆ ಅವರ ಮನೆಮುಂದೆ ಕದಂಬ ವೃಕ್ಷ ಇತ್ತು. ಅದಕ್ಕೆ ಕದಂಬರು ಅಂತಾ ಕರೆದರು ಅಂತಾ ಇದೆಯಲ್ಲಾ ಎಷ್ಟರ ಮಟ್ಟಿಗೆ ಸತ್ಯ? ನನಗಂತೂ ಸಮಂಜಸ ಅನಿಸುತ್ತಿಲ್ಲಾ.

ಸಂದರ್ಶಕ : ಈ ಹೆಸರುಗಳ ಬಗ್ಗೆ ಉಲ್ಲೇಖ ಮಾಡಿದಿರಲ್ಲಾ, ಮಯೂರವರ್ಮ, ಕಾಕುತ್ಸವರ್ಮ ಆ ತರದ ವರ್ಮಾ ಹೆಸರಿನ ಸಂಸ್ಕೃತಿ ಆ ಪರಂಪರೆ ಆಮೇಲೆ ಮುಂದುವರೆಯಲಿಲ್ವಾ?

ಎಂ.ಎಂ. ಕಲಬುರ್ಗಿ : ಅದು ಇಲ್ಲಾ. ಬಹುಶಃ ವರ್ಮಾ ಎಂಬ ಪರಂಪರೆ ಪಲ್ಲವರಿಂದ ಬರುತ್ತದೆ. ಅಲ್ಲಿ ನಂದಿವರ್ಮ ಅಂತಾ ಹೆಸರು ಬರುತ್ತದೆ. ಅದಕ್ಕಾಗಿ ಈತ ಪಲ್ಲವರೊಡನೆ ಜಗಳ ಮಾಡುತ್ತಾನೆ. ಕಂಚಿಯಲ್ಲಿ ಜಗಳಾಡುತ್ತಾರಲ್ಲ ಬಹುಶಃ ಇದು ಪಲ್ಲವ ವಂಶದ್ದು ಇರಬೇಕು

ಅನಿಸುತ್ತದೆ. ಕಂಚಿಯಲ್ಲಿ ಪಲ್ಲರೊಡನೆ ಜಗಳ ಮಾಡಿ ಇಲ್ಲಿ ಬಂದು ಸಾಮ್ರಾಜ್ಯ ಕಟ್ಟಿದರು ಅನಿಸುತ್ತದೆ. ಅದು ನನಗೇನೋ ನಮ್ಮ ಅರಸರ ಬಗ್ಗೆ ಇನ್ನೊಮ್ಮೆ ಸರಿಯಾಗಿ ಬರೆಯಬೇಕಾಗಿದೆ ಅನ್ಸುತ್ತ.

ಸಂದರ್ಶಕ : ನಮ್ಮ ಅರಸರ ಬಗ್ಗೆ ಇನ್ನೊಮ್ಮೆ ಬರೆಯಬೇಕಾಗಿದೆ. ಇತಿಹಾಸದ ಬಚ್ಚಿಟ್ಟ ಪುಟಗಳನ್ನು ತೆರೆದಿಡುವ ಕೆಲಸವನ್ನು ನಾವು ಡಾ. ಎಂ. ಎಂ. ಕಲಬುರ್ಗಿ ಅವರೊಡನೆ ಮಾಡುತ್ತಿದ್ದೇವೆ. ಕಲಬುರ್ಗಿಯವರೇ ನಿಮಗೆ ನೃಪತುಂಗ ಪ್ರಶಸ್ತಿ ಬಂದಿದೆ. ಅದಕ್ಕೆ ಅಭಿನಂದನೆ. ಮೊದಲೆ ಹೇಳಬೇಕಾಗಿತ್ತು? ನೃಪತುಂಗನ ಪ್ರಶಸ್ತಿಯನ್ನು ತೆಗೆದುಕೊಳ್ಳುತ್ತಾ ಇದೀರಾ ನಾವು ಇದುವರೆಗೂ ಮೈಸೂರ ಅರಸರ ಬಗ್ಗೆ ಮಾತಾಡುತ್ತಾ ಬಂದಿರುವೆವು ನೃಪತುಂಗ ಅರಸನ ಬಗ್ಗೆ ತಮ್ಮ ನಿಲುವೇನು?

ಎಂ.ಎಂ. ಕಲಬುರ್ಗಿ : ನಮ್ಮ ರಾಜಕೀಯ ಇತಿಹಾಸದೊಳಗೆ ಎರಡು ಮಾದರಿಗಳಿವೆ. ಅದನ್ನ ನಾನು ಸಾಂಕೇತಿಕವಾಗಿ ಒಂದು: ಪುಲಕೇಶಿ ಮಾದರಿ, ಇನ್ನೊಂದು: ನೃಪತುಂಗ ಮಾದರಿ ಎಂದು ಕರೆಯುತ್ತೇನೆ. ಪುಲಕೇಶಿ ಮಾದರಿ– ಎಂದರೆ ಭೌತಿಕ ಸಾಮ್ರಾಜ್ಯವನ್ನು ಕಟ್ಟುವುದು. ನೃಪತುಂಗನ ಮಾದರಿ–ಎಂದರೆ ಸಾಂಸ್ಕೃತಿಕ ಸಾಮ್ರಾಜ್ಯವನ್ನ ಕಟ್ಟುವುದು. ಅದಕ್ಕಾಗಿ ಪುಲಕೇಶಿ ನರ್ಮದಾ ನದಿ ವರೆಗೂ ಭೂಮಿಗೆದ್ದ. ಭೌತಿಕ ಸಾಮ್ರಾಜ್ಯದಲ್ಲಿ ನರ್ಮದಾ ನದಿವರೆಗೂ ನೆಲವನ್ನು ಗೆದ್ದ. ನೃಪತುಂಗ ನೆಲವನ್ನು ಹೊಲವನ್ನಾಗಿ ಮಾಡಬೇಕೆಂದ. ನೆಲ ಎಷ್ಟಿದ್ದರೇನು? ಹೊಲ ಆಗದಿದ್ದರೆ ಏನು ಪ್ರಯೋಜನ? ಇಂತಹ ಒಂದು ವಿಚಾರ ಮಾಡಿ ಆತ ಒಂದು ರೀತಿ ಪರ್ಯಾಯವಾಗಿ ಯುದ್ಧವಿರಾಮವನ್ನೇ ಸಾರಿದ. ಸಾರಿ ಇವತ್ತೇನು ಸಾಂಸ್ಕೃತಿಕ ಸಮಸ್ಯೆಗಳಿದಾವ ಆ ಸಮಸ್ಯೆಗಳನ್ನ ಬಿಡಿಸಿಕೊಳ್ಳೋಣ, ನಾವು ದೊಡ್ಡ ಭೂಮಿಯನ್ನೆ ಗೆದ್ದಿದ್ದು ಮುಖ್ಯವಲ್ಲ ದೊಡ್ಡ ಬದುಕನ್ನ ಬದುಕಿದೇವು ಅನ್ನುವುದು ಮುಖ್ಯ. ಅದಕ್ಕಾಗಿ ಆತ ಏನು ಮಾಡುತ್ತಾನೆ ಅಂದರೆ ಆಸ್ಥಾನದೊಳಗೆ ಕವಿಗಳ ಸಭೆಯನ್ನು ರೂಪಿಸುತ್ತಾನೆ. ಸಭೆಯನ್ನು ರೂಪಿಸಿ ನಾವು ಮಾಡಬೇಕಾದ ಕೆಲಸ ಏನು? ಆತ ಎಲ್ಲರ ಕೂಡಾ ವಿಚಾರ ಮಾಡಿದ. ಈಗ ದೊಡ್ಡ ಸಮಸ್ಯೆಯೆಂದರೆ ಭಾಷಾ ಸಮಸ್ಯೆ. ದೇಶ ಅಂದರೆ ಭಾಷೆ. ದೇಶ ದೊಡ್ಡದಾಗಿ ಭಾಷೆ ಸಣ್ಣದಾದರೆ ದೇಶ ಉಳಿಯುವುದಿಲ್ಲ. ದೇಶ ದೇಶವಾಗಿ ಉಳಿಯುವುದಿಲ್ಲ. ಅದರಿಂದ ದೇಶದೊಳಗ ಭಾಷೆಯೆನ್ನುವದು ಆ ದೇಶದ ಬೆಳೆಯು ಹೌದು. ಆ ದೇಶದ ಬೇಲಿಯೂ ಹೌದು. ಅದಕ್ಕಾಗಿ ನಮ್ಮ ಬೇಲಿ ಗಟ್ಟಿಯಾಗಬೇಕು. ನಮ್ಮ ಸಂಸ್ಕೃತಿಯ ಬೆಳೆಬರಬೇಕೆಂದರೆ ಭಾಷೆ ಬಗ್ಗೆ ಹೆಚ್ಚು ವಿಚಾರ ಮಾಡಬೇಕು. ಭಾಷೆ ಎನ್ನುವುದು ದೇಶದ ಸಂಗಾತಿ. ಅದು ಯಾವ ಕಾಲಕ್ಕೂ ದೇಶದ ಸಂಗಾತಿ. ದೇಶಕ್ಕೊಂದು ಅರ್ಥ ತುಂಬುವುದೇ ಭಾಷೆ. ಆದ್ದರಿಂದ ಈಗ ಏನು ಭಾಷೆ ಸಮಸ್ಯೆ ಇದೆ ಅಂದರ ಈಗ ಸಂಸ್ಕೃತ ನಮ್ಮಲ್ಲಿ ತುಂಬ ರಭಸದಿಂದ ಒಳಗೆ ಬಂದು ಸೇರಕೊಂಡು ಬಿಟ್ಟದ. ಹ್ಯಾಗೆ ಈ ಸಮಸ್ಯೆಯನ್ನು ಬಿಡಿಸಿಕೋಬೇಕು. ಆಗ ಕೆಲ ಜನರು ಅದನ್ನ ವಿರೋಧಿಸಿದರು. ಸಂಸ್ಕೃತವನ್ನು ಸ್ವೀಕಾರ ಮಾಡಬಾರದು ಅಂತಾ, ದೇಶಿಯಲ್ಲಿ ಬರೆಯಬೇಕು ಅಂತಾ. ಒಂದು ಪದ್ಯ ಸಿಕ್ತದ ಸೂಕ್ತಿಸುಧಾರ್ಣವದೊಳಗ. ಆ ಪದ್ಯ ಯಾರು ಬರೆದಿದ್ದಾರೋ ಗೊತ್ತಿಲ್ಲ. ಆ ಪದ್ಯ ದೇಶಿ ಕವಿಗಳು ಬೈಯುವ ಪದ್ಯ. ಅದು ದೇಶಿಯ ಕವಿಗಳಿದಾರಲ್ಲ ಇದು ಯಾವ ಛಂದಸ್ಸುಯೆಂದರೆ ಹೊಡೆಯಲಿಕ್ಕೆ ಬರುತ್ತಾರೆ. ಇದು ಯಾವ ಕವಿಯ ಮಾರ್ಗ ಎಂದು ಕೇಳಿದರೆ ಮೈಮೇಲಿನ ಬಟ್ಟೆಯನ್ನೇ ಎಳೆದು ಬಿಡುತ್ತಾರೆ. ದೇಶಿಗೆ

ಮೋಹ ಬೆಳಸಿಕೊಂಡಂತ ಈ ಬುದ್ಧಿವಂತರು ಅಂತಾ ವ್ಯಂಗ್ಯವಾಗಿ ಒಂದು ಪದ್ಯ ಬರತದ. ಹೀಗಾಗಿ ಒಂದು ರೀತಿಯ ದೇಶಿಯನ್ನೇ ಬೆಳಸಬೇಕು ಎಂದು ಕೆಲವರು ಸಂಸ್ಕೃತವನ್ನ ಹ್ಯಾಗೆ ಮಾಡಬೇಕು, ಈ ಪ್ರಶ್ನೆಯನ್ನ ಹ್ಯಾಗ ಬಿಡಿಸಬೇಕು ಎಂದು ಇನ್ನೂ ಕೆಲವು ಜನ ಕೊನೆಗೆ ಅವರೆಲ್ಲಾ ಕೂಡಿ ವಿಚಾರ ಮಾಡಿ ಇಲ್ಲಾ, ಸಂಸ್ಕೃತ ಈಗ ಅನಿವಾರ್ಯ ಇದೆ. ಈಗ ಹ್ಯಾಂಗ ಇಂಗ್ಲಿಷ್ ಅನಿವಾರ್ಯ ಇದಾ ಹಾಗೆ ಸಂಸ್ಕೃತ ಅನಿವಾರ್ಯವಾಗಿ ಬಂದದ. ಆದರ ಕನ್ನಡದೊಂದಿಗೆ ಹ್ಯಾಗೆ ಅದನ್ನ ಸಮರಸಗೊಳಿಸಬೇಕು ಎಂಬ ಈ ವಿಚಾರವನ್ನು ತಿಳಿದುಕೊಂಡು ಒಂದು ಸಾಮರಸ್ಯದ ಧೋರಣೆಯನ್ನ ಅವರು ತಾಳಿದರು. ಆ ಧೋರಣೆಯನ್ನು ತಾಳಿ ಅದಕ್ಕ ಆರಂಭದೊಳಗ ಅವರು ಏನ ಮಾಡತ್ತಾರ–ಕವಿರಾಜಮಾರ್ಗ ರೂಪಗೊಂಡಿದ್ದೇ ಆ ಸಂದರ್ಭದೊಳಗ. ಆರಂಭದೊಳಗ ನಾಡಿನ ಬಗ್ಗೆ ನುಡಿಯ ಬಗ್ಗೆ ನಾಡವರ ಬಗ್ಗೆ ನಮ್ಮ ಸಂಸ್ಕೃತಿಯ ಬಗ್ಗೆ ಎಲ್ಲಾ ಹೇಳಿದಂತೆ 'ಕಾವೇರಿಯಿಂದಮಾ ಗೋದಾವರಿವರಮಿರ್ದನಾಡದಾ ಕನ್ನಡದೊಳ್ ಭಾವಿಸಿದ ಜನಪದಂ' ಎಂದು ಕನ್ನಡನಾಡಿಗೆ ಗೆರೆಯನ್ನ ಎಳೆದರು. ಆಮೇಲೆ ಅಲ್ಲಿರುವಂತಹ ಪ್ರಜೆಗಳು ಹೇಗೆಂದರೆ 'ಸುಭಟರ್ಕಳ್, ಕವಿಗಳ್, ಸುಪ್ರಭುಗಳ್ ಗುಣಿಗಳ್, ಅಭಿಮಾನಿಗಳ್, ಅತ್ಯುಗ್ರರ್, ಗಂಭೀರಚಿತ್ತರ್, ವಿವೇಕಿಗಳ್, ನಾಡವರ್ಗಗಳ್' ಎಂದು ಅವರ ಬಗ್ಗೆ ಹೇಳೋದು. ಆಮೇಲೆ ನಾಡುನುಡಿ ಕನ್ನಡ ಮಾತಿನ ಬಗ್ಗೆ 'ಕುರಿತೋದದೆಯಂ ಕಾವ್ಯಪ್ರಯೋಗ ಪರಿಣತ ಮತಿಗಳ್' ಎಂದು ನಾಡವರ ಬಗ್ಗೆ, ತನ್ನ ನಗರದ ಬಗ್ಗೆ ಇಷ್ಟೆಲ್ಲಾ ದಾಖಲಿಬೇಕು, ನಾನು ದಾಖಲಿಸುವ ಮುಂದೆ ಏನೇನು ಪ್ರಯೋಗಗಳು ಮಾಡಬೇಕು ಸಂಸ್ಕೃತ ಕನ್ನಡ ಮಿಶ್ರಣ ಹೇಗೆ ಮಾಡಬೇಕು. ಸಮಾಸ ಹೇಗೆ ಮಾಡಬೇಕು, ಸಂಧಿ ಹೇಗೆ ಮಾಡಬೇಕು, ಕಾವ್ಯದೊಳಗೆ ದೇಶೀಯ ಹೇಗೆ ಹೊಸಿಬೇಕು. ಇಂಥ ಎಲ್ಲಾ ವಿಚಾರ ಹೇಳುವುದರ ಮೂಲಕ ಆ ಕಾಲಕ್ಕೂ ಎಂಥಾ ಒಂದು ತೆರೆದ ಮನಸ್ಸು ಅವರದು ಇರಬೇಕು ಕವಿರಾಜಮಾರ್ಗಕಾರ ಹೇಳುತ್ತಾನೆ 'ಅನ್ಯತೆ ಬರಬೇಕು ಅಸ್ಮಿತೆ ನಾಶವಾಗಬಾರದು.' ಇವತ್ತಿಗೂ ನನ್ನ ಧೋರಣೆ ಅದೇ. ನಮ್ಮತನವನ್ನು ಕಳೆದುಕೊಳ್ಳದೇ ಬೇರೆಯವರನ್ನು ಒಪ್ಪಿಕೊಳ್ಳಬೇಕು. ಬೇರೆಯವರ ಜೊತೆ ಬಾಳಬೇಕು.

ಸಂದರ್ಶಕ : ನೃಪತುಂಗ ಕಷ್ಣದೇವರಾಯ ಇಬ್ಬರನ್ನೂ ತೆಗೆದುಕೊಂಡರೆ ಭೌತಿಕ ವಿಸ್ತಾರದ ಬಗ್ಗೆ ತಾವು ಮಾತನಾಡುತ್ತಾ ಇದ್ದೀರಿ. ಕೃಷ್ಣದೇವರಾಯನ ಕಾಲ ಇವತ್ತಿಗೂ ಸುವರ್ಣ ಯುಗ ಎಂದು ನೆನಪಿಸಿಕೊಳ್ಳುತ್ತೇವೆ. ಅದೆಷ್ಟು ಸರಿ. ಅದೆಷ್ಟು ತಪ್ಪು ಅಂತಾ ತಾವು ಹೇಳಬೇಕು. ಅಪಾರ ವಿಸ್ತಾರ ಪಡೆದಿದ್ದಂತಹ ಹಿಂದೂ ಮಹಾ ಸಾಮ್ರಾಜ್ಯ ಆಗಿನ ಕಾಲದ್ದೂ ಅಂತಾ ನಾವು ಹೇಳುತ್ತೇವೆ. ಕೃಷ್ಣದೇವರಾಯನ ಎದುರು ನೃಪತುಂಗನನ್ನು ಇಟ್ಟರೇ ಕರ್ನಾಟಕದ ಇಬ್ಬರೂ ಮಹಾರಾಜರು ಅಂತಾ ಇಟ್ಟುಕೊಂಡು ನೋಡಿದರೆ ಯಾರು ಉತ್ತಮರು?

ಎಂ.ಎಂ. ಕಲಬುರ್ಗಿ : ಖಂಡಿತವಾಗಿಯೂ ನಾವು ಇಬ್ಬರನ್ನು ಹೋಲಿಕೆ ಮಾಡಲೇ ಬಾರದು. ಭೌತಿಕ ಸಾಮ್ರಾಜ್ಯ ಕಟ್ಟಿ ಕನ್ನಡ ವಿರೋಧಿ ಧೋರಣೆಯಿಂದ ಆಳುವಂತಹ ಮನೋಧರ್ಮ ಒಬ್ಬರಾಜಂದು. ನೃಪತುಂಗ ಸಾಂಸ್ಕೃತಿಕ ರಾಜ್ಯ ಕಟ್ಟಿದ. ಕೃಷ್ಣದೇವರಾಯನ ಕಾಲಕ್ಕೆ ಏನು ಸುಭಿಕ್ಷೆ ಇತ್ತೋ. ನಾವು ಬರೆದಿದ್ದ ಸುಭಿಕ್ಷೆ ಅಷ್ಟೇ. ಅದು ಎಂಥಾ ಮಾತು ಅಲ್ಲಿ ದೇಶಭಾಷೆಯೊಳಗೆ ತೆಲಗು ಶ್ರೇಷ್ಠ ಅಂಥಾ ಅವನು ಹೇಳುತ್ತಾನೆ. ನೃಪತುಂಗ ತನ್ನ ಪ್ರಜೆಗಳ ಬಗ್ಗೆ ಎಂಥಾ ಪ್ರೀತಿ–ಸುಭಟರ್ಕಳ್, ಕವಿಗಳ್, ಸುಪ್ರಭುಗಳ್........ಮಕ್ಕಳನ್ನ ಪ್ರೀತಿ ಮಾಡತ್ತೇವಲ್ಲಾ ಅಂಥಾ ಪ್ರೀತಿ. ಆದರೆ ನಾವು ನೃಪತುಂಗನ ಬಗ್ಗೆ ಏನೂ ಬರೆಯಲಿಲ್ಲ. ಯಾಕೆ ಅಂದರ ಇತಿಹಾಸ ಬರೆದವರೆಲ್ಲ

ಕೃಷ್ಣದೇವರಾಯನಿಂದ ಲಾಭ ಪಡೆದವರು. ಹೀಗಾಗಿ ಪಡೆದುಕೊಂಡಂತೆ ಅವರು ದೊಡ್ಡೋರು ಬರೆದು ಬಿಟ್ಟರು. ಉಳಿದವರ ಇತಿಹಾಸ ಮೂಲೆಗೆ ಬಿದ್ದಬಿಟ್ಟಿತು. ಭಾರತದ ಇತಿಹಾಸವನ್ನು ಬ್ರಿಟಿಷರು ಬರೆದ ಹಾಗೆ, ಕರ್ನಾಟಕದ ಮೊದಮೊದಲು ಇತಿಹಾಸವನ್ನು ಬರೆದವರು ಶ್ರೀವೈಷ್ಣವರೇ. ಅವರೆಲ್ಲಾ ದಿವಾನರ ಕೈಯಲ್ಲಿದ್ದು ಬಹಳ ಪ್ರಬುದ್ಧರಾಗಿದ್ದರು. ಆರ್.ನರಸಿಂಹಚಾರ್ಯರಂಥ ಕವಿಚರಿತ್ರೆ ಬರೆದವರೆಲ್ಲಾ ಶ್ರೀವೈಷ್ಣವರೇ. ಶ್ರೀಕೃಷ್ಣದೇವರಾಯ ವಿಷ್ಣುವರ್ಧನ ದೊಡ್ಡವರಾಗುತ್ತಾರೆ. ಅಲ್ಲಿ ನೃಪತುಂಗನಿಗೆ ಮಹತ್ವ ದೊರೆಯುವುದಿಲ್ಲ. ಪ್ರೌಢದೇವರಾಯ, ಪುಲಕೇಶಿಗೆ ಸಿಗುವುದಿಲ್ಲ. ವಿಕ್ರಮಾದಿತ್ಯನಿಗೆ ಸಿಗುವುದಿಲ್ಲ. ಕೃಷ್ಣದೇವರಾಯ ಬಹಳ ದೊಡ್ಡ ಸಾಮ್ರಾಟಗಾರಂತಲ್ಲ. ಅವನಿಗಿಂತ ೫-೬ ಪಟ್ಟು ಭೂಮಿಯನ್ನು ಗೆದ್ದವರು ಇದ್ದಾರೆ. ವಿಕ್ರಮಾದಿತ್ಯ ಇದಾನಲ್ಲ ಅವನು ಕಟ್ಟಿದಂಥ ಕಲ್ಯಾಣ ರಾಜ್ಯ ಹಿಂದೆಯೂ ಇಲ್ಲ ಇಂದು ಇಲ್ಲ ಮುಂದೂ ಆಗೋದಿಲ್ಲ. ವಿಕ್ರಮಾದಿತ್ಯನಂತ ಅರಸ ಹಿಂದೂ ಇಲ್ಲ ಇಂದೂ ಇಲ್ಲ ಮುಂದೂ ಆಗೋದಿಲ್ಲ. ಎಷ್ಟು ದೊಡ್ಡ ಸಾಮ್ರಾಜ್ಯ ಗಳಿಸುತ್ತಾನೆ. ಗಂಗಾ ನದಿವರೆಗೂ ಹಿಗ್ಗಿಸುತ್ತಾನೆ. ಕೃಷ್ಣದೇವರಾಯನಿಗೆ ಬಿಜಾಪುರವನ್ನು ದಾಟಲಿಕ್ಕೆ ಆಗಲಿಲ್ಲ. ಅದಕ್ಕ ವಿಕ್ರಮಾದಿತ್ಯನ ಬಗ್ಗೆ ನಾವು ಏನು ವಿಚಾರ ಮಾಡಲಿಲ್ಲ. ಅದು ದುರಂತವೇ. ಇತಿಹಾಸನ ಇತಿಹಾಸ ಬರೆದವರ ಕಣ್ಣಿನಿಂದ ನೋಡುತ್ತೇವೆ ಹೊರೆತು ಶಾಸನಗಳು ಅಥವಾ ದಾಖಲೆಗಳ ಆಧಾರಗಳಿಂದ ನೋಡಲಿಕ್ಕೆ ಹೋಗಿಲ್ಲ. ಹೀಗಾಗಿ ಭಾರತದ ನಿಜ ಇತಿಹಾಸವನ್ನು ನೋಡಲಿಕ್ಕೆ ಸಾಧ್ಯವಾಗಲೇ ಇಲ್ಲ. ಅದಕ್ಕಾಗಿಯೇ ಹೊಸ ಇತಿಹಾದ ಶೋಧ ಎಷ್ಟು ಮುಖ್ಯವೋ ಹಳೆಯ ಇತಿಹಾಸದ ಪರಿಷ್ಕರಣೆ ಅಷ್ಟೇ ಮುಖ್ಯ; ರೀರೈಟ್ ಅವಶ್ಯ ಇದೆ.

ಸಂದರ್ಶಕ : ಮತ್ತೆ ಮಹಾರಾಜರ ವಿಚಾರವನ್ನು ಪಕ್ಕಕ್ಕೆ ಇಟ್ಟು ಧರ್ಮ ಸಂಘರ್ಷದ ವಿಚಾರಕ್ಕೆ ಬಂದರೆ ಇತಿಹಾಸದುದ್ದಕ್ಕೂ ಪದೇ ಪದೇ ಹೇಳುತ್ತಿರುತ್ತಿರಾ ಅಲ್ಲಿರುವುದು ಸಂಘರ್ಷನೇ ಹೊರತು ಸಾಮರಸ್ಯವಲ್ಲ. ಉದ್ದಕ್ಕೂ ಕಂಡಿರುವುದು ಸಂಘರ್ಷ. ಧಾರ್ಮಿಕ ಸಂಘರ್ಷಗಳು ಉದ್ದಕ್ಕೂ ನಡೆಕೊಂಡು ಬಂದದ್ದು. ಇತ್ತೀಚ್ಚಿಗೆ ಅಣ್ಣೀಗೇರಿಯಲ್ಲಿ ೬೦೦ ತಲೆಬುರುಡೆಗಳು ಸಿಕ್ಕಿದವು. ಆ ತಲೆ ಬುರುಡೆಗಳಿಂದ ಅನೇಕ ಕಥೆಗಳು ಹುಟ್ಟಿಕೊಂಡವು. ಅನೇಕ ಥೇರಿಗಳು ಹುಟ್ಟಿಕೊಂಡವು. ಬರದಿಂದ ಕ್ಷಾಮದಿಂದ ಸತ್ತವರ ತಲೆ ಬುರುಡೆಗಳು ಅಂತ ಹೇಳಿ ಅಥವಾ ನರಮೇಧದಿಂದ ಆದಂತಹ ತಲೆ ಬುರುಡೆಗಳು ಅಂತಾ; ತಮ್ಮ ಥೇರಿ ಏನು, ತಮ್ಮ ಅಭಿಪ್ರಾಯ, ಡಿಸ್‌ಕವರಿ ಏನು ಸರ್?

ಎಂ.ಎಂ. ಕಲಬುರ್ಗಿ : ನೋಡಿ ಅದು ತಲೆಬುರುಡೆ ಶೋಧ ಆದ ಕೂಡಲೆ ನನಗೆ ಕೇಳಲಿಕ್ಕ ಬಂದರು. ನಾನು ಹೇಳಿದೆ, ಅದರ ಕಾಲ ನಿರ್ಣಯ ಮಾಡಿಕೊಂಡು ಬರ್ರಿ, ಆಮೇಲೆ ನಾನು ಮಾತನಾಡತ್ತೇನಿ ಅಂತಾ ಹೇಳಿದೆ. ಅಷ್ಟರೊಳಗಾಗಿ ಒಂದಿಷ್ಟು ಜನ ಅವರಸದ ಸಂಶೋಧಕರು ಏನು ಮಾಡಿದರು. ಮಂತ್ರ ಮಾಟದಿಂದ ತಂದಿಟ್ಟ ೬೦೦ ತಲೆಗಳು ಅಂತಾ ಒಬ್ಬರು ಹೇಳಿದರು. ಅದು ಬರಗಾಲದ ಘಟನೆ ಅಂತಾ ಕೆಲವರು ಹೇಳಿದರು. ಇಲ್ಲಾ ಯುದ್ಧದೊಳಗೆ ಆದಂತಹದ್ದು ಅಂತಾ ಕೆಲವರು ಹೇಳಿದರು. ಆದರೆ ಇದು ಯಾವುದು ನನಗೆ ಸರಿ ಅನಿಸಲಿಲ್ಲ. ಆಮೇಲೆ ನಾ ಹೇಳಿದೆ. ಕಾಲ ನಿರ್ಣಯ ಮಾಡಿಕೊಂಡು ಬರ್ರಿ ಆಮೇಲೆ ನಾ ಹೇಳ್ತೀನಿ ಅಂದೆ. ಕೆಲವು ತಿಂಗಳಾದ ಮೇಲೆ ಅದನ್ನು ಭೂಪಾಲಕ್ಕೆ ಕಳುಹಿಸಿ ಕಾಲನಿರ್ಣಯ ಮಾಡಿಕೊಂಡು ಬಂದರು. ಅದು ಸುಮಾರು ೭೦೦ ವರ್ಷಗಳಷ್ಟು ಹಿಂದಿನ ಘಟನೆ ಅಂತ ಹೇಳಿದರು. ಆಗ ನನ್ನ ಮನಸ್ಸಿನಲ್ಲಿ

ಇತ್ತಲ್ಲ 'ಥೇರಿ'ಗೆ ಅದು ಹೊಂದಿತು. ಏನು ಅದು ಥೇರಿ ಅಂದರ ಉತ್ತರಕರ್ನಾಟಕದ ವೀರಮಹೇಶ್ವರರು, ದಕ್ಷಿಣ ಕರ್ನಾಟಕದೊಳಗ ವೀರವೈಷ್ಣವರು-ಶ್ರೀವೈಷ್ಣವ ಪರಂಪರೆಯವರು ವೀರವೈಷ್ಣವರು ಇಬ್ಬರೂ ಉಗ್ರವಾದಿಗಳು. ಶೈವ ವೈಷ್ಣವ ದಕ್ಷಿಣದೊಳಗ ವೀರವೈಷ್ಣವರು ಅಂದರೆ ರಾಮಾನುಜಪಂಥೀಯರದಾರಲ್ಲ ಅಲ್ಲಿ ವೀರವೈಷ್ಣವರು ಒಂದು ಸಂಘಟನೆ ಇತ್ತು. ಉತ್ತರದೊಳಗ ಶೈವ ಪರಂಪರೆಯೊಳಗ ವೀರ ಮಾಹೇಶ್ವರರು ಒಂದು ಸಂಘಟನೆ ಇತ್ತು. ಇವರೆಲ್ಲಾ ಅನ್ಯ ಧರ್ಮಗಳನ್ನ ನಾಶ ಮಾಡೋದು, ಅನ್ಯಧರ್ಮ ದೇವಾಲಯಗಳನ್ನ ನಾಶ ಮಾಡುವುದು ಇಂತಾ ಒಂದು ಸಂಘಟನೆ ಉತ್ತರ ಕರ್ನಾಟಕದೊಳಗ ಇತ್ತಲ್ಲಾ ಅಂಥಾ ಒಂದು ಸಂಘಟನೆಗೆ ಕಾರಣವಾಗಿ ಅಣ್ಣಿಗೇರಿಯ ಆ ತಲೆ ಬುರುಡೆಯ ಪ್ರಕರಣ ಜರುಗಿರಬಹದು ಅಂತಾ ನನಗೆ ಅನಿಸುತ್ತದೆ. ಅಂದರೆ ಅದು ನರಮೇಧ ಅಂತಾ ಅಲ್ಲ, ಅದು ಧಾರ್ಮಿಕವಾದ ಒಂದು ಆತ್ಮಾರ್ಪಣೆ. ಅದು ಸ್ವಂತ ಆತ್ಮಾಹುತಿ ಮಾಡಿಕೊಂಡಿರುವುದು; ಯಾಕೆ ಮಾಡಿಕೊಳ್ಳುತ್ತಿದ್ದರು ಅಂದರೆ ವೀರ ಮಾಹೇಶ್ವರರ ಒಂದು ರೀತಿನೇ ಹಾಗಿತ್ತು. ಅವರು ಅನ್ಯಧರ್ಮವನ್ನು ನಾಶಮಾಡಿ ನಾವು ಹುಟ್ಟಿದ್ದಕ್ಕೆ ಸಾರ್ಥಕವಾಯಿತು ಅಂತಾ ತಿಳಕೊಂಡು ಶಿವಲಿಂಗದ ಮುಂದೆ ತಮ್ಮ ರುಂಡ ಹಾರಿಸಿಕೊಳ್ಳುತ್ತಿದ್ದರು. ಅರ್ಪಣೆ ಮಾಡುತ್ತಿದ್ದರು. ಸಾರ್ಥಕದ ಸೂಚಕನೋ ಅದು ಅಥವಾ ಪಶ್ಚಾತ್ತಾಪದ ಸೂಚಕನೋ? ಅದಕ್ಕ ನಮಗ ಹರಿಹರನ ಕೋವೂರ ಬ್ರಹ್ಮಯ್ಯನ ರಗಳೆ ಇದೆ, ಆ ರಗಳೆಯೊಳಗೆ ಬಸದಿ ನಾಶಮಾಡುತ್ತಾರೆ. ಅದರೊಳಗೆ ೩೦೦ ಜನ ಇರುತ್ತಾರೆ. ಅದೊಂದು ಸಂಘಟನೆ ಬಸದಿ ನಾಶಮಾಡಿ ೩೦೦ ಜನ ಆ ಕೋವೂರಿನ ನೇತೃತ್ವದೊಳಗೆ ತಮ್ಮ ರುಂಡವನ್ನ ಕೈಯನ್ನ ಕಾಲನ್ನ ಕತ್ತರಿಸಿಕೊಂಡು ರುಂಡದಿಂದ ಪುಟಿಯುವಂತಹ ರಕ್ತವನ್ನ ಬಗಸೆಯಲ್ಲಿ ತುಂಬಿಕೊಂಡು ಲಿಂಗಕ್ಕೆ ಹಾಕತಿದ್ದರು ಅಂತಾ ಅವನು ೨-೩ ಪುಟದಷ್ಟು ವರ್ಣನೆ ಮಾಡಿದ್ದಾನೆ. ಇದಲ್ಲದೆ ಇನ್ನೂ ಕೆಲವು ಕಾವ್ಯದೊಳಗ ಶಾಸನದೊಳಗ ಆತ್ಮಾಹುತಿಯ ಸಾಕಷ್ಟು ಉಲ್ಲೇಖ ಬರತಾವೆ. ಇದಲ್ಲದೆ ಶ್ರೀಶೈಲದೊಳಗ ಒಂದು ಶಿಲ್ಪ ಇದೆ. ಅನೇಕ ಶಿಲ್ಪ ಅದಾವು. ನಾನು ರುಂಡ ಹೊತ್ತಿದ್ದನ್ನ ಅಣ್ಣೀಗೇರಿಯ ಮುಂದೆ ತೋರಿಸಿದೆ. ಈ ರುಂಡ ಯಾವುದು ಅಂತಾ-ಹೇ ಇದು ನಮ್ಮೂರದು ರೀ ಅಂದರು. ಅದಕ್ಕೆ ಇದು ನಿಮ್ಮೂರದಲ್ಲ ಶ್ರೀಶೈಲದ್ದು ಅಂತಾ ಹೇಳಿದೆ. ಮುಂದೆ ಲಿಂಗ, ಅದರ ಮುಂದ ಒಬ್ಬ ಕೂತಾನ, ಅವನು ರುಂಡ ಕತ್ತರಿಸಿಕೋತಾನೆ. ಮತ್ತೊಬ್ಬ ಅದನ್ನ ಹೊತ್ತು, ಒಟ್ಟತಾ ಇದಾನೆ. ಅಂದರೆ ಯಾವುದೇ ಒಂದು ಶೋಧ ಮಾಡಬೇಕಾದರ ಅದು ಬಹುರೀತಿಯೊಳಗ ವಿಚಾರ ಮಾಡಬೇಕಾಗುತ್ತದೆ. ಬಹುಶಿಸ್ತೀಯ ಅಧ್ಯಯನ ಅಂತಾ ಹೇಳತ್ತೀವಿ ನಾವು. ಒಂದು ಸಂಪ್ರದಾಯ, ಒಂದು ಇತಿಹಾಸ, ಒಂದು ಶಿಲ್ಪ, ಆಮೇಲೆ ಉಳಿದಿದ್ದೆಲ್ಲಾ ತಗೋ ಬೇಕಾಗುತ್ತದೆ. ಇಂಥಾ ಒಂದು ಹಿನ್ನೆಲೆಯೊಳಗೆ ನಾನು ಇದು ಆತ್ಮಾರ್ಪಣೆ ಒಂದು ಘಟನೆ ಅಂತಾ ಹೇಳಿದೆ. ನನ್ನ ಪುಣ್ಯಕ್ಕೆ ಏನಾಯಿತು ಅಂತಾ ಹೇಳಿದರೆ, ಆ ಊರೊಳಗೆ ಒಂದು ಶಾಸನ ಇದ್ದದ್ದು ನನ್ನ ಗಮನಕ್ಕೆ ಬಂತು. ಅದನ್ನ ಹಿಂದೆ ಓದಿದ್ದೇ. ಆ ಶಾಸನದಲ್ಲಿ ವೀರ ಗೊಗ್ಗಿದೇವ ಅವನು ವೀರಮಾಹೇಶ್ವರ ಪಂಥದವನು ಅದರ ನಾಯಕ. ಆ ವೀರ ಗೊಗ್ಗಿದೇವ, 'ಜೈನಮೃಗ ಬೇಟೆಗಾರ' ಎಂದು ತನ್ನ ಬಗ್ಗೆ ಹೇಳಿಕೊಳ್ಳುತ್ತಾನೆ. ಜೈನ ಜಿಂಕೆಗಳನ್ನ ಬೇಟೆಯಾಡುವವನು; ನಾನು ನೋಡ್ರಿ ಎಂಥಾ ಕ್ರೂರವಾದ ಬರವಣಿಗೆ 'ಜೈನ ಮೃಗಬೇಟೆಕಾರ ಜೈನಾಗಮ ಧೂಮಕೇತು', ಜೈನ ಸಮಾಜಕ್ಕೆ ನಾನು ಧೂಮಕೇತು 'ಜೈನ ಕುಠಾರ' ಜೈನರಿಗೆ ನಾನು ಕೊಡಲಿ ಇದ್ದ ಹಾಗೆ ಅಂತಾ ಹೇಳ್ತನಾ ಅಂವಾ. ವೀರಮಹೇಶ್ವರ ಪರಂಪರೆಯವನು.

ಶಾಸನ ಅದು ವೀರಭದ್ರ ದೇವಾಲಯದ ಮುಂದೆ ಇದೆ. ಅವರು ಎಲ್ಲಿ ಪ್ರತಿಜ್ಞೆ ಮಾಡತ್ತಿದ್ದರು ಅಂದರೆ ವೀರಭದ್ರನ ಮುಂದೆ ಮಾಡತ್ತಿದ್ದರು. ಅವರು ವೀರಭದ್ರನ ಅನುಯಾಯಿಗಳು. ಅದಕ್ಕಾಗಿಯೇ ವೀರಮಹೇಶ್ವರಗೆ ವೀರಶೈವ ಅಂತಾ ಹೆಸರು ಬಂದಿತು. ಉಗ್ರರು ಇದ್ದರಲ್ಲಾ ಆ ವೀರಮಹೇಶ್ವರರೇ ಲಿಂಗಾಯತರೊಳಗೆ ಬಂದು ಸೇರಿಕೊಂಡುಬಿಟ್ಟರು. ಮುಂದೆ ಲಿಂಗಾಯತರೊಳಗೆ ಸೇರಿಕೊಂಡದ್ದರಿಂದ ಲಿಂಗಾಯತ ವೀರಶೈವ ಎರಡು ಒಂದೇ ಅಂತ ಬರೆಯುತ್ತಾ ಇದಾರೆ. ಆಮೇಲೆ ಏನು ವಿಚಾರ ಬರೆದರೂ ಅಂದರೆ ಇತಿಹಾಸಕಾರರು ಎಲ್ಲಾ ಜೈನ ಬಸದಿಗಳನ್ನು ಹಾಳುಮಾಡಿದವರು ಲಿಂಗಾಯತರು ಅಂತ. ಆದರೆ ಲಿಂಗಾಯತರು ಹಾಳು ಮಾಡಿಲ್ಲ. ಬಸವಣ್ಣನ ಲಿಂಗಾಯತ ಧರ್ಮ ಅದಲ್ಲಾ, ದಯವೇ ಧರ್ಮದ ಮೂಲ ಅನ್ನುವುದು. ಅಹಿಂಸಾ ವಾದಿಗಳು. ಅವರೊಳಗೆ ಉಗ್ರವಾದಿಗಳು ಹಿಂಸಾವಾದಿಗಳು ಸೇರಿಕೊಂಡರು. ವೀರಶೈವ ಇದೊಂದು ವ್ರತ, ಮತ ಅಲ್ಲ. ಅವರು ವೀರವ್ರತ ಹಿಡಿಯುವವರು. ಅವರು ಬಂದು ಸೇರಿಕೊಂಡು ಎರಡೂ ಒಂದೇ ಎಂದ ಕೂಡಲೇ ಆಮೇಲೆ ಏನ ಮಾಡಿದರು ಅಂದರೆ, ಹೇ ಇದು ಬಸವಣ್ಣ ಚಳುವಳಿಗೆ ಕಾರಣವಾಗಿ ಬಸದಿಗಳು ನಾಶವಾದವು ಅಂತಾ. ಬಸವಣ್ಣ ದೇವಾಲಯದ ನಾಶದ ವಿಚಾರವನ್ನು ಹೇಳಿಲ್ಲ. ಅಂವಾ ದೇವಾಲಯದ ನಿರಾಕರಣೆ ವಿಚಾರವನ್ನು ಹೇಳುತ್ತಾನೆ. ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯ. ಅವನು ನಾಶ ಮಾಡುವನಲ್ಲ, ಆ ತತ್ವದ ನಿರಕಾರಣೆ ಮಾಡಿದ. ದೇವಾಲಯ ಬೇಡ, ನಮ್ಮ ದೇಹವೇ ದೇವಾಲಯ ಎಂದ.

ಸಂದರ್ಶಕ : ನಮ್ಮ ದೇಹವೇ ದೇವಾಲಯ ಎಂಬ ಪಂಥಕ್ಕೆ ಉಗ್ರವಾದಿಗಳು ಸೇರಿಕೊಂಡರು. ಅದೇ ಈ ತರಹದ ಅನೇಕ ತಪ್ಪು ಕಲ್ಪನೆಗಳು ಇತಿಹಾಸವನ್ನು ಸರಿಯಾಗಿ ದಾಖಲು ಮಾಡದೆ ಇಡದೇ ಇರೋ ಕಾರಣದಿಂದಾಗಿ ನಮ್ಮ ಮುಂದೆ ಬಂದಿದೆ ಅಂತಾ ಅನೇಕ ತಪ್ಪು ಕಲ್ಪನೆಗಳನ್ನು ದೂರಮಾಡುವ ಕೆಲಸ ಆಗಬೇಕಾಗಿದೆ. ಕಲಬುರ್ಗಿಯವರು ಹೇಳಿದ ಹಾಗೆ ಡಿಸ್ಕವರಿ ಮರುಪರಿಶೀಲನೆ ಆಗಬೇಕಾಗಿದೆ ಅಂತಾ ಅನಿಸುತ್ತೆ. ಅದನ್ನ ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ವಾಹಿನಿಯ ಮೂಲಕ ಮಾಡಲಿಕ್ಕೆ ಸಾಧ್ಯವಾದರೆ ಪ್ರಯತ್ನ ಮಾಡತ್ತೀವಿ.

ಕಲಬುರ್ಗಿಯವರೇ ನಾವು ಇತಿಹಾಸದಿಂದ ಸ್ವಲ್ಪ ವರ್ತಮಾನಕ್ಕೆ ಬಂದರೆ ತಾವು ನಮ್ಮ ಜೊತೆ ಇರುವುದರಿಂದ ಈ ಅವಕಾಶವನ್ನು ಬಳಸಿಕೊಂಡು ನಾನು ಇನ್ನೊಂದು ಬಹಳ ಮುಖ್ಯವಾದ ವಿಚಾರದ ಬಗ್ಗೆ ತಮ್ಮನ್ನು ಕೇಳಬೇಕು ಅಂದುಕೊಂಡಿದೇನಿ. ತಾವು ಶಿಕ್ಷಣ ತಜ್ಞರೂ ಆಗಿದ್ದೀರಿ. ಇವತ್ತು ಕನ್ನಡ ಶಾಲೆಗಳ ಸ್ಥಿತಿ ಹೇಗಾಗಿದೆ ಅಂದರೆ ಅದು ಕೂಡಾ ಇತಿಹಾಸ ಆಗಬಹುದಾದ ಸಾಧ್ಯತೆಗಳಿವೆ. ಬಹಳ ಶೀಘ್ರದಲ್ಲಿಯೇ ಅನೇಕ ಶಾಲೆಗಳನ್ನ ಮುಚ್ಚಲಿಕ್ಕೆ ಹೊರಟಿದೆ ಸರ್ಕಾರ. ಮುಚ್ಚೋದಲ್ಲ, ಅದು ಇನ್ನೊಂದು ಶಾಲೆಯ ಜೊತೆಗೆ ವಿಲೀನ ಮಾಡುವುದು ಅಂತಾ ಮಾತುಗಳು ಬರುತ್ತಾ ಇದಾವೆ. ಪ್ರಾಕ್ಟಿಕಲಿ ಅವರು ಹೇಳೋ ಕಾರಣ ಸರಿ ಇರಬಹುದು. ಕನ್ನಡ ಶಾಲೆಗಳಿಗೆ ಮಕ್ಕಳಿಲ್ಲ ಆ ಶಾಲೆ ನೆಡಸೋದು ಹೇಗೆ ಇದಕ್ಕೆ ಪರಿಹಾರ ಏನು?

ಎಂ.ಎಂ. ಕಲಬುರ್ಗಿ : ಈ ದುಸ್ಥಿತಿಗೆ ಯಾರು ಕಾರಣ ಅಂದರೆ ಸರ್ಕಾರ ಮತ್ತು ಅನೇಕ ಶಿಕ್ಷಕರು. ವಿದ್ಯಾರ್ಥಿಗಳು ಬರೋದಿಲ್ಲ, ಅದಕ್ಕ ಈ ಶಾಲೆಯನ್ನು ಮುಚ್ಚುತ್ತಿದ್ದೇವಿ ಅನ್ನೋದಕ್ಕಿಂತ ಶಾಲೆ ಮುಚ್ಚಲಿಕ್ಕೆ ಏನು ಕಾರಣಗಳು ಅದನ್ನ ಹುಡುಕಬೇಕು(ಸಂದರ್ಶಕ–ಮಕ್ಕಳು ಬರ್ತಾ ಇಲ್ಲಾ. ಆಂಗ್ಲ ಮಾಧ್ಯಮ ಶಾಲೆಗಳ ಕಡೇ ಇಚ್ಛೆ) ಮಕ್ಕಳು ಬರದೆ ಇರದಕ್ಕೂ ಏನು ಕಾರಣ, ಯಾಕೆ

ಬರೋದಿಲ್ಲ. ನಮ್ಮ ಶಿಕ್ಷಣ ಪದ್ಧತಿಯಲ್ಲಿಯೂ ತಪ್ಪು ದಾರಿ ತುಳಿದಿರೋದು. ಅದಕ್ಕಾಗಿ ಸರ್ಕಾರ ಏನು ಮಾಡಬೇಕು ಅಂತವರ ಶಾಲೆಯನ್ನು ಮುಚ್ಚಬಾರದು. ಇಷ್ಟೇ ಯಾಕೆ ಬಿ.ಜೆ.ಪಿ. ತನ್ನ ಕಾಲಾವಧಿಯೊಳಗೆ ಎಷ್ಟು ಕನ್ನಡ ಶಾಲೆಯನ್ನ ಮುಚ್ಚಿದಾವ ಅದು ನಮಗೆ ಗೊತ್ತೆ ಇಲ್ಲಾ. ಈಗ ನಮಗೆ ಗೊತ್ತಾಗತಾ ಇದೆ. ಆ ಶಾಲೆಗಳು ತೆರೆಯಬೇಕು. ಹೊಸ ಶಾಲೆ ಮುಚ್ಚೋದಲ್ಲ ಅಷ್ಟೇ ಅಲ್ಲ ಈಗ ಮುಚ್ಚಿದ್ದನ್ನು ಅವರು ತೆರೆಯಬೇಕು. ಈ ಮುಚ್ಚಿದಕ್ಕ ಏನು ಕಾರಣ ನಮ್ಮ ಶಿಕ್ಷಣ ನೀತಿಕಾರಣ. ಸರ್ಕಾರಕ್ಕೆ ಮುಖ್ಯವಾಗಿ ಬೇಕಾಗಿದ್ದು ಮತ. ಮತಗಳಿಕೆಗಾಗಿ ಜನಪ್ರಿಯತೆಗಾಗಿ ಅವರು ಏನಾದರೂ ಮಾಡಬಲ್ಲರು. ಇದು ಯಾವುದೇ ಸರ್ಕಾರಂತಲ್ಲಾ ಬಿ.ಜೆ.ಪಿ., ಜೆ.ಡಿ.ಎಸ್. ಕಾಂಗ್ರೇಸ್ ಇರಬಹುದು. ಅವರಿಗೆ ಮತ ಗಳಿಕೆ ಜನಪ್ರಿಯತೆ ಗಳಿಸೋ ಸಂಬಂಧ ಅವರು ಕನ್ನಡ ಬಲಿಕೊಡಲಿಕ್ಕೆ ಹಿಂದೆ ಮುಂದೆ ನೋಡುವುದಿಲ್ಲ.

ಸಂದರ್ಶಕ : ಉಳಿಸಿಕೊಳ್ಳುವುದು ಹೇಗೆ ಸಾಧ್ಯ?

ಎಂ.ಎಂ. ಕಲಬುರ್ಗಿ : ಉಳಿಸಿಕೊಳ್ಳಲಿಕ್ಕೆ ಸಾಧ್ಯವಿದೆ. ಮೊದಲಿಗೆ ಏಕರೂಪಿ ಪಠ್ಯ. ಪಟ್ಟಣ, ಹಳ್ಳಿಯೊಳಗೆ ಏನು ಬೇರೆ ಪಠ್ಯಗಳದಾವಲ್ಲ, ಸ್ಟೇಟ್, ಸಿ.ಬಿ.ಎಸ್.ಸಿ. ಪಠ್ಯಕ್ರಮ ಇದಾವಲ್ಲಾ ಇವೆಲ್ಲಾ ಹೋಗಬೇಕು. ಏಕರೂಪ ಪಠ್ಯ ಇರಬೇಕು. ಬಡವರು ಶ್ರೀಮಂತರು ಅಂತರಲ್ಲಾ. ಏಕರೂಪ ಪಠ್ಯ ಯಾಕ ಮಾಡಲಿಲ್ಲ, ಸರ್ಕಾರದವರು ತಾವು ಮಾಡಿದ ತಪ್ಪು, ಏಕ ರೂಪ ಪಠ್ಯ ಇದು ಮೊದಲನೆಯದ್ದು ಮಾಡಬೇಕು. ೨ನೆಯದಾಗಿ ಸರಿಯಾಗಿ ಭಾಷಾ ನೀತಿ ಇಲ್ಲಾ. ಆಂಗ್ಲ ಮಾಧ್ಯಮ ಶಾಲೆ, ಉರ್ದು ಮಾಧ್ಯಮ ಶಾಲೆ ಗುಜರಾತಿ ಮಾಧ್ಯಮ ಶಾಲೆ, ಮರಾಠಿ ಮಾಧ್ಯಮ ಶಾಲೆ. ಮತ್ತು ಕನ್ನಡದ ಬಗ್ಗೆ ಬಂದಾಗ, ಇದು ಕನ್ನಡ, ಇದು ಸಂಸ್ಕೃತ ಹಿಂದಿ, ಇಂಗ್ಲಿಷ್ ಇವುಗಳ ಬಗ್ಗೆ ಸರಿಯಾದ ನಿಲುವು. ಕನ್ನಡ ಪರ ಮತ್ತು ಅವುಗಳಿಗೆ ಗೌರವ ಕೊಡೋಣ ಪರಭಾಷೆಗೆ ಅಗತ್ಯ ಇರುವ ಭಾಷೆಗಳನ್ನ ಕಲಿಯಬೇಕು. ಕಲಿಯಲಿ ಬೇಡ ಅನ್ನೋದಿಲ್ಲ, ಮೊದಲನೆಯದು ಏಕರೂಪ ಪಠ್ಯ, ೨ನೆಯದಾಗಿ ಶಿಕ್ಷಣ ನೀತಿಯಲ್ಲಿ ದೋಷ, ಅದನ್ನ ತಿದ್ದಿಕೊಳ್ಳಬೇಕು. ೩ನೆಯದಾಗಿ ಮೂಲಭೂತ ಸೌಕರ್ಯಗಳು. ಹಳ್ಳಿಯ ಶಾಲೆಯೊಳಗ ದುಸ್ಥಿತಿ ನೋಡಿದರೆ–ನಾನೇ ಕಲಿತ ಶಾಲೆ ನಾನು ಅಭ್ಯಾಸ ಮಾಡುವಾಗ ಎಷ್ಟು ಚಂದ ಇತ್ತು. ಶಾಲೆ (ಸಂದರ್ಶಕ–ಆವಾಗ ಅಷ್ಟೊಂದು ಹುಡುಗರು ಮಕ್ಕಳು ಇದ್ದಿರಲಿಲ್ಲ. ಈಗ ಮಕ್ಕಳೇ ಇಲ್ಲವಲ್ಲಾ) ಒಂದು ಶಾಲೆಯಲ್ಲಿ ಒಂದು ಕಟ್ಟಡ ಇತ್ತು. ತುಂಬಾ ವಿದ್ಯಾರ್ಥಿಗಳಿದ್ದರು. ಈಗ ಮತ್ತೊಂದು ಬೇರೆ ಶಾಲೆಯಾಗಿದೆ ಬೇರೆ ಬೇರೆ ಕಟ್ಟಡಗಳಾಗಿವೆ. ಆ ಮಾತು ಬೇರೆ ಏನಾದರೂ ಸಹ ಆ ಶಾಲೆಯಲ್ಲಿ ಮಕ್ಕಳು ಕೂಡಲಿಕ್ಕೆ ಬರಲಾರದ ರೀತಿಯಲ್ಲಿ ಅದಾವ. ಶಾಲೆಗಳೂ ತುಂಬಾ ದುಸ್ಥಿತಿಯಲ್ಲದವ. ಅದರಿಂದ ೩ನೆಯದಾಗಿ ಮೂಲಭೂತ ಸೌಕರ್ಯಗಳನ್ನ ಅವರು ಪೂರೈಸಬೇಕು. **ಸಂದರ್ಶಕ:** ಸರ್ಕಾರ ಹೇಳುವುದೇನೆಂದರೆ ಸರ್ಕಾರ ಬಂದರನೇ ಮೂಲಭೂತ ಸೌಕರ್ಯ ಕೊಡುವುದು. ಮಕ್ಕಳಿಲ್ಲದ ಶಾಲೆಯನ್ನ ಹೇಗೆ ನಡೆಸುವದು.

ಎಂ.ಎಂ. ಕಲಬುರ್ಗಿ : ಮಕ್ಕಳನ್ನ ಬರದಂತೆ ನೀವು ಮಾಡಿದ್ದೀರಾ. ಅದಕ್ಕೆ ಕಾರಣ ನೀವು ಮೊನ್ನೆ ಕಾಗೇರಿಯವರು ಮಾತಾಡತ್ತಾರ ಮೊದಲು ಹೀಗೆ ಮಾತನಾಡುವವರು ಮೊದಲು ತಮ್ಮ ಮಕ್ಕಳನ್ನ ಕಳಿಸಲಿ ನಾನು ಕಳಸುತ್ತೇನೆ. ನನ್ನ ಮಕ್ಕಳನ್ನ ಮೊದಲು ನನ್ನ ಮಗ ಹೋಗು ಹಾಗೇ ನೀ ಶಿಕ್ಷಣ ಮಾಡು (ಸಂದರ್ಶಕ–ಅವರು ಕಳಿಸುತ್ತಾ ಇದ್ದಾರೆ; ಬೇರೆಯವರು ಕಳಸ್ತಿಲ್ಲಾ) ಅದು ಅದೇನೇ ಇರಲಿ ಶಾಲೆಯನ್ನ ಹೇಗೆ ಮಾಡಬೇಕೆಂದರೆ ನನ್ನ ಮಗನ್ನ ಆ ಶಾಲೆಗೆ ಕಳಿಸೋ

ಹಾಂಗ ಆ ಶಾಲೆ ಮಾಡರಿ, ಶಾಲೆಯನ್ನ ದುಸ್ಥಿತಿಯಲ್ಲಿ ಇಟ್ಟು ಪಠ್ಯಕ್ರಮ ತಪ್ಪು ಇಟ್ಟು, ಭಾಷೆಗಳನ್ನ ತಪ್ಪ ಇಟ್ಟು, ನನ್ನ ಮಗನ್ನ ಶಾಲೆಗೆ ಕಳುಹಿಸಿ ಅಂದರೆ ಹ್ಯಾಂಗ ಕಳಸ್ತಾನ. ಅದಕ್ಕಾಗಿ ತಪ್ಪಿದ್ದಿದ್ದು ನೀವು, ಆ ತಪ್ಪು ತಿದ್ದಿಕೊಳ್ಳಿ. ಇವತ್ತ ಹಳ್ಳಿಯ ಒಳಗೆ ಇದ್ರೂನೂ ಪಟ್ಟಣದವರು ಬೇಸರ ಆಗೋದಿಲ್ಲ. ಹಳ್ಳಿಯಲ್ಲಿ ಶಾಲೆ ಚನ್ನಾಗಿ ಇದೆ ಅಂದ್ರ ಪಟ್ಟಣದವರು ಹಳ್ಳಿಗೆ ಕಳಿಸಿಯೇ ಕಳಿಸುತ್ತಾರೆ. ಈಗ ಮುದ್ದೇನ ಹಳ್ಳಿಯಲ್ಲಿ ಶಾಲೆ ಇದೆ. ಮುದ್ದೇನಹಳ್ಳಿ ಒಂದು ಸಣ್ಣಹಳ್ಳಿ. ಬೆಂಗಳೂರಿನ ಎಷ್ಟೆ ಜನ ಮುದ್ದೇನ ಹಳ್ಳಿಗೆ ಒಯ್ದು ಇಟ್ಟಾರ. ಆದ್ದರಿಂದ ಮೂಲ ತಪ್ಪಿದ್ದಿದ್ದು ಸರ್ಕಾರದ್ದು ಮತ್ತು ಅನರ್ಹ ಶಿಕ್ಷಕರ ಆಯ್ಕೆ ಮತ್ತು ಕಲಿಸೋ ಶಿಕ್ಷಕರ ಉದಾಸೀನತೆ ಈ ೩-೪ ಪಾಯಿಂಟ್ ಅದಾವಲ್ಲ ಸರಿಯಾಗಿ ಒಂದು ವ್ಯವಸ್ಥೆ ಬಗ್ಗೆ ಸರಿಗೊಳಿಸಿದರ ನಿಜವಾಗಿಯೂ ಕನ್ನಡ ಶಾಲೆ ಯಾವುವು ಮುಚ್ಚುವದಿಲ್ಲ. ಕನ್ನಡ ಶಾಲೆ ಇನ್ನೂ ಹೆಚ್ಚಾಗುತ್ತವೆ.

ಸಂದರ್ಶಕ : ಸರ್ಕಾರ ಈ ಮಾತುಗಳನ್ನ ಗಂಭೀರವಾಗಿ ತೆಗೆದುಕೊಳ್ಳುತ್ತೇ ಅಂದಕೊಳ್ಳುತಾ ನಾನು ಕೊನೆಯದಾಗಿ ಇನ್ನೊಂದು ವಿಚಾರವನ್ನ ಪ್ರಸ್ತಾಪ ಮಾಡತ್ತೇನಿ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆ. ತಾವು ಮೂಲತಃ ಸಂಶೋಧಕರು. ಅನೇಕ ಅದ್ಭುತ ಸಂಶೋಧನೆಗಳನ್ನು ಭಾಷಾ ವಿಜ್ಞಾನಕ್ಕೆ ಸಂಬಂಧಪಟ್ಟಿರುವ ಹಾಗೆ ಮಾಡಿದ್ದೀರಿ. ಶಾಸ್ತ್ರೀಯ ಸ್ಥಾನಮಾನ ಸಿಕ್ಕ ನಂತರ ಬೇಕಾದಷ್ಟು ಹಣ ಹರಿದು ಬರುತ್ತೇ. ಆದರೆ ಆ ಹಣ ಹೇಗೆ ಬಳಕೆಯಾಗಬೇಕು ಯಾವರೀತಿಯ ಸಂಶೋಧನೆ ನಡೆಯಬೇಕು ಅಂತಾ ಹೇಳ್ತಿರಿ.

ಎಂ.ಎಂ. ಕಲಬುರ್ಗಿ : ನೋಡಿ ಹಣದ ಕೊರತೆಯಿಲ್ಲ. ನಮಗೆ ವಿದ್ವಾಂಸರ ಕೊರತೆ ಇದೆ. ಬುದ್ಧಿವಂತರ ಕೊರತೆ ಇದೆ. ಅದಕ್ಕಿಂತ ಶ್ರದ್ಧಾವಂತರ ಕೊರತೆಯಿದೆ. **ಸಂದರ್ಶಕ:** ಈಗ ಹಣ ಬರುತ್ತಿದ್ದಂತೆ ಶ್ರದ್ಧಾವಂತರು ಬರಬಹುದೇನೋ. **ಎಂ.ಎಂ. ಕಲಬುರ್ಗಿ :** ಇಲ್ಲಾ ಈಗ ಶ್ರದ್ಧಾವಂತರೇ ಇಲ್ಲ. ಅದಕ್ಕಾಗಿ ನನಗೆ ಅನಿಸತ್ತದ ಸರ್ಕಾರದವರು ಏನು ಮಾಡಬೇಕೆಂದರೆ ಆ ರೀತಿಯ ವ್ಯಕ್ತಿಗಳನ್ನು ನಿರ್ಮಾಣ ಮಾಡಬೇಕು. ನಮ್ಮ ಕನ್ನಡವನ್ನ ಹ್ಯಾಗೇ ಏನು ಮಾಡಬೇಕಂದರೆ ಆ ರೀತಿಯ ವ್ಯಕ್ತಿಗಳನ್ನು ನಿರ್ಮಾಣ ಮಾಡಬೇಕು. ನಮ್ಮ ಕನ್ನಡವನ್ನ ಹ್ಯಾಗೆ ಏನು ಅಭ್ಯಾಸ ಮಾಡಬೇಕು ಅದನ್ನ ಹೇಗೆ ಬೆಳೆಸಬೇಕು ಅನ್ನುವ ತಾಕತ್ತು ಇದ್ದ ಜನ ಇರತ್ತಾರಲ್ಲ. ಆ ತಾಕತ್ತೇ ಇದ್ದ ಜನ ಇಲ್ಲ ಇವತ್ತು. ಹಣವನ್ನ ಹಂಚಿಕೊಂಡು ಹೋಗುವ ಜನ ಬಂದಾರೆ ಶಿಕ್ಷಣ ಕ್ಷೇತ್ರದೊಳಗೆ. ಈಗ ಯಡೆಯೂರಪ್ಪನವರು 'ಕೋಟಿ ರೂಪಾಯಿ ಕೊಟ್ಟರು. ಎಲ್ಲಾ ಹಣದ ಲೆಕ್ಕವನ್ನ ತಗೊಳ್ಳಿ ನಾಳೆ ಆ ಹಣಕ್ಕೆ ತಕ್ಕ ಫಲಿತಾಂಶ ಬಂತೋ' ಇವತ್ತು ಸದಾನಂದ ಗೌಡ್ರು ಹೇಳುತ್ತಾರೆ. ಇಲ್ಲಾ ನಾನು ೨ ಕೋಟಿ ರೂಪಾಯಿ ಕೊಡ್ತಿನಿ ಅಂತಾ. ನಾ ಸದಾನಂದಗೌಡರಿಗೆ ಹೇಳ್ತೀನಿ ಮಾನ್ಯ ಮುಖ್ಯಮಂತ್ರಿಗಳಿಗೆ ಮೊದಲನೆ ಒಂದು ಕೋಟಿದ ಲೆಕ್ಕ ತಗೋಳ್ರಿ. ಅವರು ಸರಿಯಾಗಿ ಮಾಡಿದಾರೋ ಇಲ್ರೋ ನೋಡಿ. ಸಬ್ ಸ್ಟ್ಯಾಂಡ್ ಇತ್ತು ಅಂದ್ರ ತಿರಸ್ಕರಿಸಿ; ರಿಸರ್ಚ್ ಇದೆಯಲ್ಲಾ ಯಾವುದಕ್ಕೊ ಮಾಡಿ ಒಂದಿಷ್ಟು ಬಲ್ಕ ಮಾಡಿ ತೋರಿಸಿದರ ಅದು ರಿಸರ್ಚ್ ಆಗ್ತದೇನು.

ಸಂದರ್ಶಕ : ಯಾವತರ ರಿಸರ್ಚ್ ನಡೆಯಬೇಕು ಸರ್

ಎಂ. ಎಂ. ಕಲಬುರ್ಗಿ : ಮೊದಲನೆಯದಾಗಿ ಕನ್ನಡ ಪ್ರಾಧ್ಯಾಪಕರಿಗೆ ಒಂದಕ್ಕಿಂತ ಇನ್ನೊಂದು ಭಾಷೆ ಬೇಕು ಕನ್ನಡದ ಕೂಡಾ ಇಂಗ್ಲಿಷ್ ಅಥವಾ ಹಿಂದಿ ಕಲಿಯಬೇಕು. ಆಗ ಅವರು ಏನು

ಮಾಡಲಿಕ್ಕೆ ಆಗ್ತದ ಅಂದರೆ ಸುತ್ತಮುತ್ತಲಿನೊಳಗೆ ಶ್ರೇಷ್ಠತೆ ಏನು ಅನ್ನುವದನ್ನ ತಿಳಿದುಕೊಳ್ಳಲಿಕ್ಕೆ ಸಾಧ್ಯವಾಗತ್ತದೆ. ಇಲ್ಲ ಅಂದರೆ ನಮ್ಮದೇ ಶ್ರೇಷ್ಠತೆ ಅಂತ ಕೂತುಬಿಟ್ಟಿರುತ್ತದೆ. ಆ ಶ್ರೇಷ್ಠತೆ ಗೊತ್ತಾಗತ್ತದೆ. ಅದಕ್ಕೆ ತಕ್ಕ ಹಾಗೆ ಒಂದು ಕಾಂಪಿಟೇಟಿವ್ ಸ್ಪಿರಿಟ್ ಬರತ್ತದ. ಆಮೇಲೆ ಒಳ್ಳೆಯ ಕೆಲಸ ಮಾಡಲಿಕ್ಕೆ ಆಗತದ. ಜನರು ಏನು ಬಯಸ್ತಾರ ದೇಶ ಏನು ಬಯಸ್ತದ ಅಂತರಾಷ್ಟ್ರೀಯ ಮಟ್ಟದಲ್ಲಿ ಏನು ನಡೆದದ ಅಂತಾ ಗೊತ್ತಾಗತದ. ಇವರು ಕೂಪ ಮಂಡೂಕ ರಾಗಿದ್ದಾರ. ಅದಕ್ಕಾಗಿ ಒಂದಕ್ಕಿಂತ ಹೆಚ್ಚು ಭಾಷೆಯನ್ನ ಇವರಿಗೆ ಕಲಿಸಬೇಕು. ಕನ್ನಡದ ಬರಹಗಾರರೇ ಇರಲಿ ಕನ್ನಡದ ಶಿಕ್ಷಕರಿರಲಿ. ಈಗ ನೋಡಿ ನಾನು ಏನು ಬರೆಯುತ್ತೇನಿ ನನ್ನ ಬರವಣಿಗೆ ರಾಷ್ಟ್ರಮಟ್ಟಕ್ಕೆ ಹೋಗಿ ಹೇಳಲಿಕ್ಕೆ ನನಗೆ ಸಾಧ್ಯವಿಲ್ಲ. ನಾನೇನು ಬಹಳ ದೊಡ್ಡ ಕಾಂಟ್ರಿಬ್ಯೂಷನ್ ಮಾಡಿನಿ ಅಂತಾ ತಿಳಿದುಕೊಂಡಿರುತ್ತೇವೆ. ಅಂತರಾಷ್ಟ್ರೀಯ ಮಟ್ಟದೊಳಗೆ ಹೋಗಿ ಕಲಬುರ್ಗಿ ನೀ ಏನು ಮಾಡಿ ಹೇಳು ಅಂದ್ರ ಹೇಳೂಕೆ ಆಗೂದಿಲ್ಲ. ನಮ್ಮ ಕನ್ನಡ ಪ್ರಾಧ್ಯಾಪಕರಿಗೆ ಒಬ್ಬರಿಗೂ ಆಗುವುದಿಲ್ಲ.

ಸಂದರ್ಶಕ : ಬಹಳ ಇಂಟರೆಸ್ಟಿಂಗ್ ಆರ್ಗ್ಯೂಮೆಂಟ್ ಅನಿಸುತ್ತದೆ. ನಾವು ಚರ್ಚೆಯನ್ನು ಪ್ರಾರಂಭ ಮಾಡ್ತ ಇತಿಹಾಸದ ಬಗ್ಗೆ ನೋಡ್ತಾ ಅನ್ಯಭಾಷೆಗಿರುವ ಪ್ರಭುತ್ವದ ಬಗ್ಗೆ ಅನ್ಯಭಾಷೆಯ ಪ್ರಭುತ್ವದ ಬಗ್ಗೆ, ಅನ್ಯಭಾಷಿಗರೂ ನಮ್ಮಲ್ಲಿ ಸೇರಿಕೊಂಡಿರುವ ಬಗ್ಗೆ ಮಾತಾಡತ್ತಾ ಇದ್ವಿ, ಅದು ಪ್ರಭುತ್ವಕ್ಕಷ್ಟ ಸೀಮಿತಗೊಳಿಸಿ. ಅದು ಕೊನೆಗೆ ನೀವು ಹೇಳ್ತ ಇರೋ ಮಾತು ನಾವು ಬೇರೆ ಭಾಷೆಗಳನ್ನು ಕಲಿತು ಸಾಮರಸ್ಯ ಬೆಳೆಸಬೇಕು. ಪ್ರಭುತ್ವ ವಿರೋಧಿಸಬಹುದು. ಆದರೆ ಭಾಷೆಗಳನ್ನ ವಿರೋಧಿಸುತ್ತಿಲ್ಲಾ. ನಾವು ಭಾಷೆಗಳಲ್ಲಿರುವ ಶ್ರೇಷ್ಠತೆಯನ್ನ ತೆಗೆದುಕೊಂಡು ಬೆಳೆಯಬೇಕು. ಬಹುಶಃ ಕೃಷ್ಣದೇವರಾಯ ರಾಜ್ಯಬೆಳಸಿದ ಹಾಗೆ ದೇಶ ಬೆಳಸಿದ ಹಾಗೆ ನಾವು ಭಾಷೆಯನ್ನು ಬೆಳೆಸಬೇಕು ಅಂತಾ ಅನಿಸುತ್ತೆ. ಕಲಬುರ್ಗಿಯವರೇ ತಮ್ಮ ವಿದ್ವತ್ಪೂರ್ಣ ಮಾತುಗಳನ್ನ ನಮ್ಮ ಜೊತೆ ಹಂಚಿಕೊಂಡಿದ್ದೀರಿ ಇದು ನಿಜವಾಗಲೂ ಒಂದು ಹೊಸ ಚರ್ಚೆಗೆ ನಾಂದಿಯಾಗುತ್ತಿದೆ ಅಂದುಕೊಳ್ಳುತಾ ತಮ್ಮನ್ನ ಬೀಳಕೊಡುತಾ ಇದ್ದೇನಿ ನಮಸ್ಕಾರ ಸರ್.

ಎಂ.ಎಂ.ಕಲಬುರ್ಗಿ : ನಮಸ್ಕಾರ.

ಜನಶ್ರೀ ನ್ಯೂಸ್– ೨೩ ನವ್ಹೆಂಬರ್ ೨೦೧೧

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೦೨

ಸತ್ಯವೇ ದೊಡ್ಡದು, ಸಂಘರ್ಷಕ್ಕೆ ಹೆದರಲ್ಲ

❖

ಸಂದರ್ಶನ : ಪುಷ್ಪಾ ಶಿಮ್ಲಡ್ಕ

ಅಧ್ಯಕ್ಷ ಭಾಷಣವೂ ಸೇರಿ ಎರಡು ದಿನಗಳಿಂದ ನಡೆದ ಗೋಷ್ಠಿಗಳು ಸಂಘರ್ಷದ ನೆಲೆಗಳಿಗೆ ಹೆಚ್ಚು ಒತ್ತುಕೊಟ್ಟಂತೆ ಕಾಣ್ತದೆ. ಸಾಮರಸ್ಯಕ್ಕೆ ಇನ್ನಷ್ಟು ಒತ್ತು ಕೊಡಬೇಕಾಗಿತ್ತು. ನಿಮ್ಮ ಪ್ರಬಂಧವೂ ಸೇರಿದಂತೆ ಇದು ಸರಿಯೇ?

ನನ್ನ ಭಾಷಣದಂತೆ ಮಿಕ್ಕವರದ್ದು ಇದೇ ಅಧ್ಯಯನಪೂರ್ಣ ಪ್ರಬಂಧಗಳು. ಇದು ಕನ್ನಡ ಮನಸ್ಸಿನ ಅಧ್ಯಯನ. ಹಾಗೇ ನೋಡಿದರೆ ಇತಿಹಾಸದಲ್ಲಿ ಸಾಮರಸ್ಯ ಕಡಿಮೆಯೇ, ಸಂಘರ್ಷ ಹೆಚ್ಚು. ಮೌನ ಕಂಡರೆ ಇದು ಸಾಮರಸ್ಯ ಮೌನ ಅಲ್ಲ, ಅದು ಯಜಮಾನಿಕೆಯ ಸಮಾಜ ನಿಯಂತ್ರಿಸಿದ ಮೌನ. ಮುಚ್ಚಿಟ್ಟಿದ್ದನ್ನು ಹೊರಹಾಕಿ ಮತ್ತೆ ಇಂತಹ ತಪ್ಪು ವರ್ತಮಾನದಲ್ಲಿ ಮಾಡಬಾರದು ಅಂತ ಹೇಳ್ತಾ ಇದ್ದೇವೆ.

ಸಂಘರ್ಷವನ್ನು ಹೇಳುವುದಕ್ಕಿಂತ ಸಾಮರಸ್ಯದ ಕುರಿತು ಹೇಳಬಹುದಲ್ಲ?

ಸತ್ಯ ಹೇಳಿದರೆ ಸಿಟ್ಟು ಬರುವ ಕಾಲವಿದು. ನಿದ್ದೆ ಮಾಡ್ತಾ ಇರೋದಕ್ಕಿಂತ ಜಾಗೃತ ಸ್ಥಿತಿ ಸುಖ ಅಲ್ಲವೆ? ಇದೆಲ್ಲ ಇತಿಹಾಸ ಪಾಠ ಎಂದು ಸ್ವೀಕರಿಸಬೇಕು. ಈ ಪಾಠದೊಂದಿಗೆ ಸಾಮರಸ್ಯ ಸಾಧಿಸಬೇಕು.

ಕಲಬುರ್ಗಿ ಎಂದರೆ ವಿವಾದ ಅಥವಾ ವಿವಾದವೆಂದರೆ ಕಲಬುರ್ಗಿ ಎಂದು ಹೇಳ್ತಾರಲ್ಲ? ಈ ವಯಸ್ಸಲ್ಲೂ ಕೊಲೆ ಬೆದರಿಕೆ ಎದುರಾದರೂ ಮತ್ತೆ ಸತ್ಯದ ಹಠವೇಕೆ? ಈ ಸಂಘರ್ಷ ಸಾಮಾಜಿಕ ಸಂಶೋಧಕರೊಂದಿಗೆ ನಿಮ್ಮನ್ನು ಸಾಕಷ್ಟು ಸಂಘರ್ಷಕ್ಕೊಡ್ಡಿತು ಅಲ್ಲವೇ?

ದೇವರು ದೊಡ್ಡವ, ಆದರೆ ದೇವರಿಗಿಂತ ಸತ್ಯ ದೊಡ್ಡದು. ಹಾಗಾಗಿ ಸಂಘರ್ಷಕ್ಕೆ ನಾನು ಹಿಂಜರಿಯಲಾರೆ. ಸಂಶೋಧನೆಯಲ್ಲಿ ಸ್ಥಗಿತ ಸಂಶೋಧನೆ ಹಾಗೂ ಚಲನಶೀಲ ಎಂದು ಎರಡು

ಬಗೆ. ನವೋದಯ ಕಾಲದ ಜನ ತಮ್ಮ ಚರಿತ್ರೆಯನ್ನು ಎಲ್ಲೂ ದಾಖಲಿಸಿಲ್ಲ. ಗೋವಿಂದ ಪೈ ಮೊದಲಾದವರು ಈ ಕೊಂಡಿ ಜೋಡಿಸುವ ನಿಟ್ಟಿನಲ್ಲಿ ಬಹಳಷ್ಟು ಕೆಲಸ ಮಾಡಿದ್ದಾರೆ. ಇದು ವರ್ತಮಾನಕ್ಕೆ ಪ್ರಯೋಜನವಾಗದು. ವರ್ತಮಾನ ಸರಿಪಡಿಸುವುದು ಚಲನಶೀಲ ಸಂಶೋಧನೆ. ನನ್ನ ಸಂಶೋಧನೆ ಸಮಾಜಕ್ಕಾಗಿ. ನನ್ನ ಸಂಶೋಧನೆ ದೋಷ ಸರಿಪಡಿಸಬೇಕು. ಆರಂಭದಲ್ಲಿ ನಾನೂ ಗತಕಾಲದ ಶೋಧ ಮಾಡ್ತಿದ್ದೆ. ನಾನು ಬಳಿಕ ವರ್ತಮಾನ ಮುಖಿ ಸಂಶೋಧನೆಗೆ ತೊಡಗಿದೆ. ವರ್ತಮಾನ ದುರುಪಯೋಗಪಡಿಸಿಕೊಳ್ತಾರೆ. ಅವರ ವಿರುದ್ಧ ಖಡ್ಗ ಎತ್ತಿದೆ. ನನಗೆ ಅಪಮಾನವಾಗಿದ್ದು ಹೌದು, ಆದರೆ ಏಸು, ಪೈಗಂಬರ್, ಬಸವಣ್ಣರಿಗೆ ಆದ ಅಪಮಾನದ ಮುಂದೆ ಏನೇನೂ ಅಲ್ಲ. ಇವತ್ತಿಗೂ ಸತ್ಯ ಹೇಳುವವರ ಮೇಲೆ ದಾಳಿ ನಡೀತದೆ. ಇಂಥ ಸಂದರ್ಭದಲ್ಲಿ ಸತ್ಯ ಹೇಳುವವರನ್ನು ಬೆಂಬಲಿಸಬೇಕೇ ಹೊರತು ಮುಚ್ಚಿಹಾಕುವವರನ್ನಲ್ಲ.

೫೦೦ನೇ ಪಟ್ಟಾಭಿಷೇಕ ಸಂದರ್ಭ ಕೃಷ್ಣದೇವರಾಯ ಕನ್ನಡ ವಿರೋಧಿ ಎಂದಿರಿ. ನಾವು ನಂಬಿದಂತೆ ಮುಸ್ಲಿಮರ ದಾಳಿಯಿಂದಾಗಿ ಹಾಳು ಹಂಪೆಯಾಯಿತು ಎಂಬುದನ್ನು ತಿರುವು ಮುರುವು ಮಾಡಿ ಇದು ಶೈವ–ವೈಷ್ಣವ ಕಾಳಗದ ಪರಿಣಾಮ ಎಂದಿರಲ್ಲ!

– ರಾಜನೊಬ್ಬ ೫೦೦ನೇ ವರ್ಷದ ಪಟ್ಟಾಭಿಷೇಕ ವೈಭವಕ್ಕೆ ೫೦೦ ಕೋಟಿ ರೂ. ವ್ಯಯ ಮಾಡಿದ್ದು ಮೂರ್ಖತನ. ರಾಜನೆಂದರೆ ಒಬ್ಬ ದುಷ್ಟನೇ, ಅತಿ ದುಷ್ಟ ರಾಜ, ಈಗಲೂ ಹಾಗೆಯೇ. ಈಗಿನ ಎಂಎಲ್‌ಎಗಳು, ಮಂತ್ರಿಮಹೋದಯರನ್ನೆ ನೋಡಿದರೆ ತಿಳಿತದಲ್ಲ. ಅನ್ಯಾಯ ಮಾಡಿದ ರಾಜರ ಹೊಗಳಿಕೆ ಅಸಾಧ್ಯ. ಹೀಗೆಂದು ಹೇಳಿದರೆ ಯಾರೂ ಕೇಳಿಲ್ಲ. ಇದೇ ಖರ್ಚಿನಲ್ಲಿ ೫೦೦ ಕೆರೆ ಸರಿಪಡಿಸಬಹುದಿತ್ತು. ಸಾವಿರಾರು ಬಡವರಿಗೆ ಸಹಾಯ ಮಾಡಬಹುದಿತ್ತು. ನಮ್ಮನ್ನು ನಾವು ಸಮಾರಂಭ ಮೂಲಕ ಅಪಮಾನ ಮಾಡ್ತೀವಿ.

ಜೈನರ ಕಾಲದಲ್ಲಿ ದೌರ್ಜನ್ಯಗಳಾಗಿಲ್ಲವೇ?

ಮೂಡುಬಿದರೆಯನ್ನು ಜೈನಕಾಶಿ ಎಂದು ಯಾಕೆ ಕರಿಯಬಾರದು. ಕಾಶಿಯನ್ನು ಅವರು ವೈದಿಕ ಕಾಶಿ ಅಂತಾರಾ? ಕಾಶಿಗಿಂತ ನಮ್ಮ ಮೂಡುಬಿದರೆ ಶ್ರೇಷ್ಠ. ಗಂಗೆಗಿಂತ ನಮ್ಮೂರ ಹಳ್ಳಶ್ರೇಷ್ಠ. ಮುಜರಾಹಿ ಮೂರ್ಖನೊಬ್ಬ ಗಂಗೆ ನೀರು ತರಿಸ್ತೇನೆ ಎಂದು ಎಲ್ಲೆಲ್ಲಿಂದಲೋ ನೀರು ತರಿಸಿ, ಹಂಚಿದ.

ಕೃಷ್ಣದೇವರಾಯ ಕನ್ನಡ ವಿರೋಧಿ ಎನ್ನೋದಕ್ಕೆ ಪುರಾವೆಗಳಿವೆಯೇ?

ಸಾಕಷ್ಟು ಪುರಾವೆ ಸಿಗುತ್ತದೆ. ಈತ ತೆಲುಗಿನಲ್ಲಿ ಅಮೌಕ್ತಮಾಲ್ಯ ಬರೆದ. ಆದರೆ ಕನ್ನಡದಲ್ಲಿ ಒಂದಾದರೂ ಬರೆದನೆ? ಅದರಲ್ಲೂ ದೇಶಭಾಷೆ ಹಾಗೂ ಪ್ರಾಂತ ಭಾಷೆಗಳಲ್ಲಿ ತೆಲುಗೇ ಶ್ರೇಷ್ಠ ಎಂದು ಬೇರೆ ಬರೆದ. ಈತನ ಆಸ್ಥಾನದಲ್ಲಿದ್ದುದ್ದು ಬಹುತೇಕ ತೆಲುಗರು. ಆದರೆ ಕುಳಿತದ್ದು ಕನ್ನಡ ಸಿಂಹಾಸನದ ಮೇಲೆ. ಹಂಪಿಯ ದೇವರು ವಿರೂಪಾಕ್ಷನ ಬದಲು ತಿರುಪತಿಗೆ ಲೆಕ್ಕವಿಲ್ಲದಷ್ಟು ಸಂಪತ್ತು ದಾನ ಮಾಡಿದ ರಾಯ, ಏಕೆ? ಹಂಪಿಯಲ್ಲಿ ಶ್ರೀ ವಿರೂಪಾಕ್ಷನ ಅಂಕಿತದಲ್ಲೇ ರಾಜ ಎಲ್ಲ ನಿರ್ಧಾರಗಳನ್ನು ದಾಖಲಿಸಬೇಕಾಗಿತ್ತು. ಆದರೆ ವಿರೂಪಾಕ್ಷನ ಎದುರು ಹಲವಾರು ದೇವಾಲಯಗಳನ್ನು ರಾಯ

ಸ್ಥಾಪಿಸಿದ್ದು ಸ್ಥಳೀಯರಿಗೆ ಆಘಾತ ತಂದಿತು. ಕನ್ನಡ ಮತ್ತು ತೆಲುಗು ಸೈನ್ಯ ಇವನಲ್ಲಿತ್ತು. ಮುಂದೆ ಇವನ ಅಳಿಯನ ಕಾಲದಲ್ಲಿ ಕನ್ನಡಿಗರು ಮುಸಲ್ಮಾನ ಸೈನ್ಯ ನೆರವು ಪಡೆದು ತೆಲಗು ಸೈನ್ಯ ಓಡಿಸಿಬಿಟ್ಟರು.

ಕೃಷ್ಣದೇವರಾಯ ತುಳುವನೇ?

ಈತನದ್ದು ತೌಳವ ವಂಶ. ಈತನ ತಂದೆ ನರಸ ನಾಯಕ ತುಳು ಕನ್ನಡಿಗ. ತಾಯಿ ತೆಲುಗು. ಈಕೆ ಉಪಪತ್ನಿ. ಹಾಗಾಗಿ ತಾಯಿ ಭಾಷೆ ಈತನದ್ದು. ಹಾಗಾಗಿ ಕನ್ನಡಿಗರನ್ನು ಮರೆತೇಬಿಟ್ಟು ತೆಲುಗಿಗೆ ಪ್ರಾಧಾನ್ಯತೆ ಕೊಟ್ಟ.

ಕನ್ನಡ ಶಾಲೆಗಳನ್ನು ಮುಚ್ಚುವ ಅಪಾಯದ ಬಗ್ಗೆ?

ಡಿ.ವಿ.ಗೆ. ಮೊದಲು ಅಭಿನಂದನೆ ಸಲ್ಲಿಸುತ್ತೇನೆ. ಕನ್ನಡ ಶಾಲೆ ಮುಚ್ಚೋದಿಲ್ಲ ಎಂದಿದ್ದಾರೆ, ಅದಕ್ಕೆ ಹಾಗೆಯೇ ಇನ್ನೊಂದು ವಿನಂತಿ ಎಂದರೆ ಬಿಜೆಪಿ ಸರಕಾರ ಈಗಾಗಲೇ ಮುಚ್ಚಿದ ೫೦೦ ಶಾಲೆಗಳನ್ನು ತೆರೆಯಿರಿ. ಇನ್ನು ಮೇಲೆ ಮುಚ್ಚೋದಿಲ್ಲ ಅಂತಲ್ಲ. ಮುಚ್ಚಿದವುಗಳನ್ನು ಆರಂಭಿಸಿ ಅವುಗಳ ಅಭಿವೃದ್ಧಿ ಬಗ್ಗೆ ಚಿಂತನೆ ನಡೆಸಿ. ಅಲ್ಲಿ ಮಕ್ಕಳೇ ಇಲ್ಲ ಎಂದರೆ! ಅಲ್ಲಿನವರಿಗೆ ಮಕ್ಕಳಾಗೋಲ್ವೆ!? ನಗರಕ್ಕೇಕೆ ಅಲ್ಲಿನವರು ವಲಸೆ ಹೋಗುತ್ತಾರೆ ಎಂಬುದನ್ನು ಕಂಡುಕೊಳ್ಳಿ. ಮತ ಗಳಿಸುವ ರಾಜಕಾರಣ ಮಾಡಬೇಡಿ. ಸಮಾಜಕ್ಕೆ ಅನುಕೂಲ ಆಗುವಂಥದ್ದು ಮಾಡಿ. ಆಗ ಮಾತ್ರ ಕನ್ನಡ ಬೆಳೀಬಹುದು.

ಅಣ್ಣಿಗೇರಿಯಲ್ಲಿ ಇತ್ತೀಚೆಗೆ ಸಿಕ್ಕ ತಲೆಬುರುಡೆ ಯಾರದ್ದೂಂತ?

ನನ್ನ ಅಧ್ಯಯನ ಪ್ರಕಾರ ಇದು ಪಂಥವೊಂದರ ಧಾರ್ಮಿಕ ಸಂಪ್ರದಾಯದ ಪರಿಣಾಮ. ೧೨-೧೩ನೆಯ ಶತಮಾನದ ವೀರಗೊಗ್ಗಿದೇವ ಶಾಸನದಂತೆ ಶೈವ ಸಂಪ್ರದಾಯದಂತೆ ದೇವರಿಗೆ ರುಂಡ ಕೊಡುವ ಪದ್ಧತಿಯಿತ್ತು. ವೀರಭದ್ರ ಭಕ್ತರು ತಮ್ಮ ರುಂಡವನ್ನು ದೇವರಿಗೆ ಅರ್ಪಿಸುತ್ತಾರೆ. ಇದು ಶಿಲ್ಪ ಸಂಪ್ರದಾಯ, ಶಾಸನದ ಅಧ್ಯಯನದಿಂದ ಮಾಡಿದ ಸಂಶೋಧನೆ.

ನಮ್ಮ ಕರಾವಳಿ : ೧೪ ನವೆಂಬರ್ ೨೦೧೧

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೦೩

ಅಸ್ಮಿತೆ ಜಾಗೃತಿಯ ವಿನಃ ಕನ್ನಡ ಉದ್ಧಾರವಾಗಲ್ಲ

❖

ಸಂದರ್ಶಕರು : ರವೀಂದ್ರ ಎಸ್. ದೇಶಮುಖ

ನಮ್ಮ ನಾಡಿನಲ್ಲೇ ಕನ್ನಡ ಶಾಲೆಗಳನ್ನು ಮುಚ್ಚುವ ಸ್ಥಿತಿ ಬಂದಿದೆಯಲ್ಲ. ಇದು ಕನ್ನಡಕ್ಕೆ ಕುತ್ತಲ್ಲವೇ?

ಕನ್ನಡ ಶಾಲೆಗಳು ಮುಚ್ಚಿದ್ರೆ ಖಂಡಿತವಾಗಿಯೂ ಕನ್ನಡಕ್ಕೆ ದೊಡ್ಡ ಪೆಟ್ಟು ಬೀಳಲಿದೆ. ಕನ್ನಡ ಶಾಲೆಗಳನ್ನು ಮುಚುವುದೆಂದರೆ ಮುಂದಿನ ತಲೆಮಾರನ್ನು ಕನ್ನಡದಿಂದ ವಂಚಿತರಾಗಿಸಿದಂತೆ. ಅಷ್ಟೇ ಅಲ್ಲಾರೀ, ಶಿಕ್ಷಣದಿಂದ ಕನ್ನಡವನ್ನೇ ಮಾಯ ಮಾಡಿದಂತೆ. ಹೀಗೇನಾದ್ರು ಆದ್ರೆ, ಹಳ್ಳಿ ಮಕ್ಳು ಪಟ್ಟಣ ಸೇರಿ ಆಂಗ್ಲ ಮಾಧ್ಯಮ ಶಿಕ್ಷಣ ಶುರುಹಚ್ಚಕ್ಕೊಳ್ತಾರೆ. ಆಗ, ಕನ್ನಡ ಅನಾಥವಾಗದೇ ಮತ್ತೇನಾದೀತು? ನನ್ನ ಅಭಿಪ್ರಾಯದ ಪ್ರಕಾರ ಕನ್ನಡ ಶಾಲೆಗಳನ್ನು ಮುಚ್ಚುವ ಬದಲು ಇಂತಹ ಸ್ಥಿತಿ ಬರಲು ಏನು ಕಾರಣ ಎಂಬುದನ್ನು ಶೋಧಿಸಬೇಕು. ಅಷ್ಟಕ್ಕೂ ಕನ್ನಡ ಶಾಲೆಗಳನ್ನು ಉಳಿಸುವ ಜವಾಬ್ದಾರಿ ಸರಕಾರ ಹಾಗೂ ಶಿಕ್ಷಕರ ಮೇಲಿದೆ. ಈ ದಾಯಿತ್ವವನ್ನು ಸಮರ್ಥವಾಗಿ ನಿಭಾಯಿಸುವಂತಾಗಬೇಕು.

ಶಿಕ್ಷಕರೂ ಕೂಡ ಕರ್ತವ್ಯಪ್ರಜ್ಞೆ, ಬದ್ಧತೆಯಿಂದ ಕಾರ್ಯನಿರ್ವಹಿಸಿ ವಿದ್ಯಾರ್ಥಿಗಳಿಗೆ ಜ್ಞಾನ ಉಣಬಡಿಸಬೇಕು. ಶಾಲೆ ದೇವಾಲಯವಾಗುವುದು ಶಿಕ್ಷಕರಿಂದಲೇ, ಆದರೆ, ಇಂದು ಶಿಕ್ಷಕರ ಪೈಕಿ ಬಹುತೇಕರು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ. ವಿಶ್ವವಿದ್ಯಾಲಯಗಳಲ್ಲಂತೂ ಪ್ರಾಧ್ಯಾಪಕರಿಗೆ ಸಿಗುವ ದೊಡ್ಡ ಮೊತ್ತದ ಸಂಬಳ ಅವರನ್ನು ಆಲಸಿಗಳನ್ನಾಗಿಸಿದೆ. ಶಿಕ್ಷಣದ ಯೋಜನೆಗಳಲ್ಲೂ ಭ್ರಷ್ಟಾಚಾರ ರಾಚುತ್ತಿದೆ. ಹೀಗಾಗಿ ಶಿಕ್ಷಕರು ಸುಜ್ಞಾನಿಗಳಾಗಿ ಹಾಗೂ ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಲು ಮುಂದಾಗಬೇಕಿದೆ. ಒಟ್ಟಿನಲ್ಲಿ, ಕನ್ನಡ ಶಾಲೆಗಳನ್ನು ಮುಚ್ಚುವ ನಿರ್ಧಾರ ಹಿಂದಕ್ಕೆ ಪಡೆಯಬೇಕು. ಇಲ್ಲದಿದ್ದಲ್ಲಿ ಕನ್ನಡಕ್ಕೆ ಕುತ್ತು ಖಂಡಿತ.

ಕನ್ನಡದಲ್ಲಿ ಸಾಕಷ್ಟು ಸಾಹಿತ್ಯ ರಚನೆಯಾಗುತ್ತಿದೆ. ಆದರೂ, ಭಾಷೆಗೆ ಏಲ್ಲೋ ಆತಂಕ ಕವಿದಂತಿದೆಯಲ್ಲ?

ಈ ಸಂಗತಿಯನ್ನು ಅಲ್ಲಗಳೆಯುವಂತಿಲ್ಲ. ಇಂದು ಭಾಷೆ ಉಳಿಸುವ ನಿಟ್ಟಿನಲ್ಲಿ ಸವಾಲುಗಳು ಸಾಕಷ್ಟಿವೆ. ಮೊದಲಿಗೆ ಮಾತೃಭಾಷೆಯ ಪರಿಕಲ್ಪನೆ ಬದಲಾಗಬೇಕು. ಈ ಬಗ್ಗೆ ನಾವು ತುಂಬಾ

ಹಿಂದಿನ ಅಂದರೆ ಸ್ವಾತಂತ್ರ್ಯಪೂರ್ವದ ಪರಿಕಲ್ಪನೆಯನ್ನೇ ಈಗಲೂ ಮುಂದುವರಿಸಿಕೊಂಡು ಬರುತ್ತಿರುವುದರಿಂದ ಅಧ್ವಾನಗಳನ್ನು ಕಾಣುತ್ತಿದ್ದೇವೆ. ಮಾತೃಭಾಷೆಯೆಂದರೆ ಪ್ರಾದೇಶಿಕ ಭಾಷೆ, ರಾಜ್ಯ ಭಾಷೆ. ಹೀಗಾಗಿ ಇದರ ಮರುವ್ಯಾಖ್ಯಾನ ಅಗತ್ಯ. ಹಿಂದೆ ಸಮಾಜ ಸ್ಥಿರವಾಗಿತ್ತು. ಮನೆ ಒಳಗಡೆ ಹಾಗೂ ಹೊರಗಡೆ ಮಾತನಾಡುವ ಭಾಷೆ ಒಂದೇ ಆಗಿರುತ್ತಿತ್ತು. ಆದರೀಗ ಚಲನಶೀಲ ಸಮಾಜದಲ್ಲಿ ಮನೆಯ ಭಾಷೆಯೇ ಬೇರೆ, ಸಮಾಜದ ಭಾಷೆಯೇ ಬೇರೆ. ಹೀಗಿರುವಾಗ ಮಾತೃಭಾಷೆಯ ಹಳೆ ವ್ಯಾಖ್ಯಾನ ಸಂಕುಚಿತತೆಯನ್ನು ಪೋಷಿಸುತ್ತದೆ. ಇದು ಬರೀ ಕನ್ನಡಕ್ಕೆ ಸಂಬಂಧಿಸಿದ್ದಲ್ಲ. ಎಲ್ಲ ಪ್ರಾದೇಶಿಕ ಭಾಷೆಗಳೂ ಈ ಸ್ಥಿತ್ಯಂತರಕ್ಕೆ ಒಳಗಾಗಿವೆ. ಮಾತೃಭಾಷೆಗೆ ಮರುವ್ಯಾಖ್ಯಾನ ಮಾಡಲು ನಮ್ಮ ಸಂವಿಧಾನ ತಿದ್ದುಪಡಿ ತರಬೇಕು. ಯಾವೆಲ್ಲ ಸಂಗತಿಗಳಿಗೆ ಸಂವಿದಾನ ತಿದ್ದುಪಡಿ ತರುವ ನಮ್ಮ ಆಡಳಿತಗಾರರು ಈ ದಿಸೆಯಲ್ಲಿ ಇಚ್ಛಾಶಕ್ತಿ ತೋರಿಸಬೇಕಿದೆ.

ಹಿಂದೆಲ್ಲ ಸಾಹಿತ್ಯ ಕೃಷಿ ಮೌಲ್ಯ, ನೈತಿಕತೆಯನ್ನು ಬಿಂಬಿಸುತ್ತಿತ್ತು. ಇತ್ತೀಚಿನ ಸಾಹಿತ್ಯ ವರ್ತಮಾನದ ತಲ್ಲಣಗಳಿಗೆ ಅಷ್ಟಾಗಿ ಸ್ಪಂದಿಸುತ್ತಿಲ್ಲ. ಭ್ರಷ್ಟಾಚಾರ ವಿರುದ್ಧ ನಡೆದಿರುವ ಆಂದೋಲನವನ್ನೇ ತೆಗೆದುಕೊಂಡು ನೈತಿಕ ಮೌಲ್ಯ ಬಿತ್ತುವ ಕಾರ್ಯ ಸಾಹಿತ್ಯದಿಂದ ಆಗಬೇಕಲ್ಲವೇ?

ನಮ್ಮ ಅಸ್ಮಿತೆ ನಾಶವಾಗಿರುವುದೇ ಇದಕ್ಕೆ ಕಾರಣ. ಇಲ್ಲಿನ ಆಚರಣೆಗಳು, ಪದ್ಧತಿಗಳು, ಹೀಗೆ ಜೀವನದ ಹಲವು ಆಯಾಮಗಳು ಉತ್ತರ ಭಾರತವನ್ನೇ ಅವಲಂಬಿಸಿವೆ. ಹೊರಗಿನಿಂದ ಆದರ್ಶಗಳನ್ನು ಸ್ವೀಕರಿಸುವುದು ತಪ್ಪಲ್ಲ. ಆದರೆ, ನಮ್ಮಲ್ಲಿನ ಒಳ್ಳೇತನಗಳನ್ನು ಆದರ್ಶಗಳನ್ನು ಗುರುತಿಸದಿರುವುದು ಅಸ್ಮಿತೆಯ ವಿಸ್ಮೃತಿಯನ್ನು ಸೂಚಿಸುತ್ತದೆ. ಸ್ವಾತಂತ್ರ್ಯದ ತರುವಾಯವೂ ಉತ್ತರ ಭಾರತದ ಪ್ರವಾಹ ನಮ್ಮ ಅಸ್ಮಿತೆಯನ್ನು ಹಾಳುಗೆಡುವುತ್ತಾ ಬಂದಿದೆ. ಇದು ಎಷ್ಟರಮಟ್ಟಿಗೆ ಎಂದರೆ ನಮ್ಮತನವನ್ನೇ ಮರೆಸುವಂತಾಗಿದೆ. ಇದರ ಪರಿಣಾಮವೇ ಕನ್ನಡಿಗರಿಗೆ ಕರ್ನಾಟಕ ಬಾಡಿಗೆ ಮನೆಯಂತಾಗಿದೆ. ಬಾಡಿಗೆ ಮನೆಯಲ್ಲಿರುವಾಗ ಸ್ವಂತಿಕೆಯ ಅರಿವು ಆಗುವುದಿಲ್ಲ. ಕನ್ನಡಿಗರು ಈಗಲೂ ತಮ್ಮ ಅಸ್ಮಿತೆಯನ್ನು ತಿಳಿದುಕೊಳ್ಳುತ್ತಿಲ್ಲ. ಎಲ್ಲಿಯವರೆಗೆ ನಮ್ಮ ಅಸ್ಮಿತೆ ಜಾಗೃತಗೊಳ್ಳವುದಿಲ್ಲವೋ ಅಲ್ಲಿಯವರೆಗೆ ಕನ್ನಡ ಉದ್ಧಾರವಾಗೋಲ್ಲ.

ಜಾಗತೀಕರಣದ ಈ ಯುಗದಲ್ಲಿ ಕನ್ನಡ ಜೀವನ ಕಟ್ಟಿಕೊಡಬಲ್ಲುದೆ ಎಂಬ ಪ್ರಶ್ನೆ ಪದೇ–ಪದೇ ಉದ್ಭವವಾಗುತ್ತಿದೆ. ಇದಕ್ಕೇನು ಪರಿಹಾರ ಅಂತಿರಿ?

ಕನ್ನಡಿಗ ತಾನು ಕನ್ನಡಿಗನಾಗುವುದರ ಜೊತೆಗೆ ಅಂತರಾಷ್ಟ್ರೀಯ ವ್ಯಕ್ತಿಯೂ ಆಗಬೇಕು. ಕೇವಲ ಕನ್ನಡಿಗ ಎಂಬ ಚೌಕಟ್ಟು ಅಳವಡಿಸಿಕೊಂಡರೆ ಎತ್ತರಕ್ಕೆ ಬೆಳೆಯಲು ಸಾಧ್ಯವಿಲ್ಲ. ಭಾಷೆಯ ಸ್ವಾಭಿಮಾನವನ್ನು ನಮ್ಮದಾಗಿಸಿಕೊಂಡು ಜಾಗತೀಕರಣ ಎದುರಿಸುವ ಅಂತಾರಾಷ್ಟ್ರೀಯ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕಾಗಿದೆ.

ಇಂದಿನ ವಿದ್ಯಾರ್ಥಿಗಳಲ್ಲಿ ಕನ್ನಡದ ಆಸಕ್ತಿ ಬಹುಬೇಗ ಕಡಿಮೆಯಾಗುತ್ತಿದೆ. ಹೀಗಿರುವಾಗ ಮುಂದಿನ ತಲೆಮಾರು ಕನ್ನಡತನವನ್ನು ಉಳಿಸಿಕೊಳ್ಳಲು ಹೇಗೆ ಸಾಧ್ಯ?

ಈಗಿನ ಶಿಕ್ಷಣದಲ್ಲಿ ಮಾಹಿತಿ ಇದೆ. ಮೌಲ್ಯಜ್ಞಾನವಿಲ್ಲ. ಬರೀ ಮಾಹಿತಿಯಾಧಾರಿತ ಶಿಕ್ಷಣ ವಿದ್ಯಾರ್ಥಿಗಳ ಆಸಕ್ತಿಯನ್ನು ಕುಗ್ಗಿಸುತ್ತದೆ. ಇದಕ್ಕೆ ಕನ್ನಡವೂ ಹೊರತಾಗಿಲ್ಲ. ಈ ದಿಸೆಯಲ್ಲಿ ವಿದ್ಯಾರ್ಥಿಗಳಿಗೆ ನಮ್ಮವರ ಸಾಧನೆಗಳನ್ನು ಸಾಹಿತ್ಯಕ ಮೌಲ್ಯಗಳನ್ನು ತಿಳಿಸಿಕೊಡುವ ಯತ್ನವಾಗಬೇಕು.

ಒಟ್ಟಾರೆ, ಕನ್ನಡ್ದದ ಅಪಾರ ಶಕ್ತಿಯನ್ನು ಬಳಸಿಕೊಳ್ಳಲು ಕನ್ನಡಿಗರು ಮುಂದಾಗಬೇಕಿದೆ. ನಮ್ಮ ಭಾಷೆಯಲ್ಲಿ ಅಸೀಮ ಶಕ್ತಿ ಇದ್ದರೂ, ಅದರ ಬಳಕೆಯಲ್ಲಿ ಹಿಂದುಳಿದಿದ್ದೇವೆ.

ಹೊಸ ದಿಗಂತ : ೧೧ ನವೆಂಬರ್ ೨೦೧೧

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೦೪

ಕನ್ನಡದ ನಾಳೆಗಳು ಆತಂಕದಲ್ಲಿ . . .

❖

ಸಂದರ್ಶಕರು : ಡಾ. ಶ್ಯಾಮಸುಂದರ ಬಿದರಕುಂದಿ

ಶ್ಯಾಮಸುಂದರ ಬಿದರಕುಂದಿ : ಕನ್ನಡಕ್ಕೆ ದೊರೆತಿರುವ ಕ್ಲಾಸಿಕಲ್ (ಶಾಸ್ತ್ರೀಯ) ಸ್ಥಾನಮಾನ ಭಾಷೆಯ ಮುನ್ನಡೆಗೆ ಪ್ರೋತ್ಸಾಹ ಕೊಟ್ಟಂತೆ ಅಲ್ಲವೇ?

ಎಂ.ಎಂ. ಕಲಬುರ್ಗಿ : ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದ್ದು ನ್ಯಾಯೋಚಿತ. ಇದು ರಾಜಕೀಯವಾಗಿ ಹೆಮ್ಮೆಯ ವಿಷಯ. ಇದರಿಂದ ಕನ್ನಡಿಗರ ಹೊಣೆ ಹೆಚ್ಚಿದೆ. ಅಭಿಮಾನ–ಹೆಮ್ಮೆ ತೋರಿಸುವುದು ಕೇವಲ ಪ್ರಾಥಮಿಕ ಪ್ರತಿಕ್ರಿಯೆ. ಕನ್ನಡಕ್ಕಿರುವ ಪ್ರಬುದ್ಧತೆ ಕನ್ನಡಿಗರನ್ನು ಎಲ್ಲ ನೆಲೆಗಳಲ್ಲಿ ಬೆಳೆಸಬೇಕಾಗಿದೆ. ಶ್ರೀಮಂತ ಸಾಹಿತ್ಯ, ಅತೀ ಶ್ರೀಮಂತ ಸಾಧನೆಗಳು ಕನ್ನಡಿಗರಿಂದಾಗಿವೆ. ಕನ್ನಡದ ಉಳಿವು, ಬಳಕೆ, ಬೆಳವಣಿಗೆಗೆ ಸರ್ಕಾರ ಕಾನೂನು ಜಾರಿಗೆ ತಂದಿದೆ. ಅಪಾರ ಪ್ರಮಾಣದ ಹಣ ಕನ್ನಡದ ಕೆಲಸಗಳಿಗಾಗಿ ವ್ಯಯವಾಗುತ್ತಿದೆ. ಕಂಡಾಪಟ್ಟೆ ಅಧ್ಯಯನ ಯೋಜನೆಗಳು ರೂಪುಗೊಂಡಿವೆ. ಹೀಗಿದ್ದೂ, ಕನ್ನಡದ ಭವಿಷ್ಯ ಆತಂಕಕಾರಿ ಯಾಗಿದೆ.

ಶ್ಯಾಮಸುಂದರ ಬಿದರಕುಂದಿ : ಭಾಷೆಯ ಬೆಳವಣಿಗೆ ಹಾದಿ ತಪ್ಪಿದೆಯೇ?

ಎಂ.ಎಂ. ಕಲಬುರ್ಗಿ : ಹೌದು. ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಸ್ವಾತಂತ್ರ್ಯಬೇಕು, ಅವಕಾಶ ಬೇಕು. ಅದಕ್ಕೂ ಮುಖ್ಯವಾಗಿ ಪ್ರತಿಭೆ, ಪರಿಶ್ರಮಗಳು ಬೇಕೇ ಬೇಕು. ಇವುಗಳದೇ ಕೊರತೆ. ಜಾಗತೀಕರಣ, ಖಾಸಗೀಕರಣದ ನೆಪದಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ಕನ್ನಡತನಕ್ಕೆ ವಿಮುಖರಾಗಿ ವರ್ತಿಸುತ್ತಾರೆ. ಇದು ಭಾರತದ ಎಲ್ಲ ಪ್ರಾದೇಶಿಕ ಭಾಷೆಗಳಿಗೂ ಅನ್ವಯವಾಗುತ್ತದೆ. ರಾಜಕೀಯ ಇಚ್ಛಾಶಕ್ತಿ ಇಲ್ಲದ್ದರಿಂದ ಕನ್ನಡ ಕಲಿಕೆಗೆ ಮೊದಲ ಪೆಟ್ಟು ಈಗ ಬಿದ್ದಿದೆ. ಮೂರೂವರೆ ಸಾವಿರ ಕನ್ನಡ ಶಾಲೆಗಳು ಅಧಿಕೃತವಾಗಿ ಮುಚ್ಚಲಿವೆ. ಎರಡನೆಯದು ಕನ್ನಡ ಮಾಧ್ಯಮ ವಿಷಯದಲ್ಲಿ ಖಚಿತವಾದ ರೀತಿ, ನಿಲುವು ತಾಳದ ಸರಕಾರ ಹಿಂದೇಟು ಹಾಕುತ್ತಿದೆ. ದೋಷಪೂರ್ಣ ಶಿಕ್ಷಣ ನೀತಿಯಿಂದಾಗಿ ಭಾವೀ ತಲೆಮಾರಿನ ಕನ್ನಡಿಗರು ಕನ್ನಡತನ ಉಳಿಸಿಕೊಳ್ಳುವುದು ಅಸಾಧ್ಯವಾಗಿದೆ. ಪ್ರಾದೇಶಿಕ ಭಾಷೆ ನಾಡಿನ ಮಾತೃಭಾಷೆ. ಅದನ್ನು ಏಳನೆಯ ತರಗತಿಯವರೆಗಿನ ಎಲ್ಲ ವಿದ್ಯಾರ್ಥಿಗಳು ಕಡ್ಡಾಯ ಕಲಿಯಬೇಕು. ಕೇಂದ್ರ ಶಾಲೆಗಳು ಮತ್ತು ಖಾಸಗೀ ಇಂಗ್ಲಿಷ್ ಮಾಧ್ಯಮ ಶಾಲೆಗಳು ವಿದ್ಯಾರ್ಥಿಗಳಲ್ಲಿ ಅಸಮಾನತೆ ತರುತ್ತಿವೆ. ಏಕರೂಪದ

ಶಿಕ್ಷಣ ಎಲ್ಲರಿಗೂ, ಎಲ್ಲ ಮಟ್ಟಗಳಲ್ಲಿಯೂ ಕೊಟ್ಟಾಗ ಬಡವರು, ಹಳ್ಳಿಗರು ಉದ್ಧಾರವಾಗುತ್ತಾರೆ. ಇದಕ್ಕಾಗಿ ಸರ್ಕಾರವನ್ನು ಅವಲಂಬಿಸಿ ಬದಲಾವಣೆ ಮಾಡುವುದು ಅಸಾಧ್ಯದ ಸಂಗತಿಯಾಗಿದೆ. ಹೈಟೆಕ್ ಭ್ರಮೆಯಲ್ಲಿ ಭಾಷಾ ಕಲಿಕೆ ಮತ್ತು ಸಾಹಿತ್ಯದ ಅಭ್ಯಾಸ ಕೈಬಿಟ್ಟು ಹೋಗುವ ಪರಿಸ್ಥಿತಿಯನ್ನು ಎಲ್ಲ ಶಿಕ್ಷಣ ತಜ್ಞರು ಮುಖ್ಯವಾಗಿ ಭಾಷಾ ಶಿಕ್ಷಕರು ಒಗ್ಗಟ್ಟಿನಿಂದ ಎದುರಿಸಬೇಕಾಗಿದೆ.

ಶ್ಯಾಮಸುಂದರ ಬಿದರಕುಂದಿ : ತ್ರಿಭಾಷಾ ಸೂತ್ರ ಅನ್ವಯಿಸಬೇಕು ಎನ್ನುತ್ತೀರೇನು?

ಎಂ.ಎಂ. ಕಲಬುರ್ಗಿ : ಹೌದು. ಕರ್ನಾಟಕದಲ್ಲಿ ಕನ್ನಡ ಏಳನೆಯ ತರಗತಿಯವರೆಗೆ ಮಾಧ್ಯಮವಾಗಿರತಕ್ಕದ್ದು. ಎರಡನೆಯ ಭಾಷೆಯಾಗಿ ಇಂಗ್ಲಿಷ್/ಹಿಂದಿ ಕಲಿಯಬಹುದು. ಮೂರನೆಯ ಭಾಷೆಯಾಗಿ ಅವರವರ ಮಾತೃಭಾಷೆಯ ಅಭ್ಯಾಸ ಮಾಡಬಹುದು. ಭಾಷಾ ಕಲಿಕೆಗೆ ಸರ್ಕಾರ ಆದ್ಯತೆ ಕೊಟ್ಟು ಮಕ್ಕಳನ್ನು ಸುಸಂಸ್ಕೃತರಾಗಿ ರೂಪಿಸಲು ಖರ್ಚು ಮಾಡಬೇಕು. ಉಳಿದೆಲ್ಲ ಸುಧಾರಣೆಗಿಂತ ಇದು ಮೊದಲ ಆದ್ಯತೆಯಾಗಬೇಕು. ಅಂತೆಯೇ ಕರ್ನಾಟಕ ಸರ್ಕಾರ ಕನ್ನಡ ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ತತ್‌ಕ್ಷಣ ಕೈಬಿಡಬೇಕು.

ಭಾಷಾ ಶಿಕ್ಷಕರು ಶಿಕ್ಷಣದ ಮೂಲದಲ್ಲಿರುವ ಭಾಷೆ-ಸಾಹಿತ್ಯದ ಕಲಿಕೆಯ ಬಗ್ಗೆ ಕಾಳಜಿವಹಿಸಿ ಕ್ರಾಂತಿಕಾರಕ ರೀತಿಯಲ್ಲಿ ಕೆಲಸ ಮಾಡಬೇಕು. ತರಗತಿಗೆ ನಿಷ್ಠೆ ಮತ್ತು ಸಮಾಜಕ್ಕೆ ನಿಷ್ಠೆ ಇವೆರಡೂ ಶಿಕ್ಷಕರ ಗುರಿಯಾದಾಗ ಮುಂದಿನ ತಲೆಮಾರಿನ ಯುವಕರಿಗೆ ಸರಿಯಾದ ಹಾದಿ ತೋರಿಸಿದಂತಾಗುತ್ತದೆ. ಉನ್ನತ ಶಿಕ್ಷಣದಲ್ಲಿ ಶಿಕ್ಷಕರ ಪಗಾರ ಹೆಚ್ಚಾಗಿ ಸೋಮಾರಿತನ ಬೆಳೆಯಿತು. ಅಧ್ಯಯನ ಯೋಜನೆಗಳು ಬಂದು ಭ್ರಷ್ಟತೆ ಹೆಚ್ಚಾಯಿತು. ಇದನ್ನು ತಪ್ಪಿಸುವ ಜವಾಬ್ದಾರಿ ಶಿಕ್ಷಕನದೇ.

ಶ್ಯಾಮಸುಂದರ ಬಿದರಕುಂದಿ : ಧರ್ಮ, ಮತ, ಜಾತಿಗಳನ್ನು ನೀವು ಹೇಗೆ ಅರ್ಥೈಸುತ್ತೀರಿ?

ಎಂ.ಎಂ. ಕಲಬುರ್ಗಿ : ಧರ್ಮ ಯಾವತ್ತೂ ಒಂದು ಆದರ್ಶ ಕಲ್ಪನೆ. ಮನುಷ್ಯಪ್ರಜ್ಞೆಯಿಂದ ಮೂಡಿ ಮಾನವಿಕ ಮೌಲ್ಯಗಳಾದ ಸತ್ಯ, ಅಹಿಂಸೆ, ಶಾಂತಿ, ಸಹಬಾಳ್ವೆಯಂತಹ ಮೂಲಾಂಶಗಳನ್ನು ಆಧಾರವಾಗಿಟ್ಟುಕೊಂಡಿರುವ ನಿರ್ವಿವಾದಿತ ಕಲ್ಪನೆ. ವೈದಿಕ, ಕ್ರೈಸ್ತ, ಇಸ್ಲಾಂ ಮುಂತಾದ ಧರ್ಮಗಳು ಒಂದೊಂದು ದೇಶ ಪ್ರದೇಶಗಳಲ್ಲಿ ನಾಗರಿಕ ಲಕ್ಷಣಗಳೊಂದಿಗೆ ಹುಟ್ಟಿದವು, ಗ್ರಂಥಸ್ಥವಾದವು. ಇಂದಿಗೂ ದೇಶ ಕಾಲಾತೀತವಾಗಿ ಸ್ಮೃತಿಯಲ್ಲಿ ಉಳಿದುಬಂದಿವೆ. ಅವೆಲ್ಲ ಜಾತಿ, ಮತಗಳಾಗಿ ಮಾರ್ಪಟ್ಟಿವೆ. ಕನ್ನಡ ನಾಡಿನಲ್ಲಿ ವೈದಿಕ ಮತದ ಜೊತೆಗೆ ಅವೈದಿಕ ಮತಗಳಾದ ಜೈನ ಹಾಗೂ ವೀರಶೈವಗಳು ಬಂದವು. ನಾವಿಂದು ವೈಯಕ್ತಿಕ ಸ್ವಾರ್ಥ ಸಾಧನೆಗಾಗಿ ವ್ಯಕ್ತಿಗಳಿಗೆ ಮತ ಜಾತಿಗಳನ್ನು ಅಂಟಿಸಿಕೊಂಡು ಧರ್ಮ, ತತ್ವದ ಆದರ್ಶಗಳನ್ನು ಮರೆತಿದ್ದೇವೆ. ಇದರ ಮೂಲಕಾರಣ ಧರ್ಮಗಳು ಸಾಮಾಜಿಕವಾಗಿ ವ್ಯಕ್ತಿತ್ವ ನಿರಸನಗೊಂಡು ಬೆಳೆಯದೇ ಇರುವುದು.

ಶ್ಯಾಮಸುಂದರ ಬಿದರಕುಂದಿ : ಕರ್ನಾಟಕ 'ಧರ್ಮ'ವನ್ನು ಪ್ರತಿಪಾದಿಸಲಿಕ್ಕೆ ಸಿದ್ಧವಾದಂತಿದೆ?

ಎಂ.ಎಂ. ಕಲಬುರ್ಗಿ : ಹೌದು, ಲಿಂಗಾಯತ ಧರ್ಮ ವಚನ ಸಾಹಿತ್ಯದ ಜೊತೆಗೆ ಜಾರಿಯಲ್ಲಿ ಬಂದದ್ದನ್ನು ಕನ್ನಡಿಗರಾಗಿ ನಾವು ಎತ್ತಿ ಹಿಡಿಯಬೇಕಾಗಿದೆ. ಅದು ಅವೈದಿಕ ಮಾರ್ಗ ಅನುಸರಿಸಿ, ಕನ್ನಡತ್ವದ ಲಕ್ಷಣಗಳನ್ನು ವಿಸ್ತರಿಸಿದೆ.

ಶ್ಯಾಮಸುಂದರ ಬಿದರಕುಂದಿ : ಜೈನ ವೀರಶೈವಗಳೂ ಅವೈದಿಕವೇ ಆಗಿದ್ದವಲ್ಲ?

ಎಂ.ಎಂ. ಕಲಬುರ್ಗಿ : ಇವು ಸಂಪ್ರದಾಯನಿಷ್ಠ (ಶಾಸ್ತ್ರಬದ್ಧ) ನಾಮಾಂಕಿತದೊಂದಿಗೆ ಈಗಲೂ ಉಳಿದಿವೆ. ಲಿಂಗಾಯತವು ಮಾತ್ರ ಸಮಾಜನಿಷ್ಠ ಕನ್ನಡ ಸಂಸ್ಕೃತಿಯ ಲಕ್ಷಣಗಳೊಂದಿಗೆ ಚಾರಿತ್ರಿಕವಾಗಿ ಬೆಳೆದಿದೆ. ಒಮ್ಮೊಮ್ಮೆ ರಾಜಕೀಯ ಒತ್ತಡಗಳಿಂದ ವ್ಯಾವಹಾರಿಕ ಕಾರಣಗಳಿಂದ ಜೈನ, ವೀರಶೈವಗಳಲ್ಲಿ

ಮತಾಂತರ ಪ್ರಕ್ರಿಯೆ ನಡೆಯಿತು. ವೈದಿಕರ ರಿಚುವಲ್‌ಗಳನ್ನು ಆಚರಿಸುತ್ತ, ಅನೇಕ ದೇವರುಗಳ ಆರಾಧನೆಯನ್ನು ಒಪ್ಪಿಕೊಂಡು ಅವು ಬಂದಿವೆ. ಅವುಗಳಿಗೆ ಸಾಮಾಜಿಕ ಆಯಾಮ ಇರುವುದೇ ಇಲ್ಲ. ವೈಜ್ಞಾನಿಕ ಸಮಾಜ ಅಪೇಕ್ಷಿಸುವ ಪರಿವರ್ತನೆಗಳಿಗೆ ಬಾಗಿಲು ಮುಚ್ಚಿ ಸಂಪ್ರದಾಯ ಸ್ಥಿತಿಗೆ ಉಳಿದುಬಿಟ್ಟಿವೆ. ಆದ್ದರಿಂದ ಇವುಗಳಿಗೆ ಭಿನ್ನವಾಗಿ ಶಿವಶರಣರು ಕಟ್ಟಿಕೊಂಡ ಧರ್ಮ, ಲಿಂಗಾಯತ ತತ್ವದ ನಿಷ್ಠುರ ಆಚರಣೆಗೆ ಬದ್ಧವಾಗಿ ಹುಟ್ಟಿತು ಪರಂಪರೆಯಾಗಿ ಬೆಳೆದಿದೆ.

ಶ್ಯಾಮಸುಂದರ ಬಿದರಕುಂದಿ : ಲಿಂಗಾಯತ ಧರ್ಮ ಆಧುನಿಕವಾಗಿ ಬೆಳೆದ ಧರ್ಮ ಎಂದು ಯಾವ ನೆಲೆಯಿಂದ ಸಮರ್ಥಿಸುವಿರಿ?

ಎಂ.ಎಂ. ಕಲಬುರ್ಗಿ : ಲಿಂಗಾಯತ ಧರ್ಮ ಹನ್ನೆರಡನೆಯ ಶತಮಾನದ ಕನ್ನಡ ಸಮಾಜಕ್ಕೆ ಆಧುನಿಕತೆ ತಂದದ್ದು ಗಮನಿಸಬೇಕಾದ ಲಕ್ಷಣ. ಕಾಯಕವನ್ನು ಆಧರಿಸಿದ ಈ ಧರ್ಮ ಜಾತಿನಿರಪೇಕ್ಷ ರೀತಿಯಲ್ಲಿ ಬೆಳೆಯುವಂತೆ ಬಸವಣ್ಣ ಮೊದಲಾದ ಶಿವಶರಣರು ಅಕ್ಷರಶಃ ಆಚರಣೆಗೆ ತಂದರು. ವೃತ್ತಿಗಳು ಜಾತಿಸೂಚಕವಾಗಿದ್ದುದನ್ನು ಮರೆಸಿ, ಕಾಯಕತತ್ವ-ಷಟ್‌ಸ್ಥಲಗಳ ಸಿದ್ಧಾಂತದಿಂದ ಧಾರ್ಮಿಕಗೊಳಿಸಿದವು. ಅಂದರೆ, ಜನನ ಆಧಾರಿತ ಜಾತಿ-ಮತ ಮರೆಯಾಗಿ ಕಾಯಕತತ್ವ ಆಧಾರಿತ ಧರ್ಮ ತಲೆಯೆತ್ತಿತು. ಸಮಾಜದ ಉತ್ಪಾದಕ ಶಕ್ತಿಗಳ ಜಾತಿ ನಿರಪೇಕ್ಷ ಸಂಘಟನೆ ಅದಾಯಿತು. ಗಾಂಧೀಜಿ 'ಹಿಂದ್ ಸ್ವರಾಜ್' ಅಂದದ್ದು ಇಂತಹದನ್ನೇ.

ಶ್ಯಾಮಸುಂದರ ಬಿದರಕುಂದಿ : ಈ ಧರ್ಮದ ಪರಿಕಲ್ಪನೆ ಬಸವಣ್ಣನವರಲ್ಲಿ ಹೇಗಿದ್ದಿತು?

ಡಾ. ಎಂ.ಎಂ. ಕಲಬುರ್ಗಿ : 'ಸೋಹಂ ಎಂದೆನಿಸದೇ ದಾಸೋಹಂ ಎಂದೆನಿಸಯ್ಯಾ' ಎಂದ ಬಸವಣ್ಣ. ವ್ಯಕ್ತಿವಾದವನ್ನು ಹಿಂದಿಟ್ಟು ಶರಣ ಸಮಾಜದ ಸಮಷ್ಟಿವಾದವನ್ನು ಮುಂದೆ ತಂದರು. ಜಂಗಮತತ್ವ, ಜಂಗಮ ನಡೆಯುವ ದೇವರು, ಅಂದರೆ ಸ್ಥಿರ, ಜಡ ಮತ್ತು ವೈಯಕ್ತಿಕತೆಯನ್ನು ನಿವಾರಿಸಿಕೊಂಡವರು. ಇದಕ್ಕೆ ವ್ಯತಿರಿಕ್ತವಾಗಿ 'ಸೋಹಂ' ಎಂದುಕೊಳ್ಳುವ ಭಕ್ತ, ಸಾಂಪ್ರದಾಯಿಕ ಧರ್ಮ ಬೋಧನೆಯಲ್ಲಿ ಉಳಿದು ಯಥಾಸ್ಥಿತಿಯನ್ನು ಮುಂದುವರೆಸುತ್ತಾ ಹೋಗುತ್ತಾರೆ. 'ಸೋಹಂ' ಅನ್ನುತ್ತ ಭಕ್ತರಿಂದ 'ಮಹಾತ್ಮ' ಅನ್ನಿಸಿಕೊಳ್ಳುವುದು ಸುಲಭ. ಆದರೆ ದಾಸೋಹಂ ಭಾವವನ್ನು ತಾಳಿ ತತ್ವದಿಂದ ಮುನ್ನಡೆಯುವವ ಹುತಾತ್ಮನಾಗುವ ಪರಿಸ್ಥಿತಿ ಬರುತ್ತದೆ. ಬಸವಣ್ಣನವರಿಗೆ ಬಂದುದು ಅಂತಹ ಸ್ಥಿತಿ.

ಶ್ಯಾಮಸುಂದರ ಬಿದರಕುಂದಿ : ಅಂದರೆ ಮತೀಯ-ಮಠೀಯ ಆಗುವದು ಧರ್ಮಕ್ಕೆ ವಿಮುಖವಾದಂತೆ ಅಲ್ಲವೇ?

ಎಂ.ಎಂ. ಕಲಬುರ್ಗಿ : ಹೌದು. ನಮ್ಮ ಮಠ ವ್ಯವಸ್ಥೆ ಇದನ್ನು ಅರಿತು ವರ್ತಮಾನದ ಧರ್ಮಕ್ಕೆ ಸ್ಪಂದಿಸಬೇಕಾಗಿದೆ. ಇದು ಪ್ರಜಾಸತ್ತೆಗೆ ಅನುಗುಣವಾದದ್ದು. ಬಸವಣ್ಣನವರು ಕಾಯಕನಿಷ್ಠೆ ಉಳ್ಳ ಎಲ್ಲರಿಗೂ ಲಿಂಗದೀಕ್ಷೆ ಕೊಟ್ಟು ಅಸಮಾನತೆ, ಲಿಂಗತಾರತಮ್ಯ ನಿವಾರಿಸಿದರು. ಕೆಡುತ್ತಿದ್ದ ಸಾಂಪ್ರದಾಯಿಕ ಸಮಾಜವನ್ನು ಹೊಸ ನೀತಿ ನಡತೆಗಳಿಂದ ಸರಿಪಡಿಸಿದರು. ಇದು ಕರ್ನಾಟಕದಲ್ಲಿ ಸಾಧ್ಯವಾದ ಸುಸಂಸ್ಕೃತ ಅಭಿವೃದ್ಧಿ ಅನ್ನಬಹುದು.

ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೬ ನವೆಂಬರ್ ೨೦೧೧

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೦೫

ನೃಪತುಂಗ ಸಾಂಸ್ಕೃತಿಕ ಸಾಮ್ರಾಜ್ಯ ಕಟ್ಟಿದ ದೊರೆ

❖

ಸಂದರ್ಶಕರು : ಅನಿಲ ದೇಸಾಯಿ

ನಾಡಿನ ಸುಪ್ರಸಿದ್ಧ ವಿದ್ವಾಂಸರು, ಹೆಸರಾಂತ ಸಂಶೋಧಕರು ಆದ ಡಾ. ಎಂ.ಎಂ.ಕಲಬುರ್ಗಿ ಅವರಿಗೆ ಕರ್ನಾಟಕದ ಉನ್ನತ "ನೃಪತುಂಗ ಪ್ರಶಸ್ತಿ" ಸಂದ ಸಂದರ್ಭದಲ್ಲಿ ಆಕಾಶವಾಣಿ ಧಾರವಾಡ ಕೇಂದ್ರದಿಂದ ಪ್ರಸಾರವಾದ ಸಂದರ್ಶನ.

* * *

ಅನಿಲ ದೇಸಾಯಿ : ಆತ್ಮೀಯ ಕೇಳುಗರೇ, ಕನ್ನಡ ಸಾರಸ್ವತ ಲೋಕ, ವಿಶೇಷವಾಗಿ ಧಾರವಾಡ ಮತ್ತು ಉತ್ತರ ಕರ್ನಾಟಕ ಮತ್ತೊಮ್ಮೆ ಸಂಭ್ರಮಿಸುವ ಸಂದರ್ಭದಲ್ಲಿ ನಾವೆಲ್ಲ ಇದ್ದೀವಿ. ಬಹಳ ಮುಖ್ಯ ಕನ್ನಡ ಸಾಹಿತ್ಯವನ್ನು ನೋಡುವ ದೃಷ್ಟಿಯೊಳಗ ಸೃಜನ ಮತ್ತು ಸೃಜನೇತರ ಅಂತ ಅನುಕೂಲಕ್ಕಾಗಿ ಮಾಡಿಕೊಂಡ ವರ್ಗಾವಣೆಯನ್ನ ನಾವು ಕಾಣತೀವಿ. ಆದರೆ ಸೃಜನ ಮತ್ತು ಸೃಜನೇತರ ನಡುವೆ ಸೇತವೆಯಾಗಿ, ಒಬ್ಬ ಶ್ರೇಷ್ಠ ಸಂಶೋಧಕರಾಗಿ, ಜೊತೆಜೊತೆಗೆ ವಿಮರ್ಶಕರಾಗಿ ನಿಂತು ಈ ನಾಡಿಗೆ ಮಾರ್ಗದರ್ಶಕರಾದವರು, ಮಾರ್ಗಶಿರ ಮಾಸದಲ್ಲಿ ಜನಿಸಿದವರು, ಕವಿರಾಜಮಾರ್ಗದಿಂದ ಪ್ರಭಾವಿತರಾದವರು ಅದರ ಜೊತೆಗೆ "ಮಾರ್ಗ" ಎಂಬ ೬ ಬೃಹತ್ ಸಂಪುಟಗಳನ್ನು ನಾಡಿಗೆ ನೀಡಿದಂತಹ ಡಾ. ಎಂ.ಎಂ. ಕಲಬುರ್ಗಿಯವರು ನಮ್ಮೊಂದಿಗಿದ್ದಾರೆ, ನಮ್ಮ ಸ್ಟುಡಿಯೋದಲ್ಲಿ. ಬಹಳ ವಿಶೇಷವಾದ ಸಂದರ್ಭವಿದು. ಯಾಕೆಂದರೆ ಈ ನಾಡಿನ ಸಾಕ್ಷಿಪ್ರಜ್ಞೆ, ಈ ನಾಡಿನ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಾದರಿಯಾಗಿ ನಿಲ್ಲುವಂತಹ ನೃಪತುಂಗ ಪ್ರಶಸ್ತಿ ಕಲಬುರ್ಗಿ ಗುರುಗಳಿಗೆ ಬಂದಿದೆ. ಆ ಮೂಲಕ ಅವರು ಈಡೀ ನಾಡಿಗೆ ಸಂತಸ ನೀಡುವ ಅವಕಾಶ ನೀಡ್ಯಾರ. ಸರ್ ತಮಗೆ ನಮ್ಮೆಲ್ಲ ಕೇಳುಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು ಸರ್.

ಕಲಬುರ್ಗಿ ಸರ್ : ನಮಸ್ಕಾರ

ಅನಿಲ : ಸರ್ ಈಗಿನ "ನೃಪತುಂಗ ಪ್ರಶಸ್ತಿ" ನಮ್ಮ ರಾಜ್ಯದ ಬಹುದೊಡ್ಡ ಪ್ರಶಸ್ತಿ ಈ ಸಂದರ್ಭದಲ್ಲಿ ತಮಗೇನೆನಿಸುತ್ತದೆ?

ಕಲಬುರ್ಗಿ ಸರ್ : ನಮ್ಮ ರಾಜಕೀಯ ಇತಿಹಾಸದೊಳಗ ನಾನು ಎರಡು ಮಾದರಿಗಳನ್ನು ಗುರುತಿಸ್ತೀನಿ. ಒಂದು ಪುಲಕೇಶಿ ಮಾದರಿ, ಇನ್ನೊಂದು ನೃಪತುಂಗ ಮಾದರಿ ಅಂತ. ಪುಲಕೇಶಿ ಮಾದರಿ ಭೌತಿಕ ಸಾಮ್ರಾಜ್ಯ ಕಟ್ಟೂದು. ನೃಪತುಂಗ ಮಾದರಿ ಸಾಂಸ್ಕೃತಿಕ ಸಾಮ್ರಾಜ್ಯ ಕಟ್ಟೂದು. ಪುಲಕೇಶಿ ನರ್ಮದೆಯ ವರೆಗೆ ನೆಲವನ್ನು ಗೆದಿಯುತ್ತ ಹೋದ. ನೃಪತುಂಗ ಆ ನೆಲವನ್ನ ಹೊಲವನ್ನಾಗಿ ಮಾಡಬೇಕಂತ ವಿಚಾರ ಮಾಡಿದ. ಅದಕ್ಕಾಗಿ ಆತ ಸಾಂಸ್ಕೃತಿಕವಾಗಿ ಈ ನಾಡನ್ನ ಬೆಳಸಬೇಕು ಅಂತ ತಿಳಕೊಂಡು ತನ್ನ ಆಸ್ಥಾನದೊಳಗ ಅನೇಕ ಕವಿಗಳಿಗೆ ಆಶ್ರಯಕೊಟ್ಟು ಕನ್ನಡ ಭಾಷೆ ಸಂಸ್ಕೃತಿಗೆ ಒಂದು ಮಾರ್ಗವನ್ನು ತೋರಿಸಬೇಕು ಅಂತ ಚರ್ಚೆ ನಡೆಸಿ "ಕವಿರಾಜಮಾರ್ಗ" ಅಂತ ಒಂದು ಶ್ರೇಷ್ಠ ಗ್ರಂಥವನ್ನು ಬರೆಸಿದ. ಈ ದೃಷ್ಟಿಯಿಂದಾಗಿ ನೃಪತುಂಗ ಹೆಸರಿನಿಂದ ಇರುವಂತಹ ಈ ಪ್ರಶಸ್ತಿ ಸಿಕ್ಕಿದ್ದು ನನಗೆ ಸಂತೋಷವನ್ನುಂಟುಮಾಡಿದೆ. ಅದನ್ನ ನಾನು ತುಂಬಾ ಪ್ರೀತಿಯಿಂದ ಸ್ವೀಕಾರ ಮಾಡ್ತೀನಿ.

ಅನಿಲ : ಬಹಳ ಒಳ್ಳೆಯ ಮಾತು ಹೇಳಿದ್ರಿ ಸರ್ ನೀವು, ನೃಪತುಂಗ ನೆಲವನ್ನು ಹೊಲ ಮಾಡಲು ಹೊರಟ ಅಂತ. ಆದ್ರ ನಿಮ್ಮ ಸಂಸ್ಕೃತಿಯ ಮೂಲವೂ ಹೊಲಾನ. ಯಾಕಂದ್ರ ಬಿಜಾಪೂರ ಜಿಲ್ಲಾ ಸಿಂದಗಿ ತಾಲೂಕಿನ ಯರಗಲ್ಲ ಗ್ರಾಮದವರಾದ ತಾವು, ತಮ್ಮ ತಂದೆ-ತಾಯಿಯವರು ಮುಖ್ಯವಾಗಿ ಕೃಷಿಯಲ್ಲಿಯೇ ತೊಡಗಿಸಿಕೊಂಡು ವ್ಯಾಪಾರ ಮಾಡುತ್ತಿದ್ದರು. ಆ ಹಿನ್ನೆಲೆಯಲ್ಲಿ ಈ ಕೃಷಿ ಸಂಸ್ಕೃತಿಯಿಂದ ಅಕ್ಷರ ಸಂಸ್ಕೃತಿಯ ಕಡೆಗೆ ಬರಲು ಏನು ಕಾರಣ-ಪ್ರೇರಣೆ?

ಕಲಬುರ್ಗಿ ಸರ್ : (ನಗುತ್ತ) ಈ ಪ್ರೇರಣೆ ಕಾರಣ ನಮಗ ಹಳ್ಳಿಯವರಿಗೆ ಇರುದಿಲ್ಲ. ಒಂದನೇತ್ತ ಪಾಸಾದ್ವಿ ಅಂತ ಹತ್ತನೇತ್ತಕ ಬರತೀವಿ, ನಪಾಸಾದರ ನಾವು ಹೊಲಕ್ಕ ಹೋಗತೀವಿ. ಆದರ ನಾನು ಹಂಗ ಪಾಸಾಗ್ತ ಬಂದೇ. ಆದರ ಮುಂದ ಬರಬರತ್ತ ನನಗೆ ಒಳ್ಳೇ ಗುರುಗಳು ಸಿಕ್ರು, ಅದ್ರಾಗ, ಕಾಲೇಜದೊಳಗ ಬಿ.ಟಿ.ಸಾಸನೂರ ಮೊದಲಾದ ಗುರುಗಳು ಇದ್ರಲಾ, ಅವರ ಒಂದು ಪ್ರೇರಣೆಯಿಂದ ನಾನು ಕನ್ನಡದ ಕಡೆ ಹೊರಳಲಿಕ್ಕೆ ಕಾರಣ ಆತು. ನಾನು ಕೃಷಿ ಸಂಸ್ಕೃತಿಯಿಂದ ಶಿಕ್ಷಣ ಸಂಸ್ಕೃತಿಗೆ ಬರಲಿಕ್ಕೆ ನನಗೇನು ಉಳಿದವರ ಪ್ರೇರಣೆಯಿರಲಿಲ್ಲ; ಪಾಸಾಗ್ತ ಬಂದದ್ದ ಪ್ರೇರಣೆ ಅಂತ ಅನಸ್ತದ.

ಅನಿಲ : ಆದ್ರ ಸರ್ ಅರ್ಥಶಾಸ್ತ್ರದ ಅಭ್ಯಾಸಿಯಾದ ನೀವು ಕನ್ನಡ ಭಾಷೆ ಸಾಹಿತ್ಯ ಕಡೆ ಒಲವು ಹೆಂಗ ಬೆಳಸಿಕೊಂಡ್ರಿ?

ಕಲಬುರ್ಗಿ ಸರ್ : ಆಗಿನ ಕಾಲದೊಳಗ ಎಕನಾಮಿಕ್ಸ್ ಓದುದು ಆರ್ಟ್ಸ ಫ್ಯಾಕಲ್ಟಿಯೊಳಗ ಭಾಳದೊಡ್ಡ ಆಕರ್ಷಣೆ ಆಗಿತ್ತು. ಅದರಿಂದ ಬ್ಯಾಂಕಿನೊಳಗ ದೌಡ ನೌಕರಿ ಸಿಗ್ತದ. ಅವೆಲ್ಲ ವಿಚಾರಗಳು ಇರತಿದ್ವು, ಹೀಗಾಗಿ ನನ್ನ ಸ್ನೇಹಿತರೆಲ್ಲ ಎಕಾನಾಮಿಕ್ಸ್ ತೆಗೆದುಕೊಂಡ್ರು. ನಾನು ಅದನ್ನ ತೆಗೆದುಕೊಂಡೆ. ಆದರ ನನಗ ಕನ್ನಡದ ಬಗ್ಗೆ ಮೊದಲಿನಿಂದಲೂ ಆಸಕ್ತಿ. ಎರಡನೆಯದಾಗಿ ಬಿ.ಟಿ.ಸಾಸನೂರ ಅವರ ಬೋಧನಾ ಕ್ರಮ ಅದಲ್ಲಾ ಅದು ನನ್ನ ಮ್ಯಾಲೆ ಭಾಳ ಪ್ರಭಾವ ಬೀರಿತು. ಅದಕ್ಕಾಗಿ ಈ ಎನಾಮಿಕ್ಸ್

ಕ್ಲಾಸಿನೊಳಗ ಕುಂತ್ತಿದ್ರು ನನ್ನ ಲಕ್ಷಯೆಲ್ಲ ಕನ್ನಡ ಕ್ಲಾಸಿನ ಕಡೆಗೇ ಇರ್ತಿತ್ತು. ಒಂದಾರ ತಿಂಗಳ ಆದಕೂಡ್ಲೆ ಒಂದಿನ ಎಕನಾಮಿಕ್ಸ್ ಕ್ಲಾಸಿನ್ಯಾಗಿಂದ ಎದ್ದವನ ಸಾಸನೂರ ಸರ್ ಕ್ಲಾಸಿಗೆ ಹೋಗಿಬಿಟ್ಟೆ. ಅಲ್ಲಿಂದ ಇಲ್ಲೀತನಕ ಕನ್ನಡದ ಕೂಡನ ಅದೀನಿ.

ಅನಿಲ : ಅದಕ್ಕಾಗಿ ನಾವು ಸಾಸನೂರ ಗುರುಗಳನ್ನ ನೆನಸಬೇಕು ಮತ್ತು ಅಭಿನಂದಿಸಬೇಕು ಸರ್.

ಕಲಬುರ್ಗಿ ಸರ್ : ಖರೇ ಖರೇ, ಸಾಸನೂರ ಗುರುಗಳು ಭಾಳ ದೊಡ್ಡ ವಿದ್ವಾಂಸರು. ವಿದ್ವತ್ತು ಮತ್ತು ಶಿಸ್ತು ಇವೆರಡನ್ನು ನಾನು ಕಲಿತದ್ದು ಸಾಸನೂರ ಗುರುಗಳಿಂದ. ಆಮೇಲೆ ಎಂ.ಎ. ಬಂದಮ್ಯಾಲೆ ವಿದ್ವತ್ತಿನ ವಿಸ್ತಾರ ಮತ್ತು ಆಳವನ್ನ ನಾನು ಕಲಿತದ್ದು ಡಾ. ಆರ್.ಸಿ.ಹಿರೇಮಠರಿಂದ. ಹೀಗಾಗಿ ಅವರಿಬ್ಬರೂ ಗುರುಗಳು ನನ್ನನ್ನ ರೂಪಿಸಿದಂತಹ ದೊಡ್ಡ ಶಕ್ತಿಗಳು ಅಂತ ಇವತ್ತಿಗೂ ನಾನು ಭಾವಿಸಿದ್ದೀನಿ.

ಅನಿಲ : ಬಿಜಾಪೂರದಿಂದ ನೇರವಾಗಿ ವಿದ್ಯಾಕಾಶಿ ಧಾರವಾಡಕ್ಕೆ ಬಂದ್ರಿ. ಬಿಜಾಪೂರ ಜಿಲ್ಲಾದವರಿಗೆ ಆ ಕಾಲದಾಗ ಧಾರವಾಡಕ ಬರೂದಂದ್ರ ಆಕ್ಸಫರ್ಡಗೋ ಕ್ಯಾಂಬ್ರಿಜ್‌ಗೋ ಹೋದಷ್ಟು ಖುಷಿ ಆಗತಿತ್ತು. ಇಲ್ಲಿ ಬಂದ ಮೇಲೆ ನಿಮ್ಮನ್ನ ಪ್ರಭಾವಿಸಿದ ಸಂಸ್ಥೆ, ವ್ಯಕ್ತಿಗಳು ಯಾರು ಅಂತ ಹೇಳಬಹುದೇನು?

ಕಲಬುರ್ಗಿ ಸರ್ :(ವಿನೋದವಾಗಿ) ಶ್ರೀರಂಗರು ಬಿಜಾಪೂರ ಜಿಲ್ಲೆಯವರು. ಅವರೊಂದು ಮಾತು ಹೇಳತಿದ್ರು. ಏನಂದ್ರ ಬಿಜಾಪೂರ ಜಿಲ್ಲಾ "ಬೀಜ" ಭಾಳ ಗಟ್ಟಿ. ಆದರ ಅದು ಬರಗಾಲ ಪ್ರದೇಶ. ಅದಕ್ಕ ಆ ಬೀಜನ ಅಲ್ಲೆ ಊರಬಾರದು, ಅದನ್ನ ಹೊರಗಿನ ಜಿಲ್ಲೆಯೊಳಗ ಊರಬೇಕು ಅಂತ ಹೇಳತಿದ್ರು. ಹಿಂಗಾಗಿ ಧಾರವಾಡ ಸಾಂಸ್ಕೃತಿಕವಾಗಿ ಹದವಾದ ಭೂಮಿಯಿದೆ. ಇಲ್ಲಿ ಬೇಂದ್ರೆಯವರು, ಬಸವನಾಳರು, ಶಂ.ಬಾ. ಜೋಶಿ, ಬೆಟಗೇರಿ ಕೃಷ್ಣಶರ್ಮರೂ ವಿದ್ಯಾವರ್ಧಕ ಸಂಘ ಇಂಥಾ ಒಂದು ಪರಿಸರ ಇತ್ತಲ್ಲಾ ಈ ಪರಿಸರ ನನ್ನ ಮ್ಯಾಲೆ ದೊಡ್ಡ ಪ್ರಭಾವ ಬೀರಿತು. ದೇಸಾಯ್ರ, ಇನ್ನೂ ಒಂದು ಭಾಳ ಮಹತ್ವದ ಸಂಗತಿಯೆಂದರ ಆ ಕಾಲದೊಳಗ ನಾವೇನ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಇದ್ವೆಲ್ಲಾ, ನಾವು ಐದಾರು ಜನ ಇವತ್ತು ಕರ್ನಾಟಕಗೊಳಗ ಮುಖ್ಯ ಸಾಹಿತಿಗಳು ಚಂಪಾ ಆಯ್ತು, ಗಿರಡ್ಡಿ, ಪಟ್ಟಣಶೆಟ್ಟಿ ಆಯ್ತು, ನಾನು ಕಂಬಾರ ನಾವೆಲ್ಲ ಒಂದ ಬೆಂಚ ಮ್ಯಾಲೆ ಕುಂತು ಅಭ್ಯಾಸ ಮಾಡಿದವರು. ಇವತ್ತಿಗೂ ಜನಾ ಅಂತಾರ ಅಂಥಾ ಒಂದು ಟೀಂ ಇವತ್ತಿಗೂ ಬಂದಿಲ್ಲ ಅಂತ (ಹೆಮ್ಮೆಯಿಂದ ನಗುತ್ತ).

ಅನಿಲ : ಸರ್ ಅದರಲ್ಲೂ ಇದು ಎಂಥ ಅಪೂರ್ವ ಸಂದರ್ಭ ಅಂದ್ರ, ಇದೇ ವರ್ಷ ಕಂಬಾರರಿಗೆ 'ಜ್ಞಾನಪೀಠ', ತಮಗ "ನೃಪತುಂಗ" ಮತ್ತು ಚಂಪಾ ಸರ್‌ಗೆ "ಪಂಪ" ಪ್ರಶಸ್ತಿ ಬಂದಿದೆ ಇದೆಂಥ ಅಪರೂಪದ ಸಂದರ್ಭ.

ಕಲಬುರ್ಗಿ ಸರ್ : ಹೌದು ಹೌದು ಬರೋಬ್ಬರಿ ಹೇಳಿದಿರಿ ಅದಕ್ಕ ಕನ್ನಡದ ಸಂದರ್ಭದ ಈ ವಾತಾವರಣ ನನಗೂ ನಿಜಕ್ಕೂ ಸಂತೋಷ ತಂದದ.

ಅನಿಲ : ಸರ್ ಪಂಪ ನಿಮ್ಮ ಅತ್ಯಂತ ಮೆಚ್ಚಿನ ಕವಿ. ಪಂಪ ಭಾರತ ಓದ್ರಿ ಅಂದ್ರ ನಿರ್ಗಳವಾಗಿ ಹಾಡಲಿಕ್ಕ ಶುರುಮಾಡತೀರಿ. ಸರ್ ನನಗೆ ನೆನಪ ಅದ, ತಮ್ಮ ಪಂಪ ಪ್ರಶಸ್ತಿಯ ಒಂದು ಲಕ್ಷ ರೂಪಾಯಿ ಮೊತ್ತ ಬಂದಾಗ ತಾವು ಅದನ್ನ ಪಂಪ ಸ್ಮಾರಕ ಅಭಿವೃದ್ಧಿಗೆ ನೀಡಿ ಹಿರಿದಾದ ಆದರ್ಶ ಮೆರೆದಿದ್ದೀರಿ. ಸರ್ ಇನ್ನೊಂದು ಮಹತ್ವದ ವಿಷಯ ಅಂದ್ರ, ವಿಶ್ವ ಸಾಹಿತ್ಯ ಕನ್ನಡದ ಹಿರಿದಾದ ಕೊಡುಗೆ ಅಂದ್ರ ವಚನಸಾಹಿತ್ಯ. ವಚನಸಾಹಿತ್ಯದ ಕಡಿ ತಾವು ಯಾಕೆ ತಿರುಗಿದ್ರಿ?

ಕಲಬುರ್ಗಿ ಸರ್ : ನೋಡ್ರಿ ಕನ್ನಡ ಸಾಹಿತ್ಯವನ್ನ ಯಾವ ಓದತಾನ, ಅವ ಪಂಪನ ಪ್ರಭಾವದಿಂದ ಹೊರಗ ಬರ್ಲಾಕ ಸಾಧ್ಯನ ಇಲ್ಲ. ಭಾಳ ಭಾಳ ದೊಡ್ಡ ಕವಿ ಅವ. ಎಷ್ಟು ದೊಡ್ಡ ಕವಿ ಅಂದ್ರ ನನಗನಿಸ್ತದ ಹತ್ತನೆಯ ಶತಮಾನದೊಳಗ ಅವನಂಥ ದೊಡ್ಡ ಕವಿ ಇಡೀ ಜಗತ್ತಿನಲ್ಲೇ ಯಾರೂ ಇರಲಿಲ್ಲ ಅಂತ ಅನಸ್ತದ. ಬರೀ ಇಂಡಿಯಾದಾಗಲ್ಲ, ನಾ ಜಗತ್ತಿನ ಎಲ್ಲ ಸಾಹಿತ್ಯವನ್ನ ಸ್ಟಡಿ ಮಾಡಿ ನೋಡೀನಿ. ಆದ್ರ ಮುಂದ ನನಗೇನು ಅನಸ್ತು ಅಂದ್ರ ಈ ವಚನ ಸಾಹಿತ್ಯ ಅದಲಾ ಅದು ಪಂಪನಿಗಿಂತ ಭಿನ್ನವಾಗಿ ಸ್ಥಳೀಯತೆ ಅದಲ್ಲಾ, ನಾವೇನ ನೇಟಿವಿಟಿ ಅಂತಿವಲ್ಲಾ ಎಷ್ಟ ದೊಡ್ಡ ಪ್ರಮಾಣದಾಗ ಅದ ಮಾದರ ಚನ್ನಯ್ಯ, ಡೋಹರ ಕಕ್ಕಯ್ಯ, ಮಹಾದೇವಿಯಕ್ಕ ಇಂಥ ಸ್ಥಳೀಯರು, ಅಂದ್ರ ನಮ್ಮ ಸುತ್ತಮುತ್ತಲಿರುವ ಮಹಾತ್ಮರನ್ನು ಗುರುತಿಸಿದವರು ವಚನಕಾರರು. ಮತ್ತು ನಮ್ಮ ಭಾಷೆ ಅಂದ್ರ ಶಿಷ್ಟ ಭಾಷೆಯನ್ನು ಬಿಟ್ಟು ಜನರಾಡುವ ಭಾಷೆಯನ್ನ ಗುರುತಿಸಿದರಲ್ಲಾ ಅದು ನನಗ ಭಾಳ ಹಿಡಿಸ್ತು. ಅದಕ್ಕಾಗಿ ಸಾಹಿತ್ಯ ಸಾಮಾಜಿಕ ನ್ಯಾಯಕ್ಕಾಗಿ, ಸಾಹಿತ್ಯ ಸಾಮಾಜಿಕರಿಗಾಗಿ, ಸಾಮಾನ್ಯರಿಗಾಗಿ ಇದು ಆದದ್ದು ವಚನ ಸಾಹಿತ್ಯದಿಂದ ಅಂತ ನನಗೆ ಅನಸ್ತು. ಅದಕ್ಕಾಗಿ ನಾನು ವಚನ ಸಾಹಿತ್ಯಕ್ಕೆ ಪಂಪನನ್ನು ಹಿಡಕೊಂಡೇ ಬಂದಿನೇ ವಿನಃ ಅವನನ್ನು ಬಿಟ್ಟು ಬಂದಿಲ್ಲ.

ಅನಿಲ : ಸರ್ ಅನೇಕ ಮಠಮಾನ್ಯಗಳು ಬಸವಾದಿ ಶರಣರ ಆಶಯವನ್ನು ಮುನ್ನಡೆಸಿಕೊಂಡು ಹೋಗುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿವೆ. ತ್ರಿವಿಧ ದಾಸೋಹಗಳಲ್ಲಿ ಭಾಳ ಮುಖ್ಯವಾಗಿ ಅಕ್ಷರ ದಾಸೋಹವನ್ನು, ಅಂದ್ರ ಪ್ರಕಟಣೆಯ ರೂಪದಲ್ಲಿ ಮಠಮಾನ್ಯಗಳು ಮಾಡುವಂತೆ ಮಾಡಿದವರಲ್ಲಿ ತಾವು ಬಹಳ ಪ್ರಮುಖರು ಸರ್. ಆ ಕಾರ್ಯ ನಿಮಗೆಷ್ಟು ತೃಪ್ತಿ ತಂದಿದೆ.

ಕಲಬುರ್ಗಿ ಸರ್ : ನೋಡ ಅನಿಲ ಒಂದು ಮಾತ ಹೇಳ್ತಿನಿ. ನಾನು ಮಠಗಳ ಮೂಲಕ ಅಕ್ಷರ ಸಂಸ್ಕೃತಿಯನ್ನು ಪ್ರಚಾರ ಮಾಡಲಿಕ್ಕೆ ಕಾರಣ ಅಂದ್ರ "ಕನ್ನಡ." ನನಗೆ ಕನ್ನಡ ಬ್ಯಾರೆ ಅಲ್ಲ ಅಥವಾ ಕನ್ನಡ ಅಧ್ಯಯನ ಸಂಸ್ಥೆ ಬೇರೆ ಅಲ್ಲ, ಮತ್ತ ಮಠಗಳೂ ಬೇರೆ ಅಲ್ಲ. ಕನ್ನಡದ ಕೆಲಸಕ್ಕ ಯಾವುದೇ ಸಂಸ್ಥೆಯಿರಲಿ ಅದನ್ನ ಬಳಸ್ಕೋಬೇಕು ಅನ್ನುವ ನಾನು ಅದಕ್ಕಾಗಿ ಕನ್ನಡದ ಕೆಲಸ ಅಂತ ನಾನು ಮಠಗಳನ್ನ ಬಳಸಕೊಂಡಿನೇ ಹೊರತು ಅದು "ಮಠೀಯ" ಕೆಲಸ ಅಂತ ಅಲ್ಲ. ಆ ರೀತಿ ಮನೋಧರ್ಮ ಇದ್ದಂತಹ ಮಠಗಳ ವಿಚಾರ ಮಾಡಿದೆ. ಗದುಗಿನ ತೋಂಟದಾರ್ಯ ಮಠ ನನಗ ತುಂಬಾ ಯೋಗ್ಯವಾದ ವೇದಿಕೆ ಅಂತ ಅನಸ್ತು. ಆ ಮಠದ ಸ್ವಾಮಿಗಳಿಗೂ ಕನ್ನಡದ ಬಗ್ಗೆ ತುಂಬಾ ಭಕ್ತಿಯಿತ್ತು. ಅದಕ್ಕಾಗಿ ಅವರು ಮನಸ್ಸ ಮಾಡಿದ್ರು. ಅವರನ್ನ "ಕನ್ನಡದ ಜಗದ್ಗುರು" ಅಂತನ ಜನಾ ಕರೀತಾರ. ಅವರೇ ನನಗ ಮಾರ್ಗದರ್ಶನ ಮಾಡ್ರಿ ಅಂತ ಪ್ರಪೋಜಲ್ ಇಟ್ರು. ನಾನು ಬಯಸ್ತಿದ್ದ ಅವರೂ ಕೇಳಿದ್ರು ಹೀಗಾಗಿ ಅದು ಎಷ್ಟು ದೊಡ್ಡ ಕೆಲಸ ಆಯ್ತು ಅಂದ್ರ, "ಲಿಂಗಾಯತ ಪುಣ್ಯ ಪುರುಷರು" ಮಾಲೆಯೊಳಗ ೩೫೦ ಪುಸ್ತಕಗಳು ಆಡಾಡತ ಪ್ರಕಟ ಆಗಿಬಿಟ್ವು, ಆಮೇಲೆ ೫೦–

೬೦ ವಚನಸಾಹಿತ್ಯ ಸಂಪುಟಗಳು, ೧೫-೨೦ ಪಿಎಚ್.ಡಿ. ಪ್ರಬಂಧಗಳೂ ಹೊರಗ ಬಂದವು. ಅದು ನನ್ನ ದೃಷ್ಟಿಯೊಳಗ ಕನ್ನಡದ ಕೆಲಸವೇ. ಅದು ಆಮೇಲೆ ಸುತ್ತೂರು ಮಠದ ಕೆಲಸ, ಶಿವಮೊಗ್ಗ ಮಠದ ಕೆಲಸ ಆಯ್ತು. ಅದಕ್ಕಾಗಿ ಯಾರು ಕನ್ನಡದ ಕೆಲಸ ಮಾಡ್ತೀವಿ, ಮಠ ಇರ್ಲಿ, ಮನಿ ಇರ್ಲಿ, ಸಂಸ್ಥೆಯಿರಲಿ ಬರ್ರಿ ನಾ ನಿಮ್ಮಕೂಡ ಇರ್ತೀನಿ ಅಂದೆ.

ಅನಿಲ : ಯಾವುದೇ ಸಾಹಿತ್ಯ ಪ್ರಕಾರದ ಮುಖ್ಯವಾಗಿ ಒಂದು ಭಾಗ ಅಂದ್ರ ಸಂಶೋಧನೆ ಮತ್ತು ವಿಮರ್ಶೆ. ತಮ್ಮದು ಕೇವಲ ಸಂಶೋಧನೆಯಾಗಿರದೇ ಅದು ಸೃಜನಶೀಲ ಮತ್ತು ವಿಮರ್ಶಾತ್ಮಕವಾಗಿ ಬಂದಿರೋದರಿಂದ ಅದು ಕನ್ನಡದಲ್ಲಿ ಇನ್ನೊಂದು ಮಾದರಿಯನ್ನ ಆರಂಭಿಸಿದೆ. ನೀವು ಮೊದಲಿನಿಂದಲೂ ಶಂಬಾ ಮಾದರಿಯ ಪ್ರತಿಪಾದಕರು. ಇಂದಿನ ಕನ್ನಡ ಸಂಶೋಧನೆ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಕಲಬುರ್ಗಿ ಸರ್ : ನೋಡಿ, ಕೆಲವು ದಿವಸಗಳಿಂದ ನಾನೊಂದು ಮಾತು ಹೇಳಿದೆ, ಕರ್ನಾಟಕದೊಳಗ ಸಂಶೋಧನೆಯೊಳಗ ಎರಡು ಮಾದರಿಗಳಿವೆ ಅಂತ. ಒಂದು ಧಾರವಾಡ ಮಾದರಿ, ಇನ್ನೊಂದು ಮೈಸೂರು ಮಾದರಿ ಅಂತ. ಆದ್ರ ಇದು ಭಾಳ ಜನರಿಗೆ ಹಿಡಿಸಲಿಲ್ಲ. ಆದರೂ ನಾನು ಪ್ರತಿಪಾದನೆ ಮಾಡ್ತಾನೇ ಬಂದೀನಿ. ಯಾಕಂದ್ರ ಅದು ನನಗ ಖಾತ್ರಿ ಆಗೇದ. ಧಾರವಾಡ ಮಾದರಿ ಅಂದ್ರ ಸಂಸ್ಕೃತಿ ಮಾದರಿ. ಮೈಸೂರು ಮಾದರಿ ಅಂದ್ರ ಚರಿತ್ರೆಯ ಮಾದರಿ. ಧಾರವಾಡ ಮಾದರಿಯನ್ನು ರೂಪಿಸಿದ್ದು ಪುಣೆ. ಮೈಸೂರು ಮಾದರಿಯನ್ನ ರೂಪಿಸಿದ್ದು ಮದ್ರಾಸ್. ಹೀಗಾಗಿ ಅಲ್ಲಿಯ ಪರಿಸರದ ಕಾರಣವಾಗಿ ಅಲ್ಲಿ ಚರಿತ್ರೆಯನ್ನೇ ಬರಿದಿರಿ ನೀವು, ನಮ್ಮದು ಸಂಸ್ಕೃತಿಯ ಪರಂಪರೆಯ ಕಾರಣವಾಗಿ ನಾವು ಸಂಸ್ಕೃತಿಯನ್ನೇ ಹಿನ್ನೆಲೆಯಾಗಿ ಇಟಕೋಬೇಕಾತು. ಅದಕ್ಕಾಗಿ ನಾ ಅವರಿಗೆ ಹೇಳತಾ ಇದ್ದೆ. ಆರ್. ನರಸಿಂಹಾಚಾರ್ಯರು, ಚರಿತ್ರೆ ಅಭ್ಯಾಸ ಮಾಡಿದ್ರು, ಶಂಬಾ ಜೋಶಿಯವರು ಸಂಸ್ಕೃತಿ ಅಭ್ಯಾಸ ಮಾಡಿದ್ರು. ಅದರಿಂದ ನನಗ ಅನಸ್ತು ಚರಿತ್ರೆ ಮುಖ್ಯ. ಚರಿತ್ರೆ ಒಂದು ದೇಹ ಇದ್ದಂಗ. ಅದರ ಒಳಗ ಇರುವಂತಹ ಒಂದು ಆತ್ಮ – ಜೀವ ಅದಲಾ ಅದು ಸಂಸ್ಕೃತಿನೇ ಅದ. ಅದಕ್ಕಿಂತ ಈ ದೇಹದ ಮೂಲಕ ಒಳಗಿನ ಆತ್ಮ-ಸಂಸ್ಕೃತಿಯನ್ನ ಪ್ರವೇಶ ಮಾಡಬೇಕು ಅಂತ ಬಹಳ ದಿವಸಗಳ ತರುವಾಯ ಹೊಳಿತ ನನಗ. ಅದಕ್ಕೆ ನಾನು ಚರಿತ್ರೆಯ ಅಭ್ಯಾಸವನ್ನ ಒಳಗೊಂಡಂತೆ ಸಾಂಸ್ಕೃತಿಕ ಅಧ್ಯಯನದ ಕಡೆ ಲಕ್ಷ್ಯ ಹಾಕಿದೆ. ಹೀಗಾಗಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಗಳೇನದಾವಲಾ ಅವನ್ನ ನೋಡಲಿಕ್ಕೆ ಸಾಧ್ಯ ಆತು.

ಅನಿಲ : ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುರಿತಾದ ನಿಮ್ಮ ಕನಸು ಎಷ್ಟರ ಮಟ್ಟಿಗೆ ನನಸಾತು?

ಕಲಬುರ್ಗಿ ಸರ್ : ಹಂಪಿ ಕನ್ನಡ ವಿಶ್ವವಿದ್ಯಾಲಯ ಅದು ಕರ್ನಾಟಕದ ಪರಂಪರೆಯ ಶೋಧ, ಅಧ್ಯಯನ ಮತ್ತು ಪ್ರಸಾರ ಇದು ಭಾಳ ಮುಖ್ಯವಾದ ಅದರ ಕೆಲಸ. ಅಲ್ಲಿ ನಾ ಹೋದಾಗ ಶಿಕ್ಷರಿಗೆ ಮೂಲಭೂತ ಸೌಕರ್ಯಗಳೆಲ್ಲ ಆಗಿದ್ವು, ಆಗ ಅಲ್ಲಿಯ ಶಿಕ್ಷರಿಗೆ ಶೈಕ್ಷಣಿಕವಾದ ಆಸಕ್ತಿ ಮೂಡಸೂದು ಭಾಳ ಅಗತ್ಯ ಅಂತ ನನಗನಸ್ತು. ಯಾಕಂದ್ರ ಶಿಕ್ಷಣ ಸಂಸ್ಥೆ ಅಂದ್ರ ಶಿಕ್ಷಕರು. ಅದಕ್ಕಾಗಿ ಅವರಿಗೆ ಹೇಳಿದೆ ನಾನು, ನೋಡ್ರಿ ನೀವು ಸರಿಯಾಗಿ ಕೆಲಸ ಮಾಡದೇ ಇದ್ರ, ನನಗ ನಿಮಗ ಹೊಂದಾಣಿಕೆ ಆಗೂದಿಲ್ಲ. ನಾನೇನು ಇದರ ಮ್ಯಾಲೆ ಆಸೆ ಇಟ್ಟು ಬಂದಿಲ್ಲ. ಅದಕ್ಕಾಗಿ ನೀವು ನನ್ನ ಕೂಡ

ಹೊಂದಿಕೊಂಡು ಹೋಗಬೇಕು. ನನ್ನ ಮನೋಧರ್ಮ ಹೀಗದ. ಯಾಕಂದ್ರ ಶೈಕ್ಷಣಿಕವಾಗಿ ನಾವದನ್ನ ಬೆಳಸಬೇಕದ ಅಂತ ಹೇಳಿದೆ. ಮುಂದ ಅವರಿಗೂ ರುಚಿ ಹತ್ತಿತು. ಪ್ರತಿ ಮೂರು ತಿಂಗಳಿಗೊಮ್ಮೆ ಪ್ರತಿಯೊಂದು ವಿಭಾಗಕ್ಕೂ ಒಂದು ಯೋಜನೆ ಕೊಡ್ತಿದ್ದೆ ಮತ್ತು ಮೂರು ತಿಂಗಳಿಗೊಮ್ಮೆ ಬೆಟ್ಟಿಕೊಟ್ಟು ಪ್ರಗತಿಯನ್ನ ನೋಡತ್ತಿದ್ದೆ. ಬಂದ ಒಂದಾರು ತಿಂಗಳದೊಳಗ ಅವರಿಗೆ ಅದರ ರುಚಿ ಬೆಳದ ಬಿಟ್ತು. ಮುಂದ ನಾ ಹೇಳದೇ ಇದ್ದರು ಕೆಲಸ ನಡೆಸಿ ಬಿಡ್ತಿದ್ರು.

ಅನಿಲ : ಸರ್ ಬೇಂದ್ರೆ ಟ್ರಸ್ಟನ್ನ ರಾಷ್ಟ್ರೀಯ ಮಟ್ಟಕ್ಕ ಏರಿಸಿದ್ದು, ಆ ಮೂರು ವರ್ಷಗಳ ಕಾಲ ತಾವು ಮಾಡಿದ ಕೆಲಸ ಈಗ ಜನರ ಕಣ್ಣ ಮುಂದಿದೆ. ಸಾಧನಕೇರಿ ಕೆರೆಯ ಅಭಿವೃದ್ಧಿಗಾಗಿ ನೀವು ಪಟ್ಟ ಕಷ್ಟ, ಜನರನ್ನ ಜನಪ್ರತಿನಿಧಿಗಳನ್ನ ಕಾಡಿದ್ದು (ಅವರಿಂದ ಕಾಡಿಸಿಕೊಂಡಿದ್ದು) ಇವತ್ತು ಬೇಂದ್ರೆ ಟ್ರಸ್ಟಿಗೆ–ಅವರ ಮನೆಗೆ ಬಂದರ "ಬಾರೋ ಸಾಧನಕೆರೆಗೆ" ಅಂತ ಆ ಕೆರೆ ನಮ್ಮನ್ನ ಕರೆಯುವದು. ಸುಂದರವಾಗಿ ಕಂಗೊಳಿಸುತ್ತದೆ. ಇದರ ಜೊತೆಗೆ ಎರಡು ಧ್ರುವಗಳನ್ನು ಬೆಸೆಯುವ "ಬೇಂದ್ರೆ–ಕುವೆಂಪು ತೌಲನಿಕ ಅಧ್ಯಯನ" ಮಾಡಿದ್ರಿ, ಬೇಂದ್ರೆ ಪ್ರಶಸ್ತಿಯನ್ನ ಒಂದು ಲಕ್ಷ ರೂಪಾಯಿಗೆ ಏರಿಸಿ ರಾಷ್ಟ್ರ ಮಟ್ಟದಲ್ಲಿ ಪ್ರದಾನ ಮಾಡಿದ್ರಿ ಸರ್. ಬೇಂದ್ರೆ ಟ್ರಸ್ಟ್ ಇನ್ನೂ ಏನ ಮಾಡಬೇಕು ಅನಸ್ತದ ನಿಮ್ಗ.

ಕಲಬುರ್ಗಿ ಸರ್ : ನೋಡು ಅನಿಲ ನಾ ಮಾಡಿದ್ದು ಭಾಳ ಸ್ವಲ್ಪ ಅನಸ್ತತಿ. ಇನ್ನೂ ಭಾಳ ಮಾಡ ಬೇಕೋ..... ಯಾಕಂದ್ರ ಒಬ್ಬ ಕವಿ ಅಂದ್ರ ಕೇವಲ ಒಬ್ಬ ವ್ಯಕ್ತಿ ಅಲ್ಲ, ಒಂದು ಸುದೀರ್ಘ ಪರಂಪರೆಯ ಪ್ರತಿನಿಧಿ ಇರತಾನ. ಅವ ಅದನೆಲ್ಲಾ ತುಂಬಿಕೊಂಡ ನಿಂತಿರತಾನ. ಅದರಾಗ ಬೇಂದ್ರೆ ಅಂದ್ರ ಒಂದು ಪರಂಪರೆಯೂ ಅದ ಅವನಿಗೆ, ಮತ್ತ ಭಾಳ ಮುಖ್ಯವಾಗಿ ವ್ಯಾಪಕವಾದಂತೆ ಒಂದು ಅಧ್ಯಯನನೂ ಅದ ಅವನಿಗೆ. ಜಾಗತಿಕವಾಗಿ ಬೇಂದ್ರೆ ಅಧ್ಯಯನ ಮಾಡಿ ಇದನ್ನ ನಾವು ತಿಳಕೋಬೇಕು. ಇಂಥ ಒಬ್ಬ ದೊಡ್ಡ ಕವಿಯನ್ನ ಅಭ್ಯಾಸ ಮಾಡುವಾಗ ಅನೇಕ ಆಯಾಮಗಳು ನಮಗ ಸಿಗತಾವ ನೋಡ. ನಾವೇನೋ ಒಂದೆರಡ ಮೂರು ಆಯಾಮ ಗುರುತಿಸಿ ಅದನ್ನ ಹೊರಗ ತರಲಾಕ ಪ್ರಯತ್ನ ಮಾಡೀವಿ. ಮತ್ತ ನನ್ನ ಕಾಲದಲ್ಲಿಯೇ ಸರಕಾರನೂ ಸಹಕಾರ ಕೊಟ್ಟು.

ಅನಿಲ : ಹೌದು ಸರ್. ಆತ್ಮೀಯರೇ ಕನ್ನಡದ ಶ್ರೇಷ್ಠ ಸಂಶೋಧಕ, ಪ್ರಾಧ್ಯಾಪಕ, ಕವಿ, ನಾಟಕಕಾರ, ದಕ್ಷ ಆಡಳಿತಗಾರ ಡಾ.ಎಂ.ಎಂ.ಕಲಬುರ್ಗಿ ಗುರುಗಳು ಅವರಿಗೆ ಪ್ರತಿಷ್ಠಿತ ನೃಪತುಂಗ ಪ್ರಶಸ್ತಿ ಬಂದ ಸಂದರ್ಭದಲ್ಲಿ ಆಕಾಶವಾಣಿ ಧಾರವಾಡದೊಂದಿಗೆ ಸಂದರ್ಶನ ನೀಡಿದ್ದಾರೆ. ಸಾರ್. ನಿಮಗೆ ನಮ್ಮ ಎಲ್ಲ ಕೇಳುಗರ ಪರವಾಗಿ ಹಾಗೂ ಆಕಾಶವಾಣಿ ಪರವಾಗಿ ಧನ್ಯವಾದಗಳು ನಮಸ್ಕಾರ.

ಕಲಬುರ್ಗಿ ಸರ್: ಧನ್ಯವಾದ, ನಮಸ್ಕಾರ.

ಧಾರವಾಡ ಆಕಾಶವಾಣಿ 'ಬಾನುಲಿ ಸಂದರ್ಶನ'–೨೦೧೧

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

೩೦೬

ಅಣ್ಣಿಗೇರಿ ತಲೆ ಬುರುಡೆ ಶಿವಭಕ್ತರ ಶಿರಚ್ಛೇದ!

❖

ಸಂದರ್ಶನ : ಗೌರಿ ಲಂಕೇಶ ಪತ್ರಿಕೆ

ಧಾರವಾಡದ ತೆಕ್ಕೆಯಲ್ಲಿರುವ ಅಣ್ಣಿಗೇರಿ ಗ್ರಾಮ ಇತಿಹಾಸಕಾರರ ಚಿತ್ತವನ್ನೆಲ್ಲ ಸೆಳೆದಿರುವುದು ಹೊಸ ವಿಷಯವೇನಲ್ಲ. ೨೦೧೦ನೆಯ ಅಗಸ್ಟ್‌ನಲ್ಲಿ ಚರಂಡಿ ಕಾಮಗಾರಿಗಾಗಿ ನೆಲವನ್ನು ಅಗೆದಾಗ ಒಂದೇ ಹಳ್ಳದಲ್ಲಿ ಹತ್ತಾರು ತಲೆಬುರುಡೆಗಳು ದೊರಕಿದ್ದವು. ಅನುಮಾನವನ್ನು ಮೇಲೆಳೆದುಕೊಂಡು ಅಲ್ಲಿ ಸುದೀರ್ಘ ಉತ್ಖನನವನ್ನು ನಡೆಸಿದಾಗ ಬರೋಬ್ಬರಿ ೪೭೧ ತಲೆಬುರುಡೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದು ಬೆಳಕಿಗೆ ಬಂದಿತ್ತು.

ಅಲ್ಲಿಂದೀಚೆಗೆ ಆ ಬುರುಡೆಗಳ ಕುರಿತಾಗಿ ದಿನಕ್ಕೊಂದು ಹೊಸ ಹೊಸ ಅಚ್ಚರಿಯ ವಿಷಯಗಳು ಹೊರಬರುತ್ತಿವೆ. ಅದರಲ್ಲಿ ಕೆಲವೊಂದು ಸತ್ಯಕ್ಕೆ ಸಮಾಧಿ ಕಟ್ಟುವ ಹುನ್ನಾರದ ಪ್ರಯತ್ನಗಳಾಗಿದ್ದರೆ, ಮತ್ತೆ ಕೆಲವು ಸತ್ಯವನ್ನು ಬಡಿದೆಬ್ಬಿಸುವ ಪ್ರಯತ್ನಗಳಾಗಿದ್ದವು. ಈ ಹಿನ್ನೆಲೆಯಲ್ಲಿ ತಲೆಬುರುಡೆಗಳ ನಿಜವಾದ ಕಾಲಘಟ್ಟವನ್ನು ತಿಳಿಯಲು ಜಿಲ್ಲಾಡಳಿತವು ಅವುಗಳನ್ನು ಕಾರ್ಬನ್-೧೪ ಡೇಟಿಂಗ್‌ಗೆ ಒಳಪಡಿಸಲು ಭುವನೇಶ್ವರದ ಭೌತಶಾಸ್ತ್ರ ಸಂಸ್ಥೆಗೆ ಒಪ್ಪಿಸಿತ್ತು. ಮಾದರಿ ಪರೀಕ್ಷೆಯ ನಂತರ ಪ್ರೊ. ಡಿ.ಪಿ ಮಹಾಪಾತ್ರರವರು ಅವುಗಳು ಸುಮಾರು ೬೩೮ ವರ್ಷಗಳಷ್ಟು ಹಿಂದಿನವು ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತಾಗಿ ಸಂಶೋಧನಕಾರ, ವಿಶ್ರಾಂತ ಕುಲಪತಿ ಡಾ.ಎಂ.ಎಂ. ಕಲಬುರ್ಗಿ ಅವರು "ಇವು ಉಗ್ರ ಶಿವ ಭಕ್ತ ಪಂಥದವರ ಆತ್ಮಾಹುತಿ ತಲೆಬುರುಡೆಗಳು" ಎಂದು ಅಭಿಪ್ರಾಯಪಟ್ಟಿದ್ದರು. ಇದರ ಸತ್ಯಾಸತ್ಯತೆ ತಿಳಿಯಲು ಪತ್ರಿಕೆ ಅವರ ಸಂದರ್ಶನ ನಡೆಸಿದಾಗ ಹಲವಾರು ಆಧಾರಗಳ ಸಮೇತ ತಮ್ಮ ಅಭಿಪ್ರಾಯವನ್ನು ದೃಢಪಡಿಸಿದರು.

* * *

ಲಂಕೇಶ: ಅಣ್ಣಿಗೇರಿ ತಲೆಬುರುಡೆ ಕುರಿತಾಗಿ ತಾವು ಪ್ರತಿಪಾದಿಸುತ್ತಿರುವ ಉಗ್ರ ಶಿವ ಪಂಥದವರ ಹಿನ್ನೆಲೆ ಏನು?

ಎಂ. ಎಂ. ಕಲಬುರ್ಗಿ : ಇವರು ಮೂಲತಃ ಕಾಶ್ಮೀರಿ ಆಚಾರ್ಯರು. ಶಿವ ಆರಾಧ್ಯ ದೈವ. ತಮ್ಮ ಅಸ್ತಿತ್ವಕ್ಕಾಗಿ ಅನೇಕ ರಾಜರ ಆಶ್ರಯವನ್ನು ಬಯಸುತ್ತಿದ್ದ ಇವರು ಕಾಶ್ಮೀರದಿಂದ ಮಧ್ಯ ಪ್ರದೇಶಕ್ಕೆ ವಲಸೆ ಬಂದರು. ತಮಿಳುನಾಡಿನ ಚೋಳರು ಮಧ್ಯಪ್ರದೇಶದ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಅವರ ಮೂಲಕ ಈ ಉಗ್ರಪಂಥದ ಶೈವಾಚಾರ್ಯರು ದಕ್ಷಿಣ ಭಾರತವನ್ನು ಪ್ರವೇಶಿಸಿದರು. ಅಲ್ಲಿ ದೇಶೀಯ ಬೇಡರ ಕಣ್ಣಪ್ಪನ ಪಂಥದವರ ಮೇಲೆ ಆಕ್ರಮಣ ಮಾಡಿ ತಮ್ಮ ಆಧಿಪತ್ಯವನ್ನು

ಸ್ಥಾಪಿಸಿದರು. ಚೋಳರ ಪತನದ ನಂತರ ಅವರು ಆಶ್ರಯಕ್ಕಾಗಿ ಆಂಧ್ರದ ಕಾಕತಿ ಅರಸರ ರಾಜ್ಯಕ್ಕೆ ಬಂದರು. ಇಲ್ಲಿಯೂ ಸಹ ತಮ್ಮ ಆಕ್ರಮಣಶೀಲತೆಯನ್ನು ಪ್ರದರ್ಶಿಸಿ, ಶ್ರೀಶೈಲ ಚೆನ್ನಮಲ್ಲಿಕಾರ್ಜುನನ ಪೂಜೆ ಮಾಡ್ತಿದ್ದ ಸಿದ್ಧ ಪಂಥದವರ ಮೇಲೆ ಸವಾರಿ ಮಾಡಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು. ತಮ್ಮ ಆಗಮನಕ್ಕೂ ಮುಂಚೆ ಇದ್ದ ಬಹುಪಾಲು ಎಲ್ಲ ಶಾಸನಗಳನ್ನು ನಾಶಮಾಡಿ ತಮ್ಮದೇ ಅಸ್ತಿತ್ವವನ್ನು ಸ್ಥಾಪಿಸಿದರು. ಕಾಲಾನಂತರ ಕಾಕತಿ ಅರಸರ ಅವನತಿಯಾದ ಮೇಲೆ ಆಶ್ರಯವನ್ನರಸಿ ವಿಜಯನಗರ ಸಾಮ್ರಾಜ್ಯಕ್ಕೆ ಬರುವ ಮೂಲಕ ಕರ್ನಾಟಕವನ್ನು ಪ್ರವೇಶಿಸಿದ್ದರು.

ಲಂಕೇಶ: ಇವರನ್ನು 'ಉಗ್ರ ಪಂಥ' ಎಂದು ಕರೆಯಲು ಕಾರಣವೇನು?

ಎಂ. ಎಂ. ಕಲಬುರ್ಗಿ : ಅವರ ನಂಬಿಕೆ ಮತ್ತು ಆಚರಣೆಗಳು ಸಾಮಾನ್ಯರ ಮನಸ್ಸಿನಲ್ಲಿ 'ಉಗ್ರ' ಎನಿಸುವಷ್ಟು ಅಸಹಜವಾಗಿರುವುದೇ ಇದಕ್ಕೆ ಕಾರಣವಾಗುತ್ತದೆ. ಅದಾಗಲೇ ತಿಳಿಸಿರುವಂತೆ ಇವರು ಆಕ್ರಮಣಶೀಲತೆಯನ್ನು ಹೊಂದಿದಂಥ ಪಂಥದವರು. ತಾವು ಹೋದ ಕಡೆ ದೇಶೀಯ ಪಂಥದವರ ಮೇಲೆ ಪ್ರಭುತ್ವವನು ಸಾಧಿಸುವ ಹಿನ್ನೆಲೆಯನ್ನು ಹೊಂದಿರುವಂತವರು. ಅದಲ್ಲದೆ ಇವರ ಆರಾಧನೆಯೂ ಸಹ ಉಗ್ರ ರೀತಿಯಲ್ಲಿ ಇರುತ್ತಿತ್ತು.

ತಮ್ಮ ಇಷ್ಟದೈವವಾದ "ಶಿವ"ನ ಸಂತೃಪ್ತಿಗಾಗಿ ಆತ್ಮಾಹುತಿ ಮಾಡಿಕೊಳ್ಳುವುದಕ್ಕೆ ಹಲವಾರು ಕಾರಣಗಳಿವೆ. ತಮ್ಮ ರಕ್ತದ ಮೂಲಕ ದೇವರಿಗ ನೈವೇದ್ಯ ಮಾಡಿರುವ ಬಗ್ಗೆಯೂ ಉಲ್ಲೇಖವಿದೆ.

ಇದಿಷ್ಟು ಮಾತ್ರವಲ್ಲದೆ ಇವರು ಅನ್ಯ ಧರ್ಮೀಯರ ಹಾಗೂ ಅನ್ಯ ದೇವಾಲಯದ ಮೇಲೆ ಆಕ್ರಮಣ ಮಾಡುವ ಮನೋಭಾವವನ್ನೂ ಹೊಂದಿದ್ದರು ಎಂಬುದಕ್ಕೆ ಹಲವಾರು ಶಾಸನಗಳಿವೆ. ಅವುಗಳನ್ನು ನಂತರದಲ್ಲಿ ವಿವರಿಸುತ್ತೇನೆ.

ಲಂಕೇಶ: ಅವತ್ತಿನ ಆ ಉಗ್ರ ಶಿವಭಕ್ತರ ಪಂಥದ ರೂಪಾಂತರ ಮತ್ತು ಇವತ್ತಿನ ಈ ಪಂಥದ ಅಸ್ತಿತ್ವದ ಬಗ್ಗೆ ತಿಳಿಸಿಕೊಡುತ್ತೀರಾ?

ಎಂ. ಎಂ. ಕಲಬುರ್ಗಿ : ಈ ಉಗ್ರ ಪಂಥದ ಶೈವಾಚಾರ್ಯರು ತಮಿಳುನಾಡಿಗೆ ಬಂದಾಗ ರಾಮಾನುಜಾಚಾರ್ಯರ ಶ್ರೀವೈಷ್ಣವ ಪಂಥ ಅಸ್ತಿತ್ವಕ್ಕೆ ಬಂದಿತ್ತು. ಬಹುಸಾಮಾನ್ಯವಾಗಿಯೇ ಈ ಎರಡೂ ಪಂಥಗಳ ನಡುವೆ ಸಂಘರ್ಷವೇರ್ಪಟ್ಟಿತು. ಆಗ ವೈಷ್ಣವ ಪಂಥದವರು 'ವೀರ ವೈಷ್ಣವ ಸಂಘ'ವನ್ನು ಸ್ಥಾಪಿಸಿಕೊಂಡರೆ ಅದಕ್ಕೆ ಪರ್ಯಾಯವಾಗಿ ಈ ಶೈವಾಚಾರ್ಯರು; 'ವೀರಮಾಹೇಶ್ವರ' ಸಂಘವನ್ನು ಕಟ್ಟಿಕೊಂಡರು.

ಉಗ್ರ ಪಂಥದ ಶೈವಾಚಾರ್ಯರು ಕರ್ನಾಟಕಕ್ಕೆ ಬಂದ ತದನಂತರದಲ್ಲಿ ಆ ಪಂಥದವರೇ ಒಂದು ಭಾಗವಾದ 'ವೀರ ಮಾಹೇಶ್ವರ' ಸಂಘದವರು 'ವೀರಭದ್ರ'ನನ್ನು ತಮ್ಮ ಆರಾಧ್ಯ ದೈವವನ್ನಾಗಿ ಸ್ವೀಕರಿಸಿ ಆರಾಧಿಸಲು ಪ್ರಾರಂಭಿಸಿದರು. ಅನಿರ್ದಿಷ್ಟ ಪಂಗಡ ಕಾಲಕ್ರಮೇಣ ರೂಪಾಂತರಗೊಂಡು ಇವತ್ತಿನ 'ವೀರಶೈವ' ಸಮುದಾಯ ವಾಗಿದೆ.

ಲಂಕೇಶ: ಉಗ್ರ ಪಂಥದ 'ವೀರ ಮಾಹೇಶ್ವರ' ಪಂಗಡವೇ ಇಂದಿನ ವೀರಶೈವ ಸಮುದಾಯವಾಗಿದೆ ಎಂಬುದಕ್ಕೆ ನಿರ್ದಿಷ್ಟ ಕಾರಣಗಳೇನಾದರೂ ಇವೆಯೇ?

ಎಂ. ಎಂ. ಕಲಬುರ್ಗಿ : ಖಂಡಿತ ಇದೆ. ಇವತ್ತಿನ ವೀರಶೈವದ ಒಂದು ಪಂಗಡವಾದ ಪುರವಂತರ ವೀರಭದ್ರನ ಆರಾಧನೆಯ ಪದ್ಧತಿಯೂ, ಉಗ್ರ ಶೈವಾಚಾರ್ಯರ ಆರಾಧನೆಯ ಪದ್ಧತಿಯೂ ಬಹಳಷ್ಟು ಸಾಮ್ಯತೆಯನ್ನು ಹೊಂದಿರುವುದನ್ನು ನೀವೇ ಗಮನಿಸಬಹುದು. ಅಂದಿನ

ಆ ಪಂಥ ದೈವದ ಸಂತೃಪ್ತಿಗಾಗಿ ತಮ್ಮ ಅಂಗಗಳನ್ನು, ಶಿರಗಳನ್ನು ಕಡಿದುಕೊಂಡು ಆತ್ಮಾರ್ಪಣೆ ಮಾಡುತ್ತಿದ್ದರು. ಇವತ್ತಿನ ವೀರಗಾಸೆಯವರನ್ನು ಗಮನಿಸಿದಾಗಲು ಸಹ ನಾಲಿಗೆಗೆ, ಕೆನ್ನೆಗೆ, ಹೊಟ್ಟೆಗೆ ಉದ್ದುದ್ದನೆಯ ಸೂಜಿಗಳನ್ನು ಚುಚ್ಚಿಕೊಳ್ಳುವುದು, ಕೊಯ್ದುಕೊಳ್ಳುವದು ಇಂತವೆಲ್ಲ ಆಚರಣೆಯಲ್ಲಿ ಇರುವದು ಕಂಡುಬರುತ್ತದೆ. ಆದ್ದರಿಂದ ಅಂದಿನ ವೀರ ಮಾಹೇಶ್ವರ ಪಂಗಡವೇ ಇಂದಿನ 'ವೀರಶೈವ' ಎಂಬುದಕ್ಕೆ ಪುಷ್ಟಿ ದೊರೆತಂತಾಗುತ್ತದೆ.

ಇಲ್ಲಿ ಇನ್ನೊಂದು ಅಂಶವನ್ನು ಸ್ಪಷ್ಟಪಡಿಸುತ್ತೇನೆ. ನನ್ನ ಇತಿಹಾಸ ಸಂಶೋಧನೆಯ ಪ್ರಕಾರ 'ಲಿಂಗಾಯತ' ಮತ್ತು 'ವೀರಶೈವ' ಎರಡೂ ಸಹ ಬೇರೆ ಬೇರೆ ಪಂಗಡಗಳು. ಲಿಂಗಾಯತ ಸಮುದಾಯ ೧೨ನೆಯ ಶತಮಾನದಲ್ಲಿಯೇ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟಿದ್ದರೆ 'ವೀರಶೈವ' ಈ ಉಗ್ರ ಶೈವಾಚಾರ್ಯ ಪಂಥದ 'ವೀರಮಾಹೇಶ್ವರ ಸಂಘ'ದ ರೂಪಾಂತರ, ಇದರ ಅಸ್ತಿತ್ವ ಸುಮಾರು ೧೩ನೆಯ ಶತಮಾನ. ಹೋದ ಕಡೆಯಲ್ಲೆಲ್ಲ ದೇಸೀಯ ಪಂಥದವರ ಮೇಲೆ ಆಕ್ರಮಣ ಮಾಡುತ್ತಾ ಬಂದಿದ್ದ ಈ ಪಂಥ(ತಮಿಳುನಾಡಿನಲ್ಲಿ ಕಣ್ಣಪ್ಪನ ಪಂಥ, ಆಂಧ್ರದಲ್ಲಿ ಸಿದ್ಧ ಪಂಥ) ಇಲ್ಲಿನ ಲಿಂಗಾಯತರ ಮೇಲೆಯೂ ಸವಾರಿ ಮಾಡಿದರು. ಶಿವ ಆರಾಧನೆಯ ಸಾಮಾನ್ಯ ಗುಣದಿಂದಾಗಿ ಲಿಂಗಾಯತ ಮತ್ತು ವೀರಮಾಹೇಶ್ವರ ಸಂಘದ ಸರಿಸುಮಾರು ಒಂದೇ ಎಂಬಂತಾಗಿ, ಇವತ್ತು ಲಿಂಗಾಯತ ಮತ್ತು ವೀರಶೈವ ಎಂಬುವವು ಪ್ರತ್ಯೇಕವಲ್ಲ, ಬದಲಾಗಿ ಒಂದೇ ಪಂಗಡದ ಪರ್ಯಾಯ ಹೆಸರುಗಳು ಎಂಬಂತಾಗಿದೆ.

ಲಂಕೇಶ: ಈ ಉಗ್ರ ಪಂಥದ ಶಿವಭಕ್ತರು ತಮ್ಮ ಆತ್ಮಾರ್ಪಣೆಯನ್ನು ಏಕೆ ಮಾಡಿಕೊಳ್ಳುತ್ತಿದ್ದರು?

ಎಂ. ಎಂ. ಕಲಬುರ್ಗಿ : ತಮ್ಮ ಆರಾಧ್ಯದೈವದ ಸಂತೃಪ್ತತೆಗಾಗಿ ಅವರು ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದರು. ಅನ್ಯಧರ್ಮ ಅಥವಾ ಅನ್ಯಪಂಥದವರ ಮೇಲೆ ಆಕ್ರಮಣ ಮಾಡಿ ತಮ್ಮ ಅಧಿಪತ್ಯವನ್ನು ಸ್ಥಾಪಿಸುವುದು ಅವರ ಉದ್ದೇಶವಾಗಿತ್ತು. ಈ ರೀತಿ ಒಂದು ಅಧಿಪತ್ಯವನ್ನು ಸ್ಥಾಪಿಸಿದ ಸಾರ್ಥಕತೆ ತಮಗೆ ಲಭಿಸಿದ ಸಂದರ್ಭಗಳಲ್ಲಿ ಅವರು ಈ ತರ ತಮ್ಮ ಶಿರಗಳನ್ನು ತಾವೇ ಕತ್ತರಿಸಿಕೊಂಡು, ಅದೂ ಸಾಮೂಹಿಕವಾಗಿ ತಮ್ಮ ಸಂತೃಪ್ತತೆಯಲ್ಲಿ ದೇವರಿಗೂ ನೀಡುವ ಆಚರಣೆ ಇದ್ದುದರಿಂದ ಅವರು ಹಾಗೆ ಮಾಡಿಕೊಳ್ಳುತ್ತಿದ್ದರು.

ಲಂಕೇಶ: ಅವರು ಅನ್ಯಧರ್ಮ ಅಥವಾ ಪಂಥದ ಮೇಲೆ ಆಕ್ರಮಣಶೀಲರಾಗಿದ್ದರು ಎಂಬುದಕ್ಕೆ ಸೂಕ್ತ ಆಧಾರವೇನಾದರು ಇದೆಯೇ?

ಎಂ. ಎಂ. ಕಲಬುರ್ಗಿ : ಆವಾಗ್ಲೇ ನಾನು ಹೇಳಿದಂಗೆ ಅವರು ತಮಿಳುನಾಡಿನಲ್ಲಿ ಮತ್ತು ಆಂಧ್ರದಲ್ಲಿ ಅಲ್ಲಿನ ದೇಸೀಯ ಪಂಥದವರ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ್ದು ಸಾಬೀತಾಗಿದೆ. ಇಲ್ಲಿ ಲಿಂಗಾಯತ ಸಮುದಾಯದ ಮೇಲೂ ಆಧಿಪತ್ಯ ವನ್ನು ಸ್ಥಾಪಿಸಿ ಮುಂದೆ ಎರಡೂ ಒಂದೇ ಎಂಬಂತಾಗಿದೆ. ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದ್ರೆ ಇದೇ ಅಣ್ಣಿಗೇರಿಯ ವೀರಭದ್ರನ ಗುಡಿಯಲ್ಲಿ ವೀರ ಗೊಗ್ಗಿದೇವನ ಶಾಸನದಲ್ಲಿ ಆತ ತನ್ನನ್ನು ತಾನು 'ಜೈನಮೃಗಬೇಟೆಕಾರ','ಜೈನಾಗಮ ಧೂಮಕೇತು'(ಜೈನಧರ್ಮಕ್ಕೆ ಅನಿಷ್ಟಕಾರಕ),'ಜೈನ ಕುಠಾರ'(ಜೈನ ಧರ್ಮಕ್ಕೆ ಕೊಡಲಿ), 'ಜೈನಫಣಿ ವೈನತೇಯ'(ಜೈನ ಎಂಬ ಹಾವಿಗೆ ಗರುಡ) ಅಂತ ಕರೆದುಕೊಂಡಿದ್ದಾನೆ. ಈ ವೀರ ಗೊಗ್ಗಿದೇವ ಅಣ್ಣಿಗೇರಿ ಗ್ರಾಮದಲ್ಲಿದ್ದ 'ವೀರಮಾಹೇಶ್ವರಸಂಘ' ಪಂಗಡದ ನಾಯಕ. ಮತ್ತು ಹದಿಮೂರನೇ ಶತಮಾನದ ವೇಳೆಗಾಗಲೇ ಜೈನ ಧರ್ಮ ಅಸ್ತಿತ್ವದಲ್ಲಿತ್ತು ಎಂಬುದನ್ನು ನಾವಿಲ್ಲಿ ಗಮನಿಸಬೇಕು.

ಲಂಕೇಶ: ನಿರ್ದಿಷ್ಟವಾಗಿ ಈ ಅಣ್ಣಿಗೇರಿ ತಲೆ ಬುರುಡೆಯ ಬಗ್ಗೆ ನಿಮ್ಮ ಅಭಿಪ್ರಾಯ?

ಎಂ. ಎಂ. ಕಲಬುರ್ಗಿ : ನೋಡ್ರಿ, ನನ್ನ ಸಂಶೋಧನ ಮತ್ತು ನನ್ನತ್ರ ಇರೋ ಆಧಾರಗಳ ಮೇಲೆ ಹೇಳೋದಾದರೆ ಇದೂ ಸಹಾ ಆ 'ವೀರ ಮಾಹೇಶ್ವರ ಸಂಘ'ದ ಆತ್ಮಾಹುತಿ ಕುರುಹು. ಆವಾಗ್ಲೇ ನಾನು ಹೇಳಿದಂತೆ ವೀರಗೊಗ್ಗಿದೇವನ ನಾಯಕತ್ವದಲ್ಲಿ ನೂರಾರು ಸಂಖ್ಯೆಯ ಆರಾಧಕರು ತಮ್ಮ ಶಿರ ಕಡ್ಕೊಂಡು ದೈವ ಸಂತೃಪ್ತಿ ಮಾಡಿದ ದೇಹಗಳ ಛೇದಿತ ಶಿರಗಳೇ ಇಂದು ತಲೆ ಬುರುಡೆಗಳಾಗಿ ಲಭಿಸಿವೆ.

ಲಂಕೇಶ: ಅಷ್ಟು ನಿಖರವಾಗಿ ಇದು ಆತ್ಮಾಹುತಿಯ ಕುರುಹು ಎಂದು ಹೇಗೆ ಪ್ರತಿಪಾದಿಸುತ್ತೀರಿ?

ಎಂ.ಎಂ.ಕಲಬುರ್ಗಿ : ಎರಡು ಆಧಾರದ ಮೇಲೆ ನಾನು ಹೇಳ್ತೀನಿ. ಮೊದಲ್ನೆಯದಾಗಿ ಶ್ರೀಶೈಲ ಚೆನ್ನಮಲ್ಲಿಕಾರ್ಜುನ ದೇವಸ್ಥಾನದ ಆವರಣದ ಗೋಡೆಯಲ್ಲಿ ಶಿವಲಿಂಗದ ಮುಂದೆ ಶಿರಚ್ಛೇದನ ಮಾಡಿಕೊಳ್ಳುತ್ತಿರೋ ಕೆತ್ತನೆ ಇದೆ. ಅದು ಆ ಪಂಥದವರ ಆಚರಣೇನ ದೃಢಪಡಿಸುತ್ತೆ. ಅದೇ ಕೆತ್ತನೆಯ ಮುಂದಿನ ಭಾಗದಲ್ಲಿ ಛೇದಿತ ಶಿರಗಳನ್ನು ಸಾಲಾಗಿ ಒಂದರಮೇಲೊಂದರಂತೆ ಒಟ್ಟಿರುವುದನ್ನು ಬಿಂಬಿಸಲಾಗಿದೆ. ನಮ್ಮ ಈ ಅಣ್ಣಿಗೇರಿಯಲ್ಲಿ ತಲೆ ಬುರುಡೆಗಳು ಸಿಕ್ಕಾಗ ಅವು ಸಹ ಇದೇ ರೀತಿ ಸಾಲಾಗಿ ಜೋಡಿಸಿಟ್ಟ ಸ್ಥಿತಿಯಲ್ಲಿದ್ದವು ಎಂಬುದು ಗೊತ್ತಿರೋ ವಿಷಯವೆ.

ಇನ್ನು ಎರಡನೇ ಆಧಾರ ಅಂದ್ರೆ, ಹರಿಹರನ ಕೋವೂರ ಬ್ರಹ್ಮಯ್ಯನ ರಗಳೆ. ಸುಮಾರು ಎರಡು ಪುಟ ಇರೋ ಇದರ ವಿವರಣೇನ ಓದಿದ್ರೆ ಅಚ್ಚರಿ ಅನ್ಸುತ್ತೆ. ಅದರಲ್ಲೊಂದು ಕಡೆ ಶಿವನ ಮುಂದೆ ನಿಂತಭಕ್ತರ ಕೈಯಲ್ಲಿ ಖಡ್ಗ ಕೊಡಲಿ, ಗರಗಸ, ಶಸ್ತ್ರಗಳಿದ್ದವು. ಭಕ್ತಿಯ ಪರಾಕಾಷ್ಠೆಯಲ್ಲಿ ಕುಣಿಯುತ್ತಾ ಬಂದು, ಗರಗಸದಿಂದ ಕೈಯನ್ನು ಕೊಯ್ದುಕೊಂಡು, ಕೊಡಲಿಯಿಂದ ಕಾಲನ್ನು ಕಡಿದುಕೊಂಡು, ಹರಿವ ರಕ್ತವನ್ನು ಬೊಗಸೆಯಲ್ಲಿ ದೈವಕ್ಕೆ ನೈವೇದ್ಯವ ಮಾಡಿ, ಶಿರವ ಕಡಿದುಕೊಂಡು ಆತ್ಮಾರ್ಪಣೆ ಮಾಡಿದವರ ವಿವರಣೆ ಇದೆ. ಈ ಕೋವೂರು ಈಗ ಎಲ್ಲಿದೆಯೋ ಗೊತ್ತಿಲ್ಲ. ಅದರ ಸುಳಿವೇನಾದ್ರೂ ಸಿಕ್ರೆ ಮತ್ತಷ್ಟು ಸತ್ಯ ಹೊರಬರಬಹುದು.

ಇತ್ತೀಚೆಗೆ ನಡೆದ ಈ ಬುರುಡೆಗಳ ಕಾರ್ಬನ್ ಡೇಟಿಂಗ್ ಕೂಡ ನನ್ನ ಅಭಿಪ್ರಾಯವನ್ನು ಸಮರ್ಥಿಸುತ್ತದೆ. ಅವರ ಪ್ರಕಾರ ಅವೆಲ್ಲ ೬೩೮ ವರ್ಷಗಳ ಹಿಂದಿನವು. ಈ ಗೊಗ್ಗಿದೇವನ ಕಾಲವು ೧೩ನೆಯ ಶತಮಾನ, ಅದು ಆತನ ಶಾಸನದಲ್ಲೇ ಉಲ್ಲೇಖವಾಗಿದೆ. ಆದ್ದರಿಂದ ಇವೆರಡೂ ಕಾಲಾವಧಿ ಪರಸ್ಪರ ಹೋಲಿಕೊಳ್ತವೆ. ಆದ್ದರಿಂದ ಇದು ಆತ್ಮಾರ್ಪಣ ಘಟನೆಯ ಕುರುಹು ಅಂತ ಹೇಳ್ತಿನಿ.

ಲಂಕೇಶ: ಈ ಉಗ್ರ ಪಂಥದ ಶಿವಭಕ್ತರ ಕುರಿತಾಗಿ ಅಣ್ಣಿಗೇರಿಯಲ್ಲದೆ ಬೇರೆ ಕಡೆ ಉಲ್ಲೇಖ ಇದೆಯಾ?

ಎಂ. ಎಂ. ಕಲಬುರ್ಗಿ : ಇವ್ರು ಎಲ್ಲಕಡೆ ಹಂಚಿಹೋಗಿದ್ರು. ಅಣ್ಣಿಗೇರಿಯ ಗೊಗ್ಗಿದೇವನ ಶಾಸನದಲ್ಲಿ ಇವರನ್ನು 'ಅಸಂಖ್ಯಾತರ ಸಂಪ್ರದಾಯದವ' ಅಂತ ಕರೆದುಕೊಂಡಿದ್ದಾನೆ. ಅದೇ ಪದದ ಉಲ್ಲೇಖ ಗುಲ್ಬರ್ಗಾ ಜಿಲ್ಲೆಯ 'ಇಂಗಳಗಿ' ಶಾಸನದಲ್ಲಿ, ಬಳ್ಳಾರಿಯ ಕುಡುತಿನಿಯ ಎರಡು ಶಾಸನದಲ್ಲಿ, ಬಿಜಾಪುರದ ತಾಳಿಕೋಟೆಯ ಶಾಸನದಲ್ಲಿ ಉಲ್ಲೇಖವಾಗಿದೆ. ತಾಳಿಕೋಟೆಯ ಶಾಸನದಲ್ಲಂತು ಪರಿಯಳಿಗೆ, ಉಣಕಲ್ಲು, ಸಂಪಗಾವೆ, ಮಾರುಡಿಗೆ, ಹಬ್ಬಲೂರು ಮುಂತಾದ ಹತ್ತು ಸ್ಥಳಗಳನ್ನು ಹೆಸರಿಸಿರೋದ್ರಿಂದ ಈ ಪಂಥದವರು ಎಲ್ಲ ಕಡೆ ಹಂಚಿಹೋಗಿದ್ರು ಅನ್ನೋದಕ್ಕೆ ಪುಷ್ಟಿ ಸಿಗುತ್ತೆ.

ಲಂಕೇಶ: ಇವರ ಆತ್ಮಾಹುತಿಯ ಮಾರ್ಗ ಹೇಗಿರುತ್ತಿತ್ತು?

ಎಂ. ಎಂ. ಕಲಬುರ್ಗಿ : ಇವ್ರು ತಮ್ಮ ಶಿರವನ್ನು ತಾವೇ ಕಡಿದುಕೊಳ್ಳಲು 'ಗಂಡುಗತ್ತರಿ' ಅಂತ ವಿಶೇಷ ಆಯುಧವನ್ನು ಬಳಸ್ತಿದ್ರು. ಇದಕ್ಕೆ ಜೋಡಿಸಿದ ಹಗ್ಗದ ತುದಿಗಳನ್ನು ಕಾಲಿನ ಹೆಬ್ಬೆರಳುಗಳಿಗೆ ಕಟ್ಟಿಕೊಂಡು ಹರಿತವಾದ ಭಾಗ ಕತ್ತಿನ ಹಿಂಭಾಗಕ್ಕೆ ಬರುವಂತೆ ಬಾಗಿ ನಿಂತು ಒಮ್ಮಿಂದೊಮ್ಮೆಲೇ ಎದ್ದು ನಿಂತುಬಿಟ್ಟರೆ ಶಿರ ಕತ್ತರಿಸಿ ಹೋಗುತ್ತಿತ್ತು. ಒಮ್ಮೊಮ್ಮೆ ಶಿರಚ್ಛೇದನಕ್ಕಾಗಿಯೇ ಒಬ್ಬ ವ್ಯಕ್ತಿಯನ್ನು ನೇಮಿಸಿಕೊಳ್ಳುತ್ತಿದ್ದರಾ? ಎಂಬ ಶಂಕೆಯೂ ಇದೆ. ಒಟ್ಟಿನಲ್ಲಿ ಆ ಪಂಥದೋರು ಸಾಮೂಹಿಕ ಶಿರಚ್ಛೇದನ ಮಾಡಿಕೊಳ್ಳುತ್ತಿದ್ರು ಮತ್ತು ಅಣ್ಣಿಗೇರಿಯ ತಲೆಬುರುಡೆಗಳು ಅಂತದೇ ಶಿರಚ್ಛೇದನದ ಪ್ರತೀಕ.

ಲಂಕೇಶ: ಅವು ಬೇರೆ ಯುದ್ಧದಲ್ಲೋ, ಹತ್ಯಾಕಾಂಡದಲ್ಲೋ ಹತರಾದವರ ತಲೆ ಬುರುಡೆಗಳಿರಬಹುದಲ್ವಾ? ಕೆಲ ಇತಿಹಾಸಕಾರರು ಆ ಸ್ಥಳದಲ್ಲಿ ಆದಿಲ್ ಶಾಹಿ, ಕಲ್ಯಾಣಚಾಲುಕ್ಯರ ಮತ್ತು ವಿಜಯನಗರ ಅರಸರ ಯುದ್ಧಗಳನ್ನು ಉಲ್ಲೇಖಿಸುತ್ತಾರೆ, ಅವೂ ಸಹಾ ಆಗಿರಬಹುದಲ್ಲವೆ?

ಎಂ. ಎಂ. ಕಲಬುರ್ಗಿ : ಯುದ್ಧ ಅಥವಾ ದಂಗೆಗಳಲ್ಲಿ ಹತರಾದವರ ಶಿರಗಳು ಚೆಲ್ಲಾಡಿ ಹೋಗಿರುತ್ತವೆ. ವೈರಿ ಪಡೆಯಾದುದರಿಂದ ಅವಕ್ಕೊಂದಿಷ್ಟು ಸಂಸ್ಕಾರ ಮಾಡುವ ರೂಢಿ ಅಪರೂಪ. ಹಾಗೊಂದು ವೇಳೆ ವಿರೋಧಿ ಸಂಸ್ಕಾರವಂತನಾಗಿದ್ರು, ಒಂದು ಹಳ್ಳವನ್ನು ತೆಗೆಸಿ ಅದರೊಳಗೆ ಸುರಿದು ಮುಚ್ಚಿಬಿಡುವ ಸಾಧ್ಯತೆ ಇರುತ್ತಿತ್ತು. ಆದರೆ ಇಲ್ಲಿ ಉಳಿದ ದೇಹವನ್ನು ಹೊರತುಪಡಿಸಿ ಶಿರಗಳನ್ನು ಮಾತ್ರ ವ್ಯವಸ್ಥಿತವಾಗಿ ಜೋಡಿಸಿಡಲಾಗಿತ್ತು. ಮತ್ತು ಶ್ರೀ ಶೈಲ ಚೆನ್ನಮಲ್ಲಿಕಾರ್ಜುನನ ದೇವಸ್ಥಾನ ಕೆತ್ತನೆಯಲ್ಲಿರುವ ಶಿವಭಕ್ತರ ಆತ್ಮಾರ್ಪಣೆ ಕೆತ್ತನೆಯಲ್ಲಿ ಇದೇ ರೀತಿ ತಲೆಬುರುಡೆಗಳನ್ನು ಜೋಡಿಸಿಟ್ಟಿರುವುದನ್ನು ಕಾಣಬಹುದು. ಆದ್ದರಿಂದ ಇದು ಅದೇ ಪಂಥದ ಗೊಗ್ಗಿದೇವನ ಮುಂದಾಳತ್ವದಲ್ಲಾದ ಶಿರಚ್ಛೇದನದ ಆತ್ಮಾರ್ಪಣೆ.

* * *

–ಶ್ರೀ ಎಂ.ಎಂ. ಕಲಬುರ್ಗಿಯವರು ಕರ್ನಾಟಕದ ಹೆಸರಾಂತ ಇತಿಹಾಸ ಸಂಶೋಧಕರಾಗಿದ್ದು, ವಿಶ್ರಾಂತ ಕುಲಪತಿಗಳೂ ಆಗಿದ್ದಾರೆ. ಇತಿಹಾಸದ ನೈಜ ಚಿತ್ರಣವನ್ನು ಅರಿಯುವಲ್ಲಿ ಸದಾ ಉತ್ಸುಕರಾಗಿರುವ ಇವರು "ಇತಿಹಾಸದ ಎಲ್ಲಾ ಆಯಾಮಗಳನ್ನು ಒಳ್ಳೆಯದಿರಲಿ ಕೆಟ್ಟದಿರಲಿ ಮುಕ್ತವಾಗಿ ತೆರೆದಿಟ್ಟಾಗಲೇ ನೈಜತೆಯ ಪರಿಚಯವಾಗುತ್ತದೆ. ಕೆಲವರು ಒಳ್ಳೆಯದನ್ನು ಮಾತ್ರವೇ ತಿಳಿಸುತ್ತಾರೆ. ಇಲ್ಲವೆ ತಮ್ಮ ನಂಬುಗೆಯನ್ನೇ ಇತಿಹಾಸವೆಂದು ಚಿತ್ರಿಸುತ್ತಾರೆ. ಅಂಥವರ ಕಾರಣದಿಂದಾಗಿಯೇ ಈ ಉಗ್ರ ಪಂಥದ ಶಿವಭಕ್ತರ ಬಗ್ಗೆ ಹೆಚ್ಚಿಗೆ ಯಾರಿಗೂ ತಿಳಿದಿಲ್ಲ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಹರಿಹರ ಕವಿ ಪ್ರಸ್ತಾಪಿಸಿರುವ "ಕೋವೂರು" ಸ್ಥಳದ ಬಗ್ಗೆ ಯಾರಾದರೂ ತಮಗೆ ತಿಳಿಸಿದರೆ, ಅಲ್ಲಿ ಮತ್ತಷ್ಟು ಅಧ್ಯಯನ ಕೈಗೊಂಡು ಸತ್ಯದ ಶೋಧನೆಗೆ ಮುಂದಾಗುತ್ತೇನೆ ಎಂಬ ಬಯಕೆಯನ್ನು ಅವರು ಪತ್ರಿಕೆಯೊಂದಿಗೆ ಹಂಚಿಕೊಂಡರು. ಈ 'ಬುರುಡೆ ರಹಸ್ಯ'ದ ಅಚ್ಚರಿಯ ಅನಾವರಣದ ಸಂದರ್ಶನಕ್ಕಾಗಿ ಪತ್ರಿಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ.

ಗೌರಿ ಲಂಕೇಶ ಪತ್ರಿಕೆ : ೨೫ ಮೇ ೨೦೧೧

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೦೭

ಕಲಿಕೆಯ ಕನ್ನಡ

❖

ಸಂದರ್ಶಕರು : ಡಾ. ಆರ್. ಚಲಪತಿ

– ಪಠ್ಯದ ಸ್ವರೂಪ ಹೇಗಿರಬೇಕು? ಭಾಷೆಯ ಕಲಿಕೆಯಲ್ಲಿ ಪಠ್ಯಗಳ ಪಾತ್ರವೇನು?

ಎಂ. ಎಂ. ಕಲಬುರ್ಗಿ : ನನ್ನ ಪ್ರಕಾರ ಪಠ್ಯ ಎನ್ನುವುದು ಭಾಷೆ ಮತ್ತು ವಿಷಯ ಇವೆರಡು ಮುಖ್ಯವಾದ ಘಟಕಗಳು. ನಾವು ಪಠ್ಯ ರೂಪಿಸುವಾಗ ಇವೆರಡರ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಮೊದಲು ಭಾಷೆಯ ಬಗ್ಗೆ ಹೇಳುವುದಾದರೆ, ನಮ್ಮ ಪಠ್ಯದ ಭಾಷೆಯು ಸೃಜನಶೀಲವಾಗಿಲ್ಲ. ನಮ್ಮಲ್ಲೇನಾಗಿದೆ ಎಂದರೆ ಕನ್ನಡದ ಪಠ್ಯಗಳಿದಾವಲ್ಲ ಅವು ಬಹಳ ಜಡವಾಗಿಬಿಟ್ಟಿವೆ. ಭಾಷೆಯ ದೃಷ್ಟಿಯಿಂದ ಗತಿಶೀಲವಾಗಿಲ್ಲ. ಹೀಗಾಗಿ ನಾವು ಸೃಜನಶೀಲ ಭಾಷೆಯನ್ನು ಪಠ್ಯಕ್ಕೆ ಬಳಸಬೇಕಾಗುತ್ತದೆ. ಭಾಷೆಯನ್ನು ಸೃಜನಶೀಲಗೊಳಿಸಿದರೆ ಮಾತ್ರ ಮಕ್ಕಳಲ್ಲಿ ಅಭಿಲಾಷೆ ಮೂಡುತ್ತದೆ. ಅವರು ಭಾಷೆಯೊಳಗೆ ಪಳಗುತ್ತಾರೆ. ಈ ರೀತಿ ಭಾಷೆಯೊಳಗೆ ಅವರನ್ನು ಅಣಿ ಮಾಡಬೇಕು. ಹೀಗಾಗಿ ಮಕ್ಕಳಿಗೆ ನಾವು ಯಾವ ಟ್ರೆಡಿಷನಲ್ ಭಾಷೆಯಲ್ಲಿ ಕಲಿಸುತ್ತೇವೆಯೋ ಅದನ್ನು ಬಳಸುತ್ತಾ ಬರುತ್ತಾರೆ. ಮುಂದೆ ಅದೇ ರೀತಿ ಬೆಳೆಯುತ್ತಾರೆ. ಹೀಗಾಗಿ ಸೃಜನಶೀಲವಾದ ಭಾಷೆ ಬಹಳ ಮುಖ್ಯವಾಗುತ್ತದೆ. ಆದ್ದರಿಂದ ಸೃಜನಶೀಲ ಭಾಷೆಯ ದೃಷ್ಟಿಯಿಂದ ಪಠ್ಯವನ್ನು ರೂಪಿಸುವಾಗ ಭಾಷಾ ವಿಷಯ ಹೇಗಿದೆ ಎಂದು ಮುಖ್ಯವಾಗಿ ನೋಡಬೇಕಾಗುತ್ತದೆ. ಭಾಷೆ ಎನ್ನುವುದು ಹೇಗಿದೆಯೆಂದರೆ ಅದು ಒಂದು ಸಂವಹನದ ಮೂಲಕ ತಲುಪಬೇಕಾಗುತ್ತದೆ. ಆ ಭಾಷೆಯ ಸೃಜನಶೀಲ ಭಾಗ ಮುಖ್ಯವಾಗುತ್ತದೆ. ಸೃಜನಶೀಲ ಭಾಷೆ ಎಂದರೇನು? ಇದು ಬಹಳ ಮುಖ್ಯವಾದ ಅಂಶ. ನನ್ನ ದೃಷ್ಟಿಯೊಳಗೆ ಸೃಜನಶೀಲ ಎಂದರೆ ಕ್ರಿಯಾಶೀಲತೆಯಾಗಿದೆ. ಒಬ್ಬ ಕವಿಗೆ ಸೃಜನಶೀಲತೆ ಬೇಕಾಗುತ್ತದೆ. ಆತ ಬರೆಯುವ ಉದ್ಯೋಗದಲ್ಲಿ ತೊಡಗದಿದ್ದರೆ ಆ ಸೃಜನಶೀಲತೆಗೆ ಶಾರ್ಪ್‌ನೆಸ್ ಬರುವುದಿಲ್ಲ. ಅದಕ್ಕೊಂದು ಭಾವಸ್ಪರ್ಶ ಬರುವುದಿಲ್ಲ. ಹೀಗಾಗಿ ನಮ್ಮ ಕ್ಷೇತ್ರದಲ್ಲಿ ನಾವು ಹೇಗೆ ಕ್ರಿಯಾಶೀಲವಾಗಿ ತೊಡಗಿಕೊಳ್ಳುತ್ತೇವೆಯೋ ಹಾಗೆಯೇ ಸೃಜನಶೀಲತೆ ಬೆಳೆಯುತ್ತ ಹೋಗುತ್ತದೆ. ಹೀಗಾಗಿ ಭಾಷೆಯು ಕೇವಲ ಒಂದು ಬೋಧನಾತ್ಮಕ ಅಂಶವಾಗಷ್ಟೇ ಇರಬಾರದು, ಕ್ರಿಯಾತ್ಮಕವಾಗಿರಬೇಕು. ಭಾಷೆಯಲ್ಲಿ ಕ್ರಿಯಾತ್ಮಕ ಬೇರೆ ಮತ್ತು ವಿವರಣಾತ್ಮಕ ಬೇರೆ. ಎಷ್ಟೋ ಸಲ ನನಗನ್ನಿಸುತ್ತದೆ, ಇಂಗ್ಲಿಷ್ ಮತ್ತು ಕನ್ನಡ ಭಾಷೆ ನೋಡಿದಾಗ ನಮ್ಮ ಕನ್ನಡದಲ್ಲಿ

ಕ್ರಿಯಾಪದ ವಾಕ್ಯದ ಕೊನೆಗೆ ಬರುತ್ತದೆ. ಇಂಗ್ಲಿಷ್‌ನಲ್ಲಿ ಮೊದಲಿಗೆ ಅಥವಾ ನಡುವೆ ಬರುತ್ತದೆ. ಉದಾಹರಣೆಗೆ He went to school – ಎಂಬ ವಾಕ್ಯದಲ್ಲಿ ಕ್ರಿಯಾಪದ ಮಧ್ಯದಲ್ಲಿ ಬಳಕೆಯಾಗಿದೆ. ನಾನು ವಿದ್ಯಾರ್ಥಿ ದೆಸೆಯಿಂದಲೂ ಈ ಕುರಿತು ಆಲೋಚಿಸಿದ್ದೇನೆ. ನಮ್ಮಲ್ಲಿ ಕರ್ತೃ, ಕರ್ಮ ಮತ್ತು ಕ್ರಿಯಾಪದ ಎಂದು ಕಲಿಸುತ್ತೇವೆ. ಕೊನೆಗೆ 'ಕ್ರಿಯಾ' ಹೋಗಿ 'ಕರ್ತೃ' ಮುಖ್ಯವಾಗಿ ಬಿಡುತ್ತದೆ. ಇಂಗ್ಲಿಷ್‌ನಲ್ಲಿ ಕ್ರಿಯೆ ಕೊನೆಯಾಗುವುದಿಲ್ಲ. ಅದಕ್ಕಾಗಿ ಇಂಗ್ಲಿಷ್ ಭಾಷೆಯಲ್ಲಿ ಕ್ರಿಯಾತ್ಮಕತೆಯು ಕಾಣಿಸುತ್ತದೆ. ನಮ್ಮ ಭಾಷೆಯಲ್ಲಿ ಅದು ಕಡಿಮೆಯೆನಿಸುತ್ತದೆ.

–ಹಾಗಾದರೆ ನಾವು ಹೇಗೆ ಯೋಚನೆ ಮಾಡಬಹುದು? ಈ ಕ್ರಿಯಾಶೀಲತೆಯ ವಿಚಾರ ಬಂದಾಗ, ಇಂದಿನ ನಮ್ಮ ಜಾತಿವಾರು, ಪ್ರದೇಶವಾರು ಭಾಷಾಬಳಕೆಗಳೇನಿವೆಯಲ್ಲ ಅವು ಹೆಚ್ಚು ಕ್ರಿಯಾತ್ಮಕವಾಗಿಲ್ಲ.

ಎಂ. ಎಂ. ಕಲಬುರ್ಗಿ : ಕನ್ನಡ ಭಾಷೆಯು ಎಲ್ಲಿ ಹೆಚ್ಚು ಕ್ರಿಯಾತ್ಮಕವಾಗಿದೆಯೋ ಆ ಅಂಶವು ಹೆಚ್ಚು ಬಳಸಲ್ಪಡಬೇಕು. ಉದಾಹರಣೆಗೆ ಆದಿಪುರಾಣದಲ್ಲಿ 'ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀ ಸುಭಟಖಡ್ಗಮಂಡಲೋತ್ಪಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ' ಎಂಬಲ್ಲಿ ನೆಲಸುಗೆ ಎಂಬ ಕ್ರಿಯಾಪದ ಮೊದಲಿಗೆ ಬಂದಿದೆಯೇ ಹೊರತು ಕೊನೆಯಲ್ಲಿ ಬಳಕೆಯಾಗಿಲ್ಲ. ಅದಕ್ಕಾಗಿ ಕ್ರಿಯೆಯಿಲ್ಲದೇ ಯಾವುದೂ ಕಾಣಬರುವುದಿಲ್ಲ. 'ಹಾಲಿನೊಳಗಣ....' ಎಂಬ ಅಕ್ಕಮಹಾದೇವಿಯ ವಚನದಲ್ಲಿ ಕ್ರಿಯೆಯೇ ಮುಖ್ಯವಾಗಿದೆ. ಹೀಗಾಗಿ ಭಾಷೆಯೊಳಗೆ ಒಂದು functional quality ಯನ್ನು ತರುವುದು ಬಹಳ ಮುಖ್ಯವೆನಿಸುತ್ತದೆ. ಅಂತಹ ಭಾಷೆಯನ್ನು ನಾವು ಬಳಸಿದರೆ ಮಕ್ಕಳಿಗೆ ಅದು ಬಹಳ ಪ್ರೇರಣೆ ನೀಡುತ್ತದೆ. ಅದಕ್ಕಾಗಿ ನನಗನ್ನಿಸುವುದೇನೆಂದರೆ ನಮ್ಮ ಪಠ್ಯಗಳಲ್ಲಿ ಬಹಳ ಸಪ್ಪೆಯಾದ ಭಾಷೆಯನ್ನು ಅಳವಡಿಸುತ್ತಿದ್ದೇವೆ. ಹಳೆಯ ಸಿದ್ಧ ಮಾದರಿಗಳನ್ನೇ ಅನುಕರಿಸುತ್ತಿದ್ದೇವೆ. ಹೀಗಾಗಿ ನಾವು ಹೆಚ್ಚು ಕ್ರಿಯಾತ್ಮಕವಾದ ಭಾಷೆಯನ್ನು ಬಳಸಬೇಕು.

–ಸರ್, ಈಗ ಮತ್ತೊಂದು ಪ್ರಶ್ನೆ, ಪದವಿಗೆ ಬರುವ ಹೊತ್ತಿಗೆ ವಿದ್ಯಾರ್ಥಿಗಳು ಭಾಷೆಯನ್ನು ಕಲಿತಿರುತ್ತಾರೆ. ಪದವಿಯಲ್ಲಿ ಭಾಷೆಯನ್ನು ಕಲಿಯುವಂಥದ್ದು ಏನೂ ಇಲ್ಲ ಎಂಬ ಪ್ರಶ್ನೆ ಇದೆ. ಇಂಥ ಸಂದರ್ಭದಲ್ಲಿ ಪದವಿ ಹಂತದಲ್ಲಿ ಕನ್ನಡ ಭಾಷಾ ಪಠ್ಯಗಳ ಉದ್ದೇಶ ಏನಾಗಿರಬೇಕು ಎಂಬುದು ನಿಮ್ಮ ಅಭಿಪ್ರಾಯ ?

ಎಂ. ಎಂ. ಕಲಬುರ್ಗಿ : ಭಾಷೆಯನ್ನು ಕಲಿಯುವುದು ಬೇರೆ, ಮಾತನಾಡುವುದು ಬೇರೆ, ಮಗು ಕಲಿಯುವ ಭಾಷೆ ಬೇರೆ, ಪೇಟೆಯಲ್ಲಿ ಮಾತನಾಡುವ ಭಾಷೆ ಬೇರೆ. ಶೈಕ್ಷಣಿಕ ಕ್ಷೇತ್ರಕ್ಕೆ ಅಥವಾ ಜ್ಞಾನಕ್ಷೇತ್ರಕ್ಕೆ ಭಾಷೆಯನ್ನು ಅಳವಡಿಸಿಕೊಳ್ಳುವುದು ಭಿನ್ನವಾಗಿದೆ. ಆಡುಭಾಷೆ ಅಥವಾ ವ್ಯಾವಹಾರಿಕ ಭಾಷೆ ಎಂಬುದು ಇಲ್ಲಿ ಬರುವುದಿಲ್ಲ. ಜ್ಞಾನಕ್ಷೇತ್ರಕ್ಕೆ ಅದನ್ನು ಬಳಸುವಂತಹ ರೀತಿಯನ್ನು ಕಲಿಯಬೇಕಾಗುತ್ತದೆ. ಭಾಷೆಯನ್ನು ಬಳಸುವ ವಿವಿಧ ರೀತಿಗಳನ್ನು ಪದವಿ ಹಂತದಲ್ಲಿ ಅಭ್ಯಸಿಸಬೇಕಾಗುತ್ತದೆ.

–ಬೇರೆ ಬೇರೆ ಅಂತರ್ ಶಿಸ್ತುಗಳಲ್ಲಿ ಬೌದ್ಧಿಕವಾಗಿ ಅದನ್ನು ಬಳಸಬೇಕು ಅನ್ನುವುದರ ಕುರಿತು ...?

ಎಂ. ಎಂ. ಕಲಬುರ್ಗಿ : ಹೌದು ಅದು ಬಹಳ ಮುಖ್ಯವಾದುದು. ಇಲ್ಲಿ ಮಗು ಕಲಿಯಬೇಕಾಗುತ್ತದೆ. ಅದಕ್ಕಾಗಿ ಇಲ್ಲಿಯೂ ಭಾಷೆಯನ್ನು ಕಲಿಯುವುದು ಎಷ್ಟೋ ಜನರಿಗೆ ಇದು ಮದರ ಟಂಗ್ ಇದೆ, ಇದನ್ನು ಕಲಿಯದೆ ಬಿಟ್ಟರೂ ನಡೆಯುತ್ತದೆ ಎನ್ನುವಂತಾಗಿದೆ. 'ಮದರ್ ಟಂಗ್' ಇರಲಿ 'ಅದರಟಂಗ್' ಇರಲಿ ಅದನ್ನು ನಾವು ಬೇರೆ ಬೇರೆ ರೀತಿಯಲ್ಲಿ ಇದುವರೆಗೂ ಪ್ರಯತ್ನಿಸಿದರೂ ಸಹ ಅದರ ಬಳಕೆಯ ಎಲ್ಲಾ ಮಗ್ಗಲುಗಳು ಮತ್ತು ಆಯಾಮಗಳು ನಮಗೆ ಸಿಗುವುದಿಲ್ಲ.

–ಅದು ಹೇಗಾಗಿದೆ ಎಂದರೆ ಭಾಷೆ ಕಲಿಯುವುದೇ ಬೇಕಾಗಿಲ್ಲ. ವಿಷಯಗಳೂ ಬೇಕಾಗಿಲ್ಲ. ಭಾಷೆಯ ಅಧ್ಯಯನವೇ ಬೇಕಾಗಿಲ್ಲ ಎಂಬ ಪ್ರಶ್ನೆ ಅಚ್ಚರಿಯನ್ನುಂಟು ಮಾಡುತ್ತದೆ.

ಎಂ. ಎಂ. ಕಲಬುರ್ಗಿ : ಬರೆ ಅಂಕಿಮ್ಯಾಲೆ ಬದುಕು ಹೋಗುವುದಿಲ್ಲ. ಅಂಕಿ, ಅಕ್ಷರ ಎರಡೂ ಬೇಕಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಮನುಷ್ಯನ ಭಾವನೆಗಳು ಅಂಕಿಗಳಿಂದ ಆಗುವುದಿಲ್ಲ. ಭಾವನೆಗಳಿಗೆ ಭಾಷೆಯೇ ಬೇಕಾಗುತ್ತದೆ. ಭಾಷೆಯ ರಚನಾವಿಧಾನಗಳು ಕುಸ್ತಿಯ ಪಟ್ಟುಗಳಿದ್ದಂತೆ. ಶಕ್ತಿಶಾಲಿಯಾದವನು ಕುಸ್ತಿಯಲ್ಲಿ ಗೆಲ್ಲುತ್ತಾನೆಂದು ಹೇಳಲಾಗದು. ಶಕ್ತಿಯನ್ನು ಹೊಂದಿದ್ದರೂ ಪಟ್ಟುಗಳು ಬೇಕಾಗುತ್ತವೆ. ಕಡಿಮೆ ಶಕ್ತಿಶಾಲಿಯಾದವನು ಪಟ್ಟುಗಳಲ್ಲಿ ಪ್ರವೀಣನಾಗಿದ್ದರೆ ಆತನೇ ಗೆಲ್ಲಬಹುದು. ಹೀಗಾಗಿ ಭಾಷಾಪಟ್ಟುಗಳು ಈ ಹಂತಗಳಲ್ಲಿ ನಮಗೆ ಗೊತ್ತಾಗುತ್ತವೆ.

–ಸರ್, ಹಾಗಾದರೆ ಈಗ ಬೇರೆ ಬೇರೆ ಶಿಸ್ತುಗಳಿಗೂ ಕೂಡ ಭಾಷೆಯನ್ನು ಹೇಗೆ ಬಳಸಬೇಕು ಅನ್ನುವದನ್ನು ನಾವು ಕಲಿಸುವುದಾದರೆ ಪದವಿ ಹಂತದಲ್ಲಿ ಭಾಷಾಪಠ್ಯಗಳೆಂದು ಸಾಹಿತ್ಯದ ಪಠ್ಯಗಳನ್ನೇ ಹೆಚ್ಚು ಕಲಿಸುತ್ತೇವೆ. ಇದು ಒಂದು ಸಮಸ್ಯೆ ಅಲ್ಲವೇ?

ಎಂ. ಎಂ. ಕಲಬುರ್ಗಿ : ಹೌದು, ನಿಜ. ನೀವು ಮಗುವಿಗೆ ಎಷ್ಟು ಜ್ಞಾನವನ್ನು ಕಲಿಸುವಿರಿ? ಸಾಹಿತ್ಯದ ಜ್ಞಾನವೊಂದನ್ನೇ ಕಲಿಸುವುದಕ್ಕೆ ಹೋದರೆ ಅದು ಮುಗಿಯುವುದಿಲ್ಲ. 'ಕೇಳಿ ಕಂಡವನಾನೇನುಮಿಲ್ಲ ತದಕ್ಷಯನಿಧಿ ತಾನೆ !' ಎಂದು ಪಂಪ ಹೇಳುವುದು ಇಲ್ಲಿ ಸ್ಮರಣೀಯ. ಸಾಹಿತ್ಯದಲ್ಲಿ ಪದ್ಯ, ಗದ್ಯ, ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ, ಸಂಶೋಧನೆ ಮುಂತಾದವುಗಳ ಭಾಷೆ ಬೇರೆ ಬೇರೆಯಾಗಿದೆ. ಪ್ರಾಥಮಿಕ ಹಂತದಲ್ಲಿ ಕೇವಲ ಭಾಷೆಯನ್ನು ಬಳಸುವ ರೀತಿ ಗೊತ್ತಾಗುತ್ತದೆ. ಆದರೆ ಪದವಿ ಹಂತದಲ್ಲಿ ಭಾಷೆಯ ವೈವಿಧ್ಯಗಳನ್ನು ಅರಿಯುವ ತರಬೇತಿ ನೀಡಬೇಕಾಗುತ್ತದೆ.

ನಾವು ಕನ್ನಡದ ವಿಷಯಕ್ಕೆ ಬಂದಾಗ ಇದು ಮಾತೃಭಾಷೆಯೆಂದು ಸುಮ್ಮನಾಗಿಬಿಡುತ್ತೇವೆ. ಮಾತೃಭಾಷೆ ಎಂದರೇನು? ಇದು ಬಹಳ ಮುಖ್ಯವಾದ ಪ್ರಶ್ನೆ. ಹಿಂದಿನ ಕಾಲದಲ್ಲಿ ಯಾವುದು ಮಾತೃಭಾಷೆಯಾಗಿತ್ತೋ ಅದನ್ನು ಇಂದಿನ ಬದಲಾವಣೆಯ ಸಂದರ್ಭದಲ್ಲಿ ಒಪ್ಪಲಾಗದು. ಇಂದಿಗೂ ಮಾತೃಭಾಷೆಯ ವ್ಯಾಖ್ಯಾನದ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಹಿಂದೆ ಸ್ಥಿರ ಸಮಾಜವಿತ್ತು, ಇಂದು ಅದು ಚರ ಸಮಾಜವಾಗಿದೆ. ಹೀಗಾಗಿ ಮಾತೃಭಾಷೆಯ ಅರ್ಥವು ಸ್ಥಿರ ಸಮಾಜದಲ್ಲಿಯೇ ಬೇರೆ, ಚರ ಸಮಾಜದಲ್ಲಿಯೇ ಬೇರೆ ಆಗುತ್ತದೆ. ಸ್ಥಿರ ಸಮಾಜದಲ್ಲಿ ಹೇಳಿದ್ದನ್ನೇ ವಾದಿಸುತ್ತ ಜನರ ಮತ್ತು ವಿದ್ಯಾರ್ಥಿಗಳ ಬಾಯಿ ಮುಚ್ಚಿಸುತ್ತೇವೆ. ಮಾತೃಭಾಷೆಯಲ್ಲಿ ಕಲಿಸಬೇಕೆಂದು ಮಹಾತ್ಮಾಗಾಂಧೀಜಿಯವರು ಹೇಳಿದ್ದರು. ಆದರೆ ಅವರ ಮಾತನ್ನು ಇಂದು ಒಪ್ಪಿಕೊಳ್ಳಲಾಗದು. ಅಂದಿನ ಸ್ಥಿರ ಸಮಾಜದಲ್ಲಿ ಮನೆಯ ಮತ್ತು ಹೊರಗಿನ ಭಾಷೆ ಒಂದೇ ಆಗಿತ್ತು. ಇಂದು ಯಾವುದೋ ಊರಿನ ಕುಟುಂಬವೊಂದರಲ್ಲಿ ಜನಿಸಿದ ವ್ಯಕ್ತಿ ನೌಕರಿಯ ಕಾರಣಕ್ಕಾಗಿ ಬೇರೆ ರಾಜ್ಯಕ್ಕೆ ಹೋಗುತ್ತಾನೆ. ಅಲ್ಲಿಯ ಜನರೊಂದಿಗೆ ಬೆರೆತು ಹೊಸ ಭಾಷೆಯನ್ನು ಕಲಿಯುತ್ತಾನೆ. ಹೀಗಾಗಿ ಇಂದು ಮನೆಯ ಭಾಷೆ ಮತ್ತು ಸಮಾಜದ ಭಾಷೆ ಬೇರೆ ಬೇರೆಯಾಗಿವೆ. ಹೀಗಾಗಿ ಮಾತೃಭಾಷೆ ಯಾವುದು ಎಂಬುದು ಬಿಡಿಸಲಾಗದ ಪ್ರಶ್ನೆಯಾಗಿದೆ.

–ಇಂದು ಮಾಧ್ಯಮಗಳಲ್ಲಿ ಬರುವ ಕನ್ನಡ ಭಾಷೆಯಲ್ಲಿ ಎಷ್ಟು ಭಾಷೆಗಳ ಮಿಶ್ರಣವಿದೆಯಲ್ಲ?

ಎಂ. ಎಂ. ಕಲಬುರ್ಗಿ : ಅದು ಹಾಗಲ್ಲ, ಶಬ್ದಗಳ ಮಿಶ್ರಣ ಮತ್ತು ವಾಕ್ಯರಚನೆ ಬೇರೆ ಬೇರೆಯಾಗಿವೆ. ಭಾಷೆಯು ಬರೀ ಶಬ್ದವಲ್ಲ, ವಾಕ್ಯ. ನೀವು ಬೇಕಾದ ಶಬ್ದಗಳನ್ನು ಬಳಸಿರಿ, ಇಂದು ನಾವು ಬಳಸುವ

ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಈ ಪದಗಳೆಲ್ಲ ಮೂಲತಃ ಕನ್ನಡ ಪದಗಳಲ್ಲ, ಇವುಗಳಿಗೆ ಅಚ್ಚ ಕನ್ನಡ ಪದಗಳಾದ ಮೂಡಣ, ಬಡಗಣ ಮುಂತಾದ ಪದಗಳು ಮರೆಯಾಗಿವೆ. ಈಸ್ಟ್, ನಾರ್ಥ್, ವೆಸ್ಟ್ ಮುಂತಾದ ಪದಗಳನ್ನು ಸಹಜವಾಗಿಯೇ ಬಳಸುತ್ತೇವೆ.

–ಮನೆಯಲ್ಲಿ ಬಳಸುವಂತ ಪದಾರ್ಥಗಳು ಯಾವ ಯಾವ ದೇಶದಿಂದ ಬಂದಿದೆಯೋ? ಹೀಗೆ ಏನೇನೋ ಶಬ್ದಗಳು ಬಂದು ಸೇರಿಕೊಂಡಿವೆ. ಇದರಿಂದ ಭಾಷಿಕ ಸಂದರ್ಭ ಬದಲಾಗುತ್ತದೆಯೇ?

ಎಂ. ಎಂ. ಕಲಬುರ್ಗಿ : ಈಗ ಆ ಎಲ್ಲ ಶಬ್ದಗಳು ನಮ್ಮವೇ ಆಗಿವೆ. ಆದರೆ ಭಾಷೆ ಎಂದರೆ ಶಬ್ದ ಅಲ್ಲ, ವಾಕ್ಯ. ನಾವು ಎಷ್ಟೋ ಸಲ ಶಬ್ದವನ್ನು ತೆಗೆದುಕೊಂಡು ಅದಕ್ಕೆ ಸಮಾನವಾದ ಶಬ್ದವನ್ನು ಬಳಸಿದ ಕೂಡಲೆ ನಮ್ಮ ಕೆಲಸ ಮುಗಿಯಿತು ಎಂದು ಬಾವಿಸುತ್ತೇವೆ. ಶಬ್ದಕೋಶದಲ್ಲಿರುವ ಯಾವುದಾದರೊಂದು ಅರ್ಥವಾಗದ ಪದವನ್ನು ಒಪ್ಪಿಕೊಂಡು ಸುಮ್ಮನಾಗಿಬಿಡುತ್ತೇವೆ. ಈ ಕ್ರಮ ಸರಿಯಾದುದಲ್ಲ. ಇಂದು ಮನೆಯೊಳಗಿನ ಭಾಷೆ ಮತ್ತು ಹೊರಗಿನ ಭಾಷೆ ಬೇರೆಬೇರೆಯಾಗಿದೆ. ಹೀಗಾಗಿ ಮಾತೃಭಾಷೆ ಯಾವುದು? ಎಂಬುವುದನ್ನು ನಾವಿಂದು ಆಲೋಚಿಸಬೇಕಾಗಿದೆ. ನನ್ನ ಪ್ರಕಾರ ಮಗುವೊಂದು ಯಾವ ಭಾಷಾ ಪರಿಸರದಲ್ಲಿ ಹೆಚ್ಚು ಸಮಯ ಕಳೆಯುತ್ತದೆ. ಯಾವ ಭಾಷೆಯನ್ನು ಹೆಚ್ಚು ಜನರೊಂದಿಗೆ ವ್ಯವಹರಿಸುತ್ತದೆ ಎನ್ನುವುದು ಆ ಮಗುವಿನ ಮಾತೃಭಾಷೆಯಾಗುತ್ತದೆ. ಮನೆಯಲ್ಲಿ ತಂದೆ ತಾಯಿಗಳು ಇಬ್ಬರೆ ಇದ್ದರೆ ಮಗು ಅವರೊಂದಿಗೆ ತಮ್ಮ ಊರಿನ ಅಥವಾ ಯಾವುದೋ ಒಂದು ಭಾಷೆಯನ್ನು ಮಾತನಾಡುತ್ತದೆ. ಆದರೆ ಅದೇ ಮಗು ಕುಟುಂಬದ ಹೊರಗೆ ಸಮಾಜದ ಜನರೊಂದಿಗೆ ಬಳಸುವ ಭಾಷೆ ಬೇರೆಯಾಗುತ್ತದೆ. ಮಗು ಮುಂಜಾನೆ ಶಾಲೆಗೆ ಹೋಗಿ ಸಾಯಂಕಾಲ ಬರುತ್ತದೆ. ಮನೆಯಲ್ಲಿ ಒಂದೆರಡು ತಾಸು ತಂದೆತಾಯಿಗಳ ಜೊತೆಯಲ್ಲಿ ಒಂದೆರಡು ತಾಸು ಕಳೆಯುತ್ತದೆ. ಹೆಚ್ಚು ಸಮಯ ಕಳೆಯುವುದು ಹೊರಗಿನವರೊಂದಿಗೆ ಹೀಗಾದರೆ ಆ ಮಗುವಿನ ಮಾತೃಭಾಷೆ ಯಾವುದಾಗಬೇಕು.

–ಅಂದರೆ ನಿಮ್ಮ ಪ್ರಕಾರ ಮಾತೃಭಾಷೆಯ ವ್ಯಾಖ್ಯಾನವೇ ಬದಲಾಗಬೇಕು ಅಂತಿರಾ?

ಎಂ. ಎಂ. ಕಲಬುರ್ಗಿ : ಹೌದು! ಇದನ್ನು ನಾನು ಬಹಳ ವರ್ಷಗಳಿಂದ ಹೇಳತಾ ಬಂದಿನಿ. ಮಾತೃಭಾಷೆಯ ವ್ಯಾಖ್ಯಾನವು ಬದಲಾಗಬೇಕು. ಕರ್ನಾಟಕದ ಸಂದರ್ಭಕ್ಕೆ ಬಂದರೆ ಇಲ್ಲಿ ಕುಟುಂಬದ ಭಾಷೆ ಯಾವುದೇ ಇರಲಿ, ಮಾತೃ ಭಾಷೆ ಕನ್ನಡವೇ ಆಗುತ್ತದೆ.

–ಸರ್, ಇದು ಬೆಂಗಳೂರಿನಂತಹ ನಗರಗಳಲ್ಲಿ ಬಹುಶಃ ಸಮಸ್ಯೆಯಾಗಬಹುದು. ಈಗ ಮನೆಯಲ್ಲಿ ಕನ್ನಡ ಮಾತನಾಡುತ್ತಾ, ಹೊರಗೆ ಇಂಗ್ಲಿಷ ಹೆಚ್ಚಿಗೆ ಬಳಸುವುದನ್ನು ನಾವು ನೋಡುತ್ತಿದ್ದೇವೆ.

ಎಂ. ಎಂ. ಕಲಬುರ್ಗಿ : ಇಲ್ಲ. ಅದು ಇಂಗ್ಲಿಷ ಪರಿಸರವಾಗಿಲ್ಲ. ಅವರು ಕೇವಲ ಇಂಗ್ಲಿಷನ ಶಬ್ದಗಳನ್ನು ಬಳಸುತ್ತಿರುವುದು. ಶಬ್ದಗಳನ್ನು ಬಳಸಿದ ಮಟ್ಟಿಗೆ ಇಂಗ್ಲಿಷ ಪರಿಸರವಾಗಲಾರದು. ಇಂಗ್ಲಿಷ ಭಾಷೆಯನ್ನು ಬಳಸುವುದಲ್ಲ. ಇಂಗ್ಲಿಷ ಭಾಷೆಯ ಎಲ್ಲಾ ನಾಮಪದಗಳನ್ನಿಟ್ಟು ಬರೇ ಕ್ರಿಯಾಪದವಾಗಿ ಕನ್ನಡ ಪದವನ್ನಿಟ್ಟರೂ ಅದು ಕನ್ನಡವಾಗುತ್ತದೆ. ನಾಮಪದ ಎನ್ನುವುದು ಭಾಷೆಯಲ್ಲ. ಕ್ರಿಯಾಪದ ಮತ್ತು ಸರ್ವನಾಮಗಳು ಮುಖ್ಯವಾಗುತ್ತವೆ.

–ಅಂದರೆ ನೀವು ಹೇಳುವ ಪ್ರಕಾರ–ವಿದ್ಯಾರ್ಥಿಗಳು ಪದವಿ ಹಂತಕ್ಕೆ ಬಂದಾಗ ಅಲ್ಲಿ ವ್ಯಾಕರಣ ಸಂಬಂಧವಾದ ಭಾಷಾ ಕಲಿಕೆಯೂ ಇರುವುದಿಲ್ಲ. ಕ್ರಿಯಾತ್ಮಕ ನೆಲೆಯ ಜ್ಞಾನವನ್ನು ಮಾತ್ರ ಕಲಿಯಬೇಕು ಎನ್ನುವಿರಾ?

ಎಂ. ಎಂ. ಕಲಬುರ್ಗಿ : ಹೌದು. ಅದೇ ಉದ್ದೇಶ ಆಗಬೇಕು. ಏಕೆಂದರೆ ಈ ಕ್ರಿಯಾತ್ಮಕ ಎನ್ನುವುದು ಹೇಗಾಗಿದೆ ಎಂದರೆ ನಮ್ಮ ಪಠ್ಯದೊಳಗೆ ಒಂದು ರೀತಿ ರಚಿಸಿಕೊಂಡಿದ್ದೇವೆ. ಮಗುವಿನ ಕ್ರಿಯಾತ್ಮಕತೆಗೂ ಪಠ್ಯದ ಕ್ರಿಯಾತ್ಮಕತೆಗೂ ಬಹಳ ಅಂತರವಾಗಿದೆ.

–ಇಂತಹ ವ್ಯತ್ಯಾಸ ಬಹುಮಟ್ಟಿಗೆ ಆಗೋಗಿದೆ. ಕನ್ನಡ ಭಾಷೆಯ ಬಗ್ಗೆ ಅಸಡ್ಡೆ ಬೆಳೆಯುವುದಕ್ಕೆ ಈ ಅಂತರವೂ ಕಾರಣವಾಗಿರಬಹುದಲ್ಲವೇ?

ಎಂ. ಎಂ. ಕಲಬುರ್ಗಿ : ಆಗೋಗಿದೆ ಅದು ನಿಜ. ಸಮಾಜದೊಳಗೆ ಇರುವ ಕನ್ನಡವೇ ಬೇರೆ ಇದೆ. ನಾವು ಬದುಕುವ ಕನ್ನಡವೇ ಬೇರೆ ಇದೆ. ನಾವು ಕಲಿಸುವ ಕನ್ನಡವೇ ಬೇರೆ ಇದೆ. ಅದಕ್ಕಾಗಿ ಬದುಕುವ ಕನ್ನಡವನ್ನೇ ಕಲಿಯುವ ಪದ್ಧತಿಯನ್ನು ಜಾರಿಗೆ ತರಬೇಕಾಗಿದೆ.

–ಕ್ರಿಯಾತ್ಮಕ ಭಾಷಿಕ ಕೌಶಲಗಳನ್ನು ಹೇಗೆ ಜಾರಿಗೆ ತರುವುದು ?

ಎಂ. ಎಂ. ಕಲಬುರ್ಗಿ : ಜಾರಿಗೆ ತರಬೇಕು. ಅಂದರೆ ಮಗು ಬಹಳ ಬೇಗ ಅಪ್‌ಡೇಟ್ ಆಗುತ್ತದೆ. ಪಠ್ಯದಲ್ಲೂ ಕೂಡ ಅದೇ ಇರಬೇಕು. ಇನ್ನು ಎರಡನೆಯ ವಿಚಾರಕ್ಕೆ ಬಂದರೆ, ಪಠ್ಯ ಭಾಷೆಯನ್ನು ಜಾರಿಗೆ ತರುವಾಗ ಆಡುಭಾಷೆ ಮತ್ತು ಲಿಖಿತ ಭಾಷೆಯ ಅಂತ[illegible]ಾಗಬೇಕು. ಆರಂಭದಲ್ಲಿ ಸ್ವಲ್ಪ ಕಠಿಣ ಎನಿಸಬಹುದು ಆದರೆ ನಂತರದಲ್ಲಿ ಎಲ್ಲವೂ ಸರಿಯಾ[illegible] ಎಂಟತ್ತು ವರುಷದಲ್ಲಿ ರೂಢಿಯಾಗುತ್ತದೆ. ಇಲ್ಲಿ ಕೃತಕವಾದ ಭಾಷೆಯ ಅವಶ್ಯಕತೆ ಇರುವುದಿಲ್ಲ. 'ಬರ್‍ತಾನ' ಎಂಬ ಪದವನ್ನು 'ಬರುತ್ತಾನೆ' ಎಂದು ಬರೆಯುವ ಕಾರಣವಾದರೂ ಏನಿದೆ? ಇದು ಮಗುವಿಗೂ ಕೂಡ ಗೊಂದಲ ಹುಟ್ಟಿಸುತ್ತದೆ.

–ಹೌದು. ನಿಜ ಸರ್

ಎಂ. ಎಂ. ಕಲಬುರ್ಗಿ : ಅದಕ್ಕಾಗಿ ನಾನು ಮೊದಲೇ ಹೇಳಿದಂತೆ ಮಾತೃಭಾಷೆಯ ಅರ್ಥವನ್ನು ಪುನರ್ ವ್ಯಾಖ್ಯಾನಿಸಲ್ಪಡಬೇಕಾದ ಅಗತ್ಯವಿದೆ. ಗ್ರಂಥಸ್ಥಭಾಷೆ ಮತ್ತು ಕಂಠಸ್ಥಭಾಷೆಗಳ ಅಂತರವನ್ನು ಕಡಿಮೆ ಮಾಡಬೇಕು. ಇದನ್ನು ನಮ್ಮ ಪಠ್ಯಗಳು ಮುಖ್ಯ ಮಾಡಬೇಕು. ಭಾಷೆಯು ಕ್ರಿಯಾತ್ಮಕ ಇದೆ. ಅದನ್ನು ಮಾತ್ರ ಪಠ್ಯದೊಳಗೆ ಇಟ್ಟುಕೊಳ್ಳಬೇಕು.

–ಅದರಿಂದಾಗಿ ಈ ರೀತಿಯ ಯೋಚನೆ ಮಾಡಿದ್ರೆ, ನಮ್ಮ ಪರೀಕ್ಷಾ ಪದ್ಧತಿಗಳು ಬದಲಾಗಬೇಕಾಗುತ್ತದೆ. ನಮ್ಮ ಮೌಲ್ಯಮಾಪನದ ಪದ್ಧತಿಗಳು ಬದಲಾಗಬೇಕಾಗುತ್ತದೆ.

ಎಂ. ಎಂ. ಕಲಬುರ್ಗಿ : ಈಗ ವಾಸ್ತವ ಅದಲ್ಲ. ಆ ಭಾಷೆಯನ್ನು ಬಿಟ್ಟು ಬೇರೆ ಭಾಷೆಯನ್ನು ತೆಗೆದುಕೊಂಡು ಏನು ಮಾಡುವುದು? ಆದರೆ ಇವತ್ತು ಕ್ಲಾಸಲ್ಲಿ ಕಲಿಸುವ ಭಾಷೆಯು ಬೇರೆಯಾಗಿದೆ.

–ಕೇವಲ ವಿಷಯಾಧಾರಿತ ಕಲಿಕೆಯು ಮೂಲ ಉದ್ದೇಶವನ್ನೆ ಹಾಳುಮಾಡಿದೆ ಅಂತಾಯಿತಲ್ಲವೆ?

ಎಂ.ಎಂ. ಕಲಬುರ್ಗಿ : ಹೌದು. ಅದಕ್ಕಾಗಿ ಪಠ್ಯ ಮತ್ತು ಪರೀಕ್ಷಾ ಪದ್ಧತಿಗಳೆರಡೂ ಬದಲಾಗಬೇಕಾಗುತ್ತದೆ.

–ಪಠ್ಯದಲ್ಲಿಯೇ ಇದನ್ನು ಕ್ರಿಯಾಶೀಲಗೊಳಿಸಬೇಕಾದ ಅವಶ್ಯಕತೆ ಇದೆಯೇ?

ಎಂ. ಎಂ. ಕಲಬುರ್ಗಿ : ಹೌದು ಇದೆ. ಏನು ಕಲಿಯಬೇಕು ಎನ್ನುವುದನ್ನು ಅಲ್ಲಿಯೆ ಕ್ರಿಯಾಶೀಲಗೊಳಿಸಬೇಕು. ನಾವು ಇದನ್ನು ಮಾಡದೇ ಹೋದರೆ ಸುಮ್ಮನೇ ಯಾವುದೋ ಒಂದು ಪಠ್ಯಪುಸ್ತಕ ಕಲಿಸಿ ಅದರ ಮೇಲೆ ಪ್ರಶ್ನೆಪತ್ರಿಕೆ ತೆಗೆದು ಉತ್ತರ ಬರೆಯಿಸಿ. ಪದವಿ ಕೊಟ್ಟು ಕಳಿಸುತ್ತೇವೆ. ಅದು ಉಪಯೋಗಕ್ಕೆ ಬರುವುದಿಲ್ಲ.

–ಹಾಗಾದರೆ ನೀವು ಹೇಳುವುದು, ಈಗಿನ ಮಕ್ಕಳು ಅವರ ಸಾಮಾಜಿಕ ಜೀವನದಲ್ಲಿ ಮಾತನಾಡುವ ಭಾಷೆಯ ಕುರಿತು ಕ್ಲಾಸ್‌ರೂಮ್‌ನ ಮೂಲಕ ಅರಿವು ಮೂಡಿಸಬೇಕು.

ಎಂ. ಎಂ. ಕಲಬುರ್ಗಿ : ಹೌದು, ಪಂಪ ಹೇಳುತ್ತಾನೆ–'ದೇಸಿಯೊಳ್ ಪುಗುವುದು ಪೊಕ್ಕು ಮಾರ್ಗದೊಳೆ ತಳ್ವುದು'. ಅದು ಕೇವಲ ಮಾರ್ಗವಷ್ಟೇ ಅಲ್ಲ. ಬರೀ ದೇಸಿಯಾಗಿ ಉಳಿದರೂ ಪ್ರಯೋಜನವಿಲ್ಲ, ಅದನ್ನು ಉನ್ನತೀಕರಿಸಬೇಕು.

–ಅಂದರೆ, ಬರವಣಿಗೆಗೆ ಸೂಕ್ತವಾದ ಭಾಷೆಯೊಂದಿದೆ, ಆದರೆ ಅದಕ್ಕೆ ಶಕ್ತಿ ಇರುವುದು ಸಾಮಾಜಿಕ ಪರಿಸರದಲ್ಲಿರುವ ಭಾಷೆಯಲ್ಲಿ. ಇದೇ ಪಂಪನ ಮೂಲಕ ನೀವು ಹೇಳುತ್ತಿರುವ ದೇಸಿ. ಬರವಣಿಗೆಯ ಶೈಲಿ ಎನ್ನುವುದು ಸಾಹಿತ್ಯ ಅಥವಾ ಇತರೆ ಜ್ಞಾನಗಳಿಗೆ ಬೇರೆ ಬೇರೆಯಾಗಬಹುದು.

ಎಂ. ಎಂ. ಕಲಬುರ್ಗಿ : ಹೌದು, ಕವನ ಬರೆಯುವ ಭಾಷೆಯನ್ನು ಸಂಶೋಧನೆಯ ಭಾಷೆಯಾಗಿ ಬಳಸಲು ಸಾಧ್ಯವಿಲ್ಲ. ಎರಡರಲ್ಲೂ ಸೃಜನಶೀಲತೆ ಇರುತ್ತದೆ. ಆದರೆ ಕಾವ್ಯದ್ದು ಬೇರೆ, ಸಂಶೋಧನೆಯದ್ದು ಬೇರೆ. ಎಲ್ಲದಕ್ಕೂ ಶಕ್ತಿ ಸಾಮಾಜಿಕ ಜೀವನದಲ್ಲಿ ಇದೆ. ಇಷ್ಟೇ ಏಕೆ ನಾವು ಏನು ಮಾಡಿದರೂ ಸಮಾಜಕ್ಕಾಗಿ ಮಾಡುತ್ತೇವೆ. ಸಮಾಜದ ವಾಸ್ತವವನ್ನು ಹೊರಗಿಟ್ಟು ಕಲಿಯುವುದಾದರೆ ಏನೂ ಪ್ರಯೋಜನವಿಲ್ಲ. ರಾಜಕಾರಣ ರಾಜಕಾರಣಕ್ಕಾಗಿ ಅಲ್ಲ, ಶಿಕ್ಷಣ ಶಿಕ್ಷಣಕ್ಕಾಗಿ ಅಲ್ಲ, ಧರ್ಮ ಧರ್ಮಕ್ಕಾಗಿ ಅಲ್ಲ, ಎಲ್ಲವೂ ಇರಬೇಕಾದದ್ದು ಸಮಾಜಕ್ಕಾಗಿ.

–ಅಂದರೆ ಇಲ್ಲಿ ಒಟ್ಟು ಸಮಾಜ ಮುಖ್ಯವಾಗಬೇಕು ಅಲ್ಲವೇ?

ಎಂ. ಎಂ. ಕಲಬುರ್ಗಿ : ನಮ್ಮ ಲಿಂಗಾಯತರಲ್ಲಿ ಗುರು, ಲಿಂಗ, ಜಂಗಮ ಮುಖ್ಯವಾಗಿವೆ, ಇವತ್ತು ಅವುಗಳ ಅರ್ಥ ಕೆಡಿಸಿದ್ದಾರೆ ಬಿಡಿ, ಲಿಂಗ ಎನ್ನುವುದು ನಿಜವಾದ ಮನುಷ್ಯ ಎನ್ನುವುದಾದರೆ, ಜಂಗಮ ಎನ್ನುವುದು ಸಾಮಾಜಿಕ ಮನುಷ್ಯ, ಇದರಿಂದಾಗಿ ಇಲ್ಲಿ ಜಂಗಮ ಮುಖ್ಯವಾಗುತ್ತದೆ. ಲಿಂಗವ್ಯಕ್ತಿತ್ವ ಬೇರೆ, ಜಂಗಮದ ವ್ಯಕ್ತಿತ್ವ ಬೇರೆ. ಆದ್ದರಿಂದ ಪಠ್ಯಗಳು, ಕಲಿಕೆ, ಕಲಿಸುವಿಕೆ ಎಲ್ಲವೂ ಜಂಗಮಗೊಳ್ಳಬೇಕು. ಲಿಂಗ ಎನ್ನುವುದು ಕೋಶದ ಶಬ್ದ, ಜಂಗಮ ಎನ್ನುವುದು ಭಾಷೆಯ ಶಬ್ದ. ಒಂದು ಸ್ಥಾವರ, ಇನ್ನೊಂದು ಜಂಗಮ, ಈಗ 'ಮನೆ' ಎನ್ನುವುದು ಕೋಶದ ಶಬ್ದ, ಅದಕ್ಕೆ 'ಅನ್ನು' ಹಚ್ಚಿಕೊಂಡು 'ಮನೆಯನ್ನು' ಎಂಬ ಭಾಷೆಯ ಶಬ್ದವನ್ನಾಗಿಸುತ್ತಾರೆ. ಅದರಂತೆ Word is Linga, sentence is Jangama' ಪದವು ಚಲನಶೀಲಗೊಳ್ಳುವುದು ವಾಕ್ಯದಲ್ಲಿ. ವಾಕ್ಯ ಚಲನಶೀಲಗೊಳ್ಳುವುದು ಸಮಾಜದೊಳಗೆ. ಆದ್ದರಿಂದ ನೀವು ಎಲ್ಲಿಯವರೆಗೆ ಸಮಾಜ ಆಗುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ವ್ಯಕ್ತಿತ್ವ ಜಡವಾಗಿಯೇ ಉಳಿಯುತ್ತದೆ. ಹೀಗಾಗಿ ನಮ್ಮ ಕನ್ನಡ ಭಾಷೆಯನ್ನು ಬರಿ ಪಠ್ಯಕ್ಕೆ ಸೇರಿಸಿಕೊಂಡು ಕೇವಲ ಲಿಂಗ ಆಗಬಾರದು. ಅದು ಔಪಯೋಗಿಕವಾಗಿ ಸಾಮಾಜೀಕರಣಗೊಂಡು ಜಂಗಮವಾಗಬೇಕು. ಇಂತಹ ಭಾಷೆಯಿದ್ದಲ್ಲಿ ಮಾತ್ರ ಮಗು ಕ್ರಿಯಾಶೀಲವಾಗುತ್ತದೆ ಮತ್ತು ಸೃಜನಶೀಲವಾಗುತ್ತದೆ.

–ಬಹುಶಃ ಈ ನೆಲೆಗಳನ್ನು ಅರ್ಥ ಮಾಡಿಕೊಳ್ಳದಿರುವ ಕಾರಣಕ್ಕಾಗಿ ಗ್ರಂಥಸ್ಥ ಭಾಷೆ ಎನ್ನುವುದು ಮೇಲಾಗಿ ಆಡುಭಾಷೆಯೆನ್ನುವುದು ಕೀಳಾಗಿ ಇವುಗಳ ನಡುವಿನ ಅಂತರ ಹೆಚ್ಚಾಗಿದೆ. ಅದಕ್ಕಾಗಿಯೇ ಇಂದು ಕ್ಲಾಸ್‌ರೂಮಿನ ಬೋಧನೆ ಮತ್ತು ಕಲಿಕೆಯಲ್ಲಿ ಎಂಥ ಬದಲಾವಣೆ ಬರಬೇಕು?

ಎಂ. ಎಂ. ಕಲಬುರ್ಗಿ : ವಿದ್ವತ್ ಎಂದರೆ ಏನು? ತೀ.ನಂ.ಶ್ರೀ., ಡಿ.ಎಲ್.ಎನ್., ಬರೆದದ್ದು ವಿದ್ವತ್ತಾ? ನೀವು ಭಾರತೀಯ ಕಾವ್ಯಮೀಮಾಂಸೆ ಬರೆದರೆ ಅದು ವಿದ್ವತ್ತೇನು? ಡಿ.ಎಲ್.ಎನ್. ನೀವು

ಪದಕ್ಕೆ ಅರ್ಥ ಹೇಳುತ್ತೀರಿ, ನಿಷ್ಪತ್ತಿ ಹೇಳುತ್ತೀರಿ, ಅದಷ್ಟೇ ವಿದ್ವತ್ತೇನು? ಅದಷ್ಟೇ ಅಲ್ಲ, ಇನ್ನೂ ಇದೆ. ನಿಮ್ಮ ಈ ವಿದ್ವತ್ತು ಚಲನಶೀಲವಲ್ಲದ್ದು.

–ಈ ಅರ್ಥದಲ್ಲಿ ಕೆ.ವಿ.ಎನ್. ಭಾರತೀಯ ಕಾವ್ಯಮೀಮಾಂಸೆ ಕೃತಿಯನ್ನು ಕನ್ನಡ ಸಾಹಿತ್ಯವನ್ನು ಆಳಿದ ಖಳನಾಯಕ ಕೃತಿ ಎಂದಿದ್ದು.

ಎಂ. ಎಂ. ಕಲಬುರ್ಗಿ : ಹೌದು, ಡಿ.ಎಲ್.ಎನ್. ಮತ್ತು ತೀ.ನಂ.ಶ್ರೀ. ಬಗ್ಗೆ ಇವರು ಅಗೌರವ ತೋರಿಸುತ್ತಾರೆ ಎನ್ನುತ್ತಾರೆ, ಇದು ಅಗೌರವದ ಪ್ರಶ್ನೆಯಲ್ಲ. ಏಕೆಂದರೆ ಅದು ಸಾಮಾಜೀಕರಣಗೊಂಡಿಲ್ಲ, ರಾತ್ರಿಯಿಡೀ ಹತ್ತು ಪುಸ್ತಕಗಳನ್ನು ತಿರುಗಿಸಿ ನೋಟ್ಸ್ ಮಾಡಿಕೊಂಡು ಗಿಳಿಪಾಠ ಒಪ್ಪಿಸುವುದು ವಿದ್ವತ್ತಾಗಲಾರದು.

–ಇವತ್ತಿನ ಕ್ಲಾಸ್‌ರೂಮುಗಳೂ ಇದೇ ಆಗಿವೆ.

ಎಂ. ಎಂ. ಕಲಬುರ್ಗಿ : ಅದೂ ಇಲ್ಲ. ಡಿ.ಎಲ್.ಎನ್., ತೀ.ನಂ.ಶ್ರೀ., ಇವರು ತಾವು ಬರೆದುಕೊಂಡು ಬಂದ ನೋಟ್ಸ್‌ಗಳನ್ನು ಹಂತಹಂತವಾಗಿ ಚೆನ್ನಾಗಿ ವಿವರಿಸುತ್ತಿದ್ದರು. ಇವರಿಗೆ ಸುಂದರವಾಗಿ ಹೇಳುವುದು, ಚೆನ್ನಾಗಿ ಹೇಳುವುದು ಗೊತ್ತಿದೆ, ಆದರೆ ಸರಿಯಾಗಿ ಹೇಳುವುದು ಗೊತ್ತಿಲ್ಲ, ಇಂತಹ ಚಲನಶೀಲವಲ್ಲದ ವಿದ್ವತ್ತುಗಳೇ ನಮ್ಮ ವಿಶ್ವವಿದ್ಯಾಲಯಗಳ ಕನ್ನಡ ಕಲಿಕೆಯನ್ನು ಹಾಳು ಮಾಡುತ್ತ ಬಂದಿವೆ. ನಾನು ಗುಲಬರ್ಗಾದಲ್ಲಿ ಒಂದು ಸಮಾರಂಭಕ್ಕೆ ಹೋಗಿದ್ದಾಗ ಭಾಷಣದಲ್ಲಿ ಹೇಳಿದೆ– ನಾವು ಮಾತನಾಡುವುದರಲ್ಲಿ ಎರಡು ರೀತಿಗಳಿವೆ, ಒಂದು ಚೆನ್ನಾಗಿ ಮಾತನಾಡುವುದು; ಇನ್ನೊಂದು ಸರಿಯಾಗಿ ಮಾತನಾಡುವುದು. ಇಟ್ಟಿಗೆಗಳು ಚೆನ್ನಾಗಿರುತ್ತವೆ ಎಂದರೆ ಮನೆ ಚೆನ್ನಾಗಿಯೇ ರಚನೆಯಾಗುತ್ತದೆ ಎನ್ನಲಾಗದು. ಮನೆಯನ್ನು ಕಟ್ಟಲು ಅದಕ್ಕೊಂದು ರಚನಾವಿಧಾನವಿದೆ. ಅದಕ್ಕೆ ಅದರದೇ ಆದ ಕ್ರಿಯಾಶೀಲತೆ ಬೇಕಾಗುತ್ತದೆ. ಈ ರಚನಾವಿಧಾನವನ್ನು ಕಲಿಯದೇ ಎಂತಹ ಉತ್ತಮ ಇಟ್ಟಿಗೆಗಳನ್ನು ಬಳಸಿದರೂ ಮನೆಯು ಸುಂದರವಾಗಲಾರದು. ಶಿಕ್ಷಣವೆನ್ನುವುದೂ ಹಾಗೆಯೇ. ಭಾರತೀಯರು ಹೇಗಿದ್ದಾರೆ ಎಂದರೆ ವೈಯಕ್ತಿಕವಾಗಿ ಸಬಲರು, ಆದರೆ ಸಾಮಾಜಿಕವಾಗಿ ದುರ್ಬಲರು. ಅಂದರೆ ಇಟ್ಟಿಗೆ ಗುಣಮಟ್ಟದ್ದಾಗಿವೆ ಆದರೆ ಮನೆ ದುರ್ಬಲವಾಗಿದೆ.

–ವಿಶ್ವವಿದ್ಯಾಲಯದ ಒಟ್ಟು ಶಿಕ್ಷಣದ ಸ್ವರೂಪದ ಕುರಿತು ನೀವು ಮಾತಾಡ್ತಾ ಇದ್ದೀರಿ

ಎಂ.ಎಂ.ಕಲಬುರ್ಗಿ : ಹೌದು. ಇದು ಎಲ್ಲಿಯವರೆಗೆ ಬದಲಾವಣೆ ಯಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಏನೂ ಮಾಡುವುದಕ್ಕೂ ಆಗುವುದಿಲ್ಲ. ಅದಕ್ಕಾಗಿ ಭಾಷೆಯು ಕ್ಲಾಸ್‌ರೂಮಿನಲ್ಲೂ ಪ್ರಸ್ತುತವಾಗಬೇಕು. ಇವತ್ತಿನ ನಮ್ಮ ಪ್ರಸ್ತುತ ಪರಿಸರಕ್ಕೂ ಪ್ರಸ್ತುತವಾಗಬೇಕು.

–ಸರ್. ಇದನ್ನು ಯಾವ ರೀತಿ ಅಳವಡಿಸಬಹುದು ಅಂತ.

ಎಂ. ಎಂ. ಕಲಬುರ್ಗಿ : ಇದನ್ನು ಒಂದನೆಯ ತರಗತಿಯಿಂದಲೇ ಪ್ರಾರಂಭಿಸಬೇಕಾಗುತ್ತದೆ.

–ವ್ಯಾಕರಣಯುಕ್ತವಾದ ಒತ್ತಡಗಳನ್ನು ತೆಗೆಯಬೇಕೆಂದು ನಿಮ್ಮ ಅಭಿಪ್ರಾಯಾನಾ ಸಾರ್?

ಎಂ. ಎಂ. ಕಲಬುರ್ಗಿ : ಹೌದು. ತೆಗೆಯಬೇಕು. ಅದರದೇ ಆದ ವ್ಯಾಕರಣ ಮಾಡಬೇಕು. ಕನ್ನಡದ್ದೇ ವ್ಯಾಕರಣ ಮಾಡಬೇಕು.

–ಶಂಕರಭಟ್ಟರು ಇಂಥ ವ್ಯಾಕರಣದ ಬಗ್ಗೆ ಚರ್ಚೆ ನಡೆಸಿದ್ದಾರಲ್ಲ?

ಎಂ. ಎಂ. ಕಲಬುರ್ಗಿ : ಹೌದು. ಹಾಗೆಯೇ ಮಾಡಬೇಕು. ಕೇಶಿರಾಜನು ಲಿಂಗ, ವಚನದ ಬಗ್ಗೆ ಹೇಳುತ್ತಾ ಏಕವಚನ. ದ್ವಿವಚನ ಮತ್ತು ತ್ರಿವಚನ ಎಂದು ಸಂಸ್ಕೃತದಲ್ಲಿರುವುದನ್ನು ಹೇಳುತ್ತಾ ನಮ್ಮಲ್ಲೂ ಮೂರಿದೆ ಎಂದು ಹೇಳಿದ. ಇದು ಎಂತಹ ಅಸಂಬದ್ಧವಾದುದು. ಇದು ವ್ಯಾಕರಣ ಏನು? ನಾವು

ಶಬ್ದಮಣಿದರ್ಪಣವನ್ನು ಕಲಿಸುತ್ತೇವಲ್ಲ ಅದನ್ನು ಕಂಠಪಾಠ ಮಾಡಿ ಮಾರ್ಕ್ಸ ತೆಗೆದುಕೊಳ್ಳುವುದಕ್ಕೆ ಓದುತ್ತೇವೆ. ಹೀಗಾಗಿ ನಾವು ಯಾವಾಗಲೂ ಪ್ರಸ್ತುತವಾಗುವಂತ ಭಾಷೆಯನ್ನು ಕಲಿಸಬೇಕು. ನಮ್ಮ ವ್ಯಾಕರಣದ ಕೈಪಿಡಿಗಳು ಬದಲಾಗಬೇಕು. ನಾವು ಶಂಕರಭಟ್ಟರನ್ನು ಹೆಚ್ಚು ಅನುಸರಿಸಬೇಕು. ಅವರು ಹೇಳಿರುದು ಸರಿಯಾಗಿದೆ. (ಈ ಸಲ ಪಂಪ ಪ್ರಶಸ್ತಿಗೆ ಮೂರು ಹೆಸರೊಳಗ ಶಂಕರಭಟ್ಟರ ಹೆಸರನ್ನೂ ಸೂಚಿಸಿದ್ದೆ.) ಈ ಮೂಲಕ ಇವತ್ತು ಪ್ರಸ್ತುತವಾಗುವ ಭಾಷೆಯನ್ನು ಕಲಿಸುವಹಾಗೆ ಆಗಬೇಕು. ಸೃಜನಶೀಲ ಬರವಣಿಗೆ ಶೈಲಿಯನ್ನು ರೂಢಿಸಿಕೊಳ್ಳಬೇಕು. ಭಾಷೆಯ ವ್ಯಾಕರಣ ಭಾಷೆಯ ಶೈಲಿ ಬೇರೆ ಬೇರೆಯಾಗಿವೆ. ಸೃಜನಶೀಲವಾದ ನೆಲೆಗಳನ್ನೆಲ್ಲಾ ಕಲಿಸಿಕೊಡಬೇಕಾಗುತ್ತದೆ. ಭಾರತದ ಕುರಿತು ಪಂಪ ಒಂದು ರೀತಿಯಲ್ಲಿ ಬರೆದ, ಕುಮಾರವ್ಯಾಸ ಇನ್ನೊಂದು ರೀತಿಯಲ್ಲಿ ಬರೆದ. ಏಕೆಂದರೆ ಅವರ ಕೌಶಲಗಳೆ ಬೇರೆಯಾಗಿರುತ್ತವೆ. ವಿಷಯವಸ್ತು ಒಂದೇ ಆಗಿರುತ್ತದೆ.

–ಕೌಶಲಗಳು ಕೂಡ ನಮ್ಮ ಜೊತೆಯಲ್ಲಿದ್ದಾವೆ. ನಮ್ಮ ಸಾಮಾಜಿಕ ಸಂಬಂಧಗಳಲ್ಲಿವೆ. ನಾವು ಗ್ರಂಥಸ್ಥವಾಗಿರುವದನ್ನು ಉಳಿಸಿಕೊಂಡು ಅದನ್ನು ಮರೆಮಾಡುತ್ತಿದ್ದೇವೆಯಲ್ಲವೇ?

ಎಂ. ಎಂ. ಕಲಬುರ್ಗಿ : ಹೌದು. ಮರೆಮಾಡಿ ಒಂದು ಸಾಪಾದ, ಕೃತಕವಾದ ಭಾಷೆಯನ್ನು ತಂದು ಪಠ್ಯದೊಳಗೆ ಹಾಕಿ ಕಲಿಸುತ್ತಿದ್ದೇವೆ. ಇದು ಎಲ್ಲಿಯವರೆಗೆ ಸರಿಯಾಗುವುದಿಲ್ಲ ಅಲ್ಲಿಯವರೆಗೆ ಹೀಗೆಯೇ ಇರುತ್ತದೆ. ಭಾಷಾ ಶಿಕ್ಷಣ ಪ್ರಸ್ತುತವಾಗುವುದಿಲ್ಲ. ಬಹಳ ಮುಖ್ಯವಾದುದು ಸಾಹಿತ್ಯದ ಬಗ್ಗೆ ಮಾತನಾಡುತ್ತೇವಲ್ಲ ನಾವು 'ರಮಣೀಯಾರ್ಥ ಪ್ರತಿಪಾದಕಂ ಕಾವ್ಯಂ' ಎಂದು ಬಳಸುತ್ತಿದ್ದೇವೆ. ಆದರೆ ಕಾವ್ಯದ ಉದ್ದೇಶವನ್ನು ಕುರಿತು ಬಸವಣ್ಣವನರು 'ನೀನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂದು ಹೇಳುತ್ತಾರೆ. 'ನೀನಗೆ ಕೇಡಿಲ್ಲವಾಗಿ' ಎಂದರೆ ಸಮಾಜಕ್ಕೆ ಭಂಗ ಬರಬಾರದು ಎಂದರ್ಥ. ಬಹುಶಃ ಜಗತ್ತಿನೊಳಗ ಯಾರೂ ಹಿಂಗ ಹೇಳಿಲ್ಲ. ಸಾಮಾಜಿಕ ನ್ಯಾಯಕ್ಕೂ ಭಂಗ ಬರಬಾರದು, ತನ್ನ ವಯಕ್ತಿಕ ಸ್ವಾತಂತ್ರಕ್ಕೂ ಭಂಗ ಬರಬಾರದು. ಇದು ಬಹಳ ಮುಖ್ಯವಾದ ಸಂಗತಿಯಾಗಿದೆ. ಇದು ಕಾವ್ಯದ ಎಲ್ಲಾ ಕಲಿಕೆಗಳ ವ್ಯಾಖ್ಯಾನವಾಗಿದೆ. ಬಸವಣ್ಣವರು ಇಲ್ಲಿ Responsibility ಮತ್ತು Individual Freedom ಕುರಿತು ಹೇಳಿದ್ದಾರೆ. ಇವೆರಡು ಬದುಕಿನ ಜವಾಬ್ದಾರಿಗಳಾಗಿವೆ.

–ಸರ್, ಹಾಗಾಗಿ ನಮ್ಮ ಎಲ್ಲ ಪಠ್ಯಗಳನ್ನು ಈಗ ನಮ್ಮ ಭಾಷೆಯ ಪಠ್ಯಗಳು ಮತ್ತು ಸಾಹಿತ್ಯದ ಪಠ್ಯಗಳು, ಅವೆರಡು ಹೆಚ್ಚು ಕಡಿಮೆ ಸಾಹಿತ್ಯದ ಪಠ್ಯಗಳೇ ಆಗಿವೆ. ಅವುಗಳು ಸ್ವರೂಪದಲ್ಲಿ ಬೇರೆ ಆಗಬೇಕಾಗಿವೆ. ಸಾಹಿತ್ಯದ ಕಲಿಕೆ ಎನ್ನುವುದು ಅದೊಂದು ಜ್ಞಾನಶಿಸ್ತು, ಅದನ್ನು ಐಚ್ಛಿಕವಾಗಿ ಕಲಿಯುವುದು ಬೇರೆ, ಭಾಷಿಕ ಕಲಿಕೆ ಎನ್ನುವುದು ಬೇರೆ. ನೀವು ಹೇಳಿದ ಹಾಗೆ ಸಾಮಾಜಿಕ ಪಠ್ಯಗಳು ಬದಲಾಗಬೇಕಾಗುತ್ತದೆ. ಆಗ ಕ್ಲಾಸ್‌ರೂಮಿನ ಕಲಿಕೆ ಮತ್ತು ಬೋಧನೆಯ ಸ್ವರೂಪ, ವಿಧಾನ ಎಲ್ಲವೂ ಕೂಡ ಬದಲಾಗುತ್ತವೆ ಅಲ್ಲವೇ?

ಎಂ. ಎಂ. ಕಲಬುರ್ಗಿ : ಹೌದು. ಎಲ್ಲವೂ ಆಗ ಬದಲಾಗುತ್ತದೆ. ಜೊತೆಗೆ ಅದು ಸಾಮಾಜಿಕವಾಗಿಯೂ ಉಪಯೋಗವಾಗುತ್ತದೆ. ಅದರ ಬಗ್ಗೆ ಆಸಕ್ತಿಯೂ ಉಳಿಯುತ್ತದೆ. ಏಕೆಂದರೆ ಇದನ್ನು ಸಮಾಜದೊಳಗೆ ನಿತ್ಯವೂ ಬಳಸುತ್ತೇವೆ. ಆದರೆ ಇಂದು ಉಸಿರಾಡುವುದು ಒಂದಾಗಿದೆ, ಕಲಿಯುವುದು ಇನ್ನೊಂದಾಗಿದೆ.

–ಬಹುಶಃ ಇಂತಹ ಸಮಸ್ಯೆಯಿಂದಾಗಿಯೇ ಇತರೆ ಜ್ಞಾನಶಿಸ್ತುಗಳವರಿಂದ ಒಂದು ಆಪಾದನೆ ಇರುವುದು ಎನಿಸುತ್ತದೆ. ಪದವಿ ಹಂತದಲ್ಲಿ ಭಾಷೆ ಏಕೆ ಬೇಕು ಎನ್ನುವುದು ಪ್ರಶ್ನೆಯಾಗಿದೆ.

ಎಂ. ಎಂ. ಕಲಬುರ್ಗಿ : ಹೌದು, ಇದು ಅನಿವಾರ್ಯವಾಗಿದೆ. ನೀವು ಮೂಕರಾಗಿ ಸಮಾಜದೊಳಗೆ ಬದುಕುವುದಕ್ಕೆ ಸಾಧ್ಯವಿಲ್ಲ. ಭಾಷೆಯಿಲ್ಲದೇ ಮೂಕವಾಗಿಬಿಟ್ಟರೆ ಪರಸ್ಪರ ಸಂವಹನ ಹೇಗೆ ಸಾಧ್ಯವಾಗುತ್ತದೆ?

–ನಾವೆಲ್ಲಿ ಸೋತಿದ್ದೇವೆ ಎಂದರೆ ನಾವು ಕಲಿತಿರುವುದು ಮತ್ತು ಕಲಿಸುತ್ತಿರುವುದು ಏನು? ಏಕೆ? ಹೇಗೆ? ಎಂದು ಸರಿಯಾಗಿ ನಿರ್ಧರಿಸಿಕೊಳ್ಳದಿರುವದರಿಂದ ಇತರೆ ಜ್ಞಾನಶಿಸ್ತುಗಳಿಗೆ ಕನ್ನಡ ಭಾಷೆಯ ಬಗೆಗಿನ ತಿಳುವಳಿಕೆ ಎಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತದೆ ಎನ್ನುವುದನ್ನು ತೋರಿಸಿಕೊಡದಿರುವುದರಿಂದ ಇಂದು ಭಾಷೆಯ ಕಲಿಕೆ ಎನ್ನುವುದು ಬೇಡದ ವಿಚಾರವಾಗಿ ಪರಿಣಮಿಸಿದೆ ಅಲ್ಲವೇ? ಅಂದರೆ ಇಡೀ ವ್ಯಕ್ತಿತ್ವದೊಳಗಿನ ಭಾಷೆಯ ಹೊಸತನ ಯಾವ ರೀತಿಯದ್ದು ಎಂದು ನಾವು ಹೇಳುವುದಕ್ಕೆ ಸಾಧ್ಯವಾಗಬೇಕಲ್ಲವೇ?

ಎಂ. ಎಂ. ಕಲಬುರ್ಗಿ : ಹೌದು, ಏಕೆಂದರೆ ಬದುಕು ಎಂದರೆ ಸಂಬಂಧ. ಅದು ಗಂಡ–ಹೆಂಡತಿ ಸಂಬಂಧ, ಮಕ್ಕಳ ಸಂಬಂಧ, ವಿರೋಧಿಗಳ ಸಂಬಂಧ .... ವಿರೋಧವೂ ಕೂಡ ಒಂದು ಸಂಬಂಧವೇ. ಇವೆಲ್ಲವುಗಳ ಜೊತೆಯಲ್ಲಿಯೇ ಬದುಕು ಸಾಗುತ್ತದೆ. ಈ ಸಾಮಾಜಿಕ ಸಂಬಂಧಗಳು ಪಠ್ಯಗಳಿದ್ದಂತೆ. ಎಲ್ಲಿಯವರೆಗೆ ನಾವು ಈ ಆಲೋಚನೆಗಳ ಮೂಲಕ ಪಠ್ಯಗಳನ್ನು ರೂಪಿಸುವುದಿಲ್ಲವೋ, ಅಲ್ಲಿರುವ ಭಾಷೆಯನ್ನು ಬಳಸುವುದಿಲ್ಲವೋ, ವಿಷಯಗಳನ್ನು ತರುವುದಿಲ್ಲವೋ ಅಲ್ಲಿಯವರೆಗೂ ಪಠ್ಯಗಳು ಕೇವಲ ಗಿಳಿಪಾಠಗಳಂತಾಗುತ್ತವೆ. ಇನ್ನೊಂದು ವಿಷಯ, ದುರ್ಬಲನ ಕೈಯಲ್ಲಿ ಬ್ರಹ್ಮಾಸ್ತ್ರ ಕೊಟ್ಟರೆ ಏನೂ ಪ್ರಯೋಜನವಿಲ್ಲ. ಪಠ್ಯವನ್ನು ಸಿದ್ಧ ಮಾಡಿದರೆ ಸಾಲದು ಅದನ್ನು ಬೋಧಿಸುವ ಶಿಕ್ಷಕ ಸಮರ್ಥನಿರಬೇಕು. ಇಲ್ಲದೇ ಹೋದರೆ ಇದು ಶುದ್ಧ ವೈಫಲ್ಯವಾಗುತ್ತದೆ. ನನಗೆ ತಿಳಿದಿರುವಂತೆ ಇಂದಿನ ವಿದ್ಯಾರ್ಥಿಗಳಿಗೆ ಹೇಗೆ ಪ್ರವೇಶ ಪಡೆಯಬೇಕು, ಹೇಗೆ ಪಾಸಾಗಬೇಕು, ಹೇಗೆ ಪದವಿ ಪಡೆಯಬೇಕು ಮತ್ತು ಹೇಗೆ ನೌಕರಿ ಪಡೆಯಬೇಕು ಎನ್ನುವುದು ಗೊತ್ತಾಗಿದೆ. ಇಂದು ಆ ದಾರಿಯಲ್ಲಿ ಹೊರಟಿದ್ದಾರೆಯೇ ಹೊರತು ಜ್ಞಾನದ ದಾರಿಯಲ್ಲಿ ಅಲ್ಲ.

–ಶಿಕ್ಷಣದ ಮೂಲಕ ಉಂಟಾಗುವ ತಿಳುವಳಿಕೆಯೂ ಕೂಡ ಇದನ್ನೇ ಪುಷ್ಟೀಕರಿಸುತ್ತದೆಯಲ್ಲ? ನಾವು ಬೇಡವಾದ ಯಾವುದನ್ನು ಕಲಿಸುತ್ತಿದ್ದೇವೆಯೋ ಅದರಿಂದನೇ ವ್ಯಕ್ತಿ ಸಾಮಾಜೀಕರಣಕ್ಕೆ ಒಳಗಾಗುತ್ತಿದ್ದಾನಲ್ಲವೇ?

ಎಂ.ಎಂ.ಕಲಬುರ್ಗಿ : ಹೌದು, ಉದಾಹರಣೆಗೆ, ಬೆಂಗಳೂರು ವಿಶ್ವವಿದ್ಯಾಲಯವನ್ನೇ ತೆಗೆದುಕೊಳ್ಳಿ, ಅಲ್ಲಿ ಒಂದು ರೀತಿಯ ವಿದ್ವತ್ತು ಇತ್ತು. ಅದು ಸಮಾಜಕ್ಕೆ ಉಪಯೋಗವಾಯಿತೋ ಇಲ್ಲವೋ ಎಂಬುದು ಬೇರೆ ಮಾತು. ಈಗ ಅದೂ ಇಲ್ಲ. ಎಲ್ಲವೂ ನಿರ್ಜೀವ. ಹೀಗಾಗಿ ನಿರ್ಜೀವಗೊಂಡವರು ಎಂಥವರನ್ನು ಆಯ್ಕೆ ಮಾಡುತ್ತಾರೆ, ಬೆಂಬಲಿಸುತ್ತಾರೆ? ಅಂದರೆ ತಮ್ಮಂಥವರನ್ನೇ ಸೇರಿಸಿಕೊಳ್ಳುತ್ತಾರೆ. ಹೀಗಾಗಿ ನೀವು ಎಂತಹ ಪಠ್ಯವನ್ನು ತಯಾರಿಸಿದರೂ ಹೇಡಿಯ ಕೈಯಲ್ಲಿ ಬ್ರಹ್ಮಾಸ್ತ್ರವನ್ನು ಕೊಟ್ಟಂತೆ. ಇಂದು ನಮ್ಮ ಶಿಕ್ಷಕ ಸಮುದಾಯವನ್ನು ಚುರುಕುಗೊಳಿಸದ ಹೊರತು ನೀವು ಏನು ಪಠ್ಯ ಮಾಡಿದರೂ ಪ್ರಯೋಜನವಾಗಲಾರದು.

–ಶಿಕ್ಷಕರಿಗೆ ಸಿಕ್ಕಿರುವ ಓರಿಯೆಂಟೇಶನ್ನೂ ಈ ರೀತಿಯದ್ದೇ ಆಗಿದೆಯಲ್ಲವಾ ಸರ್?

ಎಂ. ಎಂ. ಕಲಬುರ್ಗಿ : ಮೊದಲು ಒಂದು ವಿದ್ವತ್ತಿನ ಓರಿಯೆಂಟೇಶನ್ನಾದರೂ ಇತ್ತು. ಇವತ್ತು ಅದೂ ಇಲ್ಲ. ಅಂಥ ಶಿಕ್ಷಕರನ್ನು ತುಂಬಿಕೊಂಡಿದ್ದೀರಿ. ಸಂಬಂಧ, ಜಾತಿ, ರಾಜಕಾರಣ ಮತ್ತು ದುಡ್ಡಿನ ಮೇಲೆ ಶಿಕ್ಷಕರನ್ನು ನೀವು ಆಯ್ಕೆ ಮಾಡುತ್ತೀರಿ. ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಒಂದು

ಶಿಕ್ಷಣ ಸಂಸ್ಥೆಯ ಸಂಪತ್ತು ಎಂದರೆ ಅಲ್ಲಿರುವ ಶಿಕ್ಷಕರು. ಅವರು ಶಕ್ತಿಶಾಲಿಗಳಾಗಿದ್ದಾರೆ ಎಂದರೆ ಆ ಸಂಸ್ಥೆ ಶಕ್ತಿಶಾಲಿ ಎಂದರ್ಥ. ಇಲ್ಲವಾದರೆ ಎಷ್ಟೇ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿದರೂ, ದೇಸಿ ಶಿಕ್ಷಣ ಅಂತ ಪ್ರಚಾರ ಮಾಡಿದರೂ ಪ್ರಯೋಜನವಿಲ್ಲ. ಅದಕ್ಕಾಗಿ ನನಗನಿಸುವುದೆಂದರೆ ಅಲ್ಲಿರುವ ಶಿಕ್ಷಕರನ್ನು ಬಲಿಷ್ಠರನ್ನಾಗಿಸುವುದು ಬಹಳ ಮುಖ್ಯವಾಗುತ್ತದೆ.

–ಯಾವ ರೀತಿಯಲ್ಲಿ ಅದನ್ನು ಸರಿಪಡಿಸಬಹುದು ಸರ್?

ಎಂ. ಎಂ. ಕಲಬುರ್ಗಿ : ಶಿಕ್ಷಕರನ್ನು ಬಲಿಷ್ಠ ಮಾಡುವುದು ಎಂದರೆ–ಇಂದಿರುವ ಶಿಕ್ಷಕರನ್ನೆಲ್ಲಾ ಮನೆಗೆ ಕಳಿಸಬೇಕು. ಪಗಾರ ಕೊಟ್ಟು ಅರವತ್ತು ವರ್ಷ ಇವತ್ತೇ ತುಂಬಿದವು ಎಂದು ಭಾವಿಸಿ ಕಳಿಸಬೇಕು. ಹಿಂದೆಲ್ಲ ರಸದ ಪ್ರಮಾಣ ಹೆಚ್ಚಾಗಿತ್ತು, ಕಸದ ಪ್ರಮಾಣ ಕಡಿಮೆಯಿತ್ತು. ಈಗ ಕಸದ ಪ್ರಮಾಣ ಹೆಚ್ಚಾಗಿದೆ, ರಸದ ಪ್ರಮಾಣ ಕಡಿಮೆಯಾಗಿದೆ.

–ಅಂದರೆ ಈ ರೀತಿಯ ದಾರಿಗಳಿಂದ ಬರುವಂಥವರನ್ನು ಹೇಗೆ ನಿಯಂತ್ರಿಸಬೇಕು?

ಎಂ. ಎಂ. ಕಲಬುರ್ಗಿ : ನಿಯಂತ್ರಿಸಬೇಕು. ಇವರನ್ನು ಹಿತ್ತಲ ಬಾಗಿಲಿನಿಂದಲೇ ಹೊರಗೆ ಕಳಿಸಬೇಕು. ಇವರಿರುವವರೆಗೂ ಏನೂ ಆಗುವುದಿಲ್ಲ.

–ನಾವು ಈ ರೀತಿಯಲ್ಲಿ ಯೋಚಿಸಬಹುದೇ– ಈಗ ಕನ್ನಡ ಸಾಹಿತ್ಯವನ್ನು ಕಲಿತು ಬಂದವರು ಕನ್ನಡ ಭಾಷಾ ಅಧ್ಯಾಪಕರಾಗಿದ್ದೇವೆ. ಭಾಷಾ ಕಲಿಕೆಗೆ ಬೇಕಾದಂತಹ ಓರಿಯೆಂಟೇಶನ್ನನ್ನು ಎಂ.ಎ. ತರಗತಿಗಳಲ್ಲಿ ಬೇರೆ ರೀತಿಯಲ್ಲಿ ಯೋಜಿಸಬಹುದೇ?

ಎಂ. ಎಂ. ಕಲಬುರ್ಗಿ : ಮಾಡಬೇಕು. ಅಲ್ಲಿಂದಲೇ ಪ್ರಾರಂಭಿಸಬೇಕು. ಭಾಷಾ ಕಲಿಕೆ ಮತ್ತು ಸಾಹಿತ್ಯ ಕಲಿಕೆ ಮಾತ್ರವಲ್ಲ, ಕನ್ನಡ ಅಧ್ಯಯನ ಪೀಠ, ಕನ್ನಡ ಅಧ್ಯಯನ ಸಂಸ್ಥೆ ಇವುಗಳನ್ನು ಕರ್ನಾಟಕ ಅಧ್ಯಯನ ಸಂಸ್ಥೆಗಳೆಂದು ಬದಲಾಯಿಸಬೇಕಾಗಿದೆ. ಅಂದರೆ ಕರ್ನಾಟಕದ ಪೂರ್ಣ ಅಧ್ಯಯನವಾಗಬೇಕು.

–ಅಂದರೆ ಭಾಷಾ ಕಲಿಕೆಗೆ ಸಂಬಂಧಿಸಿದಂತೆ ಪಾಲಿಸಿ ಮ್ಯಾಟರ್‌ಗಳು ಬದಲಾಗಬೇಕು ಅಂತನಾ? ಇದನ್ನು ಬದಲಾಯಿಸಿದರೆ ಭಾಷಿಕವಾದ ತೊಡಕುಗಳು ಪರಿಹಾರ ಕಾಣಬಹುದು ಅಂತೀರಾ ಸರ್?

ಎಂ. ಎಂ. ಕಲಬುರ್ಗಿ : ಹೌದು. ನಾವು ಭಾಷಾವಾರು ಪ್ರಾಂತಗಳನ್ನು ರಚನೆ ಮಾಡಿದ್ದೇವೆ. ಈಗ ಭಾಷಾವಾರು ಬಿಟ್ಟು ಜಾತಿವಾರು ಆಡಳಿತ ಮಾಡುತ್ತಿದ್ದೇವೆ. ಮರಾಠೀ ಜಾತಿಯವನಿಗೆ ಮರಾಠೀ ಕಲಿಸಬೇಕು, ಮುಸಲ್ಮಾನನಿಗೆ ಉರ್ದು ಕಲಿಸಬೇಕು ಎಂದು ನೀವು ಆಲೋಚಿಸುತ್ತಿದ್ದೀರಿ. ಆದರೆ ಅವನು ಮರಾಠೀನೂ ಅಲ್ಲ, ಮುಸಲ್ಮಾನನೂ ಅಲ್ಲ. ಮೊದಲು ಅವನು ಕನ್ನಡಿಗ. ನಂತರ ಮತ್ತೊಂದು. ನಾವು ಕನ್ನಡಭಾಷೆಯನ್ನು ಕೇಂದ್ರವಾಗಿಟ್ಟುಕೊಂಡೇ ರಾಜ್ಯವನ್ನು ರಚಿಸಿಕೊಂಡಿದ್ದೇವೆಯೇ ಹೊರತು ಮಾತೃಭಾಷೆಯನ್ನಿಟ್ಟುಕೊಂಡಲ್ಲ. ಹೀಗಾಗಿ ನಾವಿಂದು ಪಾಲಿಸಿ ಮ್ಯಾಟರ್‌ಗಳಲ್ಲಿ ಸೋತಿದ್ದೇವೆ. ಅದಕ್ಕಾಗಿ ನಾವು ಏಕೀಕರಣದ ಸಂದರ್ಭದಲ್ಲಿ ಯಾವ ತತ್ವಗಳನ್ನು ಇಟ್ಟುಕೊಂಡು ರಾಜ್ಯವನ್ನು ರೂಪಿಸಿಕೊಂಡಿದ್ದೇವೆಯೋ ಅದರ ಪ್ರಕಾರ ನಡೆದುಕೊಂಡರೆ ಎಲ್ಲವೂ ಸರಿ ಹೋಗುತ್ತದೆ. ಇಲ್ಲವಾದರೆ ಈ ಗೊಂದಲ ಹೀಗೆಯೇ ಇರುತ್ತದೆ. ಮಹಾರಾಷ್ಟ್ರದಲ್ಲಿರುವ ಕನ್ನಡಿಗರೆಲ್ಲ ಮರಾಠಿಗರು, ಕರ್ನಾಟಕದಲ್ಲಿರುವ ಮರಾಠಿಗರೆಲ್ಲ ಕನ್ನಡಿಗರು. ಆದ್ದರಿಂದ ಈ ಮಾತೃಭಾಷೆ ಎನ್ನುವ ಶಬ್ದವನ್ನು ಸಂವಿಧಾನದಿಂದಲೇ ತೆಗೆಯಬೇಕಾಗಿದೆ. ಸಂವಿಧಾನದಲ್ಲಿ ರಾಜ್ಯಭಾಷೆಯೇ ಮಾತೃಭಾಷೆಯೆಂದು ಪರಿವರ್ತಿಸಬೇಕಾಗಿದೆ. ಭಾಷೆಯನ್ನು ತಳಹದಿಯನ್ನಾಗಿ ಮಾಡಿಕೊಂಡು ರಾಜ್ಯವನ್ನು ರೂಪಿಸುವುದರಿಂದ ಇಲ್ಲಿಯ ಶಿಕ್ಷಣ, ಕಾಯಿದೆ ಎಲ್ಲವನ್ನೂ ಇಲ್ಲಿರುವ ಭಾಷೆಯಲ್ಲಿಯೇ ರೂಪಿಸಬೇಕು.

–ಇವತ್ತು ವಿದ್ಯಾರ್ಥಿಗಳ ಜ್ಞಾನಕ್ಕೆ ಅನೇಕ ಮೂಲಗಳಿವೆ. ಈ ಹಿನ್ನೆಲೆಯಲ್ಲಿ ನೀವು ಹೇಳುವುದೇನು?

ಎಂ. ಎಂ. ಕಲಬುರ್ಗಿ : ಅದಕ್ಕಾಗಿಯೇ ನೀವು ಪಠ್ಯವನ್ನು ತಯಾರಿಸುವ ವಿಷಯಕ್ಕೆ ಸಂಬಂಧಪಟ್ಟಂತೆ, ವಿಷಯವನ್ನು ಕಲಿಸುವ ಬೋಧಕರಿಗೆ ಸಂಬಂಧಪಟ್ಟಂತೆ ಚರ್ಚೆಯಾಗಬೇಕು. ಶಿಕ್ಷಕರು ಸಮರ್ಥರಾಗದೇ ಹೋದರೆ ಬೇಕಾದಷ್ಟು ಉತ್ತಮವಾದ ಪಠ್ಯವನ್ನು ಮಾಡಿದರೂ ಅದು 'ಹಂದಿಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು' ಎಂಬಂತಾಗುತ್ತದೆ. ರಾಜ್ಯದ ಪಾಲಿಸಿ ಮ್ಯಾಟರ್‌ಗಳು, ಶಿಕ್ಷಕ ಮತ್ತು ಪಠ್ಯ ಈ ಮೂರೂ ಅಂಶಗಳು ಕನ್ನಡ ಭಾಷಿಕ ಸಮಾಜವನ್ನು ಕೇಂದ್ರೀಕರಿಸಿಕೊಳ್ಳಬೇಕು. ಕೇವಲ ಪಠ್ಯವನ್ನು ಸುಧಾರಿಸಿದರೆ ಅದು ಇಟ್ಟಿಗೆಗಳನ್ನು ಮಾತ್ರ ಸುಧಾರಿಸಿದಂತೆಯೇ ಹೊರತು ಮನೆಯನ್ನಲ್ಲ. ನಾವು ಗಿಡದ ಬೇರಿಗೆ ನೀರು ಹಾಕದೇ ತುದಿ, ಕೊಂಬೆ, ಎಲೆಗಳಿಗೆ ಹಾಕಿದರೆ ಏನು ಪ್ರಯೋಜನವಾದೀತು! ಇಂದು ಕನ್ನಡ ಡಿಪಾರ್ಟಮೆಂಟ್‌ಗಳೂ ಕೆಟ್ಟಿವೆ. ಏಕೆ ಕೆಟ್ಟಿವೆ? ಯಾರು ಕೆಡಿಸಿದರು? ಅವು ಕೆಟ್ಟಿದ್ದರ ಫಲವನ್ನು ಎರಡನೆಯ ತಲೆಮಾರಿನ ನಾವು ಅನುಭವಿಸಿದ್ದೇವೆ. ದೂರ ನಿಂತ ನಾವು ಏನೂ ಸುಧಾರಣೆ ಮಾಡಲಾರದಷ್ಟು ಬೇಡಾಗಿದ್ದೆವೆ. ನಾವು ಯಾವುದಕ್ಕಾದರೂ ಡಿಪಾರ್ಟಮೆಂಟ್‌ಗೆ ಹೋದರೆ ಅಲ್ಲಿರುವವರು ನಮ್ಮನ್ನು ಇರಗೊಡುವುದಿಲ್ಲ. ಅಷ್ಟರ ಮಟ್ಟಿಗೆ ಡಿಪಾರ್ಟಮೆಂಟಿನೊಳಗೆ ಪುಂಡರು, ಪುಢಾರಿಗಳೆಲ್ಲ ಸೇರಿಕೊಂಡಿದ್ದಾರೆ. ಇಲ್ಲಿಯೇ ಸಮೀಪದಲ್ಲಿಯೇ ಇದ್ದರೂ ನಾನು ಡಿಪಾರ್ಟ್‌ಮೆಂಟಿಗೆ ಕಾಲಿಡುವುದಿಲ್ಲ. ಏಕೆಂದರೆ ಒಳಗೆ ಬಂದು ನಾನು ಏನಾದರೂ ಹೇಳಿದರೆ ಅಲ್ಲಿರುವ ಜನ ಅದಕ್ಕೆ ಬೇರೆಯೇ ಒಂದು ಅರ್ಥವನ್ನು ಕಲ್ಪಿಸುವಂತಹ ವಾತಾವರಣ ಬೆಳೆದಿದೆ. ಹೀಗಾಗಿ ನಿಮ್ಮಲ್ಲಿ ಏನಾದರೂ ವಿಚಾರಗಳಿದ್ದರೆ ನೀವೇ ಬಂದು ಮಾತನಾಡಿಕೊಂಡು ಹೋಗಿ ಎನ್ನುತ್ತೇನೆ. ಒಟ್ಟು ಕನ್ನಡದ ಸಂದರ್ಭದ ಕುರಿತು ಮಾತನಾಡುವುದಾದರೆ ನಮ್ಮ ಕನ್ನಡ ಡಿಪಾರ್ಟಮೆಂಟುಗಳನ್ನು ಕೆಡಿಸಿದವರು ಜವರೇಗೌಡರು. ಆದರೆ ಅವರ ಬಗ್ಗೆ ನನಗೆ ಬಹಳ ಗೌರವವಿದೆ, ನನ್ನ ಬಗ್ಗೆ ಅವರಿಗೆ ಬಹಳ ಪ್ರೀತಿಯಿದೆ. ಕನ್ನಡ ಪ್ರೊಫೆಸರ್‌ಗಳ ವಿಷಯದಲ್ಲಿ ಅವರೇನು ಮಾಡಿದರೆಂದರೆ, ಕುವೆಂಪು ಅವರ ಕಾಲದಲ್ಲಿದ್ದ ಕನ್ನಡ ಡಿಪಾರ್ಟಮೆಂಟ್‌ಗಳನ್ನು ಕನ್ನಡ ಅಧ್ಯಯನ ಸಂಸ್ಥೆಗಳನ್ನಾಗಿ ಪರಿವರ್ತಿಸಿದರು. ಮೊದಲು ಕನ್ನಡ ಡಿಪಾರ್ಟಮೆಂಟ್‌ಗಳಲ್ಲಿ ಕನ್ನಡಕ್ಕೆ ಪೂರಕವಾದುದನ್ನೆಲ್ಲ ಕಲಿಸುತ್ತಿದ್ದರು. ಕನ್ನಡಕ್ಕೆ ಬೇಕಾದ ಭಾಷಾಶಾಸ್ತ್ರ, ಚರಿತ್ರೆ, ಜಾನಪದ ಹೀಗೆ ಎಲ್ಲವನ್ನೂ ಒಳಗೊಂಡಿರುತ್ತಿತ್ತು. ಜವರೇಗೌಡರು ಡಿಪಾರ್ಟಮೆಂಟ್‌ಗಳನ್ನು ಇನ್ಸ್ಟಿಟ್ಯೂಟ್‌ಗಳನ್ನಾಗಿ ಮಾಡಿ ಅದರೊಳಗೆ ಕನ್ನಡ ಎಂ.ಎ. ಜೊತೆಗೆ ಭಾಷಾಶಾಸ್ತ್ರ, ಜಾನಪದ ಎಂ.ಎ. ಗಳನ್ನು ಸೇರಿಸಿದರು. ಒಂದು ಡಿಪಾರ್ಟಮೆಂಟಿನಲ್ಲಿ ಒಂದು ಎಂ.ಎ. ಇದ್ದರೇ ಹಲವಾರು ಜಗಳಗಳಿರುತ್ತವೆ. ಅಂಥದ್ದರಲ್ಲಿ ಮೂರು ಎಂ.ಎ. ಕೋರ್ಸುಗಳನ್ನು ಸೇರಿಸಿದರು. ಇದು ಅಂತರ್‌ಶಿಸ್ತೀಯ ಎಂದು ಹೇಳಿ ನಮ್ಮ ಕಣ್ಣೊರೆಸಿದರು. ಆದರೆ ಇದು ಅಂತರ್‌ಬೇಶಿಸ್ತೀಯವಾಗಿದೆ. ಹೀಗೇಕೆ ಮಾಡಿದರೆಂದರೆ ಅವರಿಗೆ ಹಾ.ಮಾ. ನಾಯಕರನ್ನು ಮುಖ್ಯಸ್ಥರನ್ನಾಗಿ ಮಾಡಬೇಕಿತ್ತು. ಅವರಿಗೆ ಕನ್ನಡ ಎಂ.ಎ. ಇರಲಿಲ್ಲ ಬದಲಾಗಿ ಅವರು ಭಾಷಾಶಾಸ್ತ್ರ ಎಂ.ಎ.ದವರು.

–ಇದು ರಾಜಕಾರಣವಲ್ಲವೇ?

ಎಂ. ಎಂ. ಕಲಬುರ್ಗಿ : ಅಂದರೆ ಇದಕ್ಕೆ ಏನೆಂದು ಬಣ್ಣ ಹಚ್ಚಿ ಹೇಳಿದರೆಂದರೆ, ಕನ್ನಡವನ್ನು ಬಹಳಷ್ಟು ವಿಶಾಲಗೊಳಿಸಬೇಕು. ಇಂದು ಜಗತ್ತೆಲ್ಲಾ ಒಂದು ಹಳ್ಳಿಯಾಗಿಬಿಟ್ಟಿದೆ. ಅದಕ್ಕಾಗಿ ಬೇರೆ ಬೇರೆಗಳೆಲ್ಲವೂ ಸೇರಿಕೊಳ್ಳಬೇಕಾಗಿದೆ ಎಂದು ಹೇಳುತ್ತ ಭಾಷಾಶಾಸ್ತ್ರ ಎಂ.ಎ. ಎಂದೂ, ಜಾನಪದ ಎಂ.ಎ. ಎಂದೂ ರಚನೆ ಮಾಡಿದರು. ಮುಂದೆ ಏನು ಮಾಡಿದರೆಂಬುದು ಗೊತ್ತಿದೆಯಲ್ಲವೇ! ಇಲ್ಲಿ

ಕನ್ನಡ, ಭಾಷಾಶಾಸ್ತ್ರ, ಜಾನಪದ ಯಾವುದೇ ವಿಷಯದ ಪ್ರೊಫೆಸರ್‌ಗಳು ಸಂಸ್ಥೆಯ ಮುಖ್ಯಸ್ಥರಾಗಬಹುದು ಎಂದು ಮಾಡಿದರು. ತಮ್ಮ ತರುವಾಯ ಹಾ.ಮಾ. ನಾಯಕರು ಮುಖ್ಯಸ್ಥರಾದರು. ಅವರೇನೋ ಸಮರ್ಥರು. ಆದರೆ ಅವರ ನಂತರ ಬಂದವರು ಹಾಗಿರಬೇಕಲ್ಲ. ಭಾಷಾಶಾಸ್ತ್ರದವರು ಮುಖ್ಯಸ್ಥರಾದಾಗ ಅವರು ಭಾಷಾಶಾಸ್ತ್ರಕ್ಕೆ ಹೆಚ್ಚು ಮಹತ್ವ ಕೊಟ್ಟು ಕನ್ನಡ ಎಂ.ಎ.ದವರನ್ನು ಬದಿಗೊತ್ತಿದರು. ಜಾನಪದದವರು ಬಂದಾಗಲೂ ಹಾಗೆಯೇ. ಹೀಗಾಗಿ ಕನ್ನಡ ತನ್ನ ಮನೆಯಲ್ಲಿಯೇ ತಾನು ಪರದೇಶಿಯಾಯಿತು. ಇವೆರಡೂ ಮಗ್ಗಲುಮುಳ್ಳುಗಳಾಗಿಬಿಟ್ಟವು. ಜೊತೆಗೆ ಒಳಗೆ ಬಂದವರು ಎಲ್ಲಿ ಲಾಭ ಹೆಚ್ಚಿದೆಯೋ ಅಲ್ಲಿ ಹೋಗುವುದಕ್ಕೆ ಪ್ರಾರಂಭಿಸಿದರು. ಕನ್ನಡ ಎಂ.ಎ.ದವರೂ ಸಹ ಕನ್ನಡದ ಲಾಭ ನೋಡದೇ ತಮ್ಮ ವೈಯಕ್ತಿಕ ಲಾಭವನ್ನು ನೋಡತೊಡಗಿದರು. ಹೊರಗಿನಿಂದ ಬಂದವರನ್ನು ವೈಯಕ್ತಿಕ ಲಾಭಕ್ಕಾಗಿ ತಮ್ಮ ಕಡೆ ಮಾಡಿಕೊಂಡರು.

–ನೀವು ಬಹಳ ಮುಖ್ಯವಾದ ವಿಷಯ ಮಾತನಾಡುತ್ತಿದ್ದೀರಿ.

ಎಂ. ಎಂ. ಕಲಬುರ್ಗಿ : ಇವರು ಕನ್ನಡದ ಮನೆಯ ಮಗ ಎಂದು ಹೇಳಿಕೊಳ್ಳುತ್ತಾರೆ. ಕನ್ನಡ ಕನ್ನಡ ಅಂತ ಹೇಳುತ್ತಾರೆ. ಆದರೆ ಎಲ್ಲಿದೆ ಕನ್ನಡ ? ಕನ್ನಡವನ್ನು ಬಿಟ್ಟು ಬೇರೆಯದಕ್ಕೆ ಲಾಭ ಮಾಡಿಕೊಡುತ್ತಾರೆ ಇವರು. ಅವರು ಹೇಳಿದಂತೆ ಉಳಿದವರು ಕೇಳುತ್ತಾರೆ. ಕನ್ನಡಕ್ಕೆ ಪ್ರಾಮಾಣಿಕವಾಗಿ ದುಡಿಯುವವನು ಮೈನೂಟ್ ಆಗಿಬಿಟ್ಟ. ಜಾತಿ ಎನ್ನುವುದು ಒಂದು ರೀತಿಯ ಗುಂಪಾದರೆ, ಸಬ್ಜೆಕ್ಟ್ ಎನ್ನುವವು ಮತ್ತೊಂದು ರೀತಿಯ ಗುಂಪುಗಳಾದವು. ಈಗ ನೋಡಿ ಮಾಲಗತ್ತಿ ಬಂದರು, ಅವರು ಕನ್ನಡ ಎಂ.ಎ.ದವರಲ್ಲ. ಜಾನಪದ ಎಂ.ಎ.ದವರು. ಜಾನಪದ ಎಂ.ಎ. ಮತ್ತು ಕನ್ನಡ ಎಂ.ಎ. ಎರಡೂ ಸಮಾನ ಅಂತ ಇತ್ತಲ್ಲ ಇಲ್ಲಿ ನಮ್ಮಲ್ಲಿ ಅಂದರೆ ಧಾರವಾಡದಲ್ಲಿ ಮತ್ತೊಂದು ತಪ್ಪಾಗಿದೆ. ಇಲ್ಲೂ ಜವರೇಗೌಡರು ಮಾಡಿದ ತಪ್ಪನ್ನೇ ಅನುಕರಿಸಿದ್ದಾರೆ. ಇವರು ಸಂಸ್ಥೆ ಮಾಡಿದರು. ನಂತರ ಮಾಡಿದ ತಪ್ಪೆಂದರೆ ಜಾನಪದ ಮತ್ತು ಕನ್ನಡ ಎರಡನ್ನೂ ಸಮಾನವೆಂದು ಮಾಡಿದರು. ವಿದ್ಯಾರ್ಥಿಗಳಿಗೆ ವಿಷಯದ ಆಯ್ಕೆಯ ಸ್ವಾತಂತ್ರ್ಯವಿತ್ತು. ಆಗ ಭಾಷಾಶಾಸ್ತ್ರಕ್ಕೆ ನಾಲ್ಕೈದು ವಿದ್ಯಾರ್ಥಿಗಳು ಇರುತ್ತಿದ್ದರು. ಜಾನಪದಕ್ಕೆ ಹದಿನೈದು ವಿದ್ಯಾರ್ಥಿಗಳಿರುತ್ತಿದ್ದರು. ಕನ್ನಡಕ್ಕೆ ಎಕ್ಸ್ಟರ್ನಲ್ ವಿದ್ಯಾರ್ಥಿಗಳನ್ನು ತರುತ್ತಿದ್ದೆವು. ಇಲ್ಲಿರುವ ೬೦ ವಿದ್ಯಾರ್ಥಿಗಳು ಅದರೊಳಗೆ ಸೇರಿರುತ್ತಿದ್ದರು. ಇದರಲ್ಲಿ ನಮ್ಮ ವಿದ್ಯಾರ್ಥಿಗಳು ಯಾರೆಂದು ನಮಗೆ ತಿಳಿಯುತ್ತಿರಲಿಲ್ಲ. ಉತ್ತರಪತ್ರಿಕೆಗಳ ಮೌಲ್ಯಮಾಪನ ಮಾಡುವಾಗ ಜಾನಪದದವರು ೮೦–೯೦ ಅಂಕಗಳನ್ನು ನೀಡುತ್ತಿದ್ದರು. ಆದರೆ ಕನ್ನಡದಲ್ಲಿ ಕೇವಲ ೫೦–೬೦ ಅಂಕಗಳನ್ನು ನೀಡುತ್ತಿದ್ದೆವು. ಈ ಅಂಕಗಳ ವ್ಯತ್ಯಾಸದಿಂದಾಗಿ ಕನ್ನಡದ ವಿದ್ಯಾರ್ಥಿಗಳು ಕನ್ನಡ ಕಲಿಯುವುದನ್ನು ಬಿಟ್ಟರು. ಇದರಿಂದ ನಾವು ಮನೆಯ ಮಕ್ಕಳನ್ನು ಕಳೆದುಕೊಂಡಂತಾಯಿತು. ಕನ್ನಡ ಮತ್ತು ಜಾನಪದ ವಿಷಯಗಳ ಫಲಿತಾಂಶಗಳ ವ್ಯತ್ಯಾಸದಿಂದಾಗಿ ಮುಂದೆ ಕೆಲಸಕ್ಕೆ ಸೇರುವಾಗ ಕನ್ನಡದವರಿಗೆ ನೌಕರಿ ಸಿಗಲಿಲ್ಲ. ಕನ್ನಡದ ವಿದ್ಯಾರ್ಥಿಗಳೆಲ್ಲ ನಿರಾಶರಾದರು ಮತ್ತು ಹತಾಶೆಗೊಂಡರು. ನಮ್ಮ ಡಿಪಾರ್ಟಮೆಂಟಿನಲ್ಲಿ ನಮಗೆ ಗೌರವ ಇಲ್ಲದಂತಾಯಿತು. ನೇಮಕಾತಿಯಿಲ್ಲದಂತಾಯಿತು. ಇದನ್ನು ಯಾರೂ ಅರ್ಥ ಮಾಡಿಕೊಳ್ಳುವುದಿಲ್ಲ. ಅಲ್ಲಿ ಜವರೇಗೌಡರು, ಇಲ್ಲಿ ಹಿರೇಮಠರು ಮತ್ತು ಗುಲಬರ್ಗದಲ್ಲಿ ಹೆಂಡಿಯವರು ಮಾಡಿದ ತಪ್ಪುಗಳಿವು. ಇದು ಇಂದಿಗೂ ಸಮಸ್ಯೆಯಾಗಿಯೇ ಉಳಿದಿದೆ. ನಮ್ಮ ಕನ್ನಡ ಎಂ.ಎ. ಕಲಿತು ನೇಮಕಗೊಂಡವರು ಸಹ ಜಾನಪದ ಸೆಮಿನಾರ್, ಜಾನಪದ ಬೋಧನೆಯಲ್ಲಿ ತೊಡಗಿಕೊಂಡರು. ವಿದ್ವತ್ತಿನ ವಿಷಯಕ್ಕೆ ಬಂದರೆ ಎಷ್ಟಂತ ಓದೋದಕ್ಕಾಗುತ್ತದೆ? ಇದರಿಂದಾಗಿ ಬೋಧನೆ ಎನ್ನುವುದು

ಸತ್ವ ಕಳೆದುಕೊಂಡುಬಿಟ್ಟಿದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ನೀವು ಕನ್ನಡವನ್ನು ಕೊಂದಿರಿ. ಬೆಳೆಸಲಿಲ್ಲ. ಕನ್ನಡ ಸತ್ತು ಹೋಯಿತು. ನೀವೂ ಬೆಳೆಯಲಿಲ್ಲ. ಭಾಷಾಶಾಸ್ತ್ರ, ಜಾನಪದಗಳಾದರೂ ಎಲ್ಲಿ ಬೆಳೆದಿವೆ? ಅವೂ ಬೆಳೆಯಲಿಲ್ಲ. ಏಕೆಂದರೆ ಪ್ರಾಧ್ಯಾಪಕರಿಗೆ ಭಾಷಾಶಾಸ್ತ್ರ ಬೆಳೆಸುವುದು ಬೇಕಾಗಿರಲಿಲ್ಲ, ಮುಖ್ಯಸ್ಥರಾಗಬೇಕೆನ್ನುವುದಷ್ಟೇ ಪ್ರಧಾನವಾಗಿತ್ತು. ನಮ್ಮ ಕನ್ನಡದ್ದು ದೊಡ್ಡ ಸಾಮ್ರಾಜ್ಯ. ಪ್ರತ್ಯೇಕ ವಿಭಾಗವನ್ನು ಮಾಡಿಕೊಟ್ಟಿದ್ದರೆ ಅವರಿಗೆ ಗೊತ್ತಾಗುತ್ತಿತ್ತು.

–ನಿಜವಾದ ಕ್ರಿಯಾಶೀಲತೆಯು ನರಳುವುದಕ್ಕೆ ಕಾರಣವಾಯಿತೆ?

ಎಂ. ಎಂ. ಕಲಬುರ್ಗಿ : ಹೌದು. ನರಳುವುದಕ್ಕೆ ಶುರುವಾಯಿತು. ಪ್ರತಿಯೊಂದಕ್ಕೂ ವ್ಯವಹಾರಿಕ ಒಂದಿರುತ್ತದೆ. ನೀವು ಕೇವಲ ವಿದ್ವಾಂಸರು, ಅಕಾಡೆಮಿಕ್‌ಗಳು ಮಾತ್ರವಾಗಿರದೆ ವ್ಯವಹಾರಿಕವೂ ಆಗಿರುತ್ತೀರಿ. ಹೀಗಾಗಿಯೇ ನೀವು ಕನ್ನಡವನ್ನು ಕೊಂದಿದ್ದೀರಿ. ಹೀಗಾಗಿ ಕನ್ನಡದ ವಿದ್ಯಾರ್ಥಿಗಳು ಹತಾಶರಾಗಿದ್ದಾರೆ. ಭಾಷಾಶಾಸ್ತ್ರದ ವಿದ್ಯಾರ್ಥಿಗಳು ರೀಡರಾಗಿ ತಿರುಗಾಡುವಂತಾದರೆ, ಕನ್ನಡ ಎಂ.ಎ. ಓದಿಕೊಂಡಿರುವವರು ಎಲ್ಲೋ ಒಂದು ಕಡೆ ಕುಳಿತು ಪ್ರೂಫ್ ನೋಡುತ್ತಿದ್ದಾರೆ. ಒಳ್ಳೆಯ ಶಿಕ್ಷಕ ಎನ್ನುವುದು ಪ್ರಶ್ನೆಯಾಗಿದೆ. ಹೀಗಾದಾಗ ಕನ್ನಡವನ್ನು ಕಲಿಸುವುದಕ್ಕೆ ಹೇಗೆ ಸಿಗುತ್ತಾರೆ. ಕುವೆಂಪು ವಿಶ್ವವಿದ್ಯಾಲಯದ ಶಂಕರನಾರಾಯಣರು ಕನ್ನಡದ ವಿದ್ಯಾರ್ಥಿ. ಆದರೆ ಅವರೀಗ ಪೂರ್ಣ ಜಾನಪದದವರಾಗಿದ್ದಾರೆ. ವಿವೇಕ ರೈ ಅವರು ಕನ್ನಡ ಎಂ.ಎ. ದವರು ಆದರೆ ಈಗ ಅವರೂ ಜಾನಪದದವರು. ಅಲ್ಲದೇ ಜೀ.ಶಂ.ಪ., ಡಿ. ಕೆ. ರಾಜೇಂದ್ರ ಇವರೆಲ್ಲ ಮೂಲದಲ್ಲಿ ಕನ್ನಡ ಓದಿಕೊಂಡವರು. ಈಗ ಜಾನಪದದವರು ಆಗಿಬಿಟ್ಟಿದ್ದಾರೆ. ಜಾನಪದದವರು ಜಾನಪದವನ್ನೇ ಅಧ್ಯಯನ ಮಾಡುತ್ತಿದ್ದಾರೆ. ಹೀಗಾಗಿ ಕನ್ನಡವು ಹೋಗಿ ಬಿಟ್ಟಿತು.

–ಒಟ್ಟಾರೆಯಾಗಿ ಎಲ್ಲವನ್ನು ಗ್ರಹಿಸುತ್ತಿರುವ ಮೂಲ ನೆಲೆ ಯಾವುದಾಗಿತ್ತೋ ಅದನ್ನೇ ನಿರಾಕರಿಸಿದರು ಎಂಬುವುದು ನಿಮ್ಮ ಮಾತಿನ ಅರ್ಥವೇ ?

ಎಂ. ಎಂ. ಕಲಬುರ್ಗಿ : ಹೌದು, ಮೂಲನೆಲೆಯನ್ನು ಬಿಟ್ಟುಬಿಟ್ಟಿದ್ದಾರೆ. ಇದು ಇಂದು ಕನ್ನಡಕ್ಕೆ ಬಡಿದುಕೊಂಡಂತಹ ಶಾಪವಾಗಿದೆ. ನೀವು ಅಕಾಡೆಮಿಕ್ ಆಗಿ ಬೇಕಾದಷ್ಟು ಕೆಲಸ ಮಾಡಿದರೂ ನಮಗೆ ವ್ಯಾವಹಾರಿಹ ಬದುಕು ಎನ್ನುವುದು ಒಂದಿರುತ್ತದೆ.

–ಇದು ಬಹಳ ಮುಖ್ಯವಾದ ವಿಚಾರ ಸರ್. ಏಕೆಂದರೆ ನಮ್ಮಲ್ಲಿ ಪದವಿಪೂರ್ವದ ಹಂತದ ಪಠ್ಯಗಳನ್ನು ನಿರ್ಧರಿಸಿದ್ದು ಅದನ್ನು ಬೋಧಿಸುವ ಪ್ರಾಧ್ಯಾಪಕರುಗಳಲ್ಲ, ನಮ್ಮ ವಿಶ್ವವಿದ್ಯಾಲಯಗಳಲ್ಲಿ ಕುಳಿತವರಿಂದ ನಿರ್ಧರಿಸಲ್ಪಟ್ಟಿರುತ್ತವೆ.

ಎಂ. ಎಂ. ಕಲಬುರ್ಗಿ : ಹೌದು, ಹಿಂದಿನ ದಿನಗಳಲ್ಲಿ ಏನಾಗಿತ್ತೆಂದರೆ ಏಳೆಂಟು ವರ್ಷಗಳವರೆಗೆ ಬೋಧನೆಯನ್ನು ಮಾಡಿದಂಥವರು ವಿಶ್ವವಿದ್ಯಾಲಯಗಳ ಡಿಪಾರ್ಟಮೆಂಟ್‌ಗಳಿಗೆ ಬರುತ್ತಿದ್ದರು. ಆದರೆ ಈಗ ಹಾಗಿಲ್ಲ. ಎಂ.ಎ. ಪಾಸಾದವರು ಪ್ರಭಾವ ಮತ್ತು ಹಣವನ್ನು ಬಳಸಿ ನೇರವಾಗಿ ಬರುತ್ತಾರೆ. ಇವರಿಗೆ ಕಾಲೇಜುಗಳಲ್ಲಿನ ಸಮಸ್ಯೆ ತಿಳಿದಿರುವುದಿಲ್ಲ. ಏಳೆಂಟು ವರ್ಷಗಳ ಕಾಲ ಕೆಲಸ ಮಾಡಿ ಅನುಭವ ಗಳಿಸಿದವನು ಅಲ್ಲಿಯೇ ಉಳಿಯುತ್ತಾನೆ. ಆದರೆ ದುಡ್ಡು ಕೊಟ್ಟು ನೇರವಾಗಿ ಬಂದವನು ಮುಂದೆ ಮುಖ್ಯಸ್ಥನಾಗಿ, ಬೋರ್ಡಿನ ಮೆಂಬರ್ ಆಗಿ ಈತನೇ ಪಠ್ಯವನ್ನು ತಯಾರಿಸುತ್ತಾನೆ. ಇಂತಹ ಸಮಸ್ಯೆಗಳನ್ನು ಇಂದು ಸಮಗ್ರವಾಗಿ ಚರ್ಚೆ ಮಾಡಬೇಕೇ ಹೊರತು ಕೇವಲ ಪಠ್ಯವೊಂದನ್ನೇ ಸುಧಾರಿಸುವುದರಿಂದ ಏನೂ ಉಪಯೋಗವಾಗುವುದಿಲ್ಲ.

ಕನ್ನಡ ಡಿಪಾರ್ಟಮೆಂಟು, ಕನ್ನಡ ಅಧ್ಯಯನ ಸಂಸ್ಥೆಗಳು ಒಂದುಗೂಡಲಿಲ್ಲ. ಇದರಿಂದ ಉಂಟಾದ ದುಷ್ಪರಿಣಾಮಗಳ ಬಗ್ಗೆ ಚರ್ಚಿಸಬೇಕಾಗಿದೆ. ಹಾ.ಮಾ. ನಾಯಕರನ್ನು ಮುಖ್ಯಸ್ಥರನ್ನಾಗಿ ಮಾಡಲು ಹೋಗಿ ನೀವು ಮಾಡಿದ್ದಾದರೂ ಏನು? ಅವರ ನಂತರ ಕೆಂಪೇಗೌಡರು ಬಂದರು. ಅವರೂ ಭಾಷಾಶಾಸ್ತ್ರದವರೇ. ಅವರಿಗೆ 'ಕುವೆಂಪು' ಎನ್ನುವುದಕ್ಕೆ ಬರುತ್ತಿರಲಿಲ್ಲ. ಬದಲಾಗಿ 'ಕುಯೆಂಪು' ಎನ್ನುತ್ತಿದ್ದರು. ಒಂದು ಕಾಲದಲ್ಲಿ ತೀ.ನಂ.ಶ್ರೀ., ಕುವೆಂಪು ಅವರಂಥ ಧೀಮಂತರು ಕುಳಿತಿದ್ದ ಕುರ್ಚಿಯ ಮೇಲೆ ನಂತರದಲ್ಲಿ ಯಾರ‍್ಯಾರೋ ಅಸಮರ್ಥರು ಬಂದು ಕುಳಿತರು. ಮುಂದೆ ಜವರೇಗೌಡರು ಬರುವವರೆಗೂ ಮೈಸೂರು ವಿಶ್ವವಿದ್ಯಾಲಯವು ಅಗ್ರಹಾರವಾಗಿತ್ತು. ಅವರು ಬಂದು ಅದನ್ನು ಒಕ್ಕಲುಮಕ್ಕಳ ಹೊಲವನ್ನಾಗಿ ಮಾಡಿದರು. ಒಂದು ರೀತಿಯಲ್ಲಿ ಇದು ಒಳ್ಳೆಯದಾಯಿತು. ಅವರು ಹೊಸ ಬಾಗಿಲನ್ನು ತೆರೆದರಷ್ಟೇ. ಆದರೆ ಸರಿಯಾದ ಕೃಷಿ ಮಾಡಲಿಲ್ಲ. ಸೀಡ್‌ಲೆಸ್ ಬೆಳೆಯನ್ನು ಬೆಳೆದುಬಿಟ್ಟರು. ಇವೆಲ್ಲವನ್ನು ನಾವಿಲ್ಲಿ ಚರ್ಚೆ ಮಾಡಬೇಕಾಗುತ್ತದೆ. ನಮ್ಮ ಕನ್ನಡವನ್ನು ಸೇರಿಸಿಕೊಂಡು ನೀವು ಬರೆಯಿರಿ. ನಮಗೆ ಭಾಷಾಶಾಸ್ತ್ರವೂ ಬೆಳೆಯಬೇಕು. ಜಾನಪದವೂ ಬೆಳೆಯಬೇಕು ಎಂಬುವುದರ ಕುರಿತು ಕಳಕಳಿ ಇದೆ. ಆದರೆ ನೀವು ಕನ್ನಡವನ್ನು ನಾಶಮಾಡಿ ಬೆಳೆಯುತ್ತೀರಿ ಎಂದರೆ ನಾವು ಸಹಿಸುವುದಿಲ್ಲ.

–ಕನ್ನಡ ಬಿಟ್ಟು ಕನ್ನಡ ಜಾನಪದ ಎಲ್ಲಿದೆ? ಕನ್ನಡ ಭಾಷಾಶಾಸ್ತ್ರ ಎಲ್ಲಿದೆ? ಇದನ್ನು ಬಿಟ್ಟು ನೀವು ಒಂದು ದ್ವೀಪವಾಗಿ ಉಳಿಯಲು ಸಾಧ್ಯವಿಲ್ಲ. ಹೀಗಾಗಿಯೇ ಇದು ಇಡೀ ನಮ್ಮ ಕಲಿಕೆಯ ಮೇಲೆ ಪರಿಣಾಮ ಬೀರಿದೆಯಲ್ಲವೇ?

ಎಂ. ಎಂ. ಕಲಬುರ್ಗಿ : ನಮ್ಮ ಕನ್ನಡ ಡಿಪಾರ್ಟಮೆಂಟಿನಲ್ಲಿ ಕನ್ನಡ ಅಧ್ಯಾಪಕರದು ಒಂದು ಲೆಟರ್‌ಹೆಡ್, ಜಾನಪದದವರದೂ ಒಂದು ಲೆಟರ್‌ಹೆಡ್ ಇದೆ. ಅಂದರೆ ಒಂದು ಡಿಪಾರ್ಟಮೆಂಟಿನಲ್ಲಿ ಎರಡು ಲೆಟರ್‌ಹೆಡ್‌ಗಳಿವೆ. ಅಂದರೆ ಜಾನಪದ ಅಧ್ಯಾಪಕರು ಒಂದು ಲೆಟರ್‌ಹೆಡ್ ಮಾಡಿಸಿ ಕನ್ನಡ ಅಧ್ಯಯನ ಸಂಸ್ಥೆ ಎಂದು ಹಾಕುತ್ತಿದ್ದರು. ಅಂದರೆ ನಮ್ಮದು ನಮಗಿರಲಿ, ನಿಮ್ಮದು ನಿಮಗಿರಲಿ ಎಂದು ಮಾಡಿದಂತಾಯಿತು. ಒಂದು ಬಾರಿ ಕೆ.ಪಿ.ಎಸ್.ಸಿ. ಪರೀಕ್ಷೆ ಇತ್ತು. ನಮ್ಮಲ್ಲಿ ಒಬ್ಬ ತಮಿಳಿಗ ಪ್ರೊಫೆಸರ್ ಇದ್ದರು. ಅವರಿಗೆ ಕನ್ನಡ ಏನೂ ಬರುತ್ತಿರಲಿಲ್ಲ. ಹೆಚ್ಚೆಂದರೆ ಅಂಗಡಿಗಳ ದೊಡ್ಡ ಬೋರ್ಡುಗಳನ್ನು ನಿಧಾನವಾಗಿ ಓದುವ ಒಂದನೇ ಇಯತ್ತೆಯ ಮಕ್ಕಳಂತೆ ಓದುತ್ತಿದ್ದರು. ಕೆ.ಪಿ.ಎಸ್.ಸಿ.ಯವರು ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕಾಗಿ ನಮ್ಮ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರ ಪಟ್ಟಿಯನ್ನು ಕಳುಹಿಸುವಂತೆ ಕೋರಿದ್ದರು. ನಮ್ಮ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಎಲ್ಲ ಪ್ರಾಧ್ಯಾಪಕರ ಹೆಸರುಗಳನ್ನೂ ಕಳುಹಿಸಲಾಯಿತು. ಆ ಪಟ್ಟಿಯಲ್ಲಿನ ಹಲವರಿಗೆ ಹಿಂದೊಮ್ಮೆ ಅವಕಾಶ ದೊರೆತಿವೆ ಎಂಬ ಕಾರಣದಿಂದ ಆ ತಮಿಳು ವ್ಯಕ್ತಿಯ ಹೆಸರನ್ನು ಆಯ್ಕೆ ಮಾಡಿದರು. ಒಂದಕ್ಕೆ ಹತ್ತು ರೂಪಾಯಿಯಂತೆ ಒಟ್ಟು ೫೦೦ ಉತ್ತರಪತ್ರಿಕೆಗಳಿಗೆ ೫,೦೦೦ ರೂ. ಸಿಗುತ್ತದೆ ಎಂಬ ಆಸೆಯಿಂದ ತಮಗೆ ಕನ್ನಡ ಬಾರದೇ ಇದ್ದರೂ ಅವರು ಮೌಲ್ಯಮಾಪನಕಾರ್ಯಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿದ್ದರು. ನಂತರ, ಬಂದ ಉತ್ತರಪತ್ರಿಕೆಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಅಂದಾಜು ರೀತಿಯಲ್ಲಿ ೫೦–೬೦–೮೦ ಹೀಗೆ ಸತ್ತಿರಬಾರದು, ಬದುಕಿರಬಾರದು ಎಂಬಂತೆ ಮೌಲ್ಯಮಾಪನ ಮಾಡಿ ಕಳುಹಿಸಿಬಿಟ್ಟರು. ಈ ವಿಷಯ ನಾಲ್ಕೈದು ತಿಂಗಳುಗಳ ನಂತರ ನಮ್ಮ ಗಮನಕ್ಕೆ ಬಂದಿತು. ಹೀಗೆ ಕನ್ನಡದ ಪತ್ರಿಕೆಗಳನ್ನು ಭಾಷಾಶಾಸ್ತ್ರದವರು, ಜಾನಪದದವರು ಮತ್ತು

ತಮಿಳಿನವರು ಮೌಲ್ಯಮಾಪನ ಮಾಡುವಂತಾಯಿತು. ನಾನು ಮುಂದೆ ಒಂದು ಸಂದರ್ಭದಲ್ಲಿ ಬೆಂಗಳೂರಿಗೆ ಹೋಗಿದ್ದಾಗ ಕೆ.ಪಿ.ಎಸ್.ಸಿ. ಕಚೇರಿಗೆ ಹೋಗಿದ್ದೆ. ಅಲ್ಲಿರುವ ಕಾರ್ಯದರ್ಶಿಯನ್ನು ಭೇಟಿಯಾಗಿ ನೀವು ಕನ್ನಡ ಪತ್ರಿಕೆಗಳನ್ನು ಯಾರಿಗೆ ಕಳಿಸಿದ್ದೀರಿ ಎಂದು ಕೇಳಿದೆ. ಅವರು ಕನ್ನಡ ಪ್ರೊಫೆಸರ್ ಒಬ್ಬರಿಗೆ ಕಳಿಸಿದ್ದೇನೆ. ಇದು ಗೌಪ್ಯ ವಿಷಯವಾಗಿದೆ ಎಂದರು. ಅದು ಸರಿ, ನೀವು ಪಟ್ಟಿ ತರಿಸಿರಿ, ನಾನು ಒಂದು ಹೆಸರನ್ನು ಹೇಳುತ್ತೇನೆ, ಅವರಿಗೆ ಕನ್ನಡ ಬರುವುದಿಲ್ಲ, ಬೇಕಿದ್ದರೆ ಕರೆದು ನಾಲ್ಕು ಸಾಲು ಕನ್ನಡ ಓದಿಸಿ ನೋಡಿ, ನಿಮಗೇ ತಿಳಿಯುತ್ತದೆ ಎಂದೆ. ಬಳಿಕ ಅವರಿಗೂ ಅದು ಮನವರಿಕೆಯಾಯಿತು. ಈ ರೀತಿ ಕನ್ನಡ ಮೌಲ್ಯಮಾಪನಕ್ಕೆ ಜಾನಪದ, ಭಾಷಾಶಾಸ್ತ್ರ, ತಮಿಳಿನವರು ಬರುವುದರಿಂದಾಗಿ ಕಲಿಕೆ ಎನ್ನುವುದು ಕೆಟ್ಟುಹೋಗಿದೆ. ಬೆಂಗಳೂರು ಕೂಡ ಹೀಗೇ ಆಗಿದೆ. ಕುವೆಂಪು ಅವರು ಕನ್ನಡ ಕಲಿಸುತ್ತಾರೆಂದು ಕಾರ್ಲೋಸರೂ ಕನ್ನಡ ಕಲಿಸಿದರೆ ಹೇಗೆ ? ಈಗ ಜಾನಪದದವರಿಗೆ ಕಾವ್ಯ, ಕಾದಂಬರಿ, ಸಣ್ಣಕಥೆ, ವಿಮರ್ಶೆ ಏನೂ ಗೊತ್ತಿರುವುದಿಲ್ಲ. ಜಾನಪದವು, ಕನ್ನಡ ಎಂ.ಎ. ಗೆ ಸಮಾನವೆಂದು ತಿಳಿದು ಕಾಲೇಜು ವಿದ್ಯಾರ್ಥಿಗಳಿಗೆ ಕಲಿಸುವುದಕ್ಕೆ ಹೋಗಿದ್ದಾರೆ. ಇವರು ಕೇವಲ ಪಠ್ಯವನ್ನು ಇಟ್ಟುಕೊಂಡು ಅದೇನು ಕಲಿಸುತ್ತಾರೋ! ಹೀಗಾಗಿ ಇದರೊಳಗೆ ಶಿಕ್ಷಕರ ಸಮಸ್ಯೆ ಎಂದು ಹೇಳಿ ಹೇಳಿ ಈ 'ಮಿಕ್ಸ್' ಏನು ಬಂದಿದೆಯಲ್ಲ, ಜವರೇಗೌಡರ ತರುವಾಯ ಇದರಿಂದ 'ಹಂದಿಯ ಕೈಯಲ್ಲಿ ಚಂದ್ರಾಯುಧವಿದ್ದಂತೆ' ಎಂಬಂತಾಗಿದೆ. ಎಲ್ಲ ವಿಶ್ವವಿದ್ಯಾಲಯಗಳಿಗೂ ಮೂಲ ಮೈಸೂರು ವಿಶ್ವವಿದ್ಯಾಲಯ ಆಗಿರುವುದರಿಂದ ಅದರ ಶಾಪವೆಲ್ಲ ಬಡಿದಿದೆ. ಶಿವರುದ್ರಪ್ಪನವರು ಬೆಂಗಳೂರನ್ನು ಕೇಂದ್ರವನ್ನಾಗಿಟ್ಟುಕೊಂಡು ಅದನ್ನೇ ಮುಂದುವರಿಸಿದರು. ಇದನ್ನು ಹೊರಗಿಟ್ಟು ಪಠ್ಯವನ್ನು ನೋಡುವುದಕ್ಕೆ ಆಗುವುದಿಲ್ಲ. ಕಾಲೇಜಿನಲ್ಲಿ ಬೋಧನೆ ಮಾಡುವ ಶಿಕ್ಷಕರು, ಪಿ.ಜಿ.ಯೊಳಗೆ ಸಿಲೆಬಸ್ ಮಾಡುವ ಶಿಕ್ಷಕರು ಎಂಥವರು ಸೇರಿಕೊಂಡಿದ್ದಾರೆ ? ಈಗ ಜಾನಪದದವರು ಕಾಲೇಜಿಗೆ ಬಂದರೆ ಪಂಪನನ್ನು ಕುರಿತು ಪಾಠ ಮಾಡಬೇಕಾಗಿದೆ. ಯಾವ ರೀತಿಯಾಗಿ ಸಮರ್ಥನೆ ಮಾಡಿಕೊಳ್ಳುತ್ತಾರೋ? ಹೀಗಾಗಿ ಪಠ್ಯದ ಪೂರಕ ಅಂಶಗಳಾಗಿ ಇವೆಲ್ಲವನ್ನೂ ಚರ್ಚಿಸಬೇಕಾಗಿದೆ.

–ಅಲ್ಲದೇ ಇವರು ಪಠ್ಯಗಳನ್ನು ಯಾವ ಪ್ರಕಾಶಕರ ಮೂಲಕ ಪ್ರಕಟಿಸುತ್ತಿದ್ದಾರೆ ಎನ್ನುವುದು ಬಹಳ ಮುಖ್ಯ ಅಲ್ಲವೇ?

ಎಂ. ಎಂ. ಕಲಬುರ್ಗಿ : ಹೌದು. ಪ್ರಕಾಶನವು ಒಂದು ದೊಡ್ಡ ರಾಜಕಾರಣವಾಗಿದೆ. ಇಲ್ಲಿರುವ ಪುಸ್ತಕಾಲಯಗಳಲ್ಲಿ ಹೋಗಿ ವಿಚಾರಿಸಿದರೆ ಅವರು ಹೇಳುತ್ತಾರೆ. ಜವರೇಗೌಡರ ಕಾಲದಲ್ಲಿ ಕಲ್ಲಯ್ಯ ಮತ್ತು ಸನ್ಸ್ ಪ್ರಮುಖವಾಗಿತ್ತು. ನಮಗಿದ್ದುದು ಮುಖ್ಯವಾಗಿ ಕನ್ನಡದ ಕಾಳಜಿಯಾಗಿದೆ. ಆದರೆ ನಾವು ಏನು ಮಾಡಿದರೂ ಇವರು ಜಾನಪದದ ವಿರುದ್ಧ, ಭಾಷಾಶಾಸ್ತ್ರದ ವಿರುದ್ಧ ಮಾಡುತ್ತಾರೆ ಎನ್ನುತ್ತಿದ್ದರು. ನಾವು ಅಕಾಡೆಮೀಶಿಯನ್‌ಗಳು. ನಮಗೆ ವಿಷಯದ ಮೇಲೆ ದೊಡ್ಡ ಗೌರವವಿದೆ. ಆದರೆ ನೀವು ವಿದ್ಯಾರ್ಥಿಗಳಿಗೆ ಕೈಗೆ ಬಂದಂತೆ ಅಂಕಗಳನ್ನು ನೀಡಿ ಎತ್ತಿಕಟ್ಟುತ್ತೀರಿ. ವಿದ್ಯಾರ್ಥಿಗಳಿಗೇನು ಹೆಚ್ಚು ಅಂಕಗಳು ಬಂದರೆ ಸಾಕು. ಒಂದು ಪಠ್ಯದ ರಚನೆಯೆನ್ನುವುದು ಇವೆಲ್ಲವನ್ನೂ ಒಳಗೊಂಡಿರುತ್ತದೆ. ನೀವು ಕ್ರಿಯಾಶೀಲವಾಗಿ ಯೋಚಿಸುವವರನ್ನು ನಾಶ ಮಾಡುವ ದೊಡ್ಡ ಪಡೆಯೊಂದನ್ನು ಕಟ್ಟಿಕೊಂಡಿದ್ದೀರಿ.

ನಮ್ಮಲ್ಲಿ ಪಠ್ಯಕ್ರಮದ ಕುರಿತಾಗಿ ಎರಡು ಯುಗಗಳಿವೆ ಎಂದು ನಾನು ಭಾವಿಸಿದ್ದೇನೆ. ಮೊದಲನೆಯದು ಎ.ಆರ್.ಕೃಷ್ಣಶಾಸ್ತ್ರಿ, ಟಿ.ಎಸ್. ವೆಂಕಣ್ಣಯ್ಯನವರು ಮತ್ತು ಕುಂದಣಗಾರರದು ಒಂದು ಯುಗವಾದರೆ, ಜವರೇಗೌಡರು ಮತ್ತು ಹಿರೇಮಠರದು ಎರಡನೆಯದು. ಸರಿಯೋ

ತಪ್ಪೋ, ಜವರೇಗೌಡರು ಮತ್ತು ಹಿರೇಮಠರು ಸೇರಿ ಪಠ್ಯವನ್ನು ಮುರಿದು ಕಟ್ಟಿದರು. ಈಗ ಮತ್ತೆ ಅದನ್ನು ಮುರಿದು ಕಟ್ಟುವ ಕಾಲ ಬಂದಿದೆ. ಸಾಹಿತ್ಯ, ಇತಿಹಾಸ ಮತ್ತು ಸಮಾಜಶಾಸ್ತ್ರ ಈ ಮೂರೂ ಸಾಂಸ್ಕೃತಿಕವಾಗಿ ಬಹಳ ಮುಖ್ಯವಾದವು. ಇವುಗಳ ಆನ್ವಯಿಕ ಬೋಧನೆಗೆ ಅವಕಾಶ ಕೊಡಬೇಕು. ವಿದ್ಯಾರ್ಥಿಗಳು ಹೊರಗೆ ಹೋಗುವಾಗ ಜೀವನಕ್ಕೆ ಉಪಯೋಗ ಬರುವಂತಹ ಯಾವುದೋ ಒಂದು ಸಂಗತಿಯಲ್ಲಿ ಪರಿಪೂರ್ಣರಾಗುವಂತಾಗಬೇಕು. ಏಕೆಂದರೆ ಇಷ್ಟು ವರ್ಷ ನಾನು ಕಲಿಸಿದರೂ ಒಬ್ಬ ನಾಟಕಕಾರ, ಸಂಶೋಧಕ, ಕಾದಂಬರಿಕಾರ ಬೆಳೆದಿಲ್ಲ. ನನಗೆ ಬಂಜೆಯಂತೆ ಭಾಸವಾಗುತ್ತಿದೆ. ಪ್ರತಿವರ್ಷವೂ ೬೦-೭೦ ವಿದ್ಯಾರ್ಥಿಗಳಿಗೆ ಕಲಿಸುತ್ತೇನೆ, ಒಬ್ಬ ವಿದ್ಯಾರ್ಥಿಯೂ ಈ ರೀತಿ ತರಬೇತಿಗೊಂಡಿಲ್ಲ. ಆರು ವರ್ಷಗಳಿಗೆ ಯಾರೋ ಒಬ್ಬ ಆಗಬಹುದೇನೋ ಗೊತ್ತಿಲ್ಲ. ಕೇವಲ ಪ್ರಶ್ನೆಗಳಿಗೆ ಉತ್ತರ ಬರೆದು ಅಂಕಗಳನ್ನು ಪಡೆಯುವುದಲ್ಲ. ವ್ಯಕ್ತಿಯಾಗಿ, ಶಕ್ತಿಯಾಗಿ ಬೆಳೆಯಬೇಕು. ಕೋರ್ಸ ಮುಗಿಯುವುದರಲ್ಲಿ ತನಗೆ ಬೇಕಾದ ವಿಷಯವನ್ನು ಆಯ್ಕೆ ಮಾಡಿಕೊಂಡು ಹತ್ತೋ ಹದಿನೈದೋ ಕವಿತೆಗಳನ್ನು ಬರೆಯುವುದಕ್ಕೆ ಸಾಧ್ಯವಾಗಬೇಕು. ಒಂದು ನಾಟಕ ಬರೆಯುವುದಕ್ಕೆ ಸಾಧ್ಯವಾಗಬೇಕು. ವಿದ್ಯಾರ್ಥಿಗಳು ಕೂಡ ತಮಗೆ ಬೇಕಾದ ಶಿಕ್ಷಣದ ಬಗ್ಗೆ ಆಲೋಚಿಸುವುದಿಲ್ಲ. ಉತ್ತಮ ಶಿಕ್ಷಕ ಬೇಕು, ಉತ್ತಮ ಶಿಕ್ಷಣ ಬೇಕು ಹೀಗಾಗಿ ನಾನು ವಿದ್ಯಾರ್ಥಿಗಳಿಗೆ ಹೇಳುತ್ತಿದ್ದೆ ನೀವು ಯಾವ್ಯಾವುದಕ್ಕೋ ಮುಷ್ಕರ ಮಾಡುತ್ತೀರಲ್ಲ ಅವೆಲ್ಲ ಮುಖ್ಯವಲ್ಲ. ಉತ್ತಮ ಶಿಕ್ಷಕ ಬೇಕು, ಉತ್ತಮ ಶಿಕ್ಷಣ ಬೇಕು ಎಂದು ಬ್ಯಾನರ್ ಬರೆದು ಕ್ಯಾಂಪಸ್‌ನಲ್ಲೆಲ್ಲ ತಿರುಗಾಡಿರಿ, ಆಗ ಶಿಕ್ಷಕರು ಸ್ವಲ್ಪ ಜಾಗೃತರಾಗುತ್ತಾರೆ, ಚಹ ಕುಡಿಯುತ್ತ ಹರಟೆ ಹೊಡೆಯುವುದನ್ನು ಬಿಟ್ಟು ಕ್ಲಾಸ್ ತೆಗೆದುಕೊಳ್ಳುತ್ತಾರೆ. ಹೀಗಾಗಿಯೇ ವಿದ್ಯಾರ್ಥಿಗಳು ಕಾರ್ಖಾನೆಗಳಲ್ಲಿನ ಪಡಿಯಚ್ಚುಗಳಾಗಿ ಬರುತ್ತಿದ್ದಾರೆಯೇ ಹೊರತು ಹೊಲದೊಳಗಿನ ಪೈರಾಗಿ ಬೆಳೆಯುತ್ತಿಲ್ಲ. ಸೃಜನಶೀಲತೆಯು ಬತ್ತಿಹೋಗಿ ಇಂದು ಯಾಂತ್ರಿಕತೆಯೇ ಪ್ರಧಾನವಾಗಿದೆ. ನನ್ನ ನಲವತ್ತು ವರ್ಷಗಳ ಅನುಭವದಲ್ಲಿ ಎಂದೂ ವರ್ಗಕೊಠಡಿಗೆ ಒಂದು ನಿಮಿಷ ತಡವಾಗಿ ಹೋಗಿಲ್ಲ ಮತ್ತು ಒಂದು ನಿಮಿಷ ತಡವಾಗಿ ಹೊರಬಂದಿಲ್ಲ. ನಮ್ಮ ಕೆ.ವಿ.ಎನ್. ಹೀಗೆಯೇ ಇದ್ದಾರೆ. ಪ್ರಾಧ್ಯಾಪಕರು ಬಹಳಷ್ಟು ಗಂಭೀರವಾಗಬೇಕಾಗಿದೆ. ತರಗತಿಗಳಲ್ಲಿ ನಾನು ಪಠ್ಯ ಹೇಳುವುದಲ್ಲ, ನಾನೇ ಪಠ್ಯವಾಗಬೇಕು, ಸಾಮಾಜಿಕ ಪಠ್ಯವಾಗಬೇಕು ಎನ್ನುವುದು ಮುಖ್ಯವಾಗುತ್ತದೆ.

ಡಾ. ಆರ್. ಚಲಪತಿ : ತಂತಿ ಮೇಲಿನ ನಡಿಗೆ, ಸಖಿ ಪ್ರಕಾಶನ, ಬಳ್ಳಾರಿ-೨೦೧೨

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೦೮

ವೀರಶೈವ ಅಂದರ ದ್ವೈತ
ಲಿಂಗಾಯತ ಅಂದರ ಅದ್ವೈತ

❖

ಸಂದರ್ಶನ : ಅಭಿವ್ಯಕ್ತಿ ಸಾಹಿತ್ಯ ಪತ್ರಿಕೆ

ನಮ್ಮ ಸಮಾಜ ಸಿದ್ಧಾಂತ ಮತ್ತು ಚರಿತ್ರೆಗಳನ್ನು ಬದಲಾದ ಕಾಲಗತಿಗೆ ತಕ್ಕಂತೆ ಮತ್ತೆ ಮತ್ತೆ ಕಟ್ಟಿಕೊಳ್ಳಬೇಕಾದ ಜರೂರು ಎಲ್ಲಾ ಕಾಲಕ್ಕೂ ಇರುವಂತಹದ್ದು. ಕನ್ನಡ ನಾಡಿನ ಬಹುದೊಡ್ಡ ಸಮಾಜ ಶರಣ ಸಮುದಾಯ. ಈ ಸಮುದಾಯವು ತನ್ನ ಸಿದ್ಧಾಂತ ಹಾಗೂ ಶರಣ ಚರಿತ್ರೆಗಳನ್ನು ಹೀಗೆ ಕಟ್ಟಿಕೊಳ್ಳಬೇಕಾದ ಅಗತ್ಯವಿದೆ. ಈ ಮೂರು ಅಂದರೆ ಸಮುದಾಯ, ಸಿದ್ಧಾಂತ ಮತ್ತು ಚರಿತ್ರೆಗಳ ನಡುವೆ ಂದು ರೀತಿಯ ಶೂನ್ಯತೆ ಅಥವಾ ನಿರ್ವಾತ ಸ್ಥಿತಿ ಏರ್ಪಟ್ಟಿದೆ. ಇಂತಹ ನಿರ್ವಾತತೆಯನ್ನು ಅರ್ಥಪೂರ್ಣವಾಗಿ ಬಿಡಿಸಿಕೊಳ್ಳುವ ಒಂದು ಗಂಭೀರ ಪ್ರಯತ್ನವಾಗಬೇಕಾಗಿದೆ. ಈ ನಿಟ್ಟಿನಲ್ಲಿ ನನ್ನ ಗುರುಗಳಾದ ಮಲೆಯೂರು ಗುರುಸ್ವಾಮಿ ಹಾಗೂ ಮೊರಬದ ಮಲ್ಲಿಕಾರ್ಜುನರೊಂದಿಗೆ ಸಮಾಲೋಚನೆ ನಡೆಸಿ ಒಂದು ಕೃತಿಯನ್ನು ರೂಪಿಸಲು ಚಿಂತಿಸಿದೆ. ಆಗ ನಾಡಿನ ಅನೇಕ ವಿದ್ವಾಂಸರಿಗೆ ಈ ಕುರಿತು ಪತ್ರ ಬರೆದು ಸಲಹೆ ಮತ್ತು ಸೂಚನೆಗಳನ್ನು ಕೇಳಲು ನಿರ್ಧರಿಸಿದೆವು. ಆನಂತರ ಆ ಎಲ್ಲ ಅಭಿಪ್ರಾಯಗಳನ್ನು ಇಟ್ಟುಕೊಂಡು ವಿಷಯಗಳನ್ನು ರೂಪಿಸಿ, ವಿಷಯಗಳಿಗೆ ಸೂಕ್ತವಾದ ವಿದ್ವಾಂಸರಿಂದ ಲೇಖನಗಳನ್ನು ಬರೆಸುವುದೆಂದು ನಿರ್ಧಾರ ಮಾಡಿದೆವು. ಅಂತಹ ಪ್ರಯತ್ನದ ಒಂದು ಅಂಗವಾಗಿ ನಾನು ಡಾ. ಎಂ. ಎಂ. ಕಲಬುರ್ಗಿ ಯವರನ್ನು ಭೇಟಿಯಾಗಿ ಸಂದರ್ಶಿಸಿದೆ.

ನಮ್ಮ ನಾಡಿನ ಹಿರಿಯ ವಿದ್ವಾಂಸರು ಹಾಗೂ ಸಂಶೋಧಕರು ಆಗಿರುವ ಡಾ. ಎಂ.ಎಂ.ಕಲಬುರ್ಗಿಯವರು ವಚನ ಚಳುವಳಿ ಹಾಗೂ ವಚನ ಸಾಹಿತ್ಯವನ್ನು ಕುರಿತು ಬಹಳ ದೀರ್ಘ ಕಾಲದ ಮತ್ತು ತಲಸ್ಪರ್ಶಿ ಅಧ್ಯಯನ ಹಾಗೂ ಸಂಶೋಧನೆ ಮಾಡಿದವರು ಮತ್ತು ಮಾಡುತ್ತಿರುವವರು. ಈ ಇಳಿವಯಸ್ಸಿನ ಸಂದರ್ಭದಲ್ಲೂ ಅವರಲ್ಲಿನ ಉತ್ಸಾಹ, ಕ್ರಿಯಾಶೀಲತೆ, ಸೃಜನಶೀಲ ಚಿಂತನೆ ನಿಜಕ್ಕೂ ಬೆರಗುಗೊಳಿಸುವಂತಹದ್ದು. ಕಲ್ಬುರ್ಗಿಯವರೊಡನೆ ನಮ್ಮ ವಿಷಯವನ್ನು ಹಂಚಿಕೊಂಡಾಗ ಬಹಳ ಸಂತೋಷಪಟ್ಟರು. ಅವರೊಡನೆ ನಡೆಸಿದ ಸಂದರ್ಶನ ಅವರ ಆವರೆಗಿನ ವಚನ ಸಾಹಿತ್ಯದ ಸಂಶೋಧನೆಯ ಒಟ್ಟಾರೆ ಸಾರಾಂಶದಂತೆ ಇತ್ತು. ಆನಂತರ ನಾನು ಈ ಸಂದರ್ಶನ ಕೇವಲ ನಮ್ಮ ಕೃತಿಗೆ ಮಾತ್ರ ಸೀಮಿತವಾಗಬಾರದು ಎನ್ನಿಸಿತು. ಆ ಕಾರಣಕ್ಕೆ ಇದನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಯೋಚಿಸಿ ಕಲ್ಬುರ್ಗಿಯವರನ್ನು ಕೇಳಿದೆ. ಅವರು ಒಪ್ಪಿಕೊಂಡರು. ಅದರ ಸಾರಾಂಶ ಇಂತಿದೆ.

* * *

ಪ್ರಶ್ನೆ: ವಚನ ಚಳುವಳಿಯ ಆಶಯ ಮತ್ತು ಲಿಂಗಾಯತ ಸಮಾಜದ ನಡುವೆ ಒಂದು ಶೂನ್ಯತೆ ಸೃಷ್ಟಿಗೊಂಡಿದೆ ಅಲ್ಲವೆ, ಅದನ್ನು ಹೇಗೆ ವ್ಯಾಖ್ಯಾನಿಸುತ್ತೀರಿ?

ಎಂ.ಎಂ. ಕಲಬುರ್ಗಿ : ಹೌದು ಸಮಾಜ ಮತ್ತು ವಚನಗಳ ಆಶಯದ ನಡುವೆ ಶೂನ್ಯತೆ ಇದೆ. ನೋಡಿ ತಮಾಷೆಯೆಂದರೆ ವಚನಗಳೊಳಗೇ ಇಂತಹ ಶೂನ್ಯತೆ ಇದೆ. ಇದಕ್ಕೆ ಕಾರಣ ೧೨ನೆಯ ಶತಮಾನದ ನಂತರ ವಚನಗಳೊಳಗೆ ಅನೇಕರು ಖೋಟಾ ವಚನಗಳನ್ನು ತುರುಕಿದ್ದಾರೆ. ಆದುದರಿಂದ ಮೊದಲು ವಚನಗಳ ಶುದ್ಧಿಮಾಡುವ ಕೆಲಸ ಆಗಬೇಕು. ಯಾವುದು ಖೋಟಾ ವಚನ ಯಾವುದು ಮೂಲ ವಚನ ಮತ್ತು ಮೂಲ ವಚನಗಳಲ್ಲಿ ಯಾವುದು ಪಾಠಾಂತರ ಹಾಗೂ ಯಾವುದು ಮೂಲಪಾಠ ಅಂತ ಶುದ್ಧ ಮಾಡುವ ಕೆಲಸ ಬಹಳವಿದೆ. ಅದು ಸಾಧ್ಯವೇ ಇಲ್ಲವೇನೋ ಅನ್ನುವಷ್ಟು ವಚನಗಳು ಬೆರೆತು ಹೋಗಿವೆ.

ಪ್ರಶ್ನೆ: ವೀರಶೈವ ಹಾಗೂ ಲಿಂಗಾಯತ ಈ ಎರಡು ತತ್ತ್ವಗಳನ್ನು ಕುರಿತು ಇನ್ನೂ ನಮ್ಮ ಸಮಾಜದಲ್ಲಿ ಅನೇಕ ಗೊಂದಲಗಳಿವೆಯಲ್ಲ ಯಾಕೆ? ಡಾ. ಎಂ. ಚಿದಾನಂದಮೂರ್ತಿಗಳು ವೀರಶೈವ ಪದ ವಚನ ಸಾಹಿತ್ಯದಲ್ಲೇ ಇದೆ ಎಂತಲೂ, ಅದರಲ್ಲೂ ಬಸವಣ್ಣನವರ ವಚನಗಳಲ್ಲೇ ಅದನ್ನು ನೋಡಬಹುದು ಎಂದು ತೋರಿಸಿದ್ದಾರಲ್ಲ. ಇಷ್ಟಿದ್ದು ಈ ಗೊಂದಲ ಯಾಕೆ?

ಎಂ.ಎಂ. ಕಲಬುರ್ಗಿ : ಸುಳ್ಳ ಅದ ಅದು. ಒಮ್ಮೆ ಒಂದು ಮುಂಜಾನೆ ಚಿದಾನಂದ ಮೂರ್ತಿಗಳು ನನಗೆ ಫೋನ್ ಮಾಡಿ ನೀವೂ ವಚನಗಳಲ್ಲಿ ವೀರಶೈವ ಪದ ಇಲ್ಲಾ ಅಂತೀರಿ ಆದರ ಇದರೊಳಗೆ ವೀರಶೈವ ಅಂತ ಇದೆ ಎಂದರು. ನಾನು ನೋಡೀನಿ ತಗೊಳ್ರಿ, ಅದರ ಕೆಳಗ ಅದು ಪಾಠಾಂತರ ಅದ ನೋಡ್ರಿ ಅಂದೆ. ಅರೇ ಹೌದಲ್ಲ. ನಾನು ನೋಡಿರಲಿಲ್ಲ ಅಂದರು. ಬಸವಣ್ಣನ ವಚನದಲ್ಲಿ 'ಭೃತ್ಯಾಚಾರ' ಎಂಬ ಪದ ತೆಗೆದುಹಾಕಿ 'ವೀರಶೈವ' ಅಂತ ಪದವನ್ನು ತುರುಕಿದ್ದಾರೆ. ಬಸವಣ್ಣನ ತಲೆಗೆ ವೀರಶೈವವನ್ನು ಕಟ್ಟುವ ಕೆಲಸವಿದು. ಚಿದಾನಂದಮೂರ್ತಿಗಳು ನಾಡಿನ ಬಹಳ ದೊಡ್ಡ ವಿದ್ವಾಂಸರಿದ್ದಾರೆ. ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ವಿಚಾರದಲ್ಲಿ ಯಾಕೋ ಅವರು ಅಂಟಿಕೊಂಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ 'ವೀರಶೈವ' ಅಂದರ ದ್ವೈತ, 'ಲಿಂಗಾಯತ' ಅಂದರ ಅದ್ವೈತ.

ಕೆಲವರು ವೀರಶೈವ ಅಂದರೂ ಒಂದೇ ಲಿಂಗಾಯತ ಅಂದರೂ ಒಂದೆ ಅನ್ನುತ್ತಾರೆ. ಅದು ಹೇಗೆ ಒಂದೇ ಆಗುತ್ತದೆ. ಇವೆರಡರ ಸಿದ್ಧಾಂತಗಳು ಬೇರೆ ಬೇರೆ ಇದ್ದಾವೆ. ಈಗ ವೃಕ್ಷ ಅಂದರ ಮರ, ದ್ವಾರ ಅಂದರ ಬಾಗಿಲು, ದ್ವಾರ ಅಂದರೂ ಒಂದೇ ಮರ ಅಂದರೂ ಒಂದೆ ಅಂದರ ಹೇಗೆ ಆಗುತ್ತದೆ. ಯಾರಿಗೂ ಈ ಮೂಲಭೂತ ವ್ಯತ್ಯಾಸಗಳೇ ಗೊತ್ತಿಲ್ಲ. ನಮ್ಮ ಸ್ವಾಮಿಗಳಿಗಂತೂ ಇದು ತಿಳಿಯುವುದಿಲ್ಲ, ತಿಳಿದುಕೊಳ್ಳುವ, ಬಿಚ್ಚಿನೋಡುವ ಪ್ರಯತ್ನ ಮಾಡೊಲ್ಲ.

ಪ್ರಶ್ನೆ: ಶರಣ ಧರ್ಮದ ಪಾರಿಭಾಷಿಕ ತತ್ತ್ವಗಳಾದ ಷಟ್‌ಸ್ಥಲ ಸಿದ್ಧಾಂತ, ಪಂಚಾಚಾರ, ಅಷ್ಟಾವರಣ, ಇವುಗಳು ಚಲನಶೀಲವಾದ ಶರಣ ಧರ್ಮವನ್ನು ಜಡಗೊಳಿಸಿವೆ ಎನ್ನಿಸುವುದಿಲ್ಲವೆ? ಇದರ ಬಗ್ಗೆ ನಿಮ್ಮ ಅನಿಸಿಕೆ ಏನು?

ಎಂ.ಎಂ. ಕಲಬುರ್ಗಿ : ಮೊದಲು ಷಟ್‌ಸ್ಥಲ ಸಿದ್ಧಾಂತ, ಪಂಚಾಚಾರ, ಅಷ್ಟಾವರಣ ಹಾಗೆಂದರೇನು ಹೇಳ್ರಿ? ಅವು ಮೂರು ಎಲ್ಲಿ ಮೀಟ್ ಆಗ್ತವಾ. ಯಾವ ಯಾವ ಸ್ಥಲಗಳಲ್ಲಿ ಮೀಟ್ ಆಗ್ತವಾ. ಹೇಳ್ರಿ, ಷಟ್‌ಸ್ಥಲ ಹೇಳಿ ಆರು ತೋರಿಸಿ ಇಲ್ಲೆ ಕೈಬಿಡುವುದು, ಪಂಚಾಚಾರ ಅಂದು ಐದು ತೋರಿಸಿ ಅಲ್ಲೆ ಕೈಬಿಡುವುದು ಇದಾ ನಡೆದಿದೆ. ಮೂರನ್ನು ಒಬ್ಬನೇ ಆಚರಿಸಬೇಕಲ್ಲ, ಅವುಗಳನ್ನು ಹೇಗೆ ಆಚರಿಸಬೇಕು. ಯಾವುದನ್ನು ಎಲ್ಲಿ ಸಂಗಮಿಸಬೇಕು ಮತ್ತು ಸಂಗಮ ಆಗುತ್ತವೆ. ಭಕ್ತಸ್ಥಲದಲ್ಲಿ ಆಗುತ್ತವೋ, ಮಹೇಶ್ವರಸ್ಥಲದಲ್ಲಿ ಆಗುತ್ತವೋ, ಐಕ್ಯಸ್ಥಲದಲ್ಲಿ ಆಗುತ್ತವೋ. ಐಕ್ಯಸ್ಥಲ ಅಂದರೆ ಏನು? ಗುಂಗಾಗಿ ಕೂರುದಾ. ರಾಮಕೃಷ್ಣ ಪರಮಹಂಸ ದೇವಿ ಮುಂದ ಕೂರುತ್ತಿದ್ದರಂತಲ್ಲ ಹಾಗೇನು. ನನ್ನ ಅಭಿಪ್ರಾಯದೊಳಗ ಐಕ್ಯ ಅಂದರ ಭ್ರಮೆ. ಬಸವಣ್ಣ ಅಷ್ಟು ಭ್ರಮಾ ಸಿದ್ಧಾಂತ ಹೇಳುವವನೇ? ಅವನು ವೈಚಾರಿಕ.

ಪ್ರಶ್ನೆ : ಅನೇಕ ಜನ ವಿದ್ವಾಂಸರು ಈ ಸಿದ್ಧಾಂತಗಳನ್ನು ವ್ಯಾಖ್ಯಾನಿಸುವ ಮತ್ತು ವಿವರಿಸುವ ಕೆಲಸ ಮಾಡಿದ್ದಾರಲ್ಲ?

ಎಂ.ಎಂ. ಕಲಬುರ್ಗಿ : ಸುಡುಗಾಡು. ವಕೀಲರು ವಾದ ಮಾಡಿದಂಗ ಅದು ಅಷ್ಟೇ. ವಕೀಲರು ಒಬ್ಬ ಕೊಲೇ ಮಾಡಿದ್ದರೂ ಮಾಡಿಲ್ಲ ಎನ್ನುತ್ತಾರಲ್ಲ ಹಾಗೆ. ಒಬ್ಬೊಬ್ಬ ವಿದ್ವಾಂಸರು ಇವುಗಳಿಗೆ ಬೇರೆ ಬೇರೆ ಅರ್ಥ ಹಚ್ಚಿ ಹೇಳುತ್ತಾರೆ. ಆದರೆ ಮೂಲಸತ್ಯ ಬೇರೆ ಇರುತ್ತದೆ. ಇವರೆಲ್ಲರ ಸತ್ಯಗಳು ಬೇರೆ ಬೇರೆ ಇರುತ್ತವೆ. ಈ ವಿದ್ವಾಂಸರೆಲ್ಲ ಬರೆದಿರುವುದು ಬೋಗಸ್ ಅದ. ಕೆಲವರು ಸತ್ಯದ ಸಮೀಪ ಬಂದು ದೂರ ಹೋಗಿದ್ದಾರೆ. ಅವೆಲ್ಲವನ್ನು ಇಟ್ಟುಕೊಂಡು ಈಗ ಸರಿಯಾದ ಸಿದ್ಧಾಂತ ರೂಪಿಸಬೇಕಾಗಿದೆ. ಮತ್ತು ಬಸವಣ್ಣನೇ ಹೇಳುವಲ್ಲಿ ಸರಿಯಲ್ಲದೆ ಇದ್ದರೆ ಇದು ಸರಿಯಲ್ಲ. ಇದು ೧೨ನೆ ಶತಮಾನಕ್ಕೆ ಯೋಗ್ಯವಾಗಿಲ್ಲವೆಂದು ಈ ಶತಮಾನಕ್ಕೆ ಹೊಂದಿಕೆಯಾಗುವ ರೀತಿ ತಿದ್ದಬೇಕಾಗಿದೆ. ಯಾಕೆಂದರೆ ಬಸವಣ್ಣನವರು ಯಾವುದೇ ಧರ್ಮಗ್ರಂಥ ಬರೆದಿಲ್ಲ. ಧರ್ಮಗ್ರಂಥವಾದರೆ ಅದು ಜಡವಾಗುತ್ತದೆ. ಇದು ವಚನಗಳ ಮೂಲಸಿದ್ಧಾಂತ.

ಪ್ರಶ್ನೆ: ಇಂತಹ ಸಿದ್ಧಾಂತಗಳೇ ಶರಣ ಧರ್ಮ ಇನ್ನುವರೆವಿಗೂ ಉಳಿದುಕೊಂಡು ಬರುವುದಕ್ಕೆ ಕಾರಣವಾಗಿದೆ ಎಂಬಂತಹ ವಾದವಿದೆಯಲ್ಲ?

ಎಂ.ಎಂ. ಕಲಬುರ್ಗಿ : ನೋಡಿ ಮೊನ್ನೆ ಸುತ್ತೂರು ಶ್ರೀಮಠದವರು ಒಂದು ಸಂಸ್ಕೃತ ವೀರಶೈವ ಪಾರಿಭಾಷಿಕ ಕೋಶ ಮಾಡಿದ್ದಾರಂತಾ. ಅದರಲ್ಲಿ ೭೫೦೦ ಪಾರಿಭಾಷಿಕ ಪದಗಳಿವೆಯಂತಾ. ಅರೇ ಮಾದರ ಚೆನ್ನಯ್ಯ, ಡೋಹರಕಕ್ಕಯ್ಯ, ಮಡಿವಾಳ ಮಾಚಿದೇವ ಇವರೆಲ್ಲ ೭೫೦೦ ಪಾರಿಭಾಷಿಕ ಪದಗಳನ್ನ ಓದಿಕೊಂಡು ಬದುಕು ಮಾಡಿದರೆ? ಅವರು ದಲಿತರು. ಅವರಿಗೆ ಇವು ಮುಖ್ಯ ಆಗಿರಲಿಲ್ಲ. ಕಾಯಕ ಮಾಡುತ್ತಿದ್ದರು, ಬಂದ ಸಂಪಾದನೆಯಲ್ಲಿ ದಾಸೋಹ ಮಾಡಿ, ಉಳಿದದ್ದನ್ನ ಉಂಡು ಮಲಗುತ್ತಿದ್ದರು. ಅಂತಹವರ ಸುತ್ತ ನೀವೂ ೭೫೦೦ ಪಾರಿಭಾಷಿಕ ಪದಗಳ ಒಂದು ಕೋಶ ಇಟ್ಟರೇ, ಇದೇ ಲಿಂಗಾಯತ ಅಂತ ಅಂದರ ಅವರು ನಗ್ತಾರೆ. ಈ ಪದಗಳು ನಮಗೆ ಗೊತ್ತೇ ಇಲ್ಲ. ೨೧ ಪ್ರಕಾರದ ದೀಕ್ಷೆ, ಮೂರು ಪ್ರಕಾರ ಮಂತ್ರ ಅಂದರ ಹುಚ್ಚರಿದ್ದಾರೆ ಇವರು ಅಂತಾರೆ. ನನ್ನ ಪ್ರಕಾರ ಲಿಂಗಾಯತ ಪಾರಿಭಾಷಿಕ ಪದಗಳು ಮೂರೇ ಅದು ಗುರು, ಲಿಂಗ, ಜಂಗಮ. ಬಸವಣ್ಣ ಸಾಮಾನ್ಯ ಜನರನ್ನ ತನ್ನ ಧರ್ಮದ ಒಳಗೆ ತೆಗೆದುಕೊಳ್ಳಬೇಕಾಗಿತ್ತು. ಆದುದರಿಂದ ಲಿಂಗಾಯತ

ಧರ್ಮಕ್ಕೆ ಬಹಳ ಸರಳವಾಗಿ ರೂಪಿಸಿದ ಪಾರಿಭಾಷಿಕ ಪದಗಳಿವು. ಇದಕ್ಕೆ ಬದಲಾಗಿ ದೊಡ್ಡ ದೊಡ್ಡ ಶಬ್ದಗಳನ್ನ ಇಟ್ಟರೆ ಶೂದ್ರರು ಹೇಗೆ ಅರಗಿಸಿಕೊಳ್ಳುತ್ತಾರೆ.

ಪ್ರಶ್ನೆ: ಸಿದ್ಧಾಂತ ಶಿಖಾಮಣಿ ಮುಂತಾದ ಗ್ರಂಥಗಳು ಬದಲಾದ ಕಾಲಗತಿಯಲ್ಲಿ ಲಿಂಗಾಯತ ಧರ್ಮವನ್ನು ವ್ಯಾಖ್ಯಾನಿಸಿದ ಗ್ರಂಥವೆನ್ನಬಹುದೇ?

ಎಂ.ಎಂ. ಕಲಬುರ್ಗಿ :ಹೇ ಅದು ೧೫ನೆಯ ಶತಮಾನದ ಗ್ರಂಥ. ಆದರೆ ಕೆಲವರು ಅದು ೨೦೦೦ ವರ್ಷಗಳಷ್ಟು ಹಿಂದಿನದು ಎನ್ನುತ್ತಾರೆ. ಅದು ಸುಳ್ಳು. ಆ ಗ್ರಂಥದಲ್ಲಿ ಕನ್ನಡದ ಅನೇಕ ಶಬ್ದಗಳಿವೆ. ಈಗ ಕೆಲವರು ಕನ್ನಡ ಶಬ್ದಗಳನ್ನು ತೆಗೆದುಹಾಕಿ ಸಂಸ್ಕೃತ ಶಬ್ದಗಳನ್ನು ಹಾಕುತ್ತಿದ್ದಾರೆ. ಮಿಂದೋಗರ ಮುಂತಾದ ಪದಗಳನ್ನು ಪರಿಶೀಲಿಸಿದರೆ ಮಿಂದುದು ಮತ್ತು ಓಗರ ಎರಡು ಕನ್ನಡ ಪದಗಳಾಗಿವೆ.

ಪ್ರಶ್ನೆ: ಬಸವಣ್ಣನವರ ಹುಟ್ಟಿನ ಅಂದರೆ ಜಾತಿಯ ಬಗ್ಗೆ ಬಹಳ ಗೊಂದಲವಿದೆಯಲ್ಲ?

ಎಂ.ಎಂ. ಕಲಬುರ್ಗಿ : ಯಾಕೆ ಇದೆ ಅಂದರೆ ಇತಿಹಾಸ ಓದಲಾರದ ಗೊಂದಲ ಅದ. ಬಸವಣ್ಣ ಬ್ರಾಹ್ಮಣ. ಶೈವ ಬ್ರಾಹ್ಮಣರಲ್ಲಿ ಬಹಳಷ್ಟು ಜಾತಿಗಳಿವೆ. ಅದರಲ್ಲಿ ಮುಖ್ಯವಾಗಿ ಎರಡು ಪಂಗಡಗಳಿವೆ. ಒಂದು ವೈದಿಕ ಶೈವ ಬ್ರಾಹ್ಮಣರು ಮತ್ತೊಂದು ಆಗಮಿಕ ಶೈವ ಬ್ರಾಹ್ಮಣರು. ಶಂಕರಾಚಾರ್ಯ ವೈದಿಕ ಶೈವಬ್ರಾಹ್ಮಣ. ಬಸವಣ್ಣ ಆಗಮಿಕ ಶೈವಬ್ರಾಹ್ಮಣ. ಇಬ್ಬರಿಗೂ ಜನಿವಾರವಿತ್ತು. ಹರಿಹರ ಮತ್ತು ರಾಘವಾಂಕ ಜನಿವಾರ ಹಾಕುತ್ತಿದ್ದರು. ಗಿರಿಜಾಕಲ್ಯಾಣದಲ್ಲಿ ಆತ ಜನಿವಾರ ಹಾಕುತ್ತಿದ್ದ ಅಂತ ಉಲ್ಲೇಖವಿದೆ. ರಾಘವಾಂಕ ಚರಿತ್ರೆಯಲ್ಲಿ ಬಂಗಾರದ ಜನಿವಾರ ಶೋಭಿಸುತ್ತಿತ್ತು ಅಂಥ ಬರುತ್ತದೆ. ಹರಿಹರನ ಕೊರಳಲ್ಲಿ ಜನಿವಾರವಿದೆ. ಆದರೆ ಎಷ್ಟೋ ಸಲ ನನಗೆ ಆಶ್ಚರ್ಯ ಆಗುತ್ತಿತ್ತು. ಅವನು ಬ್ರಾಹ್ಮಣರನ್ನ ಬಹಳ ಬೈಯುತ್ತಾನೆ. ಆದರೆ ಈತನಿಗೆ ಜನಿವಾರವಿದೆಯಲ್ಲ ಅಂತ. ಆಮೇಲೆ ಗೊತ್ತಾಯಿತು ಈತ ಬೈಯುತ್ತಿರುವುದು ವೈದಿಕ ಬ್ರಾಹ್ಮಣರನ್ನ ಅಂತ. ಬಸವಣ್ಣ, ಹರಿಹರ, ರಾಘವಾಂಕ, ಇವರೆಲ್ಲರೂ ಒಂದೇ ಬ್ರಾಹ್ಮಣ ವರ್ಗಕ್ಕೆ ಸೇರಿದವರು.

ಆಗಮಿಕ ಶೈವ ಬ್ರಾಹ್ಮಣರನ್ನು ಬಿಸುಟು ಬಂದ ಬಸವಣ್ಣ ಮೊಟ್ಟಮೊದಲು ಬಂದು ಸೇರಿದ್ದು ನಾಥಪಂಥಕ್ಕೆ. ಕೂಡಲಸಂಗಮನಾಥ ಅದು ನಾಥಕೇಂದ್ರ. ಆಮೇಲೆ ಬಸವಣ್ಣನಿಗೆ ನಾಥಪಂಥವು ಶಿಥಿಲವೆನ್ನಿಸಿತು. ಆಮೇಲೆ ಅದನ್ನು ಮುರಿದು ಲಿಂಗಾಯತ ಮಾಡಿದ. ಆನಂತರ ಬಸವಣ್ಣನ ಮೂಲವಿತ್ತಲ್ಲ ಆಗಮಿಕ ಶೈವಬ್ರಾಹ್ಮಣರು ಅವರಿಗೆ ಈ ಪಂಚಪೀಠದವರು ಪಂಚಾಚಾರ್ಯರು. ಇವರು ಬಸವಣ್ಣ ಕಟ್ಟಿದ ಲಿಂಗಾಯತ ಧರ್ಮದೊಳಗೆ ಬಂದು ಸೇರಿಕೊಂಡರು, ನಮ್ಮವನೇ ಆದ ಬಸವಣ್ಣ ಮಾಡಿರುವ ಧರ್ಮ ಎಂದು ಸೇರಿಕೊಂಡರು. ಬಸವಣ್ಣನ ನಂತರ ಕಾಲಾಂತರದಲ್ಲಿ ಅವರ ಸಾಂಸ್ಥಿಕ ಆಚಾರ ಕ್ರಮಗಳು ಲಿಂಗಾಯತ ಧರ್ಮದೊಳಗೆ ಸೇರಿಕೊಂಡವು.

ಈಗ ರೇಣುಕಪೀಠದಲ್ಲಿ ಮುಂಜಾನೆ ಸ್ತೋತ್ರ ಓದುವಾಗ ರೇಣುಕಾಚಾರ್ಯ ನಾಮಾವಳಿಯಲ್ಲಿ 'ರೇಣುಕಾಚಾರ್ಯ ಲಿಂಗ ಯಜ್ಞೋಪವೀತಿನಿಯೇ ನಮಃ' ಎಂದಿದೆ. ಕರ್ನಾಟಕಕ್ಕೆ ಬರುವ ಮೊದಲು ಕೇವಲ ಯಜ್ಞೋಪವೀತವಿತ್ತು, ಇಲ್ಲಿಗೆ ಬಂದ ಮೇಲೆ ಬಸವಣ್ಣನ ಲಿಂಗವಿತ್ತಲ್ಲ ಇವರೆಡು ಒಂದಾಗಬೇಕಾಗಿತ್ತು. ಅದಕ್ಕೆ ಅವರು ಲಿಂಗವನ್ನು ಹಾಕಿಕೊಂಡರು. ಜನಿವಾರವನ್ನು ಹಾಕಿಕೊಂಡರು.

ಈ ಆರಾಧ್ಯರಿದ್ದಾರಲ್ಲ ಇವರೆಲ್ಲ ಬಸವಣ್ಣನ ಬ್ರಾಹ್ಮಣ ಪರಂಪರೆಯವರು. ಮೈಸೂರಿನ ಆರಾಧ್ಯರಲ್ಲಿ ಇದನ್ನು ಪರಿಶೀಲಿಸಬಹುದು. ಯಾರಾದರೂ 'ಮೈಸೂರಿನ ಆರಾಧ್ಯರು' ಎಂದು ಪಿಎಚ್.ಡಿ. ಮಾಡಬಹುದು. ಈಗ ಆರಾಧ್ಯರು ತಮ್ಮನ್ನು ಲಿಂಗಾಯತ ಆರಾಧ್ಯರು ಎಂದು ಕರೆದುಕೊಳ್ಳುತ್ತಾರೆ. ಈ ಆರಾಧ್ಯರದ್ದೇ ವೀರಶೈವ. ಇವರು ಕರ್ನಾಟಕದಲ್ಲಿ ಅದನ್ನು ತಂದು ಏರಿದರು. ಅದಕ್ಕೆ ನಾನು ಒಮ್ಮೆ ಪ್ರಜಾವಾಣಿಯಲ್ಲಿ 'ಕರ್ನಾಟಕ ಶರಣರ ಮೇಲೆ ಆಂಧ್ರದ ಆರಾಧ್ಯರ ಸವಾರಿ' ಅಂತ ಬರೆದೆ. ಆದುದರಿಂದ ನನ್ನ ಪ್ರಕಾರ ಲಿಂಗಾಯತ ಅಂದರೆ ಅದ್ವೈತ, ವೀರಶೈವ ಅಂದರೆ ದ್ವೈತ. ಈಗ ಮರುಳಾರಾಧ್ಯರಿದ್ದಾರಲ್ಲ ಅವರ ನಾಮಾವಳಿಗಳನ್ನು ಹೇಳುವಾಗ 'ಯಜ್ಞೋಪವೀತ ಶೀಖಿಧಾರಣಿ ನಮಃ' ಅಂತಾರ. ಅಂದರೆ ಮರುಳಾರಾಧ್ಯರಿಗೆ ಜುಟ್ಟುನೂ ಇದೆ, ಜನಿವಾರನೂ ಇದೆಯಂತೆ. ಲಿಂಗಾಯತರಲ್ಲಿ ಯಜ್ಞೋಪವೀತ ಎಲ್ಲಿ ಬರುತ್ತದೆ. ಆದುದರಿಂದ ಪಂಚಾಚಾರ್ಯರ ಕಲ್ಪನೆ ನಮ್ಮದು ಅಲ್ಲವೇ ಅಲ್ಲ. ಅದು ಚತುರಾಚಾರ್ಯರ ಕಲ್ಪನೆ. ಇದು ೧೫-೧೬ನೆ ಶತಮಾನದಲ್ಲಿ ಬಂದದ್ದು. ತಮಾಷೆ ಎಂದರೆ ಈ ಪಂಚಾಚಾರ್ಯರಿಗೆ ಕನ್ನಡ ಬರುತ್ತಿರಲಿಲ್ಲ. ಇವರು ಸಂಸ್ಕೃತ ಮಾತನಾಡುತ್ತಿದ್ದರು. ಆದುದರಿಂದ ಅವರು ಸಂಸ್ಕೃತದಲ್ಲಿ ಸಿದ್ಧಾಂತಶಿಖಾಮಣಿ ಬರೆದುಕೊಂಡರು. ಇವರೇ ೧೦೧ ಸ್ಥಲ ಮುಂತಾದ ಕಲ್ಪನೆಗಳನ್ನು ಮಾಡಿಟ್ಟರು.

ಪ್ರಶ್ನೆ: ಬಸವಣ್ಣನ ಜಾತಿಯನ್ನು ಕುರಿತಾದ ಬಂಜಗೆರೆ ಜಯಪ್ರಕಾಶ್ ಹಾಗೂ ಸುಧಾಕರ ಮುಂತಾದವರ ಅಭಿಪ್ರಾಯಗಳಿಗೆ ವ್ಯಕ್ತವಾದ ಪ್ರತಿಭಟನೆಯನ್ನು ಗ್ರಹಿಸಿ, ಕೆಲವರು ಲಿಂಗಾಯತ ಸಮಾಜಕ್ಕೂ ಒಬ್ಬ ದಲಿತನನ್ನು ತಮ್ಮ ಧರ್ಮದ ವಕ್ತಾರನೆಂದು ಒಪ್ಪಿಕೊಳ್ಳಲು ಸಾಧ್ಯವಾಗದಿರುವುದು ಜಾತಿಯ ಉಚ್ಚ ಪ್ರಜ್ಞೆಯ ಕಾರಣದಿಂದಲೇ ಎಂಬ ಮಾತಿದೆಯಲ್ಲ.

ಎಂ.ಎಂ. ಕಲಬುರ್ಗಿ : ನೋಡಿ ಜಾತ್ಯತೀತವಾದ ಮಾತನ್ನು ಹೇಳಿದವರೆಲ್ಲ ಬೇರೆ ಜಾತಿಯವರು ಅಂಥ ಭಾವಿಸುವುದು ತಪ್ಪು. ಬಸವಣ್ಣನ ತತ್ತ್ವದಲ್ಲಿನ ಜಾತ್ಯತೀತತೆಯನ್ನು ವಿಚಾರಮಾಡುವುದು ಬೇರೆ, ಹೀಗೆ ಸುಮ್ಮನೆ ಮಾತನಾಡುವುದು ಬೇರೆ.

ಪ್ರಶ್ನೆ: ಅಂದರೆ ೧೫-೧೬ನೆ ಶತಮಾನದಲ್ಲಿ ವಚನಸಂಗ್ರಹ ಕಾಲದಲ್ಲಿ ಈ ಸಿದ್ಧಾಂತ ಶಿಖಾಮಣಿಯಂತಹ ಕೃತಿಗಳು ಹಾಗೂ ಷಟ್‌ಸ್ಥಲಾದಿಯಾದ ಆಚರಣೆಗಳು ಹುಟ್ಟಿಕೊಂಡಿರಬಹುದೇ?

ಎಂ.ಎಂ. ಕಲಬುರ್ಗಿ : ತೋಂಟದ ಸಿದ್ಧಲಿಂಗ ಯತಿಯ ಕಾಲದಲ್ಲೇ ಹಂಪಿಯಲ್ಲಿದ್ದ ಮಗ್ಗೆಯ ಮಾಯಿದೇವ, ಲಕ್ಕಣದಂಡೇಶ, ಮಹಾಲಿಂಗದೇವ, ಜಕ್ಕಣಾಚಾರ್ಯ ಮುಂತಾದವರು ಅಂದರೆ ಮೂಲತಃ ಬಸವಣ್ಣನ ಆಗಮಿಕ ಶೈವ ಬ್ರಾಹ್ಮಣ ಪರಂಪರೆಗೆ ಸೇರಿದ ಇವರು ಬಸವಣ್ಣನ ಕಾಲಾನಂತರ ಆಗಮಿಕಶೈವ ಬ್ರಾಹ್ಮಣ ತತ್ತ್ವ ಹಾಗೂ ಲಿಂಗಾಯತ ತತ್ತ್ವಗಳನ್ನು ಜೊತೆ ಸೇರಿಸಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಇಂತಹ ಸಿದ್ಧಾಂತಗಳನ್ನು ರೂಪಿಸಿದ್ರು, ಮುಂದೆ ಅದನ್ನೇ ಹೇಳುತ್ತಾ ಬಂದರು. ನಮಗೂ ಸಂಸ್ಕೃತದಲ್ಲಿ ಬರೆದದ್ದು ಶ್ರೇಷ್ಠವಾಗಿ ಕಂಡಿತು. ಸುಮ್ಮನಾದೆವು.

ಪ್ರಶ್ನೆ: ಸಾರ್ ವಚನ ಸಂಗ್ರಹ ಮಾಡಿದ ನೂರೊಂದು ವಿರಕ್ತರಿದ್ದಾರಲ್ಲ ಅವರಿಂದ ಈ ಸಿದ್ಧಾಂತಗಳು ಆಗಿರುವಂತಹದ್ದೇ.

ಎಂ.ಎಂ. ಕಲಬುರ್ಗಿ : ನೋಡಿ ಮಗ್ಗೆಯ ಮಾಯಿದೇವ ಮುಂತಾದವರು ಬೇರೆ. ಹಾಗೆಯೆ ಬೇರೆ ನೂರೊಂದು ವಿರಕ್ತರು ಇದ್ದಾರೆ. ಅವರು ಲಿಂಗಾಯತರೇ ಅಲ್ಲ. ಅವರು ಅವಧೂತ ಪರಂಪರೆಯವರು. ಅವರಲ್ಲಿ ಗುರುಬಸವ ಮುಂತಾದ ವಿರಕ್ತರು ಬರುತ್ತಾರೆ. ಅವಧೂತ ಗೀತೆ ಅಂತ ಆತ ಬರೆದಿದ್ದಾನೆ. ಈ ವಿರಕ್ತರಿಗೆ ಬಹಳ ಕಂದಾಚಾರಗಳಿದ್ದವು. ಪರಸ್ತ್ರೀ ಮೋಹವಿತ್ತು. ಆದರೆ ಲಿಂಗಾಯತ ವಿರಕ್ತರು ಅಂತಹವರಲ್ಲ. ತೋಂಟದ ಸಿದ್ಧಲಿಂಗ ಯತಿ ಮುಂತಾದವರು ಬಹಳ ಶುದ್ಧವಿದ್ದರು. ಆದರೆ ಆ ವಿರಕ್ತರಲ್ಲಿ ಅಶುದ್ಧವಿದ್ದರೂ ನಡೆಯುತ್ತದೆ.

ಪ್ರಶ್ನೆ: ವಚನ ಚಳವಳಿ ತನ್ನ ಆಶಯದ ಆತ್ಯಂತಿಕ ಸ್ಥಿತಿಯನ್ನು ಮುಟ್ಟಲು ಆಗಲಿಲ್ಲ ಎಂಬ ಮಾತಿದೆಯಲ್ಲ? ಈಗ ಆರ್ ಎನ್ ನಂದಿಯವರು ಈ ಮಾತನ್ನು ಹೇಳುತ್ತಾ ವಚನಕ್ರಾಂತಿ ಕೇವಲ ನಗರ ಪ್ರದೇಶಕ್ಕೆ ಮಾತ್ರ ಸೀಮಿತವಾದದ್ದು ಕಾರಣವೆನ್ನುತ್ತಾರೆ. ಕಾರ್ನಾಡರು ವಚನಕಾರರಿಗೆ ತಾವು ಮಾಡುತ್ತಿರುವ ಕ್ರಾಂತಿ ಅಗತ್ಯಕ್ಕೆ ತಕ್ಕಂತೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮದ ಬಗ್ಗೆ ಅರಿವಿರಲಿಲ್ಲ? ಇತ್ಯಾದಿ.

ಎಂ.ಎಂ. ಕಲಬುರ್ಗಿ : ಇದು ಸರಿಯಾದ ಮಾತಲ್ಲ. ಈಗ ಪ್ರಪಂಚದಲ್ಲಿ ಯಾವ ಚಳವಳಿ ಯಶಸ್ವಿಯಾಗಿದೆ ಹೇಳ್ರಿ, ಬುದ್ಧನದು ಸಕ್ಸಸ್ ಆಯ್ತಾ. ಗಾಂಧಿದು ಸಕ್ಸಸ್ ಆಗಿದೆಯಾ. ಗಾಂಧಿ ಸತ್ತ ೧೦-೧೫ ವರ್ಷಗಳಲ್ಲಿ ಆತ ಕಟ್ಟಿದ ಕಾಂಗ್ರೆಸ್ ಹಾಳಾಗಿ ಹೋಯ್ತು. ಆದರೆ ಬಸವಣ್ಣನ ವಚನ ಚಳವಳಿ ೯೦೦ ವರ್ಷ ಆದರೂ ಉಳಿದಿದೆ ಅಂದರೆ ಏನರ್ಥ. ಯಶಸ್ವಿಯಾಗಿದೆ ಎಂದು ತಾನೆ ಅರ್ಥ. ಆದುದರಿಂದ ವಚನ ಚಳವಳಿಯನ್ನ ಲಘುವಾಗಿ ವ್ಯಾಖ್ಯಾನಿಸಬಾರದು. ಕಾರ್ನಾಡರಿಗೆ ಚಳವಳಿ ಅಂದರೆ ಏನು ಅಂತ ಗೊತ್ತಿಲ್ಲ. ಯುದ್ಧ ಬೇರೆ ಚಳವಳಿ ಬೇರೆ. ಯುದ್ಧ ಒಂದು ಘಟನೆ. ಘಟನೆ ನಡೆಯುತ್ತದೆ. ಒಬ್ಬ ಸೋಲುತ್ತಾನೆ ಮತ್ತೊಬ್ಬ ಗೆಲ್ಲುತ್ತಾನೆ. ಚಳವಳಿ ಒಂದು ಪ್ರಕ್ರಿಯೆ. ಇದು ಸಾಮಾಜಿಕ ನ್ಯಾಯವನ್ನು ತನ್ನ ಮುಖ್ಯ ಆಶಯವನ್ನಾಗಿ ಇಟ್ಟುಕೊಂಡಿರುತ್ತದೆ. ಇದು ನಿರಂತರವಾಗಿ ಆಗುತ್ತಲೇ ಇರುವುದು. ಸಾಮಾಜಿಕ ಅನ್ಯಾಯವನ್ನು ಯಾರು ಒಮ್ಮೆಲೆ ಶುದ್ಧ ಮಾಡಲು ಸಾಧ್ಯವಿಲ್ಲ. ಹಾಗೆ ಶುದ್ಧ ಮಾಡಿದರೂ ಮುಂದೆ ಅದು ಶುದ್ಧವಾಗಿ ಉಳಿದುಕೊಳ್ಳುವುದಿಲ್ಲ. ಕ್ರಿಯೆ ಬೇರೆ ಪ್ರಕ್ರಿಯೆ ಬೇರೆ. ಬಸವಣ್ಣ ಮತ್ತು ಅಂಬೇಡ್ಕರ್ ಅವರದ್ದು ಪ್ರೊಸಸ್ ಅಂದರೆ ಪ್ರಕ್ರಿಯೆ. ಯಾವಾಗಲು ಆಗುತ್ತಲೇ ಇರುತ್ತದೆ. ಚಳವಳಿಯ ಸ್ವರೂಪ ಗೊತ್ತಿಲ್ಲದೆ ಇರುವವರು ಇದರ ಬಗ್ಗೆ ಮಾತನಾಡಬಾರದು. ಇತ್ತೀಚೆಗೆ ಬರಗೂರು ರಾಮಚಂದ್ರಪ್ಪ ಬರೆದಿದ್ದರಲ್ಲ 'ಬಸವಣ್ಣನ ಕಾಲಕ್ಕೆ ಎಲ್ಲವೂ ಆಗಿತ್ತೇ?' ಅಂತ. ಅರೇ ಬುದ್ಧನ ಕಾಲಕ್ಕೆ ಎಲ್ಲವೂ ಆಗಿತ್ತೇ! ಗಾಂಧಿಯ ಕಾಲಕ್ಕೆ ಎಲ್ಲವೂ ಆಗಿತ್ತೇ. ಇಂತಹ ಮಾತುಗಳು ಬಾಲಿಶವಾದವುಗಳು. ಆದುದರಿಂದ ನಾನು ನಂದಿ ಅವರ ಮಾತು ಒಪ್ಪುವುದಿಲ್ಲ ಮತ್ತು ಕಾರ್ನಾಡರಿಗೆ ಬಸವಣ್ಣ ಸರಿಯಾಗಿ ಗೊತ್ತಿಲ್ಲ.

ಪ್ರಶ್ನೆ: ಸಾರ್ ಜೈನರ ಬಸದಿಗಳನ್ನು ಲಕ್ಕಣ್ಣ ದಂಡೇಶನ ಕಾಲದಲ್ಲಿ ನಾಶ ಮಾಡಿದರು ಮತ್ತು ಮತಾಂತರ ಮಾಡಿದರು ಎನ್ನುವ ಮಾತಿದೆಯಲ್ಲ.

ಎಂ.ಎಂ. ಕಲಬುರ್ಗಿ : ಕರ್ನಾಟಕದಲ್ಲಿ ಪೂರ್ವದಲ್ಲಿ ಕೇವಲ ಜಾತಿಗಳಿದ್ದವು. ಧರ್ಮಗಳಿರಲಿಲ್ಲ. ಆನಂತರದಲ್ಲಿ ವೈದಿಕ, ಹಾಗೂ ಜೈನ ಧರ್ಮಗಳು ಬಂದವು. ವೈದಿಕ ಧರ್ಮದವರು ಆರಂಭದಲ್ಲಿ ಮಂತ್ರವನ್ನು ಕೊಡಲಿಲ್ಲ. ಮತಾಂತರವನ್ನು ಮಾಡಿಕೊಳ್ಳಲಿಲ್ಲ. ಆದರೆ ಆ ಧರ್ಮದ ಕಡೆಗೆ ಸಹಜವಾದ

ಕೆಲವು ಆಕರ್ಷಣೆಗಳನ್ನು ಈ ಜಾತಿಗಳು ಹೊಂದಿದ್ದವು. ಮುಂದೆ ಬಂದ ಜೈನರು ಮಂತ್ರ ಕೊಡುತ್ತೇವೆ ಮತಾಂತರ ಮಾಡಿಕೊಳ್ಳುವುದಿಲ್ಲ ಎಂದವು. ಆಗ ವೈದಿಕದ ಕಡೆಗೆ ಆಕರ್ಷಿತವಾಗಿದ್ದ ಜಾತಿಗಳು ಜೈನ ಧರ್ಮದ ಕಡೆಗೆ ನಡೆದರು. ಅತ್ತಿಮಬ್ಬೆ ಮತ್ತು ಚಾವುಂಡರಾಯ ಮುಂತಾದವರು ಹೀಗೆ ಮಂತ್ರ ಪಡೆದವರು. ಆದರೆ ಮತಾಂತರ ಆದವರಲ್ಲ. **ಪ್ರಶ್ನೆ:** ಸಾರ್ ಪಂಪನ ಬಗ್ಗೆ ಇದೇ ಮಾತನ್ನು ಹೇಳಬಹುದೇ?

ಎಂ.ಎಂ. ಕಲಬುರ್ಗಿ : ನೋಡಿ ಪಂಪ ಬ್ರಾಹ್ಮಣನಾದುದರಿಂದ ಜೈನರು ಅವನನ್ನು ಒಳಗೆ ತೆಗೆದು ಕೊಂಡರು. ಆದರೆ ಮಿಕ್ಕವರನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಮುಂದೆ ಬಂದ ಬಸವಣ್ಣ ಜಾತಿಗಳಿಗೆ ಲಿಂಗಾಯತ ಧರ್ಮದ ಮಂತ್ರವನ್ನು ಕೊಡುತ್ತೇವೆ ಮತ್ತು ಮತಾಂತರವನ್ನು ಮಾಡಿಕೊಳ್ಳುತ್ತೇವೆ ಎಂದರು. ಆಗ ಎಲ್ಲಾ ಜಾತಿಗಳ ಜನ ಲಿಂಗಾಯತ ಧರ್ಮಕ್ಕೆ ಸೇರಿದರು. ಬಸವಣ್ಣ ಬರುವವರೆಗೆ ಒಂದು ಹಳ್ಳಿಯಲ್ಲಿ ೯೮% ಜನ ಶೂದ್ರರಿದ್ದರು, ೨% ಜನ ಜೈನರಿದ್ದರು. ಈ ೯೮% ಜನ ಶೂದ್ರರು ಜೈನರ ಅನುಯಾಯಿಗಳಾಗಿದ್ದರು. ಇವರು ತಾವು ನಡೆದುಕೊಳ್ಳುತ್ತಿದ್ದ ಜೈನ ಧರ್ಮದ ತೀರ್ಥಂಕರರ ಬಸದಿಗಳನ್ನು ಕಟ್ಟಿಸಿ ಪೂಜಿಸುತ್ತಿದ್ದರು. ಮುಂದೆ ಬಸವಣ್ಣನ ಕಾಲದಲ್ಲಿ ಇವರೆಲ್ಲ ಮತಾಂತರ ಆದಾಗ ಜೈನರೆಲ್ಲ ಆ ಊರುಗಳನ್ನು ಬಿಟ್ಟು ಹೊರಟು ಹೋದರು. ಬಸದಿಗಳು ಪೂಜೆ ಮಾಡುವವರಿಲ್ಲದೆ ಖಾಲಿ ಬಿದ್ದವು. ಆಗ ಈ ಶೂದ್ರರು ತಾವೇ ಕಟ್ಟಿಸಿದ ಬಸದಿಗಳು ಪೂಜೆ ಇಲ್ಲದೆ ಇರುವುದನ್ನು ನೋಡಿ ಅಲ್ಲಿದ್ದ ತೀರ್ಥಂಕರ ಮೂರ್ತಿಗಳನ್ನು ತೆಗೆದು ಹಾಕಿ ಲಿಂಗವನ್ನು ಪ್ರತಿಷ್ಠಾಪಿಸಿದರು.

ಸಿದ್ಧಾಂತ, ಸಮಾಜ, ಚರಿತ್ರೆ ಈ ಮೂರನ್ನು ಸರಿಯಾಗಿ ಗ್ರಹಿಸಿದವರಿಗೆ ಮಾತ್ರ ಇದು ಅರ್ಥವಾಗುವಂತಹದ್ದು. ಅನೇಕರು ವಚನ ಸಾಹಿತ್ಯವನ್ನು ಕುರಿತು ಬಹಳ ಚೆನ್ನಾಗಿ ಬರೆದಿದ್ದಾರೆ. ಆದರೆ ಸರಿಯಾಗಿ ಬರೆದಿಲ್ಲ. ಚೆನ್ನಾಗಿ ಬರೆಯುವುದು ಬೇರೆ, ಸರಿಯಾಗಿ ಬರೆಯುವುದು ಬೇರೆ. ನೀವು ಮಾಡುತ್ತಿರುವ ಪ್ರಯತ್ನ ತುಂಬ ಸರಿಯಾಗಿದೆ. ಇತ್ತೀಚೆಗೆ ಶ್ರಮವಹಿಸಿ ಕೆಲಸಮಾಡುವ ಜನ ಕಡಿಮೆಯಾಗಿದ್ದಾರೆ. ನಿಮ್ಮ ಈ ಯೋಜನೆ ಶ್ರಮದಾಯಕವಾದರೂ ಮಾಡಲು ಉತ್ಸುಕರಾಗಿರುವುದು ನನಗೆ ತುಂಬಾ ಸಂತೋಷವಾಗಿದೆ. ನಮಸ್ಕಾರ.

'ಅಭಿವ್ಯಕ್ತಿ ಸಾಹಿತ್ಯ' ಪತ್ರಿಕೆಗಾಗಿ ನಡೆಸಿದ ಸಂದರ್ಶನ–೨೦೧೨

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೦೯

ಕರ್ನಾಟಕ ಇತಿಹಾಸ ಪೂರ್ಣವಾಗಲು ಸಹಾಯಕ ಆಕರ

❖

ಸಂದರ್ಶಕರು : ದೇವು ಪತ್ತಾರ

ಆದಿಲ್ ಶಾಹಿ ಸಾಹಿತ್ಯದ ಅನುವಾದದ ಹಿಂದಿನ ಉದ್ದೇಶ ಏನು?

ಮಧ್ಯಕಾಲೀನ ಅವಧಿಯವರೆಗೆ ಭಾರತೀಯ ಮನಸ್ಸುಗಳು ಪುರಾಣಗಳಲ್ಲಿ ಮುಳುಗಿದ್ದವು. ಅವರಿಗೆ ಇತಿಹಾಸದ ಅರಿವಿರಲಿಲ್ಲ. ಆದರೆ ಮುಸ್ಲಿಂ ಲೇಖಕರಿಗೆ ಐತಿಹಾಸಿಕ ಪ್ರಜ್ಞೆ ಇತ್ತು. ಇತಿಹಾಸಕಾರ ಸಮಾಜದ ಆಗುಹೋಗುಗಳನ್ನೂ ದಾಖಲಿಸಿರುತ್ತಾನೆ. ಅಂಥ ಪಠ್ಯಗಳನ್ನು ಅನುವಾದಿಸಿಕೊಂಡಾಗ ಮಾತ್ರ ಚರಿತ್ರೆಯನ್ನು ಕಟ್ಟಿಕೊಳ್ಳಬಹುದು. ಹಿಂದಿನ ಇತಿಹಾಸಕಾರರಿಗೆ ಮುಸ್ಲಿಮರು ನಮ್ಮವರಲ್ಲ ಎನ್ನುವ ಭಾವನೆ ಇತ್ತು. ಆದ್ದರಿಂದ ವಿಜಯನಗರದಷ್ಟೇ ಪ್ರಭಾವಶಾಲಿಯಾಗಿದ್ದ ಆದಿಲ್ ಶಾಹಿ ಅರಸರ ಬಗ್ಗೆ ಹೆಚ್ಚು ಕೆಲಸ ಆಗಲಿಲ್ಲ. ಬಹುತೇಕ ಪಠ್ಯಗಳು ಉರ್ದು–ಅರಬ್ಬಿ–ಫಾರಸಿ ಭಾಷೆಗಳಲ್ಲಿ ಇದ್ದದ್ದರಿಂದ ಕನ್ನಡಕ್ಕಿರಲಿ, ಇಂಗ್ಲಿಷಿಗೂ ಅನುವಾದವಾಗಿರಲಿಲ್ಲ. ಅಷ್ಟೇ ಅಲ್ಲ, ಆದಿಲ್ ಶಾಹಿ ಸಾಹಿತ್ಯಕ್ಕೆ ಸಂಬಂಧಿಸಿದ ಬಹಳಷ್ಟು ಪಠ್ಯಗಳು ಹಸ್ತಪ್ರತಿಗಳಲ್ಲಿ ಮಾತ್ರ ಉಳಿದುಕೊಂಡಿದ್ದವು. ಆಕರಗಳು ಅಲಭ್ಯವಾಗಿದ್ದರಿಂದ ಅವುಗಳ ಅಧ್ಯಯನ ಮತ್ತು ಪ್ರಕಟಣೆ ಸಾಧ್ಯವಾಗಿರಲಿಲ್ಲ.

ಯೋಜನೆ ರೂಪುಗೊಂಡಿದ್ದು ಹೇಗೆ?

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಆಗಿದ್ದ ಸಂದರ್ಭದಲ್ಲಿ ಆದಿಲ್‌ಶಾಹಿ ಸಾಹಿತ್ಯದ ಬಗ್ಗೆ ಆಸಕ್ತಿ ಹುಟ್ಟಿತು. ವಿಜಯನಗರ ಸಾಮ್ರಾಜ್ಯದ ಸಮಕಾಲೀನ ಅರಸು ಮನೆತನಗಳಾದ ಬಹಮನಿ–ಆದಿಲ್ ಶಾಹಿಗಳ ಬಗ್ಗೆ ಅರಿಯದಿದ್ದರೆ ಕರ್ನಾಟಕದ ಇತಿಹಾಸವೇ ಪೂರ್ಣ ಆಗುವುದಿಲ್ಲ. ಚರಿತ್ರೆಯನ್ನು ಕಟ್ಟಿಕೊಳ್ಳುವಾಗ ಇಡಿಯಾದ, ವಿಶಾಲ ಮನೋಭಾವದಿಂದ ಸಂಗತಿಗಳನ್ನು ನೋಡಬೇಕಾಗುತ್ತದೆ. ಇದುವರೆಗೆ ವಿಜಯನಗರ ಬಗ್ಗೆ ನಡೆದ ಸಂಶೋಧನೆ/ಚರ್ಚೆಗೆ ಶೇ. ೧೦ ರಷ್ಟೂ ಆದಿಲ್ ಶಾಹಿ–ಬಹಮನಿ ಸಾಮ್ರಾಜ್ಯದ ಬಗ್ಗೆ ನಡೆದಿಲ್ಲ. ಅದಕ್ಕೆ ಆದಿಲ್ ಶಾಹಿ ಸಾಮ್ರಾಜ್ಯದ ಅಧ್ಯಯನಕ್ಕೆ ಆಕರವಾಗಿರುವ ಆಸ್ಥಾನ ಸಾಹಿತ್ಯವು ಉರ್ದು, ಫಾರಸಿ ಮತ್ತು ಅರಬ್ಬಿ ಭಾಷೆಗಳಲ್ಲಿ

ಇರುವುದರಿಂದ ಕನ್ನಡಿಗರಿಗೆ ಅನ್ಯವಾಗಿಯೇ ಉಳಿದಿದೆ. ಆದಿಲ್ ಶಾಹಿ ಸಾಹಿತ್ಯದ ಬಗ್ಗೆ ಸ್ಥೂಲವಾದ ಔಟ್‌ಲೈನ್ ಸಿಗಲಿ ಎನ್ನುವ ಕಾರಣಕ್ಕಾಗಿ ಆಗ ವಿಷಯದಲ್ಲಿ ಆಸಕ್ತರಾಗಿದ್ದ ಕೃಷ್ಣ ಕೊಲ್ಹಾರ ಕುಲಕರ್ಣಿ ಅವರಿಂದ 'ಆದಿಲ್‌ಶಾಹಿ ಆಸ್ಥಾನ ಸಾಹಿತ್ಯ' ಬಗ್ಗೆ ಉಪನ್ಯಾಸ ಏರ್ಪಡಿಸಿ ನಂತರ ಪುಸ್ತಕರೂಪದಲ್ಲಿ ಪ್ರಕಟಿಸಲಾಯಿತು. ಹಾಗೆಯೇ ಕರ್ನಾಟಕದ ಫಾರಸಿ. ಅರಬ್ಬಿ, ಉರ್ದು ಶಾಸನಗಳ ಸಂಪುಟ ಕೂಡ ಪ್ರಸಾರಾಂಗದಿಂದ ಹೊರತರಲಾಯಿತು.

ಕರ್ನಾಟಕ ಇತಿಹಾಸದ ಪುನರ್ ವ್ಯಾಖ್ಯಾನಕ್ಕೆ ಕಾರಣ ಆಗಬಹುದೇ?

ಫಾರಸಿ ಮತ್ತು ಉರ್ದು ಪಠ್ಯಗಳನ್ನು ಗಮನಿಸದೆ ಇದ್ದರೆ ಇತಿಹಾಸ ಅಪೂರ್ಣ. ಸಮಕಾಲೀನ ಮತ್ತು ಕನ್ನಡೇತರ ಭಾಷೆಯಲ್ಲಿರುವ ಪಠ್ಯಗಳಿಂದ ಕರ್ನಾಟಕದ ಇತಿಹಾಸವನ್ನು ಬೇರೆ ರೀತಿಯಲ್ಲಿ ಕಟ್ಟಿಕೊಳ್ಳಲು ಸಾಧ್ಯ. ಆದಿಲ್ ಶಾಹಿಗಳದು ಉತ್ತರದ ಮೊಘಲರ ಜತೆ ಹಾಗೂ ದಕ್ಷಿಣದ ವಿಜಯನಗರದ ಅರಸರ ಜತೆಗೆ ಹೋರಾಟ-ಪೈಪೋಟಿ ಮಾಡಿದ ಪ್ರಮುಖ ಅರಸು ಮನೆತನ. ಹೀಗಾಗಿ ಉತ್ತರ ಮತ್ತು ದಕ್ಷಿಣ ಭಾರತದ ಕೊಂಡಿಯಂತಿರುವ ಆದಿಲ್ ಶಾಹಿ ಆಡಳಿತದ ಅವಧಿಯ ಸಾಹಿತ್ಯ ಅನುವಾದಿಸುವ ಯೋಜನೆ ಕೈಗೆತ್ತಿಕೊಂಡೆವು. ಉರ್ದುವಿನಿಂದ ಅನುವಾದಿಸುವವರೇನೋ ಸಿಗುತ್ತಾರೆ. ಆದರೆ ಫಾರಸಿಯಿಂದ ಅನುವಾದಿಸುವವರು ಸಿಗುವುದು ಕಠಿಣ. ಆದ್ದರಿಂದ ಮೊದಲ ಹಂತದಲ್ಲಿ ಉರ್ದು ಮತ್ತು ಮರಾಠಿಯಲ್ಲಿರುವ ಕೃತಿಗಳನ್ನು ಅನುವಾದಿಸಿ, ನಂತರ ಫಾರಸಿ ಕೃತಿಗಳನ್ನು ಕೈಗೆತ್ತಿಕೊಳ್ಳುತ್ತೇವೆ.

ವಿಜಯ ಕರ್ನಾಟಕ-ಸಾಪ್ತಾಹಿಕ, ಭಾನುವಾರ ೧ ಡಿಸೆಂಬರ್ ೨೦೧೩

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೧೦

ಲಿಂಗಾಯತಧರ್ಮದ ಜಾಗತೀಕರಣ

(ಸಂವಾದ)

ಪ್ರಶ್ನೆ: ಬಸವಣ್ಣನವರ ಪೂರ್ವದಲ್ಲಿ ಲಿಂಗಾಯತ ಧರ್ಮ ಇರಲಿಲ್ಲವೇ? ಹಾಗಾದರೆ ಬಸವಣ್ಣನವರು ಬ್ರಾಹ್ಮಣ ಜಾತಿಯನ್ನು ಧಿಕ್ಕರಿಸಿ ಸ್ವೀಕರಿಸಿದ ಜಾತಿ ಯಾವುದು ಅಥವಾ ಧರ್ಮ ಯಾವುದು? ಒಂದು ವೇಳೆ ಇವರೇ ಧರ್ಮ ಸ್ಥಾಪಿಸಿದ್ದರೆ ಇವರು ಸ್ವೀಕರಿಸಿದ ಧರ್ಮ ಅಥವಾ ಜಾತಿ ಯಾವುದು?

ಉತ್ತರ: ಇದೊಂದು ಪ್ರಶ್ನೆಗೆ ಉತ್ತರ ಹೇಳಿದರೆ ಎಲ್ಲ ಪ್ರಶ್ನೆಗಳಿಗೆ ಉತ್ತರ ಹೇಳಿದಂತೆಯೇ ಸರಿ, ಬಸವಣ್ಣನವರ ಪೂರ್ವದಲ್ಲಿ ಲಿಂಗಾಯತ ಧರ್ಮ ಇರಲಿಲ್ಲವೇ? ಇದ್ದಿಲ್ಲ, ಯಾಕೆಂದರೆ ನಾವು ಏನೇ ಮಾತಾಡಬೇಕಂದ್ರೂ ಸಾಕ್ಷಿ ಆಧಾರಗಳು ಇರಬೇಕಾಗ್ತದ, ನಾವು ಸಾಹಿತ್ಯ, ಶಾಸನ ಮೊದಲಾದವುಗಳನ್ನ ತಡಕಾಡಿದರೂ ಸಹ ಬಸವಣ್ಣನವರು ಏನ ಹೇಳಿದಾರ ಲಿಂಗಾಯತ ಅಂತ ಧರ್ಮಕ್ಕ ಸಂಬಂಧ ಪಟ್ಟಂತಹ ವಿಚಾರಗಳು ಬಸವಣ್ಣನವರ ಪೂರ್ವದಲ್ಲಿ ಸಿಗುವುದಿಲ್ಲ. ಹೀಗಾಗಿ ಬಸವಣ್ಣನವರ ಪೂರ್ವದಲ್ಲಿ ಲಿಂಗಾಯತ ಧರ್ಮ ಇರಲಿಲ್ಲ. ಶೈವಗಳಿದ್ವು, ವೈದಿಕ ಧರ್ಮ ಇತ್ತು, ಜೈನ ಆ ಮೇಲೆ ಬೌದ್ಧ ಇವೆಲ್ಲಾ ಮೊದಲಾದವು ಇದ್ದವು. ಬಸವಪೂರ್ವ ಕರ್ನಾಟಕದಲ್ಲಿದ್ದ ಧರ್ಮಗಳು ನಾಲ್ಕು; ಬೌದ್ಧ, ಜೈನ, ವೈದಿಕ, ಶೈವ. ಈ ನಾಲ್ಕು ಧರ್ಮಗಳು ಇದ್ದವು ಎನ್ನುವಂಥ ಮಾತು ಇದೆ. ಸಗರ ಅಂತ ಅದ ಅಲ್ಲ, ಇಲ್ಲಿ ಶಾಹಾಪೂರ ಸಗರ ಶಾಸನದೊಳಗ ಈ ನಾಲ್ಕೆ ಧರ್ಮ ನಮ್ಮಲ್ಲಿದ್ದವು. (ಉಳಿದ ಪಂಗಡಗಳಿರಬಹುದು, ಗಾಣಪತ್ಯ, ಸೌರ ಸುರ್ಯೋಪಾಸನ ಇರಬಹುದು), ಧರ್ಮಗಳು ಈ ನಾಲ್ಕೇ ಇದ್ದವು ಅನ್ನೋದು ಸ್ಪಷ್ಟ ಅದ. ಶೈವ ಇತ್ತು, ಆದರ ಬಸವಣ್ಣ ಹೇಳಿದಂತ ಲಿಂಗಾಯತ ಅಲ್ಲ ಅದು. ಬಸವಣ್ಣ ಹೇಳಿದ ಲಿಂಗಾಯತ ಅದರಿಂದ ತುಂಬಾ ಭಿನ್ನ ಅದ, ಅವು ಕಾಳಾಮುಖ, ಕಾಪಾಲಿಕ, ಇವೆಲ್ಲ ಶೈವ ಧರ್ಮದ ಭಾಗವಾಗಿ ಇದ್ವು. ಅವು ಯಾವೂ ಧರ್ಮ ಎನಿಸಿಕೊಳ್ಳುವ ರೂಪದಲ್ಲಿ ಇರಲಿಲ್ಲ. ಹಾಗಾದರೆ ಬಸವಣ್ಣನವರು ಬ್ರಾಹ್ಮಣ ಜಾತಿಯನ್ನು ಧಿಕ್ಕರಿಸಿ ಸ್ವೀಕರಿಸಿದ ಜಾತಿ ಅಥವಾ ಧರ್ಮ ಯಾವುದು? ಇದು ಇಲ್ಲಿವರೆಗೂ ನಾವು ನಂಬಿಕೊಂಡು ಬಂದಿದ್ದು ಒಂದು ರೀತಿ, ಬಹುಶಃ ಇನ್ಮೇಲೆ ಬ್ಯಾರೆ ಹೇಳಬೇಕಂತ ನನಗನಿಸ್ತದ. ಬಸವಣ್ಣ ಸ್ಪಷ್ಟ ಹೇಳ್ತಾರೆ, ಅವರು ಮಂತ್ರಿಯಾದಾಗ ಅವರಿಗೆ ಭೇಟಿಯಾಗಲಿಕ್ಕ ಅಣ್ಣತಮ್ಮಂದಿರು

ಬರ್ತಾರ, ಯಾಕ ನಾವು ದೊಡ್ಡ ಪೋಸ್ಟಿಗಿದ್ದ ಕೂಡಲೇ ಏ ನಾವು ನಿಮ್ಮ ಸಂಬಂಧಿಕರರ್ರೀ ಅಂತ ಹೇಳಿ ಬರ್ತಾರಲ್ಲ ಹಂಗ ಬಸವಣ್ಣನವರಿಗೆ ಹೇಳಲಾಕ ಬರ್ತಾರವರು. ಬಂದಾಗ ಬಸವಣ್ಣನವರು ಒಂದು ಮಾತು (ತಮ್ಮ ವಚನದಲ್ಲಿ ಉಲ್ಲೇಖಿಸಿದ್ದು ಇದೆ) ಹೇಳ್ತಾರ, 'ಅಂದೇಕೆ ಬಾರರು? ನೀರಿಂಗೆ ನೇಣಿಂಗೆ ಹೊರಗಾದಂದು? ಸಮಯಾಚಾರಕ್ಕೆ ಒಳಗಾದಂದು.' ನೇಣು ಅಂದ್ರೆ ನಿಜವಾದ ಜನಿವಾರ, ನೀರಿಗೂ ನೇಣಿಗೂ ಹಂಗು ಹರಿದು ಅಂದ್ರೆ ಜನಿವಾರ ಹರಕೊಂಡು ಹೊರಗ ಬಂದೆ. ಅವತ್ತೆಲ್ಲಿದ್ರು ಇವರು, ನನ್ನಬೆನ್ನ ತಟ್ಟಲಾಕ ಯಾರೂ ಬರಲಿಲ್ಲ, ಅಂದೇಕೆ ಬಾರರು ನೀರಿಂಗೆ ನೇಣಿಂಗೆ ಹೊರಗಾದಂದು? ಸಮಯಾಚಾರಕ್ಕೆ ಒಳಗಾದಂದು. ಯಾವದದು ಸಮಯಾಚಾರ, ಯಾವ ಸಮಯಾಚಾರದ ಒಳಗೆ ಹೋದರು ಈ ಬಸವಣ್ಣನವರು? ಇದನ್ನು ನಾವು ಸ್ಪಷ್ಟಪಡಿಸಿಕೊಳ್ಳಬೇಕು, ಇದು ಭಾಳ ವರ್ಷಗಳಿಂದ ನಮ್ಮ ತಲಿ ತಿಂತಾ ಇದೆ. ಸಮಯಾಚಾರ ಅಂದ್ರ ಅಲ್ಲ ಅದು, ವೀರಶೈವಕ್ಕೆ ಬಂದ್ರು ಅವರು ಅಂತ ಅಲ್ಲ, ಯಾಕಂದ್ರ ಅವರು ಹೊರಬಂದಿದ್ದೇ ಆ ಶೈವದಿಂದ. ಶೈವದಿಂದ ಹೊರಬಂದು ಮತ್ತ ವೀರಶೈವದೊಳಗ ಹೋದರಂದರ ಒಂದು ಜಡಸಂಸ್ಕೃತಿಯಿಂದ ಮತ್ತೊಂದು ಜಡಸಂಸ್ಕೃತಿಗೆ ಹೋದಂತೆ ಅರ್ಥ ಆಗ್ತದ. ನನ್ನ ದೃಷ್ಟಿಯೊಳಗ ಇದು ನೀಡುವ ಅರ್ಥ ಬಸವಣ್ಣ ನಾಥ ಪಂಥಕ್ಕೆ ಬಂದರು ಅಂತ ಅನ್ಸತದ. ಜನಿವಾರ ಹರಿದುಕೊಂಡು ನಾಥ ಪಂಥಕ್ಕೆ ಬಂದರು ಅನಸತಾ ಇದೆ.

ನಾಥ ಪಂಥದೊಳಗ ಹೆಣ್ಣು ಗಂಡು ಭೇದ ಇಲ್ಲ. ಜಾತಿ ಭೇದ ಇಲ್ಲ. ಆದುದರಿಂದ ಒಂದು ಸ್ಥಳೀಯವಾದಂತ ಪಂಥ ಇತ್ತಲ್ಲ ನಾಥ ಪಂಥ. ಆ ನಾಥ ಪಂಥಕ್ಕೆ ಬಸವಣ್ಣ ಬಂದರು, ಆದರ ಕೆಲ ದಿವಸದ ತರುವಾಯ ಅವರಿಗನ್ನಿಸ್ತು, ಇದು ತುಂಬಾ ಶಿಥಿಲ ಅದ, ಇದು ಪೂರ್ಣ ಧರ್ಮ ಆಗುದಿಲ್ಲ ಅಂತ ತಿಳಕೊಂಡು, ಅವರು ಅಲ್ಲಿಯ ಉತ್ತಮ ಅಂಶಗಳನ್ನ ತಗೊಂಡು ತನ್ನದೇ ಆದಂಥ ಒಂದು ಲಿಂಗಾಯತ ಧರ್ಮವನ್ನ ಅವರು ಕಟ್ಟಿದರು, ಅನ್ನುವಂಥದು ಇತ್ತೀಚೆಗೆ ನನಗೆ ಅನಿಸಿದಂತ ವಿಚಾರ. ಇದರ ಬಗ್ಗೆ ವಿದ್ವಾಂಸರು ಇನ್ನಷ್ಟು ಚರ್ಚೆ ಮಾಡಬೇಕು. ಅಂದ್ರೇ ಬಸವಣ್ಣ ಮೇಲಿನಿಂದ ವೈದಿಕರಿಂದ ಅಥವಾ ಶೈವರಿಂದ ತೆಗೆದುಕೊಂಡರು ಅಂತ ನನ್ನ ಅಭಿಪ್ರಾಯ ಇತ್ತು ಇಲ್ಲಿವರೆಗೂ. ಬಸವಣ್ಣ ಕೆಳಗಿನಿಂದ ತೆಗೆದುಕೊಂಡರು, ಅದಕ್ಕಾಗಿ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಜೇಡರ ದಾಸಿಮಯ್ಯ ಇವರೆಲ್ಲರೂ ಕೆಳವರ್ಗದವರು. ಇವರೆಲ್ಲ ಮೊದಲ ನಾಥ ಪಂಥದ ಅನುಯಾಯಿಗಳಿದ್ರಂತ ಕಾಣ್ಸತದ. ಜೇಡರ ದಾಸಿಮಯ್ಯನವರ ಮುದ್ರಿಕೆ ರಾಮನಾಥಾ ಅದ ನೋಡ್ರೀ, ಕೂಡಲಸಂಗಮದಲ್ಲಿರುವ ದೇವರ ಅದಲ್ಲ, ಅದು ಕೂಡಲಸಂಗಮನಾಥಾ, ಕೂಡಲಸಂಗಮ ಅದ ಅಲ್ಲ ಅದು ನಾಥ ಪಂಥದ ಮೂಲ ಆಗಿತ್ತು.

ಈಗ ಅದನ್ನು ಯಾರರ ಕಸಕೊಂಡಿರಬೇಕು, ಯಾರದಾರ ಕೈಯಾಗ ಬಂದಿರಬೇಕು, ಆ ಮಾತ ಬ್ಯಾರೆ. ಬಸವಣ್ಣ ಬಾಗೇವಾಡಿಯಿಂದ ಕೂಡಲ ಸಂಗಮಕ್ಕೆ ಯಾಕೆ ಹೋದ್ರು? ಯ್ಯಾಕಂದ್ರ ಅದು ಒಂದು ಬಹಳ ದೊಡ್ಡ ನಾಥದ ಕೇಂದ್ರವಾಗಿತ್ತು. ಅಲ್ಲಿ ಹೋದರು. ಹೋಗಿ ಅದನ್ನೆಲ್ಲ ತಿಳಕೊಂಡು, ಆನಂತರ ಇದು ಶಿಥಿಲ ಅಂತ ಪರಿಗಣಿಸಿದರು.

ಪ್ರಶ್ನೆ : ಏ ಇಲ್ಲ ಅಲ್ಲಿ ಯ್ಯಾವನೋ ಒಬ್ಬ ಗುರು ಇದ್ದ ಬಸವಣ್ಣನವರಿಗೆ ದೀಕ್ಷಾ ಕೊಟ್ಟ ಅಂತಾರಲ್ಲ ಸರ್?

ಉತ್ತರ : ಇದು ಸುಳ್ಳು ವದಂತಿ. ಬಸವಣ್ಣನವರಿಗೆ ಯಾವ ಗುರುವೂ ಇದ್ದಿರಲಿಲ್ಲ. ಬುದ್ಧ ದೇವಗೆ ಗುರು ಇರಲಿಲ್ಲ. ಅವರಿಗೆ ಅವರೇ ಗುರು. ಅವರಿಗೇ ಸಾಕ್ಷಾತ್ಕಾರ ಆಯ್ತು. ಇದು ನನ್ನ ತಲ್ಯಾಗಾ ಭಾಳ ವರ್ಷದಿಂದ ಇತ್ತು. ಆದ್ರ ನನಗ ಯ್ಯಾವಾಗ ಖಾತ್ರಿ ಆಯ್ತಂದ್ರ ಕೆಲ ವರ್ಷಗಳ ಹಿಂದ ನಾನು ಮೈಸೂರು ಪ್ರದೇಶದೊಳಗಿರುವಂತ ಬೊಪ್ಪಗೊಂಡನ ಹಳ್ಳಿಗೆ ಹೋಗಿದ್ದೆ. ಬೊಪ್ಪಗೊಂಡನ ಹಳ್ಳಿಯಲ್ಲಿ ಮಂಟೆಸ್ವಾಮಿ ಪರಂಪರೆ ಅದ ಅಲ್ಲಿ. ಮಂಟೆಸ್ವಾಮಿಯ ಅನುಯಾಯಿಗಳೆಲ್ಲ ದಲಿತರು, ನಾ ಹೋಗಿ ಭಕ್ತರನ್ನೆಲ್ಲ ಕರಸಿದೆ. ಬರೇ ದಲಿತರೇ ಬಂದರಲ್ಲಿ. ನಾವೇ ಮಂಟೆಸ್ವಾಮಿ ಭಕ್ತರರಿ ಅಂತ ಹೇಳಿದ್ರು. ಆಗ ನಾನು ಹೇಳ್ದೆ, 'ನಿಮಗ ಯಾವರ ಹಾಡು ಬರ್‍ತಾವೆನ ಹೇಳ್ರಿ ಅಂತಂದೆ' ಅವರು ಸುಮಾರು ಎರಡು ತಾಸು ಹಾಡಿದ್ರೂ ಬರೆ ಬಸವಣ್ಣ, ನೀಲಮ್ಮ, ಬಸವಣ್ಣ ನೀಲಮ್ಮನೇ ಹಾಡಿದ್ರವರು. ನಾ ಅಂದೆ 'ಎಲ್ಲಿ ಕಲ್ಯಾಣ? ಎಲ್ಲಿ ಚಾಮರಾಜನಗರ ಜಿಲ್ಲೆ ಅದು. ನೀವು ದಲಿತರು, ಇದೇನಿದು? ಯಾಕ ಇದು ಅಂದೆ' ಅವರಂದ್ರು 'ನಾವು ಮೊದಲಿಂದಲೂ ಇದೇ ಹಾಡ್ತಾ ಇದೆವು ಬಸವಣ್ಣ ನೀಲಮ್ಮ ಅಂತೆ.' ಆಮೇಲೆ ಅವರು ಹಾಡ್ತಾ ಹಾಡ್ತಾ ಏನು ಪ್ರಯೋಗ ಮಾಡಿದ್ರು ಅಂದ್ರೆ "ಬಸವಣ್ಣ ನೀನು ಗುರು ಇಲ್ಲದ ಗುಡ್ಡ" ಅಂದ್ರು. ಮೈಮ್ಯಾಲ ಬೆಳಕ ಬಿದ್ದಂತೆ ಆಯ್ತು ನನಗ.

ಬಸವಣ್ಣನವರಿಗೆ ಗುರು ಇಲ್ಲ. ನಾ ಅವರಿಗೆ ಕೇಳ್ದೆ. 'ಅದ್ಹ್ಯಾಂಗ ಗುರು ಇಲ್ಲಂತೀರಿ ಅಂತ?' ಗುಡ್ಡ ಅಂದ್ರ ಶಿಷ್ಯ, ಬಸವಣ್ಣ ನೀನು ಗುರು ಇಲ್ಲದ ಶಿಷ್ಯ ಅಂತ. 'ಬಸವಣ್ಣಗೆ ಜಾತವೇದಿ ಅಂತ ಗುರು ಇದ್ದ ಅಂತ' (ಸುಮ್ನೆ ಪ್ರಚೋದನೆ ಮಾಡಬೇಕು ಅಂತ ಪ್ರಶ್ನೆ ಮಾಡಿದೆ) 'ಯಾರ ಹೇಳತಾರರೀ. . . ಬಸವಣ್ಣಪ್ಪಗ ಯಾವ ಗುರು ಇಲ್ಲ. ಬಸವಣ್ಣಪ್ಪಗ ಬಸವಣ್ಣನೇ ಗುರು.' ಇವೆನದವಲ್ಲಾ ಕೆಲವು ಜನ್ರು ತಮ್ಮ ಪ್ರಸಿದ್ಧಿಯನ್ನ ಪಡಕೊಳ್ಳಲಿಕ್ಕ ತಮ್ಮ ಮತದ ಪ್ರಸಿದ್ಧಿ ಪಡಕೊಳ್ಳಲಿಕ್ಕ, ತಮ್ಮ ಮತದ ಒಬ್ಬ ಆಚಾರ್ಯರೆ ಅವರ ಗುರು, ಬಸವಣ್ಣ ನಮ್ಮ ಸಂಪ್ರದಾಯದಂವ ಅಂತ ಒಬ್ಬ ಬರಕೊಂಡ. ಮತ್ತೊಬ್ಬ ಏ ಅವರ ಗುರು ನಮ್ಮ ಸಂಪ್ರದಾಯದವನು, ಅಂತ ಬರಕೊಂಡ್ರ. ಇವೆಲ್ಲ ಸುಳ್ಳು.' ಅಂದ್ರು. ಆಮ್ಯಾಲ ಕೂಡಲಸಂಗಮದೊಳಗ ಜಾತವೇದಿಯ ಒಂದು ಗುಡಿ ತೋರಿಸ್ತಾರ. ನಾನು ಜಾಮದಾರ ಇದ್ದಾಗ, ಅಲ್ಲಿಗೆ ಹೋಗಿದ್ದೆ, ಜಾಮದಾರರಿಗೆ ಕೇಳಿದ್ದೆ, 'ಇಲ್ಲಿ ಜಾತವೇದಿ ಗುಡಿ ಎಲ್ಲದ ಅಂತಂದೆ.' ಏ ಇದೇ ತೋರಿಸ್ತಾರ ನೋಡ್ರಿ' ಅಂತಂದ್ರು. ಅಲ್ಲೆಲ್ಲ ನೋಡ್ದೆ, ಇದು ಜಾತವೇದಿ ಗುಡಿ ಅಲ್ಲ ಅಂತ ಅನ್ಸತದ, ಅಂದೆ. ಆಮೇಲೆ ನಾನು ಅವ್ರಿಗೆ 'ಈ ಊರಾಗ ಹಳಬರ ಅದಾರೇನು?' ಚರಿತ್ರೆ ಯಾರರ ಹೇಳ್ತಾರೇನು? (ಜನಸಾಮಾನ್ಯರಿಗೆ ಯಾವುದೂ ಆಶಾ ಇರುದಿಲ್ಲ ಅವರಿಗೆ ಅವರು ಸತ್ಯ ಹೇಳತಾರ, ನಾವೆ ದುಷ್ಟರು ಕಲತವ್ರು, ನಮ್ಮ ಸ್ವಾರ್ಥಕ್ಕಾಗೆ ಏನೇನೋ ಬರಕೋತಿವಿ) ಅವ್ರಿಗೆ ಕರಸರಿ' ಅಂದೆ. ಯಾರೋ ಒಬ್ಬ ಬಸಯ್ಯಾ ಸ್ವಾಮಿ ಅಂತ ಹಳಬ ಇದ್ದ. ನಾ ಹೇಳ್ದೆ 'ಸ್ವಾಮೀ ನೀ ಸತ್ಯ ಹೇಳಬೇಕ' ಅಂದೆ. 'ಇದು ಗುಡಿ ಯಾವುದು' ಅಂತ ಕೇಳ್ದೆ. 'ನೋಡ್ರಿ ಇಲ್ಲೆ ನಮ್ಮ ಅಂಗಡಿ ಇತ್ತು. ಅಂಗಡಿ ಅರ್ಧ ಭಾಗ ನಮ್ಮ ಮನಿ ಇತ್ತು. ನಾ ಇಲ್ಲೇ ಹುಟ್ಟೇನಿ. ಈ ಗುಡಿ ಮಗ್ಗುಲಿಗೆ ಹುಟ್ಟಿ ಬೆಳದೀನಿ ಅಂತ ಹೇಳ್ತಿದ್ರು. ಇದಕ ಮೊದಲು ಯಾರೂ ಜಾತವೇದಿ ಮುನಿ ಗುಡಿ ಅಂತ ಕರಿತಿದ್ದಿಲ್ಲ.' 'ಏನ ಕರೀತಿದ್ರು.' 'ಇದಕ್ಕ ರಾಚೇಶ್ವರಾ ಅಂತ ಕರೀತಿದ್ರು; ರಾಚೇಶ್ವರ ಗುಡಿ ಅಂತ ಇದಕ್ಕ ಕರೀತಿದ್ದರು' ಅಂತ ಹೇಳಿದ, ನಾನು ನೋಡಿದಾಗ ಒಂದು ಶಾಸನ ಇತ್ತು. ಶಾಸನದೊಳಗ ಸ್ಪಷ್ಟವಾಗಿ ಅದನ್ನ ಆಚೇಶ್ವರ ಗುಡಿ ಅಂತ ಅದ, ಆಚೇಶ್ವರ, ಆಚುಗಿ, ದಂಡನಾಥ. ಯಲಬುರ್ಗಿ ಸಿಂಧರೊಳಗ ಆಚುಗಿ ಅಂತ ಬರ್‍ತಾವ, ಒಬ್ಬ ಮಾಂಡಲೀಕ, ಅದು ಆತ ಕಟ್ಟಿಸಿದ ಗುಡಿ

ಅದು, ಆಚೇಶ್ವರ ಗುಡಿ ಅದು. ಜನರಿಗಿ ಇದು ಆಚೇಶ್ವರ ಅಂದ್ರ ಅರ್ಥ ಆಗಲಿಲ್ಲ. ಮುಂದ ಅವರು ರಾಚೇಶ್ವರ ರಾಚೇಶ್ವರ ಅಂತ ಕರೀತಾ ಬಂದಾರ, ಅಂದ. ನಾನು ಬಸವಯ್ಯ ಸ್ವಾಮಿಗೆ ಕೇಳಿದೆ 'ಎಂದಿನಿಂದ ಇದನ್ನ ಜಾತವೇದಿ ಮುನಿಗುಡಿ ಅಂತ ಕರಿಲಿಕ್ಕ ಸುರು ಮಾಡಿದರು' ಅಂತ. '೧೯೬೮ ರಲ್ಲಿ ಜತ್ತಿ ಸಾಹೇಬರು ಶತಮಾನೋತ್ಸವ ಮಾಡಿದರಲ್ಲ ಆವಾಗ ಇಲ್ಲೊಂದು ಸಭೆ ಕೂಡಿಸಿದ್ದೆವು ನಾವು. ಜ.ಚ.ನಿ ಯವರು ಬಂದರು. ಭಾಷಣ ಮಾಡ್ತಾ ಮಾಡ್ತಾ 'ಈ ಗುಡಿ (ಆ ಗುಡ್ಯಾಗಿನ ಲಿಂಗ ಅದನ್ನೆಲ್ಲ ಕಿತ್ತಕೊಂಡು ಹೋಗಿಬಿಟಿದ್ರು ಎಲ್ಲಾ) ಅದ್ಯಾರದು?' ಅಂತ ಕೇಳಿದ್ರು. ಎಲ್ಲರೂ ನಮ್ಮದಲ್ಲ, ನಮ್ಮದೂ ಅಲ್ಲ ಅಂತ ಹೇಳಿದ್ರು ಯಾರದೂ, ಅಲ್ಲ ಅಂದರ, ಅದು ನಮ್ಮದು ಅಂತ ಜ.ಚ.ನಿಯವರು ಹೇಳಿಬಿಟ್ರಂತ ಇದು ಜಾತವೇದಿ ಮುನಿ ಗುಡಿ ಅಂತ. ಅವಾಗಿಂದ ಇದನ್ನ ಜಾತವೇದಿ ಮುನಿ ಗುಡಿ ಅಂತ ಕರಿತಾರರಿ. ಅದರಕ್ಕಿಂತ ಮುಂಚೆ ಯಾರು ಜಾತವೇದಿ ಮುನಿ ಗುಡಿ ಅಂತ ಕರೆದಿಲ್ಲ. ಅಂತ ಹೇಳಿದ ಸ್ವಾಮಿ. ಇವೆಲ್ಲ ಏನಾಗ್ತದ ಅಂದ್ರ ಇತಿಹಾಸದೊಳಗ, ಸುಳ್ಳುಗಳನ್ನೇ ಹತ್ತು ಸಲ ಹೇಳಿದ್ರ ಸತ್ಯ ಆಗುತ್ತಂತ. ಹಾಗೆ ಇಲ್ಲೆ ಜಾತವೇದಿ ಮುನಿಗಳಿದ್ರಂದ ಕೂಡಲೇ ಬಸವಣ್ಣನವರ ಗುರು ಇಲ್ಲೇ ಇದ್ರು, ಅಂತ ಒಂದಕ್ಕೊಂದು ಸುಳ್ಳಿನ ಮ್ಯಾಲ ಸುಳ್ಳು ಸೇರಿ ಅದು ಸತ್ಯದ ಹೆಸರಿನಲ್ಲಿ ಪ್ರಚಾರ ಪಡದಿದೆ. ಹೀಗಾಗಿ ಬಸವಣ್ಣನವರಿಗೆ ಗುರು ಇದ್ದಿದ್ದಿಲ್ಲ. ಬಸವಣ್ಣನವರೇ ಸ್ವತಂತ್ರ ಧರ್ಮ ಸಂಸ್ಥಾಪಕ ಅನ್ನೋದು ಸುಸ್ಪಷ್ಟ.

ಪ್ರಶ್ನೆ: ಲಿಂಗಾಯತ ಧರ್ಮ ಸಂಸ್ಥಾಪಕ ಬಸವಣ್ಣ ಎಂಬುದು ಲಿಂಗಾಯತಕ್ಕೆ ಮಾತ್ರ ಸೀಮಿತ ಆಗುವುದಿಲ್ಲವೇ? ಅದಕ್ಕಾಗಿ ಕೆಲವರು ಹೇಳುವಂತೆ ವಿಶ್ವಗುರು ಬಸವಣ್ಣ ಅನ್ನುವುದು ಯೋಗ್ಯವಲ್ಲವೇ?

ಉತ್ತರ: ಬಸವಣ್ಣನವರನ್ನ ವಿಶ್ವಗುರು, ಲೋಕಗುರು, ಮಹಾಗುರು ಅಂತ ಖಂಡಿತವಾಗಿಯೂ ಕರೆಯಬಹುದು. ಇವೆಲ್ಲವೂ ಅವರಿಗೆ ಅನ್ವಯವಾಗುವ ಸಮಾನಾರ್ಥಕ ನಾಮಗಳು.

ಪ್ರಶ್ನೆ: ಲಿಂಗಾಯತ ಒಂದು ವಿಶ್ವಧರ್ಮವಾಗಿರುವಾಗ ಲಿಂಗಾಯತ ಧರ್ಮಗುರು ಬಸವಣ್ಣ ಎಂದರೆ ಚ್ಯುತಿ ಏನು?

ಉತ್ತರ: ಧರ್ಮಕ್ಕೊಂದು ಹೆಸರು ಬೇಕಾಗ್ತದ ಅಲ್ಲ. ಅದಕ್ಕ ಲಿಂಗಾಯತ ಧರ್ಮ ಅಂತ ಕರದರ ಅದು ವಿಶ್ವ ಧರ್ಮನೇ ಆಗಿರ್ತದ, ಅದಕ್ಕಾಗಿ ಲಿಂಗಾಯತ ಧರ್ಮ, ಅಥವಾ ವಿಶ್ವ ಧರ್ಮ ಲಿಂಗಾಯತ ಅಂತಲೂ ಕರೆಯಬಹುದು. ಎರಡೂ ಒಂದೇ ಆಗುತ್ತವೆ. ಲಿಂಗಾಯತ ಎನ್ನುವುದು ಸೀಮಿತ ಆಗುವ ಪ್ರಶ್ನೆಯೇ ಇಲ್ಲ. ಹಾಗಿರುವಾಗ ಸೀಮಿತ ಅಂತ ಯಾಕ ಪರಿಗಣಿಸಬೇಕು. ಲಿಂಗಾಯತ ಧರ್ಮ ಗುರು ಬಸವಣ್ಣ, ಖಂಡಿತ ಸೀಮಿತ ಅಲ್ಲ. ನನ್ನ ದೃಷ್ಟಿಯೊಳಗ ಲಿಂಗಾಯತ ಅನ್ನುವುದು ಒಂದು ಪ್ರಜ್ಞೆ, ಈ ಪ್ರಜ್ಞೆಯನ್ನ ಒಪ್ಪಿಕೊಂಡವರು ಯಾರೇ ಇರಲಿ ಅವರು ಲಿಂಗಾಯತರೆ ಹೌದು. ಭಾರತಕ್ಕೆ ಒಬ್ಬ ವಿದೇಶಿಯ ಬಂದು ನಮ್ಮ ಸಂವಿಧಾನವನ್ನ ಒಪ್ಪಿಕೊಂಡರ ಅವನು ಭಾರತೀಯ ಹೌದಲ್ಲ? ಬೇಕಾದವರಾಗಿರಬಹುದು ಅವರು ಈ ಸಂವಿಧಾನ ಒಪ್ಪಿಕೊಂಡರ ಸಾಕು ಮುಗಿತು. ಹಾಗ ಲಿಂಗಾಯತ ಸಂವಿಧಾನ ಅದಲ್ಲ, ಬಸವ ಸಂವಿಧಾನ ಅದಲ್ಲ, ಈ ಸಂವಿಧಾನ ಯಾರು ಒಪ್ಪಿಕೊಳ್ಳತಾರೋ ಅವರೆಲ್ಲ ಲಿಂಗಾಯತ. ವಿಶ್ವದ ಯಾರೊಬ್ಬರೂ ಒಪ್ಪಿಕೊಳ್ಳತಕ್ಕಂತ ಸಂವಿಧಾನ ಇದು, ಬಹಳ ಸರಳವಾದ ಧರ್ಮ ಇದು ಲಿಂಗಾಯತ. ಈ ಪಂಚಾಚಾರ್ಯರು ಮತ್ತು ವೀರಶೈವ ಅನ್ನುವ ಹೆಸರು ಬಂದು ಅದನ್ನ ಜಟಿಲಮಾಡಿಬಿಟ್ಟಿದ್ದೇವೆ ನಾವು. ನಮ್ಮ ಸುತ್ತೂರು ಶ್ರೀಗಳು ಒಂದು ವೀರಶೈವ ಪರಿಭಾಷಾ ಕೋಶ ಮಾಡಿದ್ದಾರಂತ. ವೀರಶೈವ ಟೆಕ್ನಿಕಲ್ ಟರ್ಮ್ಸ್.

ಅದರ ಬಿಡುಗಡೆಗೆ ಬರ್ರಿ ಅಂತ ನನಗ ಕರೆದರು. ನಾ ಕೇಳ್ದೆ ಸ್ವಾಮೀಜಿಗೆ, ಸ್ವಾಮೀಜಿಯವರೇ ಎಷ್ಟು ಪರಿಭಾಷಾ ಶಬ್ದಗಳದಾವ? ಅಂತ. ೭೫೦೦ ಅವ ಅಂತ ಹೇಳಿದರು. ಗಾಬರಿಯಾದ ನಾನು, ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ೭೫೦೦ ಪರಿಭಾಷಾ ಪದಗಳನ್ನು ಇಟ್ಟುಕೊಂಡು ಬದುಕು ಮಾಡಿದರೇನು? ಶಿವ ಶಿವಾ ಅಂತ ಕಾಯಕ ಮಾಡಿ, ದಾಸೋಹ ಮಾಡಿ ನೆಲದ ಮ್ಯಾಲ ಮಲಕೊಂಡಿರುವ ಸರಳ ಜೀವಿಗಳವರು. ೭೫೦೦ ಶಬ್ದಗಳನ್ನ ತಲಿಮ್ಯಾಲ ಹೊತ್ತುಕೊಂಡು ಹ್ಯಾಂಗ ಬದುಕು ಮಾಡಿದರು? ನಾ ಅಂದೆ ನಾ ಬರುದಿಲ್ಲರೀ ಅಂದೆ. ಬಹಳ ಸರಳ ಅದ. ನನಗ ಕೇಳಿದರ ಲಿಂಗಾಯತ ಪರಿಭಾಷೆ ಪದಗಳು ಬರೀ ಐದೇ. ಗುರು, ಲಿಂಗ, ಜಂಗಮ, ಕಾಯಕ, ದಾಸೋಹ ಮುಗಿತು. ನೀವೇನರ ೧೨ ದೀಕ್ಷೆಗಳು, ೩೬ ತತ್ವಗಳು, ೧೦೧ ಸ್ಥಲಗಳು ಅಂದ್ರ ಎಲ್ಲ ಸುಳ್ಳು ಅವು. ಯಾವುವೂ ಬೇಕಾಗಿಲ್ಲ. ಗುರು, ಲಿಂಗ, ಜಂಗಮ, ಕಾಯಕ, ದಾಸೋಹ ಇವು ೫ ತತ್ವಗಳು ಸರಿಯಾಗಿ ತಿಳಕೊಂಡರ ಸಾಕು. ಯಾಕಂದರ ಯಾವುದು ದೊಡ್ಡದಿರ್ತದ ಅದು ಬಹಳ ಸರಳ ಇರ್ತದ. ದೊಡ್ಡ ಮನುಷ್ಯರಾದವರು ಸರಳ ಇರ್ತಾರ, ನಮ್ಮಂತವರೋ ಬಹಳ ಜಟಿಲ ಇರ್ತೇವೆ. ಗಾಂಧಿ ಬಹಳ ಸರಳ ಇದ್ದ ಹೌದಿಲ್ಲೋ? ಸರಳಿದ್ದನಿಲ್ಲೋ, ನೋಡಲಿಕ್ಕೆ ಸರಳ ಇದ್ದ, ಆದರೊಳಗ ಬಹಳ ಸಂಕೀರ್ಣ ಇದ್ದ. ಸರಳ ಬೇರೆ, ಸಂಕೀರ್ಣ ಬೇರೆ, ಹಾಂಗ ನಮ್ಮ ಧರ್ಮ ಸರಳ ಅದ, ಆಚರಿಸಲಿಕ್ಕ ಬಹಳಸಂಕೀರ್ಣ ಅದ. ಆದ್ದರಿಂದ ಈ ಐದು ತಿಳಕೊಳ್ಳರೀ ಸಾಕು. ಬಹುಶಃ ಈ ಐದು ತತ್ವಗಳ ಬಗ್ಗೆ ಒಂದೊಂದು ಲೇಖನ ಬರೆದು ಒಂದು ಪುಸ್ತಕ ಬರೆದರ ಅದೇ ನಮ್ಮ ಧರ್ಮ ಗ್ರಂಥ ಆಗ್ತದ.

ಪ್ರಶ್ನೆ: ಈ ಗುರು, ಲಿಂಗ, ಜಂಗಮ, ಕಾಯಕ, ದಾಸೋಹಗಳ ಬಗ್ಗೆ ವಿವರವಾದ ಲೇಖನ ಬರದರ ಅದೇ ಗ್ರಂಥ ಆಗ್ತದ ಅಂತ ತಾವು ಹೇಳುತ್ತಿರುವಿರಿ. ನೀವು ಕಾಯಕದ ವ್ಯಾಖ್ಯಾನಬರೆದಾಗ ಬೇರೆ ಆಗ್ತದೆ, ನಾನು ಬರೆದಾಗ ನನ್ನ ವ್ಯಾಖ್ಯಾನ ಬೇರೆ ಆಗ್ತದೆ. ಜತ್ತಿಯವರ ಬರೆದಾಗ ಅವ್ರ ವ್ಯಾಖ್ಯಾನ ಬೇರೆ ಆಗ್ತದ. ಅದಕ್ಕಾಗಿ ಇದೊಂದು ಸರ್ವಮಾನ್ಯ ಧರ್ಮ ಗ್ರಂಥ ಆಗಲಿಕ್ಕೆ ಸಾಧ್ಯ ಆಗಬಹುದೇ?

ಉತ್ತರ: ಈಗಾಗಲೇ ನಾ ಹೇಳಿದ್ದೆ, ನಾವೇನೇ ಬರೆದರೂ ಒಂದಿಷ್ಟು ಖಾಲಿ ಪುಟ ಇಡಬೇಕು ಅಂತ. ವಚನ ಸಾಹಿತ್ಯವೇ ನಮ್ಮ ಧರ್ಮದ ಜೀವಾಳವಾಗಿರುವಾಗ ಗುರು ತತ್ವದ ವಚನಗಳು, ಲಿಂಗ ತತ್ವದ ವಚನಗಳು, ಜಂಗಮ ತತ್ವದ ವಚನಗಳು, ಕಾಯಕ ತತ್ವದ ವಚನಗಳು, ಹಾಗೂ ದಾಸೋಹ ತತ್ವದ ವಚನಗಳನ್ನ ಆಧಾರವಾಗಿ ಇಟ್ಟುಕೊಂಡು ಬರೆದಾಗ ಅದು ಸರ್ವಮಾನ್ಯ ಆಗೇ ಆಗ್ತದೆ.

ಪ್ರಶ್ನೆ: ವೀರಶೈವ ಪದವನ್ನು ಲಿಂಗಾಯತ ಸಮಾಜದಿಂದ ಶಾಶ್ವತವಾಗಿ ಹೊಡೆದೋಡಿಸಲು ಸಾಧ್ಯವೇ?

ಉತ್ತರ: ಖಂಡಿತವಾಗಿ ಸಾಧ್ಯ, ನಾವು ಅದನ್ನು ಬಿಟ್ಟು ಬಿಟ್ಟರೆ ಅದು ತಾನಾಗಿಯೇ ಹೊರಟು ಹೋಗ್ತದ.

ವೀರೇಂದ್ರ ಸಿಂಪಿ: ಉತ್ತರ ಕರ್ನಾಟಕದಲ್ಲಿ ಲಿಂಗಾಯತ ಅದ, ದಕ್ಷಿಣ ಕರ್ನಾಟಕ ಭಾಗದಲ್ಲಿ ವೀರಶೈವ ಅದ. ದಕ್ಷಿಣ ಕರ್ನಾಟಕದಿಂದಲೇ ಬಂದಿದ್ದು ಈ (ವೀರಶೈವ) ಪೀಡೆ.

ಎಂ.ಎಂ. ಕಲಬುರ್ಗಿ : ಈ ಆರಾಧ್ಯರೇನದಾರಲ್ಲ, ಉತ್ತರ ಕರ್ನಾಟಕದಾಗ ಆರಾಧ್ಯರಿರಲಿಲ್ಲ, ಪಾಲ್ಕುರಿಕೆ ಸೋಮನಾಥ ಅವರು ಪಾಲ್ಕುರಿಕೆ ಒಂದು ಹಳ್ಳಿ- ವಾರಂಗಲ್ ಕಡೆಯ ಒಂದು ಹಳ್ಳಿಯವರು, ಅವರು ಬಹಳ ದೊಡ್ಡ ಕವಿನೂ ಹೌದು, ತಾತ್ವಿಕವಾಗಿಯೂ ಬಹುದೊಡ್ಡ ಮೇಧಾವಿ ಆತ. ಆವಾಗ ಏನಾಯಿತು, ಮುಸಲ್ಮಾನರ ದಾಳಿ, ವಾರಂಗಲ್ ಕಾಕತೀಯರ ಮೇಲೆ ಸುರು ಆಯ್ತು. ಮುಸಲ್ಮಾನರು ಬರುದರಿಂದ ನನಗ ಆಚರಣೆಗೆ ಧಕ್ಕೆ ಆಗ್ತದಂತ ತಿಳಕೊಂಡು ತನ್ನ ಪರಿವಾರ ಎಲ್ಲ ಕಟ್ಟಿಕೊಂಡು ಪಾಲ್ಕುರಿಕೆ ಸೋಮನಾಥ ಎಲ್ಲಿ ಬಂದ ಅಂತಂದ್ರ, ಕಲ್ಲೆ ಎನ್ನುವಂಥ ಒಂದು ಊರು ಅದು, ಬಹುಶಃ ಮೈಸೂರು ಜಿಲ್ಲೆ ಮಾಗಡಿ ಸಮೀಪ ಇರಬಹುದು. ಆ ಊರಿಗೆ ಬರ್ತಾರ. ಆ ಊರೊಳಗ ಸರ್ವಶೀಲೆ ಚೆನ್ನಮ್ಮ ಅಂತ ಒಬ್ಬಾಕಿ ಇರ್ತಾಳ. ಅಲ್ಲಿ ಬಂದು ಒಂದು ತಿಂಗಳ ಇರುವಾಗ ಅಲ್ಲೇ ಲಿಂಗೈಕ್ಯರಾಗಿ ಬಿಡ್ತಾರ.

ಅವರ ಸಂಗಡ ಏನ ಬಂದಿದ್ದರಲ್ಲ ಶಿಷ್ಯರು (ಆರಾಧ್ಯರು) ಪಾಲ್ಕುರಿಕೆ ಸೋಮೇಶ್ವರ ಏನು ತಂದಿದ್ದರಲ್ಲ ಆಂಧ್ರಪ್ರದೇಶದಿಂದ ತಂದಿದ್ದರಲ್ಲ ಆರಾಧ್ಯ ಸಿದ್ಧಾಂತ ಅದೇ ಬೆಳಕೋತ ಹೋಯಿತು. ಅದು ಬೆಳೆದು ದೊಡ್ಡದಾಗಿ ದೊಡ್ಡದಾಗಿ ಮುಂದ ೧೯-೨೦ ನೆಯ ಶತಮಾನದಲ್ಲಿ ಲಿಂಗಪೂಜಾವಿಧಾನ ಮುಂತಾದೆಲ್ಲ ಬರದು ಬರದು ಉತ್ತರಕರ್ನಾಟಕದಲ್ಲೆಲ್ಲ ಪುಸ್ತಕಗಳು ಬರಲಾಕ ಹತ್ತಿದವು.

ನಮಗ ನಮ್ಮಲ್ಲಿರುವ ಮೈಸೂರಿಗರ ಸುಳ್ಳಿನ ನಂಬಿಕೆಯೇ ಪ್ರಬಲ. ಮೈಸೂರಿನ ಹುಚ್ಚು ನಮ್ಮಿಂದ ಇವತ್ತಿಗೂ ಹೋಗಿಲ್ಲ. ಅದಕ್ಕ ಅವರೇನು ಆ ವೀರಶೈವ ಅಂತ ಸುರು ಮಾಡಿದರಲ್ಲ. ಅದು ಹಾಗು ನಮ್ಮ ಅಪ್ಪಟ ಲಿಂಗಾಯತವು ಅದನ್ನೆ ನಂಬಿ ಎಲ್ಲಾ ಗೊಂದಲ ಆಗಿ ಹೋಯ್ತು. ಹಳಕಟ್ಟಿಯವರು ಮೊದಲು ನಂಬಿದ್ದಿಲ್ಲ, ಅವರ ಮೊದಲ ಪುಸ್ತಕ ವಚನಶಾಸ್ತ್ರಸಾರದ ಮೊದಲ ೩೦ ಪುಟಗಳ ಮುನ್ನುಡಿಯೊಳಗ ಎಲ್ಲಿಯೂ ವೀರಶೈವ ಪದ ಬಳಸಿಲ್ಲ ಅವರು, ಲಿಂಗಾಯತ ಧರ್ಮ, ಲಿಂಗಾಯತ ಸಮಾಜ, ಲಿಂಗಾಯತ ಸಿದ್ಧಾಂತ, ಲಿಂಗಾಯತ ಅಂತ ೩೦ ಸಲ ಬಳಸ್ಯಾರ. ವೀರಶೈವ ಪದನೇ ಬಳಸಿಲ್ಲ ಅವರು. ಮುಂದ ಅದೇ ಹಳಕಟ್ಟಿಯವರು ವೀರಶೈವ ಶುರು ಮಾಡಿ ಬಿಟ್ಟರು, ವೀರಶೈವ-ಲಿಂಗಾಯತ ಬಳಸಕೊಂತ ಹೋಗಿಬಿಟ್ರು. ಮುಂದ ನಾವೂ ಶಾಲೆ ಕಾಲೇಜುಗಳಲ್ಲಿ ಕಲಿಸುವಾಗ ವೀರಶೈವ ಅನ್ನುವುದನ್ನ ಬಳಸ್ತಾ ಬಂದೆವು.

ನಿಜವಾಗಿಯೂ ಇದನ ಹಾಳು ಮಾಡಿದವರು ಯ್ಯಾರಂತಂದ್ರ, ಮಠಗಳಲ್ಲಿರುವ ಶಾಸ್ತ್ರಿಗಳು, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿರುವ ಪ್ರೊಫೆಸರ್ಸ ನಾವೆ ಕೆಡಿಸಿದೆವು. ಮಠದಲ್ಲಿರುವ ಶಾಸ್ತ್ರೀ ಅವ ಏನು ಕಾಶಿಗೆ ಹೋಗಿ ಕಲ್ತು ಬರ್ತಿದ್ನಲ್ಲ, ಬಂದ ಕೂಡಲೇ ಏನ ಮಾಡತಿದ್ದ, ಮಠದ ಸ್ವಾಮಿ ಆಗಲಿಕ್ಕ ಪ್ರಯತ್ನ ಮಾಡ್ತಿದ್ದ, ಸ್ವಾಮಿ ಪಟ್ಟ ಸಿಗಲಿಲ್ಲಂತಂದ್ರ ಒಂದು ಪಾಠಶಾಲಾ ತಕ್ಕೊಂಡು ಕೂಡತಿದ್ದ. ಖಾಲಿ ಇದ್ದ ಬಡಗ್ಯಾ ಏನೇನೋ ಮಾಡಿದ್ನಂತಲ್ಲ ಹಾಗ. ಪಾಠಶಾಲಾದಾಗ ಕುಂತು ಏನೇನೋ ಎಲ್ಲಾ ಬರಕ್ಕೊಂಡಬಿಟ್ಟವು ಎಲ್ಲಾ. ಪುಸ್ತಕದೊಳಗ ಬಂದದ ಅಂದ ಕೂಡಲೇ ನಾವು ಸತ್ಯ ಅಂತ ತಿಳಕೊಂಡು ನಮ್ಮ ತರಗತಿಗಳಲ್ಲಿ ಕಲಿಸಿಬಿಟ್ಟೆವು. ಹಿಂಗಾಗಿ ನಿಜವಾಗಿಯೂ ನಮ್ಮ ಧರ್ಮಕ್ಕೆ ಏನಾದರೂ ಭಂಗ ಬಂದಿದ್ದರ ಶಾಸ್ತ್ರಿಗಳು ಮತ್ತು ಮಾಸ್ತರರಿಂದ. ಈಗ ಜನರ ಎಚ್ಚರಾಗ್ಯಾರ, ನಾವೂ ಈಗ ಎಚ್ಚರಾಗೀವಿ. ನಮ್ಮಿಂದ ತಪ್ಪಾಗೆದ ಅಂತ ಈಗ ಗೊತ್ತಾಗ್ಯದ.

ಪ್ರಶ್ನೆ: ವೀರಶೈವ ಪದ ಬಳಸುವ ಸಭೆ, ಸಾಹಿತ್ಯವನ್ನ ಧಿಕ್ಕರಿಸುವ (ಅವರೆಷ್ಟೇ ಪ್ರಭಾವಿಗಳಾಗಿರಲಿ) ನಿರ್ಣಯವನ್ನ ಈ ವೇದಿಕೆ ಕೈಗೊಳ್ಳಬೇಕು.

ಉತ್ತರ: ಖಂಡಿತವಾಗಿಯೂ ಇದೇ ವೇದಿಕೆಯ ಮೇಲೆ ಇಷ್ಟಲಿಂಗ ಪೂಜಾ ವಿಧಾನ ಅನ್ನುವ ತೆಲುಗು ಪುಸ್ತಕವನ್ನ ಹಂಚಿದರು ಯಾರೋ. ಅದರಲ್ಲಿ ವೀರಶೈವ ಧರ್ಮ ಅಂತ ಬಳಸಿದ್ದಾರೆ. ಅದನ್ನು ಆಗಲೇ ತಿರಸ್ಕರಿಸಿದ್ದೇನೆ. ನಮ್ಮದಲ್ಲದ್ದನ್ನ ನಿರಾಕರಿಸಬೇಕು. ಯಾರು ಆ ಮಾತುಗಳನ್ನು ಆಡ್ತಾರ ಅವುಗಳನ್ನ ನಾವು ಧಿಕ್ಕರಿಸಬೇಕು. ಅಂದರ ಮಾತ್ರ ಈ ಮುಂಚೆ ನಾನು ಲಿಂಗಾಯತದ ಶುದ್ಧೀಕರಣ ಅಂತ ಹೇಳಿದ್ನಲ್ಲ ಚಾಲನೆ ಕೊಟ್ಟಂತೆ ಆಗ್ತದೆ.

ಪ್ರಶ್ನೆ: ಶರಣರೆಲ್ಲ ಇಚ್ಛಾಮರಣಿಗಳಾಗಿದ್ದರಲ್ಲವೇ? ಬಸವಣ್ಣನವರು ಇಚ್ಛಾಮರಣಿಯಾಗಿದ್ದು ಬಸವ ಯೋಗದೊಂದಿಗೆ ತಮ್ಮ ದೇಹದಿಂದ ಪ್ರಾಣವನ್ನ ತ್ಯಾಗ ಮಾಡಿದರಲ್ಲವೆ? ತುಂಬ ಜನಪ್ರಿಯರಾದ ಮೇಲೆ ಅವರ ದೇಹ ನದಿಯ ಪಾಲಾಯ್ತು ಅಂತ ಪೇಪರಿನಲ್ಲಿ ಓದ್ತಾ ಇದ್ದೇವೆ ಇದು ಸರಿಯೇ? ಮಾಚಿದೇವರ ವಚನದಲ್ಲಿ ಬೆಳಗನುಟ್ಟು ಬಯಲಾದ ಬಸವಣ್ಣ ಎಂದು ಹೇಳಿದ್ದರಲ್ಲವೇ? ದಯವಿಟ್ಟು ಇದರ ಬಗ್ಗೆ ತಿಳಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇವೆ.

ಉತ್ತರ: ಬಸವಣ್ಣನವರ ಲಿಂಗೈಕ್ಯದ ಬಗ್ಗೆ ನಮಗಿನ್ನೂ ನಿಖರತೆ ಇಲ್ಲ. ಬಸವಣ್ಣನವರ ಅಂತ್ಯ ಹೇಗಾಯ್ತು, ಅದು ಪಾಲ್ಕುರಿಕೆ ಸೋಮೇಶ್ವರ ಏನ ಬರದಾ, ಅವ ಶೈವ ಪದ್ಧತಿ ಪುರಾಣ ಪದ್ಧತಿಯೊಳಗ, ಬಸವಣ್ಣ ಬಂದಾ ಕೂಡಲಸಂಗಮಕ್ಕ ಲಿಂಗದಿಂದ ಶಿವ ಉದ್ಭವವಾಗಿ ಅಪ್ಪಿಕೊಂಡು ಬಯಲಾದ ಅಂತ. ಲಿಂಗದಿಂದ ಉದ್ಭವವಾದವರಿಗೇ ನಾವು ಪ್ರಶ್ನೆ ಮಾಡ್ತೀವಿ ಪಂಚಾಚಾರ್ಯರಿಗೆ. ಅಂದಾಗ ನಾವು ಪ್ರಶ್ನೆ ಮಾಡ್ಬೇಕಾಗ್ತದ. ಅದು ಕಲ್ಪನೆ ಮಾತ್ರ, ಕೆಲವೊಮ್ಮೆ ಬಸವಣ್ಣ ಜಲಸಮಾಧಿಯಾದರು ಅಂತ, ಮೊನ್ನೆ ನನ್ನ ಹೆಸರಿನಲ್ಲಿ ಸುದ್ದಿ ಪ್ರಕಟ ಆಗಿತ್ತು. ಅದಕ್ಕೇ ಕೇಳಿದೆ, ನಾ ಹೇಳಿದ್ದು ಒಂದು, ಆ ಪತ್ರಿಕೆ ವರದಿಗಾರ ಅವ ಕೇಳಿಸಿಕೊಂಡದ್ದು ಒಂದು. ಬಸವಣ್ಣ ಇಚ್ಛಾಮರಣಿ ಅನ್ನುವುದರಲ್ಲಿ ಸಂಶಯವೇ ಇಲ್ಲ.

ಜೀವಂತ ಸಮಾಧಿ ಬಗ್ಗೆ ಸ್ಪಷ್ಟೀಕರಣ: ಜೀವಂತ ಸಮಾಧಿ ಪ್ರವೇಶ ಮಾಡುವುದು ನಮ್ಮ ಸಿದ್ಧಾಂತದೊಳಗ ಅದ ಅಂತ ಕಾಣ್ತದ. ಕೆಲ ಜನ ಅದು ಆತ್ಮಹತ್ಯೆ ಅಲ್ಲೇನು ಅಂತ ಪ್ರಶ್ನೆ ಮಾಡ್ತಾರ. ಆತ್ಮಹತ್ಯೆ ಬೇರೆ, ಜೀವಂತ ಸಮಾಧಿ ಬ್ಯಾರೆ. ಸಿದ್ಧರಾಮ ಜೀವಂತ ಸಮಾಧಿ ಹೋಗ್ತಾರ. ರಾಘವಾಂಕ ಸಿದ್ಧರಾಮ ಚಾರಿತ್ರ್ಯದೊಳಗ ಸ್ಪಷ್ಟ ಹೇಳ್ತಾರ, ನಮಗಿಲ್ಲಿರುವುದು ಸಾಕು. ನಮ್ಮ ಲೋಕದ ಮಣಿಹ ಎಲ್ಲ ತೀರಿ ಬಿಟ್ಟಾವ ಅದಕ್ಕಾಗಿ, ಅವರೇ ಸ್ವತಃ ನಿಂತು ಒಂದು ಗವಿ ತೋಡಿಸಿ, ದ್ವಾರ ಮಾಡಿ, ಎಲ್ಲ ಭಕ್ತರ ಎದುರು ಸಮಾಧಿ ಪ್ರವೇಶ ಮಾಡಿ ಮುಂದ ಬಾಗಿಲ ಮುಚ್ಚಿ ಬಿಡ್ತಾರ ಮುಗಿತು. ಶರಣರ ಸಮಕಾಲೀನ ಶರಣರಾದ ಸಿದ್ಧರಾಮರ ಈ ಉಲ್ಲೇಖ ನಮಗ ಅತಿ ಪ್ರಾಚೀನವಾದ ಸಾಕ್ಷಾಧಾರ. ಇದನ್ನು ಪರಿಗಣಿಸಿದಾಗ ನಾವು ಶರಣ ಸಂಪ್ರದಾಯದಲ್ಲಿ ಜೀವಂತ ಸಮಾಧಿ ಇದೆ ಅಂತ ಅರಿಯಬೇಕು. ತೋಂಟದ ಸಿದ್ಧಲಿಂಗ ಸ್ವಾಮಿಗಳದಾರಲ್ಲ ಅವರದು ಜೀವಂತ ಸಮಾಧಿ, (ಕಾಯ ಜೀವದ ಹೊಲಿಗೆಯ ಬಿಚ್ಚಿ ಎನ್ನುವಂತೆ) ಹೌದು ಬಸವಣ್ಣ ಜೀವಂತ ಸಮಾಧಿ ಹೋಗಿರಬೇಕು ಅಂತ ನಾನು ವಿಚಾರ ಮಾಡ್ತಿದಿನಿ. ನನಗೊಂದು ಸಣ್ಣ ಆಧಾರ ಬೇಕಿತ್ತು.

ನಂದಿ ಆಗಮ ಅಂತ ಒಂದು ಕಾವ್ಯ ಅದ, ೧೫ನೇ ಶತಮಾನದ ಕಾವ್ಯ ನಂದಿ ಆಗಮ. ಅದು ಕೊಡೇಕಲ್ ಬಸವಣ್ಣನವರ ಮಗ ರಾಚಪ್ಪಯ್ಯ ಬರೆದಿದ್ದು, ನಂದಿ ಆಗಮದೊಳಗ ಅವರು ಸ್ಪಷ್ಟವಾಗಿ ಹೇಳ್ತಾರ, ಬಸವಣ್ಣ ಕೂಡಲಸಂಗಮಕ್ಕ ಬಂದು ಗವಿಯ ಮುಂದ ನಿಂತು 'ಸಾಕು ಮಾಡಯ್ಯ ತಂದೆ ಲೋಕದಾಟವನಿನ್ನು' ಬಂದ ಮಣಿಹವು ಮುಗಿಯಿತು. ನಾನೇನು ಮಾಡಬೇಕಾಗಿತ್ತು ಮಾಡಿ

ಆಗ್ಯಾದ, 'ಕೂಡಿಕೊಳ್ಳಾ ತಂದೆ' ಅಂತ ಗವಿ ಸೇರಿ ಬಿಟ್ಟರು ಅಂತ ನಂದಿ ಆಗಮದೊಳಗ ಲಿಖಿತ ದಾಖಲೆಯಾಗಿರುತ್ತದೆ. ಇದು ನಮ್ಮ ಸಂಪ್ರದಾಯಕ್ಕ ಒಪ್ಪಿಕೊಳ್ಳಬಹುದಾದಂತ ಹಾಗೂ ದಾಖಲೆಗಳನ್ನು ಆಧರಿಸಿ ನಾವು ಲಿಂಗಾಯತ ಧರ್ಮದಲ್ಲಿ ಜೀವಂತ ಸಮಾಧಿ ಒಪ್ಪಬಹುದು.

ಪ್ರಶ್ನೆ: ಇತ್ತೀಚಿನ ಕೆಲ ದಿನಗಳ ಹಿಂದೆ ಮಹಾದೇವಪ್ಪ ಮೀಸೆ ಅನ್ನುವವರು ನಾನು ಜೀವಂತ ಸಮಾಧಿ ಹೋಗ್ತೇನೆ ಅಂತ ಸಮಾಧಿ ಕಟ್ಟಿಕೊಂಡರ ಆತ್ಮಹತ್ಯೆ ಪ್ರಯತ್ನ ಮಾಡ್ತಾ ಇದ್ದಿ ಅಂತ ಪೋಲಿಸ್ ಆರೆಸ್ಟ ಮಾಡಿದರು.

ಉತ್ತರ: ಹಾಂಗ ಆದರ ಜೈನರೊಳಗ ಸಲ್ಲೇಖ ಸಮಾಧಿ ತಗೋತೀನಿ ಅಂತ ಸಾಯುವರೆಗೂ ಊಟ ಬಿಡ್ತಾರಲ್ಲ ಅದಕ್ಕ ಸರಕಾರ ಒಪ್ಪ್ಯಾದ?

ಪ್ರಶ್ನೆ: ವೀರಶೈವ ಪದ ವಚನ ಸಂಪುಟದಲ್ಲಿ ಕೆಲ ವಚನಗಳಲ್ಲಿ ಕಾಣಬರುತ್ತದೆ. ವಚನ ಸಂಪುಟದ ಸಂಪಾದಕರಾಗಿ ನಿಮ್ಮ ಅಭಿಪ್ರಾಯವೇನು?

ಉತ್ತರ: ಮೊದ್ಲ ನಾವೇನ ಮಾಡಬೇಕು ಅಂದರ ಆಮೇಲ ಸೇರಿಸಿದ ವಚನಗಳ್ಯಾವವು ಮೂಲ ವಚನಗಳ್ಯಾವವು ಎನ್ನುವುದನ್ನ ತಿಳಕೋಬೇಕು. ಸಮಗ್ರವಾಗಿ ಎಲ್ಲವನ್ನು ನಾವು ಕೊಟ್ಟೀವಿ, ಹಾಳಾಗಿ ಹೋಗ್ತದ ಅಂತ ಕೊಟ್ಟೀವಿ. ಕಾಂಡ ೧ ಕಾಂಡ ೨ ಅಂತ ಮಾಡೀವಿ. ಕಾಂಡ ೧ ಷಟ್‌ಸ್ಥಲ ವಚನ (ನನ್ನ ದೃಷ್ಟಿಯೊಳಗ ನಿಜವಚನ) ಅದಾವ, ಕಾಂಡ ೨ ನಿಜನೂ ಅದಾವ, ತಪ್ಪನೂ ಅದಾವ. ಆದರ ನಮಗಿವು ತಾಡವೋಲೆ ಒಳಗ ಸಿಕ್ಕಾವ, ನೀವು ಅವು ತಗೊಂಡು ಒಮ್ಮೆಲೆ ನಿರ್ಣಯಕ್ಕ ಬರಲಿಕ್ಕೆ ಆಗುದಿಲ್ಲ.

ಪ್ರಶ್ನೆ : ನೀವೆ ಸಂಪಾದಕರಾಗಿದ್ದೀರಲ್ಲ.

ಉತ್ತರ: ಹೌದು ನಾವು ನಿಮಗ ಒದಗಿಸಿ ಕೊಟ್ಟೀವಿ, ಎಲ್ಲಾ ರಾಶಿ ತಂದು ಇಟ್ಟೀವಿ ಹಸನಮಾಡಿ ಬೀಸಲಿಕ್ಕೆ ಕೊಟ್ಟಾದ ನಂತರ ರೊಟ್ಟಿ ಮಾಡಲಿಕ್ಕೆ ಉಪಯೋಗಿಸಬಹುದು.

ಪ್ರಶ್ನೆ : ನೀವು ಜ್ವಾಳ ತಂದಿಟ್ಟಿಲ್ಲ, ಹಿಟ್ಟು ತಂದಿಟ್ಟೀರಿ. ನಾವು ರೊಟ್ಟಿ ಮಾಡದೊಂದೆ ಬಾಕಿ.

ಉತ್ತರ : ನೀವು ಹಾಂಗ ತಿಳಕೊಂಡಿರಿ. ಖರೆ ನಾವು ಮಾಡಿದ್ದು ಜ್ವಾಳ ತಂದಿಟ್ಟಿದ್ದು, ಹಸನ ಮಾಡಕೊಂಡು ಬೀಸಿ ರೊಟ್ಟಿ ಮಾಡಕೋಬೇಕಾಗಿದ್ದು ನಿಮ್ಮ ಕೆಲಸ.

ಪ್ರಶ್ನೆ: ಈ ಹಿಂದೆ ಕೂಡಲ ಸಂಗಮದೇವ, ಇಂದು ಚೆನ್ನಮಲ್ಲಿಕಾರ್ಜುನದೇವ ಹೀಗೆ ಶರಣರ ವಚನಾಂಕಿತಗಳನ್ನ ತಿರುಚುತ್ತಾ ಹೋದರೆ ಬಸವ ಭಕ್ತರು ಇಂತಹಧರ್ಮ ದ್ರೋಹ ಹೇಗೆ ಸಹಿಸಿಕೊಳ್ಳಬೇಕು? ಇಂಥ ಶರಣರ ದ್ರೋಹಕ್ಕ ಕಾನೂನಿನ ಕ್ರಮವಿಲ್ಲವೇ? ನಾವೇಕೆ ಮೌನವಾಗಿ ಕುಳಿತಿದ್ದೇವೆ? ನಮ್ಮ ಮುಂದಿನ ಕ್ರಮವೇನು? ಬಸವಾದಿ ಶರಣರು ಜೀವಂತ ಇರುವುದು ವಚನಗಳ ವಚನಾಂಕಿತದಲ್ಲಿ. ಆದರೆ ಈಗ ಮಾತೆ ಮಹಾದೇವಿ ನಿರಂತರ ತಿದ್ದುತ್ತಿರುವ ಕುರಿತು ವಿಚಾರ ಸಂಕಿರಣದ ನಿಲುವು ಏನು? ಇತ್ತೀಚೆಗೆ ಅಕ್ಕನ ವಚನಾಂಕಿತ ಎರಡು ಸಲ ಭಿನ್ನ ಭಿನ್ನ ತಿರುಚಿದ್ದರೂ ಎಲ್ಲರೂ ಮೌನವಾಗಿರುವುದು ಏಕೆ?

ಉತ್ತರ: ಮೌನ ವಹಿಸಿಲ್ಲ, ಅವರ ಕೂಡಾ ವಾದ ಮಾಡ್ಯಾದ, ಅವರ ಕೂಡಾ ದೂರವಾಣಿ ಮೂಲಕ ಮಾತೂ ಆಡ್ಯಾದ, ಪೇಪರದೊಳಗೂ ಅವೆಲ್ಲ ಬಂದಾವ. ಅವರಿಗೆ ಗೊತ್ತದ, ವಿರೋಧ

ಮಾಡ್ತರಂತ. ಕೋರ್ಟಿಗೆ ಹೋಗಿ ಅದೆಲ್ಲ ನಡದದ. ಆದರೆ ಮಾತಾಜಿಯವರು ಇದನ್ನ ಮಾಡಬಾರದಾಗಿತ್ತು. ನಾ ತುಂಬಾ ಕಳಕಳಿಯಿಂದ ಹೇಳ್ತೀನಿ, ಇದನ್ನ ಅವರು ಮಾಡಬಾರದಾಗಿತ್ತು, ಆದರ ಅವರು ಮಾಡಿದ ಕೆಲಸ, ಬಸವಣ್ಣನ ಪ್ರಚಾರ ಕೆಲಸ ಮಾಡಿದಾರ ಅದನ್ನ ನಾ ಒಪ್ತೇನಿ. ಅದು ಸಂತೋಷ ಅದ ನಮಗ. ಆದರ ಅವರು ಈ ರೀತಿ ತಿದ್ದಿದ್ದು, ಅವರ ತಿದ್ದದ್ದಕ್ಕ ಅವರ ಸುತ್ತ ಇರುವ ಜನ ಒಪ್ಪಿಕೊಂಡಿದ್ದದ ಅದು ತೀರಾ ಕೆಟ್ಟದ್ದು.

ಮಾತಾಜಿಯವರು ನನಗೊಂದು ಕಾರ್ಯಕ್ರಮಕ್ಕ ಭಾಗವಹಿಸಲಿಕ್ಕ ಕರೆದರು; ನಾ ಹೇಳ್ದೆ ಇಲ್ಲ ನೀವು ಲಿಂಗದೇವ ಅಂತ ತಿದ್ದೀರಿ, ಅದಕ್ಕಾಗಿ ನನಗಲ್ಲಿ ಬರಲಿಕ್ಕ ಆಗುವುದಿಲ್ಲ. ಬಂದರ ನಿಮ್ಮ ಅಭಿಪ್ರಾಯಕ್ಕ ನನ್ನ ಅನುಮೋದನೆ ಅದ ಅಂತ ಅರ್ಥ ಬರ್ತದ ಜನರಿಗೆ. ಅದಕ್ಕ ನಾನು ಬರೋದಿಲ್ಲ ಅಂತ ಹೇಳ್ದೆ, ನಿಮ್ಮ ಘನತೆಗೂ ಚ್ಯುತಿ ಬಂದಿರಬಾರದು, (ಅವರು ಒಂದು ಪೀಠಕ್ಕ ಅದಾರ, ನಮ್ಮವರ ಅವರೂ) ಸಮಾಜಕ್ಕೂ ಸಮಾಧಾನ ಆಗಿರಬೇಕು. ಈ ರೀತಿಯ ಒಂದು ಹೇಳಿಕೆಯನ್ನ ನಾವು ನೀವು ಕೂಡಿ ಸಿದ್ಧಪಡಿಸೋಣು. ಇದರಿಂದ ನೀವು ಹೊರಗ ಬಂದುಬಿಡಿ ಮತ್ತ ಬಸವ ಸಂಘಟನೆ ಮಾಡಲಿಕ್ಕೆ ಸಾಧ್ಯ ಆಗ್ತದ ಅಂತ ಬರೆದಿದ್ದೆ. ಅವರೇನು ನನಗ ಉತ್ತರ ಬರೀಲಿಲ್ಲ. ಆ ಮಾತು ಬ್ಯಾರೆ. ಹೀಗಾಗಿ ಅವರು ಮಾಡಿದ್ದು ನಿಜವಾಗಿಯು ತಪ್ಪು. ಈಗ ಅವರು ಒಂದಿಷ್ಟು ಪುಸ್ತಕ ಬರದಾರ, ಮುಂದ ನಾ ಬರದೆ ಅಂತ ನಾನೆ ಒಂದು ಹೆಸರು ಹಾಕೋತಿನಿ ಅಂದ್ರ, ತಪ್ಪಾಗುದಿಲ್ಲಾ ಅದು? (ಹಾಕೊಳ್ಳಿ ಅಂತಾರರಿ ಅವರು) ಹಾಕೊಳ್ಳಿ ಅಂತಾರ? ಮತ್ತ ಇಷ್ಟ ದಿಟ್ಟವಾಗಿ ನಿಂತರ ನಾವೇನು ಮಾಡೋಣ ಅವರಿಗೆ.

ಪ್ರಶ್ನೆ: ಬಸವಣ್ಣ ಬ್ರಾಹ್ಮಣರೆ, ಇವರು ಲಿಂಗವಂತ ಧರ್ಮ ಸ್ಥಾಪಿಸಿದ ಬಗ್ಗೆ ದಾಖಲೆಗಳು ಇವೆಯೇ?

ಉತ್ತರ: ಬಸವಣ್ಣ ಬ್ರಾಹ್ಮಣ ಹೌದು. "ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ" ನಾನು ಹಾರುವ ಅಂತ ಸ್ಪಷ್ಟ ಹೇಳಿದ್ದರವರು. ಒಂದು ಪ್ರಶ್ನೆ ಇಲ್ಲಿ ಅಂದ್ರ ಯಾವ ಬ್ರಾಹ್ಮಣ ಅಂತ, ಇದು ಯಾರೂ ವಿಚಾರ ಮಾಡ್ತಾ ಇಲ್ಲ. ಶೈವ ಬ್ರಾಹ್ಮಣ, ಏನು ಹಾಗಂದ್ರೆ ಯಾವ ಶೈವ ಬ್ರಾಹ್ಮಣ, ಶೈವ ಸಾಕಷ್ಟು ಅದಾವ. ಬ್ರಾಹ್ಮಣದೊಳಗ ಎರಡ ಶಾಖೆಗಳು ಅದಾವ ಸ್ಪಷ್ಟವಾಗಿ. ಒಂದು ವೈದಿಕ ಬ್ರಾಹ್ಮಣ, ಇನ್ನೊಂದು ಆಗಮಿಕ ಬ್ರಾಹ್ಮಣ, ನಾಕು ವೇದವನ್ನ ಅನುಸರಿಸುವ ಬ್ರಾಹಣರು ಬ್ಯಾರೆ, ೨೮ ಆಗಮನಗಳನ್ನ ಅನುಸರಿಸುವ ಬ್ರಾಹ್ಮಣರು ಬ್ಯಾರೆ. ಈ ಪಂಚಾಚಾರ್ಯರದಾರಲ್ಲ ಇವರು ಆಗಮಿಕ ಬ್ರಾಹ್ಮಣರು. ಬಸವಣ್ಣ ಈ ಆಗಮಿಕ ಬ್ರಾಹ್ಮಣ ಮನೆತನದವರು. ಅಲ್ಲಿರುವಂತ ಕರ್ಮ ಮತ್ತು ಭಕ್ತಿಯ ಒಂದು ಮಿಶ್ರಣ (ಅಲ್ಲಿ ಹೇಳಿದ್ದೆವಲ್ಲ ಎಲ್ಲ ಓದಲಿಕ್ಕ ಸಿಗತಾವ)

ಆದ್ರೆ ನಾ ಕೇಳ್ತಾ ಇರುವುದು, ಬ್ರಾಹ್ಮಣ ಅಂತ ಯಾರಿಗೆ ಅಂತಿರಂದ್ರೆ, ಬ್ರಾಹ್ಮಣರೆಂದೂ ಹುಟ್ಟಿನಿಂದ ಬ್ರಾಹ್ಮಣರೆಂದು ಒಪ್ಪೂದಿಲ್ಲ, ಜನಿವಾರ ಹಾಕಿದಾಗ ಮಾತ್ರ ಅವರು ಬ್ರಾಹ್ಮಣರು, ಬಸವಣ್ಣ ಜನಿವಾರೇ ಹಾಕಿಕೊಂಡಿಲ್ಲ ಅಂದಮೇಲೆ ಬ್ರಾಹ್ಮಣ ತ್ಯಾಗ ಮಾಡಿ ಬಂದರು ಅಂತ ಹೇಳುವುದು ತಪ್ಪಾಗ್ತದ. (ಅದಕ ಅವರು ಬ್ರಾಹ್ಮಣನೇ ಆಗಿಲ್ಲ; ಅದ್ಕ ಬ್ರಾಹ್ಮಣ ಬಿಡುವ ಪ್ರಶ್ನೆ ಬರುವುದಿಲ್ಲ) ಹರಿಹರ ಬಸವಣ್ಣನವರ ಹತ್ತಿರ ಇರುವಂಥ ಒಬ್ಬ ಕವಿ, ಹರಿಹರರನ್ನ ಎಷ್ಟೋ ಸಾರಿ ನಾವು ತಿರಸ್ಕಾರ ಮಾಡ್ತೀವಿ. ಕೆಲವು ವಿಷಯಗಳಿರಬಹುದು, ಆದರ ಹರಿಹರ ಆ ಕೆಲಸ ಮಾಡದೇ ಹೋಗಿದ್ರ

ಶರಣರ ಚಳುವಳಿ ದಾಖಲೆ ಆಗ್ತಿದ್ದಿಲ್ಲ. ಎಲ್ಲಾ ಶರಣರ ಚರಿತ್ರೆ ಬರೆದವರು ಹರಿಹರ, ಒಂದು ಕಾವ್ಯದಾಗ ಬರ್ತದೆ, ಅವರು ಸ್ವಲ್ಪ ಪುರಾಣ ರೀತಿಯೊಳಗ ಹೇಳ್ತಾರೆ, ದೇವಲೋಕದೊಳಗ ಹರಿಹರ ಒಬ್ಬ ಗಣ ಅಂತೆ ಶಿವ ಹೇಳಿದಂತೆ ಕೈಲಾಸದೊಳಗ ನೀನು ಹೋಗು ಶರಣರೆಲ್ಲ ಲಿಂಗೈಕ್ಯ ಆಗ್ಯಾರ ಅವರು ಮಾಡಿದ ಕೆಲಸ ಬಹಾಳ ದೊಡ್ಡದದ, ಭಾಳ ದೊಡ್ಡ ಚಳುವಳಿ ಮಾಡ್ಯಾರ, ಆ ಚಳುವಳಿಯನ್ನ ದಾಖಲೀಕರಣ ಮಾಡಬೇಕು. ಅದಕ್ಕ ನೀನು ಕವಿಯಾಗಿ ಹುಟ್ಟಿ ಅವರೆಲ್ಲರ ಕ್ಷೇತ್ರಗಳಿಗೆ ಹೋಗು. ಅಂತ ಕೊಟ್ಟು ಕಳುಹಿಸಿದ ಅಂತ ಕಾವ್ಯದಲ್ಲಿ ಬರ್ತದ. ಹರಿಹರ ಬಂದೇನು ಮಾಡ್ತಾನೆ, ಬಸವರಾಜದೇವರ ರಗಳೆ ಬರಿತಾನ, ಅಕ್ಕಮಹಾದೇವಿ ರಗಳೆ ಬರೀತಾನೆ, ಪ್ರಭುದೇವರದು ಬರೀತಾನೆ, ಮಾದಾರ ಚೆನ್ನಯ್ಯನ ಬಗ್ಗೆ ಬರೀತಾನೆ, ಬಹುತೇಕ ಎಲ್ಲಾ ಮುಖ್ಯ ಶರಣರ ಬಗ್ಗೆ ಆತ ಬರೆಯುತ್ತಾನೆ. ಹೀಗಾ ಆತ ಬರದಂತಹ ಬಸವರಾಜ ರಗಳೆ ಅದಲ್ಲ ಅದರಾಗ ಸ್ಪಷ್ಟ ಅದ, ೧೬ನೆಯ ವಯಸ್ಸಿಗಿ ಷೋಡಶಪ್ರಾಯಕ್ಕ ಅವ ಜನಿವಾರ ಹರಕೊಂಡ ಅಂತ. ೮ ವರ್ಷಕ್ಕ ಅವರ ಮೈಮ್ಯಾಲ ಜನಿವಾರ ಇತ್ತು. ೮ನೆಯ ವರ್ಷಕ್ಕೆ ಒಬ್ಬ ಹುಡುಗಗ ಏನಂತಹ ತಿಳವಳಿಕೆ ಬರ್ತದ? ಅವ ೮ ವರ್ಷ ಹಾಕಿಕೊಂಡಿದ್ದ, ಇದು ಭಾರ ಅಂತ ಅನಿಸಿತು ಅವಗ, ಇದು ಏನೂ ಉಪಯೋಗ ಇಲ್ಲದ್ದು. ಇದು ಹಾಕಿಕೊಳ್ಳೊದರಿಂದ ಏನಾಗ್ತದ ಅಂದ್ರೆ, ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಶೂದ್ರ ಈ ತಾತ್ವಿಕ ಸಿದ್ಧಾಂತ ಒಪ್ಪಿಕೊಂಡಂತೆ ಆಗ್ತದಂತ ತಿಳಕೊಂಡು ಅವ ಏನ್ಮಾಡ್ದ ೧೬ ನೆಯ ವರ್ಷಕ್ಕ ಜನಿವಾರ ಹರಿದು ಒಗೆದಾ ಅಂತ ಹರಿಹರ ಹೇಳ್ತಾರೆ. ಮತ್ತ ಇನ್ನೂ ಕಾವ್ಯಗಳು ಹೇಳ್ತಾವ, ಇದು ೮ನೆಯ ವರ್ಷಕ್ಕಂತ, ನೀವು ಹೇಳುವುದು (ಹೌದು ೮ನೆಯ ವರ್ಷಕ್ಕ ಅವರ ಅಕ್ಕನ ಜೊತೆ ಮನೆ ಬಿಟ್ಟು ಹೊರಟು ಹೋದರು ಅಂತ) ಆದರ ನನಗನಿಸುವ ಪ್ರಕಾರ ೧೬ ನೆಯ ವಯಸ್ಸಿಗೆ ತನಗ ತಿಳುವಳಿಕೆ ಬಂದಮ್ಯಾಲ ಜನಿವಾರ ತ್ಯಾಗ ಮಾಡಿದ್ದೇ ಸರಿ ಅಂತ ಅನಿಸ್ತದ.

ಪ್ರಶ್ನೆ : ಅಲ್ಲ, ಅಲ್ಲ, ಅವರು ಜನಿವಾರ ಸ್ವೀಕಾರ ಮಾಡಲೇ ಇಲ್ಲ, ಮುಂಜಿ ಮಾಡಲಿಕ್ಕೆ ಸಿದ್ಧತೆ ಮಾಡಿದಾಗ ಅದೇ ಯಜ್ಞ ಕುಂಡದಲ್ಲಿ ಜನಿವಾರ ಹಾಕಿ ಹೊರಟು ಹೋದರು, ಅವರು ಬ್ರಾಹ್ಮಣ ಸ್ವೀಕರಿಸಲೇ ಇಲ್ಲ.

ಉತ್ತರ: ಹೌದು ನಿಮ್ಮ ವಾದ ಎಲ್ಲ ನನಗ ಗೊತ್ತದ, ಅದು ತಿಳಿದ ಮ್ಯಾಲೂ ನಾನು ಈ ಒಂದು ನಿಲುವಿಗೆ ಬರ್ತಾ ಇದೀನಿ. ಕರ್ಮಲತೆಯಂತಿದ್ದ ಜನಿವಾರವನ್ನ ಹರಿದೊಗೆದ ಅಂತ ಹರಿಹರ ಹೇಳ್ತಾರೆ, ಅವರ ಮಾತನ್ನ ಒಪ್ಪಿಕೊಳ್ಳಬೇಕಾಗ್ತದ.

ಪ್ರಶ್ನೆ: ಹಾಂಗೇನು ಒಪ್ಪಿಕೊಳ್ಳುವ ಅವಶ್ಯಕತೆ ಇಲ್ಲಾ.

ಉತ್ತರ: ನೀವು ಒಪ್ಪಿಕೊಳ್ಳದಿದ್ದರೆ ಪರವಾ ಇಲ್ಲ. (ಬಸವಣ್ಣಗೆ ಗೊತ್ತಿಲ್ಲದಾಗ ಜನಿವಾರ ಹಾಕಿದ್ದರು, ೧೬ ನೆಯ ವಯಸ್ಸಿಗೆ ವಿಚಾರ ಮಾಡಿ ಇದು ಹಾಕಿಕೊಳ್ಳುವುದು ಸರಿ ಅಲ್ಲ ಅಂತ ಅನಿಸಿತು, ಹರಿದು ಹಾಕಿದ. ನಂತರ ಬ್ರಾಹ್ಮಣ ಅಲ್ಲ ಹ್ಯಾಗೋ, ಗೊತ್ತಿಲ್ಲದೇ ತನಗರಿವಿಲ್ಲದೇ ಜನಿವಾರ ಧರಿಸಿದರೂ ಕೂಡ ಬ್ರಾಹ್ಮಣ ಅಲ್ಲ).

ಪ್ರಶ್ನೆ: ಗುರು ಬಸವಣ್ಣನವರು ಮತ್ತು ೧೨ ನೆಯ ಶತಮಾನದ ಶರಣರ ಬಗ್ಗೆ ಮಾತನಾಡುವಾಗ ಅವರನ್ನ ಏಕವಚನದಲ್ಲಿ ಸಂಬೋಧಿಸುವುದು ಸರಿಯೇ? ಏಕೆಂದರೆ ಬಸವಣ್ಣನವರು ಕೇವಲ

ವಚನಕಾರರಲ್ಲ, ಅವರು ಒಂದು ಧರ್ಮದ ಸಂಸ್ಥಾಪಕರು, ಮತ್ತು ಮಹಾನ್ ಪ್ರವಾದಿ, ಕೇವಲ ಅವರ ವಚನಗಳನ್ನ ಹೊಗಳಿ ಅವರನ್ನ ಗೌರವಿಸದೇ ಸಂಬೋಧಿಸುವದು ಎಷ್ಟು ಸರಿ?

ಉತ್ತರ: ಇದು, ನಾವು ದೇವರಿಗಿ ಏಕವಚನದಾಗ ಬಳಸ್ತೀವಿ, ಅಪ್ಪಗ ಏಕವಚನ ಬಳಸ್ತೀವಿ, ಅವ್ವಗ ಏಕವಚನ ಬಳಸ್ತೀವಿ, ಎಲ್ಲಿ ಪ್ರೀತಿ ಹೆಚ್ಚಿರ್ತದ ಅಲ್ಲಿ (ಪ್ರಶ್ನೆ ಉತ್ತರ ಎರಡಕ್ಕು ಚಪ್ಪಾಳೆ ಹಾಕಿದರೆ ಏನರ್ಥ) ಅದೇ ಲಿಂಗಾಯತರ ಗುಣಧರ್ಮ.

ಪ್ರಶ್ನೆ : ನೀವು ಹೇಳುವುದು ಸರಿ. ಇಲ್ಲಿ ಕುಳಿತಿರುವಾಗ ನಾವು ಪರಸ್ಪರ ಮಾತಾಡಿಕೊಳ್ಳುವಾಗ ನಾನು ನೀನು ಅಂತ ಮಾತಾಡಿಕೊಳ್ಳುವುದಿಲ್ಲ, ಏಕವಚನದಲ್ಲಿ ಸಂಬೋಧನೆ ಮಾಡಿಕೊಳ್ಳುವುದಿಲ್ಲ. ಆದರೆ ಗುರು ಬಸವಣ್ಣನವರ ಬಗ್ಗೆ ಯಾಕೆ?

ಉತ್ತರ: ಇನ್ಮ್ಯಾಲೆ ಬಹುವಚನ ಮಾಡೋಣವಂತೆ. ಆದರೆ ಬಸವಣ್ಣ ಏಕವಚನ ಇಲ್ಲ, ಬಹುವಚನ ಇಲ್ಲ, ಅವ ಅದನ್ನ ಮೀರಿದವ ಅದಾನ. ನಾವೇನು ಮಾತಾಡಿದರೂ ಅವ ಬೇರೇನೆ ಅದಾನ.

ಸಿದ್ದಣ್ಣ ಲಂಗೋಟಿ: ಬಸವಣ್ಣನವರು ನಮಗೆಲ್ಲ ಅಪ್ಪ ಅಂತ ಕರಕೊಳ್ತೀರುವುದರಿಂದ ನಾವು ಅವರನ್ನ ನಂಬಿರೋದ್ರಿಂದ ವೈಯಕ್ತಿಕವಾಗಿ ನಾವು ಚಿಂತನ ಮಾಡುವಾಗ ಅಥವಾ ಅವರ ವಚನಗಳನ್ನ ಅನುಭವಕ್ಕ ತಂದ್ಕೊಳ್ಳುವಾಗ ಅಥವಾ ನಮ್ಮಪ್ಪ ಬಸವಣ್ಣ ಅಂತ ವೈಯಕ್ತಿಕವಾಗಿ ಏಕವಚನ ಹೇಳ್ಕಂತೀವಿ. ಆದರೆ ಸಾಮೂಹಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಭೆ ಸಮ್ಮೇಳನಗಳಲ್ಲಿ ನಮ್ಮ ಮನೆಯೊಳಗಿನ ನಮ್ಮ ಅಪ್ಪನನ್ನ ಇನ್ನೊಬ್ರು ಬಂದಾಗ ಪರಿಚಯಿಸುವಾಗ ಇವರು ನಮ್ಮ ಅಪ್ಪಾವರು ಅಂತ ಹೇಳ್ತೀವೆ ಹೊರತು, ಇವ ನಮ್ಮಪ್ಪ ಅನ್ನಲ್ಲ. ವೈಯಕ್ತಿಕವಾಗಿ ನಾವು ಅಭಿಮಾನದಿಂದ, ಆತ್ಮೀಯತೆಯಿಂದ, ನಮ್ಮಪ್ಪಗ ನಮ್ಮಪ್ಪ ಬಸವಣ್ಣ ಅಂತ ಏಕವಚನದಿಂದ ಕರೀತಿವಿ. ಆದರೆ ಸಾರ್ವಜನಿಕವಾಗಿ ಪರಿಚಯಿಸುವಾಗ ಉಪನ್ಯಾಸಗಳಲ್ಲಿ ಗೌರವಯುತವಾಗಿ ಬಸವಣ್ಣನವರು ಧರ್ಮಗುರು, ವಿಶ್ವಗುರು ಅಂತನೇ ಕರೆಯಬೇಕು.

ಉತ್ತರ: ಅರ್ಥ ಒಪ್ಪಕೊಂಡಾಂಗ ಆಯ್ತು.

ಪ್ರಶ್ನೆ: ಬಸವ ಧರ್ಮದ ಒಂದು ಅಧ್ಯಯನವನ್ನು ಪಾಠವನ್ನು ಒಂದು ಪತ್ರಿಕೆಯನ್ನ ಎಂ.ಎ. ತರಗತಿಯಲ್ಲಿಟ್ಟರೆ ಸರಿಯಾಗುವುದಿಲ್ಲವೆ?–ವೀರೇಂದ್ರ ಸಿಂಪಿಯವರ ಪ್ರಶ್ನೆ.

ಉತ್ತರ: ಒಳ್ಳೆ ಪ್ರಶ್ನೆ ಅದು, ಒಂದು ಪೇಪರ ಯಾಕೆ, ನಾನು ಧಾರವಾಡ ವಿಶ್ವವಿದ್ಯಾಲಯ ಬಸವ ಅಧ್ಯಯನ ಪೀಠದ ಅಧ್ಯಕ್ಷ ಇದ್ದಾಗ ಒಂದು ಡಿಪ್ಲೋಮಾ ಇನ ಬಸವಾ ಸ್ಟಡೀಸ ಅಂತ ೬ ಪೇಪರಗಳ ಒಂದು ಡಿಪ್ಲೋಮಾ ಕೋರ್ಸ ಪ್ರಾರಂಭಿಸಿದೆವು. ಅದಕ್ಕಾಗಿ ಒಂದ್ಯಾಕ ೮ ಪೇಪರ ಮಾಡಿದರೂ ನಡೀತದ, ಬಸವಕಲ್ಯಾಣದಾಗ ಎಂ.ಎ. ಅದ. ಆದರ ಇದರಾಗ ನನಗ ನಾವು ಏನ ಹೇಳ್ತಾ ಇದೇವು (ಕಲಿಸ್ತಾ ಇದೆವು) ಸತ್ಯವನ್ನ ಪಾಠ ಮಾಡ್ತಾ ಇದೇವೋ ಅನ್ನೊ ಬಗ್ಗೆ ನನಗೆ ಸಂಶಯ ಅದ, ಬಸವಣ್ಣ ಮಾತಾಡಾಗ ಅಂತಾನ ಎಚ್ಚರಾತದ ಅಲ್ರೋ ಇದು ನಾ ಹೇಳಿದ್ದ ಅಲ್ಲ, ನೀವು ಹೇಳತಾ ಇರೋದು ತಪ್ಪು ಅಂತಾ ಹೇಳ್ತಾನ, ಅದಕ್ಕಾಗಿ ಮೊದಲ ಧರ್ಮದ ಶುದ್ಧೀಕರಣ, ತತ್ವ ಮತ್ತು ಆಚರಣೆ ಶುದ್ಧೀಕರಣ. ಆಗಬೇಕು. ಇದು ಲಿಂಗಾಯತ ಸಿದ್ಧಾಂತ. ಇದು ಲಿಂಗಾಯತ ಆಚರಣೆ. ಅನ್ನುವುದನ್ನ ಸ್ಪಷ್ಟಪಡಿಸಿಕೋಬೇಕು ನಾವು.

ಪ್ರಶ್ನೆ: ಇದನ್ನ ಯಾರ ಮಾಡಬೇಕು?

ಉತ್ತರ : ಇದು ಯಾರು ಮಾಡಬೇಕಂದ್ರ ಅದನ್ನಮಾಡಲಾಕ ಯಾರು ಗದ್ದುಗೆ ಮ್ಯಾಲ ಕುಂತಾರ ಅವರ ಮಾಡಬೇಕು. ನಾವು ಮಾಡುವ ಕೆಲಸ ಹೇಳ್ತೀನಿ, ನಾ ಮಾಡುವ ಕೆಲಸ ಅಲ್ಲ. ಈ ಸದ್ಯ ಪ್ರೊಫೆಸರ್ ಇದ್ದೀನಿ ನಾನು. ನೀ ಪ್ರೊಫೆಸರ್ ಇದ್ದೀರೀ ಒಂದು ಸ್ವಲ್ಪ ಗ್ವಾಡಿ ಕಟ್ರೀ ಅಂದ್ರ? ನನ್ನ ಕೆಲಸ ಏನು ನಾ ಮಾಡ್ತೀನಿ, ನಾವು ಮಠದ ಸ್ವಾಮಿಗಳ ಮಾಡಿದಿವಿ, ಅದು ಅವರ ಕರ್ತವ್ಯ.

ಪ್ರಶ್ನೆ: ಅವರು ಮಾಡಲಿಲ್ಲ ಅಂದ್ರ.

ಉತ್ತರ: ಅವರಿಗೆ ಹೇಳಿ ಮಾಡಿಸಬೇಕು.

ಸಿದ್ದಣ್ಣ ಲಂಗೋಟಿ: ಕಲಬುರ್ಗಿ ಸರ್ ಏನು ಶುದ್ಧೀಕರಣ ವಿಚಾರ ಹೇಳಿದರ ಅದನ್ನ ಒಪ್ಪಿಕೊಳ್ಳೋಣ. ಆದರ ಇನ್ನೊಂದು ಹೇಳಿದರು; ಯಾರನ್ನ ಅದಕ್ಕಾಗಿ ಕೂಡಿಸಿದೆವು ಅವರು ಅದನ್ನ ಮಾಡಬೇಕು ಅಂತ ಖಂಡಿತ ಅಲ್ಲ, ಯಾಕೆಂದರೆ, ತೊತ್ತು ಅಲಸಿದಡೆ ತನ್ನ ಕೆಲಸವನು ತಾನಾ ಮಾಡಕೋಬೇಕು ಅಂತ ಬಸವಣ್ಣನವರು ಹೇಳ್ತಾರೆ. ಅವು ನಮ್ಮ ಸಮಾಜದ ತೊತ್ತುಗಳು, ದೆ ಆರ್ ದಿ ಸರ್ವಂಟ್ಸ್ ಆಫ್ ದಿ ಸೊಸೈಟಿ, ವಿ ಆರ್ ದಿ ಮಾಸ್ಟರ್ಸ ಆಫ್ ದಿ ಸೊಸೈಟಿ. ಈ ಮಾತನ್ನ ನಾವು ನೆನಪಿಟ್ಟುಕೊಳ್ಳಬೇಕು.

ಎಂ ಎಂ ಕಲಬುರ್ಗಿ : ಸರ್ವೆಂಟ ಆಗಿನೇ ಆ ಕೆಲಸ ಅವರು ಮಾಡಬೇಕು.

ಸಿದ್ಧಣ್ಣ ಲಂಗೋಟಿ: ಈಗ ಅವರಿಗೆ ಮಾಡಲಿಕ್ಕೆ ಆಗೋದಿಲ್ಲ. ಓದುವುದಿಲ್ಲ ಯಾಕಂದ್ರ ಅವರುಗಳು ಯಾರೂ ವಚನ ಸಿದ್ಧಾಂತವನ್ನ, ಶರಣ ತತ್ವದರ್ಶನವನ್ನ, ಚೆನ್ನಬಸವಣ್ಣ ಹೇಳುವ ಷಟ್‌ಶಾಸ್ತ್ರಗಳೇ ಗೊತ್ತಿಲ್ಲ ಅವರಿಗೆ. ಅಂಥವರ ಕಡೆಯಿಂದ ಈ ಶುದ್ಧೀಕರಣ ಆಗುವುದಿಲ್ಲ. ಈಗ ಕಲಬುರ್ಗಿ ಸರ್ ಅಂತವರು ಜೀವಂತ ಇರುವಾಗಲೇ, ಅವರ ಒಡನಾಡಿಗಳಾದ ಇನ್ನೂ ಅನೇಕ ಅನುಭಾವಿಗಳು ನಾಡಿನುದ್ದಕ್ಕೂ ಇದ್ದಾರೆ. ಬಹಳಷ್ಟು ಜನ ಈಗಾಗಲೇ ಬಯಲಾಗಿದ್ದಾರೆ, (ಲಿಂಗೈಕ್ಯರಾಗ್ತಾ ಇದಾರೆ) ಆದ್ದರಿಂದ ಇರುವಂತವರಾದರೂ ಕೂಡಿ ಒಂದು ನಾಲ್ಕಾರು ವರ್ಷಗಳ ಕಾಲ ಮಿತಿಯನ್ನು ಹಾಕಿಕೊಂಡು ಇದನ್ನು ಪ್ರಾರಂಭ ಮಾಡೋಣ. ಮಾಡಲೇಬೇಕು. ಮುಂದಿನವರು ಅದು ಮುಂದುವರೆಸಿಕೊಂಡು ಹೋಗಬೇಕು. ಈ ಕೆಲಸ ಆಗಬೇಕು.

ಎ.ಎಂ. ಕಲಬುರ್ಗಿ : ಪ್ರಾರಂಭ ಮಾಡಬೇಕಂದ್ರ ಸ್ವಾಮಿಗಳಿಗೆ ಕಲಿಸುವುದು ಪ್ರಾರಂಭ ಮಾಡೋಣ ಅಂತ ಅದರ ಅರ್ಥ. ಯಾಕಂದ್ರ ಅವರಿಗೆ ಕೂಡಿಸಿದ್ದೆ ಅದಕ್ಕದ, ಅವರ ಕರ್ತವ್ಯ ಅದ ಅದು. ನಾನು ಅಪ್ಪೈಂಟಮೆಂಟ ಯಾವುದಕ್ಕೊ ಮಾಡಿದ್ದೆ, ಈ ಕೆಲಸ ಮಾಡಂತಂದ್ರೇನರ್ಥ ಆಗ್ತದ. ಎಕ್ಸಪರ್ಟೈಜೇಶನ್ ನಂದು ಟೀಚಿಂಗದಾಗ ಅದ. ಟೀಚಿಂಗ ಕ್ಲಾಸ್ ಇಲ್ಲರೀ ಒಂದು ಸ್ವಲ್ಪ ಗ್ವಾಡಿ ಕಟ್ರೀ ಅಂತಂದ್ರ ನಾನೇನ ಕಟ್ಲೀ ಅದನ್ನ.

ಪ್ರಶ್ನೆ: ಕೆಲ ಹಳ್ಳಿಗಳಲ್ಲಿ ಬಸವ ತತ್ವಗಳನ್ನು ಕೇಳುವ ಶಿಷ್ಯರು ಇರುವುದಿಲ್ಲ.

ಉತ್ತರ: ಅಲ್ಲ ಅಂಥ ಹಳ್ಳಿಯೊಳಗ ಸ್ವಾಮಿಗಳನ್ನ ಕಳಿಸಬೇಕಾದರ ಸಹ ಅಲ್ಲಿ ಕೇಳಬೇಕು. (ಅಲ್ಲಿ ಬಸವ ತತ್ವದ ಜನ ಇರುವುದಿಲ್ಲ) ಆ ಜನ ಇರ್ತಾರಲ್ಲ ಅವರೂ ಬಸವ ತತ್ವದವರಾಗಬೇಕು. ಈಗ ಶಿವಯೋಗ ಮಂದಿರ ಅದ. ಅದಂತೂ ಕರ್ಮಠ ಆಗಿ ಹೋಗಿ ಬಿಟ್ಟಿತು. ಇಂತದ್ರಾಗ ಮತ್ತ ಒಂದೆರಡು ಮೂರು ಸಂಸ್ಥೆಗಳನ್ನ ಕಟ್ಟಬೇಕು. ಪ್ರಶಿಕ್ಷಣ ಕೇಂದ್ರಗಳನ್ನ ನಾವು ಆರಂಭ ಮಾಡಬೇಕು.

ಆರಂಭ ಮಾಡಿ ಸರಿಯಾಗಿ ವಟುಗಳನ್ನ ತಯಾರು ಮಾಡಬೇಕು. ವಟುಗಳು ಇಲ್ಲಾದರ ಅಂತಂದ್ರ ಹೋಗ್ತರ ಕರಕೊಂಬರ್ತಾರ ಮಠಕ್ಕ ಮಾಡ್ತಾರ ಹೀಗ ಮಾಡಲಿಕ್ಕ ಸಾಧ್ಯ ಅದ.

ಪ್ರಶ್ನೆ: ನಾಡಿನ ಅನೇಕ ವಿರಕ್ತಮಠಗಳು ಮತ್ತು ಕೆಲವು ಬಸವಪರ ಮಠದ ಸ್ವಾಮೀಜಿಗಳು ಬಹಿರಂಗವಾಗಿ ವೈದಿಕ ಆಚರಣೆಗಳಲ್ಲಿ ಭಾಗವಹಿಸುವುದಲ್ಲದೇ ತಮ್ಮ ಮಠಗಳಲ್ಲಿ ಅಂತಹ ಆಚರಣೆಗಳನ್ನು ಆಚರಿಸುವವರಃ ವಿರುದ್ಧ ಬಸವ ತತ್ವ ಸಂಘಟನೆಗಳ ನಿಲುವು ಏನು?

ಉತ್ತರ: ಇದು ಯಾರು ಹೇಳಿದರೂ ನಾನು ಮೊದಲು ಲಿಂಗಾಯತ ಆಗಬೇಕು, ಸ್ವಾಮಿಗಳಾಗಬೇಕು. ಸ್ವಾಮಿಗಳಾಗಬೇಕು ಅಂತ ನಾವು ಅಂತೀವಿ, ಭಕ್ತರು ಮೊದಲು ಲಿಂಗಾಯತ ಆಗಬೇಕು ಅಂತ ಸ್ವಾಮಿಗಳ ಅಂತಾರ. ಅದಕ್ಕಾಗಿ ಮೂಲ ಏನು ಸಮಾಜ ಇದ್ದಿವಲ್ಲ ನಾವು. ಸಂಪನ್ಮೂಲ ವ್ಯಕ್ತಿಗಳಂದ್ರ ಯಾರು? ನಾವೇ, ನಾವು ಲಿಂಗಾಯತರಾದರ ಸ್ವಾಮಿಗಳು ತಾವು ಜಕ್ಕಸ್ತಾ ಲಿಂಗಾಯತರಾಗ್ತಾರ, ನಾವೆ ಆಗಿಲ್ಲ, ಸ್ವಾಮಿಗಳಿಗೆ ಆಗ್ರಹ ಮಾಡುದ ನಮಗ ಧೈರ್ಯ ಬರುದಿಲ್ಲ. ನಾವೂ ಆಗಬೇಕು. ಅದಕ್ಕ ತಕ್ಕಂತೆ ಅವ್ರೂ ಆಗಬೇಕು.

ಪ್ರಶ್ನೆ: ಜಾತಿಗೆ ಒಂದು ಮಠ ಮಾಡಿದ್ದು ಇದು ಮತ್ತೆ ಜಾತೀಯತೆ ಗಟ್ಟಿಮಾಡುವ ಕಾರ್ಯ ಎನಿಸುವುದಿಲ್ಲವೆ?

ಉತ್ತರ:೧೫-೧೬ನೆಯ ಶತಮಾನದೊಳಗ ವಿರಕ್ತ ಮಠಗಳು ಹುಟ್ಟಿಕೊಂಡು ಬಿಟ್ಟವು. ವಿರಕ್ತ ಮಠಗಳು ಹುಟ್ಟಿಕೊಂಡ ಬಳಿಕ ಮತ್ತ ಅದರೊಳಗ ಮುರುಘಾ ಸಮಯ ಚಿರಾಳ ಸಮಯ ಇವೆಲ್ಲ ಬೇರೆ ಬೇರೆ ಸಂಘಟನೆಗಳಾದವು. ಅಂದ್ರ, ಮಠದ ವ್ಯವಸ್ಥೆಗಳು ಬದಲಾವಣೆ ಆಗ್ತಾ ಬಂದದ, ಮತ್ತ ಈಗ ಇನ್ನೊಂದು ರೀತಿ ಬದಲಾವಣೆ ಆಗಲಕ ಹತ್ತಾದ ಅಷ್ಟೆ. ಈಗ ಇನ್ನೊಂದು ರೀತಿ ಜಾತಿಗೊಂದು ಮಠ, ಮತ್ತ ಎಲ್ಲಾ ಮಠಕ್ಕ ಐಗೋಳನ್ನೆ ಮಾಡದಕ್ಕಿಂತ ಇದು ಛಲೋ ಅನಸತದ ನನಗ. ಎಲ್ಲಾ ಮಠಗಳಿಗಿ ನಾವು ಜಂಗಮರನ್ನೇ ಸ್ವಾಮಿಗಳಾಗಿ ಮಾಡ್ತಿವಲ್ಲ ಅದು ಕೆಟ್ಟ ಪದ್ಧತಿ ಆಗೇದ. ಈಗ, ಆದರ ಜಾತಿಗೊಂದು ಮಠ ಇದ್ದು ಎಲ್ಲೋರೂ ಓಂ ಶ್ರೀಗುರು ಬಸವ ಲಿಂಗಾಯ ನಮಃ ಅಂದ್ರ ಮುಗಿತಲ್ಲ. ಆದರೆ ಅವರೆಲ್ಲ ಕಡ್ಡಾಯವಾಗಿ ಓಂ ಶ್ರೀಗುರು ಬಸವ ಲಿಂಗಾಯ ನಮಃ ಅನ್ನುವಂತೆ ಮಾಡಬೇಕು. ಈಗ ಉದಾಹರಣೆಗಾಗಿ ನಮ್ಮ ಸಿರಿಗೆರೆ ಮಠ ಅದ. ಅದು ಒಂದು ಜಾತಿ ಮಠನೆ ಆಗ್ಯಾದ. ಆದ್ರೂ ಅವ್ರು ಏನ್ಮಾಡ್ತಾರ ಬಸವಣ್ಣನವರನ್ನ ಆರಾಧ್ಯ ದೈವ ಅಂತ ಒಪ್ಪಕೊಂಡು ಬಿಟ್ಟಾರ, ಯಾರರ ಬಸವಣ್ಣನ ಬಗ್ಗೆ ವಿರುದ್ಧ ಬಂದರ ಒಮ್ಮೆಲೆ ಸಿಡಿದೇಳತಾರ ಅವರು, ಹಾಗ ಜಾತಿಗೊಂದು ಮಠ ಆದರೂ ಅದು ಒಂದು ಸಂಘಟನೆ ಅಂತ ತಿಳಕೋಬೇಕು, ಅವರ ಮುಂದ ಓಂ ಶ್ರೀಗುರು ಬಸವ ಲಿಂಗಾಯ ನಮಃ ಅಂದರ ಮುಗಿದು ಹೋಯಿತು ಅಂತ ಅನಿಸ್ತದ. ಇದು ಒಂದು ಪ್ರಯೋಗದ ದೃಷ್ಟಿಯಿಂದ ನೋಡಬೇಕು ಅಷ್ಟೇ.

ಪ್ರಶ್ನೆ: ನಾವು ಬಸವ ತತ್ವ ಸಾಗರದಲ್ಲಿ ಮುಳುಗಿ, ಇವತ್ತು ನಾವು ನೋಡ್ತಾ ಇದೀವಿ ಜಾತಿ ಜಾತಿ ಜಾತಿ ಅಂತ ನಾವು ಬಾಯಲಿ ಹೇಳ್ತಾ ಇದಿವಿ, ಅಣ್ಣ ಬಸವಣ್ಣನವರ ಅನುಭವ ಮಂಟಪದಲ್ಲಿ ಎಲ್ಲಾ ಕಾಯಕದ ಶರಣರು ಇದ್ದರು. ಸರ್ ಘಾರ ಯುವರ ಇನಫಾರಮೇಶನ್ ಕಕ್ಕಯ್ಯ ಲೇದರ ಟೆಕ್ನಾನಾಜಿಸ್ಟ, ಜಾತಿ ಅಲ್ಲ ಸ್ವಾಮಿ, ಕುಂಬಾರ ತಂತ್ರಜ್ಞ ಜಾತಿಯವನಲ್ಲ, ಇವೆಲ್ಲ ಪ್ರತಿಯೊಂದು ಜಾತಿ ಪೀಠಗಳಲ್ಲ, ಕಾಯಕ ಪೀಠಗಳಿದಾವೆ. ಪದೇ ಪದೇ ಜಾತಿ ಪೀಠ ಪೀಠ ಅಂತ ಹೇಳಬೇಡಿ ಸ್ವಾಮಿ.

ಅದಕ್ಕೆ ಲಿಂಗಾಯತದಲ್ಲಿ ಜಾತಿ ಇಲ್ಲ, ಅಂಗದ ಮೇಲೆ ಲಿಂಗವುಳ್ಳಡೆ ಕೂಡಲಸಂಗಮನೆಂಬೆ ಅಂತ ಶರಣರು ಹೇಳಿದ್ದಾರೆ.

ಉತ್ತರ: ಎಲ್ಲ ಪೀಠಗಳು ಕೂಡಲಸಂಗನ ಪೀಠಗಳು. ಬಸವಣ್ಣನವರ ಆಶಯ ಈಡೇರಿಸುವ ನೀವು ಯಾರನ್ನ ಮಡಿವಾಳ ಅಲ್ಲೇ ನಿಲ್ಲು, ಹಜಾಮ ಅಲ್ಲೇ ನಿಲ್ಲು, ಅಂದ್ರಿ ಅವರೆಲ್ಲರೂ ಬಸವಣ್ಣನವರ ಧರ್ಮ ಕಟ್ಟಿ ಬಸವಣ್ಣನವರ ಕಡೆಗೆ ಬರ್ತಿರಬೇಕಾದರೆ ನೀವು ಸಂತೋಷ ಪಡಿ ಸ್ವಾಮಿ ಜಾತಿ ಪೀಠ ಅಂತ ಹೇಳಬೇಡಿ. ಒಂದು ಪ್ರಶ್ನೆ ಇಲ್ಲಿ, ಇಂಡಿಯಾ ಹಾಳು ಮಾಡಿದ್ದು ಎರಡು ಅಂಶಗಳು. ಒಂದು ದೇವತೆಗಳು, ಇನ್ನೊಂದು ಜಾತಿಗಳು. ದೇವರಲ್ಲ, ದೇವರು ಹೋಗಿ ದೇವತೆಗಳಾದವು. ಈ ದೇವತೆಗಳಾದವಲ್ಲ ಇವೆ ನಮ್ಮನ್ನ ಹಾಳು ಮಾಡಿದವು. ಕಾಯಕ ಹೋಗಿ ಜಾತಿಯಾದವು. ಈ ಜಾತಿಗಳೇ ನಮ್ಮನ್ನ ಕೆಡಿಸಿದ್ದು.

ಆ ಕಾಲಕ್ಕೆ ಬಸವಣ್ಣನವರು ಏನಮಾಡಿದರು ಅಂದ್ರೆ ದೇವತೆಗಳನ್ನೆಲ್ಲ ತೆಗೆದು ದೇವರು ಮಾಡಿದರು. ಜಾತಿಗಳನ್ನೆಲ್ಲ ತೆಗೆದು ಕಾಯಕ ಮಾಡಿದರು. ಅದಕ್ಕಾಗಿ ನಾವು ಜಾತಿ ಅನ್ನುವ ಪದ ಬಳಸಿದ್ದರ ಕಾಯಕ ಅರ್ಥದೊಳಗ; ಅದನ್ನ ನಾವು ಗ್ರಹಿಸಿಕೊಂಡು ನಾವು ಮಾಡಿದರ ಮತ್ತೆ ಬಸವಣ್ಣನ ಸಿದ್ಧಾಂತವನ್ನ ಸರಿಯಾಗಿ ಒಪ್ಪಿಕೊಂಡಂತೆ ಆಗ್ತದ, ಆದುದರಿಂದ ಇದು ಕಾಯಕ ಧರ್ಮ ಅಂತ, ಬೇಕಾದ್ದವರು ಕಾಯಕ ಬೇಕಾದ್ದ ಮಾಡಲಿ, ನಿಮಗಿದೇ ಕಾಯಕ ಅಂತ ಅಲ್ಲ, ಅಥವಾ ತಂದಿ ಮಾಡಿದ ಕಾಯಕನೇ ಮಗ ಮುಂದುವರಿಸಬೇಕಂತೇನಿಲ್ಲ, ಬೇಕಾದಂಗ ಮಗ ಮತ್ತೊಂದು ಕಾಯಕಕ್ಕೆ ಹೋಗಬಹುದು. ತಂದೆ ರಾಜಕಾರಣಿ ಇದ್ದ. ಮಗ ಇಲ್ಲ. ನಾನು ಚಪ್ಪಲಿ ಅಂಗಡಿ ಇಡ್ತೀನಿ ಅಂತಂದ್ರ ಅವನ ಮಗ ಮಾಡಬಹುದು. ಕಾಯಕ ಇರಬೇಕು. ಅದಕ್ಕ ಕಾಯಕ ಇದು, ಧರ್ಮದ ಕಾಯಕದ ಶರಣರದಾರ, ಅದನ್ನ ನಾನು ಒಪ್ಪಿಕೊಳ್ಳತೀನಿ.

ಆದರ ನನಗೇನು? ಈ ವ್ಯವಸ್ಥೆಯೊಳಗೆ ಎಲ್ಲರೂ ಶ್ರೀಗುರುಬಸವಲಿಂಗಾಯ ನಮಃ ಏನೇ ಆದರೂ ಶ್ರೀಗುರು ಬಸವ ಲಿಂಗಾಯ ನಮಃ ಅನಬೇಕು ಅನ್ನೋದು ನನ್ನ ವಿಚಾರ ಅದ ಅಷ್ಟೆ. ಆದರ ಜಾತಿ ಬೆಳಸಬೇಕು ಅಂತ ಅಲ್ಲ.

ಪ್ರಶ್ನೆ: ಸರ್ ತಾವು ಭಾಷಾಂತರ ವಚನ ಪುಸ್ತಕಗಳಲ್ಲಿ ತಮ್ಮ ಪಾತ್ರ ಬಹಳ ದೊಡ್ಡದು; ಈಗ ಅದರಲ್ಲಿ ಬಿಡಿ ಜತ್ತಿಯವರ ಫೋಟೋ ಹಾಕಿರುವುದು ಎಷ್ಟು ಸೂಕ್ತ?

ಉತ್ತರ: ಒಂದು ಮಾತು, ಫೋಟೋ ಹಾಕಿದ್ದು, ಬಸವ ಸಮಿತಿಯ ಕೆಲಸ ಅದು. ನಾವು ಅನುವಾದ ಮಾಡಿಕೊಡುವುದು ನಮ್ಮ ಕೆಲಸ. ಇದು ಒಂದು ವಿಷಯ. ಎರಡನೇದ್ದು ನಾನು ಬಹಳ ವಿಚಾರ ಮಾಡಿಲ್ಲ; ಆಧುನಿಕ ಕಾಲದೊಳಗ ಹಳಕಟ್ಟಿಯವರು, ಆಮೇಲೆ ಹರ್ಡೇಕರ ಮಂಜಪ್ಪನವರು, ಅವರ ತರುವಾಯ ಬೆಂಗಳೂರಂಥ ರಾಜಧಾನಿಯೊಳಗ ಬಸವ ಸಮೀತಿಯನ್ನ ಸ್ಥಾಪಿಸಿ, ಬಸವ ಸಮೀತಿ ಅಸ್ತಿತ್ವ ಬರುವ ವರೆಗೂ ಬಸವಣ್ಣ ಕರ್ನಾಟಕ ಬಿಟ್ಟು ಹೋಗಿದ್ದಿಲ್ಲ.

೧೯೬೮ ರೊಳಗ ಜತ್ತಿ ಸಾಹೇಬರು ಅಷ್ಟಶತಮಾನೋತ್ಸವ ಮಾಡಿದರು. ಆವಾಗ ಬಸವಣ್ಣ ನಮ್ಮ ರಾಜ್ಯ ಬಿಟ್ಟು ರಾಷ್ಟ್ರಮಟ್ಟಕ್ಕೆ ಪ್ರವೇಶ ಮಾಡಿದರು. ಜಾಕೀರ ಹುಸೇನ್ ಬಂದ್ರು, ಆವಾಗ ಪ್ರೈಮ್ ಮಿನಿಸ್ಟರ್ ಯಾರಿದ್ರು ಇಂದಿರಾ ಗಾಂಧಿ. ಇವರೆಲ್ಲ ಬಂದ್ರು, ಬಂದು ಬಸವಣ್ಣನ ಬಗ್ಗೆ ಎಲ್ಲಾ ಮಾತಾಡಿದ್ರು, ಆವಾಗ ಅವರೆಲ್ಲರಿಗಿ ಗೊತ್ತಾಯ್ತು, ಬಸವಣ್ಣ ಒಬ್ಬರಿದ್ದಾರೆ. ಅದಕ್ಕಾಗಿ ನಮ್ಮ

ಆಧುನಿಕ ಕಾಲದೊಳಗ ಬಸವ ಸಿದ್ಧಾಂತವನ್ನ ಪ್ರಚಾರ ಮಾಡಲಿಕ್ಕ ಕೆಲಸ ಮಾಡಿದ ವ್ಯಕ್ತಿಗಳ ಹೆಸರುಗಳಂದ್ರ ನಾನು ಬಹಳ ವಿಚಾರ ಮಾಡಿದಿನಿ. ಹಳಕಟ್ಟಿಯವರು ಅವರ ತರುವಾಯ ಹರ್ಡೆಕರ ಮಂಜಪ್ಪನವರು, ಮಂಜಪ್ಪನವರ ತರುವಾಯ ಜತ್ತಿಯವರು. ಅವರಿಗೇ ಬಸವಣ್ಣನವರ ಬಗ್ಗೆ, ಲಿಂಗಾಯತ ತತ್ವಾಚರಣೆಯ ಬಗ್ಗೆ ತುಂಬಾ ನಿಷ್ಠೆ ಇತ್ತು.

ಪ್ರಶ್ನೆ: ಜತ್ತಿಯವರ ಬಗ್ಗೆ ನಮಗ ತುಂಬಾ ಗೌರವ ಇದೆ. ಆದರ ನಾವು ಕೇಳ್ತ ಇರೋದು ಭಾವಚಿತ್ರ ಹಾಕಿರುವುದು ಸೂಕ್ತವೇ?

ಉತ್ತರ: ಅಂದ್ರ ಅವರು ಸುಮ್ಮನೆ ಯಾರದೋ ಒಂದು ಹಾಕಿಲ್ಲಂತ ನಾನು ಹೇಳ್ತಾ ಇರೋ ವಿಚಾರ. ಅವರು ನಮ್ಮ ಸಮಾಜಕ್ಕೆ ದೊಡ್ಡ ಕೆಲಸ ಮಾಡಿದಾರೆ, ಒಂದು. ಇನ್ನೊಂದು ಅದರೊಳಗ ಈಗ ಜತ್ತಿಯವರದು ಶತಮಾನೋತ್ಸವ ಅದ. ಬಸವ ಸಮಿತಿಯನ್ನ ಸ್ಥಾಪಿಸಿ ಅದರ ಮುಖಾಂತರ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಪ್ರಚಾರ ಕೊಟ್ಟಂತಹ ಕೆಲಸವನ್ನ ಅವರು ಮಾಡಿದಾರೆ. ಈ ಉದ್ದೇಶದಿಂದ ನಾವು ಕೃತಜ್ಞತೆಯ ರೂಪದಿಂದ ಅವರು ಬಸವ ಸಮಿತಿಯವರು ಹಾಕಿದ್ದಾರೆ ಅಂತ ನಾನು ಭಾವಿಸ್ತಾ ಇದ್ದೇನಿ. ಬೇಕಿದ್ದರ ಮುಂದಿನ ಸಲ ಈಗ ನೀವೇನು ವಿಚಾರ ಮಾಡ್ತೀರಿ ಅದನ್ನ ಜಾರಿಮಾಡಲು ಪ್ರಯತ್ನ ಮಾಡಬೇಕೆಂದು ಅವರಲ್ಲಿ ವಿನಂತಿಸುತ್ತೇನೆ.

(ಓಂ ಶ್ರೀಗುರು ಬಸವ ಲಿಂಗಾಯನಮಃ ಸಭಿಕರು ದಯವಿಟ್ಟು ಗಮನಿಸಿ, ಈ ಸಂವಾದ ಇರೋದು ಲಿಂಗಾಯತ ಧರ್ಮದ ಜಾಗತೀಕರಣ ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ. ಆದ್ದರಿಂದ ನೀವು ನೇರ ಪ್ರಶ್ನೆಗಳನ್ನ ಸಮ್ಮೇಳಾನಾಧ್ಯಕ್ಷರಿಗೆ ಕೇಳಿ ತಿಳಿದುಕೊಳ್ಳಬೇಕೆಂದು ಆಯೋಜಕ ಸಮಿತಿಯ ಪರವಾಗಿ ವಿನಂತಿಸಲಾಗುತ್ತದೆ)

ಪ್ರಶ್ನೆ : ಬಸವಣ್ಣನವರ ವಚನದಲ್ಲಿ ಬಸವಣ್ಣನವರ ಫೋಟೋನೇ ಇಲ್ಲ, ಜತ್ತಿಯವರ ಒಬ್ಬರದೇ ಫೋಟೋ ಹಾಕಿದ್ದು, ಅವರ ಮಕ್ಕಳು ಹೆಂಡತಿಯವರದ್ದೆಲ್ಲ ಹಾಕರಿ. ಆದರ ಮೊದಲು ಬಸವಣ್ಣನವರ ಫೋಟೋ ಇರಲಿ.

ಉತ್ತರ: ಅವರ ಮಕ್ಕಳ ಫೋಟೋ ಹಾಕಲಿಕ್ಕ ಬರುದಿಲ್ಲ. ಆ ರೀತಿ ಕೊಂಕು ನುಡಿಯಬಾರದು. ಈಗ ಬಸವಣ್ಣನವರ ಫೋಟೋ ಜತ್ತಿಯವರ ಫೋಟೋಕ್ಕಿಂತ ಮೊದಲ ಹಾಕಿದರ ಆಯ್ತಿಲ್ಲ. ಆ ಬಗ್ಗೆ ಅನವಶ್ಯಕ ಚರ್ಚೆ ಮಾಡುವುದು ಸರಿಯಲ್ಲ.

ಪ್ರಶ್ನೆ: ಲಿಂಗಾಯತರಿಗೆ ಧರ್ಮದಲ್ಲಿ ಅಭಿಮಾನ ಕಡಿಮೆ ಇರಲು ಕಾರಣವೇನು? ಅದಕ್ಕೆ ಪರಿಹಾರವೇನು? ಇಷ್ಟೊಂದು ನಿರಾಸಕ್ತರು ಲಿಂಗಾಯತರು ಯಾಕೆ? ಲಿಂಗಾಯತರೆ ತಮ್ಮ ಧರ್ಮ ಬಿಟ್ಟು ಬೇರೆ ಧರ್ಮಗಳಿಗೆ ಬಲಿ ಏಕೆ ಆಗುತ್ತಿದ್ದಾರೆ, ಉದಾ: ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ, ಸಹಜ ಮಾರ್ಗ, ಅಯ್ಯಪ್ಪ ಇವುಗಳಿಗೆಲ್ಲ ಲಿಂಗಾಯತರೆ ಆಕರ್ಷಿತರಾಗುತ್ತಿರುವ ಕಾರಣವೇನು?

ಉತ್ತರ: ಅದಕ್ಕ ಬಲಿಯಾಗಲಿಕ್ಕೆ ಏನು ಕಾರಣ ಅನ್ನೂದನ್ನ ಅವರೇ ಹುಡಕೋಬೇಕು. ನಮ್ಮ ಧರ್ಮದ ಮಹತ್ವವನ್ನು ಅವರಿಗೆ ಸರಿಯಾಗಿ ತಿಳಿಸಿಕೊಟ್ಟಿಲ್ಲ ನಾವು.

ಪ್ರಶ್ನೆ: ಇಲ್ಲ ಅವರಿಗೆ ಗುರ್ತು ಅದ, ಆದರೆ ಢೋಂಗಿತನದಿಂದ ಹೋಗ್ತಾರ.

ಉತ್ತರ: ಮಹತ್ವ ಗೊತ್ತಿದ್ರ ಬಿಟ್ಟು ಹೋಗುದು ಸ್ವಲ್ಪ ಕಷ್ಟ.

ಪ್ರಶ್ನೆ: ಈಗ ಲಿಂಗಾಯತ ಸ್ವತಂತ್ರ ಧರ್ಮ ಆಗಬೇಕು ಅಂತ ಹೇಳ್ತಾ ಇರೋದು ಸರ್ವವಿದಿತ. ಆದರೆ ದಲಿತ ಜನಾಂಗಕ್ಕೆ ಸೇರಿದವರಾಗಲಿ, ಹಿಂದುಳಿದ ಸಮಗಾರ ಜನಾಂಗಕ್ಕೆ ಸೇರಿದವರಾಗಲಿ, ಅವರು ದೀಕ್ಷೆ ಪಡೆದು ಲಿಂಗಾಯತರಾಗ್ತಾರೆ. ಆದರೆ ಅವರಿಗೆ ಸರಕಾರದಿಂದ ಸೌಲಭ್ಯ ಕೊಡ್ತಕ್ಕಂತದ ಇದೆ. ಆ ಸೌಲಭ್ಯಗಳು ಮೊಟಕಾಗ್ತವೆ ಅಲ್ಲವೇ ಅದಕ್ಕೇನು ಪರಿಹಾರ?

ಉತ್ತರ: ಸ್ವತಂತ್ರ ಧರ್ಮ ಅಂತ ಮಾನ್ಯತೆ ಪಡೆದಾಗ ಅವರನ್ನೊಳಗೊಂಡು ಎಲ್ಲರಿಗೂ ಸೌಲಭ್ಯಗಳು ದೊರಕುತ್ತವೆ. ಜೈನಕ್ಕ, ಸಿಖ್‌ಕ್ಕ ಹ್ಯಾಂಗ ಸಿಕ್ತದ ಹಾಂಗ ಸ್ವತಂತ್ರ ಧರ್ಮ ಅಂತ ಮಾಡ್ರಿ ಎಲ್ಲರಿಗೂ ಸಿಗ್ತದ ಇವರಿಗೂ ಸಿಗ್ತದ.

ಪ್ರಶ್ನೆ: ಈಗ ದಲಿತ, ಕುಂಬಾರರಿಗೆ ಸಿಗುವ ಸೌಲಭ್ಯ ಸಿಗುತ್ತಾ?

ಉತ್ತರ: ಖಂಡಿತವಾಗಿಯೂ ಸಿಗುತ್ತದೆ.

ಪ್ರಶ್ನೆ: ಕೆಲವರು ಬಸವ ಧರ್ಮ ಅಂತ ಕರೆಯುತ್ತಾರಲ್ಲ ನಮ್ಮ ಧರ್ಮಕ್ಕೆ; ಈ ಬಗ್ಗೆ ನಿಮ್ಮ ನಿಲುವು ಏನು?

ಉತ್ತರ: ಲಿಂಗಾಯತ ಅಂತ ಇರುವುದೇ ಸೂಕ್ತ ಅನ್ನಿಸ್ತದ. ಅದಕ್ಕ ಬಸವಣ್ಣ ಒಪ್ಪುದಿಲ್ಲ ಬಿಡ್ರೋ ಮಾರಾಯ್ರೆ ಅಂತ ಅನ್ನಿಸ್ತದ. ಲಿಂಗಾಯತ ಬಹಳ ಅರ್ಥಪೂರ್ಣ ಹೆಸರು. ಲಿಂಗಾಯತ ಲಿಂಗವನ್ನ ಆಯತ ಮಾಡಿಕೊಂಡವ ಅಂತ ಅರ್ಥಗರ್ಭಿತ ಹೆಸರು ಬಹಳ ಸೂಕ್ತ.

ಲಿಂಗಾಯತ ಧರ್ಮದ ಜಾಗತೀಕರಣ, ರಾಷ್ಟ್ರೀಯ ವಿಚಾರ ಸಂಕಿರಣ–ಬೀದರ.

೨೩–೨೪ ಡಿಸೆಂಬರ್ ೨೦೧೨

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೧೧

ಮಾರ್ಗಸಾಹಿತ್ಯ ಮತ್ತು ಜಾನಪದಸಾಹಿತ್ಯ

❖

ಪ್ರಶ್ನೋತ್ತರ : ಕರ್ನಾಟಕ ಜಾನಪದ

ಪ್ರಶ್ನೆ : ೧. ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಎರಡೂ ಬೇರೆ ಬೇರೆ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ ಎಂಬರ್ಥದ ಮಾತನ್ನು ಹೇಳಿದಿರಿ. ಇದು ಅಸಮ್ಮತವಾದ ವಿಶ್ಲೇಷಣೆ ಎಂದು ನಮ್ಮ ಭಾವನೆ. ಏಕೆಂದರೆ, ಈ ಎರಡೂ ಸಾಹಿತ್ಯಗಳು ಮೂಲಭೂತವಾಗಿ ಪ್ರತಿಬಿಂಬಿಸುವುದು ಆ ಜನಾಂಗ ಒಪ್ಪಿಕೊಂಡಿರುವ ಮೌಲ್ಯಗಳನ್ನು. ನೀವು ಹೇಳುವ ಮಾತು ನಿಜವಿದ್ದರೆ ಜನಪದ ಸಾಹಿತ್ಯ ಪೂರ್ತಿ ಆರೋಗ್ಯಕರ ಮೌಲ್ಯಗಳನ್ನು ಹೊಂದಿರಬೇಕಿತ್ತು. ಆದರೆ ವಾಸ್ತವವಾಗಿ ಹಾಗಿಲ್ಲವಲ್ಲ?

ಎಂ. ಎಂ. ಕಲಬುರ್ಗಿ : ಜನಾಂಗ ಒಂದೇ ಆಗಿದ್ದರೂ ವಿಭಿನ್ನ ಜೀವನ ವಿಧಾನ ಕಾರಣವಾಗಿ ಅಲ್ಲಿ ಶಿಷ್ಟ-ಜಾನಪದವೆಂಬ ಕವಲು ಅನಿವಾರ್ಯ. ಹೀಗೆಂದ ಮಾತ್ರಕ್ಕೆ ಒಂದು ಅನಾರೋಗ್ಯಕರ, ಇನ್ನೊಂದು ಆರೋಗ್ಯಕರ ಮೌಲ್ಯಗಳನ್ನು ಪ್ರತಿಪಾದಿಸುತ್ತವೆಯೆಂದು ನನ್ನ ಮಾತಿನ ಅರ್ಥವಲ್ಲ. ಪರಿಸರದ ಪ್ರಭಾವದಿಂದಾಗಿ ಆ ಮೌಲ್ಯವನ್ನು ಇದು, ಈ ಮೌಲ್ಯವನ್ನು ಅದು ಗೌಣವಾಗಿ ವ್ಯಕ್ತಪಡಿಸ ಬಹುದಾದರೂ ಪ್ರಧಾನವಾಗಿ ಅವು ತಮ್ಮತನವನ್ನೇ ಮೆರೆಯುತ್ತವೆ.

ಪ್ರಶ್ನೆ : ೨. ಕನ್ನಡ ಕಾವ್ಯವನ್ನು ಪ್ರಾಂತೀಯ ಕಾವ್ಯ ಎಂದೂ ತುಳು ಅಥವಾ ಇನ್ನಿತರ dialectic ಕಾವ್ಯವನ್ನು ಉಪಪ್ರಾಂತೀಯ ಕಾವ್ಯ ಎನ್ನಬಹುದಾದರೆ, ಮಹಾಭಾರತ, ರಾಮಾಯಣದಂತಹ ಕೃತಿಗಳನ್ನು ಯಾವ tradition ಗೆ ಸೇರಿಸುತ್ತೀರಾ?

ಎಂ. ಎಂ. ಕಲಬುರ್ಗಿ : ಕನ್ನಡ ಕಾವ್ಯವನ್ನು ಪ್ರಾಂತೀಯ ಕಾವ್ಯವೆಂದು ತುಳು ಅಥವಾ ಇನ್ನಿತರ dialectic ಕಾವ್ಯವನ್ನು ಉಪಪ್ರಾಂತೀಯ ಕಾವ್ಯವೆಂದು ನಾನು ಹೇಳಿಲ್ಲ. ಒಂದು ವೇಳೆ ಅದು ನಿಮ್ಮ ಅಭಿಪ್ರಾಯವಾಗಿದ್ದರೆ ಇವೆರಡೂ ಬೇರೆ ಬೇರೆ ಭಾಷೆಗಳಾಗುವುದರಿಂದ ಹಾಗೆ ಹೇಳುವುದು ತಪ್ಪು. ಅಂದರೆ ಪ್ರಾಂತೀಯ, ಉಪ ಪ್ರಾಂತೀಯ ಎಂಬ ಪಾರಿಭಾಷಿಕ ಪದಗಳು ಒಂದೇ ಭಾಷೆಯ ಸಾರ್ವತ್ರಿಕವಲಯ, ಉಪಭಾಷಾವಲಯಗಳನ್ನು ಕುರಿತು ಹೇಳುವಲ್ಲಿ ಅರ್ಥ ಪಡೆಯುತ್ತವೆ. ಒಂದು ವಸ್ತು ಈ ಎರಡೂ ಮಾಧ್ಯಮಗಳಲ್ಲಿ ಪ್ರಕಟಗೊಳ್ಳ ಬಹುದಾದುದರಿಂದ ಯಾವುದೇ ಭಾಷೆಯಲ್ಲಿ ರಾಮಾಯಣ, ಮಹಾಭಾರತಗಳು ಪ್ರಾಂತೀಯ ಕಾವ್ಯವಾಗಿಯೂ ಉಪಪ್ರಾಂತೀಯ ಕಾವ್ಯವಾಗಿಯೂ ಆಕಾರ ಪಡೆಯುತ್ತವೆ.

ಪ್ರಶ್ನೆ : ೩. 'Great - tradition -little tradition' ಗಳನ್ನು ಪ್ರಸ್ತಾಪಿಸಿದ್ದೀರ. ಅದನ್ನು ಇನ್ನಷ್ಟು ವಿವರಿಸಬೇಕೆಂದು ಕೋರುತ್ತೇನೆ. ಆಧುನಿಕ ಸಾಹಿತ್ಯದಲ್ಲಿ ಇವನ್ನು ಹೇಗೆ ಕಂಡುಕೊಳ್ಳಬಹುದು?

ಎಂ. ಎಂ. ಕಲಬುರ್ಗಿ : Great - tradition -little tradition ಗಳ ಪ್ರಸ್ತಾಪ ನನ್ನ ಪ್ರಬಂಧದಲ್ಲಿ ಸ್ಪಷ್ಟವಾಗಿಯೇ ಬಂದಿದೆ. ವಿವರ ಅನವಶ್ಯ. ನೀವು ಸೂಚಿಸಿರುವ 'ಆಧುನಿಕ ಸಾಹಿತ್ಯ'ವು ಶಿಷ್ಟ ಸಾಹಿತ್ಯವೇ ಆಗಿರುವುದರಿಂದ ಅದು Great tradition ಗೆ ಸಂಬಂಧ ಪಟ್ಟುದೆಂದು ಹೇಳಬೇಕಾಗುತ್ತದೆ. ಈ ಅಂಶವನ್ನು ಇನ್ನೂ ಸ್ಪಷ್ಟಪಡಿಸುವುದಾದರೆ ಬೇಂದ್ರೆಯವರು ಎಷ್ಟೇ ಜಾನಪದೀಯವಾಗಿ ಬರೆದರೂ ಅವರದು Great tradition ಕ್ಕೆ ಸಂಬಂಧಪಟ್ಟ ಬರವಣಿಗೆಯಾಗಿದೆ.

ಪ್ರಶ್ನೆ : ೪. ಮಾರ್ಗ-ದೇಸಿಗಳ ಬಗ್ಗೆ ನೀವು ಇಷ್ಟು descriptive ಆಗಿ ವಿವರಿಸಿದರೂ ಜಾನಪದ ಮತ್ತು ಮಾರ್ಗಗಳು ಒಂದೇ ಕಥೆಯಿಂದ ತಮ್ಮ ತಮ್ಮ ಸಾಹಿತ್ಯವನ್ನು ರೂಪಿಸಿಕೊಂಡಿದ್ದು. ಅವುಗಳ ಆಂತರಿಕ-ರಚನೆ ಒಂದೇ ಎಂದಾಗುವುದಿಲ್ಲವೇ? ಲೆವಿಸ್ಟ್ರಾಸನ ಅಧ್ಯಯನ ಇದನ್ನು ತೋರಿಸಿದೆ. ಹೀಗಾಗಿ ದೇಸಿ ಮಾರ್ಗಗಳು ಪರ್ಯಾಯವಾಗಿ ಹೊರಕವಚದವೆಂದಾಗುತ್ತದಲ್ಲ?

ಎಂ. ಎಂ. ಕಲಬುರ್ಗಿ : ಕಥೆ ಒಂದೇ ಆಗಿದ್ದ ಮಾತ್ರಕ್ಕೆ ದೇಸಿ-ಮಾರ್ಗಗಳಲ್ಲಿ ಅದು ಒಂದೇ ಬಗೆಯ ಆಂತರಿಕ ರಚನೆಯನ್ನು ಪಡೆಯುತ್ತದೆಯೆಂಬ ನಿಮ್ಮ ಅಭಿಪ್ರಾಯವನ್ನು ಲೆವಿಸ್ಟ್ರಾಸ್ ಹೇಳಿದ ಮಾತ್ರಕ್ಕೆ ನಾನು ಒಪ್ಪುವುದಿಲ್ಲ. ದೇಸಿ-ಮಾರ್ಗಗಳು ಕಾವ್ಯದ ಹೊರ ಕವಚವೆನ್ನುವ ನೀವು 'ಶೈಲಿ ಕಾವ್ಯದ ಹೊರಕವಚನ-ವೆನ್ನುವುವವರ ಗುಂಪಿಗೆ ಸೇರಿದವರು; ನಾನು 'ಶೈಲಿ ಕವಿಯ ಶೀಲ'ವೆನ್ನುವವರ ಗುಂಪಿಗೆ ಸೇರಿದವನು.

ಕರ್ನಾಟಕ ಜಾನಪದ

ಪ್ರಸಂ. ಜಿ.ಎಸ್. ಶಿವರುದ್ರಪ್ಪ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧೯೮೧

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೧೨

ಲಘುವಾಗೆಲೆ ಮನ ಕವಿಯಾಗೆಲೆ ಮನ...

❖

ನಿರೂಪಣೆ : ಸುನಂದಾ ಕಡಮೆ

ಎಂ.ಎಂ. ಕಲಬುರ್ಗಿ : ಬಾ.. ಬಾ.. ನಿಂದs ದಾರೀ ನೋಡ್ಕೋತ ಕೂತಿದ್ದೆ. ಮನಿಯೊಳಗ ಹೆಣ್ಮಕ್ಳು ಊರಿಗೆ ಹೋಗ್ಯಾರಂದ್ರs ಅದೇನೋ ಅಂತಾರಲಾ, ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ಹುಣ್ಣಿಮೆ ಹೋಳಿಗೆ ದೀಪ, ಹೆಂಡತಿ ತೌರಿಗೆ ಹೊರಡುವೆನೆಂದರೆ ನನಗಿಲ್ಲದ ಕೋಪಾ......

ಗಿರಡ್ಡಿ ಗೋವಿಂದರಾಜ : ಯಾಕೋ? ಸಂಶೋಧಕಾ ಆಗೀ ನರಸಿಂಹಸ್ವಾಮಿ ಯವರ ಕವನಾ ಹಾಡೋವಂಗ್ಹಾತಲಾ ನಿನ್ನ ಪರಿಸ್ಥಿತಿ.

ಎಂ.ಎಂ. ಕಲಬುರ್ಗಿ : ಅದ್ನs ಹೇಳಕ ಹೊಂಟಿದ್ದೆ ನೋಡ್ ಮತ್ತs ನಾ ಏನರೇ ಮೈಸೂರು ಯೂನಿವರ್ಸಿಟಿಯೊಳಗ ಎಂ.ಎ. ಮಾಡಾಕ ಹೋಗಿದ್ನಂದ್ರ ಕವಿನ ಆಗಿಬಿಟ್ಟಿರತಿದ್ದೆ. ಧಾರವಾಡಕ್ಕ ಬಂದು ಸಂಶೋಧಕಾ ಆದೆ ಅಂತ ನನ್ಗ ಭಾಳ ಸರ್ತಿ ಅನಿಸ್ತಿರ್‍ತದ ನೋಡು.

ಗಿರಡ್ಡಿ ಗೋವಿಂದರಾಜ : ಆ ವ್ಯಾಳ್ಯಾಕ ನಿಮ್ಮ ಕನ್ನಡಾ ಡಿಪಾರ್ಟಮೆಂಟಗಿಂತ, ನಮ್ಮ ಇಂಗ್ಲಿಷ್ ಡಿಪಾರ್ಟಮೆಂಟಿನಾಗ ಕಾವ್ಯದ ಗಾಳಿ ಜಬರದಸ್ತ್ ಬೀಸಿತ್ತು. ೧೯೬೦ರಾಗ ಅನಸ್ತೇತಲ್ಲ? ಚಂದ್ರಶೇಖರ ಕಂಬಾರ, ಚಂಪಾ, ಪಟ್ಟಣಶೆಟ್ಟಿ ಕೊಟ್ಟೂರಶೆಟ್ಟಿ, ಮಾಲತಿ ಮತ್ ನೀನು, ಎಲ್ಲಾರ ಒಂದು ದೊಡ್ಡ ಗುಂಪs ಇತ್ತು ಅವಾಗ.

ಎಂ.ಎಂ. ಕಲಬುರ್ಗಿ : ನಾನೂ ಮತ್ತ ಕಂಬಾರ, ನಿಮ್ಮೆಲ್ರಿಗಿಂತಾ ಒಂದ್ ವರ್ಷಾ ಸೀನಿಯರ್ ಇದ್ವೀ ಕಾಣ್ತೇತಿ, ಆ ವಿದ್ಯಾರ್ಥಿ ಜೀವ್ನಾ ಅನ್ನೋದು, ನೆನಸಿಕೊಂಡಷ್ಟೂ ಹರೇದವ್ರಾಗ್ತೀವಿ ನೋಡು.

ಗಿರಡ್ಡಿ ಗೋವಿಂದರಾಜ : ಎಲ್ಲಾರ್‍ಗೂ ಹಂಗs ಮತ್ತ. ಆದ್ರs ನಮ್ದು ತುಸು ವಿಶೇಷಾನ ಐತಿ, ಇಲ್ಲೇ ವಿದ್ಯಾರ್ಥಿಗಳಾಗಿದ್ದೋರು ಮುಂದ ಇಲ್ಲೇ ಮೇಷ್ಟ್ರೂ ಆಗಿ ಉಳ್ಕೊಂಡಿದ್ದು, ನಮ್ಮ ಗುಂಪಿಗೆ ಗುಂಪ. ಒಬ್ಬೊಬ್ರೂ ಒಂದೊಂದು ಕ್ಷೇತ್ರದೊಳಗ ತೊಡಗಿಕೊಂಡು ಬೆಳಕು ಕಂಡಿದ್ದು, ಗೋಕಾಕರು ಮತ್ತs ಶಾಂತಿನಾಥ ದೇಸಾಯೋರು ಎಂಥೆಂಥಾ ಮಂದಿs ಸಂಪರ್ಕದೊಳಗೆ ನಮ್ಮ ಯೂನಿವರ್ಸಿಟೀ ಪರಿಸರ ಸೃಷ್ಟಿಯಾಗಿತ್ತು. ಅಂದ್ರs, ಅದs ಒಂದು ಹೆಮ್ಮೆ ಪಡೋವಂಥಾ ಸಂಗ್ತೀಪಾ.

ಎಂ.ಎಂ. ಕಲಬುರ್ಗಿ : ಗೆಳೆಯಾರ ಗೆಳೆಯಾರ ನಡುವೆ ಸಾಹಿತ್ಯದ ಬಗ್ಗೇನs ಆಗ್ಲೀ, ಶಿಕ್ಷಣದ ಬಗ್ಗೇನ ಆಗ್ಲೀ ಮುಕ್ತ ಚರ್ಚೆ ನಡೀತಿತ್ತು. ಹಾಸ್ಯ, ತಮಾಷೆ, ವ್ಯಂಗ್ಯ ಗಂಭೀರ ಸ್ವರೂಪದ್ದಾಗಿರತಿದ್ರೂ ಭಾಳ ಆರೋಗ್ಯಕರ ವಾತಾವರಣ ಇತ್ತಲ್ಲ? ನಾನರೇ ಅದ ಆ ಹಳ್ಳಿಯಿಂದ ಬಂದಾಂವ. ನಿಮ್ ಜೋಡೀ ಬೆರೆಯಾಕನs ನನಗ ಭಾಳ ಸಂತೋಷ ಆಗಿತ್ತು ಬಿಡಪಾ.

ಗಿರಡ್ಡಿ ಗೋವಿಂದರಾಜ : ನಾನರs ಏನು? ಪಟ್ಟಣದಾಗs ಹುಟ್ಟಿ ಬಂದಾವಂಥ ಮಾಡಿಯನ? ಇಬ್ರೂ ಅವಿಭಕ್ತ ಕುಟುಂಬದಿಂದಾನs ಬಂದವು. ಒಕ್ಕಲತನದ ಮನೆತನದಾಗ ಬೆಳದವು ಅಲ್ಲೇನ? ನೀನು ಭಾಳ ಕಿಲಾಡಿ ಇದ್ಯಾ ಮತ್ತ ಹಳ್ಳಿಯಿಂದ ಬಂದಾಂವ ಅನ್ನೋತನ, ಯೂನಿವರ್ಸಿಟೀಗೇ ಪ್ರಥಮ ಬಂದಿದ್ಯಲ್ಲೋ. ಮೊಟ್ಟಮೊದಲ ನಿನ್ ಒಂದು ಪ್ರಬಂಧಾ ಇನ್ನೂ ನೆನಪೈತಿ ನನಗ. ಪಂಪನ ಪ್ರಭಾವ ರನ್ನನ ಮ್ಯಾಗ ಎಷ್ಟಮಟ್ಟಿಗೆ ಆಗೇದ ಅನ್ನೋ ವಿಷಯ ಇತ್ತು ಅದರಾಗ, ಒಳ್ಳೇ ಪ್ರತಿಕ್ರಿಯೆ ಬಂದಿತ್ತಲ್ಲ ಆ ಪ್ರಬಂಧಕ್ಕ?

ಎಂ.ಎಂ. ಕಲಬುರ್ಗಿ : ಪಂಪ ತನ್ನ ಮಹತ್ವದ ಎರಡು ಕಾವ್ಯವನ್ನು ತನ್ನ ನಲವತ್ತರ ಪ್ರಾಯದೊಳಗs ಬರೆದಿದ್ದಾ ಅನ್ನೋದು ಒಂದು ಘಟನಾ ಪ್ರಧಾನ ವಿಶ್ಲೇಷಣೆಗೆ ಸಂಬಂಧಪಟ್ಟ ಸಂಶೋಧನೆ ನೋಡು; ಘಟನೆಯ ಹಿಂದಿನ ಕಾರಣವನ್ನು ಶೋಧೀಸೋದು, ಮತ್ತs ಅಂಥ ವ್ಯಾಖ್ಯಾನಾತ್ಮಕ ಸಂಶೋಧನೆನ ಭಾಳ ಮುಖ್ಯವಾದದ್ದು ಅನಸ್ತದ ನನ್ಗ. ವರ್ತಮಾನದ ಕಣ್ಣು ತೆರೆಸೋವಂಥಾದ್ದು ಸಮಾಜಮುಖೀಯಾದಂಥಾದ್ದು ನನಗ ಭಾಳ ಖುಷೀ ಕೊಡ್ತಾವು.

ಗಿರಡ್ಡಿ ಗೋವಿಂದರಾಜ : ಬರವಣಿಗೆಯ ಮೂಲ ಮತ್ತು ಕೊನೀ ಎರಡೂ ಖುಷೀನ ಅಲ್ಲೇನು? ಕಥಿ, ಕವಿತಾ, ಕಾದಂಬರಿ, ವಿಮರ್ಶೆ, ಸಂಶೋಧನೆ ಎಲ್ಲಾ ಪ್ರಕಾರಾನೂ ಒಂದು ರೀತಿಯೊಳಗ ಕ್ರಿಯೆಟಿವ್ ಪ್ರೊಸೆಸ್ಸೇ ಆಗೇತಿ. ಒಂದು ಬರಹಕ್ಕs ಸಾಮಾಜಿಕ ನ್ಯಾಯಾ ಎಷ್ಟ್ ಮುಖ್ಯಾ ಆಗೈತೋ, ಕಲಾತ್ಮಕತೀನೂ ಅಷ್ಟs ಮುಖ್ಯಾ ಐತಿ. ನಿನ್ನ ಸಂಶೋಧನೆಯೊಳಗ ಸಾಮಾಜಿಕ ಕಳಕಳಿ ಯಾವಾಗ್ಲೂ ಇದ್ದೇ ಇರ್ತೇತಿ ಬಿಡು. 'ಮಾರ್ಗ'ದ ನಾಲ್ಕು ಬೃಹತ್ ಸಂಪುಟಗಳು, ಫ.ಗು. ಹಳಕಟ್ಟಿಯವರ ಸಮಗ್ರ ಸಾಹಿತ್ಯದ ಕೆಲಸಾ..... ಹಿಂಗ ಒಟ್ಟಾರೆ ಕನ್ನಡದ ಕೆಲಸಾ ಮಾಡ್ತಾ ಇರತಿ...

ಎಂ.ಎಂ. ಕಲಬುರ್ಗಿ : ಇನ್ನೊಂದು 'ದೇವಾಲಯ ಕೋಶ' ಹೊರತರಬೇಕೂ ಅನ್ನೋದು ಗದುಗಿನ ಮಠದವರ ಕನಸ ಐತಿ. ಗದುಗಿನ ಮಠಾ ಅಂದಕೂಡ್ಲೇ ನೆನಪಾತು ನೋಡು; ಗದುಗಿನ್ಯಾಗ ಕುಂದಣಗಾರ ಸಾಹಿತ್ಯ ಸಮ್ಮೇಳನಾ ಆದಾಗ, ಮೊತ್ತ ಮೊದಲು ಇಬ್ರೂ ಅಲ್ಲಿ ಭಾಗವಹಿಸಿದ್ವಿ ಅನಸ್ತದ ಅಲ್ಲ? ಅಲ್ಲಿ ನೀ ಓದಿದ ಕವಿತಾ ನಿನ್ನ 'ರಸವಂತೀ' ಕವನ ಸಂಕಲನದಾಗ ಸೇರೆತಿ. ಆಮ್ಯಾಗ ಬಂದ 'ಮರ್ಲಿನ್ ಮನ್ರೋ ಮತ್ತು ಇತರ ಪದ್ಯಗಳು' ಮೂಲಕ ನೀನು ಕವೀನೂ ಆದಿ. ನನ್ನ ಕವಿಯಾಗೋ ಆಶಾ ಹಂಗs ಉಳೀತು.

ಗಿರಡ್ಡಿ ಗೋವಿಂದರಾಜ : ಯಾಕ? ನೀನೂ ಮೊದ್ಲೇಕ ಕವಿತಾ ಬರೀತಿದ್ದೀಯಲ್ಲೋ. 'ಸಂಕ್ರಮಣ'ದಾಗ ಕೆಲವೊಂದು ಹಾಕ್ಕೊಂಡಿದ್ದು ನೆನಪಿದ್ದಂಗೈತಿ. ನಾವು ಮೂವರೂ ಸೇರಿ 'ಸಂಕ್ರಮಣ' ಶುರೂ ಮಾಡಿದ ಕಾರಣsನs ಅದು, ಯುವ ಲೇಖಕರಿಗೆ ಪ್ರಾತಿನಿಧ್ಯ ಸಿಗ್ಬೇಕೂ ಅನ್ನೋದು. ಆ ವ್ಯಾಳ್ಯಾಕ ನವ್ಯ ಸಾಹಿತ್ಯದ ಮಹತ್ವದ ತಿರುವು ಇತ್ತು. ಸಾಹಿತ್ಯದೊಳಗ ಒಂದು ಹೊಸ ದಾರಿ ನಿರ್ಮಾಣ ಮಾಡ್ಬೇಕು ಅನ್ನೋ ಧ್ಯೇಯ ಇತ್ತು. 'ಸಂಕ್ರಮಣ'ಕ್ಕ ಕವಿತಾ ಭಾಳ ಬರತ್ತಿದ್ವು, ಆದ್ರs ಪುಸ್ತಕ ವಿಮರ್ಶಾ ಮಾಡೋರು ಯಾರು ಅಂಬೋ ಪ್ರಶ್ನೆ ಬಂತು. ಆವಾಗ ನಾನs ಹಗೂರ ಒಂದೊಂದs

ವಿಮರ್ಶೆ ಬರಿಯಾಕ ಚಾಲೂ ಇಟ್ಕೊಂಡೆ ವಿಮರ್ಶೆ ಅಂದ್ರs ಹುಡಗಾಟ್ಕೀ ಅಲ್ಲ. ಅಲ್ಲಿ ವ್ಯಕ್ತಿ ಸ್ವಾತಂತ್ರ್ಯಾನೂ ಇರ್ಬೇಕ್ಕಾಕ್ಕೇತಿ. 'ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಅಂತ ಬಸವಣ್ಣ ಅಂದ್ಹಾಂಗ. ಬರೀತಾ ಬರೀತಾ ಹೊಸದೇನೋ ಹೊಳೆದಿರ್ತದ.

ಎಂ.ಎಂ. ಕಲಬುರ್ಗಿ : ಹೌದೌದ. ಸಂಶೋಧನೆ ಒಳಗೂ ಅದ ಆಗೋದು ನೋಡು. ಹೊಸದನ್ನು ಕಂಡುಹಿಡೀಬೇಕೂ ಅನ್ನೋದs ನಮ್ಮ ಉದ್ದೇಶ. ಕರ್ನಾಟಕದ ಕಲ್ಚರ್ ಬಗ್ಗೆ ಮಾಡ್ಬೇಕಾದ ಕೆಲ್ಸಾ ತುಂಬಾ ಐತಿ. ಅವಕ್ಕೆಲ್ಲಾ ಒಳಗಿಂದಾ ಇಂಥಾ ಒಂದು ಒತ್ತಡಾ ಇದ್ರನs ಯಶಸ್ಸೂ ಸಿಗೂದು.

ಗಿರಡ್ಡಿ ಗೋವಿಂದರಾಜ : ಅದೂ ಖರೇನs. ಈಗಿನ ಹುಡುಗ್ರೋಳಗs ಅಧ್ಯಯನಶೀಲತೆ ಕಮ್ಮಿಯಾಗೇತಿ. ಅವರೀಗೆ ಹಣಾ ಬೇಕು. ದಿಢೀರ್ ಕೀರ್ತಿ ಬೇಕು. ಒಳ್ಳೇ ಬರಹಗಾರ ಆಗಾಕ ಶ್ರದ್ಧಾವಂತರಾಗಿರಬೇಕೂ ಅನ್ನೋದನ ಮರ್ತು ಬಿಟ್ಟಾಂಗ ಕಾಣ್ತೇತಿ.

ಎಂ.ಎಂ. ಕಲಬುರ್ಗಿ : ಏನs ಅಂದ್ರೂ ಹಳಗನ್ನಡದ ಸಾಹಿತ್ಯಾಭ್ಯಾಸ ಮಾಡ್ಬೇಕು ಅವ್ರು. ಅಂದ್ರನs ವ್ಯುತ್ಪತ್ತಿ ಅನ್ನೋದು ಬೆಳಿತೇತಿ. ವಿಮರ್ಶೆ ಒಂದು ಬರಹಕ್ಕs ಹೊಸ ಓದನ್ನು ಒದಗಿಸಿದಂತನs ಸಂಶೋಧನೆ ಒಂದು ಹೊಸ ವಿಚಾರವನ್ನ ಹುಟ್ಟು ಹಾಕ್ಕೇತಿ.

ಗಿರಡ್ಡಿ : ಆದರೆ ಇಂದೇಕೋ ಸಂಶೋಧನೆ ಮಾಡೂಹಂಗ ಕಾಣ್ತಿಲ್ಲ... ಹ್ಞೂಂ....ಹ್ಞೂಂ.... ಕುಟುಂಬ ಮರಳೋತನಕ ನರಸಿಂಹಸ್ವಾಮಿಯವರ ಕವಿತಾ ನ ಹಾಡ್ಕೋತ ಕೂಡು, ನಾ ಹೋಗಿ ಬರ್ತಿನಿ.

ವಿಜಯ ಕರ್ನಾಟಕ ೩೦-೭-೨೦೦೬

■■

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

೩೧೩

ಈ ಯಾತನೆ ನನ್ನ ಶತೃಗಳಿಗೂ ಬೇಡ

❖

ಪ್ರಶ್ನೋತ್ತರ : ಲಂಕೇಶ ಪತ್ರಿಕೆ

ಪ್ರಶ್ನೆ: ವಿವಾದಾಸ್ಪದ ಲೇಖನಗಳನ್ನು ಬರೆದಾಗ ಇವು ಮುಂದೆಂದಾದರೂ ವಿವಾದಕ್ಕೆ ಕಾರಣವಾಗಬಹುದು ಎಂದು ನೀವು ನಿರೀಕ್ಷಿಸಿರಲಿಲ್ಲವೆ?

ಎಂ.ಎಂ. ಕಲಬುರ್ಗಿ : ಖಂಡಿತ ಇಲ್ಲ. ಏಕೆಂದರೆ ನನ್ನ ಅಭಿಪ್ರಾಯಗಳಿಗಿಂತಲೂ ಹೆಚ್ಚು ಆಘಾತಕಾರಿಯಾದ ಅಭಿಪ್ರಾಯಗಳನ್ನು ಆ ಹಿಂದೆಯೇ ಅನೇಕ ವಿದ್ವಾಂಸರು ಮತ್ತು ಸಂಶೋಧಕರು ವ್ಯಕ್ತಪಡಿಸಿರುವುದು ವಿದ್ವತ್ ಲೋಕದಲ್ಲಿ ಸರ್ವವಿದಿತವಾಗಿದೆ. ಅಲ್ಲದೆ ಮಠಗಳು ಪ್ರಕಟಿಸಿರುವ ಗ್ರಂಥಗಳಲ್ಲಿಯೇ ಶಿವಶರಣ ಶರಣೆಯರ ಗೌರವಕ್ಕೆ ಭಂಗತರುವ ವಚನಗಳು ಮತ್ತು ಸಂಗತಿಗಳು ಇವೆ. ಹೀಗಿರುವಾಗ ಶರಣ ತತ್ವಗಳ ಬಗ್ಗೆ ಅಪಾರ ಗೌರವವುಳ್ಳ ನಾನು ಆಧಾರಗಳನ್ನು ಅನುಸರಿಸಿ ಮಾಡಲಾದ ಕೆಲವು ತಾತ್ಕಾಲಿಕ ತೀರ್ಮಾನಗಳು ಇಂತಹ ಹಗರಣಗಳಿಗೆ ಕಾರಣವಾಗಬಹುದೆಂದು ನಾನು ಕನಸಿನಲ್ಲೂ ನಿರೀಕ್ಷಿಸಿರಲಿಲ್ಲ.

ಪ್ರಶ್ನೆ: ಲೇಖಕನಿಗೆ ಕೃತಿಯ ಬಗ್ಗೆ ಸಹಜವಾಗಿ ಹೆಮ್ಮೆ ಮತ್ತು ಗೌರವ ಇರುತ್ತದೆ. ನೀವು ಹೀಗೆ ನಿಮ್ಮ ಲೇಖನಗಳನ್ನು ಹಿಂತೆಗೆದುಕೊಂಡುದು ಸರಿಯೇ?

ಎಂ.ಎಂ. ಕಲಬುರ್ಗಿ : ನೀವು ನನ್ನ ಅಂತರಂಗವನ್ನೆ ಕಲಕುವ ಪ್ರಶ್ನೆಯನ್ನು ಕೇಳುತ್ತಿದ್ದೀರಿ. ನಾನು ಈ ದಿನಗಳಲ್ಲಿ ಅನುಭವಿಸಿದ ಮಾನಸಿಕ ಯಾತನೆ ಮಾತುಗಳಲ್ಲಿ ಹೇಳಲಾರದ್ದು. ಒಬ್ಬ ಪ್ರಾಮಾಣಿಕ ಲೇಖಕ ತನ್ನ ಬರಹದ ಬಗ್ಗೆ ಎಂತಹ ಭಾವನೆಗಳನ್ನು ಹೊಂದಿರುತ್ತಾನೆ ಎಂಬುದು ನಿಮಗೆ ಗೊತ್ತಿದೆ. ನನ್ನ ಎದುರಾಳಿಗಳು ಸಂಶೋಧನಾತ್ಮಕವಾಗಿಯೇ ನನಗೆ ಸವಾಲು ಹಾಕಿದ್ದರೆ ನಾನದನ್ನು ಧೈರ್ಯವಾಗಿ ಎದುರಿಸುತ್ತಿದ್ದೆ. ಮುಗ್ಧ ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸಿ ಅವರನ್ನು ಧರ್ಮಯುದ್ಧಕ್ಕೆ ಸನ್ನದ್ಧರಾದ "ಗಣಾಚಾರಿ"ಗಳನ್ನಾಗಿ ಮಾರ್ಪಡಿಸಲಾಗಿತ್ತು. ಅವರು ರುಂಡ ಹಾರಿಸುವ, ಒಂದು ಲೀಟರ್ ಪೆಟ್ರೋಲಿನಿಂದ ನನಗೆ ಪಾಠ ಕಲಿಸುವ, ಮನೆಗೆ ಮುತ್ತಿಗೆ ಹಾಕುವ ಪರಿಭಾಷೆಯಲ್ಲಿ ಸಂವಾದದಲ್ಲಿ ತೊಡಗಿದ್ದರು.

ಇತ್ತೀಚೆಗೆ ತಾನೆ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರೊ. ಶೇಷಾದ್ರಿ ಕೊಲೆಗೀಡಾದ ಚಿತ್ರ ನನ್ನ ಕಣ್ಮುಂದೆ ಸದಾ ಸುಳಿಯುತ್ತಿತ್ತು. ನನ್ನ ಹೆಂಡತಿ ಮತ್ತು ಮಕ್ಕಳು ಆ ಮೂರು ದಿನಗಳು ಅನುಭವಿಸಿದ ಘೋರ ಯಾತನೆ ನನ್ನ ಶತ್ರುಗಳಿಗೂ ಬರುವುದು ಬೇಡ. ಇಂತಹ ವಾತಾವರಣದಲ್ಲಿ ನನಗದು ತೀವ್ರ ಅವಮಾನ ಎನಿಸಿದರೂ ಅದನ್ನು ಬಿಟ್ಟು ಬೇರೆ ದಾರಿ ಇರಲಿಲ್ಲ. ನನ್ನ ಇಡೀ ಜೀವನದಲ್ಲಿ ನಾನು ಗಳಿಸಿದ್ದ ಆತ್ಮಶಕ್ತಿ ಅಂದು ಕುಸಿದುಹೋಯಿತು. ಮತ್ತೊಮ್ಮೆ ನಾನು ಮೊದಲಿನ ಸ್ಥಿತಿಗೆ ಬರಲಾರೆನೆಂದೇ ನನಗನಿಸುತ್ತದೆ.

ಪ್ರಶ್ನೆ: ಸಂಶೋಧನಾ ಕ್ಷೇತ್ರ ನಿಮಗೆ ಅತ್ಯಂತ ಪ್ರಿಯವಾದುದಾಗಿತ್ತು. ಇತ್ತೀಚಿನ ಅನುಭವದಿಂದ ನೀವು ಈ ಕ್ಷೇತ್ರಕ್ಕೆ ಪ್ರವೇಶಿಸಿದ್ದಕ್ಕಾಗಿ ವಿಷಾದವೆನಿಸುತ್ತದೆಯೆ?

ಎಂ.ಎಂ. ಕಲಬುರ್ಗಿ : ಸಂಶೋಧನೆ ಅಂದಿಗೂ ಇಂದಿಗೂ ನನಗೆ ಪ್ರಿಯವಾದ ವಿಷಯ. ಈಚಿನ ಅನುಭವದಿಂದ ವೀರಶೈವ ಸಂಶೋಧನೆಯಿಂದ ತಾತ್ಕಾಲಿಕವಾಗಿ ಸ್ವಲ್ಪ ದೂರ ನಿಲ್ಲಬೇಕೆಂದು ತೀರ್ಮಾನಿಸಿದ್ದೇನೆ. ಈ ಅನುಭವವನ್ನು ನನ್ನ ಜೀವನದ ಒಂದು ಕ್ರೂರ ದುಸ್ವಪ್ನ ಎಂದು ಭಾವಿಸಿ ಅದನ್ನು ಆದಷ್ಟು ಮರೆಯಲು 'ಸಂಶೋಧನಾ ವಿಧಾನ'(Research Methodology) ಎಂಬ ಕೃತಿರಚನೆಯಲ್ಲಿ ತೊಡಗಲು ಮನಸ್ಸು ಮಾಡಿದ್ದೇನೆ. ತೀರ ಕುಸಿದುಹೋದ ನನ್ನ ಇಂದಿನ ಸ್ಥಿತಿಯಲ್ಲಿ ಸಮೀಪದ ನನ್ನ ಆತ್ಮೀಯ ಗೆಳೆಯರು ಮತ್ತು ದೂರದಿಂದ ಬರುತ್ತಿರುವ ಪತ್ರಗಳು ನನ್ನ ಬದುಕಿಗೆ ಒಂದು ಆಸರೆಯಾಗಿವೆ. ಕ್ರಮೇಣ ಅವು ನನಗೆ ಆತ್ಮಸ್ಥೈರ್ಯ ನೀಡಬಹುದೆಂಬ ನಂಬಿಕೆ ಮೂಡುತ್ತಿದೆ.

ಲಂಕೇಶ ಪತ್ರಿಕೆ, ೨.೪.೧೯೮೯, ಪು. ೧೦, ೧೧

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

೩೧೪

ಕೌಟುಂಬಿಕವಾಗಿ ಸುಖಿ, ಸಾಮಾಜಿಕವಾಗಿ ದುಃಖಿ

❖

ನಿರೂಪಣೆ : ಗಣೇಶ ಅಮೀನಗಡ

ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ ಎಂದರೆ ಯಾರಿಗೂ ಗೊತ್ತಾಗದು. ಅದೇ ಎಂ.ಎಂ. ಕಲಬುರ್ಗಿ ಎಂದರೆ ಪರಿಚಿತ ಹೆಸರು ಎನ್ನುತ್ತಾರೆ. ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದಲ್ಲಿ ೧೯೩೮ ನವೆಂಬರ್ ೨೮ರಂದು ಜನಿಸಿದೆ. ಅಪ್ಪ ಮಡಿವಾಳಪ್ಪ, ಅವ್ವ ಗುರಮ್ಮ. ಒಕ್ಕಲುತನದ ಜೊತೆಗೆ ಸಣ್ಣ ಕಿರಾಣಿ ಅಂಗಡಿ ಇತ್ತು. ಎಲ್ಲರೂ ಶ್ರಮ ಪಡಬೇಕೆಂದು ಅಪ್ಪ ಬಯಸುತ್ತಿದ್ದ. ಸ್ವಗ್ರಾಮದಲ್ಲಿ ಪ್ರಾಥಮಿಕ, ಸಿಂದಗಿ ಮಾಧ್ಯಮಿಕ, ವಿಜಾಪುರದಲ್ಲಿ ಪದವಿ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಸ್ನಾತಕೋತ್ತರ ಪದವಿಯನ್ನು ಚಿನ್ನದ ಪದಕ ಪಡೆದು ಪಾಸಾದೆ. ಎಂ.ಎ. ಪಾಸಾದ ತಕ್ಷಣ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಸಹಾಯಕ ಸಂಶೋಧಕನಾಗಿ ಸೇರಿದೆ. ನಂತರ ೧೯೬೨ರಲ್ಲಿ ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕನಾದೆ. ಆಮೇಲೆ ಕನ್ಯಾ ನೋಡತೊಡಗಿದೆ. ಊರ ಕಡೆ ಹೋದಾಗ ಅಲ್ಲಿ, ಧಾರವಾಡದಲ್ಲಿದ್ದಾಗ ಗದಗ, ಹಾವೇರಿ ಕಡೆ ಹುಡುಕಾಡುತ್ತಿದ್ದೆ. ಒಟ್ಟು ೫೦-೬೦ ಕನ್ಯಾ ನೋಡಿರಬೇಕು. ಕೊನೆಗೆ ವಿಜಾಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಉಮಾದೇವಿಯನ್ನು ನೋಡಿ ಪಾಸುಮಾಡಿದೆ. ಅವರಿಗೆ ನಾಗಠಾಣ ಎನ್ನುವುದು ಅಡ್ಡ ಹೆಸರು. ಶ್ರೀಮಂತ ಮನೆತನ. ನಮ್ಮದು ಮಧ್ಯಮ ವರ್ಗ. ಹಿಂಗಾಗಿ ಹೊಂದಿಕೊಳ್ಳುತ್ತಾಳೋ ಇಲ್ಲವೋ ಅನುಮಾನವಿತ್ತು.

ಸಿಂದಗಿಯ ಸಂಗಮೇಶ್ವರ ಗುಡಿಯಲ್ಲಿ ನಮ್ಮ ಲಗ್ನವಾಯಿತು. ನಮ್ಮೂರು ಯರಗಲ್ಲ ಗ್ರಾಮವಾದುದರಿಂದ ಲಗ್ನಕ್ಕೆ ಬರುವವರಿಗೆ ಅನುಕೂಲವಾಗಲೆಂದು ಸಿಂದಗಿಯಲ್ಲಿ ಏರ್ಪಾಡಾಯಿತು. ಲಗ್ನದ ಹಿಂದಿನ ದಿನ ಊರೂಟ ಇಟ್ಟುಕೊಂಡಿದ್ದೆವು. ಅವತ್ತು ಸಿಂದಗಿ ಹಾಗೂ ಯರಗಲ್ಲ ಗ್ರಾಮದವರಿಗೆ ಮಾತ್ರ ಊಟ ಏರ್ಪಡಿಸಿದ್ದೆವು. ಲಗ್ನದ ದಿನ ಧಾರವಾಡದಿಂದ ಬರುವವರಿಗೆ ಹಾಗೂ ಬೀಗರಿಗೆ ಊಟವಿತ್ತು. ಲಗ್ನದ ದಿನ ರವಿವಾರವಾದುದರಿಂದ ಸಿಂದಗಿಯಲ್ಲಿ ಸಂತಿಯ ದಿನ. ನಮ್ಮಣ್ಣ ಭೋಜಣ್ಣನಿಗೆ ಸಾವಕಾರರು ಎನ್ನುತ್ತಿದ್ದರು. ಹೀಗಾಗಿ ಕಾಯಿಪಲ್ಲೆ, ಬುಟ್ಟಿ, ಎಣ್ಣೆಸೀಸೆ

ಸಮೇತ ಸಂತಿಗೆ ಬಂದವರು ಭೋಜಪ್ಪ ಸಾವಕಾರ ಮನೆತನದ ಲಗ್ನವೆಂದು ಊಟಕ್ಕೆ ಬಂದರು. ನಮ್ಮಣ್ಣ ಗಾಬರಿಯಾದ. ಎರಡು ಚೀಲ ಬೂಂದಿ, ಚಪಾತಿ, ಪಲ್ಲೇ, ಅನ್ನ, ಸಾರು ಇದ್ದರೂ ಸಾಲುವುದಿಲ್ಲ ಎಂಬ ಚಿಂತೆ ಕಾಡಿತು. ಇಡೀ ಸಂತಿಯೇ ಹೊಕ್ಕಿತು. ಆದರೆ ನಮ್ಮ ಬೀಗರು ಗಾಬರಿ ಆಗಲಿಲ್ಲ. ಆರ್. ಸಿ. ಹಿರೇಮಠ, ಎಸ್. ಶೆಟ್ಟರ ಮೊದಲಾದರಿಗೆಲ್ಲ ಬೀಗರು ಕಟ್ಟಿಕೊಂಡು ತಂದಿದ್ದ ಬುತ್ತಿಯಲ್ಲೇ ಊಟ ಮಾಡಿಸಿ, ತಾವೂ ಮಾಡಿದರು.

ಅವತ್ತು ಒಟ್ಟು ನಾಲ್ಕು ಲಗ್ನ ಆದವು. ನನ್ನ ಲಗ್ನದ ಜೊತೆಗೆ ತಮ್ಮ ಶಂಕ್ರಪ್ಪ, ಅಣ್ಣನ ಮಕ್ಕಳು ಅಲ್ಲದೇ ಎರಡು ಬಡ ಜೋಡಿಗಳಿಗೆ ಲಗ್ನ ಮಾಡಿದೆವು. ಇವೆಲ್ಲ ಹಳ್ಳಿಗಳಲ್ಲಿ ಸಾಮಾನ್ಯ. ಲಗ್ನವಾಗುವ ಎರಡು ಜೋಡಿಗೆ ಬಟ್ಟೆ, ತಾಳಿ ಕೊಟ್ಟು, ಅವರ ಬೀಗರಿಗೆ ಊಟ ಹಾಕುವುದೆಲ್ಲ ಇಂದಿಗೂ ಕಾಣುತ್ತೇವೆ.

ಆಗ ನನಗೆ ೨೬ ವರ್ಷ. ಹೆಂಡತಿ ಉಮಾದೇವಿಗೆ ೧೬ ವರ್ಷ. ಆಕೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೂ ಕೂಡಲಿಲ್ಲ. ಹಿಂಗಾಗಿ ಸಾಲಿ ಪಡಸಾಲಿ ಆಯಿತು. ಲಗ್ನಾದ ಮೇಲೆ ಧಾರವಾಡದಲ್ಲಿ ಆಗಲೇ ಮಾಡಿದ್ದ ಸಪ್ತಾಪೂರದ ಮನೆಯಲ್ಲಿ ವಾಸ ಶುರುವಾಯಿತು. ಮನೆಯಲ್ಲಿ ಪ್ರೀತಿಯಿಂದ ಉಮಾದೇವಿಯನ್ನು ಬೆಳೆಸಿದ್ದರು. ಅಡುಗೆ ಮಾಡಲು ಬರುತ್ತಿರಲಿಲ್ಲ. ಕ್ರಮೇಣ ಕಲಿತಳು. ಊರಿನಿಂದ ನಮ್ಮ ಅಣ್ಣನ ಮಕ್ಕಳು ಇಬ್ಬರು ಕಲಿಯಲು ಬಂದರು. ಹೀಗೆ ಕಲಿಯಲು ಬರುವುದು ಸಾಮಾನ್ಯ. ಪೂರ್ಣಿಮಾ, ಪ್ರತಿಮಾ, ಶ್ರೀವಿಜಯ ಹಾಗೂ ರೂಪದರ್ಶಿ ಹೀಗೆ ನಮಗೆ ನಾಲ್ಕು ಮಕ್ಕಳು. ಅಣ್ಣನ ಮಕ್ಕಳೊಂದಿಗೆ ನಮ್ಮ ಮಕ್ಕಳು ಸೇರಿಕೊಂಡು ತುಂಬಿದ ಕುಟುಂಬ ಆಗುತ್ತಿತ್ತು. ಆದರೂ ನನ್ನದೇ ನಡೆಯಬೇಕು ಎಂದೇನಿಲ್ಲ. ಮುಖ್ಯವಾಗಿ ನಾವು ಹಣ ಎಣಿಸುವವರಲ್ಲ. ಕರ್ನಾಟಕ ಕಾಲೇಜಿನಲ್ಲಿದ್ದಾಗ ೨೫೦ ರೂಪಾಯಿ ಪಗಾರ ಬರುತ್ತಿತ್ತು. ಬಂದ ಪಗಾರವನ್ನು ಬ್ಯಾಂಕಿನಲ್ಲಿಟ್ಟು ಬೇಕಾದಾಗ ತೆಗೆದುಕೊಂಡು ಬಂದು ಟೇಬಲ್ ಡ್ರಾದಲ್ಲಿ ಇಡುತ್ತಿದ್ದೆವು. ಎಷ್ಟು ಖರ್ಚಾಯಿತು, ಎಷ್ಟು ಉಳಿಯಿತು ಎಂದು ಲೆಕ್ಕ ಹಾಕುತ್ತಿರಲಿಲ್ಲ. ಈಗಲೂ ಹಾಕುವುದಿಲ್ಲ. ನಮ್ಮ ಬಾಳಿನ ಸೂತ್ರ ಎಂದರೆ, ನಾನು ಗೆಲ್ಲಬೇಕು ಎನ್ನುವುದಕ್ಕಿಂತ ನಾನು ಸೋಲಬೇಕು ಎನ್ನುವುದರಲ್ಲೇ ಸುಖವಿದೆ. ಪರಸ್ಪರ ಸೋಲುವ ಮೂಲಕ ಗೆಲ್ಲುತ್ತೇವೆ.

೧೯೬೬ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠಕ್ಕೆ ಉಪನ್ಯಾಸಕನಾಗಿ ಕಾಲಿಟ್ಟೆ. ಅದು ಲಗ್ನಾದ ವರ್ಷ. ಹಿಂಗಾಗಿ ನನ್ನಾಕೆ ಕಾಲ್ಗುಣ ಛಲೋ ಅನ್ನಬಹುದು.

ನನ್ನಾಕೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದು ಕಡಿಮೆ. ವಿಶ್ವವಿದ್ಯಾಲಯದ ವಸತಿಗೃಹದಲ್ಲಿದ್ದರೂ ನಮ್ಮ ಕನ್ನಡ ಅಧ್ಯಯನಪೀಠಕ್ಕೆ ಬಂದವಳಲ್ಲ. ನಾನು ಕೌಟುಂಬಿಕವಾಗಿ ಸುಖಿ; ಆದರೆ ಸಾಮಾಜಿಕವಾಗಿ ತುಂಬಾ ದುಃಖಿ. ಯಾಕಂದ್ರ ನನ್ನ ಪರಿಸರದೊಳಗೆ ಶೋಷಣೆ ಆಗುತ್ತಿದ್ದರೆ ಸಹಿಸುತ್ತಿರಲಿಲ್ಲ. ಕನ್ನಡ, ಕನ್ನಡ ಸಂಸ್ಥೆ ಸರಿಯಾಗಿ ಬೆಳೆಯಬೇಕು ಎನ್ನುವ ಪ್ರಜ್ಞೆ ಮೊದಲಿನಿಂದಲೂ ಇದೆ. ಕನ್ನಡಕ್ಕೆ ಸಂಸ್ಥೆಗೆ ಅನ್ಯಾಯವಾದರೆ ತಡೆದಕೊಳ್ಳಲು ಸಾಧ್ಯವಾಗುವದಿಲ್ಲ. ಹೀಗಾಗಿ ಅನ್ಯಾಯ ಮಾಡುವವರು ನನಗೆ ವಿರೋಧಿಗಳಾದರು. ಸಂಸ್ಥೆಯಲ್ಲಿ ನಮ್ಮ ಪಾಡಿಗೆ ನಾವಿರಬೇಕು ಎನ್ನುವವರು ಒಂದು ಕಡೆ, ಶೋಷಣೆ, ಅನ್ಯಾಯ ಮಾಡಿ ಲಾಭ ಮಾಡಿಕೊಳ್ಳಬೇಕು ಎನ್ನುವವರು ಇನ್ನೊಂದು ಕಡೆ. ಅನ್ಯಾಯ ತಡೆಯಬೇಕು ಎನ್ನುವವರು ಕೆಲವೇ ಜನ. ಇದು ರಿಸ್ಕ್. ಅನ್ಯಾಯ ತಡೆಯಬೇಕೆಂದು

ಮುಂದಾದೆ. ಹೀಗಾಗಿ ಸಂಸ್ಥೆಯಲ್ಲಿ ಅಲ್ಪಸಂಖ್ಯಾತನಾದೆ. ಕೆಲಸಕ್ಕೆ ಸೇರಿದ ಆರಂಭದಿಂದಲೂ ಶುರುವಾಯಿತು. ಅಪಮಾನ, ಅನ್ಯಾಯಕ್ಕೆ ಗುರಿಯಾಗುತ್ತ ಬಂದೆ. ಆದ ನೋವು ಮರೆಯಲು ಅಧ್ಯಯನಶೀಲನಾದೆ. ಅಧ್ಯಯನ ಹೆಚ್ಚಾದ ಹಾಗೆ ಬರವಣಿಗೆ ಹೆಚ್ಚಾಯಿತು. ಇದರಿಂದ ಪ್ರಸಿದ್ಧಿ ಸಿಕ್ಕಿತು. ಹೊರಗೆ ನೋವು ಅನುಭವಿಸಿದೆ. ಆದರೆ ಮನೆಯೊಳಗೆ ಕಾಲಿಟ್ಟರೆ ಎಲ್ಲವನ್ನು ಮರೆಯುತ್ತಿದ್ದೆ. ಯಾಕಂದ್ರ, ದುಡ್ಡಿನ ಹಪಾಹಪಿ ಇಲ್ಲ. ಪ್ರಸಿದ್ಧಿ ಹಪಾಹಪಿ ಇಲ್ಲ. ಸರಿಯಾಗಿ ಬೆಳೆದರೆ ದುಡ್ಡು ಮತ್ತು ಪ್ರಸಿದ್ಧಿ ಬೆನ್ನ ಹಿಂದೆ ಬರುತ್ತದೆ. ಹಾಗೆಯೇ ಬಂದವು. ಹಾಗೆ ಬಂದಷ್ಟೂ ವಿರೋಧಿಗಳು ಸಿಟ್ಟಾದರು. ಅದನ್ನು ಮರೆಯುವ ಸಲುವಾಗಿ ಮತ್ತಷ್ಟು ಅಧ್ಯಯನ ಮತ್ತು ಬರವಣಿಗೆಗೆ ಶ್ರಮವಹಿಸಿದೆ. ಇದರಿಂದ ಮತ್ತಷ್ಟು ಪ್ರಸಿದ್ಧಿ ಸಿಕ್ಕಿತು. ಮನುಷ್ಯನಿಗೆ ಕಷ್ಟ ಹೆಚ್ಚಾದಷ್ಟೂ ಬೆಳೆಯುತ್ತಾನೆ. ನನ್ನನ್ನು ಬೆಳಸಿದ್ದೇ ಮನೆಯ ಹೊರಗಿನ ಕಷ್ಟಗಳು ಹಾಗೂ ಮನೆಯೊಳಗಿನ ಸುಖ.

೧೯೮೨ರಲ್ಲಿ ಹಸ್ತಪ್ರತಿಗಳ ಅಧ್ಯಯನಕ್ಕೆ ಸಂಬಂಧಿಸಿ ಲಂಡನ್‌ಗೆ ಹೋಗಿದ್ದೆ. ಆಗ ಧಾರವಾಡದ ಕಲ್ಯಾಣನಗರದಲ್ಲಿ ಮನೆ ಕಟ್ಟಿಸುತ್ತಿದ್ದೆವು. ಪ್ಲಿಂತ್‌ವರೆಗೆ ಮಾತ್ರ ಕಟ್ಟಲಾಗಿತ್ತು. ಈಕೆ ಮನೆ ಕಟ್ಟಿಸುವ ಜವಾಬ್ದಾರಿ ತಗೊಂಡಳು. ಹಿಂಗಾಗಿ ವಿದೇಶಕ್ಕೆ ಹೋಗಲು ಸುಗಮವಾಯಿತು. ಮತ್ತೆ ವಿದೇಶಕ್ಕೆ ಹೋಗಿದ್ದು ೨೦೦೪ರಲ್ಲಿ. ನ್ಯೂಜಿಲೆಂಡ್, ಆಸ್ಟ್ರೇಲಿಯಾ ಪ್ರವಾಸಕ್ಕೆ ಒಟ್ಟಿಗೇ ಹೋಗಿಬಂದೆವು. ಕುವೆಂಪು ವಿಶ್ವವಿದ್ಯಾಲಯದ ಕುಲಪತಿಯಾಗಿದ್ದ ಎಸ್.ಪಿ. ಹಿರೇಮಠ ಹತ್ತಿರದಲ್ಲಿಯೇ ಇದ್ದಾರೆ. ನಮ್ಮನ್ನು ಕರೆದರು. ಚೆನ್ನವೀರ ಕಣವಿ ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಡಿಲಿಟ್ ನೀಡಿತ್ತು. ಇಬ್ಬರಿಗೂ ಸನ್ಮಾನ ಎಂದರು. ಬೇಡವೆಂದೆ. ಈಗ ವಿದೇಶಕ್ಕೆ ಹೋಗಿಬರುವುದೆಂದರೆ ಸಪ್ತಾಪುರಕ್ಕೆ ಹೋಗಿ ಬಂದ ಹಾಗೆ. ಒತ್ತಾಯಿಸಿ ಸನ್ಮಾನಿಸಿದರು. ಆಗ ಹೇಳಿದೆ–ಎರಡು ವರ್ಷಗಳ ಹಿಂದೆಯೇ ನ್ಯೂಜಿಲೆಂಡ್, ಆಸ್ಟ್ರೇಲಿಯಾಕ್ಕೆ ಹೋಗಬೇಕಿತ್ತು. ಅಲ್ಲಿ ಕನ್ನಡ ಸಂಘಗಳು ಕರೆದಿದ್ದವು. ಆದರೆ ದುಡ್ಡಿರದ ಕಾರಣಕ್ಕೆ ಹೋಗಿರಲಿಲ್ಲ ಎಂದಾಗ ನೆರೆದಿದ್ದವರು ನಕ್ಕರು.

“ನೀವು ನಕ್ರಿ ನಿಜ. ಆದ್ರೆ ನಾನು ಶ್ರೀಮಂತ ಕುಲಪತಿ ಅಲ್ಲ' ಎಂದಾಗ ಮತ್ತೆ ನಕ್ಕರು. ಆಗ ಹೇಳಿದೆ; ಜಗತ್ತಿನಲ್ಲಿ ನನ್ನಷ್ಟು ಶ್ರೀಮಂತ ಯಾರೂ ಇಲ್ಲ. ಹೇಗೆ ಎಂದು ಕೇಳಬಹುದು. ಎರಡು ಹೊತ್ತು ಊಟ ಸಿಕ್ಕವನೇ ದೊಡ್ಡ ಶ್ರೀಮಂತ ಅಂದಾಗ ನಿಶ್ಶಬ್ದವಾಯಿತು.

***

ನನ್ನ ಅಧ್ಯಯನ, ಸಂಶೋಧನೆಗೆ ನಾನು ಕಷ್ಟಪಡುವುದು ಆಕೆಗೆ ಗೊತ್ತಿದೆ. ಮನೆಯೊಳಗೆ ಗ್ರಂಥಾಲಯವಿದೆ. ಯಾವುದೋ ಪುಸ್ತಕ ಕೈಗೆತ್ತಿಕೊಂಡು ಟೇಬಲ್ ಮೇಲೆ ಇಟ್ಟುಬಿಡುವೆ. ಹಾಗೆಯೇ ಹೆಚ್ಚಾಗುತ್ತವೆ. ಆಮೇಲೆ ಏಳೆಂಟು ದಿನಗಳಾದ ಮೇಲೆ ಹಳಗನ್ನಡ, ಹೊಸಗನ್ನಡ ಎಂದು ವಿಂಗಡಿಸಿ ಇಡುತ್ತಾಳೆ. ಅನೇಕ ಸಾರಿ ನನಗೆ ಸಿಗದ ಪುಸ್ತಕಗಳು ಆಕೆಗೆ ಸಿಗುತ್ತವೆ.

ಪ್ರತಿ ಮನುಷ್ಯನಿಗೆ ಒಳಸುತ್ತು ಹಾಗೂ ಹೊರಸುತ್ತು ಎಂದಿರುತ್ತದೆ. ಒಳಸುತ್ತು ಎಂದರೆ ಕೌಟುಂಬಿಕ. ಅದು ಏಕಸಂಸ್ಕೃತಿ. ಹೊರಸುತ್ತು ಎಂದರೆ ಸಾಮಾಜಿಕ. ಅದು ಬಹುಸಂಸ್ಕೃತಿ. ಎರಡನ್ನೂ ತೂಗಿಸಿಕೊಂಡು ಹೋಗಬೇಕು. ಬಹಳಷ್ಟು ಜನರು ಹೊರಸುತ್ತಿನಲ್ಲಿಯೇ ಸುಖಿಯಾಗಿರುತ್ತಾರೆ. ಅಂದರೆ ಇಸ್ಪೀಟಾಟ, ಕುಡಿತ, ಮೋಜು ಎಂದು. ಆದರೆ ಒಳಸುತ್ತಿನಲ್ಲಿಯೇ ಸುಖಿಯಾದವನು ಹೊರಸುತ್ತಿನಲ್ಲೂ ಸುಖಿಯಾಗಿರುತ್ತಾನೆ. ಇಂಥ ತತ್ವಗಳನ್ನು ಅರ್ಥ ಮಾಡಿಕೊಂಡರೆ ಜೀವನಪರ್ಯಂತ ಸುಖಿಯಾಗಿರುತ್ತೇವೆ.

ಮಕ್ಕಳ ಶಿಕ್ಷಣ, ಆರೋಗ್ಯ, ಅವರ ಬೆಳವಣಿಗೆಗೆ ಕಾಳಜಿ ವಹಿಸಿದವಳು ಆಕೆಯೇ. ಮಗಳು ಪ್ರತಿಮಾಳ ಲಗ್ನ ವಿಜಾಪುರದಲ್ಲಿತ್ತು. ಆಗ ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಿದ್ದೆ. ಕನ್ನಡ ಅಧ್ಯಯನಪೀಠ ಹಾಗೂ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಹಸ್ತಪ್ರತಿಗಳಿದ್ದವು. ಎರಡು ಕಡೆ ಬೇಡ ಒಂದೇ ಕಡೆ ಇರಲಿ. ಕನ್ನಡ ಅಧ್ಯಯನ ಪೀಠಕ್ಕೆ ಸಂಶೋಧನ ಸಂಸ್ಥೆಯ ಹಸ್ತಪ್ರತಿಗಳು ಬರಲಿ ಎಂದೆ. ಆದರೆ ಸಂಶೋಧನ ಸಂಸ್ಥೆಯವರಿಗೆ ಕೊಡಬಾರದು ಎನ್ನುವ ಹಟ. ಕೊನೆಗೆ ಆಗ ಇದ್ದ ಕುಲಪತಿ ಡಾ. ರಾಮೇಗೌಡರು ಹಸ್ತಾಂತರ ತಾರೀಖನ್ನು ನಿರ್ಧರಿಸಿದರು. ಅದು ಮಗಳ ಲಗ್ನದ ಹಿಂದಿನ ದಿನ. ಎಂಟತ್ತು ಆಳುಗಳೊಂದಿಗೆ ಸಂಶೋಧನ ಸಂಸ್ಥೆಯಿಂದ ಕಪಾಟುಗಳ ಸಮೇತ ಹಸ್ತಪ್ರತಿಗಳನ್ನು ಟ್ರ್ಯಾಕ್ಟರನಲ್ಲಿ ಕನ್ನಡ ಅಧ್ಯಯನ ಪೀಠಕ್ಕೆ ಸಾಗಿಸಿದೆ. ಅಷ್ಟೊತ್ತಿಗೆ ಸಂಜೆಯಾಯಿತು. ನಂತರ ವಿಜಾಪುರ ತಲುಪಿದಾಗ ರಾತ್ರಿ ೧೦ ಗಂಟೆ. 'ಹುಡುಗಿ ತಂದೆ ಎಲ್ಲಿ' ಎಂದು ಬೀಗರ ಸಮೇತ ಅನೇಕರು ಕೇಳಿದರಂತೆ. ಎಲ್ಲ ಕಾರ್ಯಗಳನ್ನು ನಮ್ಮಣ್ಣ ಶಾಂತಪ್ಪ ನೆರವೇರಿಸಿದ. ಇಂಥ ಉದಾಹರಣೆಗಳು ಅನೇಕ. ನನ್ನ ಹೆಂಡತಿ ಕುರಿತು ನನ್ನ 'ನೀರು ನೀರಡಿಸಿತ್ತು' ಕವನ ಸಂಕಲನದಲ್ಲಿ ಕವಿತೆ ಇದೆ. ಅದು...

ನವನವೋನ್ಮೇಷಶಾಲಿನಿ
ಈಕೆ.
ತನ್ನ ಪದ್ಯಲಯಕೆ
ನನ್ನ ಗದ್ಯಲಯವ ಬಳಸಿಕೊಂಡು
ಚಂಪುವಾದಾಕೆ.

ಹೆಣ್ಣು-ಹೆಂಡತಿ
ತತ್ವ ಸಮೀಕೃತಿ.
ಲೌಕಿಕ-ಧಾರ್ಮಿಕ ಸಮಸ್ತ ಸಂಸ್ಕೃತಿ.

ಸುಳಿದರೆ ಸಾಕು ಈಕೆ.
ಪಂಪಭಾರತ ಏಕೆ?
ತೀರ್ಥಂಕರರ ಗೀತೆ
ಕಣ್ಣಿಗೆ ಕಹಿ ಎನಿಸಿ,
ಈ ಗ್ರಂಥಗೌರಿಯನ್ನು
ಎದೆಗವಚಿ ಸವಿಯುತ್ತೇನೆ, ಭಾವರತಿಯ
ಇಕ್ಕಿ ಮೆಟ್ಟುತ್ತಾಳೆ.
ಕಾವ್ಯಸತಿಯ
ಇವಳ ಅಂಗರಂಗದರಮನೆಯಲ್ಲಿ

ಅಮೃತಾನ್ನವನುಂಡು,
ಶೃಂಗಾರ ವೀಳ್ಯವ ಸವಿಯುತ್ತ,
ನಾ ಕೇಳಿದ
ಇವಳ ಒಂದೊಂದು
ಒಳಮಾತು ವಚನ,
ಕಿವಿಮಾತು ಕೀರ್ತನ,
ಬದುಕಿದಳೊ ಕುಸುಮಾಜಿ ನೈಜಕಥನ.

ತಾಳಿ
ಇನ್ನಷ್ಟು ಕೇಳಿ;
ಇವಳು ಇಡಿಯಾಗಿ ರಮ್ಯ,
ಬಿಡಿ, ಬಿಡಿ ಬಿಡಿಯಾಗಿ ನವ್ಯ,
ಒಮ್ಮೊಮ್ಮೆ ಬಂಡಾಯ, ಮೌನಕಾವ್ಯ.

ಕ್ಷಮಿಸಿ
ಈ ಮೌನಕಾವ್ಯದ ಬಗ್ಗೆ
ನಾನು
ಇಷ್ಟೆಲ್ಲ ಬರೆದದ್ದು ನೀರಸ ವ್ಯಾಖ್ಯಾನ
ಅಥವಾ
ಒಂದು ಸಾಮಾನ್ಯ ಕವನ.

ಮಯೂರ: ಡಿಸೆಂಬರ್ ೨೦೧೨

ಆಕರ : ಡಾ. ಎಂ.ಎಂ. ಕಲಬುರ್ಗಿ ಸಂದರ್ಶನ ಸಂಪುಟ, ಸಂಪಾದಕರು : ಡಾ. ವೀರಣ್ಣ ರಾಜೂರ, ಡಾ. ಹನುಮಂತ ಮೇಲಿನಮನಿ, ಸಪ್ನಬುಕ್ ಹೌಸ್, ಬೆಂಗಳೂರು, ೨೦೧೭

■■

ಅರಿಕೆ

೩೧೫

ಮಾರ್ಗ : ೧, ೨

೧೯೮೮, ೧೯೯೫, ೨೦೧೦

ನಾಲ್ಕು ದಶಕಗಳ ಹಿಂದೆ ಹಳ್ಳಿಯ ಶಾಲೆಯಲ್ಲಿ ಬೋಧನೆಯ ಮುಖ್ಯ ವಿಷಯಗಳೆಂದರೆ ಭಾಷೆ ಮತ್ತು ಗಣಿತ. ಬಾಲ್ಯದಲ್ಲಿ ಗಣಿತ ಭಯಹುಟ್ಟಿಸಿದ ಕಾರಣ, ಕನ್ನಡ ಭಾಷೆ - ಸಾಹಿತ್ಯಗಳತ್ತ ನಾನು ಆಕರ್ಷಿತನಾದೆನೆಂದು ತೋರುತ್ತದೆ. ಕಾಲೇಜು ವಿದ್ಯಾರ್ಥಿಯಾಗಿರುವಾಗ ಜುಲುಮೆಯಿಂದ ಅರ್ಥಶಾಸ್ತ್ರದ ವಿದ್ಯಾರ್ಥಿಯಾದರೂ ಭಾಷೆ - ಸಾಹಿತ್ಯಗಳ ಒಲುಮೆ ನನ್ನನ್ನು ಆಕಡೆ ಬಿಡಲಿಲ್ಲ.

ಆಧುನಿಕ ಸಾಹಿತ್ಯದ ಪ್ರಭಾವ ಗಾಢವಾಗಿರದ ಕಾಲವದು. ಹೀಗಾಗಿ ಕಾಲೇಜು ವಿದ್ಯಾರ್ಥಿಯಾಗಿರುವಾಗ ನಾನು ಪ್ರಾಚೀನಸಾಹಿತ್ಯದ ಅಧ್ಯಯನದತ್ತ ವಿಶೇಷ ಆಸಕ್ತಿವಹಿಸುವಂತಾಯಿತು. ಪ್ರೊ. ಬಿ. ಟಿ. ಸಾಸನೂರ ಅವರ ವಿದ್ಯಾರ್ಥಿಯಾಗುವಲ್ಲಿ ಈ ಅಧ್ಯಯನಕ್ಕೆ ಧ್ರುವೀಕರಣವೂ ಪ್ರಾಪ್ತವಾಯಿತು.

ನನ್ನದು ಮೂಲತಃ ಸೃಜನಶೀಲ ಮನೋಧರ್ಮ. ಆದರೆ ಈಗಾಗಲೇ ಪ್ರಾಚೀನ ಸಾಹಿತ್ಯದ ಅಭ್ಯಾಸಿಯಾಗಿದ್ದ ನನ್ನ ಒಲವು ಪ್ರಾಚ್ಯಸಂಶೋಧನೆಯತ್ತ ಬೆಳೆಯಲು, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯಾದುದೇ ಮುಖ್ಯ ಕಾರಣವೆಂದು ತೋರುತ್ತದೆ. ಆಗ ಡಾ. ಆರ್. ಸಿ. ಹಿರೇಮಠ ಅವರ ವಿದ್ವತ್ತಿನ ದಟ್ಟ ಪ್ರಭಾವದಿಂದಾಗಿ, ನನ್ನ ಸಮಸ್ತಚೈತನ್ಯವನ್ನು ಸಂಶೋಧನೆಗಾಗಿ ಕೇಂದ್ರೀಕರಿಸುವಂತಾಯಿತು.

೧೯೬೨ರಿಂದ ಅಧ್ಯಾಪನ - ಲೇಖನ ಕಾರ್ಯಗಳನ್ನು ಮುಂದುವರಿಸಿದಂತೆ ಜನ - ವಿದ್ವಜ್ಜನ ನನ್ನನ್ನು ಸಂಶೋಧಕನೆಂದು ಗುರುತಿಸತೊಡಗಿದರು. ಅವರ ನಿರೀಕ್ಷೆ - ವಿಶ್ವಾಸಗಳನ್ನು ಹುಸಿಗೊಳಿಸಬಾರದೆಂಬ ನಿರಂತರ ಎಚ್ಚರ ಕಾರಣವಾಗಿ ನನಗರಿಯದಂತೆ ಸಂಶೋಧಕನಾಗಿ ಬೆಳೆದೆ.

ಕನ್ನಡ ಸೃಜನಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿ ವ್ಯಾಖ್ಯಾನನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ

ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಎರಡೂ ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ ಈ ಕೃತಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆಯೆಂದು ಸೂಚಿಸಬಯಸುತ್ತೇನೆ.

ಭಾರತದಂಥ ಭಾವನಿಷ್ಠ ರಾಷ್ಟ್ರದಲ್ಲಿ ಸಂಶೋಧನೆ ಸರಳ ದಾರಿಯಲ್ಲ. 'ಕಹಿ ಸತ್ಯ ಹೇಳಬಾರದು' ಎಂಬ ಸಂಪ್ರದಾಯದ ವಾರಸುದಾರರಾದ ಭಾರತೀಯರಿಗೆ ಅಂಥ ಸತ್ಯ ಸಹಜವಾಗಿಯೇ ಸಿಹಿ ಎನಿಸುವುದಿಲ್ಲ. ಹೀಗಾಗಿ ಈ ರಾಷ್ಟ್ರದಲ್ಲಿ ಸಂಶೋಧಕ ಆಗಾಗ ಸಣ್ಣಸಣ್ಣ ಶಿಲುಬೆಗಳನ್ನೇರಬೇಕಾಗುತ್ತದೆ. ಈಗ 'ಜಾಣ'ರು 'ಮುಗ್ಧ'ರನ್ನು ಬಳಸಿಕೊಂಡು ಸಂಶೋಧಕನನ್ನು ಅಂದರೆ ಸತ್ಯವನ್ನು ಹಿಂಸಿಸುವಲ್ಲಿ ತೃಪ್ತಿಪಡುತ್ತಾರೆ. ಇಂಥ ಪ್ರಸಂಗಗಳಿಂದಾಗಿ ಭಾರತೀಯ ಸಂಶೋಧಕ ಅನೇಕ ಅಗ್ನಿಕುಂಡಗಳನ್ನು ದಾಟಬೇಕಾಗುತ್ತದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಬಹುಶಃ ನನ್ನ ತಲೆಮಾರಿನ ಇತರ ಸಂಶೋಧಕರಿಗಿಂತ ಪರಿಸರವು ನನ್ನ ಕಾಲಕೆಳಗೆ ತೋಡಿದ ಅಗ್ನಿಕುಂಡಗಳೇ ದೊಡ್ಡವೆಂದು ತೋರುತ್ತದೆ. ಆದರೆ ಕಾಲ ಕೆಳಗಿನ ಬೆಂಕಿಗಿಂತ ಕಣ್ಣುಮುಂದಿನ ಬೆಳಕು ದೊಡ್ಡದೆಂಬ ನನ್ನ ನಂಬಿಕೆ, ನನ್ನನ್ನು ಈವರೆಗೆ ಉಳಿಸಿದೆ - ಬೆಳೆಸಿದೆಯೆಂದು ಭಾವಿಸಿದ್ದೇನೆ.

ಸಂಶೋಧನೆಯೆನ್ನುವುದು ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ. ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. "ಜನ ಮೆಚ್ಚೆ ನಡಕೊಂಡರೇನುಂಟು ಲೋಕದಿ, ಮನ ಮೆಚ್ಚೆ ನಡಕೊಂಬುದೇ ಚೆಂದವು" ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆಯೆಂದು ವಿನಮ್ರವಾಗಿ ಹೇಳಬಯಸುತ್ತೇನೆ.

೧೯೮೮ ನವೆಂಬರ ೨೮, ನನಗೆ ೫೦ ವರ್ಷ ; ನನ್ನ ಸಂಶೋಧನೆಗೆ ೨೫ ವರ್ಷ. ಇದು ನನ್ನ ಆಯುರ್ಮಾನದ ಸುವರ್ಣಸಂದರ್ಭ, ನನ್ನ ಲೇಖನ ವಯೋಮಾನದ ರಜತಸಂದರ್ಭ. ಈ ಅವಧಿಯಲ್ಲಿ ಗ್ರಂಥಗಳನ್ನು ಬಿಟ್ಟರೂ ನಾನು ಪ್ರಕಟಿಸಿದ ಲೇಖನಗಳ ಸಂಖ್ಯೆ ೨೦೦ಕ್ಕೆ ಮಿಗಿಲು. ಇವುಗಳಲ್ಲಿ ಕೆಲವು ಈ ಹಿಂದೆ ಶಾಸನ ವ್ಯಾಸಂಗ -೧, ಶಾಸನ ವ್ಯಾಸಂಗ - ೨ ಹೆಸರಿನ ಪುಸ್ತಕಗಳ ಮೂಲಕ ಪ್ರಕಟವಾಗಿದ್ದವು. ಅವುಗಳನ್ನು ಬಿಟ್ಟರೂ, ಶಾಸನಕ್ಷೇತ್ರಕ್ಕೆ, ಇತರ ಕ್ಷೇತ್ರಗಳಿಗೆ ಸಂಬಂಧಿಸಿದ ಅನೇಕ ಲೇಖನಗಳು ಬೇರೆ ಬೇರೆ ಪತ್ರಿಕೆ, ಸಂಕಲನಗಳಲ್ಲಿ ತೂರಿಹೋಗಿದ್ದವು. "ನಿಮ್ಮ ಸಾಧನೆಯ ವ್ಯಾಪ್ತಿ - ವೈವಿಧ್ಯತೆಗಳನ್ನು ವಿದ್ವಾಂಸರ ಗಮನಕ್ಕೆ ತರುವ ದೃಷ್ಟಿಯಿಂದ ಮತ್ತು ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ ಪ್ರಯೋಜನವಾಗುವ ದೃಷ್ಟಿಯಿಂದ ಎಲ್ಲ ಲೇಖನಗಳ ಸಮಗ್ರ ಸಂಪುಟವನ್ನು ಹೊರತರಬೇಕು. ಇದು ಸಕಾಲಿಕವೂ ಕೂಡ. ನಾನು ನಿಮ್ಮಿಂದ ಇದನ್ನು ನಿರೀಕ್ಷಿಸುತ್ತೇನೆ" ಎಂದು ಡಾ. ಹಾ. ಮಾ. ನಾಯಕ ಅವರು ಆಗಾಗ ನನ್ನ ಮುಂದೆ ಪ್ರಸ್ತಾಪಮಾಡುತ್ತಿದ್ದರು. ಕೆಲಸದ ಒತ್ತಡ, ಪ್ರಕಾಶನದ ಅನನುಕೂಲತೆಯಿಂದಾಗಿ ಈ ಕಾರ್ಯ ಮುಂದು ಹೋಗುತ್ತಲಿದ್ದಿತು. ನನ್ನ ೫೦ನೆಯ ವರ್ಷವನ್ನು ನೆಪವಾಗಿಟ್ಟುಕೊಂಡು, ಪಟ್ಟುಹಿಡಿದು ಈಗ ಅವುಗಳನ್ನು ಪ್ರಕಟಿಸುತ್ತಲಿದ್ದೇನೆ.

ಪ್ರತಿಯೊಂದರಲ್ಲಿ ೧೦೦ ಲೇಖನಗಳಂತೆ ನನ್ನ ೨೦೦ ಲೇಖನಗಳನ್ನು 'ಮಾರ್ಗ' ಹೆಸರಿನ ಎರಡು ಸಂಪುಟಗಳಲ್ಲಿ ಅಡಕಗೊಳಿಸಿದ್ದೇನೆ. ಮೊದಲನೆಯ ಸಂಪುಟ ಸಾಹಿತ್ಯ, ಸಂಪಾದನೆ, ವಿಮರ್ಶೆಗಳನ್ನೂ ಎರಡನೆಯ ಸಂಪುಟ ಶಾಸನ, ಜಾನಪದ, ಶಾಸ್ತ್ರ ವಿಷಯಗಳನ್ನೂ ಒಳಗೊಂಡಿವೆ. ಇದು ಸ್ಥೂಲ ವರ್ಗೀಕರಣವಾಗಿದ್ದು, ಇವು ನನ್ನ ಅಧ್ಯಯನದ ಬಹುಮುಖತೆಯನ್ನು ಸೂಚಿಸುತ್ತವೆ. ಮೊದಲಬಾರಿಗೆ ಬೆಳಕು ಕಾಣುತ್ತಲಿರುವ ೪-೬ ಲೇಖನಗಳನ್ನು ಬಿಟ್ಟರೆ ಮಿಕ್ಕುವೆಲ್ಲ ಈ ಹಿಂದೆ ಪ್ರಕಟವಾದವುಗಳು. ಇವುಗಳಲ್ಲಿ ಕೆಲವು ಲೇಖನಗಳನ್ನು ಸೂಕ್ತ ತಿದ್ದುಪಡಿಗೆ ಗುರಿಪಡಿಸಿದ್ದೇನೆ. ಇವು ಬೇರೆಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳಾಗಿರುವುದರಿಂದ ಕೆಲವೊಮ್ಮೆ ಅಭಿಪ್ರಾಯಗಳು ಪುನರುಕ್ತಗೊಂಡಿವೆ, ಇದು ಅನಿವಾರ್ಯ.

ಇಲ್ಲಿ ವಿಮರ್ಶೆ, ಪರಿಚಯ ರೂಪದ ಕೆಲವು ಲೇಖನಗಳಿದ್ದರೂ ಅವುಗಳಿಗೆ ಸಂಶೋಧನೆಯ ಸ್ಪರ್ಶ ಇದ್ದೇ ಇರುವುದರಿಂದ ಮತ್ತು ಈ ಗ್ರಂಥಗಳಲ್ಲಿ ಸಂಶೋಧನ ಲೇಖನಗಳ ಸಂಖ್ಯೆಯೇ ಅಧಿಕವಾಗಿರುವುದರಿಂದ ಈ ಸಂಪುಟಗಳನ್ನು 'ಸಂಶೋಧನ ಪ್ರಬಂಧಗಳ ಸಂಕಲನ' ಎಂದು ಕರೆದಿದ್ದೇನೆ.

ಈ ಸಂದರ್ಭದಲ್ಲಿ ಕೆಲವರನ್ನು ನೆನೆಯುವುದು ನನಗೆ ಸಂತೋಷ, ಕರ್ತವ್ಯ ಕೂಡ. ನನ್ನೊಳಗೆ ಯಾವಾಗಲೂ ಜೀವಂತವಾಗಿರುವವರು, ಆ ಮೂಲಕ ನನ್ನನ್ನು ಬೆಳೆಸುತ್ತಲಿರುವವರು ವಿದ್ಯಾಗುರುಗಳಾದ ಡಾ. ಆರ್. ಸಿ. ಹಿರೇಮಠ ಮತ್ತು ಪ್ರೊ. ಬಿ. ಟಿ. ಸಾಸನೂರ. "ಭಯಪಡಬೇಡಿ, ಈ ಕಷ್ಟಗಳು ನಿಮ್ಮನ್ನು ಬೆಳೆಸುತ್ತವೆ..... ನಿಮ್ಮ ಬೆಂಬಲಕ್ಕೆ ನಾವೆಲ್ಲ ಇದ್ದೇವೆ" ಎಂಬಂಥ ಮಾತುಗಳ ಮೂಲಕ ಸಂಶೋಧನ ಸಂದರ್ಭದಲ್ಲಿ ಉದ್ದಕ್ಕೂ ನನ್ನ ಆತ್ಮವಿಶ್ವಾಸ ಕುಸಿಯದಂತೆ ನೋಡಿಕೊಂಡವರು, ಡಾ. ಎಂ. ಚಿದಾನಂದಮೂರ್ತಿ. ಇವರೆಲ್ಲರಿಗೂ ವಂದನೆಗಳು.

ಈ ಸಂಪುಟಗಳು ಪ್ರಕಟವಾಗಬೇಕೆಂಬ ಒಲುಮೆ, ಒತ್ತಾಯ ತೋರುತ್ತಬಂದವರು ಅಧ್ಯಯನಪೀಠದ ಕೆಲವು ಮಿತ್ರರು ಮತ್ತು ಕಾಲೇಜುಗಳ ಕೆಲವು ಕನ್ನಡ ಪ್ರಾಧ್ಯಾಪಕರು. ಮುದ್ರಣ ಸಂದರ್ಭದಲ್ಲಿ ರಾತ್ರಿಯನ್ನೂ ಹಗಲುಮಾಡಿ ದುಡಿದವರು, ವಿದ್ವತ್ತಿನ ಮೇಲಿನ ಪ್ರೀತಿಯಿಂದ ಉದ್ದಕ್ಕೂ ನೆರವಾದವರು ಡಾ. ಬಿ. ಆರ್. ಹಿರೇಮಠ ಅವರು. ಪ್ರಕಾಶನದ ಭಾರಹೊತ್ತವರು ಬೆಂಗಳೂರಿನ ಪ್ರಸಿದ್ಧ ಪ್ರಕಾಶಕರಾದ ಶ್ರೀ ಜಿ. ಕಲ್ಲಯ್ಯ ಅವರು. ಹೆಸರಿಗೆ ತಕ್ಕಂತೆ ತಮ್ಮ 'ತ್ವರಿತ ಮುದ್ರಣ'ದ ಮೂಲಕ ಎರಡು ತಿಂಗಳಲ್ಲಿ ಎರಡೂ ಸಂಪುಟಗಳನ್ನು ಮುದ್ರಿಸಿದವರು ಗದುಗಿನ ಶ್ರೀ ಫ. ಶಿ. ಭಾಂಡಗೆ ಮತ್ತು ಅವರ ಅಳಿಯ ಶ್ರೀ ಕೆ. ಅಶೋಕ. ಇವರೆಲ್ಲರಿಗೆ ನನ್ನ ಕೃತಜ್ಞತೆಗಳು.

ಲೇಖನಗಳ ಶುದ್ಧಪ್ರತಿಯನ್ನು ಸಿದ್ಧಪಡಿಸುವಲ್ಲಿ ವಿದ್ಯಾರ್ಥಿಗಳಿಂದಾಗಿ ತಲೆದೋರಿದ ಶಬ್ದದೋಷಗಳು ಈ ಮುದ್ರಣದಲ್ಲಿ ಕೆಲವೆಡೆ ಉಳಿದುಕೊಂಡಿವೆ. ನಾನು ಧಾರವಾಡದಲ್ಲಿ, ಅಚ್ಚಿನ ಕಾರ್ಯ - ಕರಡಚ್ಚು ವಾಚನಕಾರ್ಯ ಗದುಗಿನಲ್ಲಿ. ಇದರಿಂದಾಗಿ ಕೆಲವು ಅನಿವಾರ್ಯ ನ್ಯೂನತೆಗಳು ತಲೆದೋರಿವೆ. ಇವುಗಳನ್ನು ಮನ್ನಿಸಬೇಕೆಂದು ಕೋರುತ್ತೇನೆ.

ಕನ್ನಡ ಅಧ್ಯಯನಪೀಠ **- ಎಂ. ಎಂ. ಕಲಬುರ್ಗಿ**

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ದ್ವಿತೀಯ ಆವೃತ್ತಿ

ಸಂಶೋಧನೆಯ ಇತಿಹಾಸದಲ್ಲಿ ಇತಿಹಾಸವನ್ನು ಸ್ಥಾಪಿಸಿದ "ಮಾರ್ಗ" ಸಂಪುಟಗಳು ಪ್ರಕಟವಾದುದು, ೧೯೮೮ರಲ್ಲಿ. ಪರಿಸರವು ನಮ್ಮನ್ನು ಬೆಳೆಸುತ್ತದೆಯೆಂಬುದು ಎಷ್ಟು ಸತ್ಯವೋ, ಬೆಳೆಯಗೊಡುವುದಿಲ್ಲವೆಂಬುದೂ ಅಷ್ಟೇ ಸತ್ಯವೆಂಬ ವಾಸ್ತವವನ್ನು ಅರ್ಥಮಾಡಿಕೊಂಡ ದಿನಗಳು. ಆ ಆತಂಕದ ದಿನಗಳಲ್ಲಿ ನನ್ನೊಂದಿಗೆ ನಿಂತ ಪತ್ರಿಕೆಗಳಿಗೆ, ಸ್ನೇಹಿತರಿಗೆ ಋಣಿಯಾಗಿದ್ದೇನೆ.

ಮಾರ್ಗ - ೧ರಲ್ಲಿ ನಾಲ್ಕು ಲೇಖನಗಳಿಗೆ ಪ್ರತಿಯಾಗಿ ನಾಲ್ಕು ಹೊಸ ಲೇಖನ ಸೇರಿಸಿರುವುದನ್ನು ಬಿಟ್ಟರೆ, ಎರಡೂ ಸಂಪುಟಗಳು ಮೂಲರೂಪದಲ್ಲಿಯೇ ಹೊರಬರುತ್ತಲಿವೆ. ಒಂದು ವರ್ಷದಲ್ಲಿಯೇ ಎರಡೂ ಸಂಪುಟಗಳು ಮಾರಾಟವಾಗಿ ಬೇಡಿಕೆ ಹೆಚ್ಚುತ್ತಲೇ ಇದ್ದಿತು. ಇದನ್ನು ಗಮನಿಸಿ ೧೫೦೦ ಪುಟವ್ಯಾಪ್ತಿಯ ಈ ಸಂಪುಟಗಳನ್ನು ಪ್ರಕಟಿಸುತ್ತಿರುವ ಬೆಂಗಳೂರಿನ "ಕರ್ನಾಟಕ ಬುಕ್ ಏಜೆನ್ಸಿ" ಸಂಸ್ಥೆಯ ಶ್ರೀ ದೀಪಕ ಅವರಿಗೆ ಕೃತಜ್ಞನಾಗಿದ್ದೇನೆ. ಅಕ್ಷರ ಜೋಡಣೆಯನ್ನು ಪೂರೈಸಿದ ಧಾರವಾಡದ ವಿನಯ, ಜಯಶ್ರೀ ವಾಲಿ ಅವರ ನೆರವನ್ನು ನೆನೆಯುತ್ತೇನೆ.

೨೮ ನವೆಂಬರ ೧೯೯೫ - ಎಂ. ಎಂ. ಕಲಬುರ್ಗಿ

ದ್ವಿತೀಯ ಆವೃತ್ತಿ

'ಮಾರ್ಗ'ದ ಆರು ಸಂಪುಟಗಳನ್ನು ಏಕಕಾಲಕ್ಕೆ ಪ್ರಕಟಿಸುವ ಯೋಜನೆಯ ಅಂಗವಾಗಿ ಈಗ ೧ನೆಯ ಮತ್ತು ೨ನೆಯ ಸಂಪುಟಗಳ ಈ ೩ನೆಯ ಆವೃತ್ತಿ ಏನೂ ವ್ಯತ್ಯಾಸವಿಲ್ಲದೆ ಬೆಳಕು ಕಾಣುತ್ತಲಿದೆ. ನನ್ನ ಎಲ್ಲ ಪುಸ್ತಕಗಳ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾದ ಬೆಂಗಳೂರಿನ "ಸಪ್ನಾ ಬುಕ್‌ಹೌಸ್" ಒಡೆಯರಾಗಿರುವ ಶ್ರೀ ನಿತಿನ್ ಶಹಾ ಬಂಧುಗಳ ಔದಾರ್ಯಕ್ಕೆ, ಇಲ್ಲಿಯ ಕನ್ನಡ ವಿಭಾಗದ ನಿರ್ವಹಣೆಕಾರರಾದ ಶ್ರೀ ಜಿ. ದೊಡ್ಡೇಗೌಡ ಅವರ ಕ್ರಿಯಾಶೀಲತೆಗೆ ಶಬ್ದಾತೀತ ಕೃತಜ್ಞತೆಗಳು.

ನಾಲ್ಕು ಸಾವಿರ ಪುಟಗಳ, ಆರು ಸಂಪುಟಗಳ ನನ್ನ ಈ ಸಮಗ್ರ ಲೇಖನಸಾಹಿತ್ಯವನ್ನು ಪ್ರೀತಿಯಿಂದ ಬರಮಾಡಿಕೊಳ್ಳಲಿರುವ ಕನ್ನಡ ಬಂಧುಗಳಿಗೆ ವಂದನೆಗಳು.

೨೦೧೧ ಎಂ. ಎಂ. ಕಲಬುರ್ಗಿ

ಆಕರ : ಮಾರ್ಗ ಸಂಪುಟ-೫

ಮಾರ್ಗ : ೩

೧೯೯೮

ಮಾರ್ಗಕ್ಕೆ ಮೊದಲು

"ಮಾರ್ಗ" ಹೆಸರಿನ ನನ್ನ ಎರಡು ಪ್ರಬಂಧ ಸಂಪುಟಗಳ ಪ್ರಕಟನೆಯಿಂದಾಗಿ, ಈ ಶಬ್ದ ಕನ್ನಡ ಪುಸ್ತಕ ಪ್ರಪಂಚದಲ್ಲಿ "ಸ್ಥಿರಶೀರ್ಷಿಕೆ" ಮರ್ಯಾದೆಯನ್ನು ಪಡೆದಿದೆ. ಸಂವಾದಗಳಿಗೆ ವಸ್ತುವಾಗುವ ಮೂಲಕ ಒಂದು ಐತಿಹಾಸಿಕ ಸಂದರ್ಭವನ್ನೂ ಸೃಷ್ಟಿಸಿದೆ. ಇದಕ್ಕೂ ಮಿಗಿಲೆಂಬಂತೆ, "ಮಾರ್ಗ" ಎಂದಾಕ್ಷಣ ನನ್ನ ಹೆಸರು ನೆನಪಾಗುವಂತಹ ವಾತಾವರಣ ಕರ್ನಾಟಕದಲ್ಲಿ ನಿರ್ಮಾಣವಾಗಿದೆ. ಇವುಗಳಿಗೆ ಕಾರಣರಾದ ಎಲ್ಲ ಮಹನೀಯರಿಗೆ ಕೃತಜ್ಞನಾಗಿದ್ದೇನೆ.

ನನ್ನ ಶ್ರಮದ ಅರ್ಧಪಾಲು ನನ್ನ ಗುರುಗಳಲ್ಲಿ- ನನ್ನ ವಿದ್ಯಾರ್ಥಿಗಳಲ್ಲಿ ಹಂಚಿಹೋಗಿದೆ. ಉಳಿದರ್ಧ ಪಾಲು ನನ್ನ ಬರಹದಲ್ಲಿ ಸಂಚಯಗೊಂಡಿದೆ. ಗುರುಗಳಿಗಾಗಿ ವಹಿಸಿದ ಶ್ರಮವು ನಾನು "ಶ್ರಮಸಂಸ್ಕೃತಿ"ಯ ವ್ಯಕ್ತಿಯಾಗಿ ಬೆಳೆಯಲು, ವಿದ್ಯಾರ್ಥಿಗಳಿಗಾಗಿ ವಹಿಸಿದ ಶ್ರಮವು ನನ್ನ ವಿದ್ಯಾರ್ಥಿಗಳು "ಶ್ರಮಸಂಸ್ಕೃತಿ"ಯ ವ್ಯಕ್ತಿಗಳಾಗಿ ಬೆಳೆಯಲು ಸಹಾಯಮಾಡಿದೆ. ಈ ಕಾರಣಕ್ಕಾಗಿ ನಾನು ಗುರುಗಳಿಗೆ ಆಜನ್ಮ ಋಣಿಯಾಗಿದ್ದೇನೆ. "ಶ್ರಮಸಂಸ್ಕೃತಿ"ಯ ನನ್ನ ವಿದ್ಯಾರ್ಥಿ ಬಳಗ ಇನ್ನೂ ದೊಡ್ಡದಾಗಲೆಂದು ಹಾರೈಸುತ್ತೇನೆ.

ನನ್ನ ಬರವಣಿಗೆ ಪುಸ್ತಕ - ಪ್ರಬಂಧ ರೂಪಗಳಲ್ಲಿ ಕವಲೊಡೆದಿದೆ. ಪ್ರಬಂಧ ರೂಪದ ಬರವಣಿಗೆ ಈ ವರೆಗೆ "ಮಾರ್ಗ" ಹೆಸರಿನ ಎರಡು ಸಂಪುಟಗಳಲ್ಲಿ ಬೆಳಕು ಕಂಡಿದ್ದು, ಈಗ ಮೂರನೆಯ ಸಂಪುಟ ಹೊರಬರುತ್ತಲಿದೆ. ಈ ಸಂಪುಟದಲ್ಲಿ ಎಂಬತ್ತು ಲೇಖನಗಳಿವೆ. ಇವುಗಳನ್ನು ಪ್ರಬಂಧ, ಚಿಂತನ, ನಿರ್ವಚನ, ಪ್ರಸ್ತಾವನೆ - ಶೀರ್ಷಿಕೆಗಳಲ್ಲಿ ಹಂಚಿಹಾಕಿದ್ದೇನೆ.

"ಪ್ರಬಂಧ" ವರ್ಗದ ಇಲ್ಲಿಯ ಲೇಖನಗಳನ್ನು ಸ್ಥೂಲವಾಗಿ ಸಂಶೋಧನ, ವಿಮರ್ಶನ ಬರಹಗಳೆಂದು ವರ್ಗೀಕರಿಸಬಹುದು. ನನ್ನ ದೃಷ್ಟಿಯಲ್ಲಿ ಇವು ವಿರುದ್ಧ ಶಿಸ್ತುಗಳಲ್ಲ, ಪೂರಕ ಶಿಸ್ತುಗಳು. ಏಕೆಂದರೆ ಸಂಶೋಧನೆಯೆನ್ನುವುದು ವಿಶ್ಲೇಷಣಾತ್ಮಕ ವಿಮರ್ಶೆ, ವಿಮರ್ಶೆಯೆನ್ನುವುದು ವ್ಯಾಖ್ಯಾನಾತ್ಮಕ ಸಂಶೋಧನೆ. ಹೀಗಾಗಿ ಅನೇಕ ಲೇಖನಗಳು ಸಂಶೋಧನೆಯಾಗುತ್ತಲೇ ವಿಮರ್ಶೆಯಾಗಿ ಬೆಳೆದಿವೆ. ಈ ಮಾತಿಗೆ ಇಲ್ಲಿಯ ಕೆಲವು ಪ್ರಬಂಧಗಳು ಉದಾಹರಣೆಯೆನಿಸಿವೆ.

"ಚಿಂತನ"ಗಳು ದೀರ್ಘ ಟಿಪ್ಪಣಿಯಾಗಿವೆ. ನಮ್ಮ ಸಾಹಿತ್ಯದಲ್ಲಿ ಅನೇಕ ಕಗ್ಗಂಟುಗಳುಂಟು. ನೋಡಲು ಚಿಕ್ಕ ಸ್ವರೂಪದವುಗಳೆನಿಸಿದರೂ ಬಿಚ್ಚಿದಲ್ಲಿ ಅವು ಒಂದು ದೊಡ್ಡ ಪರಂಪರೆಯನ್ನೇ ತೆರೆದು ತೋರಿಸುತ್ತವೆ. ಇವು ದೊಡ್ಡ ಬಾಗಿಲನ್ನೇ ತೆರೆಯುವ ಸಣ್ಣ ಬೀಗದ ಕೈಗಳು. ನಮ್ಮ ವಿದ್ವತ್ ಪತ್ರಿಕೆಗಳಲ್ಲಿ ಸ್ಥಿರಶೀರ್ಷಿಕೆಯಾಗಿ ವಿರಾಜಿಸುತ್ತಿರುವ "ಕಮ್ಮಟದ ಕಿಡಿ" ರೂಪದ ಲೇಖನಗಳಿವು.

"ನಿರ್ವಚನ" ವಿಭಾಗವು ವಚನಗಳ ವಿಶ್ಲೇಷಣೆ - ವ್ಯಾಖ್ಯಾನ ರೂಪದ ಬರಹಗಳನ್ನೊಳಗೊಂಡಿದೆ. ಕನ್ನಡದ ವಚನಗಳು ಚಿಂತನ ಲೋಕದ ಅಕ್ಷಯನಿಧಿ. ಅವುಗಳ ಆನ್ವಯಿಕ ವಿಮರ್ಶೆ ಇತ್ತೀಚೆ ಹೆಚ್ಚು ಮಹತ್ವ ಪಡೆಯುತ್ತಲಿದೆ. ಒಂದೊಂದು ವಚನವನ್ನು ಎಲ್ಲ ಮೈಗಳಿಂದಲೂ ವಿವೇಚಿಸುವ ಪ್ರಯತ್ನವಿದು. ಸಾಹಿತ್ಯಿಕವಾಗಿ - ಸಾಹಿತ್ಯೇತರವಾಗಿ, ಆಶಯನಿಷ್ಠವಾಗಿ - ಆಕೃತಿನಿಷ್ಠವಾಗಿ, ಹೀಗೆ ಏನೆಲ್ಲವಾಗಿ ಒಂದೊಂದು ವಚನ - ರಚನೆಯನ್ನು ಸೂಕ್ಷ್ಮವಾಗಿ ನೋಡಿದ ಪ್ರಯತ್ನವಿಲ್ಲಿದೆ.

"ಪ್ರಸ್ತಾವನೆ" ಹೆಸರೇ ಸೂಚಿಸುವಂತೆ ನನ್ನ ಕೃತಿಗಳಿಗೆ ಬರೆದ ಸುದೀರ್ಘ ಸಂಪ್ರಬಂಧಗಳಾಗಿವೆ. ಕೆಲವು ಸಲ ಒಂದು ಸಣ್ಣ ಕೃತಿಯನ್ನು ನೆವವಾಗಿ ಇಟ್ಟುಕೊಂಡು, ದೊಡ್ಡ ಪರಂಪರೆಯನ್ನೇ - ದೊಡ್ಡ ಕ್ಷೇತ್ರವನ್ನೇ ಇಲ್ಲಿ ತೆಕ್ಕೆಗೆ ತೆಗೆದುಕೊಳ್ಳಲಾಗಿದೆ. ಓದುಗರ ಅನುಕೂಲಕ್ಕಾಗಿ ಇಂಥ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಒಗ್ಗೂಡಿಸುವ ಪರಂಪರೆ ಡಿ. ಎಲ್. ಎನ್. ಅವರ "ಪೀಠಿಕೆಗಳು - ಲೇಖನಗಳು" ಗ್ರಂಥ ಪ್ರಕಟನೆಯಿಂದ ನಮ್ಮಲ್ಲಿ ಆರಂಭವಾಯಿತು. ಆ ಮಾದರಿಯಲ್ಲಿ ಕೆಲವು ಮುಖ್ಯ ಪ್ರಸ್ತಾವನೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಸಂಶೋಧನಕ್ಷೇತ್ರದಲ್ಲಿ ಲೇಖಕರ - ವಾಚಕರ ಸಂಖ್ಯೆ ಯಾವಾಗಲೂ ಕಡಿಮೆ. ಇತ್ತೀಚೆ "ಸಂಶೋಧನ ಸಂಸ್ಥೆ"ಗಳು ಅಸಂಶೋಧಕರ ಸ್ವರ್ಗಗಳಾಗಿ, ಸಂಶೋಧನ ನಿಯತಕಾಲಿಕೆಗಳು ಅನಿಯತಕಾಲಿಕೆಗಳಾಗಿ ಪರಿವರ್ತನೆಗೊಳ್ಳುವಲ್ಲಿ, ಈ ಸಂಖ್ಯೆ ಇನ್ನೂ ಕಡಿಮೆಯಾಗುತ್ತಲಿದೆ. ಈ ಇಳಿಕೆಯನ್ನು ತಡೆಗಟ್ಟುವ ಪ್ರಜ್ಞೆ ಎಚ್ಚರವಾಗಿ, ಅದು ಕ್ರಿಯೆಯಲ್ಲಿ ಸಾಕಾರಗೊಳ್ಳಬೇಕಿದೆ. ಆ ಶುಭ ಸಂದರ್ಭವನ್ನು ನಿರೀಕ್ಷಿಸುತ್ತಿದ್ದೇನೆ.

೧೯೩೮ ನವೆಂಬರ್ ೨೮ ನನ್ನ ಜನ್ಮದಿನ. ನನಗೆ ೫೦ ವರ್ಷ ತುಂಬುವಂದು ಅಂದರೆ ೧೯೮೮ ನವೆಂಬರ್ ೨೮ ರಂದು "ಮಾರ್ಗ" ಹೆಸರಿನ ಎರಡು ಸಂಪುಟಗಳನ್ನು ಪ್ರಕಟಿಸಿದೆ. ಈಗ ನನ್ನ ೬೦ನೆಯ ವರ್ಷ ಆರಂಭವಾಗುವ ದಿನದಂದು (೨೯ ನವೆಂಬರ್ ೧೯೯೭) "ಮಾರ್ಗ" ಹೆಸರಿನ ಈ ಮೂರನೆಯ ಸಂಪುಟ ಪ್ರಕಟವಾಗುತ್ತಲಿರುವುದು ನನಗೆ ವಿಶೇಷ ಸಂತೋಷವನ್ನುಂಟುಮಾಡಿದೆ.

ಅನೇಕ ಸಲ ಹೇಳಿಕೊಂಡಂತೆ ನನ್ನ ಚೈತನ್ಯದ ಒಂದು ತುದಿ ನನ್ನ ವಿದ್ಯಾಗುರುಗಳಾದ ಡಾ. ಆರ್. ಸಿ. ಹಿರೇಮಠ ಮತ್ತು ಪ್ರೊ. ಬಿ. ಟಿ. ಸಾಸನೂರ, ಇನ್ನೊಂದು ತುದಿ ನನ್ನ ವಿದ್ಯಾರ್ಥಿಗಳು. ನನ್ನೊಳಗೆ ಯಾವಾಗಲೂ ಜೀವಂತವಾಗಿದ್ದು, ಬೆಳೆಸುತ್ತಲಿರುವ ಈ ಎರಡೂ ಶಕ್ತಿಗಳಿಗೆ ಕೃತಜ್ಞನಾಗಿದ್ದೇನೆ. ಇಲ್ಲಿಯ "ಚಿಂತನ" ಲೇಖನಗಳನ್ನು ಸಂಶೋಧನ ವ್ಯಾಸಂಗ, ಸಂಯುಕ್ತ ಕರ್ನಾಟಕ ಪತ್ರಿಕೆಗಳೂ, "ನಿರ್ವಚನ" ಲೇಖನಗಳನ್ನು ಬಸವಪಥ ಪತ್ರಿಕೆಯೂ, ಮಿಕ್ಕ ಲೇಖನಗಳನ್ನು ಸಂಕ್ರಮಣ ಮೊದಲಾದ ಪತ್ರಿಕೆಗಳೂ ಪ್ರಕಟಿಸಿವೆ. ಕೆಲವು ಪ್ರಬಂಧಗಳು "ಅಭಿನಂದನ ಗ್ರಂಥ"ಗಳಲ್ಲಿ ಬೆಳಕು ಕಂಡಿವೆ. ಇವುಗಳ ಸಂಪಾದಕರಿಗೆ ಕೃತಜ್ಞನಾಗಿದ್ದೇನೆ.

"ಮಾರ್ಗ" ಮಾಲೆಯ ಮೊದಲ ಎರಡು ಸಂಪುಟಗಳ ದ್ವಿತೀಯ ಆವೃತ್ತಿಯನ್ನು ಹೊರತಂದ ಬೆಂಗಳೂರಿನ ಪ್ರಸಿದ್ಧ ಪುಸ್ತಕಲೋಕವೆನಿಸಿರುವ "ಕರ್ನಾಟಕ ಬುಕ್ ಏಜೆನ್ಸಿ" ಈ ಮೂರನೆಯ ಸಂಪುಟವನ್ನು ಪ್ರಕಟಿಸುತ್ತಲಿದೆ. ಈ ದೊಡ್ಡ ಹೊಣೆಯನ್ನು ಪೂರೈಸಿದ ಶ್ರೀ ಸುರೇಶ ಷಾ ಅವರಿಗೂ, ಮಕ್ಕಳಾದ ಶ್ರೀ ನಿತಿನ್ ಮತ್ತು ಶ್ರೀ ದೀಪಕ್ ಅವರಿಗೂ ಋಣಿಯಾಗಿದ್ದೇನೆ. ನನ್ನ ಒತ್ತಾಯ -

ಕಿರಿಕಿರಿಗಳನ್ನು ಸಹಿಸಿಕೊಂಡು ಅಕ್ಷರ ಜೋಡಣೆ ಕಾರ್ಯವನ್ನು ಸಂತೋಷದಿಂದ ಪೂರೈಸಿದ, ಧಾರವಾಡದ ಅಖಿಲಗ್ರಾಫಿಕ್ಸ್ ಕೇಂದ್ರದ ವಿನಯ ವಾಲಿ ಮತ್ತು ಜಯಶ್ರೀ ವಾಲಿ ಅವರಿಗೂ ಧನ್ಯವಾದಗಳು.

೨೯ ನವೆಂಬರ್ ೧೯೯೭ ಎಂ. ಎಂ. ಕಲಬುರ್ಗಿ

ದ್ವಿತೀಯ ಆವೃತ್ತಿ

'ಮಾರ್ಗ'ದ ಆರು ಸಂಪುಟಗಳನ್ನು ಏಕಕಾಲಕ್ಕೆ ಪ್ರಕಟಿಸುವ ಯೋಜನೆಯ ಅಂಗವಾಗಿ ಈಗ ೩ನೆಯ ಸಂಪುಟದ ೨ನೆಯ ಆವೃತ್ತಿ ಬೆಳಕು ಕಾಣುತ್ತಲಿದೆ. ಪ್ರಥಮ ಆವೃತ್ತಿಯಲ್ಲಿ ಪ್ರಬಂಧ ೨೦, ಚಿಂತನ ೩೦, ನಿರ್ವಚನ ೧೫, ಪ್ರಸ್ತಾವನೆ ೧೫ - ಹೀಗೆ ೪ ವಿಭಾಗಗಳೂ, ಒಟ್ಟು ೮೦ ಲೇಖನಗಳೂ ಇದ್ದವು. ಅಲ್ಲಿಯ ಪ್ರಸ್ತಾವನೆ ವಿಭಾಗದ ೧೫ ಲೇಖನಗಳನ್ನು ಕೈಬಿಟ್ಟು, ಪ್ರಬಂಧ ವಿಭಾಗದ ಉತ್ತರಾರ್ಧಕ್ಕೆ ೩೫ ಹೊಸಲೇಖನ ಸೇರಿಸಲಾಗಿದೆ. ಇದರಿಂದಾಗಿ ಪ್ರಬಂಧ ೫೫, ಚಿಂತನ ೩೦, ನಿರ್ವಚನ ೧೫ -ಹೀಗೆ ೧೦೦ ಲೇಖನಗಳ ಸಂಪುಟ ಈಗ ರೂಪಗೊಂಡಿದೆ. ಇಡಿ ಸಂಪುಟವನ್ನು ಸಂಶೋಧನ ಲೇಖನಗಳ ಕೃತಿಯನ್ನಾಗಿಸಬೇಕೆಂಬ ಉದ್ದೇಶದಿಂದ ಹೀಗೆ ಮಾಡಲಾಗಿದೆ.

ನನ್ನ ಎಲ್ಲ ಪುಸ್ತಕಗಳ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾದ ಬೆಂಗಳೂರಿನ "ಸಪ್ನಾ ಬುಕ್‌ಹೌಸ್" ಈ ಆವೃತ್ತಿಯನ್ನೂ ಪ್ರಕಟಿಸುತ್ತಿದೆ. ಈ ಸಂಸ್ಥೆಯ ಒಡೆಯರಾಗಿರುವ ಶ್ರೀ ನಿತಿನ್ ಶಹಾ ಬಂಧುಗಳ ಔದಾರ್ಯಕ್ಕೆ, ಇಲ್ಲಿಯ ಕನ್ನಡ ವಿಭಾಗದ ನಿರ್ವಹಣೆಕಾರರಾದ ಶ್ರೀ ಜಿ. ದೊಡ್ಡೇಗೌಡ ಅವರ ಕ್ರಿಯಾಶೀಲತೆಗೆ ಶಬ್ದಾತೀತ ಕೃತಜ್ಞತೆಗಳು.

ನಾಲ್ಕು ಸಾವಿರ ಪುಟಗಳ, ಆರು ಸಂಪುಟಗಳ ನನ್ನ ಈ ಸಮಗ್ರ ಲೇಖನಸಾಹಿತ್ಯವನ್ನು ಪ್ರೀತಿಯಿಂದ ಬರಮಾಡಿಕೊಳ್ಳಲಿರುವ ಕನ್ನಡ ಬಂಧುಗಳಿಗೆ ವಂದನೆಗಳು.

ಆಕರ : ಮಾರ್ಗ ಸಂಪುಟ–೫

■■

ಮಾರ್ಗ : ೪

೨೦೦೪, ೨೦೦೫, ೨೦೧೦

ಮಾರ್ಗಕ್ಕೆ ಮೊದಲು

ಧಾರವಾಡ ಮಾದರಿ, ಮೈಸೂರು ಮಾದರಿ - ಎಂಬ ಎರಡು ಪ್ರಕಾರಗಳಲ್ಲಿ ಕವಲೊಡೆದ ಆಧುನಿಕ ಕನ್ನಡ ಸಂಶೋಧನೆ, ಏಕೀಕರಣೋತ್ತರ ಕಾಲದಲ್ಲಿ "ಏಕಮಾದರಿ"ಯಲ್ಲಿ ಮುನ್ನಡೆಯುತ್ತಲಿದೆ.

೨೦ನೆಯ ಶತಮಾನದ ಆರಂಭ ಹೊತ್ತಿಗೆ ಕರ್ನಾಟಕವು ಭೌತಿಕ ಮತ್ತು ಸಾಂಸ್ಕೃತಿಕವಾಗಿ ಎರಡು ಘಟಕಗಳಾಗಿಯೇ ರೂಪಗೊಂಡಿದ್ದಿತು. ಅಂದು "ಪುಣೆಯ ಸಾಂಸ್ಕೃತಿಕ ಶೋಧ" ಪರಿಕಲ್ಪನೆಯು ಶಂಬಾ ಅವರಿಂದಾಗಿ ಧಾರವಾಡ ಪ್ರದೇಶದಲ್ಲಿ, "ಮದ್ರಾಸದ ಚಾರಿತ್ರಿಕ ಶೋಧ" ಪರಿಕಲ್ಪನೆಯು ಆರ್. ನರಸಿಂಹಾಚಾರ್ ಅವರಿಂದಾಗಿ ಮೈಸೂರು ಪ್ರದೇಶದಲ್ಲಿ ಬೆಳೆದುಬಂದವು. ಏಕೀಕರಣೋತ್ತರ ಕಾಲದಲ್ಲಿ ಮೈಸೂರಿನ "ಶ್ರೇಷ್ಠತೆಯ ವ್ಯಸನ"ಕ್ಕೆ ಒಳಗಾಗಿ ಧಾರವಾಡದವರು ತಮ್ಮ ಮಾದರಿಯನ್ನು ಕೈಬಿಟ್ಟು, ಮೈಸೂರು ಮಾದರಿಯನ್ನು ಅನುಸರಿಸಿದರು. ಇದರಿಂದಾಗಿ ಕರ್ನಾಟಕದಲ್ಲಿ ಸಂಶೋಧನೆ "ಏಕಮಾದರಿ" ರೂಪ ಪಡೆಯಿತು.

ಮುಂದೆ ೨೦ನೆಯ ಶತಮಾನದ ಉತ್ತರಾರ್ಧದಲ್ಲಿ ಈ "ಚಾರಿತ್ರಿಕ ಶೋಧ"ದೊಂದಿಗೆ ಸಾಂಸ್ಕೃತಿಕ ಶೋಧ ಹೆಸರಿನ ಹೊಸಬಗೆಯ "ಸಾಮಾಜಿಕ ಪ್ರಕ್ರಿಯಾಶೋಧ" ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ "ಸಾಮಾಜಿಕ ಕಾರಣಶೋಧ"ದ ಮೇಲೆ ಹೆಚ್ಚು ಒತ್ತುಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ನಾಲ್ಕು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ನಾಲ್ಕೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು ಮಾರ್ಗ ಹೆಸರಿನ ನನ್ನ ಮೂರೂ ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು.

* * *

೧೯೯೮ - ೨೦೦೧, ಹೀಗೆ ಎರಡು ಶತಮಾನಗಳ ಸಂಧಿಕಾಲದಲ್ಲಿ ನಾನು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗುವ ಸಂದರ್ಭ ಒದಗಿ ಬಂದಿತು. ಅವಿಶ್ರಾಂತ ಶೈಕ್ಷಣಿಕ ಆಡಳಿತ ಕಾರಣವಾಗಿ ಬರೆವಣಿಗೆ ಒಂದಿಷ್ಟು ವಿಶ್ರಾಂತವಾಯಿತು. ಆ ಹುದ್ದೆಯಿಂದ ನಿವೃತ್ತನಾಗುತ್ತಲೇ (೫-೩-೨೦೦೧) ಅದು ಮತ್ತೆ ತನ್ನ ಮೊದಲಿನ ವೇಗಕ್ಕೆ ತಿರುಗಿತು. ಅಲ್ಲಿಂದ ಒಂದೂವರೆ ವರ್ಷದಲ್ಲಿ ಬರೆದ ನೂರು ಅಪ್ರಕಟಿತ ಲೇಖನಗಳ ಸಂಪುಟವಿದು.

ಮೂರು ವರ್ಷಗಳ ಕುಲಪತಿ ಆಡಳಿತ ಪ್ರಸಂಗದಲ್ಲಿ, ಆಗಾಗ ಹೊಳೆದ ವಿಚಾರಗಳ ಶೀರ್ಷಿಕೆ - ಸಂಬಂಧಪಟ್ಟ ಮಾಹಿತಿಗಳನ್ನು ಟಿಪ್ಪಣಿ ಮಾಡುತ್ತ ಹೋದ ಕಾರಣ, ಈ ಲೇಖನಗಳು ಒಂದೂವರೆ

ವರ್ಷದಲ್ಲಿ ಹುಟ್ಟಿದ್ದರೂ, ಇವುಗಳ ಹಿಂದೆ ಒಟ್ಟು ನಾಲ್ಕೂವರೆ ವರ್ಷಗಳ ಚಿಂತನೆ - ಶ್ರಮವಿದೆ ಎಂದೇ ಹೇಳಬೇಕು.

ಬಹುಶಃ ನನ್ನ "ಮಾರ್ಗ" ಸಂಪುಟಗಳಲ್ಲಿ ಇದೇ ಕೊನೆಯದೆಂದು ಕಾಣುತ್ತದೆ. ಹೀಗೆ ಹೇಳಲು ಕಾರಣ ವಯಸ್ಸು, ಇದಕ್ಕಿಂತ ಸಂಶೋಧನ ಲೇಖನಗಳ ಪ್ರಕಟನೆಗೆ ಸೂಕ್ತ ಪತ್ರಿಕೆಗಳಿಲ್ಲದಿರುವುದು. ಲೇಖನಸಾಹಿತ್ಯ ಹುಟ್ಟುವುದು - ಬೆಳೆಯುವುದು ಸಾಮಾನ್ಯವಾಗಿ ಪತ್ರಿಕಾ ಮಾಧ್ಯಮದಲ್ಲಿ. ಲೇಖನ - ಪ್ರತಿಲೇಖನಗಳ ಸಂವಾದಕ್ಕೆ ನೆರವಾಗುವ ಮೂಲಕ ಪತ್ರಿಕೆಗಳು, ಪರಿಸರದ ಒಟ್ಟು ಬರವಣಿಗೆಯನ್ನು ಜೀವಂತವಾಗಿರಿಸುತ್ತವೆ ; ವಿಚಾರ ಪರಿಷ್ಕರಣಕ್ಕೆ ಸಹಕರಿಸುತ್ತವೆ. ಇಂದು ಇಂಥ ಅನುಕೂಲತೆ ಕ್ಷೀಣಿಸಿರುವ ಕಾರಣ, ಏಕಕಾಲಕ್ಕೆ ನೂರರಷ್ಟು ಲೇಖನ ಬರೆದು "ಮಾರ್ಗ" ಸಂಪುಟ ಪ್ರಕಟಿಸುವುದು ಕಷ್ಟದ ಕೆಲಸ. ಹೀಗಾಗಿ ಇನ್ನು ಮುಂದೆ ನಾನು ಲೇಖನಗಳಿಗೆ ಬದಲು ಪುಸ್ತಕ ಬರೆವಣಿಗೆಗೆ ಹೆಚ್ಚು ಒತ್ತು ಕೊಡಬಹುದಾಗಿದೆ.

****

ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ - ಧಾರ್ಮಿಕ ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು, ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದು ಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನೂ ಒಳಗೊಂಡಿವೆ.

* * *

ಶ್ರೀ ಫ. ಗು. ಹಳಕಟ್ಟಿ - ಶ್ರೀ ಶಿ. ಶಿ. ಬಸವನಾಳರ ಸಮಾಜ ಪ್ರೀತಿ, ಡಾ. ಆರ್. ಸಿ. ಹಿರೇಮಠ ಅವರ ವ್ಯಾಪಕ ವ್ಯಾಸಂಗ - ಶ್ರಮ, ಪ್ರೊ. ಬಿ. ಟಿ. ಸಾಸನೂರ ಅವರ ವಿದ್ವತ್ತು - ಶಿಸ್ತು ಈ ಆದರ್ಶಗಳಲ್ಲಿ ರೂಪಗೊಳ್ಳಬಯಸಿರುವ ನಾನು, ಇವರಿಗೆ ಕೃತಜ್ಞನಾಗಿದ್ದೇನೆ. ತಮ್ಮ ಶೈಕ್ಷಣಿಕ ಸಂಪರ್ಕದ ಮೂಲಕ ನನ್ನನ್ನು ಯುವಕನನ್ನಾಗಿಸುತ್ತಿರುವ ನನ್ನ ಪ್ರೀತಿಯ ವಿದ್ಯಾರ್ಥಿಗಳಿಗೆ ಋಣಿಯಾಗಿದ್ದೇನೆ. ಈ ಹಿಂದೆ "ಮಾರ್ಗ" ಸಂಪುಟಗಳನ್ನು "ಸಂಸ್ಥೆ"ಗಳಿಗೆ ಅರ್ಪಿಸಿದ್ದ ನಾನು, ಈ ಸಂಪುಟವನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸುತ್ತಿದ್ದೇನೆ.

ಪುಸ್ತಕ ಪ್ರಕಟಣೆಯ ಮೂಲಕ ಕನ್ನಡ ನಾಡಿಗೆ ದೊಡ್ಡ ಪ್ರಮಾಣದಲ್ಲಿ ಸಾಂಸ್ಕೃತಿಕ ಸೇವೆ ಸಲ್ಲಿಸುತ್ತಲಿರುವ ಬೆಂಗಳೂರಿನ ಸ್ವಪ್ನ ಬುಕ್‌ಹೌಸ್ ಪ್ರಕಾಶನ ಸಂಸ್ಥೆ ಈ ನಾಲ್ಕನೆಯ ಸಂಪುಟವನ್ನೂ ಪ್ರಕಟಿಸುತ್ತಿದೆ. ಇದರ ಒಡೆಯರಾದ ಶ್ರೀಮತಿ ಭಾನುಮತಿ ಎಸ್. ಷಾ ಅವರಿಗೂ, ಮಕ್ಕಳಾದ ಶ್ರೀ

ನಿತಿನ್, ಶ್ರೀ ದೀಪಕ್, ಶ್ರೀ ಪರೇಶ್ ಅವರಿಗೂ ಕೃತಜ್ಞತೆಗಳು. ಈ ಸಂಸ್ಥೆಯ ಕನ್ನಡ ವಿಭಾಗದ ಮ್ಯಾನೇಜರ ಶ್ರೀ ದೊಡ್ಡೇಗೌಡರ ದೊಡ್ಡ ವಿಶ್ವಾಸಕ್ಕೆ ಋಣಿ. ಈ ಸಂಪುಟವನ್ನು ಮುದ್ರಿಸಿದ ರವಿ ಗ್ರಾಫಿಕ್ಸ್‌ನವರಿಗೂ ವಂದನೆಗಳು. ಇಷ್ಟು ಮಾತುಗಳೊಂದಿಗೆ ಈ ಸಂಪುಟವನ್ನು ಬರಮಾಡಿಕೊಳ್ಳಬೇಕೆಂದು ಕನ್ನಡಿಗರಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಧಾರವಾಡ **ಎಂ. ಎಂ. ಕಲಬುರ್ಗಿ**

ತೃತೀಯ ಆವೃತ್ತಿ

'ಮಾರ್ಗ'ದ ಆರು ಸಂಪುಟಗಳನ್ನು ಏಕಕಾಲಕ್ಕೆ ಪ್ರಕಟಿಸುವ ಯೋಜನೆಯ ಅಂಗವಾಗಿ ಈಗ ೪ನೆಯ ಸಂಪುಟದ ೩ನೆಯ ಆವೃತ್ತಿ ಏನೂ ವ್ಯತ್ಯಾಸವಿಲ್ಲದೆ ಬೆಳಕು ಕಾಣುತ್ತಲಿದೆ. ನನ್ನ ಎಲ್ಲ ಪುಸ್ತಕಗಳ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾದ ಬೆಂಗಳೂರಿನ "ಸಪ್ನಾ ಬುಕ್‌ಹೌಸ್" ಈ ಆವೃತ್ತಿಯನ್ನೂ ಪ್ರಕಟಿಸುತ್ತಿದೆ. ಈ ಸಂಸ್ಥೆಯ ಒಡೆಯರಾಗಿರುವ ಶ್ರೀ ನಿತಿನ್ ಶಹಾ ಬಂಧುಗಳ ಔದಾರ್ಯಕ್ಕೆ, ಇಲ್ಲಿಯ ಕನ್ನಡ ವಿಭಾಗದ ನಿರ್ವಹಣೆಕಾರರಾದ ಶ್ರೀ ಜಿ. ದೊಡ್ಡೇಗೌಡ ಅವರ ಕ್ರಿಯಾಶೀಲತೆಗೆ ಶಬ್ದಾತೀತ ಕೃತಜ್ಞತೆಗಳು.

ನಾಲ್ಕು ಸಾವಿರ ಪುಟಗಳ, ಆರು ಸಂಪುಟಗಳ ನನ್ನ ಈ ಸಮಗ್ರ ಲೇಖನಸಾಹಿತ್ಯವನ್ನು ಪ್ರೀತಿಯಿಂದ ಬರಮಾಡಿಕೊಳ್ಳಲಿರುವ ಕನ್ನಡ ಬಂಧುಗಳಿಗೆ ವಂದನೆಗಳು.

೨೦೧೦ **ಎಂ. ಎಂ. ಕಲಬುರ್ಗಿ**

ಆಕರ : ಮಾರ್ಗ ಸಂಪುಟ-೫

೩೧೮

ಮಾರ್ಗ : ೫

'ಮಾರ್ಗ'ದ ಆರು ಸಂಪುಟಗಳನ್ನು ಏಕಕಾಲಕ್ಕೆ ಪ್ರಕಟಿಸುವ ಯೋಜನೆಯ ಅಂಗವಾಗಿ ೫ನೆಯ ಸಂಪುಟ ಈಗ ಬೆಳಕು ಕಾಣುತ್ತಲಿದೆ. ಪ್ರಥಮ ಆವೃತ್ತಿಯಾಗಿರುವ ಇದು ಪ್ರಸ್ತಾವನೆ, ಅರಿಕೆ, ಸಂಪಾದಕೀಯ ಎಂಬ ಮೂರು ವಿಭಾಗಗಳನ್ನೊಳಗೊಂಡಿದೆ.

'ಪ್ರಸ್ತಾವನೆ'ಗಳು ನಾನು ಪರಿಷ್ಕರಿಸಿ ಪ್ರಕಟಿಸಿದ ಪ್ರಾಚೀನ ಕಾವ್ಯಗಳಿಗೆ ಬರೆದುವಾಗಿವೆ. ಈ ಮೊದಲು ಮಾರ್ಗ ೩ರಲ್ಲಿ ಪ್ರಕಟವಾಗಿದ್ದ ೧೫ ಪ್ರಸ್ತಾವನೆಗಳನ್ನು ಇಲ್ಲಿಗೆ ವರ್ಗಾಯಿಸಿಕೊಂಡು,

ಹೆಚ್ಚಿನದಾಗಿ ೧೪ ಹೊಸ ಪ್ರಸ್ತಾವನೆಗಳನ್ನು ಇಲ್ಲಿ ಜೋಡಿಸಲಾಗಿದೆ. ಇದರಿಂದಾಗಿ ನನ್ನ ಎಲ್ಲ ೨೯ ಪ್ರಸ್ತಾವನೆಗಳು ಇಲ್ಲಿ ಸಂಗ್ರಹಗೊಂಡಂತಾಗಿದೆ.

ಸಂಶೋಧನೆಗೆ ಆಕರ ಅವಶ್ಯ, ಅತ್ಯವಶ್ಯ. ಹೀಗಾಗಿ ನಾನು ನನ್ನ ಸಮಕಾಲೀನರಿಗಿಂತ ವಿಶೇಷವೆಂಬಂತೆ ಸಂಶೋಧನೆಯೊಂದಿಗೆ ಆಕರ ಶೋಧಕಾರ್ಯವನ್ನೂ ವಿಪುಲ ಪ್ರಮಾಣದಲ್ಲಿ ಪೂರೈಸಿದ್ದೇನೆ. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ಸಿರುಮನ ಚರಿತೆ, ಗೊಲ್ಲ ಸಿರುಮನ ಚರಿತೆ, ಸಿರುಮಣನಾಯಕನ ಸಾಂಗತ್ಯ, ನಿಂಬ ಸಾಮಂತ ಚರಿತೆ, ಹಳೆಯ ಕುಮಾರ ರಾಮನ ಸಾಂಗತ್ಯ, ಹೊಸ ಕುಮಾರ ರಾಮನ ಸಾಂಗತ್ಯ, ಕೊಮಾರರಾಮಯ್ಯನ ಚರಿತೆ, ಬಾಲರಾಮನ ಸಾಂಗತ್ಯ, ಕಿತ್ತೂರ ಸಂಸ್ಥಾನ ಸಾಹಿತ್ಯಗಳಂಥ ರಾಜಕೀಯ ಇತಿಹಾಸ ಕಾವ್ಯಗಳನ್ನೂ, ಹರಿಹರನ ರಗಳೆಗಳು, ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ ಸ್ತೋತ್ರ, ಷಟ್‌ಸ್ಥಲ ಶಿವಾಯಣ, ಸಿದ್ಧಮಂಕ ಚರಿತೆ, ತಗರ ಪವಾಡ, ಗುಂಡ ಬಸವೇಶ್ವರ ಚರಿತ್ರೆಗಳಂಥ ಧಾರ್ಮಿಕ ಇತಿಹಾಸ ಕಾವ್ಯಗಳನ್ನೂ, ಕರ್ನಾಟಕದ ಕೈಫಿಯತ್ತುಗಳು ಹೆಸರಿನ ದಾಖಲು ಸಾಹಿತ್ಯ ಕೃತಿಯನ್ನೂ ಪ್ರಕಟಿಸುವ ಮೂಲಕ ಒಂದು ಸ್ವತಂತ್ರ ಅಭ್ಯಾಸಕ್ಕೆ ವಿಷಯವಾಗುವಷ್ಟು ಚಾರಿತ್ರಿಕ ಆಕರ ಸಾಮಗ್ರಿಯನ್ನು ಹೊರತಂದ ಸಂತೋಷ ನನ್ನದಾಗಿದೆ. ನಾನು ಶೋಧಿಸಿ, ಪರಿಷ್ಕರಿಸಿ ಪ್ರಕಟಿಸಿದ ವಚನ ಕೃತಿಗಳಿಗೂ ಕೊಂಡುಗುಳಿ ಕೇಶಿರಾಜನ ಕೃತಿಗಳಿಗೂ ಆದಯ್ಯನ ಲಘು ಕೃತಿಗಳಂಥ ಗ್ರಂಥಗಳಿಗೂ, ಮಲ್ಲಿನಾಥ ಪುರಾಣ ಸಂಗ್ರಹದಂಥ ಸಂಗ್ರಹಗಳಿಗೂ ಬರೆದ ವಿಸ್ತಾರವಾದ ಈ ಪ್ರಸ್ತಾವನೆಗಳು ಜನಪದ, ಶಿಷ್ಟಪದ ಸಾಹಿತ್ಯ, ಶಾಸನ-ಕ್ಷೇತ್ರಕಾರ್ಯಗಳಂಥ ಆಕರಗಳನ್ನು ಬಳಸಿಕೊಂಡು ರೂಪಿಸಿದ ಶೋಧನಿಷ್ಠ ಬರಹಗಳಾಗಿವೆ. ಓದುಗರಿಗೆ ಒಂದು ಕಡೆ ಸಿಗಲೆಂಬ ದೃಷ್ಟಿಯಿಂದ ಅವೆಲ್ಲವನ್ನು ಇಲ್ಲಿ ಸಂಗ್ರಹಿಸಲಾಗಿದೆ.

'ಅರಿಕೆ' ಎಂಬ ಎರಡನೆಯ ಭಾಗದಲ್ಲಿ ನನ್ನ ಸ್ವತಂತ್ರ ಕೃತಿಗಳಿಗೆ ಬರೆದ ಬಿನ್ನಹ ರೂಪದ ಬರೆಹಗಳಿವೆ. ಗ್ರಂಥಸಂಪಾದನ ಶಾಸ್ತ್ರ, ಹಸ್ತಪ್ರತಿಶಾಸ್ತ್ರ, ಸಂಶೋಧನಶಾಸ್ತ್ರ, ನಾಮವಿಜ್ಞಾನಗಳಂಥ ಶಾಸ್ತ್ರಕೃತಿಗಳಿಗೂ, ಶಾಸನಗಳಲ್ಲಿ ಶಿವಶರಣರು, ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಮಹಾರಾಷ್ಟ್ರದ ಕನ್ನಡ ಶಾಸನಗಳು, ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳಂಥ ಕೃತಿಗಳಿಗೂ ಬರೆದ ಬಿನ್ನಹಗಳಿವು. ಆಯಾ ಪುಸ್ತಕಗಳ ಸ್ವರೂಪ, ಅವುಗಳ ರಚನೆಯಲ್ಲಿ ವಹಿಸಿರುವ ಶ್ರಮ ಇತ್ಯಾದಿಗಳನ್ನು ಇವು ಒಳಗೊಂಡಿವೆ.

'ಸಂಪಾದಕೀಯ' ವಿಭಾಗವು ಇನ್ನೊಬ್ಬರ ಆಧುನಿಕ ಪುಸ್ತಕ, ಲೇಖನಗಳನ್ನು ಸಂಪಾದಿಸಿ ನಾನು ಬರೆದ ಲೇಖನಗಳನ್ನೊಳಗೊಂಡಿದೆ. ಅರಟಾಳ ರುದ್ರಗೌಡರ ಚರಿತ್ರೆ, ಫ. ಗು. ಹಳಕಟ್ಟಿ ಸಮಗ್ರಸಾಹಿತ್ಯ ಸಂಪುಟ, ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ, ಮಡಿವಾಳಪ್ಪ ಸಾಸನೂರ, ವಜ್ರಕುಸುಮ, ಬೆಳ್ವೊಲ ಮೊದಲಾದವುಗಳಿಗೆ ಬರೆದ ಸಂಪಾದಕೀಯ ಮಾತುಗಳು ಇಲ್ಲಿವೆ. ಪ್ರತಿಯೊಂದು ವಿಭಾಗದಲ್ಲಿ ಈ ಲೇಖನಗಳನ್ನು ಕಾಲಾನುಕ್ರಮ ಜೋಡಿಸಲಾಗಿದೆ.

ನನ್ನ ಎಲ್ಲ ಪುಸ್ತಕಗಳ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾದ ಬೆಂಗಳೂರಿನ "ಸಪ್ನಾ ಬುಕ್‌ಹೌಸ್" ಒಡೆಯರಾದ ಶ್ರೀ ನಿತಿನ್ ಶಹಾ ಬಂಧುಗಳ ಔದಾರ್ಯಕ್ಕೆ, ಇಲ್ಲಿಯ ಕನ್ನಡ ವಿಭಾಗದ ನಿರ್ವಹಣೆಕಾರರಾದ ದೊಡ್ಡೇಗೌಡ ಅವರ ಕ್ರಿಯಾಶೀಲತೆಗೂ ಶಬ್ದಾತೀತ ಕೃತಜ್ಞತೆಗಳು.

ನಾಲ್ಕು ಸಾವಿರ ಪುಟಗಳ, ಆರು ಸಂಪುಟಗಳ ನನ್ನ ಈ ಸಮಗ್ರ ಲೇಖನ ಸಾಹಿತ್ಯವನ್ನು ಪ್ರೀತಿಯಿಂದ ಬರಮಾಡಿಕೊಳ್ಳಲಿರುವ ಕನ್ನಡ ಬಂಧುಗಳಿಗೆ ವಂದನೆಗಳು.

೨೦೧೦ ಎಂ. ಎಂ. ಕಲಬುರ್ಗಿ

ಆಕರ : ಮಾರ್ಗ ಸಂಪುಟ-೫

■■

೩೧೯

ಮಾರ್ಗ : ೬

'ಮಾರ್ಗ'ದ ಆರು ಸಂಪುಟಗಳನ್ನು ಏಕಕಾಲಕ್ಕೆ ಪ್ರಕಟಿಸುವ ಯೋಜನೆಯ ಅಂಗವಾಗಿರುವ ೬ನೆಯ ಸಂಪುಟವಿದು. ಪ್ರಥಮ ಆವೃತ್ತಿಯಾಗಿರುವ ಇದು ಭಾಷಣಗಳು, ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ ಇತ್ಯಾದಿ ಎಂಬ ವಿಭಾಗಗಳನ್ನೊಳಗೊಂಡಿದೆ.

ನನ್ನ ೫೦ನೆಯ, ೬೦ನೆಯ ಹುಟ್ಟು ಹಬ್ಬದಂಥ ವಿಶೇಷ ಸಂದರ್ಭಗಳಲ್ಲಿ, ಪಂಪಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸ್ವೀಕಾರದಂಥ ಪ್ರಸಂಗಗಳಲ್ಲಿ, ರಾಜ್ಯಮಟ್ಟದ ವಿಚಾರ ಸಂಕಿರಣಗಳಲ್ಲಿ ಆಡಿದ ಮಾತುಗಳು 'ಭಾಷಣ' ವಿಭಾಗದಲ್ಲಿ ಸೇರಿವೆ.

ಇನ್ನೊಬ್ಬರ ಗ್ರಂಥಗಳಿಗೆ ಬೆನ್ನುಡಿ ಬರೆಯುವ ವಿಷಯದಲ್ಲಿ ನಾನು ತುಂಬ ನಿರಾಸಕ್ತ. ಹೀಗಿದ್ದೂ ಕೆಲವು ಆತ್ಮೀಯರ ಗ್ರಂಥಗಳಿಗೆ - ಮುಖ್ಯಕೃತಿಗಳಿಗೆ ಅಭ್ಯಾಸಪೂರ್ಣ ಮುನ್ನುಡಿ ಬರೆದಿದ್ದೇನೆ. ನನ್ನ ಮಾರ್ಗದರ್ಶನದಲ್ಲಿ ಸಿದ್ಧಗೊಂಡ ಪಿಎಚ್.ಡಿ ಗ್ರಂಥಗಳಿಗೂ ಬರೆದ 'ಮುನ್ನುಡಿ-ಬೆನ್ನುಡಿ'ಗಳು ಇಲ್ಲಿವೆ.

ನನ್ನ ಪ್ರೀತಿಯ ಪರಿವಾರದಲ್ಲಿ ಹಿರಿಯರಿದ್ದಾರೆ, ಸ್ನೇಹಿತರಿದ್ದಾರೆ, ವಿದ್ಯಾರ್ಥಿಗಳಿದ್ದಾರೆ. ಇವರ ಬಗ್ಗೆ ನನ್ನ ಅನಿಸಿಕೆ, ಆತ್ಮೀಯತೆಗಳನ್ನು ವ್ಯಕ್ತಪಡಿಸಿದುವಾಗಿವೆ, ವ್ಯಕ್ತಿಚಿತ್ರಗಳು.

ನನ್ನ ಎಲ್ಲ ಪುಸ್ತಕಗಳ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಯಾದ ಬೆಂಗಳೂರಿನ 'ಸಪ್ನಾ ಬುಕ್‌ಹೌಸ್' ಒಡೆಯರಾಗಿರುವ ಶ್ರೀ ನಿತಿನ್ ಶಹಾ ಬಂಧುಗಳ ಔದಾರ್ಯಕ್ಕೆ, ಇಲ್ಲಿಯ ಕನ್ನಡ ವಿಭಾಗದ ನಿರ್ವಹಣೆಕಾರರಾಗಿರುವ ಶ್ರೀ ಜಿ. ದೊಡ್ಡೇಗೌಡ ಅವರ ಕ್ರಿಯಾಶೀಲತೆಗೆ ಶಬ್ದಾತೀತ ಕೃತಜ್ಞತೆಗಳು.

ನಾಲ್ಕು ಸಾವಿರ ಪುಟಗಳ, ಆರು ಸಂಪುಟಗಳ ನನ್ನ ಈ ಸಮಗ್ರ ಲೇಖನ ಸಾಹಿತ್ಯವನ್ನು ಪ್ರೀತಿಯಿಂದ ಬರಮಾಡಿಕೊಳ್ಳಲಿರುವ ಕನ್ನಡ ಬಂಧುಗಳಿಗೆ ವಂದನೆಗಳು.

೨೦೧೦ -ಎಂ.ಎಂ. ಕಲಬುರ್ಗಿ

ಆಕರ : ಮಾರ್ಗ ಸಂಪುಟ-೬

■■

೩.೨೦

ಐತಿಹಾಸಿಕ

೧೯೯೧

ಇತಿಹಾಸಕ್ಕೆ ಸಂಬಂಧಿಸಿದುದು Historical, ಇತಿಹಾಸದ ಮಹತ್ವವುಳ್ಳುದು Historic. ಇಂಗ್ಲಿಷ್‌ನ ಈ ಎರಡೂ ಪದಗಳಿಗೆ ನಾವು ಸಾಮಾನ್ಯವಾಗಿ 'ಐತಿಹಾಸಿಕ' ಎಂಬ ಒಂದೇ ಪದವನ್ನು ಬಳಸುತ್ತಲಿದ್ದೇವೆ. ೧೯೮೮ರಲ್ಲಿ ಪ್ರಕಟವಾದ ನನ್ನ 'ಮಾರ್ಗ' ಸಂಪುಟಗಳು ವಿಷಯದೃಷ್ಟಿಯಿಂದ Historical, ಸನ್ನಿವೇಶ ದೃಷ್ಟಿಯಿಂದ Historic ಆಗಿರುವುದರಿಂದ, ಅಲ್ಲಿಂದ ಆಯ್ದ ಈ ಲೇಖನಗಳ ಸಂಗ್ರಹಕ್ಕೆ 'ಐತಿಹಾಸಿಕ' ಎಂಬ ಹೆಸರಿಟ್ಟಿದ್ದೇನೆ.

ಚಾರಿತ್ರಿಕವಾಗಿ ಹೇಳುವುದಾದರೆ ರಾಜರ ಆಶ್ರಯದಲ್ಲಿ ಸೃಷ್ಟಿಯಾಗುತ್ತಲಿದ್ದ ನಮ್ಮ ಸಾಹಿತ್ಯ, ಇಂದು ಪ್ರಜೆಗಳ ಆಶ್ರಯಕ್ಕೆ ಬಂದಿದೆ. ವಿದ್ವಾಂಸರ ಆಲೋಚನೆಗೆ ಸೀಮಿತವಾಗಿದ್ದ ನಮ್ಮ ಕಾವ್ಯ ಮೀಮಾಂಸೆ, ಇಂದು ವಿಮರ್ಶೆಗೆ ಹೊರಳಿ, ಸಹೃದಯರ ಸಮೀಪ ಸಾರುತ್ತಲಿದೆ. ಹೀಗೆ ಜನಸಂಪರ್ಕ ಗಾಢವಾಗುತ್ತ ನಡೆದಂತೆ ಈ ಕಾವ್ಯ - ವಿಮರ್ಶೆಗಳೆರಡೂ ಸಶಕ್ತವಾಗುತ್ತ, ಜನಪ್ರಿಯವಾಗುತ್ತ ಸಾಗಿವೆ. ಸಂಶೋಧನೆ ಮಾತ್ರ ಇನ್ನೂ ವಿದ್ವಾಂಸರ ಪರಿಮಿತಿಯಲ್ಲಿಯೇ ತೇಲುತ್ತಲಿದೆ. ಹೀಗೆ ತೇಲುವುದನ್ನು ಬಿಟ್ಟು, ಜನತೆಯ ಮಧ್ಯದಲ್ಲಿ ಈಸಲು ಪ್ರಾರಂಭಿಸಿದರೆ ಮಾತ್ರ ಅದರ ಸ್ನಾಯುಗಳು ಸಶಕ್ತವಾಗಿ ಬೆಳೆಯುತ್ತವೆ. ಸಹೃದಯರ ಬಳಗ ದೊಡ್ಡದಾದಂತೆ ಅವರ ವಿವಿಧ ಪ್ರತಿಕ್ರಿಯೆಗಳಿಗೆ ಸ್ಪಂದಿಸುತ್ತ, ಅಭಿರುಚಿಗಳಿಗೆ ಬಿಚ್ಚಿಕೊಳ್ಳುತ್ತ ಜನಪ್ರಿಯ ಸಾಹಿತ್ಯಪ್ರಕಾರವಾಗಿಯೂ ವಿರಾಜಿಸುತ್ತದೆ. ಇದು ನಮ್ಮ ಸಂಶೋಧನೆ ಭವಿಷತ್ತಿನಲ್ಲಿ ಸಾಗಬೇಕಾದ ಸರಿಯಾದ 'ಮಾರ್ಗ'ವೆಂದು ನಾನು ನಂಬಿದ್ದೇನೆ. ನನ್ನ ಈ ನಂಬಿಕೆ ಸಾಕಾರಗೊಳ್ಳುತ್ತಿರುವುದರ ಸೂಚನೆಯೆಂಬಂತೆ ಪ್ರಸ್ತುತ ಸಂಶೋಧನ ಪ್ರಬಂಧ ಸಂಕಲನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಜನಪ್ರಿಯ ಪುಸ್ತಕಮಾಲೆ'ಯಲ್ಲಿ ಪ್ರಕಟಿಸುತ್ತಿರುವುದು ಸಂತೋಷದ ವಿಷಯ.

ಸತ್ಯಕ್ಕೆ ಬದ್ಧನಾಗಿರುವ ಸಂಶೋಧಕನು ಕವಿ ಮತ್ತು ವಿಮರ್ಶಕರಂತೆ ಜನಪ್ರಿಯ ಸಾಹಿತಿಯಾಗಲಾರ. ಪ್ರಿಯವಾಗಿದ್ದ ಅವರ ಬರವಣಿಗೆ ಜನಪ್ರಿಯವಾಗುವುದಕ್ಕಿಂತ, ಅಪ್ರಿಯವಾಗಿದ್ದ ಅವನ ಬರವಣಿಗೆ ಜನದೂಷಣೆಗೆ ಗುರಿಯಾಗುವುದೇ ಹೆಚ್ಚು. ಅಂಥ ಸಂದರ್ಭಗಳಲ್ಲಿ ತಾನು ಅನುಭವಿಸಿದ ಹಿಂಸೆ, ದೌರ್ಜನ್ಯಗಳನ್ನೂ ಮರೆತು ಅವನು ಶೋಧವನ್ನು ಮುಂದುವರಿಸುತ್ತಲೇ ಇರುತ್ತಾನೆ. ಏಕೆಂದರೆ ಅವನಿಗೆ ಹಿಂಸೆಗಿಂತ 'ಸತ್ಯ' ದೊಡ್ಡದಾಗಿರುತ್ತದೆ. ಇಂಥ ಶ್ರದ್ಧಾವಂತರ ದುಡಿಮೆಯಿಂದಾಗಿ ಕನ್ನಡ ಸಂಶೋಧನೆಯು ಆಕರಶೋಧ, ಘಟನಾಶೋಧ ಹಂತಗಳನ್ನು ದಾಟಿ, ಇಂದು ಸಂಸ್ಕೃತಿಶೋಧದ ಹಂತದತ್ತ ಕ್ರಮಿಸುತ್ತಲಿದೆ. ಈ ಸಂದರ್ಭದಲ್ಲಿ ಆಕರವಾಗಿ ಬರುವ ಶಿಷ್ಟಪದರ 'ಪುರಾಣ', ಜನಪದರ 'ಐತಿಹ್ಯ' ಇತ್ಯಾದಿಗಳನ್ನು ಮೊದಲು ಪರೀಕ್ಷೆಗೆ ಗುರಿಪಡಿಸಬೇಕಾಗುತ್ತದೆ. ಮತ - ಧರ್ಮ ಪ್ರಧಾನವಾದ ಭಾರತದಲ್ಲಿಯಂತೂ ಇದು ತೀರ ಅಗತ್ಯವಾಗಿದೆ.

ಈ ಅಗ್ನಿಪರೀಕ್ಷೆಯಲ್ಲಿ ಗೆದ್ದುಬಂದ ಆಕರಗಳನ್ನು ಆಧಾರವಾಗಿ ಹಿಡಿದು, ಕಳೆದುಹೋದ ಇತಿಹಾಸವನ್ನು ಪ್ರತ್ಯಕ್ಷ - ಶಬ್ದ - ಅನುಮಾನ ಪ್ರಮಾಣಗಳಿಂದ ಆತನು ಶೋಧಿಸಬೇಕಾಗುತ್ತದೆ, ಶುದ್ಧೀಕರಿಸಬೇಕಾಗುತ್ತದೆ. ಹೀಗೆ ಮಾಡುವುದರ ಉದ್ದೇಶ ಗತಕಾಲದ ಚರಿತ್ರೆಯನ್ನು ಎತ್ತಿ ತರುವ ನೆವದಲ್ಲಿ ಸಮಕಾಲೀನ ಚಾರಿತ್ರಿಕ ಪ್ರಜ್ಞೆಯನ್ನು ಜಾಗ್ರತಗೊಳಿಸುವುದಾಗಿದೆ. ಚರಿತ್ರೆಯೆನ್ನುವುದು ಅಭಿಮಾನದ್ದಿರಲಿ, ಅವಮಾನದ್ದಿರಲಿ ಅದು ನಮ್ಮ ವರ್ತಮಾನ ಬದುಕಿಗೆ ದೊಡ್ಡ ಪಾಠವಾಗಿ ಪರಿಣಮಿಸುತ್ತದೆ. ಆದುದರಿಂದ ಗತಕಾಲದ ಶೋಧವು ಶೋಧಕ್ಕಾಗಿ ಅಲ್ಲ, ವರ್ತಮಾನದ ನಿರ್ಮಾಣಕ್ಕಾಗಿ. ಅದಕ್ಕಾಗಿಯೇ ಹೇಳುವುದು 'ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು' ಎಂದು.

ಸಂಶೋಧನ ಲೇಖನಗಳನ್ನು ಬರೆಯುವಾಗಲೆಲ್ಲ ಈ ಎಚ್ಚರಗಳು ನನ್ನ ಮನಸ್ಸಿನಲ್ಲಿರುತ್ತವೆ. ಇದರ ಫಲವಾಗಿ ಕಳೆದ ೨೫ ವರ್ಷವ್ಯಾಪ್ತಿಯಲ್ಲಿ ನಾನು ಬರೆದ ಸುಮಾರು ೨೦೦ ಸಂಶೋಧನ ಲೇಖನಗಳಿಂದ ೩೩ ಲೇಖನಗಳನ್ನು ಇಲ್ಲಿ ಆಯ್ದಿದ್ದೇನೆ. ಬಹುಶಿಸ್ತೀಯತೆ, ನಿರಂತರತೆ - ಇವು ನನಗೆ ಪ್ರಿಯವಾದ ವಿಷಯಗಳು. ಆದುದರಿಂದ ಇಲ್ಲಿಯ ಲೇಖನಗಳು ಬಹುಶಿಸ್ತೀಯ ದೃಷ್ಟಿಯಿಂದ ಸಾಹಿತ್ಯ, ಶಾಸನ, ವಿಮರ್ಶೆ, ಮತಧರ್ಮ, ಸಂಸ್ಕೃತಿ, ವ್ಯಾಕರಣ, ಛಂದಸ್ಸು, ಜನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿ ಕ್ಷೇತ್ರಗಳನ್ನೂ, ನಿರಂತರತೆಯ ದೃಷ್ಟಿಯಿಂದ ಆಕರಶೋಧ, ಘಟನಾಶೋಧ, ಸಂಸ್ಕೃತಿಶೋಧ ನೆಲೆಗಳನ್ನೂ ಪ್ರತಿನಿಧಿಸುತ್ತವೆ.

ಈ ಬಗೆಯ ಲೇಖನಗಳನ್ನೊಳಗೊಂಡ ಪ್ರಸ್ತುತ ಸಂಕಲನ ಹೊರಬರಲು ಕಾರಣರಾದ ಆಯ್ಕೆ ಸಮಿತಿ ಸದಸ್ಯರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಮಿಶನರ್‌ರಾದ ಡಾ. ಪಿ. ಎಸ್. ರಾಮಾನುಜಂ ಅವರಿಗೂ ಕೃತಜ್ಞನಾಗಿದ್ದೇನೆ.

ಕೇವಲ ೩ ದಿನಗಳಲ್ಲಿಯೆ ಮುದ್ರಿಸಿಕೊಟ್ಟ ಗದುಗಿನ ತ್ವರಿತ ಮುದ್ರಣಾಲಯದ ಶ್ರೀ ಫ. ಶಿ. ಭಾಂಡಗೆ ಅವರ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ.

ಧಾರವಾಡ. **ಎಂ. ಎಂ. ಕಲಬುರ್ಗಿ**

ಆಕರ : ಮಾರ್ಗ ಸಂಪುಟ–೫

■■

೩.೨೧

ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ

೨೦೦೫

ಹನ್ನೆರಡನೆಯ ಶತಮಾನದ ಶರಣಧರ್ಮವೆಂಬ ಕುದಿಯುವ ಪಾತ್ರೆಯಲ್ಲಿ ಸಮಕಾಲೀನ ಅನೇಕ ಮತ - ಪಂಥಗಳು ಕರಗಿಹೋದವು. ಇವುಗಳಲ್ಲಿ ಶಿವಪರವಾಗಿದ್ದ ಕಾರಣ ಪರಿಶಿಷ್ಟ ನೆಲೆಯ ನಾಥಶೈವ ಮತ್ತು ಶಿಷ್ಟನೆಲೆಯ ನಾಲ್ಕು ಧರ್ಮಗಳಾದ ಪಾಶುಪತಶೈವ, ನಕುಲೀಶಶೈವ (ಕಾಳಾಮುಖ), ಮಹಾವ್ರತಶೈವ (ಸೋಮ, ಕಾಪಾಲಿಕ), ಶುದ್ಧಶೈವ (ಶ್ರೋತ್ರೀಯ, ಸಿದ್ಧಾಂತ, ಮಾಹೇಶ್ವರ, ಶಿವಸಮಯ, ಭಿಕ್ಷಾವೃತ್ತಿ, ಶ್ರೀಕಂಠ)ಗಳು ಸಹಜವಾಗಿಯೇ ಬೇಗ ಕರಗಿದವು. ಸಗರ ಶಾಸನವು (೧೦೭೧) ಅನಂತಶಕ್ತಿ ಹೆಸರಿನ ಕಾಳಾಮುಖಯತಿಯನ್ನು "ಕಾಳಾಮುಖ, ಮಹಾವ್ರತ, ಪಾಶುಪತ, ಶಿವಸಮಯ ಸಮಾನಪಕ್ಷಪಾತರ್" ಎಂದು ಕರೆದಿರುವುದರಿಂದ ಈ ನಾಲ್ಕೂ ಬಹುಶಃ ಒಂದೇ ಮೂಲದ ಶಾಖೆಗಳೆಂದು ಹೇಳಬಹುದಾಗಿದೆ.

ಶ್ರೀವತ್ಸ ಮೊದಲಾದ ಬ್ರಾಹ್ಮಣಗೋತ್ರಗಳನ್ನು - ಪಂಚಾಕ್ಷರಿಯೊಂದಿಗೆ ಗಾಯತ್ರಿ ಮಂತ್ರವನ್ನು ಬಳಸುವ ಮೂಲಕ, ಇವರು "ವೈದಿಕ ಬ್ರಾಹ್ಮಣ"ರಿಗೆ ಸಮಾಂತರದ "ಆಗಮಿಕ ಬ್ರಾಹ್ಮಣ"ರೆಂದು ಪರಿಗಣಿತರಾಗಿದ್ದರು.

ಡಾ. ಡೆವಿಡ್ ಲೊರೆಂಜಿನ್ ಮೊದಲಾದ ವಿದ್ವಾಂಸರು ಈ ನಾಲ್ಕು ಶೈವಗಳಲ್ಲಿ ಪಾಶುಪತ (ಸಿಂಹಪರ್ಷೆ), ನಕುಲೀಶ (ಶಕ್ತಿಪರ್ಷೆ, ಕಾಳಾಮುಖ), ಮಹಾವ್ರತ (ಸೋಮ, ಕಾಪಾಲಿಕ)- ಈ ಮೂರರ ಅಧ್ಯಯನ ಪೂರೈಸಿದರೇ ಹೊರತು, ಇವೆಲ್ಲವುಗಳಿಗಿಂತ ಮುಖ್ಯವಾದ ಶುದ್ಧಶೈವದ ಬಗೆಗೆ ಹೊರಳಿ ನೋಡಲಿಲ್ಲ. ಅಂದರೆ ಗುರುತು ಸಿಗದಂತೆ ಕರಗಿಹೋಗಿದ್ದ ಆ ಮೂರನ್ನು ಅಭ್ಯಸಿಸಿದ ಇವರು, ಹರಿಹರ, ಕೆರೆಯ ಪದ್ಮರಸ, ಮಗ್ಗೆಯ ಮಾಯಿದೇವ, ಮಹಾಲಿಂಗದೇವರ ಮೂಲಕ ಅರ್ಧಂಬರ್ಧ ಅಸ್ತಿತ್ವ ಉಳಿಸಿಕೊಂಡಿದ್ದ ಶುದ್ಧಶೈವದ ಅಧ್ಯಯನ ನಡೆಸಲೇ ಇಲ್ಲ

ಹೀಗೆ ಉದ್ದಕ್ಕೂ ಉಪೇಕ್ಷಿತವಾಗಿದ್ದ ಈ ಶಾಖೆಯ ಅಭ್ಯಾಸ ನನ್ನಲ್ಲಿ ಸೆಲೆಯೊಡೆದುದು, ಆಂಧ್ರಪ್ರದೇಶದ ಮಲ್ಕಾಪುರ ಶಾಸನವನ್ನು ಕುರಿತ ಡಾ. ನಂದಿಮಠ ಅವರ ಪ್ರಬಂಧದ ಮೂಲಕ. ಅಲ್ಲಿ ಬಳಕೆಯಾದ ದೂರ್ವಾಸ ಸಂಪ್ರದಾಯ, ಗೋಲಕಿ(ಗೋಲಗಿರಿ)ಮಠ, ಶುದ್ಧಶೈವ ಪದಗಳು ಪರಸ್ಪರ ಸಂಬಂಧ ಸೂಚಿಸುವುವೆಂದು ಗೊತ್ತಾಗುತ್ತಲೇ, ನಮ್ಮ ನಾಡಿನಲ್ಲಿ ಹರಡಿರುವ ಶಾಸನ - ಕಾವ್ಯ - ಅವಶೇಷಗಳು ಶುದ್ಧಶೈವದ ಜಾಲವನ್ನು ನನ್ನ ಕಣ್ಣ ಮುಂದೆ ಬಿಡಿಸಿ ನಿಲ್ಲಿಸಿದವು. ಅಧ್ಯಯನ ಮುಂದುವರಿಯುತ್ತಿದ್ದಂತೆ B.G.L. Swamy ಅವರ "The Golaki School of Saivism in the Tamil Country[1]" ಲೇಖನ ನನ್ನ ಗಮನಕ್ಕೆ ಬಂದು, ಅನೇಕ ಸಂದೇಹಗಳು ನಿವಾರಣೆಯಾದವು. ಇನ್ನೊಂದು ಹಂತದಲ್ಲಿ CynthiaTolbot ಅವರ "Golaki Math inscriptions from Andhra Pradesh : A study of a Saiva Monastic Lineage"[2]; ಲೇಖನ ಗಮನ ಸೆಳೆದವು. ಈ ಕ್ಷೇತ್ರದ ನಿಜಸ್ವರೂಪವನ್ನು ಸ್ಪಷ್ಟಪಡಿಸಿದವು.

ಮೇಲೆ ಹೇಳಿದ ನಾಲ್ಕೂ ಶೈವಗಳು ೧೨ನೆಯ ಶತಮಾನದ ಬಸವಸಂಪ್ರದಾಯದಲ್ಲಿ ಕರಗಿಹೋದರೂ, ಇವುಗಳಲ್ಲಿ ಶುದ್ಧಶೈವ ಮಾತ್ರ ೧೪ನೆಯ ಶತಮಾನದಲ್ಲಿ ತಮಿಳುನಾಡಿನ ಅರುವತ್ಮೂರು ಪುರಾತನರ ಶೈವಸಂಪ್ರದಾಯವನ್ನು ತನ್ನಂತೆ ಪರಿವರ್ತಿಸಿಕೊಂಡ ರೀತಿಯಲ್ಲಿ, ೧೫ನೆಯ ಶತಮಾನದಲ್ಲಿ ಕರ್ನಾಟಕದ ಶರಣಸಂಪ್ರದಾಯವನ್ನೂ ಅದು ಕ್ರಮೇಣ (ವೀರ)ಶೈವೀಕರಿಸಿಕೊಂಡಿತು. ಇದರ ಫಲವಾಗಿ, ನಮ್ಮಲ್ಲಿ ಈ ಶುದ್ಧಶೈವ ಬ್ರಾಹ್ಮಣರೂ ಇವರ ಪ್ರಭಾವದಿಂದ ಮಿಕ್ಕ ಮೂರು ಶಾಖೆಗಳ ಶಿವಬ್ರಾಹ್ಮಣರೂ ಜಂಗಮರಾಗಿ ಬೆಳೆದರು. ಇವರಿಂದಾಗಿಯೇ ಚತುರಾಚಾರ್ಯ ಪೀಠ, ಆಮೇಲೆ ಪಂಚಾಚಾರ್ಯಪೀಠ ವ್ಯವಸ್ಥೆ ಹುಟ್ಟಿಕೊಂಡಿತು. ಇದೆಲ್ಲಕ್ಕೂ ಸಿದ್ಧಾಂತಶೈವ(ಶುದ್ಧಶೈವದ ಇನ್ನೊಂದು ಹೆಸರು)ವೇ ಕಾರಣವಾಗಿದ್ದುದರಿಂದ, ಈ ಹೆಸರನ್ನು ಬಳಸಿ 'ಸಿದ್ಧಾಂತಶಿಖಾಮಣಿ' ಹೆಸರಿನ ಧರ್ಮಗ್ರಂಥವನ್ನೂ ರಚಿಸಿಕೊಂಡಿತು.

ಹೀಗೆ ಕರ್ನಾಟಕದ ಶರಣಧರ್ಮದಲ್ಲಿ ಲೀನವಾಗುತ್ತಲೇ, ಅದರ ಮೇಲೆ ಸವಾರಿ ಮಾಡಿದ ಈ ಶುದ್ಧಶೈವದ ಶೋಧ ಮಹತ್ವದ್ದೆಂದೇ ಹೇಳಬೇಕು. ಆದುದರಿಂದ ಕರ್ನಾಟಕದ ಶುದ್ಧಶೈವದ ಬಗ್ಗೆಯೂ ಒಂದು ಲೇಖನ ಬರೆಯಬೇಕೆಂಬ ಆಸೆ ನನ್ನಲ್ಲಿ ಚಿಗುರಿತು. ಅನೇಕ ಮೂಲಗಳಿಂದ ಮಾಹಿತಿ ಸಂಗ್ರಹಿಸಿ "ಕರ್ನಾಟಕ : ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ" ಹೆಸರಿನ ಲೇಖನ ಸಿದ್ಧಪಡಿಸಿದೆನು. ನನ್ನ ಆಸಕ್ತಿ ಇಷ್ಟಕ್ಕೆ ನಿಲ್ಲದೆ, ಮೇಲೆ ಹೇಳಿದ ಲೇಖನಗಳ ಕನ್ನಡಾನುವಾದದ ಆವಶ್ಯಕತೆಯನ್ನು ಗುರುತಿಸಿತು. ನನ್ನ ಇಂಥ ಶೈಕ್ಷಣಿಕ ಕನಸುಗಳು ಸಾಕಾರಗೊಳ್ಳುವಲ್ಲಿ ನಿರಂತರ ನೆರವಾಗುತ್ತ ಬಂದ ಡಾ. ಸಿ. ಆರ್. ಯರವಿನತೆಲಿಮಠ, ಪ್ರೊ. ಸದಾನಂದ ಕನವಳ್ಳಿ ಅವರು ಈ ಎರಡೂ ಲೇಖನಗಳನ್ನು ಅಚ್ಚುಕಟ್ಟಾಗಿ ಕನ್ನಡಕ್ಕೆ ಅನುವಾದಿಸಿದರು.

ಈ ಮೂರು ಲೇಖನಗಳನ್ನು ಈಗ "ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ : ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ" ಹೆಸರಿನಿಂದ ಪುಸ್ತಕರೂಪದಲ್ಲಿ ಪ್ರಕಟಿಸುವ ಮೂಲಕ, ಈ ವರೆಗೆ ಮುಚ್ಚಿಹೋಗಿದ್ದ ಒಂದು ಮುಖ್ಯ ಬಾಗಿಲು ತೆರೆದುಕೊಳ್ಳುವುದೆಂಬ ವಿಶ್ವಾಸ ತಾಳಿದ್ದೇನೆ; ನಮ್ಮ ನಾಡಿನ ಶರಣಧರ್ಮದ ಉಗಮ, ವಿಕಾಸಗಳನ್ನು ತಿಳಿದುಕೊಳ್ಳಲು ಇದು ನೆರವಾಗುವುದೆಂದು ನಂಬಿದ್ದೇನೆ. ಮೂಲ ಇಂಗ್ಲಿಷ್ ಲೇಖಕರಾದ ಬಿ. ಜಿ. ಎಲ್. ಸ್ವಾಮಿ, ಸಿಂಥಿಯಾ ಟ್ಯಾಲ್ಬಟ್ ಅವರಿಗೂ, ಅನುವಾದಕರಾದ ಡಾ. ಸಿ. ಆರ್. ಯರವಿತೆಲಿಮಠ, ಪ್ರೊ. ಸದಾನಂದ ಕನವಳ್ಳಿ ಅವರಿಗೂ ಕೃತಜ್ಞನಾಗಿದ್ದೇನೆ.

ಈ ಕೃತಿ ಗದುಗಿನ ಈ ತೋಂಟದಾರ್ಯ ಮಠದ "ಲಿಂಗಾಯತ ಅಧ್ಯಯನ ಸಂಸ್ಥೆ"ಯ ಮೂಲಕ ಪ್ರಕಟಗೊಳ್ಳಲು ಸಮ್ಮತಿಸಿದ ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ಗ್ರಂಥದಾಸೋಹಿಗಳಾದ ಶ್ರೀಮತಿ ಗೌರಮ್ಮ ಬಸವಣ್ಣಯ್ಯ ಹಿರೇಮಠ ಅವರಿಗೂ, ಅಚ್ಚುಕಟ್ಟಾಗಿ ಬೆರಳಚ್ಚು ಪೂರೈಸಿದ ವಚನ ಗ್ರಾಫಿಕ್ಸ್‌ನ ಶ್ರೀ ದೇವರಾಜ ನಾಡಿಗ ಅವರಿಗೂ, ಅಂದವಾಗಿ ಮುದ್ರಿಸಿದ ಗದುಗಿನ ಪ್ರಭುಗ್ರಾಫಿಕ್ಸ ಒಡೆಯರಿಗೂ ವಂದನೆಗಳು.

ಎಂ. ಎಂ. ಕಲಬುರ್ಗಿ

ಆಕರ : ಮಾರ್ಗ ಸಂಪುಟ-೫

---

೧. The Journal of Indin History, LIII. Pt II. p. 181

೨. Vajaypeya (K. D. Bajapai Felicitation volume) Vol. I. p. 133

ಸಂಸ್ಕೃತಿ - ವಿಕೃತಿ

೨೦೦೬

"ಸಂಸ್ಕೃತಿ" ಶಬ್ದ ಇಂದು ಎರಡು ಅರ್ಥಗಳಲ್ಲಿ ಬಳಕೆಯಾಗುತ್ತಲಿದೆ. ಇದರ ನಿಜವಾದ ಅರ್ಥ ಸಂಸ್ಕರಣಗೊಂಡುದು. ಇತ್ತೀಚೆ Culture ಎಂಬುದಕ್ಕೆ ಪರ್ಯಾಯವಾಗಿ ಬಳಕೆಯಾಗುತ್ತಲಿರುವ ಇದು, "ಸಂಸ್ಕೃತಿ - ವಿಕೃತಿಯನ್ನೊಳಗೊಂಡ ಸಮಾಜಸಮ್ಮತ ಜೀವನಪದ್ಧತಿ"ಯೆಂಬ ವ್ಯತ್ಯಸ್ತ ಅರ್ಥ ಪಡೆದಿದೆ. ಈ ವ್ಯತ್ಯಸ್ತ ಅರ್ಥದ ಸ್ಪಷ್ಟನೆಗಾಗಿ ಇನ್ನು ಮೇಲೆ Culture ಎಂಬುದಕ್ಕೆ "ಸಂಪ್ರದಾಯ" ಪದವನ್ನು ಬಳಸುವುದು ಯೋಗ್ಯವೆನಿಸುತ್ತದೆ.

ಮನುಷ್ಯ ತನ್ನ "ಪ್ರಾಕೃತಿಕ ಜೀವನ"ವನ್ನು "ಸಾಮಾಜಿಕ ಜೀವನ"ವನ್ನಾಗಿ ಪರಿವರ್ತಿಸಿಕೊಳ್ಳುವಲ್ಲಿ ಸಂಸ್ಕೃತಿಯೊಂದಿಗೆ ವಿಕೃತಿಗಳು ಆಕಾರ ಪಡೆದು, ಇವೆರಡೂ ಸೇರಿ "ಸಂಪ್ರದಾಯ" ನಿರ್ಮಾಣವಾಗುತ್ತದೆ. ಅದು ಧಾರ್ಮಿಕ ಮತ್ತು ಸಾಮಾಜಿಕ ನೆಲೆಗಳನ್ನು ಅನಧಿಕೃತ ಕಾನೂನಿನಂತೆ ಆಳುತ್ತಿರುತ್ತದೆ. ಈ ಎರಡೂ ನೆಲೆ (ಧಾರ್ಮಿಕ, ಸಾಮಾಜಿಕ)ಗಳ ಹಿಂದಿರುವ ಸಂಸ್ಕೃತಿ - ವಿಕೃತಿಗಳ ಸ್ವರೂಪ, ಇತಿಹಾಸ ಕ್ರಮದಲ್ಲಿ ಇವು ಸೃಷ್ಟಿಸಿಕೊಂಡಿರುವ ಗೊಂದಲಗಳನ್ನು ಕುರಿತ ಸಂಶೋಧನ ಲೇಖನಗಳ ಸಂಗ್ರಹವಾಗಿರುವ ಕಾರಣ, ಈ ಕೃತಿಗೆ "ಸಂಸ್ಕೃತಿ - ವಿಕೃತಿ" ಎಂದು ಹೆಸರಿಡಲಾಗಿದೆ.

ಧಾರ್ಮಿಕ ಕ್ಷೇತ್ರದ ಕೇಂದ್ರ ವಿಷಯ ದೈವ, ಸಾಮಾಜಿಕ ಕ್ಷೇತ್ರದ ಕೇಂದ್ರ ವಿಷಯ ಜಾತಿ. ದೇವರನ್ನು ಬಿಟ್ಟರೆ ಭಾರತೀಯ ಬದುಕಲಾರ, ಜಾತಿಯನ್ನು ಬಿಟ್ಟರೆ ಭಾರತ ಉಳಿಯಲಾರದು - ಎಂಬಷ್ಟರ ಮಟ್ಟಿಗೆ ಇವು ನಮ್ಮಲ್ಲಿ ಬೇಳೆದುಬಂದಿವೆ. ದೇವರು ವಿಕಾರಗೊಂಡು ದೈವ, ವೃತ್ತಿ ವಿಕಾರಗೊಂಡು ಜಾತಿ ರೂಪತಾಳಿ, ಇವೆರಡರ ಸಮೀಕರಣದಿಂದ ಅನೇಕ "ಸಂಪ್ರದಾಯ ವಿನ್ಯಾಸ"ಗಳು ಆಕಾರ ಪಡೆಯುತ್ತ ಬಂದಿವೆ. ಹೀಗೆ ವಿನ್ಯಾಸಗೊಂಡ ಪುರುಷದೈವ, ಸ್ತ್ರೀದೈವ, ಧಾರ್ಮಿಕ ಆಚರಣೆ, ಸಾಮಾಜಿಕ ಆಚರಣೆಗಳ ಅಧ್ಯಯನ ಈ ಕೃತಿಯ ವಸ್ತು.

ದೈವಗಳೇ ಆಗಿರಲಿ, ಆಚರಣೆಗಳೇ ಆಗಿರಲಿ, ಅವುಗಳ ತಳದಲ್ಲಿ ಒಂದು ತತ್ವವಿದ್ದು, ಕಾಲಕ್ರಮದಲ್ಲಿ ಅದು ಒಂದು ಕುರುಡು ಆಚರಣೆಯಾಗಿ ಬೆಳೆದಿರುತ್ತದೆ. 'ಬೇಟೆನಾಯಿ' ಲಾಂಛನದ ಭೈರವನು, ಬೇಟೆ ಸಂಸ್ಕೃತಿಯ ದೈವತ. ಇವನ ಪರಿಷ್ಕೃತ ರೂಪವಾಗಿರುವ 'ಕಾವಲುನಾಯಿ' ಲಾಂಛನದ ಮೈಲಾರನು, ಪಶುಪಾಲನ ಸಂಸ್ಕೃತಿಯ ದೈವತ. ಇವನ ಪರಿಷ್ಕೃತ ರೂಪವಾಗಿರುವ 'ನಂದಿ'ಲಾಂಛನದ ಮಲ್ಲಿಕಾರ್ಜುನನು, ಕೃಷಿಸಂಸ್ಕೃತಿಯ ದೈವತ - ಹೀಗೆ ಇವು ಸಂಸ್ಕೃತಿಯ ಬದಲಾವಣೆಗೆ ತಕ್ಕಂತೆ ಬೆಳವಣಿಗೆ ಹೊಂದಿದವು. ಇಂದು ಇವೆಲ್ಲ 'ತತ್ವ' ತೆರೆಗೆ ಸರಿದು, ಇವು 'ಸಂಪ್ರದಾಯ'ವಾಗಿ ಮುಂದುವರಿದಿವೆ. ಹೀಗೆ ಪ್ರತಿಯೊಂದು ದೈವದ ಹಿಂದೆ ಒಂದೊಂದು ತತ್ವವಿರುವ ಸಾಧ್ಯತೆಯಿದೆ.

"ಸಂಪ್ರದಾಯಗ"ಗಳಲ್ಲಿಯ ವಿಕೃತಿಗಳು ಮೇಲುಸ್ತರದವರಿಂದ ಪ್ರಜ್ಞಾಪೂರ್ವಕವಾಗಿ, ಕೆಳಸ್ತರದವರಿಂದ ಅಪ್ರಜ್ಞಾಪೂರ್ವಕವಾಗಿ ಸೃಷ್ಟಿಗೊಂಡು, ಸಂಸ್ಕೃತಿಯ ಸೋಗಿನಲ್ಲಿ ಮುಂದುವರಿಯುತ್ತವೆ. ಇವರಲ್ಲಿ ಒಬ್ಬರು ಡಂಬಾಚಾರದಿಂದ ದೈವದ ಮಾರ್ಗೀಕರಣ ಕ್ರಿಯೆಯಲ್ಲಿ

ತೊಡಗಿರದೆ, ಇನ್ನೊಬ್ಬರು ವಾಮಾಚಾರದಿಂದ ದೇಶೀಕರಣ ಕ್ರಿಯೆಯಲ್ಲಿ ತೊಡಗಿರುತ್ತಾರೆ. ಎಲ್ಲಮ್ಮ ದೈವತದ ವಿಷಯದಲ್ಲಿ ಮೇಲುಸ್ತರದವರು ರೇಣುಕೆಯ "ಪುರಾಣ" ಕಟ್ಟಿದುದು, ಕೆಳಸ್ತರದವರು ಎಲ್ಲಮ್ಮ, ಎಕ್ಕಮ್ಮ, ಜೋಗಮ್ಮರ "ಐತಿಹ್ಯ" ಕಟ್ಟಿದುದು ಇದಕ್ಕೆ ಉದಾಹರಣೆಯೆನಿಸಿವೆ. ಮೈಲಾರನ ವಿಷಯವಾಗಿ ಮಣಿಮಲ್ಲಾಸುರ ಪುರಾಣಕಥೆ, ಗಂಗಿಮಾಳವ್ವ - ತುಪ್ಪದ ಮಾಳವ್ವರ ಐತಿಹ್ಯ ಇತ್ಯಾದಿಗಳನ್ನು ಇಲ್ಲಿ ನೆನೆಯಬಹುದು. ಹೀಗೆ ಪ್ರತಿಯೊಂದು ಪುರುಷದೈವ, ಸ್ತ್ರೀದೈವದ ವಿಷಯವಾಗಿ ಇಂಥ ಮಾರ್ಗ, ದೇಶಿ ಕವಲುಗಳನ್ನು ಕಾಣಬಹುದಾಗಿದೆ.

ದೈವವು ಮಾರ್ಗೀಯವೇ ಆಗಿರಲಿ, ದೇಶೀಯವೇ ಆಗಿರಲಿ, ಅದಕ್ಕೆ ತಕ್ಕಂತೆ ಅನುಯಾಯಿಗಳ ಸಮಾಜದಲ್ಲಿ ಆಚರಣೆಗಳು ಆಕಾರ ಪಡೆಯುತ್ತವೆ. ಉದಾ : "ಉರಿಯ ಉಯ್ಯಲೆ" ದೇಶೀ ಆಚರಣೆಯಾದರೆ, "ನಂದಿ ಮೊಗವಾಡ" ಮಾರ್ಗೀಯ ಆಚರಣೆಯಾಗಿದೆ.

ಹೀಗೆ ಧಾರ್ಮಿಕ ಆಚರಣೆಗಳಂತೆ ಸಾಮಾಜಿಕ ಆಚರಣೆಗಳೂ ದೇಶಿ - ಮಾರ್ಗ ಕವಲುಗಳಾಗಿ ಬೆಳೆದಿರುತ್ತವೆ. ಉದಾ : ಬ್ರಾಹ್ಮಣನು ಸಾವಿರ ಆಕಳುಗಳನ್ನು ದಾನವಾಗಿ ಪಡೆಯುವ "ಗೋಸಾಸ"ವು ಮಾರ್ಗೀಯ ಆಚರಣೆಯಾದರೆ, ಶೂದ್ರನು ಒಡೆಯನಿಗಾಗಿ "ವೇಳೆವಾಳಿ"ಯಾಗುವುದು ದೇಶೀಯ ಆಚರಣೆಯಾಗಿದೆ.

ಹೀಗೆ ದೈವ - ಆಚರಣೆಗಳ ಮೂಲತತ್ವ ಏನೇ ಇರಲಿ, ಕಾಲಕ್ರಮದಲ್ಲಿ ಮಾರ್ಗೀಯ - ದೇಶೀಯವಾಗಿ ಬೆಳೆದಿರಲಿ, ಇವೆಲ್ಲ ವೈಭವೀಕೃತ ಶೋಷಣೆಗಳೇ ಆಗಿರುತ್ತವೆ. ಇವುಗಳ ಹಿಂದಿರುವ ಮೂಲ ಆಶಯವನ್ನು, ಅದರ ಐತಿಹಾಸಿಕ ಬೆಳವಣಿಗೆಯನ್ನು, ಈ ಬೆಳವಣಿಗೆಯಲ್ಲಿ ಅದು ಸೃಷ್ಟಿಸಿಕೊಂಡಿರುವ ಗೊಂದಲಗಳನ್ನು ಬಿಡಿಸಿ ನೋಡುವ ಪ್ರಯತ್ನವಿಲ್ಲಿದೆ. ಇದಲ್ಲದೆ ಬಿಡಿಸಲು ಹೋಗಿ ಅಪ್ರಜ್ಞಾಪೂರ್ವಕವಾಗಿ ವಿದ್ವಾಂಸರು ಸೃಷ್ಟಿಸಿರುವ ಹೊಸ ಗೊಂದಲಗಳನ್ನು ನಿವಾರಿಸುವ, ಅಥವಾ ಅವರು ಮಾಡಿದ ಅರ್ಧಚಿತ್ರಗಳನ್ನು ಪೂರ್ಣಗೊಳಿಸುವ ಪ್ರಯತ್ನಗಳೂ ಇಲ್ಲಿವೆ. ಇಲ್ಲೆಲ್ಲ ದೇಶೀಯ, ಮಾರ್ಗೀಕೃತ ದೇಶೀಯಗಳ ದೈವತ ಮತ್ತು ಆಚರಣೆಗಳ ಚರ್ಚೆ ಪ್ರಧಾನವಾಗಿರುವುದರಿಂದ, ಒಟ್ಟು ಕೃತಿ "ದೇಶೀ ಚಿಂತನೆ"ಯ ಸ್ವರೂಪ ಪಡೆದಿದೆ.

ದೈವತ ಮತ್ತು ಆಚರಣೆಗಳ ಕ್ಷೇತ್ರೀಯ ಅಭ್ಯಾಸದೊಂದಿಗೆ, ಕೆಲವೊಮ್ಮೆ ಗ್ರಂಥಸ್ಥ ಆಕರಗಳ ಅಭ್ಯಾಸಕ್ಕೂ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಭೈರವ, ಜುಂಜಪ್ಪ, ಮೈಲಾರ ಇತ್ಯಾದಿ ಲೇಖನಗಳು ಕ್ಷೇತ್ರೀಯ ಆಕರಗಳನ್ನು ಅವಲಂಬಿಸಿದರೆ, ಸಿದ್ಧರಾಮ ಚರಿತೆ, ವಿಕಾರಿ ಸಿದ್ಧಸಂಪ್ರದಾಯ -ಶಿವಸಿದ್ಧ ಸಂಪ್ರದಾಯ ಇತ್ಯಾದಿ ಲೇಖನಗಳು ಗ್ರಂಥಸ್ಥ ಆಕರಗಳನ್ನು ಅವಲಂಬಿಸಿದ ಶೋಧನಗಳಾಗಿವೆ.

ಈ ವಿಭಿನ್ನ ದಾರಿಗಳಲ್ಲಿ ಮುನ್ನಡೆದು, ಕರ್ಣಾಟಕದ ಜೈನ, ಲಿಂಗಾಯತ, ವೈದಿಕಧರ್ಮ ಮತ್ತು ಕೆಲವು ಜಾನಪದಧರ್ಮಗಳಿಗೆ ಸಂಬಂಧಿಸಿದ ಹೊಸ ವಿಷಯಗಳನ್ನು ಇಲ್ಲಿ ಬೆಳಕಿಗೆ ತರಲಾಗಿದೆ. ಜೈನರನ್ನು ಕುರಿತು ಹೇಳುವುದಾದರೆ, ಈ ಧರ್ಮದಲ್ಲಿ ಮತಾಂತರ ಮಾಡಿಕೊಳ್ಳುವ ವಿಧಾನ ಎರಡು ಬಗೆಯಾಗಿದ್ದಿತು. ಒಂದು ಮತಾಂತರ ದೀಕ್ಷೆಯ ಮೂಲಕ, ಇನ್ನೊಂದು ಮಂತ್ರದೀಕ್ಷೆಯ ಮೂಲಕ. ಇವರು ಬ್ರಾಹ್ಮಣರಿಗೆ ಮತಾಂತರ ದೀಕ್ಷೆನೀಡಿ ಒಳಗೆ ಬರಮಾಡಿಕೊಳ್ಳುತ್ತಿದ್ದರು. ಅಬ್ರಾಹ್ಮಣರಿಗೆ ಒಳಗೆ ಕರೆದುಕೊಳ್ಳದೆ ಕೇವಲ (ಪಂಚನಮಸ್ಕಾರ) ಮಂತ್ರದೀಕ್ಷೆ ನೀಡುತ್ತಿದ್ದರು. ಇವರು ಮಂತ್ರದೀಕ್ಷೆಯಿಂದ ಮುಂದಿನ ಜನ್ಮದಲ್ಲಿ ಜೈನರಾಗಿ ಹುಟ್ಟಿ ಮೋಕ್ಷ ಸಾಧಿಸಬಹುದಿತ್ತು. ಬ್ರಾಹ್ಮಣನಾದ

ಪಂಪನ ತಂದೆ ಭೀಮಪಯ್ಯ ಮತಾಂತರ ದೀಕ್ಷೆಗೆ, ಅಬ್ರಾಹ್ಮಣರಾದ ಚಾವುಂಡರಾಯ, ಅತ್ತಿಮಬ್ಬೆ, ಗಂಗರಾಜ, ಹುಳ್ಳ ಮೊದಲಾದವರು ಮಂತ್ರದೀಕ್ಷೆಗೆ ಉದಾಹಣೆಯೆನಿಸಿದ್ದಾರೆ. ಇಲ್ಲಿ ಮೊದಲನೆಯವರಿಗೆ "ಶಿಷ್ಯ" ಪದ ಬಳಸುತ್ತಿದ್ದರೆ, ಎರಡನೆಯವರಿಗೆ "ಗುಡ್ಡ" ಪದ ಬಳಸುತ್ತಿದ್ದರು. ಸವದತ್ತಿ ಎಲ್ಲಮ್ಮ ಮೂಲತಃ ಜೈನಯಕ್ಷಿ (ಎಕ್ಕಲಮ್ಮ) ಆಗಿದ್ದು, ಅಲ್ಲಿಯ ಪಾರ್ಶ್ವನಾಥ ಜಿನನನ್ನು ತೆಗೆದು ಹಾಕಿ, ಆತನ ಯಕ್ಷಿ ಪದ್ಮಾವತಿಯನ್ನೇ ಎಲ್ಲಮ್ಮನೆಂದು ಪೂಜಿಸುತ್ತಿದ್ದಾರೆ. ಹಿಂದುಗಳ ಆತ್ಮಬಲಿದಾನ ಮರಣ ಜೈನಕ್ಕೆ ತ್ಯಾಜ್ಯ, ಅವರ ಸಲ್ಲೇಖನ ಮರಣ ಸ್ವೀಕಾರಯೋಗ್ಯವೆಂಬ ಬ್ರಹ್ಮಶಿವನ ವಿಚಾರಗಳನ್ನು ಇಲ್ಲಿ ಬಿಡಿಸಿ ಹೇಳಲಾಗಿದೆ.

ಕುರುಬರ ಮುದಿಮಲ್ಲಯ್ಯನ (ಮೈಲಾರನ) ಪರಿಷ್ಕೃತ ದೈವತವೇ ಲಿಂಗಾಯತರ ಮಲ್ಲಯ್ಯ (ಮಲೆಯ ಅಯ್ಯ, ಮಲ್ಲಿಕಾರ್ಜುನ). ಇದೇ ರೀತಿ ಅವರ ಬೀರಪ್ಪನ ಪರಿಷ್ಕೃತ ರೂಪವೇ ಇವರ ವೀರಭದ್ರ, ವಿರೂಪಾಕ್ಷ. ಪ್ರೌಢದೇವರಾಯನ ಕಾವ್ಯದ ಕರ್ತೃವಿನ ಹೆಸರು ಅದೃಶ್ಯ ಅಲ್ಲ, ಅದ್ರೀಶ (ಅದ್ರಿ =ಪರ್ವತ, ಮಲೆ). ಇದು ಮಲ್ಲೇಶ (ಮಲೆಯ + ಈಶ)ದ ಸಂಸ್ಕೃತರೂಪ. ಇಂದಿನ ವಿಶ್ವಕರ್ಮರ ಸಿರಸಂಗಿ ಕಾಳಮ್ಮ ಕಾಳಾಮುಖ ಸಂಪ್ರದಾಯದ ಭೈರವಿ. ನಂದಿಮೊಗವಾಡ, ದೃಷ್ಟಿವಾರಿ - ಇವು ಶೈವ ಆಚರಣೆಗಳು. ಕಾಳಾಮುಖರು ಶಿವನ ಕಲಾಮುಖಗಳ ಆರಾಧಕರು. ಮಂಗಸೂಳಿ ಮಲ್ಲಯ್ಯನ ಮುರಳೇರು ಶಬ್ದದ ನಿಜರೂಪ ಮರುಳೆಯರಾಗಿದ್ದು, ಬಸವಣ್ಣನು ಭಕ್ತಿಯ ಮರುಳ ಎಂಬಲ್ಲಿ ಇದನ್ನು ಬಳಸಿದ್ದಾನೆ. ಪಾದೋದಕ, ಪ್ರಸಾದ ಜಾತಿಭೇದನಿರ್ಮೂಲನ ಮಾಧ್ಯಮಗಳು. ವಿಭೂತಿ ಧರ್ಮಪ್ರಸಾರ ಮಾಧ್ಯಮ. ಸಿದ್ಧರಾಮ ಮೂಲತಃ ನಾಥಶೈವನಾಗಿದ್ದು, ಅವನು ತನ್ನ ಕ್ಷೇತ್ರಕ್ಕೆ ಇಟ್ಟ "ಯೋಗರಮಣೀಯ ಕ್ಷೇತ್ರ" ನಾಥಪರಿಭಾಷೆಯಾಗಿದೆ. ಹಂಪಿಯ ಇಂದಿನ ಮನ್ಮಥತೀರ್ಥವು ನಾಥಸಂಪ್ರದಾಯದ ಮನಮುಖತೀರ್ಥವಾಗಿದೆ. ಇಂದಿನ ಕೂಡಲ ಸಂಗಮದ ದೇಶೀ ಹೆಸರು ಕಪ್ಪಡಿಯಾಗಿದ್ದು, ಇಲ್ಲಿಯ ದೈವತ ಸಂಗಮನಾಥನು ನಾಥಸಂಪ್ರದಾಯದ ದೇವರಾಗಿದ್ದಾನೆ. ನಾಥಸಂಪ್ರದಾಯದ ಇಂದಿನ ಪ್ರಸಿದ್ಧ ಕ್ಷೇತ್ರವಾಗಿರುವ ಕದರಿ ಹೆಸರಿನ ಮೂಲರೂಪ ಕದಳಿ. ಇದು ನಾಥಪಂಥಿಯರು ತಮ್ಮ ಕ್ಷೇತ್ರಕ್ಕೆ ಬಳಸುವ ಪರ್ಯಾಯ ಹೆಸರು. ವಚನಗಳಲ್ಲಿ ಬಳಕೆಯಾದ ಕದಳಿ ಇದೇ ಆಗಿದೆ. ಬಹುಶಃ ಕಪ್ಪಡಿಯೆಂಬುದೂ ನಾಥಕೇಂದ್ರಗಳ ಸಾಮಾನ್ಯ ಹೆಸರಾಗಿರಬಹುದು. ಶೈವದೀಕ್ಷಾಚಾರ್ಯರು (ಇಂದಿನ ಪಂಚಾಚಾರ್ಯ ಸಂಪ್ರದಾಯದ ಪ್ರಾಚೀನ ಆಚಾರ್ಯರು) ಬಸವಣ್ಣನವರ ಲಿಂಗಾಯತಕ್ಕೆ ಮತಾಂತರಗೊಂಡ ಚಿತ್ರ ಬಸವಪುರಾಣದಲ್ಲಿದೆ. ಹೀಗೆ ಹೊರಳು ದಾರಿಯಲ್ಲಿದ್ದವರ ದೀಕ್ಷಾವಿವರ "ದೀಕ್ಷಾಬೋಧೆ" ಕೃತಿಯಲ್ಲಿದೆ - ಇತ್ಯಾದಿ ವಿಷಯಗಳು ಲಿಂಗಾಯತಕ್ಕೆ ಸಂಬಂಧಿಸಿವೆ.

ಗೋಸಾಸವು ವೈದಿಕರ ಒಂದು ದಾನವಿಶೇಷ. ಪಂಪಭಾರತದಲ್ಲಿಯ ವೈದಿಕರ ಪರಿಕಲ್ಪನೆಗಳಾದ ವೀರಸ್ವರ್ಗದ ಪ್ರವೇಶದ್ವಾರವು ಸೂರ್ಯಮಂಡಲ, ವೀರಸಿದ್ಧಾಂತವೆಂಬುದು ಆರು ಗುಣಗಳನ್ನೊಳಗೊಂಡ ವ್ಯಕ್ತಿಯ ಲಕ್ಷಣವೆಂದು ಇಲ್ಲಿ ಹೇಳಲಾಗಿದೆ. 'ಹತೇನಾಪಿ ಸುರಾಂಗನಾ' ತತ್ವಕ್ಕೆ ಅಭಿಮನ್ಯುವಿನ ವೀರಮರಣವನ್ನು, 'ಸೂರ್ಯಮಂಡಲ ಭೇದಿನೌ' ತತ್ವಕ್ಕೆ ಕರ್ಣನ ವೀರಮರಣವನ್ನು, 'ವೀರಸಿದ್ಧಾಂತ' ತತ್ವಕ್ಕೆ ಭೀಷ್ಮನ ವೀರಮರಣವನ್ನು ಪಂಪ ಸಮೀಕರಿಸಿದ್ದಾನೆ. ತೊಲಗದ ಕಂಬ ಶಬ್ದ ಮಹಾಭಾರತ ಕಾಲದ ಸಂಶಪ್ತಕ ಪರಿಕಲ್ಪನೆಯ ಕನ್ನಡ ರೂಪ. 'ಬಾವನ್ನವೀರರು' ಶೂದ್ರಕ ಮಹಾರಾಜನ ನಿಷ್ಠೆಯ ಯೋಧರು. ಕುವರ ಲಕ್ಷನೊಂದಿಗೆ ಆತ್ಮಾರ್ಪಣ ಮಾಡಿಕೊಂಡವರು ಸಾವಿರಜನ ಯೋಧರಲ್ಲ,

'ಬಂಟ ಸಾಸಿರ್ವರು" ಸಂಘದ ಕೆಲವು ಜನ ಸದಸ್ಯರು. 'ಹನ್ನಿಬ್ಬರು' ಶಬ್ದದ ಪ್ರಯೋಗಗಳು ಸಿಗುತ್ತಿದ್ದು, ಅರ್ಥ ಸ್ಪಷ್ಟವಾಗುವುದಿಲ್ಲ - ಇತ್ಯಾದಿ ವಿಷಯಗಳ ಚರ್ಚೆಗೆ ಇಲ್ಲಿ ಅವಕಾಶ ಪ್ರಾಪ್ತವಾಗಿದೆ.

ಜಾನಪದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ "ಸೆರಗು" ಅನೇಕ ಅರ್ಥಗಳಲ್ಲಿ ಬಳಕೆಯಾಗುತ್ತ ಬಂದ ಪದ. "ಬೋಳಕರು" ಒಡೆಯನ ಅನುಯಾಯಿಯಾಗುವ ಸಂದರ್ಭದಲ್ಲಿ ತಲೆಬೋಳಿಸಿಕೊಳ್ಳುತ್ತಿದ್ದರು. "ಸಮಗಾರದೇವರಿಗಿ ಮಚ್ಚಿ ಪೆಟ್ಟು" ಎಂಬ ಗಾದೆ ಬ್ರಾಹ್ಮಣ ಹೆಣ್ಣಿನ ಸಂಪರ್ಕ ಬೆಳೆಸಿದ್ದ ಶೂದ್ರವ್ಯಕ್ತಿಗೆ ನೀಡಿದ ಸಾರ್ವಜನಿಕ ಶಿಕ್ಷೆಯಾಗಿದ್ದು, ಈಕೆ ಮಾರಿಕಾಂಬಾ ಆಗಿದ್ದಾಳೆ. ದೇವರ ಭಕ್ತಿಯ ವಿಷಯದಲ್ಲಿ, ಪ್ರಿಯತಮನ ಪ್ರೀತಿಯ ವಿಷಯದಲ್ಲಿ ತಲೆಗೂದಲು ಅರ್ಪಿಸುವುದು, ಬೆರಳು ಕತ್ತರಿಸಿಕೊಳ್ಳುವುದು, ಎದೆಯ ಮೇಲೆ ಅವನ ಹೆಸರು ಬರೆಯಿಸಿಕೊಳ್ಳುವುದು ಆಚರಣೆಯಲ್ಲಿದ್ದವು. ಮಾರಿಯ ದೇವಾಲಯದ ಮುಂದೆ ಸಿರದಗಾಳ, ಉರಿಯ ಉಯ್ಯಾಲೆ, ಮೂದಲೆಯ ಉಲಿ ಆಚರಣೆಗಳು ಜರುಗುತ್ತಿದ್ದವು.

ಪ್ರಾಕೃತಿಕ ಮೈಲಾರ, ಪೌರಾಣಿಕ ಮೈಲಾರ, ಐತಿಹಾಸಿಕ ಮೈಲಾರ ಮೂರೂ ಸಮೀಕರಣಗೊಂಡು, ಈ ದೈವತದ ಹೆಸರಿನಲ್ಲಿ ಗೊಂದಲ ನಿರ್ಮಾಣವಾಗಿದೆ. ಇದೇ ರೀತಿ ದೈವ ಜುಂಜಪ್ಪ (ಭೈರವ) ಮತ್ತು ಸಾಂಸ್ಕೃತಿಕ ನಾಯಕ ಜುಂಜಪ್ಪರಲ್ಲಿ ಸಮೀಕರಣ ನಿರ್ಮಾಣವಾಗಿದೆ. ಬೂದುಗ ಶಬ್ದದ ನಿಜರೂಪ ಬೂತುಗ, ಹೊನ್ನುಗ್ಗಿ ಶಬ್ದದ ನಿಜರೂಪ ಹೊನ್ನುಕ್ಕೆ, ಮುರಳಿ ಶಬ್ದದ ನಿಜರೂಪ ಮರುಳೆ, ಅದೃಶ್ಯಕವಿಯ ನಿಜನಾಮ ಅದ್ರೀಶ, ಬಾದುಬ್ಬೆಯೆಂಬುದು ಪದ್ಮಾಂಬೆಯೆಂಬುದರ ವ್ಯತ್ಯಸ್ತರೂಪ, ಉಡುಚಾದೇವಿ ಉಡವನ್ನು ವಾಹನ ಮಾಡಿಕೊಂಡ ದೈವತ. ಲಿಂಗಾಯತ ಮಳೆಯ ಬಗೆ, ಮಳಿಮತ ಎಂಬಿವುಗಳ ಸರಿಯಾದ ರೂಪಗಳು ಮಲೆಯ ಬಗೆ, ಮಲೆಯ ಮತ. ಇವು ಶ್ರೀಶೈಲ(ಮಲೆ)ಕ್ಕೆ ಸಂಬಂಧಿಸಿದವು. ಜುಂಜಪ್ಪ ಹೆಸರು ಈ ದೇವರಿಗೆ ಉದ್ದನೆಯ ಮೂಗು (ಚುಂಚ>ಜುಂಜ+ಅಪ್ಪ) ಕಾರಣವಾಗಿ ರೂಢಗೊಂಡಿದೆ. ಇವನು ಭೈರವನೇ ಆಗಿದ್ದು, (ಆದಿ)ಚುಂಚನಗಿರಿ ಇವನ ಕ್ಷೇತ್ರವಾಗಿದೆ. ಮುದಿಮಲ್ಲಯ್ಯನೆಂದರೆ ಮೈಲಾರ ಅಥವಾ ಭೈರವ. ಮುದಿವೀರಣ್ಣನೆಂದರೆ ಕುರುಬರ ಬೀರಪ್ಪ. ಭ್ರಮರಾಂಬೆ ಎಂಬುದು ಭೈರವಾಂಬೆ ಶಬ್ದದ ಪರಿಷ್ಕೃತ ರೂಪ. ಎರೆಯಪ, ಬಳರಿ, ಲಜ್ಜಾಗೌರಿ ಇನ್ನೂ ಒಗಟಾಗಿ ಉಳಿದಿರುವ ದೇವತೆಗಳು.

ಹೀಗೆ ಕನ್ನಡ ಸಂಸ್ಕೃತಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಕುರಿತ ಶೋಧರೂಪದ ಈ ಲೇಖನ ಸಂಪುಟ, ಏಕೀಕೃತ ಕರ್ನಾಟಕ ರಾಜ್ಯದ ಸುವರ್ಣ ಸಂದರ್ಭದಲ್ಲಿ ಪ್ರಕಟವಾಗುತ್ತಲಿರುವುದು ಸಂತೋಷದ ವಿಷಯ. ಈ ಅವಕಾಶವನ್ನು ನನ್ನದಾಗಿಸಿದ ಕರ್ನಾಟಕ ಸರ್ಕಾರಕ್ಕೂ, ಅದರಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಸ್. ಜಿ. ಸಿದ್ಧರಾಮಯ್ಯ ಅವರಿಗೂ, ಆತ್ಮೀಯ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೂ, ಈ ಲೇಖನಗಳನ್ನು ಸಂಗ್ರಹಿಸುವಲ್ಲಿ ನೆರವಾದ ಶ್ರೀ ಹನುಮಂತ ಮೇಲಿನಮನಿ ಅವರಿಗೂ ಕೃತಜ್ಞ.

ಎಂ. ಎಂ. ಕಲಬುರ್ಗಿ

ಆಕರ : ಮಾರ್ಗ ಸಂಪುಟ-೫

ಪರಿಕಲ್ಪನೆ

೨೦೦೭

ಪ್ರಾಚೀನಶಾಸ್ತ್ರಗಳಾದ ಅಲಂಕಾರ, ವ್ಯಾಕರಣ, ಛಂದಸ್ಸು, ಆಧುನಿಕ ಶಾಸ್ತ್ರಗಳಾದ ಗ್ರಂಥಸಂಪಾದನೆ, ಸಂಶೋಧನೆ, ಜಾನಪದ, ನಾಮವಿಜ್ಞಾನ, ಭಾಷಾಂತರ ಇವುಗಳ 'ಜಿಜ್ಞಾಸೆ' ರೂಪದ ಲೇಖನಗಳ ಸಂಗ್ರಹವಿದು. ಹೀಗಾಗಿ ಈ ಪುಸ್ತಕವನ್ನು ಪ್ರಾಚೀನ, ಆಧುನಿಕವೆಂದು ವಿಭಾಗಿಸಲಾಗಿದೆ ಮತ್ತು ಈ ಎರಡೂ ಕ್ಷೇತ್ರಗಳ ಮುಖ್ಯ ವಿಷಯಗಳ ಬಗ್ಗೆ ನಡೆಸಿದ ಮೂಲ ಜಿಜ್ಞಾಸೆ ಕಾರಣವಾಗಿ, ಇದಕ್ಕೆ 'ಪರಿಕಲ್ಪನೆ' ಎಂದು ಹೆಸರಿಡಲಾಗಿದೆ.

ನನಗೆ ಗ್ರಂಥಕ್ಕಿಂತ ಸಂಲೇಖನ ಬರವಣಿಗೆ ಇಷ್ಟವಾದುದು. ನನ್ನ ಇಂಥ ಸಂಲೇಖನಗಳ ನಾಲ್ಕು ಸಂಪುಟಗಳು 'ಮಾರ್ಗ' ಹೆಸರಿನಿಂದ ಬೆಳಕು ಕಂಡಿವೆ. ಈ ಸಂಪುಟಗಳಿಂದ ಆಯ್ದ ಲೇಖನಗಳ 'ಐತಿಹಾಸಿಕ', 'ಸಂಸ್ಕೃತಿ - ವಿಕೃತಿ' ಹೆಸರಿನ ಎರಡು ಪುಸ್ತಕಗಳು ಈಗಾಗಲೇ ಪ್ರಕಟವಾಗಿವೆ. ಇವುಗಳಲ್ಲಿ 'ಐತಿಹಾಸಿಕ'ವು ಮಹತ್ವದ ಸಂಶೋಧನ ಲೇಖನಗಳ 'ಸಂಗ್ರಹ'ವಾಗಿದ್ದರೆ, 'ಸಂಸ್ಕೃತಿ - ವಿಕೃತಿ' ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಲೇಖನಗಳ 'ಸಂಕಲನ'ವಾಗಿದೆ. ಈ ಪುಸ್ತಕ ಅವುಗಳಿಂದ ಭಿನ್ನವೆಂಬಂತೆ ಬೇರು ಹುಡುಕುವ, ಬೇರಿನಲ್ಲಿ ಕಳೆದುಹೋದ ಬೀಜವನ್ನು ಗುರುತಿಸುವ ಕೆಲಸ ಮಾಡುತ್ತಲಿದೆ.

'ಪರಿಕಲ್ಪನೆ' ತುಂಬ ಮಹತ್ವದ ಪದ. 'ಅರ್ಥಗ್ರಹಿಕೆ' ಎಂಬುದು ಇದರ ಅರ್ಥ. ಇಲ್ಲಿಯ ಲೇಖನಗಳು ಜ್ಞಾನಕ್ಷೇತ್ರವೊಂದರ ಮೂಲಸತ್ಯವನ್ನು ಕುರಿತು ನಡೆಸಿದ ಅನ್ವೇಷಣೆಗಳಾಗಿವೆ. ಹೊಸದನ್ನು ಹೇಳದಿದ್ದರೆ ಬರೆಯಲೇಬಾರದು ಎಂಬ ಪ್ರಜ್ಞೆಯ ನೆಲೆಯಲ್ಲಿ ಹುಟ್ಟಿದ ಇವು, ಮೇಲೆ ಹೇಳಿದ ಕ್ಷೇತ್ರಗಳನ್ನು ಹೊಸರೀತಿಯಿಂದ ನೋಡುವ ಇಲ್ಲವೆ ಅವುಗಳ ಹೊಸ ಮಗ್ಗಲುಗಳನ್ನು ತಿಳಿಸಿಕೊಡುವ ಕಾರ್ಯಮಾಡುತ್ತವೆ.

೧

ಕಾಲದೃಷ್ಟಿಯಿಂದ 'ಸಾಹಿತ್ಯ'ಕ್ಕಿಂತ ಕಾವ್ಯ, ಕಾವ್ಯಕ್ಕಿಂತ 'ವಾಙ್ಮಯ' ಹಳೆಯ ಪರಿಭಾಷೆಗಳಾಗಿದ್ದು, ಒಂದು ಸಾಮಾಜಿಕ ಹಿತದ ಮೇಲೆ, ಇನ್ನೊಂದು ಕಾವ್ಯಸೌಂದರ್ಯದ ಮೇಲೆ, ಮತ್ತೊಂದು ಭಾಷಾಸೃಜನಶೀಲತೆಯ ಮೇಲೆ ಹೆಚ್ಚು ಒತ್ತುಕೊಡುತ್ತವೆ. ಸಾಹಿತ್ಯವು ಮೂಲತಃ ಸಮೂಹ ಆಸ್ತಿಯಾಗಿದ್ದು, ಕ್ರಮೇಣ ಅರೆ ಖಾಸಗಿ ಆಸ್ತಿಯಾಗಿ, ಇಂದು ಖಾಸಗಿ ಆಸ್ತಿ ನೆಲೆಗೆ ಬಂದು ನಿಂತಿದೆ. ಪ್ರಾಚೀನ ಕನ್ನಡ ಸಾಹಿತ್ಯವು ಶ್ರವಣನಿಷ್ಠವಾಗಿ ಹುಟ್ಟಿದ್ದು, ಇಂದು ಸಾಕ್ಷರತೆ ಕಾರಣವಾಗಿ ಅದನ್ನು ವಾಚನನಿಷ್ಠವಾಗಿ ಗ್ರಹಿಸುವ ಮೂಲಕ, ಅದರ ಸಂವಹನಸತ್ಯಕ್ಕೆ ಅನ್ಯಾಯಮಾಡುತಲಿದ್ದೇವೆ. ಪ್ರಾಚೀನಕಾಲದಲ್ಲಿ ಸಾಹಿತ್ಯಕೃತಿಯೊಂದು ಆಸ್ಥಾನದಲ್ಲಿ ವಿದ್ವಾಂಸರ ಚರ್ಚೆಗೆ ಒಳಗಾಗಿ ರಾಜಸಮ್ಮತಿಯಿಂದ ಹೊರಬರುತ್ತಿದ್ದು, ಕೆಲವು ಕೃತಿಗಳಿಗೆ ಬಳಸಲಾಗಿರುವ 'ಶಿವಮಾರಮತ',

'ನೃಪತುಂಗಾನುಮತ', 'ರಟ್ಟಮತ' ಎಂಬ ಶೀರ್ಷಿಕೆಗಳಲ್ಲಿ ಇದರ ಸೂಚನೆ ಉಳಿದುಕೊಂಡಿದೆ. ತೊಳ್ಕಾಪ್ಪಿಯಂ ಮತ್ತು ಕವಿರಾಜಮಾರ್ಗಗಳು ಎಷ್ಟೇ ಸಂಸ್ಕೃತ ಪ್ರಭಾವಕ್ಕೆ ಒಳಗಾದರೂ, ಮೂಲತಃ ಅವು ದ್ರಾವಿಡ ಕಾವ್ಯತತ್ವ, ದ್ರಾವಿಡ ಕಾವ್ಯಶಾಸ್ತ್ರ ವಿನ್ಯಾಸವನ್ನೊಳಗೊಂಡ ಕೃತಿಗಳಾಗಿವೆ. ಪೊನ್ನನ ಅನುಪಲಬ್ಧ ಭುವನೈಕ ರಾಮಾಭ್ಯುದಯವು ಮೇಲಿನ ಸ್ತರದಲ್ಲಿ ಕಾವ್ಯತತ್ವವಿಚಾರ, ಕೆಳಗಿನ ಸ್ತರದಲ್ಲಿ ರಾಷ್ಟ್ರಕೂಟ ಮೂರನೆಯ ಕೃಷ್ಣನಿಗೆ ಸಂಬಂಧಿಸಿದ ಉದಾಹರಣೆಗಳನ್ನೊಳಗೊಂಡ ಅಲಂಕಾರಗ್ರಂಥವಾಗಿರಬಹುದು. ಮೇಲೆ ಹೇಳಿದ ಭುವನೈಕರಾಮಾಭ್ಯುದಯದಂಥ "ಶಾಸ್ತ್ರಕಾವ್ಯ"ವಲ್ಲದೆ "ಶ್ಲೇಷಕಾವ್ಯ"ಗಳು ಸಂಸ್ಕೃತ ಇತ್ಯಾದಿ ಭಾಷೆಗಳಲ್ಲಿ ಹುಟ್ಟಿದ್ದರೂ, ಪಂಪಾದಿಗಳ 'ಸಮಸ್ತಕಾವ್ಯ' ಸೃಷ್ಟಿ, ಕನ್ನಡಿಗರ ಕೊಡುಗೆಯಾಗಿದೆ. ಕನ್ನಡ ಚಂಪೂ ಪ್ರಕಾರದ ಮೂಲವನ್ನು ಸಂಸ್ಕೃತದಲ್ಲಿ ಹುಡುಕುವ ವ್ಯರ್ಥಪ್ರಯತ್ನ ನಡೆದಿದ್ದು, ಅದು ಕನ್ನಡಿಗರ ಪ್ರಸಂಗದ (ತಾಳಮದ್ದಳೆ) ಗ್ರಾಂಥಿಕ ರೂಪವಾಗಿದೆ. ಅದರ ನಿಜನಾಮ ಚಂಪೂ ಅಲ್ಲ, ಪ್ರಬಂಧ. ಜೈನರು ಪುರಾಣ, ಚರಿತಪುರಾಣ, ಮಹಾಪುರಾಣ, ಲೌಕಿಕ ಕಾವ್ಯ, ಆಗಮಿಕ ಕಾವ್ಯ, ಲೌಕಿಕವನ್ನು ಸಮಸ್ತೀಕರಿಸಿದ ಕಾವ್ಯ ಮೊದಲಾದ ಯಶಸ್ವೀ ಪ್ರಯೋಗಗಳನ್ನು ಕನ್ನಡದಲ್ಲಿ ನಡೆಸಿದವರಾಗಿದ್ದಾರೆ. ರಾಷ್ಟ್ರಕೂಟ ನೃಪತುಂಗನ (೯ನೆಯ ಶತಮಾನ) ಆಸ್ಥಾನದಂತೆ ಕಲ್ಯಾಣ ಚಾಲುಕ್ಯ ಜಯಸಿಂಹನ (೧೧ನೆಯ ಶತಮಾನ) ಆಸ್ಥಾನವೂ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಹೊಸ ಪ್ರಯೋಗಗಳಿಗೆ ಜನ್ಮಭೂಮಿಯೆನಿಸಿದ್ದು, ಅಲ್ಲಿ ಸಾಹಿತ್ಯದೊಂದಿಗೆ ಕಾವ್ಯಶಾಸ್ತ್ರಸಾಹಿತ್ಯ, ಲೌಕಿಕಶಾಸ್ತ್ರಸಾಹಿತ್ಯ, ಕನ್ನಡದಿಂದ ಸಂಸ್ಕೃತಕ್ಕೆ - ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರ ಮಾಡಿದ ಸಾಹಿತ್ಯ ಹುಟ್ಟಿದೆ. ಹೀಗಾಗಿ ೧೧ನೆಯ ಶತಮಾನ ಬರಡು ಯುಗವಲ್ಲ, ಸಾಹಿತ್ಯ ಪ್ರಯೋಗಯುಗವಾಗಿದೆ. ಆದಿಪಂಪನ ಪರಂಪರೆಯನ್ನು ತೀವ್ರವಾಗಿ ಪ್ರತಿಭಟಿಸಿದ ಕಾರಣ, ನಾಗಚಂದ್ರ ತನ್ನನ್ನು 'ಅಭಿನವ ಪಂಪ'ನೆಂದು ಕರೆದುಕೊಂಡಿದ್ದು, ಭಾವವನ್ನು ಉದ್ರೇಕಗೊಳಿಸುವ ಎಂಟು ಲೌಕಿಕ ರಸಗಳ 'ಲೌಕಿಕ ಕಾವ್ಯ' ರಚನೆಯನ್ನು ನಿರಾಕರಿಸಿ, ಅದನ್ನು ಉದ್ರೇಕಿಸುತ್ತಲೇ ಉಪಶಮನಗೊಳಿಸುವ ಒಂಬತ್ತು ರಸಗಳ 'ಆಗಮಿಕ ಕಾವ್ಯ' ರಚನೆಯನ್ನು ಇವನು ಪ್ರೋತ್ಸಾಹಿಸುತ್ತಾನೆ. ಬಹುಶಃ ಕನ್ನಡದಲ್ಲಿ ನಾಥಸಂಪ್ರದಾಯದವರ ಸೃಷ್ಟಿಯಾಗಿರುವ ಸೂಳ್ನುಡಿ ಪ್ರಕಾರಕ್ಕೆ 'ಸತ್ಸಂಗದ ಮಾತು' ಎಂಬ ಅರ್ಥವಿದ್ದು, ಇದನ್ನು ೧೨ನೆ ಶತಮಾನದ ಅನುಭಾವಿಗಳು 'ವಚನ'ವೆಂದು ಕರೆದರೆ, ಆಚಾರ್ಯರು ಈ ಸಿದ್ಧಪಠ್ಯವನ್ನು ಆಗಮೀಕರಣಗೊಳಿಸಿ 'ವಚನಾಗಮ'ವೆಂದು ಕರೆದಂತಿದೆ. 'ಲಿಂಗವಿಲ್ಲದ ಶಬ್ದಸೂತಕ, ಕೇಳಲಾಗದು' ಎನ್ನುವ ಶರಣರು 'ಭಾಷೆ' ಸೂತಕರಹಿತವಾಗಿರಬೇಕೆನ್ನುತ್ತ, ಸಂಸ್ಕೃತದ ಸಂಪರ್ಕವೆಂಬ ಜಟಿಲತೆ, ರಾಜಸ್ತುತಿಯೆಂಬ ದುರ್ಬಳಕೆ - ಈ ಎರಡೂ ಸೂತಕಗಳಿಂದ ಕನ್ನಡ ಭಾಷೆಯನ್ನು ಮುಕ್ತಗೊಳಿಸಿ 'ವಚನ' ಮಾಧ್ಯಮಕ್ಕೆ ಬಳಸಿದ್ದು, ಈ ಮಾಧ್ಯಮವು ಸಾಮಾಜಿಕ ನ್ಯಾಯ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬರೆದ ಸೂತ್ರವೆನಿಸಿದೆ ಮತ್ತು ಭಾಷಾವಿನ್ಯಾಸದಲ್ಲಿ ಅನೇಕ ವಾಕ್ಯಸಾಧ್ಯತೆಗಳನ್ನು ಸೃಷ್ಟಿಸಿದೆ. ತರುವಾಯದ ಕಾಲದಲ್ಲಿ 'ವಚನ'ವೆಂಬ ಸಿದ್ಧಸಾಹಿತ್ಯವನ್ನು ಬಳಸಿಕೊಂಡು ಶ್ರಮಪ್ರಧಾನವಾದ 'ಸಂಗ್ರಹ', ತತ್ವಪ್ರಧಾನವಾದ 'ಸಂಕಲನ', ಸಂವಾದ ಪ್ರಧಾನವಾದ 'ಸಂಪಾದನೆ'ಗಳೆಂಬ ಮರುಪ್ರಕಾರಗಳು ಹುಟ್ಟಿಕೊಂಡುದು, ಒಂದು ವಿಶಿಷ್ಟ ಸಾಧನೆಯೆಂದೇ ಹೇಳಬೇಕು. ರೂಪದೃಷ್ಟಿಯಿಂದ ಸರ್ವಜ್ಞನ ಬರೆವಣಿಗೆ ಪದ್ಯನಿಷ್ಠವಾಗಿದ್ದರೂ, ಶರಣರ ಬರವಣಿಗೆ ಗದ್ಯನಿಷ್ಠವಾಗಿದ್ದರೂ ಅವುಗಳನ್ನು 'ವಚನ'ವೆಂಬ ಒಂದೇ ಹೆಸರಿನಿಂದ ಕರೆದುದನ್ನು ನೋಡಿದರೆ, ಈ ಶಬ್ದವು ಸಾಹಿತ್ಯದ ಬೇರೆ ಲಕ್ಷಣವನ್ನು ಸೂಚಿಸುತ್ತಿದ್ದು, ಅದು : ನಡೆದಂತೆ ನುಡಿದವರ ಪ್ರತಿಜ್ಞಾ (ವಚನ) ವಾಕ್ಯವೆಂಬ ಅರ್ಥವನ್ನು ಸ್ಫುರಿಸುತ್ತಿರಬಹುದೆನಿಸುತ್ತದೆ.

ಇದರಲ್ಲಿ ಗದ್ಯಮುಖಿಯಾಗಿರುವ 'ವಚನ'ವನ್ನು ಬಿಟ್ಟರೆ, ಪದ್ಯಮುಖಿಯಾಗಿರುವ 'ಸ್ವರವಚನ'ವೆಂಬ ಬೇರೊಂದು ಪ್ರಕಾರವು ಬೆಳೆದುಬಂದಿರುವುದರಿಂದ, ಈಗಿನ ಮಟ್ಟಿಗೆ ಶರಣರೇ ಕನ್ನಡ ಲಿಖಿತ ಗೀತಸಾಹಿತ್ಯದ ಪಿತಾಮಹರೆಂದು ಹೇಳಬಹುದು.

ಕುಮಾರವ್ಯಾಸಾದಿಗಳು ಹೇಳುವ "ವೀರನಾರಾಯಣನೆ ಕವಿ. ಲಿಪಿಕಾರ ಕುವರವ್ಯಾಸ"ವೆಂಬಂಥ ಮಾತುಗಳು ವ್ಯಕ್ತಿತ್ವದ ನಿರಾಕರಣೆಯನ್ನಲ್ಲ, ವ್ಯಕ್ತಿತ್ವದ ನಿರ್ಲಿಪ್ತಸ್ಥಿತಿಯನ್ನು, ವಿಕಾಸಸ್ಥಿತಿಯನ್ನು ಸೂಚಿಸುತ್ತಿದ್ದು, ಇದು ಟಿ. ಎಸ್. ಇಲಿಯಟ್ ಹೇಳುವ ವ್ಯಕ್ತಿತ್ವ ನಿರಸನತತ್ವ (Impersonal Theory)ವನ್ನು ಪ್ರತಿನಿಧಿಸುತ್ತದೆ.

ಪ್ರಾಚೀನ ಕನ್ನಡದಲ್ಲಿ ಶಬ್ದದ ಎರಡನೆಯ ಸ್ಥಾನದ ಆ ಅಕ್ಷರವನ್ನು ಅಽ ಎಂಬಂತೆ ಉಚ್ಚರಿಸುತ್ತಿದ್ದರೆಂದು, ಅದನ್ನು ಇಂದು ಆ ದಂತೆ ಉಚ್ಚರಿಸಲಾಗುವುದೆಂದು (ಉದಾ :ಮಾದರಚೆನ್ನಯ್ಯ>ಮಾದಽರ ಚೆನ್ನಯ್ಯ>ಮಾದಾರ ಚೆನ್ನಯ್ಯ) ತಿಳಿದುಬರುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ಕನ್ನಡದ ಬಗ್ಗೆ ಬ್ರಾಹ್ಮಣರು ಸಾಮಾನ್ಯವಾಗಿ ಹದಿನೈದನೆಯ ಶತಮಾನದ ವರೆಗೆ ಅಸ್ಪೃಶ್ಯ ದೃಷ್ಟಿಯನ್ನು, ಜೈನರು ಅವ್ಯಾವಹಾರಿಕವೆಂಬಷ್ಟು ಅತಿಪ್ರೀತಿಯ (ಉದಾ. ಆಂಡಯ್ಯ) ದೃಷ್ಟಿಯನ್ನು, ಲಿಂಗಾಯತರು ಕನ್ನಡಕ್ಕೆ ಧಕ್ಕೆ ಬರದಂತೆ ಯಾವುದೇ ಭಾಷೆಯ ಶಬ್ದ ವಾಕ್ಯಗಳನ್ನು ಸ್ವೀಕರಿಸುವ ವೈಜ್ಞಾನಿಕ (ಆರೋಗ್ಯಕರ) ದೃಷ್ಟಿಯನ್ನು ಹೊಂದಿದ್ದರು. ಶಬ್ದಮಣಿದರ್ಪಣದ ಇಡೀ ತದ್ಧಿತ ಪ್ರಕರಣ ಅವೈಜ್ಞಾನಿಕವಾಗಿದ್ದು, ಕೇಶಿರಾಜ ಹೇಳುವ ತದ್ಧಿತಪ್ರತ್ಯಯಗಳ ಸಂಖ್ಯೆ ೨೯, ಆದರೆ ನಿಜವಾಗಿ ಅಲ್ಲಿರುವವು ೧೩ ಮಾತ್ರ. ಶಬ್ದಮಣಿದರ್ಪಣಕ್ಕೆ ಕೇಶಿರಾಜನು ಅರ್ಥವೃತ್ತಿಯನ್ನು ಲಿಂಗಣಾರಾಧ್ಯನು ಅನ್ವಯವೃತ್ತಿಯನ್ನು ಬರೆದಿದ್ದು, ಆತನದು ಸಾಮಾನ್ಯವಾಗಿ ಸಂಗ್ರಹಸ್ವರೂಪದ್ದು, ಈತನದು ಸಾಮಾನ್ಯವಾಗಿ (ವೃತ್ತಿ ಮತ್ತು ಪ್ರಯೋಗ) ಮಿಶ್ರಣರೂಪದ್ದೆಂದು ತಿಳಿದುಬರುತ್ತದೆ.

ಮೂರು ಬಗೆಯ ಅಂಶಗಣಗಳಲ್ಲಿ ರುದ್ರಗಣದ ಅಸ್ತಿತ್ವದ ಬಗ್ಗೆ ನನಗೆ ಸಂದೇಹವಿದೆ. ಮಿಕ್ಕ ಬ್ರಹ್ಮಗಣ ಮತ್ತು ವಿಷ್ಣುಗಣಗಳು ಒಂದು ಕಾಲ ಸಂದರ್ಭದಲ್ಲಿ ಅಂಶಗಣದಿಂದ ಮಾತ್ರಾಗಣಕ್ಕೆ ಪರಿವರ್ತನೆಗೊಳ್ಳಲಾರಂಭಿಸಿದ ಕಾರಣ, ಬ್ರಹ್ಮಗಣದ ಸಂಖ್ಯೆ ೪ ರಿಂದ ೬ಕ್ಕೇರಿತು, ವಿಷ್ಣುಗಣದ ಸಂಖ್ಯೆ ೮ ರಿಂದ ೧೮ಕ್ಕೇರಿತು. ಇದರಿಂದಾಗಿ ಗಣಗಳಲ್ಲಿಯ ತರಂಗವು ನಿಸ್ತರಂಗಗೊಂಡಿತು. ತೀ. ನಂ. ಶ್ರೀ ಅವರು ಕನ್ನಡ ಛಂದಸ್ಸಿನ ಬಗೆಗೆ ಹೊಸ ದಿಕ್ಕಿನಲ್ಲಿ ಆಲೋಚನೆ ಮಾಡಿದ ಆದ್ಯರಲ್ಲಿ ಒಬ್ಬರು. ಆದರೆ ಪ್ಲುತ-ಕಂಪಿತ, ಮುಡಿ-ಪದ್ಮಗಣಗಳ ಅರ್ಥದ ವಿಷಯವಾಗಿ, ಇವುಗಳ ಮಾತ್ರಾಮೌಲ್ಯ ಮತ್ತು ಚರಣದಲ್ಲಿ ಇವು ಬರಬೇಕಾದ ಸ್ಥಾನಗಳ ವಿಷಯವಾಗಿ ಅವರು ನೀಡಿದ ನಿರ್ಣಯ ವೈಜ್ಞಾನಿಕವೆನಿಸುವುದಿಲ್ಲ. ಕಿವಿಯಿಂದ ಕೇಳಿ ಗಣಮೌಲ್ಯವನ್ನು ನಿರ್ಧರಿಸಬೇಕಾದ ತರಂಗಯುಕ್ತ ಬ್ರಹ್ಮಗಣ, ವಿಷ್ಣುಗಣಗಳನ್ನು ಕಣ್ಣಿನಿಂದ ನೋಡಿದ ಕಾರಣ ಈ ದೋಷ ಘಟಿಸಿದೆ. ಕುವೆಂಪು ಅವರು ಅಂಶಲಯ ಘಟಿತ ಛಂದಸ್ಸಿಗಿಂತ ಮಾತ್ರಾಲಯ ಘಟಿತ ಛಂದಸ್ಸನ್ನು ಬಳಸುತ್ತಾರೆ. ಹೀಗಿದ್ದೂ ಅವರು ಛಂದಸ್ಸನ್ನು ಅಲಕ್ಷಿಸಿದ ಕವಿಯಲ್ಲ, ಆಶ್ರಯಿಸಿ ನಿಂತ ಕವಿಯೂ ಅಲ್ಲ, ಅರಗಿಸಿಕೊಂಡು ಬೆಳೆದ ಕವಿ. ಪದ್ಯಕ್ಕಿಂತ ಗದ್ಯದಲ್ಲಿ ಗದ್ಯಲಯದಲ್ಲಿ ಅವರ ಶಕ್ತಿಯಿದೆ. ನಮ್ಮಲ್ಲಿ ಅಂಶಗಣದ ಚೌಕಟ್ಟು ಭದ್ರವಾಗಿದ್ದು, ಅದರ ಒಳಗಿನ ಅಂಶಗಳು ವಿರಳ ಸಾಂದ್ರವಾಗುವುದುಂಟು. ಇದು ಕಿವಿಗೆ ಪ್ರತೀತವಾಗುವ ವಿಷಯ, ಆದರೆ ಕಣ್ಣಿನಿಂದ ನೋಡಿ ಗಣವನ್ನು ನಿರ್ಧರಿಸುವ ತಪ್ಪು ರೀತಿ ಕಾರಣವಾಗಿ, ವಿದ್ವಾಂಸರು

'ಉಯ್ಯಲಗಣ'ವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಮೇಲಾಗಿ ಇದನ್ನು 'ನಿಸ್ತರಂಗ'ಕ್ಕೆ ವಿರುದ್ಧವೆಂಬಂತೆ 'ತರಂಗ'ಗಣವೆಂದು ಕರೆಯುವುದು ಹೆಚ್ಚು ಸೂಕ್ತ.

೨

ಎರಡನೆಯ ಭಾಗ ಆಧುನಿಕ ಶಾಸ್ತ್ರಜ್ಞಾನಗಳಿಗೆ ಸಂಬಂಧಿಸಿದೆ. ಇಲ್ಲಿ ವಿದ್ವಾಂಸರೇ ಹೊಸ ದಾರಿ ಬರೆಯಬೇಕಾಗುತ್ತದೆ, ಗುರಿ ತಲುಪಬೇಕಾಗುತ್ತದೆ.

ಗ್ರಂಥಸಂಪಾದನಶಾಸ್ತ್ರವು ಕಳೆದ ಶತಮಾನದಲ್ಲಿ ಕರ್ನಾಟಕವನ್ನು ಪ್ರವೇಶಿಸಿದೆ. ಇದರ ಭಾಗವಾಗಿರುವ ಹಸ್ತಪ್ರತಿಶಾಸ್ತ್ರವು ಸಂಯೋಜನಮುಖ ಮತ್ತು ಪ್ರಯೋಜನಮುಖಗಳೆಂಬ ಎರಡು ಆಯಾಮಗಳನ್ನೊಳಗೊಂಡಿದೆ. ದೇಶದ ಮೂಲೆಮೂಲೆಯಲ್ಲಿ ಉಳಿದುಕೊಂಡಿರುವ ಹಸ್ತಪ್ರತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸುವವನಿಗೆ ಸೈದ್ಧಾಂತಿಕ ಜ್ಞಾನ, ಪ್ರಾಯೋಗಿಕ ಜ್ಞಾನ, ತಾಂತ್ರಿಕಜ್ಞಾನಗಳ ಅರ್ಹತೆ ಅವಶ್ಯವೆನಿಸಿದೆ. ಇದು ಕೇವಲ ಪತ್ರಶೋಧವಲ್ಲ, ಪರಿಸರಶೋಧವೂ ಆಗಿದೆ. ಕನ್ನಡದ ಅಪೂರ್ವ ಆಸ್ತಿಯಾಗಿರುವ ವಚನಗಳು 'ದೇಶೀ' ಸಾಹಿತ್ಯಕ್ಷೇತ್ರಕ್ಕೆ ಸಂಬಂಧಿಸಿವೆ. ಆದರೆ ಮಾರ್ಗಸಾಹಿತ್ಯ ಸಂಪಾದನೆಯ ನಿಯಮಗಳನ್ನು ಅನ್ವಯಿಸುವುದರಿಂದ, ಈ ದೇಶೀ ಸಾಹಿತ್ಯ ಸಂಪಾದನೆಗೆ ಚ್ಯುತಿ ಬರುತ್ತದೆ, ಬಂದಿದೆ. ಕಾರಣ, ಒಂದು ಉತ್ತಮ ಹಸ್ತಪ್ರತಿಯನ್ನಾಧರಿಸಿ, ಅದರ ಭಾಷಾದೋಷ, ಲಿಪಿಕಾರನ ಅಜ್ಞಾನ ಇತ್ಯಾದಿ ದೋಷಗಳನ್ನು ನಿವಾರಿಸುವುದೇ ಸರಿಯಾದ ಕ್ರಮವಾಗಿದೆ. ಮಾರ್ಗಸಾಹಿತ್ಯ ಸಂಪಾದನೆಯ ವಿಧಿವಿಧಾನಗಳನ್ನೇ ದೇಶೀಸಾಹಿತ್ಯ ಸಂಪಾದನೆಗೆ ಅನುಸರಿಸುವ ನಾವು, ಕೆಲವೊಮ್ಮೆ ಅದನ್ನು ಜನಪದಸಾಹಿತ್ಯ ಸಂಪಾದನೆಗೂ ವಿಸ್ತರಿಸುವ ದೊಡ್ಡ ತಪ್ಪು ಮಾಡುತ್ತಲಿದ್ದೇವೆ. ಲಿಖಿತ ಸಾಹಿತ್ಯದ ಸುತ್ತ ಬೆಳೆಯುವ ಭಿನ್ನಪಾಠ ರೀತಿಯೇ ಬೇರೆ, ಮೌಖಿಕ ಸಾಹಿತ್ಯದ ಸುತ್ತ ಬೆಳೆಯುವ ಭಿನ್ನಪಾಠ ರೀತಿಯೇ ಬೇರೆ. ಹಾಗೆ ನೋಡಿದರೆ ಜನಪದ ಸಾಹಿತ್ಯದ ಪ್ರತಿಸಲದ ಅಭಿವ್ಯಕ್ತಿಯೂ ಮೂಲಪಾಠವೇ, ನಿಜಪಾಠವೇ. ಆದರೆ ಅದನ್ನು ಕಾಲ, ದೇಶ, ಸಮಾಜ, ಸಂದರ್ಭ, ವ್ಯಕ್ತಿ - ಈ ಪಂಚಸೂತ್ರಗಳ ಬೆಳಕಿನಲ್ಲಿ ಲಿಖಿತಕ್ಕಿಳಿಸುವುದೇ ಸರಿಯಾದ ಪರಿಷ್ಕರಣವೆನಿಸುತ್ತದೆ. ಇದಕ್ಕಿಂತ ಆಡಿಯೋ ವಿಡಿಯೋ ಚಿತ್ರಣವೇ ಸರಿಯಾದ ಪರಿಷ್ಕರಣವಾಗಿದೆ. ಇಂದು ಹಸ್ತಪ್ರತಿಗಳನ್ನಾಧರಿಸಿ ಗ್ರಂಥಪರಿಷ್ಕರಣಕ್ರಿಯೆ ಪೂರೈಸುತ್ತೇವೆ. 'ರೂಪಕ್ಕೆ ನಾಶಮುಂಟು' ಎಂಬ ತತ್ವಕ್ಕನುಗುಣವಾಗಿ ಲಭ್ಯ, ಅಲಭ್ಯ ಹಸ್ತಪ್ರತಿಗಳೆಲ್ಲವೂ ನಾಶವಾದ ಸಂದರ್ಭದಲ್ಲಿ, ಇಂದಿನ ಆವೃತ್ತಿಗಳ ಅಡಿಯಲ್ಲಿ ವಿದ್ವಾಂಸರು ಸಂಗ್ರಹಿಸಿರುವ ಭಿನ್ನಪಾಠಗಳ ಬಲದಿಂದ 'ಪರಿಷ್ಕರಣದ ಪರಿಷ್ಕರಣ' ಕೈಗೊಳ್ಳಬೇಕಾಗುತ್ತದೆ.

ಸಂಶೋಧನೆಯೆನ್ನುವುದು ಅನ್ವೇಷಣಾತ್ಮಕ, ಆವಿಷ್ಕರಣಾತ್ಮಕವೆಂದು ಎರಡು ಬಗೆಯಾಗಿದೆ. ಸಾಹಿತ್ಯಕ್ಕೆ ಸಂಬಂಧಪಟ್ಟುದು ಅನ್ವೇಷಣಾತ್ಮಕ ಸಂಶೋಧನೆ. ಇದು ಆಕರಶೋಧ, ಶೋಧಿತ ಆಕರಗಳ ವಿಶ್ಲೇಷಣ, ವಿಶ್ಲೇಷಿತ ಆಕರಗಳ ವ್ಯಾಖ್ಯಾನವೆಂದು ಮೂರು ಬಗೆಯದಾಗಿದೆ. ಇವುಗಳಲ್ಲಿ ಕೊನೆಯದನ್ನು ವಿಮರ್ಶೆಯೆಂದು ಕರೆಯಬಹುದು. ಯಾವುದೇ ಸಂಶೋಧನೆ ಇರಲಿ, ಅದು ಸಾಮಾಜಿಕ ಬದ್ಧತೆಯಿಂದ ಕೂಡಿರುವುದು ಮುಖ್ಯ. ಜನಪದಸಾಹಿತ್ಯ ನಿರಕ್ಷರಿಗಳ ಮೌಖಿಕ ಸೃಷ್ಟಿಯಾಗಿದೆ. ಶ್ರಮ, ವಿರಾಮ, ಆಚರಣೆ, ಉಪಜೀವನ - ಈ ನಾಲ್ಕು ನೆಲೆಗಳಲ್ಲಿ ಹುಟ್ಟುವ ಇದು ಕಾಲ, ದೇಶ, ಪರಿಸರಗಳಿಗೆ ತಕ್ಕಂತೆ ಬದಲಾಗುತ್ತ ಬೆಳೆಯುತ್ತದೆ. ಇಂದು ಸಾಕ್ಷರತೆ ಬೆಳೆಯುತ್ತಲಿದೆ. ಶ್ರಮ, ವಿರಾಮ, ಆಚರಣೆ, ಉಪಜೀವನ ವಿಧಾನಗಳು ಬದಲಾಗಿವೆ. ಧ್ವನಿಮುದ್ರಿಕೆಯಿಂದಾಗಿ ಪಠ್ಯದ ಪುನಃಸೃಷ್ಟಿಕ್ರಿಯೆ ಜರುಗುತ್ತಿಲ್ಲ. ಹೀಗಾಗಿ

ಜನಪದ ಸಾಹಿತ್ಯದ ಹಳೆಯ ರೀತಿಯ ಸೃಷ್ಟಿಕ್ರಿಯೆ - ವಿಧಾನಗಳನ್ನು ಇನ್ನು ಮುಂದು ಅಪೇಕ್ಷಿಸುವಂತಿಲ್ಲ. ಶಿಷ್ಟ ಮತ್ತು ಜನಪದ ಸಾಹಿತ್ಯದ ಮಧ್ಯೆ ಇನ್ನೊಂದು ಬಗೆಯ ಸಾಹಿತ್ಯವಿದ್ದು, ಸಾಮಾನ್ಯವಾಗಿ ಬ್ರಾಹ್ಮಣ ಜನತೆಯಲ್ಲಿ ಬಳಕೆಯಲ್ಲಿರುವ ಅದನ್ನು 'ಜಾಣಪದ ಸಾಹಿತ್ಯ'ವೆಂದು ಕರೆಯಬಹುದು. ಜಾನಪದ ಪ್ರೇಕ್ಷಕರು ಚಿಂತನಶೀಲರಾಗಿ ಪ್ರದರ್ಶನದ ಆಳಕ್ಕೆ ಇಳಿಯದೆ, ಭಾವುಕರಾಗಿ ಮೇಲೆ ಮೇಲೆ ನೋಡುವುದರಿಂದ, ಅವರಿಗೆ ಪ್ರಥಮ ಆಕರ್ಷಣೆ ಎಂದರೆ ಆಂಗಿಕ, ಆಹಾರ್ಯ, ಆಮೇಲೆ ವಾಚಿಕ, ಕೊನೆಗೆ ಸಾತ್ವಿಕ.

ಮಾರ್ಗಸಾಹಿತ್ಯ ಮತ್ತು ಜನಪದ ಸಾಹಿತ್ಯಗಳು ಯಾವುದೇ ಲಿಖಿತಭಾಷೆಯಲ್ಲಿ ವಿರುದ್ಧಪೂರಕ ರಚನೆಗಳು. ಇವುಗಳಲ್ಲಿ ಮಾರ್ಗವೆನ್ನುವುದು ಪ್ರಾಂತೀಯ, ಜಾನಪದವೆನ್ನುವುದು ಉಪಪ್ರಾಂತೀಯ. ಸಾಮಾನ್ಯವಾಗಿ ಮಾರ್ಗವು ಸೋತು ನಿಂತಾಗ ದೇಶಿಯಿಂದ ಕಸುವು ಪಡೆಯುತ್ತ ಹೋದುದು ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ವೀರಮೌಲ್ಯಕ್ಕೆ ಬದಲು ಭಕ್ತಿಮೌಲ್ಯ ನಮ್ಮಲ್ಲಿ ಅಸ್ತಿತ್ವಕ್ಕೆ ಬಂದುದರ ಫಲವಾಗಿ ದೊಡ್ಡಾಟದ ಮಗ್ಗುಲಲ್ಲಿ ಸಣ್ಣಾಟ ಬೆಳೆದುಬಂದಿತು. ಅತ್ತ ದೊಡ್ಡಾಟದ ಗುಂಗಿನಿಂದ ಜನ ಪೂರ್ಣ ಪಾರಾಗಿರಲಿಲ್ಲ, ಇತ್ತ ನಾಟಕದ ಅಭಿರುಚಿ ಆರಂಭವಾಗಿದ್ದಿತು. ಈ ಸಂಧಿಕಾಲ ಕಾರಣವಾಗಿ ಸಣ್ಣಾಟ ವಿಪುಲ ಪ್ರಮಾಣದಲ್ಲಿ ಹುಟ್ಟಲಿಲ್ಲ. ಉತ್ತರ ಕರ್ನಾಟಕದಲ್ಲಿ ಕಥಾತ್ಮಕ - ಅಕಥಾತ್ಮಕ ವಸ್ತುವುಳ್ಳ 'ಲಾವಣಿ'ಯು ನಿರ್ದಿಷ್ಟ ಲಕ್ಷಣಗಳಿಂದ ಕೂಡಿದ ವಿಶಿಷ್ಟ ಜನಪದಸಾಹಿತ್ಯ ಪ್ರಕಾರವಾಗಿದೆ. ಹೀಗಿರುವಾಗ ಮೈಸೂರು ಪ್ರಾಂತದಲ್ಲಿ ಇತ್ತೀಚೆಗೆ ಕಥನ ಗೀತಗಳಾದ ಬ್ಯಾಲೆಡ್‌ಗೆ 'ಲಾವಣಿ'ಯೆಂದು ವಿದ್ವಾಂಸರು ಕರೆಯುತ್ತಲಿರುವುದು ಅವೈಜ್ಞಾನಿಕವೆನಿಸುತ್ತದೆ. ಸಂಸ್ಕೃತಿಯ ಘಟಕವಾಗಿರುವ ಅಡ್ಡ ಹೆಸರು, ಪರಂಪರೆ, ಪ್ರಾದೇಶಿಕತೆ, ವೃತ್ತಿ ಇತ್ಯಾದಿಗಳನ್ನು ಸೂಚಿಸುತ್ತಿದ್ದು, ಇವುಗಳ ಬಳಕೆಯಲ್ಲಿಯೂ ವ್ಯತ್ಯಾಸ ಕಂಡುಬರುತ್ತದೆ.

ನೋಡುವ ನಾಟಕ, ನೋಡುವ - ಕೇಳುವ ನಾಟಕ, ಕೇಳುವ ನಾಟಕ, ಓದುವ ನಾಟವೆಂದು ನಾಲ್ಕು ಹಂತಗಳಲ್ಲಿ ನಾಟಕ ಬೆಳೆದು ಬಂದಿದೆ. ಇವುಗಳಲ್ಲಿ ನೋಡಿಸಿಕೊಳ್ಳುವುದೇ ನಾಟಕದ ಮುಖ್ಯ ಲಕ್ಷಣವಾಗಿದೆ. ಕಲೆಯು ವ್ಯಕ್ತಿನಿಷ್ಠ, ನೆರವುನಿಷ್ಠ, ಸಂಘಟನೆನಿಷ್ಠವೆಂದು ಮೂರು ಬಗೆಯಾಗಿದ್ದು, ನಾಟಕ ಇವುಗಳಲ್ಲಿ ಕೊನೆಯ ವರ್ಗಕ್ಕೆ ಸೇರುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ಸೂತ್ರಧಾರ ಪ್ರಧಾನವಾಗಿದ್ದ ಇದು, ಕೇವಲ ನೋಡುವ 'ಪ್ರದರ್ಶನಕಲೆ'ಯಾಗಿ ಬೆಳೆದಿದ್ದು, ಕಾಲ ಗತಿಸಿದಂತೆ ಭಾಷೆಯ ವಿಶೇಷ - ವಿಶಿಷ್ಟ ಪ್ರವೇಶದಿಂದಾಗಿ 'ಸಾಹಿತ್ಯಕಲೆ'ಯಾಗಿ ಬೆಳೆಯಿತು. ಆದುದರಿಂದ ನಮ್ಮ ರಂಗಭೂಮಿ ಹಾಳಾಗಲು ಈ ಬದಲಾವಣೆಯೇ ಕಾರಣವೆನ್ನಬಹುದು. ಹೀಗಾಗಿ ನಾಟಕವನ್ನು ವೃತ್ತಿ, ಹವ್ಯಾಸಿ ಎಂದು ವಿಭಾಗಿಸದೆ ಸೂತ್ರಧಾರ ಪ್ರಧಾನ, ನಾಟಕ ಕವಿಪ್ರಧಾನವೆಂದು ವರ್ಗೀಕರಿಸುವುದೇ ಸರಿಯಾದ ಕ್ರಮವಾಗಿದೆ. ಭಾಷೆಯು ಸಮಾಜಗಳ ಮಧ್ಯೆ ಗೋಡೆ ಕಟ್ಟುತ್ತದೆ, ಭಾಷಾಂತರ ಆ ಗೋಡೆಯನ್ನು ಒಡೆಯುತ್ತದೆ. ಆದರೆ ಭಾಷಾಂತರವೆನ್ನುವುದು ಕೃತಕವಾಗಿ ಒಂದು ಶಬ್ದಕ್ಕೆ ಪ್ರತಿಶಬ್ದ ಇಡುವುದಿಲ್ಲ. ನಮ್ಮ ಆಡಳಿತ ಭಾಷೆಯಲ್ಲಿ ಜರುಗುತ್ತಲಿರುವ ಇಂತಹ ಕೃತಕ ಕ್ರಿಯೆ ನಿಲ್ಲಬೇಕು. ಇದೇ ರೀತಿ ಒಂದು ಪ್ರದೇಶದವರಿಗೆ ಅರ್ಥವಾಗದ ಬೇರೊಂದು ಪ್ರದೇಶದ ಭಾಷೆಗೆ ಬದಲು ಪ್ರಮಾಣಭಾಷೆಯನ್ನು ಭಾಷಾಂತರದಲ್ಲಿ ಬಳಸಬೇಕು. ಇದಲ್ಲದೆ ಭಾಷೆಯೆಂದರೆ ಶಬ್ದವಲ್ಲ, ವಾಕ್ಯ. ಹೀಗಾಗಿ ಕನ್ನಡಕ್ಕೆ ಹೊಂದುವ ವಾಕ್ಯರಚನೆ ರೂಢಗೊಳ್ಳಬೇಕು. ಈ ಎಲ್ಲ ಸಾಧ್ಯತೆಗಳು ಮಾತ್ರ ಆಡಳಿತ ಭಾಷೆಗೆ ಅರ್ಥ ತುಂಬಬಲ್ಲವು.

ಈ ರೀತಿ ಅನೇಕ ಕ್ಷೇತ್ರಗಳಿಗೆ ಸಂಬಂಧಿಸಿದ, ಅನೇಕ ವಿಷಯಗಳ ಮೂಲಭೂತ ತಿಳುವಳಿಕೆಯನ್ನು ಸ್ಪಷ್ಟಪಡಿಸುವ ಲೇಖನಗಳ ಸಂಗ್ರಹವಾದ ಇದಕ್ಕೆ 'ಪರಿಕಲ್ಪನೆ' ಎಂದು ಹೆಸರಿಟ್ಟಿದ್ದೇನೆ. ತನ್ನ 'ಹೊನ್ನಾರು' ಮಾಲೆಯಲ್ಲಿ ಇದನ್ನು ಪ್ರಕಟಿಸುತ್ತಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ, ಅದರಲ್ಲಿಯೂ ಕುಲಪತಿಗಳಾದ ಮಾನ್ಯ ಡಾ. ಬಿ. ಎ. ವಿವೇಕ ರೈ ಅವರಿಗೆ, ಪ್ರಸಾರಾಂಗದ ನಿರ್ದೇಶಕರಾದ ಆತ್ಮೀಯ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ಕೃತಜ್ಞನಾಗಿದ್ದೇನೆ. ಲೇಖನ ಸಂಗ್ರಹ ಕಾರ್ಯದಲ್ಲಿ ನೆರವಾದ ಡಾ. ಹನುಮಂತ ಮೇಲಿನಮನಿ ಅವರಿಗೂ, ಡಾ. ಸರಸ್ವತಿದೇವಿ ಅವರಿಗೂ ವಂದನೆಗಳು.

ಎಂ. ಎಂ. ಕಲಬುರ್ಗಿ

ಆಕರ : ಮಾರ್ಗ ಸಂಪುಟ-೫

■■

೩.೨೪

ಕನ್ನಡ ಅರಸರ ಅಕನ್ನಡ ಪ್ರಜ್ಞೆ

೨೦೦೮

ಹುಸಿಯ ನುಡಿಯಲು ಬೇಡ

ಪ್ರಾಚೀನ ರಾಜ್ಯಾಡಳಿತವೆನ್ನುವುದು ರಾಜನಾದವನು ತನ್ನ ಅಸ್ತಿತ್ವ- ಅಂತಸ್ತು ಉಳಿಸಿಕೊಳ್ಳುವುದಾಗಿದ್ದಿತೇ ಹೊರತು, ನಾಡವರ ರಕ್ಷಣೆ - ಅಭಿವೃದ್ಧಿಗಳಿಗೆ ಪೂರಕವಾಗಿರಲಿಲ್ಲ. ಬುದ್ಧಿವಂತನಾದ ಮಂತ್ರಿ, ಯುದ್ಧವೀರನಾದ ಸೇನಾಪತಿ, ಪ್ರತಿಭಾಶಾಲಿಯಾದ ಕವಿ, ಧರ್ಮನಿಷ್ಠನಾದ ಗುರು - ಇವರೆಲ್ಲ ಅಂತಿಮದಲ್ಲಿ ಇಂಥ ರಾಜನ ಪರವಾಗಿಯೇ ನಿಲ್ಲುತ್ತಿದ್ದರು. ಹೀಗಾಗಿ ಅವನು ದುಷ್ಟಶಿಕ್ಷೆ - ಶಿಷ್ಟರಕ್ಷೆಯ ನೆವದಲ್ಲಿ ನಾಡು - ನುಡಿ -ನಾಡವರನ್ನು ಬಲಿಕೊಟ್ಟು 'ತನ್ನ' ಸಾರ್ವಭೌಮತ್ವವನ್ನು ಉಳಿಸಿಕೊಳ್ಳುತ್ತ ಬಂದನು. ರಾಜತ್ವವೆಂದರೆ ಇದೇ ಎಂದು ಸಾಮಾಜಿಕರೂ ನಂಬುತ್ತ ಬಂದರು.

ಇಂಥ ಅಪ್ರಬುದ್ಧ ವಿಚಾರ ಕಾರಣವಾಗಿ ನಮ್ಮ ರಾಜರು ಕನ್ನಡ ನಾಡು - ನುಡಿ - ನಾಡವರಿಗೆ ಪ್ರತ್ಯಕ್ಷ - ಪರೋಕ್ಷ ಅನ್ಯಾಯ ಮಾಡುತ್ತಲೇ ಬಂದರು. ಅವರು ಮಾಡಿದ ಅನ್ಯಾಯದ ದುಷ್ಪರಿಣಾಮವನ್ನು ನಾವು ಇಂದು ಅನುಭವಿಸುತ್ತಲಿದ್ದೇವೆ. ಅಂದರೆ ಇಂದು ಬೆಂಗಳೂರು ಪ್ರದೇಶದಲ್ಲಿ ತಮಿಳರ, ಬಳ್ಳಾರಿ ಪ್ರದೇಶದಲ್ಲಿ ತೆಲುಗರ, ಬೆಳಗಾವಿ ಪ್ರದೇಶದಲ್ಲಿ ಮರಾಠರ ಪ್ರಾಬಲ್ಯ ಬೆಳೆದು ನಿಂತುದಕ್ಕೆ ಮತ್ತು ಕನ್ನಡಿಗರು ನಿರಭಿಮಾನಿಗಳಾದುದಕ್ಕೆ ಮೊದಲಿನಿಂದಲೂ ನಮ್ಮ ರಾಜರು ತಾಳಿದ ವ್ಯಷ್ಟಿಪ್ರಜ್ಞೆ, ಅದೂರದೃಷ್ಟಿಗಳೇ ಕಾರಣವಾಗಿವೆ. ಆದರೆ ಇಂಥ ಅಹಿತಕಾರಿ ಅರಸರ ಆಶ್ರಯದಲ್ಲಿ

ಬೆಳೆದಿದ್ದ ಸಮಾಜಗಳ ವಿದ್ವಾಂಸರು ಅವರನ್ನು ಇತಿಹಾಸದುದ್ದಕ್ಕೂ ವೈಭವೀಕರಿಸಿ ಬರೆಯುತ್ತ ಬಂದರು; ಸಾಮಾನ್ಯರು ಈ ಬರವಣಿಗೆಯನ್ನು ನಂಬುತ್ತ ಬಂದರು. ಇಂಥ ಸಂದರ್ಭದಲ್ಲಿ ಈ ವಿಭಿನ್ನ ಪುಸ್ತಿಕೆ ಹೊರಬರುತ್ತಲಿದೆ.

ಕನ್ನಡಿಗರಾದ ಗಂಗರ ಮಂತ್ರಿ ಚಾವುಂಡರಾಯನ ತಮಿಳುಪ್ರೀತಿ, ಹೊಯ್ಸಳರ ಮಂತ್ರಿ ಗಂಗರಾಜನ ಮರಾಠಿಪ್ರೀತಿ, ವಿಷ್ಣುವರ್ಧನನ ತಮಿಳುಮೂಲದ ಶ್ರೀವೈಷ್ಣವ ಮತಾಂತರ, ಕೃಷ್ಣದೇವರಾಯನ ತೆಲುಗು ಭಾಷಾಪ್ರೀತಿ -ಹಂಪಿ ವಿರೂಪಾಕ್ಷನ ಬದಲು ತಿರುಪತಿ ವೆಂಕಟೇಶನ ಭಕ್ತಿ, ಚಿಕ್ಕದೇವರಾಯನು ಶ್ರೀವೈಷ್ಣವನಾಗುವ ಮೂಲಕ ತಮಿಳು ಪ್ರಜೆ - ಭಾಷೆ - ಸಾಹಿತ್ಯಗಳಿಗೆ ತೋರಿದ ಒಲವು ಇತ್ಯಾದಿಗಳಿಂದಾಗಿ ಕರ್ನಾಟಕದ ಮೇಲಾಗಿರುವ 'ಅನ್ಯತ್ವ'ದ ದುಷ್ಪರಿಣಾಮಗಳ ವಿವರ ಈ ಕೃತಿಯಲ್ಲಿದೆ. ಒಬ್ಬರ ಉತ್ತರಾಧಿಕಾರಿ ಇನ್ನೊಬ್ಬರಂತೆ ಆಳಿದ ಗಂಗ - ಹೊಯ್ಸಳ - ವಿಜಯನಗರ - ಮೈಸೂರು ರಾಜಮನೆತನಗಳು ಕ್ರಮವತ್ತಾಗಿ ಕನ್ನಡಕ್ಕೆ ಮಾಡಿದ ಅನ್ಯಾಯದ ಚಿತ್ರ ಇಲ್ಲಿದೆ.

ಅನ್ಯರಾಜಕೀಯ ಆಡಳಿತ ಕಾರಣವಾಗಿ ಕನ್ನಡ ಜನ - ಕನ್ನಡ ಭಾಷೆಗಳಿಗೆ ಅನ್ಯಾಯವಾಗುತ್ತ ಬಂದಿತೆಂದು ಈ ವರೆಗೆ ನಾವು ಭಾವಿಸಿದ್ದೇವೆ. ಆದರೆ ಅನ್ಯಧಾರ್ಮಿಕ ಪ್ರವೇಶ ಕಾರಣವಾಗಿಯೂ ಅನ್ಯಾಯವಾಗಿದೆಯೆಂಬ, ಅಂದರೆ ಪರಕೀಯರು ರಾಜಕೀಯವಾಗಿ ಒಳಗೆ ನುಗ್ಗಲು ಸಾಧ್ಯವಾಗದಿದ್ದರೆ, ಧಾರ್ಮಿಕವಾಗಿ ನುಗ್ಗಿ, ನಮ್ಮನ್ನು ನಿಧಾನವಿಷದಂತೆ ಪರಾಧೀನಗೊಳಿಸಿದರೆಂಬ ಸತ್ಯವೊಂದು ಇಲ್ಲಿ ಅನಾವರಣಗೊಂಡಿದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಕನ್ನಡಿಗರು ಪಂಡರಪುರದ ವಿಠಲನ ಭಕ್ತರಾಗುವುದೆಂದರೆ ಮರಾಠಿ ಸಂಸ್ಕೃತಿಯವರಾಗುವುದು, ತಿರುಪತಿ ವೆಂಕಟೇಶನ ಭಕ್ತರಾಗುವುದೆಂದರೆ ತಮಿಳು ಇಲ್ಲವೆ ತೆಲಗು ಸಂಸ್ಕೃತಿಯವರಾಗುವುದು. ಇಂದು ಅನ್ಯಪ್ರಾಂತೀಯ ದೇವತೆಗಳನ್ನು ನಮ್ಮ ನಾಡಿನಲ್ಲಿ ಕುರುಡು ಭಕ್ತಿಯಿಂದ ಸ್ಥಾಪಿಸುತ್ತ ನಡೆದಿರುವ ಜನಸಾಮಾನ್ಯರು, ಅನ್ಯಪ್ರಾಂತಗಳಿಗೆ ಹೋಗಿ ಅದ್ದೂರಿಯ ಭಕ್ತಿ ಕಾಣಿಕೆ ಸುರಿಯುತ್ತಿರುವ ಜನನಾಯಕರು ಇಂಥ ತಪ್ಪುಗಳನ್ನು ತಿದ್ದಿಕೊಳ್ಳಬೇಕಾಗಿದೆ. ಒಟ್ಟಾರೆ, ಕನ್ನಡಕ್ಕೆ ಮಾರಕವಾಗುವ ರೀತಿಯಲ್ಲಿ ಅನ್ಯತೆಗಳನ್ನು ಬರಮಾಡಿಕೊಳ್ಳಬಾರದೆಂಬುದೇ ನನ್ನ ಈ ಮಾತಿನ ಉದ್ದೇಶವಾಗಿದೆ.

ಇನ್ನೊಂದು ವಿಷಯವೆಂದರೆ, ನಾವು ಈ ವರೆಗೆ ಆದರ್ಶ ರಾಜರೆಂದು ಚಿತ್ರಿಸುತ್ತ ಬಂದಿದ್ದ ವಿಷ್ಣುವರ್ಧನ, ಕೃಷ್ಣದೇವರಾಯ, ಚಿಕ್ಕದೇವರಾಯರಿಂದ ನಮ್ಮ ನಾಡಿನ ಭೌತಿಕ - ಅಭೌತಿಕ ಕ್ಷೇತ್ರಗಳಿಗಾಗಿರುವ ಹಾನಿಯ ಚಿತ್ರವನ್ನು ಮೊದಲಬಾರಿಗೆ ಇಲ್ಲಿ ತೆರೆದು ತೋರಿಸಲಾಗಿದೆ. ಇವರು ಮಾಡಿದ 'ಕಾರ್ಯ', ಅದರ ಹಿಂದಿರುವ 'ಕಾರಣ', ಅದರಿಂದಾಗಿ ಮುಂದೆ ಘಟಿಸಿದ 'ಪರಿಣಾಮ'ಗಳ ಒಂದು ಸ್ಥೂಲ ಚಿತ್ರವಿಲ್ಲಿದೆ. ಇದನ್ನು ಗಮನಿಸಿ, ಇನ್ನುಮೇಲಾದರೂ ನಮ್ಮ ರಾಜರಿಂದಾಗಿರುವ ನ್ಯಾಯ - ಅನ್ಯಾಯಗಳ ಸರಿಯಾದ ಚರಿತ್ರೆ ಬರೆಯುವುದು ಅವಶ್ಯವಿದೆ.

ನಾನು ಕನ್ನಡ ವಿಶ್ವವಿದ್ಯಾಲಯದ ಕುಲಪತಿ (೧೯೯೮)ಯಾಗಿ ಹಂಪಿಯಲ್ಲಿದ್ದ ೩ ವರ್ಷಗಳ ಅವಧಿಯಲ್ಲಿ ಹೊಳೆದ ವಿಚಾರಗಳನ್ನು ೨೦೦೪ರಲ್ಲಿ ಪ್ರಕಟವಾದ ಮಾರ್ಗ - ೪ ಕೃತಿಯ ಮೂಲಕ ಪ್ರಕಟಿಸಿದೆ. ಅಲ್ಲಿಯ ಐದು ಲೇಖನಗಳನ್ನು ಒಂದಿಷ್ಟು ಪರಿಷ್ಕರಿಸಿ ರೂಪಿಸಿರುವ ಈ ಪುಸ್ತಿಕೆಯನ್ನು ಕನ್ನಡಿಗರು ತೆರೆದ ಮನಸ್ಸಿನಿಂದ ಬರಮಾಡಿಕೊಳ್ಳುವರೆಂದು ಆಶಿಸುತ್ತೇನೆ.

ಈ ಲೇಖನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಅನೇಕರು ಒತ್ತಾಯಿಸುತ್ತಿದ್ದರು.ಈ ಒತ್ತಾಯವನ್ನು ಸಾಕಾರಗೊಳಿಸಿದ ಹುಬ್ಬಳ್ಳಿಯ "ಸಾಹಿತ್ಯ ಪ್ರಕಾಶನ"ದ ಶ್ರೀ ಎಂ. ಎ. ಸುಬ್ರಹ್ಮಣ್ಯ ಅವರಿಗೆ ಕೃತಜ್ಞತೆಗಳು.

ಎಂ. ಎಂ. ಕಲಬುರ್ಗಿ

ಆಕರ : ಮಾರ್ಗ ಸಂಪುಟ-೫

■■

೩.೨೫

ಕನ್ನಡ ಶಾಸನ ಸಾಹಿತ್ಯ

೨೦೧೧

ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ, ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ. ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು.

ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿವೆ. ಈವರೆಗೆ ನಾನು ಬರೆದ ಇಂಥ ವಿವಿಧ ವಿಷಯಗಳನ್ನೊಳಗೊಂಡ ಸಂಶೋಧನಿಷ್ಠ ೪೦೦ ಲೇಖನಗಳು 'ಮಾರ್ಗ' ಹೆಸರಿನ ೪ ಸಂಪುಟಗಳಲ್ಲಿ ಬೆಳಕುಕಂಡಿವೆ. ಈ ರಾಶಿಯಿಂದ ಅಭ್ಯಾಸಿಯ ಅನುಕೂಲ ದೃಷ್ಟಿಯಿಂದ, ಒಂದು ವಿಷಯಕ್ಕೆ ಸಂಬಂಧಿಸಿದ ಲೇಖನಗಳನ್ನು ಆಯ್ದು, ಸ್ವತಂತ್ರ ಪುಸ್ತಕರೂಪದಲ್ಲಿ ಪ್ರಕಟಿಸುವುದು ಅವಶ್ಯವೆಂದು ಮನಗಂಡ ನನ್ನ ಮಿತ್ರರು ಮತ್ತು ವಿದ್ಯಾರ್ಥಿ ಮಿತ್ರರು ಅಂಥ ಕೃತಿಗಳನ್ನು ಅಭ್ಯಾಸಪೂರ್ಣ ಪ್ರಸ್ತಾವನೆಯೊಂದಿಗೆ ಪ್ರಕಟಿಸುವ ಉಪಕ್ರಮ ಆರಂಭಿಸಿದ್ದಾರೆ. ಇದರ ಫಲವಾಗಿ ಲಿಂಗಾಯತಕ್ಕೆ ಸಂಬಂಧಿಸಿದ ಲೇಖನಗಳ ಸಂಪುಟವು "ಜಂಗಮದಿಂದ ಸ್ಥಾವರಕ್ಕೆ" ಹೆಸರಿನಿಂದ ಬೆಳಕುಕಂಡಿದೆ. ನಾಟಕಕ್ಕೆ ಸಂಬಂಧಿಸಿದ ಲೇಖನಗಳ ಸಂಪುಟ "ನಾಟಕದ ನೆಲೆಗಳು" ಹೆಸರಿನಿಂದ ಪ್ರಕಟವಾಗಲಿದೆ. ಕುರುಬ ಸಂಸ್ಕೃತಿ ಲೇಖನಗಳ ಶೋಧಕೃತಿ, ಕಾವ್ಯಮೀಮಾಂಸೆ ಲೇಖನಗಳ ಶಾಸ್ತ್ರಕೃತಿ ಸಿದ್ಧವಾಗುತ್ತಲಿವೆ. ಇಂಥ ಸಂದರ್ಭದಲ್ಲಿ ಶಾಸನಕ್ಕೆ ಸಂಬಂಧಿಸಿದ ಲೇಖನಗಳನ್ನೊಳಗೊಂಡ ಈ ಕೃತಿ ಈಗ ಪ್ರಕಟವಾಗುತ್ತಿದೆ.

ಸಾಹಿತ್ಯವನ್ನು, ಘಟಿತವಸ್ತು (Fact)ಕೇಂದ್ರಿತ ಮತ್ತು ಕಲ್ಪಿತವಸ್ತು(Fiction)ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು ಜೀವನಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತುಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನಚರಿತ್ರೆಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ. ಇದರ ಭಾಗವಾಗಿ ಶಾಸನಗಳೆಂಬ ದಾಖಲು ಸಾಹಿತ್ಯದ ಅಧ್ಯಯನ ನನ್ನನ್ನು ಸಮ್ಮೋಹನಗೊಳಿಸಿದೆ.

ಈ ಸಮ್ಮೋಹನ ಕಾರಣವಾಗಿ ನಾನು ೧. ನೇರವಾಗಿ ಶಾಸನಗಳ ಸ್ವರೂಪ-ಸತ್ವಗಳನ್ನು ೨ ಅಲ್ಲಿ ನಿಕ್ಷಿಪ್ತವಾದ ಸಾಮಾಜಿಕ ಸಂಗತಿ-ಸಂಸ್ಕೃತಿಗಳನ್ನು ೩. ವೈಯಕ್ತಿಕ ಕವಿ ಮೊದಲಾದವರನ್ನು ಕುರಿತ ಲೇಖನಗಳನ್ನು ಬರೆದಿದ್ದೇನೆ. ಈ ಮೂರರಲ್ಲಿ ಮೊದಲಿನ ಮತ್ತು ಕೊನೆಯ ವಿಷಯಗಳಿಗೆ ಸಂಬಂಧಿಸಿದ ಲೇಖನಗಳು ಇಲ್ಲಿವೆ. ಕೊನೆಯ ವಿಷಯವನ್ನು ಕವಿಸಾಹಿತ್ಯ, ಶರಣಕವಿಸಾಹಿತ್ಯಕ್ಕೆ ಸೀಮಿತಗೊಳಿಸಿದ್ದೇನೆ. ಇದರಿಂದಾಗಿ ಇಲ್ಲಿ ಶಾಸನ ಸಾಹಿತ್ಯ, ಶಾಸನೋಕ್ತ ಕವಿ-ಕಾವ್ಯಗಳು, ಶಾಸನೋಕ್ತ ಶರಣಕವಿಗಳು ಹೆಸರಿನ ಮೂರು ಅಧ್ಯಾಯಗಳು ಆಕಾರಗೊಂಡಿವೆ.

"ಶಾಸನ ಸಾಹಿತ್ಯ" ಹೆಸರಿನ ಮೊದಲನೆಯ ಅಧ್ಯಾಯ ಕನ್ನಡ ಶಾಸನ ಕ್ಷೇತ್ರವನ್ನು ಪರಿಚಯಿಸುತ್ತದೆ. ಈ ಬಗೆಯ ಅಧ್ಯಯನ ವಿದ್ವಾಂಸರಿಂದ ಈ ಮೊದಲು ಬಿಡಿಬಿಡಿಯಾಗಿ ನಡೆದಿದ್ದರೂ, ಓದುಗರ ಅನುಕೂಲಕ್ಕಾಗಿ ಒಂದು ಸಮಗ್ರ ಚಿತ್ರವನ್ನು ಇಲ್ಲಿ ಬಿಡಿಸಲಾಗಿದೆ. ಶಾಸನಾಭ್ಯಾಸಿಗಳಿಗೆ ಇದು ಒಂದು ಪ್ರವೇಶಿಕೆಯಂತೆ ನೆರವಾಗುವುದೆಂದು ನಂಬಿದ್ದೇನೆ.

ಎರಡನೆ ಅಧ್ಯಾಯ ಕನ್ನಡ ಕವಿಚರಿತೆಗೆ ಸಂಬಂಧಿಸಿದೆ. ಸಾಹಿತ್ಯಾಭ್ಯಾಸಿಗಳಿಗೆ ಕವಿಗಳ ನಿಜಚರಿತ್ರೆ ಇನ್ನೂ ಅಲ್ಲಲ್ಲಿ ಅಸ್ಪಷ್ಟವಾಗಿ ಉಳಿದಿದ್ದು, ಆಗಾಗ ವಿದ್ವಾಂಸರು ಬೇರೆ ಬೇರೆ ಆಕರಗಳ ಮೂಲಕ ಅದನ್ನು ಸ್ಪಷ್ಟವಾಗಿ ಬರೆದಿದ್ದಾರೆ. ಈ ದಾರಿಯಲ್ಲಿ ನಡೆದು ಶಾಸನಾಧಾರದಿಂದ ನಾನು ಸ್ಪಷ್ಟಪಡಿಸಿದ ಚರಿತ್ರೆಯ ಕೆಲವು ಸಂಗತಿಗಳನ್ನೊಳಗೊಂಡಿದೆ. ಈ ವಿಭಾಗ.

ಕನ್ನಡ ಧಾರ್ಮಿಕ ಕ್ಷೇತ್ರದ ದೊಡ್ಡ ಆಸ್ತಿಯಾಗಿರುವ ಶರಣರು ಸಾಹಿತ್ಯ ಕ್ಷೇತ್ರದ ಆಸ್ತಿಯೂ ಆದುದು ಒಂದು ವಿಶೇಷ. 'ಅಕಾಯ ಚರಿತ್ರೆ' ಧೋರಣೆಯ ಇವರು ತಮ್ಮ ಬಗ್ಗೆ ಏನೂ ಹೇಳಿಕೊಂಡಿಲ್ಲ. ಹೀಗಾಗಿ ಇವರ ಚರಿತ್ರೆ ಸಂಶೋಧಕರಿಗೆ ದೊಡ್ಡ ಹೊಣೆಯಾಗಿ ಪರಿಣಮಿಸಿದೆ. ಈ ದೃಷ್ಟಿಯಿಂದ ಶಾಸನಗಳನ್ನಾಧರಿಸಿ ಪ್ರಕಟಿಸಿದ ಶರಣ ಚರಿತ್ರೆಯ ಶೋಧವೆನಿಸಿವೆ, ಇಲ್ಲಿಯ ಲೇಖನಗಳು.

ಹೀಗೆ ಮೂರು ಮೈಗಳನ್ನು ಪಡೆದಿರುವ ಈ ಕೃತಿ ಪ್ರಕಟನಯೋಗ ಒಂದು ಆಕಸ್ಮಿಕ. ಮೈಸೂರಿನ ಪ್ರಸಿದ್ಧ ಪುಸ್ತಕ ಪ್ರಕಾಶನ ಸಂಸ್ಥೆಯಾಗಿರುವ 'ಚೇತನ ಬುಕ್ ಹೌಸ್' ಆಶ್ರಯದಲ್ಲಿ ಅಲ್ಲಿಯ ಸಾಹಿತಿ ಮಿತ್ರರು 'ಕನ್ನಡ ಸಾಹಿತ್ಯ ಚರಿತ್ರೆ'ಯ ನೇರ ಮತ್ತು ಪೂರಕರೂಪದ 'ಚೇತನ ಯುಗಾಂತರ ಕನ್ನಡ ಸಾಹಿತ್ಯ' ಹೆಸರಿನ ಗ್ರಂಥಮಾಲೆಯನ್ನು ಆರಂಭಿಸಿದ್ದಾರೆ. ಈ ಮಾಲೆಯ

ಪ್ರಧಾನ ಸಂಪಾದಕರಾಗಿರುವ ಮಿತ್ರರಾದ ಶ್ರೀ ಜಿ.ಎಸ್. ಭಟ್ ಅವರ ಪ್ರೀತಿ ಕಾರಣವಾಗಿ ಈ ಪುಸ್ತಕ ಹೊರಬರುತ್ತಲಿದೆ. ಶ್ರೀ ಭಟ್ ಅವರಿಗೂ, ಈ ಮಾಲೆಯ ಇತರ ಸದಸ್ಯರಿಗೂ, ಪ್ರಕಾಶನ ಸಂಸ್ಥೆಯ ಒಡೆಯರಾದ ಶ್ರೀ ನಟರಾಜ ಅವರಿಗೂ ಕೃತಜ್ಞನಾಗಿದ್ದೇನೆ.

---

* ಎಂ.ಎಂ. ಕಲಬುರ್ಗಿ : ಚೇತನ ಬುಕ್ ಹೌಸ್, ಬೆಂಗಳೂರು-೨೦೧೧

ಆಕರ : ಮಾರ್ಗ ಸಂಪುಟ-೮

ಸಂಪಾದಕೀಯ

ದಿಗಂಬರ

೧೯೭೧

ವಿದ್ಯಾರ್ಥಿಗಳ ಸೃಜನಶಕ್ತಿ ಅಭಿವ್ಯಕ್ತಗೊಳಿಸಿದ ಕವನಗಳನ್ನು ಒಂದೆಡೆ ಸಂಕಲಿಸಲು ಮಾಡಿದ ಪ್ರಯತ್ನ ಈ ಕೃತಿ. ಕವನಸೃಷ್ಟಿ ಕೇವಲ ಭಾಷಾವಿದ್ಯಾರ್ಥಿಗಳ ಕರ್ಮವಲ್ಲ ; ನಿರಂತರ ವ್ಯಾಸಂಗ, ಉತ್ಕಟ ಪರಿಶ್ರಮದ ಯಾವುದೇ ಪ್ರತಿಭಾಶಾಲಿ ಅದನ್ನು ಸಾಧಿಸಬಲ್ಲನು. ಕನ್ನಡ, ಹಿಂದಿ, ಇಂಗ್ಲಿಷ್‌ಗಳ ಜೊತೆಗೆ ಗಣಿತ, ಸಂಖ್ಯಾಶಾಸ್ತ್ರ, ಇತಿಹಾಸ, ಭೂಗೋಲ, ಭೌತಶಾಸ್ತ್ರಗಳ ಅಧ್ಯಯನದಲ್ಲಿ ತೊಡಗಿದ ವಿದ್ಯಾರ್ಥಿಗಳ ಕವನಗಳೂ ಇಲ್ಲಿದ್ದುದು ಇದಕ್ಕೆ ನಿದರ್ಶನ.

ಕೇವಲ ಕಥೆ, ಕಾದಂಬರಿ ಬರೆಯುತ್ತಿರುವ ಈಗಿನ ಕಾಲದ ಸ್ತ್ರೀಯರ ಕವನರಚನೆ ನಿರಾಶೆ ಹುಟ್ಟಿಸುತ್ತಲಿದೆ.ಈ ನಿರಾಶೆ ದೂರವಾಗುವ ಕಾಲ ದೂರವಿಲ್ಲವೆನ್ನುವಂತೆ ಇಲ್ಲಿ ವಿದ್ಯಾರ್ಥಿನಿಯರೂ ತಕ್ಕ ಪ್ರಮಾಣದಲ್ಲಿ ಕವನ ನೀಡಿದ್ದಾರೆ. ಇದು ಗಮನಿಸಬೇಕಾದ ಅಂಶ. ಈ ವ್ಯಾಪಕ ಪ್ರಾತಿನಿಧ್ಯತೆಯಿಂದಾಗಿ ಈ ಸಂಕಲನಕ್ಕೆ ಸಂಕೀರ್ಣತೆ, ರುಚಿವೈವಿಧ್ಯ ಸಂಪ್ರಾಪ್ತವಾಗಿದೆ.

ಈ ಸಂಕಲನದ ಹೆಸರು 'ದಿಗಂಬರ' ಅರ್ಥಪೂರ್ಣವಾದುದು. ನಮ್ಮ 'ಸಂಪ್ರದಾಯ'ದಂತೆ ತೆಲುಗು ನಾಡಿನಲ್ಲಿ 'ದಿಗಂಬರ ಸಂಪ್ರದಾಯ'ವೊಂದಿದೆ. ಕನ್ನಡ ಸಾಹಿತ್ಯದಲ್ಲಿ ಅಭಿವ್ಯಕ್ತಿಯ 'ದಿಗಂಬರತ್ವ' ಇನ್ನೂ ಪ್ರಾಮಾಣಿಕವಾಗಿ ಬರಲಿ, 'ಭಾವಬತ್ತಲೆ'ಯ ಬರವಣಿಗೆ ಮುಂದಿನ ಜನಾಂಗದ ದಾರಿಯಾಗಲಿ, ಎಂಬ ಭಾವನೆಯಿಂದ ಈ ಹೆಸರನ್ನು ಸ್ವೀಕರಿಸಲಾಗಿದೆ.

"ನೀನೆನ್ನಂ ಸಂತೈಸುವುದು, ನಾ ನಿನ್ನಂ ಸಂತೈಸುವುದು" ಎಂದು ಗುಂಪುಗೊಂಡ ಕವಿ ವೃಷಭರ, ವಿಮರ್ಶಕ ಪುಂಗವರ ಧೂಳಿ - ಕೆಂಧೂಳಿಯ ಮಧ್ಯ ಈ ಎಳೆಗರುಗಳು ಸಂಕೋಚಗೊಂಡು, ಅಂಜಿ ಅಜ್ಞಾತವಾಸ ಅನುಭವಿಸಕೂಡದು. 'ಕಾವ್ಯಮಹಾಭಾರತ'ದಲ್ಲಿ ಅಶ್ವತ್ಥಾಮನಂತೆ ಅಪ್ರಯೋಜಕರಾಗಕೂಡದು, ಹೊಸ ಬೆಳಕಿಗೆ ಶ್ರೀಕಾರ ಬರೆಯಬಹುದಾದ ಇವರು ಯುಗಧರ್ಮಕ್ಕೆ ತಕ್ಕಂತೆ ಬೆಳೆಯಬೇಕು, ಎಂಬ ಕಳಕಳಿಯಿಂದ ಈ ಪ್ರಯತ್ನವನ್ನು ಮಾಡಲಾಗಿದೆ.

ಇಲ್ಲಿಯ ಎಲ್ಲ ಕವನಗಳು ಉನ್ನತ ಗುಣಮಟ್ಟದವು ಎಂದು ಹೇಳುವ ಧೈರ್ಯ ನಮಗಿಲ್ಲ. ಈ ತರುಣ ಕವನಗಳಲ್ಲಿ ಹಸಿ ಅನಿಸಿಕೆಗಳಿರಬಹುದು. ಬಿಸಿ ಭಾವಗಳ ಅಭಾವವಿರಬಹುದು. ಆದರೆ

೧೯೭೧ - ೭೨ರಲ್ಲಿ ಅಧ್ಯಯನಿಸುತ್ತಿರುವ ಈ ವಿಶ್ವವಿದ್ಯಾಲಯದ ಸ್ನಾತಕರ ಕಾವ್ಯಶಕ್ತಿಯ ಮಟ್ಟವನ್ನು, ಮುಂಬರಲಿರುವ ಹೊಸ ಬೆಳೆಯ ಸಸಿಸ್ವರೂಪವನ್ನು ಇಲ್ಲಿ ಗುರುತಿಸಿದರೆ ಸಾಕು.

- ಎಂ. ಎಂ. ಕಲಬುರ್ಗಿ

---

* ಪ್ರಥಮ ಆವೃತ್ತಿ : ವಿದ್ಯಾರ್ಥಿ ಸಂಘ, ಕರ್ನಾಟಕ ವಿ. ವಿ. ಧಾರವಾಡ

ಆಕರ : ಮಾರ್ಗ ಸಂಪುಟ–೫

■■

೩೨೭

ಬಸವ ಮಾರ್ಗ - ೧ -೨ -೩

(೧) ೧೯೮೦, (೨) ೧೯೮೧, (೩) ೧೯೮೫

"ಶ್ರೀ ಮುರಗೋಡ ಸಂಸ್ಥಾನ ಮಠಾಧೀಶರಾದ ಶ್ರೀ ನಿ. ಪ್ರ. ಸ್ವ. ಮಹಾಂತ ಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ ಶ್ರೀ ಬಸವೇಶ್ವರ ಪೀಠ" ಕನ್ನಡ ಅಧ್ಯಯನ ಪೀಠದಲ್ಲಿ ಅಧಿಷ್ಠಾನಗೊಂಡುದು ಒಂದು ಪುಣ್ಯವಿಶೇಷ. ಮುರಗೋಡ ಶ್ರೀಗಳ ಮಹಿಮೆ, ಬಸವಭಕ್ತರ ತ್ಯಾಗಗಳಲ್ಲಿ ಮೂಡಿಬಂದ ಈ ಪೀಠ, ಬಸವ ಬೆಳಕನ್ನು ಕರ್ನಾಟಕದಿಂದ ಭಾರತಕ್ಕೆ, ಭಾರತದಿಂದ ವಿಶ್ವಕ್ಕೆ ವಿಸ್ತರಿಸುವ ಧ್ಯೇಯಾದರ್ಶಗಳನ್ನು ಹೊಂದಿದೆ. ಈ ಧ್ಯೇಯಸಾಧನೆಗಾಗಿ ಸಂಶೋಧನೆ, ಸಂಪಾದನೆ, ಸಮಾಲೋಚನೆ, ಗ್ರಂಥರಚನೆ ಮತ್ತು ಭಾಷಾಂತರ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕ್ರಿಯಾ ಕಲಾಪಗಳ ಅಂಗವಾಗಿ ಪ್ರಕಟವಾಗುತ್ತಿದೆ, ಪ್ರಸ್ತುತ "ಬಸವಮಾರ್ಗ."

'ಶ್ರೀ ಬಸವೇಶ್ವರ ಪೀಠ'ದ ಆಶ್ರಯದಲ್ಲಿ ೧೯೭೮ರಿಂದ 'ಬಸವ ಜಯಂತಿ'ಯನ್ನು ಆಚರಿಸಲು ಪ್ರಾರಂಭಿಸಿದ್ದು, ಆ ಪ್ರಸಂಗದಲ್ಲಿ ಆರು ಜನ ವಿದ್ವಾಂಸರು ಮಂಡಿಸಿದ ವಿದ್ವತ್ಪೂರ್ಣ ಪ್ರಬಂಧಗಳ ಸಂಕಲನವಾಗಿದೆ, ಈ ಕೃತಿ.

ಶ್ರೀ ಬಸವೇಶ್ವರ ಪೀಠದ ಸರ್ವಕಾರ್ಯಕೋಟಿಗಳಿಗೆಲ್ಲ ಲಿಂ. ಶ್ರೀ ಮುರಗೋಡ ಮಹಾಂತಶಿವಯೋಗಿಗಳೇ ಪರಮಚೈತನ್ಯ. ಪುಣ್ಯವೇ ಹಣ್ಣಾದಂತೆ ನೂರು ವರ್ಷಗಳ ನಿಡುಬಾಳನ್ನು ಬದುಕಿ ಮುಕ್ತಿಯಂತೆ ಮುಕ್ತರಾದ ಈ ಪೂಜ್ಯ ಶ್ರೀಗಳವರ ಅಮರಚೈತನ್ಯಕ್ಕೆ ಭಕ್ತಿಪೂರ್ವಕ ಪ್ರಣಾಮಗಳು. ಈ ಪೀಠವನ್ನು ಅನುಷ್ಠಾನಕ್ಕೆ ತರುವ ಕನಸು ಕಂಡು, ನನಸಾಗುವಂತೆ ಆಶೀರ್ವದಿಸಿದ ಧಾರವಾಡ ಶ್ರೀ ಮುರುಘಾಮಠದ ಶ್ರೀ ನಿ. ಪ್ರ. ಸ್ವ. ಮಹಾಂತಸ್ವಾಮಿಗಳವರಲ್ಲಿ, 'ಶ್ರೀ ಬಸವೇಶ್ವರ ಪೀಠ'ದ ಬಗೆಗೆ ಅಪಾರ ಆಸಕ್ತಿಯಿಟ್ಟುಕೊಂಡಿರುವ ಮುರಗೋಡಮಠದ ಶ್ರೀ ನಿ.ಪ್ರ.ಸ್ವ.ನೀಲಕಂಠ ಮಹಾಸ್ವಾಮಿಗಳವರಲ್ಲಿ ತ್ರಿಕರಣಪೂರ್ವಕ ಪ್ರಣಾಮಗಳು. ಶ್ರೀ ಮಹಾಂತ ಶಿವಯೋಗೀಶ್ವರ

ಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷರಾಗಿ 'ಶ್ರೀ ಬಸವೇಶ್ವರ ಪೀಠ'ವನ್ನು ಸ್ಥಾಪಿಸುವಲ್ಲಿ ನಾಯಕಪಾತ್ರ ವಹಿಸಿದ ಶ್ರೀ ಸಿದ್ಧರಾಮಣ್ಣ ಬೆಂಬಳಗಿ ಮೊದಲಾದವರಿಗೆ ವಂದನೆಗಳು.

'ಶ್ರೀ ಬಸವೇಶ್ವರ ಪೀಠ'ದ ಮುಖಾಂತರ 'ಬಸವಜಯಂತಿ'ಯನ್ನು ಆಚರಿಸಬೇಕೆಂಬ ಸಂಕಲ್ಪವನ್ನು ಸಾಕಾರಗೊಳಿಸಿದ, ಈ ಪೀಠದ ಕಾರ್ಯಕಲಾಪಗಳು ವಿಸ್ತಾರದಿಂದ ವಿಸ್ತಾರಕ್ಕೆ ಬೆಳೆಯಬೇಕೆಂಬ ಕನಸನ್ನು ನನಸನ್ನಾಗಿಸುತ್ತಿರುವ ಮಾನ್ಯ ಕುಲಪತಿಗಳಾದ ಶ್ರೀ ಎಸ್. ಎಸ್. ಒಡೆಯರ ಅವರಿಗೆ ಗೌರವಪೂರ್ವಕ ವಂದನೆಗಳು. ಕಾರ್ಯಪ್ರಗತಿಗಾಗಿ ಆಸಕ್ತಿಯಿಂದ ಸರ್ವ ಅನುಕೂಲತೆಗಳನ್ನು ಒದಗಿಸಿಕೊಟ್ಟ ಕನ್ನಡ ಅಧ್ಯಯನ ಪೀಠದ ನಿರ್ದೇಶಕರಾದ ಡಾ. ಎಂ. ಎಸ್. ಸುಂಕಾಪುರ ಅವರಿಗೆ ನಮಸ್ಕಾರಗಳು.

ಈ ವಿಚಾರ ಸಂಕಿರಣದ, ಈ ಪುಸ್ತಕ ಪ್ರಕಟಣೆಯ ಎಲ್ಲ ಘಟ್ಟಗಳಲ್ಲಿ ನನ್ನೊಂದಿಗೆ ದುಡಿದ ಪ್ರೊ. ಬಿ. ಆರ್. ಹಿರೇಮಠ ಅವರಿಗೆ, ಬಸವಪೀಠದ ಸಿಬ್ಬಂದಿವರ್ಗದವರಾದ ಶ್ರೀ ನಾಗಭೂಷಣ ಶಾಸ್ತ್ರಿಗಳು, ಶ್ರೀ ಪಂಚಾಕ್ಷರಿ ಹಿರೇಮಠ, ಶ್ರೀ ಎಸ್. ವ್ಹಿ. ಅಯ್ಯನಗೌಡರ, ಶ್ರೀ ಬಿ. ಆರ್. ಹೂಗಾರ ಅವರಿಗೆ ಕೃತಜ್ಞತೆಗಳು.

ಈ ಉಪನ್ಯಾಸಗಳನ್ನು ನೀಡಿದುದಲ್ಲದೆ ಬರೆದುಕೊಟ್ಟು ಉಪಕರಿಸಿದ ವಿದ್ವಾಂಸರಿಗೆ, ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ, ಉಪನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೆ, ಮುದ್ರಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಜಿ. ಬಿ. ಮನ್ವಾಚಾರ್ ಮತ್ತು ಅವರ ಸಿಬ್ಬಂದಿ ವರ್ಗಕ್ಕೆ ವಂದನೆಗಳು.

---

* ಪ್ರಥಮ ಆವೃತ್ತಿ : ಪ್ರಸಾರಾಂಗ, ಕರ್ನಾಟಕ ವಿ. ವಿ., ಧಾರವಾಡ.

* ಬಸವಮಾರ್ಗ - ೧, ೨, ೩ನೆಯ ಸಂಪುಟಗಳ ಪ್ರಾಸ್ತಾವಿಕಗಳ ಅಂತ್ಯಭಾಗವನ್ನು ಹೊರತುಪಡಿಸಿ, ಮಿಕ್ಕ ಪಠ್ಯ ಒಂದೇ ರೀತಿಯಲ್ಲಿರುವುದರಿಂದ ೧ನೆಯ ಸಂಪುಟದ ಪಠ್ಯವನ್ನು ಮಾತ್ರ ಇಲ್ಲಿ ಇಟ್ಟುಕೊಳ್ಳಲಾಗಿದೆ.

ಆಕರ : ಮಾರ್ಗ ಸಂಪುಟ–೫

■■

೩.೨೪

ಬೆಳ್ಳೊಲ

೧೯೮೧

ನಾಡು - ನುಡಿಗಳಿಗಾಗಿ ದುಡಿಯುವವರನ್ನು, ದುಡಿಯುತ್ತಿರುವವರನ್ನು ನೆನೆಯುವುದು, ಗೌರವಿಸುವುದು ಸುಸಂಸ್ಕೃತ ಸಮಾಜದ ಲಕ್ಷಣ. ಕನ್ನಡಿಗರು ಈ ಕಾರ್ಯವನ್ನು ಯಥಾಮತಿ ಮಾಡುತ್ತ ಬಂದಿದ್ದು, ಇದರ ಒಂದು ಅಂಗ, ಗ್ರಂಥಸಮರ್ಪಣೆ. ಕರ್ನಾಟಕದಲ್ಲಿ ಕಳೆದ ೫೦ ವರ್ಷದ ಅವಧಿಯಲ್ಲಿ ಇಂಥ ಗ್ರಂಥಗಳು ಗಮನಾರ್ಹ ಸಂಖ್ಯೆಯಲ್ಲಿ ಹುಟ್ಟಿ, ನಮ್ಮ ಸಾಹಿತ್ಯದ ಸತ್ವವನ್ನು ಬೆಳೆಸಿವೆ. ಇವುಗಳ ಸಾಲಿನಲ್ಲಿ ನಿಲ್ಲುತ್ತದೆ, ಡಾ. ಆರ್. ಸಿ. ಹಿರೇಮಠ ಅವರಿಗೆ ಸಮರ್ಪಿಸುತ್ತಿರುವ "ಬೆಳ್ಳೊಲ".

ಡಾ. ಆರ್. ಸಿ. ಹಿರೇಮಠರು ನಮ್ಮ ನಾಡಿನ ಹಿರಿಯ ವಿದ್ವಾಂಸರು. ಏಮ್ಮುಖ ವಿದ್ವತ್ತಿನ ವಿದ್ವಾಂಸರೇ ಬೆಳೆಯುತ್ತಲಿರುವ ಇಂದಿನ ಸಂದರ್ಭದಲ್ಲಿ ಡಾ. ಹಿರೇಮಠರದು ಬಹುಮುಖಿವಿದ್ವತ್ತು. ಅನೇಕ ಭಾಷೆ, ಸಾಹಿತ್ಯ, ಶಾಸ್ತ್ರ, ಧರ್ಮ, ಸಂಸ್ಕೃತಿ ಇತ್ಯಾದಿ ಕ್ಷೇತ್ರಗಳನ್ನು ಏಕಕಾಲಕ್ಕೆ ಈಸಬಲ್ಲ ವಿರಳವಿದ್ವಾಂಸರ ಸಾಲಿನಲ್ಲಿ ಅವರದು ಅಗ್ರಸ್ಥಾನ. ಬಹುಶಃ ಅವರ ವಿದ್ವತ್ತಿನ ಬಹುಭಾಗ ಪ್ರಕಟವಾಗದೆ, ಒಳಗೇ ಉಳಿಯಿತೆಂದು ಅವರ ನಿಕಟವರ್ತಿಗಳು ಬಲ್ಲರು.

ಡಾ. ಹಿರೇಮಠರು ಪ್ರಾಧ್ಯಾಪಕರಾಗಿ ಕನ್ನಡ ಅಧ್ಯಯನಪೀಠವನ್ನು ಕಟ್ಟಿದರು ; ಸಾಹಿತಿಗಳಾಗಿ ಕನ್ನಡ ವಿದ್ವತ್‌ಲೋಕವನ್ನು ವಿಸ್ತರಿಸಿದರು. ; ಕುಲಪತಿಗಳಾಗಿ ವಿಶ್ವವಿದ್ಯಾಲಯವನ್ನು ಮುನ್ನಡೆಸಿದರು.

ಕರ್ನಾಟಕ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದ ಹೊಸದರಲ್ಲಿ ಕನ್ನಡ ವಿಭಾಗಕ್ಕೆ ಅಸ್ತಿಭಾರ ಹಾಕುವ ಬಹುದೊಡ್ಡ ಹೊಣೆಯನ್ನು ಡಾ. ಹಿರೇಮಠರು ಹೊರಬೇಕಾಗಿ ಬಂದಿತು. ವರ್ಷದಿಂದ ವರ್ಷಕ್ಕೆ ವಿಭಾಗವನ್ನು ಅವರು ಎಲ್ಲ ದಿಕ್ಕುಗಳಿಂದ ಬೆಳೆಸಿದರು. ಒಬ್ಬ ವಿದ್ಯಾರ್ಥಿಯಿಂದ ಪ್ರಾರಂಭವಾದ ವಿಭಾಗ ಕನ್ನಡ, ಭಾಷಾಶಾಸ್ತ್ರ, ಜಾನಪದ ಶಾಖೆಗಳನ್ನು ಬಿಡಿಸಿಕೊಂಡು, ಅನೇಕ ಡಿಪ್ಲೊಮಾ ಕೋರ್ಸ್‌ಗಳನ್ನು ಬಿಚ್ಚಿಕೊಂಡು ಬೆಳೆಯಿತು ; ವಿಶ್ವವಿದ್ಯಾಲಯದ ಪ್ರಥಮ ವಿಭಾಗ ಎಂಬ ಮಾತಿಗೆ ಅರ್ಥತುಂಬಿಕೊಂಡು ಎದ್ದು ನಿಂತಿತು. ಇದು ಏಕವ್ಯಕ್ತಿಪ್ರಯತ್ನವೆಂದರೆ ಅತಿಶಯೋಕ್ತಿ ಏನಲ್ಲ. ಹೀಗಾಗಿ ಈ ಭಾಗದಲ್ಲಿ ಕನ್ನಡದ ಕ್ರಮವತ್ತಾದ ಪರಂಪರೆಗೆ ಅವರು ಗಂಗೋತ್ರಿಯಾದರು ; ಶಿಷ್ಯ, ಪ್ರಶಿಷ್ಯ ಸಂತಾನಕ್ಕೆ ಆದ್ಯಪ್ರಾಧ್ಯಾಪಕರೆನಿಸಿದರು. ಕವಿಗಳಾಗಿ ಹುಟ್ಟಿ, ಸಂಶೋಧಕರಾಗಿ ಬೆಳೆದುದು ಪ್ರಾಧ್ಯಾಪಕ ಹಿರೇಮಠರ ಸಾಧನಪಥವಾಗಿದೆ. ಅವರ ಸಂಶೋಧನೆ ಅನೇಕ ಕ್ಷೇತ್ರಗಳನ್ನು ಬಳಸಿಕೊಂಡು ಪ್ರವಹಿಸಿದ್ದು, ಭಾಷಾವಿಜ್ಞಾನ, ಕನ್ನಡಸಾಹಿತ್ಯ, ಗ್ರಂಥಸಂಪಾದನೆಗಳು ಅದರ ಪ್ರಮುಖ ಪಾತ್ರಗಳು. ಕರ್ನಾಟಕದಲ್ಲಿ ಭಾಷಾವಿಜ್ಞಾನಮಾರ್ಗವನ್ನು ತೆರೆದ ಪ್ರಥಮರಲ್ಲಿ ಡಾ. ಹಿರೇಮಠರು ಒಬ್ಬರು. ಅದರ ಬೆಳವಣಿಗೆಯ ಹೊಣೆಯನ್ನು ಕೆಲವು ಕಾಲ ಅವರೊಬ್ಬರೇ ಹೊತ್ತು ನಡೆದರೆಂಬುದು ಐತಿಹಾಸಿಕ ಸತ್ಯ. ದ್ರಾವಿಡಭಾಷಾವಲಯಗಳಲ್ಲಿ ಭಾಷಾಶಾಸ್ತ್ರವನ್ನು ನಿರಂತರ ಪ್ರತಿನಿಧಿಸಿದ ಕನ್ನಡಿಗರಲ್ಲಿ ಡಾ. ಹಿರೇಮಠರು ಮೊದಲಿಗರೆಂಬುದು ಗಮನಿಸಬೇಕಾದ ಅಂಶ.

ಕನ್ನಡಸಾಹಿತ್ಯ - ಸಂಸ್ಕೃತಿ ಹಿರೇಮಠರ ವ್ಯಾಸಂಗದ ಕೇಂದ್ರಭೂಮಿ. ಕವಿವಿವೇಚನೆ, ಕಾವ್ಯಚಿಂತನೆಗಳ ಫಲವಾಗಿ ಅವರು ಕನ್ನಡಕ್ಕೆ 'ಮಹಾಕವಿ ರಾಘವಾಂಕ' ಮೊದಲಾದ ಕೃತಿಗಳನ್ನು ನೀಡಿದ್ದಾರೆ. 'ಷಟಸ್ಥಲಪ್ರಭೆ' ಅವರ ವಿಶೇಷ ಅಧ್ಯಯನದ ಫಲವೆನಿಸಿದೆ. ಅನೇಕ ಗ್ರಂಥಗಳಿಗೆ ಬರೆದ ಪ್ರಸ್ತಾವನೆಗಳಲ್ಲಿ ಅವರ ವಿದ್ವತ್ತು ಹರಡಿಕೊಂಡಿದೆ. ಈ ಎಡೆಗಳಲ್ಲಿ ಅವರ ಸಂಶೋಧನೆಯ ಆಳ - ಅಗಲಗಳನ್ನು ಗುರುತಿಸಬಹುದಾಗಿದೆ.

ಗ್ರಂಥಸಂಪಾದನೆಯ ಕ್ಷೇತ್ರದಲ್ಲಿಯಂತೂ ಶ್ರೀಯುತರದು ಯುಗಪ್ರವರ್ತಕ ಹೆಸರು. ಅನೇಕ ಕಾವ್ಯಗಳನ್ನು, ಇವುಗಳಿಗೆ ಮಿಗಿಲಾಗಿ 'ವಚನಸಾಹಿತ್ಯ'ವನ್ನು ಬೃಹತ್ತಾಗಿ ಪರಿಷ್ಕರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ವಚನಸಾಹಿತ್ಯಕ್ಕೆ ಸಂಬಂಧಿಸಿದ ಸ್ವತಂತ್ರ ಮತ್ತು ಸಂಕಲನಕೃತಿಗಳನ್ನು ಶಾಸ್ತ್ರಶುದ್ಧವಾಗಿ ಯೋಗ್ಯ ಪ್ರಸ್ತಾವನೆ, ಅನುಬಂಧಗಳೊಂದಿಗೆ ಪ್ರಕಟಿಸಿ, ಆಧುನಿಕ ಗ್ರಂಥಸಂಪಾದನೆಯ, ಅದರಲ್ಲಿಯೂ ವಚನ ಸಂಪಾದನೆಯ ಯುಗಪ್ರವರ್ತಕರಾಗಿದ್ದಾರೆ.

ಹೀಗೆ ದುಡಿದು ಕನ್ನಡ ವಿಭಾಗವನ್ನು ಅಧ್ಯಯನಪೀಠವನ್ನಾಗಿ ರೂಪಿಸುವುದರ ಮೂಲಕ ಡಾ.ಹಿರೇಮಠರ ನಿರ್ಮಾಣಶಕ್ತಿ ಪ್ರಕಟವಾಗುವಲ್ಲಿ ಅವರು ಸಿನೇಟ್, ಅಕಾಡೆಮಿಕ್ ಕೌನ್ಸಿಲ್, ಸಿಂಡಿಕೇಟ ಸಭೆಗಳ ಅನಿವಾರ್ಯ ಭಾಗವಾದರು. ಕ್ಷಿಪ್ರದಲ್ಲಿಯೇ ಈ ಶಕ್ತಿ - ಸಾಹಸಗಳ ಪರಂಪರೆ ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪಟ್ಟಗಟ್ಟಿದವು. ೫ ವರ್ಷಗಳ ಕಾಲ ತನ್ನ ಶೈಕ್ಷಣಿಕ ಮತ್ತು ಆಡಳಿತ ಕ್ಷೇತ್ರಗಳಲ್ಲಿ ತೀವ್ರ ಚಟುವಟಿಕೆ, ಶೀಘ್ರ ನಿರ್ಣಯ ಮೊದಲಾದ ಉಪಕ್ರಮಗಳನ್ನು ಮೈಗೂಡಿಸಿಕೊಂಡು ಮುನ್ನಡೆಯಿತು, ವಿಶ್ವವಿದ್ಯಾಲಯ.

ಹೀಗೆ ಬಾಲ್ಯದಿಂದಲೂ ಸ್ವಯಂನಿರ್ಮಿತ ವ್ಯಕ್ತಿತ್ವದಿಂದ ಬೆಳೆದು, ಪರಿಸರವನ್ನು ಬೆಳಗಿಸಿದ ಡಾ. ಹಿರೇಮಠ ಅವರನ್ನು ೫೦ನೆಯ ವಯಸ್ಸಿನಲ್ಲಿ ಗೌರವಿಸಿ ಕನ್ನಡಿಗರು ತಮ್ಮ ಕೃತಜ್ಞತೆಗಳನ್ನು ಅರ್ಪಿಸಿದರು. ಆಮೇಲೆಯೂ ಸತ್ಕರಿಸಿ ಗೌರವ ಸಲ್ಲಿಸುತ್ತ ಬಂದರು. ತರುವಾಯ ಡಾ. ಹಿರೇಮಠ ಅವರಿಗೆ ೬೦ ತುಂಬುವಲ್ಲಿ ಇಂಥದೇ ಗೌರವ ಸಲ್ಲಿಸಲು ಅವರ ಸ್ನೇಹಿತರು, ಹಿತೈಷಿಗಳು, ವಿದ್ಯಾರ್ಥಿಗಳು ಬಯಸಿದುದರ ಕಾರಣವಾಗಿ ೧೯೭೭ರಲ್ಲಿ "ಡಾ. ಆರ್. ಸಿ. ಹಿರೇಮಠ ಸನ್ಮಾನ ಸಮಿತಿ" ಅಸ್ತಿತ್ವಕ್ಕೆ ಬಂದಿತು. ಸನ್ಮಾನ ಸಮಾರಂಭ, ಗ್ರಂಥಸಮರ್ಪಣೆ, ದತ್ತಿ ಅನುಷ್ಠಾನ ಕಾರ್ಯಗಳನ್ನು ಯೋಜಿಸಿಕೊಳ್ಳಲಾಯಿತು. ಈ ವ್ಯಾಪಕವಾದ ಕಾರ್ಯಕ್ಕೆ ಅನೇಕರು ಧನಸಹಾಯ ಮಾಡಿದರು, ಲೇಖನ ಒದಗಿಸಿದರು. ಈ ಲೇಖನಗಳ ಗ್ರಂಥರೂಪ 'ಬೆಳ್ವೊಲ'.

ನಮ್ಮ ನಾಡಿನ ಇತಿಹಾಸದುದ್ದಕ್ಕೂ ಭೂಸಂಪತ್ತು, ಸಾಂಸ್ಕೃತಿಕಸಂಪತ್ತುಗಳಿಗೆ ಹೆಸರಾಗಿದೆ ಬೆಳ್ವೊಲನಾಡು. ಇದರ ಸಾಂಸ್ಕೃತಿಕಸಂಪತ್ತಿನ ಭಾಗವಾಗಿ ಪಂಪ, ದುರ್ಗಸಿಂಹ, ಕುಮಾರವ್ಯಾಸ, ಚಾಮರಸರಂಥ ಮಹಾಕವಿಗಳು ಇಲ್ಲಿ ಹುಟ್ಟಿಬಂದಿದ್ದಾರೆ. ಬೆಳ್ವೊಲದಲ್ಲಿ ಹುಟ್ಟಿದ ಡಾ. ಹಿರೇಮಠರು ಈ ಕವಿಗಳ ವಿದ್ವತ್ ಪರಂಪರೆಯನ್ನು ಪ್ರತಿನಿಧಿಸುತ್ತಾರೆ. ಹೀಗಾಗಿ ಡಾ. ಹಿರೇಮಠ ಅವರಿಗೆ ಅರ್ಪಿಸಲಿರುವ ಈ ಗ್ರಂಥಕ್ಕೆ 'ಬೆಳ್ವೊಲ'ವೆಂದೇ ನಾಮಕರಣ ಮಾಡಲಾಗಿದೆ. ಲೇಖನಗಳನ್ನು ಬರಮಾಡಿಕೊಳ್ಳುವ, ಆಯ್ಕೆ ಮಾಡುವ, ಪರಿಷ್ಕರಿಸುವ, ಪ್ರಕಟಿಸುವ ಈ ಕ್ರಿಯಾಘಟ್ಟಗಳಲ್ಲಿ ೩ ವರ್ಷಗಳೇ ಸರಿದು, ಈಗ 'ಬೆಳ್ವೊಲ' ಬೆಳಕುಕಾಣುತ್ತಲಿದೆ. ಡಾ. ಹಿರೇಮಠರ ಮೇಲಿನ ಪ್ರೀತಿ ವಿಶ್ವಾಸ ಕಾರಣವಾಗಿ ನಮ್ಮೊಂದಿಗೆ ಸಹಕರಿಸಿದ 'ಸನ್ಮಾನ ಸಮಿತಿಯ' ಸದಸ್ಯರಿಗೆ, ಧನಸಹಾಯ ಮಾಡಿದ, ಲೇಖನಗಳನ್ನು ಒದಗಿಸಿದ ಎಲ್ಲ ಮಹನೀಯರಿಗೆ ನಮ್ಮ ಕೃತಜ್ಞತೆಗಳು.

ಇಂಥ ಒಂದು ಗ್ರಂಥ ಅಚ್ಚಿನ ಮನೆಯ ಮೂಲಕ ಹೊರಬರುವಲ್ಲಿ ಅನೇಕ ಹಸ್ತಗಳ ನೆರವು ಅಗತ್ಯ. ಈ ಅನೇಕ ಹಸ್ತಗಳನ್ನು ಏಕೀಭವಿಸಿಕೊಂಡು ನೆರವಾದ ಪ್ರೊ. ಬಿ. ಆರ್. ಹಿರೇಮಠ ಅವರಿಗೂ ನಾವು ಕೊಡುವ ಎಲ್ಲ ತೊಂದರೆಗಳನ್ನು ಸಹಿಸಿಕೊಂಡು ಸುಂದರವಾಗಿ ಮುದ್ರಿಸಿದ ಶ್ರೀ ರವಿ ಆಕಳವಾಡಿ ಅವರಿಗೂ ನಮ್ಮ ವಂದನೆಗಳು.

---

* ಪ್ರಥಮ ಆವೃತ್ತಿ : ಆರ್. ಸಿ. ಹಿರೇಮಠ ಸನ್ಮಾನ ಸಮಿತಿ, ಧಾರವಾಡ.

ಆಕರ : ಮಾರ್ಗ ಸಂಪುಟ–೫

■■

ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ ೧, ೬, ೭, ೮, ೯, ೧೦

೧೯೮೮

೧೯೬೨, ವಿಶ್ವವಿದ್ಯಾಲಯ ಧನಸಹಾಯ ಆಯೋಗದ ನೆರವಿನಿಂದ ಕನ್ನಡ ವಿಭಾಗದಲ್ಲಿ 'ಸಮಗ್ರ ವಚನವಾಙ್ಮಯ ಸಂಶೋಧನ, ಸಂಸ್ಕರಣ ಹಾಗೂ ಪ್ರಕಟಣ ಯೋಜನೆ" ಅಸ್ತಿತ್ವಕ್ಕೆ ಬಂದ ಸಮಯ. ಈ ಯೋಜನೆಯ ಯಶಸ್ವಿಗಾಗಿ ಕ್ಷೇತ್ರ ಕಾರ್ಯಕರ್ತರು, ಸಹಾಯಕ ಸಂಶೋಧಕರು, ಪ್ರಾಧ್ಯಾಪಕರು ಅನೇಕ ಬಗೆಯಲ್ಲಿ ದುಡಿದ ಕಾಲವದು. ಈ ದುಡಿಮೆಯ ಒಂದು ಸಾಧನೆ, 'ಪ್ರಾಚೀನ ಹಸ್ತಪ್ರತಿ ಭಾಂಡಾರ'.

ಹಸ್ತಪ್ರತಿಗಳು ನಮ್ಮ ಸಂಸ್ಕೃತಿಯ ನಿಧಿಯೂ ಹೌದು, ಪ್ರತಿನಿಧಿಯೂ ಹೌದು. ರಾಜ್ಯದ ಒಳಹೊರಗಿನ ಅನೇಕ ಮಠಮಂದಿರಗಳಲ್ಲಿ ಮತ್ತು ಅಭ್ಯಾಸಪ್ರಿಯ ವ್ಯಕ್ತಿಗಳ ವಶದಲ್ಲಿರುವ ಇವು ಇಂದು ವಾಚನದೂರ ವಸ್ತುಗಳಾಗಿ ಉಪೇಕ್ಷೆಗೆ ಗುರಿಯಾಗಿವೆ. ಕೆಲವೆಡೆ, ದೇವರ ಜಗುಲಿಯ ಮೇಲೆ ಪೂಜಾವಸ್ತುಗಳಾಗಿ ನೀರು - ಗಂಧಗಳಿಂದ ಕೊಳೆಯುತ್ತಲಿವೆ. ಇವುಗಳ ರಕ್ಷಣೆ ನಮ್ಮ ಪರಮಕರ್ತವ್ಯ. ಕನ್ನಡ ವಿಭಾಗ ಈ ಕರ್ತವ್ಯವನ್ನು ಕೈಗೆತ್ತಿಕೊಂಡು, ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಕಾರ್ಯವನ್ನು ಪ್ರಾರಂಭಿಸಿತು. ದಿನಗತಿಸಿದಂತೆ ಈ ವಿಭಾಗದಲ್ಲಿ ಅಸ್ತಿತ್ವಕ್ಕೆ ಬಂದ ಜೈನ - ವೀರಶೈವ - ಬ್ರಾಹ್ಮಣ ಸಾಹಿತ್ಯಶಾಖೆಗಳು ರಾಜ್ಯದ ಒಳಹೊರಗೆ ನಡೆಸಿದ ಪರಿವೀಕ್ಷಣೆಯಿಂದಾಗಿ ಇದು ಇನ್ನೂ ಬೆಳೆದು, ಸುಮಾರು ನಾಲ್ಕು ಸಾವಿರ ಹಸ್ತಪ್ರತಿಕಟ್ಟುಗಳ ಶ್ರೀಮಂತ ಭಾಂಡಾರವಾಗಿ, ಅಧ್ಯಯನಪೀಠದ ಅಪೂರ್ವ ಆಸ್ತಿಯಾಗಿ ವಿಸ್ತಾರಗೊಂಡಿತು.

ಸಾಹಿತ್ಯ, ಶಾಸ್ತ್ರ, ತತ್ವ ಇತ್ಯಾದಿಗಳಿಗೆ ಸಂಬಂಧಪಟ್ಟ ಈ ಹಸ್ತಪ್ರತಿಗಳ ವಿಷಯವೈವಿಧ್ಯ ಅನೇಕ ಅಭ್ಯಾಸಿಗಳನ್ನು ತನ್ನತ್ತ ಆಕರ್ಷಿಸಿದೆ. ಹೀಗಾಗಿ ಇವುಗಳನ್ನು ಆಧರಿಸಿ ಕನ್ನಡ ಅಧ್ಯಯನಪೀಠ ಈವರೆಗೆ ನೂರಾರು ಗ್ರಂಥಗಳನ್ನು ಸಂಪಾದಿಸಿ, ಪ್ರಕಟಿಸಿದೆ. ರಾಜ್ಯದ ಒಳಹೊರಗಿನ ಅನೇಕ ಸಂಸ್ಥೆಗಳು, ವಿದ್ವಾಂಸರು ಈ ಭಾಂಡಾರದ ಪ್ರಯೋಜನ ಪಡೆದಿದ್ದಾರೆ.

ಹೀಗೆ ತುಂಬ ಉಪಯುಕ್ತವಾಗಿರುವ ಈ ಭಾಂಡಾರದ ಗ್ರಂಥಸಂಪತ್ತಿಯನ್ನು ಬಿಡಿಸಿ ನೋಡುವುದು ಅತ್ಯವಶ್ಯವೆಂಬುದನ್ನು ಪ್ರಾರಂಭದಲ್ಲಿಯೇ ಅಂದಿನ ಮುಖ್ಯಸ್ಥರು ಮನಗಂಡರು. ಹೀಗಾಗಿ ಈ ಮೊದಲು ಪ್ರಕಟವಾಗಿದ್ದ ಸೂಚಿಗಳ ಬಲದಿಂದ ತುಂಬ ವೈಜ್ಞಾನಿಕವೂ, ಪರಿಪೂರ್ಣವೂ ಎನಿಸಿದ ಸೂಚಿಯ ವಿನ್ಯಾಸವನ್ನು ಅಂದೇ ರೂಪಿಸಲಾಯಿತು. ಸೂಕ್ತ ಸಿಬ್ಬಂದಿವರ್ಗದ ಮೂಲಕ ಹಸ್ತಪ್ರತಿಸೂಚಿ ರಚನಾಕಾರ್ಯವನ್ನೂ ಕೈಕೊಳ್ಳಲಾಯಿತು. ಆದರೆ ಈ ಕೆಲಸ ನಿರೀಕ್ಷಿಸಿದಷ್ಟು ಫಲಪ್ರದವಾಗಿ ಮುಂದುವರಿಯಲಿಲ್ಲ. ಈ ಮಧ್ಯ ಸಹಾಯಕ ಸಂಶೋಧಕರ ವ್ಯವಸ್ಥೆಯಲ್ಲಾದ ವ್ಯತ್ಯಾಸ, ಮುಖ್ಯಸ್ಥರ ಬದಲಾವಣೆ - ಇತ್ಯಾದಿ ಘಟನೆಗಳೆಲ್ಲ ಒಂದರ ಮೇಲೊಂದು ವೇಗವಾಗಿ ಜರುಗಿ, ಸೂಚಿ ಕೆಲಸದ ವೇಗ ಕುಂಠಿತವಾಯಿತು. ಇಷ್ಟು ವರುಷಗಳ ದುಡಿತ ವ್ಯರ್ಥ ಹೋಗಬಾರದೆಂಬ ಉದ್ದೇಶದಿಂದ ಇತ್ತೀಚೆಗೆ ೧೯೮೫ರಲ್ಲಿ ಈ ಯೋಜನೆಗೆ ಒಂದು ಯೋಗ್ಯ ಸ್ವರೂಪವನ್ನು, ನಿಯತಗತಿಯನ್ನು, ನಿರ್ದಿಷ್ಟ ಗುರಿಯನ್ನು

ಒದಗಿಸಲಾಯಿತು. ಇದರ ಫಲವಾಗಿ ಒಂದೊಂದು ಸಂಪುಟಕ್ಕೆ ನೂರು ಹಸ್ತಪ್ರತಿಕಟ್ಟುಗಳಂತೆ ಸಾವಿರ ಹಸ್ತಪ್ರತಿಕಟ್ಟುಗಳ ಮೊದಲಿನ ಹತ್ತು ಸಂಪುಟಗಳು ೧೯೮೮ರಲ್ಲಿ ಸಿದ್ಧವಾದವು.

ಸೂಚಿ ರಚನೆ ಸಂತೋಷದ ಕೆಲಸವಲ್ಲ ; ಬೇಸರದ, ಶ್ರಮದ ಕೆಲಸ. ಅಸ್ಪಷ್ಟವಾದ ಅಕ್ಷರಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಓದುವುದು, ಅಸ್ತವ್ಯಸ್ತ ಗರಿಗಳನ್ನು ಹೊಂದಿಸುವುದು, ಹಸ್ತಪ್ರತಿಯಲ್ಲಿಯ ವಿಷಯವನ್ನು ಗುರುತಿಸುವುದು, ಮೇಲಾಗಿ ಯಾಂತ್ರಿಕವಾಗಿ ಸೂಚಿಯ ವಿವರಗಳನ್ನು ಸಂಗ್ರಹಿಸುವುದು - ಇಷ್ಟೆಲ್ಲ ಶ್ರಮಗಳ ನಡುವೆ ಸಹನೆ ಕಳೆದುಕೊಳ್ಳದಿದ್ದರೆ ಮಾತ್ರ ಈ ಕಾರ್ಯ ಯಶಸ್ಸು ಪಡೆಯುತ್ತದೆ. ಅಧ್ಯಯನಪೀಠದಲ್ಲಿ ಈ ಸೂಚಿ ಇಂದಿನ ರೂಪಕ್ಕೆ ಬರಲು ಈ ಹಿಂದೆ, ಪಂಚಾಕ್ಷರಿ ಹಿರೇಮಠ, ನಿಜಲಿಂಗಮ್ಮ ಕೊಪ್ಪಳ, ಜಯಪ್ರಕಾಶ ಕಟ್ಟೀಮನಿ, ಕೆ. ಪಿ. ಎಸ್. ಆರಾಧ್ಯ, ಎಸ್. ಎಸ್. ಭೂಸರಡ್ಡಿ, ಬಿ. ಪಿ. ಪಾಟೀಲ, ಎಸ್. ವಿ. ಅಯ್ಯನಗೌಡರ, ಲಲಿತಾ ಗೌಳಿ, ಬಿ. ಬಿ. ಬಿರಾದಾರ, ಬಿ. ಡಿ. ಬಿರಾದಾರ, ಎಸ್. ಎಲ್. ಸಣ್ಣೆಲ್ಲಪ್ಪನವರ, ಮಧು ವೆಂಕರೆಡ್ಡಿ, ಸುಲೋಚನಾ ಮಟ್ಟಿ, ಶಕುಂತಲಾ ಪಾಟೀಲ ಮುಂತಾದವರು ಅನೇಕ ಬಗೆಗಳಲ್ಲಿ ದುಡಿದಿದ್ದಾರೆ.

ಹಸ್ತಪ್ರತಿಯಿಂದ ಕಷ್ಟಪಟ್ಟು ಎತ್ತಿ ಬರೆದ ಬಿಡಿ ವಿವರಗಳು ಸೂಚಿಕಾರ್ಯವನ್ನು ಪರಿಪೂರ್ಣಗೊಳಿಸಲಾರವು. ಈ ವಿವರಗಳಲ್ಲಿ ಎಡೆವಾಯ್ದು ಬಂದ ದೋಷಗಳನ್ನು ದೂರಗೊಳಿಸಿ, ಏಕರೂಪತೆಯನ್ನು ಸಾಧಿಸಿ, ಶಾಸ್ತ್ರಕ್ರಮದಲ್ಲಿ ಸಂಯೋಜಿಸಿ 'ಸೂಚಿ - ಶಿಲ್ಪ' ಕೊಡುವುದೂ ಅಷ್ಟೇ ಕಷ್ಟದ ಕೆಲಸ ; ಬೇಸರದ ಕೆಲಸ. ಕನ್ನಡ ಅಧ್ಯಯನಪೀಠದ ಅಧ್ಯಾಪಕರಾದ ಡಾ. ವಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ ಅವರು ಹಗಲಿರುಳೂ ದುಡಿದು ನಿರ್ದಿಷ್ಟ ಅವಧಿಯಲ್ಲಿ ಈ ಹೊಣೆಯನ್ನು ಪೂರೈಸಿದ್ದಾರೆ. ಈ ದಿನಗಳಲ್ಲಿ ಈ ಶ್ರದ್ಧಾವಂತ ಸಂಪಾದಕರು ದುಡಿದ - ದಣಿದ ರೀತಿಗಳು ನನಗೆ ಏಕಕಾಲಕ್ಕೆ ನೋವನ್ನೂ, ಸಂತೋಷವನ್ನೂ ಉಂಟುಮಾಡಿದೆ.

ಹಸ್ತಪ್ರತಿ ಸೂಚಿ ಸಿದ್ಧವಾಗುವುದರ ಸಲುವಾಗಿ ಈ ಹಿಂದೆ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಆರ್. ಸಿ. ಹಿರೇಮಠ, ಡಾ. ಎಂ. ಎಸ್. ಸುಂಕಾಪುರ, ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ ಅವರು ಆಯಾ ಕಾಲದಲ್ಲಿ ಮಾರ್ಗದರ್ಶನ ಮಾಡುತ್ತ ಬಂದಿದ್ದಾರೆ.

ಪುಸ್ತಕ ಪ್ರಿಯರಾದ ಕುಲಪತಿ ಡಾ. ಎಸ್. ರಾಮೇಗೌಡ ಅವರು ಮನಸ್ಸು ಮಾಡಿರದಿದ್ದರೆ ಈ ಸಂಪುಟಗಳು ಬೆಳಕು ಕಾಣುತ್ತಿರಲಿಲ್ಲ. ಪ್ರಸಾರಾಂಗದ ಉತ್ಸಾಹಿ ನಿರ್ದೇಶಕರಾದ ಶ್ರೀ ಸದಾನಂದ ಕನವಳ್ಳಿ ಅವರ ನೆರವನ್ನು ಮರೆಯುವಂತಿಲ್ಲ.

ಹಸ್ತಪ್ರತಿ ವರ್ಗೀಕರಣ, ಸೂಚಿರಚನೆಗಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಮತ್ತು ಕೇಂದ್ರ ಶಿಕ್ಷಣ - ಸಂಸ್ಕೃತಿ ಇಲಾಖೆಗಳು ಸಹಾಯಧನ ನೀಡಿವೆ. ನಮ್ಮ ವಿಶ್ವವಿದ್ಯಾಲಯ ಈ ಯೋಜನೆಯನ್ನು ನಿರಂತರ ಪೋಷಿಸುತ್ತ ಬಂದಿದೆ.

ಈ ಎಲ್ಲ ವಿದ್ವಾಂಸರಿಗೆ, ಸಂಸ್ಥೆಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ, ಇಪ್ಪತ್ತು ವರುಷಗಳ ಕನಸು ನನಸಾದ ಸಂತೋಷದೊಂದಿಗೆ ಈ ಸಂಪುಟಗಳನ್ನು ಕನ್ನಡಲೋಕಕ್ಕೆ ಅರ್ಪಿಸುತ್ತೇನೆ.

---

* ಪ್ರಥಮ ಆವೃತ್ತಿ : ಪ್ರಸಾರಾಂಗ, ಕರ್ನಾಟಕ ವಿ. ವಿ., ಧಾರವಾಡ. ಈ ಸೂಚಿ ಮಾಲೆಯ ೧, ೬, ೭, ೮, ೯, ೧೦ನೆಯ ಸಂಪುಟಗಳಿಗೆ ಬರೆದ ಅರಿಕೆಯಿದು.

ಆಕರ : ಮಾರ್ಗ ಸಂಪುಟ–೫

ಜನಪದ ಸಾಹಿತ್ಯ ದರ್ಶನ - ೧೧

೧೯೮೭

ಪ್ರಜಾಸತ್ತಾತ್ಮಕ ಯುಗದಲ್ಲಿ ಶ್ರೀಸಾಮಾನ್ಯನೇ ಸಮಾಜದ ಮೂಲ ಘಟಕ. ಹಿಂದೆ ರಾಜ - ಮಹಾರಾಜರ, ಚಕ್ರವರ್ತಿಗಳ ವಸ್ತುವೇ ಸಾಹಿತ್ಯ, ಸಂಸ್ಕೃತಿಗಳ ಕೇಂದ್ರಬಿಂದುವಾಗಿದ್ದರೆ, ಇಂದು ಶ್ರೀಸಾಮಾನ್ಯನೇ ಅದರ ಅಧಿದೈವನಾಗಿದ್ದಾನೆ. ಹೀಗಾಗಿ ಪ್ರಪಂಚದಾದ್ಯಂತ ನಡೆದ ಉತ್ಕ್ರಾಂತಿಯ ಸಮುದ್ರಮಥನದಿಂದ ಹೊರಬಂದ ಆತನಿಗೆ ಸಂಬಂಧಪಟ್ಟ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಭ್ಯಾಸಕ್ಕೆ ವಿಶ್ವವಿದ್ಯಾಲಯಗಳಲ್ಲಿ ಗಣ್ಯಸ್ಥಾನ ದೊರೆತಿದೆ ; ದೊರೆಯುತ್ತಿದೆ.

ಕನ್ನಡ ಸಾಹಿತ್ಯ, ಸಂಸ್ಕೃತಿಗಳ ವಿವಿಧ ಮುಖಗಳ ದರ್ಶನ - ಪ್ರದರ್ಶನಗಳ ಅಭ್ಯಾಸ, ಅಭಿವೃದ್ಧಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾರಂಭವಾದ ಕರ್ನಾಟಕ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ ಪೀಠ' ಶ್ರೀಸಾಮಾನ್ಯನ ಬದುಕಿನ ಸಂವೇದನೆಗಳನ್ನು ಅರ್ಥಮಾಡಿಕೊಂಡಿದೆ. ಹಲವು ವರ್ಷಗಳ ಹಿಂದೆ ಅದು ಆರಂಭಿಸಿದ 'ಜಾನಪದ ಎಂ. ಎ.' ಅಭ್ಯಾಸ ಕ್ರಮವೇ ಇದಕ್ಕೆ ನಿದರ್ಶನ. ಆ ಪೂರ್ವದಲ್ಲಿಯೇ ಕನ್ನಡ ಎಂ. ಎ. ಅಭ್ಯಾಸ ಕ್ರಮದಲ್ಲಿ ಜಾನಪದಕ್ಕೆ ವಿಶೇಷಾಧ್ಯಯನದ ಪ್ರಾಶಸ್ತ್ಯವನ್ನು ಕಲ್ಪಿಸಿ ಕೊಡಲಾಗಿದ್ದಿತು. ಅಂದಿನಿಂದ ಜಾನಪದಕ್ಕೆ ಸಂಬಂಧಪಟ್ಟ ಸಮ್ಮೇಲನ, ಗ್ರಂಥಪ್ರಕಟನೆ, ವಸ್ತು ಸಂಗ್ರಹ ಮೊದಲಾದ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ.

೧೯೭೩ನೆಯ ಜನೆವರಿ ತಿಂಗಳು ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಒಂದು ಸಂಸ್ಮರಣೀಯ ದಿನ. ಅಖಿಲ ಕರ್ನಾಟಕ ಮಟ್ಟದ ಜಾನಪದ ಸಮ್ಮೇಲನವನ್ನು ಪ್ರತಿವರ್ಷ ನಡೆಸಬೇಕೆಂಬ ಕನ್ನಡ ಅಧ್ಯಯನಪೀಠದ ಧೋರಣೆಯನ್ನು ಕರ್ನಾಟಕ ವಿಶ್ವವಿದ್ಯಾಲಯ ಒಪ್ಪಿಕೊಂಡು, ಪ್ರಥಮ ಸಮ್ಮೇಲನ ಧಾರವಾಡದಲ್ಲಿಯೇ ಜರುಗುವ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಅಂದಿನಿಂದ ಈ ಸಮ್ಮೇಲನ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಯಶಸ್ವಿಯಾಗಿ ಜರುಗುತ್ತ ಬಂದಿದೆ. ಈ ಮಾಲಿಕೆಯಲ್ಲಿ ೧೧ನೆಯ ಸಮ್ಮೇಲನ ೮, ೯ ಫೆಬ್ರುವರಿ ೧೯೮೮ರಂದು ಸವದತ್ತಿಯಲ್ಲಿ ಜರುಗಿತು.

ಈವರೆಗಿನ ಸಮ್ಮೇಲನಗಳು ಸ್ಥಳೀಯ ಕಾಲೇಜುಗಳ ಆಶ್ರಯದಲ್ಲಿ ಜರುಗುತ್ತಲಿದ್ದವು. ಹೀಗಾಗಿ ಅವುಗಳಿಗೆ ಒಂದು ಪರಿಮಿತಿಗೆ ಪ್ರಾಪ್ತವಾಗಿದ್ದಿತು. ಇದರಿಂದ ಬಿಡಿಸಿಕೊಂಡು ಸ್ಥಳೀಯ ನಾಗರಿಕರ ಸ್ವಾಗತ ಸಮಿತಿಯ ಆಶ್ರಯದಲ್ಲಿ ಜರುಗಿದುದು ಈ ಸಮ್ಮೇಲನದ ಒಂದು ವೈಶಿಷ್ಟ್ಯ. ಶ್ರೀ. ಸಿ. ಎಂ. ಮಾಮನಿ (ಅಧ್ಯಕ್ಷ), ಶ್ರೀ ಡಿ. ಎಸ್. ಜಕಾತಿ (ಕಾರ್ಯಾಧ್ಯಕ್ಷ), ಶ್ರೀ. ಜಿ. ಬಿ. ಹಂಪಣ್ಣವರ (ಕೋಶಾಧ್ಯಕ್ಷ), ಶ್ರೀ ಐ. ಎಂ. ಪಟ್ಟಣಶೆಟ್ಟಿ (ಕಾರ್ಯದರ್ಶಿ) ಇವರ ನೇತೃತ್ವದಲ್ಲಿ ಶ್ರೀಯುತರಾದ ಎಲ್. ಬಿ. ಶಿಗ್ಲಿ, ಎಸ್. ಡಿ. ಹುನಗುಂದ, ವಾಯ್. ಎಚ್. ಹಳ್ಳಿಕೇರಿ, ಜಿ. ಎಸ್. ಹಂಪಣ್ಣವರ, ಎನ್. ಸಿ. ಬೆಂಡಿಗೇರಿ, ಪಿ. ಬಿ. ಪಾಟೀಲ, ಎಸ್. ಎಸ್. ತುಪ್ಪದ, ಎಂ. ಎನ್. ಹನಸಿ, ಡಾ. (ಶ್ರೀಮತಿ) ನರಗುಂದ, ಬಿ. ಬಿ.

ಬೆಳ್ಳಿಕಟ್ಟಿ, ಎಸ್. ಎನ್. ಕೌಜಲಗಿ, ಎಸ್. ಜಿ. ಪಾಟೀಲ, ಬಿ. ಎಚ್. ಪಾಟೀಲ, ಎಸ್. ಎಸ್. ಪಾಟೀಲ, ಜಿ. ಎಸ್. ಸಿಂಧೆ, ಎಂ. ಎನ್. ಶಿರಸಂಗಿ ಸದಸ್ಯರಾಗಿ ದುಡಿದು ಈ ಸಮ್ಮೇಲನದ ಯಶಸ್ಸಿಗೆ ಕಾರಣರಾದರು.

ಸವದತ್ತಿ ನಮ್ಮ ರಾಜ್ಯದ ಒಂದು ವಿಶಿಷ್ಟ ಊರು. ಎಲ್ಲಮ್ಮನ ದೇವಾಲಯ - ಲಕ್ಷೋಪಲಕ್ಷ ಭಕ್ತಸಮೂಹ - ಜನಪದ ಆಚರಣೆ ಇತ್ಯಾದಿ ದೃಷ್ಟಿಯಿಂದ ಇದು ಜಾನಪದ ಅಭ್ಯಾಸಕ್ಕೆ ಒಂದು ಅಮೂಲ್ಯ ಗಣಿ. ಆದುದರಿಂದ ಈ ಸಮ್ಮೇಲನದ ಅಂಗವಾಗಿ, ಪ್ರಾಣವಾಗಿ "ಉಧೋ ಹೇಳುವ ಎಲ್ಲಮ್ಮ" ಹೆಸರಿನ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿದ್ದಿತು. ಹೀಗೆ ಸ್ಥಳ ಮತ್ತು ವಿಷಯ ಹೊಂದಿಕೆಯಿಂದಾಗಿ ಈ ವಿಚಾರ ಸಂಕಿರಣ ಏಕಕಾಲಕ್ಕೆ ತಾತ್ವಿಕವೂ ಅನ್ವಯಿಕವೂ ಆಗಿ ಪರಿಣಮಿಸಿತು. ಎಲ್ಲಮ್ಮನ ಪರಿಸರ, ಇತಿಹಾಸ, ಐತಿಹ್ಯ, ಪೂಜೆ, ಜಾತ್ರೆ, ಆಚರಣೆ, ಜೋಗತಿ ಸಂಪ್ರದಾಯ ಇತ್ಯಾದಿ ವಿಷಯಗಳನ್ನು ಕುರಿತ ಪ್ರಬಂಧಗಳು ಪ್ರಥಮಸಲ ಈ ಮಾತೃದೇವತೆಯನ್ನು ಸಮಗ್ರವಾಗಿ ಪರಿಚಯಿಸಿದವು. ಈ ಸಮ್ಮೇಲನದ ಇನ್ನೊಂದು ವೈಶಿಷ್ಟ್ಯವೆಂದರೆ ಖ್ಯಾತ ಅರ್ಥಶಾಸ್ತ್ರಜ್ಞರಾದ ಕುಲಪತಿ ಡಾ. ಡಿ. ಎಂ. ನಂಜುಂಡಪ್ಪ ಅವರು ಉದ್ಘಾಟಿಸಿದುದು, ಮೈಸೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ವರಿಷ್ಠರಾದ ಡಾ. (ಶ್ರೀಮತಿ) ಸಿ. ಪಾರ್ವತಮ್ಮ ಅವರು ಸರ್ವಾಧ್ಯಕ್ಷತೆ ವಹಿಸಿದುದು. ಸುಪ್ರಸಿದ್ಧ ಸಮಾಜಶಾಸ್ತ್ರಜ್ಞರಾದ ಶ್ರೀಮತಿ ಪಾರ್ವತಮ್ಮ ಅವರ ಅಧ್ಯಕ್ಷತೆಯಿಂದಾಗಿ ಈ ವಿಚಾರ ಸಂಕಿರಣಕ್ಕೆ, ಈ ಸಮ್ಮೇಲನಕ್ಕೆ ಸಾಮಾಜಿಕ ಅಧ್ಯಯನದ ಆಯಾಮವೂ ಪ್ರಾಪ್ತವಾಯಿತು. ಪ್ರತಿದಿನ ಸಂಜೆ ಜರುಗಿದ ರಂಗಪ್ರದರ್ಶನವು ಜಾನಪದ ಕಲೆಗಳನ್ನು ಚಾಕ್ಷುಷಗೊಳಿಸಿತು. ಹೀಗೆ ವಿಚಾರ ಸಂಕಿರಣ, ರಂಗಪ್ರದರ್ಶನಗಳಿಂದ ಈ ಸಮ್ಮೇಲನ ಎರಡು ದಿನಗಳ ವರೆಗೆ ಅರ್ಥವತ್ತಾಗಿ ಜರುಗಿತು.

ಕನ್ನಡ ಅಧ್ಯಯನಪೀಠ ನಡೆಸುತ್ತ ಬಂದ ಸಮ್ಮೇಳನಗಳಲ್ಲಿ ಓದಿದ ಪ್ರಬಂಧಗಳನ್ನು 'ಜಾನಪದ ಸಾಹಿತ್ಯ ದರ್ಶನ' ಹೆಸರಿನಿಂದ ನಾವು ಪ್ರಕಟಿಸುತ್ತ ಬರುತ್ತಲಿರುವುದು ಒಂದು ವಿಶೇಷ. ಅಖಿಲ ಕರ್ನಾಟಕದಲ್ಲಿಯೇ ಈ ಗ್ರಂಥಗಳು ಜಾನಪದ ಅಭ್ಯಾಸಿಗಳಿಗೆ ಅಪೂರ್ವ ಆಕರ ಸಾಮಗ್ರಿಯಾಗಿವೆ. ಈ ಗ್ರಂಥಮಾಲಿಕೆಯಲ್ಲಿ ಪ್ರಕಟವಾಗುತ್ತಲಿದೆ, ಸವದತ್ತಿಯಲ್ಲಿ ಜರುಗಿದ ಸಮ್ಮೇಲನದಲ್ಲಿ ಓದಲಾದ ಪ್ರಬಂಧಗಳ ಸಂಕಲನವಾದ ಈ ಗ್ರಂಥ. ಈ ಗ್ರಂಥಕ್ಕೆ ಪ್ರಬಂಧಗಳನ್ನು ಪೂರೈಸಿದ ವಿದ್ವಾಂಸರಿಗೂ ಇದು ಪ್ರಕಟವಾಗುವಲ್ಲಿ ಅನನ್ಯ ಆಸಕ್ತಿ ವಹಿಸಿದ ಸಮ್ಮೇಲನದ ಕಾರ್ಯದರ್ಶಿ ವಿಲ್ಯಂ ಮಾಡ್ತ ಅವರಿಗೂ, ಪ್ರಸಾರಾಂಗದ ಅಧಿಕಾರಿಗಳಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಕರ್ನಾಟಕ ವಿಶ್ವವಿದ್ಯಾಲಯ	**ಡಾ. ಎಂ. ಎಂ. ಕಲಬುರ್ಗಿ**
ಧಾರವಾಡ	ಮುಖ್ಯಸ್ಥರು
೮. ೯. ಫೆಬ್ರುವರಿ ೧೯೮೪	ಕನ್ನಡ ಅಧ್ಯಯನಪೀಠ

* ಪ್ರಥಮ ಆವೃತ್ತಿ : ಪ್ರಸಾರಾಂಗ, ಕರ್ನಾಟಕ ವಿ. ವಿ., ಧಾರವಾಡ.

ಆಕರ : ಮಾರ್ಗ ಸಂಪುಟ–೫

೩೩೧

ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ

೧೯೮೯

ನಿಮ್ಮ ನೆನೆದಾಗಲೇ ಉದಯ

'ಗಾಂಧೀಯುಗ' ಭಾರತದ ಇತಿಹಾಸ ಸಂಪುಟದಲ್ಲಿ ಒಂದು ಉಜ್ವಲ ಅಧ್ಯಾಯ. ಈ ಅವಧಿಯಲ್ಲಿ 'ಗಾಂಧೀ ಗುರಿ'ಯನ್ನು ಅನುಸರಿಸಿದವರ ಸಂಖ್ಯೆ ವಿರಳ, 'ಗಾಂಧೀ ದಾರಿ'ಯನ್ನು ಅನುಸರಿಸಿದವರ ಸಂಖ್ಯೆ ಇನ್ನೂ ವಿರಳ. ದಾರಿ - ಗುರಿ ಎರಡರಲ್ಲಿಯೂ ಗಾಂಧೀಜಿಯವರನ್ನು ಅನುಸರಿಸಿದ ಮಹಾತ್ಮರ ಸಂಖ್ಯೆ ಮತ್ತೂ ವಿರಳ. ಈ ವಿರಳ ಮಹಾತ್ಮರಲ್ಲಿ ಮಂಜಪ್ಪನವರೂ ಒಬ್ಬರು. ಈ ಕಾರಣಕ್ಕಾಗಿ ಜನಸ್ತೋಮ ಅವರನ್ನು 'ಕರ್ನಾಟಕ ಗಾಂಧಿ" ಎಂದು ಗುರುತಿಸಿದೆ.

ಗಾಂಧೀಜಿ ದಿವಾನರ ಮಗನಾಗಿ ಹುಟ್ಟಿದರು, ಮಂಜಪ್ಪನವರು ಬಡ ಕನ್ನಡಿಗನ ಮಗನಾಗಿ ಹುಟ್ಟಿದರು. ಹೀಗಾಗಿ ಗಾಂಧೀಜಿಯವರಿಗೆ ಬಾಲ್ಯದಿಂದಲೇ ವಿದೇಶದಲ್ಲಿ ವಿದ್ಯಾಭ್ಯಾಸ, ಗುಜರಾಥಿಯೊಂದಿಗೆ ಇಂಗ್ಲಿಷ್, ಹಿಂದಿ ಭಾಷೆಗಳ ಪರಿಚಯ, ಪ್ರೌಢವಿದ್ಯಾಭ್ಯಾಸ, ಗಣ್ಯರ ಒಡನಾಟ ಇತ್ಯಾದಿ ಅನುಕೂಲತೆಗಳು ಸಹಜವಾಗಿಯೇ ಪ್ರಾಪ್ತವಾದವು. ಇದಕ್ಕೆ ವಿರುದ್ಧವೆಂಬಂತೆ ಮಂಜಪ್ಪನವರದು ಹಳ್ಳಿಯ ವಿದ್ಯಾಭ್ಯಾಸ, ಕನ್ನಡಭಾಷಾ ಪರಿಚಯ, ಸಾಮಾನ್ಯರ ಒಡನಾಟ, ಪರಿಮಿತ ಸಂಪರ್ಕ, ಈ ವಿರುದ್ಧ ಪರಿಸರಗಳು ಕಾರಣವಾಗಿ ಒಬ್ಬರು "ಭಾರತದ ಗಾಂಧಿ"ಯಾಗಿ ಬೆಳೆದರು, ಇನ್ನೊಬ್ಬರು "ಕರ್ನಾಟಕದ ಗಾಂಧಿ"ಯಾಗಿ ಉಳಿದರು. ಆದರೇನು ? ಲೋಕಪ್ರಸಿದ್ಧಿಯಲ್ಲದಿದ್ದರೂ ಜೀವನಸಿದ್ಧಿಯಲ್ಲಿ ಮಹಾತ್ಮಾಗಾಂಧಿಯಾಗಿಯೇ ಬಾಳಿದರು, ಮಂಜಪ್ಪನವರು.

ಬನವಾಸಿಯಲ್ಲಿ ಹುಟ್ಟಿ, ಸಿರ್ಸಿಯಲ್ಲಿ ಶಿಕ್ಷಕರಾಗಿ, ದಾವಣಗೆರೆಯಲ್ಲಿ ಸಮಾಜ ಕಾರ್ಯವನ್ನು ಕೈಗೆತ್ತಿಕೊಂಡು, ಹರಿಹರದಲ್ಲಿಸತ್ಯಾಗ್ರಹದೀಕ್ಷೆ ಧರಿಸಿದ ಮಂಜಪ್ಪನವರು, ಐಕ್ಯರಾದುದು ಆಲಮಟ್ಟಿಯಲ್ಲಿ. ಹೀಗೆ 'ಅನಿಕೇತನ'ರಾಗಿ ೬೦ ವರ್ಷ ಬಾಳಿದ ಇವರು ಟಿಳಕರಿಂದ ಪ್ರಭಾವಿತರಾದರೂ ಗಾಂಧೀಜಿ, ಬಸವಣ್ಣನವರ ಆದರ್ಶದಲ್ಲಿ ಬೆಳೆದವರು. ಆದುದರಿಂದ ಮಂಜಪ್ಪನವರದು ಗಾಂಧೀಜಿ ಮತ್ತು ಬಸವಣ್ಣನವರು ಏಕೀಭವಿಸಿದ ವ್ಯಕ್ತಿತ್ವವಾಗಿದ್ದಿತು. ಹೀಗೆ ಬಸವಣ್ಣನವರಲ್ಲಿ ಗಾಂಧಿಯವರನ್ನು ಕಂಡ ಕಾರಣ, ಬಸವತತ್ವಾದರ್ಶನದಲ್ಲಿ ಸಮಾಜವನ್ನು ಕಟ್ಟಲು, ರಾಷ್ಟ್ರವನ್ನು ರೂಪಿಸಲು ಕಂಕಣಬದ್ಧರಾದರು.

ಈ ದೇಶದಲ್ಲಿ 'ವೇದಸಂಸ್ಕೃತಿ'ಯ ಆವರಣದಲ್ಲಿ ರೂಪಗೊಂಡ ರಾಷ್ಟ್ರೀಯ ವಿಚಾರಗಳು ಮಾತ್ರ ಭಾರತದ ಪ್ರಸಿದ್ಧಿ ಪಡೆಯುತ್ತವೆ. ಇದು ಗೊತ್ತಿದ್ದೂ ಮಂಜಪ್ಪನವರು ಕರ್ನಾಟಕದ ಮಣ್ಣಿನಲ್ಲಿ ಅರಳಿದ 'ವಚನಸಂಸ್ಕೃತಿ'ಯ ವಿಚಾರಗಳನ್ನು ರಾಷ್ಟ್ರ ನಿರ್ಮಾಣಕಾರ್ಯಕ್ಕೆ ಆದರ್ಶವಾಗಿ ಇಟ್ಟುಕೊಂಡರು. ಮೇಲುವರ್ಗದ ಬುದ್ಧಿಜೀವಿಗಳಿಗೆ ಮಾತ್ರ ಸೀಮಿತವಾಗಿದ್ದ ರಾಷ್ಟ್ರೀಯ ಚಳುವಳಿಗೆ ಮಧ್ಯಮವರ್ಗದ ವೀರಶೈವರನ್ನೂ ತೊಡಗಿಸುವ ಮೂಲಕ, ಕರ್ನಾಟಕದಲ್ಲಿ ಅದಕ್ಕೆ ಜನಪರ ಚಳುವಳಿಯ ರೂಪಕೊಟ್ಟರು.

ರಾಷ್ಟ್ರೀಯ ಚಳುವಳಿಯ ಉದ್ದೇಶ ಕೇವಲ ಬ್ರಿಟಿಶರಿಂದ ಭಾರತವನ್ನು ಮುಕ್ತಗೊಳಿಸುವುದಲ್ಲ, ಜೊತೆಗೆ ಬಡತನ, ಅಜ್ಞಾನ, ಅನಾರೋಗ್ಯಗಳಿಂದ ಭಾರತೀಯರನ್ನು ಮುಕ್ತಗೊಳಿಸುವುದು ಎಂದು ನಂಬಿದ ಮಂಜಪ್ಪನವರು, ಈ ಎರಡೂ ನೆಲೆಗಳಲ್ಲಿ ದುಡಿದರು. ಆದುದರಿಂದ ಸಮಗ್ರಸಮಾಜವನ್ನೇ ತಮ್ಮ ಅಧ್ಯಯನದ ವಸ್ತುವಾಗಿಟ್ಟುಕೊಂಡು, ಅದರ ಎಲ್ಲ ಮುಖಗಳ ಉನ್ನತಿಗಾಗಿ ವಿಚಾರ - ಆಚಾರ - ಪ್ರಚಾರ ಈ ಎಲ್ಲ ಮಾರ್ಗಗಳಲ್ಲಿ ಶ್ರಮಿಸಿದರು.

ಇಂಥ 'ಮಹಾತ್ಮ' ಕನ್ನಡಿಗನಾಗಿರುವುದು ನಮ್ಮ ಸುದೈವ. ಇದನ್ನು ಗಮನಿಸಿದ ಕರ್ನಾಟಕ ರಾಜ್ಯ ಸರಕಾರ ೧೯೮೮ - ೮೯ನೆಯ ವರ್ಷವನ್ನು ಮಂಜಪ್ಪನವರ ಜನ್ಮಶತಮಾನೋತ್ಸವ ವರ್ಷವೆಂದು ಘೋಷಿಸಿ, ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದರ ಅಂಗವಾಗಿ 'ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪ' ಹೆಸರಿನ ಈ ಸ್ಮರಣ ಸಂಪುಟ ಹೊರಬರುತ್ತಲಿದೆ.

ಈ ಸಂಪುಟದಲ್ಲಿ ನಾಲ್ಕು ಭಾಗಗಳನ್ನು ಕಲ್ಪಿಸಲಾಗಿದೆ. ಮೊದಲನೆಯ ಭಾಗದಲ್ಲಿ ೧೯೩೭ರ ವರೆಗಿನ ತಮ್ಮ ಜೀವನದ ಬಗ್ಗೆ ಮಂಜಪ್ಪನವರೇ ಬರೆದ "ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ" ಹೆಸರಿನ ಆತ್ಮವೃತ್ತವನ್ನು ಅಳವಡಿಸಲಾಗಿದೆ. ಇದಕ್ಕೆ ೧೯೪೭ರ ವರೆಗಿನ ಅವರ ಜೀವನಚರಿತ್ರೆಯನ್ನು ಹೊಸದಾಗಿ ಬರೆದು ಜೋಡಿಸಲಾಗಿದೆ. ಎರಡನೆಯ ಭಾಗದಲ್ಲಿ ಮಂಜಪ್ಪನವರನ್ನು ಕುರಿತು ಅವರ ಸ್ನೇಹಿತರು - ಸಮಕಾಲೀನರು ಪ್ರಕಟಿಸಿದ್ದ ಉತ್ತಮೋತ್ತಮ ಲೇಖನಗಳನ್ನು ಆಯ್ದು ಸಂಗ್ರಹಿಸಲಾಗಿದೆ. ಇದಕ್ಕೆ ಒಂದೆರಡು ಹೊಸ ಲೇಖನಗಳನ್ನೂ ಸೇರಿಸಲಾಗಿದೆ. ಮೂರನೆಯ ಭಾಗ ಮಂಜಪ್ಪನವರ ಸಾಧನೆಯನ್ನೂ, ನಾಲ್ಕನೆಯ ಭಾಗ ಸಾಹಿತ್ಯವನ್ನೂ ಕುರಿತಿವೆ.

ಇಂದು ಸಾಹಿತ್ಯಿಕ ಕಾರಣಕ್ಕಾಗಿ ಸಾಹಿತ್ಯ ಬರೆದವರು ಇತಿಹಾಸದ ಪುಟಗಳಲ್ಲಿ ಮೆರೆದಿದ್ದಾರೆ. ಸಾಮಾಜಿಕ ಕಾರಣಕ್ಕಾಗಿ ಸಾಹಿತ್ಯ ಬರೆದವರು ಆ ಪುಟಗಳಲ್ಲಿ ಮರೆಯಾಗಿ ಹೋಗಿದ್ದಾರೆ. ಹೀಗೆ ಮರೆಯಾಗಿ ಹೋಗುತ್ತಲಿರುವ ಮಹಾತ್ಮರ ಸಾಲಿಗೆ ಸೇರಿದ ಮಂಜಪ್ಪನವರನ್ನು ಕುರಿತು ಲೇಖನ ಬರೆಯಿಸುವುದು ತುಂಬ ಕಷ್ಟದ ಕೆಲಸ. ಹೀಗಾಗಿ ಇನ್ನೂ ನಾಲ್ಕಾರು ಲೇಖನಗಳನ್ನು ಇಲ್ಲಿ ಸೇರಿಸಬೇಕೆಂಬ ನನ್ನ ಆಸೆ ಆಸೆಯಾಗಿಯೇ ಉಳಿಯಿತು. ಹಲವರ ಮೇಲೆ ಅವಲಂಬಿಸಿ ಮಾಡಬೇಕಾದ ಕೆಲಸಗಳು ಇಂದಿನ ದಿನಗಳಲ್ಲಿ ಎಷ್ಟು ಕಷ್ಟವೆಂದು ಬೇರೆ ಹೇಳಬೇಕಿಲ್ಲ. ಆದರೆ ಈ ಕಾರ್ಯದ ಹಿಂದೆ ಪ್ರಾಮಾಣಿಕ ಮನಸ್ಸು - ಪ್ರಯತ್ನಗಳು ತೊಡಗಿಕೊಂಡಿವೆಯೆಂದು ಮಾತ್ರ ಹೇಳಬಯಸುತ್ತೇನೆ.

ಶ್ರೀ ಮಂಜಪ್ಪನವರ ಸ್ನೇಹಿತರ - ಸಮಕಾಲೀನರ ಲೇಖನಗಳಿಂದಾಗಿ ಈ ಗ್ರಂಥಕ್ಕೆ ಮೌಲಿಕತೆ ಪ್ರಾಪ್ತವಾಗಿದೆ. ಇವರಿಗೂ, ಹೊಸದಾಗಿ ಲೇಖನ ಬರೆದುಕೊಟ್ಟ ಲೇಖಕರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಶ್ರೀ ಹರ್ಡೇಕರ ಮಂಜಪ್ಪನವರ ಜನ್ಮಶತಮಾನೋತ್ಸವ ಸಮಿತಿ ಸೂಚಿಸಿದ ಚೌಕಟ್ಟಿನಲ್ಲಿ ಈ ಗ್ರಂಥವನ್ನು ರೂಪಿಸಲಾಗಿದ್ದು, ಇದರ ಪ್ರಕಟಣೆಯ ವಿಷಯವಾಗಿ ಸಮಿತಿಯ ಅಧ್ಯಕ್ಷರೂ ಮಾನ್ಯ ಸಚಿವರೂ ಆಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು ತೋರಿಸಿದ ಆಸಕ್ತಿ ಅನನ್ಯವಾದುದು. ನಮ್ಮ ಸಂಸ್ಕೃತಿಯನ್ನು ಗಾಢವಾಗಿ ಪ್ರೀತಿಸುವ ಅವರಿಗೂ, ಶತಮಾನೋತ್ಸವ ಸಮಿತಿಯ ಸದಸ್ಯರಿಗೂ ಕನ್ನಡ - ಸಂಸ್ಕೃತಿ ನಿರ್ದೇಶನಾಲಯದ ಉತ್ಸಾಹಿ ನಿರ್ದೇಶಕರಾದ ಶ್ರೀ ಐ. ಎಂ. ವಿಠ್ಠಲಮೂರ್ತಿ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥದ ಪ್ರಕಟನಕಾರ್ಯದಲ್ಲಿ ಆಸಕ್ತಿ ವಹಿಸಿದ ಬೆಂಗಳೂರಿನ ಶ್ರೀ ಕೆ. ಅಭಿಶಂಕರ, ಧಾರವಾಡದ ಮಾಜಿ ಶಾಸಕ ಶ್ರೀ ಚಂದ್ರಕಾಂತ ಬೆಲ್ಲದ ಮತ್ತು ಧಾರವಾಡ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕರಾದ ಶ್ರೀ ಮ. ಗು. ಸದಾನಂದಯ್ಯ ಮೊದಲಾದ ಮಿತ್ರರಿಗೆ ಧನ್ಯವಾದಗಳು.

---

* ಪ್ರಥಮ ಆವೃತ್ತಿ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಆಕರ : ಮಾರ್ಗ ಸಂಪುಟ-೫

೩೩೨

ವಚನ ಸಾಹಿತ್ಯದ ಪ್ರಕಟನೆಯ ಇತಿಹಾಸ

೧೯೯೦

ಸ್ಥಾವರದಿಂದ ಜಂಗಮಕ್ಕೆ

'ವೀರಶೈವಸಾಹಿತ್ಯ' ಎಂದಾಕ್ಷಣ ವಚನಸಾಹಿತ್ಯ ನೆನಪಾಗುತ್ತದೆ ; 'ವಚನಸಾಹಿತ್ಯ' ಎಂದಾಕ್ಷಣ ಬಸವಣ್ಣನವರ ವಚನಗಳು ನೆನಪಾಗುತ್ತವೆ. ಇಷ್ಟು ಗಾಢವಾಗಿ ನಮ್ಮನ್ನು ಆವರಿಸಿರುವ ಬಸವಣ್ಣನವರ ಬರವಣಿಗೆಯ ಕೆನೆಯ ಕೆನೆ, ಅವರ 'ಷಟ್ಸ್ಥಲವಚನ ಸಂಪುಟ'. ಒಂದರ್ಥದಲ್ಲಿ ಇದು ಬಸವಣ್ಣನವರ ಮಹಾಕಾವ್ಯ.

ಈ ಕಾರಣದಿಂದಾಗಿ ವಚನಪ್ರಸಾರಕಾರ್ಯದ ಇತಿಹಾಸದಲ್ಲಿ ಅವರ 'ಷಟ್ಸ್ಥಲ ವಚನ' ಸಂಪುಟ ಪ್ರಕಟನೆಗೆ ವಿಶೇಷಮಹತ್ವ ಸಲ್ಲುತ್ತದೆ. ಅದು ಪ್ರಥಮ ಸಲ ಪ್ರಕಟವಾದ ವರ್ಷ ಸ್ಮರಣಾರ್ಹವೆನಿಸುತ್ತದೆ. ಏಕೆಂದರೆ ಹಸ್ತಪ್ರತಿರೂಪದಲ್ಲಿ ಆಮೆಗತಿಯಿಂದ ಪ್ರಸಾರಗೊಳ್ಳುತ್ತಲಿದ್ದ ಈ ಕೃತಿ, ಈಗ ಯಂತ್ರಪ್ರತಿರೂಪ ಕಾರಣವಾಗಿ ಸಹಸ್ರ ಜನರ ಕರಕಮಲಗಳಲ್ಲಿ ತುಂಬಿ, ಹೃದಯಕಮಲಗಳಲ್ಲಿ ತುಳುಕಿತು. ಈ ಅಪೂರ್ವ ಘಟನೆ ಜರುಗಿದುದು ಅಂದರೆ ಈ ಕೃತಿ ಪ್ರಥಮಸಲ ಪ್ರಕಟವಾದುದು ೧೮೮೯ರಲ್ಲಿ. ಮುಂದೆ ೧೯೮೯ರಲ್ಲಿ ಈ ಪ್ರಕಟನೆಗೆ ನೂರು ವರ್ಷ ತುಂಬಿದ ನಿಮಿತ್ತ ೯ ಎಪ್ರಿಲ್ ೧೯೯೦ರಂದು ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನಸಂಸ್ಥೆ "ಬಸವಣ್ಣನವರ ಷಟ್‌ಸ್ಥಲವಚನಗಳು ಗ್ರಂಥಪ್ರಕಾಶನದ ಶತಮಾನೋತ್ಸವ ವಿಚಾರಸಂಕಿರಣ"ವೆಂಬ ಸ್ಮರಣಾರ್ಹ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಈ ಕಾರ್ಯಕ್ರಮದ ಅಂಗವಾಗಿ ಸಂಘಟಿಸಿದ್ದ "ವಚನಸಾಹಿತ್ಯ ಪ್ರಕಟನೆಯ ಇತಿಹಾಸ" ಹೆಸರಿನ ವಿಚಾರಸಂಕಿರಣದಲ್ಲಿ ವಿದ್ವಾಂಸರು ಮಂಡಿಸಿದ ನಾಲ್ಕು ಅಭ್ಯಾಸಪೂರ್ಣ ಪ್ರಬಂಧ ಮತ್ತು ಅಧ್ಯಕ್ಷೀಯ ಭಾಷಣಗಳ ಗುಚ್ಛವಾಗಿದೆ, ಈ ಕೃತಿ.

ಅಪ್ರಕಟಿತ ವಚನಸಾಹಿತ್ಯ ಪ್ರಕಟನೆಗೆ ಕಟಿಬದ್ಧವಾಗಿರುವ 'ವೀರಶೈವ ಅಧ್ಯಯನ ಸಂಸ್ಥೆ' ಯೋಜಿಸಿದ ಈ ವಿಚಾರಸಂಕಿರಣ ತುಂಬ ವಿನೂತನವಾದುದು. ಸಾಮಾನ್ಯವಾಗಿ ಹಾಡಿದ್ದನ್ನೇ ಹಾಡುವಂತಿರುವ ವೀರಶೈವ ವಿಚಾರಸಂಕಿರಣಗಳಿಗಿಂತ ಇದು ಭಿನ್ನವಾದುದು. ವಿನೂತನ ಕಾರ್ಯಕ್ರಮಗಳಿಗೆ ಹೆಸರಾಗಿರುವ 'ವೀರಶೈವ ಅಧ್ಯಯನಸಂಸ್ಥೆ' ಇಂಥ ವಿಷಯವನ್ನು ವಿಚಾರಸಂಕಿರಣಕ್ಕೆ ಆಯ್ದುಕೊಂಡುದು ಸಹಜವೇ ಆಗಿದೆ.*

ಪೂಜ್ಯ ಶ್ರೀ ಫ. ಗು. ಹಳಕಟ್ಟಿ ಅವರು ಪ್ರಾರಂಭಿಸಿದ ಪ್ರಾಚೀನ ಅಪ್ರಕಟಿತ ವಚನಸಾಹಿತ್ಯದ ಪ್ರಕಟನೆಯ ಒಂದು ಸುತ್ತು 'ವೀರಶೈವ ಅಧ್ಯಯನ ಸಂಸ್ಥೆ'ಯ ಮೂಲಕ ಪೂರ್ಣಗೊಳ್ಳಲಿರುವ ಇಂದಿನ ಸಂದರ್ಭದಲ್ಲಿ, ಈ ವಿಚಾರ ಸಂಕಿರಣ ಜರುಗಿದುದು ಅರ್ಥಪೂರ್ಣ ಉಪಕ್ರಮ.

ನೂರುವರ್ಷಗಳ ಕಾಲಾವಧಿಯಲ್ಲಿ ವಚನಸಾಹಿತ್ಯ ಪ್ರಕಟವಾಗುತ್ತ ಬಂದ ಘಟ್ಟಗಳನ್ನು ಗುರುತಿಸುತ್ತ, ಆಯಾ ಘಟ್ಟಗಳಲ್ಲಿ ಜರುಗಿದ ಸಂಪಾದನ ಕೆಲಸದ ಸಾಧನೆ - ಮಿತಿಗಳನ್ನು ಈ ಕೃತಿಯಲ್ಲಿ ಸಾದರಪಡಿಸಲಾಗಿದೆ. ಇಲ್ಲಿ ಎಲ್ಲ ಸಂಪಾದನೆಗಳ, ಎಲ್ಲ ಸಂಪಾದಕರ ಹೆಸರುಗಳು ಬಂದಿಲ್ಲ, ಬರುವುದು ಸಾಧ್ಯವೂ ಇಲ್ಲ. ಆದರೆ ಪ್ರಮುಖ ಸಂಪಾದಕರ, ಸಂಸ್ಥೆಗಳ ಹೆಸರು ಕೈಬಿಟ್ಟುಹೋಗದಂತೆ ನೋಡಿಕೊಳ್ಳಲಾಗಿದೆ. ಇದು ಒಂದು ಸಮಗ್ರಚಿತ್ರ ನೀಡಿದರೆ ನಮ್ಮ ಶ್ರಮ ಸಾರ್ಥಕವೆಂದು ಬಗೆಯುತ್ತೇವೆ.

ಈ ವಿಚಾರಸಂಕಿರಣಕ್ಕೆ ಅವಕಾಶಮಾಡಿಕೊಟ್ಟು ಪ್ರಕಟಿಸುತ್ತಿರುವ ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನಸಂಸ್ಥೆಗೆ, ಅದರ ಸ್ಫೂರ್ತಿಯಾಗಿರುವ ಪೂಜ್ಯ ಶ್ರೀ ತೋಂಟದಾರ್ಯಜಗದ್ಗುರುಗಳಿಗೆ ನಮ್ಮ ಪ್ರಣಾಮಗಳು ಸಲ್ಲುತ್ತವೆ. ಪ್ರಬಂಧಗಳನ್ನು ಮಂಡಿಸಿದ ವಿದ್ವಾಂಸರಿಗೂ, ಅಚ್ಚುಕಟ್ಟಾಗಿ ಮುದ್ರಿಸಿದ ಧಾರವಾಡ ವಿಜಯ ಪ್ರೆಸ್ಸಿನ ಒಡೆಯರಾದ ಶ್ರೀ ವಿಜಯ ಹೊಸಕೇರಿ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

ಎಂ. ಎಂ. ಕಲಬುರ್ಗಿ

---

* ಪ್ರಥಮ ಆವೃತ್ತಿ : ವೀರಶೈವ ಅಧ್ಯಯನ ಸಂಸ್ಥೆ, ಗದಗ.

ಆಕರ : ಮಾರ್ಗ ಸಂಪುಟ-೫

■■

೩೩೩

ಸಮಗ್ರ ವಚನ ಸಾಹಿತ್ಯ ಸಂಪುಟ

೧೯೯೩, ೨೦೦೧

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವಘಟನೆ, ವಚನಗಳ ಸೃಷ್ಟಿ ಒಂದು ಅನನ್ಯಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿದೆ.

'ವಚನ' ಶಬ್ದಕ್ಕೆ ಗದ್ಯ ಸಾಹಿತ್ಯ ಪ್ರಕಾರವೆಂದು ಅರ್ಥವಲ್ಲ ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ - ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ - ಕಾವ್ಯಗಳನ್ನು, ವೈದಿಕ ಪುರಾಣ - ಕೀರ್ತನೆಗಳನ್ನು, ವೀರಶೈವ ಶಾಸ್ತ್ರ - ಪುರಾಣಗಳನ್ನು ಪ್ರಕಟಿಸಿದ ಇವರು ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ ದಿಸೆಯಲ್ಲಿ ಮೊದಲು ಪ್ರಕಟವಾದ ಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ". ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಬೆಳಕು ಕಂಡುದು ೧೮೮೯ರಲ್ಲಿ. ಅಲ್ಲಿಂದ ಸರಿಯಾಗಿ ಒಂದು ಶತಮಾನ ಮುಗಿಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ವಚನಸಾಹಿತ್ಯ ಪ್ರಕಟನೆಯ ಪ್ರಥಮ ವ್ಯಾಪಕ ಪ್ರಯತ್ನವೊಂದು ವಿಜಾಪುರದ ಶಿವಾನುಭವ ಗ್ರಂಥಮಾಲೆಯ ಮೂಲಕ ಡಾ. ಫ. ಗು. ಹಳಕಟ್ಟಿ ಅವರಿಂದ ಜರುಗಿತು. ಆಮೇಲೆ ಮತ್ತೊಂದು ಯೋಜನಾಬದ್ಧ ಪ್ರಯತ್ನವು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಆಶ್ರಯದಲ್ಲಿ ಡಾ. ಆರ್. ಸಿ. ಹಿರೇಮಠ ಅವರಿಂದ ನಡೆಯಿತು. ಇತ್ತೀಚೆಗೆ ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯು ಒಂದು ಕ್ರಮಬದ್ಧ ಯೋಜನೆಯ ಮೂಲಕ ಈ ಕೆಲಸವನ್ನು ಮುಂದುವರಿಸಿ, ಮುಗಿಸುವ ಹಂತದಲ್ಲಿದೆ. ವಚನಸಾಹಿತ್ಯದ ಪ್ರಕಟನಕಾರ್ಯ ಹೀಗೆ

ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಹೆಸರಿನಲ್ಲಿ, ಕರ್ನಾಟಕ ಸರಕಾರದ ಮೂಲಕ ಹದಿನೈದು ಸಂಪುಟಗಳು (ವಚನ ಪರಿಭಾಷಾಕೋಶ ಸೇರಿ) ಪ್ರಕಟವಾಗುತ್ತಲಿವೆ. ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಪ್ರಯತ್ನಕ್ಕೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು, ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕು ಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದು, ಆ ಬಳಿಕ ಲಭ್ಯವಾದ ಹೊಸ ವಚನಗಳನ್ನು ಸೇರಿಸಿ, ಅವುಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ. ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಬಸವೋತ್ತರ ಕಾಲೀನ ಶರಣರ ಕೊನೆಯ ಐದು ಸಂಪುಟಗಳ ಕೆಲಸವೂ ಅಲಕ್ಷಿಸಲ್ಪಟ್ಟಿದ್ದಿತು. ಈ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡ ಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ೧೦೮ ಆಕರಗಳಿಂದ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ.

ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಆಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ - ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ೧೫ ಅಕ್ಟೋಬರ ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ - ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ - ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ. ಎಸ್. ಬಂಗಾರಪ್ಪ ಅವರಿಗೂ ಸಾಹಿತಿಗಳೂ ಸಾಹಿತ್ಯ - ಸಂಸ್ಕೃತಿಗಳ ಗಾಢ ಆಸಕ್ತರೂ ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಷಿಯಾಗಿದ್ದೇವೆ.

ಆ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ - ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ - ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ

ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನ ಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ - ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

---

* ಕರ್ನಾಟಕ ಸರಕಾರ ಪ್ರಕಟಿಸಿದ ಸಮಗ್ರ ವಚನಸಾಹಿತ್ಯ ಸಂಪುಟಗಳಿಗೆ ಪ್ರಧಾನ ಸಂಪಾದಕನಾಗಿ ಬರೆದ ಸಂಪಾದಕೀಯವಿದು. ೧೯೯೩ರಲ್ಲಿ ಪ್ರಥಮ ಆವೃತ್ತಿ, ೨೦೦೧ರಲ್ಲಿ ದ್ವಿತೀಯ ಆವೃತ್ತಿ ಪ್ರಕಟವಾಗಿವೆ. ಇಲ್ಲಿ ದ್ವಿತೀಯ ಆವೃತ್ತಿಯ ಸಂಪಾದಕೀಯವನ್ನು ಪ್ರಕಟಿಸಲಾಗಿದೆ.

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫ - ೫ ಪು. ೪೫)

ಆಕರ : ಮಾರ್ಗ ಸಂಪುಟ–೫

ಸಾರಂಗಶ್ರೀ

೧೯೯೪

'ಸಾರಂಗಮಠ'ವೆನ್ನುವುದು ಕೇವಲ ಒಂದು ಮಠವಲ್ಲ ; ನಿಗೂಢ ಆಚಾರ - ವಿಚಾರಗಳನ್ನೊಳಗೊಂಡ ಒಂದು ಮಹತ್ವಪೂರ್ಣ ಧಾರ್ಮಿಕ ಪರಂಪರೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿ ನೂರಾರು ಮಠಗಳನ್ನು ಕಟ್ಟಿ ಬೆಳೆಸಿರುವ ಈ ಪರಂಪರೆಯ ಮೂಲಪುರುಷ, ಸಾರಂಗದೇವ. ಚರಿತ್ರೆಯ ಪುರಾಣೀಕರಣ ಮತ್ತು ಐತಿಹ್ಯೀಕರಣ ಕ್ರಿಯೆಗಳಿಂದಾಗಿ ಈತನ ಇತಿವೃತ್ತದ ಮೇಲೆ ಇನ್ನೂ ಕತ್ತಲು ಕವಿದಿದೆ.

ಮಳೆಯ ಮಲ್ಲೇಶ, ಮರುಳಸಿದ್ಧೇಶ, ಮಳೆಯ ಮರುಳಸಿದ್ಧೇಶ, ಸಾರಂಗ ಸಿದ್ಧೇಶ ಮತ್ತು ಸಾರಂಗದೇವ - ಹೀಗೆ ಬೇರೆ ಬೇರೆ ಹೆಸರುಗಳಿದ್ದರೂ ಮಲ್ಲೇಶ, ಅದಕ್ಕಿಂತ ಸಿದ್ಧೇಶ ಎಂಬುದು ಈತನ ಅಂಕಿತನಾಮವಾಗಿದ್ದು, ಸಾರಂಗದೇವ ಎನ್ನುವುದು ಅನ್ವರ್ಥಕನಾಮವಾಗಿರುವ ಸಾಧ್ಯತೆಯಿದೆ. 'ಸಾರಂಗ' ಶಬ್ದಕ್ಕೆ ಹಲವಾರು ಅರ್ಥಗಳಿವೆ. ಗಂಡುಜಿಂಕೆಯೆಂಬುದು ಇದರ ಸಾಮಾನ್ಯ ಅರ್ಥ. ಸಾರಂಗ, ಸಾರಂಗಪಾಣಿ - ಎಂದರೆ ಶಿವ. ತೀರ ಅಪರಿಚಿತವೆನಿಸುವ ಈ ಅರ್ಥಮೂಲಗಳಿಂದ ಸಾರಂಗದೇವನ ಹೆಸರು ಅಸ್ತಿತ್ವಕ್ಕೆ ಬಂದಿರಲಿಕ್ಕಿಲ್ಲ. ಕುದುರೆಯಲ್ಲಿ ಸಾರಂಗ, ಬೊಲ್ಲ, ಪಂಚಕಲ್ಯಾಣಿ ಇತ್ಯಾದಿ ಜಾತಿಗಳಿವೆ. ಬಹುಶಃ ಸಾರಂಗಜಾತಿಯ ಕುದುರೆಯನ್ನೇರಿ ಸಂಚರಿಸುತ್ತಿದ್ದ ಕಾರಣ, ಈ ಮಲ್ಲೇಶ ಅಥವಾ ಸಿದ್ಧೇಶನಿಗೆ ಸಾರಂಗದೇವನೆಂಬ ಹೆಸರು ಪ್ರಾಪ್ತವಾಗಿರಬಹುದು. ಕುದುರೆ, ಸಂಕೇತವಾಗಿ ಕಾಣಿಸಿಕೊಳ್ಳುವ ನಾಥಪಂಥೀಯ ಛಾಯೆ, ಈ ಮಠದ ಇತಿಹಾಸದಲ್ಲಿ ಕಂಡುಬರುವುದೂ ಈ ಊಹೆಗೆ ಒಂದಿಷ್ಟು ಬೆಂಬಲ ನೀಡುತ್ತದೆ. ಅದೇನೇ ಇದ್ದರೂ ಈ ಧಾರ್ಮಿಕ ನೇತಾರನ ಹೆಸರಿನಲ್ಲಿ ಹುಟ್ಟಿ, ಹರಡಿಕೊಂಡಿರುವ ಮಠಸಮುದಾಯದಲ್ಲಿ ತುಂಬ ಗಣ್ಯವೆನಿಸಿದೆ, ಸಿಂದಗಿಯ ಸಾರಂಗಮಠ.

ಪದ್ಮರಾಜ ಹೆಸರಿನ ಕರ್ತೃ ಗದ್ದುಗೆ ಸಿಂದಗಿ ಸಾರಂಗಮಠದ ಕೇಂದ್ರಬಿಂದು. ಸಾರಂಗದೇವನ ಶಿಷ್ಯನಾಗಿರುವ ಈತ ಕುರುಬ ಜಾತಿಯ ಮಹಾಪುರುಷನೆಂದು ಜನರ ಹೇಳಿಕೆ. ಕುರುಬರಲ್ಲಿ ಪದ್ಮಗೊಂಡನೆಂಬ ಸಾಂಸ್ಕೃತಿಕ ಮಹಾಪುರುಷನ ಹೆಸರು ಪ್ರಸಿದ್ಧವಾಗಿದೆ. ಶ್ರೀಮಠದಲ್ಲಿ ಇಂದಿಗೂ ಕುರುಬರ ವಿಷಯವಾಗಿ ಜಾತಿಭೇದವೆಣಿಸದ ಒಂದಿಷ್ಟು ಉದಾರಭಾವನೆ ಇದೆ. ಪಂಚಮ, ಬಣಜಿಗ, ಜಂಗಮ - ಹೀಗೆ ವೀರಶೈವ ಎಲ್ಲ ಪಂಗಡದವರೂ ಇಲ್ಲಿ ಗುರುಪೀಠವೇರುತ್ತ ಬಂದಿದ್ದಾರೆ. "ಅಂಗದ ಮೇಲೆ ಲಿಂಗವಿದ್ದವರನೆಲ್ಲ ಸಂಗಯ್ಯನೆಂಬೆ" ಎಂಬ ಬಸವಣ್ಣನವರ ಜಾತ್ಯತೀತ ನಿಲವು ತಾಳುತ್ತ ಬಂದಿದ್ದಾರೆ.

ಸಿಂದಗಿಯ ಇನ್ನೊಂದು ಪ್ರಮುಖ ಆಕರ್ಷಣೆ 'ಸಂಗಮೇಶ್ವರದೇವಾಲಯ'. ವಿಸ್ತಾರವಾದ ಆರವಣ, ಅಧ್ಯಯನ ದೃಷ್ಟಿಯಿಂದ ತೀವ್ರ ಗಮನ ಸೆಳೆಯುವ ದಿಗಂಬರ ಸ್ತ್ರೀ - ಪುರುಷ ವಿಗ್ರಹ, ಮುದಿಸಂಗಮೇಶ್ವರ ಮತ್ತು ಭ್ರಮರಾಂಬೆಯರ ಗುಡಿ - ಇತ್ಯಾದಿಗಳಿಂದ ಈ ದೇವಾಲಯ ತುಂಬ ವಿಶಿಷ್ಟವೆನಿಸಿದೆ. ಪ್ರಾಚೀನ ಕಾಲದಲ್ಲಿ ದೇವಾಲಯದ ಉಸ್ತುವಾರಿ ನೋಡಿಕೊಳ್ಳಲು ಮಗ್ಗುಲಲ್ಲಿಯೇ

ಮಠವಿರುತ್ತಿದ್ದವು. ಇದನ್ನು ನೆನಪಿಸುವಂತೆ ಈ ಸಂಗಮೇಶ್ವರ ದೇವಾಲಯಕ್ಕೆ ಹೊಂದಿಯೇ ಸಾರಂಗಮಠವಿರುವುದು, ಪ್ರಾಚೀನ ಕಾಲದಲ್ಲಿದ್ದಿರಬಹುದಾದ ಇವೆರಡರ ಸಂಬಂಧದ ಕಡೆಗೆ ಬೆರಳು ನೀಡುತ್ತದೆ. ಇದೇ ರೀತಿ ಕೂಡಲ ಸಂಗಮದಲ್ಲಿಯೂ ಸುಪ್ರಸಿದ್ಧ ಸಂಗಮೇಶ್ವರ ದೇವಾಲಯಕ್ಕೆ ಹೊಂದಿಕೊಂಡು ಸಾರಂಗಮಠವಿದೆ. ಇಂಥ ಬೇರೆ ಉದಾಹರಣೆಗಳೂ ಅಲ್ಲಲ್ಲಿ ಇರಬಹುದು. ಇದರಿಂದ ಸಾರಂಗಮಠಕ್ಕೂ ಬಸವಣ್ಣನವರ ಸಂಗಮೇಶ್ವರ ಸಂಪ್ರದಾಯಕ್ಕೂ ಇರಬಹುದಾದ ಯಾವುದೋ ಒಂದು ಸಂಬಂಧದ ಕಡೆಗೆ ಇದು ನಮ್ಮ ಗಮನ ಸೆಳೆಯುತ್ತದೆ. ಎಲ್ಲರಿಗೂ ಗೊತ್ತಿರುವಂತೆ ಬಸವಣ್ಣನವರದು ಜಾತ್ಯತೀತ ಧಾರ್ಮಿಕ ನಿಲುವು. ಹೀಗೆ ಜಾತ್ಯತೀತ ಧೋರಣೆಯ ದೃಷ್ಟಿಯಿಂದ ಬಸವಪರಂಪರೆ ಮತ್ತು ಸಾರಂಗಮಠ ಸಮುದಾಯಗಳು ತೀರ ಹತ್ತಿರವೆನಿಸುತ್ತಿರುವುದು ಎತ್ತಿ ಹೇಳಬೇಕಾದ ಅಂಶವಾಗಿದೆ.

ಸಾರಂಗಮಠಗಳು ಉಜ್ಜಯಿನಿಪೀಠ ಪರಂಪರೆಗೆ ಸಂಬಂಧಿಸಿವೆ. ವೀರಶೈವ ಪೀಠಪಂಚಕದಲ್ಲಿ ಉಜ್ಜಯಿನಿಪೀಠ ಒಂದಿಷ್ಟು ವಿಶಿಷ್ಟವೆಂಬಂತೆ ಒಡೆದು ಕಾಣುತ್ತದೆ. ಇಲ್ಲಿಯ ಸುಪ್ರಸಿದ್ಧ ಮರುಳಸಿದ್ಧೇಶ್ವರ ದೇವಾಲಯದ ನಿಜನಾಮ ಮಲ್ಲಿಕಾರ್ಜುನದೇವಾಲಯವೆಂದು ಶಾಸನಗಳಲ್ಲಿ ಸ್ಪಷ್ಟವಿದೆ. ಹೀಗಾಗಿ ದೇವಾಲಯದ ಹೆಸರು ಮಲ್ಲಿಕಾರ್ಜುನ, ಗುರುವಿನ ಹೆಸರು ಮರುಳಸಿದ್ಧನೆಂದು ತೊಡಕು ಬಿಡಿಸಿಕೊಳ್ಳಲು ಮನಸ್ಸಾಗುತ್ತದೆ ಮತ್ತು ಸಾರಂಗದೇವನ ನಿಜನಾಮ ಮರುಳಸಿದ್ಧೇಶ ಮತ್ತು ಮಳೆಯಮಲ್ಲೇಶವೆಂದು ತಿಳಿದು ಬರುವುದರಿಂದ ಈ ಸಾರಂಗದೇವನೇ ಉಜ್ಜಯಿನಿಯ ಮರುಳಸಿದ್ಧನಾಗಿರಬಹುದೆಂಬ ಅನುಮಾನ ಮೂಡುತ್ತದೆ. ಎರಡನೆಯದಾಗಿ, ಉಜ್ಜಯಿನಿಪೀಠ 'ಮಳೆಯ ಬಗೆ (= ಗೋತ್ರ)'ಯದು. ಬಹುಶಃ ಇದರ ಸರಿಯಾದ ರೂಪ 'ಮಲೆಯ ಬಗೆ'. ವೀರಶೈವ ಸಂದರ್ಭದಲ್ಲಿ 'ಮಲೆ' ಎಂದರೆ ಶ್ರೀಶೈಲಪರ್ವತ. ಹೀಗೆ ಉಜ್ಜಯಿನಿಯ 'ಮಲ್ಲಿಕಾರ್ಜುನ ದೇವಾಲಯ' ಮತ್ತು 'ಮಳೆಯ ಬಗೆ'ಗಳು ಈ ಪೀಠಕ್ಕೂ ಶ್ರೀಶೈಲಕ್ಕೂ ಇರುವ ಸಂಬಂಧವನ್ನು ದೃಢಪಡಿಸುತ್ತವೆ. ಮೂರನೆಯದಾಗಿ ಪ್ರಾಚೀನ ಕರ್ನಾಟಕದಲ್ಲಿ ಕಾಳಾಮುಖ ಹೆಸರಿನ ಶೈವಸಂಪ್ರದಾಯ ಕರ್ನಾಟಕದಲ್ಲಿ ಪ್ರಸಿದ್ಧವಾಗಿದ್ದಿತು. ಇದರ ಹಲವು ಉಪಶಾಖೆಗಳಲ್ಲಿ 'ಪರ್ವತಾವಳಿ'ಯೂ ಒಂದು. 'ಪರ್ವತಾವಳಿ' ಎಂಬುದರ ಪರ್ಯಾಯ ದೇಶೀನಾಮ 'ಮಲೆ (= ಪರ್ವತ)ಯ ಬಗೆ' ಎಂದು ತೋರುತ್ತದೆ. ಈ ಅಂಶ ಉಜ್ಜಯಿನಿಪೀಠ, ಶ್ರೀಶೈಲ ಮತ್ತು ಕಾಳಾಮುಖಸಂಪ್ರದಾಯದ ಸಂಬಂಧವನ್ನು ಕಲ್ಪಿಸಿಕೊಡುತ್ತದೆ. ಕೊನೆಯದಾಗಿ ಕಾಳಾಮುಖದಲ್ಲಿ ಶಕ್ತಿಪರ್ಷೆ, ಸಿಂಹಪರ್ಷೆ ಎಂದು ಎರಡು ಪ್ರಮುಖ ಶಾಖೆಗಳಿವೆ. ಇವುಗಳಲ್ಲಿ ಸಿಂಹಪರ್ಷೆಯ ಮೂಲಪುರುಷ ಮಲೆಯಾಳಪಂಡಿತ. ಈತ ಶಾಸನಗಳಲ್ಲಿ ಎಳಮಲೆಯ ಮಲೆಯಾಳಪಂಡಿತನೆಂದೇ ಪ್ರಸಿದ್ಧನಾಗಿರುವುದರಿಂದ, ಇವನ ಗ್ರಾಮ ಸಿಂದಗಿ ನೆರೆಯ ಎಳಮೇಲಿಯೇ ಆಗಿದ್ದು, ಈ ದೃಷ್ಟಿಯಿಂದ ಅದು ಸಿಂಹಪರ್ಷೆಯ ಕಾಳಾಮುಖರ ಮೂಲಕೇಂದ್ರವೆನಿಸುತ್ತದೆ. ಉಜ್ಜಯಿನಿ ಪೀಠದ ಸಾರಂಗದೇವ ಸ್ಥಾಪಿಸಿದ ಸಾರಂಗಮಠ ಎಳಮೇಲಿಯಲ್ಲಿರುವುದನ್ನು ಇಲ್ಲಿ ಸ್ಮರಿಸಬಹುದು.

ಸಾಮಾನ್ಯವಾಗಿ ಕಾಳಾಮುಖರು ಚಾತುರ್ವರ್ಣ ಪರಿಪಾಲಕರಾಗಿದ್ದರೂ, ಕಾಳಮುಖಪರಂಪರೆಗೆ ಸಂಬಂಧಿಸಿದ ಉಜ್ಜಯಿನಿಪೀಠದ ಜಗದ್ಗುರು ಮರುಳಸಿದ್ಧರು ದಲಿತವರ್ಗದವರೆಂಬ ಹೇಳಿಕೆ ಅಲ್ಲಲ್ಲಿ ಕೇಳಿಬರುವುದರಿಂದ ಮತ್ತು ಈ ಪೀಠ ಪರಂಪರೆಯ ಸಾರಂಗಮಠಗಳು ಒಂದಿಷ್ಟು ಜಾತಿಮುಕ್ತ ಧೋರಣೆಯ ಕೇಂದ್ರಗಳೆಂದು ಕಂಡುಬರುವುದರಿಂದ, ಪೀಠಪಂಚಕದಲ್ಲಿ ಉಜ್ಜಯಿನಿಪೀಠ ಜಾತಿವಿಷಯವಾಗಿ ಒಂದಿಷ್ಟು ಉದಾರವೆಂದು ತೋರುತ್ತದೆ.

ಹೀಗೆ ಮುಕ್ತಸಂಪ್ರದಾಯದ ಸಾರಂಗಮಠ, ಮುಕ್ತಸಂಪ್ರದಾಯದ ಬಸವಸಿದ್ಧಾಂತ, ಮುಕ್ತಸಂಪ್ರದಾಯದ ಉಜ್ಜಯಿನಿಪೀಠ - ಇವುಗಳಲ್ಲಿ ಇರಬಹುದಾದ ಪರಸ್ಪರ ಸಂಬಂಧಗಳು ಶೋಧನೀಯವೆನಿಸಿವೆ.

ಕಾಶಿ, ಕುಂಭಕೋಣ, ಪುದುಚೇರಿ, ಶಿವಗಂಗೆ, ಗುಮ್ಮಳಾಪುರ, ಕೂಡಲಸಂಗಮ, ಎಳಮೇಲಿ, ಅಫಜಲಪುರ, ಬಾಗೇವಾಡಿ, ಬೆಳ್ಳುಬ್ಬಿ, ಎರ್ರ್ಯರಿ, ಕೆಲೂರ, ಚೆಳ್ಳಗೆರೆ, ಆನೇಗುಂದಿ, ಹಂಪಿ, ಗುಳೇದಗುಡ್ಡ ಮತ್ತು ಸಿಂದಗಿ ಮೊದಲಾದ ಸ್ಥಳಗಳಲ್ಲಿ ಸಾರಂಗಮಠಗಳಿವೆ. ಇವುಗಳಲ್ಲಿಯ ದಾಖಲೆ, ಆಚರಣೆ, ಅವಶೇಷಗಳ ಅಧ್ಯಯನ ನಡೆಸಿ, ಈ ಪರಂಪರೆಯ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ಕಂಡುಹಿಡಿಯಬೇಕಾಗಿದೆ.

ಸಾರಂಗಮಠ ಸಮುದಾಯದಲ್ಲಿ ಸಿಂದಗಿಮಠ ಪ್ರಸಿದ್ಧವಾದುದು. ಪೀಠಾಧಿಕಾರಕ್ಕೆ ಸಂಬಂಧಪಟ್ಟಂತೆ 'ಪುತ್ರವರ್ಗ'ದ ಸ್ಥಾವರಸಂಸ್ಕೃತಿಗೆ ಒಳಗಾಗದೆ, 'ಶಿಷ್ಯವರ್ಗ'ದ ಜಂಗಮಸಂಸ್ಕೃತಿಗೆ, ಅದರಲ್ಲಿಯೂ ಶರಣಸಿದ್ಧಾಂತದ ಆದರ್ಶದಲ್ಲಿ ಒಂದಿಷ್ಟು ಮುಕ್ತ ಒಡನಾಟಕ್ಕೆ ಅವಕಾಶ ಮಾಡಿಕೊಟ್ಟ ಮಠವಿದು. ಇದಕ್ಕೆ ನಮ್ಮ ಕಣ್ಣ ಮುಂದಿನ ಉಜ್ವಲ ಉದಾಹರಣೆಯೆನಿಸಿದ್ದಾರೆ, ಭಕ್ತವರ್ಗದಿಂದ ಬಂದು ಗುರುಪೀಠವೇರಿದ್ದ, ಲಿಂಗೈಕ್ಯ ಶ್ರೀ ಚೆನ್ನವೀರಮಹಾಸ್ವಾಮಿಗಳು.

ಸಿಂದಗಿಯ ಸಾರಂಗಮಠದ ಇತಿಹಾಸದಲ್ಲಿ 'ನಡೆ ಚೆನ್ನ - ನುಡಿ ಚೆನ್ನ" ಎಂಬಂತೆ ಬಾಳಿದವರು, ಶ್ರೀ ಚೆನ್ನವೀರಮಹಾಸ್ವಾಮಿಗಳು. ವೀರಶೈವವೆನ್ನುವುದು ಕೇವಲ ವ್ಯಕ್ತಿಕೇಂದ್ರೀತ ಧರ್ಮವಲ್ಲ, ಸಮಾಜಕೇಂದ್ರಿತವೂ ಹೌದು. "ಲಿಂಗವ್ಯಸನ, ಜಂಗಮಪ್ರೇಮ" ಆದರ್ಶದ ಧರ್ಮವಿದು. ಈ ಆದರ್ಶವನ್ನು ಆಳಿದವರು, ಬಾಳಿದವರು ಶ್ರೀ ಚೆನ್ನವೀರಮಹಾಸ್ವಾಮಿಗಳು. "ಗುರುಸೇವೆ", "ಲಿಂಗಪೂಜೆ", "ಜಂಗಮದಾಸೋಹ"ಗಳಿಂದ ಅವರು ಗುರುಲಿಂಗಜಂಗಮಸ್ವರೂಪರಾಗಿದ್ದರು. "ಷಟ್‌ಸ್ಥಲ ಬ್ರಹ್ಮಿ"ಯಾಗಿದ್ದ ಅವರು, "ತ್ರಿವಿಧದಾಸೋಹಿ" ನೆಲೆಗೂ ವಿಸ್ತರಿಸಿಕೊಂಡಿದ್ದರು. ಲೌಕಿಕದಲ್ಲಿ ಕೃಷಿ ಇವರ ಕಾಯಕವಾಗಿದ್ದಿತು, ಶಿಕ್ಷಣ ಇವರ ದಾಸೋಹವಾಗಿದ್ದಿತು.

ಲಿಂಗೈಕ್ಯರಾದ ಸಂದರ್ಭದಲ್ಲಿ ಶ್ರೀ ಚೆನ್ನವೀರಮಹಾಸ್ವಾಮಿಗಳವರಿಗೆ ೯೮ ವರ್ಷ. ಅವರು ಇನ್ನೂ ಎರಡು ವರ್ಷವಾದರೂ ಬದುಕಬೇಕು, ನಾವೆಲ್ಲ ಅವರ ಜನ್ಮಶತಮಾನೋತ್ಸವ ಆಚರಿಸಬೇಕೆಂದು ಭಕ್ತವರ್ಗ ಬಯಸಿದ್ದಿತು. ಕೀರ್ತಿವಾರ್ತೆಯಿಂದ ದೂರವಿದ್ದ ಪೂಜ್ಯರಿಗೆ ಇದು ಒಪ್ಪಿಗೆಯಿರಲಿಲ್ಲವೇನೋ. ಪುಣ್ಯದಂತೆ ಬಂದು, ಜ್ಞಾನದಂತೆ ನಿಂದು, ಮುಕ್ತಿಯಂತೆ ಮುಕ್ತರಾದರು. ಇಂದು ಅವರ ಪರೋಕ್ಷದಲ್ಲಿ ಆಚರಿಸುತ್ತಲಿರುವ ನೂರನೆಯ ಹುಟ್ಟುಹಬ್ಬದ ಭಾಗವಾಗಿ ವೀರಶೈವ ಅರಸುಮನೆತನಗಳ ಅಧ್ಯಯನವನ್ನೊಳಗೊಂಡ 'ಸಾರಂಗಶ್ರೀ' ಹೆಸರಿನ ಸ್ಮರಣಸಂಪುಟ ಅವರ ಪುಣ್ಯನಾಮದಲ್ಲಿ ಬೆಳಕು ಕಾಣುತ್ತಲಿದೆ.

ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳಪ್ರಾಂತಗಳಲ್ಲಿ ಹರಡಿಕೊಂಡಿರುವ, ಕನ್ನಡನಾಡಿನಲ್ಲಿ ಸಾಂದ್ರವಾಗಿರುವ ವೀರಶೈವವು ಸಮಗ್ರ ದಕ್ಷಿಣಭಾರತದಲ್ಲಿ ಭೌಗೋಲಿಕವಾಗಿ ಒಂದು ಪ್ರಧಾನ ಸಮಾಜ ; ಸಾಂಸ್ಕೃತಿಕವಾಗಿ ಒಂದು ಪರಿಪೂರ್ಣ ಸಮಾಜ. ಕರ್ನಾಟಕದಲ್ಲಿ ಕೆಲವು ಸಮಾಜಗಳು ಸಂಖ್ಯಾತ್ಮಕವಾಗಿ ಗಣ್ಯವಾಗಿರಬಹುದು. ವೀರಶೈವವು ಸಂಖ್ಯಾತ್ಮಕದೊಂದಿಗೆ ಧಾರ್ಮಿಕ, ಸಾಹಿತ್ಯಿಕ, ಶೈಕ್ಷಣಿಕ, ರಾಜಕೀಯ ಮೊದಲಾದ ಆಯಾಮಗಳನ್ನು ಆಳವಡಿಸಿಕೊಂಡು ಗುಣಾತ್ಮಕವಾಗಿಯೂ

ಗಣ್ಯವೆನಿಸಿದೆ. ಈ ಅರ್ಥದಲ್ಲಿ 'ಪರಿಪೂರ್ಣ ಸಮಾಜ'ವೆಂದು ಕರೆಯಿಸಿಕೊಳ್ಳುತ್ತದೆ. ಆಧುನಿಕ ಕರ್ನಾಟಕದಲ್ಲಿ ಈ ಸಮಾಜದ ಧಾರ್ಮಿಕ, ಸಾಹಿತ್ಯಿಕ ಆಯಾಮಗಳ ಅಧ್ಯಯನ ಮಾತ್ರ ನಡೆದು, ರಾಜಕೀಯ ಅಧ್ಯಯನ ಉಪೇಕ್ಷೆಗೆ ಗುರಿಯಾಗಿದೆ. ಈ ತಪ್ಪನ್ನು ತಿದ್ದಿಕೊಳ್ಳುವ ರೀತಿಯಲ್ಲಿ ಇತ್ತೀಚೆ ಪಿಎಚ್. ಡಿ. ಅಧ್ಯಯನ, ವಿಚಾರಸಂಕಿರಣ, ಗ್ರಂಥಪ್ರಕಟನ ಕಾರ್ಯಗಳು ಅಲ್ಲಲ್ಲಿ ಜರುಗುತ್ತಲಿವೆ. ಗದುಗಿನ ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ ಜರುಗಿಸಿದ 'ಸ್ವಾದಿ ವೀರಶೈವ ಅರಸುಮನೆತನ' ವಿಚಾರಸಂಕಿರಣದ (೧೯೯೦) ಬಳಿಕ, ಇಂಥ ಮನೆತನಗಳ ಅಧ್ಯಯನ ಒಂದು ಚಳುವಳಿ ರೂಪದಲ್ಲಿ ಮುನ್ನಡೆದಿದೆ. ಈ ಎಲ್ಲ ಪ್ರಯತ್ನಗಳಿಗಿಂತ ಭಿನ್ನರೀತಿಯಲ್ಲಿ , ವ್ಯಾಪಕ ರೀತಿಯಲ್ಲಿ ಪ್ರಸ್ತುತ ಸಂಪುಟ ರೂಪಗೊಂಡು ಹೊರಬರುತ್ತಲಿದೆ.

ರಾಜಸತ್ತೆಯಿಂದ ಪ್ರಜಾಸತ್ತೆಗೆ ಹೊರಳಿದುದು ಈ ಶತಮಾನದ ಮುಖ್ಯಲಕ್ಷಣವಾಗಿದೆ. ಈ ಸಂದರ್ಭದಲ್ಲಿ ಪ್ರಧಾನಸಂಸ್ಕೃತಿಗಳಿಗಿಂತ ಉಪಸಂಸ್ಕೃತಿಗಳ ಅಧ್ಯಯನ ತುಂಬ ಮಹತ್ವಪಡೆದಿದೆ. ಅದೇ ರೀತಿ ಮುಖ್ಯ ಅರಸುಮನೆತನಗಳ ಜೊತೆ ಅಮುಖ್ಯ ಅರಸುಮನೆತನಗಳ ಅಧ್ಯಯನಕ್ಕೆ ಹೆಚ್ಚು ಅವಕಾಶ ಕೊಡಬೇಕಾಗಿದೆ. ಇದರ ಪರಿಣಾಮವೆಂಬಂತೆ ವೀರಶೈವ ರಾಜಮನೆತನಗಳ ಅಧ್ಯಯನ ಬಿಚ್ಚಿಕೊಳ್ಳುತ್ತಲಿದೆ. ಹೊಯ್ಸಳ, ಯಾದವ ಮನೆತನಗಳ ತರುವಾಯ ರಾಜಸತ್ತೆಯ ವಿಘಟನೆ ಅಸ್ತಿತ್ವಕ್ಕೆ ಬಂದು, ವಿಜಯನಗರದ ಸಮಯದಲ್ಲಿ ಪಾಳೆಗಾರರು ಅಲ್ಲಲ್ಲಿ ತಲೆಯೆತ್ತಿದರು. ಈ ಹೊತ್ತಿಗೆ ಸಂಖ್ಯಾತ್ಮಕವಾಗಿ ದೊಡ್ಡದೂ, ಗುಣಾತ್ಮಕವಾಗಿ ಗಮನಾರ್ಹವೂ ಎನಿಸಿದ್ದ ವೀರಶೈವ ಸಮಾಜವು ಸಹಜವಾಗಿಯೇ ರಾಜಕೀಯದಲ್ಲಿ ಅನಿವಾರ್ಯವೆನಿಸಿ, ಅದರಲ್ಲಿ ಬಹುಸಂಖ್ಯೆ ಪಾಳೆಯಗಾರರು ಹುಟ್ಟಿಕೊಂಡರು. ಮುಕ್ತಸಿದ್ಧಾಂತದ ಇದು ಕೆಳವರ್ಗದ ಪಾಳೆಯಗಾರರನ್ನೂ ಮತಾಂತರಿಸಿಕೊಳ್ಳುವಲ್ಲಿ, ಈ ಸಂಖ್ಯೆ ಮತ್ತೂ ವರ್ಧಿಸಿತು.

ಇವರ ಚರಿತ್ರೆಯ ನಿರ್ಮಾಣಕ್ಕೆ ನೆರವಾಗುವ ಆಕರಸಾಮಗ್ರಿಯು ಪ್ರಕಾರ ಮತ್ತು ಭಾಷೆಗಳ ದೃಷ್ಟಿಯಿಂದ ವೈವಿಧ್ಯಪೂರ್ಣವಾಗಿದೆ. ಈ ಮೊದಲಿನ ಆಕರ ಸಾಮಗ್ರಿಯಾದ ವಾಸ್ತು - ಶಿಲ್ಪ, ಶಾಸನಗಳೊಂದಿಗೆ, ಇಮ್ಮಡಿಚಿಕ್ಕಭೂಪಾಲನ ಸಾಂಗತ್ಯಗಳಂಥ ಚಾರಿತ್ರಿಕ ಕೃತಿಗಳು, ಆರಾಧ್ಯಚಾರಿತ್ರ, ಮಳೆಯರಾಜನ ಕಾವ್ಯಗಳ ಪೀಠಿಕೆಯಂಥ ಅವತರಣಿಕೆಗಳು, ದಾಖಲೆಗಳು ಇಲ್ಲಿ ಮಹತ್ವದ ಸಾಧನಗಳಾಗುತ್ತವೆ. ಜೊತೆಗೆ ಜಾನಪದ ಸಾಹಿತ್ಯ, ಆಚರಣೆಗಳು ಮುಖ್ಯವೆನಿಸುತ್ತವೆ. ಈ ಮೊದಲಿನ ಕನ್ನಡ, ಸಂಸ್ಕೃತ ಪ್ರಾಕೃತ ಭಾಷೆಗಳ ಸಾಹಿತ್ಯದ ಜೊತೆ, ತಮಿಳು, ತೆಲುಗು, ಮರಾಠಿ ಸಾಹಿತ್ಯಕೃತಿ - ದಾಖಲೆಗಳು, ವಿದೇಶೀಯ ಪೋರ್ತುಗೀಜ, ಡಚ್, ಫ್ರೆಂಚ್, ಇಂಗ್ಲಿಷ್ ಭಾಷೆಯ ದಾಖಲೆಗಳು ನೆರವಾಗುತ್ತವೆ. ಹೀಗಾಗಿ ವೀರಶೈವ ಅರಸರ ಅಧ್ಯಯನದಲ್ಲಿ ಒಂದಿಷ್ಟು ವಿಭಿನ್ನ ಆಕರಗಳನ್ನು ಅವಲಂಬಿಸಬೇಕಾಗುತ್ತದೆ.

ವೀರಶೈವ ರಾಜವರ್ಗದಲ್ಲಿ ಮೂರು ಬಗೆಗಳನ್ನು ಗುರುತಿಸಬಹುದು. ವೀರಶೈವ ಮನೆತನ ಒಂದು ಹಂತದಲ್ಲಿ ರಾಜಮನೆತನವಾದುದು. ಅವೀರಶೈವ ರಾಜಮನೆತನ ಒಂದು ಹಂತದಲ್ಲಿ ವೀರಶೈವ ರಾಜಮನೆತನವಾದುದು. ಅವೀರಶೈವ ರಾಜಮನೆತನದ ಒಬ್ಬಿಬ್ಬರು ಅರಸರು ವೀರಶೈವರಾದುದು. ಇವುಗಳಲ್ಲಿ ಎರಡನೆಯ ಬಗೆಯ ವೀರಶೈವ ರಾಜಮನೆತನಗಳ ಸಂಖ್ಯೆ ಅಧಿಕವಾಗಿದೆ. ಇದಕ್ಕೆ ಕಾರಣ. ವೀರಶೈವ ಎಲ್ಲ ವರ್ಗದವರನ್ನೂ ತನ್ನೊಳಗೆ ಬರಮಾಡಿಕೊಳ್ಳುವ ಉದಾರ ಧರ್ಮವಾಗಿರುವುದು.

"ವೀರಭೋಜ್ಯಾ ವಸುಂಧರಾ" ಎಂಬುದು ಪ್ರಾಚೀನಕಾಲದ ರಾಜನೀತಿ. ಸಾಮಾನ್ಯವಾಗಿ ಕೆಳವರ್ಗದವರೇ ವೀರರಾಗಿರುವುದು, ಆ ಕಾರಣಕ್ಕಾಗಿ ಅವರು ರಾಜರಾಗುವುದು ಸಹಜ. ಹೀಗೆ ರಾಜರಾದವರಿಗೆ ಪ್ರಾಚೀನಕಾಲದಲ್ಲಿ ಎಲ್ಲ ಬಗೆಯ ರಾಜಗೌರವಗಳಿದ್ದರೂ, ಸಮಾಜದಲ್ಲಿ ಜಾತಿಗೌರವವಿರುತ್ತಿರಲಿಲ್ಲ. ಬ್ರಾಹ್ಮಣಧರ್ಮ ಬಹುಶಃ ಮನುವಿನ ಕಾಲಕ್ಕಾಗಲೇ ಅನ್ಯಜಾತಿಯವರು ಒಳಗೆ ಬರದಂತೆ ತನ್ನ ಧರ್ಮದ್ವಾರವನ್ನು ಮುಚ್ಚಿಕೊಂಡಿದ್ದಿತು. ಹೀಗೆ ಅದು ಮುಚ್ಚಿಕೊಳ್ಳುತ್ತಲೇ ತೆರೆದ ಬಾಗಿಲಿನಿಂದ ಮುಂದೆ ಬಂದ ಜೈನಧರ್ಮವು, ಕೆಲವು ವರ್ಷ ಎಲ್ಲರನ್ನೂ ಬರಮಾಡಿಕೊಂಡು, ೧೧ನೆ ಶತಮಾನದ ಹೊತ್ತಿಗೆ ತನ್ನ ಬಾಗಿಲುಗಳನ್ನೂ ಮುಚ್ಚಿಕೊಂಡಿತು. ಇಂಥ ಸಂದರ್ಭದಲ್ಲಿ ಬಸವಣ್ಣನಿಂದಾಗಿ ತೆರೆದ ಬಾಗಿಲಿನ ವೀರಶೈವ ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದಿತು. ಈಗ ರಾಜರೂ ಸೇರಿದಂತೆ ಕೆಳಜಾತಿಯವರಿಗೆ ಜಾತಿಗೌರವ ಸಂಪಾದಿಸಲು ಕರ್ನಾಟಕದಲ್ಲಿ ವೀರಶೈವವೊಂದೇ ಅನುಕೂಲ ನೆಲೆಯಾಗಿ ಪರಿಣಮಿಸಿತು.

ಈ ಘಟ್ಟದಲ್ಲಿ ಬಹಳೆಂದರೆ ಬ್ರಾಹ್ಮಣರು ರಾಜರಿಗೆ ಸೂರ್ಯವಂಶ, ಚಂದ್ರವಂಶ ಇತ್ಯಾದಿ ಕೃತಕ ವಂಶಾವಳಿಗಳನ್ನು ದಯಪಾಲಿಸುತ್ತಿದ್ದರೇ ಹೊರತು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಜೈನರು ಬಹಳವೆಂದರೆ ರಾಜರಿಗೆ ಆತ್ಮೋದ್ಧಾರ ಮಾಡಿಕೊಳ್ಳಲು ಮಂತ್ರದೀಕ್ಷೆ ದಯಪಾಲಿಸುತ್ತಿದ್ದರೇ ಹೊರತು ಜೈನರನ್ನಾಗಿ ಪರಿವರ್ತಿಸಿಕೊಳ್ಳುತ್ತಿರಲಿಲ್ಲ. ಹೀಗೆ ಈ ಎರಡೂ ಧರ್ಮಗಳು ರಾಜರನ್ನು ಮಾತಿನಮಟ್ಟದಲ್ಲಿ ಉದ್ಧಾರಮಾಡುತ್ತಿದ್ದವೇ ಹೊರತು, ಕೃತಿರೂಪದಲ್ಲಲ್ಲ. ಹೀಗಾಗಿ ಕೃತಕ ವಂಶಾವಳಿ ಕಟ್ಟಿಕೊಂಡ ಮೇಲೆಯೂ, ಸಾಮಾಜಿಕವಾಗಿ ಅಪ್ರಯೋಜಕವೆನಿಸುವ ಮಂತ್ರ ಕೇಳಿಸಿಕೊಂಡ ಮೇಲೆಯೂ ರಾಜನಾದವನು ತನ್ನ ಪರಿಸರದಲ್ಲಿ ಕೀಳುಜಾತಿಯವನಾಗಿಯೇ ಕಾಣಿಸಿಕೊಳ್ಳುತ್ತಿದ್ದ. ಇಂಥ ಸಂದರ್ಭದಲ್ಲಿ ಜನತೆಯನ್ನು ಕಾಯಾ - ವಾಚಾ - ಮನಸಾ ಮತಾಂತರಿಸಿಕೊಳ್ಳುವ ಹೊಸ ಚಳುವಳಿಯನ್ನೇ ಪ್ರಾರಂಭಿಸಿದ ವೀರಶೈವ, ಜಾತಿಯ ಕೀಳರಿಮೆಯಿಂದ ನರಳುತ್ತಲಿದ್ದ ರಾಜಮನೆತನಗಳಿಗೆ ದೊಡ್ಡ ವರವಾಗಿ ಪರಿಣಮಿಸಿತು. ಆಗ ಆ ಮನೆತನಗಳು ಒಂದೊಂದಾಗಿ ವೀರಶೈವಕ್ಕೆ ಮತಾಂತರಗೊಳ್ಳತೊಡಗಿದವು : ಕೆಲವೊಮ್ಮೆ ರಾಜಮನೆತನದ ಒಬ್ಬಿಬ್ಬರು ಮತಾಂತರಗೊಂಡರು. ಹೀಗೆ ವೈದಿಕ, ಜೈನವೆಂಬ ಪ್ರತಿಷ್ಠಿತ ಆದರೆ ಬದ್ಧಸಮಾಜ (Close Society)ಗಳಿಂದ ವಂಚಿತರಾದ ರಾಜರು, ವೀರಶೈವವೆಂಬ ಪ್ರತಿಷ್ಠಿತ ಆದರೆ ಮುಕ್ತಸಮಾಜಕ್ಕೆ (Open Society) ಧಾವಿಸಿ ಬಂದರು.ಈ ಕ್ರಿಯೆ ೧೨ನೆಯ ಶತಮಾನದಲ್ಲಿಯೇ ಪ್ರಾರಂಭವಾದಂತಿದೆ. ದೇವಗಿರಿಯ ಯಾದವ ರಾಮರಾಯ, ಗೋವೆಯ ಕದಂಬ ವಜ್ರರಾಯ ವೀರಶೈವರಾಗಿರುವ ಸಾಧ್ಯತೆಯಿದೆ. ಹಗರಟಗೆ ಬೈಸರಸ, ಕುರುಗೋಡು ಸಿಂದರವು ವೀರಶೈವ ರಾಜಮನೆತನಗಳೇ ಆಗಿವೆ.

ವಿಜಯನಗರ ಕಾಲದಲ್ಲಿ ಉದ್ಭವಿಸಿದ ಹೊಸಬಗೆಯ ಆಡಳಿತದ ವ್ಯವಸ್ಥೆಯಿಂದಾಗಿ ಪಾಳೆಯಗಾರರು ಆಗ ಬಹುಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬಂದು, ಕೊನೆ ಕೊನೆಗೆ ಇವರೆಲ್ಲ ಸ್ವತಂತ್ರರೆಂಬಂತೆ ವರ್ತಿಸತೊಡಗಿದರು. ಈ ಸಂದರ್ಭದಲ್ಲಿ ತೋಂಟದ ಸಿದ್ಧಲಿಂಗಯತಿಗಳು ವೀರಶೈವ ನೇತಾರರಾದುದು ಒಂದು ಮಹತ್ವದ ಘಟನೆ. 'ಅಲ್ಲಮಪ್ರಭು ಸಂಪ್ರದಾಯ'ವನ್ನು ಮರುಸ್ಥಾಪನೆ ಮಾಡಿ 'ದ್ವಿತೀಯ ಅಲ್ಲಮ'ನೆನಿಸಿದ ಇವರು ಕಾರಣವಾಗಿ, ೧೨ನೆಯ ಶತಮಾನದ ಶರಣ ಚಳುವಳಿಯು, ೧೬ನೆಯ ಶತಮಾನದಲ್ಲಿ ಮರುಹುಟ್ಟು ಪಡೆಯಿತು. ಆಗ ಜಾತಿಯ ಕೀಳರಿಮೆಯಿಂದ ಮುಕ್ತರಾಗಲು ತುದಿಗಾಲ

ಮೇಲೆ ನಿಂತಿದ್ದ ಕೆಳವರ್ಗದ ಪಾಳೆಯಗಾರರ ಮನೆತನಗಳನ್ನು ಇವರು, ಇವರ ಶಿಷ್ಯರು ವೀರಶೈವಕ್ಕೆ ಬರಮಾಡಿಕೊಂಡರು. ಹೀಗಾಗಿ ಈ ಕಾಲದ ಕರ್ನಾಟಕದಲ್ಲಿ ವೀರಶೈವ ರಾಜಮನೆತನಗಳು ಒಮ್ಮೆಲೇ ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಂಡವು.

ಹೀಗೆ ಅಪ್ರತಿಷ್ಠಿತ ವರ್ಗದವರಂತೆ ಪ್ರತಿಷ್ಠಿತ ವರ್ಗದವರಾದ ಜೈನಧರ್ಮೀಯ ಅರಸರು ವೀರಶೈವರಾದುದಕ್ಕೆ ಬೇರೆ ಕಾರಣಗಳಿವೆ. ಹನ್ನೊಂದನೆಯ ಶತಮಾನದ ಹೊತ್ತಿಗೆ ತನ್ನ ಕಠೋರ ಆಚರಣೆ, ಅನ್ಯಧರ್ಮಗಳ ದಾಳಿ ಕಾರಣವಾಗಿ ಕರ್ನಾಟಕದ ಜೈನಧರ್ಮ ಕ್ರಮೇಣ ದುರ್ಬಲವಾಗುತ್ತ ಬಂದಿತು. ಈಗ ಸ್ವಸಂತೋಷದಿಂದ ಇಲ್ಲವೆ ಸಾಂದರ್ಭಿಕ ಒತ್ತಡಗಳಿಂದಾಗಿ ಜೈನಧರ್ಮವನ್ನು ಬಿಡಬೇಕಾಗಿ ಬಂದ ಸನ್ನಿವೇಶದಲ್ಲಿ, ಅವರಿಗೆ ತೆರೆದ ಬಾಗಿಲಿನ ಏಕೈಕ ಧರ್ಮವಾದ ವೀರಶೈವ ಅನುಕೂಲಕರವಾಗಿ ಕಂಡುಬಂದಿತು. ಹೀಗಾಗಿ ಜೈನಪ್ರಜೆಗಳು, ಅವರೊಂದಿಗೆ ಜೈನರಾಜರು ವೀರಶೈವದಲ್ಲಿ ಪ್ರವೇಶ ಪಡೆಯುತ್ತ ಹೋದರು. ಒಟ್ಟಿನಲ್ಲಿ ಮತಾಂತರಿತ ವೀರಶೈವ ರಾಜಮನೆತನಗಳಲ್ಲಿ ಕೆಳವರ್ಣದಿಂದಲೂ, ಜೈನಧರ್ಮದಿಂದಲೂ ಬಂದವುಗಳ ಸಂಖ್ಯೆ ಅಧಿಕವಾಗಿದೆ. ಅಪವಾದವೆಂಬಂತೆ ಯಾವುದೋ ಕಾರಣಕ್ಕಾಗಿ ಬ್ರಾಹ್ಮಣ ಅರಸರು ಇಲ್ಲವೆ ಅರಸುಮನೆತನಗಳು ವೀರಶೈವಕ್ಕೆ ಮತಾಂತರಗೊಂಡಿವೆ. ಹೀಗಾಗಿ ವೀರಶೈವ ರಾಜಮನೆತನಗಳ ಸಂಖ್ಯೆ ವಿಜಯನಗರೋತ್ತರ ಕಾಲದಲ್ಲಿ ವರ್ಧಿಸುತ್ತ ಬಂದಿದೆ.

ಈ ಎಲ್ಲ ಅರಸರ, ಅರಸುಮನೆತನಗಳ ವಿವರವಾದ ಅಧ್ಯಯನ ಇಂದು ಅವಶ್ಯ ನಡೆಯಬೇಕಾಗಿದೆ. ಈ ಕೊರತೆಯನ್ನು ತುಂಬಿಕೊಡುವ ಒಂದು ಪ್ರಯತ್ನವಾಗಿದೆ, ಈ ಸಂಪುಟ. ಈ ಕೃತಿಯ ಪ್ರಾರಂಭದಲ್ಲಿ ಎರಡು ಪ್ರಬಂಧಗಳನ್ನು ಜೋಡಿಸಲಾಗಿದೆ : ಒಂದು : ಡಾ. ಫ. ಗು. ಹಳಕಟ್ಟಿಯವರು ಬರೆದ 'ಶ್ರೀ ಸಾರಂಗಮಠಾಧೀಶರು' ಹೆಸರಿನದು. ಅನೇಕ ಮೂಲಗಳನ್ನು ಆಧರಿಸಿ ಬರೆದ ಇದು ಈ ಮಠ ಪರಂಪರೆಯನ್ನು ಚಿತ್ರಿಸುವ ವ್ಯಾಪಕ ಪ್ರಯತ್ನವಾಗಿದೆ. ಐತಿಹಾಸಿಕ ಮಹತ್ವವುಳ್ಳ ಇದನ್ನು ಪ್ರಾರಂಭದಲ್ಲಿ ಜೋಡಿಸಿದ್ದೇವೆ. ಸಾರಂಗಮಠ ಪರಂಪರೆಯ ಪ್ರಾತಃಸ್ಮರಣೀಯ ಉತ್ತರಾಧಿಕಾರಿಯಾಗಿದ್ದ, ಜನ್ಮಶತಮಾನೋತ್ಸವ ಗೌರವಕ್ಕೆ ವಸ್ತುವಾಗಿರುವ ಶ್ರೀ ಚೆನ್ನವೀರಸ್ವಾಮಿಗಳನ್ನು ಕುರಿತುದು, ಇನ್ನೊಂದು ಪ್ರಬಂಧ. ಇದನ್ನು ಬರೆದವರು ಪೂಜ್ಯರನ್ನು ಸಮೀಪದಿಂದ ಬಲ್ಲ, ಅವರು ಸ್ಥಾಪಿಸಿರುವ ಕಾಲೇಜಿನ ಪ್ರಾಚಾರ್ಯರಾಗಿರುವ ಶ್ರೀ ಬಿ. ಎಂ. ಬಿರಾದಾರ ಅವರು. ಇವೆರಡನ್ನು ಬಿಟ್ಟರೆ "ವೀರಶೈವ ಅರಸುಮನೆತನಗಳು" ಹೆಸರಿನ ಸಂಶೋಧನ ಪ್ರಬಂಧಗಳು ಇಲ್ಲಿವೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಆಳಿದ ವೀರಶೈವ ೨೫ ಅರಸುಮನೆತನಗಳ ಕ್ರೋಢೀಕೃತ ಪ್ರಥಮ ರಚನೆಯಿದು. ಇದನ್ನು ಸಂಪುಟ - ೧ ಎಂದು ಕರೆಯಬಹುದು. ವಿದ್ವಾಂಸರು ಮಿಕ್ಕ ವೀರಶೈವ ಅರಸುಮನೆತನಗಳ ಚರಿತ್ರೆಯನ್ನು ಸಂಪುಟ - ೨, ಸಂಪುಟ - ೩ ಹೀಗೆ ಕ್ರಮವಾಗಿ ಪ್ರಕಟಿಸುವರೆಂದೂ,, ಜೊತೆಗೆ ಇಲ್ಲಿಯ ಒಂದೊಂದು ಮನೆತನವನ್ನು ನೀಲನಕ್ಷೆಯಾಗಿಟ್ಟುಕೊಂಡು, ಸ್ವತಂತ್ರ ಕೃತಿ ಕಟ್ಟಡಗಳನ್ನು ನಿರ್ಮಿಸುವರೆಂದೂ ಆಶಿಸುತ್ತೇನೆ. ಈ ಎರಡು ಕಾರ್ಯಗಳು ಪೂರ್ಣಗೊಂಡರೆ ವೀರಶೈವ ಅರಸುಮನೆತನಗಳ ಒಂದು ಸಮಗ್ರಚಿತ್ರ, ಕರ್ನಾಟಕದ ಸುದೀರ್ಘ ರಾಜಕೀಯ ಇತಿಹಾಸದಲ್ಲಿ ಎದ್ದು ಕಾಣುತ್ತದೆ.

ಈ ಸಂಪುಟದ ಸಂಪಾದನೆಯ ಹೊಣೆಯನ್ನು ನಾನು ಹೊರಬೇಕಾಗಿ ಬಂದುದು ಅನಿವಾರ್ಯವೂ ಹೌದು, ಅನಪೇಕ್ಷಿತವೂ ಹೌದು. ಯರಗಲ್ಲ ಗ್ರಾಮದವನಾದ ನಾನು ಒಂದರ್ಥದಲ್ಲಿ ತಾಲೂಕು ಸ್ಥಳವಾದ ಸಿಂದಗಿಯವನೂ ಆಗಿದ್ದೇನೆ. ಹೀಗಾಗಿ ಈ ಹೊಣೆಯನ್ನು ನನಗೆ ಹೊರಿಸುವುದು ನ್ಯಾಯವೂ, ನಾನು ಹೊತ್ತುಕೊಳ್ಳುವುದು ಅನಿವಾರ್ಯವೂ ಆಯಿತು. ಪೂಜ್ಯ ಶ್ರೀ ಚೆನ್ನವೀರ ಮಹಾಸ್ವಾಮಿಗಳ

ಶತಮಾನೋತ್ಸವ ಗೌರವಗ್ರಂಥದ ಮಾತುಗಳು ಆಗಾಗ ಕೇಳಿಬರುತ್ತಿದ್ದವು. ಈ ಬಗ್ಗೆ ಎರಡು ಒಳ್ಳೆಯ ಮಾತುಗಳನ್ನಾಡಿದರೂ ಸಾಕು, ಅದು ನನ್ನ ಕೊರಳಿಗೇ ಬೀಳುವುದೆಂದು ಎರಡು ವರ್ಷಗಳಿಂದ ಸ್ವಲ್ಪ ದೂರವೇ ಉಳಿದಿದ್ದೇನು.

ಗದುಗಿನ ಪೂಜ್ಯ ಶ್ರೀ ತೋಂಟದಾರ್ಯ ಜಗದ್ಗುರುಗಳ ಜನ್ಮಗ್ರಾಮ, ಸಿಂದಗಿ. ಅವರಿಗೆ ೧೯೯೩ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಿ. ಲಿಟ್. ಪದವಿ ಪ್ರಾಪ್ತವಾದ ನಿಮಿತ್ತ, ಸಿಂದಗಿಯ ಸಮಸ್ತಭಕ್ತರು ಪೂಜ್ಯ ಶ್ರೀ ಪ್ರಭುಸಾರಂಗದೇವ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ "ಗುರುವಂದನ" ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಅನೇಕ ಕಾರಣಗಳಿಂದಾಗಿ ಈ ಕಾರ್ಯಕ್ರಮದಲ್ಲಿ ಸ್ವಲ್ಪ ಗಾಢವಾಗಿಯೇ ಭಾಗವಹಿಸುವುದು ನನ್ನ ಕರ್ತವ್ಯವಾಗಿದ್ದಿತು. ಕಾರ್ಯಕ್ರಮ ಅರ್ಥಪೂರ್ಣವಾಗಿ ಜರುಗಿದ ಮರುಕ್ಷಣದಲ್ಲಿಯೇ ಈ ಸಂಪುಟದ ಹೊಣೆ ನನ್ನ ಹೆಗಲಿಗೇರುವ ವಾತಾವರಣ ನಿರ್ಮಾಣವಾಯಿತು. ನಿರಾಕರಿಸದ ಸ್ಥಿಯಿಲ್ಲಿ ಸ್ವೀಕರಿಸಿದೆ. "ವೀರಶೈವ ಅರಸುಮನೆತನಗಳು" ಹೆಸರಿನ ಸಂಪುಟವನ್ನು ರೂಪಿಸಲು ಅಂದೇ ನಿರ್ಣಯಿಸಲಾಯಿತು. ನನ್ನ ಬಿನ್ನಹವನ್ನು ಮನ್ನಿಸಿ ವಿದ್ವಾಂಸರು "ಸಲಹಾ ಸಮಿತಿ"ಯ ಸದಸ್ಯರಾಗಲು ತಮ್ಮ ಸಮ್ಮತಿ ನೀಡಿದರು. ಇತಿಹಾಸತಜ್ಞರು ಲೇಖನ ಪೂರೈಸಿದರು. ಇವರೆಲ್ಲರಿಗೂ ಕೃತಜ್ಞನಾಗಿದ್ದೇನೆ. ಈ ಕೆಲಸ ನನ್ನ ಧೋರಣೆಗೆ ಅನುಗುಣವಾಗಿ ಮುಂದುವರಿಯಲು ಅವಕಾಶ ಮಾಡಿಕೊಟ್ಟ, ಪೂಜ್ಯ ಶ್ರೀ ಪ್ರಭುಸಾರಂಗದೇವ ಶಿವಾಚಾರ್ಯರಿಗೆ ಪ್ರಣಾಮಗಳನ್ನು ಸಲ್ಲಿಸುತ್ತೇನೆ. ಶ್ರೀಮಠದ ಸಮಸ್ತ ಭಕ್ತರಿಗೆ, ಅಂದವಾಗಿ ಅಚ್ಚಿಸಿದ ಧಾರವಾಡದ ಶ್ರೀ ರವಿ ಆಕಳವಾಡಿ ಅವರಿಗೆ, ಅಚ್ಚಿನ ಕಾರ್ಯದಲ್ಲಿ ನೆರವಾದ ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಶ್ರೀ ಎಸ್. ಬಿ. ಹಿರೇಮಠ ಅವರಿಗೆ ಋಣಿಯಾಗಿದ್ದೇನೆ.

---

* ಪ್ರಥಮ ಆವೃತ್ತಿ : ಚೆನ್ನವೀರಸ್ವಾಮೀಜೀ ಪ್ರತಿಷ್ಠಾನ, ಸಿಂದಗಿ.

ಆಕರ : ಮಾರ್ಗ ಸಂಪುಟ–೫

■■

೩೩೫

ಜಾನಪದ ಸಾಹಿತ್ಯ ದರ್ಶನ : ೧೨

೧೯೯೪

ಪ್ರಜಾಸತ್ತಾತ್ಮಕ ಯುಗದಲ್ಲಿ ಶ್ರೀಸಾಮಾನ್ಯನೇ ಸಮಾಜದ ಮೂಲಘಟಕ. ಹಿಂದೆ ರಾಜ - ಮಹಾರಾಜರು, ಚಕ್ರವರ್ತಿಗಳು ಸಾಹಿತ್ಯ - ಸಂಸ್ಕೃತಿಗಳ ಕೇಂದ್ರಬಿಂದುವಾಗಿದ್ದರೆ, ಇಂದು ಶ್ರೀಸಾಮಾನ್ಯನೇ ಅದರ ಅಧಿದೈವನಾಗಿದ್ದಾನೆ. ಹೀಗಾಗಿ ಪ್ರಪಂಚದಾದ್ಯಂತ ನಡೆದ ಉತ್ಕ್ರಾಂತಿಯ ಸಮುದ್ರಮಥನದಿಂದ

ಹೊರಬಂದ ಆತನಿಗೆ ಸಂಬಂಧಪಟ್ಟ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಭ್ಯಾಸಕ್ಕೆ ವಿಶ್ವವಿದ್ಯಾಲಯಗಳಲ್ಲಿ ಗಣ್ಯಸ್ಥಾನ ದೊರೆತಿದೆ, ದೊರೆಯುತ್ತಲಿದೆ.

ಕನ್ನಡ ಸಾಹಿತ್ಯ, ಸಂಸ್ಕೃತಿಗಳ ವಿವಿಧ ಮುಖಗಳ ದರ್ಶನ - ಪ್ರದರ್ಶನಗಳ ಅಭ್ಯಾಸ - ಅಭಿವೃದ್ಧಿಗಳನ್ನು ಲಕ್ಷದಲ್ಲಿಟ್ಟುಕೊಂಡು ಪ್ರಾರಂಭವಾದ ಕರ್ನಾಟಕ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನಪೀಠ' ಶ್ರೀಸಾಮಾನ್ಯನ ಬದುಕಿನ ಸಂವೇದನೆಗಳನ್ನು ಅರ್ಥಮಾಡಿಕೊಂಡಿದೆ. ಈಗಾಗಲೇ ಪ್ರಾರಂಭಿಸಿದ ಜಾನಪದ ಎಂ. ಎ. ಅಭ್ಯಾಸ ಕ್ರಮವೇ ಇದಕ್ಕೆ ನಿದರ್ಶನವಾಗಿದೆ. ಕೇವಲ ಅಧ್ಯಯನವಷ್ಟೇ ಅಲ್ಲ, ಜಾನಪದಕ್ಕೆ ಸಂಬಂಧಪಟ್ಟಂತೆ ಗ್ರಂಥಪ್ರಕಟನೆ ವೊದಲಾದ ಕಾರ್ಯಕಲಾಪಗಳನ್ನು ಮೊದಲಿನಿಂದಲೂ ಕೈಗೆತ್ತಿಕೊಳ್ಳಲಾಗಿದೆ.

೧೯೮೩ - ೮೪ರಲ್ಲಿ ಪ್ರಾರಂಭಿಸಿದ ಜನಪದ ವಸ್ತುಸಂಗ್ರಹಾಲಯ ಈ ದಿಸೆಯಲ್ಲಿ ಇನ್ನೊಂದು ಹೆಜ್ಜೆ. ಈ ಅವಧಿಯಲ್ಲಿ ಅಣ್ಣಿಗೇರಿ, ಗದಗ, ಹುಬ್ಬಳ್ಳಿ, ಶಿರಹಟ್ಟಿ, ಡಂಬಳ, ಗೋಕಾಕ, ಮುಂಡರಗಿ ವೊದಲಾದ ಗ್ರಾಮಗಳಿಂದ ಜಾನಪದ ವಸ್ತುಗಳನ್ನು ಸಂಗ್ರಹಿಸಿ ವಸ್ತುಸಂಗ್ರಹಾಲಯವನ್ನು ಆರಂಭಿಸಲಾಗಿದೆ.

೧೯೮೪ - ೮೫ರಲ್ಲಿ ವಿದ್ಯಾರ್ಥಿಗಳ ಮತ್ತು ಪ್ರಾಧ್ಯಾಪಕರ ಗಾಢ ಅಧ್ಯಯನಕ್ಕೋಸುಗ ಜಾನಪದ ಕಲಾತಂಡಗಳನ್ನು ಅಧ್ಯಯನಪೀಠಕ್ಕೆ ಆಮಂತ್ರಿಸಿ, ಅವುಗಳ ಸಮಗ್ರ "ಅನ್ವಯಿಕ ಅಧ್ಯಯನ" ನಡೆಯಿಸುವ ಉಪಕ್ರಮವನ್ನು ಪ್ರಾರಂಭಿಸಲಾಗಿದೆ.

ಹೀಗೆ ಜಾನಪದಕ್ಕೆ ಸಂಬಂಧಪಟ್ಟಂತೆ ಪ್ರಾರಂಭಿಸಿದ ಅನೇಕ ಉಪಕ್ರಮಗಳಲ್ಲಿ 'ಅಖಿಲ ಕರ್ನಾಟಕ ಜಾನಪದ ಸಮ್ಮೇಲನ'ವೂ ಒಂದು. ೧೯೭೩ನೆಯ ಜನೆವರಿ ತಿಂಗಳು ನಡೆದ ಜಾನಪದ ಪ್ರಥಮ ಸಮ್ಮೇಳನ ಚಿರಸ್ಮರಣೀಯ. ಸಮ್ಮೇಳನದ ಮಹತ್ವವನ್ನು ಅರಿತ ವಿಶ್ವವಿದ್ಯಾಲಯ ಪ್ರತಿವರ್ಷವೂ ಅದು ನಡೆಯಲೆಂದು ಅನುಮತಿ ನೀಡಿತು, ಕನ್ನಡ ಅಧ್ಯಯನಪೀಠದ ಧೋರಣೆಯನ್ನು ಪುರಸ್ಕರಿಸಿತು. ಮೊದಲಿನ ಕೆಲವು ಸಮ್ಮೇಳನಗಳನ್ನು ಧಾರವಾಡದಲ್ಲಿಯೇ ಜರುಗಿಸಿದ ಕನ್ನಡ ಅಧ್ಯಯನಪೀಠ ಆಮೇಲೆ ಅವುಗಳನ್ನು ಗುಲಬರ್ಗಾ, ಇಳಕಲ್ಲ, ಗದಗ, ಬನಹಟ್ಟಿ, ಲಕ್ಷ್ಮೇಶ್ವರ, ಅಂಕೋಲಾ, ಸವದತ್ತಿಗಳಲ್ಲಿ ನೆರವೇರಿಸಿತು. ಈ ಮಾಲಿಕೆಯಲ್ಲಿ ೧೨ನೆಯ ಸಮ್ಮೇಲನ ಬೆಳಗಾವಿಯ ಸ್ನಾತಕೋತ್ತರ ಆವರಣದ ಆಶ್ರಯದಲ್ಲಿ ೧೯೮೫ ಜನೆವರಿ ೩೦, ೩೧ರಂದು ತುಂಬ ಯಶಸ್ವಿಯಾಗಿ ಜರುಗಿತು.

ಕನ್ನಡ ಸುಪ್ರಸಿದ್ಧ ವಿದ್ವಾಂಸರೂ, ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳೂ ಆದ ಡಾ. ಆರ್. ಸಿ. ಹಿರೇಮಠ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಸಮ್ಮೇಳನವನ್ನು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ಜಿ. ದೇಸಾಯಿ ಅವರು ಉದ್ಘಾಟಿಸಿದರು. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟ ಕಾಲೇಜುಗಳ ಕನ್ನಡ ಅಧ್ಯಾಪಕರು ಮೊದಲಬಾರಿಗೆ ಇಲ್ಲಿ ಸಮಾವೇಶಗೊಂಡುದು ಈ ಸಮ್ಮೇಲನದ ವೈಶಿಷ್ಟ್ಯವಾಗಿದ್ದಿತು. ಇವರಲ್ಲದೆ ಬೇರೆಬೇರೆ ಭಾಗಗಳಿಂದ ಸಾಹಿತಿಗಳೂ, ಪ್ರೇಕ್ಷಕರೂ ಇಲ್ಲಿ ಉಪಸ್ಥಿತರಿದ್ದರು.

ಈ ಸಮ್ಮೇಳನದ ಅಂಗವಾಗಿ 'ಆಕಾಶ ಜಾನಪದ' ಹೆಸರಿನ ವಿಚಾರಸಂಕಿರಣವನ್ನು ಹೀಗೆ ಯೋಜಿಸಲಾಗಿದ್ದಿತು.

ಗೋಷ್ಠಿ ಒಂದು : ಆಕಾಶ ಜಾನಪದ

ಸೂರ್ಯ - ಡಾ. ಅಂಬಳಿಕೆ ಹಿರಿಯಣ್ಣ, ಮೈಸೂರು.

ಚಂದ್ರ - ಡಾ. ಪಿ. ಕೆ. ಖಂಡೋಬಾ, ಬಾಗಿಲುಕೋಟೆ.

ಆಕಾಶ - ಡಾ. ಬಿ. ಎ. ವಿವೇಕ ರೈ, ಮಂಗಳೂರು.

ಗೋಷ್ಠಿ ಎರಡು : ಆಕಾಶ ಜಾನಪದ

ಮೋಡ - ಮಳೆ - ಡಾ. ಕೆ. ಆರ್. ಸಂಧ್ಯಾರೆಡ್ಡಿ, ಬೆಂಗಳೂರು.

ಗಾಳಿ - ಶ್ರೀ ಸಿ. ಕೆ. ನಾವಲಗಿ, ಧಾರವಾಡ.

ಗ್ರಹ - ನಕ್ಷತ್ರ - ಡಾ. ಮ. ಗು. ಬಿರಾದಾರ, ಗುಲಬರ್ಗಾ

ಗೋಷ್ಠಿ ಮೂರು : ಆಕಾಶ ಜಾನಪದ

ನಿಗ್ರೋ ಜನಾಂಗದಲ್ಲಿ ಆಕಾಶ ಜಾನಪದ

- ಡಾ. ಯು. ಪಿ. ಉಪಾಧ್ಯಾಯ, ಉಡುಪಿ

ರೆಡ್ ಇಂಡಿಯನ್ (ಅಮೇರಿಕಾ) ಬುಡಕಟ್ಟು ಜನಾಂಗದಲ್ಲಿ ಆಕಾಶ ಜಾನಪದ

- ಡಾ. ಬಿ. ಜಿ. ಹಳಬರ, ಧಾರವಾಡ.

ಭಾರತದ ಬುಡಕಟ್ಟು ಜನಾಂಗದಲ್ಲಿ ಆಕಾಶ ಜಾನಪದ

- ಡಾ. ಕೆ. ಜಿ. ಗುರುಮೂರ್ತಿ, ಧಾರವಾಡ.

ಈ ಮೂರು ಗೋಷ್ಠಿಗಳ ಅಧ್ಯಕ್ಷತೆಯನ್ನು ಕ್ರಮವಾಗಿ ಡಾ. ಬಿ. ಎ. ವಿವೇಕ ರೈ, ಡಾ. ಮ. ಗು. ಬಿರಾದಾರ, ಡಾ. ಕೆ. ಜಿ. ಗುರುಮೂರ್ತಿ ಅವರು ವಹಿಸಿದ್ದರು. ವಿದ್ವಾಂಸರಿಂದ ಪ್ರೌಢಪ್ರಬಂಧಗಳ ಮಂಡನೆ, ಶ್ರೋತೃಗಳಿಂದ ಪ್ರಶ್ನೆ ಕೇಳುವಿಕೆ - ಉತ್ತರ ಪಡೆಯುವಿಕೆಯಿಂದಾಗಿ ಈ ಗೋಷ್ಠಿಗಳು ತುಂಬ ಲವಲವಿಕೆಯಿಂದ ಕೂಡಿದ್ದವು. ಕೊನೆಯ ದಿನ ಕನ್ನಡ ಸಾಹಿತ್ಯಪರಿಷತ್ತಿನ ಅಧ್ಯಕ್ಷರಾದ ಶ್ರೀ ಹಂಪ, ನಾಗರಾಜ ಅವರು ಮುಕ್ತಾಯ ಸಮಾರಂಭದ ಅತಿಥಿಗಳಾಗಿ ಆಗಮಿಸಿದ್ದರು.

ಎರಡೂ ದಿನ ರಾತ್ರಿ ವೈವಿಧ್ಯಪೂರ್ಣ ಜಾನಪದ ಕಲಾಪ್ರದರ್ಶನ ಜರುಗಿತು. ಗೀತ - ನರ್ತನ, ವಾದ್ಯ, ಅಭಿನಯ ಇತ್ಯಾದಿಗಳು ನಮ್ಮ ಜಾನಪದರ ಕಲಾನೈಪುಣ್ಯಕ್ಕೆ ಸಾಕ್ಷಿಯೆನಿಸಿದ್ದವು.

ಈ ಹಿಂದಿನ ಸಮ್ಮೇಳನಗಳಿಗಿಂತ ಈ ಸಮ್ಮೇಲನ ಅನೇಕ ದೃಷ್ಟಿಗಳಿಂದ ವೈಶಿಷ್ಟ್ಯಪೂರ್ಣವೆನಿಸಿದ್ದಿತು. 'ಆಕಾಶ ಜಾನಪದ' ಎಂಬ ಹೆಸರೇ ವಿದ್ವಾಂಸರಿಗೆ ಕುತೂಹಲ ಹುಟ್ಟಿಸಿದ್ದಿತು. 'ಜಗತ್ತಿನಲ್ಲಿಯೇ ಈ ವಿಷಯವನ್ನು ಕುರಿತು ನಡೆದ ಪ್ರಥಮ ಸಮ್ಮೇಲನವಿದು' ಎಂದು ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಬಿ. ಎ. ವಿವೇಕ ರೈ ಅವರು, 'ಒಂದು ವಿಶ್ವವಿದ್ಯಾಲಯದ ಒಂದು ವಿಭಾಗ ನಿರಂತರವಾಗಿ ೧೨ ಸಮ್ಮೇಳನ ನಡೆಸುತ್ತಿರುವುದು ಇಡಿ ಭಾರತದಲ್ಲಿಯೇ ಏಕೈಕ ಉದಾಹರಣೆ' ಎಂದು ಮೈಸೂರು ವಿಶ್ವವಿದ್ಯಾಲಯದ ಜಾನಪದ ಪ್ರಾಧ್ಯಾಪಕ ಡಾ. ಜೀ. ಶಂ. ಪರಮಶಿವಯ್ಯ ಅವರು ಬಹಿರಂಗವಾಗಿ ಹೇಳಿದ ಮಾತುಗಳು ಈ ವಿಚಾರಸಂಕಿರಣದ, ಈ ಸಮ್ಮೇಳನದ ಮೌಲಿಕತೆಗೆ ಸಾಕ್ಷಿಯೆನಿಸಿದವು.

ಈ ಸಮ್ಮೇಳನದಲ್ಲಿ ಓದಿದ ಪ್ರಬಂಧಗಳು ಇಲ್ಲಿ ಗ್ರಂಥರೂಪದಿಂದ ಹೊರಬರುತ್ತಲಿವೆ. ಜನಪದ ಕ್ಷೇತ್ರದಲ್ಲಿಯೇ ವಿಶಿಷ್ಟ ಕೃತಿಯೆನಿಸುವ ಈ ಗ್ರಂಥವನ್ನು ವಿದ್ವಾಂಸರು ಬರಮಾಡಿಕೊಳ್ಳುವರೆಂದು ಆಶಿಸುತ್ತೇನೆ. ಸಮ್ಮೇಲನದ ಶ್ರೇಯಸ್ಸಿಗೆ ಕಾರಣರಾದ ಎಲ್ಲ ವಿದ್ವಾಂಸರಿಗೂ,

ಕನ್ನಡ ಅಧ್ಯಯನಪೀಠದ ಎಲ್ಲ ಪ್ರಾಧ್ಯಾಪಕರಿಗೂ, ವಿಶೇಷವಾಗಿ ಸಮ್ಮೇಳನದ ಕಾರ್ಯದರ್ಶಿಗಳಾದ ಡಾ. ಬಿ. ವಿ. ಮಲ್ಲಾಪುರ ಅವರಿಗೂ, ಭಾಗವಹಿಸಿದ ಕಲಾವಿದರಿಗೂ, ಬೆಳಗಾವಿಯ ನಾಗರಿಕರಿಗೂ, ಕನ್ನಡ ಅಧ್ಯಯನ ಪೀಠದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

---

* ಪ್ರಥಮ ಆವೃತ್ತಿ : ಪ್ರಸಾರಾಂಗ, ಕರ್ನಾಟಕ ವಿ. ವಿ., ಧಾರವಾಡ.

ಆಕರ : ಮಾರ್ಗ ಸಂಪುಟ-೫

೩೩೬

ಮಾನಸೋಲ್ಲಾಸ ಪರಿಚಯ

೧೯೯೫

ಕರ್ನಾಟಕದ ಚರಿತ್ರೆಯಲ್ಲಿ 'ಪಂಪಯುಗ' (೯೫೦-೧೧೫೦) ಒಂದು ಅದ್ಭುತ ಕಾಲಾವಧಿಯೆನಿಸಿದೆ. ಈ ಅವಧಿಯ ಪೂರ್ವಾರ್ಧ ಕಾವ್ಯವೈಭವದ ಕಾಲವಾದರೆ, ಉತ್ತರಾರ್ಧ ಶಾಸ್ತ್ರವೈಭವದ ಕಾಲವಾಗಿದೆ. ಇದರ ಫಲವಾಗಿ ಈ ಉತ್ತರಾರ್ಧ ಅವಧಿಯಲ್ಲಿ ಕಾವ್ಯಶಾಸ್ತ್ರಗಳಾದ ಕಾವ್ಯಾವಲೋಕನ, ಕರ್ಣಾಟ ಭಾಷಾಭೂಷಣ, ಛಂದೋವಿಚಿತಿ, ವಸ್ತುಕೋಶಗಳೂ, ಕಾವ್ಯೇತರಶಾಸ್ತ್ರಗಳಾದ ಲೋಕೋಪಕಾರ, ಮದನತಿಲಕ, ಜಾತಕತಿಲಕ, ಕಲ್ಯಾಣಕಾರಕ, ಗೋವೈದ್ಯ, ವ್ಯವಹಾರ ಗಣಿತಗಳೂ ಹುಟ್ಟಿಕೊಂಡವು. ಕರ್ನಾಟಕದ ಮನಸ್ಸು ಹೀಗೆ ಸಾಹಿತ್ಯ ಸುಗ್ಗಿಯಿಂದ ಶಾಸ್ತ್ರ ಸುಗ್ಗಿಗೆ ಸರಿಯುತ್ತಲಿದ್ದ ಸಂಕ್ರಮಣ ಯುಗದಲ್ಲಿ 'ಮಾನಸೋಲ್ಲಾಸ'ದ ಮಹಾಸೃಷ್ಟಿ ಸಂಭವಿಸಿತು.

ಈ ಅವಧಿಯ ಇನ್ನೊಂದು ಲಕ್ಷಣವೆಂದರೆ ಕನ್ನಡಿಗರ ಭಾಷೆ - ಬದುಕುಗಳನ್ನು ಅಂದಿನ ಸಂಪರ್ಕ ಭಾಷೆಯಾದ ಸಂಸ್ಕೃತದ ಮೂಲಕ ಅನ್ಯಪ್ರಾಂತಗಳಿಗೆ ಪರಿಚಯಿಸುವುದು. ಈ ಮೇರೆಗ ಕಲ್ಯಾಣಚಾಲುಕ್ಯರ ಆಸ್ಥಾನವಿದ್ವಾಂಸ ಇಮ್ಮಡಿ ನಾಗವರ್ಮ "ಕರ್ಣಾಟಭಾಷಾಭೂಷಣ"ದ ಮೂಲಕ ಕನ್ನಡಿಗರ ಭಾಷೆಯನ್ನು ಸಂಸ್ಕೃತದಲ್ಲಿ ವರ್ಣಿಸಿದರೆ, ಕಲ್ಯಾಣ ಚಾಲುಕ್ಯಚಕ್ರವರ್ತಿ ಸೋಮೇಶ್ವರ 'ಮಾನಸೋಲ್ಲಾಸ'ದ ಮೂಲಕ ಕನ್ನಡಿಗರ ಬದುಕನ್ನು ಸಂಸ್ಕೃತದಲ್ಲಿ ಚಿತ್ರಿಸಿದನು.

'ಮಾನಸೋಲ್ಲಾಸ' ಒಂದು ವಿಶ್ವಕೋಶ. ಪ್ರಾಚೀನ ಕರ್ನಾಟಕದಲ್ಲಿ ಕಣ್ಣು ತೆರೆದ ಇಂಥ ವಿಶ್ವಕೋಶಗಳು ನಾಲ್ಕು. ಅವು : ಕನ್ನಡ ಭಾಷೆಯಲ್ಲಿ ಬರೆದ ಚಾವುಂಡರಾಯನ ಲೋಕೋಪಕಾರ ಮತ್ತು ನಿಜಗುಣ ಶಿವಯೋಗಿಯ ವಿವೇಕ ಚಿಂತಾಮಣಿ. ಸಂಸ್ಕೃತ ಭಾಷೆಯಲ್ಲಿ ಬರೆದ ಕೆಳದಿಬಸವ ಭೂಪಾಲನ ಶಿವತತ್ವ ರತ್ನಾಕರ ಮತ್ತು ಸೋಮೇಶ್ವರನ ಮಾನಸೋಲ್ಲಾಸ.

ಸೋಮೇಶ್ವರನ ತಂದೆ ಆರನೆಯ ವಿಕ್ರಮಾದಿತ್ಯ. ಕಲ್ಯಾಣದಂಥ ರಾಜಧಾನಿ ಹಿಂದೆ ಇರಲಿಲ್ಲ, ಇಂದು ಇಲ್ಲ, ಮುಂದೆಯೂ ಇರುವುದಿಲ್ಲ. ವಿಕ್ರಮಾದಿತ್ಯನಂಥ ಚಕ್ರವರ್ತಿ ಹಿಂದೆ ಇರಲಿಲ್ಲ, ಇಂದು ಇಲ್ಲ, ಮುಂದೆಯೂ ಇರುವುದಿಲ್ಲ ಎಂಬ ಖ್ಯಾತಿಯ ಈ ಅರಸು, ೫೦ ವರ್ಷಗಳಷ್ಟು ದೀರ್ಘಕಾಲ ರಾಜ್ಯವನ್ನಾಳಿದನು. ಹೀಗಾಗಿ ಇವನ ಮಗ ಸೋಮೇಶ್ವರ ತನ್ನ ವಿರಾಮ ಜೀವನವನ್ನು ಮಾನಸೋಲ್ಲಾಸದ ರಚನೆಯಲ್ಲಿ (೧೧೨೯) ಸದುಪಯೋಗಗೊಳಿಸಿಕೊಂಡನೆಂದು ಕಾಣುತ್ತದೆ.

ಮಾನಸೋಲ್ಲಾಸ ೫ ವಿಂಶತಿಗಳ, ಪ್ರತಿಯೊಂದು ವಿಂಶತಿಯಲ್ಲಿ ೨೦ ಅಧ್ಯಾಯಗಳಂತೆ ೧೦೦ ಅಧ್ಯಾಯಗಳ, ೮,೦೦೦ ಶ್ಲೋಕಗಳ ಬೃಹತ್ಕೃತಿ. ಇಲ್ಲಿ ನೂರು ಅಧ್ಯಾಯವೆಂದರೆ ನೂರು ಮುಖ್ಯ ವಿಷಯಗಳು. ಈ ನೂರರಲ್ಲಿಯೇ ನೂರಾರು ವಿಷಯಗಳಿರುವುದರಿಂದ ಇದು ಸಾವಿರಾರು ವಿಷಯಗಳ ಮಹಾಕೋಶವೆನಿಸಿದೆ. ಇಲ್ಲಿ ನಿರೂಪಿತವಾದ ಬಹಳಷ್ಟು ವಿಷಯಗಳು ರಾಜನಿಗೆ ಮಾತ್ರ ಸಂಬಂಧಿಸಿರುವುದರಿಂದ ಮತ್ತು ಕವಿಯೇ ಕೆಲವೆಡೆ ಹೇಳಿರುವುದರಿಂದ ಇದರ ನಿಜನಾಮ ಬಹುಶಃ "ರಾಜಮಾನಸೋಲ್ಲಾಸ" ; ವ್ಯಾವಹಾರಿಕ ನಾಮ "ಮಾನಸೋಲ್ಲಾಸ " ; ಪರ್ಯಾಯನಾಮ "ಅಭಿಲಷಿತಾರ್ಥ ಚಿಂತಾಮಣಿ". ಆದರ್ಶ ಅರಸನಾದವನು ಮುಂಜಾನೆಯಿಂದ ಮುಂಜಾನೆಯ ವರೆಗೆ, ಜನನದಿಂದ ಮರಣದ ವರೆಗೆ ನಡೆಯಿಸಬೇಕಾದ ಜೀವನ ವಿವರ, ವಿವೇಚನೆ ಈ ಮಹಾಕೃತಿಯ ವಸ್ತುವಾಗಿದೆ.

ಮಾನಸೋಲ್ಲಾಸದಲ್ಲಿ ಆದರ್ಶರೂಪದ, ಸಾಂಪ್ರದಾಯಿಕ ಮತ್ತು ಸಮಕಾಲೀನ - ಹೀಗೆ ಮೂರು ಬಗೆಯ ವಿಷಯ ಸಾಮಗ್ರಿ ತುಂಬಿಕೊಂಡಿರುವಂತಿದೆ. ಹೀಗಾಗಿ ಈ ಕೃತಿಯಿಂದ ಸಮಕಾಲೀನ ವಿಷಯವನ್ನು ಹೊರತೆಗೆಯಬೇಕೆನ್ನುವವರಿಗೆ ಅಂದಿನ ಕನ್ನಡ ಸಾಹಿತ್ಯ, ಕನ್ನಡ ಶಾಸನಗಳ ಅಧ್ಯಯನ ಅಗತ್ಯವೆನಿಸುತ್ತದೆ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ಮೊದಲಿನಿಂದಲೂ ಭಾಷೆ, ಸಾಹಿತ್ಯಗಳ ಜೊತೆಗೆ ಸಂಸ್ಕೃತಿ ಅಧ್ಯಯನದ ಕಡೆಗೂ ವಿಶೇಷ ಒಲವು ತೋರುತ್ತ ಬಂದಿದೆ. ಶಾಸನಗಳ ರಾಜಕೀಯೇತರ ಅಧ್ಯಯನ, ಕಾವ್ಯಗಳ ಕಾವ್ಯೇತರ ಅಧ್ಯಯನಗಳಲ್ಲಿ ವಿಶೇಷ ಕೃಷಿ ನಡೆಸುತ್ತ ಬಂದಿದೆ. ಈ ಬಗೆಯ ಒಲವು ಕಾರಣವಾಗಿ, 'ಮಾನಸೋಲ್ಲಾಸ' ದಂಥ ಸಾಂಸ್ಕೃತಿಕ ವಿಶ್ವಕೋಶವನ್ನು ಭಾಷಾಂತರಿಸಬೇಕೆಂಬ ತೀವ್ರ ಅಪೇಕ್ಷೆ ಈ ಶಿಕ್ಷಣಸಂಸ್ಥೆಯಲ್ಲಿ ಮೂಡಿದುದು ಸಹಜವೇ ಆಗಿದೆ.

ಭಾಷೆಗಳು ಸಂಸ್ಕೃತಿಯ ನಡುವೆ ಗೋಡೆ ಕಟ್ಟಿದರೆ, ಭಾಷಾಂತರ ಆ ಗೋಡೆಗಳನ್ನು ಒಡೆದು ಹಾಕುತ್ತದೆ ; ವಿಶ್ವವಿದ್ಯೆಯ ಮುಕ್ತಸಂವಹನಕ್ಕೆ ದಾರಿಮಾಡಿಕೊಡುತ್ತದೆ. ಈ ಕಾರಣದಿಂದಾಗಿ ಕನ್ನಡ ಭಾಷೆಯ ಕೃತಿಗಳನ್ನು ಅನ್ಯಭಾಷೆಗಳಿಗೆ, ಅನ್ಯಭಾಷೆಯ ಕೃತಿಗಳನ್ನು ಕನ್ನಡಕ್ಕೆ ತರುವುದು ಅವಶ್ಯವಿದೆ. ಹೀಗಾಗಿ ಒಂದು ಲಕ್ಷ ಶ್ಲೋಕಗಳ ವ್ಯಾಸಭಾರತದ ಅನುವಾದಕಾರ್ಯ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಜರುಗಬೇಕೆಂಬ ಅಪೇಕ್ಷೆ ನನ್ನದಾಗಿದ್ದಿತು. ಅದು ಕೈಗೂಡಲಿಲ್ಲ. ಈ ಕಾರ್ಯ ಆಮೇಲೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಸ್ತಿತ್ವಕ್ಕೆ ಬಂದಿತು. ೨೦ ಸಾವಿರ ವಚನಗಳನ್ನು ೧೦ ಸಾವಿರ ಪುಟಗಳಲ್ಲಿ ೧೫ ಸಂಪುಟಗಳಲ್ಲಿ ಹೊರತಂದ ಬಳಿಕ ನನಗೆ ಅಂಥದೇ, ಆದರೆ ವಿಭಿನ್ನ ಮತ್ತು ವಿಸ್ತೃತ ಯೋಜನೆ ಅಗತ್ಯವೆನಿಸಿತು. ಆಗ ಬಹುದಿನಗಳಿಂದ ನಾನು ಕಣ್ಣಾಡಿಸುತ್ತ ಬಂದಿದ್ದ 'ಮಾನಸೋಲ್ಲಾಸ'ದ ಅನುವಾದ ಯೋಜನೆ ನನ್ನ ಕಣ್ಣ ಮುಂದೆ ಸುಳಿಯಿತು. ಕನ್ನಡ ಸಂಸ್ಕೃತಿಯ ಅಭಿಮಾನಿಗಳೂ, ಆರಾಧಕರೂ ಆಗಿರುವ ಮಾನ್ಯ ಕುಲಪತಿಗಳಾದ ಡಾ. ಎಸ್. ರಾಮೇಗೌಡ ಅವರು ಇದಕ್ಕೆ 'ಅಸ್ತು' ಹೇಳುವರೆಂಬ ಆತ್ಮವಿಶ್ವಾಸದೊಂದಿಗೆ ಅವರ ಮುಂದೆ ಈ ವಿಷಯ ಪ್ರಸ್ತಾಪಿಸಿದೆ. "ನಾಳೆಯೇ ಯೋಜನೆ ಕಳಿಸಿರಿ" ಎಂದರು. ನನ್ನ ಸುದೈವವೆಂಬಂತೆ ಪ್ರಸಾರಾಂಗಕ್ಕೆ ಸಾಹಿತ್ಯಪ್ರಿಯರೂ ಸಮಾಜಶಾಸ್ತ್ರ ವಿದ್ವಾಂಸರೂ ಆದ ಪ್ರೊ. ಎಚ್. ವಿ. ನಾಗೇಶ ನಿರ್ದೇಶಕರಾಗಿ ಅದೇ ಆಗ ಬಂದಿದ್ದರು. ನಾನು ತ್ವರಿತ

ಪ್ರವೃತ್ತಿಯವನಾದರೆ, ಅವರು ಅವಸರ ಪ್ರವೃತ್ತಿಯವರು. ಇಬ್ಬರೂ ಸೇರಿ ಯೋಜನೆ ಸಿದ್ಧಪಡಿಸಿ, ನಾಳೆಗೆ ಬದಲು ಅಂದೇ ಕುಲಪತಿಗಳಿಗೆ ಒಪ್ಪಿಸಿದೆವು.

ಇದು ಎರಡು ವರ್ಷಗಳ ಯೋಜನೆ. ಈ ಕಾಲವ್ಯಾಪ್ತಿಯಲ್ಲಿ ಅನುವಾದ, ಪರಿಷ್ಕರಣ, ಪ್ರಕಟಣೆ ಎಲ್ಲವೂ ಮುಗಿಯಬೇಕು. ಇದಕ್ಕಾಗಿ ವಿಶ್ವವಿದ್ಯಾಲಯ ಎರಡು ಲಕ್ಷ ರೂಪಾಯಿ - ಒಂದು ಲಕ್ಷ ಭಾಷಾಂತರ ಕಾರ್ಯಕ್ಕೆ, ಒಂದು ಲಕ್ಷ ಪ್ರಕಟನ ಕಾರ್ಯಕ್ಕೆ - ಅನುದಾನ ನೀಡಬೇಕು. ಡಾ. ಎಂ. ಎಂ. ಕಲಬುರ್ಗಿಯವರು ನಿರ್ದೇಶಕರು, ಪ್ರಸಾರಾಂಗದ ಪ್ರಮುಖರು ಕಾರ್ಯದರ್ಶಿಗಳು, ಡಾ. ಅ. ಸುಂದರ, ಡಾ. ಮಲ್ಲಿಕಾರ್ಜುನ ಪರಡ್ಡಿ, ಡಾ. ಎಂ. ಎನ್. ಜೋಶಿ ಸಲಹಾ ಮಂಡಲ ಸದಸ್ಯರು. ೧೨ ಜನ ಅನುವಾದಕ ವಿದ್ವಾಂಸರ ಒಂದು ಸಮಿತಿ ಇರಬೇಕು. ಇದು ಯೋಜನೆಯ ರೂಪರೇಷೆ. ರಾಜ್ಯದ ಮೂಲೆ ಮೂಲೆಗಳನ್ನು ಶೋಧಿಸಿದ ಫಲವಾಗಿ ನಮ್ಮ ಗಮನಕ್ಕೆ ಬಂದ ಈ ಮುಂದಿನ ವಿದ್ವಾಂಸರು ಅನುವಾದದ ಹೊಣೆ ಹೊತ್ತುಕೊಂಡರು. ಶ್ರೀ ಶೇಷ ನವರತ್ನ (ಕೂಡ್ಲಿಗಿ), ರಾಜನೀತಿ, ಶ್ರೀ ಎನ್. ಎಸ್. ರಾಮಚಂದ್ರ (ಮೈಸೂರು), ವೈದ್ಯ, ಶ್ರೀ ಎನ್. ಎಸ್. ಕೃಷ್ಣಜೋಯಿಸ (ಮೈಸೂರು), ಜ್ಯೋತಿಷ್ಯ, ಶ್ರೀ ಎಚ್. ಎಸ್. ಪಾಠಕ (ಮೈಸೂರು), ವಾಸ್ತು - ವಿಗ್ರಹ - ಚಿತ್ರ, ಶ್ರೀ ಮಲ್ಲಿಕಾರ್ಜುನ ಪರಡ್ಡಿ (ಧಾರವಾಡ), ಉಪಭೋಗ, ಶ್ರೀ ಎಚ್. ವಿ. ನಾಗರಾಜರಾವ್ (ಮೈಸೂರು), ವಿನೋದಗಳು - ೧ ಶ್ರೀ ಚಂದ್ರಮೌಳಿ ನಾಯ್ಕರ (ಧಾರವಾಡ), ವಿನೋದಗಳು -೨ ಶ್ರೀಮತಿ ಟಿ. ಎಸ್. ಸತ್ಯವತಿ (ಬೆಂಗಳೂರು), ವಿನೋದಗಳು - ೩ ಶ್ರೀಮತಿ ಚೂಡಾಮಣಿ ನಂದಗೋಪಾಲ (ಬೆಂಗಳೂರು), ವಿನೋದಗಳು - ೪ ಶ್ರೀ ಆರ್. ಗಣೇಶ (ಬೆಂಗಳೂರು), ವಿನೋದಗಳು - ೫ ಶ್ರೀ ಟಿ. ವಿ. ಸತ್ಯಾನಾರಾಯಣ (ಮೈಸೂರು), ಕ್ರೀಡೆಗಳು - ೧ ಶ್ರೀ ಎಂ. ಎನ್. ಜೋಶಿ (ಧಾರವಾಡ), ಕ್ರೀಡೆಗಳು - ೨.

ಕುಲಪತಿಗಳು ಸಿಂಡಿಕೇಟಿನ ಸಮ್ಮತಿಯೊಂದಿಗೆ ಈ ಯೋಜನೆಯನ್ನು ನಮಗೆ ಮಂಜೂರು ಮಾಡಿದರು. ಸಲಹಾ ಸಮಿತಿಯ ಮೊದಲ ಸಭೆ ೧೯೯೪ ಜುಲೈ ತಿಂಗಳಲ್ಲಿ ಸೇರಿತು. ವಿದ್ವಾಂಸರಿಗೆ ಅನುವಾದ ಭಾಗ ಹಂಚಿಕೊಟ್ಟು, ತಿಂಗಳಿಗೆ ೧೦೦ ಶ್ಲೋಕದಷ್ಟು ಕೆಲಸವನ್ನು ಪೂರೈಸಿಕೊಡಲು ಕೇಳಿಕೊಳ್ಳಲಾಯಿತು. ಇದರ ಫಲವಾಗಿ, ತಿಂಗಳಿಗೆ ಒಟ್ಟು ೧೨೦೦ ಶ್ಲೋಕಗಳಂತೆ ೬ - ೭ ತಿಂಗಳಲ್ಲಿ ೮೦೦೦ ಶ್ಲೋಕಗಳ ಅನುವಾದಕಾರ್ಯ ಮುಗಿಯಿತು. ಸಲಹಾ ಸಮಿತಿ ಪ್ರತಿ ತಿಂಗಳು ತಪ್ಪದೇ ಸಭೆ ಸೇರಿ, ಕೆಲಸದ ಪ್ರಗತಿಯತ್ತ ನಿಷ್ಠುರ ನಿಲವು ತಳೆದ ಕಾರಣ 'ಪವಾಡಸದೃಶ' ರೀತಿಯಲ್ಲಿ ಮೊದಲ ಸುತ್ತಿನ ಅನುವಾದಕಾರ್ಯ ಮುಗಿಯಿತು. ಇಂದು ಅನುವಾದಕ ವಿದ್ವಾಂಸರು ಒಂದೆಡೆ ಸೇರಿ, ತಮ್ಮ ಪಠ್ಯಭಾಗದ ಮಹತ್ವ ಮತ್ತು ಫಲಿತಗಳನ್ನು ಪ್ರಬಂಧರೂಪದಲ್ಲಿ ಮಂಡಿಸಲಿದ್ದಾರೆ. ನಾಳೆ ಈ ಸಂಕಿರಣದ ಕೊನೆಯಲ್ಲಿ ಎಲ್ಲರೂ ಸಭೆ ಸೇರಿ, ಅನುವಾದಕಾರ್ಯದಲ್ಲಿ ಎದುರಾದ ಸಮಸ್ಯೆ ಮತ್ತು ನಿವಾರಣೋಪಾಯಗಳ ಬಗೆಗೆ ಚರ್ಚಿಸಲಿದ್ದಾರೆ. ಈ ಬೇಸಗೆ ಬಿಡುವಿನಲ್ಲಿ ಪರಿಷ್ಕರಣಕಾರ್ಯ ಮುಗಿದು, ೧೯೯೫ ಜೂನ ಹೊತ್ತಿಗೆ ಹಸ್ತಪ್ರತಿ ಅಚ್ಚಿಗೆ ಹೋಗಿ, ಈ ಶೈಕ್ಷಣಿಕ ವರ್ಷದೊಳಗಾಗಿ ಸಂಪುಟಗಳು ಬೆಳಕು ಕಾಣಲಿವೆ.

ಈ ಯೋಜನೆಯನ್ನು ಸರಕಾರ ಕೈಗೆತ್ತಿಕೊಂಡಿದ್ದರೆ, ಸಹಾಯಕ ಸಂಶೋಧಕ, ಟೈಪಿಸ್ಟ್, ಪ್ಯೂನ್, ಫೋನ್ ಇತ್ಯಾದಿಗಳನ್ನು ಸುತ್ತುಹಾಕಿಸಿಕೊಂಡು, ಹಲವು ವರ್ಷ ಕಳೆದು, ಹಲವು ಸಾವಿರ ರೂಪಾಯಿ ವೆಚ್ಚಿಸಿ ಮಾಡಬಹುದಿದ್ದ ಕೆಲಸವನ್ನು ಇದಾವುದೂ ಇಲ್ಲದೆ, ಒಂದು ಪೈಸೆಯನ್ನೂ ವೆಚ್ಚಿಸದೆ ೬ ತಿಂಗಳಲ್ಲಿ ನಾವು ಪೂರೈಸಿದ್ದೇವೆ. ಇದಕ್ಕೆ ಕಾರಣ, ಕೆಲಸ ಮಾಡಬೇಕೆಂಬ ನಮ್ಮ ಶುದ್ಧ ಸಂಕಲ್ಪ ಮತ್ತು ಕೆಲಸದ ಬಗೆಗಿರುವ ಅನುವಾದಕ ಮಿತ್ರರ ಪ್ರೀತಿ.

ಕರ್ನಾಟಕದಲ್ಲಿ ವಿಶ್ವಕೋಶಗಳ ಅನುವಾದಕಾರ್ಯ ಕೆಲವು ಶತಮಾನಗಳ ಹಿಂದೆಯೇ ಕಾಣಿಸಿಕೊಂಡಿದೆ. ೧೭, ೧೮ನೆಯ ಶತಮಾನಗಳಲ್ಲಿ ಮರಾಠಿ, ತಮಿಳು ಭಾಷೆಗಳಿಗೆ ಅನುವಾದವಾದ ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿಯು ೧೯ನೆಯ ಶತಮಾನದಲ್ಲಿ ಸಂಸ್ಕೃತಕ್ಕೆ ಭಾಷಾಂತರಗೊಂಡರೆ, ಸೋಮೇಶ್ವರನ ಸಂಸ್ಕೃತ ಮಾನಸೋಲ್ಲಾಸ ನಮ್ಮಿಂದ ೨೦ನೆಯ ಶತಮಾನದಲ್ಲಿ ಕನ್ನಡಕ್ಕೆ ಭಾಷಾಂತರಗೊಳ್ಳುತ್ತಲಿದೆ. ಈ ಕಾರ್ಯಕ್ಕಾಗಿ ನಾವು ಅವಲಂಬಿಸಿದುದು ಬರೋಡಾದ ಗಾಯಕವಾಡ ಓರಿಯಂಟಲ್ ಸಿರೀಜ್‌ದಲ್ಲಿ ಪ್ರಕಟವಾದ ಮಾನಸೋಲ್ಲಾಸ ಆವೃತ್ತಿಯನ್ನು. ಹಸ್ತಪ್ರತಿಗಳಲ್ಲಿರುವ ಭಿನ್ನಪಾಠಗಳ ಆಧಿಕ್ಯ, ಮಾನಸೋಲ್ಲಾಸದಲ್ಲಿರುವ ವಿಷಯವಿಸ್ತಾರ ಕಾರಣವಾಗಿ ಈ ಕೃತಿಸಂಪಾದನೆಯಲ್ಲಿ ಕೊರತೆಗಳು ಉಳಿದುಕೊಂಡಿವೆ. ಯೋಗ್ಯಪಾಠಗಳು ಅಡಿಯಲ್ಲಿ, ಅಯೋಗ್ಯ ಪಾಠಗಳು ಪಠ್ಯದಲ್ಲಿ ಸೇರಿಕೊಂಡಿವೆ. ಕೆಲವೊಮ್ಮೆ ಯೋಗ್ಯಪಾಠಗಳೇ ಕಣ್ಮರೆಯಾಗಿವೆ. ಇಂಥ ಸಂದರ್ಭಗಳಲ್ಲಿ ವಿದ್ವಾಂಸರು ಪಾಠನಿರ್ಣಯಮಾಡಿ ಅನುವಾದ ಕಾರ್ಯಕ್ಕೆ ಇಳಿಯಬೇಕಾಗುತ್ತದೆ. ಈ ಭಾಷಾಂತರಕಾರರಲ್ಲಿ ಬಹಳ ಜನ ಸಂಸ್ಕೃತ, ಕನ್ನಡ ಕೃತಿಗಳ ಸಂಪಾದನಕಾರ್ಯದಲ್ಲಿ ದುಡಿದವರಾಗಿರುವುದರಿಂದ ಇವರು ಪಾಠಪರಿಷ್ಕರಣಕಾರ್ಯವನ್ನೂ ಪೂರೈಸಿದ್ದಾರೆ.

ಪಾಠವನ್ನು ಶುದ್ಧೀಕರಿಸಿಕೊಂಡ ಬಳಿಕ ಭಾಷಾಂತರ ಕಾರ್ಯಕ್ಕೆ ತೊಡಗಬೇಕಾಗುತ್ತದೆ. ಈ ಅನುವಾದಕರು ಚಿತ್ರ, ನೃತ್ಯ, ಸಂಗೀತ, ಜ್ಯೋತಿಷ್ಯ, ಔಷಧ ಇತ್ಯಾದಿ ಜ್ಞಾನಕ್ಷೇತ್ರಗಳಲ್ಲಿ ನೇರವಾಗಿ ತೊಡಗಿಕೊಂಡವರು. ಬದಲಾದ ಸಂದರ್ಭ ಕಾರಣವಾಗಿ ಮಾನಸೋಲ್ಲಾಸದಲ್ಲಿ ವಿವರಿಸಿದ ಅನೇಕ ವಿಷಯಗಳು ಇಂದು ನಿತ್ಯ ಜೀವನದಿಂದ ಮರೆಯಾಗಿವೆ. ಅಲ್ಲಿಯ ಕೆಲವು ಶಬ್ದಗಳು ಯಾವುದೇ ಸುಪ್ರಸಿದ್ಧ ನಿಘಂಟುವಿನಲ್ಲಿ ಕಂಡುಬರುವುದಿಲ್ಲ. ಕೆಲವೊಮ್ಮೆ ಕನ್ನಡ ಪದಗಳಿಗೆ ಸಂಸ್ಕೃತದೀಕ್ಷೆ ಕೊಡಲಾಗಿದೆ. ಈ ಎಲ್ಲ ಸಮಸ್ಯೆಗಳನ್ನು ತಮ್ಮ ವಿಷಯ ಪರಿಜ್ಞಾನದಿಂದ ಬಿಡಿಸಿಕೊಂಡ ಪ್ರಯತ್ನ ಇಲ್ಲಿದೆ. ಇವುಗಳಿಗೆ ಕಳಸವಿಟ್ಟಂತೆ ಇವರೆಲ್ಲ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಬಲ್ಲಿದವರಾಗಿದ್ದಾರೆ ; ಅನುವಾದ ಕಾರ್ಯದಲ್ಲಿ ಪಳಗಿದವರಾಗಿದ್ದಾರೆ. ಅದರ ಫಲ ಈ ಅನುವಾದ ಯೋಜನೆಗೆ ಒದಗಿ ಬಂದಿದೆ.

ವೇಗ ನಮ್ಮ ದಾರಿ, ಗುಣಮಟ್ಟ ನಮ್ಮ ಗುರಿ. ಈ ಕಾರಣಗಳಿಂದಾಗಿ 'ಮಾನಸೋಲ್ಲಾಸ'ದ ಅನುವಾದಕಾರ್ಯ ಬಹುಮಟ್ಟಿಗೆ ಪ್ರಮಾಣಭೂತವಾಗಿದೆಯೆಂಬ ವಿಶ್ವಾಸ ನಮ್ಮದಾಗಿದೆ. ಇದರಿಂದಾಗಿ ಸಂಸ್ಕೃತದಲ್ಲಿ ಪ್ರವೇಶವಿಲ್ಲದ ಅಭ್ಯಾಸಿಗಳಿಗೆ ತುಂಬ ಪ್ರಯೋಜನವಾಗಲಿದೆ. ಕನ್ನಡ ವಿದ್ವಾಂಸರ ಹಳಗನ್ನಡ ಕಾವ್ಯಗಳ ಅಧ್ಯಯನಕ್ಕೆ ಆಳ ಪ್ರಾಪ್ತವಾಗಲಿದೆ. ಪಂಪ ಭಾರತದಲ್ಲಿ ಬರುವ ಲೋಹಾಸನ, ಶಬ್ದಮಣಿದರ್ಪಣದಲ್ಲಿ ಬರುವ 'ಪರಿಕಾರ', ಯಶೋಧರ ಚರಿತೆಯಲ್ಲಿ ಬರುವ 'ಅಂಕ', 'ಎಡೆಗೋಲು' ಮತ್ತು 'ಬೆಳ್ಳೆತ್ತಿನ ಮರೆಯಲ್ಲಿ ನಿಂದು ಹುಲ್ಲೆಗೆ ಅಂಬತೊಡು' ಇತ್ಯಾದಿ ಮಾತುಗಳ ಅರ್ಥ ಸ್ಪಷ್ಟವಾಗಲಿದೆ, ವಿಸ್ತಾರವಾಗಲಿದೆ. ಹೀಗಾಗಿ ವಿದ್ವತ್ತಿನ ಒಂದು ಉಪಯುಕ್ತ ಕೆಲಸವನ್ನು ಮಾಡುತ್ತಲಿರುವ ತೃಪ್ತಿ ನಮ್ಮದಾಗಿದೆ.

ವಿಶ್ವವಿದ್ಯಾಲಯದ ಉದ್ದೇಶ, ಹೆಸರಿಗೆ ತಕ್ಕಂತೆ ವಿಶ್ವವಿದ್ಯೆಯನ್ನು ಆದಾನ - ಪ್ರದಾನ ಮಾಡುವುದಾಗಿದೆ. ಈ ಕೆಲಸದ ಬಹುಮುಖ್ಯ ಸಾಧನ ಭಾಷಾಂತರ. ಆದುದರಿಂದ 'ಮಾನಸೋಲ್ಲಾಸ'ಕ್ಕೇ ನಿಲ್ಲಿಸದೆ, ಅನ್ಯಭಾಷೆಗಳ ಉತ್ತಮೋತ್ತಮ ಕೃತಿಗಳನ್ನು ಕನ್ನಡಕ್ಕೆ, ಕನ್ನಡದ ಉತ್ತಮೋತ್ತಮ ಕೃತಿಗಳನ್ನು ಅನ್ಯಭಾಷೆಗಳಿಗೆ ನಿರಂತರ ಭಾಷಾಂತರಿಸುವುದರ ಸಲುವಾಗಿ, ಪ್ರಸಾರಾಂಗದ ಆಶ್ರಯದಲ್ಲಿ ಒಂದು

ಶಾಶ್ವತ "ಭಾಷಾಂತರ ಶಾಖೆ"ಯನ್ನು ಕರ್ನಾಟಕ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ತರಬೇಕೆಂದು ಮಾನ್ಯ ಕುಲಪತಿಗಳಿಗೆ ಕೇಳಿಕೊಳ್ಳುತ್ತ, ಈ ಯೋಜನೆಯನ್ನು ಅನುದಾನ ಮಾಡಿರುವ ಮತ್ತು ಈ ವಿಚಾರಸಂಕಿರಣವನ್ನು ಉದ್ಘಾಟಿಸಲಿರುವ ಅವರಿಗೂ, ಸಹಕರಿಸಿದ ಸಲಹಾಸಮಿತಿ ಸದಸ್ಯರಿಗೂ, ಅನುವಾದಕ ವಿದ್ವಾಂಸರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಮಾನಸೋಲ್ಲಾಸದ ಅನುವಾದಕ್ಕೆ ಹಿನ್ನೆಲೆಯಾಗಿ ಈ ವಿಚಾರ ಸಂಕಿರಣ ಜರುಗುತ್ತಲಿದೆ. ಎಂಟುಸಾವಿರ ಶ್ಲೋಕಗಳಲ್ಲಿ ಹರಡಿಕೊಂಡ ವಿಷಯವನ್ನು ಹನ್ನೆರಡು ಲೇಖನಗಳಲ್ಲಿ ಅಡಕಗೊಳಿಸಿಕೊಡುವುದು ಈ ಸಂಕಿರಣದ ಉದ್ದೇಶವಾಗಿದೆ. ಇದರಿಂದ ಒಟ್ಟು ಮಾನಸೋಲ್ಲಾಸದ ವ್ಯಾಪಕ ವಿಷಯ ಕರಿಯು ಕನ್ನಡದಲ್ಲಿ ಅಡಕಗೊಂಡಂತಾಗಿದೆ. ಮೂಲಕೃತಿಗೆ ಇದು ಒಂದು ಪ್ರವೇಶಿಕೆಯೆನಿಸಿದೆ. ಈ ಮಹಾಯೋಜನೆಗೆ, ವಿಚಾರ ಸಂಕಿರಣಕ್ಕೆ ಕಾರಣೀಭೂತರಾದ ಮಾನ್ಯ ಕುಲಪತಿಗಳಾದ ಡಾ. ಎಸ್. ರಾಮೇಗೌಡ ಅವರಿಗೆ, ಎಲ್ಲ ವಿಧದಿಂದಲೂ ಸಹಕರಿಸಿದ ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎಚ್. ವಿ. ನಾಗೇಶ ಅವರಿಗೆ, ವಿಚಾರ ಸಂಕಿರಣವನ್ನು ನಡೆಸಿಕೊಟ್ಟ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ವೀರಣ್ಣ ರಾಜೂರ ಅವರಿಗೆ ಕೃತಜ್ಞನಾಗಿದ್ದೇನೆ.

---

* ಪ್ರಥಮ ಆವೃತ್ತಿ : ಪ್ರಸಾರಾಂಗ, ಕರ್ನಾಟಕ ವಿ. ವಿ., ಧಾರವಾಡ.

ಆಕರ : ಮಾರ್ಗ ಸಂಪುಟ–೮

■■

೩೩೭

ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟನ ಯೋಜನೆ

೧೯೯೫

ಮೈಸೂರಿನ "ಶ್ರೀ ಜಗದ್ಗುರು ಶಿವರಾತ್ರೀಶ್ವರ ಮಠ" ನಮ್ಮ ನಾಡಿನ ಪ್ರತಿಷ್ಠಿತ ಧಾರ್ಮಿಕ ಸಂಸ್ಥೆ. ಧರ್ಮವನ್ನು ಶರಣಸಿದ್ಧಾಂತದ ವ್ಯಾಪಕ ಅರ್ಥದಲ್ಲಿ ಪರಿಭಾವಿಸಿದ ಈ ಸಂಸ್ಥೆ ದಾಸೋಹ ಪದವನ್ನು ಕಾಲಕ್ಕೆ ತಕ್ಕಂತೆ ಪ್ರಸ್ತುತಗೊಳಿಸುತ್ತ ಬಂದಿದೆ. ಈ ಪ್ರಯೋಗದ ಒಂದು ಅಂಗ 'ಸಾಹಿತ್ಯದಾಸೋಹ'. "ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ" ಹೆಸರಿನಲ್ಲಿ ನಡೆದ ಈ ಸಾಹಿತ್ಯ ದಾಸೋಹದ ಭಾಗವಾಗಿ ಈಗಾಗಲೇ ವಿಚಾರ ಸಂಕಿರಣ, ಸಮ್ಮೇಳನಗಳನ್ನು ಜರುಗಿಸಲಾಗಿದೆ. ಉತ್ತಮೋತ್ತಮ ಗ್ರಂಥಗಳನ್ನು ಪ್ರಕಟಿಸಲಾಗಿದೆ. ಈ ಗ್ರಂಥಪ್ರಕಟನ ಪರಂಪರೆಯ ಅಂಗವಾಗಿ "ಶಿವದಾಸಗೀತಾಂಜಲಿ"ಯನ್ನು ಪ್ರಕಟಿಸುವ ಮೂಲಕ ಶರಣರ "ಸ್ವರವಚನಸಾಹಿತ್ಯ" ಪ್ರಕಟನೆಯ ಇತಿಹಾಸದಲ್ಲಿ ಶ್ರೀ ಮಠವು,

ಡಾ. ಫ. ಗು. ಹಳಕಟ್ಟಿಯವರ ಬಳಿಕ ಇನ್ನೊಂದು ಹೊಸ ಘಟ್ಟವನ್ನೇ ತೆರೆದಿದೆ ; ಮತ್ತು ಇದರ ಮುಂದುವರಿಕೆಯೆಂಬಂತೆ "ಮುಪ್ಪಿನ ಷಡಕ್ಷರಿಗಳ ಕೈವಲ್ಯಪದ್ಧತಿ" ಸಂಪುಟವನ್ನು ಪ್ರಕಟಿಸಿದೆ. ಈಗ ಈ ಪ್ರಯತ್ನಕ್ಕೆ ಪೂರ್ಣಸ್ವರೂಪ ಕೊಡುವ ಉದ್ದೇಶದಿಂದ "ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟನಯೋಜನೆ" ಹೆಸರಿನ ಒಂದು ಬೃಹತ್ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ವೀರಶೈವ ಸಾಹಿತ್ಯದ ಮಹತ್ವದ ಪ್ರಕಾರವಾದ ವಚನಸಾಹಿತ್ಯ ಈವರೆಗೆ ಬಹುಮಟ್ಟಿಗೆ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಿದೆ. ವಚನಗಳ ಸಾಹಿತ್ಯಿಕ, ಸಾಮಾಜಿಕ, ಸೈದ್ಧಾಂತಿಕ ಪ್ರಭಾವಗಳಿಗೆ ಮಾರುಹೋದ ವಿದ್ವಾಂಸರು ಶರಣರ ಇನ್ನೊಂದು ಮಹತ್ವದ ಪ್ರಕಾರವಾದ "ಸ್ವರವಚನಸಾಹಿತ್ಯ"ದ ಪ್ರಕಟನೆಯ ಕಡೆಗೆ ಅಷ್ಟಾಗಿ ಗಮನಹರಿಸಲಿಲ್ಲ. ಈ ಕೊರತೆಯನ್ನು ತುಂಬಿಕೊಡುವ ಮಹೋದ್ದೇಶದಿಂದ ಪ್ರಸ್ತುತ ಯೋಜನೆ ಹುಟ್ಟಿಕೊಂಡಿದೆ.

ತಮ್ಮ ಅನುಭಾವದ ವಾಚನ ಪಾತಳಿಗಾಗಿ 'ವಚನ'ಗಳನ್ನು ಬರೆದ ಶರಣರು ಶ್ರವಣಪಾತಳಿಗಾಗಿ 'ಸ್ವರವಚನ'ಗಳನ್ನು ಬರೆದರು. ಹನ್ನೆರಡನೆಯ ಶತಮಾನದಿಂದ ೨೦ನೆಯ ಶತಮಾನದ ವರೆಗೆ ನೂರಾರು ಜನ ಶಿವಶರಣರು, ಶಿವಕವಿಗಳು ಸೃಷ್ಟಿಸಿದ ಈ ಸಾಹಿತ್ಯ ಲಿಖಿತ ಮತ್ತು ಮೌಖಿಕ ಪರಂಪರೆಯಲ್ಲಿ ಸಾಗಿಬಂದಿದೆ. ಈ ಸಾಹಿತ್ಯವನ್ನು ಸಮಗ್ರವಾಗಿ ಪ್ರಕಟಿಸಲಿರುವ ಪ್ರಸ್ತುತ ಯೋಜನೆಯಲ್ಲಿ ನಾವು ಎರಡು ಹಂತಗಳನ್ನು ಕಲ್ಪಿಸಿಕೊಂಡಿದ್ದೇವೆ.

೧. ಅಪ್ರಕಟಿತ ರೂಪದಲ್ಲಿರುವ ಲಿಖಿತ ಮತ್ತು ಮೌಖಿಕ ಪರಂಪರೆಯ ಎಲ್ಲ ಸ್ವರವಚನಗಳನ್ನು ಮೂರು ವರ್ಷಗಳ ಅವಧಿಯಲ್ಲಿ ಪ್ರಕಟಿಸುವ ಉದ್ದೇಶ ನಮ್ಮ ಕಣ್ಣಮುಂದಿದೆ. ಇಲ್ಲಿ ಪ್ರಾಚೀನ ಸ್ವರವಚನ ಸ್ವತಂತ್ರ 'ಕೃತಿ'ಗಳನ್ನು ಪರಿಷ್ಕರಿಸಿ ಪ್ರಕಟಿಸುವುದು ; ಹಸ್ತಪ್ರತಿಗಳಲ್ಲಿ ಬಿಡಿಬಿಡಿಯಾಗಿ ಸಿಗುವ ಸ್ವರವಚನಗಳನ್ನು ಸಂಗ್ರಹಿಸಿ ಸಂಪುಟರೂಪದಲ್ಲಿ ಪ್ರಕಟಿಸುವುದು ; ಮತ್ತು ಬೇರೆ ಬೇರೆ ಪ್ರದೇಶಗಳಲ್ಲಿ ಮೌಖಿಕ ಪರಂಪರೆಯಲ್ಲಿ ಸಿಗುವ ಸ್ವರವಚನಗಳನ್ನು ಧ್ವನಿಮುದ್ರಣ ಮಾಡಿಕೊಂಡು ಸಂಪುಟರೂಪದಲ್ಲಿ ಪ್ರಕಟಿಸುವುದು - ಇದು ಮೊದಲ ಹಂತದ ಪ್ರಕಟನ ಕಾರ್ಯ.

೨. ಹೀಗೆ ಎಲ್ಲ ಮೂಲಗಳಿಂದ ಸಂಗ್ರಹಿಸಿ ನಾವು ಪ್ರಕಟಿಸಿದ ಮತ್ತು ಈಗಾಗಲೇ ಅನ್ಯಸಂಸ್ಥೆಗಳು ಪ್ರಕಟಿಸಿದ ಎಲ್ಲ ಸ್ವರವಚನರಾಶಿಯನ್ನು ಒಂದು ಶಿಸ್ತಿಗೆ ಅಳವಡಿಸಿ, ಹದಿನೈದು ಸಂಪುಟಗಳಲ್ಲಿ ಏಕಕಾಲಕ್ಕೆ ಪ್ರಕಟಿಸುವುದು ಎರಡನೆಯ ಹತದ ಕಾರ್ಯವಾಗಿದೆ. ಈ ಹಂತದ ಒಟ್ಟು ಯೋಜನೆ ಹೀಗಿದೆ :

ಸಂಪುಟ ೧ : ಬಸವೇಶ್ವರ ಮೊದಲಾದ ೧೨ನೆಯ ಶತಮಾನದ ಶರಣರ ಬಿಡಿ ಸ್ವರವಚನ ಸಂಪುಟ.

ಸಂಪುಟ ೨ : ನಿಜಗುಣ ಶಿವಯೋಗಿ, ಸಪ್ತಕಾವ್ಯದ ಗುರುಬಸವ, ಸರ್ವಭೂಷಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಬಾಲಲೀಲಾ ಮಹಾಂತ ಶಿವಯೋಗಿ, ಮೈಲಾರ ಬಸವಲಿಂಗಶರಣರು - ಇತ್ಯಾದಿ ಪ್ರಸಿದ್ಧ ಸ್ವರವಚನಕಾರರ ಸಂಪುಟಗಳು.

ಸಂಪುಟ ೩ : ಗುರುಬಸವಾರ್ಯ, ಕರಸ್ಥಲನಾಗಿದೇವ, ಮೊಗ್ಗೆಯಮಾಯಿದೇವ, ಕಸ್ತೂರದೇವ, ಕವಿಲಿಂಗ, ವರತೆಯ ಸೋಮಣ್ಣ, ಸೋದೆಸದಾ ಶಿವರಾಯ, ದೊಡ್ಡಷಡಕ್ಷರಿಸ್ವಾಮಿ, ಜಿಗುನಿ ಮರುಳದೇವ, ಬೆಂಗಳೂರು ಮುದ್ದೀರಸ್ವಾಮಿ, ಕಾರುಗಹಳ್ಳಿ ಶಾಂತಯ್ಯ, ಶಂಕರದೇವ, ನಿಷ್ಕಲರು, ಮರಿಶಾಂತಬಸವ, ಸೋಮನಕಟ್ಟೆಕರಿಬಸವೇಶ್ವರ, ಗುರುಗುಂಡಬಸವ - ಇತ್ಯಾದಿ ಅಪ್ರಸಿದ್ಧ

ಫಲವೆಂಬಂತೆ, ಭಾರತದಲ್ಲಿ ಎಲ್ಲ ವಿಶ್ವಕೋಶಗಳು ಸಾಮಾನ್ಯವಾಗಿ ರಾಜಾಸ್ಥಾನದಲ್ಲಿ, ಕೆಲವೊಮ್ಮೆ ರಾಜನ ಹಸ್ತದಲ್ಲಿ ಹುಟ್ಟುಪಡೆದಿವೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಮಾನಸೋಲ್ಲಾಸವನ್ನು ರೂಪಿಸಿದವ ಚಾಲುಕ್ಯ ಚಕ್ರವರ್ತಿ ಸೋಮೇಶ್ವರ, ವಿವೇಕ ಚಿಂತಾಮಣಿಯನ್ನು ರಚಿಸಿದವ ಮೂಲತಃ ರಾಜನಾಗಿದ್ದ ನಿಜಗುಣ ಶಿವಯೋಗಿ, ಶಿವತತ್ವರತ್ನಾಕರ ರಚಿಸಿದವ ಕೆಳದಿಯ ಅರಸು ಬಸವಭೂಪಾಲ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಲೋಕೋಪಕಾರದ ಚಾವುಂಡರಾಯ ರಾಜನಾಗಿರದಿದ್ದರೂ ರಾಜಕೀಯ ವಲಯದ ವ್ಯಕ್ತಿಯೆಂಬುದನ್ನು ಗಮನಿಸಬೇಕು. (ಸೋಮದೇವನ ನೀತಿವಾಕ್ಯಾಮೃತಕ್ಕೆ ಟೀಕೆ ಬರೆದ ನೇಮಿನಾಥನು ಸಂಧಿವಿಗ್ರಹಿಯಾಗಿದ್ದನು)

ಮಾನಸೋಲ್ಲಾಸದ ಸೃಷ್ಟಿಸಂದರ್ಭ

ಕರ್ನಾಟಕದಲ್ಲಿ ೧೦ ಮತ್ತು ೧೨ನೆಯ ಶತಮಾನಗಳು ಪ್ರಭಾವಶಾಲಿ ಸಾಹಿತ್ಯವನ್ನು ಸೃಷ್ಟಿಸಿದ ಸಂದರ್ಭಗಳೆನಿಸಿವೆ. ೧೦ನೆಯ ಶತಮಾನದ ವೀರಯುಗ, ೧೨ನೆಯ ಶತಮಾನದ ಭಕ್ತಿಯುಗಗಳ ಸಾಹಿತ್ಯವೈಭವಕ್ಕೆ ಮನಸೋತ ಕನ್ನಡ ವಿಮರ್ಶಕರು, ಇವುಗಳ ಮಧ್ಯದ ೧೧ನೆಯ ಶತಮಾನವನ್ನು "ಬರಡುಯುಗ" ಎಂದು ಕರೆಯುತ್ತಲಿದ್ದಾರೆ. ನಿಜ ಹೇಳಬೇಕೆಂದರೆ ಇದು "ಪ್ರಯೋಗಯುಗ"ವಾಗಿದೆ.

ಸಾಹಿತ್ಯದ ಮೌಲ್ಯನಿರ್ಣಯವು ಆಯಾ ಕಾಲದ ವಿಮರ್ಶೆಯ ಧೋರಣೆ ಮತ್ತು ಸಂಶೋಧನೆಯ ಸಾಧನೆಗಳನ್ನು ಅವಲಂಬಿಸಿರುತ್ತದೆ. ೨೦ನೆಯ ಶತಮಾನದ ಪೂರ್ವಾರ್ಧದ ಸಂಶೋಧಕರು ನಾಗಚಂದ್ರನನ್ನು ೧೨ನೆಯ ಶತಮಾನದ ಆರಂಭಕ್ಕೆ ತಳ್ಳಿದ್ದರು. ಆದರೆ, ಇತ್ತೀಚೆ ಲಭ್ಯವಾದ ನಾಗವರ್ಮನ ವರ್ಧಮಾನಪುರಾಣದಿಂದಾಗಿ ಇವನ ಕಾಲ ೧೧ನೆಯ ಶತಮಾನಕ್ಕೆ ಸರಿದಿರುವುದರಿಂದ, ಈ ಯುಗದ ಬರಡುತನ ಅಷ್ಟರಮಟ್ಟಿಗೆ ಕಡಿಮೆಯಾಗಿದೆ ಎಂದೇ ಹೇಳಬೇಕು. ಇದಲ್ಲದೆ ಮೇಲೆ ಹೇಳಿದ ನಾಗವರ್ಮನ ವರ್ಧಮಾನಪುರಾಣವೂ (೧೦೪೨) ಈ ಯುಗದ ಸಾಹಿತ್ಯಕ್ಕೆ ಒಂದು ಹೊಸ ಸೇರ್ಪಡೆಯೆನಿಸಿದೆ.

ಎರಡನೆಯದಾಗಿ, ಪಂಪನ ಕಾವ್ಯಧೋರಣೆಗೆ ತೋರಿದ ನಾಗಚಂದ್ರನ ಪ್ರತಿಕ್ರಿಯೆ ಈ ಯುಗದ ಗಮನಾರ್ಹ ಅಂಶವೆನಿಸಿದೆ. ಅರಿಕೇಸರಿಯಂಥ "ಲೌಕಿಕವ್ಯಕ್ತಿ" ಕಥಾನಾಯಕನಾಗುವುದನ್ನು "ನಾಯಕನನ್ಯನಾಗೆ ಕೃತಿ ವಿಶ್ರುತಮಾಗದು" ಎಂಬ ಮಾತಿನ ಮೂಲಕ ತಳ್ಳಿಹಾಕುತ್ತಾನೆ, ನಾಗಚಂದ್ರ. "ಚೋರ ವಿಟಕಥೆ ಕಥೆಯೇ? ಕವಿ ಕವಿಯೇ? ಎಂದು ಪ್ರಶ್ನಿಸಿದುದು ಇನ್ನೂ ವಿಶೇಷವಾಗಿದೆ. ಮುಂದುವರಿದು "ಹಣಕ್ಕಾಗಿ ರಾಜನಿಗೆ ಕಾವ್ಯಸಂಪತ್ತನ್ನು ಮಾರುವುದು ಸರಿಯೇ ?" ಎನ್ನುತ್ತಾನೆ. ಹಾಗೆ ಮಾರುವುದಕ್ಕಾಗಿ "ಬಾಯಿಯಿಂದ ಹೊರಹಾಕಿದುದು ಕೃತಿಯಲ್ಲ, ಉಗುಳು" ಎಂದು ತೆಗಳುತ್ತಾನೆ. ಇದೆಲ್ಲವನ್ನು ನೋಡಿದರೆ ೧೦ನೆಯ ಶತಮಾನದ ಕಥಾನಾಯಕ ಧೋರಣೆಗೆ ತೀವ್ರ ಪ್ರತಿಭಟನೆ ತೋರಿದ ಯುಗವೆನಿಸುತ್ತದೆ, ೧೧ನೆಯ ಶತಮಾನ.

ಇದಲ್ಲದೆ, ಭಾವಗಳನ್ನು ಉದ್ರೇಕಗೊಳಿಸಿ ಆನಂದವನ್ನುಂಟುಮಾಡುವುದಕ್ಕಾಗಿದ್ದಿತು, ಪಂಪನ ಲೌಕಿಕಕಾವ್ಯ ಪರಂಪರೆ. ಇಂಥದು "ರಾಗದ್ವೇಷ ನಿಬದ್ಧಮಪ್ಪ ಕೃತಿ" ಎಂದೂ, ಇಂಥ ಕೃತಿರಚನೆಯಿಂದ "ಬಿತ್ತಿ ಬೆಳೆವಂತಕ್ಕುಂ ವಿಷೋದ್ಯಾನಮಂ" ಎಂದೂ ಅದನ್ನು ನಿರಾಕರಿಸುತ್ತ, "ನಿನಗೆ ರಸಮೊಂದೆ ಶಾಂತಮೆ ಜಿನೇಂದ್ರ" ಎಂಬ ತನ್ನ ನಿಲುವನ್ನು ಸ್ಪಷ್ಟಪಡಿಸುತ್ತಾನೆ, ನಾಗಚಂದ್ರ. ಅಂದರೆ ಕಾವ್ಯ ಎಂಟು ರಸಗಳಿಗೆ ನೆಲೆಯಾಗಬೇಕಾದರೂ ಆ ರಸಗಳು ಶಾಂತರಸರಿಂದ ನಿಯಂತ್ರಿಸಲ್ಪಡಬೇಕೆಂಬುದು ಇವನ

ಅಭಿಪ್ರಾಯವಾಗಿದೆ. ಹೀಗಾಗಿ ಪಂಪನಿಂದ ಪ್ರಾರಂಭವಾದ ಎಂಟು ರಸಗಳ ಲೌಕಿಕಕಾವ್ಯ ಪರಂಪರೆಯನ್ನು ಪೊನ್ನ, ರನ್ನ ಮುಂದುವರಿಸಿದರೆ, ಮೇಲೆ ವಿವರಿಸಿದ ಹೊಸ ಧೋರಣೆಯ ಮೂಲಕ ನಾಗಚಂದ್ರ ಅದನ್ನು ತಿರಸ್ಕರಿಸಿ, ಅದರ ಸ್ಥಾನದಲ್ಲಿ ಶಾಂತರಸದಿಂದ ನಿಯಂತ್ರಿಸಲ್ಪಟ್ಟ ಎಂಟು ರಸಗಳನ್ನೊಳಗೊಂಡ ಧಾರ್ಮಿಕ ಕಾವ್ಯ ಪರಂಪರೆಯನ್ನು ಸ್ಥಾಪಿಸುತ್ತಾನೆ. ಆಮೇಲೆ ಬಂದ ಬಂಧುವರ್ಮ, ಜನ್ನ ಮೊದಲಾದವರು ಪಂಪನ ಮಾರ್ಗವನ್ನು ಕೈಬಿಟ್ಟು, ನಾಗಚಂದ್ರನ ಈ ಮಾರ್ಗವನ್ನು ಅನುಸರಿಸಿದುದು ಗಮನಾರ್ಹವೆನಿಸಿದೆ.

ಹೀಗೆ ಪಂಪಾದಿಗಳ ಮಾರ್ಗ ನಾಗಚಂದ್ರನಿಗೆ ಸಮ್ಮತವೆನಿಸದ ಕಾರಣವಾಗಿಯೇ ಅವನು ತನ್ನ ಪೂರ್ವದ ಯಾವ ಕನ್ನಡ ಕವಿಯನ್ನೂ ನೆನೆದಿಲ್ಲವೆನಿಸುತ್ತದೆ. ಇದೆಲ್ಲವನ್ನು ನೋಡಿದರೆ ಅಭಿನವಪಂಪನೆಂಬ ಬಿರುದನ್ನು 'ಪಂಪನ ಭಕ್ತ' ಎಂಬ ಅರ್ಥದಲ್ಲಲ್ಲ, ಪಂಪನಿಗೆ ಪ್ರತಿಕ್ರಿಯೆ ತೋರಿಸಿ, ಅವನಂತೆ ಬೇರೊಂದು ಹೊಸ ದಾರಿ ಬರೆದವ - ಎಂಬ ಅರ್ಥದಲ್ಲಿ ಈತ ಧರಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಈ ಶತಮಾನದ ಇನ್ನೊಂದು ಲಕ್ಷಣವೆಂದರೆ ಸೃಜನಸಾಹಿತ್ಯದ ಜೊತೆ ಶಾಸ್ತ್ರಸಾಹಿತ್ಯವೂ ವಿಪುಲ ಪ್ರಮಾಣದಲ್ಲಿ ಹುಟ್ಟಿಕೊಂಡುದು. ಇದಕ್ಕೆ ಕಾರಣ ರಾಷ್ಟ್ರಕೂಟರ ಅವನತಿ, ಕಲ್ಯಾಣ ಚಾಲುಕ್ಯರ ಉದಯವಾಗಿ ಜೈನಧರ್ಮ ದುರ್ಬಲಗೊಂಡುದು, ವೈದಿಕ ಧರ್ಮ ಪ್ರಬಲಗೊಂಡುದು. ಇದರಿಂದಾಗಿ ಅಗ್ರಹಾರ ಸಂಸ್ಕೃತಿ ಸಂಖ್ಯಾತ್ಮಕವಾಗಿ ವರ್ಧಿಸಿತು. ಕರ್ಮಪ್ರಧಾನ ಅಗ್ರಹಾರ ಸಂಸ್ಕೃತಿಯಲ್ಲಿ ಕಾವ್ಯಕ್ಕಿಂತ ಶಾಸ್ತ್ರಸೃಷ್ಟಿಗೆ ಅವಕಾಶ ಹೆಚ್ಚು. ಹೀಗಾಗಿ ಈಗ ಜೈನರ ಕಾವ್ಯಪ್ರತಿಭೆಯ ಕರ್ನಾಟಕದಲ್ಲಿ ವೈದಿಕರ ಶಾಸ್ತ್ರಪಾಂಡಿತ್ಯ ಇಂಬುಗೊಂಡಿತು. ಈ ಶತಮಾನದಲ್ಲಿ ಒಬ್ಬಿಬ್ಬರು ಬ್ರಾಹ್ಮಣರು ಕಾವ್ಯಸೃಷ್ಟಿಮಾಡಿದರೂ ಅದು ಅನುವಾದಕ್ಕೆ ಸೀಮಿತಗೊಂಡಿತೇ ಹೊರತು, ಸ್ವತಂತ್ರ ಕೃತಿನಿರ್ಮಾಣಕ್ಕೆ ಚಾಚಿಕೊಳ್ಳಲಿಲ್ಲ. ಬದಲಾದ ಈ ಅಗ್ರಹಾರ ಸಂಸ್ಕೃತಿ ಕಾರಣವಾಗಿ ಕರ್ನಾಟಕ ಕಾವ್ಯವೈಭವದಿಂದ ಶಾಸ್ತ್ರವೈಭವಕ್ಕೆ ಸರಿಯತೊಡಗಿತು. ಇದರ ಫಲವಾಗಿ ಕಾವ್ಯಶಾಸ್ತ್ರಗಳಾದ ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ, ಛಂದೋವಿಚಿತಿ, ವಸ್ತುಕೋಶಗಳೆಂಬ ಅಲಂಕಾರ, ವ್ಯಾಕರಣ, ಛಂದಸ್ಸು, ನಿಘಂಟುಕೃತಿಗಳೂ, ಕಾವ್ಯೇತರ ಶಾಸ್ತ್ರಗಳಾದ ಜಾತಕತಿಲಕ, ಮದನತಿಲಕ, ಗೋವೈದ್ಯ, ಕಲ್ಯಾಣಕಾರಕ, ವೀರಾವಳಿ, ಲೋಕೋಪಕಾರ, ವ್ಯವಹಾರ ಗಣಿತಗಳು ಹುಟ್ಟಿಕೊಂಡವು. ಹೀಗೆ ಕರ್ನಾಟಕದ ಮನಸ್ಸು ಸಾಹಿತ್ಯಸುಗ್ಗಿಯಿಂದ ಶಾಸ್ತ್ರಸುಗ್ಗಿಗೆ ಸರಿಯುತ್ತಲಿದ್ದ ಸಂಕ್ರಮಣ ಯುಗದಲ್ಲಿ ಮಾನಸೋಲ್ಲಾಸದ ಮಹಾಸೃಷ್ಟಿ ಸಂಭವಿಸಿತು.

ಈ ಯುಗದಲ್ಲಿ ಕಣ್ಣು ತೆರೆದ ಇನ್ನೊಂದು ಹೊಸ ಪ್ರಯೋಗವಾಗಿದೆ, ಕನ್ನಡ ಜ್ಞಾನವನ್ನು ಸಂಸ್ಕೃತಮಾಧ್ಯಮದ ಮೂಲಕ ಪ್ರಸಾರ ಮಾಡುವುದು. ಈಗ ನಾಗವರ್ಮ ಕನ್ನಡ ವ್ಯಾಕರಣವನ್ನು ಕರ್ಣಾಟಕ ಭಾಷಾಭೂಷಣ ಹೆಸರಿನಿಂದ ಸಂಸ್ಕೃತದಲ್ಲಿ ಬರೆದನು. ಇದೇ ರೀತಿ ಸೋಮೇಶ್ವರನು ರಾಜರ ಜ್ಞಾನಭಂಡಾರದ ವರ್ಧನೆಗಾಗಿ ಮಾನಸೋಲ್ಲಾಸ ಹೆಸರಿನ ವಿಶ್ವಕೋಶವನ್ನು ಸಂಸ್ಕೃತದಲ್ಲಿ ಸೃಷ್ಟಿಸಿದನು. ಇದಕ್ಕೆ ಪೂರಕವೆಂಬಂತೆ ದುರ್ಗಸಿಂಹನು ರಾಜಕುಮಾರರ ಸನ್ಮಾರ್ಗಕ್ಕಾಗಿ ಸಂಸ್ಕೃತ ಪಂಚತಂತ್ರವನ್ನು ಕನ್ನಡಕ್ಕೆ ಭಾಷಾಂತರಿಸಿದನು.

ಹೀಗೆ ಕಾವ್ಯರಚನೆಯ ಹೊಸ ಪ್ರಯೋಗ, ಶಾಸ್ತ್ರರಚನೆಯ ಹೊಸ ಆರಂಭ, ಕನ್ನಡ ಜ್ಞಾನವನ್ನು ಸಂಸ್ಕೃತದ ಮೂಲಕ ಪ್ರಸಾರಮಾಡುವ ಹೊಸ ಧೋರಣೆ ಕಾರಣವಾಗಿ ೧೧ನೆಯ ಶತಮಾನವನ್ನು

ಬರಡುಯುಗವೆಂದು ಕರೆಯದೆ, ಪ್ರಯೋಗಯುಗವೆಂದು ಕರೆಯುವುದು ನ್ಯಾಯಸಮ್ಮತವೆನಿಸುತ್ತದೆ. ಈ ಪ್ರಯೋಗಯುಗದ, ಅದರಲ್ಲಿಯೂ ಶಾಸ್ತ್ರಸಾಹಿತ್ಯದ ಸೃಷ್ಟಿ ಮತ್ತು ಸಂಸ್ಕೃತಮಾಧ್ಯಮದ ಆಸಕ್ತಿಗಳ ಫಲಿತವೆನಿಸಿದೆ, ಮಾನಸೋಲ್ಲಾಸ.

ಮಾನಸೋಲ್ಲಾಸದ ಕರ್ತೃ

ಕರ್ನಾಟಕದಲ್ಲಿ ರಾಜರು ಉದ್ದಕ್ಕೂ ಸಾಹಿತ್ಯಸೃಷ್ಟಿಗೆ ಆಶ್ರಯ ನೀಡಿದುದಲ್ಲದೆ, ಸ್ವತಃ ಸಾಹಿತ್ಯವನ್ನೂ ಸೃಷ್ಟಿಸುತ್ತ ಬಂದಿದ್ದಾರೆ. ಬಾದಾಮಿ ಚಾಲುಕ್ಯರಲ್ಲಿ ವಿಜಯಾಂಬಿಕಾ, ಗಂಗರಲ್ಲಿ ಭೂವಿಕ್ರಮ, ದುರ್ವಿನೀತ, ಸೈಗೊಟ್ಟ ಶಿವಮಾರ, ರಾಷ್ಟ್ರಕೂಟರಲ್ಲಿ ನೃಪತುಂಗರು ಸುಪ್ರಸಿದ್ಧ ಸಾಹಿತ್ಯವ್ಯಸನಿಗಳು.

ರಾಷ್ಟ್ರಕೂಟರನ್ನು ಸೋಲಿಸಿ ಕರ್ನಾಟಕವನ್ನಾಳಿದವರು ಕಲ್ಯಾಣ ಚಾಲುಕ್ಯರು. ಈ ಮನೆತನದ ಸಂಸ್ಥಾಪಕ ಇಮ್ಮಡಿ ತೈಲಪ (೯೭೩ - ೯೭೭), ಇವನ ಮಗ ಇರಿವ ಬೆಡಂಗ (೯೯೭ - ೧೦೦೮), ಇವನ ತಮ್ಮ ದಶವರ್ಮನ ಮಗ ವಿಕ್ರಮಾದಿತ್ಯ V (೧೦೦೮ - ೧೦೧೫), ಇವನ ತಮ್ಮ ಜಯಸಿಂಹ II (೧೦೧೫ - ೧೦೪೨). ಕಾವ್ಯದ ಜೊತೆ ಶಾಸ್ತ್ರದ ಬೆಳವಣಿಗೆಗೂ ಅವಕಾಶ ಮಾಡಿಕೊಟ್ಟ ಕೀರ್ತಿ ಈ ಜಯಸಿಂಹನ ಆಸ್ಥಾನಕ್ಕೆ ಸಲ್ಲುತ್ತದೆ. ಪಂಪರಾಮಾಯಣ ಮಲ್ಲಿನಾಥಪುರಾಣಗಳ ಅಭಿನವಪಂಪ ಮತ್ತು ಸುಕುಮಾರ ಚರಿತೆಯ ಶಾಂತಿನಾಥರಂಥ ಕವಿಗಳೂ, ಪಂಚತಂತ್ರದ ದುರ್ಗಸಿಂಹನಂಥ ಅನುವಾದ ಕವಿಗಳೂ, ಕಾವ್ಯಾವಲೋಕನ, ಕರ್ಣಾಟ ಭಾಷಾಭೂಷಣ, ವಸ್ತುಕೋಶ, ಛಂದೋವಿಚಿತಿಗಳ ಇಮ್ಮಡಿ ನಾಗವರ್ಮನಂಥ ಸಾಹಿತ್ಯಶಾಸ್ತ್ರಕೃತಿಕರ್ತೃವೂ, ಜಾತಕ ತಿಲಕದ ಶ್ರೀಧರಾಚಾರ್ಯ, ಮದನ ತಿಲಕದ ಚಂದ್ರರಾಜ, ಕಲ್ಯಾಣಕಾರಕದ ಜಗದ್ದಳ ಸೋಮನಾಥ, ಗೋವೈದ್ಯದ ಕೀರ್ತಿವರ್ಮ, ವೀರಾವಳಿಯ ವಜ್ರಭಟ್ಟ, ವ್ಯವಹಾರ ಗಣಿತದ ರಾಜಾದಿತ್ಯರಂಥ ಸಾಹಿತ್ಯೇತರ ಶಾಸ್ತ್ರಕರ್ತೃಗಳೂ, ಲೋಕೋಪಕಾರದ ಚಾವುಂಡರಾಯನಂಥ ವಿಶ್ವಕೋಶ ಕರ್ತೃವೂ ಈತನ ಆಶ್ರಯದಲ್ಲಿ, ಪರಿಸರದಲ್ಲಿ ಬೆಳೆದುದನ್ನು ನೋಡಿದರೆ, ಈ ಅರಸನ ಕಾವ್ಯ - ಶಾಸ್ತ್ರ - ಅನುವಾದ ಸಾಹಿತ್ಯಪೋಷಣೆ ಅಪಾರವೆನಿಸುತ್ತದೆ.

ಇವನ ಮಗ ಸೋಮೇಶ್ವರ I (೧೦೪೨ - ೧೦೬೮), ಇವನ ಮಗ ಸೋಮೇಶ್ವರ II (೧೦೬೮ - ೧೦೭೬). ಇವನ ತಮ್ಮ ಆರನೆಯ ವಿಕ್ರಮಾದಿತ್ಯ (೧೦೭೬ - ೧೧೨೭) ತುಂಬಾ ಪ್ರಸಿದ್ಧ ಅರಸು. "ಕಲ್ಯಾಣದಂಥ ರಾಜಧಾನಿ ಹಿಂದೆಯೂ ಇರಲಿಲ್ಲ, ಇಂದೂ ಇಲ್ಲ, ಮುಂದೆಯೂ ಇರುವುದಿಲ್ಲ, ವಿಕ್ರಮಾದಿತ್ಯನಂಥ ಚಕ್ರವರ್ತಿ ಹಿಂದೆಯೂ ಇರಲಿಲ್ಲ, ಇಂದೂ ಇಲ್ಲ, ಮುಂದೆಯೂ ಇರುವುದಿಲ್ಲ"ವೆಂಬ ಖ್ಯಾತಿಯಿಂದ ಸುಮಾರು ೬೦ ವರ್ಷ ರಾಜ್ಯವಾಳಿದವನೀತ. ಈತನ ಆಸ್ಥಾನದಲ್ಲಿ ಬಿಲ್ಹಣನ ವಿಕ್ರಮಾಂಕದೇವ ಚರಿತ, ವಿಜ್ಞಾನೇಶ್ವರನ ಮಿತಾಕ್ಷರ ಹುಟ್ಟಿದುದು ಒಂದು ವಿಶೇಷ.

ಈತನ ಮಗ ಸೋಮೇಶ್ವರ III (೧೧೨೭ - ೧೧೩೯). ಇವನ ತಾಯಿ ಚಂದಲದೇವಿ. ಇವಳು ಗುಲ್ಬರ್ಗಾ ಜಿಲ್ಲೆಯ ಇಂದಿನ ಆಳಂದ ರಾಜಧಾನಿಯಿಂದ ಸಾವಿರ ಹಳ್ಳಿಗಳ ರಾಜ್ಯ(ಅಲಂದೆ - ೧೦೦೦)ವನ್ನು ಆಳುತ್ತಲಿದ್ದಳು. ರಾಜಧಾನಿ ಆಳಂದದ ಸುಪ್ರಸಿದ್ಧ ಸೋಮೇಶ್ವರದೇವರ ಹೆಸರನ್ನೇ ಇವಳು ತನ್ನ ಮಗನಿಗೆ ಇಟ್ಟಿರುವ ಸಾಧ್ಯತೆಯಿದೆ. ತಂದೆಯು ೬೦ ವರ್ಷಗಳಷ್ಟು ಕಾಲದ ಸುದೀರ್ಘ ಆಳಿಕೆ ಕಾರಣವಾಗಿ, ತನ್ನ ಬಿಡುವಿನ ಅವಧಿಯನ್ನು ಈತ ಸಾಹಿತ್ಯ - ಶಾಸ್ತ್ರ ವ್ಯಾಸಂಗದಲ್ಲಿ,

ವಿದ್ಯಾವಿನೋದದಲ್ಲಿ ಕಳೆದನೆಂದು ತೋರುತ್ತದೆ. ಇದರ ಫಲವಾಗಿ ಮಾನಸೋಲ್ಲಾಸ ನಾಮಪ್ರಸಿದ್ಧಿಯ ಅಭಿಲಷಿತಾರ್ಥ ಚಿಂತಾಮಣಿ ಅವತರಿಸಿತು. ತಾನು ಅದರ ಕರ್ತೃವೆಂದು, ಪ್ರಸ್ತುತ ಕೃತಿಯ ಮಧ್ಯ ಮಧ್ಯ ಹೇಳಿಕೊಂಡಿರುವನಲ್ಲದೆ, ಐದೂ ವಿಶಂತಿಗಳ ಅಂತ್ಯ ಪ್ರಶಸ್ತಿಯಲ್ಲಿಯೂ ನೇರವಾಗಿ ಹೇಳಿಕೊಂಡುದರ ಕನ್ನಡ ಪಾಠ ಹೀಗಿದೆ :

೧. ....ಶ್ರೀಮದ್ಭೂಲೋಕಮಲ್ಲ ಶ್ರೀಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆನಿಸಿದ ಮಾನಸೋಲ್ಲಾಸದಲ್ಲಿ....

೨. ....ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರದೇವ ವಿರಚಿತ ಮಾನಸೋಲ್ಲಾಸವೆನಿಸಿದ ಅಭಿಲಷಿತಾರ್ಥ ಚಿಂತಾಮಣಿಯಲ್ಲಿ....

೩. ....ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರ ವಿರಚಿತ ಮಾನಸೋಲ್ಲಾಸದ ಕಥನದಲ್ಲಿ....

೪. .....ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿ ಎಂಬ ಮಾನಸೋಲ್ಲಾಸದಲ್ಲಿ....

೫. .... ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆನಿಸಿದ ರಾಜಮಾನಸೋಲ್ಲಾಸದಲ್ಲಿ....

ಹೀಗೆ ಈ ಕೃತಿಯ ಕರ್ತೃ ಇಲ್ಲಿ ತನ್ನ ಹೆಸರನ್ನು ಸೋಮೇಶ್ವರದೇವನೆಂದೂ, ಕೆಲವೊಮ್ಮೆ ಸೋಮೇಶ್ವರನೆಂದೂ ಬೇರೆಡೆಗಳಲ್ಲಿ ಸೋಮೇಶ್ವರಕ್ಷಿತಿಪ, ಸೋಮಭೂಪಾಲನೆಂದೂ, ಹೇಳಿಕೊಂಡಿದ್ದಾನೆ. ನಾವು ಸೌಲಭ್ಯಕ್ಕೋಸುಗ ಸೋಮೇಶ್ವರ ಎಂದು ಇಟ್ಟುಕೊಂಡಿದ್ದೇವೆ. ಈತನು "ಶ್ರೀ ಮಹಾರಾಜಾಧಿರಾಜ ಸತ್ಯಾಶ್ರಯಕುಲತಿಲಕ ಚಾಲುಕ್ಯಾಭರಣ ಶ್ರೀಮದ್ಭೂಲೋಕಮಲ್ಲ" ಎಂಬ ವಿಶೇಷಣವನ್ನು ಐದೂ ವಿಶಂತಿಗಳ ಅಂತ್ಯಪ್ರಶಸ್ತಿಯಲ್ಲಿ ಹೇಳಿಕೊಂಡಿದ್ದಾನೆ. ಆದರೆ ವಿಶ್ವಕೋಶ ರಚನೆಗೆ ಅವಶ್ಯವಿರುವ ಸರ್ವಜ್ಞತ್ವದ ಸೂಚನೆಗಾಗಿ, ಶಾಸನದಲ್ಲಿ ಸಿಗುವ ಈತನ ಇನ್ನೊಂದು ಬಿರುದು 'ಸರ್ವಜ್ಞ' ಎಂಬುದನ್ನೂ, ಈತನ ವಂಶ ಮತ್ತು ವೃತ್ತಿಗಳನ್ನು ಸೂಚಿಸುವ "ಕಲ್ಯಾಣ ಚಾಲುಕ್ಯ ಚಕ್ರವರ್ತಿ" ಎಂಬುದನ್ನೂ ಇಲ್ಲಿ ಬಳಸಿ, "ಕಲ್ಯಾಣ ಚಾಲುಕ್ಯಚಕ್ರವರ್ತಿ ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ" ಎಂಬ ಶೀರ್ಷಿಕೆಯನ್ನು ನಾವು ಇಟ್ಟುಕೊಂಡಿದ್ದೇವೆ.

ಹೀಗೆ ಮಾನಸೋಲ್ಲಾಸದ ಕರ್ತೃ ಸೋಮೇಶ್ವರನಾಗಿದ್ದರೂ, ಇಷ್ಟು ವೈವಿಧ್ಯಪೂರ್ಣ ವಿಷಯಗಳನ್ನು ಸಂಗ್ರಹಿಸಿ, ಇಷ್ಟು ವ್ಯಾಪಕ ಕೃತಿಯನ್ನು ಒಬ್ಬನೇ ಬರೆದನೇ? ಅದರಲ್ಲಿಯೂ ಬಿಡುವಿಲ್ಲದ ಕಾರ್ಯಕಲಾಪಗಳಲ್ಲಿ ತೊಡಗಿಕೊಂಡ ಚಕ್ರವರ್ತಿ ಬರೆದನೇ? ಎಂಬ ಸಂದೇಹವನ್ನು ಕೆಲವರು ಎತ್ತಿದ್ದಾರೆ.

ಭಾರತದಲ್ಲಿ ಧಾರಾನಗರದ ಭೋಜ, ಪಾಟಲೀಪುತ್ರದ ಹರ್ಷವರ್ಧನರ ಹೆಸರಿನಲ್ಲಿ ಕಂಡುಬರುವ ಸಂಸ್ಕೃತ ಗ್ರಂಥಗಳ ವಿಷಯವಾಗಿಯೂ ಇಂಥ ಸಂದೇಹಗಳು ಕೇಳಿಬರುತ್ತಿವೆ. ಕರ್ನಾಟಕದಲ್ಲಿಯೂ ಕವಿರಾಜಮಾರ್ಗದ ಕರ್ತೃ ನೃಪತುಂಗನೇ? ಆಶ್ರಯಿತ ವಿದ್ವಾಂಸನೇ? ಎಂಬ ವಾದ ಇನ್ನೂ ನೆಲೆಯನ್ನು ಮುಟ್ಟಿಲ್ಲ. ಮಿಕ್ಕ ಕೃತಿಗಳ ವಿಚಾರ ಏನೇ ಇರಲಿ, ನೂರೆಂಟು ವಿಷಯಗಳ, ಎಂಟು ಸಾವಿರ ಶ್ಲೋಕಗಳ ಮಾನಸೋಲ್ಲಾಸವನ್ನು ಒಬ್ಬನೇ ರಚಿಸುವುದು, ಅದೂ ರಾಜನಂಥ ಬಹುದೊಡ್ಡ ಜವಾಬ್ದಾರಿಗಳ ವ್ಯಕ್ತಿ ರಚಿಸುವುದು ಸಹಜವಾಗಿಯೇ ಸಂದೇಹ ಹುಟ್ಟಿಸುತ್ತದೆ. ಹೀಗಾಗಿ

ಬಹುಶಃ ಈ ರಾಜನೂ ಸೇರಿದಂತೆ ಆಸ್ಥಾನದ ಅನೇಕ ವಿದ್ವಾಂಸರು ಕೈಗೂಡಿಸಿ ದುಡಿದುದರ ಫಲವಾಗಿ ಈ ಕೃತಿಸೃಷ್ಟಿ ಜರುಗಿರಬಹುದು.

ಪ್ರಾಚೀನಕಾಲದಲ್ಲಿ ರಾಜಾಸ್ಥಾನವೆನ್ನುವುದು ಸಾಹಿತ್ಯದ ಸೃಷ್ಟಿಯಾಗಿಟ್ಟಿತು. ಇಲ್ಲಿ ಸ್ವತಂತ್ರ ಸಾಹಿತ್ಯದೊಂದಿಗೆ ಅನೇಕರು ಸೇರಿ ಸಂಕಲಿಸುವ, ಸಂಯೋಜಿಸುವ ಸಮೂಹಸಾಹಿತ್ಯವೂ ಸೃಷ್ಟಿಯಾಗುತ್ತಿದ್ದಿತು. ಪಾಂಡಿತ್ಯ - ಪ್ರತಿಭೆಗಳ ರಾಜನು ಇದರಲ್ಲಿ ಕೇಂದ್ರವ್ಯಕ್ತಿಯಾಗಿ ನಿಂತು, ಕ್ರಿಯಾತ್ಮಕವಾಗಿ ತೊಡಗಿಕೊಳ್ಳುತ್ತಿದ್ದನು. ಬಹುಶಃ ಕವಿರಾಜಮಾರ್ಗ (ಕವಿಗಳು ಮತ್ತು ರಾಜ ಸೇರಿ ನಿರ್ಮಿಸಿದ ಮಾರ್ಗ) ಹುಟ್ಟಿದ್ದು ಹೀಗೆ. ಮಾನಸೋಲ್ಲಾಸ ಹುಟ್ಟಿದ್ದೂ ಹೀಗೆ. ಅಂದರೆ ಸೋಮೇಶ್ವರನ ಸಹಭಾಗಿತ್ವದಲ್ಲಿ ಮತ್ತು ಪಂಡಿತಮಂಡಳಿಯ ದುಡಿಮೆಯಲ್ಲಿ ಮಾನಸೋಲ್ಲಾಸ ರೂಪಗೊಂಡಂತಿದೆ. ಇಂದು ಸರ್ವಸಮರ್ಥ ವಿದ್ವಾಂಸನೊಬ್ಬನ ನಿರ್ದೇಶಕತ್ವದಲ್ಲಿ ಅನೇಕ ವಿದ್ವಾಂಸರು ಸೇರಿ, ಒಂದು ಸಾಹಿತ್ಯಿಕ ಯೋಜನೆಯನ್ನು ಪೂರ್ಣಗೊಳಿಸುವ ರೀತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ವಿಶ್ವಕೋಶಯೋಜನೆಯ ಇಂದಿನ ಪ್ರಧಾನ ಸಂಪಾದಕರ ಕಾರ್ಯವಿಧಾನವನ್ನೂ ಇಲ್ಲಿ ಸ್ಮರಿಸಬಹುದು. ಅದೇನೇ ಇದ್ದರೂ ಮಾನಸೋಲ್ಲಾಸದಂಥ ವಿಶ್ವಕೋಶಕ್ಕೆ ಅವಶ್ಯವಿರುವ ವೈವಿಧ್ಯಪೂರ್ಣ ವಿದ್ವತ್ತು ಸೋಮೇಶ್ವರನಲ್ಲಿ ತುಂಬಿಕೊಂಡಿದ್ದುದಕ್ಕೆ ಈ ಗ್ರಂಥ ಅನೇಕ ಸಾಕ್ಷಿಗಳನ್ನು ಹೀಗೆ ಹೇಳುತ್ತದೆ :

೧. ಅಭ್ಯಾಸ ಪ್ರಯತ್ನಗಳಿಂದ ಸೋಮೇಶ್ವರರಾಜನು ಈ ಗ್ರಂಥವನ್ನು ರಚಿಸಿದ್ದಾನೆ (ಪು. ೨).
೨. [illegible] ಸಮುದ್ರಕ್ಕೆ ಕಲಶೋದ್ಭವನೂ (ಅಗಸ್ತ್ಯನೂ) ಚಾಲುಕ್ಯವಂಶಕ್ಕೆ [illegible] ಸೋಮಭೂಪಾಲನು... (ಪು. ೪೬).
೩. ಈ [illegible] ಸೋಮೇಶ್ವರ ರಾಜನು ರಚಿಸಿದ್ದಾನೆ (ಪು. ೧೬೯).
೪. ಚಿತ್ರವಿದ್ಯಾವಿರಿಂಚಿ ಭೂಲೋಕಮಲ್ಲದೇವ[illegible] ರಚಿಸಿರುವನು. (ಪು. ೨೯೨).
೫. ಉಪಭೋಗ ವಿಂಶತಿಯನ್ನು (೨೦ ರಾಜಭೋಗಗಳನ್ನು) ಶಾರದಾದೇವಿ ಕುಲನಂದನನೂ, ಅರಿಭಯಂಕರನೂ ಆದ ಸೋಮೇಶ್ವರಭೂಪಾಲನು ವರ್ಣಿಸಿದ್ದಾನೆ (ಪು. ೩೦೧).
೬. ಕಾಲಸರ್ವಸ್ವವನ್ನು ತಿಳಿದ ಭೂಲೋಕಮಲ್ಲದೇವನಾದ ಸೋಮಭೂಪಾಲನು ಮಹಿಷಿಗಳನ್ನು ಅವಲಂಬಿಸಿದ ವಿನೋದವನ್ನು ಹೇಳಿದ್ದಾನೆ. (ಪು. ೫೧೪).
೭. ಇವುಗಳನ್ನು ಸೋಮೇಶ್ವರನು ಮಾರ್ಗದೇಶೀ ಕ್ರಮದಿಂದ ಹೇಳಿದ್ದಾನೆ. (ಪು. ೫೧೪).

ಈ ವಿವರಗಳು ಸೋಮೇಶ್ವರನ ಬಹುಮುಖಿ ಅಧ್ಯಯನ, ವಿದ್ವತ್ತುಗಳನ್ನು ಸ್ಪಷ್ಟಪಡಿಸುತ್ತವೆ. ಇದನ್ನು ಬೆಂಬಲಿಸುವ ರೀತಿಯಲ್ಲಿ "ಅಖಿಳಕಳಾ ಸಂಪತ್ಸನ್ನಿಧಿ ತಂನೊಳೆಸೆಯೆ ಸರ್ವಜ್ಞಮಹೀಭೃತ್ಸಂಜ್ಞೆ ಪಡೆದನಮಳ ಶರತ್ಸಮಯ ಸುಧಾಂಶು ಕೀರ್ತಿಧಾಮಂ ಸೋಮಂ ಭೂಲೋಕಮಲ್ಲವಲ್ಲಭನೀ ಲೋಕಮನಾಳ್ದನೆಸೆಯೆ ಸರ್ವಜ್ಞ ಮಹೀಪಾಲಂ" "ಭಾರತಿಗಂದು ಸನಾಥೋದಯಂ...." ಎಂಬಂಥ ವಾಕ್ಯಗಳು ಶಾಸನದಲ್ಲಿ ಗೋಚರಿಸುತ್ತವೆ. ಈ ವಿದ್ವತ್ತಿನ ಬಲದಿಂದ ಇವನೇ ರಚಿಸಿರಬಹುದಾದ "ಸಂಗೀತ ರತ್ನಾವಳಿ" ಹೆಸರಿನ ಅನುಪಲಬ್ಧಗ್ರಂಥದ ಸೂಚನೆಯೂ ಬೇರೆಡೆ ಸಿಗುತ್ತದೆ. ಹೀಗಾಗಿ ಕೊನೆಯ ಪಕ್ಷ ಮಾನಸೋಲ್ಲಾಸ ಸೃಷ್ಟಿಯಲ್ಲಿ ಸೋಮದೇವನ ವಿದ್ವತ್ತಿನ ಪಾಲು ಸೇರಿಕೊಂಡಿದೆಯೆಂದೇ ಹೇಳಬಹುದು.

ಕೃತಿನಾಮ

ಈ ಕೃತಿ ಅಭಿಲಷಿತಾರ್ಥ ಚಿಂತಾಮಣಿ, ಮಾನಸೋಲ್ಲಾಸ, ರಾಜಮಾನಸೋಲ್ಲಾಸ ಎಂದು ಮೂರು ಹೆಸರುಗಳಲ್ಲಿ ಕಾಣಿಸಿಕೊಂಡಿದೆ.

೧. ಚಾಲುಕ್ಯ ವಂಶತಿಲಕನಾದ ಸೋಮೇಶ್ವರರಾಜನು ಜಗತ್ತಿಗೆ ಉಪಕಾರ ಮಾಡಲೆಂದು ಈ ಮಾನಸೋಲ್ಲಾಸ ಶಾಸ್ತ್ರವನ್ನು ರಚಿಸಿದ್ದಾನೆ. (೧-೧-೯)

೨. ..... ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿ ಎನಿಸಿದ ಮಾನಸೋಲ್ಲಾಸದಲ್ಲಿ (ಪ್ರಥಮ ವಿಂಶತಿಯ ಅಂತ್ಯಪ್ರಶಸ್ತಿ).

೩. ..... ಶ್ರೀ ಸೋಮೇಶ್ವರದೇವ ವಿರಚಿತ ಮಾನಸೋಲ್ಲಾಸವೆನಿಸಿದ ಅಭಿಲಷಿತಾರ್ಥ ಚಿಂತಾಮಣಿಯಲ್ಲಿ (ದ್ವಿತೀಯ ವಿಂಶತಿಯ ಅಂತ್ಯಪ್ರಶಸ್ತಿ).

೪. .....ಶ್ರೀ ಸೋಮೇಶ್ವರ ವಿರಚಿತ ಮಾನಸೋಲ್ಲಾಸದ ರಾಜ್ಯೋಪಭೋಗ ಕಥನದಲ್ಲಿ ಮೂರನೆಯ ಅಧ್ಯಾಯ ಮುಗಿದುದು. (ತೃತೀಯ ವಿಂಶತಿಯ ಅಂತ್ಯಪ್ರಶಸ್ತಿ)

೫. ....ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆಂಬ ಮಾನಸೋಲ್ಲಾಸದಲ್ಲಿ (ಚತುರ್ಥ ವಿಂಶತಿಯ ಅಂತ್ಯಪ್ರಶಸ್ತಿ)

೬. .....ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆನಿಸಿದ ರಾಜಮಾನಸೋಲ್ಲಾಸದಲ್ಲಿ (ಪಂಚಮ ವಿಂಶತಿಯ ಅಂತ್ಯಪ್ರಶಸ್ತಿ)

ಹೀಗೆ ಈ ಕೃತಿಯಲ್ಲಿ ಇದರ ಹೆಸರುಗಳು ಉಲ್ಲೇಖಗೊಂಡಿವೆ. ಇವೆಲ್ಲವನ್ನು ಗಮನಿಸಿ ಈ ಗ್ರಂಥವನ್ನು ಮೊದಲು ಪ್ರಕಟಿಸಿದ ಬರೋಡಾ ಗಾಯಕವಾಡ ಸಂಶೋಧನ ಸಂಸ್ಥೆ "ಮಾನಸೋಲ್ಲಾಸ" ಎಂದೂ, ಮೈಸೂರಿನ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ "ಅಭಿಲಷಿತಾರ್ಥ ಚಿಂತಾಮಣಿ" ಎಂದೂ ಇದನ್ನು ಕರೆದಿವೆ. ಗಾಯಕವಾಡ ಸಂಶೋಧನ ಸಂಸ್ಥೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಂಡ ನಾವು, ಸಹಜವಾಗಿಯೇ "ಮಾನಸೋಲ್ಲಾಸ" ಹೆಸರು ಇಟ್ಟುಕೊಂಡಿದ್ದೇವೆ.

ಇಲ್ಲಿ "ಅಭಿಲಷಿತಾರ್ಥ ಚಿಂತಾಮಣಿ" ಎಂಬುದಕ್ಕೆ ಇಚ್ಛಿತ ವಿಷಯವನ್ನು ನೀಡುವ ಚಿಂತಾಮಣಿ ಸ್ವರೂಪದ ಕೃತಿಯೆಂದು ಅರ್ಥ. ರಾಜಮಾನಸೋಲ್ಲಾಸ ಎಂಬುದಕ್ಕೆ ರಾಜರ ಮನಸ್ಸನ್ನು ಉಲ್ಲಾಸಗೊಳಿಸುವ ಕೃತಿ ಎಂದು ಅರ್ಥ. ಇದರ ಸಂಕ್ಷಿಪ್ತ ರೂಪವೇ ಮಾನಸೋಲ್ಲಾಸ. ಹೀಗೆ ಈ ಎಲ್ಲ ಹೆಸರುಗಳು ಈ ಕೃತಿಗೆ ಸಾರ್ಥಕವೆನಿಸಿವೆ.

ಕಾಲ

ಮಾನಸೋಲ್ಲಾಸ ರಚನೆಯ ಕಾಲಸೂಚನೆ, ಇದರ ದ್ವಿತೀಯ ವಿಂಶತಿಯ ಅಮಾತ್ಯಾಧ್ಯಾಯದ ಪಂಚಾಂಗನಿರ್ಣಯ ವಿಭಾಗದಲ್ಲಿ ಕಂಡುಬರುತ್ತದೆ. ಇಲ್ಲಿ ಗತಶಕ ವರ್ಷವನ್ನು ಕಂಡುಹಿಡಿಯುವ ರೀತಿಗೆ, ಈ ಗ್ರಂಥ ನಿರ್ಮಾಣದ ಕಾಲವನ್ನು ಉದಾಹರಣೆಯಾಗಿ ಬಳಸಿಕೊಂಡಿದ್ದಾನೆ (೨-೨-೬೧ ರಿಂದ ೬೪). ಇದರ ಪ್ರಕಾರ ಶಾಲಿವಾಹನ ಶಕೆ ೧೦೫೧, ಸೌಮ್ಯ ಸಂವತ್ಸರ, ಚೈತ್ರ ಮಾಸ, ಶುಕ್ಲಪಕ್ಷ ಪ್ರತಿಪದೆಯ ಶುಕ್ರವಾರ ಈ ಕೃತಿ ರಚನೆ ಆರಂಭವಾಯಿತು ಅಥವಾ ಈ ಶ್ಲೋಕ ಬರೆಯುವ ದಿನವಾಗಿದ್ದಿತೆಂದು ಹೇಳಬಹುದು. ಇದಕ್ಕೆ ಸಮಾನವಾದುದು ಕ್ರಿ. ಶ. ೧೧೨೯. ಇದು ಈತ ಪಟ್ಟಕ್ಕೆ ಬಂದ ಎರಡನೆಯ ವರ್ಷವಾಗಿದೆ.

ವಿಷಯವಿನ್ಯಾಸ

ಮಾನಸೋಲ್ಲಾಸ ಐದು ವಿಂಶತಿಗಳಾಗಿ ವಿಭಾಗಿಸಲ್ಪಟ್ಟಿದೆ. ಪ್ರತಿಯೊಂದು ವಿಂಶತಿಯಲ್ಲಿ ೨೦ ಅಧ್ಯಾಯಗಳಿವೆ. ಹೀಗೆ ಇದು ಐದು ವಿಂಶತಿ, ನೂರು ಅಧ್ಯಾಯಗಳಲ್ಲಿ ವಿನ್ಯಾಸಗೊಂಡಿದೆ. ಒಂದೊಂದು ಅಧ್ಯಾಯದಲ್ಲಿ ಬಹಳಷ್ಟು ಸಲ ಒಳವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಉದಾ. ದ್ವಿತೀಯ ವಿಂಶತಿಯ ಅಮಾತ್ಯಾಧ್ಯಾಯದಲ್ಲಿ ಮಂತ್ರಿ ಲಕ್ಷಣ, ಪುರೋಹಿತ ಲಕ್ಷಣ, ಪಂಚಾಂಗ ನಿರ್ಣಯ, ಜ್ಯೋತಿರ್ವಿದ್- ಗಣಕ ಲಕ್ಷಣ, ಧರ್ಮಾಧಿಕಾರಿ ಲಕ್ಷಣ, ಕೋಶಾಧ್ಯಕ್ಷ, ಗಣಕ ಲಕ್ಷಣ, ಪ್ರತೀಹಾರ ಲಕ್ಷಣ, ಸಂಧಿವಿಗ್ರಹಿಕ ಲಕ್ಷಣ, ಲೇಖಕ ಲಕ್ಷಣ, ಸಾರಥಿ ಲಕ್ಷಣ, ಸೂದ ಲಕ್ಷಣ, ಅಂತಃ ಪುರ ರಕ್ಷಕ ಮತ್ತು ಕುಮಾರ ಪರಿಪಾಲಕರ ಲಕ್ಷಣ ವಿವರಗಳಿವೆ.

ಎಲ್ಲಾ ಅಧ್ಯಾಯ ಸೇರಿ ಒಟ್ಟು ಸುಮಾರು ೮೦೦೦ ಶ್ಲೋಕಗಳು ಈ ಕೃತಿಯಲ್ಲಿವೆ. ಪ್ರಥಮ ವಿಂಶತಿಯಲ್ಲಿ ೩೦೮ ಶ್ಲೋಕ, ದ್ವಿತೀಯ ವಿಂಶತಿಯಲ್ಲಿ ೧೩೦೦ ಶ್ಲೋಕ, ತೃತೀಯ ವಿಂಶತಿಯಲ್ಲಿ ೧೮೨೦, ಚತುರ್ಥ ವಿಂಶತಿಯಲ್ಲಿ ೧೭೨೫+೧೪೯೪=೩೨೧೯ ಶ್ಲೋಕ, ಪಂಚಮ ವಿಂಶತಿಯಲ್ಲಿ ೧೩೭೫ ಶ್ಲೋಕಗಳಿರುವುದನ್ನು ನೋಡಿದರೆ, ಪ್ರತಿಯೊಂದು ವಿಂಶತಿಯಲ್ಲಿ ಶ್ಲೋಕಸಂಖ್ಯಾಪ್ರಮಾಣದ ವ್ಯತ್ಯಾಸ ಅಧಿಕವಾಯಿತೆನಿಸುತ್ತದೆ. ಈ ಆರೋಪ ಪ್ರತಿಯೊಂದು ವಿಂಶತಿಯಲ್ಲಿಯ ಅಧ್ಯಾಯಗಳಲ್ಲಿರುವ ಶ್ಲೋಕಶಂಖ್ಯಾ ಪ್ರಮಾಣಕ್ಕೂ ಅನ್ವಯಿಸುತ್ತದೆ. ಒಂದು ಅಧ್ಯಾಯದಲ್ಲಿ ಅತಿ ಕಡಿಮೆ ಎಂದರೆ ೧ ಶ್ಲೋಕ (I - ಕ್ರೋಧವರ್ಜನಾಧ್ಯಾಯ), ಅತಿ ಹೆಚ್ಚೆಂದರೆ ೯೨೬ ಶ್ಲೋಕ(III- ಗೃಹೋಪಭೋಗ) ಗಳಿರುವುದನ್ನು ಗಮನಿಸಬಹುದು. ಈ ಅಂತರ ಕಡಿಮೆಯಾಗುವಂತೆ ನೋಡಿಕೊಂಡಿದ್ದರೆ ಈ ಕೃತಿಯ ಅವಯವಗಳಿಗೆ ಒಂದಿಷ್ಟು ಸುಸಂಬದ್ಧತೆ ಪ್ರಾಪ್ತವಾಗುತ್ತಿತ್ತು. ಇದಲ್ಲದೆ ಕೆಲವೊಮ್ಮೆ ಒಂದೇ ವಿಷಯ ಒಂದಕ್ಕಿಂತ ಹೆಚ್ಚು ಕಡೆಗೆ ಹಂಚಿಹೋಗಿದೆ. ಉದಾ : ಜ್ಯೋತಿಷ್ಯ, ಔಷಧ ಇತ್ಯಾದಿ. ಕೆಲವೆಡೆ ವಿಷಯ ನಿರೂಪಣೆಯಲ್ಲಿ ಕ್ರಮಬದ್ಧತೆ ತಪ್ಪಿಹೋಗಿರುವುದರಿಂದ ಅಭ್ಯಾಸಿಗೆ ಆಗಾಗ ದಿಕ್ಕು ತಪ್ಪಿಸಿಕೊಂಡ ಅನುಭವವಾಗುತ್ತದೆ. ಇಂಥ ಕೊರತೆಗಳೇನಿದ್ದರೂ ಮಾನಸೋಲ್ಲಾಸ ಒಂದು ಬಹುಮುಖಿ ಕೃತಿಯಾಗಿ ಕಂಗೊಳಿಸುತ್ತದೆ.

ಆಕಾರ - ವ್ಯುತ್ಪತ್ತಿ

ಸಂಸ್ಕೃತಸಾಹಿತ್ಯದಿಂದ ಉತ್ತರಕಾಲೀನ ಸಂಸ್ಕೃತ ಮತ್ತು ಸಂಸ್ಕೃತೇತರ ಸಾಹಿತ್ಯಕೃತಿಗಳು ಋಣಿಯಾಗುತ್ತ ಬಂದಿವೆ. ಇದೇ ರೀತಿ ಮಾನಸೋಲ್ಲಾಸವೂ ಪ್ರಾಚೀನ ಸಂಸ್ಕೃತ ಕೃತಿಗಳಿಂದ ವಿಶೇಷ ನೆರವು ಪಡೆದಿದೆ. ಇದನ್ನು ಆರಂಭ, ಅಂತ್ಯಗಳಲ್ಲಿ ಪಟ್ಟಿಮಾಡಿ ಹೇಳದೆ, ತೀರ ಅನುಷಂಗಿಕವೆಂಬಂತೆ ಈ ಕೃತಿ ಅಲ್ಲಲ್ಲಿ ಹೀಗೆ ಸೂಚಿಸಿದೆ :

ಆನೆಗೆ ತರಬೇತಿ ನೀಡುವ ಆರಂಭದಲ್ಲಿ ಸಾಮವೇದವನ್ನು ಮೊದಲು ಹೇಳಬೇಕು (೬೮), ಅರ್ಥರ್ವವೇದ ತತ್ವದ ಬ್ರಾಹ್ಮಣರ ಮೂಲಕ ದೂರದಿಂದಲೇ ವೈರಿಗಳನ್ನು ಕೊಲ್ಲಿಸಬೇಕು (೧೬೨), ಅಶ್ವಾಯುರ್ವೇದದಲ್ಲಿ ನಿಪುಣರಾದವರಿಂದ ಕುದುರೆಗಳಿಗೆ ಚಿಕಿತ್ಸೆ ಮಾಡಿಸಬೇಕು (೯೫), ಮಂತ್ರಾಲೋಚನೆ ಐದು ಬಗೆಯಾಗಿದೆಯೆಂದು ಗುರು, ಶುಕ್ರ, ಚಾಣಕ್ಯರು ಹೇಳುತ್ತಾರೆ (೧೦೮), ವಿಶ್ವಕರ್ಮ ಮತಾನುಸಾರಿಯಾಗಿ, ಮಯಶಾಸ್ತ್ರಕ್ಕನುಗುಣವಾಗಿ, ಮತ್ಸ್ಯನಿರೂಪಿತ ವಿಧಾನದಂತೆ, ಪಿಂಗಳ ಮತದ ಮೇರೆಗೆ ದೇವಾಲಯ, ಮಠಗಳನ್ನು ನಿರ್ಮಿಸಬೇಕು (೮), ಗೃಹ್ಯಸೂತ್ರದಲ್ಲಿ ಹೇಳಿದಂತೆ ಮಕ್ಕಳಿಗೆ

ಜಾತಕರ್ಮ ಆಚರಿಸಬೇಕು - ಇತ್ಯಾದಿ ಸೂಚನೆಗಳು ಈ ಕೃತಿಯ ಆಕರಗಳನ್ನು ಈತನ ವ್ಯುತ್ಪತ್ತಿಯನ್ನು ಸೂಚಿಸುತ್ತವೆ.

ಧರ್ಮರಾಜ ದ್ಯೂತದಿಂದ ಹಾಳಾದನು, ನಳನು ಪುಷ್ಕರನಿಂದ ಸೋತನು, ರುಕ್ಮನು ಹಲಧರನಿಂದ ಹತನಾದನು. ವೀರಕ್ರೀಡೆಯನ್ನು ಶೂದ್ರಕ, ಶಾಲಿವಾಹನ ವಂಶದ ವೀರನಾಥ, ಕಾಂತೀಶ್ವರನ ಮಗ ಕಾಳಿದಾಸ ಆಡಿದ್ದಾರೆ. ಇಂಥ ವಿವರಗಳು ಈತನ ವೈವಿಧ್ಯಪೂರ್ಣ ವ್ಯುತ್ಪತ್ತಿಯನ್ನು ತಿಳಿಸಿಕೊಡುತ್ತವೆ. ಇಲ್ಲಿಯ ವಿಗ್ರಹ ವಿವೇಚನೆ ಸಂದರ್ಭದಲ್ಲಿ ಈತನು ವಿಷ್ಣು ಧರ್ಮೋತ್ತರ ಪುರಾಣವನ್ನು ಬಳಸಿರುವನೆಂದು ವಿದ್ವಾಂಸರು ಹೇಳುತ್ತಾರೆ. ಚಾಣಕ್ಯನ ಅರ್ಥಶಾಸ್ತ್ರ, ಭರತನ [illegible]ಶಾಸ್ತ್ರ ಇಂಥ ಪ್ರಸಿದ್ಧ ಕೃತಿಗಳಿಂದ ನೆರವು ಪಡೆದುದು ವ್ಯಕ್ತವಾಗಿಯೇ ಇದೆ. "ಗಾ[illegible]ಸ್ವಯಂ ವಾ ಪ್ರೀತ್ಯರ್ಥಂ ಪ್ರೇಯಸೀ ಜನತುಷ್ಟಯೇ", "ಸ್ವಯಂ ವಾ ನರ್ತನಂ ಕುರ್ಯಾದ್ರಸಭಾವ ಸಮನ್ವಿತಮ್" ಮೊದಲಾದ ಮಾತುಗಳು ಅವನ ಕಲಾಪರಿಶ್ರಮವನ್ನು ಸಾರುತ್ತವೆ. ಈ ಮತ್ತು ಇಂಥ ವಿವರಗಳು ಈತನ ಮೂಲ ಆಕರ ಮತ್ತು ವ್ಯುತ್ಪತ್ತಿಗಳಿಗೆ ನಿದರ್ಶನವೆನಿಸಿವೆ.

ವಿಷಯಸಂಪತ್ತು

ಮಾನಸೋಲ್ಲಾಸ ವಿಷಯವೈವಿಧ್ಯದಲ್ಲಿ ಅಸಾಧಾರಣವೆನಿಸಿದ್ದರೂ ಅದನ್ನು ೧. ಸಾಂಪ್ರದಾಯಿಕ ನಿರೂಪಣೆಗಳು, ೨. ಕಲ್ಪನಾ ಲಹರಿಗಳು, ೩. ವಾಸ್ತವಿಕ ಆಚರಣೆಗಳು ಎಂದು ವಿಭಾಗಿಸಬಹುದಾಗಿದೆ.

ಇಲ್ಲಿಯ ಬಹುಭಾಗವನ್ನು ಸಾಂಪ್ರದಾಯಿಕ ವಿಷಯವೇ ತುಂಬಿಕೊಂಡಿದೆ. ಉದಾ: ಪ್ರಭು, ಮಂತ್ರ, ಉತ್ಸಹವೆಂಬ ಶಕ್ತಿತ್ರಯ ; ಸಾಮ, ದಾನ, ಭೇದ, ದಂಡಗಳೆಂಬ ಉಪಾಯ ಚತುರ್ಥ; ಚತುಃಶಾಲ ಮೊದಲಾದ ೪ ಬಗೆಯ ಗೃಹಗಳು, ಪದ್ಮಿನಿ ಮೊದಲಾದ ನಾಲ್ಕು ಬಗೆಯ ಸ್ತ್ರೀಯರು; ಶಾಸ್ತ್ರವಿನೋದ ಪ್ರಕರಣದಲ್ಲಿ ವಿವರಿಸಿರುವ ಕಾವ್ಯಮೀಮಾಂಸೆ ವಿಚಾರಗಳು; ಗೀತವಿನೋದಾಧ್ಯಾಯದಲ್ಲಿ ಬರುವ ಸಂಗೀತ ಛಂದೋವಿಚಾರಗಳು ; ನೃತ್ಯ ವಿನೋದಾಧ್ಯಾಯದಲ್ಲಿಯ ಅನೇಕ ವಿವರಗಳು; ಗೃಹೋಪಭೋಗದಲ್ಲಿ ಹೇಳಲಾಗಿರುವ ಗೃಹಲಕ್ಷಣ, ಚಿತ್ರ ಶಿಲ್ಪ ವಿವರಗಳು ಇಂಥ ನೂರಾರು ಅಂಶಗಳು ಸಾಂಪ್ರದಾಯಿಕ ವಿಚಾರಗಳೆನಿಸಿವೆ. ಇವೆಲ್ಲ ಚಾಣಕ್ಯನ ಅರ್ಥಶಾಸ್ತ್ರ, ಭರತನ ನಾಟ್ಯಶಾಸ್ತ್ರ ಮೊದಲಾದ ಪ್ರಾಚೀನ ಗ್ರಂಥಗಳಿಂದ ಇಳಿದುಬಂದವುಗಳಾಗಿವೆ.

ಇದನ್ನು ಬಿಟ್ಟರೆ ಕೆಲವು ಸಲ ಸ್ವಕಪೋಲಕಲ್ಪಿತ ವಿವರಗಳನ್ನು ಆ ಕೃತಿ ತುಂಬಿಕೊಂಡಿದೆ. ಸ್ನಾನಭೋಗ, ಪಾದುಕಾಭೋಗಗಳಂಥ ರಾಜ್ಯೋಪಭೋಗಗಳು, ಆಂದೋಲನ ಕ್ರೀಡೆ, ಜ್ಯೋತ್ಸ್ನಾ ಕ್ರೀಡೆ, ವೀರಕ್ರೀಡೆಗಳಂಥ ಕ್ರೀಡಾವಿವರಗಳು ಈ ಮಾತಿಗೆ ನಿದರ್ಶನವೆನಿಸಿವೆ. ಇಂಥ ಭಾಗಗಳು ಕೆಲವೊಮ್ಮೆ ತುಂಬ ಹಾಸ್ಯಾಸ್ಪದವೆನಿಸುತ್ತವೆ.

ನಿಜವಾಗಿಯೂ ವಿಶ್ವಕೋಶವೊಂದರ ಮಹತ್ವವಿರುವುದು ಅದು ಗರ್ಭೀಕರಿಸಿಕೊಂಡಿರುವ ಸಮಕಾಲೀನ ಆಚಾರ, ವಿಚಾರಗಳ ಸಂಗ್ರಹದಲ್ಲಿ. ಗತಾನುಗತಿಕ ವಿಷಯ ಪ್ರತಿಪಾದನೆಯೇ ಪ್ರಾಚೀನ ಭಾರತೀಯ ಕೃತಿಗಳ ದೃಷ್ಟಿಕೋನವಾಗಿದ್ದ ಕಾರಣ, ಅವುಗಳಲ್ಲಿ ಸಮಕಾಲೀನತೆಯ ದಾಖಲೆಗೆ ಅವಕಾಶ ಕಡಿಮೆ. ಈ ಮಾತಿಗೆ ಮಾನಸೋಲ್ಲಾಸ ಅಪವಾದವೇನಲ್ಲ. ಹೀಗಿದ್ದೂ ಈ ಕೃತಿ ತನ್ನ ಪ್ರದೇಶದ

ಫಲವೆಂಬಂತೆ, ಭಾರತದಲ್ಲಿ ಎಲ್ಲ ವಿಶ್ವಕೋಶಗಳು ಸಾಮಾನ್ಯವಾಗಿ ರಾಜಾಸ್ಥಾನದಲ್ಲಿ, ಕೆಲವೊಮ್ಮೆ ರಾಜನ ಹಸ್ತದಲ್ಲಿ ಹುಟ್ಟುಪಡೆದಿವೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಮಾನಸೋಲ್ಲಾಸವನ್ನು ರೂಪಿಸಿದವ ಚಾಲುಕ್ಯ ಚಕ್ರವರ್ತಿ ಸೋಮೇಶ್ವರ, ವಿವೇಕ ಚಿಂತಾಮಣಿಯನ್ನು ರಚಿಸಿದವ ಮೂಲತಃ ರಾಜನಾಗಿದ್ದ ನಿಜಗುಣ ಶಿವಯೋಗಿ, ಶಿವತತ್ವರತ್ನಾಕರ ರಚಿಸಿದವ ಕೆಳದಿಯ ಅರಸು ಬಸವಭೂಪಾಲ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಲೋಕೋಪಕಾರದ ಚಾವುಂಡರಾಯ ರಾಜನಾಗಿರದಿದ್ದರೂ ರಾಜಕೀಯ ವಲಯದ ವ್ಯಕ್ತಿಯೆಂಬುದನ್ನು ಗಮನಿಸಬೇಕು. (ಸೋಮದೇವನ ನೀತಿವಾಕ್ಯಾಮೃತಕ್ಕೆ ಟೀಕೆ ಬರೆದ ನೇಮಿನಾಥನು ಸಂಧಿವಿಗ್ರಹಿಯಾಗಿದ್ದನು)

ಮಾನಸೋಲ್ಲಾಸದ ಸೃಷ್ಟಿಸಂದರ್ಭ

ಕರ್ನಾಟಕದಲ್ಲಿ ೧೦ ಮತ್ತು ೧೨ನೆಯ ಶತಮಾನಗಳು ಪ್ರಭಾವಶಾಲಿ ಸಾಹಿತ್ಯವನ್ನು ಸೃಷ್ಟಿಸಿದ ಸಂದರ್ಭಗಳೆನಿಸಿವೆ. ೧೦ನೆಯ ಶತಮಾನದ ವೀರಯುಗ, ೧೨ನೆಯ ಶತಮಾನದ ಭಕ್ತಿಯುಗಗಳ ಸಾಹಿತ್ಯವೈಭವಕ್ಕೆ ಮನಸೋತ ಕನ್ನಡ ವಿಮರ್ಶಕರು, ಇವುಗಳ ಮಧ್ಯದ ೧೧ನೆಯ ಶತಮಾನವನ್ನು "ಬರಡುಯುಗ" ಎಂದು ಕರೆಯುತ್ತಲಿದ್ದಾರೆ. ನಿಜ ಹೇಳಬೇಕೆಂದರೆ ಇದು "ಪ್ರಯೋಗಯುಗ"ವಾಗಿದೆ.

ಸಾಹಿತ್ಯದ ಮೌಲ್ಯನಿರ್ಣಯವು ಆಯಾ ಕಾಲದ ವಿಮರ್ಶೆಯ ಧೋರಣೆ ಮತ್ತು ಸಂಶೋಧನೆಯ ಸಾಧನೆಗಳನ್ನು ಅವಲಂಬಿಸಿರುತ್ತದೆ. ೨೦ನೆಯ ಶತಮಾನದ ಪೂರ್ವಾರ್ಧದ ಸಂಶೋಧಕರು ನಾಗಚಂದ್ರನನ್ನು ೧೨ನೆಯ ಶತಮಾನದ ಆರಂಭಕ್ಕೆ ತಳ್ಳಿದ್ದರು. ಆದರೆ, ಇತ್ತೀಚೆ ಲಭ್ಯವಾದ ನಾಗವರ್ಮನ ವರ್ಧಮಾನಪುರಾಣದಿಂದಾಗಿ ಇವನ ಕಾಲ ೧೧ನೆಯ ಶತಮಾನಕ್ಕೆ ಸರಿದಿರುವುದರಿಂದ, ಈ ಯುಗದ ಬರಡುತನ ಅಷ್ಟರಮಟ್ಟಿಗೆ ಕಡಿಮೆಯಾಗಿದೆ ಎಂದೇ ಹೇಳಬೇಕು. ಇದಲ್ಲದೆ ಮೇಲೆ ಹೇಳಿದ ನಾಗವರ್ಮನ ವರ್ಧಮಾನಪುರಾಣವೂ (೧೦೪೨) ಈ ಯುಗದ ಸಾಹಿತ್ಯಕ್ಕೆ ಒಂದು ಹೊಸ ಸೇರ್ಪಡೆಯೆನಿಸಿದೆ.

ಎರಡನೆಯದಾಗಿ, ಪಂಪನ ಕಾವ್ಯಧೋರಣೆಗೆ ತೋರಿದ ನಾಗಚಂದ್ರನ ಪ್ರತಿಕ್ರಿಯೆ ಈ ಯುಗದ ಗಮನಾರ್ಹ ಅಂಶವೆನಿಸಿದೆ. ಅರಿಕೇಸರಿಯಂಥ "ಲೌಕಿಕವ್ಯಕ್ತಿ" ಕಥಾನಾಯಕನಾಗುವುದನ್ನು "ನಾಯಕನನ್ಯನಾಗೆ ಕೃತಿ ವಿಶ್ರುತಮಾಗದು" ಎಂಬ ಮಾತಿನ ಮೂಲಕ ತಳ್ಳಿಹಾಕುತ್ತಾನೆ, ನಾಗಚಂದ್ರ. "ಚೋರ ವಿಟಕಥೆ ಕಥೆಯೇ? ಕವಿ ಕವಿಯೇ? ಎಂದು ಪ್ರಶ್ನಿಸಿದುದು ಇನ್ನೂ ವಿಶೇಷವಾಗಿದೆ. ಮುಂದುವರಿದು "ಹಣಕ್ಕಾಗಿ ರಾಜನಿಗೆ ಕಾವ್ಯಸಂಪತ್ತನ್ನು ಮಾರುವುದು ಸರಿಯೇ ?" ಎನ್ನುತ್ತಾನೆ. ಹಾಗೆ ಮಾರುವುದಕ್ಕಾಗಿ "ಬಾಯಿಯಿಂದ ಹೊರಹಾಕಿದುದು ಕೃತಿಯಲ್ಲ, ಉಗುಳು" ಎಂದು ತೆಗಳುತ್ತಾನೆ. ಇದೆಲ್ಲವನ್ನು ನೋಡಿದರೆ ೧೦ನೆಯ ಶತಮಾನದ ಕಥಾನಾಯಕ ಧೋರಣೆಗೆ ತೀವ್ರ ಪ್ರತಿಭಟನೆ ತೋರಿದ ಯುಗವೆನಿಸುತ್ತದೆ, ೧೧ನೆಯ ಶತಮಾನ.

ಇದಲ್ಲದೆ, ಭಾವಗಳನ್ನು ಉದ್ರೇಕಗೊಳಿಸಿ ಆನಂದವನ್ನುಂಟುಮಾಡುವುದಕ್ಕಾಗಿದ್ದಿತು, ಪಂಪನ ಲೌಕಿಕಕಾವ್ಯ ಪರಂಪರೆ. ಇಂಥದು "ರಾಗದ್ವೇಷ ನಿಬದ್ಧಮಪ್ಪ ಕೃತಿ" ಎಂದೂ, ಇಂಥ ಕೃತಿರಚನೆಯಿಂದ "ಬಿತ್ತಿ ಬೆಳೆವಂತಕ್ಕುಂ ವಿಷೋದ್ಯಾನಮಂ" ಎಂದೂ ಅದನ್ನು ನಿರಾಕರಿಸುತ್ತ, "ನಿನಗೆ ರಸಮೊಂದೆ ಶಾಂತಮೆ ಜಿನೇಂದ್ರ" ಎಂಬ ತನ್ನ ನಿಲುವನ್ನು ಸ್ಪಷ್ಟಪಡಿಸುತ್ತಾನೆ, ನಾಗಚಂದ್ರ. ಅಂದರೆ ಕಾವ್ಯ ಎಂಟು ರಸಗಳಿಗೆ ನೆಲೆಯಾಗಬೇಕಾದರೂ ಆ ರಸಗಳು ಶಾಂತರಸರಿಂದ ನಿಯಂತ್ರಿಸಲ್ಪಡಬೇಕೆಂಬುದು ಇವನ

ಅಭಿಪ್ರಾಯವಾಗಿದೆ. ಹೀಗಾಗಿ ಪಂಪನಿಂದ ಪ್ರಾರಂಭವಾದ ಎಂಟು ರಸಗಳ ಲೌಕಿಕಕಾವ್ಯ ಪರಂಪರೆಯನ್ನು ಪೊನ್ನ, ರನ್ನ ಮುಂದುವರಿಸಿದರೆ, ಮೇಲೆ ವಿವರಿಸಿದ ಹೊಸ ಧೋರಣೆಯ ಮೂಲಕ ನಾಗಚಂದ್ರ ಅದನ್ನು ತಿರಸ್ಕರಿಸಿ, ಅದರ ಸ್ಥಾನದಲ್ಲಿ ಶಾಂತರಸದಿಂದ ನಿಯಂತ್ರಿಸಲ್ಪಟ್ಟ ಎಂಟು ರಸಗಳನ್ನೊಳಗೊಂಡ ಧಾರ್ಮಿಕ ಕಾವ್ಯ ಪರಂಪರೆಯನ್ನು ಸ್ಥಾಪಿಸುತ್ತಾನೆ. ಆಮೇಲೆ ಬಂದ ಬಂಧುವರ್ಮ, ಜನ್ನ ಮೊದಲಾದವರು ಪಂಪನ ಮಾರ್ಗವನ್ನು ಕೈಬಿಟ್ಟು, ನಾಗಚಂದ್ರನ ಈ ಮಾರ್ಗವನ್ನು ಅನುಸರಿಸಿದುದು ಗಮನಾರ್ಹವೆನಿಸಿದೆ.

ಹೀಗೆ ಪಂಪಾದಿಗಳ ಮಾರ್ಗ ನಾಗಚಂದ್ರನಿಗೆ ಸಮ್ಮತವೆನಿಸದ ಕಾರಣವಾಗಿಯೇ ಅವನು ತನ್ನ ಪೂರ್ವದ ಯಾವ ಕನ್ನಡ ಕವಿಯನ್ನೂ ನೆನೆದಿಲ್ಲವೆನಿಸುತ್ತದೆ. ಇದೆಲ್ಲವನ್ನು ನೋಡಿದರೆ ಅಭಿನವಪಂಪನೆಂಬ ಬಿರುದನ್ನು 'ಪಂಪನ ಭಕ್ತ' ಎಂಬ ಅರ್ಥದಲ್ಲಲ್ಲ, ಪಂಪನಿಗೆ ಪ್ರತಿಕ್ರಿಯೆ ತೋರಿಸಿ, ಅವನಂತೆ ಬೇರೊಂದು ಹೊಸ ದಾರಿ ಬರೆದವ - ಎಂಬ ಅರ್ಥದಲ್ಲಿ ಈತ ಧರಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಈ ಶತಮಾನದ ಇನ್ನೊಂದು ಲಕ್ಷಣವೆಂದರೆ ಸೃಜನಸಾಹಿತ್ಯದ ಜೊತೆ ಶಾಸ್ತ್ರಸಾಹಿತ್ಯವೂ ವಿಪುಲ ಪ್ರಮಾಣದಲ್ಲಿ ಹುಟ್ಟಿಕೊಂಡುದು. ಇದಕ್ಕೆ ಕಾರಣ ರಾಷ್ಟ್ರಕೂಟರ ಅವನತಿ, ಕಲ್ಯಾಣ ಚಾಲುಕ್ಯರ ಉದಯವಾಗಿ ಜೈನಧರ್ಮ ದುರ್ಬಲಗೊಂಡುದು, ವೈದಿಕ ಧರ್ಮ ಪ್ರಬಲಗೊಂಡುದು. ಇದರಿಂದಾಗಿ ಅಗ್ರಹಾರ ಸಂಸ್ಕೃತಿ ಸಂಖ್ಯಾತ್ಮಕವಾಗಿ ವರ್ಧಿಸಿತು. ಕರ್ಮಪ್ರಧಾನ ಅಗ್ರಹಾರ ಸಂಸ್ಕೃತಿಯಲ್ಲಿ ಕಾವ್ಯಕ್ಕಿಂತ ಶಾಸ್ತ್ರಸೃಷ್ಟಿಗೆ ಅವಕಾಶ ಹೆಚ್ಚು. ಹೀಗಾಗಿ ಈಗ ಜೈನರ ಕಾವ್ಯಪ್ರತಿಭೆಯ ಕರ್ನಾಟಕದಲ್ಲಿ ವೈದಿಕರ ಶಾಸ್ತ್ರಪಾಂಡಿತ್ಯ ಇಂಬುಗೊಂಡಿತು. ಈ ಶತಮಾನದಲ್ಲಿ ಒಬ್ಬಿಬ್ಬರು ಬ್ರಾಹ್ಮಣರು ಕಾವ್ಯಸೃಷ್ಟಿಮಾಡಿದರೂ ಅದು ಅನುವಾದಕ್ಕೆ ಸೀಮಿತಗೊಂಡಿತೇ ಹೊರತು, ಸ್ವತಂತ್ರ ಕೃತಿನಿರ್ಮಾಣಕ್ಕೆ ಚಾಚಿಕೊಳ್ಳಲಿಲ್ಲ. ಬದಲಾದ ಈ ಅಗ್ರಹಾರ ಸಂಸ್ಕೃತಿ ಕಾರಣವಾಗಿ ಕರ್ನಾಟಕ ಕಾವ್ಯವೈಭವದಿಂದ ಶಾಸ್ತ್ರವೈಭವಕ್ಕೆ ಸರಿಯತೊಡಗಿತು. ಇದರ ಫಲವಾಗಿ ಕಾವ್ಯಶಾಸ್ತ್ರಗಳಾದ ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ, ಛಂದೋವಿಚಿತಿ, ವಸ್ತುಕೋಶಗಳೆಂಬ ಅಲಂಕಾರ, ವ್ಯಾಕರಣ, ಛಂದಸ್ಸು, ನಿಘಂಟುಕೃತಿಗಳೂ, ಕಾವ್ಯೇತರ ಶಾಸ್ತ್ರಗಳಾದ ಜಾತಕತಿಲಕ, ಮದನತಿಲಕ, ಗೋವೈದ್ಯ, ಕಲ್ಯಾಣಕಾರಕ, ವೀರಾವಳಿ, ಲೋಕೋಪಕಾರ, ವ್ಯವಹಾರ ಗಣಿತಗಳು ಹುಟ್ಟಿಕೊಂಡವು. ಹೀಗೆ ಕರ್ನಾಟಕದ ಮನಸ್ಸು ಸಾಹಿತ್ಯಸುಗ್ಗಿಯಿಂದ ಶಾಸ್ತ್ರಸುಗ್ಗಿಗೆ ಸರಿಯುತ್ತಲಿದ್ದ ಸಂಕ್ರಮಣ ಯುಗದಲ್ಲಿ ಮಾನಸೋಲ್ಲಾಸದ ಮಹಾಸೃಷ್ಟಿ ಸಂಭವಿಸಿತು.

ಈ ಯುಗದಲ್ಲಿ ಕಣ್ಣು ತೆರೆದ ಇನ್ನೊಂದು ಹೊಸ ಪ್ರಯೋಗವಾಗಿದೆ, ಕನ್ನಡ ಜ್ಞಾನವನ್ನು ಸಂಸ್ಕೃತಮಾಧ್ಯಮದ ಮೂಲಕ ಪ್ರಸಾರ ಮಾಡುವುದು. ಈಗ ನಾಗವರ್ಮ ಕನ್ನಡ ವ್ಯಾಕರಣವನ್ನು ಕರ್ಣಾಟಕ ಭಾಷಾಭೂಷಣ ಹೆಸರಿನಿಂದ ಸಂಸ್ಕೃತದಲ್ಲಿ ಬರೆದನು. ಇದೇ ರೀತಿ ಸೋಮೇಶ್ವರನು ರಾಜರ ಜ್ಞಾನಭಂಡಾರದ ವರ್ಧನೆಗಾಗಿ ಮಾನಸೋಲ್ಲಾಸ ಹೆಸರಿನ ವಿಶ್ವಕೋಶವನ್ನು ಸಂಸ್ಕೃತದಲ್ಲಿ ಸೃಷ್ಟಿಸಿದನು. ಇದಕ್ಕೆ ಪೂರಕವೆಂಬಂತೆ ದುರ್ಗಸಿಂಹನು ರಾಜಕುಮಾರರ ಸನ್ಮಾರ್ಗಕ್ಕಾಗಿ ಸಂಸ್ಕೃತ ಪಂಚತಂತ್ರವನ್ನು ಕನ್ನಡಕ್ಕೆ ಭಾಷಾಂತರಿಸಿದನು.

ಹೀಗೆ ಕಾವ್ಯರಚನೆಯ ಹೊಸ ಪ್ರಯೋಗ, ಶಾಸ್ತ್ರರಚನೆಯ ಹೊಸ ಆರಂಭ, ಕನ್ನಡ ಜ್ಞಾನವನ್ನು ಸಂಸ್ಕೃತದ ಮೂಲಕ ಪ್ರಸಾರಮಾಡುವ ಹೊಸ ಧೋರಣೆ ಕಾರಣವಾಗಿ ೧೧ನೆಯ ಶತಮಾನವನ್ನು

ಬರಡುಯುಗವೆಂದು ಕರೆಯದೆ, ಪ್ರಯೋಗಯುಗವೆಂದು ಕರೆಯುವುದು ನ್ಯಾಯಸಮ್ಮತವೆನಿಸುತ್ತದೆ. ಈ ಪ್ರಯೋಗಯುಗದ, ಅದರಲ್ಲಿಯೂ ಶಾಸ್ತ್ರಸಾಹಿತ್ಯದ ಸೃಷ್ಟಿ ಮತ್ತು ಸಂಸ್ಕೃತಮಾಧ್ಯಮದ ಆಸಕ್ತಿಗಳ ಫಲಿತವೆನಿಸಿದೆ, ಮಾನಸೋಲ್ಲಾಸ.

ಮಾನಸೋಲ್ಲಾಸದ ಕರ್ತೃ

ಕರ್ನಾಟಕದಲ್ಲಿ ರಾಜರು ಉದ್ದಕ್ಕೂ ಸಾಹಿತ್ಯಸೃಷ್ಟಿಗೆ ಆಶ್ರಯ ನೀಡಿದುದಲ್ಲದೆ, ಸ್ವತಃ ಸಾಹಿತ್ಯವನ್ನೂ ಸೃಷ್ಟಿಸುತ್ತ ಬಂದಿದ್ದಾರೆ. ಬಾದಾಮಿ ಚಾಲುಕ್ಯರಲ್ಲಿ ವಿಜಯಾಂಬಿಕಾ, ಗಂಗರಲ್ಲಿ ಭೂವಿಕ್ರಮ, ದುರ್ವಿನೀತ, ಸೈಗೊಟ್ಟ ಶಿವಮಾರ, ರಾಷ್ಟ್ರಕೂಟರಲ್ಲಿ ನೃಪತುಂಗರು ಸುಪ್ರಸಿದ್ಧ ಸಾಹಿತ್ಯವ್ಯಸನಿಗಳು.

ರಾಷ್ಟ್ರಕೂಟರನ್ನು ಸೋಲಿಸಿ ಕರ್ನಾಟಕವನ್ನಾಳಿದವರು ಕಲ್ಯಾಣ ಚಾಲುಕ್ಯರು. ಈ ಮನೆತನದ ಸಂಸ್ಥಾಪಕ ಇಮ್ಮಡಿ ತೈಲಪ (೯೭೩ - ೯೭೭), ಇವನ ಮಗ ಇರಿವ ಬೆಡಂಗ (೯೯೭ - ೧೦೦೮), ಇವನ ತಮ್ಮ ದಶವರ್ಮನ ಮಗ ವಿಕ್ರಮಾದಿತ್ಯ V (೧೦೦೮ - ೧೦೧೫), ಇವನ ತಮ್ಮ ಜಯಸಿಂಹ II (೧೦೧೫ - ೧೦೪೨). ಕಾವ್ಯದ ಜೊತೆ ಶಾಸ್ತ್ರದ ಬೆಳವಣಿಗೆಗೂ ಅವಕಾಶ ಮಾಡಿಕೊಟ್ಟ ಕೀರ್ತಿ ಈ ಜಯಸಿಂಹನ ಆಸ್ಥಾನಕ್ಕೆ ಸಲ್ಲುತ್ತದೆ. ಪಂಪರಾಮಾಯಣ ಮಲ್ಲಿನಾಥಪುರಾಣಗಳ ಅಭಿನವಪಂಪ ಮತ್ತು ಸುಕುಮಾರ ಚರಿತೆಯ ಶಾಂತಿನಾಥರಂಥ ಕವಿಗಳೂ, ಪಂಚತಂತ್ರದ ದುರ್ಗಸಿಂಹನಂಥ ಅನುವಾದ ಕವಿಗಳೂ, ಕಾವ್ಯಾವಲೋಕನ, ಕರ್ಣಾಟ ಭಾಷಾಭೂಷಣ, ವಸ್ತುಕೋಶ, ಛಂದೋವಿಚಿತಿಗಳ ಇಮ್ಮಡಿ ನಾಗವರ್ಮನಂಥ ಸಾಹಿತ್ಯಶಾಸ್ತ್ರಕೃತಿಕರ್ತೃವೂ, ಜಾತಕ ತಿಲಕದ ಶ್ರೀಧರಾಚಾರ್ಯ, ಮದನ ತಿಲಕದ ಚಂದ್ರರಾಜ, ಕಲ್ಯಾಣಕಾರಕದ ಜಗದ್ದಳ ಸೋಮನಾಥ, ಗೋವೈದ್ಯದ ಕೀರ್ತಿವರ್ಮ, ವೀರಾವಳಿಯ ವಜ್ರಭಟ್ಟ, ವ್ಯವಹಾರ ಗಣಿತದ ರಾಜಾದಿತ್ಯರಂಥ ಸಾಹಿತ್ಯೇತರ ಶಾಸ್ತ್ರಕರ್ತೃಗಳೂ, ಲೋಕೋಪಕಾರದ ಚಾವುಂಡರಾಯನಂಥ ವಿಶ್ವಕೋಶ ಕರ್ತೃವೂ ಈತನ ಆಶ್ರಯದಲ್ಲಿ, ಪರಿಸರದಲ್ಲಿ ಬೆಳೆದುದನ್ನು ನೋಡಿದರೆ, ಈ ಅರಸನ ಕಾವ್ಯ - ಶಾಸ್ತ್ರ - ಅನುವಾದ ಸಾಹಿತ್ಯಪೋಷಣೆ ಅಪಾರವೆನಿಸುತ್ತದೆ.

ಇವನ ಮಗ ಸೋಮೇಶ್ವರ I (೧೦೪೨ - ೧೦೬೮), ಇವನ ಮಗ ಸೋಮೇಶ್ವರ II (೧೦೬೮ - ೧೦೭೬). ಇವನ ತಮ್ಮ ಆರನೆಯ ವಿಕ್ರಮಾದಿತ್ಯ (೧೦೭೬ - ೧೧೨೭) ತುಂಬಾ ಪ್ರಸಿದ್ಧ ಅರಸು. "ಕಲ್ಯಾಣದಂಥ ರಾಜಧಾನಿ ಹಿಂದೆಯೂ ಇರಲಿಲ್ಲ, ಇಂದೂ ಇಲ್ಲ, ಮುಂದೆಯೂ ಇರುವುದಿಲ್ಲ, ವಿಕ್ರಮಾದಿತ್ಯನಂಥ ಚಕ್ರವರ್ತಿ ಹಿಂದೆಯೂ ಇರಲಿಲ್ಲ, ಇಂದೂ ಇಲ್ಲ, ಮುಂದೆಯೂ ಇರುವುದಿಲ್ಲ"ವೆಂಬ ಖ್ಯಾತಿಯಿಂದ ಸುಮಾರು ೬೦ ವರ್ಷ ರಾಜ್ಯವಾಳಿದವನೀತ. ಈತನ ಆಸ್ಥಾನದಲ್ಲಿ ಬಿಲ್ಹಣನ ವಿಕ್ರಮಾಂಕದೇವ ಚರಿತ, ವಿಜ್ಞಾನೇಶ್ವರನ ಮಿತಾಕ್ಷರ ಹುಟ್ಟಿದುದು ಒಂದು ವಿಶೇಷ.

ಈತನ ಮಗ ಸೋಮೇಶ್ವರ III (೧೧೨೭ - ೧೧೩೯). ಇವನ ತಾಯಿ ಚಂದಲದೇವಿ. ಇವಳು ಗುಲ್ಬರ್ಗಾ ಜಿಲ್ಲೆಯ ಇಂದಿನ ಆಳಂದ ರಾಜಧಾನಿಯಿಂದ ಸಾವಿರ ಹಳ್ಳಿಗಳ ರಾಜ್ಯ(ಅಲಂದೆ - ೧೦೦೦)ವನ್ನು ಆಳುತ್ತಲಿದ್ದಳು. ರಾಜಧಾನಿ ಆಳಂದದ ಸುಪ್ರಸಿದ್ಧ ಸೋಮೇಶ್ವರದೇವರ ಹೆಸರನ್ನೇ ಇವಳು ತನ್ನ ಮಗನಿಗೆ ಇಟ್ಟಿರುವ ಸಾಧ್ಯತೆಯಿದೆ. ತಂದೆಯು ೬೦ ವರ್ಷಗಳಷ್ಟು ಕಾಲದ ಸುದೀರ್ಘ ಆಳಿಕೆ ಕಾರಣವಾಗಿ, ತನ್ನ ಬಿಡುವಿನ ಅವಧಿಯನ್ನು ಈತ ಸಾಹಿತ್ಯ - ಶಾಸ್ತ್ರ ವ್ಯಾಸಂಗದಲ್ಲಿ,

ವಿದ್ಯಾವಿನೋದದಲ್ಲಿ ಕಳೆದನೆಂದು ತೋರುತ್ತದೆ. ಇದರ ಫಲವಾಗಿ ಮಾನಸೋಲ್ಲಾಸ ನಾಮಪ್ರಸಿದ್ಧಿಯ ಅಭಿಲಷಿತಾರ್ಥ ಚಿಂತಾಮಣಿ ಅವತರಿಸಿತು. ತಾನು ಅದರ ಕರ್ತೃವೆಂದು, ಪ್ರಸ್ತುತ ಕೃತಿಯ ಮಧ್ಯ ಮಧ್ಯ ಹೇಳಿಕೊಂಡಿರುವನಲ್ಲದೆ, ಐದೂ ವಿಶಂತಿಗಳ ಅಂತ್ಯ ಪ್ರಶಸ್ತಿಯಲ್ಲಿಯೂ ನೇರವಾಗಿ ಹೇಳಿಕೊಂಡುದರ ಕನ್ನಡ ಪಾಠ ಹೀಗಿದೆ :

೧. ....ಶ್ರೀಮದ್ಭೂಲೋಕಮಲ್ಲ ಶ್ರೀಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆನಿಸಿದ ಮಾನಸೋಲ್ಲಾಸದಲ್ಲಿ....

೨. ....ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರದೇವ ವಿರಚಿತ ಮಾನಸೋಲ್ಲಾಸವೆನಿಸಿದ ಅಭಿಲಷಿತಾರ್ಥ ಚಿಂತಾಮಣಿಯಲ್ಲಿ....

೩. ....ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರ ವಿರಚಿತ ಮಾನಸೋಲ್ಲಾಸದ ಕಥನದಲ್ಲಿ....

೪. .....ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿ ಎಂಬ ಮಾನಸೋಲ್ಲಾಸದಲ್ಲಿ....

೫. .... ಶ್ರೀಮದ್ಭೂಲೋಕಮಲ್ಲ ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆನಿಸಿದ ರಾಜಮಾನಸೋಲ್ಲಾಸದಲ್ಲಿ....

ಹೀಗೆ ಈ ಕೃತಿಯ ಕರ್ತೃ ಇಲ್ಲಿ ತನ್ನ ಹೆಸರನ್ನು ಸೋಮೇಶ್ವರದೇವನೆಂದೂ, ಕೆಲವೊಮ್ಮೆ ಸೋಮೇಶ್ವರನೆಂದೂ ಬೇರೆಡೆಗಳಲ್ಲಿ ಸೋಮೇಶ್ವರಕ್ಷಿತಿಪ, ಸೋಮಭೂಪಾಲನೆಂದೂ, ಹೇಳಿಕೊಂಡಿದ್ದಾನೆ. ನಾವು ಸೌಲಭ್ಯಕ್ಕೋಸುಗ ಸೋಮೇಶ್ವರ ಎಂದು ಇಟ್ಟುಕೊಂಡಿದ್ದೇವೆ. ಈತನು "ಶ್ರೀ ಮಹಾರಾಜಾಧಿರಾಜ ಸತ್ಯಾಶ್ರಯಕುಲತಿಲಕ ಚಾಲುಕ್ಯಾಭರಣ ಶ್ರೀಮದ್ಭೂಲೋಕಮಲ್ಲ" ಎಂಬ ವಿಶೇಷಣವನ್ನು ಐದೂ ವಿಶಂತಿಗಳ ಅಂತ್ಯಪ್ರಶಸ್ತಿಯಲ್ಲಿ ಹೇಳಿಕೊಂಡಿದ್ದಾನೆ. ಆದರೆ ವಿಶ್ವಕೋಶ ರಚನೆಗೆ ಅವಶ್ಯವಿರುವ ಸರ್ವಜ್ಞತ್ವದ ಸೂಚನೆಗಾಗಿ, ಶಾಸನದಲ್ಲಿ ಸಿಗುವ ಈತನ ಇನ್ನೊಂದು ಬಿರುದು 'ಸರ್ವಜ್ಞ' ಎಂಬುದನ್ನೂ, ಈತನ ವಂಶ ಮತ್ತು ವೃತ್ತಿಗಳನ್ನು ಸೂಚಿಸುವ "ಕಲ್ಯಾಣ ಚಾಲುಕ್ಯ ಚಕ್ರವರ್ತಿ" ಎಂಬುದನ್ನೂ ಇಲ್ಲಿ ಬಳಸಿ, "ಕಲ್ಯಾಣ ಚಾಲುಕ್ಯಚಕ್ರವರ್ತಿ ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ" ಎಂಬ ಶೀರ್ಷಿಕೆಯನ್ನು ನಾವು ಇಟ್ಟುಕೊಂಡಿದ್ದೇವೆ.

ಹೀಗೆ ಮಾನಸೋಲ್ಲಾಸದ ಕರ್ತೃ ಸೋಮೇಶ್ವರನಾಗಿದ್ದರೂ, ಇಷ್ಟು ವೈವಿಧ್ಯಪೂರ್ಣ ವಿಷಯಗಳನ್ನು ಸಂಗ್ರಹಿಸಿ, ಇಷ್ಟು ವ್ಯಾಪಕ ಕೃತಿಯನ್ನು ಒಬ್ಬನೇ ಬರೆದನೇ? ಅದರಲ್ಲಿಯೂ ಬಿಡುವಿಲ್ಲದ ಕಾರ್ಯಕಲಾಪಗಳಲ್ಲಿ ತೊಡಗಿಕೊಂಡ ಚಕ್ರವರ್ತಿ ಬರೆದನೇ? ಎಂಬ ಸಂದೇಹವನ್ನು ಕೆಲವರು ಎತ್ತಿದ್ದಾರೆ.

ಭಾರತದಲ್ಲಿ ಧಾರಾನಗರದ ಭೋಜ, ಪಾಟಲೀಪುತ್ರದ ಹರ್ಷವರ್ಧನರ ಹೆಸರಿನಲ್ಲಿ ಕಂಡುಬರುವ ಸಂಸ್ಕೃತ ಗ್ರಂಥಗಳ ವಿಷಯವಾಗಿಯೂ ಇಂಥ ಸಂದೇಹಗಳು ಕೇಳಿಬರುತ್ತಿವೆ. ಕರ್ನಾಟಕದಲ್ಲಿಯೂ ಕವಿರಾಜಮಾರ್ಗದ ಕರ್ತೃ ನೃಪತುಂಗನೇ? ಆಶ್ರಯಿತ ವಿದ್ವಾಂಸನೇ? ಎಂಬ ವಾದ ಇನ್ನೂ ನೆಲೆಯನ್ನು ಮುಟ್ಟಿಲ್ಲ. ಮಿಕ್ಕ ಕೃತಿಗಳ ವಿಚಾರ ಏನೇ ಇರಲಿ, ನೂರೆಂಟು ವಿಷಯಗಳ, ಎಂಟು ಸಾವಿರ ಶ್ಲೋಕಗಳ ಮಾನಸೋಲ್ಲಾಸವನ್ನು ಒಬ್ಬನೇ ರಚಿಸುವುದು, ಅದೂ ರಾಜನಂಥ ಬಹುದೊಡ್ಡ ಜವಾಬ್ದಾರಿಗಳ ವ್ಯಕ್ತಿ ರಚಿಸುವುದು ಸಹಜವಾಗಿಯೇ ಸಂದೇಹ ಹುಟ್ಟಿಸುತ್ತದೆ. ಹೀಗಾಗಿ

ಬಹುಶಃ ಈ ರಾಜನೂ ಸೇರಿದಂತೆ ಆಸ್ಥಾನದ ಅನೇಕ ವಿದ್ವಾಂಸರು ಕೈಗೂಡಿಸಿ ದುಡಿದುದರ ಫಲವಾಗಿ ಈ ಕೃತಿಸೃಷ್ಟಿ ಜರುಗಿರಬಹುದು.

ಪ್ರಾಚೀನಕಾಲದಲ್ಲಿ ರಾಜಾಸ್ಥಾನವೆನ್ನುವುದು ಸಾಹಿತ್ಯದ ಸೃಷ್ಟಿಯಾಗಿಟ್ಟಿತು. ಇಲ್ಲಿ ಸ್ವತಂತ್ರ ಸಾಹಿತ್ಯದೊಂದಿಗೆ ಅನೇಕರು ಸೇರಿ ಸಂಕಲಿಸುವ, ಸಂಯೋಜಿಸುವ ಸಮೂಹಸಾಹಿತ್ಯವೂ ಸೃಷ್ಟಿಯಾಗುತ್ತಿದ್ದಿತು. ಪಾಂಡಿತ್ಯ - ಪ್ರತಿಭೆಗಳ ರಾಜನು ಇದರಲ್ಲಿ ಕೇಂದ್ರವ್ಯಕ್ತಿಯಾಗಿ ನಿಂತು, ಕ್ರಿಯಾತ್ಮಕವಾಗಿ ತೊಡಗಿಕೊಳ್ಳುತ್ತಿದ್ದನು. ಬಹುಶಃ ಕವಿರಾಜಮಾರ್ಗ (ಕವಿಗಳು ಮತ್ತು ರಾಜ ಸೇರಿ ನಿರ್ಮಿಸಿದ ಮಾರ್ಗ) ಹುಟ್ಟಿದ್ದು ಹೀಗೆ. ಮಾನಸೋಲ್ಲಾಸ ಹುಟ್ಟಿದ್ದೂ ಹೀಗೆ. ಅಂದರೆ ಸೋಮೇಶ್ವರನ ಸಹಭಾಗಿತ್ವದಲ್ಲಿ ಮತ್ತು ಪಂಡಿತಮಂಡಳಿಯ ದುಡಿಮೆಯಲ್ಲಿ ಮಾನಸೋಲ್ಲಾಸ ರೂಪಗೊಂಡಂತಿದೆ. ಇಂದು ಸರ್ವಸಮರ್ಥ ವಿದ್ವಾಂಸನೊಬ್ಬನ ನಿರ್ದೇಶಕತ್ವದಲ್ಲಿ ಅನೇಕ ವಿದ್ವಾಂಸರು ಸೇರಿ, ಒಂದು ಸಾಹಿತ್ಯಿಕ ಯೋಜನೆಯನ್ನು ಪೂರ್ಣಗೊಳಿಸುವ ರೀತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ವಿಶ್ವಕೋಶಯೋಜನೆಯ ಇಂದಿನ ಪ್ರಧಾನ ಸಂಪಾದಕರ ಕಾರ್ಯವಿಧಾನವನ್ನೂ ಇಲ್ಲಿ ಸ್ಮರಿಸಬಹುದು. ಅದೇನೇ ಇದ್ದರೂ ಮಾನಸೋಲ್ಲಾಸದಂಥ ವಿಶ್ವಕೋಶಕ್ಕೆ ಅವಶ್ಯವಿರುವ ವೈವಿಧ್ಯಪೂರ್ಣ ವಿದ್ವತ್ತು ಸೋಮೇಶ್ವರನಲ್ಲಿ ತುಂಬಿಕೊಂಡಿದ್ದುದಕ್ಕೆ ಈ ಗ್ರಂಥ ಅನೇಕ ಸಾಕ್ಷಿಗಳನ್ನು ಹೀಗೆ ಹೇಳುತ್ತದೆ :

೧. ಅಭ್ಯಾಸ ಪ್ರಯತ್ನಗಳಿಂದ ಸೋಮೇಶ್ವರರಾಜನು ಈ ಗ್ರಂಥವನ್ನು ರಚಿಸಿದ್ದಾನೆ (ಪು. ೨).
೨. ಸ[illegible]ಸ್ತ್ರಾರ್ಥ ಸರ್ವಸ್ವಸಮುದ್ರಕ್ಕೆ ಕಲಶೋದ್ಭವನೂ (ಅಗಸ್ತ್ಯನೂ) ಚಾಲುಕ್ಯವಂಶಕ್ಕೆ [illegible]ದ ಸೋಮಭೂಪಾಲನು... (ಪು. ೪೬).
೩. ಈ [illegible] ಸೋಮೇಶ್ವರ ರಾಜನು ರಚಿಸಿದ್ದಾನೆ (ಪು. ೧೬೯).
೪. ಚಿತ್ರವಿದ್ಯಾವಿರಿಂಚಿ ಭೂಲೋಕಮಲ್ಲದೇವನು [illegible]ವನ್ನು ರಚಿಸಿರುವನು. (ಪು. ೨೯೨).
೫. ಉಪಭೋಗ ವಿಂಶತಿಯನ್ನು (೨೦ ರಾಜಭೋಗಗಳನ್ನು) ಶಾರದಾದೇವಿ ಕುಲನಂದನನೂ, ಅರಿಭಯಂಕರನೂ ಆದ ಸೋಮೇಶ್ವರಭೂಪಾಲನು ವರ್ಣಿಸಿದ್ದಾನೆ (ಪು. ೩೦೧).
೬. ಕಾಲಸರ್ವಸ್ವವನ್ನು ತಿಳಿದ ಭೂಲೋಕಮಲ್ಲದೇವನಾದ ಸೋಮಭೂಪಾಲನು ಮಹಿಷಿಗಳನ್ನು ಅವಲಂಬಿಸಿದ ವಿನೋದವನ್ನು ಹೇಳಿದ್ದಾನೆ. (ಪು. ೫೧೮).
೭. ಇವುಗಳನ್ನು ಸೋಮೇಶ್ವರನು ಮಾರ್ಗದೇಶೀ ಕ್ರಮದಿಂದ ಹೇಳಿದ್ದಾನೆ. (ಪು. ೫೧೮).

ಈ ವಿವರಗಳು ಸೋಮೇಶ್ವರನ ಬಹುಮುಖಿ ಅಧ್ಯಯನ, ವಿದ್ವತ್ತುಗಳನ್ನು ಸ್ಪಷ್ಟಪಡಿಸುತ್ತವೆ. ಇದನ್ನು ಬೆಂಬಲಿಸುವ ರೀತಿಯಲ್ಲಿ "ಅಖಿಳಕಳಾ ಸಂಪತ್ಸನ್ನಿಧಿ ತಂನೊಳೆಸೆಯೆ ಸರ್ವಜ್ಞಮಹೀಭೃತ್ಸಂಜ್ಞೆ ಪಡೆದನಮಳ ಶರತ್ಸಮಯ ಸುಧಾಂಶು ಕೀರ್ತಿಧಾಮಂ ಸೋಮಂ ಭೂಲೋಕಮಲ್ಲವಲ್ಲಭನೀ ಲೋಕಮನಾಳ್ದನೆಸೆಯೆ ಸರ್ವಜ್ಞ ಮಹೀಪಾಲಂ" "ಭಾರತಿಗಂದು ಸನಾಥೋದಯಂ...." ಎಂಬಂಥ ವಾಕ್ಯಗಳು ಶಾಸನದಲ್ಲಿ ಗೋಚರಿಸುತ್ತವೆ. ಈ ವಿದ್ವತ್ತಿನ ಬಲದಿಂದ ಇವನೇ ರಚಿಸಿರಬಹುದಾದ "ಸಂಗೀತ ರತ್ನಾವಳಿ" ಹೆಸರಿನ ಅನುಪಲಬ್ಧ ಗ್ರಂಥದ ಸೂಚನೆಯೂ ಬೇರೆಡೆ ಸಿಗುತ್ತದೆ. ಹೀಗಾಗಿ ಕೊನೆಯ ಪಕ್ಷ ಮಾನಸೋಲ್ಲಾಸ ಸೃಷ್ಟಿಯಲ್ಲಿ ಸೋಮದೇವನ ವಿದ್ವತ್ತಿನ ಪಾಲು ಸೇರಿಕೊಂಡಿದೆಯೆಂದೇ ಹೇಳಬಹುದು.

ಕೃತಿನಾಮ

ಈ ಕೃತಿ ಅಭಿಲಷಿತಾರ್ಥ ಚಿಂತಾಮಣಿ, ಮಾನಸೋಲ್ಲಾಸ, ರಾಜಮಾನಸೋಲ್ಲಾಸ ಎಂದು ಮೂರು ಹೆಸರುಗಳಲ್ಲಿ ಕಾಣಿಸಿಕೊಂಡಿದೆ.

೧. ಚಾಲುಕ್ಯ ವಂಶತಿಲಕನಾದ ಸೋಮೇಶ್ವರರಾಜನು ಜಗತ್ತಿಗೆ ಉಪಕಾರ ಮಾಡಲೆಂದು ಈ ಮಾನಸೋಲ್ಲಾಸ ಶಾಸ್ತ್ರವನ್ನು ರಚಿಸಿದ್ದಾನೆ. (೧-೧-೯)

೨. ..... ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿ ಎನಿಸಿದ ಮಾನಸೋಲ್ಲಾಸದಲ್ಲಿ (ಪ್ರಥಮ ವಿಂಶತಿಯ ಅಂತ್ಯಪ್ರಶಸ್ತಿ).

೩. ..... ಶ್ರೀ ಸೋಮೇಶ್ವರದೇವ ವಿರಚಿತ ಮಾನಸೋಲ್ಲಾಸವೆನಿಸಿದ ಅಭಿಲಷಿತಾರ್ಥ ಚಿಂತಾಮಣಿಯಲ್ಲಿ (ದ್ವಿತೀಯ ವಿಂಶತಿಯ ಅಂತ್ಯಪ್ರಶಸ್ತಿ).

೪. .....ಶ್ರೀ ಸೋಮೇಶ್ವರ ವಿರಚಿತ ಮಾನಸೋಲ್ಲಾಸದ ರಾಜ್ಯೋಪಭೋಗ ಕಥನದಲ್ಲಿ ಮೂರನೆಯ ಅಧ್ಯಾಯ ಮುಗಿದುದು. (ತೃತೀಯ ವಿಂಶತಿಯ ಅಂತ್ಯಪ್ರಶಸ್ತಿ)

೫. ....ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆಂಬ ಮಾನಸೋಲ್ಲಾಸದಲ್ಲಿ (ಚತುರ್ಥ ವಿಂಶತಿಯ ಅಂತ್ಯಪ್ರಶಸ್ತಿ)

೬. .....ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಷಿತಾರ್ಥ ಚಿಂತಾಮಣಿಯೆನಿಸಿದ ರಾಜಮಾನಸೋಲ್ಲಾಸದಲ್ಲಿ (ಪಂಚಮ ವಿಂಶತಿಯ ಅಂತ್ಯಪ್ರಶಸ್ತಿ)

ಹೀಗೆ ಈ ಕೃತಿಯಲ್ಲಿ ಇದರ ಹೆಸರುಗಳು ಉಲ್ಲೇಖಗೊಂಡಿವೆ. ಇವೆಲ್ಲವನ್ನು ಗಮನಿಸಿ ಈ ಗ್ರಂಥವನ್ನು ಮೊದಲು ಪ್ರಕಟಿಸಿದ ಬರೋಡಾ ಗಾಯಕವಾಡ ಸಂಶೋಧನ ಸಂಸ್ಥೆ "ಮಾನಸೋಲ್ಲಾಸ" ಎಂದೂ, ಮೈಸೂರಿನ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ "ಅಭಿಲಷಿತಾರ್ಥ ಚಿಂತಾಮಣಿ" ಎಂದೂ ಇದನ್ನು ಕರೆದಿವೆ. ಗಾಯಕವಾಡ ಸಂಶೋಧನ ಸಂಸ್ಥೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಂಡ ನಾವು, ಸಹಜವಾಗಿಯೇ "ಮಾನಸೋಲ್ಲಾಸ" ಹೆಸರು ಇಟ್ಟುಕೊಂಡಿದ್ದೇವೆ.

ಇಲ್ಲಿ "ಅಭಿಲಷಿತಾರ್ಥ ಚಿಂತಾಮಣಿ" ಎಂಬುದಕ್ಕೆ ಇಚ್ಛಿತ ವಿಷಯವನ್ನು ನೀಡುವ ಚಿಂತಾಮಣಿ ಸ್ವರೂಪದ ಕೃತಿಯೆಂದು ಅರ್ಥ. ರಾಜಮಾನಸೋಲ್ಲಾಸ ಎಂಬುದಕ್ಕೆ ರಾಜರ ಮನಸ್ಸನ್ನು ಉಲ್ಲಾಸಗೊಳಿಸುವ ಕೃತಿ ಎಂದು ಅರ್ಥ. ಇದರ ಸಂಕ್ಷಿಪ್ತ ರೂಪವೇ ಮಾನಸೋಲ್ಲಾಸ. ಹೀಗೆ ಈ ಎಲ್ಲ ಹೆಸರುಗಳು ಈ ಕೃತಿಗೆ ಸಾರ್ಥಕವೆನಿಸಿವೆ.

ಕಾಲ

ಮಾನಸೋಲ್ಲಾಸ ರಚನೆಯ ಕಾಲಸೂಚನೆ, ಇದರ ದ್ವಿತೀಯ ವಿಂಶತಿಯ ಅಮಾತ್ಯಾಧ್ಯಾಯದ ಪಂಚಾಂಗನಿರ್ಣಯ ವಿಭಾಗದಲ್ಲಿ ಕಂಡುಬರುತ್ತದೆ. ಇಲ್ಲಿ ಗತಶಕ ವರ್ಷವನ್ನು ಕಂಡುಹಿಡಿಯುವ ರೀತಿಗೆ, ಈ ಗ್ರಂಥ ನಿರ್ಮಾಣದ ಕಾಲವನ್ನು ಉದಾಹರಣೆಯಾಗಿ ಬಳಸಿಕೊಂಡಿದ್ದಾನೆ (೨-೨-೬೧ ರಿಂದ ೬೪). ಇದರ ಪ್ರಕಾರ ಶಾಲಿವಾಹನ ಶಕೆ ೧೦೫೧, ಸೌಮ್ಯ ಸಂವತ್ಸರ, ಚೈತ್ರ ಮಾಸ, ಶುಕ್ಲಪಕ್ಷ ಪ್ರತಿಪದೆಯ ಶುಕ್ರವಾರ ಈ ಕೃತಿ ರಚನೆ ಆರಂಭವಾಯಿತು ಅಥವಾ ಈ ಶ್ಲೋಕ ಬರೆಯುವ ದಿನವಾಗಿದ್ದಿತೆಂದು ಹೇಳಬಹುದು. ಇದಕ್ಕೆ ಸಮಾನವಾದುದು ಕ್ರಿ. ಶ. ೧೧೨೯. ಇದು ಈತ ಪಟ್ಟಕ್ಕೆ ಬಂದ ಎರಡನೆಯ ವರ್ಷವಾಗಿದೆ.

ವಿಷಯವಿನ್ಯಾಸ

ಮಾನಸೋಲ್ಲಾಸ ಐದು ವಿಂಶತಿಗಳಾಗಿ ವಿಭಾಗಿಸಲ್ಪಟ್ಟಿದೆ. ಪ್ರತಿಯೊಂದು ವಿಂಶತಿಯಲ್ಲಿ ೨೦ ಅಧ್ಯಾಯಗಳಿವೆ. ಹೀಗೆ ಇದು ಐದು ವಿಂಶತಿ, ನೂರು ಅಧ್ಯಾಯಗಳಲ್ಲಿ ವಿನ್ಯಾಸಗೊಂಡಿದೆ. ಒಂದೊಂದು ಅಧ್ಯಾಯದಲ್ಲಿ ಬಹಳಷ್ಟು ಸಲ ಒಳವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಉದಾ. ದ್ವಿತೀಯ ವಿಂಶತಿಯ ಅಮಾತ್ಯಾಧ್ಯಾಯದಲ್ಲಿ ಮಂತ್ರಿ ಲಕ್ಷಣ, ಪುರೋಹಿತ ಲಕ್ಷಣ, ಪಂಚಾಂಗ ನಿರ್ಣಯ, ಜ್ಯೋತಿರ್ವಿದ್- ಗಣಕ ಲಕ್ಷಣ, ಧರ್ಮಾಧಿಕಾರಿ ಲಕ್ಷಣ, ಕೋಶಾಧ್ಯಕ್ಷ, ಗಣಕ ಲಕ್ಷಣ, ಪ್ರತೀಹಾರ ಲಕ್ಷಣ, ಸಂಧಿವಿಗ್ರಹಿಕ ಲಕ್ಷಣ, ಲೇಖಕ ಲಕ್ಷಣ, ಸಾರಥಿ ಲಕ್ಷಣ, ಸೂದ ಲಕ್ಷಣ, ಅಂತಃ ಪುರ ರಕ್ಷಕ ಮತ್ತು ಕುಮಾರ ಪರಿಪಾಲಕರ ಲಕ್ಷಣ ವಿವರಗಳಿವೆ.

ಎಲ್ಲಾ ಅಧ್ಯಾಯ ಸೇರಿ ಒಟ್ಟು ಸುಮಾರು ೮೦೦೦ ಶ್ಲೋಕಗಳು ಈ ಕೃತಿಯಲ್ಲಿವೆ. ಪ್ರಥಮ ವಿಂಶತಿಯಲ್ಲಿ ೩೦೮ ಶ್ಲೋಕ, ದ್ವಿತೀಯ ವಿಂಶತಿಯಲ್ಲಿ ೧೩೦೦ ಶ್ಲೋಕ, ತೃತೀಯ ವಿಂಶತಿಯಲ್ಲಿ ೧೮೨೦, ಚತುರ್ಥ ವಿಂಶತಿಯಲ್ಲಿ ೧೭೨೫+೧೪೯೪=೩೨೧೯ ಶ್ಲೋಕ, ಪಂಚಮ ವಿಂಶತಿಯಲ್ಲಿ ೧೩೭೫ ಶ್ಲೋಕಗಳಿರುವುದನ್ನು ನೋಡಿದರೆ, ಪ್ರತಿಯೊಂದು ವಿಂಶತಿಯಲ್ಲಿ ಶ್ಲೋಕಸಂಖ್ಯಾಪ್ರಮಾಣದ ವ್ಯತ್ಯಾಸ ಅಧಿಕವಾಯಿತೆನಿಸುತ್ತದೆ. ಈ ಆರೋಪ ಪ್ರತಿಯೊಂದು ವಿಂಶತಿಯಲ್ಲಿಯ ಅಧ್ಯಾಯಗಳಲ್ಲಿರುವ ಶ್ಲೋಕಶಂಖ್ಯಾ ಪ್ರಮಾಣಕ್ಕೂ ಅನ್ವಯಿಸುತ್ತದೆ. ಒಂದು ಅಧ್ಯಾಯದಲ್ಲಿ ಅತಿ ಕಡಿಮೆ ಎಂದರೆ ೧ ಶ್ಲೋಕ (I - ಕ್ರೋಧವರ್ಜನಾಧ್ಯಾಯ), ಅತಿ ಹೆಚ್ಚೆಂದರೆ ೯೨೬ ಶ್ಲೋಕ(III- ಗೃಹೋಪಭೋಗ) ಗಳಿರುವುದನ್ನು ಗಮನಿಸಬಹುದು. ಈ ಅಂತರ ಕಡಿಮೆಯಾಗುವಂತೆ ನೋಡಿಕೊಂಡಿದ್ದರೆ ಈ ಕೃತಿಯ ಅವಯವಗಳಿಗೆ ಒಂದಿಷ್ಟು ಸುಸಂಬದ್ಧತೆ ಪ್ರಾಪ್ತವಾಗುತ್ತಿತ್ತು. ಇದಲ್ಲದೆ ಕೆಲವೊಮ್ಮೆ ಒಂದೇ ವಿಷಯ ಒಂದಕ್ಕಿಂತ ಹೆಚ್ಚು ಕಡೆಗೆ ಹಂಚಿಹೋಗಿದೆ. ಉದಾ : ಜ್ಯೋತಿಷ್ಯ, ಔಷಧ ಇತ್ಯಾದಿ. ಕೆಲವೆಡೆ ವಿಷಯ ನಿರೂಪಣೆಯಲ್ಲಿ ಕ್ರಮಬದ್ಧತೆ ತಪ್ಪಿಹೋಗಿರುವುದರಿಂದ ಅಭ್ಯಾಸಿಗೆ ಆಗಾಗ ದಿಕ್ಕು ತಪ್ಪಿಸಿಕೊಂಡ ಅನುಭವವಾಗುತ್ತದೆ. ಇಂಥ ಕೊರತೆಗಳೇನಿದ್ದರೂ ಮಾನಸೋಲ್ಲಾಸ ಒಂದು ಬಹುಮುಖಿ ಕೃತಿಯಾಗಿ ಕಂಗೊಳಿಸುತ್ತದೆ.

ಆಕಾರ - ವ್ಯುತ್ಪತ್ತಿ

ಸಂಸ್ಕೃತಸಾಹಿತ್ಯದಿಂದ ಉತ್ತರಕಾಲೀನ ಸಂಸ್ಕೃತ ಮತ್ತು ಸಂಸ್ಕೃತೇತರ ಸಾಹಿತ್ಯಕೃತಿಗಳು ಋಣಿಯಾಗುತ್ತ ಬಂದಿವೆ. ಇದೇ ರೀತಿ ಮಾನಸೋಲ್ಲಾಸವೂ ಪ್ರಾಚೀನ ಸಂಸ್ಕೃತ ಕೃತಿಗಳಿಂದ ವಿಶೇಷ ನೆರವು ಪಡೆದಿದೆ. ಇದನ್ನು ಆರಂಭ, ಅಂತ್ಯಗಳಲ್ಲಿ ಪಟ್ಟಿಮಾಡಿ ಹೇಳದೆ, ತೀರ ಅನುಷಂಗಿಕವೆಂಬಂತೆ ಈ ಕೃತಿ ಅಲ್ಲಲ್ಲಿ ಹೀಗೆ ಸೂಚಿಸಿದೆ :

ಆನೆಗೆ ತರಬೇತಿ ನೀಡುವ ಆರಂಭದಲ್ಲಿ ಸಾಮವೇದವನ್ನು ಮೊದಲು ಹೇಳಬೇಕು (೬೮), ಅರ್ಥರ್ವವೇದ ತತ್ವದ ಬ್ರಾಹ್ಮಣರ ಮೂಲಕ ದೂರದಿಂದಲೇ ವೈರಿಗಳನ್ನು ಕೊಲ್ಲಿಸಬೇಕು (೧೬೨), ಅಶ್ವಾಯುರ್ವೇದದಲ್ಲಿ ನಿಪುಣರಾದವರಿಂದ ಕುದುರೆಗಳಿಗೆ ಚಿಕಿತ್ಸೆ ಮಾಡಿಸಬೇಕು (೯೫), ಮಂತ್ರಾಲೋಚನೆ ಐದು ಬಗೆಯಾಗಿದೆಯೆಂದು ಗುರು, ಶುಕ್ರ, ಚಾಣಕ್ಯರು ಹೇಳುತ್ತಾರೆ (೧೦೮), ವಿಶ್ವಕರ್ಮ ಮತಾನುಸಾರಿಯಾಗಿ, ಮಯಶಾಸ್ತ್ರಕ್ಕನುಗುಣವಾಗಿ, ಮತ್ಸ್ಯನಿರೂಪಿತ ವಿಧಾನದಂತೆ, ಪಿಂಗಳ ಮತದ ಮೇರೆಗೆ ದೇವಾಲಯ, ಮಠಗಳನ್ನು ನಿರ್ಮಿಸಬೇಕು (೮), ಗೃಹ್ಯಸೂತ್ರದಲ್ಲಿ ಹೇಳಿದಂತೆ ಮಕ್ಕಳಿಗೆ

ಜಾತಕರ್ಮ ಆಚರಿಸಬೇಕು - ಇತ್ಯಾದಿ ಸೂಚನೆಗಳು ಈ ಕೃತಿಯ ಆಕರಗಳನ್ನು ಈತನ ವ್ಯುತ್ಪತ್ತಿಯನ್ನು ಸೂಚಿಸುತ್ತವೆ.

ಧರ್ಮರಾಜ ದ್ಯೂತದಿಂದ ಹಾಳಾದನು, ನಳನು ಪುಷ್ಕರನಿಂದ ಸೋತನು, ರುಕ್ಮನು ಹಲಧರನಿಂದ ಹತನಾದನು. ವೀರಕ್ರೀಡೆಯನ್ನು ಶೂದ್ರಕ, ಶಾಲಿವಾಹನ ವಂಶದ ವೀರನಾಥ, ಕಾಂತೀಶ್ವರನ ಮಗ ಕಾಳಿದಾಸ ಆಡಿದ್ದಾರೆ. ಇಂಥ ವಿವರಗಳು ಈತನ ವೈವಿಧ್ಯಪೂರ್ಣ ವ್ಯುತ್ಪತ್ತಿಯನ್ನು ತಿಳಿಸಿಕೊಡುತ್ತವೆ. ಇಲ್ಲಿಯ ವಿಗ್ರಹ ವಿವೇಚನೆ ಸಂದರ್ಭದಲ್ಲಿ ಈತನು ವಿಷ್ಣು ಧರ್ಮೋತ್ತರ ಪುರಾಣವನ್ನು ಬಳಸಿರುವನೆಂದು ವಿದ್ವಾಂಸರು ಹೇಳುತ್ತಾರೆ. ಚಾಣಕ್ಯನ ಅರ್ಥಶಾಸ್ತ್ರ, ಭರತನ ನಾಟ್ಯಶಾಸ್ತ್ರ ಇಂಥ ಪ್ರಸಿದ್ಧ ಕೃತಿಗಳಿಂದ ನೆರವು ಪಡೆದುದು ವ್ಯಕ್ತವಾಗಿಯೇ ಇದೆ. "ಗಾಯೇತ್ಸ್ವಯಂ ವಾ ಪ್ರೀತ್ಯರ್ಥಂ ಪ್ರೇಯಸೀ ಜನತುಷ್ಟಯೇ", "ಸ್ವಯಂ ವಾ ನರ್ತನಂ ಕುರ್ಯಾದ್ರಸಭಾವ ಸಮನ್ವಿತಮ್" ಮೊದಲಾದ ಮಾತುಗಳು ಅವನ ಕಲಾಪರಿಶ್ರಮವನ್ನು ಸಾರುತ್ತವೆ. ಈ ಮತ್ತು ಇಂಥ ವಿವರಗಳು ಈತನ ಮೂಲ ಆಕರ ಮತ್ತು ವ್ಯುತ್ಪತ್ತಿಗಳಿಗೆ ನಿದರ್ಶನವೆನಿಸಿವೆ.

ವಿಷಯಸಂಪತ್ತು

ಮಾನಸೋಲ್ಲಾಸ ವಿಷಯವೈವಿಧ್ಯದಲ್ಲಿ ಅಸಾಧಾರಣವೆನಿಸಿದ್ದರೂ ಅದನ್ನು ೧. ಸಾಂಪ್ರದಾಯಿಕ ನಿರೂಪಣೆಗಳು, ೨. ಕಲ್ಪನಾ ಲಹರಿಗಳು, ೩. ವಾಸ್ತವಿಕ ಆಚರಣೆಗಳು ಎಂದು ವಿಭಾಗಿಸಬಹುದಾಗಿದೆ.

ಇಲ್ಲಿಯ ಬಹುಭಾಗವನ್ನು ಸಾಂಪ್ರದಾಯಿಕ ವಿಷಯವೇ ತುಂಬಿಕೊಂಡಿದೆ. ಉದಾ: ಪ್ರಭು, ಮಂತ್ರ, ಉತ್ಸಹವೆಂಬ ಶಕ್ತಿತ್ರಯ ; ಸಾಮ, ದಾನ, ಭೇದ, ದಂಡಗಳೆಂಬ ಉಪಾಯ ಚತುರ್ಥ; ಚತುಃಶಾಲ ಮೊದಲಾದ ೪ ಬಗೆಯ ಗೃಹಗಳು, ಪದ್ಮಿನಿ ಮೊದಲಾದ ನಾಲ್ಕು ಬಗೆಯ ಸ್ತ್ರೀಯರು; ಶಾಸ್ತ್ರವಿನೋದ ಪ್ರಕರಣದಲ್ಲಿ ವಿವರಿಸಿರುವ ಕಾವ್ಯಮೀಮಾಂಸೆ ವಿಚಾರಗಳು; ಗೀತವಿನೋದಾಧ್ಯಾಯದಲ್ಲಿ ಬರುವ ಸಂಗೀತ ಛಂದೋವಿಚಾರಗಳು ; ನೃತ್ಯ ವಿನೋದಾಧ್ಯಾಯದಲ್ಲಿಯ ಅನೇಕ ವಿವರಗಳು; ಗೃಹೋಪಭೋಗದಲ್ಲಿ ಹೇಳಲಾಗಿರುವ ಗೃಹಲಕ್ಷಣ, ಚಿತ್ರ ಶಿಲ್ಪ ವಿವರಗಳು ಇಂಥ ನೂರಾರು ಅಂಶಗಳು ಸಾಂಪ್ರದಾಯಿಕ ವಿಚಾರಗಳೆನಿಸಿವೆ. ಇವೆಲ್ಲ ಚಾಣಕ್ಯನ ಅರ್ಥಶಾಸ್ತ್ರ, ಭರತನ ನಾಟ್ಯಶಾಸ್ತ್ರ ಮೊದಲಾದ ಪ್ರಾಚೀನ ಗ್ರಂಥಗಳಿಂದ ಇಳಿದುಬಂದವುಗಳಾಗಿವೆ.

ಇದನ್ನು ಬಿಟ್ಟರೆ ಕೆಲವು ಸಲ ಸ್ವಕಪೋಲಕಲ್ಪಿತ ವಿವರಗಳನ್ನು ಆ ಕೃತಿ ತುಂಬಿಕೊಂಡಿದೆ. ಸ್ನಾನಭೋಗ, ಪಾದುಕಾಭೋಗಗಳಂಥ ರಾಜ್ಯೋಪಭೋಗಗಳು, ಆಂದೋಲನ ಕ್ರೀಡೆ, ಜ್ಯೋತ್ಸ್ನಾ ಕ್ರೀಡೆ, ವೀರಕ್ರೀಡೆಗಳಂಥ ಕ್ರೀಡಾವಿವರಗಳು ಈ ಮಾತಿಗೆ ನಿದರ್ಶನವೆನಿಸಿವೆ. ಇಂಥ ಭಾಗಗಳು ಕೆಲವೊಮ್ಮೆ ತುಂಬ ಹಾಸ್ಯಾಸ್ಪದವೆನಿಸುತ್ತವೆ.

ನಿಜವಾಗಿಯೂ ವಿಶ್ವಕೋಶವೊಂದರ ಮಹತ್ವವಿರುವುದು ಅದು ಗರ್ಭೀಕರಿಸಿಕೊಂಡಿರುವ ಸಮಕಾಲೀನ ಆಚಾರ, ವಿಚಾರಗಳ ಸಂಗ್ರಹದಲ್ಲಿ. ಗತಾನುಗತಿಕ ವಿಷಯ ಪ್ರತಿಪಾದನೆಯೇ ಪ್ರಾಚೀನ ಭಾರತೀಯ ಕೃತಿಗಳ ದೃಷ್ಟಿಕೋನವಾಗಿದ್ದ ಕಾರಣ, ಅವುಗಳಲ್ಲಿ ಸಮಕಾಲೀನತೆಯ ದಾಖಲೆಗೆ ಅವಕಾಶ ಕಡಿಮೆ. ಈ ಮಾತಿಗೆ ಮಾನಸೋಲ್ಲಾಸ ಅಪವಾದವೇನಲ್ಲ. ಹೀಗಿದ್ದೂ ಈ ಕೃತಿ ತನ್ನ ಪ್ರದೇಶದ

ಭೌಗೋಳಿಕ, ಸಾಮಾಜಿಕ ಅಂಶಗಳನ್ನು ಸಂಗ್ರಹಿಸಿಕೊಟ್ಟಿದೆ. ತೀರ್ಥಸ್ನಾನಾಧ್ಯಾಯದಲ್ಲಿ ಗಂಗೆ, ನರ್ಮದೆ ಮೊದಲಾದ ಭಾರತದ ಪ್ರಸಿದ್ಧ ನದಿಗಳನ್ನು ಹೇಳುತ್ತ, ಕರ್ನಾಟಕದ ಮಾಂಜರಾ, ಭೀಮಾ, ಕೃಷ್ಣಾ, ಮಲಪ್ರಭಾ ನದಿಗಳನ್ನು ಸೂಚಿಸಲಾಗಿದೆ. ಯೋಗಿನೀ ಪೀಠಗಳಲ್ಲಿ ಮೊದಲನೆಯದು ಜಲಾಂದರ, ಎರಡನೆಯದು ಕಾಮರೂಪಕ, ಮೂರನೆಯದು ಉಡ್ಡಿಯಾಣ, ನಾಲ್ಕನೆಯದು ಉಜ್ಜಯಿನಿ ಎಂದು ಹೇಳುತ್ತ, ಕೊಲ್ಲಾ[illegible]ಯು ಸೂಚಿಸಿ, ಕರಹಾಟ, ಪಿರಾಟಪುರ, ಪೂರ್ಣಗಿರಿ, [illegible], ಮುಕೂಟಕ, ಶಂಭುಶಿಖರ, ವಿಂಧ್ಯಾ, ಚಿತ್ರಕೂಟ, ಏಕಾಮ್ರಕ, ಮಹಾಚೀನ, ಪ್ರಯಾಗ, ಮಲಯ, ಕೋಲಾರಪುರ ಮೊದಲಾದ ಯೋಗಿನೀ ಕ್ಷೇತ್ರಗಳನ್ನು ಹೆಸರಿಸುತ್ತಿರುವುದು, ಆ ಕಾಲದ ಪ್ರಸಿದ್ಧ ಕ್ಷೇತ್ರಗಳ ವಿವರಣೆಯೇ ಆಗಿದೆ. ವಸ್ತ್ರೋಪಭೋಗ ಪ್ರಕರಣದಲ್ಲಿ ಪ್ರೋದ್ದಾಲಪುರ, ಚೀರಪಲ್ಲಿ, ನಾಗಪಟ್ಟಣ, ಚೋಲದೇಶ, ಅಲ್ಲಿಕಾರ್ಕುಲ. ಸಿಂಹಳ, ಅಣಿಲಾವಾಡ, ಮೂಲಸ್ಥಾನ, ತೋಂಡೀದೇಶ, ಪಚ್ಚಪಟ್ಟಣ, ಮಹಾಚೀನ, ಕಲಿಂಗ, ವಂಗಗಳಲ್ಲಿ ಸಿದ್ಧವಾದ ಬಟ್ಟೆಗಳು ರಾಜಯೋಗ್ಯವೆಂದು ಹೇಳಲಾಗಿದೆ. ಇಲ್ಲಿಯ ಚೀರಪಲ್ಲಿಯು ಇಂದಿನ ತಮಿಳುನಾಡಿನ ತಿರುಚೀರಪಲ್ಲಿ (ತಿರುಚನಾಪಳ್ಳಿ)ಯೇ ಆಗಿದ್ದು, ಇದು ಇಂದಿಗೂ ಬಟ್ಟೆಗಳಿಗಾಗಿ ಪ್ರಸಿದ್ಧಿ ಹೊಂದಿದೆ. ತಾಂಬೂಲಭೋಗ ಪ್ರಕರಣದಲ್ಲಿ ರಾಜನಾದವನು ನೈಲವರ್ತಿಕಾಪುರ, ಈಶ್ವರಪುರ, ಕಂಡಿಕಾಪುರಗಳಲ್ಲಿ ಬೆಳೆಯುವ ಅಡಿಕೆಯನ್ನು ತಿನ್ನಬೇಕೆಂದು ಹೇಳಲಾಗಿದೆ. ಇಲ್ಲಿಯ ನೈಲವರ್ತಿಕಾಪುರದ ಅಡಿಕೆಯೆನ್ನುವುದು ವಡ್ಡಾರಾಧನೆಯಲ್ಲಿ ಹೇಳಿರುವ ನೆಲವತ್ತಿ ಅಡಿಕೆಯೇ ಆಗಿದೆ. ಇದು ಶಿವಮೊಗ್ಗ ಜಿಲ್ಲೆಯ ನ್ಯಾಮತಿ ಗ್ರಾಮವೆಂದು ಇತ್ತೀಚೆ ತಿಳಿದುಬಂದಿದೆ. ಇದರಿಂದ ಇಂದಿನ ನ್ಯಾಮತಿಯ ಅಡಿಕೆ ಮಾನಸೋಲ್ಲಾಸದಷ್ಟು, ಏಕೆ ವಡ್ಡಾರಾಧನೆಯಷ್ಟು ಪ್ರಾಚೀನ ಕಾಲದಲ್ಲಿಯೂ ಪ್ರಸಿದ್ಧಿ ಹೊಂದಿದ್ದಿತೆಂದು ಸ್ಪಷ್ಟವಾಗುತ್ತದೆ.

ಸಾಮಾಜಿಕ ವಿಷಯ ಸಂದರ್ಭಗಳಲ್ಲಿಯೂ ಕೆಲವೊಮ್ಮೆ ಆ ಕಾಲದ ಅಂಶಗಳನ್ನು ಗುರುತಿಸಲಾಗಿದೆ. ಸ್ತ್ರೀ ಆಭರಣಗಳಲ್ಲಿ ಒಂದಾದ ಸರಿಗೆ (ಸರಿಕೆ) ಎನ್ನುವುದು ಈಗಲೂ ಹಳ್ಳಿಯಲ್ಲಿ ಬಳಕೆಯಾಗುತ್ತಲಿದೆ. ಐದು, ಏಳು ಇಲ್ಲವೆ ಒಂಬತ್ತು ಲೋಹದ ಕಾಲುಗಳಿಂದ ಕೂಡಿರುವ, ಲೋಹದ ತಗಡಿನಿಂದ ಮಾಡಿದ ಹಾಗೂ ಮೇಲೆ ಲೋಹ ಜಾಲಕ (ಜಾಳಿಗೆ)ಗಳಿಂದ ಕೂಡಿರುವ, ಅರಳೆಯಿಂದ ತುಂಬಿಕೊಂಡು ಹೊದಿಕೆ ವಸ್ತ್ರದಿಂದ ಆವೃತವಾಗಿರುವ, ಚೆನ್ನಾಗಿ ಜೋಡಿಸಲ್ಪಟ್ಟ ಆಸನಕ್ಕೆ "ಲೋಹಾಸನ"ವೆಂದು ಇಲ್ಲಿ ಸೂಚಿಸಲಾಗಿದೆ. ಈ ಆಸನದ ಉಲ್ಲೇಖ ಪಂಪಭಾರತದಲ್ಲಿ ಎರಡು ಸಲ ಬರುತ್ತಿದ್ದು, ಮಾನಸೋಲ್ಲಾಸದ ಈ ವಿವರ ಆ ಆಸನದ ಬಗೆಗಿನ ನಮ್ಮ ತಿಳಿವಳಿಕೆಯನ್ನು ವಿಸ್ತಾರಗೊಳಿಸುತ್ತದೆ.

ನೃತ್ಯ ವಿನೋದಾಧ್ಯಾದಲ್ಲಿ ನಟರನ್ನು ನಟ, ನರ್ತಕ, ನರ್ತಕಿ, ವೈತಾಲಿಕ, ಚಾರಣ ಮತ್ತು ಕೋಲ್ಲಟಿಕ ಎಂದು ಆರು ಪ್ರಕಾರಗಳಿಂದ ಗುರುತಿಸಲಾಗಿದೆ. ಇಲ್ಲಿ ಕೋಲ್ಲಟಿಕವೆಂಬುದು ಕನ್ನಡದ ಕೊಲ್ಲಟಿಗ > ಕೋಲಾಟಿಗ(ಡೊಂಬ)ವೇ ಇರಬಹುದು.[೧] ವಾದ್ಯ ವಿನೋದದಲ್ಲಿ ಹೇಳಿರುವ ಹುಡುಕ್ಕಾ, ಘಡಸ, ಕರಟಿ, ರುಂಜಾ, ಸೆಳ್ಳುಕಾ ಇವುಗಳಲ್ಲಿ ಕೆಲವು ಕನ್ನಡ ಮೂಲದ ವಾದ್ಯನಾಮವಾಗಿರುವ ಸಾಧ್ಯತೆಯಿದೆ. ವಸ್ತ್ರೋಪಭೋಗದಲ್ಲಿ ಚೀರಘಟ್ಟಿಕ ಎನ್ನುವುದು ಕನ್ನಡ ಕಾವ್ಯಗಳಲ್ಲಿ ಬರುವ ಚೀರಘಟ್ಟಿಯನ್ನು ನೆನಪಿಸುತ್ತದೆ.

ಪುತ್ರಭೋಗ ಪ್ರಕರಣ ಅನೇಕ ಅಮೂಲ್ಯ ವಿಷಯಗಳನ್ನು ತುಂಬಿಕೊಂಡಿದೆ. ಹೆಣ್ಣು ಗರ್ಭ ಧರಿಸಿದ ಮೂರನೆಯ ತಿಂಗಳು ಪುಂಸವನ ಕಾರ್ಯವನ್ನು ಆಚರಿಸಬೇಕು. ಆಗ ಎರಡು ಉದ್ದಿನ ಬೇಳೆಗಳನ್ನು ಒಳಗೊಂಡ, ತುಪ್ಪದಲ್ಲಿ ತಯಾರಿಸಿದ ಜವೆಗೋದಿಯ ಆಹಾರವನ್ನು ವೇದಮಂತ್ರ ಉಚ್ಚರಿಸುತ್ತ ಅರಸನು ಪತ್ನಿಗೆ ತಿನ್ನಿಸಬೇಕು. ೬ನೆಯ ಅಥವಾ ೮ನೆಯ ಶುಕ್ರವಾರ ಅಷ್ಟಮಂಗಳವೆಂಬ ಸೀಮಂತವನ್ನಾಚರಿಸಬೇಕು. ಅತ್ತಿಮರದ ಹಣ್ಣುಗಳಿಂದ ಕೂಡಿದ ಕಂಠಾಭರಣವನ್ನು ತೊಡಿಸಬೇಕು. ಮುಳ್ಳುಹಂದಿಯ ಬಾಲದ ತುದಿಯಿಂದ ಅರಸನು ತನ್ನ ಪತ್ನಿಯ ತಲೆಯ ಮೇಲೆ ಸೀಮಂತೋನ್ನಯನವನ್ನು ಆಚರಿಸಬೇಕು. ಗಂಡು ಮಗುವಿಗೆ ಗೃಹ್ಯಸೂತ್ರದಲ್ಲಿ ಹೇಳಿದಂತೆ ಜಾತಕರ್ಮವನ್ನಾಚರಿಸಬೇಕು. ಸುವರ್ಣ ಮುದ್ರಿಕೆಗೆ ಲೇಪಿಸಿದ ಜೇನುತುಪ್ಪವನ್ನು ಮಗುವಿಗೆ ತಿನ್ನಿಸಬೇಕು. ಮದುವೆಯ ಸಂದರ್ಭದಲ್ಲಿ ಒಂದರ ಪಕ್ಕದಲ್ಲಿ ಒಂದರಂತೆ ಅಕ್ಕಿಕಾಳುಗಳ ಎರಡು ಗುಂಪುಗಳನ್ನು ವೇದಿಕೆಯ ಮೇಲೆ ಯೋಜಿಸಬೇಕು. ಅವುಗಳ ಮಧ್ಯದಲ್ಲಿ ಬಿಳಿ ರೇಷ್ಮೆ ಬಟ್ಟೆಯ ಅಂತಃಪಟವನ್ನು ಸಾವಧಾನವಾಗಿ ಇಳಿಬಿಡಬೇಕು. ಒಂದು ಅಕ್ಕಿ ರಾಶಿಯ ಮೇಲೆ ಪುತ್ರನನ್ನು ಪೂರ್ವಕ್ಕೆ ಮುಖಮಾಡಿ ಕುಳ್ಳಿರಿಸಬೇಕು. ಅದೇ ರೀತಿ ಇನ್ನೊಂದು ಅಕ್ಕಿ ರಾಶಿಯ ಮೇಲೆ ಕನ್ಯೆಯನ್ನು ಪಶ್ಚಿಮಾಭಿಮುಖವಾಗಿ ಕುಳ್ಳಿರಿಸಬೇಕು. ವರ ಮತ್ತು ಕನ್ಯೆಯ ಸುತ್ತ ೫ ನೂಲಿನ ಎಳೆಗಳನ್ನು ಸುತ್ತಬೇಕು. ೫ ಸಲ ಪ್ರದಕ್ಷಿಣೆ ಹಾಕಿಸಿ, ೫ ಎಳೆಯ ಸೂತ್ರವನ್ನು ಕಡ್ಡಾಯವಾಗಿ ಹರಿದು ಕಾಲ ಕೆಳಗೆ ಬೀಳಿಸಬೇಕು. ದಾರಕ್ಕೆ ಕುಂಕುಮವನ್ನು ಲೇಪಿಸಿದರೆ ಕಂಕಣವೆನ್ನುತ್ತಾರೆ. ಈ ರೀತಿ ಕನ್ಯೆಗೆ ಕಂಕಣವನ್ನು ಕಟ್ಟಬೇಕು. ಪುತ್ರಭೋಗ ಅಧ್ಯಾಯದಲ್ಲಿ ಹೇಳಿರುವ ಈ ಎಲ್ಲಾ ಅಂಶಗಳು ರಾಜವರ್ಗದವರ ವಿವಾಹದ ಆಚರಣೆಗಳನ್ನು ತಿಳಿಸುತ್ತವೆ.

ಅನ್ನಭೋಗ ಪ್ರಕರಣದಲ್ಲಿ ಕರ್ನಾಟಕದ ಇಡ್ಲಿ, ಗಾರಿಗೆ, ಹೋಳಿಗೆ ಮಂಡಿಗೆ, ವಡೆಗಳನ್ನು ಮಾಡುವ ವಿಧಾನಗಳನ್ನು ಹೇಳಲಾಗಿದೆ.

ಮೃಗಯಾ ವಿನೋದದಲ್ಲಿ ಬರುವ ದೀಪಮೃಗಗಳ ವಿವರ, ಕನ್ನಡ ಕಾವ್ಯಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ದೀಪದ ಮೃಗಗಳ ಬಗೆಗಿನ ನಮ್ಮ ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ಇಲ್ಲಿ ಬರುವ ಎತ್ತಿನ ಮರೆಯಲ್ಲಿ ಆಡುವ ಬೇಟೆ ವಿವರವು ಬಸವಣ್ಣನವರ ವಚನದ "ಬೆಳ್ಳೆತ್ತಿನ ಮರೆಯಲ್ಲಿ ನಿಂದು ಹುಲ್ಲೆಗೆ ಅಂಬ ತೊಡುವಂತೆ" ಎಂಬ ವಚನದ ಅರ್ಥವನ್ನು ಇನ್ನೂ ಸ್ಪಷ್ಟಪಡಿಸುತ್ತದೆ. "ಕುಕ್ಕಟವಿನೋದ"ದಲ್ಲಿ, "ಗೆದ್ದವರು ಸೋತವರ ಹೆಗಲನ್ನೇರಿ ಕುಳಿತು ಪರಿಹಾಸ್ಯದ ಮಾತುಗಳನ್ನಾಡಬೇಕು. ಸೋತವರನ್ನು ನಾಚಿಕೆಗೀಡುಮಾಡಬೇಕು. ಪರಿಹಾಸ್ಯದ ಅರ್ಥ ತುಂಬಿರುವ, ಮರ್ಮಭೇದಕವಾದ, ಬೈಗುಳದಿಂದ ಕೂಡಿದ ತ್ರಿಪದಿ ಪದ್ಯಗಳನ್ನು ರಾಗಸಹಿತವಾಗಿ ಸೋತವರನ್ನು ಉದ್ದೇಶಿಸಿ ಹಾಡಬೇಕು. ಸೋತವರ ಧ್ವಜದ ಸ್ತಂಭವನ್ನು ಜೋರಾಗಿ ಕಿತ್ತುಕೊಂಡು, ಗೆಲುವನ್ನು ಗಳಿಸಿದ ಹುಂಜವನ್ನು ಹೆಣ್ಣಾನೆಯ ಮೇಲೆ ಕುಳ್ಳಿರಿಸಿ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಿಸಬೇಕು. ಸೋತವನ ಹಣೆ, ತೋಳು, ಎದೆಗಳ ಮೇಲೆ ಗೆದ್ದವನು ಕುಂಕುಮದಿಂದ ಹುಂಜದ ಗುರುತುಗಳನ್ನು ಮಾಡಬೇಕು" ಎಂದು ಹೇಳಿರುವ ವಿವರಗಳು ತುಂಬಾ ಕುತೂಹಲಕಾರಿಯಾಗಿವೆ.

"ಮದಿರಾಪಾನ ಕ್ರೀಡಾ" ಅಧ್ಯಾಯದಲ್ಲಿ "ಆನೆಯಿಂದ ಅಟ್ಟಿಸಿಕೊಂಡು ಓಡುವ ಸ್ಪರ್ಧೆ"ಯ ವಿವರವಿದೆ. ಹೀಗೆ ಓಡುವವನ್ನು ಪರಿಕಾರ ಎಂದು ಈ ಗ್ರಂಥ ಕರೆದಿದೆ. ಇದು ಕನ್ನಡ ಶಬ್ದ. "ಪರಿಕಾರನೆಂದು ಕಾಲೊಳ್ ಬಲ್ಲಿದಂ" ಎಂಬ ಶಬ್ದಮಣಿದರ್ಪಣದ ಮಾತನ್ನು ಇಲ್ಲಿ ನೆನೆಯಬಹುದು.

"ತುರಗವೈಹಾಲಿ" ಪ್ರಕರಣದಲ್ಲಿ ಗೇದ್ದಿಕಾ ಬಳಸಿ ಆಡುವ ಆಟದ ವಿವರವಿದ್ದು, ಇದು ಶ್ರವಣಬೆಳಗೊಳ ಶಾಸನದಲ್ಲಿ ಬರುವ ರಾಷ್ಟ್ರಕೂಟ ಇಂದ್ರನ ಕಂದುಕ ಕ್ರೀಡೆಯನ್ನು ಹೋಲುತ್ತದೆ.

"ರಾಷ್ಟ್ರಾಧ್ಯಾಯ" ಪ್ರಕರಣದಲ್ಲಿ ಆನೆಗಳ ಭಾಷಾ ತರಬೇತಿಯ ವಿವರ ನೀಡುತ್ತಾ, ಆನೆಗೆ ಸಂಚರಿಸಲು ಹೇಳುವಾಗ ಏಹಿ ಏಹಿ ಎಂದೂ, ದೂರ ಸರಿಸುವಾಗ ಹೇಡ ಹೇಡ ಎಂದೂ, ಎರಡೂ ಬದಿಗೆ ಸರಿಯಲು ಹೇಳುವಾಗ ಪ್ರಾಪ ಎಂದೂ, ಕುಳಿತುಕೊಳ್ಳಲು ಹೇಳುವಾಗ ವಿಶ್ವೀ ಎಂದೂ, ಎಬ್ಬಿಸುವಾಗ ನುಹ್ನಃ ಎಂದೂ, ಸೊಂಡಿಲನ್ನು ಸಂಕೋಚಗೊಳಿಸಲು ಹೇಳುವಾಗ ವಘ್‌ಡಿಹರ ಎಂದೂ, ಸೊಂಡಿಲನ್ನು ಮೇಲೆತ್ತಲು ಭರೀಹ ಎಂದೂ, ಕಂಬದಂಥ ಭಾರಯೆತ್ತುವಾಗ ಹಿಜ್ಜ ಹಿಜ್ಜ ಎಂದೂ, ಮುಂಗಾಲು ಮೇಲೆತ್ತುವಾಗ ಭಲೆ ಭಲೆ ಎಂದೂ, ಪಶ್ಚಿಮ ದಿಕ್ಕಿಗೆ ನಮಸ್ಕರಿಸಲು ಹೇಳುವಾಗ ಕಿಃ ಕಿಃ ಎಂದೂ, ಬೇಡುವಾಗ ದೇ ದೇ ಎಂದೂ, ಸೊಂಡಿಲಿನಿಂದ ಏಟು ಹಾಕಿಸುವಾಗ ಹೇ ಹೈ ಎಂದೂ, ಆಹಾರವನ್ನು ಮೆಲ್ಲುವಾಗ ದ್ವಿ ದ್ವಿ ಎಂದೂ, ತಿನ್ನುವುದನ್ನು ಬಿಡಿಸುವಾಗ ಚದು ಚುದು ಎಂದೂ, ಬೇಡ ಸಂಬೋಧಿಸುವಾಗ ಮಾ ಮಾ ಎಂದೂ, ಭೂಮಿಗೆ ದಂತ ಉಜ್ಜುವಾಗ ಹಿಗ ಹಿಗ ಎಂದೂ, ಹೊರಗೆ ಸೊಂಡಿಲನ್ನು ಬೀಸುವಾಗ ಹೂ ಹೂ ಎಂದೂ, ಮೆಲ್ಲಗೆ ಚಲಿಸಲು ಲೇಚ ಲೇಚ ಎಂದೂ, ಬರಲು ಆಹ್ವಾನಿಸುವಾಗ ಇಚ್ಚ ಭೂಭ ಎಂದೂ, ಸ್ವೀಕರಿಸಲು ತಿಳಿಸುವಾಗ ಘೇ ಘೇ ಎಂದೂ ಹೇಳಬೇಕೆಂದು ನೀಡಿದ ಈ ವಿವರ ಸೋಮೇಶ್ವರನ ಕಾಲದ ಆಚರಣೆಯೇ ಆಗಿರಬೇಕು.

"ಗೀತವಿನೋದಾಧ್ಯಾಯ" ದೇಶೀ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಮಹತ್ವದ ಅಂಶಗಳನ್ನೊಳಗೊಂಡಿದೆ. ಇಲ್ಲಿ ದ್ರಾವಿಡ ಛಂದಸ್ಸಿನ ಅಂಶಗಣ ವಿಚಾರವನ್ನು ಹೇಳಿ, ಕನ್ನಡದ ತ್ರಿಪದಿ ಲಕ್ಷಣವನ್ನು ಪ್ರಸ್ತಾಪಿಸುತ್ತ ಕನ್ನಡ ಪದ್ಯವನ್ನೇ ಉದಾಹರಣೆಯಾಗಿ ಕೊಟ್ಟುದು ವಿಶೇಷವೆನಿಸಿದೆ. ಮುಂದುವರಿದು ತ್ರಿಪದಿಯ "ಮೊದಲೆರಡು ಪಾದಗಳನ್ನು, ಮೂರನೆಯದರಲ್ಲಿ ಕೊಂಚ ಭಾಗವನ್ನೂ ಹಾಡಿದ ಬಳಿಕ, ಮತ್ತೊಮ್ಮೆ ಈ ಮೂರನೆಯ ಪಾದವನ್ನು ಹಾಡಿ ನಾಲ್ಕನೆಯದನ್ನು ಹಾಡುವುದು" ಎಂದು ಹೇಳಿದ ಮಾತು ಮನನೀಯವೆನಿಸಿದೆ. ೮೦೦ ವರ್ಷ ಬಳಿಕವೂ ಇಂದು ತ್ರಿಪದಿಯನ್ನು ಹೀಗೆಯೇ ಹಾಡುತ್ತಲಿರುವುದು ಗಮನಾರ್ಹವೇ ಸರಿ. ಇಲ್ಲಿಯೇ ಹೇಳಲಾದ ಚತುಷ್ಪದಿ, ಷಟ್ಪದಿ, ವಿಚಿತ್ರಾ ತ್ರಿಪದಿ, ಕಂದ ಲಕ್ಷಣಗಳು, ಇವುಗಳಿಗೆ ಉದಾಹರಣೆಯಾಗಿ ಕೊಟ್ಟ ಕನ್ನಡ ಪದ್ಯಗಳು ಕನ್ನಡ ಛಂದಸ್ಸಿನ ದೃಷ್ಟಿಯಿಂದ ತುಂಬ ಮಹತ್ವವೆನಿಸಿವೆ. "ತ್ರಿಪದಿ, ಷಟ್ಪದಿ, ಧವಲಗಳು ಸೂಡಕ್ರಮದಲ್ಲಿ ಹಾಡಲ್ಪಡುವ ಲೌಕಿಕ ಪ್ರಬಂಧಗಳಾಗಿವೆ. ಕಥೆಗಳಲ್ಲಿ ಷಟ್ಪದಿಯನ್ನು ಬಳಸಬೇಕು, ಮಹಾರಾಷ್ಟ್ರದಲ್ಲಿ ಕುಟ್ಟುವಾಗ ಹಾಡುವುದು ಓವಿ, ಕನ್ನಡ ಭಾಷೆಯಲ್ಲಿ ಷಟ್ಪದಿಯನ್ನು ಬಳಸಿ ಚಿತ್ರಕಥಕರು ಕಥಾಲಾಪ ಮಾಡುತ್ತಾರೆ" ಎಂದು ನೀಡುವ ವಿವರಗಳು ಅಪೂರ್ವವೆನಿಸಿವೆ. "ಕುಕ್ಕುಟ ವಿನೋದಾಧ್ಯಾಯ"ದಲ್ಲಿ ಗೆದ್ದವರು ಸೋತವರನ್ನು ಪರಿಹಾಸ್ಯಕ್ಕೆ ಗುರಿಪಡಿಸಲು ತ್ರಿಪದಿಯನ್ನು ಹಾಡಬೇಕೆಂದು ಸೂಚಿಸಲಾಗಿದೆ.

ಮಾನಸೋಲ್ಲಾಸಶಾಸ್ತ್ರ (೧-೧-೯ ಮತ್ತು ೫-೨೦-೧೩೭೩)ವೆಂದು ಇದನ್ನು ಕರೆಯಲಾಗಿದ್ದರೂ ಇದು ಅನೇಕ ವೇಳೆ ಕೇವಲ ತಾತ್ವಿಕ (Theoretical)ಆಗಿ ಉಳಿಯದೆ, ಆನ್ವಯಿಕ (Applied) ಆಗಿರುವುದೂ ಒಂದು ವಿಶೇಷತೆಯಾಗಿದೆ. ಕ್ರೀಡೆ, ವಿನೋದ, ಭೋಗಗಳೆಂಬ ಅಧ್ಯಾಯನಾಮಗಳೂ, 'ಉಲ್ಲಾಸ'ವೆಂಬ ಶಿರೋನಾಮಭಾಗವೂ ಇದರ ಆನ್ವಯಿಕತೆಯನ್ನು ಎತ್ತಿಹೇಳುತ್ತವೆ. ಹೀಗಾಗಿ ಇದು ಕೆಲವೊಮ್ಮೆ 'ಶಾಸ್ತ್ರ'ಕ್ಕೆ ಸೀಮಿತವಾಗಿ ಉಳಿಯದೆ 'ಆನ್ವಯಿಕ'ದ ವಿಸ್ತಾರವನ್ನು ಪಡೆಯುತ್ತದೆ.

ಸಾಮಾನ್ಯವಾಗಿ 'ಶಾಸ್ತ್ರ'ವೆನ್ನುವುದು ಮಾರ್ಗವಿಷಯನಿಷ್ಠವಾಗಿರುತ್ತದೆ. ಇಲ್ಲಿ ಈ ಮಾತಿಗೆ ವಿಪುಲ ಅವಕಾಶಕೊಟ್ಟಿದ್ದರೂ, ಅಲ್ಲಲ್ಲಿ ದೇಶೀ ಅಂಶಗಳನ್ನೂ ಅಳವಡಿಸಿಕೊಂಡಿರುವುದು ಗಮನಿಸಬೇಕಾದ ವಿಷಯವಾಗಿದೆ. ಗೀತವಿನೋದ, ನೃತ್ಯವಿನೋದಗಳಂಥ ಮಾರ್ಗೀಯ ವಿಷಯಗಳ ಜೊತೆ ಕುಕ್ಕಟ ವಿನೋದ, ಮೇಷ ವಿನೋದಗಳಿಗೂ ಅವಕಾಶ ಕಲ್ಪಿಸಿಕೊಡಲಾಗಿದೆ. ವಾದ್ಯ ವಿನೋದದಲ್ಲಿ ಬರುವ [illegible]ವುಗಳನ್ನು ಸೋಮೇಶ್ವರನು ಮಾರ್ಗ ದೇಶೀ ಕ್ರಮದಿಂದ ಹೇಳಿದ್ದಾನೆ' (ಪು. ೬೪೩) ಎಂಬ ಮಾತನ್ನು ಇಲ್ಲಿ ನೆನೆಯಬಹುದು.

ಇನ್ನೂ ಒಂದು ವಿಶೇಷವೆಂದರೆ ಸಾಧ್ಯವಿದ್ದಲ್ಲೆಲ್ಲ ದ್ರಾವಿಡ ಸಂಪ್ರದಾಯಕ್ಕೆ [illegible] ಕಲ್ಪಿಸಿಕೊಟ್ಟುದು. ಈ ಕೃತಿಯಲ್ಲಿ ಯಜ್ಞ ಮೊದಲಾದ ವಿಧಿಕರ್ಮಗಳ ಪ್ರಸ್ತಾಪವಿಲ್ಲ. ವೇದಕಾಲೀನ ದೇವತೆಗಳ ಪ್ರಸ್ತಾಪ ತೀರ ಅಪರೂಪ. ಇದಕ್ಕೆ ಬದಲು ದ್ರಾವಿಡ ಸಂಪ್ರದಾಯಕ್ಕೆ ಸಂಬಂಧಿಸಿದ ವಿಗ್ರಹ ನಿರ್ಮಾಣ, ದೇವಾಲಯ ನಿರ್ಮಾಣ ವಿಚಾರಗಳು ವಿಪುಲ ಪ್ರಮಾಣದಲ್ಲಿ ದಾಖಲಾಗಿವೆ. ಇಲ್ಲಿ ಬರುವ ವೈದ್ಯಕೀಯ ಕ್ರಮ ದ್ರಾವಿಡರ ಕಾಣಿಕೆಯಾಗಿರುವಂತಿದೆ. ಏಕೆಂದರೆ ಆಪಸ್ತಂಭಧರ್ಮ ಸೂತ್ರದ ಪ್ರಕಾರ ವೈದ್ಯಕೀಯವು ಶೂದ್ರರ ವೃತ್ತಿಯಾಗಿದೆ.

ಈ ಬಿಡಿ ವಿವರಗಳನ್ನಲ್ಲದೆ, ವಿದ್ವಾಂಸರು ಈ ಕೃತಿಯ ಬಗೆಗೆ ಆಡಿದ ಕೆಲವು ಮಾತುಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಸಂಗೀತಕ್ಕೆ ಸಂಬಂಧಪಟ್ಟ ಇಲ್ಲಿಯ ಶ್ಲೋಕ ಸಂಖ್ಯೆ ಸುಮಾರು [illegible] "ಸಂಗೀತದರ್ಪಣ - ಸ್ವರಮೇಳ ಕಳಾನಿಧಿ - ರಾಗವಿಬೋಧ ಮುಂತಾದ ಲಕ್ಷಣ ಗ್ರಂಥಗಳಿಗಿಂತ ಗಾತ್ರದಲ್ಲಿ ದೊಡ್ಡದಾಗಿದ್ದರೂ, ಉಲ್ಲಾಸ ವಿನೋದಗಳೇ ಪ್ರಧಾನ ಉದ್ದೇಶವಾಗಿರುವುದರಿಂದ, ಇದನ್ನು ಬೇರೊಂದು ದೃಷ್ಟಿಯಿಂದ ಅಧ್ಯಯನ ಮಾಡುವುದು ಅಗತ್ಯವಿದೆ".[೨]

"ಸುಮಾರು ನಾಲ್ಕನೆಯ ಶತಮಾನದ ಈ ಬೃಹತ್ ವಿಶ್ವಕೋಶ (ವಿಷ್ಣುಧರ್ಮೋತ್ತರ ಪುರಾಣ)ದ ನಂತರ ಜೀವನದ ಹಲವು ಮುಖಗಳ ಪರಿಚಯ ನೀಡುವ ಮಧ್ಯಕಾಲೀನ ಸಂಸ್ಕೃತ ಗ್ರಂಥವೆಂದರೆ.... ಅಭಿಲಷಿತಾರ್ಥ ಚಿಂತಾಮಣಿ",[೩] "ಸೋಮೇಶ್ವರನು ಭರತನ ಸಂಪ್ರದಾಯದ ಜೊತೆಗೆ ದೇಶಿನೃತ್ಯ ಮತ್ತು ಸಂಗೀತಕಲೆಯ ವಿಷಯದಲ್ಲಿ ಹೆಚ್ಚಿನ ಪ್ರಸ್ತಾಪ ಬೆಳೆಸಿರುವುದನ್ನು ಅವನ ಮಾನಸೋಲ್ಲಾಸದಲ್ಲಿ ಕಾಣಬಹುದು",[೪] "ನೃತ್ಯಕಲೆಯ ಬಗ್ಗೆ ಇರುವ ರಚನೆಗಳನ್ನು ಅವಲೋಕಿಸಿದಾಗ ಬಹುಶಃ ಸೋಮೇಶ್ವರನೇ ಕರ್ನಾಟಕದ ಮೊದಲ ಲಾಕ್ಷಣಿಕನಾಗಿದ್ದಾನೆ",[೫] "ವಿಷ್ಣು ಧರ್ಮೋತ್ತರದ ನಂತರ ಲಲಿತಕಲೆಗೆ ಸಂಬಂಧಿಸಿದ ಗ್ರಂಥಗಳಲ್ಲಿ ಮಾನಸೋಲ್ಲಾಸ ಬಹುಮುಖ್ಯವಾದದ್ದು".[೬]

"ಸದ್ಯಕ್ಕೆ ನಮಗೆ ಸಿಕ್ಕಿರುವ ಪ್ರಮಾಣಗಳನ್ನು ಅನುಸರಿಸಿ ಕಂಡಾಗ ಸೋಮೇಶ್ವರನ ಮಾನಸೋಲ್ಲಾಸವೇ ಮೊದಲಿಗೆ ನಾನಾವಾದ್ಯ ಭೇದಗಳ ನಿರ್ಮಾಣ ಮತ್ತು ವಾದನಗಳನ್ನು ವಿಶದವಾಗಿ ನೀಡುವ ಆಕರಗ್ರಂಥ".

- ವಿದ್ವಾಂಸರ ಈ ಮಾತುಗಳು ಮಾನಸೋಲ್ಲಾಸದ ಮಹತ್ವವನ್ನು ಸಾರುತ್ತವೆ. ಸ್ವತಃ ಸೋಮೇಶ್ವರನೇ "ಮಾನಸೋಲ್ಲಾಸಶಾಸ್ತ್ರಂ ವಿಶ್ವೋಪಕಾರಕಂ", "ಜಗದಾಚಾರ್ಯ ಪುಸ್ತಕಂ" ಎಂದು ಮೊದಲಾಗಿ ಹೇಳಿದ್ದಾನೆ. ಗ್ರಂಥದ ಕೊನೆಯಲ್ಲಿ ಹೇಳಿರುವ "ಈ ಶಾಸ್ತ್ರವನ್ನು ಕೇಳಿದವನಿಗೆ ಧರ್ಮದಲ್ಲಿ ಆಸಕ್ತಿಯೂ, ಅರ್ಥಶಾಸ್ತ್ರದಲ್ಲಿ ಕುಶಲತೆಯೂ, ರಾಜನೀತಿಯಲ್ಲಿ ವಿಚಕ್ಷಣತೆಯೂ ಉಂಟಾಗುವುದು.

ಸೇವೆ ಮಾಡುವುದರಲ್ಲಿ ದಕ್ಷತೆಯೂ, ಸಾಹಿತ್ಯದಲ್ಲಿ ನಿಪುಣತೆಯೂ, ತರ್ಕಗಳಲ್ಲಿ ಪಟುತ್ವವೂ, ಛಂದಸ್ಸು ಮತ್ತು ಅಲಂಕಾರಗಳ ಜ್ಞಾನವೂ, ಶಾಸ್ತ್ರವಿದ್ಯೆಯಲ್ಲಿ ಜಾಣ್ಮೆಯೂ, ಆನೆ - ಕುದುರೆಗಳ ಸವಾರಿಯಲ್ಲಿ ಚಾತುರ್ಯವೂ, ಮಲ್ಲವಿದ್ಯೆಯಲ್ಲಿ ವಿಶೇಷಜ್ಞಾನವೂ, ಯುದ್ಧದಲ್ಲಿ ತಿಳಿವೂ, ಸಂಗೀತ ವಿದ್ಯೆಯಲ್ಲಿ ನೈಪುಣ್ಯವೂ ಉಂಟಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಮಾನಸೋಲ್ಲಾಸ ಎಂಬ ಈ ಶಾಸ್ತ್ರವು ಕಾಮಧೇನು. ಎಲ್ಲ ವಿಷಯಗಳನ್ನು ತಿಳಿಸಿಕೊಡುವುದರಲ್ಲಿ ಇದಕ್ಕೆ ಸಮನಾದ ಇನ್ನೊಂದು ಶಾಸ್ತ್ರ (ಗ್ರಂಥ) ಇಲ್ಲ. (ಇದನ್ನು ಓದುವುದರಿಂದ) ಬ್ರಾಹ್ಮಣನು ಜ್ಞಾನವನ್ನೂ, ಕ್ಷತ್ರಿಯನು ರಾಜ್ಯವನ್ನೂ, ವೈಶ್ಯನು ಐಶ್ವರ್ಯವನ್ನೂ, ಶೂದ್ರರು ಉತ್ತಮ ವೃತ್ತಿಯನ್ನೂ ಪಡೆಯುವರು" ಎಂಬ ಮಾತುಗಳು ಮನನೀಯವಾಗಿವೆ.

ಪ್ರಭಾವ ಪರಂಪರೆ

"ಜಗದಾಚಾರ್ಯ ಪುಸ್ತಕ"ವೆಂದು (I - ೧೦) ಸುವಿಖ್ಯಾತವಾದ ಮಾನಸೋಲ್ಲಾಸ ಉತ್ತರಕಾಲೀನ ಅನೇಕ ಗ್ರಂಥಗಳ ಮೇಲೆ ಪ್ರಭಾವ ಬೀರಿದೆ. "ಶಾರದಾತನಯನ ಭಾವ ಪ್ರಕಾಶ"ದಲ್ಲಿ ಕಂಡುಬರುವ ಸೋಮೇಶ್ವರನೂ, 'ಸಂಗೀತ ರತ್ನಾಕರ'ದ ವ್ಯಾಖ್ಯಾನಕಾರನಾದ ಸಿಂಹಭೂಪಾಲ ಮತ್ತು ಸಂಗೀತ ಸಮಯಸಾರದ ಕರ್ತೃ ಪಾರ್ಶ್ವದೇವ ಆದರದಿಂದ ಸ್ಮರಿಸುವ ಸೋಮೇಶ್ವರನೂ, ಮಾನಸೋಲ್ಲಾಸಕಾರನೂ ಒಬ್ಬನೇ ಇರಬಹುದೆನ್ನುವುದಕ್ಕೆ ಸಾಕಷ್ಟು ಆಧಾರವಿದೆ.... ನೃರತ್ನಾವಲಿಯನ್ನು ರಚಿಸಿದ ಜಾಯಪ ಸೇನಾನಿಯು ಉದ್ಧರಿಸಿರುವ ನೃತ್ಯವಿನೋದದ ಭಾಗಗಳೂ ಪ್ರಶಂಸಾಪರವಾದ ವಾಕ್ಯಗಳೂ ಸೋಮೇಶ್ವರನ.... ಲಕ್ಷಣಶಾಸ್ತ್ರಜ್ಞತೆಯನ್ನು ಸಾರುತ್ತದೆ. ದೇವಗಿರಿ ಯಾದವ ಸಿಂಘಣನ ಆಸ್ಥಾನ ವಾಗ್ಗೇಯಕಾರನಾದ ಶಾಂರ್ಙದೈವನು ತನ್ನ ಸಂಗೀತರತ್ನಾಕರದಲ್ಲಿ ಸೋಮೇಶ್ವರನನ್ನು ಸ್ಮರಿಸಿದುದು ಗಮನಾರ್ಹವೆನಿಸಿದೆ. ಕೆಳದಿ ಬಸವ ಭೂಪಾಲನ "ಶಿವತತ್ವರತ್ನಾಕರ"ದ ಮೇಲೆ ಇದು ಬೀರಿರುವ ದಟ್ಟಪ್ರಭಾವ ಸುವೇದ್ಯವೇ ಆಗಿದೆ.

ಹೀಗೆ ಉದ್ದಕ್ಕೂ ಪ್ರಭಾವ ಬೀರುತ್ತ ಬಂದ ಈ ಗ್ರಂಥ ಬರೋಡಾ ಗಾಯಕವಾಡ ಸೀರಿಜ ಮೂಲಕ ಇಡಿಯಾಗಿ, ಮೈಸೂರಿನ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಮೂಲಕ ಭಾಗಶಃ ಪ್ರಕಟವಾಗುವ ಮೂಲಕ ಆಧುನಿಕ ಕಾಲದಲ್ಲಿಯೂ ತನ್ನ ಮಹತ್ವವನ್ನು ತೋರಿಸಿಕೊಟ್ಟಿದೆಯೆಂದೇ ಹೇಳಬೇಕು. ಡಾ. ಶಿವಶಂಕರ ಮಿಶ್ರಾ ಅವರು ಈ ಕೃತಿಯ ಸಮಗ್ರ ಅಧ್ಯಯನ ನಡೆಸಿ ಇಂಗ್ಲಿಷ್ (Fine Arts and Technical Sciences in Ancient India) ಮತ್ತು ಹಿಂದಿ (Somesvara's Manasollasa: A Cultural Study) ಭಾಷೆಗಳಲ್ಲಿ ಎರಡು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಡಾ. ಡಿ. ಎಲ್. ಎನ್. ಮತ್ತು ಡಾ. ಎಂ. ಎಂ. ಕಲಬುರ್ಗಿ ಅವರು ಇಲ್ಲಿಯ ಕನ್ನಡ ಛಂದಸ್ಸನ್ನು ಕುರಿತು ಲೇಖನಗಳನ್ನು ಬರೆದಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಎಂ. ಎನ್. ಜೋಶಿ ಅವರು "The treatment of secular Arts and Science in Somesvra]s Manasollasa (unpublished)" ಹೆಸರಿನ ಪಿಎಚ್. ಡಿ. ಅಧ್ಯಯನ ಪೂರೈಸಿದ್ದಾರೆ. ಈಗ ನಮ್ಮ ಮೂಲಕ ಸಮಗ್ರಕೃತಿ ಕನ್ನಡಾನುವಾದ ರೂಪದಲ್ಲಿ ಪ್ರಕಟವಾಗುತ್ತಲಿದೆ. ಪರಿಷ್ಕರಣ ಮಾನಸೋಲ್ಲಾಸ ಈವರೆಗೆ ಎರಡು ಸಲ ಪ್ರಕಟವಾಗಿದೆ.

೧. ಮಾನಸೋಲ್ಲಾಸ : ಭಾಗ ೧ ಮತ್ತು ೨. ಸಂ : ಶ್ರೀ ಗಜಾನನ ಗೋಂಡೇಕರ
ಪ್ರ : ಗಾಯಕವಾಡ ಸಂಶೋಧನ ಸಂಸ್ಥೆ, ಬಡೋದೆ.
೨. ಅಭಿಲಷಿತಾರ್ಥ ಚಿಂತಾಮಣಿ : ಭಾಗ ೧ ಸಂ : ಆರ್. ಶಾಮಾಶಾಸ್ತ್ರಿ,
ಪ್ರ : ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು.

ಹೀಗೆ ಎರಡು ಸಲ ಪ್ರಕಟವಾದರೂ ಇದರ ಶುದ್ಧಪಾಠ ಇನ್ನೂ ನಮ್ಮ ಕೈಗೆ ಇಳಿದುಬಂದಿಲ್ಲ. ಮೇಲಾಗಿ ಮುದ್ರಣ ದೋಷಗಳೂ ನುಸುಳಿವೆ. ಇದರಿಂದಾಗಿ ಈ ಕೃತಿಯ ಗಾಯಕವಾಡ ಸೀರೀಜ ಆವೃತ್ತಿಯ ಅನುವಾದ ಸಂದರ್ಭದಲ್ಲಿ ಅನೇಕ ಸಮಸ್ಯೆಗಳನ್ನು ನಾವು ಎದುರಿಸಬೇಕಾಯಿತು.

ನಾಲ್ಕನೆಯ ವಿಂಶತಿಯಲ್ಲಿ ಪದ್ಯಸಂಖ್ಯೆ ೩೦೦ಕ್ಕೆ ಬದಲು ೧೦೦ ಅಚ್ಚಾಗಿ, ೧೦೧, ೧೦೨.... ಹೀಗೆ ಮುಂದುವರಿದಿದೆ. ನಾವು ೩೦೧, ೩೦೨... ಹೀಗೆ ತಿದ್ದಿಕೊಂಡಿದ್ದೇವೆ. ಇಲ್ಲಿಯೇ ೪೦೦ಕ್ಕೆ ಬದಲು ೨೦೦ ಎಂದು ಅಚ್ಚಾಗಿ ೨೪೯ರ ವರೆಗೆ ಮುಂದುವರಿದಿದ್ದು, ನಾವು ಈ ತಪ್ಪನ್ನೂ ತಿದ್ದಿಕೊಂಡಿದ್ದೇವೆ. ಅಂದರೆ ೪೦೦, ೪೦೧... ಹೀಗೆ ಮುಂದುವರಿಸಿದ್ದೇವೆ. ಇದೇ ವಿಂಶತಿಯಲ್ಲಿ ೧೫ನೆಯ ಅಧ್ಯಾಯದ ಕೊನೆಯ ಶ್ಲೋಕದ ಸಂಖ್ಯೆ ೧೭೨೫. ಹೀಗಾಗಿ ೧೬ನೆಯ ಅಧ್ಯಾಯದ ಮೊದಲ ಶ್ಲೋಕ ಸಂಖ್ಯೆ ೧೭೨೬ರಿಂದ ಮುಂದುವರಿಯಬೇಕಿತ್ತು ಇದರ ಬದಲು ೧ರಿಂದ ಮುಂದುವರಿದಿದೆ. ಮುದ್ರಿತ ಪ್ರತಿಗೆ ಬದ್ಧವಾಗಿರಬೇಕೆಂದು ನಾವೂ ೧ರಿಂದಲೇ ಸಂಖ್ಯೆ ಸೂಚಿಸುತ್ತ ಹೋಗಿದ್ದೇವೆ. ಈ ಚತುರ್ಥ ವಿಂಶತಿಯ ಅಧಆಯ ೧ - ೧೫ರ ವರೆಗೆ ೧೭೨೫ ಶ್ಲೋಕ, ಅಧ್ಯಾಯ ೧೬ - ೨೦ರ ವರೆಗೆ ೧೪೯ ಶ್ಲೋಕಗಳಿವೆ. ಹೀಗಾಗಿ ಇಲ್ಲಿಯ ೨೦ನೆಯ ಅಧ್ಯಾಯದ ಕೊನೆಯ ಅಡಿ ಟಿಪ್ಪಣಿಯಲ್ಲಿ ಈ ವಿಂಶತಿಯಲ್ಲಿ ಒಟ್ಟು ೩೨೧೯ ಶ್ಲೋಕಗಳಿವೆಯೆಂಬ ಸ್ಪಷ್ಟೀಕರಣ ನೀಡಿದ್ದೇವೆ. ಈ ತಿದ್ದುಪಡಿಗಳಿಗಾಗಿ ಅಲ್ಲಲ್ಲಿಯ ಅಡಿಟಿಪ್ಪಣಿಗಳನ್ನು ನೋಡಬಹುದು.

ಕೆಲವೊಮ್ಮೆ ಅಡಿಟಿಪ್ಪಣಿ ಸರಿಯಿದ್ದರೆ ಅದನ್ನೇ ಸ್ವೀಕರಿಸಿದ್ದೇವೆ (೪ - ೧೬ - ೩೭೯). ಪಾಠ ಗೊಂದಲಕ್ಕೆ ಸ್ಪಷ್ಟೀಕರಣವನ್ನೂ ಕೊಟ್ಟಿದ್ದೇವೆ. (೪ - ೧೬ - ೩೭೧). ಎಲ್ಲಿಯೋ ಸೇರಿಕೊಂಡಿದ್ದ ಉದಾಹರಣೆಯನ್ನು ಸೂಕ್ತ ಸ್ಥಳಕ್ಕೆ ವರ್ಗಾಯಿಸಿಕೊಂಡಿದ್ದೇವೆ. (೪ - ೧೬ - ೩೭೧ ಉದಾಹರಣೆ). ಇಂಥ ಅನೇಕ ಬಗೆಯ ದೋಷಗಳನ್ನು ತಿದ್ದಿಕೊಂಡಿದ್ದೇವೆ. ಇವುಗಳಿಗಾಗಿಯೂ ಅಡಿಟಿಪ್ಪಣಿಗಳನ್ನು ಅವಲೋಕಿಸಬಹುದು.

ಇನ್ನೊಂದು ಮುಖ್ಯಪ್ರಯತ್ನವೆಂದರೆ ಪಾಠ ಪರಿಷ್ಕರಣ. ಅಲ್ಲಲ್ಲಿ ಉದ್ದಕ್ಕೂ ಮೇಲಿನ ಪಾಠವನ್ನು ಕೈಬಿಟ್ಟು, ಅಡಿಯಲ್ಲಿಯ ಉತ್ತಮ ಪಾಠವನ್ನು ಸ್ವೀಕರಿಸಲಾಗಿದೆ. ಇದಕ್ಕೆ ಪಂಚಮ ವಿಂಶತಿಯ ೧ - ೧೦ ವರೆಗಿನ ಅಧ್ಯಾಯಗಳ ಅಡಿಟಿಪ್ಪಣಿ ನೋಡಬಹುದು. ಕೆಲವೊಮ್ಮೆ ಅಡಿಯಲ್ಲಿಯ ಪಠ್ಯವೂ ಅಪ್ರಯೋಜಕವೆನಿಸಿದಾಗ ಸರಿಯಾದ ಪಾಠವನ್ನು ಊಹಿಸಲಾಗಿದೆ. ಉದಾ : ಅರ್ಧ ಕಪೋಲಿಕ - ಆರ್ದ್ರ ಕಪೋಲೀಕ (ಪು. ೪೪೧), ಸಮಾನಂ - ಸನೂನಂ (ಪು. ೫೦೧), ಸಮದಂತಾಂ - ಸಮದಂಡಾಂ (ಪು. ೪೦೫). ಇಂಥ ನೂರಾರು ಪಾಠಪರಿಷ್ಕರಣಗಳನ್ನು ಇಲ್ಲಿ ಕಾಣಬಹುದು. ಈ ಬಗೆಯ ಎಚ್ಚರದಿಂದಾಗಿ ಮುದ್ರಿತ ಪ್ರತಿಯ ಪರಿಷ್ಕರಣ ಕಾರ್ಯವನ್ನೂ ಮಾಡಿದ ಶ್ರೇಯಸ್ಸು ಈ ಅನುವಾದ ಆವೃತ್ತಿಗೆ ಸಲ್ಲುತ್ತದೆ.ಅನುವಾದ ಭಾಷೆಗಳು ಸಂಸ್ಕೃತಿಯ ನಡುವೆ ಗೋಡೆಕಟ್ಟಿದರೆ, ಭಾಷಾಂತರ ಆ ಗೋಡೆಗಳನ್ನು

ಒಡೆದುಹಾಕುತ್ತದೆ. ವಿಶ್ವವಿದ್ಯೆಯ ಮುಕ್ತಸಂವಹನಕ್ಕೆ ದಾರಿ ಮಾಡಿಕೊಡುತ್ತದೆ. ಈ ಆದರ್ಶದಲ್ಲಿ ಮಾನಸೋಲ್ಲಾಸದ ಅನುವಾದ ಯೋಜನೆಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತಲೇ (ಜುಲೈ ೧೯೯೪) ಮೊದಲು ಈ ಕೃತಿಯಲ್ಲಿ ಅಡಕವಾಗಿರುವ ವಿಷಯ ವೈವಿಧ್ಯವನ್ನು ಬಿಡಿಸಿ ನೋಡಲಾಯಿತು. ಬಳಿಕ ಇಲ್ಲಿಯ ಒಂದೊಂದು ವಿಷಯದಲ್ಲಿ ತಜ್ಞತೆಯುಳ್ಳ, ಕನ್ನಡ ಸಂಸ್ಕೃತ ಉಭಯ ಭಾಷೆಗಳಲ್ಲಿ ಬಲ್ಲಿದರಾದ ಮತ್ತು ಭಾಷಾಂತರ ಕ್ರಿಯೆಯಲ್ಲಿ ಪಳಗಿದ ೧೨ ಜನ ವಿದ್ವಾಂಸರಿಗೆ ಇದರ ಅನುವಾದ ಕಾರ್ಯವನ್ನು ವಹಿಸಿಕೊಡಲಾಯಿತು. ಕಾರ್ಯಸ್ವರೂಪ ಕಾರ್ಯಾಚರಣೆ ಇತ್ಯಾದಿ ದೃಷ್ಟಿಯಿಂದ ಇವರೆಲ್ಲರ ಸ್ತೋಮಕಾರ್ಯವನ್ನು ಒಂದು ಕ್ರಮದಲ್ಲಿ ಮುನ್ನಡೆಸಿಕೊಂಡು ಹೋದ ಪ್ರಧಾನ ಸಂಪಾದಕರು, ಎಲ್ಲರಿಂದ ಬಂದ ಅನುವಾದಗಳನ್ನು ಉದ್ದಕ್ಕೂ ಪರಿಶೀಲಿಸಿ, ಪರಿಷ್ಕರಿಸಿ, ಅವಶ್ಯವೆನಿಸಿದಲ್ಲಿ ಅವರೊಂದಿಗೆ ಚರ್ಚಿಸಿ, ಇದಕ್ಕೆ ಭಾಷೆ ತಂತ್ರದೃಷ್ಟಿಯಿಂದ ಏಕರೂಪತೆ ಬರುವಂತೆ ಪ್ರಯತ್ನಿಸಿದ್ದಾರೆ. ಇಲ್ಲಿ ಪ್ರತಿಯೊಂದು ಶ್ಲೋಕದ ಅನುವಾದ ಸಮಗ್ರ, ಸುಲಲಿತವಾಗುವಂತೆ ನೋಡಿಕೊಳ್ಳಲಾಗಿದೆ. ಉದಾ :

ಭವವೆಂಬ ಬಳ್ಳಿಗೆ ಬೀಜಸ್ವರೂಪನೂ, ಲಿಂಗರೂಪಿಯೂ ಆದ ಮಹೇಶ್ವರನಿಗೆ ವಂದಿಸುತ್ತೇನೆ. ಅವನು ಅವ್ಯಕ್ತನಾದರೂ ಸುವ್ಯಕ್ತನು, ಸಚರಾಚರವೆಲ್ಲ ಅವನಲ್ಲಿ ಅಡಗಿದೆ.

ಸತ್ಯವನ್ನು ನುಡಿಯಬೇಕು. ಪ್ರಿಯವಾದುದನ್ನು, ಹಿತವಾದುದನ್ನು ನುಡಿಯಬೇಕು. ಅಪ್ರಿಯವಾದ ಹಿತವಚನವನ್ನು ನುಡಿಯಬಾರದು. ಪ್ರಿಯವಾಗಿದೆಯೆಂದು ಅನೃತವನ್ನೂ ಹೇಳಬಾರದು. ಇದು ಸನಾತನ ಧರ್ಮದ ಆಜ್ಞೆಯಾಗಿದೆ.

ಕೂಪ (ಸೇದುವ ಬಾವಿ) ದ್ವಾರಹೀನವಾಗುತ್ತದೆ. ವಾಪಿಕೆಗೆ (ಹೊಕ್ಕು ತುಂಬುವ ಬಾವಿ) ಒಂದು ಬಾಗಿಲಿರಬೇಕು. ಪುಷ್ಕರಣಿಗೆ (ಹೊಂಡ) ಅನೇಕ ಪ್ರವೇಶ ದ್ವಾರಗಳಿರುತ್ತವೆ. ದೀರ್ಘಿಕೆಯು (ಕೆರೆ) ದೀರ್ಘವಾದ ಆಕಾರವುಳ್ಳದಾಗಿರುತ್ತದೆ.

ಎಲ್ಲ ಸಂದರ್ಭಗಳಲ್ಲಿ ಈ ಉತ್ತಮಿಕೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದ್ದೇವೆ. ಹೀಗಿದ್ದೂ ಅಲ್ಲಲ್ಲಿ ಉಳಿದಿರಬಹುದಾದ ದೋಷಗಳನ್ನು ಕ್ಷಮಿಸಬೇಕೆಂದು ಕೋರುತ್ತೇವೆ.

ಕೃತಜ್ಞತೆ

ಮಹಾಯಜ್ಞ ಸ್ವರೂಪದ ಇಂಥ ಯೋಜನೆಗೆ ಅನೇಕರ ನೆರವು ಅಗತ್ಯ. ಈ ನೆರವನ್ನು ಪಡೆದ ಭಾಗ್ಯ ನನ್ನದಾಗಿದೆ. ಈ ಯೋಜನೆಗೆ ಎರಡು ಲಕ್ಷ ರೂಪಾಯಿಗಳ ಅನುದಾನಕ್ಕೆ ಅಸ್ತು ಹೇಳಿದವರು ಕುಲಪತಿ ಡಾ. ಎಸ್. ರಾಮೇಗೌಡ ಅವರು. ಈ ಕಾರ್ಯ ಮುಂದುವರಿಯುವಂತೆ ಪ್ರೋತ್ಸಾಹಿಸಿದವರು ಇಂದಿನ ಕುಲಪತಿ ಡಾ. ಎಂ. ಎಂ. ಪಠಾನ ಅವರು. ಕಾರ್ಯದರ್ಶಿಗಳಾಗಿ ನಿರಂತರ ನೆರವಾದವರು ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎಚ್. ವಿ. ನಾಗೇಶ್ ಅವರು. ಸದಸ್ಯರಾಗಿ ಸಹಕರಿಸಿದವರು ಡಾ. ಅ. ಸುಂದರ, ಡಾ. ಮಲ್ಲಿಕಾರ್ಜುನ ಪರಡ್ಡಿ, ಡಾ. ಎಂ. ಎನ್. ಜೋಶಿ ಅವರು. ಅನುವಾದದ ಹೊಣೆಹೊತ್ತವರು ಡಾ. ಶೇಷ ನವರತ್ನ (ಕೂಡ್ಲಿಗಿ), ಡಾ. ಎನ್. ಎಸ್. ರಾಮಚಂದ್ರ (ಮೈಸೂರು), ಶ್ರೀ ಎನ್. ಎಸ್. ಕೃಷ್ಣಜೋಯಿಸ (ಮೈಸೂರು), ಶ್ರೀ ಎಚ್. ಎಸ್. ಪಾಠಕ (ಮೈಸೂರು), ಡಾ. ಮಲ್ಲಿಕಾರ್ಜುನ ಪರಡ್ಡಿ (ಧಾರವಾಡ), ಶ್ರೀ ಎಚ್. ವಿ. ನಾಗರಾಜರಾವ್ (ಮೈಸೂರು), ಡಾ.

ಚಂದ್ರಮೌಳಿ ನಾಯ್ಕರ (ಧಾರವಾಡ), ಶ್ರೀಮತಿ ಟಿ. ಎಸ್. ಸತ್ಯವತಿ (ಬೆಂಗಳೂರು), ಶ್ರೀಮತಿ ಚೂಡಾಮಣಿ ನಂದಗೋಪಾಲ (ಬೆಂಗಳೂರು), ಶ್ರೀ ಆರ್. ಗಣೇಶ (ಬೆಂಗಳೂರು), ಶ್ರೀ ಟಿ. ವಿ. ಸತ್ಯನಾರಾಯಣ (ಮೈಸೂರು) ಮತ್ತು ಶ್ರೀ ಎಂ. ಎನ್. ಜೋಶಿ (ಧಾರವಾಡ). ಇವರೆಲ್ಲರಿಗೆ ಹೃತ್ಪೂರ್ವಕ ವಂದನೆಗಳು. ಚತುರ್ಥ ವಿಂಶತಿಯ ೫ ರಿಂದ ೧೫ರ ವರೆಗಿನ ಅಧ್ಯಾಯ, ಪಂಚಮ ವಿಂಶತಿಯ ೧೧ ರಿಂದ ೨೦ರ ವರೆಗಿನ ಅಧ್ಯಾಯಗಳ ಅನುವಾದ ಕಾರ್ಯದಲ್ಲಿ ಹೆಚ್ಚುವರಿ ಶ್ರಮಿಸಿದ ಶ್ರೀ ಎಚ್. ವಿ. ನಾಗರಾಜರಾವ್ ಅವರ ವಿದ್ವತ್ತಿನ ನೆರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಅಚ್ಚಿನ ಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸಿದ ವಿಶ್ವವಿದ್ಯಾಲಯ ಮುದ್ರಣ ವಿಭಾಗದ ನಿರ್ದೇಶಕರಾದ ಡಾ. ಎ. ಮುರಿಗೆಪ್ಪ ಅವರ ಉಪಕಾರವನ್ನು ಸ್ಮರಿಸುತ್ತೇನೆ. ಕರಡಚ್ಚು ಸಿದ್ಧಪಡಿಸಿಕೊಡುವಲ್ಲಿ ಪ್ರೀತಿಯಿಂದ ಸಹಕರಿಸಿದ ಶ್ರೀ ಟಿ. ಜಿ. ಹೊಂಗಲ ಅವರ ನೆರವನ್ನು, ಪ್ರೂಫ್ ನೋಡುವಲ್ಲಿ ಶ್ರಮಿಸಿದ ಶ್ರೀಮತಿ ಲಲಿತಾ ಗೌಳಿ ಅವರ ಸಹಾಯವನ್ನು ನೆನೆಯುತ್ತೇನೆ. ಹೀಗೆ ಅನೇಕರ ಸಹಕಾರದಲ್ಲಿ ಸಂಸ್ಕೃತದಿಂದ ಕನ್ನಡಕ್ಕೆ ಅವತಾರಗೊಂಡ ಈ ಕೃತಿಯನ್ನು ನನ್ನ ಪ್ರೀತಿಯ ಕನ್ನಡಿಗರ ಕೈಗೆ ನೀಡುತ್ತಿದ್ದೇನೆ.

೨೫ ಜೂನ್ ೧೯೯೮ — ಎಂ. ಎಂ. ಕಲಬುರ್ಗಿ

---

೧. ಶಬ್ದಮಣಿದರ್ಪಣ ಡಿ. ಎನ್. ಎಲ್. ಸೂತ್ರ ೨೧೫ರ ಉದಾಹರಣೆ ನೋಡಿರಿ.
೨. ಮಾನಸೋಲ್ಲಾಸ ಪರಿಚಯ ಪು. ೧೦೨.
೩. ಮಾನಸೋಲ್ಲಾಸ ಪರಿಚಯ ಪು. ೧೧೪.
೪. ಮಾನಸೋಲ್ಲಾಸ ಪರಿಚಯ. ಪು. ೧೧೫
೫. ಮಾನಸೋಲ್ಲಾಸ ಪರಿಚಯ. ಪು. ೧೧೫
೬. ಮಾನಸೋಲ್ಲಾಸ ಪರಿಚಯ. ಪು. ೧೨೦.

ಆಕರ : ಮಾರ್ಗ ಸಂಪುಟ–೫

■■

೩೪೧

ನಾಟ್ಯಭೂಷಣ

೧೯೯೮

ಆಧುನಿಕ ರಂಗಭೂಮಿಯ ಸಂದರ್ಭದಲ್ಲಿ ಏಣಗಿ ಬಾಳಪ್ಪನವರು ಎರಡನೆಯ ತಲೆಮಾರಿನ ಪ್ರತಿಭಾವಂತ ಕಲಾವಿದರು. ನಟರಾಗಿ, ನಾಟಕ ಕಂಪನಿಯ ಒಡೆಯರಾಗಿ ಆದರು ನಡೆದುಬಂದ ಬಣ್ಣದ ಬದುಕಿನ ದಾರಿ ದೀರ್ಘವಾಗಿದೆ, ಐದು ದಶಕಗಳನ್ನೂ ಮೀರಿ ವ್ಯಾಪಿಸಿದೆ. ಹೇಮರಡ್ಡಿ ಮಲ್ಲಮ್ಮ,

ಭೌಗೋಳಿಕ, ಸಾಮಾಜಿಕ ಅಂಶಗಳನ್ನು ಸಂಗ್ರಹಿಸಿಕೊಟ್ಟಿದೆ. ತೀರ್ಥಸ್ನಾನಾಧ್ಯಾಯದಲ್ಲಿ ಗಂಗೆ, ನರ್ಮದೆ ಮೊದಲಾದ ಭಾರತದ ಪ್ರಸಿದ್ಧ ನದಿಗಳನ್ನು ಹೇಳುತ್ತ, ಕರ್ನಾಟಕದ ಮಾಂಜರಾ, ಭೀಮಾ, ಕೃಷ್ಣಾ, ಮಲಪ್ರಭಾ ನದಿಗಳನ್ನು ಸೂಚಿಸಲಾಗಿದೆ. ಯೋಗಿನೀ ಪೀಠಗಳಲ್ಲಿ ಮೊದಲನೆಯದು ಜಲಾಂದರ, ಎರಡನೆಯದು ಕಾಮರೂಪಕ, ಮೂರನೆಯದು ಉಡ್ಡಿಯಾಣ, ನಾಲ್ಕನೆಯದು [illegible] ಎಂದು ಹೇಳುತ್ತ, [illegible] ಸೂಚಿಸಿ, ಕರಹಾಟ, ಪಿಠಾಟಪುರ, ಪೂರ್ಣಗಿರಿ, [illegible], ಮುಕೋಟಕ, ಶಂಭುಶಿಖರ, ವಿಂಧ್ಯಾ, ಚಿತ್ರಕೂಟ, ಏಕಾಮ್ರಕ, ಮಹಾಚೀನ, ಪ್ರಯಾಗ, ಮಲಯ, ಕೋಲಾರಪುರ ಮೊದಲಾದ ಯೋಗಿನೀ ಕ್ಷೇತ್ರಗಳನ್ನು ಹೆಸರಿಸುತ್ತಿರುವುದು, ಆ ಕಾಲದ ಪ್ರಸಿದ್ಧ ಕ್ಷೇತ್ರಗಳ ವಿವರಣೆಯೇ ಆಗಿದೆ. ವಸ್ತ್ರೋಪಭೋಗ ಪ್ರಕರಣದಲ್ಲಿ ಪ್ರೋದ್ದಾಲಪುರ, ಚೀರಪಲ್ಲಿ, ನಾಗಪಟ್ಟಣ, ಚೋಲದೇಶ, ಅಲ್ಲಿಕಾರ್ಕುಲ. ಸಿಂಹಳ, ಅಣಿಲಾವಾಡ, ಮೂಲಸ್ಥಾನ, ತೋಂಡೀದೇಶ, ಪಚ್ಚಪಟ್ಟಣ, ಮಹಾಚೀನ, ಕಲಿಂಗ, ವಂಗಗಳಲ್ಲಿ ಸಿದ್ಧವಾದ ಬಟ್ಟೆಗಳು ರಾಜಯೋಗ್ಯವೆಂದು ಹೇಳಲಾಗಿದೆ. ಇಲ್ಲಿಯ ಚೀರಪಲ್ಲಿಯು ಇಂದಿನ ತಮಿಳುನಾಡಿನ ತಿರುಚೀರಪಲ್ಲಿ (ತಿರುಚನಾಪಳ್ಳಿ)ಯೇ ಆಗಿದ್ದು, ಇದು ಇಂದಿಗೂ ಬಟ್ಟೆಗಳಿಗಾಗಿ ಪ್ರಸಿದ್ಧಿ ಹೊಂದಿದೆ. ತಾಂಬೂಲಭೋಗ ಪ್ರಕರಣದಲ್ಲಿ ರಾಜನಾದವನು ನೈಲವರ್ತಿಕಾಪುರ, ಈಶ್ವರಪುರ, ಕಂಡಿಕಾಪುರಗಳಲ್ಲಿ ಬೆಳೆಯುವ ಅಡಿಕೆಯನ್ನು ತಿನ್ನಬೇಕೆಂದು ಹೇಳಲಾಗಿದೆ. ಇಲ್ಲಿಯ ನೈಲವರ್ತಿಕಾಪುರದ ಅಡಿಕೆಯೆನ್ನುವುದು ವಡ್ಡಾರಾಧನೆಯಲ್ಲಿ ಹೇಳಿರುವ ನೆಲವತ್ತಿ ಅಡಿಕೆಯೇ ಆಗಿದೆ. ಇದು ಶಿವಮೊಗ್ಗ ಜಿಲ್ಲೆಯ ನ್ಯಾಮತಿ ಗ್ರಾಮವೆಂದು ಇತ್ತೀಚೆ ತಿಳಿದುಬಂದಿದೆ. ಇದರಿಂದ ಇಂದಿನ ನ್ಯಾಮತಿಯ ಅಡಿಕೆ ಮಾನಸೋಲ್ಲಾಸದಷ್ಟು, ಏಕೆ ವಡ್ಡಾರಾಧನೆಯಷ್ಟು ಪ್ರಾಚೀನ ಕಾಲದಲ್ಲಿಯೂ ಪ್ರಸಿದ್ಧಿ ಹೊಂದಿದ್ದಿತೆಂದು ಸ್ಪಷ್ಟವಾಗುತ್ತದೆ.

ಸಾಮಾಜಿಕ ವಿಷಯ ಸಂದರ್ಭಗಳಲ್ಲಿಯೂ ಕೆಲವೊಮ್ಮೆ ಆ ಕಾಲದ ಅಂಶಗಳನ್ನು ಗುರುತಿಸಲಾಗಿದೆ. ಸ್ತ್ರೀ ಆಭರಣಗಳಲ್ಲಿ ಒಂದಾದ ಸರಿಗೆ (ಸರಿಕೆ) ಎನ್ನುವುದು ಈಗಲೂ ಹಳ್ಳಿಗಳಲ್ಲಿ ಬಳಕೆಯಾಗುತ್ತಲಿದೆ. ಐದು, ಏಳು ಇಲ್ಲವೆ ಒಂಬತ್ತು ಲೋಹದ ಕಾಲುಗಳಿಂದ ಕೂಡಿರುವ, ಲೋಹದ ತಗಡಿನಿಂದ ಮಾಡಿದ ಹಾಗೂ ಮೇಲೆ ಲೋಹ ಜಾಲಕ (ಜಾಳಿಗೆ)ಗಳಿಂದ ಕೂಡಿರುವ, ಅರಳೆಯಿಂದ ತುಂಬಿಕೊಂಡು ಹೊದಿಕೆ ವಸ್ತ್ರದಿಂದ ಆವೃತವಾಗಿರುವ, ಚೆನ್ನಾಗಿ ಜೋಡಿಸಲ್ಪಟ್ಟ ಆಸನಕ್ಕೆ "ಲೋಹಾಸನ"ವೆಂದು ಇಲ್ಲಿ ಸೂಚಿಸಲಾಗಿದೆ. ಈ ಆಸನದ ಉಲ್ಲೇಖ ಪಂಪಭಾರತದಲ್ಲಿ ಎರಡು ಸಲ ಬರುತ್ತಿದ್ದು, ಮಾನಸೋಲ್ಲಾಸದ ಈ ವಿವರ ಆ ಆಸನದ ಬಗೆಗಿನ ನಮ್ಮ ತಿಳಿವಳಿಕೆಯನ್ನು ವಿಸ್ತಾರಗೊಳಿಸುತ್ತದೆ.

ನೃತ್ಯ ವಿನೋದಾಧ್ಯಾದಲ್ಲಿ ನಟರನ್ನು ನಟ, ನರ್ತಕ, ನರ್ತಕಿ, ವೈತಾಲಿಕ, ಚಾರಣ ಮತ್ತು ಕೋಲ್ಲಟಿಕ ಎಂದು ಆರು ಪ್ರಕಾರಗಳಿಂದ ಗುರುತಿಸಲಾಗಿದೆ. ಇಲ್ಲಿ ಕೋಲ್ಲಟಿಕವೆಂಬುದು ಕನ್ನಡದ ಕೊಲ್ಲಟಿಗ > ಕೋಲಾಟಿಗ(ಡೊಂಬ)ವೇ ಇರಬಹುದು.[೮] ವಾದ್ಯ ವಿನೋದದಲ್ಲಿ ಹೇಳಿರುವ ಹುಡುಕ್ಕಾ, ಘುಡಸ, ಕರಟಿ, ರುಂಜಾ, ಸೆಳ್ಳುಕಾ ಇವುಗಳಲ್ಲಿ ಕೆಲವು ಕನ್ನಡ ಮೂಲದ ವಾದ್ಯನಾಮವಾಗಿರುವ ಸಾಧ್ಯತೆಯಿದೆ. ವಸ್ತ್ರೋಪಭೋಗದಲ್ಲಿ ಚೀರಘಟ್ಟಕ ಎನ್ನುವುದು ಕನ್ನಡ ಕಾವ್ಯಗಳಲ್ಲಿ ಬರುವ ಚೀರಘಟ್ಟಿಯನ್ನು ನೆನಪಿಸುತ್ತದೆ.

ಪುತ್ರಭೋಗ ಪ್ರಕರಣ ಅನೇಕ ಅಮೂಲ್ಯ ವಿಷಯಗಳನ್ನು ತುಂಬಿಕೊಂಡಿದೆ. ಹೆಣ್ಣು ಗರ್ಭ ಧರಿಸಿದ ಮೂರನೆಯ ತಿಂಗಳು ಪುಂಸವನ ಕಾರ್ಯವನ್ನು ಆಚರಿಸಬೇಕು. ಆಗ ಎರಡು ಉದ್ದಿನ ಬೇಳೆಗಳನ್ನು ಒಳಗೊಂಡ, ತುಪ್ಪದಲ್ಲಿ ತಯಾರಿಸಿದ ಜವೆಗೋದಿಯ ಆಹಾರವನ್ನು ವೇದಮಂತ್ರ ಉಚ್ಚರಿಸುತ್ತ ಅರಸನು ಪತ್ನಿಗೆ ತಿನ್ನಿಸಬೇಕು. ೬ನೆಯ ಅಥವಾ ೮ನೆಯ ಶುಕ್ರವಾರ ಅಷ್ಟಮಂಗಳವೆಂಬ ಸೀಮಂತವನ್ನಾಚರಿಸಬೇಕು. ಅತ್ತಿಮರದ ಹಣ್ಣುಗಳಿಂದ ಕೂಡಿದ ಕಂಠಾಭರಣವನ್ನು ತೊಡಿಸಬೇಕು. ಮುಳ್ಳುಹಂದಿಯ ಬಾಲದ ತುದಿಯಿಂದ ಅರಸನು ತನ್ನ ಪತ್ನಿಯ ತಲೆಯ ಮೇಲೆ ಸೀಮಂತೋನ್ನಯನವನ್ನು ಆಚರಿಸಬೇಕು. ಗಂಡು ಮಗುವಿಗೆ ಗೃಹ್ಯಸೂತ್ರದಲ್ಲಿ ಹೇಳಿದಂತೆ ಜಾತಕರ್ಮವನ್ನಾಚರಿಸಬೇಕು. ಸುವರ್ಣ ಮುದ್ರಿಕೆಗೆ ಲೇಪಿಸಿದ ಜೇನುತುಪ್ಪವನ್ನು ಮಗುವಿಗೆ ತಿನ್ನಿಸಬೇಕು. ಮದುವೆಯ ಸಂದರ್ಭದಲ್ಲಿ ಒಂದರ ಪಕ್ಕದಲ್ಲಿ ಒಂದರಂತೆ ಅಕ್ಕಿಕಾಳುಗಳ ಎರಡು ಗುಂಪುಗಳನ್ನು ವೇದಿಕೆಯ ಮೇಲೆ ಯೋಜಿಸಬೇಕು. ಅವುಗಳ ಮಧ್ಯದಲ್ಲಿ ಬಿಳಿ ರೇಷ್ಮೆ ಬಟ್ಟೆಯ ಅಂತಃಪಟವನ್ನು ಸಾವಧಾನವಾಗಿ ಇಳಿಬಿಡಬೇಕು. ಒಂದು ಅಕ್ಕಿ ರಾಶಿಯ ಮೇಲೆ ಪುತ್ರನನ್ನು ಪೂರ್ವಕ್ಕೆ ಮುಖಮಾಡಿ ಕುಳ್ಳಿರಿಸಬೇಕು. ಅದೇ ರೀತಿ ಇನ್ನೊಂದು ಅಕ್ಕಿ ರಾಶಿಯ ಮೇಲೆ ಕನ್ಯೆಯನ್ನು ಪಶ್ಚಿಮಾಭಿಮುಖವಾಗಿ ಕುಳ್ಳಿರಿಸಬೇಕು. ವರ ಮತ್ತು ಕನ್ಯೆಯ ಸುತ್ತ ೫ ನೂಲಿನ ಎಳೆಗಳನ್ನು ಸುತ್ತಬೇಕು. ೫ ಸಲ ಪ್ರದಕ್ಷಿಣೆ ಹಾಕಿಸಿ, ೫ ಎಳೆಯ ಸೂತ್ರವನ್ನು ಕಡ್ಡಾಯವಾಗಿ ಹರಿದು ಕಾಲ ಕೆಳಗೆ ಬೀಳಿಸಬೇಕು. ದಾರಕ್ಕೆ ಕುಂಕುಮವನ್ನು ಲೇಪಿಸಿದರೆ ಕಂಕಣವೆನ್ನುತ್ತಾರೆ. ಈ ರೀತಿ ಕನ್ಯೆಗೆ ಕಂಕಣವನ್ನು ಕಟ್ಟಬೇಕು. ಪುತ್ರಭೋಗ ಅಧ್ಯಾಯದಲ್ಲಿ ಹೇಳಿರುವ ಈ ಎಲ್ಲಾ ಅಂಶಗಳು ರಾಜವರ್ಗದವರ ವಿವಾಹದ ಆಚರಣೆಗಳನ್ನು ತಿಳಿಸುತ್ತವೆ.

ಅನ್ನಭೋಗ ಪ್ರಕರಣದಲ್ಲಿ ಕರ್ನಾಟಕದ ಇಡ್ಲಿ, ಗಾರಿಗೆ, ಹೋಳಿಗೆ ಮಂಡಿಗೆ, ವಡೆಗಳನ್ನು ಮಾಡುವ ವಿಧಾನಗಳನ್ನು ಹೇಳಲಾಗಿದೆ.

ಮೃಗಯಾ ವಿನೋದದಲ್ಲಿ ಬರುವ ದೀಪಮೃಗಗಳ ವಿವರ, ಕನ್ನಡ ಕಾವ್ಯಗಳಲ್ಲಿ ಪದೇ ಪದೇ ಕಾಣಿಸಿಕೊಳ್ಳುವ ದೀಪದ ಮೃಗಗಳ ಬಗೆಗಿನ ನಮ್ಮ ತಿಳುವಳಿಕೆಯನ್ನು ಹೆಚ್ಚಿಸುತ್ತದೆ. ಇಲ್ಲಿ ಬರುವ ಎತ್ತಿನ ಮರೆಯಲ್ಲಿ ಆಡುವ ಬೇಟೆ ವಿವರವು ಬಸವಣ್ಣನವರ ವಚನದ "ಬೆಳ್ಳೆತ್ತಿನ ಮರೆಯಲ್ಲಿ ನಿಂದು ಹುಲ್ಲೆಗೆ ಅಂಬ ತೊಡುವಂತೆ" ಎಂಬ ವಚನದ ಅರ್ಥವನ್ನು ಇನ್ನೂ ಸ್ಪಷ್ಟಪಡಿಸುತ್ತದೆ. "ಕುಕ್ಕಟವಿನೋದ"ದಲ್ಲಿ, "ಗೆದ್ದವರು ಸೋತವರ ಹೆಗಲನ್ನೇರಿ ಕುಳಿತು ಪರಿಹಾಸ್ಯದ ಮಾತುಗಳನ್ನಾಡಬೇಕು. ಸೋತವರನ್ನು ನಾಚಿಕೆಗೀಡುಮಾಡಬೇಕು. ಪರಿಹಾಸ್ಯದ ಅರ್ಥ ತುಂಬಿರುವ, ಮರ್ಮಭೇದಕವಾದ, ಬೈಗುಳದಿಂದ ಕೂಡಿದ ತ್ರಿಪದಿ ಪದ್ಯಗಳನ್ನು ರಾಗಸಹಿತವಾಗಿ ಸೋತವರನ್ನು ಉದ್ದೇಶಿಸಿ ಹಾಡಬೇಕು. ಸೋತವರ ಧ್ವಜದ ಸ್ತಂಭವನ್ನು ಜೋರಾಗಿ ಕಿತ್ತುಕೊಂಡು, ಗೆಲುವನ್ನು ಗಳಿಸಿದ ಹುಂಜವನ್ನು ಹೆಣ್ಣಾನೆಯ ಮೇಲೆ ಕುಳ್ಳಿರಿಸಿ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಿಸಬೇಕು. ಸೋತವನ ಹಣೆ, ತೋಳು, ಎದೆಗಳ ಮೇಲೆ ಗೆದ್ದವನು ಕುಂಕುಮದಿಂದ ಹುಂಜದ ಗುರುತುಗಳನ್ನು ಮಾಡಬೇಕು" ಎಂದು ಹೇಳಿರುವ ವಿವರಗಳು ತುಂಬಾ ಕುತೂಹಲಕಾರಿಯಾಗಿವೆ.

"ಮದಿರಾಪಾನ ಕ್ರೀಡಾ" ಅಧ್ಯಾಯದಲ್ಲಿ "ಆನೆಯಿಂದ ಅಟ್ಟಿಸಿಕೊಂಡು ಓಡುವ ಸ್ಪರ್ಧೆ"ಯ ವಿವರವಿದೆ. ಹೀಗೆ ಓಡುವವನ್ನು ಪರಿಕಾರ ಎಂದು ಈ ಗ್ರಂಥ ಕರೆದಿದೆ. ಇದು ಕನ್ನಡ ಶಬ್ದ. "ಪರಿಕಾರನೆಂದು ಕಾಲೊಳ್ ಬಲ್ಲಿದಂ" ಎಂಬ ಶಬ್ದಮಣಿದರ್ಪಣದ ಮಾತನ್ನು ಇಲ್ಲಿ ನೆನೆಯಬಹುದು.

"ತುರಗವೈಹಾಲಿ" ಪ್ರಕರಣದಲ್ಲಿ ಗೇದ್ದಿಕಾ ಬಳಸಿ ಆಡುವ ಆಟದ ವಿವರವಿದ್ದು, ಇದು ಶ್ರವಣಬೆಳಗೊಳ ಶಾಸನದಲ್ಲಿ ಬರುವ ರಾಷ್ಟ್ರಕೂಟ ಇಂದ್ರನ ಕಂದುಕ ಕ್ರೀಡೆಯನ್ನು ಹೋಲುತ್ತದೆ.

"ರಾಷ್ಟ್ರಾಧ್ಯಾಯ" ಪ್ರಕರಣದಲ್ಲಿ ಆನೆಗಳ ಭಾಷಾ ತರಬೇತಿಯ ವಿವರ ನೀಡುತ್ತಾ, ಆನೆಗೆ ಸಂಚರಿಸಲು ಹೇಳುವಾಗ ಏಹಿ ಏಹಿ ಎಂದೂ, ದೂರ ಸರಿಸುವಾಗ ಹೇಡ ಹೇಡ ಎಂದೂ, ಎರಡೂ ಬದಿಗೆ ಸರಿಯಲು ಹೇಳುವಾಗ ಪ್ರಾಪ ಎಂದೂ, ಕುಳಿತುಕೊಳ್ಳಲು ಹೇಳುವಾಗ ವಿಶ್ವೀ ಎಂದೂ, ಎಬ್ಬಿಸುವಾಗ ನುಹ್ನಃ ಎಂದೂ, ಸೊಂಡಿಲನ್ನು ಸಂಕೋಚಗೊಳಿಸಲು ಹೇಳುವಾಗ ವಘ್‌ಡಿಹರ ಎಂದೂ, ಸೊಂಡಿಲನ್ನು ಮೇಲೆತ್ತಲು ಭರೀಹ ಎಂದೂ, ಕಂಬದಂಥ ಭಾರಯೆತ್ತುವಾಗ ಹಿಜ್ಜ ಹಿಜ್ಜ ಎಂದೂ, ಮುಂಗಾಲು ಮೇಲೆತ್ತುವಾಗ ಭಲೆ ಭಲೆ ಎಂದೂ, ಪಶ್ಚಿಮ ದಿಕ್ಕಿಗೆ ನಮಸ್ಕರಿಸಲು ಹೇಳುವಾಗ ಕಿಃ ಕಿಃ ಎಂದೂ, ಬೇಡುವಾಗ ದೇ ದೇ ಎಂದೂ, ಸೊಂಡಿಲಿನಿಂದ ಏಟು ಹಾಕಿಸುವಾಗ ಹೇ ಹೈ ಎಂದೂ, ಆಹಾರವನ್ನು ಮೆಲ್ಲುವಾಗ ದ್ವಿ ದ್ವಿ ಎಂದೂ, ತಿನ್ನುವುದನ್ನು ಬಿಡಿಸುವಾಗ ಚದು ಚುದು ಎಂದೂ, ಬೇಡ ಸಂಬೋಧಿಸುವಾಗ ಮಾ ಮಾ ಎಂದೂ, ಭೂಮಿಗೆ ದಂತ ಉಜ್ಜುವಾಗ ಹಿಗ ಹಿಗ ಎಂದೂ, ಹೊರಗೆ ಸೊಂಡಿಲನ್ನು ಬೀಸುವಾಗ ಹೂ ಹೂ ಎಂದೂ, ಮೆಲ್ಲಗೆ ಚಲಿಸಲು ಲೇಚ ಲೇಚ ಎಂದೂ, ಬರಲು ಆಹ್ವಾನಿಸುವಾಗ ಇಚ್ಚ ಭೂಭ ಎಂದೂ, ಸ್ವೀಕರಿಸಲು ತಿಳಿಸುವಾಗ ಘೇ ಘೇ ಎಂದೂ ಹೇಳಬೇಕೆಂದು ನೀಡಿದ ಈ ವಿವರ ಸೋಮೇಶ್ವರನ ಕಾಲದ ಆಚರಣೆಯೇ ಆಗಿರಬೇಕು.

"ಗೀತವಿನೋದಾಧ್ಯಾಯ" ದೇಶೀ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಮಹತ್ವದ ಅಂಶಗಳನ್ನೊಳಗೊಂಡಿದೆ. ಇಲ್ಲಿ ದ್ರಾವಿಡ ಛಂದಸ್ಸಿನ ಅಂಶಗಣ ವಿಚಾರವನ್ನು ಹೇಳಿ, ಕನ್ನಡದ ತ್ರಿಪದಿ ಲಕ್ಷಣವನ್ನು ಪ್ರಸ್ತಾಪಿಸುತ್ತ ಕನ್ನಡ ಪದ್ಯವನ್ನೇ ಉದಾಹರಣೆಯಾಗಿ ಕೊಟ್ಟುದು ವಿಶೇಷವೆನಿಸಿದೆ. ಮುಂದುವರಿದು ತ್ರಿಪದಿಯ "ಮೊದಲೆರಡು ಪಾದಗಳನ್ನು, ಮೂರನೆಯದರಲ್ಲಿ ಕೊಂಚ ಭಾಗವನ್ನೂ ಹಾಡಿದ ಬಳಿಕ, ಮತ್ತೊಮ್ಮೆ ಈ ಮೂರನೆಯ ಪಾದವನ್ನು ಹಾಡಿ ನಾಲ್ಕನೆಯದನ್ನು ಹಾಡುವುದು" ಎಂದು ಹೇಳಿದ ಮಾತು ಮನನೀಯವೆನಿಸಿದೆ. ೮೦೦ ವರ್ಷ ಬಳಿಕವೂ ಇಂದು ತ್ರಿಪದಿಯನ್ನು ಹೀಗೆಯೇ ಹಾಡುತ್ತಲಿರುವುದು ಗಮನಾರ್ಹವೇ ಸರಿ. ಇಲ್ಲಿಯೇ ಹೇಳಲಾದ ಚತುಷ್ಪದಿ, ಷಟ್ಪದಿ, ವಿಚಿತ್ರಾ ತ್ರಿಪದಿ, ಕಂದ ಲಕ್ಷಣಗಳು, ಇವುಗಳಿಗೆ ಉದಾಹರಣೆಯಾಗಿ ಕೊಟ್ಟ ಕನ್ನಡ ಪದ್ಯಗಳು ಕನ್ನಡ ಛಂದಸ್ಸಿನ ದೃಷ್ಟಿಯಿಂದ ತುಂಬ ಮಹತ್ವವೆನಿಸಿವೆ. "ತ್ರಿಪದಿ, ಷಟ್ಪದಿ, ಧವಲಗಳು ಸೂಡಕ್ರಮದಲ್ಲಿ ಹಾಡಲ್ಪಡುವ ಲೌಕಿಕ ಪ್ರಬಂಧಗಳಾಗಿವೆ. ಕಥೆಗಳಲ್ಲಿ ಷಟ್ಪದಿಯನ್ನು ಬಳಸಬೇಕು, ಮಹಾರಾಷ್ಟ್ರದಲ್ಲಿ ಕುಟ್ಟುವಾಗ ಹಾಡುವುದು ಓವಿ, ಕನ್ನಡ ಭಾಷೆಯಲ್ಲಿ ಷಟ್ಪದಿಯನ್ನು ಬಳಸಿ ಚಿತ್ರಕಥಕರು ಕಥಾಲಾಪ ಮಾಡುತ್ತಾರೆ" ಎಂದು ನೀಡುವ ವಿವರಗಳು ಅಪೂರ್ವವೆನಿಸಿವೆ. "ಕುಕ್ಕಟ ವಿನೋದಾಧ್ಯಾಯ"ದಲ್ಲಿ ಗೆದ್ದವರು ಸೋತವರನ್ನು ಪರಿಹಾಸ್ಯಕ್ಕೆ ಗುರಿಪಡಿಸಲು ತ್ರಿಪದಿಯನ್ನು ಹಾಡಬೇಕೆಂದು ಸೂಚಿಸಲಾಗಿದೆ.

ಮಾನಸೋಲ್ಲಾಸಶಾಸ್ತ್ರ (೧-೧-೯ ಮತ್ತು ೫-೨೦-೧೩೭೩)ವೆಂದು ಇದನ್ನು ಕರೆಯಲಾಗಿದ್ದರೂ ಇದು ಅನೇಕ ವೇಳೆ ಕೇವಲ ತಾತ್ವಿಕ (Theoretical)ಆಗಿ ಉಳಿಯದೆ, ಆನ್ವಯಿಕ (Applied) ಆಗಿರುವುದೂ ಒಂದು ವಿಶೇಷತೆಯಾಗಿದೆ. ಕ್ರೀಡೆ, ವಿನೋದ, ಭೋಗಗಳೆಂಬ ಅಧ್ಯಾಯನಾಮಗಳೂ, 'ಉಲ್ಲಾಸ'ವೆಂಬ ಶಿರೋನಾಮಭಾಗವೂ ಇದರ ಆನ್ವಯಿಕತೆಯನ್ನು ಎತ್ತಿಹೇಳುತ್ತವೆ. ಹೀಗಾಗಿ ಇದು ಕೆಲವೊಮ್ಮೆ 'ಶಾಸ್ತ್ರ'ಕ್ಕೆ ಸೀಮಿತವಾಗಿ ಉಳಿಯದೆ 'ಆನ್ವಯಿಕ'ದ ವಿಸ್ತಾರವನ್ನು ಪಡೆಯುತ್ತದೆ.

ಸಾಮಾನ್ಯವಾಗಿ 'ಶಾಸ್ತ್ರ'ವೆನ್ನುವುದು ಮಾರ್ಗವಿಷಯನಿಷ್ಠವಾಗಿರುತ್ತದೆ. ಇಲ್ಲಿ ಈ ಮಾತಿಗೆ ವಿಪುಲ ಅವಕಾಶಕೊಟ್ಟಿದ್ದರೂ, ಅಲ್ಲಲ್ಲಿ ದೇಶೀ ಅಂಶಗಳನ್ನೂ ಅಳವಡಿಸಿಕೊಂಡಿರುವುದು ಗಮನಿಸಬೇಕಾದ ವಿಷಯವಾಗಿದೆ. ಗೀತವಿನೋದ, ನೃತ್ಯವಿನೋದಗಳಂಥ ಮಾರ್ಗೀಯ ವಿಷಯಗಳ ಜೊತೆ ಕುಕ್ಕಟ ವಿನೋದ, ಮೇಷ ವಿನೋದಗಳಿಗೂ ಅವಕಾಶ ಕಲ್ಪಿಸಿಕೊಡಲಾಗಿದೆ. ವಾದ್ಯ ವಿನೋದದಲ್ಲಿ ಬರುವ [illegible]ಪ್ರಗಳನ್ನು [illegible]ಮೇಶ್ವರನು ಮಾರ್ಗ ದೇಶೀ ಕ್ರಮದಿಂದ ಹೇಳಿದ್ದಾನೆ' (ಪು. ೬೪೩) ಎಂಬ ಮಾತನ್ನು ಇಲ್ಲಿ ನೆನಯಬಹುದು.

ಇನ್ನೂ ಒಂದು ವಿಶೇಷವೆಂದರೆ ಸಾಧ್ಯವಿದ್ದಲ್ಲೆಲ್ಲ ದ್ರಾವಿಡ ಸಂಪ್ರದಾಯ[illegible] ಕಲ್ಪಿಸಿಕೊಟ್ಟುದು. ಈ ಕೃತಿಯಲ್ಲಿ ಯಜ್ಞ ಮೊದಲಾದ ವಿಧಿಕರ್ಮಗಳ ಪ್ರಸ್ತಾಪವಿಲ್ಲ. ವೇದಕಾಲೀನ ದೇವತೆಗಳ ಪ್ರಸ್ತಾಪ ತೀರ ಅಪರೂಪ. ಇದಕ್ಕೆ ಬದಲು ದ್ರಾವಿಡ ಸಂಪ್ರದಾಯಕ್ಕೆ ಸಂಬಂಧಿಸಿದ ವಿಗ್ರಹ ನಿರ್ಮಾಣ, ದೇವಾಲಯ ನಿರ್ಮಾಣ ವಿಚಾರಗಳು ವಿಪುಲ ಪ್ರಮಾಣದಲ್ಲಿ ದಾಖಲಾಗಿವೆ. ಇಲ್ಲಿ ಬರುವ ವೈದ್ಯಕೀಯ ಕ್ರಮ ದ್ರಾವಿಡರ ಕಾಣಿಕೆಯಾಗಿರುವಂತಿದೆ. ಏಕೆಂದರೆ ಆಪಸ್ತಂಭಧರ್ಮ ಸೂತ್ರದ ಪ್ರಕಾರ ವೈದ್ಯಕೀಯವು ಶೂದ್ರರ ವೃತ್ತಿಯಾಗಿದೆ.

ಈ ಬಿಡಿ ವಿವರಗಳನ್ನಲ್ಲದೆ, ವಿದ್ವಾಂಸರು ಈ ಕೃತಿಯ ಬಗೆಗೆ ಆಡಿದ ಕೆಲವು ಮಾತುಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಸಂಗೀತಕ್ಕೆ ಸಂಬಂಧಪಟ್ಟ ಇಲ್ಲಿಯ ಶ್ಲೋಕ ಸಂಖ್ಯೆ ಸುಮಾರು [illegible] "ಸಂಗೀತದರ್ಪಣ - ಸ್ವರಮೇಳ ಕಳಾನಿಧಿ - ರಾಗವಿಬೋಧ ಮುಂತಾದ ಲಕ್ಷಣ ಗ್ರಂಥಗಳಿಗಿಂತ ಗಾತ್ರದಲ್ಲಿ ದೊಡ್ಡದಾಗಿದ್ದರೂ, ಉಲ್ಲಾಸ ವಿನೋದಗಳೇ ಪ್ರಧಾನ ಉದ್ದೇಶವಾಗಿರುವುದರಿಂದ, ಇದನ್ನು ಬೇರೊಂದು ದೃಷ್ಟಿಯಿಂದ ಅಧ್ಯಯನ ಮಾಡುವುದು ಅಗತ್ಯವಿದೆ".[೨]

"ಸುಮಾರು ನಾಲ್ಕನೆಯ ಶತಮಾನದ ಈ ಬೃಹತ್ ವಿಶ್ವಕೋಶ (ವಿಷ್ಣುಧರ್ಮೋತ್ತರ ಪುರಾಣ)ದ ನಂತರ ಜೀವನದ ಹಲವು ಮುಖಗಳ ಪರಿಚಯ ನೀಡುವ ಮಧ್ಯಕಾಲೀನ ಸಂಸ್ಕೃತ ಗ್ರಂಥವೆಂದರೆ.... ಅಭಿಲಷಿತಾರ್ಥ ಚಿಂತಾಮಣಿ",[೩] "ಸೋಮೇಶ್ವರನು ಭರತನ ಸಂಪ್ರದಾಯದ ಜೊತೆಗೆ ದೇಶಿನೃತ್ಯ ಮತ್ತು ಸಂಗೀತಕಲೆಯ ವಿಷಯದಲ್ಲಿ ಹೆಚ್ಚಿನ ಪ್ರಸ್ತಾಪ ಬೆಳೆಸಿರುವುದನ್ನು ಅವನ ಮಾನಸೋಲ್ಲಾಸದಲ್ಲಿ ಕಾಣಬಹುದು",[೪] "ನೃತ್ಯಕಲೆಯ ಬಗ್ಗೆ ಇರುವ ರಚನೆಗಳನ್ನು ಅವಲೋಕಿಸಿದಾಗ ಬಹುಶಃ ಸೋಮೇಶ್ವರನೇ ಕರ್ನಾಟಕದ ಮೊದಲ ಲಾಕ್ಷಣಿಕನಾಗಿದ್ದಾನೆ",[೫] "ವಿಷ್ಣು ಧರ್ಮೋತ್ತರದ ನಂತರ ಲಲಿತಕಲೆಗೆ ಸಂಬಂಧಿಸಿದ ಗ್ರಂಥಗಳಲ್ಲಿ ಮಾನಸೋಲ್ಲಾಸ ಬಹುಮುಖ್ಯವಾದದ್ದು".[೬]

"ಸದ್ಯಕ್ಕೆ ನಮಗೆ ಸಿಕ್ಕಿರುವ ಪ್ರಮಾಣಗಳನ್ನು ಅನುಸರಿಸಿ ಕಂಡಾಗ ಸೋಮೇಶ್ವರನ ಮಾನಸೋಲ್ಲಾಸವೇ ಮೊದಲಿಗೆ ನಾನಾವಾದ್ಯ ಭೇದಗಳ ನಿರ್ಮಾಣ ಮತ್ತು ವಾದನಗಳನ್ನು ವಿಶದವಾಗಿ ನೀಡುವ ಆಕರಗ್ರಂಥ".

- ವಿದ್ವಾಂಸರ ಈ ಮಾತುಗಳು ಮಾನಸೋಲ್ಲಾಸದ ಮಹತ್ವವನ್ನು ಸಾರುತ್ತವೆ. ಸ್ವತಃ ಸೋಮೇಶ್ವರನೇ "ಮಾನಸೋಲ್ಲಾಸಶಾಸ್ತ್ರಂ ವಿಶ್ವೋಪಕಾರಕಂ", "ಜಗದಾಚಾರ್ಯ ಪುಸ್ತಕಂ" ಎಂದು ಮೊದಲಾಗಿ ಹೇಳಿದ್ದಾನೆ. ಗ್ರಂಥದ ಕೊನೆಯಲ್ಲಿ ಹೇಳಿರುವ "ಈ ಶಾಸ್ತ್ರವನ್ನು ಕೇಳಿದವನಿಗೆ ಧರ್ಮದಲ್ಲಿ ಆಸಕ್ತಿಯೂ, ಅರ್ಥಶಾಸ್ತ್ರದಲ್ಲಿ ಕುಶಲತೆಯೂ, ರಾಜನೀತಿಯಲ್ಲಿ ವಿಚಕ್ಷಣತೆಯೂ ಉಂಟಾಗುವುದು.

ಸೇವೆ ಮಾಡುವುದರಲ್ಲಿ ದಕ್ಷತೆಯೂ, ಸಾಹಿತ್ಯದಲ್ಲಿ ನಿಪುಣತೆಯೂ, ತರ್ಕಗಳಲ್ಲಿ ಪಟುತ್ವವೂ, ಛಂದಸ್ಸು ಮತ್ತು ಅಲಂಕಾರಗಳ ಜ್ಞಾನವೂ, ಶಾಸ್ತ್ರವಿದ್ಯೆಯಲ್ಲಿ ಜಾಣ್ಮೆಯೂ, ಆನೆ - ಕುದುರೆಗಳ ಸವಾರಿಯಲ್ಲಿ ಚಾತುರ್ಯವೂ, ಮಲ್ಲವಿದ್ಯೆಯಲ್ಲಿ ವಿಶೇಷಜ್ಞಾನವೂ, ಯುದ್ಧದಲ್ಲಿ ತಿಳಿವೂ, ಸಂಗೀತ ವಿದ್ಯೆಯಲ್ಲಿ ನೈಪುಣ್ಯವೂ ಉಂಟಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಮಾನಸೋಲ್ಲಾಸ ಎಂಬ ಈ ಶಾಸ್ತ್ರವು ಕಾಮಧೇನು. ಎಲ್ಲ ವಿಷಯಗಳನ್ನು ತಿಳಿಸಿಕೊಡುವುದರಲ್ಲಿ ಇದಕ್ಕೆ ಸಮನಾದ ಇನ್ನೊಂದು ಶಾಸ್ತ್ರ (ಗ್ರಂಥ) ಇಲ್ಲ. (ಇದನ್ನು ಓದುವುದರಿಂದ) ಬ್ರಾಹ್ಮಣನು ಜ್ಞಾನವನ್ನೂ, ಕ್ಷತ್ರಿಯನು ರಾಜ್ಯವನ್ನೂ, ವೈಶ್ಯನು ಐಶ್ವರ್ಯವನ್ನೂ, ಶೂದ್ರರು ಉತ್ತಮ ವೃತ್ತಿಯನ್ನೂ ಪಡೆಯುವರು" ಎಂಬ ಮಾತುಗಳು ಮನನೀಯವಾಗಿವೆ.

ಪ್ರಭಾವ ಪರಂಪರೆ

"ಜಗದಾಚಾರ್ಯ ಪುಸ್ತಕ"ವೆಂದು (I - ೧೦) ಸುವಿಖ್ಯಾತವಾದ ಮಾನಸೋಲ್ಲಾಸ ಉತ್ತರಕಾಲೀನ ಅನೇಕ ಗ್ರಂಥಗಳ ಮೇಲೆ ಪ್ರಭಾವ ಬೀರಿದೆ. "ಶಾರದಾತನಯನ ಭಾವ ಪ್ರಕಾಶ"ದಲ್ಲಿ ಕಂಡುಬರುವ ಸೋಮೇಶ್ವರನೂ, 'ಸಂಗೀತ ರತ್ನಾಕರ'ದ ವ್ಯಾಖ್ಯಾನಕಾರನಾದ ಸಿಂಹಭೂಪಾಲ ಮತ್ತು ಸಂಗೀತ ಸಮಯಸಾರದ ಕರ್ತೃ ಪಾರ್ಶ್ವದೇವ ಆದರದಿಂದ ಸ್ಮರಿಸುವ ಸೋಮೇಶ್ವರನೂ, ಮಾನಸೋಲ್ಲಾಸಕಾರನೂ ಒಬ್ಬನೇ ಇರಬಹುದೆನ್ನುವುದಕ್ಕೆ ಸಾಕಷ್ಟು ಆಧಾರವಿದೆ.... ನೃರತ್ನಾವಲಿಯನ್ನು ರಚಿಸಿದ ಜಾಯಪ ಸೇನಾನಿಯು ಉದ್ಧರಿಸಿರುವ ನೃತ್ಯವಿನೋದದ ಭಾಗಗಳೂ ಪ್ರಶಂಸಾಪರವಾದ ವಾಕ್ಯಗಳೂ ಸೋಮೇಶ್ವರನ.... ಲಕ್ಷಣಶಾಸ್ತ್ರಜ್ಞತೆಯನ್ನು ಸಾರುತ್ತದೆ. ದೇವಗಿರಿ ಯಾದವ ಸಿಂಘಣನ ಆಸ್ಥಾನ ವಾಗ್ಗೇಯಕಾರನಾದ ಶಾರ್ಙ್ಗದೈವನು ತನ್ನ ಸಂಗೀತರತ್ನಾಕರದಲ್ಲಿ ಸೋಮೇಶ್ವರನನ್ನು ಸ್ಮರಿಸಿದುದು ಗಮನಾರ್ಹವೆನಿಸಿದೆ. ಕೆಳದಿ ಬಸವ ಭೂಪಾಲನ "ಶಿವತತ್ವರತ್ನಾಕರ"ದ ಮೇಲೆ ಇದು ಬೀರಿರುವ ದಟ್ಟಪ್ರಭಾವ ಸುವೇದ್ಯವೇ ಆಗಿದೆ.

ಹೀಗೆ ಉದ್ದಕ್ಕೂ ಪ್ರಭಾವ ಬೀರುತ್ತ ಬಂದ ಈ ಗ್ರಂಥ ಬರೋಡಾ ಗಾಯಕವಾಡ ಸೀರಿಜ ಮೂಲಕ ಇಡಿಯಾಗಿ, ಮೈಸೂರಿನ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಮೂಲಕ ಭಾಗಶಃ ಪ್ರಕಟವಾಗುವ ಮೂಲಕ ಆಧುನಿಕ ಕಾಲದಲ್ಲಿಯೂ ತನ್ನ ಮಹತ್ವವನ್ನು ತೋರಿಸಿಕೊಟ್ಟಿದೆಯೆಂದೇ ಹೇಳಬೇಕು. ಡಾ. ಶಿವಶಂಕರ ಮಿಶ್ರಾ ಅವರು ಈ ಕೃತಿಯ ಸಮಗ್ರ ಅಧ್ಯಯನ ನಡೆಸಿ ಇಂಗ್ಲಿಷ್ (Fine Arts and Technical Sciences in Ancient India) ಮತ್ತು ಹಿಂದಿ (Somesvara's Manasollasa: A Cultural Study) ಭಾಷೆಗಳಲ್ಲಿ ಎರಡು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಡಾ. ಡಿ. ಎಲ್. ಎನ್. ಮತ್ತು ಡಾ. ಎಂ. ಎಂ. ಕಲಬುರ್ಗಿ ಅವರು ಇಲ್ಲಿಯ ಕನ್ನಡ ಛಂದಸ್ಸನ್ನು ಕುರಿತು ಲೇಖನಗಳನ್ನು ಬರೆದಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಎಂ. ಎನ್. ಜೋಶಿ ಅವರು "The treatment of secular Arts and Science in Somesvra]s Manasollasa (unpublished)" ಹೆಸರಿನ ಪಿಎಚ್. ಡಿ. ಅಧ್ಯಯನ ಪೂರೈಸಿದ್ದಾರೆ. ಈಗ ನಮ್ಮ ಮೂಲಕ ಸಮಗ್ರಕೃತಿ ಕನ್ನಡಾನುವಾದ ರೂಪದಲ್ಲಿ ಪ್ರಕಟವಾಗುತ್ತಲಿದೆ. ಪರಿಷ್ಕರಣ ಮಾನಸೋಲ್ಲಾಸ ಈವರೆಗೆ ಎರಡು ಸಲ ಪ್ರಕಟವಾಗಿದೆ.

೧. ಮಾನಸೋಲ್ಲಾಸ : ಭಾಗ ೧ ಮತ್ತು ೨. ಸಂ : ಶ್ರೀ ಗಜಾನನ ಗೋಂಡೇಕರ
ಪ್ರ : ಗಾಯಕವಾಡ ಸಂಶೋಧನ ಸಂಸ್ಥೆ, ಬಡೋದೆ.

೨. ಅಭಿಲಷಿತಾರ್ಥ ಚಿಂತಾಮಣಿ : ಭಾಗ ೧ ಸಂ : ಆರ್. ಶಾಮಾಶಾಸ್ತ್ರಿ,
ಪ್ರ : ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು.

ಹೀಗೆ ಎರಡು ಸಲ ಪ್ರಕಟವಾದರೂ ಇದರ ಶುದ್ಧಪಾಠ ಇನ್ನೂ ನಮ್ಮ ಕೈಗೆ ಇಳಿದುಬಂದಿಲ್ಲ. ಮೇಲಾಗಿ ಮುದ್ರಣ ದೋಷಗಳೂ ನುಸುಳಿವೆ. ಇದರಿಂದಾಗಿ ಈ ಕೃತಿಯ ಗಾಯಕವಾಡ ಸೀರೀಜ ಆವೃತ್ತಿಯ ಅನುವಾದ ಸಂದರ್ಭದಲ್ಲಿ ಅನೇಕ ಸಮಸ್ಯೆಗಳನ್ನು ನಾವು ಎದುರಿಸಬೇಕಾಯಿತು.

ನಾಲ್ಕನೆಯ ವಿಂಶತಿಯಲ್ಲಿ ಪದ್ಯಸಂಖ್ಯೆ ೩೦೦ಕ್ಕೆ ಬದಲು ೧೦೦ ಅಚ್ಚಾಗಿ, ೧೦೧, ೧೦೨.... ಹೀಗೆ ಮುಂದುವರಿದಿದೆ. ನಾವು ೩೦೧, ೩೦೨... ಹೀಗೆ ತಿದ್ದಿಕೊಂಡಿದ್ದೇವೆ. ಇಲ್ಲಿಯೇ ೪೦೦ಕ್ಕೆ ಬದಲು ೨೦೦ ಎಂದು ಅಚ್ಚಾಗಿ ೨೪೯ರ ವರೆಗೆ ಮುಂದುವರಿದಿದ್ದು, ನಾವು ಈ ತಪ್ಪನ್ನೂ ತಿದ್ದಿಕೊಂಡಿದ್ದೇವೆ. ಅಂದರೆ ೪೦೦, ೪೦೧... ಹೀಗೆ ಮುಂದುವರಿಸಿದ್ದೇವೆ. ಇದೇ ವಿಂಶತಿಯಲ್ಲಿ ೧೫ನೆಯ ಅಧ್ಯಾಯದ ಕೊನೆಯ ಶ್ಲೋಕದ ಸಂಖ್ಯೆ ೧೭೨೫. ಹೀಗಾಗಿ ೧೬ನೆಯ ಅಧ್ಯಾಯದ ಮೊದಲ ಶ್ಲೋಕ ಸಂಖ್ಯೆ ೧೭೨೬ರಿಂದ ಮುಂದುವರಿಯಬೇಕಿತ್ತು ಇದರ ಬದಲು ೧ರಿಂದ ಮುಂದುವರಿದಿದೆ. ಮುದ್ರಿತ ಪ್ರತಿಗೆ ಬದ್ಧವಾಗಿರಬೇಕೆಂದು ನಾವೂ ೧ರಿಂದಲೇ ಸಂಖ್ಯೆ ಸೂಚಿಸುತ್ತ ಹೋಗಿದ್ದೇವೆ. ಈ ಚತುರ್ಥ ವಿಂಶತಿಯ ಅಥಆಯ ೧ - ೧೫ರ ವರೆಗೆ ೧೭೨೫ ಶ್ಲೋಕ, ಅಧ್ಯಾಯ ೧೬ - ೨೦ರ ವರೆಗೆ ೧೪೯ ಶ್ಲೋಕಗಳಿವೆ. ಹೀಗಾಗಿ ಇಲ್ಲಿಯ ೨೦ನೆಯ ಅಧ್ಯಾಯದ ಕೊನೆಯ ಅಡಿ ಟಿಪ್ಪಣಿಯಲ್ಲಿ ಈ ವಿಂಶತಿಯಲ್ಲಿ ಒಟ್ಟು ೩೨೧೯ ಶ್ಲೋಕಗಳಿವೆಯೆಂಬ ಸ್ಪಷ್ಟೀಕರಣ ನೀಡಿದ್ದೇವೆ. ಈ ತಿದ್ದುಪಡಿಗಳಿಗಾಗಿ ಅಲ್ಲಲ್ಲಿಯ ಅಡಿಟಿಪ್ಪಣಿಗಳನ್ನು ನೋಡಬಹುದು.

ಕೆಲವೊಮ್ಮೆ ಅಡಿಟಿಪ್ಪಣಿ ಸರಿಯಿದ್ದರೆ ಅದನ್ನೇ ಸ್ವೀಕರಿಸಿದ್ದೇವೆ (೪ - ೧೬ - ೩೬೯). ಪಾಠ ಗೊಂದಲಕ್ಕೆ ಸ್ಪಷ್ಟೀಕರಣವನ್ನೂ ಕೊಟ್ಟಿದ್ದೇವೆ. (೪ - ೧೬ - ೩೭೧). ಎಲ್ಲಿಯೋ ಸೇರಿಕೊಂಡಿದ್ದ ಉದಾಹರಣೆಯನ್ನು ಸೂಕ್ತ ಸ್ಥಳಕ್ಕೆ ವರ್ಗಾಯಿಸಿಕೊಂಡಿದ್ದೇವೆ. (೪ - ೧೬ - ೩೭೧ ಉದಾಹರಣೆ). ಇಂಥ ಅನೇಕ ಬಗೆಯ ದೋಷಗಳನ್ನು ತಿದ್ದಿಕೊಂಡಿದ್ದೇವೆ. ಇವುಗಳಿಗಾಗಿಯೂ ಅಡಿಟಿಪ್ಪಣಿಗಳನ್ನು ಅವಲೋಕಿಸಬಹುದು.

ಇನ್ನೊಂದು ಮುಖ್ಯಪ್ರಯತ್ನವೆಂದರೆ ಪಾಠ ಪರಿಷ್ಕರಣ. ಅಲ್ಲಲ್ಲಿ ಉದ್ದಕ್ಕೂ ಮೇಲಿನ ಪಾಠವನ್ನು ಕೈಬಿಟ್ಟು, ಅಡಿಯಲ್ಲಿಯ ಉತ್ತಮ ಪಾಠವನ್ನು ಸ್ವೀಕರಿಸಲಾಗಿದೆ. ಇದಕ್ಕೆ ಪಂಚಮ ವಿಂಶತಿಯ ೧ - ೧೦ ವರೆಗಿನ ಅಧ್ಯಾಯಗಳ ಅಡಿಟಿಪ್ಪಣಿ ನೋಡಬಹುದು. ಕೆಲವೊಮ್ಮೆ ಅಡಿಯಲ್ಲಿಯ ಪಠ್ಯವೂ ಅಪ್ರಯೋಜಕವೆನಿಸಿದಾಗ ಸರಿಯಾದ ಪಾಠವನ್ನು ಊಹಿಸಲಾಗಿದೆ. ಉದಾ : ಅರ್ಥ ಕಪೋಲಿಕ - ಆರ್ದ್ರ ಕಪೋಲೀಕ (ಪು. ೪೪೧), ಸಮಾನಂ - ಸನೂನಂ (ಪು. ೫೦೧), ಸಮದಂತಾಂ - ಸಮದಂಡಾಂ (ಪು. ೪೦೫). ಇಂಥ ನೂರಾರು ಪಾಠಪರಿಷ್ಕರಣಗಳನ್ನು ಇಲ್ಲಿ ಕಾಣಬಹುದು. ಈ ಬಗೆಯ ಎಚ್ಚರದಿಂದಾಗಿ ಮುದ್ರಿತ ಪ್ರತಿಯ ಪರಿಷ್ಕರಣ ಕಾರ್ಯವನ್ನೂ ಮಾಡಿದ ಶ್ರೇಯಸ್ಸು ಈ ಅನುವಾದ ಆವೃತ್ತಿಗೆ ಸಲ್ಲುತ್ತದೆ.ಅನುವಾದ ಭಾಷೆಗಳು ಸಂಸ್ಕೃತಿಯ ನಡುವೆ ಗೋಡೆಕಟ್ಟಿದರೆ, ಭಾಷಾಂತರ ಆ ಗೋಡೆಗಳನ್ನು

ಒಡೆದುಹಾಕುತ್ತದೆ. ವಿಶ್ವವಿದ್ಯೆಯ ಮುಕ್ತಸಂವಹನಕ್ಕೆ ದಾರಿ ಮಾಡಿಕೊಡುತ್ತದೆ. ಈ ಆದರ್ಶದಲ್ಲಿ ಮಾನಸೋಲ್ಲಾಸದ ಅನುವಾದ ಯೋಜನೆಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತಲೇ (ಜುಲೈ ೧೯೯೪) ಮೊದಲು ಈ ಕೃತಿಯಲ್ಲಿ ಅಡಕವಾಗಿರುವ ವಿಷಯ ವೈವಿಧ್ಯವನ್ನು ಬಿಡಿಸಿ ನೋಡಲಾಯಿತು. ಬಳಿಕ ಇಲ್ಲಿಯ ಒಂದೊಂದು ವಿಷಯದಲ್ಲಿ ತಜ್ಞತೆಯುಳ್ಳ, ಕನ್ನಡ ಸಂಸ್ಕೃತ ಉಭಯ ಭಾಷೆಗಳಲ್ಲಿ ಬಲ್ಲಿದರಾದ ಮತ್ತು ಭಾಷಾಂತರ ಕ್ರಿಯೆಯಲ್ಲಿ ಪಳಗಿದ ೧೨ ಜನ ವಿದ್ವಾಂಸರಿಗೆ ಇದರ ಅನುವಾದ ಕಾರ್ಯವನ್ನು ವಹಿಸಿಕೊಡಲಾಯಿತು. ಕಾರ್ಯಸ್ವರೂಪ ಕಾರ್ಯಾಚರಣೆ ಇತ್ಯಾದಿ ದೃಷ್ಟಿಯಿಂದ ಇವರೆಲ್ಲರ ಸ್ತೋಮಕಾರ್ಯವನ್ನು ಒಂದು ಕ್ರಮದಲ್ಲಿ ಮುನ್ನಡೆಸಿಕೊಂಡು ಹೋದ ಪ್ರಧಾನ ಸಂಪಾದಕರು, ಎಲ್ಲರಿಂದ ಬಂದ ಅನುವಾದಗಳನ್ನು ಉದ್ದಕ್ಕೂ ಪರಿಶೀಲಿಸಿ, ಪರಿಷ್ಕರಿಸಿ, ಅವಶ್ಯವೆನಿಸಿದಲ್ಲಿ ಅವರೊಂದಿಗೆ ಚರ್ಚಿಸಿ, ಇದಕ್ಕೆ ಭಾಷೆ ತಂತ್ರದೃಷ್ಟಿಯಿಂದ ಏಕರೂಪತೆ ಬರುವಂತೆ ಪ್ರಯತ್ನಿಸಿದ್ದಾರೆ. ಇಲ್ಲಿ ಪ್ರತಿಯೊಂದು ಶ್ಲೋಕದ ಅನುವಾದ ಸಮಗ್ರ, ಸುಲಲಿತವಾಗುವಂತೆ ನೋಡಿಕೊಳ್ಳಲಾಗಿದೆ. ಉದಾ :

ಭವವೆಂಬ ಬಳ್ಳಿಗೆ ಬೀಜಸ್ವರೂಪನೂ, ಲಿಂಗರೂಪಿಯೂ ಆದ ಮಹೇಶ್ವರನಿಗೆ ವಂದಿಸುತ್ತೇನೆ. ಅವನು ಅವ್ಯಕ್ತನಾದರೂ ಸುವ್ಯಕ್ತನು, ಸಚಾರಾಚರವೆಲ್ಲ ಅವನಲ್ಲಿ ಅಡಗಿದೆ.

ಸತ್ಯವನ್ನು ನುಡಿಯಬೇಕು. ಪ್ರಿಯವಾದುದನ್ನು, ಹಿತವಾದುದನ್ನು ನುಡಿಯಬೇಕು. ಅಪ್ರಿಯವಾದ ಹಿತವಚನವನ್ನು ನುಡಿಯಬಾರದು. ಪ್ರಿಯವಾಗಿದೆಯೆಂದು ಅನೃತವನ್ನೂ ಹೇಳಬಾರದು. ಇದು ಸನಾತನ ಧರ್ಮದ ಆಜ್ಞೆಯಾಗಿದೆ.

ಕೂಪ (ಸೇದುವ ಬಾವಿ) ದ್ವಾರಹೀನವಾಗುತ್ತದೆ. ವಾಪಿಕೆಗೆ (ಹೊಕ್ಕು ತುಂಬುವ ಬಾವಿ) ಒಂದು ಬಾಗಿಲಿರಬೇಕು. ಪುಷ್ಕರಣಿಗೆ (ಹೊಂಡ) ಅನೇಕ ಪ್ರವೇಶ ದ್ವಾರಗಳಿರುತ್ತವೆ. ದೀರ್ಘಿಕೆಯು (ಕೆರೆ) ದೀರ್ಘವಾದ ಆಕಾರವುಳ್ಳದಾಗಿರುತ್ತದೆ.

ಎಲ್ಲ ಸಂದರ್ಭಗಳಲ್ಲಿ ಈ ಉತ್ತಮಿಕೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದ್ದೇವೆ. ಹೀಗಿದ್ದೂ ಅಲ್ಲಲ್ಲಿ ಉಳಿದಿರಬಹುದಾದ ದೋಷಗಳನ್ನು ಕ್ಷಮಿಸಬೇಕೆಂದು ಕೋರುತ್ತೇವೆ.

ಕೃತಜ್ಞತೆ

ಮಹಾಯಜ್ಞ ಸ್ವರೂಪದ ಇಂಥ ಯೋಜನೆಗೆ ಅನೇಕರ ನೆರವು ಅಗತ್ಯ. ಈ ನೆರವನ್ನು ಪಡೆದ ಭಾಗ್ಯ ನನ್ನದಾಗಿದೆ. ಈ ಯೋಜನೆಗೆ ಎರಡು ಲಕ್ಷ ರೂಪಾಯಿಗಳ ಅನುದಾನಕ್ಕೆ ಅಸ್ತು ಹೇಳಿದವರು ಕುಲಪತಿ ಡಾ. ಎಸ್. ರಾಮೇಗೌಡ ಅವರು. ಈ ಕಾರ್ಯ ಮುಂದುವರಿಯುವಂತೆ ಪ್ರೋತ್ಸಾಹಿಸಿದವರು ಇಂದಿನ ಕುಲಪತಿ ಡಾ. ಎಂ. ಎಂ. ಪಠಾನ ಅವರು. ಕಾರ್ಯದರ್ಶಿಗಳಾಗಿ ನಿರಂತರ ನೆರವಾದವರು ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಎಚ್. ವಿ. ನಾಗೇಶ್ ಅವರು. ಸದಸ್ಯರಾಗಿ ಸಹಕರಿಸಿದವರು ಡಾ. ಅ. ಸುಂದರ, ಡಾ. ಮಲ್ಲಿಕಾರ್ಜುನ ಪರಡ್ಡಿ, ಡಾ. ಎಂ. ಎನ್. ಜೋಶಿ ಅವರು. ಅನುವಾದದ ಹೊಣೆಹೊತ್ತವರು ಡಾ. ಶೇಷ ನವರತ್ನ (ಕೂಡ್ಲಿಗಿ), ಡಾ. ಎನ್. ಎಸ್. ರಾಮಚಂದ್ರ (ಮೈಸೂರು), ಶ್ರೀ ಎನ್. ಎಸ್. ಕೃಷ್ಣಜೋಯಿಸ (ಮೈಸೂರು), ಶ್ರೀ ಎಚ್. ಎಸ್. ಪಾಠಕ (ಮೈಸೂರು), ಡಾ. ಮಲ್ಲಿಕಾರ್ಜುನ ಪರಡ್ಡಿ (ಧಾರವಾಡ), ಶ್ರೀ ಎಚ್. ವಿ. ನಾಗರಾಜರಾವ್ (ಮೈಸೂರು), ಡಾ.

ಚಂದ್ರಮೌಳಿ ನಾಯ್ಕರ (ಧಾರವಾಡ), ಶ್ರೀಮತಿ ಟಿ. ಎಸ್. ಸತ್ಯವತಿ (ಬೆಂಗಳೂರು), ಶ್ರೀಮತಿ ಚೂಡಾಮಣಿ ನಂದಗೋಪಾಲ (ಬೆಂಗಳೂರು), ಶ್ರೀ ಆರ್. ಗಣೇಶ (ಬೆಂಗಳೂರು), ಶ್ರೀ ಟಿ. ವಿ. ಸತ್ಯನಾರಾಯಣ (ಮೈಸೂರು) ಮತ್ತು ಶ್ರೀ ಎಂ. ಎನ್. ಜೋಶಿ (ಧಾರವಾಡ). ಇವರೆಲ್ಲರಿಗೆ ಹೃತ್ಪೂರ್ವಕ ವಂದನೆಗಳು. ಚತುರ್ಥ ವಿಂಶತಿಯ ೫ ರಿಂದ ೧೫ರ ವರೆಗಿನ ಅಧ್ಯಾಯ, ಪಂಚಮ ವಿಂಶತಿಯ ೧೧ ರಿಂದ ೨೦ರ ವರೆಗಿನ ಅಧ್ಯಾಯಗಳ ಅನುವಾದ ಕಾರ್ಯದಲ್ಲಿ ಹೆಚ್ಚುವರಿ ಶ್ರಮಿಸಿದ ಶ್ರೀ ಎಚ್. ವಿ. ನಾಗರಾಜರಾವ್ ಅವರ ವಿದ್ವತ್ತಿನ ನೆರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಅಚ್ಚಿನ ಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸಿದ ವಿಶ್ವವಿದ್ಯಾಲಯ ಮುದ್ರಣ ವಿಭಾಗದ ನಿರ್ದೇಶಕರಾದ ಡಾ. ಎ. ಮುರಿಗೆಪ್ಪ ಅವರ ಉಪಕಾರವನ್ನು ಸ್ಮರಿಸುತ್ತೇನೆ. ಕರಡಚ್ಚು ಸಿದ್ಧಪಡಿಸಿಕೊಡುವಲ್ಲಿ ಪ್ರೀತಿಯಿಂದ ಸಹಕರಿಸಿದ ಶ್ರೀ ಟಿ. ಜಿ. ಹೊಂಗಲ ಅವರ ನೆರವನ್ನು, ಪ್ರೂಫ್ ನೋಡುವಲ್ಲಿ ಶ್ರಮಿಸಿದ ಶ್ರೀಮತಿ ಲಲಿತಾ ಗೌಳಿ ಅವರ ಸಹಾಯವನ್ನು ನೆನೆಯುತ್ತೇನೆ. ಹೀಗೆ ಅನೇಕರ ಸಹಕಾರದಲ್ಲಿ ಸಂಸ್ಕೃತದಿಂದ ಕನ್ನಡಕ್ಕೆ ಅವತಾರಗೊಂಡ ಈ ಕೃತಿಯನ್ನು ನನ್ನ ಪ್ರೀತಿಯ ಕನ್ನಡಿಗರ ಕೈಗೆ ನೀಡುತ್ತಿದ್ದೇನೆ.

೨೫ ಜೂನ್ ೧೯೯೮ **ಎಂ. ಎಂ. ಕಲಬುರ್ಗಿ**

---

೧. ಶಬ್ದಮಣಿದರ್ಪಣ ಡಿ. ಎನ್. ಎಲ್. ಸೂತ್ರ ೨೧೫ರ ಉದಾಹರಣೆ ನೋಡಿರಿ.

೨. ಮಾನಸೋಲ್ಲಾಸ ಪರಿಚಯ ಪು. ೧೦೨.

೩. ಮಾನಸೋಲ್ಲಾಸ ಪರಿಚಯ ಪು. ೧೧೪.

೪. ಮಾನಸೋಲ್ಲಾಸ ಪರಿಚಯ. ಪು. ೧೧೫

೫. ಮಾನಸೋಲ್ಲಾಸ ಪರಿಚಯ. ಪು. ೧೧೫

೬. ಮಾನಸೋಲ್ಲಾಸ ಪರಿಚಯ. ಪು. ೧೨೦.

ಆಕರ : ಮಾರ್ಗ ಸಂಪುಟ-೫

೩೪೧

ನಾಟ್ಯಭೂಷಣ

೧೯೯೮

ಆಧುನಿಕ ರಂಗಭೂಮಿಯ ಸಂದರ್ಭದಲ್ಲಿ ಏಣಗಿ ಬಾಳಪ್ಪನವರು ಎರಡನೆಯ ತಲೆಮಾರಿನ ಪ್ರತಿಭಾವಂತ ಕಲಾವಿದರು. ನಟರಾಗಿ, ನಾಟಕ ಕಂಪನಿಯ ಒಡೆಯರಾಗಿ ಆದರು ನಡೆದುಬಂದ ಬಣ್ಣದ ಬದುಕಿನ ದಾರಿ ದೀರ್ಘವಾಗಿದೆ, ಐದು ದಶಕಗಳನ್ನೂ ಮೀರಿ ವ್ಯಾಪಿಸಿದೆ. ಹೇಮರಡ್ಡಿ ಮಲ್ಲಮ್ಮ,

ಸೃಷ್ಟಿಸಿಕೊಳ್ಳುವುದು ಈ ಸಹೋದರರ ಒಂದು ಲಕ್ಷಣ. ಸಮಾಜಕ್ಕೆ ಪ್ರಯೋಜಕರಾಗಿ ಬದುಕುವುದರಲ್ಲಿ ಜೀವನ ಸಾರ್ಥಕತೆಯಿದೆ - ಎಂಬುದು ಅವರ ನಂಬಿಕೆ. ಇದರಿಂದಾಗಿ ಅವರ ಉಪಕಾರ - ಉದಾರತೆಗಳಲ್ಲಿ, ಸ್ನೇಹ - ಸಹಾಯಗಳಲ್ಲಿ ಬೆಳೆದವರು ನೂರಾರು ಅಲ್ಲ, ಸಾವಿರಾರು ಜನ. ಒಟ್ಟಾರೆ ಬಿ. ಟಿ. ಸಾಸನೂರ ವಿದ್ವತ್ತಿಗೆ ಬರೆದ ವ್ಯಾಖ್ಯಾನ, ಸ್ನೇಹಕ್ಕೆ ಬರೆದ ಸೂತ್ರ.

ಈ ಮನೆತನದ ಮುಂದಿನ ತಲೆಮಾರು ಸಹ ಸುಶಿಕ್ಷಿತ - ಸುಪ್ರತಿಷ್ಠಿತವಾದುದು. ಎಂ. ಟಿ. ಯವರ ಮಗ ರವೀಂದ್ರ ಪ್ರಾಧ್ಯಾಪಕ ; ಎಚ್. ಟಿ. ಯವರ ಮಗ ಅಶೋಕ ಡಾಕ್ಟರ್. ಬಿ. ಟಿ. ಯವರ ಒಬ್ಬ ಮಗ ವಿಜಯ (ದಿವಂಗತ) ಪೋಲೀಸ್ ವರಿಷ್ಠ ಅಧಿಕಾರಿ - ಗಣ್ಯಸಾಹಿತಿ, ಇನ್ನೊಬ್ಬ ಮಗ ಅಜಿತ ಜಾಯಿಂಟ್ ರಜಿಸ್ಟಾರ್ ಆಫ್ ಕೋ ಆಪರೇಟಿವ್ ಸೊಸೈಟೀಜ್, ಮತ್ತೊಬ್ಬ ಮಗ ಮೋಹನ ಅಸಿಸ್ಟಂಟ್ ಕಮೀಶನರ್. ಹೀಗೆ ಸಾರ್ಥಕ ಸಂತಾನವನ್ನು ಹೊಂದಿದೆ, ಸಾಸನೂರ ಮನೆತನ.

'ವಜ್ರಕುಸುಮ' ಈ ಗೌರವ ಗ್ರಂಥದ ಹೆಸರು. ಇದಕ್ಕೆ ಕಾರಣ ಪ್ರೊ. ಬಿ. ಟಿ. ಸಾಸನೂರ ಅವರು ವಜ್ರದಷ್ಟು ಕಠಿಣ, ಕುಸುಮದಷ್ಟು ಕೋಮಲ. ಈ ಗ್ರಂಥ ಎರಡು ಭಾಗಗಳನ್ನೊಳಗೊಂಡಿದೆ : ಸಾಸನೂರದರ್ಶನ, ಶಾಸ್ತ್ರದರ್ಶನ. ಶಾಸ್ತ್ರದರ್ಶನದಲ್ಲಿ ಮತ್ತೆ ಎರಡು ಭಾಗಗಳಿವೆ : ಪ್ರಾಚೀನ ಶಾಸ್ತ್ರದರ್ಶನ, ಆಧುನಿಕ ಶಾಸ್ತ್ರದರ್ಶನ. ಈ ವಿಭಾಗಗಳ ಉದ್ದೇಶ, ಸಾಸನೂರ ಅವರನ್ನು, ಅವರು ಪ್ರೀತಿಸುತ್ತಿದ್ದ ಸಾಹಿತ್ಯ ಸಂಬಂಧಿ ಶಾಸ್ತ್ರಗಳನ್ನು ಅರ್ಥಮಾಡಿಕೊಳ್ಳುವುದಾಗಿದೆ. ಸಾಹಿತ್ಯವೆನ್ನುವುದು ಸಮಾಜದ ಸೃಷ್ಟಿಯೆಂಬ ಕಾರಣಕ್ಕಾಗಿ 'ಸಮಾಜಶಾಸ್ತ್ರ' ಪ್ರಬಂಧಗಳನ್ನೂ ಸೇರಿಸಲಾಗಿದೆ.

'ಸಾಸನೂರ ದರ್ಶನ' ಬಿ. ಟಿ. ಯವರ ಸಮಗ್ರ ಬದುಕನ್ನು ಕುರಿತ ಸುದೀರ್ಘ ಲೇಖನದಿಂದ ಆರಂಭವಾಗುತ್ತದೆ. ಆಮೇಲೆ, ಅವರ ಒಡನಾಟದಲ್ಲಿ ಸಂಭವಿಸಿದ ಘಟನೆಗಳ ಚಿತ್ರಗಳನ್ನು ೫೦ ಜನ ಆತ್ಮೀಯರು ಬಿಡಿಸಿದ ಲೇಖನಗಳಿವೆ. ಸಾಮಾನ್ಯವಾಗಿ ಗೌರವ ಗ್ರಂಥಗಳಲ್ಲಿ ವ್ಯಕ್ತಿಯನ್ನು ಕುರಿತ ಲೇಖನಗಳ ವಿಷಯ ಪುನರುಕ್ತಿಯಿಂದ ಕೂಡಿರುತ್ತವೆ. ನೋಡಲಿಕ್ಕೆ ಬೇರೆ ಬೇರೆ ಎನಿಸಿದರೂ ಒಟ್ಟು ಪರಿಣಾಮದಲ್ಲಿ, ಆ ಇಡಿ ಗ್ರಂಥ ಮೂಲತಃ ಒಂದೇ ಲೇಖನವೆನಿಸುತ್ತದೆ. ಇದನ್ನು ತಪ್ಪಿಸಲು 'ನಿಮ್ಮ ಮತ್ತು ಬಿ. ಟಿ. ಯವರ ನಡುವೆ ಸಂಭವಿಸಿದ ಘಟನೆಗಳನ್ನು ದಾಖಲಿಸಿ, ಅದರಿಂದ ವ್ಯಕ್ತವಾಗುವ ಅವರ ಸ್ವಭಾವವನ್ನು ಚಿತ್ರಿಸಿರಿ' ಎಂದು ಲೇಖಕರಿಗೆ ಸೂಚಿಸಲಾಗಿದ್ದಿತು.

ಬಿ. ಟಿ. ಯವರದು ಬಹುಮುಖಿ ಬದುಕು. ಅವರ ಸುತ್ತ ವಿದ್ಯಾರ್ಥಿಗಳಿದ್ದಾರೆ, ಶಿಕ್ಷಕರಿದ್ದಾರೆ, ಸಾರ್ವಜನಿಕರಿದ್ದಾರೆ, ಬಡವರಿದ್ದಾರೆ, ಶ್ರೀಮಂತರಿದ್ದಾರೆ. ಹೀಗೆ ಅವರ ಸಂಪರ್ಕವಲಯ ವೈವಿಧ್ಯಪೂರ್ಣವಾದುದು. ಬಿ. ಟಿ.ಯವರ ಮತ್ತು ಇವರ ನಡುವೆ ಸಂಭವಿಸಿದ ಘಟನೆ, ಆಗ ಅವರು ನಡೆದುಕೊಂಡ ರೀತಿ, ತೆಗೆದುಕೊಂಡ ನಿರ್ಣಯ, ಇವುಗಳನ್ನು ಚಿತ್ರಿಸುವುದೆಂದರೆ, ಘಟಿಸಿದ ಕೃತಿಗಳಿಂದ 'ಮೂಲ ಆಕೃತಿ'ಯನ್ನು ಕಂಡು ಹಿಡಿಯುವುದು. ವ್ಯಕ್ತವಾದ ಘಟನೆಗಳಿಂದ 'ವ್ಯಕ್ತಿ'ಯನ್ನು ಚಿತ್ರಿಸುವುದು. ಈ ಉಪಕ್ರಮದಿಂದಾಗಿ ಸಿಟ್ಟು - ಸ್ನೇಹ, ಶಕ್ತಿ - ಮಿತಿ, ಗೆಲುವು - ಸೋಲು, ಪಾಂಡಿತ್ಯ - ಆಡಳಿತ, ವಿನೋದ - ಗಾಂಭೀರ್ಯ ಹೀಗೆ ವ್ಯಕ್ತಿಯ ಬದುಕಿನ ಸಮಗ್ರಚಿತ್ರ ನೈಜರೂಪದಲ್ಲಿ ಆಕಾರ ಪಡೆಯುತ್ತದೆ. ಇಂಥ ಒಂದು ಪ್ರಯೋಗವನ್ನು ಇಲ್ಲಿ ಮಾಡಲಾಗಿದೆ. ಬಿ. ಟಿ.ಯವರದು ಬಹುಮುಖಿ ವ್ಯಕ್ತಿತ್ವವಾದುದರಿಂದ, ಅವರ ವಿಭಿನ್ನ ಚಹರೆಗಳು ಇಲ್ಲಿ ಮೂಡಿನಿಂತಿವೆ.

ಎರಡನೆಯ ಭಾಗಕ್ಕಾಗಿ ನಾವು ಲೇಖಕರಿಗೆ ನೀಡಿದ್ದ ಒಂದು ಸ್ಥೂಲ ಸೂಚನೆ : "ಶಾಸ್ತ್ರ : ಪರಿಕಲ್ಪನೆ, ಸ್ವರೂಪ, ಕರ್ನಾಟಕದಲ್ಲಿ ಬೆಳವಣಿಗೆ". ಇಲ್ಲಿ ಸಂಕಲಿತವಾದ ಪ್ರಾಚೀನ ಶಾಸ್ತ್ರಗಳು ಸಂಸ್ಕೃತದಲ್ಲಿ, ಆಧುನಿಕ ಶಾಸ್ತ್ರಗಳು ಇಂಗ್ಲಿಷಿನಲ್ಲಿ ಪ್ರಬುದ್ಧ ರೀತಿಯಲ್ಲಿ ಬೆಳೆದಿವೆ. ಇವುಗಳ ಪ್ರಭಾವದಲ್ಲಿ

ಕನ್ನಡ ಶಾಸ್ತ್ರಗಳು ಬೆಳೆದಿವೆ, ಬೆಳೆಯುತ್ತಲಿವೆ. ಹೀಗಾಗಿ ಇಲ್ಲಿಯ ಲೇಖನಗಳಲ್ಲಿ ಕಟ್ಟುನಿಟ್ಟಾದ ಏಕರೂಪತೆ ಸಾಧಿಸುವುದು ತೀರ ಕಷ್ಟ. ಅದೇನೇ ಇರಲಿ, ಬಿ. ಟಿ. ಯವರಿಗೆ ಪ್ರಿಯವಾದ "ಸಾಹಿತ್ಯ ಶಾಸ್ತ್ರ" ಪರಿವಾರದ ಪ್ರಬಂಧಗಳು ಇಲ್ಲಿವೆ. ಅಭ್ಯಾಸಿಗಳಿಗೆ ಒಂದು ಆಕರಗ್ರಂಥ ರೂಪಗೊಳ್ಳಬೇಕೆಂಬ ಆಸೆಯನ್ನು ಈಡೇರಿಸಿದ ಸಮಾಧಾನ ನಮ್ಮದಾಗಿದೆ. ಇವೆಲ್ಲ ಹೊಸದಾಗಿ ಬರೆಯಿಸಿದ ಪ್ರಬಂಧಗಳು. ಆದರೆ "ಶೈಲಿಶಾಸ್ತ್ರ", "ಸೌಂದರ್ಯಶಾಸ್ತ್ರ" ಹೆಸರಿನ ಲೇಖನಗಳನ್ನು ಕ್ರಮವಾಗಿ "ಶೈಲಿಶಾಸ್ತ್ರ", "ಸೌಂದರ್ಯ ಮೀಮಾಂಸೆ" ಗ್ರಂಥಗಳಿಂದ ಸಂಗ್ರಹಿಸಿದ್ದೇವೆ. ಒಪ್ಪಿಗೆ ನೀಡಿದ ಡಾ. ಕೆ. ವಿ. ನಾರಾಯಣ ಮತ್ತು ಡಾ. ಜಿ. ಶ್ರೀನಿವಾಸನ್ ಅವರಿಗೂ, ಈ ಕೃತಿಗಳ ಪ್ರಕಾಶಕರಿಗೂ, ಮಿಕ್ಕಂತೆ ಸಕಾಲಕ್ಕೆ ಲೇಖನ ಪೂರೈಸಿದ ಎಲ್ಲ ಆತ್ಮೀಯರಿಗೂ ಕೃತಜ್ಞತೆಗಳು.

ಈ ಗ್ರಂಥ ಪ್ರಕಟನೆಯ ಎಲ್ಲ ಹಂತಗಳಲ್ಲಿ ನೆರವಾದ ಸಂಪಾದಕ ಸಮಿತಿಯ ಸದಸ್ಯರನ್ನು, ವಿಶೇಷ ನೆರವು ನೀಡಿದ ಪ್ರಿ. ಸದಾನಂದ ಕನವಳ್ಳಿ, ಶ್ರೀ ಮಹಾಂತ ಗುಲಗಂಜಿ ಅವರನ್ನು, ದೊಡ್ಡ ರೀತಿಯಲ್ಲಿ ಬೆಂಬಲ ನೀಡಿದ ವಿಶೇಷ ಜಿಲ್ಲಾಧಿಕಾರಿಗಳಾದ ಆತ್ಮೀಯ ವಿ. ಎ. ಮಾಚಕನೂರ ಮತ್ತು ಅವರ ಇತರ ಅಧಿಕಾರಿ ಮಿತ್ರರನ್ನು, ಪ್ರೊ. ವಿ. ಎನ್. ಸಿಂಪಿ, ಡಾ. ಬಿ. ವಿ. ಶಿರೂರ, ವಿದ್ಯಾರ್ಥಿಮಿತ್ರ ಶ್ರೀ ಶಶಿಧರ ತೋಡಕರ ಅವರ ಸಹಾಯವನ್ನು ನೆನೆಯುತ್ತೇನೆ.

ಮುಖಪುಟದ ಚಿತ್ರ ಆತ್ಮೀಯ ಶ್ರೀ ಕೆ. ಕೆ. ಮಕಾಳಿ ಅವರು ಬರೆದುದು. ಬೆನ್ನುಪುಟದ ರೇಖಾಚಿತ್ರ ಅಗಲಿದ ಪ್ರಸಿದ್ಧ ಕಲಾವಿದ ಶ್ರೀ ಶಂಕರ ಪಾಟೀಲ ಅವರದು. ವಿಜಯ ಸಾಸನೂರ ಅವರ ಫೋಟೋ ಪೂರೈಸಿದವರು ಕಲಾವಿದ ಶ್ರೀ ಡಿ. ಸಿ. ನಾಗೇಶ ಅವರು. ಇವರೆಲ್ಲರಿಗೆ ಕೃತಜ್ಞನಾಗಿದ್ದೇನೆ. ಸಾಸನೂರ ಕುಟುಂಬದ ಎಲ್ಲ ಸದಸ್ಯರ ಸಹಕಾರವನ್ನು ಸ್ಮರಿಸುತ್ತೇನೆ.

---

* ಪ್ರಥಮ ಆವೃತ್ತಿ : ಬಿ.ಟಿ.ಸಾಸನೂರ ಅಭಿನಂದನ ಸಮಿತಿ, ಬಿಜಾಪುರ

ಆಕರ : ಮಾರ್ಗ ಸಂಪುಟ-೫

■■

೩೪೪೪

ಫ. ಗು. ಹಳಕಟ್ಟಿ ಸಮಗ್ರಸಾಹಿತ್ಯ

೨೦೦೭

ನಿಮ್ಮ ನೆನಪು ಸುಖದ ಸಮುದ್ರ

ಡಾ. ಫ. ಗು. ಹಳಕಟ್ಟಿಯವರು ಹುಟ್ಟಿದ್ದು, ಬೆಳೆದದ್ದು ಆಂಗ್ಲರ ಆಡಳಿತ ಕಾಲದಲ್ಲಿ. ಇದು ಕರ್ನಾಟಕದ ಇತಿಹಾಸದಲ್ಲಿ ಹೊಸ ಬಗೆಯ ಎಚ್ಚರ ಮೂಡಿದ್ದ ಕಾಲ; ಲಿಂಗಾಯತರಿಗೆ ಹೊಸ

ಅವಕಾಶಗಳು ತೆರೆದುಕೊಂಡಿದ್ದ ಕಾಲ. ಪರಂಪರೆಯನ್ನು ಶೋಧಿಸುವ, ಪ್ರಗತಿಯನ್ನು ಸಾಧಿಸುವ - ಹೀಗೆ ಎರಡು ಬಗೆಯ ಪ್ರಯತ್ನಗಳು ಈ ಕಾಲದ ಲಿಂಗಾಯತರಲ್ಲಿ ಕಾಣಿಸಿಕೊಂಡವು. ಇಂಥ ಪ್ರಯತ್ನಶೀಲರಲ್ಲಿ ಅಗ್ರಮಾನ್ಯರೆನಿಸಿದ್ದಾರೆ, ಹಳಕಟ್ಟಿಯವರು.

ಡಾ. ಹಳಕಟ್ಟಿಯವರು ಮೂಲತಃ ಧಾರವಾಡದವರು. ಅಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದ ಇವರ ತಂದೆ ಶ್ರೀ ಗುರುಬಸಪ್ಪನವರದು ಸಾರ್ವಜನಿಕ ವ್ಯಕ್ತಿತ್ವ. ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಕರ್ನಾಟಕ ವಿದ್ಯಾವರ್ಧಕ ಸಂಘಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತಲಿದ್ದ ಇವರು, ಲೇಖಕರಾಗಿದ್ದುದೂ ಒಂದು ವಿಶೇಷ. ಇವರ ಹೆಂಡತಿ ದಾನಮ್ಮ. ಈ ದಂಪತಿಗಳ ಮಗ ಫಕೀರಪ್ಪನವರು ೧೮೮೦ ಜುಲೈ ೨ರಂದು ಹುಟ್ಟಿದರು.

ಧಾರವಾಡದಲ್ಲಿ ಹೈಸ್ಕೂಲ ವರೆಗೆ ಅಭ್ಯಾಸ, ಮುಂಬಯಿಯಲ್ಲಿ ಬಿ. ಎ., ಎಲ್. ಎಲ್. ಬಿ. ಅಭ್ಯಾಸ ಪೂರೈಸಿದ ಇವರು, ವಕೀಲವೃತ್ತಿಗಾಗಿ ೧೯೦೪ರಲ್ಲಿ ವಿಜಾಪುರಕ್ಕೆ ಬಂದರು. ೧೯೧೦ರಲ್ಲಿ ಬಿ.ಎಲ್.ಡಿ.ಇ. ಸಂಸ್ಥೆ, ೧೯೧೨ರಲ್ಲಿ ಸಿದ್ಧೇಶ್ವರ ಸಂಸ್ಥೆ, ೧೯೧೩ರಲ್ಲಿ ಸಹಕಾರಿ ಸಂಘ, ೧೯೧೪ರಲ್ಲಿ ಸಿದ್ಧೇಶ್ವರ ಹೈಸ್ಕೂಲಗಳನ್ನು ಸ್ಥಾಪಿಸಿದರು. ೧೯೧೭ರಲ್ಲಿ ವಿಜಾಪುರ ಜಿಲ್ಲಾ ಕಾಂಗ್ರೆಸ್ ಕಮೀಟಿ ಕಾರ್ಯದರ್ಶಿ, ೧೯೧೯ರಲ್ಲಿ ವಿಜಾಪುರ ನಗರ ಸಭೆ ಮತ್ತು ಸೆಂಟ್ರಲ್ ಬ್ಯಾಂಕ್ ಸದಸ್ಯ, ೧೯೨೦ರಲ್ಲಿ ಮುಂಬೈ ವಿಧಾನ ಸಭೆಯ ಸದಸ್ಯರಾಗಿ ಕೆಲಸಮಾಡಿದರು. ಈ ಸಾರ್ವಜನಿಕ ಕೆಲಸವನ್ನು ಹಳಕಟ್ಟಿಯವರ ಜೀವನದ ಮೊದಲ ಘಟ್ಟವೆಂದು ಕರೆಯಬಹುದಾಗಿದೆ. ಈ ಹೊತ್ತಿಗಾಗಲೇ ಹಸ್ತಪ್ರತಿ ಸಂಗ್ರಹ - ಅಧ್ಯಯನದ ಹವ್ಯಾಸ ಬೆಳೆಸಿಕೊಂಡಿದ್ದರೂ, ಹೀಗೆ ಸಾರ್ವಜನಿಕ ಜೀವನದಲ್ಲಿ ಒಂದು ಪ್ರತಿಷ್ಠಿತ ಘಟ್ಟ ಸಾಧಿಸಿದ ತರುವಾಯವೇ ಇವರು ನೇರವಾಗಿ ಸಾಹಿತ್ಯ ಪ್ರಕಟನೆಯ ಘಟ್ಟ, ಅದರಲ್ಲಿಯೂ ವಚನಸಾಹಿತ್ಯ ಪ್ರಕಟನೆಯ ಘಟ್ಟಕ್ಕೆ ಹೊರಳಿದರೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಇವರು, ಬಸವಣ್ಣನವರ ವಚನಗಳ ಇಂಗ್ಲಿಷ್ ಅನುವಾದದ ಮೂಲಕ (ಇಂಡಿಯನ್ ಆ್ಯಂಟಿಕ್ವೆರಿ ೧೯೨೨) ತಮ್ಮ ಜೀವಮಾನದ ಎರಡನೆಯ ಘಟ್ಟವನ್ನು ಆರಂಭಿಸಿದರು. ಆಮೇಲೆ ೧೯೨೩ರಲ್ಲಿ 'ವಚನಶಾಸ್ತ್ರಸಾರ' ಹೆಸರಿನ ಬೃಹತ್ ವಚನಸಂಕಲನವನ್ನು ಬೆಳಕಿಗೆ ತರುವ ಮೂಲಕ, ವಚನಸಾಹಿತ್ಯ ಪ್ರಕಟನೆಯ ಕ್ಷೇತ್ರದಲ್ಲಿ ದೊಡ್ಡ ಬೆಳಕಾಗಿ ಕಾಣಿಸಿಕೊಂಡರು. ೧೯೨೫ರಲ್ಲಿ 'ಹಿತಚಿಂತಕ ಪ್ರಿಂಟಿಂಗ್ ಪ್ರೆಸ್' ಸ್ಥಾಪಿಸಿ, ೧೯೨೬ರಲ್ಲಿ "ಶಿವಾನುಭವ ಪತ್ರಿಕೆ"ಯನ್ನು ಆರಂಭಿಸುವಲ್ಲಿ ಈ ಬೆಳಕು ಇನ್ನು ದೊಡ್ಡದಾಗಿ ಬೆಳಗಿತು. ಅದೇ ವರ್ಷ (೧೯೨೬) 'ಶಿವಾನುಭವ ಗ್ರಂಥಮಾಲೆ'ಯನ್ನು ಪ್ರಾರಂಭಿಸಿ "ಶ್ರೀ ಬಸವೇಶ್ವರನ ವಚನಗಳು" ಹೆಸರಿನ ಪ್ರಥಮ ಕೃತಿಯನ್ನು ಪ್ರಕಟಿಸಿ, ವಚನಸಾಹಿತ್ಯ ಸಂಪಾದನೆಗೆ ಶ್ರೀಕಾರ ಹಾಕಿದರು. ಆಮೇಲೆ ಪ್ರಾಚೀನ ಮತ್ತು ಸ್ವತಂತ್ರ ಗ್ರಂಥಗಳನ್ನು 'ಶಿವಾನುಭವ' ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟಿಸಿ, ಬಳಿಕ ಅವುಗಳನ್ನೇ 'ಶಿವಾನುಭವ ಗ್ರಂಥಮಾಲೆ'ಯಲ್ಲಿ ಕೃತಿಯಾಗಿ ಹೊರ ತರುವ ಉಪಕ್ರಮವನ್ನು ಆರಂಭಿಸಿದರು. ಹೀಗಿದ್ದೂ ಆರ್ಥಿಕ ತೊಂದರೆಯಿಂದಾಗಿ ಕೆಲವು ಗ್ರಂಥಗಳು ಪತ್ರಿಕೆಯಲ್ಲಿ, ಮತ್ತೆ ಕೆಲವು ಹಸ್ತಪ್ರತಿಯಲ್ಲಿ ಉಳಿದವು.

ಗ್ರಂಥಗಳನ್ನಲ್ಲದೆ, "ಶಿವಾನುಭವ" ಪತ್ರಿಕೆಯಲ್ಲಿ ಹಳಕಟ್ಟಿಯವರು ಅನೇಕ ಲೇಖನಗಳನ್ನು ಬರೆದಿದ್ದಾರೆ. ಇವರ ಸಾಹಿತ್ಯಿಕ ಮತ್ತು ಸಾರ್ವಜನಿಕ ಸೇವೆಯ ಸ್ವರೂಪ - ವಿಸ್ತಾರಗಳನ್ನು ಇವರೇ ಬರೆದ "ನನ್ನ ೭೫ ವರ್ಷಗಳು", "ಶಿವಾನುಭವ ಪತ್ರಿಕೆಯ ೨೫ ವರ್ಷಗಳ ವರದಿಯು" (೨೫ - ೧೨) ಎಂಬ ಲೇಖನಗಳ ಮೂಲಕ ತಿಳಿಯಬಹುದಾಗಿದೆ. ಈ ಎಲ್ಲ ಸಾಧನೆಗೆ ತಂದೆ ಗುರುಬಸಪ್ಪನವರು

ನೀಡಿದ್ದ ಸಂಸ್ಕಾರ ಮತ್ತು ಹೆಂಡತಿಯ ತಂದೆ ತಮ್ಮಣ್ಣಪ್ಪ ಚಿಕ್ಕೋಡಿಯವರು ತೋರಿದ ಮಾರ್ಗದರ್ಶನಗಳೂ ಕಾರಣವೆಂಬುದನ್ನು ಮರೆಯುವಂತಿಲ್ಲ.

ಡಾ. ಹಳಕಟ್ಟಿಯವರು ರಚಿಸಿರುವ ಸಾಹಿತ್ಯ ಮೌಲಿಕವಾಗಿರುವಂತೆ ಅಪಾರವೂ ಆಗಿದೆ. ದುರ್ದೈವದ ಸಂಗತಿಯೆಂದರೆ, ಹತ್ತಾರು ಬಗೆಯ ಕೆಲಸಗಳಿಂದಾಗಿ ಅವರು ಅದನ್ನು ವ್ಯವಸ್ಥಿತವಾಗಿ ಪ್ರಕಟಿಸಲಿಲ್ಲ. ನಿಧನರಾಗಿ (೨೯-೬-೧೯೬೪) ನಾಲ್ಕು ದಶಕ ಗತಿಸಿದರೂ, ಅವರು ಪ್ರಕಟಿಸಿದುದನ್ನು ಈ ವರೆಗೆ ಯಾರೂ ಸಮಗ್ರವಾಗಿ ಸಂಗ್ರಹಿಸಲಿಲ್ಲ, ಸಂಯೋಜಿಸಲಿಲ್ಲ. ಹೀಗಾಗಿ ಅವರು ಪ್ರಕಟಿಸಿದ್ದು ಏನು? ಎಷ್ಟು ? ಎಲ್ಲಿ ? ಇತ್ಯಾದಿಗಳು ಒಂದು ಅಂದಾಜಿಗೆ ಸಿಗದೆ ಹರಿದು ಹಂಚಿಹೋಗಿವೆ. ದಿನಗಳೆದಂತೆ ಇದರ ಬಹುಭಾಗ ಕಣ್ಮರೆಯಾಗಬಹುದು ; ಉಳಿದ ಭಾಗ ಸಂದೇಹ ಹುಟ್ಟಿಸಬಹುದು. ಈ ಪರಿಸ್ಥಿತಿ ನಿರ್ಮಾಣವಾಗುವ ಮೊದಲು ಅವರ ಎಲ್ಲ ಸಾಹಿತ್ಯವನ್ನು ಒಂದೆಡೆ ವ್ಯವಸ್ಥಿತವಾಗಿ ಹಿಡಿದು ಹಾಕುವುದು ಇಂದಿನ ಬಹುಮುಖ್ಯ ಅಗತ್ಯವೆನಿಸಿದೆ. ಇದನ್ನು ಮನದಂದು ಈ ಯೋಜನೆಯನ್ನು ಅಸ್ತಿತ್ವಕ್ಕೆ ತರಲಾಗಿದೆ.

ಈ ಯೋಜನೆ ಪ್ರಧಾನವಾಗಿ ಶಿವಾನುಭವ ಗ್ರಂಥಮಾಲೆ, ಶಿವಾನುಭವ ಪತ್ರಿಕೆಗಳಲ್ಲಿ ಪ್ರಕಟವಾದ ಹಳಕಟ್ಟಿಯವರ ಸಾಹಿತ್ಯಕ್ಕೆ ಸೀಮಿತವಾಗಿದೆ. ಪೂರಕವಾಗಿ ಅನ್ಯರ ಕೃತಿಗಳಿಗೆ ಬರೆದ ಮುನ್ನುಡಿ - ವಿಮರ್ಶೆ, ಮಾಡಿದ ಭಾಷಣ ಇತ್ಯಾದಿಗಳನ್ನೊಳಗೊಂಡಿದೆ (ನವಕರ್ನಾಟಕ ಪತ್ರಿಕೆಯಲ್ಲಿಯ ಬರವಣಿಗೆ, ಸರಕಾರಿ ಮತ್ತು ಸಾರ್ವಜನಿಕ ಕ್ಷೇತ್ರಗಳಿಗೆ ಸಂಬಂಧಪಟ್ಟ ಪತ್ರ ವ್ಯವಹಾರ ಇತ್ಯಾದಿಗಳನ್ನು ಇಲ್ಲಿ ಕೈಬಿಡಲಾಗಿದೆ).

ಯೋಜನೆಯ ಆರಂಭ :

ವಿಜಾಪುರ ಬಿ.ಎಲ್.ಡಿ.ಇ.ಸಂಸ್ಥೆ "ಡಾ. ಫ. ಗು. ಹಳಕಟ್ಟಿ ಸ್ಮಾರಕ ಭವನ" ಕಟ್ಟಡದ ಉದ್ಘಾಟನ ಸಮಾರಂಭವನ್ನು ದಿನಾಂಕ ೨ ಜುಲೈ ೨೦೦೩ರಂದು ಹಮ್ಮಿಕೊಂಡಿದ್ದಿತು. ಈ ಸಮಾರಂಭಕ್ಕೆ ಅನೇಕ ಮಠಾಧೀಶರು ಸಾಮಾಜಿಕ ಗಣ್ಯರು ಆಗಮಿಸಿದ್ದರು. ಅತಿಥಿಯಾಗಿದ್ದ ನನಗೆ ಈ ಕಟ್ಟಡ ಸದುಪಯೋಗವಾಗಬೇಕು, ಅರ್ಥಪೂರ್ಣ ಕಾರ್ಯಕ್ರಮ ಮತ್ತು ಯೋಜನೆಗಳಿಂದ ಇದನ್ನು ತುಂಬಬೇಕೆಂಬ ವಿಚಾರ ಹೊಳೆಯಿತು. ಧಾರವಾಡಕ್ಕೆ ಮರಳಿದವನೇ ಸಂಸ್ಥೆಯ ಅಧ್ಯಕ್ಷರಾದ ಮಾನ್ಯ ಶ್ರೀ ಎಂ. ಬಿ. ಪಾಟೀಲ ಅವರಿಗೆ "ಸಮಗ್ರ ಹಳಕಟ್ಟಿ ಸಾಹಿತ್ಯ ಪ್ರಕಟನ ಯೋಜನೆ"ಯನ್ನು ಅಸ್ತಿತ್ವಕ್ಕೆ ತರುವ ಬಗ್ಗೆ ಪತ್ರ (೧೩. ೮. ೨೦೦೩) ಬರೆದೆ. ಜಗದ್ಗುರು ಶ್ರೀ ತೋಂಟದಾರ್ಯ ಸ್ವಾಮೀಜಿ, ಶ್ರೀ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಮುಂದೆ, ಗಣ್ಯರ ಮುಂದೆ, ಈ ವಿಷಯವನ್ನು ಪ್ರಸ್ತಾಪಿಸಿದೆ. ಪೂಜ್ಯ ಶ್ರೀ ಸಿದ್ಧೇಶ್ವರಸ್ವಾಮೀಜಿಯವರಿಗೆ ಪತ್ರ ಬರೆದೆ. ಇದರಿಂದಾಗಿ ಒಂದು ಸರಿಯಾದ ವಾತಾವರಣ ನಿರ್ಮಾಣವಾಯಿತು. ಹಗರಿಬೊಮ್ಮನಹಳ್ಳಿಯಲ್ಲಿ ಜರುಗಿದ ಪೂಜ್ಯ ಶ್ರೀ ಸಿದ್ಧೇಶ್ವರಸ್ವಾಮೀಜಿ ಅವರ ಪ್ರವಚನದ ಮಂಗಲೋತ್ಸವಕ್ಕೆ ಆಗಮಿಸಿದ್ದ ಶ್ರೀ ಶಿವರಾತ್ರಿ ದೇಶಿಕೇಂದ್ರಸ್ವಾಮಿಯವರು, ಅಲ್ಲಿ ಈ ಬಗ್ಗೆ ಒಂದು ಸಭೆ (೧೧-೨-೨೦೦೪)ಯನ್ನೇ ನಿರ್ದಿಷ್ಟಪಡಿಸಿದರು. ಹಗರಿಬೊಮ್ಮನಹಳ್ಳಿ ನೆರೆಯ ವಲ್ಲಭಾಪುರದಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರ ವಾಸ್ತವ್ಯ. ಇಲ್ಲಿಯೇ ಸಭೆ ಸೇರಿತು. ವಲ್ಲಭಾಪುರವು ಮಾನ್ಯ ಸಚಿವರಾದ ಶ್ರೀ ಎಂ. ಪಿ. ಪ್ರಕಾಶ ಅವರ ಸ್ವಗ್ರಾಮ. ಹೀಗಾಗಿಯೇ ಸಭೆಯಲ್ಲಿ ಸಹಜವಾಗಿಯೇ ಅವರೂ ಭಾಗವಹಿಸಿದ್ದರು. ವಿಜಾಪುರದಿಂದ ಬಿ. ಎಲ್. ಡಿ. ಇ. ಸಂಸ್ಥೆಯ ಪರವಾಗಿ ಶ್ರೀ ಶಿವಯೋಗಿ ತಂಬಾಕೆ, ಶ್ರೀ ಎಸ್. ಸಿ. ಉಪ್ಪಿನ, ಶ್ರೀ ಎಂ. ಎಸ್. ಮದಭಾವಿಯವರು ಆಗಮಿಸಿದ್ದರು. ಧಾರವಾಡದಿಂದ

ಡಾ. ವೀರಣ್ಣ ರಾಜೂರ, ಶ್ರೀ ಸಿದ್ಧಲಿಂಗ ದೇಸಾಯಿ ಮತ್ತು ನಾನು ಹೋಗಿದ್ದೆವು. ಸುದೀರ್ಘ ಚರ್ಚೆ ನಡೆದು "ಸಮಗ್ರ ಹಳಕಟ್ಟಿ ಸಾಹಿತ್ಯ ಪ್ರಕಟನ ಯೋಜನೆ" ಎಂ. ಪಿ. ಪ್ರಕಾಶ ಅವರ ವಲ್ಲಭಾಪುರದಲ್ಲಿ ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗ. ನಾನು ಕೈಕೊಂಡ "ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ"ಯನ್ನು ಮಂಜೂರು ಮಾಡುವಲ್ಲಿ, "ಶ್ರೀ ತೋಂಟದ ಸಿದ್ಧಲಿಂಗೇಶ್ವರ ಸಮಗ್ರ ಸಾಹಿತ್ಯ ಯೋಜನೆ"ಗೆ ಹಣ ಬಿಡುಗಡೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಸಚಿವ ಶ್ರೀ ಪ್ರಕಾಶ ಅವರು, ನನ್ನ ಈ ಯೋಜನೆಯ ಮೊದಲ ಸಭೆಯಲ್ಲಿಯೂ ಭಾಗಿಯಾದುದು ಇನ್ನೊಂದು ಯೋಗಾಯೋಗ. ಇಲ್ಲಿಂದ ಧಾರವಾಡಕ್ಕೆ ಮರಳಿದವನೇ ಸಂಪಾದಕರ ಹೆಸರು, ಅವರ ಸಂಪುಟದ ಹೆಸರು ನಿರ್ಧರಿಸಿ, ಎಲ್ಲರಿಗೂ ಪತ್ರಬರೆದು ಸಮ್ಮತಿ ಪಡೆದುಕೊಂಡೆನು.

ಈ ಯೋಜನೆಗೆ ಅವಶ್ಯವಾದುದು, ಡಾ. ಹಳಕಟ್ಟಿಯವರ ಸಮಗ್ರ ಗ್ರಂಥ ಮತ್ತು ಲೇಖನ ರೂಪದ ಸಾಹಿತ್ಯ. ಇದರ ಬಹುಭಾಗ ಬೆಳಗಾವಿಯ ನಾಗನೂರು ಮಠದ "ಲಿಂಗಾಯತ ಸಂಶೋಧನ ಕೇಂದ್ರ"ದ ಗ್ರಂಥಾಲಯದಲ್ಲಿದ್ದ ಕಾರಣ, ಅಲ್ಲಿಂದಲೇ ಸಾಹಿತ್ಯ ಸಂಗ್ರಹಿಸುವ ಸಲುವಾಗಿ, ೫-೩-೨೦೦೪ರಂದು ಅಲ್ಲಿ ಎರಡನೆಯ ಸಭೆ ಕರೆಯಲಾಯಿತು. ವಿಜಾಪುರದಿಂದ ಶ್ರೀ ಶಿವಯೋಗಿ ತಂಬಾಕೆ, ಶ್ರೀ ಎಂ. ಎಸ್. ಮದಭಾವಿ ಬಂದಿದ್ದರು. ಧಾರವಾಡದಿಂದ ನಾನು ಹೋಗಿದ್ದೆನು. ಪೂಜ್ಯ ಶ್ರೀ ಸಿದ್ಧರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಗ್ರಂಥಪಾಲಕರಾದ ಡಾ. ಎಸ್. ಆರ್. ಗುಂಜಾಳ ಅವರೂ ಸಭೆಯಲ್ಲಿ ಉಪಸ್ಥಿತರಿದ್ದರು. ಇಲ್ಲಿಯ ಗ್ರಂಥ ಮತ್ತು ಶಿವಾನುಭವ ಪತ್ರಿಕೆಯ ಲೇಖನಗಳನ್ನು ಝೆರಾಕ್ಸ್ ಮಾಡಿಸಲು ನಿರ್ಧರಿಸಲಾಯಿತು. ಈ ಕಾರ್ಯಕ್ಕಾಗಿ ಬಿ.ಎಲ್.ಡಿ.ಇ. ಸಂಸ್ಥೆ ಒಂದು ಝೆರಾಕ್ಸ್ ಯಂತ್ರವನ್ನೇ ಈ ಗ್ರಂಥಾಲಯಕ್ಕೆ ಕಾಣಿಕೆಯಾಗಿ ನೀಡಿತು. ಡಾ. ಗುಂಜಾಳ ಅವರ ನೇತೃತ್ವದಲ್ಲಿ ಶ್ರೀ ಬಿ. ಬಿ. ಹೊಸಮನಿ, ಶ್ರೀ ಪ್ರಕಾಶ ಗಿರಿಮಲ್ಲನವರ, ಶ್ರೀಮತಿ ರತ್ನಮ್ಮ ಪುರಾಣಿಕ ಅವರು ಝೆರಾಕ್ಸ್ ಪ್ರತಿ ಸಿದ್ಧಪಡಿಸಿ ಕಳಿಸಿದರು. ಇದೆಲ್ಲವನ್ನು ವರ್ಗೀಕರಿಸಿ, ೧೪ ಜನ ಸಂಪಾದಕರಿಗೆ ಅವರ ಪಾಲಿನ ಸಾಹಿತ್ಯವನ್ನು ಸೂಕ್ತ ನಿರ್ದೇಶನದೊಂದಿಗೆ ವಿತರಿಸಲಾಯಿತು. ಆಮೇಲೆ ವಿಜಾಪುರದ ಡಾ. ಹಳಕಟ್ಟಿ ಸಂಶೋಧನ ಕೇಂದ್ರದಲ್ಲಿ ಎಲ್ಲ ಸಂಪಾದಕರನ್ನು ಆಹ್ವಾನಿಸಿ, ವಿಚಾರ ಸಂಕಿರಣ (೧೬-೧೦-೨೦೦೪) ಏರ್ಪಡಿಸಲಾಯಿತು. ಎಲ್ಲರೂ ತಮ್ಮ ತಮ್ಮ ಸಂಪುಟಗಳ ಸ್ವರೂಪ, ಮಹತ್ವಗಳನ್ನು ಕುರಿತು ಮಾತನಾಡಿದರು. ಬಳಿಕ ಇವರೆಲ್ಲ ಸಂಪಾದನೆಯ ಕೆಲಸವನ್ನು ಕೈಗೆತ್ತಿಕೊಂಡರು.

ಈಗ ನಿಜವಾದ ತೊಂದರೆ ಎದುರಾಯಿತು. ಹಳಕಟ್ಟಿಯವರ ಹೆಸರಿನಲ್ಲಿ ಸೇರಿದ್ದ ಅನ್ಯರ ಪುಸ್ತಕ - ಲೇಖನ ಕೈಬಿಡುವುದು, ಹೊಸದಾಗಿ ಸಿಕ್ಕ ಪುಸ್ತಕ - ಲೇಖನ ಸೇರಿಸುವುದು, ಕೈಯಲ್ಲಿ ಉಳಿದ ನಿಜಪಠ್ಯವನ್ನು ಒಂದು ಕ್ರಮದಲ್ಲಿ ಜೋಡಿಸುವುದು, ಅಲ್ಲಲ್ಲಿ ನುಸುಳಿದ್ದ ಪಾಠದೋಷಗಳನ್ನು ಇತ್ತೀಚಿನ ಆವೃತ್ತಿಗಳ ಸಹಾಯದಿಂದ ದೂರಮಾಡುವುದು, ಇತ್ಯಾದಿ ಕೆಲಸ ಮುಗಿದು, ಸಂಪುಟಗಳು ಅಚ್ಚಿಗೆ ಸಿದ್ಧವಾದವು. ಇಷ್ಟಾಗಿಯೂ ಒಂದಿಷ್ಟು ಲೇಖನಗಳು ಶಿವಾನುಭವ ಪತ್ರಿಕೆಯಲ್ಲಿ ಉಳಿದುಕೊಂಡ ಸಂದೇಹ ಕಾಡತೊಡಗಿತು. ಆಗ ನೆರವಿಗೆ ಬಂದವರು, ಡಾ. ಸರಸ್ವತಿದೇವಿ ಭಗವತಿ, ಡಾ. ಎಚ್. ಎಸ್. ಮೇಲಿನಮನಿ ಅವರು. ಶಿವಾನುಭವ ಪತ್ರಿಕೆಯ ಎಲ್ಲ ಸಂಚಿಕೆಗಳನ್ನು ಕೈಮುಟ್ಟಿ ಹುಡಿಕಿ, ಕಣ್ಮುಟ್ಟಿ ಓದಿ ಈವರೆಗೆ ಸಿಗದಿದ್ದ ಲೇಖನ, ಟಿಪ್ಪಣಿ ಇತ್ಯಾದಿಗಳನ್ನು ಸಂಗ್ರಹಿಸಿ, ಹೆಚ್ಚಿನದಾಗಿ ೧೫ನೆಯ ಸಂಪುಟವನ್ನು ಇವರು ಸಿದ್ಧಪಡಿಸಿದರು.

ಡಾ. ಹಳಕಟ್ಟಿಯವರು ಸಂಪಾದಿಸಿದ ಮತ್ತು ರಚಿಸಿದ ಗ್ರಂಥಗಳ ಸಂಖ್ಯೆ ದೊಡ್ಡದು, ಅವು ಮೂರು ಬಗೆಗಳಲ್ಲಿ ಸಿಗುತ್ತವೆ :

೧. 'ಶಿವಾನುಭವ ಗ್ರಂಥಮಾಲೆ'ಯ ಪುಸ್ತಕಗಳು. ಇವುಗಳಲ್ಲಿ ಕೆಲವು ಮೊದಲು ಶಿವಾನುಭವ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡು, ಆಮೇಲೆ ಗ್ರಂಥರೂಪದಲ್ಲಿ ಬೆಳಕು ಕಂಡಿವೆ, ಕೆಲವು ನೇರವಾಗಿ ಮಾಲೆಯಲ್ಲಿ ಪ್ರಕಟವಾಗಿವೆ.

೨. ಕೆಲವು, ಮಾಲೆಯ ಹೆಸರು - ಸಂಖ್ಯೆಗಳಿಲ್ಲದೆ ನೇರವಾಗಿ ಪ್ರಕಟವಾಗಿವೆ.

೩. ಕೆಲವು, ಗ್ರಂಥಗಳಾಗಿ ಹೊರಬರದೆ ಪತ್ರಿಕೆಯಲ್ಲಿ ಉಳಿದಿವೆ.

ಈ ಪುಸ್ತಕಗಳಲ್ಲಿ ಒಂದಿಷ್ಟು ಅನೇಕ ಆವೃತ್ತಿಗಳಾಗಿ ಹೊರಬಂದಿವೆ. ಇವುಗಳಲ್ಲಿ ಪ್ರಥಮ ಇಲ್ಲವೆ ಅಂತಿಮ ಆವೃತ್ತಿ ಆಯ್ದುಕೊಳ್ಳಬೇಕೆಂಬ ನಮ್ಮ ಧೋರಣೆ ಕೈಗೂಡದ ಕಾರಣ, ಲಭ್ಯವಾದ ಯಾವುದೋ ಆವೃತ್ತಿಯನ್ನು ಆಯ್ದುಕೊಂಡಿದ್ದೇವೆ. ಹೀಗೆ ಆಯ್ದುಕೊಂಡ ಅವರ ಪುಸ್ತಕಗಳನ್ನೂ ಶಿವಾನುಭವ ಪತ್ರಿಕೆಯಲ್ಲಿ ಪ್ರಕಟವಾದ ಅವರ ಲೇಖನಗಳನ್ನೂ ಈ ರೀತಿ ವರ್ಗೀಕರಿಸಲಾಗಿದೆ : ೧ ರಿಂದ ೬ 'ವಚನಸಾಹಿತ್ಯ'ವನ್ನು ಕುರಿತ ಸಂಪುಟಗಳು, ೭ನೆಯದು 'ವಚನವಿವೇಚನೆ'ಯನ್ನು ಕುರಿತ ಸಂಪುಟ, ೮ ಮತ್ತು ೯ 'ಕಾವ್ಯಸಾಹಿತ್ಯ'ವನ್ನು ಕುರಿತ ಸಂಪುಟಗಳು, ೧೦ ರಿಂದ ೧೨ 'ಚರಿತ್ರಸಾಹಿತ್ಯ'ವನ್ನು ಕುರಿತ ಸಂಪುಟಗಳು, ೧೩ರಿಂದ ೧೫ 'ಲೇಖನಸಾಹಿತ್ಯ'ವನ್ನು ಕುರಿತ ಸಂಪುಟಗಳು. ಈ ಸಂಪುಟಗಳ ವಿವರ ಹೀಗಿದೆ :

ಸಂಪುಟ : ೧. ವಚನಸಾಹಿತ್ಯ -೧. ಸಂಪಾದಕರು : ಡಾ. ಎಸ್. ಆರ್. ಗುಂಜಾಳ

೧. ಶ್ರೀ ಬಸವೇಶ್ವರರ ವಚನಗಳು.
೨. ಸಟೀಕ ಬಸವೇಶ್ವರರ ವಚನಗಳು.
೩. ಹೊಸಪದ್ಧತಿಯ ಬಸವಣ್ಣನವರ ವಚನಗಳು.
೪. ಪ್ರಭುದೇವರ ವಚನಗಳು.
೫. ಶ್ರೀ ಚೆನ್ನಬಸವೇಶ್ವರ ವಚನಗಳು.

ಸಂಪುಟ : ೨. ವಚನಸಾಹಿತ್ಯ - ೨. ಸಂಪಾದಕರು : ಡಾ. ಬಸವರಾಜ ಜಗಜಂಪಿ

೧. ಶೂನ್ಯಸಂಪಾದನೆ.
೨. ಸಟೀಕ ಶೂನ್ಯಸಂಪಾದನೆ (ಸಿದ್ಧರಾಮಯ್ಯದೇವರ ಸಂಪಾದನೆ - ತೃತೀಯೋಪದೇಶ).
೩. ಸಟೀಕ ಶೂನ್ಯಸಂಪಾದನೆ (ಸಿದ್ಧರಾಮದೇವರ ಗುರುಕರಣ - ದಶಮೋಪದೇಶ).
೪. ಶೂನ್ಯಸಂಪಾದನೆ (ಭಕ್ತ ಜಂಗಮಸ್ಥಲ - ಪಂಚಮೋಪದೇಶ).
೫. ಸಿದ್ಧಲಿಂಗೇಶ್ವರ ಏಕೋತ್ತರಶತಸ್ಥಲ.

ಸಂಪುಟ : ೩. ವಚನಸಾಹಿತ್ಯ - ೩. ಸಂಪಾದಕರು : ಡಾ. ಗುಂಡಣ್ಣ ಕಲಬುರ್ಗಿ

೧. ಅಮುಗಿದೇವಯ್ಯನ ವಚನಗಳು.
೨. ಅಂಬಿಗರ ಚೌಡಯ್ಯನ ವಚನಗಳು.
೩. ಆತುರವೈರಿ ಮಾರೇಶ್ವರ ವಚನಗಳು.
೪. ಆದಯ್ಯನ ವಚನಗಳು.

೫. ಉರಿಲಿಂಗಪೆದ್ದಿಯ ವಚನಗಳು.
೬. ಗಣದಾಸಿ ವೀರಣ್ಣನ ವಚನಗಳು.
೭. ದೇವರ ದಾಸಿಮಯ್ಯನ ವಚನಗಳು.
೮. ಶ್ರೀ ಮಡಿವಾಳ ಮಾಚಿದೇವನ ವಚನಗಳು.
೯. ಮಹಾದೇವಿಯಕ್ಕನ ವಚನಗಳು.
೧೦. ಮೆರೆಮಿಂಡದೇವನ ವಚನಗಳು.
೧೧. ಮೋಳಿಗೆ ಮಾರಯ್ಯನ ವಚನಗಳು.
೧೨. ಲಿಂಗಮ್ಮನ ವಚನಗಳು.
೧೩. ಸಕಲೇಶ ಮಾದರಸನ ವಚನಗಳು.
೧೪. ಸಿದ್ಧರಾಮೇಶ್ವರನ ವಚನಗಳು.
೧೫. ಹಡಪದಪ್ಪಣ್ಣನ ವಚನಗಳು.

ಸಂಪುಟ : ೪. ವಚನಸಾಹಿತ್ಯ - ೪. ಸಂಪಾದಕರು : ಡಾ. ವಿ. ಎಸ್. ಮಾಳಿ.

೧. ಶಿವಶರಣರ ಸಂಕೀರ್ಣವಚನಗಳು - ೧ (ಗಜೇಶ ಮಸಣಯ್ಯ, ಚಂದಿಮರಸ, ಅರಿವಿನ ಮಾರಿತಂದೆ).
೨. ಶಿವಶರಣರ ಸಂಕೀರ್ಣ ವಚನಗಳು -೨ (ಹಾವಿನಹಾಳ ಕಲ್ಲಿದೇವ, ಮಧುವರಸ, ಸತ್ಯಕ್ಕ, ಶಿವಲೆಂಕ ಮಂಚಣ್ಣ, ಉರಿಲಿಂಗದೇವ, ಬಾಹೂರ ಬೊಮ್ಮಯ್ಯ).
೩. ಶಿವಶರಣರ ಸಂಕೀರ್ಣ ವಚನಗಳು -೩ (ಭಾಂಡಾರಿ ಶಾಂತಯ್ಯ, ಏಲೇಶ ಕೇತಯ್ಯ, ಸೊಡ್ಡಳ ಬಾಚರಸ, ಹಡಪದಪ್ಪಣ್ಣನ ಸ್ವರವಚನ - ಮಂತ್ರಗೌಪ್ಯ, ಗುಮ್ಮಳಾಪುರ ಸಿದ್ಧಲಿಂಗದೇವರ ವಚನ).
೪. ಕಾಲಜ್ಞಾನ ವಚನಗಳು.
೫. ಘನಲಿಂಗನ ವಚನಗಳು.
೬. ಶಿವಾನುಭವ ಸೃಷ್ಟಿಯ ವಚನಗಳು (ಸ್ವತಂತ್ರ ಸಿದ್ಧಲಿಂಗನ ಮುಕ್ತ್ಯಾಂಗನೆ ಕಂಠಮಾಲೆ, ಜ್ಯೋತಿರ್ಮಯ ಶಾಂಭವಿದೀಕ್ಷಾಬೋಧೆ).
೭. ಸಕಲಾಗಮ ಶಿಖಾಮಣಿ.
೮. ಸಂಗನ ಬಸವೇಶ್ವರನ ವಚನ.
೯. ವೇಮಣ್ಣಯೋಗಿಯ ವಚನಗಳು.

ಸಂಪುಟ : ೫. ವಚನಸಾಹಿತ್ಯ - ೫. ಸಂಪಾದಕರು : ಡಾ. ಎಂ. ಎಂ. ಕಲಬುರ್ಗಿ

೧. ವಚನಶಾಸ್ತ್ರಸಾರ ಭಾಗ - ೧.

ಸಂಪುಟ : ೬. ವಚನಸಾಹಿತ್ಯ -೬. ಸಂಪಾದಕರು : ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ ಭಾಗ - ೨.
೨. ವಚನಶಾಸ್ತ್ರಸಾರ ಭಾಗ - ೩.
೩. ಶಿವಾನುಭವ ಶಬ್ದಕೋಶ.

ಸಂಪುಟ : ೭. ವಚನವಿವೇಚನೆ - ಸಂಪಾದಕರು : ಡಾ. ಜೆ. ಎಂ. ನಾಗಯ್ಯ

೧. ಲಿಂಗಪೂಜೆಯ ತತ್ವಗಳು - ೧೯೨೬.

೨. ಲಿಂಗಪೂಜೆಯ ತತ್ವಗಳು - ೧೯೩೫.

೩. ಭಕ್ತಿಯ ವಚನಗಳು.

೪. ನೈತಿಕ ಮತ್ತು ಭಕ್ತಿಯ ವಚನಗಳು.

೫. ಪರಮಾತ್ಮನ ಸ್ವರೂಪ.

೬. ಲಿಂಗ ಮತ್ತು ಪರಮಾತ್ಮ.

೭. ಶಿವಾನುಭವ ಸತ್ಯಮಾರ್ಗ.

೮. ಬಸವೇಶ್ವರನ ತತ್ವಗಳು.

೯. ಶಿವಶರಣರ ಅಹಿಂಸಾಧರ್ಮ.

೧೦. ಸಂಗೀತದಲ್ಲಿ ಶಿವಶರಣರ ವಚನಗಳು.

೧೧. Vachanas of Shri Basaveshwara.

ಸಂಪುಟ : ೮ ಕಾವ್ಯಸಾಹಿತ್ಯ - ೧. ಸಂಪಾದಕರು : ಡಾ. ಬಿ. ವಿ. ಮಲ್ಲಾಪುರ

೧. ಹರಿಹರನ ರಗಳೆಗಳು -೧

೨. ಹರಿಹರನ ರಗಳೆಗಳು - ೨

೩. ಹರಿಹರನ ರಗಳೆಗಳು - ೩.

೪. ಹರಿಪರನ ರಗಳೆಗಳು - ೪

೫. ಹರಿಹರನ ರಗಳೆಗಳು - ೫

೬. ಪರಿಪರನ ರಗಳೆಗಳು - ೬

೭. ಪರಿಹರನ ರಗಳೆಗಳು - ೭.

೮. ಹರಿಹರನ ರಗಳೆಗಳು - ೮

೯. ವೀರಶೈವ ರಗಳೆ.

೧೦. ಶ್ರೀ ತೋಂಟದಾರ್ಯರ ರಗಳೆ.

ಸಂಪುಟ : ೯. ಕಾವ್ಯಸಾಹಿತ್ಯ - ೨. ಸಂಪಾದಕರು : ಡಾ. ಬಾಳಣ್ಣ ಸೀಗೀಹಳ್ಳಿ

೧. ಪದಮಂತ್ರಗೋಪ್ಯ.

೨. ನೂರೊಂದರ ಹಾಡುಗಳು.

೩. ಸಟೀಕ ಏಕೋತ್ತರಶತಸ್ಥಲ.

೪. ಕವಿ ಗುರುಬಸವಕೃತ ಅವಧೂತಗೀತೆ.

೫. ಪ್ರಾಣಲಿಂಗ ಜ್ಞಾನದರ್ಪಣ ಚಾರಿತ್ರ.

೬. ಶಿವಯೋಗಾಚರಣೆ.

೭. ಶಿವಶರಣರ ಪದಗಳು - ೧.

೮. ಹರಳಯ್ಯನ ತ್ರಿಪದಿ.

೯. ಮೈಲಾರ ಬಸಪ್ಪನ ಶಿವಾನುಭವ ದರ್ಪಣ.

೧೦. ಹಾನಗಲ್ಲ ಸ್ವಾಮಿಗಳವರು ರಚಿಸಿದ ಹಾಡುಗಬ್ಬಗಳು.

೧೧. ಬಸವೇಶ್ವರನ ಷಟ್‌ಸ್ಥಲ ವಚನದ ಕಥಾಸಾರ.
೧೨. ನಿರಂಜನವಂಶರತ್ನಾಕರ.
೧೩. ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ.
೧೪. ವರದಾನಿ ಗುಡ್ಡವ್ವೆಯ ಚರಿತ್ರೆ.
೧೫. ನಾಗಭೂಷಣ ಘನಮಠದಾರ್ಯರ ಕೃಷಿಜ್ಞಾನಪ್ರದೀಪಿಕೆ.
೧೬. ಕೊಡಗಿನ ಸಂಸ್ಥಾನದ ರಾಜೇಂದ್ರನಾಮೆ.
೧೭. ಕೆಳದಿ ಸಂಸ್ಥಾನದ ರಾಯರ ವಂಶಾವಳಿ.

ಸಂಪುಟ : ೧೦. ಚರಿತ್ರಸಾಹಿತ್ಯ - ೧. ಸಂಪಾದಕರು : ಡಾ. ಎಸ್. ಕೆ. ಕೊಪ್ಪಾ,ಡಾ. ಎಂ. ಎಂ. ಪಡಶೆಟ್ಟಿ
೧. ಶಿವಶರಣರ ಚರಿತ್ರೆಗಳು ಭಾಗ - ೧
೨. ಅರುವತ್ತೂರು ಶಿವಶರಣರ ಚರಿತ್ರೆಗಳು ಭಾಗ - ೨.
೩. ಶಿವಶರಣರ ಚರಿತ್ರೆಗಳು ಭಾಗ - ೩.
೪. ಶಿವಶರಣರ ಚರಿತ್ರೆಗಳು ಭಾಗ - ೪.

ಸಂಪುಟ : ೧೧. ಚರಿತ್ರಸಾಹಿತ್ಯ - ೨. ಸಂಪಾದಕರು : ಡಾ. ಎಂ. ಎಸ್. ಮದಭಾವಿ
೧. ಬಸವೇಶ್ವರನ ಚರಿತ್ರೆ.
೨. ಶಿವಶರಣೆಯರ ಚರಿತ್ರೆಗಳು.
೩. ಬ್ರಾಹ್ಮಣ ಶಿವಶರಣರ ಚರಿತ್ರೆಗಳು.
೪. ೭೭೦ ಅಮರಗಣಾಧೀಶ್ವರರ ಚರಿತ್ರೆಗಳು.
೫. ಸಾರಂಗಮಠಾಧೀಶ್ವರರು.

ಸಂಪುಟ : ೧೨. ಚರಿತ್ರಸಾಹಿತ್ಯ - ೩. ಸಂಪಾದಕರು : ಶ್ರೀ ಸಿದ್ಧಲಿಂಗ ದೇಸಾಯಿ
೧. ವೀರಶೈವ ರಾಜಮನೆತನಗಳ ಚರಿತ್ರೆಗಳು.
೨. ಕೈ. ವಾ. ಚೆನ್ನಬಸಪ್ಪ ಬಸವಲಿಂಗಪ್ಪ ಧಾರವಾಡ ಇವರ ಚರಿತ್ರೆಯು.
೩. ಆನೆಯ ಶ್ರೀಮದ್ವೀರಶೈವ ಮಹಾಸಭೆಯ ರಿಪೋರ್ಟು.
೪. ದೇವರ ದಾಸಿಮಾರ್ಯ ಪ್ರಶಸ್ತಿ*.

ಸಂಪುಟ : ೧೩, ಲೇಖನಸಾಹಿತ್ಯ - ೧. ಸಂಪಾದಕರು : ಡಾ. ಬಿ. ಎಂ. ಪಾಟೀಲ
ಸಂಪುಟ : ೧೪. ಲೇಖನಸಾಹಿತ್ಯ - ೨. ಸಂಪಾದಕರು : ಡಾ. ಪಿ. ಕೆ. ರಾಠೋಡ
ಸಂಪುಟ : ೧೫. ಲೇಖನಸಾಹಿತ್ಯ - ೩. ಸಂಪಾದಕರು : ಡಾ. ಸರಸ್ವತಿದೇವಿ ಭಗವತಿ
ಡಾ. ಎಚ್. ಎಸ್. ಮೇಲಿನಮನಿ

ಹಳಕಟ್ಟಿಯವರು ಹಮ್ಮಿಕೊಂಡಿದ್ದ ಗ್ರಂಥ ಪ್ರಕಟನ ಯೋಜನೆಗೆ ಸಂಬಂಧಿಸಿದಂತೆ ಕೆಲವು ಕೃತಿಗಳು ಬೆಳಕು ಕಾಣಲೇ ಇಲ್ಲ. ಹೀಗಾಗಿ ಮೇಲಿನ ಸಂಪುಟಗಳು ಬೆಳಕುಕಂಡ ಸಾಹಿತ್ಯವನ್ನೊಳಗೊಂಡಿವೆ. ಈ ಸಾಹಿತ್ಯದಿಂದ ತಿಳಿದುಬರುವುದು ಇಷ್ಟು :

ಇವರು ಪ್ರಾಚೀನ ಕೃತಿಗಳನ್ನು, ಅದರಲ್ಲಿಯೂ ಪ್ರಧಾನವಾಗಿ ವಚನಕೃತಿಗಳನ್ನು "ಸಂಪಾದನೆ" ಮಾಡುವ ಜೊತೆಗೆ, ತಾವೇ ವಚನ "ಸಂಕಲನ"ಗಳನ್ನು ರೂಪಿಸಿದ್ದಾರೆ. ಹೊಸ "ಗದ್ಯಕೃತಿ"ಗಳನ್ನು

ಬರೆದಿದ್ದಾರೆ. "ಸಂಪಾದನೆ"ಗಳಲ್ಲಿ ವಚನ, ರಗಳೆ, ಇತರ ಕಾವ್ಯಗಳಿವೆ. "ಸಂಕಲನ" ಕೃತಿಗಳಲ್ಲಿ ಮುಖ್ಯವಾದವು, "ವಚನಶಾಸ್ತ್ರಸಾರ" ಸಂಪುಟಗಳು. ಹೊಸ "ಗದ್ಯಕೃತಿ"ಗಳಲ್ಲಿ ಶಿವಶರಣರ ಚರಿತ್ರೆ ಸಂಪಟಗಳು ಮುಖ್ಯವೆನಿಸಿವೆ. ಇವರು ವಚನಗಳ ಅಭ್ಯಾಸ ಆರಂಭಿಸಿದುದೇ ಬಸವಣ್ಣನವರ ವಚನಗಳ ಇಂಗ್ಲಿಷ್ ಅನುವಾದದ (೧೯೨೨) ಮೂಲಕ. ಸಂಪಾದನೆ ಆರಂಭಿಸಿದುದೇ ಬಸವಣ್ಣನವರ (ಷಟ್‌ಸ್ಥಲ) ವಚನ ಪ್ರಕಟನೆಯ ಮೂಲಕ. ಮುಂದಿನ ದಿನಗಳಲ್ಲಿ ಪೂರೈಸಿದ ಕೃಷಿಯಲ್ಲಿ ಶೂನ್ಯ ಸಂಪಾದನೆ, ಏಕೋತ್ತರಶತಸ್ಥಲದಂಥ ಪ್ರಾಚೀನ ಸಂಗ್ರಹಗ್ರಂಥಗಳ ಪ್ರಕಟನೆ ಗಮನಾರ್ಹವೆನಿಸಿದೆ. ಕೆಲವು ವಚನಗ್ರಂಥಗಳಿಗೆ ಹಳಕಟ್ಟಿಯವರೇ ಅರ್ಥ, ಟೀಕೆ ಬರೆದಿದ್ದಾರೆ. "ಶಿವಾನುಭವ ಶಬ್ದಕೋಶ"ದಂಥ ಪಾರಿಭಾಷಿಕ ನಿಘಂಟು ಇಂದಿಗೂ ಮೌಲಿಕವೆನಿಸಿದೆ. ಅವಜ್ಞೆಗೆ ಗುರಿಯಾಗಿದ್ದ ಶರಣರ ಇತಿಹಾಸವನ್ನು "ಶಿವಶರಣರ ಚರಿತ್ರೆ" ಕೃತಿಗಳ ಮೂಲಕ ಪ್ರಸಾರ ಮಾಡಿದುದು ಸಣ್ಣ ಕೆಲಸವೇನಲ್ಲ. ತತ್ವಗಳ ಮೇಲೆ ಒತ್ತುಕೊಟ್ಟು 'ಪರಮಾತ್ಮನ ಸ್ವರೂಪ' ಇತ್ಯಾದಿ ಗ್ರಂಥಗಳನ್ನು ರಚಿಸಿದುದು ವಿಶೇಷ ಉಪಕ್ರಮವೆನಿಸಿದೆ. ಶಿವಶರಣರ ಪದಗಳು ೧, ನೂರೊಂದರ ಹಾಡುಗಳು ಕೃತಿ ಪ್ರಕಟನೆಯ ಮೂಲಕ ಸ್ವರವಚನದ ಸಂಶೋಧನೆ, ಪ್ರಕಟನೆಗಳ ಆದ್ಯವ್ಯಕ್ತಿಗಳೆನಿಸಿದ್ದಾರೆ. ಇದೇ ರೀತಿ 'ಸಂಗೀತದಲ್ಲಿ ಶಿವಶರಣರ ವಚನಗಳು' ಕೃತಿಯು ವಚನಗಳನ್ನು ಸಂಗೀತಕ್ಕೆ ಅಳವಡಿಸಿದ ಪ್ರಥಮ ಪ್ರಯತ್ನವೆನಿಸಿದೆ. ವಚನಸಾಹಿತ್ಯ ಪ್ರಕಟನೆಯ ಆದ್ಯರೆನಿಸಿದ ಹಳಕಟ್ಟಿಯವರು ರಗಳೆಸಾಹಿತ್ಯ ಪ್ರಕಟನೆಯ ಆದ್ಯರೆಂಬುದು ಗಮನಿಸತಕ್ಕ ವಿಷಯವಾಗಿದೆ. ಇದರ ಅಂಗವಾಗಿ ಅವರು ಹರಿಹರನ ೪೬ ರಗಳೆಗಳನ್ನು ೮ ಭಾಗಗಳಲ್ಲಿ ಪ್ರಕಟಿಸಿದರು. ಕೇವಲ ಸಾಹಿತ್ಯ - ಧರ್ಮಗಳಿಗೆ ಸಂಬಂಧಿಸಿದ ಕೃತಿಗಳನ್ನಲ್ಲದೆ, ರಾಜಮನೆತನ ಮತ್ತು ಕೃಷಿಗೆ ಸಂಬಂಧಿಸಿದ ಕೃತಿಗಳನ್ನು ಪ್ರಕಟಿಸುವ ಮೂಲಕ ತಮ್ಮದು ಸಮಗ್ರಜೀವನ ದೃಷ್ಟಿಯೆಂದು ಸ್ಪಷ್ಟಪಡಿಸಿದ್ದಾರೆ.

ಗ್ರಂಥಗಳನ್ನಲ್ಲದೆ ಸ್ವತಂತ್ರ ಲೇಖನಗಳ ಮೂಲಕವೂ ತಮ್ಮ ದೃಷ್ಟಿವೈವಿಧ್ಯವನ್ನು ಪ್ರಕಟಪಡಿಸಿದ್ದಾರೆ. ಧಾರ್ಮಿಕ ಸಾಹಿತ್ಯಿಕ, ಚಾರಿತ್ರಿಕ ಲೇಖನಗಳೊಂದಿಗೆ ಸಮಾಜಕ್ಕೆ ಸಂಬಂಧಪಟ್ಟ ಶೈಕ್ಷಣಿಕ, ಔದ್ಯೋಗಿಕ, ಭಾಷಿಕ ವಿಷಯಗಳ ಲೇಖನ ಬರೆದಿದ್ದು, ಇವು ಹಳಕಟ್ಟಿಯವರಿಗಿದ್ದ ಸಾಮಾಜಿಕ ಕಳಕಳಿ, ಪ್ರಚಲಿತ ಸಮಸ್ಯೆಗಳ ಬಗೆಗಿದ್ದ ಒಲವನ್ನು ಸ್ಪಷ್ಟಪಡಿಸುತ್ತವೆ. "ಲೇಖನ ಸಂಪುಟ"ಗಳಲ್ಲಿರುವ "ಶಿವಾನುಭವ ಪತ್ರಿಕೆಯ ಉದ್ದೇಶ", "ಸಮಾಜದ ಹಿತಚಿಂತನೆ", "ಹಳಕಟ್ಟಿಯವರ ಭಾಷಣಗಳು", "ಹಳಕಟ್ಟಿಯವರ ಸನ್ಮಾನಗಳು" ಇತ್ಯಾದಿ ಉಪಭಾಗಗಳು ಇವರ ವೈಯಕ್ತಿಕ ಜೀವನವನ್ನು, ಶಿವಾನುಭವ ಪತ್ರಿಕೆ - ಶಿವಾನುಭವ ಗ್ರಂಥಮಾಲೆಗಳ ಮುನ್ನಡೆಗಾಗಿ ಇವರು ವಹಿಸಿದ್ದ ಕಾಳಜಿಯನ್ನು ತಿಳಿಸುತ್ತವೆ. ಇದಕ್ಕೆ ಪ್ರತಿಯಾಗಿ ಇವರ ಬಗ್ಗೆ ಸಮಾಜ ತೋರುತ್ತಲಿದ್ದ ಗೌರವವನ್ನೂ ಇಲ್ಲಿಯ ಲೇಖನಗಳಿಂದ ಅರಿಯಬಹುದಾಗಿದೆ. ಒಟ್ಟಾರೆ, ಈ ಗ್ರಂಥ - ಲೇಖನಗಳು ಹಳಕಟ್ಟಿಯವರ ಜೀವನದೃಷ್ಟಿಗೆ ಬರೆದ ವ್ಯಾಖ್ಯಾನಗಳಾಗಿದ್ದು, ಅವರ ಬದುಕಿನ ಎಲ್ಲ ಆಯಾಮಗಳನ್ನು ಪ್ರತಿನಿಧಿಸುತ್ತವೆ. ಒಬ್ಬ ಲಿಂಗಾಯತನು ಏಕಕಾಲಕ್ಕೆ ಕನ್ನಡಿಗನಾಗಿಯೂ, ಭಾರತೀಯನಾಗಿಯೂ ಹೇಗೆ ಬದುಕಬೇಕೆನ್ನುವುದಕ್ಕೆ, ಈ ಸಾಹಿತ್ಯದಲ್ಲಿ ಪ್ರತಿಫಲಿತವಾದ ಹಳಕಟ್ಟಿಯವರ ಜೀವನದೃಷ್ಟಿ ನಿದರ್ಶನವೆನಿಸಿದೆ.

"ಒಬ್ಬ ಮನುಷ್ಯನ ಚಟುವಟಿಕೆಗಳು ಯೋಗ್ಯ ನಿರ್ದೇಶನವಿದ್ದರೆ ಜೀವನವನ್ನು ಹಿಗ್ಗಿಸುತ್ತವೆ. ಅವು, ಅವನು ಎಷ್ಟೇ ತೊಂದರೆ ಎದುರಿಸಬೇಕಾಗಿ ಬಂದರೂ ಜೀವನವನ್ನು ಆನಂದಮಯವಾಗಿಸುತ್ತವೆ. "ಅಭಿರುಚಿಯುಳ್ಳ ಕೆಲಸ, ಅದು ಎಷ್ಟೇ ದೊಡ್ಡದಾಗಿದ್ದರೂ ಮನಸ್ಸಿನಲ್ಲಿ ಶಕ್ತಿ ಹಾಗೂ ಉತ್ಸಾಹಗಳನ್ನು ಹುಟ್ಟಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ದಣಿವು ಅನಿಸುವುದಿಲ್ಲ ಮತ್ತು ಅದು ಜೀವನವನ್ನು ಹಿಗ್ಗಿಸುತ್ತದೆ" ಎಂಬ ಮೌಲ್ಯವನ್ನು ಈ ಸಾಹಿತ್ಯ ಪ್ರತಿನಿಧಿಸುತ್ತದೆ.

ಸಂಪಾದನೆ

ಡಾ. ಫ. ಗು. ಹಳಕಟ್ಟಿಯವರ ಗ್ರಂಥ, ಶಿವಾನುಭವ ಪತ್ರಿಕೆಯಲ್ಲಿ ಪ್ರಕಟವಾದ ಅವರ ಲೇಖನ, ಅನ್ಯರ ಗ್ರಂಥಗಳಿಗೆ ಅವರು ಬರೆದ ಮುನ್ನುಡಿ - ಪ್ರಸ್ತಾವನೆಗಳನ್ನು ಪ್ರಕಟಿಸುವ ಯೋಜನೆಯಿದು. ಇದು ಭಾವಿಸಿದೆಷ್ಟು ಸುಲಭ ಕಾರ್ಯವಲ್ಲ.

೧. ಡಾ. ಹಳಕಟ್ಟಿಯವರ ಗ್ರಂಥಗಳ ಸಂಖ್ಯಾನಿರ್ಣಯ ಒಂದು ಸಮಸ್ಯೆಯಾಗಿದೆ. 'ಶಿವಾನುಭವ ಗ್ರಂಥಮಾಲೆ'ಯಲ್ಲಿ ಹಾಲಭಾವಿ, ಶಂಭುಲಿಂಗಸ್ವಾಮಿಗಳು, ಬಿ. ರಾಮರಾವ್, ಬಿ. ಬಸವಾರಾಧ್ಯ, ಎಚ್. ಆರ್. ಮಹಾಂತಯ್ಯ ಮೊದಲಾದವರ ಕೃತಿಗಳು ಪ್ರಕಟವಾಗಿದ್ದು, ಇವೂ ಡಾ. ಹಳಕಟ್ಟಿಯವರ ಗ್ರಂಥಗಳೆಂದು ಕೆಲವರು ತಮ್ಮ ಲೇಖನ, ಪುಸ್ತಕಗಳಲ್ಲಿ ದಾಖಲಿಸುತ್ತ ಬಂದಿದ್ದಾರೆ.

ಶಿವಾನುಭವ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಅನ್ಯರ ಗ್ರಂಥಗಳನ್ನೂ ಡಾ. ಹಳಕಟ್ಟಿಯವರಿಗೆ ಸಂಬಂಧಿಸಿದುವೆಂದು ಕೆಲವರು ಭಾವಿಸಿದ್ದಾರೆ.

ಡಾ. ಹಳಕಟ್ಟಿಯವರು ಶಿವಾನುಭವ ಪತ್ರಿಕೆಯಲ್ಲಿ ತಮ್ಮ ಗ್ರಂಥಗಳ ಪಟ್ಟಿಯನ್ನು ೨ ಸಲ ಹೀಗೆ ಪ್ರಕಟಿಸಿದ್ದಾರೆ. I. "ವಿಜಾಪುರ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ದೊರೆಯುವ ಗ್ರಂಥಗಳು - ೧೫ನೇ ಆಗಸ್ಟ್ ೧೯೫೩" (ಶಿವಾನುಭವ ೨೭ - ೮) : ಈ ಪಟ್ಟಿಯಲ್ಲಿ ೧ರಿಂದ ೪೦ ಪ್ರಕಟಿತ, ೪೦ ರಿಂದ ೫೦ ಅಚ್ಚಿನಲ್ಲಿರುವ ಗ್ರಂಥಗಳು, ೫೧ ರಿಂದ ೭೨ ಈ ಮೊದಲು ಅಚ್ಚಾಗಿ ಪುನರಮುದ್ರಣಕ್ಕೆ ಸಿದ್ಧವಾಗಿರುವ ಗ್ರಂಥಗಳ ಹೆಸರಿದೆ. ಈ ೭೨ ಗ್ರಂಥಗಳಲ್ಲಿ ಅನ್ಯರ ಕೃತಿಗಳೂ ಸೇರಿವೆ. II. "ಶಿವಶರಣರ ವಾಙ್ಮಯದ ಪ್ರಕಟಣೆ" (ಶಿವಾನುಭವ (೨೯-೧೦)೧೫. ೧೦. ೧೯೫೫) : "ಇದರಲ್ಲಿ ೧೬೫ ಗ್ರಂಥಗಳ ಹೆಸರುಗಳಿವೆ. ಇವುಗಳಲ್ಲಿ ನಾವು ೧೦೫ ಗ್ರಂಥಗಳನ್ನು ಈ ಮೊದಲು ಪ್ರಕಟಿಸಿದ್ದೇವೆ. ಇವುಗಳಲ್ಲಿ ಈಗ ೩೦ - ೩೫ ಗ್ರಂಥಗಳು ಮಾತ್ರ ನಮ್ಮಲ್ಲಿ ಉಳಿದಿರುತ್ತವೆ" ಎಂದು ಹೇಳಿ, ೧೬೫ ಪುಸ್ತಕಗಳ ಪಟ್ಟಿ ನೀಡಿದ್ದಾರೆ. ಇದರಲ್ಲಿಯೂ ಅನ್ಯರ ಗ್ರಂಥ ಸೇರಿವೆ.

ಒಟ್ಟಾರೆ ಇವೆಲ್ಲವೂ ಅವರಿಗೆ ಸಂಬಂಧಿಸಿದವುಗಳಲ್ಲ. ಕೆಲವು ಅನ್ಯರವು, ಕೆಲವು ಪ್ರಕಟಿಸಬೇಕೆಂದು ಮನಸ್ಸು ಮಾಡಿದ್ದವು. ಇದರಿಂದಾಗಿ ಅವರು ಬರೆದ, ಸಂಪಾದಿಸಿ ಪ್ರಕಟಿಸಿದ ಕೃತಿಗಳೆಷ್ಟು ? ಎನ್ನುವುದು ಒಂದು ಬಗೆಯ ಗೊಂದಲದ ವಿಷಯವಾಗಿದೆ.

೨. ಶಿವಾನುಭವ ಪತ್ರಿಕೆಯಲ್ಲಿಯ ಧಾರಾವಾಹಿ ಗ್ರಂಥಗಳಾಗಲಿ, ಲೇಖನಗಳಾಗಲಿ ಸಂಚಿಕೆಯಿಂದ ಸಂಚಿಕೆಗೆ ಮುಂದುವರಿಯದೆ, ಕೆಲವೊಮ್ಮೆ ತಡೆದು ಯಾವುದೋ ಸಂಚಿಕೆಯಲ್ಲಿ ಮುಂದುವರಿದಿವೆ. ಇವುಗಳನ್ನು ಹುಡುಕಿ ಸಂಬಂಧ ಜೋಡಿಸಿಕೊಳ್ಳುವುದು ಪರಿಶ್ರಮದ ಕೆಲಸವಾಗಿದೆ. ಕೆಲವೊಮ್ಮೆ ಸಂದೇಹ ಹುಟ್ಟಿಸುತ್ತದೆ.

೩. ಕೆಲವು ಗ್ರಂಥಗಳು ನೇರವಾಗಿ ಪ್ರಕಟವಾಗಿವೆ. ಇನ್ನು ಕೆಲವು ಶಿವಾನುಭವ ಪತ್ರಿಕೆಯಲ್ಲಿ ಧಾರವಾಹಿಯಾಗಿ ಬಂದು, ಬಳಿಕ ಗ್ರಂಥರೂಪ ಪಡೆದಿವೆ. ಹೀಗಾಗಿ ನೇರ ಗ್ರಂಥಗಳು ಯಾವುವು ? ಧಾರಾವಾಹಿಯಾಗಿ, ಬಳಿಕ ಗ್ರಂಥರೂಪ ಪಡೆದುವು ಯಾವುವು ? ಪತ್ರಿಕೆಯಲ್ಲಿಯೇ ಉಳಿದುವು ಯಾವುವು? ಎಂಬ ಪ್ರಶ್ನೆ ಉದ್ಭವಿಸುತ್ತದೆ.

೪. ಕೆಲವು ಗ್ರಂಥಗಳಿಗೆ ಗ್ರಂಥಮಾಲೆಯ ಸಂಖ್ಯೆ ಹಾಕಿಲ್ಲ (ಉದಾ : ಹೊಸಪದ್ಧತಿಯ ಬಸವೇಶ್ವರ ವಚನಗಳು). ಕೆಲವೊಮ್ಮೆ ಮಾಲೆಯ ಒಂದೇ ಸಂಖ್ಯೆಯನ್ನು ಎರಡು ಪುಸ್ತಕಗಳಿಗೆ ಹಾಕಿದ್ದಾರೆ

(ಉದಾ: ಶಿವಯೋಗಾಚರಣೆ, ಪ್ರಭುದೇವರ ವಚನಗಳು - ಎರಡಕ್ಕೂ ಮಾಲೆ ಸಂಖ್ಯೆ ೮ ಹಾಕಿದ್ದಾರೆ. ಇದೇ ರೀತಿ ನೈತಿಕ ಮತ್ತು ಭಕ್ತಿಯ ವಚನಗಳು, ಭಕ್ತಿಯ ವಚನಗಳು ಪುಸ್ತಕಗಳಿಗೆ ೧೦, ಲಿಂಗ ಮತ್ತು ಪರಮಾತ್ಮ, ಪರಮಾತ್ಮನ ಸ್ವರೂಪ ವಚನಗಳು ಪುಸ್ತಕಗಳಿಗೆ ೧೧ - ಎಂದು ಮಾಲೆ ಸಂಖ್ಯೆ ಹಾಕಿದ್ದಾರೆ).

೫. ಈಗ ತಿಳಿದ ಮಟ್ಟಿಗೆ 'ಶಿವಾನುಭವ ಗ್ರಂಥ'ಮಾಲೆ'ಯ ಕೊನೆಯ ಗ್ರಂಥ' ಸಾರಂಗಮಠಾಧೀಶ್ವರರು. ಇದರ ಮಾಲೆಯ ಸಂಖ್ಯೆ ೮೬ (೧೯೫೬). ಈ ಮಾಲೆಯಲ್ಲಿ ೮೬ ಗ್ರಂಥಗಳು ಪ್ರಕಟವಾಗಿವೆಯೆಂದೇ ಇದರ ಅರ್ಥ. ಇದರಲ್ಲಿ ವೀರಭದ್ರಪ್ಪ ಹಾಲಭಾವಿ, ಬಿ. ರಾಮರಾವ್ ಮೊದಲಾದವರ ಗ್ರಂಥಗಳೂ ಸೇರಿವೆ. ಇವುಗಳನ್ನು ಬಿಟ್ಟರೂ ನಮಗೆ ಮಾಲೆಯ ೨೬, ೨೯, ೪೬, ೫೨, ೫೪, ೫೫, ೫೮, ೬೬, ೬೭, ೭೦, ೭೩, ೭೪, ೭೫, ೮೦, ೮೧, ೮೨, ೮೩, ೮೪ ಈ ನಂಬರಿನ ಒಟ್ಟು ೧೮ ಪುಸ್ತಕಗಳು ಸಿಕ್ಕಿಲ್ಲ.* ಹೆಸರೂ ಗೊತ್ತಾಗಿಲ್ಲ. ಇವು ಪ್ರಕಟವಾಗಿವೆಯೋ ಇಲ್ಲವೋ ಸಂದೇಹ.

ಇವುಗಳಲ್ಲಿ ಅನ್ಯರ ಗ್ರಂಥಗಳೂ ಸೇರಿರಬಹುದು. ಲೇಖನಗಳ ಸಂಖ್ಯಾ ವಿಷಯವೂ ಇದೇ ರೀತಿ ಗೊಂದಲಮಯವಾಗಿದೆ. ಏಕೆಂದರೆ ಸಾಮಾನ್ಯವಾಗಿ ಶಿವಾನುಭವದಲ್ಲಿ ಬರೆದ ಲೇಖನಗಳಿಗೆ ನೇರವಾಗಿ ಹಳಕಟ್ಟಿಯವರ ಹೆಸರುಗಳಿವೆ. ಕೆಲವು ಲೇಖನಗಳಿಗೆ 'ಸಂಪಾದಕರು' ಎಂಬ ಸೂಚನೆಯಿದೆ. ಕೆಲವು ಲೇಖನಗಳಿಗೆ ಯಾರ ಹೆಸರೂ ಇಲ್ಲ. ಹೀಗಾಗಿ ಹಳಕಟ್ಟಿಯವರ ನಿಜವಾದ ಲೇಖನಗಳ ನಿರ್ಣಯ ಸಂದೇಹ ಹುಟ್ಟಿಸುತ್ತದೆ.

II

ಗ್ರಂಥ ಮತ್ತು ಲೇಖನಗಳ ಸಂಖ್ಯೆ, ನೇರ ಮತ್ತು ಧಾರಾವಾಹಿ ಪ್ರಕಟನೆಗಳ ಸಮಸ್ಯೆ - ಇವುಗಳನ್ನು ಬಿಡಿಸಿಕೊಂಡರೂ ಎಲ್ಲ ಗ್ರಂಥಗಳು, ಶಿವಾನುಭವದ ಎಲ್ಲ ಸಂಚಿಕೆಗಳು ಒಂದೆಡೆ ಸಿಗುವುದಿಲ್ಲ. ಕೆಲವು ಒಂದೆಡೆ, ಕೆಲವು ಬೇರೊಂದೆಡೆ ಸಿಗುತ್ತವೆ. ೧೯೨೬ ಫೆಬ್ರುವರಿ ೧ ರಂದು ಹುಟ್ಟಿದ ಶಿವಾನುಭವ ಪತ್ರಿಕೆ ಮೊದಲಿನ ೩ ವರ್ಷ ತ್ರೈಮಾಸಿಕವಾಗಿ, ಬಳಿಕ ೨ ವರ್ಷ ಮಾಸಿಕವಾಗಿ, ಆಮೇಲೆ ೫ ವರ್ಷ ದ್ವೈಮಾಸಿಕವಾಗಿ ರೂಪ ಬದಲಿಸಿಕೊಳ್ಳುತ್ತ ೧೦ ವರ್ಷ ಹಾದಿ ಕ್ರಮಿಸಿತು. ಬಳಿಕ ೧೧ ರಿಂದ ೩೫ ವರ್ಷದ ವರೆಗೆ ಮಾಸಿಕವಾಗಿ ಮುಂದುವರಿಯಿತು. ಈ ಅವಧಿಯಲ್ಲಿ ಅಚ್ಚಿನ ತೊಂದರೆ, ಆರ್ಥಿಕ ಮುಗ್ಗಟ್ಟು, ಕಾರಣವಾಗಿ, ಅದು ಕೆಲವೊಮ್ಮೆ ಸಂಯುಕ್ತ ಸಂಚಿಕೆಗಳನ್ನು ಪ್ರಕಟಿಸಿತು. ಹೀಗೆ ನಿಯತದಲ್ಲಿಯೇ ಒಂದಿಷ್ಟು ಅನಿಯತವೆಂಬಂತೆ ತನ್ನ ೩೫ ವರ್ಷಗಳಲ್ಲಿ ೩೫ ಸಂಪುಟಗಳನ್ನು, ೩೧೯ ಸಂಚಿಕೆಗಳನ್ನು ಹೊರತಂದು ಸ್ಥಗಿತವಾಯಿತು (೧೯೬೦). ಇಂಥ ಯೋಜನೆಯ ಪ್ರಸಂಗದಲ್ಲಿ ಈ ತಿಳಿವಳಿಕೆ ಅಗತ್ಯವೆಂದು ಬೇರೆ ಹೇಳಬೇಕಿಲ್ಲ.

III

ಹಳಕಟ್ಟಿ ಸಾಹಿತ್ಯದಂಥ ಬರವಣಿಗೆ ಇಂದಿನ ತಲೆಮಾರಿಗೆ ಮಹತ್ವದ್ದೆನಿಸುವುದಿಲ್ಲ. ಆದುದರಿಂದ ಅವರ ಸಾಹಿತ್ಯದ ಸಂಗ್ರಹ, ಸಂಪಾದನೆಯ ಬಗ್ಗೆ ಶ್ರಮವಹಿಸುವ ಆಸಕ್ತ ವಿದ್ವಾಂಸರು ಸಿಗುವುದು ಕಠಿಣ. ಸಿಕ್ಕರೂ ಇಂದಿನ ಅವರಸರದ, ಹಲವು ಹವ್ಯಾಸಗಳ ಜೀವನರೀತಿ ಕಾರಣವಾಗಿ ಈ ಕೆಲಸದ ಮೇಲೆ ಶಕ್ತಿಯನ್ನು ಕೇಂದ್ರೀಕರಿಸುವುದು, ಅವರಿಗೆ ಸಾಧ್ಯವಾಗುವುದಿಲ್ಲ. ಇಂಥ ವಾತಾವರಣದಲ್ಲಿ ಇದ್ದವರಲ್ಲಿಯೇ ಸೂಕ್ತವ್ಯಕ್ತಿಗಳನ್ನು ಆಯ್ದುಕೊಂಡು, ಮೇಲೆ ಸೂಚಿಸಿದಂತೆ ಒಬ್ಬೊಬ್ಬರಿಗೆ ಒಂದೊಂದು ಸಂಪುಟದ ಹೊಣೆ ವಹಿಸಿಕೊಡಲಾಯಿತು.

ಇಲ್ಲಿಯ ಸಂಪಾದನೆಯ ನೀತಿಯನ್ನು ಕುರಿತು ಹೇಳುವುದಾದರೆ, ಅರ್ಥವಾಗುವ ಪ್ರಸಂಗದಲ್ಲಿ ಹಳಕಟ್ಟಿಯವರ ಪಾಠ ಉಳಿಸಿಕೊಳ್ಳಲಾಗಿದೆ. ಅರ್ಥವಾಗದಿದ್ದಲ್ಲಿ ಇತ್ತೀಚಿನ ಸಂಪಾದನೆಗಳ ನೆರವಿನಿಂದ ಪಾಠವನ್ನು ಸರಿಪಡಿಸಲಾಗಿದೆ. ಗ್ರಂಥದ ವಿನ್ಯಾಸದ ವಿಷಯದಲ್ಲಿ ಆಧುನಿಕತೆಯನ್ನು ಅಳವಡಿಸಲಾಗಿದೆ.

ಕೃತಜ್ಞತೆ :

"ಸಮಗ್ರ ವಚನಸಾಹಿತ್ಯ"ವನ್ನು ಬೆಳಕಿಗೆ ತಂದ ನನ್ನಿಂದ "ಸಮಗ್ರ ವಚನಪಿತಾಮಹ ಸಾಹಿತ್ಯ" ಬೆಳಕಿಗೆ ತರುವ ಕೆಲಸ ಮಾಡಿಸಿದ ದೇವರಿಗೆ ನಾನು ಋಣಿಯಾಗಿದ್ದೇನೆ. ಇವೆರಡೂ ನನ್ನ ಜೀವಮಾನದ ಮಹತ್ವದ ಕೆಲಸಗಳೆಂದು ವಿನಮ್ರವಾಗಿ ಹೇಳಬಯಸುತ್ತೇನೆ.

ಡಾ. ಫ. ಗು. ಹಳಕಟ್ಟಿಯವರು ವಿಜಾಪುರಕ್ಕೆ ಬಂದುದು ೧೯೦೪ರಲ್ಲಿ. ಈ ಯೋಜನೆ ಆರಂಭವಾದುದು ೨೦೦೪ರಲ್ಲಿ. ಹೀಗಾಗಿ ಇದು ಡಾ. ಹಳಕಟ್ಟಿಯವರು ವಿಜಾಪುರಕ್ಕೆ ಆಗಮಿಸಿದ ಶತಮಾನೋತ್ಸವ ಸ್ಮರಣೆಯೆನಿಸಿದೆ.

ಈ ಐತಿಹಾಸಿಕ ಯೋಜನೆಗೆ ಅಸ್ತು ಹೇಳಿ, ಮುಕ್ತವಾಗಿ ಧನವಿನಿಯೋಗಿಸಿದ ವಿಜಾಪುರದ ಬಿ.ಎಲ್.ಡಿ.ಇ. ಸಂಸ್ಥೆಗೆ, ಇದರ ಅಧ್ಯಕ್ಷರಾದ ಶ್ರೀ ಎಂ. ಬಿ. ಪಾಟೀಲ, ಉಪಾಧ್ಯಕ್ಷರಾದ ಶ್ರೀ ಬಿ. ಆರ್. ಪಾಟೀಲ (ಲಿಂಗದಳ್ಳಿ), ಕೋಶಾಧ್ಯಕ್ಷರಾದ ಶ್ರೀ ಜಿ. ಕೆ. ಪಾಟೀಲ ಅವರಿಗೆ, ಕಾರ್ಯಸಮಿತಿಯ ಎಲ್ಲ ಸದಸ್ಯರಿಗೆ ಧನ್ಯವಾದಗಳು.

ಈ ಯೋಜನೆಯನ್ನು ಕೈಗೆತ್ತಿಕೊಂಡ ಬಿ.ಎಲ್.ಡಿ.ಇ. ಸಂಸ್ಥೆಯ ಅಂಗವಾದ "ವಚನಪಿತಾಮಹ ಡಾ. ಹಳಕಟ್ಟಿ ಸಂಶೋಧನ ಕೇಂದ್ರ"ಕ್ಕೆ, ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರ ಶರಣಸಂಸ್ಕೃತಿ ಬಗೆಗಿನ ಭಕ್ತಿ - ಹಳಕಟ್ಟಿ ಅವರ ಬಗೆಗಿನ ಗೌರವ ಮತ್ತು ಕಾರ್ಯತತ್ಪರತೆಗಳಿಗೆ, ಕಾರ್ಯದರ್ಶಿ ಶ್ರೀ ಎಂ. ಎಸ್. ಮದಭಾವಿ ಅವರ ಸಹಾಯಕ್ಕೆ ವಂದನೆಗಳು.

"ಹಳಕಟ್ಟಿ ಸಮಗ್ರಸಾಹಿತ್ಯ ಪ್ರಕಟನ ಯೋಜನೆ"ಗೆ ಬೆಂಬಲ ನೀಡಿ, ಇದು ಅಸ್ತಿತ್ವಕ್ಕೆ ಬರಲು ಕಾರಣರಾದ ಪೂಜ್ಯ ಸುತ್ತೂರು, ಗದಗ, ಇಲಕಲ್ಲ, ಬೆಳಗಾವಿ, ಭಾಲ್ಕಿ ಶ್ರೀಗಳವರಿಗೂ, ಈ ಯೋಜನೆಗೆ ನೇತೃತ್ವ ವಹಿಸಿದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರಿಗೂ ಪ್ರಣಾಮಗಳು. ಈ ಯೋಜನೆಗೆ ಮೂಲಸಾಮಗ್ರಿ, ಹಳಕಟ್ಟಿಯವರ ಸಮಗ್ರಸಾಹಿತ್ಯ. ಇದರ ಬಹುಭಾಗವನ್ನು ಝೆರಾಕ್ಸ್ ಮಾಡಿಸಿಕೊಡುವ ಔದಾರ್ಯ ತೋರಿದ ಬೆಳಗಾವಿಯ ಪೂಜ್ಯ ಶ್ರೀ ಸಿದ್ಧರಾಮಸ್ವಾಮೀಜಿ ಅವರಿಗೂ, ಗ್ರಂಥಪಾಲರಾದ ಡಾ. ಎಸ್. ಆರ್. ಗುಂಜಾಳ ಅವರಿಗೂ, ಅವರ ಸಿಬ್ಬಂದಿ ವರ್ಗದ ಬಿ. ಬಿ. ಹೊಸಮನಿ, ಪ್ರಕಾಶ ಗಿರಿಮಲ್ಲನವರ, ಶ್ರೀಮತಿ ರತ್ನಮ್ಮ ಪುರಾಣಿಕ ಅವರಿಗೂ, ಡಾ. ಫ. ಗು. ಹಳಕಟ್ಟಿಯವರ ಮೊಮ್ಮಗ ಶ್ರೀ ಗಿರೀಶ ಹಳಕಟ್ಟಿ ಅವರಿಗೂ ವಂದನೆಗಳು.

ಸಂಪಾದಕರಾಗಿ ಶ್ರಮ, ಶ್ರದ್ಧೆಯಿಂದ ಕೆಲಸ ಪೂರೈಸಿದ ಡಾ. ಎಸ್. ಆರ್. ಗುಂಜಾಳ, ಡಾ. ಬಿ. ವಿ. ಮಲ್ಲಾಪುರ, ಡಾ. ವಿ. ಬಿ. ರಾಜೂರ, ಡಾ. ಬಾಳಣ್ಣ ಸೀಗೀಹಳ್ಳಿ, ಡಾ. ಎಸ್. ಕೆ. ಕೊಪ್ಪಾ ಮತ್ತು ಡಾ. ಎಂ. ಎಂ. ಪಡಶೆಟ್ಟಿ, ಡಾ. ಬಸವರಾಜ ಜಗಜಂಪಿ, ಡಾ. ವಿ. ಎಸ್. ಮಾಳಿ, ಡಾ. ಗುಂಡಣ್ಣ ಕಲಬುರ್ಗಿ, ಡಾ. ಬಿ. ಎಂ. ಪಾಟೀಲ, ಡಾ. ಜೆ. ಎಂ. ನಾಗಯ್ಯ, ಶ್ರೀ ಸಿದ್ಧಲಿಂಗ ದೇಸಾಯಿ, ಡಾ. ಎಂ. ಎಸ್. ಮದಭಾವಿ, ಡಾ. ಪಿ. ಕೆ. ರಾಠೋಡ, ಡಾ. ಸರಸ್ವತಿದೇವಿ ಭಗವತಿ, ಡಾ. ಎಚ್. ಎಸ್. ಮೇಲಿನಮನಿ ಅವರಿಗೂ ಕೃತಜ್ಞತೆಗಳು.

ಇಷ್ಟು ದೊಡ್ಡ ಯೋಜನೆಯ ಗ್ರಂಥಮುದ್ರಣ ಶ್ರಮ, ಅದಕ್ಕಿಂತ ಸಮಯವನ್ನು ಬಯಸುತ್ತದೆ. ಈ ಮೌಲ್ಯಗಳ ಸಾಕಾರವಾಗಿರುವ ಬೆಂಗಳೂರಿನ ಪ್ರಿಂಟ್ ಪಾರ್ಕ್ ಮುದ್ರಣಾಲಯದ ಒಡೆಯರಾದ ಶ್ರೀ ಜಿ. ಬಿ. ಪಾಟೀಲ ಅವರಿಗೆ, ನಾವು ಕೊಡುವ ತೊಂದರೆಗೆ ಬೇಸರ ಮಾಡಿಕೊಳ್ಳದೆ ಅಚ್ಚಿನ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಪ್ರೀತಿಯ ಬಸು ಅವರಿಗೆ ನಮ್ಮ ಧನ್ಯವಾದಗಳು ಸಲ್ಲುತ್ತವೆ. ಭಾಗಶಃ ಬೆರಳಚ್ಚು ಕಾರ್ಯ ಪೂರೈಸಿದ ಧಾರವಾಡ ವಚನ ಗ್ರಾಫಿಕ್ಸ್ ಮಾಲೀಕರಾದ ಶ್ರೀ ದೇವರಾಜ ನಾಡಿಗ, ಕೃಪಾ ಕಂಪ್ಯೂಟರ್ಸ್ ಮಾಲೀಕರಾದ ಶ್ರೀ ಆರ್. ಕೆ. ಹೆಗಡೆ ಅವರಿಗೆ, ಮುಖಪುಟವನ್ನು ವಿನ್ಯಾಸಗೊಳಿಸಿದ ಹುಬ್ಬಳ್ಳಿಯ ಗುರು ಆರ್ಟ್ಸ್ ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ತುಂಬ ಶ್ರಮ - ಶ್ರದ್ಧೆಯಿಂದ ನಾವು ಈ ಯೋಜನೆಯನ್ನು ಪೂರ್ಣಗೊಳಿಸಿದ್ದು, ನಮ್ಮ ಕಣ್ಣುತಪ್ಪಿ ಉಳಿದಿರಬಹುದಾದ ಗ್ರಂಥ ಮತ್ತು ಲೇಖನಗಳನ್ನು ಹುಡುಕಿ ತಿಳಿಸಬೇಕೆಂದೂ, ಕೊರತೆಗಳನ್ನು ಸೂಚಿಸಬೇಕೆಂದೂ ಕೋರುತ್ತ, ಈ ಹದಿನೈದು ಸಂಪುಟಗಳನ್ನು ಪ್ರೀತಿಯಿಂದ ಬರಮಾಡಿಕೊಳ್ಳಬೇಕೆಂದು ಸಹೃದಯರಲ್ಲಿ ಬಿನ್ನವಿಸಿಕೊಳ್ಳುತ್ತೇವೆ.

ಎಂ. ಎಂ. ಕಲಬುರ್ಗಿ

---

* ಪ್ರಥಮ ಆವೃತ್ತಿ : ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ, ವಿಜಾಪುರ.

ಆಕರ : ಮಾರ್ಗ ಸಂಪುಟ–೫

■■

೩೪೫

ಲಿಂಗಾಯತ

೨೦೦೯

ಸಮಾಜವೇ ದೇವರು

ವೃತ್ತಿ, ಜಾತಿ, ಧರ್ಮ - ಇವು ಮಾನವ ಸಮಾಜದ ಇತಿಹಾಸದಲ್ಲಿ ಮೂರು ಹಂತಗಳೆನಿಸಿವೆ. ಮೊದಲನೆಯ ಹಂತದಲ್ಲಿ ಯಾವುದೇ ವ್ಯಕ್ತಿ ಯಾವುದೇ ವೃತ್ತಿ ಆಯ್ದುಕೊಳ್ಳಬಹುದಾಗಿದ್ದಿತು. ವೃತ್ತಿಕೌಶಲ್ಯ ಇಲ್ಲಿ ಮುಖ್ಯ ತತ್ವವಾಗಿದ್ದಿತು. ಬಳಿಕ ತಂದೆಯ ವೃತ್ತಿಯನ್ನು ಮಗ ಮುಂದುವರಿಸುವ ಅನುವಂಶಿಕತೆ ಕಾರಣವಾಗಿ, ವೃತ್ತಿಯ ಸ್ಥಾನದಲ್ಲಿ ಜಾತಿ ನೆಲೆ ಪಡೆಯಿತು. ಇದರಿಂದಾಗಿ ವಿದ್ವಾಂಸನಾಗಿರದಿದ್ದರೂ ಬ್ರಾಹ್ಮಣನ ಮಗ ಬ್ರಾಹ್ಮಣನೆನಿಸಿದ, ಶೂರನಾಗಿರದಿದ್ದರೂ ಕ್ಷತ್ರಿಯನ ಮಗ ಕ್ಷತ್ರಿಯನೆನಿಸಿದ. ಇಲ್ಲಿ ವೃತ್ತಿಕೌಶಲ್ಯದ ಬದಲು ಜನನ ಮುಖ್ಯವೆನಿಸಿ, ಅದರ ಬಲದಿಂದ ವ್ಯಕ್ತಿಯ ಸ್ಥಾನಮಾನಗಳು ಸಮಾಜದಲ್ಲಿ ನಿರ್ಧಾರಗೊಳ್ಳತೊಡಗಿದವು. ದಿನಗಳೆದಂತೆ ಇವುಗಳಲ್ಲಿ

ಕೆಲವು ಜಾತಿಗಳು ಆಧ್ಯಾತ್ಮ ಪರಿಕಲ್ಪನೆಯನ್ನು ರೂಪಿಸಿಕೊಂಡು, ಧರ್ಮದ ಹಂತಕ್ಕೇರಿದವು. ಈಗ ಮನುಷ್ಯ ಸಹಜ ವೃತ್ತಿಯು ಗೌಣವೆನಿಸಿ, ಅವನಿಂದ ನಿರ್ಮಿತವಾದ ಜಾತಿ, ಧರ್ಮಗಳೇ ಮುಖ್ಯವೆನಿಸಿದವು. ಮಾನವನೇ ನಿರ್ಮಿಸಿದ್ದ ಕಾರಣ, ಅವನ ಶೋಷಕ ಬುದ್ಧಿಗೆ ಅನುಗುಣವಾಗಿ ಜಾತಿಗಳಲ್ಲಿ ತಾರತಮ್ಯ ಬೆಳೆದು ಸ್ಪೃಶ್ಯ - ಅಸ್ಪೃಶ್ಯ ಮಟ್ಟಕ್ಕೆ ಮುಟ್ಟಿತು ಮತ್ತು ಆತ್ಮೋದ್ಧಾರದ ನೆವದಲ್ಲಿ ಧರ್ಮವು ಕರ್ಮಕ್ಕೆ ಹೊರಳಿ, ಅಲ್ಲಿ ಶೋಷಣೆ ನೆಲೆ ಪಡೆಯಿತು. ಇಂಥ ಸಾಮಾಜಿಕ ದುಸ್ಥಿತಿಯ ಸಂದರ್ಭದಲ್ಲಿ ಕಲ್ಯಾಣದ ಶರಣರು ತಲೆಯೆತ್ತಿದರು.

ಜಾತಿ, ಹಿಂದೂಸಮಾಜದ ವೈಶಿಷ್ಟ್ಯದಂತೆ ಶಾಪವೂ ಆಗಿದೆ. ಈ ಸಮಾಜದಲ್ಲಿ ಬೇರ್ಪಡಿಸಲಾರದಂತೆ ಇದು ರಸಾಯನವಾಗಿ ಬೆರೆತುಬಿಟ್ಟಿದೆ. ವೃತ್ತಿ, ವರ್ಣ, ವರ್ಗ ಇತ್ಯಾದಿಗಳ ಹಿನ್ನೆಲೆಯಲ್ಲಿ ಇದರ ಮೂಲ ಹುಡುಕಹೊರಟ ವಿದ್ವಾಂಸರನ್ನೇ ಇದು ದಿಕ್ಕುಗೆಡಿಸಿದೆ; ತನ್ನನ್ನು ಕೊಲ್ಲಲು ಪ್ರಯತ್ನಿಸಿದ ಮಹಾತ್ಮರನ್ನೇ ಇದು ಬಲಿ ತೆಗೆದುಕೊಂಡಿದೆ. ಬಸವಣ್ಣನ ಬದುಕು ಇದಕ್ಕೆ ನಿಚ್ಚಳ ನಿದರ್ಶನವೆನಿಸಿದೆ.

ಜಾತಿಯ ಎಲ್ಲ ಲಕ್ಷಣಗಳಲ್ಲಿ ಅತ್ಯಂತ ಪ್ರಬಲವಾದುದು ಅದರ "ಒಳಬಾಂಧವ್ಯ". ಈ ಬಾಂಧವ್ಯದ ರೇಖೆ ಉಲ್ಲಂಘನೆಯಾದರೆ ಜಾತಿ ಸತ್ತೇ ಹೋಗುತ್ತದೆ. ಆದರೆ ಹಲವು ಸೂಕ್ಷ್ಮ ಕಾರಣಗಳಿಂದಾಗಿ ಅದು ತನ್ನ ಒಳಬಾಂಧವ್ಯವನ್ನು ಜೀವಂತವಾಗಿರಿಸಿಕೊಂಡಿದೆ. ಸುಮಾರು ಒಂಬತ್ತು ಶತಮಾನಗಳ ಹಿಂದೆ ಬಸವಣ್ಣ ಹಾಗೂ ಆತನ ಅನುಯಾಯಿಗಳು ಮನುಷ್ಯಕುಲವನ್ನು ಈ ಒಳಬಾಂಧವ್ಯದ ಬಂಧನದಿಂದ ಮುಕ್ತಗೊಳಿಸಲು ಯತ್ನಿಸಿದರು. ಅಂದರೆ ಅವರು ಅಂತರ್‌ಜಾತಿ ವಿವಾಹ ಜರುಗಿಸುತ್ತಲೇ ಕಲ್ಯಾಣದಲ್ಲಿ ಸಾಮಾಜಿಕ ಕ್ರಾಂತಿ ಸಂಭವಿಸಿತು. ಇದರಿಂದಾಗಿ, ಜಾತಿಯನ್ನು ಗೌಣಗೊಳಿಸಿ, ವೃತ್ತಿ (ಕಾಯಕ)ಯನ್ನು ಪ್ರಧಾನವಾಗಿಸಿದ್ದ ಶರಣಧರ್ಮದಲ್ಲಿ ಕ್ರಮೇಣ ವೃತ್ತಿ(ಕಾಯಕ)ಯು ಗೌಣವಾಗಿ, ಜಾತಿಯೇ ಪ್ರಧಾನವಾಯಿತು. ಇದರ ಫಲವಾಗಿ ಈ ಧರ್ಮದಲ್ಲಿ ಅನೇಕ ಉಪಜಾತಿಗಳು ಆಕಾರಪಡೆದವು. ಈಗ ಮೊದಲು ಆಕಾರ ಪಡೆದುದು ಪುರೋಹಿತಶಾಹಿ ಜಂಗಮಜಾತಿ. ದುರ್ದೈವದ ಸಂಗತಿಯೆಂದರೆ ಲಿಂಗಾಯತವು ಬ್ರಾಹ್ಮಣ್ಯವೆಂಬ ಹೊರಗಿನ ಪುರೋಹಿತಶಾಹಿ ಜಾತಿಯನ್ನು ಎದುರಿಸುವುದರ ಜೊತೆಗೆ, ತನ್ನ ಒಡಲಲ್ಲಿಯೇ ಹುಟ್ಟಿಕೊಂಡ ಜಂಗಮವೆಂಬ ಈ ಹೊಸ ಪುರೋಹಿತಶಾಹಿ ಜಾತಿಯನ್ನು ಎದುರಿಸಬೇಕಾಗಿದೆ.

ಕಲ್ಯಾಣದ ಸಂಘಟನೆಗೆ, ಅದೇ ರೀತಿ ವಿಘಟನೆಗೂ ಕಾರಣವಾದ 'ಜಂಗಮ' ಎಂಬ ಪರಿಕಲ್ಪನೆ ಹಲವು ಅರ್ಥ ಆಯಾಮಗಳನ್ನು ಹೊಂದಿದೆ. ಹೀಗಿದ್ದೂ ಇದರ ಮುಖ್ಯ ಅರ್ಥ ಜಂಗಮನಾಗುವುದೆಂದರೆ ಭಕ್ತನು ಮೊದಲು ಲಿಂಗವಾಗಿ, ಮುಂದುವರಿದು ಸಾಮಾಜಿಕನಾಗುವುದು ಅಥವಾ ಮನುಷ್ಯನು ನಿಜವಾದ ಮನುಷ್ಯನಾದ ಬಳಿಕ ಸಾಮಾಜಿಕ ಮನುಷ್ಯನಾಗುವುದು. ಆದರೆ ಆಂಧ್ರದ ಪುರೋಹಿತಶಾಹಿ ಆಚಾರ್ಯತತ್ವವು ಕರ್ನಾಟಕದ ಸಾಮಾಜಿಕ ಮನುಷ್ಯನೆಂಬ ಜಂಗಮತತ್ವದಲ್ಲಿ ಸೇರಿಕೊಳ್ಳುವಲ್ಲಿ, ಇವುಗಳ ಮಿಶ್ರಣದಿಂದ ಲಿಂಗಾಯತದಲ್ಲಿ ಜಂಗಮವೆಂಬ ಒಂದು ಉಪಜಾತಿ ರೂಪುಗೊಂಡಿತು. ಇದರಿಂದಾಗಿ ಈ ಸಮಾಜದಲ್ಲಿ ಮೊದಲು ಜಂಗಮವರ್ಗ, ಭಕ್ತವರ್ಗವೆಂಬ ಜಾತಿ ಬಿರುಕು ನಿರ್ಮಾಣವಾಯಿತು. ಕಾಲಕ್ರಮೇಣ ಈ ಸಮಾಜದ ಕಾಯಕಗಳು ಜಾತಿಯ ಬಣ್ಣಕ್ಕೆ ತಿರುಗಲಾರಂಭಿಸಿ ಸ್ಪೃಶ್ಯ ಮೇಲುಜಾತಿ, ಸ್ಪೃಶ್ಯ ಕೆಳಜಾತಿ, ಸ್ಪೃಶ್ಯ ಹೊರಜಾತಿ, ಅಸ್ಪೃಶ್ಯ ಹೊರಜಾತಿಯೆಂಬ ನಾಲ್ಕು ಘಟಕಗಳು ಆಕಾರಪಡೆದವು. ಉದಾ : ಜಂಗಮ, ಆರಾಧ್ಯ, ಬಣಜಿಗ, ಪಂಚಮಸಾಲಿ(ಸಾಲು), ಗಾಣಿಗ,

ರೆಡ್ಡಿ ಇತ್ಯಾದಿಗಳು ಸ್ಪೃಶ್ಯ ಮೇಲುಜಾತಿ ಲಿಂಗಾಯತರು. ಅಗಸ, ಕ್ಷೌರಿಕ ಇತ್ಯಾದಿಗಳು ಸ್ಪೃಶ್ಯ ಕೆಳಜಾತಿ ಲಿಂಗಾಯತರು. ಕುರುಬ, ಅಂಬಿಗ ಇತ್ಯಾದಿ ಸ್ಪೃಶ್ಯ ಹೊರಜಾತಿ ಲಿಂಗಾಯತರು. ಮಾದಿಗ (ಚನ್ನಯ್ಯನ ಕುಲ) ಡೋಹರ (ಕಕ್ಕಯ್ಯನ ಕುಲ) ಸಮಗಾರ (ಹರಳಯ್ಯನ ಕುಲ) ಇತ್ಯಾದಿ ಅಸ್ಪೃಶ್ಯ ಹೊರಜಾತಿ ಲಿಂಗಾಯತರು. ಇವರನ್ನು ಕ್ರಮವಾಗಿ ಇನ್ನೂ ಒಳಸುತ್ತು, ಒಳಸುತ್ತು, ಹೊರಸುತ್ತು, ಇನ್ನೂ ಹೊರಸುತ್ತಿನ ಲಿಂಗಾಯತರೆಂದು ಕರೆಯಬಹುದು.

ಈ ನಾಲ್ಕು ವರ್ಗಗಳಲ್ಲಿ ಇಂದು ಒಂದನೆಯ ವರ್ಗದವರು ಸ್ಪಷ್ಟವಾಗಿ ಲಿಂಗಾಯತರು. ಎರಡನೆಯ ವರ್ಗದವರೂ ಸ್ಪಷ್ಟವಾಗಿ ಲಿಂಗಾಯತರು. ಇಂದು ಲಿಂಗಾಯತದಿಂದ ಮೂರನೆಯ ವರ್ಗ ದೂರ ಹೋಗಿದ್ದರೂ, ನಾಲ್ಕನೆಯ ವರ್ಗ ಇನ್ನೂ ದೂರ ಹೋಗಿದ್ದರೂ ಶರಣನೊಬ್ಬನ ಮೂಲವನ್ನು ಹೇಳಿಕೊಳ್ಳುತ್ತಲಿರುವುದು, ಲಿಂಗಾಯತೀಯ ಅಂಶಗಳು ಅವರಲ್ಲಿ ಇನ್ನೂ ಉಳಿದುಕೊಂಡಿರುವುದು ಕಾರಣವಾಗಿ, ಅವರೂ ಮೂಲದಲ್ಲಿ ಲಿಂಗಾಯತರಾಗಿದ್ದರೆಂದು ಹೇಳಬಹುದು. ಈ ಮಾನದಂಡ ಇಟ್ಟುಕೊಂಡು ನಾವು ಇಲ್ಲಿ ಲಿಂಗಾಯತ ಒಳಪಂಗಡಗಳನ್ನು ಪರಿಗಣಿಸಿದ್ದೇವೆ. ಇವುಗಳಲ್ಲಿ ಒಂದು ಮತ್ತು ಎರಡನೆಯ ವರ್ಗದ ಲಿಂಗಾಯತರು ಇಷ್ಟಲಿಂಗ, ವಿಭೂತಿಧಾರಣೆ ಮತ್ತು ಶಾಕಾಹಾರಕ್ಕೆ ಸೀಮಿತವಾಗಿದ್ದರೆ, ಮೂರು ಮತ್ತು ನಾಲ್ಕನೆಯ ವರ್ಗದ ಲಿಂಗಾಯತರು ಇಷ್ಟಲಿಂಗ, ವಿಭೂತಿ ಧಾರಣೆ ಒಪ್ಪಿಕೊಂಡು ಶಾಕಾಹಾರದಿಂದ ವಿಮುಖರಾದುದು ಕಂಡುಬರುತ್ತದೆ. ಈಗ ಒಂದನೆಯ ವರ್ಗದ ಲಿಂಗಾಯತರು ಮಿಕ್ಕ ಮೂರು ವರ್ಗದ ಲಿಂಗಾಯತರನ್ನು, ಅದರಲ್ಲಿಯೂ ಕೊನೆಯ ಎರಡು ವರ್ಗದ ಲಿಂಗಾಯತರನ್ನು ಒಪ್ಪಿಕೊಳ್ಳುವುದು, ಅಪ್ಪಿಕೊಳ್ಳುವುದು ಇಂದಿನ ಅಗತ್ಯವೆನಿಸಿದೆ.

ಆಧುನಿಕ ಕಾಲದಲ್ಲಿ ಲಿಂಗಾಯತದ ಬಗ್ಗೆ ಅಪಾರವಾದ ಸಾಹಿತ್ಯ ಸೃಷ್ಟಿಯಾಗಿದೆ. ಗಮನಿಸಬೇಕಾದ ಅಂಶವೆಂದರೆ, ಮೊದಮೊದಲು ಇಂಥ ಆಧುನಿಕ ಸಾಹಿತ್ಯ ಮುದ್ರಣಗೊಂಡುದು ಮೈಸೂರು ಪ್ರದೇಶದಲ್ಲಿ. ಅಲ್ಲಿಯ ಆರಾಧ್ಯವೀರಶೈವರು ತಮ್ಮ ವೈದಿಕ ಧೋರಣೆಯ ಸಾಹಿತ್ಯವನ್ನೇ ಬೆಳಕಿಗೆ ತಂದು, ಅದೇ ಲಿಂಗಾಯತದ ನಿಜವಾದ ಸಾಹಿತ್ಯವೆಂದು ಎಲ್ಲರೂ ನಂಬುವಂತೆ ಮಾಡಿದರು. ಸಾಲದುದಕ್ಕೆ ಮೈಸೂರಿನಂತೆ ಸೊಲ್ಲಾಪೂರದಿಂದಲೂ ವಾರದ ಮಲ್ಲಪ್ಪನವರ ಸಂಸ್ಕೃತ ಪಾಠಶಾಲೆಯ 'ಲಿಂಗೀಬ್ರಾಹ್ಮಣ ಗ್ರಂಥಮಾಲೆ'ಯ ಮೂಲಕ ಆರಾಧ್ಯರ ಧೋರಣೆಯ ಸಾಹಿತ್ಯವು ದೊಡ್ಡ ಪ್ರಮಾಣದಲ್ಲಿ ಬೆಳಕು ಕಂಡಿತು. ಇದೇ ಕಾಲಕ್ಕೆ ಆರಂಭವಾದ ರೈಲು ಸಂಚಾರದ ಸೌಲಭ್ಯ ಕಾರಣವಾಗಿ ಕಾಶಿಗೆ ಅಭ್ಯಾಸಕ್ಕೆ ಹೋದ ಶಾಸ್ತ್ರಿಗಳು, ಕರ್ನಾಟಕಕ್ಕೆ ಮರಳುತ್ತಲೇ ವಚನ ಪಾಠಶಾಲೆಗೆ ಬದಲು ಸಂಸ್ಕೃತದ ಪಾಠಶಾಲೆ ಆರಂಭಿಸಿ, ಕಾಶಿಯಲ್ಲಿ ಕಲಿತಿದ್ದ ಆರಾಧ್ಯರ ಧೋರಣೆಯ ಸಾಹಿತ್ಯವನ್ನೇ ಇಲ್ಲಿ ಪ್ರಚಾರ ಮಾಡಿದರು. ಇವರು ಬರೆದುದನ್ನೇ ಪ್ರಾಧ್ಯಾಪಕರು ಓದಿ, ಬರೆಹ - ಭಾಷಣಗಳ ಮೂಲಕ ಪ್ರಚಾರ ಮಾಡಿದರು. ಒಟ್ಟಿನಲ್ಲಿ ಶಾಸ್ತ್ರಿಗಳು - ಶಿಕ್ಷಕರು ಶರಣಸಿದ್ಧಾಂತವನ್ನು ಕಲುಷಿತಗೊಳಿಸಿದರೆಂದು ಹೇಳಬಹುದು. ಹೀಗಾಗಿ ವೈದಿಕ ವಿರೋಧಿ (Anti Vedic) ಲಿಂಗಾಯತವು ೧೯-೨೦ನೆಯ ಶತಮಾನಗಳ ಸಂಧಿಕಾಲದಲ್ಲಿ ವೈದಿಕ ಧೋರಣೆಯ ಆರಾಧ್ಯವೀರಶೈವರ ಸಾಹಿತ್ಯವನ್ನು ತನ್ನದೆಂದು ನಂಬಿದ ಪ್ರಮಾದಮಾಡಿತು.

ಇಂಥ ಮೋಸದ ಸಂದರ್ಭದಲ್ಲಿ ಫ. ಗು. ಹಳಕಟ್ಟಿಯವರು ವಚನಸಾಹಿತ್ಯವನ್ನು ಬೆಳಕಿಗೆ ತರಲಾಗಿ, ಲಿಂಗಾಯತ ಧರ್ಮಕ್ಕೆ ಹೊಸ ತಿರುವು ದೊರೆಯಿತು. ಇದಕ್ಕೆ ಪೂರಕವಾಗಿ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳು, ವಿರಕ್ತಮಠಗಳು ದುಡಿದವಾದರೂ ಇಲ್ಲಿ ಲಿಂಗಾಯತದ ಸಾಹಿತ್ಯಿಕ,

ಧಾರ್ಮಿಕ ಅಧ್ಯಯನ ಮಾತ್ರ ಜರುಗಿ, ಸಾಮಾಜಿಕ, ಚಾರಿತ್ರಿಕ ಅಧ್ಯಯನ ಕಡೆಗಣಿಸಲ್ಪಟ್ಟಿತು. ಈ ಕೊರತೆಯನ್ನು ತುಂಬಿಕೊಳ್ಳುವ ಒಂದು ಸಣ್ಣ ಪ್ರಯತ್ನವಾಗಿದೆ, ಈ ಗ್ರಂಥ.

೧೨ನೆಯ ಶತಮಾನದಲ್ಲಿ ಕಲ್ಯಾಣದ ಶರಣರು, ೧೫ನೆಯ ಶತಮಾನದಲ್ಲಿ ಹಂಪೆಯ ಲಕ್ಕಣ್ಣ ದಂಡೇಶಾದಿಗಳು; ೧೮ನೆಯ ಶತಮಾನದಲ್ಲಿ ಕೆಳದಿ ಸಂಸ್ಥಾನಿಕರು ಕಾರಣವಾಗಿ, ಲಿಂಗಾಯತದಲ್ಲಿ ಆಯಾ ಕಾಲದ ಆವಶ್ಯಕತೆಗೆ ತಕ್ಕ ಸಂಘಟನೆಗಳು ಜರುಗಿದವು. ಬಳಿಕ ಬ್ರಿಟಿಷರು ಬರುವ ವರೆಗೆ ಇಂಥ ಸಂಘಟನೆಯ ಸಂದರ್ಭಗಳು ಜರುಗಲಿಲ್ಲ. ಬ್ರಿಟಿಷರ ಆಡಳಿತದ ಪರಿಣಾಮವಾಗಿ ಭಾರತವು ಆಧುನಿಕ ಶಿಕ್ಷಣಕ್ಕೆ ವಾಲುವಾಗ, ಲಿಂಗಾಯತ ಪ್ರಮುಖರು ತಮ್ಮ ಸಮಾಜದ ಆಧುನೀಕರಣಕ್ಕೆ ಪ್ರಥಮ ಹೆಜ್ಜೆಹಾಕಿದರು. ವಿಪರ್ಯಾಸವೆಂದರೆ ಒಂದು ಕಡೆ ಲಿಂಗಾಯತರು ಲಿಂಗಾಯತ ಫ್ರೀ ಬೋರ್ಡಿಂಗ್ (೧೮೬೮), ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ (೧೯೮೩)ಗಳನ್ನು ಸ್ಥಾಪಿಸುವ ಮೂಲಕ ಆಧುನಿಕ ಶಿಕ್ಷಣಕ್ಕೆ ತೆರೆದುಕೊಳ್ಳುವ ಪ್ರಯತ್ನ ನಡೆಸುತ್ತಿದ್ದಂತೆಯೇ, ಇನ್ನೊಂದು ಕಡೆ ಈ ಸಮಾಜದ ಪಂಡಿತರು (ಶಾಸ್ತ್ರಿಗಳು) ಸಂಸ್ಕೃತ ಪಾಠಶಾಲೆ ಇತ್ಯಾದಿ ಆರಂಭಿಸುವ ಮೂಲಕ ಬ್ರಾಹ್ಮಣಕ್ಕೆ ಸಮಾಂತರವಾಗಿ ಹಳೆಯ ಸಂಪ್ರದಾಯದತ್ತ ಚಲಿಸುವ ಪ್ರಯತ್ನ ನಡೆಸಿದರು. ೧೯೦೪ರಲ್ಲಿ ಹುಟ್ಟಿಕೊಂಡ 'ವೀರಶೈವ ಮಹಾಸಭೆ'ಯಿಂದಾಗಿ ಈ ಎರಡೂ ಶೈಕ್ಷಣಿಕ ಪ್ರಯತ್ನಗಳಲ್ಲಿ ಒಂದು ಬಗೆಯ ಸಮನ್ವಯ ಸಾಧ್ಯವಾಗಿ, ಆಧುನಿಕತೆಯ ವೇಗಕ್ಕೆ ಒಂದಿಷ್ಟು ಅಡ್ಡಿಯುಂಟಾದರೂ, ದಕ್ಷಿಣದ ಆರಾಧ್ಯ ಪರಂಪರೆಯ 'ವೀರಶೈವ'ರೂ ದಕ್ಷಿಣೋತ್ತರದ ಶರಣ ಪರಂಪರೆಯ 'ಲಿಂಗಾಯತ'ರೂ ಸಾಮಾಜಿಕವಾಗಿ ಸಂಘಟಿತರಾದುದನ್ನು ಮರೆಯುವಂತಿಲ್ಲ.

೧೯೫೬ರ ವರೆಗೆ ಲಿಂಗಾಯತರು ಈ ಸಾಮಾಜಿಕ ಸಂಘಟನೆಯನ್ನು ಸರಿಯಾಗಿ ನಿರ್ವಹಿಸುತ್ತ ಬಂದರು. ಆದರೆ ಕರ್ನಾಟಕ ಏಕೀಕರಣದ ನಂತರ ಕ್ರಮೇಣ ಇಲ್ಲಿಯ ರಾಜಕೀಯ ಇತಿಹಾಸ ಬದಲಾವಣೆ ಹೊಂದಿತು. ಹಾವನೂರ ಆಯೋಗ, ವೆಂಕಟಸ್ವಾಮಿ ಕಮಿಶನ್, ಚಿನ್ನಪ್ಪರೆಡ್ಡಿ ಕಮಿಶನ್ ರಚನೆಯ ಪರಿಣಾಮದಿಂದ ಲಿಂಗಾಯತರ ಐಕ್ಯದಲ್ಲಿ ಬಿರುಕುಗಳು ಕಾಣಿಸಿಕೊಂಡವು. ಅಂದರೆ ಈ ಆಯೋಗಗಳ ವರದಿಯಲ್ಲಿ ಹಲವು ಲಿಂಗಾಯತ ಉಪಜಾತಿಗಳನ್ನು ಹಿಂದುಳಿದವರ ಪಟ್ಟಿಯಲ್ಲಿ ಸೇರಿಸಲಾಯಿತು. ಇದರಿಂದ ಲಿಂಗಾಯತ ಅಲ್ಪಸಂಖ್ಯಾತರಿಗೆ ಲಾಭವಾಯಿತಾದರೂ, ಅವರಲ್ಲಿ ಲಿಂಗಾಯತ ಹೆಸರನ್ನು ಬಿಟ್ಟು ತಮ್ಮ ಉಪಜಾತಿಯ ಹೆಸರನ್ನೇ ದಾಖಲಿಸುವ ಯತ್ನ ಆರಂಭವಾಯಿತು. ೧೨ನೆಯ ಶತಮಾನದಿಂದಲೂ 'ಲಿಂಗಾಯತ' ಹೆಸರಿನತ್ತ ಆಕರ್ಷಣೆ ಹೊಂದಿದ್ದ ಉಪಜಾತಿಗಳು ಈ ನೌಕರಿಯ ಲಾಭ, ರಾಜಕೀಯ ಲಾಭ ಇತ್ಯಾದಿ ಕಾರಣಕ್ಕಾಗಿ ವಿಕರ್ಷಣೆ ಹೊಂದತೊಡಗಿದವು.

ಇನ್ನೊಂದು ವಿಷಯ : ಈ ಹಿಂದೆ ಮುಸಲ್ಮಾನರ ಒತ್ತಡದಿಂದಾಗಿ ಮತಾಂತರಗೊಳ್ಳುವಲ್ಲಿ ಲಿಂಗಾಯತ ಸಮಾಜದ ಸಂಖ್ಯೆ ಕ್ಷೀಣಿಸಿರಬಹುದು. ಮುಂದೆ ೧೯ - ೨೦ನೆಯ ಶತಮಾನಗಳಲ್ಲಿಯೂ ಪಾದ್ರಿಗಳಿಂದಾಗಿ ಲಿಂಗಾಯತ ವ್ಯಕ್ತಿ - ಕುಟುಂಬಗಳು ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಿದವು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಈ ನಾಡಿನ ದೊಡ್ಡ ಸಮಾಜವಾಗಿರುವ ಲಿಂಗಾಯತರು ದೊಡ್ಡ ಸಂಖ್ಯೆಯಲ್ಲಿಯೇ ಕ್ರೈಸ್ತರಾಗಿರುವ ಸಾಧ್ಯತೆ ಇದೆ. ಈ ಪ್ರಕ್ರಿಯೆ ನಡೆದಾಗ ಮಠಾಧೀಶರಾಗಲೀ, ಸಾಮಾಜಿಕ ಮುಖಂಡರಾಗಲೀ ಇದನ್ನು ತಡೆಯಲು, ವೈಯಕ್ತಿಕ - ಸಾಂಘಿಕ ಪ್ರಯತ್ನ ಮಾಡಲಿಲ್ಲ. ನಮಗೇನು ಸಂಬಂಧ ? ಅದು ಅವರವರ ವೈಯಕ್ತಿಕ ವಿಷಯವೆಂಬಂತೆ ತೆಪ್ಪಗೆ ದೂರ ಉಳಿದರು. ದುರ್ದೈವದ ಸಂಗತಿಯೆಂದರೆ ಕೇವಲ ಬಡವರಲ್ಲ, ಗೌಡರಂಥ ಆಳುವ ಕುಟುಂಬಗಳು, ಧಾರ್ಮಿಕ

ಜವಾಬ್ದಾರಿಯ ಜಂಗಮ ಕುಟುಂಬಗಳು, ಶ್ರೀಮಂತರು, ಸುಶಿಕ್ಷಿತರು, ಯಾವುಯಾವುದೋ ಆಸೆ, ಅದಕ್ಕಿಂತ ಅಜ್ಞಾನ ಕಾರಣವಾಗಿ ಕ್ರೈಸ್ತರಾದರು ; ಆಗುತ್ತಲಿರುವರು.

ಇತ್ತೀಚೆ ಲಿಂಗಾಯತ ಸಣ್ಣ ಸಣ್ಣ ಪಂಗಡಗಳನ್ನು ಒಡೆದುಕೊಳ್ಳುವ ಹುನ್ನಾರಗಳು ಜರುಗುತ್ತಲಿವೆ. ಉದಾ : ಲಿಂಗಾಯತ ಅಗಸರು ದಕ್ಷಿಣ ಕರ್ನಾಟಕದಲ್ಲಿ "ಮಡಿವಾಳ ಮಾಚಿದೇವ ಪುರಿ" ಹೆಸರಿನಿಂದ ಪ್ರತ್ಯೇಕ ಸಂಘಟನೆಯನ್ನು ಅಸ್ತಿತ್ವಕ್ಕೆ ತಂದಿದ್ದಾರೆ. ಇಲ್ಲಿ ಪ್ರಸಿದ್ಧ ಶರಣ ಮಾಚಿದೇವನ ಹೆಸರನ್ನು ಬಳಸಿಕೊಂಡ ಬಗ್ಗೆ ಯಾವ ಲಿಂಗಾಯತನೂ ಪ್ರತಿಭಟಿಸಲಿಲ್ಲ. ಹೋಗಲಿ, ಲಿಂಗಾಯತ ಸ್ವಾಮಿಗಳೇ ಅವರ ಪಟ್ಟಾಧಿಕಾರ ಸಮಾರಂಭದಲ್ಲಿ ಭಾಗವಹಿಸಿದುದಕ್ಕೆ ಏನೆನ್ನಬೇಕು ! ಇದಲ್ಲದೆ, ಮೊದಲಿನಿಂದಲೂ ಲಿಂಗಾಯತರ ಕಡೆಗೆ ಮುಖಮಾಡಿದ್ದ ಕೆಲವು ಪಂಗಡಗಳನ್ನು ಪ್ರೀತಿಯಿಂದ ಬರಮಾಡಿಕೊಳ್ಳದ ಕಾರಣ, ಅವು 'ಪುರಿ' ಸಂಘಟನೆಯಲ್ಲಿ ಸೇರಿ ಹೋದವು, ಹೊಗುತ್ತಲಿವೆ. ಹೀಗೆ ಒಬ್ಬ ವ್ಯಕ್ತಿಯಲ್ಲ, ಒಂದು ಕುಟುಂಬವಲ್ಲ, ಒಂದೊಂದು ಪಂಗಡವೇ ಲಿಂಗಾಯತದ ಸಂಬಂಧ ಕಳಚಿಕೊಳ್ಳುತ್ತ ನಡೆದಿವೆ. ಇದನ್ನು ಕಂಡೂ ಮಠಾಧೀಶರು ಮೌನವಾಗಿರುವುದು, ನಿಷ್ಕ್ರಿಯರಾಗಿರುವುದು ಸಮಾಜದ ದುರ್ದೈವವಾಗಿದೆ.

ಇಂಥ ಸಂದರ್ಭದಲ್ಲಿ, ಆಂಧ್ರಮೂಲದ ಆರಾಧ್ಯರ ಗುರುವರ್ಗ ಮತ್ತು ಕರ್ನಾಟಕ ಮೂಲದ ಶರಣರ ವಿರಕ್ತವರ್ಗಗಳೆಂಬ ಭೇದ ಸಾಲದೆಂಬಂತೆ ಲಿಂಗಾಯತದಲ್ಲಿ ಒಳಪಂಗಡಗಳ ಜಗದ್ಗುರುಪೀಠಗಳು ಅಸ್ತಿತ್ವಕ್ಕೆ ಬರತೊಡಗಿವೆ. ಈಗಾಗಲೇ ಇದ್ದ ಗೌಡಲಿಂಗಾಯತ, ಸಾಧುಲಿಂಗಾಯತ ಮೊದಲಾದವುಗಳೊಂದಿಗೆ ಇತ್ತೀಚೆ ಪಂಚಮಸಾಲಿ(ಸಾಲು)ಲಿಂಗಾಯತ ಜಗದ್ಗುರುಪೀಠ(ಗಳು) ಸ್ಥಾಪನೆಗೊಂಡುದು ತಿಳಿದ ವಿಷಯವೇ ಆಗಿದೆ. ಈ ಬಗೆಯ ಒಳಪಂಗಡ ಪೀಠಗಳು ಇನ್ನೂ ಬೆಳೆಯುವ ಲಕ್ಷಣಗಳು ತೋರಿಬರುತ್ತಿವೆ. ನಮ್ಮ ಮಠೀಯ ವ್ಯವಸ್ಥೆ ಕಾಲಕಾಲಕ್ಕೆ ಬದಲಾಗುತ್ತ, ಈಗ ಗುರು ವಿರಕ್ತ ಸ್ವರೂಪಗಳ ಹಂತಕ್ಕೆ ನಿಂತುಬಿಟ್ಟದ್ದಿತು. ಬಹುಶಃ ಇನ್ನು ಮುಂದೆ ಈ ಗುರು ವಿರಕ್ತಗಳಿಗೆ ಬದಲು ಅಥವಾ ಇವುಗಳ ಜೊತೆ, ಲಿಂಗಾಯತಮಠ ವ್ಯವಸ್ಥೆಯು ಒಳಪಂಗಡನಿಷ್ಠವೆಂಬ ಹೊಸ ರೀತಿಯಲ್ಲಿ ವಿನ್ಯಾಸಗೊಳ್ಳುವ ಲಕ್ಷಣಗಳು ತೋರಿಬರುತ್ತಿದ್ದು, ಇದು ಕಾಲದ ಆವಶ್ಯಕತೆಯೆಂದೇ ಹೇಳಬಹುದು. ಸಂತೋಷದ ಸಂಗತಿಯೆಂದರೆ, ಇವೆಲ್ಲ (ಗೌಡ, ಸಾಧು, ಪಂಚಮಸಾಲಿ) ಬಸವಮುಖಿಯಾಗಿರುವುದು.

ಇವರಂತೆಯೇ ಕರ್ನಾಟಕದ ಉತ್ತರ ಭಾಗದ ಭಾಲ್ಕಿಯ ಪಟ್ಟದೇವರ ಮಠ ಬಸವಸಂಸ್ಕೃತಿಗೆ ಹೊರಳಿರುವುದು ಮಿಕ್ಕ ಪಟ್ಟದದೇವರ ಮಠಗಳಿಗೆ ಮಾದರಿಯೆನಿಸಿದೆ. ಹಾಗೆ ನೋಡಿದರೆ, ಕರ್ನಾಟಕದ ಎಲ್ಲ ಪಟ್ಟದದೇವರ ಮಠಗಳೂ ಮುಲತಃ ಬಸವನಿಷ್ಠವಾಗಿದ್ದವು. ಈ ಮಠಗಳಲ್ಲಿರುವ 'ಸಿದ್ಧಾಂತ ಶಿಖಾಮಣಿ' ಮೊದಲು ಮಾಡಿ ಎಲ್ಲ ಪ್ರಾಚೀನ ಹಸ್ತಪ್ರತಿಗಳು - ಪತ್ರದಾಖಲೆಗಳು "ಶ್ರೀ ಗುರು ಬಸವಲಿಂಗಾಯನಮಃ" ಎಂದು ಬಸವ ಸ್ತುತಿಯಿಂದ ಆರಂಭವಾಗಿದ್ದುದೇ ಇದಕ್ಕೆ ಸಾಕ್ಷಿ ಎನಿಸಿದೆ. ಅಂದರೆ ದಕ್ಷಿಣೋತ್ತರ ಕರ್ನಾಟಕದ ಎಲ್ಲ ಜಂಗಮರು ಮೂಲತಃ 'ಶರಣ ಸಂಸ್ಕೃತಿ'ಯವರೇ ಆಗಿದ್ದರು. ೧೫ನೇ ಶತಮಾನದ ಬಳಿಕ ಮೈಸೂರು ಪ್ರದೇಶದಲ್ಲಿರುವ ಆಂಧ್ರದ ಆರಾಧ್ಯರ ಪ್ರಭಾವಕ್ಕೆ ಸಿಕ್ಕು 'ಪಂಚಾಚಾರ್ಯ ಸಂಸ್ಕೃತಿ' ವ್ಯಸನಕ್ಕೆ ಒಳಗಾದರು. ಈ ತಪ್ಪನ್ನು ತಿದ್ದಿಕೊಂಡ ಮೊದಲ ಮಠವಾಗಿದೆ, ಭಾಲ್ಕಿಯದು. ಇದೇ ರೀತಿ ಎಲ್ಲ ಪಟ್ಟದದೇವರ ಮಠಗಳು ತಮ್ಮ ತಪ್ಪನ್ನು ತಿದ್ದಿಕೊಂಡು "ಲಿಂಗಾಯತವೆಂಬ ಒಂದು ಧರ್ಮ, ಬಸವಣ್ಣನೆಂಬ ಒಬ್ಬ ಧಾರ್ಮಿಕ ನಾಯಕ" - ಈ ಪರಮ ಸತ್ಯವನ್ನು ಅನುಷ್ಠಾನಗೊಳಿಸದಿದ್ದರೆ ಈ ಧರ್ಮಕ್ಕೆ ಭವಿಷ್ಯವಿಲ್ಲವೆಂದೇ ಹೇಳಬೇಕು.

ಇಲ್ಲಿ ಗಮಿಸಬೇಕಾದ ಇನ್ನೊಂದು ವಿಷಯವೆಂದರೆ, ಚಿತ್ರದುರ್ಗ ಜಗದ್ಗುರುಗಳು ಲಿಂಗಾಯತ ಒಳಪಂಗಡಗಳಿಗೆ (ಉದಾ : ಬಸವಪ್ರಿಯ ಹಡಪದ ಅಪ್ಪಣ್ಣ ಮಹಾಸ್ವಾಮಿ) ಮತ್ತು ಲಿಂಗಾಯತೇತರ ಒಳಪಂಗಡಗಳಿಗೆ (ಉದಾ: ಬಸವ ಸೇವಾಲಾಲ ಮಹಾಸ್ವಾಮಿ) ಒಬ್ಬೊಬ್ಬ ಸ್ವಾಮಿಯನ್ನು ರೂಪಿಸುತ್ತಿರುವುದು ; ಇವರಲ್ಲಿ ಲಿಂಗಾಯತೇತರ ಪಂಗಡಗಳವರು ಅಂತಿಮದಲ್ಲಿ ತಮ್ಮ ಮೂಲಜಾತಿಗೆ ನಿರ್ಗಮಿಸುತ್ತಲಿರುವುದು. ಈ ಪ್ರಯೋಗದ ಫಲಿತಾಂಶವನ್ನು ನಾವು ಕಾಯ್ದು ನೋಡಬೇಕಾಗಿದೆ. ಇಂಥ ಹೊಸ ಹೊಸ ಪ್ರಯೋಗಗಳ ಸಂದರ್ಭದಲ್ಲಿ ಇಲಕಲ್ಲ ಮಹಾಂತಸ್ವಾಮಿಗಳು ಸಿದ್ಧಯ್ಯನ ಕೋಟೆ, ಲಿಂಗಸುಗೂರು, ಬಾಗಲಕೋಟೆ, ಶಿರೂರಗಳಲ್ಲಿ ತಾವು ಹೊಸದಾಗಿ ಸ್ಥಾಪಿಸಿದ ಲಿಂಗಾಯತ ಮಠಗಳಿಗೆ ದಲಿತವರ್ಗದವರನ್ನು, ತಮ್ಮ ಇಲಕಲ್ಲ ಮಠಕ್ಕೆ ಜಂಗಮೇತರರನ್ನು ಮಠಾಧೀಶರನ್ನಾಗಿ ಮಾಡಿದುದೆಂದರೆ, ಕೈಬಿಟ್ಟದ್ದ ಬಸವನೀತಿಯ ಸರಿಯಾದ ಮರು ಅನುಷ್ಠಾನವೆನಿಸಿದೆ. ಇನ್ನು ಮುಂದೆ, ಉತ್ತರಾಧಿಕಾರಿಯು ನಿವೃತ್ತನಾಗಲಿರುವ ಮಠಾಧೀಶನ ಒಳಪಂಗಡದವನಾಗಿರಬಾರದೆಂಬ, ಮಹಿಳೆಯರನ್ನೂ ಅಧಿಕೃತವಾಗಿ ಗುರು - ಜಗದ್ಗುರುಪೀಠಗಳಿಗೆ ಸ್ವಾಮಿಯನ್ನಾಗಿಸಬೇಕೆಂಬ ಸ್ವಾಗತಾರ್ಹ ಪ್ರಯೋಗಗಳು ಅಸ್ತಿತ್ವಕ್ಕೆ ಬರಬೇಕಾಗಿದೆ.

ಒಟ್ಟಾರೆ, ಮೂಲತಃ ಜಾತಿಯನ್ನು ವಿರೋಧಿಸಿದ ಲಿಂಗಾಯತವು ಮೊದಮೊದಲು ಕಾಯಕಗಳನ್ನಾಧರಿಸಿ ಜಾತಿಗಳಾಗಿ ಒಡೆದು ನಿಂತು. ಆಮೇಲೆ ಮತಾಂತರದ ಹುನ್ನಾರದಲ್ಲಿ ಕ್ಷೀಣಿಸಿತು, ಸರಕಾರಿ ಸೌಲಭ್ಯ - ರಾಜಕೀಯ ಲಾಭಗಳಿಗಾಗಿ ಬಿರುಕುಬಿಟ್ಟಿತು, ಒಂದೊಂದು ಪಂಗಡಕ್ಕೆ ಒಂದೊಂದು ಮಠ ಅಸ್ತಿತ್ವಕ್ಕೆ ಬಂದು ಆ ಬಿರುಕುಗಳು ಗಟ್ಟಿಯಾಗಹತ್ತಿದವು. ಒಳಪಂಗಡಗಳು ಕೊಂಡಿ ಕಳಚಿಕೊಂಡು ಹೊರಗೆ ನಡೆದವು. ಹೆಚ್ಚಿನದಾಗಿ ಕುಟುಂಬಗಳ ವಲಸೆ, ಹೊಸ ತಲೆಮಾರುಗಳ ಧಾರ್ಮಿಕ ಉಪೇಕ್ಷೆಗಳಿಂದಾಗಿ, ಸಮಾಜದ ಲಿಂಗಾಯತೀಯ ಎಳೆಗಳು ದುರ್ಬಲವಾಗುತ್ತ, ಕಡಿದುಹೋಗುತ್ತ ನಡೆದವು. ಇವೆಲ್ಲವುಗಳಿಂದಾಗಿ ಲಿಂಗಾಯತ ಸಮಾಜ ಇಂದು ಸಂಕ್ರಮಣ ಸ್ಥಿತಿಯಲ್ಲಿದೆ.

ಹೀಗೆ ಪಲ್ಲಟಗಳಿಗೆ ತೀವ್ರ ಗುರಿಯಾಗಿರುವ ಲಿಂಗಾಯತ ಸಮಾಜದ ಸುಸ್ಥಿತಿಯ ಬಗ್ಗೆ ವಿಚಾರ ಮಾಡಬೇಕಾದ ಮಠಾಧೀಶರು ಈ ಕಡೆಗೆ ಹೊರಳಿ ನೋಡದೆ, ತಮ್ಮ ತಮ್ಮ ಮಠಗಳಲ್ಲಿ ಧಾರ್ಮಿಕಕ್ಕಿಂತ ಸಾಮಾಜಿಕ - ಶೈಕ್ಷಣಿಕ ಚಟುವಟಿಕೆಗಳಿಗೆ ಹೆಚ್ಚು ಗಮನಕೊಡುತ್ತಲಿದ್ದಾರೆ. ಇದರಿಂದಾಗಿ ಭೌತಿಕವಾಗಿ ಬೆಳೆಯುತ್ತಲಿರುವ ತಮ್ಮ ಮಠದ ಆಸ್ತಿ - ಅಂತಸ್ತುಗಳ ರಕ್ಷಣೆಗಾಗಿ ಹಗಲಿರುಳು ತಮ್ಮ ಶಕ್ತಿಯನ್ನು ಕೇಂದ್ರೀಕರಿಸುವ ಮೂಲಕ, ಇಂದಿನ ಮಠಗಳು ವಿಜಯನಗರದ ಪತನದ ಬಳಿಕ ಒಡೆದು ನಿಂತ ಭಿನ್ನ ಸಂಸ್ಥಾನಿಕರ ವ್ಯವಸ್ಥೆಯಂತೆ ವಿಜೃಂಭಿಸುತ್ತಿವೆ. "ಗುರು ವೈಭವಕ್ಕೆ ಸಿಲುಕಿದಾಗಲೇ ಶಿಷ್ಯಂಗೆ ನರಕ ಪ್ರಾಪ್ತಿ" ಎಂಬ ಸಕಲೇಶ ಮಾದರಸರ ಮಾತಿನಂತೆ ಮಠ ದೊಡ್ಡದಾಗುವುದೆಂದರೆ ಮತ ಸಣ್ಣದಾಗುವುದೆಂದೇ ಅರ್ಥ. ಆದುದರಿಂದ ನಮ್ಮ ಮಠಾಧೀಶರು "ಧರ್ಮವೆಂದರೆ ಮಠವಲ್ಲ, ಮಠದ ಉತ್ಸವಗಳಲ್ಲ, ಧರ್ಮವೆಂದರೆ ವ್ಯಕ್ತಿ, ಸಮಾಜ"ವೆಂಬುದನ್ನು ಇನ್ನು ಮೇಲಾದರೂ ಅರ್ಥಮಾಡಿಕೊಳ್ಳುವುದು ಅವಶ್ಯವಿದೆ.

ಲಿಂಗಾಯತ ಸಂಸ್ಥೆಗಳಂತೆ ಮಠಗಳೂ ಆಧುನಿಕ ಕರ್ನಾಟಕವನ್ನು ಸಾಕ್ಷರ ಕರ್ನಾಟಕ - ಸುಶಿಕ್ಷಿತ ಕರ್ನಾಟಕವಾಗಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಈಗ ಈ ಪ್ರಯೋಗದ ಪುಣ್ಯ ತೀರಿದೆ. ಆದುದರಿಂದ ನಮ್ಮ ಮಠಗಳು ಶಿಕ್ಷಣದ ಆಡಳಿತವನ್ನು ಭಕ್ತರಿಗೆ ವಹಿಸಿಕೊಟ್ಟು, ಅದರ ಜಾಗದಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಅವಕಾಶ ಮಾಡಿಕೊಡುವುದು ಇಂದಿನ ಅಗತ್ಯವೆನಿಸಿದೆ.

ಒಟ್ಟಾರೆ ಲಿಂಗಾಯತದ ಏಕೀಕರಣ, ಜಾಗತೀಕರಣ, ಶುದ್ಧೀಕರಣ, ನವೀಕರಣ, ವಿಸ್ತರೀಕರಣ - ಈ ಐದು ನೆಲೆಗಳಲ್ಲಿ ಕಾರ್ಯಕ್ರಮವನ್ನು ಲಿಂಗಾಯತರು ಹಾಕಿಕೊಳ್ಳಬೇಕಿದೆ. ಇದಕ್ಕೆ ಮಾರ್ಗದರ್ಶಿಯಾದ ಒಂದು ಸಮಗ್ರ ಸಂವಿಧಾನವನ್ನು ರಚಿಸಬೇಕಾಗಿದೆ.

ಈ ತೆರನಾದ ಅಭಿನಂದನ ಗ್ರಂಥ ಏಕೆ ? ಎಂದು ಕೆಲವರು ಕೇಳಿದ್ದಾರೆ. ಸರಕಾರ ಅಥವಾ ವಿಶ್ವವಿದ್ಯಾಲಯ ಮಾಡಬೇಕಾದ ಕೆಲಸವಿದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಅವರಿಗೆ ಉತ್ತರ ಹೀಗಿದೆ : ಒಬ್ಬ ವ್ಯಕ್ತಿ ಲಿಂಗಾಯತನಾಗುವುದುದೆಂದರೆ ಕೋಶದಲ್ಲಿ ಶಬ್ದ (Word)ವಾಗುವುದಲ್ಲ ; ಭಾಷೆಯಲ್ಲಿ ಶಬ್ದ (Morpheme)ವಾಗುವುದು. ಅಂದರೆ ಪ್ರತ್ಯಯ ರಹಿತ ಶಬ್ದವಾಗುವುದಲ್ಲ, ಪ್ರತ್ಯಯ ಸಹಿತ ಶಬ್ದವಾಗುವುದು. ಮೊದಲಲ್ಲಿ ದೈವಿಕನಾಗುವುದು, ಕೊನೆಯಲ್ಲಿ ಸಾಮಾಜಿಕನಾಗುವುದು. ಇದಕ್ಕೆ ಇಲಕಲ್ಲ ಮಠಾಧೀಶರಾದ ಶ್ರೀ ಮಹಾಂತ ಶಿವಯೋಗಿಗಳು ಪರಮಾವಧಿ ನಿದರ್ಶನವೆನಿಸಿದ್ದಾರೆ. ಇವರೇ ಒಂದು ಸಮಾಜ, ಇವರಿಗೆ ಸಮಾಜವೇ ದೇವರು. ಈ ಮೌಲ್ಯದ ಅನುಷ್ಠಾನಕ್ಕಾಗಿ ಇವರು ಸಮಾಜದ ವಿರೋಧವನ್ನು ಎದುರಿಸಿದ್ದಾರೆ. ಅರ್ಚಕ ಹಾಗೂ ಪುರೋಹಿತ ಮನಸ್ಸುಗಳು ಇವರನ್ನು ಇಂದಿಗೂ ಕಾಡುತ್ತಲಿವೆ. ಇಂಥ 'ಸಮಾಜಪುರುಷ'ನಿಗೆ ಅರ್ಪಿಸಲು ಇಂಥ ಸಾಮಾಜಿಕ ಅಧ್ಯಯನದ ಕೃತಿ ಸೂಕ್ತವೆಂದು ಬೇರೆ ಹೇಳಬೇಕಿಲ್ಲ. ಮೇಲಾಗಿ ನಮ್ಮ ಸಮಾಜದ ಪರ - ವಿರೋಧಿ ಒಳವಿನ್ಯಾಸ, ಸಾಮಾಜಿಕ - ಧಾರ್ಮಿಕ ಆಚರಣೆ, ಉಡಿಗೆ - ತೊಡಿಗೆ, ನಂಬಿಕೆ - ಮೂಢ ನಂಬಿಕೆ, ಕೌಟುಂಬಿಕ - ಸಾಮಾಜಿಕ ಸಂಬಂಧ, ಆಹಾರಪದ್ಧತಿ ಇತ್ಯಾದಿಗಳು ಹೇಗಿವೆ ಎಂಬುದನ್ನು ಅರ್ಥಮಾಡಿಕೊಡಲು ಸಹ ಈ ಕೃತಿರಚನೆ ಮಾಡಲಾಗಿದೆ. ಇನ್ನೊಂದು ಮುಖ್ಯ ಸಂಗತಿಯೆಂದರೆ, ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಈ ಉಪಪಂಗಡಗಳು ತೀವ್ರ ಬದಲಾಗುತ್ತಿವೆ. ಮರೆಯಾಗುವ ಮುನ್ನ ಅವುಗಳನ್ನು ದಾಖಲಿಸುವುದು ನಮ್ಮ ಸಾಂಸ್ಕೃತಿಕ ಹೊಣೆಯಾಗಿದೆ.

ಸಮಾಜದ ಉಪಪಂಗಡಗಳ ದಾಖಲೀಕರಣವೆಂಬ ಹೊಸ ಉಪಕ್ರಮ ನಮ್ಮಲ್ಲಿ ಬ್ರಿಟಿಷ್ ವಿದ್ವಾಂಸರಿಂದ ಮತ್ತು ಅವರ ಸರಕಾರದಿಂದ ಆರಂಭವಾಯಿತು. ಈ ಪರಂಪರೆಯಲ್ಲಿ ಬುಕ್‌ನನ್ ಅಂಥವರ ಪ್ರವಾಸಿದಿನಚರಿಗಳೂ, ಎಂಥೋವನ್ ಅಂಥವರ ಕೋಶಗಳೂ, ವೆಂಕಟ ರಂಗೋ ಕಟ್ಟಿಯಂಥವರ ಗೆಝಟಿಯರ್‌ಗಳೂ ಹುಟ್ಟಿಕೊಂಡಿದ್ದು, ಅವುಗಳಲ್ಲಿ ಅನುಷಂಗಿಕವಾಗಿ ಲಿಂಗಾಯತ ಸಮಾಜದ ದಾಖಲೀಕರಣಕ್ಕೆ ಎಡೆ ಲಭಿಸಿದೆ. ಆದರೆ ಈ ಸಮಾಜವನ್ನು ಕುರಿತ ಸ್ವತಂತ್ರ ಗ್ರಂಥ ಈವರೆಗೆ ಬೆಳಕು ಕಂಡಿರಲಿಲ್ಲ. ಈ ಕೊರತೆಯನ್ನು ಪ್ರಸ್ತುತ ಕೃತಿ ಮೊದಲ ಬಾರಿಗೆ ತುಂಬಿಕೊಡಲು ಯತ್ನಿಸಿದೆ.

ಸಮಾಜದ ಸ್ವರೂಪ ಕಾಲದಿಂದ ಕಾಲಕ್ಕೆ, ಏಕೆ ಒಂದೇ ಕಾಲದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಒಂದಿಷ್ಟು ಭಿನ್ನವಾಗಿರುತ್ತದೆ. ಕೆಲವೊಮ್ಮೆ ಒಂದೇ ಪ್ರದೇಶದಲ್ಲಿ, ಒಂದೇ ಊರಿನಲ್ಲಿ ಅದು ಒಂದಿಷ್ಟು ಭಿನ್ನ - ವಿಭಿನ್ನವಾಗಿರುತ್ತದೆ. ಸಹೃದಯರು ಈ ಸತ್ಯವನ್ನು ಅರ್ಥಮಾಡಿಕೊಳ್ಳುವರೆಂದು ಭಾವಿಸುತ್ತೇವೆ. ಲಿಂಗಾಯತವೆನ್ನುವುದು ಒಂದು ಜನಾಂಗವಲ್ಲ, ಒಂದು ಸಮಾಜ. ಇಲ್ಲಿ ಬೇರೆ ಬೇರೆ ಮೂಲಗಳ ಜನವರ್ಗ ಮತಾಂತರಗೊಂಡಿವೆ. ಇದು ಇತ್ತೀಚಿನ ವರೆಗೂ ನಡೆದುಬಂದಿದೆ. ಹೀಗಾಗಿ ಕೆಲವರು ಎಷ್ಟೇ ಲಿಂಗಾಯತೀಕರಣಗೊಂಡರೂ ಹಳೆಯ ಕೆಲವು ಸಂಪ್ರದಾಯಗಳು ಅವರಲ್ಲಿ ಉಳಿದುಕೊಂಡುಬಿಟ್ಟಿವೆ. ಕೆಲವೊಮ್ಮೆ ನೆರೆಹೊರೆಯ ಸಮಾಜಗಳ ಪ್ರಭಾವದಿಂದಲೂ ಒಂದಿಷ್ಟು ಅನ್ಯ ಆಚರಣೆಗಳು ಇವರಲ್ಲಿ ಸೇರಿಕೊಂಡಿರಬಹುದೆಂಬುದನ್ನು ಮರೆಯುವಂತಿಲ್ಲ. ಇಲ್ಲಿಯ ಕೆಲವು ಪಂಗಡಗಳ ವಿಚಿತ್ರ ಆಚರಣೆಗಳನ್ನು ಆ ದೃಷ್ಟಿಯಿಂದ ನೋಡುವುದು ಅವಶ್ಯವಿದೆ.

ಲಿಂಗಾಯತ ಒಳಪಂಗಡಗಳ ನಿರ್ದಿಷ್ಟ ಸಂಖ್ಯೆಯನ್ನು ನಿರ್ಣಯಿಸುವುದು ಕಷ್ಟಸಾಧ್ಯ. ಹಾವನೂರ ಆಯೋಗದಂಥ ವರದಿಗಳ, ಗೆಜೆಟಿಯರ್‌ಗಳಂಥ ಸಂಪುಟಗಳ ನೆರವಿನಿಂದ ಸಂಗ್ರಹಿಸಬಹುದಾದರೂ ಅಲ್ಲಿ ಕಾಣುವ ಪರ್ಯಾಯ ನಾಮಗಳನ್ನು (ಹಡಪದ, ನಾವಿ, ನಾವಲಿಗ), ಪರಸ್ಪರ ಸಂಬಂಧವುಳ್ಳವುಗಳನ್ನು (ತಳವಾರ, ಅಂಬಿಗ, ಕಬ್ಬಿಲ, ಸುಣಗಾರ) ಕಳೆದು, ನಾವು ಮೂವತ್ತೈದು ಉಪಪಂಗಡಗಳನ್ನು ದಾಖಲಿಸಲು ಪ್ರಯತ್ನಿಸಿದ್ದೇವೆ. ಮಿಕ್ಕ ಉಪಪಂಗಡಗಳನ್ನು ಶೋಧಿಸಿ ಈ ವಿಷಯವನ್ನು ಪೂರ್ಣಗೊಳಿಸುವ, ಇಲ್ಲಿ ಉಳಿದಿರಬಹುದಾದ ಕೊರತೆ ದೋಷಗಳನ್ನು ದೂರಮಾಡುವ ಕೆಲಸವನ್ನು ಮುಂದಿನ ವಿದ್ವಾಂಸರು ಪೂರೈಸುವರೆಂದು ಆಶಿಸುತ್ತೇವೆ.

ಈ ಲೇಖನಗಳು ಪರಿಪೂರ್ಣವಾಗಬೇಕೆಂಬ, ಒಂದು ಕ್ರಮದಲ್ಲಿ ವಿನ್ಯಾಸಗೊಳ್ಳಬೇಕೆಂಬ ಇಚ್ಛೆಯಿಂದ ಸಾರಲೇಖ (Synopsis) ಸಿದ್ಧಪಡಿಸಿ, ಲೇಖಕರಿಗೆ ಕಳಿಸಲಾಗಿದ್ದಿತು. ಹೀಗಿದ್ದೂ ಕೆಲವರು ಈ ವಿಷಯದಲ್ಲಿ ಸ್ವಾತಂತ್ರ್ಯವಹಿಸಿದ್ದಾರೆ.

ಉಪಪಂಗಡಗಳ ಬಗ್ಗೆ ಬರೆಯುವುದು ತುಂಬ ಸೂಕ್ಷ್ಮವಿಷಯ. ಇದನ್ನು ಅರ್ಥಮಾಡಿಕೊಂಡು, ಸಾಮಾನ್ಯವಾಗಿ ಆಯಾ ಉಪಪಂಗಡದ ವಿದ್ವಾಂಸರಿಂದಲೇ ಈ ಲೇಖನಗಳನ್ನು ಬರೆಯಿಸಿದ್ದೇವೆ. ಅವರೆಲ್ಲ ಕಷ್ಟಪಟ್ಟು ವಿಷಯಸಂಗ್ರಹಿಸಿ ಪ್ರಬಂಧಗಳನ್ನು ರಚಿಸಿದ್ದು, ಇಲ್ಲಿಯ ಅಭಿಪ್ರಾಯಗಳಿಗೆ ಅವರೇ ಹೊಣೆಯೆಂದು ಬೇರೆ ಹೇಳಬೇಕಾಗಿಲ್ಲ ಇಂಥ ಯಾವುದೇ ಕೆಲಸ, ಯಾರೇ ಮಾಡಿದರೂ ಪರಿಪೂರ್ಣವಾಗುವುದಿಲ್ಲ, ದೋಷರಹಿತವಾಗುವುದಿಲ್ಲ. ಇದೆಲ್ಲ ಗೊತ್ತಿದ್ದೂ ಸಮಾಜದ ಮೇಲಿನ, ಸಮಾಜದ ಉಪಪಂಗಡಗಳ ಮೇಲಿನ ಪ್ರೀತಿ ಕಾರಣವಾಗಿ ನಾವು ಈ ಕೆಲಸ ಮಾಡಿದ್ದೇವೆ. ಸಹೃದಯರು ನಮ್ಮ ಈ ಪ್ರೀತಿಯನ್ನು ಅರ್ಥಮಾಡಿಕೊಂಡು, ಉಳಿದಿರಬಹುದಾದ ದೋಷಗಳಿಗಾಗಿ ನಮ್ಮನ್ನು ಕ್ಷಮಿಸಬೇಕೆಂದು ಕೋರುತ್ತೇವೆ.

ಲಿಂಗೈಕ್ಯ ಶ್ರೀ ವಿಜಯಮಹಾಂತೇಶಸ್ವಾಮಿಗಳು ಕೇವಲ ಇಲಕಲ್ಲ ಮಠಕ್ಕೆ ಸ್ವಾಮಿಗಳಲ್ಲ, ಅಪಾರ ಭಕ್ತಸಮುದಾಯಕ್ಕೆ ದೇವರು. ಅವರ ಪುಣ್ಯನಾಮವಿಡಿದು ಹುಟ್ಟಿರುವ 'ವಿಜಯಮಹಾಂತೇಶ ಶಿಕ್ಷಣ ಸಂಸ್ಥೆ' ಆ ಭಾಗದ ಒಂದು ಸುಪ್ರಸಿದ್ಧ ವಿದ್ಯಾಕೇಂದ್ರ. ಶ್ರದ್ಧೆ, ನಿಷ್ಠೆಯಿಂದ ಈ ಸಂಸ್ಥೆಯನ್ನು ರೂಪಿಸಿರುವ ಅದರ ಆಡಳಿತ ಮಂಡಳಿಯ ಸದಸ್ಯರು ತಮ್ಮ ಪಾಲಿನ ಭಾಗ್ಯವೆನಿಸಿರುವ ಇಂದಿನ ಪೂಜ್ಯ ಶ್ರೀ ಮಹಾಂತಸ್ವಾಮಿಗಳಿಗೆ ಭಕ್ತಿನೈವೇದ್ಯವೆಂದು ಒಂದು ಅಭಿನಂದನ ಗ್ರಂಥವನ್ನು ಅರ್ಪಿಸಲು ನಿರ್ಧರಿಸಿದರು. ಲಿಂಗಾಯತ ಅರಸು ಮನೆತನಗಳು, ಲಿಂಗಾಯತ ಸಂಪಾದನ ಸಾಹಿತ್ಯಕೃತಿಗಳು, ಲಿಂಗಾಯತ ಲಘು ಸಾಹಿತ್ಯಕೃತಿಗಳು, ಲಿಂಗಾಯತ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ದಾಸೋಹ ಸಂಸ್ಥೆಗಳು ಇತ್ಯಾದಿ ವಿಷಯಗಳನ್ನು ಕುರಿತು ಅಭಿನಂದನ ಗ್ರಂಥ ಸಂಪಾದಿಸಿದ, ಸಂಪಾದಿಸಲು ಪ್ರೇರಣೆ ನೀಡಿದ ನನಗೆ, ಲಿಂಗಾಯತ ಒಳಪಂಗಡಗಳನ್ನು ಕುರಿತು ಒಂದು ಗ್ರಂಥ ರೂಪಿಸುವುದು ಬಹುದಿನಗಳ ಕನಸಾಗಿದ್ದಿತು. ಪೂಜ್ಯರ ಅಭಿನಂದನ ಗ್ರಂಥಕ್ಕೆ ಈ ವಿಷಯವನ್ನು ಆಯ್ದುಕೊಳ್ಳಲಾಯಿತು. ಆರಂಭದಲ್ಲಿ ಶ್ರೀಗಳನ್ನು ಕುರಿತ "ದಾಸೋಹಂ ಎಂದೆನಿಸಯ್ಯಾ" ಲೇಖನವನ್ನು, ಅಂತ್ಯದಲ್ಲಿ ವಿಜಯ ಮಹಾಂತೇಶ ಶಿಕ್ಷಣ ಸಂಸ್ಥೆಯನ್ನು ಕುರಿತ "ನಮ್ಮ ಸಂಸ್ಥೆ - ನಮ್ಮ ಹೆಮ್ಮೆ" ಲೇಖನವನ್ನು ಅಳವಡಿಸಲಾಗಿದೆ.

ನಾಲ್ಕು ವರ್ಷಗಳ ಹಿಂದೆಯೇ ಅಸ್ತಿತ್ವಕ್ಕೆ ಬಂದ ಈ ಯೋಜನೆ ಅನೇಕ ಆತಂಕಗಳನ್ನು ಈಸಿ, ಈಗ ಒಂದು ಆಕಾರಕ್ಕೆ ಬಂದಿದೆ. ಈ ಯಶಸ್ಸಿಗೆ ಕಾರಣರಾದ ಶ್ರೀ ವಿಜಯಮಹಾಂತೇಶ ಶಿಕ್ಷಣ ಸಂಸ್ಥೆಯ ಸರ್ವಸದಸ್ಯರಿಗೆ ನಮ್ಮ ಮೊದಲ ಕೃತಜ್ಞತೆಗಳು ಸಲ್ಲುತ್ತವೆ. ಸಂಪಾದಕರಾಗಿ ಶ್ರಮವಹಿಸಿದ ಮಹೇಶ ತಿಪ್ಪಶೆಟ್ಟಿ, ಶಂಭು ಬಳಿಗಾರ ಅವರಿಗೂ, ಕ್ಷೇತ್ರಕಾರ್ಯದ ಮೂಲಕ ವಿಷಯ ಸಂಗ್ರಹಿಸಿ, ಪ್ರಬಂಧ ಬರೆದುಕೊಟ್ಟ ಎಲ್ಲ ಲೇಖಕರಿಗೂ, ಮುದ್ರಣಕಾರ್ಯದಲ್ಲಿ ನೆರವಾದ ಡಾ. ಹನುಮಂತ

ಮೇಲಿನಮನಿ ಅವರಿಗೂ ಅಭಿನಂದನೆಗಳು. ಎಲ್ಲ ಹಂತಗಳಲ್ಲಿ ನನಗೆ ಬೆಂಬಲ - ಮುಂಬಲ ಏನೆಲ್ಲವಾಗಿ ನಿಂತ ಪೂಜ್ಯ ಶ್ರೀ ಗುರುಮಹಾಂತಸ್ವಾಮಿಗಳಿಗೆ ನಮ್ಮ ಭಕ್ತಿಪೂರ್ವಕ ವಂದನೆಗಳು.

---

* ಪ್ರಥಮ ಆವೃತ್ತಿ : ಶ್ರೀ ವಿಜಯ ಮಹಾಂತೇಶ ಶಿಕ್ಷಣ ಸಂಸ್ಥೆ, ಇಲಕಲ್ಲ.

ಆಕರ : ಮಾರ್ಗ ಸಂಪುಟ-೫

■■

೩೪೬

ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು

ಪ್ರಸ್ತಾವನೆ

"ಬಸವಣ್ಣನವರು ಧಾರ್ಮಿಕ ಕ್ಷೇತ್ರದಲ್ಲಿ ಮಾಡಿದ
ಮಹಾಕ್ರಾಂತಿಯನ್ನೇ ಹರಿಹರ ಸಾಹಿತ್ಯಕ್ಷೇತ್ರದಲ್ಲಿ ಮಾಡಿದ."

-ಕುವೆಂಪು (ಕುವೆಂಪು ಸಮಗ್ರಗದ್ಯ II- ಪು. ೧೧೯೨)

ಹಳಗನ್ನಡ ಸಾಹಿತ್ಯ - ಕನ್ನಡಿಗರ ಅಸ್ಮಿತೆಯ ವಿಸ್ಮೃತಿಯುಗ :

ಸಮಾಜವೆನ್ನುವುದು ಜಾತಿಗಳ ಸಂರಚನೆಯಾಗಿದೆ. ಇವುಗಳಲ್ಲಿ ಬುಡಕಟ್ಟು - ಅಲೆಮಾರಿ ಜಾತಿಗಳು ವಿಶಿಷ್ಟ 'ಆಚರಣೆ'ಗಳನ್ನು, ಸಾಮಾಜಿಕ ಕೆಳವರ್ಗದ ಬೇಡ - ಕುರುಬ ಮೊದಲಾದ ಜಾತಿಗಳು 'ಪಂಥ' (ಉದಾ: ನಾಥಪಂಥ)ಗಳನ್ನು, ಸಾಮಾಜಿಕ ಮೇಲುವರ್ಗದ ಜಾತಿಗಳು ಧರ್ಮ (ಉದಾ:ಜೈನ)ಗಳನ್ನು ಅವಲಂಬಿಸಿರುತ್ತವೆ.

ಪ್ರಾಚೀನ ಕರ್ನಾಟಕದ ಮಟ್ಟಿಗೆ ವೈದಿಕ,[೧] ಆಗಮಿಕಶೈವ(ಕಾಳಾಮುಖ ಇತ್ಯಾದಿ), ಜೈನ, ಲಿಂಗಾಯತಗಳು ಧರ್ಮಗಳೆನಿಸಿವೆ. ಈ ನಾಲ್ಕರಲ್ಲಿ ವೈದಿಕ, ಆಗಮಿಕಶೈವ, ಜೈನಗಳು ಉತ್ತರ ಭಾರತದಿಂದ ವಲಸೆ ಬಂದವುಗಳಾಗಿದ್ದು, ಲಿಂಗಾಯತವು ಸ್ಥಳೀಯ ಧರ್ಮವಾಗಿದೆ; ಎಲ್ಲ ಜಾತಿಯ ಕನ್ನಡಿಗರು ಸೇರಿ ಬಸವಣ್ಣನವರ ನೇತೃತ್ವದಲ್ಲಿ ಹುಟ್ಟುಹಾಕಿದ ದೇಶೀ ಧರ್ಮವಾಗಿದೆ.

ಆಡಳಿತಕ್ಕೆ ಸೀಮಿತವೂ, ಅಲ್ಪಕಾಲಾವಧಿಯುಳ್ಳುದೂ ಆಗಿರುವ ಅನ್ಯ ರಾಜ್ಯಾಡಳಿತಕ್ಕಿಂತ, ಸಾಮಾಜಿಕ - ರಾಜಕೀಯ ಇತ್ಯಾದಿಯಾಗಿ ಹರಡಿಕೊಳ್ಳುವದೂ, ದೀರ್ಘಕಾಲಾವಧಿಯುಳ್ಳುದೂ ಆಗಿರುವ ಅನ್ಯ ಧಾರ್ಮಿಕತೆಯು ಒಂದು ನಾಡಿನ 'ಅಸ್ಮಿತೆ'ಯ ನಾಶದ ವಿಷಯದಲ್ಲಿ ಹೆಚ್ಚು ಅಪಾಯಕಾರಿಯಾಗಿರುತ್ತದೆ. ಇವುಗಳಲ್ಲಿ ಒಂದರಿಂದ ಬಹಳೆಂದರೆ ಭೌತಿಕನಾಶ ಸಂಭವಿಸಬಹುದು, ಇನ್ನೊಂದರಿಂದ ಖಂಡಿತವಾಗಿಯೂ ಸಾಂಸ್ಕೃತಿಕ ಮತ್ತು ಭೌತಿಕ ನಾಶಗಳು ಸಂಭವಿಸುತ್ತವೆ. ಈ ಮೇರೆಗೆ, ವಲಸೆ ಬಂದ ಅನ್ಯಧರ್ಮಗಳ ನೇರ

ಮತ್ತು ಪರ್ಯಾಯ ಪ್ರಭಾವದಿಂದಾಗಿ ಕನ್ನಡಿಗರ 'ಅಸ್ಮಿತೆ' ಅಧಿಕ ಪ್ರಮಾಣದಲ್ಲಿ ನಾಶವಾಗುತ್ತ ಬಂದಿತೆಂದು ಹೇಳಬಹುದು.

ಸಾಮಾನ್ಯವಾಗಿ ನಮ್ಮ ಪ್ರಾಚೀನಕವಿಗಳು ಸಾಹಿತ್ಯವನ್ನು ತಮ್ಮ ಧರ್ಮಗಳ ಪ್ರಸಾರ ಮಾಧ್ಯಮವನ್ನಾಗಿಸಿದರು. ಇದನ್ನು ಗಮನಿಸಿದ ಕವಿ ಚರಿತೆಕಾರರು ಕನ್ನಡ ಸಾಹಿತ್ಯವನ್ನು ಜೈನ ಸಾಹಿತ್ಯ, ಲಿಂಗಾಯತ ಸಾಹಿತ್ಯ, ಬ್ರಾಹ್ಮಣ ಸಾಹಿತ್ಯವೆಂದು ವರ್ಗೀಕರಿಸಿರುವುದು ನ್ಯಾಯಸಮ್ಮತವೆನಿಸಿದೆ. ಮೇಲೆ ಹೇಳಿದ ಧರ್ಮಗಳಲ್ಲಿ ಆಗಮಿಕ ಶೈವವು ಮುಂದೆ ವೀರಶೈವ ಹೆಸರಿನಿಂದ ಲಿಂಗಾಯತದಲ್ಲಿ ಸೇರಿಹೋಯಿತು. ಆಗ ಉಳಿದ ವೈದಿಕ, ಜೈನಗಳು ಉತ್ತರ ಭಾರತದ ಭಾಷೆ, ಸಾಹಿತ್ಯ, ಧರ್ಮಗಳ ಪ್ರಸಾರ-ಪ್ರಸಿದ್ಧಿಗಾಗಿ ನಮ್ಮ ಭಾಷೆ, ಸಾಹಿತ್ಯಗಳನ್ನು ಇಡಿಯಾಗಿ ಬಳಸಿಕೊಂಡವು, ದುಡಿಸಿಕೊಂಡವು. ಹೀಗಾಗಿ, ಇನ್ನು ಮೇಲೆ ಇವುಗಳ ಸಾಹಿತ್ಯಿಕ ಉದ್ದೇಶವನ್ನು ನಾವು ವಿಭಿನ್ನದೃಷ್ಟಿಯಿಂದ ನೋಡುವುದು ಇಂದು ಅವಶ್ಯವೆನಿಸಿದೆ.

ಜೈನರ ಧರ್ಮಭಾಷೆ ಪ್ರಾಕೃತ, ವೈದಿಕರ ಧರ್ಮಭಾಷೆ ಸಂಸ್ಕೃತ. ಜೈನರು ಪ್ರಾಕೃತದಲ್ಲಿ ಕೆಲವು ಕೃತಿರಚನೆ ಮಾಡಿದರೇನೋ ನಿಜ, ಆದರೆ ಅವರ ಭಾಷೆ ಕನ್ನಡ ಭಾಷೆಯ ಮೇಲೆ ಅಷ್ಟಾಗಿ ಪರಿಣಾಮ ಬೀರಲಿಲ್ಲ.[2] ಇಷ್ಟೇ ಏಕೆ, ಬರುಬರುತ್ತ ಅವರೂ ಪ್ರಾಕೃತವನ್ನು ಕೈಬಿಟ್ಟು ಸಂಸ್ಕೃತದಲ್ಲಿಯೇ ಬರೆವಣಿಗೆ ಮುಂದುವರಿಸಿದರು. ಮತ್ತು ತಮ್ಮ ಕನ್ನಡ ಭಾಷಾ ಬರವಣಿಗೆಯಲ್ಲಿ ಸಂಸ್ಕೃತವನ್ನೇ ಅಧಿಕ ಪ್ರಮಾಣದಲ್ಲಿ ಮಿಶ್ರಗೊಳಿಸಿದರು.

ಹೀಗೆ ಜೈನರು ತಮ್ಮ ಪ್ರಾಕೃತಭಾಷೆಯ ಬಳಕೆಯಲ್ಲಿ ಸೋತರೆ, ವೈದಿಕರು ತಮ್ಮ ಸಂಸ್ಕೃತಭಾಷೆಯ ಬಳಕೆಯಲ್ಲಿ ಗೆದ್ದರು. ಭಾಷೆಯಾಗಿ, ಸಾಹಿತ್ಯಭಾಷೆಯಾಗಿ ಅದರ ಪ್ರಭಾವ ಕರ್ನಾಟಕದಲ್ಲಿ ಬೆಳೆಯುತ್ತಲೇ ಹೋಯಿತು. ಅಂಡಯ್ಯ, ನಯಸೇನರಂಥ ಜೈನರ ಸಂಸ್ಕೃತ ವಿರೋಧ ಕ್ಷೀಣಪ್ರಯತ್ನವಾಯಿತೇ ಹೊರತು, ಒಂದು ಚಳುವಳಿಯಾಗಿ ಬೆಳೆಯಲಿಲ್ಲ. ವೈದಿಕರಂತೆ ನಯಸೇನನೂ ಒಳಗೊಂಡಂತೆ ಎಲ್ಲ ಜೈನರೂ ಸಂಸ್ಕೃತವನ್ನು ಅತಿಯಾಗಿ ಬಳಸಿದರು. ಇದರ ಫಲವಾಗಿ ಕನ್ನಡವು ತನ್ನ ಮನೆಯಲ್ಲಿ ಸಂಸ್ಕೃತದ ಮರ್ಜಿಹಿಡಿದು ಬದುಕುವಂತಾಯಿತು. ಇದರಿಂದ ಕನ್ನಡ ಭಾಷೆಯ ಕೋಶ ವಿಸ್ತಾರಗೊಂಡಿತಾದರೂ, ಅದರ 'ಅಸ್ಮಿತೆ' ಕ್ಷೀಣವಾಗುತ್ತ ನಡೆಯಿತು.

ನಮ್ಮ ಸಾಹಿತ್ಯದ ಈ ಮೊದಲ ಘಟ್ಟದಲ್ಲಿ ವೈದಿಕರು ಧರ್ಮದ ಪಾವಿತ್ರ್ಯ ಉಳಿಸಿಕೊಳ್ಳುವ ದೃಷ್ಟಿಯಿಂದ ಧಾರ್ಮಿಕಸಾಹಿತ್ಯಕ್ಕೆ ಸಂಸ್ಕೃತವನ್ನು, ಲೌಕಿಕ ಸಾಹಿತ್ಯಕ್ಕೆ ಕನ್ನಡವನ್ನು ಬಳಸಿದರು. ರಾಮಾಯಣ-ಭಾರತಗಳೂ ಅವರ ದೃಷ್ಟಿಯಲ್ಲಿ ಧಾರ್ಮಿಕ ಗ್ರಂಥಗಳೇ ಆಗಿರುವುದರಿಂದ ಕನ್ನಡದಲ್ಲಿ ಅವುಗಳನ್ನು ಬರೆಯದೆ, ತಮ್ಮ ಔತ್ತರೇಯ ಲೌಕಿಕ ಕೃತಿಗಳಾದ ಪಂಚತಂತ್ರದಂಥ ನೀತಿ ಕಥೆಯನ್ನು, ಬಾಣ ಕಾದಂಬರಿಯಂಥ ಪ್ರೇಮಕಥೆಯನ್ನು ಬರೆದರೇ ಹೊರತು, ಕರ್ನಾಟಕದ ಕಥೆಗಳನ್ನು ವಸ್ತುವಾಗಿ ಸ್ವೀಕರಿಸಲಿಲ್ಲ. ಹೀಗೆ ವೈದಿಕರು ಕನ್ನಡದಲ್ಲಿ ತಮ್ಮ ಔತ್ತರೇಯ ಕಥೆಗಳನ್ನು ಬರೆದರಾಗಿ, ಅವರ ಸಾಹಿತ್ಯದಲ್ಲಿ 'ಕನ್ನಡ ಅಸ್ಮಿತೆ' ಮೂಡಿ ಬರಲೇ ಇಲ್ಲ.

ಈ ಕಾಲಘಟ್ಟದಲ್ಲಿ ಜೈನರ ಸಾಹಿತ್ಯಿಕ ಕೊಡುಗೆ 'ಜೈನಯುಗ'ವೆಂದು ಕರೆಯುವಷ್ಟರ ಮಟ್ಟಿಗೆ ಅಪಾರವಾಗಿದೆ, ಅಪ್ರತಿಮವೂ ಆಗಿದೆ. ಇವರು ವೈದಿಕರಂತೆ ಧಾರ್ಮಿಕಕ್ಕೆ ಒಂದು, ಲೌಕಿಕಕ್ಕೆ ಇನ್ನೊಂದು ಭಾಷೆ ಬಳಸದೆ, ಎರಡಕ್ಕೂ ಕನ್ನಡವನ್ನು ಹೀಗೆ ಬಳಸುತ್ತ ಬಂದರು :

ಆರಂಭದಲ್ಲಿ ಜೈನಧರ್ಮದ ಮಹತ್ವದ ಕೃತಿಯಾದ, 'ಉಭಯ ಸಿದ್ಧಾಂತ'ಕ್ಕೆ ಶ್ಯಾಮಕುಂದಾಚಾರ್ಯನು ಕನ್ನಡ-ಸಂಸ್ಕೃತ-ಪ್ರಾಕೃತ ಮಿಶ್ರಿತ ಟೀಕೆ, ತೆಂಬಳೂರಾಚಾರ್ಯನು ಕೇವಲ ಕನ್ನಡ ಟೀಕೆ ಬರೆದರು. ಉಮಾಸ್ವಾತಿಯ

ತತ್ವಾರ್ಥಮಹಾಸೂತ್ರಕ್ಕೆ ಬೇರೊಬ್ಬ ಜೈನವಿದ್ವಾಂಸ ಕನ್ನಡದಲ್ಲಿ "ಚೂಡಾಮಣಿ" ಹೆಸರಿನ ಟೀಕೆ ಬರೆದ. ಇವು ಉಪಲಬ್ಧವಿಲ್ಲ. ಬಳಿಕ ಶಿವಕೋಟ್ಯಾಚಾರ್ಯನ ಪ್ರಾಕೃತ ವಡ್ಡಾರಾಧನೆಗೆ ಭ್ರಾಜಿಷ್ಣುವು ಕನ್ನಡದಲ್ಲಿ "ಆರಾಧನಾ ಕರ್ಣಾಟ ಟೀಕಾ" ಬರೆದನು.

ಹೀಗೆ ಟೀಕೆ ಬರೆದ ಬಳಿಕ ಜೈನರು ಭಾಷಾಂತರದ ದಾರಿ ಹಿಡಿದರು. ಈ ಕಾಲದಲ್ಲಿ ಕನ್ನಮಯ್ಯನು ಭವಭೂತಿಯ ಮಾಲವಿಕಾಗ್ನಿಮಿತ್ರವನ್ನು, ಅಸಗನು ಕಾಳಿದಾಸನ ಕುಮಾರ ಸಂಭವವನ್ನು[೨] ಸಂಸ್ಕೃತದಿಂದ ಭಾಷಾಂತರಿಸಿದ್ದು, ಇವು ಉಪಲಬ್ಧವಿಲ್ಲ.

ಬಹುಶಃ ಇದೇ ಕಾಲದಲ್ಲಿ ಜೈನರು ಸಾಹಿತ್ಯಿಕವಾಗಿ ಇನ್ನೂ ಎರಡು ಬಗೆಗಳನ್ನು ಅನುಸರಿಸಿದರು. ಒಂದು : ಜೈನ ಪುರಾಣಗಳನ್ನು ಬರೆಯುವುದು. ಉದಾ : ಪಂಪನ ಆದಿ ಪುರಾಣ, ಪೊನ್ನನ ಶಾಂತಿಪುರಾಣ, ರನ್ನನ ಅಜಿತ ಪುರಾಣ, ಚಾವುಂಡರಾಯನ ಚಾವುಂಡರಾಯ ಪುರಾಣ, ನಾಗಚಂದ್ರನ ಮಲ್ಲಿನಾಥ ಪುರಾಣ. ಎರಡು : ತಮ್ಮ ಧಾರ್ಮಿಕ ವಿರೋಧಿಗಳಾದ ವೈದಿಕರ ಕೃತಿಗಳನ್ನು ಜೈನೀಕರಿಸುವುದು ಮತ್ತು ಅವೈದಿಕಗೊಳಿಸುವುದು. ಜೈನೀಕರಿಸಿದುದಕ್ಕೆ ಅನುಪಲಬ್ಧ ಶ್ರೀವಿಜಯನ ರಘುವಂಶ ಮಹಾಪುರಾಣ- ಗುಣವರ್ಮನ ಹರಿವಂಶ, ಉಪಲಬ್ಧ ನಾಗಚಂದ್ರನ ಪಂಪರಾಮಾಯಣ; ಅವೈದಿಕಗೊಳಿಸಿದುದಕ್ಕೆ ಅನುಪಲಬ್ಧ ಪೊನ್ನನ ಭುವನೈಕ ರಾಮಾಭ್ಯುದಯ, ಉಪಲಬ್ಧ ಪಂಪನ ವಿಕ್ರಮಾರ್ಜುನ ವಿಜಯ - ರನ್ನನ ಸಾಹಸಭೀಮ ವಿಜಯಗಳನ್ನು ಹೆಸರಿಸಬಹುದು. ಮುಂದುವರಿದು ಇವರು, ಹೀಗೆ ಅವೈದಿಕಗೊಳಿಸಿದ ರಾಮಾಯಣ ಮಹಾಭಾರತಗಳೊಂದಿಗೆ ಸ್ಥಳೀಯ ಅರಸರನ್ನು ತಗುಳ್ಚಿ ಹೇಳಿದ್ದರೂ, ಈ ಕೃತಿಗಳನ್ನೋದುವಾಗ ಆ ಪುರಾಣ ಪಾತ್ರಗಳೇ ಕಣ್ಣಮುಂದೆ ಬಂದು, ಈ ಅರಸರು ಮರೆಗೆ ಸರಿಯುತ್ತಾರೆ.

ಹೀಗೆ ಈ ಎರಡೂ ಧರ್ಮೀಯರು ಏನೇ ಬರೆಯಲಿ, ಅದೆಲ್ಲ ಉತ್ತರ ಭಾರತದ ಆರಾಧನೆಯಾಯಿತು. ಈಗ ವೈದಿಕ ರಾಮ - ಕೃಷ್ಣರಿಗೆ ಸಂಬಂಧಿಸಿದ ರಾಮಾಯಣ, ಮಹಾಭಾರತಗಳು, ಜೈನರ ಆದಿನಾಥ- ಶಾಂತಿನಾಥ ಮೊದಲಾದವರಿಗೆ ಸಂಬಂಧಿಸಿದ ಪುರಾಣಗಳು ಹುಟ್ಟಿದವು. ಇವುಗಳಲ್ಲಿ ಜೈನಕೃತಿಗಳ ಪ್ರಭಾವ ಜೈನರಿಗೆ ಮಾತ್ರ ಸೀಮಿತಗೊಂಡಿತು. ವೈದಿಕ ಕೃತಿಗಳು ಮಾತ್ರ ಎಡಬಲದ ಕನ್ನಡಿಗರ ಮೇಲೆಯೂ ಪ್ರಭಾವ ಬೀರಿದವು. ಈಗ ನೆರೆಯ ತಮಿಳರಂತೆ ಸಿಲಪ್ಪದಿಗಾರಂ, ಮಣಿಮೇಖಲೈಗಳಂಥ ಸ್ಥಳೀಯ ಚರಿತ್ರೆ ಬರೆದು 'ಅಸ್ಮಿತೆ'ಯನ್ನು ಕಾಪಾಡಿಕೊಳ್ಳದೆ, ಕನ್ನಡಿಗರು ಉತ್ತರ ಭಾರತದ ಶ್ರೇಷ್ಠತೆಗೆ ಭ್ರಮಾಧೀನರಾಗಿ ರಾಮಾಯಣ- ಮಹಾಭಾರತ, ತೀರ್ಥಂಕರ ಪುರಾಣ ಬರೆದು 'ಅಸ್ಮಿತೆ'ಯನ್ನು ನಾಶಪಡಿಸಿಕೊಳ್ಳುತ್ತ ನಡೆದರು. ಹೀಗಾಗಿ ಉತ್ತರ ಭಾರತದ ಸಂಗತಿಗಳಿಗೆ ಕೊರಳಾದ ಹಳಗನ್ನಡ ಯುಗವು ಸಾಹಿತ್ಯಾಕವಾಗಿ ಎಷ್ಟೇ ಶ್ರೇಷ್ಠವಾಗಿದ್ದರೂ, ಅದನ್ನು ಕನ್ನಡಿಗರ 'ಅಸ್ಮಿತೆ'ಯ ವಿಸ್ಮೃತಿಯುಗವೆಂದು ಹೇಳಬಹುದು. ಈ ಮತ್ತು ಇಂಥ ತಪ್ಪುಗಳಿಂದಾಗಿ ಕನ್ನಡಿಗರ ದೇಶಾಭಿಮಾನ ಕ್ಷೀಣಿಸಿ, ಅವರು ಉತ್ತರದ ಗೋದಾವರಿ ವರೆಗಿನ ಭೂಮಿಯನ್ನು ಕಳೆದುಕೊಂಡರೆಂದು ಕಾಣುತ್ತದೆ.

ನಡುಗನ್ನಡ ಸಾಹಿತ್ಯ - ಕನ್ನಡಿಗರ ಅಸ್ಮಿತೆಯ ಜಾಗೃತಿ ಯುಗ :

೧೨ನೆಯ ಶತಮಾನ, ಕರ್ನಾಟಕದ ಜನಜೀವನದಲ್ಲಿ ಸ್ಥಿತ್ಯಂತರ ಸಂದರ್ಭ. ಈ ಪೂರ್ವದ ಮೂರು ಧರ್ಮಗಳಲ್ಲಿ ವೈದಿಕರು ಮತಾಂತರ ಮಾಡಿಕೊಳ್ಳುತ್ತಿರಲಿಲ್ಲ; ಮಂತ್ರವನ್ನೂ ಕೊಡುತ್ತಿರಲಿಲ್ಲ. ಆಗಮಿಕ ಶೈವ, ಜೈನಗಳು ಮಂತ್ರ ಕೊಡುತ್ತಿದ್ದವೇ ಹೊರತು ಮತಾಂತರ ಮಾಡಿಕೊಳ್ಳುತ್ತಿರಲಿಲ್ಲ. ಇಂಥ ಸಂದರ್ಭದಲ್ಲಿ ಬಸವಣ್ಣನಿಂದ ಹುಟ್ಟಿದ ಲಿಂಗಾಯತವು ಮಂತ್ರ, ಮತಾಂತರಗಳೆರಡಕ್ಕೂ ಅವಕಾಶಮಾಡಿಕೊಡುವಲ್ಲಿ, ಧರ್ಮದ ಹೊರಗೆ ನಿಂತಿದ್ದ ಬಹುಸಂಖ್ಯಾತರು ದೊಡ್ಡ ಸಂಖ್ಯೆಯಲ್ಲಿ ಲಿಂಗಾಯತದ ಅನುಯಾಯಿಗಳಾದರು. ಇದರಿಂದಾಗಿ ಅದು ಕ್ಷಿಪ್ರದಲ್ಲಿಯೇ ಕರ್ನಾಟಕದ ಎಲ್ಲ ಜನವರ್ಗಗಳನ್ನೊಳಗೊಂಡು ಬಹುದೊಡ್ಡ ಒಕ್ಕೂಟವಾಗಿ ಬೆಳೆಯಿತು.

ಈ ವರೆಗೆ ಭಾರತದ ಧಾರ್ಮಿಕ ಸಿದ್ಧಾಂತವೆನ್ನುವುದು ಜೀವವು ಶಿವವಾಗಬೇಕೆಂಬ ಹಂತಕ್ಕೆ ಬಂದು ನಿಂತಿದ್ದಿತು. ಈಗ ಬಸವಣ್ಣ ಹೆಚ್ಚಿನದಾಗಿ ಸಮಾಜವೂ ಶಿವವಾಗಬೇಕೆಂದು ಸಾರುವಲ್ಲಿ ಧರ್ಮಕ್ಕೆ 'ಸಮಾಜೋಧರ್ಮ'ಸ್ವರೂಪ ಪ್ರಾಪ್ತವಾಯಿತು ಮತ್ತು ಈವರೆಗೆ ಬಳಕೆಯಲ್ಲಿದ್ದ ವಿಚಾರ-ಆಚಾರಗಳಿಗೆ ಹೊಸ ಅರ್ಥಗಳು ಹೀಗೆ ಪ್ರಾಪ್ತವಾದವು : ದೇವನೊಬ್ಬ, ಸಕಲ ಜೀವಾತ್ಮರಿಗೆ ಲೇಸನೇ ಬಯವಸುವವ ಕುಲಜ, ಕೊಲುವವನೇ ಮಾದಿಗ - ಹೊಲಸು ತಿನ್ನುವವನೇ ಹೊಲೆಯ, ಆಚಾರವೇ ಸ್ವರ್ಗ- ಅನಾಚಾರವೇ ನರಕ, ಅರಿವೇ ಗುರು, ಕಲ್ಲು ದೇವರಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ, (ಕುಲ ಹದಿನೆಂಟಲ್ಲ) ಭವಿಯೊಂದು ಕುಲ ಭಕ್ತನೊಂದು ಕುಲ, ಕಾಯಕವೇ ಕೈಲಾಸ - ಇಂಥ ತತ್ವಗಳಿಂದಾಗಿ ಹೊಸ ಸಮಾಜವನ್ನು ರೂಪಗೊಳಿಸುತ್ತ, "ಏನಯ್ಯಾ ವಿಪ್ರರು ನುಡಿದಂತೆ ನಡೆಯರು ತಮಗೊಂದು ಬಟ್ಟೆ ಶಾಸ್ತ್ರಕೊಂದು ಬಟ್ಟೆ" ಎಂದು ವೈದಿಕವನ್ನೂ, "ಜಿನ್ನನ ಪೂಜಿಸಿ ಬತ್ತಲೆಯಪ್ಪುದ ಕಂಡೆ" ಎಂದು ಜೈನವನ್ನೂ, "ಮೈಲಾರನ ಪೂಜಿಸಿ ನಾಯಾಗಿ ಬೊಗಳುವುದ ಕಂಡೆ" ಎಂದು ದೈವದ ಹೆಸರಿನಲ್ಲಿ ಜರುಗುತ್ತಲಿದ್ದ ಕ್ಷುದ್ರ ಆಚರಣೆಗಳನ್ನೂ ನಿರಾಕರಿಸಿದರು. ಹೊಸದನ್ನು ಕಟ್ಟುತ್ತ, ಹಳೆಯದನ್ನು ಕೆಡಹುತ್ತ ನಡೆದ ಶರಣರ ಈ ಆಂದೋಲನದಿಂದಾಗಿ ವರ್ಣಭೇದ, ಲಿಂಗಭೇದ, ವರ್ಗಭೇದಗಳು ಅಳಿದು ಹೋಗಿ, 'ಸಮಸಮಾಜ'ವೂ, ನಾನು ದುಡಿಯಬೇಕು ನಾವು ಉಣ್ಣಬೇಕು- ಎಂಬ ತತ್ವದಿಂದಾಗಿ 'ಶ್ರಮಸಮಾಜ'ವೂ ಅಸ್ತಿತ್ವಕ್ಕೆ ಬಂದಿತು. ಒಟ್ಟಿನಲ್ಲಿ ದೇವತೆಗಳಿಗೆ ಬದಲು ದೈವತ್ವವನ್ನು, ಜಾತಿಗಳಿಗೆ ಬದಲು ವೃತ್ತಿಗಳನ್ನು ಅನುಷ್ಠಾನಗೊಳಿಸುವ ಮೂಲಕ 'ಜಾತಿಧರ್ಮ'ವನ್ನು 'ವೃತ್ತಿಧರ್ಮ'ವೆಂಬ ಮೂಲ ಪರಿಕಲ್ಪನೆಗೆ ತಿರುಗಿಸಿದರು. ಹೆಚ್ಚಿನದಾಗಿ 'ವೇದವೆಂಬುದು ಓದಿನ ಮಾತು...... ಆಗಮವೆಂಬುದು ಅನೃತದ ನುಡಿ' ಎನ್ನುತ್ತ ವೈದಿಕ ಆಗಮಿಕ ಬ್ರಾಹ್ಮಣರ ಧಾರ್ಮಿಕ ಕೃತಿಗಳನ್ನು ನಿರಾಕರಿಸಿದರು. 'ವಿದ್ಯೆಯೆಂದರೆ ರಾಮಾಯಣ- ಮಹಾಭಾರತವಲ್ಲ'ವೆನ್ನುತ್ತ ರಾಮ-ಕೃಷ್ಣರ ಸ್ಥಾನದಲ್ಲಿ ಸ್ಥಳೀಯ ಮಹಾಪುರುಷರಾದ ಮಾದರ ಚೆನ್ನಯ್ಯ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದವರನ್ನು ಪ್ರತಿಷ್ಠಾಪಿಸಿದರು. "ಸಂಸ್ಕೃತ ಮಾತಿನ ಪಸರವ ಮುಂದಿಕ್ಕಿಕೊಂಡು, ಮತ್ಸ್ಯನ ವಕ್ತದಲ್ಲಿ ಗ್ರಾಸವ ಹಾಕುವನಂತೆ ಅದೇತರ ನುಡಿ? ಮಾತಿನ ಮರೆ' ಎಂದು ದಾಳಿಯಾಗಿ ಬೆಳೆದಿದ್ದ ಸಂಸ್ಕೃತವನ್ನು ಪ್ರತಿಭಟಿಸಿದುದಲ್ಲದೆ, ಕನ್ನಡ ದೇಶೀ ಭಾಷೆಯಲ್ಲಿ ವಚನಗಳನ್ನು ಬರೆದರು. ಈಗ ಔತ್ತರೇಯ ಶ್ರೇಷ್ಠತೆಯ ವ್ಯಸನ ಕಡಿಮೆಯಾಗಿ, ವಿಸ್ಮೃತಿಗೆ ಒಳಗಾಗಿದ್ದ ಕನ್ನಡಿಗರಲ್ಲಿ ಸ್ಥಳೀಯ ಅಸ್ಮಿತೆಯ ಪ್ರಜ್ಞೆ ಜಾಗ್ರತವಾಯಿತು. ಇಂಥ ಹೊಸ ಪರಂಪರೆಗೆ ವಾರಸುದಾರನಾಗಿ ಬಂದವ, ಮಹಾಕವಿ ಹರಿಹರ.

ಹರಿಹರ :

ಕವಿ ಹರಿಹರ ಪರಮ ಶಿವಭಕ್ತ. ಹೀಗಿದ್ದೂ ಇವನ ಹೆಸರಿನಲ್ಲಿ 'ಹರಿ' ಶಬ್ದವೇಕೆ ? ಎಂಬ ಪ್ರಶ್ನೆ ಎದುರಾಗುವುದು ಸಹಜ. ಕುಮಾರರಾಮನ ತಾಯಿಯ ಹೆಸರು ದಾಖಲೆಗಳಲ್ಲಿ ಹೆರೆಯಾಳದೇವಿ, ಹರಿಹರದೇವಿ ಎಂದು ಎರಡು ರೂಪಗಳಲ್ಲಿ ಸಿಗುತ್ತದೆ. ಇವುಗಳಲ್ಲಿ ಮೊದಲನೆಯದು ನಿಜರೂಪ, ಎರಡನೆಯದು ಪರಿಷ್ಕೃತರೂಪವೆಂದು ಸಹಜ ಹೇಳಬಹುದು. ಇದೇ ರೀತಿ ಹರಿಹರದೇವ ಎಂಬುದರ ನಿಜರೂಪ ಹೆರೆಯಾಳದೇವ, ಇದರ ಹಳೆಯ ರೂಪ ಪೆರೆಯಾಳದೇವ. ಕೋರೆ ಚಂದ್ರ (=ಪೆರೆ) ನನ್ನು ಧರಿಸಿದ ಶಿವನೆಂದು ಇದರ ಅರ್ಥ. ಈ ಹಿನ್ನೆಲೆಯಲ್ಲಿ ಹೆರೆಯಾಳದೇವ ಎಂಬುದರ ಸಾಧಿತರೂಪವಾಗಿರುವ ಹರಿಹರದೇವನೆಂಬ ಹೆಸರು ಇವನು ಹುಟ್ಟುವ ಮೊದಲೇ ಇವನ ಕುಟುಂಬದಲ್ಲಿ ಬಳಕೆಯಲ್ಲಿದ್ದ ಕಾರಣ, ಅದನ್ನೇ ಈ ಕವಿಗೆ ಇಟ್ಟಿರುವರೆಂದು ಹೇಳಬಹುದು.

ಕವಿ ಹರಿಹರನ ಕಾಲ ನಿರ್ದಿಷ್ಟವಾಗಿಲ್ಲವಾದರೂ, ಅಷ್ಟೇನೂ ಸಮಸ್ಯೆಯ ವಿಷಯವಲ್ಲ. ೧೩ನೆಯ ಶತಮಾನದ ಮಧ್ಯದಲ್ಲಿ ಬದುಕಿರಬಹುದು. ಈತನ ತಂದೆ ಮಹಾದೇವ, ತಾಯಿ ಶರ್ವಾಣಿ, ಸೋದರಿ ರುದ್ರಾಣಿಯ ಮಗ ರಾಘವಾಂಕ. ಒಂದೇ ಕುಟುಂಬದಲ್ಲಿ ಮಾವ-ಅಳಿಯ, ರಗಳೆ-ಷಟ್ಪದಿಯೆಂಬ ಎರಡು ಸಾಹಿತ್ಯ ಪ್ರಕಾರಗಳ ಸಂಸ್ಥಾಪಕರಾಗಿರುವುದು ಒಂದು ಪವಾಡ.

ಹರಿಹರನ ರಗಳೆಯಲ್ಲಿ ಬರುವ ಸ್ಥಾವರಲಿಂಗ ಪೂಜೆ, ಶಿವನ ಕೈಲಾಸ, ಕಾಯಸಹಿತ ಕೈಲಾಸಪ್ರಯಾಣ, ವಿವಾಹ - ಜಾತಕರ್ಮ - ದೀಕ್ಷಾ ಸಂದರ್ಭದ ವಿವರಣೆ, ಅವನ ಅಲಿಂಗಾಯತವನ್ನು ಸೂಚಿಸುತ್ತವೆ. ಅಲ್ಲಮನು ಶಾಪಗ್ರಸ್ತನಾಗಿ ಭೂಮಿಗೆ ಬಂದನೆಂದು ಹರಿಹರ ಬರೆದುದನ್ನು ವಿರೋಧಿಸುತ್ತ ಜಕ್ಕಣಾರ್ಯನು "ಶೈವಮತದ ಕವಿಗಳಿಗೆ ವೀರಶೈವ ಪ್ರಮಥರ ಮಹತ್ವ ತಿಳಿಯದು" ಎಂದು ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರದಲ್ಲಿ ನುಡಿದುದೂ, ಅಲ್ಲಿಯೇ "ಶುದ್ಧಶೈವ ಭಕ್ತಿಯಿಂದ ಹಂಪೆಯ ವಿರೂಪಾಕ್ಷನನ್ನು" ಹರಿಹರ ಪೂಜಿಸುತ್ತಿದ್ದನೆಂದು ಹೇಳಿದುದೂ ಲಿಂಗಾಯತನಾಗಿರುವ ಈತನು ಮೂಲತಃ ಶೈವ, ಅದರಲ್ಲಿಯೂ 'ಶುದ್ಧ ಶೈವ'ನಾಗಿರಬೇಕೆನಿಸುತ್ತದೆ.

ಈ ಶುದ್ಧಶೈವರು ಆಗಮಿಕ ಶೈವಬ್ರಾಹ್ಮಣರು. ಈ ಕಾರಣದಿಂದಾಗಿಯೇ ಕವಿ ಹರಿಹರ ವೈದಿಕ ಶೈವಬ್ರಾಹ್ಮಣರನ್ನು ವೇದಜಡ, ದ್ವಿಜಾಧಮ, ಕರ್ಮಜಡವೆಂದು ತನ್ನ ಕೃತಿಗಳಲ್ಲಿ ನಿಂದಿಸಿದಂತಿದೆ. ಅದೇನೇ ಇರಲಿ, ಉತ್ತರಾರ್ಧ ಜೀವನದಲ್ಲಿ ಇವನು ವೀರಶೈವನಾಗಿರಬಹುದು.

ಹರಿಹರನ ಗುರುಗಳು ಹಂಪೆಯವರಾಗಿದ್ದು, ಈ ಕವಿಯೂ ಅಲ್ಲಿಯವನೇ ಎಂದು ಎಲ್ಲರೂ ಭಾವಿಸಿದ್ದಾರೆ. ಆದರೆ ಹೊಯ್ಸಳರ ಆಸ್ಥಾನ ತ್ಯಜಿಸಿ ಹಂಪೆಗೆ ಬಂದ ಇವನಿಗೆ ಅಲ್ಲಿಯ ನಾಗನಾಥ ದೇವಾಲಯದಲ್ಲಿ ವಸತಿ ವ್ಯವಸ್ಥೆ ಮಾಡಲಾಯಿತೆಂದು ತಿಳಿದು ಬರುವುದರಿಂದ, ಹಂಪೆಯಲ್ಲಿ ಅವನಿಗೆ ಮನೆಯಿರಲಿಲ್ಲವೆನಿಸುವ ಕಾರಣ, ಈತನು ಮೂಲತಃ ಹಳೆಬೀಡು ಪ್ರದೇಶದವನೂ, ಅಲ್ಲಿಯೇ ರಾಜಾಶ್ರಯ ಪಡೆದವನೂ ಆಗಿರಬೇಕೆನಿಸುತ್ತದೆ. ಅಳಿಯ ರಾಘವಾಂಕನ ಸಮಾಧಿ ಸಮೀಪದ ಬೇಲೂರಿನಲ್ಲಿರುವುದೂ ಈ ಅಭಿಪ್ರಾಯವನ್ನು ಬೆಂಬಲಿಸುತ್ತದೆ. ಹರಿಹರ ಹಂಪೆಗೆ ಬಂದ ಪ್ರಸಂಗದಲ್ಲಿ ವಿರೂಪಾಕ್ಷದೇವಾಲಯವು ಬಿಷ್ಟಪ್ಪಯ್ಯನ ಗೋಪುರ, ರಂಗಮಂಟಪಗಳಿಲ್ಲದ ನಿರಾಡಂಬರ ಕಟ್ಟಡವಾಗಿರಬಹುದಾಗಿದೆ.

ಯುಗ ಪ್ರವರ್ತಕ :

"ಬಸವಣ್ಣನವರು ಧಾರ್ಮಿಕ ಕ್ಷೇತ್ರದಲ್ಲಿ ಮಾಡಿದ ಮಹಾಕ್ರಾಂತಿಯನ್ನೇ ಹರಿಹರ ಸಾಹಿತ್ಯಕ್ಷೇತ್ರದಲ್ಲಿ ಮಾಡಿದ." ಮಹಾಕವಿ ಕುವೆಂಪು ಅವರ ಪ್ರಸ್ತುತ ಹೇಳಿಕೆ ಈ ಕವಿಗೆ ಇಲ್ಲಿಯ ವರೆಗೆ ಕನ್ನಡ ವಿಮರ್ಶಕರಿಂದ ಸರಿಯಾದ ನ್ಯಾಯ ಲಭಿಸಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಶರಣರ 'ಸಮಾಜೋಧಾರ್ಮಿಕ ಸಿದ್ಧಾಂತ'ವನ್ನು ಕೆಲಮಟ್ಟಿಗೆ ಸಾಹಿತ್ಯಕ್ಕೆ ವರ್ಗಾಯಿಸಿದ ಮೊದಲ ಕವಿಯೆಂಬ ಕೀರ್ತಿ ಇವನಿಗೆ ಸಲ್ಲುತ್ತದೆ.

ಈತನ ಮೊದಲ ಕ್ರಾಂತಿಯೆಂದರೆ ಕೃತಿಕರ್ತೃತ್ವ ಬಗೆಗಿನ ನಿರಪೇಕ್ಷ ಭಾವ. ಇವನು ಸಾಮಾನ್ಯವಾಗಿ ರಗಳೆಯಲ್ಲಿ ತನ್ನ ಹೆಸರನ್ನು ದಾಖಲಿಸದಿರುವುದು ಇದಕ್ಕೆ ನಿದರ್ಶವೆನಿಸಿದೆ. ಈ ಧೋರಣೆಗೆ ಕಾರಣ, ಹಂಪೆ ಪ್ರದೇಶದ ಒಡೆಯ ವಿರೂಪಾಕ್ಷನಾಗಿರುವುದು. ಇಲ್ಲಿ ಯಾರೇ ರಾಜ್ಯವಾಳಲಿ, ಅದರ ಚಕ್ರವರ್ತಿ ವಿರೂಪಾಕ್ಷ - ಯಾರೇ ಕಾವ್ಯ ಬರೆಯಲಿ, ಅದರ ಕರ್ತೃ ವಿರೂಪಾಕ್ಷ. ಹೀಗಾಗಿ, ಭಕ್ತಕವಿ ಹರಿಹರನು ಕಾವ್ಯದಲ್ಲಿ ಕರ್ತೃವು ತನ್ನ ಹೆಸರನ್ನು ದಾಖಲಿಸಬಾರದೆಂಬ ಪರಂಪರೆಗೆ ನಾಂದಿ ಹಾಡಿದ. ಚಾಮರಸ, ಕುಮಾರವ್ಯಾಸರಲ್ಲಿ ಈ ಧೋರಣೆ ಮುಂದುವರಿಯಿತು.

ಉತ್ತರ ಭಾರತದ ವಲಸೆಧರ್ಮಗಳಾದ ವೈದಿಕ, ಜೈನಗಳಿಗೆ ಸಂಬಂಧಿಸಿದ ಕನ್ನಡ ಕವಿಗಳು ರಾಮ-ಕೃಷ್ಣರನ್ನು, ತೀರ್ಥಂಕರರನ್ನು ಕಥಾನಾಯಕರನ್ನಾಗಿಸುವಲ್ಲಿ, ಕನ್ನಡಿಗರಿಗೆ ತಮ್ಮ ಬಗ್ಗೆ ತಮಗೇ ಕೀಳರಿಮೆ

ಬೆಳೆದಿದ್ದಿತು. ಕೆಲವೊಮ್ಮೆ ಸ್ಥಳೀಯ ಅರಸರ ಸ್ತುತಿಯ ಉಪಕರಣವಾಗಿ ಕಾವ್ಯದ ದುರ್ಬಳಕೆ ಜರುಗುತ್ತಲಿದ್ದಿತು. ಈ ಎರಡೂ ದೋಷಗಳನ್ನು "ಪೊಗಳೆಂ ಮಿಕ್ಕಿನ ಚಕ್ರಪಾಣಿ ಸರಸೀಜೋದ್ಭೂತ ಸಂಕ್ರಂದನಾದಿಗಳಂ", "ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಕಾವ್ಯಮಂ, ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರರೆಂದು ನೀನವರತಂ ಪೊಗಳ್ದು ಕೆಡಬೇಡೆಲೆ ಮಾನವ" ಎಂದು ಪ್ರತಿಭಟಿಸಿ, ಈತನು ಸ್ಥಳೀಯ ಮಹಾಪುರುಷರಾದ ತಮಿಳುನಾಡಿನ ೬೩ ಪುರಾತನರನ್ನು, ಅದರಲ್ಲಿಯೂ ಕನ್ನಡ ನಾಡಿನ ಶರಣರನ್ನು ಕಥಾನಾಯಕ ಪೀಠಕ್ಕೇರಿಸಿದುದು 'ಅಸ್ಮಿತೆ'ಯ ಜಾಗ್ರತಿಯಾಗಿದೆ. ಒಂದು ವೇಳೆ ಹರಿಹರ ಈ ಕೆಲಸ ಮಾಡಿರದಿದ್ದರೆ ಕರ್ನಾಟಕದಲ್ಲಿ ಜರುಗಿದ ಸಮಗ್ರಕ್ರಾಂತಿಯ ಶರಣರ ಚರಿತ್ರೆ ನಮ್ಮ ಕೈಗೆ ಇಳಿದುಬರುತ್ತಿರಲಿಲ್ಲ. ಆತ ವಚನಸಾಹಿತ್ಯವನ್ನು ಅಭ್ಯಸಿಸಿ, ಜನಜನಿತವಾಗಿ ಸಾಗಿ ಬಂದ ಸಂಗತಿಗಳನ್ನು ಸಂಗ್ರಹಿಸಿ, ಕೆಲವೊಮ್ಮೆ ಕ್ಷೇತ್ರಕಾರ್ಯ ಕೈಕೊಂಡು ಕರ್ನಾಟಕದ ಶರಣರ ಚರಿತ್ರೆಯನ್ನು ರಗಳೆಯಲ್ಲಿ ದಾಖಲಿಸಿದ್ದಾನೆ.

ರಸಕ್ಕೆ ಸಂಬಂಧಿಸಿದಂತೆ ಈ ಮೊದಲಿನ 'ವೀರ'ದ ಸ್ಥಾನದಲ್ಲಿ 'ಭಕ್ತಿ'ಯನ್ನು ಸ್ಥಾಪಿಸಿ, ಕಾವ್ಯದಲ್ಲಿ ಅದರ ಪರಾಕಾಷ್ಠೆಯನ್ನು ಮೆರೆದನು. ಇದು ಕುಮಾರವ್ಯಾಸಾದಿಗಳಿಗೆ ಹೊಸದಾರಿಯನ್ನು ಬರೆದುಕೊಟ್ಟಿತು. ಸಾಮಾನ್ಯವಾಗಿ ಭಕ್ತಿಯೆಂದಾಕ್ಷಣ ಭಜನೆಯ ಕಲ್ಪನೆ ಬರುತ್ತದೆ. ಹರಿಹರನದು ಇದಕ್ಕೆ ಭಿನ್ನವಾದ ವೀರಭಕ್ತಿ, ವೈದಿಕಶಾಹಿ -ರಾಜಶಾಹಿಗಳನ್ನು ಪ್ರತಿಭಟಿಸುವ ಸಮಾಜೋಧಾರ್ಮಿಕ ಭಕ್ತಿಯಾಗಿದೆ.

ಭಾಷೆಗೆ ಸಂಬಂಧಿಸಿದಂತೆ "ನೋಡುವೊಡೊಂದಕ್ಕರಮದು........." ಎಂಬ ಪದ್ಯದ ಮೂಲಕ ಕನ್ನಡದ ರಳ, ಕುಳ, ಕ್ಷಳ ಸಮಸ್ಯೆಗೆ ಮಂಗಳ ಹಾಡಿ, ಭಾಷೆಯ ವಿಷಯವಾಗಿ ತನಗಿರುವ ಮುಕ್ತಧೋರಣೆಯನ್ನು ಮೆರೆದನು. ಇದಕ್ಕಿಂತ ಮುಖ್ಯವಾಗಿ ರಾಜಾಸ್ಥಾನದ ಪಂಡಿತರಿಗಾಗಿ ಸೃಷ್ಟಿಯಾಗುತ್ತಲಿದ್ದ ಪಂಡಿತರ ಜಟಿಲ ಹಳಗನ್ನಡವನ್ನು ಶರಣರು ನಿರಾಕರಿಸಿ ನಡುಗನ್ನಡದಲ್ಲಿ ವಚನ ಬರೆದಿದ್ದರೂ ಅದನ್ನು ಇವನು ಶುದ್ಧಸಾಹಿತ್ಯಕ್ಕೆ ಬಳಸಿ, ನಡುಗನ್ನಡ ಸಾಹಿತ್ಯದ ಆದಿಕವಿಯೆನಿಸಿದನು. ಇದು ನವೋದಯ ಸಾಹಿತ್ಯ ಹುಟ್ಟುವ ವರೆಗೆ ಒಂದು ಮಾರ್ಗವಾಗಿ ಮುನ್ನಡೆಯಿತು.

ಪಂಪಾದಿಗಳಲ್ಲಿ ಒಂದು ಛಂದಸ್ಸಾಗಿ ಬಳಕೆಯಲ್ಲಿದ್ದ 'ರಗಳೆ'ಯನ್ನು ಒಂದು ಸಾಹಿತ್ಯ ಪ್ರಕಾರವನ್ನಾಗಿ ಹರಿಹರ ಪರಿವರ್ತಿಸಿದನು. ಅದರಲ್ಲಿ ಉತ್ಸಾಹ -ಮಂದಾನಿಲ-ಲಲಿತವೆಂಬ, ಸಾಲು ಅಂತ್ಯಗೊಳ್ಳುವಿಕೆ -ಅಂತ್ಯಗೊಳ್ಳದೆ ಮುಂದುವರಿಕೆಯೆಂಬ, ಒಂದು ಸ್ಥಲ ರಗಳೆ- ಒಂದು ಸ್ಥಲ ಗದ್ಯವೆಂಬ ಹೊಸ ಹೊಸ ಪ್ರಯೋಗಗಳನ್ನು ರೂಢಿಸಿದನು. ರಗಳೆಗೆ ಹರಿಹರನೇ ಅಂತ್ಯವೆನಿಸುವಂತೆ ಅದರ ಸಾಧ್ಯತೆಗಳನ್ನೆಲ್ಲ ಸೂರೆಮಾಡಿದ ಇವನು ಒಬ್ಬ ಕವಿಯಲ್ಲ, ಒಂದು ಕಾವ್ಯಪ್ರಕಾರವೆಂಬ ಖ್ಯಾತಿಗಳಿಸಿದ.

ಹರಿಹರನ ಶೈಲಿಗೆ ರಗಳೆಗಿಂತ ಗದ್ಯವೇ ನಿಜವಾದ ನಿದರ್ಶವೆನಿಸಿದೆ. ಹಳಗನ್ನಡ ಚಂಪೂಗದ್ಯದಿಂದ, ಈತನ ಗದ್ಯಕ್ಕೆ ಬಂದರೆ ಅರಣ್ಯದಿಂದ ಉದ್ಯಾನಕ್ಕೆ ಬಂದ ಅನುಭವವಾಗುತ್ತದೆ. ಅದು ಲಲಿತವಾಗಿದೆ. ಆ ಲಾಲಿತ್ಯಕ್ಕೆ ಒಂದು ವೇಗವಿದೆ; ಆ ವೇಗಕ್ಕೆ ಒಂದು ಲಯವಿದೆ. ಅವನಲ್ಲಿ ಅಸಾಧಾರಣ ಕಲ್ಪನೆಯಿದೆ, ಆ ಕಲ್ಪನೆಗೆ ವೈವಿಧ್ಯತೆಯಿದೆ. ಗದ್ಯವೆಂದರೆ ವಾಕ್ಯ. ಹರಿಹರನ ಈ ವಾಕ್ಯವೈವಿಧ್ಯ ಬೆರಗುಹುಟ್ಟಿಸುತ್ತದೆ. ಈ ಗದ್ಯವೈವಿಧ್ಯ ಒಂದು ಸ್ವತಂತ್ರ ಅಭ್ಯಾಸವಾಗುವಷ್ಟು ಅರ್ಥಪೂರ್ಣವಾಗಿದೆ. ಇಲ್ಲಿ ೨-೩ ಸಾಲುಗಳ ವರೆಗೆ ಹಬ್ಬುವ, ಒಂದು ಸಾಲಿಗೆ ಮುಗಿಯುವ, ಒಂದು ಶಬ್ದಕ್ಕೇ ಮುಗಿಯುವ ವಾಕ್ಯಗಳಿವೆ. ವಕ್ರೋಕ್ತಿಯಂತೂ ಸರಿಯೇ, ಸ್ವಭಾವೋಕ್ತಿಯಲ್ಲಿಯೂ ಕವಿತ್ವ ಪ್ರಕಟಿಸುವ ಅನನ್ಯ ಸಿದ್ಧಿ ಇವನದಾಗಿದೆ.

ಪ್ರಸ್ತುತ ಸಂಪುಟ :

ಹರಿಹರನ ರಗಳೆಗಳ ಸಂಖ್ಯಾನಿರ್ಣಯ ವಿದ್ವಾಂಸರಿಗೆ ಒಂದು ಸಮಸ್ಯೆಯೆನಿಸಿದೆ. ಎಚ್. ದೇವೀರಪ್ಪ, ಆರ್.ಸಿ. ಹಿರೇಮಠರು ಈ ವಿಷಯವಾಗಿ ತೀವ್ರ ಭಿನ್ನಾಭಿಪ್ರಾಯ ತಳೆದಿದ್ದಾರೆ. ಇವರಿಗಿಂತ ಮೊದಲು "ಹರಿಹರನ ರಗಳೆಗಳ ಸಂಖ್ಯಾನಿರ್ಣಯ" ವಿಷಯವನ್ನೇ ಎತ್ತಿಕೊಂಡು ಪಿಎಚ್.ಡಿ ಅಧ್ಯಯನ ಮಾಡಿರುವ ಹಿರೇಮಲ್ಲೂರ ಈಶ್ವರನ್ ಅವರು ಬೇರೊಂದು ಅಭಿಪ್ರಾಯ ತಾಳಿದ್ದಾರೆ. ಇದೇನೇ ಇದ್ದರೂ ಶಿವಪರವಾದ ಬೇರೆ ಬೇರೆ ಪಂಥ-ಧರ್ಮಗಳ ಮಹಾಪುರುಷರನ್ನು ಕುರಿತು ಹರಿಹರ ರಗಳೆಗಳನ್ನು ಬರೆದಂತಿದೆ. ಇವರಲ್ಲಿ ತಮಿಳುನಾಡಿನ ಪುರಾತನರಲ್ಲದೆ, ಕರ್ನಾಟಕದ ಶಿವಶರಣರು -ಶುದ್ಧಶೈವರು-ನಾಥಶೈವರು ಕಂಡುಬರುತ್ತಾರೆ. ಈ ಸಂಪುಟದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಶರಣ-ಶುದ್ಧಶೈವ-ನಾಥಶೈವರ ಅದರಲ್ಲಿಯೂ ರಗಳೆ+ಗದ್ಯ ರಚನೆಗಳಲ್ಲಿ ಕಾಣಿಸಿಕೊಂಡವರ ಕೃತಿಗಳನ್ನು "ಕನ್ನಡಿಗರ ಕಥೆಗಳು" ಹೆಸರಿನಿಂದ ಆಯ್ದುಕೊಳ್ಳಲಾಗಿದೆ.

ಈ ಕೃತಿಗಳ ಮುಖ್ಯ ಲಕ್ಷಣವೆಂದರೆ ವಲಸೆ ಬಂದ ಧರ್ಮಗಳು ತಮ್ಮ 'ಅಸ್ತಿತ್ವ'ಕ್ಕಾಗಿ ಪರಸ್ಪರ ಹೋರಾಡಿದುದು, ಸ್ಥಳೀಯ ಧರ್ಮವು ತನ್ನ 'ಅಸ್ಮಿತೆ'ಗಾಗಿ ವಲಸೆ ಬಂದ ಧರ್ಮಗಳೊಂದಿಗೆ ಸಂಘರ್ಷ ನಡೆಸಿದುದು. ಇಲ್ಲಿ ಹಿರಿಯ ತಲೆಮಾರಿನ ಶೈವರು ಪರಸಮಯಿಗಳನ್ನು ನಿಗ್ರಹಿಸಿದ, ಅವರ ದೇವರು-ದೇವಾಲಯಗಳನ್ನು ಭಗ್ನಗೊಳಿಸಿದ 'ಹಿಂಸೆ'ಯು ಬಸವಣ್ಣನು ವೈದಿಕಶಾಹಿ ರಾಜಶಾಹಿಗಳನ್ನು - ಅಕ್ಕಮಹಾದೇವಿಯು ಭವಿ ಗಂಡನನ್ನು ಸಂವಾದದ ಮೂಲಕ ಸೋಲಿಸಿದ 'ಅಹಿಂಸೆ'ಗೆ ತಿರುಗಿದೆ. ಇದು ಬ್ರಿಟಿಶರೊಂದಿಗೆ ಸಂಸ್ಥಾನಿಕರು ಕೈಕೊಂಡ ಹಿಂಸಾರೂಪದ ಘರ್ಷಣೆಗೆ ಬದಲು ದೇಶಭಕ್ತರು ಕೈಕೊಂಡ ಅಹಿಂಸಾರೂಪದ ಚಳುವಳಿಯನ್ನು ನೆನಪಿಸುತ್ತದೆ. ಆದುದರಿಂದ ಬಸದಿಗಳ ನಾಶಕ್ಕೆ ಶರಣರ ಚಳುವಳಿ ಕಾರಣವೆಂದು ಹೇಳುವ ವಿದ್ವಾಂಸರು ಇನ್ನುಮೇಲೆ ಶೈವ 'ವೀರಮಾಹೇಶ್ವರ'ರ ಘರ್ಷಣೆ ಕಾರಣವೆಂದು ಹೇಳುವುದು ಸೂಕ್ತವಾಗಿದೆ.

ಇನ್ನೊಂದು ಮಾತು: ಸ್ಥಳೀಯರನ್ನು ಪರಸ್ಥಳೀಯರು ಆಳುವುದು ಪಾರತಂತ್ರ್ಯವೆನಿಸಿದರೆ, ವಲಸೆಬಂದವರು ಸ್ಥಳೀಯರಾಗಿಯೂ ತಮ್ಮ ಪರಸ್ಥಳೀಯ ಪ್ರಜ್ಞೆಯಿಂದ ಬಾಳುವುದು ಅರಾಜಕತೆಯೆನಿಸುತ್ತದೆ. ಈ ಅರ್ಥದಲ್ಲಿ ವಲಸೆಬಂದ ಧರ್ಮಗಳ ಮೇಲಾಟದ ಅರಾಜಕತೆಯೂ, ವಲಸೆ ಬಂದ ಧರ್ಮಗಳ ದಬ್ಬಾಳಿಕೆಗೆ ಸ್ಥಳೀಯರು ತೋರಿದ ಪ್ರತಿಭಟನೆಯೂ ಈ ರಗಳೆಗಳ ವಸ್ತುವಾಗಿದೆ. ಕವಿ ಹರಿಹರನೂ ಇಂಥ ಮೇಲಾಟ - ಪ್ರತಿಭಟನೆಗಳಲ್ಲಿ ಸಾಹಿತ್ಯದ ಮೂಲಕ ಪಾಲುಗಾರನಾಗಿರುವನೆಂಬುದನ್ನು ಇಲ್ಲಿಯ ರಗಳೆಗಳು ಧ್ವನಿಸುತ್ತವೆ.

ಮಹಾದೇವಿಯಕ್ಕನ ರಗಳೆ ಕನ್ನಡ ಸಾಹಿತ್ಯದಲ್ಲಿ ಸ್ಥಳೀಯ ಸ್ತ್ರೀಯೊಬ್ಬಳು ಕಥಾನಾಯಕಿಯಾದ ಪ್ರಥಮ ರಚನೆಯಾಗಿದೆ. ೧೨ನೆಯ ಶತಮಾನದ ಸ್ತ್ರೀವಿಮೋಚನಾ ಚಳುವಳಿಯ ಪ್ರಭಾವವಿದು. ಸ್ತ್ರೀಗೆ ಆಯ್ಕೆಯ ಪ್ರಶ್ನೆ ಎದುರಾದಾಗ ಪತಿಯನ್ನು ನಿರಾಕರಿಸಿ, ವ್ಯಕ್ತಿ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡಿದ ಆಶಯವಿಲ್ಲಿದೆ. ಜೊತೆಗೆ ಬಾಲ್ಯದಿಂದಲೂ ಚೆನ್ನಮಲ್ಲಿಕಾರ್ಜುನ ದೈವತವನ್ನೇ ಗಂಡನೆಂದು ನಂಬಿ ನಡೆದ ಭಕ್ತಿಕೇಂದ್ರಿತ 'ವ್ಯಕ್ತಿ'ಯು ಕವಿಯ ಕೈಯಲ್ಲಿ 'ಪಾತ್ರ'ವಾದ ರೀತಿ ಇಲ್ಲಿ ಅನನ್ಯವಾಗಿ ಮೂಡಿ ಬಂದಿದೆ.

ಬಸವರಾಜದೇವರ ರಗಳೆ ಹರಿಹರನ ರಗಳೆಸಾಹಿತ್ಯದಲ್ಲಿ ತುಂಬ ಮಹತ್ವದ್ದಾಗಿದೆ. ಇಲ್ಲಿ ಆತ್ಮೋದ್ಧಾರದೊಂದಿಗೆ ಸಮಾಜೋದ್ಧಾರ ಕೈಕೊಂಡ ಮಹಾಪುರುಷನ ಚಿತ್ರಣವಿದೆ. ಬಸವಣ್ಣನವರ ಜನನದ ಉದ್ದೇಶಕ್ಕೆ ಕವಿಗಳು ಬೇರೆ ಬೇರೆ ಕಾರಣ ಹೇಳುತ್ತಿದ್ದರೂ ಕೈಲಾಸದಲ್ಲಿ 'ಪ್ರಸಾದ ವಿತರಣೆ' ವಿಷಯವಾಗಿ ಮಾಡಿದ ತಾರತಮ್ಯದ ತಪ್ಪನ್ನು ತಿದ್ದಿಕೊಳ್ಳುವ ಅಂದರೆ ಭೂಲೋಕದಲ್ಲಿ ಎಲ್ಲರಿಗೂ ಸಮಾನ ಅವಕಾಶ ಒದಗಿಸಿಕೊಡುವ ಉದ್ದೇಶದಿಂದ ಹುಟ್ಟಿದನೆಂಬ ಕಾರಣ ಹೇಳುತ್ತಾನೆ, ಹರಿಹರ. ಇದು ಬಸವಣ್ಣನ ಜನನ

ಉದ್ದೇಶವನ್ನು ಕವಿ ಸರಿಯಾಗಿ ಗ್ರಹಿಸಿದುದನ್ನು ಸೂಚಿಸುತ್ತದೆ. ಸಮಾಜಕ್ಕೆ ಸಂಬಂಧಪಟ್ಟಂತೆ ಅಂದಿನ ಅರ್ಥಹೀನ ವ್ಯವಸ್ಥೆಗಳನ್ನು ಪ್ರಶ್ನಿಸುವ, ಸಮಸಮಾಜ ನಿರ್ಮಿಸುವ ಘಟನೆಗಳು ಉದ್ದಕ್ಕೂ ಕಂಡುಬರುತ್ತವೆ. ಈ ಸಮಾನತೆಯನ್ನು ಒಪ್ಪದೆ, ಸಮಾಜವನ್ನು ಶೋಷಿಸುತ್ತಿದ್ದ ಪುರೋಹಿತವರ್ಗ, ರಾಜವರ್ಗಗಳನ್ನು ಪ್ರಶ್ನಿಸುವುದು ಇಲ್ಲಿ ಮತ್ತೆ ಮತ್ತೆ ಕೇಳಿಸುತ್ತದೆ. ಇದಕ್ಕೆ ದಲಿತ ಶಿವನಾಗಮಯ್ಯನ ಪ್ರಸಂಗ, ಕೇದಗೆ ಮತ್ತು ಉಳ್ಳಿಯ ಪ್ರಸಂಗಗಳು ನಿದರ್ಶನವೆನಿಸಿವೆ. ಬಸವಣ್ಣನವರ ಮನೆಯ ಗೋವುಗಳ ಕಳವಿನ ಪ್ರಸಂಗವು 'ಗೋಗ್ರಹಣ ಸಂದರ್ಭದಲ್ಲಿ ಹೋರಾಡಬೇಕು' ಎಂಬ ವೈದಿಕ ಮೌಲ್ಯದ ನಿರಾಕರಣೆಯನ್ನು ಸೂಚಿಸುತ್ತದೆ. ಅರ್ಥಮಂತ್ರಿಯಾಗುತ್ತಲೇ ಅಪಾರ ರಾಜ್ಯಭಂಡಾರವನ್ನು ನೋಡಿ "ಅಯ್ಯಲಾ ಇಂತಪ್ಪ ಧನಂ ಕಾಕಭಾಜನವಾಗಿ ಪೋಗುತಿರ್ದಪುದಕಟ" ಎಂದು ಬಸವಣ್ಣ ನುಡಿದುದು ರಾಜ್ಯಭಂಡಾರದ ದುರುಪಯೋಗ ತಡೆಯುವದನ್ನು ಧ್ವನಿಸುತ್ತದೆ. ಹರಿಹರ ಬಸವಣ್ಣನನ್ನು 'ಜಂಗಮದ ವೇಳೆ' ಎಂದು ಕರೆಯುತ್ತಾನೆ. ಇದು ಪ್ರಾಚೀನಕಾಲದಲ್ಲಿ ಪ್ರಜೆಗಳು ರಾಜನಿಗೆ ವೇಳೆ (ವಾಳಿ)ಯಾಗುತ್ತಿದ್ದುದಕ್ಕೆ ಪ್ರತಿಯಾಗಿ ಜಂಗಮಕ್ಕೆ(ಪ್ರಜೆಗಳಿಗೆ) ವೇಳೆ (ವಾಳಿ)ಯಾಗಬೇಕೆಂಬುದನ್ನು ಸೂಚಿಸುತ್ತದೆ. ಮಲಗಿದ ಬಸವಣ್ಣನ ದರ್ಶನಕ್ಕೆ ಬಂದ ಜಂಗಮರು ಮರಳಿ ಹೋಗಲು ಅವರೊಂದಿಗೆ ಬಸವಣ್ಣನ ಪ್ರಾಣವೂ ಹೋಯಿತೆಂಬ ಪವಾಡವು ಬಸವಣ್ಣನಿಗೆ ಜಂಗಮ(ಪ್ರಜೆ)ವೇ ಪ್ರಾಣವಾಗಿದ್ದಿತೆಂಬುದನ್ನು ಸಾರುತ್ತದೆ. ಹೀಗೆ ಈ ರಗಳೆ ವೈದಿಕವರ್ಗದ ಮೌಲ್ಯ-ರಾಜವರ್ಗದ ಅಧಿಕಾರಗಳನ್ನು ಪ್ರಶ್ನಿಸಿ, ಜಂಗಮ(ಪ್ರಜಾ)ಸತ್ತೆಯನ್ನು ಪ್ರತಿಪಾದಿಸುತ್ತದೆ.

ಬಾಹೂರ ಬೊಮ್ಮಯ್ಯ, ಆದಯ್ಯ, ಮಾರುಡಿಗೆ ನಾಚಯ್ಯ, ಕೋವೂರ ಬೊಮ್ಮಿತಂದೆಯರು ಜೈನರನ್ನು ನಿಗ್ರಹಿಸಿ, ಬಸದಿಗಳನ್ನು ನಾಶಪಡಿಸುತ್ತಾರೆ. ಇಲ್ಲಿಯ ಕೆಲವು ರಗಳೆಗಳಲ್ಲಿ ಸಾಮಾನ್ಯವಾಗಿ 'ಮಾಹೇಶ್ವರ' ಶಬ್ದ ಬಳಸಿದರೆ, ಮಾರುಡಿಗೆ ನಾಚಯ್ಯ- ಕೋವೂರ ಬೊಮ್ಮಯ್ಯ ರಗಳೆಯಲ್ಲಿ 'ವೀರಮಾಹೇಶ್ವರ' ಶಬ್ದ ಬಳಸಲಾಗಿದೆ. ಇದರಿಂದ ಹರಿಹರನ ವರೆಗೆ ವೀರಮಾಹೇಶ್ವರ ಪದ ಬಳಕೆಯಲ್ಲಿದ್ದು, ಮುಂದಿನ ದಿನಗಳಲ್ಲಿ ಇದರ ಸಮಾನಾರ್ಥವಾಗಿ 'ವೀರಶೈವ' ಪದ ಹುಟ್ಟಿರಬಹುದೆನಿಸುತ್ತದೆ. 'ಲಿಂಗವಂತ' ಪದ ಬಳಸಿರುವ ಹರಿಹರ 'ವೀರಶೈವ' ಪದ ಬಳಸಿಲ್ಲವಾಗಿ, ಅದು ಹರಿಹರೋತ್ತರ ಸೃಷ್ಟಿಯೆಂದು ಮತ್ತೂ ಸ್ಪಷ್ಟವಾಗುತ್ತದೆ.

ಬಾಹೂರ ಬೊಮ್ಮಯ್ಯ ಜೈನರ ಅಣಕಕ್ಕೆ ಉತ್ತರವಾಗಿ ಜೋಳದ ರಾಶಿಯಿಂದ ಶಿವನ ಧ್ವನಿ ಪ್ರಕಟವಾಗುವಂತೆ ಮಾಡಿದ, ಪೆರ್ಮಾಡಿಯ ಆನೆಯನ್ನು ಭಂಗಿಸಿದ, ಕಲ್ಲನಂದಿಗೆ ಕಬ್ಬು ತಿನ್ನಿಸಿದ ಭಕ್ತ.ಆದಯ್ಯ ಪುಲಿಗೆರೆಯ ಸುರಹೊನ್ನೆ ಬಸದಿ ನಾಶಪಡಿಸಿ ಅಲ್ಲಿ ಸೌರಾಷ್ಟ್ರ ಸೋಮೇಶ್ವರನನ್ನು ಸ್ಥಾಪಿಸಿದ. ಶಿವಭಕ್ತನನ್ನು ಹಿಂಸಿಸಿದ ಜೈನರನ್ನು ತೇರಸಗಣದ ನೆರವಿನಿಂದ ಮಾರುಡಿಗೆ ನಾಚಯ್ಯ ನಿಗ್ರಹಿಸಿ, ೭೦೦ ಬಸದಿಗಳನ್ನು ನಾಶಮಾಡಿದ. ಚಾಲುಕ್ಯ ವಂಶದ ಕೋವೂರ ಬೊಮ್ಮಯ್ಯ ಜೈನರಿಂದ ಕೊಲೆಗೀಡಾದ ಮಗನನ್ನು ಬದುಕಿಸಿ, ಸುಟ್ಟ ಮರ ಚಿಗುರಿಸಿ, ೮೦೦ ಬಸದಿ ನಾಶಮಾಡಿ, ತನ್ನ ೩೦೦ ಜನ ಅನುಯಾಯಿಗಳೊಂದಿಗೆ ಶಿವಸನ್ನಿಧಿಯಲ್ಲಿ ಪ್ರಾಣಾರ್ಪಣೆ ಮಾಡಿಕೊಂಡ. ಇವೆಲ್ಲ 'ವೀರಮಾಹೇಶ್ವರ' ಸಮುದಾಯದ ಉಗ್ರ ಬದುಕನ್ನು ಸೂಚಿಸುತ್ತವೆ.

ಶಂಕರದಾಸಿಮಯ್ಯ ಮೂಲತಃ ವೈದಿಕ ಶೈವಬ್ರಾಹ್ಮಣ, ನವಿಲೆಯ ಜಡೆಯ ಶಂಕರಲಿಂಗದಿಂದ ಆಗಮಿಕ ಶೈವದೀಕ್ಷೆ ಹೊಂದಿ, ಆ ಲಿಂಗದಿಂದ ನೊಸಲ ಕಣ್ಣನ್ನು ಪಡೆದನು. ಬಳಿಕ ಜೇಡರ ದಾಸಿಮಯ್ಯನ ಗರ್ವಹರಣ ಮಾಡಿ, ಕಲ್ಯಾಣದಲ್ಲಿ ಚಕ್ರವರ್ತಿ ಜಯಸಿಂಹ ಸ್ಥಾಪಿಸಿದ ವಿಷ್ಣುವಿಗ್ರಹ ನಾಶಮಾಡಿ, ಪಿಂಬೇರ ಮೈಲಾರನಿಂದ ಕೊಡೆ ಹಿಡಿಸಿಕೊಂಡು, ಭೈರವಲಿಂಗನಿಂದ ನಮಸ್ಕರಿಸಿಕೊಂಡು, ಮಾರಿ ಮಸಣಿಯಿಂದ ಧಾನ್ಯಕುಟ್ಟಿಸಿ ಗಣಪರ್ವಮಾಡಿ, ಮಗ ಸದ್ಯೋಜಾತನಿಗೆ ಉಪನಯನ ಪೂರೈಸಿ 'ಶಿವಭಕ್ತ'ನನ್ನಾಗಿಸಿದ.

ಕೊಂಡಗುಳಿ ಕೇಶಿರಾಜ ಆಗಮಿಕ ಶುದ್ಧಶೈವನೋ, ನಾಥಶೈವನೋ ಸಂದೇಹ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನಲ್ಲಿ ಮಂತ್ರಿಯಾಗಿದ್ದ ಈತ, ರಾಜನೊಂದಿಗೆ ಮನಸ್ತಾಪಗೊಂಡು ನಿಂತ ಕಾಲಮೇಲೆಯೇ ಅಧಿಕಾರ ತೊರೆಯುತ್ತಾನೆ. ಹೀಗಾಗಿ ರಾಜತ್ವವನ್ನು ಧಿಕ್ಕರಿಸಿದ ಪ್ರಥಮ ಶಿವಭಕ್ತನೆನಿಸಿದ್ದಾನೆ. ಪೂಜಿಸುತ್ತಿದ್ದ ಶಿವಲಿಂಗವನ್ನು ಎತ್ತಿಕೊಂಡು ಹೊದ ಪಕ್ಷಿ ಅದನ್ನು ನದಿಯಲ್ಲಿ ಬಿಸುಡಲಾಗಿ ಪ್ರಾಣಘಾತ ಮಾಡಿಕೊಳ್ಳಲು ಮುಂದಾಗುತ್ತಾನೆ; ಬಳಿಕ ಅದು ಕೈಗೆ ಬರುತ್ತದೆ. ಲಿಂಗ ಕಳೆದು ಹೋದರೆ ಪ್ರಾಣಾರ್ಪಣೆಗೆ ಸಿದ್ಧವಾಗುವುದನ್ನು ತರುವಾಯದ ವಚನಕಾರರು ಖಂಡಿಸುವುದನ್ನು, ಮಾಂಸಾಹಾರಿ ತೆಲುಗು ಜೊಮ್ಮಯ್ಯನ ಮನೆಯಲ್ಲಿ ಶಿವಗೋಷ್ಠಿ ನಡೆಸುವುದನ್ನು ನೋಡಿದರೆ ಇವನು ನಾಥ ಶೈವನೆ? ಎಂಬ ಸಂದೇಹ ಮೂಡುತ್ತದೆ. ಕೊಂಡಗುಳಿ ಶಾಸನದಲ್ಲಿ ಬರುವ 'ಸರಸ್ವತೀಗಣ ಲಲಾಟಪಟ್ಟ, ವಾಜಿಕುಳಾಂಬರದ್ಯುಮಣಿ' ಎಂಬ ವಿಶೇಷಣಗಳು ಇವನನ್ನು ಶುದ್ಧಶೈವದಿಂದ ಬೇರ್ಪಡಿಸಿ, ನಾಥಶೈವಕ್ಕೆ ವರ್ಗಾಯಿಸಲು ಒತ್ತಾಯಿಸುತ್ತವೆ.

ತೆಲುಗು ಜೊಮ್ಮಯ್ಯ ಬೇಟೆ ಕಾಯಕದ ಮಾಂಸಾಹಾರಿ ಶಿವಭಕ್ತ. ಹೀಗಾಗಿ ಈತ ಯಾವುದೇ ವೃತ್ತಿ(ಜಾತಿ)ಯವರನ್ನೊಳಗೊಳ್ಳುವ ನಾಥಶೈವನಾಗಿರಬಹುದೆನಿಸುತ್ತದೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಸಾಮಂತನೀತ. ರಾಣಿ ಲಕುಮಾದೇವಿ ಇವನೊಂದಿಗೆ ಶಿವಸೋದರಿಯಂತೆ ನಡೆದುಕೊಳ್ಳುತ್ತಾಳೆ. ಶಿವನ ನಿಂದೆ ಮಾಡಿದ ಅರಸನ ಪುರೋಹಿತನನ್ನು ಕೊಲ್ಲುತ್ತಾನೆ. ಮನೆಗೆ ಬಂದ ಕೊಂಡಗುಳಿ ಕೇಶಿರಾಜನೊಂದಿಗೆ ಶಿವಗೋಷ್ಠಿ ನಡೆಸುತ್ತಾನೆ.

ಇಲ್ಲಿಯ ರೇವಣಸಿದ್ಧ ನಾಥಶೈವನೆಂಬುದು ಖಚಿತ. ಇಂದು ರೇಣುಕಾಚಾರ್ಯ, ರೇವಣಾರಾಧ್ಯ ಹೆಸರಿನಿಂದ ಪಂಚಾಚಾರ್ಯ ಶಾಖೆಯವರು ಇವನನ್ನು ತಮ್ಮ ಜಗದ್ಗುರುವೆಂದು ಭಾವಿಸಿದ್ದರೂ, ಹರಿಹರನಲ್ಲಿ ಈ ಶಾಖೆಯ ಸೂಚನೆಯಿಲ್ಲ. ಇವನು ಆಚಾರ್ಯ ವರ್ಗದ ಜಗದ್ಗುರುವೆನ್ನುವದಕ್ಕೆ ಇಲ್ಲಿ ಒಂದೂ ಆಧಾರವಿಲ್ಲ. ನಾಥಶೈವರಿಗೆ 'ಶಾಂತ' ಎಂಬ ಪರ್ಯಾಯ ನಾಮವಿರುವಂತೆ ತೋರುತ್ತದೆ. ನಿಜಗುಣ ಶಿವಯೋಗಿ ಈ ಪದವನ್ನು ಮತ್ತೆ ಮತ್ತೆ ಬಳಸಿದ್ದಾನೆ. ಹರಿಹರನ ಈ ರಗಳೆಯ "ಶಾಂತರಾ ಮೊತ್ತದಿಂದೆಸೆಯೆ" (೧-೪೬ನೆಯ ಸಾಲು) ಎಂಬಲ್ಲಿ ಈ ಶಬ್ದ ಕಂಡುಬರುತ್ತದೆ. ಈ ಸಂಪ್ರದಾಯದವರನ್ನು 'ಸಿದ್ಧ'ರೆಂದೂ ಕರೆಯುತ್ತಿದ್ದರು. ಹರಿಹರ 'ರೇವಣಸಿದ್ಧ'ನೆಂದೇ ಅನೇಕ ಸಲ ಬಳಸಿದ್ದಾನೆ. 'ಸಿದ್ಧ ರೇಣುಕಯ್ಯಂ' ಇತ್ಯಾದಿ ಪ್ರಯೋಗಗಳು ಈತನ ಸಿದ್ಧಪಂಥವನ್ನು ಎತ್ತಿ ಹೇಳುತ್ತವೆ. ೪ನೆಯ ಸ್ಥಲದ ಆರಂಭದಲ್ಲಿಯ

ನಿರುಪಮಸಿದ್ಧನಪ್ರತಿಮ ಸಿದ್ಧನಚಿಂತಿತ ಸಿದ್ಧನುತ್ತಮಾ
ವರಣ ಶರೀರಸಿದ್ಧನತಿಕಾರಣ ಸಿದ್ಧನಶೇಷಮುಂ ಸಮು
ದ್ಧರಿಸುವ ಸಿದ್ಧನಾತ್ಮನಿಜಸಿದ್ಧನನೂನ ಪರಾಪರೈಕ ವಿ
ಸ್ತರತರ ಸಿದ್ಧನೊಪ್ಪಿದನಿಳಾತದೊಳ್ ಸಲೆ ಸಿದ್ಧರೇವಣಂ॥

ಎಂಬ ವೃತ್ತವಂತೂ ಇವನ ಸಿದ್ಧ ಶೈವತ್ವವನ್ನು ಖಚಿತಪಡಿಸುತ್ತದೆ. ಈ ರಗಳೆ ಈತನ ಲೋಕಪರ್ಯಟನ, ಪವಾಡ ಪ್ರದರ್ಶನ, ಅನೇಕ ರಾಜರೊಡನಿದ್ದ ಸಂಬಂಧಗಳನ್ನು ಒಳಗೊಂಡಿದೆ.

ಒಂದು ನಾಡಿನ 'ಅಸ್ಮಿತೆ'ಯನ್ನು ನಾಶಮಾಡುವಲ್ಲಿ ಅನ್ಯ ರಾಜ್ಯಾಡಳಿತಕ್ಕಿಂತ ಅನ್ಯ ಧಾರ್ಮಿಕತೆಯು ಹೆಚ್ಚು ಪ್ರಭಾವಶಾಲಿ ಪಾತ್ರವಹಿಸುತ್ತದೆ. ಆದುದರಿಂದ ವಲಸೆ ಬಂದ ಅನ್ಯಧರ್ಮಗಳಾದ ವೈದಿಕ ಜೈನಗಳ ವಿರುದ್ಧ ಹರಿಹರನು ಸಾಹಿತ್ಯದ ಮೂಲಕ ನಡೆಸಿದ ಹೋರಾಟವು ಒಂದರ್ಥದಲ್ಲಿ 'ಅಸ್ಮಿತೆ'ಯ ಹೋರಾಟದಂತೆ ತೋರುತ್ತದೆ. ಇದಕ್ಕೆ, ಈತ ರೂಢಿಸಿದ ಹೊಸಭಾಷೆ, ಹೊಸ ಸಾಹಿತ್ಯಪ್ರಕಾರ, ಹೊಸ ಕಾವ್ಯವಸ್ತು, ಹೊಸ ಆಶಯ ಇತ್ಯಾದಿಗಳನ್ನು ಜೋಡಿಸಿದರೆ ಇವನ ಹೋರಾಟದ ತಳದಲ್ಲಿ ಸ್ಥಳೀಯತೆಗಾಗಿ ನಡೆಸಿದ ಸಾಂಸ್ಕೃತಿಕ ಪರಿವರ್ತನೆಯ ಗುರಿ ಕಾಣಸಿಗುತ್ತದೆ. ಆದುದರಿಂದ ಇವನನ್ನು ಹೊಸಯುಗದ ಹರಿಕಾರನೆಂದು ಕುವೆಂಪು

ಕರೆದುದು ಅರ್ಥಪೂರ್ಣವಾಗಿದೆ. ಭಕ್ತಿಯ ಆಶಯ, ನಡುಗನ್ನಡ ಭಾಷೆ, ದೇಶೀ ಸಾಹಿತ್ಯಪ್ರಕಾರಗಳನ್ನೊಳಗೊಂಡ ಈ ಯುಗ ನವೋದಯ ಸಾಹಿತ್ಯದ ವರೆಗೆ ವಿಸ್ತರಿಸಿಕೊಂಡಿದ್ದು, ಈ ವ್ಯಾಪ್ತಿಯನ್ನು ಹರಿಹರಯುಗವೆಂದು ಕರೆಯುವುದೂ ಸೂಕ್ತವಾಗಿದೆ. ದುರ್ದೈವದ ಸಂಗತಿಯೆಂದರೆ, ೧೨-೧೩ನೆಯ ಶತಮಾನಗಳಲ್ಲಿ ಸ್ಥಳೀಯ ಚರಿತ್ರೆ ಪ್ರಧಾನವಾಗಿದ್ದ ಈ ಚಳುವಳಿ ಬರಬರುತ್ತ ಪುರಾಣ ಪ್ರಧಾನವಾಗುತ್ತ ಬಂದಿತು. ಇದು ಭಾರತೀಯ ಎಲ್ಲ ಧರ್ಮಗಳ ಹಣೆಯ ಬರಹವಾಗಿದೆ.

ಕೃತಜ್ಞತೆ :

ಕನ್ನಡ ಪುಸ್ತಕ ಪ್ರಾಧಿಕಾರ ಕೈಗೆತ್ತಿಕೊಂಡಿರುವ "ಪ್ರಾಚೀನ ಗದ್ಯಸಾಹಿತ್ಯ ಮಾಲೆ"ಯ ಅಂಗವಾಗಿ ಹತ್ತು ಮಹತ್ವದ ಕೃತಿಗಳು ಪ್ರಕಟವಾಗುತ್ತಿದ್ದು, ಅವುಗಳಲ್ಲಿ "ಹರಿಹರ ವಿರಚಿತ ಕನ್ನಡಿಗರ ಕಥೆಗಳು" ಪರಿಗಣಿತವಾದುದು, ಈ ಕೃತಿಯನ್ನು ಸಂಪಾದಿಸಿಕೊಡುವ ಅವಕಾಶ ನನಗೆ ಪ್ರಾಪ್ತವಾದುದು ಸಂತೋಷದ ವಿಷಯ. ಈ ಸಂತೋಷವನ್ನು ನನ್ನದಾಗಿಸಿದ ಪ್ರಾಧಿಕಾರದ ಅಧ್ಯಕ್ಷರೂ, ಆತ್ಮೀಯರೂ ಆಗಿರುವ ಡಾ. ಸಿದ್ಧಲಿಂಗಯ್ಯ ಅವರಿಗೂ, ಆಡಳಿತಾಧಿಕಾರಿಗಳಾದ ಶ್ರೀ ಬಿ.ಎಚ್. ಮಲ್ಲಿಕಾರ್ಜುನ ಅವರಿಗೂ ವಂದನೆಗಳು. ಸಕಾಲದಲ್ಲಿ ಅಕ್ಷರ ಜೋಡಣೆ ಕಾರ್ಯ ಪೂರೈಸಿಕೊಟ್ಟ ಶ್ರೀ ದೇವರಾಜ ನಾಡಿಗ ಅವರಿಗೂ, ಮುದ್ರಣ ಕಾರ್ಯದಲ್ಲಿ ನೆರವಾದ ಡಾ. ಹನುಮಂತ ಮೇಲಿನಮನಿ ಅವರಿಗೂ ಧನ್ಯವಾದಗಳು.

---

೧. ವೈದಿಕದಲ್ಲಿ ಶಂಕರನ ಸ್ಮಾರ್ತ,ರಾಮಾನುಜನ ಶ್ರೀವೈಷ್ಣವ, ಮಧ್ವನ ಮಾಧ್ವಗಳು ಪರಿಗಣಿತವಾಗುತ್ತವೆ.

೨. ಕನ್ನಡ ತದ್ಭವಗಳಿಗೆ ಪ್ರಾಕೃತ ಮೂಲವೆಂದು ವಿದ್ವಾಂಸರು ಹೇಳುತ್ತಾರೆ. ಆದರೆ ಅವುಗಳನ್ನು ಕನ್ನಡದ ಸ್ವತಂತ್ರ ತದ್ಭವಗಳೆಂದು ಕರೆಯುವುದು ಸೂಕ್ತ.

೩. ಕರ್ಣಾಟ ಮಾಳವೀ ಮಾಧವ, ಕರ್ಣಾಟ ಕುಮಾರ ಸಂಭವ ಎಂಬ ಇವುಗಳ ಹೆಸರಿನ ಹಿಂದಿರುವ 'ಕರ್ಣಾಟ' ಎಂಬುದು ಇವು ಅನುವಾದಿತ ಕೃತಿಗಳೆಂದು ಸ್ಪಷ್ಟಪಡಿಸುತ್ತವೆ.

ಆಕರ : ಸಂಪಾದಕರು: ಎಂ.ಎಂ. ಕಲಬುರ್ಗಿ,ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–೨೦೧೨

■■

೩೪೭

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿಯ ಮಹಾಸಂಪುಟ

(ಬೈಬಲ್ ಮಾದರಿ)

೨೦೧೪

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯದ ಸೃಷ್ಟಿಯಾಗಿರುವ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ-ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಅಂದಂದಿನ ಸಂಕಲನಕಾರ--ಸಂಪಾದನಕಾರರಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಪರಿಷ್ಕರಣ ತುಂಬ ಜಟಿಲಸ್ವರೂಪದ್ದಾಗಿದೆ.

ವಚನ ಸಾಹಿತ್ಯ : ಪ್ರಕಟನೆಯ ಇತಿಹಾಸ

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತಪಾದ್ರಿಗಳು. ಜೈನ ಪುರಾಣಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ಲಿಂಗಾಯತ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ಬಹುಶಃ ತಮ್ಮ ಕ್ರೈಸ್ತಧರ್ಮ ಪ್ರಸಾರಕ್ಕೆ ಆತಂಕವಾಗುವುದೆಂಬ ದೃಷ್ಟಿಯಿಂದ ವಚನಸಾಹಿತ್ಯವನ್ನು ಮಾತ್ರ ಪ್ರಕಟಿಸಲಿಲ್ಲ. ಆದುದರಿಂದ ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩)'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ."[೧] ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ 'ಬಸವಣ್ಣನವರ ಷಟ್‌ಸ್ಥಲವಚನ' ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೯೭ರಲ್ಲಿ.[೨] ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನ ಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ–ಡಾ. ಫ.ಗು. ಹಳಕಟ್ಟಿ

೨. ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–ಡಾ. ಆರ್.ಸಿ.ಹಿರೇಮಠ

೩. ತೋಂಟದಾರ್ಯ ಮಠ, ಗದಗ–ಡಾ. ಎಂ.ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನಕಾರ್ಯ ಹೀಗೆ ಡಾ. ಫ.ಗು. ಹಳಕಟ್ಟಿಯವರಿಂದ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡಲ್ಲಿ ಡಾ. ಆರ್. ಸಿ. ಹಿರೇಮಠ ಅವರಿಂದ ಬೆಳೆದು, ಗದುಗಿನಲ್ಲಿ ಡಾ. ಎಂ. ಎಂ. ಕಲಬುರ್ಗಿಯವರಿಂದ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ಎಲ್ಲ ವಚನಕಾರರ ಎಲ್ಲ ವಚನಗಳ ೧೪ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಎರಡು ಆವೃತ್ತಿ (೧೯೯೩, ೨೦೦೧)ಗಳಲ್ಲಿ ಪ್ರಕಟವಾದವು. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ೧೪ ಸಂಪುಟ (೧೫ನೆಯದು ವಚನ ಪರಿಭಾಷಾಸಂಪುಟ)ಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನಸಂಖ್ಯೆ ಸುಮಾರು ಇಪ್ಪತ್ತೊಂದು ಸಾವಿರ. ಈಗ ೩ನೆಯ ಆವೃತ್ತಿ ಸಿದ್ಧಪಡಿಸುವ ಹೊತ್ತಿಗೆ ಹೊಸದಾಗಿ ಲಭಿಸಿದ ಸುಮಾರು ೧೩೦೦ ವಚನಗಳನ್ನೊಳಗೊಂಡ ೧೫ನೆಯ ಸಂಪುಟವನ್ನು ಈ ಯೋಜನೆಗೆ ಜೋಡಿಸಲಾಗಿದೆ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಅಧ್ಯಯನವನ್ನು ಮುಂದುವರಿಸಬೇಕೆನ್ನುವ ವಿದ್ವಾಂಸರಿಗೆ ನಿರ್ದಿಷ್ಟ ನಿಧಿಯನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಸಂಪುಟಗಳ ವಿನ್ಯಾಸ

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ–ಹೀಗೆ ಐದು ಸಂಪುಟಗಳೂ, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳೂ, ಬಸವೋತ್ತರ ಕಾಲೀನ ಶರಣರ ವಚನಗಳ ಐದು(೩ನೆಯ ಆವೃತ್ತಿಯಲ್ಲಿ ಆರು) ಸಂಪುಟಗಳೂ ಬೆಳಕು ಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು(ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು)ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಇಲ್ಲಿ ಸಮಗ್ರರೂಪ ಕೊಡಲಾಗಿದೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ವಚನ ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿದುಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ, ಅವರ ಹೊಸ ವಚನಗಳನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮಕೀರ್ತಿ ಈ ಐದು(೩ನೆಯ ಆವೃತ್ತಿಯಲ್ಲಿ ಆರು) ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯ ಪ್ರಕಟನೆಗೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದ ವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ಈ ಸಂಪುಟಗಳ ವಿನ್ಯಾಸದ ಬಗ್ಗೆ ಹೇಳುವುದಾದರೆ ಪ್ರಾಚೀನ ಸ್ಥಲಕಟ್ಟುಗಳನ್ನು ೧ನೆಯ ಕಾಂಡದಲ್ಲಿ ಹಾಗೆಯೇ ಇಟ್ಟುಕೊಂಡು, ಹೆಚ್ಚಿನ ವಚಗಳನ್ನು ೨ನೆಯ ಕಾಂಡದಲ್ಲಿ ಅಕಾರಾದಿ ಕ್ರಮದಲ್ಲಿ ಜೋಡಿಸಲಾಗಿದೆ. ಈ ಮೇರೆಗೆ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣನವರ ಷಟ್ಸ್ಥಲ ವಚನಗಳನ್ನು ಒಂದನೆಯ ಕಾಂಡದಲ್ಲಿ, ಇವರ ಹೆಚ್ಚಿನ ವಚನಗಳನ್ನು ಎರಡನೆಯ ಕಾಂಡದಲ್ಲಿ ಅಳವಡಿಸಲಾಗಿದೆ. ಅನ್ಯಕಾರಣಗಳಿಂದಾಗಿ ಸಿದ್ಧರಾಮನ ಹೆಚ್ಚಿನ ವಚನಗಳನ್ನು ಅಕಾರಾದಿಯಾಗಿ ಒಂದನೆಯ ಕಾಂಡದಲ್ಲಿ, ಷಟ್ಸ್ಥಲ ವಚನಗಳನ್ನು ಎರಡನೆಯ ಕಾಂಡದಲ್ಲಿ ಅಳವಡಿಸಿದ್ದೇವೆ. ಇವುಗಳಲ್ಲದೆ, ಸ್ಥಲಾನುಸಾರಿಯಾಗಿರುವ ಕೋಲಶಾಂತಯ್ಯ ಮೊದಲಾದವರ ಕಟ್ಟುಗಳನ್ನೂ ಮೂಲರೂಪದಲ್ಲಿಯೇ ಇಟ್ಟುಕೊಂಡಿದ್ದೇವೆ. ಇಂಥ ಎಲ್ಲ ಸ್ಥಲಾನುಸಾರಿ ಕಟ್ಟುಗಳಿಗೆ ಮಾತ್ರ ಅಕಾರಾದಿಗಳನ್ನು ಆಯಾ ಸಂಪುಟಗಳ ಕೊನೆಗೆ ಅನುಬಂಧವಾಗಿ ಕೊಟ್ಟಿದ್ದೇವೆ(ಈ ೩ನೆಯ ಆವೃತ್ತಿಯಲ್ಲಿ ಈ ಎಲ್ಲ ಅಕಾರಾದಿಗಳನ್ನೂ, ಹೆಚ್ಚಿನದಾಗಿ ಆಯಾ ಸಂಪುಟಗಳ ಕೊನೆಗೆ ಕೊಟ್ಟಿದ್ದ ಕಠಿಣ ಪದಕೋಶ, ಆಕರಗ್ರಂಥಗಳ ಕ್ರೋಡೀಕೃತ ಯಾದಿಯನ್ನೂ ಗ್ರಂಥದ ಕೊನೆಗೆ ವರ್ಗಾಯಿಸಿದ್ದೇವೆ).

ಪರಿಷ್ಕರಣ

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು– ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಮೊದಲು ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೧೮(ಮೂರನೆಯ ಆವೃತ್ತಿಯಲ್ಲಿ ಇನ್ನೂ ಹೆಚ್ಚು) ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರಗಳನ್ನು ಅರ್ಥಮಾಡಿಕೊಳ್ಳಲು, ಅಲ್ಪವ್ಯತ್ಯಾಸದ ಪುನರುಕ್ತ ವಚನಗಳನ್ನು ಕೈಬಿಡಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು

ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕೆಲವು ಅನುಬಂಧಗಳನ್ನು ಜೋಡಿಸಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಸಂಪುಟವನ್ನೇ ಪ್ರಕಟಿಸಿದ್ದೇವೆ. (ಬೈಬಲ್ ಮುದ್ರಣ ಮಾದರಿಯ ೩ನೆಯ ಆವೃತ್ತಿಯಲ್ಲಿ ಈ ಸಂಪುಟವನ್ನು ಕೈಬಿಟ್ಟಿದ್ದೇವೆ). ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು–ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

ಪ್ರಸ್ತುತ ೩ನೆಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಸಂಪುಟಗಳ ಪ್ರಥಮ ಆವೃತ್ತಿಯ ೫೦೦೦ ಪ್ರತಿಗಳು ೧೯೯೩ರಲ್ಲಿ, ದ್ವಿತೀಯ ಆವೃತ್ತಿಯ ೫೦೦೦ ಪ್ರತಿಗಳು ೨೦೦೧ರಲ್ಲಿ ಪ್ರಕಟವಾಗುವ ಮೂಲಕ, ಸಾರ್ವಜನಿಕರಲ್ಲಿ ಈ ಸಾಹಿತ್ಯದ ಪ್ರಸಾರ, ಅಧ್ಯಯನಗಳಿಗೆ ಒಮ್ಮೆಲೇ ದೊಡ್ಡ ವೇಗ ಪ್ರಾಪ್ತವಾಯಿತು.

ಈಗ ೨ನೆಯ ಆವೃತ್ತಿಯ ಪ್ರತಿಗಳೂ ಮುಗಿದು ಬಹಳ ವರ್ಷಗಳಾದ ಕಾರಣ, ಕರ್ನಾಟಕ ಸರಕಾರ ೩ನೆಯ ಆವೃತ್ತಿಯನ್ನು ಪ್ರಕಟಿಸುತ್ತಿದೆ. ಗಮನಿಸಬೇಕಾದ ಅಂಶವೆಂದರೆ, ಈಗ ೧೫ನೆಯದಾದ ಪರಿಭಾಷಾಸಂಪುಟವನ್ನು ಕೈಬಿಟ್ಟು, ಇದಕ್ಕೆ ಬದಲು ಹೊಸದಾಗಿ ಬೆಳಕಿಗೆ ಬಂದ ವಚನಕಾರರ ವಚನಗಳನ್ನು ಅಳವಡಿಸಿ, ೧೫ನೆಯದನ್ನೂ ವಚನ ಸಂಪುಟವನ್ನಾಗಿ ರೂಪಿಸಿದ್ದೇವೆ. ಇವುಗಳಲ್ಲಿ ೧ರಿಂದ ೮ ಸಂಪುಟಗಳನ್ನು 'ಬಸವಯುಗದ ವಚನ ಮಹಾಸಂಪುಟ'ವೆಂದೂ ೯ರಿಂದ ೧೫ ಸಂಪುಟಗಳನ್ನು 'ಬಸವೋತ್ತರಯುದ ವಚನ ಮಹಾಸಂಪುಟ'ವೆಂದೂ ಕರೆದು, ಕೇವಲ ೨ ಗ್ರಂಥಗಳಾಗಿ ಹೊರತರುತ್ತಲಿದ್ದೇವೆ.

ವಿಶೇಷಸಂಗತಿಯೆಂದರೆ, ತೆಳ್ಳನೆಯ ಕಾಗದ, ಸಣ್ಣ ಅಕ್ಷರಗಳ ಈ ಆವೃತ್ತಿ 'ಬೈಬಲ್ ಮುದ್ರಣ ಮಾದರಿ'ಯಲ್ಲಿ ಪ್ರಕಟವಾಗುತ್ತಲಿದೆ. ಇದರಿಂದಾಗಿ ಸಹೃದಯರು ಈ ಪುಸ್ತಕಗಳನ್ನು ಮನೆಯಲ್ಲಿ ಇಟ್ಟುಕೊಳ್ಳಲು, ಅಭ್ಯಾಸಿಗಳು ಜೊತೆಯಲ್ಲಿ ಒಯ್ಯಲು, ಒಂದೇ ಸಂಪುಟದಲ್ಲಿ ಅನೇಕರ ವಚನಗಳನ್ನು ಓದಲು, ಸರಕಾರದ ಅನುದಾನದಲ್ಲಿ ಪ್ರತಿಸಲದಂತೆ ೫ ಸಾವಿರಕ್ಕೆ ಬದಲು ಇನ್ನೂ ೨೦ ಸಾವಿರ ಪ್ರತಿಗಳನ್ನು ಮುದ್ರಿಸಲು ಅನುಕೂಲವಾಗಿದೆ. ಹೀಗಾಗಿ ವಚನಸಾಹಿತ್ಯದ ಇತಿಹಾಸದಲ್ಲಿ ಈ ಮೂರನೆಯ ಆವೃತ್ತಿ ಇನ್ನೊಂದು ಮೈಲುಗಲ್ಲೆಂದೇ ಹೇಳಬೇಕು.

ಹೊಸ ಶೋಧಗಳ ಬೆಳಕಿನಲ್ಲಿ ೨ನೆಯ ಆವೃತ್ತಿಯಲ್ಲಿಯ ಕೆಲವು ವಚನಗಳನ್ನು ೩ನೆಯ ಆವೃತ್ತಿಗೆ ಈ ಕೆಳಗಿನಂತೆ ಸಂಪುಟದಿಂದ ಸಂಪುಟಕ್ಕೆ ವರ್ಗಾಯಿಸಿದ್ದೇವೆ.

೯ನೆಯ ಸಂಪುಟದ ಕುರಂಗೇಶ್ವರಲಿಂಗ/ಕುಂತಳಿಯ ವರದ ಕುರಂಗಲಿಂಗ ಮುದ್ರಿಕೆಯ ವಚನವನ್ನು ೫ನೆಯ ಸಂಪುಟಕ್ಕೆ ವರ್ಗಾಯಿಸಲಾಗಿದೆ.

೯ನೆಯ ಸಂಪುಟದ 'ಶಾಂತವೀರೇಶ್ವರಾ' ಅಂಕಿತದ ಎಲ್ಲ ವಚನಗಳನ್ನು ೧೫ನೆಯ ಸಂಪುಟಕ್ಕೆ ವರ್ಗಾಯಿಸಲಾಗಿದೆ.

೯ನೆಯ ಸಂಪುಟದ 'ಸರ್ವೇಶ್ವರಲಿಂಗ' ಮುದ್ರಿಕೆಯ ೧ ವಚನವಿದ್ದಿತು. ಇದರ ನಿಜಪಾಠ 'ದಸರೇಶ್ವರ ಲಿಂಗ'ವೆಂದು ಖಚಿತಮಾಡಿಕೊಂಡು ಅದನ್ನು ದಸರಯ್ಯನ ವಚನಕ್ಕೆ ವರ್ಗಾಯಿಸಲಾಗಿದೆ.

೧೪ನೆಯ ಸಂಪುಟದ 'ವೀರಸಂಗಯ್ಯ'ನ ವಚನಗಳನ್ನು ೧೫ನೆಯ ಸಂಪುಟಕ್ಕೆ ವರ್ಗಾಯಿಸಲಾಗಿದೆ.

ಈ ವ್ಯತ್ಯಾಸಗಳನ್ನಲ್ಲದೆ, ಪುನರುಕ್ತ ವಚನಗಳನ್ನು ಕೈಬಿಟ್ಟಿದ್ದೇವೆ. ದೋಷಯುಕ್ತ ವಚನಗಳ ಪರಿಷ್ಕಣ ಇತ್ಯಾದಿ ಕಾರ್ಯಗಳನ್ನು ಪೂರೈಸಿದ್ದೇವೆ.

೧೯೯೩, ೨೦೦೧ರ ಆವೃತ್ತಿಗಳಲ್ಲಿ ಪ್ರತಿಯೊಂದು ಸಂಪುಟದ ಕೊನೆಯಲ್ಲಿ ಅವುಗಳಿಗೆ ಸಂಬಂಧಪಟ್ಟ ಸ್ಥಲಕಟ್ಟು ಕೃತಿಗಳ ಅಕಾರಾದಿ, ಕಠಿಣಪದಕೋಶ, ಆಕರಗ್ರಂಥಗಳ ಯಾದಿಗಳನ್ನು ಕೊಡಲಾಗಿದ್ದಿತು. ಈ ಮೂರನೆಯ ಆವೃತ್ತಿಯಲ್ಲಿ ಈ ಎಲ್ಲ ಅಕಾರಾದಿಗಳನ್ನೂ, ಕಠಿಣಪದಕೋಶ ಮತ್ತು ಆಕರ ಗ್ರಂಥಗಳ ಕ್ರೋಡೀಕೃತ ಯಾದಿಯನ್ನು ಈ ಎರಡೂ ಗ್ರಂಥಗಳ ಕೊನೆಗೆ ಜೋಡಿಸಿದ್ದೇವೆ. ಈ ಎರಡೂ ಗ್ರಂಥಗಳ ಆರಂಭದಲ್ಲಿ ಮುಖ್ಯಮಂತ್ರಿಗಳ, ಸಂಸ್ಕೃತಿ ಸಚಿವರ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರ, ಸಂಪಾದಕರ ಮಾತುಗಳನ್ನು ಜೋಡಿಸಿ, ಬಳಿಕ ಆಯಾ ಸಂಪುಟಗಳ ಸಂಪಾದಕರ ಪ್ರಸ್ತಾವನೆಗಳನ್ನು ಅಲ್ಲಲ್ಲಿಯೇ ಹೊಂದಿಸಿದ್ದೇವೆ.

ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ಲಿಂಗಾಯತ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ.ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದು ನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ವಚನಸಂಪತ್ತನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಆವೃತ್ತಿಯನ್ನು ಪ್ರಕಟಿಸಲು ತೀವ್ರ ಆಸಕ್ತಿ ಹೊಂದಿದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಅವರಿಗೆ, ಸಂಸ್ಕೃತಿ ಸಚಿವರಾದ ಶ್ರೀಮತಿ ಉಮಾಶ್ರೀ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಹಿಂದಿನ ಸಂಸ್ಕೃತಿ ಸಚಿವರಾದ ಶ್ರೀ ಗೋವಿಂದ ಕಾರಜೋಳ ಅವರು 'ಬೈಬಲ್ ಮುದ್ರಣ ಮಾದರಿ' ವಚನಸಂಪುಟ ಪ್ರಕಟಿಸಲು ಹಣ ಮಂಜೂರ ಮಾಡಿದ್ದರೆಂಬುದನ್ನೂ ಈಗ ಕೃತಜ್ಞತೆಯಿಂದ ನೆನೆಯುತ್ತೇವೆ.

ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ನಾಗಾಂಬಿಕಾದೇವಿ, ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಉಪನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನಸ್ವಾಮಿ, ಶ್ರೀ ಬಲವಂತರಾವ ಪಾಟೀಲ ಅವರಿಗೂ, ಪ್ರೀತಿಯಿಂದ ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಬಂಜಗೆರೆ ಜಯಪ್ರಕಾಶ ಮತ್ತು ಈ ಪ್ರಾಧಿಕಾರದ ಸಲಹಾಸಮಿತಿ ಸದಸ್ಯರಿಗೂ, ಸಮಗ್ರ ವಚನಸಾಹಿತ್ಯ ಪ್ರಕಟನಯೋಜನೆಯ ಸಂಪಾದಕ ಮಂಡಳಿ ಸದಸ್ಯರಿಗೂ, ಶ್ರಮವಹಿಸಿ ಈ ಸಂಪುಟಗಳನ್ನು ಪರಿಷ್ಕರಿಸಿದ ಎಲ್ಲ ಸಂಪಾದಕರಿಗೂ, ತಾವು ಸಿದ್ಧಪಡಿಸಿರುವ 'ವಚನಸಂಚಯ'ವನ್ನು ಬಳಸಿಕೊಳ್ಳಲು ಸಮ್ಮತಿಸಿದ ಓ.ಎಲ್. ನಾಗಭೂಷಣಸ್ವಾಮಿ, ಓಂ ಶಿವಪ್ರಕಾಶ ಅವರಿಗೂ, ಫ್ರೂಫ್ ನೋಡುವಲ್ಲಿ ನೆರವಾದ ಡಾ. ಪಿ.ಕೆ. ರಾಠೋಡ ಅವರಿಗೂ ಕೆಲವು ಸಂಪುಟಗಳ ಬೆರಳಚ್ಚುಕಾರ್ಯ ಪೂರೈಸಿದ ಧಾರವಾಡದ ಡಾ. ಸರಸ್ವತಿದೇವಿ ಭಗವತಿ, ಪ್ರೀತಿ ಮುರಗೋಡ, ಯಲಗೂರೇಶ ಮೇಲಿನಮನಿ ಅವರಿಗೂ, ಬೆಂಗಳೂರಿನ ಸ್ನೇಹಾ ಪ್ರಿಂಟರ್ಸ್ ಸಿಬ್ಬಂದಿ ವರ್ಗಕ್ಕೂ, ಮೈಸೂರಿನ ಶ್ರೀಮತಿ ಮಂಜುಳಾ ಅವರಿಗೂ, ಹದಿನೈದೂ ಸಂಪುಟಗಳನ್ನು ಕಷ್ಟಪಟ್ಟು ವಿನ್ಯಾಸಗೊಳಿಸಿದ ಡಾ. ಎಚ್. ಎಸ್. ಮೇಲಿನಮನಿ ಅವರಿಗೂ ನಾವು ಋಣಿಯಾಗಿದ್ದೇವೆ. ಎರಡನೆಯ ಆವೃತ್ತಿಯಲ್ಲಿ ಉಳಿದಿದ್ದ ದೋಷಗಳನ್ನು ನಮ್ಮ ಗಮನಕ್ಕೆ ತಂದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೈಬಲ್ ಮುದ್ರಣ ಮಾದರಿಯಲ್ಲಿ ಈ ಮೂರನೆಯ ಆವೃತ್ತಿಯನ್ನು ಪ್ರಕಟಿಸಲು ನಮ್ಮ ಗಮನ ಸೆಳೆದ, ಸರಕಾರದ ಮೇಲೆ ಒತ್ತಡ ತಂದ ಕಲಬುರ್ಗಿಯ ಶ್ರೀ ಪ್ರಭುಲಿಂಗ ಮಹಾಗಾಂವಕರ ಅವರ ವಚನಪ್ರೀತಿಗೂ ನಾವು ಋಣಿಯಾಗಿದ್ದೇವೆ.

***

೧. ಮೊದಲು ಪ್ರಕಟವಾದ ವಚನಕೃತಿ 'ಅಖಂಡೇಶ್ವರ ವಚನ'(೧೮೮೭)ವೆಂದು ಡಾ. ಬಿ. ನಂಜುಂಡಸ್ವಾಮಿ ಅವರ ಅಭಿಪ್ರಾಯ(ಬಸವ ಪಥ ೧೬-೬).

೨. ಬಸವಣ್ಣನವರ ಷಟ್ಸ್ಥಲ ವಚನಗಳು ಪ್ರಥಮ ಸಲ ಬೆಳಕು ಕಂಡುದು ೧೮೮೬ರಲ್ಲಿ ಎಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ (ಬಸವ ಪಥ ೧೫-೫, ಪು.೪೫).

೩. ನೋಡಿ : ಪ್ರಕ್ಷಿಪ್ತ ವಚನಕಾರರು-ಕರ್ನಾಟಕ ಭಾರತಿ, ೨೪-೧ ಮತ್ತು ಮಾರ್ಗ-೧. ಡಾ. ಎಂ. ಎಂ. ಕಲಬುರ್ಗಿ.

ಆಕರ : ಪ್ರಸಂ.: ಎಂ.ಎಂ. ಕಲಬುರ್ಗಿ,ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು-೨೦೦೧

ಅಪ್ರಕಟಿತ ಪ್ರಾಚೀನ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರ ಮಾತು

೨೦೦೭

ಪ್ರಾಚೀನ ಹಸ್ತಪ್ರತಿಗಳು ರಾಷ್ಟ್ರದ ಸಾಂಸ್ಕೃತಿಕ ಸಂಪತ್ತು. ಇವುಗಳ ಶೋಧ–ಸಂರಕ್ಷಣೆ–ಪ್ರಕಟಣೆ–ಪ್ರಸಾರ ಸರಕಾರದ ಮತ್ತು ಸಾರ್ವಜನಿಕರ ಕರ್ತವ್ಯದ ಭಾಗವಾಗಿದೆ. ಹೀಗಿದ್ದೂ ನಮ್ಮ ಕೆಲವು ಪ್ರಾಚೀನ ಗ್ರಂಥಗಳು ಒಮ್ಮೆ–ಇನ್ನೊಮ್ಮೆ–ಮತ್ತೊಮ್ಮೆ ಬೆಳಕು ಕಂಡರೆ, ಇನ್ನು ಕೆಲವು ಒಮ್ಮೆಯೂ ಬೆಳಕು ಕಾಣದೆ ಕತ್ತಲಲ್ಲಿ ಉಳಿದುಬಿಟ್ಟಿವೆ. ಈ ಉಳಿಯುವಿಕೆಗೆ ನಮ್ಮ ಕಾಲದ ಬದಲಾದ ಒಲವುಗಳೇ ಕಾರಣವೆನಿಸಿವೆ.

ನಮ್ಮಲ್ಲಿ ಹಳೆಯ ಕಾವ್ಯಗಳ ಮುದ್ರಣ ಆರಂಭವಾದುದು ನವೋದಯ ಕಾಲದಲ್ಲಿ. ಆಗ ರಸನಿಷ್ಠ ರಮ್ಯಸಾಹಿತ್ಯದ ಪ್ರಕಟಣೆಗೆ ತೋರಿದಷ್ಟು ಉತ್ಸಾಹ, ಉಳಿದ ಸಾಹಿತ್ಯದ ವಿಷಯದಲ್ಲಿ ನಮ್ಮ ವಿದ್ವಾಂಸರು ತೋರಲಿಲ್ಲ. ಇದರಿಂದಾಗಿ ಬೇರೆ ದೃಷ್ಟಿಯಿಂದ ಮೌಲಿಕವೆನಿಸುವ ಅನೇಕ ಕೃತಿಗಳು ಅವಗಣನೆಗೆ ಗುರಿಯಾದವು. ಹೀಗೆ ಅವಗಣನೆಗೆ ಗುರಿಯಾದವುಗಳಲ್ಲಿ ಸಿರುಮನ ಚರಿತೆಯಂಥ ಚಾರಿತ್ರಿಕ ಕಾವ್ಯಗಳು, ಬಸವಣ್ಣನವರ ಟೀಕಿನ ವಚನಗಳಂಥ ಟೀಕಾಗ್ರಂಥಗಳು, ಲೋಕೋಪಕಾರದಂಥ ಲೌಕಿಕಶಾಸ್ತ್ರ ಕೃತಿಗಳು, ಶ್ರಾವಕಾಚಾರದಂಥ ಧಾರ್ಮಿಕ ಗ್ರಂಥಗಳು ಮುಖ್ಯವಾದವು. ತತ್ವಪದ, ಗ್ರಂಥಸ್ಥ ಲಾವಣಿ, ಸ್ಥಳಮಹಾತ್ಮೆ, ದಾಖಲು ಸಾಹಿತ್ಯ ಇತ್ಯಾದಿ ಪ್ರಕಾರಗಳನ್ನೂ ಇಲ್ಲಿ ಹೆಸರಿಸಬಹುದು.

ಮುಂದುವರಿದು ಹೇಳುವುದಾದರೆ, ಒಂದು ಕಾಲದಲ್ಲಿ ಮಹತ್ವದ್ದೆನಿಸಿದ್ದ ಗ್ರಂಥ ಬದಲಾದ ಕಾಲದಲ್ಲಿ ಮಹತ್ವವನ್ನು ಕಳೆದುಕೊಳ್ಳಬಹುದಾಗಿದೆ. ೧೯–೨೦ನೆಯ ಶತಮಾನಗಳಲ್ಲಿ ರಾಜಶೇಖರ ವಿಳಾಸಕ್ಕೆ ಇದ್ದ ಆಕರ್ಷಣೆ ಇಂದು ಅಷ್ಟಾಗಿ ಕಂಡುಬರುವುದಿಲ್ಲ. ಪ್ರಾಚೀನ ಕಾಲದಲ್ಲಿ ಮಂತ್ರಗೋಪ್ಯ, ಕರಣಹಸಿಗೆ ಪ್ರತಿಗಳೇ ಹೆಚ್ಚು ಸಿಗುವುದರಿಂದ, ಅಂದು ವಚನಕ್ಕಿಂತ ಈ ಸಾಹಿತ್ಯವೇ ಹೆಚ್ಚು ಮಹತ್ವಪಡೆದುದು ಸ್ಪಷ್ಟವಾಗುತ್ತದೆ.

ಹೀಗೆ ಸಮಕಾಲೀನ ಸಾಹಿತ್ಯದ ಅಭಿರುಚಿಯಲ್ಲದೆ, ವಿವಿಧ ಸಮಾಜಗಳ ಸಂಖ್ಯಾಪ್ರಮಾಣ, ಸಾಕ್ಷರತೆ ಇತ್ಯಾದಿಗಳೂ ಇಲ್ಲಿ ಕಾರಣವೆನಿಸುತ್ತವೆ. ಸಂಸ್ಕೃತದ ಒಲವಿನ ಕಾರಣವಾಗಿ ವೈದಿಕ ಸಮಾಜ ತಮ್ಮ ಕನ್ನಡ ಗ್ರಂಥಗಳ ಪ್ರಕಟಣೆಗೆ ಅಷ್ಟಾಗಿ ಆಸಕ್ತಿ ತೋರಲಿಲ್ಲ. ವಿಪುಲ ಸಾಹಿತ್ಯವಿದ್ದರೂ ಅಲ್ಪಸಂಖ್ಯೆ ಕಾರಣವಾಗಿ ಜೈನಕೃತಿಗಳು ಹೆಚ್ಚು ಪ್ರಕಟವಾಗಲಿಲ್ಲ. ಲಿಂಗಾಯತ ಕೃತಿಗಳು ಮಾತ್ರ ಸಾಮಾಜಿಕ ಬಹುಸಂಖ್ಯೆ ಇತ್ಯಾದಿ ಕಾರಣಗಳಿಂದಾಗಿ ತಕ್ಕ ಪ್ರಮಾಣದಲ್ಲಿ ಬೆಳಕು ಕಂಡವು.

ಈ ವರೆಗಿನ ವಿವರಣೆಯಿಂದ "ತಾತ್ವಿಕವಾಗಿ ಯಾವುದೇ ಕೃತಿ ಮುಖ್ಯವಲ್ಲ –ಅಮುಖ್ಯವಲ್ಲ; ಅದಕ್ಕೆ ಅದರದ್ದೇ ಆದ ಓದುಗರು ಇರುತ್ತಾರೆ"–ಎಂದು ಗ್ರಂಥಾಲಯ ಶಾಸ್ತ್ರಜ್ಞರು ಹೇಳುವುದು ಸಾಮಾನ್ಯವಾಗಿ ನಿಜವೆನಿಸುತ್ತದೆ. ಇದನ್ನು ಗಮನಿಸಿಯೇ "ಕಳೆದು ಹೋಗುವ ಮುನ್ನ ಪ್ರಾಚೀನ ಎಲ್ಲ ಗ್ರಂಥಗಳನ್ನು ಒಮ್ಮೆಯಾದರೂ ಮುದ್ರಿಸಬೇಕು" ಎಂಬ ವಿದ್ವಾಂಸರ ಹೇಳಿಕೆ ಇಲ್ಲಿ ಮುಖ್ಯವೆನಿಸುತ್ತದೆ. ಕಾಗದ ರಹಿತ ಸಂಸ್ಕೃತಿಯ ಇಂದಿನ ಕಾಲದಲ್ಲಿ ಕೊನೆಯ ಪಕ್ಷ ಇವುಗಳ ಕಂಪ್ಯೂಟರೀಕರಣ ಕಾರ್ಯವಾದರೂ ನಮ್ಮಲ್ಲಿ ಜರುಗಬೇಕಿದೆ. ಇಂಥ ಧೋರಣೆಗಳ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಕೈಗೆತ್ತಿಕೊಂಡಿರುವ "ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನ ಯೋಜನೆ", ಏಕೀಕೃತ ಕರ್ನಾಟಕದ ಸುವರ್ಣ ಸಂದರ್ಭಕ್ಕೆ ಸಲ್ಲಿಸುವ, ಒಂದು 'ಸುವರ್ಣ ಯೋಜನೆ'ಯೆಂದೇ ಹೇಳಬೇಕು.

ಕನ್ನಡದಲ್ಲಿ ಪ್ರಾಚೀನ ಗ್ರಂಥಮುದ್ರಣಕಾರ್ಯಕ್ಕೆ ಸುಮಾರು ೧೫೦ ವರ್ಷಗಳ ಇತಿಹಾಸವಿದೆ. ಅಂದಿನಿಂದ ಇದು ನಮ್ಮಲ್ಲಿ ನಿಲ್ಲದೆ ನಡೆದು ಬಂದಿದೆ. ಆರಂಭದಲ್ಲಿ ಕಲ್ಲಚ್ಚು ಮುದ್ರಣದ ಮೂಲಕ ಈ ಮಣಿಹವನ್ನು ಆರಂಭಗೊಳಿಸಿದವರು ಕ್ರೈಸ್ತಪಾದ್ರಿಗಳು ಮತ್ತು ಸ್ಥಳೀಯ ವ್ಯಾಪಾರಿವರ್ಗದ ಶೆಟ್ಟರು. ಕ್ರಮೇಣ ಇದು "ಗ್ರಂಥಸಂಪಾದನೆ" ಹೆಸರಿನಿಂದ ವಿದ್ವಾಂಸರ ಕೈಯಲ್ಲಿ ಶಾಸ್ತ್ರವಾಗಿ ಬೆಳೆಯಿತು. ಇವರು ಹಲವು ಹಸ್ತಪ್ರತಿಗಳ ಭಿನ್ನಪಾಠಗಳನ್ನು ಸಂಗ್ರಹಿಸಿ, ಮೂಲವೆನ್ನಬಹುದಾದ ಪಾಠವನ್ನು ನಿರ್ಣಯಿಸುವ ವಿದ್ವತ್ ಪದ್ಧತಿಯನ್ನು ಅಸ್ತಿತ್ವಕ್ಕೆ ತಂದರು. ಆರಂಭದಲ್ಲಿ ಉತ್ತಮವೆನಿಸುವ ಒಂದು ಹಸ್ತಪ್ರತಿಯನ್ನು ಮುಖ್ಯವಾಗಿ ಇಟ್ಟುಕೊಂಡು, ಮಿಕ್ಕವುಗಳನ್ನು ಸಹಾಯಕ ಪ್ರತಿಯೆಂದು ಪರಿಗಣಿಸುತ್ತಿದ್ದರು. ಕ್ರಮೇಣ ಎಲ್ಲ ಭಿನ್ನಪಾಠಗಳನ್ನು ದಾಖಲಿಸುವ ಹವ್ಯಾಸಕ್ಕೆ ಇಳಿಯುವಲ್ಲಿ ಎಲ್ಲವೂ ಮುಖ್ಯಪ್ರತಿಯ ಸ್ಥಾನಗೌರವ ಪಡೆದವು. ಇದರಿಂದಾಗಿ ಈ ಪದ್ಧತಿ ಹತ್ತು ಹಸ್ತಪ್ರತಿ ಬಳಸಿ ಹನ್ನೊಂದನೆಯ ಮಿಶ್ರಪ್ರತಿ ಸಿದ್ಧಪಡಿಸುವ ದೋಷಪೂರ್ಣ ವಿಧಾನದ ನೆಲೆಯನ್ನು ಮುಟ್ಟಿತು. ಹೀಗಾಗಿ ಒಂದು ಉತ್ತಮ ಪ್ರತಿಯನ್ನು ಇಟ್ಟುಕೊಂಡು, ಅನಿವಾರ್ಯವೆನಿಸಿದಲ್ಲಿ ಮಾತ್ರ ಬೇರೆ ಪ್ರತಿ ಅಥವಾ ಪ್ರತಿಗಳ ಪಾಠ ಬಳಸುವ ಹೊಸ ವಿಧಾನ ಇಂದು ಮಾನ್ಯತೆ ಪಡೆಯುತ್ತಲಿದೆ. ಇದರಿಂದ ಮಿಶ್ರಪ್ರತಿರೂಪದ ಪರಿಷ್ಕರಣಕ್ಕೆ ಬದಲು ಕೊನೆಯ ಪಕ್ಷ ಒಂದು ಉತ್ತಮ ಹಸ್ತಪ್ರತಿಯನ್ನಾದರೂ ಶುದ್ಧೀಕರಿಸಿ–ಉಳಿಸಿ ಕೊಟ್ಟಂತಾಗುತ್ತದೆ. ಪ್ರಸ್ತುತ ಯೋಜನೆಯಲ್ಲಿ ಸಾಮಾನ್ಯವಾಗಿ ಈ ವಿಧಾನವನ್ನು ಅನುಸರಿಸಲಾಗಿದೆ.

ಪ್ರಾಚೀನಕೃತಿಗಳ ಪ್ರಕಟನಕಾರ್ಯ ನಮ್ಮ ನಾಡಿನಲ್ಲಿ ಸರಕಾರ ಮತ್ತು ಸಾರ್ವಜನಿಕ ಸಂಸ್ಥೆಗಳ ಮೂಲಕ ಕೈಗೂಡುತ್ತ ಬಂದಿದೆ. ೧೮೫೮ರಷ್ಟು ಹಿಂದೆಯೇ ಮದ್ರಾಸ ಸರಕಾರ ಪ್ರಾಚ್ಯಸಂಶೋಧನಾಲಯವನ್ನು ಅಸ್ತಿತ್ವಕ್ಕೆ ತಂದಿತು. ಇಂಥ ಇನ್ನೊಂದು ಸಂಸ್ಥೆ ೧೮೯೧ರಷ್ಟು ಹಿಂದೆ ಮೈಸೂರಿನಲ್ಲಿ ತಲೆಯೆತ್ತಿತು. ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆ ೧೯೩೯ರಲ್ಲಿ ಸ್ಥಾಪನೆಗೊಂಡಿತು. ಬಳಿಕ ಮೈಸೂರು, ಕರ್ನಾಟಕ ಮೊದಲಾದ ವಿಶ್ವವಿದ್ಯಾಲಯಗಳು ಹಸ್ತಪ್ರತಿ ವಿಭಾಗ ಆರಂಭಿಸಿದವು. ಕನ್ನಡ ಸಾಹಿತ್ಯ ಪರಿಷತ್ತು ಈ ದಿಸೆಯಲ್ಲಿ ಒಂದಿಷ್ಟು ಕೆಲಸ ಮಾಡಿತು. ಜೈನ, ಲಿಂಗಾಯತ ಮಠಗಳು ಮತ್ತು ಸಾಮಾಜಿಕ ಸಂಸ್ಥೆಗಳು ಈ ಕಾರ್ಯಕ್ಕೆ ಕೈಜೋಡಿಸಿದವು. ಈ ಎಲ್ಲ ಸಂಸ್ಥೆಗಳು ಸಂಸ್ಕೃತಿಯ ರಕ್ಷಣೆ ತಮ್ಮ ಕರ್ತವ್ಯವೆಂಬ ಭಾವನೆಯಿಂದ ಅನೇಕಾನೇಕ

ಪ್ರಾಚೀನಕೃತಿಗಳನ್ನು ಪ್ರಕಟಿಸಿದವು. ಹೀಗಿದ್ದೂ ಈ ಕ್ಷೇತ್ರದಲ್ಲಿ ಪೂರೈಸಬೇಕಾದ ಕೆಲಸ ಇನ್ನೂ ಬಹಳ ಉಳಿದುಕೊಂಡಿದೆ. ಇದನ್ನು ಮನಗಂಡು ಕರ್ನಾಟಕ ರಾಜ್ಯಪತ್ರಾಗಾರ ಇಲಾಖೆ, ಈ ಯೋಜನೆಯನ್ನು ಅಸ್ತಿತ್ವಕ್ಕೆ ತಂದಿದೆ.

ಈ ಯೋಜನೆ ಪ್ರಸ್ತುತ ಆರ್ಥಿಕ ವರ್ಷದ (೨೦೦೬-೦೭) ಆರಂಭದಲ್ಲಿ ಮಂಜೂರಾದರೂ ಆಡಳಿತಾತ್ಮಕ ಎಲ್ಲ ತೊಡಕುಗಳನ್ನು ನೀಗಿಸಿಕೊಂಡು ಅಸ್ತಿತ್ವಕ್ಕೆ ಬಂದುದು, ಆರ್ಥಿಕ ವರ್ಷದ ಅಂತ್ಯದಲ್ಲಿ. ೧೭ ಫೆಬ್ರುವರಿ ೨೦೦೭ರಂದು ಸೇರಿದ ಸಂಪಾದಕ ಮಂಡಳಿಯ ಪ್ರಥಮಸಭೆಯಲ್ಲಿ ಸ್ವೀಕೃತವಾದ ನಿರ್ಣಯಗಳ ಬೆಳಕಿನಲ್ಲಿ, ಈ ಗ್ರಂಥಗಳು ಬೆಳಕು ಕಾಣುತ್ತಲಿವೆ.

ಈವರೆಗೆ ಪ್ರಸಿದ್ಧ ಕವಿಗಳ ಪ್ರಸಿದ್ಧ ಕೃತಿಗಳ ಪ್ರಕಟನೆಯ ಬಗ್ಗೆ ಆಸಕ್ತಿವಹಿಸುವ ಮೂಲಕ ಸ್ಥಳೀಯ ಚಾರಿತ್ರಿಕ ಕೃತಿಗಳು ಉಪೇಕ್ಷಿಸಲ್ಪಟ್ಟಿವೆ. ಇಲ್ಲಿಯ ನುಂಕೆಮಲೆ ಸಿದ್ಧೇಶ್ವರ ಪುರಾಣ, ಬೊಮ್ಮಲಿಂಗ ಕಾವ್ಯ, ಗುಂಡಬಸವ ಚರಿತ್ರೆ, ಮೋನಪ್ಪಯ್ಯನ ಚಾರಿತ್ರ, ಕಂಚಿಪುರಾಣ, ರಾಮನಾಥ ವಿಲಾಸ ಸ್ಥಳೀಯ ಮಹಾತ್ಮರ ಚರಿತ್ರೆಗಳಾಗಿದ್ದು, ಇವು ಕಳೆದುಹೋದ ಸ್ಥಾನಿಕ ಇತಿಹಾಸದ ಕೊಂಡಿಗಳೆನಿಸಿವೆ. ಈವರೆಗೆ ಕಡೆಗಣಿಸಲ್ಪಟ್ಟ ಟೀಕಾಸಾಹಿತ್ಯದ ಏಕೋತ್ತರಶತಸ್ಥಲೀ, ವಾತುಲಶುದ್ಧಾಗಮ ಟೀಕೆ, ಸ್ವರ ಏಕೋತ್ತರಶತಸ್ಥಲ ಟೀಕೆಗಳು ಇಲ್ಲಿ ಬೆಳಕು ಕಾಣುತ್ತಲಿವೆ. ಚರಿತ್ರೆಯ ಆಕರ ಸಂಪುಟ, ಮೂಡಬಿದರೆ ಬಸ್ತಿಗಳಲ್ಲಿರುವ ಬಿಂಬಗಳ ಲೆಕ್ಕಪುಸ್ತಕಗಳು ದಾಖಲು ಸಾಹಿತ್ಯವರ್ಗಕ್ಕೆ ಸೇರುತ್ತವೆ. ಅಂಜನಾಚರಿತೆ, ಮುನಿವಂಶಾಭ್ಯುದಯ, ಜೈನಸಾಹಿತ್ಯವಾಗಿದ್ದು, ಚಂದಯ್ಯೋಪಾಧ್ಯಾಯನ ಸಮಗ್ರ ಸಾಹಿತ್ಯ ಸಂಪುಟವೂ ಇದರ ಭಾಗವಾಗಿದೆ. ಭೈರವೇಶ್ವರ ಪುರಾಣ, ದೇವರ ದಾಸಿಮಯ್ಯನವರ ಪುರಾಣ ಪ್ರಸಿದ್ಧ ಶಿವಶರಣರ ಇತಿಹಾಸ ತಿಳಿಸುತ್ತವೆ. ಗ್ರಂಥಸ್ಥ ಲಾವಣಿ ಸಂಪುಟವು ಹಳೆಯ ಜಾನಪದ ಬಂಧಗಳನ್ನೊಳಗೊಂಡಿದೆ. ಸ್ವರವಚನ ತರಂಗಿಣಿ, ಈವರೆಗೆ ಉಪೇಕ್ಷಿಸಲ್ಪಟ್ಟ ಗೀತಸಾಹಿತ್ಯಕ್ಕೆ ಸಂಬಂಧಿಸಿದೆ. ಶಿಲ್ಪಶಾಸ್ತ್ರ ಮತ್ತು ರಸಮಂಜರಿ ಶಾಸ್ತ್ರಕೃತಿಗಳಾಗಿವೆ. ಕಲ್ಪನಾ ರತ್ನಮ್ ಸಂಸ್ಕೃತಭಾಷೆಯದಾಗಿದ್ದರೂ ಪ್ರಸಿದ್ಧ ಗಂಗ ಅರಸು ಶಿವಮಾರನದೆಂಬ ಕಾರಣದಿಂದ, ಇದನ್ನು ಕನ್ನಡ ವಿವರಣೆಯೊಂದಿಗೆ ಪ್ರಕಟಿಸುತ್ತಿದ್ದೇವೆ. ಹೀಗೆ ಈ ಕೃತಿಗಳ ಪ್ರಕಟಣೆಯ ಹಿಂದೆ ಒಂದು ನಿರ್ದಿಷ್ಟ ಉದ್ದೇಶವಿರುವುದನ್ನು ಗಮನಿಸಬಹುದಾಗಿದೆ. ಒಟ್ಟಾರೆ ಈ ಯೋಜನೆ ಸಾಹಿತ್ಯಕೃತಿಗಳನ್ನಲ್ಲದೆ ದಾಖಲು ಸಾಹಿತ್ಯಕೃತಿಗಳನ್ನೂ ಅಳವಡಿಸಿಕೊಳ್ಳುವ ಮೂಲಕ 'ಪತ್ರಾಗಾರ ಇಲಾಖೆ' ಹೆಸರಿಗೆ ನ್ಯಾಯ ಒದಗಿಸಿದೆ.

ನಮ್ಮ ಹಸ್ತಪ್ರತಿ ಸಂಪತ್ತು ತುಂಬ ದೊಡ್ಡದು. ಇದರಲ್ಲಿ ಅಪ್ರಕಟಿತ ಕೃತಿಗಳ ಸಂಖ್ಯೆಯೂ ಗಣನೀಯವೆನಿಸಿದೆ. ಆದುದರಿಂದ ಈ ಯೋಜನೆ ಈ ವರ್ಷಕ್ಕೇ ನಿಲ್ಲಬಾರದು, ಮುಂದುವರಿಯಬೇಕು. ಹೀಗೆ ಬಿಡಿ ಬಿಡಿ ಕೃತಿಗಳನ್ನಲ್ಲದೆ ಅಪ್ರಕಟಿತ ಸ್ಥಳಪುರಾಣಗಳು, ತತ್ವಪದಗಳು, ಟೀಕಾಕೃತಿಗಳು, ಲೌಕಿಕ ಶಾಸ್ತ್ರಗ್ರಂಥಗಳು– ಇತ್ಯಾದಿ ಒಳಯೋಜನೆ ರೂಪಿಸಿಕೊಳ್ಳಲೂ ಇಲ್ಲಿ ಅವಕಾಶವಿದೆ. ಹೆಚ್ಚಿನದಾಗಿ ಪತ್ರಾಗಾರ ಇಲಾಖೆಗೆ ಸಂಬಂಧಪಟ್ಟಂತೆ ಪ್ರತಿಯೊಂದು ಸಂಸ್ಥಾನದ, ಪ್ರತಿಯೊಬ್ಬ ಗಣ್ಯವ್ಯಕ್ತಿಯ ಕಾಗದ–ಪತ್ರ ಸಂಪುಟಗಳನ್ನೂ ಪ್ರಕಟಿಸಬಹುದಾಗಿದೆ. ಎಲ್ಲ ಹಸ್ತಪ್ರತಿಗಳ ಸೂಚಿಗಳನ್ನು, ಸೂಚಿಗಳ ಸೂಚಿಗಳನ್ನೂ ಯೋಜನಾ ಬದ್ಧವಾಗಿ ಬೆಳಕಿಗೆ ತರಬಹುದಾಗಿದೆ. ಆದುದರಿಂದ ಸರಕಾರ ಈ ಯೋಜನೆಗಾಗಿ ಪ್ರತಿವರ್ಷ ಹಣ ತೆಗೆದಿಡುವುದು ಅವಶ್ಯವಿದೆ.

ಈ ಬೃಹತ್ ಯೋಜನೆ ಒಬ್ಬರಿಂದ ಮುಗಿಯುವಂಥದ್ದಲ್ಲ. ಅನೇಕ ಜನ ಪರಿಣಿತರ, ಅದರಲ್ಲಿಯೂ ಹಸ್ತಪ್ರತಿ ಅಧ್ಯಯನಶೀಲರ ನೆರವನ್ನು ಬಯಸುತ್ತದೆ. ಶ್ರಮವಂತೂ ಅವಶ್ಯಬೇಕು. ಹಣ-ಕೀರ್ತಿಗಳಿಗೆ ಎರವಾಗಿರುವ ಈ ಕ್ಷೇತ್ರ ಸಹಜವಾಗಿಯೇ ಅನಾಕರ್ಷಕವಾದುದು. ಹೀಗಿದ್ದೂ, ಸಂಸ್ಕೃತಿಯ ಮೇಲಿನ ಪ್ರೀತಿ ಕಾರಣವಾಗಿ ವಿದ್ವಾಂಸರು ಈ ಕೆಲಸಕ್ಕೆ ಮುಂದುಬರಬೇಕಾಗುತ್ತದೆ. ಪ್ರಸ್ತುತ ಯೋಜನೆ ಈ ದೃಷ್ಟಿಯಿಂದ ಸುದೈವಿಯೆಂದೇ ಹೇಳಬೇಕು. ಏಕೆಂದರೆ, ಆರಂಭವಾಗುತ್ತಲೇ ಎಲ್ಲ ವಿದ್ವಾಂಸರು ಇದರಲ್ಲಿ ತೊಡಗಿಸಿಕೊಳ್ಳಲು ಉತ್ಸಾಹದಿಂದ ಮುಂದೆ ಬಂದರು. ಇವರೆಲ್ಲರಿಗೆ ಕೃತಜ್ಞ.

ಸಂಪಾದಕ ಮಂಡಳಿಯ ಸದಸ್ಯರು ತೀವ್ರ ಆಸಕ್ತಿವಹಿಸಿ, ಸಲಹೆ ಸೂಚನೆ ನೀಡಿ, ಈ ಯೋಜನೆಯ ಬುನಾದಿ-ಕಟ್ಟಡಗಳ ವಿನ್ಯಾಸದಲ್ಲಿ ನೆರವಾಗಿದ್ದಾರೆ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಉಷಾ ಸುರೇಶ ಅವರು ಈ ಬಗ್ಗೆ ತೋರಿದ ಆಸಕ್ತಿ ಅನನ್ಯ. ಈ ಇಲಾಖೆಯ ಶ್ರೀ.ಟಿ.ಇ.ಮಲ್ಲಿಕಾರ್ಜುನಪ್ಪ ಮೊದಲಾದ ಸಿಬ್ಬಂದಿ ವರ್ಗದವರ ನೆರವು ಸ್ಮರಣೀಯ. ಇವರೆಲ್ಲರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಆಕರ : ಮಾರ್ಗ ಸಂಪುಟ-೭

■■

೩೪೯

ಅಪ್ರಕಟಿತ ಪ್ರಾಚೀನ ದಾಖಲೆ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರ ಮಾತು
೨೦೧೧

ಕರ್ನಾಟಕ ಏಕೀಕರಣದ 'ಸುವರ್ಣವರ್ಷ' ಸಂದರ್ಭದಲ್ಲಿ ರಾಜ್ಯ ಪತ್ರಾಗಾರ ಇಲಾಖೆ "ಪ್ರಾಚೀನ ಅಪ್ರಕಟಿತ ಸಾಹಿತ್ಯ ಪ್ರಕಟನ ಯೋಜನೆಯ ಅಡಿಯಲ್ಲಿ ೨೫ ಪುಸ್ತಕಗಳನ್ನು ಪ್ರಕಟಿಸಿತು. ಇದರ ಮುಂದುವರಿಕೆಯೆಂಬಂತೆ ಈ ವರ್ಷ ಪ್ರಸ್ತುತ ೨೬ ಪುಸ್ತಕಗಳನ್ನು ಪ್ರಕಟಿಸುತ್ತಿದೆ.

ಪ್ರಾಚೀನ ಸಾಹಿತ್ಯ ಮತ್ತು ದಾಖಲೆಗಳು ನಮ್ಮ ಪರಂಪರೆಯ ಅಪೂರ್ವ ಆಕರ ಸಾಮಗ್ರಿಯೆನಿಸಿವೆ. ಕಳೆದ ೧೫೦ ವರ್ಷಗಳಿಂದ ಇವುಗಳ ಶೋಧ-ಪರಿಷ್ಕರಣ-ಪ್ರಕಟನ ಕಾರ್ಯವನ್ನು ವಿದ್ವಾಂಸರು ಮುನ್ನಡೆಸಿಕೊಂಡು ಬಂದಿದ್ದಾರೆ. ಸಾಮಾನ್ಯವಾಗಿ ಇವರೆಲ್ಲ ಸಾಹಿತ್ಯಿಕ ಮೌಲ್ಯದ ಮತ್ತು ಮಾರ್ಗೀಯ ಪರಂಪರೆಯ ಕವಿ ಕೃತಿಗಳತ್ತ ಹೆಚ್ಚು ಗಮನ ಹರಿಸಿದರು. ಹೀಗಾಗಿ ಸಾಹಿತ್ಯೇತರ ಮೌಲ್ಯದ

ಮತ್ತು ಪ್ರಾದೇಶಿಕ ಪರಂಪರೆಯ ಕವಿ ಕೃತಿಗಳು ಉಪೇಕ್ಷೆಗೆ ಒಳಗಾದವು. ಇಂಥ ಸಾಹಿತ್ಯ ಪ್ರಕಟನೆಯ ಮಹತ್ವವನ್ನು ಅರ್ಥಮಾಡಿಕೊಂಡು ರಾಜ್ಯ ಪತ್ರಾಗಾರ ನಿರ್ದೇಶನಾಲಯ ಪ್ರಸ್ತುತ ಯೋಜನೆಯನ್ನು ಮುಂದುವರಿಸಿದೆ.

ಕಳೆದ ವರ್ಷ ಮೈಸೂರು ಒಡೆಯರ ಆಕರ ಸಾಹಿತ್ಯ ಚಿತ್ರದುರ್ಗ ಪಾಳೆಯಗಾರರ ದಾಖಲೆಗಳು, ಚರಿತ್ರೆಯ ಆಕರ ಸಂಪುಟ, ಮೂಡಬಿದರೆ ಬಸದಿಗಳಲ್ಲಿರುವ ಬಿಂಬಗಳ ಲೆಕ್ಕ ಪುಸ್ತಕ ಹೆಸರಿನ ಶುದ್ಧ ಚರಿತ್ರೆಗಳನ್ನೂ ಚಂದಯ್ಯೋಪಾಧ್ಯಾಯನ ಸಮಗ್ರ ಸಾಹಿತ್ಯ ಸಂಪುಟ, ಶರಣ ಮೋನಪ್ಪಯ್ಯನ ಚಾರಿತ್ರ, ನುಂಕೆಮಲೆ ಸಿದ್ಧೇಶ್ವರ ಪುರಾಣ, ಬೊಮ್ಮಲಿಂಗದೇವರ ಕಾವ್ಯ, ಗುಂಡಬಸವೇಶ್ವರ ಚರಿತ್ರೆ, ಕಂಚಿಪುರಾಣ ಹೆಸರಿನ ಪ್ರಾದೇಶಿಕ ಸ್ಥಳ ಪುರಾಣಗಳನ್ನೂ, ಗ್ರಂಥಸ್ಥ ಲಾವಣಿಯಂಥ ಜನಪದ ಸಾಹಿತ್ಯ ಕೃತಿಯನ್ನೂ, ಸ್ವರವಚನತರಂಗಿಣಿ, ದಾಸರಾಯರ ಪದಗಳು ಹೆಸರಿನ ವಚನ-ಕೀರ್ತನ ಸಾಹಿತ್ಯವನ್ನೂ ಸ್ವರ ಏಕೋತ್ತರಶತಸ್ಥಲಟೀಕೆ, ವಾತುಲಶುದ್ಧಾಗಮ ಟೀಕಾ, ಜಕ್ಕಣಾರ್ಯವಿರಚಿತ ಏಕೋತ್ತರಶತಸ್ಥಲೀಯಯಂತಹ ಟೀಕಾ ಗ್ರಂಥಗಳನ್ನೂ ಗೃಹ ವಾಸ್ತು ಮತ್ತು ಶಿಲ್ಪಶಾಸ್ತ್ರ, ಕಲ್ಪನಾರತ್ನಂ, ರಸಮಂಜರಿಯಂಥ ಶಾಸ್ತ್ರ ಕೃತಿಗಳನ್ನು, ಬೇತಾಳ ಪಂಚವಿಂಶತಿ, ಬೊಮ್ಮಲಿಂಗದೇವರ ಕಾವ್ಯ, ಭೈರವೇಶ್ವರ ಪುರಾಣ, ರಾಮನಾಥ ವಿಲಾಸಂ, ಅಂಜನಾ ಚರಿತೆ, ದೇವರದಾಸಿಮಯ್ಯನವರ ಪುರಾಣ ಹೆಸರಿನ ಪೌರಾಣಿಕ, ಐತಿಹಾಸಿಕ ಕೃತಿಗಳನ್ನೂ ಪ್ರಕಟಿಸಿದ ನಾವು ಈ ವರ್ಷ ಇದೇ ಮಾದರಿಯ ಗ್ರಂಥಗಳನ್ನು, ಅದರಲ್ಲಿಯೂ ವಿಶೇಷವೆಂಬಂತೆ ಐತಿಹಾಸಿಕ-ಸಾಹಿತ್ಯ ಕೃತಿ ಮತ್ತು ದಾಖಲು ಸಾಹಿತ್ಯ ಕೃತಿಗಳನ್ನು ಹೊರತರುತ್ತಲಿದ್ದೇವೆ.

ಇವುಗಳಲ್ಲಿ ಚಾರಿತ್ರಿಕ ಕಾವ್ಯ, ಚಾರಿತ್ರಿಕ ದಾಖಲೆ, ಶಾಸ್ತ್ರ, ಕೋಲುಪದ, ಹೋಳಿಪದ, ಧವಳದ ಹಾಡು, ಕೀರ್ತನೆ ಇತ್ಯಾದಿ ಕೃತಿಗಳಿವೆ. ಹೊನ್ನಕವಿಯ ಸಮಗ್ರ ಸಾಹಿತ್ಯ, ಚಂದ್ರಸಾಗರವರ್ಣಿಯ ಸಾಹಿತ್ಯ ಸಂಪುಟದಂಥ ಸಂಕಲನಗಳಿವೆ. ಪ್ರಾಚೀನ ಪದ್ಯ ಸಂಕಲನ (ವೆಂಕ)ದಂತ ಪದ್ಯ ಸಂಗ್ರಹ ಕೃತಿಯಿದೆ. ವಿಶ್ವಕರ್ಮ ಸಮಾಜದ ವಿಶ್ವಕರ್ಮಪುರಾಣ, ಜೈನ ಸಮಾಜದ ಭವ್ಯಜನ ಚಿಂತಾಮಣಿ, ಲಿಂಗಾಯತ ಸಮಾಜದ ಸಕಲೇಶ ಮಾದರಸ, ವಜ್ರಬಾಹು, ಶಿವಲಿಂಗ, ಅಮರೇಶ, ಗಾಜುಲು ಬೊಮ್ಮಯ್ಯರನ್ನು ಕುರಿತ ಕೃತಿಗಳಿವೆ. ಮೈಸೂರು ಒಡೆಯರು, ಕೆಳದಿ ಅರಸರು, ಕದಿರೆ ರಾಯರು, ವೇಣುಪುರದ ಅರಸರು, ಬಿಳಗಿಲ ಅರಸರು, ಬಾಗುಳಿ ಅರಸರು, ಕೆಂಪೇಗೌಡರು ಮೊದಲಾದವರ ಚರಿತ್ರೆಗಳೂ ಇಲ್ಲಿ ಇಂಬು ಪಡೆದಿವೆ. ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಕುರಿತು ಸಿ.ಕೆ.ವೆಂಕಟರಾಮಯ್ಯನವರು ಬರೆದ ಆಳಿದ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ ಕೃತಿಯ ಪರಿಷ್ಕೃತ ಕೃತಿಯೂ ಇಲ್ಲಿದೆ. ಸಂಗೀತ ಶಾಸ್ತ್ರ, ವೈದ್ಯಶಾಸ್ತ್ರ ಕೃತಿಗಳಿಗೆ ಇಲ್ಲಿ ಅವಕಾಶ ಕೊಡಲಾಗಿದೆ. ಹೀಗೆ ವೈವಿಧ್ಯಪೂರ್ಣ ಪ್ರಕಾರಗಳನ್ನೊಳಗೊಂಡ ಸಾಹಿತ್ಯ ರಾಶಿಯ ಈ ಎರಡನೆಯ ಕಂತು ಈಗ ಹೊರಬರುತ್ತಲಿದೆ. ಈ ಕೃತಿಗಳು ನಮ್ಮ ಸಂಸ್ಕೃತಿಯ ಪುನರ‍್ರಚನೆ-ವಿಸ್ತರಣೆಗಳಿಗೆ ನೆರವಾಗುವ ಸಾಧ್ಯತೆಯಿದೆ.

ಈ ಮಾದರಿಯನ್ನು ಮುಂದುವರೆಸಿ ಜಗದೇವರಾಯನ ಕಾವ್ಯ, ರಾಜನೃಪ ಚರಿತ್ರೆ, ಸೊಣ್ಣ ಭೈರೇಗೌಡನ ಕಾವ್ಯ, ಹೂಲಿಕಲ್ಲ ಸಂಸ್ಥಾನ ಚರಿತ್ರೆ, ಹೊನ್ನಾವರದ ಹೊನ್ನೇಗೌಡರ ವಂಶಾವಳಿ, ಹೊಯ್ಸಳರಾಜರ ಚರಿತ್ರೆ ಇತ್ಯಾದಿ ಕೃತಿಗಳನ್ನು ಶೋಧಿಸಿ ಪ್ರಕಟಿಸುವುದರತ್ತ ಪತ್ರಾಗಾರ ಇಲಾಖೆ ಗಮನಕೊಡುವುದೆಂದು ಆಶಿಸುತ್ತೇನೆ.

ಇಂಥ ಯೋಜನೆಯ ಯಶಸ್ಸಿಗೆ ಇಲಾಖೆಯ ಅಧಿಕಾರಿಗಳ, ಸಲಹಾ ಸಮಿತಿಯ, ಸಂಪಾದಕರ ಸಹಾಯ–ಸಲಹೆ–ಶ್ರಮ ಅತ್ಯವಶ್ಯ. ಇದೆಲ್ಲವನ್ನು ಪಡೆದ ಭಾಗ್ಯ ನನ್ನದಾಗಿದ್ದು, ಇವರೆಲ್ಲರಿಗೂ ಕೃತಜ್ಞನಾಗಿದ್ದೇನೆ. ಕಾರ್ಯದರ್ಶಿಗಳಾದ ಶ್ರೀ ರಮೇಶ ಝುಳಕಿ ಅವರಿಗೂ, ಇಲಾಖೆಯ ನಿರ್ದೇಶಕರಾದ ಶ್ರೀ ಕಂಚಿ ವರದಯ್ಯ ಅವರಿಗೂ, ಉಪನಿರ್ದೇಕರಾದ ಶ್ರೀ ಟಿ.ಇ. ಮಲ್ಲಿಕಾರ್ಜುನಪ್ಪ ಅವರಿಗೂ ಮಿಕ್ಕ ಸಿಬ್ಬಂದಿ ವರ್ಗಕ್ಕೂ ಕೃತಜ್ಞತೆಗಳು.

ಆಕರ : ಮಾರ್ಗ ಸಂಪುಟ–೭

■■

೩೫೦

ಸ.ಸ. ಮಾಳವಾಡ ಜನ್ಮಶತಮಾನೋತ್ಸವ ಆವೃತ್ತಿ : ದಾರಿಸಾಗಿದೆ

೨೦೧೧

ಆಧುನಿಕ ಕರ್ನಾಟಕದ ಸಾಹಿತ್ಯ–ಸಂಸ್ಕೃತಿಗಳ ಇತಿಹಾಸದಲ್ಲಿ ಪ್ರೊ. ಸ.ಸ. ಮಾಳವಾಡ ಅವರದು ಸುಪ್ರಸಿದ್ಧ ಹೆಸರು. ದಕ್ಷಿಣೋತ್ತರ ಕರ್ನಾಟಕದ ಸಾಂಸ್ಕೃತಿಕ ಸೇತುವೆಯಾಗಿ, ಧಾರವಾಡ ನಗರಕ್ಕೆ ಸಾಂಸ್ಕೃತಿಕ ರಾಜಧಾನಿ ವರ್ಚಸ್ಸು ತಂದುಕೊಟ್ಟ ಮುಖ್ಯರಲ್ಲಿ ಒಬ್ಬರಾಗಿ, ಅವರು ದುಡಿದ ರೀತಿ ಚರಿತ್ರಾರ್ಹವೆನಿಸಿದೆ.

ಪ್ರೊ. ಮಾಳವಾಡರು ನವೋದಯ ಕಾಲಘಟ್ಟದ ಕನ್ನಡ ಪ್ರಾಧ್ಯಾಪಕರು. ವ್ಯಕ್ತಿತ್ವದ ಸಾಮಾಜೀಕರಣ ಈ ಸಂದರ್ಭದ ಗಣ್ಯರ ಗುರಿಯಾಗಿದ್ದಿತು. ಹೀಗಾಗಿ ಮೂಲತಃ ಶಿಕ್ಷಕರಾಗಿದ್ದ ಇವರು ಶಿಕ್ಷಣತಜ್ಞರಾಗಿ, ಸಾಹಿತಿಯಾಗಿ, ಸಾಂಸ್ಕೃತಿಕ ವ್ಯಕ್ತಿಯಾಗಿ ತಮ್ಮನ್ನು ವಿಸ್ತರಿಸಿಕೊಳ್ಳುತ್ತಲೇ ಹೋದರು. ಕರ್ನಾಟಕಕ್ಕೆ ಸೀಮಿತರಾಗದೆ, ಕೇಂದ್ರ ಸಾಹಿತ್ಯ ಅಕಾಡೆಮಿ–ಪ್ರಾಚ್ಯವಿದ್ಯಾ ಸಮ್ಮೇಳನಗಳ ಸದಸ್ಯರಾಗಿ ಭಾರತ ವ್ಯಾಪ್ತಿಯಲ್ಲಿ ನಮ್ಮ ನಾಡನ್ನು ಪ್ರತಿನಿಧಿಸಿದರು. ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ, ಧಾರವಾಡ ಆಕಾಶವಾಣಿ ಅಸ್ತಿತ್ವ, ನಾಡಹಬ್ಬ ಆಚರಣೆಗಳಂಥ ಐತಿಹಾಸಿಕ ಘಟನೆಗಳಲ್ಲಿ ಭಾಗಿಯಾದರು. ಉತ್ತರ ಕರ್ನಾಟಕದಲ್ಲಿ ಕನ್ನಡ ಶಿಕ್ಷಣ ಪರಂಪರೆಯ ನಿರ್ಮಾಪಕ, ಮರಾಠಿ ಭಾಷೆಯ ದಬ್ಬಾಳಿಕೆಯನ್ನು ದುರ್ಬಲಗೊಳಿಸಿದ ಕನ್ನಡ ಪರಿಚಾರಕರೆಂದು ಖ್ಯಾತರಾದರು.

ಈ ರೀತಿ ಬಹುಮುಖಿ ಕ್ರಿಯಾಶೀಲರಾಗಿದ್ದ ಕಾರಣ, ಅವರು ಬರೆದ 'ದಾರಿ ಸಾಗಿದೆ' ಹೆಸರಿನ ಆತ್ಮಕಥೆ ಕೇವಲ ವ್ಯಕ್ತಿಚರಿತ್ರೆಯಾಗಿ ಉಳಿಯದೆ, ಒಂದು ಕಾಲಘಟ್ಟದ ಸಾಂಸ್ಕೃತಿಕ ಮಾಹಿತಿಕೋಶವಾಗಿ ಬೆಳೆದಿದೆ. ನಿರ್ದಿಷ್ಟ ಅಂತರದಲ್ಲಿ ನಿಂತು ತಮ್ಮ ಪರಿಸರವನ್ನು, ತಮ್ಮನ್ನು ಕುರಿತು ಆಪ್ತಗದ್ಯಶೈಲಿಯಲ್ಲಿ ಬರೆದ ಕಾರಣ, ಇದು ಚರಿತ್ರೆಗೆ ಚರಿತ್ರೆ, ಸಾಹಿತ್ಯಕ್ಕೆ ಸಾಹಿತ್ಯದ ಆಕಾರ ಪಡೆದು, ಕನ್ನಡದ ಒಂದು ಮಹತ್ವಪೂರ್ಣ ಆತ್ಮಚರಿತ್ರೆಯೆಂಬ ಕೀರ್ತಿ ಗಳಿಸಿದೆ.

ಸ್ವಾಭಿಮಾನ-ಶಿಸ್ತು ಮಾಳವಾಡ ಅವರ ವ್ಯಕ್ತಿತ್ವದ ತಾಯಿ ಬೇರು. 'ನ್ಯಾಯ, ನಿಷ್ಠುರಿ, ದಾಕ್ಷಿಣ್ಯಪರ ನಾನಲ್ಲ' ಎಂಬ ಸೂತ್ರಕ್ಕೆ ಅವರ ವ್ಯಕ್ತಿತ್ವ ವ್ಯಾಖ್ಯಾನವಾಗಿದ್ದಿತು. ಇಂಥ ಕಾರ್ಯ ವೈವಿಧ್ಯ, ಇಂಥ ವ್ಯಕ್ತಿತ್ವದಿಂದಾಗಿ ಆ ಕಾಲದ ಕನ್ನಡ ಪ್ರಾಧ್ಯಾಪಕರೆಲ್ಲಿಯೇ ಮಾಳವಾಡ ಅವರು ವಿಶಿಷ್ಟವೆನಿಸಿದ್ದರು. ಬೋಧನೆಯಿಂದ ಬರೆಹಕ್ಕೂ ವಿಸ್ತರಿಸಿಕೊಂಡು, ಸಾಹಿತ್ಯಕೃತಿಯನ್ನು ಮಾತ್ರವಲ್ಲ ಸಾಹಿತ್ಯಪಥವನ್ನೂ ಕನ್ನಡದಲ್ಲಿ ನಿರ್ಮಿಸಿದರು.

೨೦೧೦ ಪ್ರೊ. ಮಾಳವಾಡ ಅವರ ಜನ್ಮ ಶತಮಾನವರ್ಷ. ಈ ಸಂದರ್ಭದಲ್ಲಿ ಧಾರವಾಡ, ವಿಜಾಪುರ ಮೊದಲಾದ ನಗರಗಳಲ್ಲಿ ಅವರ ಜನ್ಮಶತಮಾನ ಸಮಾರಂಭ ಜರುಗಿದವು. ಈ ಶತಮಾನ ಸ್ಮರಣೆಗೆ ಶಾಶ್ವತರೂಪ ಕೊಡುವ ಉದ್ದೇಶದಿಂದ ಅವರ ಆತ್ಮಕಥೆ 'ದಾರಿ ಸಾಗಿದೆ' ಕೃತಿಯ ದ್ವಿತೀಯ ಆವೃತ್ತಿ ಈಗ ಪ್ರಕಟವಾಗುತ್ತಲಿದೆ. ಈ ಕೃತಿಯ ಮೊದಲ ಭಾಗದಲ್ಲಿ ಉಪಶೀರ್ಷಿಕೆಗಳನ್ನು ಹೊಸತಾಗಿ ಕಲ್ಪಿಸಿದುದು, ಕೊನೆಯಲ್ಲಿ ಜೀವನಪಥ ಹೆಸರಿನ ಅನುಬಂಧ ಜೋಡಿಸಿದುದನ್ನು ಬಿಟ್ಟರೆ ಮೂಲರೂಪದಲ್ಲಿಯೇ ಈ ಆವೃತ್ತಿ ಬೆಳಕು ಕಾಣುತ್ತಲಿದೆ.

"ಸ.ಸ.ಮಾಳವಾಡ ಜನ್ಮ ಶತಮಾನೋತ್ಸವ ಸಮಿತಿ" ಸದಸ್ಯರ ಮಾರ್ಗದರ್ಶನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಧನಸಹಾಯ ಕಾರಣವಾಗಿ ಈ ಕೃತಿ ಪ್ರಕಟವಾಗುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಕಾರ್ಯದರ್ಶಿ ಶ್ರೀ ಬಿ.ಆರ್. ಜಯರಾಮರಾಜೇ ಅರಸ್, ಇಂದಿನ ಕಾರ್ಯದರ್ಶಿ ಶ್ರೀ ರಮೇಶ ಝಳಕಿ ಅವರಿಗೂ, ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಮನು ಬಳಿಗಾರ ಅವರಿಗೂ ಧನ್ಯವಾದಗಳು. ಸ.ಸ. ಮಾಳವಾಡ ಜನ್ಮಶತಮಾನೋತ್ಸವ ಸಮಿತಿಯ ಸದಸ್ಯರಿಗೂ ಈ ಕೃತಿಯ ಮೊದಲ ಆವೃತ್ತಿಯನ್ನು ಪ್ರಕಟಿಸಿದ ಬೆಂಗಳೂರಿನ ಸ್ನೇಹಾ ಪ್ರಕಾಶನದ ಡಾ. ಎಸ್. ವಿದ್ಯಾಶಂಕರ ಅವರಿಗೂ ಕೃತಜ್ಞತೆಗಳು.

ಆಕರ : ಮಾರ್ಗ ಸಂಪುಟ-೭

■■

೩೫೧

ಕಾದಂಬರಿಕಾರನ ಕಥೆ

ಅಧ್ಯಕ್ಷರ ಮಾತು
೨೦೧೨

ಸಾಹಿತಿಗಳಲ್ಲಿ ಸ್ಥೂಲವಾಗಿ ಎರಡು ವರ್ಗ: ಸಮಾಜದ ಅನುಭವದಿಂದ ಸಾಹಿತ್ಯ ಬರೆಯುವವರು, ಸಾಹಿತ್ಯದ ಅಭ್ಯಾಸದಿಂದ ಸಾಹಿತ್ಯ ಬರೆಯುವವರು. ಇವರೊಳಗೆ ಮೊದಲನೆಯ

ವರ್ಗದವರಲ್ಲಿ ಕಲಾತ್ಮಕತೆಗಿಂತ ಲೋಕಾನುಭವ ಅಧಿಕ, ಎರಡನೆಯ ವರ್ಗದವರಲ್ಲಿ ಲೋಕಾನುವಕ್ಕಿಂತ ಕಲಾತ್ಮಕತೆ ಅಧಿಕ. ಬೇರೆ ಮಾತಿನಲ್ಲಿ ಹೇಳುವುದಾದರೆ ಒಬ್ಬರ ಸೃಷ್ಟಿ ಅರಣ್ಯ, ಇನ್ನೊಬ್ಬರ ಸೃಷ್ಟಿ ಉದ್ಯಾನ. ಬಸವರಾಜ ಕಟ್ಟೀಮನಿಯವರ ಸಾಹಿತ್ಯ ಇವುಗಳಲ್ಲಿ ಒಂದನೆಯ ವರ್ಗಕ್ಕೆ ಸೇರುತ್ತದೆ. ಈ ನಿಲವಿನ ಅವರು ಕಥೆಗಾರರಾಗಿ ಪ್ರಸಿದ್ಧರು, ಕಾದಂಬರಿಕಾರರಾಗಿ ಇನ್ನೂ ಪ್ರಸಿದ್ಧರು. ಈ ಕಾರಣಕ್ಕಾಗಿಯೇ ಅವರು ತಮ್ಮ ಈ ಕೃತಿಗೆ 'ಕಥೆಗಾರನ ಕಥೆ'ಗೆ ಬದಲು 'ಕಾದಂಬರಿಕಾರನ ಕಥೆ' ಎಂದು ಹೆಸರಿಟ್ಟಿದ್ದಾರೆ.

ಕನ್ನಡದಲ್ಲಿ ಆತ್ಮಕಥೆ ಒಂದು ಗಣ್ಯಸಾಹಿತ್ಯ ಪ್ರಕಾರವಾಗಿ ಬೆಳೆದು ಬರುತ್ತಲಿದೆ. ವ್ಯಕ್ತಿಯೊಬ್ಬ ತನ್ನ ಜೀವನವನ್ನು ವಸ್ತುವಾಗಿಟ್ಟುಕೊಂಡು ಬರೆದ ಪ್ರಕಾರವಿದು. ಕೆಲವೊಮ್ಮೆ ಆತ್ಮಕಥೆಯನ್ನು ಆತ್ಮಚರಿತ್ರೆ ಎಂದು ಕರೆಯುತ್ತಿದ್ದರೂ ಆತ್ಮಕಥೆ ಎನ್ನುವುದೇ ಸರಿಯೆನಿಸುತ್ತದೆ. ಏಕೆಂದರೆ ಒಂದು ಘಟನೆ ಇತಿಹಾಸದಲ್ಲಿ 'ಚರಿತ್ರೆ' ಯಾದರೆ ಸಾಹಿತ್ಯದಲ್ಲಿ 'ಕಥೆ' ಯಾಗುತ್ತದೆ. ಅಂದರೆ ಚರಿತ್ರೆಯೇ ಕಲಾತ್ಮಕತೆ ಕಾರಣವಾಗಿ ಕಥೆಯ ರೂಪ ಪಡೆಯುತ್ತದೆ. ಆದುದರಿಂದ ದಾಖಲು ರೂಪದ ಚರಿತ್ರೆ, ಕಲ್ಪನಾ ವಿಕಾಸದ ಕಾದಂಬರಿಗಳ ನಡುವೆ ನಿಲ್ಲುವ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ, ಆತ್ಮಕಥೆ.

ಕಟ್ಟೀಮನಿಯವರು ಕಾದಂಬರಿಗಳನ್ನೂ ಆತ್ಮಕಥೆಯನ್ನೂ ಬರೆದಿದ್ದಾರೆ. ಸಾಮಾನ್ಯವಾಗಿ ಈ ಎರಡೂ ಪ್ರಕಾರಗಳಲ್ಲಿ ಪರಿಣಾಮ ದೃಷ್ಟಿಯಿಂದ ಆತ್ಮಕಥೆಯೇ ಶ್ರೇಷ್ಠವೆಂದು ಹೇಳಬಹುದು. ಏಕೆಂದರೆ ಕಾದಂಬರಿ ಕಲ್ಪಿತ, ಆತ್ಮಕಥೆ ಘಟಿತ. ಕಲ್ಪಿಸಿದುದಕ್ಕಿಂತ ಘಟಿಸಿದುದು ಸಹಜವಾಗಿಯೇ ಸಹೃದಯನಿಗೆ ಹೆಚ್ಚು ಆಪ್ತವೆನಿಸುತ್ತದೆ; ಹುರಿದುಂಬಿಸುತ್ತದೆ. ಹೀಗಾಗಿ ನಮ್ಮ ಯುವಕರಿಗೆ ಕಟ್ಟೀಮನಿಯವರ ಹೋರಾಟದ ಘಟನೆಗಳು ಪ್ರೇರಣೆ ನೀಡಲೆಂಬ ಉದ್ದೇಶದಿಂದ 'ಕಾದಂಬರಿಕಾರನ ಕಥೆ'ಯನ್ನು ಟ್ರಸ್ಟ್ ಮೂಲಕ ಪ್ರಥಮ ಪ್ರಕಟನೆಯಾಗಿ ಕೈಗೆತ್ತಿಕೊಂಡಿದ್ದೇವೆ.

೧೯೧೯ರಿಂದ ೧೯೮೯ರ ವರೆಗಿನ ೭೦ ವರ್ಷಗಳು ಕಟ್ಟೀಮನಿಯವರ ಜೀವನ ವ್ಯಾಪ್ತಿ. ಈ ಜೀವನವೇ ಈ ಕೃತಿಯ ವಸ್ತು. ಬಡವನಾಗಿ ಹುಟ್ಟಿ, ಬಡವನಾಗಿ ಬೆಳೆದು, ಬಡವನಾಗಿ ಮಡಿದ ಈ ಶ್ರೀಮಂತ ಸಾಹಿತಿ ನಮ್ಮನ್ನು ಅಗಲಿ ೨೨ ವರ್ಷದ ಬಳಿಕ, ಕರ್ನಾಟಕ ರಾಜ್ಯ ಸರಕಾರ ಬೆಳಗಾವಿಯಲ್ಲಿ 'ಬಸವರಾಜ ಕಟ್ಟೀಮನಿ ಟ್ರಸ್ಟ್' ಸ್ಥಾಪಿಸಿದೆ. ಇವರ ಸಾಹಿತ್ಯವನ್ನು ಓದುವುದಕ್ಕೆ ಮೊದಲು, ಅದಕ್ಕೆ ಹಿನ್ನೆಲೆಯ ಶ್ರುತಿಯಾಗಿ ಮಿಡಿದ ಜೀವನ ಕಥೆಯನ್ನು ಸಹೃದಯರು ಓದಲೆಂಬ, ಅಂಥ ಓದು ಇವರ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ನೆರವಾಗಲೆಂಬ ಉದ್ದೇಶದಿಂದ 'ಕಾದಂಬರಿಕಾರನ ಕಥೆ'ಯನ್ನು ಪ್ರಕಟಿಸುತ್ತಿದ್ದೇನೆ.

ಕಾವ್ಯಮೀಮಾಂಸೆಯಲ್ಲಿ ರಸ ಸಂಖ್ಯೆಯ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದರೂ ನಿಜ ಅರ್ಥದಲ್ಲಿ ರಸಸ್ಥಾನಗಳು ಎರಡೇ. ಒಂದು ನಲಿವು, ಇನ್ನೊಂದು ನೋವು. ಇವುಗಳಲ್ಲಿ ನೋವನ್ನು ಕುರಿತ ಸಾಹಿತ್ಯ ಹೆಚ್ಚು ಆಳವಾದ ಪರಿಣಾಮ ಬೀರುತ್ತದೆ. ಅದಕ್ಕಾಗಿಯೇ "Our Sweetest Songs are those that tell us saddest thoughts"ಎಂಬ ಹೇಳಿಕೆಯೊಂದು ಈಗಲೂ ಪ್ರಸಿದ್ಧಿಯಲ್ಲಿ ಉಳಿದಿದೆ. ಇದಕ್ಕೆ ಸಾಕ್ಷಿಯಾಗಿದೆ, ಕಾದಂಬರಿಕಾರನ ಕಥೆ'. ಆದಿಯಿಂದ ಅಂತ್ಯದ ವರೆಗೂ ಕೌಟುಂಬಿಕ ಬಡತನ, ಸಾಮಾಜಿಕ ಅನ್ಯಾಯ–ಈ ಎರಡರ ವಿರುದ್ಧ ಸಾಹಿತಿಯೊಬ್ಬ ನಡೆಸಿದ ಹೋರಾಟ, ಸಾಹಿತ್ಯದಲ್ಲಿ ಅದನ್ನು ಮೂಡಿಸಿದ ಬಗೆ ಇತ್ಯಾದಿಗಳಿಂದಾಗಿ ಇದು ಒಂದು

ಮಹಾಕಾದಂಬರಿಯಂತೆ ಬೆಳೆದಿದೆ. ಹೀಗಾಗಿ ಇದನ್ನು ಸ್ಥೂಲವಾಗಿ ಆತ್ಮಕಥಾ ಕಾದಂಬರಿ ಎನ್ನಬಹುದಾಗಿದೆ.

ಈ ಕೃತಿ ಆರಂಭವಾಗುವುದೇ ಬಡತನದ ಹಳ್ಳಿಯಿಂದ, ಬಡ ಪೋಲೀಸ್ ಕುಟುಂಬದ ಮನೆಯಿಂದ. ದುರ್ವ್ಯಸನದಲ್ಲಿ ಹೊರಳಾಡುತ್ತಲಿದ್ದ ಅಪ್ಪ, ದುಸ್ಥಿತಿಯ ವಿರುದ್ಧ ಹೋರಾಡುತ್ತಲಿದ್ದ ಅವ್ವ, ಹಸಿವು ಮತ್ತು ರೋಗಗಳಿಂದ ಸತ್ತು ಹುಟ್ಟುತ್ತಲಿದ್ದ ಪರಿವಾರ-ಇವುಗಳ ಮಧ್ಯ ಬಸವರಾಜ ಉದ್ಭವಿಸುತ್ತಾನೆ.

ಬಡತನ ಕಾರಣವಾಗಿ ಶಾಲೆಯನ್ನು ಅರ್ಧಕ್ಕೆ ನಿಲ್ಲಿಸಿ ೧೪ನೆಯ ವಯಸ್ಸಿಗೆ ದಿನಪತ್ರಿಕೆಯ ಕಾರ್ಯಾಲಯದಲ್ಲಿ ಕೂಲಿಯಾಗಿ ಸೇರಿ, ಒಂದರ ಬಳಿಕ ಒಂದರಂತೆ ಹತ್ತಾರು ಪತ್ರಿಕೆಗಳಿಗೆ ಬೆವರು ಬಸಿದು, ಕೊನೆಗೆ ೨೫ನೆಯ ವರ್ಷಕ್ಕೆ ಒಂದು ಸಾಹಿತ್ಯಪತ್ರಿಕೆಯ ಸಂಪಾದಕನಾದ, ಸ್ವಾತಂತ್ರ ಹೋರಾಟ-ಸೆರೆಮನೆವಾಸ ಅನುಭವಿಸಿದ ಸಾಹಸಗಾಥೆ ಇಲ್ಲಿಯ ಆರಂಭದ ಭಾಗದಲ್ಲಿದೆ.

೨೬ನೆಯ ವಯಸ್ಸಿಗೆ ಪತ್ರಿಕೆಯ ನಂಟು ಬಿಟ್ಟು, ಕಥೆ-ಕಾದಂಬರಿ ಬರೆವಣಿಗೆಗೆ ಹೊರಳಿದ ಕಟ್ಟೀಮನಿ ಮತ್ತೆ ಆ ಕಡೆ ಹೊರಳಿ ನೋಡದೆ ೪೨ ಕಾದಂಬರಿ, ೧೦ ಕಥಾ ಸಂಕಲನ ಇತ್ಯಾದಿ ೬೭ ಕೃತಿ ರಚಿಸಿದ ಇತಿಹಾಸ ಮುಂದಿನ ಭಾಗದಲ್ಲಿದೆ. ಈ ಕೃತಿಸಂಖ್ಯಾ ಬಾಹುಳ್ಯ ಅವರು ಸಹೃದಯರಲ್ಲಿ ವಾಚನಾಭಿರುಚಿ ಬೆಳೆಸಿದುದಕ್ಕೆ ಸಾಕ್ಷಿಯಾಗಿದೆ. ಈ ಸಂದರ್ಭದಲ್ಲಿ ಬರೆದ ಕಟ್ಟೀಮನಿಯವರ ಪ್ರತಿಯೊಂದು ಕೃತಿ ಬದುಕಿನ ಒಂದೊಂದು ಆಕೃತಿ. ಪ್ರತಿಯೊಂದು ಆಕೃತಿಯಲ್ಲಿಯೂ ನವೋದಯದವರು ಹೆದರುತ್ತಿದ್ದ, ಮುಜುಗರು ಪಡುತ್ತಿದ್ದ, ಸಮಾಜದ ಮುಚ್ಚಿದ ಮುಖಗಳೆಲ್ಲ ಪ್ರಥಮ ಬಾರಿ ಅನಾವರಣಗೊಂಡಿವೆ. ಇವಗಳಲ್ಲಿ ರಾಜಕಾರಣಿ, ವ್ಯಭಿಚಾರಿಣಿ, ವೇಶ್ಯೆ, ಮಠಾಧಿಪತಿಗಳ ಒಳಜಗತ್ತಿನ ಚಿತ್ರಗಳಿವೆ. ಜೊತೆಗೆ ಕಾರ್ಮಿಕ, ದೇಶಭಕ್ತ, ಸರಕಾರಿ ನೌಕರ, ರೈತರ ಬದುಕು-ಬವಣೆಗಳಿವೆ. ಈ ಕೃತಿಗಳಲ್ಲಿ ಭಾಷೆಯು ಮಡಿವಂತಿಕೆಯ ಮಾಲಿನ್ಯದಿಂದ ಮುಕ್ತವಾಗಿದೆ, ಪಾಂಡಿತ್ಯದ ಭಾರದಿಂದ ಪಾರಾಗಿದೆ. ಅರ್ಧದಷ್ಟು ಸಾಹಿತ್ಯ ಸ್ವಗ್ರಾಮ ಮಲಾಮರಡಿಯಲ್ಲಿಯೆಂಬ ಸಣ್ಣ ಹಳ್ಳಿಯ, ಸಣ್ಣ ಗುಡಿಸಲು ಮನೆಯಲ್ಲಿ, ಎಣ್ಣೆದೀಪದ ಮಂದ ಬೆಳಕಿನಲ್ಲಿ ಸೃಷ್ಟಿಯಾದುದು ಕರ್ನಾಟಕದ ಗಣ್ಯಸಾಹಿತಿಗಳು ಸಮುದಾಯದಲ್ಲಿ ಬಹುಶಃ ಏಕೈಕ ಉದಾಹರಣೆಯಾಗಿದೆ. ವಿದೇಶದಲ್ಲಿದ್ದರೆ ಈ ಮನೆಯೇ ಸರಕಾರದ ಸ್ಮಾರಕವಾಗಬಹುದಾಗಿದ್ದ ಸಂಗತಿಯಿದು. ಯಾವ ಸಾಹಿತ್ಯಕೃತಿ ಯಾವ ಊರಿನ ಯಾವ ಸ್ಥಳದಲ್ಲಿ? ಎಂಥ ಸಂದರ್ಭದಲ್ಲಿ? ಹುಟ್ಟಿತೆಂಬ ಬೇರೆ ವಿವರಗಳೂ ಇಲ್ಲಿವೆ. ಪ್ರಕಾಶನದ ಪರದಾಟ, ಮಾರಾಟದ ಸಾಹಸ, ಸಾಹಿತಿಗಳ ಪ್ರೀತಿ-ಗುಂಪುಗಾರಿಕೆ ಇತ್ಯಾದಿ ವ್ಯಥೆಗಳೂ ಇಲ್ಲಿ ಕಥೆಯಾಗಿ ನಿಂತಿವೆ. ಇದಲ್ಲದೆ ಇವರೂ ಒಳಗೊಂಡಂತೆ ೩-೪ ಜನ ದುಡಿದು, ಆತ್ಮಮುಖಿ-ಮನಮುಖಿಯಾಗಿದ್ದ ನವೋದಯ ಸಾಹಿತ್ಯವನ್ನು ಜನಮುಖಿಯನ್ನಾಗಿ 'ಪ್ರಗತಿಶೀಲ ಸಾಹಿತ್ಯ ಚಳುವಳಿ'ಯ ಬಾಗಿಲನ್ನು ತೆರೆದರೇನೋ ನಿಜ. ಆದರೆ ಮಿಕ್ಕವರಿಗಿದ್ದ ಆರ್ಥಿಕ, ಶೈಕ್ಷಣಿಕ, ಕೌಟುಂಬಿಕ ಇತ್ಯಾದಿ ಅನುಕೂಲತೆಗಳು ಇಲ್ಲದಿದ್ದರೂ ಕುಗ್ರಾಮವಾಗಿಯಾದ ಕಟ್ಟೀಮನಿಯವರು ನಗರವಾಸಿಗಳಾದ ಇವರಾರಿಗೂ ಕಡಿಮೆಯಲ್ಲದಷ್ಟು ಬೆಳೆದುದನ್ನು ಇಲ್ಲಿ ಅವಶ್ಯ ನೆನೆಯಬೇಕು. ಈ ಪ್ರಗತಿಶೀಲ ಸಾಹಿತ್ಯದ ಹೆಜ್ಜೆಗುರುತುಗಳೂ, ೫೦ ವರ್ಷಗಳ ಕನ್ನಡ ಸಾಹಿತ್ಯ ಮತ್ತು ಪತ್ರಿಕಾ ಸಾಹಿತ್ಯದ ಕಥನಗಳೂ ಇಲ್ಲಿವೆ. ಇವೆಲ್ಲವುಗಳಿಗೆ ಹಿನ್ನೆಲೆಯಾಗಿ ಸಮಕಾಲೀನ ಹಳ್ಳಿ-ಪಟ್ಟಣ,

ದೀನ–ಧನಿಕ, ಸಾಕ್ಷರ–ನಿರಕ್ಷರ, ಶೋಷಣೆ–ಶೋಷಿತ ಸಮಾಜದ ಹಸಿಹಸಿ ಅನುಭವಗಳ ಚಿತ್ರ ಬಿಚ್ಚಿ ನಿಂತಿದೆ.

ಕಟ್ಟೀಮನಿಯವರು ಕೊನೆಕೊನೆಗೆ ಕರ್ನಾಟಕ ವಿಶ್ವವಿದ್ಯಾಲಯದ ಸಿನೇಟ್ ಸದಸ್ಯ. ಕರ್ನಾಟಕ ಸರಕಾರದ ರಾಜ್ಯಸಭಾ ಸದಸ್ಯರಾದರು. ಈಗ ಅವರ ಬದುಕು ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಸರಿಯಿತು. ಇದೆಲ್ಲ ಇಲ್ಲಿ ಮಿಂಚಿನಂತೆ ಹೊಳೆದು ಮಾಯವಾಗುತ್ತದೆ. ಒಂದು ಮಾತು ನಿಜ. ಹಿಂದಿನ ನೆಲೆಗಳಲ್ಲಿಯ ಹೋರಾಟದ ಜೀವನ ಇಲ್ಲಿ ಸಹಜವಾಗಿಯೇ ಗೈರು ಹಾಜರಾಗಿದೆ.

ಆತ್ಮಕಥೆಗಳಲ್ಲಿ ಎರಡು ವಿಧ. ಒಂದು : ವ್ಯಕ್ತಿ ಕೇಂದ್ರಿತ, ಇನ್ನೊಂದು ಸಮಾಜಕೇಂದ್ರಿತ. ಮೊದಲಿನಿಂದಲೂ ಸಮಾಜದೊಂದಿಗೆ ಹೋರಾಟ ನಡೆಸುತ್ತಲೇ ಬೆಳೆದ ಕಟ್ಟೀಮನಿಯವರು ಈ ಆತ್ಮಕಥೆಯನ್ನು ಪ್ರಧಾನವಾಗಿ ಉತ್ತರಕರ್ನಾಟಕದ, ಮುಂದುವರಿದು ಸಮಗ್ರ ಕರ್ನಾಟಕದ ೫೦ ವರ್ಷಗಳ ಕಥೆಯೆಂಬಂತೆ ಕಟ್ಟಿದ್ದಾರೆ. ಹೀಗಾಗಿ ಇದು ಕಟ್ಟೀಮನಿ ಕಥೆಯಾಗುತ್ತಲೇ ಕರ್ನಾಟಕದ ಕಥೆಯಾಗಿಯೂ ಬೆಳೆದಿದೆ. ಇದೇ ರೀತಿ ಉತ್ತರ ಕರ್ನಾಟದ ಆತ್ಮಕಥೆಯಾಗಿರುವ ಶ್ರೀರಂಗರ 'ಸಾಹಿತಿಯ ಆತ್ಮಜಿಜ್ಞಾಸೆ', ಸ.ಸ.ಮಾಳವಾಡರ 'ದಾರಿ ಸಾಗಿದೆ', ಆರ್. ಸಿ. ಹಿರೇಮಠರ 'ಉರಿ ಬರಲಿ–ಸಿರಿ ಬರಲಿ', ಜೋಳದ ರಾಸಿ ದೊಡ್ಡನಗೌಡರ 'ನಂದೇ ನಾನೋದಿದೆ' ಇತ್ಯಾದಿ ಕೃತಿಗಳ ಜೊತೆಯಲ್ಲಿ ಈ 'ಕಾದಂಬರಿಕಾರನ ಕಥೆ'ಯೂ ತನ್ನ ಕಥೆಯೊಂದಿಗೆ ನಮ್ಮ ಕಥೆಯನ್ನೂ ಹೇಳುತ್ತದೆ.

* * *

೨೦೧೨, ಬಸವರಾಜ ಕಟ್ಟೀಮನಿ ಟ್ರಸ್ಟ್ ಬೆಳಗಾವಿಯಲ್ಲಿ ಅಸ್ತಿತ್ವಕ್ಕೆ ಬರುತ್ತಲೇ ಕೈಗೆತ್ತಿಕೊಂಡ ಮಹತ್ವಪೂರ್ಣ ಯೋಜನೆಗಳಲ್ಲಿ 'ಪ್ರಸಾರಾಂಗ'ವೂ ಒಂದು. ಈ ವರ್ಷ ಈ ವಿಭಾಗದ ಮೂಲಕ 'ಕಾದಂಬರಿಕಾರನ ಕಥೆ' ಗ್ರಂಥದ ಮರುಮುದ್ರಣ, 'ಮಾಡಿ ಮಡಿದವರು' ಕಾದಂಬರಿಯ ಇಂಗ್ಲಿಷ ಮತ್ತು ಮರಾಠಿ ಅನುವಾದ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದೇನೆ. ಬೆಂಗಳೂರಿನ 'ಸಪ್ನಾಬುಕ್ ಹೌಸ್' ಒಡೆತನದ ಈ ಪುಸ್ತಕಗಳನ್ನು ಪ್ರಕಟಿಸಿಕೊಳ್ಳಲು ಅನುಮತಿ ನೀಡಿದ ಅದರ ಒಡೆಯರಾದ ಶ್ರೀ ನಿತಿನ್ ಶಹಾ ಅವರಿಗೂ, ಅಲ್ಲಿಯ ಕನ್ನಡ ವಿಭಾಗದ ಸಂಚಾಲಕರಾದ ಶ್ರೀ ದೊಡ್ಡೇಗೌಡ ಅವರಿಗೂ ಕೃತಜ್ಞತೆಗಳು. 'ಬಸವರಾಜ ಕಟ್ಟೀಮನಿ ಟ್ರಸ್ಟ್' ಸಲಹಾಸಮಿತಿ ಸದಸ್ಯರಿಗೆ, ಅದರಲ್ಲಿಯೂ ಬೆಳಗಾವಿ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ಎಸ್. ಆಯ್. ಕರಿಶಂಕರಿ ಅವರಿಗೆ, ಈ ಕೃತಿಯ ಮುದ್ರಣ ಕಾರ್ಯದಲ್ಲಿ ಶ್ರದ್ಧೆಯಿಂದ ದುಡಿದ ಪ್ರೊ, ಚಂದ್ರಶೇಖರ ಅಕ್ಕಿ, ಡಾ. ಹನುಮಂತ ಮೇಲಿನಮನಿ–ಡಾ. ಸರಸ್ವತಿದೇವಿ ಭಗವತಿ ಅವರಿಗೆ, ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್ ಮುದ್ರಣಾಲಯದ ಶ್ರೀ ಬಸವರಾಜ ಪಾಟೀಲ ಅವರಿಗೆ ಧನ್ಯವಾದಗಳು.

ಆಕರ : ಮಾರ್ಗ ಸಂಪುಟ–೭

■■

ಕಟ್ಟಿಮನಿ ವ್ಯಾಸಂಗ

ಅಧ್ಯಕ್ಷರ ಮಾತು

೨೦೧೨

ಕನ್ನಡದ ಪ್ರಗತಿಶೀಲಸಾಹಿತ್ಯ ಪ್ರವರ್ತಕರಲ್ಲಿ ಬಸವರಾಜ ಕಟ್ಟೀಮನಿಯವರು ಒಬ್ಬರೂ ಮತ್ತು ಮುಖ್ಯರು. ಈ ಸಾಹಿತಿಗಳು ನವೋದಯ ಸಾಹಿತಿಗಳಿಗಿದ್ದ ಪದವಿ-ನೌಕರಿ ಸವಲತ್ತಿನಿಂದ ವಂಚಿತರಾದ ಸಾಮಾಜಿಕರು. ಹೀಗಾಗಿ ಇವರ ಬರವಣಿಗೆಯ ವಸ್ತು ನವೋದಯದವರ 'ಆದರ್ಶ'ದಿಂದ 'ವಾಸ್ತವ' ಆಯಾಮಕ್ಕೆ ಹೊರಳಿತು. ಆದರ್ಶದಿಂದಾಗಿ ಅದು 'ಪ್ರಯೋಗ'ವೆನಿಸಿದರೆ ವಾಸ್ತವದಿಂದಾಗಿ ಇದು 'ಚಳುವಳಿ', ಅದರಲ್ಲಿಯೂ ಆಧುನಿಕ ಕನ್ನಡ ಸಾಹಿತ್ಯದ 'ಪ್ರಥಮ ಬಂಡಾಯ ಚಳುವಳಿ'ಎನಿಸಿತು.

ಪ್ರಗತಿಶೀಲಸಾಹಿತಿಗಳಲ್ಲಿ ಮಿಕ್ಕವರು ನಗರವಾಸಿಗಳಾಗಿ, ಸಾಕ್ಷರ ಕುಟುಂಬದ ಹಿನ್ನೆಲೆಯವರಾಗಿ, ಅನ್ಯಪ್ರಾಂತೀಯ ಪ್ರಗತಿಶೀಲ ಚಳುವಳಿಯಿಂದ ಪ್ರಭಾವಿತರಾಗಿ ಬರೆದರು. ಇದಕ್ಕೆ ವಿರುದ್ಧವೆನ್ನುವಂತೆ ಕಟ್ಟೀಮನಿಯವರು ಗ್ರಾಮವಾಸಿಗಳಾಗಿ, ನಿರಕ್ಷರ ಕುಟುಂಬದ ಹಿನ್ನೆಲೆಯವರಾಗಿ, ಈ ಸಾಹಿತ್ಯದ ವಸ್ತುವಿನ ನೈಜ ಪರಿಸರದಲ್ಲಿ ಬದುಕಿದವರಾಗಿ ಬರೆದರು. ಹೀಗಾಗಿ ಇವರ ಬರೆಹ ಮಿಕ್ಕವರಿಗಿಂತ ಒಂದಿಷ್ಟು ಭಿನ್ನವಾಗಿ ಕಾಣುತ್ತದೆ. ನಿರ್ದಿಷ್ಟೀಕರಿಸಿ ಬರೆಯುವ ಸುದ್ದಿ ಪತ್ರಿಕಾಕ್ಷೇತ್ರದಲ್ಲಿ ಹತ್ತು ವರ್ಷ ದುಡಿಯುವ ಮೂಲಕ ಗಳಿಸಿಕೊಂಡ ನಿರ್ಭೀತ ಸ್ವಭಾವವು ಸಾಮಾನ್ಯೀಕರಿಸಿ ಬರೆಯುವ ಸಾಹಿತ್ಯಕ್ಷೇತ್ರಕ್ಕೆ ಹೊರಳಿ ಬರೆದ ಅವರ ಕಥೆ-ಕಾದಂಬರಿಗಳಲ್ಲಿಯೂ ಮುಂದುವರಿಯಿತು.

ನಗರವೆಂಬ ಸುರಕ್ಷಿತ-ಪ್ರಗತಿನಿಷ್ಠ ಪರಿಸರದಲ್ಲಿ ನಿಂತು ಬರೆಯುವವರಿಗಿಂತ ಹಳ್ಳಿಯೆಂಬ ಅರಕ್ಷಿತ-ಸಂಪ್ರದಾಯನಿಷ್ಠ ಪರಿಸರದಲ್ಲಿ ನಿಂತು ಬರೆಯುವವರಿಗೆ ಹೆಚ್ಚು ಧೈರ್ಯಬೇಕು. ಕುಗ್ರಾಮವಾದ ಮಲಾಮರಡಿಯಲ್ಲಿ ಹುಟ್ಟಿ ಬೆಳೆದ ಕಟ್ಟೀಮನಿಯವರಲ್ಲಿ ಅದು ಅಗತ್ಯಕ್ಕಿಂತ ಅಧಿಕ ಪ್ರಮಾಣದಲ್ಲಿದ್ದಿತು. ಹೀಗಾಗಿ 'ಹರಿಜನ್ವಾರ' ಮೊದಲಾದ ಕೃತಿಗಳ ಮೂಲಕ ತಮ್ಮ ಬ್ರಾಹ್ಮಣ ಸಮಾಜದ ದೋಷಗಳನ್ನು ವ್ಯಕ್ತಪಡಿಸಿದ ಶ್ರೀರಂಗರಂತೆ, 'ಜರತಾರಿ ಜಗದ್ಗುರು' ಮೊದಲಾದ ಕೃತಿಗಳ ಮೂಲಕ ತಮ್ಮ ಲಿಂಗಾಯತ ಸಮಾಜದ ದೋಷಗಳನ್ನು ಕಟ್ಟೀಮನಿಯವರು ವ್ಯಕ್ತಪಡಿಸಿದರು. ಇದಲ್ಲದೆ ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಕಾವ್ಯ-ಕಾದಂಬರಿ ಇತ್ಯಾದಿಗಳನ್ನು ಬರೆಯಲು ಯಾವ ಸಾಹಿತಿಯೂ ಧೈರ್ಯಮಾಡದ ಆ ಕಾಲದಲ್ಲಿ 'ಸ್ವಾತಂತ್ರ್ಯದೆಡೆಗೆ' (೧೯೪೬) ಕಾದಂಬರಿ ಬರೆದುದು ಸಾಮಾನ್ಯಸಂಗತಿಯಲ್ಲ. ಒಟ್ಟಾರೆ, ಏಕಕಾಲಕ್ಕೆ ಸಮಾಜವನ್ನು-ಸರಕಾರವನ್ನು ಲೆಕ್ಕಿಸದ ಸಾಹಿತಿ ಕಟ್ಟೀಮನಿಯವರ ಧೈರ್ಯ ತೀರ ಅಪರೂಪದ್ದೆಂದೇ ಹೇಳಬೇಕು. ಸಾಹಿತ್ಯವು ಸಮಕಾಲೀನ ಸಮಾಜದ ವಿಮರ್ಶೆ ಎಂಬ ಮಾತು ಇಂಥಲ್ಲಿ ಅರ್ಥಪೂರ್ಣವೆನಿಸುತ್ತದೆ. ಹೀಗೆ ವಾಸ್ತವ

ಸಮಾಜದ ಚಿತ್ರಣದಿಂದಾಗಿ ಇವರ ಕಾದಂಬರಿಗಳು ಹೆಚ್ಚು ಪರಿಣಾಮಕಾರಿ ಎನಿಸಿದವು. ಇದರಿಂದಾಗಿ ಉತ್ತರ ಕರ್ನಾಟಕದಲ್ಲಿ ಗಳಗನಾಥರ ಕಾದಂಬರಿಯ ಓದುಗರು ಕ್ರಮೇಣ ಕಟ್ಟೀಮನಿಯವರ ಕಾದಂಬರಿಗಳಿಗೆ ವಾಲಿದರು.

ಕಟ್ಟೀಮನಿಯವರು ಹೀಗೆ ಸಾಹಿತ್ಯಿಕ ಬರೆವಣಿಗೆ ಮತ್ತು ಚಿಂತನೆಗಳಿಗೆ ಸೀಮಿತರಾಗದೆ, ನಿಜ ಜೀವನದಲ್ಲಿಯೂ ಸಾಮಾಜಿಕ ರಾಜಕೀಯ ಇತ್ಯಾದಿ ಕ್ಷೇತ್ರಗಳಲ್ಲಿ ಕ್ರಿಯಾಶೀಲರಾದ ಕಾರಣ, ಇವುಗಳ ಬಗೆಗೂ ತಮ್ಮದೇ ಆದ ಧೋರಣೆ ಬೆಳೆಸಿಕೊಂಡಿದ್ದರು. ಇವುಗಳ ಅನುಷ್ಠಾನಕ್ಕಾಗಿ ಹೆಣಗಿದರು.

ಹೀಗೆ ಒಬ್ಬ ಸಾಹಿತಿಯಾಗಿ, ಒಬ್ಬ ಸಾಮಾಜಿಕನಾಗಿ ಬಾಳಿದ ಕಟ್ಟೀಮನಿಯವರ ಸಮಗ್ರ ಅಧ್ಯಯನ ಜರುಗಬೇಕೆಂಬ ಉದ್ದೇಶದಿಂದ "ಬಸವರಾಜ ಕಟ್ಟೀಮನಿ ಪ್ರತಿಷ್ಠಾನ"ವು ಬೇರೆ ಬೇರೆ ಪ್ರದೇಶಗಳಲ್ಲಿ ವಿಚಾರ ಸಂಕಿರಣಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಈ ಸಂಕಿರಣಗಳಲ್ಲಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳನ್ನೊಳಗೊಂಡ ಪುಸ್ತಕಗಳನ್ನು "ಕಟ್ಟೀಮನಿ ವ್ಯಾಸಂಗ" ಹೆಸರಿನಿಂದ ಒಂದೊಂದಾಗಿ ಪ್ರಕಟಿಸುವ ಯೋಜನೆ ನಮ್ಮದಾಗಿದೆ. ಈ ಮಾಲೆಯಲ್ಲಿ ಮೊದಲನೆಯದಾಗಿದೆ, ಪ್ರಸ್ತುತ ಕೃತಿ.

೨೨-೦೭-೨೦೧೨ರಂದು ಗೋಕಾಕ ನಗರದಲ್ಲಿ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸದಸ್ಯರಾದ ಪ್ರೊ. ಚಂದ್ರಶೇಖರ ಅಕ್ಕಿ ಅವರ ಸಂಚಾಲಕತ್ವದಲ್ಲಿ ಜರುಗಿದ ವಿಚಾರ ಸಂಕಿರಣದಲ್ಲಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಕಲನವಿದು. ಈ ಪ್ರಬಂಧಗಳನ್ನು ಪ್ರಸ್ತುತ ಪಡಿಸಿದ ವಿದ್ವಾಂಸರಿಗೂ ಕಟ್ಟೀಮನಿ ಪ್ರತಿಷ್ಠಾನದ ಸದಸ್ಯರಿಗೂ ಇದರ ಯಶಸ್ಸಿಗಾಗಿ ದುಡಿದ ನಾಗರಿಕರಿಗೂ, ಕರ್ಣಧಾರತ್ವ ವಹಿಸಿದ್ದ ಚಂದ್ರಶೇಖರ ಅಕ್ಕಿಯವರಿಗೂ ಧನ್ಯವಾದಗಳು.

■■

* ಸಂ. ಪ್ರೊ. ಚಂದ್ರಶೇಖರ ಅಕ್ಕಿ : ಕಟ್ಟೀಮನಿ ವ್ಯಾಸಂಗ, ಕರ್ನಾಟಕ ಸರಕಾರ, ಪ್ರಸಾರಾಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ-೨೦೧೨.

ಆಕರ : ಮಾರ್ಗ ಸಂಪುಟ-೭

೩೫೩

ಜನಜೀವಾಳ ವಾರಪತ್ರಿಕೆ ಮತ್ತು ಬಸವರಾಜ ಕಟ್ಟೀಮನಿ

ಪ್ರಧಾನ ಸಂಪಾದಕರ ಮಾತು

೨೦೧೪

ಕರ್ನಾಟಕ ಸರಕಾರ ಬೆಳಗಾವಿಯಲ್ಲಿ ಸ್ಥಾಪಿಸಿರುವ "ಬಸವರಾಜ ಕಟ್ಟೀಮನಿ ಪ್ರತಿಷ್ಠಾನ"ದ ಮುಖ್ಯವಿಭಾಗ ಪ್ರಸಾರಾಂಗ. ಇದು ಈ ವರೆಗೆ ಕಟ್ಟೀಮನಿಯವರು ರಚಿಸಿದ, ಇವರನ್ನು ಕುರಿತು ಅನ್ಯರು ರಚಿಸಿದ ಸಾಹಿತ್ಯ ಕೃತಿಗಳ ಪ್ರಕಟನೆಯನ್ನು ತುಂಬ ತೃಪ್ತಿಕರವಾಗಿ ಪೂರೈಸಿದೆ.

ಕಟ್ಟೀಮನಿಯವರು ಕೇವಲ ಪುಸ್ತಕ ರಚನೆಗೆ ಸೀಮಿತರಾಗದೆ, ಸುತ್ತಲಿನ ಸಮಾಜದಲ್ಲಿಯೂ ಒಬ್ಬ ಕ್ರಿಯಾಶೀಲ(ಆ್ಯಕ್ಟಿವಿಸ್ಟ್) ವ್ಯಕ್ತಿಯಾಗಿ ತೊಡಗಿಕೊಂಡವರು. ಹೀಗಾಗಿ ಇವರು ದಿನನಿತ್ಯದ ಸಾಮಾಜಿಕ ಘಟನೆಗಳ ಬಗೆಗೆ ದಿನಪತ್ರಿಕೆ, ವಾರ ಪತ್ರಿಕೆಗಳಲ್ಲಿ ಲೇಖನ, ಅಂಕಣ, ಟಿಪ್ಪಣಿಗಳನ್ನು ಬರೆಯುತ್ತ ಬಂದರು. ಇದು ಕಟ್ಟೀಮನಿಯವರ ಬದುಕಿನ-ಬರೆಹದ ಭಾಗವೇ ಆಗಿದ್ದಿತು. ಕಾರಣ, ಆ ಕಾಲದ ಪತ್ರಿಕೆಗಳಲ್ಲಿ ಪ್ರಕಟವಾದ ಅವರ ಸಣ್ಣ ದೊಡ್ಡ ಬರೆಹಗಳೆಲ್ಲವನ್ನು ಒಂದೂ ಬಿಡದಂತೆ ಸಂಗ್ರಹಿಸಿ, ಪುಸ್ತಕರೂಪದಲ್ಲಿ ಪ್ರಕಟಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. ಈ ಯೋಜನೆಯ ಮೊದಲ ಕೃತಿಯಾಗಿದೆ,"ಜನಜೀವಾಳ ವಾರಪತ್ರಿಕೆ ಮತ್ತು ಬಸವರಾಜ ಕಟ್ಟೀಮನಿ."

'ಜನಜೀವಾಳ' ಹೆಸರಿಗೆ ತಕ್ಕಂತೆ ಜನಸ್ಪಂದನೆಗೆ ವೇದಿಕೆಯಾಗಿದ್ದ ಪತ್ರಿಕೆ. ನಾಲ್ಕು ಪುಟಗಳ, ಸೀಮಿತ ಪ್ರಸಾರದ ಇದು ಮೊದಲಿನಿಂದಲೂ ಬೆಳಗಾವಿ ನಗರ ಮತ್ತು ಜಿಲ್ಲೆಗಳಲ್ಲಿ ದೊಡ್ಡ ದನಿಯಾಗಿ ಬೆಳೆಯುತ್ತ ಬಂದಿದೆ. "ನ್ಯಾಯನಿಷ್ಠುರಿ, ಲೋಕವಿರೋಧಿ"ಯಾಗಿದ್ದ ಈ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾದ ಶ್ರೀ ಬ.ಮ. ಏಳುಕೋಟಿಯವರು ಕಟ್ಟೀಮನಿಯವರ ಸ್ನೇಹಿತರಾಗಿದ್ದರು. ಈ ಪತ್ರಿಕೆಯ ಕಾರ್ಯಾಲಯ ಆಗಾಗ ಕಟ್ಟೀಮನಿಯವರ ಕಾಲಕ್ಷೇಪದ ಸ್ಥಳವೂ ಆಗಿದ್ದಿತು. ಈ ಸಂಬಂಧವನ್ನು ತಮ್ಮ ಬರೆಹಗಳ ಮೂಲಕ ಇನ್ನೂ ಗಾಢವಾಗಿಸಿಕೊಂಡವರು, ಶ್ರೀ ಕಟ್ಟೀಮನಿ.

ರಾಜ್ಯಪ್ರಸಿದ್ಧಿಯ ಪತ್ರಿಕೆಗಳಂತೆ ಸ್ಥಳೀಯ ಪತ್ರಿಕೆಗಳೂ ಸಮಾಜವನ್ನು ಎಚ್ಚರಿಸುವಲ್ಲಿ, ಶುದ್ಧೀಕರಿಸುವಲ್ಲಿ ವಿಶಿಷ್ಟ ಪಾತ್ರವಹಿಸುತ್ತವೆ. ಇದನ್ನು ಅರ್ಥಮಾಡಿಕೊಂಡ ಕಟ್ಟೀಮನಿಯವರು ಸ್ಥಳೀಯ ಪತ್ರಿಕೆ 'ಜನಜೀವಾಳ'ಕ್ಕೆ ಬಹುಸಂಖ್ಯೆ ಲೇಖನ-ಟಿಪ್ಪಣಿಗಳನ್ನು ಬರೆಯುತ್ತ ಬಂದರು. ಇವುಗಳ ಸಂಗ್ರಹವು ಸಮಕಾಲೀನ ಆಗು-ಹೋಗುಗಳ ಮತ್ತು ಕಟ್ಟೀಮನಿಯವರ ಸಾಮೂಹಿಕ ಕಾಳಜಿಯ ದಾಖಲೀಕರಣವೇ ಸರಿ. ಈ ಮಾತಿಗೆ ಸಾಕ್ಷಿಯೆಂಬಂತೆ ಇಲ್ಲಿ ಅಂದಿನ ರಾಜಕೀಯ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಇತ್ಯಾದಿಗಳ ಚಿತ್ರಣ ಮೂಡಿನಿಂತಿದೆ.

ಇಂಥ ದಾಖಲೆಗಳನ್ನು ಶೋಧಿಸುವುದು, ಸಂಗ್ರಹಿಸುವುದು ತುಂಬ ಕಷ್ಟದ ಕೆಲಸ. ಏಕೆಂದರೆ ಕೆಲವೊಮ್ಮೆ ಪತ್ರಿಕೆಯ ಬಿಡಿಸಂಚಿಕೆಗಳನ್ನು ಅವುಗಳ ಸಂಪಾದಕರೇ ಸಂರಕ್ಷಿಸಿರುವುದಿಲ್ಲ. ಸಂರಕ್ಷಿಸಿದ್ದರೂ ತುಂಬ ಜೀರ್ಣಸ್ಥಿತಿಯಲ್ಲಿರುತ್ತವೆ; ಮುಟ್ಟಿದರೆ ಮುರಿಯುತ್ತವೆ. ಇಂಥಗಳನ್ನು ಎಚ್ಚರಿಕೆಯಿಂದ ಓದಿ, ಇನ್ನೂ ಎಚ್ಚರಿಕೆಯಿಂದ ಬೆರಳಚ್ಚುಗೊಳಿಸಿ, ವರ್ಗೀಕರಿಸಿ ಕೃತಿಯನ್ನಾಗಿಸುವುದು ಬಹುದೊಡ್ಡ ಸಹನೆಯನ್ನು ಅಪೇಕ್ಷಿಸುತ್ತದೆ. ನಮ್ಮ ಸುದೈವಕ್ಕೆ ಈ ಕಾರ್ಯವನ್ನು ಪ್ರಸ್ತುತ ಕೃತಿಯ ಸಂಪಾದಕರಾದ ಶ್ರೀ ಮಹಾಲಿಂಗ ಮಂಗಿ ಮತ್ತು ಶ್ರೀ ಶಿವರಾಯ ಏಳುಕೋಟಿ ತುಂಬ ಜವಾಬ್ದಾರಿಯಿಂದ ಪೂರೈಸಿದ್ದಾರೆ. ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸಲಹಾ ಸಮಿತಿ ಸದಸ್ಯರು ಮುಕ್ತ ಮನಸ್ಸಿನಿಂದ ಇದಕ್ಕೆ ಒಪ್ಪಿಗೆ ನೀಡಿದ್ದಾರೆ. ಪತ್ರಿಕೆಯನ್ನು ಬಳಸಿಕೊಳ್ಳಲು 'ಜನಜೀವಾಳ'ದ ಸಂಪಾದಕರು ಸಮ್ಮತಿಸಿದ್ದಾರೆ. ಈ ಕೃತಿಯ ಅಕ್ಷರ ಸಂಯೋಜನೆಯನ್ನು ಡಾ. ಹನುಮಂತ ಮೇಲಿನಮನಿ ಪ್ರೀತಿಯಿಂದ ಮಾಡಿದ್ದಾರೆ. ಇವರೆಲ್ಲರಿಗೂ ನಮ್ಮ ಧನ್ಯವಾದಗಳು ಸಲ್ಲುತ್ತವೆ.

---

* ಸಂ.ಮಹಾಲಿಂಗ ಮಂಗಿ, ಶಿವರಾಯ ಏಳುಕೋಟಿ : ಜನಜೀವಾಳ ವಾರಪತ್ರಿಕೆ ಮತ್ತು ಬಸವರಾಜ ಕಟ್ಟೀಮನಿ ಕರ್ನಾಟಕ ಸರಕಾರ, ಪ್ರಸಾರಾಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ-೨೦೧೪.

ಆಕರ : ಮಾರ್ಗ ಸಂಪುಟ-೭

■■

೩೫೪

ಆದಿಲ್‌ಶಾಹಿ ಸಾಹಿತ್ಯ ಸಂಪುಟ

ಅಧ್ಯಕ್ಷರ ಮಾತು

೨೦೧೪

ವಿಜಾಪುರ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ "ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ"ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ. ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ. ಸಮಾಜ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು ಸಾಮಾಜಿಕರನ್ನು 'ಇವ

ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್ ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ-ಸಮನ್ವಯದಿಂದ ೧೪೮೯-೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು-ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ, ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ. ವಿಜಾಪುರವು ಜಗತ್ತಿಗೆ ನೀಡಿದ ದೊಡ್ಡಕೊಡುಗೆ ಗೋಳಗುಮ್ಮಟವೆಂಬುದು ಪ್ರಸಿದ್ಧ ಮಾತು. ಸಾಹಿತ್ಯ-ಇತಿಹಾಸದ ವಿದ್ಯಾರ್ಥಿಯಾದ ನನಗೆ ಗೋಳಗುಮ್ಮಟಕ್ಕಿಂತ ವಿಜಾಪುರವು ಜಗತ್ತಿಗೆ ನೀಡಿದ ದೊಡ್ಡಕೊಡುಗೆಯಾಗಿದೆ ಈ ಗ್ರಂಥರಾಸಿ. ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನು ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟುದು ಈವರೆಗೆ ಇತಿಹಾಸ ಪರ್ಶಿಯನ್, ದಖನಿ-ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ, ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ. ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ-ನೆರವಿಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ. ಫ.ಗು. ಹಳ್ಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು ಅಗತ್ಯ ಸಿಬ್ಬಂದಿವರ್ಗವನ್ನು

ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹದಲ್ಲಿ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್ ಶಾಹಿ ಸಾಹಿತ್ಯ ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ ಪ್ರಕಟಣ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

ಆಕರ : ಮಾರ್ಗ ಸಂಪುಟ-೭

■■

೩೫೫

ಬಸವರಾಜ ಕಟ್ಟೀಮನಿ ಸಮಗ್ರಸಾಹಿತ್ಯ

ಅಧ್ಯಕ್ಷರ ಮಾತು

೨೦೧೫

ಬಸವರಾಜ ಕಟ್ಟೀಮನಿಯವರು ಕನ್ನಡದ ಪ್ರಗತಿಶೀಲ ಸಾಹಿತ್ಯ ಪ್ರವರ್ತಕರಲ್ಲಿ ಒಬ್ಬರು ಮತ್ತು ವಿಶಿಷ್ಟರು. ಇದನ್ನು ಗಮನಿಸಿ ಕರ್ನಾಟಕ ಸರಕಾರ ಅವರ ತವರು ಜಿಲ್ಲೆಯ ಕೇಂದ್ರಸ್ಥಳವಾದ ಬೆಳಗಾವಿಯಲ್ಲಿ "ಬಸವರಾಜ ಕಟ್ಟೀಮನಿ ಪ್ರತಿಷ್ಠಾನ"ವನ್ನು ಸ್ಥಾಪಿಸಿದೆ.

ಈ ಪ್ರತಿಷ್ಠಾನ ಅಸ್ತಿತ್ವಕ್ಕೆ ಬಂದು ಎರಡು ವರ್ಷ ಗತಿಸಿದವು. ಇಷ್ಟು ಸಣ್ಣ ಅವಧಿಯಲ್ಲಿ ಇದು ರಾಜ್ಯಮಟ್ಟದ ದೊಡ್ಡ ಸುದ್ದಿಯಾಗಿ ಬೆಳೆದಿದ್ದು, ಈಗ ಚಾರಿತ್ರಿಕ ದಾಖಲೆಯೆನಿಸಲಿರುವ "ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ಕೈಗೆತ್ತಿಕೊಂಡಿದೆ.

ಕಟ್ಟೀಮನಿಯವರು ಪತ್ರಿಕಾಸಾಹಿತ್ಯದಿಂದ ಸೃಜನಸಾಹಿತ್ಯಕ್ಕೆ ಸಾಗಿಬಂದವರು. ಹೀಗಾಗಿ ಪತ್ರಿಕೆಯ ಜನಮುಖಿ ಭಾಷೆ, ನಿರ್ಭೀತ ನಿಲವುಗಳ ಸೃಷ್ಟಿಯಾಗಿರುವ ಇವರ ಸೃಜನ ಬರೆವಣಿಗೆಯು ಆಧುನಿಕ ಕನ್ನಡ ಸಾಹಿತ್ಯದ ಪ್ರಥಮ ಬಂಡಾಯ ಸಾಹಿತ್ಯವಾಗಿದೆ. ಈ ದೃಷ್ಟಿಯಿಂದ ಹೇಳುವುದಾದರೆ ನವೋದಯ ಸಾಹಿತ್ಯ ಒಂದು ಪ್ರಯೋಗ, ಪ್ರಗತಿಶೀಲ ಸಾಹಿತ್ಯ ಒಂದು ಚಳುವಳಿಯೆನಿಸುತ್ತವೆ.

ಈ ಪ್ರಗತಿಶೀಲ ಚಳುವಳಿಯಲ್ಲಿ ಭಾಗಿಯಾದ ಸಾಹಿತಿಗಳೆಲ್ಲ ಬಹುಮಟ್ಟಿಗೆ ದೂರದಿಂದ ಸಮಾಜವನ್ನು ಗಮನಿಸಿ ಬರೆದವರು. ಕಟ್ಟೀಮನಿಯವರು ಮಾತ್ರ ನೇರವಾಗಿ ಸಮಾಜದಲ್ಲಿ ತೊಡಗಿ ಬರೆದವರು. ಇದರಿಂದಾಗಿ ಮಿಕ್ಕವರು ವಸ್ತುವಿನ ಸಾಮಾನ್ಯೀಕರಣದ ಕಡೆಗೆ, ಇವರು ನಿರ್ದಿಷ್ಟೀಕರಣದ ಕಡೆಗೆ ಹೆಚ್ಚು ಒತ್ತು ಕೊಡುತ್ತಾರೆ. ಹೀಗಾಗಿ ಇವರ ಬರೆಹಗಳು ಅಪಾಯವನ್ನು ಲೆಕ್ಕಿಸದೆ ಸೃಷ್ಟಿಸಿದ ರಚನೆಗಳೆನಿಸುತ್ತವೆ. ಬ್ರಿಟಿಶರು ಆಳುತ್ತಿರುವಾಗಲೇ ಅವರನ್ನು ವಿರೋಧಿಸಿ ಬರೆದ 'ಸ್ವಾತಂತ್ರ್ಯದೆಡೆಗೆ' (೧೯೪೬) ಇದಕ್ಕೆ ಉದಾಹರಣೆಯಾಗಿದೆ. ಇಷ್ಟೇ ಏಕೆ? ಬ್ರಿಟಿಶರನ್ನು ವಿರೋಧಿಸಿ ಬರೆದ ಕನ್ನಡದ ಮೊದಲ ಕಾದಂಬರಿಯಾಗಿರುವ ಇದು, ಕಟ್ಟೀಮನಿಯವರ ಮೊದಲ ಕಾದಂಬರಿಯೂ ಆಗಿದೆ. ಹೀಗೆಯೆ 'ಜರತಾರಿ ಜಗದ್ಗುರು', 'ಜ್ವಾಲಾಮುಖಿಯ ಮೇಲೆ' ಇತ್ಯಾದಿ ಕೃತಿಗಳ ಮೂಲಕ ಇವರು ವಸ್ತುದೃಷ್ಟಿಯಿಂದ ಅನೇಕ ಮೊದಲುಗಳನ್ನು ತೆರೆದಿದ್ದಾರೆ.

ಕಟ್ಟೀಮನಿ ಎಂದಾಕ್ಷಣ ಮೊದಲು ನೆನಪಾಗುವುದು ಕಾದಂಬರಿ ಪ್ರಕಾರ. ನಿಜ ಹೇಳಬೇಕೆಂದರೆ, ಇವರ ಸೃಜನಶೀಲ ಸಾಹಿತ್ಯ ಆರಂಭವಾದುದು 'ಸಣ್ಣಕಥೆ' ಪ್ರಕಾರದಿಂದ, 'ಕಾರವಾನ್'(೧೯೪೩) ಕಥಾಸಂಕಲನದಿಂದ. ಈ ಎರಡು ಪ್ರಕಾರಗಳಲ್ಲದೆ ಪ್ರವಾಸಕಥನ, ಆತ್ಮಕಥೆ, ಅನುವಾದ, ಮಕ್ಕಳಕಥೆ, ನಾಟಕ, ಕವನ, ಸಂಪಾದನೆ ಕ್ಷೇತ್ರಗಳಲ್ಲಿಯೂ ಇವರು ಕೈಯಾಡಿಸಿದ್ದಾರೆ. ಇವೆಲ್ಲ ಸೇರಿ ಸುಮಾರು ೬೬ ಕೃತಿಗಳು ಇವರ ಸಾಹಿತ್ಯಿಕ ಕೊಡುಗೆಯಾಗಿದೆ. ಆದರೆ ಮೊದಲು ಬೆಂಗಳೂರಿನ 'ಮಂಗಳ' ಪತ್ರಿಕೆಯಲ್ಲಿ ಧಾರವಾಹಿಯಾಗಿ, ಬಳಿಕ ಪುಸ್ತಕವಾಗಿ ಬೆಳಕು ಕಂಡಿದ್ದ(೧೯೮೫) 'ಮಗನ ತಾಯಿ' ಕಾದಂಬರಿ ಪುಸ್ತಕ ಎಷ್ಟು ಪ್ರಯತ್ನಿಸಿದರೂ ಸಿಗಲಿಲ್ಲ. ಮಂಗಳ ಪತ್ರಿಕೆಯ ೧, ೨, ೩, ೬, ೭, ೮ನೆಯ ಸಂಚಿಕೆಗಳು ಮಾತ್ರ ಸಿಕ್ಕವು. ಸಿಕ್ಕಷ್ಟನ್ನಾದರೂ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಈ ಪತ್ರಿಕೆಯಲ್ಲಿ ಲಭ್ಯವಾದ ಅಪೂರ್ಣ ಪಠ್ಯವನ್ನು ಇಲ್ಲಿ ಪ್ರಕಟಿಸಿದ್ದೇವೆ. ಡಾ. ಬಸವರಾಜ ಸಾದರ ಅವರ ಪಿ.ಎಚ್‌ಡಿ. ಪ್ರಬಂಧವನ್ನಾಧರಿಸಿ ಇದರ ವಿಮರ್ಶೆ ಬರೆದಿದ್ದೇವೆ. ಸಂಪಾದಿತ ಕೃತಿ 'ರಸಿಕರಂಗ' ಮತ್ತು ಆಯ್ದ ಕಥೆಗಳ ಸಂಕಲನ 'ಜೀವನ ಕಲೆ'ಗಳನ್ನು ಕೈಬಿಟ್ಟಿದ್ದೇವೆ. ಇದರಿಂದಾಗಿ ಇವರ ೬೪ ಕೃತಿಗಳು ಈ ಯೋಜನೆಯಲ್ಲಿ ಅಡಕಗೊಂಡಿವೆ.

ಕಟ್ಟೀಮನಿಯವರು ತೀರಿಕೊಂಡು(೧೯೮೯)ಇಂದಿಗೆ ೨೫ ವರ್ಷ ಗತಿಸಿದವು. ಅವರ ಕೃತಿಗಳು ಮರುಮುದ್ರಣವಾಗುತ್ತಿಲ್ಲವೆಂಬಂತೆ ಆಗೊಂದು ಈಗೊಂದು ಬೆಳಕು ಕಾಣುತ್ತಲಿದ್ದವು. ಒಬ್ಬ ಸಾಹಿತಿಯನ್ನು ಜೀವಂತವಾಗಿಡುವುದೆಂದರೆ ಅವನ ಕೃತಿಗಳು ಸಹೃದಯರಿಗೆ ನಿರಂತರ ಲಭ್ಯವಾಗುವಂತೆ ನೋಡಿಕೊಳ್ಳುವುದು ಮತ್ತು ಅವನನ್ನು ಕುರಿತು ವಾದ-ಸಂವಾದ ಜರುಗಿಸುವುದು. ಇಂದು ಕಟ್ಟೀಮನಿಯವರು ಈ ಅವಕಾಶದಿಂದ ವಂಚಿತರಾಗಿರುವರೆಂದೇ ಹೇಳಬೇಕು. ಈ ಕೊರತೆಯನ್ನು ತುಂಬುವುದು ಅವರ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದಿರುವ ಪ್ರತಿಷ್ಠಾನದ ಕರ್ತವ್ಯವಾಗಿದೆ.

ಈ ಕರ್ತವ್ಯವನ್ನು ಪೂರೈಸುವ ಏಕೈಕಮಾರ್ಗವೆಂದರೆ ಮೊದಲು ಅವರ ಸಮಗ್ರ ಸಾಹಿತ್ಯವನ್ನು ಪ್ರಕಟಿಸುವುದು. ಈ ದಿಸೆಯಲ್ಲಿ ಪ್ರತಿಷ್ಠಾನ ಯೋಚಿಸಿ, ಕರ್ನಾಟಕ ಸರಕಾರದ ಆರ್ಥಿಕ ನೆರವಿನಿಂದ ಈ ಯೋಜನೆಯನ್ನು ಕೈಗೆತ್ತಿಕೊಂಡುದರ ಫಲವೆನಿಸಿವೆ, ಈ ಕೃತಿಗಳು. ಈ ಔದಾರ್ಯಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವೆಯರಾದ ಶ್ರೀಮತಿ ಉಮಾಶ್ರೀ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ ಅವರಿಗೂ ಋಣಿಯಾಗಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ಆಯುಕ್ತರಾಗಿದ್ದ ಶ್ರೀ ಕೆ. ಆರ್. ರಾಮಕೃಷ್ಣ, ಇಂದಿನ ನಿರ್ದೇಶಕರಾದ ಶ್ರೀ ಕೆ.ಎ.ದಯಾನಂದ, ಜಂಟಿ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನಸ್ವಾಮಿ, ಶ್ರೀ ಬಲವಂತರಾವ ಪಾಟೀಲ, ಶ್ರೀ ಅಶೋಕ ಚಲವಾದಿ, ಶ್ರೀಮತಿ ಪ್ರಜ್ಞಾ ಅಮ್ಮೆಂಬಳ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಇಂದು ಬೆಂಗಳೂರಿನ 'ಸಪ್ನಾ ಬುಕ್ ಹೌಸ್' ಕಟ್ಟೀಮನಿಯವರ ಸಮಗ್ರ ಸಾಹಿತ್ಯದ ಸ್ವಾಮಿತ್ವವನ್ನು ಹೊಂದಿದೆ. ಈ ಸಾಹಿತ್ಯದ ಒಂದು ಆವೃತ್ತಿಯನ್ನು ನಮ್ಮ ಪ್ರತಿಷ್ಠಾನದ ಮೂಲಕ ಪ್ರಕಟಿಸಲು ಒಪ್ಪಿಗೆ ನೀಡಿದ ಸಪ್ನಾ ಬುಕ್ ಹೌಸ್ ಮಾಲಿಕರಾದ ಶ್ರೀ ನಿತಿನ್ ಷಾ, ಕನ್ನಡ ವಿಭಾಗದ ಕಾರ್ಯನಿರ್ವಾಹಕರಾದ ಶ್ರೀ ಜಿ. ದೊಡ್ಡೇಗೌಡ ಅವರಿಗೂ, ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಳ್ಳಲು ಪ್ರೀತಿಯಿಂದ ನಿರ್ಣಯ ಸ್ವೀಕರಿಸಿದ 'ಬಸವರಾಜ ಕಟ್ಟೀಮನಿ ಪ್ರತಿಷ್ಠಾನ'ದ ಸಲಹಾ ಸಮಿತಿಗೂ, ಸಂಪಾದನೆಯ ಹೊಣೆಹೊತ್ತು ಅದನ್ನು ಶ್ರಮ-ಶ್ರದ್ಧೆಗಳಿಂದ ಪೂರೈಸಿದ ಪ್ರಧಾನ ಸಂಪಾದಕರಾದ ಪ್ರೊ. ಚಂದ್ರಶೇಖರ ಅಕ್ಕಿ ಅವರಿಗೂ, ಈ ಸಮಿತಿಯ ಇತರ ಸದಸ್ಯರಿಗೂ ನಾವು ಋಣಿಯಾಗಿದ್ದೇವೆ.

ಬಸವರಾಜ ಕಟ್ಟೀಮನಿಯವರು ನಿಧನರಾಗಿ ಕೇವಲ ೨೫ ವರ್ಷ ಗತಿಸಿವೆ. ಹೀಗಿದ್ದೂ ಅವರ ಎಲ್ಲ ಕೃತಿಗಳು ಇಂದು ಲಭಿಸುತ್ತಿಲ್ಲ. ಇಂಥ ಸಂದರ್ಭದಲ್ಲಿ ಪುಸ್ತಕ ನೀಡಿ ನೆರವಾದ ಸಪ್ನ ಬುಕ್‌ಹೌಸ್‌ದವರಿಗೂ ಶ್ರೀ ಚೆನ್ನವೀರ ಕಣವಿ, ಬೆಂಗಳೂರಿನ 'ಪುಸ್ತಕ ಮನೆ'ಯ ಶ್ರೀ ಹರಿಹರಪ್ರಿಯ, ಪಾಂಡವಪುರದ ಶ್ರೀ ಅಂಕೇಗೌಡ, ನಿರಂಜನರ ಮಗಳು ಶ್ರೀಮತಿ ಪ್ರಿಯದರ್ಶಿನಿ, ಪ್ರಾಚಾರ್ಯರಾದ ನೀಲಮ್ಮ, ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯದ ಗ್ರಂಥಪಾಲಕರಾದ ಶ್ರೀ ಶಿವಕುಮಾರ ಕೆ. ಅಂಗಡಿ ಮತ್ತು ಶ್ರೀ ಕಟ್ಟೀಮನಿ ಕುಟುಂಬದ ಸದಸ್ಯರಿಗೂ ನಮ್ಮ ಧನ್ಯವಾದಗಳು ಸಲ್ಲುತ್ತವೆ.

---

* ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ : ಕರ್ನಾಟಕ ಸರಕಾರ, ಪ್ರಸಾರಾಂಗ, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ-೨೦೧೫.

ಆಕರ : ಮಾರ್ಗ ಸಂಪುಟ-೭

ಕಲ್ಯಾಣದೀಪ್ತಿ

ಕಲ್ಯಾಣವೆಂಬ ಪ್ರಣತೆಯಲ್ಲಿ...:

೨೦೧೫

ಲಿಂಗಾಯತ ಸಮಾಜದಲ್ಲಿ ಸಾವಿರಾರು ಮಠಗಳಿವೆ. ಇಲ್ಲಿ ಒಂದನ್ನು ಹೋಲುವ ಇನ್ನೊಂದು ಮಠ ನೂರಾರು ಸಂಖ್ಯೆಯಲ್ಲಿ ಸಿಗುತ್ತವೆ. ಆದರೆ ಭಾಲ್ಕಿ ಪಟ್ಟದ್ದೇವರ ಮಠವನ್ನು ಹೋಲುವ ಮಠ ಇನ್ನೊಂದಿಲ್ಲವೆಂದೇ ಹೇಳಬೇಕು.

ಲಿಂಗಾಯತದಲ್ಲಿ ಗುರು (ವಿರಕ್ತ) ಮತ್ತು ಆಚಾರ್ಯವೆಂಬ ಎರಡು ಮಠಸಂಪ್ರದಾಯಗಳಿವೆ. ಇಂದು ಗುರು ಸಂಪ್ರದಾಯದ ಮಠಗಳು ಬಸವಣ್ಣನಲ್ಲಿ, ಆಚಾರ್ಯ ಸಂಪ್ರದಾಯದ ಮಠಗಳು ಪಂಚಾಚಾರ್ಯರಲ್ಲಿ ತಮ್ಮ ಮೂಲವನ್ನು ಹೇಳುತ್ತವೆ. ಆಚಾರ್ಯ ಸಂಪ್ರದಾಯದವರ ಈ ಹೇಳಿಕೆ ಇತ್ತೀಚಿನ ಕಲ್ಪನೆಯಾಗಿದೆ. ಮೂಲತಃ ಇವರೂ ಬಸವಣ್ಣನೇ ತಮ್ಮ ಗುರುವೆಂದು ನಂಬಿದ್ದರು. "ಶ್ರೀಗುರು ಬಸವಲಿಂಗಾಯ ನಮಃ" ಎಂಬುದು ಇವರಿಗೂ ಮಂತ್ರವಾಗಿದ್ದಿತು. ಈ ಹಳೆಯ ಸಂಪ್ರದಾಯವನ್ನು ಈಗಲೂ ಉಳಿಸಿಕೊಂಡು ಬಂದಿರುವ ಆಚಾರ್ಯ (ಪಟ್ಟದ ದೇವರು)ಸಂಪ್ರದಾಯದ ಏಕೈಕ ಉದಾಹರಣೆಯಾಗಿದೆ, ಭಾಲ್ಕಿ ಪಟ್ಟದ್ದೇವರಮಠ.

ಇನ್ನೊಂದು ವೈಶಿಷ್ಟ್ಯವೆಂದರೆ ಎಲ್ಲ ಲಿಂಗಾಯತ ಮಠಗಳಿಗೆ ಜಂಗಮ ಜಾತಿಯವರೇ ಅಧಿಪತಿಗಳಾಗುವ ಭೇದ ನೀತಿಯ 'ಏಕಸತ್ತಾ' ಪದ್ಧತಿ ಈಚೆಗೆ ಬೆಳೆದು ಬರುತ್ತಲಿದೆ. ಭಾಲ್ಕಿಯದು ಈ ಬಗೆಯ ಭೇದ ನೀತಿಯಿಲ್ಲದ ಹಳೆಯ 'ಲೋಕಸತ್ತಾ' ಪದ್ಧತಿಯನ್ನು ಮಾತ್ರ ಈಗಲೂ ಉಳಿಸಿಕೊಂಡು ಬಂದ ಮಠವಾಗಿದೆ. ಈ ಎರಡು ಕಾರಣಗಳಿಂದಾಗಿ ಇಂದು ಇದನ್ನು ಹೋಲುವ ಇನ್ನೊಂದು ಮಠವಿಲ್ಲವೆಂದು ಹೇಳುವುದು.

ಭಾಲ್ಕಿ ಮಠದ ಇತಿಹಾಸದಲ್ಲಿ ಪೂಜ್ಯ ಶ್ರೀ ಚೆನ್ನಬಸವ ಪಟ್ಟದ ದೇವರು ಒಬ್ಬ ಯುಗಪುರಷರು. "ಒಳಗೆ ಲಿಂಗದ ಕೂಟದಲ್ಲಿ ಮನವಡಗಿರಬೇಕು ಹೊರಗೆ ಜಂಗಮದ ಮಾಟದಲ್ಲಿ ತನುವಿಡಿದಿರಬೇಕು" ಎಂಬ ವಚನ ವಾಕ್ಯಕ್ಕೆ ಅವರು ಜೀವಂತ ನಿದರ್ಶನವೆನಿಸಿದ್ದರು. ಈ ತತ್ವ ಅವರಲ್ಲಿ ೧೨ನೆಯ ಶತಮಾನದಷ್ಟು ಹಳೆಯದು, ೨೧ನೆಯ ಶತಮಾನದಷ್ಟು ಹೊಸದು. ಹೀಗಾಗಿ ಅವರ ವ್ಯಕ್ತಿತ್ವದಲ್ಲಿ ಸಂಪ್ರದಾಯದ ಪರಿಷ್ಕರಣ ಎದ್ದು ಕಾಣುತ್ತಿತ್ತು. ಇವುಗಳಲ್ಲಿ ಜಂಗಮ ಮಾಟದ ಪರಿಷ್ಕರಣವು ಅನ್ನದಾಸೋಹ, ಅಕ್ಷರದಾಸೋಹ, ರಾಷ್ಟ್ರಭಕ್ತಿ, ರಾಜ್ಯಭಾಷಾ ಪ್ರೀತಿ ಇತ್ಯಾದಿ ಶಾಖೆಗಳಲ್ಲಿ ಬಿಚ್ಚಿಕೊಂಡು ಬೆಳೆದಿದ್ದಿತು.

ಚೆನ್ನಬಸವ ಪಟ್ಟದದೇವರ ಬಳಿಕ ಪೀಠಕ್ಕೆ ಬಂದವರು ಪ್ರಸ್ತುತ ಶ್ರೀ ಬಸವಲಿಂಗ ಪಟ್ಟದ್ದೇವರು, ಯುಗಪುರುಷರೊಬ್ಬರಿಗೆ ವಾರಸುದಾರರಾಗಿ ಬರುವ ಸವಾಲು ಸಣ್ಣದೇನಲ್ಲ. ಈ ಅವಕಾಶವನ್ನು

ಆಹ್ವಾನವೆಂಬಂತೆ ಸ್ವೀಕರಿಸಿ ನಿರ್ವಹಿಸುತ್ತ ಬಂದವರು ಇವರು. ಮೈಸೂರು, ತುಮಕೂರು, ಚಿತ್ರದುರ್ಗ, ಸಿರಿಗೆರೆ, ಶಿವಮೊಗ್ಗ, ಗದಗ, ಹುಬ್ಬಳ್ಳಿ, ಇಲಕಲ್ಲ ಹೀಗೆ ಉತ್ತರಕ್ಕೆ ಬಂದಂತೆ ಲಿಂಗಾಯತ ಮಠಗಳು ಬೆಳೆಯಲಿಕ್ಕೆ ಅವಕಾಶಗಳು ಕಡಿಮೆ. ಹೀಗಿರುವಾಗ ಇನ್ನು ಉತ್ತರದ ಭಾಲ್ಕಿಮಠಕ್ಕೆ ಅಂಥ ಅವಕಾಶ ಮತ್ತೂ ಕಡಿಮೆ. ಈ ಬಗೆಯ ಸವಲತ್ತು ಕೊರತೆಯನ್ನು ಸೋಪಾನ ಮಾಡಿಕೊಂಡು ಬೆಳೆದವರು, ಮಠವನ್ನು ಸಮಾಜವನ್ನು ಬೆಳೆಸಿದವರು ಶ್ರೀ ಬಸವಲಿಂಗ ಪಟ್ಟದದೇವರು. ಮೇಲೆ ಹೇಳಿದ "ಒಳಗೆ ಲಿಂಗದ ಕೂಟದಲ್ಲಿ ಮನವಡಗಿರಬೇಕು, ಹೊರಗೆ ಜಂಗಮ ಮಾಟದಲ್ಲಿ ತನುವಿಡಿದಿರಬೇಕು" ಎಂಬ ಗುರುಗಳು ನಂಬಿದ್ದ ಸೂತ್ರವನ್ನೇ ಗಟ್ಟಿಯಾಗಿ ಹಿಡಿದು ಇವರು ಲಿಂಗಾಯತ ಸಿದ್ಧಾಂತ ಸಮಾಜಗಳನ್ನು ವಿಸ್ತಾರದಿಂದ ವಿಸ್ತಾರಕ್ಕೆ ಜಾತ್ಯಾತೀತವಾಗಿ ಬೆಳೆಸಿದರು. ಅನೇಕ ಶಿಕ್ಷಣ ಸಂಸ್ಥೆ ಅನೇಕ ಗ್ರಂಥ ಪ್ರಕಾಶನ ಸಂಸ್ಥೆ, ಅನೇಕ ಪ್ರಶಸ್ತಿ, ಬಹುಮಾನ, ಅನೇಕ ಧಾರ್ಮಿಕ ಪರಿಷತ್ತು, ಅನೇಕ ಪ್ರತಿಷ್ಠಾನ, ಅನೇಕ ಸಾಂಸ್ಕೃತಿಕ ಸಂಘಗಳನ್ನು ಹುಟ್ಟುಹಾಕಿದವರು. ಇವುಗಳಲ್ಲಿ ಎತ್ತಿ ಹೇಳಬೇಕಾದುದು ಹೊರರಾಜ್ಯಗಳಲ್ಲಿ ಬಸವಪ್ರಜ್ಞೆ ಮೂಡಿಸಿದ ಸಂಘಟನಾಕಾರ್ಯ.

ಲಿಂಗಾಯತ ಗುರುಪೀಠ(ವಿರಕ್ತಪೀಠ)ದವರು ತಮ್ಮ ಕಾರ್ಯವ್ಯಾಪಿಯನ್ನು ಕರ್ನಾಟಕಕ್ಕೆ ಸೀಮಿತಗೊಳಿಸುತ್ತ ಬಂದರು. ಇದನ್ನು ಗಮನಿಸಿ ಆಚಾರ್ಯಪೀಠದವರು ಹೊರರಾಜ್ಯಗಳಾದ ಮಹಾರಾಷ್ಟ್ರ ಆಂಧ್ರಪ್ರದೇಶಗಳಲ್ಲಿ ಲಿಂಗಾಯತ ವೀರಶೈವ ಒಂದೇ ಎಂಬ ಭ್ರಮೆಯನ್ನು ಬಿತ್ತಿ 'ಲಿಂಗೀಬ್ರಾಹ್ಮಣ ಗ್ರಂಥಮಾಲೆ' ಇತ್ಯಾದಿಗಳನ್ನು ಆರಂಭಿಸಿ ತಮ್ಮ ಸಿದ್ಧಾಂತ ಶಿಖಾಮಣಿ ಮೊದಲಾದುವು ಲಿಂಗಾಯತದ ಧರ್ಮಗ್ರಂಥಗಳೆಂದು ಬೋಧಿಸಿ, ಅಲ್ಲಿಯ ಜನರು ಮೊದಲಿನಿಂದಲೂ ಅನುಸರಿಸುತ್ತಲಿದ್ದ ಬಸವ ಸಿದ್ಧಾಂತದ ದಾರಿ ಬಿಡಿಸಿದರು. ಈ ತಪ್ಪನ್ನು ತಿದ್ದುವ ದೃಷ್ಟಿಯಿಂದ ಶ್ರೀ ಬಸಲಿಂಗ ಪಟ್ಟದದೇವರು "ಮಹಾರಾಷ್ಟ್ರ ಬಸವ ಪರಿಷತ್ತು" ಮತ್ತು "ಆಂಧ್ರಪ್ರದೇಶ ಬಸವ ಪರಿಷತ್ತು" ಸ್ಥಾಪಿಸಿದುದು ಐತಿಹಾಸಿಕ ಸಾಧನೆಯೆನಿಸಿದೆ. ಇತ್ತೀಚೆ ಅವರು ಕೈಕೊಂಡ "ಸಮಗ್ರ ಮಹಾರಾಷ್ಟ್ರ ಬಸವಧರ್ಮ ಯಾತ್ರೆ" 'ನ ಭೂತೋ ನ ಭವಿಷ್ಯತಿ' ಎಂದೇ ಹೇಳಬೇಕು. ಹೀಗೆ ಸಂಸ್ಕೃತಿಯನ್ನು ಉಳಿಸಿದ ಬೆಳೆಸಿದ ಶ್ರೀಗಳಿಗೆ ಅರ್ಪಿಸಿದ ಅಭಿನಂದನ ಗ್ರಂಥವಾಗಿದೆ, "ಕಲ್ಯಾಣದೀಪ್ತಿ."

ಕರ್ನಾಟಕ ಸಂದರ್ಭದಲ್ಲಿ 'ಕಲ್ಯಾಣ' ಶಬ್ದ ತುಂಬ ಧ್ವನಿಪೂರ್ಣವಾದುದು. ಇದು ರೂಢನಾಮದಲ್ಲಿ 'ಮಂಗಳ' ಅರ್ಥವನ್ನು ಅಂಕಿತನಾಮದಲ್ಲಿ ಗ್ರಾಮದ ಹೆಸರನ್ನು ಸೂಚಿಸುತ್ತಿದ್ದರೆ, ಶರಣ ಚಳವಳಿಯಿಂದಾಗಿ 'ಬಸವಕಲ್ಯಾಣ' ವೆನಿಸಿ, 'ಜನಕಲ್ಯಾಣ' ಅರ್ಥವನ್ನು ಪ್ರತಿಬಿಂಬಿಸುತ್ತದೆ. ಶ್ರೀ ಬಸವಲಿಂಗ ಪಟ್ಟದದೇವರು ಮೇಲೆ ಹೇಳಿದಂತೆ 'ಜನಕಲ್ಯಾಣ ಮಣಿಹ'ವನ್ನು ನಿರ್ವಹಿಸುತ್ತ ಬಂದ ಕಾರಣ ಈ ಗ್ರಂಥಕ್ಕೆ ಜನಕಲ್ಯಾಣದ ಬೆಳಕು ಅರ್ಥದಲ್ಲಿ "ಕಲ್ಯಾಣದೀಪ್ತಿ" ಎಂದು ನಾಮಕರಣ ಮಾಡಲಾಗಿದೆ.

ಇದು ಅಭ್ಯಾಸಿಗಳಿಗೆ ಒಂದು ಸಂದರ್ಭ ಗ್ರಂಥವಾಗಬೇಕೆಂಬ ಅದರಲ್ಲಿಯೂ ಉಪೇಕ್ಷಿತ ಜ್ಞಾನಕ್ಷೇತ್ರವನ್ನು ಬೆಳಕಿಗೆ ತರಬೇಕೆಂಬ ಉದ್ದೇಶ ನಮ್ಮದಾಗಿದೆ. ಈ ದೃಷ್ಟಿಯಿಂದ ಆರಂಭದಲ್ಲಿ ಶ್ರೀಮಠದ ಶ್ರೀಗಳ ಸಾಧನೆ, ಅಂತ್ಯದಲ್ಲಿ ಈ ಸಾಧನೆಗಳ ವಿವರ, ಮಧ್ಯದಲ್ಲಿ 'ಕಲ್ಯಾಣ ಕರ್ನಾಟಕದ ತತ್ವಪದಕಾರರು' ವಿಷಯ ಕುರಿತ ಅಭ್ಯಾಸಪೂರ್ಣ ಪ್ರಬಂಧಗಳನ್ನು ಇಲ್ಲಿ ಸಂಯೋಜಿಸಲಾಗಿದೆ.

ಕಲ್ಯಾಣ ಕರ್ನಾಟಕ ಪ್ರವೇಶ ೧೨ನೆಯ ಶತಮಾನದ ಬಳಿಕ ಅನ್ಯ ಆಕ್ರಮಣಗಳಿಗೆ ತುತ್ತಾಗುತ್ತಲೇ ಬಂದಿತು. ಇದರಿಂದಾಗಿ ಇಲ್ಲಿ ಪ್ರತಿಷ್ಠಿತ ಧರ್ಮಗಳಾಗಲಿ ರಾಜ್ಯಗಳಾಗಲೀ ತಲೆ ಎತ್ತಲೇ ಇಲ್ಲ. ಇದ್ದುದರಲ್ಲಿಯೇ ಸಾಮಾಜಿಕರು ತಮ್ಮ ತಮ್ಮ ಪ್ರದೇಶಗಳ ನಾಥ, ಆರೂಢ, ಸೂಫಿ ಇತ್ಯಾದಿ ಆಧ್ಯಾತಿಕ ಪಂಥಗಳನ್ನು ಅನುಸರಿಸುತ್ತ ಬಂದರು. ಇದರ ಪರಿಣಾಮವಾಗಿ ಇಲ್ಲಿ ಪರಂಪರಾಗತ ಕನ್ನಡ ಶಿಷ್ಟ ಸಾಹಿತ್ಯಪ್ರಕಾರಗಳು ಹುಟ್ಟಿಕೊಳ್ಳಲಿಲ್ಲ. ಇಂಗ್ಲಿಷ್ ಪ್ರಭಾವದಿಂದ ತಲೆಯೆತ್ತಿದ್ದ ಹೊಸ ಸಾಹಿತ್ಯ ಪ್ರಕಾರಗಳು ಹುಟ್ಟಲಿಲ್ಲ. ಬದಲು ಮೇಲೆ ಹೇಳಿದ ಪಂಥೀಯ ತತ್ವಪದಗಳು ಹುಟ್ಟಲಾರಂಭಿಸಿದವು.

ಈ ಸಾಹಿತ್ಯ ಪ್ರಕಾರದ ಬಿಡಿಯಾದ ಅಧ್ಯಯನ ಈ ವರೆಗೆ ಜರುಗಿದ್ದರೂ ಒಂದು ಸಮಗ್ರ ಅಧ್ಯಯನದ ಕೊರತೆ ಇನ್ನೂ ಉಳಿದುಕೊಂಡಿದ್ದಿತು. ಇದನ್ನು ಪೂರೈಸುವ ಉದ್ದೇಶದಿಂದ 'ಕಲ್ಯಾಣ ಕರ್ನಾಟಕದ ತತ್ವಪದಕಾರರು' ಎಂಬ ವಿಷಯಕ್ಕೆ ಈ ಅಭಿನಂದನ ಗ್ರಂಥದಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ. ಇನ್ನೊಂದು ಉದ್ದೇಶ: ಇತ್ತೀಚೆ ವಿದ್ವಾಂಸರು ಪ್ರತಿಷ್ಠಿತ ವಿಷಯಗಳ ಅಭ್ಯಾಸಕ್ಕೆ ಬದಲು ಸ್ಥಳೀಯ ವಿಷಯಗಳ ಅಭ್ಯಾಸದ ಕಡೆಗೆ ಹೆಚ್ಚು ಒಲವು ತೋರಿಸುತ್ತಲಿದ್ದು, ಇದಕ್ಕೆ ಪೂರಕವೆಂಬಂತೆಯೂ ಈ ಕೃತಿ ಆಕೃತಿ ಪಡೆದಿದೆ.

'ಕಲ್ಯಾಣದೀಪ್ತಿ' ಕೃತಿ ರಚನೆಗಾಗಿ ಹಗಲೂ ಇರುಳೂ ದುಡಿದವರು ಸಂಪಾದಕರಾದ ಡಾ. ಗುರುಲಿಂಗಪ್ಪ ದಬಾಲೆ. ಇವರು ತೋರಿಸಿದ ಆಸಕ್ತಿ ದುಡಿದ ರೀತಿ ಅನನ್ಯವಾದುದು. ಸಕಾಲದಲ್ಲಿ ಲೇಖನ ಪೂರೈಸಿದ ವಿದ್ವಾಂಸರ ಸಹಕಾರವೂ ಸ್ಮರಣೀಯವಾದುದು. ಇವರಿಗೆಲ್ಲ ಕೃತಜ್ಞತೆಗಳು.

ಆಕರ : ಮಾರ್ಗ ಸಂಪುಟ–೭

■■

೩೫೭

ಅಭಿಜಾತ

ಗೌರವ ಸಂಪಾದಕರ ನುಡಿ

೨೦೦೬

ಅಭಿನಂದನ ಸಾಹಿತ್ಯ ಕನ್ನಡಕ್ಕೆ ವಿಶಿಷ್ಟವಾದುದು ಎಂದರೆ ತಪ್ಪಲ್ಲ. ಅದರ ಪರಂಪರೆ ಎಷ್ಟು ಸಮೃದ್ಧ ಮತ್ತು ಉಜ್ವಲವೆಂದರೆ, ಅದನ್ನೊಂದು ಪ್ರತ್ಯೇಕ, ಪ್ರಶಸ್ತ ಪ್ರಕಾರವನ್ನಾಗಿಯೇ ಪರಿಗಣಿಸಬಹುದು. ಆಚಾರ್ಯ 'ಶ್ರೀ' ಯವರಿಗೆ ಸಮರ್ಪಿತವಾದ 'ಸಂಭಾವನೆ' ಕನ್ನಡದ ಮೊಟ್ಟಮೊದಲನೆಯ ಅಭಿನಂದನ

ಗ್ರಂಥ. ಕನ್ನಡ ನವೋದಯಕ್ಕೆ ನಾಂದಿ ಹಾಡಿದ–ಅಥವಾ ಹಾಡಿದವರಲ್ಲಿ ಒಬ್ಬರಾದ 'ಶ್ರೀ'ಯವರ ಅಭಿನಂದನ ಗ್ರಂಥವೆ ಕನ್ನಡದಲ್ಲಿ ಅಭಿನಂದನ ಗ್ರಂಥ ಪರಂಪರೆಗೆ ನಾಂದಿಯಾದುದು ಅರ್ಥಪೂರ್ಣವಾಗಿದೆ. ಮೊದಮೊದಲು ಸಾಹಿತಿಗಳಿಗಷ್ಟೇ ಸಮರ್ಪಿತವಾಗುತ್ತಿದ್ದ ಸಂಭಾವನ ಗ್ರಂಥಗಳು ಈಚೆಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಸಿದ್ಧಿಗಳನ್ನು ಮೆರೆದ ಮಹನೀಯರಿಗೂ ಸಮರ್ಪಿತವಾಗತೊಡಗಿ, ಅವುಗಳ ಪರಿಧಿ ವಿಸ್ತರಿಸಿ, ಬೆಳೆ ಹುಲುಸಾಯಿತು.

ಅಭಿನಂದನ ಗ್ರಂಥಗಳ ಉದ್ದೇಶ ಮತ್ತು ಪ್ರಯೋಜನ ಅನೇಕ ಮುಖವಾದುದು. ಮುಖ್ಯವಾಗಿ ಅವು ಸಂಬಂಧಿಸಿದ ವ್ಯಕ್ತಿಗೆ, ಅಥವಾ ಶಕ್ತಿಗೆ, ನಾಡಿನ ಗೌರವ, ಕೃತಜ್ಞತೆಯ ದ್ಯೋತಕಗಳು, ನುಡಿನಮನಗಳು. ಸಾಮಾನ್ಯವಾಗಿ ಆಯಾ ವ್ಯಕ್ತಿಯ ಜೀವನ, ವ್ಯಕ್ತಿತ್ವ, ಕೃತಿಗಳನ್ನು–ಪುಸ್ತಕಗಳಾಗಬಹುದು ಅಥವಾ ಅನ್ಯಕಾರ್ಯಗಳಾಗಬಹುದು–ಕುರಿತ ಲೇಖನಗಳನ್ನು ಅಭಿನಂದನ ಗ್ರಂಥಗಳು ಒಳಗೊಂಡಿರುತ್ತವೆ. ಕೆಲವೊಂದು ಅಭಿನಂದನ ಗ್ರಂಥಗಳಲ್ಲಿ 'ನಾಯಕ' ವ್ಯಕ್ತಿಯೆ ತನ್ನ ಬದುಕನ್ನು ಸಮೀಕ್ಷಿಸುವುದುಂಟು. ಹೀಗಾಗಿ ಕಥನ, ಮಥನ ಎರಡೂ ಅಭಿನಂದನ ಗ್ರಂಥಗಳ ಎರಡು ಪ್ರಮುಖ ಕವಲುಗಳಾಗಿದ್ದು, ಒಟ್ಟಿನಲ್ಲಿ ಅವುಗಳಿಗೊಂದು ಪರಾಮರ್ಶನ ಗ್ರಂಥದ ಸ್ವರೂಪ ಪ್ರಾಪ್ತವಾಗಿ, ಅವು ವ್ಯಕ್ತ್ಯತೀತ ನೆಲೆಯಲ್ಲಿ ಕೂಡ ಮೌಲಿಕವಾಗಿ ಪರಿಣಮಿಸುತ್ತವೆ. ಒಂದು ಬದುಕು ಮತ್ತು ಸಮಾಜಕ್ಕೆ ಅದು ಬೀರಿದ ಬೆಳಕು–ಎರಡನ್ನೂ ಅಭಿನಂದನ ಕೃತಿಗಳು ದಾಖಲಿಸುವುದರ ಮೂಲಕ ಸ್ವತಃ ದೀಪಸ್ತಂಬಗಳಾಗುವ ಸಂಭವವುಂಟು!

ಪ್ರಕೃತ 'ಅಭಿಜಾತ' ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕರಾಗಿ, ಹಿರಿಯ ಕನ್ನಡ ಲೇಖಕರಲ್ಲಿ ಒಬ್ಬರಾಗಿ, ರಾಗೌ ಎಂಬ ಎರಡೇ ಅಕ್ಷರಗಳಿಂದ ಹೆಸರಾಂತ ಡಾ. ರಾಮೇಗೌಡ ಅವರನ್ನು ಕುರಿತ ಅಭಿನಂದನ ಗ್ರಂಥ; ಗಾತ್ರ, ಗುಣ ಎರಡರಲ್ಲೂ ಗಣ್ಯವಾದದ್ದು.

ವ್ಯಕ್ತಿಯಾಗಿ ರಾಗೌ ಅಹಂಕಾರದೂರರಾದ ಆಡಂಬರ ಆವೇಶಗಳಿಲ್ಲದ ಸರಳ ಸಜ್ಜನ. (ಅಭಿನಂದನ ಗ್ರಂಥಗಳಲ್ಲಿ ಎಲ್ಲರ ಬಗೆಗೂ ಸಾಂಪ್ರದಾಯಿಕವಾಗಿ ಹೀಗೆ ಹೇಳುವುದುಂಟು! ಆದರೆ ರಾಗೌ ಇಂಥ ವಿಶೇಷಣಗಳಿಗೆ ದಿಟವಾಗಿ ತಕ್ಕವರು)ಎಲ್ಲರ ಪ್ರೀತ್ಯಾದರಗಳಿಗೆ ಅವರು ಪಾತ್ರರು; ಯಾರ ಮನಸ್ಸನ್ನೂ ನೋಯಿಸದ ಸುಸಂಸ್ಕೃತ ಚೇತನ:'Gentleman' ಎನ್ನಬಹುದಾದವರು. (ಆದರೆ ವೈಯಕ್ತಿಕ ಜೀವನದಲ್ಲಿ ಅವರು ಸ್ವತಃ ನೊಂದು, ಆ ಪಾಡನ್ನು ಹಾಡನ್ನಾಗಿ ಪರಿವರ್ತಿಸಿ, ಸಾಂತ್ವನಗೊಂಡಿದ್ದಾರೆ). ಪ್ರಚಾರ, ಪ್ರಸಿದ್ಧಿಗಳಿಗೆ ಹಂಬಲಿಸದೆ, ಮುನ್ನುಗ್ಗದೆ ಎಲೆಮರೆಯ ಹೂವಿನಂತೆ, ಹಣ್ಣಿನಂತೆ ಇದ್ದಾರೆ ರಾಗೌ.(ಆದರೂ ಹೂವು ಹಣ್ಣುಗಳ ಪರಿಮಳ ಸುತ್ತ ಪಸರಿಸುವುದಿಲ್ಲವೆ?)ಅವರೊಬ್ಬ ವಿವಾದಾತೀತ ವ್ಯಕ್ತಿ ಎಂಬುದು ಮುಖ್ಯವಾದ ಮಾತು. ಮೌಲ್ಯಗಳ ವಿಷಯದಲ್ಲಿ ಎಂದೂ ರಾಜಿಮಾಡಿಕೊಳ್ಳದ, ಗಟ್ಟಿಯೂ ಕೆಲವೊಮ್ಮೆ ನಿಷ್ಠುರವೂ ಆದ ವ್ಯಕ್ತಿತ್ವ ಅವರದು.

ಇದು ರಾಗೌ ಅವರ ಒಂದು ಮುಖ: ವ್ಯಕ್ತಿತ್ವ ತಪ; ಇನ್ನೊಂದು ಮುಖ: ವಾಙ್ಮಯತಪ. ಅವರದು ಸದಾ ಅಂತರ್ಮುಖ, ಅಂತರ್ಮನನ ಹಾಗೂ ಮನನ. ಹೊರಗಿನ ಕೇಕೆ, ಕೋಲಾಹಲ, ಕ್ಷೋಭೆಗಳನ್ನು ಅಷ್ಟಾಗಿ ಹಚ್ಚಿಕೊಳ್ಳದೆ. ತಮ್ಮ ಪಾಡಿಗೆ ತಾವು ಬರವಣಿಗೆಯ ಕಾಯಕದಲ್ಲಿ ಅವರು

ಯಾವಾಗಲೂ ಶ್ರದ್ಧಾಪೂರ್ವಕವಾಗಿ ತೊಡಗಿದವರು. ಅವರದು ಅಚ್ಚರಿಗೊಳಿಸುವಂಥ, ಸಾಕಷ್ಟು ಸಮೃದ್ಧವಾದ ಸಾಹಿತ್ಯ ನಿರ್ಮಾಣ. ವಿಶೇಷ ವ್ಯುತ್ಪತ್ತಿ, ಸ್ತುತ್ಯ ಪ್ರತಿಭೆ ಎರಡಕ್ಕೂ ಅವರು ಒಡೆಯರು; ಸೃಜನಶೀಲ, ಸೃಜನೇತರ ಎರಡು ಸ್ತರಗಳಲ್ಲೂ ಅವರು ಉತ್ತಮವಾದ ಕೆಲಸ ಮಾಡಿದ್ದಾರೆ. ಅವರ ಸೃಜನೇತರ ಬರಹಗಳಲ್ಲೂ ಸೃಜನಶೀಲ ಗುಣವುಂಟು, ಅವರ ಕೃಷಿ ಬಹುಪ್ರಕಾರಗಳಲ್ಲಿದೆ. ಸಂಶೋಧನೆ, ವಿಮರ್ಶೆ, ಗ್ರಂಥಸಂಪಾದನೆ, ಜಾನಪದ, ಕಾವ್ಯ, ನಾಟಕ, ಮಕ್ಕಳ ಸಾಹಿತ್ಯ ಇತ್ಯಾದಿ, ರಾಗೌ ಸಾಹಿತ್ಯ ಸಾಂಸ್ಕೃತಿಕ ಪ್ರಾಮುಖ್ಯವನ್ನೂ ತಳೆದಿದೆ. ಅವರೊಬ್ಬ ಶ್ರೇಷ್ಠ ಅಧ್ಯಾಪಕ ಮತ್ತು ವಾಗ್ಮಿ ಎಂಬುದನ್ನೂ ಹೇಳಬೇಕು.

ಈ ಗ್ರಂಥದಲ್ಲಿ ಮೂರು ಮುಖ್ಯ ವಿಭಾಗಗಳಿವೆ. ಮೊದಲನೆಯ ವಿಭಾಗದಲ್ಲಿ ರಾಗೌ ಅವರ ಶಿಷ್ಯರು ಮತ್ತು ಮಿತ್ರರು ಅವರ ವ್ಯಕ್ತಿತ್ವದ ವಿವಿಧ ಮುಖಗಳ ಚಿತ್ರಗಳನ್ನು ಕಟ್ಟಿಕೊಟ್ಟಿದ್ದಾರೆ. (ಪ್ರಾಯಶಃ ಮತ್ತಾವುದೇ ಅಭಿನಂದನ ಗ್ರಂಥದಲ್ಲಿ ಇಷ್ಟೊಂದು ಮಂದಿ ಒಬ್ಬ ಸಾಧಕನನ್ನು ಕುರಿತು ಬರೆದಿಲ್ಲ ಎನ್ನುವುದು ರಾಗೌ ಅವರ ಜನಪ್ರಿಯತೆಗೆ ಸಾಕ್ಷಿ.)ಅನೇಕರು ಕವನ ರೂಪದಲ್ಲಿ ರಾಗೌ ಅವರನ್ನು ಕಂಡು, ಕಂಡರಿಸಿದ್ದಾರೆ. ಕವಿತೆ ಯಾವಾಗಲೂ ಆತ್ಮೀಯತೆಯ ಪ್ರತೀಕ. ರಾಗೌ ಬಾಳಿನಲ್ಲಿ ಆತ್ಮೀಯತೆಯನ್ನು ವ್ಯಕ್ತಿಪಡಿಸಿ, ತಾವೂ ಪಡೆದು, 'ಇವ ನಮ್ಮವ' ಎನಿಸಿಕೊಂಡಿದ್ದಾರೆ. ಅವರು ಧನ್ಯರು. (ಗದ್ಯ ಬರಹಗಳಲ್ಲಿ ಪುನರುಕ್ತಿಗಳು ಅನಿವಾರ್ಯ).

ಎರಡು 'ಸಂದರ್ಶನ'ಗಳಲ್ಲಿ ರಾಗೌ ಅವರ ಬದುಕು ಒಲವು ನಿಲುವು ದೃಷ್ಟಿಧೋರಣೆಗಳಿಗೆ ಸಂಬಂಧಿಸಿದ ಹಲವಾರು ಉಪಯುಕ್ತವಾದ ಅಂಶಗಳಿವೆ.

ಎರಡನೆಯ ವಿಭಾಗ ರಾಗೌ ಕೃತಿಗಳ ಸಮೀಕ್ಷೆಗೆ ಮತ್ತು ಬೆಲೆಗಟ್ಟುವಿಕೆಗೆ ಮೀಸಲು. ಆದರೆ ಸಮೀಕ್ಷೆ ತುಸು ತೆಳುವಾಗಿದೆ. ಸಾಕಷ್ಟು ಸಮಗ್ರವಾಗಿ ಮೂಡಿಬಂದಿಲ್ಲ ಎನಿಸುತ್ತದೆ. ಈ ಅಸಮಗ್ರತೆ ಒಮ್ಮೊಮ್ಮೆ ಸಹಜವೂ ಹೌದು.

ಮೂರನೆಯ ವಿಭಾಗದಲ್ಲಿ ಕಾವ್ಯಮೀಮಾಂಸೆ, ವಿಮರ್ಶೆ, ಜಾನಪದ ಮುಂತಾದ, ರಾಗೌ ಅವರಿಗೆ ಪ್ರಿಯವಾದ ವಿಷಯಗಳ ಬಗೆಗೆ ವ್ಯಾಸಂಗಪೂರ್ಣ ಲೇಖನಗಳು ಅಳವಟ್ಟಿವೆ. ಇದು ವಾಚಕವರ್ಗಕ್ಕೆ ತುಂಬ ಉಪಾದೇಯವಾದ ಭಾಗ: ಇದು ಕೂಡ ಇನ್ನಷ್ಟು ಮೈದುಂಬಿಕೊಳ್ಳಬಹುದಿತ್ತು. ಆದರೆ ಅದಕ್ಕೆ ಕೊನೆಯೆಲ್ಲಿದೆ?

ಈ ಹೊತ್ತಗೆ ಮೂರು ನಾಲ್ಕು ವರ್ಷಗಳ ಹಿಂದೆಯೇ ಬರಬೇಕಿತ್ತು; ಈಗಲಾದರೂ ಸಾಕಷ್ಟು ತೃಪ್ತಿಕರವಾಗಿ ಹೊರಬರುತ್ತಿರುವುದು ಸಂತೋಷ, ಸಮಾಧಾನಗಳ ಸಂಗತಿಯಾಗಿದೆ. "Better late than never!"ಎಂಬುದೊಂದು ಆಂಗ್ಲ ಸೂಕ್ತಿ, ಹಾಗೆಯೇ, "Better late and ever!"ಎಂದೂ ಹೇಳಬಹುದೇನೊ)ಸಂಪಾದಕರ, ಪ್ರಕಾಶಕರ ಮತ್ತು ಮುದ್ರಕರ ಶ್ರಮ ತಾಳ್ಮೆಗಳು ಸಾರ್ಥಕವಾಗಿವೆ. ಅವರು ಮತ್ತು ಸಂಬಂಧಿಸಿದ ಎಲ್ಲರೂ ಅಭಿನಂದನೀಯರು.

ನಾವು ಏನೂ ಕೆಲಸ ಮಾಡದಿದ್ದರೂ, ಗೌರವ ಸಂಪಾದಕತ್ವದ ಗೌರವ ನಮಗೆ ಲಭ್ಯವಾಗಿದೆ. ಬಹುಶಃ ಹಿರಿಯರೆಂಬ ಕಾರಣದಿಂದ! ಈ ಅಯಾಚಿತ ಅದೃಷ್ಟಕ್ಕಾಗಿ ಎಲ್ಲರಿಗೂ ನಮ್ಮ ನಮನಗಳನ್ನು ಸಲ್ಲಿಸುತ್ತೇವೆ.

ಈ ಮಹತ್ತ್ವದ ಉಪಾಯನ ಡಾ. ರಾಗೌ ಅವರಿಗೆ ಇಷ್ಟವಾಗಲಿ, ಅಭಿನಂದನ ಗ್ರಂಥಮಾಲೆಗೆ ಮಾತ್ರವಲ್ಲದೆ ಒಟ್ಟಿನ ಮೇಲೆ ನಾಡುನುಡಿಗಳಿಗೊಂದು ಒಳ್ಳೆಯ ಕೊಡುಗೆಯಾಗಿ ಪ್ರಯೋಜನ ಪ್ರದವಾಗಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇವೆ.

---

* ಅಭಿಜಾತ : ಗೌರವ ಸಂಪಾದಕು–ಎಂ. ಎಂ. ಕಲಬುರ್ಗಿ, ಸಿ.ಪಿ.ಕೆ, ಸಂವಹನ, ಮೈಸೂರು–೨೦೦೬

ಆಕರ : ಮಾರ್ಗ ಸಂಪುಟ–೮

■■

೩೫೮

ಶರಣಶ್ರೀ

೨೦೧೫

ಪ್ರಧಾನ ಸಂಪಾದಕರ ಮಾತು

'ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ.' ಚೆನ್ನಬಸವಣ್ಣನವರ ಈ ಮಾತು, 'ವ್ಯಕ್ತಿ(ವ್ಯಷ್ಟಿ)ಕಲ್ಯಾಣ ಪ್ರಜ್ಞೆ'ಗೆ ಸೀಮಿತನಾದವ ಭಕ್ತ; 'ಸಮಾಜ ಕಲ್ಯಾಣ ಪ್ರಜ್ಞೆ'ಗೆ ವಿಸ್ತಾರಗೊಂಡವ ಶರಣನೆಂಬ ಅರ್ಥವನ್ನು ಸೂಚಿಸುತ್ತದೆ.

ಭಾರತೀಯ ತತ್ವಜ್ಞಾನವು ಲೋಕಕಲ್ಯಾಣ ಪ್ರಜ್ಞೆಯ 'ಸೋಹಂ' ಹಂತಕ್ಕೆ ನಿಂತುಬಿಟ್ಟಿದ್ದಿತು. ಆಗ 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯ' ಎಂದು ಹೇಳುವ ಮೂಲಕ ಬಸವಣ್ಣನವರು ಆ 'ಸೋಹಂ' ತತ್ವವನ್ನು 'ದಾಸೋಹಂ' ತತ್ವಕ್ಕೆ ವಿಸ್ತರಿಸಿದರು. ಆದುದರಿಂದ ಹನ್ನೆರಡನೆಯ ಶತಮಾನದ ಕರ್ನಾಟಕದಲ್ಲಿ ಸಂಭವಿಸಿದುದು ಭಾರತದ ಇತರ ರಾಜ್ಯಗಳಲ್ಲಿಯಂಥ ಕೇವಲ ಆತ್ಮಕಲ್ಯಾಣದ 'ಭಕ್ತಿಚಳುವಳಿ' ಅಲ್ಲ, ಮುಂದುವರಿದು ಲೋಕಕಲ್ಯಾಣವೂ ಆಗಿರುವ 'ಶರಣಚಳುವಳಿ'ಯಾಗಿದೆ.

ಲಿಂಗಾಯತನಾದವನು 'ಗುರು'ವಾಗಬೇಕು, 'ಲಿಂಗ'ವಾಗಬೇಕು, 'ಜಂಗಮ'ವಾಗಬೇಕು. ಗುರು ಆಗುವುದೆಂದರೆ ಜ್ಞಾನಿಯಾಗುವದು, ಲಿಂಗವಾಗುವುದೆಂದರೆ ಆ ಜ್ಞಾನವನ್ನು ಕ್ರಿಯೆಯಾಗಿಸಿಕೊಂಡು ಬದುಕುವುದು, ಜಂಗಮವಾಗುವುದೆಂದರೆ ಆ ಜ್ಞಾನ–ಕ್ರಿಯಾ ಸಾಮರಸ್ಯ ವ್ಯಕ್ತಿತ್ವವನ್ನು

ಸಾಮಾಜೀಕರಣಗೊಳಿಸಿಕೊಳ್ಳುವುದು. ಹೀಗಾಗಿ ಮೇಲೆ ಹೇಳಿದ 'ಶರಣ' ಮತ್ತು ಈಗ ಹೇಳಿದ 'ಜಂಗಮ' ಎಂಬಿವು ಪರ್ಯಾಯ ಪದವೆನಿಸುತ್ತವೆ.

ವಚನಸಾಹಿತ್ಯದಲ್ಲಿ ಈ 'ಗುರು-ಲಿಂಗ-ಜಂಗಮ'ಗಳಿಗೆ ಪರ್ಯಾಯವಾಗಿ 'ಅರಿವು-ಅನುಭಾವ-ಆನಂದ' ಪದಗಳನ್ನು ಬಳಸುವುದರಿಂದ ಮೇಲೆ ಹೇಳಿದ ಶರಣ, ಜಂಗಮಗಳಿಗೆ 'ಅನುಭಾವಿ' ಎಂಬುದು ಇನ್ನೊಂದು ಪರ್ಯಾಯ ಪದವೆಂದೇ ಹೇಳಬಹುದು. ಒಟ್ಟಾರೆ, ಶರಣ(ಜಂಗಮ, ಅನುಭಾವಿ)ನೆಂದರೆ ದೈವೀ ವ್ಯಕ್ತಿತ್ವವನ್ನು ಸಾಮಾಜೀಕರಣಗೊಳಿಸಿಕೊಂಡವನೆಂದು ಅರ್ಥ. ಈ ವಿವರಣೆಯ ಬೆಳಕಿನಲ್ಲಿ ನೋಡಿದರೆ 'ಶ್ರೀ ಮುರುಘಾ ಶಿವಮೂರ್ತಿ ಜಗದ್ಗುರುಗಳು' ಎಂಬ ಅಭಿಧಾನವನ್ನು 'ಶ್ರೀ ಮುರುಘಾ ಶಿವಮೂರ್ತಿ ಶರಣರು' ಎಂದು ಪೂಜ್ಯರು ಬದಲಿಸಿಕೊಂಡುದು ಅರ್ಥಪೂರ್ಣವೆನಿಸುತ್ತದೆ. ರಾಜಸತ್ತೆಯ 'ಜಗದ್ಗುರು' ಪಾತಳಿಯಿಂದ ಪ್ರಜಾಸತ್ತೆಯ 'ಶರಣ' ಪಾತಳಿಗೆ ಹೊರಳಿದುದು ಧಾರ್ಮಿಕ ಕ್ಷೇತ್ರದ ಗಮನಾರ್ಹ ಪರಿವರ್ತನೆಯೆನಿಸಿದೆ.

ಈ 'ಶರಣ' ಅಭಿಧಾನಕ್ಕೆ ಅರ್ಥ ತುಂಬಲು ಶ್ರೀಗಳು ಇಪ್ಪತ್ತೈದು ವರ್ಷ ತುಳಿದ ದಾರಿ ತುಂಬ ದುರ್ಗಮವಾದುದು. ಬಸವಣ್ಣನವರ ವಚನ ವಾಕ್ಯವನ್ನೇ ಒಂದಿಷ್ಟು ವ್ಯತ್ಯಾಸಮಾಡಿ ಹೇಳುವುದಾದರೆ 'ಜಗದ್ಗುರು ಎಂಬುದು ಮುಂಜಾನೆಯ ಬಿಸಿಲು ಅಂಗಕ್ಕೆ ಹಿತವಾಯಿತ್ತು, ಶರಣನೆಂಬುದು ಮಧ್ಯಾಹ್ನದ ಬಿಸಿಲು ಕರಕಷ್ಟವಾದುದು'. ಇದು ಗೊತ್ತಿದ್ದೂ ಪೂಜ್ಯರು ಧಾರ್ಮಿಕ-ಸಾಮಾಜಿಕ ಇತ್ಯಾದಿ ಕ್ಷೇತ್ರಗಳ ಮೂಢನಂಬಿಕೆ-ಮೂರ್ಖ ಆಚರಣೆಗಳ ಫಲಿತಾಂಶವಾದ ಶೋಷಣೆಗಳನ್ನು ಮಾತಿನ ಮೂಲಕವೂ, ಕೃತಿಯ ಮೂಲಕವೂ ವಿರೋಧಿಸುತ್ತ ಬಂದಿದ್ದು, ಇಪ್ಪತ್ತೈದು ವರ್ಷಗಳ ಈ ಪಯಣ ದಾಖಲಾರ್ಹವಾಗಿದೆ. ಹೀಗಾಗಿ ಭಕ್ತವರ್ಗ ಶ್ರೀಗಳ 'ಇಪ್ಪತ್ತೈದನೆಯ ವರ್ಷದ ಪೀಠಾರೋಹಣ ಸಮಾರಂಭ'ವನ್ನು ಹಮ್ಮಿಕೊಂಡಿದೆ. ಈ ಸಮಾರಂಭದ ಮುಖ್ಯ ಅಂಗ ಸಾಹಿತ್ಯ ಪ್ರಕಟಣೆ. ಈ ಯೋಜನೆ ಮೂರು ಬಗೆಯಾಗಿದೆ: ೧. ಶ್ರೀಗಳಿಗೆ 'ಶರಣಶ್ರೀ' ಹೆಸರಿನ ಅಭಿನಂದನ ಗ್ರಂಥ ಸಮರ್ಪಿಸುವುದು. ೨. ಪೀಠಾರೋಹಣದ ಇಪ್ಪತ್ತೈದನೆಯ ವರ್ಷದ ಸಂಕೇತವಾಗಿ ಲಿಂಗಾಯತ ಸಂಸ್ಕೃತಿಗೆ ಸಂಬಂಧಿಸಿದ ಇಪ್ಪತ್ತೈದು ಪಿಎಚ್.ಡಿ. ಪ್ರಬಂಧ ಪ್ರಕಟಿಸುವುದು. ೩. ಶ್ರೀಮಠ ಈ ವರೆಗೆ ಪ್ರಕಟಿಸಿದ ಹಲವು ಕೃತಿಗಳನ್ನು ಮರುಮುದ್ರಿಸುವುದು. ಈ ಮೂರು ಯೋಜನೆಗಳ ವಿವರ ಹೀಗಿದೆ.

೧

೧. 'ಶರಣಶ್ರೀ' ಅಭಿನಂದನ ಗ್ರಂಥ ಪ್ರಕಟಣೆ:

ಪೂಜ್ಯರಿಗೆ 'ಶರಣಶ್ರೀ' ಅಭಿನಂದನ ಗ್ರಂಥ ಅರ್ಪಿಸುವುದು ಈ ಯೋಜನೆಯ ಮುಖ್ಯ ಭಾಗ. ಇದು ಷಟ್‌ಸ್ಥಲ, ಅಷ್ಟಾವರಣ ಇತ್ಯಾದಿ ಸಾಂಪ್ರದಾಯಿಕ ವಿಷಯಗಳಿಗೆ ಬದಲು ಅಸಾಂಪ್ರದಾಯಿಕ ವಿಷಯಗಳನ್ನೊಳಗೊಂಡ ಅಭಿನಂದನ ಗ್ರಂಥವಾಗಬೇಕೆಂಬುದು ನಮ್ಮ ಆಶಯ. ಆದುದುರಿಂದ ಇಲ್ಲಿ ೧. ವಿದೇಶಿಯರು ಕಂಡ ಲಿಂಗಾಯತ ಸಮಾಜ ೨. ಕರ್ನಾಟಕದ ಹೊರಗೆ ಹರಡಿರುವ ಲಿಂಗಾಯತ ಸಮಾಜ ೩. ಶ್ರೀ ಮುರುಘಾ ಪರಂಪರೆಯ ಇತಿಹಾಸ ೪. ಪೂಜ್ಯ ಶ್ರೀ ಮುರುಘಾ ಶರಣರ ಸಾಧನೆ-ಎಂಬ ನಾಲ್ಕು ಅಧ್ಯಾಯಗಳನ್ನು ಕಲ್ಪಿಸಲಾಗಿದೆ.

ಲಿಂಗಾಯತ ಸಮಾಜದ ಚರಿತ್ರೆಯ ಮುಖ್ಯ ಆಧಾರ ಶರಣರ ವಚನ, ಶರಣಸಾಹಿತಿಗಳ ಪುರಾಣ-ಶಾಸ್ತ್ರ. ಪವಾಡ, ಪ್ರಕ್ಷಿಪ್ತತೆ ಇತ್ಯಾದಿಗಳಿಂದಾಗಿ ಇವು ಶುದ್ಧ ಆಕರ ಸಾಮಗ್ರಿಗಳಾಗಿ ಉಳಿದು ಬಂದಿಲ್ಲ. 'ಪುರಾಣ ದೃಷ್ಟಿ'ಯ ಇವುಗಳಿಗೆ ಬದಲು ನಾವು ಬಳಸಿಕೊಳ್ಳಬೇಕಾದ ಆಧುನಿಕ ಸಾಮಗ್ರಿಯೆಂದರೆ ವಿದೇಶಿ ವಿದ್ವಾಂಸರ 'ಇತಿಹಾಸದೃಷ್ಟಿ'ಯ ಬರಹಗಳು. ಇವು ವಿದೇಶ ಪ್ರವಾಸಿಗಳ-ವಿದ್ವಾಂಸರ ರಚನೆಗಳು, ಗೆಜೆಟಿಯರ ದಾಖಲೆಗಳು, ಜನಗಣತಿ ವರದಿಗಳು ಎಂದು ಹೀಗೆ ಮೂರು ಬಗೆಯಾಗಿವೆ:

ವಿದೇಶಿ ವಿದ್ವಾಂಸರಲ್ಲಿ ಪ್ರವಾಸಿ(ಪಿಯತ್ರೋ ಡಲ್ಲೆ ವೆಲ್ಲೆ ಇತ್ಯಾದಿ), ಸಮಾಜ ವಿಜ್ಞಾನಿ(ಈ. ಥರ್ಸ್ಟನ್ ಇತ್ಯಾದಿ)ಗಳಿದ್ದಾರೆ. ಮಾನವಶಾಸ್ತ್ರಜ್ಞ(ಆರ್.ಇ.ಎಂಥೋವನ್ ಇತ್ಯಾದಿ), ಇತಿಹಾಸಕಾರ(ಬಿ.ಎಲ್. ರೈಸ್ ಇತ್ಯಾದಿ)ರಿದ್ದಾರೆ. ಆಡಳಿತಗಾರರೂ(ಸಿ.ಪಿ.ಬ್ರೌನ್ ಇತ್ಯಾದಿ), ಕ್ರೈಸ್ತ ಪಾದ್ರಿಗಳೂ(ಫರ್ಕುಹಾರ್)ಇದ್ದಾರೆ. ಇವರ ಬರವಣಿಗೆಗಳ ಸಾರಸಂಗ್ರಹ ಇಲ್ಲಿದೆ. ಆರ್. ಈ. ಎಂಥೋವನ್ ಅವರ 'An essay on the Rituals and Organisation of Lingayaths' ಗ್ರಂಥವಾಗಲಿ, ಇದರ ಅನುವಾದವಾಗಿರುವ 'ಲಿಂಗಾಯತ ಧರ್ಮವು'(ಬಿ. ನಾರಾಯಣರಾಯ) ಗ್ರಂಥವಾಗಲಿ ಸಿಗಲಿಲ್ಲ. ಆರ್. ಸಿ. ಕಾರ್ ಅವರ 'Monograph on Lingayaths'(1906) ಗ್ರಂಥವು ಸಿಗಲಿಲ್ಲ. ಮಿಕ್ಕ ವಿದ್ವಾಂಸರ ಮುಖ್ಯ ಗ್ರಂಥಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ.

ಇದಕ್ಕೆ ಪೂರಕವಾಗಿ, ಜಿಲ್ಲಾ ಗೆಜಿಟಿಯರ್ ಸಂಪಾದಕರು ಈ ಸಮಾಜದ ಬಗ್ಗೆ ವ್ಯಕ್ತಪಡಿಸಿರುವ ಸಮಗ್ರ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಕರ್ನಾಟಕವು ನಾಲ್ಕು ಪ್ರಾಂತಗಳಾಗಿ ಹಂಚಿಹೋಗಿದ್ದ ಕಾಲದಲ್ಲಿ ಮೈಸೂರು ಪ್ರಾಂತ ಗೆಜಿಟಿಯರ್(ಬಿ.ಎಲ್. ರೈಸ್), ಮುಂಬೈ ಪ್ರಾಂತ ಗೆಜಿಟಿಯರ್(ಜೇಮ್ಸ ಕ್ಯಾಂಬೆಲ್), ಮದ್ರಾಸ ಪ್ರಾಂತ ಗೆಜಿಟಿಯರ್(ಸ್ಟರೋಕ್, ಹೆರಾಲ್ಡ್, ವಿಲಿಯಂ ಫ್ರಾನ್ಸಿಸ್, ಕೆಲ್‌ಸಾಲ್), ನಿಜಾಂ ಪ್ರಾಂತ ಗೆಜಿಟಿಯರ್(ಕೆಲ್‌ಸಾಲ್, ಮಿರ್ಜಾಮೆಹಂದಿ ಖಾನ್)ಗಳು ಇಂಗ್ಲಿಷ್ ಭಾಷೆಯಲ್ಲಿ ರಚನೆಗೊಂಡವು. ಇವುಗಳಲ್ಲಿ ದಾಖಲಾಗಿರುವ ಲಿಂಗಾಯತ ಸಮಾಜದ ಭೌತಿಕ, ಸಾಂಸ್ಕೃತಿಕ ಮಾಹಿತಿಯನ್ನು ಅಧ್ಯಯನ ರೀತಿಯಲ್ಲಿ ಕನ್ನಡೀಕರಿಸಿ ಇಲ್ಲಿ ಅಳವಡಿಸಲಾಗಿದೆ.

ಇದರ ಜೊತೆಗೆ, ೧೮೭೧-೧೯೩೧ರ ವರೆಗಿನ(೧೮೭೧, ೧೮೮೧, ೧೮೯೧, ೧೯೦೧, ೧೯೧೧, ೧೯೨೧, ೧೯೩೧) ಏಳು ಜನಗಣತಿ ವರದಿಗಳು ಈ ಸಮಾಜದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯ ಮತ್ತು ಅದಕ್ಕೆ ಈ ಸಮಾಜದವರು ತೋರಿದ ಪ್ರತಿಕ್ರಿಯೆ ಇತ್ಯಾದಿಗಳನ್ನು ಸಂಗ್ರಹಿಸುವ ಉದ್ದೇಶ ನಮ್ಮದಾಗಿದ್ದಿತು. ವರದಿಗಳ ಅಲಭ್ಯತೆ ಕಾರಣವಾಗಿ ಹಳೆಯ ಮೈಸೂರು ಕರ್ನಾಟಕದ ಜನಗಣತಿಯನ್ನು ಕುರಿತು ಇಲ್ಲಿ ಮಾಹಿತಿ ಸಂಗ್ರಹಿಸಲಾಗಿದೆ. ಮಿಕ್ಕ ಮುಂಬೈ ಕರ್ನಾಟಕ, ಹೈದರಾಬಾದ ಕರ್ನಾಟಕ, ಮದ್ರಾಸ ಕರ್ನಾಟಕಗಳ ಜನಗಣತಿ ಅಭ್ಯಾಸವನ್ನು ವಿದ್ವಾಂಸರು ಪೂರೈಸುವರೆಂದು ಆಶಿಸುತ್ತೇವೆ.

ಇನ್ನೊಂದು ಸಂಗತಿಯೆಂದರೆ, ಬ್ರಿಟಿಷರ ಕಾಲದಿಂದಲೂ ಲಿಂಗಾಯತ ಸಮಾಜದ ಬಗ್ಗೆ ಕಾನೂನು ಪುಸ್ತಕಗಳಲ್ಲಿ ದಾಖಲಾಗುತ್ತ ಬಂದ ವಿವರಗಳನ್ನು, ಈ ಹಿಂದೆ ನಮ್ಮ ಹಿರಿಯರು ತಮ್ಮ ಯಾವ ಯಾವ ಸಾಮಾಜಿಕ ಹಕ್ಕು-ಪ್ರತಿಷ್ಠೆಗಳಿಗಾಗಿ ನ್ಯಾಯಾಲಯಗಳಲ್ಲಿ ಹೋರಾಡಿದರು?

ಅವುಗಳಲ್ಲಿ ಅನುಭವಿಸಿದ ಸೋಲು-ಗೆಲವುಗಳೇನು? ಅವು ಎಷ್ಟರ ಮಟ್ಟಿಗೆ ಭಾವನಾತ್ಮಕ ಇಲ್ಲವೆ ತಾತ್ವಿಕವಾದುವು? ಇತ್ಯಾದಿ ತೀರ್ಪುಗಳನ್ನು ಕುರಿತ ವಿಷಯವನ್ನು ಇಲ್ಲಿ ಸಂಗ್ರಹಿಸಿಕೊಡುವ ಉದ್ದೇಶ ನಮ್ಮದಾಗಿದ್ದಿತು. ಆಕರಗಳ ಅಸ್ತವ್ಯಸ್ತತೆ, ಕಾನೂನು ವಿದ್ವಾಂಸರ ಅನಾಸ್ತೆ ಕಾರಣವಾಗಿ ಇದು ಸಾಧ್ಯವಾಗದೆ ಹೋಯಿತು.

ಮೇಲೆ ಹೇಳಿದ ಲೇಖನಗಳ ಫಲಿತಾಂಶ ಹೀಗಿದೆ: ವಿದೇಶಿ ವಿದ್ವಾಂಸರು ಈ ಸಮಾಜವನ್ನು ಮೊದ ಮೊದಲು ಲಿಂಗಾಯತವೆಂದೇ ಕರೆದಿದ್ದಾರೆ. ಬಹಳಷ್ಟು ಸಲ ಲಿಂಗಾಯತ ಧರ್ಮಸಂಸ್ಥಾಪಕ ಬಸವಣ್ಣನೆಂದೇ ಹೇಳಿದ್ದಾರೆ. ಲಿಂಗಾಯತರನ್ನು ವ್ಯಾವಹಾರಿಕವಾಗಿ ಹಿಂದೂ ಎಂದು ಒಂದೆರಡು ಸಲ ಹೇಳಿದ್ದರೂ ಉದ್ದಕ್ಕೂ ಇದು ಸ್ವತಂತ್ರಧರ್ಮವೆಂದೇ ಸೂಚಿಸಿದ್ದಾರೆ. ಇದಕ್ಕೆ ಇವರು ಕೊಡುವ ಕಾರಣಗಳು-ಇಲ್ಲಿ ವೈದಿಕ(ಹಿಂದೂ)ದಂತೆ ಜಾತಿಭೇದ, ಸ್ತ್ರೀ-ಪುರುಷ ಭೇದವಿಲ್ಲ. ಯಾರುಬೇಕಾದರೂ ಲಿಂಗಾಯತರಾಗಬಹುದು. ಇಂದಿನ ಕೆಲವು ಲಿಂಗಾಯತ ವಿದ್ವಾಂಸರು ತಾವು ಹಿಂದೂ(ವೈದಿಕ)ಗಳೆಂದು ವಾದಿಸುವುದು ಅತಾತ್ವಿಕವಾದುದು. ಇತಿಹಾಸ ಕಾಲದಿಂದಲೂ ಇವರು ಬ್ರಾಹ್ಮಣ(ವೈದಿಕ, ಹಿಂದೂ)ರನ್ನು, ಅವರ ತತ್ವಗಳನ್ನು ತಮ್ಮ ಕಾವ್ಯ-ಶಾಸ್ತ್ರಗಳಲ್ಲಿ ವಿರೋಧಿಸುತ್ತ ಬಂದಿದ್ದಾರೆ. ಈ ಬಗೆಯ ವಿವರಗಳು ಇಂದಿನ ನಮ್ಮ ಕಣ್ಣು ತೆರೆಸಬಹುದು ಮತ್ತು 'ಲಿಂಗಾಯತವು ಸ್ವತಂತ್ರಧರ್ಮ'ವೆಂಬ ಇಂದಿನವರ ಹೋರಾಟಕ್ಕೆ ನೆರವಾಗಬಹುದೆಂಬ ಭಾವನೆ ನಮ್ಮದಾಗಿದೆ.

ಈ ಗ್ರಂಥದ ಎರಡನೆಯ ಭಾಗ, ಕರ್ನಾಟಕದ ಹೊರಗಿನ ಲಿಂಗಾಯತ ಸಮಾಜದ ಅಧ್ಯಯನವಾಗಿದೆ. ಇವರ ಭೌಗೋಳಿಕ ಪ್ರಸರಣ, ಸಾಮಾಜಿಕ ಜೀವನ, ಸಾಂಸ್ಕೃತಿಕ-ಧಾರ್ಮಿಕ ಕಾರ್ಯಕಲಾಪಗಳ ವಿವರಣೆ ಇಲ್ಲಿದೆ. ಉತ್ತರಭಾರತ, ವಿದೇಶಗಳಲ್ಲಿರುವ ಲಿಂಗಾಯತರ ಬಗೆಗೂ ಬರೆಸಬೇಕೆಂದಿದ್ದ ನಮ್ಮ ಆಸೆ ಈಡೆರಲಿಲ್ಲವೆಂದು ಹೇಳಲು ವಿಷಾದವೆನಿಸುತ್ತದೆ. ಈ ಸಂಪುಟದ ಮೂರನೆಯ ಭಾಗ, ಶ್ರೀಮಠದ ಇತಿಹಾಸ. ಮೂಲತಃ ಬಸವಣ್ಣನಿಂದ ಆರಂಭವಾಗಿದ್ದ ಈ ಸಮಾಜ ಅಲ್ಲಲ್ಲಿಯ ಸ್ಥಳೀಯ ಪ್ರಭಾವಗಳಿಂದಾಗಿ ಗುರುವರ್ಗ(ಇದರ ಸರಿಯಾದ ಹೆಸರು ಆಚಾರ್ಯವರ್ಗ), ವಿರಕ್ತವರ್ಗ(ಇದರ ಸರಿಯಾದ ಹೆಸರು ಗುರುವರ್ಗ), ಆರೂಢವರ್ಗಗಳಲ್ಲಿ ಬಿಚ್ಚಿಕೊಂಡಿದೆ. ಹೀಗಿದ್ದರೂ ಈ ಸಮಾಜಕ್ಕೆ ಸೈದ್ಧಾಂತಿಕ ತಾಯಿಬೇರು ವಿರಕ್ತಸಂಪ್ರದಾಯ. ಈ ಸಂಪ್ರದಾಯಕ್ಕೆ ಮೂಲವಾಗಿರುವ ಶೂನ್ಯಪೀಠ ಪರಂಪರೆಯು ಚಿತ್ರದುರ್ಗದ ಬೃಹನ್ಮಠದ ವರೆಗೆ ಬೆಳೆದು ಬಂದಿದೆ. ಭಾರತದಲ್ಲಿ ಶುದ್ಧ ಇತಿಹಾಸ ದಾಖಲಿಸುವ ಸಂಪ್ರದಾಯವಿಲ್ಲವಾಗಿ ಈ ಪೀಠದ ಚರಿತ್ರೆಯುಲ್ಲಿಯೂ ಒಂದೆರಡು ಕೊಂಡಿಗಳು ಕಳೆದುಹೋಗಿರಬಹುದು, ಹಿಂದುಮುಂದಾಗಿರಬಹುದು. ಈ ತಿಳುವಳಿಕೆಯ ಹಿನ್ನೆಲೆಯಲ್ಲಿ ತುಂಬ ಎಚ್ಚರದಿಂದ ಈ ಪರಂಪರೆಯ ಇತಿಹಾಸವನ್ನು ರೂಪಿಸಲಾಗಿದೆ.

ಈ ಗ್ರಂಥದ ನಾಲ್ಕನೆಯ ಭಾಗ, ಈ ಪರಂಪರೆಯ ಇಂದಿನ ವಾರಸುದಾರರಾಗಿರುವ ಪೂಜ್ಯ ಶ್ರೀ ಮುರುಘಾ ಶರಣರ ಇಪ್ಪತ್ತೈದು ವರ್ಷಗಳ ಪಯಣದ ಕಥೆ, ವ್ಯಥೆ, ಸಾಧನೆ, ಇತ್ಯಾದಿಗಳ ಪ್ರತಿಪಾದನೆಯಾಗಿದೆ. ಪೂಜ್ಯರನ್ನು ಸಮೀಪದಿಂದ ಕಂಡ, ಅವರ ಕೇಂದ್ರೀಯ, ವಿಕೇಂದ್ರೀಯ ಕೆಲಸ-ಕಾರ್ಯಗಳನ್ನು ಹತ್ತಿರದಿಂದ ನೋಡಿದ ಸಹೃದಯರ ಲೇಖನಗಳು ಈ ವಿಭಾಗದಲ್ಲಿವೆ. ಮಾನವ ಸಹಜ ಒಂದೆರಡು ಹೆಜ್ಜೆ ವಿಫಲವಾಗಿರಬಹುದಾದರೂ, ಶ್ರೀಗಳ ಬಹಳಷ್ಟು ಹೆಜ್ಜೆಗಳು

ಸಫಲವಾದುವು, ಸಮಾಜಮುಖಿಯಾದುವು. ಒಂದು ಮಾತು: ಯಾವ ಕಾಲಕ್ಕೂ, ಯಾವುದೇ ಪ್ರಲೋಭನೆಗೂ ಒತ್ತಡಕ್ಕೂ ಒಳಗಾಗಿ ಅವರು ಶಿಷ್ಟರ ಡಂಬಾಚಾರ, ಪರಿಶಿಷ್ಟರ ಕಂದಾಚಾರಗಳೊಂದಿಗೆ ರಾಜೀ ಮಾಡಿಕೊಂಡಿಲ್ಲವೆಂಬುದನ್ನು ಎತ್ತಿ ಹೇಳಲೇ ಬೇಕು, ತೆರೆದ ಹೊಸ ದಾರಿಗಳನ್ನು ಬೆರಳು ಮಾಡಿ ತೋರಿಸಲೇ ಬೇಕು. ಇದೆಲ್ಲವನ್ನು ಈ ವಿಭಾಗದಲ್ಲಿ ದಾಖಲಿಸಲಾಗಿದೆ.

೨

ಪಿಎಚ್.ಡಿ ಪ್ರಬಂಧಗಳ ಪ್ರಕಟಣೆ:

ಈ ಯೋಜನೆಯ ಇನ್ನೊಂದು ವಿಭಾಗವೆಂದರೆ ಪೂಜ್ಯರ ಇಪ್ಪತ್ತೈದು ವರ್ಷಗಳ ಸಾರ್ಥಕ ಬದುಕನ್ನು ಸಂಕೇತಿಸುವಂತೆ ೨೫ ಸಂಶೋಧನ ಮಹಾಪ್ರಬಂಧ(ಪಿಎಚ್.ಡಿ ಪ್ರಬಂಧ)ಗಳನ್ನು ಏಕಕಾಲಕ್ಕೆ ಪ್ರಕಟಿಸುವುದು. ಬಹುಶಃ ಇದು ಒಂದು ವಿಶ್ವವಿದ್ಯಾಲಯ ಮಾಡಬೇಕಾದ, ಈ ವರೆಗೆ ಮಾಡದಿರುವ, ಮುಂದೆಯೂ ಮಾಡಲಾಗದ ಸಾಹಸ. ಈ ಮಹಾಪ್ರಬಂಧಗಳು ಲಿಂಗಾಯತದ ಇತಿಹಾಸ, ಸಮಾಜ, ಸಂಸ್ಕೃತಿ, ಸಾಹಿತ್ಯ, ಸಿದ್ಧಾಂತಗಳಿಗೆ ಸಂಬಂಧಿಸಿವೆ. ಅಭ್ಯಾಸಿಗಳಿಗೆ ನಿರಂತರ ನೆರವಾಗುವ ಸಾಹಿತ್ಯವನ್ನೊಳಗೊಂಡ ಈ ಅಪೂರ್ವ ಯೋಜನೆ ಪ್ರಸ್ತುತ ಸಂದರ್ಭದ ಅತ್ಯಪೂರ್ವ ಘಟನೆಯೆಂದೇ ಹೇಳಬೇಕು. ಇಲ್ಲಿ ಡೆಪ್ಯೂಟಿ ಚೆನ್ನಬಸಪ್ಪ, ಸಿರಸಂಗಿ ಲಿಂಗರಾಜ, ಹರ್ಡೇಕರ ಮಂಜಪ್ಪ, ಶಿ.ಶಿ. ಬಸವನಾಳರಂತಹ ಗಣ್ಯರ ಚರಿತ್ರೆಗಳಿವೆ. ವಚನಸಾಹಿತ್ಯ, ಹರಿಹರನ ರಗಳೆ, ಶಂಕರದಾಸಿಮಯ್ಯನ ಪುರಾಣಗಳ ಸಾಂಸ್ಕೃತಿಕ ಅಧ್ಯಯನವಿದೆ. ಕೊಡೆಕಲ್ ಬಸವಣ್ಣ, ಕೊಡೆಕಲ್ ರಾಚಪ್ಪಯ್ಯ, ನೂರೊಂದು ವಿರಕ್ತರಂತಹ ನಾಥಮೂಲದ ಲಿಂಗಾಯತರ ಶೋಧವಿದೆ. ಉಪನಿಷತ್ತು–ವಚನಗಳ ತೌಲನಿಕ ಚರ್ಚೆ ಇದೆ. ಶರಣರ ಸ್ವರವಚನ–ಕಡಕೋಳ ಮಡಿವಾಳಪ್ಪನವರ ತತ್ವಪದಗಳ ವಿವೇಚನೆ ಇದೆ. ಶರಣರ ಸ್ತ್ರೀವಾದಿ ಚಿಂತನೆ ಇದೆ. ಪ್ರಾಚೀನ ಚಿತ್ರದುರ್ಗ, ಬೆಂಗಳೂರಿನ ವೀರಶೈವಮಠಗಳನ್ನು ಕುರಿತ ವಿಶಿಷ್ಟ ಪ್ರಬಂಧಗಳಿವೆ. ಮುರುಘಾ ಪರಂಪರೆಯ ಸಾಹಿತ್ಯ, ಕೆಳದಿ ರಾಜಾಶ್ರಯದ ಸಾಹಿತ್ಯ, ಫ.ಗು.ಹಳಕಟ್ಟಿಯವರ ಪತ್ರಿಕಾ ಸಾಹಿತ್ಯಗಳ ವಿವರಣೆಯಿದೆ. ಲಿಂಗಾಯತ ಅಸ್ಪೃಶ್ಯ ಹೆಸರಿನ ಪ್ರಬಂಧವಿದೆ. ಶರಣರ ಅನುಭಾವ ಸಾಹಿತ್ಯ, ಮಧ್ಯಕಾಲೀನ ಭಕ್ತಿ–ಅನುಭಾವ ಸಾಹಿತ್ಯ ಮತ್ತು ಚಾರಿತ್ರಿಕ ಪ್ರಜ್ಞೆ, ಚಾಮರಸನ ಪ್ರಭುಲಿಂಗಲೀಲೆಯ ದಾರ್ಶನಿಕ ಅಧ್ಯಯನಗಳಂತಹ ಅನುಭಾವಿಕ ಬರವಣಿಗೆಗಳಿವೆ. ಚಿತ್ರಕಲಾವಿದ ಮುರಿಗೆಪ್ಪ ಚಟ್ಟಿಯವರ ಕಲಾಜೀವನದ ಚಿತ್ರಣವಿದೆ. ಹಾಗಲವಾಡಿ ಪಾಳೇಗಾರರ ಇತಿಹಾಸವಿದೆ. ಇವೆ ಮೊದಲಾದ ಲಿಂಗಾಯತದ ಬಹುಮುಖಿ ಅಧ್ಯಯನದ ನೆಲೆಯಾಗಿದೆ ಈ ವಿಭಾಗ.

೩

ಶ್ರೀಮಠದ ಕೃತಿಗಳ ಮರುಮುದ್ರಣ:

ಶೂನ್ಯಪೀಠ ಪರಂಪರೆಯ ಮುರುಘಾ ಸಮಯದಲ್ಲಿ ಶ್ರೀ ಶಾಂತವೀರರಂತಹ, ಇಮ್ಮಡಿ ಮುರಿಘಾಗುರುಸಿದ್ಧರಂತಹ ದೊಡ್ಡ ವಿದ್ವಾಂಸರು, ದೊಡ್ಡ ಕವಿಗಳು ಆಗಿಹೋಗಿದ್ದಾರೆ. ಈ

ಪರಂಪರೆಯ ಇಂದಿನ ಉತ್ತರಾಧಿಕಾರಿಯಾಗಿರುವ ಪೂಜ್ಯ ಶ್ರೀ ಮುರುಘಾ ಶರಣರು ವೈಚಾರಿಕ, ತಾತ್ವಿಕ ಕೃತಿಶ್ರೇಣಿ, ಅನ್ಯವಿದ್ವಾಂಸರು ರಚಿಸಿದ ಮುಖ್ಯಕೃತಿ–ಹೀಗೆ ಈ ಮೊದಲು ಶ್ರೀಮಠದಿಂದ ಪ್ರಕಟವಾದ ೨೫ ಗ್ರಂಥಗಳನ್ನು ಮರುಮುದ್ರಿಸುವುದು ಈ ಯೋಜನೆಯ ಇನ್ನೊಂದು ಭಾಗವಾಗಿದೆ.

* * *


ಎರಡು ವರ್ಷಗಳಷ್ಟು ಹಿಂದೆಯೇ ಆರಂಭಿಸಬೇಕಿದ್ದ ಈ ಬೃಹತ್ ಯೋಜನೆಯನ್ನು ಆರು ತಿಂಗಳ ಹಿಂದೆ ಮಾತ್ರ ಆರಂಭಿಸಲಾಯಿತು. ಅಸಾಂಪ್ರದಾಯಿಕ ವಿಷಯಗಳ ಆಯ್ಕೆ, ಅಲಭ್ಯ ಸಾಮಗ್ರಿಯ ಶೋಧ, ಸಮರ್ಥ ಲೇಖಕರ ಹುಡುಕುವಿಕೆ–ಇತ್ಯಾದಿಗಳ ನಡುವೆಯೂ ಈ ಕೆಲಸವನ್ನು ಕಷ್ಟಪಟ್ಟು ಸಕಾಲದಲ್ಲಿ ಪೂರೈಸಲಾಗಿದೆ. ಸಹೃದಯ ವಿದ್ವಾಂಸರು ಈ ದಿಸೆಯಲ್ಲಿ ಮುಂದುವರಿಯಲೆಂದು ಹಾರೈಸುತ್ತೇನೆ. ಈ ಮಹಾಯೋಜನೆಗೆ ಬೆನ್ನ ಹಿಂದಿನ ಬೆಳಕಾಗಿರುವ ಪೂಜ್ಯ ಶ್ರೀ ಮುರುಘಾ ಶರಣರಿಗೂ, ಪ್ರಬಂಧ–ಮಹಾಪ್ರಬಂಧ ನೀಡುವ ಮೂಲಕ ಸಹಕರಿಸಿದ ಎಲ್ಲ ವಿದ್ವಾಂಸರಿಗೂ, ಮಾರ್ಗದರ್ಶನ ಮಾಡಿದ ಸಂಪಾದಕ ಸಮಿತಿಯ ಸದಸ್ಯರಿಗೂ, ಶ್ರೀಮಠದ ಆಡಳಿತವರ್ಗದ ಶ್ರೀ ಜಿ.ಎನ್.ಮಲ್ಲಿಕಾರ್ಜುನಪ್ಪ, ಶ್ರೀ ಜಯಣ್ಣ ಅವರಿಗೂ, ಪ್ರಕಟಣ ಕಾರ್ಯದಲ್ಲಿ ಸಹಕರಿಸಿದ ಮುದ್ರಣಾಲಯದ ಮಿತ್ರರಿಗೂ ಕೃತಜ್ಞತೆಗಳು.

---

* ಶರಣಶ್ರೀ : ಡಾ. ಶಿವಮೂರ್ತಿ ಮುರುಘಾಶರಣರ ಶೂನ್ಯಪೀಠಾರೋಹಣ ಬೆಳ್ಳಿಹಬ್ಬ ಸಂಭಾವನಾ ಗ್ರಂಥ. ಶ್ರೀ ಮುರುಘಾಮಠ ಚಿತ್ರದುರ್ಗ–೨೦೧೫.

ಆಕರ : ಮಾರ್ಗ ಸಂಪುಟ–೮

■■



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಮಾಜಿ ಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359